






ಸಂಪುಟ ೨

# ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ


ಪ್ರಧಾನ ಸಂಪಾದಕ

ಪ್ರೊ. ಅಂಬಳಿಕೆ ಹಿರಿಯಣ್ಣ


ಕಾರ್ಯನಿರ್ವಾಹಕ ಸಂಪಾದಕ

ಪ್ರೊ. ಆರ್ವಿಯಸ್ ಸುಂದರಂ

ಸಂಪಾದಕ

ಪ್ರೊ. ಸ.ಚಿ. ರಮೇಶ





# ದಕ್ಷಿಣ ಭಾರತೀಯ
# ದೇಶೀ ಕೃಷಿವಿಜ್ಞಾನ ಕೋಶ
## ಸಂಪುಟ ೨

**ತುಳುನಾಡಿನ ಏತ ನೀರಾವರಿ** ಕೃಷಿ ಬದುಕಿನಲ್ಲಿ ನೀರಾವರಿ ಇಲ್ಲದೆ ಏನೂ ಮಾಡಲಾಗದು. ತುಳುನಾಡಿನ ಗದ್ದೆಗಳಿಗೆ ಸುಗ್ಗಿ ಬೆಳೆಯ ಸಂದರ್ಭದಲ್ಲಿ ಏತಗಳ ಮೂಲಕ ನೀರನ್ನು ಹಾಯಿಸಲಾಗುತ್ತದೆ ಎನಿಸಿದೆ. ಆಳವಾದ ಭಾವಿಯಿಂದ ನೀರು ಸೇದಬೇಕಾದಾಗ ಮಾತ್ರ ಏತಗಳನ್ನು ಹಾಕುತ್ತಾರೆ. ಇದರಿಂದ ಏತ ನೀರಾವರಿ ಅತೀ ಕಷ್ಟದ ಪದ್ಧತಿ. 'ಏತ'ವನ್ನು ದಕ್ಷಿಣ ಕನ್ನಡ ಜಿಲ್ಲೆಯ ತುಳು ಭಾಷಿಗರು 'ಪನೆ' ಎನ್ನುತ್ತಾರೆ. ಏಣೆಲು ಬೆಳೆ ಕೊಯ್ದು ಸುಗ್ಗಿ ಬೆಳೆ ನಾಟಿ ಮಾಡಿದ ಬಳಿಕ ನೆಲ ಒರತೆ ಕಡಿಮೆ ಆಗಿ ಗದ್ದೆಗಳಲ್ಲಿ ನೀರು ಕಡಿಮೆಯಾಗುವ ಸಂದರ್ಭದಲ್ಲಿ ಏತಗಳನ್ನು ಹಾಕುತ್ತಾರೆ. ಏತದಲ್ಲಿ ನೀರು ಸೇದಲು ಮೂರು ಆಳುಗಳು ಬೇಕಾಗುತ್ತದೆ. ಇಬ್ಬರು ನೀರನ್ನು ಎಳೆಯಲು, ಒಬ್ಬ ಅಡ್ಡಲಾಗಿ ಹಾಕಿದ ಎರಡು ಮರದ ಗಾಳಗಳ ಮೇಲೆ ನಿಂತು ಆತ ನೀರನ್ನು ಮುಳುಗಿಸಿ ನಿಧಾನವಾಗಿ ಮೇಲೆ ಬರುವಾಗ ಜಾಗೃತೆಯಾಗಿ ಬಸಿಯಬೇಕು. ಇಲ್ಲಿ ಗಂಡಸರೇ ನಿಂತು ಕೆಲಸ ಮಾಡಬೇಕಾಗುತ್ತದೆ. ನೀರನ್ನು ಎಳೆಯಲು ಹೆಂಗಸರನ್ನೂ ಬಳಸಿಕೊಳ್ಳಬಹುದು. ಏತದಲ್ಲಿ ನೀರೆಳೆಯುವುದು ಅತೀ ಅಪಾಯಕಾರಿ ಕೆಲಸ. ಯಾಕೆಂದರೆ ಯಾವುದೇ ಸಂದರ್ಭದಲ್ಲಿ ಜೀವ ಹಾನಿಯಾಗುವ ಸಾಧ್ಯತೆಗಳಿವೆ. ರೈತರು ಯಾವುದೇ ವೈಜ್ಞಾನಿಕ ಸಲಕರಣೆಗಳಿಲ್ಲದೆ, ಕಬ್ಬಿಣದ ಸಹಾಯವಿಲ್ಲದೆ ಕೇವಲ ಕಾಡು ಗುಡ್ಡಗಳಲ್ಲಿ ದೊರೆಯುವ ಮರ ಬಿಳಲುಗಳಿಂದ ಇದನ್ನು ನಿರ್ಮಿಸುತ್ತಾರೆ. ಎತ್ತರವಾದ ಎರಡು ಮರಗಳನ್ನು ಒಂದು ಮೀಟರ್ ಅಂತರ್‌ವಿರುವಂತೆ ನೆಟ್ಟು, ಅದರ ಮಧ್ಯೆ ಸುಮಾರು 20 ಅಡಿಗಳಷ್ಟು ಎತ್ತರದಲ್ಲಿ 'ನೊಗಪನೆ'ಯನ್ನು ಜೋಡಿಸುತ್ತಾರೆ. ನೊಗಪನೆಯ ಮೇಲೆ ಸುಮಾರು 21ರಿಂದ 25 ಅಡಿ ಉದ್ದದ ದೊಡ್ಡ ಮರವನ್ನು ಸಮಾನಾಂತರದಲ್ಲಿ ಇಟ್ಟು ಕೀಲುಗಳ ಮೂಲಕ ಬಿಗಿದು ಕಟ್ಟುತ್ತಾರೆ. ಇದನ್ನು ಬೆರ್ಮರ (ದೊಡ್ಡ ಮರ) ಎನ್ನುತ್ತಾರೆ.

ಬೆರ್ಮರದ ಒಂದು ತುದಿಗೆ ಅಂದರೆ ಬಾವಿಯ ಭಾಗಕ್ಕೆ ಉದ್ದವಾದ ಬಿದಿರಿನ ಗಳವನ್ನು ಕಟ್ಟುತ್ತಾರೆ. ಗಳದ ಬುಡಕ್ಕೆ ಸುಮಾರು ಹತ್ತು ಕೊಡ ನೀರನ್ನು ತುಂಬುವಷ್ಟು ದೊಡ್ಡ ಗಾತ್ರದ ಮರದ ತೊಟ್ಟಿಯನ್ನು ನೇತಾಡಿಸುತ್ತಾರೆ. ಇದನ್ನು 'ಮರಯಿ' ಎನ್ನುವರು. ಬೆರ್ಮರದ ಇನ್ನೊಂದು ತುದಿಗೆ ಬೈಹುಲ್ಲಿನ ಹುರಿಮಾಡಿದ ಹಗ್ಗವನ್ನು ಕಟ್ಟುತ್ತಾರೆ. ನೀರನ್ನು ಎಳೆಯುವವರು ಸುಮಾರು ಹತ್ತು ಅಡಿ ಆಳವಿರುವ 'ಕಡೆಗುರಿ'ಗೆ (ಹೊಂಡ) ಹಗ್ಗದಲ್ಲಿ ನೇತಾಡಿ ಎಳೆಯುತ್ತಾರೆ. ನೀರು ಸೇದುವವನು ಬಾವಿಗೆ ಅಡ್ಡಲಾಗಿ ಹಾಕಿದ 'ಪುಡೆಮುಟ್ಟಲ್ಲಿ (ನಿಲ್ಲುವ ಅಡ್ಡಮರ) ನಿಂತು ಗದ್ದೆಗೆ ಜೋಡಿಸಲಾದ ಬರಣೆಗೆ ನೀರನ್ನು ಮಗುಚಬೇಕು. ಈ ಎಲ್ಲ ಕ್ರಿಯೆಗಳಲ್ಲಿ ಏಕತಾನತೆ ಇದ್ದರೆ ಮಾತ್ರ ಆಳದ ಬಾವಿಯಿಂದ ನೀರು ಮೇಲಕ್ಕೆ ಬರುತ್ತದೆ. ಇಲ್ಲದಿದ್ದರೆ ಜೀವಕ್ಕೆ ಅಪಾಯವಾಗುತ್ತದೆ. ಏತದ ನೀರಿನಿಂದಲೇ ಸುಗ್ಗಿ, ಕೊಳಕೆ, ನೇಜಿ ಮಾಡುತ್ತಿದ್ದರು. ಕಬ್ಬಿನ ಗದ್ದೆಗಳಿಗೆ, ತೆಂಗು, ಕಂಗಿನ ತೋಟಗಳಿಗೂ ಏತದ ಮೂಲಕ ನೀರು ಹಾಯಿಸುತ್ತಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಈ ಸಾಂಪ್ರದಾಯಿಕ ನೀರಾವರಿ ಪದ್ಧತಿಯಿಂದ ಭೂಮಿಯಲ್ಲಿ ನೀರಿನ ಒರತೆ ಹೆಚ್ಚಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಬೋರ್‌ವೆಲ್‌ಗಳ ಮೂಲಕ ಆಳದ ನೀರನ್ನು ತೆಗೆಯುವ ಕಾರಣ ಏತ ನೀರಾವರಿಗೆ ಅವಕಾಶ ಇಲ್ಲದಂತಾಗಿದೆ.

*ಜಿ.ಎ.ಎಸ್.*

**ತುಳುನಾಡಿನ ಕೃಷಿ ಆಚರಣೆಗಳು** ಈ ಪ್ರದೇಶದ ಬಹುಪಾಲು ಜನರ ಮಾತೃಭಾಷೆ ತುಳು. ಇಲ್ಲಿನ ಪ್ರಮುಖ ಕಸುಬು ಬತ್ತ ಬೇಸಾಯ. ಆದುದರಿಂದ ತುಳುನಾಡ ಸಂಸ್ಕೃತಿಯ ಮೂಲನೆಲೆ ಇಲ್ಲಿನ ಬತ್ತ ಬೇಸಾಯದಲ್ಲಿದೆ. ಬತ್ತ ಬೇಸಾಯ ಇಲ್ಲಿನ ವಾರ್ಷಿಕ ಋತು ಆವರ್ತನಗಳನ್ನು ಆಶ್ರಯಿಸಿ ರೂಪಿತಗೊಂಡಿದೆ. ಮೂಲದಲ್ಲಿ ದಟ್ಟವಾದ ಕಾಡುಗಳಿಂದ ಆವರಿಸಿಕೊಂಡಿದ್ದ ಈ ಪ್ರದೇಶದಲ್ಲಿ ಅನಂತರ ಬೇಸಾಯಕ್ಕೆ ಯೋಗ್ಯವಾದ ಕಡೆಗಳಲ್ಲೆಲ್ಲ ಕಾಡು ಕಡಿದು ಹೊಲಗದ್ದೆಗಳನ್ನು ನಿರ್ಮಿಸಿ ಬತ್ತ ಬೇಸಾಯದ ಸಂಸ್ಕೃತಿಯನ್ನು ತುಳುವರು ಹುಟ್ಟು ಹಾಕಿದ್ದಾರೆ. ಈ ಬತ್ತ ಬೇಸಾಯ ತುಳುವರಿಗೆ ಕೇವಲ ಒಂದು ಕಸುಬು ಮಾತ್ರವಲ್ಲ. ಅದೊಂದು ಧಾರ್ಮಿಕ ಕೈಂಕರ್ಯ ಕೂಡ. ತುಳುವರಲ್ಲಿ ಬತ್ತ ಕೃಷಿಯ ಬಗ್ಗೆ ಒಂದು ವಿಧವಾದ ಪವಿತ್ರ ಭಾವನೆಯಿದೆ. ತಾವು ಬೆಳೆದ ಪೈರಲ್ಲಿ - ಬೆಳೆಯಲ್ಲಿ ಕೃಷಿಕರು ದೈವಿಕ ಶಕ್ತಿಯನ್ನು ಕಾಣುತ್ತಾರೆ. ಈ ಕೃಷಿಗೆ ಪೂರಕವಾದ ಮಣ್ಣು (ಭೂಮಿ), ಗಾಳಿ, ನೀರು, ಬೆಳಕು, ಬೆಂಕಿಗಳನ್ನು ತುಳು ಜನಪದರು ದೈವೀಶಕ್ತಿ ರೂಪಗಳೆಂದು ಭಾವಿಸುತ್ತಾರೆ. ಸದಾ ನೀರಿನಲ್ಲೇ ಇದ್ದು ಬೆಳೆಯುವ ಬತ್ತ ಬೆಳೆ ಅದು ದೇವರ ಕೃಪೆ ಎಂದು ನಂಬಿದ ಜನರು ತುಳುವರು. ಈ ಹಿನ್ನೆಲೆಯಲ್ಲಿ ಗಮನಿಸುವಾಗ ಉಳುಮೆಗೆ ಸಹಕಾರಿಯಾಗುವ ಎತ್ತು, ಕೋಣ, ನೊಗ, ನೇಗಿಲು ಇವೆಲ್ಲ ಪವಿತ್ರವಾದವುಗಳು.

ಪಗ್ಗು, ಬೆಶ, ಕಾರ್ತೆಲ್, ಆಟಿ, ಸೋಣ, ನಿರ್ನಾಲ, ಬೊಂತೆಲ್, ಜಾರ್ದೆ, ಪೆರಾರ್ದೆ, ಪೊನ್ನಿ, ಮಾಯಿ, ಸುಗ್ಗಿ - ಈ 12 ತಿಂಗಳುಗಳಲ್ಲಿ ತುಳುವರ ಕಾಲ ಪರಿಕಲ್ಪನೆ ಮತ್ತು ಬತ್ತ ಬೇಸಾಯ ಇವು ಇಲ್ಲಿಯ ಮಳೆ

ಬಿಸಿಲುಗಳ ವಾರ್ಷಿಕ ಋತು ಆವರ್ತನವನ್ನು ಅವಲಂಬಿಸಿವೆ. ಅಂತೆಯೇ ವಾರ್ಷಿಕ ಆವರ್ತನದ ಆಚರಣೆಗಳೂ ಜೀವನಾವರ್ತನ ಆಚರಣೆಗಳೂ ಪಗ್ಗು 'ಸಿಂಗೊಡ' ಮೊದಲ್ಗೊಂಡು ವರ್ಷದುದ್ದಕ್ಕೂ ಬತ್ತ ಬೇಸಾಯದ ಕೃಷಿ ಚಟುವಟಿಕೆಯ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಆಚರಿಸಲ್ಪಡುವಲ್ಲಿ ತುಳುನಾಡ ಸಂಸ್ಕೃತಿಯ ದರ್ಶನವಾಗುತ್ತದೆ. ಈ ಹಿನ್ನೆಲೆಯಲ್ಲಿ ತುಳುನಾಡಿನ ಕೆಲವೊಂದು ಕೃಷಿ ಸಂಬಂಧಿ ಆಚರಣೆಗಳ ಪರಿಚಯ ಇಲ್ಲಿದೆ.

**1. ಬಿಸುಪರ್ಬ :** 'ಬಿಸುಪರ್ಬ' ಎಂದರೆ ಸೌರಮಾನ ಯುಗಾದಿ ಹಬ್ಬ. 'ಪಗ್ಗು' (ತುಳುವರ ಮೊದಲ ತಿಂಗಳು) ತಿಂಗಳ ಮೊದಲ ದಿನ ತುಳುವರಿಗೆ ವರ್ಷಾರಂಭದ ದಿನ ; ಅಂತೆಯೇ ವಾರ್ಷಿಕ ಆವರ್ತನದ ಮೊದಲ ಆಚರಣೆ ಕೂಡ. ತುಳುವರು ವರ್ಷಾರಂಭದ ದಿನ ಮಾಡುವ 'ಭೂಮಿಪೂಜೆ' ಇದು. ಸೌರಮಾನ ಯುಗಾದಿಯು ಕಲಿ ವರ್ಷಾರಂಭದ ದಿನವೂ ಆಗಿದೆ.

'ಬಿಸು' ಎಂದರೆ ವಿಷು-ಸೌರಮಾನ ಯುಗಾದಿ ; (Solar new year day) 'ಬಿಸುಕಣಿ' ಎಂದರೆ ಹೊಸ ವರ್ಷದ ಪ್ರಾರಂಭದ ದಿನ ನಡೆಯುವ ಒಂದು ಆಚರಣೆ. ದೇವರೆದುರಲ್ಲಿ ಹಣ್ಣು, ಕಾಯಿ, ಅಕ್ಕಿ, ಚಿನ್ನ, ಕನ್ನಡಿ ಇತ್ಯಾದಿಗಳನ್ನಿಟ್ಟು ಬೆಳಿಗ್ಗೆ ಎದ್ದು ಅವುಗಳನ್ನು ನೋಡಿ ನಮಸ್ಕರಿಸುವ ಆಚರಣೆ (ತುಳು ನಿಘಂಟು, 1997, ಪುಟ - 2328)

ಪ್ರಪ್ರಥಮವಾಗಿ ಬಿಸುಪರ್ಬದ ಮೊದಲ ದಿನ ಇಲ್ಲವೆ ಅದೇ ದಿನ ಬೆಳಿಗ್ಗೆ ಹೆಂಗಸರು ಮನೆಯನ್ನು ಸಗಣಿಯಿಂದ ಸಾರಿಸಿ ಶುದ್ಧಗೊಳಿಸುತ್ತಾರೆ. 'ಪಗ್ಗುಸಿಂಗೊಡೆ' (ಪಗ್ಗು ತಿಂಗಳ ಮೊದಲ ದಿನ)ಯ ಹಿಂದಿನ ದಿನ ಮನೆಯ ಯಜಮಾನ ಭೂತಸ್ಥಾನದಲ್ಲಿ ಇಲ್ಲವೆ ದೇವರ ಎದುರು ಮಣೆಯ ಮುಂದೆ ಹಣ್ಣು, ತರಕಾರಿ, ತೆಂಗಿನಕಾಯಿ, ಅಕ್ಕಿ, ಹೂವು ಇತ್ಯಾದಿ ಫಲವಸ್ತುಗಳನ್ನು ಇಡುತ್ತಾರೆ. ಅನಂತರ ಮರುದಿನ ಅಂದರೆ ಸಿಂಗೊಡೆಯ ದಿನ ಬೆಳಗ್ಗೆ ಯಜಮಾನ ಅಲ್ಲಿ ದೀಪ ಬೆಳಗಿಸಿ ಕೈ ಮುಗಿಯುತ್ತಾನೆ. ಎತ್ತುಗಳನ್ನು ಹಟ್ಟಿಯಿಂದ ಗದ್ದೆಗೆ ಕೊಂಡುಹೋಗಿ ಗದ್ದೆಯ ಮಧ್ಯಭಾಗದಲ್ಲಿ ಮೊದಲೇ 'ಕುರುಂಬಿಲಿ' (ಹುಲ್ಲುಕಡ್ಡಿಕಸ) ಹಾಕಿ ಸುಟ್ಟ ಜಾಗದಲ್ಲಿ ಎರಡು 'ಪೊರಿ' (ಪೊರಿ ಎಂದರೆ ಉಳುಮೆ ಮಾಡಿದ ಜಾಗ) ಉಳುತ್ತಾರೆ. ಜೊತೆಗೆ ಹಟ್ಟಿಯಿಂದ ಒಂದು ಬುಟ್ಟಿ ಗೊಬ್ಬರವನ್ನು ಕೊಂಡುಹೋಗಿ ಪೊರಿಯ ಮಧ್ಯದಲ್ಲಿ ಹಾಕಿ, ಅದರ ಮೇಲೆ 'ತರೊಳಿತಪ್ಪು', 'ನೆಕ್ಕಿತಪ್ಪು' (ಒಂದು ಜಾತಿಯ ಸೊಪ್ಪು)ಗಳನ್ನು ಹಾಕುತ್ತಾರೆ. ಆನಂತರ ಪೂರ್ವ ದಿಕ್ಕಿಗೆ ಮುಖಮಾಡಿ ಗೊಬ್ಬರ ಹಾಕಿ ಭೂಮಿಗೆ ನಮಸ್ಕರಿಸಿ ಎತ್ತುಗಳನ್ನು ಬಿಚ್ಚಿಕೊಂಡು ಮನೆಗೆ ಬರುತ್ತಾರೆ. ಇದನ್ನು 'ಅಪ್ಪರೆ ಪಾಡುನ' ಎಂದು ಕರೆಯುತ್ತಾರೆ. ಕೆಲವರು 'ನಾಲೆರು ಮಾದವುನ' ಎಂತಲೂ ಕರೆಯುತ್ತಾರೆ. ಈ ರೀತಿ ಬಿಸುಪರ್ಬದಂದು ಉಳುಮೆ ಮಾಡುವಾಗ ಎತ್ತುಗಳನ್ನು ಹೊಡೆಯಲು ಎಂದಿನ ಕೋಲುಗಳನ್ನು ಉಪಯೋಗಿಸದೆ ವಿಶೇಷವಾಗಿ 'ನೆಕ್ಕಿಕೋಲು'ಗಳನ್ನು ಬಳಸುವುದು ಸಂಪ್ರದಾಯ. ಉಳುಮೆಯಾದ ಬಳಿಕ ಆ 'ನೆಕ್ಕಿಕೋಲು' (ಒಂದು ಜಾತಿಯ ಗಿಡದ ಕೋಲು)ಗಳನ್ನು ತಂದು ಹಟ್ಟಿಯ ಮಾಡಿನಲ್ಲಿ ಇಡುತ್ತಾರೆ. ಗದ್ದೆಉತ್ತಾದ ಬಳಿಕ ಎತ್ತುಗಳನ್ನು ಮೇಯಲು ಬಿಡುತ್ತಾರೆ. ಈ ದಿನಗಳಲ್ಲಿ ಬಿಸುಪರ್ಬದ ಪ್ರಯುಕ್ತ ಮಣ್ಣಿನ ಸತ್ಯಗಳಾದ 'ನಾಗಬನ'ಗಳಲ್ಲಿ, 'ದೈವದಗುಡಿ'ಗಳಲ್ಲಿ ಸಾಮಾನ್ಯವಾಗಿ 'ಪರ್ವ' 'ತಂಬಿಲ'ಗಳು ನಡೆಯುತ್ತವೆ.ಅಂತೆಯೇ ಈ ದಿನ 'ಕೈಬಿತ್ತ್ ದೀಪುನ' (ಸಾಂಕೇತಿಕವಾಗಿ ಬೀಜಬಿತ್ತನೆ ಮಾಡುವುದು) ಕ್ರಮವೂ ಇದೆ. ಅಂದರೆ ಗದ್ದೆಯೊಂದರ ಮೂಲೆಯಲ್ಲಿ ಹುಣಿಯನ್ನು ಹದಮಾಡಿ ಅದರಲ್ಲಿ ಬಿತ್ತನೆ ಬೀಜ ಹಾಕುವ ಕ್ರಮವಾಗಿರುತ್ತದೆ. ಅಂದರೆ ಪಗ್ಗು ತಿಂಗಳ ಮೊದಲ ದಿನ ಬಿಸುಪರ್ಬದ ಈ ಅಪ್ಪರೆ ಪಾಡುನ ಮತ್ತು ಕೈಬಿತ್ತ್ ದೀಪುನದಲ್ಲಿಂದ ಹಿಡಿದು 'ನಿರ್ನಾಲ' (ತುಳುವರ ಆರನೆಯ ತಿಂಗಳು) ತಿಂಗಳ 'ಕಾವೇರಿ ಸಂಕ್ರಾಂತಿ' ಆಚರಣೆಯಲ್ಲಿನ 'ಬಿತ್ತ್‌ದ ಮುಡಿ' ಅಟ್ಟಕ್ಕೆ ಹಾಕುವಲ್ಲಿವರೆಗಿನ ಆರು ತಿಂಗಳು 'ಎಣೇಲು' ಬೇಸಾಯ. 'ಬೊಂತೆಲ್' (ತುಳುವರ ಏಳನೆಯ ತಿಂಗಳು) ತಿಂಗಳಿಂದ 'ಸುಗ್ಗಿ' (ತುಳುವರ ಕೊನೆಯ ತಿಂಗಳು) ತಿಂಗಳವರೆಗೆ ಆರು ತಿಂಗಳು 'ಸುಗ್ಗಿ' ಮತ್ತು 'ಕೊಳಕೆ' ಬೇಸಾಯ. ಹಾಗಾಗಿ ಬಿಸುಪರ್ಬದ ದಿನ ತುಳುವರು ಬೇಸಾಯ ಆರಂಭಿಸುತ್ತಾರೆ. ಮುಂದೆ ಯಾವಾಗ ಬೇಕಾದರೂ ಬೀಜ ಬಿತ್ತನೆ ಮಾಡಬಹುದಾಗಿದೆ. ಈ ನೆಲೆಯಲ್ಲಿ 'ಪಗ್ಗುಡೆ ಎರುಕಟ್ಟ್ ದೆತ್ತೊನುಲ, ಬಗ್ಗ್‌ದ್ ನೇಜಿನ್ ಪಾಡೊನುಲ' ('ಪಗ್ಗು' ತಿಂಗಳಲ್ಲಿಯೇ ಎತ್ತು ಕೋಣಗಳನ್ನು ತೆಗೆದುಕೊ, ಬಗ್ಗಿ ನೇಜಿ ಹಾಕಿಕೊ) ಮತ್ತು 'ಪಗ್ಗುಡ್ ಬಗ್ಗ್‌ನಾಯೆ ಸುಗ್ಗಿಡ್ ಸರ್ತಾಯೆ' (ಪಗ್ಗು ತಿಂಗಳಲ್ಲಿ ಬಗ್ಗಿದವ ಸುಗ್ಗಿ ತಿಂಗಳಲ್ಲಿ ನೆಟ್ಟಗಾದ) ಎಂಬ ಗಾದೆ ಮಾತುಗಳು ಹುಟ್ಟಿಕೊಂಡಿವೆ. 'ಪಗ್ಗು ಹದಿನೆಂಟು' ಹೋಗುವ ಮೊದಲು ನೇಜಿ ಹಾಕಿದರೆ ಒಳ್ಳೆಯದಂತೆ. ಆದುದರಿಂದ ಕೆಲವರು ಆ ದಿನ ಕೈಬಿತ್ತ್ ಹಾಕುವ ಕ್ರಮವೂ ಇದೆ. ಹಿಂದಿನ ಕಾಲದಲ್ಲಿ 'ಚಾಲ್‌ಗೇಣಿ' ಮತ್ತು 'ವರ್ಷಗೇಣಿ' ದುಡಿಮೆಗೆ ಭೂಮಿ, ತೋಟ, ಮನೆ ಮಾಡುತ್ತಿದ್ದವರು ಬಿಸುಪರ್ಬದ ದಿನ ಹಳೆಯ ಬೇಸಾಯ ಬಿಡುವುದು ಮತ್ತು ಹೊಸತು ಆರಂಭಿಸುವುದು ಮಾಡುತ್ತಿದ್ದರು. ಬಿಸುಪರ್ಬದ ಕಾಲಕ್ಕೆ ಭೂಮಿ ಹೊರಗಿನಿಂದ ರಣಗುಟ್ಟುತ್ತದೆ. ಆದರೆ ಒಳಗಿಂದೊಳಗೆ ತಂಪು ಕೊಡುತ್ತದೆ. ಈ ದಿನ ಸಿಹಿನೀರಿನಲ್ಲಿ, ಕೆರೆಗಳಲ್ಲಿ, ಸಮುದ್ರದಲ್ಲಿ ಮೀನು ಹಿಡಿಯುತ್ತಾರೆ. ಅಂದು ಸಣ್ಣ ಮಕ್ಕಳನ್ನು ಚಿನ್ನಬೆಳ್ಳಿಗಳ ಆಭರಣ ತಯಾರಿಸುವ ಆಚಾರಿಗಳಲ್ಲಿಗೆ ಕರೆದುಕೊಡು ಹೋಗಿ ಕಿವಿಮೂಗು ಚುಚ್ಚಿಸುತ್ತಾರೆ. ಕೆಲವೊಮ್ಮೆ ಸಾಮೂಹಿಕವಾಗಿ ಬೇಟೆಗೆ ಹೋಗುವ ಕ್ರಮವೂ ಇದೆ. ಅಂದರೆ ತುಳುವರಿಗೆ ಆ ದಿನ ರಜಾದಿನವಾಗಿರುತ್ತದೆ. ಯಾವುದೇ ಕೆಲಸಗಳಿಗೆ ತೆರಳದೆ ಆಚರಣೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಮಧ್ಯಾಹ್ನ ಗೇರುಬೀಜದ 'ಬೊಂಡು' (ಗೋಡಂಬಿ) ಹಾಕಿದ ಪಾಯಸ ಮಾಡಿ ತರಕಾರಿ ಊಟ ಮಾಡುತ್ತಾರೆ. ರಾತ್ರಿಯ ಊಟಕ್ಕೆ ಏನಾದರೂ ವಿಶೇಷ 'ಅಡ್ಯೆ' (ಅಕ್ಕಿತಿಂಡಿ) ಇರುತ್ತದೆ. ಬೇಟೆಗೆ ಹೋದವರಿಗೆ ಏನಾದರೂ ಪ್ರಾಣಿ ಪಕ್ಷಿ ಸಿಕ್ಕಿದರೆ ಅವುಗಳನ್ನು ರಾತ್ರಿಗೆ ಪದಾರ್ಥ ಮಾಡುತ್ತಾರೆ. 'ಹೆಸರು' ಧಾನ್ಯದ ಪರಮಾನ್ನವನ್ನೂ ಮಾಡುತ್ತಾರೆ. ಹೀಗೆ ಈ ಪಾಯಸ, ಅಡ್ಯೆ ಪದಾರ್ಥಗಳನ್ನು ಮನೆಯವರು ಸ್ವೀಕರಿಸುವ ಮೊದಲು 'ಕುಲೆ'ಗಳಿಗೆ (ಪಿತೃಗಳಿಗೆ) ಬಡಿಸುತ್ತಾರೆ. ಹಿಂದೆ 'ಧಣಿ-ಒಕ್ಕಲು'ಗಳ ಕಾಲದಲ್ಲಿ 'ಒಕ್ಕಲುಕುಟುಂಬ' 'ಧಣಿ'ಗಳಿಗೆ ತಾವು ಕೊಡಲು ಬಾಕಿಯಿದ್ದ ಹಿಂದಿನ ವರ್ಷದ ಗೇಣಿಯನ್ನು ಬಿಸುಪರ್ಬದ ದಿನ ಫಲಕಾಣಿಕೆಗಳ ಜೊತೆಗೆ ಒಪ್ಪಿಸುವ ಕ್ರಮವೂ ಇತ್ತು. ಬಳಿಕ ಆ ವರ್ಷದ ಬೇಸಾಯಕ್ಕೆ ಧಣಿಗಳಿಂದ ಒಪ್ಪಿಗೆ ಪಡೆದುಕೊಂಡು ಬಿಸು ಆಚರಣೆಯನ್ನು ಮಾಡುತ್ತಿದ್ದರು.

ಬಿಸು ಆಚರಣೆಯ ದಿನ ಇದರ ಅಂಗವಾಗಿ ಉಳುವಾಗ 'ಎದಂಗ್ ಮಾದಾವುನ' ಕ್ರಮ ನಡೆಯುತ್ತದೆ ; ಮಾತ್ರವಲ್ಲ ಎರಡು ಪೊರಿ ಮಾದಾವುನ ಕ್ರಮ ಆದ ಅನಂತರ ಆ ಪೊರಿಯ ಮಧ್ಯೆ ಹಾಕುವ ಗೊಬ್ಬರವನ್ನು ಸಾಮಾನ್ಯವಾಗಿ ಮನೆಯ ಯಜಮಾನನೇ ಹಾಕಬೇಕು ಮತ್ತು ಆತ ಆ ಗೊಬ್ಬರವನ್ನು ಹಟ್ಟಿಯಿಂದಲೇ ತೆಗೆದು ಸ್ವತಃ ಎತ್ತಿ ತಲೆಯಲ್ಲಿ ಹೊತ್ತು ತಂದು ಹಾಕಬೇಕೆಂಬುದು ಸಂಪ್ರದಾಯ.

ಈ ದಿನ ಕುಟುಂಬದ ಸದಸ್ಯರೆಲ್ಲ ಮನೆಯಲ್ಲೇ ಇರುತ್ತಾರೆ. ಆಚರಣೆಯಲ್ಲಿ ಭಕ್ತಿ ಸಂಭ್ರಮಗಳಿಂದ ಪಾಲ್ಗೊಳ್ಳುತ್ತಾರೆ.

ಬೇಟೆಯಾಡುವುದಲ್ಲದೆ ಕೋಳಿಅಂಕ, ಇಲ್ಲವೆ ತೆಂಗಿನಕಾಯಿ ಕುಟ್ಟುವಂತಹ ಕ್ರೀಡೆಯನ್ನು ಮನೋರಂಜನೆಗಾಗಿ ಆಡುತ್ತಾರೆ. ಆದರೆ ಹುಟ್ಟು, ಸಾವುಗಳ ಸೂತಕಗಳು ಬಂದರೆ ಆ ವರ್ಷ ಇದನ್ನು ಮಾಡುವುದಿಲ್ಲ.

ಈ ಆಚರಣೆಯಲ್ಲಿ ಮೂರು ಮುಖ್ಯ ಅಂಶಗಳಿವೆ. ಅವುಗಳೆಂದರೆ ಮೊದಲನೆಯದಾಗಿ 'ಅಪ್ಪರೆಪಾಡುನ' ಕ್ರಮ, ಎರಡನೆಯದಾಗಿ 'ಬಿಸುಕಣಿ ಇಡುವುದು', ಮೂರನೆಯದಾಗಿ 'ಬುಳೆಕಾಣಿಕೆ ಒಪ್ಪಿಸುವುದು'. ಇವು ಮೂರು ಬತ್ತ ಬೇಸಾಯದ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವದ ಸಂಗತಿಗಳು. ಬೇಸಿಗೆ ಕಳೆದು ಮಳೆಗಾಲಕ್ಕೆ ಋತು ಪರಿವರ್ತನೆಯಾಗುವ ಸಂಕ್ರಮಣ ಕಾಲಘಟ್ಟದಲ್ಲಿ ಈ ಆಚರಣೆ ನಡೆಯುತ್ತದೆ. ಬಿಸಿಲಿಗೆ ಬೆಂದ ಭೂಮಿಗೆ ಮಳೆನೀರಿನ ಸ್ಪರ್ಶವಾದಾಗ ಭೂಮಿ ಹೊಸಸೃಷ್ಟಿಗೆ ತನ್ನನ್ನು ತೆರೆದುಕೊಳ್ಳುವ ಸಮಯವಿದು. ಹಾಗಾಗಿ ತುಳುನಾಡಿನಲ್ಲಿ ಈ ಕಾಲಪರಿವರ್ತನೆಯ ಸಂದರ್ಭವನ್ನು ಹೊಸವರ್ಷವೆಂದು ಗುರುತಿಸಿರುವುದರಲ್ಲಿ ವಿಶೇಷ ಅರ್ಥವೂ ಇದೆ.

**ಅಪ್ಪರೆಪಾಡುನ :** ಅಪ್ಪರೆಪಾಡುನ ಎಂಬುದು ತುಳು ಭಾಷೆಯ ಪದಪುಂಜ. ಎತ್ತುಗಳನ್ನು ಹೂಳಲು ಕಟ್ಟಿ ಎರಡು ಸುತ್ತು ಉಳುಮೆಮಾಡಿ, ಉಳುಮೆ ಮಾಡಿದ ಸ್ಥಳದಲ್ಲಿ ಸೊಪ್ಪು ಗೊಬ್ಬರ ಹಾಕುವುದನ್ನು 'ಅಪ್ಪರೆ ಪಾಡುನ' ಎಂದು ಕರೆಯುತ್ತಾರೆ. 'ಅಪ್ಪು' ಅಂದರೆ ಸೊಪ್ಪು ಮತ್ತು 'ಬರೆ' ಎಂದರೆ ಉಳುಮೆ ಮಾಡುವಾಗ ಉಂಟಾಗುವ ಗುರುತು. ಹಾಗಾಗಿ ಅಪ್ಪು-ಬರೆ ಸೇರಿ 'ಅಪ್ಪರೆ'ಯಾಗಿದೆ. ಈ ಅಪ್ಪರೆ ಪಾಡುನ ಕ್ರಮವು ಏಣೇಲು ಬೇಸಾಯ ಮಾಡಲು ಮುಹೂರ್ತ ಆಗಿರುವುದರಿಂದ ಇದು ಭೂಮಿಪೂಜೆಯಾಗಿದೆ.

**ಬಿಸುಕಣಿ ಇಡುವುದು :** ಬಿಸುಕಣಿ ಇಡುವುದು ಅಂದರೆ ಬಿಸುಪರ್ಬದಂದು ದೈವ-ದೇವರುಗಳಿಗೆ ಫಲಪುಷ್ಪಗಳನ್ನು ಇಟ್ಟು ದೀಪ ಬೆಳಗಿಸಿ ಕೈಮುಗಿದು, ಮುಂದಕ್ಕೆ ವರ್ಷದುದ್ದಕ್ಕೂ ನಮಗೆ ಒಳ್ಳೆಯದನ್ನು ಮಾಡುವಂತೆ ಕೋರಿ ಪ್ರಾರ್ಥನೆಯನ್ನು ಮಾಡಿ ಮುಂದಿನ ಕೃಷಿ ಚಟುವಟಿಕೆಗೆ ತೊಡಗುವ ಕ್ರಮ.

**ಬುಳೆಕಾಣಿಕೆ ಒಪ್ಪಿಸುವುದು :** ಬುಳೆ ಕಾಣಿಕೆ (ಬೆಳೆ ಕಾಣಿಕೆ) ಕೊಡುವುದು ಎಂದರೆ ಒಕ್ಕಲು ಕುಟುಂಬ ಬಿಸು ಪರ್ಬದ ದಿನ ಧಣಿಗಳಿಗೆ (ಒಡೆಯರಿಗೆ) ಕಾಣಿಕೆಯಾಗಿ ತರಕಾರಿಯೊ ಇಲ್ಲವೆ ಇನ್ನಿತರ ವಸ್ತುಗಳನ್ನು ಕೊಡುವುದು. ಹೀಗೆ ಕಾಣಿಕೆ ನೀಡಿ ಮುಂದಿನ ವರ್ಷದವರೆಗೆ ಒಕ್ಕಲುಗಳಾಗಿ ಮುಂದುವರಿಯಲು, ಹೊಲದಲ್ಲಿ ಬೇಸಾಯ ಮಾಡಲು ಅನುಮತಿ ಕೇಳುವುದಾಗಿರುತ್ತದೆ. ಒಕ್ಕಲು ಕುಟುಂಬ ಈ ರೀತಿ ಧಣಿಗಳಿಗೆ ಕಾಣಿಕೆ ಸಲ್ಲಿಸಿದರೆ, ಸಿರಿವಂತ ಇಲ್ಲವೆ 'ಗುತ್ತು' ಮನೆಯವರು, ಧಣಿ ಕುಟುಂಬದವರು ದೇವರಿಗೋ ದೈವಕ್ಕೋ ಈ ಬುಳೆಕಾಣಿಕೆಯನ್ನು ಅರ್ಪಿಸುತ್ತಾರೆ.

**2. ಪತ್ತನಾಜೆ :** 'ಪತ್ತನಾಜೆ' ಎಂದರೆ 'ಬೇಶ' (ತುಳುವರ ಎರಡನೆಯ ತಿಂಗಳ ಹೆಸರು). ತಿಂಗಳಲ್ಲಿ ಹತ್ತು ಹೋಗುವ ದಿನದಂದು ಆಚರಿಸುವ ಆಚರಣೆ. ತುಳುವರ ಧಾರ್ಮಿಕ, ಸಾಮಾಜಿಕ, ಇಲ್ಲವೆ ಸಾಂಸ್ಕೃತಿಕವಾದ ಆ ವರ್ಷದ ಎಲ್ಲಾ ಕಾರ್ಯಕ್ರಮಗಳೂ ಪತ್ತನಾಜೆಯಂದು ಮುಕ್ತಾಯವಾಗುತ್ತವೆ. ಮತ್ತೆ 'ಸೋಣ'(ತುಳುವರ ಐದನೆಯ ತಿಂಗಳ ಹೆಸರು) ತಿಂಗಳ ಅನಂತರವೇ ಯಾವುದೇ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು ಪರಂಪರಾಗತವಾಗಿ ಬೆಳೆದು ಬಂದಿದೆ. ವಿಶೇಷವಾಗಿ ಭೂತಾರಾಧನೆ, ನಾಗಾರಾಧನೆಗಳಂತಹ ಧಾರ್ಮಿಕ ಕಾರ್ಯಕ್ರಮಗಳು, ಯಕ್ಷಗಾನ ಬಯಲಾಟದಂತಹ ಸಾಂಸ್ಕೃತಿಕ ಕಲಾಪಗಳು, ಮದುವೆ - ಮುಂಜಿ, ಮನೆಒಕ್ಕಲು ಮುಂತಾದ ಸಾಮಾಜಿಕ ಉತ್ಸವಾಚರಣೆಗಳು ಪತ್ತನಾಜೆಯಂದು ಮುಕ್ತಾಯವಾಗುತ್ತದೆ.

ಪತ್ತನಾಜೆ ಎಂದರೆ "ವೃಷಭಮಾಸದ ಹತ್ತನೆಯ ದಿನ ; ಭೂತಾರಾಧನೆ, ಉತ್ಸವ, ಯಕ್ಷಗಾನ, ಮೊದಲಾದ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳು ಮುಕ್ತಾಯವಾಗುವ ದಿನ. ಅನಂತರ ಮಳೆಗಾಲ ಪ್ರಾರಂಭವಾಗುವುದರಿಂದ ಈ ದಿನದ ಬಳಿಕ ಮಳೆಗಾಲದ ಕೊನೆಯವರೆಗೆ ಇಂತಹ ಕಾರ್ಯಕ್ರಮಗಳು ನಡೆಯುವುದಿಲ್ಲ ; The tenth day of the second solar month (The concluding day for all religious and cultural functions of the season like Bhuta worship, Yakshagana play etc". (ತುಳು ನಿಘಂಟು, 1997, ಪುಟ - 1991)

ಪತ್ತನಾಜೆ ಎನ್ನುವುದು ತುಳುವರಿಗೆ ಕಾಲ ಬದಲಾವಣೆಯ, ಋತು ಪರಿವರ್ತನೆಯ ಒಂದು ನಿರ್ದಿಷ್ಟ ಗಡುವು ಆಗಿದೆ. ಆ ದಿನ ಮನೆಯ ಹೆಂಗಸರು ಮನೆಯನ್ನು ಸೆಗಣಿ ಸಾರಿಸಿ ಪರಿಶುದ್ಧಗೊಳಿಸುತ್ತಾರೆ. ಕೆಲವರು ಮನೆಯಲ್ಲಿ ಆರಾಧಿಸುವ / ನಂಬುವ ಎಲ್ಲ ಭೂತಗಳಿಗೆ ಆ ದಿನ 'ಕಾಲದಿ' (ಕಾಲಾವಧಿ) ಉತ್ಸವ ಮಾಡುತ್ತಾರೆ. ಹಾಗಾಗಿ ದೈವಸ್ಥಾನ, ಚಾವಡಿ ಶುದ್ಧ ಮಾಡುತ್ತಾರೆ. 'ಮಣೆಮಂಚ' (ಭೂತಗಳ ಮೂರ್ತಿಗಳನ್ನು ಇಡುವ ಮರದ ಸಾಧನ)ವನ್ನು ಗುಡಿಸುತ್ತಾರೆ. 'ಮುದ್ರೆ' (ಅರಿಶಿನ ಮಿಶ್ರಿತ ನೀರು) ಚಿಮುಕಿಸುತ್ತಾರೆ. 'ಹೋಮ' ಮಾಡುತ್ತಾರೆ. ಭೂತಗಳಿಗೆ, ನಾಗನಿಗೆ 'ಅಗೆಲು', 'ತಂಬಿಲ' ಇತ್ಯಾದಿಗಳನ್ನು ಕೊಡುತ್ತಾರೆ. 'ಪರ್ವ'ವನ್ನು ಮಾಡುತ್ತಾರೆ. ನೆರೆ ಹೊರೆಯವರನ್ನು, ಬಂಧು-ಬಳಗವನ್ನು ಆಹ್ವಾನಿಸುತ್ತಾರೆ. ಕಾಲಾವಧಿಯ ತಂಬಿಲಕ್ಕೆ ಕುಟುಂಬದ ದೂರ ದೂರದಲ್ಲಿದ್ದ ಪೀಳಿಗೆಯವರು ಎಲ್ಲರೂ ಆ ದಿನ ತವರು ಮನೆಯಲ್ಲಿ ಸೇರುತ್ತಾರೆ. ಹಿಂಗಾರದ ಚೂರು ಕೈಯಲ್ಲಿ ಹಿಡಿದುಕೊಂಡು ಮಣೆಮಂಚದ ಎದುರು ನಿಲ್ಲುತ್ತಾರೆ. ಮನೆಯ ಯಜಮಾನ ಇಲ್ಲವೆ ಸೇರಿದವರಲ್ಲಿ ತಿಳಿದವರೊಬ್ಬರು ಹೀಗೆ 'ನುಡಿಕಟ್ಟ್' (ಪ್ರಾರ್ಥನೆ) ಸಲ್ಲಿಸುತ್ತಾರೆ.

"ಸ್ವಾಮೀ ದೈವಗಳೇ, ಯಾವ ಕಾಲದಲ್ಲಿ ತುಳುನಾಡಿನ ಈ ಪಂಚವರ್ಣದ ನಾಗನಡೆಯ ಪುಣ್ಯಭೂಮಿಯಲ್ಲಿ ನೀವು ನೆಲೆಯಾಗಿದ್ದೀರಿ ಎಂದು ನಮಗೆ ತಿಳಿಯದು. ನಮ್ಮ ಹಿರಿಯರು ನಂಬಿಕೊಂಡು ಬಂದಂತೆ ನಾವೂ ನಡೆದುಕೊಂಡು ಬಂದಿದ್ದೇವೆ. ಅದರಂತೆ ಇವತ್ತು ನಿಮಗೆ ಕಾಲಾವಧಿಯ ಭೋಗ-ತಂಬಿಲ ಕೊಡುತ್ತಿದ್ದೇವೆ. ನಾಲ್ಕು ದಿನ ಬೇಗ ಕೊಡಬೇಕಿತ್ತು. ನಾಲ್ಕು ದಿನ ತಡವಾಗಿ ಹೋಯಿತು. ಸ್ವಾಮೀ ದೈವಗಳೇ, ಈ ದಿನ ನಿಮ್ಮ ಸ್ಥಾನ ಚಾವಡಿಯ ಬಾಗಿಲಲ್ಲಿ ಗುಡಿಸಿರುವ ಕಸದಲ್ಲಿ, ಸಾರಿಸಿದ ಸೆಗಣಿಯಲ್ಲಿ, ಮಾಡಿದ ಶುದ್ಧದಲ್ಲಿ, ಉರಿಸಿದ ನಂದಾದೀಪದಲ್ಲಿ, ಏರಿಸಿದ 'ಮೊಗಮೂರ್ತಿ' (ದೈವದ ಪ್ರತಿಮೆ)ಯಲ್ಲಿ, ಇಟ್ಟ ಸ್ವಸ್ತಿಕದಲ್ಲಿ, ಮಾಡಿದ ಅಲಂಕಾರದಲ್ಲಿ, ಬಡಿಸಿದ ಅಗೆಲಲ್ಲಿ, ಮುದ್ರೆಯಲ್ಲಿ ಹೋಮದಲ್ಲಿ, ತೂತು ಮಾಡಿದ ಎಳನೀರಲ್ಲಿ, ಪರವೂರಿನ 'ಪೂಜಾರಿ' (ದೈವದ ಪಾತ್ರಿ)ಯನ್ನು ತಂದು ನಿಲ್ಲಿಸಿದ ದರ್ಶನದಲ್ಲಿ ಕೊಟ್ಟಮಾತಿನಲ್ಲಿ, ಕತ್ತರಿಸಿದ ಕೋಳಿಯಲ್ಲಿ ಅನೇಕ ತರದ ತಪ್ಪುಗಳಾಗಿರಬಹುದು. ಸ್ವಾಮೀ ದೈವಗಳೇ, ಒಂದು ವೇಳೆ ವಿಷಘಳಿಗೆ ಇದ್ದರೂ ಅಮೃತವನ್ನಾಗಿ ಮಾಡಿ, ನಿಮ್ಮನ್ನು ಸೃಷ್ಟಿಮಾಡಿದ ದೇವರ ಪಾದ ಹಿಡಿದುಕೊಳ್ಳಿ. ಗ್ರಾಮದೇವರನ್ನು

ನೆನಪಿಸಿಕೊಳ್ಳಿ ಭೂಮಿಯ ಒಡೆಯನಾಗಿರುವ ನಾಗದೇವರಿಗೆ ಸಂಧಿ ಹೇಳಿ. ವಿಷಘಳಿಗೆಯನ್ನು ಗರುಡನ ಬಾಯಿಗೆ ಹಾಕಿಸಿಕೊಂಡು, ಅಮೃತಘಳಿಗೆ ಮಾಡಿಕೊಂಡು ಕೊಟ್ಟಂತಹ ಭೋಗ-ತಂಬಿಲವನ್ನು ಸಂತೋಷದಲ್ಲಿ ಸ್ವೀಕಾರ ಮಾಡಿಕೊಳ್ಳಿ. ನಂಬಿದ ಸಂಸಾರದ ಹೆಣ್ಣು ಕೊಟ್ಟಲ್ಲಿಗಾಗಲಿ, ಹೆಣ್ಣು ತಂದಲ್ಲಿಗಾಗಲಿ ಏನೂ ತೊಂದರೆಯಿಲ್ಲದೆ ಕಾಪಾಡಿ. ಹೊಟ್ಟೆಪಾಡಿಗಾಗಿ ಪರವೂರಿಗೆ ಹೋದ ಮಕ್ಕಳ ಹಣೆಗೆ ಒಂದುಚೂರೂ ತೊಂದರೆಯಾಗದಂತೆ ಕಾಪಾಡಿಕೊಂಡು ಬನ್ನಿ ಎಂದು ಹತ್ತು ಮಂದಿ ಸೇರಿಕೊಂಡು ಬೇಡುತ್ತಿದ್ದೇವೆ".

ಕುಟುಂಬದಲ್ಲಿ ಹಿಂದೆ ಗತಿಸಿಹೋದ ಪಿತೃಗಳ ಆರಾಧನೆಯೂ ಈ ದಿನ ನಡೆಯುತ್ತದೆ. ಭೂತದ ಗುಡಿಗಳಲ್ಲಿ ತಂಬಿಲ, 'ಕೋಲ'ಗಳು ನಡೆದ ಬಳಿಕ ಅವುಗಳ ಬಾಗಿಲು ಮುಚ್ಚುತ್ತಾರೆ. ಊರಿನ ದೇವಾಲಯಗಳಲ್ಲೂ ಪತ್ತನಾಜೆಯ ದಿನ ವಿಶೇಷ ಪೂಜೆ ಇತ್ಯಾದಿ ನಡೆಯುತ್ತದೆ. ಪತ್ತನಾಜೆಯಂದು ಹಲಸಿನಕಾಯಿಯ ಪಲ್ಯವನ್ನು ವಿಶೇಷ ಪದಾರ್ಥವನ್ನಾಗಿ ಮಾಡುತ್ತಾರೆ. ಹಲಸಿನಹಣ್ಣಿನ ಗಟ್ಟಿ(ಅಕ್ಕಿಯೊಂದಿಗೆ ಹಲಸಿನ ಹಣ್ಣು ಬೆರೆಸಿ ಮಾಡುವ ತಿಂಡಿ) ಮಾಡಿ ಪಿತೃಗಳಿಗೆ ಬಡಿಸುತ್ತಾರೆ. ಭೂತಗಳಿಗೆ ಬಡಿಸಲು ತಯಾರಿಸಿದ ಕೋಳಿ ಇಲ್ಲವೇ ಯಾವುದೇ ಪದಾರ್ಥವನ್ನು ರಾತ್ರಿ ಊಟಕ್ಕೆ ಬಳಸುತ್ತಾರೆ. ಪತ್ತನಾಜೆಯ ಗಡುವಿನೊಳಗಾಗಿ ಭೂಮಿಯನ್ನು ಉತ್ತು ಹಸನುಗೊಳಿಸಿ ಮುಂದೆ ನೇಜಿ ನಾಟಿಗಾಗಿ ಸಿದ್ಧಗೊಳಿಸಿರಬೇಕು. ಅಂತೆಯೇ ಆ ದಿನ ಆ ವರ್ಷದ ಕೊನೆಯ ಯಕ್ಷಗಾನ ಬಯಲಾಟ ನಡೆಯುತ್ತದೆ. ಕಾಲಿಗೆ ಕಟ್ಟಿದ ಗೆಜ್ಜೆ ಆ ದಿನ ಬಯಲಾಟ ಆಡಿ ಬಿಚ್ಚಿಸುತ್ತಾರೆ. 'ಪತ್ತನಾಜೆ ಬತ್ತಂಡ್, ಜತ್ತಿ ಆಟೊ ಉಂತ್‌ಡ್' (ಪತ್ತನಾಜೆ ಬಂತು, ಹೊರಟ ಆಟ ನಿಂತಿತು) ಎಂಬ ಗಾದೆಯೇ ಇದೆ.

**3. ಆಟಿ ಅಮಾವಾಸ್ಯೆ :** 'ಆಟಿ' ತಿಂಗಳು (ತುಳುವರ ನಾಲ್ಕನೆಯ ತಿಂಗಳು) ಮಳೆಗಾಲದ ಮಧ್ಯಭಾಗವಾಗಿದ್ದು, ಎಡೆಬಿಡದೆ ಮಳೆ ಸುರಿಯುವ ತಿಂಗಳು. ಈ ತಿಂಗಳಲ್ಲಿ ಬರುವ ಅಮಾವಾಸ್ಯೆಯಂದು ತುಳುವರು ಅತ್ಯಂತ ಶ್ರದ್ಧೆಯಿಂದ ಆಟಿ ಅಮಾವಾಸ್ಯೆ ಆಚರಿಸುತ್ತಾರೆ.

'ಆಟಿ ಅಮಾವಾಸ್ಯೆ' ಎಂದರೆ "ಕರ್ಕಟ ಮಾಸದ ಅಮಾವಾಸ್ಯೆ. ಸಮುದ್ರ ಸ್ನಾನ, ಹಾಲೆಮರದ ಕೆತ್ತೆಯ ರಸಪಾನ, ಭೂತಗಳಿಗೆ ಅಗೆಲ್ ಅರ್ಪಿಸುವುದು ಮೊದಲಾದವುಗಳು ಈ ದಿನದ ವಿಶೇಷ ಆಚರಣೆಗಳು. The new moon day in the month of aati. Bathing in the sea, drinking the juice extracted from the bark of the tree Alstonia sholaris, offering agelu to the bhutas are the special performance of this days". (ತುಳು ನಿಘಂಟು, 1997, ಪುಟ - 228)

ಆಟಿ ಅಮಾವಾಸ್ಯೆಯ ಹಿಂದಿನ ದಿನ ಇಲ್ಲವೆ ಅದೇ ದಿನ ಬೆಳಿಗ್ಗೆ ಹೆಂಗಸರು ಮನೆಯನ್ನು ಸೆಗಣಿ ಸಾರಿಸಿ ಶುದ್ಧಗೊಳಿಸುತ್ತಾರೆ. ಹಾಗೆಯೇ ಅಮಾವಾಸ್ಯೆಯ ಹಿಂದಿನ ದಿನ ಮನೆಯ ಯಜಮಾನ ಗುಡ್ಡಕ್ಕೋ ಕಾಡಿಗೋ ಹೋಗಿ 'ಪಾಲೆ' (ಹಾಲೆ) ಮರವನ್ನು ಹುಡುಕುತ್ತಾನೆ. ಅದರ ಬುಡದಲ್ಲಿ ವೀಳ್ಯ ಮತ್ತು ಒಂದು 'ಬೊಳ್ಫುಕಲ್ಲ್' (ಬೆಣಚು ಕಲ್ಲು)ನ್ನು ಇಟ್ಟು 'ಮದ್ದಾದ ಮದ್ದೆಲ್ಲ ಈ ಮರದಲ್ಲಿ ಬಂದು ಸೇರಲಿ ; ನಾನು ನಾಳೆ ಬೆಳಗ್ಗೆ ನಿನ್ನಲ್ಲಿಗೆ ಬರುವಾಗ ನೀನು ನಮಗೆ ಮದ್ದು ಕೊಡಬೇಕು' ಎಂದು ಪ್ರಾರ್ಥಿಸಿ ಒಂದು ನೂಲು ಕಟ್ಟಿ ಬರುತ್ತಾನೆ. ಮರುದಿನ ಮುಂಜಾನೆ ಬೆಳಕು ಹರಿಯುವ ಮೊದಲೇ ಮನೆಯ ಯಜಮಾನ ಎದ್ದು ಬೆತ್ತಲೆಯಾಗಿ ಆ ಮರದ ಬಳಿಗೆ ಹೋಗುತ್ತಾನೆ. ಹೋಗಿ ಹಾಲೆಮರಕ್ಕೆ ಒಂದು ಸುತ್ತು ಪ್ರದಕ್ಷಿಣೆ ಬಂದು ಕೈ ಮುಗಿದು ಹಿಂದಿನ ದಿನ ಅಲ್ಲಿಟ್ಟಿದ್ದ ಬೆಣಚು ಕಲ್ಲಿನಿಂದ ಮರದ ಕಾಂಡವನ್ನು ಜಜ್ಜಿ ಸಿಪ್ಪೆಯನ್ನು ತೆಗೆದು ಹಿಡಿದುಕೊಂಡು ಮನೆಗೆ ಬರುತ್ತಾನೆ. ಮನೆಯಲ್ಲಿ ಹೆಂಗಸರು ಆ ಹಾಲೆಮರದ ಸಿಪ್ಪೆಯನ್ನು ಅರೆಯುವ ಕಲ್ಲಿನಲ್ಲಿ ಇಲ್ಲವೆ ಕಡೆಯುವ ಕಲ್ಲಿನಲ್ಲಿ ಅರೆದೋ, ಕಡೆದೋ ಇಲ್ಲವೇ ಜಜ್ಜಿ ರಸ ತೆಗೆಯುತ್ತಾರೆ. ಹೀಗೆ ಕಡೆಯುವಾಗ ಇಲ್ಲವೇ ಜಜ್ಜುವಾಗ ಬೆಳ್ಳುಳ್ಳಿ, ಕರಿಮೆಣಸು, ಶುಂಠಿ, ಓಮ ಇತ್ಯಾದಿ ವಸ್ತುಗಳನ್ನು ಬೆರೆಸುತ್ತಾರೆ. ಕೊನೆಗೆ ಬೆಣಚು ಕಲ್ಲೊಂದನ್ನು ಬಿಸಿ ಮಾಡಿ ಆ ರಸದಲ್ಲಿ ಮುಳುಗಿಸಿ ಒಗ್ಗರಣೆ ಕೊಡುತ್ತಾರೆ. ಹೀಗೆ ಮನೆಯ ಯಜಮಾನ ಪಾಲೆ(ಹಾಲೆ)ಯ ಸಿಪ್ಪೆ ತಂದದ್ದನ್ನು ಮನೆಯ ಹೆಂಗಸರು ರಸ ತೆಗೆದು ತಯಾರಿಸಿಡುತ್ತಾರೆ. ಇತ್ತ ಮನೆಯ ಯಜಮಾನ ಮತ್ತು ಇತರ ಗಂಡಸರು ಏಣೇಲು ಬೆಳೆಗೆ, ನೇಜಿ ನೆಟ್ಟ ಗದ್ದೆಗಳಿಗೆ, ಹಟ್ಟಿ ಗೊಬ್ಬರದ ರಾಶಿಗೆ, 'ನಟ್ಟಿಕಾಯಿದೊಂಪ'(ತರಕಾರಿ ತೋಟ)ಗಳಿಗೆಲ್ಲ 'ಕಳ್ಳಿ' (ಹಾಲು ಬರುವ ಒಂದು ಮುಳ್ಳು ಜಾತಿಯ ಸಸ್ಯ) ಕುತ್ತಿ ಬರುತ್ತಾರೆ. ಕೆಲವರು ಗದ್ದೆಗೆ 'ಕಾಪು' (ಇದನ್ನು 'ಮುಕ್ಕಾರ್' ಎಂದೂ ಕರೆಯುತ್ತಾರೆ. ಅಂದರೆ ಮೂರು ಕಾಲುಗಳಿರುವಂತೆ ಮಾಡಿ ಅದರ ತುದಿಯಲ್ಲಿ ಕಳ್ಳಿ ಇಡುವ ಸಾಧನ) ಕುತ್ತುತ್ತಾರೆ. ಮತ್ತೆ ಕೆಲವರು ಕಾಸರ್ಕನ ಮರದ ಗೆಲ್ಲುಗಳನ್ನು ಕುತ್ತುವುದು ಉಂಟು. ಆದರೆ ಆಟಿ ಅಮಾವಾಸ್ಯೆಯ ದಿನ ಕಳ್ಳಿ ಅಥವಾ ಕಾಪು ಕುತ್ತುವುದೇ ಹೆಚ್ಚಾಗಿ ಕಂಡು ಬರುತ್ತದೆ. ಕಾಸರ್ಕನ ಗೆಲ್ಲನ್ನು ಇಲ್ಲವೇ ತರೋಳಿ ಗೆಲ್ಲನ್ನು ಗದ್ದೆಯಲ್ಲಿ ನೇಜಿ ನೆಟ್ಟ ತಕ್ಷಣವೇ ಕುತ್ತುತ್ತಾರೆ. ಆಟಿ ಅಮಾವಾಸ್ಯೆಯಂದು ಕಳ್ಳಿ ಕುತ್ತುವುದೇ ಪದ್ಧತಿ.

ಆಟಿ ಅಮಾವಾಸ್ಯೆಯ ಹಿಂದಿನ ದಿನವೇ ಗಂಡಸರು ಈ ಕಳ್ಳಿ ಕುತ್ತುವ ಇಲ್ಲವೇ ಕಾಪು ಹಾಕುವ ವ್ಯವಸ್ಥೆಗೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ತಮ್ಮ ತಮ್ಮ ಮನೆಗಳಲ್ಲಿ ಬೇಕಾಗುವಷ್ಟು ಕಳ್ಳಿಯ ಕೊಂಬೆಗಳನ್ನು ಗುಡ್ಡದಿಂದ ಸಂಗ್ರಹಿಸುತ್ತಾರೆ. ಅಷ್ಟೇ ಸಂಖ್ಯೆಯಲ್ಲಿ ಬಿದಿರಿನ 'ಅಂಡೆ' (ಬೊಂಬು)ಗಳನ್ನು, ಒಂದಾಳು ಉದ್ದದ ಕೋಲುಗಳನ್ನು ತಯಾರಿಸುತ್ತಾರೆ. ಅದರ ಮಧ್ಯಭಾಗದಲ್ಲಿ ಗಂಟು ಬರುವಂತೆ ಉಳಿದೆರಡು ಕಡೆಗಳಲ್ಲಿ ದೊಡ್ಡ ದೊಡ್ಡ ಟೊಳ್ಳುಗಳಿರುವಂತದ್ದನ್ನು ಸಂಗ್ರಹಿಸುತ್ತಾರೆ. ಈ ಬಿದಿರಿನ ಅಂಡೆಯ ಒಂದು ಟೊಳ್ಳಿನಲ್ಲಿ ಚೂರು ಮಣ್ಣು ತುಂಬಿಸುತ್ತಾರೆ. ಅದರಲ್ಲಿ ಕಳ್ಳಿಯ ಒಂದು ಕೊಂಬೆಯನ್ನು ಇಡುತ್ತಾರೆ. ಹೀಗೆ ಕಳ್ಳಿಯನ್ನಿಟ್ಟು ಅದರ ಸುತ್ತ 'ಈಚಲು ಮರ', 'ರಾವುಬೀಜ', 'ಕರಿಯನೆಕ್ಕಿ', 'ಬಿಳಿನೆಕ್ಕಿ', 'ಬಿದಿರು', 'ಓಟೆ', 'ನೆಲ್ಲಿ' ಮೊದಲಾದ ಗಿಡಮರಗಳ ಸೊಪ್ಪುಗಳನ್ನು ಜೋಡಿಸಿಡುತ್ತಾರೆ. ಹೀಗೆ ಬಿದಿರ ಅಂಡೆಯ ಒಂದು ತುದಿಯಲ್ಲಿ ಕಳ್ಳಿ ಇಟ್ಟು ಒಂದಾಳು ಉದ್ದದ ಕೋಲಿನ ಒಂದು ತುದಿಗೆ ಬಿದಿರ ಅಂಡೆಯ ಇನ್ನೊಂದು ಭಾಗದ ಟೊಳ್ಳಿನ ಮೂಲಕ ಸಿಕ್ಕಿಸುತ್ತಾರೆ. ಕೋಲಿನ ಇನ್ನೊಂದು ತುದಿಯನ್ನು ಚೂಪು ಮಾಡಿಡುತ್ತಾರೆ. ಹೀಗೆ ಕಳ್ಳಿ ಕುತ್ತಲು ತಯಾರಿ ನಡೆಸುತ್ತಾರೆ. ಕೆಲವರು ಬಿದಿರ ಅಂಡೆಯ ಬದಲಿಗೆ ಕೋಲಿನ ಒಂದು ತುದಿಗೆ ಮುಳಿ ಹುಲ್ಲನ್ನು ಕಟ್ಟಿ ಅದರಲ್ಲಿ ಮಣ್ಣು ಮತ್ತು ಇತರ ವಸ್ತುಗಳನ್ನಿಟ್ಟು ಕಳ್ಳಿ ಕಟ್ಟುತ್ತಾರೆ. ಮತ್ತೆ ಕೆಲವರು ಒಂದಾಳು ಗಾತ್ರದ ಮೂರು ಕೋಲುಗಳ ಸಹಾಯದಿಂದ ಮುಕ್ಕಾರ್ ಮಾಡುತ್ತಾರೆ. ಅದರ ಮೇಲ್ಭಾಗದಲ್ಲಿ 'ಮಾದೆರ್' ಬೀಳನ್ನು ಸುತ್ತಿ ಕಾಪು ಮಾಡುತ್ತಾರೆ. ಆ ಕಾಪಿನಲ್ಲಿ ಕಳ್ಳಿ ನೆಟ್ಟು ಅವುಗಳನ್ನು ಗದ್ದೆಗಳಿಗೆ ನೆಡುವ ಕ್ರಮವೂ ಇದೆ. ಹೀಗೆ ಅಮಾವಾಸ್ಯೆಯ ದಿನ ಬೆಳಗ್ಗೆ ಗಂಡಸರು ಕಳ್ಳಿ ನೆಡುವ ಕ್ರಮವನ್ನು ಮಾಡುತ್ತಾರೆ. ಇನ್ನೊಂದು ಕಡೆಗೆ ಹೆಂಗಸರು ಪಾಲೆ (ಹಾಲೆ) ಮರದ ರಸ ತಯಾರಿಸಿ ನೀರಿನಲ್ಲಿ ದಾನ ಬಿಡಲು ಸಿದ್ಧತೆ ನಡೆಸುತ್ತಾರೆ. 5 ವೀಳ್ಯದೆಲೆ, 1 ಅಡಕೆ, 1 ತೆಂಗಿನಕಾಯಿ, ನಾಲ್ಕಾಣೆ, ಇಲ್ಲವೆ ಒಂದು ಮುಕ್ಕಾಲ್ ಪೈಸೆ,

ದಾಸವಾಳ, 'ಇಟ್ಟೇವು', 'ನೈಕಂರ್ಬು', 'ರಥಹೂವು', 'ನೆಲಮುಚ್ಚಿರ್ ಹೂವು', 'ಹಾಲು ಹೂವು' ಇವೇ ಮೊದಲಾದ ವಿವಿಧ ಜಾತಿಯ 7 ಬಗೆಯ ಹೂವುಗಳು, ಬತ್ತಿ ಹಾಗೂ ಗಂಧ ಹಾಗೂ ಬತ್ತ, ಹೆಸರು, ಗೋಧಿ, ಕಡಲೆ, ಅವರೆ, ಎಳ್ಳು, ಉದ್ದು, ಹುರುಳಿ, ತೊಗರಿ ಮೊದಲಾದ ನವಧಾನ್ಯಗಳನ್ನು ಒಟ್ಟುಮಾಡಿ ಇಡುತ್ತಾರೆ. ಇವುಗಳನ್ನೆಲ್ಲ ಒಂದು 'ಕದಳಿಬಾಳೆ'ಯ ತುದಿ ಎಲೆಯಲ್ಲಿ ಜೋಡಿಸುತ್ತಾರೆ. ಇವುಗಳನ್ನು ಹಿಡಿದು ಮನೆಯ ಯಜಮಾನನ ನೇತೃತ್ವದಲ್ಲಿ ನೀರು ಹರಿಯುವ ತೋಡಿಗೋ, ನದಿಗೋ ಹೋಗುತ್ತಾರೆ. ಅಲ್ಲಿ ಎಲ್ಲರೂ ಸಾಲಾಗಿ ನಿಲ್ಲುತ್ತಾರೆ. ಬಾಳೆ ಎಲೆಯ ತುದಿಯಲ್ಲಿ ಬತ್ತಿ ಉರಿಸಿಟ್ಟು ಎಲೆಯನ್ನು ಕೈಯಲ್ಲಿ ಹಿಡಿದುಕೊಂಡು ಎಲ್ಲರ ತಲೆಗೂ ಮೂರು ಸುತ್ತು ತಂದು ಕೈ ಮುಗಿಯುತ್ತಾನೆ. ಅನಂತರ ನೀರಿನಲ್ಲಿ ದಾನ ಬಿಡುತ್ತಾನೆ. ಬಳಿಕ ಎಲ್ಲರೂ ನೀರಿನಲ್ಲಿ ಮುಳುಗಿ ಸ್ನಾನ ಮಾಡಿ ಮನೆಗೆ ಹಿಂತಿರುಗುತ್ತಾರೆ. ಇಲ್ಲಿಯವರೆಗೆ ಎಲ್ಲರೂ ಬರಿಹೊಟ್ಟೆಯಲ್ಲಿರುತ್ತಾರೆ. ಮನೆಗೆ ಬಂದು ಆಗಲೇ ತಯಾರಿಸಿಟ್ಟಿದ್ದ ಪಾಲೆ(ಹಾಲೆ) ಮರದ ರಸವನ್ನು ಅರ್ಧ ಅರ್ಧ ಕುಡ್ತೆಯಷ್ಟೋ ಇಲ್ಲವೇ ಸ್ವಲ್ಪ ಸ್ವಲ್ಪ ಸೇವಿಸುತ್ತಾರೆ. ಪಾಲೆ(ಹಾಲೆ) ರಸ ಅತ್ಯಂತ ಕಹಿ ಇರುವುದರಿಂದ ರಸ ಕುಡಿದಾದ ಮೇಲೆ ಬೆಲ್ಲ ತಿನ್ನುವುದೂ ಉಂಟು. ಕುಟುಂಬದ ಸದಸ್ಯರು ಎಲ್ಲಿದ್ದರೂ ಆಟಿ ಅಮಾವಾಸ್ಯೆಯ ದಿನ ಮನೆಗೆ ಬರುತ್ತಾರೆ. ಈ ಆಚರಣೆಯಲ್ಲಿ ಭಕ್ತಿ ಸಂಭ್ರಮಗಳಿಂದ ಪಾಲ್ಗೊಳ್ಳುತ್ತಾರೆ. ಈ ಆಚರಣೆಯ ಸಂತೋಷಾರ್ಥವಾಗಿ ಬೇಟೆಗೆ ಹೋಗುವುದು, ಕೋಳಿಅಂಕ ಮಾಡುವುದು, ತೆಂಗಿನಕಾಯಿ ಕುಟ್ಟುವಂತಹ ಜಾನಪದ ಆಟಗಳು ನಡೆಯುತ್ತವೆ. ಅಂತೆಯೇ ಚೆನ್ನೆಮಣೆಯಾಟವನ್ನು ವಿಶೇಷವಾಗಿ ಆಟಿತಿಂಗಳುದ್ದಕ್ಕೂ ಆಚರಿಸುತ್ತಾರೆ. ಕೆಲವು ಮನೆಗಳಲ್ಲಿ ಈ ದಿನ ಹಟ್ಟಿಮಾರಿ ಆಚರಣೆ ಮಾಡುವುದಿದೆ. ಅಂದರೆ ಹಟ್ಟಿಗೆ, ಜಾನುವಾರುಗಳಿಗೆ ಸಂಬಂಧಿಸಿದ ಆಚರಣೆ ಇದಾಗಿದ್ದು, ಹಂದಿ ಇಲ್ಲವೆ ಕೋಳಿಯನ್ನು ಬಲಿ ಕೊಡುವುದಾಗಿದೆ.

ಇಷ್ಟೆಲ್ಲ ಕ್ರಿಯಾಚರಣೆಗಳು ಆದ ಮೇಲೆ ಉಪಾಹಾರ ಮಾಡುತ್ತಾರೆ. ಆ ದಿನದ ಬೆಳಗ್ಗಿನ ಉಪಾಹಾರಕ್ಕೆ ಹೆಂಗಸರು 'ಮರಚೇವು' (ಮರಕೆಸು)ವನ್ನು ಹಾಕಿದ 'ಪತ್ರೊಡೆಅಡ್ಯೆ'(ಅಕ್ಕಿತಿಂಡಿ) ಮಾಡಿರುತ್ತಾರೆ. ಎಲ್ಲರೂ ಪತ್ರೊಡೆ ಸೇವಿಸುತ್ತಾರೆ. ಉಳಿದಂತೆ ಕೆಲವು ಮನೆಗಳಲ್ಲಿ 'ರಾಹು', 'ಕಲ್ಲುರ್ಟಿ', 'ಗುಳಿಗ' ಮೊದಲಾದ ಸಣ್ಣ ಸಣ್ಣ ಭೂತಗಳಿಗೆ ಬಡಿಸುತ್ತಾರೆ. ಈ ಭೂತಗಳಿಗೆ ಮಧ್ಯಾಹ್ನ ಇಲ್ಲವೆ ಸಂಜೆ 'ಅಗೆಲು' ಬಡಿಸಿ ಪ್ರಾರ್ಥನೆ ಮಾಡಿ ಕೈ ಮುಗಿಯುತ್ತಾರೆ. ಮಧ್ಯಾಹ್ನ ಎಂದಿನಂತೆ ಊಟ ನಡೆಯುತ್ತದೆ. ರಾತ್ರಿ ಭೂತಗಳಿಗೆ ಬಡಿಸಿದ ಮನೆಯಲ್ಲಿ ಸಾಮಾನ್ಯವಾಗಿ ಕೋಳಿ ಪದಾರ್ಥವಿರುತ್ತದೆ. ರೊಟ್ಟಿ ಮಾಡುತ್ತಾರೆ. ಕೆಲವರು ಮೀನು ಪದಾರ್ಥ ಮಾಡಿದರೆ ಕೆಲವರು ತರಕಾರಿ ಪದಾರ್ಥ ಮಾಡಿ ಏನಾದರೂ 'ಅಡ್ಯೆ' (ಅಕ್ಕಿತಿಂಡಿ) ಮಾಡುವುದುಂಟು. ಸಾಮಾನ್ಯವಾಗಿ ಆಟಿ ಅಮಾವಾಸ್ಯೆಗೆ ರೊಟ್ಟಿ ಮಾಡುವುದು ಹೆಚ್ಚು ಕಂಡು ಬರುತ್ತದೆ. ಗುಡ್ಡೆಯಲ್ಲಿ ಬೆಳೆಯುವ 'ಕೇನೆಕಂಡೆ' (ಕೆಸುಗೆಡ್ಡೆ) ತಂದು ಅಕ್ಕಿಯ ಜೊತೆಗೆ ಕಡೆಯ ಕೇನೆದ ಪುಂಡಿ ಮಾಡುತ್ತಾರೆ. ಬೆಳಗ್ಗೆಯ ಪಾಲೆ(ಹಾಲೆ) ಮರದ ರಸ, ಪತ್ರೊಡೆ ಮತ್ತು ರಾತ್ರಿಯ ಅಡ್ಯೆ (ಅಕ್ಕಿತಿಂಡಿ) ಪದಾರ್ಥ ಇವುಗಳನ್ನು ಮನುಷ್ಯ ಸ್ವೀಕರಿಸುವ ಮೊದಲು ಕುಲೆಗಳಿಗೆ (ಪಿತೃಗಳಿಗೆ) ಬಡಿಸುವುದುಂಟು. ಈ ಕೆಲಸವನ್ನು ಮನೆಯ ಹೆಂಗಸರೇ ಹೆಚ್ಚಾಗಿ ಮಾಡುತ್ತಾರೆ. ಹೀಗೆ ಆಟಿ ಅಮಾವಾಸ್ಯೆಯನ್ನು ತುಳುವರು ಅತ್ಯಂತ ಭಕ್ತಿ ಶ್ರದ್ಧೆಯಿಂದ ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಾರೆ. ಆದರೆ ಹುಟ್ಟು ಸಾವುಗಳ ಸೂತಕಗಳು ಬಂದರೆ ಈ ಆಚರಣೆಯನ್ನು ಮಾಡುವುದಿಲ್ಲ.

**4. ನಾಗರಪಂಚಮಿ :** ಆಟಿ ಅಮಾವಾಸ್ಯೆ ಅನಂತರ ಬರುವ ಪಂಚಮಿಯಂದು 'ನಾಗರ ಪಂಚಮಿ' ಬರುತ್ತದೆ. ಹಾಗಾಗಿ ಇದು ಸಾಮಾನ್ಯವಾಗಿ ಆಟಿ(ತುಳುವರ ನಾಲ್ಕನೆಯ ತಿಂಗಳು) ತಿಂಗಳಲ್ಲಿಯೇ ಬರುತ್ತದೆ. ಕೆಲವೊಮ್ಮೆ 'ಸೋಣ' (ತುಳುವರ ಐದನೆಯ ತಿಂಗಳು) ತಿಂಗಳಲ್ಲಿಯೂ ಬರುವುದಿದೆ. "ತುಳುನಾಡು ನಾಗಲೋಕವಾಗಿತ್ತೆಂದೂ, ಇಲ್ಲಿಗೆ ನಾಗಬ್ರಹ್ಮವೆಂಬ ದೈವವೇ ಸೃಷ್ಟಿಕರ್ತ ಸ್ಥಾನದಲ್ಲಿರುವುದಾಗಿಯೂ ಜನಪದ ಪ್ರತೀತಿ ಇದೆ. ಬ್ರಹ್ಮ, ನಾಗಬ್ರಹ್ಮ, ನಾಗಲಿಂಗ, ಬ್ರಹ್ಮಲಿಂಗ, ನಾಗಬ್ರಹ್ಮಲಿಂಗೇಶ್ವರ, ನಾಗಯಕ್ಷ(ಕ್ಷಿ), ಬೆರ್ಮೆರ್, ಶೇಷನಾಗ, ಅನಂತ ಪದ್ಮನಾಭ, ಸುಬ್ರಹ್ಮಣ್ಯ ಮೊದಲಾದ ಬೇರೆ ಬೇರೆ ನಾಮರೂಪಗಳಿಂದ ಆತನನ್ನು ತುಳುನಾಡಿನಲ್ಲಿ ಆರಾಧಿಸುತ್ತಾರೆ". (ತುಳುವ ಜಾನಪದ ; ಕೆಲವು ನೋಟಗಳು, 2007, ಪು. 17)

ನಾಗರ ಪಂಚಮಿ ಎಂದರೆ "ಶ್ರಾವಣಮಾಸದ ಪಂಚಮಿ ನಾಗರ ಪಂಚಮಿ ಚಾಂದ್ರಮಾನ ಪಕ್ಷದ ಐದನೆಯ ದಿನ. ನಾಗದೇವರ ಪೂಜೆಗೆ ಪ್ರಶಸ್ತವಾದ ದಿನ ; The fifth day of the for night in the fifth lunar month ; festival day for the serpent god" (ತುಳು ನಿಘಂಟು, 1997, ಪು. 1734)

ನಾಗರ ಪಂಚಮಿಯ ಪ್ರಯುಕ್ತ ಈ ದಿನ ಹೆಂಗಸರು ಮನೆಯನ್ನು ಶುದ್ಧಗೊಳಿಸುತ್ತಾರೆ. ನಾಗರ ಪಂಚಮಿಯ ದಿನ ತುಳುನಾಡಿನ ಉದ್ದಗಲದಲ್ಲೂ ಎಲ್ಲ ಜಾತಿಜನಾಂಗಗಳವರೂ ನಾಗನಿಗೆ ಹಾಲು ಎರೆಯುತ್ತಾರೆ. ಹಾಗಾಗಿ ನಾಗನಿಗೆ ಹಾಲು ಎರೆಯುವುದು ಮತ್ತು 'ಪರ್ವ', 'ತಂಬಿಲ' ನಡೆಸುವುದು ನಾಗರ ಪಂಚಮಿ ಆಚರಣೆಯ ವಿಶೇಷತೆಯಾಗಿದೆ. ಅರ್ಧ ಇಲ್ಲವೆ ಒಂದು ಕುಡ್ತೆ ದನದ ಹಾಲು ಹಿಡಿದುಕೊಂಡು ನಾಗರ ಪಂಚಮಿ ದಿನ ನಾಗಬನಕ್ಕೆ ಹೋಗುತ್ತಾರೆ. ಪರ್ವ ಮಾಡುವವರು 1 ಸೇರು ಬೆಳ್ತಿಗೆ ಅಕ್ಕಿ, 1 ತೆಂಗಿನ ಕಾಯಿ,1 'ಬೊಂಡ' (ಸೀಯಾಳ), ಸ್ವಲ್ಪ ಅರಳು, ಅರಿಶಿನ, ಬೆಲ್ಲ, ಹಣ್ಣು ಇತ್ಯಾದಿ ವಸ್ತುಗಳನ್ನು ಒಟ್ಟುಮಾಡಿ ನಾಗಬನಕ್ಕೆ ಹೋಗುತ್ತಾರೆ. ಅಲ್ಲಿಗೆ ಬರಹೇಳಿದ ಪುರೋಹಿತರೊಬ್ಬರು ಮೊದಲೇ ಬರುತ್ತಾರೆ. ಆ ಬ್ರಾಹ್ಮಣ ಪುರೋಹಿತರ ಮೂಲಕ ಹಾಲು ಎರೆಯುವುದು, ಪರ್ವ ಇತ್ಯಾದಿ ನಡೆಯುತ್ತದೆ. ಜನ ಭಕ್ತಿಯಿಂದ ಕೈಮುಗಿದು ಪ್ರಸಾದ ಸ್ವೀಕರಿಸಿ ಮನೆಗೆ ಹಿಂತಿರುಗುತ್ತಾರೆ. ಈ ದಿನ ವಿಶೇಷ ಅಡುಗೆ ಮಾಡುವ ಕ್ರಮವಾಗಲಿ, ಬೇಟೆಯಾಡುವುದಾಗಲಿ, ಕೋಳಿಅಂಕ ನಡೆಸುವುದಾಗಲಿ, ತೆಂಗಿನಕಾಯಿ ಕುಟ್ಟುವುದಾಗಲಿ ಇರುವುದಿಲ್ಲ. ಮಾತ್ರವಲ್ಲ, ಕುಟುಂಬದಲ್ಲಿ ಹುಟ್ಟು ಸಾವುಗಳ ಸೂತಕಗಳು ಬಂದರೆ ಈ ಆಚರಣೆಯನ್ನು ನಡೆಸುವುದಿಲ್ಲ.

**5. ಕುರಲ್‌ಪರ್ಬ :** 'ಕುರಲ್‌ಪರ್ಬ' ಎಂದರೆ ಕದಿರು ಮನೆ ತುಂಬಿಸುವ ಆಚರಣೆ. ತುಳುವಿನಲ್ಲಿ ಇದನ್ನು 'ಕುರಲ್‌ಕಟ್ಟುನ' (ಕದಿರು ಕಟ್ಟುವುದು), 'ಇಲ್ಲದಿಂಜಾವುನ' (ಮನೆ ತುಂಬಿಸುವುದು) ಮುಂತಾಗಿ ಪರ್ಯಾಯ ಹೆಸರುಗಳಿಂದಲೂ ಕರೆಯುತ್ತಾರೆ. "ಗದ್ದೆಯಲ್ಲಿ ಮಳೆಗಾಲದ ಏಣೇಲು ಬೆಳೆಯ ಪೈರು ಬೆಳೆದು ತೆನೆ ತುಂಬಿ ನಿಂತಾಗ ಬೆಳೆ ಕೊಯ್ಯುವ ಮೊದಲು, ಕದಿರನ್ನು ಇನ್ನಿತರ ಕಾಡ ಸಂಪತ್ತಿನ ಜೊತೆ ಮನೆಯೊಳಗೆ ತಂದು ಮನ ತುಂಬಿಸುವ ಹಬ್ಬ ಅಥವಾ 'ಕುರಲ್‌ಪರ್ಬ'ವನ್ನು ಆಚರಿಸಲಾಗುತ್ತದೆ". (ಜಾನಪದ ಮಿನದನ, 1997, ಪುಟ - 62)

ಸಾಮಾನ್ಯವಾಗಿ 'ನಿರ್ನಾಲ' (ತುಳುವರ ಆರನೆಯ ತಿಂಗಳು) ತಿಂಗಳ 'ಸಿಂಗೊಡೆ' (ಮೊದಲದಿನ)ಯಂದು ಈ ಆಚರಣೆಯನ್ನು ಮಾಡುತ್ತಾರೆ

ಅಥವಾ ನಿರ್ನಾಲ ತಿಂಗಳ ಮೊದಲ ಶುಭ ಶುಕ್ರವಾರದಂದು ತಪ್ಪಿದರೆ ನಿರ್ನಾಲ ತಿಂಗಳು ಮುಗಿಯುವುದರೊಳಗೆ ಕುರಲ್‌ಪರ್ಬವನ್ನು ಆಚರಿಸುವ ಕ್ರಮವಿದೆ. ಈ ಆಚರಣೆಗೂ ಮುಂದಿನ 'ಪುದ್ದಾರ್' ಆಚರಣೆಗೂ ತೀರಾ ಹತ್ತಿರದ ಸಂಬಂಧವಿದೆ. ಕುರಲ್‌ಪರ್ಬ ಮಾಡದೆ ಪುದ್ದಾರ್ ಮಾಡುವುದಿಲ್ಲ. ಕುರಲ್‌ಪರ್ಬ ಮತ್ತು ಪುದ್ದಾರನ್ನು ಒಂದೇ ದಿನ ಆಚರಿಸುವುದೂ ಉಂಟು. ಬೆಳಿಗ್ಗೆ ಕುರಲ್‌ಪರ್ಬ ಆಚರಿಸಿ, ಮಧ್ಯಾಹ್ನ ಇಲ್ಲವೆ ರಾತ್ರಿ ಪುದ್ದಾರ್ ಊಟ ಮಾಡುವುದೂ ಉಂಟು. ಕೃಷಿಯನ್ನು ದೇವರೆಂದೇ ನಂಬಿಕೊಂಡು ಬಂದಿರುವ ತುಳುವರು ಬತ್ತದ ತೆನೆಯನ್ನು ವಿಧಿವತ್ತಾಗಿ ಮನೆಯೊಳಗೆ ತಂದು ದೇವರ ಮಣೆಗೆ, ಭೂತದ ಪದೊಲಿಗೆ, ಅಟ್ಟಕ್ಕೆ, ಬಾಗಿಲಿಗೆ, ಬಾವಿದಂಡೆಗೆ, ಹಟ್ಟಿಗೆ ಹೀಗೆ ಬೇರೆ ಬೇರೆ ಕಡೆಗಳಲ್ಲಿ ಕಟ್ಟುವುದು ಈ ಆಚರಣೆಯ ಒಂದು ಭಾಗವಾಗಿರುತ್ತದೆ.

ಸಾಂಪ್ರದಾಯಿಕವಾಗಿ ತಂದ ತೆನೆಯನ್ನು ಪೂಜಿಸಿ ಮಾವು, ಹಲಸು, ಅಶ್ವತ್ಥ ಮೊದಲಾದವುಗಳ ಎಲೆಗಳೊಂದಿಗೆ ಸುತ್ತಿ ದೇವಸ್ಥಾನಕ್ಕೆ, ಮನೆಗೆ ಕೃಷಿ ಸಂಬಂಧಿಯಾದ ಉಪಕರಣ ಮೊದಲಾದವುಗಳಿಗೆ, ಫಲ ಬಿಡುವ ಗಿಡಮರಗಳಿಗೆ ಕಟ್ಟುವರು. A ritual performed before the first harvest. (The spike of corn is ceremoniusly broght into the house, worshipped as goddess of wealth and prosperity and tied with mango and jack leaves to the pillars and doors of the house temples, and cattle shed and also to the agricultural implements, granary, fruit bearing trees etc". (ತುಳು ನಿಘಂಟು, 1997, ಪುಟ - 845).

ಕುರಲ್‌ಪರ್ಬದ ಮೊದಲ ದಿನ ಇಲ್ಲವೆ ಅದೇ ದಿನ ಹೆಂಗಸರು ಮನೆಯನ್ನು ಶುದ್ಧಗೊಳಿಸುತ್ತಾರೆ. ಮನೆಯ ಯಜಮಾನ ಸ್ನಾನಮಾಡಿ ಮಡಿ ಬಟ್ಟೆಯುಟ್ಟು ತಲೆಗೆ ಮುಂಡಾಸು, ಹೆಗಲಲ್ಲಿ ಬೈರಾಸು ಧರಿಸಿ, ದೇವರ ಮಣೆಯ ಕೆಳಗೆ ಇನ್ನೊಂದು ಮಣೆಯನ್ನು ತೊಳೆದಿಟ್ಟು, ಅದರಲ್ಲಿ ಒಂದು ದೀಪ ಉರಿಸುತ್ತಾನೆ. ಅನಂತರ ಕದಿರು ತರಲು ಗದ್ದೆಗೆ ಹೋಗುತ್ತಾನೆ. ಅಲ್ಲಿ ಬೆಳೆದು ನಿಂತ ಪೈರಿಗೆ ವಿಧಿವತ್ತಾಗಿ ಪೂಜಿಸಿ, ಅನನ್ಯ ಭಕ್ತಿಭಾವದಿಂದ ಪ್ರಾರ್ಥಿಸಿ ಒಂದು 'ಸೂಡಿ'ಯಷ್ಟು ತೆನೆಯನ್ನು ಕಿತ್ತು ಇಲ್ಲವೆ ಕತ್ತರಿಸಿ ತಂದು ಒಂದು ಕೊಡಿ (ತುದಿ) ಬಾಳೆ ಎಲೆಯಲ್ಲಿ ಹಾಕಿ ತಲೆ ಮೇಲೆ ಹೊತ್ತು ತರುತ್ತಾನೆ. ಕೆಲವೊಮ್ಮೆ ತೆನೆಯನ್ನು ಮುಂಚಿನ ದಿನ ಸಾಯಂಕಾಲವೇ ತರುವುದೂ ಉಂಟು. ಹಾಗೆ ತಂದು ಬಾವಿಯ ದಂಡೆಯಲ್ಲಿಯೋ, ಇಲ್ಲವೆ ತುಳಸೀ ಕಟ್ಟೆಯ ಬಳಿಯಲ್ಲಿಯೋ ಇಟ್ಟಿರುತ್ತಾರೆ. ಹಾಲು ಬರುವ ಮರದಡಿಯಲ್ಲಿ ತೆನೆಯನ್ನು ಇಡಬೇಕೆಂಬ ನಂಬಿಕೆಯೂ ಇದೆ. ಅದರಂತೆ ಮನೆಯ ಆವರಣದೊಳಗಿರುವ ಹಲಸಿನ ಮರದಡಿಯಲ್ಲಿ ಸಂಗ್ರಹಿಸಿಡುತ್ತಾರೆ. ಅದರ ಜೊತೆಗೆ ತುದೀಗೆಲ್ಲು ಸಹಿತ ಮಾವಿನಸೊಪ್ಪು, ಹಲಸಿನಸೊಪ್ಪು, ಗರಿಕೆಹುಲ್ಲು, 'ಪಚ್ಚೆಕುರಲ್', 'ರುಕ್ಕಿ', 'ಪೊಲಿಬಲ್ಲ್', 'ದಡ್ಡಲ್‌ನಾರ್', 'ನೆಯ್‌ಕಂಬ್ರು', 'ಇಟ್ಟೊವು', ಅಶ್ವತ್ಥ, ಅತ್ತಿ, 'ಇತ್ತಿ', 'ಬಲಿಪಬಳ್ಳಿ', 'ಗೋಳಿ', ಹೂವು ಸಹಿತವಾದ ಸೌತೆ ಮಿಡಿ, ಬಿದಿರುಸೊಪ್ಪು, ತುಳಸಿ, ಗೌರಿಹೂವು, ಗಂಧ, ಕುಂಕುಮ ಇತ್ಯಾದಿಗಳನ್ನು ಸಂಗ್ರಹಿಸಿ ಇಡುತ್ತಾರೆ. ಹೀಗೆ ಎಲ್ಲ ವಸ್ತುಗಳನ್ನು ಜೋಡಿಸಿಯಾದ ಬಳಿಕ ಒಂದಿಬ್ಬರು ಯಜಮಾನನ ಜೊತೆಗೆ ಸೇರಿಕೊಳ್ಳುತ್ತಾರೆ. ಯಜಮಾನ ಆ ವಸ್ತುಗಳಿಗೆ ಧೂಪ ಆರತಿ ಮಾಡಿ ಅವುಗಳನ್ನು ಶುದ್ಧಗೊಳಿಸುತ್ತಾನೆ. ಅನಂತರ ಇಬ್ಬರು ಮೂವರು ಅವುಗಳನ್ನೆಲ್ಲ ಹಿಡಿದುಕೊಂಡು ಮನೆಯೊಳಗೆ ತರುತ್ತಾರೆ. ಹೀಗೆ ತರುವಾಗ ಮನೆಯ ಯಜಮಾನ ತೆನೆಗಳನ್ನು ಹಿಡಿದು ಮುಂದುಗಡೆಯಿಂದಲೂ, ಉಳಿದವರು ಉಳಿದ ವಸ್ತುಗಳನ್ನು ಹಿಡಿದುಕೊಂಡು ಆತನನ್ನು ಹಿಂಬಾಲಿಸಿ ಮನೆಯೊಳಗೆ ತೆನೆ ತರುತ್ತಾರೆ. ಆಗ ಎಲ್ಲರೂ 'ಪೊಲಿ ಪೊಲಿ ಪೊಲಿ' (ಧಾನ್ಯಲಕ್ಷ್ಮಿ ಬರಲಿ) ಎಂದು ಹೇಳುತ್ತಾ ತುಳಸೀಕಟ್ಟೆಗೆ ಒಂದುಸುತ್ತು ಪ್ರದಕ್ಷಿಣೆ ಬಂದು ಮನೆಯೊಳಗೆ ಪ್ರವೇಶಿಸುತ್ತಾರೆ. ಹೀಗೆ ಮನೆಯೊಳಗೆ ಪ್ರವೇಶಿಸುವ ಮೊದಲು ಮನೆಯ ಹೆಂಗಸರು ಯಜಮಾನನ ಪಾದವನ್ನು ತೊಳೆಯುತ್ತಾರೆ. ಅನಂತರ ದೇವರಮಣೆಯ ಕೆಳಗೆ ಶುಚಿಗೊಳಿಸಿಟ್ಟ ಮಣೆಯ ಮೇಲೆ ಹೊತ್ತುತಂದ ತೆನೆಗಳನ್ನು ಇಡುತ್ತಾನೆ. ಮಣೆಯ ಪಕ್ಕದಲ್ಲಿ ದೀಪ ಉರಿಸುತ್ತಾನೆ. ತೆನೆಗಳನ್ನು 'ಕಳಸ' (ಬತ್ತ ಮತ್ತು ಅಕ್ಕಿಗಳನ್ನು ಅಳೆಯುವ ಸಾಧನ) ಇಲ್ಲವೆ 'ಮಿಜ' (ಬತ್ತ ಮತ್ತು ಅಕ್ಕಿಗಳನ್ನು ಅಳೆಯುವ ಸಾಧನ)ಗಳಲ್ಲಿ ಅಥವಾ ಹೊಸ 'ಕುರುವೆ'ಯಲ್ಲಿ ಇಡುತ್ತಾರೆ. ಈ ಕಳಸ, ಮಿಜ ಇಲ್ಲವೆ ಕುರುವೆಗಳನ್ನು ಮೊದಲ ದಿನವೇ ಸೆಗಣಿ ಸಾರಿಸಿ ಪರಿಶುದ್ಧಗೊಳಿಸಿರುತ್ತಾರೆ. ಅವುಗಳಿಗೆ ಗಂಧ ಹಚ್ಚುತ್ತಾರೆ. ಹಾಗೆಯೇ ಅಲ್ಲಿ ಒಂದು 'ಮಂತು' (ಕಡೆಗೋಲು), ಒಂದು 'ಪರ್ದತ್ತಿ' (ಪೈರು ಕೊಯ್ಯುವ ಹಲ್ಲುಗಳಿರುವ ಕತ್ತಿ) ಒಂದು 'ಸೇರು' (ಅಕ್ಕಿ, ಭತ್ತ ಮೊದಲಾದವುಗಳನ್ನು ಅಳೆಯುವ ಸಾಧನ) - ಇತ್ಯಾದಿಗಳನ್ನು ಗಂಧ ಹಚ್ಚಿ ಇಡುತ್ತಾರೆ. ಅವುಗಳಲ್ಲಿಯೇ ಐದು ವೀಳ್ಯ, ಒಂದು ಅಡಕೆ ಇಡುತ್ತಾರೆ. ಒಂದು 'ಕೊಡಿ' ಎಲೆಯಲ್ಲಿ 1 'ಪಾವು' ಬೆಳ್ತಿಗೆ ಅಕ್ಕಿ, ಅದರ ಮೇಲೆ 'ತೆಕ್ಕರ್ಪೆ' (ನೀರುಸೌತೆ) ಇಡುತ್ತಾರೆ. ಅದರಲ್ಲಿಯೂ 5 ವೀಳ್ಯ, 1 ಅಡಿಕೆ ಇಡುತ್ತಾರೆ. 1 ಹರಿವೆ, 1 'ಕರಿಚೇವುದಂಡ್' (ಕರಿಕೆಸು) ಅಕ್ಕಿಯ ಬದಿಯಲ್ಲಿಡುತ್ತಾರೆ. ಈ ಹರಿವೆ, ಚೇವು, ಸೌತೆಗಳನ್ನು ಅನಂತರ ನಡೆಯುವ ಪುದ್ದಾರ್‌ಗೆ ಪದಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಮನೆಯೊಳಗೆ ಇಟ್ಟ ಕುರಲ್‌ಗೆ ತೆಂಗಿನಕಾಯಿ ಒಂದನ್ನು ಒಡೆಯುತ್ತಾರೆ. ಅನಂತರ ಕುದಲ್‌ಗೆಲ್ಲ ಗಂಧ ಪ್ರಸಾದ ಮುಟ್ಟಿಸಲಾಗುತ್ತದೆ. ತೆಂಗಿನ ಕಾಯಿಯ ಗಡಿಗಳಿಗೆ ಭತ್ತ ಇಲ್ಲವೆ ಗಂಧ ಹಾಕುತ್ತಾರೆ. ಬಳಿಕ ಎಲ್ಲರೂ ಸೇರಿ ಮನೆಯೊಳಗೆ ಮತ್ತೆ ತೆನೆಗಳಿಗೆ ಧೂಪ, ಆರತಿ ಬೆಳಗಿ ಈ ರೀತಿ ಪ್ರಾರ್ಥನೆ ಸಲ್ಲಿಸುತ್ತಾರೆ. "ತಾಯಿ, ಸಂಪತ್ತು ಲಕ್ಷ್ಮಿಯನ್ನು ಸ್ವಾಗತಿಸುವ ಹೊತ್ತಿನಲ್ಲಿ ವಿಷ ಇದ್ದರೆ ಗರುಡನ ಬಾಯಿಗೆ ಹಾಕಿ ಅಮೃತಫಳಿಗೆಯನ್ನಾಗಿ ಮಾಡಿ ಎಲ್ಲರನ್ನು ಸುಖ ಸೌಖ್ಯದಿಂದ ನಡೆಸಿಕೊಡಿ" ಎಂದು ನಿವೇದಿಸಿ ಎಲ್ಲರೂ ಆ ತೆನೆಗಳನ್ನು ಮುಟ್ಟಿ ನಮಸ್ಕರಿಸುತ್ತಾರೆ: ಅಡ್ಡಬೀಳುತ್ತಾರೆ. ಹೀಗೆ ನಮಸ್ಕರಿಸಿದ ಅನಂತರ ಬತ್ತದ ತೆನೆಯಿಂದ ಮೂರು ಇಲ್ಲವೇ ಐದು ಬತ್ತ ತೆಗೆದು ಅದರ ಸಿಪ್ಪೆ ಸುಲಿದು ಅಕ್ಕಿಯನ್ನು ಉರಿಸಿಟ್ಟ ದೀಪಕ್ಕೆ ಹಾಕುತ್ತಾರೆ. ಪುನಃ ನಮಸ್ಕರಿಸಿ ಗಂಧ ಸ್ವೀಕರಿಸುತ್ತಾರೆ. ಅನಂತರ ಬತ್ತದಿಂದ ಅಕ್ಕಿ ಕಾಳು ತೆಗೆದು ಹಾಲಿಗೆ ಸೇರಿಸಿ ಮನೆಮಂದಿ ಕುಡಿಯುವ ಕ್ರಮವಿದೆ. ಇದನ್ನು ತೊಲ್ಲುಪುದ್ದಾರ್ ಎಂದೂ ಕರೆಯುತ್ತಾರೆ. ಹೀಗೆ ಆರಾಧನೆಯ ಕ್ರಮ ಮುಗಿದು ಎಲ್ಲರು ಒಟ್ಟು ಸೇರಿ ತಂದಿದ್ದ ಪರಿಕರಗಳ ಸಹಿತ ಕುರಲ್‌ಕಟ್ಟುನ ಕ್ರಿಯೆಗೆ ಮುಂದಾಗುತ್ತಾರೆ. ಮೂರು ಕುರಲ್‌ಗಳನ್ನು ಈಗಾಗಲೇ ತಿಳಿಸಿದ ವಸ್ತುಗಳ ಸಹಿತ ದಡ್ಡಲ್‌ನಾರಿನಿಂದ ಕಟ್ಟುಗಳನ್ನಾಗಿ ಕಟ್ಟಿ ವಿಂಗಡಿಸುತ್ತಾರೆ. ಮುಖ್ಯವಾಗಿ ದೇವರ ಮಣೆಗೆ, ಬಾಗಿಲಿಗೆ, ಭೂತದ ಕೋಣೆಗೆ, ತುಳಸಿಕಟ್ಟೆಗೆ, ಬಾವಿದಂಡೆಗೆ, ಹಟ್ಟಿಗೆ, ತೆಂಗಿನಮರಕ್ಕೆ, ಹಲಸಿನಮರಕ್ಕೆ, ಒನಕೆಹಗ್ಗಕ್ಕೆ, ನಿಗನಾಯೆರ್ (ನೊಗನೇಗಿಲು)ಗಳಿಗೆ ಇತ್ಯಾದಿಗಳಿಗೆಲ್ಲ ಕಟ್ಟುತ್ತಾರೆ. ಹೀಗೆ ಕುರಲ್‌ಕಟ್ಟುನ ಆದ ಮೇಲೆ ಮಧ್ಯಾಹ್ನ ರುಚಿಕರವಾದ ಅಡುಗೆ ಮಾಡಿ ಎಲ್ಲರೂ ಸೇರಿ ಊಟ ಮಾಡುತ್ತಾರೆ. ಕುಟುಂಬದ ಸದಸ್ಯರು ಎಲ್ಲಿದ್ದರೂ ಈ ದಿನ ಬಂದು ಆಚರಣೆಯಲ್ಲಿ ಭಕ್ತಿ ಸಂಭ್ರಮಗಳಿಂದ ಪಾಲ್ಗೊಳ್ಳುತ್ತಾರೆ. ಕೋಳಿಅಂಕ, ಬೇಟೆಯಾಡುವುದು

ಇಲ್ಲವೆ ತೆಂಗಿನಕಾಯಿ ಕಟ್ಟುವಂತಹ ಕ್ರೀಡೆಯನ್ನು ಮನೋರಂಜನೆಗಾಗಿ ಆಡುತ್ತಾರೆ. ಹುಟ್ಟು ಸಾವುಗಳ ಸೂತಕಗಳು ಬಂದರೆ ಈ ಆಚರಣೆಯನ್ನು ಮಾಡುವುದಿಲ್ಲ.

**6. ಪುದ್ವಾರ್ :** ನಿರ್ನಾಲ ತಿಂಗಳಿನಲ್ಲಿ ತುಳುವರು 'ಪುದ್ವಾರ್' ಆಚರಿಸುತ್ತಾರೆ. ಇದು ಕುರಲ್‌ಪರ್ಬ ಆಚರಣೆಯ ಮುಂದುವರಿದ ಭಾಗವಾಗಿದೆ. "ಎಣೇಲು ಬೆಳೆ ಕೊಯ್ದು ಆ ಬತ್ತದ ಅಕ್ಕಿಯನ್ನು ಮೊದಲ ಸಲ ಬೇಯಿಸಿ ಅನ್ನ ಊಟ ಮಾಡುವುದು ಕೂಡಾ ಒಂದು ಹಬ್ಬ. ಈ ಹಬ್ಬವನ್ನು ಪುದ್ದರಿ, ಪುದ್ವಾರು ಎನ್ನಲಾಗುತ್ತದೆ. ಪುದ್ದರಿ ಎಂದರೆ ಹೊಸ ಅಕ್ಕಿಯ ಊಟ ಅಥವಾ ಹೊಸ್ತೂಟ. ಪುದು ಅರಿ ಎಂಬೆರಡು ಪದಗಳು ಕೂಡಿ ಪುದ್ದರಿ ಎಂಬ ಪದ ಉಂಟಾಗಿದೆ. ತುಳು ಭಾಷೆಯಲ್ಲಿ ಪುದು ಎಂದರೆ ಹೊಸ, ಅರಿ ಎಂದರೆ ಅಕ್ಕಿ, ಬಾರ್ ಎಂದರೆ ಬತ್ತ. ಪುದುವಾರ್ ಅಥವಾ ಪುದುವಾಳ್ ಎಂಬ ಪದಕ್ಕೆ ಹೊಂದಿಕೊಂಡು ಬಾಳು ಅಥವಾ ಕೂಡಿ ಬಾಳು ಎಂಬರ್ಥವೂ ಇದೆ" (ಜಾನಪದ ಮಿನದನ, 1997, ಪುಟ 63) ಎಣೇಲು ಬೆಳೆಯ ಕದಿರು ತಂದು ಮನೆ ತುಂಬಿಸುವ ಆಚರಣೆಯ ದಿನವೇ ಪುದ್ವಾರ್ ಆಚರಣೆಯನ್ನು ಕೆಲವರು ಆಚರಿಸುತ್ತಾರೆ. ಮತ್ತೆ ಕೆಲವರು ಕುರಲ್‌ಪರ್ಬವನ್ನು ಮೊದಲು ಮಾಡಿ ಅನಂತರ ನಿರ್ನಾಲ ಮುಗಿಯುವುದರೊಳಗೆ ಪುದ್ವಾರ್ ಆಚರಿಸುತ್ತಾರೆ. ಇದನ್ನು ಕುಟುಂಬದವರೆಲ್ಲ ಸೇರಿ ಸಂತೋಷ ಸಂಭ್ರಮದಿಂದ ಮತ್ತು ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ. ಪುದ್ವಾರನ್ನು ಕೆಲವರು ಮಧ್ಯಾಹ್ನ ಮಾಡಿದರೆ ಕೆಲವರು ರಾತ್ರಿಯೂ ಮಾಡುವುದಿದೆ. ನೆರೆಹೊರೆಯವರನ್ನು ಪ್ರೀತಿಯಿಂದ ಊಟಕ್ಕೆ ಆಹ್ವಾನಿಸುತ್ತಾರೆ.

"ಪುದ್ವಾರ್ > ಪುದ್ವಾರ್-ಪೊಸಾರ್-ಹೊಸಕ್ಕಿಯ ಊಟ, ಹೊಸಕ್ಕಿಯ ಊಟದ ದಿನ; A ceremony observed in partaking of new produce for the first time; a feast with new rice after the harvest; The day of just with new rice." (ತುಳು ನಿಘಂಟು, 1997, p - 2063)

ಪುದ್ವಾರ್ ಆಚರಣೆಯ ದಿನ ಬೆಳಗ್ಗೆ ಉಪಾಹಾರಕ್ಕೆ 'ತೆಲಿತಮಣ್ಣಿ' (ಗಂಜಿ ನೀರಿನ ಹಲ್ವ ತಿಂಡಿ) ಮಾಡಿ ಸೇವಿಸುತ್ತಾರೆ. ಗಂಡಸರಿಗೆ ಸಾಮಾನ್ಯವಾಗಿ ಆ ದಿನ ವಿಶೇಷ ವಿಶ್ರಾಂತಿಯ ದಿನವಾಗಿರುತ್ತದೆ. ಹೆಂಗಸರು ಮೊದಲು ಮನೆಯನ್ನೆಲ್ಲ ಸಾರಿಸಿ ಶುದ್ಧಗೊಳಿಸುತ್ತಾರೆ. ಬಳಿಕ ಪುದ್ವಾರ್ ಊಟದ ತಯಾರಿಯಲ್ಲಿ ತೊಡಗುತ್ತಾರೆ. ಅಟ್ಟದಿಂದ 'ಪುದ್ವಾರ್‌ದ ಕರ' (ಪುದ್ವಾರ್‌ಗಾಗಿಯೇ ಇರುವ ಮಣ್ಣಿನ ದೊಡ್ಡ ದೊಡ್ಡ ಮಡಕೆ)ಗಳನ್ನು ತೆಗೆಯುತ್ತಾರೆ. ಅವುಗಳನ್ನೆಲ್ಲ ತೊಳೆದು, ಅವುಗಳಲ್ಲಿ ಅನ್ನ ಬೇಯಿಸುವ ದೊಡ್ಡ ಮಡಕೆಯೊಂದನ್ನು ಹಿಡಿದುಕೊಂಡು ಬಾವಿಯ ಹತ್ತಿರ ಹೋಗುತ್ತಾರೆ. ಮೊದಲು 'ಪುದ್ವಾರ್‌ಗ್ ನೀರ್ ಕೊನರ್ಪುನ' (ಪುದ್ವಾರ್‌ಗೆ ನೀರು ತರುವುದು) ಕ್ರಮ ಮಾಡುತ್ತಾರೆ. ಅಂದರೆ ಮನೆಯ ಮೂವರು ಇಲ್ಲವೆ ಐದು ಮಂದಿ ಹೆಂಗಸರು ಈ ನೀರು ತರುವ ಆಚರಣೆಯಲ್ಲಿ ಪಾಲುಗೊಳ್ಳಬೇಕೆಂಬುದು ನಂಬಿಕೆ. ಪುದ್ವಾರ್‌ಗೆ ನೀರು ತರಲು ಬಾವಿಯ ಬಳಿಗೆ ಹೋಗುವಾಗ 'ಬಚ್ಚಿರೆ ಬಜ್ಜೆಯಿ' (ಎಲೆ ಅಡಿಕೆ) ತಿಂದುಕೊಂಡು ಹೋಗುತ್ತಾರೆ. ಬಾವಿದಂಡೆಯಲ್ಲಿ ವೀಳ್ಯ ಅಡಿಕೆ ಅರ್ಪಿಸಿ ಮನೆಯ ಯಜಮಾನ್ತಿ ಪುದ್ವಾರ್‌ಕರದಲ್ಲಿ ನೀರು ಹಿಡಿದುಕೊಂಡು ಮುಂದೆ ಬರುತ್ತಾರೆ. ಹಿಂದಿನಿಂದ ಇತರರು ಬೇರೆ ಬೇರೆ ಪಾತ್ರಗಳಲ್ಲಿ ನೀರು ಹಿಡಿದುಕೊಂಡು ಬರುತ್ತಾರೆ. ಬರುವಾಗ 'ಪೊಲಿಯೇ ಪೊಲಿ ಪೊಲಿ' ಎಂದು ಹೇಳುತ್ತಾರೆ. ಈ ಕ್ರಮದಲ್ಲಿ ನೀರು ತಂದು 'ಅಡ್ಪಿಲ್' (ಅಡುಗೆ ಮನೆ)ಯಲ್ಲಿ ಇಡುತ್ತಾರೆ. ಅನ್ನ ಬೇಯಿಸಲು ಒಲೆಯ ಮೇಲೆ ಇಡಲಿರುವ ಪುದ್ವಾರ್‌ಕರಕ್ಕೆ ತೇದ ಗಂಧದ ನಾಮ ಹಾಕುತ್ತಾರೆ. ತುಂಬೆ ಹೂವು, ಬೆಳ್ತಿಗೆ ಅಕ್ಕಿಯಿಂದ ಅಕ್ಷತೆ ಹಾಕುತ್ತಾರೆ. ಆಮೇಲೆ ನೀರು ತಂದ ಮಂದಿಯೆಲ್ಲ ಸೇರಿ ಒಟ್ಟಿಗೆ ಹಿಡಿದು ಆ ಪುದ್ವಾರ್ ಕರವನ್ನು ಒಲೆಗೆ ಇಡುತ್ತಾರೆ. ಬಳಿಕ ನೀರು ಕುದಿದಾಗ ಅದಕ್ಕೆ ಅಕ್ಕಿ ಹಾಕಿ ಅನ್ನ ಬೇಯಿಸುತ್ತಾರೆ. ಬೆಂದ ಅನ್ನಕ್ಕೆ ಏಣೇಲು ಬೆಳೆಯ ಕದಿರಿನಿಂದ ತೆಗೆದ ನಾಲ್ಕಾರು ಅಕ್ಕಿಯನ್ನು, ಹಸುವಿನ ಹಾಲು ಅಥವಾ ತೆಂಗಿನ ಕಾಯಿಯ ಹಾಲನ್ನು ಹಾಕುತ್ತಾರೆ. ಹಿಂದಿನ ಬೆಳೆಯ ಅಕ್ಕಿಯ ಅನ್ನವಾದರೂ ಅದಕ್ಕೆ ಈ ರೀತಿ ನಾಲ್ಕಾರು ಬತ್ತದಿಂದ ತೆಗೆದ ಹೊಸ ಅಕ್ಕಿಯನ್ನು ಹಾಕುವುದು ಬಹಳ ಪ್ರಧಾನವಾಗುತ್ತದೆ. ಹೀಗೆ ಈ ಹಬ್ಬದ ಊಟಕ್ಕೆ ಹೊಸ ಅಕ್ಕಿಯ ಅನ್ನ ತಯಾರಾಗುತ್ತದೆ.

ಇನ್ನೊಂದು ಕಡೆ ಹೆಂಗಸರು ಮೂರು, ಐದು, ಏಳು, ಇಲ್ಲವೆ ಒಂಬತ್ತು ಹೀಗೆ ಬೆಸ ಸಂಖ್ಯೆಯ ಪ್ರಮಾಣದಲ್ಲಿ ವಿಶೇಷ ತರಕಾರಿ ಖಾದ್ಯಗಳನ್ನು ತಯಾರಿಸುತ್ತಾರೆ. ಮೊದಲ ದಿನವೆ ಈ ತರಕಾರಿಗಳನ್ನು ಸಂಗ್ರಹಿಸಿಡುತ್ತಾರೆ. 'ಚೇವು ಮತ್ತು ಪದ್ಪೆ' (ಕೆಸು ಮತ್ತು ಹರಿವೆ) ಪುದ್ವಾರ್‌ಗೆ ಕಡ್ಡಾಯವಾಗಿ ಆಗಲೇಬೇಕು. ಅಂತೆಯೇ 'ತೆಕ್ಕರೆದ ತಲ್ಲಿ ಪಜ್ಜಿ ಕಜಿಪು' (ಸೌತೆಯ ಹಸಿ ಪದಾರ್ಥ) ಮತ್ತು ಉಪ್ಪು-ಶುಂಠಿಗಳು ಕೂಡ ಅತ್ಯಗತ್ಯ. ಉಳಿದಂತೆ ಇನ್ನು ಲಭ್ಯವಿರುವ ತರಕಾರಿಗಳನ್ನು ಅವಲಂಬಿಸಿ ಮತ್ತು ಮನೆಯವರ ಪುರುಸೊತ್ತು ಸೌಲಭ್ಯಗಳನ್ನು ಅವಲಂಬಿಸಿ ಹೆಚ್ಚು ಹೆಚ್ಚು ವಿಧದ ಪದಾರ್ಥಗಳನ್ನು ಸಂಭ್ರಮಕ್ಕಾಗಿ ಮಾಡಬಹುದಾಗಿದೆ. ಅನ್ನ ಬೇಯಿಸಲು ಪುದ್ವಾರ್‌ಕರ ಇದ್ದ ಹಾಗೆ ಪುದ್ವಾರ್‌ನ ಚೇವು ಮತ್ತು ಪದ್ಪೆ (ಕೆಸು ಮತ್ತು ಹರಿವೆ) ಪದಾರ್ಥ ಮಾಡಲು ಪುದ್ವಾರ್‌ದ ಬಿಸಲೆ (ಪಾತ್ರೆ) ಕೂಡ ಇರುತ್ತದೆ. ಈ ರೀತಿಯ ಪಾತ್ರೆಗಳು ಪುದ್ವಾರ್‌ಗಾಗಿಯೇ ಮೀಸಲಾಗಿದ್ದು, ಪುದ್ವಾರ್ ಕಳೆದಾದ ಮೇಲೆ ಅವುಗಳನ್ನು ಅಟ್ಟದಲ್ಲಿಡುತ್ತಾರೆ.

ಹೀಗೆ ಪುದ್ವಾರ್ ಊಟಕ್ಕೆ ಎಲ್ಲ ತಯಾರಿ ಆದ ಬಳಿಕ ವೀಳ್ಯ ಅಡಕೆಯನ್ನು ಬಾಳೆಲೆಯಲ್ಲಿಟ್ಟು ಪತ್ನಿಸಹಿತನಾಗಿ ಮನೆಯ ಯಜಮಾನ ಒಲೆಯ ಬೆಂಕಿಗೆ ಹೊಸ ಅನ್ನವನ್ನು ಅರ್ಪಿಸುತ್ತಾನೆ. ಇದನ್ನು 'ಅಗ್ಗಿಷ್ಟಕೆ' ಎನ್ನುತ್ತಾರೆ. ಆಮೇಲೆ 'ಕುಲೆಕ್ಕುಲೆಗ್ ಬಳಸುವ ಕ್ರಮ' (ಸತ್ತ ಹಿರಿಯರಿಗೆ ಅಗೆಲು ಹಾಕುವ ಕ್ರಮ) ಮಾಡುತ್ತಾರೆ. ಪುದ್ವಾರ್‌ಗಾಗಿ ತಯಾರಿಸಿದ ವಿಶೇಷ ಅಡುಗೆಯನ್ನು ಹಿರಿಯರಿಗೆ ಒಪ್ಪಿಸಿ ಅವರಿಗೆ ಭಕ್ತಿಯಿಂದ ಕೈ ಮುಗಿಯುತ್ತಾರೆ. ಬಳಿಕ ಮನೆಯವರು ಹಾಗೂ ಪುದ್ವಾರ್ ಊಟಕ್ಕೆ ಬಂದ ನೆರೆಹೊರೆಯವರು, ನೆಂಟರಿಷ್ಟರೆಲ್ಲ ಆ ದಿನ ಕೂಡಿ ಬಾಳೆ ಎಲೆಯಲ್ಲಿ ಊಟ ಮಾಡುವುದು ವಿಶೇಷ ಪದ್ಧತಿಯಾಗಿರುತ್ತದೆ.

ಪುದ್ವಾರ್ ಊಟ ಬಡಿಸುವಾಗ ಪುದ್ವಾರ್‌ಸಮ್ಮಾನವನ್ನು ಉಪಯೋಗಿಸುತ್ತಾರೆ. ಬಡಿಸುವಾಗ ಮೂರು ಸಲ ಬಡಿಸಬೇಕು. ಹೀಗೆ ಬಡಿಸಿಕೊಳ್ಳುವಾಗ ಪ್ರತಿ ಸಲವೂ ಅನ್ನವನ್ನು ಸಟ್ಟುಗದಲ್ಲಿರುವಾಗಲೇ ಮುಟ್ಟಿ ನಮಸ್ಕರಿಸುತ್ತಾರೆ. ಪುದ್ವಾರ್ ಊಟ ಬಡಿಸಲೆಂದೇ ವಿಶೇಷ ಮರದಸಟ್ಟುಗವೂ ಇರುತ್ತದೆ. ಗಂಡಸರು ಅಡುಗೆ ಕೋಣೆಯಲ್ಲಿಯೇ ಮೊದಲು ಪುದ್ವಾರ್‌ಊಟ ಮಾಡುತ್ತಾರೆ. ಊಟ ಮಾಡುವಾಗ ತಲೆಗೆ ಮುಂಡಾಸು ಸುತ್ತಿರುತ್ತಾರೆ. ಪುದ್ವಾರ್ ಊಟ ಮಾಡುವಾಗ ಪ್ರತಿಯೊಬ್ಬರೂ ಪರಸ್ಪರ 'ಎಂಕಲೊ ಪುದ್ವಾರ್ ಉಣ್ಪೊ' (ನಾವು ಪುದ್ವಾರ್ ಊಟ ಮಾಡುತ್ತೇವೆ) ಎಂದು ಮೂರು ಸಲ ಕೇಳಿಕೊಳ್ಳುತ್ತಾರೆ. ಆಗ ಇತರರು 'ದೇವರಪ್ಪಣೆ' (ದೇವರ ಅಪ್ಪಣೆ) ಎಂದು ಒಪ್ಪಿಗೆ ಸೂಚಿಸುತ್ತಾರೆ. ಹೀಗೆ ಎಲ್ಲರೂ ಪರಸ್ಪರ ಒಪ್ಪಿಗೆ ಕೇಳಿಕೊಂಡು ಸಹಭೋಜನ ಮಾಡುತ್ತಾರೆ. ಪುದ್ವಾರ್ ಊಟದ ಬಳಿಕವೂ ಬಚ್ಚಿರೆ ಬಜ್ಜೆಯಿ (ಎಲೆ ಅಡಿಕೆ) ತಿನ್ನುವ ಕ್ರಮವೂ ಇದೆ.

ಆ ವರ್ಷ ಮನೆಯಲ್ಲಿ ಮಗು ಜನಿಸಿದ್ದರೆ, ಆ ಮಗುವಿಗೆ ಪುದ್ವಾರ್ ದಿನ ಅನ್ನ ಕೊಡುವ ಕ್ರಮವಿರುತ್ತದೆ. ಇದನ್ನು 'ಬಾಲೆಗ್ ಉಣ್ಪು ಕೊರ್ಪುನ' (ಮಗುವಿಗೆ ಅನ್ನ ಕೊಡುವುದು) ಎಂದು ಕರೆಯುತ್ತಾರೆ. ಪುದ್ವಾರ್ ಊಟದ ಸಂದರ್ಭದಲ್ಲಿ ಮಗುವಿನ ತಾಯಿ-ತಂದೆ ಮತ್ತು ಮನೆ-ಮಂದಿಯೆಲ್ಲ ಆ ಮಗುವಿಗೆ ಅನ್ನದ ಅಗುಳನ್ನು ಉಣಿಸುವುದು ಕ್ರಮ.

ಇದೇ ರೀತಿ ಆ ವರ್ಷ ಮನೆಯಲ್ಲಿ ಮದುವೆಯಾದ ಮದುವಣಗಿತ್ತಿದ್ದರೆ ಆ ಪುದ್ವಾರ್‌ಗೆ ವಿಶೇಷತೆಯಿದೆ. ಅದನ್ನು 'ಪೊಸ ಪುದ್ವಾರ್' (ಹೊಸ ಪುದ್ವಾರ್) ಎಂದು ಕರೆಯುತ್ತಾರೆ. ಅಂದರೆ ಹೆಣ್ಣು ತಂದ ಮನೆಯಲ್ಲಿ ಈ ಪೊಸಪುದ್ವಾರ್ ಆಚರಣೆಯಾಗುತ್ತದೆ. ಈ ಪುದ್ವಾರ್‌ಗೆ ಹೆಣ್ಣಿನ ತವರು ಮನೆಯಿಂದ ನಂಟರು ಬಂದಿರುತ್ತಾರೆ.

ಕುಟುಂಬದ ಸದಸ್ಯರು ಎಲ್ಲಿದ್ದರೂ ಪುದ್ವಾರ್ ಊಟಕ್ಕೆ ಮನೆಗೆ ಬರುತ್ತಾರೆ. ಈ ಆಚರಣೆಯಲ್ಲಿ ಭಕ್ತಿ ಸಂಭ್ರಮಗಳಿಂದ ಪಾಲ್ಗೊಳ್ಳುತ್ತಾರೆ. ಕೋಳಿಅಂಕ, ಬೇಟೆಯಾಡುವುದು ಇಲ್ಲವೆ ತೆಂಗಿನಕಾಯಿ ಕುಟ್ಟುವಂತಹ ಕ್ರೀಡೆಯನ್ನು ಮನೋರಂಜನೆಗಾಗಿ ಆಡುತ್ತಾರೆ. ಹುಟ್ಟು, ಸಾವುಗಳ ಸೂತಕಗಳು ಬಂದರೆ ಈ ಆಚರಣೆಯನ್ನು ಮಾಡುವುದಿಲ್ಲ. ಹೀಗೆ ಪುದ್ವಾರ್ ಆಚರಣೆಯ ಕ್ರಮ ವಿಶಿಷ್ಟವಾಗಿ ಕಂಡುಬರುತ್ತದೆ.

**7. ಕಾವೇರಿ ಸಂಕ್ರಾಂತಿ :** 'ನಿರ್ನಾಲ' (ತುಳುವರ ಆರನೆಯ ತಿಂಗಳು) ತಿಂಗಳ ಕಡೆಯ ದಿನ 'ಕಾವೊರಿ ಸಂಕ್ರಾಂತಿ' ಹಬ್ಬವನ್ನು ಆಚರಿಸಲಾಗುತ್ತದೆ. ತುಳುವರು ಈ ದಿನವನ್ನು 'ಬೊಂತೆಲ್' (ತುಳುವರ ಏಳನೆಯ ತಿಂಗಳು) ತಿಂಗಳ ಸಂಕ್ರಾಂತಿಯೆಂದು ಗುರುತಿಸುತ್ತಾರೆ. ಸಾಮಾನ್ಯವಾಗಿ ಈ ಹೊತ್ತಿಗೆ 'ಏಣೇಲು' ಕೊಯ್ಲು ಮುಗಿದಿರುತ್ತದೆ. ಮನೆಯಲ್ಲಿ 'ಬತ್ತದತುಪ್ಪ'. ಅಂಗಳದಲ್ಲಿ 'ಬೈತ ಮೊಂಟಮೆ' (ಬೈ ಹುಲ್ಲಿನ ರಾಶಿ) ಇರುತ್ತದೆ.

ಕಾವೊರಿ ಸಂಕ್ರಾಂತಿ ಎಂದರೆ 'ತುಲಾ ಸಂಕ್ರಮಣ, ಮತ್ತು ಕಾವೇರಿ ನದಿ ಹುಟ್ಟಿದ ದಿನವೆಂದು ನಂಬಲಾದ ತುಲಾ ಸಂಕ್ರಮಣದ ದಿನದ ಧಾರ್ಮಿಕ ಆಚರಣೆಗಳು : The day of transition of the sun from the sixth to the seventh solar month; The festivals and rituals performed in honour of the river kaaveeri which is considered to have originated on the day of transition of the sun from the sixth to the seventh solar month" (ತುಳು ನಿಘಂಟು, 1997, p - 777,778)

ಕಾವೊರಿ ಸಂಕ್ರಾಂತಿ ಆಚರಣೆಯ ಹಿನ್ನೆಲೆಯಲ್ಲಿ ಮನೆಯನ್ನು ಸಾರಿಸಿ ಶುದ್ಧಗೊಳಿಸುತ್ತಾರೆ. ಕಾವೊರಿ ಸಂಕ್ರಾಂತಿಯ ಮೊದಲ ದಿನವೇ ಹೊಸ ಅಕ್ಕಿಗೆ ಉದ್ದು ಹಾಕಿ ಕಡೆದು ಮರುದಿನ ಬೆಳಗ್ಗೆಯ ಉಪಾಹಾರಕ್ಕೆ ದೋಸೆಗಾಗಿ ಸಿದ್ಧತೆ ನಡೆಸುತ್ತಾರೆ. ಸಂಕ್ರಾಂತಿಯ ದಿನ ಬೆಳಗ್ಗೆ 'ಬಿತ್ತ್‌ದಮುಡಿ' (ಬಿತ್ತನೆ ಬೀಜದ ಮುಡಿ)ಯನ್ನು ಅಟ್ಟಕ್ಕೆ ಹಾಕುವ ಕ್ರಮವಿರುತ್ತದೆ. ಅದಕ್ಕಾಗಿ ಬಿತ್ತನೆ ಬೀಜದ ಮುಡಿ ತಯಾರಿಸುತ್ತಾರೆ. ಅಂತೆಯೇ ಬತ್ತದ ರಾಶಿಗೆ, ಬೈ ಹುಲ್ಲಿನ ರಾಶಿಗೆ ಕಲ್ಲು-ಮುಳ್ಳು ಮತ್ತು ಬೂದಿಬರೆಯನ್ನು ಸಂಕ್ರಾಂತಿಯ ಹಿಂದಿನ ದಿನ ಸಂಜೆಯೇ ಹಾಕಿಡುತ್ತಾರೆ. ಈ ಕೆಲಸವನ್ನು ಸಾಮಾನ್ಯವಾಗಿ ಮನೆಯ 'ಯಜಮಾನ್ತಿ' (ಹಿರಿಯ ಹೆಂಗಸು) ನೆರವೇರಿಸುತ್ತಾರೆ. 'ಬೊಳ್ಳುಕಲ್ಲು' (ಬಿಳಿಕಲ್ಲು) ಮತ್ತು 'ಚೂರಿಮುಳ್ಳು' (ಒಂದು ಜಾತಿಯ ಮುಳ್ಳು ಗಿಡ) ಮತ್ತು 'ಪುದ್ವಾರ್' ದಿನ ಅನ್ನವನ್ನು ಅಗ್ನಿಗೆ ಕೊಟ್ಟಿದ್ದರ ಬೂದಿಯನ್ನು ಈ ಆಚರಣೆಯ ವೇಳೆ ಬಳಸುತ್ತಾರೆ.

ಸಂಕ್ರಾಂತಿ ದಿನ ಮನೆಯ ಹೆಂಗಸರು ಬೇಗನೆ ಎದ್ದು ದೋಸೆ ಹುಯ್ಯುತ್ತಾರೆ. ಮೊದಲು "ಕುಲೆ" (ಪಿತೃ)ಗಳಿಗೆ ಬಡಿಸುತ್ತಾರೆ. ಮನೆಯ ಯಜಮಾನ ಬಿತ್ತ್‌ದಮುಡಿ (ಬಿತ್ತನೆ ಬೀಜ ಮುಡಿ)ಯನ್ನು ಅಟ್ಟಕ್ಕೆ ಹಾಕುತ್ತಾರೆ. ಹೀಗೆ ಬಿತ್ತ್‌ದಮುಡಿಯನ್ನು ಅಟ್ಟಕ್ಕೆ ಹಾಕಿದವರಿಗೆ ಮೊದಲು ದೋಸೆಯನ್ನು ಕೊಡುತ್ತಾರೆ. ಅನಂತರ ಎಲ್ಲರೂ ದೋಸೆಯನ್ನು ವಿಶೇಷ ತಿನಿಸಾಗಿ ತಿನ್ನುತ್ತಾರೆ. ಉಳಿದಂತೆ ಆ ದಿನ ಕೃಷಿಕರಿಗೆ ರಜಾ ದಿನವಾಗಿರುತ್ತದೆ. ಭೂತ-ನಾಗಗಳಿಗೆ 'ಪರ್ವ' 'ತಂಬಿಲ' ಮೊದಲಾದ ಸೇವೆಗಳನ್ನು ನಡೆಸುತ್ತಾರೆ. ಮಧ್ಯಾಹ್ನ ಎಂದಿನಂತೆ ಸಾಮಾನ್ಯ ಅಡುಗೆ ಮಾಡಿ ಊಟ ಮಾಡುತ್ತಾರೆ. ರಾತ್ರಿ ಮಾತ್ರ ಹೊಸಅಕ್ಕಿಯ ರೊಟ್ಟಿ ಮಾಡಿ ಮೀನು ಇಲ್ಲವೆ ಮಾಂಸದ ಪದಾರ್ಥ ಮಾಡಿ ಕುಲ(ಪಿತೃ)ಗಳಿಗೆ ಬಡಿಸುತ್ತಾರೆ. ಅನಂತರ ಸಹಭೋಜನ ಮಾಡುತ್ತಾರೆ. ಹೊರಗಿರುವ ಕುಟುಂಬದ ಸದಸ್ಯರು ಈ ದಿನ ಮನೆಗೆ ಬರುತ್ತಾರೆ. ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಬೇಟೆಯಾಡುವುದು ಇಲ್ಲವೆ ತೆಂಗಿನಕಾಯಿ ಕುಟ್ಟುವಂತಹ ಕ್ರೀಡೆಗಳಲ್ಲಿ ವಿಶೇಷವಾಗಿ ಸಂಭ್ರಮದಿಂದ ಪಾಲ್ಗೊಳ್ಳುತ್ತಾರೆ. 'ಸಂಕ್ರಾಂತಿದ ಕಟ್ಟ' ಎಂದು ವಿಶೇಷವಾಗಿ ಕೋಳಿ ಅಂಕ ನಡೆಸುತ್ತಾರೆ. ಹುಟ್ಟು ಇಲ್ಲವೆ ಸಾವು ಮುಂತಾದ ಸೂತಕಗಳು ಬಂದರೆ ಈ ಆಚರಣೆಯನ್ನು ಮಾಡುವುದಿಲ್ಲ.

**8. ಪರ್ಬ :** ತುಳುವರು ದೀಪಾವಳಿಯನ್ನು 'ಪರ್ಬ' ಎಂದೇ ಕರೆಯುತ್ತಾರೆ. 'ಬೊಂತೆಲ್' (ತುಳುವರ ಏಳನೆಯ ತಿಂಗಳು) ತಿಂಗಳಲ್ಲಿಬರುವ ಅಮಾವಾಸ್ಯೆಯ ಹಿಂದಿನ ದಿನ (ಕಾರ್ತಿಕ ಮಾಸದ ಚತುರ್ದಶಿ), ಅಮಾವಾಸ್ಯೆಯ ದಿನ ಮತ್ತು ಅಮಾವಾಸ್ಯೆಯ ಮರುದಿನ (ಪಾಡ್ಯ)ದಂದು- ಹೀಗೆ ಮೂರು ದಿನ ಪರ್ಬವನ್ನು ಆಚರಿಸುತ್ತಾರೆ. ತುಳುವರ ವಾರ್ಷಿಕ ಆವರ್ತನದ ಆಚರಣೆಗಳಲ್ಲಿ ಪರ್ಬಕ್ಕಿರುವ ಸಂಭ್ರಮ ಉಳಿದ ಆಚರಣೆಗಳಿಗಿಲ್ಲವೆನ್ನಬಹುದು. ಪರ್ಬ ಆಚರಣೆ ಉಳಿದೆಲ್ಲ ಆಚರಣೆಗಳಿಗೂ ಒಡೆಯನಿದ್ದಂತೆ.

ಪರ್ಬ ಎಂಬುದಕ್ಕೆ ಪರ್ಬೊ, ಹಬ್ಬ, ವಿಶೇಷ ದಿನ, ದೀಪಾವಳಿ ಹಬ್ಬ, ಕೊಡಿಪರ್ಬ, ಬಲಿಪರ್ಬ, ಮಲ್ಲಪರ್ಬ : A festival; festivity; feast. Deepavali festival- ಎಂಬ ಅರ್ಥಗಳಿವೆ. (ತುಳು ನಿಘಂಟು, 1997, p - 1957)

'ಕಾವೇರಿ ಸಂಕ್ರಾಂತಿ' ಆಚರಣೆಯ ದಿನದಿಂದಲೇ ಪರ್ಬ ಆಚರಣೆಯ ಸಂಭ್ರಮ ಪ್ರಾರಂಭವಾಗುತ್ತದೆ. ಬೊಂತೆಲ್ ತಿಂಗಳ ಅಮಾವಾಸ್ಯೆಯ ಮೊದಲ ದಿನ ಪರ್ಬದ ಆರಂಭದ ದಿನ. ಆ ದಿನವನ್ನು 'ಮೀಪಿಪರ್ಬ' (ಮೀಯುವ ಹಬ್ಬ)ವೆಂದು ಆಚರಿಸುತ್ತಾರೆ. 'ಮೀಪಿಪರ್ಬ'ದ ಮೊದಲ ದಿನ ರಾತ್ರಿ ಸ್ನಾನದ ನೀರಿನ ಪಾತ್ರೆಯನ್ನು ತೊಳೆದು ಶುದ್ಧಗೊಳಿಸಿ ಅದರಲ್ಲಿ ನೀರು ತುಂಬಿಸಿ, ಮರುದಿನ ಬೆಳಿಗ್ಗೆ ಮೀಪಿಪರ್ಬಕ್ಕೆ ತಯಾರಿ ಮಾಡಲಾಗುತ್ತದೆ. ನೀರಿನ ಪಾತ್ರೆಗೆ 'ಸೇಡಿ' (ಜೇಡಿ) ಮಣ್ಣಿನಿಂದ ಚಿತ್ತಾರ ಬಿಡಿಸಿ ಅದರ ಕೊರಳಿಗೆ ನೀರು ಸೌತೆಯ (ಮುಳ್ಳುಸೌತೆ) ಬಳ್ಳಿಯನ್ನು ಕಟ್ಟುತ್ತಾರೆ. ಮೀಪಿಪರ್ಬದ ದಿನ ಬೆಳಗ್ಗೆ ಎಲ್ಲರೂ ಶರೀರಕ್ಕೆ ಎಣ್ಣೆ ಹಚ್ಚಿ ಅನಂತರ ಬಿಸಿನೀರಿನಲ್ಲಿ ಸ್ನಾನ ಮಾಡುತ್ತಾರೆ. ಹೆಂಗಸರು ಮನೆ ಅಂಗಳವನ್ನೆಲ್ಲ ಸೆಗಣಿಯಿಂದ ಸಾರಿಸುತ್ತಾರೆ. ಪರ್ಬಕ್ಕೆ ಬೇಕಾಗುವ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆ. ಅಂತೆಯೇ ಮೊದಲ ದಿನದಿಂದಲೇ

ಉದ್ದು ಹಾಕಿದ ದೋಸೆಯನ್ನು ಮಾಡುತ್ತಾರೆ. ಮನೆ ಮಂದಿಯೆಲ್ಲ ಬೇಗನೆ ಎದ್ದು ಬಿಸಿ ಬಿಸಿ ದೋಸೆ ತಿಂದು ಮತ್ತೆ ಮಲಗುವುದೂ ಉಂಟು. ಹಬ್ಬದ ದಿನಗಳಲ್ಲಿ ಕೃಷಿ ಕೆಲಸಗಳಿಗೆ ಬಿಡುವಿರುತ್ತದೆ.

ಎರಡನೆಯ ದಿನ 'ದೇವೆರಪರ್ಬ' (ದೇವರ ಹಬ್ಬ). ಇದು ಅಮಾವಾಸ್ಯೆಯ ದಿನ ಬರುತ್ತದೆ. ಈ ದಿನ ತುಳುವರಿಗೆ ಕೊನೆಯ ದಿನದ 'ಕೊಡಿಪರ್ಬ'ದ (ತುದಿಹಬ್ಬ) ಸಿದ್ಧತೆಯ ದಿನವಾಗಿರುತ್ತದೆ. ಕೊಡಿಪರ್ಬದ ದಿನ ಪರ್ಬದ ಮಹತ್ವದ ಆಚರಣೆಗಳಿರುವುದರಿಂದ ಅದರ ಸಿದ್ಧತೆಗಳನ್ನು ದೇವೆರಪರ್ಬದ ದಿನ (ಅಮಾವಾಸ್ಯೆಯ ದಿನ) ನಡೆಸುತ್ತಾರೆ. ಕೆಲವರು ದೇವೆರ ಪರ್ಬದ ದಿನವೇ 'ಬಿಲಕ್ಕಿಮರ' (ಬಲೀಂದ್ರಮರ) ಹಾಕುತ್ತಾರೆ. ಉಳಿದಂತೆ ಯಾವುದೇ ಆಚರಣೆಗಳು ಆ ದಿನ ಇರುವುದಿಲ್ಲ.

ಮೂರನೆಯ ದಿನ ಕೊಡಿಪರ್ಬ (ತುದಿಹಬ್ಬ). ಇದು ಪಾಡ್ಯದ ದಿನ ಬರುತ್ತದೆ. ತುಳುವರು ಕೊಡಿಪರ್ಬವನ್ನು 'ಪಾಡ್ಯಬಳಸುನ' (ಪಾಡ್ಯ ಬಡಿಸುವುದು) ಇಲ್ಲವೆ 'ಬಲಿಪಾಡ್ಯಮಿ' ಎಂದು ಕರೆಯುತ್ತಾರೆ. ಈ ದಿನ ಪರ್ಬದ ಅತ್ಯಂತ ಮಹತ್ವದ ದಿನವಾಗಿರುತ್ತದೆ. ಮನೆಯ ಯಜಮಾನ ಬೆಳಗ್ಗೆ ಬೇಗನೆ ಎದ್ದು ಗುಡ್ಡಕ್ಕೆ ಇಲ್ಲವೇ ಮಲೆಗೋ, ಕಾಡಿಗೋ ಹೋಗಿ 6-7 ಅಡಿ ಎತ್ತರದ ಸಣ್ಣ 'ಪಾಲೆಮರ' (ಹಾಲೆಮರ)ವೊಂದನ್ನು ಕಡಿದುಕೊಂಡು ಬರುತ್ತಾರೆ. ಆ ಮರದ ತುದಿಯಲ್ಲಿ ಮೂರುನಾಲ್ಕು ಕವಲುಗಳಿರುವುದನ್ನೇ ಆರಿಸುತ್ತಾರೆ. ಮನೆಯ ಅಂಗಳದಲ್ಲಿರುವ ತುಳಸಿ ಕಟ್ಟೆಯ ಬಳಿಯಲ್ಲಿ, ಸಬಳದಿಂದ ಒಂದು ಅಡಿ ಆಳದ ಗುಂಡಿ ತೋಡುತ್ತಾರೆ. ಅದಕ್ಕೆ ಹಾಲು, ನೀರು, ಗಂಧ, ಬೆಳ್ತಿಗೆ ಅಕ್ಕಿ ಹಾಕಿ ಧೂಪ ಆರತಿ ಮಾಡಿ ನಮಸ್ಕರಿಸಿದ ತರುವಾಯ ತಂದಂತಹ ಪಾಲೆಮರ (ಹಾಲೆಮರ)ವನ್ನು ವಿಧಿವತ್ತಾಗಿ ನೆಡುತ್ತಾರೆ. ಈ ವಿಧಿಗೆ 'ಮರಪಾಡುನ' (ಮರ ಹಾಕುವುದು) ಎಂದು ಕರೆಯುತ್ತಾರೆ : ಇದನ್ನೇ ಬಿಲಕ್ಕಿಮರ (ಬಲೀಂದ್ರಮರ) ಎನ್ನಲಾಗುತ್ತದೆ. ಅದರ ಬುಡದಲ್ಲಿ ನೀರಿನಲ್ಲಿ ತೊಳೆದು ಶುದ್ಧಗೊಳಿಸಿದ ಮರದ ಮಣೆಯೊಂದನ್ನು ಇಟ್ಟು ಅದರ ಮೇಲೆ 'ಕೊಡಿ' ಬಾಳೆ ಎಲೆಯಲ್ಲಿ ಬೆಳ್ತಿಗೆ ಅಕ್ಕಿ, ತೆಂಗಿನಕಾಯಿ, ವೀಳ್ಯ, ಅಡಿಕೆ ಮತ್ತು ಫಲವಸ್ತುಗಳನ್ನು ಇಡುತ್ತಾರೆ. ಪಕ್ಕದಲ್ಲಿ ದನದ ಹಾಲನ್ನು ಇಡುತ್ತಾರೆ. ಒಂದು ದೀಪವನ್ನು ಉರಿಸಿಡುತ್ತಾರೆ.

ಮರಪಾಡುನ (ಮರಹಾಕುವುದು) ಆದ ಮೇಲೆ ಗಂಡಸರು ಹಟ್ಟಿಯಲ್ಲಿರುವ ದನಕರು ಎತ್ತು ಎಮ್ಮೆ ಕೋಣಗಳನ್ನು ತೋಡಿಗೋ, ನದಿಗೋ, ಹಳ್ಳಕ್ಕೋ ಕೊಂಡು ಹೋಗಿ ತೊಳೆದು ಅವುಗಳ ಹಣೆಗೆ ಗಂಧ, ಕುಂಕುಮ ಹಾಕಿ ಮೇಯಲು ಗುಡ್ಡಕ್ಕೆ ಬಿಡುತ್ತಾರೆ ಇಲ್ಲವೆ ಕಟ್ಟಿ ಹಾಕುತ್ತಾರೆ. ಅನಂತರ ಮಕ್ಕಳು ಮತ್ತು ಹೆಂಗಸರು, ಗಂಡಸರೆಲ್ಲ ಸಂಜೆ ಬಿಲಕ್ಕಿ ಮರ(ಬಲೀಂದ್ರಮರ)ವನ್ನು ಅಲಂಕರಿಸಲು ವಿವಿಧ ಜಾತಿಯ ಹೂವುಗಳ ಸಂಗ್ರಹಕ್ಕೆ ಹೋಗುತ್ತಾರೆ. ಪಾದೆಹೂವು, ಕೇಪುಳಹೂವು, ಗೌರಿಹೂವು, ತುಳಸಿ, ಕವಳಿಗೆಹೂವು, ದಾಸವಾಳ, ರಥಹೂವು, ಮೆಣಸುಹೂವು- ಹೀಗೆ ಅನೇಕ ಜಾತಿ ಹೂವುಗಳನ್ನು ಸಂಗ್ರಹಿಸಿಕೊಂಡು ಬರುತ್ತಾರೆ. ಮಧ್ಯಾಹ್ನ ತರಕಾರಿ ಊಟ ಮಾಡಿ ಆಮೇಲೆ 'ಪೊಲಿಬಲ್ಲ್' (ಬಾಳೆಯ ಹಗ್ಗ) ನಿಂದ ಹೂವುಗಳನ್ನು ಮಾಲೆ ಮಾಡುತ್ತಾರೆ. ಸಂಜೆಗೆ ಪರ್ಬ ಆಚರಿಸಲು ಎಲ್ಲ ರೀತಿಯ ಸಿದ್ಧತೆ ನಡೆಸುತ್ತಾರೆ. ಬಿಲಕ್ಕಿಮರ (ಬಲೀಂದ್ರಮರ)ದ ತುದಿಗೆ ಅಡ್ಡಲಾಗಿ ಒಂದು ಕೋಲು ಕಟ್ಟಿ ಅದರ ಆಧಾರದಲ್ಲಿ ಮಾಲೆ ಮಾಡಿದ ಹೂವುಗಳನ್ನು ಹಾಕಿ ಅಲಂಕರಿಸುತ್ತಾರೆ. ಮನೆಯ ಯಜಮಾನ ಬಿಲಕ್ಕಿಮರ (ಬಲೀಂದ್ರಮರ)ದ ಬುಡದಲ್ಲಿ 'ಅಗೆಲು' (ಎಡೆ) ಬಡಿಸಲು ಬಾಳೆ ಎಲೆ ಮತ್ತು ಇತರ ಸಾಮಗ್ರಿಗಳನ್ನು ಕಲೆ ಹಾಕುತ್ತಾನೆ. 'ಕೊಲ್ತಿರಿ' (ದೊಂದಿ). 'ನಿಣೆ' (ಬತ್ತಿ) ಮೊದಲಾದವುಗಳನ್ನು ತಯಾರಿಸಿ ಒಂದು 'ತಡ್ಪೆ' (ಗೆರಸೆ/ಮೊರ)ಯಲ್ಲಿಯೋ, 'ಕೈಕುರುವೆ' (ಸಣ್ಣ ಬುಟ್ಟಿ)ಯಲ್ಲಿಯೋ ಇಡುತ್ತಾರೆ. ಮತ್ತೊಂದೆಡೆ ಬಿಲಕ್ಕಿಮರ (ಬಲೀಂದ್ರಮರ)ದ ಸಮೀಪದಲ್ಲಿ ನಿಗ(ನೊಗ), ನಾಯೆರ್ (ನೇಗಿಲು), ಸೇರು (ಅಕ್ಕಿ, ಬತ್ತ ಮೊದಲಾದವುಗಳನ್ನು ಅಳೆಯುವ ಸಾಧನ), 'ಕಳಸ', ಕತ್ತಿ, 'ಪರ್ದತ್ತಿ' (ಪೈರು ಕೊಯ್ಯುವ ಹಲ್ಲುಗಳಿರುವ ಕತ್ತಿ), 'ಕೊಟ್ಟು' (ಹಾರೆ) ಪಿಕ್ಕಾಸು, ಸಬಳ, 'ಇಸ್‌ಮುಳ್ಳು' (ಹಟ್ಟಿಗೊಬ್ಬರ ತೆಗೆಯುವ ಪಿಕ್ಕಾಸು ಮಾದರಿಯ ಸಾಧನ) 'ಮೊಟ್ಟೆಪಲಾಯಿ' (ಗದ್ದೆ ಉತ್ತಾದ ಬಳಿಕ ಎತ್ತು-ಕೋಣಗಳ ಮೂಲಕ ಸಮತಟ್ಟು ಮಾಡುವ ಹಲಗೆಯ ಸಾಧನ)- ಇವೇ ಮೊದಲಾದ ಕೃಷಿ ಉಪಕರಣಗಳನ್ನು ತೊಳೆದು ಜೋಡಿಸಿಡುತ್ತಾರೆ. ಅವುಗಳ ಮೇಲೆ ಹೂವುಗಳಿರುವ 'ನರೆತಬೂರ್', 'ಕುರುಡ್‌ದಬೂರ್', 'ಇಲ್ಲ್‌ಬಲ್ಲ್'(ಒಂದೊಂದು ಜಾತಿಯ ಬಳಲುಗಳು) ಜಾತಿಯ ಬಿಳಲುಗಳನ್ನು ಇಡುತ್ತಾರೆ. ಬಳಿಕ ಅವುಗಳಿಗೆ ಅಕ್ಕಿ ಹಿಟ್ಟಿನ ನೀರನ್ನು ಚಿಮುಕಿಸುತ್ತಾರೆ.

ಅತ್ತ ಮನೆಯೊಳಗೆ ಹೆಂಗಸರು ಬಿಲಕ್ಕಿಮರ (ಬಲೀಂದ್ರಮರ)ದ ಬುಡದಲ್ಲಿ, ಗದ್ದೆಯಲ್ಲಿ, ಕೃಷಿ ಉಪಕರಣಗಳ ಬಳಿಯಲ್ಲಿ, ಗೊಬ್ಬರದ ರಾಶಿಯ ಬಳಿಯಲ್ಲಿ ಬಡಿಸಲು ಮತ್ತು ಗೋವುಗಳಿಗೆ ತಿನ್ನಿಸಲು ಹಾಗೂ ಪರ್ಬದ ರಾತ್ರಿಯ ವಿಶೇಷ ಊಟಕ್ಕಾಗಿ ಅವಲಕ್ಕಿ, ನೀರುದೋಸೆ, ಪದಾರ್ಥಗಳನ್ನು ತಯಾರಿಸುತ್ತಾರೆ.

ಎಲ್ಲ ಸಿದ್ಧತೆಗಳು ಆದ ಬಳಿಕ ರಾತ್ರಿ ಸುಮಾರು 8.00 ಗಂಟೆಯ ಹೊತ್ತಿಗೆ ಮನೆಯ ಯಜಮಾನ ಸ್ನಾನ ಮಾಡಿಕೊಂಡು ಬಂದು ಮಡಿ ಬಟ್ಟೆ ಉಟ್ಟು ಮರದ ಬುಡದಲ್ಲಿ 'ಅಗೆಲ್' (ಎಡೆ) ಹಾಕುವ ಕ್ರಮವನ್ನು ಮಾಡುತ್ತಾನೆ. ಬಿಲಕ್ಕಿಮರ(ಬಲೀಂದ್ರಮರ)ದ ಬುಡದಲ್ಲಿ ಇಟ್ಟಿರುವ ಮಣೆಯ ಮೇಲೆ ಒಂದು ತುದಿ ಬಾಳೆ ಎಲೆ ಇಟ್ಟು ಅದರಲ್ಲಿ ಸ್ವಲ್ಪ ಬೆಳ್ತಿಗೆ ಅಕ್ಕಿ ಒಂದು ತೆಂಗಿನಕಾಯಿ, 5 ವೀಳ್ಯ ಒಂದು ಅಡಿಕೆ ಹೀಗೆ ಸುತ್ತೆ (ಸ್ವಸ್ತಿಕ) ಇಡುತ್ತಾರೆ. ಮರದ ತುದಿಯಲ್ಲೂ ದೀಪ ಇಟ್ಟಿರುತ್ತಾರೆ. ಸ್ವಸ್ತಿಕದ ಬದಿಯಲ್ಲೂ ದೀಪ ಉರಿಸುತ್ತಾರೆ. ಅನಂತರ 3 ಇಲ್ಲವೆ 5 ತುದಿ ಬಾಳೆ ಎಲೆಗಳನ್ನು ಸಾಲಾಗಿ ಹಾಕಿ 'ಅಗೆಲ್‌ಬಡಿಸುವ' ಕ್ರಮ ಮಾಡುತ್ತಾರೆ. ಆ ಎಲೆಗಳಲ್ಲಿ ಅವಲಕ್ಕಿ, ಬೆಲ್ಲ, ಬಾಳೆಹಣ್ಣು, ದೋಸೆ ಹಾಕುತ್ತಾರೆ. ಒಂದು ತೆಂಗಿನಕಾಯಿ ಒಡೆದು ಇಡುತ್ತಾರೆ. ಮತ್ತೊಂದು 'ಬೊಂಡ' (ಎಳನೀರು) ತೂತು ಮಾಡಿ ಇಡುತ್ತಾರೆ. ಹಾಗೆಯೇ ಬಿಲಕ್ಕಿ ಮರ(ಬಲೀಂದ್ರಮರ)ದ ತುದಿಯಲ್ಲಿರುವ ಮೂರೋ ನಾಲ್ಕೋ ಕವಲುಗಳಲ್ಲಿ ಕೊಲ್ತಿರಿ (ದೊಂದಿ) ಕುತ್ತಿ ಇರಿಸುತ್ತಾರೆ. ಒಂದು ಚೆಂಬು ನೀರು ಇರುತ್ತದೆ. ಊದು ಬತ್ತಿ ಉರಿಸುತ್ತಾರೆ. ತೆಂಗಿನ ಸಿಪ್ಪೆಯಲ್ಲಿ ಕೆಂಡ ಸಿದ್ಧವಿರುತ್ತದೆ. ಹಾಕಿದ ಎಡೆಗಳ ಮುಂದೆ ಒಂದು ತುದಿ ಬಾಳೆ ಎಲೆಯಲ್ಲಿ ಸ್ವಲ್ಪ ಅಕ್ಕಿ ಮತ್ತು ಹೂವು ಮತ್ತು ಶ್ರೀಗಂಧ ಇಟ್ಟಿರುತ್ತಾರೆ. ಎಲ್ಲ ಸಿದ್ಧತೆ ಮಾಡಿಕೊಂಡು ಮನೆಮಂದಿಯನ್ನೆಲ್ಲ ಯಜಮಾನ ಕರೆಯುತ್ತಾನೆ. ಆಗಲೇ ಸ್ನಾನಾದಿಗಳನ್ನು ಮುಗಿಸಿ ಮಡಿಬಟ್ಟೆ ಉಟ್ಟುಕೊಂಡಿರುವ ಮನೆಮಂದಿಯೆಲ್ಲ ಅಲ್ಲಿಗೆ ಬರುತ್ತಾರೆ. ಎಲ್ಲರಿಗೂ ಯಜಮಾನ ಸ್ವಲ್ಪ ಸ್ವಲ್ಪ ಅಕ್ಕಿಕಾಳು (ಅಕ್ಷತೆ) ನೀಡುತ್ತಾನೆ. ಅವುಗಳನ್ನು ಎರಡೂ ಕೈಗಳಿಂದ ಭಕ್ತಿಯಿಂದ ತೆಗೆದುಕೊಂಡು

ಹಿಡಿದು ನಿಲ್ಲುತ್ತಾರೆ. ಯಜಮಾನ ಎಡೆಗಳಿಗೆ ನೀರು ಚಿಮುಕಿಸಿ ಆರತಿ ಧೂಪ ಎತ್ತುತ್ತಾನೆ ; ಪ್ರಾರ್ಥನೆ ಮಾಡುತ್ತಾನೆ. ಕೆಲವರು ಬಲಿಯೇಂದ್ರನ ಕಥೆಯನ್ನು ಹೇಳುತ್ತಾರೆ. ಪಾಡ್ದನವನ್ನೂ ಹಾಡುತ್ತಾರೆ.

ಕೊನೆಗೆ "ಆ ಜಾಲ ಪೊಲಿ ಕೊಂಡಲಾ, ಆ ಜಾಲ ಪೊಲಿಕೊಂಡಲಾ, ಕೂ ಬಲಾ ಬಲಿಯೇಂದ್ರ, ಕೂ ಬಲಾ ಬಲಿಯೇಂದ್ರ, ಕೂ ಬಲಾ ಬಲಿಯೇಂದ್ರ" (ಆ ಅಂಗಳದ ಸಮೃದ್ಧಿಯನ್ನು ತಾ, ಈ ಅಂಗಳದ ಸಮೃದ್ಧಿಯನ್ನು ತಾ, ಬಲಿಯೇಂದ್ರ ಬಾ), "ಆಟಿತ ಪುಣ್ಣಮೆ ಆಯನೊಂತ ಸಂಕ್ರಾಂತಿ ದೀಪಾವಳಿ ಕೊಡಿಪರ್ಬೊ ಎನ್ನ ರಾಜ್ಯೊಂತ ಬಲಿ ಕೊಂಡೋತ್ ನಿನ್ನ ರಾಜ್ಯೊಂತ ಪೊಲಿಕೊಂಡ ಕೂ ಬಲಿಯೇಂದ್ರ" (ಆಟಿಯ ಹುಣ್ಣಿಮೆ ಅಯನದ ಸಂಕ್ರಮಣ ದೀಪಾವಳಿಯ ಕೊಡಿಹಬ್ಬ ನನ್ನ ರಾಜ್ಯದಿಂದ ಬಲಿ ಕೊಂಡುಹೋಗಿ ನಿನ್ನ ರಾಜ್ಯದಿಂದ ಸಂಪತ್ತನ್ನು ತಾ ಬಲಿಯೇಂದ್ರ) ಎಂದು ಬೇರೆ ಬೇರೆ ರೀತಿಯಲ್ಲಿ ಮೂರು ಬಾರಿ ಎಲ್ಲರೂ ಜೋರಾಗಿ ಕೂಗಿ ಕರೆಯುತ್ತಾರೆ. ಕರೆಯುವಾಗ ಪೂರ್ವ ದಿಕ್ಕಿಗೆ ಬಾನಿಗೆ ಮುಖ ಮಾಡಿ ಕರೆಯುತ್ತಾರೆ. ಹೀಗೆ ಕರೆದಾದ ಮೇಲೆ ಒಬ್ಬೊಬ್ಬರಾಗಿ ಎಡೆಗಳ ಮುಂದಿರುವ ಅಕ್ಕಿ ಕಾಳು, ಹೂವುಗಳಿರುವ ತುದಿ ಎಲೆಗೆ ತಮ್ಮ ಕೈಯಲ್ಲಿದ್ದ ಅಕ್ಕಿ ಕಾಳುಗಳನ್ನು (ಅಕ್ಷತೆ) ಹಾಕಿ ನಮಸ್ಕರಿಸುತ್ತಾರೆ. ಎಲ್ಲರೂ ತೇದ ಗಂಧವನ್ನು ಹಣೆಗೆ ಇಟ್ಟುಕೊಳ್ಳುತ್ತಾರೆ. ಎಲ್ಲರೂ ನಮಸ್ಕರಿಸಿದ ಮೇಲೆ ಯಜಮಾನ ನಮಸ್ಕರಿಸುತ್ತಾನೆ. ಸ್ವಲ್ಪ ಹೊತ್ತು ಅಲ್ಲಿಯೇ ಎಲ್ಲರೂ ಹಿಂದಕ್ಕೆ ಮುಖ ಮಾಡುತ್ತಾರೆ. ಅನಂತರ ಯಥಾ ಸ್ಥಿತಿಗೆ ಬಂದು ಮತ್ತೊಮ್ಮೆ ನಮಸ್ಕಾರ ಮಾಡುತ್ತಾರೆ. ಹೀಗೆ ಮೊದಲು ಬಲಿ ಕಂಬದ ಬುಡದಲ್ಲಿ 'ಬಲಿಪೂಜೆ' ನಡೆಯುತ್ತದೆ. ಕೋವಿ ಇರುವವರು ಆ ವೇಳೆಗೆ ಮದ್ದು ಗುಂಡು ಸಿಡಿಸುತ್ತಾರೆ.

ಆಮೇಲೆ ತಡ್ಪೆ (ಗೆರಸೆ)ಯೊಂದರಲ್ಲಿ ಅವಲಕ್ಕಿ, ಬಾಳೆಹಣ್ಣು, ದೋಸೆ, ಕುಂಕುಮ, ಗಂಧ, ಹೂವು ಇತ್ಯಾದಿಗಳನ್ನು ಹಿಡಿದುಕೊಂಡು ನಿಗನಾಯೆರ್ (ನೊಗ ನೇಗಿಲು)ಗಳನ್ನು ಇಟ್ಟಿರುವ ಜಾಗಕ್ಕೆ ಯಜಮಾನ ಇತರರ ಸಹಾಯದೊಂದಿಗೆ ಹೋಗುತ್ತಾನೆ. ಅಲ್ಲಿಯೂ ಬಿಲಕ್ಕಿ ಮರ (ಬಲೀಂದ್ರಮರ)ದ ಬುಡದಲ್ಲಿ ಮಾಡಿದಂತೆ ಅಗೆಲು ಬಡಿಸಿ ಕೊಲ್ತಿರಿ (ದೊಂದಿ), ದೀಪ ಧೂಪ ಎತ್ತುತ್ತಾರೆ. ಪ್ರಾರ್ಥನೆ ಮಾಡುತ್ತಾರೆ. ಭಕ್ತಿಯಿಂದ ನಮಸ್ಕರಿಸುತ್ತಾರೆ. ಅನಂತರ ಗೋಪೂಜೆಗೆಂದು ಹಟ್ಟಿ ಬಳಿಗೆ ಹೋಗುತ್ತಾರೆ.ಹಟ್ಟಿಯ 'ಬೈಪಣೆ'(ಹುಲ್ಲು, ನೀರು ಹಾಕುವ ಸ್ಥಳ) ಕೆಳಗೆ ನಿಂತು ದನಕರು ಜಾನುವಾರುಗಳಿಗೆ ತಡ್ಪೆ(ಗೆರಸೆ)ಯಲ್ಲಿರುವ ಅಗೆಲು ಸಹಿತ ದೀಪ ಧೂಪ ಎತ್ತುತ್ತಾರೆ. ಹೀಗೆ ಮಾಡುವಾಗ 'ಕಲ್ಲಡಿತ್ತ ನೀರ್ ಪರೂನೊಡು, ಮುಳ್ಳಡಿತ್ತ ಪಂತಿಮೇಪೊನೊಡು, ಆತ್ ವರ್ಷ ಬಾಳ್ ಮಗ ಬಾಳ್ ; ಪಂಚಪಾಂಡವೆರೆ ಕೈಕಂಜಿ, ಕಿದೆ ದಿಂಜಾ ಬಾಳೊಡು, ಕುಲೊ ದಿಂಜಾ ಮೇಪೊಡು, ಕೊಂಬುದೆಡೆ ನೆರೆಪೊಡು ಬಾಳ್‌ಮಗ ಬಾಳ್; ಕೊಂಬುಡು ಅಲಂಬು ಕೊಡಿತ್‌ನೇಟ, ಕಣ್ಣ್‌ಡ್ ನರತೆ ಬನ್ನೇಟ ಈ ಬದುಕೊಡು ವಜ್ರ' (ಕಲ್ಲಡಿಯ ನೀರು ಕುಡಿಯಬೇಕು, ಮುಳ್ಳಡಿಯ ಹುಲ್ಲು ಮೇಯಬೇಕು, ಅಷ್ಟು ವರ್ಷ ಬಾಳು ಮಗ ಬಾಳು ; ಪಂಚಪಾಂಡವರ ದನಕರು, ಹಟ್ಟಿತುಂಬ ಬದುಕಬೇಕು, ಕುಲತುಂಬ ಮೇಯಬೇಕು, ಕೊಂಬಿನೆಡೆ ತುಂಬಿಕೊಳ್ಳಬೇಕು. ಬಾಳು ಮಗ ಬಾಳು ; ಕೊಂಬಿನಲ್ಲಿ ಅಣಬೆ ಹುಟ್ಟುವವರೆಗೆ, ಕಣ್ಣಿನಲ್ಲಿ ಪೊರೆ ಬರುವವರೆಗೆ ಬದುಕಬೇಕು ವಜ್ರ) ಎಂದು ಹೇಳಿ ಅವುಗಳನ್ನು ಒಂದೊಂದಾಗಿ ಕರೆಯುವ ಕ್ರಮವಿದೆ. ಅವುಗಳಿಗೆಲ್ಲ ಬಾಳೆಹಣ್ಣು, ಅವಲಕ್ಕಿ, ದೋಸೆಯನ್ನು ತಿನ್ನಿಸುತ್ತಾರೆ. ಅವುಗಳ ಹಣೆಗೆ ಕುಂಕುಮ ಬೊಟ್ಟು ಇಡುತ್ತಾರೆ. ಹೂವು ಮಾಲೆ ಹಾಕುವುದೂ ಇದೆ. ಈ ರೀತಿ ಗೋಪೂಜೆ ಮಾಡುವುದನ್ನು ತುಳುವರು 'ಎರ್ಲೆಗ್ ಒಡರ ತೋಜಾಪುನ' (ದನಕರುಗಳಿಗೆ ದೀಪ ತೋರಿಸುವುದು) ಎಂದು ಕರೆಯುತ್ತಾರೆ. ಹಿಂದಿನ ವರ್ಷದ ಪರ್ಬದ ಬಳಿಕ ಆ ವರ್ಷದ ಪರ್ಬದ ನಡುವೆ ಹುಟ್ಟಿದ ಕರುಗಳು ಮನೆಯಲ್ಲಿದ್ದರೆ ಅವುಗಳಿಗೆ ಪರ್ಬದ ಆ ಸಂದರ್ಭದಲ್ಲಿ ಹೆಸರಿಡುವ ಕ್ರಮವಿದೆ. ಹೀಗೆ ಗೋಪೂಜೆ ಆದ ಅನಂತರ ತಡ್ಪೆಯಲ್ಲಿ ಎಲ್ಲ ಸಾಮಾಗ್ರಿಗಳನ್ನು ಹಿಡಿದುಕೊಂಡು ಗೊಬ್ಬರದ ರಾಶಿಯಲ್ಲಿಗೆ ಹೋಗುತ್ತಾರೆ. ಅಲ್ಲಿಯೂ ಕೊಲ್ತಿರಿ (ದೊಂದಿ) ಬೆಳಗಿಸಿ ಎಡೆ ಹಾಕಿ ಧೂಪ ಆರತಿ ಎತ್ತಲಾಗುತ್ತದೆ. ಪ್ರಾರ್ಥನೆ ಮಾಡಿ ನಮಸ್ಕರಿಸುತ್ತಾರೆ. ಆ ಮೇಲೆ ಗದ್ದೆಗೆ ಹೋಗುತ್ತಾರೆ. ಗದ್ದೆಯಲ್ಲಿಯೂ ಎಡೆ ಹಾಕಿ, ಕೊಲ್ತಿರಿ (ದೊಂದಿ, ಕುತ್ತಿ, ಧೂಪ, ದೀಪ ಎತ್ತಿ ಪ್ರಾರ್ಥನೆ ಮಾಡಿ ನಮಸ್ಕರಿಸುತ್ತಾರೆ. ಕೆಲವರು ಗದ್ದೆಯಲ್ಲಿ ಈ ಕ್ರಮ ಮಾಡುವಾಗ ಬಲಿಯನ್ನು ಕರೆಯುತ್ತಾರೆ. ಹೀಗೆ ಆಚರಿಸಿದ ಬಳಿಕ ಮನೆಗೆ ಹಿಂತಿರುಗಿ ಉಳಿದಿರುವ ಅವಲಕ್ಕಿ, ದೋಸೆ, ಅರಳು, ಬಾಳೆಹಣ್ಣು ಇತ್ಯಾದಿ ಎಲ್ಲ ವಸ್ತುಗಳನ್ನು ತಡ್ಪೆ ಸಹಿತ ಮನೆಯೊಳಗಿರುವ ಬತ್ತದ ರಾಶಿಯಲ್ಲಿಡುತ್ತಾರೆ.

ಇದಾದ ಬಳಿಕ ಮನೆಯೊಳಗೆ ಕುಲೆ (ಪಿತೃ)ಗಳಿಗೆ ಬಡಿಸುತ್ತಾರೆ. ಅನಂತರ ಸಹಭೋಜನ ಮಾಡುತ್ತಾರೆ. ಅವಲಕ್ಕಿ, ದೋಸೆ, ಬಾಳೆಹಣ್ಣು ಮತ್ತು ದೋಸೆ ತಿನ್ನಲು 'ಪಂದಿರ ರಸಾಯನ' (ಬಾಳೆ ಹಣ್ಣಿನ ರಸಾಯನ), 'ಬೆಲ್ಲತಾರಾಯಿ' (ಬೆಲ್ಲ ತೆಂಗಿನ ಕಾಯಿ) ಇತ್ಯಾದಿ ಸಿಹಿ ಮಾಡುತ್ತಾರೆ. ಇಲ್ಲವೆ 'ಬೆಲ್ಲದ ಪೇರ್' (ಬೆಲ್ಲದ ಹಾಲು) ಮಾಡುತ್ತಾರೆ. ಇದಲ್ಲದೆ ತರಕಾರಿ ಪದಾರ್ಥ ಇಲ್ಲವೆ ಮೀನು, ಕೋಳಿ ಪದಾರ್ಥಗಳನ್ನು ಮಾಡುತ್ತಾರೆ. ವಿಶೇಷವಾಗಿ ಪರ್ಬಕ್ಕೆ ಹೊಸ ಅಕ್ಕಿಯ ಅವಲಕ್ಕಿ, ಹೊಸ ಬೆಳ್ತಿಗೆ ಅಕ್ಕಿಯ 'ನೀರುದೋಸೆ', ಬೆಲ್ಲ - ತೆಂಗಿನಕಾಯಿ ಬೇಕೇ ಬೇಕು. ಇಲ್ಲಿಗೆ ಪರ್ಬ ಆಚರಣೆಯ ಮುಖ್ಯ ಭಾಗ ಮುಗಿಯುತ್ತದೆ.

ತುಳುವರ ಪರ್ಬದ ಇನ್ನೊಂದು ವಿಶೇಷವೆಂದರೆ ತುಳುವರ ಕುಟುಂಬದಲ್ಲಿ ಆ ವರ್ಷ ಯಾರಾದರೂ ಮರಣ ಹೊಂದಿದ್ದರೆ ಅವರಿಗೆ 'ಬಜಿಲ್ ಪಾಡುವ' (ಅವಲಕ್ಕಿ ಹಾಕುವುದು) ಎಂಬ ಕ್ರಮವಿದೆ. ಸತ್ತ ವ್ಯಕ್ತಿ ಹೆಂಗಸಾಗಿದ್ದರೆ ಅವರಿಗೆ ಅಮಾವಾಸ್ಯೆ ದಿನ, ಗಂಡಸಾಗಿದ್ದರೆ ಅವರಿಗೆ ಪಾಡ್ಯದ ದಿನ ಬೆಳಕು ಮೂಡುವುದರೊಳಗೆ ಈ ಬಜಿಲ್ ಪಾಡುನ ಕ್ರಮವನ್ನು ಮಾಡುತ್ತಾರೆ. ಮನೆಯ ಒಳಗೆ ದೈವಗಳ ಮಣೆಮಂಚ ಇರುವ ಕೋಣೆಯಲ್ಲಿ ಈ ಆಚರಣೆಯನ್ನು ಮಾಡುತ್ತಾರೆ. ಅದು ಸತ್ತವರಿಗೆ ಒಂದು ವರ್ಷದವರೆಗೆ ಮಾಡುವ ಕೊನೆಯ ಸಂಸ್ಕಾರ ಕ್ರಿಯೆಯಾಗಿರುತ್ತದೆ. ದೋಸೆ/ಪುಂಡಿ ಮತ್ತು ಮೀನು, ಹುರುಳಿ, ಕೋಳಿ ಪದಾರ್ಥ ಮಾಡಿ ಎರಡು ಎಲೆ ಹಾಕಿ ಅಗೆಲ್ ಬಡಿಸುತ್ತಾರೆ. ಪಕ್ಕದಲ್ಲಿ ಮತ್ತೆ ಮೂರು ಎಲೆಗಳನ್ನು ಸೇರಿಸಿ ಅವಲಕ್ಕಿ ಬಡಿಸುತ್ತಾರೆ. ಅದರ ಸುತ್ತ ಸುಲಿದ ಬಾಳೆ ಹಣ್ಣುಗಳನ್ನು ಇಡುತ್ತಾರೆ. ಅಂದರೆ ಹೆಸರೇ ಸೂಚಿಸುವಂತೆ ಈ ಕ್ರಿಯೆಗೆ ವಿಶೇಷವಾಗಿ ಅವಲಕ್ಕಿಯನ್ನು ಉಪಯೋಗಿಸುತ್ತಾರೆ. ನೆಂಟರಿಷ್ಟರು, ನೆರೆಹೊರೆಯ ಜನ ಈ ಆಚರಣೆಗೆ ಬರುತ್ತಾರೆ. ಹೀಗೆ ಆ ದಿನ ಮಧ್ಯಾಹ್ನದವರೆಗೆ ಸಾಮಾನ್ಯವಾಗಿ ಅವಲಕ್ಕಿ ಹಾಕಲು ಜನ ಬರುತ್ತಿರುತ್ತಾರೆ. ಬರುವವರು ಸ್ವಲ್ಪ ಅವಲಕ್ಕಿ, ಬೆಲ್ಲ, ಬಾಳೆಹಣ್ಣು ತರುತ್ತಾರೆ. ಕೆಲವರು ತೆಂಗಿನಕಾಯಿ, ಬೊಂಡ ಇತ್ಯಾದಿ ತರುವುದೂ ಇದೆ. ತಂದಂತಹ ವಸ್ತುಗಳನ್ನು ಅದಾಗಲೇ ಸತ್ತವರಿಗೆ ಬಡಿಸಿದ ರಾಶಿಯ ಮೇಲೆ ಬಡಿಸಿ ನಮಸ್ಕರಿಸುವ ಕ್ರಮವಿದೆ.

ಅವಲಕ್ಕಿ ಬಡಿಸಿ ಅದರ ಬುಡದಲ್ಲಿ ಬಾಳೆಹಣ್ಣೊಂದನ್ನು ಸುಲಿದಿಡುತ್ತಾರೆ. ಅನಂತರ ಬಂದವರಿಗೆ ತಿನ್ನಲು ಅವಲಕ್ಕಿ ಮತ್ತು ಮೀನು ಕೋಳಿ ಪದಾರ್ಥ ಊಟ ಬಡಿಸುತ್ತಾರೆ. ಅವರು ಹೋಗುವಾಗ ಅವರು ಅವಲಕ್ಕಿ ತಂದ ಚೀಲದಲ್ಲಿ ಸ್ವಲ್ಪ ಅವಲಕ್ಕಿ ಹಾಕಿ ಹಿಂತಿರುಗಿಸುವ ಕ್ರಮವಿದೆ.

ಪರ್ಬ ಆಚರಣೆಯ ಮೂರನೆಯ ದಿನ ಅಂದರೆ ಪಾಡ್ಯ ಬಳಸುವ (ಪಾಡ್ಯ ಬಡಿಸುವುದು) ದಿನದ ಮರುದಿನ, ಪರ್ಬದ ಕರಿ (ಹಬ್ಬದ ಮರುದಿನ) ಆಚರಿಸುತ್ತಾರೆ. ಆ ದಿನವೂ ಬೆಳಿಗ್ಗೆ ಉದ್ದು ಹಾಕಿದ ದೋಸೆ ಹೆಚ್ಚು ಮಾಡುತ್ತಾರೆ. ಆ ದಿನ 'ಪರ್ಬೊದ ಮರ್ಯಾದೆ' ಕೇಳಿಕೊಂಡು ಮನೆಗೆ ಬಡ ಜನ ಬರುತ್ತಾರೆ. ದೋಸೆ, ಪದಾರ್ಥ, ಅವಲಕ್ಕಿ, ಬಾಳೆಹಣ್ಣು ಇತ್ಯಾದಿ ಕೊಡುವ ಕ್ರಮವಿದೆ. ಇದಕ್ಕಾಗಿ 'ಪರ್ಬದ ಕರಿ' ಎಂದು ಕರೆಯುತ್ತಾರೆ. ಪರ್ಬದ ದಿನ ಹಾಕಿದ ಬಿಲಕ್ಕಿಮರ (ಬಲೀಂದ್ರಮರ)ವನ್ನು ಮುಂದೆ 'ಜೋಕುಲೆ ಪುಣ್ಣಮೆ' (ಮಕ್ಕಳ ಹುಣ್ಣಿಮೆ)ಯ ಆಚರಣೆಯವರೆಗೆ ಇಟ್ಟುಕೊಳ್ಳುತ್ತಾರೆ. ಅದಕ್ಕೆ ಆ ಹದಿನೈದು ದಿನವೂ ರಾತ್ರಿ ಮನೆಯ ಯಜಮಾನ ದೀಪ ಇಟ್ಟು ನಮಸ್ಕರಿಸುತ್ತಾನೆ. ಕುಟುಂಬದ ಸದಸ್ಯರೆಲ್ಲರೂ ಈ ಆಚರಣೆಯಲ್ಲಿ ಭಕ್ತಿ ಸಂಭ್ರಮಗಳಿಂದ ಪಾಲ್ಗೊಳ್ಳುತ್ತಾರೆ. ಮೂರು ನಾಲ್ಕು ದಿನ ಪುರುಸೊತ್ತು ಇರುವುದರಿಂದ ಬೇಟೆಯಾಡುವುದು, ಶಕ್ತಿಕಲ್ಲು ಎತ್ತುವುದು, ಸರಿಮುಗುಲಿ ಆಟ ಇಲ್ಲವೆ ತೆಂಗಿನಕಾಯಿ ಕುಟ್ಟುವಂತಹ ಕ್ರೀಡೆಯನ್ನು ಮನೋರಂಜನೆಗಾಗಿ ಆಡುತ್ತಾರೆ. ಕೋಳಿ ಅಂಕವನ್ನು 'ಪರ್ಬೊದಕಟ್ಟ' (ದೀಪಾವಳಿ ಹಬ್ಬದ ಕಟ್ಟ) ಎಂದು ವಿಶೇಷವಾಗಿ ನಡೆಸುತ್ತಾರೆ. ಹುಟ್ಟು ಸಾವುಗಳ ಸೂತಕಗಳು ಬಂದರೆ ಪರ್ಬವನ್ನು ಆ ದಿನ ಆಚರಿಸದೆ ಮುಂದೆ ಬರುವ ಜೋಕುಲೆ ಪುಣ್ಣಮೆ (ಮಕ್ಕಳ ಹುಣ್ಣಿಮೆ)ಯಂದು ಆಚರಿಸುವ ಕ್ರಮವಿದೆ. ಹೀಗೆ ಪರ್ಬವನ್ನು ತುಳುವರು ವಿಶೇಷವಾಗಿ ಸಂಭ್ರಮದಿಂದ ಆಚರಿಸುತ್ತಾರೆ.

**9. ಕೆಡ್ಡಸ :** 'ಪೊನ್ನಿ' (ಪುಯಿತೆಂಲ್) ತಿಂಗಳ (ತುಳುವರ ಹತ್ತನೆಯ ತಿಂಗಳು) 27, 28, 29, 30 ರಂದು 'ಕೆಡ್ಡಸ' ಆಚರಣೆ ಇರುತ್ತದೆ. ಕನ್ನಡದಲ್ಲಿ ಇದನ್ನು 'ಭೂಮಿತಾಯಿಯ ಮೀಹದ ಹಬ್ಬ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಕೆಡ್ಡಸವನ್ನು ಮೂರು ದಿನ ಆಚರಿಸುತ್ತಾರೆ. ಇದನ್ನು 'ಶುರುಕೆಡ್ಡಸ', 'ನಡುಕೆಡ್ಡಸ' ಮತ್ತು 'ಕಡೆಕೆಡ್ಡಸ'ವೆಂದು ಜನಪದರು ಕರೆಯುತ್ತಾರೆ. ಭೂಮಿತಾಯಿ ರಜಸ್ವಲೆ (ಪುಷ್ಪವತಿ)ಯಾಗುತ್ತಾಳೆ ಎಂಬ ನಂಬಿಕೆ ಈ ಆಚರಣೆಯ ಹಿಂದಿದೆ. ಪುಷ್ಪವತಿಯಾದ ಹೆಣ್ಣು ಹೆಂಗಸಾದಳೆಂಬುದು ಇದರರ್ಥ. ಈ ಮೂಲಕ ಹೆಣ್ಣು ಫಲವತಿಯಾಗುವ ಅರ್ಹತೆಯನ್ನು ಪಡೆಯುತ್ತಾಳೆ. ಹಾಗಾಗಿ ಕೆಡ್ಡಸ ಆಚರಣೆ ಫಲೋತ್ಪತ್ತಿಯನ್ನು ಸಂಕೇತಿಸುವ ಅತ್ಯಂತ ಮಹತ್ವದ ಆಚರಣೆಯಾಗಿದೆ.

ಕೆಡ್ಡಸವನ್ನು 'ಕೆಡ್ಡಸೊ', 'ಕೆಡ್ಡೇಸೊ', ಇಲ್ಲವೆ 'ಕೆಡುವಾಸೆ' ಮೊದಲಾದ ಬೇರೆ ಬೇರೆ ಹೆಸರುಗಳಿಂದ ಕರೆಯುವುದು ಕಂಡುಬರುತ್ತದೆ. ಇದು "ಮಕರ ಮಾಸದ 27ನೆಯ ದಿನ ಮೊದಲ್ಗೊಂಡು ಕುಂಭಸಂಕ್ರಮಣದವರೆಗಿನ ದಿನಗಳಲ್ಲಿ ಆಚರಿಸುವ ತುಳುನಾಡಿನ ಒಂದು ಹಬ್ಬ (ಈ ಮೂರು ದಿನಗಳಲ್ಲಿ ಭೂದೇವಿಯು ಪುಷ್ಪವತಿಯಾಗಿ ಫಲವತಿಯಾಗುವಳೆಂಬುದು ಜನಪದ ನಂಬಿಕೆ. ಈ ಸಮಯದಲ್ಲಿ ಮೂಡುದಿಕ್ಕಿನಿಂದ ಬೀಸುವ ಒಂದು ವಿಲಕ್ಷಣವಾದ ಗಾಳಿಯನ್ನು ಕೆಡ್ಡಸದ ಗಾಳಿ ಎನ್ನುತ್ತಾರೆ. ಈ ದಿನಗಳಲ್ಲಿ ನೆಲ ಅಗೆಯುವ, ಉಳುವ ಕೆಲಸ ನಿಷಿದ್ಧ. ಶೂರರು ಬೇಟೆಗೆ ಹೋಗುವುದು ಸಂಪ್ರದಾಯ. ಅಕ್ಕಿ ಮತ್ತಿತರ ಧಾನ್ಯಗಳನ್ನು ಹುರಿದು ಗೋಟು ತೆಂಗಿನ ಕಾಯಿ ಚೂರುಗಳನ್ನು ಬೆರೆಸಿ ಭೂದೇವಿಗೆ ಸಮರ್ಪಿಸಿ ತಿನ್ನುವುದು ವಾಡಿಕೆ. ಕೊನೆಯ ದಿನ ಭೂದೇವಿಗೆ ಸ್ನಾನ ಹಾಗೂ ಅಲಂಕಾರಕ್ಕೆ ಸಂಬಂಧಿಸಿದ ಆಚರಣೆಗಳಿವೆ. (A three day festival of tulunad in the month of February. (There is a belief that the Mother Earth blooms during these days and becomes fertile. A strong eastern wind blows these days. People do not use their digging instruments. They go on a hunting expedition. A special friend dish of rice and other cereals and pieces of dry coconut is prepared and offered to Mother Earth. On the last day of the festival certain rites are performed to celebrate bathing and ritual purification and decoration of the Mother Earth".) (ತುಳು ನಿಘಂಟು, 1997, p-896) "'ಕೆಡ್ಡಸ'ವೆಂದರೆ ತೊಡಗು ಎಂಬ ಅರ್ಥವೂ ಇದೆ. ತೊಡಗುವುದು ಎಂದರೆ ಕೃಷಿ ಆರಂಭಿಸುವುದು ಎಂದು ಪರಿಗ್ರಹಿಸಬಹುದು" (ಪರ್ವಕಾಲ, 2007, ಪು. - 53)

ಕೆಡ್ಡಸ, ಪೊನ್ನಿ ತಿಂಗಳ 27ರಂದು ಆರಂಭವಾದರೂ ಇದರ ವಿಶೇಷ ಆಚರಣೆಯ ಭಾಗ ಹೆಚ್ಚಾಗಿ ಪೊನ್ನಿ 29 ರಂದು ನಡೆಯುತ್ತದೆ. ಪೊನ್ನಿ 27ರಿಂದ ಸಾಮಾನ್ಯವಾಗಿ 29 ರವರೆಗೆ ಯಾರೂ ಭೂಮಿಗೆ ತೊಂದರೆ ಕೊಡುವಂತಹ ಯಾವುದೇ ಕೆಲಸಗಳನ್ನು ಮಾಡುವುದಿಲ್ಲ. ಪೊನ್ನಿ 29 ರಂದು ಎಲ್ಲರೂ ಸಾಮಾನ್ಯವಾಗಿ ಮನೆಯನ್ನು ಸೆಗಣಿ ಸಾರಿಸಿ ಶುದ್ಧಗೊಳಿಸುತ್ತಾರೆ ಮಾತ್ರವಲ್ಲ, ಮಧ್ಯಾಹ್ನ ಊಟಕ್ಕೆ ನುಗ್ಗೆಮತ್ತು ಬದನೆ ಪದಾರ್ಥಗಳನ್ನು ಕಡ್ಡಾಯವಾಗಿ ಮಾಡುತ್ತಾರೆ. ತರಕಾರಿ ಭೋಜನ ನಡೆಯುತ್ತದೆ. ಹಲಸಿನ ಮಿಡಿಯ ಪದಾರ್ಥಗಳನ್ನು ಮಾಡುವುದು ರೂಢಿ. ರಾತ್ರಿಗೆ 'ಪೇರಲ್ದಎಲೆ' (ಆಲದಮರದ ಎಲೆ)ಗಳಲ್ಲಿ ಮಡಚಿದ 'ಅಡ್ಯೆ' (ಅಕ್ಕಿತಿಂಡಿ) ಮೀನು ಮಾಂಸ ಪದಾರ್ಥ ಮಾಡುತ್ತಾರೆ. ಗಂಡಸರು ಕೆಡ್ಡಸದ ದಿನಗಳಲ್ಲಿ ಈ ಆಚರಣೆ ಭಾಗವಾಗಿ ಮೂರು ದಿನಗಳಲ್ಲಿಯೂ 'ಬೋಂಟೆ'ಗೆ (ಬೇಟೆಗೆ) ಹೋಗುತ್ತಾರೆ. ಬೋಂಟೆಯಲ್ಲಿ ಯಾವುದೇ ಪ್ರಾಣಿಗಳು ಸಿಕ್ಕಿದಲ್ಲಿ ಕೆಡ್ಡಸದ ರಾತ್ರಿ ಅದನ್ನೇ ಪದಾರ್ಥ ಮಾಡುತ್ತಾರೆ. ಮೀನುಮಾಂಸವನ್ನು ತಿನ್ನದವರು ಮಾತ್ರ ಅಕ್ಕಿಯನ್ನು ಹುರಿದು ತಿನ್ನುತ್ತಾರೆ. ಕೆಡ್ಡಸದ ನಾಲ್ಕನೆಯ ದಿನ ಬೆಳಿಗ್ಗೆ ಬೇಗ ಅಂದರೆ ಪೊನ್ನಿ 30 ಹೋಗುವಂದು ಮನೆಯ ಹಿರಿಯ ಹೆಂಗಸು ಭೂಮಿಗೆ 'ಎಣ್ಣೆ ಹೊಯ್ಯುವ' ವಿಧಿಯನ್ನು ನೇರವೇರಿಸುತ್ತಾರೆ. ಇದಕ್ಕಾಗಿ ಹಿಂದಿನ ದಿನ ರಾತ್ರಿಯೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ತುಳಸಿಕಟ್ಟೆಯ ಬಳಿ ರಾತ್ರಿ ಸೆಗಣಿ ಸಾರಿಸಿ ಸ್ಥಳ ಶುದ್ಧಗೊಳಿಸಿ ಮಾವಿನ ಮರದ ಮೂರು ಎಲೆ, ಹಲಸಿನಮರದ ಮೂರು ಎಲೆ, ಸೀಗೆಕಾಯಿ (ಕೊಳೆ ತೆಗೆಯುವ ಒಂದು ಜಾತಿಯ ಕಾಯಿ), ಗರಿಕೆ ಹುಲ್ಲು, ಗೆರಟೆಯಲ್ಲಿ ಕುಂಕುಮ, ಗಂಧ, ತೆಂಗಿನೆಣ್ಣೆ ಇಲ್ಲವೆ ಎಳ್ಳೆಣ್ಣೆ ಹಾಗೂ ದೀಪ ಇತ್ಯಾದಿಗಳನ್ನು ಇಡುತ್ತಾರೆ. ಜೊತೆಗೆ ರಾತ್ರಿ ಮಾಡಿದ ಅಡ್ಯೆ (ಅಕ್ಕಿತಿಂಡಿ) ಒಂದನ್ನು ಇಡುತ್ತಾರೆ. ಮರುದಿನ ಬೆಳಿಗ್ಗೆ ಬೇಗ ಎದ್ದು ಆ ಜಾಗದಲ್ಲಿ ಭೂಮಿಗೆ ಮೂರು ತೊಟ್ಟು ಎಣ್ಣೆ ಹೊಯ್ಯುತ್ತಾರೆ ; ಭಕ್ತಿಯಿಂದ ಕೈ ಮುಗಿಯುತ್ತಾರೆ. ಈ ರೀತಿ ಭೂಮಿಗೆ ಎಣ್ಣೆ ಹೊಯ್ಯುವ ಹೆಂಗಸರು ಹಿಂದಿನ ರಾತ್ರಿ ಮಾಂಸಾಹಾರ ಸೇವಿಸುವುದಿಲ್ಲ.

ಕೆಡ್ಡಸಕ್ಕೆ 'ಕುಡುಅರಿ' ಅಥವಾ 'ನನ್ನೆರಿ' ಅತ್ಯಂತ ಅಗತ್ಯ ಮತ್ತು ಇದರ ಸೇವನೆಯನ್ನು ಮಾಡಲೇಬೇಕೆಂಬುದು ಜನಪದರ ನಂಬಿಕೆ. "ಕೆಲವು ಕಡೆಗಳಲ್ಲಿ ಅಂಗಳದ ಒಂದೆಡೆ ಸ್ವಲ್ಪ ನೆರಳಿನ ಜಾಗದಲ್ಲಿ ಗೋಮಯದಿಂದ ಸ್ಥಳ ಶುದ್ಧಿ ಮಾಡಿ, ಮೊಳದಷ್ಟು ಅಗಲಕ್ಕೆ ವೃತ್ತವೊಂದನ್ನು ವಿಭೂತಿಯಿಂದ ಬಿಡಿಸಿ ಅದರಲ್ಲಿ ಬಿಳಿಯ ಮಡಿ ಬಟ್ಟೆ, ಗೆಜ್ಜೆಕತ್ತಿ, ಕಿರುಗತ್ತಿ, ತೆಂಗಿನ ಸೋಗೆಯ ಹಸಿಕಡ್ಡಿಯನ್ನು ಇಟ್ಟು ಭೂಮಿ ತಾಯಿಯ ಸಾನ್ನಿಧ್ಯವನ್ನು ಸಾಂಕೇತಿಸುತ್ತಾರೆ. ಕೆಡ್ಡಸದ ಪ್ರಾರಂಭದ ದಿನ ಬೆಳಿಗ್ಗೆ ಅಡುಗೆ ಮನೆಯನ್ನು ಶುಚೀಕರಿಸಿ ನವಧಾನ್ಯಗಳನ್ನು (ಇವುಗಳಲ್ಲಿ ಹುರುಳಿ ಮುಖ್ಯವಾದದ್ದು) ಅಥವಾ ಇದ್ದಷ್ಟು ಬಗೆಯ ಧಾನ್ಯಗಳನ್ನು ಹುರಿದು ಪುಡಿ ಮಾಡಿ, ಬೆಲ್ಲ, ಅರಳು, ತೆಂಗಿನಕಾಯಿಯ ಚೂರುಗಳನ್ನು ಬೆರೆಸಿ ಅಗ್ರದ ಬಾಳೆಯಿಲೆಯಲ್ಲಿ ಹಾಕಿ, ಭೂಮಿ ಬರೆದುದರ ಬದಿಯಲ್ಲಿಟ್ಟು ನಮಿಸುತ್ತಾರೆ. (ಇವೆಲ್ಲ ಫಲವಂತಿಕೆಯ ಬಯಕೆಯ ಸಂಕೇತಗಳು) ಆ ಬಳಿಕ ಎಲ್ಲರಿಗೂ ಹಂಚಿ ತಿನ್ನುತ್ತಾರೆ. ಇದಕ್ಕೆ 'ಕೆಡ್ಡಸದ ಕುಡುಅರಿ' ಅಥವಾ 'ನನ್ನೆರಿ' ಎನ್ನುತ್ತಾರೆ. ಜೊತೆಗೆ ಬಾಳೆಹಣ್ಣನ್ನೂ ಸೇರಿಸಿಕೊಳ್ಳುವ ಸಂಪ್ರದಾಯವೂ ಇದೆ. ಚೊಚ್ಚಲ ಮಕ್ಕಳಂತೂ ಈ ಹುರಿಗಾಳನ್ನು ತಿನ್ನಲೇಬೇಕಂತೆ. ಅವರು ಪರವೂರಿನಲ್ಲಿದ್ದರೆ ಅವರ ಪಾಲಿನದ್ದನ್ನು ಕಟ್ಟಿಟ್ಟು ಅವರು ಬಂದಾಗ ಕೊಡಲೇಬೇಕಂತೆ"(ತುಳುವ ಜಾನಪದ ; ಕೆಲವು ನೋಟಗಳು, 2007, ಪು. - 234, 235) ಕೆಡ್ಡಸ ಎಂದರೆ ಸಾಮೂಹಿಕ ಬೇಟೆ ಎಂಬುದಾಗಿಯೂ ಹೆಚ್ಚು ಪ್ರಚಲಿತವಿದೆ. 'ಪುಂಡದ' ಎಂಬ ಹಕ್ಕಿಗೆ ಈ ಸಮಯದಲ್ಲಿ ಜ್ವರ ಬರುತ್ತದೆ ಎಂಬ ಮಾತಿದೆ. ಹಾಗಾಗಿ 'ಪುಂಡದ ಬೋಂಟೆ' ಕೆಡ್ಡಸದ ವೇಳೆ ನಡೆಸುತ್ತಾರೆ. ಇದರ ಪದಾರ್ಥ ಎಲುಬು ಸುರಿಯುವ ಕಾಯಿಲೆಗೆ ಒಳ್ಳೆಯ ಮದ್ದು ಎಂಬುದು ಜನಪದರ ನಂಬಿಕೆಯಾಗಿದೆ. ಆದರೆ ಈ 'ಪುಂಡದ' ಪಕ್ಷಿಯ ಪದಾರ್ಥವನ್ನು ಮನೆಯೊಳಗೆ ಮಾಡಬಾರದೆಂಬ ವಿಧಿನಿಷೇಧವೂ ಜನಪದರಲ್ಲಿದೆ. "ಬೇಟೆಗೆ ಹೊರಡಬೇಕೆನ್ನುವ ಡಂಗುರವನ್ನು ಊರ ಅಜಲಾಯ (ನಲಿಕೆಯವ)ನು ಡೋಲು ಹೆಗಲಿಗೆ ಹಾಕಿ ಬಾರಿಸುತ್ತಾ ಮನೆ ಮನೆಗೆ ಬಂದು ಸಾರುವುದು ರೂಢಿ. ಕಾಡಿಗೆ ಹೋಗಿ ಬೇಟೆಯಾಡುವುದಲ್ಲದೆ ಕೊಳ ಕೆರೆಗಳಿಗೆ ಹೋಗಿ ಮೀನು, ಏಡಿ ಮುಂತಾದವನ್ನು ಹಿಡಿಯುತ್ತಾರೆ. ಕೆಲವರು ಆಮೆಗಳನ್ನು ಹುಡುಕುತ್ತಾರೆ. ಹಬ್ಬಕ್ಕೋಸ್ಕರ ಸಾಕಿದ ಹಂದಿಗಳನ್ನು ಕೊಲ್ಲುವುದೂ ಇದೆ. ಅದಲ್ಲದಿದ್ದರೆ ಕುಕ್ಕುಟ ಸಂಹಾರ. ಕೋಳಿ ಅಂಕವಂತೂ ಹಳ್ಳಿಯ ಆಕರ್ಷಕ ರಕ್ತರಂಜಿತ ಕ್ರೀಡೆ. ಇದಲ್ಲದೆ ವಿನೋದಕ್ಕೋಸ್ಕರ ಕುಟ್ಟಿದೊಣ್ಣೆ, ಚೆಡುಗುಡು (ಕಬಡ್ಡಿ), ಚೆಂಡು, ಪಲ್ಲಿಪತ್ ಮೊದಲಾದ ಆಟಗಳಲ್ಲಿ ಕಾಲ ಕಳೆಯುವುದಿದೆ.

ನಡುಕೆಡ್ಡಸದ ದಿವಸ 'ದೊಡ್ಡ ಬೇಟೆ'ಯ ಸಂಪ್ರದಾಯ. ಬೇಟೆನಾಯಿಗಳ ನೆರವಿನಿಂದ ಕೋವಿ, ಕತ್ತಿ, ದೊಣ್ಣೆಗಳಿಂದ ಕಾಡನ್ನು ಎಬ್ಬುವ ಸಾಮೂಹಿಕ ಸಂಭ್ರಮದ ಸಂದರ್ಭವಿದು. ಹೊರಡುವ ಮೊದಲು ಪುರುಷಭೂತ ಹಾಗೂ ಮುಗ್ಗೆರ್ಲು ದೈವಗಳನ್ನು (ಈ ದೈವಗಳು ಬೇಟೆಗೆ ಸಹಕಾರಿಗಳೆಂದು ಪ್ರತೀತಿ) ಪ್ರಾರ್ಥಿಸಿ ಕಾಡನ್ನು ಪ್ರವೇಶಿಸುವುದು ರೂಢಿ. ನಲಿಕೆಯವನು ಡೋಲು ಹೊಡೆಯುತ್ತಾ ಬೇಟೆಗಾರರನ್ನು ಪುಸಲಾಯಿಸಿ ಹೊಗಳಿ ಕಾಕು ಹಾಕುತ್ತಾ ಒಂದಿಷ್ಟು ದೂರ ಹೋಗಿ ಒಂದು ಮುಷ್ಟಿ ಮರಳನ್ನು ಮುಂದೆ ಬಿಸಾಡಿ ಹಿಂದಿರುಗುತ್ತಾನೆ. (ಇದೊಂದು ಮೃಗಾಕರ್ಷಣೆಯ ತಾಂತ್ರಿಕ ವಿಧಿಯ ಪಳಿಯುಳಿಕೆ ಇರಬಹುದು) ಬೇಟೆಗಾರರು ಉತ್ಸಾಹದಿಂದ ಮುನ್ನುಗ್ಗುತ್ತಾರೆ.

ಬೇಟೆಯಲ್ಲಿ ಮೊದಲು ಮೃಗಕ್ಕೆ ಹೊಡೆದು ರಕ್ತ ಚಿಮ್ಮಿಸಿದವನಿಗೆ ಮೊದಲ ದಾಯ (ಪಾಲು) ಲಭ್ಯವಾಗುತ್ತದೆ. ಹಂದಿ ಹೊಡೆದವನಿಗೆ ಮೂರು ದಾಯಗಳು. ತಲೆ, ಕೈ, 'ನಡುಗಂಟಿ' (ಬೆನ್ನೆಲುಬು ಭಾಗ) ಉಳಿದುದು ಎಲ್ಲರಿಗೂ ಪಾಲು. ಮೊದಲು ಕಾಡಿನ ಭೂತಗಳಿಗೆಂದು ಅದರ 'ಕರ್ಯಾಟ' (ಪಿತ್ತ ಜನಕಾಂಗ)ವನ್ನು ಬೆಂಕಿಯಲ್ಲಿ ಸುಟ್ಟು ಅರ್ಪಿಸಿ, ಅದನ್ನು ಅಲ್ಲೇ ಪ್ರಸಾದ ರೂಪವಾಗಿ ಹಂಚುತ್ತಾರೆ. ಹಾಗೆ ಪುರುಷಭೂತಕ್ಕೂ ಮುಗ್ಗೆರ್ಲ ದೈವಗಳಿಗೂ ಒಂದೊಂದು ಮೀಸಲು ಪಾಲು ಸಲ್ಲುತ್ತದೆ. ಆ ಮಾಂಸಭಾಗವನ್ನು ಸಂಬಂಧಪಟ್ಟವರು ಮನೆಗೊಯ್ದು, ಪಾಕಮಾಡಿ ಆಯಾ ದೈವಗಳಿಗೆ ಮರಗಳ ಬುಡಗಳಲ್ಲಿ ಎಡೆ ಅರ್ಪಿಸುತ್ತಾರೆ. ಕೂಡಿದ ಜನರಿಗೆಲ್ಲ ದಾಯವನ್ನು ಕ್ರಮದಂತೆ ಹಂಚಲಾಗುತ್ತದೆ. ಬೇಟೆಯಲ್ಲಿ ಪಾಲುಗೊಂಡವರಿಗೆ ಮಾತ್ರವಲ್ಲದೆ ಊರ ಪಟೇಲರಿಗೂ ಇತರ ಗಣ್ಯವ್ಯಕ್ತಿಗಳಿಗೂ ಪಾಲು ಸಲ್ಲುತ್ತದೆ. ಬೇಟೆ ಡಂಗುರದ ಅಜಲಾಯನಿಗೂ ಪಾಲು ಸಲ್ಲುತ್ತದೆ. ಬೇಟೆ ನಾಯಿಗಳೂ ಪಾಲು ಪಡೆಯುತ್ತವೆ. ಮಾಂಸ ಹಂಚಿಕೊಂಡಾದ ಬಳಿಕ 'ನನ ದುಂಬುಗುಲಾ ಇಂಚನೇ ನಡಪೊಡು' (ಇನ್ನು ಮುಂದಕ್ಕೂ ನಡೆಯಬೇಕು) ಎಂದು ಹೊರಡುವಾಗ ಒಂದು ಸನ್ನೆಗುಂಡು ಹೊಡೆದು ಶಬ್ದವೆಬ್ಬಿಸುವ ಕ್ರಮವಿದೆ" (ತುಳುವ ಜಾನಪದ, ಕೆಲವು ನೋಟಗಳು, 2007, ಪು.- 235, 236)ಹೀಗೆ ಬೇಟೆಗೆ ಹೋಗುವವರನ್ನು 'ಸೋವತ'ರೆಂದೂ, ಬೇಟೆಯ ನಿರ್ದೇಶಕನನ್ನು 'ಬೊಂಟ್ರ'ನೆಂದೂ ಕರೆಯಲಾಗುತ್ತದೆ. (ಕನ್ನಡ ಜಾನಪದ ವಿಶ್ವಕೋಶ, 1985, ಪು.-480)

ಮೂರನೆಯ ಮುಂಜಾನೆ ಮುತ್ತೈದೆಯರು 'ಭೂಮಿ' ಬರೆದಲ್ಲಿ (ತುಳಸಿಕಟ್ಟೆಯ ಬಳಿಯೂ ಆಗಬಹುದು) ಏಳು ಸರೊಳಿ ಸೊಪ್ಪುಗಳನ್ನು (ಲೊಳೆ ರಸವುಳ್ಳದ್ದು) ಪಶ್ಚಿಮಕ್ಕೆ ತುದಿ ಬರುವಂತೆ ಸಾಲಾಗಿರಿಸಿ, ದೀಪವಿರಿಸಿ, ಮಣೆ ಮಡುಗುತ್ತಾರೆ. ಅರಸಿನ, ಕುಂಕುಮ, ಮಸಿ, ಎಣ್ಣೆ, ಸೀಗೆ ಬಾಗೆಗಳ ತೊಗಟೆಗಳು (ಅಥವಾ ಅವುಗಳನ್ನು ಪುಡಿ ಮಾಡಿ ಉಂಡೆ ಮಾಡಿಟ್ಟದ್ದನ್ನು), ಪಚ್ಚೆಹೆಸರು ಪುಡಿ, ವೀಳ್ಯ, ಊದುಬತ್ತಿ ಇತ್ಯಾದಿಗಳನ್ನು ಇರಿಸುತ್ತಾರೆ. ಭೂಮಿಯ ಅಲಂಕಾರಕ್ಕಾಗಿ ಕನ್ನಡಿ, ಬಾಚಣಿಗೆ, ಕರಿಮಣಿಗಳನ್ನು ಇರಿಸುವುದೂ ಉಂಟು. ಹೊಸ್ತಿಲನ್ನು ರಂಗವಲ್ಲಿಯಿಂದ ಸಿಂಗರಿಸುವುದಿದೆ. ಮಿಂದು ಶುದ್ಧಳಾದ ಭೂಮಿತಾಯಿಯನ್ನು, ಫಲವತಿಯಾಗಲಿರುವ ಮಾತೃದೇವತೆಯನ್ನು ಮನೆಯೊಳಕ್ಕೆ ಸ್ವಾಗತಿಸುವ ಸನ್ನಾಹವಿದು" (ತುಳುವ ಜಾನಪದ, ಕೆಲವು ನೋಟಗಳು, 2007, ಪು - 235, 237) ಕುಟುಂಬದ ಸದಸ್ಯರೆಲ್ಲರೂ ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಸಾಮೂಹಿಕ ಬೇಟೆಯಲ್ಲದೆ ಕೋಳಿಅಂಕ, ಇಲ್ಲವೆ ತೆಂಗಿನಕಾಯಿ ಕುಟ್ಟುವಂತಹ ಕ್ರೀಡೆಯನ್ನು ಮನೋರಂಜನೆಗಾಗಿ ಆಡುತ್ತಾರೆ. ಹುಟ್ಟು ಸಾವುಗಳ ಸೂತಕಗಳು ಬಂದರೆ ಈ ಆಚರಣೆಯನ್ನು ಮಾಡುವುದಿಲ್ಲ.

**10. ಬಾರೆ ಪಾಡುನ :** ತುಳುನಾಡಿನಲ್ಲಿ ಕೆಲವೊಂದು ಬತ್ತದ ಗದ್ದೆಗಳು ನಾಗದೇವರಿಗೋ ಇಲ್ಲವೆ ಭೂತಗಳಿಗೋ ಮೀಸಲಾದವುಗಳಾಗಿರುತ್ತವೆ. ಅಂತಹ ಗದ್ದೆಗಳಲ್ಲಿ ಸುಗ್ಗಿ ಬೆಳೆ ಮಾಡುವ ಸಂದರ್ಭದಲ್ಲಿ ಅಂದರೆ ಸಾಮಾನ್ಯವಾಗಿ ಬೊಂತೆಲ್‌ನಿಂದ ಪೆರಾರ್ದೆ ತಿಂಗಳೊಳಗೆ ಒಂದು ಒಳ್ಳೆಯ ದಿನ ನೋಡಿ ಬಾಳೆ ಹಾಕುವ ಧಾರ್ಮಿಕ ಕೃಷಿ ಆಚರಣೆಯಿರುತ್ತದೆ. ಬಾಳೆ ಹಾಕುವ ಗದ್ದೆಗಳು ವಿಶಾಲವಾಗಿರುತ್ತವೆ. ಬಾಳೆ ಹಾಕಿಸುವ ಕುಟುಂಬದವರು ತಮ್ಮ ಮೂಲದ ಹೊಲೆಯರ (ಮೇರ

ಇಲ್ಲವೆ ಮನ್ಸ) ಮೂಲಕ ಈ ಆಚರಣೆಯನ್ನು ಅತ್ಯಂತ ಭಯ ಭಕ್ತಿಯಿಂದ ಮಾಡಿಸುತ್ತಾರೆ. ಬಾಳೆ ಹಾಕುವ ಗದ್ದೆ, ಭೂತದ್ದೋ ಇಲ್ಲವೇ ನಾಗನದ್ದೋ ಆಗಿರುವುದರಿಂದ ಅತ್ಯಂತ ಶುದ್ಧಾಚಾರದಿಂದ ಇದ್ದು, ವೈದಿಕರು ತಿಳಿಸುವ ಒಂದು ಶುಭದಿನದಂದು ಈ ಆಚರಣೆಯನ್ನು ಆಚರಿಸುತ್ತಾರೆ. ಮೊದಲೇ ಗದ್ದೆಯನ್ನು ಬೇಕಾದಷ್ಟು ಉಳುಮೆ (ಹದ) ಮಾಡಲಾಗಿರುತ್ತದೆ. ಕೊನೆಗೆ ಆ ಗದ್ದೆಯಲ್ಲಿ ಬೀಜ ಬಿತ್ತನೆ ಇಲ್ಲವೆ ನೇಜಿ ನೆಡಲು ಅಥವಾ ಪುಂಡಿ ಬಿತ್ತ್ ಹಾಕಲು ಅಂತಿಮವಾಗಿ ಸಜ್ಜುಗೊಳಿಸುವ ದಿನದಂದು ಮೂವರು ಹೊಲೆಯರು ಬಂದು ಬಾಳೆ ಹಾಕುವ ಆಚರಣೆಯನ್ನು ನೆರವೇರಿಸುತ್ತಾರೆ, ಬಾಳೆ ಹಾಕುವ ಗದ್ದೆಯನ್ನು 'ಬಾರೆದ ಕಂಡ' (ಬಾಳೆಯ ಗದ್ದೆ) ಎಂದೇ ಪರಂಪರೆಯಿಂದ ಕರೆದುಕೊಂಡು ಬರಲಾಗಿದೆ.

ಮೂಲದಲ್ಲಿ ಹೊಲೆಯರ ಅಧೀನದಲ್ಲಿದ್ದು, ಅನಂತರ ರಾಜಾಳ್ವಿಕೆ ಕಾಲದಲ್ಲಿ ಗುತ್ತುಮನೆಯವರಿಗೆ ಬಂದು, ಆ ಬಳಿಕ ಭೂಸುಧಾರಣೆ ಕಾಯ್ದೆಯನ್ವಯ ಒಕ್ಕಲು ಕುಟುಂಬದವರ ಪಾಲಾದ ಈ ಗದ್ದೆಗಳಲ್ಲಿ ನಂಬಿಕೆಯ ಆಧಾರದಲ್ಲಿ ಬಾಳೆ ಹಾಕುವ ಆಚರಣೆ ಮುಂದುವರಿದುಕೊಂಡು ಬಂದಿದೆ. ಮನೆಯ ಯಜಮಾನ ಬಾಳೆ ಹಾಕುವ ದಿನ ನಿಗದಿಗೊಳಿಸಿ ತನ್ನ ಮೂಲದವರಿಗೆ ತಿಳಿಸುತ್ತಾನೆ. ಆ ಪ್ರಕಾರ ಮೂಲದವರು ಬಾಳೆ ಹಾಕುವ ಮೊದಲ ದಿನ ಸಾಯಂಕಾಲ ಬಂದು ಜೇಡಿ (ಬಿಳಿ) ಮತ್ತು ಕೆಮ್ಮಣ್ಣು (ಕೆಂಪುಮಿಶ್ರಿತ) ಮಣ್ಣು ಸಂಗ್ರಹಿಸಿ ಗದ್ದೆಯ ಹುಣಿಯಲ್ಲಿಡುತ್ತಾರೆ. ಅನಂತರ ಕತ್ತಲೆಯಾಗುವ ಹೊತ್ತಿಗೆ ಮನೆಯ ಯಜಮಾನ ಮನೆಯಲ್ಲಿ ದೈವದ ಚಾವಡಿಯಲ್ಲಿ ದೀಪ ಉರಿಸಿ ಪ್ರಾರ್ಥನೆ ಸಲ್ಲಿಸಿ, ಮೂಲದವರಿಗೆ ಒಂದು ಅಡಕೆ ಮತ್ತು ಐದು ವೀಳ್ಯದೊಂದಿಗೆ ಬಾಳೆಹಾಕುವ ಗದ್ದೆಗೆ ಜೇಡಿ-ಕೆಮ್ಮಣ್ಣು ಬಳಿಯಲು ಅಪ್ಪಣೆ (ಪಟ್ಟಿ) ಕೊಡುತ್ತಾರೆ. ಅದರಂತೆ ಮೂಲದವರು ಯಜಮಾನನಲ್ಲಿ ಗದ್ದೆಗೆ ಜೇಡಿ-ಕೆಮ್ಮಣ್ಣು ಬಳಿಯುತ್ತೇವೆಂದು ಪಟ್ಟಿ ತೆಗೆದುಕೊಂಡು ನೇರ ಗದ್ದೆಗೆ ಹೋಗುತ್ತಾರೆ. ಮೊದಲೇ ತಂದಿರಿಸಿದ್ದ ಜೇಡಿ ಮತ್ತು ಕೆಮ್ಮಣ್ಣು ಮಣ್ಣುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೀರಿನಲ್ಲಿ ಕಲಸುತ್ತಾರೆ. ಬೈಹುಲ್ಲಿನ ಬ್ರಶ್ (ಸೂಡಿ) ಮಾಡಿ ಅದರಲ್ಲಿ ಗದ್ದೆಯ ಸುತ್ತಲೂ ಅಲ್ಲಲ್ಲಿ 5, 7, 9 ಹೀಗೆ ಬೆಸಸಂಖ್ಯೆ ಬರುವಂತೆ ಜೇಡಿ - ಕೆಮ್ಮಣ್ಣು ಹುಣಿಗೆ ಬಳಿಯುತ್ತಾರೆ. ಹುಣಿಗಳನ್ನು ಮೊದಲೇ ಕೆತ್ತಿ ಹುಲ್ಲನ್ನೆಲ್ಲ ತೆಗೆದು ಹದ ಮಾಡಿದ ಗದ್ದೆಯ ಮಣ್ಣಿನಿಂದ ಮೆತ್ತಿರುತ್ತಾರೆ. ಅನಂತರ ಮೂಲದವರು ತಮ್ಮ ಮನೆಗೆ ಹೋಗುತ್ತಾರೆ. ಮರುದಿನ ಬೆಳಗ್ಗೆ ಗೊತ್ತಾದ ಸಮಯಕ್ಕೆ ಬರುತ್ತಾರೆ. ಮನೆಯ ಯಜಮಾನ ಸ್ನಾನ ಮಾಡಿ ಮಡಿಯುಟ್ಟು ಭೂತದ ಚಾವಡಿಯಲ್ಲಿ ದೈವಕ್ಕೆ ದೀಪ ಉರಿಸಿ ಪ್ರಾರ್ಥನೆ ಮಾಡಿ ಮೂಲದವರಿಗೆ ಒಂದು ಅಡಕೆ ಮತ್ತು ಐದು ವೀಳ್ಯದೊಂದಿಗೆ ಆ ದೈವದ ಗದ್ದೆಯನ್ನು ಉಳುವುದಕ್ಕೆ ಪಟ್ಟಿಕೊಡುತ್ತಾರೆ. ಅವರು 'ಕಂಬಳಕ್ಕೆ ಎತ್ತುಗಳನ್ನು ಇಳಿಸುತ್ತೇವೆ' ಎಂದು ಹೇಳಿ ಅಪ್ಪಣೆ (ಪಟ್ಟಿ) ಪಡೆದು ಎತ್ತುಗಳನ್ನು ಆ ಗದ್ದೆಗೆ ಇಳಿಸಿ ನೊಗ ನೇಗಿಲು ಕಟ್ಟಿ ಉಳುಮೆ ಮಾಡುತ್ತಾರೆ. ಉಳುವಾಗ ಊರ ಹಲವು ಜೊತೆ ಎತ್ತು - ಕೋಣಗಳನ್ನು ಬರ ಹೇಳಿ ಉಳುಮೆ ಮಾಡಲಾಗುತ್ತದೆ. ಹೀಗೆ ಬೇಸಾಯ ಮುಕ್ತಾಯ ಮಾಡುವುದನ್ನು 'ಗದ್ದೆ ಕೋರುವುದು' ಎನ್ನುತ್ತಾರೆ. ಉತ್ತಾದ ಬಳಿಕ ಮನೆಯ ಎತ್ತುಗಳನ್ನು ಗದ್ದೆಯಲ್ಲಿಯೇ ಉಳಿಸಿಕೊಂಡು ಉಳಿದೆಲ್ಲವನ್ನು ಬಿಡುತ್ತಾರೆ. ಮೂಲದವರು ಮನೆಗೆ ಹೋಗಿ ಫಲಾಹಾರ ಸೇವಿಸಿ ಬಳಿಕ ಮೂರು ಕಣೆ ಸರೋಳಿ ಗೆಲ್ಲುಗಳನ್ನು, ಯಾವುದೇ ಮರದ ನಾಲ್ಕು ಕಬೆಗಳನ್ನು, ಒಂದೆರಡು ಬಿಳಲನ್ನು ಮತ್ತು ಒಂದು 'ಗಾಳಿ' ಇಲ್ಲವೆ 'ಕದಳಿ' ಜಾತಿಯ ಗೊನೆ ಹಾಕದ ಬಾಳೆಯನ್ನು ಸಂಗ್ರಹಿಸಿ ತಂದು ಗದ್ದೆಯ ಹುಣಿಯಲ್ಲಿ ಇಡುತ್ತಾರೆ. ಅನಂತರ ಗದ್ದೆಯಲ್ಲಿದ್ದ ಎತ್ತುಗಳಿಗೆ ಹೂಡಿದ್ದ ನೇಗಿಲನ್ನು ನೊಗದಿಂದ ಬೇರ್ಪಡಿಸಿ, ಹಲಗೆಕಟ್ಟಿ ಗದ್ದೆಯನ್ನು ಸಮತಟ್ಟುಗೊಳಿಸಿ ಬಳಿಕ ಆ ಹಲಗೆಯನ್ನು ತೆಗೆದು ಹುಣಿಯ ಒಂದು ಬದಿಯಲ್ಲಿ ಗದ್ದೆಯಲ್ಲಿ ನೇಗಿಲಿನ ಆಧಾರದಲ್ಲಿ ಇಡುತ್ತಾರೆ. ಆ ಹಲಗೆಯಲ್ಲಿ, ಮನೆಯ ಯಜಮಾನ ತಂದುಕೊಡುವ ಅನ್ನದ ಮುದ್ರೆಯನ್ನು ಬಾಳೆಯ ಎಲೆಯ ಒಂದು ತದಿಯಲ್ಲಿ ಇಡುತ್ತಾರೆ. ಅದನ್ನು ಅರಿಸಿನ ಮತ್ತು ಸುಣ್ಣ ಬೆರೆಸಿದ ಕುರ್ದಿ ನೀರಿನಿಂದ ಕೆಂಪು ಮಾಡುತ್ತಾರೆ. ಮುದ್ರೆಗೆ ಒಂದು 'ಕೊಲ್ತಿರಿ' ಉರಿಸಿ ಇಡುತ್ತಾರೆ. ಬೈಹುಲ್ಲಿನ ಸಹಾಯದಿಂದ ಬೆಂಕಿಕೆಂಡ ತಂದಿರುತ್ತಾರೆ. ಅದರಿಂದ ಮುದ್ರೆಗೆ ಮೂರು ಸುತ್ತು ಧೂಪ ತೋರಿಸುವರು. ಅನಂತರ ಮನೆಯ ಯಜಮಾನನ ಅಪ್ಪಣೆ ಕೇಳಿ ಒಂದು ಅಡಕೆ ಮತ್ತು ಐದು ವೀಳ್ಯದೊಂದಿಗೆ ಪಟ್ಟಿ ಪಡೆದು ಎತ್ತುಗಳನ್ನು ಹತ್ತಿಸುತ್ತೇವೆ (ಎರುಬಡ್ತಬೊ) ಎಂದು ಹೇಳಿ ಎತ್ತುಗಳನ್ನು ಬಿಟ್ಟು ಮೂರು ಸಲ 'ಕೂ' ಎಂದು ಕೂಗುತ್ತಾರೆ. ಮತ್ತೆ ಮನೆಯ ಯಜಮಾನ ಒಂದು ಅಡಕೆ ಮತ್ತು ಐದು ವೀಳ್ಯಗಳ ಐದು ಪ್ರತ್ಯೇಕ ವೀಳ್ಯ ಅಡಕೆಗಳ ಪಟ್ಟಿಯನ್ನು ಮೂಲದವನಿಗೆ ಕೊಡುತ್ತಾರೆ. ಪಟ್ಟಿ ಸ್ವೀಕರಿಸಿದ ಮೂಲದವನು 'ಬಾರೆ ಪಾಡ್ಯರ ಪಟ್ಟಿ ದೆತೊನುಬೆ' (ಬಾಳೆ ಹಾಕಲು ಅಪ್ಪಣೆ ಕೋರುತ್ತೇನೆ) ಎಂದು ಹೇಳಿ ಮೂಲದವರು ಮೂವರೂ ಸೇರಿಕೊಂಡು ಗದ್ದೆಯ ನಡುಭಾಗದಲ್ಲಿ ಬಾಳೆಹಾಕಲು ಹೊರಡುತ್ತಾರೆ. ಒಬ್ಬ ಹಾರೆ ಮತ್ತೊಬ್ಬ ಸರೊಳಿ, ಗೆಲ್ಲು ಮತ್ತು ಕಬೆಗಳನ್ನು ಹಾಗೂ ಮೂರನೆಯವನಾದ ಮುಖ್ಯಸ್ಥ ಬಾಳೆಯನ್ನು ಹಿಡಿದುಕೊಂಡು ಮುಂದುವರಿಯುತ್ತಾರೆ. ಹೀಗೆ ಹೋಗುವಾಗ ಮತ್ತೆ ಮೂರು ಬಾರಿ ಕೂಗುತ್ತಾರೆ. ಹಾರೆ ಹಿಡಿದುಕೊಂಡವ ಅದರಿಂದ ಮೂರು ಕೊಟ್ಟು ಮಣ್ಣು ತೆಗೆದು ಗುಂಡಿಮಾಡಿ ಆ ಗುಂಡಿಗೆ ಮೂರು ಸುತ್ತು ಪ್ರದಕ್ಷಿಣೆ ಬಂದು ಗೊತ್ತು ಪಡಿಸಿದ ದಿಕ್ಕಿನಿಂದ ಬಾಳೆಯನ್ನು ನೆಡಲಾಗುತ್ತದೆ. ನೆಡುವಾಗ ಬಾಳೆ ನೆಡುತ್ತೇವೆ ಎಂದು ಹೇಳುತ್ತಾರೆ. ಅದರ ಸುತ್ತ ಮಣ್ಣು ಸೇರಿಸುತ್ತಾರೆ. ನೆಟ್ಟ ಬಾಳೆಗೆ ಮೂರು ಬಾರಿ ಗದ್ದೆಯ ನೀರು ಚಿಮುಕಿಸಲಾಗುತ್ತದೆ. ಅನಂತರ ಬಾಳೆಯ ಸುತ್ತ ಸರೋಳಿ ಗೆಲ್ಲುಗಳನ್ನು ಕಟ್ಟಿ, ತಂದಿರುವ ನಾಲ್ಕು ಕಬೆಗಳನ್ನು ಬಾಳೆಗೆ ಆಧಾರವಾಗಿ ಕಟ್ಟುತ್ತಾರೆ. ಮತ್ತೆ ಮೂರು ಸುತ್ತು ಪ್ರದಕ್ಷಿಣೆ ಬರುತ್ತಾರೆ. ಅನಂತರ ಗೊತ್ತು ಪಡಿಸಿದ ದಿಕ್ಕಿನಿಂದ ಗದ್ದೆಯಿಂದ ಮೇಲಕ್ಕೆ ಹತ್ತುತ್ತಾರೆ. ಅಲ್ಲಿ ಒಂದಿಷ್ಟು ಬತ್ತವನ್ನು ಬಿತ್ತನೆಗೆಂದು ತಂದಿಟ್ಟಿರುತ್ತಾರೆ. ಅವನ್ನು ಮೂಲದವನು ಸಾಂಕೇತಿಕವಾಗಿ ಗದ್ದೆಯ ಒಂದು ಬಿತ್ತುತ್ತಾನೆ. ಅಲ್ಲದೆ ಒಂದು ಉಂಡೆ ಮಾಡಲಾದ ಮಣ್ಣಿನ ಮುದ್ದೆಯೊಂದರ ಮೇಲೆ ಮೂರು ಗರಿಕೆ ಹುಲ್ಲನ್ನು ನೆಟ್ಟು ಅದರ ನಡುವೆ ಸ್ವಲ್ಪ ಬೀಜ ಬಿತ್ತಿ ಅದನ್ನು ಒಂದು ತುದಿ ಬಾಳೆ ಎಲೆಯಲ್ಲಿಟ್ಟು ಗದ್ದೆಯ ನೀರಿನಲ್ಲಿ ತೇಲಿ ಬಿಡುತ್ತಾರೆ. ಇಲ್ಲಿಗೆ ಬಾಳೆ ಹಾಕುವ ಕ್ರಮ ಮುಗಿಯುತ್ತದೆ. ಆಮೇಲೆ ಎಲ್ಲರೂ ಸ್ನಾನ ಮಾಡಿಕೊಂಡು ಮನೆಗೆ ಬಂದು ಊಟ ಮಾಡುತ್ತಾರೆ. ಆ ದಿನ ಸಾಮಾನ್ಯವಾಗಿ ಮೀನು - ಮಾಂಸದ ವಿಶೇಷ ಅಡುಗೆ ಮಾಡುತ್ತಾರೆ. ಊಟದ ಅನಂತರ ಮೂಲದವರಿಗೆ ಸಂಬಳವಾಗಿ ಸಂಪ್ರದಾಯದಂತೆ ಬತ್ತ ಕೊಡುತ್ತಾರೆ. ಮೂಲದವರಿಗೆ ಒಂದು ವೇಳೆ ಸೂತಕ ಬಂದಲ್ಲಿ ಅವರು ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕಾಗುತ್ತದೆ. ಮನೆಯವರಿಗೆ ಸೂತಕ ಬಂದಲ್ಲಿ ಬಾಳೆಹಾಕುವ ದಿನವನ್ನು ಮುಂದೂಡಬೇಕಾಗುತ್ತದೆ. ಬಾಳೆ ಗದ್ದೆಯಲ್ಲಿ ಗೊನೆ ಹಾಕಬಾರದು ಎಂಬ

ನಂಬಿಕೆಯಿದೆ. ಅಂತೆಯೇ ಹಾಕಿದ ಬಾಳೆ ಯಾವ ದಿಕ್ಕಿಗೆ ವಾಲುತ್ತದೋ ಆ ದಿಕ್ಕಿನವರಿಗೆ ಆ ವರ್ಷ ಒಳ್ಳೆಯ ಫಸಲು ಬರುತ್ತದೆ ಎಂಬ ನಂಬಿಕೆಯೂ ಜನಪದರಲ್ಲಿದೆ. ಮುಂದೆ ಆ ಗದ್ದೆಯ ಕೊಯ್ಲಿಗೂ ಮೂಲದವರು ಬರುತ್ತಾರೆ ಮತ್ತು ಕೊಯಿಲಾದ ಅನಂತರ ಒಳ್ಳೆಯ ದಿನದಂದು ಅಥವಾ ಪಗ್ಗು ತಿಂಗಳ ಮೊದಲ ದಿನ 'ಬಿಸುಪರ್ಬ'ದಂದು ಆ ಬಾಳೆಯನ್ನು ತೆಗೆಯುತ್ತಾರೆ. ಆ ಗದ್ದೆಯ ಬತ್ತವನ್ನು ಮೂಲದವರೇ ಬಂದು ಹೊಡೆಯುವ ಕ್ರಮಗಳಿವೆ. ಬಾಳೆ ಹಾಕುವ ಗದ್ದೆಗೆ ಸೂತಕದವರು ಯಾರೂ ಇಳಿಯಬಾರದು ಮತ್ತು ಆ ಗದ್ದೆಯ ಹುಣಿಗಳಲ್ಲಿಯೂ ಸೂತಕದವರು ಹೋಗಬಾರದು ಎಂಬ ನಂಬಿಕೆಗಳೂ ಇವೆ. ಊರಿನಲ್ಲಿರುವ ಪೂಕರೆ ಗದ್ದೆಗೆ ಪೂಕರೆ ಹಾಕಿದ ಅನಂತರವೇ ಬಾಳೆ ಹಾಕುವ ಗದ್ದೆಗಳಿಗೆ ಬಾಳೆ ಹಾಕುವ ಕಾರ್ಯಕ್ರಮ ನಡೆಯುತ್ತದೆ. ಅಂತೆಯೇ ಬಾಳೆ ಹಾಲು ಗದ್ದೆಯನ್ನು ಉತ್ತ ಅನಂತರ ಬಾಳೆ ಹಾಕುವ ಸಮಯದ ನಡುವೆ ಕಂಬಳ (ಎತ್ತು-ಕೋಣಗಳನ್ನು ಓಡಿಸುವ ಸ್ಪರ್ಧೆ), ಕೋಳಿ ಅಂಕಕಹ, ತೆಂಗಿನಕಾಯಿ ಕುಟ್ಟುವಂತಹ ಜನಪದ ಕ್ರೀಡೆಗಳನ್ನು ನಡೆಸುವರು. (ಮಾಹಿತಿ : ಕುಂಜೆರ, ಮೇರ, ಡೆಂಬುಗ ಕಜೆ, ಕೊಯ್ಯೂರು ಗ್ರಾಮ, ಬೆಳ್ತಂಗಡಿ ತಾಲ್ಲೂಕು, ದ.ಕ. - 574214)

**11. ಪೂಕರೆ ಪಾಡುನ :** ಬಾಳೆ ಹಾಕುವ ಗದ್ದೆಗಳಿಗಿಂತಲೂ ವಿಸ್ತಾರದಲ್ಲಿ ಹೆಚ್ಚಿರುವ ನಾಗದೇವರಿಗೋ ಊರಿನ ಭೂತಗಳಿಗೋ ಮೀಸಲಿಟ್ಟ ಕೆಲವೇ ಕೆಲವು ಪ್ರಮುಖ ಗದ್ದೆಗಳಲ್ಲಿ ಮಾತ್ರ ಸುಗ್ಗಿ ಬೇಸಾಯದ ಮುಕ್ತಾಯದ ಸಂದರ್ಭದಲ್ಲಿ ಪೂಕರೆ ಹಾಕುವ ವಿಶೇಷ ಕೃಷಿ ಆಚರಣೆ ತುಳುನಾಡಿನಲ್ಲಿದೆ. ಹೆಚ್ಚು ಕಡಿಮೆ ಬಾಳೆ ಹಾಕುವ ಕ್ರಮಗಳನ್ನೇ ಹೋಲುವ ಆಚರಣೆ ಇದಾಗಿದೆ. ಬೊಂತೆಲ್‌ನಿಂದ ಪೆರಾರ್ದೆ ತಿಂಗಳೊಳಗೆ ಒಳ್ಳೆಯ ದಿನದಂದು ಈ ಆಚರಣೆ ನಡೆಯುತ್ತದೆ. ಪೂಕರೆ ಹಾಕುವ ಗದ್ದೆಯನ್ನು 'ಪೂಕರೆ ಗದ್ದೆ'ಯೆಂದೇ ಕರೆಯುತ್ತಾರೆ. ಇದರ ಪ್ರತಿಯೊಂದು ಕಾರ್ಯಗಳೂ ಗದ್ದೆಯ ಮೊದಲ ಉಳುಮೆ, ಬೀಜ ಹಾಕುವ, ನೇಜಿ ಕೀಳುವ, ಕೊಯ್ಲು ಮಾಡುವ ಇತ್ಯಾದಿ ಎಲ್ಲ ಕಾರ್ಯಗಳೂ ನಂಬಿಕೆಯಂತೆ ನಡೆಯುತ್ತವೆ. ಅಂದರೆ ಪೂಕರೆ ಹಾಕುವ ಗದ್ದೆ ಊರಿನ ಭೂತದ್ದೋ ಇಲ್ಲವೇ ನಾಗನದ್ದೋ ಆಗಿರುವುದರಿಂದ ಅತ್ಯಂತ ಶುದ್ಧಾಚಾರದಿಂದ ಇದ್ದು ಶುಭದಿನದಂದು ಈ ಆಚರಣೆಯನ್ನು ಆಚರಿಸುತ್ತಾರೆ. ಇದೊಂದು ಧಾರ್ಮಿಕ ನೆಲೆಯ ಇಡೀ ಊರಿಗೆ ಸಂಬಂಧಿಸಿದ ಆಚರಣೆಯಾದ್ದರಿಂದ ಇದರಲ್ಲಿ ಸಾಮೂಹಿಕ ಪಾಲ್ಗೊಳ್ಳುವಿಕೆ ಇದೆ. ಪೂಕರೆ ಹಾಕಲು ದಿನ ನಿಗದಿ ಮಾಡುವುದಕ್ಕೆ 'ಕುದಿ' ನೋಡುವುದು ಎನ್ನುತ್ತಾರೆ. ಪೂಕರೆ ಹಾಕುವುದನ್ನು 'ಕಂಡೊದ ಕೋರಿ' (ಗದ್ದೆ ಕೋರುವುದು), ಕಂಡೊ ಕೋರುನೆ (ಗದ್ದೆ ಕೋರುವುದು), ಕೋರಿದ ಕಂಬಳ (ಕೋರುವ ಕಂಬಳ), ಕಂಡೊದ ಮದ್ಮೆ (ಗದ್ದೆಯ ಮದುವೆ) ಮೊದಲಾದ ಪರ್ಯಾಯ ಪದಗಳಿಂದಲೂ ಕರೆಯುತ್ತಾರೆ. ಪೂಕರೆಯನ್ನು ನಾಗಧ್ವಜ ಎಂತಲೂ ಕರೆಯುತ್ತಾರೆ. ಮೊದಲೇ ಗದ್ದೆಯನ್ನು ಬೇಕಾದಷ್ಟು ಉಳುಮೆ (ಹದ) ಮಾಡಲಾಗಿರುತ್ತದೆ. ಕೊನೆಗೆ ಆ ಗದ್ದೆಯಲ್ಲಿ ಬೀಜ ಬಿತ್ತನೆ ಇಲ್ಲವೆ ನೇಜಿ ನೆಡಲು ಅಥವಾ ಪುಂಡಿಬಿತ್ತ್ ಹಾಕಲು ಅಂತಿಮವಾಗಿ ಸಜ್ಜುಗೊಳಿಸುವ ದಿನದಂದು ಪೂಕರೆ ಹಾಕುವ ಆಚರಣೆಯನ್ನು ನಡೆಸಲಾಗುತ್ತದೆ.

ಪೂಕರೆಗೆ ದಿನ ನಿಗದಿ ಮಾಡುವ ಮೊದಲೇ ಒಂದು ಶುಭದಿನದಂದು ಆ ಗದ್ದೆಯ ಉಳುಮೆ ಪ್ರಾರಂಭಿಸುತ್ತಾರೆ. ಎರಡು ಇಲ್ಲವೆ ಮೂರು ಬಾರಿ ಉಳುಮೆ ಆದ ಮೇಲೆ ಗದ್ದೆಯ ಸುತ್ತಲೂ ಹುಣಿಯನ್ನು ಕೆತ್ತಿ ಹುಣಿಗೆ ಉಳುಮೆಯಿಂದ ಹದಗೊಂಡ ಗದ್ದೆಯ ಕೆಸರು ಮಣ್ಣನ್ನು ಚೆನ್ನಾಗಿ ಮೆತ್ತಿ ಚಂದ ಮಾಡುತ್ತಾರೆ. ಅನಂತರ ಗದ್ದೆಗೆ ಹಟ್ಟಿ ಗೊಬ್ಬರ ಹಾಕಿ ಉಳುಮೆ ಯಾಗುತ್ತದೆ. ಪೂಕರೆಯ ದಿನ ಆ ಗದ್ದೆಯ ಕೊನೆಯ ಉಳುಮೆಯಾಗಿರುತ್ತದೆ. ಹಾಗಾಗಿ ಪೂಕರೆಯ ಹಿಂದಿನ ದಿನ ಬೆಳಿಗ್ಗೆಯಿಂದಲೇ ಊರಿನ ಅಜಿಲ ಊರಿನೆಲ್ಲ ಮನೆ ಮನೆಗೆ ಹೋಗಿ ತೆಂಬರೆ ಬಾರಿಸಿ ಪೂಕರೆಯ ಹೇಳಿಕೆ ಕೊಡುತ್ತಾನೆ. ಸಂಜೆಗೆ ಮಣ್ಣು ಮೆತ್ತಲಾದ ಹುಣಿಗೆ ಸುತ್ತಲೂ ಅಲ್ಲಲ್ಲಿ ಜೇಡಿ ಮಣ್ಣಿನ ಲೇಪನವನ್ನೂ, ಮಧ್ಯ ಮಧ್ಯದಲ್ಲಿ ತ್ರಿಶೂಲಾಕಾರದಲ್ಲಿ ಜೇಡಿ ಮಣ್ಣಿನಿಂದ ನಾಗನ ಚಿತ್ರಗಳನ್ನೂ ಬರೆಯಲಾಗುತ್ತದೆ. ಈ ಕೆಲಸವನ್ನು ಮೂಲದ ಮೇರ ಇಲ್ಲವೆ ಮನ್ಸ ಜನಾಂಗದ ಮುಖ್ಯಸ್ಥನಾದ 'ಕಾಪಡ'ನು ಸಹಾಯಕರೊಂದಿಗೆ ಮಾಡುತ್ತಾನೆ. ಬಳಿಕ ಆ ದಿನ ರಾತ್ರಿ ಗುತ್ತು ಮನೆಯಿಂದ ಅಥವಾ ಊರ ದೈವದ ಚಾವಡಿಯಿಂದ ಕೊಂಬು ವಾಲಗಗಳೊಂದಿಗೆ ದೈವಗಳ ಭಂಡಾರವನ್ನು (ದೈವಗಳ ಆಭರಣಗಳ ಪೆಟ್ಟಿಗೆ) ತಂದು ಪೂಕರೆ ಗದ್ದೆಯ ಪಕ್ಕದಲ್ಲಿ ಹಾಕಿದ ಚಪ್ಪರದಡಿಯಲ್ಲಿ ಇರಿಸಲಾಗುತ್ತದೆ. ಹೀಗೆ ಭಂಡಾರ ಇರಿಸುವ ಸ್ಥಳವನ್ನು 'ಕೊಡಿಯಡಿ' ಎಂದು ಕರೆಯುತ್ತಾರೆ. ಪೂಕರೆ ಗದ್ದೆಯ ಪಕ್ಕದಲ್ಲಿಯೇ ಅಥವಾ ಹುಣಿಯಲ್ಲಿಯೇ ನಾಗನ ಬನವಿರುತ್ತದೆ. ದೈವದ ಭಂಡಾರ ಇರಿಸಿದ ನಂತರ ನಾಗನಿಗೆ ಪೂಕರೆ ಗದ್ದೆಯ ಯಜಮಾನ 'ತಂಬಿಲ' ಕೊಡುತ್ತಾನೆ. ಆಗ ಬಿಲ್ಲವರ ಮುಖ್ಯಸ್ಥ ಊರ 'ಬೋಂಟ್ರ', ಊರ ಮಡಿವಾಳ, ಊರ ಕೆಲಸಿಗ ಆಚಾರಿ ಜೊತೆಗಿರುತ್ತಾರೆ. ಕಾಪಡ ನಾಗನಿಗೆ ನುಡಿಕಟ್ಟ್ ಹೇಳುತ್ತಾ ಕೊನೆಯಲ್ಲಿ 'ಆಳ್ ಏ ಕೂ' ಎಂದು ಕೂಗುತ್ತಾ ಗದ್ದೆಗೆ ಸುತ್ತು ಬರುತ್ತಾರೆ. ಸುತ್ತು ಬರುವಾಗ ಗದ್ದೆಯ ಹುಣಿಗೆ ಅಲ್ಲಲ್ಲಿ 'ಕೊಳ್ಳುರಿ' ಕುತ್ತುತ್ತಾರೆ.

ನಾಗನಿಗೆ ತಂಬಿಲವಾದ ಅನಂತರ ಅಲ್ಲಿ ಸೇರಿರುವ ಮನ್ಸರು (ಆದಿ ದ್ರಾವಿಡರು) ರಾತ್ರಿಯಿಡೀ ಡೋಲು, ಹಲಗೆ ಬಾರಿಸುತ್ತ ಕುಣಿಯುತ್ತಾರೆ. ಉರಲ್‌ಗಳನ್ನು ಹಾಡುತ್ತಾರೆ. ಮರುದಿನ ಪೂಕರೆಯ ದಿನವೂ ಮನೆಮನೆಗೆ ಹೋಗಿ ಕುಣಿಯುತ್ತಾರೆ. ಮತ್ತೆ ಪೂಕರೆ ಹಾಕುವಾಗಲೂ ಕುಣಿಯುತ್ತಾರೆ. ಪೂಕರೆಯ ಹಿಂದಿನ ರಾತ್ರಿ ನಾಗನಿಗೆ ತಂಬಿಲ ಆದ ಬಳಿಕ ಪೂಕರೆ ಗದ್ದೆಯ ಹುಣಿಯಲ್ಲಿ ಮೂಲದವ 'ಕಾಪಡ' ಜಾಗರಣೆ ಕೂರುತ್ತಾನೆ. ಇದನ್ನು 'ಪನಿಕ್ಕ್ ಕುಲ್ಲುನೆ' ಎಂದು ಕರೆಯುತ್ತಾರೆ.

ಪೂಕರೆಯ ದಿನ ಬೆಳಿಗ್ಗೆ ಗುತ್ತಿನ ಮನೆಯ ಎತ್ತುಗಳನ್ನು ಮೊದಲು ಗದ್ದೆಗೆ ಇಳಿಸಲಾಗುತ್ತದೆ. ಇವುಗಳನ್ನು 'ಕುದಿ ಎರ್ಲು' ಎಂದು ಕರೆಯುತ್ತಾರೆ. ಈ ಎತ್ತುಗಳನ್ನು ದೈವದ ಎತ್ತುಗಳೆಂದೇ ಗುರುತಿಸಲಾಗುತ್ತದೆ ಮತ್ತು ವರ್ಷಕ್ಕೊಮ್ಮೆ ಪೂಕರೆ ಗದ್ದೆಗೆ ಮಾತ್ರ ಇಳಿಸಲಾಗುತ್ತದೆ. ಈ ಕಾರ್ಯಗಳನ್ನು ಮೂಲದವನೇ ಮಾಡುತ್ತಾನೆ. ಕುದಿ ಎರ್ಲುಗಳು ಪೂಕರೆ ಗದ್ದೆಯಲ್ಲಿ ಮೂರು ಸುತ್ತು ಬಂದು ಉಳುಮೆಗೆ ಚಾಲನೆ ನೀಡುತ್ತವೆ. ಅನಂತರ ಅವು ಪೂಕರೆ ಹಾಕುವ ಆಚರಣೆ ಮುಗಿಯುವ ತನಕವೂ ಗದ್ದೆಯಲ್ಲಿಯೇ ಒಂದು ಮೂಲೆಯಲ್ಲಿ ಇರುತ್ತವೆ. ಆ ದಿನ ಆ ಗದ್ದೆಯ ಕೊನೆಯ ಉಳುಮೆಯಾಗಿದ್ದು, ದೈವದ ಗದ್ದೆಯೂ ಆಗಿರುವುದರಿಂದ ಊರಿನ ಪ್ರತಿ ಮನೆಯ ಜೋಡು ಎತ್ತು ಇಲ್ಲವೆ ಕೋಣಗಳು ಉಳುಮೆಗೆ ಬರುತ್ತವೆ. ಇತ್ತ ಇನ್ನೊಂದು ಕಡೆಯಲ್ಲಿ ಊರ ಕೆಲಸಿಗ ಆಚಾರಿ ಪೂಕರೆಯನ್ನು ತಯಾರಿಸುತ್ತಾನೆ. ಸುಮಾರು ಏಳು ಕೋಲು

(ಒಂದು ಕೋಲು = ಎರಡೂವರೆ ಅಡಿ) ಉದ್ದದ ಧೂಪದ ಇಲ್ಲವೆ ಅಡಕೆ ಮರದ ಕಂಬದಿಂದ ಪೂಕರೆ ತಯಾರಿಯಾಗುತ್ತದೆ. ಆಚಾರಿಯು ಕಂಬವನ್ನು 7, 9 ಇಲ್ಲವೆ 11 ಹೀಗೆ ಬೆಸ ಸಂಖ್ಯೆಯ ಅಂಕಣ ಬರುವಂತೆ ಬಿದಿರಿನ ಅಥವಾ ಅಡಕೆ ಮರದ ಭಾಗಗಳಿಂದ ತ್ರಿಕೋನಾಕಾರದಲ್ಲಿ ಅಥವಾ ರಥದ ಮಾದರಿಯಲ್ಲಿ ರಚನೆ ಮಾಡುತ್ತಾನೆ. ಹೀಗೆ ರಚಿತವಾದ ಪೂಕರೆಯನ್ನು ಚೆಂಡು ಹೂ, ಪಾದೆ ಹೂ, ಕೇಪುಲ ಹೂ, ಹಿಂಗಾರ ಹೀಗೆ ವಿವಿಧ ಜಾತಿಯ ಹೂವುಗಳಿಂದ ಅಲಂಕರಿಸುತ್ತಾರೆ. ಹೀಗೆ ಅಲಂಕಾರಗೊಂಡ ಪೂಕರೆಯನ್ನು ದೈವಗಳ ಭಂಡಾರ ಇರಿಸಿದ 'ಕೊಡಿಯಡಿ'ಯ ಮುಂಭಾಗದಲ್ಲಿ ತಂದು ಇಡುತ್ತಾರೆ.

ಗದ್ದೆ ಉತ್ತಾದ ಬಳಿಕ ಎತ್ತು ಮತ್ತು ಕೋಣಗಳನ್ನು ಕಂಬಳ ಓಡಿಸುತ್ತಾರೆ. ಒಂದು ಕಡೆಯಿಂದ ಗದ್ದೆ ಕೋರುವ (ಸಮತಟ್ಟು ಮಾಡುವ) ಕೆಲಸವೂ ನಡೆಯುತ್ತದೆ.

ಇದಾದ ಮೇಲೆ ದೈವಗಳಿಗೆ ಕೋಲ ನಡೆಯುತ್ತದೆ. ದೈವಗಳು 'ನುಡಿಕಟ್ಟ್' (ಕಟ್ಟು ಕಟ್ಟಳೆಯ ಬಗ್ಗೆ ಹೇಳುವುದು) ಹೇಳುತ್ತವೆ. ಪೂಕರೆ ಗದ್ದೆಗೆ ದೈವಗಳು ಒಂದು ಸುತ್ತು ಪ್ರದಕ್ಷಿಣೆ ಬರುತ್ತವೆ. ಅಲ್ಲಿ ಸೇರಿರುವ ಗುತ್ತು ಮನೆಯ ಯಜಮಾನ, ಊರಿನ ಪ್ರಮುಖರು, ಊರ ಬೋಂಟ್ರ, ಊರ ಮಡಿವಾಳ, ಆಚಾರಿ, ಕಾಪಡ ಹೀಗೆ ಸಮಸ್ತರು ಪೂಕರೆಗೆ ಅಕ್ಷತೆ ಇಟ್ಟು, ಹಾಲೆರೆದು ದೈವವನ್ನು ಪ್ರಾರ್ಥಿಸುತ್ತಾರೆ. ಮೂಲದವರು ಎಲ್ಲರೂ ಸೇರಿಕೊಂಡು ಪೂಕರೆಯನ್ನು ಅಡ್ಡಲಾಗಿ ಹೊತ್ತುಕೊಂಡು ಗದ್ದೆಯ ಮಧ್ಯಭಾಗಕ್ಕೆ ತರುತ್ತಾರೆ. ಹೀಗೆ ಪೂಕರೆಯನ್ನು ಗದ್ದೆಗೆ ತರುವಾಗ ಮುಂದಿನಿಂದ ಊರ ಮಡಿವಾಳ ಬಿದಿರಿನ ಹಂಡೆಯಿಂದ ಪೂಕರೆಗೆ ಹಾಲೆರೆದುಕೊಂಡು ಹೋಗುತ್ತಾನೆ. ಬಳಿಕ ಗದ್ದೆಯ ಮಧ್ಯದಲ್ಲಿ ಪೂಕರೆಯನ್ನು ನಿಲ್ಲಿಸಲೆಂದೇ ಇರುವ ಗುಳಿ ಕಲ್ಲಿನಲ್ಲಿ ಅಥವಾ ಕಲ್ಲಿನ ಚಕ್ರಗಳಲ್ಲಿ ಪೂಕರೆಯನ್ನು ನೆಟ್ಟಗೆ ನೆಡುತ್ತಾರೆ. ಅನಂತರ ಎಲ್ಲರೂ ಅಲ್ಲಿಂದ ಓಡಿಕೊಂಡು ಬರುತ್ತಾರೆ. ಇಲ್ಲಿಗೆ ಪೂಕರೆ ಹಾಕುವ ಆಚರಣೆ ಮುಗಿಯುತ್ತದೆ. ಪೂಕರೆ ಯಾವ ದಿಕ್ಕಿಗೆ ವಾಲುತ್ತದೋ ಆ ದಿಕ್ಕಿನವರ ಗದ್ದೆಗಳಲ್ಲಿ ಆ ವರ್ಷ ಉತ್ತಮ ಬೆಳೆಯಾಗುವುದೆಂಬ ನಂಬಿಕೆಯಿದೆ. ಪೂಕರೆ ಹಾಕಿದ ದಿನ ಆ ಗದ್ದೆಯಲ್ಲಿ ಮತ್ತೆ ಯಾವುದೇ ಕೆಲಸ ಕಾರ್ಯ ನಡೆಯುವುದಿಲ್ಲ. ಆ ಗದ್ದೆಗೆ ಬಿತ್ತನೆ ಮಾಡುವುದಾಗಲೀ, ನೇಜಿನೆಡುವುದಾಗಲೀ ಅದು ಮರುದಿನ ನಡೆಯುತ್ತದೆ. (ಆಧಾರ ಗ್ರಂಥ : ಪೂವಪ್ಪ ಕಣಿಯೂರು, ಪೂಕರೆ ಮತ್ತು ಇತರ ಜಾನಪದೀಯ ಲೇಖನಗಳು - 2004)

**12. ಕಂಡೊಗು ಪೇರ್ ದೀಪುನ :** ತುಳುನಾಡಿನಲ್ಲಿ ಬತ್ತ ಬೆಳೆದು ಕಟಾವಿಗೆ ಬಂದ ಸಂದರ್ಭದಲ್ಲಿ ಕಟಾವು ಮಾಡುವ ಮೊದಲು ಗದ್ದೆಗೆ ಹಾಲು ಮತ್ತು ವೀಳ್ಯ ಇಟ್ಟು ಪ್ರಾರ್ಥಿಸಿಕೊಳ್ಳುವ ಆಚರಣೆಯನ್ನು 'ಕಂಡೊಗು ಪೇರ್ ದೀಪುನ' ಎಂದು (ಗದ್ದೆಗೆ ಹಾಲು ಇಡುವುದೆಂದು) ಕರೆಯಲಾಗುತ್ತದೆ. ಒಂದು ಗೊತ್ತಾದ ಶುಭದಿನದಂದು ಬೆಳಗ್ಗೆ ಮನೆಯ ಯಜಮಾನ ತಲೆಗೆ ಮುಂಡಾಸು ಸುತ್ತಿಕೊಂಡು ಅರ್ಧ ಕುಡ್ತೆಯಷ್ಟು ದನದ ಹಾಲು (ಇಲ್ಲದಿದ್ದರೆ ತೆಂಗಿನ ಕಾಯಿಯ ಹಾಲು), ಒಂದು ಅಡಕೆ, ಐದು ವೀಳ್ಯ, ಒಂದು ಪರ್ದತ್ತಿ ಹಿಡಿದುಕೊಂಡು ಬೆಳೆದಿರುವ ಒಂದು ಗದ್ದೆಯ ಮೂಲೆಯಲ್ಲಿ ಹೋಗಿ ಮೂರು ಹಿಡಿ ಬತ್ತವನ್ನು ಕೊಯ್ದು ಅಲ್ಲೇ ಪೂರ್ವಕ್ಕೆ ಮುಖ ಮಾಡಿ ಇಟ್ಟು ಅದರ ಪಕ್ಕದಲ್ಲಿ ಹಲಸಿನ ಮರದ ಎಲೆಯ ಐದು ಕಿಲ್ಲಿಗಳಲ್ಲಿ ಹಾಲು ಇಡುತ್ತಾರೆ. ಜೊತೆಗೆ ಅಡಕೆ ಮತ್ತು ವೀಳ್ಯವನ್ನು ಇಟ್ಟು ಕೈಮುಗಿದು ಪ್ರಾರ್ಥನೆ ಮಾಡಿ ಬರುತ್ತಾರೆ. ಅನಂತರ ಯಾವಾಗಬೇಕಾದರೂ ಕೊಯಿಲು ಮಾಡಬಹುದು. ಏಣೇಲು, ಸುಗ್ಗಿ ಮತ್ತು ಕೊಳಕೆ ಹೀಗೆ ಮೂರೂ ಬೆಳೆಯ ಸಂದರ್ಭದಲ್ಲೂ ಹಾಲು ಇಡುವ ಆಚರಣೆಯಿದೆ.

*ಡಿ.ಕೆ.*

**ತುಳುನಾಡಿನ ಕೃಷಿ ಜಾನಪದ** ಸಹ್ಯಾದ್ರಿಯ ತಪ್ಪಲಿನಿಂದ ಪಶ್ಚಿಮದ ಕಡೆಗೆ ಅರಬ್ಬೀ ಸಮುದ್ರದ ತಡಿಯವರೆಗೆ, ದಕ್ಷಿಣದಲ್ಲಿ ಕಾಸರಗೋಡಿನ ಚಂದ್ರಗಿರಿ ನದಿಯಿಂದ ಉತ್ತರದ ಗೋಕರ್ಣದವರೆಗೆ ಹಬ್ಬಿರುವ ಭೂಭಾಗವನ್ನು 'ತುಳುನಾಡು' ಎನ್ನುತ್ತಿದ್ದರು. ತುಳು ಎಂಬ ಪದವು ನೀರಿನಿಂದ ತುಂಬಿದ, ತೇವಭರಿತವಾದ ವಾತಾವರಣವಿರುವ ಎಂಬರ್ಥವನ್ನು ಕೊಡುತ್ತದೆ. ಮಣ್ಣಿನ ಗುಣಕ್ಕನುಸಾರವಾಗಿ ಈ ಪ್ರದೇಶಕ್ಕೆ ತುಳುನಾಡು ಎಂಬ ಹೆಸರುಬಂದಿದೆ. ತುಳುನಾಡಿನ ಅಸ್ತಿತ್ವಕ್ಕೆ ಬಹಳ ಪ್ರಾಚೀನತೆ ಇದೆ. ತಮಿಳುಸಂಗಂ ಸಾಹಿತ್ಯದಲ್ಲಿ ತುಳುನಾಡಿನ ಉಲ್ಲೇಖವಿದೆ. ಅಶೋಕನ ಕಾಲದ ಶಾಸನಗಳಲ್ಲಿ ತುಳುನಾಡನ್ನು ಸತಿಯಪುತೋ (ಸತಿಯ ಪುತ್ರ) ಎಂದು ಹೆಸರಿಸಲಾಗಿದೆ. ತುಳು ಜನಪದ ಸಾಹಿತ್ಯದಲ್ಲೂ (ಅಕ್ಕೆರ ಸು 409 ಪಾಡ್ದನ) ಈ ಹೆಸರು ಸತ್ಯನಾಪುರ ಎಂಬುದಾಗಿ ಬಳಕೆಯಾಗಿದೆ. ತುಳುನಾಡಿನ ನಿವಾಸಿಗಳು ಮಾತನಾಡುತ್ತಿದ್ದ ಭಾಷೆಗೆ 'ತುಳು' ಎಂಬ ಹೆಸರಾಯಿತು. 'ತುಳು' ಅತ್ಯಂತ ಪ್ರಾಚೀನ ಭಾಷೆ ಎಂಬುದಾಗಿ ಭಾಷಾ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಇದೊಂದು ಮೂಲ ಭಾಷೆ (Proto language) ಆಗಿದ್ದು ದಕ್ಷಿಣ ದ್ರಾವಿಡ ಭಾಷೆಯಿಂದ ಮೊದಲು ಕವಲೊಡೆಯಿತು. ತುಳು ಭಾಷೆ ತನ್ನದೇ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದೆ. ಕಾಲಕ್ರಮೇಣ ತುಳುನಾಡಿನ ರಾಜಕೀಯ ಗಡಿಯೊಂದಿಗೆ ಸಾಂಸ್ಕೃತಿಕ ಪರಿಧಿಯೂ ಹ್ರಸ್ವಗೊಳ್ಳುತ್ತಾ ಬಂದು ಪ್ರಸ್ತುತ ತುಳು ಭಾಷೆ ಮತ್ತು ಸಂಸ್ಕೃತಿ ಕರ್ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗಷ್ಟೇ ಸೀಮಿತವಾಗಿ ಉಳಿದಿದೆ. ಉಡುಪಿ ಜಿಲ್ಲೆಯ ಉತ್ತರ ಭಾಗದಲ್ಲಿ ತುಳು ಮಾತನಾಡುವವರ ಸಂಖ್ಯೆ ಕಡಿಮೆ ಇದ್ದರೂ ತುಳುವ ಸಂಸ್ಕೃತಿ ಮಾತ್ರ ಜೀವಂತವಾಗಿ ಉಳಿದಿದೆ.

ತುಳುನಾಡಿಗೆ ಜನಪದರು ಸಾಮಾನ್ಯವಾಗಿ 'ಪರಶುರಾಮ ಸೃಷ್ಟಿ' ಎನ್ನುತ್ತಾರೆ. ಪುರಾಣಗಳ ಪ್ರಕಾರ ಜಮದಗ್ನಿಯ ಮಗ ಪರಶುರಾಮನು ಕ್ಷತ್ರಿಯಪ್ರಿಯರನ್ನೆಲ್ಲಾ ನಾಶಗೊಳಿಸುತ್ತಾ ಗೋಕರ್ಣದವರೆಗೆ ಬಂದು ತನ್ನ ಅನುಯಾಯಿಗಳಾದ ಬ್ರಾಹ್ಮಣರಿಗೆ ನೆಲೆಯೊಂದನ್ನು ಕಲ್ಪಿಸಿಕೊಡುವ ಸಲುವಾಗಿ ಭೂಭಾಗವನ್ನು ಬಿಟ್ಟು ಕೊಡುವಂತೆ ಸಮುದ್ರರಾಜನನ್ನು ಪ್ರಾರ್ಥಿಸಿ ತನ್ನ ಕೊಡಲಿಯನ್ನು ದಕ್ಷಿಣಕ್ಕೆಸೆದನು. ಆತನ ಕೊಡಲಿಯು ಹಾರಿಹೋಗಿ ಕೇರಳದಲ್ಲಿ ಬಿದ್ದಷ್ಟು ದೂರದವರೆಗಿನ ಸಮುದ್ರ ಹಿಂದೆ ಸರಿಯಿತೆಂದೂ, ಆ ಭೂಭಾಗದಲ್ಲಿ ವೈದಿಕ ಸಂಸ್ಕೃತಿಯ ಬ್ರಾಹ್ಮಣರು ಬಂದು ನೆಲೆಸಿ ಇಲ್ಲಿನ ಮೂಲ ಸಂಸ್ಕೃತಿಯನ್ನು ತಮ್ಮ ಅಧೀನ ಸಂಸ್ಕೃತಿಯನ್ನಾಗಿ ಮಾಡಿಕೊಂಡ ವಿಚಾರ ಐತಿಹ್ಯದಿಂದ ತಿಳಿದುಬರುತ್ತದೆ. ಹೀಗಾಗಿ ಗೋಕರ್ಣದಿಂದ ಈಗಿನ ಕೇರಳದ ಪೆರುಂಪೊಲದವರೆಗಿನ ಭೂಭಾಗವನ್ನು ಪರಶುರಾಮ ಸೃಷ್ಟಿ ಎಂದು ಕರೆಯುತ್ತಾರೆ.

ತುಳುನಾಡಿನ ಅಸ್ತಿತ್ವವು ಇಂದು - ನಿನ್ನೆಯದಲ್ಲ. ಭೂಖಂಡಗಳು ಹುಟ್ಟಿಕೊಂಡಾಗ ತುಳುನಾಡಿನ ಸೃಷ್ಟಿಯಾಯಿತೆಂಬುದನ್ನು ಕೆಲವು ಭೂವಿಜ್ಞಾನಿಗಳು ಉಲ್ಲೇಖಿಸಿದ್ದಾರೆ. ಕೋಟ್ಯಾಂತರ ವರ್ಷಗಳ ಹಿಂದೆ

ಯಾವತ್ತೋ ಭೂಖಂಡಗಳೆಲ್ಲ ಒಂದಾಗಿದ್ದು ಈ ಸಹ್ಯಾದ್ರಿಯ ಸೆರಗು ದಕ್ಷಿಣ ಆಫ್ರಿಕದ ಮೂಡಣ ಸೆರಗಿಗೆ ಅಂಟಿಕೊಂಡಿತ್ತು. ಕಾಲಕ್ರಮೇಣ ಭೂಖಂಡ ಒಡೆದು ಒಂದು ಭಾಗವು ಪೂರ್ವಕ್ಕೆ ಸರಿಯಿತು. ಮಧ್ಯದಲ್ಲಿ ಹಿಂದೂ ಸಾಗರವು ಒಳ ಹೊಕ್ಕು ಅರಬ್ಬೀ ಸಮುದ್ರ ಉಂಟಾಯಿತು. ಆಫ್ರಿಕಾ ಖಂಡ ಬೇರ್ಪಟ್ಟಿತು ಎಂಬುದು ಅವರ ವಾದವಾಗಿದೆ.

ಸಹ್ಯಾದ್ರಿ ಪರ್ವತದ ತಪ್ಪಲಿನಿಂದಲೇ ತುಳುನಾಡು ಹುಟ್ಟಿಕೊಂಡಿದ್ದು, ಈ ಪರ್ವತ ಸಾಲು ತುಳುನಾಡಿನ ಬೆಳೆ, ಭಾಗ್ಯ, ಭಾಷೆ - ಸಂಸ್ಕೃತಿ, ಮಳೆ - ನೀರಾವರಿ ಮುಂತಾದ ಹಲವು ವಿಚಾರಗಳಲ್ಲಿ ತುಳುನಾಡಿನ ರಕ್ಷಣೆ ಗೈಯ್ಯುತ್ತಿರುವುದರಿಂದಲೇ ಪ್ರಾಚೀನ ಕಾಲದ ಜನರು ಈ ಭೂಭಾಗವನ್ನು ಸಹ್ಯಾದ್ರಿಯ ಪುತ್ರಿ ಎಂದಿದ್ದಾರೆ. ಡಾ. ಕೆ. ಶಿವರಾಮಕಾರಂತರು ತುಳುನಾಡನ್ನು 'ಸಹ್ಯಾದ್ರಿಸಂಪದ' ಎಂದಿದ್ದಾರೆ.

**ಕೃಷಿ ಸಂಸ್ಕೃತಿ :** ತುಳುನಾಡಿನ ಆದಿವಾಸಿಗಳು ಜಲ ಸಂಸ್ಕೃತಿಯವರು. ಕೃಷಿಯನ್ನೇ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡವರು. ಕೃಷಿ ಮಾಡಬೇಕಾದರೆ ಫಲವತ್ತಾದ ಮಣ್ಣುಬೇಕು. ಧಾರಾಳವಾಗಿ ನೀರು ಬೇಕು, ಬೆಳೆಯನ್ನು ದುಷ್ಟ ಶಕ್ತಿಗಳಿಂದ ರಕ್ಷಣೆ ಮಾಡಬೇಕು. ಈ ಕಾರ್ಯಗಳಿಗಾಗಿ ಅವರು ನಾಗಾರಾಧನೆ, ಯಕ್ಷಾರಾಧನೆ ಮತ್ತು ಭೂತಾರಾಧನೆಯನ್ನು ಬಹಳ ಹಿಂದಿನ ಕಾಲದಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ.

ಫಲವತ್ತಾದ ಮಣ್ಣನ್ನು ಒದಗಿಸುವುದು ಭೂಮಿ. ಈ ಭೂಮಿಯೊಳಗೆ ಜೀವಂತವಾಗಿರುವ ಮಹಾಶಕ್ತಿಶಾಲಿ ಜೀವಿಗಳೆಂದರೆ ಉರಗಗಳು. ಅವುಗಳಲ್ಲಿ ಅತ್ಯಂತ ವಿಷಭರಿತವಾದ ಹಾಗೂ ಕಚ್ಚಿದಾಕ್ಷಣ ಜೀವ ಹಿಂಡಿ ಬಿಡುವ ಸರೀಸೃಪವೆಂದರೆ (ಸರ್ಪ) ನಾಗರಹಾವು. ನಾಗಾರಾಧನೆ ಜಗತ್ತಿನಲ್ಲೇ ಅತ್ಯಂತ ಪ್ರಾಚೀನವಾದ ಆರಾಧನಾ ಪದ್ಧತಿ. ಸುಮಾರು 25,000 ವರ್ಷಗಳಿಗಿಂತಲೂ ಪೂರ್ವದಲ್ಲಿ ನಾಗಾರಾಧನೆ ಜಗತ್ತಿನ ಹಲವಾರು ಕಡೆಗಳಲ್ಲಿ ರೂಢಿಯಲ್ಲಿತ್ತು. ಹೆಚ್ಚಿನ ಕಡೆಗಳಲ್ಲಿ ಈ ಆರಾಧನಾ ಪದ್ಧತಿ ಕಣ್ಮರೆಯಾಗುತ್ತಾ ಬಂದರೂ ತುಳುನಾಡಿನಲ್ಲಿ ಮಾತ್ರ ಈಗಲೂ ಉಳಿದುಕೊಂಡಿದೆ. ಪುರಾಣ ಕಾಲದಲ್ಲಿ ತುಳುನಾಡು ಪಾತಾಳ ಅಥವಾ ನಾಗಲೋಕವೆಂಬ ಹೆಸರು ಪಡೆದಿದ್ದುದೇ ಇದಕ್ಕೆ ಮುಖ್ಯ ಕಾರಣ. ಇಲ್ಲಿಯ ಜನರು ತಮ್ಮ ಕೃಷಿ ಭೂಮಿಯ ಫಲವತ್ತತೆಯ ರಕ್ಷಣೆಗಾಗಿ, ಮನುಷ್ಯರ ಆರೋಗ್ಯ ರಕ್ಷಣೆಗಾಗಿ ನಾಗನನ್ನು ಆರಾಧಿಸಿಕೊಂಡು ಬರುತ್ತಿದ್ದಾರೆ. ತುಳುನಾಡಿನಲ್ಲಿ ನಾಗಗಳ ಆವಾಸಕ್ಕಾಗಿ ಬಹಳಷ್ಟು ಬನಗಳನ್ನು, ದೇವರ ಕಾಡುಗಳನ್ನು ಮತ್ತು ನಾಗಾಲಯಗಳನ್ನು ನಿರ್ಮಿಸಿದ್ದಾರೆ. ಈ ನಾಗಾಲಯಗಳಲ್ಲಿ ನಾಗನಿಗೆ ವಿಶೇಷ ಪೂಜೆ, ತಂಬಿಲ ಮುಂತಾದ ಕಾರ್ಯಗಳು ನಡೆಯುತ್ತಲೇ ಇರುತ್ತವೆ. ನಾಗ ಶಾಪ ನಿವಾರಣೆಗಾಗಿ ಆಶ್ಲೇಷ ಬಲಿ, ನಾಗ ಸಂಸ್ಕಾರ ಇತ್ಯಾದಿ ಕ್ರಿಯೆಗಳು ವೈದಿಕ ಸಂಸ್ಕೃತಿಯ ಪ್ರಕಾರ ನಡೆಯುತ್ತವೆ. ಪಾಹಾರ ಜನಾಂಗದವರು ಹಿಂದೆ ನಾಗಲೋಲ, ಜಕ್ಕೆ (ಡಕ್ಕೆ) ಬಲಿಗಳನ್ನು ನಡೆಸುತ್ತಿದ್ದರು. ಪ್ರಸ್ತುತ ವೈದ್ಯ ಕುಲದ ಬ್ರಾಹ್ಮಣರು ನಾಗಮಂಡಲವೆಂಬ ಹೆಸರಿನಿಂದ ಉಡುಪಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆಸುತ್ತಿದ್ದಾರೆ.

ಕೃಷಿ ನಡೆಸಲು ಮಣ್ಣು ಎಷ್ಟು ಅವಶ್ಯವೋ ನೀರು ಕೂಡ ಅಷ್ಟೇ ಅವಶ್ಯ. ನೀರಿನ ರಕ್ಷಕರು ಯಕ್ಷರವಿ, ವೈದಿಕ ಪಂಥದಲ್ಲಿ ಯಕ್ಷರ ಅಸ್ತಿತ್ವದ ಉಲ್ಲೇಖವಿದೆ. ಅವರು ಪವಾಡ ಪುರುಷರು, ಜಲ ಸಂರಕ್ಷಕರು, ಧನಾಧಿಪತಿಗಳು ಎಂಬ ವಿಶೇಷತೆಗಳನ್ನು ಹೇಳಲಾಗಿದೆ. ಅದರೊಂದಿಗೆ ಅವರು ತೊಂದರೆ ಕೊಡುವ ಶಕ್ತಿಗಳು. ಮನುಷ್ಯರಲ್ಲಿ ಆವಾಹನೆಗೊಂಡು ದಿಙ್ಮೂಢರನ್ನಾಗಿ ಮಾಡಿ ಬಿಡುತ್ತಾರೆ. ಮಾನಸಿಕ ತೊಂದರೆಗಳನ್ನು ಕೂಡಾ ನೀಡುತ್ತಾರೆ ಎಂಬ ಕಲ್ಪನೆಗಳೂ ಇವೆ. ಬೌದ್ಧ ಮತ್ತು ಜೈನ ಧರ್ಮೀಯರು ಯಕ್ಷಾರಾಧಕರು. ಜೈನಧರ್ಮ ತುಳುನಾಡಿಗೆ ಬಂದಾಗ ಉತ್ತರ ಭಾರತದಲ್ಲಿ ಆರಾಧಿಸಲ್ಪಡುವ 'ಬಿರ್' (ಯಕ್ಷ) ಆರಾಧನೆ ತುಳುನಾಡಿಗೂ ಬಂತು. ಉತ್ತರದ 'ಬಿರ್‌ಮಹಾ' ಇಲ್ಲಿ ಬಿರ್ಮ ಅಥವಾ ಬೆರ್ಮ ಆಯಿತು. ಬೆರ್ಮ ತುಳುನಾಡಿನ ಆದಿ ದೈವ, ತಾನಗಳಲ್ಲಿ ಗುಂಡಗಳಲ್ಲಿ ಆಲಡೆ ಮತ್ತು ಗರುಡಗಳಲ್ಲಿ ಬೆರ್ಮನ ಆರಾಧನೆ ನಡೆಯುತ್ತದೆ. ಕೋಟಿ-ಚೆನ್ನಯರು ಬೆರ್ಮನ ಆರಾಧಕರೂ ಬೆರ್ಮನ ಮಾನಸ ಪುತ್ರಿ ಸಿರಿ. ತುಳುವಿನಲ್ಲಿ ಯಕ್ಷಿಣಿಯರನ್ನು 'ಸಿರಿ'ಗಳೆಂದೂ ಯಕ್ಷರನ್ನು 'ಕುಮಾರ'ರೆಂದೂ ಕರೆಯುತ್ತಾರೆ. ಸಿರಿ ಮತ್ತು ಲಕ್ಷ್ಮಿಗೆ ನಿಕಟ ಸಂಬಂಧವಿದೆ. ಅದೇ ರೀತಿ ಕುಮಾರ ಎಂಬ ಪದಕ್ಕೂ ಕುಮಾರ ಸ್ವಾಮಿಗೂ ಬಾಹ್ಯ ಸಂಬಂಧವಿದೆ. ಹೀಗಾಗಿ ಜೈನರು ಲಕ್ಷ್ಮಿ, ಗಣಪತಿ ಮತ್ತು ಸುಬ್ರಹ್ಮಣ್ಯನನ್ನು ಯಕ್ಷರೆಂದೇ ನಂಬಿ ಆರಾಧಿಸುತ್ತಾರೆ. ತುಳುನಾಡಿನಲ್ಲಿ ನಡೆಯುವ ಸಿರಿಯ ಆರಾಧನೆಯು ಯಕ್ಷಾರಾಧನೆಯ ಒಂದು ಭಾಗವಾಗಿದೆ. ಯಕ್ಷಾರಾಧನೆಯು ಮಾರ್ಪಾಡುಗೊಂಡು ರಂಗಕಲೆಯಾಗಿ ಯಕ್ಷಗಾನ ರೂಪತಾಳಿದೆ. ಇಲ್ಲಿ ನಡೆಯುವ 'ಕಲಶ' ಪೂಜೆ ಯಕ್ಷಾರಾಧನೆಯ ಒಂದು ಭಾಗವಾಗಿದೆ. ಪ್ರಸ್ತುತ ನಾಗಸಂಪತ್ತು ಯಕ್ಷರನ್ನು ಸಮೀಕರಿಸಿ ಬೆರ್ಮನನ್ನು ನಾಗಬೆರ್ಮನನ್ನಾಗಿ ಮಾಡಲಾಗಿದೆ. ಜಕ್ಕೆ ಬಲಿ, ನಾಗಮಂಡಲವಾಗಿ ರೂಪಾಂತರಹೊಂದಿದೆ.

ಈ ಪ್ರಕೃತಿಯಲ್ಲಿ ಬಹಳಷ್ಟು ಶಕ್ತಿಗಳಿವೆ ಎಂಬುದಾಗಿ ಜನಪದರ ನಂಬಿಕೆ. ಅಂತಹ ಶಕ್ತಿಗಳಲ್ಲಿ ಭೂತಗಳೂ ಸೇರಿವೆ. ಭೂತಗಳನ್ನು ಉಳಿದ ಕಡೆಗಳಲ್ಲಿ ದೆವ್ವ (devil) ಎಂದು ಪರಿಗಣಿಸಿದರೆ ತುಳುವರು ಮಾತ್ರ ದೈವಗಳು (devine spirits) ಎಂದು ನಂಬುತ್ತಾರೆ. ತಾವು ಬೆಳೆಸಿದ ಬೆಳೆಯ ರಕ್ಷಣೆ ತಮ್ಮ ಜಾನುವಾರುಗಳ ರಕ್ಷಣೆ. ತಮ್ಮ ಮನೆಯ ಶಿಶುಗಳ ಮತ್ತು ಕುಟುಂಬದ ಸದಸ್ಯರ ರಕ್ಷಣೆಗಾಗಿ ತಮ್ಮ ಕೆಲಸ ಕಾರ್ಯಗಳಿಗೆ ಬರುವ ಆತಂಕಗಳ ಪರಿಹಾರಕ್ಕಾಗಿ ತುಳುವರು ಭೂತಗಳನ್ನು ನಂಬುತ್ತಾರೆ. ತುಳುನಾಡಿನಲ್ಲಿ ಅಸಂಖ್ಯಾತ ಭೂತಗಳು ಆರಾಧಿಸಲ್ಪಡುತ್ತವೆ. ಅಗಿಲು, ತುಂಬಿಲ, ಕೋಲ, ನೇಮ ಮುಂತಾದ ವಿವಿಧ ಆಚರಣೆಗಳ ಮೂಲಕ ಭೂತಾರಾಧನೆ ನಡೆಯುತ್ತದೆ. ಪ್ರತಿಯೊಂದು ಕುಟುಂಬದಲ್ಲಿಯೂ ವರ್ಷಕ್ಕೊಮ್ಮೆ ಭೂತಕೋಲಗಳು ನಡೆಯುತ್ತವೆ. ಗ್ರಾಮದ ದೈವಗಳನ್ನು ಗ್ರಾಮಸ್ಥರು, ಮಾಗಣೆಯ ದೈವಗಳನ್ನು ಮಾಗಣೆಯ ಹತ್ತು ಸಮಸ್ತರು ಹಾಗೂ ಸೀಮೆಯ ದೈವಗಳನ್ನು ಸೀಮೆಯವರೆಲ್ಲ ಸೇರಿ ವರ್ಷಕ್ಕೊಮ್ಮೆ ನಿಗದಿತ ದಿನದಂದು ಉತ್ಸವನಡೆಸಿ ಆರಾಧಿಸುತ್ತಾರೆ.

**ಬತ್ತದ ಬೇಸಾಯ :** ಅಕ್ಕಿ ದಕ್ಷಿಣ ಭಾರತದ ಹೆಚ್ಚಿನ ಜನರ ನಿತ್ಯಾಹಾರ. ತುಳುನಾಡಿನ ಜನರು ಕೃಷಿ ಬದುಕನ್ನು ಆರಂಭಿಸಿದಾಗಿನಿಂದ ಈವರೆಗೆ ಬತ್ತದ ಬೆಳೆಗೆ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿದ್ದಾರೆ. ಬತ್ತದ ಬೆಳೆಗೆ ಸಮತಲಗಟ್ಟಿಯಾದ ಭೂಮಿಬೇಕು. ಮೇಲೆ ಮೆಕ್ಕಲು ಮಣ್ಣಿರಬೇಕು. ಪೈರಿನ ಬುಡದಲ್ಲಿ ಬೀಜ ಬಿತ್ತಿದಂದಿನಿಂದ ಬತ್ತದ ತೆನೆ ಹಣ್ಣಾಗುವವರೆಗೆ ನೀರು ಬೇಕು. ಅದೇ ರೀತಿ ಇತರ ಬೆಳೆಗಳಿಗಿಂತ ಹೆಚ್ಚು ಉಷ್ಣಬೇಕು. ಈ ಎಲ್ಲಾ ಅನುಕೂಲತೆಗಳೂ ತುಳುನಾಡಿನನಲ್ಲಿರುವುದರಿಂದ ಬತ್ತದ ಬೆಳೆ ಇಲ್ಲಿ ಹೆಚ್ಚಾಗಲು ಕಾರಣವಾಯಿತು.

**ಕುಮರಿ ಬೆಳೆ :** ಪ್ರಾಚೀನ ಕಾಲದಲ್ಲಿ ಜನಸಂಖ್ಯೆ ಕಡಿಮೆಯಾಗಿತ್ತು. ಭೂಮಿಬೇಕಾದಷ್ಟಿತ್ತು. ಕೃಷಿ ಮಾಡಲು ಬೇಕಾದಷ್ಟು ಅನುಕೂಲವಿತ್ತು. ಆದರೆ ಅವರಲ್ಲಿ ಕೃಷಿಯ ಬಗ್ಗೆ ಹೆಚ್ಚು ಕೌಶಲ್ಯವಿದ್ದಿರಲಿಲ್ಲ. ತಮ್ಮ ದಿನನಿತ್ಯಕ್ಕೆ ಬೇಕಾಗುವಷ್ಟನ್ನು ಮಾತ್ರ ಬೆಳೆದರೆ ಸಾಕೆಂಬುದು ಅವರ ಅಭಿಪ್ರಾಯವಾಗಿತ್ತು. ಹಾಗಾಗಿ ಅವರು ಕೃಷಿಗಾಗಿ ಹೆಚ್ಚು ಪರಿಶ್ರಮ ವಹಿಸಲು ಸಿದ್ಧವಿರಲಿಲ್ಲ. ಮಳೆಗಾಲದಲ್ಲಿ ಒಂದು ಬೆಳೆ ಬೆಳೆದು ವರ್ಷಕ್ಕಾಗುವಷ್ಟು ಆಹಾರ ಧಾನ್ಯವನ್ನು ಸಂಗ್ರಹಿಸುತ್ತಿದ್ದರು.

ತಮ್ಮ ಗುಡಿಸಲಿನ ಸಮೀಪವಿರುವ ಗುಡ್ಡ ಪ್ರದೇಶಗಳಲ್ಲಿ ಬೆಳೆದಿರುವ ಕಾಡು, ಕುರುಚಲು ಪೊದೆಗಳನ್ನೆಲ್ಲ ಕತ್ತಿ, ಕೊಡಲಿಗಳಿಂದ ಕಡಿದು ತೆಗೆದು ಅವುಗಳನ್ನೊಂದು ಕಡೆ ಬೆಂಕಿಕೊಟ್ಟು ಮೇಲಿನಿಂದ ತೆಳ್ಳಗೆ ಮಣ್ಣು ಸುರಿದು ಮುಚ್ಚಿ ಬಿಡುತ್ತಿದ್ದರು. ಇದನ್ನು ಸುಡುಮಣ್ಣು ಎನ್ನುತ್ತಾರೆ. ಹೀಗೆ ಬರಿದುಗೊಳಿಸಿದ ಭೂಪ್ರದೇಶವನ್ನು ಪಿಕ್ಕಾಸಿಯಿಂದ ಅಗೆದು 'ಸಮತಲಗೊಳಿಸಿ ಅದರ ಮೇಲೆ ಸುಡುಮಣ್ಣು ಹರಡುತ್ತಿದ್ದರು. ಹೀಗೆ ಹಸನುಗೊಳಿಸಿದ ಭೂಭಾಗದ ಸುತ್ತಲೂ ದನಕರುಗಳು ಬರದಂತೆ ಬೇಲಿ ಹಾಕುತ್ತಿದ್ದರು. ಮಳೆಯ ನೀರು ಒಳಗೆ ಹರಿದು ಬಾರದಂತೆ ಸುತ್ತ ಕಣಿವೆ ತೋಡುತ್ತಿದ್ದರು. ಆರಂಭದ ಒಂದು ಮಳೆ ಬಂದೊಡನೆ ಬತ್ತ ಬಿತ್ತನೆ ಮಾಡುತ್ತಿದ್ದರು. ಪೈರು ಅದರಷ್ಟಕ್ಕೆ ಬೆಳೆದು ಬಿಡುತ್ತಿತ್ತು. ತೆನೆ ಬಲಿತು ಹಣ್ಣಾದ ಮೇಲೆ ಪೈರನ್ನು ಕೊಯ್ದು ಕಾಡು ಬಳ್ಳಿಗಳಿಂದ ಬಿದಿರಿನ ಸಲಿಕೆಗಳಿಗೆ ಹೆಣೆದು ಮಾಡಿದ ತಡಿಕೆಗೆ (ಪಡಿ) ಪೈರನ್ನು ಬಡಿದು ಪೈರಿನಿಂದ ಬತ್ತವನ್ನು ಬೇರ್ಪಡಿಸುತ್ತಿದ್ದರು. ಹೀಗೆ ಪಡೆದ ಬತ್ತವನ್ನು ಒಣಗಿಸಿ ಅನಂತರ ಅರೆ ಬೇಯಿಸಿ ಮತ್ತೊಮ್ಮೆ ಒಣಗಿಸಿ ಒನಕೆಯಿಂದ ಕುಟ್ಟಿ ಅಕ್ಕಿ ಮಾಡಿ ಮಾಡಿ ಕಟ್ಟಿ ತೆಗೆದಿಡುತ್ತಿದ್ದರು. ಬೇಕಾದಂತೆ ಊಟಕ್ಕೆ ಈ ಕುಚ್ಚಲಕ್ಕಿ (ಕುಸುಬುಲಕ್ಕಿ, ಉರ್ಪೆಲರಿ)ಯನ್ನು ಬಳಸುತ್ತಿದ್ದರು.

ಕುಮರಿ ಬೆಳೆ ಎಂದು ಕರೆಯಲ್ಪಡುವ ಈ ಬೆಳೆ ವರ್ಷಕ್ಕೊಂದು ಬೆಳೆ. ಮಳೆ ನೀರಿನ ಆಧಾರದಿಂದಲೇ ಬೆಳೆಯುವ ಬೆಳೆ. ಈ ಬೆಳೆಯನ್ನು ಕಾಡುಮೃಗಗಳಿಂದ ರಕ್ಷಿಸಿಕೊಳ್ಳಲು ಹಗಲು ಹೊತ್ತು ಯಾರಾದರೂ ಮಕ್ಕಳು ಬೆಳೆಯ ಪಕ್ಕದಲ್ಲೊಂದು ಚಪ್ಪರ ಹಾಕಿ ಕಾದು ಕುಳಿತುಕೊಳ್ಳಬೇಕಾಗಿತ್ತು. ರಾತ್ರಿ ಹೊತ್ತು ಯಾರಾದರೂ ಹಿರಿಯರು ಪಕ್ಕದಲ್ಲಿ ಮರದ ಬೊಡ್ಡೆ, ಕಟ್ಟಿಗೆಗಳನ್ನೆಲ್ಲಾ ರಾಶಿ ಹಾಕಿ ಬೆಂಕಿ ಕೊಟ್ಟು ಅದರ ಉರಿಗೆ ಚಳಿಕಾಯಿಸುತ್ತಾ ಮಲಗುತ್ತಿದ್ದರು. ಬೆಂಕಿ ನೋಡಿ ಮೃಗಗಳು ಬರುತ್ತಿರಲಿಲ್ಲ. ಇಲ್ಲದೆ ಹೋದರೆ ಕೆಲವರು ಡಬ್ಬಿ ಬಡಿಯುತ್ತಾ ಕುಳಿತು ಕೊಳ್ಳುತ್ತಿದ್ದರು. ಬೆಳೆಯ ಪಕ್ಕದ ಮರಕ್ಕೊಂದು ಡಬ್ಬಿ ಕಟ್ಟಿ ಆ ಡಬ್ಬಿಗೆ ಕಬ್ಬಿಣದ ಕೋಲೊಂದು ಬಡಿಯುವಂತೆ ಹಗ್ಗ ಜೋಡಿಸಿ, ಹಗ್ಗದ ತುದಿಯನ್ನು ಮನೆವರೆಗೆ ತಂದು, ಹಗ್ಗ ಎಳೆಯುವಾಗಲೆಲ್ಲ ಕಬ್ಬಿಣದ ಕೋಲು ಡಬ್ಬಿಯನ್ನು ಬಡಿದು ಸದ್ದು ಮಾಡುವ ಉಪಕರಣವ ಮಾಡುತ್ತಿದ್ದರು. ಪಕ್ಕದಲ್ಲಿ ಎತ್ತರದಿಂದ ಕೆಳಗೆ ಹರಿಯುವ ನೀರಝುರಿ ಇದ್ದರೆ, ಆ ಝುರಿಯ ಬುಡದಲ್ಲಿ ಎದುರೆದುರು ಎರಡು ಕಡೆ ಗೂಟಗಳನ್ನು ನೆಟ್ಟು, ದಪ್ಪ ಬಿದಿರಿನ ಅಂಡೆಯ ಗಂಟಿನ ಕೆಳಗಡೆ ತೂತು ಕೊರೆದು, ಆ ತೂತಿಗೆ ಸಿಕ್ಕಿಸಿದ ಕೋಲನ್ನು ನೆಟ್ಟ ಗೂಟಗಳ ಮೇಲಿಟ್ಟು ನೀರ ಮೊಂಟೆ ಮಾಡುತ್ತಿದ್ದರು. ಈ ನೀರ ಮೊಂಟೆಯ ಕೆಳಗಡೆ ಕಲ್ಲೊಂದನ್ನು ಇಡುತ್ತಿದ್ದರು. ಹರಿದು ಬರುವ ನೀರಧಾರೆ ಮೊಂಟೆಯ ಬಾಯಿಗೆ ಬೀಳುವಂತೆ ಮಾಡುತ್ತಿದ್ದರು. ಮೊಂಟೆಯಲ್ಲಿ ನೀರು ತುಂಬಿದಾಗ ಅದು ಭಾರದಿಂದ ಕೆಳಗಡೆ ಬಾಗಿ ಕಲ್ಲಿಗೆ ಬಡಿದು ಸದ್ದು ಮಾಡುತ್ತಿತ್ತು. ನೀರು ಸುರಿದು ಹೋದ ಮೇಲೆ ಅದು ಮೊಂಟೆಯ ಮತ್ತೊಂದು ತುದಿಯ ಭಾರಕ್ಕೆ ಮೇಲಕ್ಕೆತ್ತಲ್ಪಡುತ್ತಿತ್ತು. ಮೇಲಕ್ಕೆತ್ತಲ್ಪಟ್ಟಾಗ ಮತ್ತೆ ಮೊಂಟೆಯ ಬಾಯಿಯನ್ನು ನೀರ ಹರವಿಗೆ ಒಡ್ಡಿದಂತಾಗುತ್ತಿತ್ತು. ಇನ್ನು ದನಕರುಗಳನ್ನು ಹಿಡಿಯಲು ಬರುತ್ತಿದ್ದ ಹುಲಿ, ಚಿರತೆಗಳನ್ನು ಬೆನ್ನಟ್ಟಲು ಹುಲಿ ಓಡಿಸುವ ಉಪಕರಣವೊಂದನ್ನು ಮರದಿಂದ ತಯಾರಿ ಮಾಡಿ ಬಳಸುತ್ತಿದ್ದರು. ಈ ಉಪಕರಣದ ಹಿಡಿಯನ್ನು ಹಿಡಿದು ಜೋರಾಗಿ ತಿರುಗಿಸಿದಾಗ ಅದು ಆರ್ಭಟೆ ಕೊಡುವ ಸದ್ದನ್ನುಂಟು ಮಾಡುತ್ತಿತ್ತು. (ಇದರ ಮಾದರಿ ಬಂಟ್ವಾಳ ರಾಣಿ ಅಬ್ಬಕ್ಕ ವಸ್ತು ಸಂಗ್ರಹಾಲಯದಲ್ಲಿದೆ)

ಕುಮರಿಬೆಳೆ ಜಾಗಕ್ಕೆ ಯಾವುದೇ ಹೆಚ್ಚಿನ ಗೊಬ್ಬರವನ್ನು ಬಳಸದೆ ಇರುವುದರಿಂದ ಒಂದು ಸ್ಥಳದಲ್ಲಿ ಒಂದೆರಡು ವರ್ಷ ಮಾತ್ರ ಒಳ್ಳೆಯ ಬೆಳೆ ಬರುತ್ತದೆ. ಮತ್ತೆ ಇಳುವರಿ ಕಡಿಮೆಯಾಗುತ್ತದೆ. ಅದಕ್ಕಾಗಿ ಬೆಳೆ ಬೆಳೆಯುವ ಜಾಗವನ್ನು ಆಗಾಗ ಬದಲಾವಣೆಗೊಳಿಸುತ್ತಿದ್ದರು. ಈ ಬೆಳೆಗೆ ಸಾಂಪ್ರದಾಯಿಕ ತಳಿಗಳಾದ ತೊನ್ನೂರು, ಅತಿಕರಾಯ, ಚಕ್ಕಚವ್ವೆ ಮುಂತಾದವುಗಳನ್ನು ಹೆಚ್ಚಾಗಿ ಬಳಸುತ್ತಿದ್ದರು.

**ಗದ್ದೆ ಬೇಸಾಯ :** ಗದ್ದೆ ಬೇಸಾಯಕ್ಕೆ ಸಮತಲವಾದ ಭೂಮಿ ಬೇಕು. ಪೈರಿನ ಬುಡದಲ್ಲಿ ಸದಾ ನೀರು ನಿಲ್ಲುವಂತಿರಬೇಕು. ಬತ್ತದ ಗಿಡದ ಬೇರುಗಳು ಹೆಚ್ಚು ಆಳಕ್ಕೆ ಹೋಗುವುದಿಲ್ಲ. ಹಾಗಾಗಿ ತಳಭಾಗ ಮೆಕ್ಕಲು ಮಣ್ಣಿನಿಂದ ಕೂಡಿದ್ದು ಅದರ ಕೆಳಗಿನ ಪದರು ಗಟ್ಟಿಯಾಗಿರಬೇಕು. ಬೇಸಾಯಗಾರರು ಇದನ್ನರಿತು ತನ್ನ ಸ್ವಾಧೀನವಿರುವ ಭೂಮಿಯನ್ನು ಸಮತಲಗೊಳಿಸಿ ಸುತ್ತ ಬದುಗಳನ್ನು ಕಟ್ಟಿ ಗದ್ದೆಗಳನ್ನು ನಿರ್ಮಿಸುತ್ತಿದ್ದರು. ತಾವು ಸಾಕಿದ ಜೋಡೆತ್ತು ಇಲ್ಲವೇ ಕೋಣಗಳನ್ನು ಬಳಸಿ, ಅವುಗಳ ಹೆಗಲಿಗೆ ನೊಗ ಹೇರಿ, ನೊಗದ ಮಧ್ಯದ ಹಗ್ಗಕ್ಕೆ ನೇಗಿಲ ಜೋಡಿಸಿ, ನೇಗಿಲ ಪುಡ್ಕಂಬಿ (ಹಿಡಿ)ಯಲ್ಲಿ ಹಿಡಿದು ಗದ್ದೆ ಉಳುಮೆ ನಡೆಸಿದರು. ಗದ್ದೆಗೆ ತಮ್ಮ ಹಟ್ಟಿಯಲ್ಲಿ ಸಿಕ್ಕಿದ ಗೊಬ್ಬರ, ಬೂದಿ ಹಾಗೂ ಕಾಡಿನಿಂದ ತಂದ ಸೊಪ್ಪನ್ನು ಕೊಚ್ಚಿ ಹಾಕಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿದರು. ಗದ್ದೆ ಉಳುವುದು ಕೂಡ ಒಂದು ಕೌಶಲ. ಉಳುಮೆಯ ಸಂದರ್ಭದಲ್ಲಿ ನೇಗಿಲ ಪನೊರು (ಕುಳ) ಒಂದೇ ಆಳಕ್ಕೆ ಮಣ್ಣನ್ನು ಸೀಳಿಕೊಂಡು ಹೋಗುವಂತೆ ನೋಡಿಕೊಳ್ಳುತ್ತಾರೆ. ಹೀಗೆ ಹರಿದುಕೊಂಡು ಹೋಗುವ ಸೀಳು ದೀರ್ಘ ವೃತ್ತಾಕಾರದಲ್ಲಿ ಗದ್ದೆಯ ಒಳಮೈಯ ಸುತ್ತು ತೆಗೆಯುತ್ತದೆ. ಇದನ್ನು ಪೊರಿ ಕಟ್ಟುವುದು ಎನ್ನುತ್ತಾರೆ. ಪೊರಿಕಟ್ಟುವಾಗ ಗದ್ದೆಯಲ್ಲಿ ನೇಗಿಲು ಹೋಗದ ಖಾಲಿ ಜಾಗ ಉಳಿಯಬಾರದು. ಒಂದು ಗದ್ದೆಯನ್ನು ಪೂರ್ತಿಯಾಗಿ ಉಳುವುದಕ್ಕೆ ಬಿಂದು ಸಾಲು ಎನ್ನುತ್ತಾರೆ. ಗೊಬ್ಬರ ಹಾಕಿದ ಮೇಲೆ ಬಿತ್ತನೆಗೆ ಮೊದಲು ಕನಿಷ್ಟ ಮೂರು ಸಲವಾದರೂ ಉಳುಮೆನಡೆಸಬೇಕು. ಆಗ ಗದ್ದೆಯ ಮಣ್ಣೆಲ್ಲ ನಯವಾಗಿ ಹದಕ್ಕೆ ಬರುತ್ತದೆ. ಗದ್ದೆಗೆ ಹದ ನೀರು ಬಿಟ್ಟು ಉತ್ತಾದ ಬಳಿಕ ಮಣ್ಣನ್ನು ಸಮತಲಗೊಳಿಸಲು ಹಲಗೆ ಮೆಟ್ಟುತ್ತಾರೆ. ಸುಮಾರು ಹತ್ತಡಿ ಉದ್ದದ ಒಂದಡಿ ಅಗಲದ ಸಾಮಾನ್ಯ ದಪ್ಪದ ಮರದ ಹಲಗೆಯ ಮಧ್ಯೆ ಮರದ ಉದ್ದದ ಹಿಡಿ ಜೋಡಿಸುವ ಒಂದು ತೂತಿನ ವ್ಯವಸ್ಥೆ ಇರುತ್ತದೆ. ಈ ತೂತಿಗೆ ಮರದ ಹಿಡಿಯ ಒಂದು ತುದಿಯನ್ನು ಜೋಡಿಸಿ ಇನ್ನೊಂದು ತುದಿಯನ್ನು ನೊಗದ ಮಧ್ಯದ ಹಗ್ಗಕ್ಕೆ ಕಟ್ಟಿ ನೇತಾಡಿಸುತ್ತಾರೆ. ಉಳುವವನು ಒಂದು ಕೈಯಲ್ಲಿ ಬೆತ್ತ ಇನ್ನೊಂದು ಕೈಯಲ್ಲಿ ಎತ್ತಿನ ಬಾಲ

ಹಿಡಿದುಕೊಂಡು ಹಲಗೆಯ ಮೇಲೆ ಮಧ್ಯಭಾಗದಲ್ಲಿ ನಿಂತು ಗದ್ದೆ ಹೂಡುತ್ತಾನೆ. ಎಲ್ಲೆಲ್ಲಿ ಎತ್ತರ ಜಾಗ ಉಂಟೆಂಬುದನ್ನು ತಿಳಿದುಕೊಂಡು ಆಕಡೆಗೆ ಹೆಚ್ಚು ಹಲಗೆ ಮೆಟ್ಟಿ, ಒಟ್ಟು ಗದ್ದೆಯ ನೀರು ಒಂದೇ ಮಟ್ಟದಲ್ಲಿ ನಿಲ್ಲುವಂತೆ ಮಾಡುತ್ತಾನೆ. ಗದ್ದೆ ಉಳುವಾಗ ಉಳುವಾತನು ಹೇಳುವ ಜನಪದ ಹಾಡಿಗೆ ಉರಲ್ ಎನ್ನುತ್ತಾರೆ. ಈ ಉರಲ್‌ಗಳು ಸಾಮಾನ್ಯವಾಗಿ ದ್ವಿಪದಿಗಳಾಗಿರುತ್ತವೆ. ಪ್ರಾಸ ಮತ್ತು ಲಯಬದ್ಧವಾಗಿರುತ್ತವೆ. ಈ ಉರಲ್ ಹೇಳಿಕೊಂಡು ಎತ್ತುಗಳನ್ನು ತಿರುಗಿಸಬೇಕಾದಲ್ಲಿ 'ಹೊಂಮಾದ್' ಎಂದೂ ನೆಟ್ಟಗೆ ಹೋಗಬೇಕಾದಲ್ಲಿ 'ಸರ್ತಪೋಲ' ಎಂದೂ ಆದೇಶ ನೀಡಿಕೊಂಡು, ತನ್ನ ಆದೇಶ ಪಾಲಿಸದ ಎತ್ತುಗಳನ್ನು ಕೈಯಲ್ಲಿ ಹಿಡಿದಿರುವ ಬೆತ್ತದಿಂದ ಬಡಿದುಕೊಂಡು ಗದ್ದೆ ಉಳುವಾಗ ರೈತನಿಗೆ ಆತನ ಆಯಾಸದ ಅರಿವೇ ಉಂಟಾಗುವುದಿಲ್ಲ. 'ಉರಲ್'ಗೊಂದು ಉದಾಹರಣೆ:

*ಎರಿಕ್ಲೆ ಎರ್ಲು ಮೇವಂದಿನ ಅಡ್ಕೆ ಇಜ್ಜಿ*
*ಎಂಕ್ಲೆ ದಣಿಕುಲು ತೂವಂದಿದ ಪೊಣ್ಣು ಉ ಇಜ್ಜಿ*

(ನಮ್ಮ ಎತ್ತುಗಳು ಮೇಯದ ಮೈದಾನವಿಲ್ಲ. ನಮ್ಮ ದಣಿಗಳು ನೋಡದ ಹೆಣ್ಣುಗಳೇ ಇಲ್ಲ)

ಕಾಯೆರಡ್ಕದ ಬಡುವೋಖಾಲಗ | ಕುಮೆರಕ್ಕರಕುಡುವೋಬೊಲ್ಲಿಗ್ (ಕಾಯೆರಡ್ಕದ ಬೆತ್ತಕಾಳನಿಗೆ, ಕುಮೆರಡ್ಕದ ಹುರುಳಬೊಳ್ಳನಿಗೆ) ಹಲಗೆ ಮೆಟ್ಟಿದ ಬಳಿಕ ಗದ್ದೆಗೆ ನೀರು ಹಾಯಿಸುತ್ತಾರೆ. ಅನಂತರ ನೆನೆಹಾಕಿದ ಬತ್ತದ ಬೀಜವನ್ನು ಗದ್ದೆಗೆ ಬಿತ್ತುತ್ತಾರೆ. ಈ ಬಿತ್ತನೆಯ ಕೆಲಸ ಪರಿಣತರಿಂದ ನಡೆಯಬೇಕು. ಬಿತ್ತಿದ ಬೀಜ ಮಣ್ಣೊಳಗೆ ಹೋಗುವಷ್ಟು ರಭಸದಿಂದ ಬೀಸಿ ಎಸೆಯಬೇಕು. ಪರಿಣತರು ಬಿತ್ತಿದಾಗ ಮಾತ್ರಗದ್ದೆಯಲ್ಲಿ ಪೈರು ಏಕಪ್ರಕಾರವಾಗಿ ಕಾಣುತ್ತದೆ. ಬಿತ್ತಿದ ಅನಂತರ ಗದ್ದೆಯ ಮಧ್ಯೆ ದೊಡ್ಡ ಕಾಸರಕ ಮರದ ರೆಂಬೆಯನ್ನು ಊರಿಬಿಡುತ್ತಾರೆ. ಇದು ಗದ್ದೆ ಮತ್ತು ಅಲ್ಲಿ ಬೆಳೆಯುವ ಪೈರಿಗೆ ಕೆಟ್ಟ ದೃಷ್ಟಿ ತಾಗದಂತೆ ಮಾಡಿ ದುಷ್ಟ ಶಕ್ತಿಗಳಿಂದ ರಕ್ಷಣೆ ಕೊಡುತ್ತದೆ. ಆದುದರಿಂದ ಇದನ್ನು 'ಕಾಪು' ಎನ್ನುತ್ತಾರೆ.

**ನಾಟಿ ಕೆಲಸ :** ಗದ್ದೆಗೆ ಬೀಜ ಬಿತ್ತುವುದು ಒಂದು ಪದ್ಧತಿಯಾದರೆ ನೇಜಿ(ಬತ್ತದ ಸಸಿ) ನೆಡುವುದು ಇನ್ನೊಂದು ವಿಧಾನ. ಮೊದಲ ಮಳೆ ಬಿದ್ದ ತಕ್ಷಣ ರೈತರು ಗದ್ದೆಯ ಒಂದು ಬದಿಯಲ್ಲಿ ಅಗಲವಾದ ಪುಡಿಗಳನ್ನು ಮಾಡಿ ಅಥವಾ ನೀರಿನ ಆದ್ರತೆ ಇರುವ ಒಂದು ಕೋಳೆಂಜಿ (ಚಿಕ್ಕ ಗದ್ದೆ)ಯಲ್ಲಿ ಸುಡುಮಣ್ಣು ಇಲ್ಲವೇ ಗೊಬ್ಬರದ ಹುಡಿ ಹರಡಿ ಉತ್ತು ಹಸನುಗೊಳಿಸಿ ಬತ್ತದ ಬೀಜವನ್ನು ಮಂದವಾಗಿ ಬಿತ್ತುತ್ತಾರೆ. ಈ ಬೀಜ ಮೊಳೆತು ಸಸಿಯಾಗಿ ಬೆಳೆಯುತ್ತದೆ. 21 ದಿವಸಗಳಾಗುವಾಗ ಈ ನೇಜಿಯನ್ನು ಕಿತ್ತು ತೆಗೆದು ಸೂಡಿ ಕಟ್ಟಿಡುತ್ತಾರೆ. ಸೂಡಿಯ ತಲೆ ಭಾಗದ ಎಲೆಗಳನ್ನು ಕತ್ತರಿಸಿ ಬಿಡುತ್ತಾರೆ. ಅನಂತರ ಹಸನುಗೊಳಿಸಿದ ಗದ್ದೆಯಲ್ಲಿ ಎರಡು ಅಥವಾ ಮೂರು ಮೂರು ನೇಜಿಗಳನ್ನು ಬೆರಳಲ್ಲಿ ಹೆಕ್ಕಿಹಿಡಿದು (ಪತ್ತು) ಸಾಲಾಗಿ ಊರಿನೆಟ್ಟು ನಾಟಿ ಮಾಡುತ್ತಾರೆ. ಬೀಜ ಬಿತ್ತುವುದಕ್ಕಿಂತ ನಾಟಿ ಮಾಡುವುದು ಒಳ್ಳೆಯದು. ನಾಟಿ ಮಾಡಿದ ಪೈರು ಬೇಗನೆ ಫಲ ಕೊಡುತ್ತದೆ. ಮಾತ್ರವಲ್ಲ ಹೆಚ್ಚು ಇಳುವರಿ ಕೊಡುತ್ತದೆ.

ನೇಜಿ ತೆಗೆಯುವ ಸಂದರ್ಭದಲ್ಲಿ ಪಾಡ್ದನ ಹೇಳುವುದರಲ್ಲಿ ಪರಿಣತರಾದ ಮಹಿಳೆಯರು ಪಾಡ್ದನ ಹೇಳುತ್ತಾರೆ. ಅವರಿಗೆ ಯಾರಾದರೊಬ್ಬರು ಸಹವರ್ತಿಗಳಾಗಿ ಕೆಲಸ ಮಾಡುತ್ತಾರೆ. ಪಾಡ್ದನಗಳೆಂದರೆ ಪದ್ಯಧಾಟಿಯ ಲಯಬದ್ಧವಾದ ವಚನ ಕಾವ್ಯಗಳು. ಇವು ಕನ್ನಡದ ಲಾವಣಿಯನ್ನು ಹೋಲುತ್ತವೆ. ತುಳುನಾಡಿನ ಹೆಚ್ಚಿನ ಭೂತಗಳಿಗೆಲ್ಲ ಅವುಗಳ ಹುಟ್ಟು, ಬೆಳವಣಿಗೆಗೆ, ಕಾರಣಿಕ ಮತ್ತು ಪ್ರಸರಣವನ್ನು ಸಾರುವ ಪಾಡ್ದನಗಳಿರುತ್ತವೆ. ನೇಜಿ ತೆಗೆಯುವಾಗ ಭೂತಗಳ ಕತೆಯ ಪಾಡ್ದನಗಳೂ ಇರುತ್ತವೆ. ಕೊಲ್ಲೂರಮೂಕಾಂಬಿಕೆ ಜಾನಮ್ಮ ಜೇವು. ಪರತಿಮುಂಜಾನೆ, ಬಲಜೇಯಿಮಾಣಿಗ ಇಂತಹ ಪಾಡ್ದನಗಳನ್ನು ಹೇಳುವುದೇ ಹೆಚ್ಚು.

ನೇಜಿ ನೆಡುವಾಗ ಜಾಬೇಲೆ ಹಾಕು(ಡು)ತ್ತಾರೆ. ಒಬ್ಬಾಕೆ ಜಾಬೇಲೆ ಹಾಕಿದ ಸೊಲ್ಲುಗಳನ್ನು ಹೇಳುತ್ತಾ ಹೋಗುತ್ತಾಳೆ. ಉಳಿದವರೆಲ್ಲ ಅದರ ಪಲ್ಲವಿಯನ್ನು ಪುನರಾವರ್ತಿಸುತ್ತಾರೆ. ಜಾಬೇಲೆ ಹಾಡುಗಳು ಬಹಳಷ್ಟಿವೆ. ಉದಾಹರಣೆಗೆ ಒಂದು ಹಾಡನ್ನು ಇಲ್ಲಿ ನೀಡಲಾಗಿದೆ.

*ರಾವೋ ರಾವು ಕೊರುಂಗ*
*ರಾವೋ ರಾವು ಕೊರುಂಗು ರಾವಂದೇಸ ದಾನ್‌ಬೆ*
*ಪಟ್ಟೆ ಸೀರೆ ತುತ್ತು ಕೊರುಂಗು ತುತ್ತಂದೇನ್ ದಾನ್‌ಬೆ*
*ಕಣರವಕೆ ಪಾಡ್‌ಕೊರುಂಗು ಪಾಡಂದೇನ್ ದಾನೆಬೆ*
*ತರೆ ಬಾರ್ ಕಟ್ಟ್ ಕೊರುಂಗು ಕಟ್ಟಂದೇನ್ ದಾನ್‌ಬೆ*
*ಕೆಕ್ಕಿಗ್ ಸರ ಪಾಡ್‌ಕೊರುಂಗು ಪಾಡಂದೇನ್ ದಾನ್‌ಬೆ*
*ಕೈಕ್‌ಕಾಜಿ ದೀಲ ಕೊರುಂಗು ದೀವಂದೇಶ್ ದಾನ್‌ಬೆ*
*ಕಾರ್‌ಗ್ ಕಡಗ ಪಾಡ್‌ಕೊರುಂಗು ಪಾಡಂದೇನ್ ದಾನ್‌ಬೆ*
*ಕೆಬಿಕ್ ಜಾಲೆದೀಲಕೊರುಂಗು ದೀಮದೇನ್ ದಾನ್‌ಬೆ*
*ವಲಾಂಕುಗು ಟಿಕ್ಕಿ ದೀಲ ಕೊರುಂಗು ದೀವಂದೇನ್ ದಾನ್‌ಬೆ|*
*ಕಾರ್‌ಗ್ ಮಟ್ಟು ಪಾಡ್‌ಕೊರುಂಗ್ ಪಾಡಂದೇನ್ ದಾನ್‌ಬೆ*
*ರಾವುರಾವು ಕೊರುಂಗು ರಾವಂದೇನ್‌ದಾನ್‌ಬೆ*
*ಪುತ್ತೂ ರ ಪೇಂಟೆ ಕಡತೊನುವೆ ಬಲ್ಲೆ ರಿಕಾಡ್ ಸೆರೊನ್ಪೆ*
*ರಾವೋ ರಾವು ಕೊರುಂಗುರಾವಂದೇನ್ ದಾನ್‌ಬೆ*

ಪ್ರತಿ ಸಾಲಿನ ಕೊನೆಯ ಅರ್ಧಹಾಡನ್ನು ಇತರರು ಪುನಾರವರ್ತಿಸುತ್ತಾರೆ. ಉದಾ : ರಾವಂದೇನ್ ದಾನ್‌ಬೆ, ತುತ್ತಂದೇನ್ ದಾನ್‌ಬೆ ಇಂತಹ ಹಲವಾರು ಜಾಬೇಲೆ ಪದಗಳು ರೂಢಿಯಲ್ಲಿವೆ.

**ಬಿತ್ತನೆಯ ಬೀಜ ತಯಾರಿ :** ಬಿತ್ತನೆಯ ಬತ್ತದ ಬೀಜವನ್ನು ಬಿತ್ತನೆಗಿಂತ ಮೊದಲು ಬಿಸಿಲಲ್ಲಿ ಚೆನ್ನಾಗಿ ಒಣಗಿಸುತ್ತಾರೆ. ಅನಂತರ ಮೂರು ದಿವಸ ತಣ್ಣೀರಲ್ಲಿ ಹಾಕಿಡುತ್ತಾರೆ. ಬಳಿಕ ತಣ್ಣೀರಿಂದ ತೆಗೆದು ಮನೆಯೊಳಗಡೆ ಗಾಳಿ ಬೀಸುವಲ್ಲಿ ಚಾಪೆ ಹರಡಿ ಅದರ ಮೇಲೆ ಹರಡಿ ಗಾಳಿಗೆ ಒಣಗಿಸುತ್ತಾರೆ. ಬಳಿಕ ಒಂದು ದೊಡ್ಡ ಅಗಲ ಬಾಯಿಯ ಬಳ್ಳಿ ಹೆಣೆದು ಮಾಡಿದ ಕುಕ್ಕೆಯಲ್ಲಿ ತಳಕ್ಕೆ ಇಟ್ಟೇವು ಎಲೆಗಳನ್ನು ಹರಡಿ ಅದರ ಮೇಲೆ ಈ ಬಿತ್ತನೆಯ ಬತ್ತವನ್ನು ಹಾಕುತ್ತಾರೆ. ಅದರ ಮೇಲೆ ಮತ್ತೆ ಸಾಕಷ್ಟು ಇಟ್ಟೇವು ಸೊಪ್ಪು ಮುಚ್ಚಿ ಅದರ ಮೇಲೆ ಭಾರದ ಕಲ್ಲುಗಳನ್ನಿಡುತ್ತಾರೆ. ಹೀಗೆ ಇಟ್ಟ 3-4 ದಿವಸಗಳಲ್ಲಿ ಬತ್ತ ಮೊಳಕೆ ಬಂದಿರುತ್ತದೆ. ಈ ಬೀಜಗಳನ್ನು ಚಿಕ್ಕ ಚಿಕ್ಕ ಕುಕ್ಕೆಗಳಲ್ಲಿ ತುಂಬಿಕೊಂಡು ಬಿತ್ತನೆ ಮಾಡುತ್ತಾರೆ. ಈ ಬೀಜಕ್ಕೆ ಗೊಬ್ಬರ ಹುಡಿ ಅಥವಾ ಸುಡು ಮಣ್ಣಿನ ಹುಡಿ ಬೆರೆಸಿ ಪುಷ್ಮಿಯಲ್ಲಿ ಬಿತ್ತುವ ಕ್ರಮವಿದೆ. ಇದನ್ನು ಪುಂಡಿ ಬಿತ್ತು ಎನ್ನುತ್ತಾರೆ.

**ಗದ್ದೆ ಗೋರಿ :** ನೀರಾವರಿ ಸೌಕರ್ಯವಿರುವ ಪ್ರದೇಶದಲ್ಲಿ ವರ್ಷಕ್ಕೆ ಏಣೇಲು, ಸುಗ್ಗಿ, ಕೊಳಕೆ ಎಂಬ ಮೂರು ಬೆಳೆ ತೆಗೆಯುತ್ತಾರೆ. "ತಗ್ಗು ಗದ್ದೆಗೆ ಮೂರು ಬೆಳೆ"ಎಂಬೊಂದು ಗಾದೆ ಇದೆ. ಜಲಾಶಯಗಳ ತಗ್ಗು ಪ್ರದೇಶಗಳಲ್ಲಿರುವ ಗದ್ದೆಗಳಿಗೆ ವರ್ಷವಿಡೀ ನೀರು ಹರಿಸಲು ಸಾಧ್ಯವಾಗುತ್ತದೆ. ಹಾಗಾಗಿ ಅಂತಹ ಗದ್ದೆಗಳಲ್ಲಿ ಮೂರು ಬೆಳೆಯನ್ನು ಬೆಳೆಸುತ್ತಾರೆ. ಏಣೇಲುಬೆಳೆ ಮಳೆಯಾಧಾರಿತ ಆಗಿರುವುದರಿಂದ ಎಲ್ಲಾ ಕಡೆ ಬೆಳೆಯುತ್ತಾರೆ. ಆದರೆ ಸುಗ್ಗಿ ಬೆಳೆ ಮತ್ತು ಕೊಳಕೆ ಏರು ಪ್ರದೇಶಗಳಲ್ಲಿ ಬೆಳೆಯಲು ಸಾಧ್ಯವಾಗುವುದಿಲ್ಲ. ಇಂತಹ ಗದ್ದೆಗಳನ್ನು ಕಂಡ (ಗದ್ದೆ) ಎನ್ನುವುದಿಲ್ಲ, ಮಜಲು ಎನ್ನುತ್ತಾರೆ. ಅತಿ ಎತ್ತರದಲ್ಲಿರುವ ಗದ್ದೆ ಬೊಟ್ಟು (ಬೆಟ್ಟು) ಈ ಬಗೆದೊಂದು ಗಾದೆ ರೂಢಿಯಲ್ಲಿದೆ. ಜೂನ್‌ನಿಂದ ಸೆಪ್ಟಂಬರ್‌ದೊಳಗೆ ಬೆಳೆಯುವ ಏಣೇಲು ಬೆಳೆ 'ಸೂಳೆ', ಸುಗ್ಗಿ ಬೆಳೆ ಮದು ಮಗಳು ಹಾಗೂ ಕೊಳಕೆ ಪತಿವ್ರತೆ.

ಏಣೇಲು ಬೆಳೆ ಕೊಯ್ದ ಬಳಿಕ ಸುಗ್ಗಿಯ ಬೆಳೆಯ ಅಟ್ಟಿಗೆ ನಡೆಯುತ್ತದೆ. ಈ ಸಿದ್ಧತೆಯೆಲ್ಲಾ ನಡೆದ ಬಳಿಕ ಬೀಜ ಬಿತ್ತನೆಯ ದಿನವನ್ನು ಗದ್ದೆಗೋರಿ (ಕಂಡದಕೋರಿ) ಎನ್ನುತ್ತಾರೆ. ಎಲ್ಲ ರೈತರೂ ತಮ್ಮ ಗದ್ದೆ ಕೆಲಸ ಮುಗಿದೊಡನೆ ಗದ್ದೆಗೋರಿ ಆಚರಿಸುತ್ತಾರೆ. ಆದರೆ ಊರಿನ ಗುತ್ತು, ಬೀಡಿನ (ಗಣ್ಯಮನೆತನದ ಕೃಷಿಕರು)ನವರು ಮಾತ್ರ ಈ ಉತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಸುತ್ತಾರೆ. ಎಲ್ಲರೂ ತಮ್ಮ ತಮ್ಮ ಗದ್ದೆಗಳಿಗೆ ಗದ್ದೆಗೋರಿ ಮಾಡಿದ ಬಳಿಕ ಕಾಪು ಕುತ್ತುವ ಕ್ರಮವಿದೆ. ಏಣೇಲು ಬೆಳೆಗೆ ಕಾಸರಕನ ಮರದ ರೆಂಬೆ, ಸುಗ್ಗಿ ಬೆಳೆಗೆ ಸರಳಿ ಮರದರೆಂಬೆ ಮತ್ತು ಕೊಳಕೆ ಬೆಳೆಗೆ ಮುಂಡೇವು ಗಿಡವನ್ನೆ ಗದ್ದೆಯ ನಡುವಿನಲ್ಲಿ ನೆಟ್ಟರೆ ಸುಗ್ಗಿ ಬೆಳೆಯ ಆದಿಯಲ್ಲಿ ಗದ್ದೆ ಗೋರಿ ಮಾಡುವ ಗುತ್ತು ಬೂಡಿನವರು ಗದ್ದೆಗೆ ಮರದ ರೆಂಬೆ ನೆಡುವ ಬದಲು ಪೂಕರೆ ಹಾಕುವ ಸಂಪ್ರದಾಯವಿದೆ. ಸಾಮಾನ್ಯ ಈ ಗದ್ದೆ ಗೋರಿ ಡಿಸೆಂಬರ್ ತಿಂಗಳಲ್ಲಿ ನಡೆಯುತ್ತದೆ.

ಗದ್ದೆಗೋರಿಗೆ ದಿನ ನಿಗದಿಗೊಳಿಸಿದ ಬಳಿಕ ಅದನ್ನು ತಿಳಿದುಕೊಂಡ ಊರಿನ ಸಾಂಸ್ಕೃತಿಕ ವಕ್ತಾರ (ನಲ್ಕೆ ಜಾತಿಯ ಹಿರಿಯನೊಬ್ಬ) ಗುತ್ತಿನ ಮನೆಗೆ ಬಂದು ಮನೆಯ ಹಿರಿಯರಿಂದ ಗದ್ದೆ ಗೋರಿ ನಡೆಸಿಕೊಡುವ ಬಗ್ಗೆ ವೀಳ್ಯ (ನಿಶ್ಚಯತಾಂಬೂಲ) ಪಡೆಯುತ್ತಾನೆ. ತಾನು ಕೆಂಪು, ಕಪ್ಪು, ಬಿಳಿ ಬಣ್ಣಗಳಿಂದ ಮುಖ ವರ್ಣಿಕೆ ಮಾಡಿಕೊಂಡು ಕೆಂಪು ಇಜಾರು ಕೆಂಪು ದೊಗಲೆ ಅಂಗಿ ಹಾಕಿ ಅದರ ಮೇಲೆ ಸೀಳು ಮಾಡಿದ ತೆಂಗಿನ ಎಳತು ಗರಿಯನ್ನು ಸೊಂಟಕ್ಕೆ, ಕೈಗೆ ಹಾಗೂ ಕುತ್ತಿಗೆಗೆ ಕಟ್ಟಿಕೊಂಡು ಕಾಲಿಗೆ ಗಗ್ಗರ ತೊಟ್ಟುಕೊಳ್ಳುವನು. ಕೈಯಲ್ಲಿ ತೆಂಬರೆ ಹಿಡಿದು ಬಡಿದು ಕೊಂಡು ಮನೆಮನೆಗೆ ಹೋಗಿ ಗದ್ದೆ ಗೋರಿಯ ಡಂಗುರ ಸಾರುತ್ತಾನೆ.

"ಬುಧವಾರ ದಿನ ಗುತ್ತಿನ ಮನೆಯಲ್ಲಿ ಭೂಮಿ ದೇವಿಯ ಮದುವೆ, ಮದುವೆ ಊಟಕ್ಕೆ ಎಲ್ಲರೂ ಬರಬೇಕು. ಮುಂಜಾನೆ ಬೇಸಾಯದ ಒಕ್ಕಲಿನವರು ತಮ್ಮ ತಮ್ಮ ಜೊತೆ ಎತ್ತು ನೊಗ ನೇಗಿಲಿನೊಂದಿಗೆ ಗುತ್ತಿನ ಮನೆ ಎದುರಿನ ಬಾಕ್ಯಾರ್ (ಬಾಕಿಲ್ + ತಿಮರ್ = ಬಾಕ್ಯಾರ. ಮನೆ ಎದುರಿನ ವಿಶಾಲಗದ್ದೆ, ತಿಮರ್ = ಗದ್ದೆ)ನಲ್ಲಿ ಬಿಟ್ಟು ಸೇರಬೇಕು. ಚಂದಗಾಣಿಸಿಕೊಡಬೇಕು" ಎಂದು ಸಂದೇಶ ರವಾನಿಸಿ ಕುಣಿತ ನಡೆಸಿ ಮನೆಯವರಿಂದ ಅಕ್ಕಿ ತೆಂಗಿನಕಾಯಿ ದಾನ ಪಡೆಯುತ್ತಾನೆ.

ಗದ್ದೆ ಗೋರಿಯ ದಿನ ಊರಿನ ಆಹ್ವಾನಿತ ಒಕ್ಕಲಿನವರೆಲ್ಲ ತಮ್ಮ ತಮ್ಮ ಜೋಡೆತ್ತು ಕೋಣಗಳೊಂದಿಗೆ ಮುಂಜಾನೆ ಬಾಕ್ಯಾರು ಗದ್ದೆಯಲ್ಲಿ ಹಾಜರಾಗುವರು. ಫಲಹಾರ ಮುಗಿಸಿಕೊಂಡು ಗದ್ದೆ ಹೂಡಲು ಪ್ರಾರಂಭಿಸುವರು. ಸುಮಾರು 10-20 ಜೊತೆ ಎತ್ತು, ಕೋಣಗಳು ನೊಗ ಹೇರಿ ನಿಲ್ಲುತ್ತವೆ. ಗದ್ದೆಯ ಉಳುಮೆ ಮುಂದುವರಿಯುತ್ತದೆ. ಮಧ್ಯಾಹ್ನದ ಹೊತ್ತಿಗೆ ಉಳುಮೆ ಮುಗಿದಿರುತ್ತದೆ. ಅನಂತರ ಎತ್ತುಗಳ ಹೆಗಲಿಂದ ನೇಗಿಲು ಬಿಚ್ಚಿ ಸಾಲಾಗಿ ನಿಲ್ಲಿಸಿ ಗದ್ದೆಯಲ್ಲಿ ಕಂಬಳ ನಡೆಸುತ್ತಾರೆ. ತುಳುನಾಡಿನ ಪ್ರಸಿದ್ಧ ಜನಪದ ಕ್ರೀಡೆ ಕಂಬಳ, ಈ ಆಚರಣೆಯಿಂದಲೇ ಹುಟ್ಟಿಕೊಂಡಿತೆಂದು ವಿದ್ವಾಂಸರು ಅಭಿಪ್ರಾಯ. ಕಂಬಳ ಮುಗಿದ ಬಳಿಕ ಎತ್ತುಗಳನ್ನೆಲ್ಲ ತೊಳೆದು, ಒಂದು ಎತ್ತನ್ನು ಮಾತ್ರ ಗದ್ದೆಯಲ್ಲೇ ಕಟ್ಟುತ್ತಾರೆ. ಅನಂತರ ಎಲ್ಲರಿಗೂ ಸಮಾರಾಧನೆ ನಡೆಯುತ್ತದೆ.

ಊಟವಾದ ಮೇಲೆ ಊರಿನ ಮುಗ್ಗೇರ ಜಾತಿಯ ಮುಖ್ಯಸ್ಥ (ಕಾಪಾಡ) ಗದ್ದೆಗೆ ನೀರು ಹಾಯಿಸಿ ಗದ್ದೆಯ ಬದುವಿಗೆಲ್ಲ ಮಣ್ಣು ಬಳಿದು ಜೇಡಿಮಣ್ಣಿನಿಂದ ಸಿಂಗಾರಗೊಳಿಸುತ್ತಾನೆ. ರಾತ್ರಿ ಹೊತ್ತು ಗದ್ದೆಯ ಸುತ್ತು ಬದುವಿಗೆ ಕೊಳ್ತಿರಿ ಕುತ್ತಲು ಸಿದ್ಧತೆ ನಡೆಸುತ್ತಾನೆ. ಊರಿನ ಬ್ರಾಹ್ಮಣ ಪುರೋಹಿತ ಗದ್ದೆಯ ಪಕ್ಕದಲ್ಲಿರುವ ಬನದ ನೆಲವನ್ನು ಶುದ್ಧಗೊಳಿಸಿ ಅಲ್ಲಿರುವ ನಾಗಕಲ್ಲಿಗೆ ಅರಿಸಿನ, ಹಾಲಿನ ಅಭಿಷೇಕ ಮಾಡಿ ತಂಬಿಲ ಪೂಜೆ ನಡೆಸುತ್ತಾನೆ.

ಅಷ್ಟರಲ್ಲಿ ನಲ್ಕೆಯವರು ಬೆರ್ಮನ ವೇಷ ಧರಿಸಿರುತ್ತಾರೆ. ಕಲಾವಿದನೊಬ್ಬ ಮುಖವರ್ಣಿಕೆ ಮಾಡಿಕೊಂಡು ರಾಜ ವೇಷ ಧರಿಸಿ ಕೀಲುಕುದುರೆಯಲ್ಲಿ ಕುಳಿತಂತೆ ನಟಿಸಿ ಕುದುರೆಯ ಹೆಜ್ಜೆ ಹಾಕುತ್ತಾ ಗದ್ದೆಯ ಬದುವಿನಲ್ಲಿ ಸುತ್ತು ಬರುತ್ತಾನೆ. ಇದನ್ನು ಕುದುರೆ ಕೋಲ ಎನ್ನುತ್ತಾರೆ. ಆತನನ್ನು 'ಉರಗ' ವೇಷಧರಿಸಿದ ಹುಡುಗನೊಬ್ಬ ಹಿಂಬಾಲಿಸಿ ಕೊಂಡು ಬರುತ್ತಾನೆ.

ಸಂಜೆಯ ಹೊತ್ತಿಗೆ ಊರ ಗಣ್ಯರ ಅಧ್ಯಕ್ಷತೆಯಲ್ಲಿ ಸಭೆ ಸನ್ಮಾನ ನಡೆಯುತ್ತದೆ. ಅವರ ಮುಂದೆ ನೆಲ್ಕೆವರಿಂದ ಎರುಕೋಲ ನಡೆಯುತ್ತದೆ. ಕೊರಗ ಜಾತಿಯವರಿಂದ ಮತ್ತು ಮನ್ಸರ ಕೋಲು ಕುಣಿತಗಳು ನಡೆಯುತ್ತವೆ.

ರಾತ್ರಿಯಾಗುತ್ತಿದ್ದಂತೆ ಕಾಪಾಡ ಗದ್ದೆಯ ಸುತ್ತು ಕೊಳ್ತಿರಿ ನೆಡುತ್ತಾನೆ. ದಿನರಾತ್ರಿ ಭೂತಗಳಿಗೆಲ್ಲ ಕೋಲ ನಡೆಯುತ್ತದೆ. ಕೊರಗರು ರಾತ್ರಿ ಇಡೀ ಕೋಲು ಬಡಿಯುತ್ತಾ ಇರುತ್ತಾರೆ. ಇದನ್ನು 'ಪನಿಕುಲ್ಲುವೆ' ಎನ್ನುತ್ತಾರೆ. ಹೀಗೆ ಹಾಡು, ಕುಣಿತಗಳು ರಾತ್ರಿ ಇಡೀ ನಡೆಯುತ್ತವೆ. ಅದರ ಬೆಳಕು ಮತ್ತು ಪ್ರತಿ ಬಿಂಬ ಗದ್ದೆಯ ನೀರಿ.

**ಮೂರ್ಲೆ ನಲಿಕೆ :** ಮೂರಿ ಎಂದರೆ ಮಣ್ಣಿನ ಕಲಶ, ಗುತ್ತು, ಬೂಡುಗಳ ಅಂಗಳದ ಪಕ್ಕದಲ್ಲೊಂದು ಭೂತದ ಗುಡಿ ಇರುತ್ತದೆ. ಈ ಭೂತದ ಗುಡಿಯಲ್ಲಿ ಮಂಚದ ಮೇಲೊಂದು ಮೆಟ್ಟುಮಣೆ ಇದಕ್ಕೆ ದಲಿಯ ಹೊದಿಸಿ ಅದರ ಮೇಲಿನ ಮೆಟ್ಲಲ್ಲಿ ಮೂರು ಮಾರಿಗಳನ್ನಿಟ್ಟು. ಇದಕ್ಕೆ ನಾಗನ ಹೆಡೆಯ ಚಿತ್ತಾರ ಬಿಡಿಸಿರುತ್ತಾರೆ. ಪೂಜಾರಿ ಮೂರು ಕೊಡ ತೊಳೆದು ಅದರಲ್ಲಿ ಶುದ್ಧ ನೀರನ್ನು ತುಂಬಿಸಿಕೊಂಡು ಬರುತ್ತಾನೆ. ಅವುಗಳ ಬಾಯಿಗೆ ಹಲಸಿನ ಎಲೆ, ಮಾವಿನ ಎಲೆಗಳನ್ನಿಟ್ಟು ಎಲೆಗಳ ಮಧ್ಯೆ ಮೊಗಡ (ಜುಟ್ಟು) ಇರುವ ತೆಂಗಿನಕಾಯಿಗಳನ್ನಿಡುತ್ತಾನೆ. ಕಳಶ ಸ್ಥಾಪನೆಯಾದ ಬಳಿಕ ದೀಪ, ಊದುಬತ್ತಿ ಹೊತ್ತಿಸಿ, ಕೆಳಗಡೆ ಮೂರು ಎಲೆಗಳಲ್ಲಿ ಅನ್ನ,

ಸಾರು ಬಡಿ ಅನಂತರ ಮನೆಯ ಯಜಮಾನನನ್ನು ಕರೆದು ನಾಗನಿಗೆ ಪ್ರಾರ್ಥನೆ ಸಲ್ಲಿಸುತ್ತಾನೆ. ಇದು ಮೂರ್ಲೆ ಪೂಜೆ ಎನ್ನುವರು. ಅಷ್ಟರಲ್ಲಿ ನಲಿಕೆ ಹೆಂಗಸರು ಮಿಂದು ಮಡಿಯುಟ್ಟುಕೊಂಡು ಬರುವರು. ಅವರು ಕೂಡ ಮೂರ್ಲೆಗಳಿಗೆ ನಮಸ್ಕಾರ ಮಾಡಿ ಅಡ್ಡ ಬೀಳುತ್ತಾರೆ. ಪೂಜಾರಿ ಗಂಧ ಪ್ರಸಾದ ಹಾಕಿದೊಡನೆ ಅವರಿಗೆ ಆವೇಶ ಬಂದು. ಕುಣಿಯಲು ಪ್ರಾರಂಭಿಸುತ್ತಾರೆ. ಒಬ್ಬಾಕೆ ಹಾಡು ಹೇಳಿಕೊಂಡು ತೆಂಬರೆ ಬಾರಿಸಿದರೆ ಉಳಿದವರು ಕುಣಿತ ನಡೆಸುತ್ತಾರೆ. ಕುಣಿತ ಮುಗಿದ ಮೇಲೆ ಮನೆಯ ಯಜಮಾನ ಅವರೆಲ್ಲರಿಗೂ ಹೊಸ ಸೀರೆ ಹಂಚುತ್ತಾನೆ.

**ತೆನೆಗೆ ಹಾಲಿಡುವುದು :** ಗದ್ದೆಯಲ್ಲಿ ಪೈರು ಬೆಳೆದು ತೆನೆ ಬಲಿತು ಕೊಯ್ಲಿಗೆ ಸಿದ್ಧಗೊಂಡಾಗ ಕೊಯ್ಯುವ ಹಿಂದಿನ ದಿನ ಗದ್ದೆಗೆ ಹಾಲಿಡುವ ಕ್ರಮವಿದೆ. ಮನೆಯ ಯಜಮಾನ ಕೊಯ್ಲಿನ ಗದ್ದೆಗೆ ಹೋಗಿ ಮೂಲೆಯಲ್ಲಿ ಒಂದು ಹಿಡಿ ಬತ್ತದ ಪೈರು ಕೊಯ್ದು ಅದನ್ನು ಚೌಕಾಕಾರದಲ್ಲಿ ಗದ್ದೆಯಲ್ಲಿಡುತ್ತಾರೆ. ನಾಲ್ಕು ಹಲಸಿನ ಎಲೆಗಳನ್ನು ಕೊಯ್ದು ಪ್ರತಿ ಎಲೆಗೂ ಒಂದೊಂದು ದೊನ್ನೆ ಮಾಡಿ, ಅವುಗಳಲ್ಲಿ ಸ್ವಲ್ಪ ದನದ ಹಾಲು ಹಾಕಿ ದೊನ್ನೆಗಳನ್ನು ಪೈರು ಇಟ್ಟ ಚೌಕದ ನಾಲ್ಕು ಮೂಲೆಗಳಲ್ಲಿ ಕಂಡರೆ ಅನಂತರ ಮರುದಿನ ಕೊಯ್ಲು ನಡೆಸುವುದಾಗಿ ಯಜಮಾನ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತಾನೆ.

**ಪೂಕರೆ ಹಾಕುವುದು :** 'ಪೂ' ಎಂದರೆ ಹೂವು. ಕರೆ ಎಂದರೆ ಉದ್ದದ ನೆಟ್ಟಗಿನ ಗಟ್ಟಿ ಕೋಲು, ಪೂಕರೆ ಎಂದರೆ ಹೂವಿನ ಕೋಲು. ಗದ್ದೆ ಗೋರಿಯ ದಿನ ಗದ್ದೆಯನ್ನು ಸಿಂಗರಿಸುವುದಕ್ಕಾಗಿ ಗದ್ದೆಯ ಮಧ್ಯೆ ಪೂಕರೆ ನೆಡುವುದು ಒಂದು ಮುಖ್ಯ ಆಚರಣೆ. ಪೂಕರೆಯನ್ನು ಮರ ಇಲ್ಲವೇ ಅಡಕೆ ಮರದಿಂದ ಸಿದ್ಧಪಡಿಸುತ್ತಾರೆ. ಸುಮಾರು 20 ಅಡಿ ಉದ್ದದ ಅಡಿಕೆ ಮರಕ್ಕೆ ಬುಡದ ಭಾಗ ಮತ್ತು ಮೇಲ್ಭಾಗವನ್ನು ಗರಗಸದಿಂದ ಕತ್ತರಿಸಿ ತುದಿಯ ಭಾಗದ 4-5 ಅಡಿ ಕೆಳಗಿನವರೆಗೆ ಎದುರು-ಬದುರಾಗಿ ಮರದಲ್ಲಿ ತೂತುಗಳನ್ನು ಕೊರೆಯುತ್ತಾರೆ. ಈ ತೂತುಗಳಿಗೆ ಬಿದಿರಿನ ಸಲಿಕೆ ಅಥವಾ ಅಡಿಕೆ ಮರದ ಎರಡೆರಡು ಅಡಿ ಉದ್ದದ ಸಲಿಕೆ ಅಥವಾ ಅಟ್ಟೆಗಳನ್ನು ಸಿಕ್ಕಿಸುತ್ತಾರೆ. ಈ ಸಲಿಕೆಗಳಿಗೆ ಹೂವಿನ ಹಾರಗಳನ್ನು ಸುತ್ತಿ ಅಲಂಕರಿಸುತ್ತಾರೆ. ಇದು ಪೂಕರೆ ಇದನ್ನು ನೆಟ್ಟಗೆ ನಿಲ್ಲಿಸಿದಾಗ ಬಣ್ಣ ಬಣ್ಣದ ಹೂ ಬಿಟ್ಟ ಒಂದು ಸುಂದರ ಮರದಂತೆ ಕಾಣುತ್ತದೆ. ಇದನ್ನು ಬ್ಯಾಕ್ಯಾರು ಗದ್ದೆಯ ಮಧ್ಯೆ ತಂದು ನೆಟ್ಟಗೆ ನೆಡುವುದೇ ಪೂಕರೆ ಹಾಕುವುದು.

ಮುಹೂರ್ತಕ್ಕೆ ಸರಿಯಾಗಿ ಪೂಕರೆಯನ್ನು ಬಂಡಿಯಲ್ಲಿ ಹೇರಲಾಗುತ್ತದೆ. ಆ ನಾಲ್ಕು ಚಕ್ರದ ಮರದ ಬಂಡಿಯನ್ನು ಎಲ್ಲರೂ ಸೇರಿ ಗದ್ದೆಯ ಕಡೆಗೆ ಹಗ್ಗ ಹಾಕಿ ಎಳೆಯುತ್ತಾರೆ. ಬ್ಯಾಂಡು, ವಾಲಗ, ಡೋಲುಗಳು ಮೊಳಗುತ್ತವೆ. ಗರ್ನಾಲು ಸಿಡಿಯುತ್ತದೆ. ಗದ್ದೆಯ ಪಕ್ಕಕ್ಕೆ ಬಂದೊಡನೆ ಎಲ್ಲರೂ ಸೇರಿ ಪೂಕರೆಯನ್ನು ಎತ್ತಿ ಕೊಂಡೈದು ಗುರುತಿಸಿದ ಮಧ್ಯಭಾಗದಲ್ಲಿ ನೆಡುತ್ತಾರೆ.

ಪ್ರತಿ ವರ್ಷ ಪೂಕರೆ ಹಾಕುವ ಕಾರ್ಯ ನಡೆಸಲು ಸಾಧ್ಯವಾಗದೇ ಇದ್ದಾಗ ಮನೆಯವರು ಸರಳವಾಗಿ ಗದ್ದೆಗೋರಿ ನಡೆಸಿ ಬಾಳೆಗಿಡ ನೆಡುವ ಕಾಪುಕುತ್ತಾವುದು, ಬಾಳೆ ನೆಡುವುದು ಮತ್ತು ಪೂಕರೆ ಹಾಕುವುದು. ಇವು ಮೂರು ಕೃಷಿಯ ಆರಾಧನೆಯ ಒಂದು ವಿಧಾನ. ಇದರಿಂದ ಗದ್ದೆಗೆ ರಕ್ಷಣೆ ಸಿಗುತ್ತದೆ ಹಾಗೂ ಪೈರು ಹುಲುಸಾಗಿ ಬೆಳೆಯುತ್ತದೆ ಎಂಬುದು ರೈತರ ನಂಬಿಕೆ.

**ಕೃಷಿ ಸಂಬಂಧಿ ಹಬ್ಬಗಳು :** ವ್ಯವಸಾಯಕ್ಕೆ ಸಂಬಂಧಪಟ್ಟಂತೆ ತುಳುವರು ಹಲವು ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಮೊದಲನೆಯದು ಮನೆ ತುಂಬಿಸುವ ಹಬ್ಬ ಅಥವಾ ಕದಿರುಹಬ್ಬ, ಗದ್ದೆಯಲ್ಲಿ ಏಣೇಲು ಬೆಳೆ ಬೆಳೆದು ತೆನೆ ತುಂಬಿ ನಿಂತಾಗ ಬೆಳೆ ಕೊಯ್ಯುವ ಮೊದಲು ಮೊದಲಬಾರಿಗೆ ತೆನೆಯನ್ನು ಮನೆಯೊಳಗೆ ತಂದು ಮನೆಯ ಮೂಲೆ ಮೂಲೆಗಳಿಗೆ ಕಟ್ಟುವುದೇ ಮನೆ ತುಂಬಿಸುವ ಹಬ್ಬ. ಇದನ್ನು ಕುರಲ್‌ಪರ್ಬ (ತೆನೆ ಹಬ್ಬ)ವೆಂದೂ ಕರೆಯುತ್ತಾರೆ. ಇದಕ್ಕೆ ನಿಶ್ಚಿತ ದಿನವೆಂಬುದೇನೂ ಇಲ್ಲ. ಮುಹೂರ್ತ ನೋಡಿ ಪ್ರತಿಯೊಬ್ಬ ರೈತರೂ ಅವರವರ ಮನೆಗಳಲ್ಲಿ ಒಂದೊಂದು ದಿನ ನಡೆಸುತ್ತಿದ್ದರು.

ಮನೆ ತುಂಬಿಸುವುದೆಂದರೆ ಮನೆಯನ್ನು ಧಾನ್ಯ ಸಂಪತ್ತಿನಿಂದ ತುಂಬಿಸುವುದು. ಅದೃಷ್ಟವನ್ನು ಮನೆಯೊಳಗೆ ಬರಮಾಡಿಕೊಳ್ಳುವುದು ಎಂದರ್ಥ. ಇದೊಂದು ಪ್ರಕೃತಿ ಆರಾಧನೆಯ ಹಬ್ಬ. ಗದ್ದೆಯಿಂದ ಕೊಯ್ದು ಒಂದು ಸೂಡಿ ಬತ್ತದ ತೆನೆಯೊಂದಿಗೆ ಕಾಡು ಸಸ್ಯಗಳಿಂದ ಮಾವು, ಹಲಸು, ಅಶ್ವತ್ಥ, ಗೋಳಿ ಬಿದಿರು, ಅತ್ತಿ, ಇತ್ತಿ, ಪೊಲಿಬಳ್ಳಿ, ಬಲಿಪಬಳ್ಳಿ, ನಾಯಿಕಬ್ಬು ಇತ್ಯಾಗಿ ಸಸ್ಯಗಳ ರೆಂಬೆಗಳನ್ನೂ ತಂದು ಅಂಗಳದ ತುಳಸಿ ಕಟ್ಟೆಯಲ್ಲಿಡುತ್ತಾರೆ. ಜೊತೆಗೆ ದೊಡ್ಡಾಲ ಮರದ ತೊಗಟೆಯನ್ನು ಜಜ್ಜಿ ತೆಗೆದ ನಾರನ್ನು ಇಡುತ್ತಾರೆ. ಇದೆಲ್ಲ ಸಂಗ್ರಹ ಕೆಲಸವು ಹಿಂದಿನ ದಿನ ಸಂಜೆಗೇನೇ ನಡೆಯುತ್ತದೆ.

ಮುಂಜಾನೆಯೇ ಮನೆಯ ಯಜಮಾನ ಸ್ನಾನಮಾಡಿ, ಮಡಿ ಬಟ್ಟೆ ಉಟ್ಟು ಗಂಧ, ಭಸ್ಮ ಧಾರಣೆ ಮಾಡಿ ಮುಂಡಾಸು ಧರಿಸಿ ತುಳಸಿ ಕಟ್ಟೆಯಲ್ಲಿ ಮಣೆಯ ಮೇಲಿಟ್ಟ ತೆನೆ ಮತ್ತಿತರ ಸಾಮಗ್ರಿಗಳನ್ನು ತನ್ನ ತಲೆ ಮೇಲೆ ಹೊತ್ತುಕೊಂಡು ತುಳಸಿ ಕಟ್ಟೆಗೆ ಒಂದು ಪ್ರದಕ್ಷಿಣೆ ಹಾಕಿ ಮನೆಯೊಳಗೆ ಬರುತ್ತಾನೆ. ಆಗ ಗೃಹಿಣಿಯರು ಆತನ ಕಾಲಿಗೆ ನೀರು ಹಾಕಿ ತೊಳೆದು ಹಣೆಗೆ ಕುಂಕುಮವಿಟ್ಟು ಒಳಗೆ ಬರಮಾಡಿ ಕೊಳ್ಳುತ್ತಾರೆ. ತಂದ ತೆನೆ ಸಾಮಗ್ರಿಗಳನ್ನು ದೇವರ ಮುಂದಿಡಲಾಗುತ್ತದೆ. ಒಂದು ಬದಿಯಲ್ಲಿ ಸುತ್ತೆ (ಹಣ, ಅಕ್ಕಿ, ತೆಂಗಿನಕಾಯಿ) ಇಟ್ಟು ಕಾಲುದೀಪ ಉರಿಸಲಾಗುತ್ತದೆ. ಅಂಗಳದಿಂದ ತೆನೆಯನ್ನು ಹೊತ್ತುತರುವಾಗ ಶಂಖ ಜಾಗಟೆ ಬಾರಿಸುತ್ತಾರೆ. ಮನೆಯವರು "ಪೊಲಿ ಪೊಲಿಯೇ ಪೊಲಿ, ದಿಚ್ಚಿ, ಆ ಜಾಲ ಪೊಲಿ, ಈ ಜಾಲ ಪೊಲಿ, ಮಾತ ಜಾಲ ಪೊಲಿ, ಎನ್ನ ಜಾಲ್‌ಗೇ ಬಿತ್ತ್ ಬುರಕ್‌ವ್" (ಆ ಅಂಗಳದ ಅದೃಷ್ಟ, ಈ ಅಂಗಳದ ಅದೃಷ್ಟ, ಎಲ್ಲಾ ಅಂಗಳದ ಅದೃಷ್ಟವೂ ನಮ್ಮ ಅಂಗಳನ್ನೇ ಬಂದು ಸೇರಲಿ).

ಅನಂತರ ಮಣೆಯ ಮೇಲಿಟ್ಟ ಕದಿರು ಮತ್ತು ಕಾರ ಸಂಪತ್ತಿಗೆ ಆರತಿ ಬೆಳಗಿ ಗಂಧ ಕುಂಕುಮ ಹಚ್ಚುತ್ತಾರೆ. ತೆನೆಯ ಮೇಲೆ ಅಕ್ಕಿ ಕಾಳು ಸೇಸೆ ಹಾಕಿ ಮನೆಯಲ್ಲಿ ಸಂಪತ್ತು ತುಂಬಲೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಬಳಿಕ ಇತ್ತಿ, ಅತ್ತಿ ಹಲಸು, ಮಾವು ಇತ್ಯಾದಿಗಳ ಒಂದೊಂದೇ ಎಲೆ ತೆಗೆದು ಒಂದರ ಮೇಲೊಂದು ಇಟ್ಟು ಅದರ ಮಧ್ಯೆ ಎರಡು ಕದಿರುಳಗನ್ನಿಡುವರು. ಅನಂತರ ಕದಿರನ್ನು ಎಲೆಯಿಂದ ಸುತ್ತಿ ನಾರಿನಿಂದ ಬಿಗಿದು ಮನೆಯ ಬೇರೆ ಬೇರೆ ಭಾಗಗಳಿಗೆ ಕಟ್ಟುವರು. ಮನೆಯ ಛಾವಣಿ, ಪೀಠೋಪಕರಣಗಳು, ತಿಜೋರಿ ಅಡುಗೆಕೋಣೆ, ದೇವರಕೋಣೆ, ಹಟ್ಟಿ, ಬಾವಿದಂಡೆ, ತೆಂಗಿನಮರ, ಮನೆಯಲ್ಲಿದ್ದ ವಾಹನ, ಮೊಗ ನೇಗಿಲುಗಳಿಗೆಲ್ಲ ತೆನೆ ಕಟ್ಟುವ ಸಂಪ್ರದಾಯವಿದೆ.

ತುಳುನಾಡಿನ ಈ ತೆನೆ ಹಬ್ಬದ ಆಚರಣೆಯನ್ನು ಕ್ರೈಸ್ತರು ಕನ್ಯಾಮರಿಯಮ್ಮನ ಜನ್ಮದಿನವಾದ ಸೆಪ್ಟೆಂಬರ್ 8 ರಂದು ನಡೆಸುತ್ತಾರೆ. ಆ ದಿನ ಚರ್ಚಿನಲ್ಲಿ ಮರಿಯಮ್ಮನನ್ನು ಬಣ್ಣ ಬಣ್ಣದ ಹೂಗಳಿಂದ ಅಲಂಕರಿಸಲಾಗುತ್ತದೆ. ಪೂಜೆಯ ಬಳಿಕ ಬಂದವರಿಗೆಲ್ಲ ಎರಡೆರಡು ತೆನೆ, ತೆಂಗಿನ ಮಡಲಿನ ಎಳೆ ತಿರಿ ಮತ್ತು ಕಬ್ಬಿನ ಎಲೆಯನ್ನು ನೀಡಲಾಗುತ್ತದೆ. ಅದನ್ನು ಕ್ರೈಸ್ತರೆಲ್ಲರೂ ಮನೆಗೆ ತಂದು ದೇವರ ಪವಿತ್ರ ಮಂಟಪದಲ್ಲಿ ಇಟ್ಟುಕೊಳ್ಳುತ್ತಾರೆ.

ನಗರಪ್ರದೇಶಗಳಲ್ಲಿ ಬತ್ತದ ಕದಿರು ಸಿಗುವುದು ಈಗ ದುರ್ಲಬವಾಗಿದೆ. ಅದಕ್ಕಾಗಿ ನಗರದ ದೇವಾಲಯಗಳಲ್ಲಿ ಗೌರಿಪೂಜೆಗೆ ಹಳ್ಳಿಯಿಂದ ತೆನೆಯ ತರಿಸಿ ಪೂಜೆ ಸಲ್ಲಿಸಿ ಆ ದಿನ ಬಂದಿರುವ ಭಕ್ತರಿಗೆ ಪ್ರಸಾದ ರೂಪದಲ್ಲಿ ನೀಡಲಾಗುತ್ತದೆ. ಭಕ್ತರು ತಾವು ಪಡೆದ ತೆನೆಗಳನ್ನು ತಮ್ಮ ತಮ್ಮ ಮನೆಗೆ ಕೊಂಡೊಯ್ದು ಮನೆಯ ಮುಂಭಾಗಕ್ಕೆ ಅಥವಾ ದೇವರ ಮಂಟಪಕ್ಕೋ ಇಲ್ಲವೇ ತಿಜೋರಿಗೆ ಕಟ್ಟಿಕೊಳ್ಳುತ್ತಾರೆ. ಈ ಕದಿರಹಬ್ಬ ಹುತ್ತರಿ ಎಂಬ ಹೆಸರಲ್ಲಿ ಕೊಡಗಿನಾದ್ಯಂತ ಬಹಳ ವಿಜೃಂಭಣೆಯಿಂದ ನಡೆಯುತ್ತದೆ.

**ಪುದ್ವಾರ್, ಪುದ್ವಾರ್ :** ಏಣೇಲು ಬೆಳೆ ಕೊಯ್ದು ಬಳಿಕ ಬತ್ತ ಕುಟ್ಟಿ ಅಕ್ಕಿ ಮಾಡಿ ಆ ಹೊಸ ಅಕ್ಕಿಯಿಂದ ಮೊದಲ ಸಲ ಅನ್ನ ಮಾಡಿ ಊಟ ಮಾಡುವ ಹಬ್ಬವನ್ನು ಪುದ್ವಾರ್ ಎನ್ನುತ್ತಾರೆ. ಪುದಿಯಬಂಗ್ ಅಥವಾ ಪುದಿಯ ಅರಿ ಎಂಬ ಅರ್ಥದಲ್ಲಿ ಪದ್ವಾರ್ ಅಥವಾ ಪುದ್ವರಿಯಾಗಿದೆ.

ಆ ದಿನ ಕುಟುಂಬದ ಎಲ್ಲಾ ಸದಸ್ಯರೂ ತರವಾಡಿನ (ಮೂಲದ) ಮನೆಯಲ್ಲಿ ಸೇರಬೇಕು. ದೂರ ದೂರದಲ್ಲಿ ಉದ್ಯೋಗದಲ್ಲಿದ್ದವರು ಕೂಡ ಪುದ್ವಾರಿಗೆ ಬಂದೇ ತೀರಬೇಕೆಂಬ ನಿಯಮವಿತ್ತು. ಈ ನಿಯಮ ಸಡಿಲವಾಗಿ ನಗರ ಪ್ರದೇಶದಲ್ಲಿ ಹಬ್ಬದೂಟವೇ ನಿಂತುಹೋಗಿದೆ.

ಆ ದಿನ ಮುಂಜಾನೆ ಎಲ್ಲರೂ ಮಿಂದು ಶುಚಿರ್ಭೂತರಾಗುತ್ತಾರೆ. ಹೆಂಗಸರೆಲ್ಲರೂ ಸೀರೆಯುಟ್ಟು, ಸಿಂಗಾರ ಮಾಡಿಕೊಂಡು ಅನ್ನಕ್ಕೆಸರಿಡಲು, ನೀರು ತರಲು ಬಾವಿ ಕಟ್ಟೆಗೆ ಹೋಗುತ್ತಾರೆ. ಬಾವಿ ಕಟ್ಟೆಯಲ್ಲಿ ತಾಂಬೂಲ, ದಕ್ಷಿಣೆ, ದೀಪಗಳನ್ನಿಟ್ಟು ಬಾವಿಗೆ ಆರತಿ ಮಾಡಿ ನೀರಿಗೆ ವೀಳ್ಯ ಹಾಕಿ ಕೈ ಮುಗಿಯುತ್ತಾರೆ. ಕೊಡದಲ್ಲಿ ನೀರು ತುಂಬಿಸಿ ಕೊಂಡು ಮನೆಗೆ ತರುವಾಗ ಮಕ್ಕಳು ಶಂಖ ಜಾಗಟೆ ಬಡಿಯುತ್ತಾರೆ. ಅನಂತರ ಒಲೆಯನ್ನು ಶುದ್ಧಗೊಳಿಸಿ ಬೆಂಕಿ ಮಾಡಿ, ಅಗ್ನಿ ಪೂಜೆ ಸಲ್ಲಿಸಿ ಅನ್ನಕ್ಕೆ ಎಸರಿಡುತ್ತಾರೆ. ಹೊಸ ಅಕ್ಕಿ ಸಿಕ್ಕಿದರೆ ಹೊಸ ಅಕ್ಕಿಯದ್ದೇ ಅನ್ನ ಮಾಡುತ್ತಾರೆ. ಹೊಸ ಅಕ್ಕಿ ಸಿಗದೆ ಹೋದರೆ ಗದ್ದೆಯಿಂದ ಒಂದು ಬತ್ತದ ತೆನೆ ತಂದು ಅದರ ಬತ್ತದಿಂದ ಅಕ್ಕಿ ಸುಲಿದು ಅದನ್ನು ಬೇಯುತ್ತಿರುವ ಅನ್ನಕ್ಕೆ ಹಾಕುತ್ತಾರೆ. ಆ ದಿನ ಹಾಲು ಪಾಯಸ ಕೆಸು ಮತ್ತು ಹರಿವೆ ಸಾಂಬಾರು ಆಗಲೇ ಬೇಕು, ಮುಳ್ಳು ಸೌತೆಯ ಖಾದ್ಯವಿರಬೇಕು. ಹೀಗೆ ಕನಿಷ್ಠ ಒಂಬತ್ತು ಬಗೆಯ ಪದಾರ್ಥ (ವ್ಯಂಜನಗಳು)ಗಳು ಊಟಕ್ಕಿರಬೇಕು.

ಎಲ್ಲರೂ ಊಟಕ್ಕೆ ಕುಳಿತುಕೊಳ್ಳುತ್ತಾರೆ. ಮನೆಯ ಯಜಮಾನ ಪಂಕ್ತಿಯ ಆರಂಭದಲ್ಲಿ ಕುಳಿತಿರುತ್ತಾರೆ. ಯಜಮಾನ್ತಿ ಅನ್ನದ ಮಡಕೆ, ಕೆಸು - ಹರಿವೆ ಸಾಂಬಾರಿನ ಮಡಿಕೆ ಯಜಮಾನನ ಮುಂದೆ ತಂದಿಡುತ್ತಾಳೆ. ಆಗ ಯಜಮಾನ ಆ ಮಡಿಕೆಗಳಿಗೆ ಗಂಧಾಕ್ಷತೆ ಹಾಕಿ ಅನ್ನ ಬಡಿಸುವಾಗ ಕೈ ಮುಗಿಯುತ್ತಾನೆ. ಎಲ್ಲರಿಗೂ ಎಲ್ಲ ಪದಾರ್ಥಗಳನ್ನು ಬಡಿಸಿದ ಬಳಿಕ ಹಿರಿಯರೊಡನೆ ಕಿರಿಯರು ಪರಸ್ಪರ ಹೊಸ್ತೂಟ ಮಾಡುತ್ತೇವೆಂದು ಹೇಳಿಕೊಂಡು ಹಿರಿಯರ ಒಪ್ಪಿಗೆ ಪಡೆದು ಊಟ ಪ್ರಾರಂಭಿಸುವ ಪದ್ಧತಿ ಊಟವನ್ನು ಎಲ್ಲರೂ ಒಟ್ಟಿಗೆ ಪ್ರಾರಂಭಿಸಬೇಕು. ಬಡಿಸುವಾಗ ಯಾರು ಕೂಡ ಸಾಕು ಎನ್ನಬಾರದು. ಊಟವಾದ ಮೇಲೆ ಎಲ್ಲರೂ ಒಟ್ಟಿಗೆ ಎದ್ದು ಕೈತೊಳೆಯಬೇಕು. ಊಟಕ್ಕಿಂತ ಮೊದಲು ಕಿರಿಯರು ಹಿರಿಯರ ಕಾಲ ಮುಟ್ಟಿ ನಮಸ್ಕಾರ ಮಾಡುವ ಪದ್ಧತಿ ಇದೆ. ಊಟವಾದ ಮೇಲೆ ಎಲ್ಲರೂ ತಾಂಬೂಲ ಹಾಕುತ್ತಾರೆ. ಆ ದಿನ ರಾತ್ರಿ ಕೆಲವು ಕಡೆ ಮೀನು, ಮಾಂಸಾಹಾರದ ಊಟ ಮಾಡುವುದೂ ಇದೆ. ಇದನ್ನು ಮಧುಪುದ್ವಾರ್ ಎನ್ನುತ್ತಾರೆ. ಪುದ್ವಾರಿನ ದಿನ ರಾತ್ರಿ ಕೆಲವು ಕಡೆ ಭೂತಗಳಿಗೆ ಅಗೆಲು (ಎಡೆ) ಬಡಿಸುವ ಕ್ರಮವಿದೆ. ಪುದ್ವಾರನ್ನು ಕೆಲವರು ಮನೆ ತುಂಬಿಸುವ ದಿನವೇ ಮಾಡುವುದೂ ಇದೆ. ಇನ್ನು ಕೆಲವರು ನವರಾತ್ರಿಯಲ್ಲಿ ಮಾಡುತ್ತಾರೆ. ನವರಾತ್ರಿಯ ನಂತರ ಹೊಸ್ತೂಟ ಮಾಡುವ ಪದ್ಧತಿ ಇಲ್ಲ.

**ದೀಪಾವಳಿ :** ದೀಪಾವಳಿಯಂದು ತುಳುವರು ಬಲಿಯೇಂದ್ರನ್ನು ಬರಮಾಡಿಕೊಳ್ಳುವ ಹಬ್ಬ ನಡೆಸುತ್ತಾರೆ. ಬಲಿಯೇಂದ್ರ ತುಳುನಾಡಿನ ಒಳ್ಳೆಯ ರಾಜನಾಗಿದ್ದು ಪ್ರಜೆಗಳನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಿದ್ದ. ಕಲಿಯನ್ನು ತನ್ನ ರಾಜ್ಯಕ್ಕೆ ಕಾಲಿಡಲು ಬಿಡುತ್ತಿರಲಿಲ್ಲ. ಇದರಿಂದ ದೇವೇಂದ್ರನಿಗೆ ಮತ್ಸರ ಹುಟ್ಟಿತು. ಸ್ವರ್ಗ ಸಮಾನವಾದ ತುಳುನಾಡನ್ನು ನಾಶ ಮಾಡುವಂತೆ ನಾರಾಯಣದೇವರಲ್ಲಿ ಆತ ಬೇಡಿಕೊಂಡ. ನಾರಾಯಣ ಬಾಲ ಬ್ರಹ್ಮಚಾರಿಯ ರೂಪದಲ್ಲಿ ತುಳುನಾಡಿಗೆ ಬಂದದು, ದಾನ ಕೇಳಿ ಮೋಸದಿಂದ ಬಲಿಚಕ್ರವರ್ತಿಯನ್ನು ಕಡಲಾಚೆಗಟ್ಟಿದ. ಬಲಿನಾಡಿಂದ ದೂರ ಹೋಗುತ್ತಿರುವಾಗ ಪ್ರಜೆಗಳಿಗೆ ದೀಪಾವಳಿಯ ಸಂದರ್ಭದಲ್ಲಿ ಮತ್ತೆ ಬರುವುದಾಗಿ ಮಾತುಕೊಟ್ಟಿದ್ದ. ಅದರಂತೆ ಆತ ತನ್ನ ಪ್ರಜೆಗಳನ್ನು ಕಾಣಲು ಬರುತ್ತಾನೆಂದು ಜನರ ನಂಬಿಕೆ. ಪಾಲೆಮರದ ಗೂಟನೆಟ್ಟು ಅಲಂಕರಿಸಿ ಆ ಮರದಲ್ಲಿ ಬಲೀಂದ್ರನನ್ನು ಆವಾಹಿಸಿ ಬಲೀಂದ್ರ ಪೂಜೆ ಮಾಡುತ್ತಾರೆ. ಆಗಿನ ಹಟ್ಟಿಯಲ್ಲಿರುವ ಎಲ್ಲಾ ದನಕರು ಎತ್ತುಗಳನ್ನು ತೊಳೆದು, ಗಂಧಾಕ್ಷತೆ ಹಾಕಿ ಅಲಂಕರಿಸಿ ಸೊಡರು ತೋರಿಸಿ ತಿನ್ನಲು ವಿಧ ವಿಧದ ದೋಸೆ ಇತ್ಯಾದಿ ಕೊಟ್ಟು ಪೂಜಿಸುವ ಕ್ರಮವಿದೆ. ಅದೇ ರೀತಿ ನೊಗ, ನೇಗಿಲುಗಳಿಗೂ ಪೂಜೆಸಲ್ಲಿಸಲಾಗುತ್ತದೆ. ಆ ದಿನ ಬೆಳಕಿನ ಹಬ್ಬ, ಮನೆ ಸುತ್ತ ಮುತ್ತ ಹಟ್ಟಿಯ ಬದಿಗೆ ಗದ್ದೆಯ. ಬದುವಿನ ಮೇಲೆಲ್ಲ ಲತೆಯಲ್ಲಿ ದೀಪ ಉರಿಸಿಡುತ್ತಾರೆ. ದೀಪಾಲಂಕಾರ ಮಾಡಿದ ಮರಗಳನ್ನು ಅಲ್ಲಲ್ಲಿ ನೆಡುತ್ತಾರೆ. ಇದನ್ನು ಬುಳೆಕಿಮರ (ಬೆಳಕಿನ ಮರ) ಎನ್ನುತ್ತಾರೆ.

**ಕಾವೇರಿ ಸಂಕ್ರಾಂತಿ :** "ಕಾಡು ಕೋಳಿಗೇನು ಕಾವೇರಿ ಸಂಕ್ರಾಂತಿ" ಎಂಬೊಂದು ಗಾದೆಯಿದೆ. ಬೆಳೆಕೊಯ್ದು ಬಳಿಕ ಎಲ್ಲರ ಮನೆಯಲ್ಲೂ ದವಸ ಧಾನ್ಯ ತುಂಬಿರುತ್ತದೆ. ಆದರೆ ವ್ಯವಸಾಯ ಮಾಡದ ಬಡವರಿಗೆ ಎಲ್ಲಿಂದ ಬರಬೇಕು. ದವಸಧಾನ್ಯ, ಕಾಡುಕೋಳಿಯಂತೆ ದಾರಿಯಲ್ಲಿ ಬಿದ್ದುದನ್ನವರು ಹೆಕ್ಕಿ ತಿನ್ನಬೇಕು, ಇದು ಉಳ್ಳವರು ಇಲ್ಲದವರ ಬಗೆಗೆ ಕಲ್ಪಿಸಿಕೊಂಡ ಒಂದು ಗಾದೆ.

ಕಾವೇರಿ ಸಂಕ್ರಮಣ ಎಂದರೆ ತುಲಾ ಸಂಕ್ರಮಣ. ಬೊಂತೆಲ್ ತಿಂಗಳ ಪ್ರಾರಂಭ, ಆಗ ಎಲ್ಲರ ಮನೆಯಲ್ಲೂ ಧಾನ್ಯ ತುಂಬಿರುತ್ತದೆ. ಬಿದಿರಿನ ತಡಿಕೆಯ ಕೋಟೆ (ಕದಿಕೆ) ಮಾಡಿ ಕೆಲವರು ಬತ್ತ ತುಂಬಿದರೆ, ಇನ್ನೂ ಕೆಲವರು ಅಂಗಳದಲ್ಲಿ ಕುಪ್ಪೆ ಕಟ್ಟಿ ಬತ್ತ ಶೇಖರಿಸಿಟ್ಟಿರುತ್ತಾರೆ. ಮತ್ತೆ ಕೆಲವರು ಕೋಣೆಯ ಮೂಲೆಯಲ್ಲಿ ರಾಶಿ ಹಾಕಿರುತ್ತಾರೆ.

ಗದ್ದೆಯಲ್ಲಿ ಬತ್ತ ಬೆಳೆಯಲು ಫಲವತ್ತಾದ ಭೂಮಿ ಕೊಟ್ಟು ನಾಗ ರೈತರಿಗೆ ಸಹಕಾರ ಮಾಡಿದ್ದಾನೆ. ಕಾವೇರಿ ಸಂಕ್ರಮಣದಂದು ಆತ ಭೂಮಿಯ ಪಾಲು ಕೇಳಲು ಬರುತ್ತಾನೆ. ರಾಶಿ ಹಾಕಿದ ಬತ್ತವನ್ನು ಮಾಯ ಮಾಡಿ ಬಿಡುತ್ತಾನೆ ಎಂಬುದು ಜನರ ನಂಬಿಕೆ. ಅದಕ್ಕಾಗಿ ಬತ್ತದ ರಾಶಿಗೆಲ್ಲ ಮುಳ್ಳು ಕಲ್ಲು (ಚೂರಿಮುಳ್ಳು - ಚಿಕ್ಕ ಮುಳ್ಳಿನ ಒಂದು ಜಾತಿಯ ಸಸ್ಯ ಮತ್ತು ಬೆಣಚು ಕಲ್ಲಿನ ತುಂಡು) ಇಟ್ಟು ಬಿಡುತ್ತಾರೆ.

ಆ ದಿನ ರಾತ್ರಿ ಉದ್ದು ಬೆರೆಸಿದ ಅಕ್ಕಿದೋಸೆ ಮಾಡುತ್ತಾರೆ. ಆವರೆಗೆ ದೋಸೆ ಮಾಡಬಾರದೆಂಬ ನಂಬಿಕೆ ಇದೆ. ದೇವರಿಗೆ, ಗುರು ಕಾರ್ನವರಿಗೆ ಎಡೆ ಬಡಿಸುತ್ತಾರೆ. ಕಾವೇರಿ ಉತ್ಸವ ಅದೇ ದಿನ ತಲಕಾವೇರಿಯಲ್ಲಾಗುತ್ತದೆ. ಕೆಲವರು ತಲಕಾವೇರಿಗೆ ಹೋಗಿ ತೀರ್ಥ ಸ್ನಾನ ಮಾಡಿಕೊಂಡು ಬರುತ್ತಾರೆ. ಇನ್ನು ಕೆಲವರು ತಮ್ಮ ಮನೆಯ ಪಕ್ಕದ ಜಲಾಶಯಗಳಿಗೆ ಮುಂಜಾನೆ ಹೋಗಿ ತೀರ್ಥ ಸ್ನಾನ ಮಾಡಿಕೊಂಡು ಬರುತ್ತಾರೆ.

**ಕೆಡ್ಡಸ :** ಕೆಡ್ಡಸ ಹಬ್ಬವು ಪೊನ್ನಿ ತಿಂಗಳ ಇಪ್ಪತ್ತೇಳರಿಂದ ಸಂಕ್ರಾಂತಿವರೆಗೆ 34 ದಿವಸ ನಡೆಯುತ್ತದೆ. ಸಾಮಾನ್ಯ ಫೆಬ್ರವರಿ 11 ರಿಂದ 14 ರವರೆಗೆ ಕೆಟ್ಟ ಆವಾಸವೇ ಕೆಡ್ವಾಸ ಅಥವಾ ಕೆಡ್ಡಸ ಆಗಿದೆ. ಭೂಮಿದೇವಿ ಮುಟ್ಟಾಗಿ ಈ ದಿನಗಳಲ್ಲಿ ಸಂಕಷ್ಟದಲ್ಲಿರುತ್ತಾಳೆ ಎಂಬುದು ಜನರ ನಂಬಿಕೆ. ನಾಲ್ಕನೇ ದಿನ ಆಕೆ ಮಿಂದು ಬರುತ್ತಾಳೆ. ಅನಂತರ ಗರ್ಭಧರಿಸಿ ಪ್ರಕೃತಿಯನ್ನು ಸೃಷ್ಟಿಮಾಡುತ್ತಾಳೆ, ಎಂಬುದಾಗಿ ಜನರು ನಂಬಿದ್ದಾರೆ.

ಕೆಡ್ಡಸದ ಮೊದಲ ದಿನ ಭೂಮಿದೇವಿಯನ್ನೇ ಸ್ನಾನಕ್ಕೆ ಕಳುಹಿಸುವ ಆಚರಣೆ. ಆಕೆಗೆ ಎಣ್ಣೆ, ಸೀಗೆ, ಬಾಗೆ, ಮಡಿವಸ್ತ್ರ ಕತ್ತಿ, ಕುರಿನೀರು, ಅರಸಿನ ಎಲ್ಲವನ್ನು ಅಂಗಳದ ತುಳಸಿಕಟ್ಟೆಯ ಪಕ್ಕದಲ್ಲಿ ಕೈ ಮುಗಿದು ಮಹಿಳೆಯರು ಕಳುಹಿಸಿ ಕೊಡುತ್ತಾರೆ. ಆ ದಿನ ಅಕ್ಕಿ ಮತ್ತು ನವ ಧಾನ್ಯಗಳನ್ನು ಹುರಿದು ನುಣ್ಣಗೆ ಪುಡಿ ಮಾಡಿ ಬಾಳೆಹಣ್ಣಿನೊಂದಿಗೆ ಭೂಮಿ ದೇವಿಗೆ ಸಮರ್ಪಿಸಿ ತಾವೂ ತಿನ್ನುತ್ತಾರೆ. ಇದನ್ನು ಸಸ್ಯಕುಡ್ಪರಿ ಎನ್ನುತ್ತಾರೆ. ಭೂಮಿದೇವಿ ಈ ಧಾನ್ಯಗಳನ್ನು ತಿಂದು ಗರ್ಭಧಾರಣೆಗೆ ದೈಹಿಕವಾಗಿ ಆರೋಗ್ಯವಂತಳಾಗಬೇಕೆಂದು ಈ ತಿಂಡಿ ತಿನಿಸುವ ಆಶಯ.

ನಾಲ್ಕನೆಯ ಆ ದಿನ ಮಿಂದು ಬಂದ ಆಕೆಗೆ ಹೊಸ ಸೀರೆ, ರವಿಕೆ, ಬಳೆ, ಕುಂಕುಮ, ಎಣ್ಣೆ, ಬಾಚಣಿಗೆ, ಎಲ್ಲವನ್ನೂ ಇಟ್ಟು ಹಾಲೆರೆದು ಸ್ವಾಗತ ಮಾಡಿಕೊಳ್ಳುತ್ತಾರೆ. ಕೆಡ್ಡಸದ ನಾಲ್ಕು ದಿನಗಳು ಭೂಮಿದೇವಿ ಸಂಕಷ್ಟದಲ್ಲಿರುತ್ತಾಳೆ. ಆದುದರಿಂದ ಆಕೆಯ ಮೈ ಮುಟ್ಟಬಾರದು, ಗದ್ದೆ ಉಳುವುದು, ಮಣ್ಣು ಅಗೆಯುವುದು, ಮರಗೆಲ್ಲು, ಕೊಂಬೆ, ರೆಂಬೆ ಸೊಪ್ಪು ಕಡಿಯುವುದು ಕೂಡ ನಿಷೇಧ. ಹಿಂದೆ ಒಬ್ಬಾತ ಕೆಡ್ಡಸದ ದಿನ ಭೂಮಿ ಉಳಲು ಹೋಗಿ ಮಣ್ಣಿಡಿಯಿಂದ ರಕ್ತ ಬಿಸರಿ ಬಂತೆಂಬ ಪ್ರತೀತಿ ಇದೆ. ಕೆಡ್ಡಸದ ದಿನ ಮಾಂಸಾಹಾರಿಗಳು ಮಾಂಸ, ಮೀನು ತಿನ್ನಬೇಕು. ಅದಕ್ಕಾಗಿ ಹಿಂದೆ ಬೇಟೆಯಾಡುತ್ತಿದ್ದರು. ಈಗ ಕೋಳಿ ಅಂಕ ನಡೆಸುತ್ತಾರೆ. ಸಸ್ಯಾಹಾರಿಗಳು ನುಗ್ಗೆಕಾಯಿ ಬದನೆ ಸಾಂಬಾರಿನಲ್ಲಿ ಊಟ ಮಾಡುತ್ತಾರೆ. ಇದು ಲೈಂಗಿಕ ಶಕ್ತಿಗೆ ಉತ್ತೇಜನಕಾರಿ, ಅವರೆ, ಧಾನ್ಯಗಳ ಸಾರು ಮಾಡುತ್ತಾರೆ. ಇದು ಪೌಷ್ಟಿಕತೆಯನ್ನು ಹೆಚ್ಚಿಸುತ್ತದೆ ಎಂಬುದು ಜನರ ನಂಬಿಕೆ.

**ಬಿಸು :** ಎಂದರೆ ಸೌರಮಾನ ಯುಗಾದಿ. ತುಳುವರು ಪಗ್ಗು ತಿಂಗಳಿಂದ ಹೊಸ ವರ್ಷ ಲೆಕ್ಕಾಚಾರ ಮಾಡುತ್ತಾರೆ. ಇದು ಸಾಮಾನ್ಯ ಏಪ್ರಿಲ್ ತಿಂಗಳ 14ರಂದು ಬರುತ್ತದೆ.

ಬಿಸುವಿನ ದಿನ ಮನೆಯ ಚಾವಡಿಯಲ್ಲಿ ಮಂಚದ ಬಳಿ ಬಟ್ಟೆ ಹಾಸಿ ಅದರ ಮೇಲೆ ಸಿಹಿ ಗುಂಬಳ, ಸೌತೆ, ಮುಳ್ಳು ಸೌತೆ, ಹೀರೆ, ಅಲಸಂದೆ ಮುಂತಾದ ತರಕಾರಿಗಳನ್ನೂ ಬಾಳೆಹಣ್ಣು, ಗೇರುಹಣ್ಣು, ಮಾವು, ಹಲಸಿನ ಹಣ್ಣು ಸೀತಾಫಲ, ಪಪ್ಪಾಯಿ, ಅನನಾಸು ಇತ್ಯಾದಿ ಹಣ್ಣುಗಳನ್ನು ಓರಣವಾಗಿ ಇಡುತ್ತಾರೆ. ಮಧ್ಯೆ ಒಂದು ದೊಡ್ಡ ಕನ್ನಡಿ, ಪಕ್ಕದಲ್ಲೊಂದು ಸಿಪ್ಪೆ ತೆಗೆಯದ ತೆಂಗಿನಕಾಯಿ ಇಟ್ಟು ದೀಪ ಹಚ್ಚಿಡುತ್ತಾರೆ. ಒಂದು ತಟ್ಟೆಯಲ್ಲಿ ಗಂಧ ಕುಂಕುಮ ಇನ್ನೊಂದು ಕಡೆ ಹೊಸ ಬಟ್ಟೆಗಳನ್ನಿಡುತ್ತಾರೆ. ಈ ಸಿದ್ಧತೆ ಎಲ್ಲಾ ಮೊದಲ ದಿನವೇ ನಡೆಯುತ್ತದೆ. ಇದನ್ನು ಕಳೆ ಇಡುವುದು ಎನ್ನುತ್ತಾರೆ.

ಮುಂಜಾನೆ ಎದ್ದು ಶುಚಿರ್ಭೂತರಾಗಿ ಬಂದು ಒಬ್ಬೊಬ್ಬರಾಗಿ ಕನ್ನಡಿಯಲ್ಲಿ ಮುಖ ನೋಡಿ, ಕೈ ಮುಗಿದು ಗಂಧಾಕ್ಷತೆ ಹಾಕಿಕೊಳ್ಳುತ್ತಾರೆ. ಕಿರಿಯರು ಹಿರಿಯರ ಕಾಲಿಗೆ ನಮಸ್ಕಾರ ಮಾಡುತ್ತಾರೆ. ಹಿರಿಯರು ಕಿರಿಯರಿಗೆ ಹೊಸ ಬಟ್ಟೆ ನೀಡುತ್ತಾರೆ. ಮಧ್ಯಾಹ್ನ ಪಾಯಸದೂಟವಿರುತ್ತದೆ. ಗೋಡಂಬಿ (ಗೇರು ಬೀಜ) ಪಲ್ಯ, ಹೆಸರು ಬೇಳೆ ಪಾಯಸ ಈ ದಿನದ ವಿಶೇಷ. ಕಳೆ ಹೇಳುವುದೆಂದರೆ ಭವಿಷ್ಯ ಹೇಳುವುದು ಎಂದರ್ಥ. ಕನ್ನಡಿಯಲ್ಲಿ ಮುಖ ನೋಡುವುದೆಂದರೆ ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳಲು ಸಿದ್ಧರಾಗುವುದು ಎಂಬುದು ಇದರ ಅರ್ಥ.

ಆ ದಿನ ಕೋಳಿ ಅಂಕ, ಕಾಯಿ ಕುಟ್ಟುವುದು, ಚೆಂಡಾಟ ಕಬ್ಬಡಿ ಮುಂತಾದ ಪಂದ್ಯಗಳು ನಡೆಯುತ್ತವೆ. ದೇವಸ್ಥಾನಗಳಲ್ಲಿ ವಿಶೇಷ ಉತ್ಸವಗಳು ಇರುತ್ತದೆ. ಬಿಸುವಿನ ದಿವಸ ಗದ್ದೆಗೆ ಜೋಡೆತ್ತು ಕಟ್ಟಿ ಒಂದು ಸುತ್ತು ಉಳುಮೆ ನಡೆಸಿ, ಗೊಬ್ಬರ ಹಾಕಿ ಒಂದು ಹಿಡಿ ಬೀಜ ಬಿತ್ತಿ ವ್ಯವಸಾಯಕ್ಕೆ ನಾಂದಿ ಹಾಡುತ್ತಾರೆ. ಇದನ್ನು ಕುಂದಾಪುರದ ಕಡೆ ಆರೂಪಕ ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಒಕ್ಕಲಿನವರೆಲ್ಲ ದಣಿಗಳಿಗೆ ತಾವು ಬೆಳೆದ ತರಕಾರಿಗಳನ್ನು ಆ ದಿನ ದಣಿಗಳಿಗೆ ಕಾಣಿಕೆಯಾಗಿ ಒಪ್ಪಿಸುವ ಕ್ರಮವಿತ್ತು. ಇದನ್ನು ಬುಳೆಕಾಣಿಕೆ ಎನ್ನುತ್ತಾರೆ.

**ಪತ್ತನಾಜೆ :** ವೃಷಭಮಾಸದ 10ನೇ ದಿನ (ಬೇಸ್ಯ10) ಅಂದರೆ ಸಾಮಾನ್ಯವಾಗಿ ಮೇ 25 ರಂದು ಪತ್ತನಾಜೆ ನಡೆಯುತ್ತದೆ. ತುಳುವರ ನಂಬಿಕೆಯ ಪ್ರಕಾರ ಮಳೆಗಾಲ ಪ್ರಾರಂಭವಾಗುವುದು ಪತ್ತ ನಾಜೆಯಿಂದ. "ಪತ್ತನಾಜೆದಾನಿ ಪತ್ ಪನಿಯಾಂಡಲ್ ಹೂರುಂಡು" (ಪತ್ತನಾಜೆಯಂದು ಹತ್ತು ಹನಿಯಾದರೂ ಸುರಿಯುತ್ತದೆ.) ಎಂಬ ಗಾದೆಯ ಮಾತೇ ಇದೆ.

ಬೇಸಗೆ ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲ ಅಂದು ಮುಕ್ತಾಯ ಗೊಳ್ಳುತ್ತವೆ. ಯಕ್ಷಗಾನದವರು ಆ ದಿನ ಕೊನೆಯ ಆಟವಾಡಿ 'ಗೆಜ್ಜೆ ಗಿಚ್ಚುತ್ತಾರೆ (ಕಳಚುತ್ತಾರೆ) ಭೂತಗಳಿಗೆಲ್ಲ ಅಂದು ಕೋಲ ತಂಬಿಲ ಕೊಟ್ಟರೆ ಮತ್ತು ಆರಂಭಗೊಳ್ಳುವುದು ಸೋಣ (ಶ್ರಾವಣ) ಮಾಸದಲ್ಲಿ.

ಕೃಷಿಕರು ಮಳೆಗಾಲಕ್ಕೆ ಬೇಕಾದ ಕಟ್ಟಿಗೆ, ಅಕ್ಕಿ ಮುಡಿ, ಸೌತೆಕಾಯಿ, ಕುಂಬಳಕಾಯಿ, ಹಲಸಿನ ಬೀಜ, ಉಪ್ಪಿನಕಾಯಿ ಎಲ್ಲವನ್ನು ಸಂಗ್ರಹಿಸಿ ಅಟ್ಟಕ್ಕೇರಿಸಿ ಬಿಡುತ್ತಾರೆ. ಪತ್ತನಾಜೆಯಂದು ಹಲಸಿನ ಸೋಳೆ ಪಲ್ಯ,

ಹಲಸಿನ ಬಜ್ಜಿ ಮಾಡಿ ತಿನ್ನುವುದು ರೂಢಿ. ಪತ್ತನಾಜೆ ಕಳೆದೊಡನೆ ಅವರು ಬೇಸಾಯದ ತುರ್ತು ಕೆಲಸಗಳಲ್ಲಿ ಕಾರ್ಯ ನಿರತರಾಗುತ್ತಾರೆ.

**ಅಕ್ಕಿ - ಬತ್ತದ ರಕ್ಷಣೆ :** ಅಕ್ಕಿ, ಬತ್ತವನ್ನು ಹಾಳಾಗದಂತೆ ಬಹಳ ಕಾಲದವರೆಗೆ ದಾಸ್ತಾನು ಮಾಡುವ ಕಲೆ ತುಳುವರಿಗೆ ಗೊತ್ತು. ಬೈಹುಲ್ಲಿನ ದುಂಡಗಿನ ಆಕಾರದ ಆವರಣದಲ್ಲಿ ಅಕ್ಕಿಯನ್ನು ಸುತ್ತಿ 'ಮುಡಿ' ಕಟ್ಟುತ್ತಾರೆ. ಕ್ರಿ.ಶ. 1583ರಲ್ಲಿ ಇಂಗ್ಲೆಂಡಿನಿಂದ ಬಂದ ಲಿನ್‌ಸ್ಕೂತೆನ್ ಎಂಬ ಪ್ರವಾಸಿ "ತುಳುವರು ಅಕ್ಕಿಯನ್ನು ಬತ್ತದ ಹುಲ್ಲಿನ ಮೂಟೆಗಳಲ್ಲಿ ಸುತ್ತಿ, ಮೇಲೆ ಹುರಿಮಾಡಿದ ಹಗ್ಗದಿಂದ ಕಟ್ಟುತ್ತಾರೆ. ಹೀಗೆ ಮೂಟೆಗಳಲ್ಲಿ ಸಂಗ್ರಹಿಸಲ್ಪಟ್ಟ ಅಕ್ಕಿ ಅತ್ಯುತ್ಕೃಷ್ಟವಾಗಿರುತ್ತಿತ್ತು" ಎಂದು ಬರೆದಿದ್ದಾನೆ. ಬತ್ತದ ರಕ್ಷಣೆಗೆ ಮನೆಯಂಗಳದಲ್ಲಿ ಬೈಹುಲ್ಲಿನ ಆವರಣದ ವ್ಯವಸ್ಥೆ ಮಾಡುತ್ತಾರೆ. ಇದನ್ನು ತುಪ್ಪೆ ಎನ್ನುತ್ತಾರೆ. ಮನೆಯೊಳಗೆ ಬಿದಿರಿನ ತಡಿಕೆಗಳಿಂದ ತಯಾರಿಸಲ್ಪಟ್ಟ ಕದಿಕೆಯಲ್ಲಿ, ಮರದ ಪತ್ತಾಯಗಳಲ್ಲಿ, ಕಲ್ಲ ಕಲೆಂಬಿಗಳಲ್ಲಿ ಬತ್ತ - ಅಕ್ಕಿಯನ್ನು ಕೆಡದಂತೆ ರಕ್ಷಣೆ ಮಾಡುತ್ತಿದ್ದರು. ಇವೆಲ್ಲ ತುಳುವರ ಭೌತಿಕ ಕೃಷಿ ಸಂಸ್ಕೃತಿಗೆ ಉದಾಹರಣೆಗಳಾಗಿವೆ.

**ಕೃಷಿ ಸಂಬಂಧೀ ಕುಣಿತಗಳು :** ನೇರವಾಗಿ ವ್ಯವಸಾಯದ ಭಾಗವಾಗದೆ ಇದ್ದರೂ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಇರುವ ಕುಣಿತಗಳು ತುಳುನಾಡಿನಲ್ಲಿ ಮುಖ್ಯವಾಗಿ ಎರಡು. ಅವುಗಳಲ್ಲೊಂದು ಕರಂಗೋಲು ಇನ್ನೊಂದು ಕಂಗೀಲು.

**ಕರಗೋಲು :** ಈ ಕುಣಿತವನ್ನು ಸುಳ್ಯ, ಪುತ್ತೂರು, ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಮನ್ಸರು (ಆದಿ ದ್ರಾವಿಡರು) ನಡೆಸಿದರೆ, ಬಂಟ್ವಾಳದಲ್ಲಿ ಮೇರರು (ಮುಗೇರರು) ನಡೆಸುತ್ತಾರೆ. ಈ ಜಾತಿಯವರು ಕೃಷಿ ಕಾರ್ಮಿಕರು.

ಈ ಕುಣಿತ ಸುಗ್ಗಿಯ ಹುಣ್ಣಿಮೆ (ಮಾರ್ಚ್)ಯ ಮೊದಲ ದಿನದಿಂದ ಪ್ರಾರಂಭಗೊಂಡು ನಾಲ್ಕೈದು ದಿವಸಗಳವರೆಗೆ ನಡೆಯುತ್ತದೆ. ಕುಣಿತದ ತಂಡದಲ್ಲಿ ಹಲವು ಮಂದಿ ಹೆಣ್ಣು, ಗಂಡುಗಳಿರುತ್ತಾರೆ. ವೇಷಧಾರಿಗಳು ಗಂಡಸರು ಮಾತ್ರ, ಬಿಳಿಯ ಬಣ್ಣದ ಪಂಚೆ ಉಟ್ಟು ಕೊಂಡು, ಜೇಡಿಮಣ್ಣನ್ನು ಕಲಸಿ ಬಿದಿರಿನ ಕೋಲಿನ ಸಹಾಯದಿಂದ ಮುಖ, ತೋಳು, ಎದೆ, ಹೊಟ್ಟೆ, ಹೀಗೆ ಮೈಮೇಲೆಲ್ಲಾ ಚುಕ್ಕಿಗಳನ್ನು ಹಾಕಿಕೊಳ್ಳುವರು. ದೇಹದ ಮುಂಭಾಗ ಮತ್ತು ಹಿಂಭಾಗಕ್ಕೆ ದಪ್ಪಕ್ಕೆ ಜೇಡಿಯ ಗುರುತಿನ ಗೆರೆಗಳನ್ನೆಳೆದುಕೊಳ್ಳುವುದಕ್ಕೆ ಗೇಂಟಿ ಕಟ್ಟುವುದು ಎನ್ನುತ್ತಾರೆ. ಕೈ ಕಾಲುಗಳಿಗೆ ಬಳೆಯಾಕಾರದಲ್ಲಿ ಜೇಡಿಯ ಸುತ್ತು ಬಳಿದುಕೊಳ್ಳುತ್ತಾರೆ. ಇದನ್ನು ದಂಡೆ ಎನ್ನುತ್ತಾರೆ. ಕಲೆಗೆ ಮುಂಡಾಸು ಇಲ್ಲವೆ, ತಲೆಯ ಸುತ್ತು ಹಾಗೂ ಬೈತಲೆಯ ಮಧ್ಯದಿಂದ ಒಂದು ಚಿನ್ನದ ಬಣ್ಣದ ರಿಬ್ಬನ್ ಅಂಟಿಸಿಕೊಳ್ಳುವರು. ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಕೈಗಳಲ್ಲಿ ನೆಕ್ಕಿ ಸೊಪ್ಪು ಸೂಡಿ ಹಿಡಿದುಕೊಂಡಿರುತ್ತಾರೆ. ಇಂತಹ ಪಾತ್ರಧಾರಿಗಳು ಕನಿಷ್ಠ ನಾಲ್ಕು ಮಂದಿ ಇರುತ್ತಾರೆ.

ಕುಣಿತಗಾರರ ಮಧ್ಯೆ ಒಬ್ಬ ಮುದುಕ ವೇಷಧಾರಿ ಇರುತ್ತಾರೆ. ಈತ ಹತ್ತಿಯನ್ನು ಮುಖಕ್ಕೆ ಅಂಟಿಸಿಕೊಂಡು ಬಿಳಿಗಡ್ಡ ಮೀಸೆ, ಉದ್ದ ತೋಳಿನ ಅಂಗಿ, ಗಿಡ್ಡ ಬಿಳಿ ಬಟ್ಟೆಯ ಕಚ್ಚೆ, ತಲೆಗೆ ಮುಂಡಾಸು ಕಟ್ಟಿಕೊಂಡಿರುತ್ತಾನೆ. ಕಾಲಿಗೆ ಗೆಜ್ಜೆ, ಕೈಗೆ ಕಡಗದೊಂದಿಗೆ ಕುಂಡಲ ಧರಿಸಿರುತ್ತಾರೆ. ಆತನ ಕೈಯಲ್ಲಿ ಬಿದಿರಿನ ದಂಟು ಇರುತ್ತದೆ. ದಂಟೆಯ ತುದಿಯನ್ನು ಜಜ್ಜಿರುತ್ತಾರೆ. ಈತ ಇದನ್ನು ನೆಲಕ್ಕೆ ಕುಟ್ಟಿ ಕುಟ್ಟಿ ಸದ್ದು ಮಾಡುತ್ತಾ ಕುಣಿತದವರ ನಡುವಿನಿಂದ ಹೋಗುತ್ತಾ "ಬಂದ್ರಣ್ಣ ಬಂದು, ತಡ್ಪೆ ಪಡೊನು ಬಂದು, ದೆಕ್ಕಂಡಲಾ ಪೋಪುಜಿ ಉರ್ದುಡಲಾ ಪೂಪುಜಿ" ಎನ್ನುತ್ತಾರೆ. ಕುಣಿತದ ಕಲಾವಿದರು ನಿಧಾನ ಹೆಜ್ಜೆಯಲ್ಲಿ ಹಿಂದೆ, ಮುಂದೆ ಹೋಗುತ್ತಿರುತ್ತಾರೆ. ಕಾಲಿನ ಹೆಜ್ಜೆಗೆ ಸರಿಯಾಗಿ ಸೊಪ್ಪು ಹಿಡಿದ ಕೈ ಬೀಸುತ್ತಾರೆ.

ಹಿಮ್ಮೇಳದಲ್ಲಿ ಡೋಲು, ಗಂಟಾ ಮಣಿ ಇರುತ್ತದೆ. "ಪೊಲಿಯೇ ಪೊಲ್ಯರ ಪೋ ಪುಪೊಣ ಡುಲ್ಲಯಾ, ಮಾಯದಾಪುಣ್ಣಮೆ ಮಾಚಿದೇ ಪೋತುಲ ಡೇ" ಹೀಗೆ ಹಾಡನ್ನು ಪ್ರಾರಂಭಿಸಿ ಮುಂದುವರಿಸುತ್ತಾರೆ. ಪೊಲಿ ಎಂದರೆ ಅದೃಷ್ಟ ಬೆಳೆ ಬೆಳೆಸಿ ಅದೃಷ್ಟ. ಹೆಚ್ಚುವಂತಾಗಲಿ ಎಂಬುದು ಇದರ ಆಶಯ. ಆದಿ ದ್ರಾವಿಡ ಸಾಂಸ್ಕೃತಿಕ ವೀರರಾದ ಕನದ ಕಟದರು, ಮಾಂತ್ರಿಕ, ಬತ್ತದ ಬೀಜವನ್ನು ತಂದು ಪವಾಡ ಸದೃಶವಾಗಿ ಬಿತ್ತನೆ ಮಾಡಿ ಬೆಳೆತೆಗೆಯುವ ಕತೆಯನ್ನು ಈ ಹಾಡು ಒಳಗೊಂಡಿರುತ್ತದೆ. ಈ ಕುಣಿತಕ್ಕೆ ಆದಿ ಮತ್ತು ಅಂತ್ಯದಲ್ಲಿ ಕೆಲವು ಆಚರಣೆಗಳಿವೆ.

**ಕಂಗೋಲು :** ಕರಂಗೋಲು ಮೂಲಕ್ಕೆ ಸೇರಿದ ಇನ್ನೊಂದು ಕುಣಿತ ಕಂಗೀಲು. ಉಡುಪಿ ಜಿಲ್ಲೆಯ ಮೂಲ್ಕಿ - ಕಾಪು ಪರಿಸರದಲ್ಲಿ ಮುಂಡಾಲ ಜನಾಂಗದವರು ಸುಗ್ಗಿಯ ಹುಣ್ಣಿಮೆಗೆ ನಡೆಸುತ್ತಾರೆ.

ಇವರು ಕಾಪು ಮಾಡಿ ಗುಡಿ ಎದುರಿನಿಂದ ಅಥವಾ ಮಾರಣಕಟ್ಟೆಯ ದೇವಸ್ಥಾನದ ಬಾಗಿಲಿನಿಂದ ಪ್ರಾರ್ಥನೆ ಸಲ್ಲಿಸಿ, ಕುಣಿತ ಪ್ರಾರಂಭಿಸುವುದು ಪದ್ಧತಿ. ಕುಣಿತದ ತಂಡದಲ್ಲಿ 5 ರಿಂದ 14 ಮಂದಿಯವರೆಗೆ ಕಲಾವಿದರಿರುತ್ತಾರೆ. ಹದಿನಾಲ್ಕು ಜನರ ತಂಡದಲ್ಲಿ ಏಳು ಜನ ವೇಷ ಧರಿಸುತ್ತಾರೆ. ಲುಂಗಿ ಮತ್ತು ಅಂಗಿ ತೊಟ್ಟು ಅದರ ಮೇಲೆ ಸೊಂಟಕ್ಕೆ ಮತ್ತು ಕುತ್ತಿಗೆಗೆ ತೆಂಗಿನ ತಿರಿಯಿಂದ ಮಾಡಿದ ಜಾಲರಿಯನ್ನು ಸುತ್ತಿ ಗಟ್ಟಿಯಾಗಿ ಕಟ್ಟುತ್ತಾರೆ. ತಲೆಗೆ ಬಟ್ಟೆ ಸುತ್ತಿ ಕಟ್ಟಿ ಅದರ ಮೇಲೆ ಸುತ್ತು ಜಾಲರಿ ಕಟ್ಟಿ ಅದನ್ನು ಕೆಳಗೆ ಇಳಿಬಿಟ್ಟು ವೃತ್ತಾಕಾರದಲ್ಲಿ ಕುಣಿಯುತ್ತಾರೆ. ಮಧ್ಯದಲ್ಲೊಬ್ಬ ರಾಜವೇಷ ಹಾಕಿದವನ್ನು ಕೀಲುಕುದುರೆಯನ್ನು ಸೊಂಟಕ್ಕೆ ಕಟ್ಟಿಕೊಂಡು, ಹಿಂದೆ - ಮುಂದೆ ಹೆಜ್ಜೆ ಹಾಕಿ ಕುಣಿಯುತ್ತಾನೆ. ಕೆಲವು ತಂಡದವರೊಡನೆ ಕೀಲುಕುದುರೆ ಇರುವುದಿಲ್ಲ. ಬದಲಾಗಿ ಕೊರಗ ವೇಷವಿರುತ್ತದೆ. ಆತ ಕುಣಿತದವರ ಮಧ್ಯದಿಂದ ಅಡ್ಡಾದಿಡ್ಡಿ ಕುಣಿಯುತ್ತಾನೆ.

ಡೋಲು, ತಾಸೆಯ ಹಿಮ್ಮೇಳದಲ್ಲಿ ಕುಣಿತ ನಡೆಯುತ್ತದೆ. ಹಾಡು ಹೇಳುವವರು ಚಕ್ರತಾಳ ಇಲ್ಲವೇ ಘಂಟಾಮಣಿ ಬಾರಿಸಿಕೊಂಡು ಹಾಡು ಹೇಳುತ್ತಾರೆ. "ಕಂಗಿಲೋ... ಮಾಯಿಲೋ" ಎಂಬ ಸೊಲ್ಲು ಹೇಳಿಕೊಂಡು ಕಲಾವಿದರು ರಂಗ ಪ್ರವೇಶಿಸುತ್ತಾರೆ.

***ಕಂಗಿಲು ಪುಟುದಿನಿ ಜಾಲುಂದು ಮಿಂಬರ***
***ಕಂಗಿಲು ಪುಟುದಿನಿ ದೆಸೆ ಬಡಕಾಯಿ***
***ದೆಸೆಬಡಕಾಯಿ ಪುಟ್ಟಿ, ಕಂಗಿಲು ನೆಂಚಕನವೋ***

ಹೀಗೆ ಹಾಡು ಮುಂದುವರಿಯುತ್ತದೆ. ಊರಿಗೆ ಬರಗಾಲ ಬಂದು ಬೆಳೆ ಎಲ್ಲಾ ನಾಶವಾಗಿ ಹೋದಾಗ ಪಂಚಪಾಂಡವರ ನಾಡಿಂದ ಊರಿನ ಬಲ್ಲಾಳ ಹೊಸ ತಳಿಯ ಬತ್ತದ ಬೀಜವನ್ನು ತರುವುದೇ ಈ ಕುಣಿತದ ಆಶಯ.

**ಪೊಲ್ಬೊಡಿ ಪೋಪಿಸಿ :** ಏಣೇಲು ಬೆಳೆಯ ಕೊಂಬಲು ಆದ ಬಳಿಕ ಬತ್ತದ ಪೈರನ್ನು ಪಡಿಗೆ ಹೊಡೆದು ಪೈರಿನಿಂದ ಬತ್ತ ಬೇರ್ಪಡಿಸುವ ಸಂದರ್ಭದಲ್ಲಿ ಐದು ಅಥವಾ ಏಳು ಸೂಡಿ ಪೈರನ್ನು ಬತ್ತ ಬೇರ್ಪಡಿಸದೆ ಹಾಗೆಯೇ ಹುಲ್ಲಿನ ರಾಶಿಯಲ್ಲಿ ನಲ್ಕೆಯವರಿಗಾಗಿ ಬಿಡುವುದು ವಾಡಿಕೆ.

ಬತ್ತದ ಬೇಸಾಯ ಮುಗಿದು ಬತ್ತ ಮನೆಯೊಳಗೆ ಸೇರಿದ ಒಂದೆರಡು ದಿನಗಳಲ್ಲಿ, ನಲ್ಕೆ ಜಾತಿಯ ಮಹಿಳೆಯರು ಮನೆಯಂಗಳಕ್ಕೆ ಕುಣಿತಕ್ಕೆ ಬರುತ್ತಾರೆ. ಇವರು ನಡೆಸುವ ಕುಣಿತ "ಪೊಲ್ಬೊಡಿ ಪೋಪಿನಿ" ಎಂದರೆ ಅದೃಷ್ಟ ತುಂಬಿ ತುಳುಕುವುದು. ಅವರು ಅದೃಷ್ಟವನ್ನು ಕರೆಯುತ್ತಾ ಕುಣಿದು, ತೆನೆಯಿರುವ ಬತ್ತದ ಸೂಡಿಯನ್ನು ಹೊಡೆದು ಬತ್ತ ಬೇರ್ಪಡಿಸುತ್ತಾರೆ. ಹುಲ್ಲಿನ ಸೂಡಿಯನ್ನು ಮನೆಯ ಮಾಡಿಗೆ ಎಸೆಯುತ್ತಾರೆ. ತಂಡದಲ್ಲಿ ಇಬ್ಬರು ಮಹಿಳೆಯರಿರುತ್ತಾರೆ. ಇವರು ನೇಯಿನಲಿಕೆಯ ಪಾಡ್ದನವನ್ನು ಹೇಳಿಕೊಂಡು ಬತ್ತದ ಸೂಡಿ ಬಡಿಯುತ್ತಾರೆ.

ಕೊನೆಯಲ್ಲಿ ಬತ್ತವನ್ನು ಪೂಸಿ, ದೆರೆಸೆಯಲ್ಲಿ ಗೇರಿ ತಮ್ಮ ಚೀಲಕ್ಕೆ ತುಂಬಿಕೊಳ್ಳುತ್ತಾರೆ. ಪೊಲಿ ಪೊಲಿಯೇ ಪೊಲಿ ಎಚ್ಚೇ ಎಂದುಕೊಂಡು ಮನೆಯವರಿಂದ ಊಟ, ತಿಂಡಿ ವೀಳ್ಯ ಪಡೆದುಕೊಳ್ಳುತ್ತಾರೆ. ಇದೊಂದು ಕುಣಿತ ಎನ್ನುವುದಕ್ಕಿಂತ ಹೆಚ್ಚಾಗಿ ಅದೃಷ್ಟ ಹೆಚ್ಚಿಸುವ ಆಚರಣೆ ಎನ್ನಬಹುದು.

*ಆರ್.ಎ.ಪಿ.*

## ತುಳುನಾಡಿನ ಕೃಷಿ ಪರಿಕರಗಳು

**ಏತ :** ಇದನ್ನು ತುಳು ಭಾಷೆಯಲ್ಲಿ ಪನೆ ಎನ್ನುತ್ತಾರೆ. ಸುಗ್ಗಿ ಮತ್ತು ಕೊಳಕೆ ಬೆಳೆಗಳಿಗೆ ಕಬ್ಬು, ತೆಂಗು ತೋಟಗಳಿಗೆ ಆಳವಾದ ಬಾವಿಗಳಿಂದ 'ಏತ'ದ ಮೂಲಕ ನೀರನ್ನು ಪೂರೈಸುತ್ತಾರೆ. ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ಸುಮಾರು 1980ರ ತನಕ ಏತದ ಮೂಲಕ ಕೃಷಿ ಮಾಡುವ ಪದ್ಧತಿ ರೂಢಿಯಲ್ಲಿತ್ತು. ಯಾವುದೇ ಒಂದು ತಂತ್ರಜ್ಞಾನದ ಸಹಾಯವಿಲ್ಲದೆ ಆಧುನಿಕ ಸಾಧನಗಳಿಲ್ಲದೆ ಏತವನ್ನು ಕೃಷಿಕರೇ ತಯಾರಿಸುತ್ತಿದ್ದರು. ಆಳವಾದ ಬಾವಿಯ ಮೇಲ್ಗಡೆಯಲ್ಲಿ ಎರಡು ಎತ್ತರವಾದ ಮರಗಳನ್ನು ಎರಡು ಅಡಿಗಳಷ್ಟು ಅಂತರದಲ್ಲಿ ನೆಡುವುದು. ಆ ಮರಗಳು ಅಲ್ಲೇ ಜೀವ ಹಿಡಿಯುವ ಮರಗಳಾದರೆ ತುಂಬಾ ಅನುಕೂಲ. ಇಲ್ಲದಿದ್ದರೆ ಸತ್ತ ತೆಂಗಿನ ಮರವನ್ನು ಕಡಿದು ನೆಡುವ ಪರಿಪಾಠವೂ ಇತ್ತು. ಸುಮಾರು 15 ರಿಂದ 20 ಅಡಿ ಎತ್ತರದಲ್ಲಿ ಆ ಎರಡು ಮರಗಳಿಗೆ ಸಮನಾಂತರದಲ್ಲಿ ರಂಧ್ರಗಳನ್ನು ಕೊರೆದು 'ನೊಗ ಪನೆ' ಎನ್ನುವ ಮರದ ಸಾಧನವನ್ನು ಸಿಕ್ಕಿಸಿ ಎರಡೂ ಮರಗಳನ್ನು ಬಿಳಲಿನ ಮೂಲಕ (ಮೊರಜ) ಎಳೆದು ಕಟ್ಟಲಾಗುತ್ತದೆ. ಇಲ್ಲದಿದ್ದರೆ ಎರಡು ಮರಗಳು ಅಗಲ ಹೋದರೆ ಮರ ಕೆಳಗೆ ಬಿದ್ದು ಜೀವಹಾನಿಯಾಗುವ ಸಾಧ್ಯತೆಗಳಿವೆ. ಇದಕ್ಕೆ ತಿರು ಬಿಗಿಯುವುದು ಎನ್ನುವರು. ನೊಗ ಪನೆಯ ಮೇಲ್ಭಾಗಕ್ಕೆ ಸುಮಾರು 25 ರಿಂದ 30 ಅಡಿ ಉದ್ದದ ಬಿದಿರಿನ ಗಳದ ತುದಿಗೆ ಬಿಗಿದು ಬಾವಿಯ ಆಳಕ್ಕೆ ಇಳಿಬಿಡುತ್ತಾರೆ. ಗಳದ ಒಂದು ತುದಿಯಲ್ಲಿ ಮರಯಿ (ಹೊನ್ನೆ ಮರದಿಂದ ಮಾಡಿದ ದೊಡ್ಡ ಅಗೋಳಿ)ಯನ್ನು ನೇತಾಡಿಸುವುದು. ಇನ್ನೊಂದು ತುದಿಯಲ್ಲಿ ಬೆರ್ಮರಕ್ಕೆ ಉದ್ದವಾದ ಹಗ್ಗವನ್ನು ಇಳಿಬಿಟ್ಟು ಅದರ ಮೂಲಕ ನೀರನ್ನು ಎಳೆಯುತ್ತಾರೆ. ಈ ಹಗ್ಗ ಬೈಹುಲ್ಲಿನಿಂದ ಮಾಡಿದ್ದಾಗಿರುತ್ತದೆ. ಇದನ್ನು ಕಡೆಬಲ್ಲು ಎನ್ನುತ್ತಾರೆ. ಬಾವಿಯಿಂದ ನೀರನ್ನು ಸೇದುವ ಜಾಗಕ್ಕೆ ಬರವು ಎನ್ನುವರು. ನೀರು ಮರಯಿಯಿಂದ ತೋಡಿಗೆ ಬರುವಲ್ಲಿ ತಾಳೆ ಮರವನ್ನು ತೋಡಿ ಮಾಡಿದ ಬರಣೆಯನ್ನು ಜೋಡಿಸಿರುತ್ತಾರೆ. ಬರಣೆಯನ್ನು ಗಟ್ಟಿಯಾದ ಎರಡು ಮರದ ತುಂಡುಗಳ ಮೇಲೆ ಇಡುವುದನ್ನು ಪುಡೆಮುಟ್ಟು ಎನ್ನುವರು. ಮರಯಿ ಮತ್ತು ಗಳ (ಗರೆ)ವನ್ನು ಸಲೀಸಾಗಿ ಜೊತೆಯಾಗಿಸಲು 'ನಾವು' ಎನ್ನುವ ಮರದ ಪರಿಕರವಿದೆ. ಗರೆಯಲ್ಲಿರುವ ಮರದ ಪರಿಕರವನ್ನು ಮಾದಲೆ ಎನ್ನುವರು. 'ನಾವು' ಮತ್ತು ಮಾದಲೆಯನ್ನು ಪರಸ್ಪರ ಜೊತೆಯಾಗಿಸಲು ಗಿರ್‌ಗೋಲು ಎನ್ನುವ ಕೋಲಿನ ತುಂಡನ್ನು ಇಡುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಏತದಲ್ಲಿ ತುಳುವಿನ ಪದಕೋಶದ ದೊಡ್ಡ ಕಣಜವೇ ಇದೆ. ಅದರಲ್ಲೂ ವಿಶೇಷವೆಂದರೆ ಎಲ್ಲಾ ವಸ್ತುಗಳು ಪ್ರಕೃತಿ ನಿರ್ಮಿತವಾದವುಗಳು. ಮರ, ಬಿಳಲು, ಹುರಿಹಗ್ಗ, ಬೈಹುಲ್ಲು, ಹುಲ್ಲಿನ ಹಗ್ಗ, ಕಲ್ಲು, ಮಣ್ಣು. ಒಂದೇ ಒಂದು ಆಣೆಯಾಗಲೀ ಕಬ್ಬಿಣದ ವಸ್ತುವಾಗಲೀ ಇಲ್ಲಿ ಅಗತ್ಯವಿರುವುದಿಲ್ಲ. ಇದು ತುಳುನಾಡಿನ ಹಿರಿಯರ ದೈಹಿಕ ಶ್ರಮ ಮತ್ತು ಬೌದ್ಧಿಕ ಕುಶಲತೆಯ ಮೂಲಕವೇ ರೂಪು ತಾಳುತ್ತದೆ. ಏತದ ಮೂಲಕ ವಾರ್ಷಿಕ ಮೂರು ಬೆಳೆಯನ್ನು ತುಳುನಾಡಿನಲ್ಲಿ ಬೆಳೆಯಲಾಗುತ್ತದೆ.

**ಮುಕ್ಕಾರ್ :** ಏತದಂತೆಯೇ ತುಳುನಾಡಿನಲ್ಲಿ ಗದ್ದೆಗಳಿಗೆ ನೀರು ಹಾಯಿಸುವ ಸಾಧನ ಮುಕ್ಕಾರ್. ಏತ ಆಳ ಬಾವಿಯ ನೀರಾವರಿಗೆ ಅನುಕೂಲವಾದರೆ ಮುಕ್ಕಾರ್ ತೋಡಿನಿಂದ, ಕಾಲುವೆಗಳಿಂದ ತಗ್ಗಿನ ಹೊಳೆಗಳಿಂದ ಅಥವಾ ಕೆಳಗಿನ ಗದ್ದೆಯಿಂದ ಮೇಲಿನ ಗದ್ದೆಗೆ ನೀರು ಹಾಯಿಸಿ ನೇಜು ಮಾಡಲು, ನಾಟಿ ಮಾಡಲು ಅಥವಾ ತರಕಾರಿ ಬೆಳೆಸಲು ಅನುಕೂಲವಾಗುತ್ತದೆ. ಮೂರು ಮರದ ಗಳಗಳನ್ನು ಉಪಯೋಗಿಸಿ ಮಾಡುವ ಕಾರಮ ಮೂರು ಕಾಲು ಎನ್ನುವಂತೆ ತುಳು ಭಾಷೆಯಲ್ಲಿ ಮುಕ್ಕಾರ್ ಆಗಿದೆ. ಸುಮಾರು ಹತ್ತು ಅಡಿಗಳಷ್ಟು ಎತ್ತರಕ್ಕೆ ಜೋಡಿಸಿ ತುದಿಗೆ ದಂಬೆ ನೀರನ್ನು ಹಾಯಿಸುವ ಸಾಧನವನ್ನು ನೇತು ಹಾಕಲಾಗುತ್ತದೆ. ನೀರು ಬೇಕಾದಷ್ಟು ಇದ್ದರೆ ಹಾಯಿಸುವವನಿಗೆ ರಟ್ಟೆಯಲ್ಲಿ ಬಲವಿದ್ದರೆ ತಂತ್ರಗಾರಿಕೆ ತಿಳಿದಿದ್ದರೆ ಏತಕ್ಕಿಂತಲೂ ಸುಲಭವಾಗಿ ಬೇಗನೆ ನೀರು ಹಾಯಿಸಲು ಸಾಧ್ಯವಾಗುತ್ತದೆ. ಇದು ಒಬ್ಬ ವ್ಯಕ್ತಿಯಿಂದಲೇ ಮಾಡಬಹುದಾದ ಕೆಲಸ. ಈ ಸಾಧನವನ್ನು ಇತ್ತೀಚಿನವರೆಗೂ ತುಳುನಾಡಿನಲ್ಲಿ ಕಾಣಬಹುದು. ಕಬ್ಬು ಬೆಳೆಸುವ ಪ್ರದೇಶಗಳಲ್ಲಿಯೂ ಇದರ ಬಳಕೆ ಸಾಮಾನ್ಯವಾಗಿತ್ತು.

**ನೇಗಿಲು (ನಾಯೆರ್) :** ಉಳುಮೆಯ ಸಾಧನ. ಎತ್ತು ಮತ್ತು ಕೋಣಗಳನ್ನು ಗದ್ದೆಯಲ್ಲಿ ಕಟ್ಟಿ ಉಳುಮೆ ಮಾಡುವಲ್ಲಿ ನೇಗಿಲು ಉಪಯೋಗವಾಗುತ್ತದೆ. ಸಾಮಾನ್ಯವಾಗಿ ಕಾಸರಕನ ಮರ ಮತ್ತು ಮಾವಿನ ಮರದಿಂದ ನೇಗಿಲು ತಯಾರಿಸುತ್ತಾರೆ. ಕಾಸರಕನ ಮರ ಅತೀ ಉತ್ತಮ. ಅದು ಸಿಗದ ಸಂದರ್ಭದಲ್ಲಿ ಮಾವಿನ ಮರವನ್ನು ಬಳಸುತ್ತಾರೆ. ಮರವನ್ನು ಕಡಿದು ಮೂರು ಅಡಿ ಉದ್ದ ಒಂದೂವರೆ ಅಡಿ ಅಗಲಕ್ಕೆ ತುಂಡು ಮಾಡಿ ಕೊಡಲಿಯ ಮೂಲಕ ಅದರ ಕರಡು ಆಯ ಆಕಾರ ತರುತ್ತಾರೆ. ಅದನ್ನು 'ಮದಕಡಿ ನಾಯೆರ್' ಎನ್ನುವರು. ಅನಂತರ ಮರದ ಕೆಲಸದವರು ಅದನ್ನು ನೇಗಿಲಿನ ನಿಜ ರೂಪಕ್ಕೆ ಕೆತ್ತುತ್ತಾರೆ. ಇದನ್ನು ತುಳುವಿನಲ್ಲಿ 'ನಾಯೆರ್ ಬಾರುನು' 'ನಾಯೆರ್ ಗೂರುನು' ಎನ್ನುವರು. ಮರದ ನೇಗಿಲು ಮಾಡುವ ಕಾಲಕ್ಕೆ ಅಂದರೆ ಸುಮಾರು ಮೂವತ್ತು ವರ್ಷಗಳ ಹಿಂದೆ ಒಂದು ನೇಗಿಲು

ಗೂರಿದ್ದಕ್ಕೆ ಒಂದೂವರೆ ಸೇರು ಅಕ್ಕಿ ಕೊಡಬೇಕಾಗಿತ್ತು. ಕೊಡಲಿಯಿಂದ ಬಾರಿದ್ದ ಮದಕಡಿಗೆ ಎರಡೂವರೆ ರೂಪಾಯಿ ಇತ್ತು. ನೇಗಿಲಿನಲ್ಲಿ ಎರಡು ವಿಧ: ನೀರಿನಲ್ಲಿ ಉಳುಮೆ ಮಾಡಲು ಮತ್ತು ನೀರಿಲ್ಲದೆ ಗದ್ದೆ ಉಳುಮೆಗೆ ಬೇರೆ ಬೇರೆ ರೀತಿ ಆಗಬೇಕು. ಎಳ್ಳು ಇತ್ಯಾದಿ ಧಾನ್ಯಗಳನ್ನು ಬಿತ್ತುವಾಗ ಉಳಲು ದೊಡ್ಡ ನೇಗಿಲು ಬೇಕಾಗುತ್ತದೆ. ಅನಂತರ ಅದು ಸವೆದಾಗ ನೀರಿನಲ್ಲಿ ಉಳುಮೆಗೆ ಅನುಕೂಲ ಆಗುತ್ತದೆ. ನೇಗಿಲು ಅತೀ ಚಿಕ್ಕದಾದರೆ ಅದನ್ನು 'ಗುದ್ದಲಂ' ಎಂದು ಕರೆಯುತ್ತಾರೆ. ನೇಗಿಲಿನಲ್ಲಿರುವ ವಿವಿಧ ಭಾಗಗಳೇಂದರೆ, ನೊಗಕ್ಕೆ ನೇಗಿಲನ್ನು ಜೋಡಿಸಲು ನಾಲ್ಕು ಅಥವಾ ಐದು ಅಡಿಗಳಷ್ಟು ಉದ್ದದ ಮರದ ಗಳ ಬೇಕು. ಇದನ್ನು 'ಮನೆ' ಎನ್ನುತ್ತಾರೆ. ಮಣ್ಣಿಗೆ ತಾಗುವಂತೆ ಹಿಡಿಯಲು 'ಪುಡಿಕ್ಕೆ' ಎನ್ನುವ ಭಾಗ. ಇದು ಹಿಡಿ ದಂಟೆಯ ರೀತಿಯಲ್ಲಿ ಕೈಯಿಂದ ಹಿಡಿಯಲು ಅನುಕೂಲವಾಗುತ್ತದೆ. ಭೂಮಿಗೆ ತಾಗುವ ಜಾಗಕ್ಕೆ ಕಬ್ಬಿಣದ ಸಲಾಕೆಯನ್ನು ಕೀಲುಗಳ ಮೂಲಕ ಬಡಿಯುತ್ತಾರೆ. ಇದನ್ನು 'ಪನೊರ್' ಎನ್ನುತ್ತಾರೆ. ಮರದ ಹಾಗೂ ಕಬ್ಬಿಣದ ಕೀಲುಗಳಿಗೆ 'ಪತ್ತ್' ಎನ್ನುತ್ತಾರೆ. ಉಳುವಾಗ ಜಾಗ್ರತೆಯಿಂದ ಇರದಿದ್ದರೆ ಕೋಣಗಳ, ಎತ್ತುಗಳ ಕಾಲಿಗೆ ಕಬ್ಬಿಣದ ಪನೊರ್ ತಾಗುವ ಸಾಧ್ಯತೆ ಇರುತ್ತದೆ. ಮನೆಯಲ್ಲಿ ಹಗ್ಗ ಜಾರದಂತೆ ಕಟ್ಟಲು 'ಮಾಕಲಿ' ಎಂಬ ಹೆಸರಿನ ಚಡಿ ಮಾಡುತ್ತಾರೆ. ನೇಗಿಲಿನ ಹಗ್ಗ ಕಟ್ಟುವುದೂ ತಿಳಿದಿರಬೇಕಾಗುತ್ತದೆ. ನೇಗಿಲಿನ ಮುಂಭಾಗದಲ್ಲಿ ಮನೆ, ಹಿಂಭಾಗದಲ್ಲಿ ಪುಡ್ಕೈ ಒಂದಕ್ಕೊಂದು ಬಲವಾಗಿ ನಿಲ್ಲಲು ಮೂಂಡು ಎನ್ನುವ ಮರದ ತುಂಡನ್ನು ಬಡಿಯಬೇಕಾಗುತ್ತದೆ. ಇಂದು ನೇಗಿಲು ನೋಡಲು ಸಿಗುವುದು ಅಪರೂಪ. ಮೊದಲು ದೀಪಾವಳಿ ಸಮಯದಲ್ಲಿ ನೇಗಿಲುಗಳನ್ನು ತೊಳೆದು ತುಡರ್ ತೋರಿಸಲು ಸಾಲಾಗಿ ಇಡುತ್ತಿದ್ದುದು ತುಳುವರ ಸಂಪ್ರದಾಯ. ಮರದ ಅಭಾವದ ಕಾರಣ ಮತ್ತು ನೇಗಿಲು ಮಾಡುವವರ ಅಭಾವದ ಕಾರಣ ಅನಂತರದ ದಿನಗಳಲ್ಲಿ ಕಬ್ಬಿಣದ ನೇಗಿಲನ್ನು ಉಪಯೋಗಿಸಿದ್ದರು. ಆದರೆ ಮರದ ನೇಗಿಲಿನಂತೆ ಇವು ಒಳಿತಲ್ಲ. ಅಲ್ಲದೆ ಕೋಣಗಳ ಕಾಲಿಗೆ ತಾಗಿ ಗಾಯ ಆಗುವುದೂ ಸಾಮಾನ್ಯ.

**ನೊಗ :** ಗದ್ದೆ ಉಳುಮೆಯ ಸಂದರ್ಭದಲ್ಲಿ ಗಾಣಕ್ಕೆ ಎತ್ತು ಅಥವಾ ಕೋಣಗಳನ್ನು ಕಟ್ಟಿ ಉಳುವಾಗ ಹೆಗಲಿಗೆ ಇಡುವ ಸಾಧನ ನೊಗ. ನೊಗಕ್ಕೆ ನೇಗಿಲನ್ನು ಹಗ್ಗದ ಮೂಲಕ ಕಟ್ಟಿ ಗದ್ದೆ ಉಳುವುದು ಪದ್ಧತಿ. ಸಾಮಾನ್ಯವಾಗಿ ನೊಗವನ್ನು ಹೊನ್ನೆ ಅಥವಾ 'ಸಿರಿ ಹೊನ್ನೆ'ಯ ಮರಗಳಿಂದ ತಯಾರಿಸುತ್ತಾರೆ. ಹೆಗಲಿಗೆ ಇಡುವ ಜಾಗವನ್ನು ಬಟ್ಟಲಿನಾಕಾರವಾಗಿ ಮೃದುವಾಗಿ ಕೆತ್ತಲಾಗುತ್ತದೆ. ಎತ್ತುಗಳ ನೊಗ ಹಾಗೂ ನೇಗಿಲು ರೈತರಿಗೆ ಅತೀ ಪವಿತ್ರವಾದ ಸಾಧನಗಳು. 'ನೊಗ ನೇಗಿಲು ಅಟ್ಟಕ್ಕೆ ಬೀಳಬಾರದು' ಎಂಬ ನಂಬಿಕೆ ತುಳುವರದ್ದು. ಕಂಬಳ ಕೋಣಗಳ ನೊಗ ವಿಶಿಷ್ಟ ಶೈಲಿಯಲ್ಲಿ ಕೆತ್ತಲ್ಪಟ್ಟಿರುತ್ತದೆ. ನೊಗಕ್ಕೂ ನೇಗಿಲಿಗೂ ಕೆತ್ತನೆಯಲ್ಲಿಯೇ ಒಂದು ರೀತಿಯ 'ಪನೆ' ಅಂದರೆ ಸಮತೋಲನ ಇರಬೇಕು. ಇಲ್ಲದಿದ್ದರೆ ಕೋಣಗಳ ಹೆಗಲು ಬಾತುಕೊಳ್ಳುತ್ತದೆ. ಉಳುಮೆಗೆ ತಯಾರಾಗದ ಎಳೆಯ ಕರುಗಳಿಗೆ ಇಡುವ ನೊಗವು ಅತೀ ಚಿಕ್ಕದು. ಉಳುವಾಗ ಎತ್ತುಗಳು, ಕೋಣಗಳು ಓಡಿ, ಬೇರಿಗೊ, ಮರಕ್ಕೊ ತಾಗಿ ನೊಗ ತುಂಡಾದರೆ ಉಳುವವ (ಮನೆಯ ಯಜಮಾನ) ಊಟ ಮಾಡಲಿಕ್ಕಿಲ್ಲ. ಊಟ ಮಾಡಬೇಕಾದರೆ ದೇವಸ್ಥಾನಕ್ಕೆ ಹೋಗಿ ತಪ್ಪುದಂಡ ಕಾಣಿಕೆ ಹಾಕಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನೊಗ ತಯಾರಿಸುವ ಮರದ ಕೆಲಸದವರೂ ಸಿಗುವುದಿಲ್ಲ. ಅಲ್ಲದೆ ಉಳುವ ನೊಗ ನೇಗಿಲುಗಳಿಗೆ ಬೇಡಿಕೆಯೂ ಇಲ್ಲದಾಗಿದೆ. ನೊಗವನ್ನು ಬಿಗಿಯಲು "ನಾಯಿರ್ ಅರ್ಕಲ್" ಎನ್ನುವ ಕಟ್ಟುವ ವಿಧಾನ ಬೇಕಾಗುತ್ತದೆ. ನೊಗದ ಎರಡೂ ಬದಿಗಳಲ್ಲಿ ಎರಡೆರಡು ಕಬ್ಬಿಣದ ಬಗ್ಗಿಸಿದ ಸರಳುಗಳನ್ನು ಬಡಿಯುತ್ತಾರೆ. ಅದನ್ನು 'ಗುಂಡಲ' ಎನ್ನುತ್ತಾರೆ. ಗೊಂಡೆ ಇರುವ ಹುರಿಹಗ್ಗವನ್ನು ಗುಂಡಲದೊಳಗೆ ತುರುಕಿ ಕೋಣಗಳ ಕೊರಳಿಗೆ ಸುತ್ತಿ ನೊಗಕ್ಕೆ ಜೋಡಿಸುವರು. ನೊಗ ಎತ್ತು ಕೋಣಗಳ ಹೆಗಲಲ್ಲಿ ಜಾರುತ್ತಿರಬೇಕು, ಆಡುತ್ತಿರಬೇಕು. ಯುಗಾದಿಯ ದಿನ ಹೊಸ ಕೋಣಗಳಿಗೆ ನೊಗ ಇಡುವುದು ಸಂಪ್ರದಾಯ.

**ಪಡಿಮಂಚ :** ಬತ್ತವನ್ನು ಬಡಿಯುವ ಸಾಧನ. ಆಯತಾಕಾರ, ಚೌಕಾಕಾರವಾಗಿ ಇರುತ್ತದೆ. ನಾಲ್ಕು ಜನ ನಿಂತು ಬಡಿಯುವ ಪಡಿಮಂಚ ಚೌಕಾಕಾರವಿದ್ದರೆ ಆರು ಜನ ಆ ಬದಿ ಈ ಬದಿಯಲ್ಲಿ ನಿಂತು ಬಡಿಯುವ ಪಡಿಮಂಚ ಆಯತಾಕಾರವಿರುತ್ತದೆ. ನೊಗ ನೇಗಿಲಿನಂತೆಯೇ ಪಡಿಮಂಚವೂ ಅತೀ ಪವಿತ್ರ ಸಾಧನ. ಬತ್ತ ಬಡಿಯಲು ಪಡಿಮಂಚ ಅಂಗಳದಲ್ಲಿ ಇಟ್ಟ ಮೇಲೆ ಪಾದರಕ್ಷೆ ಹಾಕಿಕೊಂಡು ಅಂಗಳಕ್ಕೆ ಬರಬಾರದು. ಪಡಿಮಂಚ ಇಟ್ಟ ಮೇಲೆ ಮನೆಯಿಂದ ಬತ್ತ, ಅಕ್ಕಿ ಹೊರಗೆ ಕೊಡಬಾರದು ಎಂಬ ನಂಬಿಕೆ ಸಂಪ್ರದಾಯಗಳಿವೆ. ಪಡಿಮಂಚವನ್ನು ಯಾವುದೇ ಮರದಿಂದ ತಯಾರಿಸಬಹುದು. ತಾಳೆ ಮರ, ತೆಂಗಿನ ಮರದಿಂದಲೂ ಪಡಿಮಂಚ ಮಾಡುತ್ತಾರೆ. ನಾಲ್ಕು ಕಾಲು ಇದ್ದು ಅಡ್ಡಕ್ಕೆ ಬತ್ತ ಬಡಿಯಲು ರೀಪು ಬಡಿಯುತ್ತಾರೆ. ಇದನ್ನೂ ಕಬ್ಬಿಣದ ಆಣಿಗಳ ಸಹಾಯವಿಲ್ಲದೆ ಮರದ ಕೀಲುಗಳ ಮೂಲಕವೇ ತಯಾರಿಸುತ್ತಾರೆ. ಅಂಗಳಕ್ಕೆ ಸೆಗಣಿ ಸಾರಿಸಿದ ಮೇಲೆಯೇ ಪಡಿಮಂಚ ಇಡಬೇಕು. ಯಾರು ಇಡುತ್ತಾರೋ ಬತ್ತ ಬಡಿದಾದ ಮೇಲೆ ಅವರಿಂದಲೇ ತೆಗೆಸಬೇಕು. ತೆಗೆಯುವಾಗ ಅದರ ಕಾಲು ಇದ್ದ ಜಾಗವನ್ನು ಸಮಮಾಡಬೇಕು. ಅದಕ್ಕೆ 'ಪಡಿತ್ತ ಕಾರ್ ಮಾಜಾವುನು' ಎನ್ನುತ್ತಾರೆ. ಬತ್ತ ಬಡಿದು ಬತ್ತದ ರಾಶಿ ಪಡಿಮಂಚಕ್ಕೆ ತಾಗಿದರೆ ಆಗ ಪೊಲಿ ಕರೆಯುವ ಪದ್ಧತಿಯಿದೆ. ಮಂಚದ ನಾಲ್ಕೂ ಮೂಲೆಗಳಿಗೆ ತೆಂಗಿನ ಕಾಯಿಯನ್ನು ಒಡೆಯಬೇಕಾಗುತ್ತದೆ. ಕಾಯಿ ಒಡೆಯುವ ಮೊದಲು ದೇವರನ್ನು ಪ್ರಾರ್ಥಿಸಿ

*ಪೊಲಿ ಪೊಲಿ ಆಜಾಲ ಪೊಲಿ*
*ಈಜಾಲ ಪೊಲಿ ಎಲ್‌ಪತ್ತೇಳ್ ಜಾಲ ಪೊಲಿ*
*ಪಂಚ ಪಾಂಡೇರ್ಕಲೆ ಪೊಲಿ*
*ನಿತ್ಯ ದೇವೆರ್ಕಲೆ ಪೊಲಿ*
*ನಿತ್ಯ ದೇವೆರ್ಕಲೆ ಪೊಲಿ*
*ಅಪ್ಪೆ ಬೆರಿಯೆ ಬಾಲೆಲು ಬನ್ನಂಗೆ ಬರೊಡು*
*ನಿತ್ಯ ದೇವೇರ್ಕ್‌ಲೆ ಪೊಲಿ*
*ಪೆರಡೆದ ಬೆರಿಯೆ ಕಿನ್ನಿಲು ಬನ್ನಂಗೆ ಬರೊಡು*
*ಪೇರ್ ಉರ್ಕರಿನಂಗೆ ಉರ್ಕರೊಡು*
*ಕಡಲ ಸಿರೆ ಮಗ್‌ರ್‌ನಂಗೆ ಮಗುರೊಡು*
*ಬಲಿಪ ಬೀಲೊಡು ಬರೊಡು ಕುದುಕ ಕೊಲಿಡ್*
*ಮದ್ಮಲ್ ಪೊಣ್ಣಗ್ ತರೆ ಬನ್ನಂಗೆ ಬರೊಡು*
*ಕೆರ್ಮಲ್ ಪೊಣ್ಣಗ್ ಮಿರೆ ಬನ್ನಂಗೆ ಬರೊಡು*
*ಎಂಕಲೆ ಜಾಲ್‌ಗೇ ಪೊಲಿಬರೊಡು*

ಎಂದು ಪೊಲಿ ಕರೆ ಕರೆಯುತ್ತಾರೆ.

ಅನಂತರ ತೆಂಗಿನಕಾಯಿ ಒಡೆದು ಅದರ ಹೋಳನ್ನು ಪ್ರಸಾದವಾಗಿ ಕೆಲಸದವರೇ ತಿನ್ನುವುದು ಪದ್ಧತಿ. ಈಗ ಪದ್ಧತಿಯೂ ಇಲ್ಲ, ಪಡಿಮಂಚದ ಅಗತ್ಯವೂ ಇಲ್ಲ. ಯಾಕೆಂದರೆ ಯಂತ್ರದ ಮೂಲಕ ಕೊಯ್ದರೆ ಅಂಗಳಕ್ಕೆ ಬತ್ತದ ಪೈರು ಬರುವುದೇ ಇಲ್ಲ. ಪಡಿಮಂಚ ಇಡುವುದಕ್ಕೆ ತುಳುವರು 'ಆನೆ ದೀಪಿನಿ' ಎನ್ನುವರು. ಬಾರ್ ಆನೆಗ್ ಮುಟ್ಪೊಡು, ಎಂದೇ ಪೊಲ್ಸ್ ಸೂಡಿ ಕಟ್ಟಿ ಮನೆಯ ಮಾಡಿಗೆ ಪೊಲ್ಸ್ ಸೂಡಿ ಬಿಸಾಡಿ ಬಡಿದು ಮುಗಿಯುವವರೆಗೆ ಪಡಿಮಂಚ ಖಾಲಿ ಇಲ್ಲದಂತೆ ಬಡಿಯುತ್ತಾರೆ. ಎಲ್ಲಾ ರೈತರ ಮನೆಗಳಲ್ಲಿ ಪಡಿಮಂಚ ಇರುತ್ತಿತ್ತು.

*ಜಿ.ಎ.ಎಸ್.*

**ತುಳುನಾಡಿನ ದ್ವಿದಳ ಧಾನ್ಯಗಳು** "ಉನ್‌ಲಾತ್ ನುಪ್ಪು ಬೆನ್‌ಲಾತ್ ಬೇಲೆ ಇತ್ತಿ ತುಳುನಾಡ್" (ಉಣ್ಣುವಷ್ಟು ಅನ್ನ ದುಡಿಯುವಷ್ಟು ಕೆಲಸ ಇರುವ ತುಳುನಾಡು) ಎಂಬ ಹೆಗ್ಗಳಿಕೆಗೆ ಪಾತ್ರವಾದ ಕರಾವಳಿ, ಭೌಗೋಳಿಕವಾಗಿ ಪ್ರಾಕೃತಿಕವಾಗಿ ವೈಶಿಷ್ಟವನ್ನು ಹೊಂದಿದೆ. ಬತ್ತ ಇಲ್ಲಿಯ ಪ್ರಮುಖ ಬೆಳೆಯಾದರೂ ಉಪಬೆಳೆಯಾಗಿ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಕರಾವಳಿಯಲ್ಲಿ ಚಾಲ್ತಿಯಲ್ಲಿರುವ ವಾರ್ಷಿಕ ಆವರ್ತನದ ಎಣೆಲು, ಸುಗ್ಗಿ, ಕೊಳಕೆ, ಇಡೆಕೊಳಕೆ ಬೆಳೆಗಳಲ್ಲಿ ಮೂರು ಬೆಳೆಯಲ್ಲೂ ಬತ್ತವನ್ನೇ ಬೆಳೆಯುವವರಿದ್ದಾರೆ. ಅದರೊಂದಿಗೆ ಎಣೆಲು ಬೆಳೆಯಲ್ಲದೆ ಉಳಿದ ಸುಗ್ಗಿ-ಕೊಳಕೆ ಬೆಳೆಗಳಲ್ಲಿ ಪ್ರಮುಖವಾಗಿ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ.

ತುಳುನಾಡಿನಲ್ಲಿ ಬೆಳೆಯುವ ಪ್ರಮುಖ ದ್ವಿದಳ ಧಾನ್ಯಗಳೆಂದರೆ ಹೆಸರು, ಉದ್ದು, ಹುರುಳಿ, ಅವರೆ. ಜೊತೆಗೆ ಎಳ್ಳನ್ನೂ ಬೆಳೆಯುತ್ತಾರೆ. ಸಣ್ಣ ಹಿಡುವಳಿಯ ರೈತರು ವಾಣಿಜ್ಯ ಉದ್ದೇಶದಿಂದ ಇವನ್ನು ಎರಡು ರೀತಿಯಲ್ಲಿ ಬೆಳೆಯಲಾಗುತ್ತದೆ. 1. ಪ್ರಮುಖ ಬೆಳೆ 2. ಉಪಬೆಳೆ.

ಸಾಮಾನ್ಯವಾಗಿ ಬೈಲು ಗದ್ದೆಗಳಲ್ಲಿ ಎರಡನೆಯ ಬೆಳೆಯಾಗಿ ಬೆಳೆಗೆ ದ್ವಿದಳ ಧಾನ್ಯಗಳನ್ನು ಬೆಳೆಯುವುದು ಸಾರ್ವತ್ರಿಕ. ಗದ್ದೆಯನ್ನು ಉಳುವಾಗ ಗದ್ದೆಯ ಬದುವಿಗೆ ಕೆಸರ ಮಣ್ಣನ್ನು ಬದು ಮಣ್ಣಾಗಿ ಎರಡೂ ಕೈಗಳಿಂದ ಎತ್ತಿ ಸವರಲಾಗುತ್ತದೆ. ಹೀಗೆ ನಯವಾಗಿ ಸವರಿದ ಬದುವಿಗೆ ಧಾನ್ಯಗಳನ್ನು ನಿಧಾನವಾಗಿ ಬಿತ್ತಲಾಗುತ್ತದೆ. ಹೀಗೆ ಬಿತ್ತುವುದರೊಂದಿಗೆ ಗದ್ದೆಯ ಬತ್ತದ ನಾಟಿಯನ್ನು ಪೂರ್ಣಗೊಳಿಸಲಾಗುತ್ತದೆ. ಗದ್ದೆ ಹುಣಿಯಲ್ಲಿ ಯಾರೂ ನಡೆದಾಡುವುದಿಲ್ಲ. ಬಿತ್ತಿದ ಧಾನ್ಯಗಳ ಮೊಳಕೆಯೊಡೆದು ಪೈರು ಕಟಾವಿನ ಕಾಲಕ್ಕೆ, ಧಾನ್ಯವೂ ಕಟಾವಿಗೆ ಲಭಿಸುತ್ತದೆ. ಇದೇ ರೀತಿಯಲ್ಲಿ ಬೆಟ್ಟು, ಮಜಲು ಗದ್ದೆಗಳಲ್ಲಿ ಬೆಳೆಯುವ ಬತ್ತದ ಗದ್ದೆಗೆ ಉದ್ದು, ಹುರುಳಿ, ಹೆಸರನ್ನು ಉಪಬೆಳೆಯಾಗಿ ಬೆಳೆಯುತ್ತಾರೆ.

**ಬಿತ್ತನೆಯ ವಿಧ :** ದ್ವಿದಳ ಧಾನ್ಯಗಳ ಬೆಳೆಯಲ್ಲಿ ಒಟ್ಟು ಮೂರು ವಿಧ.

1. ಸುಗ್ಗಿ-ಕೊಳಕೆ ವ್ಯವಸಾಯದಲ್ಲಿ ಉಪಬೆಳೆ ಬಿತ್ತನೆ.

2. ಎಣೆಲು-ಸುಗ್ಗಿ-ಕೊಯಿಲು ಕೊನೆಯ ಹಂತದಲ್ಲಿ ಪೈರಿನೊಂದಿಗೆ ನಡೆಸುವ ಬಿತ್ತನೆ.

3. ಎಣೆಲು-ಸುಗ್ಗಿ ಬೆಳೆಯ ಕೊಯಿಲು ಆದ ಮೇಲೆ ನಡೆಸುವ ಬಿತ್ತನೆ.

**ಮಣ್ಣಿನ ಆಯ್ಕೆ :** ಈ ಮೂರು ವಿಧಾನದಲ್ಲೂ ದ್ವಿದಳ ಧಾನ್ಯಗಳನ್ನು ಬೆಳೆಯಲು ಬೈಲು ಅಥವಾ ಮಜಲುಗದ್ದೆಗಳನ್ನು ಆರಿಸಿಕೊಳ್ಳಲಾಗುತ್ತದೆ. ನೀರು ನಿಲ್ಲುವ ಪಟ್ಲ ಗದ್ದೆಗಳಾಗಲೀ ಬೈಲು ಗದ್ದೆಗಳಾಗಲೀ ಇದಕ್ಕೆ ಯೋಗ್ಯವಾದುವಲ್ಲ. ಹಾಗಾಗಿ ಎಣೆಲು ಬೆಳೆಯ ಬತ್ತದ ಕೊಯ್ಲು ಮುಗಿದ ಮೇಲೆ, ನೀರು ನಿಲ್ಲುವ ಬೈಲು ಗದ್ದೆ ಹಾಗೂ ಹುಡಿಮಣ್ಣಿನಿಂದ ಕೂಡಿದ್ದು ಸ್ವಲ್ಪ ತೇವಾಂಶದ ಮಣ್ಣು ಇರುವ ಮಜಲು ಗದ್ದೆಗಳನ್ನು ಬಿತ್ತನೆಗೆ ಆಯ್ದುಕೊಳ್ಳಲಾಗುತ್ತದೆ. ಕೊಳಕೆ ಬಿತ್ತನೆಗಾದರೂ ಸುಗ್ಗಿಯ ಬತ್ತದ ಕೊಯ್ಲು ಮುಗಿದ ಗದ್ದೆಗಳಲ್ಲಿ ನೀರಿದ ತೇವಾಂಶವಿರುವುದರಿಂದ ಅಂತಹ ಗದ್ದೆಗಳ ಬತ್ತದ ಕೊಯ್ಲು ಆದ ಮೇಲೂ ದ್ವಿದಳ ಧಾನ್ಯಗಳನ್ನು ಬಿತ್ತಲಾಗುತ್ತದೆ. ಗದ್ದೆಯನ್ನು ನೀರು ಹಾಯಿಸದೆ ಹುಡಿಮಣ್ಣಿಗೆ ಉಳುಮೆ ಮಾಡಿ ಮಣ್ಣನ್ನು ಹದಗೊಳಿಸಲಾಗುತ್ತದೆ. ಗದ್ದೆಯ ಆಯ್ಕೆ ಸಂದರ್ಭದಲ್ಲಿ ನೀರು ನಿಲ್ಲುವ ಗದ್ದೆಗಳಿಗೆ ಬಿತ್ತನೆಯಾಗಬಾರದೆನ್ನುವ ಎಚ್ಚರವಿದೆ. ಹಾಗೆ ಬಿತ್ತಿದರೆ ಧಾನ್ಯಗಳು ಕೊಳೆತು ಹೋಗುತ್ತವೆಂಬ ಸಾಮಾನ್ಯ ಜ್ಞಾನ ತುಳುವರದ್ದು. ಸಾಮಾನ್ಯವಾಗಿ ಕೊಳಕೆ ಬೆಳೆಗಳನ್ನು ನೀರು ಹಾಯಿಸಿ ಮಾಡಲಾಗುತ್ತದೆ. ಕೆರೆ ಇಲ್ಲವೇ ಬಾವಿಯ ನೀರನ್ನು ಮನೆ ಸಮೀಪದ ಮಜಲು ಮತ್ತು ಬೆಟ್ಟು ಗದ್ದೆಗಳಿಗೆ ಹಾಯಿಸಿ ಮಾಡುವುದರಿಂದ ಉರಿವ ಬೇಸಗೆಯ ಬಿಸಿಲಿನಲ್ಲಿ ನೀರಾವರಿ ಬಗೆಗೆ ಜಾಗ್ರತೆ ವಹಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಬೆಳೆವ ದ್ವಿದಳ ಧಾನ್ಯಗಳ ಬಗೆಗೂ ಅಂತಹ ಸಾಮಾನ್ಯ ಎಚ್ಚರ ಇಲ್ಲದೆ ಹೋದರೆ ಜನಪದರು ಹೇಳುವ "ಎಣೆಲು ಸೂಳೆ, ಸುಗ್ಗಿ ಮದಿಮಾಳ್, ಕೊಳಕೆ ಪೆದ್‌ಮೆದಿ" ಎಂಬ ಗಾದೆ ಮಾತು ಹುಟ್ಟುತ್ತಿರಲಿಲ್ಲ. ಒಟ್ಟಿನಲ್ಲಿ ಬರಡಾಗಿ ಶುಷ್ಕವಿರದ ಮಣ್ಣಿಗಿಂತ ತೇವಾಂಶವಿರುವ ಗದ್ದೆಗಳು ದ್ವಿದಳ ಧಾನ್ಯಗಳನ್ನು ಬೆಳೆಯುವುದಕ್ಕೆ ಯೋಗ್ಯವಾದವುಗಳು.

ಆಯ್ಕೆ ಮಾಡಿಕೊಂಡ ಗದ್ದೆಗಳಿಗೆ ಬಿತ್ತನೆಯನ್ನು ಮೂರು ವಿಧದಲ್ಲಿ ನಡೆಸಲಾಗುತ್ತದೆ.

1. ಕನ್ಯಾ-ಬೊಂತೆಲ್ ತಿಂಗಳಲ್ಲಿ (ಅಕ್ಟೋಬರ್) ಎಣೆಲು ಬತ್ತದ ಬೆಳೆಯ ಕೊಯ್ಲು ಮುಗಿದು ಸುಗ್ಗಿ ಬತ್ತದ ನಾಟಿ ಮಾಡುವಾಗ ಉಪ ಬೆಳೆಯಾಗಿ ಬಿತ್ತನೆ ಮಾಡಲಾಗುತ್ತದೆ. ಇದಲ್ಲದೆ ಸುಗ್ಗಿ ಬೆಳೆಯ ಕೊಯ್ಲು (ಡಿಸೆಂಬರ್-ಜನವರಿ) (ಪುಯಿಂತೆಲ್-ಮಾಯಿ) ಮುಗಿದು ಕೊಳಕೆ ಬೆಳೆಯ ನಾಟಿ ಮಾಡುವಾಗಲೂ ಉಪಬೆಳೆಯಾಗಿ ಬೆಳೆಯಲಾಗುತ್ತದೆ. ಹೀಗೆ ಉಪಬೆಳೆಯಾಗಿ ಆಯ್ಕೆ ಮಾಡಿಕೊಳ್ಳುವಾಗ ಗದ್ದೆಯ ನಾಲ್ಕು ಬದುಗಳನ್ನೂ ಸವರಿ, ಹುಲ್ಲನ್ನು ಸ್ವಚ್ಛ ಮಾಡಲಾಗುತ್ತದೆ. ಉಳುಮೆ ಮಾಡುವ ಕೊನೆಯ ಹಂತದಲ್ಲಿ ಗದ್ದೆಯ ಹಲಗೆ ಹಾಕುವ ಪೂರ್ವದಲ್ಲಿ ಕೆಸರು ಮಣ್ಣನ್ನು ಸವರಿದ ಬದುಗಳಿಗೆ ಎರಡೂ ಕೈಗಳಿಂದ ಎತ್ತಿ ನಾಜೂಕಾಗಿ ಪೇರಿಸಲಾಗುತ್ತದೆ.

2. ಪ್ರಾಕೃತಿಕ ಸಹಜ ಬೆಳೆಯಾಗಿ ಬಿತ್ತನೆ ಮಾಡುವ ಜಾಣ್ಮೆ ತುಳುವರಲ್ಲಿದೆ. ಎಣೆಲು ಅಥವಾ ಸುಗ್ಗಿಯ ಪೈರು ಕಟಾವಿಗೆ ಸನ್ನದ್ಧವಾಗಿರುವಾಗ ಕಟಾವಿನ ಒಂದು ವಾರದ ಪೂರ್ವದಲ್ಲಿ ಪೈರಿನ ಮೇಲೆಯೇ ದ್ವಿದಳ ಧಾನ್ಯಗಳನ್ನು ಜಾಗರೂಕತೆಯಿಂದ ಬಿತ್ತಲಾಗುತ್ತದೆ. ಪೈರಿನ ಕೊಯಿಲಿಗೆ ಗದ್ದೆಯ ನೀರನ್ನು ಹೊರಗೆ ಹರಿದು ಬಿಡುವುದರಿಂದ ತಳದಲ್ಲಿ ನೀರು ನಿಲ್ಲುವುದಿಲ್ಲ. ಒಂದು ವಾರದ ಬಳಿಕ ಬತ್ತದ ಪೈರು ಕಟಾವಿಗೆ ಸಿದ್ಧವಾಗುವಾಗ ದ್ವಿಧಾನ್ಯಗಳ ಬೇರು ಬಿಟ್ಟು ಚಿಗುರು ಮೇಲೆ ಬಂದಿರುತ್ತದೆ. ಕಟಾವಿನ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಸೂಕ್ಷ್ಮವಾಗಿ

ಗಮನಿಸುತ್ತಲೇ ಎಚ್ಚರಿಕೆಯ ಹೆಜ್ಜೆಳನ್ನಿಡುತ್ತಾ ಪೈರನ್ನು ಕಟಾವುಗೊಳಿಸುತ್ತಾರೆ. ಪೈರಿನ ಕೊಯಿಲಿನ ಅನಂತರ ಈ ಬೆಳೆಯು ಸಹಜವಾಗಿಯೇ ಬೆಳೆದು ನಿಲ್ಲುತ್ತದೆ.

3. ಎಣೆಲು-ಸುಗ್ಗಿ ಬೆಳೆಯ ಪೈರಿನ ಕಟಾವನ್ನು ಮಾಡಿಯಾದ ಮೇಲೆ ಸಾಂಪ್ರದಾಯಿಕವಾಗಿ ಗದ್ದೆಯನ್ನು ಉಳುಮೆ ಮಾಡಲಾಗುತ್ತದೆ. ನೀರಿನ ತೇವಾಂಶವಿರುವ ಹುಡಿ ಮಣ್ಣಿನ ಉಳುಮೆಯನ್ನು ಎರಡು ಇಲ್ಲವೇ ಮೂರು ಸುತ್ತು ನಡೆಸಿ ಆಮೇಲೆ ದ್ವಿದಳ ಧಾನ್ಯಗಳನ್ನು ಬಿತ್ತನೆ ಮಾಡಲಾಗುತ್ತದೆ. ಸುಗ್ಗಿಯಲ್ಲಿ ಬೆಳೆಯುವ ದ್ವಿದಳ ಧಾನ್ಯಗಳು ಬೈಲು ಮತ್ತು ಮಜಲುಗಳಲ್ಲಾದರೆ ಕೊಳಕೆ ಬೆಳೆಯಾಗಿ ಬೆಳೆಯುವ ಧಾನ್ಯಗಳು ಮಜಲು ಮತ್ತು ಬೆಟ್ಟು ಗದ್ದೆಗಳು ಆಗಿರುತ್ತವೆ.

ಈ ದ್ವಿದಳ ಧಾನ್ಯಗಳ ತಳಿಗಳಲ್ಲಿ ವೈವಿಧ್ಯವಿದೆ.

1. ಉದ್ದು-ಕರಿ ಉದ್ದು, ಬಿಳಿ ಉದ್ದು, ಕೃಷ್ಣಾ, ಉಪ್ರ.

2. ಹೆಸರು-ಪಚ್ಚೆ ಹೆಸರು, ಕಪ್ಪು ಹೆಸರು, ಮಿಂಚ ಹೆಸರು, ಉತಾಳಿ ಹೆಸರು, ಚೀನಾ ಮುಗ್ನ, ಜವಹಾರ್.

3. ಹುರುಳಿ-ಕೆಂಪು ಹುರುಳಿ, ಕರಿಹುರುಳಿ.

4. ಎಳ್ಳು-ಕರಿ ಎಳ್ಳು, ಬಿಳಿ ಎಳ್ಳು, ಮರ ಎಳ್ಳು, ಪುಟ್ಟ ಎಳ್ಳು.

ದ್ವಿದಳ ಧಾನ್ಯಗಳಾದ ಉದ್ದು, ಹುರುಳಿ, ಹೆಸರು, ಎಳ್ಳುವಿನ ಬೀಜಗಳ ಆಯ್ಕೆ ಹಾಗೂ ಸಂಸ್ಕರಣೆಯಲ್ಲಿ ಮಹಿಳೆಯರ ಮುತುವರ್ಜಿ ಹೆಚ್ಚಿನದು. ಒಡೆದಿರದ, ಮುಕ್ಕಾಗಿರದ ದಪ್ಪನೆಯ ಕಾಳುಗಳನ್ನು ಆಯ್ದುಕೊಂಡು, ಗಾಳಿಗೆ ತೂರಿ, ಕೇರಿ ಚೆನ್ನಾಗಿರುವ ಕಾಳುಗಳನ್ನೇ ವಿಂಗಡಿಸಿಕೊಳ್ಳುತ್ತಾರೆ. ಇವುಗಳಿಗೂ ಕ್ರಿಮಿ ಕೀಟಗಳು ಬಾಧಿಸದಂತೆ ಕ್ರಿಮಿ ನಿರೋಧಕ ಗುಣವಿರುವ ವಿವಿಧ ಬಗೆಯ ಸೊಪ್ಪುಗಳನ್ನು ಸೇರಿಸುತ್ತಾರೆ. ಬೀಜ ಸಂಸ್ಕರಣೆಗೆ ಬೂದಿ ಕೆಮ್ಮಣ್ಣುಗಳನ್ನು ಬಳಸುತ್ತಾರೆ.

**ಬೀಜ ಸಂಗ್ರಹಣೆ :** ಹೀಗೆ ಸಿದ್ಧಗೊಳಿಸಿದ ದ್ವಿದಳ ಧಾನ್ಯಗಳನ್ನು, ಮಣ್ಣಿನ ಭಾರಣೆ, ಗಡಿಗೆ, ಪಾತ್ರೆ, ಬೈಹುಲ್ಲಿನಿಂದ ಕಟ್ಟಿದ ಮುಡಿಗಳಲ್ಲದೇ ಗಾಳಿ ಸೇರದಂತೆ ಗೋಣಿ ಚೀಲದಲ್ಲೂ ಭದ್ರವಾಗಿ ಕಟ್ಟಿಡುತ್ತಿದ್ದರು. ಜನಪದರು ತಾವು ಬೆಳೆದ ತರಕಾರಿಗಳಾದ ಸೋರೆಕಾಯಿ, ಕುಂಬಳಕಾಯಿಗಳನ್ನು ಬುರುಡೆಗಳನ್ನಾಗಿ ಬಳಸಿಕೊಂಡು ಧಾನ್ಯವನ್ನು ಶೇಖರಿಸುತ್ತಿದ್ದರು. ಕಾಯಿಗಳ ಒಳತಿರುಳನ್ನು ತೆಗೆದು ಒಣಗಿಸಿ, ಬೂದಿ ಹಾಕಿ ಸ್ವಚ್ಛಗೊಳಿಸಿ, ಬೀಜ ಸಂಸ್ಕರಣೆಯ ಧಾನ್ಯ ತುಂಬಿ ಹೊಗೆ ಹೋಗುವ ಸ್ಥಳದಲ್ಲಿ ತೂಗು ಹಾಕುತ್ತಿದ್ದರು. ಈ ಧಾನ್ಯಗಳ ಬಿತ್ತನೆ ಬೀಜಗಳನ್ನು ಅಗತ್ಯಕ್ಕಿಂತ ಹೆಚ್ಚು ಜೋಪಾನ ಮಾಡಿಟ್ಟುಕೊಳ್ಳುವುದು ಮಹಿಳೆಯರ ಮುಂಜಾಗ್ರತೆಗೆ ಸಾಕ್ಷಿ. ಬಿತ್ತನೆಗೆ ಬಳಸಿ ಮಿಕ್ಕಿದರೆ ಮನೆಯ ಅಡುಗೆಗೂ ಬಳಸಿಕೊಳ್ಳುತ್ತಾರೆ ಅಥವಾ ನೆರೆಹೊರೆಯವರಿಗೆ ಕೊರತೆ ಇದ್ದಲ್ಲಿ ಕೊಟ್ಟು ಸಹಕರಿಸುತ್ತಾರೆ. ಬಿತ್ತನೆ ಬೀಜಗಳನ್ನು ಮಾರಾಟಕ್ಕಾಗಿಯೂ ಸಂಸ್ಕರಣೆ ಮಾಡುವುದಿದೆ.

ದ್ವಿದಳ ಧಾನ್ಯದ ಬೀಜಗಳಿಗೆ ಬೇವಿನಬೀಜದರಸ ಮತ್ತು ಗಂಜಳವನ್ನು ಚಿಮುಕಿಸಿ ಮಿಶ್ರ ಮಾಡಿ ನೆರಳಲ್ಲಿ ಒಣಗಿಸಿದರೆ ಬಿತ್ತನೆ ಮೊಳಕೆಯ ಹಂತದಲ್ಲಿ ಕೊಳೆಯುವುದಿಲ್ಲ. ಇರುವೆ ಅಥವಾ ಹುಳುಗಳ ಕಾಟವೂ ತಪ್ಪುತ್ತದೆ.

ದ್ವಿದಳ ಧಾನ್ಯಗಳಿಗೆ ಬಿತ್ತನೆಯ ಕ್ರಮ ಚಾಲ್ತಿಯಲ್ಲಿದೆಯೇ ಹೊರತು ನಾಟಿಯ ಕ್ರಮ ಚಾಲ್ತಿಯಲ್ಲಿಲ್ಲ. ಮೊದಲ ಬೆಳೆಯ ಧಾನ್ಯವನ್ನು ಬೀಜವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. 'ಬೀಜ'ವಾಗುವ ಧಾನ್ಯವನ್ನು ಚೆನ್ನಾಗಿ ಒಣಗಿಸಿ ತಣಿದ ಒಲೆಯ ಬೂದಿಯೊಂದಿಗೆ ಬೆರೆಸಿ ಬೈ ಹುಲ್ಲಿನೊಂದಿಗೆ 'ಮುಡಿ'ಯಾಗಿ ಕಟ್ಟಿ ತೆಳುವಾಗಿ ಸೆಗಣಿಯನ್ನು ಸಾರಿಸಲಾಗುತ್ತದೆ. ಬೀಜೋಪಚಾರ ಮತ್ತು ಬೀಜ ಸಂಗ್ರಹಣೆಯು ಜತೆಯಾಗಿ ನಡೆಯುತ್ತದೆ. ಈ ವರ್ಷದಲ್ಲಿ ಸಂಗ್ರಹಿಸಿದ ದ್ವಿದಳ ಧಾನ್ಯವು ಮುಂದಿನ ವರ್ಷದ ಬೇಸಾಯಕ್ಕೆ ಬಳಕೆಯಾಗುತ್ತದೆ.

ದ್ವಿದಳ ಧಾನ್ಯಗಳಿಗೆ ನೀರಾವರಿಯಾಗಿ ನೀರನ್ನು ಹಾಯಿಸುವ ಕ್ರಮವಿಲ್ಲ. ಬಿತ್ತನೆಯ ಪೂರ್ವದಲ್ಲಿಯೇ ಗದ್ದೆಗೆ ನೀರನ್ನು ಹಾಯಿಸಿ ಮಣ್ಣಿನಲ್ಲಿ ತೇವಾಂಶವಿರುವಂತೆ ನೋಡಿಕೊಳ್ಳಲಾಗುವುದು. ಹಿಂಗಾರಿನಲ್ಲಿ ಬೀಳುವ ಒಂದೆರಡು ಮಳೆಗಳೇ ಸಾಕು. ಈ ಧಾನ್ಯಗಳಿಗೆ ಚಳಿಗಾಲದಲ್ಲಿ ಬೀಳುವ ಇಬ್ಬನಿ ನೀರಾವರಿಯ ಜವಾಬ್ದಾರಿಯನ್ನು ವಹಿಸಿಬಿಡುತ್ತದೆ.

ದ್ವಿದಳ ಧಾನ್ಯಗಳಿಗೆ ಹಟ್ಟಿ ಗೊಬ್ಬರವನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಬತ್ತದ ಬೆಳೆಯನ್ನು ಬೆಳೆಗೆ ಗೊಬ್ಬರ ಮತ್ತು ಬೂದಿ ಬಳಸುವುದು ಸಾಮಾನ್ಯ. ಮಣ್ಣಿನ ಸಾರಕ್ಕಾಗಿ ಬಳಸುವ ಸಾರಜನಕ-ರಂಜಕಗಳು ಉಳುಮೆಯಾಗಿ ನಾಟಿಯಾದ ಸಂದರ್ಭದಲ್ಲಿ ಬಳಸಿದರೆ ಅದೇ ಸರ್ವಸ್ವ. ಉಳಿದಂತೆ ದ್ವಿದಳ ಧಾನ್ಯಗಳಿಗಾಗಿಯೇ ಗೊಬ್ಬರ ಹೊತ್ತು ಉತ್ತು ಬೆಳೆಸುವ ಪ್ರಮೇಯಗಳಿಲ್ಲ.

**ಕಳೆ ನಿರ್ವಹಣೆ :** ದ್ವಿದಳ ಧಾನ್ಯದ ಗದ್ದೆಗಳಲ್ಲಿ ಸಾಮಾನ್ಯವಾಗಿ ಹುಲ್ಲು, ಕಂರ್ಡೆ, ಗರ್ಗೆ, ಸುಗ್ಗಿ ಗೊಡ್ಡು, ಪೊನ್ನೊಲು, ಚಗಟೆ, ತುಂಬೆಗಿಡ, ಕುಂರ್ಬಿಲ್, ಗಂಟು ಹುಲ್ಲು, ಸಹದೇವಿ ಇತ್ಯಾದಿ ಕಳೆಗಿಡಗಳಿರುತ್ತದೆ. ಧಾನ್ಯದ ಗದ್ದೆಗಳ ಕಳೆ ಕೀಳುವ ಕೆಲಸ ಕರಾವಳಿಯಲ್ಲಿಲ್ಲ. ಬತ್ತದ ಗದ್ದೆಯ ಕಳೆ ನಿರ್ವಹಣೆಯ ಸಂದರ್ಭದಲ್ಲಿಯೇ ಇದನ್ನು ಸ್ವಚ್ಛಗೊಳಿಸಲಾಗುವುದು. ಧಾನ್ಯದ ಗಿಡಗಳು ಬಲಿತು ಧಾನ್ಯಗಳನ್ನು ಕೀಳುವಾಗ ಜತೆಯಾಗಿಯೇ ಕಳೆಯನ್ನು ಕೀಳಲಾಗುತ್ತದೆ. ಮೇವಾಗಿ ಬಳಸುವ ಗಿಡಗಳನ್ನು ಧಾನ್ಯದ ಗಿಡಗಳೊಂದಿಗೆ ಸೇರಿಸುತ್ತ ಉಳಿದುದನ್ನು ಕಿತ್ತು ಎಸೆಯಲಾಗುತ್ತದೆ. ಒಣಗಿದ ಕಳೆ ಮತ್ತೆ ಗದ್ದೆಯಲ್ಲಿ ಗೊಬ್ಬರವಾಗಿ ಮರುಪೂರೈಕೆಯಾಗುತ್ತದೆ.

**ರೋಗಗಳು :**

**ಹುರುಳಿ :** ಬೆಂಕಿ ರೋಗ, ಕೀಟಗಳು ಬರುತ್ತವೆ. ಎಲೆ ತಿನ್ನುವ ಹುಳುಗಳು ಕಾಣಿಸಿಕೊಂಡಾಗ ಬೂದಿಯನ್ನು ಮುಂಜಾನೆ ಸಿಂಪಡಿಸುತ್ತಾರೆ.

**ಉದ್ದು :** ಉದ್ದಿಗೆ ನೊಣ, ಹೇನು, ಕೀಟ, ನಂಜುರೋಗ ಬರುತ್ತದೆ. ಇವುಗಳ ನಿವಾರಣೆಗಾಗಿ ಬೆಳೆಯನ್ನು ಬಿತ್ತುವಾಗಲೇ ಬೂದಿ ಮತ್ತು ಗಂಜಳದೊಂದಿಗೆ ಬೆರೆಸಿ ಬಿತ್ತುತ್ತಾರೆ. ಕೆಲವು ಕಡೆಗಳಲ್ಲಿ ಯಾವುದೇ ರೋಗ ಬರದಿರಲೆಂದು ಎಣ್ಣೆಯನ್ನು ಪೌಡರನ್ನು ಸಿಂಪಡಿಸುತ್ತಾರೆ.

**ಹೆಸರು :** ಬೂದಿ ರೋಗ, ಎಲೆ ಮುಚ್ಚುವ ರೋಗ ಹಾಗೂ ಹೇನು ಕೀಟ ಕಾಣಿಸಿಕೊಳ್ಳುತ್ತದೆ. ಹೆಸರು ಬೆಳೆಗೆ ತುಳುವಿನಲ್ಲಿ ಪೇರ್ ಪದೆಂಗಿ ಎನ್ನುತ್ತಾರೆ.

ಎಳ್ಳು : ಎಳ್ಳಿನ ಬೆಳೆಗೆ ಮುಖ್ಯವಾಗಿ ಫಕ್ಕನ ಹುಳುಗಳು ಹತ್ತುತ್ತವೆ. ಅಲ್ಲದೇ ನೊಣ, ಹೇನು, ನಂಜುರೋಗ, ಬೂದಿರೋಗ, ಎಲೆಯ ಮೇಲೆ

ಕಪ್ಪಾಗಾದ ಚುಕ್ಕಿಗಳು ಮೂಡುತ್ತವೆ. ಜುಟ್ಟು ರೋಗ ಬರುತ್ತದೆ. ಬೆಳೆ ಸಮಯ ಮೀರಿ ಬೆಳೆದಾಗ ಈ ರೋಗ ಬರುತ್ತದೆ. ಇದಕ್ಕೆ ಔಷಧಿ ಇಲ್ಲ. ಕೃತಿಕ ಮಳೆ ಒಳಗೆ ಬಿತ್ತನೆಯಾಗಬೇಕು. ಇಲ್ಲದಿದ್ದರೆ ಕೆಂಪಗೆ ಗುಲಗಂಜಿಯಂತಹ ಹುಳ ಹತ್ತುತ್ತದೆ. ಅದರಿಂದ ಬೆಳೆಗೆ ಯಾವ ಹಾನಿಯೂ ಇಲ್ಲ. ಹಾಗಾಗಿ ಎಳ್ಳಿಗೆ ಯಾವ ಔಷಧಿಯನ್ನೂ ಸಿಂಪಡಿಸುವುದಿಲ್ಲ.

ಮುಂಜಾನೆ ಧಾನ್ಯದ ಗದ್ದೆಗೆ ಬೂದಿಯನ್ನು ಎರಚಿ ರೋಗಗಳನ್ನು ನಿಯಂತ್ರಿಸುತ್ತಾರೆ. ರಾಸಾಯನಿಕಗಳಾಗಿ ಕೀಟನಾಶಕಗಳನ್ನು ಸಿಂಪಡಿಸಲಾಗುವುದಿಲ್ಲ. ಬದಲಾಗಿ ಗದ್ದೆಗೆ ಬೀಳುವ ಹಕ್ಕಿ, ಹಾತೆ, ಕೀಟಗಳಿಗಾಗಿ ಧಾನ್ಯದ ಗದ್ದೆಗಳಲ್ಲಿ ಬೆದರು ಬೊಂಬೆಗಳನ್ನು ನಿಲ್ಲಿಸಲಾಗುತ್ತದೆ. ಅಲ್ಲದೆ ಪ್ಲಾಸ್ಟಿಕ ಬ್ಯಾಗನ್ನು ಕೋಲುಗಳಿಗೆ ಸಿಕ್ಕಿಸಿ, ಬೀಸುವ ಗಾಳಿಗೆ ಪ್ಲಾಸ್ಟಿಕ್ ಮಾಡುವ ಸದ್ದಿಗೆ ಪಕ್ಷಿಗಳು ಹೆದರಿ ಓಡುತ್ತದೆ. ಹೀಗೆ ಕಟ್ಟಿದ ಪ್ಲಾಸ್ಟಿಕ್ ಮಣ್ಣಿನಡಿಗೆ ಸೇರಿ ಹೋಗದ ಎಚ್ಚರವನ್ನು ಕೃಷಿಕರು ವಹಿಸುತ್ತಾರೆ.

ಧಾನ್ಯಗಳಲ್ಲಿ ಹೂವರಳಿ ಪರಾಗಸ್ಪರ್ಶ ಹೊಂದಿ, ಧಾನ್ಯದ ಕೋಡುಗಳು ಬೆಳೆದು ಬಲಿತು, ಗಿಡದ ಎಲೆಗಳು ನಸು ಹಳದಿ ಬಣ್ಣಕ್ಕೆ ತಿರುಗಿದಾಗ ಕಟಾವಿಗೆ ಸಿದ್ಧವಾಗಿವೆ ಎಂದು ಅರ್ಥ. ಗಿಡದ ಅಡಿಯಲ್ಲಿರುವ ಕೋಡು ಬಲಿತು, ತುದಿಯಲ್ಲಿರುವ ಚಿಕ್ಕ ಪುಟ್ಟ ಕೋಡು ಸ್ವಲ್ಪ ಬಲಿಯದಿದ್ದರೂ ಅವುಗಳನ್ನು ಹಸಿಯಿರುವಾಗಲೇ ಕೀಳುವುದರಿಂದ ಒಂದು ಅಥವಾ ಎರಡು ದಿನ ಗದ್ದೆಯಲ್ಲಿ ಒಣಗಲು ಬಿಡಲಾಗುತ್ತದೆ. ಹೀಗೆ ಒಣಗಿದ ಧಾನ್ಯದ ಗಿಡಗಳನ್ನು ತೆಂಗಿನ ಸೋಗೆ ಹಸಿಯಿರುವಾಗಲೇ ಕಡಿದು ಹೆಣೆದು ಮಾಡಿದ ಕುರ್ಕಿಲ್‌ಗಳಲ್ಲಿ ತುಂಬಿ ಮನೆಯಂಗಳಕ್ಕೆ ತಂದು, ವಿಶಾಲವಾಗಿ ಹರಡಲಾಗುತ್ತದೆ. ಅಂಗಳದಲ್ಲಿಯೂ ಒಂದು ದಿನ ಒಣಹಾಕಿ ಮರುದಿನ ಆ ರಾಶಿಯನ್ನು ವೃತ್ತಾಕಾರವಾಗಿಸಿ ಇಬ್ಬರಿಗಿಂತ ಹೆಚ್ಚು ಮಹಿಳೆಯರು ಬೈಹುಲ್ಲು ಬಡಿಯುವಂತೆ ಬಡಿದು ಧಾನ್ಯವನ್ನು ಕೋಡಿನಿಂದ ಬೇರ್ಪಡಿಸುತ್ತಾರೆ. ಕೆಲವು ಕಡೆಗಳಲ್ಲಿ ತೆಂಗಿನ ಮರದ ಸೋಗೆಯ ಬುಡವನ್ನು ತಿರುವು ಮುರುವಾಗಿ ಹಿಡಿದು ಅಗಲವಾದ ಭಾಗದಿಂದ ಧಾನ್ಯಕ್ಕೆ ಏಟು ಬೀಳುವಂತೆ ಬಡಿಯುತ್ತಾರೆ. ಹೀಗೆ ಮಾಡಿದಾಗ ಧಾನ್ಯಗಳು ತಳದಲ್ಲಿ ನಿಂತು ಮೇಲ್ಭಾಗದಲಿ ಧಾನ್ಯದ ದಂಟು ಬರುತ್ತದೆ. ಅದನ್ನು ದನಗಳಿಗೆ ಮೇವಾಗಿ ಬಳಸುತ್ತಾರೆ. ತಳದಲ್ಲಿ ಉಳಿದ ಧಾನ್ಯವನ್ನು ಸ್ವಚ್ಛಗೊಳಿಸುವ ಕೆಲಸ ಮಹಿಳೆಯರದು. ಧಾನ್ಯದ ಒಕ್ಕಣೆಯನ್ನು ಮೊದಲಿಗೆ ಗೆರಸೆಯಲ್ಲಿ ಹಿಡಿದು ಗಾಳಿಗೆ ತೂರುತ್ತಾರೆ. ಒಬ್ಬರು ಗೆರಸೆಯಿಂದ ಧಾನ್ಯವನ್ನು ಗಾಳಿ ಬರುವ ದಿಕ್ಕಿಗೆ ನಿಧಾನವಾಗಿ ಸುರಿದರೆ ಇನ್ನೊಬ್ಬರು ಹಿಂದಿನಿಂದ ತೆಂಗಿನಮರದ ಹೆಣೆಗೆ ಸೋಗೆಯಿಂದ ಗಾಳಿ ಹಾಕುತ್ತಾರೆ. ಧಾನ್ಯದಲ್ಲಿರುವ ಜಳ್ಳು, ಕಸ ತೂರಿಯಾದ ಮೇಲೆ ಗಟ್ಟಿ ಕಾಳುಗಳು ಉಳಿಯುತ್ತದೆ. ಹೀಗೆ ಸಂಗ್ರಹಣೆಗೊಂಡ ಧಾನ್ಯಗಳಲ್ಲಿ ಗದ್ದೆ ಮಣ್ಣಿನ ಹೆಂಟೆ, ಸಣ್ಣ ಪುಟ್ಟ ಕಲ್ಲುಗಳು ಇರುತ್ತದೆ. ಅದಕ್ಕಾಗಿ ಧಾನ್ಯವನ್ನು ಗೆರಸೆಯಲ್ಲಿ ಗೇರುತ್ತಾರೆ. ಗೇರುವಾಗ ಕಲ್ಲುಗಳೆಲ್ಲಾ ಒಂದೆಡೆ ಉಳಿದು ಒಳ್ಳೆಯ ಧಾನ್ಯ ಸಂಗ್ರಹಗೊಳ್ಳುತ್ತದೆ. ಹೀಗೆ ಸಂಗ್ರಹಿತವಾದ ಧಾನ್ಯದಿಂದಲೇ ಬೀಜ ಸಂಗ್ರಹಣೆ ನಡೆಯುತ್ತದೆ. ಉಳಿದಂತೆ ಮನೆ ಬಳಕೆಗೆ ಅಗತ್ಯವಿದ್ದಷ್ಟು ತೆಗೆದಿಟ್ಟು ಉಳಿದದ್ದನ್ನು ಮಾರುಕಟ್ಟೆಗೆ ವಿಲೇವಾರಿ ಮಾಡಲಾಗುತ್ತದೆ.

*ಜೆ.ಸಿ.*

**ತುಳುನಾಡಿನ ಬತ್ತದ ಕೃಷಿ-ವಾರ್ಷಿಕಾವರ್ತನ** ಹಚ್ಚ ಹಸುರಿನ ದಟ್ಟ ಕಾಡುಗಳಿರುವ ಪಶ್ಚಿಮ ಘಟ್ಟಗಳ ಎತ್ತರದ ಸಾಲು ಮತ್ತು ನಿರಂತರ ಭೋರ್ಗರೆಯುವ ಪಶ್ಚಿಮದ ಕಡಲು ಇವೆರಡರ ನಡುವಿನಲ್ಲಿರುವ ತುಳುನಾಡು ಉಷ್ಣವಲಯದಲ್ಲಿದ್ದು 12 ಡಿಗ್ರಿ ಉತ್ತರ ಅಕ್ಷಾಂಶದಿಂದ 13.5 ಡಿಗ್ರಿ ಉತ್ತರ ಅಕ್ಷಾಂಶದವರೆಗೆ ಹಬ್ಬಿಕೊಂಡಿದೆ. ಎತ್ತರದ ಬೆಟ್ಟ - ಗುಡ್ಡ, ಆಳದ ಕಣಿವೆ, ಕಾವು ನಿಂತ ಕಡಲು, ಜೀವ ನೀಡುವ ನದಿ - ಬಯಲು ಇವೆಲ್ಲವೂ ಈ ನಾಡನ್ನು ಚೆಂದಗಾಣಿಸಿವೆ, ಇಲ್ಲಿಯ ಜನಜೀವನಕ್ಕೆ ಅನ್ನವನ್ನೊದಗಿಸಿ ಕೊಟ್ಟಿವೆ. ಮಳೆಗಾಲದ ಅಧಿಕ ಮಳೆ ಮತ್ತು ಬೇಸಗೆಯ ಬಿರು ಬಿಸಿಲುಗಳೆರಡೂ ಇಲ್ಲಿನ ಮಣ್ಣನ್ನು ಫಲವತ್ತಾಗಿಸಿವೆ. ವರ್ಷದ ಆರು ತಿಂಗಳಲ್ಲಿ ಇಲ್ಲಿ ಸಾಮಾನ್ಯವಾಗಿ 100 ರಿಂದ 150 ಇಂಚುಗಳ ಮಳೆ ಬಿದ್ದು ನೆಲವನ್ನು ತಂಪಾಗಿಸಿ, ಹಸಿರುಗೊಳಿಸುತ್ತದೆ.

ತುಳುನಾಡಿನ ಬತ್ತದ ಕೃಷಿಯನ್ನು ಇಡೀ ವರ್ಷದಲ್ಲಿ ನಾಲ್ಕು ಬೆಳೆಗಳಾಗಿ ಗುರುತಿಸಲಾಗುತ್ತದೆ. ಏಣೆಲು, ಸುಗ್ಗಿ, ಇಡೆ ಕೊಳಕೆ, ಕೊಳಕೆ ಎಂದು ಕಾಲಮಾನಕ್ಕನುಗುಣವಾಗಿ ಬೆಳೆಯಲಾಗುತ್ತದೆ. ಏಣೆಲು ಧರ್ಮ / ಸುಲಭದ ಬೆಳೆ, ಸುಗ್ಗಿ ಸ್ವಲ್ಪ ಕಷ್ಟದಲ್ಲಿ ಬೆಳೆಯುವ ಸತ್ವದ ಬೆಳೆ ಆದರೆ ಬಹುದಿನ ಉಳಿಯುವಂತಹುದು, ಕೊಳಕೆಯ ಬೆಳೆ ಮಳೆ ನೀರಿನ ಆಶ್ರಯವಿಲ್ಲದೆ ಕಷ್ಟ ಪಟ್ಟು ಬೆಳೆಸುವಂತಹುದು ಎಂದು ಪರಿಗಣಿಸಲಾಗುತ್ತದೆ.

**1. ಪಗ್ಗು ತಿಂಗಳು (ಮೇಷ ಮಾಸ)** : ತುಳುವರು ಮೊದಲ ತಿಂಗಳ ಮೊದಲ ದಿನವೇ ಕೃಷಿ ಕೆಲಸಕ್ಕೆ ಚಾಲನೆ ನೀಡುತ್ತಾರೆ. ಬೇಸಗೆಯಲ್ಲಿ ಬರುವ ಏಪ್ರಿಲ್ - ಮೇ ತಿಂಗಳ ನಡುವಿನ ಸಂಕ್ರಮಣದಲ್ಲಿ 'ಬಿಸು' ಆಚರಣೆಯೊಂದಿಗೆ ತುಳುವ ಕೃಷಿಕರು ವಾರ್ಷಿಕ ಬೇಸಾಯದ ಆರಂಭ ಮಾಡುತ್ತಾರೆ. ಬಿಸುವಿನಂದು 'ಕೈಬಿತ್ತ್' ಹಾಕದ ಮಂದಿ 'ಪಗ್ಗುಡು ಪದಿನೆನ್ಮ ಪೋನಗ' (ಪಗ್ಗು ತಿಂಗಳ ಹದಿನೆಂಟನೆಯ ದಿನದಂದು) ಹಾಕುತ್ತಾರೆ. ಈ ದಿನವೂ ಕೃಷಿ ಆರಂಭಕ್ಕೆ ಶುಭದಿನವೆಂದು ಪರಿಗಣಿಸಲ್ಪಟ್ಟಿದೆ. ಅಂತೂ 'ಏಣೆಲು' ಬೆಳೆಯ ಆರಂಭ ಮತ್ತು ಪಗ್ಗು ತಿಂಗಳು ಜೊತೆ ಜೊತೆಗೆ ಆರಂಭಗೊಳ್ಳುತ್ತವೆ, ಮುನ್ನಡೆಯುತ್ತವೆ.

**2. ಬೇಷ ತಿಂಗಳು (ವೃಷಭ ಮಾಸ) :** ಮೇ - ಜೂನ್ ತಿಂಗಳ ಸಂಕ್ರಮಣಗಳ ನಡುವಿನ ಬೇಷ ತಿಂಗಳು 'ಏಣೆಲು' ಬೆಳೆಯ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ.

ನೇಜಿ ಹಾಕಿದುದನ್ನು ತೆಗೆದು ನಾಟಿ ಮಾಡುವುದು ಅಥವಾ ಗದ್ದೆಗೆ ನೇರವಾಗಿ ಬಿತ್ತನೆ ಮಾಡುವುದು ಈ ತಿಂಗಳಲ್ಲಿ ಮಾಡಲಾಗುತ್ತದೆ. ಅಂದರೆ ಪಗ್ಗು ತಿಂಗಳಲ್ಲಿಆರಂಭಗೊಂಡ ಬೇಸಾಯದ ಬದುಕು ಬೇಷ ತಿಂಗಳಲ್ಲಿ ವೇಗ ಪಡೆಯುತ್ತದೆ. ಬೇಸಾಯದ ಬದುಕು ಹೆಚ್ಚಿನ ಜನಶಕ್ತಿಯನ್ನು ಕೇಳುತ್ತದೆ, ಉಳಿದ ಕೆಲಸಗಳಲ್ಲಿ ಕಾಲ ಕಳೆಯಬಾರದೆಂಬ ನಿಯಮವಿದೆ.

**3. ಕಾರ್ತೆಲ್ (ಮಿಥುನ ಮಾಸ) :** ಇದಂತೂ ಪೂರ್ತಿಯಾಗಿ ಬೇಸಾಯಕ್ಕೆ ಮೀಸಲಾದ ತಿಂಗಳು. ಜೂನ್-ಜುಲೈ ತಿಂಗಳ ಸಂಕ್ರಮಣಗಳ ನಡುವಿನಲ್ಲಿ ಬರುವ ಈ ತಿಂಗಳಲ್ಲಿ ತುಳುನಾಡಿನಸಂಪೂರ್ಣ ಮಳೆಗಾಲದ ದರ್ಶನವಾಗುತ್ತದೆ. ಆದುದರಿಂದಲೇ ಬೇರಾವುದೇ ಚಟುವಟಿಕೆಗಳಿಗೆ ಈ ತಿಂಗಳಲ್ಲಿಅವಕಾಶವಿಲ್ಲ. ಬದಲಾಗಿ ಬೇಸಾಯವೇ ಬದುಕಾಗಿ ಪರಿವರ್ತಿತವಾಗುತ್ತದೆ.

**4. ಆಟಿ (ಕಟಕ ಮಾಸ) :** ಬಿರು ಬಿಸಿಲು ಮತ್ತು ಜಡಿಮಳೆಯನ್ನು ಜೊತೆಜೊತೆಯಲ್ಲಿ ಕೊಡುವ ಆಟಿ ತಿಂಗಳು ದರಿದ್ರದ ತಿಂಗಳು ಎಂದು ಪರಿಗಣಿಸಲಾಗುತ್ತದೆ. ಆ ತಿಂಗಳಲ್ಲಿ ಯಾವುದೇ ಒಳ್ಳೆಯ ಕೆಲಸಗಳನ್ನು ನಡೆಸುವುದಿಲ್ಲ.

**5. ಸೋಣ (ಸಿಂಹ ಮಾಸ) :** ತುಳುನಾಡಿನ ಬೇಸಾಯದ ಬದುಕು ಮತ್ತು ಜನರಿಗೆಲ್ಲ ಒಳ್ಳೆಯ ಹವಾಮಾನದ ಮೂಲಕ ಖುಷಿಯೊದಗಿಸುವ ಸೋಣತಿಂಗಳು ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳ ಸಂಕ್ರಮಣಗಳ ನಡುವೆ ಬರುತ್ತದೆ. ಗದ್ದೆಯಲ್ಲಿನ ಸೊಂಪು ಪೈರಿನ ನಡುವಿನ ಕಳೆ ಕೀಳುವುದರ ಜೊತೆಗೆ ಹಬ್ಬಗಳ ಸಾಲನ್ನು ಈ ತಿಂಗಳಲ್ಲಿ ನೋಡಬಹುದಾಗಿದೆ.

**6. ನಿರ್ನಾಲ (ಕನ್ಯಾ ಮಾಸ) :** ಇದು ಸಮೃದ್ಧಿಯ ತಿಂಗಳು. ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳ ಸಂಕ್ರಮಣಗಳ ನಡುವಿನ ನಿರ್ನಾಲ ತಿಂಗಳಲ್ಲಿ ಏಣೇಲು ಬೆಳೆ ಬೆಳೆದು ಕಟಾವಿಗೆ ತಯಾರಾಗುತ್ತದೆ. 'ಮನೆ / ತೆನೆ ತುಂಬಿಸುವ ಹಬ್ಬ', 'ಹೊಸ ಅಕ್ಕಿ ಊಟದ ಹಬ್ಬ', 'ಕಾವೇರಿ ಸಂಕ್ರಾಂತಿ' ಇವೆಲ್ಲವೂ ಬರುವ ಅಂದರೆ ಬತ್ತದ ಬೆಳೆ ಬರುವ ತಿಂಗಳಿದು. ತುಳುನಾಡಿನ ಬತ್ತದ ಬೆಳೆಯ ವಾರ್ಷಿಕಾವರ್ತನದಲ್ಲಿ ನೇರವಾಗಿ ಕೃಷಿಗೆ ಸಂಬಂಧಿಸಿದ ಮೂರು ಹಬ್ಬಗಳು ಆ ತಿಂಗಳಲ್ಲಿ ಆಚರಿಸಲ್ಪಡುತ್ತವೆ. ಈ ನಿಟ್ಟಿನಲ್ಲಿ ಈ ತಿಂಗಳ ಮಹತ್ತ್ವವನ್ನು ಬತ್ತದ ಕೃಷಿಯ ನೆಲೆಯಲ್ಲಿ ಗುರುತಿಸಬಹುದಾಗಿದೆ.

**7. ಬೊಂತೆಲ್ (ತುಲಾ ಮಾಸ)** : ಏಣೇಲು ಬೆಳೆ ಮನೆಯೊಳಗೆ ಬಂದು ಸುಗ್ಗಿಯ ಬೇಸಾಯ ಆರಂಭ ಮಾಡುವ ಈ ತಿಂಗಳು ಅಕ್ಟೋಬರ್ ಮತ್ತು ನವೆಂಬರ್ ತಿಂಗಳ ಸಂಕ್ರಮಣಗಳ ನಡುವೆ ಬರುತ್ತದೆ. ಮಳೆ ಕಡಿಮೆಯಾಗಿ ಹದವಾದ ಚಳಿಯ ವಾತಾವರಣದಲ್ಲಿ ಹಬ್ಬ ಆಚರಿಸಲಾಗುತ್ತದೆ. ಈ ಹಬ್ಬದ "ಆಚರಣೆಯ ವಿಧಿ ವಿಧಾನಗಳನ್ನು ವಿಶ್ಲೇಷಿಸಿದಾಗ ಅದು ಬತ್ತ ಬೇಸಾಯದ ಗರ್ಭದಿಂದ ಹುಟ್ಟಿಕೊಂಡಿರುವುದು ಮನದಟ್ಟಾಗುತ್ತದೆ". ಹಬ್ಬದ ಸಂಭ್ರಮದೊಡನೆ ತುಳುವರು ತಮ್ಮ ಒಂದು ಕಾಲದ ಅರಸ ಬಲೀಂದ್ರನನ್ನು ಸ್ವಾಗತಿಸುವಲ್ಲಿ ಕೃಷಿ ಸಲಕರಣೆಗಳನ್ನು ಸ್ವಚ್ಛಗೊಳಿಸಿ ಮೂರು ದಿನ ಹಬ್ಬವಾಚರಿಸುತ್ತಾರೆ. ಈ ಸಮಯದಲ್ಲಿಯೇ ಬೆಳೆಗಳಿಗೊದಗುವ ಆತಂಕಗಳನ್ನು ನಿವಾರಿಸಲು ಹಬ್ಬದ ನೆಪದಲ್ಲಿ ಗದ್ದೆ ಬದುವಿನಲ್ಲಿ, ಗೊಬ್ಬರದ ರಾಶಿಯ ಬದಿಯಲ್ಲಿ, ಜಾನುವಾರುಗಳ ಹಟ್ಟಿಯೊಳಗೆ ಹಚ್ಚಿಡುವ ದೀಪಗಳು ಆಗ ಹುಟ್ಟಿ ಬರುವ ಕ್ರಿಮಿ ಕೀಟಗಳನ್ನು ತಮ್ಮತ್ತ ಸೆಳೆಯುವ ಕೀಟನಾಶಕವಾಗಿ ಕೆಲಸ ಮಾಡುತ್ತವೆ.

**8. ಜಾರ್ದೆ (ವೃಶ್ಚಿಕ ಮಾಸ) :** ಸುಗ್ಗಿ ಬೇಸಾಯದ ಬಿರುಸಿನ ತಿಂಗಳಿದು. ನವೆಂಬರ್ - ಡಿಸೆಂಬರ್ ತಿಂಗಳ ಕಾಲದಲ್ಲಿ ಜಾರ್ದೆ ತಿಂಗಳು ಬರುತ್ತದೆ. ಇದೇ ಸಮಯದಲ್ಲಿ ಅಲ್ಲಲ್ಲಿ ಕೃಷಿ ಕೆಲಸಕ್ಕೆ ಬೇಕಾದ ಜಾನುವಾರು ಜಾತ್ರೆಗಳು ನಡೆಯುತ್ತವೆ. ಕೆಲವೆಡೆ ಸುಗ್ಗಿ ಬೇಸಾಯದ ಮುಕ್ತಾಯದ ದಿನವನ್ನು 'ಕಂಡ ಕೋರಿ' ಎಂದು ಆಚರಿಸುತ್ತಾರೆ. ಇಡೆಕೊಳಕೆಯ ಬೇಸಾಯ ಆರಂಭಗೊಂಡಿರುತ್ತದೆ.

**9. ಪೆರಾರ್ದೆ (ಧನುರ್ಮಾಸ) :** ಸುಗ್ಗಿ ಬೇಸಾಯದ ಚಟುವಟಿಕೆಯನ್ನು ಮುಗಿಸಿ, ಕೊಳಕೆ ಬೆಳೆಯನ್ನು ಬೆಳೆಯಲು ಅನುವಾಗುವುದು ದಶಂಬರ - ಜನವರಿ ತಿಂಗಳ ಸಂಕ್ರಮಣಗಳ ನಡುವಿನ ಪೆರಾರ್ದೆ ತಿಂಗಳಲ್ಲಿ ಮಳೆಯಿಂದ ಪೂರ್ತಿಯಾಗಿ ಬಿಡುಗಡೆಗೊಂಡ ಇದೇ ಸಮಯದಲ್ಲಿ ಏಣೆಲು ಬೆಳೆಯ ಬತ್ತದಿಂದ ಅಕ್ಕಿಯನ್ನು ತಯಾರು ಮಾಡಲಾಗುತ್ತದೆ.

**10. ಪುಯಿಂತೆಲ್/ಪೊನ್ನಿ (ಮಕರ ಮಾಸ) :** ಜನವರಿ ಮತ್ತು ಫೆಬ್ರವರಿ ತಿಂಗಳ ಸಂಕ್ರಮಣಗಳ ನಡುವಿನ ಅವಧಿಯನ್ನು ಪುಯಿಂತೆಲ್/ ಪೊನ್ನಿ ತಿಂಗಳು ಎಂದು ಗುರುತಿಸಲಾಗುತ್ತದೆ. ಚಳಿಗಾಲ ಕಳೆದು ಬೇಸಿಗೆ ಕಾಲಿಡುವ ತಿಂಗಳಿದು. ಪೆರಾರ್ದೆ ತಿಂಗಳ ಚಟುವಟಿಕೆ ಮುಂದುವರಿಯುತ್ತದೆ. ಈ ತಿಂಗಳ ಕೊನೆಯಲ್ಲಿ 'ಕೆಡ್ಡಸ' ಆಚರಣೆ ಬರುತ್ತದೆ. ಇದು ಭೂಮಿಯ ಫಲವಂತಿಕೆಯ ಪೂಜೆಯಾಗಿರುವುದರಿಂದ ಬತ್ತದ ಬೇಸಾಯಕ್ಕೂ ಸಾಂಕೇತಿಕವಾಗಿ ಸಂಬಂಧಿಸಿದೆ.

**11. ಮಾಯಿ (ಕುಂಭ ಮಾಸ) :** ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಸಂಕ್ರಮಣಗಳ ನಡುವಿನ ಅವಧಿ ಮಾಯಿ ತಿಂಗಳು. ಬೇಸಿಗೆಯ ಬಿಸಿ ಈ ಹೊತ್ತಿನಲ್ಲಿ ಕಾವೇರ ತೊಡಗುತ್ತದೆ. ಕೊಳಕೆ ಬೇಸಾಯಕ್ಕೆ ನೀರೊದಗಿಸುವ ಕೆಲಸ ತುರ್ತಾಗಿ ಆಗಬೇಕಾಗುತ್ತದೆ.

**12. ಸುಗ್ಗಿ (ಮೀನ ಮಾಸ) :** ತುಳುವರ ವರ್ಷದ ಕೊನೆಯ ತಿಂಗಳಾಗಿ ಅಂದರೆ ಮಾರ್ಚ್ - ಏಪ್ರಿಲ್ ತಿಂಗಳ ಸಂಕ್ರಮಣಗಳ ನಡುವಿನಲ್ಲಿ ಸುಗ್ಗಿ ತಿಂಗಳು ಬರುತ್ತದೆ. ಈ ತಿಂಗಳಲ್ಲಿ ಕೊಳಕೆ ಬೆಳೆಯು ತುಳುವರ ಮನೆಯಂಗಳವನ್ನು ತುಂಬಿಕೊಳ್ಳುತ್ತದೆ. ಮುಂದಿನ ಬೆಳೆಯ ಪೂರ್ವ ತಯಾರಿಗಾಗಿ ಗದ್ದೆ ಸುಡುವುದು, ಸುಡು ಮಣ್ಣು ಹಾಕುವುದು, ಹಟ್ಟಿಗೊಬ್ಬರ ಚೆಲ್ಲುವುದು ಇತ್ಯಾದಿ ಕೆಲಸಗಳು ಈ ತಿಂಗಳಲ್ಲಿ ನಡೆಯುತ್ತವೆ.

**ತುಳುನಾಡಿನ ಕೃಷಿ ಭೂಮಿ :** ತುಳುನಾಡಿನಲ್ಲಿ ಜಂಬಿಟ್ಟಿಗೆ (laterite) ಕಲ್ಲಿನ ಮೂಲದಿಂದಾದ ಮಣ್ಣು ಇದೆ. ಕರಾವಳಿ ಪ್ರದೇಶದಲ್ಲಿ ಮರಳು ಮಿಶ್ರಿತ ಮಣ್ಣು ಅಥವಾ ಮರಳೇ ಹೆಚ್ಚಿರುವುದನ್ನೂ ಗಮನಿಸಬಹುದು. ಇಲ್ಲಿನ ಕೃಷಿ ಭೂಮಿಯನ್ನು ಕುಮೇರ್, ಬೊಟ್ಟು, ಮಜಲ್, ಬೈಲ್, ಪಟ್ಲ ಮತ್ತು ಬೈಲರೆ ಎಂದು ಆರು ಬಗೆಯಾಗಿ ಗುರುತಿಸಲಾಗುತ್ತದೆ. ಇವುಗಳನ್ನು ಎತ್ತರ ಮತ್ತು ಮಳೆ ನೀರಿನ ಲಭ್ಯತೆಯ ಮೇರೆಗೆ ಈ ರೀತಿಯಾಗಿ ವಿಂಗಡಿಸಲಾಗಿದೆ.

**ಕುಮೇರ್ :** ಕುಮೆರ್ ಅಂದರೆ ಗುಡ್ಡದ ಸಮತಟ್ಟಾದ ಪ್ರದೇಶಗಳನ್ನು ಬೇಸಾಯಕ್ಕೆ ಬೇಕಾದಂತೆ ಹದಗೊಳಿಸಿ, ಬೆಳೆ ಬೆಳೆಯುವುದು.

**ಬೊಟ್ಟು ಗದ್ದೆ :** ಬೊಟ್ಟು ಗದ್ದೆ ಎತ್ತರದಲ್ಲಿದ್ದು ಇದರಲ್ಲಿ ಮಳೆ ನೀರನ್ನೇ ಆಶ್ರಯಿಸಿ ಏಣೆಲು ಬೆಳೆಯನ್ನು ಬೆಳೆಯಲಾಗುತ್ತದೆ. ಬೊಟ್ಟು ಗದ್ದೆಗೆ ಹೆಚ್ಚಾಗಿ ಬೇರೆ ಕಡೆ ಬೆಳೆಸಿದ ನೇಜಿಯನ್ನು ನೆಡುವುದರ ಬದಲು ನೇರವಾಗಿ ಬೀಜ ಬಿತ್ತನೆ ಮಾಡುತ್ತಾರೆ. ಕೆಲವೊಮ್ಮೆ 'ನೀರ್ ನೇಜಿ'ಯನ್ನು ನೆಡುವುದೂ ಇದೆ. ಬೊಟ್ಟುಗದ್ದೆಯಲ್ಲಿ ಬೆಳೆಯುವ ತೊನ್ನೂರು ತಳಿ 90 ದಿನಗಳಲ್ಲಿ ಕಟಾವಿಗೆ ಬರುತ್ತದೆ.

**ಮಜಲು ಗದ್ದೆ :** ಬೆಟ್ಟುಗದ್ದೆಗಿಂತ ತಗ್ಗಿನಲ್ಲಿದ್ದು ಬೈಲು ಗದ್ದೆಗಿಂತ ಎತ್ತರದಲ್ಲಿರುವ ಗದ್ದೆಗಳನ್ನು ಮಜಲು ಗದ್ದೆಗಳೆಂದು ಗುರುತಿಸಲಾಗುತ್ತದೆ.

ಎತ್ತರ ಸಾಲಿನ ಮಜಲು ಗದ್ದೆಯಲ್ಲಿ ಎಣೆಲು ಬೆಳೆಯನ್ನು ಬೆಳೆದ ಬಳಿಕ ತರಕಾರಿ ಮತ್ತು ಧಾನ್ಯಗಳನ್ನು ಬೆಳೆಯಲಾಗುತ್ತದೆ. ತಗ್ಗು ಸಾಲಿನ ಮಜಲು ಗದ್ದೆಯಲ್ಲಿ ಎಣೆಲು ಮತ್ತು ಸುಗ್ಗಿಗಳೆಂಬ ಎರಡು ಬೆಳೆಗಳನ್ನು ತೆಗೆಯಬಹುದು. ನೀರಿನ ಲಭ್ಯತೆಯ ಸಾಧ್ಯತೆ ಕಡಿಮೆಯಿರುವುದರಿಂದ ಕೊಳಕೆ ಸಾಧ್ಯವಿಲ್ಲ.

**ಬೈಲು ಗದ್ದೆ :** ಬೈಲು ಗದ್ದೆಗಳು ಕೃಷಿಕನ ಅನ್ನದ ಬಟ್ಟಲು. ಮೂರು ಬೆಳೆಗಳು, ಬೇಕೆನಿಸಿದರೆ ನಾಲ್ಕೂ ಬೆಳೆಗಳಿಗೆ ತೆರೆದುಕೊಳ್ಳುತ್ತವೆ ಈ ಬೈಲು ಗದ್ದೆಗಳು. ಮಳೆನೀರನ್ನು, ಬಳಿಕ ನೀರಾವರಿಯನ್ನು ಒದಗಿಸಿಕೊಂಡು ಬೈಲು ಗದ್ದೆಗಳಲ್ಲಿ ಬೆಳೆ ಬೆಳೆಯಲಾಗುತ್ತದೆ.

**ಪಟ್ಲ ಗದ್ದೆ :** ಪಟ್ಲ ಗದ್ದೆಯಲ್ಲಿ ಸುಗ್ಗಿ ಮಾತ್ರ ಬೆಳೆಯಲಾಗುತ್ತದೆ. ಎಣೆಲು ಸಮಯದಲ್ಲಿ ಈ ಗದ್ದೆಯಲ್ಲಿ ನೀರು ನಿಂತಿರುತ್ತದೆ. ಕೊಳಕೆಯ ಹೊತ್ತಿಗಾಗುವಾಗ ಈ ಮಣ್ಣಿನ ಗುಣದಿಂದಾಗಿ ನೀರನ್ನು ಹೆಚ್ಚು ಹಿಡಿದಿಟ್ಟುಕೊಳ್ಳಲಾಗದೆ ಅಥವಾ ನದಿಬದಿಯ ಗದ್ದೆಗಳಾದರೆ ಉಪ್ಪು ನೀರಿನ ಒಗರು ಗದ್ದೆಯಲ್ಲೂ ಕಾಣಿಸಿಕೊಳ್ಳುವುದರಿಂದ ಬೆಳೆ ಸರಿಯಾಗಿ ಬರುವುದಿಲ್ಲ. ಆದುದರಿಂದ ಈ ಸಮಯದಲ್ಲಿ ಯಾವುದೇ ಬೆಳೆಯನ್ನು ಪಟ್ಲ ಗದ್ದೆಯಲ್ಲಿ ಬೆಳೆಯಲು ಸಾಧ್ಯವಿಲ್ಲ.

**ಬೈಲರೆ :** ಬೈಲರೆಯಲ್ಲಿಬೇಗ ಬಿತ್ತಿ, ಗಟ್ಟಿಯಾಗಿ ನಿಂತು ಬೆಳೆಯುವ ಬತ್ತದ ಬೆಳೆಯನ್ನು ಎಣೆಲು ಬೆಳೆಯ ಸಮಯದಲ್ಲಿ ಬೆಳೆಯಲಾಗುತ್ತದೆ. ಬೈಲರೆಗೆ ನೆಡಲು ಬೇಕಾದ ನೇಜಿಯನ್ನು ಮಾಯಿ ತಿಂಗಳ ಕೊನೆಯಲ್ಲಿ ಅಥವಾ ಸುಗ್ಗಿಯ ಆರಂಭದಲ್ಲಿಯೇ ಬಿತ್ತಲಾಗುತ್ತದೆ. ಇದನ್ನು 'ಪರ ಪಸೆತ್ತ ನೇಜಿ' (ನೀರಿನ ಪಸೆಯಿರುವ ಗದ್ದೆಗಳಲ್ಲಿ ಬೆಳೆಯುವ ನೇಜಿ) ಎಂದು ಹೇಳುತ್ತಾರೆ. ಇದಕ್ಕೆ ಬೇಕಾದ ಎತ್ತರಕ್ಕೆ ಬೆಳೆಯುವ 'ಕಜೆಕಯಮೆ' ಬತ್ತದ ತಳಿಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಮಳೆ ಹೆಚ್ಚು ಬೀಳಲಾರಂಭಿಸುವಾಗ ಹೆಚ್ಚು ನೀರು ನಿಲ್ಲುವ ಈ ಭೂಮಿಯಲ್ಲಿ ನೀರಿನ ಹರಿವನ್ನು ತಡೆದುಕೊಳ್ಳುವ ಮತ್ತು ಅದನ್ನು ಮೀರಿ ನಿಲ್ಲುವ ಎತ್ತರವನ್ನು ಅಂದರೆ ಐದು ಅಡಿಗಿಂತಲೂ ಹೆಚ್ಚು ಎತ್ತರ ಪಡೆದುಕೊಳ್ಳುವ ಈ ತಳಿಯ ಬೆಳೆಯನ್ನು ಕೊಯ್ಯುವ ಹೊತ್ತಿನಲ್ಲಿಯೂ ಮೊಣಕಾಲುದ್ದ ನೀರಿನಲ್ಲಿ ನಿಂತುಕೊಂಡೇ ಕೊಯ್ಯ ಬೇಕಾಗುತ್ತದೆ. ಆದುದರಿಂದ ಈ ಬೆಳೆಯ ಬೈಹುಲ್ಲು ಸಿಗುವುದಿಲ್ಲ. ಎತ್ತರದಿಂದ ತೆನೆಗಳನ್ನು ಕೊಯ್ದು ತರುವುದರಿಂದ ಉಳಿದ ಭಾಗ ನೀರಿನಲ್ಲಿದ್ದು ನಂತರ ಅಲ್ಲೇ ಕೊಳೆಯುತ್ತದೆ.

ಕೆಲವು ಗದ್ದೆಗಳು ದೈವಾರಾಧನೆಯೊಂದಿಗೆ ತಮ್ಮ ಬೆಳೆಯ ಆವರ್ತನವನ್ನು ತಳಕು ಹಾಕಿಕೊಂಡಿದ್ದು ಅವುಗಳಲ್ಲಿ ಬೆಟ್ಟು, ಮಜಲು ಮತ್ತು ಬೈಲುಗಳೆಂಬ ಭೇದವಿಲ್ಲ. ಇವುಗಳಿಗೆ ಎಣೆಲು ಮತ್ತು ಸುಗ್ಗಿಬೆಳೆಯ ಸಮಯದಲ್ಲಿ ಪೂಕರೆ, ಕಾಪು ಅಥವಾ ಬಾಳೆ ಹಾಕುವ ಆಚರಣೆಯನ್ನು ನಡೆಸಲಾಗುತ್ತದೆ.

**ಬಿತ್ತನೆ ಬೀಜ :** ಎಣೆಲು ಬೆಳೆಯ ಬತ್ತದಿಂದ ಜಳ್ಳನ್ನು ಬೇರ್ಪಡಿಸುವ ಬಳಿಕ ಒಳ್ಳೆಯ ಬತ್ತವನ್ನು ಸರಿಯಾಗಿ ಒಣಗಿಸಿ, ಅದರಲ್ಲಿ ಕಾಸರಕನಗೆಲ್ಲನ್ನು ನೆಟ್ಟಿರುತ್ತಾರೆ. ಇದನ್ನು 'ಮುಡಿ' ಅಥವಾ 'ಕುರುಂಟು' ಕಟ್ಟಿ ಕಾವೇರಿ ಸಂಕ್ರಮಣದಂದು ಅಥವಾ ಅದಕ್ಕೆ ಮುನ್ನವೇ ಅಡಿಗೆ ಕೋಣೆಯ ಮೇಲಿನ ಅಟ್ಟ (ಕುತ್ತಟ್ಟ)ದಲ್ಲಿಡಲಾಗುತ್ತದೆ. ಇಲ್ಲಿ ಬೆಚ್ಚನೆಯ ವಾತಾವರಣವು ವರ್ಷವಿಡೀ ಇರುವುದನ್ನು ಗಮನಿಸಬಹುದು. ಹೀಗೆ ಇಟ್ಟ ಬೀಜವನ್ನು ಮತ್ತೊಂದು ಎಣೆಲು ಬೆಳೆಗೆ ಬಿತ್ತಲು ತೆಗೆಯಲಾಗುತ್ತದೆ. ಎಣೆಲ್ ಬೆಳೆಯ ಬತ್ತವನ್ನು ಕೊಳಕೆ ಬೆಳೆಯ ಸಂದರ್ಭದಲ್ಲಿ ಬಿತ್ತನೆಗೆ ಬಳಸಬಹುದು. ಆದರೆ ಸುಗ್ಗಿಯ ಬೆಳೆ ಕೊಳಕೆಗೆ ಅಥವಾ ಎಣೆಲು ಬಿತ್ತನೆಗೆ ಆಗುವುದಿಲ್ಲ. ಕೊಳಕೆಯ ಬೆಳೆಯನ್ನು ಎಣೆಲು ಸಮಯದಲ್ಲಿ ಬಿತ್ತನೆ ಮಾಡಲಾಗುವುದಿಲ್ಲ. ಎಣೆಲು ಬೆಳೆಯ ಬತ್ತವನ್ನು ಸುಗ್ಗಿಯಲ್ಲಿ ಬಿತ್ತಲಾಗುವುದಿಲ್ಲ. ಅಂದರೆ ಎಣೆಲ್ ಬೆಳೆಗೆ ಹಿಂದಿನ ವರ್ಷದ ಎಣೆಲ್ ಬೆಳೆಯಲ್ಲಿ ಸಂಗ್ರಹಿಸಿದ ಬಿತ್ತನೆ ಬೀಜವನ್ನೇ ಉಪಯೋಗಿಸಲಾಗುತ್ತದೆ. ಸುಗ್ಗಿ ಬೆಳೆಗೆ ಹಿಂದಿನ ವರ್ಷದ ಸುಗ್ಗಿ ಬೆಳೆಯಲ್ಲಿ ಸಂಗ್ರಹಿತವಾದ ಬೀಜವನ್ನೇ ಬಿತ್ತನೆ ಮಾಡಲಾಗುತ್ತದೆ. ಎಣೆಲ್‌ನ ಬಿತ್ತನೆ ಬೀಜವನ್ನು ಕೊಳಕೆಗೂ, ಹಿಂದಿನ ವರ್ಷದ ಸುಗ್ಗಿಯ ಬಿತ್ತನೆ ಬೀಜವನ್ನು ಇಡೆ ಕೊಳಕೆಗೂ ಬಿತ್ತಲಾಗುತ್ತದೆ. ಬಿತ್ತನೆಗೆಂದು ಇಟ್ಟಿರುವ ಬತ್ತವು ಸ್ವಲ್ಪ ಕಾಲ ಬೆಚ್ಚನೆಯ ವಾತಾವರಣದಲ್ಲಿ ಇರಬೇಕು, ಹಾಗಿದ್ದರೆ ಮಾತ್ರ ಒಳ್ಳೆಯ ಬೆಳೆ ಬರುತ್ತದೆ.

**ನೇಜಿ (ಬತ್ತದ ಸಸಿ)ಯ ವಿಧಗಳು :** ಪರ ಪಸೆತ್ತ ನೇಜಿ : ಕೊಳಕೆ ಅಥವಾ ಸುಗ್ಗಿ ಆದ ಗದ್ದೆಯಲ್ಲಿ ನೀರಿನ ಪಸೆಯಿದ್ದರೆ ಅದರಲ್ಲಿ ಮಾಯಿ ಅಥವಾ ಸುಗ್ಗಿ ತಿಂಗಳಲ್ಲಿ ಬತ್ತವನ್ನು ಮೊಳಕೆ ಬರಿಸದೆ ನೇರವಾಗಿ ಬಿತ್ತನೆ ಮಾಡುತ್ತಾರೆ. ಈ ನೇಜಿಯನ್ನು ನೀರು ಹೆಚ್ಚಾದರೆ ಬೆಳೆ ಹಾಳಾಗುವುದಿಲ್ಲ ಎಂಬ ಕಾರಣದಿಂದ ಹೆಚ್ಚು ನೀರು ನಿಲ್ಲುವ ಗದ್ದೆಗಳಿಗೆ ನೆಡಲು ಉಪಯೋಗಿಸಲಾಗುತ್ತದೆ. ಇದನ್ನು ಬೀಜ ಬಿತ್ತನೆಯಾದ ಒಂದೂವರೆಯಿಂದ ಎರಡು ತಿಂಗಳ ಸುಮಾರಿಗೆ ತೆಗೆದು ಗದ್ದೆಗಳಲ್ಲಿ ನೆಡಲಾಗುತ್ತದೆ.

**ಪೊಡಿ ನೇಜಿ :** ಎಣೆಲು ಮತ್ತು ಸುಗ್ಗಿ ಬೆಳೆಗಳಿಗಾಗಿ ನೀರಿನ ಆಶ್ರಯವಿಲ್ಲದ ಗದ್ದೆಗಳ ಮಂದಿ 'ಪೊಡಿ ನೇಜಿ' ಹಾಕುತ್ತಾರೆ. ಬಿತ್ತನೆಗೆ ಮೊದಲು ಗದ್ದೆಯನ್ನು ಬೆಳಿಗ್ಗೆ ಬೇಗ ಮತ್ತು ಸಂಜೆಯ ಹೊತ್ತಿನಲ್ಲಿ ಅಂದರೆ ಬಿಸಿಲಿಲ್ಲದ ಸಮಯದಲ್ಲಿ ಉಳಲಾಗುತ್ತದೆ. ಆ ಬಳಿಕ ಬತ್ತವನ್ನು ಬಿತ್ತಲಾಗುತ್ತದೆ. ಮಳೆ ಬಿದ್ದ ಕೂಡಲೇ ಇದು ಮೊಳಕೆ ಬರುತ್ತದೆ. ಒಂದು ತಿಂಗಳಿಗಿಂತ ಹೆಚ್ಚು ದಿನ ಬೆಳೆದಿರುವ ಈ ನೇಜಿ ಬಹಳ ಗಟ್ಟಿ. ನೆರೆ ನೀರು ನಿಲ್ಲುವ ಬೈಲು ಗದ್ದೆಗಳಿಗೆ ಇದನ್ನು ನೆಡಲಾಗುತ್ತದೆ.

**ಪದಂತ್‌ದ್ ಪಾಡು ನೇಜಿ :** ಗದ್ದೆಗೆ ನೀರು ಹಾಕಿಟ್ಟು ಒಂದು ದಿನ ಬಿಟ್ಟು, ಮರುದಿನ ಆ ಗದ್ದೆಯನ್ನು ಉತ್ತು ಮೊಳಕೆ ಬರಿಸಿದ ಬತ್ತವನ್ನು ಬಿತ್ತಲಾಗುತ್ತದೆ. ಈ ನೇಜಿಯನ್ನೂ ಒಂದರಿಂದ ಒಂದೂವರೆ ತಿಂಗಳ ಬಳಿಕ ತೆಗೆದು ಬೈಲು ಗದ್ದೆಗೆ ನೆಡಲಾಗುತ್ತದೆ.

**ನೀರ್ ನೇಜಿ :** ಇದರ ಬೀಜ 24 ಗಂಟೆಗಳ ಕಾಲ ನೀರಿನಲ್ಲಿ ನೆನೆಯಬೇಕು. ಬೀಜದ ಬತ್ತದ ಮುಡಿಯನ್ನೇ ನೀರಿನಲ್ಲಿಡಲಾಗುತ್ತದೆ. ಅದನ್ನು ಮರುದಿನ ನೀರಿನಿಂದ ತೆಗೆದು ನೀರಿಳಿದ ಬಳಿಕ ಬೀಜಕ್ಕೆ ಗಾಳಿ ತಾಗದಂತೆ ಮುಚ್ಚಿ ಇಡಲಾಗುತ್ತದೆ. ಇದಕ್ಕೆ 'ದಕ್ಕಾದ್ ದೀಪಿನಿ' ಎನ್ನುತ್ತಾರೆ. ಮರುದಿವಸಕ್ಕೆ ಬತ್ತ ಮೊಳಕೆಯೊಡೆದಿರುತ್ತದೆ. ಆ ಮುಡಿಯನ್ನು ಬಿಚ್ಚಿ ಅದಕ್ಕೆ ದಪ್ಪನಾಗಿ ಕಲಸಿದ ಸೆಗಣಿ ಬೆರಸಿ ('ಅಂಬಿನೀರ್ ಪೂಜುನು'), ನೆಲದಲ್ಲೇ ರಾಶಿ ಮಾಡಿ ನೆಕ್ಕಿ ಸೊಪ್ಪು, ಗೋಣಿ, ಬೈಹುಲ್ಲು ಹಾಕಿ ಮುಚ್ಚಿಡಲಾಗುತ್ತದೆ. ಮರು ದಿನ ಈ ಮೊಳಕೆ ಚೆನ್ನಾಗಿ ಬಂದಿರುತ್ತದೆ. ಇದನ್ನು ನೀರು ಕಟ್ಟಿ ಉತ್ತ, ಬದು ಕೆತ್ತಲಾದ ಗದ್ದೆಗೆ ಬಿತ್ತಲಾಗುತ್ತದೆ. ಎರಡು ದಿನದ ಬಳಿಕ ಗದ್ದೆಯ ನೀರು ಆರುವಂತೆ ಮಾಡಿ, ಮತ್ತೆ ಒಂದು ದಿನ ಗಾಳಿಯಾಡಲು ಬಿಟ್ಟು, ಮತ್ತೆ ಪುನಃ ನೀರು ಕಟ್ಟಿ ಇಡಬೇಕಾಗುತ್ತದೆ.

ಎತ್ತರದ ಬೈಲು ಮತ್ತು ಬೊಟ್ಟು ಗದ್ದೆಗಳಿಗೆ 20 ರಿಂದ 25 ದಿನಗಳ ಒಳಗಿನ ಈ ನೇಜಿಯನ್ನು ನೆಡಬೇಕು. ಎಣೆಲು ಬೆಳೆಗೆ ಬೈಲು ಮತ್ತು ಬೊಟ್ಟು ಗದ್ದೆಗಳಿಗೆ, ಸುಗ್ಗಿ ಬೆಳೆಗೆ ಬೈಲು ಮತ್ತು ಪಟ್ಲ ಗದ್ದೆಗಳಿಗೆ ಇದನ್ನು ನೆಡಲಾಗುತ್ತದೆ.

ಇಡೆ ಕೊಳಕೆ ಬೆಳೆಗೆ ನೀರ್ ನೇಜಿಯನ್ನೇ ನೆಡಲಾಗುತ್ತದೆ. ನೇರ ಬಿತ್ತನೆ ಮಾಡುವುದು ಬಹಳ ಕಡಿಮೆ. ಕೊಳಕೆ ಬೆಳೆಗೆ ಹೆಚ್ಚಾಗಿ ನೇರ ಬಿತ್ತನೆ ನಡೆಸುತ್ತಾರೆ ; ಅಪರೂಪಕ್ಕೆ ನೀರ್ ನೇಜಿ ನೆಡಲಾಗುತ್ತದೆ.

**ನೇಜಿ ಕಲ :** ನೇಜಿ ಹಾಕುವ ಗದ್ದೆಗೆ ನೇಜಿದ ಕಲ ಎಂದು ಕರೆಯಲಾಗುತ್ತದೆ.

ಎಣೆಲು ಬೆಳೆಗೆ 'ಪರ ಪಸೆತ್ತ ನೇಜಿ' ಮತ್ತು 'ಪದಂತ್‌ದ್ ಪಾಡು ನೇಜಿ'ಗಳನ್ನು ನೀರಿನ ಲಭ್ಯತೆಯಿರುವ ಬೈಲು ಗದ್ದೆಗಳಲ್ಲಿ ಹಾಕಲಾಗುತ್ತದೆ.

ಸುಗ್ಗಿ ಬೆಳೆಗೆ ಬೊಟ್ಟು ಗದ್ದೆಯಲ್ಲಿ ನೀರು ನಿಲ್ಲದಂತೆ ಮಾಡಿ ಪೊಡಿ ನೇಜಿ ಹಾಕಲಾಗುತ್ತದೆ.

ಬೈಲು ಗದ್ದೆಗೆ ನೆಡುವ ನೀರ್ ನೇಜಿಗೆ ಹೆಚ್ಚು ನೀರಿನಾಶ್ರಯವಿರುವ ತಗ್ಗಿನ ಗದ್ದೆಯಲ್ಲಿ ಬಿತ್ತಲಾಗುತ್ತದೆ. ಇಡೆ ಕೊಳಕೆಗೆ ನೀರ್ ನೇಜಿಯನ್ನೂ ಇಲ್ಲೇ ಬೆಳೆಯಲಾಗುತ್ತದೆ.

**ಬರಿ ಕಡ್ಪುನು :** ಗದ್ದೆಯ ಬದುವನ್ನು ಹಾರೆಯಿಂದ ಕೆತ್ತುವುದಕ್ಕೆ 'ಬರಿ ಕಡ್ಪುನು' ಎನ್ನಲಾಗುತ್ತದೆ. ಎಣೆಲು ಬೆಳೆಯ ಸಮಯದಲ್ಲಿ ಗದ್ದೆಯ ಬದುವನ್ನು ಕೆತ್ತಲಾಗುತ್ತದೆ. ಆದರೆ ಸುಗ್ಗಿಯ ಸಮಯದಲ್ಲಿ ಬದುವನ್ನು ಕೆತ್ತಿ, ಮತ್ತೆ ಅದಕ್ಕೆ ಮಣ್ಣು ಮೆತ್ತಲಾಗುತ್ತದೆ. ಇದಕ್ಕೆ 'ಬರಿ ಮಣ್ಣ್ ದೀಪಿನಿ' (ಬದುವಿಗೆ ಮಣ್ಣು ಇಡುವುದು) ಎನ್ನುತ್ತಾರೆ. ಮಳೆ ಕಡಿಮೆಯಾಗುವ ಈ ಸಮಯದಲ್ಲಿ ಗದ್ದೆಯಲ್ಲಿರುವ ನೀರಿನ ಪಸೆಯೂ ಹೊರ ಹೋಗದಂತೆ (ಪೀರ್ಯಂದಿನಂಚ) ಈ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಈ ಸಮಯದಲ್ಲಿ ಬದುವಿನಲ್ಲಿನ ನೀರಿನ ಪಸೆಯಿಂದಷ್ಟೇ ಬೆಳೆಯುವ ಉದ್ದು ಮತ್ತು ಹೆಸರು ಬೀಜಗಳನ್ನು ಬಿತ್ತಲಾಗುತ್ತದೆ. ಕೊಳಕೆ ಮತ್ತು ಇಡೆ ಕೊಳಕೆಗಳಿಗೆ ಬರಿಮಣ್ಣು ಹಾಕಿದ ಬಳಿಕ ಮತ್ತೊಮ್ಮೆ ಬರಿ ಮಣ್ಣು ಮೆತ್ತುವ ಕ್ರಮವಿದೆ.

**ಗೊಬ್ಬರ :** ಹಟ್ಟಿ ಗೊಬ್ಬರ : ಜಾನುವಾರುಗಳು ಮಲಗುವಲ್ಲಿ ಬೆಚ್ಚಗಿರಲು ಮತ್ತು ಗೊಬ್ಬರವಾಗಲು ಬೇಸಗೆಯಲ್ಲಿ ಗುಡ್ಡದಿಂದ ಸೊಪ್ಪು ಮತ್ತು ತರಗೆಲೆಗಳನ್ನು ತಂದು ಹಾಸಲಾಗುತ್ತದೆ. ಪ್ರತಿದಿನ ಇದನ್ನು ಹಾಸದಿದ್ದರೆ ಗೊಬ್ಬರ ನೀರು ನೀರಾಗುತ್ತದೆ ಮತ್ತು ಜಾನುವಾರುಗಳಿಗೆ ಚಳಿಯಾಗುತ್ತದೆ.

ಬೇಸಗೆಯಲ್ಲಿ ತರಗೆಲೆಯನ್ನು ತಂದು ರಾಶಿ ಮಾಡುತ್ತಾರೆ. ಹೊಳೆ ಸಾಲಿನ ಪಕ್ಕದಲ್ಲಿ ಬೆಳೆಯುವ 'ಕಜೆ' ಎಂಬ ಹುಲ್ಲನ್ನು ತಂದು, ಒಣಗಿಸಿ ಪೇರಿಸಿಡುತ್ತಾರೆ. ಗದ್ದೆಯಲ್ಲಿ ಬತ್ತದ ಬೆಳೆಯ ಕಟಾವಿನ ಬಳಿಕ ಉಳಿಯುವ ಬುಡವನ್ನೂ ತಂದು ಪೇರಿಸಲಾಗುತ್ತದೆ. ಇವುಗಳನ್ನು ಮಳೆಗಾಲದಲ್ಲಿ ಹೆಚ್ಚು ಮಳೆಯ ಸಮಯದಲ್ಲಿ ಬೆಚ್ಚಗಿರಲು ಹಟ್ಟಿಯೊಳಗೆ ಜಾನುವಾರುಗಳು ಮಲಗುವಲ್ಲಿ ಹಾಕಿ, ಸೆಗಣಿ ಮತ್ತು ಗಂಜಲಗಳೊಡನೆ ಇದು ಮಿಶ್ರಣಗೊಂಡು ದಿನಗಳೆದಂತೆ ಗೊಬ್ಬರವಾಗುವಂತೆ ಮಾಡುತ್ತಾರೆ. ಈ ಗೊಬ್ಬರವನ್ನು ಹದಿನೈದು ದಿನಗಳಿಗೊಮ್ಮೆ ತೆಗೆದು ಗೊಬ್ಬರದ ಗುಂಡಿಯಲ್ಲಿ ರಾಶಿ ಹಾಕಲಾಗುತ್ತದೆ. ಹೀಗಿರುವ ಹಟ್ಟಿ ಗೊಬ್ಬರವನ್ನು ಮಳೆಗಾಲದಲ್ಲಿ ಗದ್ದೆ ಉಳುಮೆಯ ಸಮಯದಲ್ಲಿ ಗದ್ದೆಗೆ ಹಾಕಲಾಗುತ್ತದೆ. ಬೇಸಿಗೆಯ ಸಮಯದಲ್ಲಿ ಹೆಚ್ಚು ಗೊಬ್ಬರವಿದ್ದಲ್ಲಿ ಅದನ್ನು ಗದ್ದೆಯಿಡೀ ಹರಡಿ, ಜೊತೆಯಲ್ಲಿ ಸೊಪ್ಪು, ತರಗೆಲೆ, ಮಣ್ಣು ಇತ್ಯಾದಿಗಳನ್ನೆಲ್ಲ ಹಾಕಿ ಗದ್ದೆಗೆ ಬೆಂಕಿ ಕೊಡಲಾಗುತ್ತದೆ. ಸುಟ್ಟ ಗದ್ದೆಯಲ್ಲಿ ನಂತರ ಚೆನ್ನಾಗಿ ಬೆಳೆ ಬರುತ್ತದೆ. ಕೆಲವೊಮ್ಮೆ ಈ ಎಲ್ಲಾ ಕಸಗಳನ್ನೂ ರಾಶಿ ಹಾಕಿ (ಮುಲ್ಲು ಮುಟ್ಟೆ) ಸುಡುವುದು (ಸೂಂಟಾನ್/ತೂಂಟಾನ್) ಇದೆ.

ಕೆಲವು ಎಣೆಲು ಗದ್ದೆಗಳಿಗೆ ಉಳುಮೆಯ ಬಳಿಕ ಸೊಪ್ಪನ್ನು ಹರಡಿ, ಕೊಳೆಯಲು ಬಿಡಲಾಗುತ್ತದೆ. ಹತ್ತು ದಿನಗಳ ಬಳಿಕ ಮತ್ತೆ ಉಳುಮೆ ಮಾಡಿ ನೇಜಿ ನೆಡಲಾಗುತ್ತದೆ. ಹೆಚ್ಚಾಗಿ ನೇರಳೆ ಮರದ ಸೊಪ್ಪು, ಮಾವಿನ ಸೊಪ್ಪು, ದಡ್ಡಲ್ ಮರದ ಸೊಪ್ಪು ಇತ್ಯಾದಿಯನ್ನು ಹೀಗೆ ಹಾಕುತ್ತಾರೆ.

ಬತ್ತದ ಗದ್ದೆಯಲ್ಲಿ ತರಕಾರಿಯನ್ನು ಬೆಳೆಸುವುದರಿಂದ ಮುಂದಿನ ಬೆಳೆಯ ವೇಳೆಗೆ ಮಣ್ಣು ಫಲವತ್ತಾಗುತ್ತದೆ. ಬತ್ತದ ಬೆಳೆಗಳ ನಡುವೆ ಉದ್ದು ಬಿತ್ತುವುದರಿಂದ ಭೂಮಿಯಲ್ಲಿ ಸಾರಜನಕದ ಅಂಶ ಹೆಚ್ಚಾಗುತ್ತದೆ.

**ಕ್ರಿಮಿನಾಶಕ :** ಬಿಸುವಿನ ದಿನದಂದು 'ಅಪ್ಪರೆ ಮಾಡುನು' ಎಂಬ ಆಚರಣೆಯಿದೆ. ಸ್ವಲ್ಪ ಜಾಗವನ್ನು ಉತ್ತು ಅದಕ್ಕೆ ಗೊಬ್ಬರ ಮತ್ತು ಅಪ್ಪರೆ ಮರದ ಸೊಪ್ಪನ್ನು ಹಾಕಲಾಗುತ್ತದೆ. ಇದು ಕ್ರಿಮಿನಾಶಕ ಹಾಗೂ ಗೊಬ್ಬರವಾಗಿ ಕೆಲಸ ಮಾಡುತ್ತದೆ. ಎಣೆಲ್ ಬೆಳೆಯ ಉಳುಮೆಯ ಸಮಯದಲ್ಲಿ ಗದ್ದೆಗೆ ಕಾಸರಕನ ಸೊಪ್ಪು ಮತ್ತು ರೆಂಜೆ ಗಿಡದ ಸೊಪ್ಪುಗಳನ್ನು ಹಾಕಲಾಗುತ್ತದೆ. ಈ ಎರಡೂ ಸೊಪ್ಪುಗಳಿಗೆ ಕ್ರಿಮಿನಾಶಕ ಗುಣವಿದೆ.

ಆಟಿಯ ಅಮಾವಾಸ್ಯೆಯಂದು ಗದ್ದೆಗಳಿಗೆ ಕಾಸರಕನ ಮರದ ಗೆಲ್ಲುಗಳನ್ನು ಆಚರಣೆಯ ನೆಪದಲ್ಲಿ ಊರಲಾಗುತ್ತದೆ. ಕಳ್ಳಿ / ಕಾಪು ಕುತ್ತುವುದು ಆಟಿ ಅಮಾವಾಸ್ಯೆಯಂದು ನಡೆಯುವ ಆಚರಣೆ. ಕಳ್ಳಿಯಲ್ಲಿರುವ ಮತ್ತು ಕಾಪುವಿನಲ್ಲಿ ಬಳಸುವ ಸೊಪ್ಪುಗಳಲ್ಲಿರುವ ವಿಷದ ಶಕ್ತಿಯಿಂದ ಕ್ರಿಮಿಗಳು ನಾಶಗೊಳ್ಳುತ್ತವೆ. ಸುಗ್ಗಿಯ ಬತ್ತದ ಬೆಳೆಗೆ ಹುಳದ ಉಪದ್ರವವಿದ್ದರೆ ಆಗ ಬಿಸಿ ಬೂದಿಯನ್ನು ಹಾರಿಸಲಾಗುತ್ತದೆ. ಹಿಂದಿನ ಬತ್ತದ ಬೆಳೆಗಳಿಗೆ ಕೀಟ ಬಾಧೆ ಬಹಳ ಕಡಿಮೆ ಇತ್ತು.

ಮಂಗಳೂರು ತಾಲೂಕಿನ ತೋಕೂರು ಎಂಬ ಹಳ್ಳಿಯಲ್ಲಿ 1950ರ ದಶಕದಲ್ಲಿ ಎಣೆಲು ಬೆಳೆಯ ಫಸಲು ಬರುವ ಸಮಯದಲ್ಲಿ ಮೊದಲ ಬಾರಿಗೆ ಬೊಂಬುಚ್ಚು ಕೀಟ ದಾಳಿಯಿಟ್ಟಾಗ ಊರವರೆಲ್ಲ ಸೇರಿ, ದೈವದ ನುಡಿಯಂತೆ ಊರಿನ ಮುಖ್ಯಸ್ಥನ ಮನೆಯ ನೆಲ್ಲಿಹಲಗೆ ಹಾಕಿರುವ ಬಾವಿಯ ನೀರನ್ನು ಸಿಂಪಡಿಸಿ, ಆ ಕೀಟದ ಬಾಧೆಯಿಂದ ಬಿಡುಗಡೆ ಹೊಂದಿರುವುದನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ.

'ಪರ್ಬ'ದ ದಿನದಲ್ಲಿ ಎಲ್ಲಾ ಗದ್ದೆಗಳಿಗೆ ಸೊಡರು ತೋರಿಸುವ (ತುಡರ್ ತೋಜಾವುನ) ಕ್ರಮವಿದೆ. ತೆನೆಗಳಲ್ಲಿ ಹಾಲು ತುಂಬಿರುವ ದಿನಗಳಲ್ಲಿ ಕೀಟಗಳ ಬಾಧೆಯಿಂದ ನಿವಾರಣೆ ಪಡೆಯಲು ಈ ಕ್ರಮವನ್ನು ಆಚರಣೆಯ ನೆಪದಲ್ಲಿ ನಡೆಸಲಾಗುತ್ತದೆಯೆಂದು ಹಿರಿಯರು ಹೇಳುತ್ತಾರೆ. ಗದ್ದೆಗೆ ಹಾಕುವ ಪೂಕರೆ, ಬಾಳೆಗಳು ಹಕ್ಕಿಗಳ ನಿಲುದಾಣವಾಗಿ, ಕ್ರಿಮಿ ಕೀಟಗಳ ನಿವಾರಣೆಗೆ ಸಹಕಾರಿಯಾಗುವಂತೆ ಮಾಡುತ್ತವೆ.

ಸುಗ್ಗಿ ಬೆಳೆಯಲ್ಲಿ ಪೈರು ಹಾಕಿದಾಗ ಅರಳಿಮರದ ಕೊಂಬೆಯನ್ನು ದೃಷ್ಟಿ ತಾಗದಿರುವಂತೆ ಗದ್ದೆಗಳಲ್ಲಿ ನೆಡುವರು. ಏಣೆಲು ಬೆಳೆಯಲ್ಲಿ ಪೈರು ಹಾಕಿದಾಗ ಕಾಸರಕನ ಮರದ ಕೊಂಬೆಯನ್ನು ನೆಡುವರು. ಕೊಳಕೆ ಬೆಳೆಯಲ್ಲಿ ಪೈರು ಹಾಕಿದಾಗ ಮುಂಡೋವಿನ ಮರದ ಒಂದು ಚಿಕ್ಕ ರೆಂಬೆಯನ್ನು ನೆಡುವರು ಹೀಗೆ ಕಾಪು ನೆಡುವುದರಿಂದ ದೃಷ್ಟಿ ತಾಗುವುದಿಲ್ಲವೆಂದು ನಂಬುವರು.

ಕಾವೇರಿ ಸಂಕ್ರಮಣದಂದು ಬತ್ತದ ರಾಶಿಗೆ ಬೂದಿಯ ಗೆರೆಯೆಳೆದು, ಮುಳ್ಳು ಮುಚ್ಚಿ ಇಡುವುದೂ ಕೂಡ ಬೆಳೆ ಸಂರಕ್ಷಣೆಯ ಒಂದು ಭಾಗವಾಗಿದೆ. ಕಾವೇರಿ ಸಂಕ್ರಮಣದ ಸಮಯದಲ್ಲಿ ಬೆಳೆ ಕಟಾವು ಮಾಡದಿದ್ದರೆ ಈ ಕ್ರಮವನ್ನು ಗದ್ದೆಗಳಲ್ಲಿರುವ ಬೆಳೆಗೇ ಮಾಡುವುದನ್ನೂ ಕಾಣಬಹುದಾಗಿದೆ.

ಬತ್ತದ ಬೀಜ ಸಂರಕ್ಷಣೆಗಾಗಿ ಅದರ ಜೊತೆಯಲ್ಲಿಡುವ ನೆಕ್ಕಿ ಸೊಪ್ಪು ಮುಂದಿನ ಬೆಳೆಗೆ ಬೆಂಕಿ ರೋಗ ಬರದಂತೆ ತಡೆಯುತ್ತದೆ. ನಂಜು ಹೆಚ್ಚಿರುವ ಗದ್ದೆಗಳಿಗೆ ಸುಣ್ಣ ಪಸರಿಸುವ ಕ್ರಮವೂ ಇಲ್ಲಿದೆ.

ತುಳುನಾಡಿನ ಬತ್ತದ ಬೇಸಾಯವನ್ನು ಏಣೆಲು / ಕಾರ್ತಿ, ಸುಗ್ಗಿ, ಇಡೆ ಕೊಳಕೆ ಮತ್ತು ಕೊಳಕೆಗಳೆಂಬ ನೆಲೆಯಲ್ಲಿಯೂ ನೋಡಬಹುದಾಗಿದೆ.

**ಏಣೆಲ್ :** ತುಳುವ ಬತ್ತದ ಬೇಸಾಯದ ಮೊದಲ ಬೆಳೆ 'ಏಣೆಲ್'. ಪೂರ್ತಿಯಾಗಿ ಮಳೆಯನ್ನೇ ಆಶ್ರಯಿಸಿದ ಈ ಬೆಳೆಯು ಪಟ್ಲವೊಂದನ್ನು ಬಿಟ್ಟು ಉಳಿದ ಕೃಷಿ ಭೂಮಿಗಳಲ್ಲಿ ಬೆಳೆಯುತ್ತದೆ. ಮಾಯಿ ತಿಂಗಳ ಕೊನೆ ಅಥವಾ ಸುಗ್ಗಿ ತಿಂಗಳ ಮೊದಲ ವಾರದಲ್ಲಿ ಬೈಲರೆಗೆ ಪೊಡಿನೇಜಿ ಹಾಕುವ ಮೂಲಕ ಅಥವಾ ಪಗ್ಗು ತಿಂಗಳ ಮೊದಲ ದಿನ ಬಿಸುವಿನಂದು 'ಕೈಬಿತ್' ಹಾಕುವ ಮೂಲಕ ಆರಂಭಗೊಳ್ಳುವ ಏಣೆಲ್ ಬೇಸಾಯದ ಪ್ರಕ್ರಿಯೆ ಬೊಂತೆಲ್ ತಿಂಗಳ ಸಂಕ್ರಮಣದಲ್ಲಿ ಅಂದರೆ ತುಲಾ ಸಂಕ್ರಮಣದಂದು ಮುಂದಿನ ಬೆಳೆಗಾಗಿ ಬೀಜದ ಮುಡಿಯನ್ನು ಅಟ್ಟಕ್ಕೆ ಹಾಕುವಲ್ಲಿಯವರೆಗೆ ಇರುತ್ತದೆ.

**ಸುಗ್ಗಿ :** ಆಟಿಯಲ್ಲಿ ಬೊಟ್ಟು ಗದ್ದೆಯಲ್ಲಿ ಹಾಕಿದ 'ಪೊಡಿ ನೇಜಿ'ಯನ್ನು ಸೋಣದಲ್ಲಿ ತಗ್ಗಿನ ಪಟ್ಲಗಳಲ್ಲಿ ನೆಡಲಾಗುತ್ತದೆ. ಬೈಲು ಗದ್ದೆಗಳಲ್ಲಿ ಸೋಣ, ಕನ್ಯೆ ತಿಂಗಳಲ್ಲಿ ಏಣೆಲಿನಕೊಯ್ಲು ಮತ್ತು ಸುಗ್ಗಿಯ ನಟ್ಟಿ ಬೆನ್ನು ಬೆನ್ನಿಗೆ ನಡೆಯುತ್ತದೆ. ಕೊಯ್ಲು ಮುಗಿದ ಮರುದಿನವೇ ಅದನ್ನು ಉಳುಮೆ ಮಾಡಿ, ನಾಲ್ಕು ದಿನ ಬಿಟ್ಟು ನೇಜಿ ನೆಡಲಾಗುತ್ತದೆ. 'ಪರ್ಬ'ದ ಹೊತ್ತಿಗೆ ಹೆಚ್ಚಿನ ಸುಗ್ಗಿ ಬೇಸಾಯದ ಕೆಲಸಗಳು ಮುಗಿದಿರುತ್ತವೆ. ಪುಯಿಂತೆಲ್ / ಪೊನ್ನಿ, ಮಾಯಿಯ ಹೊತ್ತಿಗೆ ಸುಗ್ಗಿ ಬೆಳೆ ಅಂಗಳಕ್ಕೆ ಬಂದಿರುತ್ತದೆ. ಸುಗ್ಗಿಯ ಆರಂಭದ ಸಿಂಗೋಡೆಯಂದು ಆರಂಭಿಸಿ ಮತ್ತೆ ಇಡೀ ತಿಂಗಳು ಅಕ್ಕಿ ಮಾಡಲಾಗುತ್ತದೆ.

**ಇಡೆಕೊಳಕೆ :** ಸುಗ್ಗಿ ಬೆಳೆಯ ನೇಜಿ ನೆಟ್ಟ ಹತ್ತು ಹದಿನೈದು ದಿನಗಳಲ್ಲಿ ಅಂದರೆ ಬೊಂತೆಲ್ ತಿಂಗಳಲ್ಲಿಯೇ ಇಡೆಕೊಳಕೆಗೆ ನೇಜಿ ಹಾಕಲಾಗುತ್ತದೆ. ಸುಗ್ಗಿ ಮತ್ತು ಇಡೆಕೊಳಕೆಗೆ ಸುಮಾರು ಒಂದೂವರೆ ತಿಂಗಳಿನಷ್ಟು ವ್ಯತ್ಯಾಸವಿರುತ್ತದೆ. ಇಡೆ ಕೊಳಕೆಯ ಬೆಳೆ ಸುಗ್ಗಿ ತಿಂಗಳಲ್ಲಿ ಕೊಯ್ಲಿಗೆ ಬಂದಿರುತ್ತದೆ.

**ಕೊಳಕೆ :** ಮಾಯಿ ಕೊನೆಗೆ ಅಥವಾ ಸುಗ್ಗಿ ಮೊದಲ ದಿನಗಳಲ್ಲಿ ಕೊಳಕೆಗೆ ಬಿತ್ತನೆ ನಡೆಸಲಾಗುತ್ತದೆ. ಇದಕ್ಕೆ ನೇಜಿ ನೆಡುವಿಕೆ ಬಹಳ ಅಪರೂಪ. ಪಗ್ಗು ಕೊನೆಗೆ ಅಥವಾ ಬೇಷದ ಆರಂಭದ ದಿನಗಳಲ್ಲಿ ಕೊಳಕೆಯ ಕೊಯ್ಲು ಮುಗಿದು, ಬತ್ತವನ್ನು ಅಕ್ಕಿ ಮಾಡಿಯೂ ಆಗಿರುತ್ತದೆ.

**ಬತ್ತದ ಬೇಸಾಯದ ಒಟ್ಟಂದ :** ಬೈಲರೆಯನ್ನು ಮೊದಲ ಮಳೆ ಬಿದ್ದ ಕೂಡಲೇ ನೆಡಲಾಗುತ್ತದೆ. ಬೊಟ್ಟು ಮತ್ತು ಬೈಲುಗಳನ್ನು ಬೇಷ ಕಾರ್ತೆಲ್ ತಿಂಗಳಲ್ಲಿ ಉಳುಮೆ ಮಾಡಲಾಗುತ್ತದೆ. ನಾಲ್ಕು ಸಾಲು ಉಳುಮೆಯ ಬಳಿಕ ಐದನೇ ಸಾಲನ್ನು ಉಳುವಾಗ ಹಲಗೆಯ ಬಳಕೆಯ ಮೂಲಕ ನೆಲವನ್ನು ಸಮತಟ್ಟುಗೊಳಿಸುವುದಕ್ಕೆ ಗದ್ದೆ 'ಕೋರುನು' ಎಂದು ಹೇಳುತ್ತಾರೆ. ಎರಡು ಸಾಲು ಉಳುಮೆಯ ಹೊತ್ತಿಗೆ ಬದು ಕೆತ್ತಲಾಗುತ್ತದೆ. ನಾಲ್ಕು ಸಾಲುಗಳಾದ ಕೂಡಲೇ ಹಾರೆಯಿಂದ ಗದ್ದೆಯಲ್ಲಿ ನೇಗಿಲು ಹೋಗದ ಮೂಲೆಗಳನ್ನು ಕೊಚ್ಚಿ (ಕೋಡಿ ಕೊಚ್ಚುನು) ಹದಗೊಳಿಸಲಾಗುತ್ತದೆ. ಇದರ ಬಳಿಕ ಕೆಲವು ಗದ್ದೆಗಳಿಗೆ ನೇರವಾಗಿ ಬಿತ್ತನೆ ಮಾಡಲಾಗುತ್ತದೆ. ಅಂತಹ ಗದ್ದೆಗಳಲ್ಲಿದ್ದ ನೀರು ಎರಡು ದಿನ ಬಿಟ್ಟು ಹೊರಹರಿಯಬಿಡುತ್ತಾರೆ (ಬಿದೆ ನೀರ್‌ಕಡ್ಪುನು). ನೀರಿಳಿದ ಗದ್ದೆಯನ್ನು ಗಾಳಿಯಾಡಲು ಒಂದು ದಿನ ಬಿಟ್ಟು, ಮತ್ತೆ ಮರುದಿನ ನೀರು ಕಟ್ಟಿಡಬೇಕು. ಬಿತ್ತಿದ ಗದ್ದೆಯಲ್ಲಿ ಹತ್ತು ಹದಿನೈದು ದಿನಗಳ ಬಳಿಕ ಅಲ್ಲಲ್ಲಿ ಖಾಲಿ ಜಾಗಗಳಿದ್ದಲ್ಲಿ, (ಬಿತ್ತುವವನ ಕೈತಪ್ಪಿ ಬೀಜ ಒಂದೇ ಕಡೆಗೆ ಬಿದ್ದಿದ್ದಲ್ಲಿ ಅಥವಾ ಬೀಜವನ್ನು ಗದ್ದೆಯ ನಂಜು ಹಾಳುಮಾಡಿದ್ದರೆ) ಹೆಚ್ಚಿನ ಸಸಿಯಿದ್ದಲ್ಲಿಂದ ತೆಗೆದು ನೆಡುವುದು. ಇದಕ್ಕೆ 'ಪರಿ ಹಾಕುವುದು' ಎನ್ನುತ್ತಾರೆ. ಸಸಿಯ ನಡುವೆ ಬೆಳೆದ ಕಳೆಯನ್ನೂ ತೆಗೆಯಲಾಗುತ್ತದೆ. ನೇಜಿಯನ್ನು ನೆಟ್ಟ ಗದ್ದೆ (ನಟ್ಟಿದಕಂಡ)ಯಲ್ಲಿ ಸರಿಯಾಗಿ ನೆಡುವ ಕಾರಣ ಆ ಗದ್ದೆಯಲ್ಲಿ ಬೆಳೆ ಚೆನ್ನಾಗಿ ಬರುತ್ತದೆ.

ಬೆಳೆ ಬೆಳೆದು ತೆನೆ ತುಂಬಿದ ಬಳಿಕ ಕೊಯ್ಲು ಮಾಡಲಾಗುತ್ತದೆ. ಆ ಸಮಯದಲ್ಲಿ ಬಿಸಿಲು ಇದ್ದಲ್ಲಿ ಒಣಗಲೆಂದು ಕೊಯ್ದ ಬೆಳೆಯನ್ನು ಎರಡು ದಿನ ಗದ್ದೆಯಲ್ಲೇ ಬಿಡಲಾಗುತ್ತದೆ. ಮಳೆಯಿದ್ದಲ್ಲಿ ಆಗಲೇ ಹೊತ್ತು ಮನೆಯಂಗಳಕ್ಕೆ ತರುತ್ತಾರೆ. ಅದನ್ನು ಓರಣವಾಗಿ ಪಡಿ ಮಂಚದ ಎರಡೂ ಕಡೆ ಪೇರಿಸಿಡುವುದಕ್ಕೆ 'ಪೇಜಿ ಪಾಡುನು' ಎನ್ನುತ್ತಾರೆ. ಹೀಗೆ ಇದ್ದ ಬತ್ತದ ಪೈರಿನ ಸೂಡಿಯನ್ನು ಹಿಡಿದು 'ಪಡಿ ಮಂಚ'ಕ್ಕೆ ಹೊಡೆದು ಬತ್ತ ಮತ್ತು ಬೈಹುಲ್ಲನ್ನು ಬೇರ್ಪಡಿಸಲಾಗುತ್ತದೆ.

ಆ ಬಳಿಕ ಅದನ್ನು ಕೈ ಸುತ್ತಿ ಹಾರಿಸಿ (ಬಾರ್ ಪಾರಾದ್) ಬತ್ತ ಮತ್ತು ಜಳ್ಳನ್ನು ಬೇರ್ಪಡಿಸಲಾಗುತ್ತದೆ. ಹೀಗೆ ಸಂಗ್ರಹವಾದ ಒಳ್ಳೆಯ ಬತ್ತದಲ್ಲಿ (ಕಡೆ ಬಾರ್) ಬೇಕಾದಷ್ಟು ಬತ್ತವನ್ನು ಸರಿಯಾಗಿ ಒಣಗಿಸಿ ಮುಂದಿನ ವರ್ಷದ ಬಿತ್ತನೆಗೆಂದು ನಾಲ್ಕು ಕಳಸೆ (ಒಂದು ಕಳಸೆ = 14 ಸೇರು) ಅಳತೆಯ ಮುಡಿಗಳನ್ನು ಕಟ್ಟಿ ಇಡಲಾಗುತ್ತದೆ. ಬಾಕಿ ಉಳಿದ ಬತ್ತವನ್ನು ತುಪ್ಪೆ ಹಾಕಿ ಸಂರಕ್ಷಿಸಲಾಗುತ್ತದೆ.

ಬೈಹುಲ್ಲಿನಿಂದ 'ಪೆರ್ಮರಿ' ಕಟ್ಟಿ ಹಾಕಿದ ತುಪ್ಪೆಯು ಏಣೆಲ್ ಬೆಳೆಯನ್ನು ಸಂರಕ್ಷಿಸುವುದು. ಮಳೆಗಾಲದಲ್ಲಿ ನೀರೆಳೆದುಕೊಂಡು ಬತ್ತ ಹಾಳಾಗಬಾರದೆಂಬ ಕಾರಣದಿಂದ ಈ ರೀತಿ ಮಾಡುತ್ತಾರೆ. ಸುಗ್ಗಿ ಮತ್ತು ಇಡೆಕೊಳಕೆಯ ಬತ್ತವನ್ನು ಕದಿಕೆ, ಮಡಲು ಮತ್ತು ಸಿರಿ ತುಪ್ಪೆಗಳೆಂಬ ಮೂರು ವಿಧದ ತುಪ್ಪೆಗಳಲ್ಲಿ ಸಂಗ್ರಹಿಸುತ್ತಾರೆ. ಕೊಳಕೆಯ ಬತ್ತವನ್ನು ಆ ಕೂಡಲೇ ಅಕ್ಕಿ ಮಾಡಲಾಗುತ್ತದೆ. ಇದನ್ನು ಸಂಗ್ರಹಿಸಿಡುವ ಕ್ರಮವಿಲ್ಲ.

ಮತ್ತೆ ಎಣೆಲು, ಸುಗ್ಗಿ ಮತ್ತು ಇಡೆ ಕೊಳಕೆಯ ಫಸಲನ್ನು ಒಟ್ಟಿಗೇ ಅಕ್ಕಿ ಮಾಡುವ ಕ್ರಮ ತುಳುವರದು.

ಬತ್ತದ ಬೆಳೆ ಈ ನಾಡಿನ ಮುಖ್ಯ ಬೆಳೆಯಾಗಿದೆ. ಇದರಿಂದ ಕೃಷಿ ತುಳುನಾಡಿನ ಪಗ್ಗುವಿನಿಂದ ಸುಗ್ಗಿಯವರೆಗೆ, ಎಣೆಲು ಬಿತ್ತನೆಯಿಂದ ಕೊಳಕೆ ಬೆಳೆಯ ಕೊಯ್ಲಿನವರೆಗೆ ತುಳುನಾಡಿನ ಬತ್ತದ ಬೆಳೆ ಸಂಸ್ಕೃತಿಯನ್ನು ಗ್ರಹಿಸಬಹುದು.

*ಎಸ್. ಜಿ.*

## ತುಳು ಬದುಕು ಮತ್ತು ತುಳುನಾಡಿನ ಕೃಷಿ ಪರಿಕರಗಳು

ತುಳುನಾಡೆಂದೇ ಪ್ರಖ್ಯಾತಗೊಂಡ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಭೌಗೋಳಿಕವಾಗಿ ಪ್ರತ್ಯೇಕತೆಯನ್ನುಳಿಸಿಕೊಂಡು ಬಂದ ಪ್ರದೇಶ. ದಕ್ಷಿಣದಲ್ಲಿ ಕಾಸರಗೋಡಿನ ಚಂದ್ರಗಿರಿ ನದಿ, ಉತ್ತರದಲ್ಲಿ ಕಲ್ಯಾಣಪುರ ನದಿ, ಸಹ್ಯಾದ್ರಿ ಪಶ್ಚಿಮ ಸಮುದ್ರಗಳು ಇದರ ಮೇರೆಯಾಗಿರುತ್ತದೆ. ಇಲ್ಲಿಯ ಜನರು ಹೆಚ್ಚಾಗಿ ಆಡುವ ಭಾಷೆ ತುಳು. ಅಲ್ಲದೆ, ಕೊಂಕಣಿ, ಮಲಯಾಳಂ, ಮರಾಠಿ, ಕನ್ನಡ ಹಾಗೂ ಕನ್ನಡದ ಉಪ ಭಾಷೆಗಳನ್ನಾಡುವರು ಇವರೆಲ್ಲರ ವ್ಯವಹಾರ ಭಾಷೆಯು ತುಳು. ಉತ್ತರದ ಕುಂದಾಪುರ ತಾಲ್ಲೂಕು ಹೊರತು ಪಡಿಸಿ ಉಳಿದೆಲ್ಲಾ ತಾಲೂಕುಗಳ ಜನಸಾಮಾನ್ಯರ ಮನೆ ಹೊರಗಿನ ಭಾಷೆ ತುಳು. ಯಾವ ಜಾತಿಯವನಿರಲಿ, ಅವನ ಮನೆ ಮಾತು ಯಾವುದೇ ಇರಲಿ, ಅವನಿಗೆ ತುಳು ಭಾಷೆ ಗೊತ್ತೇ ಇದೆ. ತುಳುವರಿಯದೆ ದಿನ ನಿತ್ಯದ ವ್ಯವಹಾರ ಸರಾಗವಾಗಿ ಸಾಗದು. ತುಳು ಭಾಷೆಯಲ್ಲಿ ಮೆಲ್ಪು, ಬಲ್ಪು ಇದೆ. ಸಂಸ್ಕೃತಿ ಇದೆ. ಕನ್ನಡದಂತೆಯೇ ಸರಾಗವಾಗಿ ಜೀವನವನ್ನು ಚಿತ್ರಿಸಲು ಬೇಕಾದ ಶಬ್ದ ಸಂಪತ್ತಿದೆ. ತುಳು ಶಬ್ದ ಭಂಡಾರವನ್ನು ಪರಿಶೀಲಿಸಿದರೆ, ತುಳುವಿನಲ್ಲಿರುವ ಜನಪದ ಸಾಹಿತ್ಯವಾದ ಪಾಡ್ದನಗಳನ್ನು ಕಿವಿಗೊಟ್ಟು ಕೇಳಿದರೆ, ತುಳುವಿನ ಕಿರುಗಾದೆಗಳ ಹಿರಿದರ್ಥವನ್ನು ಮನಗಂಡರೆ ತುಳುವರು ಉಚ್ಚ ಸಂಸ್ಕೃತಿಯುಳ್ಳ ಜನರೆಂಬುದು ಸ್ಪಷ್ಟವಾಗುತ್ತದೆ. (ಕೂರಡ್ಕುಲ್ ಶ್ರೀನಿವಾಸ್, 1949.)

ದ್ರಾವಿಡ ಭಾಷೆಗಳಲ್ಲೊಂದಾದ ತುಳು, ಭಾಷಾ ವಿಜ್ಞಾನ ದೃಷ್ಟಿಯಿಂದ ಸಾಕಷ್ಟು ವಿಕಸಿತವಾದುದಾದರೂ ಗ್ರಂಥಸ್ಥವಾಗಿ ಅಷ್ಟು ಬೆಳೆದಿಲ್ಲ. ಆದರೆ ಕಂಠಸ್ಥವಾಗಿ ತುಳುವಿನಷ್ಟು ಬೆಳೆದ ಭಾಷೆ ಇನ್ನೊಂದಿಲ್ಲವೆಂದರೆ ಉತ್ಪ್ರೇಕ್ಷೆಯಾಗಲಾರದು. ಇದಕ್ಕೆ ಕಾರಣ ತುಳು ನಾಡುನುಡಿ ಪ್ರತ್ಯೇಕತೆಯನ್ನುಳಿಸಿಕೊಂಡಿದ್ದರೂ, ಇನ್ನೊಂದು ರೀತಿಯಲ್ಲಿ ಕರ್ನಾಟಕಾಂತರ್ಗತವೆನಿಸಿ. ಆದಿಯಿಂದ ಇಂದಿನವರೆಗೂ ಕನ್ನಡದ ಹಿರಿತನವನ್ನು ಒಪ್ಪಿಕೊಂಡು ಬಾಳಿ ಬಂದಿರುವುದೇ ಆಗಿದೆ.

**ತುಳುವ ಸಮಾಜ :** ತುಳುನಾಡಿನ ಸಾಮಾಜಿಕ ವ್ಯವಸ್ಥೆಯನ್ನು ನಿರ್ದಿಷ್ಟವಾಗಿ ವ್ಯಾಖ್ಯಾನಿಸುವುದು ಕಷ್ಟ. ಬೇರೆ ಬೇರೆ ಕಾಲಘಟ್ಟದಲ್ಲಿ ವಿಭಿನ್ನ ವರ್ಗದ ಜನ ವಿವಿಧ ಕಾರಣಗಳಿಂದ ಇಲ್ಲಿ ಬಂದು ನೆಲೆಸಿದ್ದಾರೆ. ಭವಿಷ್ಯದಲ್ಲಿ ವ್ಯತ್ಯಾಸವನ್ನು ಗುರುತಿಸಲಾಗದಷ್ಟರ ಮಟ್ಟಿಗೆ ಇಲ್ಲಿಯ ಮೂಲ ಸಂಸ್ಕೃತಿಯೊಂದಿಗೆ ಬೆರೆತುಹೋದುದನ್ನು ಕಾಣಬಹುದು. ಪ್ರಾಚೀನ ತುಳುನಾಡಿನ ಮುಖ್ಯ ವೃತ್ತಿಗಳೆಂದರೆ ಕೃಷಿ, ಕಳ್ಳುಇಳಿಸುವುದು ಮತ್ತು ಮೀನು ಹಿಡಿಯುವುದು. ಇದಲ್ಲದೆ ಮಡಕೆಮಾಡುವ ಕುಂಬಾರರು, ತುಳುವರ ಪುರೋಹಿತರೆಂದೇ ಗುರುತಿಸಿಕೊಂಡ ಕ್ಷೌರಿಕ ವೃತ್ತಿಯ ಭಂಡಾರಿಗಳು, ದೈವ ದೇವಸ್ಥಾನಗಳಲ್ಲಿ ವಾದ್ಯ ನುಡಿಸುವ ದೇವಾಡಿಗಳು ಅಥವಾ ಮೊಯ್ಲಿಗಳು, ಸಮಗಾರರು, ಗಾಣಿಗರು, ಚಿನ್ನ, ಕಬ್ಬಿಣ ಹಾಗೂ ಮರದ ಕೆಲಸದ ಕುಶಲಕರ್ಮಿಗಳಾದ ಆಚಾರಿಗಳು ಅಥವಾ ವಿಶ್ವಕರ್ಮರು, ನೇಕಾರರು, ಬುಟ್ಟಿ ಹೆಣೆಯುವ ಕಾಯಕದ ಕೊರಗರು, ಭೂತ ಕಟ್ಟುವ ಪಂಬದವರು, ಮಲೆಕುಡಿಯರು ಮುಂತಾದವರು ತುಳುನಾಡಿನ ಬಹುಸಂಖ್ಯಾತ ಜನವರ್ಗ. ವ್ಯಾಪಾರವೇ ಪ್ರಧಾನ ವೃತ್ತಿಯನ್ನಾಗಿಸಿಕೊಂಡ ಮುಸಲ್ಮಾನರು ಗೌಡಸಾರಸ್ವತರು ಹಾಗೂ ಕ್ರೈಸ್ತರು ತಮ್ಮದೇ ರೀತಿಯಲ್ಲಿ ಇಲ್ಲಿಯ ಸಾಮಾಜಿಕ ಬದುಕಿಗೆ ಮೆರುಗು ನೀಡಿದ್ದಾರೆ. ಜೈನರು, ಬಂಟರು ಜಮೀನ್ದಾರರಾಗಿದ್ದು, ಒಟ್ಟು ಸಮಾಜದ ಮೇಲಿನ ನಿಯಂತ್ರಕರು ಹಾಗೂ ಯಜಮಾನ ಸಂಸ್ಕೃತಿಯ ಪೋಷಕರು ಆಗಿದ್ದಾರೆ.

**ಕರಾವಳಿಯ ಕೃಷಿ ಸಂಪತ್ತು :** ಇಲ್ಲಿ ವಿವಿಧ ಭಾಷೆಗಳನ್ನಾಡುವ, ವಿಭಿನ್ನ ಜಾತಿ, ಮತ, ಪಂಥ, ಧರ್ಮಗಳಿಗೆ ಸೇರಿದ ಜನರಿದ್ದಾರೆ. ಬೇರೆ ಕಸುಬುಗಳನ್ನು ಮಾಡುವವರಿದ್ದಾರೆ. ಆದರೆ ಕೃಷಿ ಇಲ್ಲಿಯ ಪ್ರಧಾನ ವೃತ್ತಿ, ಘಟ್ಟದ ಬುಡದಿಂದ ಕಡಲ ತಡಿಯವರೆಗೆ ಸರ್ವತ್ರ ಪ್ರಧಾನವಾದ ಬೆಳೆ ಬತ್ತದ ಪೈರು. ಎರಡನೆಯದು ಉದ್ದು, ಹೆಸರು, ಹುರುಳಿ ಮುಂತಾದ ಧಾನ್ಯಗಳು, ಮೂರನೆಯದು ಕಬ್ಬು ಮತ್ತು ತೆಂಗಿನ ಕೃಷಿ. ಇವುಗಳ ಜೊತೆಗೆ ಅಡಿಕೆಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಸುತ್ತಾರೆ.

**ವಸ್ತು ಸಂಗ್ರಹಾಲಯದ ಹಾದಿಯಲ್ಲಿ ಕೃಷಿ ಪರಿಕರಗಳು :** ಇಂದು ಕಾಲ ಬದಲಾಗಿದೆ. ತುಳುನಾಡು ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿದೆ. ಕೃಷಿ ಬದುಕು ಮರೆಯಾಗುತ್ತಿದೆ. ಕಸುಬುಗಳ ಪಲ್ಲಟವಾಗಿ ಇವೆಲ್ಲವೂ ಯಾಂತ್ರೀಕೃತಗೊಂಡಿವೆ. ನಿತ್ಯ ಬದುಕಿಗೆ ಅನಿವಾರ್ಯವೆಂದೆನಿಸಿದ್ದ ವಿವಿಧ ಪಾರಂಪರಿಕ ವಸ್ತು ವಿಶೇಷಗಳು ಮೂಲೆಗುಂಪಾಗಿ ನಶಿಸಿ ಹೋಗುತ್ತಿವೆ. ಇಲ್ಲವೆ ವಸ್ತುಸಂಗ್ರಹಾಲಯವನ್ನು ಸೇರುತ್ತಿವೆ.

ತುಳುನಾಡಿನ ಸಮಗ್ರ ಚಿತ್ರಣವನ್ನು ಸೀಮಿತ ಚೌಕಟ್ಟಿನೊಳಗೆ ಒದಗಿಸುವುದು ಅಸಾಧ್ಯವಾದ ಮಾತಾದರೂ ಈ ನಾಡಿನ ಕೃಷಿ ಬದುಕಿಗೆ ಸಂಬಂಧಿಸಿದ ಕೆಲವು ಪ್ರಮುಖ ವಸ್ತು ಪರಿಕರಗಳ ಕಿರು ಚಿತ್ರಣ ನೀಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

**ನೊಗ - ನೇಗಿಲಿನ ಉಗಮ :** ಕಾಡು ಮೇಡುಗಳಲ್ಲಿ ಅಲೆದಾಡುತ್ತಿದ್ದ ಮನುಷ್ಯ ಗೆಡ್ಡೆ ಗೆಣಸು ಅಗೆಯಲು ಬಳಸಿದ ಕೋಲು ಮುಂದೊಂದು ಹಂತದಲ್ಲಿ ಬೀಜ ಬಿತ್ತನೆಗೂ ಬಳಕೆಯಾಗತೊಡಗಿತು. ಈ ಹಂತ ಮಾನವನ ನಾಗರಿಕ ಬದುಕಿನ ಬೆಳವಣಿಗೆಯಲ್ಲಿ ಪ್ರಮುಖವಾದ ಘಟ್ಟವೆನ್ನಬಹುದು. ಮುಂದೊಂದು ದಿನ ಇದೇ ಕೋಲು ಎತ್ತುಗಳಿಂದ ಎಳೆಯಲ್ಪಡುವ ನೇಗಿಲಿನ ಕಲ್ಪನೆಗೆ ನಾಂದಿಯಾಯಿತು. ಇದು ಈಜಿಪ್ಟರ ಕೊಡುಗೆ ಎನ್ನಲಾಗುತ್ತಿದೆ. ಆದುದರಿಂದಲೇ ಈಜಿಪ್ಟಿಯನ್ನರನ್ನು ಆಧುನಿಕ ಕೃಷಿ ವ್ಯವಸ್ಥೆಯ ಸಂಸ್ಥಾಪಕರೆನ್ನುವುದು. ತುಳುನಾಡಿನಲ್ಲಿ ಮನುಷ್ಯ ಆಹಾರ ಸಂಗ್ರಹಣಾ ಹಂತದಿಂದ ಉತ್ಪಾದನಾ ಹಂತಕ್ಕೆ ಯಾವಾಗ ಕಾಲಿರಿಸಿದ ಎಂದು ಸ್ಪಷ್ಟವಾಗಿ ಹೇಳಲಾಗದು. ಆದರೂ ತುಳುನಾಡಿನಲ್ಲಿ ಪತ್ತೆಯಾದ ಬೃಹತ್ ಶಿಲಾಯುಗದ ನಿವೇಶನಗಳ ಕಾಲವನ್ನು ಖ್ಯಾತ ಇತಿಹಾಸ ತಜ್ಞರಾದ ಪಾದೂರು ಗುರುರಾಜಭಟ್ಟ, ಪುಂಡಿಕಾಯಿಗಣಪಯ್ಯಭಟ್ಟ ಮೊದಲಾದವರು ಅದನ್ನು ಕ್ರಿ.ಪೂ. 800 ರಿಂದ ಕ್ರಿ.ಪೂ. 600ರ ವರೆಗೆ ಕೊಂಡೊಯ್ಯುತ್ತಾರೆ. ಆದುದರಿಂದ, ಆಹಾರ ಸಂಗ್ರಹಣಾ ಹಂತವನ್ನು ಸುಮಾರು 2000 ವರ್ಷದ ಹಿಂದಕ್ಕೆ ಕೊಂಡೊಯ್ಯಬಹುದು.

ಇಂದು ಯಾಂತ್ರಿಕ ಯುಗದಲ್ಲಿ ಸಾಂಪ್ರದಾಯಿಕತೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದೆ. ಉಳುಮೆಯ ಪಾರಂಪರಿಕ ಸಾಧನವಾದ ನೇಗಿಲು, ನೊಗ, ಮೂಟ್ಟೆ ಪಲಯಿ ಕಣ್ಮರೆಯಾಗಿ ಆ ಜಾಗವನ್ನು ಟ್ರ್ಯಾಕ್ಟರ್, ಟೆಲ್ಲರ್ ಆಕ್ರಮಿಸಿಕೊಂಡಿದೆ. ಈ ವಸ್ತುಗಳ ತಯಾರಿಯಲ್ಲಿ ತುಳುವರು ಕೇವಲ ಅದರ ಪ್ರಯೋಜನ ದೃಷ್ಟಿಯನ್ನಲ್ಲದೆ ಅವರ ಕಲಾತ್ಮಕತೆಯನ್ನು ಮೆರೆದಿರುವುದನ್ನು ಗಮನಿಸಬಹುದು. ನೊಗ ನೇಗಿಲಿಗೆ ತುಳುವರು ನೀಡಿರುವ ಮಹತ್ವವನ್ನು, ಅವರು ಹೊಂದಿರುವ ಪವಿತ್ರ ಭಾವನೆಯನ್ನು ಗಮನಿಸುವಾಗ ಆಶ್ಚರ್ಯ ಉಂಟಾಗುತ್ತದೆ. ನಮ್ಮ ಕಮ್ಮಾರರ ವೃತ್ತಿಪರತೆ, ಈ ವಸ್ತುಗಳ ರಚನೆಯಲ್ಲಿ ತೋರಿದ ಆಸ್ಥೆ ಮೆಚ್ಚುವಂತಹುದು. ನೇಗಿಲ ಕುಳ ಅಥ್‌ವಾ 'ಪನೊರು'ವನ್ನು ನಿರ್ಮಿಸುವುದರಲ್ಲಿ ನಮ್ಮ ಪಾಣೆಮಂಗಳೂರಿನ ಕಮ್ಮಾರರು ಜಿಲ್ಲೆಯಲ್ಲೆ ಪ್ರಸಿದ್ಧರಾಗಿದ್ದರಂತೆ, ಆದುದರಿಂದಲೇ ಆ ಊರಿಗೆ ಪಾಣೇರ್ (ಈಗಿನ ಪಾಣೆಮಂಗಳೂರು) ಎಂಬ ಹೆಸರಾಯಿತೆಂದು ಹಿರಿಯರಿಂದ ತಿಳಿದು ಬರುತ್ತದೆ. ತನ್ನ ಶಕ್ತಿ, ಸಾಮರ್ಥ್ಯ, ಪ್ರಾಮಾಣಿಕತೆ ಹಾಗೂ ದೈಹಿಕ ಶಕ್ತಿಗೆ ಹೆಸರಾಗಿ ಜನಮಾನಸದಲ್ಲಿ ನೆಲೆಯಾದ ಅಗೋಳಿ ಮಂಜಣ್ಣನದ್ದೆಂದು ಹೇಳಲಾಗುವ ನೊಗಗಳ ಗಾತ್ರ, ಅದರಲ್ಲಿನ ಕೆತ್ತನೆ ಆಶ್ಚರ್ಯ ಉಂಟು ಮಾಡುತ್ತದೆ. ನೊಗ ನೇಗಿಲಿನ ಹಿಂದಿರುವ ನಂಬಿಕೆಗಳು ಹಲವಾರು. ಇದನ್ನು ಕಾಲಿನಿಂದ ಮೆಟ್ಟಬಾರದು. ದಾಟಬಾರದು ಮತ್ತು ತುಂಡಾಗಬಾರದು. ಒಂದು ವೇಳೆ ತುಂಡಾದರೆ, ಅದು ಅನಾಹುತದ ಮುನ್ಸೂಚನೆ ಎಂದು ತಿಳಿಯಲಾಗುತ್ತದೆ. ಅಂದು ಮನೆಯೊಡೆಯ ದೇವಸ್ಥಾನಕ್ಕೆಹೋಗಿ ಸೂತಕ ಕಳೆದುಕೊಂಡು ಬರತಕ್ಕದ್ದು ಎಂಬ ನಂಬಿಕೆ ಇದೆ. ನೊಗ ನೇಗಿಲುಗಳನ್ನು ಸುಡಬಾರದು. ಆದರೆ ಕೃಷಿಕನೊಬ್ಬ ಸತ್ತಾಗ ಅವನ ಕಾಷ್ಟಕ್ಕೆ ತುಂಡಾದ ನೇಗಿಲನ್ನು ಹಾಕಬೇಕೆಂದು ಬಲವಾದ ನಂಬಿಕೆ ತುಳುವರಲ್ಲಿದೆ.

ಇದರೊಂದಿಗೆ ಇದರ ರಚನೆಯ ವಿವಿಧ ಪಾರಿಭಾಷಿಕ ಪದಗಳು ಇಂದು ಕಣ್ಮರೆಯಾಗುತ್ತಿದೆ (ಉದಾಹರಣೆ, ಗುಂಡಲ, ಪತ್, ಪುಡ್ಕಾಯಿ, ಮುನೆ, ಪಣೋರು, ಕಲ್ಯಟ, ಪೂನಕೆ, ಸುಡ, ಮಾಕಾಲಿ ಇತ್ಯಾದಿ). ನೊಗ ನೇಗಿಲಿನೊಂದಿಗೆ ಕೃಷಿ ಸಂಬಂಧಿತ ಕಾರ್ಯಗಳಲ್ಲಿ ಬಳಕೆಯಾಗುತ್ತಿದ್ದ ಹಗ್ಗಗಳ ರಚನೆಯಲ್ಲಿ ಎಷ್ಟೊಂದು ವೈವಿಧ್ಯವಿತ್ತು! ಜಾನುವಾರುಗಳ ಮೂಗುದಾರ, ಚಾಟಿ, ತೆಂಗಿನ ನಾರಿನಿಂದ ರಚಿಸಲಾಗುತ್ತಿದ್ದ ಮಣಿಪು ಹಗ್ಗ, ಕೊಂಟು ಬಲ್, ಕಟ್ಟದ ಬಲ್ಲ್, ಪೊಣಕೆ ಹಗ್ಗ ತಯಾರಿಯು ವಿಶಿಷ್ಟವಾದ ಕಸುಬುಗಾರಿಕೆಯನ್ನು ಹೊಂದಿದ್ದವು. ಕನೆಹಲಗೆ, ಪಡಿಮಂಚ, ಉರಬಡು (ಕಲ್ಲಿಕಟ್ಟು ಹಾಕಿದ ಕಾಸರಕದ ಬೆತ್ತ)ದಂತಹ ಸಾಧನಗಳ ತಯಾರಿಯಲ್ಲಿಯು ನಮ್ಮ ಜನ ಕಲಾತ್ಮಕತೆಯನ್ನು ಮೆರೆಯುತ್ತಿದ್ದರು.

**ಕತ್ತಿಗಳ ವೈವಿಧ್ಯ :** ಕೃಷಿ ಕಾರ್ಯಕ್ಕೆ ಬಳಕೆಯಾಗುತ್ತಿದ್ದ ಕತ್ತಿಗಳಲ್ಲೆಷ್ಟೋ ವಿಧ! ಕೊಯಿಲತ್ತಿ, ಪರ್ದತ್ತಿ, ಕಡ್ಪತ್ತಿ, ಅಂಡೆಕತ್ತಿ, ಮೆಟ್ಟುಕತ್ತಿ ಕುಂಞತ್ತಿ, ಚಾಕತ್ತಿ, ನಾರೆಕತ್ತಿ, ಸೂಟೆಕತ್ತಿ, ತರ್ಕತ್ತಿ, ಗೆಜ್ಜೆತ್ತಿ ಇತ್ಯಾದಿ. ಹುಲ್ಲು ಹೆರೆಯುವ ಕೊಯಿಲತ್ತಿ, ಪೈರು ಕೊಯ್ಯುವ ಪರ್ದತ್ತಿ, ದೊಡ್ಡ ಗೆಲ್ಲು ಕಡಿಯುವ ನಾರೆ ಕತ್ತಿ, ತೆಂಗಿನ ಕಾಯಿ ಸುಲಿಯುವ ಕಡ್ಪತ್ತಿ, ಬಿದಿರಿನ ಮುಳ್ಳು ಕೊಯ್ಯುವ ಅಂಡೆಕತ್ತಿ, ತರಕಾರಿ ಹೆಚ್ಚುವ ಮೆಟ್ಟುಕತ್ತಿ, ಮಾರ್ತೆಗಾರಿಕೆಗೆ ಬಳಕೆಯಾಗುವ ತರ್ಕತ್ತಿ, ಕೊರಗರು ನಾರು ಬೇರು ಸಿಗಿಯುವ ಕುಂಞತ್ತಿ, ತಾಳೆ ಮರದ ಮುಳ್ಳು ಸೀಳುವ ಚಾಕತ್ತಿ, ಮೀನುಕಡಿಯುವ ಸೂಟೆಕತ್ತಿ, ಮದುಮಗಳು ದೃಷ್ಟಿ ತಾಗದಂತೆ ಹಿಡಿಯುವ ಗೆಜ್ಜೆತ್ತಿ ಹೀಗೆ ಒಂದೇ, ಎರಡೇ...! ಇಂದು ಈ ಹೆಸರುಗಳು ಹಳ್ಳಿ ಪ್ರದೇಶದಲ್ಲೂ ಕೇಳಿ ಬರುವುದಿಲ್ಲ. ಏಕ ಸಂಸ್ಕೃತಿ ಎಲ್ಲವನ್ನು ಅಳಿಸಿ ಹಾಕಿದೆ. ಕತ್ತಿ ಎಂಬ ಒಂದೇ ಪದದಲ್ಲಿ ಎಲ್ಲವೂ ಮುಗಿದುಬಿಡುತ್ತದೆ. ಈ ಕತ್ತಿಗಳನ್ನು ಒಂದೆಡೆ ತೂಗುಹಾಕುವ ಪರಿಕರಕ್ಕೆ 'ಕಣ್ಣಜೆ' ಎನ್ನುತ್ತಾರೆ. ಇದನ್ನು ಬಿದಿರಿನಿಂದ ಮಾಡಲಾಗಿದ್ದು. ಇದರಲ್ಲಿ ಎಲ್ಲಾ ನಮೂನೆಯ ಕತ್ತಿಗಳನ್ನು ಒಂದೆಡೆ ಇಡಬಹುದು. ಆದುದರಿಂದ ಮನೆಯ ಎಲ್ಲರಿಗೂ ಸುಲಭದಲ್ಲಿ ಸಿಗುವಂತಾಗುವುದು. ಇಂದು ಕೃಷಿ ಕಾರ್ಯ ಅಥವಾ ಇತರ ಕಸುಬುಗಳಲ್ಲಿ ತೊಡಗಿಕೊಂಡವರು ಬಳಕೆ ಮಾಡುವ ಕತ್ತಿಗಳಲ್ಲಿ ವೈವಿಧ್ಯತೆ ಇಲ್ಲ. ಇದನ್ನು ಹರಿತಗೊಳಿಸುವ ಬಗೆಯೂ ತಿಳಿದಿಲ್ಲ. ಹಿಂದಿನ ಕಾಲದಲ್ಲಿ ಕತ್ತಿಗಳನ್ನು ಹರಿತಗೊಳಿಸಲು ಕಾಸರಕ ಮರದಿಂದ ತಯಾರು ಮಾಡಿದ ಸಾಧನ ಬಳಸುತ್ತಿದ್ದರು. ಇದಕ್ಕೆ ಒಚ್ಚಿದ ಮರ ಎಂದು ಹೇಳುತ್ತಿದ್ದರು. ಬೆಣಚು ಕಲ್ಲಿನ ಹುಡಿ ಬಳಸಿ ಹರಿತಗೊಳಿಸುವ ಸಾಮಾನ್ಯ ಜಾಣ್ಮೆ ಇಂದಿನವರೆಗೆ ತಿಳಿದೇ ಇಲ್ಲ.

ಕತ್ತಿ ಹಿಡಿದು ಕಡಿಯುವ ಹಾಗೇ, ಹಾರೆ ಹಿಡಿದು ದುಡಿಯುವ ಮಂದಿಯೂ ಕಣ್ಮರೆಯಾಗುತ್ತಿದ್ದಾರೆ. ಕೃಷಿ ಕಾರ್ಯಕ್ಕೆ ಬಳಕೆಯಾಗುವ ಹಾರೆ, ಪಿಕ್ಕಾಸು, ಗುದ್ದಲಿ, ಸೈಂಗೊಲು ಇತ್ಯಾದಿ ಇಂದಿನವರಿಗೆ ತಿಳಿದೇ ಇಲ್ಲ. ಉದಾಹರಣೆಗೆ ಹಾರೆಗೆ ಹಿಡಿ ಹಾಕುವುದು ಅದನ್ನು ಪರಿಣತ ಕಮ್ಮಾರನೇ ಹಾಕಬೇಕು. ಪರಿಣತನಲ್ಲದವನು ಕೀಲು ಹಾಕಿದರೆ ಅದು ಪಡ್ಡನೆ ಅಥವಾ ಕುತ್ತವಾಗುತ್ತದೆ. ಬಾಮ ಸರಿ ಬರುವುದಿಲ್ಲ ಎನ್ನುವರು ನಮ್ಮ ಹಿರಿಯರು. ಅಂತಹ ಸಾಧನದಿಂದ ಕೆಲಸ ಸಾಗುವುದಿಲ್ಲ. ಇಂದಿನ ಯುವ ಪೀಳಿಗೆ ಕೃಷಿ ಕಾರ್ಯದಿಂದ ದೂರ ಸರಿದಿದೆ. ಒಂದು ವೇಳೆ ತೊಡಗಿಸಿಕೊಂಡರೂ ಇವೆಲ್ಲದರ ಕನಿಷ್ಠ ಜ್ಞಾನವೂ ಅವರಿಗಿಲ್ಲ. ಹಾರೆ ಹಿಡಿಯಲು ತಿಳಿಯದಿರುವ ಸ್ಥಿತಿ ಇಂದಿನ ಕೃಷಿ ಕಾರ್ಮಿಕರದ್ದು. ಯಾವುದೇ ಕ್ಷೇತ್ರದಲ್ಲಿ ಪರಿಣತಿ ಎಂಬುದೇ ಇಲ್ಲ.

**ಅಳತೆ ಸಾಮಗ್ರಿಗಳು :** ದವಸ ಧಾನ್ಯಗಳನ್ನು ಅಳತೆ ಮಾಡಲು ಉಪಯೋಗಿಸುತ್ತಿದ್ದ ಚಟಿಕ್. ಕೊಂಡೆ, ಪಾವು, ಬಳ್ಳ, ಸೇರು, ಪಾಣೆ, ಕಲಸೆ, ಅಜಲೆ ಮುಂತಾದ ವಿವಿಧ ಪ್ರಮಾಣದ ಅಳತೆಯ ಸಾಧನಗಳಿದ್ದುವು. ಇವುಗಳನ್ನು ಬಿದಿರು, ಮರ, ತಾಮ್ರ, ಹಿತ್ತಾಳೆಗಳಿಂದ ಮಾಡಲಾಗುತ್ತಿತ್ತು. ಎಣ್ಣೆ ಮುಂತಾದ ದ್ರವ ಪದಾರ್ಥಗಳನ್ನು ಅಳತೆ ಮಾಡಲು ಬಳಕೆಯಾಗುತ್ತಿದ್ದ ಪರಿಕರಗಳನ್ನು, ಹಿತ್ತಾಳೆ, ತಾಮ್ರಗಳಲ್ಲದೆ, ತೆಂಗಿನ ಗೆರಟೆ, ಚಂದನ, ಬಿದಿರುಗಳಿಂದಲೂ ಮಾಡುತ್ತಿದ್ದುದನ್ನು ಗಮನಿಸಬಹುದು. ಇವುಗಳಲ್ಲೂ ಕುಶಲಕರ್ಮಿಗಳು ತಮ್ಮ ಕಲಾತ್ಮಕತೆಯನ್ನು ವ್ಯಕ್ತಪಡಿಸುತ್ತಿದ್ದರು. ಅಲ್ಲದೆ, ಈ ಸಾಧನಗಳು, ಶ್ರೇಣೀಕೃತ ಸಮಾಜದ ಮುಖವನ್ನೂ ಪರಿಚಯಿಸುವಂತಿವೆ.

**ದವಸ ಧಾನ್ಯಗಳ ಸಂರಕ್ಷಣಾ ವಿಧಾನ :** ಅಕ್ಕಿ ಅಥವಾ ಬತ್ತವನ್ನು ಬಹಳ ಕಾಲದವರೆಗೆ ಕೆಡದಂತೆ, ಸಂರಕ್ಷಿಸಿಡುವ ತುಳುವರ ಕಲಾವಂತಿಕೆ ಮೆಚ್ಚುವಂಥದ್ದು. ಬೈಹುಲ್ಲಿನಲ್ಲಿ ದುಂಡಗಿನ ಆಕಾರದ ಆವರಣದಲ್ಲಿ ಅಕ್ಕಿಯನ್ನು ಸುತ್ತಿ ಮುಡಿ ಕಟ್ಟುತ್ತಾರೆ. ಅಕ್ಕಿಯನ್ನು ಮುಡಿ ಕಟ್ಟುವ ಬಗೆಯನ್ನು ಕ್ರಿ.ಶ. 1583ರಲ್ಲಿ ಇಂಗ್ಲೆಂಡಿನಿಂದ ಬಂದ ಲಿನ್‌ಸ್ಕೊತ್ತೆನ್ ಹೀಗೆ ವಿವರಿಸಿದ್ದಾನೆ- "ಅಕ್ಕಿಯನ್ನು ಬತ್ತದ ಹುಲ್ಲಿನ ಮೂಟೆಗಳಲ್ಲಿ ಸುತ್ತಿ ಮೇಲೆ ಹುರಿ ಮಾಡಿದ ಹಗ್ಗದಿಂದ ಕಟ್ಟುತ್ತಾರೆ. ಹೀಗೆ ಮೂಟೆಗಳಲ್ಲಿ ಸಂಗ್ರಹಿಸಲ್ಪಟ್ಟ ಅಕ್ಕಿ ಅತ್ಯುತ್ಕೃಷ್ಟವಾಗಿರುತ್ತಿತ್ತು ಎಂದಿದ್ದಾನೆ". (ಜಾನಪದ ಮಿನದನದಲ್ಲಿ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್). ಮುಡಿ ಕಟ್ಟುವ

ಸಂದರ್ಭದಲ್ಲಿ ಬೇಕಾಗುವ ಹುರಿಹಗ್ಗಕ್ಕೆ ಮೊರಜ್ಜ ಎನ್ನುತ್ತಾರೆ. ಪರಿಪೂರ್ಣ ಅಕ್ಕಿ ಮುಡಿಯಲ್ಲಿ 24 ಕಲಗಳು (ಹಗ್ಗದ ಚೌಕಗಳು), ಬತ್ತದ ಮುಡಿಯಲ್ಲಿ 16 ಕಲಗಳು ಇರುತ್ತವೆ. ಮೊರಜ್ಜಕ್ಕಾಗಲಿ, ಅಕ್ಕಿಮುಡಿ ತಯಾರಿಕೆಯಲ್ಲಾಗಲಿ ಎಲ್ಲಾ ಜಾತಿಯ ಬತ್ತದ ಬೈಹುಲ್ಲುಗಳು ಬಳಕೆಯಾಗುವುದಿಲ್ಲ. ಎತ್ತರವಾಗಿ ಬೆಳೆವ ತಳಿಗಳಾದ ಅತಿಕರ, ಕಯಮೆ, ಗಂಧಸಾಲೆಯಂತಹ ತಳಿಗಳೇ ಆಗಬೇಕು. ಇದರ ರಚನೆಯ ಸಂದರ್ಭದಲ್ಲಿ ಮುಖ್ಯವಾಗಿ ಕಲ್ಲೆ ಮತ್ತು ಕೊದಂಟೆ ಎಂಬ ಸಾಧನವನ್ನು ಬಳಸಲಾಗುತ್ತದೆ. ಈ ಕೊದಂಟೆ ಸಾಮಾನ್ಯವಾಗಿ ತುಸು ಬಾಗಿದ ಸಣ್ಣ ಗದೆಯಾಕಾರದಲ್ಲಿದ್ದು ಒಂದು ಭಾಗ ಕತ್ತಿಯ ಬಾಯನ್ನು ಹೋಲುತ್ತದೆ. ಇದನ್ನು ವಿಶೇಷವಾಗಿ ಹುಣಸೆ ಮರದ ತಿರುಳಿನಿಂದ ರಚಿಸಲಾಗುತ್ತದೆ. ಇದು ಐತಿಹಾಸಿಕವಾಗಿಯೂ ಗುರುತಿಸಿಕೊಂಡಿದೆ. ದ.ಕ. ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧ ನಡೆದ ಕಲ್ಯಾಣಪ್ಪನ ಕಾಟಕಾಯಿ ಎಂದೇ ಪ್ರಖ್ಯಾತವಾದ 1837ರ ದಂಗೆಯ ಸಂದರ್ಭದಲ್ಲಿ ಇಲ್ಲಿಯ ರೈತಾಪಿ ವರ್ಗ ಮುಡಿ ಕಟ್ಟುವ ಕೊದಂಟೆಯನ್ನು ಹೋರಾಟದ ಸಂದರ್ಭದಲ್ಲಿ ಅಸ್ತ್ರವಾಗಿ ಬಳಸಿಕೊಂಡಿದ್ದರೆಂದು ಇತಿಹಾಸದಲ್ಲಿ ಮಾಹಿತಿ ಲಭ್ಯವಾಗುತ್ತದೆ. 'ಗೀಸುಕೋಲು' ಕಳಸೆಯ ಬಾಯಿಗೆ ಧಾನ್ಯವನ್ನು ಸಮವಾಗಿಸುವ ಸಾಧನ (ತೇಕೆಗೊಳಿಸುವ). ಮುಡಿಯೊಳಗಿರುವ ಅಕ್ಕಿಯನ್ನು ತೆಗೆದು ಯಾವ ಜಾತಿಗೆ ಸೇರಿದ ಅಕ್ಕಿ ಎಂದು ಪರೀಕ್ಷಿಸುವ ಸಾಧನಕ್ಕೆ 'ಮುರ್ನಾಲಿ' (ಮುಡಿವಾಳ)ಯೆಂದು ಕರೆಯುತ್ತಾರೆ. ಅಕ್ಕಿ ಮುಡಿಯನ್ನು ಬಿಚ್ಚದೆ ಬೇಕಾದಷ್ಟು ಪ್ರಮಾಣದ ಅಕ್ಕಿಯನ್ನು ಮುಡಿಯಿಂದ ತೆಗೆಯುವ ನಳಿಗೆಯಾಕಾರದ ಸಾಧನಕ್ಕೆ 'ಓಟೆ' ಎನ್ನುತ್ತಾರೆ.

ಈ ಅಕ್ಕಿ ಮುಡಿಗಳನ್ನು ರಾಶಿ ಇಡುವ ಕ್ರಮಕ್ಕೆ ಕೂಟಾಯಿ ಕಟ್ಟುವುದು ಎನ್ನುವರು. ಭೂಮಾಲೀಕನ ಮನೆಗೆ ಗೇಣಿ ರೂಪದಲ್ಲಿ ಸಂದಾಯವಾಗುವ ನೂರಾರು ಅಕ್ಕಿ ಮುಡಿಗಳನ್ನು ಪಿರಮಿಡ್ ಆಕಾರದಲ್ಲಿ ವ್ಯವಸ್ಥಿತವಾಗಿ ಜೋಡಿಸಿಡಲಾಗುವ 'ಕೂಟಾಯಿ' ನೋಡಲು ತುಂಬಾ ಆಕರ್ಷಣೀಯ. ಬತ್ತವನ್ನು ಬಿಸಿಲು ಮಳೆಯಿಂದ ರಕ್ಷಿಸಲು ಮನೆಯಂಗಳದಲ್ಲಿಯೇ ಬೈ ಹುಲ್ಲಿನ ಆವರಣದ ವ್ಯವಸ್ಥೆ ಮಾಡುತ್ತಾರೆ. ಇದನ್ನು 'ತುಪ್ಪೆ' ಎನ್ನುತ್ತಾರೆ. ಇದು ತುಳುವರ ಹೆಮ್ಮೆ ಹಾಗೂ ಸಮೃದ್ಧಿಯ ಸಂಕೇತವೂ ಹೌದು. ಮನೆಯೊಳಗೆ ಬಿದಿರಿನ ತಡಿಕೆಗಳಿಂದ ರಚಿತವಾದ 'ಕದಿಕೆ'ಯಲ್ಲಿ. ದೊಡ್ಡ ಗಾತ್ರದ ಮರದ ಹತ್ತಾಯಗಳಲ್ಲಿಯೂ ಬತ್ತವನ್ನು ಸಂರಕ್ಷಿಸುಡುತ್ತಿದ್ದರು. ಅಲ್ಲದೆ, ಬಿತ್ತನೆಗೆ ಬೇಕಾದ ಅಥವಾ ಗೃಹ ಬಳಕೆಗೆ ಅಗತ್ಯವಾದ ದವಸ ಧಾನ್ಯಗಳನ್ನು ಸಂರಕ್ಷಿಸಿಡುತ್ತಿದ್ದ ರೀತಿ ವಿಶಿಷ್ಟವಾದುದು. ಉದ್ದು, ಹೆಸರು, ಅಲಸಂದೆಬೀಜ, ಹುರುಳಿ ಇತ್ಯಾದಿಗಳನ್ನು ಮುಡಿ ಕಟ್ಟಿ ಸಂರಕ್ಷಿಸಿಡಲಾಗುತ್ತಿತ್ತು. ಸಣ್ಣ ರೈತರು ಮಣ್ಣಿನ ಮಡಕೆಯೊಳಗೆ ಬೂದಿ ಮಿಶ್ರ ಮಾಡಿ ಅದರ ಮೇಲ್ಭಾಗಕ್ಕೆ ಬೈಹುಲ್ಲನ್ನಿಟ್ಟು, ಸೆಗಣಿ ಮೆತ್ತಿ ಇಡುವ ಕ್ರಮವೂ ಇತ್ತು. ಇದಲ್ಲದೆ ಇನ್ನೂ ಅನೇಕ ರೀತಿಯ ಸಂರಕ್ಷಣೆಯ ವಿಧಾನಗಳಿವೆ. ಇದರಿಂದ ಎಲ್ಲಾ ಋತುವಿನ ವಾತಾವರಣದಲ್ಲೂ ದವಸ ಧಾನ್ಯಗಳು ಕೆಡದಂತೆ ಸಂರಕ್ಷಿಸಲ್ಪಡುತ್ತಿದ್ದವು.

**ಬಿಸಿಲು ಮಳೆಯಿಂದ ರಕ್ಷಿಸಿಕೊಳ್ಳುವ ಪರಿಕರಗಳು :** ಗದ್ದೆ ಉಳುವಾಗ, ನೇಜಿ ನೆಡುವಾಗ ಮಳೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ತೆಂಗಿನ ಗರಿಯಿಂದ ಹೆಣೆಯಲ್ಪಡುತ್ತಿದ್ದ ಸಾಧನ ಕೆಡೆಂಜೊಲು, ಬಿದಿರಿನ ಜಾತಿಯ ಓಟೆ ಹಾಗೂ ಚಿಪುಲು ಎಂಬ ಜಾತಿಯ ಎಲೆಯನ್ನು ಬಳಸಿ ರಚಿಸಲಾಗುತ್ತಿದ್ದ ಗೊರಬು ಅಥವಾ ಕೊರಂಬು, ತಾಳೆ ಗಿಡದ ಗರಿಯಿಂದ ರಚಿತವಾಗುತ್ತಿದ್ದ ಪಣೋಲಿ ಇಂದು ಸಂಪೂರ್ಣವಾಗಿ ಕಣ್ಮರೆಯಾಗಿದೆ.

ಬಿಸಿಲಿನ ಝಳಕ್ಕೆ ತಲೆಯ ರಕ್ಷಣೆಗಾಗಿ, ಗೊಬ್ಬರ, ಮಣ್ಣು, ಪೈರು ಕೊಯ್ಯು ಅಥವಾ ನೇಜಿ ಹೊರುವ ಸಂದರ್ಭಗಳಲ್ಲಿ ಉಪಯೋಗಿಸಲ್ಪಡುತ್ತಿದ್ದ ಮುಟ್ಟಾಲೆಯು ಇಂದು ಮರೆಯಾಗಿದೆ. ಅಡಕೆ ಹಾಳೆ ಹಾಗೂ ನೇಯ್ಗೆಗೆ ಈಚಲ ಮರದ ಕನ್ನಿಯನ್ನು ಬಳಸಿ ರಚಿತವಾಗುತ್ತಿದ್ದ ಈ ಮುಟ್ಟಾಲೆ ತುಳುವರ ಒಂದು ವಿಶಿಷ್ಟವಾದ ತೊಡುಗೆಯೂ ಹೌದು. ಇದರಲ್ಲಿಯೂ ಹಲವು ಹೆಸರಿನ ವಿವಿಧ ಮಾದರಿಯ ಗಂಡಸರು-ಹೆಂಗಸರು ಪ್ರತ್ಯೇಕವಾಗಿ ಬಳಸುವ ಮುಟ್ಟಾಲೆಯನ್ನು ಕಾಣಬಹುದು.

**ಕಾಡು ಪ್ರಾಣಿಗಳಿಂದ ಪೈರಿನ ಸಂರಕ್ಷಣೆ :** ತಾನು ಕಷ್ಟಪಟ್ಟು ಬೆಳೆಸಿದ ಬೆಳೆಯನ್ನು ಕಾಡು ಪ್ರಾಣಿಗಳ ಹಾವಳಿಯಿಂದ ರಕ್ಷಿಸಿಕೊಳ್ಳುವುದೇ ಅಂದಿನ ಜನರಿಗೆ ಒಂದು ದೊಡ್ಡ ಸವಾಲಾಗಿತ್ತು. ಇದಕ್ಕಾಗಿ ಅವರು ಕಂಡುಕೊಂಡ ಉಪಾಯಗಳು ಹಲವು. ಇವುಗಳಲ್ಲಿ ಹುಲಿ ಓಡಿಸುವ, ಕಾಡು ಹಂದಿಯನ್ನು ಓಡಿಸುವ, ಹಕ್ಕಿ ಓಡಿಸುವ ಸಾಧನಗಳು ಗಮನಾರ್ಹವಾದುವು. ಈ ಸಾಧನಗಳಿಂದುಂಟಾಗುವ ಶಬ್ದಕ್ಕೆ ಯಾವ ಪ್ರಾಣಿಯಾದರೂ ಓಡಲೇಬೇಕು. ಇಲ್ಲಿ ಭೌತಿಕ ವಸ್ತುವೊಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸಿದ್ಧಗೊಂಡಿದ್ದರೂ ಅದನ್ನು ಕುತೂಹಲದಿಂದ ಕೂಲಂಕಷವಾಗಿ ಗಮನಿಸಿದಾಗ ಹಲವು ಮಾಹಿತಿಗಳು ದೊರೆಯುತ್ತವೆ. ಒಂದನೆಯದಾಗಿ, ಇದರ ಸರಳವಾದ ತಂತ್ರಗಾರಿಕೆ. ಎರಡನೆಯದಾಗಿ, ಇದರ ಆಧಾರದಲ್ಲಿ ಆ ಕಾಲದ ಭೌಗೋಳಿಕ ಚಿತ್ರಣವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಾಗುತ್ತದೆ. ಮನೆಯಲ್ಲಿ ಹುಲಿ ಓಡಿಸುವ ಸಾಧನವೊಂದಿರಬೇಕಾದರೆ ಆ ಕಾಲದಲ್ಲಿ ಎಷ್ಟೊಂದು ಕಾಡು ಹಾಗೂ ಕಾಡು ಪ್ರಾಣಿಗಳ ಹಾವಳಿಯಿತ್ತೆಂಬುದನ್ನು ಊಹಿಸಬಹುದಾಗಿದೆ. ಅಲ್ಲದೆ, ಈ ಸಾಧನ ದೊರೆತದ್ದು ಜೈನ ಬೀಡೊಂದರಲ್ಲಿ ಇದರಿಂದ ಅವರ ಧಾರ್ಮಿಕ ನಿಲುವು ಅಥವಾ ಅಹಿಂಸಾ ಸಿದ್ಧಾಂತವು ಸ್ಪಷ್ಟವಾಗುತ್ತದೆ. ಹುಲಿಗಳು ಉಪದ್ರವಕಾರಿಯಾಗಿದ್ದರೂ ಅವುಗಳನ್ನು ಹೆದರಿಸಿ ಓಡಿಸುತ್ತಿದ್ದರೇ ಹೊರತು, ಹೊಡೆದು ಕೊಲ್ಲುತ್ತಿರಲಿಲ್ಲ. ಅವುಗಳ ಬದುಕುವ ಹಕ್ಕನ್ನು ಇಂದಿನವರಂತೆ ಕಸಿದುಕೊಳ್ಳುತ್ತಿರಲಿಲ್ಲ.

ಬೆಳೆದು ನಿಂತ ಪೈರನ್ನು ಹಂದಿಗಳ ಹಿಂಡು ನಾಶಪಡಿಸುತ್ತಿದ್ದುದು ಸರ್ವೇಸಾಮಾನ್ಯ. ಅವುಗಳನ್ನು ಹೆದರಿಸಿ ಓಡಿಸುವುದಕ್ಕೂ ಅವರೊಂದು ಉಪಾಯವನ್ನು ಕಂಡುಹಿಡಿದಿದ್ದರು. 'ನೀರಮೂಂಟೆ' ಎಂಬ ಹೆಸರಿನ ಈ ಸಾಧನವನ್ನು ಬಿದಿರಿನಿಂದ ತಯಾರಿಸುತ್ತಿದ್ದರು. ನಳಿಗೆ ಆಕಾರದಲ್ಲಿರುವ ಇದನ್ನು ಮೇಲಿನ ಗದ್ದೆಯಿಂದ ಕೆಳಗಿನ ಗದ್ದೆಗೆ ನೀರು ಹರಿಯುವಲ್ಲಿಡಲಾಗುತ್ತದೆ. ರಾತ್ರಿಯ ನಿಶ್ಶಬ್ದದಲ್ಲಿ ಈ ನಳಿಗೆಯಲ್ಲಿ ಪ್ರತಿ ಬಾರಿ ನೀರು ತುಂಬಿದಾಗ ಅದು ಹಿಂಭಾಗದಲ್ಲಿಟ್ಟ ಕಲ್ಲು ಚಪ್ಪಡಿಗೆ ಬಡಿದು ಶಬ್ದ ಮಾಡುವಾಗ ಹಂದಿಗಳು ಹೆದರಿ ಓಡಿಹೋಗುತ್ತಿದ್ದವು. ಇದು ಸರಳವಾದ ಹೆಚ್ಚು ಖರ್ಚಿಲ್ಲದೆ ಸಿದ್ಧವಾದ ತಂತ್ರಗಾರಿಕೆ.

ಮೊಲ, ಹಕ್ಕಿ ಮುಂತಾದವುಗಳ ಬಾಧೆಯಿಂದ ತಪ್ಪಿಸಿಕೊಳ್ಳಲು ಮುಡ್ಕಣೆ ಅಥವಾ ಉರುಳು ಇಡುವುದು ಸಾಮಾನ್ಯ ಸಂಗತಿಯಾಗಿತ್ತು. ನಾಟಿಯಾದ ಗದ್ದೆಯ ಮಧ್ಯದಲ್ಲಿ ಕಾಪು ಇಡುವುದು, ಕಾಸರಕ, ಮುಂಡೇವು ನೆಡುವುದು ಕೂಡಾ ಪೈರಿನ ಸಂರಕ್ಷಣೆಯ ಉದ್ದೇಶವೆ ಆಗಿದ್ದಿರಬೇಕು. 'ಕಾಪು' ಎಂದರೆ ಉದ್ದನೆಯ ಮೂರು ಕೋಲನ್ನು (ಮುಕ್ಕಾರು) ಜೋಡಿಸಿ, ತುದಿ ಭಾಗದಲ್ಲಿ, ಮಾದರಿಯ ಬೀಳಲಿನಿಂದ ಗೂಡಿನಾಕಾರ ಹೆಣೆದು ಕೋರಿ ಜಾತಿಯ ಹುಲ್ಲನಿಟ್ಟು ಅದರಲ್ಲಿ ಕಳ್ಳಿಯ ತುಂಡೊಂದನ್ನು

ಇಡಲಾಗುತ್ತದೆ. 'ಕಾಪು' ಎನ್ನುವ ಹೆಸರೇ ಸೂಚಿಸುವಂತೆ ರಕ್ಷಣೆಯೇ ಇದರ ಉದ್ದೇಶ. ಒಂದೆಡೆ ಕಣ್ಣಿನ ದೃಷ್ಟಿ ಬೀಳಬಾರದೆಂದಾದರೆ, ಇನ್ನೊಂದೆಡೆ, ಹಕ್ಕಿಗಳು ಇದರಲ್ಲಿ ಗೂಡು ಕಟ್ಟಿ ಗದ್ದೆಯಲ್ಲಿರುವ ಹುಳ ಹುಪ್ಪಟೆಗಳನ್ನು ತಿಂದು ಪೈರಿಗೆ ಒದಗುವ ಹಾನಿಯನ್ನು ತಪ್ಪಿಸುವ ಉದ್ದೇಶವಿತ್ತೆಂದು ತಿಳಿಯಬಹುದು.

ಅಂದು ಪೈರುಗಳು ಆಳೆತ್ತರಕ್ಕೆ ಬೆಳೆದು ನಿಂತಿರುತ್ತಿತ್ತು. ತೆನೆಯ ಭಾರಕ್ಕೆ ಬಾಗಿ ಗದ್ದೆಯ ಹುಣಿಯ ಮೇಲೆ ಪೈರು ಬೀಳುವುದು ಸ್ವಾಭಾವಿಕ. ಮನೆಯ ಯಜಮಾನ ಅಥವಾ ನಿಗದಿತ ಆಳು ಇಬ್ಬನಿ ತುಂಬಿದ ಮುಂಜಾವಿನಲ್ಲಿ ತಲೆಗೊಂದು ಮುಂಡಾಸು ಸುತ್ತಿಕೊಂಡು, ಕೈಯಲ್ಲಿ 'ಬಿರು' ಹಿಡಿದು ಹುಣಿಯ ಮೇಲೆ ಬಿದ್ದ ಪೈರುಗಳು ನಡೆದಾಡುವಾಗ ಕಾಲಿಗೆ ಸಿಕ್ಕಿಹಾಳಾಗದಂತೆ ಸರಿಸುವ ಕಾಯಕ ಮಾಡುತ್ತಿದ್ದರು. 'ಬಿರು' ಎಂದರೆ ಎರಡು ಉದ್ದನೆಯ ಕೋಲುಗಳನ್ನು ಜೋಡಿಸಿ ಸಿದ್ಧಪಡಿಸಿದ ಒಂದು ಸಾಧನ. ಅಲ್ಲದೆ, ಹುಣಿ ಬದಿಗೆ ಕೋಲುಗಳನ್ನು ಊರಿ, ಕೋಲಿನಿಂದ ಕೋಲಿಗೆ ಮೊರಜ್ಜವನ್ನು ಕಟ್ಟಿ ಪೈರು ಹುಣಿಗೆ ಬೀಳದಂತೆಯೂ ಮಾಡುತ್ತಿದ್ದರು. ಇದಕ್ಕೆ ಮೊರಜ್ಜ ಬಿಡುವುದೆನ್ನುವರು.

**ಹಟ್ಟಿಯ ಸುತ್ತಮುತ್ತ :** ಒಂದು ಕಾಲದಲ್ಲಿ ಮನೆಯಂಗಳದಲ್ಲಿದ್ದ ಬೈಹುಲ್ಲಿನ ರಾಶಿ. ತುಪ್ಪೆ, ಹಟ್ಟಿಯಲ್ಲಿನ ದನಕರುಗಳು. ಉಳುಮೆಯ ಕೋಣ ಎಮ್ಮೆಗಳನ್ನು ನೋಡಿಯೆ ಮನೆಯ ಆರ್ಥಿಕ ಸ್ಥಿತಿ, ಸ್ಥಾನಮಾನ ನಿರ್ಧಾರವಾಗುತ್ತಿತ್ತು. ಅಂದು ಹಟ್ಟಿಯಲ್ಲಿ ಹಸು ಅಥವಾ ಎಮ್ಮೆಯೊಂದು ಕರು ಹಾಕಿದರೆ ಕುಟುಂಬದಲ್ಲಿ ಮಗು ಜನಿಸಿದ ಸಂಭ್ರಮ. ಪುಟ್ಟ ಕರುವಿಗೆ ಅಥವಾ ಜಾನುವಾರುಗಳಿಗೆ ಅಸೌಖ್ಯವಾದಾಗ ಮದ್ದು ಕುಡಿಸಲೆಂದೆ ತಯಾರಿಸಿದ 'ವಟ್ಟ'. ಅವುಗಳಲ್ಲಿ ಗುಡ್ಡಕ್ಕೆ ಮೇಯಲು ಬಿಟ್ಟಾಗ ಹಿಂಡಿನೊಂದಿಗೆ ತಪ್ಪಿಸಿಕೊಂಡರೂ ಪತ್ತೆ ಮಾಡಲು ಅನುಕೂಲವಾಗುವಂತೆ ಅದರ ಕುತ್ತಿಗೆಗೆ ಕಟ್ಟುವ 'ಬೊಂಕ' ಎಲ್ಲವೂ ಇಂದು ಮರೆಯಾಗಿವೆ.

ಹಟ್ಟಿಯೊಳಗೆ ದನಕರುಗಳಿಗೆ ಅಕ್ಕಚ್ಚು ಹೊಯ್ಯುತ್ತಿದ್ದ ಮರದ ಮರಿಗೆ (ಮರಾಯಿ), ಅಕ್ಕಚ್ಚು ಸಿದ್ಧಮಾಡುವ, ತೌಡು ತುಂಬಿಸಿಡುತ್ತಿದ್ದ 'ಕಪ್ಪಲು' ಕಬ್ಬಿಣ ಅಥವಾ ತಾಮ್ರದ ಬಾಲ್ದಿಗಳು, ಒಪ್ಪ ಓರಣವಾಗಿ ಜೋಡಿಸಿಡುತ್ತಿದ್ದ ನೊಗ ನೇಗಿಲು, ಮುಟ್ಟಾಳೆ, ಗೊಬ್ಬರದ ಬಟ್ಟೆ, ಗೊಬ್ಬರ ತೆಗೆಯುವ ಕೊಕ್ಕೆ, ಬೈಹುಲ್ಲು ಬಡಿಯುವ ಬೈತಡ್, ಬೈ ಹುಲ್ಲು ರಾಶಿ ಹಾಕಲು ಬಳಸುತ್ತಿದ್ದ ಕಬರ್ ಕೋಲು, ಬತ್ತ ಕುಟ್ಟಲು ಬಳಸುತ್ತಿದ್ದ ಒನಕೆ, ಅಂಗಳದಲ್ಲಿ ಬತ್ತ ಹರಡುವ ಕೈಪುಲು, ಬತ್ತ ಬೇಯಿಸಲು ಬಳಸುತ್ತಿದ್ದ ಬೃಹತ್ ಗಾತ್ರದ ತಾಮ್ರದ ಹಂಡೆ, ಬೆಂದ ಬತ್ತ ತೋಡುವ ರೊಂಕ, ಬತ್ತ ಗಾಲಿಸಲು ಬಳಸುವ ಮರದ ಕೈಸಟ್ಟಿ, ಒಣಗಿಸಲು ಹಾಕಿದ ಬತ್ತದ ಅಡಿ ಮಗುಚಲು ಉಪಯೋಗಿಸುವ 'ಒಯ್ಪಣೆ', ಅಂಗಳ ಸಮತಟ್ಟು ಮಾಡಲು ಬಳಸುತ್ತಿದ್ದ ಪೊಲಿಮಣೆ. ಅಂಗಳವನ್ನು ಗಟ್ಟಿಗೊಳಿಸುವ ಮರದ ಮುಟ್ಟಿ ಮತ್ತು 'ದಾಮನ್'. ಗದ್ದೆಯಲ್ಲಿ ಒಂದೆ ಕಡೆ ರಾಶಿ ಬಿದ್ದ ಮಣ್ಣನ್ನು ಜಾರಿಸಿ ಸಮತಟ್ಟು ಮಾಡಲು ಬಳಸುತ್ತಿದ್ದ ಓಡಮರಾಯಿ, ಗದ್ದೆಯನ್ನು ಉತ್ತ ಅನಂತರ ಸಮತಟ್ಟು ಮಾಡುವ ಹಲಗೆ (ಮೊಟ್ಟೆ ಪಲಾಯಿ), ವಿವಿಧ ಗಾತ್ರದ ಹಿಡಿಸೂಡಿಗಳು, ಕಟ್ಟಿಗೆ ಒಡೆಯುವ, ಮರ ಕಡಿಯುವ ಮಡು, ಕುಡಾರಿ, ಕೈ ಮಡು, ಕೈ ಕುಡಾರಿ, ಹಾರೆ, ಪಿಕ್ಕಾಸು ಇತ್ಯಾದಿ ಅಲ್ಲಿ ಕಂಡು ಬರುತ್ತಿತ್ತು. ಕೃಷಿ ಕಾರ್ಯಗಳಿಗೆ ಬೇಕಾಗುವ ತಾಳೆ ಮರದ ಗರಿಯಿಂದ ರಚಿಸಲಾಗುತ್ತಿದ್ದ ಚಾಪೆ, ಬೀಳಲುಗಳಿಂದ ನೇಯಲ್ಪಡುತ್ತಿದ್ದ ಕುರ್ವೆ, ತಾಳೆ ಮರದ ಪಾಂದಳದಿಂದ ಹೆಣೆಯಲಾಗುತ್ತಿದ್ದ ಗಟ್ಟಿಮುಟ್ಟಾದ ಕಾಂಟ್ಯಾ, ತಡ್ಪೆ, ಕಂಚಿತಡ್ಪೆ ಇತ್ಯಾದಿಗಳನ್ನು ಕಾಣಬಹುದಾಗಿತ್ತು.

**ಎತ್ತಿನ ಗಾಡಿ :** ಅದೊಂದು ಕಾಲವಿತ್ತು. ಒಂದೂರಿನಿಂದ ಇನ್ನೊಂದೂರಿಗೆ ಮುಖ್ಯವಾಗಿ ಘಟ್ಟದ ಮೇಲಿನಿಂದ ಸಾಮಾನು ಸರಂಜಾಮುಗಳನ್ನು ಹೊತ್ತು ಸಾಲಾಗಿ ಬರುತ್ತಿದ್ದ ಗಾಡಿಗಳ ಸಂಖ್ಯೆ 60-70ಕ್ಕೂ ಮೀರುತ್ತಿತ್ತು. ಅದೂ ರಾತ್ರಿ ಹೊತ್ತು ಲಾಟೀನಿನ ಮಂದ ಬೆಳಕಿನಲ್ಲಿ ಉರಲ್ ಹಾಕುತ್ತಾ ಸಾಗಿ ಬರುತ್ತಿದ್ದ ಆ ಸುಂದರ ದೃಶ್ಯವನ್ನು ವರ್ಣಿಸಲಸಾಧ್ಯ. ಈ ರೀತಿ ಸಾಗಿ ಬಂದ ಗಾಡಿಗಳಿಗೆ ತಂಗಲು ನಿಲ್ದಾಣವೂ ಇತ್ತು. ಬಂಟ್ವಾಳದ ಈಗಿನ ಬಡ್ಡಕಟ್ಟೆ ಹಿಂದಿನ ಕಾಲದ ಬಂಡಿಕಟ್ಟೆಯಂತೆ. ಬಂಡಿಕಟ್ಟೆ ಹೋಗಿ ಬಡ್ಡಕಟ್ಟೆಯಾಯಿತು. ಇಲ್ಲಿಯ ಎತ್ತುಗಳ ಹಾಗೂ ಗಾಡಿ ಹೊಡೆಯುವವರ ಆಯಾಸ ಪರಿಹಾರಕ್ಕೆ ವ್ಯವಸ್ಥೆ ಇರುತ್ತಿತ್ತು. ಎತ್ತಿನ ಕಾಲುಗಳಿಗೆ ಲಾಳ ಹೊಡೆಯುವುದು. ಹುರುಳಿ ತಿನ್ನಿಸುವ, ನೀರು ಕುಡಿಸುವ ವ್ಯವಸ್ಥೆಯೂ ಇರುತ್ತಿತ್ತು. ಒಂದರ್ಥದಲ್ಲಿ ಈ ಬಂಡಿಕಟ್ಟೆಗಳು ಆಗಿನ ಕಾಲದ ಕಾರ್ಯಾಗಾರಗಳು.

**ನೀರಾವರಿ ವ್ಯವಸ್ಥೆ :** ನೀರಾವರಿಗೆ ಸಂಬಂಧಪಟ್ಟಂತೆ, ನೀರು ಹಾಯಿಸಲು ಇಂದಿನಂತೆ ಅಂದು ಡೀಸೆಲ್ ಅಥವಾ ವಿದ್ಯುಚ್ಛಕ್ತಿಯಿಂದ ನಡೆಯುವ ಪಂಪ್ ಸೆಟ್ಟುಗಳಿರಲಿಲ್ಲ. 'ಏತ'ವೆ ನೀರು ಹಾಯಿಸುವ ಪ್ರಧಾನ ಸಾಧನ. ಇದನ್ನು ಚೊಟ್ಟೆ ಮರಾಯಿ ಅಂತಲೂ ಕರೆಯುತ್ತಾರೆ. ಕೆರೆ ಬಾವಿಗಳಿಂದ, ನದಿ ತೋಡುಗಳಿಂದ ನೀರನ್ನು ಏತ ಅಥವಾ ಕೊಂತಗಳ ಮುಖಾಂತರವೇ ಗದ್ದೆಗಳಿಗೆ, ಹಿತ್ತಲುಗಳಿಗೆ ಹಾಯಿಸಲಾಗುತ್ತಿತ್ತು. ಏತಗಳ ಕುರಿತಂತೆ ಹೆಚ್ಚಿನ ಪಾಡ್ದನಗಳಲ್ಲಿ ಉಲ್ಲೇಖವಿದೆ. ಇಂದು ಏತವೆಂಬ ಶಬ್ದವೇ ಬಳಕೆಯಲ್ಲಿಲ್ಲ. ಅಂತಿರುವಲ್ಲಿ ಇದರ ತಯಾರಿಕೆಗೆ ಬೇಕಾದ ವಿವಿಧ ಪರಿಕರಗಳ ಹೆಸರುಗಳ ಅಗತ್ಯವಾದರು ಏಕೆ? ಉದಾಹರಣೆಗೆ ಪಾರಿಭಾಷಿಕ ಶಬ್ದಗಳಾದ ನೊಗಮರ, ಬೆರಿಮರ, ಗಿರ್ಗೊಲು, ನಾವು, ಕರಿ, ಕುಂಡಚೆ, ಬರೋಣಿ, ಅಡ್ಡಕರಿ, ಪನೆಬಲ್ಲ್, ಉಂಡೈ, ಕುಂಜಾಲಿ, ಕೀಲ್, ಗುಮ್ಮೆ(ಕಲ್ಲ್), ಪಣೆತ್ತಗುರಿ, ಮರಾಯಿ, ಮುಟ್ಟಿಮರ, ಕಂಡಿ ಇತ್ಯಾದಿಗಳ ಅಗತ್ಯವೆ ಇಲ್ಲ. ಕೆಳಭಾಗದಿಂದ ಮೇಲ್ಭಾಗಕ್ಕೆ ನೀರು ಹಾಯಿಸುತ್ತಿದ್ದ ಕೊಂತ, ಕೊರಂಗ ಇಂದಿನವರಿಗೆ ಗೊತ್ತೇ ಇಲ್ಲ. ಅಂದು ಸೂರ್ಯೋದಯಕ್ಕೆ ಮುನ್ನ ಹಾಗೆಯೇ ಸಂಜೆಯಿಂದ ಕತ್ತಲೆಯವರೆಗೂ ಬಯಲಿನಲ್ಲಿ ಈ ಏತಗಳದ್ದೇ ಕಾರುಬಾರು. ಅದರ ವಿಶಿಷ್ಟ ಕಿರುಚಾಟ ನಿರ್ಜನ ಬಯಲಿನಲ್ಲಿ ಭ್ರಮಾಲೋಕವನ್ನೆ ಸೃಷ್ಟಿಸುತ್ತಿತ್ತು. ಗಂಡಸು ಹೆಂಗಸರೆನ್ನುವ ಭೇದವಿಲ್ಲದೆ ನೀರು ಹಾಯಿಸುವ ಈ ಕಾಯಕಕ್ಕೆ ಮನೆ ಮಂದಿಯೆಲ್ಲಾ ಕೈ ಜೋಡಿಸುತ್ತಿದ್ದರು.

**ಉಪಸಂಹಾರ :** ಇಲ್ಲಿ ಕೇವಲ ಕೃಷಿ ಕಾರ್ಯಕ್ಕೆ ಸಂಬಂಧಪಟ್ಟಂತೆ ತುಳುವರು ಬಳಸುತ್ತಿದ್ದ ವಸ್ತು ಪರಿಕರಗಳ ಮೇಲಷ್ಟೆ ಕಣ್ಣು ಹಾಯಿಸಲಾಗಿದೆ. ಇನ್ನು ಇತರ ವೃತ್ತಿಗಳಾದ ಮೀನುಗಾರಿಕೆ, ಕಳ್ಳು ಇಳಿಸುವಿಕೆ, ಗೃಹ ಕೃತ್ಯ, ಆಹಾರ, ಆಹಾರ್ಯ, ಮನೋರಂಜನೆ, ವ್ಯಾಪಾರ ವಹಿವಾಟು,ಯ ಆರಾಧನೆ, ಆಚರಣೆಗೆ ಸಂಬಂದಿಸಿದ ವಸ್ತು ಪರಿಕರಗಳನ್ನು ಹೊಂದಿರುವ ತುಳುವರ ಭೌತಿಕ ವಸ್ತು ಸಂಸ್ಕೃತಿಗೆ ಸಂಬಂಧಪಟ್ಟಂತೆ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು! ನಮ್ಮ ಹಿರಿಯರು ಬಳಸಿದ ಸಾಮಾನ್ಯ ಭೌತಿಕ ವಸ್ತು ಸಂಸ್ಕೃತಿ ಪರಿಣಾಮಕಾರಿಯಾಗಿ ಅವರ ಬದುಕಿನ ವಿವಿಧ ಸ್ತರಗಳ ಚಿತ್ರಣವನ್ನು ನೀಡಬಲ್ಲುದು.

## ಪರಾಮರ್ಶನ ಗ್ರಂಥಗಳು

ಡಿ.ಡಿ. ಕೊಸಾಂಬಿ, 1998, ಪ್ರಾಚೀನ ಭಾರತದ ಚರಿತ್ರೆ, ಎಚ್.ಎಸ್. ಶ್ರೀಮತಿ (ಅನು), ಬೆಳ್ಳಿಚುಕ್ಕಿ ಪಬ್ಲಿಷರ್ಸ್, ಬೆಂಗಳೂರು

ಶ್ರೀಪತಿ ಕಲ್ಲೂರಾಯ, 1998, 'ಕೃಷಿರಂಗ-ಒಂದು ಅವಲೋಕನ' ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ

ಪಾಲ್ತಾಡಿ ರಾಮಕೃಷ್ಣ ಆಚಾರ್, 1997, ಜಾನಪದ ಮಿನದನ, ಸುಪ್ರಿಯ ಪ್ರಕಾಶನ

ಅಮೃತ ಸೋಮೇಶ್ವರ, 1984, ತುಳು ಬದುಕು, ಪ್ರಕೃತಿ ಪ್ರಕಾಶನ

ಕೊರಡ್ಕಲ್ ಶ್ರೀನಿವಾಸ, 1949, ದಕ್ಷಿಣ ಕನ್ನಡದ ಜನಜೀವನ, ಪಟ್ಟಾಂಗ, ಕನ್ನಡ ಪಾಕ್ಷಿಕ, ಸಂಪುಟ 1, ಸಂಚಿಕೆ 8

ತುಕಾರಾಂ ಪೂಜಾರಿ, (ಸಂ), 1997, ಕಣ್ಮರೆಯಾಗುತ್ತಿರುವ ತುಳು ಬದುಕು ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ ಮಂಗಳೂರು.

*ಟಿ.ಪಿ.*

**ತೂಕ ಮತ್ತು ಅಳತೆ** ಆದಿಮಾನವ ಕೃಷಿಯನ್ನು ಅವಲಂಬಿಸಿ ವಿಕಾಸದ ಹಂತವನ್ನು ಏರುತ್ತಾ ಹೋದಂತೆ ಆತನ ವ್ಯಾವಹಾರಿಕ ಬದುಕು ಬೆಳೆವಣಿಗೆ ಹೊಂದಿತು. ಅಲ್ಲಿ ತನ್ನ ಸುತ್ತಲಿನ ಪರಿಸರದ ವಸ್ತುಗಳೆಲ್ಲವೂ ನಿರ್ದಿಷ್ಟ ತೂಕ ಮತ್ತು ಅಳತೆಯಲ್ಲಿ ಗುರುತಿಸಲ್ಪಟ್ಟವು. ತೂಕ ಮತ್ತು ಅಳತೆ ಮಾನದಂಡಗಳು ಆಧುನಿಕತೆ ಬೆಳೆದಂತೆಲ್ಲಾ ನವೀಕರಣಗೊಂಡು ಬದಲಾಗುತ್ತಿರುವುದನ್ನು ಕಾಣುತ್ತೇವೆ. ಕಾಲಗಣನೆ, ಭೂ ವಿಸ್ತೀರ್ಣದ ಅಳತೆ, ಉದ್ದ ಅಗಲದ ಅಳತೆ ಆಳ ಎತ್ತರ ಅಳತೆ, ದವಸಧಾನ್ಯಗಳ ತೂಕ ಮತ್ತು ಅಳತೆ, ಘನ ಹಾಗೂ ದ್ರವಪದಾರ್ಥಗಳ ಗಣನೆ, ಗಾತ್ರದ ಲೆಕ್ಕಾಚಾರ ಮುಂತಾದವು ಇವೆ. ಹೀಗಾಗಿ ಮಾನವ ಬಳಕೆಯ ಪ್ರತಿಯೊಂದು ವಸ್ತುವೂ ನಿರ್ದಿಷ್ಟ ಮಾಪನವನ್ನು ಹೊಂದಿವೆ. ಅಲೆಮಾರಿ ಜೀವನವನ್ನು ಬಿಟ್ಟು ಒಂದೆಡೆ ನೆಲೆಯೂರಿ ಕೃಷಿ ಆರಂಭಿಸಿದ ಮಾನವ ಮೊದಲು ವಸ್ತುವಿನಿಮಯ ಪದ್ಧತಿಯನ್ನು ಬಳಸಿ ವ್ಯವಹರಿಸುತ್ತಿದ್ದನು. ಈ ವಿನಿಮಯ ಪದ್ಧತಿ ಸ್ವಯಂಕೃತವಾದ ಒಂದು ಅಳತೆಯನ್ನು ಅವಲಂಬಿಸಿತ್ತು. ತೂಕ ಪದ್ಧತಿಯು ಅನಂತರದಲ್ಲಿ ಬೆಳೆವಣಿಗೆ ಹೊಂದಿತು. ಲೋಹಗಳನ್ನು ಹೊರತುಪಡಿಸಿ ಉಳಿದ ವಸ್ತುಗಳು ಗಾತ್ರ ಮತ್ತು ಪ್ರಮಾಣದ ಅಳತೆಯನ್ನು ಅವಲಂಬಿಸಿದ್ದುದೇ ಹೆಚ್ಚು. ನಿಸರ್ಗವನ್ನು ನೋಡಿ ಕಾಲವನ್ನು, ದೇಹದ ಅಂಗಗಳಿಂದ ಉದ್ದಗಲಗಳನ್ನು, ನೇಗಿಲಿನಿಂದ ಭೂಮಿಯನ್ನು, ಕೊಳಗ ಬುಟ್ಟಿಗಳಿಂದ ದವಸಧಾನ್ಯ, ಬೀಜಗಳನ್ನು ಅಳೆಯುತ್ತಿದ್ದರು. ಆದರೆ ಹಲವು ವಿಭಿನ್ನ ಮತ್ತು ವಿಶಿಷ್ಟ ಅಳತೆ, ತೂಕ, ವಿಧಾನಗಳನ್ನು ಈ ಮುಂದಿನಂತೆ ತಿಳಿಯಬಹುದು.

**1. ಕಾಲಗಣನೆ :**

ಹಗಲುರಾತ್ರಿಗಳ ಗಣನೆ
ಋತುಮಾನದ ಗಣನೆ
ಗಂಟೆಗಳ ಲೆಕ್ಕಾಚಾರ
ಗ್ರಹಗಳ ಚಲನೆ, ನಕ್ಷತ್ರಗಳ ಲೆಕ್ಕಾಚಾರ ಕಂಡುಬರುತ್ತದೆ.

ಹಗಲು ರಾತ್ರಿಗಳ ನಡುವಿನ ಕಾಲವನ್ನು ವಿಶಿಷ್ಟವಾಗಿ ಗುರುತಿಸುವ ಬೇರೆ ಬೇರೆ ಪರಿಭಾಷೆ ಇದೆ. ಸೂರ್ಯೋದಯವನ್ನು, ಬೆಳ್ಳಿ ಮೂಡೋ ಹೊತ್ತು, ಬೆಳಕರಿಯೋ ಹೊತ್ತು, ಕೋಳಿಕೂಗೋ ಹೊತ್ತು, ಮುಂಜಾವು ಏರ್‌ಕಟ್ಟೋ ಹೊತ್ತು (ಎತ್ತುಗಳನ್ನು ದನಕರುಗಳನ್ನು ಬಿಡುವ ಹೊತ್ತು), ದನಬಿಡೋ ಹೊತ್ತು, ಹೀಗೆ ಕರೆಯುತ್ತಾರೆ. ಇನ್ನು ಮಧ್ಯಾಹ್ನವನ್ನು ಬಿಸ್ಲೊತ್ತು, ಸುಡೋ ಹೊತ್ತು, ನೆತ್ತಿಸುಡೋ ಹೊತ್ತು, ಸಂಜೆಯನ್ನೂ ದೀಪ ಹಚ್ಚೋ ಹೊತ್ತು ಎಂದು ಕರೆಯುತ್ತಾರೆ. ಇನ್ನು ರಾತ್ರಿವೇಳೆಯನ್ನು, ಸರೊತ್ತು, ನಿಸ್ರಾತ್ರಿ ಜಾಮ, ಕಲ್ಲುನೀರು ಕರಗೋಹೊತ್ತು ಎನ್ನುತ್ತಾರೆ. ಹೀಗೆ ಹಗಲು ರಾತ್ರಿಗಳನ್ನು ನಿರ್ದಿಷ್ಟ ಕಾರ್ಯಗಳ ಅಳತೆಯಲ್ಲಿ ವಿಶಿಷ್ಟವಾಗಿ ಗುರುತಿಸಿದ್ದಾರೆ. ದಿನವೊಂದಕ್ಕೆ 60 ಘಳಿಗೆಗಳು, ಏಳೂವರೆ ಘಳಿಗೆಗಳಿಗೆ ಒಂದು ಜಾವ, ಎಂಟು ಜಾವಗಳಿಗೆ ಒಂದು ದಿವಸ. ಈ ಕ್ರಮದಲ್ಲಿ ಜಾವಗಳನ್ನು ಗುರುತಿಸುತ್ತಾರೆ.

ಜನಪದರು ಕೇವಲ ದಿನವನ್ನು ಮಾತ್ರ ಅಳೆಯುವಲ್ಲಿ ಜಾಣರಲ್ಲ. ಬದಲಾಗಿ ನಿಸರ್ಗ ಸಹಜ ಋತುಮಾನಗಳನ್ನು ತಮ್ಮದೇ ರೀತಿಯಲ್ಲಿ ಗುರುತಿಸಿಕೊಳ್ಳುತ್ತಾರೆ. ಬಿಸಿಲು ಹೆಚ್ಚಾದ ಕಾಲವನ್ನು ಬೇಸಗೆ ಎಂದು, ಚಳಿ ಹೆಚ್ಚಾದ ಕಾಲವನ್ನು ಚಳಿಗಾಲವೆಂದು, ಮಳೆ ಬೀಳುವ ಕಾಲವನ್ನು ಮಳೆಗಾಲವೆಂದು ಕರೆದರು. ಹುಣ್ಣಿಮೆಯಿಂದ ಹುಣ್ಣಿಮೆ, ಅಮಾವಾಸ್ಯೆಯಿಂದ ಅಮಾವಾಸ್ಯೆಗೆ ಒಂದು ತಿಂಗಳಾಗುವುದೆಂದು, ಯುಗಾದಿಯಿಂದ ಯುಗಾದಿಗೆ ಒಂದು ವರ್ಷವೆಂದು, ನಿಸರ್ಗದ ಋತುಮಾನವನ್ನು ನಿಸರ್ಗದ ಸಹಾಯದಿಂದಲೆ ತಿಳಿದುಕೊಳ್ಳುತ್ತಿದ್ದರು.

ಗಂಟೆಗಳ ಲೆಕ್ಕಾಚಾರಕ್ಕೆಂದೆ 'ನೇಸರ್ಗಡಿಯಾರ' ಹಾಗೂ 'ನೀರ್ಗಡಿಯಾರ'ಗಳು ಬಳಕೆಯಲ್ಲಿದ್ದುವು. ಚಪ್ಪಟೆಯಾದ ಮಣ್ಣಿನ ಪೀಠದ ಮೇಲೆ ಮಧ್ಯದಲ್ಲಿ ನಾಲ್ಕು ಬೆರಳುದ್ದದ ಕಡ್ಡಿಯನ್ನು ನೆಟ್ಟು ಆ ಕಡ್ಡಿಯ ನೆರಳಿನ ಸ್ಥಾನವನ್ನು ಅನುಸರಿಸಿ ಸಮಯವನ್ನು ತಿಳಿಯಲಾಗುತ್ತಿತ್ತು. ಈ ಪದ್ಧತಿಯೇ 'ನೇಸರ್ಗಡಿಯಾರ', ಅಂದರೆ ಸೂರ್ಯನನ್ನು ಆಧರಿಸಿ ಕಾಲವನ್ನು ತಿಳಿಯುವ ಪದ್ಧತಿ. ಇದನ್ನು ಬಿಸಿಲು ಇರುವ ದಿನಗಳಲ್ಲಿ ಮಾತ್ರ ಬಳಸಲಾಗುತ್ತಿತ್ತು. ಉಳಿದ ದಿನಗಳಲ್ಲಿ ನೀರ್ಗಡಿಯಾರದ ಬಳಕೆ ಇತ್ತು. ಇದನ್ನು ಹಗಲುರಾತ್ರಿಗಳಲ್ಲೆಲ್ಲ ಬಳಕೆ ಮಾಡಬಹುದಿತ್ತು. ಎರಡು ಸೇರಿನಷ್ಟು ನೀರು ಹಿಡಿಯುವ ತಾಮ್ರದ ಬೋಗುಣಿಯಲ್ಲಿ ಗುಂಡು ಸೂಜಿಮೊನೆಯಷ್ಟು ರಂಧ್ರವನ್ನು ಅದರ ತಳದಲ್ಲಿ ಮಾಡಿ, ನೀರಿನಲ್ಲಿ ತೇಲಿ ಬಿಟ್ಟು ಅದು ನೀರು ತುಂಬಿ ಮುಳುಗುವುದನ್ನು ಅನುಸರಿಸಿ ಕಾಲ ನಿರ್ಧಾರ ಮಾಡಲಾಗುತ್ತಿದ್ದ ಪದ್ಧತಿಯೇ ನೀರ್ಗಡಿಯಾರ. ಇದಲ್ಲದೆ ಯುರೋಪಿನಲ್ಲಿ 'ಮರಳು ಗಡಿಯಾರ' ಉಪಯೋಗದಲ್ಲಿದ್ದು, ಸಣ್ಣರಂಧ್ರವಿರುವ ದೊಡ್ಡ ಪಾತ್ರೆಯೊಂದಕ್ಕೆ ಮರಳು ತುಂಬಿ ರಂಧ್ರಕ್ಕೆ ಸಣ್ಣದೊಂದು ಕೊಳವೆಯನ್ನು ಅಳವಡಿಸಿ ಅದರ ಕೆಳಗೆ ಒಂದು ಸಣ್ಣ ಪಾತ್ರೆಯನ್ನಿಡುತ್ತಿದ್ದರು. ಮರಳು ಈ ಪಾತ್ರೆ ತುಂಬಲು ಬೇಕಾದ ಸಮಯವನ್ನು ಒಂದು ಗಂಟೆ ಎಂದು ಹೇಳುತ್ತಿದ್ದರು.

ರಾತ್ರಿಯ ಜಾವವನ್ನು ನಕ್ಷತ್ರಗಳ ಸಹಾಯದಿಂದ ಎಣಿಸುತ್ತಿದ್ದರು. ಮಳೆಯನ್ನು ಈ ನಕ್ಷತ್ರಗಳ ಆಧಾರದ ಮೇಲೆ ನಿರೀಕ್ಷಿಸುತ್ತಿದ್ದುದನ್ನು ಕಾಣುತ್ತೇವೆ. ಹೀಗಾಗಿ ನಮ್ಮಲ್ಲಿ 'ಮಳೆ ನಕ್ಷತ್ರಗಳೆಂದೆ' ಇವು ಪ್ರಚಲಿತದಲ್ಲಿವೆ. ಕೃಷಿಕರಿಗೆ ಇವುಗಳ ಬಗ್ಗೆ ಅಧಿಕ ನಂಬಿಕೆ. ಹೀಗೆ

ಗ್ರಹಗಳನ್ನು ನಕ್ಷತ್ರಗಳನ್ನು ಅನುಸರಿಸಿ ಸುತ್ತಲಿನ ಹವಾಗುಣವನ್ನು ತಿಳಿಯುವಲ್ಲಿ ಇವರ ಲೆಕ್ಕಾಚಾರ ಪಂಚಾಂಗವನ್ನು ಅವಲಂಬಿಸಿರುತ್ತದೆ. ಇದೇ ರೀತಿ ಇತ್ತೀಚೆಗೆ ' ಕೃಷಿ ಪಂಚಾಂಗ'ವನ್ನು ಪ್ರಕಟಪಡಿಸುತ್ತಿದ್ದಾರೆ.

**2. ವಿಸ್ತೀರ್ಣದ ಅಳತೆ :**


ಈ ಅಳತೆಯಲ್ಲಿ ಉದ್ದ, ಅಗಲ, ಆಳ, ಗಾತ್ರ ಎತ್ತರಗಳಲ್ಲಿ ಗುರುತಿಸುತ್ತಾರೆ.

ಸಾಮಾನ್ಯವಾಗಿ ಉದ್ದ ಅಳತೆ ಮಾಡುವಲ್ಲಿ ಇಂದಿನಂತೆ ಮೆಟ್ರಿಕ್ ಅಳತೆ ಇರಲಿಲ್ಲ. ಹೆಚ್ಚಾಗಿ ತಮ್ಮ ದೇಹದ ಅಂಗಗಳನ್ನೇ ನಿರ್ದಿಷ್ಟ ಮಾಪನವಾಗಿ ಮಾಡಿಕೊಂಡು ವಿಸ್ತೀರ್ಣವನ್ನು ಅಳೆಯ ಲಾಗುತ್ತಿತ್ತು. ಬೆರಳು, ಕೈಗಳು ಹಾಗೂ ಹೆಜ್ಜೆಗಳನ್ನು ಅವಲಂಬಿಸಿ ಉದ್ದ ಅಗಲಗಳನ್ನು ಅಳೆಯಲಾಗುತ್ತಿತ್ತು. ಗೇಣುದ್ದ, ಮೊಳುದ್ದ, ಮಾರುದ್ದ, ಹೀಗೆ ಅಳತೆ ಹೇಳುತ್ತಿದ್ದುದುಂಟು. ಸಾಮಾನ್ಯವಾಗಿ ಅಗಲವನ್ನು ಕೆಲವು ವಸ್ತುಗಳನ್ನು ಬಳಸಿ ಗುರುತಿಸುತ್ತಾರೆ . ಆನೆ ಅಷ್ಟಗ್ಲ, ಮನೆ ಅಷ್ಟಗ್ಲ ಎಂದು ಹೇಳುತ್ತಾರೆ. ಅಂಗೈಅಗಲ, ಹರಿವಾಣದಗಲ, ಚಾಪೆ ಅಗಲ, ಊರಗಲ ಎಂಬ ಬಳಕೆಯನ್ನು ಕಾಣುತ್ತೇವೆ. ಆಳವನ್ನು ಅಳೆಯಲು ಮನುಷ್ಯನನ್ನೇ ಅಳತೆಗೋಲಾಗಿಸುತ್ತಾರೆ. ಮಂಡಿ ಮಟ್ಟ ಆಳ, ನಡಮಟ್ಟ ಆಳ, ಎದಿಮಟ್ಟ ಆಳ, ಒಂದಡಿ ಆಳ, ಹತ್ತಡಿ ಆಳ ಎಂಬುದಾಗಿ ಗುರುತಿಸುವುದನ್ನು ಕಾಣುತ್ತೇವೆ.

ಗಾತ್ರದ ಅಳತೆಯಲ್ಲಿ ಮನುಷ್ಯನ ಅಂಗಗಳು ಹಾಗೂ ಕೆಲವು ದಿನ ಬಳಕೆಯ ವಸ್ತುಗಳನ್ನು ಬಳಸುತ್ತಾರೆ. ಬೆಟ್ಟಿನ್ಗಾತ್ರ, ಹೆಬ್ಬೆಟ್ಟಿನ್ಗಾತ್ರ, ಸಾಸ್ವೆಕಾಳಗಾತ್ರ, ಗುಲಗಂಜಿಗಾತ್ರ, ನಿಂಬೆಕಾಯಿಗಾತ್ರ, ಮನಗಾತ್ರ ತೊಲಗಾತ್ರ ಹೀಗೆ ವಿವಿಧ ಅಳತೆಗಳನ್ನು ಕಾಣಬಹುದು.

ಎತ್ತರವನ್ನು ಒಂದಾಳೆತ್ತರ, ಎರಡಾಳೆತ್ತರ, ಮೂರಾಳೆತ್ತರ, ಹತ್ತಾಳೆತ್ತರ, ತೆಂಗಿನಮರದೆತ್ತರ ಎಂಬುದಾಗಿ ಅಳತೆಯನ್ನು ಗುರುತಿಸುತ್ತಾರೆ.

**3. ದವಸಧಾನ್ಯಗಳ ಅಳತೆ :** ದವಸಧಾನ್ಯಗಳನ್ನು ಅಳೆಯಲು ವಿವಿಧ ಪ್ರದೇಶಗಳಲ್ಲಿ ವಿವಿಧ ಅಳತೆಯ ಸಾಧನಗಳನ್ನು ಉಪಯೋಗಿಸುತ್ತಾರೆ. ಸ್ವಾರೆ, ಹಿಡಿ, ಬೊಗಸೆ, ಸೊಲ್ಲಿಗೆ, ಪಾವು, ಚಟಾಕು, ಪಡಿ, ಸೇರು, ಬಳ್ಳ, ಮಾನ, ಕೊಳಗ, ಪಂಚಕ, ಐಗ್ಳ, ಖಂಡುಗ ಇತ್ಯಾದಿ ಮಾಪನಗಳನ್ನು ಬಳಸಿ ದವಸಧಾನ್ಯಗಳನ್ನು ಅಳೆಯುತ್ತಾರೆ. ಇಷ್ಟೇ ಅಲ್ಲದೆ ಕೃಷಿ ಬಳಕೆಯ ಪಶುಸಂಗೋಪನೆಯ ಹುಲ್ಲು, ಗೊಬ್ಬರ ಮುಂತಾದವುಗಳನ್ನೆಲ್ಲ ಗಾಡಿ ಮತ್ತು ಬಂಡಿಯ




ಲೆಕ್ಕದಲ್ಲಿ ಅಳೆಯುತ್ತಾರೆ. ಒಂದು ಗಾಡಿ ಹುಲ್ಲು, ನಾಲ್ಕ ಗಾಡಿ ಗೊಬ್ಬರ ಹೀಗೆ... ಬಳಸುತ್ತಾರೆ. ಒಂದೇ ಸಾಧನವು ವಿವಿಧ ಪ್ರಮಾಣದಲ್ಲಿ ಬಳಕೆಯಲ್ಲಿರುವುದಿದೆ. 5, 8, 10 ಕೊಳಗ ಮತ್ತು 16 ಸೇರಿನ ಕೊಳಗಗಳನ್ನು ಕಾಣುತ್ತೇವೆ. ಐದು ಸೇರು = ಒಂದು ಕೊಳಗ, ಇಪ್ಪತ್ತು ಕೊಳಗ (100 ಸೇರು) = ಒಂದು ಪಲ್ಲ.... ಎರಡು ಪಲ್ಲ = ಒಂದು



ಖಂಡುಗ, ನಾಲ್ಕು ಪಾವು = ಒಂದು ಸೇರು, ಮೂರು ಸೇರು = ಒಂದು ಬಳ್ಳ ಇತ್ಯಾದಿ. ಹೆಡಿಗೆ, ಕುಕ್ಕೆ, ಬಿಬ್ಲು, ಮೊರ, ತಡಿಕೆ, ಗುಡಾಣ, ಗೂಡೆ, ಹೋಳು, ಹಿಡಿ, ಮುಂತಾದ ಕ್ರಮಗಳಲ್ಲಿ ದವಸಧಾನ್ಯಗಳನ್ನು ಅಳೆಯುತ್ತಿದ್ದರು. ಒಂದು ಚೀಲ ಇಪ್ಪತ್ ಚೀಲ ಹೀಗೆ ಮೂಟೆಗಳಲ್ಲಿ ಅಳೆಯುವುದೂ ಕಂಡುಬರುತ್ತದೆ.

**4. ದ್ರವ ಪದಾರ್ಥಗಳ ಅಳತೆ :** ದ್ರವ ಪದಾರ್ಥಗಳನ್ನು ಸೇರು,



ಅಚ್ಚೇರು, ಪಾವು, ಚಟಾಕುಗಳಲ್ಲಿ ಅಳೆಯುತ್ತಿದ್ದರು. ಇಲ್ಲಿ ಸೇರು ಎಂಬುದು ಬೆಣ್ಣೆ, ಎಣ್ಣೆಯನ್ನು ಅಳೆಯುವಾಗ ಒಂದು ಪಾವಿನ ಸ್ಥಾನವನ್ನು ಪಡೆಯುತ್ತದೆ. ಬೆಣ್ಣೆಯನ್ನು ಒಂದು ಪಾವಿನ ಅಳತೆಗೆ ಉಂಡೆಗಳನ್ನು ಮಾಡಿ ಒಂದೊಂದು ಉಂಡೆಯನ್ನು ಒಂದು ಪಾವು ಎಂದು ಅಳೆಯಲಾಗುತ್ತದೆ. ದ್ರವ ಪದಾರ್ಥಗಳನ್ನು ಅಳೆಯಲು ಬಿದಿರಿನ ಹಂಡೆಗಳನ್ನು ಬಳಸಲಾಗುತ್ತಿತ್ತು. ದ್ರವಪದಾರ್ಥದ ಕನಿಷ್ಠ ಪ್ರಮಾಣವನ್ನು ಹೇಳಲು ಒಂದನಿ ಮಜ್ಜಿಗೆ, ಒಂದು ಗುಟುಕು ನೀರು, ಒಂದ್ ತೊಟ್ಟು ಹಾಲು, ಒಂದ್ ಓಳ್ ಎಣ್ಣೆ ಮುಂತಾದ ಶಬ್ದಗಳು ಬಳಕೆಯಲ್ಲಿವೆ. ದ್ರವ ಪದಾರ್ಥದ ಹೆಚ್ಚಿನ ಪ್ರಮಾಣವನ್ನು ಹೇಳುವಾಗ ಒಂದು ಬಳ್ಳ ನೀರು, ಅಂಡೆ ನೀರು ಕುಡ್ಡ ಎಂಬುದಾಗಿ ಬಳಸುತ್ತಾರೆ.

**5. ವಯಸ್ಸಿನ ಅಳತೆ :** ವಯಸ್ಸು ಮತ್ತು ಹಣವನ್ನು ತಮಗೆ ತಿಳಿದಿರುವ ಅಂಕಿಯವರೆಗೆ ಎಣಿಸಿ ಆಮೇಲೆ ಅದನ್ನು ದ್ವಿಗುಣಗೊಳಿಸುತ್ತಾ ಹೆಚ್ಚು ಮಾಡುತ್ತಾ ನಿರ್ದಿಷ್ಟ ಪದಗಳಲ್ಲಿ ಅಳೆಯುತ್ತಾರೆ. ಆಲ್‌ಕಂದ, ಪ್ರಾಯದಾಳು, ಕತ್ತೆ ವಯಸ್ಸು, ನೆತ್ತಿನೆರಿಯೋ ವಯಸ್ಸು, ಹೀಗೆ

ಹೇಳುತ್ತಾರೆ. ಹೆಣ್ಣು ಮಕ್ಕಳ ಬಗ್ಗೆ ಹೇಳುವಾಗ, ನೆರತಾಳ, ನೆರೆತು ನಾಕೊರಸಾತು, ಎರಡ್ ಹಡದಾಳ ಹೀಗೆ ಬೆಳವಣಿಗೆಯ ದೈಹಿಕ ಮಾನದಂಡವನ್ನು ಬಳಸಿ ಹೇಳಲಾಗುತ್ತಿತ್ತು. ದನ, ಕರು, ಎಮ್ಮೆ, ಹಸುಗಳ ವಯಸ್ಸನ್ನು ಅವುಗಳ ಹಲ್ಲಿನ ಲೆಕ್ಕದ ಮೇಲೆ ಹೇಳುತ್ತಾರೆ. ಹೆಣ್ಣುದನಗಳ ವಯಸ್ಸನ್ನು ಅವುಗಳ ಸೂಲು (ಕರುಹಾಕುವಿಕೆ)ಗಳ ಆಧಾರದ ಮೇಲೆ ನಿರ್ಧರಿಸುತ್ತಾರೆ, ಇನ್ನು ಮರಗಳ ವಯಸ್ಸನ್ನು ಅವುಗಳ ಕಾಂಡದ ಗಾತ್ರ ಮತ್ತು ಅದರ ಬೆಳಗಿನ ಸುರುಳಿಗಳ ಲೆಕ್ಕದಿಂದ ಅಳೆಯುತ್ತಾರೆ. ಹೀಗೆ ವಿವಿಧ ರೀತಿಯಲ್ಲಿ ಮನುಷ್ಯನ ಪ್ರಾಣಿಗಳ, ವಸ್ತುಗಳ ವಯಸ್ಸನ್ನು ಅಳೆಯುತ್ತಾರೆ.

**6. ಎಣಿಕೆ ವಿಧಾನ :** ಎಣಿಕೆಯ ವಿಧಾನವು ವ್ಯಾವಹಾರಿಕ ಜೀವನಕ್ಕೆ ಮುಖ್ಯವಾದದ್ದು. ದಿನಬಳಕೆಯ ಹಣ್ಣು, ಕಾಯಿ, ಪಾತ್ರೆ, ಅಳತೆಗಳನ್ನು ಮಾಡಲು ಮೊದಲು ಎಣಿಕೆ ಮುಖ್ಯವಾಗುತ್ತದೆ. ಎಣಿಕೆ ಇಂದು ಕ್ಲಿಷ್ಟಕರವೇ ಆಗಿದೆ. ಕೈಬೆರಳು, ಕಾಲುಬೆರಳುಗಳ ಸಹಾಯದಿಂದ ಇಪ್ಪತ್ತರವರೆಗೆ ಎಣಿಸುವುದು ಒಂದು ಕ್ರಮ ಹಾಗೂ ಬೆರಳುಗಳ ಗೆಣ್ಣೆಗಳನ್ನು ಬಳಸಿ ಮೂವ್ವತ್ತರವರೆಗೂ ಎಣಿಸುವ ಮತ್ತೊಂದು ಕ್ರಮವಿದೆ. ಹೆಚ್ಚಿನ ಎಣಿಕೆಗಳು ಬಂದಾಗ ಒಂದತ್ತು, ಎರಡತ್ತು, ಮೂರತ್ತು ಹೀಗೆ..... ಇಲ್ಲವೇ ಒಂದಿಪ್ಪತ್ತು, ಎರಡಿಪ್ಪತ್ತು, ಹೀಗೆ ಹೆಚ್ಚಿನ ಎಣಿಕೆ ಮಾಡುತ್ತಿದ್ದರು. ಕಲ್ಲುಗಳನ್ನು ಬಳಸಿ ಲೆಕ್ಕವಿಡುವುದು, ಸುಣ್ಣ ಅಥ'ವಾ ಇದ್ದಿಲಿನ ಗೆರೆ ಎಳೆದು ಲೆಕ್ಕವಿಡುವುದೂ ಬಳಕೆಯಲ್ಲಿತ್ತು. ಹೀಗೆ ಎಣಿಕೆ ಎಂಬುದು ಸಾಮಾನ್ಯ ಹಂತದಿಂದ ವಿಕಾಸ ಹೊಂದಿದ್ದನ್ನು ಕಾಣುತ್ತೇವೆ. ಆದರೆ ಇಂದು ಎಷ್ಟೇ ದೊಡ್ಡ ಎಣಿಕೆಯನ್ನಾದರೂ ಮಾಡಬಹುದಾದ ತಂತ್ರಾಂಶ- ಯಂತ್ರಾಂಶಗಳನ್ನು ಬಳಸುತ್ತಿದ್ದೇವೆ.

**7. ಮಳೆ ಹಾಗೂ ಗಾಳಿಯ ಅಳತೆ :** ರೈತರು, ಮೀನುಗಾರರು, ಬೇಟೆಗಾರರು, ನೌಕಾಯಾತ್ರಿಕರು ಪರಂಪರಾನುಗತವಾಗಿ ಬಂದ ಅನುಭವದಿಂದ ಮಳೆ ಬೀಳುವ ಸಂದರ್ಭಗಳನ್ನು ಮೋಡಗಳ ಹಾಗೂ ಗಾಳಿ ಬೀಸುವಿಕೆಯಿಂದಲೇ ಅರ್ಥ ಮಾಡಿಕೊಳ್ಳುವರು. 'ಮಲೆ ಮೇಲೆ ಮೋಡ ಕಟ್ಟಿದರೆ ಮಳೆ ತಪ್ಪದು' ಎಂದು ಸುಲಭವಾಗಿ ಮಳೆಯ ಸೂಚನೆ ನೀಡುತ್ತಿದ್ದರು. ಏಪ್ರಿಲ್-ಮೇ ಅವಧಿಯಲ್ಲಿ ಮುಂಗಾರು ಮಳೆಯಾದರೆ, ಸೆಪ್ಟೆಂಬರ್- ಅಕ್ಟೋಬರ್ ಅವಧಿಯ ಮಳೆಯನ್ನು ಹಿಂಗಾರು ಮಳೆ ಎಂದು ಗುರುತಿಸುತ್ತಾರೆ. ಮಳೆಯ ಪ್ರಮಾಣವನ್ನು ಕುರಿತು, ಹದ ಮಳೆ, ಧೂಳಡಗೋ ಮಳೆ, ಬಟ್ಟೆ ನೆನೆಯುವಷ್ಟು ಚಪ್ಪಿ ತ್ಯಾಮಾಗುವಷ್ಟು, ದೋಮಳೆ, ಕುಟುಗ್ಲುಮಳೆ, ಸೋನೆಮಳೆ, ಉದ್ರುಮಳೆ ಮುಂತಾಗಿ ಗುರುತಿಸುತ್ತಾರೆ. ಗಾಳಿಯ ಬೀಸುವಿಕೆಯನ್ನು ಹೇಳುವಾಗ ಬೀಸುವಿಕೆಯ ರಭಸ ಹಾಗೂ ರೀತಿಯನ್ನು ನೋಡಿ ಸುಂಟರಗಾಳಿ, ಬಿರುಗಾಳಿ, ಶೀತಗಾಳಿ, ಬಿಸಿಗಾಳಿ, ಪೈರ್ ಮಲಗ್ಸಗಾಳಿ ಹೀಗೆ ವಿವಿಧ ರೀತಿಯಲ್ಲಿ ಕಾಲದ ಆಧಾರದ ಮೇಲೆ ಮಳೆಗಾಳಿ, ಚಳಿಗಾಳಿ, ಬಿಸಿಲುಗಾಳಿ ಎಂದು ಗುರುತಿಸುವುದನ್ನು ಕಾಣುತ್ತೇವೆ.

**8. ಶೀತೋಷ್ಣಗಳ ಅಳತೆ :** ತಮ್ಮ ದಿನನಿತ್ಯದ ಬಳಕೆಯ ವಸ್ತುಗಳಾದ ನೀರು, ಹಾಲು, ದೇಹದ ಉಷ್ಣಾಂಶ ಮುಂತಾದವನ್ನು ವಿವಿಧ ರೀತಿಯಲ್ಲಿ ಗುರುತಿಸುತ್ತಾರೆ : ಉಗುರು ಬೆಚ್ಚಗೆ, ಕಾದುಕುದೀತಾದೆ, ಉಕ್ಕಿ ಮಳ್ತಾವೆ, ಮೈ ಹದಕ್ಕೆ ಕಾದಿದೆ, ಹೀಗೆ ನೀರಿನ ಉಷ್ಣಾಂಶವನ್ನು ಅಳೆಯುತ್ತಾರೆ. ಜ್ವರದ ಪ್ರಮಾಣವನ್ನು ಹೇಳುವಾಗ ಮೈಕಾದು ಕೆಂಡವಾಗಿದೆ, ಬೆಚ್ಚಗಿದೆ. ಬೆಂಕಿ ಉರ್ದಂಗ್ ಉರಿತಾದೆ, ಕಾದು ಅವುಲಾಯ್ತದೆ ಇತ್ಯಾದಿಯಾಗಿ ಗುರುತಿಸುತ್ತಾರೆ. ಸೂರ್ಯನ ಶಾಖ ಕುರಿತಂತೆ ಹೇಳುವಾಗ ಎಳ ಬಿಸ್ಲು, ಇಳಿ ಬಿಸ್ಲು, ಹೊಫ್ಲೆ ಬರೋ ಬಿಸ್ಲು, ಉರಿಬಿಸ್ಲು ಮುಂತಾಗಿ ಹೇಳುತ್ತಾರೆ. ಶೀತವನ್ನು ಹೇಳುವಾಗ ಮೈ ಕೊರಿಯೋ ಶೀತ, ಗಡಗಡನಡಗ್ಸ ಶೀತ, ಹಲ್ಗ್‌ಹಲ್ಗೊಡಿಯೋ ಚಳಿ ತಣ್ಣಗ್ ಕೊರಿತಾದೆ, ಆರಿ ಅಣ್ಣೆಕಲ್ಲಾಗದೆ, ಮುಂತಾದ ರೀತಿಯಲ್ಲಿ ಹೇಳುತ್ತಾರೆ.

**9. ತೂಕ ಮತ್ತು ಭಾರದ ಅಳತೆ :** ತೂಕವು ಇತ್ತೀಚೆಗೆ ಅತಿ ಹೆಚ್ಚು ಅಳತೆಯ ಸಾಧನವಾಗಿ ಗುರುತಿಸಲ್ಪಡುತ್ತಿದೆ. ಆದರೆ ಹಿಂದೆ ಇದರ ಬಳಕೆ ತೀರ ಕಡಿಮೆ ಇತ್ತು. ತೂಕ ಅಳತೆಗಾಗಿ ತೂಗುವ ಕೋಲನ್ನು ಬಳಸುವುದು ರೂಢಿಯಲ್ಲಿತ್ತು. ಹಳ್ಳಿಗಳಲ್ಲಿ ಈಗಲು ತಕ್ಕಡಿಯ ಬದಲು ತೂಗುಕೋಲನ್ನು ಬಳಸುವುದನ್ನು ಕಾಣುತ್ತೇವೆ. ಲೋಹಗಳನ್ನು ಅಳತೆ ಮಾಡಲು ಈ ತೂಕವಿಧಾನ ಬಳಸುತ್ತಿದ್ದರು. ತೂಕ ಹಾಕಲು ತೂಕದ ಬಟ್ಟಲುಗಳನ್ನು ಹೊಂದಿದ ತಕ್ಕಡಿ ಮಾಡಿಕೊಳ್ಳುತ್ತಿದ್ದರು. ಸೇರು, ಪಾವು, ತೊಲ (ಹತ್ತು ಗ್ರಾಂ ಅಥವಾ ಹನ್ನೊಂದು ಗ್ರಾಂ), ವೀಸೆ (ಪಂಚೇರು) ಮುಂತಾದ ರೀತಿಯಲ್ಲಿ ತೂಕವನ್ನು ಮಾಡುತ್ತಾರೆ. ಇಂದು ಮೆಟ್ರಿಕ್ ಪದ್ಧತಿಯ ಕಿಲೋ ತೂಕವು ಅತಿ ಹೆಚ್ಚು ಬಳಕೆಯಲ್ಲಿದೆ. ಭಾರವನ್ನು ಹೇಳುವಾಗ ಅತಿ ಹೆಚ್ಚು ಭಾರಕ್ಕೆ ಹೆಣಭಾರ, ಮಣಭಾರ, ದೆಯ್‌ಭಾರ ಎಂದೂ, ಕಡಿಮೆ ಭಾರಕ್ಕೆ 'ಮಲ್ಲಿಗೆ ಹೂವಿನ ಭಾರ' ಎಂದು ಹಗುರವನ್ನು ಹೇಳುತ್ತಾರೆ, ತೂಕಕ್ಕೆ ಸಂಬಂಧಿಸಿದಂತೆ 'ಮಣ' (40 ಸೇರು) ದೊಡ್ಡ ಅಳತೆಯಾಗಿದೆ.

**10. ನಾಣ್ಯಗಳು :** ಅಳತೆ ಮಾಪನದಲ್ಲಿ ವಸ್ತುವಿನಿಮಯ ಪದ್ಧತಿ ದೂರವಾದಂತೆ ಹಣದ ವ್ಯವಹಾರ ಮುಖ್ಯವಾಯಿತು. ಆಗ ನಾಣ್ಯದ ಲೆಕ್ಕಾಚಾರವು ಆವಶ್ಯಕವಾಯಿತು. ಹಿಂದೆ ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳು ಚಾಲ್ತಿಯಲ್ಲಿದ್ದು, ಅನಂತರದಲ್ಲಿ ಇವು ವ್ಯಾಪಾರ, ವ್ಯವಹಾರ ಬೆಳೆವಣಿಗೆಗೆ ಸಹಾಯಕವಾದುವು. ಮುಂದುವರಿದು ಇಪ್ಪತ್ತನೇ ಶತಮಾನದಲ್ಲಿ ಆಣೆ, ಪೈಸೆ, ರೂಪಾಯಿಗಳ ಲೆಕ್ಕಾಚಾರ ರೂಢಿಗೆ ಬಂತು. ನಿಕ್ಕಲ್ ನಾಣ್ಯಗಳು ಕಾಗದದ ನೋಟುಗಳು ಬಂದ ಮೇಲೆ ಈ ಆಣೆ, ಅರ್ಧಾಣೆಯ ನಾಣ್ಯಗಳು ಕಣ್ಮರೆಯಾಗಿ ಇಂದು ರೂಪಾಯಿ ಲೆಕ್ಕಾಚಾರ ಪ್ರಾಮುಖ್ಯ ಪಡೆದಿದೆ.

ಒಟ್ಟಾರೆಯಾಗಿ ಮಾನವ ಬಳಸುತ್ತಿರುವ ತೂಕ ಮತ್ತು ಅಳತೆಯ ಮಾನದಂಡಗಳೂ ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವುದನ್ನು ಕಾಣುತ್ತೇವೆ. ನಿಸರ್ಗಜೀವಿಯಾಗಿ ಬೆಳೆದ ಆದಿಮಾನವ, ವ್ಯವಸಾಯ ಕೈಗೊಂಡು ಕೃಷಿಕನಾಗಿ ಒಂದೆಡೆ ನೆಲೆ ನಿಂತಾಗ ನಿಸರ್ಗವೇ ಅವನ ತೂಕ, ಅಳತೆಯ ಮಾನದಂಡವನ್ನು ಒದಗಿಸಿತ್ತು. ಇಂದು ಆಧುನೀಕರಣದ, ವ್ಯಾವಹಾರಿಕ ಬದುಕು ತೂಕ ಅಳತೆಗಾಗಿ ನಿರ್ದಿಷ್ಟ ಯಂತ್ರ, ತಂತ್ರಗಳನ್ನು ಒದಗಿಸಿದೆ. ಆದರೂ ಇವೆಲ್ಲ ಆಧುನೀಕರಣದ ತಾಯಿಬೇರು ನಿಸರ್ಗದಲ್ಲೇ ಅಡಗಿವೆ ಎಂಬುದು ಸತ್ಯ.

*ಎ.ಎಸ್.ಎಸ್.*

**ತೆಂಗು** ಪ್ರಪಂಚದಲ್ಲಿರುವ ಅತ್ಯಂತ ಉಪಯುಕ್ತ ಮರಗಳಲ್ಲಿ ಒಂದಾಗಿದೆ. ಇದರ ವೈಜ್ಞಾನಿಕ ಹೆಸರು ಕೋಕೋಸ್ ನುಸಿಫೆರಾ. ಇದು ಏಕದಳ ಸಸ್ಯಗಳ ಗುಂಪಿನದಾಗಿದ್ದು, 'ಅರಕೇಸಿ' ಪಾಮೆ ಎಂಬ ಕುಟುಂಬಕ್ಕೆ ಸೇರಿದೆ. ಇಂಗ್ಲಿಷಿನಲ್ಲಿ ಇದನ್ನು ಕೋಕೊನಟ್, ಸಂಸ್ಕೃತದಲ್ಲಿ ನಾರೀಕೇಳ, ದೃಢಫಲ, ತಮಿಳಿನಲ್ಲಿ ತೆಂಗಾಯ್, ತೆಲುಗಿನಲ್ಲಿ ಟೆಂಕಾಯ ಚೆಟ್ಟು, ಮಲಯಾಳಂನಲ್ಲಿ ತೆಂಗ, ನಾಳಿಗೇರಂ ಎಂದು ಕರೆಯುತ್ತಾರೆ.

ತಾಳವೃಕ್ಷಗಳಲ್ಲೆಲ್ಲ ಇದು ಅತ್ಯಂತ ಸುಂದರವಾದ ಮರ, ಸಸ್ಯ ಸಂಕುಲದಲ್ಲಿಯೇ 'ಕಲ್ಪವೃಕ್ಷ'ವೆಂದು ಪ್ರಸಿದ್ಧವಾಗಿದೆ. ಇದರ



ಪ್ರತಿಯೊಂದು ಭಾಗವೂ ಮಾನವನಿಗೆ ಒಂದಿಲ್ಲೊಂದು ರೀತಿಯಲ್ಲಿ ಪ್ರಯೋಜನಕಾರಿ. ಇದರಿಂದ ಆಹಾರ, ವಸತಿ, ಎಣ್ಣೆ, ಸಾಬೂನು, ನಾರು, ಪಶು ಆಹಾರ ಮತ್ತು ಕಾಂತಿವರ್ಧಕ ವಸ್ತು ತಯಾರಿಕಾ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳು ದೊರೆಯುತ್ತವೆ. ತೆಂಗಿನ ನಾರಿನಿಂದ ಜಮಖಾನ, ಕುಳಿತುಕೊಳ್ಳಲು ಮತ್ತು ಒರಗಿಕೊಳ್ಳಲು ಉಪಯೋಗಿಸುವ ಮೆತ್ತೆ, ದಿಂಬುಗಳು, ಹಾಸಿಗೆಗಳು ಕಾಲೊರಸು ಮುಂತಾದವುಗಳನ್ನು ತಯಾರಿಸಲಾಗುತ್ತದೆ.

ತೆಂಗಿನ ಮರದ ಕಾಂಡವನ್ನು ಮನೆ ಕಟ್ಟುವ ಮರ ಮುಟ್ಟಾಗಿ ಉಪಯೋಗಿಸುತ್ತಾರೆ. ಗರಿಗಳನ್ನು ಹೆಣೆದು ಗುಡಿಸಲುಗಳಿಗೆ ಹೊದಿಸಲಾಗುತ್ತದೆ. ತೆಂಗಿನ ಚಿಪ್ಪು ಹಾಗೂ ಗರಿಕಾಂಡಗಳನ್ನು ಉರುವಲಾಗಿ, ಕಾಯಿಸಿಪ್ಪೆಯನ್ನು ಕಾಲೊರಸು ಹಾಗೂ ಹಗ್ಗ ತಯಾರಿಕೆಗೆ ಬಳಸಲಾಗುತ್ತದೆ. ಮುಖ್ಯವಾಗಿ ಕಾಯಿಯ ತಿರುಳಿನಿಂದ ಕೊಬ್ಬರಿ, ಖಾದ್ಯತೈಲ, ಹಿಂಡಿ ಇತ್ಯಾದಿ ತಯಾರಿಸುತ್ತಾರೆ.

ಎಳನೀರು ದೇಹಕ್ಕೆ ತಂಪು ನೀಡುವ ಪೋಷಕಾಂಶ ಯುಕ್ತವಾದುದು. ರೋಗಿಗಳಿಗೆ ಮೂತ್ರ ಉತ್ತೇಜಕ ಹಾಗೂ ಬಲವರ್ಧಕ. ಅರಳದೇ ಇರುವ ತೆಂಗಿನ ಹೊಂಬಾಳೆಯಿಂದ ತೆಗೆಯುವ ನೀರಾದಿಂದ ಹೆಂಡ, ಪೆನ್ನಿ, ಸಾರಾಯಿ ಅಥವಾ ವಿನೇಗಾರ್ ಇತ್ಯಾದಿ ಮಾದಕ ಪಾನೀಯಗಳನ್ನು ತಯಾರಿಸಬಹುದು. ತೆಂಗಿನ ಮರದ ಬೇರಿನ ಕಷಾಯವು ಜಠರದ ಬೇನೆಗಳ ನಿವಾರಣೆಗೆ ಉಪಯುಕ್ತ.

**ಮೂಲಸ್ಥಾನ :** ತೆಂಗಿನ ಮರ ಅತಿ ಪುರಾತನ ಕಾಲದಿಂದಲೂ ಬಹುಮಟ್ಟಿಗೆ ಉಷ್ಣವಲಯದ ಪ್ರದೇಶಗಳಲ್ಲಿ ಇತ್ತೆಂದು ತಿಳಿದು ಬರುತ್ತದೆ. ಇದನ್ನು ಮಲಯಾ, ಪೂರ್ವ ದ್ವೀಪಸ್ತೋಮ, ಪೂರ್ವ ಮತ್ತು ಮಧ್ಯ ಪೆಸಿಫಿಕ್ ಸಾಗರದ ದ್ವೀಪಗಳು, ಶ್ರೀಲಂಕಾ ಹಾಗೂ ಭಾರತದ ಕರಾವಳಿ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಆದರೆ ತೆಂಗಿನ ಮೂಲ ಭಾರತ ಎಂದು ಹೇಳುವುದಕ್ಕೆ ಹಲವಾರು ಪುರಾವೆಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಕನ್ಯಾಕುಮಾರಿಭೂಶಿರದವರೆಗಿನ ಮಲಬಾರ್ ತೀರಪ್ರದೇಶವನ್ನು 'ಕೇರಲಾವರ್' (ತೆಂಗಿನ ನಾಡು) ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದು. ಅಲ್ಲಿ ತೆಂಗಿನ ಉದ್ದಿಮೆಯು ಗ್ರಾಮೀಣ ಜನಜೀವನದ ಹಾಗೂ ಜನರ ಕಸುಬುಗಳ ಜೊತೆಗೆ ಬಹು ನಿಕಟವಾದ ಬಾಂಧವ್ಯವನ್ನು ಹೊಂದಿದೆ.

**ತೆಂಗು ಬೆಳೆಯುವ ಪ್ರದೇಶಗಳು :** ಫಿಲಿಪ್ಪೈನ್ಸ್, ಇಂಡೋನೇಷಿಯಾ, ಭಾರತ, ಮಲೇಷಿಯಾ, ಶ್ರೀಲಂಕಾ, ಫಿಜಿ, ಜಾವಾ ಹಾಗೂ ಜುಮೈಕಾ ದೇಶಗಳಲ್ಲಿಯೂ ಬೆಳೆಯಲಾಗುತ್ತಿದೆ.

ಪ್ರಪಂಚದ ತೆಂಗು ಬೆಳೆಯುವ ರಾಷ್ಟ್ರಗಳಲ್ಲಿ ಭಾರತವು ಮೂರನೆಯ ಸ್ಥಾನವನ್ನು ಹೊಂದಿದ್ದು, ಮೊದಲನೆಯ ಸ್ಥಾನವನ್ನು ಫಿಲಿಪ್ಪೈನ್ಸ್ ಮತ್ತು ಎರಡನೆಯ ಸ್ಥಾನವನ್ನು ಇಂಡೋನೇಷಿಯಾ ರಾಷ್ಟ್ರಗಳು ಪಡೆದಿವೆ.

ಭಾರತದಲ್ಲಿ ಕೇರಳ ರಾಜ್ಯ ತೆಂಗನ್ನು ಬೆಳೆಯುವಲ್ಲಿ ಮೊದಲನೆಯ ಸ್ಥಾನದಲ್ಲಿದ್ದು. ತಮಿಳುನಾಡು ಮತ್ತು ಕರ್ನಾಟಕ ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿವೆ. ತೆಂಗನ್ನು ಬೆಳೆಯುವ ಇತರ ರಾಜ್ಯಗಳೆಂದರೆ ಆಂಧ್ರಪ್ರದೇಶ, ಒಡಿಸ್ಸಾ, ಮಹಾರಾಷ್ಟ್ರ, ಗೋವಾ, ಅಂಡಮಾನ್-ನಿಕೋಬಾರ್ ದ್ವೀಪಗಳು, ಲಕ್ಷದ್ವೀಪಗಳು, ಅಸ್ಸಾಂ, ಪಶ್ಚಿಮಬಂಗಾಳ, ಪಾಂಡಿಚೇರಿ, ತ್ರಿಪುರ, ಗುಜರಾತ್, ಬಿಹಾರ ಮತ್ತು ಮಧ್ಯಪ್ರದೇಶ.

**ಸ್ವರೂಪ :** ತೆಂಗಿನ ಮರ ಬಹುವಾರ್ಷಿಕ ಬೆಳೆ. ಇದು ಸುಮಾರು 20-30 ಮೀ. ಎತ್ತರದವರೆಗೆ ಬೆಳೆಯುತ್ತದೆ ಹಾಗೂ 80 ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಕಾಲ ಜೀವಿಸಿರುತ್ತದೆ. ಇದರಲ್ಲಿ ಮುಖ್ಯವಾಗಿ ಕಂಡು ಬರುವ ಭಾಗಗಳೆಂದರೆ- ಬೇರು, ಕಾಂಡ ಮತ್ತು ಗರಿ, ಹೊಂಬಾಳೆ (ಹೂಗೊಂಚಲು), ಕಾಯಿ.

**ಬೇರು :** ಈ ಸಸ್ಯವು ನಾರಿನಿಂದ ಕೂಡಿದ ಸೂಕ್ಷ್ಮ ಬೇರು ವ್ಯೂಹವನ್ನು ಹೊಂದಿದ್ದು, ಭೂಮಿಯಲ್ಲಿ ನೆಲೆ ನಿಲ್ಲಲು ಆಧಾರ ಒದಗಿಸುವುದರ ಜೊತೆಗೆ ನೀರು ಹಾಗೂ ಪೋಷಕಾಂಶಗಳನ್ನು ಹೀರಿಕೊಳ್ಳುವ ಅಂಗವಾಗಿದೆ. ಸು. 3000-10,000 ಬೇರುಗಳಿದ್ದು ಮರದ ಸುತ್ತಲೂ ವೃತ್ತಾಕಾರದಲ್ಲಿ ಬುಡದಿಂದ ಸಮತಲದ ದಿಕ್ಕಿನಲ್ಲಿ

ಸು. 8-9 ಮೀ. ದೂರದವರೆಗೆ ಹಾಗೂ 1-2 ಮೀ ಆಳದವರೆಗೆ ಹರಡಿರುತ್ತದೆ.

**ಕಾಂಡ ಮತ್ತು ಗರಿ :** ಭೂಮಿಯ ಮೇಲ್ಭಾಗದಲ್ಲಿ ದೃಢವಾದ ಕಾಂಡವು ಗಿಡ ನೆಟ್ಟ 3-4 ವರ್ಷಗಳಲ್ಲಿ ಆರಂಭವಾಗುತ್ತದೆ. ಮರದ ಕಾಂಡವು ತುದಿಯಲ್ಲಿ ಕೇವಲ ಒಂದೇ ಒಂದು ಅಂಕುರಣ (ತುದಿ) ಮೊಗ್ಗನ್ನು ಹೊಂದಿರುವುದರಿಂದ ಹಾಗೂ ಹೊರ ಬೆಳವಣಿಗೆಯುಳ್ಳ ಗಿಡಗಳ ತೊಗಟೆಯ ಕೆಳಗಿರುವ ಕೋಶಮಯವಾದ ಕೂಡು ಪದರವು ಇಲ್ಲದೇ ಇರುವುದರಿಂದ ಕಾಂಡಕ್ಕೆ ಯಾವುದೇ ರೀತಿಯ ಹಾನಿಯಾದರೆ ಹೊಸದಾಗಿ ಕೂಡು ಪದರ ಬೆಳೆಯುವುದಿಲ್ಲ.

ಒಂದು ಮರದಲ್ಲಿ ಸುಮಾರು 30-40 ಗರಿಗಳು 4-6 ಸುತ್ತುಗಳಲ್ಲಿ ಕಾಂಡಕ್ಕೆ ಅಂಟಿಕೊಂಡಿರುತ್ತವೆ.



**ಹೊಂಬಾಳೆ (ಹೂಗೊಂಚಲು) :** ಇಳುವರಿನೀಡುವ ಹಂತ ತಲುಪಿದ ತೆಂಗಿನ ಮರದಲ್ಲಿ ಪ್ರತಿಯೊಂದು ಗರಿಯ ಕಂಕುಳಲ್ಲಿ ಒಂದು ಹೂಗೊಂಚಲು ಬರುತ್ತದೆ. ವರ್ಷದಲ್ಲಿ ಬರುವ ಹೊಂಬಾಳೆಗಳ ಸಂಖ್ಯೆಯು ಗರಿಗಳ ಸಂಖ್ಯೆಗೆ ಸಮವಾಗಿದ್ದು, ಸಾಮಾನ್ಯವಾಗಿ ವರ್ಷಕ್ಕೆ 12-15 ಹೊಂಬಾಳೆಗಳು ಬರುತ್ತದೆ. ತೆಂಗಿನ ಮರದಲ್ಲಿ ಗಂಡು ಮತ್ತು ಹೆಣ್ಣು ಹೂಗಳು ಎಂದು ಎರಡು ರೀತಿ ಇದ್ದು ಒಂದೇ ಹೊಂಬಾಳೆಯಲ್ಲಿರುತ್ತವೆ. ಪ್ರತಿಯೊಂದು ಹೊಂಬಾಳೆ ಶಾಖೆಯ ಬುಡದಲ್ಲಿ ಗುಂಡಾಕಾರದ ಹೆಣ್ಣು ಹೂಗಳು ತುದಿಯಲ್ಲಿ ಕುಸುಬೆ ಕಾಳಿನ ಆಕಾರದಲ್ಲಿರುವ ಗಂಡು ಹೂವುಗಳು ಇರುತ್ತದೆ. ಕೆಲವೊಂದು ಗಂಡು ಹೂಗಳು ಹೆಣ್ಣು ಹೂಗಳ ಮಧ್ಯದಲ್ಲಿರುತ್ತವೆ. ಪೂರ್ತಿ ಬೆಳವಣಿಗೆ ಹೊಂದಿದ ಇನ್ನೂ ಬಿಚ್ಚಿಕೊಂಡಿರದ ಹೊಂಬಾಳೆಯನ್ನು ಆವರಿಸಿರುವ ಕವಚವು ಗಟ್ಟಿಯಾಗಿದ್ದು, ಸು. 120x15x16 ಸೆಂ.ಮೀ. ಗಾತ್ರವಿರುತ್ತದೆ. ಈ ಕವಚ ಪತ್ರವು ಸೀಳಿಕೊಂಡು ಹೊಂಬಾಳೆ ಅರಳಿ ಹೊರ ಬರಲು 75-90 ದಿನಗಳು ಬೇಕಾಗುತ್ತವೆ. ಈ ಕವಚ ಪತ್ರವು ಬಿಚ್ಚಿ ಕೊಳ್ಳುವುದಕ್ಕಿಂತ ಸುಮಾರು 32 ತಿಂಗಳುಗಳ ಮುಂಚೆ ಹೊಂಬಾಳೆಗಳು ಪ್ರಥಮ ಅಂಕುರಣವಾಗಿರುತ್ತವೆ.

**ಪರಾಗಸ್ಪರ್ಶ :** ತೆಂಗಿನ ಮರದಲ್ಲಿ ಗಂಡು ಮತ್ತು ಹೆಣ್ಣು ಹೂಗಳು ಎರಡೂ ಒಂದೇ ಹೊಂಬಾಳೆಯಲ್ಲಿದ್ದರೂ ಸಹ ಎತ್ತರ ತಳಿಗಳಲ್ಲಿ ಪರಕೀಯ ಪರಾಗಸ್ಪರ್ಶ ಹಾಗೂ ಗಿಡ್ಡ ತಳಿಗಳಲ್ಲಿ ಸ್ವಕೀಯ ಪರಾಗಸ್ಪರ್ಶವು ನಡೆಯುತ್ತದೆ. ಎತ್ತರ ಜಾತಿಯ ತಳಿಗಳಲ್ಲಿ ಪರಕೀಯ ಪರಾಗಸ್ಪರ್ಶವು ಗಾಳಿ ಮತ್ತು ಕೀಟಗಳಿಂದ ನಡೆಯುತ್ತದೆ. ಕೀಟಗಳಲ್ಲಿ ಎಪಿಸ್ ಇಂಡಿಕಾ, ಎಪಿಸ್ ಫ್ಲೋರಿಯಾ ಮತ್ತು ಎಪಿಸ್ ಡಾರ್ನೇಟಾ ಎಂಬ ಜಾತಿಗೆ ಸೇರಿದ ಜೇನುಹುಳುಗಳು ಪರಾಗಸ್ಪರ್ಶ ಕಾರ್ಯದಲ್ಲಿ ಭಾಗವಹಿಸುತ್ತವೆ. ಸಾಮಾನ್ಯ ನೊಣ, ದುಂಬಿಗಳು ಈ ಕ್ರಿಯೆಯಲ್ಲಿ ನೆರವಾಗುತ್ತವೆ.


ಪರಾಗಸ್ಪರ್ಶವಾದ ಅನಂತರ ಗರ್ಭಧಾರಣೆಯಾಗದ ಹೆಣ್ಣು ಹೂಗಳು ಕಂದು ಬಣ್ಣಕ್ಕೆ ತಿರುಗಿ ಹೊಂಬಾಳೆಯಿಂದ ಉದುರುತ್ತವೆ. ಗರ್ಭಧಾರಣೆಯಾದ ಬಹಳಷ್ಟು ಸಂಖ್ಯೆಯ ಹೆಣ್ಣು ಹೂವುಗಳು ಸರಿಯಾಗಿ ಬೆಳವಣಿಗೆ ಹೊಂದಲು ವಿಫಲವಾಗಿ ಉದುರಿ ಹೋಗುತ್ತವೆ. ಉತ್ಪತ್ತಿಯಾದ ಶೇ. 50-80 ರಷ್ಟು ಹೆಣ್ಣು ಹೂವುಗಳು ಉದುರಿ ಹೋಗಿ ಶೇ. 20-50 ರಷ್ಟು ಹೂವುಗಳು ಕಾಯಿಗಳಾಗಿ ಅಭಿವೃದ್ಧಿ ಹೊಂದುತ್ತವೆ.

**ಕಾಯಿ :** ಹೆಣ್ಣು ಹೂವುಗಳು ಗರ್ಭಧಾರಣೆಯಾದ ದಿನದಿಂದ ಕಾಯಿ ಬಲಿಯಲು ಸುಮಾರು 11-12 ತಿಂಗಳು ಬೇಕಾಗುತ್ತದೆ. ಬಲಿತ ಕಾಯಿ ಅಂಡಾಕಾರದಲ್ಲಿದ್ದು, ಮೂರು ಏಣುಗಳು, 15-30 ಸೆಂ.ಮೀ. ಉದ್ದವಿದ್ದು, ಒಂದೇ ಒಂದು ಬೀಜ ಅಥವಾ ಭ್ರೂಣವನ್ನು ಹೊಂದಿರುತ್ತದೆ. ಕಾಯಿಯ ಹೊರ ಭಾಗದಲ್ಲಿರುವ ನುಣುಪಾದ ಸಿಪ್ಪೆ 'ಹೊರಪದರ', ಅದರ ಒಳಗಿರುವ ತೆಂಗಿನ ನಾರು 'ನಡುವಣಪದರ' ಹಾಗೂ ಅದರ ಒಳಭಾಗದಲ್ಲಿರುವ ಗಟ್ಟಿಯಾದ ಚಿಪ್ಪು 'ಒಳಪದರ' ಅದರ ಒಳ ಭಾಗದಲ್ಲಿರುವ ಮಂದವಾದ ಸಾರಜನಕ ಯುಕ್ತ ತಿರುಳನ್ನು ಬೀಜಾಂತಸ್ಸಾರ' ಎಂದು ಕರೆಯಲಾಗುತ್ತದೆ.

ಚಿಪ್ಪಿನ ಒಂದು ತುದಿಯಲ್ಲಿ ಮೂರು ಕಣ್ಣುಗಳಿದ್ದು, ಕಣ್ಣುಗಳ ಹತ್ತಿರ ಮೃದುವಾದ ಚಿಕ್ಕದಾದ ಭ್ರೂಣವು ಇರುತ್ತದೆ. ಕಾಯಿಯ ಒಳಭಾಗದಲ್ಲಿರುವ ಖಾಲಿ ಜಾಗದಲ್ಲಿ ಕಾಯಿಯ ಎಳೆಯದಾಗಿದ್ದಾಗ ಸಂಪೂರ್ಣವಾಗಿಯೋ ಮತ್ತು ಭಾಗಶಃವಾಗಿಯೋ ನೀರು ತುಂಬಿರುತ್ತದೆ. ಒಂದು ಬಲಿತ ಕಾಯಿಯಲ್ಲಿ ಸು. ಶೇ. 28 ರಷ್ಟು ಕಾಯಿಯ ತಿರುಳು ಹಾಗೂ ಸು. ಶೇ. 25 ರಷ್ಟು ನೀರು ಇರುತ್ತದೆ.

**ಬೀಜ ಮೊಳೆಯುವಿಕೆ :** ಬಲಿತ ಕಾಯಿ ನೀರು ಅಥವಾ ತೇವಾಂಶದ ಜೊತೆಗೆ ಸಾಕಷ್ಟು ಸಮಯದವರೆಗೆ ಸಂಪರ್ಕ ಪಡೆದಾಗ ಭ್ರೂಣವು ಬೆಳೆಯಲು ಆರಂಭಿಸುತ್ತದೆ. ಪ್ರಾಂಕುರ ಅಥವಾ ಚಿಗುರು ಮೆತ್ತನೆಯ ಕಣ್ಣಿನ ಕಡೆಗೆ ಬೆಳೆಯುತ್ತದೆ ಹಾಗೂ ಭ್ರೂಣದ ಇನ್ನೊಂದು ತುದಿಯು ಊದಿಕೊಂಡು ಹಾಸ್ಟೋರಿಯಂ ಎಂದು ಕರೆಯಲ್ಪಡುವ ಬೂಸ್ಟು ಸ್ಪಂಜಿನಂತೆ ಮುದ್ದೆಯಾಕಾರವಾಗಿ ಬೆಳೆದು ಕಟ್ಟ ಕಡೆಗೆ ಕಾಯಿಯ ಒಳಗಡೆಯಿರುವ ಪೊಳ್ಳು ಭಾಗವನ್ನು ಸಂಪೂರ್ಣವಾಗಿ ತುಂಬಿಕೊಳ್ಳುತ್ತದೆ.

ಹಾಸ್ಟೋರಿಯಂನ ಮುಖಾಂತರ ಎಳೆಯ ಸಸಿಯ ಕಾಯಿಯಲ್ಲಿರುವ ನೀರು ಹಾಗೂ ತಿರುಳಿನಲ್ಲಿರುವ ಪೋಷಕಾಂಶಗಳನ್ನು ಹೀರಿಕೊಂಡು ಪ್ರಾಂಕುರವು ಮೆತ್ತನೆಯ ಕಣ್ಣಿನ ಮುಖಾಂತರ ಸಿಪ್ಪೆಯೊಳಗೆ ಬೆಳೆದುಕೊಂಡು ಹೋಗುತ್ತದೆ. ಮೊಳಕೆ ಬಂದ 6 ವಾರಗಳ ಅನಂತರ ಮೊದಲನೆಯ ಬೇರು ಚಿಗುರಿನ ತಳಭಾಗದಿಂದ ಸಿಪ್ಪೆಯೊಳಗೆ ಬೆಳೆಯುತ್ತದೆ. ತರುವಾಯ ಕಾಯಿಯ ತಳಭಾಗದಲ್ಲಿ ಹಾಗೂ ಪಕ್ಕದ


ತೆಂಗು

ಬದಿಗಳಲ್ಲಿ ಬೇರುಗಳು ಹೊರಬಂದು ಮಣ್ಣಿನೊಳಕ್ಕೆ ಸೇರುತ್ತವೆ. ಬೇರುಗಳು ಮಣ್ಣಿನ ಸೆಳತಕ್ಕೆ ತಲುಪಿದ ಅನಂತರ ಚಿಗುರು ಉದ್ದವಾಗಿ ಬೆಳೆದು ಸಿಪ್ಪೆಯೊಳಗಿಂದ ಹೊರ ಬರುತ್ತದೆ. ಈ ಬೆಳವಣಿಗೆಯು ಬೀಜದ ಕಾಯಿಯನ್ನು ನಾಟಿ ಮಾಡಿದ ಮೂರು ತಿಂಗಳುಗಳ ಮೇಲೆ ಕಂಡುಬರುತ್ತದೆ.

**ಹವಾಗುಣ :** ತೆಂಗು ಉಷ್ಣವಲಯವನ್ನು ಬಯಸುವ ಆರ್ಥಿಕ ಬೆಳೆ. ಇದನ್ನು ಗಾಳಿಯಲ್ಲಿ ಹೆಚ್ಚು ತೇವಾಂಶವಿರುವ ಉತ್ತರ ಮತ್ತು ದಕ್ಷಿಣದ 23$^{o}$ ಅಕ್ಷಾಂಶದ ವ್ಯಾಪ್ತಿಯಲ್ಲಿ ಮತ್ತು ಸಮುದ್ರ ಮಟ್ಟದಿಂದ 3000 ಅಡಿ (915 ಮೀ) ಎತ್ತರದವರೆಗಿನ ಎಲ್ಲ ಪ್ರದೇಶಗಳಲ್ಲಿಯೂ ಬೆಳೆಯಬಹುದು. ಈ ಬೆಳೆಯನ್ನು ಭಾರತದಲ್ಲಿ ಕರಾವಳಿ ಪ್ರದೇಶ, ಪ್ರಸ್ಥಭೂಮಿ ಹಾಗೂ ಕೆಲವು ಒಳನಾಡು ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ.

**ಮಣ್ಣು :** ತೆಂಗು ಕೃಷಿ ಮಾಡಲು ಸಮನಾಗಿ ವ್ಯಾಪಿಸಿದ ಮಳೆಯಾಗುವ, ನೀರಾವರಿ ಅನುಕೂಲವಿರುವ, ಜೌಗು ಪ್ರದೇಶವಲ್ಲದ, ಭೂಮಿಯ ಅಡಿಯಲ್ಲಿ 2 ಮೀ ಆಳದಲ್ಲಿ ಕಲ್ಲು ಬಂಡೆ ಅಥವಾ ಗಟ್ಟಿ ಪದರವಿಲ್ಲದ, 3 ಮೀ. (10 ಅಡಿ) ಆಳದಲ್ಲಿ ನೀರಿನ ಸೆಲೆಯನ್ನು ಹೊಂದಿದ ಸ್ಥಳವನ್ನು ಆಯ್ಕೆ ಮಾಡುವುದು ಯುಕ್ತ. ಹೆಚ್ಚು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ, ನೀರು ಚೆನ್ನಾಗಿ ಬಸಿದು ಹೋಗುವಂತಹ ಆಳವಾದ ಮರಳು ಮಿಶ್ರಿತ ಗೋಡು, ಮೆಕ್ಕಲು ಮತ್ತು ಕೆಂಪು ಮಣ್ಣಿನ ಪ್ರದೇಶಗಳು ತೆಂಗು ಬೆಳೆಗೆ ಅತ್ಯುತ್ತಮ.

**ತಳಿಗಳು :** ತೆಂಗಿನ ತಳಿಗಳು ನಮ್ಮ ದೇಶದಲ್ಲಿ ವಿವಿಧ ಬಗೆಯಲ್ಲಿ ಪ್ರಚಲಿತವಾಗಿವೆ. ಎತ್ತರದ ತಳಿಗಳು, ಗಿಡ್ಡ ತಳಿಗಳು, ಸಂಕರಣ (ಹೈಬ್ರಿಡ್) ತಳಿಗಳು.

**ಎತ್ತರದ ತಳಿಗಳು :** ಪ್ರಪಂಚದ ತೆಂಗು ಬೆಳೆಯುವ ಎಲ್ಲಾ ಪ್ರದೇಶಗಳಲ್ಲಿಯೂ ಎತ್ತರದ ತಳಿಗಳನ್ನು ವ್ಯಾಪಕವಾಗಿ ಬೆಳೆಯುಲಾಗುತ್ತದೆ. ಇವು ತುಂಬಾ ಶಕ್ತಿಯುತವಾಗಿದ್ದು, ವೈವಿಧ್ಯಮಯ ಹವಾಗುಣ ಮತ್ತು ಮಣ್ಣುಗಳಲ್ಲಿ ಬೆಳೆಯವಂಥವು. ಸು. 80-100 ವರ್ಷದವರೆಗೆ ಬದುಕಬಲ್ಲವು. ಇವುಗಳಲ್ಲಿ ಸು. 78 ತಳಿಗಳಿದ್ದು, ಇವುಗಳನ್ನು ತೆಂಗು ಬೆಳೆಯುವ 13 ದೇಶಗಳಲ್ಲಿ ಬೆಳೆಯಲಾಗುತ್ತದೆ.

ಈ ತಳಿಗಳ ಕಾಂಡವು ನೇರವಾಗಿದ್ದು, ಸು. 15-25 ಮೀ. ಎತ್ತರ ಬೆಳೆದು, ಮಕುಟದಲ್ಲಿ ಸು. 6 ಮೀಟರ್ ಉದ್ದದ 25-40 ಗರಿಗಳಿರುತ್ತವೆ. ಕಾಂಡದ ಭಾಗವು ಉಬ್ಬಿರುತ್ತದೆ. ಈ ತಳಿಗಳು ಪರಕೀಯ ಪರಾಗಸ್ಪರ್ಶ ಹೊಂದಿ ಭಿನ್ನ ಸಂಯುಕ್ತ ಬೀಜದ ಮರಗಳಾಗುತ್ತವೆ. ಸಾಮಾನ್ಯವಾಗಿ 6-8 ವರ್ಷಗಳಲ್ಲಿ ಫಲಕ್ಕೆ ಬರುತ್ತವೆ ಹಾಗೂ ಹೂಬಿಟ್ಟ ಸು. 12-15 ವರ್ಷಗಳಲ್ಲಿ ಸ್ಥಿರವಾದ ಇಳುವರಿ ನೀಡುತ್ತವೆ. ಈ ತಳಿಗಳ ಕಾಯಿಗಳು ಸಾಮಾನ್ಯವಾಗಿ ಮಧ್ಯಮ ಗಾತ್ರವಾಗಿದ್ದು, ಉತ್ತಮ ದರ್ಜೆಯ ಹೆಚ್ಚು ಕೊಬ್ಬರಿ ಹಾಗೂ ಎಣ್ಣೆಯನ್ನು ನೀಡುತ್ತವೆ. ಮರ ಒಂದಕ್ಕೆ ವರ್ಷಕ್ಕೆ ಸರಾಸರಿ 60-80 ಕಾಯಿಗಳು ದೊರೆಯುತ್ತವೆ.

ಎತ್ತರದ ತಳಿಗಳೆಂದರೆ ಅರಸೀಕೆರೆ ಅಥವಾ ತಿಪಟೂರು ಎತ್ತರದ ತಳಿ, ಪಶ್ಚಿಮ ತೀರ ಪ್ರದೇಶದ ಎತ್ತರದ ತಳಿ ವೆಸ್ಟ್‌ಕೋಸ್ಟ್ ಟಾಲ್, ಲಕ್ಷ ದ್ವೀಪ ಸಾಮಾನ್ಯ ತಳಿ, ಲಕ್ಷದ್ವೀಪ ಉಷ್ಣತಳಿ, ಅಂಡಮಾನ್ ಸಾಮಾನ್ಯ ತಳಿ, ಕಪ್ಪಾಡಮ್ ತಳಿ, ಪರದೇಶದ ತಳಿಗಳಾದ ಸ್ಯಾನೆರಾಮೋನ್ ತಳಿ, ಫಿಲಿಪ್ಪೈನ್ಸ್ ಸಾಮಾನ್ಯ ತಳಿ, ಫಿಜಿ ತಳಿ, ಸ್ಟ್ರೈಯಟ ಸೆಟ್ಲ್‌ಮೆಂಟ್ ಹಸುರು ತಳಿ, ಮುಂತಾದವು.

**ಗಿಡ್ಡ ತಳಿಗಳು :** ಇವು ಎತ್ತರದ ತಳಿಗಳಿಂದ ಮಾರ್ಪಡು ಹೊಂದಿದವು. ಜಾವಾ ಮತ್ತು ಫಿಲಿಪೈನ್ಸ್ ದ್ವೀಪಗಳಲ್ಲಿ ಮೊದಲ ಬಾರಿಗೆ ಗುರುತಿಸಲಾಗಿದೆ. ಎತ್ತರ ತಳಿಗಳಿಗೆ ಹೋಲಿಸಿದಲ್ಲಿ ಈ ತಳಿಗಳು ಗಿಡ್ಡವಾಗಿದ್ದು, ತೆಳ್ಳಗಿರುತ್ತವೆ. ಸುಮಾರು 15 ಅಡಿ (5 ಮೀ) ಎತ್ತರವಿದ್ದು ಎಲೆಗಳು 12 ಅಡಿ (4 ಮೀ) ಉದ್ದವಿರುತ್ತವೆ. ಈ ಮರಗಳು ಎತ್ತರ ತಳಿಗಳಿಗಿಂತ ಶೀಘ್ರವಾಗಿ ಬೆಳವಣಿಗೆ ಹೊಂದುತ್ತವೆ. ಗಿಡ ನೆಟ್ಟ 3-4 ವರ್ಷಗಳಲ್ಲಿ ಹೂವು ಬಿಡುತ್ತವೆ. ಪ್ರತಿ ಗಿಡವು ವರ್ಷಕ್ಕೆ 100 - 150 ಕಾಯಿಗಳ ಇಳುವರಿ ದೊರೆಯುತ್ತದೆ. ಈ ಇಳುವರಿಯು ಸು. 30-45 ವರ್ಷಗಳವರೆಗೆ ತೃಪ್ತಿಕರವಾಗಿರುವುದು ಕಂಡು ಬರುತ್ತದೆ. ಈ ತಳಿಗಳಲ್ಲಿ ಸ್ವಕೀಯ ಪರಾಗಸ್ಪರ್ಶದಿಂದ ಕಾಯಿ ಹೆಚ್ಚುತ್ತದೆ. ಈ ತಳಿಗಳನ್ನು ಹೆಚ್ಚಾಗಿ ಬಳಸುವುದಿಲ್ಲ. ಗಿಡ್ಡ ತಳಿಗಳಲ್ಲಿ ಮುಖ್ಯವಾಗಿ ಚೌಘಾಟ್ ಗಿಡ್ಡ ಕಿತ್ತಳೆ ತಳಿ, ಚೌಘಾಟ್ ಗಿಡ್ಡ ಹಸುರು ತಳಿ, ಗಂಗಾಬಾಂಡಮ್ ತಳಿ, ಮಲಯನ್‌ಗಿಡ್ಡ ಹಸುರು ತಳಿ, ಮಲಯನ್ ಗಿಡ್ಡ ಹಳದಿ ತಳಿ, ಮಲಯನ್ ಗಿಡ್ಡ ಕಿತ್ತಳೆ ತಳಿ.

**ಸಂಕರಣ (ಹೈಬ್ರಿಡ್) ತಳಿಗಳು :** ಪ್ರಚಲಿತವಿರುವ ಆಶಾದಾಯಕ ಎತ್ತರ ಹಾಗೂ ಗಿಡ್ಡ ಜಾತಿಯ ವಿವಿಧ ತಳಿಗಳ ನಡುವೆ ಸಂಕರಗೊಳಿಸಿ ಅಥವಾ ನಿಯಂತ್ರಿಸಿ ಪರಕೀಯ ಪರಾಗಸ್ಪರ್ಶದಿಂದ ಸಂಕರ ತಳಿಗಳನ್ನು ಉತ್ಪಾದನೆ ಮಾಡಲಾಗುತ್ತದೆ. ಈ ತಳಿಗಳು ಶೀಘ್ರ ಬೆಳವಣಿಗೆ ಹೊಂದಿ, ಬೇಗ ಫಲಕ್ಕೆ ಬರುತ್ತದೆ. ಉತ್ತಮ ದರ್ಜೆಯ ಕೊಬ್ಬರಿ ಹಾಗೂ ಹೆಚ್ಚು ಎಣ್ಣೆಯ ಅಂಶ ಹೊಂದಿದ್ದು ಒಳ್ಳೆಯ ಇಳುವರಿ ನೀಡುತ್ತವೆ. ಎತ್ತರ ಹಾಗೂ ಗಿಡ್ಡ ಜಾತಿಯ ವಿವಿಧ ಜಾತಿಗಳನ್ನು ಉಪಯೋಗಿಸಿ ಸಂಕರಗೊಳಿಸಿ ಎತ್ತರ x ಗಿಡ್ಡ ಸಂಕರ ತಳಿಯನ್ನು ಭಾರತದಲ್ಲಿ ಮೊಟ್ಟ ಮೊದಲಬಾರಿಗೆ 1937ರಲ್ಲಿ ಕಾಸರಗೋಡು ಮತ್ತು ನೀಲೇಶ್ವರಗಳಲ್ಲಿರುವ ತೆಂಗು ಸಂಶೋಧನಾ ಕೇಂದ್ರಗಳಲ್ಲಿ ಉತ್ಪಾದಿಸಲಾಯಿತು.

ಸಂಕರ ತಳಿಗಳಲ್ಲಿ ನಾಲ್ಕು ಬಗೆಗಳಿವೆ.

ಚಂದ್ರಕಲಾ, ಪ್ರತಾಪ್, ಚಂದ್ರಲಕ್ಷ, ಕ್ಷೀರಶಂಕರ, ಚಂದ್ರತಾರಾ ಎಂಬವು ಪ್ರಮುಖವಾದಂಥವು. ಇತರ ತಳಿಗಳು ಎತ್ತರ x ಗಿಡ್ಡ (TxD), ಗಿಡ್ಡ x ಎತ್ತರ (DxT) ಸಂಕರಣ ತಳಿಗಳು, ಎತ್ತರ x ಎತ್ತರ (TxT) ಸಂಕರ ತಳಿಗಳು, ನೈಸರ್ಗಿಕ ಸಂಕರ ಗಿಡ್ಡ ತಳಿಗಳು (N.C.D.) ಎಂದೂ ಮುಂತಾಗಿ ಕೃಷಿಯಲ್ಲಿವೆ.

**ತೆಂಗಿನ ಸಸಿಗಳನ್ನು ಬೆಳೆಸುವುದು :** ತೆಂಗಿನ ಸಸಿಗಳನ್ನು ಬೆಳೆಸುವುದರಲ್ಲಿ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕು.

1. ಬೀಜದ ತೋಟವನ್ನು ಆಯ್ಕೆ ಮಾಡಿಕೊಳ್ಳಬೇಕು, 2. ತಾಯಿ ಮರಗಳನ್ನು ಆಯ್ಕೆ ಮಾಡಿಕೊಳ್ಳುವುದು, 3. ಬೀಜದ ಕಾಯಿಗಳನ್ನು ಸಂಗ್ರಹಿಸಿಕೊಳ್ಳಬೇಕು, 4. ಸಸಿಗಳನ್ನು ಬೆಳೆಸುವುದು, 5. ಸಸಿಗಳನ್ನು ಆಯ್ಕೆ ಮಾಡುವುದು

ಉತ್ತಮ ಸಸಿಗಳ ಆಯ್ಕೆ ಹೆಚ್ಚಿನ ಇಳುವರಿ ಪಡೆಯುವಲ್ಲಿ ಮುಖ್ಯವಾದುದು. 9-18 ತಿಂಗಳಿನ ವಯಸ್ಸಿನ ಸಸಿಗಳನ್ನು ಕಿತ್ತು ನೆಡಬಹುದು. ಸಸಿಗಳನ್ನು ನೆಡಲು ಆಯ್ಕೆ ಮಾಡುವಾಗ ಈ ಅಂಶಗಳನ್ನು ಗಮನಿಸಬೇಕು.

ಆರೋಗ್ಯವಾಗಿ ಬೆಳವಣಿಗೆ ಹೊಂದಿದ, ಕಸುವುಳ್ಳ ಸಸಿಗಳನ್ನು ಮಾತ್ರ ಆರಿಸಬೇಕು.

150 ದಿನಗಳೊಳಗಾಗಿ ಮೊಳಕೆ ಬಂದ ಸಸಿಗಳನ್ನು ಮಾತ್ರ ಆಯ್ಕೆ ಮಾಡಬೇಕು.

ಸಸಿಗಳಿಗೆ ಒಂದು ವರ್ಷ ವಯಸ್ಸಾಗಿದ್ದು, ಕನಿಷ್ಠ ಪಕ್ಷ 6 ಗರಿಗಳನ್ನು ಹೊಂದಿರಬೇಕು.

ಸಸಿಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗರಿಗಳು ಹಾಗೂ ಬೇರುಗಳಿದ್ದು ಸಸಿಯ ಕುತ್ತಿಗೆಯ ಬಳಿ ಒಳ್ಳೆಯ ಸುತ್ತಳತೆ ಇರಬೇಕು. ಗರಿಗಳ ತೊಟ್ಟು ಗಿಡ್ಡವಾಗಿದ್ದು ದಪ್ಪವಾಗಿರಬೇಕು.

**ಭೂಮಿಯ ಸಿದ್ಧತೆ :** ಎರಡು ಮೂರು ಬಾರಿ ಚೆನ್ನಾಗಿ ಉಳುಮೆಮಾಡಿ, ಕಳೆಗಳನ್ನು ಆರಿಸಿ ಸಮತಟ್ಟಾಗಿ ಮಾಡಿದ ಭೂಮಿ ಯೋಗ್ಯವಾದುದು. ಮಣ್ಣಿನ ಸವೆತವನ್ನು ತಡೆಗಟ್ಟುವ ಸಲುವಾಗಿ ಇಳಿಜಾರಿಗೆ ಅಡ್ಡವಾಗಿ ಬದುಗಳನ್ನು, ಜಾನುವಾರುಗಳಿಂದ ರಕ್ಷಣೆ ಪಡೆಯಲು ತೋಟದ ಸುತ್ತ ಬೇಲಿಯನ್ನು ಹಾಕಬೇಕು.

ತೆಂಗಿನ ಸಸಿಗಳು ಉತ್ತಮವಾಗಿ ಬೆಳೆಯಲು ಧಾರಾಳವಾಗಿ ಬಿಸಿಲು ಬೀಳಬೇಕು. ಚೌಕ ಪದ್ಧತಿ, ತ್ರಿಕೋನ ಪದ್ಧತಿ, ಆಯತಾಕಾರದ ಪದ್ಧತಿ (ಅಂಚು ಪದ್ಧತಿ) ಈ ಮೂರು ಪದ್ಧತಿಗಳಲ್ಲಿ ಸಸಿಗಳನ್ನು ನೆಡಬಹುದು.

ಚೌಕ ಪದ್ಧತಿಯಲ್ಲಿ ಗಿಡಗಳನ್ನು ಒಂದೇ ರೀತಿಯ ಅಂತರ ಕೊಟ್ಟು ಒಂದು ಚೌಕದ ನಾಲ್ಕು ಮೂಲೆಗಳಲ್ಲಿ ನೆಡುತ್ತಾರೆ. ಸಾಲುಗಳ ಹಾಗೂ ಸಸಿಗಳ ನಡುವಿನ ಅಂತರ ಒಂದೇ ಆಗಿರುತ್ತದೆ. ಈ ಪದ್ಧತಿಯನ್ನು ಕರ್ನಾಟಕದ ಒಳನಾಡು ಪ್ರದೇಶಗಳಲ್ಲಿ ಬಹು ಜನಪ್ರಿಯವಾಗಿ ಅನುಸರಿಸಲಾಗುತ್ತದೆ. ಎತ್ತರ ತಳಿಗಳಿಗೆ 7.5-9 ಮೀ. ಮತ್ತು ಗಿಡ್ಡನೆಯ ತಳಿಗಳನ್ನು 6.5-7.5 ಮೀ ಅಂತರದಲ್ಲಿ ನೆಡುವುದು ಉತ್ತಮ.

ತ್ರಿಕೋನ ಪದ್ಧತಿಯಲ್ಲಿ ಒಂದು ಸ್ಥಿರವಾದ ಅಂತರ ಕೊಟ್ಟು ಒಂದು ಸಮಬಾಹು ತ್ರಿಕೋನದ ಮೂಲೆಗಳಲ್ಲಿ ನೆಡಲಾಗುತ್ತದೆ. ಈ ಪದ್ಧತಿಯಲ್ಲಿ ಎತ್ತರ ತಳಿಗಳಿಗೆ 7.0-7.5 ಮೀ. ಮತ್ತು ಗಿಡ್ಡ ತಳಿಗಳಿಗೆ 6.0-6.5 ಮೀ. ಅಂತರ ಕೊಟ್ಟು ಎತ್ತರ ದಿಕ್ಕುಗಳ ಪರಸ್ಪರ ಸ್ಥಾನವಿನ್ಯಾಸದೊಂದಿಗೆ ಬೆಳೆಸುವುದು ಯುಕ್ತ.

ಆಯತಾಕಾರ ಪದ್ಧತಿಯಲ್ಲಿ ಸಾಲಿನಿಂದ ಸಾಲಿಗೆ 9-10 ಮೀ. ಹಾಗೂ ಗಿಡದಿಂದ ಗಿಡಕ್ಕೆ 5.0 ರಿಂದ 5.5 ಅಂತರ ನೆಡಲಾಗುವುದು.

**ನಾಟಿಮಾಡುವ ಕಾಲ :** ವಿವಿಧ ಪ್ರದೇಶಗಳಲ್ಲಿ ತೆಂಗಿನ ಸಸಿಯನ್ನು ನೆಡುವ ಕಾಲವು ಹವಾಗುಣಗಳಿಗೆ ಅನುಗುಣವಾಗಿರುತ್ತದೆ. ಮುಂಗಾರು ಮಳೆ ಪ್ರಾರಂಭವಾಗುವುದಕ್ಕೆ ಸ್ವಲ್ಪ ಮೊದಲು ಸಸಿ ನೆಡುವುದಕ್ಕೆ ಯುಕ್ತ ಕಾಲ. ಮೈದಾನ ಪ್ರದೇಶ ಹಾಗೂ ಜೌಗಿನ ಸಮಸ್ಯೆಯಿಲ್ಲದ ಕಡೆ ಮಳೆಗಾಲ ಪ್ರಾರಂಭವಾದಾಗ ಅಂದರೆ ಮೇ-ಜೂನ್ ತಿಂಗಳುಗಳಲ್ಲಿ ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿರುವಾಗ ಸಸಿ ನೆಟ್ಟು ಮುಂಗಾರು ಮಳೆಗಳ ಸದುಪಯೋಗ ಮಾಡಿಕೊಳ್ಳುವುದು ಉತ್ತಮ. ಆಗಸ್ಟ್-ಸೆಪ್ಟೆಂಬರ್ ತಿಂಗಳುಗಳಲ್ಲಿಯೂ ಸಸಿ ನೆಡಬಹುದು. ಹೆಚ್ಚು ನೀರು ನಿಲ್ಲುವ ತಗ್ಗಿನ ಪ್ರದೇಶಗಳಲ್ಲಿ ಜೋರಾದ ಮಳೆ ಬಿದ್ದ ಬಳಿಕ ಅಥವಾ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಸ್ವಲ್ಪ ಮುಂಚೆ ನಾಟಿ ಮಾಡಬಹುದು.

**ನೆಡುವ ವಿಧಾನ :** ಸಸಿ ನೆಡಲು ಸು. ಎರಡರಿಂದ ಮೂರು ತಿಂಗಳ ಮುಂಚಿತವಾಗಿಯೇ ನಿರ್ದಿಷ್ಟ ಅಂತರದಲ್ಲಿ ಗುಂಡಿಗಳನ್ನು ತೆಗೆದು, ಗಾಳಿ ಬಿಸಿಲುಗಳಿಗೆ ಬಿಡಬೇಕು. ಗೆದ್ದಲಿನ ಹಾವಳಿಯನ್ನು ತಪ್ಪಿಸಲೆಂದು ಗುಂಡಿಗಳಲ್ಲಿ ಒಣ ಎಲೆಗಳನ್ನು ಹಾಕಿ ಸುಡಬೇಕು. ಗಿಡ ನೆಡಲು ತೆಗೆಯ ಬೇಕಾದ ಗುಂಡಿಗಳ ಗಾತ್ರವು ಮಣ್ಣಿನ ರಚನೆ ಮತ್ತು ಅಂತರ್ಜಲ ಪಾತಳಿಯನ್ನು ಅವಲಂಬಿಸಿರುತ್ತದೆ. ಗಟ್ಟಿಯಾದ ಜೆಂಬಟ್ಟಿಗೆ ಮಣ್ಣಿನಲ್ಲಿ ಹಾಗೂ ಅಂತರ್ಜಲ ಪಾತಳಿ ಬಹು ಆಳವಿರುವ ಮಣ್ಣಿನಲ್ಲಿ 1.3 ಘನ ಮೀಟರ್ ಅಳತೆಯ ಗುಂಡಿಗಳನ್ನು ತೆಗೆಯಬೇಕು. ಅಂತರ್ಜಲ ಪಾತಳಿಯು ತುಲನಾತ್ಮಕವಾಗಿ ಎತ್ತರವಿರುವ ಪ್ರದೇಶಗಳಲ್ಲಿ ಹೆಚ್ಚು ಆಳವಿಲ್ಲದ ಗುಂಡಿಗಳು ಬೇಕಾಗುತ್ತದೆ.

ನೆಲಮಟ್ಟದಿಂದ ಸಸಿಗಳನ್ನು ನೆಡುವ ಆಳವು ಮಣ್ಣಿನ ಪ್ರಕಾರ, ಮಳೆಯ ತೀವ್ರತೆ ಮತ್ತು ಹಂಚಿಕೆ, ಭೂಮಿಯಲ್ಲಿನ ಅಂತರ್ಜಲ ಪಾತಳಿ ಹಾಗೂ ಇತರ ವಾತಾವರಣ ಅಂಶಗಳು ಮುಂತಾದ ಸ್ಥಳೀಯ ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ. ಸಾಮಾನ್ಯವಾಗಿ ಸಸಿ ಬೆಳೆದಂತೆ ಮರದ ಕಾಂಡದ ಬುಡದಲ್ಲಿರುವ ಬೇರು ಸು. 75 ಸೆಂ.ಮೀ. ಉದ್ದವಾದ ಕಾಂಡ ಬುಡ ಅಥವಾ ಕಾಂಡ ಕುಂಭವು ಬಹುಕಾಲ ಸಂಪೂರ್ಣವಾಗಿ ಮಣ್ಣಿನಲ್ಲಿರುವಂತೆ ಎಚ್ಚರವಹಿಸಬೇಕು. ಭೂಮಿಯ ಮೇಲ್ಭಾಗದಿಂದ 60 ಸೆಂ.ಮೀ. (2 ಅಡಿ)ಗಳಷ್ಟು ಆಳದಲ್ಲಿ ನೆಡುವುದು ಯುಕ್ತ. ತುಂಬಾ ಆಳವಾಗಿ ಅಂದರೆ 1.20 ಮೀ. (4 ಅಡಿ)ನಷ್ಟು ಆಳದಲ್ಲಿ ಸಸಿಗಳನ್ನು ನೆಡುವುದು ಅಗತ್ಯವಾಗುತ್ತದೆ. ಈ ರೀತಿ ಆಳಕ್ಕೆ ನೆಟ್ಟ ಗಿಡ ಸು. 6000 ರಿಂದ 7000 ರಷ್ಟು ಕಾರ್ಯನಿರ್ವಹಿಸುವ ಆಳವಾದ ಮತ್ತು ದೃಢವಾದ ಬೇರು ವ್ಯೂಹವನ್ನು ಪಡೆಯುತ್ತದೆ.

**ಎಳೆಯ ಸಸಿಗಳ ಆರೈಕೆ :** ಹೊಸದಾಗಿ ನೆಟ್ಟ ಸಸಿಗಳ ಬೆಳವಣಿಗೆ, ಅವು ಹೂವು ಬಿಡುವ ವಯಸ್ಸು ಹಾಗೂ ಮುಂದಿನ ವರ್ಷಗಳಲ್ಲಿಯ ಇಳುವರಿ ಸಾಮರ್ಥ್ಯ ಇವುಗಳು ಪ್ರಾರಂಭದ ವರ್ಷಗಳಲ್ಲಿ ಅಂದರೆ ನೆಟ್ಟ 3/4 ವರ್ಷಗಳಲ್ಲಿ ಅವುಗಳಿಗೆ ಸಿಕ್ಕಿರುವ ಪೋಷಣೆ ಆರೈಕೆ ಹಾಗೂ ಜಾಗರೂಕತೆಗಳನ್ನು ಅವಲಂಬಿಸಿರುತ್ತದೆ. ಎಳೆಯ ಸಸಿಗಳನ್ನು ಆರೈಕೆ ಮಾಡುವಾಗ ಬೇಲಿ ಹಾಕಿ ಜಾನುವಾರುಗಳ ಬಾಯಿಗೆ ಎಟುಕದಷ್ಟು ಎತ್ತರ ಬೆಳೆಯುವವರೆಗೆ ರಕ್ಷಿಸಬೇಕು ಮತ್ತು ನೆಟ್ಟ ಸಸಿಗಳಿಗೆ ಅವುಗಳು ಬೇರು ಬಿಟ್ಟು ನೆಲೆಗೊಳ್ಳುವವರೆಗೆ ಮಳೆಯಾಗದಿದ್ದರೆ ನಿಯಮಿತವಾಗಿ ನೀರು ಹಾಕಬೇಕು. ದಿನಬಿಟ್ಟು ದಿನ ಮತ್ತು ಅನಂತರ ಐದಾರು ವರ್ಷಗಳವರೆಗೆ ವಾರಕ್ಕೆ ಒಂದು ಅಥವಾ ಎರಡು ಬಾರಿ ಸಾಕಷ್ಟು ನೀರು ಕೊಡಬೇಕು.

**ತೆಂಗಿನ ಬೆಳೆಯಲ್ಲಿ ಪೋಷಕಾಂಶಗಳ ಪಾತ್ರ :** ಪ್ರಮುಖ ಪೋಷಕಾಂಶಗಳಾದ ಸಾರಜನಕ, ಪೊಟ್ಯಾಷ್, ರಂಜಕ, ಕ್ಯಾಲ್ಸಿಯಂ (ಸುಣ್ಣ) ಮತ್ತು ಮೆಗ್ನೆಷಿಯಂ ಪೋಷಕಾಂಶಗಳು ತೆಂಗಿನ ಬೆಳೆಗೆ ಅಧಿಕ ಪ್ರಮಾಣದಲ್ಲಿ ಬೇಕಾಗುತ್ತವೆ. ಸಾರಜನಕ ಹಾಗೂ ಪೊಟ್ಯಾಷ್

ಪೋಷಕಾಂಶಗಳು ಇಳುವರಿ ಮತ್ತು ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಇವುಗಳಲ್ಲದೇ ಲಘು ಪೋಷಕಾಂಶಗಳಾದ ಕ್ಲೋರಿನ್, ಸೋಡಿಯಂ, ಗಂಧಕ, ಸತುವು, ಬೋರಾನ್ ಹಾಗೂ ಮ್ಯಾಂಗನೀಸ್ ಇವುಗಳೂ ಅಲ್ಪ ಪ್ರಮಾಣದಲ್ಲಿ ಬೇಕಾಗುತ್ತದೆ.

**ಕೀಟಗಳು :** ತೆಂಗಿನ ಬೆಳೆಗೆ ಹಾನಿಯನ್ನುಂಟು ಮಾಡುವ ಕೀಟಗಳು-

ರೈನಾಸಿರಸ್ ದುಂಬಿ, ಕೆಂಪು ಮೂತಿ ದುಂಬಿ, ಕಪ್ಪು ತಲೆ ಹುಳು, ಬೇರು ತಿನ್ನುವ ಕಾಕ್ ಚಾಫರ್ ಹುಳು, ಬಿಲಿಯ ಗೊಣ್ಣೆ ಹುಳು. ಇವು ಪ್ರಮುಖವಾದವುಗಳು.

**ರೋಗಗಳು :** ಸುಳಿ ಕೊಳೆಯುವ ರೋಗ, ಎಲೆ ಕೊಳೆಯುವ ರೋಗ, ಬೂದು ಎಲೆ ಚುಕ್ಕೆ ಅಥವಾ ಬ್ಲೈಟ್ ರೋಗ, ಮಹಾಲಿ ಅಥವಾ ಕಾಯಿ ಕೊಳೆಯುವ ಹಾಗೂ ಕಾಯಿ ಉದುರುವ ರೋಗ, ಎಲೆಗಳು ಹಳದಿ ಬಣ್ಣಕ್ಕೆ ತಿರುಗುವ ರೋಗ ಅಥವಾ ಪೆನ್ಸಿಲ್ ತುದಿ ರೋಗ, ರಸ ಸೋರುವ ರೋಗ, ಅಣಬೆ ರೋಗ ಅಥವಾ ಕಾಂಡ ಮತ್ತು ಬೇರು ಕೊಳೆಯುವ ರೋಗ, ಬೇರು ಸೊರಗು ರೋಗ, ಹೂವು ಹರಳು ಮತ್ತು ಅಪ್ರಾಪ್ತ ವಯಸ್ಸಿನ ಕಾಯಿಗಳು, ಬರಡು (ಬಂಜೆ) ಕಾಯಿಗಳು ಉದುರುವುದು.

**ಉಪಯೋಗಗಳು**

**ಆಹಾರ ಉತ್ಪನ್ನಗಳು :**

**ಎ. ಕಾಯಿಯ ತಿರುಳು ಮತ್ತು ತಿರುಳಿನ ಹಾಲು :** ಕಾಯಿಯ ತಿರುಳು ಅಥವಾ ಭ್ರೂಣವು ತೆಂಗು ಬೆಳೆಯುವ ದೇಶಗಳಲ್ಲಿ ಮುಖ್ಯವಾದ ಆಹಾರ ಪದಾರ್ಥ. ಕಾಯಿಯ ತಿರುಳಿನ ಚೂರುಗಳಿಂದ ಹಿಂಡಿ ತೆಗೆದ ತೆಂಗಿನ ಕಾಯಿ ಹಾಲು ಅಥವಾ ಕೆನೆಯನ್ನು ಹಲವು ವಿಧದ ಆಹಾರ ಪದಾರ್ಥಗಳ ತಯಾರಿಕೆಯಲ್ಲಿಬಳಸಲಾಗುತ್ತದೆ.

ಕಾಯಿ ಹಾಲು ಮತ್ತು ತಿರುಳಿನ ಚೂರುಗಳಿಗೆ ಸ್ವಲ್ಪ ನೀರನ್ನು ಸೇರಿಸಿ, ನಾದುವಂತೆ ಮಾಡಿ ಹಿಂಡಿ ತೆಗೆದ ಹಾಲಿನ ತರಹದ ದ್ರವ. ತಿರುಳಿನಲ್ಲಿರುವ ಕರಗಿನ ಪೋಷಕಾಂಶಗಳು ಈ ಹಾಲಿನಲ್ಲಿ ಇರುವುದಲ್ಲದೇ ನೀರಿನಲ್ಲಿ ತೇಲುತ್ತಿರುವ ಜಿಡ್ಡಿನ ಎಣ್ಣೆಯೂ ಇರುತ್ತದೆ. ಇದರಲ್ಲಿ ಕೊಬ್ಬು ಜಾಸ್ತಿ ಇದ್ದು, ಸಾರಜನಕ ಮತ್ತು ಸಕ್ಕರೆ ಅಂಶಗಳು ಕಡಿಮೆ ಪ್ರಮಾಣದಲ್ಲಿರುತ್ತವೆ. ಫಿಲಿಪೈನ್ಸ್, ಥೈಲ್ಯಾಂಡ್ ಹಾಗೂ ಇಂಡೋನೇಷಿಯಾದಲ್ಲಿ ತೆಂಗಿನ ತಿರುಳಿನ ಕೆನೆಯನ್ನು ಸಂಸ್ಕರಿಸಿ ಡಬ್ಬಿಗಳಲ್ಲಿ ತುಂಬಿ ಸಿದ್ಧಪಡಿಸುವ ಕಾರ್ಖಾನೆಗಳಿವೆ.

**ಬಿ. ತೆಂಗಿನ ಷರಬತ್ತು :** ತುರಿದ ಕಾಯಿಯ ಹಾಲನ್ನು ಸಮರೂಪಕ್ಕೆ ತಂದು ಇದಕ್ಕೆ ಸಮ ಪ್ರಮಾಣದ ಸಕ್ಕರೆ ಹಾಗೂ ಶೇ. 0.05 ಸಿಟ್ರಿಕ್ ಆಮ್ಲವನ್ನು ಮಿಶ್ರ ಮಾಡಬೇಕು. ಒಟ್ಟು ಘನವಸ್ತುಗಳ ಪ್ರಮಾಣವು ಶೇಕಡಾ 65-68 ರಷ್ಟು ಉಳಿಯುವವರೆಗೆ ಈ ಮಿಶ್ರಣವನ್ನು ಆವಿಯಲ್ಲಿ ಬೇಯಿಸಿ ಬಿಸಿಯಾಗಿರುವ ಷರಬತ್ತನ್ನು ಡಬ್ಬಿಗಳಲ್ಲಿ ಭರ್ತಿ ಮಾಡಿ ಮುಚ್ಚಳ ಹಾಕಿ ಮೇಲೆ ನೀರು ಸುರಿದು ತಣ್ಣಗೆ ಮಾಡಬೇಕು. ಈ ಷರಬತ್ತನ್ನು ಮಿಠಾಯಿ, ಮುರಬ್ಬ, ಉಪ್ಪಿನಕಾಯಿ ಇತ್ಯಾದಿಗಳನ್ನು ತಯಾರಿಸುವಲ್ಲಿ ಕಚ್ಚಾವಸ್ತುವಾಗಿ ಉಪಯೋಗಿಸುತ್ತಾರೆ.

**ಸಿ. ಬಲಿತ ಕಾಯಿಗಳು :** ಬಲಿತ ಕಾಯಿಗಳನ್ನು ಮುಖ್ಯವಾಗಿ ಕೊಬ್ಬರಿ ಹಾಗೂ ಅಡುಗೆ ಪದಾರ್ಥಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ತಮಿಳುನಾಡು, ಕೇರಳ ಹಾಗೂ ಕರ್ನಾಟಕದ ಬಹುಪಾಲು ಕಾಯಿಗಳನ್ನು ಕೊಬ್ಬರಿ ತಯಾರಿಸಲು ಉಪಯೋಗಿಸುತ್ತಾರೆ. ಭಾರತದಲ್ಲಿ ತಯಾರಾಗುವ ಕೊಬ್ಬರಿಯನ್ನು ತಿನ್ನುವ ಕೊಬ್ಬರಿ ಹಾಗೂ ಗಿರಣಿಯ ಕೊಬ್ಬರಿ ಎಂದು ವಿಂಗಡಿಸಲಾಗಿದೆ. ತಿನ್ನುವ ಕೊಬ್ಬರಿ ಉತ್ತಮ ದರ್ಜೆಯದಾಗಿದ್ದು, ಗಿಟುಕು ಮತ್ತು ಬಟ್ಟಲು ರೂಪದಲ್ಲಿ ಸಿಗುತ್ತದೆ. ಗಿರಣಿಯ ಕೊಬ್ಬರಿ ಬಟ್ಟಲು ಅಥವಾ ಇತರ ರೂಪದಲ್ಲಿ ಸಿಗುತ್ತದೆ.

**ಹೆಂಡ ಹಾಗೂ ಹೆಂಡದ ಉತ್ಪನ್ನಗಳು :** ಇನ್ನೂ ಅರಳದ ತೆಂಗಿನ ಹೊಂಬಾಳೆಗಳಿಗೆ ಕಚ್ಚು ಮಾಡಿ, ಸಕ್ಕರೆ ಅಂಶವಿರುವ ದ್ರವವನ್ನು ಸಂಗ್ರಹಿಸುವ ವಿಧಾನವನ್ನು 'ಹೆಂಡ ಇಳಿಸುವಿಕೆ' ಎಂದು ಕರೆಯುತ್ತಾರೆ. ಹೂಗೊಂಚಲಿನ ತುದಿಯನ್ನು ಕಚ್ಚುಮಾಡಿ, ಸೀಳಿ ಅದರಿಂದ ರಸ ಒಸರುವಂತೆ ಮಾಡುತ್ತಾರೆ. ಹೆಂಡ ಇಳಿಸುವ ಋತುವಿನಲ್ಲಿ ಪ್ರತಿದಿನ ಪ್ರತಿ ಮರದ ಸರಾಸರಿ ಹೆಂಡದ ಉತ್ಪತ್ತಿ ಸುಮಾರು 1590 CC. ಒಂದು ಹೊಂಬಾಳೆಯಿಂದ ತಿಂಗಳಿಗೆ ಸುಮಾರು 18 ಲೀಟರ್ ಹೆಂಡ ಬರುತ್ತದೆ. ಉತ್ತಮ ಮರಗಳಿಂದ 6 ತಿಂಗಳಿನಲ್ಲಿ ಸರಾಸರಿ ಒಂದು ಹೊಂಬಾಳೆಗೆ 50 ಲೀಟರ್‌ನಂತೆ ಸುಮಾರು 300 ಲೀಟರ್ ಹೆಂಡವನ್ನು ಪಡೆಯಬಹುದು. ಅತಿ ಹೆಚ್ಚು ಪ್ರಮಾಣದ ಹೆಂಡ, ಕಚ್ಚು ಮಾಡಿದ ಮೂರನೆಯ ತಿಂಗಳಿನಿಂದ ದೊರೆಯುತ್ತದೆ.

**ಆಹಾರ ಪ್ರಾಮುಖ್ಯತೆಯ ಇತರ ಉತ್ಪನ್ನಗಳು :** ಹೆಚ್ಚು ಕಾಲ ದಾಸ್ತಾನು ಮಾಡಿದ ಅಥವಾ ಮೊಳಕೆ ಬಂದ ಕಾಯಿಗಳ ತಿರುಳಿನ ಒಳಭಾಗದಲ್ಲಿ ಇರುವ ಖಾಲಿ ಜಾಗದಲ್ಲಿ 'ಹಾಸ್ಟೋರಿಯಂ' ಬೆಳೆಯುತ್ತದೆ. ಇದನ್ನು ಜಾಮ್, ಮಾರ್ಮಲಾಡ್ ಇತ್ಯಾದಿ ತಯಾರು ಮಾಡಲು ಉಪಯೋಗಿಸುತ್ತಾರೆ. ಹಾಸ್ಟೋರಿಯಂ ಅನ್ನು ಹೋಳುಗಳಾಗಿ ಮಾಡಿ ಸಕ್ಕರೆಯ ದ್ರಾವಣದಲ್ಲಿ ಶೇಖರಿಸಿ, ಊಟದ ಅನಂತರ ಸೇವಿಸಲು ಇಲ್ಲವೇ ಫ್ರೂಟ್ ಸಲಾಡ್ ತಯಾರಿಕೆಗೆ ಬಳಸುತ್ತಾರೆ.

**ಇತರ ಉಪಯೋಗಗಳು :** ಅರಸೀಕೆರೆ ಅಥವಾ ತಿಪಟೂರು ಎತ್ತರದ ತಳಿ ಉತ್ಪನ್ನಗಳ ಉಪಯೋಗಗಳು

1. ಮರದ ಕಾಂಡ - ಪೀಠೋಪಕರಣ, ಕಿಟಕಿ, ಬಾಗಿಲುಗಳನ್ನು ಮಾಡಿಸಲು, ಮನೆಗೆ ಆಸರೆ ದಿಮ್ಮಿಗಳಾಗಿ, ಕರಕುಶಲ ವಸ್ತುಗಳು, ಮರದ ಕಂಬಗಳು, ಉರುವಲು, ಮೇಲ್ಛಾವಣಿಗೆ ಹೊದಿಸಲು ಚದರ ಬಿಲ್ಲೆಗಳು, ಗೋಡೆಗಳಿಗೆ ಅಂಕ ಫಲಕಗಳನ್ನಿಟ್ಟು ಅಲಂಕರಿಸಲು.
2. ಗರಿಗಳು - ಮನೆಗಳಿಗೆ ಮತ್ತು ಗುಡಿಸಲುಗಳಿಗೆ ಹೊದಿಸಲು, ಬೇಲಿ ಹಾಕಲು, ಉರುವಲು ಮುಂತಾದವುಗಳಿಗೆ ಉಪಯೋಗವಾಗುತ್ತವೆ.
3. ತೆಂಗಿನಸೋಗೆ ಕಡ್ಡಿಗಳು - ಪೊರಕೆ, ಕರಕುಶಲ ವಸ್ತುಗಳು.
4. ಕಾಯಿಯ ತಿರುಳು - ತೇವ ತೆಗೆದ ಕೊಬ್ಬರಿ, ತೆಂಗಿನ ಹಾಲಿನ ಕೆನೆ, ಕೊಬ್ಬರಿ.
5. ಕೊಬ್ಬರಿ - ಕೊಬ್ಬರಿ ಎಣ್ಣೆ, ಕೊಬ್ಬರಿ ಹಿಂಡಿ ಇತ್ಯಾದಿ.

6. ಕೊಬ್ಬರಿ ಹಿಂಡಿ - ಪಶು ಮತ್ತು ಕೋಳಿ ಆಹಾರ.

7. ಎಳನೀರು - ಸೌಮ್ಯ ಪಾನೀಯ, ಹಣ್ಣುಪಾಕ, ಹಣ್ಣಿನ ರಸ, ಹುಳಿನೀರು, ಬಿಯರ್ (ಮದ್ಯ)

8. ಚಿಪ್ಪು : ಕರಕುಶಲ ವಸ್ತುಗಳು, ಇದ್ದಲು / ಕೈಗಾರಿಕೆಗಳಿಗೆ ಉಪಯೋಗಿಸುವ ಇಂಗಾಲ ಮತ್ತು ಕ್ರಿಯಾಶಕ್ತ ಇಂಗಾಲ, ಚಿಪ್ಪಿನ ಪುಡಿ, ಉರುವಲು, ಔಷಧಿಯಾಗಿ ಚಿಪ್ಪಿನ ಎಣ್ಣೆ.

9. ತೆಂಗಿನ ಚಿಪ್ಪಿನ ಪುಡಿ - ಪ್ಲಾಸ್ಟಿಕ್ ಕಾರ್ಖಾನೆಗಳಲ್ಲಿ, ಅಗರಬತ್ತಿ, ಸೊಳ್ಳೆಗಳ ಸುರುಳಿ ಸಿಂಬಿ ತಯಾರಿಕೆಯಲ್ಲಿ, ಬೇಕೆಲೈಟ್ ರೂಪು ಕೊಡಲು.

11. ತೆಂಗಿನ ಸಿಪ್ಪೆ - ನಾರು, ನಾರಿನ ಹುರಿ, ನಾರಿನ ಜಮಖಾನ, ನಾರಿನ ಕಾಲೊರೆಸುವ ತಟ್ಟು ಇತ್ಯಾದಿ.

11. ತೆಂಗಿನ ನಾರಿನ ಪುಡಿ - ನಾರಿನ ಹುಡಿಯಿಂದ ಮಾಡಿದ ಇಟ್ಟಿಗೆ ಬೇರ್ಪಡಿಸುವ ಹಲಗೆ.

12. ತೆಂಗಿನ ಸಸ್ಯದ ಜೀವರಸ - ಹೆಂಡ, ಬೆಲ್ಲ.

ಒಟ್ಟಿನಲ್ಲಿ ತೆಂಗಿನ ಮರದ ಎಲ್ಲಾ ಭಾಗಗಳೂ ಒಂದಲ್ಲ ಒಂದು ರೀತಿಯಲ್ಲಿ ಉಪಯುಕ್ತ. ತೆಂಗು ಒಂದು ಬಹುವಾರ್ಷಿಕ ಬೆಳೆಯಾಗಿರುವುದರಿಂದ ಪ್ರತಿ ತಿಂಗಳು, ಪ್ರತಿ ವರ್ಷ ಕೆಲವು ಸುಧಾರಿತ ಬೇಸಾಯ ಕ್ರಮಗಳನ್ನು ತಪ್ಪದೆ ಅನುಸರಿಸುವುದರಿಂದ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವಾಗುತ್ತದೆ.

'ಕಲ್ಪವೃಕ್ಷ' ವೆಂದೆ ಪ್ರಸಿದ್ಧವಾಗಿರುವ ತೆಂಗಿನ ಮರದ ಪ್ರತಿಯೊಂದು ಭಾಗವೂ ಮಾನವನಿಗೆ ತುಂಬಾ ಉಪಯೋಗಕಾರಿಯಾಗಿದ್ದು, ಇದನ್ನು 'ರೈತರ ಮಿತ್ರ' ಎಂದು ಕರೆಯುತ್ತಾರೆ. ತೆಂಗನ್ನು ಸಾಮಾನ್ಯವಾಗಿ ಹೊಲ, ಮನೆಗಳ ಬಳಿ, ತೋಟಗಳಲ್ಲಿ ಬೆಳೆಯಲಾಗುತ್ತದೆ. ರೈತರು ತಮ್ಮ ಜೀವನವನ್ನು ಸಾಗಿಸಲು ತುಂಬಾ ಸಹಕಾರಿಯಾಗಿದೆ.

*ಬಿ.*

**ತೆರಿಗೆ** ತೆರಿಗೆ ಕೇವಲ ಭಾರತಕ್ಕೆ ಮಾತ್ರ ಸೀಮಿತವಾದುದಲ್ಲ. ಪ್ರಪಂಚಾದ್ಯಂತ ವಿಭಿನ್ನ ರೂಪಗಳಲ್ಲಿ, ವಿವಿಧ ಕಾಲಗಳಲ್ಲಿ ಪ್ರಚಲಿತದಲ್ಲಿತ್ತು. ಎಂದು ಮನುಷ್ಯ, ಮನುಷ್ಯನ ಮೇಲೆ ಅಧಿಕಾರ ಚಲಾಯಿಸಲು ಪ್ರಾರಂಭಿಸಿದನೋ ಅಂದೇ ಕೊಡುವವ ಮತ್ತು ಪಡೆಯುವ ವರ್ಗ ಸೃಷ್ಟಿಯಾಯಿತು. ಕಾಲಕ್ರಮೇಣ ಮಾನವ ಒಂದೆಡೆ ನೆಲಸಿ ಸಂಘಜೀವಿಯಾದ ಕಾಲಘಟ್ಟದಲ್ಲಿ ಬೌದ್ಧಿಕ, ಭೌತಿಕವಾಗಿ ಬಲಿಷ್ಠನಾದ ವ್ಯಕ್ತಿಯೊಬ್ಬ ಅಲ್ಲಿಯ ನಾಯಕನಾಗುತ್ತಿದ್ದ. ಈ ವ್ಯಕ್ತಿ ತನ್ನ ನೇತೃತ್ವದಲ್ಲಿ ಆ ಭಾಗದ ಸಮಾಜದ ಆಗುಹೋಗುಗಳನ್ನು ಅನುಕೂಲ ರೀತಿಯಲ್ಲಿ ನೋಡಿಕೊಳ್ಳುವಲ್ಲಿ ಅವನಿಗೊಂದಿಷ್ಟು ಆದಾಯ ಬೇಕಾಗುತ್ತದೆ. ಅದನ್ನು ದ್ರವ್ಯ ರೂಪದಲ್ಲಿ ಅಲ್ಲಿ ವಾಸಿಸುವ ಕುಟುಂಬಗಳಿಂದ ಪಡೆಯುತ್ತಾನೆ. ಬಹುಶಃ ಇದು ತೆರಿಗೆ ಉದಯಿಸಿದ ಪರಿಯೆನಿಸುತ್ತದೆ. ಸಮಾಜ ಬೆಳೆದಂತೆಲ್ಲ ನಾಯಕತ್ವ ವಿಸ್ತಾರವಾದಂತೆಲ್ಲ ಪ್ರಭು ಮತ್ತು ಪ್ರಜೆ ಆಳ್ವಿಕೆ ಆರಂಭವಾಯಿತು.

ಯಾವುದೇ ಒಂದು ಸರ್ಕಾರ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ಅದಕ್ಕೆ ಆದಾಯ ಬಹುಮುಖ್ಯ. ರಾಜರು ತಮ್ಮ ಆಡಳಿತಾವಧಿಯಲ್ಲಿ ಅವರ ಆಡಳಿತಕ್ಕೆ ಒಳಪಟ್ಟ ಸಾಮ್ರಾಜ್ಯವನ್ನು ಯಾವುದೇ ರೀತಿಯ ಸಮಸ್ಯೆಗಳಿಗೆ ಒಳಗಾಗದ ಹಾಗೆ ಸುರಕ್ಷಿತವಾಗಿ ಮತ್ತು ಸುಭಿಕ್ಷಿತವಾಗಿ ಆಡಳಿತ ನಡೆಸಲು ಸಾರ್ವಜನಿಕರ ಮೇಲೆ ವಿವಿಧ ರೀತಿಯ ತೆರಿಗೆಗಳನ್ನು ವಿಧಿಸುತ್ತಿದ್ದರು. ತೆರಿಗೆ ಎಂಬ ಪದ 'ತೆರ' ಎಂಬ ಪ್ರಕೃತಿ 'ಇಗೆ' ಎಂಬ ಪ್ರತ್ಯಯ ಸೇರಿ ಆದ ಸಮಾಸಪದ. 'ತೆರ' ಎಂದರೆ ತೆರುವುದು, ಕೊಡುವುದು ಎಂದರ್ಥ. ಯಾವುದೇ ಕಾರ್ಯನಿರ್ವಹಿಸಲು ಸರಕಾರಕ್ಕೆ ಹಣದ ಅಗತ್ಯವಿರುತ್ತದೆ. ಅಂತಹುಗಳಲ್ಲಿ ತೆರಿಗೆ ಮುಖ್ಯವಾದುದು. ಇದನ್ನು ಪ್ರಜೆಗಳ ಮೇಲೆ ಕಡ್ಡಾಯವಾಗಿ ಉಪಯೋಗವಾಗುವ ರೀತಿಯಲ್ಲಿ ಸರಕಾರ ವಿನಿಯೋಗಿಸುತ್ತದೆ. ಆದರೆ ತೆರಿಗೆ ಕೊಡುವ ವ್ಯಕ್ತಿ ಸರಕಾರದಿಂದ ಇದಕ್ಕೆ ಸಂಬಂಧಿಸಿದ ಯಾವುದೇ ಫಲವನ್ನು ನಿರೀಕ್ಷಿಸುವಂತಿಲ್ಲ.

**ಶಾಸನಗಳಲ್ಲಿ ತೆರಿಗೆ :**

1) ನಿಮಗೆ ತೆಱಿಗೆ ಕಾಣಿಕೆ ಬೇಡಿಕೆ ಬಿರಾಡಯೇನುಂಟಾದರೂ ನಾವು ನಿಮಗೆ ಬಿಟ್ಟೆಉ (ಮೈಆರಿ. 1946, 2-8; ಸು. 1554)

2) ಯೀ ತೆರಿಗೆ ಹಣವಿ.... (ಎಕ. VII ಶಿವಮೊ. 21-10:?)

3) ಹದಿನಅಯ್ದು ಹಣವಿನ ತೆಱಿಗೆಯ ಭೂಮಿ (ಎಕ. VIII, ತೀರ್ಥಹಳ್ಳಿ, 148-21:1417);

4) ಸಮಸ್ತ ತೆಱೆಗೆ ಹೊಱಗೆ ಎಲ್ಲವನು ಕಳವ ಕಡಿದು ಬಿಟ್ಟು ಸರ್ವಮಾನ್ಯದ ಅಗ್ರಾರವಾಗಿ ಚಿಕ್ಕರಾಯಪುರವೆಂಬ ಹೆಸರನುಯಿಟ್ಟು (ಎಕ.IV. ಗುಂಡ್ಲು ಪೇ. 67.47 : 1505)

ಹೀಗೆ ಶಾಸನಗಳಲ್ಲಿ ಉಲ್ಲೇಖಗೊಂಡಿದೆ.

ದಕ್ಷಿಣ ಭಾರತದಲ್ಲಿ ಕೃಷಿ ಆಧಾರಿತ ತೆರಿಗೆಗಳನ್ನು ಕುರಿತಂತೆ ವಿಸ್ತೃತವಾಗಿ ವಿಜಯನಗರದ ಕಾಲಘಟ್ಟವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

**ಭೂಕಂದಾಯ :** ವಿಜಯನಗರದ ಅರಸರು ಪೂರ್ವ ಮರ್ಯಾದೆಯನ್ನು ಪಾಲಿಸುವವರು ಎಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಅವರು ಕರ್ನಾಟಕದಲ್ಲಿ ಹಿಂದಿನವರ ಸಂಪ್ರದಾಯಗಳನ್ನು ಪಡೆದುಕೊಂಡಿದ್ದುದು ಮಾತ್ರವಲ್ಲದೆ ನೂತನ ತತ್ತ್ವಗಳನ್ನು ವಿಕಾಸಗೊಳಿಸಿ ವ್ಯವಸ್ಥೆಯನ್ನು ಸಮರ್ಪಕವಾಗುವಂತೆ ಮಾಡುತ್ತಿದ್ದರು. ತೆರಿಗೆಯ ಯಾವುದೇ ವ್ಯವಸ್ಥಿತ ಪದ್ಧತಿಯಂತೆ ವಿಜಯನಗರ ಸಾಮ್ರಾಜ್ಯದ ಭೂಕಂದಾಯದ ವ್ಯವಸ್ಥೆಯಲ್ಲೂ ಎರಡು ಹಂತಗಳಿದ್ದವು. ಮೊದಲನೆಯದು ಕಂದಾಯದ ನಿಗಧಿ, ಎರಡನೆಯದು ಕಂದಾಯದ ವಸೂಲಿ. ಭೂಕಂದಾಯ ನಿಗದಿಯ ಯಾವುದೇ ಪದ್ಧತಿಯಲ್ಲಿ ಮೊದಲನೆಯ ತತ್ವ, ಕೃಷಿಕನು ಕೊಡಬೇಕಾದ ತೆರಿಗೆಯನ್ನು ಮುಖ್ಯವಾಗಿ ಮಣ್ಣಿನ ವರ್ಗ ಮತ್ತು ಬೇಸಾಯದ ಪರಿಸ್ಥಿತಿ ಇವುಗಳ ಆಧಾರದಿಂದಲೇ ನಿರ್ಣಯಿಸಬೇಕು ಎನ್ನುವುದು. ವಿಜಯನಗರ ಕಾಲದಲ್ಲಿಯೂ ಈ ನಿಯಮವನ್ನು ಅನುಸರಿಸುತ್ತಿದ್ದರು. ಅದಕ್ಕಾಗಿ ನಾಲ್ಕು ಬಗೆಯ ಬೇಸಾಯವನ್ನು ಪರಿಗಣಿಸಲಾಗುತ್ತಿತ್ತು. ಅವು ಕಾಡಾರಂಭ

(ಒಣಬೇಸಾಯ)/ ನೀರಾರಂಭ (ನೀರಾವರಿ ಗದ್ದೆ ಬೇಸಾಯ) ತೋಟಾರಂಭ ಮತ್ತು ಕುಮರಿ (ಸ್ಥಳ ವರ್ಗಾಯಿಸುವ ಬೇಸಾಯ) ಶಾಸನಗಳಲ್ಲಿ ಇವುಗಳನ್ನು ಬೇರೆ ಬೇರೆಯಾಗಿ ಉಲ್ಲೇಖಿಸಿರುವುದರಿಂದ ಅದಕ್ಕೆ ಬೇರೆ ಬೇರೆ ದರಗಳಲ್ಲಿ ಕಂದಾಯ ನಿಗದಿಯಾಗಿತ್ತೆಂದು ನಿರ್ಣಯಿಸಬಹುದು. ಯಾವ ಬಗೆಯ ಭೂಮಿಗೆ ಸೇರಿದೆ ಎನ್ನುವುದರ ಮೇಲೂ ಅದು ನಿಗದಿಯಾಗಿದ್ದಿತು. ಗದ್ದೆಗಳನ್ನು ಉತ್ತಮ, ಮಧ್ಯಮ ಮತ್ತು ಕನಿಷ್ಟ ಎಂದು ಮೂರು ಬಗೆಯಾಗಿ ವಿಂಗಡಿಸಲಾಗಿತ್ತು.

ತೋಟದ ಭೂಮಿಗೆ ಸಂಬಂಧಿಸಿದಂತೆ ಕಂದಾಯ ನಿಗಧಿಪಡಿಸುವ ಮೊದಲು ಅಲ್ಲಿಯ ಉತ್ಪನ್ನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿದ್ದರು. ತೆಂಗು, ಅಡಕೆ, ಹಲಸು, ಮಾವಿನ ಮರಗಳು, ಬಾಳೆ ಗಿಡ ಮತ್ತು ವೀಳೆಯದೆಲೆ ಹಂಬುಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸುತ್ತಿದ್ದರು. ಗದ್ದೆಯಲ್ಲೂ ಅಷ್ಟೇ, ಕಬ್ಬು ಮತ್ತು ಧಾನ್ಯಗಳಿಗೆ ಪ್ರತ್ಯೇಕವಾಗಿ ತೆರಿಗೆಯಿರುತ್ತಿತ್ತು. ಹೀಗೆ ವಿಜಯನಗರದ ಅರಸರು ಪ್ರತ್ಯೇಕ ತೆರಿಗೆ ಪದ್ಧತಿಯನ್ನು ಕೃಷಿ ಭೂಮಿಗೆ ಸಂಬಂಧಿಸಿದಂತೆ ಅನುಸರಿಸುತ್ತಿದ್ದರು.

ತೆರಿಗೆ ನಿಗದಿಗಾಗಿ ಜಮೀನನ್ನು ಅಳತೆ ಮಾಡುವುದು ಕರ್ನಾಟಕದಲ್ಲಿ ಹಿಂದಿನಿಂದಲೂ ಬಂದ ಪದ್ಧತಿ. ವಿಜಯನಗರ ಕಾಲಕ್ಕಿಂತ ಹಿಂದಿನಿಂದಲೂ ಜಮೀನು ಅಳತೆಯ ಅನೇಕ ಘಟಕಗಳು ಚಾಲ್ತಿಯಲ್ಲಿದ್ದವು. ಕದಂಬರ ಕಾಲದಲ್ಲಿ ನಿರ್ತನ ಮತ್ತರು ಮತ್ತು ಮಣ್ಣು ನೆಲ ಅಳತೆಯ ಮಾನಕಗಳಾಗಿದ್ದವು. ಗಂಗರ ಶಾಸನಗಳಲ್ಲಿ ಗಂಗಕೋಲು, ಭೇರುಂಡ ಕೋಲು, ಕಚ್ಛವಿ ಕೋಲು ಮತ್ತು ಏರಿಸೈಕೋಲು ರಾಜಮಟ್ಟದ ದಂಡ ಅಥವಾ ಕೋಲು ಇವುಗಳ ಉಲ್ಲೇಖವಿದೆ. ಇವಲ್ಲದೆ 18 ಮೊಳ ಅಳತೆ 36 ಹೆಜ್ಜೆ ಮತ್ತು 48 ಹೆಜ್ಜೆ ಅಳತೆಗಳಿರುತ್ತಿದ್ದವು.

ವಿಜಯನಗರದ ರಾಜರು ಆಗಲೇ ಸ್ಥಾಪಿತವಾಗಿದ್ದ ಪದ್ಧತಿಯನ್ನು ಅನುಸರಿಸಿದುದು ಮಾತ್ರವಲ್ಲದೆ ತಮ್ಮದೇ ಆದ ಪದ್ಧತಿಯನ್ನು ರೂಪಿಸಿಕೊಂಡರು. ಹಳೆಯ ಅಳತೆಗಳ ಜೊತೆಗೆ ಈ ಕಾಲದಲ್ಲಿ ಕೆಲವು ಹೊಸ ಅಳತೆಗಳನ್ನು ಜಾರಿಗೆ ತಂದರು. ಆ ಸಮಯದಲ್ಲಿ 18 ಪಾದ ಉದ್ದವಿದ್ದ ಮಾನದಂಡ ಎಂಬ ಅಳತೆಯ ಕೋಲು ಪ್ರಚಲಿತವಾಗಿತ್ತು. ಇದು ಹಳೆಯ ಅಳತೆಯೇ ಆದರೆ ಈ ಅಳತೆ ಕೋಲಿನ ಉದ್ದ ಬೇರೆಬೇರೆಯಾಯಿತು.

**ಕಂದಾಯ ನಿಗದಿ :** ಸಾಮಾನ್ಯವಾಗಿ ಎರಡು ಬಗೆಯ ಕಂದಾಯ ನಿಗದಿಯಾಗುತ್ತಿತ್ತು. ರಾಯರೇಖೆ ಮತ್ತು ಬೀಜವರಿ. ರಾಯ ರೇಖೆ ನಿಗದಿಯ ಮಹತ್ವವೇನೆಂದರೆ ಅದು ಕರ್ನಾಟಕದಲ್ಲಿ ಆಳುತ್ತಿದ್ದ ಬಿಜಾಪುರ (1573-1686) ಸವಣೂರು (1686-1752) ಮತ್ತು ಮರಾಠಾ (1752-1817) ಸರ್ಕಾರಗಳಲ್ಲಿ ಜಾರಿಯಲ್ಲಿದ್ದ ಕಂದಾಯ ನಿಗದಿಯ ವ್ಯವಸ್ಥೆಗೆ ತಳಹದಿಯನ್ನು ಹಾಕಿತು.

ಬೀಜವರಿ ನಿಗದಿ ಎನ್ನುವುದು ಒಂದು ಜಮೀನು ಉತ್ಪಾದಿಸಬಹುದೆಂದು ಅಂದಾಜು ಮಾಡಿರುವ ಅಥವಾ ಒಂದು ಜಮೀನಿಗೆ ಎಷ್ಟು ಬಿತ್ತನೆ ಬೀಜ ಬೇಕು ಎನ್ನುವುದರ ಆಧಾರದ ಮೇಲೆ ಕಂದಾಯವನ್ನು ನಿಗದಿಪಡಿಸುವುದು. ಜಮೀನಿನ ಬಿತ್ತನೆ ಬೀಜಸಾಮರ್ಥ್ಯವನ್ನು ಅಳೆಯುವ ಮಾನಕಗಳು ಸ್ಥಳದಿಂದ ಸ್ಥಳಕ್ಕೆ ಬೇರೆಯಾಗುತ್ತಿದ್ದವು. ಖಂಡುಗ, ಕೊಳಗ, ಸಲಗ, ಬಳ್ಳ ಮತ್ತು ಮುಡೆ (ಮುಡಿ) ಇತ್ಯಾದಿ.

**ಭೂ ಕಂದಾಯವನ್ನು ವಸೂಲು ಮಾಡುತ್ತಿದ್ದ ವಿಧಾನ :** ಸರಕಾರಕ್ಕೆ ಸಲ್ಲಬೇಕಿದ್ದ ಕಂದಾಯ ರೂಪದ ವರಮಾನವನ್ನು ಸಂಗ್ರಹಿಸುವ ಒಂದು ನಿರ್ದಿಷ್ಟ ವಿಧಾನವಿದ್ದಂತೆ ತೋರುತ್ತದೆ. ಸಂಗ್ರಹಿಸಿದ ಹಣವನ್ನು ಚಕ್ರವರ್ತಿಯ ಬೊಕ್ಕಸಕ್ಕೆ ನಿರ್ದಿಷ್ಟ ಕಾಲಾವಧಿಯಲ್ಲಿ ಜಮಾ ಮಾಡಲಾಗುತ್ತಿತ್ತು. ಸಾಮಾನ್ಯವಾಗಿ ನಾಲ್ಕು ಬೇರೆ ಬೇರೆ ವಿಧಾನಗಳಿಂದ ಕಂದಾಯವನ್ನು ಸಂಗ್ರಹಿಸಲಾಗುತ್ತಿತ್ತು.

**1. ಸರಾಕರವೇ ಮಾಡುವ ವಸೂಲಾತಿ :** ಮೊದಲನೆಯ ವಿಧಾನದಲ್ಲಿ ಸರಕಾರ ನೇಮಿಸಿದ ಅಧಿಕಾರಿಗಳು ಮತ್ತು ತೆರಿಗೆ ವಸೂಲಿಗಾರರು ಸಂಗ್ರಹಿಸುತ್ತಿದ್ದರು. ಇದಕ್ಕಾಗಿ ಕೆಲವು ರೆವಿನ್ಯೂ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಈ ಅಧಿಕಾರಿಗಳು ತೆರಿಗೆಗಳನ್ನು ವಿನಾಯಿತಿಗೊಳಿಸುವ ಹಕ್ಕುಪಡೆದಿದ್ದರು.

**2. ಗುತ್ತಿಗೆ ಪದ್ಧತಿ :** ಕಂದಾಯವನ್ನು ಸಂಗ್ರಹಿಸುತ್ತಿದ್ದ ಎರಡನೆಯ ವಿಧಾನ ಗುತ್ತಿಗೆ ಪದ್ಧತಿ. ಹರಾಜಿನಲ್ಲಿ ಯಾರು ಅತ್ಯಂತ ಹೆಚ್ಚು ಹಣವನ್ನು ಬಿಡ್ ಮಾಡುತ್ತಾರೊ ಅವರಿಗೆ ಕಂದಾಯವನ್ನು ವಸೂಲು ಮಾಡುವ ಹಕ್ಕನ್ನು ಕೊಡಲಾಗುತ್ತಿದ್ದಿತು. ಇದಕ್ಕೆ ಗುತ್ತಿಗೆ ಪದ್ಧತಿ ಎಂದು ಹೆಸರು. ಗುತ್ತಿಗೆ ಆಧಾರದ ಮೇಲೆ ಜಮೀನುಗಳನ್ನು ಪಡೆದವನು ಆ ಪ್ರದೇಶದಲ್ಲಿ ತೆರಿಗೆಗಳನ್ನು ಸಂಗ್ರಹಿಸುವುದಕ್ಕೆ ಹೊಣೆಗಾರನಾಗುತ್ತಿದ್ದನು. 19 ಮತ್ತು 20ನೆಯ ಶತಮಾನದ ಮೊದಲ ಭಾಗಗಳಲ್ಲಿ ಕಂಡುಬಂದ ಜಮೀನ್ದಾರಿ ಪದ್ಧತಿಯ ಮೂಲ ಈ ರೀತಿ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವುದರಲ್ಲಿತ್ತು. ಮೋರ್‌ಲ್ಯಾಂಡ್‌ನ ಪ್ರಕಾರ "ಗುತ್ತಿಗೆ ಕರಾರುಗಳ ಮೇಲೆ ಪ್ರಾಂತೀಯ ಗವರ್ನರರನ್ನು ನೇಮಕ ಮಾಡುವ ರೂಢಿಯು ವಿಜಯನಗರದ ಹಿಂದೂ ಸಾಮ್ರಾಜ್ಯದಲ್ಲಿತ್ತು. ಆಮೇಲೆ ಆ ಗುತ್ತಿಗೆ ಪದ್ಧತಿಯು ಪ್ರಾಂತದಿಂದ ಹಳ್ಳಿಯ ಮಟ್ಟಕ್ಕೆ ಇಳಿಯಿತು. ಸಾಮ್ರಾಜ್ಯವು ಪತನಗೊಂಡ ಮೇಲೆ ಈ ಪ್ರದೇಶದಲ್ಲಿ ಚಾಲ್ತಿಯಲ್ಲಿದ್ದ ಪದ್ಧತಿ ಇದೇ ಆಗಿತ್ತು.

ಇದರಿಂದ ಕೇಂದ್ರಾಡಳಿತಕ್ಕೆ ಆ ಸಂಬಂಧವಾದ ಆರ್ಥಿಕ ಜವಾಬ್ದಾರಿ ಯಾವುದೂ ಉಳಿದಿರುತ್ತಿರಲಿಲ್ಲ. ಗುತ್ತಿಗೆ ಪದ್ಧತಿಯು ಊಳಿಗಮಾನ್ಯ ಪದ್ಧತಿಗಿಂತ ಬೇರೆ. ಅದು ನಾಯಂಕರ ಪದ್ಧತಿ ಎನಿಸಿತ್ತು. ನ್ಯೂನಿಜ್ ಪ್ರಕಾರ ರಾಜಧಾನಿಯ ಹೆಬ್ಬಾಗಿಲಿನಲ್ಲಿ ಸುಂಕ ಸಂಗ್ರಹಣೆಯನ್ನು 12000 ಪಗೋಡಗಳಿಗೆ ಗುತ್ತಿಗೆ ಕೊಡಲಾಗಿತ್ತು. ಆದರೆ ಅಲ್ಲಿರುತ್ತಿದ್ದ ಗುತ್ತಿಗೆದಾರನು ಮುಗ್ಧರಾದ ಗ್ರಾಮ ಜನರಿಂದ ಇನ್ನೂ ಬೇಕಾದಷ್ಟು ಸುಂಕಗಳನ್ನು ವಸೂಲು ಮಾಡುತ್ತಿದ್ದನು. ಹೀಗೆ ಮಧ್ಯವರ್ತಿಗಳ ಮೂಲಕ ತೆರಿಗೆ ಸಂಗ್ರಹಿಸುವುದು ವಿಜಯನಗರ ಕಾಲದಲ್ಲಿ ರೂಢಿಯಲ್ಲಿದ್ದ ಪದ್ಧತಿಯಾಗಿತ್ತು. ಪ್ರಾಂತದ ಗವರ್ನರನಿಂದಲೋ ಅವನ ಅಧೀನ ಅಧಿಕಾರಿಯಿಂದಲೋ ಕಂದಾಯ ವಸೂಲಿ ಮಾಡುವ ಹಕ್ಕನ್ನು ಗುತ್ತಿಗೆ ಆಧಾರದ ಮೇಲೆ ಪಡೆದ ಗುತ್ತಿಗೆದಾರನು ರಾಜನಿಗೆ ಸೈನ್ಯ ಸೇವೆಯನ್ನು ಒದಗಿಸಬೇಕಾದ ಪ್ರಮೇಯವಿರಲಿಲ್ಲ. ಅದಕ್ಕೂ ಅವನಿಗೂ ಸಂಬಂಧವಿರಲಿಲ್ಲ. ಅಥವಾ ಅವನು ತೆರಿಗೆ ವಸೂಲಿ ಮಾಡುವ ಪ್ರದೇಶದ ಆಡಳಿತಗಾರನೂ ಆಗಿರಲಿಲ್ಲ. ಅವನು ಸರ್ಕಾರಕ್ಕೆ ನಿರ್ದಿಷ್ಟ ಪ್ರಮಾಣದ ಮೊತ್ತದ ಕಂದಾಯವನ್ನು ಪಾವತಿ ಮಾಡುತ್ತಿದ್ದನು.

**3. ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹ :** ಮೂರನೆಯ ಪದ್ಧತಿಯಲ್ಲಿ ನಾಡು ಮತ್ತು ಸಭಾಗಳಿಗೆ ತೆರಿಗೆಗಳನ್ನು ವಸೂಲು ಮಾಡುವ ಹಕ್ಕನ್ನು

ವಹಿಸಲಾಗಿದ್ದಿತು. ಈ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದವು. ಮತ್ತು ತೆರಿಗೆಗಳ ವಿನಾಯಿತಿ ಕೊಡುವ ಅಧಿಕಾರವೂ ಅವುಗಳಿಗಿತ್ತು. ಸಂಗ್ರಹಿತ ಕಂದಾಯದಿಂದ ದೇವಾಲಯಗಳಿಗೆ ದಾನ ಮಾಡಲಾಗುತ್ತಿತ್ತು. ಹೀಗೆ ದಾನ ಮಾಡುವ ಮೊದಲು ಸರ್ಕಾರದಿಂದ ಪೂರ್ವಭಾವೀ ಅನುಮತಿಯನ್ನು ಪಡೆಯಬೇಕಾಗಿತ್ತು.

**4. ಮಧ್ಯವರ್ತಿ (ನಾಯಂಕರ ಪದ್ಧತಿ) :** ಭೂ ಹಿಡುವಳಿ ಮತ್ತು ಕಂದಾಯ ವಸೂಲಾತಿಯಲ್ಲಿ ನಾಲ್ಕನೆಯ ಪದ್ಧತಿ ನಾಯಂಕರ ವ್ಯವಸ್ಥೆ. ಇದು ಮಧ್ಯಯುಗೀನ ಯುರೋಪಿನಲ್ಲಿದ್ದ ಫ್ಯೂಡಲ್ ಪದ್ಧತಿಗೆ ಸಮನಾಗಿತ್ತು. ಪ್ರತಿ ವರ್ಷವು ನಿರ್ದಿಷ್ಟ ಮೊತ್ತದ ಕಾಣಿಕೆ ಮತ್ತು ಅಗತ್ಯವಾದಾಗ ಸೈನ್ಯದ ಪೂರೈಕೆ ಈ ಎರಡು ಸೇವೆಗಳಿಗೆ ಪ್ರತಿಯಾಗಿ ರಾಜನು ಕೆಲವು ವ್ಯಕ್ತಿಗಳಿಗೆ ಭೂಮಿಯನ್ನು ನೀಡುತ್ತಿದ್ದನು. ಈ ವ್ಯಕ್ತಿಗಳು ಸಾಮಾನ್ಯವಾಗಿ ದಣ್ಣಾಯಕರು, ಪ್ರಾಂತೀಯ ರಾಜ್ಯಪಾಲರು ಮತ್ತು ಇತರ ಸ್ಥಳೀಯ ಮುಖಂಡರಾಗಿರುತ್ತಿದ್ದರು. ನಾಯಂಕರ ಪದ್ಧತಿಯನ್ನು ಕುರಿತು ನ್ಯೂನಿಜ್ ಹೇಳುತ್ತಾನೆ. "ಬಿಸ್ನಗರ್ ರಾಜ್ಯವನ್ನು ಇನ್ನೂರಕ್ಕೂ ಹೆಚ್ಚು ನಾಯಕರಿಗೆ ಹಂಚಲಾಗಿದೆ. ಅವರೆಲ್ಲರೂ ಹಿಂದುಗಳು, ಅವರ ಬಳಿ ಇರುವ ಭೂಮಿ ಮತ್ತು ಅದರ ವರಮಾನಗಳಿಗೆ ಅನುಗುಣವಾಗಿ ರಾಜನು ಅವರು ಕಾಪಾಡಿಕೊಂಡಿರಬೇಕಾದ ಸೈನ್ಯದ ಪ್ರಮಾಣವನ್ನು ನಿಗದಿಪಡಿಸುತ್ತಾನೆ. ಸೆಪ್ಟೆಂಬರ್ ತಿಂಗಳ ಮೊದಲ ಒಂಬತ್ತು ದಿನಗಳಲ್ಲಿ ಈ ಪಾವತಿಯು ನಡೆಯುತ್ತದೆ. ಹಾಗೆ ಬಂದ ಕಾಣಿಕೆಗೆ ರಾಜನು ರಶೀತಿಯನ್ನು ಕೊಡುವುದಿಲ್ಲ. ಅವರು ಕೊಡದೆ ಹೋದರೆ ಮಾತ್ರ ಉಗ್ರವಾಗಿ ಅವರನ್ನು ಶಿಕ್ಷಿಸಿ ಅವರ ಆಸ್ತಿಯನ್ನು ಕಿತ್ತುಕೊಳ್ಳಲಾಗುತ್ತದೆ.

ಭೂಕಂದಾಯ ಮತ್ತು ಇತರ ತೆರಿಗೆಗಳನ್ನು ಯಾವ ರೂಪದಲ್ಲಿ ಪಾವತಿ ಮಾಡುತ್ತಿದ್ದರು ಎನ್ನುವುದನ್ನು ಸೂಚಿಸುವ ಕೆಲವು ಸ್ವಾರಸ್ಯಕರವಾದ ವಿವರಗಳು ಶಾಸನಗಳಲ್ಲಿವೆ. ಭೂ ಕಂದಾಯವನ್ನು ನಗದಾಗಿಯೂ ವಸ್ತುರೂಪದಲ್ಲೂ, ಸಂಗ್ರಹಿಸಲಾಗುತ್ತಿತ್ತು. ಗದ್ಯಾಣ, ಹೊನ್ನು ಮತ್ತು ಪಣ ಎಂಬ ನಾಣ್ಯಗಳ ರೂಪದಲ್ಲಿ ನಗದು ಪಾವತಿ ನಡೆಯುತ್ತಿತ್ತು. ಹದಿನಾಲ್ಕನೆಯ ಶತಮಾನದ ಮುಂದಕ್ಕೆ ಹೊಲಗದ್ದೆಗಳೆರಡಕ್ಕೂ ಕಂದಾಯವನ್ನು ನಗದಾಗಿ ಪಾವತಿ ಮಾಡುವುದೇ ಹೆಚ್ಚು ಪ್ರಾಚುರ್ಯಕ್ಕೆ ಬಂದಿತು. ಮಾಧವಾಚಾರ್ಯರು ವಿಜಯನಗರ ಸರ್ಕಾರವನ್ನು ಧಾನ್ಯದಿಂದ ಹಣಪಾವತಿಯ ಕಡೆಗೆ ಪರಿವರ್ತಿಸುವ ವಿಷಯವಾಗಿ ಹೇಳುವಾಗ "ಭೂಮಿಯ ವಿಸ್ತೀರ್ಣ ಅಗತ್ಯವಾದ ಬೀಜವರಿ, ಫಸಲಿನ ಸರಾಸರಿ ಹೆಚ್ಚಳ ಮತ್ತು ಮೌಲ್ಯ ಇವುಗಳ ಆಧಾರದ ಮೇಲೆ ಈ ಪರಿವರ್ತನೆಗೆ ಅವರು ನಿರ್ದಿಷ್ಟ ನಿಯಮಗಳನ್ನು ರಚಿಸಿದರು. ಕರ್ನಾಟಕದಲ್ಲಿ ರೂಢಿಗೆ ಬರುತ್ತಿದ್ದ ನಗದುರೂಪದ ಕಂದಾಯ ಪಾವತಿ ಪದ್ಧತಿಯನ್ನು ಮಾಧವಾಚಾರ್ಯರು ವ್ಯವಸ್ಥಿತಗೊಳಿಸಿದರು. 14, 15ನೆಯ ಶತಮಾನಗಳಲ್ಲಂತೂ ಸಾಮಾನ್ಯವಾಗಿ ಕಂದಾಯವನ್ನು ನಗದಾಗಿ ಪಾವತಿ ಮಾಡಲಾಗುತ್ತಿದ್ದಿತು ಎಂದು ಹೇಳಬಹುದು.

ವಿಜಯನಗರ ಕಾಲದ ಶಾಸನಗಳು ಈ ಪ್ರದೇಶದ ಜನರು ಸರ್ಕಾರಕ್ಕೆ ಕೊಡಬೇಕಾಗಿದ್ದ ತೆರಿಗೆಗಳನ್ನು ಕುರಿತು ಮಾಹಿತಿಯನ್ನು ನೀಡುತ್ತವೆ. ಅವು ಇಂತಿವೆ :

ಅಪಾಯ, ಆಯ, ಮೇಪ್ಪನ್, ಪೆನ್ನಿಕಾಣಿ, ಮಕ್ಕುತಿರೈ; ಎಣ್ಣೆಗಿರಣಿಗಳ ಮೇಲಿನ ತೆರಿಗೆ, ತಳವಾರಿಕೆ, ಎರಡು ಎತ್ತಿನ ಹೆಸರು; ಕಡ್ನಾಯ ಹುಟ್ಟುವಳಿ; ಕಾಣಿಕೆ; ಕಾವಲು, ಕೂಲಿ, ಬೀಜಿಗೆ; ಕಿರುಕುಳ ತೆರಿಗೆ; ಕುದುರೆ ಸುಂಕ; ಕೈಮಗ್ಗದ ಮೇಲಿನ ತೆರಿಗೆ ; ಗೌಡಸುಂಕ ; ಬಿಟ್ಟಿ, ಬಿರಾಡ, ಬೀಜವರಿ, ಸೊಲ್ಲಗ (ಸೊಲಗೆ) ; ಬೀಡುಗಳು (ಬಿಡಾರ ಹಳೆಯದು, ಹೊಸದು) ; ಮನೆ ತೆರಿಗೆ; ಮದುವೆ ತೆರಿಗೆ; ಮಡಿದೆರೆ (ಗದ್ದೆ), ಬೆದ್ದಲು ದೆರೆ (ಹೊಲ), ಯಲಗುದುರೆ, ಗುಯಲುದೆರೆ; ಮಗ್ಗದೆರೆ, ಕಾಣಿಕೆ, ಪೂರ್ವಾಯ-ಅಪೂರ್ವಾಯ, ಸುವರ್ಣಾಯ; ವಿಭೂತಿ ಕಾಣಿಕೆ; ಸುಂಕಮಗ್ಗ; ಸ್ವರಿಯಾರ್ ಮಕ್ಕಂ; ಹಸು, ಎತ್ತು, ಎಮ್ಮೆ ಮತ್ತು ಚಮ್ಮಾರರ (ವೃತ್ತಿ ತೆರಿಗೆ) ಮೇಲಿನ ತೆರಿಗೆ ಇತ್ಯಾದಿ.

ಈ ತೆರಿಗೆಗಳನ್ನು ಗ್ರಾಮಗಳ ಮೇಲೆ ಹಾಕುತ್ತಿದ್ದರು. ತೆರಿಗೆಗಳು ಹಣದ ರೂಪದಲ್ಲಿ ಸಂದಾಯವಾಗುತ್ತಿದ್ದವು. ದೇವಾಲಯ, ಅಗ್ರಹಾರ ಮತ್ತು ಮಠಗಳು ತೆರಿಗೆಗಳನ್ನು ನೀಡುತ್ತಿರಲಿಲ್ಲ. ಹಿಂದಿಗಿಂತಲೂ ವಿಜನಯಗರ ಕಾಲದಲ್ಲಿ ವಿವಿಧ ರೀತಿಯ ತೆರಿಗೆಗಳು ಹುಟ್ಟಿ ತೆರಿಗೆಗಳ ಸಂಖ್ಯೆ ಹೆಚ್ಚಾದುದು ಸ್ಪಷ್ಟವಾಗುತ್ತದೆ. ಈ ಹೆಚ್ಚಳಕ್ಕೆ ಕಾರಣವೇನು? ಎಂಬ ಪ್ರಶ್ನೆಗೆ ಉತ್ತರವನ್ನು ನಾವು ಅಂದಿನ ಐತಿಹಾಸಿಕ ಹಿನ್ನೆಲೆಯಲ್ಲಿ ಹುಡುಕಬೇಕಾಗುತ್ತದೆ. ಹಿಂದೆ ಪ್ರಸ್ತಾಪಿಸಿರುವಂತೆ ರಾಜರ ಆಕ್ರಮಣವನ್ನು ಎದುರಿಸಬೇಕಾಗಿತ್ತು. ಸ್ವರಕ್ಷಣೆಗಾಗಿ ಒಂದು ದೊಡ್ಡ ಸೈನ್ಯವನ್ನು ಅವರು ಕಾದಿರಿಸಿದ್ದರು. ಅವರ ಜೀವನಕ್ರಮ ವೈಭವದಿಂದ ಕೂಡಿತ್ತು. ಆಳುವ ವರ್ಗದವರು ಚಕ್ರವರ್ತಿಗಳ ಮಾದರಿಯನ್ನೇ ಅನುಸರಿಸುತ್ತಿದ್ದರು. ಇದಲ್ಲದೇ ಹೇರಳವಾಗಿ ಮತ್ತು ಸತತವಾಗಿ ಸರ್ವಮಾನ್ಯ ತರಹದ ದಾನದತ್ತಿಗಳನ್ನು ನೀಡುತ್ತಿದ್ದುದರಿಂದ ಸರ್ಕಾರದ ಆದಾಯಕ್ಕೆ ತೊಂದರೆಯುಂಟಾಗಿತ್ತು. ಇದನ್ನು ಸರಿಪಡಿಸಲು ಹೊಸ ಬಗೆಯ ತೆರಿಗೆಗಳನ್ನು ಹಾಕಬೇಕಾಯಿತು. ವೃತ್ತಿದಾರರ ಮೇಲೆ, ಗ್ರಾಮಸ್ಥರ ಮೇಲೆ ವಿಧಿಸುತ್ತಿದ್ದ ಕಂದಾಯವೂ ಸೇರಿದಂತೆ ವಿವಿಧ ರೀತಿಯ ತೆರಿಗೆಗಳು ವಿಜಯನಗರದ ಬೊಕ್ಕಸಕ್ಕೆ ಹಣ ತುಂಬುವ ಸಾಧನಗಳಾಗಿದ್ದವು. ತೆರಿಗೆಗಳನ್ನು ಆಯಾ ಪ್ರದೇಶಗಳಲ್ಲಿದ್ದ ಅಮರನಾಯಕರು ಪಾಳಯಗಾರರು ಹಾಗೂ ಚಕ್ರವರ್ತಿಗಳಿಂದ ನೇಮಿಸಲ್ಪಟ್ಟ ರಾಜ ಪ್ರತಿನಿಧಿಗಳು ವಸೂಲಿ ಮಾಡುತ್ತಿದ್ದರು. ಒಂದು ತಮಗೆ ನಿಗದಿಯಾದ ಸೇನಾಬಲವನ್ನು ಇಟ್ಟುಕೊಳ್ಳುವುದಕ್ಕೆ ಎರಡು ಸ್ಥಳೀಯ ಆಡತ ಖರ್ಚಿನಲ್ಲಿ ತಮ್ಮ ವೆಚ್ಚವನ್ನು ನಿರ್ವಹಿಸುವುದಕ್ಕೆ ಮೂರು ವಿಜಯನಗರಕ್ಕೆ ಒಂದು ಭಾಗವನ್ನು ಕಳುಹಿಸಿ ಕೊಡುತ್ತಿದ್ದರೆಂದು ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಬರೆದಿದ್ದಾನೆ. ತೋಟಗಳ ಕಂದಾಯ ನಿಗದಿಗೆ ಮರಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು.

ರಾಜನು ರೈತರಿಂದ ಉತ್ಪನ್ನದ 1/4 ಭಾಗವನ್ನು ತೆಗೆದುಕೊಳ್ಳಬೇಕು ಎಂಬ ತತ್ತ್ವವನ್ನೇ ಚನ್ನಬಸವಪುರಾಣ ಮತ್ತು ರಾಜಾವಳಿ ಕಥೆ ಮೊದಲಾದ ಕನ್ನಡ ಕಾವ್ಯಗಳೂ ಪುನರುಚ್ಚರಿಸಿವೆ. ಶಾಸನಗಳೂ ಕೂಡ ವಕ್ಕಲಪಾಲು ಅಥವಾ ರೈತನಿಗೆ ಸಲ್ಲುವ ಭಾಗ ಮತ್ತು ರಾಜಪಾಲು ಅಥವಾ ರಾಜನಿಗೆ ಸಲ್ಲುವ ಭಾಗ ಎಂದು ಪ್ರತ್ಯೇಕಿಸುತ್ತವೆ. ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಹೀಗೆ ಬರೆಯುತ್ತಾನೆ. ನೆಲವೆಲ್ಲವೂ ರಾಜನಿಗೆ ಸೇರಿದೆ. ಅವನಿಂದ ದಂಡನಾಯಕರು ಅದನ್ನು ಪಡೆಯುತ್ತಾರೆ. ಅವರು ರೈತರಿಗೆ ವಹಿಸಿಕೊಡುತ್ತಾರೆ. ರೈತರು ದಂಡನಾಯಕರಿಗೆ ಉತ್ಪನ್ನದ 9/10 ಪಾಲನ್ನು ಸಲ್ಲಿಸುತ್ತಾರೆ. ಅವರು ರಾಜನಿಗೆ ಅರ್ಧವನ್ನು ಸಲ್ಲಿಸುತ್ತಾರೆ.

ಹಯವದನರಾವ್ ಅವರ ಪ್ರಕಾರ ವಿಜಯನಗರ ಕಾಲದಲ್ಲಿ ಕಂದಾಯವು ಶೇ. 50 ಆಗಿತ್ತು. ಪ್ರೊ. ಕೆ.ಎಸ್. ಶಿವಣ್ಣನವರು ಅನೇಕ ಕಾರಣಗಳಿಂದ ಈ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವುದು ಕಷ್ಟವೆಂದು ಸ್ಪಷ್ಟಪಡಿಸುತ್ತಾರೆ.

ಸಾಮ್ರಾಜ್ಯಕ್ಕೆ ವೈರಿಗಳಿಂದ ತನ್ನನ್ನು ಕಾಪಾಡಿಕೊಳ್ಳಲು ಅಪಾರವಾದ ಜನಬಲ ಮತ್ತು ಹಣಬಲವನ್ನು ಪಡೆಯುವ ಸಮಸ್ಯೆಯಿದ್ದಿತು. ವಿಜಯನಗರದ ಅರಸರು ಹಿಂದೂ ಶಾಸನವನ್ನು ಅಕ್ಷರಶಃ ಅನುಸರಿಸಿ ಉತ್ಪನ್ನದ ಕೇವಲ 1/6 ಪಾಲನ್ನು ರೈತರಿಂದ ವಸೂಲು ಮಾಡುತ್ತಿದ್ದರು ಎಂದು ಒಪ್ಪುವುದು ಸಾಧ್ಯವೇ ಇಲ್ಲ. ಎರಡನೆಯದಾಗಿ ರಾಜ್ಯವು ತೆರಿಗೆಯನ್ನು ಉತ್ಪನ್ನದ 1/2 ಅಥವಾ 1/10 ಎಂದು ನಿಗದಿಪಡಿಸಿದ್ದರೆ ಕೇವಲ ಅರ್ಧದಿಂದ ಅಥವಾ ಕೇವಲ 1/10 ಭಾಗದಿಂದ ಜೀವಿಸುವುದೇ ಸಾಧ್ಯವಾಗುತ್ತಿರಲಿಲ್ಲ. ಇಂತಹ ದುಬಾರಿ ವಸೂಲಿ ಮತ್ತು ದಬ್ಬಾಳಿಕೆಗಳಿಂದ ಸಾಮ್ರಾಜ್ಯವು ಸುಮಾರು ಮೂರು ಶತಮಾನಗಳ ಕಾಲ ಉಳಿಯುತ್ತಿರಲಿಲ್ಲ.

ಈ ಸಂಬಂಧವಾಗಿ ಗಮನಿಸಬೇಕಾದ ಅಂಶವೆಂದರೆ ಹಿಂದೆ ಪ್ರಸ್ತಾಪಿಸಿರುವಂತೆ ಬೇಸಾಯಕ್ಕೆ ಭೂಮಿಯು ಧಾರಾಳವಾಗಿ ದೊರಕುತ್ತಿದ್ದಿತು. ಆದ್ದರಿಂದ ಸರ್ಕಾರದವರು ಬೀಳು ಭೂಮಿಯನ್ನು ಬೇಸಾಯಕ್ಕೊಳಪಡಿಸುವವರಿಗೆ ಸಾಕಷ್ಟು ರಿಯಾಯಿತಿಗಳನ್ನು ತೋರಿಸಿ ಅಂತಹ ಭೂಮಿಗೆ ನಿಧಾನವಾಗಿ ಕಂದಾಯದ ದರವನ್ನು ನಿಗದಿಪಡಿಸುವ ವ್ಯವಸ್ಥೆ ಮಾಡಿ ಪ್ರೋತ್ಸಾಹಿಸುತ್ತಿದ್ದರು. ಈ ನೀತಿಯು ರೈತರಿಗೆ ಮಾತ್ರವಲ್ಲದೆ ಸರಕಾರಕ್ಕೂ ಸಹಾಯಕವಾಗಿತ್ತು.

ಉತ್ತಮ ಪರಿಸ್ಥಿತಿಗಳನ್ನು ಹುಡಿಕಿಕೊಂಡು ರೈತರು ವಲಸೆ ಹೋಗುತ್ತಿದ್ದುದು ದಬ್ಬಾಳಿಕೆಯ ವಿರುದ್ಧವಾಗಿ ಅವರ ಬಳಿಯಿದ್ದ ಶಕ್ತಿಯುತವಾದ ಆಯುಧವಾಗಿತ್ತು. ಸಾಗುವಳಿಯಾಗಬಹುದಾಗಿದ್ದ ನೆಲವು ಧಾರಾಳವಾಗಿ ಎಲ್ಲಾ ಕಡೆಯೂ ಲಭ್ಯವಿದ್ದುದರಿಂದ ಈ ಪರಿಸ್ಥಿತಿ ಹುಟ್ಟಿತು. ಅನೇಕ ಶಾಸನಗಳು ಇದನ್ನು ಸಮರ್ಥಿಸುತ್ತವೆ. ಬಳ್ಳಾರಿ ಜಿಲ್ಲೆಯ ಶಾಸನವೊಂದು ರಾಜನು ಅವರಿಂದ ವಿಪರೀತವಾಗಿ ತೆರಿಗೆ ವಸೂಲಿ ಮಾಡಿದುದರಿಂದ ಅನೇಕ ರೈತರು ಒಟ್ಟಾಗಿ ತುಂಗಭದ್ರೆಯನ್ನು ದಾಟಿ ವಲಸೆ ಹೋದರು. ಆಗ ರಾಜನು ಅವರು ಹಿಂದಿರುಗಿ ಬಂದು ಮತ್ತೆ ತಮ್ಮ ಜಮೀನುಗಳನ್ನು ಸಾಗುವಳಿ ಮಾಡಿದ್ದೇ ಆದರೆ ಅವರನ್ನು ಅಂತಹ ಶೋಷಕ ಕ್ರಮಗಳಿಂದ ರಕ್ಷಿಸುವುದಾಗಿ ಭರವಸೆ ಕೊಟ್ಟನು ಎಂದು ಹೇಳುತ್ತದೆ. ಅಲ್ಲದೆ ನೆಲದ ಬೇಡಿಕೆಯ ಪರಿಕಲ್ಪನೆಯೇ ಬಹುಮುಖ್ಯವಾಗಿತ್ತು. ಕೃಷಿ ಉದ್ದೇಶಗಳಿಗಾಗಿ ಬಳಸುವ ನೆಲಕ್ಕೆ ವಿಪರೀತ ಬೇಡಿಕೆಯಿರುತ್ತಿದ್ದಿತೆಂದು ಆ ಕಾಲದ ಶಾಸನಗಳು ಹೇಳುತ್ತವೆ. ಅವುಗಳಲ್ಲಿ ದಾಖಲೆಯಾಗಿರುವಂತೆ ಸಾಗುವಳಿಗೊಳಪಡಿಸಿದ ದಾಖಲೆಗಳು, ಭೋಗ್ಯ ಪತ್ರಗಳು ಇವೆಲ್ಲ ಆ ದಿನಗಳಲ್ಲಿ ಕೃಷಿ ಭೂಮಿಗಿದ್ದ ಮಹತ್ವವನ್ನು ಹೇಳುತ್ತವೆ. ವಿಜಯನಗರ ಕಾಲದ ಭೂ ಕಂದಾಯದ ದರವು ಮಧ್ಯಮ ಸ್ವರೂಪದ್ದಾಗಿದ್ದುದರಿಂದ ನೆಲಕ್ಕೆ ಬೇಡಿಕೆಯಿದ್ದಿತು. ವಿಜಯನಗರ ಕಾಲದಲ್ಲಿ ಹಣದ ಕೊಳ್ಳಿಕೆಯ ಸಾಮರ್ಥ್ಯ ಅಧಿಕವಾಗಿತ್ತು ಎಂದು ನ್ಯೂನಿಜ್ ಹೇಳುತ್ತಾನೆ. "ಮಾರುಕಟ್ಟೆಗಳಲ್ಲಿ ಒಂದು ಪರ್ದಾವೊ ಕೊಟ್ಟರೆ ಹನ್ನೆರಡು ಕುರಿಗಳನ್ನು ಕೊಡುತ್ತಾರೆ. ಬೆಟ್ಟಗಳಲ್ಲಿ ಒಂದು ಪರ್ದಾವೋಗೆ 14 ಅಥವಾ 15 ಕುರಿಗಳು ದೊರಕುತ್ತವೆ. ಪರ್ದಾವೋ ಅಥವಾ ಪಗೋಡ 4.5 ರೂಪಾಯಿಗಳಿಗೆ ಸಮನಾಗಿತ್ತು. ಆದ್ದರಿಂದ ಸಂಗ್ರಹಿಸುತ್ತಿದ್ದ ಭೂ ಕಂದಾಯದ ಮೊತ್ತದ ಮೇಲೆ ಅದರ ಪರಿಣಾಮವು ಅಧಿಕವಾಗಿತ್ತು. ಹಣವು ವಿರಳವಾಗಿತ್ತು. ವಸ್ತುಗಳ ಬೆಲೆ ಕಡಿಮೆಯಿತ್ತು. ಇದರಿಂದಾಗಿ ಸರಕಾರದ ಪಾಲಿನ ಮೌಲ್ಯವೂ ಹೆಚ್ಚಿತ್ತು. ವಿಜಯನಗರ ಸರಕಾರವು ಭೂ ಕಂದಾಯವನ್ನು ಸಂಗ್ರಹಿಸಿ ಇದನ್ನು ಪೋಷಿಸುತ್ತಿದ್ದಿತು.

ಹಳ್ಳಿಯು ಹೊರುತ್ತಿದ್ದ ತೆರಿಗೆಯ ಭಾರವು ಪೂರ್ತಿ ಭೂಕಂದಾಯವಾಗಿರಲಿಲ್ಲ. ಅದರ ಜೊತೆಗೆ ಸಂಗ್ರಹಿಸುತ್ತಿದ್ದ ಇತರ ಅನೇಕ ಗ್ರಾಮೀಣ ತೆರಿಗೆಗಳನ್ನು ಶಾಸನಗಳು ದಾಖಲಿಸಿವೆ. ಮುಖ್ಯವಾಗಿ ಬೇಸಾಯದಿಂದ ಬರುತ್ತಿದ್ದ ಹಳ್ಳಿಯ ಉತ್ಪನ್ನದ ಪಾಲು ತೆಗೆದುಕೊಂಡು ಅರಸರು ತೃಪ್ತರಾಗುತ್ತಿರಲಿಲ್ಲ. ಹಣದ ಅಗತ್ಯಗಳು, ರಾಜಕೀಯ ಅಗತ್ಯಗಳು ಇತ್ಯಾದಿಗಳನ್ನು ನಿರ್ವಹಿಸುವ ಸಲುವಾಗಿ ಆಗ ಕರ್ನಾಟಕದಲ್ಲಿ ಪ್ರಚುರವಾಗಿದ್ದ ರೀತಿಯಲ್ಲಿ ಅನೇಕ ಸುಂಕಗಳನ್ನು ವಿಧಿಸುತ್ತಿದ್ದರು. ಮಧ್ಯಕಾಲೀನ ಭಾರತದಲ್ಲಿ ಇದು ಅಸಾಧಾರಣವಾದ ಪದ್ಧತಿಯೇನೂ ಆಗಿರಲಿಲ್ಲ.

ಈ ತೆರಿಗೆಗಳನ್ನು ಸಾಮಾನ್ಯವಾಗಿ ನೇಗಿಲು, ಎತ್ತುಗಳು, ಬಂಡಿಗಳು, ಬಿತ್ತನೆ ಬೀಜ ದನಗಳನ್ನು ಮೇಯಿಸುವ ಹುಲ್ಲುಗಾವಲು ಮತ್ತು ಮದುವೆ ಇತ್ಯಾದಿಗಳ ಮೇಲೆ ಹಾಕಲಾಗುತ್ತಿತ್ತು. ಅನಾದಿ ಕಾಲದಿಂದಲೂ ಸರಕಾರದ ಪರವಾಗಿ ಭೂ ಕಂದಾಯ ಮತ್ತು ಇತರ ತೆರಿಗೆಗಳನ್ನು ಹಳ್ಳಿಯ ಗೌಡ ಮತ್ತು ಸೇನಬೋವ ಎಂಬಿಬ್ಬರು ಆಡಳಿತಾಧಿಕಾರಿಗಳು ವಸೂಲು ಮಾಡುತ್ತಿದ್ದರು. ವಿಜಯನಗರ ಕಾಲದಲ್ಲಿ ಮತ್ತು ಅನಂತರದ ಕಾಲದಲ್ಲೂ ಇವರು ಬಹು ಮಹತ್ವದ ಪಾತ್ರ ವಹಿಸುತ್ತಿದ್ದರು. ಭೂ ಕಂದಾಯದ ಇಡೀ ಆಡಳಿತ ಯಂತ್ರವು ಇವರ ಮೇಲೆ ನಿಂತಿತ್ತು ಎಂದರೆ ತಪ್ಪಾಗದು.

ಗೌಡ ಅಥವಾ ಗ್ರಾಮ ಮುಖ್ಯಸ್ಥನ ಅಧಿಕಾರವನ್ನು ಸಾರ್ವಜನಿಕ ಸೇವೆ ಮಾಡುವ ಅದರಲ್ಲೂ ಹಳ್ಳಿಯಲ್ಲಿ ಹೆಸರಾದವನೊಬ್ಬನಿಗೆ, ರಾಜನೋ, ಅಧಿಕಾರಿಗಳೋ ಅಥವಾ ಗ್ರಾಮದ ಜನರೋ ಅಥವಾ ನಾಡುಗಳ ಜನರೋ ವಹಿಸಿಕೊಡುತ್ತಿದ್ದರು. ಗೌಡನು ಜನತೆಯ ಪ್ರತಿನಿಧಿಯಾಗಿಯೂ, ಸರಕಾರದ ಮಧ್ಯವರ್ತಿಯಾಗಿಯೂ ಕೆಲಸ ಮಾಡುತ್ತಿದ್ದನು. ಅವನ ಮುಖ್ಯವಾದ ಕೆಲಸವೇ ಭೂ ಕಂದಾಯವನ್ನು ಇತರೆ ತೆರಿಗೆಗಳನ್ನು ವಸೂಲಿ ಮಾಡುವುದು. ಈ ಸೇವೆಗಳಿಂದ ಅವನಿಗೆ 'ಗೌಡ ಕೊಡುಗೆ' ತೆರಿಗೆ ರಹಿತ ಭೂಮಿ ದೊರಕುತ್ತಿತ್ತು. ಅವನ ಪದವಿಯು ಅನುವಂಶಿಕವಾಗಿತ್ತು.

ವಿಜಯನಗರ ಕಾಲದಲ್ಲಿ ಸ್ಥಳಗೌಡ, ಒಂದು ಸ್ಥಳದ ಮುಖ್ಯಸ್ಥನಾಗಿದ್ದುದನ್ನು ಗಮನಿಸುತ್ತೇವೆ. ಆಗಿನ ಶಾಸನಗಳಲ್ಲಿ ಸ್ಥಳ ಎಂಬ ಶಬ್ದವು ಒಂದು ಉಪವಿಭಾಗ ಅಥವಾ ಗ್ರಾಮಗಳ ಒಂದು ಗುಂಪು ಎಂಬ ಅರ್ಥ ಕೊಡುವುದನ್ನು ನೋಡಬಹುದು. ಸಾಮಾನ್ಯಗೌಡನ ಕರ್ತವ್ಯಗಳು ಒಂದು ಹಳ್ಳಿಗೆ ಸೀಮಿತವಾಗಿದ್ದರೆ ಸ್ಥಳಗೌಡನ ಕರ್ತವ್ಯಗಳು ಸ್ಥಳಕ್ಕೆ ವಿಸ್ತ್ರುತವಾಗಿದ್ದವು ಎಂದು ಭಾವಿಸಬಹುದು. ಆ ಕಾಲದ ಅಗತ್ಯಗಳನ್ನು ಪೂರೈಸಲು, ಭೂ ಕಂದಾಯ ಆಡಳಿತವನ್ನು ಉಪವಿಭಾಗದ ಮಟ್ಟದಲ್ಲಿ ವ್ಯವಸ್ಥಿತಗೊಳಿಸಲು ವಿಜಯನಗರ ಆಡಳಿತವು ಈ ಹುದ್ದೆಯನ್ನು ಸೃಷ್ಟಿಸಿರಬಹುದು.

ಸೇನಬೋದ ಅಥವಾ ಶಾನಭೋಗ ಹಳ್ಳಿಯ ಲೆಕ್ಕಪತ್ರಗಳನ್ನಿಡುವವನು. ಹಳ್ಳಿಯಲ್ಲಿ ಈತ ಪ್ರಭಾವಶಾಲಿಯಾದ ವ್ಯಕ್ತಿ. ಕ್ರಿ.ಶ. 1093ರ ಪಶ್ಚಿಮ ಚಾಲುಕ್ಯ ಶಾಸನವು ಇದನ್ನು ಉಲ್ಲೇಖಿಸುತ್ತದೆ.

ಇವನು ಹಳ್ಳಿಯ ತೆರಿಗೆಗಳ ದಾಖಲಾತಿಯನ್ನು ಇಟ್ಟುಕೊಂಡಿರುತ್ತಿದ್ದನು. ಕೃಷಿಯೋಗ್ಯ ಮತ್ತು ಬಂಜರುಭೂಮಿ, ಕೃಷಿಯಾಗುತ್ತಿರುವ ಹಾಗೂ ಬೀಳುಬಿದ್ದಿರುವ ಭೂಮಿ ಇವುಗಳ ವಿಸ್ತೀರ್ಣ, ಗದ್ದೆ ಮತ್ತು ಹೊಲ ಬೇಸಾಯಗಳ ವಿವರಗಳ ಮಾಹಿತಿ, ತೆರಿಗೆ ಹಾಕಿರುವ ಮತ್ತು ತೆರಿಗೆ ವಿನಾಯಿತಿ ಪಡೆದಿರುವ ಭೂಮಿಗಳ ವಿವರ, ಬೆಳೆಗಳ ಅಂದಾಜು, ಹಿಂದಿನ ಮತ್ತು ಈಗಿನ ಸರಕಾರಗಳ ಹಳ್ಳಿಯ ಬ್ರಹ್ಮದಾಯ, ದೇವಾದಾಯ ಮತ್ತು ಮತ್ತಪುರ ಭೂಮಿಗಳ ವಿಸ್ತೀರ್ಣ, ವಿವಿಧ ಸೇವೆಗಳು ಸಾರ್ವಜನಿಕ ಸೇವೆಯೂ ಸೇರಿದಂತೆ ಹಳ್ಳಿಯ ಆಡಳಿತಕ್ಕೆ ಸಂಬಂಧಿಸಿದ ಸಮಸ್ತ ಮಾಹಿತಿಗಳು - ಸೇನಬೋವನ ಬಳಿ ದಾಖಲೆಯಲ್ಲಿರುತ್ತಿದ್ದವು. ಅವನು ಕಂದಾಯ ವಿವರಗಳನ್ನು ಬರೆದಿಡುತ್ತಿದ್ದ ಪಟ್ಟಿಯನ್ನು 'ಪಟ್ಟೆ' ಎಂದು ಕರೆಯುತ್ತಿದ್ದರು. ಗ್ರಾಮಸ್ಥರು ಸರಕಾರಕ್ಕೆ ಪಾವತಿ ಮಾಡಬೇಕಾದ ಭೂ ಕಂದಾಯವನ್ನು ಅದರಲ್ಲಿ ದಾಖಲೆ ಮಾಡುತ್ತಿದ್ದರು.

ವಿಜಯನಗರ ಸರಕಾರವು ಧಾರ್ಮಿಕ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಭೂ ಕಂದಾಯವನ್ನು ದಾನವಾಗಿ ವಹಿಸಿಕೊಡುತ್ತಿದ್ದುದು ಉಂಟು. ಹಾಗೆ ವಹಿಸಿದುದನ್ನು ತಿಳಿಸುವ ಸಾಕಷ್ಟು ಶಾಸನಗಳು ಕಂಡುಬರುತ್ತವೆ. ಯಾರಿಗೆ ವಹಿಸಿಕೊಡಲಾಗಿದೆಯೋ ಅವರು ನೇರವಾಗಿ ರೈತರೊಂದಿಗೆ ವ್ಯವಹಾರ ಮಾಡಿಕೊಳ್ಳಬಹುದಾಗಿತ್ತು. ರೈತನೊಂದಿಗೆ ನೇರವಾಗಿ ವ್ಯವಹರಿಸುವ ಅನುಭೋಗಿಯು ಕಂದಾಯ ವಸೂಲಿಗಾಗಿ ತನ್ನದೇ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ದಾನ ಮಾಡುವ ರೈತರು ತನಗೆ ಯಾವ ಮೊತ್ತವನ್ನು ಸಲ್ಲಿಸುತ್ತಿದ್ದರೊ ಅದೇ ಮೊತ್ತವನ್ನು ಅಲ್ಲಿಂದ ಮುಂದಕ್ಕೆ ಆತನಿಗೆ ಅಥವಾ ಸಂಸ್ಥೆಗೆ ಸಲ್ಲಿಸಬೇಕೆಂದು ರಾಜ, ಅಪ್ಪಣೆ ಮಾಡುತ್ತಿದ್ದನು. ಸರಕಾರವು ಇದಕ್ಕೆ ಯುಕ್ತವಾದ ವ್ಯವಸ್ಥೆ ಮಾಡುತ್ತಿತ್ತು.

ಹದಿನಾಲ್ಕನೆಯ ಶತಮಾನದಿಂದ ಮುಂದಕ್ಕೆ ಹೊಲಗದ್ದೆಗಳೆರಡಕ್ಕೂ ಕಂದಾಯವನ್ನು ನಗದಾಗಿ ಪಾವತಿ ಮಾಡುವುದು ಹೆಚ್ಚು ಪ್ರಚಾರಕ್ಕೆ ಬಂದಿತು. ಮಾಧವಾಚಾರ್ಯರು ವಿಜಯನಗರ ಸರ್ಕಾರವನ್ನು ಧಾನ್ಯದಿಂದ ಹಣಪಾವತಿಯ ಕಡೆಗೆ ಪರವರ್ತಿಸುವ ವಿಷಯವಾಗಿ ಹೀಗೆ ಹೇಳಿದ್ದಾರೆ. "ಭೂಮಿಯ ವಿಸ್ತೀರ್ಣ, ಅಗತ್ಯವಾದ ಬೀಜವರಿ, ಫಸಲಿನ ಸರಾಸರಿ ಹೆಚ್ಚಳ ಮತ್ತು ಮೌಲ್ಯ- ಇವುಗಳ ಆಧಾರದ ಮೇಲೆ ಈ ಪರಿವರ್ತನೆಗೆ "ಅವರು ನಿರ್ದಿಷ್ಟ ನಿಯಮಗಳನ್ನು ರಚಿಸಿದರು.

**ಸರ್ವಮಾನ್ಯ ಭೂಹಿಡುವಳಿಗಳು :** ಕೃಷಿ ವಲಯದಲ್ಲೇ ಭೂ ಕಂದಾಯ ಮತ್ತು ಇತರ ತೆರಿಗೆಗಳಿಂದ ವಿನಾಯಿತಿ ಪಡೆದ ಕೆಲವು ವರ್ಗಗಳಿದ್ದುವು. ಅದರಲ್ಲಿ ಹಲವು ಅಷ್ಟಭೋಗ - ತೇಜ - ಸ್ವಾಮ್ಯಗಳೆಂಬ ಹೆಸರಿನಲ್ಲಿ ಎಂಟು ಹಕ್ಕುಗಳೊಂದಿಗೆ ಪೂರ್ತಿ ಒಡೆತನವನ್ನು, ವ್ಯವಹಾರ ಚತುಷ್ಟಯ (ನಾಲ್ಕು ಬಗೆಯ ಹಕ್ಕುಗಳುನ್ನು) ಅನುಭವಿಸುತ್ತಿದ್ದರು. ಅವರು ನೇರವಾಗಿ ನೆಲವನ್ನು ಉಳುತ್ತಿರಲಿಲ್ಲ. ಹೀಗೆ ಅವರು ಜಮೀನುದಾರ ಮಧ್ಯವರ್ತಿಗಳಾದರು. ಈ ಅವಧಿಯಲ್ಲಿ ಊಳಿಗಮಾನ್ಯತೆ ಊಳಿಗದ ಶೋಷಣೆ ಇವು ಹೆಚ್ಚಾಗಿ, ನಿರ್ದಿಷ್ಟ ಕಾಲಾವಧಿಯ ಗುತ್ತಿಗೆ ಕ್ರಮವು ಜಾರಿಗೆ ಬಂದಿತು. ಬ್ರಹ್ಮದಾಯ, ದೇವದಾಯ, ಮಠಪುರದಂತಹ ಲಾಭದಾಯಕ ಹಿಡುವಳಿಗಳು ಬ್ರಾಹ್ಮಣರು, ದೇವಾಲಯಗಳು ಮತ್ತು ಮಠಗಳಿಗೆ ಭೂಮಿಯನ್ನು ದಾನ ಮಾಡುವುದು ಕೃಷಿ ಪ್ರಧಾನವಾದದ್ದು ಎಂಬ ನಂಬಿಕೆಯ ಫಲವಾಗಿದ್ದುವು. ಧರ್ಮದ ವಿಸ್ತರಣ, ಪಾಲನೆ ಮತ್ತು ಬೆಳೆವಣಿಗೆಗಳ ಹೊಣೆಹೊತ್ತವರಿಗೆ ಲೌಕಿಕವಾದ ಆಧಾರವನ್ನು ಒದಗಿಸುವ ಮೂಲಕ ಹಿಂದೂಧರ್ಮವನ್ನು ಬೆಳೆಸಬೇಕೆಂಬ ಅವರ ಆಸೆಯನ್ನು ತೋರಿಸುತ್ತಿದ್ದವು. ಈ ಪ್ರಯೋಜನ ಪಡೆದ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸರಕಾರಕ್ಕೆ ಯಾವುದೇ ಕಂದಾಯವನ್ನಾಗಲಿ ಇತರೆ ತೆರಿಗೆಯನ್ನಾಗಲಿ ಕಟ್ಟದೆ ಜಮೀನಿನ ಪೂರ್ಣ ಫಸಲನ್ನು ಅನುಭವಿಸುತ್ತಿದ್ದರು. ಇದಕ್ಕೆ 'ಸರ್ವಮಾನ್ಯ' ಎಂಬ ಹೆಸರಿತ್ತು.

ವ್ಯಾಪಕವಾಗಿ ಹಣದ ಬಳಕೆ ಇರದಿದ್ದರೂ ಕೃಷಿಯೋಗ್ಯ ಭೂಮಿಯು ಧಾರಾಳವಾಗಿ ದೊರಕುತ್ತಿದ್ದವು. ಸರಕಾರಗಳ ಆಡಳಿತೀಯ ಅಗತ್ಯ ಸರಕಾರಕ್ಕೂ ಸಮಾಜಕ್ಕೂ ವ್ಯಕ್ತಿಗಳು ವಿವಿಧ ಸ್ವರೂಪದ ಸೇವೆಗಳನ್ನು ಸಲ್ಲಿಸುವುದು, ಅದಕ್ಕಾಗಿ ದಾನಗಳನ್ನು ನೀಡುತ್ತಿದ್ದು, ಇವೆಲ್ಲ ಕೂಡಿ ನಿರ್ದಿಷ್ಟ ಸೇವಾವರ್ಗ ಸ್ಥಾಪನೆಗೆ ದಾರಿಯಾಯಿತು. ಅಮರನಾಯಕ ಹುದ್ದೆ ಅಂತಹ ಸೇವಾವರ್ಗಗಳಲ್ಲಿ ಒಂದು. ಸದಾ ಕಾಲವು ಉತ್ತರದಲ್ಲಿ ನೆರೆಯ ರಾಜ್ಯಗಳೊಂದಿಗೆ ಯುದ್ಧನಿರತವಾಗಿರುತ್ತಿದ್ದ ವಿಜಯನಗರವು ಅದರ ಅಗತ್ಯವನ್ನು ಕಂಡುಕೊಂಡಿತು. ಅಗತ್ಯವಾಗಿದ್ದ ಬೃಹತ್ ಸೈನ್ಯವನ್ನು ವಿವಿಧ ಶ್ರೇಣಿಗಳು ಮತ್ತು ವರ್ಗಗಳಿಗೆ ಸೇರಿದ ಅಮರನಾಯಕರು ಪಾಲಿಸುತ್ತಿದ್ದರು. ಅವರಿಗೆ ವಹಿಸಿಕೊಟ್ಟ ರಾಜ್ಯದ ಭಾಗಗಳಿಂದ ವಸೂಲು ಮಾಡಿದ ಕಂದಾಯ ಮತ್ತು ಇತರ ತೆರಿಗೆಗಳನ್ನು ಇದಕ್ಕಾಗಿ ಅವರು ವೆಚ್ಚ ಮಾಡುತ್ತಿದ್ದರು.

ಕೃಷಿ ವ್ಯವಸ್ಥೆಗೆ ಸಂಬಂಧಿಸಿದಂತೆ ಮುಳವಾಯಿ ರಾಜ್ಯದಲ್ಲಿ ಕಂಡುಬರುವ ಕೆಲವು ಭೂ ಹಿಡುವಳಿಗಳ ವಿಷಯವನ್ನು ಇಲ್ಲಿ ಪ್ರಸ್ತಾಪಿಸಬಹುದು. ಸಾಮಾನ್ಯವಾಗಿ ಮೂರು ವರ್ಗದ ಭೂಹಿಡುವಳಿಗಳಿದ್ದವು. 1) ಬ್ರಹ್ಮದೇಯ, 2) ದೇವರಾಯ, 3) ಸೇವಾನಿರತ ಉಂಬಳಿಗಳು.

**1) ಬ್ರಹ್ಮದೇಯ :** ಎಂದರೆ ವಿದ್ವಾಂಸರಿಗೆ ಬ್ರಾಹ್ಮಣರಿಗೆ ಕೊಡುತ್ತಿದ್ದ ಭೂ ದಾನಗಳು. ಇವುಗಳನ್ನು ಅಗ್ರಹಾರಗಳೆಂದು ಕರೆಯುತ್ತಿದ್ದರು. ಇಂತಹ ದಾನಗಳನ್ನು ಅರಸರು, ಸಾಮಂತರು ಮತ್ತು ಇತರರು ನೀಡುತ್ತಿದ್ದರು. ಇದಕ್ಕೆ ತೆರಿಗೆ ನೀಡಬೇಕಾಗಿರಲಿಲ್ಲ.

**2) ದೇವಾದಾಯ :** ದೇವಾಲಯಗಳಿಗೆ ನೀಡಿದ ಭೂಮಿಯನ್ನು 'ದೇವದಾಯ' ಎಂದು ಕರೆಯುತ್ತಿದ್ದರು. ಬ್ರಾಹ್ಮಣರಾಗಲಿ ದೇವಾಲಯಗಳಾಗಲಿ ಯಾವ ತೆರಿಗೆಯನ್ನು ನೀಡುತ್ತಿರಲಿಲ್ಲ. ಅವುಗಳನ್ನು ಸರ್ವಮಾನ್ಯ ಹಿಡುವಳಿಗಳೆಂದು ಕರೆಯುತ್ತಿದ್ದರು. ಬ್ರಹ್ಮದೇಯದ ಭೂಮಿಯನ್ನು ಒಡೆಯರಾದ ಮಹಾಜನರು ಜೀತಗಾರರಿಗೆ ಕೊಡುತ್ತಿದ್ದರು. ಅದರಿಂದ ಬಂದ ಉತ್ಪನ್ನವನ್ನು ಅನುಭವಿಸುತ್ತಿದ್ದರು. ಆದರೆ ದೇವಾಲಯದ ಭೂಮಿಯನ್ನು ಆಸ್ಥಾನಿಕರೆಂಬ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು.

**3) ಸೇವಾನಿರತ ಉಂಬಳಿಗಳು :** ಸರ್ಕಾರಕ್ಕೆ ಅಥವಾ ಸಮಾಜಕ್ಕೆ ವಿಶಿಷ್ಟವಾದ ಸೇವೆ ಸಲ್ಲಿಸಿದವರಿಗೆ ಗ್ರಾಮವನ್ನೋ ಅಥವಾ ಸ್ವಲ್ಪ ಭೂಮಿಯನ್ನೊ ಸೇವಾನಿರತ ಉಂಬಳಿಯಾಗಿ ಕೊಡುತ್ತಿದ್ದರು.

**ಸರ್ವಮಾನ್ಯ ಭೂಹಿಡುವಳಿಗಳು :** ಕೃಷಿ ವಲಯದಲ್ಲೇ ಭೂ ಕಂದಾಯ ಮತ್ತು ಇತರ ತೆರಿಗೆಗಳಿಂದ ವಿನಾಯಿತಿ ಪಡೆದ ಕೆಲವು ವರ್ಗಗಳಿದ್ದುವು. ಅದರಲ್ಲಿ ಹಲವು ಅಷ್ಟಭೋಗ - ತೇಜ - ಸ್ವಾಮ್ಯಗಳೆಂಬ ಹೆಸರಿನಲ್ಲಿ ಎಂಟು ಹಕ್ಕುಗಳೊಂದಿಗೆ ಪೂರ್ತಿ ಒಡೆತನವನ್ನು, ವ್ಯವಹಾರ

ಚತುಷ್ಟಯ (ನಾಲ್ಕು ಬಗೆಯ ಹಕ್ಕುಗಳು)ಗಳನ್ನು ಅನುಭವಿಸುತ್ತಿದ್ದರು. ಅವರು ನೇರವಾಗಿ ನೆಲವನ್ನು ಉಳುತ್ತಿರಲಿಲ್ಲ. ಹೀಗೆ ಅವರು ಜಮೀನುದಾರ ಮಧ್ಯವರ್ತಿಗಳಾದರು. ಈ ಅವಧಿಯಲ್ಲಿ ಊಳಿಗಮಾನ್ಯತೆ ಊಳಿಗದ ಶೋಷಣೆ ಇವು ಹೆಚ್ಚಾಗಿ, ನಿರ್ದಿಷ್ಟ ಕಾಲಾವಧಿಯ ಗುತ್ತಿಗೆ ಕ್ರಮವು ಜಾರಿಗೆ ಬಂದಿತು. ಬ್ರಹ್ಮದಾಯ, ದೇವದಾಯ, ಮಠಪುರದಂತಹ ಲಾಭದಾಯಕ ಹಿಡುವಳಿಗಳು ಬ್ರಾಹ್ಮಣರು, ದೇವಾಲಯಗಳು ಮತ್ತು ಮಠಗಳಿಗೆ ಭೂಮಿಯನ್ನು ದಾನ ಮಾಡುವುದು ಕೃಷಿ ಪ್ರಧಾನವಾದದ್ದು ಎಂಬ ನಂಬಿಕೆಯ ಫಲವಾಗಿದ್ದುವು. ಧರ್ಮದ ವಿಸ್ತರಣ, ಪಾಲನೆ ಮತ್ತು ಬೆಳೆವಣಿಗೆಗಳ ಹೊಣೆಹೊತ್ತವರಿಗೆ ಲೌಕಿಕವಾದ ಆಧಾರವನ್ನು ಒದಗಿಸುವ ಮೂಲಕ ಹಿಂದೂಧರ್ಮವನ್ನು ಬೆಳೆಸಬೇಕೆಂಬ ಅವರ ಆಸೆಯನ್ನು ತೋರಿಸುತ್ತಿದ್ದವು. ಈ ಪ್ರಯೋಜನ ಪಡೆದ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸರಕಾರಕ್ಕೆ ಯಾವುದೇ ಕಂದಾಯವನ್ನಾಗಲಿ ಇತರೆ ತೆರಿಗೆಯನ್ನಾಗಲಿ ಕಟ್ಟದೆ ಜಮೀನಿನ ಪೂರ್ಣ ಫಸಲನ್ನು ಅನುಭವಿಸುತ್ತಿದ್ದರು. ಇದಕ್ಕೆ 'ಸರ್ವಮಾನ್ಯ' ಎಂಬ ಹೆಸರಿತ್ತು.

ವ್ಯಾಪಕವಾಗಿ ಹಣದ ಬಳಕೆ ಇರದಿದ್ದರೂ ಕೃಷಿಯೋಗ್ಯ ಭೂಮಿಯು ಧಾರಾಳವಾಗಿ ದೊರಕುತ್ತಿದ್ದವು. ಸರಕಾರಗಳ ಆಡಳಿತ ಅಗತ್ಯ ಸರಕಾರಕ್ಕೂ ಸಮಾಜಕ್ಕೂ ವ್ಯಕ್ತಿಗಳು ವಿವಿಧ ಸ್ವರೂಪದ ಸೇವೆಗಳನ್ನು ಸಲ್ಲಿಸುವುದು, ಅದಕ್ಕಾಗಿ ದಾನಗಳನ್ನು ನೀಡುತ್ತಿದ್ದು, ಇವೆಲ್ಲ ಕೂಡಿ ನಿರ್ದಿಷ್ಟ ಸೇವಾವರ್ಗ ಸ್ಥಾಪನೆಗೆ ದಾರಿಯಾಯಿತು. ಅಮರನಾಯಕ ಹುದ್ದೆ ಅಂತಹ ಸೇವಾವರ್ಗಗಳಲ್ಲಿ ಒಂದು. ಸದಾ ಕಾಲವು ಉತ್ತರದಲ್ಲಿ ನೆರೆಯ ರಾಜ್ಯಗಳೊಂದಿಗೆ ಯುದ್ಧನಿರತವಾಗಿರುತ್ತಿದ್ದ ವಿಜಯನಗರವು ಅದರ ಅಗತ್ಯವನ್ನು ಕಂಡುಕೊಂಡಿತು. ಅಗತ್ಯವಾಗಿದ್ದ ಬೃಹತ್ ಸೈನ್ಯವನ್ನು ವಿವಿಧ ಶ್ರೇಣಿಗಳು ಮತ್ತು ವರ್ಗಗಳಿಗೆ ಸೇರಿದ ಅಮರನಾಯಕರು ಪಾಲಿಸುತ್ತಿದ್ದರು. ಅವರಿಗೆ ವಹಿಸಿಕೊಟ್ಟ ರಾಜ್ಯದ ಭಾಗಗಳಿಂದ ವಸೂಲು ಮಾಡಿದ ಕಂದಾಯ ಮತ್ತು ಇತರ ತೆರಿಗೆಗಳನ್ನು ಇದಕ್ಕಾಗಿ ಅವರು ವೆಚ್ಚ ಮಾಡುತ್ತಿದ್ದರು.

"ನಾಡಸಭೆ"ಯು ದೇವಸ್ಥಾನಗಳಿಗೆ ಭೂಮಿಯನ್ನು ದಾನ ಮಾಡುತ್ತಿತ್ತು. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಕ್ರಿ.ಶ. 1343ರಲ್ಲಿ ಪೆರಿಯಪೆಮ್ಮೆಯ ನಾಯಕರ್ ಟೇಕಲ್ಲಿನ ಅರುಳಾಲನಾಂದರ್ ದೇವರಿಗೆ, ಬಾವಿಗಳು ಮತ್ತು ಮರಗಳನ್ನೊಳಗೊಂಡ ಭೂಮಿಯನ್ನು 'ಸರ್ವಮಾನ್ಯ'ವಾಗಿ ಅನ್ನ ಗಂಧ, ದೀಪಗಳು, ಹಾರಗಳು, ದೇವಸ್ಥಾನದ ದುರಸ್ತಿ ಮತ್ತಿತರ ಆವಶ್ಯಕತೆಗಳಿಗಾಗಿ ದೇವಸ್ಥಾನದ ಅಧಿಕಾರಿಗಳಿಗೆ ಕೊಟ್ಟರು. ನಾಡಿನ ನಿವಾಸಿಗಳು ಆ ಭೂಮಿಯನ್ನು ಸರ್ವಮಾನ್ಯವಾಗಿ ಮುಂದುವರಿಸುವುದಾಗಿ ವಾಗ್ದಾನ ಮಾಡಿದರು. ಈ ಶಾಸನದಲ್ಲಿ ನಾಡಿನ ನಾಲ್ಕು ನಿವಾಸಿಗಳ ಸಹಿಗಳಿವೆ. ಕ್ರಿ.ಶ. 1346ರಲ್ಲಿ ಅಂಬದಕ್ಕಿನಾಡಿನ ನಿವಾಸಿಗಳು ಪಪ್ಪಿಸಿಯರ್ ಮತ್ತು ಇತರ ಆರು ಜನರೊಂದಿಗೆ ಮಹಾಸಾಮಂತಾಧಿಪತಿ ಮಂಜಯ್ಯನಾಯಕನ ಮಗ ಅಂಕಯ್ಯನಾಯಕರ್ ಕದಳಿ ದೇವರಿಗೆ ಭೂದಾನ ಮಾಡಿದರು. ಅನೂರ್‌ಸ್ಥಳಕ್ಕೆ ಸೇರಿದ ಎಲ್ಲ ತರಿ ಮತ್ತು ಒಣಭೂಮಿಯನ್ನು ಷೇಂಗೈನಲ್ಲಿದ್ದ ಇರಾಜೇಂದ್ರಚೋಳ ತಕ್ಕೀಶ್ವರಂ ಉಡಯನಾಯನಾರ್ ದೇವಸ್ಥಾನದ ಪೂಜೆ ಮತ್ತು ನೈವೇದ್ಯಕ್ಕೆ ಸರ್ವಮಾನ್ಯವಾಗಿ ದಾನ ಮಾಡಿದರು.

**ಕೃಷಿ ಮತ್ತು ವಾಣಿಜ್ಯ :**

ಸಾಮಾನ್ಯವಾಗಿ ಭಾರತದಲ್ಲಿ ವಿಶೇಷವಾಗಿ ದಖ್ಖನ್ನಿನಲ್ಲಿ ಕೃಷಿಯೇತರ ಅರ್ಥವ್ಯವಸ್ಥೆಯು 14ನೆಯ ಶತಮಾನದಿಂದ ಒಂದು ಮುಖ್ಯ ಬೆಳೆವಣಿಗೆಯಾಗಿಯೂ ಆರ್ಥಿಕ ಪರಿವರ್ತನೆಯಾಗಿಯೂ ರೂಪುಗೊಳ್ಳತೊಡಗಿತು. ಇದರ ಅರ್ಥ ಕೃಷಿಯೇತರ ಉತ್ಪಾದನೆ ಅಥವಾ ಚಟುವಟಿಕೆ ಕೃಷಿ ಅರ್ಥವ್ಯವಸ್ಥೆಯನ್ನು ಮುಚ್ಚಿಹಾಕಿ ಸಂಪೂರ್ಣ ಪ್ರಧಾನ್ಯ ಪಡೆಯಿತು ಎಂದಲ್ಲ. ಕೃಷಿ ಆರ್ಥಿಕತೆಗೆ ಪೂರಕವಾಗಿ ಕೃಷಿಯೇತರ ಉತ್ಪಾದನಾ ಚಟುವಟಿಕೆಯು ಕ್ರಮೇಣ ಕಾಣಿಸಿಕೊಂಡಿತು. ಬೆಳೆಯುತ್ತಿದ್ದ ಅದರ ಪಾತ್ರ ರಾಜ್ಯದ ಬೊಕ್ಕಸಕ್ಕೆ ವರಮಾನವನ್ನು ಹರಿಸುವ ಕ್ಷೇತ್ರವಾಗಿ ಅದರ ಪ್ರಾಮುಖ್ಯ ಕಣ್ಣಿಗೆ ಕಾಣುವಂತಹ ಆರ್ಥಿಕ ಬೆಳೆವಣಿಗೆಯಾಯಿತು.

ವಾಣಿಜ್ಯ ಮತ್ತು ವ್ಯಾಪಾರ ಕ್ರಮೇಣ ರುದ್ದಿಸಿದ್ದು, ವಸ್ತುಗಳ ಉತ್ಪಾದನೆ, ಕಸಬುಗಳು ಹರಳುಗಟ್ಟಿದುದು, ರಾಜ್ಯದ ಅರ್ಥವ್ಯವಸ್ಥೆ ಉತ್ತಮಗೊಂಡದ್ದು ಮುಂತಾದವುಗಳಿಂದ ಕೃಷಿ ಅರ್ಥವ್ಯವಸ್ಥೆಯು ವಿಶಾಲತರವಾದ ಕೃಷಿಯೇತರ ಮಾರುಕಟ್ಟೆಯನ್ನಾಧರಿಸಿದ ಅರ್ಥವ್ಯವಸ್ಥೆಯಾಗಿ ಬೆಳೆದುದರ ಸ್ಪಷ್ಟ ಕುರುಹುಗಳಾಗಿದ್ದವು. ಈ ಬದಲಾವಣೆ ದಿಢೀರನೆ ಆದದ್ದಲ್ಲ. ಯುರೋಪಿಯನ್ ಅರ್ಥವ್ಯವಸ್ಥೆಯಲ್ಲಿ ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ಹಂತಕ್ಕೆ, ಅಲ್ಲಿಂದ ಮುಂದೆ ಔದ್ಯೋಗಿಕ ಅರ್ಥವ್ಯವಸ್ಥೆಯ ನೆಲೆಗೆ ಪರಿವರ್ತನೆ ಕಂಡುಬಂದುದರಿಂದ 14 ಮತ್ತು 15ನೆಯ ಶತಮಾನಗಳಿಂದ ಯೂರೋಪು ಮತ್ತು ದಕ್ಷಿಣ ಭಾರತಗಳ ನಡುವೆ ಪೂರ್ಣವಾದ ನೇರ ಹೋಲಿಕೆ ಸಾಧ್ಯವಿಲ್ಲವಾದರೂ ಆವೃತ ಅರ್ಥ ವ್ಯವಸ್ಥೆಯೊಂದರಿಂದ ಮುಕ್ತವಾದ ಬಂಡವಾಳಗಾರಿಕೆಯ ಅರ್ಥವ್ಯವಸ್ಥೆಯಾಗಿ ಪರಿವರ್ತನೆ ಹೊಂದಿದುದು ಮಾತ್ರ ವ್ಯಕ್ತವಾಗಿದೆ.

ಆಧುನಿಕ ಪೂರ್ವಸ್ಥಿತಿಯಿಂದ ಆಧುನಿಕ ಸ್ಥಿತಿಗೆ, ಊಳಿಗಮಾನ್ಯ ಆವೃತ ಜೀವನೋಪಾಯದ ಆರ್ಥಿಕತೆಯಿಂದ ವಿಶಾಲತರವಾದ ಮಾರುಕಟ್ಟೆಯ ಗುರಿಯುಳ್ಳ ಮುಕ್ತ ಅರ್ಥವ್ಯವಸ್ಥೆಗೆ, ಅಲ್ಲಿಂದ ಬಂಡವಾಳಶಾಹಿ ಆರ್ಥಿಕತೆಯ ಕಡೆಗೆ, ಚಲನೆಯು ಅನಿವಾರ್ಯವಾದ ಐತಿಹಾಸಿಕ ಪ್ರಕ್ರಿಯೆಯಾಗಿ ಬದಲಾಯಿತು. ಸಂಪೂರ್ಣವಾಗಿ ಕೃಷಿ ಆಧಾರಿತ ಆರ್ಥಿಕ ರಚನೆಯು ಬದಲಾಗುವ ಆರ್ಥಿಕ ವಿನ್ಯಾಸದ ವಿವಿಧ ಹಂತಗಳ ಮೂಲಕ ಬೆಳೆಯಿತು. ವಾಸ್ತವವಾಗಿ ಯುರೋಪಿನಲ್ಲಿ ಅಂಥದೊಂದು ಮಹತ್ವದ ಪರಿವರ್ತನೆಯನ್ನು ಯುರೋಪಿನ ಆಧುನಿಕ ಆರ್ಥಿಕ ರಚನೆಯ ಮತ್ತು ಬಂಡವಾಳಶಾಹಿಯ ಕಡೆಗೆ ಕಂಡುಬಂದ ಒಂದು ಮುಖ್ಯವಾದ ಹೆಜ್ಜೆಯೆಂದು ಪರಿಗಣಿಸಲಾಯಿತು.

ಇದು ಯುರೋಪಿನ ಅರ್ಥವ್ಯವಸ್ಥೆಗೆ ಮಾತ್ರ ಅನ್ವಯಿಸಿದ ಲಕ್ಷಣವಲ್ಲ. ಏಷ್ಯಾ ಪ್ರಾಂತಗಳ ಆರ್ಥಿಕ ಇತಿಹಾಸವನ್ನು ಕುರಿತು ಕೆಲಸ ಮಾಡುತ್ತಿರುವ ವಿದ್ವಾಂಸರು 14 ರಿಂದ 18ನೆಯ ಶತಮಾನಗಳವರೆಗಿನ ಕಾಲಾವಧಿಯಲ್ಲಿ ಏಷ್ಯಾಖಂಡವು ಕೂಡ, ಮೂಲ ಬಂಡವಾಳಶಾಹಿಯ ಹೊಸ್ತಿಲಲ್ಲಿತ್ತು. ಆವೃತ ಸ್ವಯಂಪೂರ್ಣ ಗ್ರಾಮೀಣ ಆರ್ಥಿಕತೆಯಿಂದ ಬಂಡವಾಳಶಾಹಿ ಆರ್ಥಿಕತೆಯ ಕಡೆಗೆ ಬದಲಾವಣೆ ಹೊಂದುತ್ತಿದ್ದಿತು. ವಸಾಹತುಶಾಹಿ ಪೂರ್ವ, ಏಷ್ಯಾಖಂಡದ ಆರ್ಥಿಕ ಇತಿಹಾಸವನ್ನು

ಗಂಭೀರವಾಗಿ ಅಧ್ಯಯನ ಮಾಡಿದರೆ ಇದು ವೇದ್ಯವಾಗುತ್ತದೆ ಎನ್ನುತ್ತಾರೆ. ಆಧುನಿಕ ಬಂಡವಾಳ ವ್ಯವಸ್ಥೆಯು ಹಂತಹಂತವಾಗಿ ಬೆಳೆಯಿತು. ಮಧ್ಯಯುಗದಲ್ಲಿ ಬೆಳವಣಿಗೆಯು ದೊಡ್ಡ ಪ್ರಮಾಣದಲ್ಲಿ ಊಳಿಗಪದ್ಧತಿಯು ಕುಸಿದು ಹಿಂದಿನ ಆವೃತ ಗ್ರಾಮೀಣ ಅರ್ಥವ್ಯವಸ್ಥೆಯ ಬದಲಿಗೆ ಮಾರುಕಟ್ಟೆಗಳ ಹೆಚ್ಚು ಮುಕ್ತವಾದ ಅರ್ಥವ್ಯವಸ್ಥೆಗೆ ದಾರಿ ಮಾಡಿತು. ಹೆಚ್ಚುವರಿ ಉತ್ಪಾದನೆ ಅಂದರೆ "ತಮ್ಮ ಉಪಯೋಗಕ್ಕಾಗಿ ಉತ್ಪಾದನೆ"ಗಿಂತ ಮಾರುಕಟ್ಟೆಗಾಗಿ ಅಥವಾ ವಿನಿಮಯಕ್ಕಾಗಿ ಉತ್ಪಾದನೆ "ಅಧಿಕಗೊಂಡದ್ದು ಕ್ರಾಂತಿಕಾರಕ ಬದಲಾವಣೆಯೇ. ಇದಕ್ಕೆ ಇಂಬುಗೊಟ್ಟಂತೆ ಉತ್ಪಾದನೆಯ ತಾಂತ್ರಿಕತೆಯಲ್ಲಿ ಬದಲಾವಣೆಗಳೂ ಆರ್ಥಿಕ ಪರಿವರ್ತನೆಯನ್ನು ಚುರುಕುಗೊಳಿಸಿದವು.

**ವರ್ತಕ ಸಂಘಗಳು :** ರಾಜಾಶ್ರಯವನ್ನು ಪಡೆದ ವರ್ತಕರು ಶ್ರೀಮಂತರಾಗಿದ್ದರು. ಇವರು ಉದ್ಯಮಶೀಲರಾಗಿದ್ದು, ಸಮಾಜದಲ್ಲಿ ಅಪಾರವಾದ ಪ್ರಭಾವವನ್ನು ಬೀರುತ್ತಿದ್ದರು. ಆರ್ಥಿಕ ಶಕ್ತಿಯು ಅವರಿಗೆ ರಾಜಕೀಯ ಶಕ್ತಿಯನ್ನು ಕೊಟ್ಟಿತ್ತು. ಅವರು ಸಂಘಗಳನ್ನು ರಚಿಸಿಕೊಂಡಿದ್ದರು. ರಾಜಸಭೆಗಳಲ್ಲೂ ಅವರಿಗೆ ಮುಖ್ಯವಾದ ಸ್ಥಾನವಿರುತ್ತಿತ್ತು. ಈ ಅಧಿಕಾರವು ಅವರ ಸಂಚಾರಶೀಲತೆಯ ಕಷ್ಟವನ್ನು ನೀಗಿಸುವಂಥದ್ದಾಗಿತ್ತು. ಕುಶಲಕರ್ಮಿಗಳು ಕೂಡ ಸಂಘಟಿತರಾಗಿದ್ದರು. ಆದರೆ ಅವರದು ಕೆಳಮಟ್ಟದ ಸ್ಥಾನವಾಗಿತ್ತು. ಏಕೆಂದರೆ ಅವರು ತಯಾರಿಸಿದ ವಸ್ತುಗಳ ಮೇಲೆ ವರ್ತಕ ಸಂಘಗಳು ಪರಿಮಾಮಕಾರಿಯಾದ ಪ್ರಭಾವ ಹೊಂದಿದ್ದವು. ನಗರದಲ್ಲಿ ಎರಡು ಬಗೆಯ ಸಂಘಗಳಿದ್ದುದನ್ನು ಅಬ್ದುಲ್‌ರಜಾಕ್ ವಿವರಿಸುತ್ತಾನೆ. "ಬೇರೆ ಬೇರೆ ಸಂಘಗಳ ಅಥವಾ ಕಸಬುಗಳ ವರ್ತಕರು ತಮ್ಮ ವ್ಯಾಪಾರ ಮಳಿಗೆಗಳನ್ನು ಪಕ್ಕದಲ್ಲೇ ಇಟ್ಟುಕೊಂಡಿರುತ್ತಾರೆ. ಡೊಮಿಂಗೊ ಪೇಸ್" ಎಲ್ಲಾ ಕಸಬುಗಳ ಮತ್ತು ವರ್ತಕರ ಸಂಘಗಳು ನಮ್ಮ ಕಡೆ ಇರುವ ಕನ್‌ಫ್ರಾಟಿಮಿಟೋಗಳಂತೆ ಇಲ್ಲೂ ಇವೆ. ವರ್ತಕ ಸಂಘಗಳಿಗೆ ಒಳ್ಳೆಯ ಹೆಸರು ಪಡೆದ ವ್ಯಕ್ತಿಗಳು ಅಧ್ಯಕ್ಷರಾಗಿದ್ದರು. ಇವರನ್ನು ಶೆಟ್ಟಿ ಪಟ್ಟಣಸ್ವಾಮಿಗಳೆಂದು ಕರೆಯಲಾಗುತ್ತಿತ್ತು ಎನ್ನುತ್ತಾನೆ.

**ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆ ಮತ್ತು ವ್ಯಾಪ್ತಿ :** ಈ ಕಾಲದಲ್ಲಿ ಜನತೆಯ ಬಹು ಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುತ್ತಿತ್ತು. ಹಳ್ಳಿಯು ಬಹುಮಟ್ಟಿಗೆ ಸ್ವಯಂಪೂರ್ಣವಾಗಿತ್ತು. ಜೀವನದ ಅಗತ್ಯಗಳನ್ನೆಲ್ಲ ತಾನೇ ಪೂರೈಸಿಕೊಳ್ಳುತ್ತಿತ್ತು. ಆದರೂ ಕೃಷಿ ಉತ್ಪನ್ನಗಳಿಗೆ ವ್ಯಾಪಕವಾದ ಮಾರುಕಟ್ಟೆಯಿದ್ದಿತು. ವಾಸ್ತವವಾಗಿ ಈ ಕಾಲಘಟ್ಟದಲ್ಲಿ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟು ಒಂದು ಮುಖ್ಯವಾದ ಪರಿವರ್ತನೆಯನ್ನು ಕಂಡಿತು. ಈ ಬದಲಾವಣೆಗೆ ಕಾರಣ ಹಣದ ಪ್ರಸಾರ ಹೆಚ್ಚಾದುದು. ಸಂಬಾರ ಪದಾರ್ಥಗಳು, ಅದರಲ್ಲೂ ಮುಖ್ಯವಾಗಿ ಮೆಣಸು, ಕಬ್ಬು ಮತ್ತು ಹತ್ತಿ ಮೊದಲಾದ ನಗದು ಬೆಳೆಗಳ ಉತ್ಪಾದನೆ ಅಧಿಕಗೊಂಡಿದ್ದುದು. ಕರ್ನಾಟಕದ ಕರಾವಳಿಗೆ ಯುರೋಪಿಯನ್ ವರ್ತಕರು ಬಂದಿಳಿದುದು, ಅದರಿಂದಾಗಿ ವಿಶಾಲ ಮಾರುಕಟ್ಟೆಗಳ ಬೆಳವಣಿಗೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳೀಯ ಮಾರುಕಟ್ಟೆಗಳಿದ್ದುದು ಕಂಡುಬರುತ್ತದೆ. ಇವುಗಳಿಂದ ರೈತರಿಗೂ ವರ್ತಕರಿಗೂ ನಡುವೆ ಕೃಷಿ ಉತ್ಪನ್ನಗಳು ಧಾರಾಳವಾಗಿ ವಿನಿಮಯಗೊಳ್ಳಲು ಅವಕಾಶವಾಯಿತು. ಸಕ್ರಿಯವಾಗಿದ್ದ ಈ ವ್ಯಾಪಾರದಿಂದಾಗಿ, ಹಳ್ಳಿಗಳಿಗೆ ನಗದು ಹಣವು ಹರಿದುಬಂದಿತು. ಸರಕಾರಕ್ಕೆ ಕಂದಾಯವನ್ನು, ಜಮೀನುದಾರರಿಗೆ ಬಾಡಿಗೆಯನ್ನು ನಗದಾಗಿ ಪಾವತಿ ಮಾಡಲು ರೈತರಿಗೆ ಸಾಧ್ಯವಾಯಿತು. ತಾವು ಹಳ್ಳಿಗಳಲ್ಲಿ ಉತ್ಪಾದಿಸಲು ಸಾಧ್ಯವಿರದಿದ್ದ ಉಪ್ಪು, ಬಟ್ಟೆಗಳು ಮತ್ತು ಸಾಂಪ್ರದಾಯಿಕ ಚಿನ್ನಾಭರಣಗಳು ಇತ್ಯಾದಿಗಳನ್ನು ಅವರು ನಗರು ಹಣಕೊಟ್ಟು ಕೊಂಡುಕೊಳ್ಳುವ ಹಾಗಾದರು. ಎಲ್ಲಕ್ಕಿಂತ ಮಿಗಿಲಾಗಿ ಅನ್ಯಥಾ ರಾಜಕೀಯ ಅನೈಕ್ಯದ ಚಿತ್ರವನ್ನು ಕೊಡುತ್ತಿದ್ದ ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ನಡುವೆ ಈ ವ್ಯಾಪಾರ ವಹಿವಾಟು ಒಂದು ಪರಿಣಾಮಕಾರಿಯಾದ ಕೊಂಡಿಯಂತೆ ವರ್ತಿಸಿತು.

ಕೃಷಿ ಉತ್ಪನ್ನಗಳ ವ್ಯಾಪಾರವು ಹೆಚ್ಚಿದುದರಿಂದ ಸಂತೆಗಳ ಸ್ಥಾಪನೆಗೆ ಅವಕಾಶವಾಯಿತು. ಅವು ಮಧ್ಯಯುಗೀನ ಕರ್ನಾಟಕದಲ್ಲಿ ನಗರಗಳ ಬೆಳವಣಿಗೆಗೆ ಎಡೆಮಾಡಿಕೊಟ್ಟವು. ಈ ಸಂತೆಗಳೇ ಒಳನಾಡು ವ್ಯಾಪಾರದ ಮುಖ್ಯ ಮಾರ್ಗಗಳಾಗಿದ್ದವು. ಆದ್ದರಿಂದ ಅದು ಮುಖ್ಯವಾದ ವ್ಯವಹಾರ ಕೇಂದ್ರವಾಗಿತ್ತು. ಸಂತೆಗಳು ನಡೆಯುತ್ತಿದ್ದ ನಗರಗಳು ವರ್ತಕರಿಗೆ ಮತ್ತು ರೈತರಿಗೆ ಸೌಕರ್ಯಗಳನ್ನು ಮಾಡಿಕೊಡುತ್ತಿದ್ದವು. ಒಳ್ಳೆ ರಸ್ತೆ ಸಮೃದ್ಧವಾದ ನೀರು ಇತ್ಯಾದಿ. ಸಂತೆಗೆ ಸಂಬಂಧಪಟ್ಟ ವೆಚ್ಚಗಳನ್ನು ನಿರ್ವಹಿಸಲು ಸುಂಕವನ್ನು ಸಂಗ್ರಹಿಸಲಾಗುತ್ತಿದ್ದಿತು. ಕೆಲವು ವೇಳೆ ವಸ್ತುಗಳು ಊರಿಗೆ ಪ್ರವೇಶ ಮಾಡುವಾಗ ವಸ್ತುರೂಪದಲ್ಲೋ ನಗದಾಗಿಯೋ ಪಡೆದುಕೊಳ್ಳಲಾಗುತ್ತಿತ್ತು. ಇನ್ನು ಕೆಲವು ಸಂದರ್ಭಗಳಲ್ಲಿ ಮಾರಿದ ಮತ್ತು ಕೊಂಡ ವಸ್ತುಗಳ ಮೇಲೆ ಸುಂಕ ವಿಧಿಸಲಾಗುತ್ತಿತ್ತು. ವರ್ತಕರು ಈ ಸುಂಕಗಳನ್ನು ಪಾವತಿ ಮಾಡುತ್ತಿದ್ದರು. ಹೀಗೆ ಸಂತೆಯನ್ನು ಏರ್ಪಡಿಸುವ ವ್ಯಕ್ತಿಗಳಿಗೆ ರೈತರು ಮತ್ತು ವರ್ತಕರು ಸೇರಿ ಭೂಮಿಯನ್ನು ಬಿಟ್ಟುಕೊಡುತ್ತಿದ್ದರು. ಅಥ‌ವಾ ಕೆಲವು ರಿಯಾಯಿತಿಗಳನ್ನು ಘೋಷಿಸುತ್ತಿದ್ದರು. ಕೆಲವೊಮ್ಮೆ ವರ್ತಕ ಸಂಘದ ಮುಖ್ಯಸ್ಥನಿಗೆ ಸಂತೆಯನ್ನು ಏರ್ಪಡಿಸುವಂತೆ ಕೋರಿ ಒಂದು ತುಂಡು ಜಮೀನನ್ನು ನೀಡುತ್ತಿದ್ದುದುಂಟು. ಮಾರುಕಟ್ಟೆಯನ್ನು ಪೇಟೆ, ಸಂತೆ ಅಥವಾ ಸಂತೆ ಪೇಟೆ ಎಂದು ಕರೆಯುತ್ತಿದ್ದರು. ಇವುಗಳನ್ನು ನಾಡಗೌಡರು ಪ್ರಾರಂಭಿಸುತ್ತಿದ್ದರು ಅಥ‌ವಾ ನಿಂತುಹೋಗಿದ್ದರೆ ಮತ್ತೆ ಚಾಲನೆಗೊಳಿಸುತ್ತಿದ್ದರು. ಪ್ರಾಂತೀಯ ಗವರ್ನರ್ ಅಥವಾ ಮಂತ್ರಿಯ ಆದೇಶದಂತೆ ಗೌಡನು ತಾನೇ ಹಳೆಯ ಸಂತೆಯನ್ನು ಚಾಲ್ತಿಗೆ ತರುತ್ತಿದ್ದುದೂ ಉಂಟು.

ವಿಜಯನಗರದ ಅರಸರ ಕಾಲದಲ್ಲಿ 26 ನಗರಗಳಲ್ಲಿ ಸಂತೆಗಳನ್ನು ಸ್ಥಾಪಿಸಿದ್ದರು. ಇದನ್ನು ಸ್ಥಾಪಿಸಿದವರು ಒಂದು ಮುಖ್ಯ ವರ್ತಕ ಸಮುದಾಯವಾದ ಸಾಲುಮೂಲೆ ಬಣಜಿಗ - ವರ್ತಕರು. ಇವರು ಕೃಷಿ ಉತ್ಪನ್ನಗಳ ವಹಿವಾಟವನ್ನೇ ಮುಖ್ಯವಾಗಿ ನಿರ್ವಹಿಸುತ್ತಿದ್ದರು. ಅರಸರು ಸ್ಥಾಪಿಸಿದ ಪ್ರಸಿದ್ಧ ವ್ಯಾಪಾರ ಕೇಂದ್ರಗಳೆಂದರೆ 1. ವಿಜಯನಗರ 2. ಹಸ್ತಿನಾವತಿ 3. ದೋರಸಮುದ್ರ 4. ಗುತ್ತಿ 5. ಪೆನುಕೊಂಡ 6. ಆದವಾನಿ 7. ಉದಯಗಿರಿ 8. ಚಂದ್ರಗಿರಿ 9. ಮುಳುವಾಯಿ ಅಥವಾ ಮುಳಬಾಗಿಲು 10. ಕಂಚಿ 11. ಪಡೆವೀಡು 12. ಚದುರಂಗ ಪಟ್ಟಣ 13. ಮಂಗಳೂರು 14. ಬಾರಕೂರು 15. ಹೊನ್ನಾವರ 16. ಚಂದಾವರ 17. ಚಂದ್ರಗುತ್ತಿ 18. ಅಣ್ಣಿಗೇರಿ 19. ಹುಲಿಗೆರೆ 20. ನಿಡುಗಲ್ಲು 21. ಚಿಮತನ ಕಲ್ಲು 22. ತರಿಯ ಕಲ್ಲು 23. ಆನೆವಿಡ್ಡ 24. ಸರಿಕಟ್ಟೆಯ 25. ತೆಲಕಲಾಂಬಿ ಅಥವಾ ತೆರಕಣಾಂಬಿ ಮತ್ತು 26. ಸಿಂಗಪಟ್ಟಣ. ಈ ಪಟ್ಟಿಯಿಂದ ನಾವು

ಬಳ್ಳಾರಿ, ಹಾಸನ, ಕೋಲಾರ, ದಕ್ಷಿಣ ಕನ್ನಡ, ಉತ್ತರಕನ್ನಡ, ಶಿವಮೊಗ್ಗ, ಧಾರವಾಡ, ತುಮಕೂರು, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳು ವಿಜಯನಗರ ಕಾಲದಲ್ಲಿ ಬಹುಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದವು ಎಂದು ಹೇಳಬಹುದು. ಕರ್ನಾಟಕವಲ್ಲದೆ ಸಾಲುಮೂಲೆ ಬಣಜಿಗರು ತಮಿಳುನಾಡು ಮತ್ತು ಆಂಧ್ರಗಳೊಂದಿಗೂ ಸಂಪರ್ಕವಿರಿಸಿಕೊಂಡಿದ್ದರು.

ಈ ಇಪ್ಪತ್ತಾರು ನಗರಗಳ ಸಂತೆಗಳಲ್ಲಿ ಬತ್ತ, ಜೋಳ, ರಾಗಿ, ಬಾರ್ಲಿ, ಬರಗು, ಸಾವೆ, ಗೋಧಿ, ಕಡಲೆ, ಎಳ್ಳು, ಅಗಸೆ, ಕುಸುಬೆ, ಹೆಸರು, ತೊಗರಿ, ಹುರುಳಿ, ಅಕ್ಕಿ, ಸಕ್ಕರೆ, ಎಣ್ಣೆ, ತುಪ್ಪ, ಉಪ್ಪು, ಬೆಲ್ಲ, ಅಡಕೆ, ವೀಳ್ಯದೆಲೆ, ಮೆಣಸು, ಅರಿಸಿನ, ಈರುಳ್ಳಿ, ಜೀರಿಗೆ, ಮೆಂತ್ಯ, ಸಬ್ಬಿಸಿಗೆ, ಸಾಸಿವೆ ಮತ್ತು ಕಬ್ಬು ಮೊದಲಾದ ಕೃಷಿ ಉತ್ಪನ್ನಗಳ ಹಂಚಿಕೆ ಮತ್ತು ಸಂಗ್ರಹಣೆಗಳ ವಸ್ತುಗಳು ಭಾರೀ ಪ್ರಮಾಣದಲ್ಲಿ ವಿನಿಮಯವಾಗುತ್ತಿದ್ದವು. ಸುತ್ತಮುತ್ತಲ ಗ್ರಾಮಾಂತರ ಪ್ರದೇಶಗಳಿಂದ ಬಂದ ರೈತಾಪಿ ಜನರು, ಕರ್ನಾಟಕದ ದೂರ ದೂರದ ಸ್ಥಳಗಳಿಂದ ಬಂದು, ವಿಧ ವಿಧವಾದ ಉಡುಗೆಗಳಿಂದ ಆಕರ್ಷಿತರಾಗಿದ್ದ ಮಾರಾಟಗಾರರನ್ನು ನೋಡುತ್ತಿದ್ದರು. ಇವರು ಮಾರುತ್ತಿದ್ದ ಬಟ್ಟೆಗಳು, ಧಾನ್ಯಗಳು ಸಂಬಾರ ವಸ್ತುಗಳು ಮತ್ತು ಸುಗಂಧ ದ್ರವ್ಯಗಳು ಅವರ ಮನಸೆಳೆಯುತ್ತಿದ್ದವು. ಹಳ್ಳಿಯಿಂದ ಎಷ್ಟೋ ಮೈಲಿಗಳಾಚೆ ನಡೆಯುತ್ತಿದ್ದ ಘಟನೆಗಳ ಬಗೆಗೆ ಅಲ್ಲಿ ಅವರಿಗೆ ತಿಳಿಯುತ್ತಿತ್ತು. ತಮ್ಮಲ್ಲೂ ನೆರೆಹೊರೆಯಲ್ಲೂ ದೊರಕದ ವಸ್ತುಗಳನ್ನು ಕೊಳ್ಳಲು ಈ ಸಂತೆಗಳು ಅವರಿಗೆ ಏಕೈಕ ಅವಕಾಶವಾಗಿದ್ದುವು. ಅದಕ್ಕಿಂತ ಮುಖ್ಯವಾಗಿ, ರೈತರು ಹಳ್ಳಿಗಳಲ್ಲಿ ನಡೆಸುತ್ತಿದ್ದ ತಮ್ಮ ಜೀವನಕ್ಕಿಂತ ಹೊರಗಿನ ವ್ಯವಹಾರಗಳ ಬಗೆಗೆ ತಿಳಿವಳಿಕೆ ಪಡೆಯುತ್ತಿದ್ದರು.

ಕೃಷಿ ಉತ್ಪನ್ನಗಳ ಮಾರಾಟದ ಪ್ರಮಾಣ ಎಷ್ಟಿತ್ತೆಂದರೆ ಅದು ವರ್ತಕರ ಸಂಘಗಳ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿತ್ತು. ಇಂತಹ ಸಂಘಗಳ ಅಸ್ತಿತ್ವವನ್ನು ರಜಾಕ್ ಮತ್ತು ಪೇಸ್ ಅಂತಹ ವಿದೇಶೀ ಪ್ರವಾಸಿಗರು ಸಮರ್ಥಿಸಿದ್ದಾರೆ. ವರ್ತಕರಿಗೆ ಬೇರೆ ಬೇರೆ ಹೆಸರುಗಳಿದ್ದವು. ಬಣಜಿಗರು, ನಾನಾ ದೇಶಿಗಳು, ಉಭಯ ನಾನಾದೇಶಿಗಳು ನಖರರು, ವೈಶ್ಯರು, ಸೆಟ್ಟಿಗಳು, ಸೆಟ್ಟಿಗುತ್ತರು, ವೀರಬಣಜಿಗರು ಇತ್ಯಾದಿ. ಈ ಸಂಘಗಳ ಮುಖ್ಯಸ್ಥರು ವಾಣಿಜ್ಯ ಕೇಂದ್ರಗಳ ಮುಖ್ಯಸ್ಥರೂ ಆಗಿರುತ್ತಿದ್ದು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿದ್ದರು. ಉಭಯ ದೇಶಿ, ಪಟ್ಟಣಸ್ವಾಮಿ, ಮಹಾವಡ್ಡವ್ಯವಹಾರಿ, ವಡ್ಡವ್ಯವಹಾರಿ, ಪಟ್ಟವ್ಯಾಪಾರಿ, ಸೆಟ್ಟಿ ಮುಂತಾಗಿ.

ದಕ್ಷಿಣ ಭಾರತದ ಮುಖ್ಯ ಬಂದರುಗಳು ಮತ್ತು ಅಲ್ಲಿಂದ ರಫ್ತಾಗುತ್ತಿದ್ದ ಮತ್ತು ಆಮದಾಗುತ್ತಿದ್ದ ಸರಕುಗಳು, ಎಲ್ಲಿಗೆ ಹೋಗುತ್ತಿದ್ದವು ಎಂಬುದನ್ನು ತೋರಿಸುವ ಪಟ್ಟಿ (14 ರಿಂದ 17ನೇ ಶತಮಾನ) ಇಂತಿದೆ.

| ಕ್ರ.ಸಂ. | ಕರಾವಳಿ | ಬಂದರು | ರಫ್ತು | ಆಮದು | ಎಲ್ಲಿಗೆ |
|---|---|---|---|---|---|
| 1. | ಪಶ್ಚಿಮ | ಸೂರತ್ | 1. ಬಟ್ಟೆ | 1. ಅರಬ್ಬೀ ಕುದುರೆಗಳು | ಓರಾಜ್ |
| | | | 2. ತೇಗ ಮತ್ತು ಶ್ರೀಗಂಧ | 2. ವೆಲ್ವೆಟ್ | ಯೆಮೆನ್ |
| | | | 3. ಕೃಷಿ ವಸ್ತುಗಳು | 3. ಸ್ಯಾಟಿನ್ | ಮಾಲ್ಡೀವ್ಸ್ |
| | | | | 4. ಚೈನಾ ತುಣುಕುಗಳು | |
| | | | | 5. ಕೇಸರಿ ಮತ್ತು ಕೆಂಪು ಹರಳು | |
| 2. | ಪಶ್ಚಿಮ | ದಾಮನ್ ಮತ್ತು ಬೆಸ್ಸೀನ್ | | | |
| 3. | ಪಣಜಿ | | | | |
| 4. | ಧಬೋಲ್ | | | | |
| 5. | ಗೋವಾ | | | | |
| 6. | ಅಂಕೋಲಾ | ಬಟ್ಟೆ | 1 ಶ್ರೀಗಂಧ | ಪೋರ್ಚುಗಲ್ | |
| 7. | ಹೊನ್ನಾವರ | | ಕಾಗದ | 1 ಪರ್ಷಿಯ ಮತ್ತು ಅರೇಬಿಯ | |
| | | | 2 ಶುಂಠಿ | 2 ಪರ್ಷಿಯ ಮತ್ತು ಯೆಮೆನ್ | |
| | | | 3 ಬಟ್ಟೆ | 3 ಪೋರ್ಚುಗಲ್ | |
| 8. | ಭಟ್ಕಳ | | 1 ಬಿಳಿ ಅಕ್ಕಿ | | |
| | | 2 ಹುಡಿಮಾಡಿದ ಸಕ್ಕರೆ | 2 ಓರ್ಮಾಜ್‌ಗೆ | | |
| | | 3 ಕಬ್ಬಿಣದ ಅದುರು | 3 ಮೆಕ್ಕಾ ಮತ್ತು | | |
| | | 4 ಮೆಣಸು ಮತ್ತು | 4 ಮಾಲ್ಡೀವ್ಸ್ ದ್ವೀಪ | | |
| | ಏಡನ್ | ಸಂಬಾರ ವಸ್ತುಗಳು | | | |
| 9. | | ಬಸೂರು | ಅಕ್ಕಿ | | ಓರ್ಮಜ್ |
| | | | | ಏಡನ್ ಮತ್ತು ಮಾಲ್ಡೀವ್ಸ್ | |
| 10 | | ಬಾರಕೂರು | | | |
| 11 | | ಮಂಗಳೂರು | ಅಕ್ಕಿ ಮತ್ತು ತೇಗದ ಮರ | ಕಾಗದ | |
| 12 | | ಮಂಜೇಶ್ವರ | | | |

| | | | | |
|---|---|---|---|---|
| 13 | | ಕುಂಬ್ಳೆ | | |
| 14 | | ನೀಲೇಶ್ವರ | | |
| 15 | | ಕೈಲಾಸ್ | ಬಟ್ಟೆ ಮತ್ತು ಕೃಷಿ ವಸ್ತುಗಳು | |
| 16 | | ಕ್ಯಾಲಿಕಟ್ | ಹತ್ತಿ ಬಟ್ಟೆ ಮರ ಮತ್ತು ಕೃಷಿ ಉತ್ಪನ್ನಗಳು | |
| 17 | | ಕೊಚ್ಚಿನ್ | | |
| 18 | | ಪುಲಿಕಾಟ್ | ಮುದ್ರಿತ ಬಟ್ಟೆಗಳು | ಮಲಕ್ಕಾ ಮತ್ತು |
| 19 | ಪೂರ್ವ | ಮೈಲಾಪುರ | ಮುದ್ರಿತ ಬಟ್ಟೆ | |
| 20 | | ಮಲ್ಲಿಪಟ್ಟಣ | ಅಕ್ಕಿ | ಮಾಲ್ಡೀವ್ ದ್ವೀಪಗಳು |
| 21 | | ನಾಗಪಟ್ಟಣ | | |

14 ರಿಂದ 17ನೇ ಶತಮಾನಗಳಲ್ಲಿ ದಕ್ಷಿಣ ಭಾರತದ ಮುಖ್ಯವಾದ ಆಮದು ಮತ್ತು ರಫ್ತುಗಳು

| ಕ್ರ.ಸಂ. | ಆಮದು | ರಫ್ತು |
|---|---|---|
| 1 | ಕರ್ಪೂರ | ಅಕ್ಕಿ |
| 2 | ಮುತ್ತುಗಳು | ಹುಡಿಮಾಡಿದ ಸಕ್ಕರೆ |
| 3 | ಹವಳ | ಮೆಣಸು ಮತ್ತು ಸಂಬಾರ ಜೀನಸುಗಳು |
| 4 | ಕುಂಕುಮ | ಶುಂಠಿ |
| 5 | ಚೈನಾ ರೇಷ್ಮೆ | ಬಟ್ಟೆ |
| 6 | ವೆಲ್ವೆಟ್ | ಶ್ರೀಗಂಧದ ಮರ |
| 7 | ಸೀಸ | ತೇಗದ ಮರ |
| 8 | ತವರ | ಮುದ್ರಿತ ಬಟ್ಟೆ |
| 9 | ಕಬ್ಬಿಣಮತ್ತು ಹಿತ್ತಾಳೆ | ಕೇಸರಿ |
| 10 | ಪಾದರಸ ಮತ್ತು ಗಾಜು | ನೀಲಿ |
| 11 | ಬಣ್ಣಗಳು | ವೈದ್ಯಕೀಯ ಮೂಲಿಕೆಗಳು |
| 12 | ಚಿನ್ನ (ಏಡನ್ ಮತ್ತು ಚೈನಾದಿಂದ) | ಕೃಷಿ ಉತ್ಪನ್ನಗಳು |
| 13 | ಕುದುರೆಗಳು (ಅರೇಬಿಯ ಮತ್ತು ಉತ್ತರ ಆಫ್ರಿಕಾಗಳಿಂದ ಪೋರ್ಚುಗೀಸರ ಮೂಲಕ) | |
| 14 | ಆನೆಗಳು(ಸಿಲೋನ್) | |
| 15 | ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳು (ಅರಬ್ಬರು ಮತ್ತು ಪೋರ್ಚುಗೀಸರಿಂದ) | |
| 16 | ಕಾಗದ | |

ಈ ಪಟ್ಟಣಗಳನ್ನು, ನಗರ ಕೇಂದ್ರಗಳನ್ನೂ, ಒಂದುಗೂಡಿಸುವ ಉತ್ತಮವಾದ ವ್ಯಾಪಾರ ಮಾರ್ಗಗಳು ಇದ್ದುದು ಸಹಜ. ಬಹು ವ್ಯಾಪಕವಾಗಿ ಉಪಯೋಗವಾಗುತ್ತಿದ್ದ ಕೆಲವು ವ್ಯಾಪಾರ ಮಾರ್ಗಗಳು ಇವು 1) ವಿಜಯನಗರ ಪಟ್ಟಣದಿಂದ ಬಂಕಾಪುರದ ಮೂಲಕ ಗೋವಾಕ್ಕೆ 2) ಬಂಕಾಪುರದಿಂದ ಹೊನ್ನಾವರದ ಮೂಲಕ ಭಟ್ಕಳಕ್ಕೆ 3) ಬೀದರ್ ಮತ್ತು ಗೋಲ್ಕೊಂಡಗಳ ಮಾರ್ಗವಾಗಿ ದೌಲತಾಬಾದಿನಿಂದ ಗುಲ್ಬರ್ಗಕ್ಕೆ 4) ಬಂಕಾಪುರದಿಂದ ಬಿಜಾಪುರ ಮತ್ತು ಗುಬ್ಲರ್ಗಾ ಮಾರ್ಗವಾಗಿ ಗೋಲ್ಕಂಡಕ್ಕೆ 5) ವಿಜಯನಗರ ಪಟ್ಟಣದಿಂದ ಪೆನುಕೊಂಡಾ, ಚಂದ್ರಗಿರಿ, ತಿರುಪತಿ ಮತ್ತು ಪುಲಿಕೋಟೆ ಹಾದು ಮೈಲಾಪುರಕ್ಕೆ 6) ವಿಜಯನಗರದಿಂದ ಆದೋನಿ, ರಾಯಚೂರುಗಳಿಗೆ 7) ವಿಜಯನಗರದಿಂದ ಶಿವನಸಮುದ್ರಕ್ಕೆ ಮತ್ತು ಶ್ರೀರಂಗಪಟ್ಟಣಕ್ಕೆ. ಇಲ್ಲಿ ಸ್ವಾರಸ್ಯವಾದ ವಿಚಾರವೇನೆಂದರೆ ಈ ವ್ಯಾಪಾರ ಮಾರ್ಗಗಳು ವಿಂಧ್ಯದ ದಕ್ಷಿಣಕ್ಕೆ ಬಹಮನಿ ಮತ್ತು ವಿಜಯನಗರ ರಾಜ್ಯಗಳ ಪ್ರದೇಶಗಳನ್ನು ಪೂರ್ತಿಯಾಗಿ ಆವರಿಸಿಕೊಂಡಿದ್ದುವು. ಈ ವ್ಯಾಪಾರ ಮಾರ್ಗಗಳು ವಹಿವಾಟನ್ನು ಹೆಚ್ಚು ಮಾಡಿ, ನಗರ ಕೇಂದ್ರಗಳನ್ನು ವ್ಯಾಪಾರ ಕೇಂದ್ರಗಳಾಗಿಯೂ ದೇವಾಲಯ ನಗರಗಳನ್ನಾಗಿಯೂ ಬೆಳೆಸಿದ್ದುವು. ಸಹಜವಾಗಿಯೇ ಇದರಿಂದ ನಗರ ಅರ್ಥವ್ಯವಸ್ಥೆಯೂ ಸಮಾಜವೂ ವರ್ಧಿಸಿದುವು. ದಕ್ಷಿಣ ಭಾರತದಲ್ಲಿ ಸಾಮಾಜಿಕ ಆರ್ಥಿಕ ಪರಿವರ್ತನೆ ಮತ್ತು ನಗರಗಳ ಬೆಳೆವಣಿಗೆಗಳಿಗೆ ಸಂಬಂಧಿಸಿದಂತೆ 13ನೆಯ ಶತಮಾನ ಬಹುಮಹತ್ವದ ಕಾಲವಾಗಿತ್ತು.

ಹಾಗೆ ಬೆಳೆಯುವ ಬಿರುಸಾದ ವ್ಯಾಪಾರ ವಹಿವಾಟಿಗೆ ಪೂರಕವಾದ ಇನ್ನೊಂದು ಅಂಶವೆಂದರೆ, ಅತ್ಯಂತ ಅನುಕೂಲಕರವಾದ ವಿನಿಮಯ ಮಾಧ್ಯಮ. ಹಿಂದಿದ್ದ ವಸ್ತು ವಿನಿಮಯ ಪದ್ಧತಿಯಿಂದ ಈ ಸೌಲಭ್ಯ ಸಾಧ್ಯವಿರಲಿಲ್ಲ. ವ್ಯಾಪಾರ ಅಷ್ಟು ಅಗಾಧ ಪ್ರಮಾಣದಲ್ಲಿತ್ತು. ಆದ್ದರಿಂದ ವಿನಿಮಯ ಮಾಧ್ಯಮವಾಗಿ ಸುಭದ್ರವಾದೊಂದು ಹಣದ ವ್ಯವಸ್ಥೆ ನಿಧಾನವಾಗಿ ಪ್ರಾಮುಖ್ಯ ಪಡೆಯಿತು. 14 ರಿಂದ 17ನೆಯ ಶತಮಾನಗಳ ಅವಧಿಯಲ್ಲಿ ವ್ಯಾಪಾರ ವಹಿವಾಟಿನಲ್ಲಿ ಹಣಕ್ಕಿದ್ದ ಪ್ರಾಮುಖ್ಯ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದು 14ನೆಯ ಶತಮಾನಕ್ಕಿಂತ ಹಿಂದೆ ಇದ್ದ ಹಣಕಾಸು ಪದ್ಧತಿಗೆ ಹೋಲಿಸಿದರೆ ಗುಣ ಮತ್ತು ಪ್ರಮಾಣ ಎಲ್ಲಾ ದೃಷ್ಟಿಗಳಿಂದಲೂ ಅತ್ಯಂತ ಪದ್ಧತಿಗೆ ಹೋಲಿಸಿದರೆ ಗುಣ ಮತ್ತು ಪ್ರಮಾಣ ಎಲ್ಲಾ ದೃಷ್ಟಿಗಳಿಂದಲೂ ಅತ್ಯಂತ ಮೇಲು ಮಟ್ಟದ್ದಾಗಿತ್ತು.

ಹೀಗೆ ಒಳನಾಡು ಮತ್ತು ಸಾಗರೋತ್ತರ ವಾಣಿಜ್ಯದಲ್ಲಿ ಉಂಟಾದ ಅಪಾರ ಹೆಚ್ಚಳ, ಸಂತೆಗಳು ಮತ್ತು ಮಾರುಕಟ್ಟೆಗಳ ವಿಸ್ತರಣ, ವ್ಯಾಪಾರ

ಕೇಂದ್ರಗಳು, ಹೊಸ ಪಟ್ಟಣಗಳು ಹಾಗೂ ನಗರಗಳ ಉದಯ - ಇವು ಬಿರುಸಾಗಿ ಬೆಳೆಯುತ್ತಿದ್ದ ಒಂದು ಹಣ ಆಧಾರಿತ ಅರ್ಥವ್ಯವಸ್ಥೆಯನ್ನು ಸೂಚಿಸುತ್ತವೆ. ವೈವಿಧ್ಯಪೂರ್ಣವಾದ ನಾಣ್ಯಗಳು ವ್ಯಾಪಕವಾಗಿ ಚಲಾವಣೆಯಲ್ಲಿದ್ದುದು ಹಣ ವಿನಿಮಯ, ಸಾಲಗಳ ಮೇಲೆ ಬಡ್ಡಿ, ಇತರ ಹಣ ಆಧಾರಿತ ಅರ್ಥವ್ಯವಸ್ಥೆಯಕಾರ್ಯಗಳನ್ನು ಸೂಚಿಸುತ್ತವೆ. ನಾಣ್ಯಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದಕ್ಕಿಂತ ವಿನಿಮಯ ಮಾಧ್ಯಮವಾಗಿ ಬಳಸುವುದು ಅಧಿಕವಾಗಿ ರೂಢಿಯಲ್ಲಿತ್ತೆಂಬುದಕ್ಕೆ ಇದು ಸ್ಪಷ್ಟವಾದ ಸಾಕ್ಷಿಯಾಗಿದೆ.

ಕರ್ನಾಟಕದ ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯನ್ನು ಅವಲಂಬಿಸಿದ ಜನರು ಹೆಚ್ಚಾಗಿದ್ದುದರಿಂದ ಅಧಿಕ ಉತ್ಪನ್ನಗಳಿಂದಾಗಿ ವ್ಯಾಪಾರ ವಹಿವಾಟು, ತೆರಿಗೆಗಳ, ಹೆಚ್ಚಳ, ಸಂತೆಗಳ ಸ್ಥಾಪನೆಯಿಂದಾಗಿ, ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಹೊಂದಿದ್ದವು ಎನಿಸುತ್ತದೆ. ಇದಕ್ಕೆ ಪೂರಕವಾಗಿ ಆ ಕಾಲದ ಶಾಸನಗಳನ್ನು ಪರಿಶೀಲಿಸಿದರೆ ಅನೇಕ ವೃತ್ತಿಗಳನ್ನು ಮಾಡುತ್ತಿದ್ದ ಜನರು ಕಂಡುಬರುತ್ತಾರೆ. ಅವರನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು. ಒಂದು ಕುಶಲಕರ್ಮಿಗಳು, ಎರಡು ಸೇವೆಯಲ್ಲಿ ನಿರತರಾದ ವ್ಯಕ್ತಿಗಳು. ಮೂರು ಅಧಿಕಾರ ವರ್ಗದವರು ನಾಲ್ಕು ವಾಣಿಜ್ಯ ವ್ಯಾಪಾರಗಳಲ್ಲಿ ತೊಡಗಿದವರು.

ಮೊದಲನೆಯದ ವರ್ಗದಲ್ಲಿ ಬಡಗಿ, ಕಮ್ಮಾರ, ಚಮ್ಮಾರ, ನೇಕಾರ, ಕುಂಬಾರ ಮೊದಲಾದವರು ಸೇರಿದ್ದರು. ಎರನಡೆಯ ವರ್ಗದಲ್ಲಿ ಅಗಸ, ನಾಯಿಂದ, ತಳವಾರ, ತೋಟಿ, ದೇವದಾಸಿ, ಸಂಗೀತಗಾರರು ಮೊದಲಾದವರಿದ್ದರು. ಗೌಡ, ಶಾನುಭೋಗ, ಅಮರನಾಯಕ, ಸೈನಿಕ ಮೊದಲಾದವರು ಅಧಿಕಾರ ವರ್ಗಕ್ಕೆ ಸೇರಿದ್ದರು. ಶೆಟ್ಟಿ, ಬಣಜಿಗ, ಪಟ್ಟಣಸ್ವಾಮಿ ಮೊದಲಾದವರು ವ್ಯಾಪಾರ ವಾಣಿಜ್ಯಗಳ ಮೂಲಕ ಹಣವನ್ನು ಸಂಪಾದಿಸಿ ತಮ್ಮ ಜೀವನವನ್ನು ನಡೆಸುತ್ತಿದ್ದರು. ಹೀಗೆ ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ವೈವಿಧ್ಯತೆ ಇತ್ತು. ಮೇಲಿನ ಅಂಶಗಳೆಲ್ಲವೂ ದಕ್ಷಿಣ ಭಾರತೀಯ ದೇಶೀ ಕೃಷಿ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವಂಥವೇ ಆಗಿದ್ದು ವಿಜಯನಗರದ ಕಾಲಘಟ್ಟ ಸ್ಪಷ್ಟವಾಗಿ ದೇಶೀ ಕೃಷಿಯ ವಿಚಾರಗಳನ್ನು ತಿಳಿಸುವಲ್ಲಿ ಸಹಕಾರಿಯಾಗುತ್ತದೆ.

**ಆಧಾರ ಗ್ರಂಥಗಳು**


ವಿಜಯನಗರದ ಇತಿಹಾಸಕ್ಕೆ ಕೋಲಾರಜಿಲ್ಲೆಯ ಕೊಡುಗೆ

2010, ಕೆ.ಎಸ್. ಶಿವಣ್ಣ (ಸಂ.) ಕರ್ನಾಟಕ ಇತಿಹಾಸ (ಸಂ.)


*ವಿ.ಆರ್.ಬಿ.*

**ತೇಗ** ಮರಗಳ ರಾಜ ಎಂದು ಇದನ್ನು ಕರೆಯುವುದುಂಟು. ಅತ್ಯುತ್ತಮ ಮರಗಳಲ್ಲಿ ಒಂದು. ವರ್ಬಿನೇಸಿ ಕುಟುಂಬಕ್ಕೆ ಸೇರಿದ ಹೆಚ್ಚು ಉಪಯುಕ್ತವಾದ ಮರ. ಇದಕ್ಕೆ ಇಂಗ್ಲಿಷಿನಲ್ಲಿ ಟೀಕ್, ಪಿಪ್‌ಟ್ರೀ, ಇಂಡಿಯನ್ ಓಕ್ ಎಂದೂ ಹಿಂದಿಯಲ್ಲಿ ಸಾಗವಾನಿ, ಸಾಗವಾನ್ ಎಂದೂ ಬಂಗಾಲಿಯಲ್ಲಿ ಸಿಂಗುರು ಎಂದೂ ತಮಿಳಿನಲ್ಲಿ ಸಾಗ್, ಸಾಗವಾನ್, ತೆಕ್ಕು, ತೇಕ್ ಎಂದೂ ತೆಲುಗಿನಲ್ಲಿ ಚೇಕು ಎಂದೂ ಕರೆಯುವರು. ಇದರ ವೈಜ್ಞಾನಿಕನಾಮ ಟೆಕ್ಟೋನ ಗ್ರಾಂಡಿಸ್.

ತೇಗ ಒರಟಾದ ಎಲೆಗಳಿರುವ ಪರ್ಣಪಾತಿ ಮರ. ಭೂಗುಣಕ್ಕನುಗುಣವಾಗಿ 30-40 ಮೀ. ಎತ್ತರ ಬೆಳೆಯುತ್ತದೆ. ಕಾಂಡದ ಮೇಲ್ತುದಿಯಿಂದ ಎಲ್ಲ ದಿಕ್ಕಿನಲ್ಲೂ ರೆಂಬೆಗಳು ಹರಡಿ ಎಳೆಯ ಕಾಂಡಗಳು ಚೌಕಾಕಾರವಾಗಿಯೂ ಅನಂತರ ನೀಳವಾದ ಉರುಳೆ ಆಕಾರದಲ್ಲಿರುತ್ತವೆ. ತೊಗಟೆಯ ಬಣ್ಣ ತಿಳಿಕಂದು ಅಥವಾ ಬೂದು. ಎಲೆಗಳು 30-60 ಸೆಂ.ಮೀ. ಉದ್ದ, 15-30 ಸೆಂ.ಮೀ. ಅಗಲ ಇರುತ್ತವೆ. ಎಲೆಯ ಹೊರಮೈ ಒರಟು, ಮೇಲುಭಾಗ ನಯ. ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿರುತ್ತವೆ. ಈ ಮರ ಬಿಳಿಯ ಬಣ್ಣದ ಸಣ್ಣ ಹೂಗಳನ್ನು ಬಿಡುತ್ತದೆ. ಜೂನ್‌ನಲ್ಲಿ ಹೂಬಿಟ್ಟರೆ ಫೆಬ್ರವರಿ ತಿಂಗಳಲ್ಲಿ ಬಿತ್ತನೆ ಬೀಜ ಪಡೆಯಬಹುದು. ಮರದ ತಿರುಳು ತೆಳುಹಳದಿ ಬಣ್ಣವಿದ್ದು ತೀಕ್ಷ್ಣ ಸುವಾಸನೆ ಹೊಂದಿರುತ್ತದೆ. ಈ ಮರ ಗಟ್ಟಿಯಾಗಿ ಬಿರುಸಾಗಿದ್ದರೂ ಸೂಕ್ಷ್ಮ ಕುಸುರಿ ಕೆಲಸಗಳಿಗೂ ಉಪಯೋಗಿಸಬಹುದು. ಇದನ್ನು ಸುಲಭವಾಗಿ ಯಾವುದೇ ಗೆದ್ದಲು ಅಥವಾ ಕ್ರಿಮಿಕೀಟಗಳು ಹಾಳು ಮಾಡಲಾರವು. ಮರದ ದಿಮ್ಮಿ 2000 ವರ್ಷಗಳಿಗಿಂತಲೂ ಹೆಚ್ಚುಕಾಲ ಬಾಳಿಕೆ ಬರುತ್ತದೆ.

**ಭೂಪ್ರದೇಶ :** ತೇಗದ ಮೂಲ ಭಾರತ, ಮ್ಯಾನ್ಮಾರ್, ಜಾವ ಎಂದು ಪರಿಗಣಿಸಲಾಗಿದೆ. ಭಾರತ, ಮ್ಯಾನ್ಮಾರ್‌ಗಳಲ್ಲಿ ನೈಸರ್ಗಿಕವಾಗಿ ಹಾಗೂ ವಿಪುಲವಾಗಿ ಬೆಳೆಯುತ್ತದೆ. ಪ್ರಪಂಚದಲ್ಲೇ ತೇಗವನ್ನು ಅತಿ ಹೆಚ್ಚು ರಫ್ತು ಮಾಡುವ ದೇಶ ಮ್ಯಾನ್ಮಾರ್. ಭಾರತದಲ್ಲಿ ತಂಪಾದ ಪರ್ಣಪಾತಿ ಕಾಡುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದು ಪ್ರತ್ಯೇಕವಾಗಿ ಬೆಳೆಯದೆ ಇತರ ಜಾತಿಯ ಮರಗಳೊಂದಿಗೆ ಬೆಳೆಯುವುದೇ ಹೆಚ್ಚು. ಒಡಿಶಾ, ಮಧ್ಯಪ್ರದೇಶ ಹಾಗೂ ಬಿಹಾರಗಳ ಕೆಲವು ಭಾಗಗಳಲ್ಲಿ ಕಡಿಮೆ ಪ್ರಮಾಣದಲ್ಲೂ



ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಆಂಧ್ರ ಪ್ರದೇಶಗಳಲ್ಲಿ ಹೆಚ್ಚಾಗಿಯೂ ಬೆಳೆಯುವುದುಂಟು.

ಕೇರಳದ ವೈನಾಡು, ಮಲಬಾರ್ ಹಾಗೂ ತಿರುವಾಂಕೂರು ಬೆಟ್ಟ ಪ್ರದೇಶಗಳಲ್ಲಿ ತುಂಬ ಹುಲುಸಾಗಿ ಬೆಳೆಯುತ್ತದೆ. ನೀಲಂಬೂರು ಘಟ್ಟ ಕಣಿವೆಪ್ರದೇಶಗಳಲ್ಲಿ ಮೊದಲ ಬಾರಿಗೆ (1844) ಸಸಿಗಳನ್ನು ನೆಟ್ಟು ತೇಗದ ತೋಪುಗಳನ್ನು ಅಭಿವೃದ್ಧಿಪಡಿಸಲಾಯಿತು. ತಮಿಳುನಾಡಿನಲ್ಲಿ ಮಧುಮಲೈ, ಅಣ್ಣಾಮಲೈ, ಗುಡ್ಡಗಳಲ್ಲಿ ತೇಗದ ಮುಖ್ಯ ಅರಣ್ಯಗಳಿವೆ. ನೀಲಗಿರಿ ಬೆಟ್ಟದ ಇಳಿಜಾರು ಪ್ರದೇಶಗಳಲ್ಲೂ ಈ ಮರಗಳು ಕಂಡುಬರುತ್ತವೆ. ಆಂಧ್ರದ ಅದಿಲಾಬಾದ್, ನಿಜಾಮಾಬಾದ್, ಕರೀಂನಗರ, ಮಹಬೂಬ್‌ನಗರ, ವರಂಗಲ್, ಕರ್ನೂಲು ಮುಂತಾದ ಜಿಲ್ಲೆಗಳಲ್ಲಿ; ಗೋದಾವರಿ ಹಾಗೂ ಕೃಷ್ಣ ನದಿಗಳ ಜಲಾನಯನ ಪ್ರದೇಶಗಳಲ್ಲಿ ತೇಗ ಹೆಚ್ಚಾಗಿದೆ. ಮಹಾರಾಷ್ಟ್ರದಲ್ಲಿ ಎಲ್ಲ ಉದುರೆಲೆ ಕಾಡುಗಳಲ್ಲೂ ಬೆಳೆಯುತ್ತವೆ. ಕರ್ನಾಟಕದ ಮಲೆನಾಡು ಹಾಗೂ ಅರೆಮಲೆನಾಡು ಪ್ರದೇಶಗಳಿರುವೆಡೆ ಶ್ರೇಷ್ಠಮಟ್ಟದ ತೇಗದ ಮರಗಳಿವೆ. ಮೈಸೂರು, ದಕ್ಷಿಣ ಕನ್ನಡ, ಶಿವಮೊಗ್ಗ, ಹಾಸನ, ಧಾರವಾಡ, ಉತ್ತರ ಕನ್ನಡ ಹಾಗೂ ಬೆಳಗಾಂವಿ ಜಿಲ್ಲೆಗಳು ಉತ್ತಮ ಗುಣಮಟ್ಟದ ತೇಗದ ತಾಣಗಳಾದರೆ; ಕೊಳ್ಳೆಗಾಲ, ಬೆಂಗಳೂರು, ಗುಲ್ಬರ್ಗಗಳು ಸಾಧಾರಣ ಗುಣಮಟ್ಟದ ತೇಗದ ತಾಣಗಳು.

**ಹವಾಗುಣ ಮತ್ತು ಮಣ್ಣು :** ಸಾಮಾನ್ಯವಾಗಿ ಆರ್ದ್ರ ಉಷ್ಣವಲಯ ವಾತಾವರಣಗಳಲ್ಲಿ, 125-150 ಸೆಂ.ಮೀ. ಸರಾಸರಿ ಮಳೆಯಾಗುವ ಪ್ರದೇಶಗಳಲ್ಲಿ ತೇಗ ಹುಲುಸಾಗಿ ಬೆಳೆಯುತ್ತದೆ. ಮರದ ಬೆಳವಣಿಗೆ ಹಾಗೂ ದಿಮ್ಮಿಯ ಗುಣ ಮಣ್ಣಿನ ಆಳ ಮತ್ತು ಫಲವತ್ತತೆ, ನೀರು ಬಸಿಯುವಿಕೆ, ತೇವಾಂಶ ಇವುಗಳನ್ನು ಅವಲಂಬಿಸಿದೆ. ಕಪ್ಪುಬಣ್ಣ ಜ್ವಾಲಾಮುಖಿ ಶಿಲೆ,ಹಸುರು ಅಥವಾ ಕಂದುಬಣ್ಣದ ಅಗ್ನಿಶಿಲೆ, ಬೆಣಚುಶಿಲೆ, ಸ್ಫಟಿಕದ ಆಕಾರದ ಸುಣ್ಣಶಿಲೆ ಮುಂತಾದ ಅನೇಕ ಬಗೆಯ ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುವುದುಂಟು. ಆಳವಾದ ಮರಳುಭೂಮಿ, ಶುದ್ಧ ಸುಣ್ಣ ಹಾಗೂ ಜೌಗು ಭೂಮಿಯಲ್ಲಿ ಬೆಳೆಯುವುದಿಲ್ಲ. ಭೂಮಿಯಲ್ಲಿ ಗಾಳಿಸಂಚಾರದ ಕೊರತೆಯಾದರೆ ಬೆಳೆ ಕುಂಠಿತವಾಗುತ್ತದೆ. ಮಣ್ಣಿನಲ್ಲಿ ಗಾಳಿಯ ಚಲನವಲನ ಹೆಚ್ಚಿದಷ್ಟೂ ಬೆಳವಣಿಗೆ ಚೆನ್ನಾಗಿರುತ್ತದೆ.

ಈ ಗಿಡದ ಬೆಳವಣಿಗೆಗೆ ಅದರ ನೆತ್ತಿಯ ಮೇಲೆಲ್ಲ ಸೂರ್ಯನ ಬೆಳಕು ಹಾಗೂ ಅಕ್ಕಪಕ್ಕ ಸಾಕಷ್ಟು ಸ್ಥಳಾವಕಾಶವಿರಬೇಕು. ಬೇರೆ ಜಾತಿಯ ಗಿಡಗಳಿಂದುಂಟಾಗುವ ತೊಂದರೆಯನ್ನು ನಿರೋಧಿಸುವ ಶಕ್ತಿ ಗಿಡಕ್ಕೆ ಇಲ್ಲ. ಬೆಳಕಿನ ಪ್ರಭಾವ ಗಿಡದ ಮೇಲಲ್ಲದೆ ಹೂವು ಬಿಡುವಿಕೆ, ಕವಲೊಡೆಯುವಿಕೆ, ಮುಂತಾದವುಗಳನ್ನು ನಿಯಂತ್ರಿಸುತ್ತದೆ. ಬೇಲಿಯಲ್ಲಿ, ತೋಪುಗಳ ಅಂಚಿನಲ್ಲಿ ಬೆಳೆಯುವ ಗಿಡಗಳು ಹೆಚ್ಚು ಕವಲೊಡೆದು ಬೆಳೆಯುತ್ತವೆ. ಬೆಳಕಿಲ್ಲದಿದ್ದರೆ ಹೂವು ಬಿಡುವುದೇ ಇಲ್ಲ. ಸಸಿಯ ಬೆಳವಣಿಗೆಗೆ ಶೇಕಡ 94ರಷ್ಟು ಗಾಢವಾದ ಬೆಳಕಿನ ಅವಶ್ಯಕತೆ ಇರುತ್ತದೆ. ಈ ಮರದ ಗುಣವೆಂದರೆ ಇತರೆ ಯಾವುದೇ ಮರಗಳಿಗಿಂತ ಹೆಚ್ಚು ಬೆಂಕಿಯಿಂದಾಗುವ ಅನಾಹುತಗಳನ್ನು ತಡೆದುಕೊಳ್ಳುವುದು.

**ಸಸ್ಯಾಭಿವೃದ್ಧಿ :** ತೇಗ ನೈಸರ್ಗಿಕವಾಗಿ ವಿಫುಲವಾಗಿ ಬೆಳೆಯಬಲ್ಲದಾದರೂ ಇತ್ತೀಚೆಗೆ ತೇಗದ ಅರಣ್ಯಗಳ ಮೇಲಿನ ಒತ್ತಡ ಹೆಚ್ಚಾಗಿರುವುದರಿಂದ ಅದನ್ನು ಪ್ರತ್ಯೇಕವಾಗಿ ಬೆಳೆಸಬೇಕಾಗಿದೆ. ಇದು ಮುಖ್ಯವಾಗಿ ಬೀಜದಿಂದಲೂ ಬೆಳೆಯುತ್ತದೆ. ಬಿತ್ತನೆ ಬೀಜ ಪಡೆಯಲು ಮರಕ್ಕೆ ಕನಿಷ್ಠ 20 ವರ್ಷಗಳಾಗಿರಬೇಕು. ಒಂದು ಮರದಿಂದ 15-16 ಸಾವಿರ ಕಾಯಿ ಸಿಗುತ್ತದೆ. ಕಾಯಿ ದುಂಡಗಿದ್ದು 1-2.5 ಸೆಂ.ಮೀ. ಸುತ್ತಳತೆ ಹೊಂದಿರುತ್ತದೆ. ಬೀಜವನ್ನು ಆಯ್ಕೆ ಮಾಡುವಾಗ ಗಮನಿಸಬೇಕಾದ ಅಂಶಗಳು : 1. ತಾಯಿಮರ ಸ್ಥಳೀಯವಾಗಿದ್ದು ಹುಲುಸಾಗಿದ್ದು ವಯಸ್ಸಾದ ಮರವಾಗಿರಬೇಕು. 2. ಕಾಂಡ ಬಲಿತು ದುಂಡಗಿರಬೇಕು. 3. ಮರಕ್ಕೆ ರೋಗ ನಿರೋಧಕ ಶಕ್ತಿಇರಬೇಕು. 4. ಬುಡದಿಂದ ಕವಲೊಡೆದಿರಬಾರದು. 5. ದುಂಡು, ದಪ್ಪ ಹಾಗೂ ಭಾರವಾದ ಬೀಜಗಳನ್ನೇ ಆಯ್ಕೆ ಮಾಡಬೇಕು. 6. ಬೀಜ ಹಳೆಯದಾದಷ್ಟೂ ಮೊಳೆಯುವಿಕೆ ಪ್ರಮಾಣ ಹೆಚ್ಚಾಗಿರುತ್ತದೆ.

ನೀರಿನಲ್ಲಿ 12 ಗಂಟೆ ನೆನೆಸಿ ಒಣಗಿಸಿ, ಅನಂತರ ಪ್ರತಿದಿನ (15-20 ದಿವಸಗಳು) ಒದ್ದೆ ಮಾಡಿ ಒಣಗಿಸಿಡಬೇಕು. ಈ ವೇಳೆಗೆ ಬೀಜದ ಕವಚ ಮೃದುವಾಗಿ ಸೀಳುತ್ತದೆ. ಇಲ್ಲವೆ ಮೊಳಕೆ ಒಡೆಯುತ್ತದೆ, ಇಂಥ ಬೀಜಗಳು ಬಿತ್ತನೆಗೆ ಯೋಗ್ಯವಾದಂಥವು.

**ಬಿತ್ತನೆ ಕ್ರಮ :** ಮೇಲಿನಂತೆ ಉಪಚರಿಸಿದ ಬೀಜಗಳನ್ನು ನಿರ್ದಿಷ್ಟ ಅಂತರದಲ್ಲಿ ಬಿತ್ತಬಹುದು. ಹೀಗಲ್ಲದೆ ಬೇರೊಂದು ಬಗೆಯ ಬಿತ್ತನೆ ಕ್ರಮವನ್ನು ಅನುಸರಿಸುವುದುಂಟು. ಒಂದೆರಡು ಬೀಜಗಳನ್ನು ಸಗಣಿಯಲ್ಲಿಟ್ಟು ನಿಂಬೆಹಣ್ಣಿನ ಗಾತ್ರ ಕಟ್ಟಿ ಒಣಗಿಸಿಟ್ಟು, ಇವನ್ನು ಮಳೆಗಾಲದ ಮುನ್ನ ನಿರ್ದಿಷ್ಟ ಅಂತರದಲ್ಲಿ ಎಸೆಯಲಾಗುತ್ತದೆ. ಮಳೆ ಬಂದಾಗ ಮೊಳೆತು ಚಿಗುರುತ್ತವೆ.

**ಸಸಿ ತಯಾರಿಕೆ :** ಸಾಮಾನ್ಯವಾಗಿ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ತೇಗದ ಬೀಜವನ್ನು ಚೆನ್ನಾಗಿ ಹದಮಾಡಿ ತಯಾರಿಸಿ 1.2 x 1.2 ಮೀ. ಆಕಾರದ ಏರುಮಡಿಗಳಲ್ಲಿ ಬಿತ್ತನೆ ಮಾಡಬೇಕು. ಇಂಥ ಮಡಿಗಳಿಗೆ ಸು. 7-9 ಕೆಯಜಿ ಬೀಜ ಬೇಕಾಗುತ್ತದೆ. ಒಂದು ಮಡಿಯಲ್ಲಿ ಸು. 1500 ಸಸಿಗಳು ಲಭ್ಯವಾಗುತ್ತವೆ. ಮಡಿ ಮಾಡುವ ಮುನ್ನ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿರಬೇಕು. ಬೂದಿ ಹಾಗೂ ಕೊಟ್ಟಿಗೆ ಗೊಬ್ಬರ ಮಣ್ಣಿಗೆ ಸೇರಿಸಿ ಅನಂತರ ಮಣ್ಣನ್ನು ಸಮಮಾಡಿ ಸ್ಥಳೀಯ ವಾತಾವರಣಕ್ಕನುಗುಣವಾಗಿ ಮಡಿ ತಯಾರಿಸಬೇಕು. ಬೀಜವನ್ನು ಕೈಯಿಂದ ತಟ್ಟಿ ಅದರ ಮೇಲೆ 1-2.5 ಸೆಂ.ಮೀ.ಯಷ್ಟು ಮಣ್ಣು ಅಥವಾ ಮರಳು ಹರಡಿ ಮತ್ತೆ ಕೈಯಿಂದ ತಟ್ಟಬೇಕು. ಬೀಜ ಮೊಳೆಯುವ ತನಕ ಮಡಿಯನ್ನು ಹುಲ್ಲು ಅಥವಾ ಸೊಪ್ಪಿನಿಂದ ಮುಚ್ಚಬೇಕು. ಒಣ ಪ್ರದೇಶದಲ್ಲಿ ಪ್ರತಿದಿನ ನೀರುಣಿಸಬೇಕು. ಇಂಥ ಬೀಜಗಳು 15-20 ದಿನಗಳಲ್ಲಿ ಮೊಳೆಯುತ್ತವೆ. ಎರಡು ತಿಂಗಳ ಬಳಿಕ ಸಸಿಗಳನ್ನು ಕಿತ್ತು ಅದರ ಎಲೆಗಳನ್ನು ಮತ್ತು ತುಂತುರುಬೇರುಗಳನ್ನು ಕತ್ತರಿಸಿ ತೆಗೆದರೆ ಮೋಟು ಸಿದ್ಧವಾಗುತ್ತದೆ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಸು. 15 ಸೆಂ.ಮೀ. ಏರು ಮಡಿಗಳನ್ನು ಹಾಗೂ ಒಣ ಪ್ರದೇಶಗಳಲ್ಲಿ 15ಸೆಂ.ಮೀ. ತಗ್ಗು ಮಡಿಗಳನ್ನು ಸಿದ್ಧಪಡಿಸಿ ಸಸಿ ಬೆಳೆಸಬೇಕು.

**ಮೋಟು ತಯಾರಿಕೆ :** ಸು. 1-2 ಸೆಂ.ಮೀ. ದಪ್ಪ ಕಾಂಡವಿರುವ ಸಸಿಗಳು ಮೋಟು ಮಾಡಲು ಯೋಗ್ಯ. ಸಸಿಗಳನ್ನು ಮಡಿಯಿಂದ ಕಿತ್ತು ತೆಗೆಯುವ ಮೊದಲ ದಿನ ಮಡಿಗೆ ನೀರು ಹಾಯಿಸಿರಬೇಕು. ಮಡಿಯ ಒಂದು ಭಾಗದಿಂದ ಮಣ್ಣನ್ನು ಸಡಿಲಗೊಳಿಸುತ್ತ ಸಸಿಗಳನ್ನು ತೆಗೆಯಬೇಕು. ಇಂಥ ಸಸಿಗಳನ್ನು 1.5-5 ಸೆಂ.ಮೀ. ಕಾಂಡ ಹಾಗೂ 15-25 ಸೆಂ.ಮೀ. ತಾಯಿ ಬೇರು ಉಳಿಸಿಕೊಂಡು ಮಿಕ್ಕ ಭಾಗಗಳನ್ನು ಕತ್ತರಿಸಬೇಕು. ಈ ಮೋಟುಗಳನ್ನು ಚೀಲಗಳಲ್ಲಿ ಹಾಕಿ ಬೆಳೆಸಬೇಕು. ಹೀಗೆ ಬೆಳೆಸಿದ ಸಸಿಗಳನ್ನು ಒಂದೆರಡು ಹದ ಮಳೆ ಬಿದ್ದ ಮೇಲೆ ನೈಸರ್ಗಿಕವಲಯ ಹಾಗೂ ಇತರೆಡೆಗಳಲ್ಲಿ ನೆಟ್ಟು ಬೆಳೆಸಲಾಗುತ್ತದೆ.

ಭೂಮಿ ಮೃದುವಾಗಿ ಫಲವತ್ತಾಗಿದ್ದರೆ ಮೋಟಿನಷ್ಟೇ ದಪ್ಪವಾದ ಕೋಲಿನಿಂದ ಭೂಮಿಯಲ್ಲಿ ಕೊರೆದ ಗುಳಿಗಳಲ್ಲಿ ನೆಡುವರು. ಸಸಿಗಳನ್ನು ನೆಡುವೆಡೆ ಗಿಡಗಂಟೆಗಳನ್ನು ತೆಗೆದು ಸ್ವಚ್ಛಗೊಳಿಸಬೇಕು. 30 x 30 ಸೆಂ.ಮೀ. ಆಳತೆಯ ಗುಳಿಗಳನ್ನು ತೆಗೆದು 15-20 ದಿನಗಳ ತನಕ ಹಾಗೆಯೇ ಬಿಡಬೇಕು. ಮಳೆಗಾಲಕ್ಕೆ ಮುನ್ನ ಗುಳಿ ಮುಚ್ಚುವಾಗ ತೆಗೆದ ಮೇಲ್ಮಣ್ಣನ್ನು ಕೊಟ್ಟಿಗೆ ಗೊಬ್ಬರದ ಜೊತೆ ಬೆರೆಸಿ ಮುಚ್ಚಬೇಕು. ಮೋಟನ್ನೆ ಆಗಲಿ ಸಸಿಯನ್ನೇ ಆಗಲಿ ಭೂಮಿಯ ಮಟ್ಟಕ್ಕೆ ಹೂಳಬೇಕು. ಸಾಮಾನ್ಯವಾಗಿ ಸಸಿಯನ್ನು 1.8 x 1.8 ಮೀ. ಅಥವಾ 3.7 x 3.7 ಮೀ. ಅಂತರದಲ್ಲಿ ಬೆಳೆಯಲಾಗುತ್ತದೆ.

ಕೃಷಿ ಅರಣ್ಯಕ್ಕೆ ತೇಗ ಅತ್ಯಂತ ಮಹತ್ತ್ವದ ಹಾಗೂ ಯೋಗ್ಯವಾದ ಮರಗಳಲ್ಲಿ ಒಂದು. ಕೃಷಿ ಜಮೀನಿನ ಬದುಗಳ ಮೇಲೆ ಹೊಲಗಳ ಅಂಚಿನಲ್ಲಿ ಹಾಗೂ ಹೆಚ್ಚುವರಿ ಜಮೀನಿನಲ್ಲಿ ಬೆಳೆಯಲು ಉಪಯುಕ್ತ. ಕೃಷಿ ಭೂಮಿಯಲ್ಲಿ ಈ ಮರ ಬೆಳೆದರೆ ಬೆಳೆಗಳ ಅಥವಾ ಭೂಮಿಯ ಮೇಲೆ ಯಾವುದೇ ಬಗೆಯ ದುಷ್ಪರಿಣಾಮ ಆಗುವುದಿಲ್ಲ. ಇದು ತುಂಬ ಆಳವಾಗಿ ಬೇರು ಬಿಡುವುದರಿಂದ ಭೂಮಿಯ ತೇವಾಂಶಕ್ಕೆ ಅಥವಾ ಖನಿಜಾಂಶಕ್ಕೆ ಕೃಷಿಬೆಳೆಗಳ ಜೊತೆ ಪೈಪೋಟಿ ಆಗುವುದಿಲ್ಲ.

ಮುಸುಕಿನ ಜೋಳ, ಬತ್ತ, ಮೆಣಸಿನಕಾಯಿ, ಹುರುಳಿ, ಹೆಸರು, ರಾಗಿ ಬೆಳೆಗಳನ್ನು ತೇಗದ ಜೊತೆ ಅಂತರ್‌ಬೆಳೆಯಾಗಿ ಬೆಳೆಯಬಹುದು. ಎರಡೂ ಸಾಲಿನ ಮಧ್ಯೆ ಗಿಡ ಹಾಕಿದ ಎಂಟು ಹತ್ತು ವರ್ಷಗಳ ತನಕ ಮಧ್ಯಂತರ ಬೆಳೆ ಬೆಳೆಯಬಹುದು. ಹೀಗೆ ಬೆಳೆದ ಗಿಡಗಳಿಗೆ ಶೇ. 15 ರಷ್ಟು ಜಮೀನು ಬೇಕಾದರೆ ಉಳಿದ ಜಮೀನು ಕೃಷಿ ಬೆಳೆಗೆ ಲಭ್ಯವಾಗುತ್ತದೆ. ತೇಗ ಬೆಳೆಯುವಲ್ಲಿ ಕ್ರಮಬದ್ಧ ಕಳೆ ನಿವಾರಣೆ ಅನಿವಾರ್ಯ. ಸಸಿ ನೆಟ್ಟವರ್ಷ ಬೇರುಗಳು ಭೂಮಿಯಲ್ಲಿ ಆಳವಾಗಿ ಇಳಿದಿರುವುದಿಲ್ಲ. ಈ ಕಾರಣದಿಂದ ಕಳೆಯ ಬೇರಿನಿಂದಾಗುವ ತೊಂದರೆ ತಪ್ಪಿಸಲು ವರ್ಷಕ್ಕೆ ಮೂರು ಬಾರಿಯಾದರೂ ಕಳೆ ತೆಗೆಯಬೇಕು. ಎರಡು ಮೂರು ವರ್ಷಗಳ ಬಳಿಕ ಕಳೆ ತೆಗೆಯುವ ಅಗತ್ಯವಿರುವುದಿಲ್ಲ.

**ಕೀಟಬಾಧೆ ಮತ್ತು ರೋಗಗಳು :** ಕೆಲವು ಕೀಟಗಳು ತೇಗದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಎಲೆಯ ನಡುದಿಂಡು ಮತ್ತು ಪಕ್ಕದ ದಿಂಡುಗಳನ್ನು ಬಿಟ್ಟು ಉಳಿದೆಲ್ಲ ಭಾಗಗಳನ್ನು ಕೆಲವು ಕೀಟಗಳು ತಿನ್ನುತ್ತವೆ.

**ಗುಣ ಮತ್ತು ಬಾಳಿಕೆ :** ಬಳಕೆಯಲ್ಲಿರುವ ಇತರ ಗಟ್ಟಿ ಮರಗಳಿಗೆ ಹೋಲಿಸಿದರೆ ತೇಗದ ಮರ ಸರಾಸರಿ ಭಾರದ, ಬಲವಾದ ಸಾಧಾರಣ ಗಡುಸಾದ ಮರ. ಬಹಳ ಕಾಲ ಡೊಂಕಾಗದೆ ನೇರವಾಗಿ ನಿಲ್ಲುವ ಮರ. ಇದರ ಚೇಗು ಹೆಚ್ಚು ಬಾಳಿಕೆ ಬರುವಂಥದು. ಗರಗಸ, ಉಳಿ, ಹತ್ತರಿ ಇವುಗಳ ಬಾಯಿಗೆ ಹದವಾದ ಚೌಬೀನೆಯಿದು. ಕತ್ತರಿಸಿದ ಪಾತಳಿಗಳು ಸ್ವಾಭಾವಿಕವಾಗಿ ನುಣುಪಾಗಿರುತ್ತವೆ. ಇದರ ಚಾಬೀನೆಯಿಂದ ಹಾಳೆಗಳನ್ನು (ಪ್ಲೈವುಡ್) ತಯಾರಿಸುವರು.

*ಎ.ಎಂ.ಡಿ.*

**ತೊಂಡೆಕಾಯಿ(ಲಿಟಲ್ ಗಾರ್ಡ್)** 'ಕುಕರ್ಬಿಟೇಸಿ' ಕುಟುಂಬಕ್ಕೆ ಸೇರಿದ ತೊಂಡೆಕಾಯಿಯ ವೈಜ್ಞಾನಿಕ ಹೆಸರು ಕಾಕ್ಸೀನಿಯಾ ಇಂಡಿಕಾ. ಭಾರತದಲ್ಲೇ ಹುಟ್ಟಿ ಪ್ರಸಿದ್ಧಿ ಪಡೆದ ಬಹುವಾರ್ಷಿಕ ಬೆಳೆ. ದಕ್ಷಿಣ ಭಾರತದಲ್ಲಿ ಇದರ ಬೇಸಾಯ ಹೆಚ್ಚು. ಈ ಬಳ್ಳಿಗೆ ರೋಗ ರುಜಿನಗಳು ಕಡಿಮೆ. ಎಂತಹ ವಾತಾವರಣದಲ್ಲಿಯೂ ಉತ್ತಮ ಇಳುವರಿ ನೀಡಬಲ್ಲ ಸಾಮರ್ಥ್ಯ ಇದಕ್ಕಿದೆ.

ನೀರು ಹರಿದು ಹೋಗುವಂತಹ ಮರಳು ಮಿಶ್ರಿತ ಗೋಡು ಮಣ್ಣು ಮತ್ತು ಆಳವಿರುವ ಹಾಗೂ ತೇವ ಹಿಡಿದಿಡುವ ಮಣ್ಣಿನಲ್ಲಿ ತೊಂಡೆ ಚೆನ್ನಾಗಿ ಬೆಳೆದು ಉತ್ತಮ ಇಳುವರಿ ನೀಡಬಲ್ಲದು. ಬಿಸಿಲಿನಿಂದ ಕೂಡಿದ ಆರ್ದ್ರ ಹವಾಗುಣ ಇದಕ್ಕೆ ಉತ್ತಮ. ಅಧಿಕ ಮಳೆ ಇರುವಾಗ ಹೆಚ್ಚು ಫಲ ನೀಡುತ್ತದೆ. ಜೂನ್-ಜುಲೈ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ನಾಟಿ ಮಾಡುತ್ತಾರೆ. ತೊಂಡೆಯನ್ನು ಬೀಜ ಹಾಗೂ ಕಾಂಡದ ತುಂಡುಗಳಿಂದಲೂ ಸಸ್ಯಾಭಿವೃದ್ಧಿ ಮಾಡುವರು. ಸಾಮಾನ್ಯವಾಗಿ



ಕಾಂಡದ ತುಂಡನ್ನೇ ಬಳಸುತ್ತಾರೆ. ಬೀಜವನ್ನು ಉಪಯೋಗಿಸಿದಾಗ ಗಂಡುಬಳ್ಳಿಗಳು ಬರುವ ಸಾಧ್ಯತೆ ಹೆಚ್ಚು. ಕಾಂಡದ ತುಂಡುಗಳನ್ನು ಹೆಣ್ಣು ಹಂಬುಗಳಿಂದ ಆರಿಸಿಕೊಳ್ಳಬೇಕು. ಪ್ರತಿಕಾಂಡಕ್ಕೆ ಕನಿಷ್ಠ 2 ಕಣ್ಣು ಇರಬೇಕು. ಬಲಿತ ಹಂಬನ್ನು ನಾಟಿ ಮಾಡಿದಾಗ ಅವು ಬೇಗ ಚಿಗುರಿ ಹೆಚ್ಚು ಬೇರು ಬಿಡುತ್ತವೆ. ಒಂದು ಎಕರೆಗೆ ಸುಮಾರು 3630 ಕಾಂಡದ ತುಂಡುಗಳು ಬೇಕಾಗುತ್ತವೆ.

ಭೂಮಿಯನ್ನು ಆಳವಾಗಿ ಉತ್ತು ಹದಮಾಡಿ 6 ಅಡಿ ಅಂತರದ ಸಾಲುಗಳಲ್ಲಿ 6 ಅಡಿಗೊಂದರಂತೆ 2 ಘನ ಅಡಿಯ ಪಾತಿಗಳನ್ನು ತೆಗೆದು

ಕೊಟ್ಟಿಗೆ ಗೊಬ್ಬರ ಮತ್ತು ಸುಡುಮಣ್ಣು ಬೆರೆಸಿ ಪಾತಿಗಳಿಗೆ ತುಂಬಬೇಕು. ಅದರ ಮೇಲೆ ತೋಟದ ಮಣ್ಣು ತುಂಬಿಸಿ ಬಳ್ಳಿಯನ್ನು ನಾಟಿಮಾಡಬೇಕು. ಬೆಳೆದ ಬಳ್ಳಿಯನ್ನು ಮರಗಳಿಗೆ ಅಥವಾ 6 ಅಡಿ ಎತ್ತರದ ಚಪ್ಪರಕ್ಕೆ ಹಬ್ಬಿಸಬೇಕು. ನಾಟಿ ಹಾಕಿದ ಕಾಂಡದ ತುಂಡುಗಳು 15 ದಿನಗಳಲ್ಲಿ ಚಿಗುರೊಡೆದು 6 ವಾರಗಳಲ್ಲಿ ಚಪ್ಪರವನ್ನು ಮುಟ್ಟಬಲ್ಲವು. 4-5 ವರ್ಷಕ್ಕೊಮ್ಮೆ ಹಳೆಬೆಳೆಯನ್ನು ತೆಗೆದು ಹೊಸನಾಟಿ ಮಾಡಬೇಕು.

ಇದಕ್ಕೆ ಹೆಚ್ಚು ನೀರಿನ ಅಗತ್ಯವಿದೆ. ಆಗಾಗ್ಗೆ ಮಣ್ಣನ್ನು ಕೆದಕಿ ಕಳೆ ತೆಗೆದು ಪಾತಿಗಳನ್ನು ಸ್ವಚ್ಛವಾಗಿಡಬೇಕು. ಪ್ರತಿವರ್ಷ ಬಳ್ಳಿಗಳನ್ನು ನೆಲಮಟ್ಟದಿಂದ ಮೂರು ಅಡಿ ಎತ್ತರಕ್ಕೆ ಸವರಿ ಗೊಬ್ಬರ ಮತ್ತು ನೀರನ್ನು ಒದಗಿಸಬೇಕು.

**ಸಸ್ಯ ಸಂರಕ್ಷಣೆ :** ತೊಂಡೆಗೆ ಬೂಜುರೋಗ, ತುಪ್ಪಳ ರೋಗ ಮತ್ತು ನಂಜು ರೋಗಗಳು ಹೆಚ್ಚಾಗಿ ಬರುತ್ತವೆ. ಇವು ಹಾನಿಕಾರಕ ರೋಗಗಳಾಗಿದ್ದು ಎಲೆಯ ಕೆಳಭಾಗದಲ್ಲಿ ಹಳದಿ ಅಥವಾ ಕಂದು ಬಣ್ಣಗಳಲ್ಲಿ ಕಾಣಿಸಿಕೊಳ್ಳುತ್ತದೆ. ರೋಗ ಹೆಚ್ಚಾದಾಗ ಎಲೆ ಉದುರಿ ಹಣ್ಣಿನ ರುಚಿ ಕೆಡುತ್ತದೆ. ವಾತಾವರಣದಲ್ಲಿ ಹೆಚ್ಚು ತೇವಾಂಶವಿದ್ದರೆ ರೋಗ ಉಲ್ಬಣಗೊಳ್ಳುತ್ತವೆ. ಈ ರೋಗದ ಹೇನುಗಳು ಬೇರೆ ಗಿಡಗಳಿಗೆ ಹರಡುವುದರಿಂದ ರೋಗ ಪೀಡಿತ ಗಿಡಗಳನ್ನು ಕಿತ್ತು ಸುಟ್ಟು ಹಾಕಬೇಕು ಇಲ್ಲವೆ ನೆಲದಲ್ಲಿ ಹೂಳಬೇಕು.

**ಇಳುವರಿ :** ಕಾಂಡದ ತುಂಡುಗಳು ನಾಟಿ ಮಾಡಿದ 6 ತಿಂಗಳಲ್ಲಿ ಹೂಬಿಟ್ಟು ಕಾಯಾಗುತ್ತವೆ ಮತ್ತು ವಿವಿಧ ಋತುಮಾನಗಳೆನ್ನದೆ ವರ್ಷ ಪೂರ್ತಿ ಇಳುವರಿ ಕೊಡುತ್ತವೆ. ಏಪ್ರಿಲ್-ನವೆಂಬರ್ ತಿಂಗಳಲ್ಲಿ ಹೆಚ್ಚು ಇಳುವರಿ ದೊರೆಯುತ್ತದೆ. ಕಾಯಿ ಎಳೆಯಾಗಿರುವಾಗಲೇ 3-4 ದಿನಗಳಿಗೊಮ್ಮೆ ಕೊಯ್ಲು ಮಾಡಬೇಕು. ಅರೆಬಲಿತ ಅವಸ್ಥೆಯಲ್ಲಿ ಕೊಯ್ಲು ಮಾಡಿದರೆ ತಿನ್ನಲು ಯೋಗ್ಯ.

**ತಳಿಗಳು :** ತೊಂಡೆ ಬೆಳೆಯ ಸುಧಾರಣೆಗೆ ಯಾರೂ ಅಷ್ಟಾಗಿ ಗಮನ ನೀಡಿಲ್ಲ. ಕುಂದಾಪುರ, ದಕ್ಷಿಣ ಕನ್ನಡ ಮುಂತಾದ ಕೆಲವು ಪ್ರದೇಶಗಳಲ್ಲಿ ಮಾತ್ರ ಬೆಳೆಯುತ್ತಾರೆ. ಇದರಲ್ಲಿ ನಿರ್ದಿಷ್ಟವಾದ ತಳಿಗಳನ್ನು ನಿಗದಿಪಡಿಸಲಾಗಿಲ್ಲ. ಆದರೂ ಕಾಯಿಗಳ ರುಚಿಯ ಆಧಾರದ ಮೇಲೆ ಕಹಿ ಮತ್ತು ಸಿಹಿ ವಿಧಗಳೆಂದು ವಿಂಗಡಿಸಲಾಗಿದೆ. ಕಾಯಿಗಳ ಬಣ್ಣಕ್ಕನುಗುಣವಾಗಿ ಹಸಿರು, ಬಿಳಿಪು ಮತ್ತು ಬಿಳಿಪಟ್ಟೆಯ ವಿಧಗಳೆಂದು ಗುರುತಿಸಲಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚಾಗಿ ದೊಡ್ಡದಿದ್ದು ಕಡಿಮೆ ಬೀಜ ಹೊಂದಿರುತ್ತವೆ. ಕಾಗೆ ತೊಂಡೆ, ಸಿಹಿ ತೊಂಡೆ, ಎಂದೂ ಇದು ಪರಿಚಿತವಾಗಿದೆ.

ತೊಂಡೆಹಣ್ಣು ಭಾರತದಾದ್ಯಂತ ಉಪಯೋಗಿಸುವ ತರಕಾರಿ. ಇದರ ಎಳೆ ಕಾಯಿಗಳು ಮಧುಮೇಹ ರೋಗಿಗಳಿಗೆ ಪಥ್ಯ, ಮೂತ್ರ ಉತ್ತೇಜಕವೂ ಹೌದು. ಇದು ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಎಲೆಗಳನ್ನು ತುಪ್ಪದಲ್ಲಿ ಹುರಿದು, ಅರೆದು ಕಜ್ಜಿ, ಹುಳುಕಡ್ಡಿ, ಶರೀರದಲ್ಲಿನ ಊತ ಮೊದಲಾದ ಜಾಗಗಳಿಗೆ ಹಚ್ಚಿದರೆ ರೋಗ ನಿವಾರಣೆಯಾಗುತ್ತದೆ. ಮುಟ್ಟಿನ ಸಮಯದಲ್ಲಿ ಅತಿರಕ್ತಸ್ರಾವವಿದ್ದರೆ ಒಂದೆರಡು ಚಮಚೆ ಇದರ ರಸ ಸೇವಿಸಿದರೆ ಸ್ರಾವ ಕಡಿಮೆಯಾಗುತ್ತದೆ.

*ಎನ್.ಆರ್.*

**ತೊಗರಿ** ತೊಗರಿ ಬೆಳೆ ಭಾರತ ದೇಶದ ಅತ್ಯಂತ ಪ್ರಮುಖ ಬೆಳೆಯಾಗಿದೆ. ಇದು ದ್ವಿದಳ ಧಾನ್ಯ ಬೆಳೆಗಳಲ್ಲಿ ಜನಪ್ರಿಯವಾದ ಒಂದು ಸಸ್ಯ. ಲೆಗ್ಯುವಿನೋಸೀ ಕುಟುಂಬದ ಪ್ಯಾಪಿಲಿಯೊನಾಯ್ಡಿ ಗುಂಪಿಗೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಕಜಾನಸ್ ಕಜನ್. ತೊಗರಿ ಬೇಳೆಯ ಕಾಳುಗಳಲ್ಲಿ ಹೆಚ್ಚಾಗಿ ಪ್ರೋಟೀನ್ ಅಂಶವಿರುವುದರಿಂದ ದ್ವಿದಳ ಧಾನ್ಯಗಳಲ್ಲಿ ಇದಕ್ಕೆ ಪ್ರಮುಖ ಸ್ಥಾನವಿದೆ. ಬೇಳೆಯನ್ನು ಬೇರ್ಪಡಿಸಿದ ಬಳಿಕ ಉಳಿಯುವ ಸಿಪ್ಪೆ ದನಗಳಿಗೆ ಆಹಾರವಾಗುತ್ತದೆ. ತೊಗರಿ ಗಿಡದ ಕಡ್ಡಿಗಳು ಬುಟ್ಟಿ ಹೆಣೆಯಲು, ಚಾವಣಿಗೆ ಹೊದಿಸಲು ಉಪಯುಕ್ತವಾಗುತ್ತವೆ.

ಕ್ರಿ.ಪೂ. 2200-24ರ ಕಾಲದಲ್ಲಿ ಈಜಿಪ್ಟ್‌ನಲ್ಲಿ ಸಮಾಧಿಗಳಲ್ಲಿ ತೊಗರಿ ಬೇಳೆ ಸಿಕ್ಕಿದೆ ಎಂದು ಸ್ಟರ್ಟ್‌ವಾಂಟ್ ಹೇಳಿದ್ದಾನೆ. ಇಷ್ಟು ಪ್ರಾಚೀನ ಬೆಳೆಯಾಗಿದ್ದ ಇದು ಭಾರತದಲ್ಲಿ ಎಲ್ಲೂ ಕೂಡಾ ಕಾಡು ಗಿಡವಾಗಿ ಕಾಣಿಸಿಕೊಂಡಿಲ್ಲ. ಆದರೆ ಆಫ್ರಿಕದ ಮೇಲಣ ನೈಲ್ ಪ್ರದೇಶ ಅಂಗೋಲದ ಕರಾವಳಿ ವಲಯಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಆದ್ದರಿಂದ ತೊಗರಿ ಆಫ್ರಿಕಾದ ಮೂಲ ಬೆಳೆಯಾಗಿದೆ. ಜಾಂಜಿಬಾರ್ ಭಾರತ ಶ್ರೀಲಂಕಾದ ನಡುವೆ ಪ್ರಯಾಣಿಸುತ್ತಿದ್ದ ವ್ಯಾಪಾರಿಗಳು ತೊಗರಿ ಬೆಳೆಯನ್ನು ಭಾರತಕ್ಕೆ ಪರಿಚಯಿಸಿದರು ಎಂದು ಹೇಳಲಾಗಿದೆ. ಅನಂತರ ಇದು ಆಫ್ರಿಕಾದಿಂದ ವೆಸ್ಟ್ ಇಂಡೀಸ್, ಬ್ರೆಜಿಲ್, ಗೈಯಾನ, ಆಸ್ಟ್ರೇಲಿಯ ಎಲ್ಲಾ ಕಡೆ ಹರಡಿತು. ಭಾರತದಲ್ಲಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ ಹಾಗೂ ತಮಿಳುನಾಡು ಇವುಗಳು ತೊಗರಿ ಬೇಸಾಯಕ್ಕೆ ಪ್ರಸಿದ್ಧಿಯಾಗಿವೆ.

ವ್ಯಾಟ್ ಎಂಬ ವಿಜ್ಞಾನಿಯ ಪ್ರಕಾರ ಲೂರಸಿರೊ ಎಂಬಾತ ಚೀನ, ವಿಯಟ್ನಾಮ್, ಲಾವೋಸ್ ಮತ್ತು ಕಾಂಬೋಡಿಯಾಗಳಲ್ಲಿ ತೊಗರಿ ಕೃಷಿ ಸಸ್ಯವಾಗಿಯೂ ಕಾಡುಗಿಡವಾಗಿಯೂ ಬೆಳೆಯುತ್ತಿತ್ತು ಎಂಬುದನ್ನು ತಿಳಿಸಿದ್ದಾನೆ.

ತೊಗರಿಗಿಡ ಸುಮಾರು 2-12 ಮೀ. ಎತ್ತರ ಬೆಳೆಯುವ ಏಕ ವಾರ್ಷಿಕ ಹಾಗೂ ಬಹುವಾರ್ಷಿಕ ಬೆಳೆಯಾಗಿದೆ. ಇದರ ಗಿಡ ಹೆಚ್ಚು ಪೊದೆಗಳಿಂದ ಕೂಡಿರುವಂತೆ ಕವಲುಗಳಾಗಿ ಬೆಳೆಯುತ್ತದೆ ಹಾಗೂ ಬೇರುಗಳು ಭೂಮಿಯಲ್ಲಿ ಆಳವಾಗಿ ಇಳಿದು ಗಟ್ಟಿಯಾಗಿ ನಿಲ್ಲುತ್ತವೆ. ಇದು ಬಹುವಾರ್ಷಿಕ ಬೆಳೆಯಾದರೂ 2-3 ವರ್ಷಗಳಲ್ಲಿ ಇಳುವರಿ ಕಡಿಮೆಯಾಗುವುದರಿಂದ ಸಾಮಾನ್ಯವಾಗಿ ಏಕವಾರ್ಷಿಕ ಬೆಳೆಯಾಗಿ ಬೆಳೆಯುತ್ತಾರೆ.

ತೊಗರಿಯನ್ನು ಶುದ್ಧ ಬೆಳೆಯಾಗಿ ಇಲ್ಲವೆ ಮಿಶ್ರ ಬೆಳೆಯಾಗಿ ಬೆಳೆಯುತ್ತಾರೆ. ಶುದ್ಧ ಬೆಳೆಯಾಗಿ ಬೆಳೆಯುವುದಾದರೆ ಎಕರೆಗೆ 6-8 ಕೆ.ಜಿ. ಬೀಜ ಬೇಕಾಗುತ್ತದೆ. ಮಿಶ್ರ ತಳಿಗೆ / ಬೆಳೆಗೆ ಸಾಲುಗಳ ಅಂತರದ ಮೇಲೆ ಪರಿಮಾಣ ವ್ಯತ್ಯಾಸವಾಗಿರುತ್ತದೆ.

ತೊಗರಿ ಬೇಳೆಯಲ್ಲಿರುವ ಪೋಷಕಾಂಶಗಳು

| | | |
|---|---|---|
| ನೀರು | - | ಶೇ. 10.5 - 15.2 |
| ಪ್ರೋಟೀನ್ | - | ಶೇ. 20.0 - 22.3 |
| ಕೊಬ್ಬು | - | ಶೇ. 1.0 - 1.7 |
| ಖನಿಜಗಳು | - | ಶೇ. 3.0 - 3.6 |

| | | |
|---|---|---|
| ಪಿಷ್ಟ | - | ಶೇ. 54.0 - 57.2 |
| ಸುಣ್ಣ | - | ಶೇ. 8.0 - 9.14 |
| ರಂಜಕ | - | ಶೇ. 0.26 |
| ನಾರು | - | ಶೇ. 1.0 - 1.2 |
| ಬೂದಿ | - | ಶೇ. 1.8 - 3.0 |
| ವಿಟಮಿನ್ | ಎ - 220 ಐ.ಯು/100ಗ್ರಾಂ | |
| ವಿಟಮಿನ್ | ಬಿ - 151 ಎ.ಯು./100ಗ್ರಾಂ | |

**ಬಿತ್ತನೆ :** ತೊಗರಿ ಬೀಜ ಮತ್ತು ರಸಗೊಬ್ಬರಗಳನ್ನು ಏಕಕಾಲದಲ್ಲಿ ಹಾಕುವ ಕೂರಿಗೆಯಿಂದ ಹಾಕಿ, ರಾಸಾಯನಿಕ ಗೊಬ್ಬರಗಳನ್ನು ಬಿತ್ತನೆಯ ಕಾಲಕ್ಕೆ ಹಾಕಬೇಕು. ಬಿತ್ತನೆಯ ಬೀಜಗಳನ್ನು ಇಳುವಳಿ ಹೆಚ್ಚಳಕ್ಕಾಗಿ ಶೇ. 2ರ ಸುಣ್ಣದ ಕ್ಲೋರೈಡ್ ದ್ರಾವಣದಲ್ಲಿ 1 ಗಂಟೆ ನೆನೆಸಬೇಕು. ಅನಂತರ ಬಿಸಿಲು ಇಲ್ಲದ ಜಾಗದಲ್ಲಿ 7 ತಾಸು ಒಣಗಿಸಬೇಕು. ಈ ರೀತಿ ಬೀಜೋಪಚಾರ ಮಾಡುವುದರಿಂದ ಇಳುವರಿ ಹೆಚ್ಚಾಗುತ್ತದೆ.

ಅಲ್ಪಾವಧಿ ತಳಿಗಳಾದಲ್ಲಿ ಬೀಜವನ್ನು 45 ಸೆಂ.ಮೀ. ಅಂತರ ಸಾಲುಗಳಲ್ಲಿ ಬಿತ್ತಿ 10 ಸೆಂ.ಮೀ. ಒಂದರಂತೆ ಸಸಿಗಳನ್ನು ಕಿತ್ತು ಹಾಕಬೇಕು. ಮಧ್ಯಮಾವಧಿ ತಳಿಗಳಾದಲ್ಲಿ ಬೀಜವನ್ನು 60 ಸೆಂ.ಮೀ. ಅಂತರದ ಸಾಲುಗಳಲ್ಲಿ ಬಿತ್ತಬೇಕು. 20-25 ದಿನಗಳ ಬಳಿಕ ರಾಸಾಯನಿಕ ಸಲ್ಫೇಟ್‌ನ್ನು ಕೊಟ್ಟಿಗೆ ಗೊಬ್ಬರ ಜೊತೆಗೆ ಸಮಪ್ರಮಾಣದಲ್ಲಿ ಕೂಡಿಸಿ ಹಾಕುವುದರಿಂದ ಬೆಳೆ ಸಮೃದ್ಧಿಯಾಗುತ್ತದೆ.

**ಒಂದು ಬೆಳೆ ಪದ್ಧತಿ :** ತೊಗರಿಯನ್ನು ಒಂದೇ ಬೆಳೆಯಾಗಿ ಬೆಳೆಯುವ ಪದ್ಧತಿಯು ಉಂಟು. ಬೇಸಾಯಗಾರರು ಅಧಿಕವಾಗಿ ಇಳುವರಿಯನ್ನು ಪಡೆಯುವ ದೃಷ್ಟಿಯಿಂದ ಆರ್ಥಿಕ ಬೆಳೆಯಾಗಿಯೂ ಕೂಡಾ ಬೆಳೆಯುತ್ತಾರೆ. ಒಂದು ಎಕರೆಗೆ ಸುಮಾರು 6-8 ಕೆ.ಜಿ. ಬೀಜ ಬೇಕಾಗುತ್ತದೆ. ಸಾಲುಗಳ ನಡುವೆ ಅಂತರವಿರಬೇಕು. ಒಂದು ಬೆಳೆಯಾಗಿ ಬೆಳೆಯುವುದರಿಂದ ಬಹು ವರ್ಷದವರೆಗೆ ಅಂದರೆ 2-3 ವರ್ಷಗಳ ವರೆಗೂ ಇಳುವರಿಯನ್ನು ಪಡೆಯಬಹುದು.

**ಮಿಶ್ರ ಬೆಳೆ ಪದ್ಧತಿ :** ಪ್ರತ್ಯೇಕವಾಗಿ ಬೆಳೆಯುವುದಕ್ಕಿಂತ ಮಿಶ್ರ ಬೆಳೆಗಳ ಪದ್ಧತಿ ಒಳ್ಳೆಯದು. ಸರಿಯಾದ ರೀತಿಯಲ್ಲಿ ಮಿಶ್ರ ಬೆಳೆ ಪದ್ಧತಿಯನ್ನು ಅನುಸರಿಸಿದರೆ ಅಧಿಕ ಆದಾಯವು ದೊರೆಯುತ್ತದೆ. ಒಂದು ಬೆಳೆ ಕಾರಣಾಂತರಗಳಿಂದ ನಷ್ಟವಾದರೂ ಇತರ ಬೆಳೆಗಳಿಂದ ಸ್ವಲ್ಪವಾದರೂ ಆದಾಯವು ದೊರೆಯುವ ಸಂಭವವಿರುತ್ತದೆ.

**ಮಿಶ್ರ ಬೆಳೆ ಪದ್ಧತಿಯ ವಿಧಗಳು**

**ರಾಗಿ ಮತ್ತು ತೊಗರಿ :** ಮೇ ಅಥವಾ ಜೂನ್ ತಿಂಗಳಲ್ಲಿ ತೊಗರಿಯನ್ನು 3.3. ಮೀ.ಗಳ ಅಂತರದಲ್ಲಿ 60 ಸೆಂ.ಮೀ. ಜೋಡು ಸಾಲುಗಳಲ್ಲಿ ಬಿಟ್ಟು ಬಿತ್ತಬೇಕು ಅಥವಾ ಎರಡು ಜೋಡಿ ತೊಗರಿಗಳ ಸಾಲು ಮಧ್ಯರಾಗಿಯನ್ನು ಬಿತ್ತಬೇಕು. ಎರಡು ತೊಗರಿ ಸಾಲುಗಳ ಮಧ್ಯೆ ದೊಡ್ಡದಾದ ಸಾಲು ಒಡೆದು ಕಾಲುವೆಯಂತೆ ನಿರ್ಮಿಸಬೇಕು. ಇದರಿಂದ ಮಳೆಯ ನೀರು ಮಣ್ಣಿನಲ್ಲಿ ಇಂಗುತ್ತದೆ.

**ಮುಸುಕಿನ ಜೋಳ ಮತ್ತು ತೊಗರಿ :** ಜುಲೈ ತಿಂಗಳಲ್ಲಿ 37.5 ಸೆಂ.ಮೀ. ಅಂತರವನ್ನಿಟ್ಟು ಒಂದು ಸಾಲು ತೊಗರಿ, ಒಂದು ಸಾಲು ಮುಸುಕಿನ ಜೋಳ ಬಿತ್ತಬೇಕು. ಉತ್ತಮ ಮಳೆಯಾದರೆ ಒಂದು ವರ್ಷದಲ್ಲಿ ಎರಡೂ ಬೆಳೆಗಳಿಂದ ಅಧಿಕವಾದ ಇಳುವರಿಯನ್ನು ಪಡೆಯಬಹುದು. ಮಳೆಯ ಪ್ರಮಾಣ ಕಡಿಮೆಯಾದ ಸಂದರ್ಭದಲ್ಲಿ 65 ದಿನಗಳ ಅನಂತರ ಮುಸುಕಿನ ಜೋಳವನ್ನು ಕತ್ತರಿಸಿ ದನಗಳ ಮೇವಿಗೆ ಬಳಸಿಕೊಂಡು ತೊಗರಿಯನ್ನು ಬೆಳೆಯಲು ಬಿಡಬೇಕು.

**ಜೋಳ ಮತ್ತು ತೊಗರಿ :** ಜೋಳ ಮತ್ತು ತೊಗರಿಗಳನ್ನು ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಬಿತ್ತಬೇಕು. ಜೋಳ ಕೊಯ್ಲಾದ ಅನಂತರ ಮಣ್ಣಿನಲ್ಲಿ ಉಳಿದಿರುವ ಸಾರಾಂಶದ ಆರ್ದ್ರತೆಯಿಂದ ತೊಗರಿ ಬೆಳೆಯ ಲಾಗುತ್ತದೆ.

**ಶೇಂಗಾ ಮತ್ತು ತೊಗರಿ :** ಜೂನ್ - ಜುಲೈ ತಿಂಗಳಲ್ಲಿ ಬಿತ್ತಬೇಕು. ತೊಗರಿಯನ್ನು ಜೋಡು ಸಾಲುಗಳಲ್ಲಿ ಬಿತ್ತಿ ಮಧ್ಯದಲ್ಲಿ ಶೇಂಗಾ ಬಿತ್ತಬೇಕು. ಎರಡು ಸಾಲು ತೊಗರಿಗಳ ಮಧ್ಯದಲ್ಲಿ ಕಾಲುವೆಯನ್ನು ನಿರ್ಮಿಸಬೇಕು.

**ಎಳ್ಳು ಮತ್ತು ತೊಗರಿ :** ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಬಿತ್ತಬೇಕು. ಎಳ್ಳಿನ ಬೆಳೆ ಕೊಯ್ಲಾದ ಬಳಿಕ ತೊಗರಿ ಸಾಲುಗಳ ಮಧ್ಯದಲ್ಲಿ ರಾಗಿ ಪೈರು ನಾಟಿ ಮಾಡಬಹುದು. ಇಲ್ಲವೆ ಹುರುಳಿಯನ್ನು ಬಿತ್ತಬಹುದು. ಆದರೆ ಎಳ್ಳು ಮತ್ತು ತೊಗರಿಗಳನ್ನು 3.1 ಸಾಲುಗಳ ಅಂತರದಲ್ಲಿ ಬಿತ್ತಿದರೆ ಎಳ್ಳಿನ ಬೆಳೆಯ ಅನಂತರ ಇತರೆ ಬೆಳೆಗಳನ್ನು ಬೆಳೆಯಲಾಗುವುದಿಲ್ಲ.

**ತೊಗರಿ ಮತ್ತು ಇತರೆ ಬೇಳೆ ಕಾಳುಗಳು :** ಜುಲೈ ತಿಂಗಳಿನಲ್ಲಿ ತೊಗರಿಯನ್ನು ಬಿತ್ತಿ, ಇದರ ಸಾಲುಗಳ ಮಧ್ಯ, ಅಲಸಂದೆ, ಅವರೆ, ಹೆಸರು ಕಾಳು ಯಾವುದಾದರೊಂದು ಬೆಳೆಯ ಬೀಜವನ್ನು ಬಿತ್ತಬಹುದು.

**ತೊಗರಿ ಬೆಳೆಗೆ ಬರುವ ಕೀಟಗಳು ಮತ್ತು ರೋಗಗಳು :**

ತೊಗರಿಗೆ ಹಸುರು ಕಾಯಿ ಕೊರಕ, ಕಾಯಿ ನೊಣ, ಚುಕ್ಕೆಕಾಯಿ ರೋಗ ರಸ ಹೀರುವ ಕೀಟಗಳು, ಜಿಗಿ ಹುಳುಗಳ ಹಾವಳಿ, ಸೊರಗು ರೋಗಗಳು ಬಂದು ಇದರ ಇಳುವರಿಯನ್ನೆ ಕಡಿಮೆ ಮಾಡುತ್ತವೆ.



**ಹಸುರು ಕಾಯಿ ಕೊರಕ :** ಈ ರೋಗ ಬಂದಾಗ ಕೀಟಗಳು ಮೊಗ್ಗು, ಹೂವು ಮತ್ತು ಕಾಯಿಗಳನ್ನು ತಿನ್ನುತ್ತವೆ. ಹೂವು ಮತ್ತು ಕಾಯಿಗಳು ದೊರೆಯದಿದ್ದರೆ ಎಲೆಗಳನ್ನು ತಿನ್ನುತ್ತವೆ. ಅನಂತರ ಕೀಟಗಳು ಮೊಟ್ಟೆ

ಹಾಕಿ ಅದರಿಂದ ಮರಿಕೀಟಗಳು ಉತ್ಪತ್ತಿಯಾಗಿ ಕಾಯಿಗಳನ್ನು ಕೊರೆದು ಅದರೊಳಗಿನ ಬೀಜಗಳನ್ನು ತಿನ್ನುವುದರಿಂದ ಇಳುವರಿ ಕಡಿಮೆಯಾಗುತ್ತದೆ. ಒಂದು ಕೀಟವು ತನ್ನ ಬೆಳೆವಣಿಗೆ ಅವಧಿಯಲ್ಲಿ 8-10 ಕಾಯಿಗಳನ್ನು ತಿನ್ನುತ್ತದೆ. ಇದರಿಂದ ಕಾಯಿಗಳ ಇಳುವರಿ ನಷ್ಟವಾಗುತ್ತದೆ.

**ಕಾಯಿನೊಣ :** ಇದು ತೊಗರಿ ಬೆಳೆಯನ್ನು ನಾಶ ಮಾಡುವ ಮುಖ್ಯ ಕೀಟ. ಇದು ಚಿಕ್ಕದಾದ ಕಪ್ಪು ನೊಣ. ಸುಮಾರು 5 ಮಿ.ಮೀ. ಉದ್ದವಿರುತ್ತದೆ. ಎಳೆಯ ಕಾಯಿಯ ಕವಚದಲ್ಲಿ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯಿಂದಾದ ಮರಿಗಳು ಬೆಳೆಯುತ್ತಿರುವ ಕಾಳುಗಳನ್ನು ತಿಂದು ನಾಶಮಾಡುತ್ತವೆ. ಪೂರ್ಣಬೆಳೆದ ಹುಳುಗಳು ತಿಂದು ಉಳಿದ ಕಾಳು ಮತ್ತು ಕಾಯಿ ಸಿಪ್ಪೆಯ ಮಧ್ಯ ಕೋಶಾವಸ್ಥೆಗೆ ಹೋಗುತ್ತವೆ. ನೊಣ ಬಾಧಿತ ಕಾಯಿಗಳಲ್ಲಿ ಪೂರ್ತಿ ಬೆಳೆದ ಹುಳು ಕವಚದಲ್ಲಿ ರಂಧ್ರ ಮಾಡುವವರೆಗೆ ಬಾಧೆಯ ಲಕ್ಷಣ ಗೊತ್ತಾಗುವುದಿಲ್ಲ. ಈ ರಂಧ್ರವು ಮುಂದೆ ಕಾಯಿ ನೊಣ ಹೊರಬರಲು ದಾರಿಯಾಗುತ್ತದೆ.

**ಚುಕ್ಕೆ ಕಾಯಿ ಕೊರಕ** (ಜಾಡ ಹುಳು) : ಈ ಕೀಟವು ಇತ್ತೀಚಿನ ದಿನಗಳಲ್ಲಿ ತೊಗರಿಯ ಮೇಲೆ ಹೆಚ್ಚಾಗಿ ಕಂಡು ಬರುತ್ತಿದೆ. ಇದರ ನಿಯಂತ್ರಣ ಕಷ್ಟಸಾಧ್ಯ. ಪ್ರೌಢ ಚಿಟ್ಟೆಯು ಕುಡಿ, ಮೊಗ್ಗು ಮತ್ತು ಎಲೆಗಳ ಮೇಲೆ ಮೊಟ್ಟೆಗಳನ್ನು ಇಡುತ್ತದೆ. ಇದರಿಂದ ಬರುವ ಮರಿ ಹುಳುಗಳು ಮೊಗ್ಗು, ಕಾಯಿ, ಎಲೆಗಳನ್ನು ಹಾನಿ ಮಾಡುತ್ತವೆ.

**ರಸ ಹೀರುವ ಕೀಟಗಳು :** ಜಿಗಿ ಹುಳುಗಳು ಮತ್ತು ಥ್ರಿಪ್ಸ್‌ನುಸಿ ತೊಗರಿ ಬೆಳೆಯುವ ಎಲ್ಲಾ ಪ್ರದೇಶಗಳಲ್ಲೂ ಕಂಡು ಬಂದರೂ ಇಳುವರಿಯಲ್ಲಿ ವ್ಯತ್ಯಾಸ ಕಂಡುಬರುವುದಿಲ್ಲ.

ಈ ಸಣ್ಣ ಕೀಟಗಳು 2.5 ಮಿ.ಮೀ. ಉದ್ದವಿದ್ದು. ಮೇಲ್ಭಾಗ ಮತ್ತು ಕೆಳಭಾಗ, ಹೂ ಮೊಗ್ಗುಗಳಿಂದ ರಸವನ್ನು ಹೀರುತ್ತವೆ. ಮರಿ ಹುಳುಗಳ ರೆಕ್ಕೆ ಇಲ್ಲದಿರುವುದರಿಂದ ಅಲುಗಾಡಿದಾಗ ಅವು ಪಕ್ಕಕ್ಕೆ ಚಲಿಸುತ್ತವೆ. ಇದರ ಕಾಟದಿಂದ ಹಾನಿಯಾದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಒಳ ಮುಖಿಯಾಗಿ ಮುದುಡಿ ಬಟ್ಟಲಿನ ಆಕಾರ ತಾಳುತ್ತವೆ. ಇದರಿಂದ ಬೆಳೆವಣಿಗೆ ಕುಂಠಿತವಾಗಿ ಎಲೆಗಳು ಉದುರುತ್ತವೆ.

**ಸೊರಗು ರೋಗ :** ಇದು ತೊಗರಿ ಬೆಳೆಗೆ ತಗುಲುವುದರಿಂದ ಹೆಚ್ಚಿನ ಹಾನಿ ಉಂಟಾಗುತ್ತದೆ. ಶಿಲೀಂಧ್ರಗಳ ಸಂಖ್ಯೆ ಭೂಮಿಯಲ್ಲಿ ಹೇರಳವಾಗಿದ್ದರೆ ಈ ರೋಗ ಕಾಣಿಸಿಕೊಳ್ಳುತ್ತದೆ. ಇದರಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಅನಂತರ ಪೂರ್ತಿ ಬತ್ತಿದಂತಾಗಿ ಎಲೆಗಳು ಉದುರುತ್ತವೆ.

**ರೋಗಗಳ ನಿಯಂತ್ರಣ ಮತ್ತು ಹತೋಟಿ :** ತೊಗರಿ ಬೆಳೆಗೆ ತಗಲುವ ಎಲ್ಲಾ ರೋಗಗಳನ್ನು ನಿಯಂತ್ರಣ ಮಾಡುವುದರಿಂದ ಉತ್ತಮವಾದ ಇಳುವರಿಯನ್ನು ಪಡೆಯಬಹುದು.

ಹಸುರು ಕಾಯಿ ಕೊರಕ ರೋಗ ನಿಯಂತ್ರಿಸಲು ಮಾಗಿ ಉಳುಮೆ ಮಾಡಬೇಕು. ಇದರಿಂದ ಕೀಟಗಳ ಕೋಶಗಳು ಭೂಮಿಯ ಮೇಲ್ಭಾಗಕ್ಕೆ ಬಂದು ಬಿಸಿಲಿನ ಝಳಕ್ಕೆ ಸಾಯುತ್ತವೆ.

ಮೋಹಕ ಬಲೆಗಳನ್ನು ಒಂದು ಎಕರೆಗೆ 4-5ರಂತೆ ಕಟ್ಟಬೇಕು. ಇದರಿಂದ ಹೆಚ್ಚು ಪತಂಗಗಳು ಸಾಯುತ್ತವೆ.

ಕಾಯಿ ನೊಣದ ನಿಯಂತ್ರಣಕ್ಕಾಗಿ ಕಾಯಿ ತುಂಬುವ ಹಂತದಲ್ಲಿ ರಾಸಾಯನಿಕ ಔಷಧಿಯನ್ನು ಸಿಂಪಡಿಸಬೇಕು ಹಾಗೂ ಅಸಿಟಾಮಾಪ್ರಿಡ್ 0.33 ಗ್ರಾಂ. ಮತ್ತು ಡಿ.ಡಿ.ವಿ.ಪಿ. 0.5 ಮಿ.ಲಿ. ಒಂದು ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ರೋಗದಿಂದ ಬಳಲುತ್ತಿರುವ ಗಿಡಗಳನ್ನು ಕಿತ್ತು ಸುಡಬೇಕು.

ಬೇಸಗೆಯಲ್ಲಿ ಆಳವಾಗಿ ಉಳುಮೆ ಮಾಡಬೇಕು.

ಮಿಶ್ರ ಬೆಳೆಯಲ್ಲಿ ಪರ್ಯಾಯ ಬೆಳೆ ಯೋಜನೆಯನ್ನು ಅಳವಡಿಸಿಕೊಳ್ಳಬೇಕು.

ಟ್ರೈಕೊಡರ್ಮಾ ಜೈವಿಕ ಜೀವಿಯಿಂದ ಬೀಜೋಪಚಾರ ಮಾಡುವುದರಿಂದ ಬೀಜದಿಂದ ಪ್ರಸಾರವಾಗುವ ಸೋಂಕನ್ನು ಹತೋಟಿ ಮಾಡಬಹುದು.

**ಕೀಟ ನಿರ್ವಹಣೆಯ ರಾಸಾಯನಿಕ ಕ್ರಮಗಳು**

1. ಮೊದಲ ಸಿಂಪರಣೆ : 2 ಮಿ.ಲೀ. ಪ್ರೋಪೇನೋಪಾಸ್, 50. ಇ.ಸಿ., ಥೈಯೋಡಿಕಾರ್ಬನ್ 75 ಡಬ್ಲ್ಯು.ಪಿ. ಒಂದು ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.
2. ಎರಡನೇ ಸಿಂಪರಣೆ : 2 ಮಿ.ಲೀ. ಶೇ. 5 ಬೇವಿನ ಕಷಾಯವನ್ನು 1. ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು.
3. ಮೂರನೆ ಸಿಂಪರಣೆ : ಎಚ್.ಎ.ಎನ್.ಪಿ.ವಿ. - 100 ಎಲ್.ಇ. 0.11. ಬೋರಿಕ್ ಆಮ್ಲದ ಜೊತೆಗೆ 0.5% ಬೆಲ್ಲ ಎಚ್.ಎ.ಎನ್.ಪಿ.ವಿ. ನಂಜಾಣು ಜೊತೆ 1. ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
4. ನಾಲ್ಕನೆಯ ಸಿಂಪರಣೆ : 2 ಮಿ.ಲೀ. ಕ್ವಿನಾಲ್ಫಾಸ್ 25 ಇ.ಸಿ. ಅಥವಾ 2.5 ಮಿ.ಲೀ. ಕ್ಲೋರ್ಪೈರಿಫಾಸ್ 20 ಇ.ಸಿ. ಅಥವಾ 1 ಗ್ರಾಂ. ಆಸಿಫೇರ್ 75 ಎಸ್.ಪಿ. 1 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಪ್ರತಿ ಎಕರೆಗೆ 400 ಲೀಟರ್ ದ್ರಾವಣಬೇಕು.

**ಆರ್.ಡಿ**

**ತೋಟಗಾರಿಕೆಯಲ್ಲಿ ಸಸ್ಯಾಭಿವೃದ್ಧಿ** ತೋಟಗಾರಿಕೆ ಎಂದರೆ ಹಣ್ಣು ಹಂಪಲು, ತರಕಾರಿ, ಪ್ಲಾಂಟೇಷನ್ ಬೆಳೆಗಳು, ಸಂಬಾರ ಬೆಳೆಗಳು, ಹೂವು ಮತ್ತು ಅಲಂಕಾರಿಕ ಗಿಡಗಳು, ಹುಲ್ಲುಹಾಸು, ಔಷಧೀಯ ಸಸ್ಯಗಳು, ಸುಗಂಧ ದ್ರವ್ಯಗಳ ಬೆಳೆಗಳು ಮುಂತಾದವುಗಳ ಬೇಸಾಯ. ಇದರಲ್ಲಿ ಉತ್ತಮ ಬೀಜ, ಸಸ್ಯ ಸಾಮಗ್ರಿ ಮುಂತಾಗಿ ಸೇರಿರುತ್ತವೆ. ಈ ಬೆಳೆಗಳನ್ನು ವೃದ್ಧಿ ಪಡಿಸುವುದೇ ಸಸ್ಯಾಭಿವೃದ್ಧಿ.

'ಉತ್ತಮ ಬಿತ್ತನೆ ಅರ್ಧ ಬೆಳೆ ಬಂದಂತೆ' ಎಂಬ ಗಾದೆ ಅರ್ಥವತ್ತಾಗಿದೆ. ಯಾವ ಬೆಳೆಯನ್ನು ಯಾವ ವಿಧದಲ್ಲಿ ಅಭಿವೃದ್ಧಿ ಮಾಡಬಹುದೆಂಬುದನ್ನು ಚೆನ್ನಾಗಿ ತಿಳಿಯಬೇಕು. ಕೆಲವೊಂದು ಬೆಳೆಗಳನ್ನು ಬೀಜದ ಮೂಲಕ ಅಭಿವೃದ್ಧಿ ಮಾಡಬೇಕಾಗುತ್ತದೆ. ಮತ್ತೆ ಕೆಲವೊಂದನ್ನು ನಿರ್ಲಿಂಗ ವಿಧಾನದಲ್ಲಿ ಅಭಿವೃದ್ಧಿ ಪಡಿಸಬಹುದು. ಕೆಲವು ಬೀಜ ಬಿತ್ತಿದ ಕೂಡಲೆ ಮೊಳೆಯುವುದಿಲ್ಲ.

ಕೆಲವಕ್ಕೆ ಮೊಳೆಯುವ ಸಾಮರ್ಥ್ಯ ಬಹುಬೇಗ ಹಾಳಾಗುತ್ತದೆ. ಆದ್ದರಿಂದ ಬೀಜೋಪಚಾರ ಮಾಡುವುದು ಲಾಭದಾಯಕ.

ಯಾವುದೇ ತೋಟಗಾರಿಕೆ ಬೆಳೆಯನ್ನು ಬೆಳೆಯುವ ಮುಂಚೆ ತಜ್ಞರ ನೆರವನ್ನು ಪಡೆಯಬೇಕು. ಉತ್ತಮ ಬೇಸಾಯದ ಅನುಭವ ಇರುವವರೊಂದಿಗೆ ಕುಳಿತು ಚರ್ಚೆ ಮಾಡಬೇಕು. ಅಂತಹ ತೋಟಗಳನ್ನು ಕಣ್ಣಾರೆ ನೋಡಬೇಕು.

ಉಪಯುಕ್ತ ಸಸ್ಯಗಳನ್ನು ಆರಿಸಿ ಕ್ರಮಬದ್ಧ ರೀತಿಯಲ್ಲಿ ವೃದ್ಧಿಪಡಿಸುವುದಕ್ಕೆ ಸಸ್ಯಾಭಿವೃದ್ಧಿ ಎನ್ನುತ್ತೇವೆ. ತೋಟಗಾರಿಕೆಯಲ್ಲಿ ಇದು ಬಹು ಅಗತ್ಯ. ಇದನ್ನು ಎರಡು ವಿಧದಲ್ಲಿ ಮಾಡಲಾಗುತ್ತದೆ. ಬೀಜ ಪದ್ಧತಿ ಮತ್ತು ನಿರ್ಲಿಂಗ ಪದ್ಧತಿ. ಈ ಎರಡೂ ಪದ್ಧತಿಗಳಲ್ಲಿ ಕೆಲವೊಂದು ಅನುಕೂಲ ಹಾಗೂ ಅನಾನುಕೂಲಗಳಿರುತ್ತವೆ.

**1. ಬೀಜ ಪದ್ಧತಿ :** ಇದನ್ನು ಲಿಂಗ ಪದ್ಧತಿ, ಸೆಕ್ಷುಯಲ್ ಪ್ರಾಪಗೇಷನ್, ಸೀಡ್ ಮೆಥಡ್ ಮುಂತಾಗಿ ಕರೆಯಲಾಗುತ್ತದೆ. ಅನುಕೂಲಕರ ಪರಿಸ್ಥಿತಿಯಲ್ಲಿ ಜೀವಂತವಿರುವ ಬೀಜವನ್ನು ಬಿತ್ತಿ ಸಸಿಗಳನ್ನು ಎಬ್ಬಿಸುವುದೇ ಬೀಜ ಪದ್ಧತಿ. ಈ ವಿಧದಲ್ಲಿ ಹಲವಾರು ಬೆಳೆಗಳನ್ನು ವೃದ್ಧಿಪಡಿಸಿ, ಬೆಳೆಯಲಾಗುತ್ತದೆ. ಉದಾ : ತೆಂಗು, ಅಡಕೆ, ತಾಳೆ, ಪಪ್ಪಾಯಿ, ಕುಂಬಳ, ಸೋರೆ, ಹಾಗಲ, ಹೀರೆ, ಕೋಸು, ಟೊಮ್ಯಾಟೋ, ಬದನೆ, ಮೆಣಸಿನಕಾಯಿ, ಸೀಮೆಬದನೆ, ಪಡವಲ, ನುಗ್ಗೆ, ಕರಿಬೇವು, ಕನಕಾಂಬರ, ಚೆಂಡುಮಲ್ಲಿಗೆ, ಸೂರ್ಯಕಾಂತಿ, ಕೆಂಪು ಮಂದಾರ, ಕರ್ಣಕುಂಡಲ, ಆಸ್ಟರ್, ಕೊತ್ತಂಬರಿ, ಜೀರಿಗೆ ಇತ್ಯಾದಿ.

**2. ನಿರ್ಲಿಂಗ ಪದ್ಧತಿ :** ಇದಕ್ಕೆ ವೆಜಿಟೇಟಿವ್ ಮೆಥಡ್ ಆಫ್ ಪ್ರಾಪಗೇಷನ್, ಅಸೆಕ್ಷುಯಲ್ ಪ್ರಾಪಗೇಷನ್ ಮುಂತಾದ ಹೆಸರುಗಳಿವೆ. ಬೀಜವನ್ನು ಬಳಸುವ ಬದಲಾಗಿ ರೆಂಬೆ, ಕಾಂಡ, ಎಲೆ, ಬೇರು ಮುಂತಾದ ಭಾಗಗಳನ್ನು ಮಣ್ಣು ಅಥವಾ ಇನ್ನಿತರ ಮಾಧ್ಯಮಗಳಲ್ಲಿ ಊರಿ ಬೆಳೆಯುವಂತೆ ಮಾಡಲಾಗುತ್ತದೆ. ಈ ಪದ್ಧತಿಯನ್ನು ಹಲವಾರು ಬೆಳೆಗಳಲ್ಲಿ ಅನುಸರಿಸಲಾಗುತ್ತದೆ. ಅಗತ್ಯ ಪ್ರಮಾಣದಲ್ಲಿ ಜೀವಂತ ಬೀಜ ಸುಲಭವಾಗಿ ಹಾಗೂ ಕಡಿಮೆ ಬೆಲೆಗೆ ಲಭಿಸದಿದ್ದಾಗ ಈ ಪದ್ಧತಿ ಲಾಭದಾಯಕವಿರುತ್ತದೆ.

ಕೆಲವೊಂದು ತಳಿಗಳ ಹಣ್ಣು ಬೀಜರಹಿತವಾಗಿರುತ್ತವೆ. ಅಂತಹ ಬಗೆಗಳನ್ನು ನಿರ್ಲಿಂಗ ರೀತಿಯಲ್ಲಿ ಮಾತ್ರವೇ ವೃದ್ಧಿ ಮಾಡಬೇಕು. ಉದಾ : ಪೈನಾಪಲ್, ಬಾಳೆ, ಸೀಬೆ, ದ್ರಾಕ್ಷಿ, ಕಿತ್ತಲೆ, ನಿಂಬೆ ಇತ್ಯಾದಿ.

**ಬೀಜವನ್ನು ಸಿದ್ಧಗೊಳಿಸುವುದು :** ಸಾಮಾನ್ಯವಾಗಿ ಈ ಕೆಲಸವನ್ನು ಬೀಜೋತ್ಪಾದನಾ ಸಂಸ್ಥೆಗಳು ಅಥವಾ ನಿಗಮಗಳು ಮಾಡುತ್ತವೆ. ಅಂತಹ ಬೀಜವನ್ನು ಆದಷ್ಟು ಬೇಗ ಬಿತ್ತುವುದು ಒಳ್ಳೆಯದು. ಏಕೆಂದರೆ ದಿನ ಕಳೆದಂತೆ ಸಂಗ್ರಹಿಸಿಟ್ಟ ಬೀಜ ಮೊಳೆಯುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಒಂದು ವೇಳೆ ಬಿತ್ತನೆ ಕೆಲಸ ತಡವಾದಲ್ಲಿ, ಅಂತಹ ಬೀಜವನ್ನು ಗಾಳಿಯಾಡದ ಡಬ್ಬಿಗಳಲ್ಲಿ ತುಂಬಿ ಸಮಪ್ರಮಾಣದಲ್ಲಿ ಇದ್ದಿಲಿನ ಪುಡಿಯನ್ನು ಬೆರೆಸುವುದು ಲಾಭದಾಯಕ. ಈ ಬೀಜವನ್ನು ಕಡಿಮೆ ಉಷ್ಣತೆ ಇರುವ ತಂಪಾದ ಜಾಗದಲ್ಲಿಟ್ಟು ಭದ್ರಪಡಿಸಬೇಕು.

**ಜೀವಂತ ಅವಧಿ :** ಬೀಜಗಳ ಮೊಳೆಯುವ ಸಾಮರ್ಥ್ಯ ಅಥವಾ ಜೀವಂತಿಕೆಯಲ್ಲಿ ಆಯಾ ತಳಿ ಬಗೆ ಋತುಮಾನ ಜೋಪಾನ ಮಾಡಿಡುವ ವಿಧಾನ ಮುಂತಾಗಿ ವ್ಯತ್ಯಾಸಗೊಳ್ಳುತ್ತದೆ. ಬಿತ್ತಿದ ಕೂಡಲೇ ಅಧಿಕ ಸಂಖ್ಯೆಯಲ್ಲಿ ಮೊಳೆತರೆ ಅವುಗಳ ಜೀವಂತಿಕೆ ಅಥವಾ ಮೊಳೆಯುವ ಸಾಮರ್ಥ್ಯ ಹೆಚ್ಚಿನ ಪ್ರಮಾಣದಲ್ಲಿರುತ್ತದೆ ಎಂದರ್ಥ. ಕೆಲವೊಂದು ತರಕಾರಿ ಹಾಗೂ ಹಣ್ಣಿನ ಬೆಳೆಗಳ ಬೀಜದ ಜೀವಂತ ಅವಧಿ ಮತ್ತು ಮೊಳೆಯುವ ಸಾಮರ್ಥ್ಯವನ್ನು ಇಲ್ಲಿ ಕೊಟ್ಟಿದೆ.

| ಬೆಳೆ | ಜೀವಿತ ಅವಧಿ (ವರ್ಷಗಳಲ್ಲಿ) | ಶೇ. ಮೊಳೆಯುವ ಪ್ರಮಾಣ |
|---|---|---|
| ಬೀಟ್‌ರೂಟ್ | 4 | 80-85 |
| ಎಲೆಕೋಸು | 4 | 90-95 |
| ಕ್ಯಾರೆಟ್ | 3 | 70 |
| ಹೂಕೋಸು | 3-4 | 70-75 |
| ಸೆಲರಿ | 3 | 70-80 |
| ಸೌತೆ | 2-3 | 70 |
| ಲೆಟ್ಯೂಸ್ | 4-6 | 85 |
| ಈರುಳ್ಳಿ ಬೀಜ | 2 | 80 |
| ಬಟಾಣಿ | 3-4 | 95 |
| ಮೂಲಂಗಿ | 3-6 | 90 |
| ಟೊಮ್ಯಾಟೋ | 3-4 | 70-85 |
| ಟರ್ನಿಪ್ | 4 | 90-95 |
| ಬದನೆ | 3-4 | 75-80 |
| ಬೆಂಡೆ | 2 | 50-80 |
| ಕರಬೂಜ | 4-5 | 80-90 |
| ಸ್ಪಿನಾಚ್ | 4 | 65-70 |
| ಕುಂಬಳ | 4-5 | 80-90 |
| ಸೀಬೆ | 1 | - |
| ಲಿಚ್ಚಿ | 4-5ದಿನ | - |

ಈರುಳ್ಳಿ, ಮುಸುಕಿನ ಜೋಳ, ಪಾರ್ಸ್ನಿಪ್ ಮುಂತಾದ ಬೀಜವನ್ನು ಒಂದು ವರ್ಷದ ಒಳಗಾಗಿ ಬಿತ್ತುವುದು ಒಳ್ಳೆಯದು.

ಆಸ್ಪರಾಗಸ್, ಬೆಂಡೆ, ತಿಂಗಳಹುರುಳಿ, ಬಟಾಣಿ, ಕ್ಯಾರೆಟ್, ಮೆಣಸಿನಕಾಯಿ ಮುಂತಾದ ಬೀಜವನ್ನು 2-3 ವರ್ಷಗಳ ಒಳಗಾಗಿ ಬಿತ್ತಬೇಕು. ಸೆಲರಿ, ಬೀಟ್‌ರೂಟ್, ಎಲೆಕೋಸು, ಸೌತೆ, ಬದನೆ ಮುಂತಾಗಿ 4-5 ವರ್ಷಗಳೊಳಗಾಗಿ ಬಿತ್ತಬೇಕು. ಮಾವು, ಪಪ್ಪಾಯಿ, ನಿಂಬೆ ಮುಂತಾದವುಗಳ ಬೀಜವನ್ನು ಬಿಡಿಸಿದ ಒಂದು ವಾರದೊಳಗಾಗಿ ಬಿತ್ತಬೇಕು. ಬೀಜ ಜೀವಂತವಾಗಿದೆಯೇ ಎಂಬುದನ್ನು ತಿಳಿಯುವುದು ಬಹುಮುಖ್ಯ. ಅದನ್ನು ಹಲವಾರು ವಿಧದಲ್ಲಿ ತಿಳಿಯಬಹುದು. ಅವುಗಳಲ್ಲಿ ಬೀಜವನ್ನು ನಿರ್ದಿಷ್ಟ ಅವಧಿಗೆ ನೀರಿನಲ್ಲಿ ನೆನೆಸಿ ಬಿತ್ತುವುದು ಮತ್ತು ಟಿಟಿಸಿ (ಟ್ರೈಫಿನೈಟ್ ಟ್ರಜೋಲಿಯಂ ಟ್ರೈಕ್ಲೋರೈಡ್) ದ್ರಾವಣದಲ್ಲಿ ಅದ್ದಿ ನೆನೆಸಿಡುವುದು ಬಹು ಮುಖ್ಯವಾದ ವಿಧಾನ.

ಕೆಲವೊಂದು ಪ್ರಭೇದಗಳಲ್ಲಿ ಬಿಡಿಸಿ ತೆಗೆದ ಬೀಜವನ್ನು ಬಿತ್ತಿದರೆ ಕೂಡಲೇ ಮೊಳೆಯುವುದಿಲ್ಲ. ಅಂತಹ ಬೀಜವನ್ನು ಸ್ವಲ್ಪ ಸಮಯ ಒಣಗಿಸಿ, ಸಂಗ್ರಹಿಸಿಟ್ಟು ಅನಂತರ ಬಿತ್ತಿದಲ್ಲಿ ಚೆನ್ನಾಗಿ ಮೊಳೆಯುತ್ತವೆ. ಹಾಗಾಗಲು ಅವುಗಳಲ್ಲಿ ಇನ್ನೂ ಪೂರ್ಣಗೊಳ್ಳದ ಶಾರೀರಿಕ ಕ್ರಿಯೆಗಳು ಇರುವುದೇ ಪ್ರಮುಖ ಕಾರಣ. ಈ ರೀತಿಯ ಪರಿಸ್ಥಿತಿಯನ್ನು 'ಕೊಯ್ಲಿನ ನಂತರದ ಪಕ್ವಗೊಳ್ಳುವಿಕೆ' ಎನ್ನಲಾಗುತ್ತದೆ. ಇದಕ್ಕೆ ಒಳ್ಳೆ ಉದಾಹರಣೆಗಳೆಂದರೆ ಸೇಬು, ಪೇರು, ಪ್ಲಮ್, ಚೆರ್ರಿ ಮುಂತಾದವು. ಮಾವು, ಪಪ್ಪಾಯಿ, ಕಿತ್ತಲೆ, ನಿಂಬೆ ಮುಂತಾದವುಗಳಲ್ಲಿ ಈ ಸಮಸ್ಯೆ ಇರುವುದಿಲ್ಲ. ಹಾಗಾಗಿ ಬಿತ್ತನೆಗೆ ಮುಂಚೆ ಅವುಗಳಿಗೆ ಯಾವ ಉಪಚಾರದ ಅಗತ್ಯವಿರುವುದಿಲ್ಲ.

**ಗಿಡಗಳನ್ನು ಬೆಳೆಸಲು ಬಳಸುವ ವಿವಿಧ ಕುಂಡಧಾರಕಗಳು.**

ಕುಂಡಧಾರಕಗಳನ್ನು ಜೇಡಿ ಮಣ್ಣಿನಿಂದ ತಯಾರಿಸಿ ಸುಟ್ಟಿರುತ್ತಾರೆ. ಅವು ವಿವಿಧ ಗಾತ್ರ ಹಾಗೂ ಆಕಾರದ್ದಿರುತ್ತವೆ. ವಿವಿಧ ಬಗೆಯ ಹಾಗೂ ಗಾತ್ರದ ಗಿಡಗಳನ್ನು ಬೆಳೆಸುವಲ್ಲಿ ಅಗತ್ಯವಿರುವ ಮಣ್ಣು - ಗೊಬ್ಬರಗಳ ಮಿಶ್ರಣ ಹಾಗೂ ಬೇರು ಸಮೂಹಗಳಿಗೆ ಜಾಗ ಮಾಡಿ ಕೊಡಲು ಇವು ಉಪಯುಕ್ತ. ಅವುಗಳ ಪಾರ್ಶ್ವಗಳು ನೇರವಾಗಿದ್ದು, ಮೇಲ್ಭಾಗ ಅಗಲವಾಗಿದ್ದರೆ ತಳಭಾಗ ಸಂಕುಚಿತಗೊಂಡಿರುತ್ತದೆ. ಹೀಗಿರುವುದರಿಂದ ಗಿಡಗಳನ್ನು ಹೆಪ್ಪು ಸಮೇತ ಹೊರ ತೆಗೆಯಲು ಸುಲಭವಿರುತ್ತದೆ. ಸಾಮಾನ್ಯವಾಗಿ ಅವುಗಳ ಎತ್ತರವು ಮೇಲ್ಭಾಗದ ಅಡ್ಡಗಲದಷ್ಟು ಇರುವುದುಂಟು.

ವಿವಿಧ ಬಗೆಯ ವಿನ್ಯಾಸ, ಅಳತೆ, ಗಾತ್ರಗಳಿಂದ ಕೂಡಿದ ನೂರಾರು ಕುಂಡಗಳು ಮಾರುಕಟ್ಟೆಯಲ್ಲಿದೊರೆಯುತ್ತವೆ. ಮಣ್ಣಿನ ಕುಂಡಗಳು, ಪ್ಲಾಸ್ಟಿಕ್ ಕುಂಡಗಳು, ಆರ್‌ಸಿಸಿ ಕುಂಡಗಳು, ಲೋಹದ ಧಾರಕಗಳು, ಹಿತ್ತಾಳೆ, ಪಿಂಗಾಣಿ ಹಾಗೂ ಗಾಜಿನ ಧಾರಕಗಳು, ಪಾಲಿಥೀನ್ ಚೀಲಗಳು ಇತ್ಯಾದಿ ವಿವಿಧ ಬಗೆಯ ಕುಂಡಧಾರಕಗಳು ನಾನಾ ಬಗೆಯ ಗಿಡಗಳನ್ನು ನೆಡಲು ಯೋಗ್ಯ. ಕುಂಡಗಳನ್ನು ಖರೀದಿಸುವಾಗ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸಬೇಕಾಗುತ್ತದೆ.

ಕುಂಡಗಳು ಪ್ರಾಮಾಣೀಕರಣ ಗಾತ್ರದವುಗಳಾಗಿರಬೇಕು.

ಮಣ್ಣಿನ ಕುಂಡಗಳಾದಲ್ಲಿಚೆನ್ನಾಗಿ ಸುಟ್ಟಿರಬೇಕು.

ಗಾತ್ರ ಮತ್ತು ಬಳಕೆಗೆ ತಕ್ಕಂತೆ ಬಸಿ ರಂಧ್ರಗಳಿರಬೇಕು.

**ಬಿತ್ತನೆಗೆ ಮೊದಲು ಬೀಜೋಪಚಾರ :** ಕೆಲವೊಂದು ತೋಟಗಾರಿಕೆ ಬೆಳೆಗಳ ಬೀಜವು ಬಿತ್ತಿದ ಕೂಡಲೇ ಮೊಳೆಯುವುದಿಲ್ಲ. ಅದಕ್ಕೆ ಗಡುಸಾದ ಬೀಜ ಕವಚ, ರಾಸಾಯನಿಕ ತಡೆಯೊಡ್ಡುವ ಪದಾರ್ಥಗಳು, ಸುಪ್ತಾವಸ್ಥೆಯಲ್ಲಿನ ಭ್ರೂಣ ಮುಂತಾಗಿ ಕಾರಣವಿರುತ್ತದೆ. ಆದುದರಿಂದ ಬೀಜದ ಪೂರ್ವೋಪಚಾರ ಅಗತ್ಯವಿರುತ್ತದೆ. ಉದಾ. : ಯಾಂತ್ರಿಕವಾಗಿ ಬೀಜ ಕವಚವನ್ನು ಗೀರಿ / ಉಜ್ಜಿ ಉಪಚರಿಸುವುದು, ಆಮ್ಲಗಳಲ್ಲಿ ಬೀಜವನ್ನು ತೊಯ್ಯಿಸಿ ಬೀಜ ಕವಚ ತೆಳ್ಳಗಾಗುವಂತೆ ಮಾಡುವುದು, ತೇವದ ಮರಳಿನ ಪದರಗಳ ನಡುವೆ ಬೀಜವನ್ನು ತೆಳ್ಳಗೆ ಹರಡಿ ಉಪಚರಿಸುವುದು, ಬೀಜವನ್ನು ನೀರಿನಲ್ಲಿ ನೆನೆಸಿ ಉಪಚರಿಸುವುದು, ಯಾಂತ್ರಿಕ ಬೀಜೋಪಚಾರದಲ್ಲಿ ಬೀಜವನ್ನು ಉಜ್ಜುವಾಗ ಇಲ್ಲವೇ ಸಿಪ್ಪೆಯನ್ನು ಭಾಗಶಃ ಹೋಳು ಮಾಡುವಾಗ ಭ್ರೂಣಕ್ಕೆ ಸ್ವಲ್ಪವೂ ಹಾನಿಯಾಗಬಾರದು, ಆಮ್ಲಗಳಲ್ಲಿ ಅದ್ದಿ ಉಪಚರಿಸುವಾಗ ಸಣ್ಣ ಗಾತ್ರದ ಬೀಜವನ್ನು ಬಳಸಬೇಕು. ; ಕೇವಲ ಬೀಜ ಸಿಪ್ಪೆಮಾತ್ರ ತೆಳ್ಳಗಾಗಬೇಕು. ಮರಳಿನ ಪದರಗಳ ಮಧ್ಯೆ ಬೀಜವನ್ನು ಹರಡಿದಾಗ, ಅವು ಸದಾ ಒದ್ದೆಯಿಂದ ಕೂಡಿರುವಂತೆ ನೋಡಿ ಕೊಳ್ಳಬೇಕು, ಬಿಸಿ ನೀರಿನಲ್ಲಿ ಬೀಜವನ್ನು ಹರಡಿ, 10 ನಿಮಿಷ ಬಿಡಬೇಕು, ಉಪಚರಿಸಿದ ಬೀಜವನ್ನು ನೆರಳಿನಲ್ಲಿ ಹರಡಿ ತೇವ ಆರುವಂತೆ ಮಾಡಬೇಕು.

**ಸಸ್ಯಾಭಿವೃದ್ಧಿಗೆ ಕಟ್ಟಡ ನಿರ್ಮಾಣ :** ಸಸ್ಯಾಭಿವೃದ್ಧಿಗೆ ಇಂದು ಹಲವಾರು ಬಗೆಯ ಕಟ್ಟಡ ನಿರ್ಮಾಣಗಳನ್ನು ಮಾಡಿ ಸುರಕ್ಷಿತವಾಗಿ ಸಸ್ಯಗಳ ಸಂರಕ್ಷಣೆಯನ್ನು ಮಾಡುವುದುಂಟು. ಅಗತ್ಯವಿರುವ ಮೂರು ಮೂಲಭೂತ ಸಸ್ಯಾಭಿವೃದ್ಧಿ ರಚನಾ ಕಟ್ಟಡ (ನಿರ್ಮಾಣ)ಗಳೆಂದರೆ :

ಹಸುರು ಮನೆ / ಬಿಸಿ ಮಡಿಗಳು (ಪಾತಿಗಳು) - ಇವುಗಳಿಂದ ಉಷ್ಣತೆ ಹಾಗೂ ಬೆಳಕುಗಳು ನಿರ್ಬಂಧದಲ್ಲಿ (ಹತೋಟಿ)ರುತ್ತವೆ. ಹಾಗಾಗಿ ಅವುಗಳಲ್ಲಿ ಬೀಜ ಬಿತ್ತುವ ಹಾಗೂ ರೆಂಬೆ ತುಂಡುಗಳನ್ನು ಊರುವ ಕೆಲಸ ಸುಲಭವಿರುತ್ತದೆ.

ತೀರಾ ಎಳೆಯದಿರುವ ಅಥವಾ ಹೊಸದಾಗಿ ಬೇರು ಬಿಟ್ಟಿರುವ ಸಸಿಗಳನ್ನು ಗಡಸುಗೊಳ್ಳಲು ಇವುಗಳಿಗೆ ವರ್ಗಾಯಿಸಿ, ಅನಂತರ ಉದ್ದೇಶಿತ ಜಾಗಗಳಲ್ಲಿ ನೆಡಲು ಇವು ನೆರವಾಗುತ್ತವೆ. ಈ ಉದ್ದೇಶಕ್ಕೆ ಶೈತ್ಯ ಚೌಕಟ್ಟುಗಳು ಅಥವಾ ಲೇಥ್ ಮನೆಗಳು (Lath house) ಹೆಚ್ಚು ಉಪಯುಕ್ತ.

ಸಿಂಚನ (ತುಷಾರ) ವ್ಯವಸ್ಥೆ / ಕೊಠಡಿ ಎಲೆಗಳಿಂದ ಕೂಟದ ಕಡ್ಡಿ ತುಂಡುಗಳು ಬಾಡದಂತಿರಲು ಹಾಗೂ ಚೆನ್ನಾಗಿ ಬೇರು ಬಿಟ್ಟು ವೃದ್ಧಿ ಹೊಂದಲು ನೆರವಾಗುತ್ತವೆ.

ಉದ್ದೇಶಕ್ಕೆ ತಕ್ಕ ಕಟ್ಟಡಗಳನ್ನು ನಿರ್ಮಿಸಿ, ಋತುಮಾನ ಹಾಗೂ ಸಸ್ಯ ಪ್ರಭೇಧಗಳನ್ನು ಅವುಗಳಲ್ಲಿ ಊರಿ, ವೃದ್ಧಿಪಡಿಸಬೇಕು. ಹೀಗೆ ನಿರ್ಮಿಸಿದ ಕಟ್ಟಡಗಳು ಸುವ್ಯವಸ್ಥಿತ ರೀತಿಯಲ್ಲಿಇರಬೇಕು. ದುರಸ್ತಿ ಕಾರ್ಯಗಳಿದ್ದರೆ ಸರಿಪಡಿಸಲು ಅಗತ್ಯ ಸಲಕರಣೆಗಳನ್ನು ಹೊಂದಿಸಿಡಬೇಕು. ಕೆಲಸ ನಿರ್ವಹಿಸಬೇಕಾಗಿರುವ ಕಟ್ಟಡ ಭಾಗವನ್ನು ರೋಗಾಣುಗಳು, ಕೀಟಗಳು ಮುಂತಾದವುಗಳಿಂದ ರಕ್ಷಿಸಬೇಕು.

**ಸಸಿ ಮಡಿಗಳನ್ನು ಸಿದ್ಧಗೊಳಿಸುವುದು ಹಾಗೂ ಬೀಜ ಬಿತ್ತುವುದು:** ಬಹುತೇಕ ತರಕಾರಿ, ಅಲಂಕಾರಿಕ ಗಿಡಗಳು ಹಾಗೂ ಕೆಲವೊಂದು ಹಣ್ಣಿನ ಬೆಳೆಗಳನ್ನು ಬೀಜ ಊರಿ ಬೆಳೆಯಲಾಗುತ್ತದೆ. ಯಾವ ಯಾವ ತೋಟಗಾರಿಕೆ ಬೆಳೆಗಳು ಕಿತ್ತು ನಾಟಿ ಮಾಡುವ ಅಘಾತವನ್ನು ತಡೆದುಕೊಳ್ಳಬಲ್ಲವೋ ಅಂತಹವುಗಳ ಬೀಜವನ್ನು ಒಟ್ಟಿಗೆ ಬಿಟ್ಟು, ಸಸಿಗಳನ್ನು ಎಬ್ಬಿಸಲಾಗುತ್ತದೆ.

ವಯಸ್ಸು, ಟೊಂಗೆಯ ಬಲಿತಿರುವ ಮುಂತಾದ ಅಂಶಗಳ ಆಧಾರದ ಮೇಲೆ ಕಾಂಡದ ತುಂಡುಗಳನ್ನು ಕೆಲವು ಗುಂಪುಗಳಾಗಿ ವಿಂಗಡಿಸಬಹುದು.

ಮೂಲಿಕೆ ತುಂಡುಗಳು

ಮೇಡು ಕಾಂಡದ ತುಂಡುಗಳು

ಅರೆ ಬಲಿತ ಕಾಂಡದ ತುಂಡುಗಳು

ಬಲಿತ ಕಾಂಡದ ತುಂಡುಗಳು

ಈ ಎಲ್ಲಾ ಬಗೆಯ ಕಾಂಡದ ತುಂಡುಗಳನ್ನು ಸಿದ್ಧಗೊಳಿಸುವ ಸಂದರ್ಭದಲ್ಲಿ ಅಗತ್ಯ ಸಾಮಗ್ರಿ ಸಲಕರಣೆಗಳನ್ನು ಬಳಸಿ ಉತ್ತಮ

ತುಂಡುಗಳನ್ನು ಕ್ರಮಬದ್ಧವಾದ ರೀತಿಯಲ್ಲಿ ತಯಾರಿಸಿಕೊಂಡರೆ ಬಹುಬೇಗನೆ ಸಸಿಗಳಲ್ಲಿ ಚಿಗುರನ್ನು ಕಾಣಬಹುದು.

**ಲೇಯರರೇಚ :** ರೆಂಬೆಯು ತಾಯಿ ಗಿಡಕ್ಕೆ ಅಂಟಿಕೊಂಡಿರುವಾಗಲೇ ಅದರಲ್ಲಿ ಬೇರು ಮೂಡುವುದೇ ಲೇಯಾ ರೇಚ, ಬೇರು ಬಿಟ್ಟ ಅನಂತರ, ಆ ಕಾಂಡ ಭಾಗ ತಾಯಿಗಿಡದಿಂದ ಬೇರ್ಪಟ್ಟು ಸ್ವತಂತ್ರವಾಗಿ ಬೆಳೆಯಬಲ್ಲದು. ಅಂತಹ ಗಿಡಕ್ಕೆ ಲೇಯರ್ ಎನ್ನುತ್ತಾರೆ.

**ಲೇಯರಿಂಗ್‌ನಲ್ಲಿನ ಅನುಕೂಲಗಳು :** ಈ ಪದ್ಧತಿ ಸರಳವಿದ್ದು, ಹೊರಗಡೆ ಅನುಸರಿಸಿ, ವೈವಿಧ್ಯ ಮಾಡಬಹುದು, ನರ್ಸರಿಗಳಲ್ಲಿ ಸಹ ಕೈಗೊಳ್ಳಬಹುದು, ಹೆಚ್ಚಿನ ಯಶಸ್ಸು ಸಾಧ್ಯ, ಹೆಚ್ಚಿನ ಕೌಶಲ್ಯತೆ ಬೇಕಾಗಿಲ್ಲ, ಸ್ವಾಭಾವಿಕವಾಗಿ ಲೇಯರಿಂಗ್ ಕಂಡು ಬರುವ ಬ್ಲಾಕ್ ಲಾಸ್ಪ್, ಬೆರ್ರಿ, ಕರ್ರಂಟ್ ಮುಂತಾದವುಗಳಲ್ಲಿ ಇದು ಸುಲಭ ಹಾಗೂ ಸರಳವಿದ್ದು ಕಡಿಮೆ ಖರ್ಚಿನಲ್ಲಿ ಸಾಧ್ಯವಿರುತ್ತದೆ.

**ಲೇಯರಿಂಗ್‌ನಲ್ಲಿರುವ ಮಿತಿಗಳು :** ಈ ಕೆಲಸಕ್ಕೆ ಬಹಳಷ್ಟು ಕೂಲಿಯಾಳುಗಳ ಅಗತ್ಯವಿರುತ್ತದೆ. ಹೆಚ್ಚಿನ ಸಮಯ ಹಿಡಿಸುತ್ತದೆ. ಬೇಸಾಯ ಕೆಲಸಗಳಿಗೆ ಅಡ್ಡಿಯಾಗುತ್ತದೆ. ಇವುಗಳ ಬೇರು ಸಮೂಹ ಆಳವಾಗಿ ಇಳಿಯುವುದು. ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ವೃದ್ಧಿಪಡಿಸಲು ಕಷ್ಟ.

**ವಿವಿಧ ಪದ್ಧತಿಗಳು :** 1. ಸರಳ / ನಾಲಗೆ ಪದ್ಧತಿ, 2. ಸರ್ಪಾಕಾರದ ಪದ್ಧತಿ, 3. ಕುಪ್ಪೆ ಪದ್ಧತಿ, 4. ಗೂಡಿ ಪದ್ಧತಿ, 5. ಕಾಲುವೆಪದ್ಧತಿ, 6. ರೆಂಬೆಯ ತುದಿಯನ್ನು ಹಸಿಮಣ್ಣಿನಲ್ಲಿ ಊರುವುದು.

**ವಿಶಿಷ್ಟ ಸಸ್ಯಭಾಗಗಳಿಂದ ಸಸ್ಯಾಭಿವೃದ್ಧಿ :** ವಿಶಿಷ್ಟ ಸಸ್ಯಭಾಗಗಳೆಂದರೆ ಮಾರ್ಪಟ್ಟ ಕಾಂಡಗಳು. ಸಸ್ಯಾಭಿವೃದ್ಧಿಯಲ್ಲಿ ಇವುಗಳನ್ನು ಬಳಸಲಾಗುತ್ತದೆ. ಈ ಭಾಗಗಳಲ್ಲಿ ಆಹಾರಾಂಶಗಳು ಸಂಗ್ರಹಗೊಂಡು, ಅವುಗಳನ್ನು ವಿಭಜಿಸಿ ನೆಟ್ಟರೆ ಹೊಸದಾಗಿ ಗಿಡಗಳು ಬೆಳೆಯಬಲ್ಲವು. ಉದಾ : ಟ್ಯೂಬರ್, ಟ್ಯೂಬರಸ್ ರೂಟ್ಸ್, ಲಶುನ, ಮರಿಲಶುನಗಳು, ಗುಪ್ತ ಕಾಂಡಗಳು, ಗೆಡ್ಡೆಗಳು, ಮರಿಗೆಡ್ಡೆಗಳು, ಕಂದುಗಳು, ಹರಿ ಹಂಬುಗಳು, ಆಫ್ ಸೆಟ್ಸ್ ಮುಂತಾದವು. ಈ ವಿಶಿಷ್ಟ ಸಸ್ಯಭಾಗಗಳ ಮೇಲ್ಮೈ ಲಕ್ಷಣಗಳನ್ನು ಗಮನವಿಟ್ಟು ಅಧ್ಯಯನ ಮಾಡಬೇಕು. ಈರುಳ್ಳಿ, ಬೆಳ್ಳುಳ್ಳಿ, ಗ್ಲಾಡಿಯೋಲಸ್, ಆಲೂಗೆಡ್ಡೆ, ಡೇರೆ ಅಥವಾ ಸಿಹಿ ಗೆಣಸಿನ ಗೆಡ್ಡೆ, ಶುಂಠಿ, ಕ್ಯಾನ್ನ, ಸ್ಟ್ರಾಬೆರ್ರಿ, ಗರಿಕ್, ಸೇಕ್‌ಪ್ಲಾಂಟ್, ಬಾಳೆ, ಪೈನಾಪೆಲ್, ಬರ್ಬೆರ ಮುಂತಾದವುಗಳನ್ನು ಈ ವಿಧವಾಗಿ ಸಸ್ಯಾಭಿವೃದ್ಧಿ ಮಾಡಬಹುದು.

**ಕಸಿವಿಧಾನ :** ಆರಿಸಿಕೊಂಡ ಗಿಡದ ಗಾಯ ಮಾಡಿದ ಭಾಗವನ್ನು ಮತ್ತೊಂದು ಗಾಯ ಮಾಡಿದ ಭಾಗಕ್ಕೆಇಲ್ಲವೇ ಬೇರೊಂದು ಗಿಡದ ಗಾಯವಾಡಿದ ಭಾಗಕ್ಕೆಎದುರು ಬದರಾಗುವಂತೆ ಜೋಡಿಸಿ ಕಟ್ಟುವುದಕ್ಕೆ 'ಕಸಿವಿಧಾನ' ಎಂದು ಹೆಸರು. ಗಾಯ ಮಾಡಿದ ಎರಡೂ ಭಾಗಗಳು ಕೋಂಬಿಯಂ ಅಥವಾ ಕೊಡು ಪದರದ ನೆರವಿನಿಂದ ಬೆಸೆದು ಒಂದಾಗುತ್ತವೆ. ನಿರ್ಲಿಂಗ ರೀತಿಯಲ್ಲಿ ಸಸಿಗಳನ್ನು ವೃದ್ಧಿಪಡಿಸಲು ಅನುಸರಿಸುವ ವಿಧಾನಗಳಲ್ಲಿ ಇದು ಬಹು ಮುಖ್ಯವಾದುದು. ಈ ರೀತಿಯಲ್ಲಿ ಸಿದ್ಧಗೊಂಡ ಗಿಡಕ್ಕೆ ಕಲಮು ಎನ್ನುತ್ತಾರೆ.

**ಕಸಿ ವಿಧಾನದ ಇತಿಹಾಸ :** ಕ್ರಿಸ್ತ ಶಕ ಪ್ರಾರಂಭಗೊಳ್ಳುವ ಮೊದಲೇ ಅದು ಆಚರಣೆಯಲ್ಲಿತ್ತು. ಕ್ರಿ.ಶ. 1393ರಲ್ಲಿ ವಿರಚಿತ ಸಂಸ್ಕೃತ ಗ್ರಂಥವಾದ 'ವೃಕ್ಷ ಆಯುರ್ವೇದ'ದಲ್ಲಿ ಇದರ ಬಗ್ಗೆ ಸವಿಸ್ತಾರವಾಗಿ ವಿವರಿಸಿದೆ. ಕಸಿ ಮಾಡಿದ ಗಿಡಮರಗಳಲ್ಲಿನ ಹೂವು ಹಣ್ಣುಗಳು ಗಾತ್ರದಲ್ಲಿ ದೊಡ್ಡವಿದ್ದು ಹೆಚ್ಚು ಆಕರ್ಷಕವಿರುತ್ತವೆ. ಅಂತಹ ಹಣ್ಣು ತಿನ್ನಲು ಹೆಚ್ಚು ರುಚಿಯಾಗಿರುತ್ತವೆ.

ಮೊಘಲರ ಕಾಲದಲ್ಲಿ ಸಹ ಕಸಿ ಮಾಡಿದ ಮಾವು ಮುಂತಾಗಿ ಬಳಕೆಯಲ್ಲಿ ಬಂದವು. ಭಾರತಕ್ಕೆ ಕಾಲಿಟ್ಟ ಯೂರೋಪಿಯನ್ನರು ಅದರಲ್ಲೂ ಪೋರ್ಚುಗೀಸರು ಮತ್ತು ಬ್ರಿಟಿಷರು ಹಲವಾರು ಸಸ್ಯಾಭಿವೃದ್ಧಿ ಪದ್ಧತಿಗಳನ್ನು ಆಚರಣೆಗೆ ತಂದರು. ಇತ್ತೀಚಿನ ದಿನಗಳಲ್ಲಿ ಸಸ್ಯಾಭಿವೃದ್ಧಿ ಪದ್ಧತಿಗಳಲ್ಲಿ ಹಲವಾರು ಸುಧಾರಣೆಗಳಾಗಿವೆ.

**ಉಪಯೋಗಗಳು :** ವಿಶಿಷ್ಟ ಗುಣಗಳಿಂದ ಕೂಡಿದ ತಳಿಯನ್ನು ಬೇರೆ ವಿಧದಲ್ಲಿ ವೃದ್ಧಿಪಡಿಸಲು ಸಾಧ್ಯವಿಲ್ಲದೇ ಇದ್ದಾಗ ಕಸಿಪದ್ಧತಿಯನ್ನು ಅನುಸರಿಸಲಾಗುವುದು. ಉದಾಹರಣೆಗೆ, ಕೆಲವೊಂದು ಕಿತ್ತಲೆ ಮತ್ತು ಮಾವಿನ ತಳಿಗಳ ಬೀಜ ಸಸಿಗಳು ವಿಶಿಷ್ಟ ಗುಣಗಳನ್ನು ಹೊಂದಿದ್ದು ಹಾಗೆಯೇ ಬೆಳೆಯಲು ಬಿಟ್ಟರೆ ಅವು ಆ ಗುಣಗಳನ್ನು ಕಳೆದುಕೊಂಡು ತಾಯಿ ಪೀಳಿಗೆಯಂತಾಗುತ್ತವೆ. ಆದ್ದರಿಂದ ಅವುಗಳನ್ನು ಕಸಿ ಮಾಡಿಯೇ ರಕ್ಷಿಸಬೇಕಾಗುತ್ತದೆ.

ಗಡಸಿರುವ ಹಾಗೂ ರೋಗ ಮತ್ತು ಕೀಟ ನಿರೋಧಕ ಗುಣಗಳಿಂದ ಕೂಡಿದ ಬೇರು, ಸಸಿಗಳ ಬಳಕೆಯಿಂದ ಪ್ರತಿಕೂಲ ಹವಾಗುಣ ಮತ್ತು ಭೂಗುಣಗಳಲ್ಲಿ ಗಿಡಗಳು ಯಶಸ್ವಿಯಾಗಿ ಬೆಳೆದು ಒಳ್ಳೆ ಫಸಲು ಬಿಡುವಂತೆ ಮಾಡಬಹುದು.

ಉದಾಹರಣೆಗೆ ಮ್ಯಾಂಡರಿನ್ ಕಿತ್ತಲೆಯನ್ನು ಅದರದೇ ಬೇರು ಸಸಿಯ ಮೇಲೆ ಕಣ್ಣು ಹಾಕಿ ಕಸಿ ಮಾಡಿದಾಗ ಅದು ಡೈ ಬ್ಯಾಕ್ ರೋಗಕ್ಕೆ ಸುಲಭವಾಗಿ ತುತ್ತಾಗುತ್ತದೆ. ಆದರೆ ಗಜ ನಿಂಬೆಯನ್ನು ಬೇರು ಸಸಿಯಾಗಿ ಬಳಸಿದ್ದೇ ಆದರೆ ಈ ಸಮಸ್ಯೆ ಇರುವುದಿಲ್ಲ.

ಕಸಿ ಗಿಡಗಳು ಬೀಜ ಸಸಿಗಳಿಗಿಂತ ಬೇಗ ಹೂ ಬಿಟ್ಟು ಫಲ ಕಚ್ಚುತ್ತವೆ. ಉದಾಹರಣೆಗೆ : ಸಪೋಟ ಹಣ್ಣಿನ ಬೀಜ ಸಸಿಗಳಲ್ಲಿ ಚೊಚ್ಚಲು ಫಸಲು ಬಿಡಲು 8-10 ವರ್ಷಗಳ ಅವಧಿ ಬೇಕು. ಆದರೆ ಕಸಿಗಿಡಗಳು ನೆಟ್ಟ 2-3 ವರ್ಷಗಳಲ್ಲಿಯೇ ಫಸಲು ಕೊಡಬಲ್ಲವು.

ಒಂದೇ ಗಿಡದಲ್ಲಿ ಹತ್ತಾರು ಬಗೆಯ ಹೂವು ಅಥವಾ ಹಣ್ಣು ಬಿಡುವಂತೆ ಮಾಡಲು ಕಸಿ ವಿಧಾನ ಸುಲಭ ಮಾರ್ಗ. ಉದಾಹರಣೆಗೆ ಗಜನಿಂಬೆ ಬೇರು ಸಸಿಯ ಮೇಲೆ ಕಿತ್ತಲೆ, ಚಕ್ಕೋತ, ನಿಂಬೆ, ಮಾದಳ ಮುಂತಾಗಿ ಕಣ್ಣು ಕೂಡಿಸಿ ಕಸಿ ಮಾಡಿದರೆ ನೋಡಲು ಅತ್ಯಂತ ಆಕರ್ಷಕವಾಗಿರುತ್ತವೆ. ಅಂಥ ಮರಕ್ಕೆ 'ಒಂದು ಮರದ ತೋಟ' ಎನ್ನುತ್ತಾರೆ. ಇಂತಹ ಗಿಡಗಳು ಗುಲಾಬಿ ಹೂ ಬೆಳೆಯಲ್ಲಿ ಸಹ ಕಂಡು ಬರುತ್ತದೆ.

**ಕಸಿ ವಿಧಾನದಲ್ಲಿಯ ನಿಯಮಗಳು :** ಯಾವುದೇ ಎರಡು ಸಸ್ಯಗಳು ಹತ್ತಿರದ ಸಂಬಂಧಗಳಾಗಿದ್ದು ಒಂದೇ ತೆರನಾದ ಕೂಡು ಪದರ ಹೊಂದಿದ್ದರೆ ಅವುಗಳನ್ನು ಕಸಿ ಮಾಡಬಹುದು. ಅವು ಒಂದೇ ಕುಟುಂಬದ ಬೇರೆ ಬೇರೆ ವರ್ಗಗಳಿಗೆ ಅಥವಾ ಒಂದೇ ವರ್ಗದ ಬೇರೆ ಬೇರೆ

ಪ್ರಭೇಧಗಳಿಗೆ ಇಲ್ಲವೇ ಒಂದೇ ಪ್ರಭೇದದ ಬೇರೆ ಬೇರೆ ತಳಿಗಳಿಗೆ ಸೇರಿರುವುದು ಅಗತ್ಯ. ಇವುಗಳ ಪೈಕಿ ಒಂದೇ ಪ್ರಭೇದದ ಎರಡು ತಳಿಗಳ ನಡುವೆ ಇದ್ದಷ್ಟು ಹೊಂದಾಣಿಕೆ ಉಳಿದವುಗಳಲ್ಲಿ ಕಂಡು ಬರುವುದಿಲ್ಲ. ಕಸಿ ಮಾಡುವ ಕಾಲಕ್ಕೆ ಬೇರು ಸಸಿ ಮತ್ತು ಕಸಿ ಕೊಂಬೆಗಳೆರಡರಲ್ಲೂ ಜೀವರಸ ಚುರುಕಾಗಿ ಹರಿದಾಡುವುದು ಬಹುಮುಖ್ಯ. ಆಗ ಕೂಡು ಪದರ ಬಹುಬೇಗ ಬೆಸೆದು ಒಂದಾಗುತ್ತದೆ.

**ಸಸ್ಯಾಭಿವೃದ್ಧಿಯಲ್ಲಿ ಬಳಸುವ ಉಪಕರಣಗಳು :** ಸಸ್ಯಾಭಿವೃದ್ಧಿಯಲ್ಲಿ ಹಲವಾರು ಉಪಕರಣಗಳನ್ನು ಬಳಸುತ್ತಾರೆ. ಅವು ಮಣ್ಣನ್ನು ಅಗೆಯಲು, ಹೆಂಟೆಗಳನ್ನು ಒಡೆದು ಪುಡಿಮಾಡಲು, ಆಳವಾಗಿ ಗುಂಡಿಗಳನ್ನು ತೋಡಲು, ಬದುಗಳನ್ನು ಮಾಡಲು, ಕಾಲುವೆ ತೋಡಲು, ನೀರು ಹಾಯಿಸಲು, ಪಾತಿಗಳನ್ನು ತಯಾರಿಸಲು, ಬೀಜವನ್ನು ವಿಂಗಡಿಸಲು, ಮಣ್ಣು, ಮರಳು ಗೊಬ್ಬರಗಳನ್ನು ತುಂಬಿಸಲು, ಎಳೆ ಸಸಿಗಳನ್ನು ಒಟ್ಟು ಪಾತಿಗಳಿಂದ ಕಿತ್ತು ತೆಗೆಯಲು, ಕಸ ಕಡ್ಡಿಗಳನ್ನು ಹಾಗೂ ಗಿಡ ಗಂಟೆಗಳನ್ನು ಸಾಗಿಸಲು, ಕಳೆ ಕೀಳಲು, ಮಣ್ಣನ್ನು ಸಡಲಿಸಲು, ಕೆದಕಲು, ಆಕಾರ ರೂಪಿಸಲು ಸಸ್ಯ ಭಾಗಗಳನ್ನು ಸವರಿ ತೆಗೆಯಲು ಬೇಲಿ ಒಪ್ಪ ಮಾಡಲು, ನೀರನ್ನು ಸಂಗ್ರಹಿಸಿಡಲು ಮುಂತಾಗಿ ಪ್ರತಿನಿತ್ಯ ಬಳಸಲ್ಪಡುತ್ತವೆ.

ಅವುಗಳನ್ನು ಒಂದು ಪ್ರತ್ಯೇಕ ಕೊಠಡಿಯಲ್ಲಿ ಒಪ್ಪವಾಗಿ ಜೋಡಿಸಿಡಬೇಕು. ಕೆಲಸ ಮುಗಿದ ಅನಂತರ ಸ್ವಚ್ಛಗೊಳಿಸಿ ಇಡಬೇಕು. ಕೈ ಗರಗಸ, ಸವರುಗತ್ತರಿ, ಕಸಿಚಾಕು ಮುಂತಾಗಿ ಆಗಾಗ್ಗೆ ಸ್ವಚ್ಛಗೊಳಿಸಿ ಹರಿತ ಮಾಡಬೇಕಾಗುತ್ತದೆ. ತೋಟಗಾರಿಕೆಯಲ್ಲಿ ಬಳಸುವ ಕೆಲವೊಂದು ಉಪಕರಣಗಳ ಹೆಸರುಗಳು ಇಂತಿವೆ.

ಸನಿಕೆ, ಪಿಕಾಸಿ, ಗುದ್ದಲಿ, ಕೋಲು ಗುದ್ದಲಿ, ಮುಳ್ಳು ಹಲುಬೆ, ಕೈ ಹಲುಬೆ, ಮುಳ್ಳು ಸನಿಕೆ, ಡಚ್ ಹಲುಬೆ, ಗಾತ ಕೋಲು, ಕುಳಿಗೋಲು, ವರವಾರಿ, ಕುಡುಗೋಲು, ಕಸಿಚಾಕು, ಸವರುಗತ್ತರಿ, ಕೈಗರಗಸ, ಮಚ್ಚು, ಡ್ರೋವೆಲ್, ಜರಡಿ, ಉರುಳುಗುಂಡು, ಕೈಸಿಂಪರಣೆಯಂತ್ರ, ಕಲಾ ಧೂಳೀಯಂತ್ರ, ಪಿಚಕಾರಿ, ಕೈ ಬಂಟಿ, ಊಂಗಿ, ಕೊಡ, ನೀರು ಹನಿಸುವ ಡಬ್ಬಿ, ಅಳತೆ ಪಟ್ಟಿ, ಬಾಂಡ್ಲಿ, ತೆಂಗಿನ ಹುರಿ, ನೀರು ನಳಿಕೆ, ಸಂಖ್ಯಾಫಲಕ, ಗೂಟಗಳು, ಬಕೆಟ್, ಊರುಗೋಲು ಇತ್ಯಾದಿ.

*ವಿ.ಎಸ್.*

**ತೋಟದ ನೆಲ** 'ನೆಲ ನೋಡಿ ಬೆಳೆ ಮಾಡು' ಎಂಬುದು ಕೃಷಿಕರ ಅನುಭವದ ಮಾತು. ಯಾವುದೇ ಬೆಳೆಯನ್ನು ಮಾಡಬೇಕಾದರೂ ಮೊದಲು ಅದು ಯಾವ ನೆಲ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಒಂದೊಂದು ನೆಲದಲ್ಲಿ ಒಂದೊಂದು ಬೆಳೆ. ಕೆಲವು ಮಾತ್ರ ಎಲ್ಲ ನೆಲಗಳಿಗೂ ಹೊಂದಿಕೊಳ್ಳುವ ಬೆಳೆಗಳು.

ಕರ್ನಾಟಕದಲ್ಲಿ ತೋಟದ ಬೆಳೆ ಎಂದರೆ ಅದು ಮಿಶ್ರ ಬೆಳೆಯ ಪದ್ಧತಿಯೇ ಆಗಿರುತ್ತದೆ. ತೋಟಗಳಲ್ಲಿ ಅಂತರ ಬೆಳೆಗಳನ್ನು ಮಾಡುವುದು ರೂಢಿ. ಸಾಮಾನ್ಯವಾಗಿ ಬಯಲು ಸೀಮೆಯಲ್ಲಿ ಬೆಳೆಯುವ ಮಿಶ್ರ ಬೆಳೆ ಎಂದರೆ - ವೀಳ್ಯದೆಲೆ, ಅಡಕೆ, ತೆಂಗು, ಬಾಳೆ, ಏಲಕ್ಕಿ, ಲವಂಗ, ಹಲಸು ಮಾವು ಪಪ್ಪಾಯಿ, ಅಗಸೆ, ನುಗ್ಗೆ ಬೂರುಗ ಮೊದಲಾದವು.

ಮಲೆನಾಡಿನಲ್ಲಿ ಅಡಕೆ, ಬಾಳೆ, ವೀಳ್ಯದೆಲೆ, ಕಾಳುಮೆಣಸು, ಏಲಕ್ಕಿ, ಲವಂಗ, ದಾಲ್ಚಿನ್ನಿ, ಜಾಯಿಕಾಯಿ, ತೆಂಗು, ವೆನಿಲ್ಲಾ ಮತ್ತಿತರ ಸಾಂಬಾರ ಪದಾರ್ಥಗಳನ್ನು ಒಳಗೊಂಡ ಮುಖ್ಯ ಬೆಳೆ ತೋಟಗಳ ಜೊತೆಗೆ ಕಾಫಿ, ಕಾಳುಮೆಣಸು, ಕಿತ್ತಳೆ, ಕಾಡಿನಮರಗಳು, ಏಲಕ್ಕಿ, ಜಾಯಿಕಾಯಿ, ಲವಂಗ ಮುಂತಾದ ಮಿಶ್ರಬೇಸಾಯದ ತೋಟಗಳಿರುತ್ತವೆ.

ಇಂತಹ ಯಾವುದೇ ಮುಖ್ಯ ಬೆಳೆ ಅಥವಾ ಮಿಶ್ರ ಬೆಳೆ ಮಾಡಬೇಕಾದರೂ ಅಲ್ಲಿಯ ಮಣ್ಣಿನ ಗುಣವೇ ಮುಖ್ಯ. ಬಯಲು ಸೀಮೆ, ಕರಾವಳಿ, ಬೆಟ್ಟ, ದಿನ್ನೆ, ಕಣಿವೆ, ಮಲೆನಾಡು, ಕಾಡು, ಇಲ್ಲೆಲ್ಲಾ ತೋಟ ಮಾಡಬಹುದಾದರೂ ಅಲ್ಲಿ ತೇವಾಂಶ ಉಳಿಸಿಕೊಳ್ಳುವ, ಹೆಚ್ಚಾದ ನೀರು ಬಸಿದು ಹೋಗುವ ವಾತಾವರಣವಿರಬೇಕು. ಕೆಂಪು ಮಣ್ಣಿನ ನೆಲವಾದರೆ ತೋಟ ಮಾಡಲು ಹೆಚ್ಚು ಉಪಯುಕ್ತ. ಇತರ ಮಣ್ಣುಗಳಾದ ಕಾಗದಾಳಿ, ಕೆಂಪು ಗೋಡು, ಜಂಬಿಟ್ಟಿಗೆ ಮಣ್ಣು, ಮೆಕ್ಕಲು ಮಣ್ಣುಗಳಲ್ಲಿಯೂ ತೋಟ ಮಾಡಬಹುದು. ಸಡಿಲ ಮಣ್ಣಿನಲ್ಲಿ ಗಿಡಬೇರು ಬಿಟ್ಟು ಉಸಿರಾಡಲು ಅನುಕೂಲವಾಗಿ ಒಳ್ಳೆ ಫಲವನ್ನು ಕೊಡುತ್ತದೆ.

**ನೀರಿನ ವ್ಯವಸ್ಥೆ :** ತೋಟಕ್ಕೆ 'ಜಲವೇ ಜೀವ'. ನೀರಿನ ಆಸರೆಯನ್ನು ನೋಡಿಯೇ ತೋಟ ಮಾಡಬೇಕು. ಕೆರೆ, ಕಟ್ಟೆ, ಗೋಕಟ್ಟೆ, ಹಳ್ಳ, ಮದಕ, ಹೊಂಡ, ಕಾಲುವೆ, ನದಿ, ಕುಂಟೆ ಮೊದಲಾದ ಸದಾ ನೀರಿನ ಆಸರೆಯಿರುವ ತಗ್ಗು, ಜೌಗು ಪ್ರದೇಶವಾಗಿದ್ದು ಬಾವಿ ತೋಡಿದರೆ ನೀರು ಸಿಗುವಂತಿರಬೇಕು.

ಚಳಿಗಾಲದಲ್ಲಿ ಸಾಮಾನ್ಯ ತೇವಾಂಶವಿದ್ದು, ಬೇಸಗೆಯಲ್ಲಿ ತಂಪಾಗಿಯೂ ತೇವಾಂಶ ಭರಿತವಾಗಿಯೂ ಇರುವಂತೆ ನೋಡಿಕೊಳ್ಳಬೇಕು. ತೋಟ ಮಾಡುವ ಮೊದಲು ರೈತ ಎಲ್ಲಿ ತೋಟ ಮಾಡಿದರೆ ನೀರು ಸುಲಭವಾಗಿ ತೋಟಕ್ಕೆ ಒದಗಿಸಬಹುದೆಂಬುದನ್ನು ಖಚಿತ ಪಡಿಸಿಕೊಳ್ಳುತ್ತಾನೆ. ತೋಟದ ಮೇಲ್ಭಾಗದಲ್ಲಿ ನೀರು ನಿಲ್ಲುವಂತೆ ಕುಂಟೆ ಅಥವಾ ಹೊಂಡವನ್ನು ನಿರ್ಮಾಣ ಮಾಡುವುದು. ಅಥವಾ ನೀರಿನ ಪದರ ಮೇಲಿರುವ ಜಾಗದಲ್ಲಿ ತೋಟ ಕಟ್ಟುವುದು ರೈತ ಅನುಭವದಿಂದ ಕಂಡುಕೊಂಡಿದ್ದಾನೆ.

ತೋಟ ಕಟ್ಟುವಾಗ ದಿಕ್ಕು ನೋಡುವುದು ಸಂಪ್ರದಾಯವಾದರೂ ಅದರಲ್ಲಿ ಹಲವಾರು ವೈಜ್ಞಾನಿಕ ಅಂಶಗಳೂ ಸೇರಿಕೊಂಡಿರುತ್ತವೆ. ಚೆನ್ನಾಗಿ ಬಿಸಿಲು, ಬೆಳಕು, ಹದವಾದ ಗಾಳಿ ಸಿಗುವಂತಿರಬೇಕು. ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ತೋಟ ಕಟ್ಟಿದರೆ, ತೋಟದ ಬೆಳವಣಿಗೆಗೆ ಬೇಕಾದ ಎಲ್ಲಾ ರೀತಿಯ ಹವಾಗುಣ ಸಿಗುತ್ತದೆ. ಪಶ್ಚಿಮ ಮತ್ತು ಪೂರ್ವ ದಿಕ್ಕಿನಲ್ಲಿ ಮಳೆ, ಚಳಿ, ಗಾಳಿ ಹೆಚ್ಚಾಗಿ ಬರುವುದರಿಂದ ಈ ದಿಕ್ಕುಗಳು ತೋಟ ಮಾಡಲು ಉಪಯುಕ್ತವಲ್ಲ. ಮಾಡಿದರೂ ಆರೋಗ್ಯಕರವಾಗಿ ಬೆಳೆ ಬೆಳೆಯಲಾರವು.

ಉತ್ತರ ದಕ್ಷಿಣವಾಗಿ ತೋಟವಿದ್ದರೆ ಅತಿಹೆಚ್ಚಿನ ಬಿಸಿಲು ಬೆಳಕು ದೊರೆಯುತ್ತದೆ. ಆದರೆ ಅಗತ್ಯಕ್ಕಿಂತ ಬಿಸಿಲು ಹೆಚ್ಚಾದರೂ ತೋಟಕ್ಕೆ ಹಿತಕರವಲ್ಲ. ಆದ್ದರಿಂದ ಉತ್ತರ ದಕ್ಷಿಣಗಳಲ್ಲೂ ಸಾಲು ಮರಗಳನ್ನು ಅಥವಾ ಮಿಶ್ರ ಬೆಳೆಗಳನ್ನು ಬೆಳೆಯುವುದು ಉತ್ತಮ.

**ನೆಲದ ಸಿದ್ಧತೆ :** ತೋಟದ ಸ್ಥಳ ಆಯ್ಕೆಯಾದ ಮೇಲೆ ನೆಲದ ಆಕಾರ, ಉದ್ದ-ಅಗಲಗಳನ್ನು ಗುರುತಿಸಬೇಕು. ತೋಟದ ಜಾಗವನ್ನು

ಮೊದಲು ಸಮತಟ್ಟು ಮಾಡಿಕೊಳ್ಳಬೇಕು. ಹಳ್ಳ, ಕೊಳ್ಳ, ದಿನ್ನೆಗಳನ್ನು ಸಮ ಮಾಡಲು ಎತ್ತರದ ಭಾಗವನ್ನು ಹೊಡೆದು ಹಳ್ಳಕ್ಕೆ ಮಣ್ಣನ್ನು ತುಂಬ ಬೇಕು. ಇಲ್ಲವಾದರೆ ಬೇರೆ ಕಡೆಯಿಂದ ಮಣ್ಣನ್ನು ತಂದು ಹಳ್ಳವನ್ನು ತುಂಬಿ ಸಮತಟ್ಟಾಗಿ ಮಾಡಿಕೊಳ್ಳಬೇಕು. ಹೊರಗಡೆಯಿಂದ ತರುವ ಮಣ್ಣು ಮೂಲ ತೋಟದ ಮಣ್ಣಿಗಿಂತ ಫಲವತ್ತಾಗಿದ್ದರೆ ಒಳ್ಳೆಯದು. ಕಾಡಿನ ಗೋಡು ಮಣ್ಣು, ಜಂಬಿಟ್ಟಿಗೆ ಮಣ್ಣು, ಕಲ್ಲು ಮಿಶ್ರಿತ ಕೆಂಪು ಮಣ್ಣು ಮುಂತಾದ ಆಯಾ ಪರಿಸರದಲ್ಲೇ ಸಿಗುವ ಯಾವುದೇ ಮಣ್ಣಾನಾದರೂ ತಂದು ಸಮತಟ್ಟು ಮಾಡಿಕೊಳ್ಳಬೇಕು. ಕಪ್ಪು ಮಣ್ಣು ತೋಟಕ್ಕೆ ಉಚಿತವಲ್ಲ.

ಹೊಸದಾಗಿ ತೋಟ ಮಾಡಲು ಮಣ್ಣು ಎಷ್ಟೇ ಆಳವಾಗಿದ್ದರೂ ಏಕಾಏಕಿ ಆ ಮಣ್ಣು ಬೇಸಾಯಕ್ಕೆ ಯೋಗ್ಯವಾಗುವುದಿಲ್ಲ. ಗಿಡ ಗಂಟೆಗಳನ್ನು ತೆಗೆದು ಮಣ್ಣನ್ನು ಚೆನ್ನಾಗಿ ಉಳುಮೆ ಮಾಡಿ ಮಣ್ಣಿನ ಕಣಗಳನ್ನು ಸಡಿಲಗೊಳಿಸಬೇಕು. ಮಣ್ಣಿನಲ್ಲಿ ಎಲೆ, ಕಸ, ಕೃಷಿ ತ್ಯಾಜ್ಯ ವಸ್ತುಗಳು, ಕೊಳೆತ ಕೊಟ್ಟಿಗೆ ಗೊಬ್ಬರ ಮುಂತಾದವುಗಳನ್ನು ಬೆರೆಸಬೇಕು. ಮಳೆಗಾಲದಲ್ಲಿ ಸಾವಯವ ಪದಾರ್ಥಗಳನ್ನು ಮಣ್ಣಿನಲ್ಲಿ ಬೆರೆಸಿದರೆ ಅವು ಚೆನ್ನಾಗಿ ಕೊಳೆತು ಕೃಷಿಗೆ ಯೋಗ್ಯವಾದ ಮಣ್ಣನ್ನು ನೀಡುವ ಏಕಾಣು ಜೀವಿಗಳು ಬೆಳೆದು ಮಣ್ಣನ್ನು ಸಜೀವಗೊಳಿಸುತ್ತವೆ. ಹೀಗೆ ನೆಲವನ್ನು ಕೃಷಿ ಯೋಗ್ಯವಾಗುವಂತೆ ಮಾಡಲು ರೈತ ಸತತವಾಗಿ ಪರಿಶ್ರಮ ಹಾಕಬೇಕು. ಅನಂತರವಷ್ಟೇ ಅದು ತೋಟಕ್ಕೆ ಯೋಗ್ಯವಾದ ಫಲವತ್ತಾದ ಭೂಮಿಯಾಗುತ್ತದೆ.

**ದಾಯ ನೋಡುವುದು :** ತೋಟದ ಜಮೀನನ್ನು ಸಮತಟ್ಟು ಮಾಡಿದ ಮೇಲೆ ಅಲ್ಲಿ ದೊರೆಯುವ ನೀರನ್ನು ಆಧರಿಸಿ ಬೆಳೆಯನ್ನು ನಿರ್ಧರಿಸಬೇಕು. ಯಾವ ಭಾಗದಲ್ಲಿ ನೀರು ಸಿಗುತ್ತದೆಂದು ಖಚಿತ ಪಡಿಸಿಕೊಂಡು ಅಲ್ಲಿ ಬಾವಿಯನ್ನು ತೋಡುತ್ತಿದ್ದರು. ಜಮೀನಿನ ಅಳತೆಯನ್ನು ನೋಡಿಕೊಂಡು ಯಾವ ಭಾಗದಲ್ಲಿ ಯಾವ ಸಸಿಗಳನ್ನು ಕೂರಿಸಬೇಕೆಂದು ಮೊದಲೇ ಯೋಜನೆ ಹಾಕಿಕೊಳ್ಳಬೇಕು. ವೀಳ್ಯದೆಲೆ ತೋಟವಾದರೆ ಅಡಕೆ ಮರವನ್ನು ಬೆಳೆಸಬಹುದು. ಅಡಕೆ ಫಸಲನ್ನು ಕೊಡಲು ಹೆಚ್ಚು ವರ್ಷಗಳು ಬೇಕಾಗುವುದರಿಂದ, ಆ ತೋಟದಲ್ಲಿ ಒಂದು ವರ್ಷದಲ್ಲಿ ಫಲವನ್ನು ಕೊಡುವ ಉಪ ಬೆಳೆಗಳನ್ನು ಮಾಡಬಹುದು. ಜೊತೆಗೆ ಕಡಿಮೆ ಅವಧಿಯಲ್ಲಿ ಬೆಳೆಯಬಹುದಾದ ಅಂತರ ಬೆಳೆಗಳನ್ನು ಬೆಳೆಯುವ ಯೋಜನೆ ಹಾಕಿ ಕೊಳ್ಳಬೇಕು. ಮುಖ್ಯ ಬೆಳೆಗೆ ತೊಂದರೆಯಾಗದಂತೆ ಬೆಳೆಯಬಹುದಾದ ಬೆಳೆಗಳೆಂದರೆ ನುಗ್ಗೆ, ಅಗಸೆ, ಹೊಂಗೆ, ಬೂರುಗ ಮುಂತಾದವು ಸಣ್ಣ ಮರಗಳಾದರೆ ವೀಳ್ಯದೆಲೆ ಬಳ್ಳಿಗಳಿಗೆ ಆಸರೆಯಾಗುತ್ತದೆ. ತೋಟದ ಅಂಚಿನಲ್ಲಿ ಅಡಕೆ, ಬಾಳೆ, ಅಲ್ಲಲ್ಲಿ ಪಪ್ಪಾಯಿ, ಗಜನಿಂಬೆ ಮುಂತಾದವನ್ನು ಬೆಳೆಸಬಹುದು. ಉಳಿದ ಜಾಗದಲ್ಲಿ ಮಲ್ಲಿಗೆ, ಕನಕಾಂಬರ ಮುಂತಾದ ಹೂ ಗಿಡಗಳನ್ನು ಮುಖ್ಯ ಬೆಳೆ ಬರುವವರೆಗೆ ತಾತ್ಕಾಲಿಕವಾಗಿ ಬೆಳೆಯಬಹುದು.

ತನ್ನ ತೋಟಕ್ಕೆ ಒಟ್ಟು ಎಷ್ಟು ಸಸಿಬೇಕು, ಎಷ್ಟು ಗೊಬ್ಬರ ಬೇಕು ಎಂದು ನಿರ್ಧರಿಸಲು ಹಿಂದೆ ರೈತರು ಹೆಜ್ಜೆ ಅಳತೆಯ ಮೂಲಕ ನಿರ್ಧರಿಸುತ್ತಿದ್ದರು. ಒಂದು ಹೆಜ್ಜೆಯ ಹಿಮ್ಮಡಿಯಿಂದ ಇನ್ನೊಂದು ಹೆಜ್ಜೆಯ ಹಿಮ್ಮಡಿಗೆ ಸರಿಯಾಗಿ ಎರಡೂವರೆ ಅಡಿ ಬರುತ್ತದೆಂದು ಲೆಕ್ಕ ಹಾಕುತ್ತಿದ್ದರು. ಈ ಪ್ರಕಾರ ಒಂದು ಎಕರೆ ತೋಟಕ್ಕೆ ಎಷ್ಟು ಗಿಡ ನೆಡಬಹುದೆಂದು ಅಂದಾಜು ಮಾಡುತ್ತಿದ್ದರು. ಗಿಡ ನೆಡುವಾಗಲೂ ಪ್ರತಿ ಸಾಲಿನ ಗುಂಡಿಗಳನ್ನು ಲೆಕ್ಕ ಮಾಡಲು, ಗೇಣಿಗೆ ಕೊಡಲು 'ಹೆಜ್ಜೆಗುರುತು' ಹಾಕುತ್ತಿದ್ದರು.

**ಆರೈಕೆ :** ರೈತ ಬೆಳೆಯುವ ಬೆಳೆಗೂ ಅದಕ್ಕೆ ಕೊಡುವ ಪೋಷಕಾಂಶಗಳಿಗೂ ಸಂಬಂಧವಿದೆ. ಮಣ್ಣಿನ ಗುಣಕ್ಕೆ ತಕ್ಕಂತೆ ಬೇಕಾದ ಪದಾರ್ಥಗಳನ್ನು ಸೇರಿಸಿ ಮಣ್ಣನ್ನು ಸಿದ್ಧಗೊಳಿಸಿಕೊಳ್ಳಬೇಕು. ಮಲೆನಾಡಿನಲ್ಲಿ ಸಾಮಾನ್ಯವಾಗಿ ಮೊದಲು ಕಬ್ಬನ್ನು ಬೆಳೆಯುವುದು ರೂಢಿ. ಕಬ್ಬು ಬೆಳೆದ ಮೇಲೆ ಅದರ ಸೋಗೆ, ಕೂಳೆ ಎಲ್ಲವನ್ನೂ ಮಣ್ಣಿನಲ್ಲೇ ಬಿಟ್ಟು ಉತ್ತು ಹದ ಮಾಡಿಕೊಳ್ಳುತ್ತಾರೆ. ಕೆಲವರು ಸೋಗೆಗೆ ಬೆಂಕಿ ಹಚ್ಚಿ ಸುಟ್ಟು ಉಳುಮೆ ಮಾಡುತ್ತಾರೆ. ತೀರ ಜವಳೂ ಅಲ್ಲದೆ ಬರಡೂ ಅಲ್ಲದ ನೆಲ ಕಬ್ಬು ಬೆಳೆಯಲು ಯೋಗ್ಯವಾದುದು.

ಅಡಕೆ ತೋಟವನ್ನು ಯಾವಾಗಲೂ ಕಣಿವೆ ಪ್ರದೇಶಗಳಲ್ಲಿ ಮಾಡುವುದು ಉಚಿತ. ಬಯಲು ಪ್ರದೇಶ ಅಡಕೆಗೆ ಯೋಗ್ಯವಲ್ಲ. ತೆಂಗಿನ ತೋಟಕ್ಕೆ ಅರೆ ಬಯಲು, ಸೀಮೆ, ಕರಾವಳಿ ಪ್ರದೇಶಗಳು ಉಪಯುಕ್ತ. ಬಯಲು ಸೀಮೆ, ಅತಿ ಬಿಸಿಲಿನ ಪ್ರದೇಶಗಳಲ್ಲಿ ಅಡಕೆ, ತೆಂಗು, ಕಬ್ಬು ಯಾವುದೂ ಸರಿಯಾಗಿ ಬೆಳೆಯುವುದಿಲ್ಲ. ಇಂಥ ಕಡೆ ಪೇರಲ, ಮೂಸಂಬಿ, ದಾಳಿಂಬೆಯಂತಹ ಸಸಿಗಳನ್ನು ಬೆಳೆಸಬಹುದು. ಎರೆಮಣ್ಣು ಅಥವಾ ಗೋಡುಮಣ್ಣು ತೆಂಗು, ಅಡಕೆ ಬೆಳೆಗೆ ಯೋಗ್ಯವಾದುದು. ಈ ಮಣ್ಣಿನಲ್ಲಿ ಹಸುರೆಲೆ ಸೊಪ್ಪುಗಳನ್ನು ತೋಟ ಮಾಡುವ ಮೊದಲು ಒಂದು ಎಕರೆಗೆ 20 ಗಾಡಿಗಳಷ್ಟು ಸೇರಿಸಿದರೆ ಉತ್ತಮ ಇಳುವರಿಯನ್ನು ಪಡೆಯಬಹುದು. ಬಯಲು ಪ್ರದೇಶಗಳಲ್ಲಿ ತಂಗಡಿ ಸೊಪ್ಪು, ಕತ್ತಾಳೆ, ಹುಣಸೆ, ಪದುರಂಗಿ, ಲಟ್ಟಾಣಿ, ಹೊಂಗೆ ಸೊಪ್ಪು ಮುಂತಾದವುಗಳನ್ನು ಮಣ್ಣಿನಲ್ಲಿ ಬೆರೆಸಿ ಉಳುಮೆ ಮಾಡಬಹುದು. ಹರಳಿನ ಹಿಂಡಿ, ಶೇಂಗ, ಎಳ್ಳು, ತೆಂಗು, ಬೇವು, ಹೊಂಗೆ ಹಿಂಡಿಯನ್ನು ಕೊಡಬಹುದು. ಹುರುಳಿ, ಉದ್ದು, ಹೆಸರು, ಅಲಸಂದಿ ಮುಂತಾದವನ್ನು ಬಿತ್ತಿ ಸ್ವಲ್ಪ ಎತ್ತರಕ್ಕೆ ಬೆಳೆದ ಮೇಲೆ ಅಲ್ಲಿಯೇ ಬಿಟ್ಟು ಉತ್ತು ಬಿಟ್ಟರೆ ಭೂಮಿಗೆ ಪೋಷಕಾಂಶ ಸೇರಿ ಫಲವತ್ತಾದ ಮಣ್ಣು ಸಿದ್ಧವಾಗುತ್ತದೆ. ತೋಟವೂ ಉತ್ತಮವಾಗಿ ಬೆಳೆಯುತ್ತದೆ.

*ವಿ. ಆರ್. ಬಿ.*

**ತೋಟದ ಬೆಳೆಯ ಬೀಜೋಪಚಾರ** ತೋಟದ ಬೆಳೆಗಳನ್ನು ಹೆಚ್ಚು ಅಭಿವೃದ್ಧಿ ಪಡಿಸುವಲ್ಲಿ ಬೀಜ ಮತ್ತು ಬೀಜೋಪಚಾರ ಪ್ರಮುಖವಾದ ಹಂತ. ಬೆಳೆಯ ಅಂತಿಮ ಉತ್ಪತ್ತಿಯೇ ಬೀಜ. ಭ್ರೂಣ ಮತ್ತು ಆಹಾರಾಂಶಗಳಿಂದ ಕೂಡಿದ, ಬಿಗಿಯಾದ ಕವಚ ಪದರಗಳಿಂದ ಆವರಿಸಲ್ಪಟ್ಟ ಬಲಿತವಾದ ಅಂಡಾಣುವನ್ನು ಬೀಜವೆಂದು ಕರೆಯುತ್ತಾರೆ.

ಬೀಜ ಮಾಡುವ ಮೊದಲು ಅವು ಯಾವ ಉದ್ದೇಶಕ್ಕೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳುವುದು ಮುಖ್ಯ. ಬೀಜ ಮಾಡುವ ವಿಧಾನ ಆಯಾ ಬೆಳೆಯನ್ನನುಸರಿಸಿ ವ್ಯತ್ಯಾಸಗೊಳ್ಳುತ್ತದೆ. ರೋಗ ಮತ್ತು ಕೀಟ ರಹಿತವಿರುವ, ಅಧಿಕ ಫಸಲನ್ನು ಬಿಡುವ ಹಾಗೂ ಅಪೇಕ್ಷಿತ ಗುಣಗಳಿಂದ ಕೂಡಿದ ತಳಿಗಳ ಹಣ್ಣು ಕಿತ್ತು ಬೀಜ ಮಾಡಬೇಕು. ಅಂಥ ಹಣ್ಣು ಒಳ್ಳೆಯ ಗಾತ್ರ, ಆಕಾರ, ಬಣ್ಣ, ರುಚಿ, ಪರಿಮಳ, ಅಧಿಕ ಇಳುವರಿ ಮುಂತಾದ ಗುಣಗಳಿಂದ ಕೂಡಿದ್ದು ಇತರ ಗಿಡಮರಗಳಿಗಿಂತ ಉತ್ಕೃಷ್ಟವಾಗಿರಬೇಕು.

ಒಂದು ವೇಳೆ ಬೇರು ಸಸಿಗಳಾದರೆ ಅವು ಕಸಿಯಿಂದ ಕೂಡಿರಬೇಕು. ಅವು ಬಹು ಭ್ರೂಣಿಯ ಬಗೆಗಳಾಗಿದ್ದರೆ ಇನ್ನೂ ಉತ್ತಮ, ಸಂಕೀರ್ಣ ತಳಿಗಳಾಗಿದ್ದರೆ ಪ್ರತಿ ಬಾರಿ ಹೊಸ ಬೀಜವನ್ನು ಬಿತ್ತಬೇಕು.

ಬೆಂಡೆ, ಹೀರೆ, ಹುರುಳಿ, ಬದನೆ, ಪಡುವಲಕಾಯಿ, ಸೋರೆಕಾಯಿ, ಹಾಗಲಕಾಯಿ ಮುಂತಾದವು ಸಂಪೂರ್ಣ ಹಣ್ಣಾದ ಬಳಿಕ ಅವುಗಳನ್ನು ಬಿಡಿಸಿ ನೆರಳಿನಲ್ಲಿ ಹರಡಿ ಒಣಗಿಸಿ, ತುಳಿದು ಇಲ್ಲವೇ ಕೈಯಿಂದ ಬಿಡಿಸಿ ತೂರಿ, ಕೇರಿ ಸ್ವಚ್ಛಗೊಳಿಸಿ ಸಂಗ್ರಹಿಸಬೇಕು. ಜೊಳ್ಳು, ಜಜ್ಜಿ ಹಾಳಾದ ಬೀಜ, ಕಸ ಕಡ್ಡಿಯಿಂದ ಕೂಡಿದ ಬೀಜವನ್ನು ಬೇರ್ಪಡಿಸಬೇಕು. ಬಿತ್ತನೆಗೆ ಯೋಗ್ಯವಾದ ಬೀಜವನ್ನು ಜರಡಿ ಹಿಡಿದು ಬೂದಿಯನ್ನು ಬೆರೆಸಿ ಜೊತೆಗೆ ಬೇವಿನ ಎಲೆಯನ್ನು ಹಾಕಿ ಹುಳುಗಳು ಬರದ ಹಾಗೆ ಶೇಖರಿಸಿಡಬೇಕು. ಬೀಜಗಳನ್ನು ಉತ್ಪಾದಿಸುವ ನಿಗಮ ಅಥವಾ ಸಂಸ್ಥೆಗಳು ಮತ್ತು ಹಳ್ಳಿಗಳಲ್ಲಿ ರೈತರು ಈ ಸಂರಕ್ಷಣೆ ಕೆಲಸವನ್ನು ಮಾಡುತ್ತಾರೆ. ಹೀಗೆ ಶೇಖರಿಸಿಟ್ಟ ಬೀಜವನ್ನು ಆದಷ್ಟು ಬೇಗ ಬಿತ್ತುವುದು ಒಳ್ಳೆಯದು. ಏಕೆಂದರೆ ಅವು ದಿನ ಕಳೆದಂತೆ ಮೊಳೆಯುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಒಂದು ವೇಳೆ ಅವುಗಳನ್ನು ತಡವಾಗಿ ಬಿತ್ತುವುದಾದರೆ ಸಮ ಪ್ರಮಾಣದ ಇದ್ದಿಲು ಪುಡಿಯೊಂದಿಗೆ ಬೆರೆಸಿ ತಗಡಿನ ಅಥವಾ ಮರದ ಪೆಟ್ಟಿಗೆಗಳಲ್ಲಿ ತುಂಬಿಸಿ ಶುಷ್ಕ ಹಾಗೂ ತಂಪಾದ ಜಾಗದಲ್ಲಿ ಕಡಿಮೆ ಉಷ್ಣತೆ ಇರುವ ಸ್ಥಳದಲ್ಲಿ ಜೋಪಾನ ಮಾಡಬೇಕು.

ರಸಭರಿತ ಹಣ್ಣುಗಳಾದ ಕಿತ್ತಲೆ, ಮಾವು, ಪಪ್ಪಾಯಿ, ಸಪೋಟ, ಸೀಬೆ ಮುಂತಾದ ಹಣ್ಣುಗಳನ್ನು ಹೋಳುಗಳಾಗಿ ಮಾಡಿ ಬೀಜವನ್ನು ನೀರಿಗೆ ಸುರಿದು ಚೆನ್ನಾಗಿ ಹಿಚುಕಿದರೆ ಬೀಜಗಳ ಮೇಲಿನ ಸಿಪ್ಪೆ ಮುಂತಾದವುಗಳು ಬೇರ್ಪಡುತ್ತವೆ. ನೀರಿನ ತಳಭಾಗದಲ್ಲಿ ಕುಳಿತ ಬೀಜ ಗಟ್ಟಿ ಬೀಜ, ತೇಲುವ ಬೀಜ ಪೊಳ್ಳು, ಅವು ಪೂರ್ಣ ಬೆಳೆದಿರುವುದಿಲ್ಲ. ಅಂತಹ ಬೀಜವನ್ನು ಬಿತ್ತಬಾರದು.

ಮುಸುಕಿನ ಜೋಳ, ಈರುಳ್ಳಿ ಮುಂತಾದವುಗಳ ಬೀಜವನ್ನು ಒಂದು ವರ್ಷದೊಳಗೆ ಬಿತ್ತುವುದು ಒಳ್ಳೆಯದು. ಕ್ಯಾರೆಟ್, ಬಟಾಣಿ, ಮೆಣಸಿನಕಾಯಿ, ಬೆಂಡೆ, ಬದನೆ ಮುಂತಾದ ಬೀಜವನ್ನು 2-3 ವರ್ಷದೊಳಗೆ ಬಿತ್ತಬೇಕು. ಮಾವು, ಪಪ್ಪಾಯಿ, ನಿಂಬೆ ಮುಂತಾದವುಗಳ ಬೀಜವನ್ನು ಒಂದು ವಾರದೊಳಗೆ ಬಿತ್ತುವುದು ಒಳ್ಳೆಯದು.

ಬಿತ್ತನೆಗೆ ಮುಂಚೆ ಇವುಗಳ ಬೀಜೋಪಚಾರ ಮುಖ್ಯ. ಕೆಲವೊಂದು ಪ್ರಭೇದಗಳಲ್ಲಿ ಆಗ ತಾನೇ ಬಿಡಿಸಿದ ಬೀಜವನ್ನು ಬಿತ್ತಿದರೆ ಅವು ಕೂಡಲೇ ಮೊಳೆಯುವುದಿಲ್ಲ. ಅವುಗಳನ್ನು ಸ್ವಲ್ಪ ಕಾಲ ಒಣಗಿಸಿ ಸಂಗ್ರಹಿಸಿಟ್ಟು ಅನಂತರ ಬಿತ್ತನೆ ಮಾಡಿದರೆ ಅವು ಚೆನ್ನಾಗಿ ಮೊಳೆಯಬಲ್ಲವು. ಹೀಗಾಗಲು ಅವುಗಳಲ್ಲಿ ಇನ್ನೂ ಪೂರ್ಣಗೊಳ್ಳಬೇಕಾದ ಶಾರೀರಿಕ ಕ್ರಿಯೆಗಳು ಇರುವುದೇ ಪ್ರಮುಖ ಕಾರಣ. ಇಂಥ ಪರಿಸ್ಥಿತಿಯನ್ನು ಕೊಯ್ಲಿನ ಅನಂತರದಲ್ಲಿ ಪಕ್ವಗೊಳ್ಳುವಿಕೆ ಎನ್ನುತ್ತಾರೆ. ಸೇಬು, ಚೆರ್ರಿ ಇದಕ್ಕೆ ಉತ್ತಮ ಉದಾಹರಣೆ. ಪಪ್ಪಾಯಿ, ಮಾವು, ಕಿತ್ತಲೆ, ನಿಂಬೆ ಮುಂತಾದವುಗಳಲ್ಲಿ ಈ ಸಮಸ್ಯೆ ಇರುವುದಿಲ್ಲ. ಇವುಗಳಿಗೆ ಬಿತ್ತನೆಗೆ ಮುಂಚೆ ಯಾವುದೇ ತರಹದ ಉಪಚಾರದ ಅಗತ್ಯವಿರುವುದಿಲ್ಲ. ಬೀಜ ಪಕ್ವಗೊಳ್ಳುವಿಕೆಯ ಸಮಸ್ಯೆಯನ್ನು ದೂರಗೊಳಿಸಲು ಯುಕ್ತ ರೀತಿಯ ಕೆಲವೊಂದು ಉಪಚಾರ ಕ್ರಮಗಳನ್ನು ಕಾಣಬಹುದು.

ಬೀಜಗಳ ಮೇಲಿನ ಸಿಪ್ಪೆ ಮಂದವಾಗಿ ಗಡುಸಾಗಿದ್ದರೆ ತೇವಾಂಶ ಬೀಜದ ಒಳಭಾಗಕ್ಕೆ ತಾಗಲು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಬೀಜವನ್ನು ಉಜ್ಜಿ ತೆಳುಗೊಳಿಸಬಹುದು. ಬೀಜಗಳನ್ನು ಉಜ್ಜುವ ಸಂದರ್ಭದಲ್ಲಿ ಸಿಪ್ಪೆಯ ಗಾತ್ರವನ್ನು ನೋಡಿ ಉಜ್ಜಬೇಕು. ಒಂದು ವೇಳೆ ಬೀಜ ಬಲು ಸಣ್ಣವಿದ್ದು ಜಾರುವಂತಿದ್ದರೆ ಅದನ್ನು ಒಂದು ಚೀಲದ ಮೇಲೆ ಹಾಕಿ ಮರಳು ಕಾಗದದಿಂದ ತೀಡಿದಾಗ ಸಿಪ್ಪೆಯ ಮೇಲೆ ಕೆರದಂತಾಗುತ್ತದೆ. ಅನಂತರ ಅವುಗಳನ್ನು ಹೊರ ತೆಗೆದು ಬಿತ್ತನೆಗೆ ಬಳಸಬಹುದು. ಅಂತೆಯೇ ಬೀಜವನ್ನು ಪಕ್ವಗೊಳಿಸುವ ಮತ್ತೊಂದು ವಿಧಾನ ನೀರಲ್ಲಿ ನೆನೆಸುವುದು. ರಾತ್ರಿಯ ವೇಳೆ ನೀರಿನಲ್ಲಿ ನೆನೆಸಿ ಬೆಳಗ್ಗೆ ಬಿತ್ತುತ್ತಾರೆ. ಅಥವಾ ಬೀಜವನ್ನು ನಿಗದಿ ಪಡಿಸಿದ ಅವಧಿಯವರಿವಿಗೆ ನೆನೆಸಿಟ್ಟಲ್ಲಿಯೂ ಸಹ ಅವುಗಳ ಸಿಪ್ಪೆ ಮೃದುಗೊಂಡು ಬಿತ್ತನೆ ಮಾಡಬಹುದು. ಇದರಿಂದಾಗಿ ಬಿತ್ತನೆ ಮಾಡಿದ ಕೂಡಲೇ ಅವು ಮೊಳೆಯಬಲ್ಲವು. ಬಿತ್ತುವ ಹಿಂದಿನ ದಿನ ಒದ್ದೆ ಬಟ್ಟೆಯಲ್ಲಿ ಬೀಜವನ್ನು ಕಟ್ಟಿಟ್ಟುಕೊಂಡು ಬಿತ್ತಬಹುದು. ಬೆಂಡೆ, ಹಾಗಲ, ಗೋರಿಕಾಯಿ, ಮೆಂತ್ಯ, ನುಗ್ಗೆ.... ಇತ್ಯಾದಿ ಬೀಜಗಳನ್ನು ಕೆಲವು ಗಂಟೆಗಳ ಕಾಲ ನೆನೆಸಿಟ್ಟು ಅನಂತರ ಬಿತ್ತಬೇಕು. ಬಹಳಷ್ಟು ಗಡುಸು ಸಿಪ್ಪೆಯಿಂದ ಕೂಡಿದ ಸೀಬೆ ಮುಂತಾದವುಗಳನ್ನು ತಣ್ಣೀರಿನಲ್ಲಿ ಸುಮಾರು ಹತ್ತರಿಂದ ಹದಿನೈದು ದಿನಗಳ ಕಾಲ ನೆನೆಸಿಟ್ಟು ಅನಂತರ ಬಿತ್ತುವುದುಂಟು. ಕೆಲವೊಂದು ಬೀಜಗಳನ್ನು ಗಂಧಕಾಮ್ಲ, ನೈಟ್ರಿಕ್ ಆಮ್ಲ, ಫಾರ್ಮಿಕ್ ಆಮ್ಲ ಮುಂತಾದ ರಸಾಯನಿಕಗಳಲ್ಲಿ 5 ರಿಂದ 10 ನಿಮಿಷಗಳ ಕಾಲ ಅದ್ದಿ ತೆಗೆದು ಅನಂತರ ನೀರಿನಲ್ಲಿ ತೊಳೆದು ಬಿತ್ತಬಹುದು. ರಸಾಯನಿಕಗಳಲ್ಲಿ ಅದ್ದುವುದರಿಂದ ಬೀಜಗಳಲ್ಲಿನ ಜೀರ್ಣಕೋಶದಲ್ಲಿ ವಿವಿಧ ರಸಾಮ್ಲ ಕ್ರಿಯೆಗಳು ಉಂಟಾಗಿ, ಬಹುಬೇಗ ಮೊಳೆಯುತ್ತವೆ. ಸೇಬು, ಚೆರ್ರಿ ಮುಂತಾದ ಹಣ್ಣುಗಳಲ್ಲಿ ಬೀಜವನ್ನು ಬಿಡಿಸಿ ತೆಗೆದ ಕೂಡಲೇ ಅವು ಮೊಳೆಯುವುದಿಲ್ಲ. ಏಕೆಂದರೆ ಅವು ಹಸಿ ಬೀಜಗಳಾಗಿದ್ದು ಮೊಳಕೆಯೊಡೆಯಲು ಬೇಕಾಗಿರುವ ಕೆಲವೊಂದು ಶಾರೀರಕ ಕ್ರಿಯೆಗಳು ಇನ್ನೂ ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ ನಿರ್ದಿಷ್ಟ ಸಮಯದವರೆಗೂ ಇಟ್ಟು ಅನಂತರ ಬಿತ್ತಬೇಕು.

ಉದಾ : ಬೀಜವನ್ನು ನೀರಿನಲ್ಲಿ ಚೆನ್ನಾಗಿ ನೆನೆಸಿ ತೇವದಿಂದ ಕೂಡಿದ ಮರಳಿನ ಪದರಗಳ ನಡುವೆ ತೆಳ್ಳಗೆ ಹರಡಬೇಕು. ಈ ಸಮಯದಲ್ಲಿ ಉಷ್ಣತೆ ಕಡಿಮೆ ಇರುವುದು ಅಗತ್ಯ. ಆಮೇಲೆ ಬೀಜ ಹೊರ ತೆಗೆದು ಬಿತ್ತನೆ ಮಾಡಬಹುದು.

***ಕೆ.ಪಿ.ಎಂ.***

**ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ** ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿರುವ ಒಂದು ಜಿಲ್ಲೆ. ಪಶ್ಚಿಮ ಘಟ್ಟಗಳ ಸಾಲು ಮೂಡಣ ಗಡಿಯಾಗಿ, ಅರಬ್ಬೀ ಸಮುದ್ರ ತೀರ ಪಡುವಣ ಗಡಿಯಾಗಿ ಹೊಂದಿರುವ ಈ ಜಿಲ್ಲೆ ಭಾರತದ ಪಶ್ಚಿಮ ಕರಾವಳಿಯಲ್ಲಿ ಮುಂಬಯಿ ಮತ್ತು ಕನ್ಯಾಕುಮಾರಿ ಭೂಶಿರದ ಮಧ್ಯದಲ್ಲಿದೆ. ಉತ್ತರ ಅಕ್ಷಾಂಶ $12^0 27'$-$13^0 10'$ ಮತ್ತು ಪೂರ್ವ ರೇಖಾಂಶ $74^0 50'$-$75^0 45'$ ನಡುವೆ ಇರುವ ದಕ್ಷಿಣ ಕನ್ನಡ ಪ್ರಕೃತಿ ಸೌಂದರ್ಯದ ಸಿರಿ ನಾಡು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು (ಪಶ್ಚಿಮ ಘಟ್ಟದಿಂದ ಕರಾವಳಿವರೆಗೆ) 'ಪರಶುರಾಮ ಸೃಷ್ಟಿ'ಯ ಭಾಗವಾಗಿದೆ ಎಂಬ ನಂಬಿಕೆಯಿದೆ. ಕ್ಷತ್ರಿಯರನ್ನು ಭೂಲೋಕದಿಂದ ನಿರ್ಮೂಲನ ಮಾಡುವ ಪ್ರತಿಜ್ಞೆ ಕೈಗೊಂಡ ಪರಶುರಾಮ ಭೂಮಿಯನ್ನು 21 ಬಾರಿ ಜೈತ್ರ ಯಾತ್ರೆ

ಮಾಡಿ ಕ್ಷತ್ರಿಯ ವಂಶವನ್ನು ನಿರ್ಮೂಲನ ಮಾಡಿದ ಅನಂತರ ತಾನು ನೆಲೆಸಲು ಕ್ಷತ್ರಿಯರು ಕಾಲಿಡದ ಜಾಗವೊಂದನ್ನು ಸೃಷ್ಟಿಸಬಯಸುತ್ತಾನೆ. ಅದರಂತೆ ಪಶ್ಚಿಮ ಘಟ್ಟದ ಶಿಖರವೊಂದರ ಮೇಲೆ ನಿಂತು ರಕ್ತದಿಂದ ಮಲಿನವಾದ ತನ್ನ ಪರಶು (ಕೊಡಲಿ)ವನ್ನು ಸಮುದ್ರದೆಡೆಗೆ ಎಸೆಯಲು ಸಮುದ್ರರಾಜನು ಕೊಡಲಿಬಿದ್ದಲ್ಲಿಯವರೆಗೆ ಹಿಂದೆ ಸರಿದು ಸೃಷ್ಟಿಯಾದ ಭೂಭಾಗವೇ ಈ ಪರಶುರಾಮ ಸೃಷ್ಟಿ. ಬಹುಶಃ ಪಶ್ಚಿಮ ಘಟ್ಟದ ಕೆಳಗಿನ ಭೂಭಾಗದಲ್ಲಿ ಈ ಜಿಲ್ಲೆ ಇದ್ದು, ಸಮುದ್ರ ತೀರವನ್ನು ಹೊಂದಿರುವುದರಿಂದ ಈ ನಂಬಿಕೆಗೆ ಪುಷ್ಟಿ ಬಂದಿರಬಹುದು.

1860ರ ಹಿಂದೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಟ್ಟಾಗಿ 'ಕೆನರಾ' ಎಂದು ಕರೆಯಲಾಗುತ್ತಿತ್ತು. 1860ರಲ್ಲಿ ಬ್ರಿಟಿಷರು ಈ ಭಾಗವನ್ನು ಉತ್ತರ ಕೆನರಾ ಮತ್ತು ದಕ್ಷಿಣ ಕೆನರಾ ಎಂದು ವಿಭಾಗಿಸಿದರು. 1862ರಲ್ಲಿ ಉತ್ತರ ಕೆನರಾವನ್ನು ಬಾಂಬೆ ಪ್ರೆಸಿಡೆನ್ಸಿ ಹಾಗೂ ದಕ್ಷಿಣ ಕೆನರಾವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಲಾಯಿತು. ಈ ದಕ್ಷಿಣ ಕೆನರಾ ಭಾಗವೇ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ.


ಸ್ವಾತಂತ್ರ್ಯಾನಂತರ ಈ ಜಿಲ್ಲೆ ಈಗಿನ ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡಿತ್ತು. 1956 ರಾಜ್ಯಗಳ ಪುನರ್ ವಿಂಗಡಣೆ ಸಂದರ್ಭದಲ್ಲಿ ಅವಿಭಜಿತ ದಕ್ಷಿಣ ಕನ್ನಡವನ್ನು ಮೈಸೂರು ರಾಜ್ಯಕ್ಕೆ (ಕರ್ನಾಟಕ) ಹಾಗೂ ಕಾಸರಗೋಡು ಜಿಲ್ಲೆಯನ್ನು ಕೇರಳ ರಾಜ್ಯಕ್ಕೆ ಸೇರಿಸಲಾಯಿತು.

ಕರ್ನಾಟಕ ಸರ್ಕಾರ ಆಡಳಿತದ ದೃಷ್ಟಿಯಿಂದ ಆಗಸ್ಟ್ 1997ರಲ್ಲಿ ಅವಿಭಜಿತ ದಕ್ಷಿಣ ಕನ್ನಡವನ್ನು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಾಗಿ ವಿಂಗಡಿಸಿತು. ಅದುವರೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಉಡುಪಿ, ಕುಂದಾಪುರ ಮತ್ತುಕಾರ್ಕಳ ತಾಲ್ಲೂಕುಗಳು 24.08.1997ರಂದು 'ಉಡುಪಿ ಜಿಲ್ಲೆ'ಯಾಗಿ ಘೋಷಿಸಲ್ಪಟ್ಟವು.

**ಮೇಲ್ಮೈ ಲಕ್ಷಣ :** ಹಚ್ಚ ಹಸುರಿನಿಂದ ಕೂಡಿದ ಏರುತಗ್ಗುಗಳೇ ಜಿಲ್ಲೆಯಲ್ಲಿ ಎದ್ದು ಕಾಣುವ ಲಕ್ಷಣ. ಕಡಲ ತೀರದಿಂದ ಪಶ್ಚಿಮ ಘಟ್ಟಗಳ ಗಡಿಯವರೆಗೆ ದಕ್ಷಿಣೋತ್ತರವಾಗಿ ಹಬ್ಬಿರುವ ಈ ಜಿಲ್ಲೆಯನ್ನು ಪ್ರಾಕೃತಿಕವಾಗಿ ಕರಾವಳಿ ಬಯಲು, ಮುರಕಲ್ಲಿನಿಂದ ಕೂಡಿದ ಏರುನೆಲ ಮತ್ತು ಒಳನಾಡು ಬಯಲು, ಮಲೆನಾಡು ಹಾಗೂ ಪಶ್ಚಿಮ ಘಟ್ಟಗಳೆಂದು ವಿಭಾಗಿಸಬಹುದು. ಸಮುದ್ರದ ಅಂಚಿನಲ್ಲಿ ಸುಮಾರು 75-100 ಮೀ ವಿಸ್ತಾರವಾಗಿ ಹರಡಿರುವ ಮರಳು ರಾಶಿಯ ಭಾಗ ಮತ್ತು ಒಳ ಅಂಚಿನಲ್ಲಿ 1-3 ಕಿ.ಮೀ ಅಗಲದ ಕರಾವಳಿಯ ತಗ್ಗು ಬಯಲಿದೆ. ಮುರಕಲ್ಲಿನಿಂದ ಕೂಡಿದ ವಿಶಾಲವಾದ ಗುಡ್ಡಗಳನ್ನು ಸ್ಥಳೀಯವಾಗಿ 'ಪದವು'ಗಳೆಂದು ಕರೆಯುವರು. ಗುಡ್ಡಗಳ ನಡುನಡುವೆ ಕೃಷಿಯೋಗ್ಯವಾದ ಬಯಲಿದೆ. ಮಲೆನಾಡು ಘಟ್ಟಗಳಿಗೂ ಏರುನೆಲಕ್ಕೂ ನಡುವಿನ ವಿಭಾಗವಾಗಿದ್ದು, ಕಾಡುಗಳಿಂದ ಕೂಡಿದೆ. ಇಲ್ಲಿ ಅನೇಕ ನದಿಗಳು ಹುಟ್ಟಿ ಪಶ್ಚಿಮಮುಖವಾಗಿ ಹರಿಯುತ್ತವೆ. ಪಶ್ಚಿಮ ಘಟ್ಟಗಳು ದಕ್ಷಿಣೋತ್ತರವಾಗಿ ಸಾಲುಸಾಲಾಗಿ ಹಬ್ಬಿದ್ದು, ಕೆಲವು ಕಡೆ ಕುಗ್ಗಿದಂತೆಯೂ ಕೆಲವು ಕಡೆ ನೇರವಾಗಿ ನಿಂತಂತೆಯೂ ಇವೆ.

ಎತ್ತರವಲ್ಲದ ಗುಡ್ಡಗಳು, ಕೃಷಿಯೋಗ್ಯವಾದ ಬಯಲುಗಳು, ಕೋಟೆ ಕಟ್ಟಿದಂತಿರುವ ಪಶ್ಚಿಮ ಘಟ್ಟ ಶ್ರೇಣಿಗಳು, ಅವುಗಳ ಮೇಲೆ ಗೆರೆ ಎಳೆದಂತೆ ಕಾಣುವ ರಸ್ತೆಗಳು, ವೈಭವೋಪೇತ ಅರಣ್ಯರಾಶಿ, ಅದ್ಭುತವಾದ ಗಿರಿ ಕಂದರಗಳು, ಪರ್ವತಗಳ ಇಳಿಜಾರಿನಿಂದ ದೌಡಾಯಿಸುವ ಅಸಂಖ್ಯಾತ ತೊರೆಗಳು, ರೋಮಾಂಚನಗೊಳಿಸುವ ಶಿಖರ ಸಮೂಹ, ಮನೋಲ್ಲಾಸಕ್ಕೂ ಸಾಹಸ ಪ್ರವೃತ್ತಿಗೂ ಪ್ರಚೋದಕವಾದ ಸಮುದ್ರತೀರ ಇಲ್ಲಿಯ ಪ್ರಮುಖ ಪ್ರಾಕೃತಿಕ ಲಕ್ಷಣಗಳಾಗಿವೆ.

**ಮೇರೆಗಳು :** ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ ಪಶ್ಚಿಮ ಭಾಗದಲ್ಲಿದ್ದು; ಪಶ್ಚಿಮದಲ್ಲಿ ಅರಬ್ಬೀಸಮುದ್ರ, ಪೂರ್ವದಲ್ಲಿ ಹಾಸನ ಜಿಲ್ಲೆ, ಉತ್ತರದಲ್ಲಿ ಉಡುಪಿ ಜಿಲ್ಲೆ, ಈಶಾನ್ಯದಲ್ಲಿ ಚಿಕ್ಕಮಗಳೂರು



ಜಿಲ್ಲೆ, ಆಗ್ನೇಯದಲ್ಲಿ ಕೊಡಗು ಜಿಲ್ಲೆ ಮತ್ತು ದಕ್ಷಿಣದಲ್ಲಿ ಕೇರಳ ರಾಜ್ಯದಿಂದ ಆವರಿಸಿದೆ.

**ವಿಸ್ತೀರ್ಣ :** ಜಿಲ್ಲೆಯ ಒಟ್ಟು ವಿಸ್ತೀರ್ಣ 4866 ಚ.ಕಿ.ಮೀ ಇದ್ದು, ರಾಜ್ಯದ ಒಟ್ಟು ವಿಸ್ತೀರ್ಣದ ಶೇ. 2.53ರಷ್ಟಿದೆ. ಪ್ರಸ್ತುತ ಜಿಲ್ಲೆಯಲ್ಲಿ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಪುತ್ತೂರು ಮತ್ತು ಸುಳ್ಯ ಎಂದು 5 ತಾಲ್ಲೂಕುಗಳಿವೆ. 17 ಹೋಬಳಿಗಳಿದ್ದು 354 ಜನವಸತಿ ಇರುವ ಗ್ರಾಮಗಳಲ್ಲಿ 203 ಗ್ರಾಮಪಂಚಾಯತ್‌ಗಳು ಹಾಗೂ 20 ಪಟ್ಟಣ/ನಗರಗಳಿದ್ದು ಒಂದು ಮಹಾನಗರ ಪಾಲಿಕೆ, 4 ಪುರಸಭೆ, 3 ನಗರ ಪಂಚಾಯತ್‌ಗಳಿವೆ. ಕರಾವಳಿ ನಗರವಾದ ಮಂಗಳೂರು ಜಿಲ್ಲಾ ಕೇಂದ್ರವಾಗಿದೆ. ಕರ್ನಾಟಕ ಸರ್ಕಾರ ರೂಪಿಸಿರುವ 4ಆಡಳಿತ ವಿಭಾಗಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೈಸೂರು ವಿಭಾಗಕ್ಕೆ ಸೇರುತ್ತದೆ.

**ಜನಸಂಖ್ಯೆ :** ಜಿಲ್ಲೆಯ ಒಟ್ಟು ಜನಸಂಖ್ಯೆ 20,83,625 ಆಗಿದ್ದು ಇದರಲ್ಲಿ ಪುರುಷರು 10,32,577 ಹಾಗೂ ಮಹಿಳೆಯರು 10,51,048 (2011). ರಾಜ್ಯದ ಒಟ್ಟು ಜನಸಂಖ್ಯೆಯ ಶೇ 3.41ರಷ್ಟನ್ನು ಈ ಜಿಲ್ಲೆ ಹೊಂದಿದೆ.

**ಭೂ ಸಂಪತ್ತು :** ಈ ಜಿಲ್ಲೆಯ ಭೂಶಿಲಾ ರಚನೆಗಳನ್ನು ಧಾರವಾಡ ಶಿಲಾವರ್ಗ, ಮಧ್ಯಂತರ ಸೇರ್ಪಡೆಗಳು ಮತ್ತು ಈಚಿನ ರಚನೆಗಳು ಎಂದು ವಿಂಗಡಿಸಬಹುದು. ಮೊದಲಿನೆರಡು ಪ್ರಾಚೀನವಾದ ಆರ್ಕೇಯಿಯನ್ ಯುಗಕ್ಕೆ ಸೇರಿದವು. ಧಾರವಾಡ ಶಿಲಾವರ್ಗದಲ್ಲಿ ಅನೇಕ ಸ್ವರೂಪಾಂತರಿಕ ಪ್ರಾಚೀನ ಶಿಲೆಗಳಿವೆ. ಮುಖ್ಯವಾಗಿ ಪದರಯುತ ಕಬ್ಬಿಣ ಮಿಶ್ರಿತ ಕ್ವಾರ್ಟ್‌ಸೈಟ್ ಮತ್ತು ಸ್ವಲ್ಪಮಟ್ಟಿಗೆ ಟಾಲ್ಕ್ ಮತ್ತು ಹಾರ್ನ್‌ಬ್ಲೆಂಡ್ ಶಿಸ್ಟ್ ಕಂಡುಬರುತ್ತವೆ. ಸ್ಟೆರಾಕ್ಸಿನೈಟ್‌ಗಳು ಜಿಲ್ಲೆಯ ಪೂರ್ವಭಾಗದಲ್ಲಿ 5 ಶ್ರೇಣಿಗಳಲ್ಲಿ ಹಬ್ಬಿವೆ. ಬಯೋಟೈಟ್ ನೈಸ್‌ಗಳ ಮಧ್ಯೆ ಸಣ್ಣ ಪದರಗಳಲ್ಲಿ ಟಾಲ್ಕ್ ಕಾಣುತ್ತದೆ. ಅವುಗಳಲ್ಲಿಯ ಇತ್ತೀಚಿನ ಒಂದು ಹೊಡೆಪೊರೆ ಬೆಳ್ತಂಗಡಿ ಬಳಿ ಇದೆ. ಹಾರ್ನ್‌ಬ್ಲೆಂಡ್ ಹೊಡೆಪೊರೆಗಳು ಅಲ್ಲಲ್ಲಿ ಅಪರೂಪವಾಗಿ ಕಾಣಸಿಗುತ್ತವೆ. ಬಯೋಟೈಟ್‌ನೈಸ್ ಶಿಲೆ ಜಿಲ್ಲೆಯಲ್ಲಿ ವಿಸ್ತಾರವಾಗಿ ಹರಡಿದೆ. ಅಲ್ಲಲ್ಲಿ ಸ್ಟೆರಾಕ್ಸಿನೈಟ್, ಆಂಫಿ ಬಯೋಟೈಟ್, ಡಾಲರೈಟ್ ಮೊದಲಾದವುಗಳ ಹೊಡೆ ಶಿಲೆಗಳುಂಟು. ಜಂಬುಕಲ್ಲು ಕರಾವಳಿ ಪ್ರದೇಶದಲ್ಲಿ ಬಹುಮಟ್ಟಿಗೂ ಒಳಭಾಗದಲ್ಲಿ ಸ್ವಲ್ಪಮಟ್ಟಿಗೂ ಇದೆ. ಕರಾವಳಿ ಪ್ರದೇಶದ ಮೆಕ್ಕಲು, ಜೇಡಿ ಮತ್ತು ಸುಣ್ಣದ ಕಲ್ಲಿನ ಪದರಗಳು ಈಚಿನ ರಚನೆಗಳು.

**ಅರಣ್ಯ ಸಂಪತ್ತು :** ಜಿಲ್ಲೆಯಲ್ಲಿ ಒಟ್ಟು 1,28,476 (2010-11) ಹೆಕ್ಟೇರ್ ಅರಣ್ಯ ಪ್ರದೇಶವಿದ್ದು, ಜಿಲ್ಲೆಯ ಒಟ್ಟು ವಿಸ್ತೀರ್ಣದ ಶೇ 28 ಭಾಗವನ್ನು ಆವರಿಸಿದೆ. ತಂಪು ಹವೆಯ ಕಾರಣದಿಂದ ಮಲೆನಾಡಿನ ಭಾಗಕ್ಕೆ ಸೇರಿದ ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳ ಪೂರ್ವಭಾಗಗಳು ಅರಣ್ಯಮಯವಾಗಿವೆ. ಹೆಚ್ಚಿನವು ಸಂರಕ್ಷಿತ ಕಾಡುಗಳಾಗಿ ಸರ್ಕಾರದ ವಶದಲ್ಲಿವೆ. ಕಾಡುಗಳಲ್ಲಿ ನಿತ್ಯಹರಿದ್ವರ್ಣ ಮತ್ತು ಎಲೆ ಉದುರುವ ಸಸ್ಯವರ್ಗಗಳಿವೆ. ಸಾಗುವಾನಿ, ಮತ್ತಿ, ನಂದಿ, ಸಿರಿಹೊನ್ನೆ, ತೇಗ, ಬಿದಿರು, ಬೀಟೆ ಮೊದಲಾದ ಮರಗಳೂ, ಕುಕ್ಕೆ ಹೆಣೆಯಲು ಬೇಕಾಗುವ ತರತರಹದ ಬೆತ್ತಗಳು, ಬಳ್ಳಿಗಳು, ಸೀಗೆಕಾಯಿ, ಅಳಲೆ, ಕಾಸರಕನ ಬೀಜ, ಏಲಕ್ಕಿ, ಮೆಣಸು, ಕೇದಿಗೆ, ಈಚಲು, ಕಾಚು, ರಾಮಪತ್ರೆ, ಅರಗು ಮೊದಲಾದ ಅರಣ್ಯೋತ್ಪನ್ನಗಳು ಇಲ್ಲಿಯ ಕಾಡುಗಳಲ್ಲಿ ದೊರಕುತ್ತವೆ.

**ಖನಿಜ ಸಂಪತ್ತು :** ಜೋಗಿಮಲೈ ಬೆಟ್ಟ ಮತ್ತು ಉಪ್ಪಿನಂಗಡಿ ಬಳಿ ಕುರಂಗದ ಕಲ್ಲುಗಳ ನಿಕ್ಷೇಪಗಳಿವೆ. ಸುಬ್ರಹ್ಮಣ್ಯ ಮತ್ತು ಸುಳ್ಯ ತಾಲ್ಲೂಕಿನ ಕೆಲವೆಡೆಗಳಲ್ಲಿ ಗ್ರಾನೈಟ್ ದೊರಕುತ್ತದೆ. ಮಂಗಳೂರು-ಮಡಿಕೇರಿ ಮಾರ್ಗದಲ್ಲಿ ಸುಮಾರು 68 ಕಿ.ಮೀ ದೂರದಲ್ಲಿರುವ ಮಡಲು (ಮೂಡೂರು) ಹೊಳೆಯಲ್ಲಿ ರೇವೆ ಚಿನ್ನದ ತುಣುಕು ಅಂಶವನ್ನು ಬಿಟ್ಟರೆ ಕಬ್ಬಿಣದ ಅದುರು ಮುಖ್ಯವಾದುದು. ಪಣಂಬೂರು ಬಳಿ ಮತ್ತು ಮಂಗಳೂರು ತಾಲ್ಲೂಕು ಹಾಗೂ ಇತರೆಡೆಗಳಲ್ಲಿ ದೊರೆಯುವ ಗ್ರಾನೈಟಿಕ್ ರೂಪದ ಬೆಣಚು ಕಲ್ಲನ್ನು ಬಂದರು ಮತ್ತು ಕಟ್ಟಡಗಳ ರಚನೆಯಲ್ಲಿ ಬಳಸಲಾಗುತ್ತದೆ. ಸುಬ್ರಹ್ಮಣ್ಯ ಗುಡ್ಡದ ಅರಬಗುಡ್ಡ, ಭೂತಲ ಗುಡ್ಡ, ಸುಂಕದ ಕಟ್ಟೆಯ ವಾಯವ್ಯೋತ್ತರದಲ್ಲಿರುವ ಬೊರೆಗುಡ್ಡ, ಎಣೆಕಲ್ಲು ಮತ್ತು ಬಳಪ, ಪುತ್ತೂರು ತಾಲ್ಲೂಕಿನ ಒಡದ ಮುಖ, ನಿಡ್ಲೆ - ಇವುಗಳಲ್ಲಿ ಶೇ 53-58 ಕಬ್ಬಿಣಾಂಶವಿರುವ ಅದುರುಗಳು ಪತ್ತೆಯಾಗಿವೆ.

**ಜಲಸಂಪತ್ತು :** ಇಲ್ಲಿಯ ಭೌಗೋಳಿಕ ಸ್ವರೂಪದಿಂದಾಗಿ ಈ ಜಿಲ್ಲೆ ಹೆಚ್ಚಿನ ಜಲಸಮೃದ್ಧಿ ಪಡೆದಿದೆ. ಪಶ್ಚಿಮ ಘಟ್ಟಗಳು ಮುಂಗಾರು ಮಾರುತಗಳನ್ನು ತಡೆಯುವುದರಿಂದ ಮಳೆಯ ಪ್ರಮಾಣ ಹೆಚ್ಚು. ಜಿಲ್ಲೆಯಲ್ಲಿಯ ಹೆಚ್ಚಿನ ನದಿಗಳು ಪಶ್ಚಿಮ ಘಟ್ಟಗಳ ತಪ್ಪಲಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ನೇತ್ರಾವತಿ, ಗುರುಪುರ, ಪಯಸ್ವಿನಿ, ಕುಮಾರಧಾರಾ, ಶಾಂಭವಿ - ಮುಖ್ಯ ನದಿಗಳು. ಕುದುರೆ ಮುಖದಲ್ಲಿ ಹುಟ್ಟುವ ನೇತ್ರಾವತಿ ನದಿ ಕುಮಾರಧಾರಾ ಮತ್ತು ಗುರುಪುರ ಉಪನದಿಗಳನ್ನು ಕೂಡಿಕೊಂಡು ಮಂಗಳೂರಿನ ಬಳಿ ಸಮುದ್ರವನ್ನು ಸೇರುತ್ತದೆ. ಪೂರ್ವ ಭಾಗದಲ್ಲಿ ಚಾಚಿಕೊಂಡಿರುವ ಘಟ್ಟಗಳ ದೆಸೆಯಿಂದ ಈ ಜಿಲ್ಲೆಯ ನದಿಗಳೆಲ್ಲ ಸಹಜವಾಗಿ ಪೂರ್ವ-ಪಶ್ಚಿಮವಾಗಿ ಹರಿದು ಸಮುದ್ರವನ್ನು ಸೇರುತ್ತವೆ. ಎತ್ತರವಾದ ಪಶ್ಚಿಮ ಘಟ್ಟಗಳು ಸಮುದ್ರತೀರದಿಂದ ಹೆಚ್ಚು ದೂರವಿರುವ ಕಾರಣ, ಇಲ್ಲಿಯ ಹೊಳೆಗಳು ಮೊದಲು ರಭಸದಿಂದ ಹರಿದು, ಸಮುದ್ರ ಹತ್ತಿರವಾದಂತೆ ವೇಗ ಕಡಿಮೆಯಾಗುತ್ತದೆ. ಮತ್ತೊಂದು ವೈಶಿಷ್ಟ್ಯವೆಂದರೆ ಒಂದೇ ಅಳಿವೆಯಲ್ಲಿ ಎದುರು ಬದರಾಗಿಯಾಗಲಿ, ಏಕಮುಖವಾಗಿ ಯಾಗಲಿ ಒಂದಕ್ಕಿಂತ ಹೆಚ್ಚು ನದಿಗಳು ಒಟ್ಟುಗೂಡಿ ಸಮುದ್ರವನ್ನು ಸೇರುತ್ತವೆ.

**ಹವಾಗುಣ :** ಈ ಜಿಲ್ಲೆಯ ವಾಯುಗುಣದ ಮುಖ್ಯ ಲಕ್ಷಣಗಳೆಂದರೆ ಅತ್ಯಧಿಕ ಮಳೆ, ಅಧಿಕ ತೇವಾಂಶ ಮತ್ತು ಭಾರಿ ಸೆಕೆ. ಭಾರತದ ಪಶ್ಚಿಮ ಕರಾವಳಿ ವಾಯುಗುಣ ವಲಯಕ್ಕೆ ಸೇರಿದ ಈ ಜಿಲ್ಲೆಯ ಉಷ್ಣತೆ ವರ್ಷದಲ್ಲೆಂದೂ ಅತಿರೇಕದ್ದಾಗಿರುವುದಿಲ್ಲ. ಅತ್ಯುಷ್ಣ ಮತ್ತು ಬೇಸಗೆಯ ತಿಂಗಳುಗಳಾದ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಗರಿಷ್ಠ ಉಷ್ಣತೆ $32^0$ಸೆಂ ಮತ್ತು $34^0$ ಸೆಂ ಒಳಗೂ, ಚಳಿಗಾಲದ ತಿಂಗಳುಗಳಲ್ಲಿ $24^0$ ಸೆಂ ಮತ್ತು $26^0$ ಸೆಂ. ನಡುವೆಯೂ ಇರುತ್ತದೆ. ಸಾಮಾನ್ಯ ವಾರ್ಷಿಕ ಉಷ್ಣತೆಯ ಅಂತರ ಕೇವಲ $8^0$ ಸೆಂ. ಜಿಲ್ಲೆಯ ಬಹುಭಾಗ ಸಮುದ್ರ ಮಟ್ಟಕ್ಕಿಂತ ಹೆಚ್ಚು ಎತ್ತರವಿಲ್ಲದ್ದರಿಂದ ವರ್ಷದ ಬಹುಭಾಗ ಮೈಯಲ್ಲಿ ಬೆವರೂರಿಸುವ ಉಷ್ಣಾಂಶವಿರುತ್ತದೆ.

## ಮಳೆಮಾಪನ ಕೇಂದ್ರಗಳು
## ವಾರ್ಷಿಕ ಮಳೆ

Year - 2011

| ಕ್ರ.ಸಂ. | ತಾಲ್ಲೂಕುಗಳು | ಮಳೆ ಮಾಪನ ಕೇಂದ್ರಗಳು | | ವಾರ್ಷಿಕ ವಾಡಿಕೆ ಮಳೆ | | ಮಳೆ (ಮಿ.ಮೀ.) 2000ರಿಂದ 2011ರವರೆಗೆ ವಾರ್ಷಿಕ ವಾಸ್ತವಿಕ ಮಳೆ (ಮಿ.ಮೀ) | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | ಕಾರ್ಯ ನಿರ್ವಹಿಸುತ್ತಿರುವ | ದುರಸ್ಥಿಯಲ್ಲಿರುವ | ಮಳೆ ದಿನಗಳು | ವಾಡಿಕೆ ಮಳೆ | 2000 | 20001 | 2002 | 2003 | 2004 | 2005 | 2006 | 2007 | 2008 | 2009 | 2010 | 2011 |
| 1 | 2 | 396 | 397 | 398 | 399 | 400 | 401 | 402 | 403 | 404 | 405 | 406 | 407 | 408 | 409 | 410 | 411 |
| 1 | ಬಂಟ್ವಾಳ | 7 | - | 120 | 3833 | 2939 | 3778 | 2961 | 3582 | 3590 | 3255 | 4334 | 4115 | 3683 | 4100 | 4205 | 3979 |
| 2 | ಬೆಳ್ತಂಗಡಿ | 7 | 1 | 128 | 4509 | 4042 | 3868 | 3617 | 4008 | 3538 | 4247 | 5192 | 4884 | 4044 | 4818 | 4601 | 4533 |
| 3 | ಮಂಗಳೂರು | 9 | - | 120 | 3609 | 3124 | 3781 | 3413 | 3268 | 3124 | 2819 | 2887 | 3314 | 2261 | 3146 | 4523 | 3480 |
| 4 | ಪುತ್ತೂರು | 7 | - | 124 | 4017 | 3257 | 3394 | 2894 | 3185 | 3440 | 3445 | 4077 | 3764 | 3127 | 3652 | 3786 | 4012 |
| 5 | ಸುಳ್ಯ | 6 | - | 125 | 3593 | 3141 | 3320 | 2748 | 3388 | 3345 | 3571 | 4062 | 4280 | 3199 | 3167 | 3806 | 4151 |
| | ಜಿಲ್ಲಾಮೊತ್ತ | 36 | 1 | 123 | 3912 | 3301 | 3628 | 3127 | 3486 | 3407 | 3468 | 4090 | 4017 | 3343 | 3777 | 4184 | 4031 |

ಮಾಹಿತಿ : ಜಿಲ್ಲಾ ಸಾಂಖ್ಯಿಕ ಅಧಿಕಾರಿ

**ಮಳೆ :** ಜೂನ್-ಸೆಪ್ಟೆಂಬರ್ ಮಳೆಗಾಲ. ನೈಋತ್ಯ ಮಾನ್ಸೂನ್ ಮಾರುತ ಇಲ್ಲಿ ಮಳೆ ತರುತ್ತದೆ. ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ 393 ಸೆಂ.ಮೀ. ವರ್ಷದಲ್ಲಿ ಒಟ್ಟು ಮಳೆದಿನಗಳು 123 ಅವುಗಳಲ್ಲಿ 97 ದಿನಗಳು ಮಳೆಗಾಲದವು. ಕರಾವಳಿಯಿಂದ ಪಶ್ಚಿಮ ಘಟ್ಟಗಳ ಕಡೆಗೆ ಹೋದಂತೆ ಮಳೆ ಹೆಚ್ಚುತ್ತಾ ಹೋಗುವುದು. 2011ರ ಮಳೆ ವರದಿಯ ಆಧಾರದ ಮೇಲೆ ಹೇಳುವುದಾದರೆ ಈ ಜಿಲ್ಲೆಯ ಒಟ್ಟು ಮಳೆ ಪ್ರಮಾಣ 4031 ಮಿ.ಮೀ. ಹೆಚ್ಚು ಮಳೆ ಬೆಳ್ತಂಗಡಿ ತಾಲ್ಲೂಕು 4533 ಮಿ.ಮೀ- ಕಡಿಮೆ ಮಳೆ ಮಂಗಳೂರು ತಾಲ್ಲೂಕು 3480 ಮಿ.ಮೀ. ಜುಲೈ ಅತ್ಯಧಿಕ ಮಳೆಯ ತಿಂಗಳು. ಮಳೆಗಾಲದ ತಿಂಗಳುಗಳಲ್ಲಿ ವಾರ್ಷಿಕವಾಗಿ ಶೇ 87ರಷ್ಟು ಮಳೆ ಬರುವುದರಿಂದ ಅನಂತರ ಅಕ್ಟೋಬರ್-ನವೆಂಬರ್‌ನಲ್ಲಿ (ಹಿಂಗಾರು) ಸರಾಸರಿ 31 ಸೆಂ.ಮೀ ಮಳೆಯಾಗುತ್ತದೆ.

**ಕೃಷಿ-ಭೂಮಿ ವಿಸ್ತೀರ್ಣ :** 2011-12ರಲ್ಲಿ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 4,77,149 ಹೆಕ್ಟೇರ್‌ಗಳಾಗಿದ್ದು, ಇದರಲ್ಲಿ ಅರಣ್ಯ 1,28,476 ಹೆ.ಗಳಷ್ಟಿದೆ. ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿಯಲ್ಲಿ ವ್ಯವಸಾಯೇತರ 65,440 ಹೆ., ಬಂಜರು 5,878 ಹೆ. ಇದ್ದು, ಒಟ್ಟು 1,24,220 ಹೆಕ್ಟೇರ್ ವ್ಯವಸಾಯಕ್ಕೆ ಲಭ್ಯವಿಲ್ಲವಾಗಿದೆ. ಸಾಗುವಳಿಗೆ ಯೋಗ್ಯವಾಗಿದ್ದೂ ಸಾಗುವಳಿಗೆ ಒಳಪಡದಿರುವ ಸಾಗುವಳಿ ಯೋಗ್ಯವಾದ ಬಂಜರು 30,554 ಹೆ., ಖಾಯಂ ಗೋಮಾಳ 19,027 ಹೆ., ವೃಕ್ಷ ಮತ್ತು ತೋಪುಗಳು 31,652 ಹೆ. ಇದ್ದು ಒಟ್ಟು 81,223 ಹೆ. ಸಾಗುವಳಿ ಮಾಡದಿರುವ ಇತರ ಭೂಮಿಯಾಗಿದೆ.

ಕೃಷಿಗೆ ಒಳಪಟ್ಟಿರುವ ಒಟ್ಟು ಭೂಮಿ 2009-10ರಲ್ಲಿ 1,57,326 ಹೆಕ್ಟೇರ್‌ಗಳಿದ್ದು 2011-12ರಲ್ಲಿ ಒಟ್ಟು 1,57,683 ಹೆ. ಭೂಮಿ ಬಿತ್ತನೆಯಾಗಿರುವ ಪ್ರದೇಶವಾಗಿದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣದ ಶೇ 28.9 ರಷ್ಟು ಭಾಗ ಕೃಷಿಯೋಗ್ಯ ಭೂಮಿಯಾಗಿದೆ.

**ಭೂ ಹಿಡುವಳಿದಾರರು :** 2010-11ರ ವರದಿಯಂತೆ ಜಿಲ್ಲೆಯಲ್ಲಿ 1,42,792 ಪುರುಷರು, 65,458 ಮಹಿಳೆಯರು ಹಾಗೂ 847 ಸಂಘ ಸಂಸ್ಥೆಗಳು ಸೇರಿದಂತೆ ಒಟ್ಟು 209097 ಭೂ ಹಿಡುವಳಿದಾರರಿದ್ದಾರೆ.

| **ಭೂಹಿಡುವಳಿದಾರರು** | | **ವಿಸ್ತೀರ್ಣ** |
|---|---|---|
| ಪುರುಷರು | 142792 | 121884.67 ಹೆ. |
| ಮಹಿಳೆಯರು | 65458 | 54613.51 ಹೆ. |
| ಸಂಘಸಂಸ್ಥೆಗಳು | 847 | 1917.02 ಹೆ |
| ಒಟ್ಟು | 209097 | 178415.20 ಹೆ. |

ತಾಲ್ಲೂಕುವಾರು ಭೂ ಹಿಡುವಳಿದಾರರನ್ನು ವಿಭಾಗಿಸುವುದಾದರೆ ಬಂಟ್ವಾಳ - 54008, ಬೆಳ್ತಂಗಡಿ - 43375, ಮಂಗಳೂರು - 39645, ಪುತ್ತೂರು-46384, ಸುಳ್ಯ-25685. ಭೂ ಹಿಡುವಳಿದಾರರಿದ್ದಾರೆ. ಸಣ್ಣ ಮತ್ತು ಅತೀ ಸಣ್ಣ ಭೂಹಿಡುವಳಿಗಳಿದ್ದು, ಪರಿಶಿಷ್ಟ ಜಾತಿಯ 9224 ಅತಿ ಸಣ್ಣ ಭೂಹಿಡುವಳಿದಾರರು, ಪರಿಶಿಷ್ಟ ಪಂಗಡದ 7431 ಅತಿ ಸಣ್ಣ ಭೂಹಿಡುವಳಿದಾರರು, ಪರಿಶಿಷ್ಟ ಪಂಗಡದ 9618 ಒಟ್ಟು ಭೂಹಿಡುವಳಿದಾರರು, ಇತರೆ-188093 ಭೂಹಿಡುವಳಿದಾರರಿದ್ದಾರೆ.

**ನೀರಾವರಿ ಸೌಕರ್ಯಗಳು :** ಜಿಲ್ಲೆಯಲ್ಲಿ ನೇತ್ರಾವತಿ, ಕುಮಾರಧಾರಾ, ಗುರುಪುರ ನದಿಗಳು ಹರಿಯುವುದರಿಂದ ಮತ್ತು ಹೆಚ್ಚಿನ ಮಳೆಯಿಂದ ಕೃಷಿಗೆ ಯೋಗ್ಯ ನೀರು ದೊರೆಯುತ್ತದೆ. ಜೊತೆಗೆ ಬಾವಿ, ಕೊಳವೆಬಾವಿ, ಏತ ನೀರಾವರಿಯಿಂದ ನೀರಾವರಿ ಸೌಕರ್ಯ ಪಡೆಯಲಾಗುತ್ತಿದೆ.

2009-10 ಹಾಗೂ 2011-12 ವಿವಿಧ ಮೂಲಗಳಿಂದ ನೀರಾವರಿಯ ವಿವರ.

| | | |
|---|---|---|
| ಕಾಲುವೆಗಳಿಂದ | - | - |
| ಕೆರೆಗಳಿಂದ | - | - |
| ಬಾವಿಗಳು | 40501 ಹೆ.ವಿ. | 40550 ಹೆ.ವಿ. |
| ಕೊಳವೆ ಬಾವಿಗಳು | 9202 ಹೆ.ವಿ | 9628 ಹೆ.ವಿ. |
| ಏತ ನೀರಾವರಿ | 2138 ಹೆ.ವಿ | 2138 ಹೆ.ವಿ. |
| ಇತರೆ ಮೂಲಗಳಿಂದ | 18146 ಹೆ.ವಿ | 19211 ಹೆ.ವಿ. |

2009-10ರಲ್ಲಿ ನೀರಾವರಿಯಾದ ನಿವ್ವಳ ಪ್ರದೇಶ ಒಟ್ಟು 70,387 ಹೆ. ವಿಸ್ತೀರ್ಣವಾಗಿದೆ. 2011-12ರಲ್ಲಿ ಒಟ್ಟು 72378 ಹೆ. ವಿಸ್ತೀರ್ಣ ನೀರಾವರಿಯಾದ ನಿವ್ವಳ ಪ್ರದೇಶವಾಗಿದೆ.

ಈ ಜಿಲ್ಲೆಯಲ್ಲಿ ಬಯಲುಗಳು ಕಿರಿದಾಗಿ ಹೆಚ್ಚು ಏರುತಗ್ಗುಗಳಿಂದ ಕೂಡಿರುವುದರಿಂದ ಭಾರೀ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿಲ್ಲ. ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳು ಫಲಪ್ರದವಾಗಿ ನಡೆದಿವೆ. ಅವುಗಳಲ್ಲಿ ಪುತ್ತೂರು ತಾಲ್ಲೂಕಿನ ಗೌರಿಹೊಳೆ, ಬಂಟ್ವಾಳ ತಾಲ್ಲೂಕಿನ ಹಂಚಿಕಟ್ಟೆ ಮತ್ತು ನೇತ್ರಾವತಿ ಹಾಗೂ ಕಟ್ಟೆಹೊಳೆ ಜಲಾಶಯ ಯೋಜನೆ ಮುಖ್ಯವಾದವು.

**ಬೆಳೆಗಳು :** ಜಿಲ್ಲೆಯಲ್ಲಿ ಆಹಾರ ಮತ್ತು ಆಹಾರೇತರ ಎಂದು ಎರಡು ಬಗೆಯ ಬೆಳೆಗಳನ್ನು ನೋಡಬಹುದು. ಇವುಗಳನ್ನು ಖಾರಿಫ್ ಮತ್ತು ರಬಿ ಅವಧಿಯಲ್ಲಿ ಬೆಳೆಯುತ್ತಾರೆ. ಬತ್ತ, ಉದ್ದು, ಹೆಸರು, ಹುರುಳಿ, ಬಾಳೆ ಮತ್ತು ತರಕಾರಿಗಳು ಮೊದಲಾದವು ಆಹಾರ ಬೆಳೆಗಳಾದರೆ, ತೆಂಗು, ಅಡಕೆ, ಕಬ್ಬು, ಗೇರುಬೀಜ ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ.

**ಬತ್ತ :** ಕರ್ನಾಟಕ ರಾಜ್ಯದಲ್ಲಿ ಇದು ಅತ್ಯಧಿಕ ಬತ್ತ ಬೆಳೆಯುವ ಜಿಲ್ಲೆಯೆನಿಸಿದೆ. ಕೃಷಿ ಭೂಮಿಯ ಶೇ. ಸು. 68 ಭಾಗದಲ್ಲಿ ಬತ್ತ ಬೆಳೆಯಲಾಗುತ್ತದೆ. ಬತ್ತವನ್ನು ಎಲ್ಲಾ ತಾಲ್ಲೂಕುಗಳಲ್ಲಿ ಬೆಳೆದರೂ, ಬಂಟವಾಳ, ಮಂಗಳೂರು ತಾಲ್ಲೂಕುಗಳಲ್ಲಿ ಬತ್ತ ಬೆಳೆಯುವ ನೆಲದ ವಿಸ್ತೀರ್ಣ ಹೆಚ್ಚು. 2011-12ರಲ್ಲಿ ಬಂಟ್ವಾಳ ತಾಲ್ಲೂಕಿನಲ್ಲಿ 15,950 ಹೆ. ವಿಸ್ತೀರ್ಣದಲ್ಲಿ ಮಂಗಳೂರು ತಾಲ್ಲೂಕಿನಲ್ಲಿ 18,295 ಹೆ. ವಿಸ್ತೀರ್ಣದಲ್ಲಿ ಬತ್ತ ಬೆಳೆದ ವರದಿಯಾಗಿದೆ.

ವಾರ್ಷಿಕವಾಗಿ ಈ ಜಿಲ್ಲೆಯಲ್ಲಿ ಮೂರು ಬೆಳೆ, ಬತ್ತ ತೆಗೆಯುತ್ತಾರೆ. ಮೊದಲನೆಯ ಬೆಳೆ ಮಳೆಗಾಲದ, ಎರಡನೆಯ ಬೆಳೆ (ಸುಗ್ಗಿ) ಹಿಂಗಾರು ಮಳೆ ಮತ್ತು ಚಳಿಗಾಲದ ನಡುವಿನದು. ನೀರಿನ ಹರಿವಿಗೆ ಅಡ್ಡಕಟ್ಟೆ ಕಟ್ಟಿ ನೀರು ಪಡೆಯಲಾಗುತ್ತದೆ. ಮೂರನೆಯ ಬೆಳೆ (ತೊಳಕೆ) ಅರ್ಧ ಚಳಿಗಾಲ ಮತ್ತು ಪೂರ್ತಿ ಬೇಸಗೆಯದು. ಇದು ಬಯಲುಗದ್ದೆಗಳಲ್ಲಿ ನೀರಿನ ಆಸರೆ ಸರಿಯಾಗಿ ಇರುವಲ್ಲಿ ಮಾತ್ರ ಸಾಧ್ಯ. ವಾರ್ಷಿಕ ಅಕ್ಕಿಯ ಉತ್ಪಾದನೆ 1,41,211 ಟನ್.

**ಬತ್ತದ ಬೆಳೆಯ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)**

| ತಾಲ್ಲೂಕುಗಳು | 2009-10 | 2011-12 |
|---|---|---|
| ಬಂಟ್ವಾಳ | 15952 | 15950 |
| ಬೆಳ್ತಂಗಡಿ | 14909 | 14770 |
| ಮಂಗಳೂರು | 18652 | 18295 |
| ಪುತ್ತೂರು | 5075 | 5285 |
| ಸುಳ್ಯ | 784 | 866 |
| ಒಟ್ಟು ಜಿಲ್ಲಾ ಮೊತ್ತ | 55372 ಹೆ. | 55166 ಹೆ. |

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬತ್ತವನ್ನು ಹೊರತುಪಡಿಸಿ ಮತ್ತಾವುದೇ ಏಕದಳ ಬೆಳೆಗಳನ್ನು ಬೆಳೆಯುವುದಿಲ್ಲ. 2011-12ರಲ್ಲಿ ಮಾತ್ರ ಮುಸುಕಿನ ಜೋಳವನ್ನು ಮಂಗಳೂರು ತಾಲ್ಲೂಕಿನಲ್ಲಿ 6 ಹೆಕ್ಟೇರ್‌ಗಳ ವಿಸ್ತೀರ್ಣದಲ್ಲಿ ಮಾತ್ರ ಬೆಳೆಯಲಾಗಿದೆ.

**ದ್ವಿದಳ ಧಾನ್ಯಗಳು :** ಈ ಜಿಲ್ಲೆಯಲ್ಲಿ ಉದ್ದು, ಹೆಸರು, ಹುರುಳಿ ಮೊದಲಾದ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಮಂಗಳೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ದ್ವಿದಳ ಧಾನ್ಯಗಳ ಕೃಷಿ ಉಳಿದ ತಾಲ್ಲೂಕುಗಳಿಗಿಂತ ಹೆಚ್ಚು. ಜಿಲ್ಲೆಯಲ್ಲಿ ಒಟ್ಟು 3390 ಹೆ. ಪ್ರದೇಶ ದ್ವಿದಳ ಧಾನ್ಯಗಳ ಕೃಷಿಗೆ ಒಳಪಟ್ಟಿದೆ.

2009-10ರಲ್ಲಿ ತಾಲ್ಲೂಕುವಾರು ಒಟ್ಟು ದ್ವಿದಳ ಧಾನ್ಯಗಳ ಕೃಷಿ

| | |
|---|---|
| ಬಂಟ್ವಾಳ | 436 ಹೆ. |
| ಬೆಳ್ತಂಗಡಿ | 749 ಹೆ. |
| ಮಂಗಳೂರು | 1828 ಹೆ. |
| ಪುತ್ತೂರು | 213 ಹೆ. |
| ಸುಳ್ಯ | 164 ಹೆ. |
| ಒಟ್ಟು ಜಿಲ್ಲಾ ಮೊತ್ತ | 3390ಹೆ. |

**ತೋಟಗಾರಿಕಾ ಬೆಳೆಗಳು :** ಜಿಲ್ಲೆಯಲ್ಲಿ ಕಬ್ಬು, ತೆಂಗು, ಬಾಳೆ, ಹಣ್ಣುಗಳು ಮತ್ತು ತರಕಾರಿಗಳನ್ನು ತೋಟಗಾರಿಕೆಯ ಬೆಳೆಗಳಾಗಿ ಬೆಳೆಯಲಾಗುತ್ತದೆ. ಈ ತೋಟಗಳಿಗೆ ಸ್ಥಳೀಯವಾಗಿ 'ಬಾಗಾಯ್ತು' ಎಂದು ಕರೆಯಲಾಗುತ್ತದೆ.

2009-10ರಲ್ಲಿ ತೋಟಗಾರಿಕಾ ಬೆಳೆಗಳ ನಿವ್ವಳ ವಿಸ್ತೀರ್ಣ

| | |
|---|---|
| ತೆಂಗು | 16106 ಹೆ. |
| ಬಾಳೆ | 3135ಹೆ. |
| ಕಬ್ಬು | 16 ಹೆ. |
| ಒಟ್ಟು ಹಣ್ಣುಗಳು | 37207 ಹೆ. |
| ಒಟ್ಟು ತರಕಾರಿ | 1697 ಹೆ. |

ಜಿಲ್ಲೆಯ ಒಟ್ಟು ತೋಟಗಾರಿಕೆ ಬೆಳೆ ಕ್ಷೇತ್ರ 98037 ಹೆ.ಗಳಿದ್ದು, ಒಟ್ಟು ಬೆಳೆ ಕ್ಷೇತ್ರದ ಶೇ 62.31ರಷ್ಟಿದೆ.

**ವಾಣಿಜ್ಯ ಬೆಳೆಗಳು :** ಕೃಷಿ ಜೀವನಾಧಾರದ ಜೊತೆಗೆ ಆರ್ಥಿಕತೆಯ ಕಡೆ ಮುಖ ಮಾಡಿರುವುದರಿಂದ ಸಾಗುವಳಿಯಲ್ಲಿ ಆಹಾರ ಬೆಳೆಗಳ ಜೊತೆಗೆ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ರಬ್ಬರ್, ಕೋಕೋ, ಎಣ್ಣೆ, ತಾಳೆ ಪ್ರಮುಖ ವಾಣಿಜ್ಯ ಬೆಳೆಗಳು. ಕುತ್ಪಾಜೆಯಲ್ಲಿ ರಬ್ಬರ್ ಹದ ಮಾಡುವ ಕಾರ್ಖಾನೆ ಇದೆ. ಇತ್ತೀಚೆಗೆ ವನಿಲ ಬಳ್ಳಿ ಬೆಳೆಯುವುದು ಕಂಡುಬರುತ್ತಿದೆ.

2009-10ರಲ್ಲಿ ವಾಣಿಜ್ಯ ಬೆಳೆಗಳ ನಿವ್ವಳ ವಿಸ್ತೀರ್ಣ

| | |
|---|---|
| ಕೋಕೋ | 929 ಹೆ. |
| ರಬ್ಬರ್ | 10,392 ಹೆ. |
| ಅಡಕೆ | 27,645 ಹೆ. |
| ಗೇರು | 30,957ಹೆ. |

ಜಿಲ್ಲೆಯ ಒಟ್ಟು ವಾಣಿಜ್ಯ ಬೆಳೆಗಳ ಕ್ಷೇತ್ರ 59,133 ಹೆ.ಗಳಿದ್ದು, ಒಟ್ಟು ಬೆಳೆ ಕ್ಷೇತ್ರದ ಶೇ. 37.59ರಷ್ಟಿದೆ.

**ಕೃಷಿ ಸಂಬಂಧಿ ಚಟುವಟಿಕೆಗಳು**

**ಪಶುಸಂಗೋಪನೆ :** ಕೃಷಿಯ ಅಭಿವೃದ್ಧಿಗೆ ಸಹಾಯಕವಾದ ಪಶುಪಾಲನೆ, ಉಪ ಉದ್ಯೋಗಗಳನ್ನು ಒದಗಿಸುತ್ತಿದೆ. ಜಾನುವಾರುಗಳ ಆರೈಕೆಗಾಗಿ 13 ಪಶುವೈದ್ಯ ಆಸ್ಪತ್ರೆಗಳು, 35 ಚಿಕಿತ್ಸಾಲಯಗಳು, 48 ಪ್ರಾಥಮಿಕ ಪಶುವೈದ್ಯ ಆಸ್ಪತ್ರೆಗಳು, 5 ಸಂಚಾರಿ ಚಿಕಿತ್ಸಾಲಯಗಳು, 7 ಕೃತಕ ಗರ್ಭಧಾರಣಾ ಕೇಂದ್ರಗಳಿವೆ (2012). ಕ್ಷೀರೋತ್ಪನ್ನ ಕೇಂದ್ರಗಳೂ ಅಲ್ಲಲ್ಲಿ ಸ್ಥಾಪಿತವಾಗಿವೆ. ವರ್ಷವರ್ಷವೂ ಸುಬ್ರಹ್ಮಣ್ಯದ ಬಳಿ ಕುಳಕುಂದ ಎಂಬಲ್ಲೂ, ಕಾರ್ಕಳ ತಾಲ್ಲೂಕಿನ ಸೀತಾನದಿ ತೀರದಲ್ಲೂ ಜಾನುವಾರು ಜಾತ್ರೆಗಳಾಗುತ್ತವೆ. ಉಪ್ಪಿನಂಗಡಿಯ ಸಮೀಪದ ಕೊಯಿಲ ಎಂಬಲ್ಲಿ ಪಶುಪಾಲನೆ ಕೇಂದ್ರವಿದೆ.

ಈಚೆಗೆ ಕೋಳಿ ಸಾಕಣೆ, ಹಂದಿ ಸಾಕಣೆ ಮೊದಲಾದವು ಹೆಚ್ಚುತ್ತಿವೆ. ಮಲೆನಾಡಿನ ಭಾಗದಲ್ಲಿ ಜೇನು ಸಾಕಣೆ ಹೆಚ್ಚು ಪ್ರಚಾರದಲ್ಲಿದೆ.

**ಮೀನುಗಾರಿಕೆ :** ದಕ್ಷಿಣ ಕನ್ನಡ ಜಿಲ್ಲೆ ಮತ್ಸ್ಯ ಸಂಪತ್ತಿಗೆ ಹೆಸರಾದುದು. ಈ ಜಿಲ್ಲೆಯ ಕರಾವಳಿ ತೀರ ಕೇವಲ 41 ಕಿ.ಮೀ ಉದ್ದವಿದ್ದರೂ ಅದರ ಬಳಿಯ ಸಮುದ್ರದಲ್ಲೂ ಮತ್ಸ್ಯ ಸಂಪತ್ತು ವಿಫುಲವಾಗಿದೆ. ಇಲ್ಲಿಯ ಮುಖ್ಯ ಕಸುಬು ಮೀನುಗಾರಿಕೆಯಾಗಿದ್ದು, ಕಡಲ ತೀರದಲ್ಲಿ ವಾಸಿಸುವ ಮೊಗವೀರ ಸಮುದಾಯದ ಸು. 2 ಲಕ್ಷ ಮಂದಿ ಮೀನುಗಾರಿಕೆಯಲ್ಲಿ ನೇರವಾಗಿ ತೊಡಗಿರುತ್ತಾರೆ.

**ರೇಷ್ಮೆ :** ಹಿಪ್ಪುನೇರಳೆ ಗಡಸು ಜಾತಿಗೆ ಸೇರಿದ ಸಸ್ಯವಾಗಿದ್ದು, ಇದರ ಬೇಸಾಯಕ್ಕೆ ವಾರ್ಷಿಕವಾಗಿ 60ರಿಂದ 120 ಸೆಂ.ಮೀ ಮಳೆಯ ಅಗತ್ಯವಿದೆ. ಹಿಪ್ಪುನೇರಳೆ ಸೊಪ್ಪನ್ನು ಮೇಯಿಸಿ ರೇಷ್ಮೆ ಹುಳುಗಳನ್ನು ಸಾಕಿ ಗೂಡುಗಳನ್ನು ಪಡೆದು, ಇದರಿಂದ ರೇಷ್ಮೆ ಎಳೆಯನ್ನು ತೆಗೆಯುವರು. ಜಿಲ್ಲೆಯಲ್ಲಿ ರೇಷ್ಮೆ ಉತ್ಪಾದನೆಯಲ್ಲಿ ಬೆಳ್ತಂಗಡಿ ತಾಲ್ಲೂಕು ಮೊದಲ ಸ್ಥಾನದಲ್ಲಿದೆ.

2009-10ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರೇಷ್ಮೆ ಕೃಷಿಯ ಅಂಕಿ ಅಂಶ

ಹಿಪ್ಪುನೇರಳೆ ಬೆಳೆದ ಕ್ಷೇತ್ರ 6763 ಹೆಕ್ಟೇರ್
ರೇಷ್ಮೆಗೂಡು ಉತ್ಪಾದನೆ 3262 ಟನ್
ರೇಷ್ಮೆ ಕೃಷಿಯಲ್ಲಿ ತೊಡಗಿದ ರೈತರು 200 ಮಂದಿ
ಉತ್ಪಾದಿಸಿದ ರೇಷ್ಮೆಯ ಮೌಲ್ಯ 7,25,200 ಲಕ್ಷ ರೂಗಳು.

**ಕೃಷಿ ಅಭಿವೃದ್ಧಿ ಸಂಸ್ಥೆಗಳು :** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಅನೇಕ ಸಂಘ ಸಂಸ್ಥೆಗಳನ್ನು ರೂಪಿಸಿದೆ. ಮಂಗಳೂರಿಗೆ ಸು. 4 ಕಿ.ಮೀ. ದೂರದ ಜಪ್ಪಿನ ಮೊಗರುವಿನಲ್ಲಿ 1944ರಲ್ಲಿ ಸ್ಥಾಪಿತವಾದ 'ವ್ಯವಸಾಯ ಸಂರಕ್ಷಣಾ ಕೇಂದ್ರ'ವಿದೆ. ದಕ್ಷಿಣ ಕನ್ನಡದಲ್ಲಿ ಬತ್ತವೇ ಪ್ರಮುಖ ಬೆಳೆಯಾಗಿದ್ದು, ಉತ್ತಮ ಇಳುವರಿ ಸಾಧನೆಗಾಗಿ ಕಂಕನಾಡಿನಲ್ಲಿ 'ಬತ್ತ ಅಭಿವೃದ್ಧಿ ಕೇಂದ್ರ'ವನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದು ಬೆಳೆಯ ಇಳುವರಿಯನ್ನು ಗಮನದಲ್ಲಿರಿಸಿಕೊಂಡು ಪ್ರತ್ಯೇಕವಾಗಿಯೇ ಹಲವು ಕೇಂದ್ರಗಳನ್ನು ತೆರೆಯಲಾಗಿದೆ. ಉಳ್ಳಾಲದಲ್ಲಿ 'ಗೇರು ಸಂಶೋಧನ ಕೇಂದ್ರ', ಪಡಿಲ್‌ನಲ್ಲಿ 'ಹಣ್ಣು ಹಂಪಲುಗಳ ಮಾದರಿ ಕೇಂದ್ರ', ವಿಟ್ಲದಲ್ಲಿ 'ಕೇಂದ್ರ ಅಡಕೆ ಸಂಶೋಧನ ಕೇಂದ್ರ'ವಿದೆ. ಮಣ್ಣಿನ ಗುಣ ಪರಿಶೀಲನೆಗೆ 1968ರಲ್ಲಿ ಮಂಗಳೂರಿನಲ್ಲಿ 'ಮಣ್ಣು ಪರೀಕ್ಷಣಾ ಪ್ರಯೋಗಾಲಯ'ವನ್ನು ಸ್ಥಾಪಿಸಲಾಯಿತು.

ಕೀಟನಾಶಕ ಮತ್ತು ರಸಗೊಬ್ಬರ ತಯಾರಿಕೆಯಲ್ಲೂ ಸಂಶೋಧನೆಗಳು ನಡೆದಿವೆ. ಜಿಲ್ಲೆಯಲ್ಲಿ 'ಕ್ರಿಮಿನಾಶಕ ಸಂಶೋಧನ ಕೇಂದ್ರ'ವಿದೆ. ಮಂಗಳೂರಿನ 'ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್' ಎಂಬುದು ದೊಡ್ಡ ರಸಗೊಬ್ಬರ ಕಾರ್ಖಾನೆಯಾಗಿದೆ. ತೋಟಗಾರಿಕೆ ಇಲಾಖೆಯು ತೋಟಗಾರಿಕಾ ಬೆಳೆಗಳನ್ನು ಅಭಿವೃದ್ಧಿ ಪಡಿಸುತ್ತಿದೆ.

**ಸಹಾಯಕ ಗ್ರಂಥಗಳು**


ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ ಸಂ. 2
ಕನ್ನಡ ವಿಷಯ ವಿಶ್ವಕೋಶ - ಭೂಗೋಳ ವಿಜ್ಞಾನ
ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ - ಡಾ. ರಂಗನಾಥ
ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ - ಎಂ.ಗಣಪತಿರಾವ್ ಐಗಳ್
ದಕ್ಷಿಣದ ಸಿರಿನಾಡು - ಕೆ. ಅನಂತರಾಮು
www.Raithamitra.com
ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2009-10 ಮತ್ತು 2011-12 ಪ್ರಕಟಣೆ - ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ದಕ್ಷಿಣ ಕನ್ನಡ ಮಂಗಳೂರು
Annual season and crop report 2010-11, DE&S, Bangalore


*ವಿ.ಎನ್.ಕೆ*

**ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಬದುಕು** ತುಳುನಾಡು ಎಂದು ಇಂದು ಕರೆಯಲ್ಪಡುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಕೃಷಿ ಪ್ರಧಾನವಾದ ಪ್ರದೇಶ. ನಾಗಾರಾಧನೆ, ದೈವಾರಾಧನೆ ಪ್ರಮುಖ ಆರಾಧನೆಗಳಾಗಿದ್ದು ಸಾಂಪ್ರದಾಯಿಕ ಹಿನ್ನೆಲೆಯುಳ್ಳ ಬದುಕು ಇಲ್ಲಿಯ ಕೃಷಿಕರದ್ದಾಗಿದೆ. ತುಳುನಾಡಿನ ಜನ 'ಸತಿಯ ಪುತ್ರರ್ಯ್' ಎಂಬ ಇತಿಹಾಸದ ಉಲ್ಲೇಖದ ಪ್ರಕಾರ ಇಲ್ಲಿಯವರು ಸತ್ಯದ ಮಕ್ಕಳು. ಆರಾಧನೆ, ಆಚರಣೆ, ನಂಬಿಕೆಗಳ ಹಿನ್ನೆಲೆಯೊಂದಿಗೆ ಅವರ ಕೃಷಿ ಬದುಕು ಅನಾವರಣಗೊಂಡಿದೆ. ದೈವಗಳ ಆರಾಧನೆಯ, ವೀರರ ಆರಾಧನೆಯ ಹಿನ್ನೆಲೆಯಲ್ಲಿ ಪಾಡ್ದನಗಳನ್ನು ಅರ್ಥಾತ್ ಮೌಖಿಕ ಸಾಹಿತ್ಯವನ್ನು ಅವಲೋಕನ ಮಾಡಿದಾಗ ಪರಂಪರೆಯಿಂದಲೂ ತುಳುನಾಡಿನ ಹಿರಿಯರು ಕೃಷಿಯನ್ನೇ ನಂಬಿಕೊಂಡು ಬಂದಿದ್ದಾರೆ ಎಂಬುದು ತಿಳಿಯುತ್ತದೆ.

ಕರಾವಳಿ ಕರ್ನಾಟಕದಲ್ಲಿ ಒಕ್ಕಲು ಮಸೂದೆ ಬರುವ ಮೊದಲು ದಣಿ ಒಕ್ಕಲುಗಳ ಕಾಲದಲ್ಲಿ ಗೇಣಿಗೆ ಭೂಮಿಯನ್ನು ಪಡೆದುಕೊಂಡು ಕರಾರುವಕ್ಕಾಗಿ ನಿಗದಿತ ಮೌಲ್ಯದ ಕೃಷಿ ಉತ್ಪನ್ನಗಳನ್ನು ದಣಿಗಳಿಗೆ ನೀಡುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಕಾಲದಿಂದಲೂ ವ್ಯವಸ್ಥಿತವಾಗಿ ಈ ಪದ್ಧತಿ ಜಾರಿಯಲ್ಲಿತ್ತು. ದಕ್ಷಿಣ ಕನ್ನಡ ಜಿಲ್ಲೆ ಸಮುದ್ರ ತೀರದ ಮಣ್ಣಿನ ಫಲವತ್ತತೆ, ನದಿಗಳ ಮೆಕ್ಕಲು ಮಣ್ಣಿನ ಸಾಂದ್ರತೆ, ಅದರೊಂದಿಗೆ ಕಾಡಿನ ಸೊಪ್ಪು, ಮಣ್ಣಿನ ವಿಶೇಷ ಗುಣಗಳಿಂದ ಉತ್ತಮ ಕೃಷಿ ಭೂಮಿಯಾಗಿ ರೂಪುಗೊಂಡಿದೆ. ಕಾಲಕಾಲಕ್ಕೆ ಮಳೆ ಬರುವುದರಿಂದಾಗಿ ಆಯಾ ಕಾಲಕ್ಕನುಗುಣವಾದ ತಳಿಗಳನ್ನು ಸಿದ್ಧಪಡಿಸಿಕೊಂಡು ಬತ್ತದ ಬೆಳೆಗಳನ್ನು ಬೆಳೆಸುತ್ತಿದ್ದರು. ಬತ್ತ ಬೆಳೆಯದ ತಗ್ಗು ಪ್ರದೇಶಗಳಲ್ಲಿ ಕಬ್ಬು ಬೆಳೆಸುತ್ತಿದ್ದರು. ಅಂದರೆ ಉಪ್ಪು ನೀರು ಮಿಶ್ರಿತವಾದ ಮಣ್ಣಿನ ಗುಣವಿದ್ದು ಕೆಲವು ಕಡೆಗಳಲ್ಲಿ ಬತ್ತದ ಬೆಳೆ ಮಾತ್ರ ಬೆಳೆಯುತ್ತಿರುವುದರಿಂದ ಕಬ್ಬು ಅಥವಾ ತೆಂಗು ಬೆಳೆಯಲು ಕಾರಣವಾಗಿದೆ. ಇಲ್ಲಿಯ ಗದ್ದೆಗಳನ್ನು ಪ್ರಮುಖವಾಗಿ ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು. 1. ಬೆಟ್ಟುಗದ್ದೆಗಳು 2. ಮಜಲು ಗದ್ದೆಗಳು 3. ಬಯಲು ಗದ್ದೆಗಳು. ಸಮುದ್ರ, ಹೊಳೆ ಪ್ರದೇಶಗಳಲ್ಲಿ ಕೆಲವು ಕಡೆ ಅತೀ ತಗ್ಗು ಅಂದರೆ ಹೊಳೆಯಿಂದ ತುಸು ಎತ್ತರವಿರುವ 'ಪಟ್ಲ' ಎನ್ನುವ ಪ್ರಕಾರದ ಗದ್ದೆಗಳೂ ಇವೆ. ಇವುಗಳಲ್ಲಿ ಎಣೆಲು ಮತ್ತು ಸುಗ್ಗಿಯ ಮಧ್ಯೆ ಬೇಸಾಯ ಮಾಡುವ ಪದ್ಧತಿ ಇದೆ. ತೀವ್ರ ಮಳೆಗಾಲವೂ ಅಲ್ಲದ ಅತ್ತ ಬೇಸಗೆಯೂ ಅಲ್ಲದ ಮಧ್ಯಮ ಕಾಲಘಟ್ಟದಲ್ಲಿ ವಿಶಿಷ್ಟ ತಳಿಗಳ ಮೂಲಕ ಕೃಷಿ ಮಾಡುವುದು ಕ್ರಮ.

ಬತ್ತದ ಕೃಷಿ ಪ್ರಧಾನವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡುಗುಡ್ಡಗಳನ್ನು ಕಡಿದು ಮಾಡಿದ ಬೆಟ್ಟು ಗದ್ದೆಗಳಲ್ಲಿ ಮೇಲಿನ ಅಂದರೆ ಮಳೆಯ ನೀರನ್ನೇ ಆಶ್ರಯಿಸಿ ಬೆಳೆ ಬೆಳೆಯುವುದು ಅತೀ ಶ್ರಮದ ಕೆಲಸ. ಗುಡ್ಡ ಪ್ರದೇಶದಲ್ಲಿ ದೊಡ್ಡ ಹಳ್ಳಗಳಲ್ಲಿ ನೀರನ್ನು ಶೇಖರಿಸಿ ಮಳೆ ಬಾರದ ಸಂದರ್ಭದಲ್ಲಿ ಬೆಟ್ಟು ಗದ್ದೆಗಳಿಗೆ ಬಿಟ್ಟು ಹೇಗಾದರೂ ಮಾಡಿ ಬೆಳೆಯನ್ನು ಕೊಯಿಲಿಗೆ ಅಣಿಗೊಳಿಸುತ್ತಾರೆ. ಸಾಮಾನ್ಯವಾಗಿ ಬೆಟ್ಟು ಗದ್ದೆಗಳನ್ನು ಬಿತ್ತುತ್ತಾರೆ. ನೆಡುವ ಕ್ರಮ ಕಡಿಮೆ. ಇದರ ಉಳುಮೆಯೂ ಅತೀ ಸಾಹಸ.

ಸಾಮಾನ್ಯವಾಗಿ ಎತ್ತುಗಳ ಮೂಲಕವೇ ಉಳುಮೆ ಮಾಡಲಾಗುತ್ತಿತ್ತು. ಕೋಣಗಳು ಕಲ್ಲಿನಲ್ಲಿ ನಡೆಯುವುದು ಸ್ವಲ್ಪ ಅಪಾಯ. ಬೆಟ್ಟುಗದ್ದೆಗಳಿಗೆ ಕಡಿಮೆ ಅವಧಿಯ ಬೆಳೆಗಳನ್ನು ಬೆಳೆಸುತ್ತಿದ್ದರು. ಬಯಲು, ಮಜಲು ಗದ್ದೆಗಳಿಗಿಂತ ಹೆಚ್ಚು ಉಳುಮೆ ಈ ಗದ್ದೆಗಳಿಗೆ ಬೇಕಾಗುತ್ತದೆ. ಕಡಿಮೆಯೆಂದರೂ 8, 10 ಸಾಲು ಉತ್ತು ಹಲಗೆಯ ಮೂಲಕ ಹದ ಮಾಡಿ ಹೆಚ್ಚು ನೀರು ಕಟ್ಟಿ ಬೀಜವನ್ನು ಮೊಳಕೆ ಬರಿಸಿ ಬಿತ್ತುವುದು ಪದ್ಧತಿ.

ಎಣೆಲು, ಸುಗ್ಗಿ, ಕೊಳಕೆ ಮೂರು ಪ್ರಧಾನ ಬೆಳೆಗಳಾಗಿದ್ದು ನೀರಾವರಿ ಮೂಲಕ ಸುಗ್ಗಿ ಬೆಳೆಯನ್ನು ಬೆಳೆಸುತ್ತಿದ್ದರು. ಉತ್ತಮ ನೀರಿನ ಸೌಕರ್ಯ ಇರುವ ಪ್ರದೇಶಗಳಲ್ಲಿ ಮಾತ್ರ ಕೊಳಕೆ ಬೆಳೆಯನ್ನು ಬೆಳೆಸಲಾಗುತ್ತಿತ್ತು. "ಕೊಳಕೆ ಇತ್ತಿನಾಯಿಗ್ ಬಲಕೆ" (ಕೊಳಕೆ ಇದ್ದವನಿಗೆ ಸಾಮರ್ಥ್ಯ) ಎಂಬ

ಮಾತು ತುಳುವರಲ್ಲಿ ವಾಡಿಕೆಯಲ್ಲಿತ್ತು. ಯಾಕೆಂದರೆ ಕೊಳತೆಗೆ ನೀರಾವರಿ ಕಷ್ಟ. ಅತೀ ಆಳದ ಬಾವಿಗಳಿಂದ ನೀರನ್ನು ಏತದ ಮೂಲಕ ಮೇಲೆ ಹಾಕಿ ಈ ಬೆಳೆಯನ್ನು ಸಾಹಸದಿಂದ ಗೆಲ್ಲಬೇಕು. ಅಲ್ಲದೆ ಕೆಲವೇ ಕೆಲವು ಗದ್ದೆಗಳಲ್ಲಿ ಮಾತ್ರ ಕೀಟಗಳ ಉಪದ್ರ ಈ ಬೆಳೆಗೆ ಹೆಚ್ಚು. "ಎಣೆಲು ಸೂಳೆ, ಸುಗ್ಗಿ ಮದ್ಮಲ್, ಕೊಲಕೆ ಪೆದ್ಮಿದಿ" (ಎಣೆಲು ಸೂಳೆ, ಸುಗ್ಗಿ ಮದುಮಗಳು, ಕೊಳಕೆ ಬಾಣಂತಿ) ಎಂಬ ಗಾದೆ ಕೃಷಿಕರಲ್ಲಿದೆ. ಯಾಕೆಂದರೆ ಎಣೆಲು ಹೇಗಾದರೂ ಮೇಲೆ ಬಂದು ತೆನೆ ಬಿಡುತ್ತದೆ. ಗಾಳಿ, ಮಳೆ, ಬಿಸಿಲು ಎಂಬ ಭೇದ ಅದಕ್ಕಿಲ್ಲ. ಸುಗ್ಗಿ ಹಾಗಲ್ಲ ಅದನ್ನು ಸುಂದರವಾಗಿ ನೆಡಬೇಕು. ಆಕರ್ಷಕವಾಗಿ ಗದ್ದೆ ಹುಣೆಯನ್ನು ಕೆತ್ತಿ ನೀರು ಮಣ್ಣಿನಿಂದ ಸಾರಿಸಬೇಕು. ಕೊಳತೆ ಹಾಗಲ್ಲ ಅದಕ್ಕೆ ನೇಜಿಯಿಂದ ತೊಡಗಿ ಜಾಗ್ರತೆ ವಹಿಸಬೇಕು. ಬಿಸಿಲಿನ ಸಂದರ್ಭದಲ್ಲಿ ನೀರು ಸೇದಬೇಕು. ಅದಕ್ಕೆ 'ದೊಂಬು ನೀರ್' (ಬಿಸಿ ನೀರು) ಎನ್ನುತ್ತಾರೆ. ಕೊಳತೆಯಲ್ಲಿ ಸರಿಯಾಗಿ ನೀರು ಇದ್ದ ಸಂದರ್ಭದಲ್ಲಿ ಉತ್ತಮ ಫಸಲು ಬರುತ್ತದೆ.

ಬತ್ತದ ಕೃಷಿಯಲ್ಲಿ ಎಣೆಲು ಬೆಳೆಗೆ ಸಾಮಾನ್ಯವಾಗಿ ಸಾಂಪ್ರದಾಯಿಕ ತಳಿಗಳಾದ ಗುಡ್ಡುಬಿಳಿ, ಗುಡ್ಡು ಕಜೆ, ಕಜೆತಾಯಮೆ, ಬಿಳಿಕಾಯಮೆ, ಸಣ್ಣ ಬೊಳ್ಪೆರಿ, ತೊಂದುರು, ಗಂಧಸಾಲೆ ಮುಂತಾದ ರಾಜಕಾಯಮೆ ಬೀಜಗಳನ್ನು ಉಪಯೋಗಿಸುತ್ತಿದ್ದರು. ಸುಗ್ಗಿ ಬೆಳೆಗೆ ಅತಿಕಾರ, ಸುಗ್ಗಿ ಕಾಯಮೆ ಮುಂತಾದ ತಳಿಗಳನ್ನು ಉಪಯೋಗಿಸುತ್ತಿದ್ದರೆ ಕೊಳಕೆ ಬೆಳೆಗೆ ಸುಗ್ಗಿಯ ತಳಿಗಳನ್ನೇ ಉಪಯೋಗಿಸಲಾಗುತ್ತಿತ್ತು.

**ನೇಜಿ ವಿಧಾನ :** ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಪದ್ಧತಿಯಲ್ಲಿ ನಾಟಿ ಮಾಡುವುದು ಮತ್ತು ಬಿತ್ತುವುದು ಬತ್ತದ ಕೃಷಿಯಲ್ಲಿ ಕಾಣುವ ಪ್ರಧಾನ ಕ್ರಮಗಳು. ಬೆಟ್ಟು ಗದ್ದೆಗಳನ್ನು ಬಿತ್ತಿದರೆ ಮಜಲು ಗದ್ದೆಗಳನ್ನು ನೇಜಿ ಹಾಕಿ ನೆಡುವುದೇ ಉತ್ತಮ. ಇಲ್ಲದಿದ್ದರೆ ನೆರೆ, ಬಂದು ಮೊಳಕೆ ಕೊಚ್ಚಿಕೊಂಡು ಹೋಗುತ್ತದೆ. ನೇಜಿಯಲ್ಲಿ ಅಡಿನೀರು, ಪರಪಸೆ, ಪೊಜಿನೇಜಿ, ಕಲಸಿ ಹಾಕುವ ನೀರು ನೇಜಿ, ಹಾಯಿಸಿ ಹಾಕುವುದು ಇತ್ಯಾದಿ ಪ್ರಕಾರಗಳಿವೆ. ಪರಪತೆಯೆಂದರೆ ಹೊಳೆಯ ಬದಿಯ ಗದ್ದೆಗಳಲ್ಲಿ ಮೆಕ್ಕಲು ಮಣ್ಣಿನ ಕಾರಣವಾಗಿ ಉಳುಮೆ ನೀರಿನ ತೇವಾಂಶ ಮೇಲೆ ಬರುತ್ತದೆ. ಅದನ್ನು ಚೆನ್ನಾಗಿ ಉತ್ತು ಬೀಜ ಹಾಕಿದರೆ ನೇಜಿ ಬೆಳೆದು, ಬೆಳೆ ಬರುತ್ತದೆ. ಯಾವುದೇ ನೆರೆ ನಾಟಿ ಹಾವಳಿಗೂ ಅದು ಹಾಳಾಗುವುದಿಲ್ಲ. ಅಲ್ಲದೆ ಆ ಬೆಳೆಗೆ ಯಾವುದೇ ರೋಗದ ಬಾಧೆಯೂ ತಟ್ಟುವುದಿಲ್ಲ.

ಇನ್ನೊಂದು ನೇಜಿ 'ಅಡಿ ನೀರು' ಅಂದರೆ ಮಳೆ ಬರುವ ಮೊದಲು ಬಾವಿಯ ನೀರನ್ನು ಉಪಯೋಗಿಸಿ ಗದ್ದೆಯನ್ನು ಕಲಸಿ ಹದ ಮಾಡಿ ಮೊಳಕೆ ಬರಿಸಿದ ಬೀಜವನ್ನು ಬಿತ್ತಿ ನೇಜಿ ಮಾಡುವ ಕ್ರಮ. ಮಳೆಯಾಗಿ ನೀರು ಆದ ತಕ್ಷಣ ನೇಜಿಯ ನಾಟಿಯನ್ನು ಮಾಡಬೇಕು. ಇದರಿಂದ ಉತ್ತಮ ಫಸಲು ಬರುತ್ತದೆ. ಆದರೆ ಅತೀ ನೀರಿನ ಸೌಕರ್ಯವಿರುವ ಪ್ರದೇಶಗಳಲ್ಲಿ ಮಾತ್ರ ಈ ರೀತಿಯ ನೇಜಿಯನ್ನು ಮಾಡಲು ಸಾಧ್ಯ. ಇಂತಹ ಗದ್ದೆಗಳಿಗೆ ಅತೀ ಬೇಡಿಕೆ ಇತ್ತು. ಗೇಣಿ ಕೂಡಾ ಹೆಚ್ಚಿಗೆ ವಸೂಲಾಗುತ್ತಿತ್ತು.

ಎಣೆಲು ಬೆಳೆಯ ಮೂರನೇ ಪ್ರಕಾರದ ನೇಜಿ 'ಪೊಡಿ ನೇಜಿ' (ಹುಡಿ ನೇಜಿ) ಅಂದರೆ ನೀರಿನ ಸೌಕರ್ಯ ಇಲ್ಲದ ಪ್ರದೇಶಗಳಲ್ಲಿ ಗದ್ದೆಯನ್ನು ಚೆನ್ನಾಗಿ ಉತ್ತು ಪುಡಿ ಮಾಡಿ ಅಲ್ಲಿ ನೀರಿನ ಪಸೆ ಇಲ್ಲ ಎಂದು ಖಾತ್ರಿಯಾದಾಗ ಒಣ ಬೀಜವನ್ನು ಬಿತ್ತುತ್ತಾರೆ. ಅದು ಜೂನ್ ತಿಂಗಳಲ್ಲಿ ಮಳೆ ಬೀಳುವಾಗ ಚೆನ್ನಾಗಿ ಮೊಳಕೆ ಬಂದು ನೇಜಿ ಬೆಳೆಯುತ್ತದೆ. ನೀರಾದಾಗ ಆ ನೇಜಿಯನ್ನು ತೆಗೆದು ನಾಟಿ ಮಾಡುತ್ತಾರೆ. ಇದು ನೆರೆ ಬರುವ ಪ್ರದೇಶಗಳಿಗೆ ಉತ್ತಮ ವಿಧಾನ. ಆದರೆ ಇಲ್ಲಿ ಹಾಕಿದ ಬೀಜಗಳೆಲ್ಲ ಮೊಳಕೆ ಬರುತ್ತದೆ ಎಂಬ ಖಾತ್ರಿ ಇಲ್ಲ. ಅಲ್ಲದೆ ಭೂಮಿಯಲ್ಲಿ ಸ್ವಲ್ಪ ನೀರಿನ ತೇವಾಂಶ ಇದ್ದ ಸಂದರ್ಭದಲ್ಲಿ ಬೀಜ ಹಾಳಾಗುವ ಸಂಭವ ಹೆಚ್ಚು. ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ರೈತರು ಈ ಪ್ರಕಾರದ ನೇಜಿಯನ್ನು ಅಲವಂಬಿಸಿದವರು.

ನೇಜಿಯ ನಾಲ್ಕನೇ ಪ್ರಕಾರ ಅಗ್ಗದ ನೇಜಿ ಎಂದರೆ ನೀರು ನೇಜಿ. ಇದನ್ನು ಕಲಸಿ ಹಾಕಿದ ನೇಜಿ ಎಂದೂ ಕರೆಯುತ್ತಾರೆ. ಸರಿಯಾಗಿ ಮಳೆಯಾಗಿ ನೀರು ನಿಂತ ಮೇಲೆ ಈ ನೇಜಿಯನ್ನು ಮಾಡುತ್ತಾರೆ. ನೆರೆ ಬರುವ ಗದ್ದೆಗಳಿಗೆ ಈ ನಾಟಿ ಆಗುವುದಿಲ್ಲ. ಒಂದು ವೇಳೆ ಸಾಧಾರಣ ಮಳೆ ಬಂದು ಒಂದು ಸಲ ಈ ಬೆಳೆ ಉಳಿದು ಹೋದರೆ ಉತ್ತಮ ಫಸಲು ಕಡಿಮೆ ಖರ್ಚಿನಿಂದ ಬರುತ್ತದೆ. ಇತ್ತೀಚೆಗೆ ಕೆಲಸದ ಜನರ ಕೊರತೆಯಿಂದಾಗಿ ನೀರು ನೇಜಿಯ ನಾಟಿಯನ್ನೇ ಅವಲಂಬಿಸಲಾಗುತ್ತದೆ.

ಸುಗ್ಗಿ ಮತ್ತು ಕೊಳಕೆ ಬೆಳೆಯ ಸಂದರ್ಭಗಳಲ್ಲಿ ನೀರು ನೇಜಿಯನ್ನೇ ಮಾಡುತ್ತಾರೆ. ಬೀಜವನ್ನು ಮೊಳಕೆ ಬರಿಸಿ ಗದ್ದೆಯನ್ನು ಹದ ಮಾಡಿ ಬೀಜ ಹಾಕಿದ ಒಂದು ದಿನ ನೀರನ್ನು ಹಾಗೆಯೇ ಇರಿಸಿ ಮರು ದಿನ ನೀರು ಹೊರಹಾಕಿ ಗದ್ದೆಯನ್ನು ಒಣಗಿಸಲಾಗುತ್ತದೆ. ನೀರಿನೊಳಗಿನಿಂದ ಸುಗ್ಗಿಕೊಳತೆಯ ಬೀಜ ಮೇಲೆ ಬರುವುದಿಲ್ಲ. ಇದಕ್ಕೆ ನಂಜು ನೀರು ಹೊರಗೆ ಬಿಡುವುದು ಎಂದು ಹೆಸರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಬೆಳೆಗಳಾಗಿ ಬತ್ತವನಲ್ಲದೆ ಉದ್ದು, ಹೆಸರು, ಹುರುಳಿ, ಎಳ್ಳು ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಸುತ್ತಿದ್ದರು. ಈ ಧಾನ್ಯಗಳ ಬೆಳೆಯ ಮೂಲಕ ಬತ್ತದ ಬೆಳೆಗೆ ಮಣ್ಣಿನ ಫಲವತ್ತತೆ ಹೆಚ್ಚುತ್ತಿತ್ತು. ಭೂಮಿಯಲ್ಲಿ ದನ, ಎಮ್ಮೆ, ಕೋಣ, ಎತ್ತುಗಳ ಸಾಕಾಣಿಕೆಯ ಮೂಲಕವಾಗಿ ಗೊಬ್ಬರದ ಅಂಕ ಇತ್ತು. ಯಾವುದೆ ರಾಸಾಯನಿಕ ಗೊಬ್ಬರಗಳ ಸಹಾಯವಿಲ್ಲದೆ ಉತ್ತಮ ಬೆಳೆ ಬರುತ್ತಿತ್ತು. ಇಂದು ಕೃಷಿ ಭೂಮಿಗಳನ್ನು ಕಾರ್ಖಾನೆಗಳು ಆಕ್ರಮಿಸುತ್ತಿವೆ. ರೈತರು ರೋಗದಿಂದ ಸಾಯುತ್ತಿದ್ದಾರೆ. ಕೂಲಿ ಕಾರ್ಮಿಕರ ಕೊರತೆಯಿಂದ ಸಾಗುವಳಿಯ ಕೆಲಸ ದುಬಾರಿ ಆಗಿ, ಹಿಂದೆ ಗೇಣಿ ಕೊಟ್ಟು ಬದುಕುತ್ತಿದ್ದ ಜನ ಇಂದು ಗೇಣಿ ಕೊಡದೆಯೂ ಬೆಳೆ ಮಾಡಲು ಸಾಧ್ಯವಿಲ್ಲ ದವರಾಗಿದ್ದಾರೆ. ರೈತರ ಮಕ್ಕಳು ಯಾರೂ ಕೃಷಿ ಕೆಲಸಕ್ಕೆ ನಿಲ್ಲುವವರಿಲ್ಲ. ಎಲ್ಲರ ನಿರ್ಲಕ್ಷದಿಂದ ದಕ್ಷಿಣ ಕನ್ನಡದ ಕೃಷಿ ಬದುಕು ಇಂದು ವಿನಾಶದ ಅಂಚಿನಲ್ಲಿದೆ.

*ಜಿ.ಎ.ಎಸ್.*


**ದಕ್ಷಿಣ ಭಾರತದ ಕೃಷಿ - ಪಕ್ಷಿನೋಟ** ಭಾರತ ಉಪಖಂಡವು ಬಹುತೇಕ ಭೌಗೋಳಿಕ ಪ್ರತ್ಯೇಕತೆಯನ್ನು ಹೊಂದಿದ್ದು, ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡಿದೆ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಹಬ್ಬಿರುವ ಭೂ ಭಾಗವನ್ನು 'ಭರತವರ್ಷ' ಎಂದು ಕರೆಯುವರು. ಈ ಭರತ ಖಂಡವು ಹಿಂದೂ ಪುರಾಣಗಳಲ್ಲಿ ಉಲ್ಲೇಖಿತವಾಗಿರುವ ಸಪ್ತಭೂಖಂಡಗಳನ್ನೊಳಗೊಂಡ "ಜಂಬೂ ದ್ವೀಪದ" ಕೇಂದ್ರವಾಗಿದೆ. ಪುರಾಣಗಳಲ್ಲಿ ಆರ್ಯರ ಪ್ರಾಧಾನ್ಯತೆಯ ಉತ್ತರಭಾಗವನ್ನು 'ಆರ್ಯಾವರ್ತ'ವೆಂದು, ವಿಂಧ್ಯಾ ಸಾತ್ಪುರ ಪರ್ವತಗಳ ದಕ್ಷಿಣಕ್ಕಿರುವ ದ್ರಾವಿಡ ಮತ್ತು ಮೂಲ ಭಾರತೀಯ - ಪ್ರಾಧಾನ್ಯತೆಯ ಪ್ರದೇಶವನ್ನು

'ದಕ್ಷಿಣಾ ಪಥ'ವೆಂದು ಕರೆಯುವರು. ಏಷ್ಯಾಖಂಡದ ದಕ್ಷಿಣದಲ್ಲಿರುವ ಭಾರತ ದೊಡ್ಡ ಪರ್ಯಾಯ ದ್ವೀಪವಾಗಿದೆ. ಭಾರತ $8.4^0$ ಉತ್ತರದಿಂದ $37.6^0$ಉ.ಅಕ್ಷಾಂಶದವರೆಗೆ ವಿಸ್ತರಿಸಿದ್ದು ಸಂಪೂರ್ಣವಾಗಿ ಉತ್ತರ ಗೋಳಾರ್ಧದಲ್ಲಿದೆ. ಈ ಭೂಪ್ರದೇಶವು ಪ್ರಧಾನವಾಗಿ ಮೂರು ಭೂಸ್ವರೂಪವನ್ನು ಒಳಗೊಂಡಿದ್ದು, ಪರ್ವತಗಳು, ಪ್ರಸ್ಥಭೂಮಿ ಮತ್ತು ಮೈದಾನಗಳು ಇಲ್ಲಿದೆ. ಉತ್ತರದ ಹಿಮಾಲಯ ಪರ್ವತಗಳು ಎತ್ತರ ಮತ್ತು ವಿಸ್ತಾರಗಳಲ್ಲಿ ಜಗತ್ತಿನಲ್ಲಿ ಅದ್ವಿತೀಯವಾಗಿವೆ. ಇವುಗಳು ಭೂ ಇತಿಹಾಸದ ಇತ್ತೀಚಿನ ಅವಧಿಯಲ್ಲಿ ನಿರ್ಮಾಣಗೊಂಡಿರುವ ಮಡಿಕೆ ಪರ್ವತಗಳು. ಇದಕ್ಕೆ ವಿರುದ್ಧವಾಗಿ ಪ್ರಸ್ಥಭೂಮಿಯು ಪರ್ಯಾಯ ದ್ವೀಪದ ವಿಸ್ತಾರವಾದ ಭಾಗವನ್ನು ಒಳಗೊಂಡಿದೆ. 27.4ರಷ್ಟು ಪ್ರಸ್ಥಭೂಮಿಯಿಂದ ಭಾರತವು ಕೂಡಿದೆ. ತ್ರಿಕೋನಾಕೃತಿಯ ಪ್ರಸ್ಥಭೂಮಿಯು ಪೂರ್ವದಲ್ಲಿ ಬಂಗಾಳಕೊಲ್ಲಿ, ಪಶ್ಚಿಮದಲ್ಲಿ ಅರಬ್ಬಿಸಮುದ್ರಗಳ ನ್ನೊಳಗೊಂಡಿದ್ದು, ಹಿಂದೂ ಮಹಾಸಾಗರದೊಂದಿಗೆ ಹೆಣೆದುಕೊಂಡಿದೆ. ಈ ಪ್ರಸ್ಥಭೂಮಿಯ ಸರಾಸರಿ ಎತ್ತರ ಸುಮಾರು 500ರಿಂದ 1000 ಮೀಗಳಷ್ಟಿದ್ದು 300 ಮೀ ಸಮೋನ್ನತ ರೇಖೆಯ ಸುತ್ತಲಿನ ಮೈದಾನದಿಂದ ಇದನ್ನು ಪ್ರತ್ಯೇಕಿಸಿದೆ. ಈ ಪ್ರಸ್ಥಭೂಮಿಯಲ್ಲಿ ದಖನ್ ಪ್ರಸ್ಥಭೂಮಿಯು ಸು. 7 ಲಕ್ಷ ಚ.ಕಿ.ಮೀ ಪ್ರದೇಶವನ್ನೊಳಗೊಂಡಿದೆ.

**ರಾಜ್ಯಗಳ ವಿಸ್ತೀರ್ಣ :** ತ್ರಿಕೋನಾಕೃತಿಯ ಭೂಸ್ವರೂಪವನ್ನು ಹೊಂದಿರುವ ದಕ್ಷಿಣ ಭಾರತದಲ್ಲಿಯ ಈ ರಾಜ್ಯಗಳು ಭಾರತದ ಒಟ್ಟು 32,87,263 ಚ.ಕಿ.ಮೀ ವಿಸ್ತೀರ್ಣದಲ್ಲಿ 6,35,280 ಚ.ಕಿ.ಮೀ ಪ್ರದೇಶವನ್ನು ಒಳಗೊಂಡಿವೆ. ಇದು ಕ್ರಮವಾಗಿ ಆಂಧ್ರಪ್ರದೇಶ 2,75,068 ಚ.ಕಿ.ಮೀ ಕರ್ನಾಟಕ 1,91,791 ಚ.ಕಿ.ಮೀ. ತಮಿಳುನಾಡು 1,30,058 ಚ.ಕಿ.ಮೀ. ಮತ್ತು ಕೇರಳ ರಾಜ್ಯವು 38,363 ಚ.ಕಿ.ಮೀ ಪ್ರದೇಶವನ್ನು ಹೊಂದಿದೆ. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ 1,21,01,93,422ರಷ್ಟಿದ್ದು ಇದರಲ್ಲಿ ಆಂಧ್ರಪ್ರದೇಶವು 8,46,65,533, ಕರ್ನಾಟಕ 6,11,30,704, ತಮಿಳುನಾಡು 7,21,38,958 ಮತ್ತು ಕೇರಳ 3,33,87,677 ಜನಸಂಖ್ಯೆಯನ್ನು ಹೊಂದಿದ್ದು ನಾಲ್ಕು ರಾಜ್ಯಗಳ ಒಟ್ಟು ಜನಸಂಖ್ಯೆ 25,13,22,872ರಷ್ಟಾಗಿದೆ.

**ಮೇಲ್ಮೈಲಕ್ಷಣ :** ವಿಸ್ತಾರವಾದ ಭೂಪ್ರದೇಶವನ್ನು ಹೊಂದಿರುವ ದಖನ್ ಪ್ರಸ್ಥಭೂಮಿಯು ಭೂಮಿಯ ಅತಿ ಪುರಾತನ ಭಾಗಗಳಲ್ಲಿ ಒಂದಾಗಿದ್ದು ಇದರ ಭೂ ಸ್ವರೂಪಗಳು ಬಹುತೇಕ ಅವಶೇಷ ಪರ್ವತಗಳಾಗಿವೆ. ಇವು ನಿರ್ಮಾಣದ ಅವಧಿಯಿಂದ ನಿರಂತರ ಭೂ ಸವೆತ ಹೊಂದಿದ್ದು ಬಹುತೇಕ ಅಂತ್ಯ ಸ್ವರೂಪ ಮೈದಾನಗಳಾಗಿವೆ. ಹೀಗೆ ಪರ್ಯಾಯ ಪ್ರಸ್ಥಭೂಮಿಯು ವೃದ್ಧಾಪ್ಯ ಹಂತದ ಭೂ ಸ್ವರೂಪಗಳನ್ನು ಪ್ರತಿಬಿಂಬಿಸುವುದು. ಇದು ಶಿಲಾಗೋಳದ ಭಾಗವಾಗಿದ್ದು ಪುರಾತನ ಸಂಕೀರ್ಣ ಶಿಲೆಗಳಿಂದ ರೂಪಿತವಾಗಿದೆ. ಬಹುತೇಕ ಶಿಲಾಮಡಿಕೆ ರಹಿತವಾಗಿದೆ. ಇಲ್ಲಿಯೂ ಒತ್ತಡದಿಂದ ಸ್ತರಭಂಗ, ಬಿರುಕು ಹಾಗೂ ಊರ್ಧ್ವ ಚಲನೆಗಳುಂಟಾಗಿವೆ. ಹಾಗೆಯೇ ಈ ಪ್ರಸ್ಥಭೂಮಿಯು ದೀರ್ಘಾವಧಿಯ ಸವೆತಕ್ಕೀಡಾಗಿ, ಇದರ ಪರ್ವತಗಳು ಕೇವಲ ಉನ್ನತ ಭಾಗಗಳಂತೆ ಕಂಡುಬರುತ್ತವೆ. ನದಿಗಳು ವಿಸ್ತಾರವಾದ ಹೆಚ್ಚು ಆಳವಲ್ಲದ ಕಣಿವೆಯಲ್ಲಿಯು ಹರಿಯುತ್ತವೆ. ತ್ರಿಕೋನಾಕೃತಿಯ ಈ ಪ್ರದೇಶವು ಪೂರ್ವದಲ್ಲಿ ಬಂಗಾಳಕೊಲ್ಲಿ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಮತ್ತು ದಕ್ಷಿಣದಲ್ಲಿ ಹಿಂದೂ ಮಹಾಸಾಗರದೊಡನೆ ಚಾಚಿಕೊಂಡಿದೆ. ಪರ್ಯಾಯ ದ್ವೀಪದ ಅಣ್ಣಾಮಲೈ ಬೆಟ್ಟಗಳಲ್ಲಿರುವ 'ಆನೈಮುಡಿ' ಅತಿ ಎತ್ತರದ ಶಿಖರವಾಗಿದೆ. ಈ ಪುರಾತನ ಪ್ರಸ್ಥಭೂಮಿಯು ನಿರಂತರ ಭೂಸವೆತ ಕಾರ್ಯದಿಂದ ವೃದ್ಧಾಪ್ಯ ಭೂ ಸ್ವರೂಪಗಳಿಂದ ಕೂಡಿದೆ. ಈ ಪ್ರಸ್ಥಭೂಮಿಯನ್ನು ವಿವಿಧ ದಿಕ್ಕಿಗೆ ಹರಿಯುವ ನದಿಗಳು ಕೊರೆದು ಛಿದ್ರೀಕರಿಸಿವೆ. ಇದು ಜೀವ ನಿರ್ಮಾಣ ಯುಗಕ್ಕಿಂತ ಪೂರ್ವದಲ್ಲಿ ಅಂದರೆ ಕ್ಯಾಂಬ್ರಿಯನ್ ಪೂರ್ವ ಭೂ ಯುಗದಲ್ಲಿ ನಿರ್ಮಾಣಗೊಂಡಿರುವ ಅತಿ ಪುರಾತನ ಭೂರಾಶಿಯಾಗಿದೆ. ಈ ಪ್ರಸ್ಥಭೂಮಿಯು ಪುರಾತನ ಗೊಂಡ್ವಾನ ಭೂ ರಾಶಿಯ ಕೇಂದ್ರ ಭಾಗವೆಂದು ಪರಿಗಣಿಸಲ್ಪಟ್ಟಿದೆ. ಭೂ ವಿಭಾಗಗಳ ಚಲನೆಯ ಸಿದ್ಧಾಂತದಲ್ಲಿ ಈ ಪ್ರಸ್ಥಭೂಮಿಯನ್ನು "ಇಂಡಿಯನ್ ಪ್ಲೇಟ್" ಎಂದು ಪರಿಗಣಿಸಲಾಗಿದೆ. ಇದು ಅಗ್ನಿಶಿಲೆ ಮತ್ತು ರೂಪಾಂತರ ಶಿಲೆಗಳನ್ನೊಳಗೊಂಡಿದೆ. ಅಲ್ಲಲ್ಲಿ ಕಂಡುಬರುವ ಪುರಾತನ ಕಣಶಿಲೆಗಳು ಸಂಪೂರ್ಣವಾಗಿ ರೂಪಾಂತರಗೊಂಡಿವೆ. ಸಾತ್ಪುರ ಪರ್ವತವು ಉತ್ತರ ನರ್ಮದಾ ಮತ್ತು ದಕ್ಷಿಣದಲ್ಲಿ ತಪತಿ ನದಿಗಳ ನಡುವೆ ಪೂರ್ವ ಪಶ್ಚಿಮವಾಗಿ ವಿಂಧ್ಯ ಪರ್ವತಗಳಿಗೆ ಸಮಾನಾಂತರವಾಗಿ ಹಬ್ಬಿದೆ. ಓಸಾಲ್ಕ್ ಹೊರಪದರದಿಂದ ಆವರಿಸಲ್ಪಟ್ಟ 'ಡೆಕ್ಕನ್ ಟ್ರಾಪ್' ಲಾವಾರಸದ ಹೊರಹೊಮ್ಮುವಿಕೆಯಿಂದ ನಿರ್ಮಿತವಾಗಿದೆ. ಇದು ಪಶ್ಚಿಮ ಆಂಧ್ರ ಪ್ರದೇಶ ಹಾಗೂ ಉತ್ತರ ಕರ್ನಾಟಕಗಳನ್ನು ಒಳಗೊಂಡಿದೆ. ಹಾಗೆಯೇ ಕೃಷ್ಣಾ, ಗೋದಾವರಿ ಮತ್ತು ಭೀಮಾ ನದಿಗಳ ಜಲಾನಯನ ಪ್ರದೇಶವನ್ನು ಹೊಂದಿದೆ. ತೆಲಂಗಾಣ ಪ್ರದೇವು ಪಶ್ಚಿಮ ಘಟ್ಟದ ಮುಂಚಾಚುಗಳ ಪೂರ್ವ ಭಾಗವನ್ನು ಒಳಗೊಂಡಿದ್ದು, ಗೋದಾವರಿಯು ಈ ಪ್ರದೇಶವನ್ನು ಉತ್ತರ ಮತ್ತು ದಕ್ಷಿಣದ ಭಾಗಗಳಾಗಿ ಪ್ರತ್ಯೇಕಿಸುವುದು. ಉತ್ತರ ಭಾಗವು ವಾರ್ಧ ಮತ್ತು ಪ್ರಣಹಿತ ನದಿಗಳ ನಡುವೆ ಇದ್ದು, ಬೆಟ್ಟಗುಡ್ಡಗಳಿಂದ ಆವರಿಸಿದೆ. ಆದರೆ ದಕ್ಷಿಣದಲ್ಲಿ ವಿಸ್ತಾರವಾದ ತಗ್ಗುವಲಯವಿದೆ. 'ಕರ್ನಾಟಕ ಪ್ರಸ್ಥಭೂಮಿ' ದಕ್ಷಿಣ ಭಾಗದಲ್ಲಿ ಹಿಂದಿನ ಮೈಸೂರು ಸಂಸ್ಥಾನದ ಬಹು ಭಾಗವನ್ನೊಳಗೊಂಡಿದೆ. ಆದುದರಿಂದಲೆ ಇದನ್ನು 'ಮೈಸೂರು ಪ್ರಸ್ಥಭೂಮಿ' ಎಂದು ಕರೆಯುವರು. 600 ಮೀ ಸಮೋನ್ನತ ರೇಖೆಯು ಉತ್ತರಭಾಗದಿಂದ ಕರ್ನಾಟಕ ಪ್ರಸ್ಥಭೂಮಿಯನ್ನು ಪ್ರತ್ಯೇಕಿಸಿದೆ. ಇದು ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಕೆಲವು ಭಾಗಗಳನ್ನು ಹೊಂದಿದೆ. ಈ ಪ್ರಸ್ಥಭೂಮಿಯ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳಿದ್ದು ಪೂರ್ವ ಮತ್ತು ಪಶ್ಚಿಮದಲ್ಲಿ ಕ್ರಮವಾಗಿ ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳು ಕಂಡುಬರುವುವು. ಇದರ ಉತ್ತರ ಭಾಗವು ಕೃಷ್ಣಾ ಹಾಗೂ ತುಂಗಭದ್ರಾ ಮತ್ತು ದಕ್ಷಿಣ ಭಾಗವು ಕಾವೇರಿ ನದಿಯ ಜಲಾನಯನ ಪ್ರದೇಶದಿಂದ ಕೂಡಿದೆ. ಭೂಸ್ವರೂಪಗಳ ಆಧಾರದ ಮೇಲೆ ಕರ್ನಾಟಕ ಪ್ರಸ್ಥ ಭೂಮಿಯನ್ನು ಮಲೆನಾಡು ಮತ್ತು ಮೈದಾನ ಪ್ರದೇಶವೆಂದು ವಿಂಗಡಿಸಿದ್ದು, ಪಶ್ಚಿಮ ಘಟ್ಟಗಳು ಪಶ್ಚಿಮದಲ್ಲಿ ಗಡಿಯಂತೆ ದಕ್ಷಿಣೋತ್ತರವಾಗಿ ಉತ್ತರದಲ್ಲಿ ತಪತಿಯ ಬಳಿ ಇರುವ 'ಸತ್‌ಮೂಲ' ಬೆಟ್ಟಗಳಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೆ $21^0$ ಉತ್ತರ ಅಕ್ಷಾಂಶದಿಂದ $11^0$ ಉತ್ತರ ಅಕ್ಷಾಂಶದವರೆಗೆ ಸುಮಾರು 1600 ಕಿ.ಮೀ ಉದ್ದವಾಗಿ ಹಬ್ಬಿವೆ. ಇವು ಅರಬ್ಬಿ ಸಮುದ್ರಕ್ಕೆ ಸಮೀಪದಲ್ಲಿದ್ದು ಕರಾವಳಿ ಮೈದಾನ ಕಿರಿದಾಗಿದೆ. ಬಹುತೇಕ ಪೂರ್ವ ಮತ್ತು ಪಶ್ಚಿಮಕ್ಕೆ ಹರಿಯುವ ನದಿಗಳ ಜಲವಿಭಾಜಕ ರೇಖೆಯು ಪಶ್ಚಿಮ ಘಟ್ಟಗಳ ಶಿಖರಾಗ್ರದಿಂದಾಗಿದೆ. ಈ ಪ್ರದೇಶದ ಲಾವಾ

## ದಕ್ಷಿಣ ಭಾರತ


ಉ
ಪ.
ಪೂ
ದ
ಹೈದ್ರಾಬಾದ್
ಆಂಧ್ರಪ್ರದೇಶ
ಬಂಗಾಳ ಕೊಲ್ಲಿ
ಕರ್ನಾಟಕ
ಅರಬ್ಬೀ
ಸಮುದ್ರ
ಬೆಂಗಳೂರು
ಚೆನ್ನೈ
ಪಾಂಡಿಚೇರಿ
ಕೇರಳ
ತಮಿಳುನಾಡು
ತಿರುವನಂತಪುರಂ
ಶ್ರೀಲಂಕಾ
ಹಿಂದೂ ಮಹಾಸಾಗರ

ನಿರ್ಮಿತ ಶಿಲಾಸ್ತರಗಳು ಭೂ ಸವೆತದಿಂದ ವಿಶಿಷ್ಟ ಸ್ವರೂಪಗಳನ್ನೊಳಗೊಂಡಿದ್ದು ಅಲ್ಲಲ್ಲಿ ಮೆಸ್ತಾ ಹಾಗೂ ಇನ್‌ಸೆಲ್‌ಬಗ್ ಸ್ವರೂಪಗಳು ಕಂಡುಬರುತ್ತವೆ. ಗೋದಾವರಿ ಮತ್ತು ಭೀಮಾನದಿಗಳು 'ಶಿರೋಮುಖ' ಭೂಕೊರೆತದಿಂದ ಉಂಟಾಗಿದ್ದು ಇಲ್ಲಿ ಸು 33 ಬಿಸಿನೀರಿನ ಚಿಲುಮೆಗಳಿವೆ. ತಾಲ್‌ಘಾಟ್ ಮತ್ತು ಬೋರ್‌ಘಾಟ್ ಮುಖ್ಯ ಕಣಿವೆ ಮಾರ್ಗಗಳು ಇಲ್ಲಿವೆ. ಪಶ್ಚಿಮ ಘಟ್ಟಗಳ ದಕ್ಷಿಣ ಭಾಗವು ಉತ್ತರದಲ್ಲಿ 160 ಅಕ್ಷಾಂಶದಿಂದ ದಕ್ಷಿಣದಲ್ಲಿ ನೀಲಗಿರಿಯವರೆಗೂ ಹಬ್ಬಿದ್ದು, ಇವು ಪೂರ್ವ ಘಟ್ಟಗಳನ್ನು ನೀಲಗಿರಿ ಬಳಿಯ ಗುಡಲೂರಿನಲ್ಲಿ ಸಂಧಿಸುತ್ತವೆ. ಇದರ ಸರಾಸರಿ ಎತ್ತರ 1220 ಮೀ. ಇಲ್ಲಿ ಅನೇಕ ಶಿಖರಗಳಿದ್ದು ಕರ್ನಾಟಕದ ಕುದುರೆಮುಖ 1892ಮೀ, ಪುಷ್ಪಗಿರಿ 1712 ಮೀ ಹಾಗೂ ನೀಲಗಿರಿಯ ದೊಡ್ಡಬೆಟ್ಟ 2637 ಮೀ ಎತ್ತರ ಹೊಂದಿವೆ.

ಪೂರ್ವ ಘಟ್ಟಗಳು ಒರಿಸ್ಸಾದ ಮಹಾನದಿಯಿಂದ ದಕ್ಷಿಣದಲ್ಲಿ ತಮಿಳುನಾಡಿನ ವೈಗೈ ನದಿಯವರೆಗೆ ಕಂಡುಬರುತ್ತವೆ. ಇವುಗಳ ರಚನೆಯಲ್ಲಾಗಲಿ, ಭೂ ಸ್ವರೂಪದಲ್ಲಾಗಲಿ ಏಕರೂಪತೆ ಕಂಡುಬರುವುದಿಲ್ಲ. ಈ ವಲಯದಲ್ಲಿ ಮಲಿಯಾ ಬೆಟ್ಟಗಳು ಅತಿಮುಖ್ಯವಾದವು. ಇವು ಮಹಾನದಿ ಮತ್ತು ಗೋದಾವರಿ ನದಿಗಳ ನಡುವೆಯಿದ್ದು ವಿಶಾಖಪಟ್ಟಣದ ಬಳಿಯಿರುವ ಆಮುರಕೊಂಡ 1680 ಮೀ ಎತ್ತರವಾಗಿದ್ದು ಪೂರ್ವ ಘಟ್ಟದಲ್ಲಿಯೇ ಅತಿ ಎತ್ತರದ ಶಿಖರವಾಗಿದೆ.

ಆಂಧ್ರ ಪ್ರದೇಶದ ದಕ್ಷಿಣ ಭಾಗದಲ್ಲಿ ಪೆನ್ನಾರ್ ಮತ್ತು ಕೃಷ್ಣಾ ನದಿಗಳ ನಡುವೆಯೂ ಪೂರ್ವ ಘಟ್ಟಗಳು ಪರ್ವತದ ಲಕ್ಷಣವನ್ನೊಳಗೊಂಡಿವೆ. 'ನಲ್ಲುಮಲೈ' ಇಲ್ಲಿಯ ಮುಖ್ಯ ಶ್ರೇಣಿಯಾಗಿದೆ. ಇವುಗಳ ನೈರುತ್ಯದಲ್ಲಿ ಪಾಲ್ಕೊಂಡ ಶ್ರೇಣಿಯಿದ್ದು ಇಲ್ಲಿ ಪ್ರಸಿದ್ಧ ತಿರುಪತಿ ಯಾತ್ರಾ ಸ್ಥಳವಿದೆ. ತಮಿಳುನಾಡಿನಲ್ಲಿ ಪೂರ್ವ ಘಟ್ಟಗಳು ಅಸ್ತವ್ಯಸ್ತವಾಗಿದ್ದು ಹರಡಿಕೊಂಡಿವೆ. ಆರ್ಕಾಟ್ ಜಿಲ್ಲೆಗಳಲ್ಲಿ ಇವುಗಳನ್ನು 'ಜಾವರಿ ಬೆಟ್ಟ'ಗಳೆಂದು, ತಿರುಚನಾಪಳ್ಳಿಯಲ್ಲಿ 'ಕೊಲ್ಲುಮಲೈ ಮತ್ತು ಪಚ್ಚೈಮಲೈ' ಎಂದು ಸೇಲಂನಲ್ಲಿ 'ಶಿವರಾಮ್ ಮತ್ತ ಗೊಂಡು ಮಲೈ' ಎಂದು ಕರ್ನಾಟಕದ ಚಾಮರಾಜನಗರದಲ್ಲಿ 'ಬಿಳಿಗಿರಿರಂಗನ ಬೆಟ್ಟ'ಗಳೆಂದು ಕರೆಯುವರು. ನೀಲಗಿರಿ ಬೆಟ್ಟಗಳಲ್ಲಿ ದೊಡ್ಡ ಬೆಟ್ಟ ಉನ್ನತ ಶಿಖರವಾಗಿದೆ. ಇದು 2637 ಮೀ ಎತ್ತರವಾಗಿದೆ. ಇದರ ಪಾದಗಳಲ್ಲಿಯೇ ನೀಲಗಿರಿ ಗಿರಿಧಾಮವಿರುವುದು. ನೀಲಗಿರಿಯ ವೃತ್ತಾಕಾರ ಜಲವ್ಯವಸ್ಥೆಯನ್ನು ಒಳಗೊಂಡಿದ್ದು, ಭೂ ಪ್ರದೇಶವು ಮೇಲೆತ್ತಲ್ಪಟ್ಟಿದೆ.

ದೇಶದ ಕರಾವಳಿ ಮೈದಾನ ಸಾಕಷ್ಟಿದ್ದು ಇದರಲ್ಲಿ ಪೂರ್ವ ಕರಾವಳಿ ವಿಸ್ತಾರವಾಗಿದ್ದರೆ, ಪಶ್ಚಿಮ ಕರಾವಳಿ ಅತಿ ಕಿರಿದಾಗಿದೆ. ಪೂರ್ವ ಕರಾವಳಿ ಒಣಹವೆಯನ್ನು ಹೊಂದಿದ್ದರೆ ಪಶ್ಚಿಮ ಕರಾವಳಿ ಮೈದಾನ ಹೆಚ್ಚು ಮಳೆ ಪಡೆಯುತ್ತಿದ್ದು ತೇವಯುತವಾಗಿದೆ. ಪೂರ್ವಕರಾವಳಿ ವಿಸ್ತಾರವಾದ ಮುಖಜಭೂಮಿಯನ್ನು ಹೊಂದಿದೆ. ಪಶ್ಚಿಮ ಕರಾವಳಿ ಆಳವಾದ, ನೀಳವಾದ ನದಿ ಅಳಿವೆಗಳನ್ನು ಹೊಂದಿದ್ದು ಸ್ವಾಭಾವಿಕ ಬಂದರುಗಳಿಗೆ ಕಾರಣವಾಗಿದೆ. ಈ ಮೈದಾನದ ತೀರದಲ್ಲಿ ಹಲವಾರು ಮರಳು ದಿಬ್ಬಗಳಿದ್ದು ತೀರದುದ್ದಕ್ಕೂ ಹಲವಾರು ಲಗೂನ್‌ಗಳಿವೆ. ಇವುಗಳಲ್ಲಿ ಚಿಲ್ಕ ಸರೋವರ ಅತಿ ಮುಖ್ಯವಾದುದು. ಇದು 70ಕಿ.ಮೀ ಉದ್ದ 20ಕಿ.ಮೀ. ಅಗಲವಾಗಿದೆ. ಇದನ್ನು ಭಾರತದ ಅತಿ ದೊಡ್ಡ ಸರೋವರ ಎನ್ನಲಾಗಿದೆ. ಉತ್ತರದ ಉತ್ಕಲ್ ಮೈದಾನದಿಂದ ಚೆನ್ನೈನ 50 ಕಿ.ಮೀ. ಉತ್ತರಕ್ಕಿರುವ ಪುಲಿಕಾಟ್ ಸರೋವರದವರೆಗೆ ಆಂಧ್ರದ ಕರಾವಳಿ ಮೈದಾನವಿದೆ. ಗೋದಾವರಿ ಮತ್ತು ಕೃಷ್ಣಾ ನದಿಗಳ ಮುಖಜ ಭೂಮಿಯಲ್ಲಿ ಕೊಲ್ಲೇರು ಸರೋವರವಿದೆ. ಪುಲಿಕಾಟ್ ಸರೋವರದಿಂದ ಕನ್ಯಾಕುಮಾರಿಯವರೆಗಿನ ಮೈದಾನವನ್ನು 'ತಮಿಳುನಾಡಿನ ಕರಾವಳಿ' ಎನ್ನುವರು. ಇದನ್ನು "ಕೋರಮಂಡಲ"ವೆಂದು ಕರೆಯುವರು. ಪಶ್ಚಿಮ ಕರಾವಳಿ ಮೈದಾನದಲ್ಲಿ ಕೊಂಕಣ, ಕರ್ನಾಟಕ ಮತ್ತು ಮಲಬಾರ್ ತೀರ ಪ್ರದೇಶಗಳು ಕಂಡುಬರುವುವು. ಕರ್ನಾಟಕದ ಕರಾವಳಿ ಮೈದಾನವು 225 ಕಿ.ಮೀ ಉದ್ದವಾಗಿದೆ. ಹಾಗೆಯೇ 'ಮಲಬಾರ್' ಕೇರಳದ ಕರಾವಳಿ ತೀರವಾಗಿದ್ದು ಉತ್ತರದಲ್ಲಿ ಕಣ್ಣಾನೂರಿನಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೆ ಸು. 550 ಕಿ.ಮೀ ಉದ್ದವಾಗಿದೆ. 'ವೆಂಬನಾಡ್' ಸರೋವರವು ಮಲಬಾರ್ ತೀರದ ಅತಿ ದೊಡ್ಡ ಹಿನ್ನೀರಿನ ಭಾಗವಾಗಿದೆ. ಇದಲ್ಲದೆ 'ಅಷ್ಟಮುಡಿ' ಸರೋವರವು ಅತಿ ಸುಂದರವಾಗಿದೆ.

**ಹವಾಗುಣ :** ದಕ್ಷಿಣ ಪರ್ಯಾಯ ದ್ವೀಪವು ಉಷ್ಣವಲಯದಲ್ಲಿ ಚಾಚಿಕೊಂಡಿದೆ. ಇದರಿಂದಾಗಿ ಉಷ್ಣವಲಯದ ಮಾನ್ಸೂನ್ ವಾಯುಗುಣದ ಲಕ್ಷಣಗಳು ಇಲ್ಲಿ ಕಂಡುಬರುತ್ತವೆ. ಸುತ್ತಲಿನ ಸಾಗರದ ಪ್ರಭಾವದಿಂದಾಗಿ ಇದರ ಉಷ್ಣಾಂಶವು ಪ್ರಭಾವಿತವಾಗುವುದು ಕಂಡುಬರುತ್ತದೆ. ಇದಲ್ಲದೆ ಪಶ್ಚಿಮ ಘಟ್ಟ, ಪೂರ್ವಘಟ್ಟ, ಕೇಂದ್ರದ ಉನ್ನತ ಪ್ರದೇಶಗಳಿಂದಾಗಿ ಪ್ರಾದೇಶಿಕ ಹವಾಗುಣ ಮತ್ತು ಮಳೆಯ ಹಂಚಿಕೆಯಲ್ಲಿ ಅತೀವ ಬದಲಾವಣೆಗಳನ್ನು ಕಾಣಬಹುದು. ಇದರ ಭೌಗೋಳಿಕ ಸ್ಥಾನವು ಮಾನ್ಸೂನ್ ಮಾರುತಗಳ ಮೇಲೆ ಹೆಚ್ಚು ಪ್ರಭಾವ ಬೀರುವುದು. ಪಶ್ಚಿಮದಲ್ಲಿರುವ ಅರಬ್ಬಿ ಸಮುದ್ರದ ಸಾಮೀಪ್ಯತೆ ಮಾತ್ರವಲ್ಲದೆ ಪೂರ್ವದಲ್ಲಿರುವ ಬಂಗಾಳಕೊಲ್ಲಿಯ ಪ್ರಭಾವವು ನೈರುತ್ಯ ಮತ್ತು ಈಶಾನ್ಯ ಮಾರುತಗಳನ್ನು ಒಳಗೊಂಡಿದೆ. ಮಾನ್ಸೂನ್ ಮಾರುತಗಳ ಉಗಮ, ಚಲನೆ ಹಾಗೂ ಮಳೆಯ ಪ್ರಮಾಣ ಹವಾಗುಣದೊಡನೆ ಸಂಬಂಧ ಹೊಂದಿದೆ. ಬೇಸಗೆಕಾಲದಲ್ಲಿ ಉಷ್ಣಾಂಶವು ಪ್ರಸ್ಥಭೂಮಿಯಲ್ಲಿ ಕ್ರಮೇಣ ಹೆಚ್ಚುತ್ತಾ ಹೋಗಿ ಏಪ್ರಿಲ್‌ನಲ್ಲಿ ದಕ್ಷಿಣ ಭಾರತವು ಗರಿಷ್ಠ ಉಷ್ಣಾಂಶವನ್ನು ಪಡೆಯುತ್ತದೆ. ಈ ಅವಧಿಯಲ್ಲಿ ದಕ್ಷಿಣದಲ್ಲಿ 270 ಸೆಂ.ಗಿಂತ ಉಷ್ಣಾಂಶವು ಹೆಚ್ಚಾಗಿರುವುದು. ಬೇಸಗೆಯ ಅವಧಿ ಪರ್ಯಾಯ ದ್ವೀಪದ ಒಳನಾಡಿನಲ್ಲಿ ಭಿನ್ನವಾಗಿರುವುದು. ಸಾಗರಗಳಿಗೆ ಸಮೀಪದಲ್ಲಿರುವ ಪ್ರದೇಶಗಳಲ್ಲಿ ವಾಯುಮಂಡಲದ ಉಷ್ಣಾಂಶವು ಅಧಿಕವಾಗಿರುವುದರಿಂದ ಪ್ರಚಲನ ಪ್ರವಾಹಗಳುಂಟಾಗಿ ಗುಡುಗು-ಸಿಡಿಲುಗಳಿಂದ ಕೂಡಿದ 'ಮಾನ್ಸೂನ್ ಪೂರ್ವದ' ಮಳೆ ಬೀಳುವುದು. ಈ ಅತ್ಯಲ್ಪ ಮಳೆಯು ಕಾಫಿ ಗಿಡಗಳು ಹಾಗೂ ಮಾವು ಹೂ ಬಿಡಲು ಅತೀ ಮುಖ್ಯವಾಗಿರುವುದರಿಂದ ಇದನ್ನು 'ಕಾಫಿ ಹೂ ಬಿಡುವ ಕಾಲದ ಮಳೆ' ಎಂದು ಕರೆಯುವರು ಹಾಗೂ 'ಮಾವಿನ ಹುಯ್ಲು' ಎನ್ನುವರು. ಒಳನಾಡಿನಲ್ಲಿ ಈ ಮಳೆಯನ್ನು 'ಅಡ್ಡಮಳೆ' ಎನ್ನುವರು. ಅರಬ್ಬಿ ಸಮುದ್ರದ ಮೂಲಕ ಹಾದು ಬರುವ ನೈರುತ್ಯ ಮಾನ್ಸೂನ್ ಸರಣಿಯು ದಕ್ಷಿಣೋತ್ತರವಾಗಿ ಗೋಡೆಯಂತೆ ಹಬ್ಬಿರುವ ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು 'ಆರೋಹ ಮಾದರಿಯ' ಮಳೆ ಬೀಳುವುದು. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ಕರ್ಕಾಟಕ ಸಂಕ್ರಾಂತಿ ವೃತ್ತದಿಂದ ದಕ್ಷಿಣದ ಕಡೆಗೆ ಸರಿಯತೊಡಗಿದಂತೆ ಇದನ್ನು ಅನುಸರಿಸಿ ಅಂತರ ಉಷ್ಣವಲಯ ಸಂಧಿಕ್ಷೇತ್ರವೂ ಸಹ ದಕ್ಷಿಣದ ಕಡೆಗೆ ಚಲನೆಗೀಡಾಗುವುದು. ಈ ಅವಧಿಯಲ್ಲಿ ದಕ್ಷಿಣದಲ್ಲಿ 27.50 ಸೆಂ.

ಉಷ್ಣಾಂಶವಿರುವುದು. ಚಳಿಗಾಲದಲ್ಲಿ ದೀರ್ಘವಾದ ಶುಭ್ರ ರಾತ್ರಿಯ ಅವಧಿಯಲ್ಲಿ ಉಷ್ಣಾಂಶ 'ವಿಪರ್ಯಯ ಕ್ರಿಯೆ'ಯಿಂದಾಗಿ ಮುಂಜಾನೆಯಲ್ಲಿ ಮಂಜು ಕವಿಯುವುದು. ಈ ಅವಧಿಯಲ್ಲಿ ಉಷ್ಣಾಂಶವು ದಕ್ಷಿಣದಲ್ಲಿ ಸರಾಸರಿ 250 ಸೆಂ.ಗಿಂತ ಅಧಿಕವಾಗುವುದು

**ಮಳೆ :** ಭಾರತದಲ್ಲಿ ಪ್ರಾದೇಶಿಕತೆಯ ವೈವಿಧ್ಯತೆಗಳ ನಿರ್ಮಾಣದಲ್ಲಿ ಮಳೆಯ ಹಂಚಿಕೆಯ ಪ್ರಭಾವವು ಮಹತ್ತರವಾದುದು. ಹವಾಗುಣದ ನಾಲ್ಕು ಋತುಮಾನಗಳಲ್ಲಿ ಬೀಳುವ ಮಳೆಯ ಹಂಚಿಕೆಯು ಈ ಕೆಳಕಂಡಂತಿದೆ.

| ಋತುಗಳು | ವಾರ್ಷಿಕ ಮಳೆಯ ಪ್ರಮಾಣ |
|---|---|
| ಬೇಸಗೆ ಕಾಲ | ಶೇ. 10 |
| ನೈಋತ್ಯ ಮಾನ್ಸೂನ್ ಮಾರುತಗಳ ಕಾಲ | ಶೇ. 75 |
| ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ | ಶೇ. 13 |
| ಚಳಿಗಾಲ | ಶೇ. 02 |

ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಮಳೆಯ ಹಂಚಿಕೆಯು ಅದರ ಋತುಕಾಲಿಕ ಪರಿಶ್ರಮಕ್ಕಿಂತಲೂ ವೈವಿಧ್ಯಮಯವಾಗಿದೆ. ಕಡಿಮೆ ಮಳೆ ಪಡೆಯುವ ಪ್ರದೇಶಗಳಲ್ಲಿ ಅಂದರೆ 40ರಿಂದ 60 ಸೆ.ಮೀ. ಮಳೆ ಪಡೆಯುವ ಪಶ್ಚಿಮ ಘಟ್ಟಗಳ ಪೂರ್ವದಲ್ಲಿ ದಕ್ಷಿಣೋತ್ತರವಾಗಿ 100 ಕಿ.ಮೀಗಳಷ್ಟು ಅಗಲವಾಗಿರುವ ಮಳೆ ನೆರಳಿನ ಪ್ರದೇಶ. ಇದರ ಪೂರ್ವದ ಗಡಿಯು ಧೂಲಿಯಾ, ಅಹಮದ್‌ನಗರ, ಬಿಲಾಪುರ ಮತ್ತು ಕಾರ್ನೂಲ್‌ಗಳನ್ನೊಳಗೊಂಡಿದೆ. ಕರ್ನಾಟಕ ಹಾಗೂ ಆಂಧ್ರಪ್ರದೇಶದ ಪ್ರಸ್ಥಭೂಮಿಯನ್ನು ಒಳಗೊಂಡು ದಕ್ಷಿಣದಲ್ಲಿ ಇದು ಸಿರಾದಿಂದ ಕಾರ್ನೂಲ್‌ವರೆಗೆ ಸು. 300 ಕಿ.ಮೀ. ಅಗಲವಾಗಿದೆ. 60ರಿಂದ 100 ಸೆ.ಮೀ. ಸಾಧಾರಣ ಮಳೆ ಪಡೆಯುವ ಆಂಧ್ರ ಪ್ರದೇಶದ ಪ್ರಸ್ಥಭೂಮಿ ಮತ್ತು ತಮಿಳುನಾಡಿನ ಒಳನಾಡುಗಳು ನೈರುತ್ಯ ಮಾನ್ಸೂನ್ ಮಾರುತಗಳಿಂದ ಮಳೆ ಪಡೆಯುವವು. 100ರಿಂದ 200 ಸೆ.ಮೀ. ಮಳೆ ಪಡೆಯುವ ಆಂಧ್ರ ಪ್ರದೇಶದ ಉತ್ತರ ಭಾಗ ನೆಲ್ಲೂರಿನಿಂದ ದಕ್ಷಿಣಕ್ಕೆ ಪೂರ್ವತೀರದುದ್ದಕ್ಕೂ ವಿಸ್ತರಿಸಿದೆ. 2008ರ ಡೈರೆಕ್ಟೊರೇಟ್ ಆಫ್ ಎಕಾನಮಿಕ್ ಅಂಡ್ ಸ್ಟ್ಯಾಟಿಸ್ಟಿಕ್ಸ್ ವರದಿಯಂತೆ ವಾಡಿಕೆಯ 1140 ಸೆ. ಮಳೆ ಕರ್ನಾಟಕದಲ್ಲಿ ಬಿದ್ದಿದೆ. ರಾಜ್ಯದಲ್ಲಿಯೇ ಅತ್ಯಧಿಕ ಮಳೆ ಪಡೆಯುವ ಆಗುಂಬೆ 827.6 ಸೆಂ.ಮೀ. ಮಳೆ ಪಡೆದಿದೆ. ಇದನ್ನು 'ದಕ್ಷಿಣದ ಚಿರಾಪುಂಜಿ' ಎನ್ನುವರು. ಕೇರಳದ ಪಿರಮಿಡ್ 517 ಸೆಂ.ಮೀ ನೆರಿಯಾಮಂಗಲಮ 504 ಸೆಂ.ಮೀ. ಮಳೆ ಪಡೆದಿರುವುದು ದಾಖಲಾಗಿದೆ.

**ನದಿಗಳು :** ಭಾರತದಲ್ಲಿ ನದಿಗಳನ್ನು ಪ್ರಧಾನವಾಗಿ ಎರಡು ರೀತಿ ವಿಂಗಡಿಸಬಹುದು. ಅವುಗಳೆಂದರೆ ಉತ್ತರದ ಹಿಮಾಲಯದ ನದಿಗಳು ಹಾಗೂ ದಕ್ಷಿಣದ ಪ್ರಸ್ಥಭೂಮಿಯ ನದಿಗಳು ಎಂದು. ಹಿಮಾಲಯದ ನದಿಗಳು ಗತಕಾಲಿಕ ನದಿ ವ್ಯವಸ್ಥೆಗೆ ಉತ್ತಮ ಉದಾಹರಣೆಗಳು. ಪ್ರಸ್ಥಭೂಮಿಯ ಬಹುಪಾಲು ನದಿಗಳು ಪುರೋಗಾಮಿ ನದಿ ವ್ಯವಸ್ಥೆಗೆ ಉದಾಹರಣೆಯಾಗಿವೆ. ಪರ್ಯಾಯ ದ್ವೀಪದ ನದಿಗಳು ಮಳೆಗಾಲದಲ್ಲಿ ಮಾತ್ರ ನೀರಿನಿಂದ ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ಸಹಜವಾಗಿಯೇ ಬತ್ತಿಹೋಗುತ್ತವೆ. ಇಲ್ಲಿಯ ನದಿಗಳು ಬೆಟ್ಟ ಹಾಗೂ ಘಟ್ಟಗಳಲ್ಲಿ ಉಗಮವಾಗುತ್ತವೆ. ಇಲ್ಲಿಯ ನದಿಗಳು ಕಠಿಣ ಶಿಲಾಪದರು ಪ್ರದೇಶದಲ್ಲಿ ಹರಿಯುತ್ತವೆ. ಆದುದರಿಂದ ಇಲ್ಲಿ ಭೂಕಂಪ ಹಾಗೂ ಭೂ ಕುಸಿತಗಳು ಕಡಿಮೆ ಕಂಡುಬರುತ್ತವೆ. ಹಾಗೆಯೇ ನದಿಗಳು ಅಲ್ಲಲ್ಲಿ ಅನೇಕ ಜಲಪಾತಗಳನ್ನು ಹೊಂದಿದ್ದು, ವಿದ್ಯುತ್ತಿನ ಉತ್ಪಾದನೆಗೆ ಬಹು ಉಪಯುಕ್ತವಾಗಿವೆ. ಇಲ್ಲಿಯ ಪೂರ್ವಕ್ಕೆ ಹರಿಯುವ ನದಿಗಳು ಗೋದಾವರಿ, ಕೃಷ್ಣಾ, ಕಾವೇರಿ, ಮಹಾನದಿ. ಗೋದಾವರಿ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ತ್ರಿಯಂಬಕ್ ಎಂಬಲ್ಲಿ ಉಗಮ ಹೊಂದಿ 1465 ಕಿ.ಮೀ ದೂರ ಹರಿದು ಕಾಕನಾಡ ಬಳಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಇದು ಪರ್ಯಾಯ ದ್ವೀಪದ ಅತಿ ಉದ್ದವಾದ ಹಾಗೂ ಅತಿ ದೊಡ್ಡ ನದಿಯಾಗಿದೆ. ಕೃಷ್ಣಾ ನದಿಯು ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಉಗಮ ಹೊಂದಿ ಅನಂತರ ಕರ್ನಾಟಕ ಹಾಗೂ ಆಂಧ್ರಪ್ರದೇಶಗಳ ಮೂಲಕ ಸು. 1400 ಕಿ.ಮೀ ದೂರ ಹರಿದು ನಿಜಾಮ ಪಟ್ಟಣದ ಬಳಿ ಬಂಗಾಳಕೊಲ್ಲಿಯನ್ನು ಸೇರುವುದು. 'ಶ್ರೀಶೈಲಂ' ಬಳಿಯಲ್ಲಿ ಆಳವಾದ ಕಂದರವನ್ನು ನಿರ್ಮಿಸಿರುವ ಇದು ಗತಕಾಲಿಕ ವ್ಯವಸ್ಥೆಯಾಗಿದೆ. ಇದರ ಜಲಾನಯನ ಪ್ರದೇಶವು 2,71,300 ಚ.ಕಿ.ಮೀ ಇದೆ. ಇದರ ಮುಖ್ಯ ಉಪನದಿಗಳೆಂದರೆ ದೋಣಿ, ಭೀಮಾ, ದಿಂದಿ, ಮೂಸಿ, ಪಾರೂದ್‌ಲೇರು, ಆಕೇರು, ಕೊಯ್ನಾ, ಪಂಚಗಂಗಾ, ಧೂದ್‌ಗಂಗಾ, ಘಟಪ್ರಭ, ಮಲಪ್ರಭ ಮತ್ತು ತುಂಗಭದ್ರ. ಕಾವೇರಿ ನದಿ ಪ್ರಸ್ಥಭೂಮಿಯ ಮುಖ್ಯ ನದಿಗಳಲ್ಲಿ ಒಂದು. ಇದು ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಜೀವನದಿಯಾಗಿದ್ದು ಇದನ್ನು 'ದಕ್ಷಿಣ ಗಂಗೆ' ಎಂದು ಕರೆಯುವರು. ಬ್ರಹ್ಮಗಿರಿ ಬೆಟ್ಟದ ತಲಕಾವೇರಿಯಲ್ಲಿ ಉಗಮ ಹೊಂದಿ ಪೂರ್ವಾಭಿಮುಖವಾಗಿ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ 805 ಕಿ.ಮೀ. ದೂರ ಹರಿದು ಕಾವೇರಿ ಪಟ್ಟಣದ ಬಳಿ ಬಂಗಾಳಕೊಲ್ಲಿಯನ್ನು ಸೇರುವುದು. ಇದರ ಒಟ್ಟು ಜಲಾನಯನ ಪ್ರದೇಶ 94400 ಚ.ಕಿ.ಮೀ. ಇದರ ಮುಖ್ಯ ಉಪನದಿಗಳೆಂದರೆ ಹಾರಂಗಿ, ಹೇಮಾವತಿ, ಲೋಕಪಾವನಿ, ಶಿಂಷಾ, ಅರ್ಕಾವತಿ, ಲಕ್ಷ್ಮಣತೀರ್ಥ, ಕಪಿಲಾ, ಸುವರ್ಣಾವತಿ ಭವಾನಿ ಮತ್ತು ಅಮರಾವತಿ. ಕಾವೇರಿ ನದಿಯು ಮೂರು ಅಂತರ್‌ನದಿ ದ್ವೀಪಗಳನ್ನು ಉಂಟುಮಾಡಿದ್ದು ಇವುಗಳನ್ನು ಆದಿರಂಗ, ಮಧ್ಯರಂಗ ಮತ್ತು ಅಂತ್ಯರಂಗಗಳೆಂದು ಕರೆಯುವರು. ಇವು ಕ್ರಮವಾಗಿ ಶ್ರೀರಂಗಪಟ್ಟಣ, ಶಿವನಸಮುದ್ರ ಮತ್ತು ಶ್ರೀರಂಗಂನಲ್ಲಿ ಕಂಡುಬರುವುದು. ಪಾಲಾರ್‌ನದಿ ನಂದಿದುರ್ಗ ಶ್ರೇಣಿಯಲ್ಲಿ ಉಗಮಹೊಂದಿ ಪೂರ್ವಾಭಿಮುಖವಾಗಿ ಹರಿದು ಮಹಾಬಲಿಪುರಂ ಬಳಿ ಬಂಗಾಳಕೊಲ್ಲಿ ಸೇರುವುದು. ಪೊನ್ನೆಯಾರ್ ಇದನ್ನು ಪೆನ್ನಾರ್ 'ದಕ್ಷಿಣ ಪಿನಾಕಿನಿ' ಎಂದು ಕರೆಯುವರು. ಕೋಲಾರ ಜಿಲ್ಲೆಯ ನಂದಿಬೆಟ್ಟದಲ್ಲಿ ಉಗಮಿಸಿ ತಮಿಳುನಾಡಿನ ಸೇಲಂ, ಧರ್ಮಪುರಿಗಳಲ್ಲಿ ಹರಿದು ಕಡಲೂರಿನ ಬಳಿ ಬಂಗಾಳ ಕೊಲ್ಲಿಯನ್ನು ಸೇರುವುದು. ವೈಗೈ - ಕಾವೇರಿ ನದಿಯ ದಕ್ಷಿಣದಲ್ಲಿರುವ ಅತಿ ಉದ್ದವಾದ ನದಿ. ಇದು ಕಾರ್ಡ್‌ಮಮ್ ಬೆಟ್ಟಗಳಲ್ಲಿ ಉಗಮ ಹೊಂದಿ ಮಧುರೈ ಮತ್ತು ರಾಮನಾಥಪುರಂ ಜಿಲ್ಲೆಗಳಲ್ಲಿ ಹರಿದು ಮಂಡಪಂ ಬಳಿ ಬಂಗಾಳಕೊಲ್ಲಿ ಸೇರುವುದು. ತಾಮ್ರಪರ್ಣಿ- ಅಗಸ್ತ್ಯಮಲೈಯಲ್ಲಿ ಹುಟ್ಟಿ ಹರಿದು ಮನ್ನಾರ್ ಕೊಲ್ಲಿಯನ್ನು ಸೇರುವುದು. ಶರಾವತಿ ನದಿಯು ಅಂಬುತೀರ್ಥದಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಹೊನ್ನಾವರದ ಬಳಿ ಅರಬ್ಬಿ ಸಮುದ್ರವನ್ನು ಸೇರುವುದು. ಇದು ಜೋಗ್ ಬಳಿ ಜಲಪಾತವನ್ನುಂಟು ಮಾಡಿದೆ. ಕಾಳಿ ನದಿಯು ಸೂಪ ಬಳಿ

ಹುಟ್ಟಿ ಅರಬ್ಬಿ ಸಮುದ್ರವನ್ನು ಸೇರುವುದು. ಇದು ಸುಂದರವಾದ 'ಲಾಲ್‌ಗುಳಿ' ಜಲಪಾತವನ್ನು ನಿರ್ಮಿಸಿದೆ. ನೇತ್ರಾವತಿ ನದಿಯು ಬಲ್ಲಾಳರಾಯನ ದುರ್ಗದಲ್ಲಿ ಹುಟ್ಟಿ ಅರಬ್ಬಿ ಸಮುದ್ರವನ್ನು ಸೇರುತ್ತದೆ.

ಪಶ್ಚಿಮ ಕರಾವಳಿಯಲ್ಲಿ ಹರಿಯುವ ನದಿಗಳಲ್ಲಿ ಕೇರಳದ ನದಿಗಳು ಹೆಚ್ಚು ಉದ್ದವಾದವು. ಇವುಗಳಲ್ಲಿ ಬೈಪೊರೆ, ಅನ್ನಾಡಿ, ಅಲ್ವೇಯಿ, ಪಲಕುಡಿ, ಕುರುಮಾಲಿ, ಆಚನ್‌ಕೋಯಿಲ್, ಕಳೋದ ಹಾಗೂ ಅಣ್ಣಾಮಲೈ ಮುಖ್ಯವಾದವು. 'ಪೆರಿಯಾರ್' ಕೇರಳದ ಅತಿ ಮುಖ್ಯ ನದಿ. ಇದು ತಮಿಳುನಾಡು - ಕೇರಳ ರಾಜ್ಯಗಳ ಗಡಿಯಲ್ಲಿ ಶಿವಗಿರಿ ಅರಣ್ಯದ ಪೆರಿಯಾರ್ ಸರೋವರದಲ್ಲಿ ಹುಟ್ಟಿ 225 ಕಿ.ಮೀ. ದೂರ ಹರಿದು ದಿರ್ನಾಕುಲಂ ಬಳಿ ಅರಬ್ಬಿ ಸಮುದ್ರವನ್ನು ಸೇರುವುದು. ಪ್ರಸಿದ್ಧ ಪೆರಿಯಾರ್ ವನ್ಯ ಪ್ರಾಣಿಧಾಮವು ತಿರುವಾಂಕೂರ್ ಬಳಿಯಿರುವ ಪೆರಿಯಾರ್ ನದಿಯ ಜಲಾಶಯದ ದಂಡೆಯಲ್ಲಿದೆ. ಪಂಬಾ ನದಿಯು ಓಣಂ ಹಬ್ಬದ ದೋಣಿ ಸ್ಪರ್ಧೆಗೆ ಪ್ರಸಿದ್ಧಿಯಾಗಿದೆ.

**ಅರಣ್ಯಗಳು :** ಸ್ವಾಭಾವಿಕ ಸಸ್ಯವರ್ಗವು ಪ್ರಾಕೃತಿಕ ಸಂಪತ್ತುಗಳಲ್ಲಿ ಅತಿಮುಖ್ಯವಾದುದು. ದಕ್ಷಿಣ ಭಾರತದ ಸ್ವಾಭಾವಿಕ ಸಸ್ಯವರ್ಗ ಕೂಡ ವೈವಿಧ್ಯತೆಯಿಂದ ಕೂಡಿದ್ದು ಇದಕ್ಕೆ ವಾಯುಗುಣದ ಪರಿಸ್ಥಿತಿಗಳು, ಭೂಸ್ವರೂಪ, ಜೈವಿಕ ಪರಿಸ್ಥಿತಿ ಮತ್ತು ಮಣ್ಣಿನ ಗುಣಗಳು ಕಾರಣವಾಗಿರುವುದು ಸಹಜವಾಗಿದೆ. 2001ರ ಅಂದಾಜಿನಂತೆ 7,68,436 ಚ.ಕಿ.ಮೀ. ಅರಣ್ಯವನ್ನು ಭಾರತವು ಹೊಂದಿದ್ದು, ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ 23.88ರಷ್ಟನ್ನು ಹೊಂದಿದೆ. ಇದರಲ್ಲಿ ಆಂಧ್ರಪ್ರದೇಶವು 63,814 ಚ.ಕಿ.ಮೀ. ಕರ್ನಾಟಕ 38,724 ಚ.ಕಿ.ಮೀ ತಮಿಳುನಾಡು 22,871 ಚ.ಕಿ.ಮೀ. ಮತ್ತು ಕೇರಳ ರಾಜ್ಯವು 11,221 ಚ.ಕಿ.ಮೀ ಅರಣ್ಯವನ್ನು ಹೊಂದಿವೆ. ಇಲ್ಲಿಯ ಅರಣ್ಯಗಳು ಹೆಚ್ಚು ಉಷ್ಣವಲಯದ ತೇವಯುತ ಎಲೆಯುದುರುವ ಅರಣ್ಯಗಳಾಗಿದ್ದು ವಾರ್ಷಿಕವಾಗಿ 100 ರಿಂದ 200 ಸೆಂ.ಮೀ ಮಳೆ ಬೀಳುವ ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ, ಪೂರ್ವದ ಇಳಿಜಾರುಗಳಲ್ಲಿ ನಿತ್ಯಹರಿದ್ವರ್ಣದ ಕಾಡುಗಳನ್ನು ಸುತ್ತುವರಿದಂತಿದೆ. ಹಾಗೆಯೆ ಉಷ್ಣವಲಯದ ಶುಷ್ಕ ಎಲೆಯುದುರುವ ಕಾಡುಗಳು ಹಿಮಾಲಯದ ಪಾದ ಬೆಟ್ಟಗಳಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೂ ಪಟ್ಟಿಯಾಕಾರದಲ್ಲಿ ಕಂಡು ಬರುತ್ತವೆ. ಇವು ತೇವಯುತ ಅರಣ್ಯಗಳಿಗಿಂತ ಭಿನ್ನವಾಗಿದ್ದು ಹೆಚ್ಚು ಶುಷ್ಕ ವಾಯುಗುಣ ಪ್ರದೇಶದಲ್ಲಿವೆ. ಇಲ್ಲಿನ ಕಾಡುಗಳಲ್ಲಿ ತೇಗ, ತೂಪರ, ಆಕ್ಸೆಲ್‌ವುಡ್, ಬೀಟೇ, ಕಾಸಿ, ಧೂಪ, ಲಾರೆಲ್, ಏಲಿವಾರ, ಹೆಬ್ಬಲಸು, ಕೆನೇರಿಯನ್ ಸ್ಟ್ರಿಕ್ವವ್, ಕಂಧೂಪ, ಹಿರೆಬೋವಿ ವಾಟೇರಿಯಾ ಇಂಡಿಕಾ, ನಾಗಸಂಪಿಗೆ, ಕಾಂಡೇಲಿಯಾ ಕಂಡೆಲ್‌ಪ್ರೂಸ್ ಮುಕ್ರೋವಟಲಾಮ್, ಬೃಗುಯೇರ ಕಂಜುಗಾಟ ಮೆಕ್ರಿಲ್ ಮೊದಲಾದ ಮರಗಳು ಕಂಡುಬರುತ್ತವೆ. ಜೊತೆಗೆ ದಕ್ಷಿಣ ಭಾರತದ ಕೆರೆ ಹಳ್ಳ ಮೊದಲಾದ ಜಲಾಂಶದ ಪೂರೈಕೆಯಿರುವ ಭಾಗಗಳಲ್ಲಿ ಕಣಿವೆಯುದ್ದಕ್ಕೂ ಕಂಡುಬರುವ ಅರಣ್ಯಗಳನ್ನು 'ಶೋಲಾ ಅರಣ್ಯ'ಗಳೆಂದು ಕರೆಯುವರು. ಇವು ಪಶ್ಚಿಮಘಟ್ಟದ ಉತ್ತರದಲ್ಲಿ ತಪತಿ ನದಿಯಿಂದ ದಕ್ಷಿಣದ ಕಡೆಗೆ 2500 ಕಿ.ಮೀ. ಉದ್ದವಾಗಿ ಕನ್ಯಾಕುಮಾರಿಯವರೆಗೆ ವಿಸ್ತರಿಸಿವೆ. ಉಷ್ಣವಲಯದ ಮುಳ್ಳುಗಂಟಿ ಅರಣ್ಯಗಳು ಪಶ್ಚಿಮ ಘಟ್ಟದ ಮಳೆನೆರಳಿನ ಪ್ರದೇಶವಾದ ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಕಾಣಬಹುದು.

ಇಲ್ಲಿಯ ಅರಣ್ಯಗಳಲ್ಲಿ ಬೇವು, ಶ್ರೀಗಂಧ, ನಿರ್ಮಾನಿ ಮರಗಳು ಕಂಡುಬರುತ್ತವೆ. ಕರ್ನಾಟಕದಲ್ಲಿ ಕಂಡುಬರುವ ಶ್ರೀಗಂಧದ ಮರಗಳು ಭಾರತದಲ್ಲಿಯೇ ಹೆಸರುವಾಸಿಯಾಗಿವೆ.

**ಮಣ್ಣುಗಳು :** ಭೂಮೇಲ್ಮೈನ ಶಿಲೆಗಳು ಶಿಥಿಲಗೊಂಡು, ಒಡೆದು ಸಣ್ಣ ಸಣ್ಣ ಕಣಗಳಾಗಿ ಭೂಮಿಯ ಮೇಲೆ ತೆಳುವಾಗಿ ಹರಡಿರುವುದನ್ನು ಮಣ್ಣು ಎಂದು ಕರೆಯುವುದು ವಾಡಿಕೆ. ಇದು ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ರೂಪುಗೊಳ್ಳುವುದು. ದಕ್ಷಿಣದ ಪ್ರಸ್ಥಭೂಮಿಯು ಕ್ಯಾಂಬ್ರಿಯನ್ ಪೂರ್ವ ಭೂಯುಗದ ಅಗ್ನಿಶಿಲೆ ಹಾಗೂ ರೂಪಾಂತರ ಶಿಲೆಗಳನ್ನೊಳಗೊಂಡ ಧಾರವಾಡ, ಅರಾವಳಿ, ಕಡಪಾ ಮತ್ತು ವಿಂಧ್ಯ ಮಾದರಿಯ ಶಿಲೆಗಳಿಂದ ಕೂಡಿದ್ದು ಇವುಗಳ ರಾಸಾಯನಿಕ ಸಂಯೋಜನೆಯು ಮೂಲಶಿಲೆಗಳ ಪಡಿಯಚ್ಚಿನಂತಿದೆ. ದಕ್ಷಿಣ ಭಾರತದ ಈ ರಾಜ್ಯಗಳಲ್ಲಿ ಕಂಡುಬರುವ ಮಣ್ಣನ್ನು ಈ ಕೆಳಗಿನಂತೆ ನೋಡಬಹುದು.

**ಕಪ್ಪುಮಣ್ಣು (ಕಿಣಾರ್ ಮಣ್ಣು) :** ಪುರಾತನ ಕಾಲದಲ್ಲಿ ಹರಡಿದ ಲಾವಾರಸದಿಂದ ನಿರ್ಮಿತಗೊಂಡ ಶಿಲೆಗಳ ಶಿಥಿಲೀಕರಣದಿಂದ ಈ ಮಣ್ಣು ನಿರ್ಮಿತವಾಗಿದೆ. ಕರ್ನಾಟಕದ ಬಿಜಾಪುರ, ಗುಲ್ಬರ್ಗ, ಬೀದರ್, ಬೆಳಗಾಂ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ, ಆಂಧ್ರಪ್ರದೇಶದ ಆದಿಲಾಬಾದ್, ವಾರಂಗಲ್, ಕಮ್ಮಂ ಮೆಹಬೂಬ್ ನಗರ ಮತ್ತು ಕರ್ನೂಲ್ ಜಿಲ್ಲೆಗಳಲ್ಲಿ, ತಮಿಳುನಾಡಿನ ರಾಮನಾಥಪುರಂ, ತಿರುನೆಲ್ವೇರಿ, ದಕ್ಷಿಣದ ಆರ್ಕಾಟ್ ಜಿಲ್ಲೆಗಳಲ್ಲಿ ಇದು ಹರಡಿದೆ. ಇದು ಕಬ್ಬಿಣ ಮತ್ತು ಅಲ್ಯುಮಿನಿಯಂ ಮಿಶ್ರಣಗಳನ್ನು ಒಳಗೊಂಡಿದ್ದು ಪೊಟ್ಯಾಷ್, ಸುಣ್ಣ, ಅಲ್ಯುಮಿನಿಯಂ, ಕ್ಯಾಲ್ಸಿಯಂ ಮತ್ತು ಮ್ಯಾಗ್ನಿಷಿಯಂ ಕಾರ್ಬೋರೋಟ್ ಖನಿಜಾಂಶಗಳು ಇದರಲ್ಲಿ ಅಧಿಕ ಪ್ರಮಾಣದಲ್ಲಿವೆ. ಕಪ್ಪು ಮಣ್ಣು ಅತೀ ಒತ್ತಾದ ಕಣಗಳ ರಚನೆಯನ್ನು ಹೊಂದಿದ್ದು ಜಲಾಂಶವನ್ನು ಅತಿ ದೀರ್ಘ ಕಾಲದವರೆಗೆ ಹಿಡಿದಿಡುವುದು.

**ಕೆಂಪುಮಣ್ಣು :** ಇದು ಅತ್ಯಂತ ಪುರಾತನವಾದುದು. ರೂಪಾಂತರ ಹೊಂದಿದ ಗ್ರಾನೈಟ್ ಶಿಲೆಗಳ ಶಿಥಿಲೀಕರಣದಿಂದ ನಿರ್ಮಿತಗೊಂಡಿರುವ ಕೆಂಪುಮಣ್ಣು ಸಡಿಲವಾದ ಕಣ ರಚನೆಯಿಂದ ಕೂಡಿದೆ. ಕಬ್ಬಿಣದ ಖನಿಜಾಂಶವನ್ನು ಹೊಂದಿದ ಶಿಲೆಗಳು ಪುಡಿಯಾಗಿ ಅನಂತರ ಆಮ್ಲಜನಕ ಸಂಯೋಜನೆಯಿಂದ ಕಬ್ಬಿಣದ ಆಕ್ಸೈಡ್ ಆಗಿ ಪರಿವರ್ತನೆ ಹೊಂದಿ ಮಣ್ಣು ನಿರ್ಮಾಣವಾಗುತ್ತದೆ. ಈ ಮಣ್ಣಿನಲ್ಲಿ ಸುಣ್ಣದ ಕಾರ್ಬೊರೇಟ್, ಕೊಳೆತ ಜೈವಿಕಾಂಶ ಹಾಗೂ ರಂಜಕದ ಆಮ್ಲ ಕೊರತೆಯಿರುವುದು. ಇದು ತಮಿಳುನಾಡು ಮತ್ತು ಕರ್ನಾಟಕದಲ್ಲಿ ಕಂಡುಬರುತ್ತದೆ.

**ಜಂಬಿಟ್ಟಿಗೆ ಮಣ್ಣು :** ಅಧಿಕ ಮಳೆ ಅಂದರೆ 200 ಸೆಂ.ಮೀ.ಗಿಂತಲೂ ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ಮಣ್ಣಿನ ಖನಿಜಾಂಶಗಳ ತೊಳೆಯುವಿಕೆಯಿಂದ ಈ ಮಣ್ಣು ನಿರ್ಮಾಣಗುತ್ತದೆ. ಈ ಮಣ್ಣಿನಲ್ಲಿ ನೀರು ಸುಲಭವಾಗಿ ಕರಗುವಂತೆ ಸುಣ್ಣ ಮತ್ತು ಸಿಲಿಕಾನ್‌ಗಳ ಸಂಪೂರ್ಣವಾಗಿ ತೊಳೆಯಲ್ಪಟ್ಟು ಮಣ್ಣಿನ ಆಳ ಪದರುಗಳಿಗೆ ಸಾಗಿಸಲ್ಪಟ್ಟಿರುತ್ತವೆ. ಇಂಥ ಮಣ್ಣಿನಲ್ಲಿ ಸಸ್ಯಗಳ ಬೆಳವಣಿಗೆಗೆ ಅಗತ್ಯವಾದ ರಂಜಕದ ಆಮ್ಲದ ಪ್ರಮಾಣ

ಕಡಿಮೆ. ಕರ್ನಾಟಕದ ಕರಾವಳಿ ಜಿಲ್ಲೆಗಳು, ಶಿವಮೊಗ್ಗ, ಕೊಡಗು ಮತ್ತು ಕೇರಳ ರಾಜ್ಯದ ಬೆಟ್ಟಗುಡ್ಡ ಪ್ರದೇಶದಲ್ಲಿ ಇದು ಕಂಡುಬರುತ್ತದೆ. ಈ ಮಣ್ಣಿನಲ್ಲಿ ಸಾರಜನಕ, ಪೊಟ್ಯಾಷ್ ಹಾಗೂ ಕೊಳೆತ ಜೈವಿಕಾಂಶಗಳು ಅತ್ಯಲ್ಪ ಪ್ರಮಾಣದಲ್ಲಿರುತ್ತವೆ.

**ಮೆಕ್ಕಲು ಮಣ್ಣು :** ದಖನ್ ಪ್ರಸ್ಥಭೂಮಿಯ ಇಕ್ಕೆಲಗಳಲ್ಲಿ ಕಾಣಬರುವ ಕರಾವಳಿ ಮೈದಾನವು ಪಶ್ಚಿಮ ಘಟ್ಟಗಳು ಹಾಗೂ ವಿಂಧ್ಯ ಪರ್ವತಗಳಲ್ಲಿ ಹುಟ್ಟಿ ಹರಿಯುವ ನದಿಗಳಿಂದ ಸಂಚಯಿಸಲ್ಪಟ್ಟ ಮಣ್ಣು ಇದಾಗಿದೆ. ಇದರಲ್ಲಿ ಲವಣ ಮತ್ತು ಕ್ಷಾರಯುಕ್ತ ಮಣ್ಣು ಅತಿ ಮುಖ್ಯವಾದುದು. ಇದು ತಪತಿ, ಗೋದಾವರಿ ಮತ್ತು ಕೃಷ್ಣಾ ಬಯಲುಗಳ ನಡುವೆ ವಿಸ್ತಾರವಾಗಿ ಹರಡಿದೆ.

**ನೀರಾವರಿ** : ಮಾನವನ ಉಳಿವಿಗೆ ನೀರು ಅತಿಮುಖ್ಯವಾದ ಸಂಪನ್ಮೂಲ. ಋತುಮಾನಿಕ ಮಳೆಯ ಹಂಚಿಕೆ ಹಾಗೂ ಪ್ರಾದೇಶಿಕ ಮಳೆಯ ಹಂಚಿಕೆಯು ಅಸಮಾನತೆಯಿಂದ ಕೂಡಿರುವುದರಿಂದ ನೀರಾವರಿಯ ಕ್ಷೇತ್ರವೂ ಕೂಡ ಅಸಮಾನತೆಯಿಂದ ಕೂಡಿರುವುದು ದಕ್ಷಿಣದ ರಾಜ್ಯಗಳಲ್ಲಿ ಕಂಡುಬರುವ ಅಂಶ. 2001-02ರಲ್ಲಿ ಭಾರತದ ನಿವ್ವಳ ನೀರಾವರಿ ಕ್ಷೇತ್ರ 54.5 ದಶಲಕ್ಷ ಹೆಕ್ಟೇರ್. ಇದರಲ್ಲಿ ಬಾವಿ ನೀರಾವರಿ 30.9 ಹೆ, ಕಾಲುವೆ ನೀರಾವರಿ 17.1 ಹೆ, ಕೆರೆ ನಿರಾವರಿ 3.1 ಹೆ, ಹಾಗೂ ಇತರೆ ನೀರಾವರಿ 3.5 ಹೆ.ಗಳಷ್ಟಾಗಿದೆ. ಈ ನೀರಾವರಿಯು ದಕ್ಷಿಣ ರಾಜ್ಯಗಳಲ್ಲಿ ಅಸಮಾನವಾಗಿ ಹಂಚಲ್ಪಟ್ಟಿದ್ದು ಅದನ್ನು ಕೆಳಕಂಡಂತೆ ಗುರುತಿಸಬಹುದು.

**ಕಾಲುವೆ ನೀರಾವರಿ:** ಕಾಲುವೆ ನೀರಾವರಿಯು ನೀರಾವರಿಯ ಮುಖ್ಯ ಮೂಲವಾಗಿದ್ದು, ಆಂಧ್ರಪ್ರದೇಶವು 16,34,000 ಹೆ.ಪ್ರದೇಶದಲ್ಲಿ, ಕರ್ನಾಟಕವು 1030438 ಹೆ. ಪ್ರದೇಶದಲ್ಲಿ, ಕೇರಳದಲ್ಲಿ 86 ಸಾವಿರ ಹೆ.ಪ್ರದೇಶದಲ್ಲಿ, ತಮಿಳುನಾಡು 8,67,000 ಹೆ.ಪ್ರದೇಶದಲ್ಲಿ ಕಾಲುವೆ ನೀರಾವರಿಯನ್ನು ಬೇಸಾಯದ ಮುಖ್ಯ ನೀರಾವರಿ ವಿಧಾನವಾಗಿ ಬಳಸುತ್ತಿವೆ.

**ಕೆರೆ ನೀರಾವರಿ :** ದಕ್ಷಿಣದ ರಾಜ್ಯಗಳು ಕೆರೆ ನೀರಾವರಿಗೆ ಹೆಚ್ಚು ಪ್ರಸಿದ್ಧಿ ಹೊಂದಿದ್ದು, ಇದೊಂದು ಸಾಂಪ್ರದಾಯಿಕ ನೀರಾವರಿ ವಿಧಾನವಾಗಿದೆ. ಆಂಧ್ರಪ್ರದೇಶವು ದೇಶದಲ್ಲಿಯೆ ಅತಿ ಹೆಚ್ಚು ಕೆರೆ ನೀರಾವರಿ ಬಳಸುವ ರಾಜ್ಯವಾಗಿದ್ದು 2001ರ ಅಂಕಿ ಅಂಶದಂತೆ 651 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಇದು ಹರಡಿದೆ. ತಮಿಳುನಾಡಿನಲ್ಲಿ 633 ಸಾವಿರ ಹೆ. ಪ್ರದೇಶದಲ್ಲಿ ಕೇರಳದಲ್ಲಿ 245 ಸಾವಿರ ಹೆ. ಪ್ರದೇಶದಲ್ಲಿ ಹಾಗೂ 2010ರ ಅಂಕಿಯಂತೆ ಕರ್ನಾಟಕದಲ್ಲಿ 1,91,691 ಹೆ. ಪ್ರದೇಶದಲ್ಲಿ ಕೆರೆ ನೀರಾವರಿ ವ್ಯಾಪಿಸಿದೆ.

**ಬಾವಿ ನೀರಾವರಿ :** ದೇಶದಲ್ಲಿ ಬಾವಿ ನೀರಾವರಿಯು ಅತಿ ಹೆಚ್ಚು ಬಳಸಲ್ಪಡುವ ನೀರಾವರಿ ಮೂಲವಾಗಿದ್ದು, ತೆರೆದ ಬಾವಿ ಹಾಗೂ ಕೊಳವೆ ಬಾವಿ ಮೂಲಗಳಿಂದ ನೀರಾವರಿಯನ್ನು ಪಡೆಯಲಾಗುವುದು. ಈ ಎರಡೂ ಮೂಲಗಳಿಂದ ಆಂಧ್ರಪ್ರದೇಶವು 1900 ಸಾವಿರ ಹೆ.ಪ್ರದೇಶದಲ್ಲಿ, ಕೇರಳ 122 ಸಾವಿರ ಹೆ. ಪ್ರದೇಶದಲ್ಲಿ, ತಮಿಳುನಾಡು 1453 ಸಾವಿರ ಹೆ. ಪ್ರದೇಶದಲ್ಲಿ 2001ರ ಅಂಕಿ ಅಂಶದಲ್ಲಿ ಈ ನೀರಾವರಿಯನ್ನು ಹೊಂದಿದೆ. 2010ರ ಅಂಕಿ ಸಂಖ್ಯೆಯಂತೆ ಕರ್ನಾಟಕವು 13,27,452 ಹೆ. ಪ್ರದೇಶದಲ್ಲಿ ಬಾವಿ ನೀರಾವರಿಯನ್ನು ಹೊಂದಿರುವುದು ದಾಖಲಾಗಿರುವ ಅಂಶವಾಗಿದೆ.

ಈ ಮೂರು ನೀರಾವರಿಯ ಮೂಲಗಳಿಂದಲ್ಲದೆ ಇತರೆ ನೀರಾವರಿ ಮೂಲಗಳಿಂದ ಆಂಧ್ರಪ್ರದೇಶವು 199 ಸಾವಿರ ಹೆ. ಪ್ರದೇಶದಲ್ಲಿ, ತಮಿಳುನಾಡು 18 ಸಾವಿರ ಹೆ., ಕೇರಳ 119 ಸಾವಿರ ಹೆ. ಪ್ರದೇಶದಲ್ಲಿ ಹಾಗೂ ಕರ್ನಾಟಕವು 2010ರ ಅಂಕಿಸಂಖ್ಯೆಯಂತೆ 2,78,031 ಹೆ. ಪ್ರದೇಶದಲ್ಲಿ ಈ ಸೌಲಭ್ಯ ಹೊಂದಿರುವುದು ಕಾಣಬಹುದು.

**ಭೂ ಹಿಡುವಳಿ :** ಯಾವುದೇ ಒಂದು ರಾಜ್ಯದ ಕೃಷಿ ಅಭಿವೃದ್ಧಿಯು ಅಲ್ಲಿನ ಭೂಹಿಡುವಳಿಯನ್ನು ಅವಲಂಬಿಸಿದೆ. ಅದು ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಮತ್ತು ದೊಡ್ಡ ಪ್ರಮಾಣದ ಹಿಡುವಳಿಗಳ ಸರಾಸರಿ ಗಾತ್ರದಿಂದ ನಿರ್ಧರಿಸಲ್ಪಡುವುದು. 1990-1991ರ ಅಂಕಿಸಂಖ್ಯೆಯಂತೆ ನಾಲ್ಕು ರಾಜ್ಯಗಳ ಹಿಡುವಳಿಯ ಸರಾಸರಿ ಗಾತ್ರ ಹೆಕ್ಟೇರುಗಳಲ್ಲಿ ಈ ಕೆಳಕಂಡಂತಿದೆ.

| ರಾಜ್ಯ | ಸಣ್ಣ ಹಿಡುವಳಿಗಳು | ಮಧ್ಯಮ ಪ್ರಮಾಣದ | ದೊಡ್ಡ ಹಿಡುವಳಿಗಳು ಹಿಡುವಳಿಗಳು |
|---|---|---|---|
| ಆಂಧ್ರಪ್ರದೇಶ | 1.43 | 5.86 | 15.61 |
| ಕರ್ನಾಟಕ | 1.46 | 5.93 | 15.22 |
| ಕೇರಳ | 1.36 | 5.27 | 55.74 |
| ತಮಿಳುನಾಡು | 1.41 | 5.72 | 18.44 |

**ಭೂ ಬಳಕೆ :** ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಭೂಮಿ ಅತಿ ಮುಖ್ಯವಾಗಿದ್ದು ಆರ್ಥಿಕಾಭಿವೃದ್ಧಿಯು ಈ ಪ್ರಾಕೃತಿಕ ಬಳಕೆಯನ್ನು ಅವಲಂಬಿಸಿದೆ. ದೊರೆಯುವ ಭೂಮಿಯನ್ನು ಅವುಗಳ ಗುಣಲಕ್ಷಣ ಹಾಗೂ ಅಗತ್ಯತೆಗೆ ಅನುಗುಣವಾಗಿ ವಿವಿಧ ಉದ್ದೇಶಗಳಿಗೆ ಬಳಸಲಾಗುವುದು. ಈ ಬಳಕೆಯು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಹೊಂದಿದ್ದು ತಮ್ಮದೇ ಆದ ರೀತಿಯಲ್ಲಿ ಬಳಕೆ ಮಾಡುತ್ತಿರುವುದು ಕಂಡುಬರುತ್ತದೆ. ಅದು 2000ದ ಅಂಕಿ ಸಂಖ್ಯೆಯಂತೆ ಆಂಧ್ರಪ್ರದೇಶವು 6,19,922.5 ಸಾವಿರ ಹೆ. ಪ್ರದೇಶದಲ್ಲಿ ಅರಣ್ಯವನ್ನು, 1061038.7 ಸಾ.ಹೆ. ಪ್ರದೇಶದಲ್ಲಿ ನಿವ್ವಳ ಸಾಗುವಳಿಯನ್ನು, 26069.5 ಸಾ.ಹೆ.ಪ್ರ ವ್ಯವಸಾಯೇತರ ಬಳಕೆ, 21077.8 ಸಾ.ಹೆ. ಅನುಪಯುಕ್ತ. ವ್ಯವಸಾಯ ಯೋಗ್ಯವಲ್ಲದ ಭೂಮಿ, 6822.5 ಸಾ.ಹೆ.ಪ್ರ. ನಿರಂತರ ಹುಲ್ಲುಗಾವಲು 2431.0 ಸಾ.ಹೆ.ಪ್ರದೇಶ, ವೃಕ್ಷ ಹಾಗೂ ಇತರೆ 7812.8 ಸಾ.ಹೆ. ಪ್ರದೇಶ, ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ 421315.3 ಸಾ.ಹೆ.ಪ್ರ. ಬೀಳುಭೂಮಿ ಹಾಗೂ 241322.7 ಸಾ.ಹೆ. ಪ್ರದೇಶವು ಒಂದಕ್ಕಿಂತ ಹೆಚ್ಚು ಬಾರಿ ಸಾಗುವಳಿಯಾಗುವ ಭೂಮಿಯನ್ನು ಬಳಕೆ ಮಾಡುತ್ತಿದೆ. ಕರ್ನಾಟಕದಲ್ಲಿ ಭೂಬಳಕೆ ಇಂತಿದೆ. 306316.0 ಹೆ.ಪ್ರ. ಅರಣ್ಯವು 1025953.5 ಸಾ.ಹೆ. ಪ್ರದೇಶವು ನಿವ್ವಳ ಸಾಗುವಳಿ ಕ್ಷೇತ್ರವಾಗಿದ್ದು, 13016.8 ಸಾ.ಹೆ.ಪ್ರ.ವು ವ್ಯವಸಾಯೇತರ ಬಳಕೆ, 7964.2 ಸಾ.ಹೆ.ಪ್ರ.ವು ಅನುಪಯುಕ್ತ ವ್ಯವಸಾಯಯೋಗ್ಯವಲ್ಲದ ಭೂಮಿ, 97951 ಸಾ.ಹೆ.ಪ್ರ. ನಿರಂತರ ಹುಲ್ಲುಗಾವಲು 3051.6 ಸಾ.ಹೆ.ಪ್ರ ವೃಕ್ಷ ಹಾಗೂ ಇತರೆ 4332.3 ಸಾ.ಹೆ.ಪ್ರದೇಶ ಬಳಕೆಯಾಗದ ವ್ಯವಸಾಯ ಯೋಗ್ಯಭೂಮಿ 191510.0 ಬೀಳು ಭೂಮಿ ಹಾಗೂ 183917.9 ಸಾ.ಹೆ.ಪ್ರ. ಒಂದಕ್ಕಿಂತ ಹೆಚ್ಚು ಬಾರಿ ಸಾಗುವಳಿಯಾಗುವ ಭೂಮಿಯಾಗಿ ಬಳಕೆಯಾಗುತ್ತಿದೆ.

ಕೇರಳ ರಾಜ್ಯವು 108227.8 ಸಾ.ಹೆ.ಪ್ರ.ದಲ್ಲಿ ಅರಣ್ಯ ಭೂಮಿಯನ್ನು, 223957.6 ಸಾ.ಹೆ.ಪ್ರ., ನಿವ್ವಳ ಸಾಗುವಳಿ ಕ್ಷೇತ್ರವನ್ನು, 3549.1 ಸಾ.ಹೆ.ಪ್ರದೇಶದಲ್ಲಿ ವ್ಯವಸಾಯೇತರ ಭೂ ಬಳಕೆಯನ್ನು, 290.7 ಸಾ.ಹೆ.ಪ್ರ. ಅನುಪಯುಕ್ತ ವ್ಯವಸಾಯ ಯೋಗ್ಯವಲ್ಲದ ಭೂಮಿಯನ್ನು, 190.5 ಸಾ.ಹೆ.ಪ್ರ.ವು ವೃಕ್ಷ ಹಾಗೂ ಇತರೆ ಭೂಮಿಯಾಗಿ, 581.5 ಸಾ.ಪ್ರ.ವು ಬಳಕೆಯಾಗದ ವ್ಯವಸಾಯ ಯೋಗ್ಯ, 1042.0 ಸಾ.ಹೆ. ಬೀಳು ಭೂಮಿ ಹಾಗೂ 76234.0 ಸಾ.ಹೆ.ಪ್ರ.ವು ಒಂದಕ್ಕಿಂತ ಹೆಚ್ಚು ಬಾರಿಯಾಗಿ ಸಾಗುವಳಿಯಾಗುವ ಭೂಮಿಯಾಗಿ ಬಳಕೆಯಾಗುತ್ತಿದೆ. ಇದರಂತೆ ತಮಿಳುನಾಡು ರಾಜ್ಯವು 213416.4 ಸಾ.ಹೆ.ಪ್ರ. ಅರಣ್ಯವಾಗಿ, 546442.2 ಸಾ.ಹೆ.ಪ್ರ ನಿವ್ವಳ ಸಾಗುವಳಿ ಕ್ಷೇತ್ರವಾಗಿ, 197815.2 ಸಾ.ಹೆ.ಪ್ರ. ವ್ಯವಸಾಯೇತರ ಬಳಕೆ, 4763.7 ಸಾ.ಹೆ.ಪ್ರ ಅನುಪಯುಕ್ತ ವ್ಯವಸಾಯ ಯೋಗ್ಯವಲ್ಲದ ಭೂಮಿ, 1230.9 ಸಾ.ಹೆ.ಪ್ರ. ನಿರಂತರ ಹುಲ್ಲುಗಾವಲು, 2431.9 ಸಾ.ಹೆ.ಪ್ರ. ವೃಕ್ಷ ಹಾಗೂ ಇತರೆ 3492.7 ಸಾ.ಹೆ.ಪ್ರ. ಬಳಕೆಯಾಗದ ವ್ಯವಸಾಯ ಭೂಮಿ 222517.1 ಸಾ.ಹೆ.ಪ್ರ. ಬೀಳುಭೂಮಿ ಹಾಗೂ 105519.3 ಸಾ.ಹೆ. ಪ್ರದೇಶವು ಒಂದು ಬಾರಿಗಿಂತ ಹೆಚ್ಚು ಬಾರಿ ಸಾಗುವಳಿಯಾಗುವ ಭೂ ಬಳಕೆಯನ್ನು ಮಾಡುವುದು ಕಂಡುಬರುತ್ತದೆ.

**ವ್ಯವಸಾಯ :** ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಬಗೆಯ ವ್ಯವಸಾಯ ಪದ್ಧತಿಯನ್ನು ನೋಡಬಹುದು. ಇದು ದಕ್ಷಿಣದ ರಾಜ್ಯಗಳಿಗೆ ಹೊರತಲ್ಲ. ದಕ್ಷಿಣದ ರಾಜ್ಯಗಳು ತಮ್ಮದೆಯಾದ ವ್ಯವಸಾಯದ ವಿಧಾನಗಳನ್ನು ಬಳಕೆ ಮಾಡುವುದು ಮಳೆ ಹಾಗೂ ನೀರಾವರಿಯ ವಿಧಾನಗಳಿಗೆ ಅನುಗುಣವಾಗಿರುವುದು ಕಂಡುಬರುತ್ತದೆ. ಇದರಿಂದಾಗಿ ಇಲ್ಲಿ ಕಂಡುಬರುವ ಆಧುನಿಕ ಹಾಗೂ ಸಾಂಪ್ರದಾಯಿಕ ವ್ಯವಸಾಯದ ಪದ್ಧತಿಗಳ ವಿಶಿಷ್ಟತೆ ಪಡೆದಿದೆ. ಅರಣ್ಯ ಪ್ರದೇಶದಲ್ಲಿ ಕಂಡುಬರುವ ವರ್ಗಾವಣೆ ಅಥವಾ ಸ್ಥಳಾಂತರ ಬೇಸಾಯವು ಒಂದು ವಿಧವಾಗಿದ್ದು, ಇದನ್ನು ಆಂಧ್ರಪ್ರದೇಶದಲ್ಲಿ ಪೋಡು ಎಂದು, ಕೇರಳದಲ್ಲಿ ಪೋನಮ್ ಎಂದು ಕರೆಯುವುದು ವಾಡಿಕೆ. ಈ ಬೇಸಾಯ ಪದ್ಧತಿಯಲ್ಲಿ ಅರಣ್ಯದ ಕೆಲವು ಭಾಗಗಳಲ್ಲಿಯ ಮರಗಳನ್ನು ಕಡಿದು ಅಲ್ಲಿ ಬೇಸಾಯ ಮಾಡುವರು. ಮಣ್ಣಿನ ಫಲವತ್ತತೆ ಕಡಿಮೆಯಾದಾಗ ವಲಸೆ ಹೋಗುವುದು ಸಾಮಾನ್ಯವಾಗಿದೆ. ಜೀವನಾಧಾರ ಬೇಸಾಯವು ಆಂಧ್ರಪ್ರದೇಶ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ನಾಲ್ಕು ರಾಜ್ಯಗಳಲ್ಲೂ ಕಂಡುಬರುವುದು.

ಇದೊಂದು ಸಾಂಪ್ರದಾಯಿಕ ಪದ್ಧತಿಯಾಗಿದ್ದು ಭೂಮಿಯನ್ನು ಉಳುಮೆ ಮಾಡಿ, ಬೀಜಗಳನ್ನು ಬಿತ್ತುವ ಮೂಲಕ ಆಹಾರ ಧಾನ್ಯಗಳನ್ನು ಬೆಳೆಯಲಾಗುವುದು. ಸಾಂದ್ರಬೇಸಾಯವು ಕೂಡ ಬಹುಮುಖ್ಯವಾಗಿದ್ದು ಒಂದೇ ವರ್ಷದ ಅವಧಿಯಲ್ಲಿ ಒಂದು ವ್ಯವಸಾಯದ ಭೂಮಿಯಲ್ಲಿ ಎರಡು ಅಥವಾ ಮೂರು ಫಸಲುಗಳನ್ನು ಪಡೆಯುವ ಪದ್ಧತಿ ಇದಾಗಿದ್ದು ಆಹಾರ ಧಾನ್ಯಗಳ ನಡುವೆ ಎಣ್ಣೆಕಾಳುಗಳು, ದ್ವಿದಳ ಧಾನ್ಯಗಳು, ತರಕಾರಿ ಮೊದಲಾದ ಬೆಳೆಗಳನ್ನು ಬೆಳೆಯಲಾಗುವುದು. ಇವುಗಳಿಗೆ 'ಕ್ಯಾಚ್‌ಕ್ರಾಪಸ್' (Catch crops) ಎಂದು ಕರೆಯುವರು. ಪೂರ್ವ ಮತ್ತು ಪಶ್ಚಿಮ ಕರಾವಳಿ ಹಾಗೂ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ಈ ಸಾಂದ್ರಬೇಸಾಯ ಮುಖ್ಯವಾಗಿದೆ. ಹಾಗೆಯೆ ತೋಟಗಾರಿಕೆ ಬೇಸಾಯ ಕೂಡ ಕರ್ನಾಟಕದ ಪಶ್ಚಿಮಘಟ್ಟ ವಲಯ, ತಮಿಳುನಾಡು, ಕೇರಳ ಹಾಗೂ ಆಂಧ್ರದಲ್ಲಿಯೂ ಕಂಡುಬರುವುದು ಸಾಮಾನ್ಯವಾಗಿದೆ. ಇಲ್ಲಿಯ ವ್ಯವಸಾಯ ಪದ್ಧತಿಗಳು ಮುಂಗಾರು (ಖಾರೀಫ್) ಮತ್ತು ರಬಿ (ಹಿಂಗಾರು) ಎರಡೂ ಅವಧಿಯಲ್ಲಿಯು ಪ್ರಧಾನವಾಗಿವೆ.

**ಬೆಳೆಗಳು :** ಯಾವುದೇ ದೇಶದ ಆರ್ಥಿಕಾಭಿವೃದ್ಧಿಯು ಅಲ್ಲಿಯ ಬೆಳೆಗಳ ಉತ್ಪಾದನೆಯ ಮೇಲೆ ಅವಲಂಬಿತವಾಗಿದೆ. ದಕ್ಷಿಣದ ರಾಜ್ಯಗಳು ಬೆಳೆಯುವ ಬೀಜಗಳನ್ನು ಆಹಾರ ಬೆಳೆಗಳು ಮತ್ತು ಆಹಾರೇತರ ಬೆಳೆಗಳು ಎಂದು ಎರಡು ವಿಧಗಳಾಗಿ ವಿಂಗಡಿಸಿ ಈ ಕೆಳಗಿನಂತೆ ನೋಡಬಹುದು.

**ಆಹಾರ ಬೆಳೆಗಳು :**

**ಬತ್ತ :** ಇದು ಉಷ್ಣವಲಯದ ಬೆಳೆ. ಇದರ ಉತ್ಪಾದನೆಗೆ ಸರಾಸರಿ ಉಷ್ಣಾಂಶವು $21^0$-$24^0$ ಸೆಂ.ನಷ್ಟಿರಬೇಕು. ಬತ್ತವನ್ನು ಸಾಲುಬಿಡುವ, ಎರಚುವ, ನಾಟಿಮಾಡುವ ಹಾಗೂ ಜಪಾನಿ ವಿಧಾನದ ಮೂಲಕ ಬೆಳೆಯಲಾಗುವುದು (ಜಪಾನಿ ವಿಧಾನವು ಸಸಿಮಡಿಗಳಲ್ಲಿ ಬೆಳೆಸಿದ ಸಸಿಗಳನ್ನು ಸಾಲಾಗಿ ನಾಟಿಮಾಡುವ ವಿಧಾನವಾಗಿರುವುದು) 2001-02ರ ಅಂಕಿ ಅಂಶದಂತೆ ಆಂಧ್ರಪ್ರದೇಶವು 3.83 ದ.ಲಕ್ಷ. ಹೆ ಪ್ರದೇಶದಲ್ಲಿ 11.39 ದಶಲಕ್ಷ ಟನ್ ಬತ್ತವನ್ನು ಉತ್ಪಾದನೆ ಮಾಡಿದೆ. ತಮಿಳುನಾಡು 2.11 ಲಕ್ಷ ಹೆ.ಪ್ರ.ದಲ್ಲಿ 6.87 ದ.ಲ.ಟನ್ ಉತ್ಪಾದನೆ ಮಾಡಿದೆ. ಕರ್ನಾಟಕ ರಾಜ್ಯವು 1.42 ದ.ಲ.ಹೆ. ಪ್ರದೇಶದಲ್ಲಿ 3.17ದ.ಲ. ಟನ್ ಬತ್ತವನ್ನು ಉತ್ಪಾದಿಸಿದೆ. ಕೇರಳದ ಪಶ್ಚಿಮ ಕರಾವಳಿಯಲ್ಲಿ ಬತ್ತ ಪ್ರಧಾನ ಕೃಷಿಯಾಗಿರುವುದನ್ನು ಕಾಣಬಹುದು.

**ಗೋಧಿ :** ಗೋಧಿಯು ಸಮಶೀತೋಷ್ಣ ವಲಯದ ಹುಲ್ಲುಗಾವಲಿನ ಹುಲ್ಲಿನ ವರ್ಗಕ್ಕೆ ಸೇರಿದ ಬೆಳೆ. ಇದಕ್ಕೆ $10^0$ರಿಂದ $15^0$ ಸೆಲ್ಸಿಯಸ್ ಉಷ್ಣಾಂಶ ಬೇಕಾಗುವುದು. ಗೋಧಿಯ ಹಂಚಿಕೆಯು ಉತ್ತರ ಭಾರತದಲ್ಲಿ ಹೆಚ್ಚು ಹಂಚಿಕೆಯಾಗಿದ್ದು, ದಕ್ಷಿಣ ರಾಜ್ಯಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಣಬರುವುದು. ಕರ್ನಾಟಕದಲ್ಲಿ 0.26 ಲ.ಹೆ. ಪ್ರದೇಶದಲ್ಲಿ ಗೋಧಿ ಬೆಳೆಯಲಾಗುತ್ತಿದ್ದು, ಇದು ಕಡಿಮೆ ಸಾಂದ್ರತೆಯ ವಲಯದಲ್ಲಿ ಬರುವುದು. ಆಂಧ್ರಪ್ರದೇಶದ ಕೆಲವು ಕಡೆಗಳಲ್ಲಿಯೂ ಗೋಧಿ ಬೆಳೆಯನ್ನು ಬೆಳೆಯುವುದು ಸಾಮಾನ್ಯವಾಗಿದೆ.

**ಜೋಳ :** ಒಣ ಹವಾಗುಣದ ಪರ್ಯಾಯ ಪ್ರಸ್ಥಭೂಮಿಯ ಒಳನಾಡು ಹಾಗೂ ಪಶ್ಚಿಮದ ರಾಜ್ಯಗಳಲ್ಲಿ ಪ್ರಧಾನ ಆಹಾರ ಧಾನ್ಯವಾಗಿದೆ. ಇದರ ಬೆಳವಣಿಗೆಗೆ 30-100 ಸೆಂ.ಮೀ. ಮಳೆ ಸಾಕಾಗುವುದು. 2001-02ರ ವರದಿಯಂತೆ ಕರ್ನಾಟಕವು 1.79 ಲಕ್ಷ ಹೆ. ಪ್ರದೇಶದಲ್ಲಿ 1.44 ಲ.ಟನ್ ಉತ್ಪಾದಿಸಿದೆ. ಆಂಧ್ರಪ್ರದೇಶವು 0.69 ಲ.ಹೆ.ಪ್ರದೇಶದಲ್ಲಿ 0.63 ಲ.ಟನ್ ಉತ್ಪಾದಿಸಿದೆ ಮತ್ತು ತಮಿಳುನಾಡು 0.47 ಪ್ರದೇಶದಲ್ಲಿ 0.46 ಲ.ಟನ್ ಉತ್ಪಾದಿಸಿದೆ.

**ಸಜ್ಜೆ :** ಪ್ರಕೃತಿಯು ನೀಡಿರುವ ಅತಿ ವಿಶಿಷ್ಟ ಬೆಳೆಗಳಲ್ಲಿ ಇದೂ ಒಂದಾಗಿದ್ದು ಮಳೆಯ ಆಶ್ರಯದಲ್ಲೆ ಬೆಳೆಯಲಾಗುವುದು. ಇದು ಉಷ್ಣವಲಯದ ಬೆಳೆಯಾಗಿದ್ದು 25-35 ಸೆಂ.ಮೀ. ಮಳೆಯಾದರೆ ಸಾಕು. 2001-02ರ ವರದಿಯಂತೆ ಕರ್ನಾಟಕದ 0.21 ದ.ಲ.ಹೆ. ಪ್ರದೇಶದಲ್ಲಿ 0.11 ದ.ಲ.ಟನ್ ಉತ್ಪಾದನೆ ಆಗಿರುವುದು. ಆಂಧ್ರಪ್ರದೇಶದ 0.09 ದ.ಲ.ಹೆ. ಪ್ರದೇಶದಲ್ಲಿ 0.07 ದ.ಲ.ಟನ್ ಮತ್ತು ತಮಿಳುನಾಡಿನ 0.18

ದ.ಲಕ್ಷ ಹೆ. ಪ್ರದೇಶದಲ್ಲಿ 0.26 ದ.ಲ.ಟನ್ ಉತ್ಪಾದನೆ ಆಗಿರುವುದು ವರದಿಯಾಗಿದೆ.

**ಮೆಕ್ಕೆಜೋಳ :** ಇದು ಉಷ್ಣವಲಯದ ಬೆಳೆಯಾಗಿದ್ದು, ಇದರ ಬೆಳವಣಿಗೆಗೆ $35^0$ ಸೆಲ್ಸಿಯಸ್ ಉಷ್ಣಾಂಶವು ಬೇಕಾಗುವುದು. 2001-02 ಅಂಕಿ ಸಂಖ್ಯೆಯಂತೆ ಕರ್ನಾಟಕವು 0.58 ಲಕ್ಷ ಹೆ. ಪ್ರದೇಶದಲ್ಲಿ 1.51 ಲಕ್ಷ ಟನ್ ಉತ್ಪಾದನೆ ಮಾಡಿದೆ. ಆಂಧ್ರಪ್ರದೇಶವು 0.43 ಲ.ಹೆ.ಪ್ರದೇಶದಲ್ಲಿ 1.46 ಲಕ್ಷ ಟನ್ ಉತ್ಪಾದನೆ ಮಾಡಿದೆ ಮತ್ತು ತಮಿಳುನಾಡು 0.1 ಲಕ್ಷ ಹೆ. ಪ್ರದೇಶದಲ್ಲಿ 0.19 ಲಕ್ಷ ಟನ್ ಉತ್ಪಾದನೆ ಮಾಡಿರುವುದು ದಾಖಲಾಗಿದೆ.

**ರಾಗಿ :** ಉಷ್ಣವಲಯದ ಅಲ್ಪಕಾಲಿಕ ಬೆಳೆ. ಇದನ್ನು ಬೆಳೆಯಲು 20ರಿಂದ $30^0$ ಸೆಲ್ಸಿಯಸ್ ಉಷ್ಣಾಂಶವು ಸಾಕಾಗುವುದು. ಇದರ ಹರವು ದಕ್ಷಿಣ ಭಾರತದಲ್ಲಿ ಹೆಚ್ಚಿರುವುದು ಕಂಡುಬರುವ ದೃಶ್ಯವಾಗಿದೆ. ರಾಗಿಯ ಉತ್ಪಾದನೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನ ಪಡೆದಿರುವುದು ವಿಶೇಷ. 2001-02ರ ವರದಿಯಂತೆ ಕರ್ನಾಟಕವು 10.21 ಲಕ್ಷ ಹೆ. ಪ್ರದೇಶದಲ್ಲಿ 18.87 ಲ.ಟನ್ ಉತ್ಪಾದನೆ ಮಾಡಿದೆ. ತಮಿಳುನಾಡು 1.65 ಲ.ಹೆ. ಪ್ರದೇಶದಲ್ಲಿ 2.83 ಲ.ಟನ್ ಮತ್ತು ಆಂಧ್ರಪ್ರದೇಶವು 0.93 ಲ.ಹೆ.ಪ್ರ.ಲ್ಲಿ 1.06 ಲ.ಟನ್ ರಾಗಿಯನ್ನು ಉತ್ಪಾದಿಸಿವೆ.

**ದ್ವಿದಳ ಧಾನ್ಯಗಳು :** ದ್ವಿದಳ ಧಾನ್ಯಗಳು ಪ್ರೊಟೀನಿನ ಮೂಲವಾಗಿದ್ದು, ಮಾನವ ಹಾಗೂ ಪ್ರಾಣಿಗಳಿಗೆ ಆಹಾರ ಪೂರೈಸುವುದರ ಜೊತೆಗೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಬೆಳೆಗಳ ಬೇರುಗಳು ವಾಯುಮಂಡಲದ ಸಾರಜನಕವನ್ನು ಹೀರಿ ಮಣ್ಣಿಗೆ ಸೇರಿಸುತ್ತವೆ. ಇವುಗಳನ್ನು 'ರೈತನ ಭೂಮಿಯ ಗೊಬ್ಬರದ ಕಾರ್ಖಾನೆ'ಯೆಂದು ಪರಿಗಣಿಸಲಾಗಿದೆ. ದಕ್ಷಿಣದ ರಾಜ್ಯಗಳಲ್ಲಿ ಕಂಡುಬರುವ ಅತಿಮುಖ್ಯ ದ್ವಿದಳ ಧಾನ್ಯಗಳೆಂದರೆ

**ತೊಗರಿ :** ಖಾರಿಫ್ ಮತ್ತು ರಬಿ ಬೆಳೆಯಾಗಿ ಎರಡೂ ಅವಧಿಯಲ್ಲಿಯೂ ಇದನ್ನು ಉತ್ಪಾದಿಸಲಾಗುತ್ತದೆ. $20^0$ರಿಂದ $25^0$ ಸೆ. ಉಷ್ಣಾಂಶ ಹಾಗೂ 40ರಿಂದ 80 ಸೆ.ಮೀ. ಮಳೆ ಬೇಕಾಗುವುದು. ತೊಗರಿಯನ್ನು 2000-01ರ ವರದಿಯಂತೆ ಕರ್ನಾಟಕವು 5.83 ಲಕ್ಷ ಹೆ. ಪ್ರದೇಶದಲ್ಲಿ 2.57 ಲಕ್ಷ ಟನ್ ಉತ್ಪಾದಿಸಿದೆ. ಆಂಧ್ರಪ್ರದೇಶವು 5.07 ಲಕ್ಷ ಹೆ. ಪ್ರದೇಶದಲ್ಲಿ 2.16 ಲಕ್ಷ ಟನ್ ಉತ್ಪಾದಿಸಿದ್ದು ವರದಿಯಾಗಿದೆ.

**ಕಡಲೆ :** ಸಮಶೀತೋಷ್ಣ ವಲಯದ ಬೆಳೆ. ಇದಕ್ಕೆ $20^0$-$25^0$. ಉಷ್ಣಾಂಶ ಬೇಕಾಗುವುದು. 35ರಿಂದ 50 ಸೆಂ.ಮೀ. ಮಳೆ ಸಾಕಾಗುವುದು. 2001ರ ವರದಿಯಂತೆ ಕರ್ನಾಟಕವು 3.69 ಲಕ್ಷ ಹೆ. ಪ್ರದೇಶದಲ್ಲಿ 2.39 ಲಕ್ಷ ಟನ್ ಉತ್ಪಾದಿಸಿದೆ. ಮತ್ತು ಆಂಧ್ರಪ್ರದೇಶವು 1.64 ಲ.ಹೆ.ಪ್ರ.ದಲ್ಲಿ 1.06 ಲ.ಟನ್ ಉತ್ಪಾದಿಸಿದೆ.

**ವಾಣಿಜ್ಯ ಬೆಳೆಗಳು :** ದಕ್ಷಿಣದ ರಾಜ್ಯಗಳಲ್ಲಿ ಆಹಾರ ಬೆಳೆಗಳ ಹಂಚಿಕೆಯಲ್ಲಿಯ ವೈವಿಧ್ಯತೆಯನ್ನು ವಾಣಿಜ್ಯ ಬೆಳೆಗಳಲ್ಲಿಯೂ ಗುರುತಿಸಬಹುದು. ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆಗಳನ್ನು ಈ ಕೆಳಗಿನಂತೆ ನೋಡಬಹುದು.

**ಹತ್ತಿ :** ನಾರಿನ ಬೆಳೆಗಳಲ್ಲಿ ಹತ್ತಿ ಮುಖ್ಯವಾದುದು. ಹತ್ತಿ ವಿದೇಶೀ ವಿನಿಮಯ ತಂದುಕೊಡುವ ಬೆಳೆಯಾಗಿರುವುದರಿಂದ 'ಬಿಳಿಯ ಚಿನ್ನ' ಎಂದು ಕರೆಯುವರು. ಹತ್ತಿಗೆ 75-150 ಸೆ.ಮೀ. ಮಳೆ ಸಾಕಾಗುವುದು. 20-$45^0$ ಸೆಂ. ಉಷ್ಣಾಂಶದಲ್ಲಿ ಹತ್ತಿ ಬೆಳೆ ಸಂವೃದ್ಧಿಯಾಗಿ ಬರುವುದು. 2001-02ರ ವರದಿಯಂತೆ ಆಂಧ್ರಪ್ರದೇಶವು 1.10 ದ.ಲ.ಹೆ.ಪ್ರದೇಶದಲ್ಲಿ 1.87 ದ.ಲ.ಬೇಲ್ ಹತ್ತಿ ಉತ್ಪಾದಿಸಿದೆ. ಕರ್ನಾಟಕವು 0.61 ದ.ಲಕ್ಷ. ಹೆ. ಪ್ರದೇಶದಲ್ಲಿ 0.72 ದ.ಲ. ಬೇಲ್ ಉತ್ಪಾದಿಸಿದೆ ಮತ್ತು ತಮಿಳುನಾಡು 0.19 ದ.ಲ.ಹೆ.ಪ್ರ.ದಲ್ಲಿ 0.33 ದ.ಲ ಬೇಲ್ ಉತ್ಪಾದಿಸಿರುವುದು ದಾಖಲಾಗಿದೆ.

**ಕಬ್ಬು :** ವಾಣಿಜ್ಯ ಬೆಳೆಗಳಲ್ಲಿ ಅತಿ ಮುಖ್ಯವಾದ ಬೆಳೆ ಇದಾಗಿದ್ದು ಉಷ್ಣವಲಯದ ದೀರ್ಘಾವಧಿ ಬೆಳೆ. $21^0$ರಿಂದ $26^0$ ಸೆ. ಉಷ್ಣಾಂಶವು ಇದಕ್ಕೆ ಬೇಕಾಗುವುದು. 2001-02ರ ವರದಿಯಂತೆ ತಮಿಳುನಾಡು 0.33 ದ.ಲ.ಹೆ. ಪ್ರದೇಶದಲ್ಲಿ 36.34 ದ.ಲ.ಟನ್ ಕರ್ನಾಟಕ 0.41 ದ.ಲ.ಹೆ.ನಲ್ಲಿ 33.75 ದ.ಲ.ಟನ್ ಮತ್ತು ಆಂಧ್ರಪ್ರದೇಶವು 0.21 ದ.ಲ.ಹೆ. ನಲ್ಲಿ 17.61 ದ.ಲ.ಟನ್ ಕಬ್ಬು ಉತ್ಪಾದಿಸಿದೆ.

**ಹೊಗೆಸೊಪ್ಪು :** ನಿಕೋಟಿನ್ ವರ್ಗಕ್ಕೆ ಸೇರಿದ ಸಸ್ಯ. ವಾರ್ಷಿಕವಾಗಿ ಸರಾಸರಿ 50ಸೆಂ.ಮೀ. ಮಳೆಯಾಗುವ ಪ್ರದೇಶದಲ್ಲಿ ಇದನ್ನು ಬೆಳೆಯಬಹುದು. ವರ್ಜೀನಿಯಾ ಸೊಪ್ಪನ್ನು ಆಂಧ್ರದಲ್ಲೂ, ನಿಪ್ಪಾಣಿ ಹಾಗೂ ವರ್ಜೀನೀಯ ಎರಡನ್ನೂ ಕರ್ನಾಟಕದಲ್ಲಿ ಬೆಳೆಸುವುದು ಸಾಮಾನ್ಯವಾಗಿದೆ. 2001-02ರ ವರದಿಯಂತೆ ಆಂಧ್ರಪ್ರದೇಶವು 1.3 ದ.ಲ.ಹೆ. ಪ್ರದೇಶದಲ್ಲಿ 1.5 ದ.ಲ.ಟನ್ ಉತ್ಪಾದಿಸಿದೆ. ಕರ್ನಾಟಕ 0.8 ದ.ಲ.ಹೆ. ನಲ್ಲಿ 0.5 ದ.ಲ.ಟನ್ ಉತ್ಪಾದಿಸಿದೆ. ತಮಿಳುನಾಡು 0.1 ದ.ಲ.ಹೆ.ನಲ್ಲಿ 0.1 ದ.ಲ.ಟನ್ ಹೊಗೆಸೊಪ್ಪನ್ನು ಉತ್ಪಾದಿಸಿದೆ.

**ಹಿಪ್ಪುನೇರಳೆ :** ಇದಕ್ಕೆ 24ರಿಂದ $29^0$ ಸೆಂ. ಉಷ್ಣಾಂಶವು ಯುಕ್ತವಾದುದು. ಹಾಗೆಯೇ 60ರಿಂದ 250 ಸೆ.ಮೀ. ವಾರ್ಷಿಕ ಮಳೆಯ ಪ್ರಮಾಣವಿದ್ದರೆ ಒಳ್ಳೆಯದು. ಕರ್ನಾಟಕವು ಹಿಪ್ಪುನೇರಳೆ ಕ್ಷೇತ್ರ ಹಾಗೂ ಉತ್ಪಾದನೆ ಎರಡರಲ್ಲಿಯೂ ಭಾರತದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಕರ್ನಾಟಕವು 149.785 ಹೆ. ಪ್ರದೇಶದಲ್ಲಿ 6214 ಟನ್ ರೇಷ್ಮೆಯನ್ನು ಉತ್ಪಾದಿಸಿದೆ. ಆಂಧ್ರಪ್ರದೇಶವು 76.348ಹೆ.ನಲ್ಲಿ 3194 ಟನ್ ಮತ್ತು ತಮಿಳುನಾಡು 36798 ಹೆ.ನಲ್ಲಿ 1072 ಟನ್ ರೇಷ್ಮೆಯನ್ನು ಉತ್ಪಾದಿಸಿದೆ.

**ಸಂಬಾರ ಪದಾರ್ಥಗಳು :** ಬಹು ಹಿಂದಿನಿಂದಲೂ ಭಾರತವು ಸಂಬಾರ ಪದಾರ್ಥಗಳಿಗೆ ಹೆಸರುವಾಸಿ. ದಕ್ಷಿಣದ ರಾಜ್ಯಗಳಲ್ಲಿ ಸಾಂಬಾರ ಉತ್ಪನ್ನಗಳ ಉತ್ಪಾದನೆಯು 2000-01 ಅಂಕಿ ಸಂಖ್ಯೆ ಇಂತಿದೆ.

**ಮೆಣಸಿನಕಾಯಿ :** ಭಾರತೀಯ ಅಡುಗೆ ಪದ್ಧತಿಯಲ್ಲಿ ಮೆಣಸಿನಕಾಯಿಯ ಬಳಕೆಯು ಪ್ರಧಾನವಾಗಿದೆ. ಆಂಧ್ರಪ್ರದೇಶವು ದೇಶದಲ್ಲಿಯೇ ಅತಿ ಹೆಚ್ಚು ಮೆಣಸಿನಕಾಯಿ ಉತ್ಪಾದಿಸುವ ರಾಜ್ಯವಾಗಿದೆ. ಕರ್ನಾಟಕವು 2ನೇ ಸ್ಥಾನದಲ್ಲಿರುವುದು. ಆಂಧ್ರಪ್ರದೇಶವು 240 ಸಾ.ಹೆ. ಪ್ರದೇಶದಲ್ಲಿ 467 ಸಾ.ಟನ್., ಕರ್ನಾಟಕ 173.6 ಸಾ.ಹೆ.ನಲ್ಲಿ 144.1 ಸಾ.ಟನ್ ಮತ್ತು ತಮಿಳುನಾಡು 66.6 ಸಾ.ಹೆ.ನಲ್ಲಿ 35.3 ಸಾ.ಟನ್ ಮೆಣಸಿನಕಾಯಿಯನ್ನು ಉತ್ಪಾದಿಸಿವೆ.

**ಶುಂಠಿ :** ಇದು ವಾರ್ಷಿಕ ಬೆಳೆಯಾಗಿದ್ದು ಉಷ್ಣವಲಯದ ಮಾನ್ಸೂನ್ ವಾಯುಗುಣ ಹೊಂದಿರುವ ದಕ್ಷಿಣದ ರಾಜ್ಯಗಳಲ್ಲಿ ಮುಖ್ಯ ಬೆಳೆಯಾಗಿದೆ. ಕೇರಳವು ಶುಂಠಿಯ ಉತ್ಪಾದನೆ ಹಾಗೂ ಕ್ಷೇತ್ರಗಳೆರಡರಲ್ಲಿಯೂ ದೇಶದಲ್ಲಿಯೇ ಮೊದಲನೆ ಸ್ಥಾನದಲ್ಲಿದೆ. 1999-2000ದ ವರದಿಯಂತೆ ಕೇರಳವು 14.57 ಸಾ.ಹೆ.ನಲ್ಲಿ 49.95 ಸಾ.ಟನ್, ಆಂಧ್ರಪ್ರದೇಶ 1.91 ಸಾವಿರ ಹೆ.ನಲ್ಲಿ 6.77 ಸಾ.ಟನ್, ಕರ್ನಾಟಕ 3.94 ಸಾ.ಹೆ.ನಲ್ಲಿ 5.26 ಸಾ.ಟನ್ ಮತ್ತು ತಮಿಳುನಾಡು 0.60 ಸಾ.ಹೆ.ನಲ್ಲಿ 19.01 ಸಾ.ಟನ್ ಶುಂಠಿಯನ್ನು ಉತ್ಪಾದಿಸಿದೆ.

**ಕರಿಮೆಣಸು :** ಪಶ್ಚಿಮ ಘಟ್ಟವಲಯದ ಬಳ್ಳಿಯ ಸಸ್ಯ. 2000ದ ಅಂಕಿ ಸಂಖ್ಯೆಯಂತೆ ಕೇರಳವು 173860 ಹೆ.ನಲ್ಲಿ 55520 ಟನ್, ಕರ್ನಾಟಕ 3830 ಹೆ.ನಲ್ಲಿ 940 ಟನ್ ಮತ್ತು ತಮಿಳುನಾಡು 3420 ಹೆ.ನಲ್ಲಿ 720 ಟನ್ ಕರಿಮೆಣಸನ್ನು ಉತ್ಪಾದಿಸಿವೆ.

**ಅರಿಸಿನ :** ಅರಿಸಿನವು ವರ್ಷದ ಎಲ್ಲ ಅವಧಿಯಲ್ಲಿಯೂ ಕಂಡುಬರುವುದು. ಆಂಧ್ರಪ್ರದೇಶ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ನಾಲ್ಕು ರಾಜ್ಯಗಳಲ್ಲಿಯೂ ಬೆಳೆಯುವುದು. ಕರ್ನಾಟಕದಲ್ಲಿ ಚಾಮರಾಜನಗರವು ಅತಿ ಹೆಚ್ಚು ಅರಿಸಿನ ಬೆಳೆಯುವ ಜಿಲ್ಲೆಯಾಗಿದೆ.

**ಧನಿಯಾ :** ಎಲೆ ಮತ್ತು ಬೀಜಗಳೆರಡನ್ನೂ ವಿವಿಧ ಉಪಯೋಗಕ್ಕಾಗಿ ಬಳಸಬಹುದು. 2001ರ ಅಂಕಿ ಸಂಖ್ಯೆಯಂತೆ ಆಂಧ್ರಪ್ರದೇಶವು 107.100 ಲ.ಹೆ.ನಲ್ಲಿ 26900 ಲ.ಟನ್ ಉತ್ಪಾದಿಸಿದೆ. ತಮಿಳುನಾಡು 30600 ಲ.ಹೆ.ನಲ್ಲಿ 6400 ಲ.ಟನ್ ಮತ್ತು ಕರ್ನಾಟಕವು 17300 ಲ.ಹೆ.ನಲ್ಲಿ 2900ಲ.ಟನ್ ಧನಿಯಾ ಉತ್ಪಾದಿಸಿವೆ.

**ಎಣ್ಣೆಕಾಳುಗಳು :**

**ನೆಲಗಡಲೆ :** ಉಷ್ಣವಲಯದ ಸಸ್ಯ. ಇದಕ್ಕೆ 20ರಿಂದ 30$^0$ ಸೆ.ಉಷ್ಣಾಂಶ ಹಾಗೂ 50-75 ಸೆಂ.ಮೀ ಮಳೆ ಸಾಕಾಗುವುದು. 'ಬಡವರ ಬಾದಾಮಿ' ಎಂದು ಕರೆಯಲ್ಪಡುವ ಇದನ್ನು 2000-01ರ ಅಂಕಿಸಂಖ್ಯೆಯಂತೆ ಆಂಧ್ರಪ್ರದೇಶ 1.81 ದಶಲಕ್ಷ ಹೆಕ್ಟೇರ್‌ನಲ್ಲಿ 12.03 ದ.ಲ.ಟನ್, ತಮಿಳುನಾಡು 0.83 ದ.ಲ.ಹೆ.ನಲ್ಲಿ 1.46 ದ.ಲ.ಟನ್ ಮತ್ತು ಕರ್ನಾಟಕ 1.13 ದ.ಲ.ಹೆ.ನಲ್ಲಿ 0.90 ದ.ಲ.ಟನ್ ಉತ್ಪಾದನೆ ಮಾಡಿವೆ. ಆಂಧ್ರಪ್ರದೇಶವು ನೆಲಗಡಲೆ ಉತ್ಪಾದನೆಯಲ್ಲಿ ದೇಶದಲ್ಲಿಯೆ ಮೊದಲ ಸ್ಥಾನ ಪಡೆದಿದೆ.

**ಹರಳು/ಔಡಲ :** ಇದು ಸು. ಹತ್ತು ಹನ್ನೆರಡು ಅಡಿ ಎತ್ತರದವರೆಗೂ ಬೆಳೆಯುತ್ತದೆ. ದಕ್ಷಿಣ ಭಾರತದಲ್ಲಿ ಇದು ಖಾರೀಫ್ ಬೆಳೆಯಾಗಿದೆ. 2001-02ರ ಅಂಕಿ ಸಂಖ್ಯೆಯಂತೆ ಆಂಧ್ರಪ್ರದೇಶವು 3.93 ಲ.ಹೆ.ನಲ್ಲಿ 1.31 ಲ.ಟನ್, ಕರ್ನಾಟಕ 0.24 ಲ.ಹೆ.ನಲ್ಲಿ 0.25 ಲ.ಟನ್ ಮತ್ತು ತಮಿಳುನಾಡು 0.39 ಲ.ಹೆ.ನಲ್ಲಿ 0.13 ಲ.ಟನ್ ಹರಳನ್ನು ಉತ್ಪಾದಿಸಿವೆ.

ಎಳ್ಳು : ಮುಖ್ಯ ಎಣ್ಣೆ ಕಾಳುಗಳಲ್ಲಿ ಒಂದಾಗಿದ್ದು, ಉಷ್ಣವಲಯ ಹಾಗೂ ಉಪ ಉಷ್ಣವಲಯದ ಬೆಳೆಯಾಗಿ ಬೆಳೆಯುವರು. 2001-02ರ ವರದಿಯಂತೆ ತಮಿಳುನಾಡು 1,78 ಲ.ಹೆ.ನಲ್ಲಿ 1.0 ಲ.ಟನ್, ಕರ್ನಾಟಕ 1.11 ಲ.ಹೆ. 0.46 ಲ.ಟನ್ ಮತ್ತು ಆಂಧ್ರಪ್ರದೇಶವು 1.69 ಲ.ಹೆ.ನಲ್ಲಿ 0.31 ಲ.ಟನ್ ಎಳ್ಳನ್ನು ಉತ್ಪಾದಿಸಿವೆ.

**ಸೂರ್ಯಕಾಂತಿ :** ಇದು ಖಾರೀಫ್ ಮತ್ತು ರಬಿ ಎರಡೂ ಅವಧಿಯಲ್ಲಿಯೂ ಬೆಳೆಯುವ ಬೆಳೆ. 2000-01ರ ಅಂಕಿ ಸಂಖ್ಯೆಯಂತೆ ಕರ್ನಾಟಕವು 6.9 ಲ.ಹೆ.ನಲ್ಲಿ 2.50 ಲ.ಟನ್ ಮತ್ತು ಆಂಧ್ರಪ್ರದೇಶವು 2.0 ಲ.ಹೆ.ನಲ್ಲಿ 1.70 ಲ.ಟನ್ ಸೂರ್ಯಕಾಂತಿಯನ್ನು ಉತ್ಪಾದಿಸಿವೆ. ಕರ್ನಾಟಕವು ಸೂರ್ಯಕಾಂತಿ ಉತ್ಪಾದನೆ ಹಾಗೂ ಬೆಳೆಯುವ ಕ್ಷೇತ್ರ ಎರಡರಲ್ಲಿಯೂ ಭಾರತದಲ್ಲಿ ಮೊದಲ ಸ್ಥಾನ ಪಡೆದಿದೆ.

**ಸೋಯಾ ಅವರೆ :** ಖಾದ್ಯ ತೈಲಗಳ ಮೂಲಗಳಲ್ಲಿ ಒಂದಾಗಿದ್ದು, ಕರ್ನಾಟಕವು 0.7 ಲ.ಹೆ.ನಲ್ಲಿ 0.6 ಲ.ಟನ್ ಸೋಯಾ ಅವರೆಯನ್ನು 2001ರಲ್ಲಿ ಉತ್ಪಾದಿಸಿರುವುದು ತಿಳಿದುಬರುತ್ತದೆ. ಹಾಗೆಯೆ ಆಂಧ್ರಪ್ರದೇಶದ ಕೆಲವು ಕಡೆ ಇದನ್ನು ಬೆಳೆಯುವುದು ಕಂಡುಬರುತ್ತದೆ.

**ತೋಟಗಾರಿಕೆಯ ಬೆಳೆಗಳು :**

**ಚಹ :** ಚಹದ ಹಂಚಿಕೆಯು ದೇಶದಲ್ಲಿ ವಿಭಿನ್ನವಾಗಿದ್ದು, ದಕ್ಷಿಣ ವಲಯದ ರಾಜ್ಯಗಳು ಕೂಡ ಚಹದ ಉತ್ಪಾದನೆಯಲ್ಲಿ ತೊಡಗಿರುವುದು ಕಂಡುಬರುವ ದೃಶ್ಯ. 2000-01ರ ವರದಿಯಂತೆ ಕರ್ನಾಟಕವು 2 ಸಾವಿರ ಹೆಕ್ಟೇರ್‌ನಲ್ಲಿ 5 ಸಾವಿರ ಟನ್, ಕೇರಳವು 35 ಸಾವಿರ ಹೆ.ನಲ್ಲಿ 68 ಸಾವಿರ ಟನ್ ಮತ್ತು ತಮಿಳುನಾಡು 51 ಸಾವಿರ ಹೆ.ನಲ್ಲಿ 128 ಸಾವಿರ ಟನ್ ಚಹ ಉತ್ಪಾದಿಸಿವೆ.

**ಕಾಫಿ :** ಕಾಫಿಯು ಅತಿಮುಖ್ಯವಾದ ಪಾನೀಯಗಳಲ್ಲಿ ಒಂದು. ಇದು ಒಳಗೊಂಡಿರುವ 'ಕೆಫಿನ್' ಉತ್ತೇಜನಕಾರಕವಾಗಿದೆ. ಕಾಫಿಯು ಉಷ್ಣವಲಯದ ಬಹುವಾರ್ಷಿಕ ನಿತ್ಯಹರಿದ್ವರ್ಣದ ಬೆಳೆ. 2001-02ರ ವರದಿಯಂತೆ ಕರ್ನಾಟಕವು 1,99,550 ಹೆ. ಪ್ರದೇಶದಲ್ಲಿ 2,19,950 ಟನ್ ಕೇರಳ 84,735 ಹೆ.ಪ್ರದೇಶದಲ್ಲಿ 70,550 ಟನ್ ಮತ್ತು ತಮಿಳುನಾಡ್ 30,618 ಹೆ.ಪ್ರದೇಶದಲ್ಲಿ 16,450 ಟನ್ ಕಾಫಿಯನ್ನು ಉತ್ಪಾದಿಸಿವೆ. ಕರ್ನಾಟಕವು ಉತ್ಪಾದನಾ ಕ್ಷೇತ್ರ, ಉತ್ಪಾದನೆ ಎರಡರಲ್ಲಿಯೂ ಭಾರತದಲ್ಲಿಯೆ ಮೊದಲ ಸ್ಥಾನಗಳಿಸಿದೆ.

**ರಬ್ಬರ್ :** ಬಹುವಾರ್ಷಿಕ ನಿತ್ಯಹರಿದ್ವರ್ಣದ ಬೆಳೆ. ಇಂಡಿಯನ್ ಅಗ್ರಿಕಲ್ಚರ್ ವರದಿಯಂತೆ 1989-90ರಲ್ಲಿ ಕೇರಳ 4,12,900 ಹೆ.ನಲ್ಲಿ ಕರ್ನಾಟಕ 19,565 ಹೆ.ನಲ್ಲಿ 14,445 ಟನ್ ರಬ್ಬರನ್ನು ಉತ್ಪಾದಿಸಿವೆ. ಕೇರಳವು ಭಾರತದಲ್ಲಿಯೇ ಅತಿ ಹೆಚ್ಚು ರಬ್ಬರ್ ಉತ್ಪಾದಿಸುವ ರಾಜ್ಯವಾಗಿದೆ.

**ಕೊಕೋ :** ಇದರ ಉತ್ಪಾದನೆಯು ದಕ್ಷಿಣದ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿದೆ. ಕೇರಳವು ಕೋಕೋ ಉತ್ಪಾದನೆಯಲ್ಲಿ ದೇಶದಲ್ಲಿಯೇ ಮೊದಲ ಸ್ಥಾನ ಪಡೆದಿದೆ. 'ಕ್ಯಾಷ್ಯೂ ಅಂಡಂ ಕೊಕೋ ಡೆವಲಪ್‌ಮೆಂಟ್ ಬೋರ್ಡ್' ವರದಿಯಂತೆ 2003ರಲ್ಲಿ ಕೇರಳ 8680 ಸಾ.ಹೆ.ನಲ್ಲಿ 4100 ಸಾ.ಟನ್, ಕರ್ನಾಟಕ 4400 ಸಾ.ಹೆ.ನಲ್ಲಿ 1700 ಸಾ.ಟನ್, ತಮಿಳುನಾಡು 350 ಸಾ.ಹೆ.ನಲ್ಲಿ 180 ಸಾ.ಟನ್ ಮತ್ತು ಆಂಧ್ರಪ್ರದೇಶವು 2700 ಸಾ.ಹೆ.ನಲ್ಲಿ 800 ಸಾ.ಟನ್ ಉತ್ಪಾದನೆ ಮಾಡಿವೆ.

**ಅಡಕೆ :** ಇದು ಉಷ್ಣವಲಯದ ತಾಳೆ ಜಾತಿಯ ಮರ. ಭಾರತದಲ್ಲಿ ಕರ್ನಾಟಕವು ಕ್ಷೇತ್ರ ಮತ್ತು ಉತ್ಪಾದನೆ ಎರಡರಲ್ಲಿಯೂ ಮೊದಲ ಸ್ಥಾನ ಪಡೆದಿದೆ. ಕರ್ನಾಟಕವು 77.0 ಸಾವಿರ ಹೆ.ನಲ್ಲಿ 113.3 ಸಾವಿರ ಟನ್

ಮತ್ತು ಕೇರಳ 63.8 ಸಾ.ಹೆ.ನಲ್ಲಿ 70.3 ಸಾ.ಟನ್ ಅಡಕೆಯನ್ನು ಉತ್ಪಾದಿಸಿದೆ.

**ತೆಂಗು :** ನಿರಂತರ ಫಲ ಕೊಡುವ ಕಲ್ಪವೃಕ್ಷ ಬಹುವಾರ್ಷಿಕ ಮರ. 2002ರ ವರದಿಯಂತೆ ಕೇರಳವು 939.5 ಸಾ.ಹೆ.ನಲ್ಲಿ 6744 ದ.ಲಕ್ಷ ಕಾಯಿ, ತಮಿಳುನಾಡು 33.8 ಸಾ.ಹೆ.ನಲ್ಲಿ 3293 ದ.ಲ.ಕಾಯಿ, ಕರ್ನಾಟಕ 373.7 ಸಾವಿರ ಹೆ.ನಲ್ಲಿ 1523 ದ.ಲ.ಕಾಯಿ ಮತ್ತು ಆಂಧ್ರಪ್ರದೇಶ 104.0 ಸಾ.ಹೆ.ನಲ್ಲಿ 1130 ದ.ಲ.ಕಾಯಿಯನ್ನು ಉತ್ಪಾದನೆ ಮಾಡಿವೆ. ಕೇರಳವು ಭಾರತದಲ್ಲಿಯೇ ಹೆಚ್ಚು ತೆಂಗು ಉತ್ಪಾದನೆ ಮಾಡುವ ರಾಜ್ಯವಾಗಿದೆ.

**ಹಣ್ಣುಗಳು :** ದಕ್ಷಿಣದ ರಾಜ್ಯಗಳು ಹಣ್ಣಿನ ಉತ್ಪಾದನೆಯಲ್ಲಿ ತಮ್ಮದೇಯಾದ ರೀತಿಯಲ್ಲಿ ಗುರುತಿಸಿಕೊಂಡಿದ್ದು, ಆಂಧ್ರಪ್ರದೇಶವು 449.3 ಸಾ.ಹೆ.ನಲ್ಲಿ 5175.4 ಸಾ.ಟನ್. ಕರ್ನಾಟಕ 315.0 ಸಾ.ಹೆ.ನಲ್ಲಿ 5456.1 ಸಾ.ಟನ್, ಕೇರಳ 187.8 ಸಾ.ಹೆ.ನಲ್ಲಿ 1184.5 ಸಾ.ಟನ್ ಮತ್ತುತಮಿಳುನಾಡು 232.0 ಸಾ.ಹೆ.ನಲ್ಲಿ5939.6 ಸಾ.ಟನ್ ಉತ್ಪಾದನೆ ಮಾಡಿವೆ.

**ಮಾವು :** ಆಂಧ್ರಪ್ರದೇಶವು ಮಾವಿನ ಕ್ಷೇತ್ರದಲ್ಲಿ ದೇಶದಲ್ಲಿಯೇ ಎರಡನೆ ಸ್ಥಾನದಲ್ಲಿದ್ದು, ಉತ್ಪಾದನೆಯಲ್ಲಿ ಮೂರನೆ ಸ್ಥಾನದಲ್ಲಿದೆ. ಇಲ್ಲಿಯ ಮುಖ್ಯ ತಳಿಗಳೆಂದರೆ ಸುವರ್ಣರೇಖ, ನಾಗುಲಪಲ್ಲಿ, ಕೊತ್ತಪಲ್ಲಿ, ಬಂಗಿನಪಲ್ಲಿ, ಜಹಂಗೀರ್, ಕಟರಿ ಮತ್ತು ದೇಸವಕಿ, ತಮಿಳುನಾಡಿನ ಆಳ್ಫೋನ್ಸೋ, ಮುಂಡಪ್ಪ ಮತ್ತು ನೀಲಂ. ಕರ್ನಾಟಕದಲ್ಲಿ ತೋತಾಪುರಿ, ರಸಪುರಿ, ಮಲ್ಲಿಕ, ಮಲಗೋಬ, ಬಾದಾಮಿ, ನೀಲಂ ತಳಿಯ ಹಣ್ಣುಗಳನ್ನು ಬೆಳೆಯಲಾಗುವುದು.

**ಬಾಳೆ :** ಬಾಳೆಯ ಉತ್ಪಾದನೆಯಲ್ಲಿ ತಮಿಳುನಾಡು ದೇಶದ ಬಾಳೆ ಕ್ಷೇತ್ರದ ಶೇ. 16.7ರಷ್ಟನ್ನು ಹೊಂದಿದ್ದು, ಶೇ. 26.2ರಷ್ಟನ್ನು ಉತ್ಪಾದಿಸುತ್ತಿದೆ. ಉತ್ಪಾದನೆ ಮತ್ತು ಕ್ಷೇತ್ರಗಳೆರಡರಲ್ಲಿಯೂ ದೇಶದಲ್ಲಿ ಎರಡನೆ ಸ್ಥಾನದಲ್ಲಿದೆ.

ತಂಜಾವೂರು, ಮಧುರೈ, ಕೊಯಿಮತ್ತೂರು, ಸೇಲಂ, ಕನ್ಯಾಕುಮಾರಿ ಮತ್ತು ತಿರುಚನಾಪಳ್ಳಿಯಲ್ಲಿ ಮುಖ್ಯವಾಗಿ ಬೆಳೆಯುವರು. ಕೇರಳದಲ್ಲಿ ಇದು ಸಾಂಪ್ರದಾಯಿಕ ಬೆಳೆ. ಆಂಧ್ರಪ್ರದೇಶವು ಶೇ 10.1ರಷ್ಟು ಬಾಳೆಯ ಕ್ಷೇತ್ರ ಹೊಂದಿದ್ದು, ಶೇ 8.6ರಷ್ಟನ್ನು ಉತ್ಪಾದಿಸುವುದು. ಕೃಷ್ಣಾ, ವಿಶಾಖಪಟ್ಟಣ, ಪೂರ್ವ ಮತ್ತು ಪಶ್ಚಿಮ ಗೋದಾವರಿ ಬಾಳೆ ಬೆಳೆಯುವ ಮುಖ್ಯ ಜಿಲ್ಲೆಗಳು. ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ 'ಪೂನಮ್' ತಳಿ ಮುಖ್ಯವಾದುದು. ಕರ್ನಾಟಕದ ಉತ್ತರ ಕನ್ನಡ, ದಕ್ಷಿಣ ಕನ್ನಡ ಉಡುಪಿ, ಬೆಳಗಾಂ, ಮೈಸೂರು, ಚಿಕ್ಕಮಗಳೂರು, ಕೋಲಾರ, ಶಿವಮೊಗ್ಗ ಮುಖ್ಯವಾದವು.

**ಕಿತ್ತಳೆ :** ಸಿಟ್ರಸ್ ಗುಂಪಿನ ಹಣ್ಣುಗಳಿಗೆ ಸೇರಿದ ಇದನ್ನು ಕರ್ನಾಟಕದ ಕೊಡಗು ಮತ್ತು ಚಿಕ್ಕಮಗಳೂರು, ಕೇರಳದ ವೈನಾಡು, ತಮಿಳುನಾಡಿನ ನೀಲಗಿರಿಯಲ್ಲಿ ಬೆಳೆಯಲಾಗುವುದು.

**ಗೋಡಂಬಿ :** ಕಾರ್ಬೋಹೈಡ್ರೆಟ್, ಪ್ರೊಟಿನ್, ಕ್ಯಾಲ್ಸಿಯಂ ಮತ್ತು ವಿಟಮಿನ್‌ಗಳನ್ನು ಒಳಗೊಂಡಿರುವ ಉತ್ತಮ ಪೌಷ್ಟಿಕಾಂಶದ ಬೆಳೆ. ಕೇರಳವು ಗೋಡಂಬಿ ಉತ್ಪಾದನೆಯಲ್ಲಿ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಇದು ದೇಶದ ಶೇ 19.6ರಷ್ಟು ಕ್ಷೇತ್ರದಲ್ಲಿ ಶೇ. 19.2ರಷ್ಟನ್ನು ಉತ್ಪಾದಿಸುವುದು. ಆಂಧ್ರಪ್ರದೇಶವು ಶೇ. 13.2ರಷ್ಟನ್ನು ಉತ್ಪಾದಿಸುವುದು. ಕರ್ನಾಟಕದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ಗೋಡಂಬಿ ಬೆಳೆಯಲಾಗುವುದು. 2001ರ ವರದಿಯಂತೆ ಕೇರಳ 100 ಸಾವಿರ ಹೆ.ನಲ್ಲಿ 76 ಸಾವಿರ ಟನ್, ಕರ್ನಾಟಕ 91 ಸಾವಿರ ಹೆ.ನಲ್ಲಿ 42 ಸಾವಿರ ಟನ್, ತಮಿಳುನಾಡು 86 ಸಾವಿರ ಹೆ.ನಲ್ಲಿ 59 ಸಾವಿರ ಟನ್ ಮತ್ತು ಆಂಧ್ರಪ್ರದೇಶದಲ್ಲಿ 130 ಸಾವಿರ ಹೆ.ನಲ್ಲಿ 75 ಸಾವಿರ ಟನ್ ಗೋಡಂಬಿ ಉತ್ಪಾದಿಸಿದೆ.

**ದ್ರಾಕ್ಷಿ :** ಆಂಧ್ರಪ್ರದೇಶವು ದೇಶದಲ್ಲಿಯೇ ಅತಿ ಹೆಚ್ಚು ದ್ರಾಕ್ಷಿ ಬೆಳೆಯುವ ರಾಜ್ಯ. ಇಲ್ಲಿಯ ಹೈದ್ರಾಬಾದ್, ಅನಂತಪುರ, ನಿಜಾಮಾಬಾದ್ ಜಿಲ್ಲೆಗಳು ಮುಖ್ಯವಾದವು. ತಮಿಳುನಾಡಿನ ಸೇಲಂ ಮತ್ತು ಮಧುರೈ ಕರ್ನಾಟಕದ ಬಿಜಾಪುರ,ಬೆಂಗಳೂರು ಮುಖ್ಯ ದ್ರಾಕ್ಷಿ ಬೆಳೆಯ ತಾಣಗಳು.

**ತರಕಾರಿಗಳು** : **ಈರುಳ್ಳಿ :** ದೇಶದ ಒಟ್ಟು ಉತ್ಪಾದನೆಯಲ್ಲಿ ಕರ್ನಾಟಕವು 14.24ರಷ್ಟನ್ನು, ಆಂಧ್ರಪ್ರದೇಶ 10.89ರಷ್ಟನ್ನು ಉತ್ಪಾದಿಸುತ್ತವೆ. ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ಅತಿ ಸಣ್ಣ ಆದರೆ ಹೆಚ್ಚು ಆಮ್ಲೀಯತೆಯನ್ನು ಹೊಂದಿರುವ ಈರುಳ್ಳಿಯನ್ನು ಉತ್ಪಾದಿಸಲಾಗುವುದು.

**ಆಲೂಗಡ್ಡೆ :** 2001ರ ವರದಿಯಂತೆ ಕರ್ನಾಟಕವು 38.20 ಲ.ಹೆ.ಗಳಲ್ಲಿ 442.70 ದ.ಲ.ಟನ್ ಮತ್ತು ತಮಿಳುನಾಡು 5.60 ಲ.ಹೆ.ನಲ್ಲಿ 103.30 ದ.ಲ.ಟನ್ ಉತ್ಪಾದನೆ ಮಾಡಿದ್ದು, ದೇಶದ ಒಟ್ಟು ಉತ್ಪಾದನೆಯಲ್ಲಿ ಕ್ರಮವಾಗಿ ಶೇ. 2.00ರಷ್ಟು ಮತ್ತು ಶೇ. 0.47ರಷ್ಟನ್ನು ಉತ್ಪಾದಿಸಿವೆ.

**ಟೊಮ್ಯಾಟೊ :** ಆಂಧ್ರಪ್ರದೇಶವು ವಾರ್ಷಿಕವಾಗಿ 2.05ದ.ಲ.ಟನ್ ಟೊಮ್ಯಾಟೊ ಉತ್ಪಾದಿಸುತ್ತಿದ್ದು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಕೂಡ ಟೊಮ್ಯಾಟೊ ಉತ್ಪಾದನೆ ಮಾಡುವುದು ಕಂಡುಬರುವುದು. ಉಳಿದಂತೆ ತೊಂಡೆಕಾಯಿ, ಗೋರಿಕಾಯಿ, ಎಲೆಕೋಸು, ಗೆಡ್ಡೆಕೋಸು, ಬದನೆಕಾಯಿ, ಹಾಗಲಕಾಯಿ, ಪಡವಲಕಾಯಿ ಮೊದಲಾದ ತರಕಾರಿಗಳು ನಾಲ್ಕು ರಾಜ್ಯಗಳಲ್ಲೂ ಕಂಡುಬರುತ್ತವೆ.

**ಪುಷ್ಪ ಬೇಸಾಯ :** ದಕ್ಷಿಣದ ಈ ರಾಜ್ಯಗಳು ಮಲ್ಲಿಗೆ, ಚಂಡುಮಲ್ಲಿಗೆ, ಮಲ್ಲಿಗೆ, ಜಾಜಿ, ಸಂಪಿಗೆ, ದಾಸವಾಳ, ಕಣಿಗಿಲೆ, ನಂದಿಬಟ್ಟಲು, ಸೇವಂತಿಗೆ, ಬೆಟ್ಟತಾವರೆ, ಆಸ್ಟರ್, ಗುಲಾಬಿ, ಆರ್ಕಿಡ್, ಲಿಲ್ಲಿ, ಗ್ಲಾಡಿಯೊಲಸ್, ಕಾರ್ನೇಷನ್, ಆಂಥ್ಯೂರಿಯಮ್, ಗಾಳ್‌ಬೇರಾ ಮೊದಲಾದ ಹೂವುಗಳನ್ನು ಬೆಳೆಯುತ್ತವೆ. ಕರ್ನಾಟಕವು ದೇಶದಲ್ಲಿಯೇ ಅತಿ ಹೆಚ್ಚು ಪುಷ್ಪ ಬೇಸಾಯ ಮಾಡುವ ಮತ್ತು ಉತ್ಪಾದಿಸುವ ರಾಜ್ಯವಾಗಿದೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ. 28.1ರಷ್ಟನ್ನು ಇದು ಒಳಗೊಂಡಿದೆ. ಕರ್ನಾಟಕವು 20780 ಹೆ.ನಲ್ಲಿ 124290 ಮೆಟ್ರಿಕ್‌ಟನ್, ಆಂಧ್ರಪ್ರದೇಶ 8357 ಹೆ.ನಲ್ಲಿ 32000 ಮೆ.ಟನ್ ಮತ್ತು ತಮಿಳುನಾಡು 17750 ಹೆ.ನಲ್ಲಿ 133125 ಮೆ.ಟನ್ ಉತ್ಪಾದಿಸಿವೆ.

**ಗ್ರಂಥ ಋಣ**


ಭಾರತದ ಪ್ರಾದೇಶಿಕ ಮತ್ತು ಆರ್ಥಿಕ ಭೂಗೋಳಶಾಸ್ತ್ರ, ಡಾ. ರಂಗನಾಥ

ಕರ್ನಾಟಕದ ಪ್ರಾದೇಶಿಕ ಭೂಗೋಳಶಾಸ್ತ್ರ, ಡಾ. ರಂಗನಾಥ

ಕರ್ನಾಟಕ ಸಂಗಾತಿ

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ, ಎಂ.ಬಿ.ಗೌಡರ

ಭಾರತದ ಪ್ರಾದೇಶಿಕ ಭೂಗೋಳಶಾಸ್ತ್ರ, ಎಂಬಿ.ಗೌಡರ

ಇಂಡಿಯ - 2010

ಯೋಜನಾ ಅಭಿವೃದ್ಧಿ ಮಾಸ ಪತ್ರಿಕೆ, ಫೆಬ್ರುವರಿ 2012, ಜೂನ್ 2013 ನವೆಂಬರ್ 2013

ಕೃಷಿ ಅರ್ಥಶಾಸ್ತ್ರ, ಡಾ.ಎಚ್.ಆರ್. ಕೃಷ್ಣಯ್ಯಗೌಡ


*ಎಲ್. ಆರ್.*

**ದಣಿ ಒಕ್ಕಲು ಪದ್ಧತಿ** ದಣಿ(ಧಣಿ/ದನಿ) ಮತ್ತು ಒಕ್ಕಲು ಮನೆಗಳು ಸಾಮಾನ್ಯವಾಗಿ ಒಂದೇ ಬಯಲಲ್ಲಿ, ಹೆಚ್ಚು ಕಡಿಮೆ ಒಂದು ಕಿಲೋಮೀಟರ್ ಅಂತರದಲ್ಲಿರುತ್ತಿದ್ದವು. ದಣಿಗಳ ಮನೆಯಿಂದ ಆಗಾಗ ಜನ ಬಂದು ಕರೆದಾಗಲೆಲ್ಲ ಹೋಗಿ ಬರುವಷ್ಟು ಅನುಕೂಲಕರವಾಗಿರಬೇಕು. ದಣಿಗಳ ಮನೆಗೆ ಹೋಗುವುದೆಂದರೆ ನಂತರ ಹಾಗಲ್ಲ, ಊಳಿಗದ ಆಳಿನ ಹಾಗೆ ಉಟ್ಟ ಬಟ್ಟೆಯಲ್ಲೇ ತಲೆಗೊಂದು ಮಟ್ಟಾಳೆ, ಕೈಯಲ್ಲೊಂದು ಕತ್ತಿ ಹಿಡಿದುಕೊಂಡು ಕೆಲಸದ ಮೇಲೆ ಹೋಗುವುದು. ದಣಿ ಮತ್ತು ಒಕ್ಕಲು ನಡುವೆ ಒಂದು ಸಾಮಾಜಿಕ ಅಂತರ ಯಾವತ್ತೂ ಇರುತ್ತಿತ್ತು. ದಣಿಗಳ ಮನೆಗೆ ನಂಟರು ಬಂದಾಗಲೋ ಅಥವಾ ಇತರ ವಿಶೇಷ ಸಂದರ್ಭಗಳಲ್ಲಿ ಒಕ್ಕಲಿನವನ ಮನೆಗೆ ಜನ ಬಂದೇ ಬರುತ್ತಾರೆ. ಆಗ ಆತ ತನ್ನ ಅಂಗಳದ ಕೋಳಿ, ತೋಟದಿಂದ ಸೀಯಾಳ, ತೆಂಗಿನಕಾಯಿ, ಬಾಳೆ ಎಲೆ ಮೊದಲಾದವುಗಳನ್ನು ಹೊತ್ತುಕೊಂಡು ದಣಿಯ ಮನೆಗೆ ಒಯ್ಯಲೇಬೇಕು. ಇಲ್ಲಿ ಇಷ್ಟೇ ಮಹತ್ವದ ಇನ್ನೊಂದು ಮಗ್ಗುಲೂ ಇದೆ. ಅನಪತ್ಯದ (ಅಗತ್ಯ/ಅನಿವಾರ್ಯ/ಆಪತ್ತು) ಸಂದರ್ಭ ಬಂದಾಗ ಒಕ್ಕಲಿನವ ಮೊದಲು ಓಡುವುದೇ ದಣಿಗಳ ಮನೆಗೆ. ಮದುವೆ, ಕಾಯಿಲೆ ಮುಂತಾದ ಖರ್ಚುವೆಚ್ಚದ ಹೊತ್ತುಗಳಲ್ಲಿ, ಸಹಾಯವೋ ಸಾಲವೋ ಮೊದಲಾಗಿ ಸಿಗುವುದೇ ಉಳ್ಳಾಯನ ಮನೆಯಲ್ಲಿ. ಅಂತಹ ಸಾಲಸೋಲ ಸಂದಾಯಕ್ಕೆ ಒಕ್ಕಲಿನವ ತನ್ನ ದುಡಿಮೆಯ ಪಗಾರವನ್ನೇ ಅಡವಿಟ್ಟಿರುತ್ತಾನೆ. ಇಂತಹ ಅನಪತ್ಯಗಳೇ ದಣಿಗೆ ಒಕ್ಕಲಿನವನ ಮೇಲಿನ ನಿಯಂತ್ರಣಕ್ಕೆ ಇರುವ ಹಿಡಿತಗಳು.

ಬೇಸಾಯದ ದಿನಗಳಲ್ಲಿ ಊರಿನ ಒಕ್ಕಲುಗಳೆಲ್ಲ ಹೊತ್ತು ಮೂಡುವ ಮೊದಲೇ ತಮ್ಮ ತಮ್ಮ ಕೋಣಗಳೊಂದಿಗೆ ನೊಗನೇಗಿಲು ಸಮೇತ ಹೋಗಿ ದಣಿಯ ಗದ್ದೆಗಳನ್ನು ಉಳಲು ತೊಡಗಬೇಕು. ಮಧ್ಯಾಹ್ನದವರೆಗೆ ಉತ್ತು ಕೋಣಗಳನ್ನು ತೊಳೆದು ಮೇಯಲು ಬಿಟ್ಟು, ತಾವೆಲ್ಲ ಗದ್ದೆಯ ಇತರ ಕೆಲಸಗಳಲ್ಲಿ ತೊಡಗಬೇಕು. ಮೇಯಲು ಬಿಟ್ಟ ಕೋಣಗಳೊಂದಿಗೆ ಮನೆ ಸೇರುವಾಗ ಕತ್ತಲಾಗುತ್ತಿತ್ತು. ಅಲ್ಲಲ್ಲಿ ಒಕ್ಕಲಿನವರನ್ನು ಮಕ್ಕಳ ಹಾಗೆ ನೋಡಿಕೊಳ್ಳುತ್ತಿದ್ದ ದಣಿಗಳೂ ಇದ್ದರು. ಭೂಮಸೂದೆಯ ಕಾನೂನು ನ್ಯಾಯಪೀಠ ಕರೆದಾಗ ಒಕ್ಕಲಿನವರ ಪರವಾಗಿ ನಿಂತು 'ಉಳುವವನೇ ಹೊಲದೊಡೆಯ'ನಾಗಬೇಕಿದ್ದರೆ ಏನೆಲ್ಲಾ ಮಾಡಬೇಕು ಎನ್ನುವುದನ್ನು ಹೇಳಿಕೊಟ್ಟ ದಣಿಗಳೂ ಇದ್ದರು. ಇಂದು ಕೂಡ ಅಂತಹ ದಣಿ ಒಕ್ಕಲು ಪೀಳಿಗೆಯವರು ಒಳ್ಳೆಯ ವಿಶ್ವಾಸದಿಂದ ನಡೆದುಕೊಳ್ಳುತ್ತಲೂ ಇದ್ದಾರೆ.

**ಗೇಣಿ ಪದ್ಧತಿ :** ಬೇಸಾಯದ ಕೃಷಿ ಭೂಮಿ ಆಸ್ತಿಯನ್ನು ಜಮೀನುದಾರನೊಬ್ಬ ಸಾಗುವಳಿ ಮಾಡಲು ಬೇರೊಬ್ಬನಿಗೆ ಕೊಡುವುದುಂಟು. ಹಾಗೆ ಸಾಗುವಳಿ ಮಾಡಿದಾಗ ಆ ಭೂಮಿಗೆ ಗೇಣಿ ಕೊಡುವ ಪದ್ಧತಿಯಿದೆ. ಸಾಗುವಳಿ ಮಾಡುವವನು ಭೂಮಾಲೀಕನಿಗೆ ಗೇಣಿ ಕೊಡಬೇಕು. ಗೇಣಿ ಕೊಡುವುದೆಂದರೆ ತಾನು ಬೆಳೆದುದರಲ್ಲಿ ಒಂದಂಶವನ್ನು ಒಪ್ಪಂದದಂತೆ ನೀಡುವುದು. ಆಗ ಭೂಮಾಲೀಕ ಅಥವಾ ಜಮೀನುದಾರ ಸಾಗುವಳಿದಾರನ ಒಡೆಯನಾಗುತ್ತಾನೆ. ಭೂಮಾಲೀಕ ದಣಿಯೆನಿಸಿಕೊಳ್ಳುತ್ತಾನೆ. ಯಾರು ಒಂದಂಶವನ್ನು ಕೊಡುತ್ತಾನೋ ಆತ ಒಕ್ಕಲಿನವ, ಗೇಣಿ ಒಕ್ಕಲು ಆಗಿರುತ್ತಾನೆ. ಹೆಚ್ಚಾಗಿ ಬ್ರಾಹ್ಮಣರು, ಜೈನರು, ಬಂಟರು ಮತ್ತು ಗೌಡರು ದಣಿಗಳು. ಬಂಟರು ಮತ್ತು ಗೌಡರು ಕೂಡ ಒಕ್ಕಲುಗಳಾಗಿದ್ದುದೂ ಇದೆ.

**ಗೇಣಿ ಕಟ್ಟುವುದು :** ಒಂದು ಆಸ್ತಿಗೆ ಗೇಣಿ ಕಟ್ಟುವುದು ಎಂದರೆ ಗೇಣಿ ಎಷ್ಟೆಂದು ನಿರ್ಧರಿಸುವುದು ; ಗೇಣಿಗೆ ಕಟ್ಟಿಕೊಡುವುದು ; ಗೇಣಿಗೆ ಒಪ್ಪಿಸುವುದು. ಕೃಷಿ ಭೂಮಿಯಲ್ಲಿ ಮಾಡಿದ ಬೇಸಾಯಕ್ಕೆ ಸಂಬಂಧಿಸಿದಂತೆ ದಣಿಗೆ ಒಕ್ಕಲಿನವ ಸಾಮಾನ್ಯವಾಗಿ ಅಕ್ಕಿಯ ರೂಪದಲ್ಲೇ ಗೇಣಿ ಕೊಡುವುದು. ಈ ಅಕ್ಕಿಯನ್ನು ಮುಡಿ ಕಟ್ಟಿ ಸಂಗ್ರಹಿಸಿ ದಣಿಗೆ ಒಪ್ಪಿಸಬೇಕು. ಇದು ದಣಿಗಂಟು. ಕೆಲವರು ಬತ್ತದ ರೂಪದಲ್ಲಿ ನೀಡುವುದಿಲ್ಲ. ಬತ್ತವನ್ನು ಮಾರಾಟ ಮಾಡಿ ದುಡ್ಡಿನ ಅಥವಾ ತೆಂಗಿನ ಕಾಯಿಗಳ ರೂಪದಲ್ಲಿ ಕೊಡುತ್ತಾರೆ. ಅದೇನಿದ್ದರೂ ದಣಿಯ ಅಪೇಕ್ಷೆಯಂತೆ. ಇದೇ ಭೂಮಿಯಲ್ಲಿ ಬೆಳೆಸಿದ ಕಾಯಿಪಲ್ಯೆಗಳಲ್ಲಿ ಒಂದಂಶವನ್ನು ಬುಲೆಕಾನಿಗೆ (ಬೆಳೆ ಕಾಣಿಕೆ) ರೂಪದಲ್ಲಿ ಪರ್ಬ(ದೀಪಾವಳಿ) ಮತ್ತು ಬಿಸು(ಸೌರಮಾನ ಯುಗಾದಿ)ವಿನ ಸಮಯದಲ್ಲಿ ದಣಿಗೆ ಸಲ್ಲಿಸಲಾಗುತ್ತದೆ.

**ದಣಿಗಂಟು :** (ಭೂಮಾಲೀಕನ ಭೂಮಿಗೆ ಪ್ರತಿವರ್ಷ ಒಕ್ಕಲಿನವ ಸಲ್ಲಿಸಬೇಕಾದ ಗೇಣಿಗೆ ಇನ್ನೊಂದು ಹೆಸರು). ನೀಡಲು ಆಗದ ಪರಿಸ್ಥಿತಿಗಳು ನಿರ್ಮಾಣವಾಗುವುದೂ ಉಂಟು. ಬರ, ನೆರೆ, ಕ್ಷಾಮ, ಮೊದಲಾದ ಕಾರಣಗಳಿಂದಾಗಿ ಒಕ್ಕಲಿನವರು ಕಂಗಾಲಾಗುವ ರಿಯಾಯಿತಿ ಸಂದರ್ಭಗಳೂ ರಿಯಾಯಿತಿ ಯಾರು ಯಾರಿಗೆ ತೋರಿಸುವುದು ? ಜಮೀನ್ದಾರರೇ ? ಸರಕಾರವೇ ? ಜಮೀನ್ದಾರನಾದರೂ ಸರಕಾರಕ್ಕೆ ಕಂದಾಯ ಸಲ್ಲಿಸಲು ಇದ್ದೇ ಇದೆ. ಅದು ಭೂ ತೆರಿಗೆ.

ಗೇಣಿ ಪದ್ಧತಿಯಲ್ಲಿ ಹಲವು ವಿಧಗಳಿವೆ. ಮೂಲಗೇಣಿ, ಚಾಲಗೇಣಿ, ವಾಯಿದೆಗೇಣಿ, ಪಾಲುಗೇಣಿ, ಮುಂಗೇಣಿ ಮತ್ತು ಶರೀರ ಗೇಣಿ. ಯಾವುದೇ ರೀತಿಯ ಗೇಣಿಯಾದರೂ ಗೇಣಿದಾರ ಮತ್ತು ದಣಿಯ ನಡುವೆ ಒಪ್ಪಂದವಾಗಿ 'ಗೇಣಿಚೀಟು' ಆಗಬೇಕಾಗುತ್ತದೆ. ಗೇಣಿಚೀಟು ಎಂದರೆ ದಣಿ-ಒಕ್ಕಲು ನಡುವೆ ನಡೆಯುವ ಕರಾರು ಪತ್ರ. ಭೂಮಿಯ ಹಕ್ಕನ್ನು ಭೂ ತೆರಿಗೆ / ತೀರ್ವೆ ತೆತ್ತು ಸರಕಾರದಿಂದ ಒಂದು ನಿಶ್ಚಿತ ಕಾಲದವರೆಗೆ ಪಡೆದುಕೊಳ್ಳಲಾಗುವುದು. ಇದಕ್ಕೆ ಗೇಣಿ ವರ್ಗ / ತಿರುವಳಿವರ್ಗ / ಬನಾಮೆ ವರ್ಗ / ಮೂಲಿವರ್ಗ / ವಾಯಿದೆ ವರ್ಗ ಎಂದೆಲ್ಲ ಹೆಸರಿದೆ. ಭೂಮಿಯ ಒಡೆತನ ಮತ್ತು ಒಡೆತನದ ಸ್ಥಳ ಪಡೆದವನು ವರ್ಗದಾರನಾಗುತ್ತಾನೆ. ಹಕ್ಕು ಪತ್ರ ಪಡೆದ ಒಡೆಯ / ಜಮೀನ್ದಾರ. ವರ್ಗದಾರನಿಗೆ ಸ್ವಾಧೀನತೆ ಹೊಂದಿ ಅನುಭವಿಸಬಹುದಾದ

ಖಾಲಿ ಮೈದಾನ ಸ್ಥಳವಿರುತ್ತದೆ. ಇದಕ್ಕೆ ವರ್ಗದ ಕುಮೇರಿ / ಪರಂಬೋಕು ಎನ್ನುತ್ತಾರೆ. ಜಾನುವಾರು ಮೇಯಲು ಅನುಕೂಲವಾದ, ಸೊಪ್ಪು ಸೌದೆ ಕಡಿಯಲು ಮೊದಲಾದವುಗಳಿಗಾಗಿ ಮೀಸಲಿಟ್ಟ ಇಂತಹ ಕುಮೇರಿ ಜಾಗ, ವರ್ಗದ ಆಸ್ತಿಯ ಪಕ್ಕದಲ್ಲೇಇರುತ್ತದೆ.

**ಮೂಲಗೇಣಿ :** ಯಾರೋ ಒಬ್ಬರು ವಂಶಪಾರಂಪರ್ಯವಾಗಿ ಅನುಭೋಗಿಸಬಹುದಾದ ಹಕ್ಕುಳ್ಳ ನಿಯತ ಗೇಣಿಯ ಮೂಲ ದಸ್ತಾವೇಜಿನ ಕರಾರು ಪತ್ರದಂತೆ ಭೂಮಾಲೀಕನ ಜತೆ ಒಪ್ಪಂದ ಮಾಡಿಕೊಂಡು ಅನುಭವಿಸಿ ಮೂಲಗೇಣಿ ನೀಡುತ್ತಾ ಬರುವ ವ್ಯವಸ್ಥೆ. ಅವಧಿ ನೂರರಿಂದ ಐನೂರು ವರ್ಷವೂ ಆಗಬಹುದು. ಮೂಲಗೇಣಿ ನೀಡುತ್ತಾ ಬರುವವನಿಂದ ಇನ್ನೊಬ್ಬ ಮಧ್ಯವರ್ತಿ ಭೂಮಿ ಪಡೆದು ಅನುಭವಿಸಲು ಸಾಧ್ಯವಿದೆ ಅಥವಾ ಮೂಲಗೇಣಿದಾರನು ಇನ್ನೊಬ್ಬನಿಗೆ ಭೂಮಿ ನೀಡಿ ವರ್ಷಾವಧಿಯಲ್ಲಿ ಗೇಣಿ ಪಡೆದುಕೊಳ್ಳಬಹುದು. ಗೇಣಿದಾರನು ಮೂಲಗೇಣಿದಾರನಿಗೆ ಕರಾರಿನಂತೆ ಗೇಣಿ ಒಪ್ಪಿಸಬೇಕಾಗುತ್ತದೆ. ಹೀಗೆ ಒಂದು ಕೈಯಿಂದ ಎರಡನೇ ಕೈಗೆ ಅಥವಾ ಮೂರನೇ ಕೈಗೂ ಬರುವುದುಂಟು.

**ಚಾಲಗೇಣಿ :** ತಾತ್ಕಾಲಿಕ ಒಪ್ಪಂದದಲ್ಲಿ ಭೂ ಹಿಡುವಳಿಯನ್ನು ಜಮೀನ್ದಾರ ಇನ್ನೊಬ್ಬನಿಗೆ ಗೇಣಿ ಚೀಟಿ ಬರೆಸಿ ಕರಾರು ಪತ್ರದಂತೆ ಆತನ ರುಜು ಹಾಕಿಸಿಕೊಂಡು, ಸಾಗುವಳಿಗೆ ಭೂಮಿ ನೀಡುವುದು. ಎಷ್ಟೋ ಬಾರಿ ಚಾಲಗೇಣಿ ಚೀಟು ದಾಖಲೆ ಆತನಿಗೆ ನೀಡದೇ ತಾನೇ ಇಟ್ಟುಕೊಂಡು ಸತಾಯಿಸುವುದೂ ಇದೆ.

**ಪಾಲುಗೇಣಿ :** ಭೂಮಾಲಿಕ ಮತ್ತು ಸಾಗುವಳಿದಾರ ಉತ್ಪನ್ನವನ್ನು ಪಾಲು ಮಾಡಿಕೊಳ್ಳುವ ವ್ಯವಸ್ಥೆ ಎಂದರೆ ಪಾಲುಗಾರರ ಪಾಲುಗಾರಿಕೆ, ಒಪ್ಪಂದ ಪತ್ರದಂತೆ ಹಂಚಿಕೊಳ್ಳುವುದು.

**ಮುಂಗೇಣಿ :** ಗೇಣಿ ಪದ್ಧತಿಯಲ್ಲಿ ಮುಂಗಡವಾಗಿ ಕೊಡುವ ಗೇಣಿಯೇ ಮುಂಗೇಣಿ.

**ವಾಯಿದೆ ಗೇಣಿ :** ವಾಯಿದೆ ಚೀಟಿನ ಮೂಲಕ ನಿಶ್ಚಿತ ಅವಧಿಗೆ (5 ರಿಂದ 10 ವರ್ಷಗಳು) ಭೂಮಿಯನ್ನು ಗೇಣಿಗೆ ಪಡೆದುಕೊಳ್ಳುವ ಕರಾರು ಪತ್ರದಂತೆ ಭೂಮಿಯನ್ನು ಗುತ್ತಿಗೆಗೆ ಕೊಡುವುದು. ಈ ವ್ಯವಹಾರದಲ್ಲಿ ಬೇಕಿದ್ದರೆ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು.

**ಶರೀರ ಗೇಣಿ :** ಗೇಣಿ ಪದ್ಧತಿಯಲ್ಲಿ ಶಾರೀರಿಕ ಪರಿಶ್ರಮ ಮಾಡಿ ತೀರಿಸುವ ಗೇಣಿ ಶರೀರಗೇಣಿ.

ಬೇಸಾಯ ಪರಂಪರೆಯಲ್ಲಿ ಗದ್ದೆಯ ವಿಸ್ತೀರ್ಣವನ್ನು ಮುಡಿ, ಕಳಸೆ, ಸೇರುಗಳಲ್ಲಿ ಹೇಳುವುದು ರೂಢಿ. ಒಂದು ಗದ್ದೆಗೆ ಬಿತ್ತುವ ಬೀಜದ ಅಳತೆಯೇ ಅದರ ವಿಸ್ತೀರ್ಣ. ಒಂದು ಮುಡಿ ಗದ್ದೆ ಎಂದರೆ ಒಂದು ಮುಡಿ ಬತ್ತ ಹೋಗುವ (ಬಿತ್ತಬಹುದಾದ ಜಾಗ) ಗದ್ದೆ. ಮುಡಿ ಎಂದರೆ ಅಕ್ಕಿ ಅಥವಾ ಬತ್ತವನ್ನು ಬೈಹುಲ್ಲಿನ ವಿಶಿಷ್ಟ ಕಟ್ಟಿನಲ್ಲಿ ಶೇಖರಿಸಿಟ್ಟ ಮೂಟೆ.

**ಗೇಣಿ :** ಗೇಣಿ ನೀಡುವ ಕ್ರಮದಲ್ಲಿ ಒಂದು ಮುಡಿ ಗದ್ದೆಗೆ ಎಷ್ಟೆಂದು ನಿರ್ಧರಿಸಿ ಆ ಮೂಲಕ ಕರಾವಳಿಗದ್ದೆಗಳಿಗೆ ಗೇಣಿ ನಿರ್ಧರಿಸಲಾಗುವುದು.

ಕರಾವಳಿ ಗದ್ದೆಯಲ್ಲಿ ಸುಮಾರು ಏಳು ವಿಧಗಳನ್ನು ಗುರುತಿಸಬಹುದು.

**ಅ. ಬೊಟ್ಟುಗದ್ದೆ (ಬೆಟ್ಟುಗದ್ದೆ) :** ಇದಕ್ಕೆ ಮಳೆನೀರೇ ಆಧಾರ. ಹೆಚ್ಚಾಗಿ ಎತ್ತರದ ಸಮತಟ್ಟಾದ ಗುಡ್ಡಗಳ ಪ್ರದೇಶಗಳಲ್ಲಿರುವ ಗದ್ದೆ. ಇದಕ್ಕೆ ಬಾನ ಬೊಟ್ಟು (ಬಾನಬೆಟ್ಟು) ಎಂದರೆ ಬಾನಿನಿಂದ ಮಳೆಯೇ ಆಧಾರವಾಗಿರುವ ಕಾರಣದಿಂದ ಸಾಧ್ಯವಾಗುವ ಬೆಳೆ ಎಂದು ಅರ್ಥ. ಈ ಬೆಳೆಗೆ ಏಣೆಲು ಬೆಳೆ ಎನ್ನುತ್ತಾರೆ.

**ಆ. ಮಜಲು ಗದ್ದೆ :** ಹೆಚ್ಚು ಗುಡ್ಡ ಪ್ರದೇಶವಲ್ಲದ ತಗ್ಗಾದ ಸ್ಥಳಗಳಲ್ಲಿರುವ ಗದ್ದೆ. ಇಂತಹ ಗದ್ದೆಗಳಲ್ಲಿ ಎರಡು ಬೆಳೆ ಸಾಧ್ಯವಾಗುತ್ತದೆ. ಮಳೆಗಾಲದಲ್ಲಿ ಏಣೆಲು ಬೆಳೆಯಾಗುತ್ತದೆ. ಈ ಗದ್ದೆಗಳಲ್ಲಿ ಮಳೆಗಾಲದ ಬಳಿಕ ಇನ್ನೊಂದು ಬೆಳೆ ಸಾಧ್ಯವಾಗುತ್ತದೆ. ಈ ಬೆಳೆಗೆ ಸುಗ್ಗಿ ಬೆಳೆ ಎನ್ನುತ್ತಾರೆ. ಮಳೆ ಕಡಿಮೆಯಾದರೆ ಅಂತಹ ಸಂದರ್ಭಗಳಲ್ಲಿ 'ಕಟ್ಟದ ಬಿಡು ನೀರ್' ಇರುತ್ತದೆ. ತೋಡು, ಕೆರೆ, ಬಾವಿಗಳಿಂದ ಕೊಂತು' ಮತ್ತು ಏತ ನೀರಾವರಿ ಸಾಧ್ಯವಾಗುವ ಗದ್ದೆಗಳು ಇವೆ.

**ಇ. ಬಯಲು ಗದ್ದೆ :** ಮೂರು ಬೆಳೆಗಳು ಸಾಧ್ಯವಾಗುವ ಹೆಚ್ಚು ತೇವಾಂಶವಿರುವ ಗದ್ದೆಗೆ ಬೈಲ್ ಕಂಡ (ಬಯಲು ಗದ್ದೆ) ಎಂದು ಹೆಸರು. ಮಜಲು ಗದ್ದೆಗಳಿಗೆ ತಾಗಿಕೊಂಡಂತೆ ತಗ್ಗು ಪ್ರದೇಶಗಳಲ್ಲಿರುವ ಇವು ಹೊಳೆ ತೋಡುಗಳ ಬದಿಗಳಲ್ಲಿರುತ್ತವೆ. ಇಂತಹ ಗದ್ದೆಗಳಲ್ಲಿ ಏಣೆಲು ಬೆಳೆ ಹೇಗೂ ಸಾಧ್ಯ. ಆ ಬಳಿಕದ ಬೆಳೆ ಸುಗ್ಗಿ ಬೆಳೆ. ಇದಲ್ಲದೆ ಕೊಳಕೆ ಬೆಳೆಯನ್ನು ಕೂಡಾ ಬಯಲು ಗದ್ದೆಯಲ್ಲಿ ಮಾಡುತ್ತಾರೆ.

ಸಾಮಾನ್ಯವಾಗಿ ನೀರ ಹರಿವಿನ ಬದಿಯಲ್ಲಿರುವ ಗದ್ದೆಗಳು ಪಟ್ಲಗದ್ದೆಗಳು. ಮಳೆಗಾಲದಲ್ಲಿ ಸದಾ ನೆರೆ ನೀರು ತುಂಬಿಕೊಂಡು ಏನೂ ಬೆಳೆಸಲು ಸಾಧ್ಯವಾಗದ ಗದ್ದೆಗಳಿವು. ಕುರುಂಬಿಲ್ ಹುಲ್ಲು, ಜಲೀಯ ಸಸ್ಯ ಮೊದಲಾದವು ಬೆಳೆಯುವ ಗದ್ದೆಗಳಲ್ಲಿ ನೀರಿನ ಒರತೆ ಹೆಚ್ಚಿರುತ್ತದೆ. ಹೀಗಾಗಿ ಸುಗ್ಗಿ ಬೆಳೆ ಸಾಧ್ಯ.

**ಉ. ಬೈಲರೆ ಗದ್ದೆ :** ನದೀ ತೀರದ ತಗ್ಗು ಪ್ರದೇಶದಲ್ಲಿರುವ ಗದ್ದೆಗೆ ಬೈಲರೆ ಗದ್ದೆ ಎನ್ನುತ್ತಾರೆ. ಇಂತಹ ಗದ್ದೆಗಳಲ್ಲಿ ಮಳೆಗಾಲದಲ್ಲಿ ಹೆಚ್ಚು ನೀರು ತುಂಬಿಕೊಂಡಿರುತ್ತದೆ. ಆದರೆ ಮಳೆಗಾಲದ ಆರಂಭಕ್ಕೆ ಮೊದಲೇ ಏಣೆಲು ಬೆಳೆ ಮಾಡುವರು.

**ಊ. ಪಾಂಡಿ ಗದ್ದೆ :** ನದೀ ತೀರದಲ್ಲಿ ಯಾವಾಗಲೂ ನೀರು ನಿಂತಿರುವ ಗದ್ದೆಗಳು. ಈ ಗದ್ದೆಗಳಲ್ಲಿ ಬೈಲರೆಯ ಹಾಗೆ ಬೆಳೆಮಾಡಲು ಸಾಧ್ಯವಾಗದ ಕಾರಣ ಏಣೆಲು ಮತ್ತು ಸುಗ್ಗಿ ಬೆಳೆಗಳ ನಡುವಣ ಅವಧಿಯಲ್ಲಿ ಬೆಳೆ ಮಾಡುತ್ತಾರೆ. 'ಪಾಂಡಿ ಬಿತ್ತಂಡ ಪುಂಡಿ ನುಪ್ಪು ಉಣೊಲಿ' (ಪಾಂಡಿ ಬಿತ್ತಿದರೆ ತುತ್ತು ಅನ್ನ ಉಣಬಹುದು) ಎನ್ನುವ ಗಾದೆಯೇ ಇದೆ. ತುಳುನಾಡಿನಲ್ಲಿ ಬೈಲರೆ ಮತ್ತು ಪಾಂಡಿ ಗದ್ದೆಗಳ ವ್ಯತ್ಯಾಸಗಳನ್ನು ಪರಿಗಣಿಸದೆ ಒಂದೇ ಅರ್ಥದಲ್ಲಿ ತಿಳಿದುಕೊಂಡ ಹಾಗೆ ಇದೆ.

**ಋ. ಕುಮೇರ್ :** ಬೆಟ್ಟ ಗುಡ್ಡ ಗಾಡುಗಳ ಸಮತಟ್ಟಾದ ಪ್ರದೇಶದಲ್ಲಿ ಮಳೆನೀರನ್ನು ಅವಲಂಬಿಸಿದ ಗದ್ದೆಗಳನ್ನು ಮಾಡಿರುವುದಕ್ಕೆ ಕುಮೇರ್ (ಕುಮ್ಮರಿ) ಎನ್ನಲಾಗುತ್ತದೆ. ಅಲ್ಲಲ್ಲ ಹೆಚ್ಚಾಗಿ ಹುರುಳಿ ಮೊದಲಾದ ಧಾನ್ಯ ಬಿತ್ತಿ ಬೆಳೆಯುತ್ತಾರೆ.

ಒಂದು ಮುಡಿ ಬೈಲು ಬೆಳೆ ಗದ್ದೆಗೆ ವರ್ಷಕ್ಕೆ ಹನ್ನೆರಡು ಮುಡಿ ಗೇಣಿ. ಬೈಲಿನಲ್ಲಿ ವರ್ಷಕ್ಕೆ ಮೂರು ಬೆಳೆಯಲಾಗುತ್ತದೆ. ಎಂದರೆ ಒಂದು ಮುಡಿಗೆ ಸರಾಸರಿ ನಾಲ್ಕು ಮುಡಿ ಗೇಣಿ ಎಂದಾಯಿತು.

ಒಂದು ಮುಡಿ ಮಜಲಿಗೆ ಆರು ಮುಡಿ ಗೇಣಿ. ಮಜಲು ಗದ್ದೆಯಲ್ಲಿ ಎರಡು ಬೆಳೆ ತೆಗೆಯಬಹುದು. ಮಜಲು ಗದ್ದೆಗೆ ಸುಗ್ಗಿ ಕಾಲದಲ್ಲಿ ಏತ ನೀರಾವರಿಯ ಅಗತ್ಯವಿದೆ. ಅದು ಶ್ರಮದಾಯಕವಾದುದು. ಈ ಕಾರಣದಿಂದ ಸರಾಸರಿ ಒಂದು ಮುಡಿ ಗದ್ದೆಗೆ ಮೂರು ಮುಡಿ ಗೇಣಿ ಎಂದ ಹಾಗಾಯಿತು.

ಒಂದು ಮುಡಿ ಬೆಟ್ಟು ಗದ್ದೆಗೆ ನಾಲ್ಕು ಮುಡಿ ಗೇಣಿ. ಒಂದು ಮುಡಿ ಪಟ್ಲ ಗದ್ದೆಗೆ ಕೂಡ ನಾಲ್ಕು ಮುಡಿ ಗೇಣಿ. ಬೈಲರೆ ಮತ್ತು ಕುಮೇರು ಗದ್ದೆಗಳು ಕಷ್ಟದ ಬೇಸಾಯವಾಗಿರುವುದರಿಂದ, ಇವಕ್ಕೆ ಗೇಣಿ ಇಲ್ಲ. ಹೀಗಿದ್ದರೂ ಅತಿವೃಷ್ಟಿ, ಅನಾವೃಷ್ಟಿಯ ಸಂದರ್ಭಗಳಲ್ಲಿ ಒಕ್ಕಲಿನವ ಕಂಗಾಲಾಗಿ ಗೇಣಿ ಮುಳುಗಿಸಬೇಕಾದ (ಗೇಣಿ ಕೊಡದಿರುವ) ಅನಿವಾರ್ಯ ಪರಿಸ್ಥಿತಿಯೂ ತಲೆದೋರುವುದಿದೆ.

ದಣಿ ಒಕ್ಕಲು ಪದ್ಧತಿಯಲ್ಲಿ ಭೂಮಾಲೀಕ ಮತ್ತು ಗೇಣಿದಾರರ ಸಂಬಂಧ ಬಹು ಮುಖ್ಯ ಎನಿಸಿಕೊಂಡರೂ ಅದು ಎಲ್ಲಾ ಕಡೆಯಲ್ಲೂ ಒಂದೇ ತೆರನಾಗಿರಬೇಕಾಗಿಲ್ಲ. ಈ ಸಂಬಂಧಗಳು ವ್ಯತ್ಯಾಸ ಹೊಂದಿರಲು ನಿರ್ದಿಷ್ಟ ದಣಿ ಮತ್ತು ಒಕ್ಕಲು ಪದ್ಧತಿಯಲ್ಲಿ ಅವರ ನಡುವಣ ಸಂಬಂಧದ ಹಿನ್ನೆಲೆ ಮತ್ತು ಸಂದರ್ಭಗಳು ಕಾರಣವಾಗಿರುತ್ತವೆ. ಹಿಂದಿನ ಕಾಲದಲ್ಲಿ ಜಮೀನುದಾರನೇ ಅರಸನಿಗೆ ಕಂದಾಯ ನೀಡಬೇಕಾಗಿದ್ದು ಅದರ ನಿರ್ಣಯವನ್ನು ಪರಂಪರೆಯ ಪ್ರಕಾರ ನಡೆಸಿಕೊಂಡು ಬರಲಾಗುತ್ತಿತ್ತು. ಬ್ರಿಟಿಷ್ ಆಡಳಿತದ ಆರಂಭದ ಬಳಿಕ ಬಂದ ಗೇಣಿಗೆ ಸಂಬಂಧಿಸಿದ ಕಾನೂನು ಪದ್ಧತಿಯನ್ನು ಕೂಡಾ ಇದು ಅವಲಂಬಿಸಿದೆ. ವಾಸ್ತವವಾಗಿ ಭೂ ಮಾಲೀಕನೇ ಬೇಸಾಯ ಮಾಡುವುದು ಅತ್ಯಂತ ಸಮರ್ಪಕ ವ್ಯವಸ್ಥೆ. ಅದು ಸಾಧ್ಯವಾಗದೇ ಹೋದಾಗ ಗೇಣಿಯ ಕರಾರಿನ ಮೇಲೆ ಇನ್ನೊಬ್ಬನಿಗೆ ಸಾಗುವಳಿಗೆ ನೀಡುವುದು ಅವಶ್ಯವಾಗಬಹುದು. ಇವರಿಬ್ಬರ ನಡುವಣ ಕರಾರು ನ್ಯಾಯವಾಗಿರಬೇಕಾದದ್ದು ಅಗತ್ಯ. ಅನೇಕ ಸಂದರ್ಭಗಳಲ್ಲಿ ಗೇಣಿಗೆ ಸಂಬಂಧಿಸಿದ ಕಾಯಿದೆಯ ಅರಿವು ಸಾಗುವಳಿದಾರನಿಗಾಗಲೀ ಜಮೀನಿನ ಒಡೆಯನಿಗಾಗಲೀ ಇರುವುದಿಲ್ಲ. ಇದರಿಂದ ಸಮಸ್ಯೆಗಳು ತಲೆದೋರುತ್ತವೆ.

**ಮಿಶ್ರ ಬೆಳೆ ಮತ್ತು ಪರ್ಯಾಯ ಬೆಳೆ :** ಪೂರ್ವಜರು ಗದ್ದೆಗಳ ಕಟ್ಟ ಪುಣಿಗಳಲ್ಲಿ ತೆಂಗಿನ ಮರಗಳನ್ನು ಬೆಳೆಸುತ್ತಿದ್ದರು. ಗದ್ದೆ ಬದಿಗಳಲ್ಲಿ, ಉದ್ದು, ಹೆಸರು, ಹುರುಳಿಗಳಂತಹ ದ್ವಿದಳ ಧಾನ್ಯಗಳನ್ನು ಬಿತ್ತಿ ಬೆಳೆಸುವುದು ಪದ್ಧತಿಯಾಗಿತ್ತು. ಬತ್ತದ ಕೊಯ್ಲಿಗೆ ಮುಂಚಿತವಾಗಿ ನೀರಿನ ತೇವದ ಸದುಪಯೋಗವನ್ನು ಪಡೆದು ಪಕ್ಷಿಗಳ ಕಾಟವನ್ನು ತಡೆಯಲು ದ್ವಿದಳ ಧಾನ್ಯವನ್ನು ಬಿತ್ತಿ ಬೆಳೆಸಿ, ಬತ್ತದ ಕಟಾವಿನೊಂದಿಗೆ ಕತ್ತರಿಸಿ, ರೆಂಬೆ ಬರುವ ಪ್ರಕ್ರಿಯೆಯನ್ನು ಖರ್ಚಿಲ್ಲದೆ ನಿರ್ವಹಿಸಿ, ಆವರ್ತನ ಬೆಳೆಯ ಪ್ರಯೋಗ ಮತ್ತು ಸಾರಜನಕದ ಸ್ಥಿರೀಕರಣದಂತಹ ಉನ್ನತ ಮಟ್ಟದ ತಾಂತ್ರಿಕತೆಯನ್ನು ಜಗತ್ತಿಗೆ ಸಾರಿದ್ದಾರೆ. ಕೃಷಿಯಲ್ಲಿ ಕಾಡಿನ ಪರಿಜ್ಞಾನ ಇತ್ತೆನ್ನುವುದಕ್ಕೆ ಎಲೆ ಉದುರುವ ಮರಗಳನ್ನು ಬೆಳೆಸುತ್ತಿದ್ದುದಲ್ಲದೆ ಬಿರುಗಾಳಿಗೆ ತಡೆಯಾಗಿ ಹಲಸು, ಬೇಲಿಗಳಲ್ಲಿ ಮಾವನ್ನು ಬೆಳೆಸುತ್ತಿದ್ದರು. ಇಂತಹ ಸಾಂಪ್ರದಾಯಿಕ ಕೃಷಿ ಪದ್ಧತಿ ಅನುಕರಣೀಯ.

ಮಳೆಗಾಲದಲ್ಲಿ ಸಾಧ್ಯವಾದರೆ ಎಲ್ಲೆಂದರಲ್ಲಿ ತರಕಾರಿ ಬೆಳೆಯಾದರೆ ಏಣೆಲು, ಸುಗ್ಗಿ ಕಳೆದು ಗದ್ದೆಗಳಲ್ಲಿ ಮೆಣಸಿನ ಹಿತ್ತಿಲು ಅದರ ಜೊತೆಗೆ ಇತರ ತರಕಾರಿಗಳನ್ನು ಬೆಳೆಯಬಹುದು. ಹಾಗೆಯೇ ಬೇಸಗೆಯಲ್ಲಿ ಹೊಳೆ ಬದಿಗಳಲ್ಲಿ ಪಟ್ಲ ಬೆಳೆಯ ಜೊತೆಗೆ ಮೆಕ್ಕಲು ಮಣ್ಣ ಇಳಿಜಾರು ಪ್ರದೇಶಗಳಲ್ಲಿ ಸೌತೆ ಹಿತ್ತಿಲು ಮಾಡಿ ತರಕಾರಿ ಬೆಳೆಯುವುದು ಸಾಧ್ಯವಾಗುತ್ತದೆ. ಇದರ ಜೊತೆಗೆ ಬೆಂಡೆ, ಕುಂಬಳ, ಚೀನಿ, ಬಸಳೆ ಮೊದಲಾದ ಸೊಪ್ಪು ತರಕಾರಿಗಳನ್ನು ಬೆಳೆಸುತ್ತಾರೆ. ಮಜಲು ಗದ್ದೆಗಳಲ್ಲಿ ಬತ್ತ ಕೊಯ್ಲಿನ ಬಳಿಕ ತೇವಾಂಶ ಇರುವ ಕಡೆಗಳಲ್ಲಿ ಹೆಸರು, ಉದ್ದು, ಹುರುಳಿ, ಅವರೆ, ಎಳ್ಳು ಇತ್ಯಾದಿಗಳನ್ನು ಬೆಳೆಸಲು ಸಾಧ್ಯವಾಗುತ್ತದೆ.

**ಅಜಲಿನವರು :** ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಸಾಮಾಜಿಕ ಧಾರ್ಮಿಕ ಆಚರಣೆಗಳ ಅಧಿಕಾರವುಳ್ಳವರು. ಅಜಲ್‌ಎಂದರೆ ಹಕ್ಕು, ಹಕ್ಕಿನ ಪ್ರದೇಶ ಮೀಸಲು ಪ್ರದೇಶ, ಧಾರ್ಮಿಕ ಸಾಮಾಜಿಕ ಆಚರಣೆಗಳಲ್ಲಿ ವಿಶಿಷ್ಟ ಕರ್ತವ್ಯಗಳನ್ನು ವಂಶಪರಂಪರೆಯಿಂದ ಮಾಡುತ್ತ ಬರುವ ಅಧಿಕಾರ ವಲಯ. ಅಂತಹ ಹಕ್ಕಿನ ಅಧಿಕಾರ ಪಡೆದವರಿಗೆ ಅಜಲಿನವರು ಎನ್ನುವರು. ಇವರನ್ನು ಇತರ ಕಡೆಗಳಲ್ಲಿ ಆಯಗಾರರು ಎನ್ನುತ್ತಾರೆ. ಒಂದು ಕಾಲದ ಗ್ರಾಮೀಣ ಸಾಮಾಜಿಕ ವ್ಯವಸ್ಥೆಯಲ್ಲಿ ಊರಿನ ರೈತರಿಗೆ ವಿವಿಧ ರೀತಿಯ ಸೇವೆಯನ್ನು ಮಾಡಿಕೊಡುತ್ತಿದ್ದವರು. ಇದಕ್ಕೆ ಪಡಿ (ಪ್ರತಿಫಲ) ವರ್ಷಕ್ಕೆ ಒಂದು ಬಾರಿ ಅವರು ಪಡೆಯುತ್ತಿದ್ದರು. ತಮ್ಮ ದುಡಿಮೆಗೆ ಧಾನ್ಯ, ಅಕ್ಕಿ, ಜಿನಸುಗಳ ರೂಪದ ಪಡಿ / ಪ್ರತಿಫಲ ಅವರಿಗೆ ದೊರೆಯುತ್ತಿತ್ತು. ಜನಪದ ಸಮಾಜದಲ್ಲಿ ರೈತನೇ ಕೇಂದ್ರ ಬಿಂದು.

**ಪಟ್ಲೆರ್ / ಪಟೇಲ :** ಊರಿನ / ಗ್ರಾಮದ ಮುಖಂಡ / ಮುಖ್ಯಸ್ಥ ಪಟ್ಲೆರ್ / ಪಟೇಲ. ಬೇರೆಡೆಗಳಲ್ಲಿ ಈತನಿಗೆ ಗೌಡ ಎನ್ನುತ್ತಾರೆ. ಗ್ರಾಮದ ಆಡಳಿತ ನಡೆಸುವ ಪಟೇಲ ಸರಕಾರದಿಂದಲೂ ಮಾನ್ಯತೆ ಪಡೆದು ಸರಕಾರದ ಪ್ರತಿನಿಧಿಯಂತೆ ಇದ್ದವನು. ಜನನ ಮರಣ ದಾಖಲೆ ಮಾಡಿಕೊಳ್ಳುವುದು, ಕಂದಾಯ ವಸೂಲಿಗೆ, ದಂಡಾಧಿಕಾರ ಹುದ್ದೆಯವರು. ಮನೆ ಮನೆಗೆ ಹೋಗಿ ಹಣ ವಸೂಲಿ ವರ್ಷಕ್ಕೆ ಒಮ್ಮೆ ಸರಕಾರಕ್ಕೆ ಕಳಿಸುವುದು, ಊರಿನ ನ್ಯಾಯ ತೀರ್ಮಾನದಲ್ಲಿ ಪಾಲುಗೊಂಡು ಸಮಸ್ಯೆಗಳನ್ನು ಸ್ವೀಕರಿಸಿ ಹಿರಿಯರ ಸಲಹೆ ಪಡೆದು ತೀರ್ಮಾನ ನೀಡುವುದು ಪಟೇಲನ ಜವಾಬ್ದಾರಿ. ಪಟೇಲರ ಮನೆಗೆ ದೂರು ತರುವ ಊರ ಜನರಿಗೆ ಅವರ ಮನೆ ಚಾವಡಿ ಒಂದು ಆಶ್ರಯ ತಾಣವಾಗಿದೆ.

**ಸೇನೆರ್ / ಶ್ಯಾನುಭೋಗ / ಮಣೆಗಾರ :** ಭೂ ದಾಖಲೆ, ಲೆಕ್ಕ ಪತ್ರ ಇಡುವ ಕೆಲಸ ಊರ ಶ್ಯಾನುಭೋಗರದು. ಜಮೀನು ತಗಾದೆ, ಸಣ್ಣ ಪುಟ್ಟ ವ್ಯಾಜ್ಯಗಳನ್ನು ನಿಭಾಯಿಸಿ ಪರಿಹಾರ ನೀಡುವುದು, ಭೂಮಿ ಖರೀದಿ, ಮಾರಾಟ ಸಂದರ್ಭದಲ್ಲಿ ನೋಂದಾವಣೆ ಇವರ ಮೂಲಕವೇ ನಡೆಯುತ್ತದೆ. ಈ ವ್ಯವಹಾರದಲ್ಲಿ ಹೆಚ್ಚು ಕಡಿಮೆಯಾಗದಂತೆ ದಾಖಲೆ ಇಡುವುದು ಇವರ ಕರ್ತವ್ಯ. ಇವರನ್ನು ಸೇನ ಭೋವ, ಕರಣಿಕ, ಮಧ್ಯಸ್ಥ, ಗಣಿಕ, ಸೇನವ, ಶೇಣವ, ಶೇನವ, ಸೇನೆರ್ (ತುಳು), ಮಣೆಗಾರ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ.

**ಉಗ್ರಾಣಿ :** ಕಂದಾಯ ಸಂಗ್ರಹದಂತಹ ಮುಖ್ಯ ಕಾರ್ಯಗಳಲ್ಲಿ ಪಟೇಲನ ಪೇದೆಯಾಗಿ, ಹಿಂಬಾಲಕನಾಗಿ ಸುದ್ದಿ ಸಂದೇಶವಾಹಕನಾಗಿ ಇರುವವನು. ಕಾವಲು ಸೇವೆಯನ್ನು ನಿರ್ವಹಿಸುವವನು.

**ಕೃಷಿ ಅವಲಂಬಿತ ಕಸುಬುಗಳು:** ಬುಡಕಟ್ಟು ಜನರು ಕಸುಬುಗಳು : ಗುಡ್ಡ, ಕಾಡು ಪ್ರದೇಶಗಳಿಂದ ಬೇರೆ ಬೇರೆ ಸಸ್ಯಗಳ ಬೂರು / ಬಿಳಲು ಮತ್ತು ತಾಳೆ, ತೆಂಗು, ಅಡಕೆಹಾಳೆ, ಈಚಲು ಮರಗಳ ದಂಟುಗಳನ್ನು ಸೀಳಿ ಅವುಗಳಿಂದ, ಕುಕ್ಕೆ, ಬಟ್ಟೆ (ಬುಟ್ಟಿ), ಮುಟ್ಟಾಳೆ (ಟೊಪ್ಪಿಗೆ, ಶಿರಸ್ತ್ರಾಣ), ಕುಡುಪು (ಅನ್ನ ಬಸಿಯುವ ತಟ್ಟೆ, ಎಸರು ತಟ್ಟೆ), ಮಕ್ಕೇರಿ (ಮೀನು ಹಿಡಿಯುವ ಸಾಧನ), ಕೂರಿ (ಮೀನು ಹಿಡಿಯುವ ಸಾಧನ), ಕುತ್ತರಿ (ದೊಡ್ಡ ಕುಕ್ಕೆ), ಕೊರಂಬು (ಗೊರಬೆ), ಕೆಡೆಂಜಲು (ಗೊರಬೆ). ಮೊದಲಾದ ಸಾಧನಗಳನ್ನು ತಯಾರಿಸುತ್ತಾರೆ. ತಮ್ಮ ಕುಲ ಕಸುಬುಗಳಲ್ಲಿ ಅವರದ್ದೆ ಆದ ಕಲಾತ್ಮಕತೆ, ಕುಸಿರಿತನ ಮೂಡಿಸುವ ದೇಸಿ ಕಲಾ ಕೌಶಲ ಉಳ್ಳವರು ಕೊರಗರು ಮತ್ತು ಮಲೆಕುಡಿಯರು. ಗಿಡ, ಮರ, ಬಳ್ಳಿ, ಚಿಗುರು, ನಾರು, ಬೇರು, ತೊಗಟೆ, ಹಣ್ಣು, ಕಾಯಿ, ಬೀಜ ಗಿಡಮೂಲಿಕೆ - ಮೊದಲಾದವುಗಳ ಪರಿಚಯ ಚೆನ್ನಾಗಿ ಇರುವುದರಿಂದ ಅವುಗಳನ್ನು ಆಹಾರ ಮತ್ತು ಔಷಧಗಳಲ್ಲಿ ಬಳಸಿಕೊಳ್ಳುತ್ತಾ ಬಂದವರು ಮಲೆಕುಡಿಯರಂತಹ ನಿಸರ್ಗದ ಮಕ್ಕಳು. ಚಾಪೆ, ಚಕ್ಕಣ ಕುಕ್ಕೆ ಮೊದಲಾದ ಗುಡಿ ಕೈಗಾರಿಕೆಯಲ್ಲೂ ನುರಿತವರು.

ತಮಗೆ ಆಸರೆ ನೀಡಿದ ಭೂಮಾಲಿಕರ ಒಡೆಯರ, ಊಳಿಗ ಚಾಕರಿ ಕೆಲಸಗಳಿಗೆ, ಮುಂಡಾಲ, ಮುಗೇರ, ಕೊರಗರಂತಹ ಆಳುಗಳು ಬೇಕು. ಊರ ಜಾತ್ರೆ, ಪೂಕರೆ ಕಂಬಳ ಮೊದಲಾದವುಗಳ ಜೋಡಣೆ, ಜೇಡಿಮಣ್ಣು, ಅರಿಸಿನ, ಸುಣ್ಣ ಕಲಸಿ ಮಾಡಿದ ನೀರಿನಿಂದ ಗದ್ದೆಯ ಸುತ್ತಲೂ ಬದುವಿನ ಮೇಲೆ ನಾಗನ ಹೆಡೆ / ತ್ರಿಶೂಲ ಆಕೃತಿಗಳನ್ನು ಬರೆಯುವ ಕೆಲಸ ಕೊರಗರದು. ಊರೆಲ್ಲ ತಿರುಗಿ ಡೋಲನಲಿಕೆ (ಜನಪದ ಕುಣಿತ)ಗಳ ಮೂಲಕ ಕಂಬಳಕ್ಕೆ ಹೇಳಿಕೆ ನೀಡುವುದು ಕೊರಗರ ಅಜಲಿನ ಕೆಲಸ.

ಪೂಕರೆ ಕಂಬವನ್ನು ಎಂದರೆ ತೆಂಗಿನಗರಿ, ಹೂ ಮೊದಲಾದವುಗಳಿಂದ ಅಲಂಕರಿಸಿದ ಕಂಬವನ್ನು ದುಷ್ಟ ಶಕ್ತಿಗಳ ನಿವಾರಣೆಗಾಗಿ ನಾಟಿ (ಬತ್ತದ ಸಸಿ ನೆಡುವಿಕೆ)ಯ ಬಳಿಕ ಕಂಬಳ ಮೊದಲಾದ ವಿಶಿಷ್ಟ ಗದ್ದೆಗಳಲ್ಲಿ ಧಾರ್ಮಿಕ ಆಚರಣೆಗಳೊಂದಿಗೆ ನೆಡುತ್ತಾರೆ. ಸಿದ್ಧಪಡಿಸುವ ಸೇವೆಯಲ್ಲಿ ಊರ ಅಜಲಿನ ಬಡಗಿ, ಬಂಡಾರಿ, ಮಡಿವಾಳ ಮೊದಲಾದವರು ಮುಖ್ಯವಾಗುತ್ತಾರೆ. ಆಯ್ಕೆ ಮಾಡಿದ ಮರದಿಂದ ಪೂಕರೆ ಕಂಬವನ್ನು ಕೆತ್ತಿ ಕೊಡುವಾತ ಬಡಗಿಯಾದರೆ ಅದಕ್ಕೆ ತಲಿಪು (ಪ್ರೋಕ್ಷಣೆ) ನೀಡಿ ಶುದ್ಧ ಮಾಡುವಾತ ಬಂಢಾರಿ ಮತ್ತು ಅದಕ್ಕೆ ಮಡಿಬಟ್ಟೆ ಹೊದಿಸುವಾತ ಮಡಿವಾಳ. ಕೊಡಿ ಪಾಡನೆ (ಕೊಡಿ ಹಾಕುವುದು) ಮದುವೆ, ಉತ್ಸವ, ಧಾರ್ಮಿಕ ಆಚರಣೆ ಮೊದಲಾದ ಸಂದರ್ಭಗಳಲ್ಲಿ ಮಡಿವಾಳ ಅವು ನಡೆಯುವ ಸ್ಥಳದ ಮೇಲ್ಗಡೆ ಚಪ್ಪರಕ್ಕೆ ಬಿಡಿಸಿ ಕಟ್ಟುವ ಮಡಿಮಾಡಿದ ಬಿಳಿಬಟ್ಟೆ. ಇದೊಂದು ಶುದ್ಧೀಕರಣದ ಕ್ರಿಯಾಭಾಗ.

**ಕುಂಬಾರಿಕೆ :** ಕೃಷಿ ಅವಲಂಬಿತ ಕಸುಬಾಗಿ ಕೃಷಿಯೊಡನೆ ಹೆಣೆದುಕೊಂಡಿದೆ. ಮಣ್ಣಿನ ಮಡಕೆಗಳು ಬತ್ತದ ಬಿತ್ತನೆಯಲ್ಲಿಂದ ಹಿಡಿದು ಅನ್ನದ ಅಡಗಿಯವರೆಗೆ, ಮುಂದಿನ ವರ್ಷಕ್ಕೆ ಆಹಾರ ಧಾನ್ಯಗಳನ್ನು ಉಳಿಸಿಕೊಳ್ಳಲು ಬೇಕಾದ ಪಾತ್ರೆಗಳವರೆಗೆ ಹರಡಿಕೊಳ್ಳುತ್ತದೆ.

**ಕಬ್ಬಿಣದ ಸಲಕರಣೆಗಳಿಗೆ ಕಮ್ಮಾರ ಸಾಲೆ :** ಹಳ್ಳಿಗಳ ಮನೆಗಳಲ್ಲಿ ಅಂಗಳದಲ್ಲಿ ಹೊಲ ಗದ್ದೆಗಳಲ್ಲಿ ಇಲ್ಲವೇ ಗುಡ್ಡಗಳಲ್ಲಿ ಕೆಲಸ ಮಾಡಲು ಕಡಿಯಲು, ಬಡಿಯಲು, ಕೊಯ್ಯಲು, ಅಗೆಯಲು ಕಬ್ಬಿಣದ ಉಪಕರಣಗಳು ಬೇಕಾಗುತ್ತವೆ. ಕತ್ತಿ, ಕೊಡಲಿ, ಹಾರೆ, ಪಿಕ್ಕಾಸು, ಗುದ್ದಲಿ, ಉಳುವ ನೇಗಿಲಿಗೆ, ಅಡುಗೆ ಮನೆ ಪಾತ್ರೆ ಪರಡಿಗಳಿಗೆ, ಬಾವಿಯಿಂದ ನೀರೆತ್ತುವ ರಾಟೆ, ಗಾಡಿ ಎತ್ತಿನ ಚಕ್ರಗಳಿಗೆ ಪಟ್ಟಿ, ಎತ್ತಿನ ಕಾಲಿಗೆ ಲಾಳ ಹೊಡೆಯಲು ಮರಗೆಲಸದ ಉಳಿ, ಬಾಚಿ, ಸುತ್ತಿಗೆ ಮೊದಲಾದ ಕಬ್ಬಿಣದ ಸಲಕರಣೆಗಳೆಲ್ಲವೂ ಕಮ್ಮಾರಸಾಲೆಯಲ್ಲಿ ತಯಾರಾಗಬೇಕು. ಕಬ್ಬಿಣದಿಂದ ಕತ್ತಿ ಮುಂತಾದ ಸಲಕರಣೆಗಳನ್ನು ತಯಾರಿಸುವವರನ್ನು ಕಡ್ತಲೆಗಾರ, ಕಮ್ಮಾರ ಎನ್ನುತ್ತಾರೆ. ಸಾಮಾನ್ಯವಾಗಿ ಕಮ್ಮಾರ ಸಾಲೆ ಕಮ್ಮಾರನ ಮನೆಯೇ ಆಗಿರುತ್ತದೆ. ಮನೆಯ ಪಕ್ಕದ ಒಂದು ಕೋಣೆಯೋ ಅಂಗಳದ ಬದಿಯಲ್ಲೋ ಕಮ್ಮಾರ ಸಾಲೆಯಿರುವುದುಂಟು. ಅಲ್ಲೊಂದು ತಿದಿಯಿಂದ ಕೂಡಿದ ಒಲೆ, ಬಳಿಯಲ್ಲೇ ಸುತ್ತಿಗೆಗಳು, ಬಡಿಗಲ್ಲು, ವಿವಿಧ ಗಾತ್ರಗಳ, ಆಕಾರದ ಕಬ್ಬಿಣದ ತುಂಡು, ಪಟ್ಟಿ, ತಂತಿಗಳ, ಸರಪಳಿಗಳ ರಾಶಿ, ಚಕ್ರಗಳಿಗೆ ಹೊಸ ಪಟ್ಟಿ ಕೂರಿಸಲು ಎತ್ತರವಾದ ಜಗಲಿ, ಇದ್ದಲಿನ ರಾಶಿ, ನೀರಿನ ತೊಟ್ಟಿ ಇವೆಲ್ಲ ಕಮ್ಮಾರಸಾಲೆಯ ಸಂಗಾತಿಗಳು.

**ಬಡಗಿ :** ಬೇಕಾದ ಜಾತಿಯ ಮರವನ್ನು ಆಯ್ದು ಸಿದ್ಧಗೊಳಿಸಿದ ಮರದ ಬಿಡಿಭಾಗಗಳನ್ನು ಬಳಸಿ ಉಪಕರಣಗಳನ್ನು ತಯಾರಿಸುವವನು. ನೊಗ, ನೇಗಿಲು, ಮಣ್ಣನ್ನು ಸಮತಟ್ಟುಗೊಳಿವ ಹಲಗೆ, ಮಣ್ಣು ಎಳೆಯುವ ಮರಿಗೆ, ನೀರಾವರಿಗೆ ಬೇಕಾದ ಏತ, ಕೊಂತು ನೀರೆಳೆಯುವ ಮರಿಗೆ, ಅಂಗಳದಲ್ಲಿರುವ ಪಡಿಮಂಚ, ಮುಡಿ ಕಟ್ಟುವ ಸಲಕರಣೆಯಾದ ಕೊದಂಟಿ, ಏಣಿ ದೋಣಿ, ಬತ್ತ-ಅಕ್ಕಿಗಳ ಸಂರಕ್ಷಣೆಗೆ ಬೇಕಾದ ಕಲೆಂಬಿ, ಪತ್ತಾಯ ಇತ್ಯಾದಿಗಳನ್ನು ತಯಾರಿಸುವ ಕೆಲಸ ಬಡಗಿಗಳದು.

**ಕೊಂತ :** ಕೆರೆ ಅಥವಾ ತೋಡುಗಳಿಂದ ಗದ್ದೆಗಳಿಗೆ ನೀರು ಹಾಯಿಸುವ ಸಾಧನ. ಮೂರು ಕಂಬಗಳನ್ನು ತಳದಲ್ಲಿ ನೆಟ್ಟು ಅವುಗಳ ತುದಿಗಳು ಒಂದೇ ಕಡೆ ಬರುವಂತೆ ಜೋಡಿಸಿ ಕಟ್ಟಿ ಅಲ್ಲಿಂದ ಉದ್ದನೆಯ ದಂಬೆ (ಹರಿನಳಿಗೆ)ಯನ್ನು ನೇತು ಹಾಕಿ ಅದರಿಂದ ನೀರು ತೆಗೆದು ಮೇಲಕ್ಕೆ ಹಾಯಿಸಲಾಗುವುದು.

**ಕುತ್ತಟ್ಟ :** ಅಡುಗೆ ಕೋಣೆಯಲ್ಲಿ ದೆಂಗದಿಂದ ಮೇಲ್ಗಡೆ ಹೊಗೆ ತಾಗುವಂತೆ ಬಿತ್ತನೆ ಬೀಜ, ಧಾನ್ಯ, ಅಕ್ಕಿಮುಡಿ ಇತ್ಯಾದಿಗಳನ್ನು ಕೆಡದಂತೆ ರಕ್ಷಿಸಿಡಲು ವ್ಯವಸ್ಥೆಯಿರುವ ದಾಸ್ತಾನು ಅಟ್ಟ.

ಕೃಷಿಕರು ಕುತ್ತಟ್ಟ, ದೆಂಗಗಳನ್ನು ಅಡಗೆ ಕೋಣೆಯೊಳಗೆ ಸಂಯೋಜಿಸುವ ಮೂಲಕ ಅವರು ಬಿತ್ತನೆ ಬೀಜಗಳ ಸಂರಕ್ಷಣೆಯ ಬುನಾದಿ ಹಾಕುತ್ತಾರೆ.

**ದೆಂಗ :** ಹಪ್ಪಳ ಉಪ್ಪಿನಕಾಯಿ ಮೊದಲಾದುವುಗಳನ್ನು ಕೆಡದಿರುವಂತೆ ಬೆಚ್ಚಗಿರಿಸಲು ಅಡುಗೆ ಒಲೆಯ ಮೇಲ್ಗಡೆ ಮರದ ಹಲಗೆ ಅಥವಾ ಬಿದಿರು ಮೊದಲಾದುವುಗಳ ಸಲಾಕೆಗಳನ್ನು ಜೋಡಿಸಿಟ್ಟು ಮಾಡಿದ ಅಟ್ಟಳೆ.(ಣೆ).

ಎಣ್ಣೆ ತೆಗೆಯುವ ಗಾಣಿಗರು ಕೃಷಿ ಅವಲಂಬಿತ ಕಸುಬನ್ನು ನಡೆಸುತ್ತಾರೆ. ತೆಂಗು, ಎಳ್ಳಿನಿಂದ ಎಣ್ಣೆ ತೆಗೆಯುವಲ್ಲಿ ಈ ಕಸುಬು ಕೃಷಿ ಅವಲಂಬಿತವಾಗಿ ಕಂಡುಬಂದರೆ ಕಾಡುತ್ಪನ್ನಗಳಿಂದ ಉತ್ಪಾದಿಸುವ ಹರಳೆಣ್ಣೆ, ಹೊನ್ನೆಣ್ಣೆಗಳು ಮನೆ ಮನೆಯಲ್ಲಿ ತೆಗೆಯಲ್ಪಡುತ್ತಿದ್ದು, ಇವು ದೀಪ ಉರಿಸಲು, ಕೃಷಿಯಲ್ಲಿ ಪ್ರತ್ಯಕ್ಷ, ಪರೋಕ್ಷವಾಗಿ

ಭಾಗಿಯಾಗುವ ಜಾನುವಾರುಗಳ ಮೈಗೆ ಹಚ್ಚಲು ಮದ್ದಾಗಿ ಉಪಯೋಗವಾಗುತ್ತವೆ.

ತೆಂಗು ಕೃಷಿಯಲ್ಲಿ ಹೆಚ್ಚಿನ ಬೆಳೆ ಪಡೆಯಲು, ಮರದ ಬೆಳವಣಿಗೆಗೆ ಸಹಾಯಕವಾಗುವಂತೆ ಮೂರ್ತೆಗಾರಿಕೆ (ಕಳ್ಳು ತೆಗೆಯುವ ಪ್ರಕ್ರಿಯೆ)ಯನ್ನು ಮಾಡಿಸುವುದಿದೆ. ತೆಂಗಿನ ಮರದಿಂದ ಕಳ್ಳು ತೆಗೆಯುವುದರಿಂದ ಮರಕ್ಕೆ ಒಳ್ಳೆಯದೆಂಬ ನಂಬಿಕೆ ಕೃಷಿಕರದು.

ಬೇಟೆ ಹಿಂದಿನ ಕಾಲದಲ್ಲಿ ಕೃಷಿಯನ್ನು ಹಾನಿಗೊಳಿಸುವ ಪ್ರಾಣಿಗಳಿಂದ ಮುಕ್ತಿ ಪಡೆಯಲು ಮತ್ತು ಆಹಾರಕ್ಕಾಗಿಯೂ ಆಚರಣಾತ್ಮಕವಾಗಿ ನಡೆಸಲಾಗುತ್ತಿತ್ತು. ತುಳುನಾಡಿನ ಕೃಷಿಯನ್ನು ಆಧಾರವಾಗಿಸಿಕೊಂಡೇ ಬಹಳ ಹಿಂದಿನಿಂದಲೂ ವಿದೇಶಗಳೊಡನೆ ವ್ಯಾಪಾರ ನಡೆಯುತ್ತಿತ್ತು. ಮೆಣಸು, ಕಾಳುಮೆಣಸು, ಅಕ್ಕಿಯ ವೈವಿಧ್ಯಗಳು ಈ ವ್ಯಾಪಾರದಲ್ಲಿ ಮುಖ್ಯವಾಗಿದ್ದವು.

ವ್ಯಾಪಾರವಾಗಲಿ, ಕೃಷಿಯಾಗಲಿ ಮುನ್ನಡೆಯುವಲ್ಲಿ ಸಾರಿಗೆ ವ್ಯವಸ್ಥೆ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಹಿಂದಿನ ಕಾಲದಲ್ಲಿ ನದಿಗಳನ್ನು ದಾಟಿಸುವ ಅಂಬಿಗರು, ಎತ್ತಿನ ಗಾಡಿಗಳವರು, ತಲೆ ಹೊರೆಯ ಮೂಲಕ ಊರೂರಿಗೆ ಸೇತುವಾಗಿದ್ದ ಜನರು ಕೃಷಿಯನ್ನು ಅವಲಂಬಿಸಿಯೇ ಬದುಕುತ್ತಿದ್ದರು. ಬೇರದಕುಲು ಬ್ಯಾರ್ಲು (ವ್ಯಾಪಾರ ಮಾಡುವವರು), ಸಾಯ್ಬೆರ್ (ಸಾಹೇಬರು), ಮಾಪಿಳ್ಳೆಗಳು ಮೀನು, ಮಣಿಸರಕು ಮೊದಲಾದುವುಗಳನ್ನು ತಲೆಹೊರೆ ಮೂಲಕ ಊರೂರಿಗೆ ಸಂಚರಿಸಿ ಮಾರಾಟ ಮಾಡುತ್ತಾರೆ. ಕುಂಬಾರರು ಕೂಡ ತಲೆಹೊರೆಗಳ ಮೂಲಕ ಊರೂರಲ್ಲಿ ಮಡಕೆಗಳನ್ನು ಮಾರಾಟಮಾಡಲು ಹೋಗುತ್ತಾರೆ.

ತುಳುನಾಡಿನಲ್ಲಿ ಕೃಷಿ ಮತ್ತು ಆಚರಣೆಗಳಲ್ಲಿ ಒಂದರಿಂದ ಇನ್ನೊಂದನ್ನು ಬೇರ್ಪಡಿಸುವಂತಿಲ್ಲ. ಹಾಗಾಗಿ ಗ್ರಾಮ ಪುರೋಹಿತರಾಗಿ ಗುರುತಿಸಿಕೊಂಡಿರುವ ಕೆಲೆಸಿ/ಕ್ಷೌರಿಕ/ಬಂಡಾರಿ ಮತ್ತು ಮಡಿವಾಳರನ್ನು ಆಚರಣೆಗಳನ್ನು ಸಾಂಗವಾಗಿ ನಡೆಸಿಕೊಡುವಲ್ಲಿ ನೆನಪಿಸಿಕೊಳ್ಳಲೇ ಬೇಕಾಗುತ್ತದೆ.

ಆಚರಣೆಗಳನ್ನು ಗಮನಕ್ಕೆ ತಂದುಕೊಳ್ಳುವಾಗ ಅದನ್ನು ನಂಬಿಯೇ ದಿನ ತಗೆಯುತ್ತಿದ್ದ ಬ್ರಾಹ್ಮಣರು, ಬಲ್ಯಾಯರು, ಮನೆ, ಹಟ್ಟಿ, ಕೊಟ್ಟಿಗೆಗಳ ಆಯಸ್ಥಳಗಳಿಗೆ ಕುಟ್ಟಿಕಲ್ಲು ಹಾಕುವ, ಜನ ಜಾನುವಾರಗಳಿಗೆ ಬಂದ ರೋಗಗಳನ್ನು ವಾಸಿ ಮಾಡುವ ಮದ್ದಿನ ಪಂಡಿತರು, ನಾಟಿ ವೈದ್ಯರು, ತಾಳೆ, ಈಚಲು, ತೆಂಗಿನ ಮರಗಳ ಮೂರ್ತೆ ಕಾಯಕ ನಡೆಸಿ ಕಳ್ಳು ಇಳಿಸಿ ಓಲೆಬೆಲ್ಲದಂತಹ ಆಹಾರ ಉತ್ಪಾದಿಸುವ ಬಿಲ್ಲವರದು ಕೃಷಿ ಅವಲಂಬಿತ ಕಸುಬುಗಳ ಬದುಕೇ ಆಗಿದೆ. ಬೇಟೆಯೂ ಅವರ ಇನ್ನೊಂದು ವೃತ್ತಿ.

ಹೊಳೆ, ಕಡಲು, ಕೆರೆಗಳಲ್ಲಿನ ಬೆಳೆಯೆನಿಸಿಕೊಂಡ ಮೀನು ಮೊದಲಾದ ಜಲಚರ ಉತ್ಪನ್ನಗಳನ್ನು ಹಿಡಿದು ಊರೂರಿಗೆ ಸಂಚರಿಸಿ ಮಾರಾಟ ಮಾಡಿ ಜೀವನ ನಡೆಸುವ ಬೆಸ್ತ, ಮೊಗವೀರ, ಬೋವಿ ಸಮುದಾಯಗಳ ಕುಲಕಸುಬಾಗಿದೆ. ಆಳಸಮುದ್ರತಾಣಗಳಿಗೆ ತೆಪ್ಪ, ದೋಣಿಗಳಲ್ಲಿ ಸಾಗಿ ಬಲೆ ಬೀಸಿ ಮೀನು ಹಿಡಿಯುವ ಕೌಶಲವುಳ್ಳವರು ಮೀನುಗಾರಿಕೆಯೆನ್ನುವುದು ನೀರಲ್ಲಿ ನಡೆಸುವ ಬೇಟೆಯೇ ಆಗಿದೆ.

ಕಂಬಳ ಗದ್ದೆಗೋರಿಗೆ ದಿನಮನ ಕೇಳಲು ಮಾಡನ್ನೂರು ಮಟ್ಟನ್ನೂರು ಮಟ್ಟ್ ಬೀರಬಲ್ಯಾಯನಲ್ಲಿಗೆ ಹೋಗಿ ದಿನಕೇಳಿಬರುವ ಉಲ್ಲೇಖ ತುಳುನಾಡಿನ ಮೌಖಿಕ ಕಾವ್ಯ ಕೋಟಿಚೆನ್ನಯ ಮೊದಲಾದ ಪಾಡ್ದನಗಳಲ್ಲಿವೆ. ಇದಕ್ಕೆ ಬಲಿಮೆ ಕೇಳುವುದು ಎನ್ನುತ್ತಾರೆ.

ಕೃಷಿ ಬದುಕಿನಲ್ಲಿ ಗೋವುಗಳನ್ನು ಸಾಕುವ ಗೊಲ್ಲೆರ್/ಗಲ್ಲರು ಗೋಮಂದೆಯನ್ನು ಬಯಲು, ಗುಡ್ಡಗಳಲ್ಲಿ ಗೋವಲೆರೆ ಜೋಕುಲು/ ಗೋವಳರ ಮಕ್ಕಳು ಉರಲ್/ರಾಗ ಹಾಕುತ್ತ ಮೇಯಿಸುತ್ತಿದ್ದ ವರ್ಣನೆಗಳು, "ಪಂಜದ ಪದವುಡು/ಪದವಿನಲ್ಲಿ ಹೋಗುವಾಗ ಸಾವಿರಾರು ಗೋವುಗಳನ್ನು ಮೇಯಿಸುವ ಗೋಮಾಳರು/ಗೋಪಾಲರು ಇದ್ದಾರೆ" ಮೊದಲಾದ ವಿವರಗಳು ಪಾಡ್ದನಗಳಲ್ಲಿ ಸಿಗುತ್ತವೆ. ದನಕರು ಎಮ್ಮೆ ಮೊದಲಾದ ಜಾನುವಾರುಗಳನ್ನು ಕಾಯುವವರು ಗೋವಳರು. ಅಲ್ಲಲ್ಲಿ ಮೈದಾನಗಳಲ್ಲಿ ಗೋವುಗಳಿಗೆ ಮೈತಿಕ್ಕಿ ಕೊಳ್ಳುವುದಕ್ಕಾಗಿ ಗೋಕಲ್ಲುಗಳನ್ನು ನಾಟಿಸುವುದಿತ್ತು. ದೀಪಾವಳಿ ಹಬ್ಬದಲ್ಲಿ ಹಸುಗಳಿಗೆ ಗೋಪೂಜೆ ಮಾಡುವ ರೂಢಿ ಇಂದು ಕೂಡ ಉಳಿದು ಬಂದಿದೆ. ಗೊಲ್ಲಚ್ಚಿಲ್, ಗೊಲ್ಲರ ಕೇರಿ ಮೊದಲಾದ ಸ್ಥಳಗಳು ಕರಾವಳಿಯಲ್ಲಿ ಅಲ್ಲಲ್ಲಿ ಇವೆ.

ಜನ-ಜಾನುವಾರುಗಳ ರೋಗ ರುಜಿನಕ್ಕೆ ಕಂಬಳದ ಕೋಣಗಳಿಗೆ ನೀಡುವ ಬೋಳ ಎನ್ನುವ ನಾಟಿ ಮದ್ದು ಮೊದಲಾದುವನ್ನು ಬಿದಿರಿನ ಅಂಡೆಯಲ್ಲಿ ಅವುಗಳ ಬಾಯಿಗಿಟ್ಟು ಕುಡಿಸುವ, ಅದೇ ರೀತಿ ಹೋರಿ, ಕೋಣ ಮೊದಲಾದವುಗಳನ್ನು ನಿರ್ವೀರ್ಯ (ಹಿಡುಮಾಡು)ವನ್ನಾಗಿ ಮಾಡು ಅವುಗಳ ಬೀಜ ಒಡೆಯುವ, ಗಾಡಿ ಎತ್ತುಗಳ ಕಾಲಿನ ಗೊರಸಿನ ಅಡಿ ಸವೆಯದಂತೆ ಅರ್ಧಚಂದ್ರಾಕೃತಿಯ ಕಬ್ಬಿಣದ ಲಾಳ ಹೊಡೆಯುವ ದೇಸೀ ವೈದ್ಯಪದ್ಧತಿಯನ್ನು ಕೃಷಿ ಅವಲಂಬಿತ ಕಸುಬಾಗಿ ತೆಗೆದುಕೊಳ್ಳಬಹುದು.

ಮನೆ ಹಟ್ಟಿಗಳ ಮಾಡಿಗೆ ಮುಚ್ಚಲು ಮುಳಿ ಹುಲ್ಲು ತರುವುದು, ಜಾನುವಾರುಗಳ ಆರಾಮದ ದಿನಗಳಿಗಾಗಿ ಸೊಪ್ಪು ಸೌದೆಗಳನ್ನು, ಕಜೆ-ಕಟ್ಟಿಗೆಗಳು ಮೊದಲಾದುವನ್ನು ತರುವುದು ಕೃಷಿ ಅವಲಂಬಿತ ಕಸುಬೇ ಆಗಿದೆ. ಕೃಷಿಕರ ಮನೆ ಅಂಗಳ ಎಂದರೆ ಒಂದು ಮೂಲೆಯಲ್ಲಿ ಹಟ್ಟಿ ಕೊಟ್ಟಿಗೆಗಳಿಗೆ ಹೊಂದಿಕೊಂಡಂತೆ ಬೈಹುಲ್ಲು, ಮುಳಿಹುಲ್ಲು, ಕಟ್ಟಿಗೆ ಮೊದಲಾದುವನ್ನು ವ್ಯವಸ್ಥಿತವಾಗಿ ಕಲಾತ್ಮಕವಾಗಿ ಪೇರಿಸಿಡುತ್ತಾರೆ. ಗಾಳಿ, ಮಳೆನೀರಿನಿಂದ ಹಾನಿಯಾಗದಂತೆ ಅವುಗಳನ್ನು ಒಟ್ಟೈಸಿಡುವುದು, ಮಳೆನೀರು ಸರಾಗವಾಗಿ ಕೆಳಗೆ ಇಳಿದು ಹೋಗುವಂತೆ ಅವುಗಳಿಗೆ ಕುಬಲ್ (ಮಾಡು ರಚಿಸಿ) ಹಾಕಿ ದಾಸ್ತಾನು ಮಾಡಿಡುತ್ತಾರೆ.

ಬೇಸಾಯದ ಕೆಲಸ ಮುಗಿದು ವಿರಾಮದ ಕಾಲದಲ್ಲಿ ಹೆಂಗಸರು ಉಪ್ಪಿನಕಾಯಿ, ಗೇರು, ಮಾವಿನ ಹಣ್ಣು ಮೊದಲಾದವುಗಳಿಂದ ಮಾಂಬಳ, ಹಪ್ಪಳ, ಸಂಡಿಗೆ ಮಾಡಿ ಅಂಗಳದಲ್ಲಿ ಬಿಸಿಲಿಗೆ ಒಣಗಿಸಲು ಇಡುತ್ತಾರೆ. ಗಂಡಸರು ತೆಂಗಿನ ಸಿಪ್ಪೆಗಳನ್ನು ನೀರಲ್ಲಿ ನೆನೆಸಿಟ್ಟು ಒಣಗಿಸಿ ಗುದ್ದಿ ಅವುಗಳಿಂದ ಹುರಿಹಗ್ಗ ಮೊದಲಾದುವುಗಳನ್ನು ತಯಾರಿಸುತ್ತಾರೆ.

ಚೌತಿ, ದೀಪಾವಳಿ ಮೊದಲಾದ ಹಬ್ಬಕ್ಕೆ ಒಂದೆರಡು ದಿನ ಮೊದಲು ಕೊಂಬು (ಊದುವ ವಾದ್ಯ), ಬಾಂಕೆ/ಕಹಳೆ, ಡೋಲು, ದಿಡುಂಬು (ದೊಡ್ಡ ನಗಾರಿ), ನಗಾರಿಯಂತ ವಾದ್ಯಸಮ್ಮೇಳದ, ತೆಂಬರೆ (ಚರ್ಮವಾದ್ಯ) ಇವುಗಳ ಅಜಲಿನವರು ಹಳ್ಳಿಯ ಮನೆಗಳಿಗೆಲ್ಲ ತಿರುಗಾಡಿ ಊರಲ್ಲಿ ಆಚರಿಸುವ ಹಬ್ಬಗಳಿಗೆ ಹಬ್ಬದ ಒಸಾಯ/ಒಗೆ ನೀಡುತ್ತಿದ್ದರು. ಕರಾವಳಿ ಮಲೆನಾಡಿನ ಕೃಷಿ ಸಂಪ್ರದಾಯಸ್ಥ ಮೊಯಿಲಿ, ದೇವಾಡಿಗ, ಸೇರಿಗಾರ

ಕಲಾವಿದರ ಪರಂಪರೆಗೆ ಅಜಲಿನ ಬಜಂತ್ರಿಹಕ್ಕು (ಓಲಗ ಸೇವೆಯ ಹಕ್ಕು) ಸೇರಿತ್ತು. ಹಾಗಾಗಿ ಈ ಕುಟುಂಬಗಳ ಉಪಕಸುಬಾಗಿಯೂ ಇಂತಹ ವಾದ್ಯಸಮ್ಮೇಳ ತಂಡಗಳು ಉಳಿದುಕೊಂಡು ಬಂದಿವೆ. ಹಿಂದಿನ ಕಾಲದಲ್ಲಿ ಯುದ್ಧ ಸಂದರ್ಭಗಳಲ್ಲಿ, ಇಂದು ಕಂಬಳ ಜಾತ್ರೆಗಳಲ್ಲೂ ಈ ವಾದ್ಯಮೇಳ ಬಳಕೆಯಾಗುತ್ತಿದೆ. ಹೀಗೆ ಒಸಾಯ/ಒಸಗೆ ತರುವುದು ಅವರ ಸೇವೆಯಾದರೂ ಬತ್ತ/ಅಡಕೆ/ತೆಂಗಿನಕಾಯಿ ಮೇಲೆ ನಾಲ್ಕಾಣೆ ಇಟ್ಟು ಮರ್ಯಾದೆ ನೀಡುವುದು ಸಂಪ್ರದಾಯ. ಅಂದಿನ ಕಾಲದಲ್ಲಿ ಅವರಿಗೆ ಸಾಗುವಳಿ ಗದ್ದೆ ಉಂಬಳಿ, ಅಕ್ಕಿ ಮುಡಿ ಹುಟ್ಟುವಳಿ ಕೂಡಾ ಇತ್ತು.

ತೆಂಗಿನಕಾಯಿ, ಎಳ್ಳು, ಹೊನ್ನೆಕಾಯಿ, ಗೇರುಬೀಜ, ನಾಣೇಲು ಹಣ್ಣು, ಪುನರ್ಪುಳಿ, ಕಾಚುಹುಳಿ, ನಾಗಸಂಪಿಗೆ, ಗದ್ದೆ ಹರಳು, ಬೇಲಿ ಹರಳು ಮೊದಲಾದ ಬೀಜ, ಕಾಳುಗಳಿಂದ ಎಣ್ಣೆ ತೆಗೆಯುವುದು ಕೃಷಿ ಬದುಕಿನ ಒಂದು ಉಪಕಸುಬು. ಅವು ಅಡುಗೆ, ಔಷಧಿ, ದೀಪ ಉರಿಸಲು, ಕಾಲುಗಳಲ್ಲಿ ತಲೆದೋರುವ ಹುಣ್ಣಿಗೆ, ಗಾಯಗಳಿಗೆ ಹಚ್ಚಲು ಉಪಯೋಗವಾಗುತ್ತದೆ. ಕೈಮಣ್ಣಿನ ನೆಲಕ್ಕೆ, ಗೋಡೆಗೆ, ಮನೆಯ ಮರಮಟ್ಟುಗಲಿಗೆ ಹಚ್ಚುತ್ತಿದ್ದರು. ನೆಲಗೋಡೆ ಗಟ್ಟಿಯಾಗುತ್ತಿತ್ತು. ಮರಮಟ್ಟುಗಳಿಗೆ ಗೆದ್ದಲು ಬರುತ್ತಿರಲಿಲ್ಲ, ಉತ್ತಮ ಕ್ರಿಮಿನಾಶಕವೂ ಹೌದು.

ಮರಗಳಿಂದ ಗೆಲ್ಲು ಕಡಿಯಲು, ಹುಲ್ಲು ಹೆರೆಯಲು, ಪೈರುಕೊಯ್ಯಲು, ಸೌದೆ, ಕಟ್ಟಿಗೆ ತುಂಡು ಮಾಡಲು ಅಡುಗೆ ಮನೆಯಲ್ಲಿ ಉಪಯೋಗಕ್ಕೆ ಕತ್ತಿ ಹೆರೆಮಣೆ, ಮೆಟ್ಟುಗತ್ತಿ, ಕೊಯಿಲತ್ತಿ (ಕೊಯ್ಯುವ ಕತ್ತಿ), ಕಡ್ಪತ್ತಿ (ಕಡಿಯುವ ಕತ್ತಿ), ಬೀಸತ್ತಿ (ಚೂರಿ) ಮೊದಲಾದುವು ತುಕ್ಕುಹಿಡಿದಾಗ, ಬಡ್ಡುಗಟ್ಟಿದಾಗ ಅವುಗಳನ್ನು ಹರಿತಗೊಳಿಸುವ ಒಚ್ಚಿ ಮೊದಲಾದ ದೇಸೀ ಸಾಧನಗಳು ಇದ್ದುವು. ಹೀಗಿದ್ದರೂ ಕತ್ತರಿ ಕತ್ತಿಸಾಣೆಗಾರರು, ಅರಹಾಕುವವರು, ಕಡೆಯುವ ಕಲ್ಲುಗಳಿಗೆ ಕುಟ್ಟಿಹಾಕುವವರು ಮನೆಮನೆಗೆ ಬರುತ್ತಾರೆ, ಹಾರೆ ಪಿಕ್ಕಾಸು ದೊಡ್ಡ ಮತ್ತು ಚಿಕ್ಕ ಸಬಳಗಳು, ಕೊಡಲಿ, ಗರಗಸ ಮೊದಲಾದವುಗಳನ್ನು ಹರಿತಗೊಳಿಸಲು ಕಲ್ಲಿನ ಅಂಚುಗಳಿಗೆ ತಿಕ್ಕಿ, ಮರದ ಒಚ್ಚಿ ಮೊದಲಾದವುಗಳಿಂದ ಬೆಣಚುಕಲ್ಲು, ಮರಳು ಹಾಕಿ ತಿಕ್ಕಿ ಹರಿತಗೊಳಿಸುತ್ತಿದ್ದರು. ಹೀಗೆ ದೇಸೀಯವೆನ್ನುವ ವಿವಿಧ ಸಾಧನಗಳಿದ್ದವು.

ವಾಣಿಜ್ಯ ಬೆಳೆ, ಹೊರೆ ಸಾಗಿಸಲು, ಮದುವೆ ದಿಬ್ಬಣ, ಅಸೌಖ್ಯದಂತಹ ತುರ್ತು ಸಂದರ್ಭಗಳಲ್ಲಿ ಜನರ ದೂರ ಪ್ರಯಾಣಕ್ಕಾಗಿ ನೆಲದಲ್ಲಿ ಎತ್ತಿನಬಂಡಿ, ನದಿ ಕಡಲುಗಳಲ್ಲಿ ದೋಣಿ, ಹಡಗುಗಳು ಬಳಕೆಯಲ್ಲಿದ್ದುವು. ಕೃಷಿಕರು ಮರದ ದಿಮ್ಮಿಗಳನ್ನು ಹೊಳೆ ತೋಡುಗಳಲ್ಲಿ ನೀರಿನ ಹರಿವಿನ ಜೊತೆಯಲ್ಲಿ ತೇಲಿಸಿಕೊಂಡು ಬೇಕಾದಲ್ಲಿ ಸಾಗಾಟಮಾಡುವ ತಂತ್ರಗಳಲ್ಲಿ ಪರಿಣತರಾಗಿದ್ದರು.

ಸುಬ್ರಹ್ಮಣ್ಯದ ಕುಲುಕುಂದ ಮೊದಲಾದ ಮೈದಾನಗಳಲ್ಲಿ ತಿಂಗಳುಗಟ್ಲೆ ನಡೆಯುತ್ತಿದ್ದ ಜಾನುವಾರು ಜಾತ್ರೆಗಳಲ್ಲಿ ತಮಗೆ ಬೇಕಾದ ಜಾನುವಾರುಗಳನ್ನು ವಿಕ್ರಯಿಸಿ ತರುತ್ತಿದ್ದರು. ವರ್ಷದ ಬೇರೆ ಬೇರೆ ಸಂದರ್ಭಗಳಲ್ಲಿ ಅಲ್ಲಲ್ಲಿ ನಡೆಯುತ್ತಿದ್ದ ಜಾತ್ರೆ, ಉತ್ಸವಗಳಲ್ಲಿ ಕೃಷಿ ಮತ್ತು ಗೃಹೋಪಯೋಗಿ ವಸ್ತು ಸಾಮಗ್ರಿಗಳ ಪ್ರದರ್ಶನಗಳ ಸಂತೆಗಳಲ್ಲಿ ತಮಗೆ ಬೇಕಾದ ವಸ್ತು ಒಡವೆಗಳನ್ನು ಖರೀದಿಸುತ್ತಿದ್ದರು. ಕೆಲವೊಮ್ಮೆ ತಮ್ಮ ಒಡವೆ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳಬಹುದಾದ ದೇಸೀ ಮಾರುಕಟ್ಟೆಗಳು ರೂಢಿಯಲ್ಲಿದ್ದುವು. ಈ ಮಾರುಕಟ್ಟೆಗಳೆಂದರೆ ಕೃಷಿ ಅವಲಂಬಿತ ಕುಲಕಸುಬುಗಳ ಉತ್ಪನ್ನಗಳೇ ಆಗಿರುತ್ತವೆ. ಅನೇಕಬಾರಿ ಆಯಾ ಕುಲಕಸುಬುದಾರರೇ ಮಾರಾಟ ಮಳಿಗೆಗಳಲ್ಲಿ ಇದ್ದು ತಮ್ಮ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಅಥವಾ ದಲ್ಲಾಳಿಗಳ, ವ್ಯಾಪಾರಸ್ಥರ ಮೂಲಕ ಅದನ್ನು ನಿರ್ವಹಿಸುತ್ತಿದ್ದರು. 'ಊರ ಜಾತ್ರೆಯಿಂದ ಯಾರಿಗೆಷ್ಟು ಲಾಭ?'', 'ಜಾತ್ರೆಗೆ ಹೋಗಿ ಪಾತ್ರೆಪರಡಿ ತಂದಂತೆ' ಮೊದಲಾದ ಗಾದೆ ಮಾತುಗಳು ಕೃಷಿ ಅವಲಂಬಿತ ಕುಲಕಸುಬುಗಳ ಹಿನ್ನೆಲೆಯಲ್ಲೇ ಹುಟ್ಟಿಕೊಂಡು ಜನಜನಿತವಾದಂತವು.

**ಮಾಹಿತಿದಾರರು:**

ಜಿ.ಟಿ. ಆಳ್ವ, ನಿವೃತ್ತ ಸರಕಾರಿ ಅಧಿಕಾರಿ, ವಯಸ್ಸು 69 ವರ್ಷ, ಲೋಹಿತನಗರ, ಮಂಗಳೂರು - 575 006

ಹರಿಣಾಕ್ಷಿ ಶೆಟ್ಟಿ, ತೋಕೂರುಗುತ್ತು, ಕೃಷಿಕ ಕುಟುಂಬ, 67 ವರ್ಷ, ಮಂಗಳೂರು ತಾಲ್ಲೂಕು, ದ.ಕ.

ನಾರಾಯಣ ಕಿಲ್ಲೆ, ಕೃಷಿಕ, ವಯಸ್ಸು 55 ವರ್ಷ, ಕಿನ್ಯ, ತಲಪಾಡಿ ಗ್ರಾಮ, ಮಂಗಳೂರು ತಾಲ್ಲೂಕು, ದ.ಕ.

ಶಿವಶಂಕರ ಸಿ.ಎಚ್. ನಿವೃತ್ತ ಸರಕಾರಿ ಅಧಿಕಾರಿ, ಗೊಲ್ಲಚ್ಚಿಲ್, ದೇರೆಬೈಲು, ಮಂಗಳೂರು - 575 006.

**ಆಧಾರ ಗ್ರಂಥಗಳು**


| | | | |
|---|---|---|---|
| ಅಮೃತ ಸೋಮೇಶ್ವರ (ಡಾ.) | 1977 | : | ತುಳು ಪಾಡ್ದನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-583 221 |
| ಅನಂತ ರಾಮು ಕೆ. (ಡಾ.) | 1997 | : | ದಕ್ಷಿಣದ ಸಿರಿನಾಡು, ಅನಂತ ಪ್ರಕಾಶನ, 414, ದೇವಾಂಬ ಅಗ್ರಹಾರ, ಮೈಸೂರು-570 024 |
| ಅರವಿಂದ ಮಾಲಗತ್ತಿ (ಡಾ.) | 2006 | : | ಪ್ರಧಾನ ಸಂಪಾದಕರು, ಕನ್ನಡ ವಿಷಯ ವಿಶ್ವಕೋಶ, ಜಾನಪದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ - 570 006 |
| ಉಪಾಧ್ಯಾಯ ಯು.ಪಿ. (ಡಾ.) | 1988-97 | : | ಪ್ರಧಾನ ಸಂಪಾದಕರು, ತುಳು ನಿಘಂಟು ಸಂಪುಟಗಳು (1 ರಿಂದ 6) ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ - 576 102 |
| ಕೈಂತಜೆ ವಿಷ್ಣು ಭಟ್ಟ | 1998 | : | ಎತ್ತಿನ ಬಂಡಿ : ಹಳಬರ ಜೋಳಿಗೆ ಭಾಗ - 3, ಸಂಪಾದಕಿ : ಜಯಮ್ಮ ಚೆಟ್ಟಿಮಾಡ, ಮೊಗರ್ಪಣೆ, ಸುಳ್ಯ |

| | | | |
|---|---|---|---|
| ನಾವೂರು ನಾರ್ಣಪ್ಪ ಗೌಡ | 1997 | : | ಬೇಸಾಯದ ಕೆಲವು ಮಾಹಿತಿಗಳು, ಹಳಬರ ಜೋಳಿಗೆ ಭಾಗ - 2, ಸಂಪಾದಕಿ : ಜಯಮ್ಮ ಚೆಟ್ಟಿಮಾಡ, ಸುಳ್ಯ |
| ನಿರಂಜನ | 1972 | : | ಪ್ರಧಾನ ಸಂಪಾದಕ ಜ್ಞಾನಗಂಗೋತ್ರಿ, ಕಿರಿಯರ ವಿಶ್ವಕೋಶ, ಸಂ. 4, ಯಂತ್ರಜಗತ್ತು, ಬೆಂಗಳೂರು. |
| ಪೊಳಲಿ ಶೀನಪ್ಪ ಹೆಗ್ಗಡೆ | 1991 | : | ಪೊಳಲಿ ಶೀನಪ್ಪ ಹೆಗ್ಗಡೆ ಸಮಗ್ರ ಸಾಹಿತ್ಯ, ಶೀನಪ್ಪ ಹೆಗ್ಗಡೆ ಜನ್ಮ ಶತಾಬ್ದಿ, ಹೇಮಾ, ವಿದ್ಯಾನಗರ ಮಣಿಪಾಲ |
| ಬಸವರಾಜು ಕುಂಚೂರು | 2003 | : | ಕುಂಬಾರ ಜನಾಂಗ, ಬಸವೇಶ್ವರ ನಿಲಯ, ವಿವೇಕಾನಂದ ಬಡಾವಣೆ, 8ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ದಾವಣಗೆರೆ - 577 004 |
| ಬಾಬು ಕೊರಗ ಪಾಂಗಾಳ | 2009 | : | ಕೊರಗರ ಅಜಲು ಒಂದು ವಿಶ್ಲೇಷಣೆ ಪರಿವರ್ತನೆ ಪಾದೆಬೆಟ್ಟು ಕೊರಗರ ಮನೆ, ಪಡುಬಿದ್ರಿ - 574 111, ಉಡುಪಿ. |
| ಮಂಜೇಶ್ವರ ಗಣಪತಿ ರಾವ್ ಐಗಳ್ | 1923/ 2004 | : | ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜ್, ಉಡುಪಿ 576 102. |
| ಲಕ್ಷ್ಮೀ ಜಿ. ಪ್ರಸಾದ (ಡಾ.) | 2010 | : | ತುಳುವ ಸಂಸ್ಕಾರಗಳು ಮತ್ತು ವೃತ್ತಿಗಳು ಮಾತೃ ಶ್ರೀ ಪ್ರಕಾಶನ, ಬೆಂಗಳೂರು. |
| ವೆಂಕಟಸುಬ್ಬಯ್ಯ ಜಿ. (ಡಾ.) ಮತ್ತು ಇತರರು | 1992 | : | ಕನ್ನಡ ಇಂಗ್ಲಿಷ್ ನಿಘಂಟು ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು - 560 009 |
| ವಾಮನ ನಂದವಾರ (ಡಾ.) | 2001 | : | ಕೋಟಿ ಚೆನ್ನಯ ಜಾನಪದೀಯ ಅಧ್ಯಯನ, ಹೇಮಾಂಶುಪ್ರಕಾಶನ, ಮಂಗಳೂರು |
| ವಿಶ್ವನಾಥ ಬಿ. | 1997 | : | ಅಂದಿನ ಧನಿ ಒಕ್ಕಲು, ಹಳಬರ ಜೋಳಿಗೆ ಸಂಪಾದಕಿ, ಜಯಮ್ಮ ಚೆಟ್ಟಿ ಮಾಡ, ಮೊಗರ್ಪಣೆ ಸುಳ್ಯ, ದ.ಕ. |
| ಹೇಮಾವತಿ ಹೆಗ್ಡೆ | 2010 | : | ತುಳುಗ್ರಾಮ ಪ್ರಧಾನ ಸಂಪಾದಕರು, ವಿಶ್ವ ತುಳು ಸಮ್ಮೇಳನ, ಉಜಿರೆ, ದ.ಕ. |


*ವಿ.ಎಸ್.*

**ದಲ್ಲಾಳಿ** ಚರಾಚರವಸ್ತುಗಳನ್ನು ಮಾರುವ ಅಥವಾ ಕೊಳ್ಳುವ ಸಂದರ್ಭದಲ್ಲಿ ಇಬ್ಬರು ವ್ಯಕ್ತಿಗಳ ನಡುವೆ ಸಂಧಾನ ಏರ್ಪಡಿಸಿ ಶುಲ್ಕ ಪಡೆಯುವ ವ್ಯಕ್ತಿಯೇ ದಲ್ಲಾಳಿ. ಈತನಿಗೆ ಸರಕು, ಸ್ವತ್ತು, ವಸ್ತುಗಳ ಮೇಲೆ ಸ್ವಾಧೀನ ಅಥವಾ ಹಕ್ಕು ಇರುವುದಿಲ್ಲ. ದಲ್ಲಾಳಿ ಇಬ್ಬರು ವ್ಯಕ್ತಿಗಳಲ್ಲಿ ಯಾರ ಸೇವಕನೂ ಅಲ್ಲ. ಆತ ಒಬ್ಬ ವ್ಯಕ್ತಿಯಾಗಿರಬಹುದು ಅಥವಾ ಪಾಲುದಾರಿಕೆ ಸಂಸ್ಥೆ ಅಥವಾ ಕೂಡುಬಂಡವಾಳ ಸಂಸ್ಥೆ ಆಗಿರಬಹುದು. ಒಂದು ದೃಷ್ಟಿಯಲ್ಲಿ ಪ್ರತಿಯೊಬ್ಬ ದಲ್ಲಾಳಿಯೂ ಒಬ್ಬ ಮಧ್ಯಸ್ಥಗಾರ. ಆದರೆ ಪ್ರತಿಯೊಬ್ಬ ಮಧ್ಯಸ್ಥಗಾರನೂ ದಲ್ಲಾಳಿಯಲ್ಲ. ಈತ ಜನಪ್ರಿಯನೂ ನಂಬಿಕಸ್ಥನೂ ಆಗಿರಬೇಕು.

ಹಣ ನೇರವಾಗಿ ದಲ್ಲಾಳಿಗೆ ಪಾವತಿಯಾಗುವುದಿಲ್ಲ. ಸ್ವತ್ತಿನ ಒಡೆಯನ ಒಪ್ಪಿಗೆ ಮೇರೆಗೆ ಮಾತ್ರ ಹಣ ಪಡೆಯಬಹುದು. ಕರಾರುಗಳನ್ನು ದಲ್ಲಾಳಿಯ ಹೆಸರಿನಲ್ಲಿ ಮಾಡಲಾಗುವುದಿಲ್ಲ. ವಸ್ತುವಿನ ಬೆಲೆ ನಿರ್ಧರಿಸಲು, ಒಪ್ಪಲು, ಚರ್ಚಿಸಲು, ಕೊಳ್ಳಲು ಅಥವಾ ಮಾರಲು ಮುಖ್ಯರನ್ನು ಬದ್ಧಗೊಳಿಸಲು ದಲ್ಲಾಳಿಗೆ ಅವಕಾಶವಿರಬಹುದು. ವಸ್ತುವಿನ ಒಡೆಯನ ಒಪ್ಪಿಗೆಯಿಲ್ಲದೆ ಅವನಿಂದ ಯಾವುದನ್ನು ಕೊಳ್ಳುವುದಾಗಲಿ ಮಾರುವುದಾಗಲಿ ಸಾಧ್ಯವಿಲ್ಲ. ಒಡೆಯನ ಹಿತಕ್ಕೆ ಬಾಧಕವಾಗುವ ರೀತಿಯಲ್ಲಿ ಆತ ತನ್ನ ಸ್ವಂತ ಹಿತ ಪೂರೈಕೆ ಮಾಡಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಉದಾ: ಮುಖ್ಯಸ್ಥನಿಗೆ ತಿಳಿಯದಂತೆ ರಹಸ್ಯವಾಗಿ ಲಾಭಮಾಡಿಕೊಳ್ಳುವಂತಿಲ್ಲ. ವಿರುದ್ಧ ಪಕ್ಷಗಳನ್ನು ಪ್ರತಿನಿಧಿಸುವಂತಿಲ್ಲ.

ಮುಖ್ಯಸ್ಥನಿಗೂ ದಲ್ಲಾಳಿಗೂ ನಡುವಣ ಕರಾರು ನಿರ್ದಿಷ್ಟ ಅವಧಿಯದಾಗಿರುತ್ತದೆ. ಹಾಗಲ್ಲದೆ ಅದು ಅನಿರ್ದಿಷ್ಟ ಕಾಲದ ತನಕ ಮುಂದುವರಿಯುವುದಾಗಿದ್ದು ಎರಡೂ ಪಕ್ಷಗಳಲ್ಲಿ ಯಾವೊಂದು ಪಕ್ಷವಾದರೂ ಸ್ವಇಚ್ಛೆಯಿಂದ ಅದನ್ನು ಕೊನೆಗೊಳಿಸಬಹುದು. ದಲ್ಲಾಳಿಯ ಕೆಲಸ ಒಂದೇ ವಹಿವಾಟಿಗೆ ಸೀಮಿತವಾಗಿರುತ್ತದೆ. ಒಂದು ಗೊತ್ತಾದ ಅವಧಿಗೆ ದಲ್ಲಾಳಿಯನ್ನು ನೇಮಕ ಮಾಡಿಕೊಂಡಿದ್ದು ಆ ಅವಧಿ ಮುಗಿಯುವ ಮುನ್ನ ವಿನಾಕಾರಣವಾಗಿ ಯಜಮಾನ ಕರಾರು ರದ್ದುಗೊಳಿಸಿದ್ದಲ್ಲಿ ಆತ ದಲ್ಲಾಳಿಗೆ ಪರಿಹಾರ ನೀಡಬೇಕಾಗುತ್ತದೆ.

**ದಲ್ಲಾಳಿಯ ಬಗೆಗಳು :** ಸರಕು ಬಿಕರಿ ದಲ್ಲಾಳಿ, ಸರಕು ಕೊಳ್ಳುವಿಕೆ ದಲ್ಲಾಳಿ, ಸ್ವತ್ತಿನ ದಲ್ಲಾಳಿ, ವಿಮಾ ದಲ್ಲಾಳಿ, ಹಡಗು ದಲ್ಲಾಳಿ, ವಾಯಿದಾ ದಲ್ಲಾಳಿ, ಷೇರು ದಲ್ಲಾಳಿ ಎಂದು ದಳ್ಳಾಳಿಗಳಲ್ಲಿ ಹಲವು ಬಗೆಗಳಿವೆ.

**ಸರಕು ಬಿಕರಿ ದಲ್ಲಾಳಿಗಳು :** ಯಾವುದೇ ನಿರ್ದಿಷ್ಟ ಮುಖ್ಯಸ್ಥರಿಗೂ ಶಾಶ್ವತವಾಗಿ ಬದ್ಧರಲ್ಲ. ಒಂದು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರಕುಕೊಳ್ಳಲು ಹಾಗೂ ಮಾರಲು ಬಯಸುವವರಿಗೆಲ್ಲ ಅವರು ಏಜೆಂಟರಾಗಿ ಕಾರ್ಯನಿರ್ವಹಿಸುತ್ತಾರೆ. ಇಂಥ ದಲ್ಲಾಳಿ ಮತ್ತು ಉತ್ಪಾದಕರ ನಡುವಣ ಸಂಬಂಧ ಶಾಶ್ವತವಾದುದು. ಇವರು ಪರಸ್ಪರ ಸ್ಪರ್ಧಿಸದ ಹಲವು

ಉತ್ಪಾದಕರ ವಸ್ತುಗಳ ಏಜೆಂಟರಾಗಿರುವುದುಂಟು. ದಲ್ಲಾಳಿಗಳಿಂದ ಸರಕುಗಳ ವಿತರಣೆ ಸುಸೂತ್ರವಾಗಿ ನಡೆದು ಮಾರಾಟದ ವೆಚ್ಚದಲ್ಲೂ ಉಳಿತಾಯವಾಗುತ್ತದೆ.

**ಸರಕುಕೊಳ್ಳುವಿಕೆ ದಲ್ಲಾಳಿಗಳು :** ಇವರು ಕೊಳ್ಳುವವರ ಪರವಾಗಿ ಸರಕು ಇರುವ ಸ್ಥಳ ಪತ್ತೆ ಹಚ್ಚಿ ಕೊಳ್ಳುವಿಕೆಯ ಕರಾರು ಮಾಡಿಕೊಳ್ಳಲು ಸಂಧಾನ ನಡೆಸುತ್ತಾರೆ. ಕರಾರುಗಳನ್ನು ಮುಗಿಸಿ ಬೆಲೆಯ ವಿಚಾರವಾಗಿ ಕೊಳ್ಳುವವರಿಗೆ ವಿಷಯ ತಿಳಿಸುತ್ತಾರೆ. ಇವರಲ್ಲಿ ಕೊಳ್ಳುವವರ ಏಜೆಂಟರಾಗಿದ್ದರೂ ಬಿಕರಿದಾರರಿಂದ ಕಮಿಷನ್ ಪಡೆಯುವ ದಲ್ಲಾಳಿಗಳೂ ಇದ್ದಾರೆ.

**ಸ್ವತ್ತಿನ ದಲ್ಲಾಳಿಗಳು :** ಕೊಳ್ಳುವವರನ್ನೂ ಮಾರುವವರನ್ನೂ ಒಟ್ಟಿಗೆ ಸೇರಿಸಿ ನೆರವು ನೀಡುವಂಥವರು. ಈ ಕಾರ್ಯನಿರ್ವಹಣೆಗಾಗಿ ಇವರು ನಿಗದಿತ ಶುಲ್ಕ ಪಡೆಯುತ್ತಾರೆ. ಇಂಥ ದಲ್ಲಾಳಿಯ ಅಧಿಕಾರ ಸೀಮಿತವಾಗಿರುತ್ತದೆ. ಅದನ್ನು ಮೀರಿದರೆ ಶುಲ್ಕ ನೀಡದಿರಬಹುದು.

**ವಿಮಾ ದಲ್ಲಾಳಿ :** ಯಾವುದೇ ಕಂಪನಿಯಲ್ಲಿ ವ್ಯವಹಾರ ನಡೆಸಬಹುದು. ವಿಮಾ ಕಂಪನಿಯೇ ಈ ದಲ್ಲಾಳಿಗಳಿಗೆ ಕಮಿಷನ್ ನೀಡುತ್ತದೆ. ಆದರೆ ಕಮಿಷನ್‌ನಿಂದ ತುಂಬಲಾರದ ವಿಶೇಷ ಸೇವೆಗಾಗಿ ವಿಮಾದಾರರಿಂದಲೂ ಶುಲ್ಕ ವಸೂಲು ಮಾಡಬಹುದು. ಅವರಿಗೆ ಪಾವತಿ ಮಾಡುವ ಕಮಿಷನ್ ವಿಮಾದಾರ ಕಟ್ಟುವ ಪ್ರೀಮಿಯಮ್ಮಿಗೆ ಅನುಗುಣವಾಗಿರುತ್ತದೆ. ಇತ್ತೀಚೆಗೆ ಸರ್ಕಾರ ರೈತರಿಗೆ ಹಲವು ರೀತಿಯ ವಿಮಾ ಸೌಲಭ್ಯಗಳನ್ನು ಒದಗಿಸುತ್ತಿದೆ. ಮುಖ್ಯವಾಗಿ ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳಿಗೆ ಸಂಬಂಧಿಸಿದಂತೆ ಸಾಕಷ್ಟು ವಿಮೆಗಳಿವೆ. ಅಲ್ಪಾವಧಿ ಮತ್ತು ವಾರ್ಷಿಕ ಬೆಳೆಗಳಿಗೆ ಮಳೆಯ ಏರುಪೇರು ಹಾಗೂ ಇನ್ನಿತರ ಪ್ರಾಕೃತಿಕ ವೈಪರೀತ್ಯಗಳಿಂದ ಉಂಟಾಗುವ ನಷ್ಟವನ್ನು ತಗ್ಗಿಸಲು ಈ ಸೌಲಭ್ಯ ರೈತರಿಗೆ ಹೆಚ್ಚು ಉಪಯುಕ್ತವಾಗಿದೆ.

**ಹಡಗು ದಲ್ಲಾಳಿಗಳು :** ಹಡಗುಗಳನ್ನು ಬಾಡಿಗೆಗೆ ಗೊತ್ತುಮಾಡಿ, ಮಾರುವುದು, ಕೊಳ್ಳುವುದು, ರಫ್ತು, ಸರಕು ಇಳಿಸಿಕೊಳ್ಳುವುದು, ಕಳೆದುಹೋದ ಸರಕಿನ ನಷ್ಟಪೂರಣ ಮುಂತಾದವುಗಳಿಗೆ ಸಂಬಂಧಿಸಿದಂತೆ ಸೇವೆ ಸಲ್ಲಿಸುವರು.

**ವಾಯಿದೆ ದಲ್ಲಾಳಿಗಳು :** ವಾಯಿದೆ ವ್ಯವಹಾರಗಳಲ್ಲಿ ಕರಾರು ಮಾಡಿಕೊಳ್ಳಲು ನೆರವಾಗುವರು. ಕರಾರು ಪೂರೈಕೆಗೆ ನೇರವಾಗಿ ಇವರು ಹೊಣೆಗಾರರು. ಮಾರುಕಟ್ಟೆ ಸಂಸ್ಥೆಯ ನಿಬಂಧನೆಗಳಿಗನುಗುಣವಾಗಿ ವ್ಯವಹರಿಸುವರು.

**ಷೇರು ದಲ್ಲಾಳಿಗಳು :** ಪ್ರಾಥಮಿಕ ಷೇರು ಮತ್ತು ಬಾಂಡುಗಳನ್ನು ಸಾರ್ವಜನಿಕರಿಗೆ ಸಂಸ್ಥೆಗಳು ನೀಡುವಾಗ ನೆರವಾಗುವರು. ದ್ವಿತೀಯ ಮಾರುಕಟ್ಟೆಗಳಲ್ಲಿ ಇವರು ಷೇರುಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ಮಾರಾಟ ಮಾಡಿಸಲು ನೆರವಾಗುವರು. ಇವರು ಸಾಮಾನ್ಯ ದಲ್ಲಾಳಿಗಳಿಗಿಂತ ಹೆಚ್ಚು ಅಧಿಕಾರವನ್ನು ಹೊಂದಿರುತ್ತಾರೆ.

ದೇಶೀಯವಾಗಿ ದಲ್ಲಾಳಿಗಳ ಕೆಲಸ ಬಹುಮುಖ್ಯವಾದುದು. ರೈತರ ಸಾಕು ಪ್ರಾಣಿಗಳಿಂದ ಹಿಡಿದು ಜಮೀನು, ಬೆಳೆಯುವ ಉತ್ಪನ್ನಗಳು ಎಲ್ಲವೂ ಬಿಕರಿಯಾಗುವುದು ದಲ್ಲಾಳಿಯ ಮೂಲಕವೇ. ಸಾಮಾನ್ಯವಾಗಿ ಇವರು ಸ್ಥಳೀಯರಾಗಿದ್ದು ವಸ್ತುವಿನ ಬಗ್ಗೆ ಅರಿವು, ಅನುಭವ, ಮಾತಿನಲ್ಲಿ ಚಾತುರ್ಯವುಳ್ಳವರೂ ಆಗಿರುತ್ತಾರೆ. ಕೊಳ್ಳುವವರು ಮತ್ತು ಮಾರುವವರ ಮಧ್ಯೆ ಹೊಂದಾಣಿಕೆ ಮಾಡಿ ವಸ್ತುವಿನ ಬೆಲೆ ನಿಗದಿಪಡಿಸಿ ಪರಸ್ಪರರಿಗೆ ಒಪ್ಪಿಗೆ ಆಗುವಂತೆ ವ್ಯವಹರಿಸುತ್ತಾರೆ. ಈ ಕೆಲಸಕ್ಕಾಗಿ ಅವರು ಎರಡೂ ಕಡೆಯವರಿಂದ ನಿಗದಿತ ಶುಲ್ಕ ಪಡೆಯುವರು.

*ಎ.ಎಂ.ಡಿ.*

**ದವಸ ಧಾನ್ಯಗಳ ಶೇಖರಣಾ ಪರಿಕರಗಳು** ಆಹಾರ ಧಾನ್ಯಗಳನ್ನು ಜೋಪಾನವಾಗಿ ಸಂರಕ್ಷಿಸಿಕೊಳ್ಳುವುದು ಒಂದು ಕಲೆ. ರೈತರು ಯಾವುದೇ ಹಾನಿಕಾರಕ ವಸ್ತುಗಳನ್ನು ಬಳಸದೆ, ರಾಗಿ, ಬತ್ತ, ಜೋಳ, ಸಜ್ಜೆ, ನವಣೆ,ಎಳ್ಳು ಕಾಳುಗಳನ್ನೆಲ್ಲಾ ಹುಳ ಹುಪ್ಪಟ್ಟೆಗಳಿಂದ ಸಂರಕ್ಷಿಸಿಕೊಳ್ಳುವ ವಿಧಾನಗಳನ್ನು ನಾನಾ ಮಾರ್ಗಗಳ ಮೂಲಕ ಕಂಡು ಕೊಂಡಿದ್ದಾರೆ.



ಮೈಸೂರು, ಮಂಡ್ಯ, ಚಾಮರಾಜನಗರ ಭಾಗಗಳಲ್ಲಿ ನೆಲವನ್ನು ಅಗೆದು, ಗುಳಿ ತೋಡಿ ಧಾನ್ಯಗಳನ್ನು ತುಂಬುವ ಪದ್ಧತಿ ಇದೆ. ಈ ಭಾಗಗಳ ಜನರು ತಮ್ಮ ಹಟ್ಟಿಯ ಹಿಂಬದಿಯ ಜಾಗ, (ಹಿತ್ತಲ ಕಡೆ) ಅಥವಾ ಮುಂಬದಿಯ ಜಾಗ (ಜಗಲಿ ಬಳಿ) ಅಗೆದು ಕಲ್ಲು ತಾಕುವವರೆಗೂ ಬಂದಂತಹ ಮಣ್ಣನ್ನೆಲ್ಲಾ ಹೊರ ತೆಗೆದು ಸೆಗಣಿಯಿಂದ (ತೊಪ್ಪೆ) ತಾರಿಸಿ, ಒಣಗಿಸಿ ಪಲ್ಲಗಟ್ಟಲೆ ದವಸಗಳನ್ನು ತುಂಬಿಡುತ್ತಾರೆ. ಇದನ್ನು 'ಪಾಳಗುಳಿ' ಎನ್ನುವರು. ವಾಸಿಸುವ ಮನೆಯ ಮುಗ್ಗುಲಿಗೆ ಹತ್ತಿರವೆನಿಸುವಂತೆ. ಮಲಗುವ ಗೋಡೆಗೆ 'ಗಂಟು ಮೂಟೆ ಕಟ್ಟಿ ಕೊಂಡು' ಅದರಲ್ಲೂ 25 ರಿಂದ 30 ಪಲ್ಲಗಟ್ಟಲೆ ಅಕ್ಕಿ, ರಾಗಿ, ಜೋಳ ತುಂಬಿಡುವ

'ಕಣಜ'ಗಳುಂಟು. ಇವು ಅರ್ಧ ಗೋಡೆಗಿಂತಲೂ ಎತ್ತರದ ಆಕಾರದಲ್ಲಿರುತ್ತವೆ.

ಬಿದಿರಿನ ಚಾಪೆಯ ಎಣಿಕೆಯಲ್ಲಿ ಹೆಣೆದ 10 ರಿಂದ 12 ಪಲ್ಲದವರೆಗೆ ತುಂಬಿಡಬಹುದಾದ 'ಸುಣ್ಣಗೋಳು' ಪರಿಕರವೂ ಒಂದು. ಒಣ ಹುಲ್ಲಿನ ಬುಟ್ಟಿ ಮತ್ತೊಂದು ಸಾಧನ. 300 ಸೇರು ಹಿಡಿಯುವ 3 ಪಲ್ಲವಷ್ಟೇ ತುಂಬಿಡುವ ಬಿದಿರಿನ ಚಿಕ್ಕ ಎಡಗೆಯನ್ನು 'ಕೊಮ್ಮೆ' ಎನ್ನುತ್ತಾರೆ. ಇದು ಕುಕ್ಕೆ ಆಕಾರದಲ್ಲಿದ್ದರೂ ಕುಕ್ಕೆಗಿಂತ ಕೊಂಚ ದೊಡ್ಡ ಗಾತ್ರದಲಿರುತ್ತದೆ.

ಮಣ್ಣಿನಿಂದ, ಲೋಹದಿಂದ ಮಾಡಿದ 30 ರಿಂದ 50 ಸೇರಷ್ಟು ಧಾನ್ಯಗಳನ್ನು ತುಂಬಿಡಬಹುದಾದ ಗುಡಾಣಗಳುಂಟು. ಗುಡಾಣಗಳನ್ನು ಮಣ್ಣಿನಿಂದ ಮತ್ತು ಕಬ್ಬಿಣದಿಂದ ಮಾಡಿರುತ್ತಾರೆ. ಇವನ್ನು ಅಳಗೆ, ಗಳಗೆ, ಮಡಕೆ, ಗುಡಾಣಗಳೆಂಬ ಹೆಸರುಗಳಿಂದಲೂ ಕರೆಯುವುದು ಉಂಟು.

**ಹಗೆವು :** ಉತ್ತರ ಕರ್ನಾಟಕದ ಕಡೆಪಾಳಗುಳಿಯಂತೆ 'ಹಗೆವು' ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ. ಯಾವುದೇ ಪುಡಿ, ವಿಷ, ಹಾನಿಕಾರಕ ವಸ್ತುಗಳನ್ನು ಬಳಸದೆ ಸಂರಕ್ಷಿಸುವ ವಿಧಾನದಲ್ಲಿ 'ಹಗೆವು' ಕೂಡ ಒಂದು. ಇದು ಒಟ್ಟು ಮೂರು ವಿಧದ ವಿವಿಧ ಅಳತೆಯ ರಂಧ್ರಗಳನ್ನು ಹೊಂದಿದ್ದು, ನೆಲದ ಮೇಲಿಂದ ಕೊರೆಯುವ ಮೊದಲ ರಂಧ್ರ ನಾಲ್ಕರಿಂದ ಆರು ಅಡಿ ವ್ಯಾಸ ಹೊಂದಿರುತ್ತದೆ. ಇದರ ಆಳ ಇಷ್ಟೇ ಇರಬೇಕೆಂದು ನಿಯಮವೇನಿಲ್ಲ. ಇದು ಮಣ್ಣಿನ ಹಗುರ ಮೇಲ್ಪದರು ಕೊನೆಯಾಗುವವರೆಗೂ ಆಳವನ್ನು ಹೊಂದಿರುತ್ತದೆ. ಏಳೆಂಟು ಅಡಿ ಉದ್ದವಾಗಿರುತ್ತದೆ. ಚೌಕಾಕಾರದ ರೂಪದಲ್ಲಿದ್ದು ಇದರ ಎರಡನೇ ರಂಧ್ರ ಎರಡು ಅಡಿ ವ್ಯಾಸವಿರುತ್ತದೆ. ಆಳ ಎಂಟರಿಂದ ಹದಿನೈದರ ಅಡಿಯವರೆಗೂ ಇರುತ್ತದೆ. ಇದರಲ್ಲಿಯೇ ಆಹಾರ ಧಾನ್ಯದ ಶೇಖರಣೆಯಾಗುತ್ತಿರುತ್ತದೆ.

ವರ್ಷವಿಡೀ ಬಳಸಬಹುದಾದ ಈ ಹಗೆವುಗಳಲ್ಲಿ ತುಂಬಿಟ್ಟ ಅನಂತರದಲ್ಲಿ ಸೆಣಬಿನ ಚೀಲಗಳನ್ನು ಹಾಕಿ ಮುಚ್ಚಿ, ಮೇಲೊಂದು ಕಳ್ಳಿ ಗಿಡದ ಹಸಿ ಟೊಂಗೆಯನ್ನು ಇಡುತ್ತಾರೆ. ಇದರಿಂದ ಕ್ರಿಮಿಕೀಟ ಹತ್ತಿರ ಸುಳಿಯುವುದಿಲ್ಲ. ಧಾನ್ಯದ ಅವಶ್ಯಕತೆ ಉಂಟಾದಾಗ ಹಗೆವು ತೆಗೆದು ಧಾನ್ಯ ತೆಗೆದುಕೊಂಡು ಮತ್ತೆ ಮುಚ್ಚಿ ಬಿಡುತ್ತಾರೆ. ಇದರಲ್ಲಿರುವ ಧಾನ್ಯಗಳು ದೀರ್ಘಕಾಲ



ಕೆಡಲಾರವು. ಯಾವುದೇ ವಾಸನೆಗೂ ಈಡಾಗದೆ ಸುರಕ್ಷಿತವಾಗಿರುವ ಮೂರ್‍ನಾಲ್ಕು ಚೀಲದಿಂದ ಹಿಡಿದು ನೂರು ಚೀಲದವರೆಗೂ ಸಂಗ್ರಹಿಸುವ ಸಾಮರ್ಥ್ಯದ ಹಗೆವು ಗಳು ಈಗಲೂ ಹಳ್ಳಿಗಳಲ್ಲಿವೆ.



ಬಿದಿರಿನ ತಡಿಕೆಯಿಂದ ಹೆಣೆದ ಪಣತವನ್ನು ಕೂಡ ಬಳಸಲಾಗುತ್ತಿದೆ. ಕೋಲನ್ನು ಒಂದಡಿ ಯಷ್ಟು ನೆಲದಲ್ಲಿ ಹೂತು, ಅದಕ್ಕೆ ಬಿದಿರ ತಡಿಕೆಯನ್ನು ಲಂಬವಾಗಿ ಕಟ್ಟಬೇಕು. ಈಗ ತಡಿಕೆಯ ಇನ್ನೊಂದು ತುದಿಯನ್ನು ಹಿಡಿದುಕೊಂಡು ವೃತ್ತಾಕಾರವಾಗಿ ಮಡಸುತ್ತ ಅದನ್ನು ಕೋಲಿನಸುತ್ತ ತಂದು ಕಟ್ಟಿದರೆ, ತೊಟ್ಟಿಯಾಕಾರದ 'ಬಳಿಕ' ನಿರ್ಮಾಣವಾಗುತ್ತದೆ.

ಈ ಪಣತದ ತಳದಲ್ಲಿ ತಡಿಕೆ ಹಾಗೂ ನೆಲ ಒಂದಾಗುವಂತೆ ಕೆಸರನ್ನು ಹೊರಭಾಗಕ್ಕೆ ಮೆತ್ತಿ, ಕೆಮ್ಮಣ್ಣು ಮತ್ತು ಸೆಗಣಿ ಮಿಶ್ರ ಮಾಡಿ ಮೆತ್ತಲಾಗಿರುತ್ತದೆ. ಇದರ ಎತ್ತರ ಸುಮಾರು ಆರೇಳು ಅಡಿಯಿರುತ್ತದೆ. ಇದರಲ್ಲಿ ಆಹಾರ ಧಾನ್ಯ ಸುರುವಿ ಮೇಲೆ ಸೆಣಬಿನ ಚೀಲದಿಂದ ಮುಚ್ಚಿದರೆ ಒಂದು ವರ್ಷದವರೆಗೆ ಆಹಾರ ಧಾನ್ಯಗಳನ್ನು ಸಂರಕ್ಷಿಸಿಡಬಹುದು.

ಇವಲ್ಲದೆ ಬಿದಿರಿನ ಹೆಡಗೆ, ಕುಕ್ಕೆ, ಮೊರ, ಸೆಣಬಿನ ಚೀಲ ಮತ್ತು (ಕೈಚೀಲ)ಗಳು ಕೂಡ ಆಹಾರ ಧಾನ್ಯಗಳನ್ನು ಸಂರಕ್ಷಿಸುವ, ತುಂಬಿಡುವ ಪರಿಕರಗಳಾಗಿವೆ.

***ಕೆ.ಎಂ.***

**ದಾಲ್ಚಿನಿ (ಸಿನ್ನಮೊವ್)** ಸಿನ್ನಮೊನಮ್ ಜೆಲಮಿಕಮ

ದಾಲ್ಚಿನಿ ಮರದ ಪ್ರತಿಯೊಂದು ಭಾಗವೂ ಬಹಳ ಉಪಯೋಗಕಾರಿ. ಲಾರೇಸೀ ಕುಟುಂಬಕ್ಕೆ ಸೇರಿದ ಈ ಮರವನ್ನು ಸಸ್ಯಶಾಸ್ತ್ರದಲ್ಲಿ ಸಿನ್ನಾಮೋಮಮ್ ಜೈಲಾನಿಕಮ್ ಎಂದು ಕರೆಯುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ 'ಸಿನ್ನಾಮನ್' ಅಥವಾ 'ಸಿಲೋನ್ ಸಿನ್ನಾಮನ್' ಎಂದೆನ್ನುತ್ತಾರೆ. ದಕ್ಷಿಣ ಭಾರತದಲ್ಲಿ 'ಚಕ್ಕೆ' ಎಂದೂ ಕರೆಯುವುದುಂಟು. ಇದು ದಕ್ಷಿಣ ಭಾರತದಲ್ಲಿ ಮತ್ತು ಶ್ರೀಲಂಕಾದಲ್ಲಿ ಸ್ವಾಭಾವಿಕವಾಗಿ ಬೆಳೆಯುವುದನ್ನು ಗಮನಿಸಬಹುದು. ಇನ್ನೊಂದು ತಳಿ 19ನೆಯ ಶತಮಾನದಲ್ಲಿ ಚೀನದಿಂದ ಆಮದಾಗುತ್ತಿತ್ತು. ಅದೇ ಸಿನ್ನಮೊಮಮ್ ಕ್ಯಾಸ್ಸಿಯ. ಆದರೆ ದಕ್ಷಿಣ ಭಾರತದ ದಾಲ್ಚಿನಿ ತೊಗಟೆಯ ವಾಸನೆ ಚೀನದ

ದಾಲ್ಚಿನಿಗಿಂತ ಉತ್ತಮವಾಗಿದ್ದುದರಿಂದ ದೇಶೀಯ ದಾಲ್ಚಿನಿ ಹೆಚ್ಚಿಗೆ ಬಳಕೆಯಾಗುತ್ತಿದೆ. ಚೀನಿ ದಾಲ್ಚಿನಿ ಪಟ್ಟಿಗಿಂತ ದೇಶಿ ದಾಲ್ಚಿನಿ ಪಟ್ಟಿ ತೆಳುವಾಗಿರುತ್ತದೆ.

ಇದು 6-8 ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯುವ ನಿತ್ಯಹರಿದ್ವರ್ಣದ ಮರ. ಸಮುದ್ರಮಟ್ಟದಿಂದ 30 ರಿಂದ 200 ಮೀಟರ್ ಎತ್ತರದ ಪ್ರದೇಶಗಳಲ್ಲಿ ಅಧಿಕವಾಗಿಯೂ ಮತ್ತು 1000 ಮೀಟರ್ ಎತ್ತರದವರೆಗೆ ಸ್ವಲ್ಪ ಕಡಿಮೆ ಪ್ರಮಾಣದಲ್ಲೂ ಬೆಳೆಯುತ್ತದೆ. ಶ್ರೀಲಂಕಾದಲ್ಲಿ ಇದರ ಉತ್ಪಾದನೆ ಪ್ರಪಂಚದಲ್ಲೇ ಬೇರೆಲ್ಲೂ ಇಲ್ಲದಷ್ಟು ಆಗುತ್ತಿದೆ. ಈಚೆಗೆ ಸಚೆಲ್ಲೆಸ್, ಬ್ರೆಜಿಲ್‌ಗಳಲ್ಲೂ ಬೆಳೆಸುತ್ತಿದ್ದಾರೆ.

**ಹವಾಗುಣ :** ದಾಲ್ಚಿನಿ ಉಷ್ಣವಲಯ ಪ್ರದೇಶಗಳಲ್ಲಿ ವಿವಿಧ ರೀತಿಯ ಮಣ್ಣುಗಳಲ್ಲಿ ಬೆಳೆಯಬಲ್ಲದು. ಶ್ರೀಲಂಕಾ ದ್ವೀಪದಲ್ಲಿ ಒಳ್ಳೆಯ ದರ್ಜೆಯ ತೊಗಟೆಯನ್ನು ಕೊಡುವ ಮರಗಳಿವೆ. ಬಿಳಿಯ ಮರಳು ಇದರ ಬೇಸಾಯಕ್ಕೆ ಅನುಕೂಲ. ಮಳೆ ಅಧಿಕವಾಗಿ ಬಿದ್ದರೂ ಯಾವ ತೊಂದರೆಯೂ ಇಲ್ಲ. ಈ ಮರಗಳು ಬೆಂಕಿಯಿಂದ ಬೇಗ ನಾಶವಾಗುವ ಗುಣವನ್ನು ಹೊಂದಿವೆ. ದನಕರುಗಳು ಇದರ ಎಲೆಗಳನ್ನು ತಿನ್ನುವುದಿಲ್ಲ.



**ಬಿತ್ತನೆ :** ಇದರ ಸಸ್ಯಾಭಿವೃದ್ಧಿ ಬೀಜಗಳಿಂದ ನಡೆಯುತ್ತದೆ. ಭೂಮಿಯಲ್ಲಿ ಒಟ್ಲು ಪಾತಿಗಳಲ್ಲಿ ಬಿತ್ತಬಹುದು. ಪಾತಿಗಳಲ್ಲಿ ಒಟ್ಲು ಹಾಕುವಾಗ ಇದರ ಬೀಜಗಳನ್ನು ಸು. 22 ಸೆಂ.ಮೀಟರ್ ಅಂತರದಲ್ಲಿ ನೆಡಬೇಕು. ಪಾತಿಗಳಿಗೆ ನೀರು ಮತ್ತು ನೆರಳು ಮುಖ್ಯ. ಒಟ್ಲು ಪಾತಿಯಲ್ಲಿ ಗಿಡಗಳನ್ನು 3 ತಿಂಗಳುವರೆಗೆ ಬೆಳೆಸಿ. ಅನಂತರ ಸಸಿಗಳನ್ನು ಎರಡು ಮೀಟರ್ ಅಂತರದಲ್ಲಿ ನೆಡಬೇಕು. ಕತ್ತರಿಸಿದ ಕೊಂಬೆಗಳನ್ನು ನೆಟ್ಟು ಇದರ ಸಸ್ಯಾಭಿವೃದ್ಧಿಯನ್ನು ಮಾಡಬಹುದು.

ನೆಟ್ಟ ಎರಡು ಮೂರು ವರ್ಷಗಳ ಅನಂತರ ಕೆಲವು ರೆಂಬೆಗಳನ್ನು ಕತ್ತರಿಸಬೇಕು. ರೆಂಬೆಗಳು 3-5 ಸೆಂ.ಮೀ. ವ್ಯಾಸದಷ್ಟು ದಪ್ಪ ಬೆಳೆದ ಆನಂತರ ಕೊಯ್ಲಿಗೆ ಬರುತ್ತದೆ. ತೊಗಟೆಯನ್ನು ಬೇರ್ಪಡಿಸಲು ಮಳೆಗಾಲ ಯುಕ್ತ ಸಮಯ. ತೊಗಟೆಯು ಸು. 0.5 ಸೆಂ.ಮೀ. ಗಿಂತಲೂ ಹೆಚ್ಚು ದಪ್ಪ ಇರುವುದಿಲ್ಲ. ಇದರ ಹೊರ ಮೇಲ್ಮೈ ನಸು ಕಂದು ಬಣ್ಣವಿದ್ದು ಒಳ ಮೇಲ್ಮೆ ಹೆಚ್ಚು ಕಪ್ಪಾಗಿರುತ್ತದೆ. ಇದು ಮಧುರ ವಾಸನೆಯನ್ನು ಹೊಂದಿದ್ದು ಸ್ವಲ್ಪ ಸಿಹಿಯಿಂದ ಕೂಡಿದ ರುಚಿಯನ್ನು ಹೊಂದಿರುತ್ತದೆ. ಇದನ್ನು ಖಾದ್ಯ ಪದಾರ್ಥದಂತ ಶುದ್ಧೀ ಕರಣ



ಪದಾರ್ಥಗಳು, ಸುವಾಸನಾದ್ರವ್ಯಗಳು, ಧೂಪ ಮುಂತಾದವು ಗಳಲ್ಲಿ ಬಳಸುತ್ತಾರೆ. ತೊಗಟೆಯಲ್ಲಿ ಎಣ್ಣೆಯ ಅಂಶವಿದ್ದು ಬಟ್ಟಿ ಇಳಿಸುವಿಕೆಯಿಂದ ಎಣ್ಣೆಯನ್ನು ಬೇರ್ಪಡಿಸುತ್ತಾರೆ. ಕೊಂಬೆಗಳನ್ನು ತೊಗಟೆಗಾಗಿ ಕತ್ತರಿಸಿ ಎಲೆಗಳನ್ನು ಬಟ್ಟಿ ಇಳಿಸಿಯೂ ಸುವಾಸನೆ ಎಣ್ಣೆಯನ್ನು ಪಡೆಯುತ್ತಾರೆ. ಇದರ ಎಲೆಯ ಕುಡಿಗಳು ಎಳೆಯದಾಗಿರುವಾಗ ಕೆಂಪಾಗಿ ಸುಂದರವಾಗಿರುತ್ತವೆ. ಮೊದಲು ತಿಳಿಹಳದಿ ಬಣ್ಣ ತದನಂತರ ಪಾಚಿ ಹಸುರುಬಣ್ಣಕ್ಕೆ ತಿರುಗಿ ಹೊಳಪಿನಿಂದ ಕೂಡಿರುತ್ತವೆ. ಬಲಿತ ಎಲೆಗಳು ಸು. 12-18 ಸೆಂ.ಮೀ. ಇದರ ಎಣ್ಣೆಯನ್ನು ಭಾರತದಲ್ಲಿ ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಾಗೂ ಮಲಬಾರ್‌ನಲ್ಲಿಯೂ ಸ್ವಲ್ಪಮಟ್ಟಿಗೆ ತಯಾರಿಸು ತ್ತಾರೆ. ಎಲೆಗಳಿಂದ ಪಡೆದ ಎಣ್ಣೆ ಕಂದುಬಣ್ಣ ದಲ್ಲಿದ್ದ ವಾಸನೆ ಕರ್ಪೂರದಂತಿರುತ್ತದೆ. ಎಣ್ಣೆಯನ್ನು ಶೇಖರಿಸಿದರೆ ಕರ್ಪೂರವು ಬೇರ್ಪಟ್ಟು ನಿಲ್ಲುತ್ತದೆ.

ದಾಲ್ಚಿನಿಯನ್ನು ಬಹುಕಾಲದಿಂದ ಸಾಂಬಾರ ಪದಾರ್ಥವಾಗಿ ಮತ್ತು ವಸ್ತುವಾಗಿ ಬಳಸುತ್ತಿದ್ದಾರೆ. ಇದರ ತೈಲ ಔಷಧಿ ಸಿಹಿ ಮತ್ತು ಖಾರಗಳಿಂದ ಕೂಡಿರುತ್ತದೆ. ವಾತ, ಶ್ಲೇಷ್ಮ, ಕೆಮ್ಮು, ಅಜೀರ್ಣ ಬಿಕ್ಕಳಿಕೆ, ಹಲ್ಲುನೋವು ಮುಂತಾದವುಗಳಿಗೆ ಒಳ್ಳೆಯದು.

*ಎಸ್. ಆರ್.*

**ದಾವಣಗೆರೆ ಜಿಲ್ಲೆಯ ಕೃಷಿ** ಭೂಮಿಯ ಮೇಲಿನ ಯಾವುದೇ ಸ್ಥಳದ ಪ್ರಾದೇಶಿಕ ವಿವರಗಳನ್ನು ತಿಳಿಯಬೇಕಾದರೆ, ಆ ಪ್ರದೇಶದ ಭೂಮೇಲ್ಮೈಲಕ್ಷಣ, ವಾಯುಗುಣ, ಮಣ್ಣುಗಳು, ಸಸ್ಯವರ್ಗ, ಜಲಸಂಪತ್ತು, ಖನಿಜಗಳು ಹಾಗೂ ಮಾನವನ ಚಟುವಟಿಕೆಗಳನ್ನು ಗಮನಿಸಬೇಕು. ವೈವಿಧ್ಯಮಯ ಭೂಲಕ್ಷಣಗಳನ್ನು ಹೊಂದಿರುವ ದಾವಣಗೆರೆ ಬಹುಮುಖ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿರುವ ಜಿಲ್ಲೆಯಾಗಿದೆ.

**ಜಿಲ್ಲೆಯ ವಿಸ್ತೀರ್ಣ**

ಕರ್ನಾಟಕದಲ್ಲಿರುವ ಇತರೆ ಜಿಲ್ಲೆಗಳಂತೆ ದಾವಣಗೆರೆ ಜಿಲ್ಲೆಯು ಒಂದು ಆಡಳಿತ ಕೇಂದ್ರವಾಗಿದೆ. ರಾಜ್ಯದ ಮಧ್ಯಭಾಗದಲ್ಲಿದ್ದರೂ, ಭೂನಕ್ಷೆಯಲ್ಲಿ ಉತ್ತರ ಅಕ್ಷಾಂಶ 14°-28° ಮತ್ತು ಪೂರ್ವರೇಖಾಂಶ 75°-38°ಯು ವರೆಗೆ ವ್ಯಾಪಿಸಿಕೊಂಡಿದೆ. ಸಮುದ್ರಮಟ್ಟಕ್ಕಿಂತ 602.6 ಮೀಟರ್ ಎತ್ತರದಲ್ಲಿದ್ದು, ಸಮತಟ್ಟಾದ ಭೂಪ್ರದೇಶವನ್ನು ಒಳಗೊಂಡಿದೆ. ಉತ್ತರದಲ್ಲಿ ಬಳ್ಳಾರಿ, ದಕ್ಷಿಣ ಭಾಗದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಪೂರ್ವಕ್ಕೆ ಚಿತ್ರದುರ್ಗ ಹಾಗೂ ಪಶ್ಚಿಮ ಭಾಗದಲ್ಲಿ ಹಾವೇರಿ ಜಿಲ್ಲೆಗಳಿಂದ ಆವರಿಸಿಕೊಂಡಿದೆ.

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು 6018 ಚ.ಕಿ.ಮೀ. ರಾಜ್ಯದ ವಿಸ್ತೀರ್ಣದಲ್ಲಿ ಶೇ. 3.14ರಷ್ಟು ಭೂಭಾಗವನ್ನು ಆಕ್ರಮಿಸಿಕೊಂಡು, ರಾಜ್ಯದ 14ನೇ ಸ್ಥಾನವನ್ನು ಪಡೆದುಕೊಂಡಿದೆ. (2011)

1997ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ದಿ. ಜೆ.ಎಚ್. ಪಟೇಲ್‌ರವರು ಸ್ವಾತಂತ್ರ್ಯ ಸುವರ್ಣಮಹೋತ್ಸವ ದಿನವಾದ ಆಗಸ್ಟ್ 15 ರಂದು ಏಳು ಹೊಸ ಜಿಲ್ಲೆಗಳನ್ನು ರಚಿಸಿ ಆದೇಶ ಹೊರಡಿಸಿದ್ದರು. ಇವುಗಳಲ್ಲಿ ದಾವಣಗೆರೆಯೂ ಒಂದು. ದಾವಣಗೆರೆ, ಚನ್ನಗಿರಿ, ಹರಿಹರ, ಹೊನ್ನಾಳಿ, ಹರಪನಹಳ್ಳಿ ಹಾಗೂ ಜಗಳೂರು ಹೀಗೆ ಒಟ್ಟು 6 ತಾಲ್ಲೂಕುಗಳು ದಾವಣಗೆರೆ ಜಿಲ್ಲೆಗೆ ಸೇರ್ಪಡೆಗೊಂಡಿದೆ. ರಾಷ್ಟ್ರೀಯ ಹೆದ್ದಾರಿ ಮತ್ತು ದಕ್ಷಿಣ ಭಾರತದ ರೈಲು ಮಾರ್ಗಗಳು ಹಾದು ಹೋಗಿರುವುದರಿಂದ ವ್ಯಾಪಾರ ವಹಿವಾಟು, ಶಿಕ್ಷಣ ಸಂಸ್ಥೆಗಳಿಂದಾಗಿ ವಾಣಿಜ್ಯ ಮತ್ತು ವಿದ್ಯೆಯು ಸಂಗಮಿಸಿದ ಜಿಲ್ಲೆಯೆಂದೇ ಪ್ರಖ್ಯಾತಿ ಪಡೆದಿದೆ. ವಿವಿಧ ಕ್ಷೇತ್ರಗಳಲ್ಲಿ ಅಪಾರ ಸಾಧನೆಗಳನ್ನು ಮಾಡಿ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರೂ ಜಿಲ್ಲೆಯಲ್ಲಿದ್ದಾರೆ.

**ಹವಾಗುಣ :** ಜಿಲ್ಲೆ ಸಂಪೂರ್ಣವಾಗಿ ಉಷ್ಣವಲಯದಲ್ಲಿದೆ. ಆದ್ದರಿಂದ ಉಷ್ಣವಲಯದ ಮಾನ್ಸೂನ್ ಹವಾಗುಣದ ಲಕ್ಷಣಗಳನ್ನು ಜಿಲ್ಲೆಯಲ್ಲಿ ಸ್ಪಷ್ಟವಾಗಿ ಕಾಣಲಾಗುತ್ತದೆ. ಭಾರತ ಮತ್ತು ಕರ್ನಾಟಕದ ವಾಯುಗುಣದಂತೆಯೇ ದಾವಣಗೆರೆ ಜಿಲ್ಲೆಯ ವಾರ್ಷಿಕ ಹವಾಗುಣದ ಪರಿಸ್ಥಿತಿಯನ್ನು ನಾಲ್ಕು ಋತುಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

ಬೇಗೆಯ ಕಾಲ (ಮಾರ್ಚ್ - ಮೇ)

ನೈಋತ್ಯ ಮಾನ್ಸೂನ್ ಮಾರುತಗಳ ಕಾಲ (ಜೂನ್ - ಸೆಪ್ಟೆಂಬರ್)

ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ (ಅಕ್ಟೋಬರ್-ನವೆಂಬರ್)

ಚಳಿಗಾಲ (ಡಿಸೆಂಬರ್-ಫೆಬ್ರವರಿ)


ಬೇಸಗೆ ಕಾಲದಲ್ಲಿ ಜಿಲ್ಲೆಯಲ್ಲಿನ ಉಷ್ಣಾಂಶದ ಏರಿಕೆಯು ನಿಧಾನವಾಗಿ ಆರಂಭಗೊಂಡು, ಅನಂತರ ಗರಿಷ್ಠ ಪ್ರಮಾಣವನ್ನು ತಲುಪುವುದು. ಏಪ್ರಿಲ್ ಹಾಗೂ ಮೇ ತಿಂಗಳ ಆರಂಭದಲ್ಲಿ ಜಿಲ್ಲೆಯು ಗರಿಷ್ಠ ಉಷ್ಣಾಂಶವನ್ನು ಹೊಂದಿರುತ್ತದೆ.

ನೈಋತ್ಯ ಮಾನ್ಸೂನ್ ಮಾರುತಗಳ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿ ಸಾಧಾರಣ ಮಳೆ ಬೀಳುತ್ತದೆ. ಇದು ಮುಂಗಾರು ಮಳೆಗಾಲ. ಸೆಪ್ಟೆಂಬರ್ ತಿಂಗಳಿನವರೆಗೆ ಇದು ಮುಂದುವರಿಯುತ್ತದೆ. ದಿನದ ಹೆಚ್ಚುಕಾಲ ಮೋಡದಿಂದ ಕವಿದಿದ್ದು, ಆಗಿಂದ್ದಾಗ್ಗೆ ಮಳೆ ಬೀಳುವುದರಿಂದ ಉಷ್ಣಾಂಶವು ಅತಿಕಡಿಮೆ ಇರುತ್ತದೆ.

ಮಾನ್ಸೂನ್ ಮಾರುತಗಳ ನಿರ್ಗಮನವು ಜಿಲ್ಲೆಯಲ್ಲಿ ಅಕ್ಟೋಬರ್‌ನಿಂದ ನವೆಂಬರ್‌ವರೆಗೆ ಮುಂದುವರಿಯುತ್ತದೆ. ಈ ವೇಳೆಯಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳು ನಿಲುಗಡೆಗೊಂಡು, ಈಶಾನ್ಯ ಮಾನ್ಸೂನ್ ಮಾರುತಗಳು ಬೀಸಲು ಆರಂಭವಾಗುತ್ತವೆ. ಇದರಿಂದ ಇವುಗಳ ದಿಕ್ಕು ನೈಋತ್ಯ ದಿಕ್ಕಿಗೆ ಬದಲಾಗಿ ಈಶಾನ್ಯ ದಿಕ್ಕಿಗೆ ಸ್ಥಳಾಂತರವಾಗಿರುವುದರಿಂದ, ತೇವಾಂಶ ಮತ್ತು ಮೋಡದ ಪ್ರಮಾಣ ಕಡಿಮೆಯಾಗುತ್ತದೆ, ಉಷ್ಣಾಂಶ ಈ ಅವಧಿಯಲ್ಲಿ ಕಡಿಮೆಯಾಗಿ ಹವಾಗುಣವು ತಂಪಿನಿಂದ ಕೂಡಿರುತ್ತದೆ.

**ಚಳಿಗಾಲ :** ಡಿಸೆಂಬರ್‌ನಿಂದ ಫೆಬ್ರವರಿಯ ಕೊನೆಯವರೆಗೂ ಮುಂದುವರಿಯುತ್ತದೆ. ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಅತಿ ಕಡಿಮೆ ಉಷ್ಣಾಂಶ, ಅತ್ಯಲ್ಪ ಮಳೆ, ಕಡಿಮೆ ಸಾಪೇಕ್ಷ ಆರ್ದ್ರತೆಯಿಂದ ಕೂಡಿದ ತಂಪಾಗಿರುವ ಹವೆ ಇರುತ್ತದೆ.

ಹೀಗೆ ಮೇಲಿನ ಎಲ್ಲಾ ಅಂಶಗಳಿಂದಲೂ ಜಿಲ್ಲೆ ಸಮಶೀತೋಷ್ಣ ಹವಾಗುಣದಿಂದ ಕೂಡಿರುವುದು.



### ಕೃಷಿ ಭೂಮಿ

ಜಿಲ್ಲೆ ಒಳಗೊಂಡಿರುವ ಎಲ್ಲಾ ಭೂ ಪ್ರದೇಶವು ಉಳುಮೆಗೆ ಯೋಗ್ಯವಾಗಿರುವುದಿಲ್ಲ. ಅದರಲ್ಲಿ ಉಳುಮೆಗೆ ಬಳಸಿಕೊಂಡ ಭೂಮಿಯನ್ನ ಕೃಷಿ ಭೂಮಿ ಎಂತಲೂ, ಉಳಿದ ಭೂಪ್ರದೇಶವನ್ನು ಬಂಜರು ಭೂಮಿ ಎಂದೂ ವಿಭಾಗಿಸಲಾಗಿದೆ. ಜಿಲ್ಲೆಯ ತಾಲ್ಲೂಕುವಾರು ಮಾಹಿತಿಯನ್ನ ಹೆಕ್ಟೇರ್‌ನಲ್ಲಿ ನೀಡಲಾಗಿದೆ.

**ಕೋಷ್ಟಕ - 1**

| ಕ್ರಮ ಸಂಖ್ಯೆ | ತಾಲ್ಲೂಕುಗಳು | ಬಿತ್ತನೆಗೆ ಯೋಗ್ಯವಾದ ಭೂಮಿ (ಹೆಕ್ಟೇರ್‌ನಲ್ಲಿ) | ಬಂಜರು ಭೂಮಿ (ಹೆಕ್ಟೇರ್‌ನಲ್ಲಿ) |
|---|---|---|---|
| 01 | ಚನ್ನಗಿರಿ | 84187 | 3048 |
| 02 | ದಾವಣಗೆರೆ | 92577 | 2274 |
| 03 | ಹರಪನಹಳ್ಳಿ | 101098 | 4962 |
| 04 | ಹರಿಹರ | 56010 | 2640 |
| 05 | ಹೊನ್ನಾಳಿ | 67819 | 26 |
| 06 | ಜಗಳೂರು | 59081 | 10036 |
| | **ಮೊತ್ತ** | **460772** | **22986** |

**ಆಧಾರ :** (ದಾವಣಗೆರೆ ಜಿಲ್ಲಾ ಅಂಕಿ ಅಂಶಗಳ ನೋಟ 2010-11)

ಮೇಲಿನ ಕೋಷ್ಟಕವು ಸೂಚಿಸಿರುವಂತೆ ಹರಪನಹಳ್ಳಿ ತಾಲ್ಲೂಕು ಇಡೀ ಜಿಲ್ಲೆಯಲ್ಲಿ ಅತಿ ಹೆಚ್ಚು ಕೃಷಿ ಯೋಗ್ಯ ಭೂಮಿಯನ್ನು, ಅತಿ ಹೆಚ್ಚು ಬಂಜರು ಭೂಮಿಯನ್ನು ಜಗಳೂರು ತಾಲ್ಲೂಕು ಹೊಂದಿರುವುದನ್ನು ಸೂಚಿಸುತ್ತದೆ.

ಜಿಲ್ಲೆಯಾದ್ಯಂತ ಕೃಷಿ ಭೂಮಿಯನ್ನು ಹೊಂದಿರುವ ಒಟ್ಟು ಭೂ ಹಿಡುವಳಿದಾರರ ವಿವರಣೆಯನ್ನು ಮುಂದಿನ ಕೋಷ್ಟಕದಲ್ಲಿ-2 ನೀಡಲಾಗಿದೆ.

### ಭೂಹಿಡುವಳಿದಾರರು

**ಕೋಷ್ಟಕ - 2**

| ಕ್ರಮ ಸಂಖ್ಯೆ | ತಾಲ್ಲೂಕುಗಳು | ಹಿಡುವಳಿದಾರರ ಸಂಖ್ಯೆ |
|---|---|---|
| 01 | ಚನ್ನಗಿರಿ | 74162 |
| 02 | ದಾವಣಗೆರೆ | 76415 |
| 03 | ಹರಪನಹಳ್ಳಿ | 100674 |
| 04 | ಹರಿಹರ | 39363 |
| 05 | ಹೊನ್ನಾಳಿ | 57403 |
| 06 | ಜಗಳೂರು | 68248 |
| | ಒಟ್ಟು | **418692** |

**ಆಧಾರ :** (ದಾವಣಗೆರೆ ಜಿಲ್ಲಾ ಅಂಕಿ ಅಂಶಗಳ ನೋಟ 2010-11)

ಕೋಷ್ಟಕ -2 ರಲ್ಲಿ ಸೂಚಿಸಿರುವಂತೆ ಅತಿ ಹೆಚ್ಚು ಹಿಡುವಳಿದಾರರನ್ನು ಹರಪನಹಳ್ಳಿ ತಾಲ್ಲೂಕು, ಅತಿ ಕಡಿಮೆ ಭೂಹಿಡುವಳಿದಾರರನ್ನು ಹರಿಹರ ತಾಲ್ಲೂಕು ಹೊಂದಿರುವುದನ್ನು ಸೂಚಿಸುತ್ತದೆ. ಹಿಡುವಳಿದಾರರು ಹೊಂದಿರುವ ಭೂಮಿಯ ವಿಸ್ತಾರಕ್ಕನುಗುಣವಾಗಿ

| | | |
|---|---|---|
| ದೊಡ್ಡ ಭೂಹಿಡುವಳಿದಾರರು | 10 | ಹೆಕ್ಟೇರ್‌ಗಿಂತ ಹೆಚ್ಚು |
| ಮಧ್ಯಮ ಭೂ ಹಿಡುವಳಿದಾರರು | 4-10 | ಹೆಕ್ಟೇರ್‌ವರೆಗೆ |
| ಅರೆಮಧ್ಯಮ ಭೂಹಿಡುವಳಿದಾರರು | 2-4 | ಹೆಕ್ಟೇರ್‌ವರಿಗೆ |
| ಸಣ್ಣ ಭೂಹಿಡುವಳಿದಾರರು | 1-2 | ಹೆಕ್ಟೇರ್‌ಗಿಂತ ಕಡಿಮೆ |
| ಅತಿ ಸಣ್ಣ ಭೂಹಿಡುವಳಿದಾರರು | 01 | ಹೆಕ್ಟೇರ್‌ಗಿಂತ ಕಡಿಮೆ |

ಭೂಮಿ ಹೊಂದಿರುವ ಭೂಹಿಡುವಳಿದಾರರೆಂದು ವಿಂಗಡಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಜಿಲ್ಲೆಯಲ್ಲಿಯ ವಿವರಣೆಯನ್ನು ಕೋಷ್ಟಕ 3ರಲ್ಲಿ ನೀಡಲಾಗಿದೆ.

**ಕೋಷ್ಟಕ - 3**

| ಕ್ರಮ ಸಂಖ್ಯೆ | ತಾಲ್ಲೂಕುಗಳು | ದೊಡ್ಡ ಭೂ ಹಿಡುವಳಿದಾರರು | ಮಧ್ಯಮ | ಅರೆ ಮಧ್ಯಮ ಭೂ.ಹಿ. | ಸಣ್ಣ ಭೂ.ಹಿ. | ಅತಿ ಸಣ್ಣ ಭೂ.ಹಿ. |
|---|---|---|---|---|---|---|
| 01 | ಚನ್ನಗಿರಿ | 2275 | 14053 | 20660 | 22552 | 16622 |
| 02 | ದಾವಣಗೆರೆ | 2990 | 16813 | 23060 | 20336 | 13216 |
| 03 | ಹರಪನಹಳ್ಳಿ | 7964 | 25646 | 29740 | 26480 | 10844 |
| 04 | ಹರಿಹರ | 1791 | 9923 | 11190 | 9917 | 6542 |
| 05 | ಹೊನ್ನಾಳಿ | 2409 | 11912 | 16257 | 16060 | 10765 |
| 06 | ಜಗಳೂರು | 2619 | 16652 | 21918 | 17727 | 6332 |
| | ಒಟ್ಟು | **23,908** | **95662** | **123263** | **113374** | **62321** |

**ಆಧಾರ :** (ದಾವಣಗೆರೆ ಜಿಲ್ಲಾ ಅಂಕಿ ಅಂಶಗಳ ನೋಟ 2010-11)

ಕೋಷ್ಟಕ 3ರಲ್ಲಿ ಸೂಚಿಸಿರುವಂತೆ ಜಿಲ್ಲೆಯಲ್ಲಿರುವ ಹರಪನಹಳ್ಳಿ ತಾಲ್ಲೂಕು ಅತಿ ಹೆಚ್ಚು ಹಾಗೂ ಹರಿಹರ ತಾಲ್ಲೂಕು ಅತಿ ಕಡಿಮೆ ದೊಡ್ಡ ಭೂ ಹಿಡುವಳಿದಾರರನ್ನು ಹೊಂದಿರುವುದನ್ನ ಸೂಚಿಸುತ್ತದೆ. ಹಾಗೆಯೇ ದಾವಣಗೆರೆ ತಾಲ್ಲೂಕು ಅತಿ ಹೆಚ್ಚು ಹಾಗೂ ಹರಿಹರ ತಾಲ್ಲೂಕು ಅತೀ ಕಡಿಮೆ ಮಧ್ಯಮ ಭೂಹಿಡುವಳಿದಾರರನ್ನು ಹೊಂದಿದೆ. ಹರಪನಹಳ್ಳಿ ತಾಲ್ಲೂಕು ಅತಿ ಹೆಚ್ಚು ಹಾಗೂ ಹರಿಹರ ತಾಲ್ಲೂಕು ಅತೀ ಕಡಿಮೆ ಅರೆ ಮಧ್ಯಮ ಭೂಹಿಡುವಳಿದಾರರನ್ನು ಸೂಚಿಸುತ್ತದೆ. ಹಾಗೂ ಹರಿಹರ ಅತೀ ಕಡಿಮೆ ಸಣ್ಣಭೂಹಿಡುವಳಿದಾರರನ್ನು ಹೊಂದಿದೆ. ಚನ್ನಗಿರಿ ತಾಲ್ಲೂಕು ಅತೀ ಹೆಚ್ಚು ಹಾಗೂ ಜಗಳೂರು ತಾಲ್ಲೂಕು ಕಡಿಮೆ ಅತೀ ಸಣ್ಣ ಭೂ ಹಿಡುವಳಿದಾರರ ಬಗ್ಗೆ ಕೋಷ್ಟಕವು ಸ್ಪಷ್ಟವಾಗಿ ತೋರಿಸುತ್ತದೆ.

**ಜಿಲ್ಲೆಯ ವ್ಯವಸಾಯದ ಪ್ರದೇಶಗಳು**

ಈ ಪ್ರದೇಶ ಏಕರೀತಿಯ ವಾಯುಗುಣ, ವಿವಿಧ ಭೂಸ್ವರೂಪ, ಮಣ್ಣು, ಬೆಳೆಗಳು ಹಾಗೂ ವ್ಯವಸಾಯಪದ್ಧತಿ, ತಾಂತ್ರಿಕತೆ, ಮಾರುಕಟ್ಟೆ ಪ್ರಾಕೃತಿಕ ವಿಶೇಷಗಳ ಜೊತೆಗೆ ಆರ್ಥಿಕ-ಸಾಮಾಜಿಕ ಹಿನ್ನೆಲೆಯ ವೈವಿಧ್ಯತೆಯು ಬೆಳೆಗಳ ವೈವಿಧ್ಯತೆ ಹಾಗೂ ವ್ಯವಸಾಯ ವಿಧಾನಗಳು ಬೇರೆಯಾಗಿರುವುದಕ್ಕೆ ಕಾರಣವಾಗಿವೆ.

ಈ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ ಹೊಂದಿರುವ ಭೂ ಸ್ವರೂಪ, ಮಳೆ, ಉಷ್ಣಾಂಶದ ಹಂಚಿಕೆ, ಮಣ್ಣಿನ ಲಕ್ಷಣ, ಜಲ ಸಂಪನ್ಮೂಲ ಹಾಗೂ ಬಳಕೆಯಲ್ಲಿ ಕಂಡುಬರುವ ಪ್ರಾದೇಶಿಕ ಭಿನ್ನತೆ, ರೂಢಿಗತವಾಗಿರುವ ವ್ಯವಸಾಯಪದ್ಧತಿಯನ್ನು ತಿಳಿಯಲು ನೆರವಾಗುತ್ತವೆ.

ದಾವಣಗೆರೆ ಜಿಲ್ಲಾ ಕೃಷಿ ಪದ್ಧತಿಯನ್ನು ಭೂವಿಸ್ತಾರದ ಹಿನ್ನೆಲೆಯಲ್ಲಿ 3 ವ್ಯವಸಾಯ ಪ್ರದೇಶಗಳನ್ನಾಗಿ ಮಾಡಿಕೊಳ್ಳಲಾಗಿದೆ. ಈ ವಿಂಗಡಣೆಗೆ ಬಳಸಲಾಗಿರುವ ಆಧಾರಗಳೆಂದರೆ

1. ಮಳೆಯ ಪ್ರಮಾಣ, ಹಂಚಿಕೆ ಹಾಗೂ ಋತುಮಾನ
2. ಮಣ್ಣಿನ ವಿಧಗಳು
3. ಭೂ ಸ್ವರೂಪಗಳು
4. ಉತ್ಪಾದಿಸುವ ಬೆಳೆಗಳು, ಮಾರುಕಟ್ಟೆ ಹಾಗೂ ವ್ಯವಸಾಯ ಪದ್ಧತಿ

**ದಾವಣಗೆರೆ : ವ್ಯವಸಾಯ ಪ್ರದೇಶಗಳ ಪಕ್ಷಿ ನೋಟ**

| ಕ್ರಮ ಸಂಖ್ಯೆ | ವಲಯವಾರು | ವ್ಯಾಪ್ತಿ ತಾಲ್ಲೂಕುಗಳು | ಮಳೆಯ ಪ್ರಮಾಣ ಮಿ.ಮೀ. | ಒಟ್ಟು ಭೌಗೋಳಿಕ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | ಗ್ರಾಮ ಪಂಚಾಯಿತಿಗಳು |
|---|---|---|---|---|---|
| 01 | ಉತ್ತರ ಒಣ ವಲಯ Northern Dry region | ಹರಪನಹಳ್ಳಿ | 752.1 | 101098 | 35 |
| 02 | ಕೇಂದ್ರ ಒಣ ವಲಯ The Central Dry Region | ದಾವಣಗೆರೆ | 658.1 | 92577 | 40 |
| | | ಹರಿಹರ | 632.5 | 56010 | 25 |
| | | ಜಗಳೂರು | 550.2 | 59081 | 22 |
| 03 | ದಕ್ಷಿಣ ಸ್ಥಿತ್ಯಂತರ ವಲಯ Southern Transitional Region | ಚನ್ನಗಿರಿ | 688.7 | 84187 | 61 |
| | | ಹೊನ್ನಾಳಿ | 625.5 | 67819 | 47 |

**ಉತ್ತರ ಒಣ ವಲಯ (ನಾರ್ದರ್ನ್ ಡ್ರೈ ರೀಜನ್) :** ಹರಪನಹಳ್ಳಿ ಇದು ಜಿಲ್ಲೆಯ ಅತ್ಯಂತ ವಿಸ್ತಾರವಾದ ವ್ಯವಸಾಯ ಪ್ರದೇಶವನ್ನು ಒಳಗೊಂಡಿರುವ ತಾಲ್ಲೂಕು. ಇದು ಉತ್ತರದಲ್ಲಿ ಹಡಗಲಿ, ಪೂರ್ವದಲ್ಲಿ ಕೂಡ್ಲಿಗೆ ಮತ್ತು ಜಗಳೂರು, ದಕ್ಷಿಣ ಭಾಗದಲ್ಲಿ ದಾವಣಗೆರೆ ಹಾಗೂ ಹರಿಹರ, ಪಶ್ಚಿಮಕ್ಕೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನಿಂದ ಸುತ್ತುವರಿದಿದೆ. ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣ 1430.4 ಚ.ಕಿ.ಮೀ. ಇದ್ದು, 35 ಗ್ರಾಮ ಪಂಚಾಯಿತಿಗಳನ್ನು ಹಾಗೂ ವಾರ್ಷಿಕ ಸರಾಸರಿ 752.1 ಮಿ.ಮೀ. ಮಳೆ ಬೀಳುತ್ತದೆ. ಇದು ಎತ್ತರದ ಪ್ರದೇಶದಲ್ಲಿದ್ದು, ಉತ್ತರದ ಇಳಿಜಾರಿನಲ್ಲಿ ಕಲ್ಲಳ್ಳಿಗುಡ್ಡ ಶ್ರೇಣಿ, ಮುಂದೆ ಕವಲೊಡೆದು ತೆಲಗಿ ಹರಪನಹಳ್ಳಿಗುಡ್ಡ ಸಮೂಹವಾಗಿ ತಾಲ್ಲೂಕಿನ ದಕ್ಷಿಣದಲ್ಲಿ ಉಚ್ಚಂಗಿದುರ್ಗದವರೆಗೂ ಸಾಗಿದೆ. ಉತ್ತರದಲ್ಲಿ ಬಾಗುಳಿ, ದಕ್ಷಿಣದಲ್ಲಿ ಉಚ್ಚಂಗಿದುರ್ಗಗಳಂತಹ ಮಹತ್ವದ ಸ್ಥಳಗಳನ್ನು ಹೊಂದಿದೆ. ಉತ್ತಮ ಮಳೆಗಾಲದಲ್ಲಿ ಅರಸಿಕೆರೆ, ಕಸಬಾ ಹೋಬಳಿಗಳು ಹೆಚ್ಚಿಗೆ ಮೆಕ್ಕೆ ಜೋಳವನ್ನು ಬೆಳೆಯುತ್ತಾರೆ. ಶೇಂಗಾ, ಹೆಸರು, ನವಣೆಗಳಂತಹ ಪಾರಂಪರಿಕ ಬೆಳೆಗಳನ್ನು, ಕಡಿಮೆ ಮಳೆಬೀಳುವ ತೆಲಗಿ ಮತ್ತು ಚಿಗಟೇರಿ ಹೋಬಳಿಗಳು ಮೆಕ್ಕೆ ಜೋಳ ಹೆಸರಾಗಿದೆ.

**ಕೇಂದ್ರ ಒಣ ವಲಯ (ಸೆಂಟ್ರಲ್ ಡ್ರೈ ರೀಜನ್) :** ದಾವಣಗೆರೆ ಜಿಲ್ಲೆಯ 2ನೆಯ ವ್ಯವಸಾಯದ ಭೂಪ್ರದೇಶವನ್ನು ಒಳಗೊಂಡಿರುವ ತಾಲ್ಲೂಕು. ಉತ್ತರದಲ್ಲಿ ಹರಪನಹಳ್ಳಿ ಪೂರ್ವದಲ್ಲಿ ಜಗಳೂರು, ಪಶ್ಚಿಮದಲ್ಲಿ ಹರಿಹರ ಮತ್ತು ಹೊನ್ನಾಳಿ ಹಾಗೂ ದಕ್ಷಿಣ ಭಾಗದಲ್ಲಿ ಚನ್ನಗಿರಿ ಮತ್ತು ಹೊಳಲ್ಕೆರೆ ತಾಲ್ಲೂಕುಗಳಿಂದ ಆವರಿಸಿಕೊಂಡಿದೆ. ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣವು 994.1 ಚ.ಕಿ.ಮೀ. ಇದ್ದು, 40 ಗ್ರಾಮ ಪಂಚಾಯಿತಿಗಳನ್ನು ವಾರ್ಷಿಕ ಸರಾಸರಿ 658.1 ಮಿ.ಮೀ. ಮಳೆ ಬೀಳುತ್ತದೆ. ಸಮತಟ್ಟಾದ ಮಧ್ಯಭಾಗದಲ್ಲಿದ್ದರೂ ವಾರ್ಷಿಕವಾಗಿ ಹದಮಳೆ, ವೈವಿಧ್ಯಮಯವಾದ ಬೆಳೆಗಳ ಭೂ ಸ್ವರೂಪವನ್ನು ಒಳಗೊಂಡಿರುವ ಆನಗೋಡು ಮತ್ತು ಮಾಯಕೊಂಡ ಹೋಬಳಿಗಳಿವೆ. ಬಹುತೇಕ ನೀರಾವರಿ ಸೌಲಭ್ಯವನ್ನು ಪಡೆದು ಬತ್ತ, ಕಬ್ಬು, ಹತ್ತಿ, ಮೆಕ್ಕೆಜೋಳ ಇತ್ಯಾದಿ ಬೆಳೆಗಳ ಇಳುವರಿಯಲ್ಲಿ ನೂತನ ತಾಂತ್ರಿಕ ಕೌಶಲ್ಯತೆಗಳ ಅಳವಡಿಕೆಯಲ್ಲಿ ತಾಲ್ಲೂಕಿನ ಪಾತ್ರ ಬಹುಮುಖ್ಯವಾಗಿದೆ.

ಹರಿಹರವು ಜಿಲ್ಲೆಯ 6 ನೆಯ ಮತ್ತು ಚಿಕ್ಕ ವ್ಯವಸಾಯದ ಭೂಪ್ರದೇಶವನ್ನು ಒಳಗೊಂಡಿರುವ ತಾಲ್ಲೂಕು. ಉತ್ತರದಲ್ಲಿ ಹರಪನಹಳ್ಳಿ, ದಕ್ಷಿಣದಲ್ಲಿ ಹೊನ್ನಾಳಿ, ಪೂರ್ವದಲ್ಲಿ ದಾವಣಗೆರೆ ಹಾಗೂ ಪಶ್ಚಿಮದಲ್ಲಿ ರಾಣೆಬೆನ್ನೂರು ಮತ್ತು ಹಿರೆಕೆರೂರು ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ಇದರ ಭೌಗೋಳಿಕ ವಿಸ್ತೀರ್ಣ 498.6 ಚ.ಕಿ.ಮೀ. ಇದ್ದು, 25 ಗ್ರಾಮ ಪಂಚಾಯಿತಿಗಳು ಹಾಗೂ ವಾರ್ಷಿಕ ಸರಾಸರಿ 632.5 ಮಿ.ಮೀ. ಮಳೆ ಬೀಳುತ್ತದೆ. ಮೈದಾನ ಪ್ರದೇಶ, ಕೆಂಪು ಮಿಶ್ರಿತ ಕಂದು ಮಣ್ಣಿನಿಂದ ಕೂಡಿದೆ. ಭದ್ರಾಜಲಾಶಯ ಯೋಜನೆಯ ನೀರಾವರಿಗೆ ಅನುಕೂಲವಾಗಿದೆ. ದಾವಣಗೆರೆ ಮತ್ತು ಮಲೇಬೆನ್ನೂರು ಶಾಖಾ

ಕಾಲುವೆಗಳ ನೀರು ಪಡೆಯುತ್ತಿರುವ ಹರಿಹರ, ಬಾತಿ, ಐರಣಿಗುಡ್ಡ ಹಾಗೂ ಗುಡ್ಡದ ಕೋಮರನಹಳ್ಳಿ, ಇನ್ನೂ ಮುಂತಾದ ಪ್ರದೇಶಗಳಿವೆ. ಈ ಭಾಗವು ಸಂಪೂರ್ಣ ಬೆಳೆ ವೈವಿಧ್ಯತೆಯನ್ನು ಕಳೆದುಕೊಂಡಿದೆ. ಎತ್ತ ನೋಡಿದರೂ ಬತ್ತ ಎನ್ನುವುದು ಒಂದೆಡೆಯಾದರೆ, ಸ್ಥಿರ ಉತ್ಪಾದಕತೆ, ಬತ್ತದ ಅವೈಜ್ಞಾನಿಕ ಬಿತ್ತನೆ ಮತ್ತು ಮಾರಾಟದಿಂದ ರೈತರು ಅನೇಕ ಸಂಕಷ್ಟಗಳಿಗೆ ಒಳಗಾಗಿದ್ದಾರೆ. ಸಿರಿವಂತಿಕೆಯನ್ನು ನೋಡಲು ಎಲೆ ಬಳ್ಳಿ ತೋಟ ಕಟ್ಟುವ, ನಿರ್ವಹಿಸುವ ಬೆಳ್ಳೂಡಿ, ಹನಗವಾಡಿ, ರಾಜನಹಳ್ಳಿಗಳು ಪ್ರಮುಖವಾಗಿವೆ. ರೈತರು ಸಾವಯವ ಮತ್ತು ವೈವಿಧ್ಯಮಯವಾದ ಬೆಳೆ ಕೃಷಿ ಪದ್ಧತಿಗೆ ಬದ್ಧವಾಗಿರುವುದು ತಾಲ್ಲೂಕಿನ ವಿಶೇಷತೆ.

ಜಗಳೂರು ಜಿಲ್ಲೆಯ 5ನೆಯ ವ್ಯವಸಾಯದ ಭೂಪ್ರದೇಶವನ್ನು ಒಳಗೊಂಡಿರುವ ತಾಲ್ಲೂಕು. ಉತ್ತರದಲ್ಲಿ ಕೂಡ್ಲಿಗಿ, ದಕ್ಷಿಣದಲ್ಲಿ ಚಿತ್ರದುರ್ಗ, ಪಶ್ಚಿಮದಲ್ಲಿ ದಾವಣಗೆರೆ ಮತ್ತು ಹರಪನಹಳ್ಳಿ ಹಾಗೂ ಪೂರ್ವದಲ್ಲಿ ಚಳ್ಳಕೆರೆ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ಭೌಗೋಳಿಕ ವಿಸ್ತೀರ್ಣ 955,27 ಚ.ಕಿ.ಮೀ. 22 ಗ್ರಾಮ ಪಂಚಾಯಿತಿಗಳಿವೆ. ವಾರ್ಷಿಕ ಸರಾಸರಿ 550.2 ಮಿ.ಮೀ. ಮಳೆಯಾಗುತ್ತದೆ. ಉಬ್ಬುದಿಣ್ಣೆ, ತಗ್ಗುಗಳಿಂದ ಕೂಡಿದ ಮೈದಾನ ಪ್ರದೇಶದಿಂದ ಕೂಡಿದೆ. ವಾಯವ್ಯ ಭಾಗದಲ್ಲಿ ಚಿಕ್ಕ ಚಿಕ್ಕ ಗುಡ್ಡಗಳಾದ ಕೊಡದಗುಡ್ಡ, ಕೊಣಚಗಲ್‌ರಂಗನ ಬೆಟ್ಟ ಮತ್ತು ಹಾಲೇಕಲ್ ಗುಡ್ಡಗಳಿಂದ ಆವರಿಸಿಕೊಂಡಿದೆ. ಕೆಲವು ಭಾಗದಲ್ಲಿ ಫಲವತ್ತಾದ ಭೂಮಿ ಮಾತ್ರ ಇದೆ. ಉಳಿದೆಲ್ಲ ಭಾಗದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿ ಇದೆ. ಈಶಾನ್ಯ ಹಾಗೂ ನೈಋತ್ಯ ಭಾಗದಲ್ಲಿ ಎತ್ತರದ ಭೂ ಪ್ರದೇಶವಿದ್ದು, ಈ ಪ್ರಾಂತ್ಯದಿಂದ ವಾಯವ್ಯ ಮತ್ತು ಆಗ್ನೇಯ ಭಾಗಕ್ಕೆ ಹರಿಯುವ ಚಿಕ್ಕ ಚಿಕ್ಕ ಹಳ್ಳ ಮತ್ತು ಕೆರೆಗಳಿವೆ. ಆನಗೋಡುಕೆರೆ, ಬಿಳಿಚೋಡುಕೆರೆ, ತುಪ್ಪದಹಳ್ಳಿಗಳ ನೀರಾವರಿಗೆ ಅನುಕೂಲವಾಗಿವೆ.

ಬಿಳಿಚೋಡು ಹೋಬಳಿ ಭಾಗದ ಹಾಲೇಕಲ್ಲು ಮತ್ತಿತರ ಗ್ರಾಮಗಳು ಸಾವಯವ ಕೃಷಿ ಆಧಾರಿತದಿಂದ ಆನಗೋಡು ಹೋಬಳಿಯಲ್ಲಿ ಮೆಕ್ಕೆಜೋಳ ಮತ್ತು ಶೇಂಗಾ ಬೆಳೆಗಳನ್ನು ಬೆಳೆಯುತ್ತಾರೆ. ಜಗಳೂರು ಸೊಕ್ಕೆ ಹೋಬಳಿಗಳ ಬಹುತೇಕ ಭಾಗಗಳಲ್ಲಿ ರಾಗಿ, ಜೋಳ, ಮೆಕ್ಕೆಜೋಳ, ಶೇಂಗಾ ಹಾಗೂ ಬಿ.ಟಿ. ಹತ್ತಿ ಬೆಳೆ.

**ದಕ್ಷಿಣ ಸ್ಥಿತ್ಯಂತರ ವಲಯ (ಸದರನ್ ಟ್ರಾನ್ಸಿಷನಲ್ ರೀಜನ್) :** ಚನ್ನಗಿರಿ 3ನೆಯ ವ್ಯವಸಾಯದ ಭೂ ಪ್ರದೇಶವನ್ನು ಒಳಗೊಂಡಿರುವ ತಾಲ್ಲೂಕು. ಉತ್ತರದಲ್ಲಿ ದಾವಣಗೆರೆ, ದಕ್ಷಿಣದಲ್ಲಿ ತರೀಕೆರೆ ಪೂರ್ವದಲ್ಲಿ ಹೊಳಲ್ಕೆರೆ ಹಾಗೂ ಪಶ್ಚಿಮದಲ್ಲಿ ಹೊನ್ನಾಳಿ ಮತ್ತು ಭದ್ರಾವತಿ ತಾಲ್ಲೂಕುಗಳಿಂದ ಆವರಿಸಲ್ಪಟ್ಟಿದೆ. ಭೌಗೋಳಿಕ ವಿಸ್ತೀರ್ಣ 1209.7 ಚ.ಕಿ.ಮೀ. 61 ಗ್ರಾಮ ಪಂಚಾಯಿತಿಗಳಿವೆ. ವಾರ್ಷಿಕ ಸರಾಸರಿ 688.7 ಮಿ.ಮೀ. ಮಳೆ ಬೀಳುತ್ತದೆ. ಬಯಲು ಸೀಮೆ ಮೈದಾನ ಪ್ರದೇಶವಾಗಿದ್ದರೂ ಉತ್ತರ ವಾಯವ್ಯ ಭಾಗದಲ್ಲಿ ಫಲವತ್ತಾದ ಕಪ್ಪು ಮಣ್ಣು, ದಕ್ಷಿಣದಲ್ಲಿ ಕಪ್ಪು ಮಿಶ್ರಿತ ಕೆಂಪು ಮಣ್ಣು, ಉಳಿದ ಭಾಗದಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನ ಭೂಲಕ್ಷಣವನ್ನು ಒಳಗೊಂಡಿದೆ. ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಬೆಟ್ಟದ ಸಾಲುಗಳು, ಕೆಲವು ಹಳ್ಳ ತೊರೆಗಳು ಹರಿಯುತ್ತವೆ. ಉತ್ತರದಲ್ಲಿ ಹರಿಯುವ ಹರಿದ್ರಾನದಿ ಹರಿಹರದ ಬಳಿ ತುಂಗಭದ್ರೆಗೆ ಸಂಗಮವಾಗುತ್ತದೆ.

ಸೂಳೆಕೆರೆಯಿಂದ ನೀರಾವರಿಗೆ ಹೆಚ್ಚು ಅನುಕೂಲವಾಗಿದೆ. ಬತ್ತ, ಕಬ್ಬಿನ ಗದ್ದೆಗಳು ಸಮೃದ್ಧವಾಗಿವೆ. ತೋಟಗಾರಿಕೆಯ ಬೆಳೆಗಳು ಅಧಿಕವಾಗಿವೆ. ಇತರೆ ಬೆಳೆಯಾಗಿ ಜೋಳ, ರಾಗಿ, ಹತ್ತಿ, ಮೆಕ್ಕೆಜೋಳ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯುವುದಕ್ಕೆ ಯೋಗ್ಯ ಭೂಪ್ರದೇಶವಿದೆ. ಅಡಕೆ ಬೆಳೆಯು ಮೆಕ್ಕೆ ಜೋಳದ ಆರ್ಭಟದಲ್ಲಿ ತಾಲ್ಲೂಕು ತನ್ನ ಬೆಳೆವೈವಿಧ್ಯತೆಯನ್ನು ಕಳೆದುಕೊಂಡಿದೆ. ಸಾವಯವ ಕೃಷಿಗೆ ಯುವಕರ ಪಾದಾರ್ಪಣೆ ಮಾಡಿದ ಕಾರಣ, ಸಂತೆಬೆನ್ನೂರು ಸಮೀಪದ ಗೆದ್ಲಹಟ್ಟಿಯಂತಹ ಕುಗ್ರಾಮಗಳಲ್ಲಿ ವೈವಿಧ್ಯಮಯವಾದ ಬೆಳೆ ಪದ್ಧತಿ ಅಳವಡಿಕೆಯಾಗಿ ತಾಲ್ಲೂಕಿಗೆ ವಿಶೇಷ ಮಹತ್ವ ದೊರೆತಿದೆ.

ಜಿಲ್ಲೆಯಲ್ಲಿ ವ್ಯವಸಾಯದ ಭೂಪ್ರದೇಶವನ್ನು ಒಳಗೊಂಡಿರುವ ತಾಲ್ಲೂಕುಗಳಲ್ಲಿ ಹೊನ್ನಾಳಿ ನಾಲ್ಕನೆಯ ಸ್ಥಾನದಲ್ಲಿದೆ. ಉತ್ತರದಲ್ಲಿ ದಾವಣಗೆರೆ ಮತ್ತು ಹರಿಹರ, ದಕ್ಷಿಣದಲ್ಲಿ ಭದ್ರಾವತಿ ಮತ್ತು ಶಿವಮೊಗ್ಗ, ಪೂರ್ವದಲ್ಲಿ ಚನ್ನಗಿರಿ ಹಾಗೂ ಪಶ್ಚಿಮದಲ್ಲಿ ಹಿರೆಕೆರೂರು, ರಾಣೆಬೆನ್ನೂರು ಹಾಗೂ ಶಿಕಾರಿಪುರ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ಭೌಗೋಳಿಕ ವಿಸ್ತೀರ್ಣ 887.9; ಚ.ಕಿ.; 47 ಗ್ರಾ ಪಂಚಾಯಿತಿಗಳಿವೆ. ವಾರ್ಷಿಕ ಸರಾಸರಿ 625.5 ಮಿ.ಮೀ. ಮಳೆ ಬೀಳುತ್ತದೆ. ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಮರಳು ಮಿಶ್ರಿತ ಜೇಡಿ ಮಣ್ಣಿನ ಭೂಮಿಯಾಗಿದೆ. ತುಂಗಾ ಮತ್ತು ಭದ್ರಾನದಿಗಳು ಶಿವಮೊಗ್ಗಕ್ಕೆ 16 ಕಿ.ಮೀ. ದೂರದಲ್ಲಿರುವ ಕೂಡಲಿಯಲ್ಲಿ ಸಂಗಮವಾಗಿ, ತುಂಗಭದ್ರಾನದಿಯಾಗಿ ಹೊನ್ನಾಳಿ ಪ್ರಾಂತ್ಯದ ಮುಖ್ಯನದಿಯಾಗಿದೆ. ಮಳಲಿ ಗ್ರಾಮದ ಪೂರ್ವದಿಂದ ಹೊನ್ನಾಳಿ ತಾಲ್ಲೂಕಿಗೆ ಪ್ರವೇಶಿಸಿ, ವಾಯವ್ಯ ಹಾಗೂ ಆಗ್ನೇಯಾಭಿಮುಖವಾಗಿ ಪಶ್ಚಿಮ ಮತ್ತು ಉತ್ತರಾಭಿಮುಖವಾಗಿ ಪೂರ್ವಕ್ಕೆ ತಿರುಗಿ, ಹೊನ್ನಾಳಿಯ ಅಂಚಿನಲ್ಲಿ ಹರಿದು ಹಾವೇರಿ ಜಿಲ್ಲೆ ಹಿರೇಕೇರೂರು ತಾಲ್ಲೂಕನ್ನು ಬೇರ್ಪಡಿಸಿ ತಾಲ್ಲೂಕಿನ ಗಡಿಯಾಗಿ ಹರಿಯುತ್ತದೆ.

ಹದವಾದ ಜಡಿ ಮಳೆಯಿಂದ ತಾಲ್ಲೂಕಿನ ಸುತ್ತಲೂ ಶಿವಮೊಗ್ಗ ಜಿಲ್ಲೆಯ ನಯವಂತಿಕೆಯೊಂದಿಗೆ ಬಾಳೆ, ಅಡಕೆ ಹಾಗೂ ದಪ್ಪ ಬತ್ತದ ಬೆಳೆಯೊಂದಿಗೆ ಹಿರೇಕೆರೂರು ಮತ್ತು ರಾಣೆಬೆನ್ನೂರು ತಾಲ್ಲೂಕುಗಳ ಬೆಳೆಯು ವೈವಿಧ್ಯತೆಯೊಂದಿಗೆ ಗರಿಷ್ಠ ಮಟ್ಟದ ಉತ್ಪಾದಕತೆಯನ್ನು ಪಡೆದುಕೊಂಡಿದೆ. ಒಂದು ಗುಂಟೆಗೆ ಒಂದು ಚೀಲ ಮೆಕ್ಕೆ ಜೋಳ, ಒಂದು ಚೀಲ ಶೇಂಗಾ ಬೆಳೆಯುವ ರೈತರಿದ್ದಾರೆ. ಅದೂ ಸಾವಯವ ಕೃಷಿಯಲ್ಲಿ ಎಂಬ ಅಚ್ಚರಿ ಒಂದೆಡೆಯಾದರೆ ಬೆಳೆಗುತ್ತಿ ಹೋಬಳಿ 'ಬೆಳೆ ವೈವಿಧ್ಯತೆಯಿಂದ ಆರ್ಥಿಕ ಸಬಲತೆ' ಎಂಬ ಧ್ಯೇಯ ವಾಕ್ಯದೊಂದಿಗೆ ಜಿಲ್ಲೆಗೆ ತನ್ನದೆ ಆದ ಕೊಡುಗೆ ನೀಡಿರುವ ತಾಲ್ಲೂಕಾಗಿದೆ.

**ಅರಣ್ಯ (ಸಸ್ಯಸಂಪತ್ತು)**

ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶವು (2009) 742 ಚ.ಕಿ.ಮೀ. ಇದೆ. ಜಿಲ್ಲೆಯ ಒಟ್ಟು ಭೌಗೋಳಿಕ ಕ್ಷೇತ್ರದ ಶೇ 12.52 ರಷ್ಟಿದೆ ಇದರಿಂದ ಅರಣ್ಯ ಪ್ರದೇಶವು ಕಡಿಮೆ ಇರುವುದಲ್ಲದೆ, ಇದರ ಹಂಚಿಕೆಯ ಮೇಲೆ ಭೂಸ್ವರೂಪ ಹಾಗೂ ಮನುಷ್ಯನ ಪ್ರಭಾವವಾಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಜಿಲ್ಲೆಯ 6018 ಚ.ಕಿ.ಮೀ. ಭೌಗೋಳಿಕ

ವಿಸ್ತೀರ್ಣದಲ್ಲಿ 3.42 ಲಕ್ಷ ಹೆಕ್ಟೇರ್‌ನಷ್ಟು ಕೃಷಿಭೂಮಿ ಇದೆ. ಇದರಲ್ಲಿ 43 ಸಾವಿರ ಹೆಕ್ಟೇರ್‌ನಷ್ಟು ಅರಣ್ಯಪ್ರದೇಶದಿಂದ ಆವೃತ್ತವಾಗಿದೆ. ದಾವಣಗೆರೆ ತಾಲ್ಲೂಕಿನ ಆನಗೋಡು ಅರಣ್ಯಪ್ರದೇಶದ ವ್ಯಾಪ್ತಿಯಲ್ಲಿ ಇಂದಿರಾಪ್ರಿಯದರ್ಶಿನಿ ಪುಟ್ಟಪ್ರಾಣಿ ಸಂಗ್ರಹಾಲಯವಿದೆ., 2342 ಚನ್ನಗಿರಿ ತಾಲ್ಲೂಕಿನಲ್ಲಿ ಕುಕ್ಕವಾಡೇಶ್ವರಿ ರಕ್ಷಿತ ಅರಣ್ಯ ಪ್ರದೇಶವಿದ್ದು, ಇದು ಸಾಮಾಜಿಕ ಅರಣ್ಯ ಪ್ರದೇಶವಾಗಿ ಸುಮಾರು 42 ಸಾವಿರ ಹೆಕ್ಟೇರ್‌ಗಳವರೆಗೆ ವಿಸ್ತಾರಗೊಂಡಿದೆ.

ಜಗಳೂರು ತಾಲ್ಲೂಕಿನಲ್ಲಿ 129.8 ಚ.ಕಿ.ಮೀ. ಅರಣ್ಯ ಪ್ರದೇಶ ಹಾಗೂ 172 ಹೆಕ್ಟೇರ್‌ಗಳವರೆಗೆ ಆವರಿಸಿರುವ ರಂಗಯ್ಯನದುರ್ಗ, ಗುಹೇಶ್ವರಗುಡ್ಡ ಮೀಸಲು ಹಾಗೂ ಅಣಬೂರು ಅರಣ್ಯಪ್ರದೇಶವಿದೆ. ಹರಿಹರ ತಾಲ್ಲೂಕಿನಲ್ಲಿ 46.08. ಚ.ಕಿ.ಮೀ. ವ್ಯಾಪ್ತಿಯಲ್ಲಿ ಕೊಂಡಜ್ಜಿ ಅರಣ್ಯಪ್ರದೇಶವಿದೆ. ಹೊನ್ನಾಳಿ ತಾಲ್ಲೂಕು 53.2 ಚ.ಕಿ.ಮೀ. ಅರಣ್ಯಪ್ರದೇಶ ಹಾಗೂ 196 ಹೆಕ್ಟೇರ್‌ವರೆಗೆ ಸಾಮಾಜಿಕ ಅರಣ್ಯ ಪ್ರದೇಶದಿಂದ ಕೂಡಿದೆ.

ಮೇಲಿನ ಕೋಷ್ಟಕದಲ್ಲಿ ಸೂಚಿಸಿರುವಂತೆ ದಾವಣಗೆರೆ ತಾಲ್ಲೂಕು ಅತಿ ಹೆಚ್ಚು ನೀರಾವರಿಕಾಲುವೆಗಳನ್ನು ಹೊಂದಿದೆ. ಚನ್ನಗಿರಿ ತಾಲ್ಲೂಕು ಕೆರೆ ನೀರಾವರಿಗೆ ಪ್ರಸಿದ್ಧಿ. ಹೊನ್ನಾಳಿ ತಾಲ್ಲೂಕು ಅತಿ ಹೆಚ್ಚು ಬಾವಿಗಳಿಂದ ಮತ್ತು ದಾವಣಗೆರೆ ತಾಲ್ಲೂಕು ಅತಿ ಹೆಚ್ಚು ಕೊಳವೆ ಬಾವಿಗಳಿಂದ ಹರಿಹರ ತಾಲ್ಲೂಕು ಅತಿ ಹೆಚ್ಚು ಏತನೀರಾವರಿಯಿಂದ ಅವಲಂಬಿತವಾಗಿರುವುದನ್ನು ಕೋಷ್ಟಕವು ಸೂಚಿಸುತ್ತದೆ.

ಒಟ್ಟಾರೆ ಮೇಲಿನ ಅಂಕಿ ಅಂಶಗಳ ಆಧಾರದಿಂದ ಜಗಳೂರು ತಾಲ್ಲೂಕು ಅತೀ ಕಡಿಮೆ ನೀರಾವರಿ ಸೌಲಭ್ಯವನ್ನು ಹೊಂದಿರುವುದನ್ನು ಕೋಷ್ಟಕವು ಸೂಚಿಸುತ್ತದೆ.

**ತೋಟಗಾರಿಕೆ ಬೆಳೆಗಳು :** ಬೆಳೆಗಳಲ್ಲಿ ಹಲವಾರು ವಿಧಗಳಿವೆ. ಅವುಗಳೆಂದರೆ ಆಹಾರ ಬೆಳೆಗಳು, ವಾಣಿಜ್ಯಬೆಳೆಗಳು ಹಾಗೂ ತೋಟಗಾರಿಕೆ ಬೆಳೆಗಳು. ಹವಾಗುಣ, ಭೂಗುಣ, ಕೃಷಿಯ ವೈವಿಧ್ಯತೆ ನೀರಾವರಿ ಸೌಲಭ್ಯಗಳ ಮಹತ್ವದಂತೆಯೇ ತೋಟಗಾರಿಕೆಯ ವೈಶಿಷ್ಟ್ಯತೆಯನ್ನು

ಕೋಷ್ಟಕ 4

| ಕ್ರಮ ಸಂಖ್ಯೆ | ತಾಲ್ಲೂಕುಗಳು | ಕಾಲುವೆಗಳು | ಕೆರೆಗಳು | ಬಾವಿಗಳು | ಕೊಳವೆ ಬಾವಿಗಳು | ಏತ ನೀರಾವರಿ |
|---|---|---|---|---|---|---|
| 01 | ಚನ್ನಗಿರಿ | 11050 | 739 | - | 19120 | 889 |
| 02 | ದಾವಣಗೆರೆ | 19862 | - | - | 23625 | - |
| 03 | ಹರಪನಹಳ್ಳಿ | 2726 | 317 | 212 | 15139 | 2526 |
| 04 | ಹರಿಹರ | 15563 | - | - | 6232 | 8498 |
| 05 | ಹೊನ್ನಾಳಿ | 9257 | 515 | 217 | 7175 | 3987 |
| 06 | ಜಗಳೂರು | - | - | - | 9449 | - |
| ಒಟ್ಟು | | **58458** | **1571** | **42** | **80740** | **15900** |

**ಆಧಾರ :** (ದಾವಣಗೆರೆ ಅಂಶಗಳ ನೋಟ 2010-11)

**ಕುರುಚಲು ವನ :** ಹರಪನಹಳ್ಳಿ ತಾಲ್ಲೂಕಿನಲ್ಲಿ 54.708 ಎಕರೆಯ ವ್ಯಾಪ್ತಿಯಲ್ಲಿ ಅರಣ್ಯವಿದೆ. ಇದು ಸಂಪೂರ್ಣವಾಗಿ ಕುರುಚಲು ಕಾಡಿನಿಂದ ಕೂಡಿದೆ. ಅಲಗಿಲವಾಡ 3300, ನೀಲಗುಂದ 1887 ಯ್ಯಾರ್ಡ್ ಅರಣ್ಯ 10,000. ಉಚ್ಚಂಗಿದುರ್ಗ 6500, ತೊಗರಿಕಟ್ಟೆ 3300, ಸೋಗಿ 400, ಜಾಜಿಕಲ್‌ಗುಡ್ಡ 10,000 ಎಕರೆಗಳಷ್ಟು ಪ್ರದೇಶಗಳಲ್ಲಿ ವಿಸ್ತಾರಗೊಂಡಿರುವುದು ತಾಲ್ಲೂಕಿನ ಅರಣ್ಯಪ್ರದೇಶದ ವೈಶಿಷ್ಟ್ಯವಾಗಿದೆ. ಇಲ್ಲಿ ಕರಡಿ, ಚಿರತೆ, ಕೃಷ್ಣಮೃಗ, ನವಿಲು, ತೋಳ ಇನ್ನೂ ಮುಂತಾದ ಪ್ರಾಣಿ, ಪಕ್ಷಿಗಳು ವಾಸವಾಗಿವೆ.

**ನೀರಾವರಿ ಸೌಕರ್ಯಗಳು**

ಜಿಲ್ಲೆಯಲ್ಲಿ ಲಭ್ಯವಿರುವ ನೀರಾವರಿಯ ಮೂಲಗಳನ್ನು ವಿವಿಧ ಭಾಗಗಳಾಗಿ ವಿಂಗಡಿಸಬಹುದಾಗಿದೆ., ಅವುಗಳೆಂದರೆ ಕಾಲುವೆಗಳು, ಕೆರೆಗಳು, ಬಾವಿಗಳು, ಹಾಗೂ ಏತ ನೀರಾವರಿಗಳು. ಕೊಳವೆ ಬಾವಿಗಳು ಅವುಗಳ ವಿಸ್ತಾರ ವಿವರಣೆಯನ್ನು ಕೆಳಗಿನ ಕೋಷ್ಟಕದಲ್ಲಿ ಜಿಲ್ಲೆಯ ತಾಲ್ಲೂಕುವಾರು ಮಾಹಿತಿಯನ್ನು ಹೆಕ್ಟೇರ್‌ಗಳಲ್ಲಿ ನೀಡಲಾಗಿದೆ.

ಪಡೆದುಕೊಂಡಿದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದಲ್ಲಿ, ಕೃಷಿ ಸಾಗುವಳಿ 4.237 ಲಕ್ಷ ಹೆಕ್ಟೇರ್. ಇದರಲ್ಲಿ ತೋಟಗಾರಿಕೆಯ ಬೆಳೆಗಳ ವಿಸ್ತೀರ್ಣ 72.33 ಸಾವಿರ ಹೆಕ್ಟೇರ್. ಇದು ಜಿಲ್ಲೆಯ ಸಾಗುವಳಿ ಪ್ರದೇಶದ ಶೇ. 17.07 ರಷ್ಟಾಗಿದೆ. ಬೆಳೆಗಳ ಪಟ್ಟಿ ಇಂತಿದೆ.

**ಹಣ್ಣಿನ ಬೆಳೆಗಳು**

| | | |
|---|---|---|
| ಮಾವು | - | 2852 |
| ಬಾಳೆ | - | 4887 |
| ಸಪೋಟ | - | 876 |
| ಪಪ್ಪಾಯಿ | - | 148 |
| ದಾಳಿಂಬೆ | - | 133 |
| ಮೋಸಂಬಿ | - | 411 |
| ಇತರೆ | - | 172 |
| **ಒಟ್ಟು** | **-** | **10479** |

**ತೋಟದ ಬೆಳೆಗಳು**

| | | |
|---|---|---|
| ತೆಂಗು | - | 13160 |
| ಅಡಕೆ | - | 35432 |
| ವೀಳ್ಯಾದೆಲೆ | - | 1016 |
| ಕೊಕೋ | - | 213 |
| ತಾಳೆಬೆಳೆ | - | 700 |
| ಇತರೆ | - | 97 |
| ಒಟ್ಟು | - | 50618 |

**ಸಂಬಾರ ಬೆಳೆಗಳು**

| | | |
|---|---|---|
| ಹುಣಸೆ | - | 84 |
| ಶುಂಠಿ | - | 39 |
| ಅರಿಸಿನ | - | 97 |
| ಬೆಳ್ಳುಳ್ಳಿ | - | 44 |
| ಮೆಣಸಿನಕಾಯಿ | - | 58 |
| ಧನಿಯಾ | - | 47 |
| ಇತರೆ | - | 63 |
| **ಒಟ್ಟು** | **-** | **432** |

**ತರಕಾರಿ ಬೆಳೆಗಳು**

| | | |
|---|---|---|
| ಟೊಮ್ಯಾಟೊ | - | 3682 |
| ಈರುಳ್ಳಿ | - | 4769 |
| ಮೆಣಸಿನಕಾಯಿ | - | 952 |
| ಬದನೆ | - | 265 |
| ಬೆಂಡೆಕಾಯಿ | - | 348 |
| ಬೀನ್ಸ್ | - | 412 |
| ಇತರೆ | - | 1972 |
| ಒಟ್ಟು | - | 12400 |

**ಹೂವಿನ ಬೆಳೆಗಳು**

| | | |
|---|---|---|
| ಚೆಂಡೂವು | - | 612 |
| ಮಲ್ಲಿಗೆ | - | 216 |
| ಸೇವಂತಿಗೆ | - | 364 |
| ಕನಕಾಂಬರ | - | 72 |
| ಗುಲಾಬಿ | - | 92 |
| ಇತರೆ | - | 56 |
| ಒಟ್ಟು | - | 1412 |

ಮೇಲಿನ ಎಲ್ಲಾ ಪಟ್ಟಿಗಳ ಅಂಕಿ ಅಂಶಗಳ ಆಧಾರದ ಮೇಲೆ ತೋಟಗಾರಿಕೆ ಬೆಳೆಗಳ ಉತ್ಪಾದನೆ 3.72 ಲಕ್ಷ ಟನ್‌ಗಳಷ್ಟಿದೆ. ಹಣ್ಣಿನ ಬೆಳೆಗಳ ವಿಸ್ತೀರ್ಣ 10479 ಹೆಕ್ಟೇರ್‌ಗಳಷ್ಟಿದ್ದು, ಉತ್ಪಾದನೆ 1.35 ಲಕ್ಷ ಟನ್, ತರಕಾರಿ ಬೆಳೆಗಳ ವಿಸ್ತೀರ್ಣ 12400 ಹೆಕ್ಟೇರ್‌ಗಳಷ್ಟಿದ್ದು, ಉತ್ಪಾದನೆ 1.92 ಲಕ್ಷಟನ್ ತೋಟದ ಬೆಳೆಗಳ ವಿಸ್ತೀರ್ಣ 50618 ಹೆಕ್ಟೇರ್‌ಗಳಷ್ಟಿದ್ದು ಉತ್ಪಾದನೆ 0.46 1412 ಹೆಕ್ಟೇರ್‌ಗಳಷ್ಟಿದ್ದು, ಉತ್ಪಾದನೆ 0.46 ಲಕ್ಷ ಟನ್ ಹೂವಿನ ಬೆಳೆಗಳ ವಿಸ್ತೀರ್ಣ 1412 ಹೆಕ್ಟೇರ್‌ಗಳಷ್ಟಿದ್ದು, ಉತ್ಪಾದನೆ 0.86 ಲಕ್ಷಟನ್, ಸಾಂಬಾರು ಬೆಳೆಗಳ ವಿಸ್ತೀರ್ಣ 432 ಹೆಕ್ಟೇರ್‌ಗಳಷ್ಟಿದ್ದು, ಉತ್ಪಾದನೆ 0.0081 ಲಕ್ಷ ಟನ್‌ನಷ್ಟು ಇದೆ.

**ಗೊಬ್ಬರಗಳು :** ಅಧಿಕ ಇಳುವರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಂಪ್ರದಾಯಿಕ ಮತ್ತು ರಾಸಾಯನಿಕ ಗೊಬ್ಬರಗಳನ್ನು ರೈತರು ಬಳಸುತ್ತಿದ್ದಾರೆ. ಜಿಲ್ಲೆಯಲ್ಲಿ ಇತ್ತೀಚೆಗೆ ಕೃಷಿ ಭೂಮಿಯಲ್ಲಿ ರಾಸಾಯನಿಕ ಗೊಬ್ಬರಗಳನ್ನು ಹೇರಳವಾಗಿ ಬಳಸುವುದನ್ನು ಕಾಣುತ್ತೇವೆ. ಸಾರಜನಕ, ರಂಜಕ, ಪೊಟ್ಯಾಷ್, NPK, SSP ಇನ್ನೂ ಮುಂತಾದ ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಿದ್ದಾರೆ. ಸಾಂಪ್ರದಾಯಿಕ ಗೊಬ್ಬರಗಳಾದ ಸಗಣಿ, ಗಂಜಳ, ಕಂಪೋಸ್ಟ್, ಗ್ರಾಮಸಾರ ಮತ್ತು ಚರಂಡಿರೊಚ್ಚು ಇನ್ನು ಮುಂತಾದವುಗಳ ಬಳಿಕ ಜಿಲ್ಲೆಯಲ್ಲಿ ಬಳಸಲಾಗುತ್ತಿದೆ.

**ಉಪಕರಣಗಳು :** ರೈತಾಪಿ ವರ್ಗದವರ ಬದುಕನ್ನು ಇಡಿಯಾಗಿ ಆವರಿಸಿಕೊಂಡಿರುವುದು ವ್ಯವಸಾಯ. ಇವರು ಮಾಡುವ ಎಲ್ಲಾ ದೈನಂದಿನ ಕೆಲಸಗಳು ವ್ಯವಸಾಯದ ಜೊತೆಗೆ ತಳುಕುಹಾಕಿಕೊಂಡಿರುತ್ತವೆ. ಆಧುನಿಕತೆಯಿಂದಾಗಿ ಹೊಸ ಹೊಸ ಯಂತ್ರಗಳು ಆವರಿಸಿಕೊಳ್ಳಲು ತೊಡಗಿದ್ದರೂ ಪರಂಪರೆಯ ಪದ್ಧತಿಗಳ ಮೇಲೆಯೆ ಅವುಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕೃಷಿಗೆ ಬಳಸುತ್ತಿರುವ ಉಪಕರಣಗಳಿಂದ ಗೋಚರಿಸುತ್ತದೆ. ನೇಗಿಲು, ನೊಗ, ಕುಂಟೆ, ಎಡೆಕುಂಟೆ, ಕೂರಿಗೆ, ಕುಳಗೂರಿಗೆ, ಕೊರಡು, ಸಡ್ಡೆ, ಹಲುಬೆ ಹಾಗೂ ಟ್ರ್ಯಾಕ್ಟರ್, ಟಿಲ್ಲರ್ ಇನ್ನು ಮುಂತಾದವುಗಳು ಉಳುಮೆಯ ಉಪಕರಣಗಳಾಗಿವೆ. ರೋಣಗಲ್ಲು, ನೆರೆಕೋಲು, ನಾಗರಬೆತ್ತ, ಗೋರು, ಕೈಹಲುಬೆ, ಮೊರ, ತೂರುಬುಟ್ಟಿ, ಮುಳ್ಳಗಡ್ಡಿ, ಬರಲು, ಇನ್ನೂ ಮುಂತಾದವುಗಳು ಒಕ್ಕಲು ಮಾಡುವ ಉಪಕರಣಗಳಾಗಿವೆ. ವ್ಯವಸಾಯ ಕ್ಷೇತ್ರದಲ್ಲಿ ಉಪಕರಣಗಳ ಜೊತೆಗೆ ಬಳಕೆಯಾಗುವ ಇನ್ನಿತರ ಉಪಕರಣಗಳ ಪಟ್ಟಿ ಇಂತಿದೆ :

**ಮಣ್ಣಿನ ಉಪಕರಣಗಳು :** ಕುಡಿಕೆ, ವಡೇವು, ಕೈಬಟ್ಟಲು, ಕುಂಬ, ಗಡಿಗೆ, ಗುಡಾಣ, ಮುಚ್ಚಳಿಕೆ, ಸೋರೆ, ಮಡಕೆ, ಕುಂಡಲ ಮುಂತಾದವು.

**ಕಲ್ಲಿನ ಉಪಕರಣಗಳು :**ರೋಣಗಲ್ಲು, ಗುಂಡುಕಲ್ಲು, ದುಂಡಿ, ಹಾಸುಗಲ್ಲು, ರುಬ್ಬುಗಲ್ಲು, (ಬಿಳಿಕಲ್ಲು) ಬೀಸುಕಲ್ಲು, ಮುಂತಾದವು.

**ಕಬ್ಬಿಣದ ಉಪಕರಣಗಳು :** ಗುದ್ದಲಿ, ಸಲಿಕೆ, ಸರಪಳಿ, ಕುಡ, ಹಾರೆ, ಕುಡುಗೋಲು, ತುಂಭಾರಿ, ಮಚ್ಚು, ಸುತ್ತಿಗೆ, ಪಾಂಡುವಾಳ ಮುಂತಾದವು.

**ನಾರಿನ ಉಪಕರಣಗಳು :** ಮಿಣೆ, ಬಂಡಿಮಿಣೆ, ಸೆರಗಿನಮಿಣೆ, ಕವಣೆ, ಜೋಲಿಹಗ್ಗ, ಮುಗುದಾಣ, ಪಟಗಣ್ಣಿ, ಮುಂತಾದವು.

**ಚರ್ಮದ ಉಪಕರಣಗಳು :** ಬಾರುಕೋಲು, ನೊಗಸುತ್ತು, ಗೆಜ್ಜೆಸರ, ತೊಗಲುಮಿಣೆ ಮುಂತಾದವು.

**ವ್ಯವಸಾಯೋತ್ಪನ್ನಗಳು :** ಬೀಜ, ಧಾನ್ಯ ತರಕಾರಿ ಹಾಗೂ ಹಣ್ಣುಗಳ ಸಂರಕ್ಷಣೆ ಕೃಷಿಯ ಒಂದು ಪ್ರಮುಖ ಭಾಗ. ಇದರಿಂದ ಮುಂದಿನ ಋತುವಿನಲ್ಲಿ ಬಿತ್ತನೆಗೆ ಅನುಕೂಲವಾಗುತ್ತದೆ. ಸಾಮಾನ್ಯವಾಗಿ ರೈತರು ಬೀಜ, ಧಾನ್ಯ, ತರಕಾರಿ ಹಾಗೂ ಹಣ್ಣುಗಳ ಸಂರಕ್ಷಣೆಗಾಗಿ ಕೆಲ ಸಾವಯವ ಮತ್ತು ಅತಿ ಕಡಿಮೆ ಖರ್ಚಿನ ವಿಧಾನಗಳನ್ನು ಅನುಸರಿಸುತ್ತಾರೆ. ಕಡಿಮೆ ಖರ್ಚಿನ ಜೊತೆಗೆ ಈ ವಿಧಾನಗಳು ಅತಿ ಉಪಯುಕ್ತವಾಗಿವೆ.

ಈ ಸಾಂಪ್ರದಾಯಿಕ ಮತ್ತು ಸಾವಯವ ವಿಧಾನಗಳನ್ನು ಈ ಕೆಳಗೆ ವಿವರಿಸಲಾಗಿದೆ.

| ಕ್ರಮ ಸಂಖ್ಯೆ ಬೀಜಗಳು | ಸಂರಕ್ಷಣೆಯ ವಿಧಾನ |
|---|---|
| ಜೋಳ | ಜೋಳದ ಬೀಜಗಳನ್ನು ಆಕಳ ಸಗಣಿಯ ಪುಡಿ ಜೊತೆ ಮಿಶ್ರಣ ಮಾಡಿ ಮುಂದಿನ ಬಿತ್ತನೆಗೆ ಇಡಲಾಗುತ್ತದೆ. ಸಗಣಿಯ ಪುಡಿ ಜೋಳದಲ್ಲಿರುವ ಹೆಚ್ಚುವರಿ ನೀರಿನ ಅಂಶವನ್ನು ಹೀರಿಕೊಂಡು ಸಂರಕ್ಷಿಸುತ್ತದೆ. |
| ದ್ವಿದಳ, ಧಾನ್ಯ ಬೀಜಗಳು | ಮಣ್ಣಿನ ಮಡಕೆ (ಅಡಕಲು)ಗಳಲ್ಲಿ ಬೂದಿ ಮತ್ತು ಬೇವಿನ ಎಲೆಗಳ ಅಥವಾ ಪುದೀನಾ ಸೊಪ್ಪು ಅಥವಾ ಬಜೆಯ ಬೇರುಗಳ ಜೊತೆಗಿಟ್ಟಾಗ ಬಹು ದಿನದವರೆಗೆ ಸಂರಕ್ಷಿಸಬಹುದು. |
| ತೊಗರಿ | ತೊಗರಿ ಬೀಜಗಳನ್ನು ಮಣ್ಣಿನಿಂದ ಲೇಪನೆ ಮಾಡಿ ಒಣಗಿಸಿ ಬಹುದಿನದವರೆಗೆ ಕೆಡದೆ ಇಡಬಹುದು. ಗುಂಟುರು- ಮೆಣಸಿನಕಾಯಿ ಕಾರದಪುಡಿಯೊಂದಿಗೆ ಮಿಶ್ರಣ ಮಾಡಿಟ್ಟರೆ ಕನಿಷ್ಠ ಒಂದು ವರ್ಷ ಕೆಡದಂತೆ ಇಡಬಹುದು. |
| ಕಡಲೆ | ಕಡಲೆ ಬೀಜಗಳನ್ನು ಹುರುಳಿ ಬೀಜದ ಜೊತೆ ಮಿಶ್ರಣ ಮಾಡಿ ಮುಂದಿನ ಬಿತ್ತನೆಯವರೆಗೆ ಸಂರಕ್ಷಿಸಲಾಗುತ್ತದೆ. |
| ಬತ್ತ | ಬತ್ತದ ಬೀಜಗಳನ್ನು ಸೆಣಬಿನ ಚೀಲದಲ್ಲಿ ಗಂಟು ಕಟ್ಟಿ ಬಣವೆಯ ಮಧ್ಯದಲ್ಲಿಟ್ಟರೆ ಯಾವುದೇ ಕೀಟ ಸೋಂಕುವುದಿಲ್ಲ. |
| ಸೂರ್ಯಕಾಂತಿ | ಒಣಗಿದ ಸೋರೆಕಾಯಲ್ಲಿ ಶೇಖರಣೆ ಮಾಡಿಟ್ಟರೆ, ಮುಂದಿನ ಬಿತ್ತನೆಯವರೆಗೆ ಕೆಡದಂತೆ ಇಡಬಹುದು. |
| ಜೋಳ ಮತ್ತು ಗೋವಿನ ಜೋಳ | ತೆನೆಗಳನ್ನು ಗಾಳಿಯಾಡುವ ಪ್ರದೇಶದಲ್ಲಿ ಇಳಿಬಿಡುವುದರಿಂದ ಬಹಳ ದಿನದವರೆಗೆ ಸಂರಕ್ಷಿಸಬಹುದು. |
| ಗೋಧಿ | ಗೋಧಿ ತುಂಬಿರುವ ಚೀಲವನ್ನು 'ಬಣವೆಯ' ಮಧ್ಯೆ ಇಟ್ಟರೆ ಕೀಟಗಳು ಹಾವಳಿ ಕಡಿಮೆಯಾಗುತ್ತದೆ. |
| ರಾಗಿ ಮತ್ತು ಜೋಳ | ಈ ಧಾನ್ಯಗಳನ್ನು ಬಿದಿರಿನಿಂದ ಮಾಡಿದ ಅಥವಾ ಮಡಕೆಗಳಲ್ಲಿ ಬೇವಿನ ಎಲೆಗಳ ಜೊತೆಗಿಟ್ಟರೆ ಬಹಳ ದಿನದವರೆಗೆ ಸಂರಕ್ಷಿಸಬಹುದು. ಹಗೆವು, ಕಣಜ, ಕೋಠಿ ಮತ್ತು ವಾಡೇವುಗಳನ್ನು ಬಳಸಲಾಗುತ್ತದೆ. |
| ದ್ವಿದಳ ಧಾನ್ಯಗಳು | ಕಾಳುಗಳನ್ನು ಕೊಯ್ಲಾದ ಅನಂತರ ಕಡು ಬಿಸಿಲಿನಲ್ಲಿ ಒಣಗಿಸಿ, ಪ್ಲಾಸ್ಟಿಕಿನ ಡ್ರಮ್ಮಿನಲ್ಲಿ ಶೇಖರಣೆ ಮಾಡಬೇಕು. ಡ್ರಮ್ಮಿನಲ್ಲಿ ಮೊದಲು ಮರಳಿನ ಪದರನ್ನು ಹಾಕಿ ಬಳಿಕ ಧಾನ್ಯ ಹಾಕಬೇಕು. ಮೇಲೆ ದಪ್ಪನೆಯ ಮರಳಿನ ಪದರನ್ನು ಹಾಕಿ ಮುಚ್ಚಬೇಕು. ಕೀಟಗಳು ಮರಳನ್ನು ತೂರಿ ಹೋಗಲು ಇದರಿಂದ ಸಾಧ್ಯವಿಲ್ಲ. ಅಲ್ಲದೆ ಸಂತಾನ ಅಭಿವೃದ್ಧಿ ಚಟುವಟಿಕೆ ಪೂರ್ತಿಯಾಗಿ ನಿಲ್ಲುತ್ತದೆ. ಈ ಧಾನ್ಯಗಳನ್ನು ಸಾಸಿವೆ ಎಣ್ಣೆಯಿಂದ ಸವರಿಟ್ಟರೆ ಬಹಳ ದಿನದವರೆಗೆ ಸಂರಕ್ಷಿಸಬಹುದು. |
| ಎಲ್ಲಾ ರೀತಿಯ ಧಾನ್ಯಗಳು | ಭೂಮಿಯಲ್ಲಿ ತೆಗ್ಗು ತೋಡಿ, ಹಗೆವು, ಪಳತ, ಕಣಜ, ವಾಡೆಗಳಲ್ಲಿ ಸಂರಕ್ಷಿಸ ಬಹುದು. ಎಲ್ಲ ಧಾನ್ಯಗಳಿಗೆ ಯಾವುದೇ ರೀತಿಯ ಅಪಾಯವಿರುವುದಿಲ್ಲ. ಇಲ್ಲಿ ಗಾಳಿ ಮತ್ತು ತೇವಾಂಶ ನಿಯಂತ್ರಣದಲ್ಲಿರುತ್ತದೆ. ಧಾನ್ಯಗಳನಿಟ್ಟು ಮಣ್ಣಿನಿಂದ ಮೆತ್ತುವುದರಿಂದ ಗಾಳಿ ಬರದ ಹಾಗೆ ಸಂರಕ್ಷಿಸಲಾಗುತ್ತದೆ. |

ತರಕಾರಿಗಳನ್ನು ಮರದಬುಟ್ಟಿ, ಚೀಲ, ತಟ್ಟೆಗಳು ಹಾಗೂ ರಟ್ಟಿನ ಡಬ್ಬಿಗಳಲ್ಲಿ ಸಂರಕ್ಷಣೆ ಮಾಡುವುದಲ್ಲದೆ ಹಣ್ಣುಗಳನ್ನು ಪೇಪರ್ ಪೆಟ್ಟಿಗೆ ಕಟ್ಟಿಗೆಯ ಪೆಟ್ಟಿಗೆ ತಟ್ಟೆಗಳಲ್ಲಿ ಶೇಖರಣೆ ಮಾಡಲಾಗುತ್ತದೆ.

**ಆಕರ ಗ್ರಂಥಗಳು**


ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ, ಡಾ. ರಂಗನಾಥ್, ವಿದ್ಯಾನಿಧಿ ಪ್ರಕಾಶನ, ಗದಗ, 2012

ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಡಾ. ಎಂ.ಜಿ. ಈಶ್ವರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1995.

ದಾವಣಗೆರೆ ಜಿಲ್ಲಾ ಅಂಕಿ ಅಂಶಗಳ ನೋಟ 2010-11 ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಚೇರಿ, ದಾವಣಗೆರೆ 2012

ದಾವಣಗೆರೆ ಇದು ನಮ್ಮ ಜಿಲ್ಲೆ, ಟಿ. ಗಿರಿಜ, ನೀಹಾರಿಕಾ ಪ್ರಕಾಶನ, ದಾವಣಗೆರೆ - 1, 2001

ಸತತ ಬೇಸಾಯ ಹಾಗೂ ಭೂಮಿ - ಜನ-ಪರಿಸರ ವಿಕಾಸ ಬಿ.ವಿ. ವೆಂಕಟರಾವ್, ಸ್ವಪ್ನ ಬುಕ್ ಹೌಸ್, 2003

ತೆನೆ ತೇರು, ದಾವಣಗೆರೆ ಹಬ್ಬ - 2012 ಸ್ಮರಣ ಸಂಪುಟ, (ಪ್ರ.ಸಂ.) ಮಲ್ಲಿಕಾರ್ಜುನ ಕಲಮರಹಳ್ಳಿ, ಜಿಲ್ಲಾಧಿಕಾರಿಗಳ ಕಾರ್ಯಾಲಯ ದಾವಣಗೆರೆ, 2012

ಪ್ರಾದೇಶಿಕ ಜಾನಪದ, (ಸಂ.) ಕುಮಾರಚಲ್ಯ, ಕನ್ನಡ ಭಾರತಿ, ಕುವೆಂಪು, ವಿ.ವಿ. ಶಂಕರಘಟ್ಟ, 2004

ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ - ಒಂದು ಅಧ್ಯಯನ, ಬಿ.ಎಸ್. ಗೀತಾ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು 2008


***ಟಿ.ಎ.ಕೆ.***

**ದಾಸವಾಳ** ಇದೊಂದು ಅಲಂಕಾರಿಕ ಸಸ್ಯ. ಮನೆಯ ಅಂಗಳದಲ್ಲಿ, ದೇವಾಲಯದ ಆವರಣಗಳಲ್ಲಿ, ತೋಟಗಳಲ್ಲಿ ಬೆಳೆಸುವಂಥ ಗಿಡವಿದು. ಎರಡುನೂರಕ್ಕೂ ಹೆಚ್ಚು ಪ್ರಭೇದಗಳಿವೆ. ಮಾಲ್ವೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಹೈಬಿಸ್ಕಸ್. ಇಂಗ್ಲಿಷಿನಲ್ಲಿ ಚೈನಾರೋಸ್, ಷೂಫ್ಲವರ್ ಎಂದೂ ತಮಿಳಿನಲ್ಲಿ ಶೆಂಬರತ್ತೈ, ಅರತ್ತಮ್ ಎಂದೂ ತೆಲುಗಿನಲ್ಲಿ ದಾಸನಚೆಟ್ಟು ಎಂದೂ ಮಲೆಯಾಳದಲ್ಲಿ ಚೆಂಪರುತ್ತಿ ತುಳುವಿನಲ್ಲಿ ದಾಸನ್‌ಪೂ ಎಂದೂ ಕರೆಯುವರು. ಇದು ಬಹುವಾರ್ಷಿಕ ಸಸ್ಯ. ಸುಂದರವಾದ, ವರ್ಣಮಯವಾದ ಹೂಗಳಿಗಾಗಿ ಇದನ್ನು ಬೆಳೆಸುವರು. ಇದು ಹವಾಯ್ ದೇಶದ ರಾಷ್ಟ್ರೀಯ ಪುಷ್ಪ.



**ಸಸ್ಯ ಸ್ವರೂಪ :** ಸುಮಾರು ಹತ್ತು ಅಡಿ ಎತ್ತರ ಬೆಳೆಯುವ ಇದು ಬುಡದಿಂದ ಅನೇಕ ಕವಲುಗಳೊಡೆದು ಪೊದೆಯಂತೆ ಬೆಳೆಯುತ್ತದೆ. ಕಾಂಡ ತುಸುಗಟ್ಟಿ. ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡ ಇದರ ಎಲೆಗಳು ಕಡುಹಸುರು ಬಣ್ಣದವು. ಸುಮಾರು 10-12 ಇಂಚು ಉದ್ದದ ಎಲೆಗಳು ತುದಿಯಲ್ಲಿ ಮೊನಚಾಗಿರುತ್ತವೆ. ಬೇರೆ ಬೇರೆ ಪ್ರಭೇದದ ಎಲೆಗಳು ಅಗಲ, ಆಕಾರಗಳಲ್ಲಿ ಭಿನ್ನವಾಗಿರುತ್ತವೆ. ಹೂಗಳು ರೆಂಬೆಯ ತುದಿಯಲ್ಲಿ ಹುಟ್ಟುತ್ತವೆ. ಕೆಲವು ಜಾತಿಯ ಹೂವುಗಳು ಒಂಟಿಯಾಗಿದ್ದರೆ ಇನ್ನು ಕೆಲವು ಗೊಂಚಲಿನಂತಿರುತ್ತದೆ. ಹೂಗಳು ದ್ವಿಲಿಂಗಿಗಳು ಕೆಲವು ಹೂಗಳಲ್ಲಿ ಐದು ದಳಗಳಿರುತ್ತವೆ. ಕೆಲವು ಇನ್ನೂ ಹೆಚ್ಚಾಗಿಯೂ ಇರಬಹುದು. ಹೂವಿನ ಮಧ್ಯೆ ಶಲಾಕಾಗ್ರ ಹೊರಚಾಚಿರುತ್ತದೆ.

**ಸಸ್ಯಾಭಿವೃದ್ಧಿ :** ಪ್ರಪಂಚದ ಎಲ್ಲ ಉಷ್ಣವಲಯ ಮತ್ತು ಸಮಶೀತೋಷ್ಣ ವಲಯಗಳಲ್ಲಿ ಬೆಳೆಯುತ್ತದೆ. ಯಾವ ಬಗೆಯ ಮಣ್ಣಿನಲ್ಲಾದರೂ ಬೆಳೆಯುವ ಗುಣ ಇದರದು. ಕಾಂಡದಿಂದಲೇ ಸಸ್ಯಾಭಿವೃದ್ಧಿ ಹೆಚ್ಚಾಗಿ ನಡೆಯುತ್ತದೆ. ಕಸಿಕಟ್ಟುವುದು, ಕಣ್ಣು ಇಡುವುದರ ಮೂಲಕವೂ ಸಸ್ಯಾಭಿವೃದ್ಧಿ ಮಾಡಬಹುದು. ಕೆಲವರು ಬೀಜದಿಂದಲೂ ಸಸ್ಯಾಭಿವೃದ್ಧಿ ಮಾಡುವುದುಂಟು. ಗೂಟಿಕಟ್ಟಿ ಸಸ್ಯಾಭಿವೃದ್ಧಿ ಮಾಡಲು ಹುಡಿಗೊಬ್ಬರ ಮತ್ತು ಸಣ್ಣ ಮರಳನ್ನು ಮಿಶ್ರಮಾಡಿ ಪ್ಲಾಸ್ಟಿಕ್ ಕೊಟ್ಟೆ (ಚೀಲ)ಯಲ್ಲಿ ತುಂಬಿ ಗೂಡಿಕಟ್ಟುವ ಕಾಂಡದ ತೊಗಟೆಯನ್ನು ಸುಲಿದು ಆ ಭಾಗದಲ್ಲಿ ಮರಳು ಮಿಶ್ರಿತ ಗೊಬ್ಬರ ತುಂಬಿದ ಆ ಕೊಟ್ಟೆ(ಚೀಲ)ಯನ್ನು ಗಾಳಿ ಆಡದಂತೆ ಬಿಗಿಯಾಗಿ ಕಟ್ಟುತ್ತಾರೆ. ತೇವಾಂಶದಿಂದ ಕೂಡಿದ ಈ ಚೀಲದಲ್ಲಿ ಸುಮಾರು ಒಂದು, ಒಂದೂವರೆ ತಿಂಗಳಲ್ಲಿ ಬೇರುಗಳು ಮೂಡುತ್ತವೆ. ಮಳೆಗಾಲದಲ್ಲಿ ಕಾಂಡಗಳನ್ನು ಕತ್ತರಿಸಿ ಪ್ರತ್ಯೇಕ ಜಾಗದಲ್ಲಿ ನೆಟ್ಟು ಗಿಡ ಬೆಳೆಸುತ್ತಾರೆ. ನರ್ಸರಿಗಳಲ್ಲಿ ಬೆಳೆಸುವವರು. ಸುಮಾರು ಎರಡು ಮೂರು ತಿಂಗಳತನಕ ನೆರಳಿನಲ್ಲಿ ಜೋಡಿಸಿ ಹದವಾಗಿ ನೀರುಣಿಸಿ ಮತ್ತಷ್ಟು ದೃಢವಾಗಿ ಬೇರೂರುವಂತೆ ಮಾಡುತ್ತಾರೆ.

**ಉಪಯೋಗಗಳು :** ದೇವರ ಪೂಜೆಗೆ, ಅಲಂಕಾರಕ್ಕೆ ಮುಖ್ಯವಾಗಿ ಬಳಸುವುದಾದರೂ ಇದರಲ್ಲಿ ಕೆಲವು ಔಷಧೀಯ ಗುಣಗಳಿವೆ. ಇದರ ಹೂವನ್ನು ಋತುಸ್ರಾವ ಸಂಬಂಧಿಕಾಯಿಲೆಗೆ ಉಪಯೋಗಿಸುತ್ತಾರೆ. ದಳಗಳ ಹಾಗೂ ಬೇರಿನ ಕಷಾಯ ಕೆಮ್ಮು ಮತ್ತುಜ್ವರ ನಿವಾರಣೆಗೆ ಉಪಯುಕ್ತ. ಬಿಳಿದಾಸವಾಳದ ಹೂ ಮೇಹರೋಗಕ್ಕೆ ಒಳ್ಳೆಯದು. ಇದರ ಎಲೆಗಳನ್ನು ಅರೆದು ತಲೆಗೆ ಹಚ್ಚಿದರೆ ತಲೆಹೊಟ್ಟು ನಿವಾರಣೆಯಾಗುತ್ತದೆ. ಕೂದಲ ಬೆಳೆವಣಿಗೆಗೆ ಹೂವಿನ ದಳಗಳನ್ನು ಕೊಬ್ಬರಿ ಎಣ್ಣೆಯಲ್ಲಿ ಹಾಕಿ ಕುದಿಸಿ ಹಚ್ಚುವರು.

*ಯು.ಜೆ.ಎಸ್.*

**ದಾಳಿಂಬೆ** ದಾಳಿಂಬೆಯ ಮೂಲ ಸ್ಥಾನ ಪರ್ಷಿಯಾ. ಇಂದು ದಾಳಿಂಬೆ ಇರಾನ್, ಇರಾಕ್, ತುರ್ಕಿ, ಅಫ್‌ಘಾನಿಸ್ತಾನ್, ಬರ್ಮಾ, ಭಾರತ, ಶ್ರೀಲಂಕಾ, ಚೀನಾ, ಫಿಲಿಪಾಯಿನ್ಸ್ ಮತ್ತು ಮಲಯಗಳಲ್ಲಿ ವಾಣಿಜ್ಯ ಬೆಳೆಯಾಗಿ ಹೆಸರು ಮಾಡಿದೆ. ಔಷಧೀಯ ಗುಣಗಳಿಂದಾಗಿ ಎಲ್ಲರಿಗೂ ಪ್ರಿಯವಾದ ಹಣ್ಣು. ಸುಂದರವಾದ ನಸು ಕೆಂಪು ಬಣ್ಣದ ಹೂಗಳನ್ನು ಬಿಡುವ ದಾಳಿಂಬೆ ಗಿಡ ನೋಡಲು ಆಕರ್ಷಣೀಯವಾಗಿ ಕಾಣುತ್ತದೆ.



**ಹವಾಗುಣ :** ಏರು ಪೇರಿನ ವಾತಾವರಣಗಳಿಗೆ ಹೊಂದಿಕೊಂಡು ಬೆಳೆಯಬಲ್ಲ ಸಾಮರ್ಥ್ಯವನ್ನು ದಾಳಿಂಬೆ ಹೊಂದಿದೆ. ಚಳಿಗಾಲದ ಶೀತ ಮತ್ತು ಬೇಸಗೆಯ ಬೆಚ್ಚಗಿನ ವಾತಾವರಣದಲ್ಲೂ ಇದು ಬೆಳೆಯಬಲ್ಲದು. ಒಣ ಹವೆಯಿದ್ದು ನೀರು ಹಿಂಗಿ ಹೋಗುವ ನೆಲವಾದರೆ ಇಳುವರಿ ದ್ವಿಗುಣಗೊಳ್ಳುತ್ತದೆ. ಕ್ಷಾರ ಕಡಿಮೆಯಿರುವ ಮಣ್ಣು ಈ ಬೆಳೆಗೆ ಯುಕ್ತ. ಗೋಡು ಮತ್ತು ಮೆಕ್ಕಲು ಮಣ್ಣು ಅತ್ಯುತ್ತಮ.

**ಸಸ್ಯಾಭಿವೃದ್ಧಿ :** ಮೊದಲು ಬೀಜದಿಂದ ಸಸ್ಯಾಭಿವೃದ್ಧಿ ಮಾಡುತ್ತಿದ್ದರು. ಕ್ರಮೇಣ ಹೆಚ್ಚು ಫಸಲಿನ ದೃಷ್ಟಿಯಿಂದ ಡ್ರಾಫ್ಟಿಂಗ್, ಲೇಯರಿಂಗ್ ಕಟಿಂಗ್ ವಿಧಾನಗಳಿಂದ ಸಸ್ಯಾಭಿವೃದ್ಧಿ ಮಾಡುವ ಕ್ರಮ ರೂಢಿಗೆ ಬಂತು. ಕಟಿಂಗುಗಳನ್ನು ತಯಾರಿಸುವಾಗ ಬಲಿತ ಶಾಖೆಗಳನ್ನು ತುಂಡುಗಳಾಗಿ ಕತ್ತರಿಸಿ (9 ರಿಂದ 13 ಇಂಚು) ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಹೂತು ಹದವಾಗಿ ನೀರನ್ನು ಕೊಟ್ಟರೆ ಚಿಗುರೊಡೆದು ಬೇರು ಬಿಟ್ಟು ಒಂದೆರಡು ತಿಂಗಳಲ್ಲಿ ಗಿಡ ನೆಡಲು ಯೋಗ್ಯವಾಗುತ್ತದೆ.

ಗಿಡದಿಂದ ಗಿಡಕ್ಕೆ ಹದಿನೈದರಿಂದ ಇಪ್ಪತ್ತು ಅಡಿ ಅಂತರದಲ್ಲಿ ನೆಡಬೇಕು. ಕೊಟ್ಟಿಗೆ ಗೊಬ್ಬರ ಎಲೆ ಹಸುರು ಸೊಪ್ಪು ಗುಂಡಿಯೊಳಗೆ ತುಂಬಿ ಹದವಾಗಿ ನೀರು ಕೊಟ್ಟರೆ ಬೇಗನೆ ಬೆಳೆಯುತ್ತದೆ. ಸಾಮಾನ್ಯವಾಗಿ ಮಳೆಗಾಲ ಆರಂಭವಾಗುತ್ತಿದ್ದಂತೆ ನೆಡುವುದು ವಾಡಿಕೆ. ಇದು ಉತ್ತಮ ಕಾಲವೂ ಹೌದು. ಪ್ರತ್ಯೇಕ ತೋಟವಾಗಿ ಇಲ್ಲವೆ ತೋಟದ ಸುತ್ತ ಗಿಡಗಳನ್ನು ಬೆಳೆಸಿ ಫಲವನ್ನು ಪಡೆಯಬಹುದು.

**ಆರೈಕೆ :** ಗಿಡ ನೆಟ್ಟಾಗ ಪ್ರತಿದಿನ ತೇವವರಿತು ನೀರನ್ನು ಕೊಡಬೇಕು. ಕ್ರಮೇಣ ಮೂರು ನಾಲ್ಕು ದಿನಗಳಿಗೊಮ್ಮೆ ನೀರನ್ನು ಕೊಟ್ಟರೆ ಸಾಕು. ಪ್ರತಿವರ್ಷ ಗಿಡದ ಸುತ್ತ ಮೂರು ಅಡಿ ಸುತ್ತಳತೆ ಅಗೆದು ಶುದ್ಧ ಮಾಡಿ ನಾಲ್ಕು ದಿನ ಮಣ್ಣು ಒಣಗಲು ಬಿಟ್ಟು ಎರಡು ಮಕ್ಕರಿಯಷ್ಟು ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರ, ನೆಲಗಡಲೆ ಅಥವಾ ಹೊಂಗೆ ಹಿಂಡಿಯನ್ನು ಕೊಟ್ಟು ಗುಂಡಿ ತುಂಬಿ ನೀರನ್ನು ಕೊಡಬೇಕು. ಹೀಗೆ ಆರೈಕೆ ಮಾಡಿ ರೋಗ ಬಂದಾಗ ಔಷಧಿಯನ್ನು ಸಿಂಪಡಿಸಿದರೆ ಉತ್ತಮಫಸಲನ್ನು ಪಡೆಯಬಹುದು. ಹಣ್ಣು ಬಿಡಲು ಆರಂಭವಾದಾಗಿನಿಂದ ಸುಮಾರು 15 ವರ್ಷಗಳವರೆಗೂ ಫಸಲನ್ನು ಕೊಡುತ್ತವೆ. ಹಣ್ಣು ಒಮ್ಮೆ ಫಲವನ್ನು ಕೊಟ್ಟ ಮೇಲೆ ರೆಂಬೆಗಳನ್ನು ಸವರಿ ಪೊದೆಯ ಆಕಾರ ಬರುವಂತೆ ಮಾಡಬೇಕು. ಒಣಗಿದ ಕಡ್ಡಿಗಳನ್ನು ಕತ್ತರಿಸಬೇಕು. ಬುಡದ ಸುತ್ತ ಇತರ ಗಿಡಗಳ ಬೇರುಗಳ ಬರದಂತೆ ಅಗೆದು ಶುಚಿಯಾಗಿಡಬೇಕು. ವಾರಕ್ಕೊಮ್ಮೆಯಾದರೂ ನೀರನ್ನು ಕೊಡಬೇಕು.

**ದಾಳಿಂಬೆ ಜಾತಿಗಳು :** ದಾಳಿಂಬೆ ಗಿಡದಲ್ಲಿ ನಾನಾ ಜಾತಿಗಳಿವೆ. ಬೀಜ ರಹಿತ ಮತ್ತು ಕಾಬೂಲ್ ದಾಳಿಂಬೆಗಳು ಮುಖ್ಯವಾದವು. ಕೆಳದರ್ಜೆಯವು - ಬಿಳಿಯ ಹೂವನ್ನು ಬಿಡುತ್ತವೆ. ಕೆಲವು ಜೋಡಿ ಹೂವುಗಳನ್ನು ಬಂಜೆ ಹೂವುಗಳನ್ನು ಬಿಡುತ್ತವೆ. ದಾಳಿಂಬೆ ವರ್ಷದಲ್ಲಿ ಮೂರು ಸಲ ಫಸಲು ಬಿಡುತ್ತದೆ. ಒಂದು ಗಿಡಕ್ಕೆ ನೂರರಿಂದ ಇನ್ನೂರು ಹಣ್ಣುಗಳನ್ನು ಒಂದು ವರ್ಷದಲ್ಲಿ ಪಡೆಯಬಹುದು. ಹಣ್ಣಿನ ಬಣ್ಣ ಹಳದಿ ಮಿಶ್ರಿತ ನೇರಳೆ. ಬಣ್ಣ ಹೆಚ್ಚಾಗಿದ್ದರೆ ರುಚಿ ಕಡಿಮೆ. ನಾಗಪುರದ ದಾಳಿಂಬೆ ಗಾತ್ರದಲ್ಲಿ, ಬಣ್ಣದಲ್ಲಿ, ರುಚಿಯಲ್ಲಿ ಉತ್ತಮ ತಳಿ ಎನಿಸಿದೆ.

ಕರ್ನಾಟಕದಲ್ಲಿ ಮಧು ಗಿರಿ ದಾಳಿಂಬೆ, ಜಲಗನಹಳ್ಳಿ ದಾಳಿಂಬೆ ಮತ್ತು ಬೊಮ್ಮನಹಳ್ಳಿ ದಾಳಿಂಬೆ ಮುಖ್ಯವಾದವು. ಇವಲ್ಲದೆ ಕರ್ನಾಟಕದಲ್ಲಿ ಇತರ ನಾಲ್ಕು ತಳಿಗಳಿವೆ.

1. ಪೇಪರ್‌ಶೆಲ್ : ಗಾತ್ರದಲ್ಲಿ ಚಿಕ್ಕದಾದರೂ ಹೆಚ್ಚು ಇಳುವರಿ ಕೊಡುವ ತಳಿ. ಸಿಪ್ಪೆ ದಪ್ಪಗಿದ್ದು ಬೀಜ ಮೃದುವಾಗಿರುತ್ತದೆ. ಬಣ್ಣ ನಸುಗೆಂಪು, ತಿನ್ನಲು ಸಿಹಿಯಾಗಿರುತ್ತದೆ.

2. ಸ್ಪಾನಿಷ್ ರೂಬಿ : ಗಾತ್ರದಲ್ಲಿ ಚಿಕ್ಕದು. ಹೆಚ್ಚು ಹಣ್ಣುಗಳನ್ನು ಕೊಡುವ ಮೃದು ಬೀಜದ ತಳಿ. ತಿರುಳು ನಸು ಕೆಂಪು, ರುಚಿಯಾದ ಬೀಜಗಳನ್ನು ಕೊಡುತ್ತದೆ.

3. ಮಸ್ಕಿಟ್‌ರೆಡ್ : ಸಾಮಾನ್ಯ ಗಾತ್ರ. ಅಧಿಕ ಇಳುವರಿ, ತೆಳು ಸಿಪ್ಪೆಯ ತಳಿ. ತಿರುಳು ಕೆಂಪು, ರುಚಿ ಹೆಚ್ಚು.

4. ವೆಲ್ಲೋಡು : ಗಾತ್ರದಲ್ಲಿ ದೊಡ್ಡದು. ಇಳುವರಿ ಕಡಿಮೆ. ರುಚಿಯೂ ಕಡಿಮೆ.

**ಉಪಯೋಗಗಳು :** ದಾಳಿಂಬೆ ರಕ್ತಾಭಿವೃದ್ಧಿಗೆ ಸಹಕಾರಿ. ಕಾಯಿ ಮತ್ತು ಬೀಜಗಳ ರಸ ಕರಳು ರೋಗ ನಿವಾರಕ. ಇದರ ಬೀಜ ಕುಷ್ಠ ರೋಗ ನಿವಾರಣೆ ಮಾಡಬಲ್ಲದು. ಹಣ್ಣಿನ ರಸ ಮತ್ತು ಸಿಪ್ಪೆಯನ್ನು ಟ್ಯಾನಿಕ್ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸಿಪ್ಪೆ ಮತ್ತು ತೊಗಟೆಯನ್ನು ಆಮಶಂಕೆ ಭೇದಿ ನಿರೋಧಕ ಔಷಧಿ ತಯಾರಿಸಲು ಬಳಸುವರು. ಸಿಪ್ಪೆಯನ್ನು ಬಟ್ಟೆಗೆ ಬಣ್ಣ ಹಾಕಲು ಉಪಯೋಗಿಸುತ್ತಾರೆ. ಚಿಗುರೆಲೆಯನ್ನು ತಿಂದರೆ ಆಮಶಂಕೆ ಗುಣವಾಗುತ್ತದೆ. ಹಣ್ಣಿನ ಬೀಜಗಳನ್ನು ನೇರವಾಗಿ ತಿಂದರೆ ಹೆಚ್ಚು ರುಚಿ ಮತ್ತು ಪುಷ್ಟಿಯನ್ನು ನೀಡುತ್ತವೆ. ಬೀಜ ಗಟ್ಟಿಯಾಗಿರುವುದರಿಂದ ಕೆಲವರು ಪಾನೀಯ ಮಾಡಿಕೊಂಡು ಉಪಯೋಗಿಸುತ್ತಾರೆ.



**ರೋಗಗಳು :** ಬೂದು ಮಿಶ್ರಿತ ಕಂದು ಬಣ್ಣದ ದೊಡ್ಡ ಗಾತ್ರದ ಪಾದರಗಿತ್ತಿಗಳು ದಾಳಿಂಬೆ ಹಣ್ಣಿಗೆ ತುಂಬಾ ಹಾನಿಯುಂಟು ಮಾಡುತ್ತವೆ. ಹೆಣ್ಣು ಚಿಟ್ಟೆ, ಎಲೆ, ಹೂ ಮತ್ತು ಹೀಚುಕಾಯಿಗಳ ಮೇಲೆ ಬಿಳಿ ಮೊಟ್ಟೆಗಳನ್ನಿಡುತ್ತದೆ. ಈ ಮೊಟ್ಟೆಗಳು ಒಡೆದು ಮರಿ ಹೊರ ಬಂದು ಹಣ್ಣಿನ ತಿರುಳನ್ನು ತಿಂದು ಕೊಳೆಯುವಂತೆ ಮಾಡುತ್ತದೆ. ಇದರಿಂದ ಸಿಪ್ಪೆಯ ಬಣ್ಣ ಕೆಡುವುದಲ್ಲದೆ ಹಣ್ಣು ಶಿಲೀಂಧ್ರ ರೋಗಕ್ಕೆ ತುತ್ತಾಗುತ್ತದೆ.

ಅಳಿಲು ಹಣ್ಣಾಗುವ ಕಾಯಿಯ ತಿರುಳನ್ನು ತಿನ್ನುತ್ತದೆ. ಕಾಯಿ ಮಾಗುತ್ತಿರುವಾಗ ಬಟ್ಟೆ ಅಥವಾ ಕಾಗದದಿಂದ ಸುತ್ತಿದರೆ ಕೀಟ ಬಾಧೆಯನ್ನು ನಿಯಂತ್ರಿಸಬಹುದು.

ಎಲೆ ಮತ್ತು ಹಣ್ಣಿನ ಚುಕ್ಕೆ ರೋಗ ಬಂದರೆ ನೊಣ ತಗುಲಿದ ಹಣ್ಣುಗಳನ್ನು ಕಿತ್ತು ರಾಶಿ ಹಾಕಿ ಮಣ್ಣು ಮುಚ್ಚಬೇಕು. ಇಲ್ಲವೆ ಸುಡಬೇಕು. ನೀರನ್ನು ಸರಿಯಾದ ಪ್ರಮಾಣದಲ್ಲಿ ಕೊಡದಿದ್ದರೆ ಹಣ್ಣು ಪಕ್ವವಾದಾಗ ಬಿರಿಯುವ ಸಂಭವವಿದೆ.

*ವಿ. ಆರ್. ಬಿ.*

**ದೇಶೀಯ ಕೃಷಿ ಜ್ಞಾನ** 'ಮಣ್ಣು' ಕೃಷಿಕನಿಗೆ ತಾಯಿ ಸಮಾನ. ಪ್ರತಿನಿತ್ಯ ರಾಗಿ ಬೀಸುತ್ತಲೋ ತೊಟ್ಟಿಲ ತೂಗುತ್ತಲೋ ರೈತ ಮಹಿಳೆಯರು ನೆನಪಿಸಿಕೊಳ್ಳೋದು ಬದುಕು ನೀಡಿದ ಭೂಮಿ ತಾಯಿಯನ್ನೇ. ಪ್ರತಿನಿತ್ಯ ನನ್ನ ದಿನನಿತ್ಯದ ಕೆಲಸಗಳಿಗಾಗಿ ನಿಮ್ಮನ್ನು ತುಳಿಯುತ್ತಿದ್ದೇನೆ, ತಾಯಿ ಅದಕ್ಕಾಗಿ ಕ್ಷಮೆ ಇರಲಿ ಎಂದು ನಿತ್ಯ ಭೂಮಾತೆಯನ್ನು ಪ್ರಾರ್ಥಿಸುವ ಕೃಷಿಕರಿದ್ದಾರೆ. ತಮ್ಮ ಜಮೀನಿನ ಮೇಲೆ ಚಪ್ಪಲಿ ಧರಿಸಿ ಓಡಾಡದೆ, ಬರಿಗಾಲಲ್ಲಿ ನಡೆಯುವ ಹಿರಿಯ ಕೃಷಿಕರಿದ್ದಾರೆ.

ಜನಪದರು ಭೂಮಿಯನ್ನು ಸ್ಮರಿಸುವ ರೀತಿ ಹೀಗಿದೆ :

*ಬೆಳಗಾಗಿ ನಾ ಎದ್ದು ಯಾರ್‍ಯಾರ ನೆನೆಯಾಲಿ*
*ಎಳ್ಳು ಜೀರಿಗೆ ಬೆಳೆದೋಳ*
*ಭೂತಾಯ ಎದ್ದೊಂದು ಘಳಿಗೆ ನೆನೆದೇನ*

*ಸಮುದ್ರವಸನೇದೇವಿ ಪರ್ವತಸ್ತನಮಂಡಲೆ*
*ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಷಂ ಕ್ಷಮಸ್ವಮೆ*

ಈ ಶ್ಲೋಕ ಭೂತಾಯ ಗರಿಮೆಯನ್ನು ಮನುಷ್ಯನ ವಿನೀತಭಾವವನ್ನ ಸಾರಿ ಹೇಳುತ್ತದೆ.

ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಮಹಿಳೆ

*ಒಂದು ರಾಗಿ ಕಾಳು ಗಾತ್ರದ ಸಗಣಿ*
*ಒಂದು ದೋಸೆ ಹಾಲೆಯಷ್ಟು ವಿಸ್ತೀರ್ಣದ*
*ಬೆಳೆ ಬೆಳಸ್ತದೆ ಅಂತ.*

ಸಗಣಿ-ಮಣ್ಣಿನ ಸಂಬಂಧದ ಬಗ್ಗೆ ಹೀಗೆ ಹೇಳಿದರು.

ವಿಸ್ತೀರ್ಣ ಹೇಳಲು ಈಕೆ ದೋಸೆ ಕಾವಲಿಯನ್ನೇಕೆ ಆರಿಸಿಕೊಂಡಿರಬಹುದು ಅಂತ ನಾನು ಯೋಚನೆ ಮಾಡುತ್ತಿದ್ದೆ. ಆಗ ಆಕೆ ಹೇಳಿದ್ದು 'ಸ್ವಾಮಿ,

*ದೋಸೆ ತುಂಬಾ ತೂತು ಇದ್ರೆ ಚನ್ನ*
*ಜಮೀನಿನ ತುಂಬಾ ರಂಧ್ರ ಇದ್ರೆ ಇನ್ನೂ ಚನ್ನ' ಅಂತ.*

ಎಂಥ ಹಿರಿದಾದ ವೈಜ್ಞಾನಿಕ ಸತ್ಯವನ್ನು, ಏನೂ ಓದಿರದ ಹಳ್ಳಿಯ ಮಹಾತಾಯಿ ಎಷ್ಟು ಸರಳವಾಗಿ ಹೇಳಿದಳಲ್ಲ ಅನ್ನಸ್ತು. ದೋಸೆ ಸರಿಯಾಗಿ ಹುದುಗದಿದ್ರೆ ಅದರಲ್ಲಿ ತೂತು ಬೀಳೋಲ್ಲ ಮಣ್ಣು ಫಲವತ್ತಾಗಿರದಿದ್ರೆ ಅದರಲ್ಲಿ ರಂಧ್ರ ಇರೋಲ್ಲ. ಇನ್ನು ಸಗಣಿ ವಿಚಾರಕ್ಕೆ ಬಂದ್ರೆ, ಒಂದು ಬರಡು ನೆಲದ ಮೇಲೆ ಹಸು ಸಗಣಿ ಹಾಕಿತು ಅಂತ ಇಟ್ಟುಕೊಳ್ಳಿ. ಮೂರ್‍ನಾಕು ದಿನ ಕಳೆದ ಮೇಲೆ ಅದು ಒಣಗುತ್ತೆ. ಒಣಗಿದ ಸಗಣಿ ಮೇಲೆತ್ತಿದರೆ ನೆಲದಲ್ಲಿ ರಂಧ್ರ ಗಮನಿಸಬಹುದು. ಹಿಂದೆ ಇರಲಿಲ್ಲ, ಈಗ ಎಲ್ಲಿಂದ ಬಂತು ಅಂತ ಅಚ್ಚರಿಪಡುವ ಅಗತ್ಯವಿಲ್ಲ. ಈ ರಂಧ್ರಗಳು ಆದದ್ದು ಎರೆಹುಳುಗಳಿಂದ ಹಾಗೂ ಸಗಣಿ ಆಶ್ರಯಿಸಿ ಬದುಕುವ ಮಣ್ಣು ಜೀವಿಗಳಿಂದ. ಒಂದು ತೊಪ್ಪೆ ಹಸಿ ಸಗಣಿ ಸೃಷ್ಟಿಸುವ ಚಮತ್ಕಾರ ಇದು.

ಒಂದು ಎಕರೆ ಪ್ರದೇಶದ ಮೇಲಿನ ಒಂದು ಗೇಣು ಮಣ್ಣಿನಲ್ಲಿ ಸುಮಾರು ಎಂಟು ಟನ್‌ಗಳಷ್ಟು ಸೂಕ್ಷ್ಮ ಜೀವಿಗಳಿವೆ. ಅವು ಪ್ರತಿನಿತ್ಯ, ಪ್ರತಿ ಕ್ಷಣ ಉಸಿರಾಡುತ್ತೆ, ಆಹಾರ ಸೇವಿಸುತ್ತೆ, ನೀರು ಕುಡಿಯುತ್ತೆ, ಆರೋಗ್ಯವಾಗಿರಲು ಇಷ್ಟಪಡುತ್ತೆ. ಮಣ್ಣಿಗೆ ಜೀವವಿದೆ ಅಂತಾರೆ ಕೃಷಿ ವಿಜ್ಞಾನಿಗಳು. ಮಣ್ಣು ಜೀವಂತವಾಗಿರಬೇಕಾದ್ರೆ ಮಣ್ಣಿನ ಸೂಕ್ಷ್ಮ ರಂಧ್ರಗಳ ಸಂಖ್ಯೆ ಹೆಚ್ಚಬೇಕು, ಸಾವಯವ ಅಂಶ ಜಾಸ್ತಿ ಆಗಬೇಕು, ಪಸೆಗೊಬ್ಬರ ನಿರ್ಮಾಣ ಆಗಬೇಕು, ಆಗ ಮಣ್ಣಿನ ಆರೋಗ್ಯ ಉತ್ತಮವಾಗಿರುತ್ತೆ. ಇದು ಕೃಷಿಜ್ಞಾನ. ಅದಕ್ಕೇ ಕೃಷಿ ವಿಜ್ಞಾನಿ ಆಲ್ಬರ್ಟ್ ಹೋವಾರ್ಡ್ ಹೇಳಿದ್ದು 'ಮಣ್ಣಿನ ಆರೋಗ್ಯಕ್ಕೂ ಮನುಷ್ಯನ ಆರೋಗ್ಯಕ್ಕೂ ನೇರವಾದ ಸಂಬಂಧ ಇದೆ ಅಂತ.'

ಮಣ್ಣಿನ ಅನಂತರದ ಸ್ಥಾನ, ಕೃಷಿಕರು 'ಗಂಗೆ' ಎಂದು ಪೂಜಿಸುವ ನೀರಿಗೆ. ಮಣ್ಣಿಗೂ ನೀರಿಗೂ ಅವಿನಾಭಾವ ಸಂಬಂಧ. ನದಿ ಬಯಲಿನಲ್ಲಿ ಫಲವತ್ತಾದ ಮೆಕ್ಕಲು ಮಣ್ಣು ಸಂಗ್ರಹಿಸುವುದೂ ನೀರೇ, ಸಾವಿರಾರು ವರ್ಷಗಳಿಂದ ರೂಪಿತವಾದ ಫಲವತ್ತಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗುವುದೂ ನೀರೇ ! (ಮಳೆ ನೀರು) ಹೀಗಾಗಿ ತಮ್ಮನ್ನು ಸಲಹುವ ಮಣ್ಣನ್ನು ಕಾಯುವ ನೀರಿಗೆ ಪೂಜನೀಯ ಸ್ಥಾನ ನೀಡಿದ್ರು. ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು, ಹಸುವಿನ ಸಗಣಿ, ಗಂಜಲ ಹಾಗೂ ನೀರು ಬೆರೆಸಿದ ದ್ರಾವಣದಲ್ಲಿ ಅಂಗಳ, ಒಲೆ ಸಾರಿಸಿ, ರಂಗಾಬಲಿ ಎಂದು 'ರಂಗೋಲಿ' ಇಟ್ಟು, ಹೊಳೆ, ಬಾವಿ, ಕಟ್ಟೆಗಳಿಂದ ನೀರು ತಂದೇ ಗ್ರಾಮೀಣ ಮಹಿಳೆಯರ ದಿನನಿತ್ಯದ ಕಾಯಕ ಆರಂಭವಾಗುತ್ತಿದ್ದುದು.

ನಲ್ಲಿಗಳಲ್ಲಿ ನೀರು ಹರಿಸುವ ಈಗಿನ ಸಂಸ್ಕೃತಿಗಿಂತ ಮಡಕೆ, ಕುಂಭಗಳಲ್ಲಿ ನೀರನ್ನು ಶೇಖರಿಸಿಡುವ ಸಂಸ್ಕೃತಿಯೇ ಶ್ರೇಷ್ಠ ಅನ್ನುವ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಮಳೆ-ಇಳೆಯ ಸಂಬಂಧದಂತೆ, ರೈತನ ಕೃಷಿ ಕಾಯಕದಲ್ಲಿ ಹಾಸು ಹೊಕ್ಕಾಗಿರುವ ಮಣ್ಣು-ನೀರಿನ ಪ್ರಾಮುಖ್ಯತೆಗಳ ಬಗ್ಗೆ ಹಳ್ಳಿಯ ಹಿರಿಯರು ಗಾದೆ ನಾಣ್ಣುಡಿಗಳ ಸರಮಾಲೆಯನ್ನು ಸೃಷ್ಟಿಸಿದ್ದಾರೆ.

ಮಳೆ ನಕ್ಷತ್ರಗಳಿಗೆ ತಮ್ಮ ವ್ಯವಸಾಯವನ್ನು ಕರಾರುವಕ್ಕಾಗಿ ಹೊಂದಿಸಿಕೊಂಡಿದ್ದರು ಗ್ರಾಮೀಣರು. ಪೂರ್ವ ಮುಂಗಾರು (ಮಾರ್ಚ್/ ಏಪ್ರಿಲ್ ತಿಂಗಳು/ಹೊತ್ತು ತರುವ ಅಶ್ವಿನಿ ಭರಣಿ ಮಳೆಗಳು ಭೂಮಿ ಸಿದ್ಧತೆಗೆ ಅನುಕೂಲ. ಅದಕ್ಕೆ ಗ್ರಾಮೀಣರು ಹೇಳಿದ್ರು 'ಭರಣಿ ಮಳೆ ಆದ್ರೆ ಧರಣಿ ಆಳಬೋದು' ಅಂತ. ಅನಂತರ ಕೃತ್ತಿಕಾ-ರೋಹಿಣಿ ಮಳೆ ಸಾಲು (ಮೇ ತಿಂಗಳು). 'ರೋಹಿಣಿ ಮಳೆ ಆದ್ರೆ ಓಣಿ ತುಂಬಾ ನೀರು' ಅನ್ನುವ ಮಾತು ಮುಂಗಾರು ಮಳೆಯ ಆರ್ಭಟ ಸೂಚಿಸುತ್ತೆ. ಜೂನ್ ತಿಂಗಳಿನಲ್ಲಿ ಮೃಗಶಿರ-ಆರಿದ್ರೆಯ ಅಬ್ಬರ. ಹಳ್ಳಿಕಡೆ 'ಮೃಗಶಿರಕ್ಕೆ ಮುಗುಟರಲು ಮಳೆ ಅಂತಾರೆ. ಮುಗುಟರಲು ಅಂದರೆ ಮುಗಿಲು

ಮುಟ್ಟುವಂತೆ ಹೊಳೆ ಅಥವಾ ನೀರು ಅನ್ನುವ ಅರ್ಥ. ಘಟ್ಟಗಳಲ್ಲಿ ಮೃಗಶಿರಾ ಆರಿದ್ರ ಅಬ್ಬರಿಸಿದರೆ ನದಿಗಳಲ್ಲಿ ಪ್ರವಾಹದ ಅಬ್ಬರ ಜಾಸ್ತಿ ಎನ್ನುವುದನ್ನು ಸೂಚ್ಯವಾಗಿ ಸೂಚಿಸುತ್ತೆ. ಆರಿದ್ರಾ ಮಳೇಲಿ ಪೂರ್ವ ಮುಂಗಾರಿನ ಬೆಳೆಗಳು ಹೊಡೆ ಅಥವಾ ತೆನೆ ಹೊರಡಿಸುವ ಸಂದರ್ಭ. ಹಳ್ಳಿಗಳಲ್ಲಿ ಆರಿದ್ರಾ ಮಳೆಗೆ 'ಅರೋಡೆ ಮಳೆ' ಅಂತಾನೇ ಅಡ್ಡ ಹೆಸರು. ಜುಲೈ ತಿಂಗಳಿನ ಪುನರ್ವಸು-ಪುಶ್ಯ ಮಳೆಗೆ ಕಗಟದ ಮಳೆ ಎಂದೇ ಹೆಸರು. ಅದರಲ್ಲೂ ಒದು ಹಿಡಿಯೋ ಕಗಟೆ ಮತ್ತೊಂದು ಅಳಿಯೋಕಗಟೆ. ಈ ಹೆಸರಿಗೆ ಜನಪದ ಸೊಗಡೂ ಇದೆ. ಮಳೆಗಳಲ್ಲಿ ಜಡಿಮಳೆ ಸೋನೆ ಮಳೆ ಎರಡು ವಿಧ. ಈ ಮಳೆಗಳ ಆರಂಭದಲ್ಲೇ ಆಷಾಢ ಮಾಸ ಸಹ ಆರಂಭವಾಗತ್ತೆ, ಜಿಟಿಜಿಟಿ ಮಳೆ ಹಿಡಿಯುತ್ತೆ. ಅದಕ್ಕೆ ಅದು ಹಿಡಿಯೋಕಗಟೆ. ಆಷಾಢ ಮಾಸದಲ್ಲಿ ಮಗಳು ತವರಿಗೆ ಬರುವುದು ಸಾಮಾನ್ಯ. ಈ ಸೋನೆ ಮಳೆ ಅಂತ್ಯವಾದಾಗ ಅಂದ್ರೆ ಆಷಾಢಮಾಸ ಮುಗಿದಾಗ ಮಾವನ ಮನೆಗೆ ಅಳಿಯ ಬಂದು ಮಗಳನ್ನು ಕರೆದೊಯ್ಯುವ ಸಂದರ್ಭ. ಹಾಗಾಗಿ ಇದು ಅಳಿಯೋ ಕಗಟೆ. ಇದನ್ನು ನಿಲ್ಲುವಾಗಿನ ಅಥವಾ ಅಳಿಯುವ ಮಳೆ ಅಂತಾನೋ ಅಥವಾ ಅಳಿಯನ ಮಳೆ ಅಂತಾನೋ ಅರ್ಥೈಸಬಹದು. ಜನಜೀವನ, ಕೃಷಿ ಎಲ್ಲವೂ ಬೆರೆತಿದೆ ಇಲ್ಲಿ.

ಆಗಸ್ಟ್ ತಿಂಗಳಿನಲ್ಲಿ ಆಶ್ಲೇಷ, ಮಘೆ ಮಳೆಗಳದ್ದೇ ದರ್ಬಾರು. ಹಳ್ಳಿ ಕಡೆ ಆಶ್ಲೇಷ ಮಳೆಗೆ ಅಸಲೆ ಮಳೆ ಅಂತಾರೆ. 'ಅಸಲೆ ಮಳೆಗೆ ಫಸಲು ಬೆಟ್ಟ ಹತ್ತುತ್ತೆ' ಅಂತಾ ಗಾದೆ ಇದೆ. ಈ ಮಳೆಗೆ ನದಿ ತುಂಬಿ ಹರಿಯುವುದರಿಂದ ಅದರಲ್ಲಿರುವ ಫಸಲು (ಮೀನು) ಅಭಿವೃದ್ಧಿಯಾಗಿ ಬೆಟ್ಟವನ್ನೇ ಹತ್ತುತ್ತೆ ಅನ್ನುವ ಪ್ರತೀತಿ. ಈ ಮಳೆಗಳಲ್ಲಿಯೇ ದೊಡ್ಡ ದೊಡ್ಡ ಅಣೆಕಟ್ಟೆಗಳು ಭರ್ತಿಯಾಗುವುದು.

ಹುಬ್ಬೆ (ಉಬ್ಬೆ) ಹಾಗೂ ಉತ್ತರೆ ಮಳೆಗಳು ಸೆಪ್ಟೆಂಬರ್ ತಿಂಗಳ ಮಳೆಗಳು. 'ಮಘೆ ಮೆಟ್ಕಂಡು ಹುಬ್ಬೆ (ಉಬ್ಬೆ) ಹೊತ್ಕಂಡು ಗೌರಮ್ಮ ಬರ್ತ್ತಾಳೆ' ಅಂತ ಜನಪದರು ಗೌರೀನ ಸ್ವಾಗತಿಸ್ತಾರೆ. ಗೌರಿಗಣೇಶನ ಹಬ್ಬ ಆರಂಭವಾಗುವ ಹೊತ್ತಿಗೆ ಮಘೆ ಮಳೆ ಮುಗಿದು ಉಬ್ಬೆ ಆರಂಭವಾಗುತ್ತೆ ಅನ್ನುವುದರ ಅರ್ಥ ಇದು. ಉಬ್ಬೆ ಮಳೆ ಬಂದರೂ ಬರಬಹುದು ಅಥವಾ ಬಾರದೆಯೂ ಇರಬಹುದು. ಹಾಗಾಗಿ ಗ್ರಾಮೀಣರು ಈ ಮಳೆಯ ವರ್ಣನೇನ ಎರಡು ರೀತಿ ಮಾಡಿದ್ದಾರೆ. 'ಉಬ್ಬೆ ಮಳೆಗೆ ಗುಬ್ಬಿ ತಲೇನೂ ನೆನೆಯೊಲ್ಲ' ಅಥವಾ 'ಉಬ್ಬೆ ಮಳೆಗೆ ಒಬ್ಬೇನೂ ಕೊಚ್ಚಿಕೊಂಡ ಹೋಗುತ್ತೆ ಅಂತ. ಒಬ್ಬೆ ಅಂದ್ರೆ ಬೇಲಿ ಅಂತ ಅರ್ಥ ಇದೆ.

ಅಕ್ಟೋಬರ್ ತಿಂಗಳ ಹಸ್ತ-ಚಿತ್ತಾ ಮಳೆಗೆ ವಿಶೇಷ ಮಹತ್ವ ಇದೆ. 'ಹಸ್ತ' ರೈತರಿಗೆ ಭಾಷೆ ಕೊಟ್ಟಿರುವ ಮಳೆ ಅಂತಾನೇ ರೈತರು ನಂಬಿದ್ದಾರೆ. ಯಾವ ಮಳೆ ಹೋದ್ರೂ ಈ ಮಳೆ ಬಂದೇ ಬರುತ್ತೆ ಅನ್ನುವ ಅಚಲ ವಿಶ್ವಾಸ ಗ್ರಾಮೀಣರದ್ದು. ಚಿತ್ತಾ ಮಳೆಗೆ ಕುರುಡು ಚಿತ್ತೆ ಎಂಬ ಅಡ್ಡ ಹೆಸರಿದೆ. ರಾತ್ರಿ ಹಗಲು ಎನ್ನದೆ ಒಂದೇ ಸಮನೆ ಧೋ ಎಂದು ಸುರಿಯುವುದು ಇದರ ವಿಶೇಷ. ಚಿಟ್ಟೆ ಹುಳುಗಳು ಮೇಲೇಳುವುದೂ ಇದೇ ಸಂದರ್ಭದಲ್ಲಿ. ಈ ಸಮಯಕ್ಕೆ ಮುಂಗಾರಿನ ಅನೇಕ ಬೆಳೆಗಳು ಖಟಾವಿಗೆ ಬಂದಿರುತ್ತದೆ. ಕೀಟ ರೋಗಗಳಿಗೂ ಇದು ಸಮೃದ್ಧಿಯ ಕಾಲ. ಬೆಳೆಗಳ ಮೇಲೆ ಅವೂ ಧಾಳಿ ಮಾಡುತ್ತವೆ. ಅನಂತರ ನವೆಂಬರ್‌ನಲ್ಲಿ ಬೀಳುವ ಮಳೆ ವಿಶಾಖ ಹಾಗೂ ಅನೂರಾಧ. ವಿಶಾಖ ಮಳೆಗೆ ವಿಷಾತಿ ಮಳೆ ವಿಷದ ಮಳೆ ಅಂತ ರೈತರು ಹೇಳ್ತಾರೆ. ಈ ಮಳೆ, ಕೀಟರೋಗಗಳಿಗೆ ವಿಷವಿದ್ದಂತೆ ಅನ್ನುವುದು ಕೃಷಿಕರ ನಂಬಿಕೆ. ರೈತರ ಅನುಭವ ದಾಖಲಿಸುವುದಾದರೆ ವಿಶಾಖ ಮಳೆ ಆದ್ರೆ ಬೆಳೆ ಕೀಟರೋಗಗಳ ಬಾಧೆಯಿಂದ ದೂರವಾಗುತ್ತೆ. ರಭಸವಾಗಿ ಬೀಳುವ ಮಳೆ ನೀರು ಕೀಟ ರೋಗಾಣುಗಳ ಸಂತಾನೋತ್ಪತ್ತಿಗೆ ಅಡ್ಡಿ ಮಾಡುವುದರಿಂದ ಈ ರೀತಿ ಆಗಬಹುದು.

ಅನೂರಾಧ ಮಳೆಗೆ 'ಆನೆಗಂಪಲು' ಮಳೆ ಅಂತಾರೆ. ಈ ಮಳೆಗೆ ಆನೆಯೂ ಕಂಪಿಸುತ್ತೆ ಅನ್ನುವುದು ಇದರ ಅರ್ಥ. ಮುಂಗಾರಿನ ಆರಂಭದ ಮಳೆಗಳು ಮಲೆನಾಡಿನ ಮಳೆಗಳಾದರೆ ಅನಂತರದವು ಬಯಲುಸೀಮೆ ಮಳೆಗಳು. ಈ ಮಳೆಗಳಿಗೆ ಕೆರೆಕಟ್ಟೆಗಳು ತುಂಬಿ ಕೃಷಿಯ ಸುಭಿಕ್ಷತೆಗೆ ಕಾರಣವಾಗುತ್ತವೆ.

ಡಿಸೆಂಬರ್ ತಿಂಗಳ ಜ್ಯೇಷ್ಠ, ಮೂಲ, ಜನವರಿ ತಿಂಗಳ ಪೂರ್ವಾಷಾಢ, ಉತ್ತರಾಷಾಢ, ಫೆಬ್ರವರಿಯ ಶ್ರಾವಣ, ಧನಿಷ್ಠ, ಮಾರ್ಚ್ ತಿಂಗಳ ಪೂರ್ವಾಭಾದ್ರ ಉತ್ತರಾಬಾದ್ರ ಮಳೆಗಳು ಬಂದರೂ ಆದೀತು, ಬಾರದಿದ್ದರೂ ಆದೀತು. ಆದ್ರೆ 'ಉಗಾದಿ ಹೊತ್ತಿಗೆ ಉಗುಳು ನೀರು' ಅನ್ನುವ ಗಾದೆ ಮಾತಿದೆ. ಏನೇ ಆದ್ರೂ, ಉಗುಳು ನೀರಿನಂತಾದ್ರೂ ಉಗಾದಿ ಹೊತ್ತಿಗೆ ಮಳೆ ಬರಲೇಬೇಕೆಂಬುದು ಜನಪದರ ಆಶಯ. ಮಳೆ ನಕ್ಷತ್ರಗಳು, ಮಳೆ ಹಂಚಿಕೆ, ಅದರೊಟ್ಟಿಗೆ ಬರುವ ಬೆಳೆಗಳು, ಇದಕ್ಕೆ ಹೊಂದಿಕೊಂಡಂತೆ ಬರುವ ಹಬ್ಬ ಹರಿದಿನಗಳು, ಗ್ರಾಮೀಣ ಆಚರಣೆಗಳು ಜಾತ್ರೆ ರಥೋತ್ಸವಗಳು ಒಂದಕ್ಕೊಂದು ಮಿಳಿತವಾಗಿ ಗ್ರಾಮೀಣ ಸಂಸ್ಕೃತಿಯನ್ನು, ಕೃಷಿ ಸಂಸ್ಕೃತಿಯನ್ನು ವಿಶಿಷ್ಟವಾಗಿಸಿವೆ.

ಬೆಳೆ ವೈವಿಧ್ಯ ಹಾಗೂ ಜೀವ ವೈವಿಧ್ಯಗಳ ಬಗ್ಗೆ ನಾವು ಇಂದು ಕೇವಲ ಮಾತನಾಡ್ತೀವಿ. ಏನೆಲ್ಲಾ ನೀರಾವರಿ ಪದ್ಧತಿಗಳು ಬಂದಿದ್ದರೂ ಇಂದು ರೈತನ ಜಮೀನಿನಲ್ಲಿ ಐದಾರು ಬೆಳೆ ಕಾಣುವುದು ಕಷ್ಟಸಾಧ್ಯ. ಆದ್ರೆ ಹಿಂದೆ ಮಳೆ ಆಧರಿತ ಕೃಷಿಯಲ್ಲಿಯೇ, ಮಳೆ ನೀರನ್ನು ನಂಬಿಕೊಂಡು ರೈತ ತನ್ನ ಜಮೀನಿನಲ್ಲಿ ಪೋಣಿಸುತ್ತಿದ್ದ ಬೆಳೆ ವೈವಿಧ್ಯವನ್ನು ಒಮ್ಮೆ ಗಮನಿಸಿ, ಕೇವಲ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ 9 ತಿಂಗಳ ಅವಧಿಯಲ್ಲಿ ಏಕದಳ, ದ್ವಿದಳ, ಎಣ್ಣೆಕಾಳು ಬೆಳೆಗಳ ಜೋಡಣಾ ವಿಧಾನಕ್ಕೆ ಮಣ್ಣಿನ ಸಾರ ಸಂರಕ್ಷಣಾ ಕ್ರಮಗಳಿಗೆ ಜನ ಜಾನುವಾರು, ಪ್ರಾಣಿ ಪಕ್ಷಿಗಳನ್ನು ಸಲಹುತ್ತಿದ್ದ ಕೃಷಿ ವಿಧಾನಗಳಿಗೆ ಸಾಟಿಯಲ್ಲ.

ಪೂರ್ವ ಮುಂಗಾರಿನಲ್ಲಿ ಎಳ್ಳು ಉದ್ದು, ಅಲಸಂದೆ, ಹೆಸರು, ನವಣೆ, ಮಣ್ಣಿನ ಫಲವತ್ತತೆಗೆ ಸೆಣಬು. ಅನಂತರ ಮುಂಗಾರಿನಲ್ಲಿ ಹೊಲಬತ್ತ, ರಾಗಿ, ಅವರೆ, ತೊಗರಿ, ಹಾರಕ, ಸಾಮೆ, ಊದಲು, ಬರಗು, ಕೊರಲೆ, ಸಜ್ಜೆ, ಮೇವಿನ ಜೋಳ, ನೆಲಗಡಲೆ, ಮಡಿಕೆ ಕಾಳು, ಹಿಂಗಾರಿನಲ್ಲಿ ಜೋಳ, ಹುಚ್ಚೆಳ್ಳು, ಕುಸುಬೆ, ಹುರುಳಿ, ಗೋಧಿ, ಕಡಲೆ, ಬರಗು ಬೆಳೆಗಳು. ಈ ಬೆಳೆಗಳ ಮಧ್ಯದಲ್ಲಿ ಹಾಗಲ, ಹೀರೆ, ಪಡವಲ, ಕುಂಬಳ, ತೊಂಡೆ, ಸೌತೆ, ಸೋರೆ ಜಾತಿಯ ಬಳ್ಳಿ ತರಕಾರಿ ಬೆಳೆಗಳು, ಬಗೆಬಗೆಯ ಬೆರಕೆ ಸೊಪ್ಪುಗಳು, ಜಾನುವಾರುಗಳಿಗೆ ಮೇವು, ಮರಮುಟ್ಟಿನ ಗಿಡಗಳು, ಮಾವು, ಹಲಸು, ನೇರಳೆ, ಹುಣಿಸೆ, ಅತ್ತಿ, ಅಂಜೂರ, ಆಲ, ಅರಳಿ, ಮುಂತಾದ ಮರಗಿಡಗಳು. ಪಟ್ಟಿ ಮಾಡಿದ್ರೆ ಪ್ರಪಂಚದ ಜೀವವೈವಿಧ್ಯ ರೈತನ ಜಮೀನಿನಲ್ಲಿಯೂ ಇರ್ತಾ ಇತ್ತು. ಇಷ್ಟೆಲ್ಲಾ ವೈವಿಧ್ಯ ಇರುವ ವ್ಯವಸಾಯ ರೈತನಿಗೆ ಆರ್ಥಿಕಭದ್ರತೆ ಹಾಗೂ ಆನಂದ ಎರಡನ್ನೂ ತರ್ತಿತ್ತು.

ಕೃಷಿ ಸಂಸ್ಕೃತಿ ಹಾಗೂ ಆಹಾರ ಸಂಸ್ಕೃತಿ ಎರಡೂ ಪರಸ್ಪರ ಪೂರಕ ಅಂಶಗಳು. ಹಿಂದಿನ ಕೃಷಿಕರು 'ಬೆಳೆದಿದ್ದನ್ನು ತಿನ್ನುತ್ತಿದ್ರೊ ಅಥವಾ ತಿನ್ನೋದನ್ನು ಬೆಳೀತಿದ್ರೋ' ಹೇಳೋದು ಕಷ್ಟ. ಆದ್ರೆ ಜಮೀನಿನ ಬೆಳೆ ವೈವಿಧ್ಯತೆ ಅವರ ಆಹಾರ ವೈವಿಧ್ಯತೆಗೆ ನೆರವಾದದ್ದಂತೂ ಸತ್ಯ, ಆಹಾರದ ವಿಷಯದಲ್ಲಿ ಸಂಪೂರ್ಣ ಸ್ವಾವಲಂಬಿಗಳಾಗಿದ್ರು ಕೃಷಿಕರು. ಅನೇಕ ಹಿರಿಯ ಕೃಷಿಕರು ಹೇಳ್ತಾರೆ ಉಪ್ಪು, ಸೀಮೆಎಣ್ಣೆ, ಬೆಂಕಿಪೊಟ್ಟಣ ಬಿಟ್ರೆ ಹೊರಗಿನಿಂದ ನಾವು ಬೇರೇನನ್ನೂ ತರ್ತಿರಲಿಲ್ಲ ಅಂತ. ಹಿಂದಿನ ವ್ಯವಸಾಯ ಅಪಾರ ದೈಹಿಕ ಶ್ರಮ ಬೇಡ್ತಿದ್ದರಿಂದ, ಹಿಂದಿನ ರೈತರು ಆಜಾನುಬಾಹುಗಳಾಗಿದ್ದು, ರಟ್ಟೆ ಬಲದಿಂದಲೇ ಸುಸ್ಥಿರ ಕೃಷಿ ಬದುಕು ಕಟ್ಟಿಕೊಂಡಿದ್ರು.

ಮಳೆ ಆಧರಿತ ಜಮೀನಿನಲ್ಲಿ ಬೆಳೆಯುವ ಕಳೆ ಸಸ್ಯಗಳೇ ಬೆರಕೆ ಸೊಪ್ಪು. ಇದರಲ್ಲಿ ಔಷಧೀಯ ಗುಣ ಇದೆ, ಸತ್ವ ಇದೆ. ಮಹಿಳೆಯರು ಬೆರಕೆ ಸೊಪ್ಪು ಕುಯ್ಯುವಾಗ ಗಿಡದ ಕುಡಿ ಮಾತ್ರ ಚಿವುಟ್ತಾ ಇದ್ರು. ಇದರಲ್ಲಿ ಎಂತಹ ವೈಜ್ಞಾನಿಕ ಸತ್ಯ ಇದೆ ನೋಡಿ. ಬುಡಸಮೇತ ಗಿಡ ಕಿತ್ತು ಹಾಕಿದ್ರೆ ಅದರ ಸಂತತಿ ನಾಶವಾಗುತ್ತೆ. ಆದ್ರೆ ಹಾಗಾಗಬಾರದು. ಕಳೆಗಳು ಬೆಳೆಗಳ ಜತೆ ಇರಬೇಕು. ಕುಡಿ ಚಿವುಟಿದ್ರೆ ಗಿಡ ಒಂದಕ್ಕೆ ಎರಡಾಗಿ ಕವಲೊಡೆಯುತ್ತೆ, ಸೊಪ್ಪಿನ ಪ್ರಮಾಣ ಜಾಸ್ತಿ ಆಗುತ್ತೆ ಅಷ್ಟೇ ಅಲ್ಲ ಗಿಡಗಳ ಕುಡಿಯಲ್ಲಿಯೇ ಬೆಳವಣಿಗೆ ಚೋದಕಗಳು ಹೆಚ್ಚು ಇರೋದು. ತಿಂದರೆ ಎಂತಹ ಆರೋಗ್ಯ. ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆ ತಾಲ್ಲೂಕು ಲಕ್ಷ್ಮೀಪುರದ ರೈತ ಮಹಿಳೆಯೊಬ್ಬರನ್ನು ಬೆರಕೆಸೊಪ್ಪು ಪಟ್ಟಿ ಮಾಡಲು ಹೇಳಿದೆ. ಅವರು ಹೇಳ್ತಾ ಹೋದ್ರು ಅಣ್ಣೆಸೊಪ್ಪು (ಅಣ್ಣೆಸೊಪ್ಪು ತಿನ್ನೋಕೂ ಪುಣ್ಯ ಇರಬೇಕು ಅಂತ ಹಳ್ಳಿ ಗಾದೆ ಮಾತಿದೆ) ಕನ್ನೆಸೊಪ್ಪು, ಕಾಡುಕೀರೆ ಸೊಪ್ಪು, ಕಿಲಕೀರೆಸೊಪ್ಪು, ಮಳ್ಳಿಸೊಪ್ಪು, ತೂಕದ ಸೊಪ್ಪು, ಕೋಳಿಕಾಲುಸೊಪ್ಪು, ದೊಡ್ಡಪತ್ರೆ, ವಾಯು ನಾರಾಯಣಸೊಪ್ಪು, ಹೊನಗೊನೆ ಸೊಪ್ಪು, ಗರಗದ ಸೊಪ್ಪು, ಕಾಡುಸಬ್ಬಸಿಗೆ ಸೊಪ್ಪು, ಅಚ್ಚಿಲಿಕೆ ಸೊಪ್ಪು, ಹುಳಿಚಿಕ್ಕೆಸೊಪ್ಪು, ಮುಳ್ಳುಗೀರೆ ಸೊಪ್ಪು, ನೆಗ್ಗಿಲು ಮುಳ್ಳಿನ ಸೊಪ್ಪು, ತಿಮ್ಮಾಲೆ ಸೊಪ್ಪು, ಮಳೆ ಹುಯ್ದಾಗ ಜಮೀನಿನಲ್ಲಿ ಅರಳು ಎಲ್ಲಾ ಸೊಪ್ಪು ಅಂತ ಕಟ್ಟಿಮುಗಿಸಿದ್ರು. ಇಷ್ಟೇ ಅಲ್ಲ ಸಾರ್ ಇನ್ನೂ ನೂರಾರಿದೆ. ಯಾವ ಸೊಪ್ಪು ಕತ್ತರಿಸಿದಾಗ ಹಾಲು ಬರೋದಿಲ್ವೋ ಅದನ್ನೆಲ್ಲಾ ನೇರ ತಿನ್ನಬಹುದು ಅಂದ್ರು ಜತೇಲಿದ್ದವರು. ಅಷ್ಟರಲ್ಲಿ ಹಿರಿಯರೊಬ್ಬರು ಹೇಳದ್ರು 'ನಾವು ಯಾವ ಸೊಪ್ಪು ತಿನ್ನಬೇಕು ತಿನ್ನಬಾರದು ಅನ್ನೋದನ್ನು ನಿರ್ಧರಿಸಲು ಸುಲಭದ ವಿಧಾನ ಇದೆ. ಯಾವುದನ್ನು ಹಸು ದನ ತಿನ್ನಲ್ವೋ ಅದನ್ನು ನಾವೂ ತಿನ್ನಬಾರದು' ಅಂದ್ರು. ಸೊಪ್ಪು ತಿನ್ನುವ ವಿಚಾರದಲ್ಲಿ ಮನುಷ್ಯರಿಗಿಂತ ದನಗಳೇ ಮೇಲು ಅಂತಾಯ್ತಲ್ಲವೇ ?

ಹಿಂದಿನ ಕೃಷಿ ಸಂಸ್ಕೃತಿಯ ಅತ್ಯಂತ ಶ್ರೇಷ್ಠವಾದ ಅಂಶವೆಂದರೆ ಅವರು ಜಮೀನಿಗೆ ನೀಡುತ್ತಿದ್ದ ವಿಶ್ರಾಂತಿ. ಡಿಸೆಂಬರ್ ತಿಂಗಳಲ್ಲಿ ಬೆಳೆ ಒಕ್ಕಣೆ ಮಾಡಿ ಧಾನ್ಯ ಮನೆ ತುಂಬಿಕೊಂಡ ಮೇಲೆ ರೈತನಿಗೆ, ಜಮೀನಿಗೆ ವಿಶ್ರಾಂತಿ. ಮುಂದಿನ ಮುಂಗಾರಿನವರೆಗೆ ಮೂರು ತಿಂಗಳ ಕಾಲ ಮಣ್ಣಿಗೆ ತನ್ನನ್ನು ತಾನು ಪುನರುಜ್ಜೀವನಗೊಳಿಸಲು ಅವಕಾಶ. ಹಾಗಂತ ರೈತ ಸುಮ್ಮನೆ ಕೂತಿರ್ತಿತ್ತಿಲ್ಲ. ಊರಜಾತ್ರೆ, ದನಗಳ ಜಾತ್ರೆ, ತೇರು, ರಥೋತ್ಸವಗಳ ನಡುವೆಯೇ ಜಮೀನಿಗೆ ಕೆರೆಗೋಡು ಮಣ್ಣನ್ನು ಹೊಡೀತಿದ್ದ, ಹಟ್ಟಿಗೊಬ್ಬರ ಹಾಕ್ತಿದ್ದ, ಹಸುರೆಲೆಗೊಬ್ಬರ, ಹೊಂಗೆ, ಬೇವು ಹೀಗೆ ಸಾರಯುಕ್ತ ಗೊಬ್ಬರ ಮಣ್ಣಿಗೆ ಸೇರಿಸ್ತಿದ್ದ. ಮಣ್ಣು ನವಚೈತನ್ಯದಿಂದ ತುಂಬಿರುವಂತೆ ಮಾಡ್ತಿದ್ದ, ತನ್ನ ಆರೋಗ್ಯ, ಜಾನುವಾರುಗಳ ಆರೋಗ್ಯ, ಮಣ್ಣಿನ ಆರೋಗ್ಯ ಮೂರನ್ನೂ ಸಂರಕ್ಷಿಸುತ್ತಿದ್ದ.

ಗ್ರಾಮೀಣರು ಆಚರಿಸುವ ಹಬ್ಬಗಳು, ಅವರ ಕೃಷಿ ಸಂಸ್ಕೃತಿಗೆ ಅತ್ಯಂತ ಪೂರಕವಾಗಿದ್ದು. ಕೃಷಿಕನನ್ನು ಸಲಹುವ ಮಣ್ಣು, ನೀರು, ಬೆಳೆ, ಸಸ್ಯ, ಜಾನುವಾರುಗಳು, ಗಿಡಮರಗಳು ಇವುಗಳಿಲ್ಲದ ಹಬ್ಬಗಳನ್ನು ಊಹಿಸಲೂ ಅಸಾಧ್ಯ. ತಮ್ಮ ಬದುಕಿನ ಭಾಗವೇ ಆಗಿದ್ದ ಕೃಷಿಗೆ ಅವರು ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದರಿಂದ, ದನಗಳ ಜಾತ್ರೆ, ದೇವರ ತೇರು, ರಥೋತ್ಸವಗಳನ್ನು ಅವರು ಆಚರಿಸುತ್ತಿದ್ದುದು ಸುಗ್ಗಿ ಕಾಲದಲ್ಲಿ. ದವಸಧಾನ್ಯಗಳನ್ನು ಕಣಜಗಳಲ್ಲಿ ತುಂಬಿದ ಮೇಲೆ, ರೈತ ಸಾಮುದಾಯಿಕ ಕಾರ್ಯಗಳಿಗೆ ಮಹತ್ವ ನೀಡಿದ್ದರಿಂದಲೇ ಸಾಲುಸಾಲು ಜಾತ್ರೆಗಳನ್ನು ಸಂಕ್ರಾಂತಿಯಿಂದ ಹಿಡಿದು ಯುಗಾದಿವರೆಗೆ ಕಾಣಬಹುದು. ಅದು ಒಂದು ಜಾತ್ರೆಯಲ್ಲ... ಜಾತ್ರೆಗಳ ಸರಮಾಲೆ.

'ಸಂಕ್ರಾಂತಿ' ಸುಗ್ಗಿಯ ಹಬ್ಬ. ಹೊಸ ಅಕ್ಕಿಯಿಂದ ಹುಗ್ಗಿ ತಯಾರಿಸುವ, ಎಳ್ಳು ಬೆಲ್ಲ ಹಂಚುವ ಹಬ್ಬ. 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತನಾಡಿ' ಅನ್ನುವ ನಾಣ್ಣುಡಿಯಂತೆ ಹಳ್ಳಿಗಳಲ್ಲಿ ಹಿರಿಯರು ಸಣ್ಣಪುಟ್ಟ ಮನಸ್ತಾಪಗಳಿಂದ ದೂರಾದ ರೈತ ಕುಟುಂಬಗಳನ್ನು ಎಳ್ಳುಬೆಲ್ಲದ ಪರಸ್ಪರ ಹಂಚಿಕೆಯಿಂದ ಒಂದು ಮಾಡೋರಂತೆ. ಚಳಿಗಾಲದ ಸಂದರ್ಭದಲ್ಲಿ ಬರುವ ಈ ಹಬ್ಬಕ್ಕೆ ಸೊಗಡಿನ ಅವರೆ ಸದಾ ಜತೆಗಾರ. ಸೂಲಂಗಿ ತುಂಬಿದ ಕಬ್ಬಿನ ಗದ್ದೆಗಳ ಸಾಲು, ತುಂಬಿದ ಕಣಗಳು, ವರುಷದ ಶ್ರಮಸಾರ್ಥಕವಾದ ಭಾವ ಸಂಕ್ರಾಂತಿಯ ಸೊಬಗ ಹೆಚ್ಚಿಸುತ್ತಿದ್ದವು. ಎಳ್ಳು, ನೆಲಗಡಲೆ, ಕೊಬ್ಬರಿ, ಹುರಿಗಡಲೆ, ಬೆಲ್ಲ ಸೇರಿಸಿ ತಯಾರಿಸುತ್ತಿದ್ದ 'ಪಂಚಕಜ್ಜಾಯ' ದುಡಿದ ದೇಹಕ್ಕೆ ಎಣ್ಣೆಯ ಅಂಶಸೇರಿಸಿ, ಬಿರಿದ ಚರ್ಮದ ಆರೈಕೆ ಮಾಡ್ತಿತ್ತು.

ಸಂಕ್ರಾಂತಿ 'ಜಾನುವಾರುಗಳ ಹಬ್ಬ'. ತಮ್ಮ ಬೆನ್ನೆಲುಬಾಗಿ ದುಡಿದ ಎತ್ತು ದನಗಳಿಗೆ ರೈತರು ಅಕ್ಕರೆ ತೋರುತ್ತಿದ್ದ ಹಬ್ಬ. ಅವುಗಳ ಮೈತೊಳೆದು, ಅಲಂಕಾರ ಮಾಡಿ ಊರ ತುಂಬಾ ಮೆರವಣಿಗೆ ಮಾಡಿ, ಸಂಜೆ ಊರ ಮುಂದಿನ ಗುಡಿ ಹತ್ರ 'ಕಿಚ್ಚು ಹಾಯಿಸಿ ಕೆಚ್ಚು ತುಂಬಿ' ಸಡಗರ ಪಡುವ ಹಬ್ಬ ಸಂಕ್ರಾಂತಿ. ಅನೇಕ ಕಡೆಗಳಲ್ಲಿ 'ಎತ್ತಿನ ಗಾಡಿಗಳ ಓಟದ ಸ್ಪರ್ಧೆಯೂ ಏರ್ಪಾಡಾಗುತ್ತಿತ್ತು. ಜನ ಜಾನುವಾರುಗಳಿಗೆ ಚೇತನ ತುಂಬುತ್ತಿತ್ತು.

ಮಾವು - ಬೇವಿನ ಹಬ್ಬ ಯುಗಾದಿ. ಬೇವು - ಬೆಲ್ಲದ ಸಿಹಿ ಕಹಿ ಮಿಶ್ರಣದ ಹಬ್ಬ. ದಕ್ಷಿಣ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ಯುಗಾದಿಯ ಸಂದರ್ಭದಲ್ಲಿ 'ಹೊನ್ನೇರು' ಪೂಜೆ ಮಾಡುತ್ತಾರೆ. ಒಂದೂರಿನ ಅತ್ಯುತ್ತಮವಾದ ಜೋಡೆತ್ತಿಗೆ ಆರುಹೂಡಿ, ಒಂದೆರಡು ಸಾಲು ಉಳುತ್ತಾರೆ. ಇದೇ 'ಹೊನ್ನೇರು' ಇದೇ ಸಂದರ್ಭದಲ್ಲಿ ಆ ಊರ ಗೌಡರು ತಾವು ಸಂಗ್ರಹಿಸಿದ ಅತ್ಯುತ್ತಮ ಬಿತ್ತನೆ ಬೀಜವನ್ನು ಸಣ್ಣ ಸಣ್ಣ ಗುಂಪುಮಾಡಿ, ಬಟ್ಟೆಯಲ್ಲಿ ಕಟ್ಟಿ, ನೇಗಿಲಿಗೆ ಕಟ್ಟುತ್ತಾರೆ. ಪ್ರತಿನಿತ್ಯ ಪೂಜೆಯ ಹೆಸರಿನಲ್ಲಿ ನೀರಿನ ಅಭಿಷೇಕ. ಒಂದು ವಾರದ ಹಬ್ಬದ ಆಚರಣೆಗಳು ಮುಗಿಯುವ ವೇಳೆಗೆ ಬೀಜದ ಗಂಟು ತೆರೆದ್ರೆ ಅವು ಅಲ್ಲೆ ಮೊಳಕೆ ಒಡೆದಿರುತ್ತಿತ್ತು. ಯಾವುದು ಉತ್ತಮವಾಗಿ ಮೊಳಕೆ ಒಡೆದಿದ್ಯೋ

ಅದು ಉತ್ತಮ ಬೀಜ, ಆ ಬೆಳೆ ಉತ್ತಮವಾಗಿ ಬರುತ್ತೆ ಅನ್ನುವುದು ಕೃಷಿಕರ ನಂಬಿಕೆ. ಆಧುನಿಕ ವಿಜ್ಞಾನ ತಿಳಿದಿಲ್ಲದ ಗ್ರಾಮೀಣರು ಹಿಂದೆ ನಡೆಸುತ್ತಿದ್ದ ಬಿತ್ತನೆ ಬೀಜಗಳ ಮೊಳಕೆ ಪರೀಕ್ಷೆ ವಿಧಾನ ಇದು. ಪ್ರತಿಯೊಂದು ಊರಿನ ಗೌಡನ ಮನೆಯಲ್ಲಿ ಬಿತ್ತನೆ ಬೀಜ ದೊರೆಯುತ್ತದೆ.. ವ್ಯವಸಾಯದ ಅರ್ಧ ಯಶಸ್ಸಿಗೆ ಕಾರಣವಾಗುವ ಬಿತ್ತನೆ ಬೀಜಗಳ ಉತ್ಪಾದನೆ, ಸಂಗ್ರಹಣೆ ಪರಸ್ಪರ ವಿನಿಮಯ ಹಳ್ಳಿಗಳಲ್ಲೇ ಆಗಿ ಬೀಜ ಸ್ವಾವಲಂಬನೆ ಸ್ವಾಭಾವಿಕವಾಗಿಯೆ ಆಗುತ್ತಿತ್ತು. ಹೋರಿಗಳನ್ನು ಸಾಕುವ ಹೋರಿ ಗೌಡರಿಗೂ ಬಿತ್ತನೆ ಬೀಜಗಳ ಸಂಗ್ರಹಕಾರರಾದ ಬೀಜದ ಗೌಡರಿಗೂ ಹತ್ತೂರಲ್ಲಿ ಭಾರೀ ಮರ್ಯಾದೆ.

'ಉಂಡದ್ದೆ ಉಗಾದಿ ಮಿಂದದ್ದೆ ದೀಪಾವಳಿ' ಎಂದು ಹೆಳ್ತಾರೆ. ದವಸಧಾನ್ಯಗಳ ತುಂಬಿದ್ದ ಕಾಲಕ್ಕೆ ರಸದೌತಣ ಮಾಡುವುದು ಯುಗಾದಿ ವಿಶೇಷ. ಜಲಸಮೃದ್ಧಿ ಇದ್ದ ಕಾಲದಲ್ಲಿ ಎಣ್ಣೆ - ನೀರಿನ ಅಭ್ಯಂಜನ ಮಾಡಿ ದೇಹಕ್ಕೆ ಕಸುವನ್ನು ತುಂಬ್ತಿದ್ದು ದೀಪಾವಳಿ ವಿಶೇಷ. ಮೀಯಲು ಯೋಗ್ಯವಾದ ಚಳಿಗಾಲದಲ್ಲಿ ದೀಪಾವಳಿ ಬರುವುದೂ ಕೂಡ ಗಮನಿಸಬೇಕಾದ ಅಂಶ.

ಸಮೀಪದ ಬಾವಿಯಿಂದ 'ನೀರು - ಮರಳು' ಸೋಸಿ ತಂದು, ಮಣ್ಣಿಂದ ಗಣಪನ ಮಾಡಿ ಗೌರಿ ಹಾಗೂ ಗಣೇಶನನ್ನು ಪೂಜಿಸುವ ಹಬ್ಬವೇ 'ಗೌರಿಗಣೇಶನ ವ್ರತ', 'ಸಗಣಿ ಉಂಡೆಗೆ ಗರಿಕೆ ಸಿಕ್ಕಿಸಿದ್ರೂ' ಗಣಪ ಸಿದ್ಧ. ಆದ್ರೆ ನೋಡಿ ಗರಿಕೆ ರೈತನ ನಿದ್ದೆಗೆಡಿಸುವ ಕಳೆ. ಗರಿಕೆ ಇದ್ದ ಜಮೀನಿನಲ್ಲಿ ಏನೂ ಬೆಳೆಯಲು ಸಾಧ್ಯವಿಲ್ಲ. ಇಂತಹ ಕಳೆಯನ್ನೂ ರೈತರು ಪೂಜೆ ಮಾಡ್ತಿದ್ರು. ಅದು ವಿಶೇಷ. ಅಮ್ಮಾ ತಂದೇ ಕಾಪಾಡು ಅಂತ ಎಂತಹ ಕಡಿದಾದ ಬೆಟ್ಟವನ್ನು ಹತ್ತಿದ್ರೂ ಬೆಟ್ಟವೇ ಕಾಲಬುಡಕ್ಕೆ ಬಂದು ಬೀಳುತ್ತೆ ಅಂತ ಹಳ್ಳಿಜನ ಹೇಳ್ತಾರೆ. ಎದುರಾಗುವ ಕಷ್ಟಗಳ ಪರಿಹಾರ ಮಾಡು ಅಂತ ಸಮಸ್ಯೆ ತಂದೊಡ್ಡುವವರನ್ನೇ ಬೇಡಿಕೊಂಡ್ರೆ ! ಎಂತಹ ನಿರ್ವಹಣಾ ಕೌಶಲ ನೋಡಿ. ಹಾಸನಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಹಳ್ಳಿ ಮೈಸೂರಿನ ಕೃಷಿಕ ರೊಬ್ಬರು ಹೇಳ್ತಿದ್ರು. 'ಅವರ ಅಡಿಕೆ, ತೆಂಗಿನ ತೋಟದಲ್ಲಿ ತುಂಬಾ ಕಳ್ಳತನ ಆಗ್ತಿತ್ತಂತೆ. ಕಳ್ಳರು ಅಕ್ಕಪಕ್ಕದ ಜನಗಳೇ. ಅವರು ತುಂಬಾ ಆಲೋಚನೆ ಮಾಡಿ, ಕಳ್ಳರನ್ನು ಕರೆದು ತೋಟ ಕಾಯುವ ಕೆಲಸ ನೀಡಿದರಂತೆ. ಕೆಲವೇ ದಿನಗಳಲ್ಲಿ ಕಳ್ಳತನ ನಿಂತು ಹೋಯ್ತು ಅನ್ನುವುದ ಅವರ ದೃಢಮಾತು. ಹಳ್ಳಿಗರದ್ದು ಅತ್ಯುತ್ತಮ ನಿರ್ವಹಣಾ ವಿಧಾನ. ಸಮಸ್ಯೆಗಳಲ್ಲೂ ದೇವರನ್ನು ಕಾಣುವ ಜನಪದ ಪ್ರೀತಿ, ನಂಬಿಕೆ, ಗೌರವ. ಹೀಗಾಗಿಯೇ ಗರಿಕೆ, ಇಲಿ, ಹಾವು, ಕಾಗೆ, ನವಿಲು, ಗರುಡ, ಹನುಮ, ಹಂಸ, ಹಸು ಎಲ್ಲವೂ ಗೌರವಯುತ ಸ್ಥಾನವನ್ನು ಪಡೆಯುತ್ತವೆ. ಜನರ ಪ್ರೀತಿ ಸಂಪಾದಿಸುತ್ತವೆ. 'ನಿಸರ್ಗದಲ್ಲಿ ಕೆಟ್ಟದ್ದು ಅಥವಾ ಕಳೆ ಎಂಬುದಿಲ್ಲ' ಎಂಬ ಸತ್ಯ ಸಾರ್ವತ್ರಿಕವಾಗುತ್ತದೆ. ಇದು ಕೃಷಿ ಸಂಸ್ಕೃತಿಯ ವೈಶಿಷ್ಟ್ಯ.

ಮುಂಗಾರಿನಲ್ಲಿ ಬೆಳೆಗಳು ಗರ್ಭಧರಿಸಿ ಹೊಡೆ ಹೊರಡುವ ಹಂತದಲ್ಲಿ, ಕಾಳುಗಗಳಲ್ಲಿ ಹಾಲು ತುಂಬುವ ಹಂತದಲ್ಲಿ ಭೂತಾಯಿಯೇ ಬಸಿರಾಗಿದ್ದಾಳೇನೋ ಅನ್ನುವಂತೆ ರೈತ ಸಂಭ್ರಮಿಸುತ್ತಾನೆ. ಭೂತಾಯ ಬಸಿರ ಬಯಕೆ ತೀರಿಸಲು ಬಗೆಬಗೆಯ ಅಡುಗೆ ಮಾಡಿ, ಹೊಲಗದ್ದೆಗಳಲ್ಲಿ ಆಕೆಗೆ ಉಣಬಡಿಸುತ್ತಾನೆ. ಅನೇಕ ಹಳ್ಳಿಗಳಲ್ಲಿ ಇದೇ ಸಂದರ್ಭದಲ್ಲಿ ಅನ್ನಕ್ಕೆ ಅರಿಸಿನ ಬೆರೆಸಿ ಗದ್ದೆ ತುಂಬಾ ಚೆಲ್ಲುತ್ತಾರೆ. ಇದಕ್ಕೆ 'ಸರಗು ಹಾಸುವುದು' ಅಂತ ಕರೀತಾರೆ. ಆಚರಣೆಯ ಭಾಗಗಳ ಹಿಂದಿನ ವೈಜ್ಞಾನಿಕ ಅಂಶಗಳ ವಿಶ್ಲೇಷಣೆ ಮಾಡಿದ್ರೆ, ಬೆಳೆ ಕಾಳು ತುಂಬುವ ಹಂತದಲ್ಲಿ ಕೀಟಗಳ ಬಾಧೆ ಜಾಸ್ತಿ. ಅನ್ನ, ಪುರಿ, ಕಡಲೆ, ಬೆಲ್ಲ ಎರಚುವುದರಿಂದ ಕೀಟಗಳ ಶತೃ ಪಕ್ಷಿಗಳು ಬೆಳೆಗಳತ್ತ ಆಕರ್ಷಿತವಾಗುತ್ತವೆ. ಕೀಟಗಳನ್ನು ಆಹಾರವಾಗಿ ತಿಂದು ರೈತನ ಬೆಳೆ ಸಂರಕ್ಷಣೆ ಮಾಡುತ್ತವೆ. ಪ್ರಾಣಿ ಪಕ್ಷಿಗಳಿಗೂ ಆಹಾರ ದೊರಕುವುದರಿಂದ ಬೆಳೆ ಸುರಕ್ಷಿತವಾಗಿರುತ್ತೆ. ಹಬ್ಬಗಳ ಆಚರಣೆಯ ಹಿಂದಿನ ವೈಜ್ಞಾನಿಕ ಸತ್ಯ ಇದು. ಅರಿಸಿನಕ್ಕೆ ಶಿಲೀಂಧ್ರನಾಶಕ ಗುಣ ಇರುವುದರಿಂದ ಅದು ಕೆಲವು ರೋಗಗಳ ನಿಯಂತ್ರಣ ಮಾಡುತ್ತೆ ಅಂತಾರೆ ಅನುಭವಿ ಕೃಷಿಕರು.

ದೀಪಾವಳಿಯಲ್ಲಿ ಸಗಣಿಯದ್ದೆ ಕಾರುಬಾರು. ಸಗಣಿಯ ಪುಟ್ಟ ಉಂಡೆ ಮಾಡಿ, ಅದಕ್ಕೆ 'ಕೆರಕ' ಅಂತ ಹೆಸರು ಇಟ್ಟು, ಬಾಗಿಸಿ ಎರಡೂ ಬದಿಗಿಟ್ಟು ಪೂಜೆ ಮಾಡ್ತಾರೆ. ಮನೆ ಸುಣ್ಣಬಲಿದು, ಹೊಳೆ ಸಾಲಿನ ಕೆಮ್ಮಣ್ಣಿನ ಪಟ್ಟೆ ಬಳೀತಾರೆ. ಸಗಣಿಯ ಕಟ್ಟೆ ಕಟ್ಟಿ ತಾವು ಬೆಳೆದ ಧಾನ್ಯದ ತೆನೆಗಳನ್ನು ಸಿಕ್ಕಿಸಿ ಸಡಗರ ಸಂಭ್ರಮದಿಂದ ಪೂಜೆ ಮಾಡ್ತಾರೆ. ಮಣ್ಣಿನ ಸತ್ವ ಹೆಚ್ಚಿಸುವ ಹಟ್ಟಿ ಗೊಬ್ಬರ ನೀಡುವ 'ತಿಪ್ಪೆಗೆ' ಈ ಹಬ್ಬದಲ್ಲಿ ಆದ್ಯತೆ. ಕಸಕಡ್ಡಿ ತುಂಬಿರುವ ತಿಪ್ಪೆಗೂ ಅಂದು ಪೂಜೆ ! ಮಾಲಿನ್ಯದಲ್ಲೂ ಪಾವಿತ್ರ್ಯತೆ ಕಾಣುವುದು ಹಳ್ಳಿಗರ ಗುಣ. ತಿಪ್ಪೆ ಇರುವ ಪರಿಸರ ಶುದ್ಧವಾಗಿದ್ರೆ ಅನುಕೂಲ. ಸುತ್ತಮುತ್ತಲ ಜನರಿಗೆ ಪೂಜೆಯ ನೆಪದಲ್ಲಿ ಸೇರುವ ನೀರು ಕಸವನ್ನು ಕಳೆಯುವಂತೆ ಮಾಡಿ - ತೇವಾಂಶ ಸಂರಕ್ಷಣೆ ಮಾಡಿ ಕಳಿತ ಗೊಬ್ಬರ ತಯಾರಾಗುವಂತೆ ಮಾಡುತ್ತೆ. ಜಾನುವಾರುಗಳ ಸಗಣಿ, ಗಂಜಲ, ಕೃಷಿ ತ್ಯಾಜ್ಯಗಳ 'ತಿಪ್ಪೆ' ವ್ಯವಸಾಯದ ಬದುಕಿನ ಅವಿಭಾಜ್ಯ ಅಂಗ ಎಂದು ಸಾರುವುದು ಈ ಆಚರಣೆಯ ಹಿಂದಿನ ಆಶಯ.

ಆಧುನಿಕ ಕೃಷಿ ವಿಜ್ಞಾನಕ್ಕೆ ನೂರಿನ್ನೂರು ವರುಷಗಳ ಇತಿಹಾಸ ವಿರಬಹುದು. ಆದ್ರೆ ಕೃಷಿಕರ ಜ್ಞಾನಕ್ಕೆ ಐದು ಸಾವಿರ ವರುಷಗಳ ಪರಂಪರೆ ಇದೆ. ಸಾವಯವ ಕೃಷಿಕ ನಾರಾಯಮ ರೆಡ್ಡಿ ಒಮ್ಮೆ ಕೇಳಿದ್ರು 'ಹಸು ಒಂದೇ ಬಾರಿಗೆ ಗಂಜಲ ಹಾಕುತ್ತೆ ಆದ್ರೆ ಎತ್ತು ನಿಧಾನವಾಗಿ ಗಂಜಲ ಹುಯ್ಸುತ್ತೆ' ಯಾಕೆ ಹೇಳಿ. ಉತ್ತರ ಹೊಳೀಲಿಲ್ಲ. ಅವರೇ ಹೇಳಿದ್ರು. ಸಾಮಾನ್ಯವಾಗಿ ಎತ್ತುಗಳು ಮೂತ್ರ ಮಾಡೋದು ಹೊಲ ಉಳುವಾಗ ಹೀಗಾಗಿ ಜಮೀನು ಪೂರ್ಣ ಗಂಜಲದಿಂದ ನೆನೆಯಲಿ ಅಂತ ನಿಧಾನವಾಗಿ ಹುಯ್ಸುತ್ತೆ ಅಂತ. ಅವುಗಳ ದೇಹ ರಚನೆ ಶಾಸ್ತ್ರ ಏನು ಹೇಳುತ್ತೋ ಆದ್ರೆ ಈ ನಡೆಯನ್ನು ಒಬ್ಬ ರೈತ ಅರ್ಥೈಸಿರುವ ರೀತಿಗೆ ಮೆಚ್ಚುಗೆ ಸೂಚಿಸಲೇಬೇಕಲ್ವಾ.

ಹಳ್ಳಿ ಕಡೆ ಬೆರಣಿ ತಟ್ತಾರೆ. ಅದು ಒಂದು ಕಲೆ ಅಂತ ಎಷ್ಟೋ ಜನರಿಗೆ ಅರಿವಿಲ್ಲ. ಹಸು, ಎಮ್ಮೆ ಸಗಣಿಯನ್ನು ಆಡು, ಕುರಿ ಹಿಕ್ಕೆಗಳನ್ನು ಹದವಾಗಿ ಮಿಶ್ರಣ ಮಾಡಿ, ಬತ್ತದ ಹೊಟ್ಟು ಸೇರಿಸಿ ಬೆರಣಿ ತಟ್ಟಿರುತ್ತಾರೆ. ತಟ್ಟುವವರ ಕೈಬೆರಳ ಗುರುತು ; ಬೆರಣಿ ಮೇಲೆ ಮೂಡಿರುತ್ತೆ. ಒಣಗಿದ ಬೆರಣಿಯನ್ನು ಒಂದರ ಮೇಲೊಂದು ಸೇರಿಸುವಾಗ ಜಾರದಂತೆ ಇದು ತಡೆಯುತ್ತೆ. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದ ಕಡೆ ಬೆರಣಿಯ ಮೇಲೆ ಬೆಣ್ಣೆ ಕಾಯಿಸಿದ ತುಪ್ಪ ಹಾಕಿ ಮನೇಲಿ ಬೆಳಗ್ಗೆ ಸಂಜೆ ಉರಿಸುವುದರಿಂದ ಹಾನಿಕಾರಕ ಸೂಕ್ಷ್ಮಜೀವಿಗಳು ನಾಶವಾಗ್ತವೆ ಎಂಬ ನಂಬಿಕೆ. ಸೊಳ್ಳೆ ನಿರ್ಮೂಲನೆ ಆಗುತ್ತೆ. ಉತ್ತಮ ವಾತಾವರಣ ನಿರ್ಮಾಣವಾಗಿ, ಆರೋಗ್ಯ ಉತ್ತಮವಾಗುತ್ತೆ ಅಂತ ಇದೆ. ಮೈಸೂರು ಜಿಲ್ಲೆ ಹುಣಸೂರು, ಹೆಚ್.ಡಿ. ಕೋಟೆ ಈ ಭಾಗದಲ್ಲಿ ನೈಸರ್ಗಿಕ ಸೊಳ್ಳೆ

ವಿಕರ್ಷಕಗಳನ್ನು ರೈತರೇ ತಯಾರಿಸ್ತಾರೆ. ಸಗಣಿ, ಗಂಜಲ ಇದ್ದಿಲಪುಡಿ, ಜಿಗುಟು ಬೆರೆಸಿ ಅದಕ್ಕೆ ತುಳಸಿ, ಗಂಧ, ಲಕ್ಕಿ, ಪುದೀನ, ಬೇವಿನ ಎಲೆ ಪುಡಿ ಸೇರಿಸಿ ಬೆರಣಿ ರೀತಿ ತಟ್ಟಿ ಒಣಗಿಸಿ ಇಟ್ಟು ಸೊಳ್ಳೆ ಬತ್ತಿ ತಯಾರು. ಕೊಟ್ಟಿಗೇಲಿ, ಮನೆ ಮೂಲೇಲಿ ಇದನ್ನು ಉರಿಸಿದ್ರೆ ಸೊಳ್ಳೆ, ನೊಣಮಾಯ. ವಾತಾವರಣ ಆನಂದಮಯ. 'ಹೋಗು ಅನ್ನಲಾಗದೆ ಹೊಗೆ ಹಾಕಿದ್ರು' ಅನ್ನುವ ಗಾದೆಯಂತೆ ಪೇಟೆ ಜನ ಕ್ಯಾನ್ಸರ್ ಕಾರಕ ರಸಾಯನಿಕ ಸೊಳ್ಳೆ ಬತ್ತಿಯ ಹೊಗೆ ಹಾಕಿ ನೆಂಟರನ್ನು ತಮ್ಮ ಆರೋಗ್ಯವನ್ನು ದೂರ ಮಾಡ್ಕೊತಿದ್ದಾರೆ. ಹಳ್ಳಿಗರ ನೆಲ ಸಂಸ್ಕೃತಿ ಎಂತಹ ಪರಿಹಾರ ಇಟ್ಟಿದೆ ನೋಡಿ.

'ಅಗಲವಾಗಿ ಮಾಡುವ ಬದಲು ಆಳವಾಗಿ ಮಾಡು' ಅನ್ನುವುದು ಅನುಭವಿ ಕೃಷಿಕರ ಮಾತು. ತುಂಡು ಜಮೀನಿದ್ರೂ ಶ್ರದ್ಧೆಯಿಂದ ಬೇಸಾಯ ಮಾಡಿದ್ರೆ ಬದುಕು ಕಟ್ಟಬಹುದು ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ಹುಣಸೂರು ತಾಲ್ಲೂಕು ಚಿಲ್ಕುಂದಲ್ಲಿ ಕೇವಲ ಹತ್ತುಗುಂಟೆ ಅಡಕೆ ತೋಟ ಹೊಂದಿದ್ದ ಕೃಷಿ ಕುಟುಂಬ ತನ್ನ ಎಂಟು ಜನ ಮಕ್ಕಳಿಗೆ ಸುಸ್ಥಿರವಾಗಿ ಬದುಕುವ ಮಾರ್ಗ ತೋರಿಸಿದೆ. ಆಳವಾಗಿ ಬೇಸಾಯ ಮಾಡು, ಅಗಲ ನೋಡಬೇಡ ಎನ್ನುವುದರ ಅರ್ಥ ಇದು.

ಬಾಗಾಯ್ತನ್ನು ಪೂರ್ಣವಾಗಿ ಒಂದು ಸಂಸಾರಕ್ಕೆ ಹೋಲಿಸಬಹುದು. ಯಾವಾಗಲೂ ಸಹ ತೆಂಗಿನ ಮರ ತಲೇಲಿ ಎಳನೀರು ಹೊತ್ತಿರುತ್ತೆ. ಅದು ಮನೆಯ ಯಜಮಾನನ ತರಹ, ಯಾವ ಸಂದರ್ಭದಲ್ಲಿ ಯಾರೇಬಂದ್ರು ಕುಡಿಯಲು ನೀರಿತ್ತು ಬನ್ನಿ ಒಳಗೆ ಅಂತ ಕರೆಯುವ ರೀತಿಯಲ್ಲಿ ತೆಂಗಿನ ಮರ. ಮನೇಲಿರುವ ನಾಲ್ಕಾರು ಜನ ದುಡಿಯುವ ಮಕ್ಕಳಿಗೆ ಅಡಕೆ ಮರಗಳನ್ನು ಹೋಲಿಸಬಹುದು. ಮನೆಯನ್ನು ಶುಚಿಯಾಗಿ ಇಟ್ಟುಕೊಂಡಿರುವ ಗೃಹಿಣಿಗೆ ಎಲೆ ಹಂಬನ್ನು ಹೋಲಿಸಬಹುದು. ಸಂಸಾರದಲ್ಲಿ ನಾಲ್ಕಾರು ಜನ ಮಕ್ಕಳು ಮರಿ ಇರುವ ರೀತಿಯಲ್ಲಿ ಬಾಳೆ ಗಿಡಗಳು ಇರುತ್ವೆ. ಬಾಗಾಯ್ತು ಅನ್ನುವ ವ್ಯವಸಾಯವೂ ಒಂದೇ ಸಂಸಾರವೂ ಒಂದೇ' ಅಂತ. ಬಹುಮಹಡಿ ಬೆಳೆ ಪದ್ಧತಿ, ಬೆಳೆ ವೈವಿಧ್ಯ ಅಂತ ಈಗ ಹೇಳ್ತೀವಿ. ವ್ಯವಸಾಯದ ಸುಸ್ಥಿರತೆಗೆ, ಬದುಕಿನ ವರಮಾನಕ್ಕೆ ಹಿರಿಯರು ಕಂಡುಕೊಂಡ ಅತ್ಯುತ್ತಮ ಪರಿಹಾರ ಬಾಗಾಯ್ತು ಅಥವಾ ತೋಟ. ಬಾಳೆಯಿಂದ ಪ್ರತಿನಿತ್ಯ ಆದಾಯ, ಎಲೆ ಹಂಬಿನಿಂದ ವಾರಕ್ಕೊಮ್ಮೆ ದುಡ್ಡು ಅಡಕೆಯಿಂದ, ತೆಂಗಿನಿಂದ ವರುಷಕ್ಕೊಮ್ಮೆ ಇಡಿಗಂಟು. ಹಾಗಾಗಿಯೇ ಹಿಂದಿನ ಕೃಷಿಕರು ಕೃಷಿಯಿಂದ ಸಂತೃಪ್ತರಾಗಿದ್ರು. 'ಕೃಷಿಯೂ ಒಂದೇ ಕುಟುಂಬವೂ ಒಂದೇ' ಎನ್ನುವ ಮಾತು ಕೃಷಿ ಸಂಸ್ಕೃತಿಯಲ್ಲದೇ ಬೇರೆಲ್ಲಿ ಕಾಣಲು ಸಾಧ್ಯ.

ಅಡಕೆ ತೋಟದಲ್ಲಿ ಬಾಳೆ ಇರಬೇಕು, ಅನ್ನುವುದು ಹಿರಿಯರ ಅನುಭವ. ಮೊದಲು ಬಾಳೆ ಅಡಕೆಗೆ ನೆರಳಾಗಿರುತ್ತೆ. ಮಳೆಗಾಲದಲ್ಲಿ ಹೆಚ್ಚಾದ ನೀರು ಹೀರಿಕೊಳ್ಳುತ್ತೆ. ಬೇಸಗೆಯಲ್ಲಿ ನೀರು ಬಿಟ್ಟು ಕೊಡುತ್ತೆ. ಬಾಳೆಕಂಬವನ್ನು ಕಡಿದಾಗ ಝುಳ್ಳನೆ ನೀರು ಚಿಮ್ಮುವುದು ಇದಕ್ಕೆ ಸಾಕ್ಷಿ. ಇದು ಅನುಭವದ ಮಾತು. ಭೂಮಿಯ ಮೇಲೆ, ಬೆಳೆಗಳ ಮೇಲೆ ಚಂದ್ರನ ಗುರುತ್ವಾಕರ್ಷಣೆಯ ಪ್ರಭಾವ ಇದೆ ಅನ್ನುವುದು ಹಿರಿಯ ಕೃಷಿಕರಿಗೆ ಗೊತ್ತಿತ್ತು. ಶುಕ್ಲ ಪಕ್ಷದಲ್ಲಿ ಬೇರುಗಳ ಚಟುವಟಿಕೆ ಜಾಸ್ತಿ. ಕೃಷ್ಣ ಪಕ್ಷದಲ್ಲಿ ಕಾಂಡದ ಬೆಳವಣಿಗೆ ಜಾಸ್ತಿ. ಅಮಾವಾಸ್ಯೆ ದಿನದಲ್ಲಿ ಮೊಳಕೆ ಆಗುವಂತೆ ಬೀಜ ಬಿತ್ತನೆ ಮಾಡಬೇಕು. ಹುಣ್ಣಿಮೆ ದಿನದಲ್ಲಿ ಸಸಿ ನಾಟಿ ಮಾಡಬೇಕು. ಆಗ ಸಸ್ಯಗಳು ಸಹಜವಾಗಿ ರೋಗನಿರೋಧಕ ಗುಣ ಹೊಂದುತ್ವೆ ಅನ್ನುವುದು ಅನುಭವ ವೇದ್ಯವಾದ ಸತ್ಯ. ಮನೆ ಮಂದಿ ಎಲ್ಲಾ ಸೇರಿ ಬೆಳದಿಂಗಳಲ್ಲಿ ಜಮೀನಿನಲ್ಲಿ ಸೇರಿ ಕೃಷಿ ಕೆಲಸ ಮಾಡಿ ಬೆಳದಿಂಗಳ ಭೋಜನ ಸವಿಯುತ್ತಿದ್ದುದನ್ನು ನಾನು ಅನೇಕ ಹಳ್ಳಿಗಳಲ್ಲಿ ಕಂಡಿದ್ದೇನೆ. ಕಿರಿಯರಲ್ಲಿ ಕೃಷಿ ಪ್ರೀತಿಯನ್ನು ಬೆಳೆಸಲು ಇದಕ್ಕಿಂತಾ ಸುಲಭದ ಮಾರ್ಗ ಯಾವುದಿದೆ.

ಅಡಕೆ ಸಸಿಗಳನ್ನು ಸಸಿ ಮಡಿಯಿಂದ ಎತ್ತಲು ಅಡಕೆ ದಬ್ಬೆಯಿಂದ ಮಾಡಿದ ಚೂಪಾದ ಕೋಲು ಬಳಸ್ತಾರೆ. ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಚಿಲ್ಕುಂದದ ಅಡಕೆ ಬೆಳೆಗಾರರು ಅಡಕೆ ತೋಟಗಳಲ್ಲಿಯೇ ಕೆಲಸ ಮಾಡುತ್ತಲೇ ವೇದಾಭ್ಯಾಸ, ಸಂಗೀತಾಭ್ಯಾಸ ಮಾಡ್ತಾರೆ. ಬಾಳೆ ಬೇಸಾಯದಲ್ಲಿ ಪಾರಮ್ಯ ಸಾಧಿಸಿರುವ ಮೈಸೂರಿನ ಕೃಷಿಕರೊಬ್ಬರು ಹೇಳಿದ್ರು 'ನೋಡಿ, ಬಾಳೇಲಿ ವಾರಕ್ಕೆ ಒಂದು ಎಲೆ ಹೊರಟಿರಬೇಕು. ಹೀಗೆ ವರುಷಕ್ಕೆ ಐವತ್ತೆರಡು ಎಲೆ ಬಂದ ಮೇಲೆ ಗೊನೆ ಖಚಿತವಾಗುತ್ತೆ' ಅಂತ. ಎಂತಹ ಅನುಭವದ ಲೆಕ್ಕ ನೋಡಿ.

ಒಂದು ಮನೆ ಅಂದ್ರೆ ಅಲ್ಲಿ ಎಲ್ಲ ವಯಸ್ಸಿನ ಜನಾನೂ ಇರ್ತಾರಲ್ವ. ಒಂದು ತೋಟ ಅಂದ್ರೆ ಒಂದೇ ವಯಸ್ಸಿನ ಮರಯಾಕಿರಬೇಕು. ಒಂದೇ ಜಾತಿಯ ಬೇರೆ ಬೇರೆ ವಯಸ್ಸಿನ ಮರ ಇರಬೇಕು. ಆಗ ಬೇಸಾಯ ಚಂದ ಅಂತಾರೆ. ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ಕೃಷಿಕರು. ವಯಸ್ಸಾದ ಮರಗಳು ಬೀಳುವ ಹೊತ್ತಿಗೆ ಬೇರೆಯ ಮರಗಳು ನೆಲೆ ನಿಂತು ರೈತನನ್ನು ಕಾಪಾಡುತ್ತವೆ ಎಂಬುದು ಇದರ ತತ್ತ್ವ. ಆಧುನಿಕ ಕೃಷಿ ಜ್ಞಾನ ಎಲ್ಲಿಯೂ ಈ ಜ್ಞಾನ ನೀಡೋಲ್ಲ. ಅನುಭವದ ಹಿನ್ನೆಲೆಯಲ್ಲಿ ಮೂಡಿ ಬಂದ ಪರಂಪರಾಗತ ಜ್ಞಾನ ಯಾವತ್ತಿಗೂ ಅಮೂಲ್ಯ.

ಬೇಳೆ ಕಾಳುಗಳನ್ನು ಸಂಗ್ರಹಿಸುವಾಗ ಬೀಜಗಳಿಗೆ ತಿನ್ನುವ ಎಣ್ಣೆಯನ್ನು ಲೇಪಿಸಿ ಇಡುತ್ತಾರೆ. ಇದರಿಂದ ಹುಳುಹಿಡಿಯೋಲ್ಲ ಅನ್ನೋದು ಅವರ ನಂಬಿಕೆ. ಕೆಲವೊಮ್ಮೆ ಕೆಮ್ಮಣ್ಣು ಲೇಪಿಸಿ ಇಡುತ್ತಾರೆ. ಧಾನ್ಯ ಸಂರಕ್ಷಣೆ ಆಗುತ್ತೆ. ಆದ್ರೆ ಯಾಕೆ ಹುಳು ಹಿಡಿಯೋಲ್ಲ ಅಂದ್ರೆ ಬೇಳೆಕಾಳನ್ನು ರಂಧ್ರ ಕೊರೆದು ಹಾಳು ಮಾಡುವ ಪಲ್ಸ್‌ಬೀಟ್ಲ್ ಮೊಟ್ಟೆ ಇಡಲು ಆಗುವುದಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೃಷಿಕರು ದ್ವಿದಳ ಧಾನ್ಯಗಳ ಬಿತ್ತನೆಯನ್ನು ಹತ್ತಿ ಚೀಲದಲ್ಲಿ ಕಟ್ಟಿ ಜನ ಓಡಾಡುವ ಜಾಗದಲ್ಲಿ ಇಡುತ್ತಾರೆ. ಕೃಷಿ ವಿಜ್ಞಾನವನ್ನು ಅರಿತಿರುವ ಹಿರಿಯ ಕೃಷಿಕರು ಹೇಳಿದ್ರು 'ಬೇಳೆಗಳನ್ನು ಹಾಳು ಮಾಡುವ ಕೀಟಗಳು ತಮ್ಮ ಮೊಟ್ಟೆಯನ್ನು ಧಾನ್ಯಗಳ ಮೇಲ್ಭಾದಲ್ಲಿ ಅಂಟಿಸಬೇಕಾದ್ರೆ ಅದು ಇಪ್ಪತ್ನಾಲ್ಕು ಗಂಟೆಗಳ ಕಾಲ ಅಲುಗಾಡದೇ ಇರಬೇಕಂತೆ. ಜನ ಓಡಾಡುವ ಜಾಗದಲ್ಲಿ ಈ ಧಾನ್ಯಗಳ ಚೀಲದ ಮೇಲೆ ಕಾಲಿಡುವುದರಿಂದ, ಧಾನ್ಯ ಸ್ಥಿರವಾಗಿರೋಲ್ಲ. ಹಾಗಾಗಿ ಹುಳು ಬೀಳೋಲ್ಲ' ಅಂತ. ಇದು ಅನುಭವದ ಕುಲುಮೆಯಲ್ಲಿ ಬೆಂದು ಬಂದ ಜ್ಞಾನ.

ಅನೇಕ ಪ್ರದೇಶಗಳಲ್ಲಿ ಬೇಳೆ ಕಾಳುಗಳನ್ನು ಮಡಕೆಗಳಲ್ಲಿ ಸಂಗ್ರಹಿಸುತ್ತಾರೆ. ಮಡಕೆ ತಳಭಾಗಕ್ಕೆ ಮರಳು, ಲಕ್ಕಿಸೊಪ್ಪು, ಬೇವಿನಸೊಪ್ಪು ಹಾಕಿ ಅದರ ಮೇಲೆ ಚೆನ್ನಾಗಿ ಒಣಗಿದ ಕಾಳು ಹಾಕಿ ಮತ್ತೆ ಮೇಲ್ಭಾಗದಲ್ಲಿ ಒಣ ಮೆಣಸಿನಕಾಯಿ, ಬೇವಿನಸೊಪ್ಪು,

ಲಕ್ಕಿಸೊಪ್ಪು ಹಾಕಿ, ಮೆಂತ್ಯ ಹಾಗೂ ಕಾಗದ ನೆನೆಸಿ ರುಬ್ಬಿದ ಮಿಶ್ರಣದಿಂದ ಮಡಕೇನ ಮುಚ್ಚುತ್ತಾರೆ. ಒಂದು ವರುಷದವರಗೆ ಕಾಳಿಗೆ ಹುಳು ಬೀಳೋಲ್ಲ ಅಂತ ದೃಢವಾಗಿ ಹೇಳುತ್ತಾರೆ.

ಹಿಂದೆಲ್ಲಾ ಬೀದಿಗೆ ನಾಯಿನೋ ಬೆಕ್ಕೋ ಅಥವಾ ಯಾವುದೋ ಪ್ರಾಣಿ ಸತ್ತು ಬಿದ್ದಿದ್ರೆ ಅದನ್ನು ಮರಗಳ ಕೆಳಗೆ ಹೂಳಿ ಅಂತ ಹೇಳೋರು. ಈ ರೀತಿ ಸತ್ತ ಪ್ರಾಣಿಗಳನ್ನು ಮಣ್ಣಿನಲ್ಲಿ ಹೂಳುವುದರಿಂದ ಪರಿಸರ ಸ್ವಚ್ಛವಾಗಿರುತ್ತೆ. ಸಾಂಕ್ರಾಮಿಕ ರೋಗ ಹರಡೋಲ್ಲ. ಆದ್ರೆ ಗಿಡಗಳೂ ಮಾಂಸಾಹಾರ ಅಪೇಕ್ಷೆ ಪಡುತ್ವೆ ಅಂತ ವೃಕ್ಷಾಯುರ್ವೇದದಲ್ಲಿ ಉಲ್ಲೇಖವಾಗಿದೆ. ಸತ್ತ ಪ್ರಾಣಿಗಳ ಮಾಂಸದಿಂದ 'ಕುಣಪಜಲ' ತಯಾರಿಸಿ ಗಿಡಗಳಿಗೆ ಹಾಕಿದ್ರೆ ಅದರ ಆರೋಗ್ಯ ವೃದ್ಧಿಯಾಗುತ್ತೆ ಅಂತ 'ಮಾನಸೋಲ್ಲಾಸ' ಗ್ರಂಥದಲ್ಲಿ ಉಲ್ಲೇಖವಿದೆ. ತಿಂದು ಉಳಿದ ಮೀನಿನ ಸಾರು ಹಾಕಿದಾಗ ಬಾಡಿಹೋಗಿದ್ದ ಮಾವಿನ ಮರ ಚಿಗುರಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಕೊಡಗು ಜಿಲ್ಲೆ ವಿರಾಜಪೇಟೆ ಸಮೀಪದ ಪಾಲಂಗಾರ ಎಂಬ ಪ್ರದೇಶದಲ್ಲಿ 'ವೇದ ಕೃಷಿ ಪದ್ಧತಿಗಳನ್ನು' ಅನುಸರಿಸುತ್ತಿರುವ ನಾಗರಾಜ್ ತಮ್ಮ ತೋಟಗಳಿಗೆ ನೀಡೋದು ಕುಣಪಜಲವನ್ನು ಕಸಾಯಿಖಾನೆಗಳ ತ್ಯಾಜ್ಯ ತಂದು ಅದನ್ನು ಕೊಳೆ ಹಾಕಿ, ವೇದ ಕೃಷಿ ಜ್ಞಾನದ ಆಧಾರದಲ್ಲಿ ಕುಣಪಜಲವನ್ನಾಗಿ ಪರಿವರ್ತಿಸಿ ಕಾಫಿ, ಕಾಳುಮೆಣಸು, ಏಲಕ್ಕಿ, ಬತ್ತಕ್ಕೆ ನೀಡುತ್ತಿದ್ದಾರೆ. ಸೊರಗು ರೋಗದಿಂದ ನರಳುತ್ತಿದ್ದ ಕಾಳುಮೆಣಸಿನ ಬಳ್ಳಿ ಮತ್ತೆ ಚಿಗುರಿ ಫಸಲು ನೀಡುತ್ತಿದೆ. ಕಾಫಿ ನಳನಳಿಸುತ್ತಿದೆ. ಆಧುನಿಕ ಕೃಷಿ ವಿಜ್ಞಾನದ ಸಮಗ್ರ ಸಾರವೆಲ್ಲಾ ನಮ್ಮ ಪ್ರಾಚೀನ ವೇದಗಳಲ್ಲೇ ಉಲ್ಲೇಖವಾಗಿದೆ.

ಮೊದಲ ಮಳೆ ಬಿದ್ದಮೇಲೆ ಊರಿನ ಓಣಿಗಳ ಮಣ್ಣನ್ನು ಬಾಚುತ್ತಾರೆ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಲಕ್ಕರಸನ ಪಾಳ್ಯದ ಕೃಷಿಕರು. ಒಣ ತರಗು, ಹಸಿಸೊಪ್ಪಿನ ಜತೆ ಈ ಮಣ್ಣನ್ನು ಬೆರೆಸಿ ದನದ ಕೊಟ್ಟಿಗೇಲಿ ಹರಡುತ್ತಾರೆ. ಹಳ್ಳಿ ಕಡೆ ಇದಕ್ಕೆ 'ಮಗ್ಗಲು ಸೊಪ್ಪು' ಅಂತಾರೆ. ಒಂದು ತಿಂಗಳ ಬಳಿಕ ಕೊಟ್ಟಿಗೆಯ ಮಣ್ಣಿನ ಸಮೇತ ಚೀಲದಲ್ಲಿ ತುಂಬಿ ಸಂಗ್ರಹಿಸುತ್ತಾರೆ. ತಾವು ಬೆಳೆಯುವ ಎಲ್ಲಾ ಬೆಳೆಗಳಿಗೆ ಗೊಬ್ಬರವಾಗಿ ಈ ಮಿಶ್ರಣವನ್ನು ಅವರು ಬಳಸುವರು. ಈ ಗೊಬ್ಬರ ಹಾಕಿ ಬೆಳೆದ ಟೋಮ್ಯಾಟೊ ಗಿಡಗಳು ಒಂದು ವರುಷ ನಿರಂತರವಾಗಿ ಫಸಲು ನೀಡಿದ್ದು ವಿಶೇಷ.

ತಮಿಳುನಾಡಿನ ಕೊಯಮತ್ತೂರು ಜಿಲ್ಲೆ ಸತ್ತಿ ಸಮೀಪದ ಕೃಷಿಕರು ಕೀಟಗಳ ನಿವಾರಣೆಗೆ ಹೊಸ ದೇಶೀಯ ಅಸ್ತ್ರ ಸಂಶೋಧಿಸಿದ್ದಾರೆ. ಇದಕ್ಕೆ ಅವರಿಟ್ಟ ಹೆಸರು 'ಪೂಚಿಮರಂದು' ಅಂದ್ರೆ 'ಕೀಟಗಳು ನಿರ್ನಾಮ' ಅಂತ. 20 ಲೀಟರ್ ಗಂಜಲ, 2 ಕೆ.ಜಿ. ಹಸಿಮೆಣಸಿನಕಾಯಿ, 2 ಕೆ.ಜಿ. ಈರುಳ್ಳಿ, 2 ಕೆ.ಜಿ. ಬೆಳ್ಳುಳ್ಳಿ, 2 ಕೆ.ಜಿ. ಬೇವಿನಸೊಪ್ಪು, 2 ಕೆ.ಜಿ. ಎಕ್ಕದ ಸೊಪ್ಪು, 4 ಕೆ.ಜಿ. ಉಮ್ಮತ್ತಿಗಿಡ, 2 ಕೆ.ಜಿ. ಹೊಗೆಸೊಪ್ಪು 2 ಕೆ.ಜಿ. ಅರಿಸಿನ, 2 ಕೆ.ಜಿ. ಸೀಮೆಕಳ್ಳಿ, 4 ಬಿಲ್ವಪತ್ರೆಕಾಯಿ, ಒಂದು ಸೀತಾಫಲದ ಹಣ್ಣಿನ ಬೀಜದ ಪುಡಿ, ಒಂದು ಹಿಡಿ ಅಂಟುವಾಳ ಇವಿಷ್ಟನ್ನೂ ಒಂದು ತಿಂಗಳು ನೆನೆಸಿ, ಸೋಸಿ ಒಂದು ದ್ರಾವಣಕ್ಕೆ 80 ಲೀಟರ್ ನೀರು, 10 ಲೀಟರ್ ಗಂಜಲ ಹಾಗೂ ಐದು ಲೀಟರ್ ಹುಳಿಮಜ್ಜಿಗೆ ಸೇರಿಸಿದರೆ ಪೂಚಿಮರಂದು ತಯಾರು.

ಬೆಳೆಗಳಲ್ಲಿ ನಾವು ಅನೇಕ ರೋಗಗಳನ್ನು ಕಾಣ್ತೇವಿ. ಆದ್ರೆ ಅದರ ಜತೆ ಬೆಳೆದಿರುವ ಕಳೆಗಳಲ್ಲಿ ಆ ರೋಗ ಇರೋಲ್ಲ. ಏಕೆಂದರೆ ಕಳೆ ಗಿಡಕ್ಕೆ ರೋಗದಿಂದ ಪಾರಾಗುವ ಮಾರ್ಗಗೊತ್ತು. ಯಾವ ಕಳೆಯಲ್ಲಿ ರೋಗ ಇರಲ್ವೋ ಅದನ್ನು ಕಿತ್ತು ತಂದು, ನೀರಲ್ಲಿ ನೆನೆಸಿ, ರಸ ತೆಗೆದು ಬೆಳೆಗೆ ಸಿಂಪರಣೆ ಮಾಡಿದ್ರೆ ರೋಗ ಹತೋಟಿ ಮಾಡಬಹುದು.

*ಕೆ.ಎಂ.ಎಸ್.*

**ದೇಶೀಯ ದಾಸ್ತಾನು ಪದ್ಧತಿ** ಮನುಷ್ಯ ಕೃಷಿ ಮಾಡುವುದನ್ನು ಕಲಿತಾಗಿನಿಂದಲೂ ತಾನು ಬೆಳೆದ ದವಸ ಧಾನ್ಯಗಳನ್ನು ಒಂದೆಡೆ ಸಂಗ್ರಹಿಸಿ ಸಂರಕ್ಷಿಸುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾನೆ. ಋತುಗಳಿಗನುಗುಣವಾಗಿ ಬೆಳೆಯುವ ಉತ್ಪನ್ನವನ್ನು ವರ್ಷದ ಇನ್ನಿತರ ಕಾಲಗಳಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ ರೈತರು ದಾಸ್ತಾನು ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ದೇಶೀಯ ದಾಸ್ತಾನು ಪದ್ಧತಿಯಲ್ಲಿ ರೈತರು ಸುಲಭವಾಗಿ ಕೈಗೆಟುಕುವ ಸಲಕರಣೆಗಳಿಂದ ಅಷ್ಟೇ ಸರಳವಾದ ರೀತಿಯಲ್ಲಿ ದಾಸ್ತಾನು ಮಾಡಿಕೊಂಡಿರುತ್ತಾರೆ. ಹಳ್ಳಿಯ ರೈತ ಕುಟುಂಬಗಳಲ್ಲಿ ಬಳಕೆಯಲ್ಲಿರುವ ಕೆಲವು ದೇಶೀಯ ದಾಸ್ತಾನು ಪದ್ಧತಿಗಳು ಹೀಗಿವೆ.

**1. ಕಣಜ :** ಮಧ್ಯಮ ಹಿಡುವಳಿ ಮತ್ತು ದೊಡ್ಡ ಹಿಡುವಳಿ ರೈತ ಕುಟುಂಬಗಳ ಮನೆಗಳಲ್ಲಿ ಸಾಮಾನ್ಯವಾಗಿ ಕಣಜ ಇದ್ದೇ ಇರುತ್ತದೆ. ಇವರು ಮನೆಯನ್ನು ಕಟ್ಟುವಾಗ ಕಣಜಕ್ಕೆಂದೇ ಮನೆಯ ಒಳ ಆವರಣದ ಒಂದು ನಿರ್ದಿಷ್ಟ ಜಾಗವನ್ನು ಗೊತ್ತು ಮಾಡಿಕೊಂಡಿರುತ್ತಾರೆ. ಹೀಗೆ ಧಾನ್ಯ ಶೇಖರಣೆಗೆಂದೇ ಇರುವ ಪ್ರತ್ಯೇಕವಾದ ಕೋಣೆಗೆ ಕಣಜವೆಂದು ಕರೆಯುತ್ತಾರೆ. ಕಣಜವು ಐದರಿಂದ ಆರು ಅಡಿ ಎತ್ತರ ಹಾಗೂ ನಾಲ್ಕರಿಂದ ಐದು ಅಡಿ ಅಗಲದಿಂದ ಕೂಡಿರುತ್ತದೆ. ಕಣಜಕ್ಕೆ ಕಿಟಕಿ ಬಾಗಿಲುಗಳಿರುವುದಿಲ್ಲ. ಕಣಜದ ಈ ಕೊಠಡಿಯ ನೆಲ ಮತ್ತು ಒಳಗೋಡೆಗಳಿಗೆ ಗಾರೆ ಹಾಕಿ, ಸುಣ್ಣ ಬಳಿದಿರುತ್ತಾರೆ. ಕಣಜದ ಮೇಲ್ಭಾಗ ತೆರೆದಾಕಾರದಲ್ಲಿದ್ದು ಅದರ ಮೂಲಕ ಧಾನ್ಯಗಳನ್ನು ಸುರಿಯುತ್ತಾರೆ. ಪೂರ್ಣ ತುಂಬಿದ ಮೇಲೆ ಹಲಗೆಗಳಿಂದ ಮುಚ್ಚಿ ಅದರ ಮೇಲೆ ಮಣ್ಣು ಮುಚ್ಚುತ್ತಾರೆ. ಕೆಲವು ಕಣಜಗಳಲ್ಲಿ ಹಲಗೆಯ ಮೇಲ್ಭಾಗ ಮುಚ್ಚುವಾಗ ಎರಡು ಅಡಿ ಸುತ್ತಳತೆಯಲ್ಲಿ ಒಳಪ್ರವೇಶಿಸಲು ಬಾಗಿಲಿನಂತೆ ಜಾಗ ಬಿಟ್ಟಿರುತ್ತಾರೆ. ಸಾಮಾನ್ಯವಾಗಿ ಇಂತಹ ಕಣಜಗಳಲ್ಲಿ ರಾಗಿಯನ್ನೊ, ಬತ್ತವನ್ನೊ ತುಂಬಿರುತ್ತಾರೆ. ಧಾನ್ಯ ಕೆಡದಿರಲೆಂದು ಬೇವಿನ ಸೊಪ್ಪನ್ನು ಸೇರಿಸಿರುತ್ತಾರೆ. ರಾಗಿ ತುಂಬಿದ ಕಣಜವನ್ನು ಯಾವಾಗ ಬೇಕಾದರೂ ತೆಗೆಯಬಹುದು. ಮೂರ್ನಾಲ್ಕು ವರ್ಷ ಬಿಟ್ಟರೂ ರಾಗಿ ಕೆಡುವುದಿಲ್ಲ. ಬತ್ತವನ್ನು ಐದಾರು ತಿಂಗಳೊಳಗೆ ತೆಗೆದು ಬಳಕೆ ಮಾಡಿಕೊಳ್ಳಬೇಕು. ಹೆಚ್ಚು ಕಾಲ ಬಿಟ್ಟರೆ ಬತ್ತ ಮುಗ್ಗುತ್ತದೆ.

**2. ಹಗೇವು :** ರೈತರು ದಾಸ್ತಾನು ತುಂಬುವುದಕ್ಕೆ ನೆಲದೊಳಗೆ ಬಾವಿಯಂತೆ ತೋಡುವ ಗುಂಡಿ ಅಥವಾ ಕುಳಿಯೇ ಹಗೇವು. ಎತ್ತರದ ಜಾಗದಲ್ಲಿ ಸುಮಾರು ಏಳೆಂಟು ಅಡಿ ಆಳ ಮತ್ತು ಐದಾರು ಅಡಿ ಸುತ್ತಳತೆಯಲ್ಲಿರುವ ಹಗೇವುಗೆ ಒಳಮೈ ಗಾರೆ ಹಾಕಿ ನೀರು ನುಗ್ಗದಂತೆ ನಿರ್ಮಿಸಿರುತ್ತಾ ರೆ. ಹಗೇವಿನ ಮೇಲ್ಭಾಗ ಚಿಕ್ಕದಾಗಿ ಮುಚ್ಚಳದಂತಿದ್ದು ಹಲಗೆ ಅಥವಾ ಚಪ್ಪಡಿ ಮುಚ್ಚಲು ಅನುಕೂಲವಾಗುವಂತೆ ಮಾಡಿರುತ್ತಾರೆ.

ಧಾನ್ಯ ತುಂಬುವಾಗ ಹಗೇವಿನ ತಳಭಾಗ ಮತ್ತು ಮಧ್ಯದಲ್ಲಿ ಬೇವಿನ ಎಲೆ ಹಾಗೂ ಇನ್ನಿತರ ಕೀಟ ನಿವಾರಕ ಸೊಪ್ಪುಗಳನ್ನು ಹಾಕಿರುತ್ತಾರೆ. ಸುಗ್ಗಿಯ ಧಾನ್ಯಗಳಾದ ರಾಗಿ, ಜೋಳ, ಬತ್ತ ಮುಂತಾದವುಗಳನ್ನು ಹಗೇವಿಗೆ ತುಂಬುವರು. ತಮಗೆ ಬೇಕೆನಿಸಿದಾಗ ತೆಗೆದುಕೊಳ್ಳುವರು. ಹಗೇವಿನಲ್ಲಿ ರಾಗಿಯನ್ನು ವರ್ಷಾನುಗಟ್ಟಲೆ ಬಿಟ್ಟರೂ ಕೆಡುವುದಿಲ್ಲ. ಫಸಲು, ಮಳೆ ಕೊರತೆಯಿಂದ ಬೆಳೆಯದಿದ್ದರೆ ಹಿಂದಿನ ವರ್ಷದಲ್ಲಿ ಹಗೇವಿನಲ್ಲಿ ತುಂಬಿದ ರಾಗಿಯನ್ನು ಉಪಯೋಗಿಸುತ್ತಾರೆ.

**3. ಪೆಂಟೆ ಅಥವಾ ಕೊಮ್ಮೆ :** ಪೆಟ್ಟೆ, ಪೆಂಟೆ, ಕೊಮ್ಮೆ ಸುಣಗಲು ಎಂದು ಕರೆಯುವ ಈ ದಾಸ್ತಾನು ಧಾರಕವನ್ನು ಬಿದಿರಿನ ಚಾಪೆಯಿಂದ ಮಾಡಿರುತ್ತಾರೆ. ಈ ಚಾಪೆಯನ್ನು ಉರುಳೆಯಾಕಾರದಲ್ಲಿ ಸುತ್ತಿದಂತೆ ಬಾಗಿಸಿ ಮನೆಯೊಳಗಿನ ಪಡಸಾಲೆಯಲ್ಲೋ, ಹಜಾರದಲ್ಲೋ, ಅಥವಾ ವಿಶಾಲವಾದ ಜಗುಲಿಯ ಮೇಲೊ ನಿಲ್ಲಿಸಿರುತ್ತಾರೆ. ಈ ಕೊಮ್ಮೆ ಅಥವಾ ಸುಣಗಲಿನ ಹೊರ ಮತ್ತು ಒಳಮೈ ಎರಡನ್ನೂ ಸಗಣಿ ಕಲಸಿದ ನೀರಿನಿಂದ ಬಳಿದಿರುತ್ತಾರೆ. ಇದನ್ನು ಕೂರಿಸಿದ ಮೇಲೆ ತಳಭಾಗಕ್ಕೆ ಹಸುಬೆ ಚೀಲ ಹಾಸುತ್ತಾರೆ. ಇದರ ಮೇಲ್ಭಾಗಕ್ಕೆ ಯಾವುದೇ ಮುಚ್ಚಳದ ಆವಶ್ಯಕತೆ ಇರುವುದಿಲ್ಲ. ಧಾನ್ಯಗಳನ್ನು ಪೂರ್ಣ ತುಂಬಿದ ಮೇಲೆ ಗೋಣಿ ಚೀಲದಲ್ಲಿ ಮುಚ್ಚಿರುತ್ತಾರೆ. ಸಾಮಾನ್ಯವಾಗಿ ಈ ಪೆಂಟೆ ಆರರಿಂದ ಏಳು ಅಡಿ ಎತ್ತರಕ್ಕಿದ್ದು ಐದರಿಂದ ಆರು ಅಡಿ ಸುತ್ತಳತೆಯ ವ್ಯಾಸವಿರುತ್ತದೆ. ಇದರಲ್ಲಿ ಹೆಚ್ಚಾಗಿ ಬತ್ತ, ರಾಗಿ, ಜೋಳ, ಕಡಲೆ ಮತ್ತಿತರ ಧಾನ್ಯಗಳನ್ನು ತುಂಬುವರು.

**4. ವಾಡೆ :** ದಾಸ್ತಾನು ಶೇಖರಣೆಗಾಗಿ ಜೇಡಿಮಣ್ಣಿನಿಂದ ಮಾಡಲಾದ ಉಪಯುಕ್ತ ಧಾರಕವೇ ವಾಡೆ. ಈ ವಾಡೆ ಸಾಮಾನ್ಯವಾಗಿ ಅಂಡಾಕಾರದಲ್ಲಿದ್ದು ಇದರ ಎರಡು ತುದಿಗಳೂ ಚಪ್ಪಟೆಯಾಗಿದ್ದು ನೆಲದ ಮೇಲೆ ಇಡುವುದಕ್ಕೂ ಮುಚ್ಚಳವನ್ನು ಹಾಕುವುದಕ್ಕೂ ಅನುಕೂಲಕರವಾಗಿರುತ್ತದೆ. ಕೆಲವು ದೊಡ್ಡ ವಾಡೆಗಳಿರುತ್ತವೆ. ಅವುಗಳನ್ನು ಎರಡು ಭಾಗಗಳಾಗಿ ಅಂದರೆ ನಡು ಭಾಗದಲ್ಲಿ ಕತ್ತರಿಸಿದಂತೆ ಮಾಡಿರುತ್ತಾರೆ. ಒಂದರ ತುದಿ ನೆಲಕ್ಕೂ ಮತ್ತೊಂದರ ತುದಿ ಮೇಲಕ್ಕೂ ಕೂರಿಸಿದಂತೆ ಒಂದರ ಮೇಲೆ ಮತ್ತೊಂದನ್ನು ಬೋರಲು ಹಾಕಿದಂತೆ ಜೋಡಿಸಿರುತ್ತಾರೆ. ರೈತ ಕುಟುಂಬಗಳ ಮನೆಗಳಲ್ಲಿ ಪಡಸಾಲೆಯಲ್ಲೋ, ಜಗುಲಿಯ ಮೇಲೋ ದೊಡ್ಡ ದೊಡ್ಡ ವಾಡೆಗಳನ್ನು ಖಾಯಂ ಆಗಿಯೇ ನಿಲ್ಲಿಸಿರುವುದು ಕಂಡು ಬರುತ್ತದೆ. ಇವುಗಳಲ್ಲಿ ರಾಗಿ, ಜೋಳ, ಬತ್ತ ಹಾಗೂ ಇನ್ನಿತರ ದ್ವಿದಳ ಧಾನ್ಯಗಳನ್ನು ತುಂಬಿ ಅಗತ್ಯವೆನಿಸಿದಾಗ ತೆಗೆದು ಉಪಯೋಗಿಸುತ್ತಾರೆ.

**5. ಗುಡಾಣ :** ಜೇಡಿಮಣ್ಣಿನಿಂದ ಮಾಡಲಾದ ವಿವಿಧ ಗಾತ್ರಗಳ ಮಡಕೆಗಳನ್ನು ಗುಡಾಣಗಳೆಂದು ಕರೆಯುವರು. ಸಾಮಾನ್ಯವಾಗಿ ಸಣ್ಣ ರೈತ ಕುಟುಂಬಗಳ ಮನೆಗಳಲ್ಲಿ ಇವುಗಳನ್ನು ನೆಲದ ಮೇಲೂ ಅಟ್ಟದ ಮೇಲೂ ಸಾಲು ಸಾಲಾಗಿ ಜೋಡಿಸಿಟ್ಟಿರುತ್ತಾರೆ. ಸ್ಥಳದ ಅಭಾವದಿಂದ ಕೆಲವರು ದೊಡ್ಡ ಗುಡಾಣದ ಮೇಲೆ ಚಿಕ್ಕ ಗುಡಾಣ ಅದರ ಮೇಲೆ ಇನ್ನೂ ಚಿಕ್ಕದನ್ನು ಇಟ್ಟಿರುತ್ತಾರೆ. ದೊಡ್ಡಗುಡಾಣಗಳಲ್ಲಿ ರಾಗಿ, ಬತ್ತ, ಜೋಳ ಮತ್ತಿತರ ಧಾನ್ಯಗಳನ್ನು ತುಂಬಿದರೆ ಚಿಕ್ಕ ಗುಡಾಣಗಳಲ್ಲಿ ನಿತ್ಯ ಬಳಕೆಯ ಬೇಳೆ, ಅಲಸಂದೆಕಾಳು, ಹುರುಳಿಕಾಳು, ಕಡ್ಲೆಕಾಳು ಮುಂತಾದ ಧಾನ್ಯಗಳನ್ನು ತುಂಬಿರುತ್ತಾರೆ. ಹಾಗೆಯೇ ದೊಡ್ಡ ರೈತ ಕುಟುಂಬಗಳಲ್ಲಿ ಬಿತ್ತನೆ ಬೀಜಗಳನ್ನು ಗುಡಾಣಗಳಲ್ಲಿ, ಕೀಟ ನಿವಾರಕ ಸೊಪ್ಪುಗಳನ್ನು ಹಾಕಿ ಇಟ್ಟಿರುತ್ತಾರೆ. ಸಾಮಾನ್ಯವಾಗಿ ಸಣ್ಣ ಹಿಡುವಳಿಯ ರೈತ ಕುಟುಂಬಗಳಲ್ಲಿ, ಕೂಲಿ ಕಾರ್ಮಿಕ ಕುಟುಂಬಗಳಲ್ಲಿ ಕಣಜ, ಹಗೇವು, ವಾಡೆಗಳಿಗೆ ಬದಲಾಗಿ ಗುಡಾಣಗಳೇ ದಾಸ್ತಾನು ಧಾರಕಗಳಾಗಿರುತ್ತವೆ.

**6. ಮೂಡೆ :** ನೆಲ್ಲು ಹುಲ್ಲನ್ನು ಹಗ್ಗದಂತೆ ಹೆಣೆದು ಗೋಳಾಕಾರದಲ್ಲಿ ಸಿಂಬಿ ಸುತ್ತಿದಂತೆ ಸುತ್ತುತ್ತಾ ನಿರ್ಮಿಸುವುದೇ ಮೂಡೆ. ಮೂರ್‍ನಾಲ್ಕು ಅಡಿ ವ್ಯಾಸದ ಮೂಡೆಯನ್ನು ಹುರುಳಿ, ಅಲಸಂದೆ, ಹೆಸರು, ಉದ್ದು, ಹರಳು, ಕಡಲೆ ಮುಂತಾದವನ್ನು ಶೇಖರಿಸಿಡಲು ಉಪಯೋಗಿಸುತ್ತಾರೆ. ಇದರ ಕೆಳಭಾಗ ಮತ್ತು ಮೇಲ್ಭಾಗದ ಮುಚ್ಚಳಕ್ಕೂ ಹುಲ್ಲಿನ ಹಗ್ಗವನ್ನು ಹೆಣೆದು ಕಟ್ಟಿರುತ್ತಾರೆ. ಸುಗ್ಗಿಯ ಸಂದರ್ಭದಲ್ಲಿ ಸುಲಭವಾಗಿ ಸಿಗುವ ಒಣ ಹುಲ್ಲನ್ನು ದಾಸ್ತಾನು ಶೇಖರಿಸಿಡುವ ಧಾರಕವಾಗಿ ಬಳಸುವ ಈ ಮೂಡೆಗಳು ಇತ್ತೀಚೆಗೆ ಕಣ್ಮರೆಯಾಗುತ್ತಿವೆ.

**7. ಸಂದೂಕ :** ಮರದ ಹಲಗೆಗಳನ್ನು ಬಳಸಿ ನಿರ್ಮಿಸುವ ದಾಸ್ತಾನು ಧಾರಕಗಳನ್ನು ಸಂದೂಕಗಳೆಂದು ಕರೆಯುವರು. ಇವು ದೊಡ್ಡ ಪೆಟ್ಟಿಗೆಯಂತಿರುತ್ತವೆ. ಹಲಗೆಗಳನ್ನು ಆರರಿಂದ ಎಂಟು ಅಡಿ ಅಗಲವಾಗಿಯೂ ಅಷ್ಟೇ ಎತ್ತರವಾಗಿಯೂ ಜೋಡಿಸಿ ನಿರ್ಮಿಸಿರುತ್ತಾರೆ. ಮರದ ಪೆಟ್ಟಿಗೆಯಂತಿರುವ ಈ ಸಂದೂಕಗಳಿಗೆ ಮಳೆಯಿಂದ ಸಂರಕ್ಷಣೆ ನೀಡಲು ಹಲಗೆಯಿಂದಲೇ ಮಾಡಿದ ಇಳಿಜಾರಾದ ಛಾವಣಿಯೂ ಇರುತ್ತದೆ. ಸಾಮಾನ್ಯವಾಗಿ ಈ ಸಂದೂಕಗಳನ್ನು ಮನೆಯ ಹೊರಗಡೆ ನಿರ್ಮಿಸಿರುತ್ತಾರೆ. ಇದರಲ್ಲಿ ರಾಗಿ, ಬತ್ತ, ಹುರುಳಿ ಮತ್ತಿತರ ಧಾನ್ಯಗಳನ್ನು ತುಂಬಿರುತ್ತಾರೆ. ಧಾನ್ಯವನ್ನು ತುಂಬಲು ಹಾಗೂ ಹೊರಗೆ ತೆಗೆದುಕೊಳ್ಳಲು ಇದರ ಮೇಲ್ಭಾಗ ಮತ್ತು ತಳಭಾಗದಲ್ಲಿ ಬಾಗಿಲುಗಳನ್ನು ಮಾಡಿರುತ್ತಾರೆ. ಹೀಗೆ ಸಂದೂಕಗಳಿಗೆ ಎರಡು ದ್ವಾರಗಳು ಉಪಯುಕ್ತವೆನಿಸಿವೆ.

**8. ಚೀಲ :** ಸಾಮಾನ್ಯವಾಗಿ ಹಳ್ಳಿಯ ರೈತ ಕುಟುಂಬಗಳ ಮನೆ ಪ್ರವೇಶಿಸಿದೊಡನೆ ಧಾನ್ಯ ತುಂಬಿದ ಚೀಲಗಳನ್ನು ಒಂದರ ಮೇಲೊಂದು ಪೇರಿಸಿರುವುದನ್ನು ಕಾಣುತ್ತೇವೆ. ರೈತರಿಗೆ ದಾಸ್ತಾನುವಿನಲ್ಲಿ ಗೋಣಿಚೀಲದ ಉಪಯುಕ್ತತೆ ಬಹಳಷ್ಟಿರುತ್ತದೆ. ಧಾನ್ಯವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದಕ್ಕೆ, ಒಂದರ ಮೇಲೊಂದು ಜೋಡಿಸಿಡುವುದಕ್ಕೆ ಚೀಲಗಳ ಆವಶ್ಯಕತೆ ಇರುತ್ತದೆ. ಒಂದು ಗೋಣಿ ಚೀಲಕ್ಕೆ ಒಂದು ಪಲ್ಲ ಅಥವಾ ನೂರು ಸೇರು ಧಾನ್ಯ ತುಂಬಬಹುದು. ಇತ್ತೀಚೆಗೆ ಹಳ್ಳಿಗಳಲ್ಲಿ ದಾಸ್ತಾನುಗಳಿಗಾಗಿಯೇ ಪ್ರತ್ಯೇಕವಾದ ಕೊಠಡಿಗಳಿದ್ದು ಧಾನ್ಯ ತುಂಬಿದ ಚೀಲಗಳನ್ನು ಒಂದರ ಮೇಲೊಂದು ಕ್ರಮವಾಗಿ ಅಚ್ಚುಕಟ್ಟಾಗಿ ಪೇರಿಸಿಟ್ಟಿರುತ್ತಾರೆ. ಸಣ್ಣ ಹಿಡುವಳಿ ರೈತರು ಇವುಗಳನ್ನು ಹೆಚ್ಚಾಗಿ ಬಳಸುತ್ತಾರೆ.

*ಎನ್. ಆರ್.*

**ದೊಡ್ಡಗೋಣಿ ಸೊಪ್ಪು** ಆಹಾರಕ್ಕಾಗಿ ಬಳಕೆಯಾಗುವ ಸಸ್ಯಗಳಲ್ಲಿ ಒಂದು. ಇದು ಪೋರ್ಚುಲಕೇಸೀ ಕುಟುಂಬಕ್ಕೆ ಸೇರಿದ ವಾರ್ಷಿಕ ಮೂಲಿಕೆ. ಇದರ ವೈಜ್ಞಾನಿಕ ಹೆಸರು ಪೋರ್ಚುಲಕ ಪೋಲರೇಸಿಯ. ನೆಲದ ಮೇಲೆ ಹರಡಿಕೊಂಡೋ ಇಲ್ಲವೇ ನೇರವಾಗಿಯೊ ಬೆಳೆಯುವ ಸಸ್ಯ. ಸು. 50 ಸೆಂ.ಮೀ. ಎತ್ತರ ಬೆಳೆಯುವಂಥದು. ಇದರ ಕಾಂಡ ಮತ್ತು ಎಲೆಗಳು ನುಣುಪಾಗಿರುತ್ತವೆ. ನೇರಳೆ ಅಥವಾ ಹಸುರು ಬಣ್ಣದ ಕಾಂಡವಿದ್ದು ಹೂಗೊಂಚಲು ಸಸ್ಯದ ತುದಿಭಾಗದಲ್ಲಿರುತ್ತದೆ. ಇದು ಹಳದಿ ಬಣ್ಣದ ದ್ವಿಲಿಂಗಿ ಹೂ ಬಿಡುತ್ತದೆ. ಎರಡು ಪುಷ್ಪಪತ್ರಗಳಿದ್ದು 4-6 ದಳಗಳಿರುತ್ತವೆ. ಬೀಜಗಳು ಕಪ್ಪುಬಣ್ಣ ಭಾರತದ ಎಲ್ಲೆಡೆ

ಕಳೆಗಿಡವಾಗಿ ಬೆಳೆಯುವಂಥದು. ಪ್ರಪಂಚದ ಎಲ್ಲ ಕಡೆಯಲ್ಲೂ ಇದನ್ನು ಆಹಾರ ಸಸ್ಯವಾಗಿ ಬೆಳೆಸುವುದುಂಟು. ಬಯಲು ಪ್ರದೇಶಗಳಲ್ಲಿ ಮಾರ್ಚ್-ಜೂನ್ ಅವಧಿಯಲ್ಲೂ ಮಲೆ ಪ್ರದೇಶಗಳಲ್ಲಿ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲೂ ಬೆಳೆಯಲಾಗುತ್ತದೆ. ಎಲ್ಲ ಬಗೆಯ ಮಣ್ಣುಗಳಲ್ಲೂ ಬೆಳೆಸಬಹುದಾದರೂ ಗೋಡು ಮಣ್ಣು ಉತ್ತಮ. ಬೆಳೆಸುವ ಮೊದಲು ಒಂದು ಎಕರೆಗೆ 40ಗಾಡಿಗಳಷ್ಟು ಕೊಟ್ಟಿಗೆ ಗೊಬ್ಬರ ಹಾಕುವರು. ಒಂದು ಎಕರೆಗೆ 2-3 ಕೆ.ಜಿ ಬಿತ್ತನೆ ಬೀಜ ಬೇಕಾಗುತ್ತದೆ. ಮಳೆಯಿಲ್ಲದಿದ್ದ ಸಂದರ್ಭದಲ್ಲಿ ಬೀಜ ಮೊಳೆತ ಅನಂತರ ವಾರಕ್ಕೊಮ್ಮೆಯಾದರೂ ನೀರೂಡಬೇಕು. ಬೆಳೆಯ ಅವಧಿ ಎರಡು ತಿಂಗಳು. ನಿರಂತರವಾಗಿ ಬೆಳೆಯಬೇಕಾದರೆ 15 ದಿನಗಳಿಗೊಮ್ಮೆ ಬೇರೆ ಬೇರೆ ಭಾಗಗಳಲ್ಲಿ ಬಿತ್ತನೆ ಮಾಡುತ್ತಿರಬೇಕು.

**ಉಪಯೋಗ :** ಈ ಸೊಪ್ಪು ಸಾರು, ಪಚ್ಚಡಿಗಳಿಗೂ ಇದರ ಕಾಂಡ ಉಪ್ಪಿನಕಾಯಿಗೂ ಬಳಕೆಯಾಗುತ್ತದೆ. ದನಕರು, ಕುರಿ, ಹಂದಿಗಳಿಗೂ ಮೇವು. ಇದು ಮೂತ್ರ ಸ್ರಾವ ಉತ್ತೇಜಕ, ಪಿತ್ತ ಜನಕಾಂಗ, ಮೂತ್ರಜನಕಾಂಗ ಹಾಗೂ ಗುಲ್ಮರೋಗಗಳಲ್ಲಿ ಇದರ ಉಪಯೋಗವಿದೆ.

ಇಸುಬು, ಹುಳಕಡ್ಡಿ ಮೊದಲಾದ ಚರ್ಮವ್ಯಾಧಿಗಳಿಗೂ ಹೃದಯಸಂಬಂಧಿ ಕಾಯಿಲೆಗಳಿಗೂ ಆಮಶಂಕೆ ಮತ್ತು ಬಾಯಿ ಹುಣ್ಣುಗಳಿಗೂ ಉತ್ತಮ ಮದ್ದು. ಈ ಸೊಪ್ಪಿನ ರಸ ಹಲ್ಲುನೋವು, ಕಿವಿನೋವಿನ ಶಮನಕ್ಕೆ ಉಪಯೋಗ. ಹೋಮಿಯೋಪತಿ ಔಷಧಿಯಲ್ಲಿ ಜೀರ್ಣರಸ ಸ್ರಾವಕ್ಕೆ ಮತ್ತು ರಕ್ತಶುದ್ಧಿಗೆ ಬಳಸುವುದುಂಟು. ಇದರಲ್ಲಿ 'ಸಿ' ಜೀವಸತ್ತ್ವದ ಪ್ರಮಾಣ ಹೆಚ್ಚಾಗಿದೆ. ಹಸುರುಗೊಬ್ಬರವಾಗಿಯೂ ಇದು ಬಳಕೆಯಲ್ಲಿದೆ.

*ಎ.ಬಿ.ಪಿ.*

**ದೊಡ್ಡಪತ್ರೆ** ಲ್ಯಾಮಿಯೇಸೀ ಕುಟುಂಬಕ್ಕೆ ಸೇರಿದ ಮೂಲಿಕೆ ಸಸ್ಯ. ಕೋಲಿಯಸ್ ಅಂಬಾಯ್‌ನಿಕಸ್ ಅಥವಾ ಕೋ. ಆ್ಯರೋಮ್ಯಾಟಿಕಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಇಂಡಿಯನ್ ಬೋರೇಜ್ ಎಂದೂ ಕರೆಯುವರು. ಇದರ ತವರು ಈಸ್ಟ್ ಇಂಡೀಸ್. ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯಗಳಲ್ಲಿ ಬೆಳೆಸಲಾಗುತ್ತದೆ.



ಅರ್ಧ ಮೀ. ಎತ್ತರದ ಚಿಕ್ಕ ಪೊದೆಯಂತೆ ಒತ್ತಾಗಿ ಬೆಳೆಯುವ ಸಸ್ಯವಿದು. ಇದರ ಎಲೆಗಳು ದಪ್ಪ, ರಸಪೂರಿತ ಹಾಗೂ ಸುವಾಸನೆಯಿಂದ ಕೂಡಿರುತ್ತವೆ. ಸುವಾಸನೆಗೆ ಕಾರಣ ಅದರಲ್ಲಿರುವ ಕಾರ್ವಾಕ್ರಾಲ್ ಎಂಬ ಎಣ್ಣೆ.

ದೊಡ್ಡಪತ್ರೆಯ ಎಲೆಗಳನ್ನು ಮಾಂಸದಡುಗೆಗೆ, ಕೋಸಂಬರಿ, ಚಟ್ನಿ, ತಂಬುಳಿಗಳಿಗೆ; ಮಾದಕ ಪಾನೀಯಗಳಾದ ದ್ರಾಕ್ಷಾರಸ, ಬೀರ್ ಮೊದಲಾದವುಗಳಿಗೆ ಸುವಾಸನೆಗಾಗಿಯೂ ಬಳಸುವುದುಂಟು. ಆಯುರ್ವೇದದಲ್ಲಿ ಇದರ ಎಲೆಗಳನ್ನು ಮೂತ್ರಪಿಂಡದ ಕಾಯಿಲೆಗಳಿಗೂ, ಕೆಮ್ಮು, ಆಸ್ತಮಗಳಿಗೂ ಔಷಧಿಯಾಗಿ ಬಳಸುತ್ತಾರೆ. ಅಲರ್ಜಿಗಳಿಂದ ಮೈಯಲ್ಲಿ ಗಂದೆಯಾದಾಗ ಇದರ ರಸವನ್ನು ಹೇರಳೆಕಾಯಿ ರಸದೊಂದಿಗೆ ಬೆರೆಸಿ ಮೈಗೆಲ್ಲಾ ಚೆನ್ನಾಗಿ ತಿಕ್ಕುವರು. ಇದಕ್ಕೆ ಜ್ವರ ನಿವಾರಕ ಗುಣವುಂಟು.

*ಎಂ.ಎಲ್.*

**ದ್ರಾಕ್ಷಿ** ದ್ರಾಕ್ಷಿಯ ವೈಜ್ಞಾನಿಕ ಹೆಸರು ವೈಟಸ್ ವಿನಿಫೆರಾ. ಇದು ವೈಟಿಸಿ ಕುಟುಂಬಕ್ಕೆ ಸೇರಿದೆ. ಇದರಲ್ಲಿ ಸಕ್ಕರೆ ಪ್ರಮಾಣ ಹೆಚ್ಚಾಗಿದ್ದು, ರಂಜಕ, ಸುಣ್ಣ, ಕಬ್ಬಿಣ ಮುಂತಾದ ಖನಿಜಾಂಶಗಳು ಇವೆ. ದೇಹಕ್ಕೆ ಪೋಷಣೆ ಹಾಗೂ ಪುನಶ್ಚೇತನ ನೀಡುವುದಲ್ಲದೆ ಸುಲಭವಾಗಿ ಜೀರ್ಣವಾಗುತ್ತದೆ.

ದ್ರಾಕ್ಷಿ ಹಣ್ಣಿನ ಚರಿತ್ರೆ ಬಹಳ ಪುರಾತನವಾದದ್ದು : ಭರತಖಂಡದಲ್ಲಿ ದ್ರಾಕ್ಷಿ ಬೆಳೆಯುತ್ತಿದ್ದರು ಎಂಬುದಕ್ಕೆ ಸಂಸ್ಕೃತ ಕಾವ್ಯಗಳಲ್ಲಿ ವರ್ಣನೆಗಳಿವೆ. ಇದರಿಂದ ತಯಾರಿಸಿದ ಪಾನೀಯಗಳನ್ನು ಆರ್ಯರು ಸೇವಿಸುತ್ತಿದ್ದರಂತೆ. ಮಹಮ್ಮದೀಯ ಅರಸರ ಹಾಗೂ ಆಂಗ್ಲರ ಕಾಲದಲ್ಲಿ ದ್ರಾಕ್ಷಿ ಬೆಳೆ ಪ್ರಸಿದ್ಧಿಯನ್ನು ಪಡೆದಿತ್ತು. ಹೈದ್ರಾಬಾದಿನ ನವಾಬರು ಈ ಬೆಳೆಗೆ ಪ್ರೋತ್ಸಾಹ ನೀಡುತ್ತಿದ್ದರು ಹಾಗೂ ಅರಮನೆಯ ಹಣ್ಣಿನ ತೋಟಗಳಲ್ಲಿ ದ್ರಾಕ್ಷಿ ಬಳ್ಳಿಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡುತ್ತಿದ್ದರು. 1954ರಲ್ಲಿ ಬೆಂಗಳೂರಿನ ಲಾಲ್‌ಬಾಗಿನಲ್ಲಿ ದ್ರಾಕ್ಷಿ ತೋಟ ನಿರ್ಮಿಸಲಾಯಿತು. ಇದಕ್ಕೂ ಮೊದಲು ತೋಟಗಾರಿಕಾ ಇಲಾಖೆಯವರು ಮೈಸೂರು ಮಹಾರಾಜರಿಗೆ ಸೇರಿದ್ದ ಬೆಂಗಳೂರಿನ ಅರಮನೆಯ ಹಣ್ಣಿನ ತೋಟದಲ್ಲಿ, ಶ್ರೀರಂಗಪಟ್ಟಣದ ಸರಕಾರಿ ಹಣ್ಣಿನ ತೋಟದಲ್ಲಿ ದ್ರಾಕ್ಷಿ ವ್ಯವಸಾಯ ಪ್ರಾರಂಭಿಸಿದರು. ಈ ಪ್ರಯೋಗಗಳಿಂದ ದೊರೆತ ಉತ್ತೇಜನಗಳಿಂದ ತೋಟಗಾರಿಕಾ ಇಲಾಖೆಯವರು ಮೈಸೂರು ಸಂಸ್ಥಾನದಾದ್ಯಂತ ದ್ರಾಕ್ಷಿ ಬೆಳೆಯನ್ನು ಬೆಳೆಯುವಂತೆ ಪ್ರೋತ್ಸಾಹಿಸಿದರು. ಈಗ ಕರ್ನಾಟಕದಲ್ಲಿ 4000 ಹೆಕ್ಟೇರುಗಳಿಗಿಂತಲು ಅಧಿಕ ಭೂ ಪ್ರದೇಶಗಳಲ್ಲಿ ದ್ರಾಕ್ಷಿಯನ್ನು ಬೆಳೆಯಲಾಗುತ್ತಿದೆ.

**ಮಣ್ಣು :** ದ್ರಾಕ್ಷಿಯನ್ನು ಹಲವಾರು ಬಗೆಯ ಮಣ್ಣಿನಲ್ಲಿ ಬೆಳೆಯಬಹುದು. ನೀರು ಚೆನ್ನಾಗಿ ಬಸಿದು ಹೋಗುವಂತಹ ಗೋಡುಮಣ್ಣು ಈ ಬೆಳೆಗೆ ಉತ್ತಮವಾದದ್ದು. ಆಳವಾದ ಮರುಳು ಮಿಶ್ರಿತ ಗೋಡುಮಣ್ಣು, ಕಡಿಮೆ ಆಳದ ಮಧ್ಯಮದ ಕಪ್ಪು ಮಣ್ಣು, ಮೆಕ್ಕಲು ಮಣ್ಣು, ಕೆಬ್ಬೆ ಮಣ್ಣು, ಇವುಗಳಲ್ಲಿ ಸ್ವಲ್ಪ ಭಾಗ ಸುಣ್ಣದ ಅಂಶವಿದ್ದರೂ ದ್ರಾಕ್ಷಿಯನ್ನು ಬೆಳೆಯಬಹುದು.

**ಹವಾಗುಣ :** ದ್ರಾಕ್ಷಿ ಉಷ್ಣವಲಯದ ಬೆಳೆ. ಸಮಶೀತೋಷ್ಣವಲಯದ ಪ್ರದೇಶಗಳಲ್ಲಿಯೂ ಬೆಳೆಯಲಾಗುತ್ತದೆ. ಹಣ್ಣು ಬಿಡುವ ಸಮಯದಲ್ಲಿ ಮಳೆ ಇಲ್ಲದೆ ಇರುವ ಶುಷ್ಕ ಹವಾಗುಣ ಅಗತ್ಯ. ಹೂವು ಬಿಟ್ಟು ಹಣ್ಣು ಆಗುವವರೆಗಿನ ಕಾಲದಲ್ಲಿಮಳೆಯಾದರೆ ಇದಕ್ಕೆ ಭಾದಿಸುವ ರೋಗ ಹೆಚ್ಚಾಗುತ್ತದೆ. ಕಡುಶೀತ ಹವಾಗುಣ ಎಳೆ ಗಿಡಗಳ ಬೆಳೆವಣಿಗೆಯನ್ನು ಕುಂಠಿತಗೊಳಿಸುತ್ತದೆ. ಹೀಗಾಗಿ ದ್ರಾಕ್ಷಿ ಬೆಳೆಗೆ ಮಣ್ಣು ಮತ್ತು ಹವಾಗುಣ ಬಹಳ ಮುಖ್ಯವಾದುದು.



**ತಳಿಗಳು :** ದ್ರಾಕ್ಷಿ ಬೆಳೆಯಲ್ಲಿ ಅನೇಕ ತಳಿಗಳಿವೆ. ಮಣ್ಣು ಮತ್ತು ಹವಾಗುಣದ ಭಿನ್ನತೆಗೆ ಅನುಗುಣವಾಗಿ ಇವನ್ನು ಬೆಳೆಯಲಾಗುತ್ತಿದೆ. ಅವುಗಳಲ್ಲಿ ಕೆಲವು ಮಾತ್ರ ಜನಪ್ರಿಯವಾಗಿವೆ.

**ಬೆಂಗಳೂರು ನೀಲಿ :** ಕರ್ನಾಟಕದಲ್ಲಿ ಅತಿಹೆಚ್ಚು ಪ್ರದೇಶಗಳಲ್ಲಿ ಬೆಳೆಯುವ ತಳಿ. 'ಬೆಂಗಳೂರು ನೀಲಿ' ಅಮೇರಿಕ ದೇಶದ ತಿಬ್ರಾಸ ಜಾತಿಗೆ ಸೇರಿದೆ. ಈ ಹಣ್ಣು ಕಪ್ಪು ಮಿಶ್ರಿತ ನೀಲಿ ಬಣ್ಣ ಹೊಂದಿದ್ದು ಗುಂಡಾಗಿರುತ್ತವೆ. ರುಚಿ ಸ್ವಲ್ಪ ಹುಳಿ, ರಸ ಕಂದು ಬಣ್ಣದಿಂದ ಕೂಡಿದ್ದು ಬಹುಕಾಲ ಶೇಖರಿಸಿಡಬಹುದು. ಗೊಂಚಲು ಸಾಧಾರಣಗಾತ್ರವಾಗಿದ್ದು ಹಣ್ಣುಗಳು ಒತ್ತಾಗಿರುತ್ತವೆ. ವರ್ಷದಲ್ಲಿ ಎರಡು ಬೆಳೆಗಳನ್ನು ಪಡೆಯಬಹುದು. ರೋಗಗಳನ್ನು ಸಹಿಸುವ ಶಕ್ತಿ ಈ ತಳಿಗಳಿಗಿದೆ. ಶರಬತ್ ಮತ್ತು ವೈನ್‌ತಯಾರಿಕೆಗೆ ಉಪಯುಕ್ತವಾದ ತಳಿ.

**ಅನಾಬ್- ಇ - ಷಾಹಿ :** ಹಣ್ಣುಗಳು ತಿಳಿ ಹಳದಿ ಬಣ್ಣದಿಂದ ಕೂಡಿದ್ದು ಸಿಹಿಯಾಗಿರುತ್ತವೆ. ಅತಿ ಹೆಚ್ಚು ಇಳುವರಿ ನೀಡುತ್ತವೆ. ಗೊಂಚಲು ದೊಡ್ಡದಾಗಿದ್ದು ಹಣ್ಣು ಒತ್ತಾಗಿರುತ್ತವೆ. ಮಾರು ಕಟ್ಟೆಯಲ್ಲಿ ಈ ಹಣ್ಣಿಗೆ ಬೇಡಿಕೆ ಹೆಚ್ಚು.

**ದಿಲ್‌ಖುಷ್ :** ಹಣ್ಣು ಉದ್ದವಾಗಿದ್ದು ಆಕರ್ಷಕವಾಗಿರುತ್ತವೆ. ಇದನ್ನು ಅನಾಬ್ - ಇ - ಷಾಹಿ ತಳಿಯಿಂದ ಆಯ್ಕೆ ಮಾಡಲಾಗಿದೆ. ಅಧಿಕ ಇಳುವರಿ ಕೊಡಬಲ್ಲದು.

**ಥಾಮ್‌ಸನ್ ಸೀಡ್‌ಲೆಸ್:** ಗುಂಡನೆಯ ಹಳದಿ ಮಿಶ್ರಿತ ಬಿಳಿ ಬಣ್ಣದ ಹಣ್ಣು. ಬೀಜ ಇರುವುದಿಲ್ಲ. ತಿನ್ನಲು ಬಹಳ ರುಚಿ. ಬೇರೆ ತಳಿಗಳ ಹಾಗೆ ಹೆಚ್ಚು ಇಳುವರಿ ಕೊಡುವುದಿಲ್ಲ. ಒಣ ದ್ರಾಕ್ಷಿ ಮಾಡುವುದಕ್ಕೆ ಬಳಸಲಾಗುತ್ತದೆ.

**ಸೊನಾಕಾ :** ಥಾಮ್ ಸನ್ ಸೀಡ್‌ಲೆಸ್ ತಳಿಯಿಂದ ಅಭಿವೃದ್ಧಿ ಪಡಿಸಿದ ಬೀಜ ರಹಿತತಳಿ. ಹಣ್ಣು ಉದ್ದವಾಗಿರುತ್ತದೆ. ಅಧಿಕ ಇಳುವರಿಕೊಡುತ್ತದೆ.

**ಶರದ್ ಸೀಡ್‌ಲೆಸ್:** ಕಡು ನೀಲಿ ಬಣ್ಣದ ಬೀಜ ರಹಿತ ತಳಿ. ಉತ್ತಮಗುಣಮಟ್ಟದ ಹಣ್ಣನ್ನು ಕೊಡಬಲ್ಲವು. ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ.

**ಫ್ಲೇಮ್‌ಸೀಡ್‌ಲೆಸ್ :** ಅಮೆರಿಕಾದ ಕ್ಯಾಲೀಫೋರ್ನಿಯಾದಲ್ಲಿ ಅಭಿವೃದ್ಧಿ ಪಡಿಸಿದ ತಳಿ. ಕೆಂಪು ಬಣ್ಣ, ದುಂಡಾಕಾರವಾಗಿದ್ದು, ತಿರುಳು ಗಟ್ಟಿಯಾಗಿರುತ್ತದೆ.

**ಗುಲಾಬಿ :** ಹಣ್ಣುಗಳು ದುಂಡಾಗಿದ್ದು. ನೇರಳೆ,ಕಂದುಬಣ್ಣದಿಂದಕೂಡಿರುತ್ತವೆ.ಸಿಪ್ಪೆ ದಪ್ಪವಾಗಿದ್ದು ತಿರುಳು ಸಿಹಿ ಹಾಗೂ ರುಚಿಕರ. ಪನ್ನೀರು ವಾಸನೆ ಇದರಲ್ಲಿರುವುದರಿಂದ ಮದರಾಸಿನಲ್ಲಿಇದನ್ನು 'ಪನ್ನೀರು ದ್ರಾಕ್ಷಿ'ಯೆಂದೂ ಕರೆಯುತ್ತಾರೆ.

**ಬ್ಲಾಕ್‌ಚಂಪ :** ಬೆಂಗಳೂರಿನ ಸುತ್ತಮುತ್ತ ಪ್ರದೇಶಗಳಲ್ಲಿ ಬೆಳೆಯುತ್ತಿರುವ ಹೊಸತಳಿ. ಹಣ್ಣುಸಣ್ಣದಾಗಿರುವುದಲ್ಲದೆ ಕಪ್ಪು ಮಿಶ್ರಿತ ನೀಲಿ ಬಣ್ಣದಿಂದ ಕೂಡಿದ್ದು ಹೆಚ್ಚು ಇಳುವರಿಯನ್ನು ಕೊಡುತ್ತದೆ.

**ಬೋಕರಿ :** ಕರ್ನಾಟಕದ ಉತ್ತರ ಭಾಗದಲ್ಲಿಮತ್ತು ಮುಂಬಯಿಯಲ್ಲಿ ಬೆಳೆಸುತ್ತಾರೆ. ಸಿಪ್ಪೆದಪ್ಪವಾಗಿದ್ದು ಹಸುರು ಬಣ್ಣದಿಂದ ಕೂಡಿರುತ್ತದೆ.

**ಪಚ್ಚೆದ್ರಾಕ್ಷಿ :** ಇದು ಮದರಾಸ್ ಕಡೆ ಬೆಳೆಯುವ ಹಣ್ಣು. ದಪ್ಪವಾಗಿದ್ದು ದೊಡ್ಡ ಗೊಂಚಲು ಬಿಡುತ್ತವೆ. ಬೋಕ್ರಿಯನ್ನು ಹೋಲುತ್ತದೆ.

**ಪಂಡರಿಸಾಹೇಬಿ :** ಬಿಳಿಯ ಬಣ್ಣದ ದಪ್ಪ ದ್ರಾಕ್ಷಿ, ತಿರುಳು ಮೃದುವಾಗಿದ್ದು ಹೆಚ್ಚು ಸಿಹಿ ಹಾಗೂ ರುಚಿಕರವಾಗಿರುತ್ತವೆ.

13. **ಕಾಂದಾರಿ :** ನೇರಳೆ ಬಣ್ಣದಾಗಿದ್ದು, ಸಾಮಾನ್ಯ ಗಾತ್ರದಾಗಿರುತ್ತದೆ. ದಟ್ಟ ಗೊಂಚಲು ಬಿಡುವ ಈ ಹಣ್ಣುಗಳ ಸಿಪ್ಪೆ ಮಂದವಾಗಿರುತ್ತದೆ.

**ಬೇಸಾಯದ ಕ್ರಮ :** ಬೀಜಗಳಿಂದ ಸಸ್ಯಾಭಿವೃದ್ಧಿ ಸಾಧ್ಯವಿದ್ದರೂ ಕಡ್ಡಿಗಳನ್ನು ನೆಟ್ಟು, ಸಸ್ಯಾಭಿವೃದ್ಧಿಯನ್ನು ಮಾಡಲಾಗುತ್ತಿದೆ. ಚೆನ್ನಾಗಿ ಬಲಿತ ಒಂದು ವರ್ಷದ ಬಳ್ಳಿಗಳನ್ನು ಗಿಣ್ಣಿನ ಸಮೀಪ 22 ರಿಂದ 44 ಸೆಂ.ಮೀ. ಗಳ ಉದ್ದಕ್ಕೆ ಅಕ್ಟೋಬರ್ ತಿಂಗಳಲ್ಲಿ ಕತ್ತರಿಸಬೇಕು. ಕತ್ತರಿಸಿದ ಕಡ್ಡಿಗಳನ್ನು ಮರಳು ಮಿಶ್ರಿತ ಮಣ್ಣಿನಲ್ಲಿ ಒಂದೆರಡು ಗಿಣ್ಣುಗಳು ಮಾತ್ರ ಮೇಲಕ್ಕೆ ಕಾಣುವಂತೆ ಹೂಳಬೇಕು. ಕ್ರಮೇಣ ನೀರು ಹಾಯಿಸ ಬೇಕು. ಜನವರಿ-ಫೆಬ್ರವರಿ ತಿಂಗಳಿಗೆ ಬೇರು ಬಿಟ್ಟಸಸಿಗಳು ದೊರೆಯುತ್ತವೆ.

ಇತ್ತೀಚಿನ ದಿನಗಳಲ್ಲಿ ಬೀಜರಹಿತ ತಳಿಗಳನ್ನು ತೋಟದಲ್ಲೇ ಕಣ್ಣು ಕಸಿ ವಿಧಾನ ಅನುಸರಿಸಿ ಬೆಳೆಸುತ್ತಿದ್ದಾರೆ. ಡಾಗ್‌ರಿಡ್ಜ್ ಬೇರು ಸಸಿಗಳನ್ನೇ ತೋಟದ ಗುಂಡಿಗಳಲ್ಲಿ ಅಕ್ಟೋಬರ್ - ಜನವರಿ ತಿಂಗಳಲ್ಲಿ

ನಾಟಿ ಮಾಡಬೇಕು. ಒಂದು ವರ್ಷದ ಅನಂತರ ಬೆಳೆದ ಬೇರು ಕಾಂಡಗಳ ಮೇಲೆ ಭೂಮಿಯಿಂದ ಒಂದು ಅಡಿ ಎತ್ತರದಲ್ಲಿ ಆಯ್ದ ತಳಿಗಳ ಕಣ್ಣುಗಳನ್ನು ತಂದು ಕಣ್ಣು ಕಸಿ ಮಾಡಬೇಕು. ಚಿಗುರಿದ ಕಣ್ಣು ಕಸಿಯನ್ನು ಚಪ್ಪರದ ಎತ್ತರಕ್ಕೆ ಬೆಳೆಸಬೇಕು.

**ನಾಟಿ ಮಾಡುವುದು :** ಉತ್ತಮವಾಗಿ ಬೇರು ಬಿಟ್ಟಮೂರು ಕಣ್ಣುಳ್ಳ ಕಡ್ಡಿಗಳನ್ನು ನಾಟಿಗಾಗಿ ಬಳಸುತ್ತಾರೆ. ಅಕ್ಟೋಬರ್ ತಿಂಗಳ ಎರಡನೇ ವಾರದಿಂದ ಜನವರಿ ತಿಂಗಳವರೆಗೆ ನಾಟಿ ಮಾಡುವುದಕ್ಕೆ ಯೋಗ್ಯ ಅವಧಿ. ನಾಟಿ ಮಾಡುವುದಕ್ಕಿಂತ ಹದಿನೈದು ದಿನ ಮುಂಚಿತವಾಗಿ 90 ಘನ ಸೆಂ.ಮೀ. ಗುಣಿಗಳನ್ನು ತೋಡಿಕೊಳ್ಳಬೇಕು. ಕಡಿಮೆ ಅಂತರದಲ್ಲಿ ನಾಟಿ ಮಾಡುವ ಪಕ್ಷದಲ್ಲಿ ಸಾಲಿನುದ್ದಕ್ಕೂ ಹರಿ / ಕಾಲುವೆಗಳನ್ನು 60 ಸೆಂ.ಮೀ. ಆಳ ಮತ್ತು 60 ಸೆಂ.ಮೀ ಅಗಲ ತೆಗೆಯುವುದು ಒಳ್ಳೆಯದು. ಗುಣಿಗಳನ್ನು ಒಂದು ಪದರ ಹಸುರೆಲೆ ಗೊಬ್ಬರ ಒಂದು ಪದರ ಮೇಲ್ಮಣ್ಣು ಹಾಕಿ ಮುಚ್ಚಬೇಕು. ಪ್ರತಿ ಗುಣಿಗೆ ಎರಡು ಕಿ.ಗ್ರಾಂ. ಎಲುಬಿನ ಪುಡಿ, ಮೂರು ಕಿ.ಗ್ರಾಂ. ಬೇವಿನ ಹಿಂಡಿಯನ್ನು ಹಾಕಬೇಕು. ತೆಳುವಾಗಿ ನೀರು ಹಾಯಿಸಿ ಮಣ್ಣು ಚೆನ್ನಾಗಿ ಕೂಡುವಂತೆ ಮಾಡಬೇಕು. ಒಂದು ವಾರದ ಅನಂತರದು ಕಡ್ಡಿಗಳನ್ನು ನಾಟಿ ಮಾಡಬೇಕು.

**ಬಳ್ಳಿ ಹಬ್ಬಿಸುವುದು :** ಬಳ್ಳಿಗಳನ್ನು ಚಪ್ಪರ ವಿಧಾನದಲ್ಲಿ ಹಬ್ಬಿಸುವುದರಿಂದ ಹೆಚ್ಚಿನ ಇಳುವರಿಕೊಡುತ್ತವೆ. ಆದುದರಿಂದ ಚಪ್ಪರ ವಿಧಾನವನ್ನು ಅನುಸರಿಸಿ ದ್ರಾಕ್ಷಿಯನ್ನು ಬೆಳೆಸುವುದು ರೂಢಿಯಾಗಿದೆ.

**ಚಪ್ಪರ ವಿಧಾನ :** ಸಾಮಾನ್ಯವಾಗಿ ಬುಡದಿಂದ ಒಂದು ಬಳ್ಳಿಯನ್ನು ಮಾತ್ರ ಬೆಳೆಯಲು ಬಿಟ್ಟು ಚಪ್ಪರ ಎತ್ತರ ತಲುಪುವವರೆಗೆ ಬೊಂಬಿನ ಸಹಾಯದಿಂದ ಆಸರೆ ಒದಗಿಸಿ ಪಕ್ಕದಲ್ಲಿ ಬರುವ ಚಿಗುರುಗಳನ್ನು ತೆಗೆಯುತ್ತಿರಬೇಕು. ಬಳ್ಳಿಯ ಚಪ್ಪರ ತಲುಪಲು 15 ಸೆಂ.ಮೀ. ಇದ್ದಾಗಲೇ ಅದರ ತುದಿಯನ್ನು ಕತ್ತರಿಸಿ ಎರಡು ಕವಲುಗಳನ್ನು ಚಪ್ಪರದ ಮೇಲೆ ಬೆಳೆಯಲು ಬಿಡಬೇಕು. ಎರಡು ಕವಲುಗಳ ವಿರುದ್ಧ ದಿಕ್ಕಿನಲ್ಲಿ ಹಬ್ಬುವಂತೆ ಬಿಡಬೇಕು. ಕೊನೆಗೆ ಈ ಕವಲುಗಳು ರೆಂಬೆಗಳಾಗುತ್ತವೆ. ರೆಂಬೆಗಳು ಹಬ್ಬಿದಂತೆಲ್ಲ 45 ಸೆಂ.ಮೀ. ಅಂತರದಲ್ಲಿಸಣ್ಣ ರೆಂಬೆಗಳು ಬೆಳೆಯುವಂತೆ ನೋಡಿಕೊಳ್ಳಬೇಕು. ಸಣ್ಣ ರೆಂಬೆಗಳ ಮೇಲೆ ಬರುವ ಚಿಕ್ಕ ಕಡ್ಡಿಗಳು ಬಲಿತು ಹಣ್ಣುಗಳನ್ನು ಕೊಡುತ್ತವೆ. ಬಳ್ಳಿ ಹಬ್ಬಿಸುವ ಅವಧಿಯಲ್ಲಿ ಬಳ್ಳಿ ಮತ್ತು ರೆಂಬೆಗಳನ್ನು ಬಾಳೆನಾರು ಅಥವಾ ದಾರದಿಂದ ಕಟ್ಟಬೇಕು. ಅನಾವಶ್ಯಕ ಚಿಗುರುಗಳನ್ನು ತೆಗೆಯಬೇಕು. ಈ ವಿಧಾನವನ್ನು ಅಳವಡಿಸುವುದರಿಂದ ಔಷಧಿ ಸಿಂಪರಣೆ, ಬಳ್ಳಿ ಕತ್ತರಿಸುವುದು ಮುಂತಾದ ಕೆಲಸಗಳಿಗೆ ಸುಲಭವಾಗುತ್ತದೆ.

**Y ಆಕಾರ ವಿಧಾನ :** ದ್ರಾಕ್ಷಿ ಬಳ್ಳಿಯನ್ನು ವಿವಿಧ ಆಕಾರದಲ್ಲಿ ಹಬ್ಬಿಸಲಾಗುತ್ತದೆ. ಅದರಲ್ಲಿ Y ಆಕಾರ ಪದ್ಧತಿಯೂ ಒಂದು. ಈ ಪದ್ಧತಿಯಲ್ಲಿ ಐದು ಅಡಿ ಕಲ್ಲಿನ ಕಂಬಕ್ಕೆ ಒಂದು ಮೀಟರ್ ಉದ್ದದ ಎರಡು ಕಬ್ಬಿಣದ ತುಂಡುಗಳನ್ನು $60^o$ ಕೋನಾಕಾರದಲ್ಲಿ ಕಂಬಕ್ಕೆ ಅಳವಡಿಸಬೇಕು. ಅನಂತರ Y ಆಕಾರದ ಕಬ್ಬಿಣದ ಪಟ್ಟಿಯ ಕೆಳ ತುದಿಗೆ ಒಂದು ತಂತಿಯನ್ನು ಮತ್ತು ಪಕ್ಕದ ಎಡ ಹಾಗೂ ಬಲಭಾಗದ ಪಟ್ಟಿಗಳಿಗೂ ಊರು ತಂತಿಗಳಂತೆ ಒಟ್ಟು ಏಳು ತಂತಿಗಳನ್ನು ಎಳೆಯಬೇಕು. ಕೆಳ ತುದಿಯ ತಂತಿಯ ಮೇಲೆ ಮುಖ್ಯ ಎರಡು ಕವಲುಗಳನ್ನು ವಿರುದ್ಧ ದಿಕ್ಕಿನಲ್ಲಿ ಹಬ್ಬುವಂತೆ ನೋಡಿಕೊಳ್ಳಬೇಕು. ಕವಲುಗಳ ಮೇಲೆ ಬಂದಂತಹ ಚಿಕ್ಕ ಕಾಂಡಗಳು ಪಕ್ಕದಲ್ಲಿದ್ದ ಎಡ ಹಾಗೂ ಬಲ ತಂತಿಯ ಮೇಲೆ ಹರಡುವಂತೆ ಮಾಡಬೇಕು. ಈ ಬಳ್ಳಿ ಹಬ್ಬಿಸುವ ಅವಧಿಯಲ್ಲಿ ಬಳ್ಳಿ ಹಾಗೂ ರೆಂಬೆಗಳನ್ನು ಬಾಳೆ ನಾರು ಅಥವಾ ದಾರದಿಂದ ಕಟ್ಟಬೇಕು. ಅನಾವಶ್ಯಕವಾದ ಚಿಗುರುಗಳನ್ನು ತೆಗೆಯಬೇಕು. ಈ ಪದ್ಧತಿಯಿಂದ ರೋಗ ಹಾಗೂ ಕೀಟಗಳ ಬಾಧೆಗಳನ್ನು ಕಡಿಮೆಗೊಳಿಸಬಹುದಲ್ಲದೆ ಸಾಕಷ್ಟು ಪ್ರಮಾಣದ ಸೂರ್ಯನ ಬೆಳಕನ್ನು ಉಪಯೋಗಿಸುವಂತಹ ಸಾಮರ್ಥ್ಯವನ್ನು ಹೊಂದುತ್ತದೆ.

**ಬಳ್ಳಿ ಸವರುವುದು :** ಸಾಮಾನ್ಯವಾಗಿ ನಾಟಿ ಮಾಡಿದ ಒಂದೂವರೆ-ಎರಡು ವರ್ಷಗಳಲ್ಲಿ ಬಳ್ಳಿಗಳು ಮುಂಗೈ ಗಾತ್ರಕ್ಕೆ ಬಂದಾಗ ಸವರುತ್ತಾರೆ. ಇದರಿಂದ ಉತ್ತಮ ಇಳುವರಿ ಪಡೆಯಲು ಮತ್ತು ಬಳ್ಳಿಗಳ ಬೆಳೆವಣಿಗೆಯನ್ನು ನಿಯಂತ್ರಿಸುವಲ್ಲಿ ಸಾಧ್ಯವಾಗುತ್ತದೆ. ಬಳ್ಳಿಗಳನ್ನು ವರ್ಷದಲ್ಲಿ ಎರಡು ಬಾರಿ ಎಂದರೆ ಒಮ್ಮೆ ಏಪ್ರಿಲ್ ತಿಂಗಳಲ್ಲಿ ಮತ್ತೊಮ್ಮೆ ಅಕ್ಟೋಬರ್ ತಿಂಗಳಲ್ಲಿ ಸವರುತ್ತಾರೆ.



**ಎರಡು ಬೆಳೆಯಾಗಿ ಬಳ್ಳಿ ಸವರುವುದು :** ಬೆಂಗಳೂರು ನೀಲಿ ಮತ್ತು ಗುಲಾಬಿ ತಳಿಗಳಿಂದ ವರ್ಷದಲ್ಲಿ ಎರಡು ಬೆಳೆ ತೆಗೆಯಲು ಸಾಧ್ಯ. ಈ ತಳಿಗಳನ್ನು ಬೇಸಗೆಯಲ್ಲಿ ಒಂದು ಅಥವಾ ಎರಡು ಕಣ್ಣು ಬಿಟ್ಟು ಸವರುವುದರ ಬದಲಾಗಿ ಬೇಸಗೆ ಮತ್ತು ಚಳಿಗಾಲದಲ್ಲಿ ಎರಡು ಬಾರಿ 4 - 6 ಕಣ್ಣುಗಳನ್ನು ಬಿಟ್ಟು ಸವರುತ್ತಾರೆ.

**ಹಂತ ಹಂತವಾಗಿ ಬಳ್ಳಿ ಕತ್ತರಿಸುವುದು :** ದ್ರಾಕ್ಷಿ ಹಣ್ಣುಗಳು ಮಾರುಕಟ್ಟೆಯಲ್ಲಿ ದೀರ್ಘಕಾಲದವರೆಗೆ ದೊರೆಯುವಂತೆ ಮಾಡಲು ಬೆಂಗಳೂರು ನೀಲಿ ತಳಿಗಳನ್ನು ಹಂತ ಹಂತವಾಗಿ ವರ್ಷವಿಡೀ ಚೌಟನಿ ಮಾಡುತ್ತಾರೆ.

**ಗೊಬ್ಬರ ಹಾಕುವುದು :** ಸಾರಜನಕ ಮತ್ತು ರಂಜಕ ಉತ್ತಮ ಬೆಳೆವಣಿಗೆ ಹಾಗೂ ಹಣ್ಣು ಬಿಡಲು ಸಹಾಯವಾಗುತ್ತದೆ. ಪೊಟ್ಯಾಷ್ ಅಂಶವು ಹಣ್ಣುಗಳ ಬಣ್ಣ ಮತ್ತು ಗುಣಮಟ್ಟ ಸುಧಾರಣೆಗೆ ಸಹಾಯಕವಾಗುತ್ತದೆ.

**ನೀರಾವರಿ :** ಬಳ್ಳಿಗಳನ್ನು ಸವರಿದ ಮೇಲೆ, ರಾಸಾಯನಿಕ ಗೊಬ್ಬರಗಳನ್ನು ಪೂರೈಸಿದ ಕೂಡಲೇ ನೀರನ್ನು ಒದಗಿಸಬೇಕು. ದ್ರಾಕ್ಷಿ ಕಾಯಿಗಳು ಬಟಾಣಿ ಗಾತ್ರ ಬೆಳೆಯುವವರೆಗೆ ಐದು - ಆರು ದಿನಗಳಿಗೊಮ್ಮೆ ನೀರು ಹರಿಸಬೇಕು. ಕೊಯ್ಲು ಮಾಡುವ ಒಂದು ವಾರಕ್ಕೆಮೊದಲು ನೀರು ಕೊಡಬಾರದು. ಇದರಂದ ಹಣ್ಣು ಸಿಹಿಯಾಗಿರುತ್ತವೆ. ದ್ರಾಕ್ಷಿ ಬೆಳೆಗೆ ಹನಿ ನೀರಾವರಿ ಹೆಚ್ಚು ಯುಕ್ತ. ಇದರಿಂದ ನೀರು ಉಳಿತಾಯುವಾಗುವುದಲ್ಲದೆ. ನೀರಿನಲ್ಲಿ ಕರಗಬಹುದಾದ ರಸಗೊಬ್ಬರಗಳನ್ನು 'ಡ್ರಿಪ್' ಮೂಲಕ ಸುಲಭವಾಗಿ ಕೊಡಬಹುದು.

**ಕೊಯ್ಲು ಮತ್ತು ಇಳುವರಿ :** ದ್ರಾಕ್ಷಿ ಗೊಂಚಲುಗಳು ಕೊಯ್ಲು ಮಾಡಿದ ಮೇಲೆ ಹಣ್ಣಾಗುವುದಿಲ್ಲ. ಆದ್ದರಿಂದ ಪೂರ್ತಿ ಹಣ್ಣಾಗದ ಗೊಂಚಲುಗಳನ್ನು ಕೊಯ್ಲು ಮಾಡಬಾರದು. ಬಹುತೇಕ ಎಲ್ಲ ತಳಿಗಳು ಹಣ್ಣಾದಾಗ ಬಂಗಾರದ ಹಳದಿ ಮಿಶ್ರಿತ ಬಣ್ಣಕ್ಕೆ ತಿರುಗುತ್ತವೆ. ಕಪ್ಪು ಬಣ್ಣದ ತಳಿಗಳು ಸಮನಾದ ದಟ್ಟ ಕಪ್ಪು ಬಣ್ಣಕ್ಕೆ ತಿರುಗುತ್ತವೆ.

ಇಳುವರಿ ಪ್ರಮಾಣ, ತಳಿ, ಬಳ್ಳಿಯ ವಯಸ್ಸು ಮತ್ತು ಬೇಸಾಯದ ಕ್ರಮಗಳನ್ನು ಅವಲಂಬಿಸಿ ವಿವಿಧ ತಳಿಗಳ ಸರಾಸರಿ ಇಳುವರಿ ಈ ರೀತಿ ಇದೆ.

| **ತಳಿಗಳು** | **ಪ್ರತಿ ಹೆಕ್ಟೇರಿಗೆ** |
|---|---|
| ಬೆಂಗಳೂರು ನೀಲಿ | 20 - 25 ಟನ್ |
| ಅನಾಬ್ - ಇ - ಷಾಹಿ | 30 - 37 ಟನ್ |
| ಥಾಮ್ಸನ್ ಸೀಡ್‌ಲೆಸ್ | 15 - 18 ಟನ್ |

ದ್ರಾಕ್ಷಿ ಇಳುವರಿ ಆಯಾ ಪ್ರದೇಶದ ಹವಾಗುಣ ಮತ್ತು ವ್ಯವಸಾಯ ಕಾಲದಲ್ಲಿ ಆರೈಕೆಗಳನ್ನು ಹೊಂದಿಕೊಂಡಿದೆ. ಬೆಳೆಸಿದ ಗಿಡ 4 ನೆಯ ವರ್ಷದಲ್ಲಿ ಫಸಲು ಕೊಡಲಾರಂಭಿಸಿದರೂ ಲಾಭದಾಯಕ ಫಸಲು ಬರಲು ಪ್ರಾರಂಭವಾಗುವುದು ಆರನೇಯ ವರ್ಷದಲ್ಲಿ. ಪ್ರಾರಂಭವಾದ ಸುಮಾರು ನೂರು ವರ್ಷಗಳ ವರೆಗೂ ಅಥವಾ ಇನ್ನೂ ಹೆಚ್ಚು ಕಾಲ ಫಸಲು ನೀಡುತ್ತವೆ. ಬಳ್ಳಿಯೊಂದು 1700 ಗೊಂಚಲು ದ್ರಾಕ್ಷಿ ಬಿಟ್ಟು 84 ವರ್ಷ ಬದುಕಿದೆ. ಕರ್ನಾಟಕದಲ್ಲಿ ಬೆಂಗಳೂರು ನೀಲಿ, ಪಕಡಿ, ಬೋಕ್ರಿ, ಸೆಲೆಕ್ಷನ್ ನಂ. 7 ಅಧಿಕ ಫಸಲು ಕೊಡುತ್ತವೆ.

**ಕೀಟ ಬಾಧೆ :** ಕಾಂಡ ಕತ್ತರಿಸುವ ದುಂಬಿ, ಚಿಕ್ಕಟ ದುಂಬಿ, ಥ್ರಿಪ್ಸ್‌ನುಸಿ, ಕೆಂಪು ಜೇಡ, ಹಿಟ್ಟು ತಿಗಣೆ,ಕಣಜದಹುಳು, ಸಣ್ಣ ರಂಧ್ರ ಕೊರೆವ ದುಂಬಿ, ತೊಗಟೆ ಕೊರೆವ ಕೀಟ ಇವು ದ್ರಾಕ್ಷಿ ಬೆಳೆಯನ್ನು ಬಾಧಿಸುತ್ತವೆ.

**ರೋಗಗಳು :** ಬೂದಿ ರೋಗ, ತುಕ್ಕು ರೋಗ, ಚಿಬ್ಬು ರೋಗ, ಬೂಜುರೋಗ, ತುಪ್ಪಟರೋಗ, ದುಂಡಾಣು ಎಲೆ ಚುಕ್ಕೆ ರೋಗಗಳು ಈ ಬೆಳೆಯನ್ನು ಕಾಡುತ್ತವೆ.

ದ್ರಾಕ್ಷಿಗೆ ಕಾಡುವಂತಹ ಕೀಟಗಳು ಮತ್ತು ರೋಗಗಳ ನಿವಾರಣೆಗಾಗಿ ರೋಗ ನಿರೋಧಕ ಔಷಧಿಗಳು ಹಾಗೂ ಕೀಟ ನಾಶಕಗಳನ್ನು ಸಕಾಲದಲ್ಲಿ ಸಿಂಪಡಿಸಬೇಕು. ಗಿಳಿಗಳು, ಇಲಿ ಇತರ ಕೆಲವು ಹಕ್ಕಿಗಳು, ಬಾವಲಿಗಳು, ಇರುವೆಗಳೂ ದ್ರಾಕ್ಷಿ ಬೆಳೆಗೆ ಬಾಧೆ ಉಂಟು ಮಾಡುತ್ತವೆ. ಇವುಗಳಿಗೆ ಎಚ್ಚರಿಕೆಯ ಕಾವಲು ಮಾಡಬೇಕು ಮತ್ತು ಬಲೆಗಳಿಂದ ಮುಚ್ಚಿ ರಕ್ಷಣೆ ನೀಡುವ ಅಥವಾ ಬೋನು ಗಳನ್ನಿಟ್ಟು ನಷ್ಟವನ್ನು ಕಡಿಮೆ ಮಾಡಬಹುದು.

**ಉಪಯೋಗಗಳು :** ದ್ರಾಕ್ಷಿಯಿಂದ ಹಲವು ಬಗೆಯ ಪಾನೀಯಗಳನ್ನು ತಯಾರಿಸುತ್ತಾರೆ. ಇವುಗಳಲ್ಲಿ ವೈನ್ ಮತ್ತು ಬ್ರಾಂದಿ ಮುಖ್ಯವಾದವು. ಜಪಾನ್ ಆಸ್ಟ್ರೇಲಿಯಾಗಳಲ್ಲಿ ಇದನ್ನು ದೈನಂದಿನ ಆಹಾರದೊಂದಿಗೆ ನಿತ್ಯ ಸೇವಿಸುತ್ತಾರೆ. ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಉನ್ನತ ಮಟ್ಟದ ವೈನ್ ತಯಾರಿಸುವ ಪ್ರಯತ್ನ ನಡೆದಿದೆ. ಕರ್ನಾಟಕದಲ್ಲಿ ದೊರೆಯುವ ಹೆಚ್ಚಿನ ದ್ರಾಕ್ಷಿ ನೇರವಾಗಿ ಬಳಸುವಂತಹವಾದರೂ ಬೆಂಗಳೂರು ನೀಲಿ ಸ್ವಲ್ಪ ಹುಳಿಯಾಗಿರುವುದರಿಂದ ವೈನ್ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಮಲಬದ್ಧತೆಯ ನಿವಾರಣೆಗೂ ಮೂತ್ರ ಪಿಂಡಗಳ ಸಮರ್ಪಕ ಕಾರ್ಯಕ್ಕೂ ಇದು ಸಹಾಯಕ. ಇದರಲ್ಲಿ ಸಾಕಷ್ಟು ಜೀವ ಸತ್ವಗಳು ಇವೆ. ದ್ರಾಕ್ಷಿ ಹಣ್ಣುಗಳನ್ನು ಬಿಸಿಲಿನಲ್ಲಿ ಒಣಗಿಸಿ ಒಣದ್ರಾಕ್ಷಿಯಾಗಿ ಶೇಖರಿಸುತ್ತಾರೆ.

ಆರ್ಥಿಕ ಬೆಳೆಯಾಗಿ ದಕ್ಷಿಣ ಭಾರತದಲ್ಲಿ ಕೊಡೈಕೆನಾಲ್, ಬೆಟ್ಟದ ತಪ್ಪಲಲ್ಲಿ, ಕಾವೇರಿ ಪಟ್ಟಣದ ಪ್ರದೇಶಗಳಲ್ಲಿ ಅನಂತಪುರ ಜಿಲ್ಲೆಯ ಪೆನಗೊಂಡ ತಾಲ್ಲೂಕು, ಬೆಂಗಳೂರಿನ ಆನೆಕಲ್, ಹೊಸಕೋಟೆ,ದೇವನಹಳ್ಳಿ ದೊಡ್ಡ ಬಳ್ಳಾಪುರ, ರಾಮನಗರ, ಬೆಳಗಾವಿ, ಧಾರವಾಡ ಬಿಜಾಪುರ ಹೀಗೆ ಹತ್ತು ಹಲವು ಕಡೆ ಬೆಳೆಸಲಾಗುತ್ತಿದೆ.

*ಎಸ್. ಬಿ.*

**ಧಾರವಾಡ ಜಿಲ್ಲೆಯ ಕೃಷಿ** ಧಾರವಾಡ ಜಿಲ್ಲೆ ಉತ್ತರ ಕರ್ನಾಟಕದ ಸಾಂಸ್ಕೃತಿಕ ಕೇಂದ್ರವಾಗಿದ್ದು, ಇದು 12ನೇ ಶತಮಾನದಲ್ಲಿ ನಿರ್ಮಿತವಾದ ನಗರವೆಂಬ ಕುರುಹುಗಳು ಸಿಕ್ಕಿವೆ. ಧಾರವಾಡ ಜಿಲ್ಲೆ ಕರ್ನಾಟಕದ ಏಕೀಕರಣವಾಗುವುದಕ್ಕಿಂತ ಮುಂಚೆ ಮುಂಬೈ ರಾಜ್ಯದ ಭಾಗವಾಗಿತ್ತು. ಧಾರವಾಡ ಜಿಲ್ಲೆಯ ಹುಬ್ಬಳ್ಳಿಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು ಹರ್ಡೇಕರ ಅವರು ಕ್ರಿ.ಶ. 1923 ರಲ್ಲಿ ಭಾರತ ಸೇವಾದಳವನ್ನು ಸತ್ಯಾಗ್ರಹಿಗಳ ಸಂಘಟನೆಗಾಗಿ ಸ್ಥಾಪಿಸಿದರು. ಜಿಲ್ಲಾ ಆಡಳಿತ ಕೇಂದ್ರ ಧಾರವಾಡ. ಜಿಲ್ಲೆಯ ವಿಸ್ತೀರ್ಣ 4,230 ಚ.ಮೀ., ಕ್ರೋಮೈಟ್, ಮೆಗ್ನೇಶಿಯಂ, ನದಿಗಳು : ಬೆಣ್ಣೆಹಳ್ಳ, ಕಾಲುವೆ, ಮಲಪ್ರಭಾ ಬಲದಂಡೆ ಕಾಲುವೆ, ಬೆಳೆಗಳು : ಜೋಳ, ಬತ್ತ, ಸೂರ್ಯಕಾಂತಿ, ಶೇಂಗಾ, ಕಡಲೆ, ಹೆಸರು, ತೊಗರಿ, ಕುಸುಬಿ, ಸೋಯಾ ಅವರೆ, ಹೆಸರು (ಜವಾರಿ), ಹೊಂಬೆಸರು, ಅಲಸಂಧಿ, ಉದ್ದು, ಗುರೆಳ್ಳು, ಬಟಗಡ್ಲಿ (ಬಟಾಣಿ ಜವಾರಿ), ಹೈಬ್ರೀಡ್ ಹತ್ತಿ, ಬಿ.ಟಿ. ಹತ್ತಿ ಜಯದರ ಹತ್ತಿ ಇತ್ಯಾದಿ.

ಹುಬ್ಬಳ್ಳಿಯ ತಂಪು ಸಿರಿಯ ತಾಣವೆಂದರೆ ಉಣಕಲ್ ಕೆರೆ. ಕ್ರಿ.ಶ. 1893ರಲ್ಲಿ ಈ ಕೆರೆಯನ್ನು ಪುನರುಜ್ಜೀವನಗೊಳಿಸಿ ನಿರ್ಮಿಸಲಾಗಿದೆ. ಕೆರೆಯ ವಿನ್ಯಾಸಕ್ಕೆ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯನವರಿಂದ ಅಂಗೀಕಾರ ಪಡೆಯಲಾಗಿತ್ತು ಎಂದು ತಿಳಿದು ಬರುತ್ತದೆ. ಸುಮಾರು 213

ಎಕರೆ ಪ್ರದೇಶಗಳಲ್ಲಿ ವ್ಯಾಪಿಸಿರುವ ಉಣಕಲ್ ಕೆರೆ 30 ಅಡಿ ಆಳವಿದೆ. ಈ ಕೆರೆಯೊಂದರಿಂದಲೇ 1955 ರ ಮೊದಲು ಇಡೀ ಹುಬ್ಬಳ್ಳಿಗೆ ನೀರು ಸರಬರಾಜು ಮಾಡಲಾಗುತ್ತಿತ್ತು ಎಂದು ತಿಳಿದು ಬರುತ್ತದೆ. ಸದಾ ಜಲಾವೃತ್ತದಿಂದ ಕೂಡಿದ ಈ ಕೆರೆಯಲ್ಲಿ ಉದ್ಯಾನವನ ನಿರ್ಮಿತಗೊಂಡು ಸೂರ್ಯನು ಮುಳುಗುವ ದೃಶ್ಯವನ್ನು ನೋಡಲು ಜನ ತಂಡೋಪ-ತಂಡವಾಗಿ ಈಗಲೂ ಆಗಮಿಸುತ್ತಾರೆ. ಈ ಸ್ಥಳವನ್ನು ಮಹಾನಗರ ಪಾಲಿಕೆ ರಮ್ಯ ತಾಣವಾಗಿ ಮಾರ್ಪಡಿಸಿದೆ. ಈಗ ಕಾರಂಜಿ ಅಲಂಕೃತ ಉದ್ಯಾನವನ ಮಾಡಿದ್ದು ದೋಣಿವಿಹಾರದ ಜೊತೆಗೆ ಮತ್ತಷ್ಟು ಸುಂದರ ತಾಣವಾಗಿ ಪ್ರಸಿದ್ಧಿ ಪಡೆದಿದೆ. ಆದರೆ ಕೆರೆಯ ಒತ್ತುವಾರಿಯಾಗಿ ಕೆರೆಯ ಪ್ರದೇಶ ಕಬಳಿಕೆಗೊಂಡು, ನೀರನ್ನು ಮಲಿನಗೊಳಿಸುತ್ತಿದ್ದಾರೆ. ಕೆರೆಯ ಸುತ್ತಲೂ ರಕ್ಷಣೆ ಬೇಕಾಗಿದೆ.


**ಧಾರವಾಡ :** ಕರ್ನಾಟಕ ರಾಜ್ಯದ 30 ಜಿಲ್ಲೆಗಳ ಪೈಕಿ ಒಂದು. ಈ ಜಿಲ್ಲೆ ರಾಜ್ಯದ ವಾಯವ್ಯ ಭಾಗದಲ್ಲಿದೆ. ಉ.ಅ. $14^{o}17'$ - $15^{o}50'$ಮತ್ತು ಪೂ.ರೇ. $76^{o}$-$78^{o}$ನಡುವೆ ಇದೆ. ಉತ್ತರದಲ್ಲಿ ಬೆಳಗಾಂವಿ ಮತ್ತು ಗದಗ ಜಿಲ್ಲೆ, ಪೂರ್ವದಲ್ಲಿ ಗದಗ, ಪಶ್ಚಿಮದಲ್ಲಿ ಬೆಳಗಾಂವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು, ದಕ್ಷಿಣದಲ್ಲಿ ಹಾವೇರಿ ಜಿಲ್ಲೆಗಳಿಂದ ಸುತ್ತುವರಿದಿದೆ. ಧಾರವಾಡ, ನವಲುಗುಂದ, ಹುಬ್ಬಳ್ಳಿ, ಕಲಘಟಗಿ ಮತ್ತು ಕುಂದಗೋಳ ತಾಲ್ಲೂಕುಗಳಿವೆ. ಈ ಜಿಲ್ಲೆಯ ವಿಸ್ತೀರ್ಣದ 4230 ಚ.ಕಿ.ಮೀ. ಇದು ಬೆಳಗಾಂವಿ ಆಡಳಿತ ವಿಭಾಗಕ್ಕೆ ಸೇರಿದೆ. ಇಲ್ಲಿಯ ಪ್ರಮುಖ ನಗರ ಹಾಗೂ ಆಡಳಿತ ಕೇಂದ್ರ ಹುಬ್ಬಳ್ಳಿ, ಧಾರವಾಡ, ನಿಜಾಮರ ಆಡಳಿತದಲ್ಲಿದ್ದ ಈ ಪ್ರದೇಶ 1818ರ ತರುವಾಯ ಧಾರವಾಡ ಜಿಲ್ಲೆಯಾಯಿತು.

**ಮೇಲ್ಮೈಲಕ್ಷಣ :** ಜಿಲ್ಲೆಯು ಭೌಗೋಳಿಕವಾಗಿ ಪಶ್ಚಿಮದಿಂದ ಪೂರ್ವದ ಕಡೆಗೆ ಇಳಿಜಾರಾಗಿದೆ. ಇದನ್ನು ಪಶ್ಚಿಮದ ಮಲೆನಾಡು ಮತ್ತು ಪೂರ್ವದ ಬಯಲುನಾಡು ಎಂದು ವಿಗಡಿಸಬಹುದು. ಇದು ಮಲೆನಾಡಿನ ಘಟ್ಟ ಪ್ರದೇಶವನ್ನು ಹೆಚ್ಚಾಗಿ ಹೊಂದಿದೆ. ಆಳ್ನಾವರದ ಪೂರ್ವಕ್ಕಿರುವ ತೇಗೂರು ಗುಡ್ಡ, ಧಾರವಾಡ, ಕಲಘಟಗಿ ನಡುವೆ ಇರುವ ಬೂದನಗುಡ್ಡ; ಅದರ ಪಶ್ಚಿಮಕ್ಕಿರುವ ಗಣಿ ಗುಡ್ಡ, ದಕ್ಷಿಣದಲ್ಲಿ ಕುಮಾರಗುಡ್ಡ ಪಮುಖವಾದಂಥವು. ಬೂದನಗುಡ್ಡ ದಕ್ಷಿಣೋತ್ತರ ವಾಗಿ ಸುಮಾರು 13ಕಿ.ಮೀ. ಉದ್ದ, 1.6ಕಿ.ಮೀ. ಅಗಲವಿದ್ದು ಎತ್ತರ ದಲ್ಲಿದೆ. ಅತ್ಯಂತ ಎತ್ತರವಾದ ಶಿಖರಗಳೂ ಇಲ್ಲಿವೆ. ದುಂಡನೆ ಮತ್ತು ಹಾನಗಲ್ ಗುಡ್ಡಗಳು ಈ ಭಾಗದ ಚಿಕ್ಕ ಗುಡ್ಡಗಳು. ದಕ್ಷಿಣದಲ್ಲಿ ಕಡೂರು, ಮಾಸೂರು ಹಾಗೂ ಮಾರವಳಿ ಗುಡ್ಡಗಳು ಕಡಿದಾಗಿವೆ. ಇವುಗಳ ಸರಾಸರಿ ಎತ್ತರ 732ಮೀ. ಅತ್ಯುನ್ನತ ಶಿಖರ 825ಮೀ. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಮಲೆನಾಡಿಗೂ ಬಯಲು ಸೀಮೆಗೂ ನಡುವೆ ಹಾದು ಹೋಗುತ್ತದೆ. ಈ ಜಿಲ್ಲೆಯ ಎಲ್ಲ ಭಾಗಗಳಲ್ಲೂ ಗುಡ್ಡಗಳು, ಶಿಖರಗಳು ಗೋಚರಿಸುತ್ತದೆ.

**ನದಿಗಳು :** ತುಂಗಭದ್ರ ಮತ್ತು ಮಲಪ್ರಭ ಇಲ್ಲಿಯ ಮುಖ್ಯ ನದಿಗಳು. ಮಲಪ್ರಭ ನದಿ ಜಿಲ್ಲೆಯ ಉತ್ತರ ಗಡಿಯಲ್ಲಿ ಸುಮಾರು 327 ಕಿ.ಮೀ. ದೂರ ಹರಿಯುತ್ತದೆ. ಇದರ ಮುಖ್ಯ ಶಾಖೆಯೊಂದು 192ಕಿ.ಮೀ. ಹರಿದು ಮೆಣಸಿಗೆ ಹತ್ತಿರ ಮಲಪ್ರಭ ನದಿ ಸೇರುತ್ತದೆ. ಶಾಲ್ಮಲ ನದಿ ಧಾರವಾಡ ಹತ್ತಿರ ಸೋಮೇಶ್ವರದಲ್ಲಿ ಹುಟ್ಟಿ ಬೇಡ್ತಿಹಳ್ಳವನ್ನು ತಲುಪುತ್ತದೆ. ಅನಂತರ ದಮ್ಮಾನದಿ ಕೂಡಲ ಗ್ರಾಮದ ಹತ್ತಿರ ವರದಾ ನದಿಯನ್ನು ಸೇರುತ್ತದೆ. ಕುಮುದ್ವತಿ ನದಿ ಹಿರೇಕೆರೂರು ಮತ್ತು ರಾಣಿಬೆನ್ನೂರು ತಾಲ್ಲೂಕುಗಳ ಮೂಲಕ ಪೂರ್ವಕ್ಕೆ ಹರಿದು ತುಂಗಭದ್ರ ನದಿಯನ್ನು ಸಂಧಿಸುತ್ತದೆ. ಬೇಡ್ತಿ ಹಳ್ಳ ಅರಬ್ಬಿ ಸಮುದ್ರದ ಕೈಡೆಗೆ ಹರಿಯುವ ಏಕಮಾತ್ರ ನದಿ.

**ಕೆರೆಗಳು :** ನೀರಸಾಗರ, ಉಣಕಲ್ಲು, ಮಾದಿಗ-ಮಾಸೂರು, ಹಿರೇಕೆರೂರು, ಹಾವೇರಿ, ಆಸುಂಡಿ, ಮೆಡ್ಲೇರಿ, ಡಂಬಳ, ಹತ್ತಿಮತ್ತೂರು, ಸವಣೂರು, ಮಾಗಡಿ ಮತ್ತು ಕಲಗೇರಿ ಈ ಜಿಲ್ಲೆಯ ಮುಖ್ಯ ಕೆರೆಗಳು.

**ಭೂಸ್ವರೂಪ :** ಜಿಲ್ಲೆಯ ಈಶಾನ್ಯ ಭಾಗದಲ್ಲಿ ಮರಳುಗಳಿದ್ದು ಅದು ನರಗುಂದ ಮತ್ತು ನವಿಲು ಗುಂದ ಗುಡ್ಡಗಳವರೆಗೂ ವಿಸ್ತರಿಸಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಲ್ಯಾಟರೈಟ್ ಶಿಲೆಯೂ ಕಂಡುಬರುತ್ತದೆ.



ಹೆಚ್ಚಿನ ಶಿಲಾಶ್ರೇಣಿಗಳು ಕಂಡು ಬರುವುದು ಮಧ್ಯ, ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ. ಡೋಣ ಗ್ರಾಮದ ಬಳಿ ಸುಣ್ಣದ ಕಲ್ಲಿರುವ ಭೂಭಾಗವಿದೆ. ಈ ಭಾಗದ ಬಯಲು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಗ್ರಾನೈಟ್ ಮತ್ತು ನೈಸ್ ಶಿಲೆಗಳು ಕಾಣಸಿಗುತ್ತವೆ.

**ಮಣ್ಣುಗಳು :** ಎರೆ, ಹುಳಕೆರೆ, ಕೆಂಪು, ಮಾಸಾರಿ ಮಣ್ಣು, ಮಡಿಕಟ್ಟು ಮಣ್ಣು, ರೇವೆ ಮಣ್ಣು ಮುಂತಾದ ಎಲ್ಲ ಪ್ರಕಾರದ ವಿಭಜಿತ ಶಿಲೆಗಳ ಮಿಶ್ರಣ ಜಿಲ್ಲೆಯ ಮಣ್ಣಿನ ವಿಶೇಷ. ಎರೆಮಣ್ಣು, ನವಲಗುಂದ, ರೋಣ, ಗದಗ, ಹುಬ್ಬಳ್ಳಿಯ ಪೂರ್ವಭಾಗ. ಶಿರಹಟ್ಟಿಯ ಪಶ್ಚಿಮ ಭಾಗ ಮುಂತಾದೆಡೆ ಕಂಡುಬರುತ್ತದೆ. ಹುಳಕೆರೆ ಮಣ್ಣು ಗಡಿನಾಡಿನ ಧಾರವಾಡದ ಪೂರ್ವ, ಹುಬ್ಬಳ್ಳಿಯ ಪಶ್ಚಿಮ ಭಾಗಗಳಲ್ಲಿ ಕಂಡುಬಂದರೆ ಕೆಂಪು ಮಣ್ಣು ಈ ಜಿಲ್ಲೆಯ ಗುಡ್ಡಗಳ ಇಳಿಜಾರುಗಳಲ್ಲಿ ಅನೇಕ ಕಡೆ ಇದೆ.

**ಸಸ್ಯ ಸಂಪತ್ತು :** ಜಿಲ್ಲೆಯಲ್ಲಿ ಮಾನ್ಸೂನ್ ಕಾಡು ಮತ್ತು ಕುರುಚಲು ಕಾಡುಗಳು ಕಂಡುಬರುತ್ತವೆ. ಮಲೆನಾಡು ಪ್ರದೇಶಗಳಲ್ಲಿರುವ ಮಾನ್ಸೂನ್ ಕಾಡುಗಳಲ್ಲಿ ತೇಗ ಮುಖ್ಯವಾದುದು. ಇತರ ಮರಗಳು ವಿರಳವಾಗಿದ್ದು ಸುಮಾರು 9-15ಮೀ. ಎತ್ತರ ಬೆಳೆಯುತ್ತವೆ. ಅರಣ್ಯ ಈ ಭಾಗದ ಕಲಘಟಗಿ ಮತ್ತು ತಡಸ ಸುತ್ತ ಹರಡಿಕೊಂಡಿದೆ. ನದಿ ದಂಡೆಗಳಲ್ಲಿ ಬಿದಿರು ಮೆಳೆಗಳು ಇವೆ. ಮಾನ್ಸೂನ್ ಕಾಡುಗಳಲ್ಲಿ ಮಾವು, ಹಲಸು, ಹುಣಿಸೆ, ಅರಳಿ, ಆಲ ಇತ್ಯಾದಿ ಮರಗಳಿವೆ. ಈ ಭಾಗದಲ್ಲಿ ಮುಳ್ಳು ಕಾಡು ಇದ್ದು ಅಲ್ಲೆಲ್ಲ ಜಾಲಿಮರಗಳೇ ಹೆಚ್ಚು. ಕುರುಚಲು ಕಾಡುಗಳೂ ಕೆಲವೆಡೆ ಇವೆ.

**ಹವಾಗುಣ :** ಜಿಲ್ಲೆಯ ಹವಾಗುಣ ಹಿತಕರವಾಗಿದೆ. ಮೊದಲನೆಯ ಋತು ವಸಂತ ಫೆಬ್ರವರಿ ಕೊನೆಯಿಂದ ಮೇ ಕೊನೆಯ ತನಕ. ಜೂನ್-ಸೆಪ್ಟೆಂಬರ್ ತನಕ ಮುಂಗಾರು ಮಳೆಗಾಲ, ಅಕ್ಟೋಬರ್-ನವೆಂಬರ್‌ನಲ್ಲಿ ಈಶಾನ್ಯ ಮಾರುತಗಳ ಹಿಂಗಾರು ಮಳೆಗಾಲ, ಡಿಸೆಂಬರ್-ಫೆಬ್ರವರಿ ಚಳಿಗಾಲವಾಗಿರುತ್ತದೆ. ಜಿಲ್ಲೆಯ ವಾರ್ಷಿಕ ಮಳೆಯ ವಿವರ (2000-2010) ಹೀಗಿದೆ

ಮೆಣಸಿನಕಾಯಿ ಮತ್ತು ಕುಸುಬೆ ಜೋಳವನ್ನು ಶೇ.28.95 ಹೆ. ಪ್ರದೇಶದಲ್ಲಿ ಬೆಳೆಯುತ್ತಿದ್ದು, ಇದು ಜಿಲ್ಲೆಯ ಪ್ರಮುಖ ಬೆಳೆಯೆನಿಸಿದೆ. ಶೇ.20.73 ಪ್ರದೇಶದಲ್ಲಿ ಗೋಧಿಯನ್ನು ಶೇ.11.63 ಪ್ರದೇಶದಲ್ಲಿ ಬತ್ತವನ್ನೂ ಶೇ. 3.80 ಪ್ರದೇಶದಲ್ಲಿ ಮುಸುಕಿನ ಜೋಳವನ್ನು ಶೇ.32.81 ಪ್ರದೇಶದಲ್ಲಿ ದ್ವಿದಳ ಧಾನ್ಯವನ್ನು ಬೆಳೆಯಲಾಗುತ್ತದೆ. ಧಾರವಾಡ ತಾಲ್ಲೂಕಿನಲ್ಲಿ ಜೋಳ ಮತ್ತು ಗೋಧಿಯನ್ನು, ಧಾರವಾಡ ಮತ್ತು ಕಲಘಟಗಿಯಲ್ಲಿ ಬತ್ತವನ್ನು ಹೆಚ್ಚಾಗಿ ಬೆಳೆಯುವರು. ನವಲಗುಂದ, ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ದ್ವಿದಳ ಧಾನ್ಯಗಳ ಬೇಸಾಯವಿದ್ದರೆ, ಗಡಿಭಾಗದಲ್ಲಿ ಕಬ್ಬು ಬೆಳೆ ಉಂಟು. ಧಾರವಾಡ ಜಿಲ್ಲೆಯಲ್ಲಿ ಸು. 512,031 ಹೆಕ್ಟೇರ್‌ನಲ್ಲಿ ವ್ಯವಸಾಯ ಮಾಡಲಾಗುತ್ತಿದೆ. (2011) ಕಾಲುವೆಗಳಿಂದ 41403ಹೆ, ಕೆರೆಗಳಿಂದ 1113ಹೆ, ನೀರಾವರಿಗೆ ಒಳಪಟ್ಟ ನಿವ್ವಳ ಭೂಪ್ರದೇಶ.

**ಇತರ ಬೆಳೆಗಳು :** 2012-13ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಅನುಷ್ಠಾನಗೊಂಡ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗಳ ಅಡಿಯಲ್ಲಿ ವಿವಿಧ ತರಕಾರಿ ಬೀಜೋತ್ಪಾದನೆಗೆ ಮೂಲ ಸೌಕರ್ಯ ಒದಗಿಸಿಲಾಗಿ ವಿವಿಧ ಹಣ್ಣಿನ ಹೊಸ ತೋಟಗಳ ಸ್ಥಾಪನೆ ಮಾಡಲಾಗಿದೆ. ಸರ್ಕಾರದಿಂದ ಧನಸಹಾಯ ನೀಡಲಾಗುತ್ತಿದೆ. ಹುಬ್ಬಳ್ಳಿ ಹಾಗೂ ಧಾರವಾಡ ಮಳೆ ಕೊರತೆ ಪ್ರದೇಶಗಳಾದರು ತೋಟಗಾರಿಕೆ ಬೆಳೆಗಳಾದ ಆಲೂಗಡ್ಡೆ, ಈರುಳ್ಳಿ, ಮೆಣಸಿನಕಾಯಿ ಇತರೆ ಕಾಯಿಪಲ್ಯೆ ಬೆಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಸಪೋಟಾ, ಪೇರಲ, ಬಾಳೆ, ಪಪ್ಪಾಯಿ, ಧಾರವಾಡ ಹುಬ್ಬಳ್ಳಿ ಮತ್ತು ಕಲಘಟಗಿ ತಾಲ್ಲೂಕುಗಳಲ್ಲಿ ಅತಿ ಹೆಚ್ಚು ಇಳುವರಿಯನ್ನು ಕೊಡುತ್ತಿವೆ. ಈ ಮೇಲಿನ ಬೆಳೆಗಳನ್ನು ಬೆಳೆಯುವ ಭೂವಿಸ್ತೀರ್ಣ ಕೋಷ್ಟಕವನ್ನು ಗಮನಿಸಬಹುದು. ಪೇರಲೆ ಉಷ್ಣ ವಲಯದ ಜನಪ್ರಿಯ ಹಣ್ಣಾಗಿದೆ. ಪೇರಲ ಹಣ್ಣು ವಿಟಮಿನ್ ಸತ್ವಗಳ ಆಗರವೆಂದೇ ಹೇಳಬಹುದು. ದೇಶದ ತಾಜಾ ಪೇರಲ ಹಣ್ಣುಗಳಿಗೆ ವಿದೇಶಗಳಲ್ಲಿ ಬೇಡಿಕೆ ಇದೆ.

| ಕ್ರ.ಸಂ. | ತಾಲ್ಲೂಕುಗಳು | ಮಳೆ ಮಾಪನ ಕೇಂದ್ರಗಳು | | ವಾರ್ಷಿಕ ವಾಡಿಕೆ ಮಳೆ (1941–1990 | | ಮಳೆ (ಮಿ.ಮೀ.) 2000 ದಿಂದ 2010 ರವರೆಗೆ ವಾರ್ಷಿಕ ವಾಸ್ತವಿಕ ಮಳೆ (ಮಿ.ಮೀ.) | | | | | | | | | | |
|---|---|---|---|---|---|---|---|---|---|---|---|---|---|---|---|---|
| | | ಕಾರ್ಯ ನಿರ್ವಹಿಸುತ್ತಿರುವ | ದುರಸ್ತಿಯಲ್ಲಿರುವ | ಮಳೆ ದಿನಗಳು | ವಾಡಿಕೆ ಮಳೆ | **2000** | **2001** | **2002** | **2003** | **2004** | **2005** | **2006** | **2007** | **2008** | **2009** | **2010** |
| 1 | 2 | 402 | 403 | 404 | 405 | 406 | 407 | 408 | 409 | 410 | 411 | 412 | 413 | 414 | 415 | 416 |
| 1. | ಧಾರವಾಡ | 7 | 0 | 61 | 864 | 754.0 | 449.0 | 446.8 | 387.9 | 693.4 | 905.4 | 974.3 | 1149.3 | 859.6 | 974.6 | 1017.2 |
| 2. | ಹುಬ್ಬಳ್ಳಿ | 4 | 0 | 58 | 729 | 587.1 | 399.5 | 632.9 | 567.1 | 560.7 | 1496.5 | 693.5 | 804.9 | 765.1 | 795.0 | 848.7 |
| 3. | ಕಲಘಟಗಿ | 4 | 0 | 73 | 978 | 1076.6 | 682.3 | 520.0 | 773.3 | 852.9 | 171.8 | 923.4 | 1191.3 | 833.1 | 1085.7 | 1037.2 |
| 4. | ಕುಂದಗೋಳ | 2 | 0 | 56 | 715 | 488.0 | 287.9 | 716.3 | 424.1 | 536.3 | 640.6 | 569.5 | 575.6 | 627.4 | 738.2 | 766.5 |
| 5. | ನವಲಗುಂದ | 3 | 0 | 45 | 643 | 737.5 | 454.8 | 673.1 | 341.0 | 540.2 | 682.6 | 432.1 | 722.3 | 771.5 | 948.9 | 539.7 |
| | **ಜಿಲ್ಲಾಮೊತ್ತ** | **20** | **0** | **58** | **786** | **728.6** | **454.7** | **597.8** | **498.7** | **636.7** | **979.4** | **713.2** | **888.7** | **771.3** | **908.5** | **841.9** |

**ಕೃಷಿ :** ಜಿಲ್ಲೆಯಲ್ಲಿ ಕೃಷಿಯೇ ಪ್ರಧಾನ ಕಸಬು. ಶೇ. 80ರಷ್ಟು ಸಾಗುವಳಿ ಭೂಮಿಯಿದೆ. ಜೋಳ ಬತ್ತ, ಮುಸುಕಿನ ಜೋಳ, ಗೋಧಿ ಇಲ್ಲಿಯ ಪ್ರಮುಖ ಆಹಾರ ಬೆಳೆಗಳು. ವಾಣಿಜ್ಯ ಬೆಳೆಗಳು ಹತ್ತಿ, ಶೇಂಗಾ,

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಪ್ರಮುಖ ತಳಿ ಬ್ಯಾಡಗಿ. ಇದರ ಬಣ್ಣ ಕೆಂಪಾಗಿದ್ದು ಒಣಗಿದಾಗ ನೇರಿಗೆಗಟ್ಟುವುದು. ಹಣ್ಣು 20-25 ಸೆಂ.ಮೀ. ಉದ್ದ ಕಡ್ಡಿಯಾಗಿರುವುದು. ಈ ತಳಿಯ

ಗಿಡಗಳು ಒಂದು ಮೀಟರ್ ಎತ್ತರವಾಗಿ ಬೆಳೆಯುವವು. ಧಾರವಾಡ ಗಡಿನಾಡಿನಲ್ಲಿ ಒಣಹಣ್ಣಿಗಾಗಿ ಮೆಣಸಿನಕಾಯಿ ಬೆಳೆಯುವ ಮುಖ್ಯ ತಳಿ ಇದು. ಈ ತಳಿಯಲ್ಲಿಯೇ ಪ್ರತ್ಯೇಕಿಸಿದ ಕುಂದಗೋಳ ತಾಲೂಕಿನ ದ್ಯಾವನೂರ ಗ್ರಾಮದಲ್ಲಿ ಬೆಳೆಯುವ ಮೆಣಸಿನಕಾಯಿ ದಪ್ಪವಾಗಿರುವುದು. ಹೀಗೆ ಬ್ಯಾಡಗಿ ಒಣ ಮೆಣಸಿನಕಾಯಿಯಲ್ಲಿ ಅನೇಕ ಪ್ರಕಾರಗಳಿದ್ದು ಕಡ್ಡಿ, ಡಬ್ಬಿ ಮತ್ತು ದ್ಯಾವನೂರ ಮೆಣಸಿನಕಾಯಿಗಳೆಂದು ವಿಂಗಡಿಸಬಹುದು. ಅಸ್ಟಾ ಬಣ್ಣದ ಮೌಲ್ಯ 156.9 ಕ್ಯಾಪ್ಸಿಸಿಯನ್ ಅಂಶ ಇದರಲ್ಲಿ ಬಹಳ ಕಡಿಮೆ ಇರುವುದು.

**ಧಾರವಾಡ ಡೊಣ್ಣೆ ಮೆಣಸಿನಕಾಯಿ :** ಈ ತಳಿಗೆ ತಾರಿಹಾಳ ಡೊಣ್ಣೆ ಮೆಣಸಿನಕಾಯಿ ಎಂದು ಕರೆಯುವರು. ಕಾಯಿಗಳು ದುಂಡಾಗಿ ಇದ್ದು, ಬಹಳ ಖಾರವಾಗಿದ್ದು, ರುಚಿ ಮತ್ತು ಸ್ವಾದಗಳಿಂದ ಧಾರವಾಡ ಸುತ್ತ-ಮುತ್ತಲೂ ಬಹಳ ಜನಪ್ರಿಯವಾಗಿದೆ. ಗಿಡವೊಂದಕ್ಕೆ 200 ರಿಂದ 300 ಕಾಯಿಗಳನ್ನು ನೀಡುತ್ತದೆ. ಕರ್ನಾಟಕದಲ್ಲಿ ನೀರಾವರಿಯ ಆಶ್ರಯದಲ್ಲಿ ವರ್ಷವಿಡೀ ಬೆಳೆಯಬಹುದು. ಕಾಲಾವಧಿ 120 ರಿಂದ 180 ದಿನಗಳು.

**ಹುಬ್ಬಳ್ಳಿ ತಾಲೂಕಿನ ಗುಲಾಬಿ ಹೂವಿನ ತಳಿ :** 'ಕೆಂಪು ಸೋಫಿಯಾ ಲಾರೆನ್ಸ್'. ಫಲವತ್ತಾದ ಮರಳು ಮಿಶ್ರಿತ ಕೆಂಪುಗೋಡು ಮಣ್ಣು ಅಗತ್ಯ. ದೇವರಗುಡಿಹಾಳ, ರಾಯನಾಳ, ಅಂಚಟಗೇರಿ ಪರಸಾಪೂರ ಮತ್ತು ಚವರಗುಡ್ಡ ಗ್ರಾಮದ ಪ್ರದೇಶಗಲ್ಲಿ ಇದರ ಜೊತೆಗೆ ಸೇವಂತಿಗೆ, ಮಲ್ಲಿಗೆ ಮುಂತಾದ ಪುಷ್ಪ ಕೃಷಿಯನ್ನು ನೋಡಬಹುದು. ಇದು ರೈತರ ಆರ್ಥಿಕ ಸ್ಥಿತಿಗೆ ಸಹಕಾರಿಯಾಗಿದೆ. ಇತರ ದೇಶೀಯ ಹೈಬ್ರಿಡ್ ತಳಿಗಳು ಇವೆ.

ಸಾಂಪ್ರದಾಯಿಕವಾಗಿ ಹುಬ್ಬಳ್ಳಿ ತಾಲೂಕಿನ ಗಾಮನಗಟ್ಟಿ, ಸುತಗಟ್ಟಿ, ಅಮರಗೋಳಗಳಲ್ಲಿ ಮೂಲಂಗಿ, ಕೊತ್ತಂಬರಿ, ಪಾಲಕ, ರಾಜಕೀರೆ, ಮೆಂತೆ, ಆಲೂಗಡ್ಡೆ, ಈರುಳ್ಳಿ ಮುಂತಾದ ತರಕಾರಿಗಳನ್ನು ಬೆಳೆಯುತ್ತಾರೆ. ದೇಶೀಯ ತಳಿ ಮತ್ತು ಹೈಬ್ರಿಡ್ ತಳಿಗಳನ್ನು ಬೆಳೆಯುವುದುಂಟು.

ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 64,27,329 ಹೆಕ್ಟೇರ್. ಸಾಗುವಳಿ ವಿಸ್ತೀರ್ಣ 3,60,186 ಹೆಕ್ಟೇರ್. (2011-12) ಮುಂಗಾರು ಹಂಗಾಮಿನಲ್ಲಿ 2,46,40 ಹೆಕ್ಟೇರ್ ಗುರಿಗೆ 1,84,705 ಹೆಕ್ಟರ್ ಕ್ಷೇತ್ರದಲ್ಲಿ ವಿವಿಧ ಬೆಳೆಗಳ ಬಿತ್ತನೆಯಾಗಿದ್ದು, ಜುಲೈ ತಿಂಗಳಲ್ಲಿ 151.7 ಮಿ.ಮೀ. ವಾಡಿಕೆ ಮಳೆಗೆ 98.6 ಮಿ.ಮೀ. ಅಂದರೆ ಶೇ. 64 ರಷ್ಟು ಮಾತ್ರ ಮಳೆ ಬಂದಿದ್ದರಿಂದ ಕಲಘಟಗಿ ತಾಲೂಕು ಹೊರತುಪಡಿಸಿ ಉಳಿದೆಲ್ಲಾ ತಾಲೂಕುಗಳಲ್ಲಿ ಖುಷ್ಕಿ ಕ್ಷೇತ್ರದಲ್ಲಿ ಸುಮಾರು 37,730 ಹೆ. ಪ್ರದೇಶದಲ್ಲಿ ಬೆಳೆಗಳು ತೇವಾಂಶ ಕೊರತೆಯಿಂದ ಬಾಡಿ, ಬೆಳವಣಿಗೆ ಕುಂಠಿತವಾಗಿ ಇಳುವರಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ. ಅದೇ ರೀತಿ ಹಿಂಗಾರು ಹಂಗಾಮಿನ ಬಿತ್ತನೆ ಸಮಯದಲ್ಲಿ ಸೆಪ್ಟಂಬರ್ ತಿಂಗಳಲ್ಲಿ 112.4 ಮಿ.ಮೀ. ವಾಡಿಕೆಗೆ ಕೇವಲ 66.5 ಮಿ.ಮೀ. ಅಂದರೆ ಶೇ. 59 ಮಳೆ ಬಂದಿದ್ದರಿಂದ ಹಿಂಗಾರು ಹಂಗಾಮಿನ ಬಿತ್ತನೆ ತಡವಾಗಿ ಮಂದಗತಿಯಿಂದ ಪ್ರಾರಂಭವಾಯಿತು. ಅನಂತರ ಅಕ್ಟೋಬರ್ ತಿಂಗಳಲ್ಲಿ ಉತ್ತಮ ಮಳೆ ಬಂದಿತ್ತಾದರೂ ಜಿಲ್ಲೆಯಾದ್ಯಂತ ಸಮರ್ಪಕವಾಗಿ ಆಗದೇ ಇದ್ದುದರಿಂದ 20,86,50 ಹೆ. ಬಿತ್ತನೆ ಕ್ಷೇತ್ರದ ಗುರಿಗೆ 1,95,646 ಹೆ. (ಶೇ. 94) ಕ್ಷೇತ್ರದಲ್ಲಿ ವಿವಿಧ ಬೆಳೆಗಳ ಬಿತ್ತನೆಯಾಗಿರುತ್ತದೆ. ಆದರೆ ಭೂಮಿಯಲ್ಲಿ ತೇವಾಂಶ ಕಡಿಮೆಯಾಗಿ ಕೃಷಿ ಪ್ರದೇಶದಲ್ಲಿಯ ಸುಮಾರು 90,765 ಹೆ. ಪ್ರದೇಶದ ಎಲ್ಲ ಬೆಳೆಗಳು ತೇವಾಂಶ ಕೊರತೆಯಿಂದ ಬಾಡಿ ಬೆಳವಣಿಗೆ ಕುಂಠಿತವಾಗಿ ಇಳುವರಿ ಶೇ. 50 ಕ್ಕಿಂತ ಕಡಿಮೆಯಾಗಿರುವುದು ಕಂಡು ಬರುತ್ತದೆ.

ಜಿಲ್ಲೆಯಾದ್ಯಂತ ಬೇಸಗೆ ಹಂಗಾಮಿನ 4,030 ಹೆ. ಗುರಿಗೆ 3,770 ಹೆ. ಬಿತ್ತನೆಯಾಗಿದೆ. ಪ್ರತಿ ತಾಲೂಕಿನಲ್ಲಿ ರೈತ ಸಂಪರ್ಕ ಕೇಂದ್ರಗಳಿವೆ. ಕೃಷಿಗೆ ಸಂಬಂಧಿಸಿದ ನಿರ್ದೇಶಕರ ಕಛೇರಿಗಳಿವೆ, ಇನ್ನು ಹೆಚ್ಚಿನ ಮಾಹಿತಿಗಾಗಿ ಕೋಷ್ಟಕವನ್ನು ಗಮನಿಸಬಹುದು.

| ಪ್ರಮುಖ ಬೆಳೆಗಳ ವಿಸ್ತೀರ್ಣ | | | | | | | | | |
|---|---|---|---|---|---|---|---|---|---|
| ಏಕದಳ ಧಾನ್ಯಗಳು ವಿಸ್ತೀರ್ಣ (ಹೆ.) | | | | | | | | | |
| ಕ್ರಸಂ. | ತಾಲ್ಲೂಕುಗಳು | ಬತ್ತ | ಜೋಳ | ಸಜ್ಜೆ | ಮುಸುಕಿನ ಜೋಳ | ರಾಗಿ | ಗೋದಿ | ಇತರೆ ತೃಣ ಧಾನ್ಯಗಳು | ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು |
| 1 | 2 | 667 | 668 | 669 | 670 | 671 | 672 | 673 | 674 |
| 1. | ಧಾರವಾಡ | 12,431 | 8,235 | 0 | 8,281 | 0 | 6,933 | 319 | 36,199 |
| 2. | ಹುಬ್ಬಳ್ಳಿ | 455 | 7,307 | 0 | 6,619 | 2 | 5,518 | 439 | 20,340 |
| 3. | ಕಲಘಟಗಿ | 13,770 | 5,591 | 0 | 4,064 | 0 | 41 | 206 | 23,672 |
| 4. | ಕುಂದಗೋಳ | 302 | 10,226 | 0 | 1,283 | 54 | 8,741 | 94 | 20,700 |
| 5. | ನವಲಗುಂದ | 0 | 12,295 | 0 | 31,615 | 0 | 16,855 | 0 | 60,765 |
| **ಜಿಲ್ಲಾಮೊತ್ತ** | | **26,958** | **43,654** | **0** | **51,862** | **56** | **38,088** | **1,058** | **161,676** |

| ಪ್ರಮುಖ ಬೆಳೆಗಳ ವಿಸ್ತೀರ್ಣ | | | | | | | | | | | | | |
|---|---|---|---|---|---|---|---|---|---|---|---|---|---|
| ದ್ವಿದಳ ಧಾನ್ಯಗಳ (ಹೆ.) | | | | | | | | | | | | | |
| ಕ್ರ.ಸಂ. | ತಾಲ್ಲೂಕುಗಳು | ತೊಗರಿ | ಹುರುಳಿ | ಉದ್ದು | ಹೆಸರು | ಅವರೆ | ಅಲಸಂದಿ | ಕಡಲೆ | ಇತರೆ | ಒಟ್ಟು ದ್ವಿದಳ ಧಾನ್ಯಗಳು | ಒಟ್ಟು ಆಹಾರ ಧಾನ್ಯಗಳು | ಒಟ್ಟು ಹಣ್ಣುಗಳ ಬೆಳೆಯ ವಿಸ್ತೀರ್ಣ | ಒಟ್ಟು ತರಕಾರಿಗಳು ಬೆಳೆಗಳ ವಿಸ್ತೀರ್ಣ |
| 1 | 2 | 675 | 676 | 677 | 678 | 679 | 680 | 681 | 682 | 683 | 684 | 685 | 686 |
| 1. | ಧಾರವಾಡ | 813 | 413 | 1,548 | 8,322 | 292 | 180 | 21,565 | 16 | 33,149 | 69,348 | 4,520 | 7,583 |
| 2. | ಹುಬ್ಬಳ್ಳಿ | 685 | 318 | 588 | 5,022 | 30 | 566 | 6,453 | 17 | 13,359 | 33,699 | 2,317 | 9,170 |
| 3. | ಕಲಘಟಗಿ | 202 | 621 | 49 | 2,422 | 82 | 92 | 142 | 10 | 3,620 | 27,292 | 1,212 | 284 |
| 4. | ಕುಂದಗೋಳ | 823 | 462 | 70 | 2,304 | 0 | 445 | 5,148 | 4 | 9,256 | 29,956 | 354 | 2,434 |
| 5. | ನವಲಗುಂದ | 50 | 0 | 125 | 13,250 | 0 | 8 | 27,151 | 0 | 40,584 | 101,349 | 67 | 27,419 |
| ಜಿಲ್ಲಾಮೊತ್ತ | | **2,573** | **1,814** | **2,380** | **31,300** | **404** | **991** | **60,459** | **47** | **99,968** | **261,644** | **8,470** | **46,890** |

| ಪ್ರಮುಖ ಬೆಳೆಗಳ ವಿಸ್ತೀರ್ಣ | | | | | | | | | |
|---|---|---|---|---|---|---|---|---|---|
| ಎಣ್ಣೆ ಕಾಳುಗಳು (ಹೆ.) | | | | | | | | | |
| ಕ್ರ.ಸಂ. | ತಾಲ್ಲೂಕುಗಳು | ಶೇಂಗಾ | ಸೂರ್ಯಕಾಂತಿ | ಕುಸುಮೆ | ಹರಳು | ಎಳ್ಳು | ಹುಚ್ಚೆಳ್ಳು | ಇತರೆ ಎಣ್ಣೆ ಕಾಳುಗಳು | ಒಟ್ಟು ಎಣ್ಣೆ ಕಾಳುಗಳು |
| 1 | 2 | 687 | 688 | 689 | 690 | 691 | 692 | 693 | 694 |
| 1. | ಧಾರವಾಡ | 7,700 | 189 | 2,105 | 0 | 51 | 57 | 11,256 | 21,358 |
| 2. | ಹುಬ್ಬಳ್ಳಿ | 8,078 | 708 | 1,054 | 0 | 208 | 87 | 8,106 | 18,241 |
| 3. | ಕಲಘಟಗಿ | 488 | 51 | 102 | 0 | 0 | 23 | 15,204 | 15,868 |
| 4. | ಕುಂದಗೋಳ | 18,074 | 295 | 1,472 | 0 | 139 | 144 | 1,556 | 21,680 |
| 5. | ನವಲಗುಂದ | 4,767 | 7,054 | 2,488 | 0 | 77 | 0 | 30 | 14,416 |
| ಜಿಲ್ಲಾಮೊತ್ತ | | **39,107** | **8,297** | **7,221** | **0** | **475** | **311** | **36,152** | **91,563** |

| ಕ್ರ.ಸಂ. | ತಾಲ್ಲೂಕುಗಳು | ವಾಣಿಜ್ಯ ಬೆಳೆಗಳು (ಹೆ.) | | | |
|---|---|---|---|---|---|
| | | ಹತ್ತಿ | ಕಬ್ಬು | ತಂಬಾಕು | ಒಟ್ಟು ವಾಣಿಜ್ಯ ಬೆಳೆಗಳು |
| 1 | 2 | 695 | 696 | 697 | 698 |
| 1. | ಧಾರವಾಡ | 3,646 | 4,395 | 0 | 25,358 |
| 2. | ಹುಬ್ಬಳ್ಳಿ | 19,762 | 70 | 0 | 38,350 |
| 3. | ಕಲಘಟಗಿ | 4,067 | 877 | 7 | 20,939 |
| 4. | ಕುಂದಗೋಳ | 28,143 | 0 | 0 | 49,954 |
| 5. | ನವಲಗುಂದ | 27,843 | 63 | 0 | 42,276 |
| ಜಿಲ್ಲಾಮೊತ್ತ | | **83,461** | **5,405** | **7** | **176,877** |

**ಕೃಷಿ ಉತ್ಪನ್ನಗಳ ಸಂರಕ್ಷಣೆ :** ಕೃಷಿಯಲ್ಲಿ ಬೀಜ ಪ್ರಮುಖ ಪಾತ್ರವಹಿಸುತ್ತದೆ. ಗುಣಮಟ್ಟದ ಬೀಜ ಹಾಗೂ ಬೀಜ ಸಂರಕ್ಷಣೆ ಬಹಳ ಮುಖ್ಯ. ಶೇಖರಣೆ ಬೀಜದಂತೆ ಬೆಳೆ, ಉತ್ತಮ ಬೀಜ, ಉತ್ತಮ ಬೆಳೆಯ ಸಂಕೇತ. ಒಳ್ಳೆಯ ಬಿತ್ತನೆ ಬೀಜದಿಂದ ಹುಲುಸಾದ ಬೆಳೆ ಮತ್ತು ಅಧಿಕ ಇಳುವರಿ ಪಡೆಯಬಹುದು. ಲಾಭದಾಯಕ ಕೃಷಿಗೆ ಗುಣಮಟ್ಟದ ಬೀಜ ಒಂದು ಪ್ರಮುಖ ಸಂಪನ್ಮೂಲವಾಗಿದೆ. ಬೀಜದ ಪರಿಶುದ್ಧತೆ, ಮೊಳಕೆಯ ಪ್ರಮಾಣ, ತೇವಾಂಶ, ರೋಗ ಮತ್ತು ಕೀಟ ಬಾಧೆಗಳನ್ನು ಪರೀಕ್ಷಿಸಿ ಬೀಜದ ಗುಣಮಟ್ಟ ತೀರ್ಮಾನಿಸಬಹುದು. ಆದ್ದರಿಂದ ಬೀಜಗಳನ್ನು ಬಿತ್ತುವುದಕ್ಕೆ ಮೊದಲು ಅದು ಉತ್ತಮ ಗುಣ ಸತ್ತ್ವಗಳನ್ನು ಹೊಂದಿದ ಬಗ್ಗೆ ಖಾತ್ರಿ ಮಾಡಿಕೊಂಡು ಬಿತ್ತಿದಲ್ಲಿ ಹೆಚ್ಚಿನ ಇಳುವರಿ ಪಡೆಯಬಹುದು. ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳು ಈ ಕೆಳಗಿನಂತೆ ಗುಣಧರ್ಮಗಳನ್ನು ಹೊಂದಿರಬೇಕು.

- ಬೀಜ ಒಳ್ಳೆ ತಳಿಗೆ ಸೇರಿದ್ದು, ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಭೌತಿಕ ಮತ್ತು ಆನುವಂಶಿಕ ಶುದ್ಧತೆ ಹೊಂದಿರಬೇಕು.
- ಬೀಜಗಳಲ್ಲಿ ಕಸ - ಕಡ್ಡಿ, ಒಡೆದ ಬೀಜ, ಜೊಳ್ಳು, ಕಲ್ಲು ಮತ್ತು ಮಣ್ಣು ಮುಂತಾದ ಜಡ ಪದಾರ್ಥಗಳು ಇಲ್ಲದಂತೆ ಯೋಗ್ಯ ರೀತಿಯಲ್ಲಿ ಸಂಗ್ರಹಿಸುವುದು ಮುಖ್ಯ.
- ಇತರ ಬೀಜ ಮತ್ತು ಕಳೆ ಬೀಜಗಳಾಗಲಿ ಇರಕೂಡದು.
- ಬೀಜಗಳ ಮೊಳಯುವಿಕೆಯ ಸಾಮರ್ಥ್ಯ ಹೆಚ್ಚಾಗಿರಬೇಕು.
- ಬೀಜ ಬೆಳೆಯನ್ನು ಬಾಧಿಸುವ ರೋಗಾಣುಗಳನ್ನಾಗಲಿ ಕೀಟಗಳ ಮೊಟ್ಟೆ ಅಥವಾ ಕೋಶಗಳನ್ನಾಗಲಿ ಹೊಂದಿರಬಾರದು.
- ಬೀಜೋತ್ಪಾದನೆ ಕೈಗೊಂಡು, ಉತ್ಪಾದಿಸಿದ ಬೆಳೆಯನ್ನು ಪೂರ್ಣ ಮಾಗಿದಾಗ ಕಟಾವು ಮಾಡುವುದು ಮುಖ್ಯ. ಅನಂತರ ತೆನೆ ಒಣಗಿಸಿ

ಒಕ್ಕಣೆ ಮಾಡಿ ಸಂಸ್ಕರಣೆ ಮಾಡುವುದರಿಂದ ಕಸ - ಕಡ್ಡಿ, ಜೊಳ್ಳು, ದೊಡ್ಡ ಮತ್ತು ಸಣ್ಣಗಾತ್ರದ ಬೀಜಗಳಿಂದ ಬೇರ್ಪಡಿಸಿದ ಒಂದೇ ಗಾತ್ರದ ಬೀಜವನ್ನು ಪಡೆಯಬಹುದು.

- ಬೀಜವನ್ನು ನಿಗದಿತ ಪ್ರಮಾಣದ ತೇವಾಂಶಕ್ಕಿಂತ ಹೆಚ್ಚಿರದಂತೆ ಪುನಃ ಒಣಗಿಸಿ ಉತ್ತಮ ರೀತಿಯ ಬೀಜ ಉಗ್ರಾಣಗಳಲ್ಲಿ ಶೇಖರಿಸಿದಾಗ ಬೀಜದ ಗುಣಮಟ್ಟವನ್ನು ಹೆಚ್ಚು ಕಾಲ ಕಾಪಾಡಿಕೊಳ್ಳಬಹುದು.

  ಬೀಜವು ಇಲಿ, ಹೆಗ್ಗಣ ಮತ್ತು ಕೀಟಗಳಿಗೆ ತುತ್ತಾಗುವ ಸಂಭವವಿರುವುದರಿಂದ ಇವುಗಳಿಂದ ಸಂರಕ್ಷಿಸುವುದು ಅಷ್ಟೇ ಮುಖ್ಯ. ಕೆಲವೊಮ್ಮೆ ಅಣಬೆ, ಕೀಟಗಳು ಬೆಳೆಯಲ್ಲಿ ಮತ್ತು ಉಗ್ರಾಣ ಗಳಲ್ಲಿ ವೃದ್ಧಿಯಾಗುವ ಸಂಭವವುಂಟು.

- ಪ್ರತಿ ಕಿ.ಗ್ರಾಂ. ಬೀಜಕ್ಕೆ 2.5 ಗ್ರಾಂ ಥೈರಾಮ್ ಅಥವಾ ಕ್ಯಾಪ್ಟಾನ್ ಶಿಲೀಂಧ್ರ ನಾಶಕದಿಂದ ಬೀಜೋಪಚಾರ ಮಾಡಬೇಕು. ದ್ವಿದಳ ಧಾನ್ಯದ ಬೀಜಗಳಿಗೆ ತಗಲುವ ಬುರಬುರಿ ಕೀಟ ಬಾಧೆ ತಡೆಗಟ್ಟಲು ಪ್ರತಿ ಕಿ.ಗ್ರಾಂ. ಬೀಜಕ್ಕೆ 5 ಮಿ.ಲೀ. ಹರಳೆಣ್ಣೆ ಅಥವಾ ಬೇವಿನೆಣ್ಣೆ ಅಥವಾ ಹೊಂಗೆ ಎಣ್ಣೆಯಿಂದ ಬೀಜೋಪಚಾರ ಮಾಡಬಹುದು.

- ಬೆಳೆ ಕಟಾವಿಗೆ 15 ದಿನ ಮೊದಲೇ ಮುಂಜಾಗ್ರತೆ ಕ್ರಮವಾಗಿ ಏಕದಳ, ದ್ವಿದಳ, ತರಕಾರಿ, ಹಣ್ಣುಗಳನ್ನು ತಾಪಮಾನ ಸ್ಥಿತಿಯಲ್ಲಿ ಸಂಗ್ರಹಿಸಿಡಬಹುದಾಗಿದೆ. ಪ್ಲಾಸ್ಟಿಕ್ ಚೀಲಗಳು, ಗೋಣಿ ಚೀಲಗಳಲ್ಲಿ ಸಂರಕ್ಷಣೆ ಮಾಡಬಹುದು. ಮೆಲಾಥಿನ ರಾಸಾಯನಿಕಗಳನ್ನು ನೀರಿನೊಂದಿಗೆ ಬೆರೆಸಿ ಬಳಸಬಹುದು.

- ಸಂರಕ್ಷಣೆ ಉಗ್ರಾಣ, ಹಗೇವು, ಗೋದಾಮುಗಳು ಸ್ವಚ್ಛವಾಗಿರಬೇಕು. ರಂಧ್ರಗಳು ಇರಬಾರದು. ಬಿಸಿಲಿಗೆ ಒಣಗಿಸಿ ತೇವಾಂಶ 8-10 ಕ್ಕಿಂತ ಕಡಿಮೆ ಮಾಡಿ ಸಂಗ್ರಹಿಸಿದರೆ ಕೀಟ ಬಾಧೆ ಕಡಿಮೆ ಮಾಡಬಹುದು. ಸಾಕಷ್ಟು ಗಾಳಿ ಬೆಳಕಿರಬೇಕು. ನೀರು ಸೋರಿ ಗೋಡೆ ತೇವಾಂಶವಾಗುವಂತಿರಬಾರದು. ಕೀಟನಾಶಕ ಮತ್ತು ರಾಸಾಯನಿಕ ಗೊಬ್ಬರಗಳು ದೂರವಿಡಬೇಕು.

- ಉಗ್ರಾಣದ ಪೀಡೆ ನಿರ್ವಹಣೆಗಾಗಿ ಬಜೆಪುಡಿ, ಬೇವಿನ ಬೀಜದ ಪುಡಿ, ಸೀತಾಫಲ ಬೀಜದ ಪುಡಿ, ಬೂದಿ, ಉಸುಕು, ಎಣ್ಣೆ ಲೇಪನ (ದ್ವಿದಳ ಧಾನ್ಯಕ್ಕೆ) ಇವು ವಿಷರಹಿತ ವಾಗಿರುತ್ತವೆ.

- ಹಣ್ಣು ತರಕಾರಿಗಳನ್ನು ದ್ರಾವಣದ ಸಾಂದ್ರತೆ ಮತ್ತು ಬಳಸುವ ಸಮಯ ಸಸ್ಯದಿಂದ ಸಸ್ಯಕ್ಕೆ ಮತ್ತು ಬೆಳವಣಿಗೆಯ ಹಂತಕ್ಕೆ ಅನುಗುಣವಾಗಿ ಬೇರೆ - ಬೇರೆ ಇರುತ್ತದೆ.

- ಹಣ್ಣು ಮಾಗುವುದನ್ನು ನಿಯಂತ್ರಿಸುವುದು, ಬೇಗನೆ ಹಣ್ಣಾಗಿಸುವುದು, ಹಣ್ಣಾಗುವಿಕೆಯನ್ನು ಮುಂದೂಡುವುದು, ಬೆಳವಣಿಗೆ ತಡೆಯುವುದು, ಇಳುವರಿ ಹೆಚ್ಚಿಸುವುದು, ಬಾಳಿಕೆ ಹೆಚ್ಚಿಸುವುದು, ಅದರ ಜೊತೆಗೆ ಕಳೆ ನಿಯಂತ್ರಣವನ್ನು ಮಾಡುವುದು. ಕೀಟ ಮತ್ತು ರೋಗಗಳ ಬಾಧೆ ಈ ಎಲ್ಲವನ್ನು ನಿಯಂತ್ರಣ ರಾಸಾಯನಿಕ ದ್ರಾವಣದ ಸಿಂಪಡಿಸುವುದರಿಂದ ಸಂರಕ್ಷಣೆ ಮಾಡಬಹುದು.

  ಹಗೇವುಗಳಲ್ಲಿ ಸುಂಕದೊಂದಿಗೆ ಸೊಪ್ಪಿನ ಕಂಕಣ ಜೋಳವನ್ನು ನೆಲದಲ್ಲಿ ಹುಗಿದಿಡುವುದು.

**ಗೊಬ್ಬರಗಳು, ಕೀಟನಾಶಕಗಳು :** ಧಾರವಾಡ ಮೂಲತಃ ಸಾಂಪ್ರದಾಯಿಕ ಕೃಷಿಗೆ ಹೆಚ್ಚು ಒತ್ತು ಕೊಟ್ಟ ಪ್ರದೇಶ. ಪ್ರತಿಯೊಂದು ತಾಲೂಕು ಹಳ್ಳಿಯಲ್ಲೂ ಕೊಟ್ಟಿಗೆ ಗೊಬ್ಬರಗಳ ಬಳಕೆ ಜಾಸ್ತಿಯಿದ್ದು ಆಧುನಿಕತೆಗೆ ಒಗ್ಗಿಕೊಂಡಂತೆ ಹಿಂದಿನ 4-5 ವರ್ಷದಿಂದ ರಾಸಾಯನಿಕ ಗೊಬ್ಬರಗಳನ್ನು ತೊರೆದು ಸಾವಯವ ಕೃಷಿಗೆ ಒಲವು ತೋರುತ್ತಿದ್ದಾರೆ.

**ಸಾವಯವ ಕೃಷಿ :** ರೈತನ ಮಿತ್ರ ಎಂದು ಕರೆಯಲ್ಪಡುವ ಎರೆಹುಳು ನಿಸರ್ಗದಲ್ಲಿ ನಿರಂತರವಾಗಿ ಮಣ್ಣನ್ನು ಉಳುಮೆ ಮಾಡುವ ಜೀವಿ. ಮಣ್ಣಿನ ಫಲವತ್ತತೆ ಕಾಪಾಡುವಲ್ಲಿ ಇದರದು ಪ್ರಮುಖ ಪಾತ್ರ. ಇದು ತಳದ ಮಣ್ಣನ್ನು ಮೇಲೆ ತಂದು ಸಾವಯವ ವಸ್ತುಗಳನ್ನು ತನ್ನ ಜಠರದಲ್ಲಿ ವಿಭಜಿಸಿ ವಿವಿಧ ಪೋಷಕಾಂಶಗಳನ್ನು ಒಳಗೊಂಡು ಹಿಕ್ಕೆಗಳನ್ನು ಹಾಕುತ್ತದೆ. ಈ ಹಿಕ್ಕೆಯೇ ಎರೆಹುಳು ಗೊಬ್ಬರ.

ಇದು ಬೆಳೆಗಳಿಗೆ ಬೇಕಾಗುವ ಮುಖ್ಯ ಮತ್ತು ಲಘು ಪೋಷಕಾಂಶಗಳನ್ನು ಬೆಳವರ್ಧಕಗಳನ್ನು ಹೊಂದಿರುತ್ತದೆ. ಎಲ್ಲ ತರಹದ ಬೆಳೆಗಳಿಗೆ ಬಿತ್ತುವ ವೇಳೆಯಲ್ಲಿ ಎರೆಗೊಬ್ಬರ ಬಳಕೆಯಿದೆ. ತೋಟದ ಬೆಳೆಗಳಲ್ಲಿ ಎರೆಹುಳುಗಳನ್ನು ಮಣ್ಣಿನಲ್ಲಿ ಬಿಟ್ಟು ಕೃಷಿ ಮಾಡುವುದರಿಂದ ಉತ್ತಮ ಇಳುವರಿಯನ್ನು ಪಡೆಯಬಹುದು. ಕೋಳಿ ಮತ್ತು ಮೀನು ಸಾಕಾಣಿಕೆಯಲ್ಲಿ ಎರೆಹುಳುಗಳನ್ನು ಆಹಾರವಾಗಿ ಉಪಯೋಗಿಸುವರು.

**ಜೈವಿಕ ಗೊಬ್ಬರ :** ಬೆಳೆಗಳಿಗೆ ಪ್ರಯೋಜನಕಾರಿಯಾಗುವಂತಹ ಸೂಕ್ಷ್ಮಜೀವಿಗಳನ್ನು ಅಳವಡಿಸಿ ತಯಾರಿಸಿದಂತಹ ಗೊಬ್ಬರಗಳಿಗೆ ಜೈವಿಕ ಗೊಬ್ಬರಗಳೆನ್ನುವರು. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಸಾರಜನಕ, ಸ್ಥಿರೀಕರಿಸುವ ಜೈವಿಕ ಗೊಬ್ಬರಗಳು, ರಂಜಕ ಕರಗಿಸುವ ಜೈವಿಕ ಗೊಬ್ಬರಗಳು, ಸಾವಯವ ಪದಾರ್ಥಗಳನ್ನು ಕೊಳಿಸುವ ಜೈವಿಕ ಗೊಬ್ಬರಗಳು ಹಾಗೂ ಸಸ್ಯ ಬೆಳವಣಿಗೆಯನ್ನು ಪ್ರಚೋದಿಸುವ ಜೈವಿಕ ಗೊಬ್ಬರಗಳು ಸದ್ಯ ಪ್ರಚಲಿತದಲ್ಲಿವೆ. ಏಕದಳ, ದ್ವಿದಳ ಮತ್ತು ತೃಣ ಧಾನ್ಯ ಬೆಳೆಗಳಾದ ಜೋಳ, ಗೋಧಿ, ಗೋವಿನ ಜೋಳ, ರಾಗಿ, ಹತ್ತಿ, ಕಬ್ಬು ಮತ್ತು ಕಾಯಿಪಲ್ಲೆ ಬೆಳೆಗಳಿಗೆ ಇದು ಹೆಚ್ಚು ಉಪಯುಕ್ತ.

**ಹಸುರು ಗೊಬ್ಬರ :** ಗಿಡಗಳ ಎಲೆ ಕಾಂಡ ಮತ್ತು ಇತರ ಭಾಗಗಳನ್ನು ಹಸುರಾಗಿರುವಾಗಲೇ ಮಣ್ಣಿಗೆ ಸೇರಿಸಿ ಮಣ್ಣಿನ ಫಲವತ್ತತೆಯನ್ನು ಕಾಪಾಡುವ ಕ್ರಮವೇ ಹಸುರು ಗೊಬ್ಬರ. ಸಸ್ಯಾವಶೇಷಗಳನ್ನು ಭೂಮಿಯೊಳಗೆ ಸೇರಿಸಿ ಗೊಬ್ಬರ ತಯಾರಿಸುವುದು. ಪ್ರಚಲಿತ ಕ್ರಮ. ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಮೇಲೆ ತಿಳಿಸಿದ ಗೊಬ್ಬರಗಳ ಬಳಕೆ ಅಧಿಕವಾಗಿದೆ.

**ಕೀಟನಾಶಕಗಳು :** ಭೂಮಿ ಮತ್ತು ಹವಾಗುಣಕ್ಕೆ ಅನುಗುಣವಾಗಿ ಬೆಳೆಗಳಿಗೆ ಬೀಜ ಹಂತದಿಂದ ಕೊಯ್ಲು ಮಾಡಿ ಸಂಗ್ರಹಣೆ ಮಾಡುವವರೆಗೆ ವಿವಿಧ ತರಹದ ಪೀಡೆಗಳಿಂದ ತೊಂದರೆ ಉಂಟಾಗಿ ಬೆಳೆಯ ಇಳುವರಿ ಹಾಗೂ ಗುಣಮಟ್ಟದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಈ ತೊಂದರೆಗಳು ಕೀಟ, ನುಶಿ, ಪಶು-ಪಕ್ಷಿ, ಶಿಲೀಂದ್ರ, ದುಂಡಾಣು, ನಂಜಾಣು, ಬೂದು ರೋಗ, ಜಂತು, ಕಳೆ ಹಾಗೂ ನಿಸರ್ಗ ವಿಕೋಪಗಳಿಂದ

ಉಂಟಾಗುವುದು. ಭಾರತದಲ್ಲಿ 1960 ರ ಮೊದಲು ಕೀಟಗಳ ಬಾಧೆಯಿಂದ ಬರಗಾಲ ಸಂಭವಿಸಿತ್ತು. 1975 ರ ಅನಂತರ ಕೃಷಿಗೆ ಮಾನ್ಯತೆ ಕೊಟ್ಟು ಸಂಶೋಧನೆ ನಡೆದಿದ್ದರಿಂದ ಕೀಟನಾಶಕಗಳು ಹುಟ್ಟಿ ಹಸುರುಕ್ರಾಂತಿ ಬಂದು ದೇಶದ ಆಹಾರದ ಪರಿಸ್ಥಿತಿ ಸುಧಾರಿಸಿದೆ. ಇಂದಿಗೂ ಶೇ. 15-20 ರಷ್ಟು ನಷ್ಟವು ಕೀಟ ರೋಗ ಹಾಗೂ ಕಳೆಗಳಿಂದ ಆಗುತ್ತಿದೆ. ಬೆಳೆಗಳನ್ನು ರಕ್ಷಿಸಲು ಕೀಟರೋಗ ನಿರೋಧಕ ತಳಿಗಳ ಬಳಕೆ ಹೈಬ್ರಿಡ್ ತಳಿಗಳ ಬಳಕೆ ಸರಿಯಾದ ಬೇಸಾಯ ಕ್ರಮಗಳನ್ನು ಅಳವಡಿಸಬೇಕಿದೆ.

**ಉಪಕರಣಗಳು :** ಭೂಮಿಯನ್ನು ಹಸನುಗೊಳಿಸಲು ಮೊದಲು ಬೇಕಾದುದು ರಂಟೆ, ಮರದ ನೇಗಿಲು : ಇತ್ತೀಚೆಗೆ ಕಬ್ಬಿಣದ ನೇಗಿಲು ಬಂದು ದಿನದ 6 ತಾಸುಗಳಲ್ಲಿ ಜೋಡಿ ಎತ್ತಿನಿಂದ 0.30 ರಿಂದ 0.35 ಹೆಕ್ಟೇರ್ ನೆಲವನ್ನು ಉಳುಮೆ ಮಾಡಬಹುದಾಗಿದೆ. ದೇಶಿಯ ನೇಗಿಲಿಗಿಂತ ಉತ್ತಮವಾಗಿ ಮಣ್ಣನ್ನು ತಿರುವಿ ಹಾಕಿ ಹಾಗೂ ಹೆಂಟೆಗಳನ್ನು ಪುಡಿ ಮಾಡಬಲ್ಲದು.

**ಗುರ್ರ (ಗ್ರಬ್ಬರ್) :** ಇದು ದೇಶಿಯ 3 ತಾಳಿನ ಕೂರಿಗೆ ಆಕಾರ ಇರುತ್ತದೆ. ಇದನ್ನು ಕುಶಲಕರ್ಮಿಗಳು ತಯಾರಿಸುತ್ತಾರೆ. ಸದಾಕಾಲ ಉಳುಮೆ ಮಾಡುವಂತಹ ಭೂಮಿಯಲ್ಲಿ ನೇಗಿಲ ಬದಲಾಗಿ ಉಪಯೋಗಿಸುವ ಉಪಕರಣ. ಕಪ್ಪು ಮಣ್ಣಿನಲ್ಲಿ ಜೋಡಿ ಎತ್ತುಗಳಿಂದ 1.2 ರಿಂದ 1.5 ಹೆಕ್ಟೇರ್ ನೆಲವನ್ನು ಉಳುಮೆ ಮಾಡಬಹುದು.

**ಗುರ್ರ (ಫುಟ್ ಕಲ್ಟಿವೇಟರ್) :** 1.2 ರಿಂದ 1.5 ಹೆಕ್ಟೇರ್ ಪ್ರದೇಶವನ್ನು ಜೋಡಿ ಎತ್ತುಗಳಿಂದ ಉಳುಮೆ ಮಾಡುವ ಸಾಧನ. ಇದರಿಂದ ನೇಗಿಲು ಹೊಡೆಯುವ ಹಾಗೂ ಹರಗುವ ಕೆಲಸಗಳನ್ನು ಏಕಕಾಲಕ್ಕೆ ಮಾಡಬಹುದು. ಈ ಉಪಕರಣ ತೇವಾಂಶ ಕಾಯ್ದುಕೊಳ್ಳುವಲ್ಲಿ ಸಹಕಾರಿ. ಸಮಯವನ್ನು ಉಳಿಸುತ್ತದೆ. ಬೆಳೆ ಕಟಾವು ಮಾಡಿದ ಉಳಿದ ಕಸ-ಕಡ್ಡಿಗಳನ್ನು ಮಣ್ಣಿನೊಂದಿಗೆ ಬೆರೆಸುವ ಕೆಲಸವನ್ನು ಫುಟ್ ಕಲ್ಟಿವೇಟರ್ (ಗುರ್ರ) ಮಾಡುತ್ತದೆ.




**ದಿಂಡು ಸಾಲು ಮಾಡುವ ಸಾಧನ :** ಇದರ ಸಹಾಯದಿಂದ ಒಂದು ಜೋಡಿ ಎತ್ತಿನಿಂದ ಪ್ರತಿ ತಾಸಿಗೆ 1500 ರಿಂದ 3000 ಮೀ. ರವರೆಗೆ ಬೇರೆ - ಬೇರೆ ಅಳತೆಯ ಹರಿ ಮತ್ತು ಬೋದುಗಳನ್ನು (ಅಗಲ 45-90 ಸೆಂ.ಮೀ. ಆಳ 15-25 ಸೆಂ.ಮೀ.) ಮಾಡಬಹುದು. ನೀರಾವರಿ ಬೇಸಾಯಕ್ಕೆ ಅನುಕೂಲ ಇದರಿಂದ ಮಣ್ಣು ಸಹ ಏರಿಸಬಹುದು.

**ಬದು ಹಾಕುವ ಸಾಧನ :** (ಬಂಡ ಫಾರ್ಮರ್) : ಪ್ರತಿ ತಾಸಿಗೆ 15 ರಿಂದ 30 ಸೆಂ.ಮೀ. ಎತ್ತರ 30 ರಿಂದ 40 ಸೆಂ.ಮೀ. ತಳದ ಅಗಲ ಅಳತೆಯುಳ್ಳ ಬೋದುಗಳನ್ನು 1500 ರಿಂದ 2000 ಮೀ. ರವರೆಗೆ ಒಂದು ಜೋಡಿ ಎತ್ತಿನಿಂದ ಹಾಕಬಹುದು. ಖುಷ್ಕಿ ಬೇಸಾಯದಲ್ಲಿ ಚಾಕುಮಾಡಿ ಮತ್ತು ಬದುಪಟ್ಟಿ ಪದ್ಧತಿಗಳ ಬದು ಹಾಕಲು ಯೋಗ್ಯವಾದ ಉಪಕರಣವಿದು.

**ಬಿತ್ತನೆಗೆ ಉಪಯೋಗಿಸುವ ಸಾಧನಗಳು :** ಬಿತ್ತನೆಗೆ ಹೊಂದಾಣಿಕೆ ಮಾಡಬಲ್ಲ ಬೀಜ ಮತ್ತು ಗೊಬ್ಬರದ ಕೂರಿಗೆ ಒಂದು ಜೋಡಿ ಎತ್ತಿನಿಂದ ದಿನಕ್ಕೆ 1.5 ರಿಂದ 2.0 ಹೆಕ್ಟೇರ್ ಪ್ರದೇಶದಲ್ಲಿ ಕುಸುಬೆ, ತೊಗರಿ, ಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ಬಿತ್ತಲು ಉಪಯೋಗ. ಬಿತ್ತನೆಯ ಅಂತರವನ್ನು ಬದಲಾಯಿಸಲು ಸಾಧ್ಯವಿದ್ದು ಬೀಜ ಮತ್ತು ಗೊಬ್ಬರ ಬೇರೆ ಬೇರೆ ಸಾಲುಗಳಲ್ಲಿ ಬೀಳುತ್ತವೆ.

**ಶೇಂಗಾ ಬಿತ್ತುವ ಕೂರಿಗೆ :** ಒಂದು ಜೋಡಿ ಎತ್ತಿನಿಂದ 1.5 ರಿಂದ 2.0 ಹೆ. ಬಿತ್ತಬಹುದು. ಇದರಲ್ಲಿ 4 ತಾಳುಗಳಿದ್ದು, 2 ಶೆಡ್ಡೆ ಬಟ್ಟಲುಗಳಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಬೀಜವನ್ನು ಬಿತ್ತಲು ಅನುಕೂಲವಾಗುತ್ತದೆ.

**ಮೇಲು ಗೊಬ್ಬರ ಕೊಡುವ ಕೂರಿಗೆ :** ಬೆಳೆ 30 ಸೆಂ.ಮೀ. ಎತ್ತರವಿದ್ದಾಗ ಅತಿ ಸಮೀಪವಾಗಿ ಮತ್ತು ಅತೀ ಆಳವಾಗಿ ಗೊಬ್ಬರ ಹಾಕಲು ಇದರಿಂದ ಸಾಧ್ಯವಾಗುತ್ತದೆ.

**ಬೀಜ ಹೊದಿಕೆ ಮಾಡುವ ಸಾಧನ :** ಒಂದು ಜೊತೆ ಎತ್ತುಗಳಿಂದ 1.5 ರಿಂದ 2.0 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತಿದ ಬೀಜ ಹೊದಿಕೆ ಮಾಡಬಹುದು. ಈ ಕುಂಟೆಗೆ ಉದ್ದವಾದ ಹಲಗೆ ಇದ್ದು ಹಗುರವಾದ ದಿಂಡು ತಾಳ ಕೂಡ ಇರುತ್ತದೆ.

**ಎಡೆ ಒಡೆಯಲು ಬಳಸುವ ಸಾಧನ :** ಅಲಗನ್ನು ಹೊಂದಾಣಿಕೆ ಮಾಡಬಲ್ಲ ಎಡೆ ಕುಂಟೆ : ಜೋಡಿ ಎತ್ತುಗಳಿಂದ 1 ರಿಂದ 3 ಹೆಕ್ಟೇರ್ ಪ್ರದೇಶದಲ್ಲಿ ಉಳುಮೆ ಮಾಡಬಹುದು. ಈ ಕುಂಟೆಯ ಒಂದೇ ದಿಂಡಿನಲ್ಲಿ ಬೇರೆ - ಬೇರೆ ಅಳತೆಯ ಅಲಗು ಜೋಡಿಸಬಹುದಾದ್ದರಿಂದ ಒಂದಕ್ಕಿಂತ ಹೆಚ್ಚಿಗೆ ಎಡೆಕುಂಟೆಗಳ ಆವಶ್ಯಕತೆ ಇಲ್ಲ.

**ಬಾಯಿ ಎಡೆಕುಂಟೆ :** ಒಂದು ಜೋಡಿ ಎತ್ತುಗಳಿಂದ 1.2 ರಿಂದ 2.4 ಹೆಕ್ಟೇರ್ (3 ಘಟಕದ ಒಂದು ಗುಂಪಿಗೆ) ಪ್ರದೇಶದಲ್ಲಿರುವ ಪಟ್ಟಿ ಬೆಳೆಯ ಕಳೆ ತೆಗೆಯುವುದು.

**ಕೈ ವಲೆ ಆಕಾರದ ಎಡೆಕುಂಟೆ :** ಒಂದು ಜೋಡಿ ಎತ್ತುಗಳಿಂದ (ಮೂರು ಘಟಕದ ಗುಂಪಿಗೆ) 1.2 ರಿಂದ 2.4 ಹೆಕ್ಟೇರ್ ಪ್ರದೇಶದಲ್ಲಿ ಕಳೆ ತೆಗೆಯುವುದು. ಇದರಿಂದ ತೇವಾಂಶವನ್ನು ಕಾಯ್ದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

**ಕೊಯ್ಲಿಗೆ ಉಪಯೋಗಿಸುವ ಸಾಧನಗಳು :**

**ಸುಧಾರಿಸಿದ ಕುಡುಗೋಲು :** ಸಾದಾ ಕುಡುಗೋಲನ್ನು ಮಸೆದು ಹರಿತ ಮಾಡಲಾಗುತ್ತಿತ್ತು. ಇದು ಗರಗಸದಂತೆ ಹಲ್ಲಿನ ಆಕಾರವನ್ನು

ಹೊಂದಿರುತ್ತದೆ. ಇದರಿಂದ ಬೆಳೆಯನ್ನು ತೀವ್ರವಾಗಿ ಕೊಯ್ಲು ಮಾಡಬಹುದು. ಇದು ಒಳ್ಳೆಯ ಗುಣಮಟ್ಟದ ಉಕ್ಕಿನಿಂದ ತಯಾರಿಸಲ್ಪಟ್ಟಿದ್ದು ಹಾಗೂ ಸ್ವ ಹರತಗೊಳ್ಳುವುದರಿಂದ ಪದೇ - ಪದೇ ಹರಿತ ಮಾಡಬೇಕಾಗುವುದಿಲ್ಲ. ಈ ಕುಡುಗೋಲನ್ನು ಉಪಯೋಗಿಸುವುದರಿಂದ ಶೇ. 30 ರಿಂದ 40 ರಷ್ಟು ಹೆಚ್ಚು ಕ್ಷೇತ್ರವನ್ನು ಕೊಯ್ಲು ಮಾಡಬಹುದು.

**ಸೂರ್ಯಕಾಂತಿ ಒಕ್ಕುವ ಚಾಕು :** ಈ ಉಪಕರಣದಿಂದ ಸೂರ್ಯಕಾಂತಿ ಬೀಜವನ್ನು ಬೇರ್ಪಡಿಸಲು ಅನುಕೂಲವಾಗುತ್ತದೆ. ಒಬ್ಬ ಮನುಷ್ಯ ಪ್ರತಿ ಗಂಟೆಗೆ 10-12 ಕಿ.ಗ್ರಾಂ. ಬೀಜವನ್ನು ಬೇರ್ಪಡಿಸಬಲ್ಲ.

**ಕೊಳವೆ ಆಕಾರದ ಗೋವಿನ ಜೋಳದ ಚಾಕು :** ಒಬ್ಬ ಮನುಷ್ಯ 15-20 ಕಿ.ಗ್ರಾಂ. ಕಾಳುಗಳನ್ನು ಬೇರ್ಪಡಿಸಬಹುದು. ಇದರಿಂದ ಕಾಳುಗಳನ್ನು ಸುಲಭವಾಗಿ ಬಿಡಿಸಬಹುದು.

35 ಅಶ್ವಶಕ್ತಿ ಅಥವಾ ಅದಕ್ಕಿಂತ ಹೆಚ್ಚು ಅಶ್ವಶಕ್ತಿಯುಳ್ಳ ಟ್ರ್ಯಾಕ್ಟರ್ ಚಾಲಿತ ಬಹು ಬೆಳೆ ಒಕ್ಕಣೆ ಯಂತ್ರ ಉಪಯೋಗಿಸಿ ಪ್ರತಿ ಗಂಟೆಗೆ 18 ಕ್ವಿಂಟಾಲ್ ಜೋಳ, 2 ಕ್ವಿಟಾಂಲ್ ಕುಸುಬೆ, 8 ಕ್ವಿಂಟಾಲ್ ಕಡಲೆ ಹಾಗೂ 6 ಕ್ವಿಂಟಾಲ್ ಸೂರ್ಯಕಾಂತಿಯನ್ನು ಒಕ್ಕಣೆ ಮಾಡಬಹುದು. ಈ ಯಂತ್ರವನ್ನು ಉಪಯೋಗಿಸುವುದರಿಂದ ಶೇ. 66 ಹಣವನ್ನು ಉಳಿತಾಯ ಮಾಡಬಹುದು.

**ಸೈಕಲ್ ಚಾಲಿತ ಕಳೆ ತೆಗೆಯುವ ಯಂತ್ರ :** ಒಬ್ಬ ಮನುಷ್ಯ ಒಂದು ದಿನಕ್ಕೆ 0.13 ಎಕರೆ ಭೂಮಿಯ ಕಳೆಯನ್ನು ಸುಲಭವಾಗಿ ತೆಗೆಯಬಹುದು.

**ಚಕ್ಕಡಿಗಳು :** ಇದರಲ್ಲಿ ಮೂರು ವಿಧ. ಎರಡೆತ್ತಿನ, ಒಂಟೆತ್ತಿನ, ಸುಧಾರಿತ. ಮೊದಲು ಮರದಿಂದ ಮಾಡಿದ ಎರಡೆತ್ತಿನ, ಒಂಟೆತ್ತಿನ ಚಕ್ಕಡಿಗಳು ಇದ್ದವು. ಕಾಲ ಬದಲಾದಂತೆ ಸುಧಾರಿತ ಚಕ್ಕಡಿಗಳು ಟ್ರ್ಯಾಕ್ಟರ್ ಬಂದವು. ಇದು ರಚನೆಯಲ್ಲಿ ಸರಳವಾಗಿದ್ದು ಕಬ್ಬಿಣದ ಚಕ್ಕಡಿಯ ಗಾಲಿಗೆ ಗಟ್ಟಿಯಾದ ರಬ್ಬರನ್ನು ಹಳಿಯ ರೂಪದಲ್ಲಿ ಕೂಡಿಸಿರುವುದರಿಂದ ರಸ್ತೆ ಗ್ರಿಪ್ ಚೆನ್ನಾಗಿ ಇರುತ್ತದೆ. ಪಂಕ್ಚರ್ ಆಗುವುದಿಲ್ಲ. ಇದರಿಂದ ರಸ್ತೆ ಹಾಳಾಗುವುದಿಲ್ಲ. ಚಕ್ಕಡಿಯ ಭಾರ 230 ರಿಂದ 245 ಕಿ.ಗ್ರಾಂ. ಇದ್ದು ಒಂದು ಜೊತೆ ಎತ್ತು 10 ರಿಂದ 12 ಕ್ವಿಂಟಾಲ್ ಭಾರವನ್ನು, ಒಂಟಿ ಎತ್ತಿನ ಚಕ್ಕಡಿಯಾದರೆ 8 ರಿಂದ 10 ಕ್ವಿಂಟಾಲ್ ಭಾರವನ್ನು ಸುಲಭವಾಗಿ ಎಳೆಯುವುದು.

ಕತ್ತೆ ಚಾಲಿತ ಕಬ್ಬಿಣದ ಸುಧಾರಿತ ಚಕ್ಕಡಿಯ ರಚನೆ ಸರಳವಾಗಿರುತ್ತವೆ. ಚಕ್ಕಡಿ ಗಾಲಿಗೆ ಗಟ್ಟಿಯಾದ ರಬ್ಬರ ಕೂಡ್ರಿಸಿರುವುದರಿಂದ ರಸ್ತೆ ಗ್ರಿಪ್ ಚೆನ್ನಾಗಿ ಬರುವುದಲ್ಲದೇ ಪಂಕ್ಚರ್ ಆಗುವುದಿಲ್ಲ. ಇದೇ ರೀತಿ ಅಲೆಮಾರಿ ಸಮುದಾಯದವರು ಕುದುರೆಗಳನ್ನು ಚಕ್ಕಡಿ ಎಳೆಯಲು ಬಳಸುತ್ತಾರೆ. ಚಕ್ಕಡಿಯ ಭಾರ 190 ಕಿ.ಗ್ರಾಂ. ಇದ್ದು ಕತ್ತೆ ಅಥವಾ ಕುದುರೆ 4 ಅಥವಾ 5 ಕ್ವಿಂಟಾಲ್ ಭಾರವನ್ನು ಸುಲಭವಾಗಿ ಎಳೆಯಬಹುದು.

**ಇತರೆ ಕೃಷಿ ಉಪಕರಣಗಳು :** ಬೆಳೆ ಕೊಯ್ಲು ಯಂತ್ರ : ರೈತರಿಗೆ ಕೃಷಿ ಕಾರ್ಮಿಕರ ಕೊರತೆಯಿಂದ ಶೇಂಗಾ ಕಾಯಿಗಳನ್ನು ಬೇರ್ಪಡಿಸುವ ಕೆಲಸವು ದುಸ್ತರವಾಗಿದ್ದು ಯಂತ್ರಗಳು ಹುಟ್ಟಿಕೊಂಡವು. ಶೇಂಗಾ ಕಾಯಿಗಳನ್ನು ಬೇರ್ಪಡಿಸಲು ಬಳಸುವ ಬಹು ಬೆಳೆ ಕೊಯ್ಲು ಯಂತ್ರ 3-5 ಅಶ್ವಶಕ್ತಿಗಳ ಎಂಜಿನನ್ನು ಹೊಂದಿದ್ದು ಪ್ರತಿ ಗಂಟೆಗೆ 0.2 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಕೊಯ್ಲು ಮಾಡುತ್ತದೆ. ಇದರಿಂದ ಗೋಧಿ ಬತ್ತ ವಿಶೇಷವಾಗಿ ಕುಸುಬಿ ಬೆಳೆ ಕೊಯ್ಲು ಮಾಡಬಹುದು. ಪ್ರತಿ ಸಲ ಎರಡು ಸಾಲುಗಳನ್ನು ಕತ್ತರಿಸುತ್ತದೆ. ಪೆಡಲ್ ಚಾಲಿತ ಮೆಕ್ಕೆ ಜೋಳ (ಗೋವಿನಜೋಳ)ದ ಒಕ್ಕಣೆ ಯಂತ್ರ ಒಬ್ಬ ಕೃಷಿ ಕಾರ್ಮಿಕನ ಕಾರ್ಯದಕ್ಷತೆಯ ಹೆಚ್ಚಿಸುವುದಲ್ಲದೇ ಪ್ರತಿ ಕ್ವಿಂಟಾಲ್‌ಗೆ ಕೇವಲ ರೂ. 34 ಖರ್ಚಿನಲ್ಲಿ ಕೆಲಸವನ್ನು ಮುಗಿಸಬಹುದು. ಇದೇ ರೀತಿ ಶಕ್ತಿ ಚಾಲಿತ ಶೇಂಗಾ ಕಾಯಿ ಹರಿಯುವ ಒಂದು ಯಂತ್ರದಿಂದ 3 ರಿಂದ 4 ಜನರ ಕೆಲಸವನ್ನು ತೆಗೆಯಬಹುದು. ತುಂಗಭದ್ರಾ ಪೆಡಲ್ - ಚಾಲಿತ ತೂರುವ ಯಂತ್ರ : 120 ಸೆಂ.ಮೀ. ಪಂಖದ ವ್ಯಾಸವುಳ್ಳ ಈ ಯಂತ್ರವನ್ನು ಕಾಲುಗಳಿಂದ ತಿರುಗಿಸಿದಲ್ಲಿ ಪ್ರತಿ ಗಂಟೆಗೆ 5-15 ಕ್ವಿಂಟಾಲ್ ಮತ್ತು ಹೆಚ್ಚಿನ ಶಕ್ತಿಯ ಮೋಟಾರ್ ಎಂಜಿನ್ ಬಳಸಿದಲ್ಲಿ 10-40 ಕ್ವಿಂಟಾಲ್ ಒಕ್ಕಿದ ಬೆಳೆಗಳನ್ನು ಸ್ವಚ್ಛಗೊಳಿಸಬಹುದು.

**ಶೇಂಗಾ / ಔಡಲ ಕಾಯಿ ಒಡೆಯುವ ಸಾಧನ :** ವಿವಿಧ ತಳಿಗಳ ಶೇಂಗಾ ಕಾಯಿಗಳನ್ನು ಅವುಗಳ ಗಾತ್ರಕ್ಕೆ ಅನುಗುಣವಾಗಿ ಮಾರ್ಪಾಟು ಮಾಡುವ ವ್ಯವಸ್ಥೆಯನ್ನು ಈ ಯಂತ್ರದಲ್ಲಿಅಳವಡಿಸಿದೆ.

**ಮೇವು ಕತ್ತರಿಸುವ ಯಂತ್ರ :** ಮಾನವ ನಿರ್ಮಿತ ಸೊಪ್ಪು ಕತ್ತರಿಸುವ ಮೊದಲ ಸಾಧನವಿದು. ಅನಂತರ ಬಂದ ಯಂತ್ರಚಾಲಿತ ಮೇವು ಕತ್ತರಿಸುವ ಸಾಧನವು ಪ್ರತಿ ತಾಸಿಗೆ 50-60 ಕಿ.ಗ್ರಾಂ. ಮೇವನ್ನು ಕತ್ತರಿಸುತ್ತದೆ. ಇದೇ ರೀತಿ ತೆಂಗಿನಕಾಯಿ ಸುಲಿಯುವ ಯಂತ್ರದಿಂದ ಒಬ್ಬ ಮನುಷ್ಯ ಒಂದು ತಾಸಿಗೆ ಸುಲಭವಾಗಿ 50 ರಿಂದ 60 ತೆಂಗಿನಕಾಯಿಗಳನ್ನು ಸುಲಿಯಬಹುದು.

**ಇಂಜಿನ್ ಚಾಲಿತ ಚಕ್ಕಡಿ ಸಿಂಪರಣ ಯಂತ್ರ :** ಎತ್ತರವಾಗಿ ಬೆಳೆಯುವವ ತೊಗರಿ ಮತ್ತು ಹತ್ತಿ ಬೆಳೆಗಳಿಗೆ ಔಷಧಿ ಸಿಂಪರಣೆಗಾಗಿ ಬಳಸುವರು.

ಇವು ದೇಶೀಯ ತಂತ್ರಜ್ಞಾನದಿಂದ ಬಳಸುವ ಉಪಕರಣಗಳಾದರೂ ಒಕ್ಕುವ ಯಂತ್ರಗಳನ್ನು ನಿರ್ವಹಿಸುವಾಗ ಹೆಚ್ಚರಿಕೆ ಅಗತ್ಯ. ಐ.ಎಸ್.ಐ. ಶಿಫಾರಸ್ಸು ಮಾಡಿದ ಯಂತ್ರಗಳನ್ನು ಬಳಸಬೇಕು. ಒಬ್ಬ ಕೃಷಿ ಕಾರ್ಮಿಕ ದಿವಸಕ್ಕೆ 10 ತಾಸುಗಳಿಗಿಂತ ಹೆಚ್ಚು ಸಮಯ ಒಕ್ಕುವ ಯಂತ್ರದಿಂದ ಕೆಲಸ ಮಾಡಬಾರದು.

**ಗ್ರಂಥ ಋಣ**


ಕರ್ನಾಟದ ಪ್ರಮುಖ ಐತಿಹಾಸಿಕ ಸ್ಥಳಗಳು - ಹೂಗಾರ

ಕರ್ನಾಟಕ ರೋಡ್ ಅಟ್ಲಾಸ್ - ವಾಸನ್ಸ್

ಸುರಾ ರೋಡ್, ಅಟ್ಲಾಸ್, ಕರ್ನಾಟಕ - ಸುರಾ ಬುಕ್ಸ್

ಕೃಷಿ ಪರಾಶರ, ಆರ್.ಎಸ್. ಪಂಚಮುಖಿ - ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ

ಸರ್ವಜ್ಞ ಮೂರ್ತಿ ವಚನಗಳು - ಪಿ.ಸಿ. ಶಾಬಾದಿಮಠ, ಗದಗ

ಕರ್ನಾಟಕ ಸರ್ಕಾರ ಧಾರವಾಡ ಜಿಲ್ಲಾ ಅಂಕಿ ಅಂಶಗಳ ನೋಟ 2010-11 ಜಿಲ್ಲಾಸಂಖ್ಯಾ ಸಂಗ್ರಹಣಾಧಿಕಾರಿಗಳು, ಜಿಲ್ಲಾ ಕಛೇರಿ, ಧಾರವಾಡ

ಸುಧಾರಿತ ಬೇಸಾಯ ಕ್ರಮಗಳು- ಕೃ.ವಿ.ವಿ. ಧಾರವಾಡ ಹಾಗೂ ರಾಯಚೂರು

ಒಣಮೆಣಸಿನಕಾಯಿ ಕಾರ್ಯಾಗಾರ - ಕ.ರಾ.ಕೃ.ಮಾ.ಮ., ಹುಬ್ಬಳ್ಳಿ

2012-13ನೇ ಸಾಲಿನ ಮುಂಗಾರು ಹಂಗಾಮಿನ ಕಾರ್ಯಾಗಾರ - ಸ.ಕೃ.ನಿ., ಹುಬ್ಬಳ್ಳಿ

ಪುಷ್ಪ ಕೃಷಿ - ಕೃ.ವಿ.ವಿ., ಧಾರವಾಡ

ಸಂರಕ್ಷಿತ ಕೃಷಿ- ಕೃ.ವಿ.ವಿ. ಧಾರವಾಡ

*ಎನ್.ಸಿ.ಪಿ.*

**ಧಾರ್ಮಿಕ ಆಚರಣೆ ಮತ್ತು ಸಸ್ಯಗಳು** ಭಾರತೀಯರಿಗೆ ಪ್ರಕೃತಿಯೇ ದೇವರಾಗಿತ್ತು. ಅಂದು ಮೂರ್ತರೂಪದ ಕೃತಕ ಸೃಷ್ಟಿಯ ಶಿಲ್ಪಗಳಾಗಲಿ ದೇವಾಲಯಗಳಾಗಲಿ ಅವನು ಪೂಜಿಸುವ ವಸ್ತುಗಳಾಗಿರಲಿಲ್ಲ. ಪ್ರಕೃತಿಯಲ್ಲಿ ದೊರೆಯುವ ಸಕಲ ಸಂಪತ್ತುಗಳಿಗೂ ತನ್ನ ಕಣ್ಣೆದುರಿಗೆ ಕಾಣುವ ಮರಗಿಡಗಳೇ ಮೂಲಕಾರಣವೆಂಬ ವೈಜ್ಞಾನಿಕ ಅರಿವು ಅವನಿಗಿತ್ತು. ಅಂಥ ಗಿಡಮರಗಳನ್ನು ವಿಶೇಷ ಮುತುವರ್ಜಿ ವಹಿಸಿ ತಾನು ವಾಸಿಸುವ ಸ್ಥಳದಲ್ಲಿಯೇ ಬೆಳೆಸಿದ. ಆಯುಷ್ಯ ಆರೋಗ್ಯಗಳ ವೃದ್ಧಿಗೆ ಕಾರಣವಾದ ಆ ಸಸ್ಯ ಸಂಪತ್ತನ್ನು ಪವಾಡ ಸದೃಶವಾಗಿ ಕಂಡು ಜೀವದ ಜೀವಾಳವೆಂದು ಬಗೆದು ಪೂಜಿಸತೊಡಗಿದ. ಕೃಷಿ ಪರಂಪರೆಯ ಉಗಮದೊಂದಿಗೆ ಇಂಥ ಸಹಸ್ರಾರು ಸಸ್ಯಗಳ ಪೋಷಣೆ ಆರಂಭವಾಯಿತು. ಒಂದೊಂದು ಸಸ್ಯ, ಮರ, ಗಿಡಕ್ಕೂ ಒಂದೊಂದು ಬಗೆಯ ಔಷಧೀಯ ಗುಣಗಳಿದ್ದು ಅದರ ಪ್ರತಿಯೊಂದು ಭಾಗವೂ ಪ್ರತಿಫಲಾಪೇಕ್ಷೆಯಿಲ್ಲದೆ ತನ್ನ ಸಹಾಯಕ್ಕೆ ಬರುತ್ತದೆ ಎಂಬ ಸತ್ಯವನ್ನು ಕಂಡುಕೊಂಡ. ಹಾಗಾಗಿ ಭಾರತೀಯ ಸಂಸ್ಕೃತಿಯ ಭಾಗವಾಗಿ ಎಲ್ಲ ಸಸ್ಯಗಳೂ ಪವಿತ್ರವೆನಿಸುತ್ತವೆ, ಪೂಜೆಗೊಳ್ಳುತ್ತವೆ. ಅವುಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ.

**ಶಮಿ ವೃಕ್ಷ (ಬನ್ನಿಮರ) :** ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಋಷಿಮುನಿಗಳು ತಾವು ಮಾಡುವಂತಹ ಯಜ್ಞಯಾಗಗಳಿಗೆ ಅಗ್ನಿಯನ್ನು ಪಡೆಯಲು ಅತ್ತಿ ಹಾಗೂ ಬನ್ನಿಯ ಮರದ ತುಂಡುಗಳನ್ನು ಆರಿಸಿ ಅವುಗಳಿಂದ ಅಗ್ನಿಯನ್ನು ಉತ್ಪತ್ತಿ ಮಾಡುತ್ತಿದ್ದರು. 'ಅಗ್ನಿಗರ್ಭಾಶಮೀಮಿವ' ಅಂದರೆ ಶಮಿವೃಕ್ಷವು ತನ್ನ ಗರ್ಭದಲ್ಲಿ (ಒಡಲಿನಲ್ಲಿ) ಅಗ್ನಿಯನ್ನು ಧರಿಸಿದೆ ಎಂದರ್ಥ. ಈ ವೃಕ್ಷ ಮಾನವರಿಗೆ ದೊರೆತ ಬಗೆಗಿನ ಇತಿಹಾಸ ಬಹು ಕುತೂಹಲಕರವಾಗಿದೆ. ಈ ವೃಕ್ಷದ ಪತ್ರಗಳು ಬಂಗಾರಕ್ಕೆ ಸಮ ಎಂಬ ದಿವ್ಯ ಭಾವನೆಯಿಂದ ವಿನಿಮಯ ಮಾಡಿಕೊಳ್ಳುವ ಪರಂಪರೆ ಭಾರತ ದೇಶದಲ್ಲಿದೆ.

ರಘುವಂಶದ ಶ್ರೀರಾಮನ ಹಿರಿಯರು ಈ ಮರವನ್ನು ವಂಶದ ಮರ್ಯಾದೆಯನ್ನು ಕಾಪಾಡಿದ ಸಂಕೇತವಾಗಿ ತಮ್ಮ ಕುಲದೇವತೆಯೆಂದು ಪೂಜೆ ಮಾಡುತ್ತಾರೆ. ಶಮೀಮರದ ಎಲೆಗಳು ಹಾಗೂ ಹೂವು, ಮುಟ್ಟಿದರೆ ಮುನಿ ಸಸ್ಯದ ತರಹವಿದೆ. ಇದರಲ್ಲಿಯ ಔಷಧೀಯ ಗುಣದಿಂದಾಗಿ ವಾತಾವರಣ ಶುದ್ಧೀಕರಣವನ್ನು ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹೋಮ ಹವನಗಳಲ್ಲಿ ಸಮಿತ್ತಾಗಿ ಬಳಕೆಗೊಳ್ಳುತ್ತದೆ. ಬೇರಿನಿಂದಲೇ ವಂಶಾಭಿವೃದ್ಧಿ ಮಾಡುವ ಗುಣವನ್ನು ಹೊಂದಿದೆ.

ಬನ್ನಿಯ ಎಲೆಯನ್ನು ವಿಜಯದಶಮಿಯಂದು ವಿಶೇಷವಾಗಿ ಬಳಸುತ್ತಾರೆ. ಅಂದು ಬನ್ನಿಮರಕ್ಕೆ ವಿಶೇಷವಾದ ಪೂಜೆ ಸಲ್ಲುತ್ತದೆ. ಪಾಂಡವರು ವನವಾಸದ ಸಮಯದಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಈ ಮರದಲ್ಲಿ ಬಚ್ಚಿಟ್ಟಿದ್ದರು. ಇದರ ಜ್ಞಾಪಕಾರ್ಥವಾಗಿ ಕುಲದೈವವಾಗಿ ಪೂಜಿಸುವ ಪರಿಪಾಠವು ಇಂದಿಗೂ ಇದೆ. ಹೇಡಿತನದಿಂದ ಹೆದರಿದ ಉತ್ತರನನ್ನು ಅರ್ಜುನ ಹಿಡಿದುಕೊಂಡು ಬಂದು ಅವನ ಕೈಯಿಂದ ಆಯುಧಗಳನ್ನು ಕೆಳಗಿಳಿಸುತ್ತಾನೆ. ಸ್ಫಿಯ, ಮೋಕ್ಷಣ, ದೃಷ್ಟಿ ಎಂಬ ಇತರೆ ಯಜ್ಞೋಪಕರಣಗಳನ್ನು ಶಮಿ ಮರದಿಂದಲೆ ಮಾಡುತ್ತಾರೆ. ಈ ಎಲ್ಲಾ ಕಾರಣಕ್ಕಾಗಿ ಬನ್ನಿಮರವು ಅಗ್ನಿದಿವ್ಯದಿಂದ ಕೂಡಿದ ಶಕ್ತಿ ಸ್ವರೂಪಿಣಿಯಾದ ದುರ್ಗೆಯ ಅವತಾರ ಎಂಬ ನಂಬಿಕೆಯನ್ನು ಜನರು ಹೊಂದಿದ್ದಾರೆ. ಇದರ ಎಲೆಯನ್ನು ಕೆಮ್ಮು, ದಮ್ಮು, ಕ್ರಿಮಿನಾಶಕಗಳಿಗೆ ಬಳಸುತ್ತಾರೆ. ವೇದ ಸಂಸ್ಕೃತಿಯ ಸಂಬಂಧ ಮಹಾಭಾರತದ ನಂಟು ಬನ್ನಿ ಮರಕ್ಕಿದೆ. ಇದರ ಕುರುಹಾಗಿ ಇಂದಿಗೂ ವಿಜಯದಶಮಿಯ ದಿನ ಬನ್ನಿ ಎಲೆಗಳನ್ನು ಪರಸ್ಪರ ಹಂಚಿಕೊಳ್ಳುವ ಪರಿಪಾಠವಿದೆ.

**ಆಲದ ಮರ :** ಮಹಾಪತಿವ್ರತೆಯಾದ ಸಾವಿತ್ರಿಯು ಈ ಮರದ ಕೆಳಗೆ ತನ್ನ ಪತಿಯ ಅಪಮೃತ್ಯುವನ್ನು ಪರಿಹರಿಸಿ ಯಮಧರ್ಮನಿಂದ ಪತಿಯ ಪ್ರಾಣವನ್ನು ರಕ್ಷಿಸಿದಳು. ಆ ಕಾರಣಕ್ಕೆ ಇಂದಿಗೂ ಅವಳ ಹೆಸರಿನಿಂದ 'ವಟ ಸಾವಿತ್ರಿವ್ರತ' (ಪೂಜಾ) ಎಂಬ ಪೂಜೆಯನ್ನು ಸುಮಂಗಲಿಯರು ತಮ್ಮ ಪತಿಯರ ಆಯಸ್ಸು ವೃದ್ಧಿಸಲೆಂದು ಪೂಜೆ ಮಾಡುವರು.

ಹಿಂದೆ ಋಷಿ ಮುನಿಗಳು ಆಲದಮರದ ಕೆಳಗೆ ಕುಳಿತು ಶಿಷ್ಯರಿಗೆ ಪಾಠ ಪ್ರವಚನಗಳನ್ನು ನಡೆಸುತ್ತಿದ್ದರು. ಇದೊಂದು ಪುಣ್ಯಸ್ಥಳವೆಂಬ ಭಾವನೆಯಿದೆ.

*ವಟಮೂಲೇ ಸ್ಥಿತೋ ಬ್ರಹ್ಮ | ವಟಮಧ್ಯೇ ಜನಾರ್ದನ*
*ವಟಾಗ್ರೇತು ಶಿವೋದೇವಃ | ಸಾವಿತ್ರೀ ವಟ ಸೌಶ್ರಿತಾ*

ಈ ವೃಕ್ಷದ ಮೂಲದಲ್ಲಿ ಬ್ರಹ್ಮನು, ಮಧ್ಯದಲ್ಲಿ ಜನಾರ್ದನ ಸ್ವಾಮಿಯು ಅಗ್ರಭಾಗದಲ್ಲಿ ಮಹಾದೇವನ ಸನ್ನಿಧಾನವು ಹಾಗೂ ಸಾವಿತ್ರಿಯ ವಿಶೇಷ ಸನ್ನಿಧಾನವು ಈ ವೃಕ್ಷದಲ್ಲಿ ಇರುವುದಾಗಿ ಹೇಳಿಕೆ ಇದೆ.

ಕಾಶಿಗೆ ಹೋಗಿ ಅಲ್ಲಿಯ ಆಲದಮರದ ಕೆಳಗೆ ಪಿತೃಗಳ ಹೆಸರಿನಿಂದ ಪಿಂಡ ಪ್ರದಾನವನ್ನು ಮಾಡಿದರೆ ಅವರಿಗೆ ಸ್ವರ್ಗ ಸಿಗುವುದೆಂಬ ನಂಬಿಕೆ ಜನಪದರದು. ಭಾರತದಲ್ಲಿ ಕಲ್ಕತ್ತಾದಲ್ಲಿರುವ ವಟವೃಕ್ಷವು ವಿಶ್ವದಲ್ಲಿಯೇ ಅತ್ಯಂತ ಪ್ರಸಿದ್ಧವಾದುದು. ಬೆಂಗಳೂರಿನ ಸಮೀಪ ರಾಮೋಹಳ್ಳಿ ಎಂಬಲ್ಲಿ ಇರುವ ವೃಕ್ಷವು ಎರಡನೇ ಸ್ಥಾನವನ್ನು ಪಡೆದಿರುತ್ತದೆ. ಮದರಾಸಿನ ಅಡಿಯಾರದಲ್ಲಿರುವ ವೃಕ್ಷವು ಮೂರನೆಯ ಸ್ಥಾನವನ್ನು ಹೊಂದುತ್ತದೆ. ಈ ಮೂರು ವೃಕ್ಷಗಳಲ್ಲಿಯ ಮೂಲ ಶಾಖೆ ಯಾವುದು ಎಂದು ತಿಳಿದುಕೊಳ್ಳಲಾರದಷ್ಟು ಬಿಳಲುಗಳನ್ನು ಬಿಟ್ಟು ಬಹು ಗಾತ್ರ ಬೆಳೆದು ನಿಂತಿದೆ. ಆಲದ ಮರದ ನೆರಳು ಬಹು ತಂಪಾಗಿರುತ್ತದೆ. ಪ್ರಳಯ ಕಾಲದಲ್ಲಿ ಭಗವಂತನು ಈ ವೃಕ್ಷದ ಎಲೆಯ ಮೇಲೆ ಮಲಗಿ ತನ್ನ ಹೆಬ್ಬೆರಳಿನ ರುಚಿಯನ್ನು ನೋಡುತ್ತಿರುತ್ತಾನೆ ಎಂದು ಪುರಾಣ

ಗ್ರಂಥದಲ್ಲಿ ಹೇಳಲಾಗಿದೆ. ವಟವೃಕ್ಷವು ದೀರ್ಘಕಾಲದ ಅನುಭವದಿಂದ ತುಂಬಿದ ಜೀವನ, ಶಾಂತಿ, ಸಂತೃಪ್ತಿ, ಆಶ್ರಯ ನೀಡಿದ ಉದಾತ್ತ ಧರ್ಮವನ್ನು ಎತ್ತಿಹಿಡಿಯುವಲ್ಲಿ ಸಾಕ್ಷಿಯಾಗಿದೆ. ವೃಕ್ಷಲೋಕದಲ್ಲಿಯೇ ಬಹು ದೊಡ್ಡ ಗಾತ್ರದ ಸ್ಥಾನವನ್ನು ಪಡೆದುಕೊಂಡಿರುವ ಆಲದ ಮರವನ್ನು ಕುರಿತಾಗಿ ವೇದ ಪುರಾಣ, ಬೈಬಲ್, ಕುರಾನ್ ಇತರೆ ಧಾರ್ಮಿಕ ಗ್ರಂಥಗಳಲ್ಲೆಲ್ಲ ಉಲ್ಲೇಖವಿದೆ. ಪಂಜಾಬಿಗರು, ಪೇಷಾವರದ ನಿವಾಸಿಗಳು ಈ ವೃಕ್ಷವನ್ನು ಶಿವ ಪಾರ್ವತಿ ರೂಪವೆಂದು ಪೂಜಿಸುವ ಸಂಪ್ರದಾಯವಿದೆ. ಭೂಮಿಯನ್ನು ಆಶ್ರಯಿಸಿರುವ ವೃಕ್ಷಗಳು ಮತ್ತು ಮಾನವರಿಬ್ಬರಲ್ಲಿಯೂ ಅನ್ಯೋನ್ಯವಾದ ಸಂಬಂಧವಿದೆ. ನೂರಾರು ವರ್ಷ ಬಾಳಿ ಬದುಕುವ ವೃಕ್ಷಗಳನ್ನು ನೋಡಿದಾಗ ವಯಸ್ಸಾದ ವೃದ್ಧರನ್ನು ನೋಡಿದಂತೆ ಅನುಭವವಾಗುವುದು. ಒಂದು ಪುರಾಣ ಕಥೆಯ ಪ್ರಕಾರ ವಟರಾಜನ ಪತ್ನಿ ದೂರ್ವ ಎಂದು ಹೇಳುತ್ತಾರೆ. ಇವರಿಬ್ಬರ ಸಮಾಗಮದಿಂದ ಬೆಳೆದ ಮಕ್ಕಳೇ ಬಿಳಲುಗಳಾಗಿ ರೂಪ ತಾಳಿವೆ.

**ಅತ್ತಿಯ ಗಿಡ (ದತ್ತಾತ್ರೇಯ ವೃಕ್ಷ) :** ಅತ್ತಿಯ ಮರ ಆಲದ ಮರದ ಸೋದರ ಎಂಬ ನಂಬಿಕೆಯಿದೆ. ಕಾರಣ ಇವೆರಡರ ಎಲೆಗಳು, ಫಲಗಳು ಒಂದೇ ತರಹದಲ್ಲಿವೆ. ಆದರೆ ಆಕಾರ ಮಾತ್ರ ಬೇರೆ ಬೇರೆಯಾಗಿದೆ. ದತ್ತಾತ್ರೇಯನಿಗೆ ಬಹು ಪ್ರಿಯವಾದ ವೃಕ್ಷವಿದು. ಈ ವೃಕ್ಷದಡಿಯಲ್ಲಿಯೇ ಸದಾಕಾಲ ವಾಸಿಸುವನೆಂದು ಜನರು ನಂಬುತ್ತಾರೆ. ಭವಾನಿ ಈ ವೃಕ್ಷದ ಅಧಿದೇವತೆ. ಯಜ್ಞ-ಹೋಮ-ಹವನಗಳಲ್ಲಿ ಈ ಮರದ ತುಂಡನ್ನು ಬಳಸುತ್ತಾರೆ. ಯಜ್ಞ ಮಾಡುವಾಗ ಯಜ್ಞ ಮಂಟಪದ ಎತ್ತರದ ಸ್ಥಳದಲ್ಲಿ ಅತ್ತಿಯ ಮರದ ತುಂಡೊಂದನ್ನು ನೆಟ್ಟು, ಅದರಲ್ಲಿ ಯಜ್ಞ ದೇವತೆಯನ್ನು ಆಹ್ವಾನಿಸುತ್ತಾರೆ. ರಾಜ ಸಿಂಹಾಸನಗಳನ್ನು ಮಾಡುವಾಗ ಈ ಮರವನ್ನೆ ಬಳಸುತ್ತಾರೆ. ಈ ವೃಕ್ಷ ಎಲ್ಲಿರುವುದೋ ಅಲ್ಲಿ ನೀರಿನ ಸೆಲೆಯಿದೆ ಎಂದು ನಂಬುತ್ತಾರೆ. ಇದರ ಹಣ್ಣುಗಳು ಕೋತಿಗಳಿಗೆ ಪ್ರಿಯ. ಜಿಂಕೆ, ಮೇಕೆ, ದನ, ಹಂದಿಗಳು ಸಹ ಇದರ ಹಣ್ಣುಗಳನ್ನು ತಿನ್ನುತ್ತವೆ. ಪಕ್ಷಿಗಳಂತೂ ಬಲು ಇಷ್ಟಪಟ್ಟು ತಿನ್ನುತ್ತವೆ. ಮನುಷ್ಯರೂ ಈ ಹಣ್ಣು ತಿನ್ನುತ್ತಾರೆ. ಇದರ ಎಲೆ, ತೊಗಟೆ, ಹಣ್ಣುಗಳೂ ಔಷಧಿಗೆ ಬಳಸಲ್ಪಡುತ್ತದೆ. ಇದರ ಸಸ್ಯಕ್ಷೀರವನ್ನು ಹುಣ್ಣುಗಳಿಗೆ ಲೇಪಿಸುವರು. ಎಲೆಗಳು ಜಾನುವಾರುಗಳಿಗೆ ಮೇವನ್ನು ಒದಗಿಸುತ್ತವೆ. ಈ ವೃಕ್ಷವನ್ನು ದೇವಾಲಯಗಳಲ್ಲಿ ಬೆಳೆಸುತ್ತಾರೆ. ಈ ವೃಕ್ಷದ ಪ್ರದಕ್ಷಿಣೆ ಮಾಡುವುದರಿಂದ ರೋಗ-ರುಜಿನಗಳನ್ನು ನಿವಾರಿಸುವುದೆಂದು ನಂಬುತ್ತಾರೆ.

**ಅರಳಿ (ಅಶ್ವತ್ಥ) :** ಹಿಂದೂಗಳಿಗೆ ಬಹು ಪವಿತ್ರವಾದ ವೃಕ್ಷ. ಬ್ರಹ್ಮ, ವಿಷ್ಣು, ಮಹೇಶ್ವರ ಮೂರ್ತಿ ಸ್ವರೂಪವೆಂದು ಪರಿಗಣಿಸುತ್ತಾರೆ. ಈ ವೃಕ್ಷದ ತುಂಡನ್ನು ಯಜ್ಞಯಾಗಾದಿ ಶುಭಕಾರ್ಯಗಳಲ್ಲಿ ಬಳಸಲಾಗುತ್ತದೆ. ಪ್ರತಿ ಹಳ್ಳಿಯಲ್ಲಿಯೂ ಊರಿನ ಬಹು ಮುಖ್ಯ ಸ್ಥಳದಲ್ಲಿ ಅರಳಿ ಮರವನ್ನು ಶಾಸ್ತ್ರೋಕ್ತವಾಗಿ ನೆಟ್ಟು ಪೂಜಿಸುತ್ತಾರೆ. ಅದರೊಟ್ಟಿಗೆ ಬೇವಿನ ಮರವನ್ನು ನೆಟ್ಟು ಅರಳಿ ಬೇವು ವಿವಾಹ ಮಾಡಿಸುತ್ತಾರೆ. ಊರಿನ ಒಳಿತಿಗಾಗಿ, ಮಕ್ಕಳಿಲ್ಲದವರು ಈ ಮರದ ಬಳಿ ನಾಗ ಪ್ರತಿಷ್ಠೆಯನ್ನು ಮಾಡಿಸುತ್ತಾರೆ. ಧನುರ್ಮಾಸದಲ್ಲಿ ಊರಿನ ಸುಮಂಗಲಿಯರು ನಾಗರ ಕಲ್ಲಿಗೆ ಹಾಲನ್ನೆರೆದು ಅರಳಿ ಮರಕ್ಕೆ ಪ್ರದಕ್ಷಿಣೆ ಹಾಕುವ ಸಂಪ್ರದಾಯವಿದೆ. ಮಕ್ಕಳಿಲ್ಲದವರು, ಅವಿವಾಹಿತರು, ಅನಾರೋಗ್ಯದಿಂದ ಬಳಲುವವರು ಅನನ್ಯ ಭಕ್ತಿಯಿಂದ ತಮ್ಮ ಬೇಡಿಕೆಯನ್ನು ನೆರವೇರಿಸಲೆಂದು ದೇವರನ್ನು ಬೇಡಿ ಮುಂಜಾನೆಯೇ ತಣ್ಣೀರಿನಿಂದ ಮಿಂದು ಪೂಜಿಸುತ್ತಾರೆ. ಅರಳಿಮರದ ಸುತ್ತ ಕಲ್ಲಿನಿಂದ ಕಟ್ಟಡವನ್ನು ಕಟ್ಟಿ ಊರಿನ ಸಮಸ್ತರೆಲ್ಲರೂ ಸೇರುವಂತೆ ವ್ಯವಸ್ಥೆ ಮಾಡಿರುತ್ತಾರೆ. ಇಲ್ಲಿ ಊರಿನ ನ್ಯಾಯ ತೀರ್ಮಾನ ಮಾಡುತ್ತಾರೆ. ಇದಕ್ಕೆ ಅರಳಿ ಕಟ್ಟೆ / ಅಶ್ವತ್ಥ ಕಟ್ಟೆ ಎಂದು ಕರೆಯುತ್ತಾರೆ.

ಶತಮಾನಗಳ ಕಾಲ ಬದುಕಬಲ್ಲದು. ಕ್ರಿ.ಪೂ. 288ರಲ್ಲಿ ನೆಟ್ಟಂತಹ ಅರಳಿ ಮರವು ಸಿಲೋನಿನಲ್ಲಿ ಇನ್ನೂ ಇದೆ ಎಂದು ತಿಳಿದು ಬಂದಿದೆ. ವಿದುರಾಶ್ವತ್ಥದಲ್ಲಿರುವಂತಹ ಅರಳಿಮರ ಬಹು ಪ್ರಾಚೀನವಾದುದು. ಜ್ಞಾನದ ಸಂಕೇತವಾಗಿರುವ ಇದನ್ನು ಬುದ್ಧಗಯಾದಲ್ಲಿ ಭೋದಿ ವೃಕ್ಷವೆಂದು ಕರೆಯಲಾಗಿದೆ. ಬರ್ಮಾದಲ್ಲಿ ಇದರ ನಾರಿನಿಂದ ಕಾಗದ ತಯಾರಿಸುತ್ತಿದ್ದರು. ಮಳೆ ಬಾರದಿದ್ದಾಗ ಅರಳಿ ಮರದ ಎಲೆಗಳು ಗಾಳಿಗೆ ಚಲಿಸುತ್ತಾ ಪರಪರ ಶಬ್ದ ಮಾಡಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ. ಇದರ ಎಳೆಯ ಎಲೆಗಳನ್ನು ಮೇಕೆ, ಕುರಿ, ದನಗಳು ತಿನ್ನುವುವು. ಇದರಿಂದ ಹಾಲು ಹೆಚ್ಚುವುದೆಂದು ನಂಬುತ್ತಾರೆ. ಇದರ ಕಾಂಡದಿಂದ ಒಂದು ಬಗೆಯ ಅಂಟು ಬರುತ್ತದೆ ಅದನ್ನು ಆಭರಣಗಳ ತಯಾರಿಕೆಯಲ್ಲಿ ಟೊಳ್ಳುಗಳನ್ನು ತುಂಬಲು ಬಳಸುತ್ತಾರೆ. ಈ ಮರದಲ್ಲಿ ಅರಗಿನ ಹುಳುಗಳು ವಾಸವಾಗಿವೆ ಎಂಬ ನಂಬಿಕೆಯಿದೆ. ಇದರ ತೊಗಟೆಯಿಂದ ಬರುವ ಅಂಟನ್ನು ಪಕ್ಷಿಗಳನ್ನು ಹಿಡಿಯಲು ಬಳಸುತ್ತಾರೆ. ಆಯುರ್ವೇದದಲ್ಲಿ ಇದರ ಬೇರು, ತೊಗಟೆ, ಮಧುಮೇಹರೋಗ, ಅಸ್ತಮ ಹಾಗೂ ಬಂಜೆತನದ ಔಷಧಿಯಾಗಿ ಬಳಕೆಯಾಗುತ್ತಿದೆ.

**ಬಿಲ್ವ ವೃಕ್ಷ :** ಭಾರತೀಯರಿಗೆ ಪ್ರಿಯವಾದ ವೃಕ್ಷ. ಭಾರತದಲ್ಲಿ ಹಲವು ಕಡೆ ಇದು ಬೆಳೆಯುತ್ತದೆ. ದೇವಸ್ಥಾನಗಳಲ್ಲಿ, ಊರಿನ ಆಸು ಪಾಸು ಕಂಡುಬರುತ್ತದೆ. ಶಿವರಾತ್ರಿಯ ದಿನ ಬಿಲ್ವಪತ್ರೆಯನ್ನು ಪೂಜೆಗೆ ಬಳಸುತ್ತಾರೆ. ಹೀಗೆ ಪೂಜಿಸುವುದರಿಂದ ಬೇಡಿದ ವರವನ್ನು ನೀಡುವನೆಂಬ ಪ್ರತೀತಿಯೂ ಇದೆ. ಎಲ್ಲಾ ತರಹದ ವಾತಾವರಣದಲ್ಲೂ ಬೆಳೆಯಬಲ್ಲ ಗುಣವನ್ನು ಈ ವೃಕ್ಷ ಹೊಂದಿದೆ. ದುರ್ಗಾ ರೂಪದಲ್ಲಿ ಈ ವೃಕ್ಷವನ್ನು ಪೂಜಿಸುವ ಸಂಪ್ರದಾಯ ಬಂಗಾಲದಲ್ಲಿದೆ. ಅಲ್ಲಿಯ ಹೆಂಗಳೆಯರು ಪತಿಯ ಪ್ರೇಮಕ್ಕಾಗಿ ಹಾಗೂ ಯೋಗ್ಯನಾದ ವರನು ಸಿಗಲೆಂದು ಭಕ್ತಿಯಿಂದ ಈ ವೃಕ್ಷವನ್ನು ಪೂಜಿಸುವರು. ಬ್ರಹ್ಮ, ವಿಷ್ಣು, ಮಹೇಶ್ವರರು ಈ ಮೂವರು ಬಿಲ್ವದ ಎಲೆಯಲ್ಲಿ ವಾಸಿಸುವರೆಂಬ ನಂಬಿಕೆಯಿದೆ. ಬಿಲ್ವಪತ್ರೆಯ ಹಿಂಭಾಗದಲ್ಲಿ ಇಂದ್ರಾದಿ ಲೋಕ ಪಾಲಕರು ಇರುವರೆಂಬುದಾಗಿ ಹಲವು ಪುರಾಣಕಥೆಗಳು ಹೇಳುತ್ತವೆ. ಬಿಲ್ವ ಫಲವನ್ನು ಶ್ರೀಫಲ ಎಂದು ಕರೆಯುವರು. ಒಂದು ಕಥೆಯ ಪ್ರಕಾರ ಶ್ರೀದೇವಿ ಶಿವನ ಆರಾಧನೆ ಮಾಡುವಾಗ ಸಹಸ್ರ ಕಮಲಗಳಲ್ಲಿ ಎರಡು ಕಮಲಗಳ ಕೊರತೆ ಉಂಟಾದಾಗ ಪೂಜೆಗೆ ವಿಘ್ನವಾಗುವುದೆಂದು ಬಯಸಿ ತನ್ನ ಸ್ತನಗಳನ್ನೇ ಅರ್ಪಿಸಲು ಮುಂದಾದಾಗ ಅವಳ ಭಕ್ತಿಗೆ ಮೆಚ್ಚಿ ಶಿವ ಇದರ ಸಂಕೇತವಾಗಿ ಬಿಲ್ವ ವೃಕ್ಷವು ಇದೇ ಆಕಾರದ ಫಲಗಳನ್ನು ನೀಡಲಿ ಎಂದು ವರವಿತ್ತನು. ಅಂದಿನಿಂದ ಬಿಲ್ವ ವೃಕ್ಷ ಸುಂದರವಾದ ಫಲವನ್ನು ಕೊಡುತ್ತದೆಂದು ನಂಬಿಕೆ. ಭಾರತದ ಆದಿವಾಸಿ ಸಮೂಹ ಈ ಫಲವನ್ನು ಮಾನವನ ಶಿರಸ್ಸು ಇಲ್ಲವೇ ರುಂಡ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಮಾಘ ಮಾಸದಲ್ಲಿ ಕೃಷ್ಣ ಚತುರ್ದಶಿಯ ದಿನದಂದು ಭಗವಾನ್ ಶಂಕರನು ಈ ವೃಕ್ಷದಲ್ಲಿ ಕಾಣಿಸಿಕೊಳ್ಳುತ್ತಾನೆಂಬ ನಂಬಿಕೆಯನ್ನು ಲಿಂಗಾಯತರು ಹೊಂದಿದ್ದಾರೆ. ಆ ದಿನ ವಿಶೇಷವಾಗಿ ಈ ವೃಕ್ಷವನ್ನು ಪೂಜಿಸುವರು. ಬಿಲ್ವ ವೃಕ್ಷವು

ಭಾರತೀಯರ ಸಕಲ ಇಷ್ಟಗಳನ್ನು ಪೂರೈಸುವಂತಹ ದಾರಿದ್ರ್ಯವನ್ನು ಹೋಗಲಾಡಿಸುವಂತಹದು. ಈ ವೃಕ್ಷದ ಪೂಜೆಗೆ ಹಾಗೂ ಇದರ ಕೆಳಗೆ ಯಜ್ಞಯಾಗಗಳನ್ನು ನಡೆಸುವುದರಿಂದ ಪುಣ್ಯ ಪ್ರಾಪ್ತಿಯಾಗುವುದೆಂದು ನಂಬುವರು.

ಬಿಲ್ವ ಪತ್ರಗಳನ್ನು ಬಿಡಿಸುವಾಗ ಅಮೃತೋದ್ಭವಿಯಾದ ಶ್ರೀ ವೃಕ್ಷವೇ ನಿನ್ನನ್ನು ಶಿವನ ಪೂಜೆಗಾಗಿ ಬಿಡಿಸುತ್ತಿರುವೆ ಎಂದು ಹೇಳಿಕೊಳ್ಳುವುದರಿಂದಲೂ ಬಿಲ್ವವೃಕ್ಷ ಒಳಿತನ್ನು ನೀಡುವುದೆಂದು ಪ್ರತೀತಿ. ಕೃತಘ್ನತೆಯಾಗಿ ಪಡೆದ ಪತ್ರಕ್ಕೆ ಗೌರವ ಸಲ್ಲಿಸುವುದರಿಂದ ಒಳಿತಾಗುವುದು ಎಂಬ ಭಾವನೆ. ಬಿಲ್ವವೃಕ್ಷ ಭಾರತೀಯರ ಧ್ಯಾನಾಸಕ್ತಿಯನ್ನು ಹೆಚ್ಚಿಸುವುದರಲ್ಲಿ ಮಹತ್ತರವಾದ ಸ್ಥಾನವನ್ನು ಹೊಂದಿದೆ. ಇದರ ಕಟ್ಟಿಗೆಯನ್ನು ಶೈವರು ಯಾವುದಕ್ಕೂ ಬಳಸುವುದಿಲ್ಲ ಹಾಗೂ ತುಳಿಯುವುದಿಲ್ಲ. ಇದರ ವಾಸನೆಗೆ ಹಾವುಗಳು ದೂರ ಇರುತ್ತವೆ ಎಂದು ಪ್ರತೀತಿಯಿದೆ. ಔಷಧೀಯ ಗುಣಗಳನ್ನು ಹೊಂದಿರುವ ಬಿಲ್ವ ವೃಕ್ಷವು ಹಲವು ರೋಗಗಳನ್ನು ನಿವಾರಿಸುವ ಶಕ್ತಿಯನ್ನು ಹೊಂದಿದೆ.

**ಬೇವಿನ ಮರ :** ಜೀವನದ ಸಿಹಿ-ಕಹಿಗಳ ದ್ಯೋತಕವಾಗಿ ಯುಗಾದಿಯಂದು ಬೇವು-ಬೆಲ್ಲವನ್ನು ತಿನ್ನುವುದು ರೂಢಿ. "ಅಧರಕ್ಕೆ ಕಹಿ ಉದರಕ್ಕೆ ಸಿಹಿ" ಎಂಬ ಗುಣಗಳನ್ನು ಮೇಳೈಸಿಕೊಂಡು ಅಮೃತದಿಂದ ಹುಟ್ಟಿಬಂದಿದೆ ಎಂದು ಹೇಳುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಸಂಪ್ರದಾಯಸ್ಥರು ಈ ವೃಕ್ಷವನ್ನು ಬ್ರಹ್ಮನೆಂದೂ, ಜಗನ್ನಾಥನೆಂದೂ, ಮಹಾಕಾಳಿ, ಮಹಾದುರ್ಗೆ, ಮಹಾಲಕ್ಷ್ಮೀ ಎಂದು ಪೂಜಿಸುವ ಸಂಪ್ರದಾಯವಿದೆ. ಕಾಳಿ ಇಲ್ಲವೆ ದುರ್ಗಾಮಂದಿರಗಳಲ್ಲಿ ಈ ವೃಕ್ಷವನ್ನು ಪೂಜೆಗಾಗಿ ಬೆಳೆಸುತ್ತಾರೆ. ದೇವಿಯ ಅರ್ಚನೆಯಿಂದಿಡಿದು, ಬಾಗಿಲ ತೋರಣದವರೆಗೆ ಬೇವಿನ ಎಲೆಯನ್ನು ಕಟ್ಟುವ ಸಂಪ್ರದಾಯವಿದೆ. ಹಾಗೆಯೇ ಕಲಶ ಪೂಜಾದಿಗಳಲ್ಲಿಯೂ ಬೇವಿನೆಲೆಯನ್ನು ಬಳಸುತ್ತಾರೆ.

ಬೇವಿನ ಸೊಪ್ಪನ್ನು ತಿನ್ನುವುದರಿಂದ ರೋಗನಿರೋಧಕ ಶಕ್ತಿ ದೊರೆಯುವುದು. ಇದಕ್ಕೆ ಕ್ರಿಮಿನಾಶಕ ಗುಣವಿರುವುದರಿಂದ ಚರ್ಮರೋಗಗಳಿಗೆ ಬಳಸುತ್ತಾರೆ. ಬೇವಿನ ಎಣ್ಣೆ ತೆಗೆದ ಅನಂತರ ಅದರ ಹಿಂಡಿಯನ್ನು ಗೊಬ್ಬರವಾಗಿ ಬಳಸುತ್ತಾರೆ. ಮರದಿಂದ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುತ್ತಾರೆ. ಕಾರಣ ಗೆದ್ದಲುಹುಳುಗಳು ಈ ಮರವನ್ನು ಬಾಧಿಸುವುದಿಲ್ಲ. ಈ ವನಸ್ಪತಿಯ ಸರ್ವ ಅಂಗವು ಔಷಧೀಯ ಗುಣವನ್ನು ಹೊಂದಿರುವುದರಿಂದ ಇದನ್ನು 'ನಿಂಬ' ಎಂದು ಕರೆಯುವರು. ಬೇವಿನ ಕಡ್ಡಿಯನ್ನು ಹಲ್ಲುಜ್ಜಲು ಬಳಸುವರು ಬೀಜದ ಗೊಬ್ಬರವು ಉತ್ಕೃಷ್ಟವಾದ ಗೊಬ್ಬರವಾಗಿ ಬಳಕೆಗೊಳ್ಳುತ್ತದೆ ಹಾಗೂ ಕ್ರಿಮಿನಾಶಕ ಗುಣವಿರುವುದರಿಂದ ರೋಗನಿರೋಧಕ ಶಕ್ತಿಯು ಬೆಳೆಗೆ ದೊರಕುವುದು. ಎಲೆಗಳನ್ನು ಅರೆದು ಗಾಯಗಳಿಗೆ ಲೇಪಿಸುವರು. ಒಣಗಿದ ಎಲೆಯನ್ನು ಆಲಮಾರುಗಳಲ್ಲಿ ಬಟ್ಟೆಗಳಿಗೆ ಕೀಟಭಾದೆಯನ್ನು ತಪ್ಪಿಸಲು ಇಡುವರು. ಒಟ್ಟಾರೆ ಬೇವಿನಮರವು ವಿವಿಧ ರೀತಿಯಲ್ಲಿ ಕೀಟ ನಾಶಕ ಗುಣಗಳನ್ನು ಹೊಂದಿರುವುದರಿಂದ ಹಳ್ಳಿಯಿಂದಿಡಿದು ಪಟ್ಟಣದವರೆಗೆ ಎಲ್ಲರ ಪ್ರೀತಿಗೆ ಪಾತ್ರವಾಗಿದೆ. ಬೇವಿನ ಹೂವು, ಎಲೆಯನ್ನು ಔಷಧಿಗಾಗಲಿ, ಪೂಜೆಗಾಗಲಿ ಬಿಡಿಸುವಾಗ ಮಂತ್ರವನ್ನೇಳುತ್ತಾರೆ. ಇದು ವೃಕ್ಷಕ್ಕೆ ಕೊಡುವ ಗೌರವ. ಸೀತಾಳ ಸಿಡುಬು ಅಮ್ಮ ಆಗಿರುವ ಮಕ್ಕಳಿಗೆ ಬೇವಿನ ಸೊಪ್ಪನ್ನು ಅರೆದು ಮೈಗೆಲ್ಲ ಹಚ್ಚುವರು ಹಾಗೂ ಬೇವಿನ ಸೊಪ್ಪನ್ನು ಮಲಗುವ ಸ್ಥಳದಲ್ಲಿ ಇಡುವರು. ಮುಖ್ಯವಾಗಿ ದೇವಿ ಸಂಬಂಧ ದೇವಾಲಯಗಳಲ್ಲಿ ಇಲ್ಲವೆ ಊರಿನ ಮಾರಮ್ಮನ ಗುಡಿಗೆ ಬೇವಿನ ಸೊಪ್ಪನ್ನು ಇಟ್ಟು ಬಿಸಿಲ ಸಮಯದಲ್ಲಿ ದೇವಿಯ ವಿಗ್ರಹಕ್ಕೆ ನೀರೆರೆದು ಬರುತ್ತಾರೆ. ಇದರಿಂದ ದೇವಿ ತಂಪಾಗುವಳೆಂದು ನಂಬುವರು. ಊರಮಾರಿ ಕೋಪಿಸಿಕೊಂಡರೆ ಅಮ್ಮ ಆಗುವಳೆಂದು ಪ್ರತಿ ವರ್ಷ ಮಾರಮ್ಮನ ಹಬ್ಬವನ್ನು ಮಾಡಿ ಬೇವಿನ ಸೊಪ್ಪಿನಿಂದ ದೇವಿಯನ್ನು ಅಲಂಕರಿಸಿ ತಂಬಿಟ್ಟಿನ ಆರತಿ ಮಾಡಿ ಪೂಜಿಸುವರು. ಭೂತ ಪ್ರೇತಗಳು ಬೇವಿನ ಮರವನ್ನು ಕಂಡರೆ ಹೆದರುತ್ತವೆ ಎಂದು ನಂಬುತ್ತಾರೆ. ಆ ಕಾರಣಕ್ಕೆ ಶವಸಂಸ್ಕಾರಕ್ಕೆ ಹೊರಟಾಗ ಬೇವಿನ ಸೊಪ್ಪನ್ನು ಹಿಡಿದು ಹಿಂದಿರುಗುತ್ತಾರೆ. ಬಾಣಂತಿ - ಮಗು ಮಲಗುವ ಸ್ಥಳದಲ್ಲಿ ಬೇವಿನ ಸೊಪ್ಪನ್ನು ಇಡುತ್ತಿದ್ದರು ಹಾಗೂ ಬಾಣಂತಿ ಸ್ನಾನ ಮಾಡುವ ನೀರಿಗೂ ಉಪಯೋಗಿಸುವರು.

ದೇವಿಸಂಬಂಧಿ ದೇವಾಲಯಗಳಾದ ಕಾಳಿ, ಮಹಾಕಾಳಿ, ಭವಾನಿ, ಬನಶಂಕರಿ ಇತರೆ ದೇವಿಯರ ಆರಾಧಕರು ಹಾಗೂ ಸೇವಕರು ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ದೇವಿಯನ್ನು ಆರಾಧಿಸುವಾಗ ಬೇವಿನ ಸೊಪ್ಪನ್ನು ಉಡುಗೆಯಾಗಿ ತೊಟ್ಟು ನರ್ತಿಸುತ್ತಿದ್ದರು. ಮೈಮೇಲೆ ಅಮ್ಮ ಆವಾಹನೆಯಾದಾಗ ಬೇವಿನ ಸೊಪ್ಪನ್ನು ಹಿಡಿದು ಕುಣಿಯುವರು. ಮೈಮೇಲೆ ದೆವ್ವ ಬಂದಿರುವವರಿಗೆ ದೇವಿಯ ಸೇವಕರು ಬೇವಿನ ಸೊಪ್ಪಿನಿಂದ ಹೊಡೆದು ಓಡಿಸುವ ಪದ್ಧತಿಯು ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುತ್ತದೆ. ಬೇವಿನ ಸೊಪ್ಪಿನಿಂದ ಮಕ್ಕಳಿಗೆ ದೃಷ್ಟಿಯನ್ನು ತೆಗೆಯುವ ಪದ್ಧತಿಯಿದೆ. ಅದಕ್ಕೆ ವಿಶೇಷ ಮಂತ್ರಗಳನ್ನು ಉಚ್ಚರಿಸುತ್ತಾರೆ. ಯುಗಾದಿಯಂದು ಬೇವಿನ ಸೊಪ್ಪನ್ನು ತೋರಣವಾಗಿ ಕಟ್ಟುವರು. 'ಬ್ಯಾಸಗಿ ದಿವಸಕ್ಕೆ ಬೇವಿನ ಮರ ತಂಪು' ಎಂಬ ತ್ರಿಪದಿ ಬೇವಿನ ಮಹತ್ವವನ್ನು ಸಾರುತ್ತದೆ. ದಕ್ಷಿಣ ಭಾರತದಲ್ಲಿ ಬೇವಿನ ಮರವನ್ನು ಲಕ್ಷ್ಮಿಯ ರೂಪದಲ್ಲಿ ಪೂಜಿಸುವರು. ಮಕ್ಕಳಿಲ್ಲದವರು ಅರಳಿ ಮರ ಹಾಗೂ ಬೇವಿನ ಮರಗಳಿಗೆ ಮದುವೆ ಮಾಡುವ ಪರಿಪಾಠವಿದೆ. ಇಲ್ಲಿ ಬೇವು ಸ್ತ್ರೀಯೆಂದು, ಅರಳಿ ಪುರುಷನೆಂದು ಭಾವಿಸಲಾಗುತ್ತದೆ. ಹೀಗೆ ಪೂಜಿಸಿದವರಿಗೆ ಒಳಿತಾಗುವುದೆಂಬ ನಂಬಿಕೆ.

**ಅಶೋಕ ವೃಕ್ಷ :** ಹಿಂದೂಗಳಿಗೆ ಪವಿತ್ರವಾದ ವೃಕ್ಷಗಳಲ್ಲಿ ಅಶೋಕ ವೃಕ್ಷವೂ ಒಂದು. ಅಶೋಕ ಎಂಬ ಹೆಸರು ಶೋಕವಿಲ್ಲದಿರುವುದನ್ನು ಸೂಚಿಸುತ್ತದೆ. ಸ್ತ್ರೀ ಸಂಬಂಧಿ ರೋಗಗಳಿಗೆ ಅಮೃತದಂತೆ ಇರುವುದರಿಂದ 'ಅಶೋಕ' ಎನ್ನುತ್ತಾರೆಂದು ಅನುಭವಸ್ಥರ ಅಭಿಪ್ರಾಯ. ಪುರಾಣಗಳಲ್ಲಿ ಅಶೋಕವೃಕ್ಷದ ವರ್ಣನೆ ಬರುತ್ತದೆ. ರಾವಣನಿಂದ ಅಪಹರಿಸಿದ ಸೀತೆ ಅಶೋಕ ವೃಕ್ಷದ ಕೆಳಗೆ ಕುಳಿತಿದ್ದಳು. ಸಿದ್ಧಾರ್ಥ ಬುದ್ಧನಾದ ಮೇಲೆ ಮೊದಲ ಉಪದೇಶವನ್ನು ಅಶೋಕ ವೃಕ್ಷದ ಕೆಳಕೆ ಕೊಟ್ಟನು ಎಂದು ಪುರಾಣಗಳಲ್ಲಿದೆ. ಉತ್ತರ ಇಂಡಿಯಾದಲ್ಲಿ ಈ ವೃಕ್ಷವನ್ನು ಪ್ರೇಮದ ಸಂಕೇತವಾಗಿ ಪೂಜಿಸುತ್ತಾರೆ. ಪ್ರತಿ ಚೈತ್ರ ಮಾಸದ 13ನೇ ದಿನ ವಿರಹಿಗಳೂ, ಪ್ರೇಮಿಗಳು ತಮ್ಮ ಇಷ್ಟಾರ್ಥಗಳ ಸಿದ್ಧಿಗಾಗಿ ಈ ಮರವನ್ನು ಪೂಜಿಸುವರು. ಸಂಸ್ಕೃತ ಕಾವ್ಯಗಳಲ್ಲಿ ಅಶೋಕವೃಕ್ಷದ ಸೌಂದರ್ಯವನ್ನು ಅದ್ಭುತವಾಗಿ ವರ್ಣಿಸುತ್ತಾರೆ.

ಅಶೋಕ ಎಷ್ಟು ಸೂಕ್ಷ್ಮವೆಂಬುದನ್ನು ಹೇಳುವಾಗ ಅದು ಹೂವು ಬಿಡದಿದ್ದಾಗ ಸರ್ವಾಂಗ ಸುಂದರಿಯದ ಪ್ರೇಮಮಯಿಯಾದ ಪತಿವ್ರತೆಯೊಬ್ಬಳು ತನ್ನ ಎಡಗಾಲನ್ನು ಆ ಮರಕ್ಕೆ ಮುಟ್ಟಿಸುವುದರ

ಮೂಲಕ ಮರವೆಲ್ಲಾ ಹೂ ಚಿಗುರುಗಳಿಂದ ತುಂಬಿ ಕಂಗೊಳಿಸುತ್ತದೆ. ಈ ವಿಧಾನವನ್ನು "ದೋಹದ" ಎಂದು ಕರೆಯುತ್ತಿದ್ದರು. ಅಶೋಕ ನೋವು ನಿವಾರಕ ಶಕ್ತಿಯನ್ನು ಹೊಂದಿದೆ ಎಂದು ಚರಕಸಂಹಿತೆ ಹೇಳುತ್ತದೆ. ಸ್ತ್ರೀಯರ ಋತುಚಕ್ರ ಸರಿಯಾಗಿದ್ದು, ಭಕ್ತಿಯಿಂದ ಒಂದು ವಾರ ಅಶೋಕ ಮರದ ಎಲೆಗಳನ್ನು ಸೇವಿಸುವುದರಿಂದ ಸಂತಾನವಾಗುವುದೆಂಬ ನಂಬಿಕೆಯಿದೆ. ಈ ಎಲೆಗೆ ರಕ್ತ ಶುದ್ಧೀಕರಿಸುವ ಗುಣವಿದೆ. ಈ ವೃಕ್ಷದ ಗಾಳಿ ಸೇವಿಸುವುದರಿಂದ ಶರೀರದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದೆಂದು ಹೇಳಲಾಗಿದೆ. ಇದೊಂದು ಚೆಲುವಾದ ನಿತ್ಯ ಹಸಿರಿನಿಂದ ಕಂಗೊಳಿಸುವ ಮರ. ಇದನ್ನು ಅಲಂಕಾರಿಕ ಮರವಾಗಿ ಹಾಗೂ ಪೂಜನೀಯ ಮರವಾಗಿ ದೇವಾಲಯಗಳಲ್ಲಿ ಉದ್ಯಾನವನಗಳಲ್ಲಿ, ಕೈ ತೋಟಗಳಲ್ಲಿ ಬೆಳೆಸುತ್ತಾರೆ.

**ತೆಂಗು :** ಭಾರತೀಯ ಸಂಸ್ಕೃತಿಯಲ್ಲಿ ತೆಂಗು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಅದರ ಪ್ರತಿಯೊಂದು ಭಾಗವೂ ಉಪಯೋಗಕ್ಕೆ ಬರುವುದರಿಂದ 'ಕಲ್ಪವೃಕ್ಷ' ಎಂದು ಕರೆದು ಗೌರವಿಸಿದ್ದಾರೆ. ಹುಟ್ಟಿನಿಂದ ಸಾವಿನವರೆಗಿನ ಹಲವು ಆಚಾರಗಳಲ್ಲಿ ಅಗತ್ಯದ ಅಂಶವಾಗಿ ಕಂಡುಬರುತ್ತದೆ. ತೆಂಗಿಲ್ಲದೆ ಯಾವ ಶುಭಕಾರ್ಯಗಳು ಜರುಗುವುದಿಲ್ಲ ಎಂಬಲ್ಲಿ ಅಡುಗೆ ರುಚಿಗೆ ಸರಿಸಾಟಿಯಾಗಿ ಬೇರೆ ಯಾವ ಫಲವೂ ಅದರ ಸ್ಥಾನವನ್ನು ತುಂಬಲಾರದು. ತೆಂಗಿನ ಎಳನೀರು ದಾಹವನ್ನು, ಮೂತ್ರದೋಷಗಳು, ಮೇಹರೋಗಗಳನ್ನು ನಿವಾರಿಸುವುವು. ಗ್ಲೂಕೋಸ್ ಅಂಶವಿರುವುದರಿಂದ ಶಕ್ತಿದಾಯಕವಾಗಿಯೂ ಬಳಸುತ್ತಾರೆ. ವಿವಾಹದ ಸಂದರ್ಭದಲ್ಲಿ ಫಲಪೂಜೆಯ ಸಮಯದಲ್ಲಿ ಎಳನೀರನ್ನು ಇಟ್ಟು ಪೂಜಿಸಿ ಗುರು-ಹಿರಿಯರಿಗೆ ದಾನ ಕೊಡುತ್ತಾರೆ. ಧಾರಾ ಸಮಯದಲ್ಲಿ ಫಲತಾಂಬೂಲವನ್ನು (ಗಂಡು-ಹೆಣ್ಣಿನ) ನವ ವಧು-ಕೈಯಲ್ಲಿಟ್ಟು ಧಾರೆಯೆರೆಯುವ ಸಂಪ್ರದಾಯ ನಮ್ಮ ಹಿಂದೂ ಸಂಸ್ಕೃತಿಯದೆ. ತೆಂಗಿನ ಹೊಂಬಾಳೆಯನ್ನು ದೇವರ ಗಡಿಗೆಗಳಿಗೆ ಇಟ್ಟು ಪೂಜಿಸುತ್ತಾರೆ. ದೇವರು ತರುವಾಗ ವಿಶೇಷವಾಗಿ ಬಳಸುತ್ತಾರೆ. ಮದುವೆ ಮನೆಯ ಮುಂದಿನ ಚಪ್ಪರದಲ್ಲಿ ತೆಂಗಿನ ಗರಿಯಿಂದ ಅಲಂಕರಿಸುತ್ತಾರೆ. ಹಸುರು ಚಪ್ಪರವು ನೆರಳಿಗೆ ಹಾಗೂ ಬೇಸಗೆಯ ಬಿಸಿಲಿನಲ್ಲಿ ತಂಪನ್ನು ನೀಡುವಲ್ಲಿ ಸಹಾಯಕ. ಶುಭದ ಸಂಕೇತವಾಗಿ ಚಪ್ಪರವು ತಳಿರು ತೋರಣದಿಂದ ರಾರಾಜಿಸುತ್ತದೆ. ಇವು ವಿದೇಶಿ ವಿನಿಮಯವನ್ನು ಗಳಿಸುತ್ತಿವೆ. ತೆಂಗಿನ ಎಣ್ಣೆ ಚರ್ಮರೋಗಕ್ಕೆ ಬಲು ಉಪಯುಕ್ತವಾಗಿದೆ. ಒಣಕೊಬ್ಬರಿಯಿಂದ ಹಲವು ವಿಧದ ಸಿಹಿ ತಿಂಡಿಗಳನ್ನು ತಯಾರಿಸುತ್ತಾರೆ. ಬೇಕರಿ ತಿಂಡಿಗಳಲ್ಲಿ ಕಲಾತ್ಮಕವಾಗಿ ರಂಗುತುಂಬಿ ಬಳಸುವರು. ಖಾದ್ಯಗಳನ್ನು ತಯಾರಿಸಲು ಅಗತ್ಯವಾಗಿ ಬಳಸುತ್ತಾರೆ. ಕೊಬ್ಬರಿಯಿಂದ ಎಣ್ಣೆಯನ್ನು ತಯಾರಿಸಿ ತಲೆಕೂದಲಿಗೆ ಬಳಸುತ್ತಾರೆ. ಹಾಗೆಯೇ ಅಡುಗೆ ಎಣ್ಣೆಯಾಗಿಯೂ ಕೆಲವು ಕಡೆ ಬಳಸುತ್ತಾರೆ. ಹೀಗೆ ಹತ್ತಾರು ಉಪಯೋಗಗಳನ್ನು ಒಳಗೊಂಡಿರುವ ತೆಂಗಿಗೆ ಸರಿಸಾಟಿಯಾದ ಬೇರೊಂದು ವೃಕ್ಷವಿಲ್ಲವೆಂದೇ ಹೇಳಬೇಕು.

ದೇವರ ಪೂಜೆಗೆ ಬಳಸುವ ತೆಂಗಿನಕಾಯಿ ಬಹು ಹಿಂದೆ ಬಲಿಯ ಸಂಕೇತವಾಗಿತ್ತು ಎಂದು ಇತಿಹಾಸ ತಿಳಿಸುತ್ತದೆ. ಜನ ನಾಗರೀಕರಾದಂತೆ ಅವರ ಚಿಂತನೆಗಳು ರೂಢಿಗಳು ಬದಲಾದವು. ಮೊದಮೊದಲು ಮಾನವ ಬಲಿ ನಡೆಯುತ್ತಿದ್ದು ಕಾಲಾನಂತರ ಪ್ರಾಣಿಬಲಿ ಕ್ರಮೇಣ ಆ ಸ್ಥಾನವನ್ನು ಕುರಿ, ಕೋಳಿ ಹಂದಿ, ಮೇಕೆಗಳನ್ನು ಬಲಿಕೊಟ್ಟು ಅದನ್ನು ಆಹಾರವಾಗಿ ಸೇವಿಸತೊಡಗಿದರು. ಅದಕ್ಕೆ ಮಾಂಸಾಹಾರಿಗಳು ಉತ್ತೇಜಿಸತೊಡಗಿದರು. ಸಸ್ಯಹಾರಿಗಳು ತೆಂಗಿನಕಾಯಿಯನ್ನು ಪೂಜೆಗೆ ಬಳಸತೊಡಗಿದರು. ಪ್ರಸ್ತುತ ಸಸ್ಯಹಾರಿಗಳು ಮಾಂಸಾಹಾರಿಗಳೆನ್ನದೆ ಎಲ್ಲರೂ ಹಣ್ಣುಕಾಯಿ ಪೂಜೆ ಮಾಡಿಸುವ ಪರಿಪಾಠ ರೂಢಿಗೆ ಬಂತು. ತೆಂಗಿನ ಕಾಯಿಯೂ ಮೂರು ಕಣ್ಣುಳ್ಳದ್ದು. ಮುಕ್ಕಣ್ಣೇಶ್ವರನೆಂದು ಪೂಜಿಸುತ್ತಾರೆ. ಬೇಸಾಯದಲ್ಲಿ ಸಾವಿರಾರು ಎಕರೆ ತೆಂಗಿನ ತೋಟಗಳನ್ನು ಕಾಣಬಹುದು. ಪ್ರಪಂಚದ ಎಲ್ಲೆಡೆಗೆ ಈ ಕಾಯಿಗಳು ತಲುಪುತ್ತವೆ. ಸಾರ್ವತ್ರಿಕವಾಗಿ ಎಲ್ಲರೂ ಒಪ್ಪಿ ಪೂಜಿಸುವ ಗಿಡಗಳಲ್ಲಿ ತೆಂಗೂ ಕೂಡ ಒಂದು. ಪ್ರತಿ ಹಳ್ಳಿಯಲ್ಲಿ ತಮ್ಮ ಮನೆಯ ಮುಂದೆ ದಿನನಿತ್ಯದ ಬಳಕೆಗಾಗಿ ಒಂದೊಂದು ತೆಂಗಿನ ಮರವನ್ನು ಬೆಳೆಸುತ್ತಾರೆ. ಹಬ್ಬ - ಹುಣ್ಣಿಮೆಗಳಲ್ಲಿ ತೆಂಗಿನ ಮರಕ್ಕೆ ಸುಣ್ಣ ಕೆಮ್ಮಣ್ಣಿನಿಂದ ಪಟ್ಟೆ ಬಳಿದು ಅರಿಸಿನ ಕುಂಕುಮ ಹೂವಿಟ್ಟು ಪೂಜಿಸುತ್ತಾರೆ.

ಹಿಂದೂ ಸಂಸ್ಕೃತಿಯಲ್ಲಿ ಪ್ರತಿಯೊಬ್ಬರು ಕಳಸಕ್ಕೆ ತೆಂಗಿನಕಾಯಿಯನ್ನಿಟ್ಟು ಪೂಜಿಸುವುದು ರೂಢಿ. ವಿಶೇಷವಾಗಿ ಶುಕ್ರವಾರಗಳಂದು, ಹಬ್ಬ-ಹುಣ್ಣಿಮೆಗಳಲ್ಲಿ ಕಳಸವನ್ನು ಕೂರಿಸುತ್ತಾರೆ. ದೈವಿಕ ಸಂಪ್ರದಾಯದ ಮಂದಿರಗಳಲ್ಲಿ ಹೋಮ-ಹವನಗಳು ಜರುಗುವ ವೇಳೆ ಮೊದಲು ತೆಂಗಿನಕಾಯಿ ಕಳಸ ಪೂಜಿಸಿ ಅನಂತರ ಮುಂದಿನ ಕಾರ್ಯಗಳಿಗೆ ತೊಡಗುತ್ತಾರೆ. ಸಂಪ್ರದಾಯಸ್ಥರು ವಿವಾಹಿತಳಾದ ಮಗಳನ್ನು ಅತ್ತೆ ಮನೆಗೆ ಕಳುಹಿಸುವಾಗ, ಗರ್ಭಿಣಿಗೆ ಸೀಮಂತ ಮಾಡುವಾಗ, ನವ ವಧುವನ್ನು ಮನೆ ತುಂಬಿಸಿಕೊಳ್ಳುವಾಗ ತೆಂಗಿನ ಕಾಯಿಯಾಗಿ ವಿವಿಧ ರೀತಿಯಲ್ಲಿ ಕೊಡುವ ಮೂಲಕ ಯಶಸ್ಸನ್ನು ಕೋರುತ್ತಾರೆ. ದೇವಾಲಯಗಳಲ್ಲಿ ಸಂತಾನ ಪ್ರಾಪ್ತಿಗಾಗಿ, ಇಷ್ಟಾರ್ಥ ಸಿದ್ಧಿಗಾಗಿ, ಭೂತ ಪ್ರೇತಾದಿಗಳ ನಿಗ್ರಹಕ್ಕೆ ತೆಂಗಿನಕಾಯಿಯನ್ನು ಮಂತ್ರಿಸಿಕೊಡುತ್ತಾರೆ. ಮಹಾರಾಷ್ಟ್ರದಲ್ಲಿ ಮನೆಯ ಹೆಬ್ಬಾಗಿಲಿಗೂ, ದೇವಸ್ಥಾನಗಳಿಗೂ ತೆಂಗಿನಕಾಯಿಯನ್ನು ತೋರಣದಂತೆ ಕಟ್ಟುವ ಸಂಪ್ರದಾಯವಿದೆ.

ತೆಂಗು ಮೊದಲು ಹೂ ಬಿಟ್ಟಾಗ ಅದಕ್ಕೆ ಚೊಚ್ಚಲ ಸೀಮಂತ ಮಾಡಿದಂತೆ ಪೂಜಿಸುತ್ತಾರೆ. ಶರತ್ ಪೌರ್ಣಿಮೆಯ ದಿನವನ್ನು ತೆಂಗಿನ ಹುಣ್ಣಿಮೆ ಎಂದು ಗೌರವಿಸಿದ್ದಾರೆ. ಈ ಫಲದಲ್ಲಿ ಶ್ರೀದೇವಿಯು ವಾಸವಾಗಿದ್ದಾಳೆಂದು ಹೇಳುತ್ತಾರೆ. ಹರಕೆಗಳಲ್ಲಿ 101 ತೆಂಗಿನಕಾಯಿಯನ್ನು ಒಡೆಯುವ ಸಂಪ್ರದಾಯವಿದೆ. ದೇವಾಲಯದ ಪ್ರತಿ ಮೆಟ್ಟಿಲುಗಳಿಗೆ ತೆಂಗಿನಕಾಯಿಯನ್ನು ಒಡೆಯುವ ವಿಶೇಷ ಹರಕೆಗಳನ್ನು ಜನರು ಹೊರುತ್ತಾರೆ. ತಮ್ಮ ಇಷ್ಟಾರ್ಥ ಸಿದ್ದಿಸಿದಾಗ ದೇವಾಲಯಕ್ಕೆ ಬಂದು ಹರಕೆ ಸಲ್ಲಿಸುತ್ತಾರೆ. ವರುಷಕ್ಕೊಮ್ಮೆ ಆಚರಿಸುವ ಹಬ್ಬಗಳಲ್ಲಿ ಮಡಿಯಿಂದ ಉಪವಾಸವಿದ್ದ ಭಕ್ತರು ತಮ್ಮ ತಲೆಯ ಮೇಲೆ ತೆಂಗಿನಕಾಯಿ ಹೊಡೆಸಿಕೊಳ್ಳುವ ಪದ್ಧತಿಯನ್ನು ಕಾಣುತ್ತೇವೆ. ಶನಿದೇವಾಲಯದಲ್ಲಿ ಶನಿದೇವರು ದೇವರ ಗುಡ್ಡಪ್ಪನ ಮೇಲೆ ಬಂದು ಜನರಿಗೆ ಕಷ್ಟ-ಸುಖಕ್ಕೆ ಪರಿಹಾರ ಕೊಡುವಾಗ ಆತ ನೂರಾರು ತೆಂಗಿನಕಾಯಿಗಳನ್ನು ತನ್ನೆರಡು ಕೈಗಳಿಂದ ಒಂದಕ್ಕೊಂದು ಘರ್ಷಿಸಿ ಒಡೆಯುತ್ತಾನೆ.

ಕಾಯಿ ಒಡೆಯುವಾಗ ಮಧ್ಯ ಹೋಳಾಗದೆ ಹೆಚ್ಚು ಚೂರುಗಳಾದರೆ ತೊಟ್ಟಿಲ ಕಾಯಿ ಎಂದು, ಮನೆಯಲ್ಲಿ ಯಾರಾದರೂ ತೊಟ್ಟಿಲು ಕಟ್ಟುವರೆಂಬ ನಂಬಿಕೆ ಇದೆ. ದೇವಾಲಯಗಳಲ್ಲಿ ಉತ್ಸವ, ತೇರುಗಳು ನಡೆಯುವಾಗ ತೆಂಗಿನಕಾಯಿಯನ್ನೂ ದೇವರಿಗೆ ನೀವಳಿಸಿ ಈಡುಗಾಯಿ

ಒಡೆಯುತ್ತಾರೆ. ದೇವಾಲಯದ ಮುಂದೆ ಈಡುಗಾಯಿ ಹೊಡೆಯಲೆಂದು ಪ್ರತ್ಯೇಕವಾದ ಸ್ಥಳವನ್ನು ಗೊತ್ತುಪಡಿಸಿಕೊಡುತ್ತಾರೆ. ದೃಷ್ಟಿನಿವಾರಕವಾಗಿ ಪ್ರತಿ ವಾರಕ್ಕೊಮ್ಮೆ ಮನೆ ಜನರನ್ನು ನೀವಳಿಸಿ ತೆಂಗಿನಕಾಯಿಯನ್ನು ಒಡೆಯುವ ಪದ್ಧತಿಯಿದೆ. ಮಾಟ ಮಂತ್ರಗಳಲ್ಲಿ ತೆಂಗಿನ ಕಾಯಿಯ ಜೊತೆಗೆ ಇತರೆ ವಸ್ತುಗಳನ್ನು ಭೂಮಿಯಲ್ಲಿ ಹೂಳುತ್ತಾರೆ. ತಡೆ ಹೊಡೆಯುವಾಗ ತೆಂಗಿನಕಾಯಿಯ ಜೊತೆಗೆ ನಿಂಬೆಹಣ್ಣನ್ನು ಇಟ್ಟು ಒಡೆಯುತ್ತಾರೆ.

**ಬಾಳೆ :** ಹಿಂದೂ ಸಂಸ್ಕೃತಿಯಲ್ಲಿ ಪ್ರತಿ ಕುಟುಂಬದಲ್ಲಿ ಜರುಗುವ ಶುಭಕಾರ್ಯಗಳಿಗೆ ಬಾಳೆ ಅಗತ್ಯವಾಗಿ ಬಳಸಲ್ಪಡುತ್ತದೆ. ಮದುವೆಯಂತಹ ಶುಭ ಸಮಾರಂಭದಲ್ಲಿ ಚಪ್ಪರಕ್ಕೆ ಶೋಭೆಯನ್ನು ನೀಡುತ್ತದೆ. ಹಸುರಿನಿಂದಾವೃತವಾದ ಬಾಳೆ ಮನೆ-ಮನಗಳನ್ನು ತುಂಬುತ್ತದೆ. ಬಾಳೆಗಿಡದ ಅಕ್ಕಪಕ್ಕ ಬಿಟ್ಟ ಕಂದುಗಳನ್ನು ಕಡಿದು ಮಂಗಲಕಾರ್ಯಗಳಿಗೆ ಬಳಸಿಕೊಳ್ಳುವಲ್ಲಿ ನಮ್ಮ ಬಾಳೆಲ್ಲ ಬಾಳೆಯ ಗಿಡದಂತೆ ಉಪಯುಕ್ತವಾಗಲಿ ಎಂಬುದಾಗಿದೆ. ಲಕ್ಷ್ಮೀ, ಗಣೇಶ ಪೂಜಾದಿಯಾಗಿ ಆಯುಧ ಪೂಜೆಗಳಲ್ಲಿ ವಾಹನಗಳಿಗೆ ಬಾಳೆಕಂದನ್ನು ಕಟ್ಟಿ ಪೂಜಿಸುತ್ತಾರೆ. ಈ ಗಿಡವನ್ನು ಕದಳಿ ವೃಕ್ಷ, ರಂಭಾ ವೃಕ್ಷ ಎಂದು ಹೆಸರಿಸುತ್ತಾರೆ.

ನವಪತ್ರಿಕಾ ಎಂದರೆ ಒಂಬತ್ತು ವೃಕ್ಷಗಳು ಸೇರಿದುದು ಎಂದರ್ಥ. ಈ ನವ ಪತ್ರಿಕಾದಲ್ಲಿ ಬಾಳೆಯ ಎಲೆಯೂ ಒಂದು. ಮಾಘ ಮಂಡಲ ಎಂಬ ಹೆಸರಿನಲ್ಲಿ ಬಾಳೆಯ ಗಿಡವನ್ನು ಪೂಜಿಸುವುದಿದೆ. ಇದನ್ನು ಸೂರ್ಯನ ಪ್ರತೀಕವೆಂದು ಪೂಜಿಸುತ್ತಾರೆ. ಇಂಥ ಪೂಜೆಯಿಂದ ತೃಪ್ತರಾದ ವೃಕ್ಷದೇವತೆ ಸಂಪತ್ತು, ಸಂತಾನ, ಸಮೃದ್ಧಿ, ಶಾಂತಿ, ಉತ್ತಮ ಪತಿಯನ್ನು ನೀಡುವಳೆಂಬ ನಂಬಿಕೆಯಿದೆ. ಈ ವ್ರತವನ್ನು ಕೃಷ್ಣ ರುಕ್ಮಿಣಿಗಾಗಿ ಹೇಳಿದನೆಂದು ತಿಳಿದು ಬರುತ್ತದೆ. ಈ ವ್ರತವನ್ನು ಭಾದ್ರಪದ ಶುದ್ಧ ಚತುರ್ದಶಿಯಂದು ಆಚರಿಸುವರು. ಈ ಪೂಜೆಯ ಅಧಿದೇವತೆಯು 'ರಂಭಾ' ಎಂಬ ಹೆಸರಿನಿಂದ ಕರೆಯಲ್ಪಡುತ್ತಾಳೆ. ಗುಜರಾತ್ ಮತ್ತು ಮಧ್ಯ ಪ್ರದೇಶಗಳಲ್ಲಿ ಕಾರ್ತಿಕ, ಮಾಘ ಇಲ್ಲವೇ ವೈಶಾಖದಲ್ಲಿ ಈ ದೇವತೆಯನ್ನು ಪೂಜಿಸುವರು.

ಮಾತೃವಾತ್ಸಲ್ಯಕ್ಕೆ ಸಂಬಂಧಿಸಿದ ಕತೆಗಳಲ್ಲಿ ಬಾಳೆವೃಕ್ಷದ ಕಥೆಯು ಬಹು ವಿಶೇಷವಾದುದು. ಒಮ್ಮೆ ಹೂಬಿಟ್ಟು ಹೊರ ಬಂದರೆ ಕಮಾನಿನಾಕಾರದಲ್ಲಿ ಮಾತೆಯು ಬಾಗಿ ಹೂವಿನೊಂದಿಗೆ ಕಾಯಿಗಳು ಹೊರ ಬರುತ್ತವೆ. ಅವು ಬಲಿತು ಹಣ್ಣಾಗುತ್ತಿದ್ದಂತೆ ತಾಯಿ ವೃಕ್ಷವು ಸೊರಗಿ ಅಸು ನೀಗುತ್ತದೆ. ಇಲ್ಲಿ ಬಾಳೆ ಗೊನೆಯನ್ನು ಕತ್ತರಿಸಿದ ಅನಂತರ ಬಾಳೆಯ ಗಿಡವನ್ನು ಕತ್ತರಿಸುವ ಪರಿಪಾಠವಿದೆ. ಆ ಕಾರಣಕ್ಕೆ ಜನಪದರು "ಬಾಳೆಗೊಂದು ಗೊನೆ ಬದುಕುವವರಿಗೆ ಒಂದು ಮಾತು" ಎಂಬ ಗಾದೆ ಮಾತು ಹುಟ್ಟಿಕೊಂಡಿದೆ. ಜಾತಕ ಕರ್ಮಾದಿಗಳನ್ನು ಮಾಡುವಾಗ ಮಗುವಿನ ತಲೆಗೂದಲನ್ನು ಬಾಳೆಯ ಎಲೆಯಲ್ಲಿ ಸುತ್ತಿ ಪ್ರವಾಹಕ್ಕೆ ಬಿಡುವರು. ಅದು ಎಷ್ಟು ದೂರ ಹರಿಯುತ್ತಿದೆಯೋ ಅಷ್ಟು ದೀರ್ಘಕಾಲ ಜೀವಿಸುವುದೆಂಬ ನಂಬಿಕೆಯಿದೆ.

ಬಾಳೆಯ ಮರವು ವಿನಾಯಕನ ಪತ್ನಿ ಎಂಬ ನಂಬಿಕೆ ಬಂಗಾಲದ ಜನರಲ್ಲಿದೆ. ಒಮ್ಮೆ ಗಣೇಶನಿಗೆ ವಿವಾಹ ಮಾಡಬೇಕೆಂದು ನಿಶ್ಚಯಿಸಿದರು. ನಿಶ್ಚಿತಾರ್ಥಕ್ಕೆ ಮೈಗೆ ಅರಿಸಿನ ಲೇಪಿಸಿದರು. ಬಹು ಆನಂದದಿಂದ ತಾಯಿಯನ್ನು ಕರೆತರಲು ಗಣೇಶ ಹೊರಡುವಾಗ ಅದೇ ಸಮಯಕ್ಕೆ ಶ್ರೀ ದುರ್ಗೆ ತಮ್ಮ ಅಷ್ಟಭುಜಗಳಿಂದ ಭೋಜನ ನಡೆಸುತ್ತಿರುವುದನ್ನು ಕಂಡು ಆಶ್ಚರ್ಯಗೊಂಡು ಪ್ರಶ್ನೆ ಮಾಡಿದಾಗ, ದುರ್ಗೆಯೂ ಮಗೂ ನಾಳೆ ಬರಲಿರುವ ಸೊಸೆ ಹೇಗೆ ಅನ್ನವಿಡುವಳೋ? ಆದ್ದರಿಂದ ಮನಸ್ಸು ಇಚ್ಛೆ ಊಟ ಮಾಡುತ್ತಿದ್ದೇನೆ ಎಂದು ಹೇಳಿದಳು. ತಾಯಿಯ ಮಾತಿನಿಂದ ಗಣೇಶನ ಮನಸ್ಸು ಬದಲಾಗಿ ಆತ ವಿವಾಹವನ್ನು ಮಾಡಿಕೊಳ್ಳಲಾರೆ ಎಂದು ಹಠ ಹಿಡಿದ. ಆಗ ದುರ್ಗೆಯು ಅರಿಸಿನ ಹಚ್ಚಿದ ಮೈ ಲಗ್ನವಾಗದೇ ಉಳಿಯಬಾರದೆಂದು ಕದಳಿ ವೃಕ್ಷದೊಂದಿಗೆ ವಿವಾಹ ಮಾಡಿಕೊಳ್ಳುವಂತೆ ಹೇಳಿದಳು.

ಜನಪದರು ಬಾಳೆಯ ಮೊದಲ ಗೊನೆಯನ್ನು ದೇವರಿಗೆ ಅರ್ಪಿಸುತ್ತಾರೆ. ಅದರಿಂದ ರಸಾಯನ ತಯಾರಿಸಿ ನೆರೆದ ಊಟ ಜನರಿಗೆಲ್ಲ ಹಂಚುವ ಪರಿಪಾಠವಿದೆ. ಚೆಲುವೆಯರ ಅಂಗಗಳಿಗೆ ಬಾಳೆಯನ್ನು ಹೋಲಿಸುವುದು ಹಾಗೂ ಶತೃವಿನ ಬಲಹೀನತೆಗೆ ಬಾಳೆಯ ಕಾಂಡವನ್ನು ಹೋಲಿಸುತ್ತಾನೆ. ದಕ್ಷಿಣ ಭಾರತದಲ್ಲಿ ನಾಥ ಸಂಪ್ರದಾಯಿಕ ಕ್ಷೇತ್ರಗಳಿಗೆ 'ಕದಳಿ ಕ್ಷೇತ್ರ' ಎನ್ನುತ್ತಾರೆ.

ಕರ್ನಾಟಕದ ಕೆಲವು ಕಡೆ ದೇವಿ ಸಂಬಂಧ ದೇವಾಲಯಗಳಲ್ಲಿ ಪ್ರತಿ ಮನೆಯಿಂದ ಒಂದೊಂದು ಬಾಳೆಗೊನೆಯನ್ನು ದೇವಿಯ ಗುಡಿಗೆ ಇಟ್ಟು ಪೂಜಿಸುವ ಪರಿಪಾಠವಿದೆ. ಈ ಹೂವು ಹತ್ತು ವರುಷಕ್ಕೊಮ್ಮೆ ಜರುಗುತ್ತದೆ.

**ಬೆಟ್ಟದ ನೆಲ್ಲಿಕಾಯಿ :** ಚ್ಯವನ ಮಹರ್ಷಿಗೆ ಮುಪ್ಪನ್ನು ಹೋಗಲಾಡಿಸಲು ಅಶ್ವಿನಿ ದೇವತೆಗಳು ನೆಲ್ಲಿಕಾಯಿಯನ್ನು ಪ್ರಸಾದವಾಗಿ ನೀಡಿದರೆಂದು ಪ್ರತೀತಿ. ಇದನ್ನು ಸೇವಿಸಿದ ಚ್ಯವನನಿಗೆ ಯೌವನ ಮತ್ತೆ ಮರುಕಳಿಸಿತಂತೆ. ಆದ್ದರಿಂದ ಅದರ ಲೇಹಕ್ಕೆ "ಚ್ಯವನಪ್ರಾಶ" ಎಂಬ ಹೆಸರು. ವಿಟಮಿನ್ 'ಸಿ' ಅಧಿಕವಾಗಿದ್ದು ಚ್ಯವನ ಪ್ರಾಶದ ಮುಖ್ಯ ದ್ರವ್ಯವಾಗಿ ಹುಳಿ, ಸಿಹಿ ರುಚಿಯನ್ನು ಹೊಂದಿದೆ. ಮುಂಜಾನೆಯೇ ಎದ್ದು ಇದನ್ನು ತಿಂದು ನೀರು ಕುಡಿಯುವುದರಿಂದ ಗಂಟಲು ಉತ್ತಮಗೊಂಡು ಸುಶ್ರಾವ್ಯವಾದ ಧ್ವನಿಯೂ ಬರುವುದೆಂದು ಹೇಳುತ್ತಾರೆ. ಭಗವಂತನಿಂದ ಭೂಮಿಗಿಳಿದ ಸಂಜೀವಿನಿಯಾಗಿ ಇದನ್ನು ಪೂಜಿಸುತ್ತಾರೆ.

ಪಾಲ್ಗುಣ ಶುದ್ಧ ಏಕಾದಶಿಯ ದಿನವನ್ನು 'ಧಾತ್ರಿ ಏಕಾದಶಿ' ಎಂದು ಕರೆದು ಪೂಜಿಸುತ್ತಾರೆ. ಈ ವೃಕ್ಷದ ಕೆಳಗೆ ಮಹಾವಿಷ್ಣುವಿರುವನೆಂದು ವಿಶೇಷ ಭಕ್ತಿಯಿಂದ ನಮಿಸುತ್ತಾರೆ. ಕಾರ್ತಿಕ ಮಾಸದಲ್ಲಿ ತುಳಸಿ ಪೂಜೆ ಮಾಡುವಾಗ ಈ ವೃಕ್ಷದ ತುಂಡೊಂದನ್ನು ಇಟ್ಟು ಪೂಜಿಸಿದರೆ ಪಾಪ ಕರ್ಮಗಳು ಪರಿಹಾರವಾಗಿ ಸುಖ ಶಾಂತಿ ನೆಲೆಸುವುದೆಂಬ ನಂಬಿಕೆಯಿದೆ. ವೃಕ್ಷಗಳನ್ನು ಸೃಷ್ಟಿಸುವಾಗ ಬ್ರಹ್ಮನು ಮೊದಲು ಈ ವೃಕ್ಷವನ್ನು ಸೃಷ್ಟಿಸಿದನೆಂದೂ, ಈ ವೃಕ್ಷದಲ್ಲಿ ಸಕಲ ದೇವಾನುದೇವತೆಗಳು ವಾಸ ಮಾಡುವರೆಂಬ ಭಾವನೆಯಿದೆ.

ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಧಾತ್ರಿ ಪೂಜೆ ಮಾಡುವಾಗ ಇದನ್ನು ಹುಡುಕಿ ಅದರಡಿಯಲ್ಲಿ ಹೋಮವನ್ನು ಮಾಡಿ ಪರಿವಾರದೊಂದಿಗೆ ವನಭೋಜನವನ್ನು ಮುಗಿಸುವ ಪದ್ಧತಿಯಿದೆ. ಅಂದು ವಿಶೇಷವಾಗಿ ಬಳಸಲ್ಪಡುವ ಭೋಜನವು ನೆಲ್ಲಿಯ ಗೊಜ್ಜು, ಹುಣಿಸೆಯ ಚಟ್ನಿ ಇತರೆ ಆಮ್ಲದಿಂದ ತಯಾರಿಸಿದುದಾಗಿದ್ದು, ಮುಂದೆ ಯಾವ ರೋಗ ರುಜಿನಗಳು ಬಾರದಿರಲೆಂದು ಇಂತಹ ಆಚರಣೆಗಳನ್ನು ಮಾಡುತ್ತಾರೆ. ಈ ವೃಕ್ಷವು ದಾರಿದ್ರ್ಯವನ್ನು ಹೋಗಲಾಡಿಸಿ ಅಷ್ಟೈಶ್ವರ್ಯ ನೀಡುವುದೆಂಬ ನಂಬಿಕೆಯಿದೆ.

ಸೂರ್ಯನಿಗೆ ನೆಲ್ಲಿಯನ್ನು ಕಂಡರೆ ಆಗುವುದಿಲ್ಲ. ಆ ಕಾರಣ ಧಾತ್ರಿಯ ಹೋಮವನ್ನು ಭಾನುವಾರದಂದು ಮಾಡುವುದಿಲ್ಲವೆಂಬ ಪದ್ಧತಿಯಿದೆ. ಗತಿಸಿದ ವ್ಯಕ್ತಿಯ ತಲೆದಿಂಬು ಇಲ್ಲವೆ ಆ ಸ್ಥಳದಲ್ಲಿ ನೆಲ್ಲಿಯನ್ನಿಟ್ಟರೆ ಆತನಿಗೆ ಪುಣ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆಯಿದೆ. ನೆಲ್ಲಿಯ ಚಕ್ಕೆಗಳನ್ನು ಬಾವಿ ಹಾಗೂ ನೀರಿನ ಕೊಳಗಳಲ್ಲಿ ಹಾಕುವ ವಾಡಿಕೆಯಿದೆ. ಕಾರಣ ನೀರನ್ನು ಶುದ್ಧೀಕರಿಸುವ ಶಕ್ತಿ ಇದಕ್ಕಿದೆ ಎಂದು ನಂಬುವರು.

ನೆಲ್ಲಿಯ ಬಲಿತ ಕಾಯಿಯನ್ನು ಜಜ್ಜಿ ರಸ ತೆಗೆದು ಜೇನುತುಪ್ಪದೊಡನೆ ಸೇವಿಸುವುದರಿಂದ ನೆನಪಿನ ಶಕ್ತಿ ಹೆಚ್ಚುವುದು. ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದು. ಹಸಿ ನೆಲ್ಲಿಕಾಯಿಯಿಂದ ಉಪ್ಪಿನಕಾಯಿ, ಮೊರಬ್ಬ, ಚಟ್ನಿ, ಮಾಡಿ ಸೇವಿಸುತ್ತಾರೆ. ಇದರ ಗುಣವನ್ನರಿತು ಪ್ರತಿದಿನ ಒಣಗಿದ ನೆಲ್ಲಿಕಾಯಿಯನ್ನು ಅಡಕೆಯಂತೆ ಸೇವಿಸುವರು. ಇದರಿಂದ ದೃಷ್ಟಿದೋಷ ನಿವಾರಿಸುವ, ನೆರೆ ಕೂದಲನ್ನು ದೂರವಿಡುವ ಶಕ್ತಿ ನೆಲ್ಲಿಗೆ ಇದೆ. ಹಲ್ಲುಗಳಿಗೆ ರಕ್ಷಣೆಯನ್ನು ಕೊಡುತ್ತದೆ. ಬಾಯಾರಿಕೆ ಹಾಗೂ ನೀರಿನ ರುಚಿ ಹೆಚ್ಚಿಸಲು ನೆಲ್ಲಿಯ ಕಾಯಿಯನ್ನು ತಿನ್ನುತ್ತಾರೆ.

**ಪಾರಿಜಾತ :** ಪಾರಿಜಾತವು ಭಾರತೀಯರ ಪುರಾಣ ಇತಿಹಾಸಗಳಲ್ಲಿ ಉಲ್ಲೇಖಿಗೊಂಡಿರುವ ವೃಕ್ಷ. ಹಾಲ್ಗಡನ್ನು ಕಡೆದಾಗ ಮೇಲೆದ್ದು ಬಂದ ಹದಿನಾಲ್ಕು ರತ್ನಗಳಲ್ಲಿ ಇದು ಒಂದು. ಈ ವೃಕ್ಷದ ಅಂದ ಚೆಂದಕ್ಕೆ ಮಾರುಹೋದ ದೇವಾನುದೇವತೆಗಳು ಅವನ್ನು ಪಡೆಯಲು ನಡೆಸಿದ ಪ್ರಯತ್ನಗಳನ್ನು ಕುರಿತ ಕಥೆಗಳು ಕುತೂಹಲಕಾರಿಯಾಗಿವೆ. ಶಚಿದೇವಿಯು ಪಾರಿಜಾತ ವೃಕ್ಷವನ್ನು ತನ್ನ ಮನೆಯಂಗಳದಲ್ಲಿ ತಂದಿಡುವಂತೆ ಇಂದ್ರನಿಗೆ ಹೇಳುತ್ತಾಳೆ. ಅದರಂತೆ ಪತಿ-ಪತ್ನಿಯರ ಗಾಢ ಪ್ರೇಮಕ್ಕೆ ಸಾಕ್ಷಿಯಾಗಿ ಇಂದ್ರನ ನಂದನವನದಲ್ಲಿ ಪಾರಿಜಾತ ವೃಕ್ಷ ಬೆಳೆಯಲಾರಂಭಿಸಿತು. ಶಚಿದೇವಿಗೆ ಈ ವೃಕ್ಷವನ್ನು ಕಂಡಾಗಲೆಲ್ಲ ಪತಿಯ ಮೇಲೆ ಪ್ರೀತಿ ಉಂಟಾಗುತ್ತಿತ್ತು. ಮುಂಜಾನೆ ಎದ್ದು ಈ ವೃಕ್ಷವನ್ನು ನೋಡಿದಾಗ ಅದರ ಹೂವು, ಬಣ್ಣ ಉರುಳಿ ಬಿದ್ದಿರುವ ರೀತಿ ಇವುಗಳೆಲ್ಲವನ್ನು ತಮ್ಮ ದಾಂಪತ್ಯದ ಸುಖಕ್ಕೆ ಹೋಲಿಸಿಕೊಳ್ಳುತ್ತಾರೆ. ಆ ಹೂವಿನ ಅಂದ ಚಂದದ ಮುಂದೆ ಮತ್ತಾವ ವೃಕ್ಷವೂ ಬೇಡ ಎನ್ನುವಷ್ಟರ ಮಟ್ಟಿಗೆ ಆಕೆ ಆ ವೃಕ್ಷಕ್ಕೆ ಮನಸೋಲುತ್ತಾಳೆ.

ಸ್ವರ್ಗಲೋಕದ ಈ ವೃಕ್ಷ ಭೂಮಿಗೆ ಬಂದ ಪರಿಯೂ ಕೂಡ ಸ್ವಾರಸ್ಯಕರವಾಗಿದೆ. ದ್ವಾಪರ ಯುಗದಲ್ಲಿ ಶ್ರೀಕೃಷ್ಣನ ಪತ್ನಿ ಸತ್ಯಭಾಮೆಗೆ ಈ ವೃಕ್ಷವನ್ನು ಪಡೆಯುವ ಆಸೆಯಾಯಿತು. ಆಗ ಕೃಷ್ಣ ಇಂದ್ರನೊಂದಿಗೆ ಯುದ್ಧ ಹೂಡಿ ತಂದು ದ್ವಾರಕೆಯಲ್ಲಿ ನೆಡುತ್ತಾನೆ. ಆದರೆ ಅದು ಬಿಡುವ ಹೂವು ರುಕ್ಮಿಣಿಯ ಮನೆಗೆ ಬೀಳುವಂತಾಗುತ್ತದೆ ಎಲ್ಲಿ ಲಕ್ಷ್ಮೀ ವಾಸವಾಗಿರುತ್ತಾಳೆ ಅಲ್ಲಿ ಪಾರಿಜಾತ ವೃಕ್ಷವಿರುತ್ತದೆ ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಪುಷ್ಪಲೋಕದಲ್ಲಿ ಪಾರಿಜಾತಕ್ಕೆ ವಿಶೇಷ ಸ್ಥಾನವಿದೆ. ಇದನ್ನು ದೇವಾಲಯ, ಮನೆಯ ಅಕ್ಕ-ಪಕ್ಕದಲ್ಲಿ ಬೆಳೆಸುತ್ತಾರೆ. ಸಂಜೆಯೊಡನೆ ಅರಳಿ ಬೆಳಗಾಗುವುದರೊಳಗೆ ಹೂವು ಬಿಡುತ್ತವೆ. ಪಾರಿಜಾತ ಪೂಜೆಗೆ ಶ್ರೇಷ್ಠವಾದ ಹೂವು, ಸಾಯಂಕಾಲ ಅರಳುತ್ತಿರುವ ಮೊಗ್ಗುಗಳನ್ನು ಬಿಡಿಸಿ ಇಟ್ಟುಕೊಂಡರೆ ಅರ್ಚನೆಗೆ ಬಳಸಲು ಉತ್ಕೃಷ್ಟವಾದ ಹೂವು ಸಿಕ್ಕಂತಾಗುತ್ತದೆ. ಆಗ ತಾನೆ ಅರೆಬಿರಿದು, ಸುವಾಸನೆಯನ್ನು ಬೀರುತ್ತಿರುವ ಹೂವುಗಳನ್ನು ಗೋಧೂಳಿ ಸಮಯದಲ್ಲಿ ಲಕ್ಷ್ಮಿಗೆ ಅರ್ಪಿಸುವುದರಿಂದ ಸಕಲ ಭೋಗಭಾಗ್ಯಗಳು ದೊರಕುವುದೆಂಬ ನಂಬಿಕೆಯಿದೆ.

**ಅರ್ಕ (ಎಕ್ಕೆಯ ಗಿಡ) :** ವೇದಗಳ ಕಾಲದಿಂದಲೂ ಅರ್ಕವೇ ಸೂರ್ಯನೆಂಬ ಭಾವನೆ. ಆ ಕಾರಣಕ್ಕೆ

**ಅರ್ಕಃ ಪಲಾಶ ಖದಿರ**
**ಸ್ವಾಪಾ ಮಾಗೋsಥ ಪಿಪ್ಪಲಃ**
**ಔದುಂಬರಃ ಶಮೀ ದುರ್ವಾ**
**ಕುಶಶ್ಚ ಸಮಿಧಃ ಕ್ರಮಾತ್**

ನವಗ್ರಹ ಶಾಂತಿ ಕುರಿತು ಗರುಡ ಪುರಾಣದಲ್ಲಿಯ 101ನೇ ಅಧ್ಯಾಯದಲ್ಲಿ ನವಗ್ರಹಗಳಿಗೆ ಪ್ರಿಯವಾದಂತಹ ಸಸ್ಯಗಳ ಬಗ್ಗೆ ಹೇಳಿದ್ದಾರೆ. ಆಯಾ ಗ್ರಹ ಶಾಂತಿಗೆ ಆಯಾಯ ವೃಕ್ಷಗಳ ಸಮಿತ್ತನ್ನೇ ಬಳಸಬೇಕೆಂದು ಅಭಿಪ್ರಾಯಪಡುತ್ತಾರೆ. ಗರುಡ ಪುರಾಣದಲ್ಲಿ ಹೇಳಿರುವ ವೃಕ್ಷಗಳೆಲ್ಲವೂ ವೇದಕಾಲದಿಂದಲೂ ಪವಿತ್ರವೆಂದು ಬಾವಿಸಿದ್ದರ ಪರಿಣಾಮ ಯಜ್ಞಕಾರ್ಯಗಳಲ್ಲಿ ಬಳಸಲ್ಪಟ್ಟ ಭಾರತೀಯ ಸಸ್ಯಗಳಾಗಿವೆ.

ದಕ್ಷಿಣ ಭಾರತದ ಪವಿತ್ರ ಕ್ಷೇತ್ರವಾದ ತಿರುಪತಿಯ ಶ್ರೀನಿವಾಸನು ಗೋಪಾಲಕನ ಆಕಸ್ಮಿಕ ಪ್ರಹಾರದಿಂದ ಜರ್ಜರಿತಗೊಂಡು ಬಳಲುವಾಗ ಎಕ್ಕೆಯಗಿಡದ ಹತ್ತಿಯನ್ನು ಬಳಸಿ ಶುಶ್ರೂಷೆ ಮಾಡಿಕೊಂಡ ವಿಷಯ 'ವೆಂಕಟೇಶ ಮಹಾತ್ಮೆ' ಎಂಬ ಗ್ರಂಥದಲ್ಲಿ ಬರುತ್ತದೆ.

ಪಾರ್ವತಿಯು ಶಂಕರನೇ ತನಗೆ ಪತಿಯಾಗಿ ಬರಬೇಕೆಂದು ಹನ್ನೆರಡು ವರುಷ ಬಹು ಕಠಿಣ ತಪಸ್ಸು ಮಾಡಿ ತನ್ನ ಬಯಕೆಯನ್ನು ಈಡೇರಿಸಿಕೊಂಡ ಬಳಿಕ ಎಕ್ಕೆಯ ಎಲೆಯನ್ನು ವಾಸನೆ ನೋಡಿ ಈ ವ್ರತವನ್ನು ಪೂರ್ಣಗೊಳಿಸಿದಳಂತೆ. ಆ ಕಾರಣಕ್ಕೆ ಅವಿವಾಹಿತ ಹೆಣ್ಣು ಮಕ್ಕಳ 'ಹರತಾಲಿಕಾ ಪೂಜಾ' ಎಂಬ ಹೆಸರಿನಿಂದ ಪಾರ್ವತಿ ಪೂಜೆಯನ್ನು ಮಾಡಿ ಯೋಗ್ಯವರನನ್ನು ಕರುಣಿಸು ಎಂದು ಪ್ರಾರ್ಥಿಸಿಕೊಳ್ಳುತ್ತಾರೆ.

ಪುರುಷರು ತಮ್ಮ ಮೊದಲ ಹಾಗೂ ಎರಡನೆಯ ಮದುವೆಯ ಅನಂತರ ಹೆಂಡತಿ ಮರಣಿಸಿದಾಗ ಮೂರನೇ ವಿವಾಹವನ್ನು ಅರ್ಕ ವೃಕ್ಷದೊಂದಿಗೆ ಆಚರಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ಕುಜದೋಷವಿದ್ದವರು ಈ ವೃಕ್ಷದೊಂದಿಗೆ ವಿಧಿ ಪೂರಕವಾದ ಮದುವೆ ಮಾಡಿ ಅನಂತರ ಸಾಮಾನ್ಯ ಜೀವನದ ಮದುವೆ ಮಾಡುವ ಪದ್ಧತಿಯಿದೆ ಎಂದು ಹೇಳಲಾಗಿದೆ. ಜನಪದರು ತಮ್ಮ ಹೊಲಗಳಲ್ಲಿ ಇಲ್ಲವೇ ತೋಟಗಳಲ್ಲಿ ಹುಟ್ಟಿರುವಂತಹ ಎಕ್ಕೆಯ ಗಿಡವನ್ನು ಭೂಲಕ್ಷ್ಮೀ ಎಂದು ಪೂಜಿಸುತ್ತಾರೆ. ಅರ್ಕದ ಬೇರಿನಿಂದ ಗಣೇಶನ ವಿಗ್ರಹಗಳನ್ನು ತಯಾರಿಸುತ್ತಾರೆ. ಇಂಥ ಗಣಪನಿಗೆ ವಿಶೇಷ ಬೇಡಿಕೆ. ಪ್ರತಿ ಶನಿವಾರ ಆಂಜನೇಯನಿಗೆ ಅರ್ಕ ಎಲೆಯ ಮಾಲೆಯನ್ನು ಧರಿಸುತ್ತಾರೆ. ಈ ವೃಕ್ಷವು ಸೂರ್ಯನ ಪ್ರತಿನಿಧಿ ಎಂಬ ನಂಬಿಕೆಯುಂಟು. ಫಾಲ್ಗುಣ ಸಪ್ತಮಿಯ ದಿನ ಅರ್ಕಪುಟ ಸಪ್ತಮಿ ಎಂಬ ವ್ರತ ಆಚರಿಸುವ ರೂಢಿಯಿದೆ. ಅಂದು ತುಳಸಿ ಪತ್ರದಷ್ಟು ಅರ್ಕ ಪತ್ರವನ್ನು ಪ್ರಾಶನ ಮಾಡುತ್ತಾರೆ. ಹಾಗೆಯೇ ಎಲೆಯ ದೊನ್ನೆಯಿಂದ ನೀರನ್ನು ಕುಡಿಯುವುದರಿಂದ ಸಕಲ ರೋಗಗಳು ಗುಣಹೊಂದುವುವು ಎಂಬ ನಂಬಿಕೆಯಿದೆ. ರಥಸಪ್ತಮಿಯ ದಿನ ಹಲಗೆಯ ಮೇಲೆ ಸೂರ್ಯನ ರಥವನ್ನು ಬಿಡಿಸಿ ಪೂಜೆ ಮಾಡುತ್ತಾರೆ. ಅಂದು ಎಕ್ಕೆಯ ಹೂವು ಬಹು ಶ್ರೇಷ್ಠವಾದುದೆಂದು ಪೂಜೆಗೆ ಬಳಸುತ್ತಾರೆ. ಹಾಗೆಯೇ ಸ್ನಾನ ಮಾಡುವಾಗ ಅಂಗಾಂಗಗಳ ಮೇಲೆ ಎಕ್ಕೆಯ ಪತ್ರಗಳನ್ನಿಟ್ಟುಕೊಂಡು ಸ್ನಾನ ಮಾಡುವ ಪದ್ಧತಿಯಿದೆ.

ಕಾಲಿಗೆ ಮುಳ್ಳು ಮುರಿದು ತೊಂದರೆ ಉಂಟಾದಾಗ ಆ ಮುಳ್ಳನ್ನು ಹೊರತೆಗೆಯಲು ಎಕ್ಕೆಯ ಹಾಲನ್ನು ಭಾಗಕ್ಕೆ ಸವರುವುದು ಜನಪದ ವೈದ್ಯವಾಗಿದೆ. ಬಿಳಿ ಹೂವಿನ ಎಕ್ಕವು ಪೂಜೆಗೆ ಶ್ರೇಷ್ಠ. ಗಣೇಶನನ್ನು ಚೌತಿಯ ದಿನ ಬಿಳಿ ಎಕ್ಕದ ಹೂವಿನಿಂದ ಅಲಂಕರಿಸುತ್ತಾರೆ. ಹಣ್ಣು - ತರಕಾರಿ, ಹೂವು ಮಾರಾಟ ಮಾಡುವವರು ಎಕ್ಕೆಯ ಹೂವನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ. ಇದರಿಂದ ಬಹುಬೇಗ ವ್ಯಾಪಾರ ಮುಗಿಯುತ್ತದೆಂಬ ನಂಬಿಕೆ ಅವರದು. ಮಾಟ ಮಂತ್ರಗಳನ್ನು ಮಾಡಿದವರು ಅದನ್ನು ಎಕ್ಕದ ಗಿಡದ ಕೆಳಗೆ ಇಡುತ್ತಾರೆ.

**ಅಡಕೆ ಮರ :** ವೀಳ್ಯದೆಲೆಯಷ್ಟೇ ಸಮಾನವಾದ ಸ್ಥಾನವನ್ನು ಅಡಕೆ ಪಡೆದಿದೆ. ವೀಳ್ಯ ಮತ್ತು ಅಡಕೆ, ಸುಣ್ಣದ ಸಮಾಗಮದಿಂದ ಹೊಸದೊಂದು ಬಣ್ಣವೇ ನಿರ್ಮಾಣವಾಗುತ್ತದೆ. ಈ ಮೂರರೊಂದಿಗೆ ಲವಂಗ, ಯಾಲಕ್ಕಿ, ಪತ್ರೆ, ಜಾಯಿಕಾಯಿ, ಕೊಬ್ಬರಿ, ಕೇಸರಿ, ಪಚ್ಚಕರ್ಪೂರ, ಧನಿಯ, ಸೊಂಪುಕಾಳು, ಮೆಣಸು, ಕರಬೂಜ ಬೀಜಗಳನ್ನು ಕೂಡಿಸಿ ಷೋಡಶೋಪಚಾರ ವೀಳ್ಯ ಎಂದು ಕರೆಯುವರು.

ಈ ಮರವು ವಿಶಿಷ್ಟವಾದಂತಹ ನೈಸರ್ಗಿಕ ಸೌಂದರ್ಯದಿಂದ ಕೂಡಿದುದಾಗಿದೆ. ಹೆಚ್ಚಿನ ಮಳೆಯ ಅಗತ್ಯತೆಯನ್ನು ಹೊಂದಿರುವ ಈ ವೃಕ್ಷ ಗಗನ ಚುಂಬಿಯಂತೆ ಊರ್ಧ್ವಮುಖಿಯಾಗಿ ಬೆಳೆದು ನಿಲ್ಲುತ್ತದೆ. ಹಸುರಿನ ಮಧ್ಯೆ ಬಂಗಾರದ ಸರಗಳಂತೆ ಹೊಳೆಯುವ ಹೂವುಗಳು ಕಣ್ಮನ ಸೆಳೆಯುತ್ತಿದೆ. ಕರ್ನಾಟಕದಲ್ಲಿ ಕಾರವಾರ, ಮಂಗಳೂರು, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ತುಮಕೂರು, ಮೈಸೂರು ಜಿಲ್ಲೆಗಳು ಈ ವೃಕ್ಷಕ್ಕೆ ಹೆಸರುವಾಸಿ. ಅಡಕೆ ಬೆಳೆಯಲ್ಲಿ ಹವ್ಯ ಮಹಿಳೆಯರ ಶ್ರಮ ವಿಶೇಷವಾದಂತಹುದು. ಮಂದಿರದ ಮರಕ್ಕೆ ತೂಗಿಕೊಂಡು ಮಂಗನಂತೆ ಬೇರೊಂದು ಗಿಡವನ್ನು ಅಂಟಿಕೊಂಡು ಬಹು ಚಾಕಚಕ್ಯತೆಯಿಂದ ಅಡಕೆಯ ಫಲವನ್ನು ಬಿಡಿಸುತ್ತಾರೆ. ಈ ವೃಕ್ಷ ಬಹು ಗಟ್ಟಿಮುಟ್ಟಾಗಿರುತ್ತದೆ. ಗುಡಿಸಲು ನಿರ್ಮಾಣಕ್ಕೆ ಈ ಮರವನ್ನು ಬಳಸುತ್ತಾರೆ. ಅಡಕೆಯ ಹಾಳೆಗಳನ್ನು ಪದಾರ್ಥಗಳನ್ನು ಸಾಗಿಸಲು ಹೊದಿಕೆಯಂತೆ ಬಳಸುತ್ತಾರೆ. ಊಟಕ್ಕೆ ಬಳಸುತ್ತಾರೆ. ಬರೀ ಅಡಕೆಗಷ್ಟೇ ಅಲ್ಲ ಇಡೀ ಮರದ ಭಾಗಗಳು ಉಪಯುಕ್ತವಾಗಿರುವುದರಿಂದ ಈ ಮರವನ್ನು ಗೃಹಾಶ್ರಮ, ಗೋಪದಲ ಹಾಗೂ ತಂತುಸಾರ, ಪೂಗೀಫಲ ಎಂಬೆಲ್ಲ ರೀತಿಯಿಂದಲೂ ಕರೆದು ಗೌರವಿಸಿದ್ದಾರೆ.

ಭಾರತೀಯರಲ್ಲಿ ಅಡಕೆ ಹಾಗೂ ವೀಳ್ಯವಿಲ್ಲದೆ ಯಾವುದೆ ದೈವಿಕ ಹಾಗೂ ಶುಭಾಸುಭ ಸಮಾರಂಭಗಳು ನಡೆಯುವುದಿಲ್ಲ. ತಾವು ಪ್ರಾರಂಭಿಸಿದ ಕಾರ್ಯವು ನಿರ್ವಿಘ್ನವಾಗಿ ನೆರವೇರಲೆಂದು ಬೇಡಿ ಅಡಕೆಯನ್ನಿಟ್ಟು ಅದರಲ್ಲಿ ವಿನಾಯಕನನ್ನು ಆಹ್ವಾನಿಸಿ ಮೊದಲ ಪೂಜೆಯನ್ನು ಮಾಡುವ ರೂಢಿಯಿದೆ. ಎಲೆ, ಅಡಕೆ ಮಂಗಳಕಾರಕ ಪ್ರತೀಕ ಎಂಬುದು ಜನಪದರ ನಂಬಿಕೆ.

ಅಸ್ಸಾಂನಲ್ಲಿ ಈ ಅಡಕೆಯನ್ನು ಗುವಾ ಎಂದು ಕರೆಯುತ್ತಾರೆ. ಗೌಹಾತಿ ಕಾಮ ರೂಪದ ರಾಜಧಾನಿ. ಇದಕ್ಕೆ ಈ ಹೆಸರು ಬರಲು ಮುಖ್ಯ ಕಾರಣ ಇಲ್ಲಿ ಅಡಕೆಯ ವಹಿವಾಟು ನಡೆಯುವ ಬಹುದೊಡ್ಡ ವ್ಯಾಪಾರ ಕೇಂದ್ರವಾಗಿರುವುದು. ಗುವಾಹತಿ ಎಂದರೆ ಅಡಕೆಯ ಬಜಾರ ಎಂದರ್ಥ. ಮುಂದೆ ಅದು ಗೌಹಾತಿ ಆಗಿದೆ.

ವಿವಾಹದ ಶುಭ ಸಂದರ್ಭಗಳಲ್ಲಿ ತಮ್ಮ ಕುಲದೇವರಿಗೆ ವೀಳ್ಯದೆಲೆ, ಅಡಕೆಗಳನ್ನಿಟ್ಟು ಆಮಂತ್ರವನ್ನೀಯುವರು. ತರುವಾಯ ಪುರೋಹಿತರು, ವಾಲಗದವರು, ಅಗಸರು ಇತರೆ ವರ್ಗದವರು ವಿವಾಹದ ಸಂದರ್ಭದಲ್ಲಿ ತಮ್ಮದೇ ಆದ ಸೇವೆಯನ್ನು ನೀಡಿರುತ್ತಾರೆ. ಅವರಿಗೆಲ್ಲ ವೀಳ್ಯದೆಲೆ ಅಡಕೆಯ ಜೊತೆಗೆ ಸಂಭಾವನೆಯನ್ನು ಕೊಡುತ್ತಾರೆ. ವಿವಾಹದ ಸಮಯದಲ್ಲಿ ವಧುವನ್ನು ಧಾರೆಯೆರೆಯುವಾಗ ಆಕೆಯ ತಂದೆ ಸಾಲಂಕೃತವಾಗಿ ಕನ್ನೆಯನ್ನು ಧಾರೆಯೆರೆದು ಕೊಡುವೆ ಎಂದು ಸಂಕಲ್ಪ ಮಾಡುವಾಗ ಅಡಕೆಯ ಬೆಟ್ಟವನ್ನು ಸಹ ಅದರಲ್ಲಿ ಇಟ್ಟಿರುತ್ತಾರೆ. ನವ ವಧುವರರ ದೃಷ್ಟಿ ನಿವಾರಕವಾಗಿ ಅಡಕೆಯನ್ನು ಮೂರು ಸಲ ನೀವಳಿಸುತ್ತಾರೆ. ವಧುವರರು ಹಿರಿಯರಿಗೆ ವೀಳ್ಯದೆಲೆ ಅಡಕೆ ಕೊಟ್ಟು ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ.

ಬದುಕಿನಲ್ಲಿ ಏನಾದರೂ ಏರು-ಪೇರುಗಳಾದರೆ ಭಯದಿಂದ ಮುಂದೆ ಏನಾಗಬಹುದೋ ಎಂಬ ಭಾವನೆಯಿಂದ ತಮ್ಮ ದಿಂಬಿನ ಕೆಳಗೆ ಅಡಕೆಯನ್ನಿಟ್ಟುಕೊಂಡು ಮಲಗುತ್ತಾರೆ. ಇದರಿಂದ ಮುಂದೆ ಆಗಬಹುದಾದ ಘಟನೆಗಳ ಸೂಚನೆಗಳು ಕನಸುಗಳಾಗಿ ಬೀಳುತ್ತವೆ ಎಂದು ನಂಬುವರು.

ಮಳೆಯಿಂದಾಗುವ ಅತಿವೃಷ್ಟಿ, ಅನಾವೃಷ್ಟಿಗೆ ಬರಗಾಲದಲ್ಲಿ ಅಡಕೆಯನ್ನು ಭೂಮಿಯಲ್ಲಿ ನೆಡುತ್ತಾರೆ. ಇದರಿಂದ ಪ್ರಕೃತಿಯು ಒಲಿಯುತ್ತದೆ ಎಂಬ ನಂಬಿಕೆ. ಮಾಂತ್ರಿಕರು, ವಶೀಕರಣ ಸಂದರ್ಭದಲ್ಲಿ ಅಡಕೆಯನ್ನು ಬಳಸುತ್ತಾರೆ. ಕಾರಣ ಮಂತ್ರಧಾರಣ ಮಾಡುವ ಶಕ್ತಿ ಈ ಫಲಕ್ಕಿದೆ ಎಂಬ ಪ್ರತೀತಿ ಇದೆ. ಅಡಕೆಯು ಹಲವು ವಿಧದಲ್ಲಿ ಉಪಯೋಗಕ್ಕೆ ಬಂದು ದೈವದ ಪ್ರತೀಕವಾಗಿದೆ. ವ್ರತಾಚರಣೆ ಮಾಡುವಾಗ ಆಕಸ್ಮಿಕವಾಗಿ ಪತ್ನಿ ತೀರಿಕೊಂಡಾಗ ಪತಿಯಾದವನು ಅಡಕೆಯನ್ನೇ ಪತ್ನಿಯ ರೂಪದಲ್ಲಿ ಆಮಂತ್ರಿಸಿ ಅದನ್ನು ಸೊರಟಿದ್ದು ಇಟ್ಟುಕೊಂಡು ವ್ರತವನ್ನು ಪೂರ್ತಿಗೊಳಿಸುವನು.

ಜಯತೀರ್ಥರೆಂಬ ಯತಿಗಳು ತಮ್ಮ ಗ್ರಂಥವನ್ನು ಆರಂಭಿಸುವಾಗ ದುರ್ಗೆಯನ್ನು ಕುರಿತು ತಪಸ್ಸು ಮಾಡಿದಾಗ ದೇವಿ ಕನಸಿನಲ್ಲಿ ಅಡಕೆಯನ್ನು ಕೊಟ್ಟಳೆಂದೂ ಅದರಿಂದಲೇ ಜಯತೀರ್ಥರು ಮಹಾಗ್ರಂಥಗಳನ್ನು ರಚಿಸಿದರೆಂದೂ ಇತಿಹಾಸದಿಂದ ತಿಳಿದು ಬರುತ್ತದೆ. ಭಾರತೀಯರಲ್ಲಿ ಮಾತ್ರ ಅಡಕೆ ವೀಳ್ಯದ ಮಹತ್ತ್ವ ಎಂದಷ್ಟೇ ಭಾವಿಸಲಾಗದು. ಇಂಡೋಚೀನ, ಮಲಯ, ನಿಕೋಬಾರ ಮೊದಲಾದ ದ್ವೀಪಗಳಲ್ಲೂ ಇದರ ಪ್ರಾಮುಖ್ಯತೆಯನ್ನು ಕಾಣಬಹುದು. ವೀಳ್ಯದೆಲೆ, ಅಡಕೆಯ ಬಗ್ಗೆ ಇಂಡೋ ಚೀನದಲ್ಲಿ ಜಾನಪದ ಕಥೆಗಳಿವೆ. ವೀಳ್ಯದೆಲೆ ಹಾಗೂ ಅಡಕೆ ದಂಪತಿಗಳ ಪ್ರೇಮದ ಸಂಕೇತ ಎಂದು ವರ್ಣಿಸಲಾಗಿದೆ. "ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು" ಎಂಬ ಗಾದೆಯು ಅಡಕೆಯ ಮಹತ್ತ್ವವನ್ನು ಸಾರುತ್ತದೆ. ಎಲೆ ಅಡಕೆಯನ್ನು ಸೇವಿಸುವುದರಿಂದ ಕಫ ನಿವಾರಣೆಯಾಗುವುದು. ರಕ್ತ ವೃದ್ಧಿಸುವುದು ಪಚನಶಕ್ತಿಯು ಉತ್ತಮಗೊಳ್ಳುವುದು ಮುಖದಲ್ಲಿ ನವಕಾಂತಿ ಮೂಡುವುದು.

**ವೀಳ್ಯದೆಲೆ (ನಾಗವಲ್ಲಿ) :** ಭೂಮಿಯಲ್ಲಿ ಹುಟ್ಟಿದ ಪ್ರತಿ ಸಸ್ಯ ಹೂವು, ಕಾಯಿ, ಹಣ್ಣುಗಳನ್ನು ಬಿಟ್ಟರೆ, ಈ ವೀಳ್ಯದೆಲೆಯು ಯಾವುದೇ ಹಂತಗಳನ್ನು ದಾಟದೆ ಪ್ರತಿ ಎಲೆಯೂ ಬಿಟ್ಟಾಗಲೂ ಹೊಸದೊಂದು

ಆಕರ್ಷಕ ಗುಣವನ್ನು ಹೊಂದಿ ನಳನಳಿಸತೊಡಗುತ್ತದೆ. ಸಸ್ಯಕೋಟಿಯಲ್ಲಿ ಈ ಎಲೆಗೆ ಇರುವ ಪ್ರಾಧಾನ್ಯ ಮತ್ತಾವ ಎಲೆಗೂ ಪ್ರಾಪ್ತವಾದಂತಿಲ್ಲ. ಹಾಗಾಗಿಯೇ ಇದನ್ನು 'ಎಲೆಗಳ ರಾಜ' ಎಂದು ಕರೆಯುವರು. ಆಶ್ರಯಕೊಟ್ಟ ಮರವನ್ನು ಹಬ್ಬಿ ಬೆಳೆಯುವ ಗುಣವನ್ನು ಹೊಂದಿದೆ. ರೈತರ ಪಾಲಿಗೆ ವೀಳ್ಯದೆಲೆ ಬಂಗಾರದ ಗಣಿ ಇದ್ದಂತೆ. ಶ್ರೀಲಕ್ಷ್ಮಿಗೆ ಸಮಾನವಾದುದೆಂಬ ಭಾವನೆ ಭಾರತೀಯರಲ್ಲಿದೆ. ಮೈಲಿಗೆ, ಮುಟ್ಟಾದವರ ನೆರಳು ಈ ಬಳ್ಳಿಯ ಮೇಲೆ ಬೀಳಬಾರದೆಂಬ ನಂಬಿಕೆ. ಬಹು ಸೂಕ್ಷ್ಮ ಗುಣವನ್ನು ಹೊಂದಿರುವ ಕಾರಣ ವಿಶೇಷವಾದ ಆರೈಕೆಯಿಂದ ಇದನ್ನು ಬೇಸಾಯ ಮಾಡುತ್ತಾರೆ. ಆರ್ಥಿಕ ರಂಗದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಭಾರತೀಯರು ತಮ್ಮ ವಿವಾಹ ಇತರೆ ಶುಭ ಸಮಾರಂಭಗಳಲ್ಲಿ, ಪೂಜಾ ಕೈಂಕರ್ಯಗಳಲ್ಲಿ ಸುಮಂಗಲಿಯರಿಗೆ ಹೂವು ವೀಳ್ಯ ನೀಡುವುದು ಸತ್ಸಂಪ್ರದಾಯಿಕವಾಗಿ ಬಳಕೆಗೆ ಬಂದಿದೆ. ಪೂಜೆಗೊಂಡ ವೀಳ್ಯ ಆಹಾರವಾಗಿ ಬಳಕೆಗೊಳ್ಳುತ್ತದೆ. ವೀಳ್ಯದೆಲೆ, ಅಡಕೆ, ಸುಣ್ಣ, ಕಾಚು, ಏಲಕ್ಕಿಗಳೊಂದಿಗೆ ಸೇವಿಸುತ್ತಾರೆ. ಇದು ಕಾಮೋದ್ದೀಪನ ಶಕ್ತಿಯನ್ನು ಹೊಂದಿದ್ದು, ಸೌಂದರ್ಯ ಮತ್ತು ಪ್ರೇಮಭಾವವನ್ನು ಹೆಚ್ಚಿಸುತ್ತದೆ. ಮುಖದ ಅಂದವನ್ನು ಇಮ್ಮಡಿಗೊಳಿಸಿ ಶರೀರದ ತೇಜಸ್ಸನ್ನು ಹೆಚ್ಚಿಸುತ್ತದೆ. ಕಫವನ್ನು ಹೋಗಲಾಡಿಸುವ ಶಕ್ತಿಯನ್ನು ಹೊಂದಿದೆ. ವೀಳ್ಯದೆಲೆಯು ಮಾನವರಿಗೆ ಪರಿಚಿತವಾದ ಬಗ್ಗೆ ಸಾಕಷ್ಟು ಕಥೆ, ಪುರಾಣಗಳಿವೆ. ಪಾಂಡವರು ದ್ವಾಪರಯುಗದಲ್ಲಿ ಅಶ್ವಮೇಧಯಾಗವನ್ನು ಮಾಡುವಾಗ ರಾಜ ಪುರೋಹಿತನ ಆಣತಿಯಂತೆ, ವೀಳ್ಯದೆಲೆಯನ್ನು ಅರ್ಜುನನೇ ನಾಗಲೋಕಕ್ಕೆ ಹೋಗಿ ನಾಗವಲ್ಲಿಯನ್ನು ತಂದನೆಂದು ಆ ಕಾರಣಕ್ಕೆ ಇದನ್ನು ನಾಗವಲ್ಲಿ ಇಲ್ಲವೆ ನಾಗರಬಳ್ಳಿ ಎಂದು ಕರೆಯುವುದುಂಟು.

ಸುಮಾರು ಎರಡು ಸಾವಿರ ವರ್ಷಗಳಿಂದ ಈ ಬಳ್ಳಿಯು ಭಾರತೀಯರ ಜೀವನದಲ್ಲಿ ವಿಶಿಷ್ಟವಾದ ಪಾತ್ರವನ್ನು ಉಳಿಸಿಕೊಂಡಿದೆ. ಸ್ಕಂದ ಪುರಾಣದಲ್ಲಿ ದೇವದಾನವರು ಸಮುದ್ರ ಮಂಥನವನ್ನು ಮಾಡಿ ಅಮೃತ ಪಡೆದಾಗ ಅದನ್ನು ಹಂಚಲು ವಿಷ್ಣುವು ಮೋಹಿನಿಯ ರೂಪವನ್ನು ಧರಿಸಿ ಹೆಚ್ಚಿನದೆಲ್ಲ ದೇವತೆಗಳಿಗೆ ನೀಡುವ ಆ ಸಂದರ್ಭದಲ್ಲಿ ಕೆಲವು ಹನಿಗಳು ಭೂಮಿಯಲ್ಲಿ ಉದುರಿದವು. ಆ ಹನಿಗಳೇ ಎಲೆ ಬಳ್ಳಿಗಳಾದವು. ಇದನ್ನು ಸೇವಿಸಿದ ದೇವಗಣರೆಲ್ಲ ಪರೀಕ್ಷಿಸಲಾಗಿ ಈ ಎಲೆಯಲ್ಲಿ ಮಾದಕ ಶಕ್ತಿಯಿದೆ ಎಂದು ವರದಿ ಮಾಡಿದರಂತೆ. ಮುಂದೆ ವಿಷ್ಣು ಎಲ್ಲರಿಗೂ ಈ ಬಳ್ಳಿಯನ್ನು ಹಂಚಿದನೆಂದು ಪ್ರತೀತಿ.

ಪ್ರಾಚೀನ ಕಾಲದಲ್ಲಿ ದೇವಾಲಯ, ರಾಜಗೃಹಗಳು ವೀಳ್ಯದೆಲೆಗೆ ಮೀಸಲಾದ ತೋಟಗಳನ್ನು ಕಾಯ್ದಿರಿಸುತ್ತಿದ್ದರು. ಶ್ರಾವಣಮಾಸದ ಮೊದಲ ಭಾನುವಾರ ವೀಳ್ಯದೆಲೆಯ ಮೇಲೆ ಸೂರ್ಯನ ಚಿತ್ರವನ್ನು ಪೂಜೆ ಮಾಡುವುದರಿಂದ ಸಕಲಾಭೀಷ್ಟಗಳು ದೊರೆಯುವುದೆಂಬ ನಂಬಿಕೆಯಿದೆ. ಮಕರ ಸಂಕ್ರಾಂತಿಯ ದಿನ ಮೂವತ್ತೆರಡು ಎಲೆಯ ತಾಂಬೂಲವನ್ನು ದಾನಮಾಡುವ ಸಂಪ್ರದಾಯವಿದೆ. ಮಗು ಹುಟ್ಟಿ ಎರಡು ಇಲ್ಲವೇ ಮೂರು ತಿಂಗಳ ಅನಂತರ ವೀಳ್ಯದೆಲೆಯನ್ನು ಗುತ್ತಿಯಂತೆ ಮಾಡಿ ಕೊಡುತ್ತಾರೆ. ವೀಳ್ಯದೆಲೆಯಿಲ್ಲದೆ ಯಾವ ಮಂಗಲ ಕಾರ್ಯವೂ ಜರುಗುವುದೇ ಇಲ್ಲ. ಆದರೂ ಬ್ರಹ್ಮಚಾರಿಗಳಿಗೆ, ಯತಿಗಳಿಗೆ, ವಿಧವೆಯರಿಗೆ, ವಿದ್ಯಾರ್ಥಿಗಳಿಗೆ ತಾಂಬೂಲವನ್ನು ನೀಡಬಾರದೆಂದು ನಿಷೇಧವಿದೆ. ರಾಜಾಧಿರಾಜರು, ರಾಜಗುರುಗಳು, ಸನ್ಮಾನಿತ ವ್ಯಕ್ತಿಗಳನ್ನು ಗೌರವಿಸುವಾಗ ಫಲತಾಂಬೂಲ ನೀಡುವ ಪರಿಪಾಠ ಭಾರತೀಯರಲ್ಲಿ ವಿಶಿಷ್ಟ ಸಂಪ್ರದಾಯವಾಗಿ ಅಂದಿನಿಂದ ಇಂದಿನವರೆಗೂ ನಡೆದು ಬಂದಿದೆ.

ಕಬೀರ ಪಂಥದವರ ದೀಕ್ಷಾವಿಧಿಯ ವೇಳೆಯಲ್ಲಿ ಮಹಂತರ ಪಾದಗಳನ್ನು ತೊಳೆದು ವೀಳ್ಯವನ್ನು ಪಡೆಯುವಂತಹ ಸಂಪ್ರದಾಯವಿದೆ. ಆ ಸಂದರ್ಭದಲ್ಲಿ ವೀಳ್ಯದೆಲೆಯ ಮೇಲೆ ದೇವರ ಹೆಸರು ಬರೆದು ಪೂಜಿಸುವರು. ಆ ಪೂಜೆಗೆ "ಪರ್ಣಾವ" ಪೂಜೆಯೆಂದು ಕರೆಯುವರು. ವೀಳ್ಯದೆಲೆ ಕಬೀರನ ದೇಹದಿಂದ ಹುಟ್ಟಿದುದು ಎಂಬ ಭಾವನೆ ಈ ಪಂಥದವರಲ್ಲಿ ಇದೆ. ಸತ್ತ ವ್ಯಕ್ತಿಗೆ ತೀರ್ಥ ಹಾಗೂ ವೀಳ್ಯದೆಲೆಯನ್ನು ಬಾಯಿಗಿಡುವ ಸಂಪ್ರದಾಯವಿದೆ. ಹಾಗೆಯೇ ಮರಣಿಸಿದ ವ್ಯಕ್ತಿಯ ಸಮಾಧಿಯ ಸುತ್ತ ವೀಳ್ಯದೆಲೆಯನ್ನು ಇಡುವ ಸಂಪ್ರದಾಯವು ಇದೆ. ಯಾವುದೇ ಶುಭ ಅಶುಭ ಸಂದರ್ಭವಿರಲಿ ಊಟದ ಅನಂತರ ತಾಂಬೂಲವನ್ನು ನೀಡುವ ಸಂಪ್ರದಾಯ ಹಿಂದೂ ಸಂಸ್ಕೃತಿಯಲ್ಲಿ ತಲತಲಾಂತರದಿಂದ ನಡೆದುಕೊಂಡು ಬಂದಿದೆ. ಬಹು ಆತ್ಮೀಯರಾದವರು ಇಲ್ಲವೇ ಪತಿ ಪತ್ನಿಯರು ಒಬ್ಬರ ಮುಖದ ತಾಂಬೂಲವನ್ನು ಮತ್ತೊಬ್ಬರು ಸ್ವೀಕರಿಸುವ ಅಭ್ಯಾಸವಿದೆ. ಇದು ಕೆಲವು ಕಡೆ ಗುರು-ಶಿಷ್ಯರ ಸಂಬಂಧವನ್ನು ಸೂಚಿಸುತ್ತದೆ. ಚಕ್ರಧರನೆಂಬ ಗುರುವು ತನ್ನ ಶಿಷ್ಯರಿಗೆ ಇಂಥದೇ ಪ್ರಸಾದವನ್ನು ನೀಡಿದನೆಂದು ಹೇಳಲಾಗಿದೆ.

ಆರ್ಯರು ಭಾರತಕ್ಕೆ ಬರುವ ಮುನ್ನ ಈ ಬಳ್ಳಿಯ ಪರಿಚಯವಿರಲಿಲ್ಲ. ಮೂಲನಿವಾಸಿಗಳಿಂದ ನಾಗ ಜನರಿಂದ ಇದರ ಮಹತ್ವವನ್ನು ತಿಳಿದುಕೊಂಡರು. ಇದರ ಜ್ಞಾಪಕಾರ್ಥವಾಗಿ ಪಾತಾಳದ ನಾಗರಾಜನು ಭೂಲೋಕದ ಉದಯನ ಎಂಬುವವನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು, ಆ ಸಮಯದಲ್ಲಿ ವರದಕ್ಷಿಣೆಯ ರೂಪದೇ ಸವತ್ಸ ಕಾಮಧೇನು, ನಾಗವಲ್ಲಿ, ಶಯ್ಯಾ, ರತ್ನಮದೀಪಗಳನ್ನು ಕೊಟ್ಟನೆಂದು ಹೇಳಲಾಗಿದೆ. ಇದು ಮುಂದೆ ಆರ್ಯ ಮತ್ತು ದ್ರಾವಿಡ ಬಾಂಧವ್ಯಕ್ಕೆ ಸಾಕ್ಷಿಯಾಯಿತು.

**ತುಳಸಿ :** ಭಾರತೀಯರಿಗೆ ತುಳಸಿ ಪವಿತ್ರವಾದುದು. ಇದನ್ನು ಪ್ರತಿ ಹಿಂದೂ ನಾಗರೀಕರು ತಮ್ಮ ಮನೆಯಂಗಳದಲ್ಲಿ ಬೆಳಸುತ್ತಾರೆ. ತುಳಸಿಗೆ ಇರುವ ಮಾನ್ಯತೆ, ಪವಿತ್ರತೆ ಮತ್ತೊಂದು ಗಿಡಕ್ಕೆ ಇದ್ದಂತಿಲ್ಲ. ಅದು ಸರ್ವ ಶುಭ ಕಾರ್ಯಗಳಿಗೆ ಬೇಕಾದದ್ದು. ಇದಕ್ಕೆ ಹರಿಪ್ರಿಯ, ಭೂತಾಘ್ನಿ ಎಂಬ ಹೆಸರುಗಳಿವೆ. ತುಳಸಿ ಇರುವ ಕಡೆ ಭೂತ ಪ್ರೇತಾದಿ ದುಷ್ಟ ಶಕ್ತಿಗಳು ಸುಳಿಯುವುದಿಲ್ಲ ಎಂಬ ನಂಬಿಕೆಯಿದೆ.

ಲೇಬಿಯೇಸಿ ಕುಟುಂಬಕ್ಕೆ ಸೇರಿದ ತುಳಸಿಗೆ ಅನೇಕ ಗುಣಗಳಿವೆ. ಎಲೆಗಳಿಗೆ ಹಸಿವು ವೃದ್ಧಿಮಾಡುವ, ಕಫ ಕತ್ತರಿಸುವ, ಸುವಾಸನೆ ಕೊಡುವ, ಉದ್ದೀಪರ, ಶೀತಹರ ಇತರೆ ಗುಣಗಳಿವೆ. ಇದನ್ನು ಪೂಜಾರ್ಹವಾಗಿ, ಅಲಂಕಾರಕ್ಕಾಗಿ, ಸುವಾಸನೆಗಾಗಿಯೂ ಬೆಳೆಸುತ್ತಾರೆ. ಮುಂಜಾನೆ ಸ್ನಾನಾದಿಗಳನ್ನು ಮುಗಿಸಿ ಪ್ರತಿ ಮನೆಯ ಗೃಹಿಣಿ ತುಳಸಿಗೆ ಪೂಜಿಸುತ್ತಾರೆ. ಪುರಾಣಗಳಲ್ಲಿ ವಿವಿಧ ಸುಗಂಧ ಪುಷ್ಪಗಳಿಂದ ಶ್ರೀ ಹರಿಯನ್ನು ಪೂಜಿಸಿದರೂ ಶ್ರೀಹರಿಯು ಅವೆಲ್ಲವನ್ನು ಬಿಟ್ಟು, ತುಳಸಿಯನ್ನು ವಿಶೇಷ ಮಮತೆಯಿಂದ ಸ್ವೀಕರಿಸುವನೆಂದು ನಂಬಿಕೆ. ಆದ್ದರಿಂದಲೇ ಪುರಂದರದಾಸರು ತುಳಸಿ ಇಲ್ಲದ ಪೂಜೆ ಕೊಳ್ಳನೊ ಹರಿಕೊಳ್ಳನೋ ಎಂದು ಹಾಡಿದ್ದಾರೆ.

ತುಳಸಿಯಲ್ಲಿ ಅನೇಕ ವಿಧಗಳಿವೆ. ಬಿಳಿ ತುಳಸಿ, ಕೃಷ್ಣ ತುಳಸಿ, ನಾಯಿ ತುಳಸಿ, ಅರಣ್ಯ ತುಳಸಿ, ಸುಗಂಧವುಳ್ಳ ಕಾಡುತುಳಸಿ, ರಾಮತುಳಸಿ, ಕೃಷ್ಣ ತುಳಸಿ, ವಿಷ್ಣು ತುಳಸಿ, ಶ್ರೀ ತುಳಸಿ ಇಂಬಿತ್ಯಾದಿ. ಕೃಷ್ಣ ತುಳಸಿ ಬಹು ಶ್ರೇಷ್ಠವಾದುದೆಂಬ ನಂಬಿಕೆಯಿದೆ.

ಪದ್ಮ ಪುರಾಣವು ಬಂಗಾರದ ಇಲ್ಲವೆ ಮುತ್ತಿನ ಪುಷ್ಪಗಳಾಗಲೀ ತುಲಸಿಯ ಹದಿನಾರನೇ ಒಂದಂಶಕ್ಕೂ ಸಮವಾಗಲಾರದೆಂದು ತಿಳಿಸುತ್ತದೆ. ಕೃಷ್ಣ ತುಲಾಭಾರವೆಂಬ ಪ್ರಚಲಿತವಾದ ಕಥೆಯಲ್ಲಿ ಕೃಷ್ಣನ ತೂಕವನ್ನು ಸರಿತೂಗಿಸಲು ಬಂಗಾರ, ರತ್ನ, ಮುತ್ತುಗಳು ಅಸಮರ್ಥವಾದಾಗ ತುಳಸಿಯನ್ನು ರುಕ್ಮಿಣಿ ತಕ್ಕಡಿಯಲ್ಲಿಟ್ಟಾಗ ತಕ್ಷಣ ತೂಕ ಬಂದಿತೆಂದುಹೇಳಲಾಗಿದೆ. ಬ್ರಹ್ಮ ವೈವರ್ತ ಪುರಾಣವು ತುಳಸಿಯನ್ನು "ಅಸದೃಶ ಸ್ತ್ರೀ" ಎಂದೇ ಪ್ರಶಂಸಿಸುತ್ತದೆ. ಹೀಗೆ ತುಳಸಿ ಪುರಾಣಾದಿಯಾಗಿ ಇಂದಿಗೂ ಪೂಜ್ಯಭಾವನೆಯಿಂದ ಪ್ರತಿ ಮನೆಯಂಗಳದಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ತುಳಸಿಯ ಮೂಲದ ಬಗೆಗೆ ಹಲವು ಪುರಾಣ ಕಥೆಗಳಿವೆ. ಕಾರ್ತಿಕ ಶುದ್ಧದ್ವಾದಶಿಯಂದು ತುಳಸಿ ವಿವಾಹವನ್ನು ಮಾಡುತ್ತಾರೆ. ಅಂದು ವಿಶೇಷವಾದ ಪೂಜಾ ಕೈಂಕರ್ಯಗಳು ತುಳಸಿಗೆ ಸಲ್ಲುತ್ತವೆ.

ಕ್ಷೀರ ಸಾಗರ ಮಂಥನವನ್ನು ಮಾಡಿದಾಗ ಅಮೃತವು ಉದಯವಾಯಿತು. ಅದನ್ನು ಹಂಚಿಕೊಳ್ಳಲು ದೇವ-ದಾನವರಲ್ಲಿ ಸಂಘರ್ಷ ನಡೆದು ಕೆಲವು ಅಮೃತದ ಹನಿಗಳು ಭೂಮಿಯಲ್ಲಿ ಬಿದ್ದವು. ಆ ಅಮೃತದ ಹನಿಗಳೇ ಮುಂದೆ ತುಳಸಿ ಸಸ್ಯಗಳಾಗಿ ಬೆಳೆದವು ಎಂಬುದಾಗಿ ಪುರಾಣ ಕಥೆಗಳು ಹೇಳುತ್ತವೆ.

ಹಿಂದೂ ಸಂಪ್ರದಾಯಸ್ಥರ ಪ್ರತಿ ಮನೆಯಂಗಳದಲ್ಲಿ ತುಳಸಿ ಕಟ್ಟೆ ಇದ್ದೇ ಇರುತ್ತದೆ. ಮನೆಯವರು ಪ್ರವಾಸಕ್ಕೆ ಹೊರಟಾಗ ತುಳಸಿಕಟ್ಟೆಗೆ ಪ್ರದಕ್ಷಿಣೆ ಹಾಕಿ ಹೊರಡುವ ಸಂಪ್ರದಾಯವಿದೆ. ಪೂಜೆಗೆ ಹೂವುಗಳನ್ನು ಬಿಡಿಸುವಾಗ ತುಳಸಿಯೊಟ್ಟಿಗೆ ಬಿಡಿಸಬಾರದು. ಪ್ರತ್ಯೇಕವಾಗಿಯೇ ತುಳಸಿಯನ್ನು ಪೂಜೆಗೆ ಬಿಡಿಸಬೇಕು. ಅಮಾವಾಸ್ಯೆ, ಪೌರ್ಣಿಮೆ, ದ್ವಾದಶಿ, ಸಂಕ್ರಮಣ ಕಾಲದಲ್ಲಿ ಮಧ್ಯಾಹ್ನ, ರಾತ್ರಿ ವೇಳೆ ತುಳಸಿಯನ್ನು ಮುಟ್ಟಬಾರದು. ಕುಡಿಯುವ ನೀರಿಗೆ ತುಳಸಿಯನ್ನು ಹಾಕಿ ಇಡುವುದರಿಂದ ನೀರಿನಲ್ಲಿ ಕಲ್ಮಶಗಳೆಲ್ಲ ತಳಭಾಗದಲ್ಲಿ ಸೇರಿ ನೀರು ಶುದ್ಧಿಯಾಗುವುದು. ದೇವಾಲಯಗಳಲ್ಲಿ ತೀರ್ಥದಲ್ಲಿ ತುಳಸಿಯನ್ನು ಬಳಸುತ್ತಾರೆ. ಸುವಾಸನೆ, ಪೂಜ್ಯ ಭಾವನೆ, ಔಷಧೀಯ ಗುಣಗಳೆಲ್ಲವೂ ಏಕಪ್ರಕಾರವಾಗಿ ಹೊಂದಿರುವಂತಹ ವಿಶಿಷ್ಟ ಪೂರ್ಣವಾದ ಸಸ್ಯ ತುಳಸಿ. ಸಾವಿನಂಚಿನಲ್ಲಿರುವವರ ಬಾಯಿಗೆ ತುಳಸಿ ಜಲವನ್ನು ಬಿಡುವುದರಿಂದ ಆತನಿಗೆ ಸದ್ಗತಿ ದೊರಕುವುದೆಂದು ನಂಬುವರು.

**ಹುಲ್ಲು (ಗರಿಕೆ) :** ಗರಿಕೆ ಎಂದಾಕ್ಷಣ ಗಣಪತಿಯ ನೆನಪಾಗುತ್ತದೆ. ಒಂದು ಕಥೆಯ ಪ್ರಕಾರ ಗಣಪತಿ ಒಬ್ಬ ದೈತ್ಯ ರಾಕ್ಷಸನನ್ನು ನುಂಗಿ ನೀರು ಕುಡಿದ ಕಾರಣ ಗಣಪತಿಗೆ ಹೊಟ್ಟೆಯಲ್ಲಿ ಕುಳಿತ ಅನಲಾಸುರನಿಂದ ತೊಂದರೆಯಾಗತೊಡಗಿತು. ಅದರ ನಿವಾರಣೆಗೆ ದೇವಾನುದೇವತೆಗಳು, ಋಷಿ ಮುನಿಗಳೆಲ್ಲ ಒಂದೆಡೆ ಸೇರಿ ಪ್ರತಿಯೊಬ್ಬರು ಇಪ್ಪತ್ತೊಂದು ಗರಿಕೆಯ ದಳಗಳನ್ನು ನೀವಳಿಸಿ ಗಣಪತಿಯ ದೇಹದ ಮೇಲೆ ಇಡತೊಡಗಿದರು. ಇದರಿಂದ ಗಣೇಶನ ದಾಹ ತಣಿಯಿತು. ಈ ಕಾರಣಕ್ಕೆ ಗಣೇಶನು ಯಾರು ನನ್ನನ್ನು ಗರಿಕೆಯಿಂದ ಪೂಜಿಸುವರೋ ಅವರಿಗೆ ಸಹಸ್ರ ಯಜ್ಞದ ಫಲವು ಪ್ರಾಪ್ತವಾಗಲಿ ಎಂದು ಹರಸಿದನು. ಪ್ರತಿಯೊಂದು ಮಂಗಲಕಾರ್ಯ, ಕೃಷಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಮೊದಲು ಸೆಗಣಿಯ ಬೆನಕನನ್ನು ಗರಿಕೆಯಿಂದ ಅಲಂಕರಿಸಿ ಗಣೇಶನ ಪ್ರತಿರೂಪವಾಗಿ ಪೂಜಿಸುತ್ತಾರೆ. ಮಕ್ಕಳ ಹುಟ್ಟು ಹಬ್ಬದಲ್ಲಿ ಗರಿಕೆ ಹಾಗೂ ಮಂತ್ರಾಕ್ಷತೆಯನ್ನು ಮಕ್ಕಳ ಹಣೆಗೆ ಅಂಟಿಸುವ ಸಂಪ್ರದಾಯವಿದೆ. ನವಜಾತ ಶಿಶುವಿಗೆ ಹುಲ್ಲಿನ ಗೆಡ್ಡೆಗಳನ್ನು ತೋಳುಗಳಿಗೆ ಕಟ್ಟುವ ಸಂಪ್ರದಾಯ ಕೆಲವೊಂದು ಜನಾಂಗಗಳಲ್ಲಿದೆ. ಹುಟ್ಟಿದ ಮಕ್ಕಳು ಬದುಕಿ ಉಳಿಯಬೇಕಾದರೆ ದುರ್ವಾಷ್ಟಮಿಯ ವ್ರತವನ್ನು ಮಾಡಬೇಕೆಂದು ಶ್ರೀಕೃಷ್ಣನು ಪುರಾಣದ ಕಥೆಯೊಂದರಲ್ಲಿ ಹೇಳುತ್ತಾನೆ. ಗರಿಕೆಯು ಬ್ರಹ್ಮನಿಂದ ಸೃಷ್ಟಿಗೊಂಡ ಸುಂದರವಾದ ದೇವತೆಯೆಂದು ದೇವಾನುದೇವತೆಗಳು ವರ್ಣಿಸುತ್ತಾರೆ. ಇದರಿಂದ ಹುಲ್ಲು ಗರಿಕೆ ತಾನು ಸಾಕ್ಷಾತ್ ಜಗದಂಬೆಗಿಂತಲೂ ಶ್ರೇಷ್ಠಳೆಂಬ ಭಾವನೆ ಬೆಳೆದು ಅಹಂಕಾರದಿಂದ ವರ್ತಿಸತೊಡಗಿದಾಗ ಅದನ್ನು ತಿಳಿದ ಪಾರ್ವತಿ ಹುಲ್ಲಿಗೆ ಶಾಪವಿತ್ತಳು. ಆ ಶಾಪವೇ ದರ್ಬೆಯು ಗರಿಕೆಯ ರೂಪವನ್ನು ತಾಳಿ ಭೂಮಿಯಲ್ಲೆಲ್ಲ ಪಸರಿಸತೊಡಗಿತು. ತೈತ್ತಿರೀಯ ಸಂಹಿತೆಯಲ್ಲಿ ಗರಿಕೆಯ ಹಬ್ಬುವಿಕೆಯಂತೆ ವಂಶವೂ ಹಬ್ಬಿ ಅಭಿವೃದ್ಧಿಯಾಗಿ ಬೆಳೆಯಲಿ ಎಂದು ಹೇಳಲಾಗಿದೆ. ಗರಿಕೆಯು ನವಗ್ರಹದಲ್ಲಿ ರಾಹು ಸ್ಥಾನವನ್ನು ಹೊಂದಿದೆ. ಆಯಸ್ಸು, ಆರೋಗ್ಯ ಹಾಗೂ ಜನನಕ್ಕೆ ಸಂಬಂಧಿಯಾದ ಗ್ರಹವಾದ್ದರಿಂದ ಗರ್ಭದಾನ ಕಾಲದಲ್ಲಿ ಗರಿಕೆಯ ಉಪಯೋಗವನ್ನು ಮಾಡುತ್ತಾರೆ, ದೂವ, ದರ್ಭೆ, ಕುಶ ಇವೆಲ್ಲ ಒಂದೇ ಅರ್ಥವನ್ನು ನೀಡುವಂತಹವು. ಮಹಾಕವಿ ಕಾಳಿದಾಸ ರಘುವಂಶದಲ್ಲಿ ಮಾನವ ಬುದ್ಧಿಯನ್ನು ವರ್ಣಿಸುವಾಗ ಕುಶಾಗ್ರ ಎಂಬ ಪದವನ್ನು ಬಳಸಿದುದು ಕಂಡು ಬಂದಿದೆ. ಯಜುರ್ವೇದದಲ್ಲಿ "ಎಲೈ ದಾಹ ನಾಶಕ, ಶಾಂತಿದಾಯಕ, ದೂರ್ವೆಯೋ ನೀನು ಕಠಿಣ ಸ್ಥಾನದಲ್ಲಿಯೂ ಸಹಿತ ಬೆಳೆಯುತ್ತಾ, ಜನರ ಹಿತಕ್ಕಾಗಿ ಔಷಧೀಯ ರೂಪದಲ್ಲಿ ಪ್ರಪಂಚದಲ್ಲಿ ಹುಟ್ಟಿದ್ದೀಯೋ" ಎಂದು ಹೇಳುತ್ತದೆ. ಚರಕರು ಮೂಗಿನ ರಕ್ತಸ್ರಾವವನ್ನು ನಿಲ್ಲಿಸಲು ಉಪಯೋಗ ಬರುತ್ತದೆ ಎಂದು ಹೇಳಿದ್ದಾರೆ. ಭಾವ ಪ್ರಕಾಶದಲ್ಲಿ ಉರಿಮೂತ್ರ, ಪದೇ ಪದೇ ಮೂತ್ರ ಮಾಡುತ್ತಿದ್ದರೆ ಗರಿಕೆ ಉತ್ತಮ ಔಷಧಿ ಎಂದು ಹೇಳಿದೆ. ಗರಿಕೆಯಲ್ಲಿ ವಿಟಮಿನ್'ಬಿ' ಮತ್ತು 'ಸಿ' ಕ್ಯಾಲ್ಸಿಯಂ ಹಾಗೂ ಇತರೆ ಔಷಧೀಯ ಗುಣಗಳನ್ನು ಹೊಂದಿದೆ ಎಂಬುದಾಗಿ ವೈಜ್ಞಾನಿಕವಾಗಿ ಸಾಬೀತಾಗಿದೆ. ಅಮೇರಿಕದಲ್ಲಿ ಇತ್ತೀಚೆಗೆ 'ಗ್ರಾಸ್ ಎಕ್ಸ್‌ಟ್ರಾಕ್ಟ್' ಎಂಬಂತಹ ಇಂಜಕ್ಷನ್ ತಯಾರಿಸಿದ್ದಾರೆ. ಇದು ಅನೀಮಿಯ ರೋಗಿಗಳಿಗೆ ಕೊಡುವಂತಹದ್ದು.

ಗರಿಕೆಯು ಹಿಂದೂ ಧರ್ಮದ ಕೌಟುಂಬಿಕ ಬದುಕಿನಲ್ಲಿ ಪ್ರತೀಕವಾಗಿ, ಸಿದ್ಧಿ ಸಾಧನೆಗಳಿಗೆ ಮೂರ್ತಿ ಚಿಕ್ಕದಾದರೂ, ಕೀರ್ತಿ ದೊಡ್ಡದು ಎಂಬ ಮಹತ್ತ್ವವನ್ನು ಬಿಂಬಿಸುವಲ್ಲಿ ಸಾಂಕೇತಿಕವೆಂದು ಹೇಳಬಹುದಾಗಿದೆ.

**ಕೂಷ್ಮಾಂಡ (ಬೂದುಕುಂಬಳಕಾಯಿ) :** ಕೃಷಿಕರು ತಾವು ಬೆಳೆದ ಮೊದಲ ಕುಂಬಳಕಾಯಿಯನ್ನು ಪುರೋಹಿತ ವರ್ಗಕ್ಕೆ ಕೊಟ್ಟು ಅನಂತರ ಮಾರಾಟ ಮಾಡುತ್ತಿದ್ದರು. ಮಾಂಸಹಾರಿಗಳು ಬೂದುಕುಂಬಳ ಕಾಯಿಯನ್ನು ಸೇವಿಸಬಾರದೆಂದು ನಂಬಿಕೆಯಿತ್ತು. ಕ್ರಮೇಣ ಎಲ್ಲರೂ ಇದನ್ನು ಸೇವಿಸುವಂತಾಗಿದೆ. ಇದನ್ನು ಆಹಾರವಾಗಿ ಸೇವಿಸುವುದರಿಂದ ಬುದ್ಧಿಶಕ್ತಿ, ಉಚ್ಚಾರಣೆ ಸ್ಫುಟವಾಗುವುದು. ಇದರಿಂದ ಸಿಹಿತಿನಿಸು, ಹುಳಿ, ಕೂಟು ತಯಾರಿಸುತ್ತಾರೆ. ಇದರ ಸಂಡಿಗೆ ಬಲು ರುಚಿಯಾಗಿರುತ್ತದೆ.

ಕಾರ್ತಿಕಮಾಸದ ನವಮಿಯನ್ನು ಕೂಷ್ಮಾಂಡ ನವಮಿ ಎಂದು ಆಚರಿಸುತ್ತಾರೆ. ಕಥೆಯೊಂದರ ಪ್ರಕಾರ ದ್ವಾಪರ ಯುಗದಲ್ಲಿ ಕೂಷ್ಮಾಂಡವೆಂಬ ದೈತ್ಯನಿದ್ದ. ಆತನ ಉಪಟಳವನ್ನು ಸಹಿಸಲಾರದೆ ಭಕ್ತರು ದೇವತೆಗಳಿಗೆ ಮೊರೆ ಹೋದರು. ವಿಷ್ಣು ದೈತ್ಯನ ಸಂಹಾರ ಮಾಡಿದ. ಆಗ ಕೂಷ್ಮಾಂಡನು ನನ್ನ ದೇಹವು ಬಹು ಜನಪ್ರಿಯವಾಗಿ ಬಳಕೆಯಾಗಬೇಕೆಂದು ದೇವರಲ್ಲಿ ಪ್ರಾರ್ಥಿಸಿಕೊಂಡನಂತೆ. ಆತನ ದೇಹದಿಂದ ಹುಟ್ಟಿದ ಫಲವೇ ಈ ಕುಂಬಳಕಾಯಿ ಎಂಬ ಪ್ರತೀತಿ ಇದೆ. ಈ ಫಲವು ಯಜ್ಞಯಾಗಾದಿಗಳೇ ನವಗ್ರಹ ಪೂಜೆಗಳಲ್ಲಿ, ನೂತನ ಗೃಹ ನಿರ್ಮಾಣ ಕಾಲದಲ್ಲಿ ನಡೆಯುವ ಶಾಂತಿ, ಯಜ್ಞಕಾಲದಲ್ಲಿ ದೃಷ್ಟಿ ನಿವಾರಕವಾಗಿ ಬಳಸುತ್ತಾರೆ. ಆಯುಧಪೂಜಾ ಸಮಯದಲ್ಲಿ ವಾಹನಗಳಿಗೆ ಇದನ್ನು ದೃಷ್ಟಿ ನಿವಾರಕವಾಗಿ ಒಡೆಯುತ್ತಾರೆ. ಕೂಷ್ಮಾಂಡ ದಾನ ಕೊಡುವುದರಿಂದ ಸದ್ಗತಿ ದೊರಕುವುದೆಂಬ ನಂಬಿಕೆಯಿದೆ. ಸಕಲ ಪಾಪಗಳ ಪರಿಹಾರವಾಗಿ ಉತ್ತಮ ಸಂತತಿಯಾಗಲೆಂದು ಕಾರ್ತಿಕೆಯ ಪೌರ್ಣಿಮೆಯಂದು ಕೂಷ್ಮಾಂಡ ವ್ರತವನ್ನು ಆಚರಿಸುತ್ತಾರೆ. ಇದನ್ನು ಲಕ್ಷ್ಮೀ ನಾರಾಯಣರ ಪ್ರತೀಕವಾಗಿ ಪೂಜೆ ಮಾಡುತ್ತಾರೆ.

ಬಹು ಹಿಂದೆ ಭಾರತದಲ್ಲಿ ಹಳ್ಳಿಯ ರಕ್ಷಣೆಗಾಗಿ, ರೋಗ ರುಜಿನಗಳ ನಿವಾರಣೆಗಾಗಿ ದೃಷ್ಟಿ ಪರಿಹಾರಕ್ಕಾಗಿ ನರಬಲಿಯನ್ನು ಕೊಡುವ ಸಂಪ್ರದಾಯವಿತ್ತು. ಕಾಲ ಕ್ರಮೇಣ ಕೂಷ್ಮಾಂಡವು ಆ ಬಲಿಯ ಸ್ಥಾನವನ್ನು ತಾನು ತುಂಬಿ ಮಾನವ ಜೀವನವನ್ನು ಬೆಳಗಿತು. ಇದು ಶೀತ ಪದಾರ್ಥವಾಗಿದ್ದು ವಿರೇಚಕ ಗುಣ ಇರುವಂತಹ ಖಾದ್ಯ ವಸ್ತುವಾಗಿದೆ. ಶರೀರದ ಉಷ್ಣಾಂಶವನ್ನು ಕಡಿಮೆ ಮಾಡುತ್ತದೆ. ತೆಳ್ಳಗಿರುವವರು ಇದರ ಸೇವನೆಯಿಂದ ಮೈದುಂಬುವರು.

**ಕೇಸರಿ (ಕೇಶರ) :** ಕೇಸರಿಯ ಉಪಯೋಗ ಭಾರತೀಯರಲ್ಲಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಇದು ನಸುಗೆಂಪಿನ ಮೃದುವಾದ ಎಲೆಗಳಿಂದ ಕೂಡಿದ್ದು ಸುವಾಸನಾಯುಕ್ತವಾಗಿದೆ. ಹಿಮಾಲಯ ಪ್ರದೇಶ ಹಾಗೂ ಭಾರತದ ಕಾಶ್ಮೀರ ಪ್ರದೇಶಗಳು ಇದನ್ನು ಸಾಗುವಳಿ ಮಾಡುತ್ತಾರೆ. ಬಯಲು ಸೀಮೆಯಲ್ಲಿ ಬೆಳೆಯುವ ಕುಸುಬೆ ಗಿಡವನ್ನು ಇದು ಹೋಲುತ್ತದೆ. ಕುಸುಬೆಯ ಎಸಳನ್ನು ಕೇಸರಿಯಲ್ಲಿ ಬೆರೆಸಿ ಮಾರುವ ಮೋಸವು ನಡೆಯುತ್ತವೆ. ಕೇಸರಿಯ ಹುಟ್ಟಿನ ಬಗೆಗೆ ಕುತೂಹಲಕಾರಿ ಕಥೆಗಳಿವೆ. ಆಶ್ವೀಜ ಹಾಗೂ ಕಾರ್ತಿಕ ಮಾಸಗಳು ಕೇಸರಿಯ ಬೆಳೆಗಳನ್ನು ನೋಡಲು ವಿಹಾರಿಗಳು, ಸೌಂದರ್ಯ ಆರಾಧಕರು ಕಾಶ್ಮೀರಕ್ಕೆ ಬರುವ ಪರಿಪಾಠ ಇಂದಿಗೂ ಇದೆ. ಕಾಶ್ಮೀರದ ಅರಸರು ತಮ್ಮ ಕಿರೀಟದಲ್ಲಿ ಕೇಸರಿಯ ದಳಗಳನ್ನು ಧರಿಸುತ್ತಾರೆ. ರಾಜಮನೆತನದ ಕನ್ಯೆಯರು ಮೈಗೆಲ್ಲ ಕೇಸರಿಯ ಲೇಪನವನ್ನು ಮಾಡಿಕೊಳ್ಳುತ್ತಾರೆ. ದೇವರಿಗೆ ಸಂಬಂಧಿಸಿದ ಪೂಜಾದಿಗಳಲ್ಲೂ ಬಳಸುವ ಸಂಪ್ರದಾಯವಿದೆ. ಹಿಂದಿನ ಕಾಲದಲ್ಲಿ ಕೇಸರಿಯ ಬಣ್ಣದಿಂದಲೇ ರಂಗಪಂಚಮಿಯ ಹಬ್ಬವನ್ನು ಆಚರಿಸುತ್ತಿದ್ದರು. ಮಕ್ಕಳಿಗೆ ಗೂಟಿ ಹಾಕುವಾಗ ಕೇಸರಿಯ ದಳಗಳನ್ನು ಅರೆದುಕೊಡುವ ಸಂಪ್ರದಾಯವಿದೆ. ತಾಂಬೂಲ ಸೇವಿಸುವಾಗ ಕೇಸರಿಯನ್ನು ಬಳಸುತ್ತಾರೆ. ಅಡುಗೆಯಲ್ಲಿ ಕೇಸರಿಯನ್ನು ಆಕರ್ಷಕ ಬಣ್ಣ ಮತ್ತು ರುಚಿಗಾಗಿ ಬಳಸುತ್ತಾರೆ. ಕೇಸರಿಯಲ್ಲಿ ಕ್ರೋಸಿನ್ ಎಂಬ ಬಹುಮುಖ್ಯವಾದ ನೈಸರ್ಗಿಕ ಕಿತ್ತಳೆ ಮಿಶ್ರಿತ ಹಳದಿ ಬಣ್ಣ ಮತ್ತು ಸುವಾಸನಾ ತೈಲವಿದೆ. ಇದು ನೀರಿನಲ್ಲಿ ಕರಗುವ ಗುಣವನ್ನು ಹೊಂದಿದೆ. ಸ್ವಲ್ಪ ಬಳಸಿದರೂ ಹೆಚ್ಚಾಗಿ ಕಂಡುಬರುತ್ತದೆ. ಸ್ಪೈನ್, ಹಂಗೇರಿ, ಫ್ರಾನ್ಸ್, ಸ್ಕಾಂಡಿನೇವಿಯಾ ಇತರ ದೇಶಗಳಲ್ಲಿ ಕೇಸರಿಯನ್ನು ಬೇಕರಿ ತಿಂಡಿಗಳು ಚೀಸು, ಬೆಣ್ಣೆ, ಅನ್ನ ಇತ್ಯಾದಿಗಳಿಗೆ ಬಣ್ಣ ಕೊಡಲು, ಸುವಾಸನೆಗೊಳಿಸಲು ಬಳಸುತ್ತಾರೆ. ಭಾರತದಲ್ಲಿ ತಯಾರಿಸುವ ಪಾಕ ವೈವಿಧ್ಯಗಳಾದ ಖೀರು, ಮಿಠಾಯಿ, ಕೇಸರಿಬಾತ್, ಹಾಲು ಮುಂತಾದವುಗಳಿಗೆ ಬಣ್ಣ ಹಾಗೂ ಸುವಾಸನೆಗಾಗಿ ಬಳಸುತ್ತಾರೆ. ಕೇಸರಿಯನ್ನು ಅತಿಯಾಗಿ ಬಳಸಬಾರದು. ಕಾರಣ ಮಾದಕ ಗುಣವನ್ನು ಹೊಂದಿರುವುದರಿಂದ ಮಿತವಾಗಿ ಬಳಸಬೇಕು. ಇದನ್ನು ಕಷಾಯದ ರೂಪದಲ್ಲಿ ಮುಲಾಮಿನ ರೂಪದಲ್ಲಿ ಬಳಸುತ್ತಾರೆ. ದೇಹದ ಮೇಲಿನ ಗಾಯ, ಮೂಗುಪೆಟ್ಟು, ಹುಣ್ಣು ಇವುಗಳನ್ನು ವಾಸಿಮಾಡಲು ಇದರ ಮುಲಾಮನ್ನು ಹಚ್ಚುತ್ತಾರೆ.

**ನಿಂಬೆ :** ಪ್ರಾಚೀನ ಕಾಲದಿಂದಲೂ ಕೂದಲು ಹಾಗೂ ಚರ್ಮದ ಆರೈಕೆಗಾಗಿ, ವಿರೇಚಕವಾಗಿ, ಶೀತದ ನಿವಾರಣೆ, ಉದರ ಬೇನೆಗಳಲ್ಲಿ ಅವಶ್ಯವಾಗಿ ಬಳಸುತ್ತಾರೆ. ದೃಷ್ಟಿ ನಿವಾರಕವಾಗಿ, ಬಲಿಗೆ ಪರ್ಯಾಯವಾಗಿ ಬಳಸುತ್ತಾರೆ. ದೇವಾಲಯಗಳಲ್ಲಿ ನಿಂಬೆ ಹಣ್ಣಿನ ಹಾರವನ್ನು ಹಾಕುತ್ತಾರೆ. ಇದು ಹರಕೆಯ ರೂಪದಲ್ಲೂ ಇರುವುದು. ಮಾಟ ಮಂತ್ರ, ಪೂಜೆ ಸಂದರ್ಭದಲ್ಲಿ ನಿಂಬೆಹಣ್ಣು ಬೇಕೇಬೇಕು. ಕೆಲವು ಜನಪದ ನೃತ್ಯಗಳಲ್ಲಿ ಬಾಯಿಯಲ್ಲಿ ನಿಂಬೆಹಣ್ಣು, ಕೊರಳಿಗೆ ಮಾಲೆ ಧರಿಸಿ ಕುಣಿಯುತ್ತಾರೆ. ಮಾಟ ಮಂತ್ರಗಳಲ್ಲಿ ಮೋಡಿ ಹಾಕುವಾಗ ತಾವು ರಚಿಸಿರುವ ಒಂದೊಂದು ಮಂಡಲಕ್ಕೂ ನಿಂಬೆಹಣ್ಣನ್ನು ಇಡುತ್ತಾರೆ. ಹೊಸ ವಾಹನಗಳನ್ನು ಕೊಂಡಾಗ ದೇವಾಲಯದ ಮುಂದೆ ವಾಹನಗಳಿಗೆ ಪೂಜೆ ಮಾಡಿಸುವಾಗ ವಾಹನದ ಪ್ರತಿ ಚಕ್ರಕ್ಕೆ ಒಂದೊಂದು ನಿಂಬೆಹಣ್ಣನ್ನು ಇಟ್ಟು ಪೂಜೆ ಮಾಡುತ್ತಾರೆ. ಹೊರಡುವಾಗ ನಿಂಬೆಹಣ್ಣು ಚಕ್ರಕ್ಕೆ ಸಿಲುಕಿ ಒಡೆದಾಗ ಮುಂದೆ ಯಾವ ದುರಂತಗಳು ಸಂಭವಿಸುವುದಿಲ್ಲ ಎಂಬ ನಂಬಿಕೆ ಜನಪದರದು. ದೇವಾಲಯಗಳಲ್ಲಿ ಮನೆಯ ಒಳಿತಿಗಾಗಿ, ಮಕ್ಕಳ ಆರೈಕೆಗಾಗಿ, ತಮಗೆ ಆಗಬೇಕಾದ ಕೆಲಸಗಳು ಬಹುಬೇಗ ಆಗಲೆಂದು ಬೇಡಿ ನಿಂಬೆಹಣ್ಣನ್ನು ಮಂತ್ರಿಸಿ ಪೂಜೆ ಮಾಡಿಸಿ ಮನೆಯಲ್ಲಿ 5 ಇಲ್ಲವೇ 7 ದಿನಗಳವರೆಗೆ ಇಟ್ಟುಕೊಂಡು ಅನಂತರ ಅದನ್ನು ಹರಿಯುವ ನೀರಿಗೆ ಬಿಡುವುದೋ ಇಲ್ಲವೇ ಮನೆಯ ಜನರೆಲ್ಲಾ ಪಾನೀಯವಾಗಿ ಸೇವಿಸುವ ರೂಢಿಯಿದೆ. ಹೊಸದಾದ ಅಂಗಡಿ, ಹೋಟೆಲು ಇತರೆ ಯಾವುದೇ ವ್ಯವಹಾರಿಕ ಅಂಗಡಿಗಳೇ ನಿಂಬೆಹಣ್ಣನ್ನು ಪೂಜಿಸಿ ಹಣದ ಪೆಟ್ಟಿಗೆಯಲ್ಲಿ ಇಟ್ಟುಕೊಂಡಿರುತ್ತಾರೆ. ಹಾಗೆಯೇ ಒಂದು ಗಾಜಿನ ಲೋಟದಲ್ಲಿ ನೀರನ್ನು ತುಂಬಿ ಅದಕ್ಕೆ ನಿಂಬೆಹಣ್ಣನ್ನು ಇಡುವ ಪದ್ಧತಿಯಿದೆ.

**ಅರಿಶಿನ :** ಮಂಗಲದ್ರವ್ಯಗಳಲ್ಲಿ ಅರಿಸಿನವೂ ಒಂದು. ಸುಮಂಗಲಿಯರು ಕಡ್ಡಾಯವಾಗಿ ಇದನ್ನು ಬಳಸುತ್ತಾರೆ. ದೇವರು, ಧರ್ಮ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಅರಿಸಿನ-ಕುಂಕುಮ ಲೇಪನ ಇದ್ದೇ ಇರುತ್ತದೆ. ಭಾರತೀಯರ ಸೌಭಾಗ್ಯ ಚಿಹ್ನೆಗಳಲ್ಲಿ ಅರಿಸಿನಕ್ಕೆ ಮಹತ್ವದ ಸ್ಥಾನ. ನವ ವಧುವರರನ್ನು ಅರಿಸಿನದ ನೀರಿನಿಂದ ಸ್ನಾನ ಮಾಡಿಸುವುದು ಸಾಮಾನ್ಯ. ವಿವಾಹಕ್ಕೆ ಬಳಸುವ ಮಾಂಗಲ್ಯದ ದಾರವನ್ನು ಅರಿಸಿನದಿಂದ ಲೇಪಿಸಿರುತ್ತಾರೆ. ಮಾಂಗಲ್ಯಕ್ಕೆ ಪರ್ಯಾಯವಾಗಿ ಅರಿಸಿನದ ಕೊನೆಯಲ್ಲಿ ಕಟ್ಟುವ ರೂಢಿಯಿದೆ. ಮದುವೆಗೆ ಹೆಣ್ಣು ಗೊತ್ತಾದಾಗ "ಅರಿಸಿನ ಬಾಳೆಹಣ್ಣು ಶಾಸ್ತ್ರ" ಎಂದು ಮಾಡುತ್ತಾರೆ. ಅರಿಸಿನ ಶುಭಸೂಚಕ. ಕಂಕಣ ಕಟ್ಟುವಾಗ ಅರಿಸಿನದ ಕೊನೆಯನ್ನು ಇಡುತ್ತಾರೆ.

ಅರಿಸಿನ ವಿವಾಹದ ಸಂದರ್ಭದಲ್ಲಿ ಎಷ್ಟು ಮುಖ್ಯ ಎಂಬುದನ್ನು ಸಾಬೀತುಪಡಿಸಲು 'ಅರಿಸಿನದ ಮೈ ಹಾಕಿಯೇ ಇಲ್ಲ ಆಗ್ಲೆ' ಎಂದು ಯಾವುದಾದರೂ ಕೆಡಕು ಸಂಭವಿಸಿದಾಗ ಜನಪದರು ಈ ರೀತಿ ಉದ್ಗರಿಸುತ್ತಾರೆ. ವಿವಾಹ ಸಂದರ್ಭದಲ್ಲಿ ಅರಿಸಿನ ಲೇಪನ ಮಂತ್ರಾಕ್ಷತೆ ಪವಿತ್ರವೆಂದು ನಂಬುವರು. ವಧುವರರಿಗೆ ಸೋಗಲು ಉಯ್ಯುವಾಗ, ಸೊಸೆ ಇಕ್ಕಲು ಮಂತ್ರಾಕ್ಷತೆಯನ್ನು ಉಪಯೋಗಿಸುತ್ತಾರೆ. ಇಂದು ವಿವಿಧ ಬಣ್ಣದ ಮಿಶ್ರಣದೊಂದಿಗೆ ಅಕ್ಕಿಯನ್ನು ಮಂತ್ರಾಕ್ಷತೆ ಅಕ್ಕಿಯನ್ನು ತಯಾರು ಮಾಡುತ್ತಾರೆ. ಆದರೆ 'ಅಕುಸ್ಥಿ' ಎಂದು ಕರೆಯುವ ಅರಿಸಿನ ಲೇಪಿತವಾದ ವಸ್ತುವನ್ನು ಸುಮಂಗಲಿಯರು ಮಾತ್ರ ಇಡುತ್ತಾರೆ. ಇದೊಂದು ಅರಿಸಿನ-ಕುಂಕುಮದ ಜೊತೆ ಜೊತೆಯಲ್ಲಿ ಶುಭ ಸಂದರ್ಭದಲ್ಲಿ ಬಳಸುವ ವಸ್ತು. ಕೆಲವೊಂದು ಸಂದರ್ಭದಲ್ಲಿ ಗಂಡು-ಹೆಣ್ಣಿಗೂ, ಹೆಣ್ಣು-ಗಂಡಿಗೂ ಹಣೆಗೆ ಹಚ್ಚುತ್ತಾರೆ. ದೇವರಿಗೆ ಮುಡುಪು ಕಟ್ಟುವಾಗ ಅರಿಸಿನದಿಂದ ಲೇಪಿತವಾದ ಬಟ್ಟೆಯಿಂದಲೇ ಕಟ್ಟುತ್ತಾರೆ. ಅರಿಸಿನ ಕ್ರಿಮಿಹರ ಜೊತೆಗೆ ಶುಭಸೂಚಕ ಹಾಗೂ ದೇವರ ಪ್ರತಿರೂಪವೆಂದು ಜನಪದರು ನಂಬುವರು.

ವಿವಾಹದ ಸಂದರ್ಭದಲ್ಲಿ 'ಐಧಾನ್ಯ ಬುತ್ತಿ', 'ನವಧಾನ್ಯ' ಮಾಡುವಾಗಲೂ ಅರಿಸಿನ ಲೇಪಿತವಾದ ವಸ್ತ್ರದಿಂದ ಕಟ್ಟುತ್ತಾರೆ. ಅರಿಸಿನವನ್ನು ಗೋಪುರಾಕೃತಿಯಲ್ಲಿ ಉಂಡೆ ಮಾಡಿ 'ಅರಿಸಿನ ಗೌರಿ' ಎಂದು ಪೂಜಿಸುತ್ತಾರೆ. ಭೀಮನ ಅಮಾವಾಸ್ಯೆ, ಮಂಗಳಗೌರಿ ವ್ರತಗಳಲ್ಲಿ, ಗೌರಿಪೂಜೆಯಲ್ಲಿ ಬಳಸುವ ಕೈದಾರವನ್ನು ಅರಿಸಿನದಿಂದ ಲೇಪಿಸಿ ಅದರೊಟ್ಟಿಗೆ ಹೂವನ್ನು ಕಟ್ಟಿ ಗೌರವಪೂರ್ವಕವಾಗಿ, ಭಕ್ತಿಯಿಂದ ಒಬ್ಬರಿಗೊಬ್ಬರು ಕಟ್ಟುತ್ತಾರೆ. ದೇವಾಲಯಗಳಲ್ಲಿ ಅರ್ಚಕರು ಸುಮಂಗಲಿಯರಾದಿಯಾಗಿ ಎಲ್ಲರಿಗೂ ಕಟ್ಟುತ್ತಾರೆ. ಹಿಂದೂ ಸಂಸ್ಕೃತಿಯಲ್ಲಿ ಮಕ್ಕಳಿಗೆ ಮೊದಲ ಅಕ್ಷರಭ್ಯಾಸವನ್ನು ಮೊರದಲ್ಲಿ ಅಕ್ಕಿಯನ್ನು ತುಂಬಿ ಅರಿಸಿನದ ಕೊನೆಯಿಂದ ಮೊದಲ ಅಕ್ಷರವನ್ನು ಮಗುವಿನಿಂದ ತಾಯಿ ಬರೆಸುವುದರ ಮೂಲಕ ಆರಂಭ ಮಾಡಿಸುತ್ತಾಳೆ. ಅರಿಸಿನವಿಲ್ಲದ ಯಾವ ಪೂಜೆಯು ಶುಭವಲ್ಲವೆಂದು ನಂಬಿಕೆಯಿದೆ. ಹಿಂದೂ ಧರ್ಮದಲ್ಲಿ ವಿಶೇಷವಾದ ಸ್ಥಾನವನ್ನು ಅರಿಸಿನ ಪಡೆದುಕೊಂಡಿದೆ. ಮಾಟ ಮಂತ್ರಗಳಲ್ಲಿ ಅರಿಸಿನವನ್ನು ಬಳಸುತ್ತಾರೆ. ಅರಿಸಿನದ ಅನ್ನ, ಕೆಂಪನ್ನ ಎಂಬುದಾಗಿ ಅನ್ನವನ್ನು ತಯಾರು ಮಾಡಲು ಬಳಸುತ್ತಾರೆ. ಶವ ಸಂಸ್ಕಾರದಲ್ಲಿ 'ಅರಿಸಿನದ ಕೂಳು' ಎಂಬುದಾಗಿ ತಯಾರು ಮಾಡಿ ಅದನ್ನು ಶವದ ಸುತ್ತ ಚೆಲ್ಲುತ್ತಾರೆ.

ಅರಿಸಿನ ಬಣ್ಣ ಕೊಡುವ ಸಾಮಾಗ್ರಿಯಾಗಿ, ಸುಗಂಧ ಕಾರಕವಾಗಿ ವಿಶಿಷ್ಟ ರುಚಿ ಕೊಡುವ ಪದಾರ್ಥವಾಗಿ ಕೆಲಸ ಮಾಡುತ್ತದೆ. ಹಿಂದೂಗಳ ನಂಬಿಕೆಯಲ್ಲಿ ಅರಿಸಿನ ಪವಿತ್ರ, ಇದಕ್ಕೆ ಶೃಂಗಾರ ಸಂಬಂಧವಾದ ಅರ್ಥವಂತಿಕೆಯಿದೆ. ವಿವಾಹ ಅಡುಗೆಯಲ್ಲಿ ಅಗತ್ಯವಾಗಿ ಬಳಕೆಯಾಗುತ್ತದೆ. ಅರಿಸಿನ ಲೇಪಿತವಾದ ಯಾವುದೇ ವಸ್ತು ಅದೃಷ್ಟಕರ ಎಂದು ನಂಬುತ್ತಾರೆ. ಅನರ್ಘ್ಯ ವಸ್ತುಗಳಲ್ಲಿ ಅರಿಸಿನವೂ ಒಂದು ಎಂದು ರಾಮಾಯಣದಲ್ಲಿ ಹೇಳಿದೆ. ಹಿಂದೂ ಸಂಸ್ಕೃತಿಯಲ್ಲಿ ಅರಿಸಿನವನ್ನು ಸುಮಂಗಲಿಯರು ಹಚ್ಚಿಕೊಳ್ಳುವುದರಿಂದ ಗಂಡನ ಆಯಸ್ಸು ಹೆಚ್ಚುವುದೆಂದು ನಂಬುತ್ತಾರೆ. ಋತುಮತಿಯಾದ ಹೆಣ್ಣು ಮಗಳಿಗೆ ಅರಿಸಿನದ ನೀರನ್ನು ಹಾಕುತ್ತಾರೆ. ವಿಧವೆಯರು ಅರಿಸಿನ ಬಳಸಬಾರದೆಂಬ ಸಂಪ್ರದಾಯವಿದೆ. ದೃಷ್ಟಿ ನಿವಾರಿಸಲು ಬಳಸುವ ಆರತಿಯಲ್ಲಿ ಅರಿಸಿನದ ನೀರು ಕೂಡ ಒಂದು.

**ಅಕ್ಕಿ :** ಅಕ್ಕಿಯನ್ನು ಆಹಾರವಾಗಲ್ಲದೆ ಆಚರಣೆಯಲ್ಲಿಯೂ ಬಳಸಿಕೊಂಡಿದ್ದಾರೆ. ಅಕ್ಷತೆ ರೂಪದಲ್ಲಿ ಅರಿಸಿನ ಲೇಪಿತ ಅಕ್ಕಿಯನ್ನು ಸುಮಂಗಲಿಯರಿಗೆ ಶುಭ ಸಮಾರಂಭಗಳಲ್ಲಿ ಕೊಡುತ್ತಾರೆ. ಭಕ್ತಿಯಿಂದ ನಮಿಸಿ ಬೇಡಿದ ವರವನ್ನು ಕರುಣಿಸೆಂದು ಹೂವಿನೊಂದಿಗೆ ಅಕ್ಷತೆಯನ್ನು ದೇವರ ಬಳಿ ಇಡುತ್ತಾರೆ.

ಮಂತ್ರಾಲಯ ರಾಯರ ದೇವಾಲಯಗಳಲ್ಲಿ ದೇವರ ಆಶೀರ್ವಾದವಾಗಿ ಮಂತ್ರಾಕ್ಷತೆಯನ್ನು ಅರ್ಚಕರು ಭಕ್ತರಿಗೆ ತಲೆಯ ಮೇಲೆ ಇಡುತ್ತಾರೆ.

"ಅಕ್ಕಿ ಕಾಳು ತಲೆಯ ಮೇಲೆ ಬಿದ್ದರೆ ಸಾಕು" ಎಂಬ ಉದ್ಗಾರದೊಂದಿಗೆ ಮದುವೆಯಾಗದ ಹೆಣ್ಣು ಮಕ್ಕಳನ್ನು ಮನೆಯಲ್ಲಿ ಹೆಚ್ಚು ದಿನ ಇಟ್ಟುಕೊಳ್ಳುವುದು ಕಷ್ಟ ಎಂಬುದನ್ನು ಇದು ಸೂಚಿಸುತ್ತದೆ. ವಿವಾಹದ ಸಂದರ್ಭದಲ್ಲಿ ಅಕ್ಕಿಯ ಪಾತ್ರ ಬಹುಮುಖ್ಯವಾಗಿರುತ್ತದೆ. ಹತ್ತಾರು ಅರ್ಥವಂತಿಕೆಯನ್ನು ಒಂದೊಂದು ಕಾರ್ಯವು ನಮಗೆ ತೋರಿಸಿಕೊಡುತ್ತದೆ. ಯಾವುದೇ ಶುಭಕಾರ್ಯ, ದೇವತಾಕಾರ್ಯದಲ್ಲೂ ಕಳಶ ಪ್ರತಿಷ್ಠಾಪನೆಯಲ್ಲಿ ಅಕ್ಕಿಯ ಪಾತ್ರವಿರುತ್ತದೆ. ಅಕ್ಕಿಯಮೇಲೆ ಕಳಸವನ್ನು ಕೂರಿಸುತ್ತಾರೆ. ಹಾಗೆಯೇ ಕಳಶದ ಚೊಂಬಿಗೂ ಅಕ್ಕಿಯನ್ನಿಟ್ಟು ಪೂಜಿಸುವ ರೂಢಿಯೂ ಇದೆ. ಮೊದಲು ಕಳಸಕ್ಕೆ ಸೇಸೆ ಇಕ್ಕಿ ಅನಂತರ ನವವಧುವಿಗೆ ಸೇಸೆ ಇಕ್ಕುತ್ತಾರೆ. ವಿವಾಹದ ಪ್ರತಿ ಶಾಸ್ತ್ರದಲ್ಲೂ ಸೇಸೆ ಇಕ್ಕುವುದು ರೂಢಿ. ಹಾಗೆಯೇ ಮಾಂಗಲ್ಯಧಾರಣೆ ಮಾಡುವಾಗ ನೆರೆದ ಬಂಧು ಮಿತ್ರರೆಲ್ಲಾ ಅಕ್ಷತೆಯನ್ನು ಎರಚುವ ಮೂಲಕ ಶುಭ ಕೋರುತ್ತಾರೆ. ಹಿರಿಯರಿಂದ ಆಶೀರ್ವಾದ ಪಡೆಯುವಾಗ ಅವರು ಸೇಸೆ ಇಕ್ಕಿಯೇ ಹರಸುವರು. ಸೋಗಲು ಹುಯ್ಯುವಲ್ಲಿ ತಾಯಿಯ ಮನೆಯ ಅಕ್ಕಿಯನ್ನು ನವವಧುವಿನ ಮಡಿಲಿಗೆ ತುಂಬುವ ಮೂಲಕ ಅವಳನ್ನು ಹರಸುತ್ತಾರೆ. ಗಂಡನ ಮನೆಗೆ ತೆರಳುವಾಗ ತವರು ಮನೆಯ ಬಾಗಿಲಲ್ಲೆ ನಿಂತು ಮೂರು ಬೊಗಸೆ ಅಕ್ಕಿಯನ್ನು ಭಕ್ತಿಪೂರ್ವಕವಾಗಿ ಅಪ್ಪನ ಮನೆ ಹೆಚ್ಚೊಕ್ಕಲಾಗಿ ಎಂದ್ಹೇಳಿ ಹಾರೈಸಿ ಹೋಗುವ ಸಂಪ್ರದಾಯವಿದೆ. ಹಾಗೆಯೇ ಗಂಡನ ಮನೆಗೆ ಹೊಸದಾಗಿ ಪ್ರವೇಶಿಸುವ ಹೆಣ್ಣು "ಪಡಿಯಕ್ಕಿ"ಯನ್ನು ಒದ್ದು ಒಳಗೆ ಪ್ರವೇಶಿಸುತ್ತಾಳೆ. ಹಸಿವನ್ನು ತಣಿಸುವ ಅಕ್ಕಿ ಅನ್ನವಾಗಿ ಮಾತ್ರವಲ್ಲದೆ ಸಂಸ್ಕೃತಿಯ ಒಳಹೊಕ್ಕು ತನ್ನ ಸ್ಥಾನವನ್ನು ತುಂಬಿಕೊಂಡಿದೆ. ಹೆಣದ ಬಾಯಿಗೆ ಅಕ್ಕಿಯನ್ನಿಡುತ್ತಾರೆ. ಭಿಕ್ಷುಕರಿಗೆ ಅಕ್ಕಿಯನ್ನು ಭಿಕ್ಷೆಯ ರೂಪದಲ್ಲಿ ಕೊಡುತ್ತಾರೆ.

ಚೊಚ್ಚಲ ಬಾಣಂತಿಗೆ ಗಂಡನ ಮನೆಯವರು ತನ್ನ ಸೊಸೆ-ಮೊಮ್ಮಗುವಿನ ಯೋಗಕ್ಷೇಮದ ಕುರುಹಾಗಿ 'ಅಕ್ಕಿ-ಎಣ್ಣೆ'ಯನ್ನು ಕೊಡುತ್ತಾರೆ. ಪ್ರಯಾಣದ ಮಧ್ಯೆ ಹಸಿವಾದಾಗ ಊಟ ಮಾಡಿದರೆ "ಅನ್ನದ ಋಣ" ಇಲ್ಲಿತ್ತು ಎಂದು ಹೇಳುವ ವಾಡಿಕೆಯಿದೆ. ದೇವರು ಪ್ರತಿ ಅಗುಳಿನ ಮೇಲೆ ತಿನ್ನುವರರ ಹೆಸರು ಬರೆದಿರುತ್ತಾನೆಂದು ಜನಪದರು ನಂಬುತ್ತಾರೆ. ಭೂಮಿ ಹುಣ್ಣಿಮೆಯಂತಹ ಆಚರಣೆಗಳು ಬೆಳೆಯ ಕುರಿತಾಗಿಯೇ ಇರುವಂತಹವು. ಕರ್ನಾಟಕದ ಹಲವು ಕಡೆ ಒಂದೊಂದು ಹೆಸರಿನಲ್ಲಿ ಬೆಳೆಯ ಫಸಲನ್ನು ಗೌರವಿಸುತ್ತಾರೆ. ಬತ್ತ ತೆನೆಕಟ್ಟುವಾಗ, ಬತ್ತ ಕುಯ್ಯುವಾಗ, ಬತ್ತದ ರಾಶಿಗೆ, ಪೂಜೆ ಆರತಿ ಮಾಡಿ ಭೂಮಿ ತಾಯಿಯನ್ನು ಅನನ್ಯ ಭಕ್ತಿಯಿಂದ ಆರಾಧಿಸುವ ಸಂಪ್ರದಾಯವಿದೆ.

**ಎಳ್ಳು :** ಎಣ್ಣೆಗಾಗಿ, ಪೂಜೆಗಾಗಿ, ಶ್ರಾದ್ಧಕ್ಕಾಗಿ ಉಪಯೋಗಿಸುತ್ತಾರೆ. ಹಿಂದೂ ಶ್ರಾದ್ಧಗಳಲ್ಲಿ ಅನ್ನ ಹಾಗೂ ಕರಿಎಳ್ಳಿನ ಪಿಂಡಗಳನ್ನು ಸತ್ತವರಿಗೆ ಇಡಲಾಗುವುದು. ಎಷ್ಟು ಪಿಂಡಗಳನ್ನು ಇಡುವರೋ ಅಷ್ಟು ನರಕಗಳನ್ನೂ ಸತ್ತವರು ಪರಿಹರಿಸಿಕೊಳ್ಳುವನೆಂದು ಜನಪದರು ನಂಬುವರು.

ಶನಿದೇವರಿಗೆ ಎಳ್ಳಿನ ಸಿಹಿ ಖಾದ್ಯ ಮಾಡಿ ಭಕ್ತರಿಗೆ ಹಂಚುತ್ತಾರೆ. ಶನಿದೇವರ ಕಾಟದಿಂದ ಪರಿಹರಿಸಿಕೊಳ್ಳಲು ಎಳ್ಳಿನಿಂದ ಪೂಜೆ ಮಾಡುವರು. ಎಳ್ಳು ವಿನಾಯಕನಿಗೂ ಪ್ರಿಯವಾದುದು. ಎಳ್ಳು ಉಂಡೆ, ಎಳ್ಳಿನ ಬೆಲ್ಲ ಕೊಬ್ಬರಿಯಿಂದ ತಯಾರಿಸಿದ ಸಿಹಿ ತಿಂಡಿಯನ್ನು ಗಣೇಶನಿಗೆ ನೈವೇದ್ಯಕ್ಕೆ ಇಡುವರು. ಎಳ್ಳನ್ನು ದಾನ ಮಾಡಿದರೆ ಪಾಪ ಕಳೆಯುತ್ತದೆ ಎಂದು ನಂಬುವರು. ಸಂಕ್ರಾಂತಿಯಲ್ಲಿ ಎಳ್ಳು ಬೆಲ್ಲ ಕೊಬ್ಬರಿಯನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳಬಹುದು. ಪಿತೃಗಳು ಸ್ವರ್ಗ ಸೇರಲೆಂದು ಎಳ್ಳು - ನೀರನ್ನು ಬಿಡುತ್ತಾರೆ. ಮಹಾಲಯ, ಅಮಾವಾಸ್ಯೆಗಳಂದು ಪಿತೃಗಳಿಗೆ ಎಳ್ಳು ನೀರನ್ನು ಬಿಡುತ್ತಾರೆ. ಋತುಮತಿಯಾದ ಹೆಣ್ಣು ಮಗಳಿಗೆ ಎಳ್ಳಿನಿಂದ ತಯಾರಿಸಿದ ಭಕ್ಷ್ಯಗಳನ್ನು ಸೇವಿಸಲು ಕೊಡುವರು. ದೇಹದಲ್ಲಿರುವ ಕೆಟ್ಟ ನೀರನ್ನೆಲ್ಲ ಎಳ್ಳು ಹೊರತೆಗೆಯುತ್ತದೆಂದು ಜನಪದರು ನಂಬುವರು. ಎಳ್ಳು ಕಾಮೋದ್ದೀಪಕ ಗುಣವನ್ನು ಹೊಂದಿದೆ ಎನ್ನುವರು. ಮಕ್ಕಳಿಗೆ ಎಳ್ಳಿನ ತಿನಿಸುಗಳನ್ನು ಹೆಚ್ಚು ಕೊಡುವುದಿಲ್ಲ. ಕೆಲವೊಂದು ದೇವಿ ಸಂಬಂಧ ದೇವಾಲಯಗಳಲ್ಲಿ ಎಳ್ಳು ಜೀರಿಗೆಯನ್ನು ದೇವಾಲಯದ ಸುತ್ತು ಎರಚುವ ಸಂಪ್ರದಾಯವಿದೆ.

**ಉತ್ತರಾಣಿ :** ಇದು ಹೊಲಗಳಲ್ಲಿ ಹುಟ್ಟಿಕೊಳ್ಳುವ ಸಸ್ಯ. ಇದನ್ನು ಬೇಸಾಯಕ್ಕೆ ಸಂಬಂಧಿಸಿದ ಪೂಜೆಗಳಲ್ಲಿ ಬಳಸುತ್ತಾರೆ. ಬಿತ್ತನೆ ಮಾಡುವಾಗ, ಬೆಳೆ ಕುಯ್ಯುವಾಗ, ಮೇಟಿ ಪೂಜೆ, ರಾಶಿ ಪೊರಕೆಯ ಸಂದರ್ಭದಲ್ಲಿ ಹೂವಿಗೆ ಪರ್ಯಾಯವಾಗಿ ಬಳಸುತ್ತಾರೆ. ಸಂಕ್ರಾಂತಿಯ ಹಿಂದಿನ ದಿನ ಮೆದೆಗಳಿಗೆ ಹಾಕುವ ಪತ್ರೆಗಳಲ್ಲಿ ಉತ್ತರಾಣಿಯೂ ಒಂದು.

ದವನ, ಪಂಚಪತ್ರೆ, ಪಚ್ಚೆತೆನೆ, ಕಾಮಕಸ್ತೂರಿ, ಮರುಗ ಇವೆಲ್ಲವೂ ಹೂವಿಗೆ ಪರ್ಯಾಯವಾಗಿ ಪೂಜೆಗಳಲ್ಲಿ ಬಳಸುತ್ತಾರೆ. ಸುವಾಸನಾಯುಕ್ತವಾದ ಈ ಪತ್ರೆಗಳನ್ನು ಹೂವಿನೊಂದಿಗೆ ಮಾಲೆಕಟ್ಟಲು ಬಳಸುವರು. ಸ್ವರ್ಗಕ್ಕೆ ಹೂವಿನ ಕೊರತೆ ಕಂಡುಬಂದಾಗ ಪತ್ರೆಯನ್ನು ಭಕ್ತಿಯಿಂದ ಇಟ್ಟು ಪೂಜಿಸುವ ಪರ್ಯಾಯ ವ್ಯವಸ್ಥೆಯನ್ನು ಜನಪದರು ಕಂಡು ಕೊಂಡಿದ್ದಾರೆ. ದವನವು ಒಣಗಿದರೂ ಸುಗಂಧ ಬೀರುವುದರಿಂದ ಬಟ್ಟೆ, ಪುಸ್ತಕದೊಳಗೆ ಇಡುವ ರೂಢಿಯಿದೆ.

**ಮಾವು :** ಮಾವಿನ ಎಲೆಯನ್ನು ತೋರಣವಾಗಿ ಕಟ್ಟುತ್ತಾರೆ. ಇದು ಸ್ವಾಗತ ಕೋರುವುದರ ಸಂಕೇತವಾಗುತ್ತದೆ. ಗ್ರಾಮದೇವತೆಗಳಿಗೆ ಕುರಿ, ಮೇಕೆಗಳನ್ನು ಬಲಿಕೊಡುವಾಗ ಕೊರಳಿಗೆ ಮಾವಿನ ಎಲೆಯ ಹಾರವನ್ನು ಹಾಕುತ್ತಾರೆ. ಚಪ್ಪರಗಳಿಗೆ ಮಾವಿನ ಸೊಪ್ಪನ್ನು ಕಟ್ಟುತ್ತಾರೆ. ಯುಗಾದಿ, ಸಂಕ್ರಾಂತಿ ಇತರೆ ಯಾವುದೇ ಹಬ್ಬ-ಹರಿದಿನಗಳು ಹುಟ್ಟಿನಿಂದ ಸಾವಿನವರೆಗಿನ ಯಾವುದೇ ಆಚರಣೆಗಳಿರಲಿ ಮನೆಯ ಬಾಗಿಲನ್ನು ಮಾವಿನ ತೋರಣದಿಂದ ಸಿಂಗರಿಸುತ್ತಾರೆ. ಸಂಕ್ರಾಂತಿಯಂದು ಮೆದೆಗೆ, ಮನೆಗೆ ದವಸ ಧಾನ್ಯಗಳನ್ನು ತುಂಬಿದ ಚೀಲಗಳಿಗೆ ಮಾವು - ಬೇವಿನ ಸೊಪ್ಪನ್ನು ಹಾಕುತ್ತಾರೆ. ಇದಕ್ಕೆ "ಪತ್ರೆ ಹಾಕುವುದು" ಎಂದು ಕರೆಯುವರು. ಮಾವಿನ ಎಲೆ ಸುವಾಸನಾಯುಕ್ತವಾಗಿದ್ದು ಕ್ರಿಮಿಹರ ಗುಣಗಳನ್ನು ಹೊಂದಿರುವ ಸಾಧ್ಯತೆಗಳಿವೆ.

**ಜೀರಿಗೆ :** ಕೆಲವೊಂದು ಶಕ್ತಿ ದೇವತೆಗಳಿರುವ ದೇವಾಲಯಗಳಲ್ಲಿ ಜೀರಿಗೆ - ಎಳ್ಳು ಮಿಶ್ರ ಮಾಡಿ ದೇವಾಲಯದ ಹೊರ ಭಾಗದಿಂದ ಮೂರು ಪ್ರದಕ್ಷಿಣೆ ಬಂದು ದೇವಾಲಯಕ್ಕೆ ಎರಚುತ್ತಾರೆ. ಜೀರಿಗೆ ಜೀರ್ಣಕಾರಿ ಗುಣವನ್ನು ಹೊಂದಿದೆ. ಗರ್ಭಿಣಿಗೆ ಜೀರಿಗೆ ಕಷಾಯವನ್ನು ಕುಡಿಸುತ್ತಾರೆ. ಹೆರಿಗೆ ನೋವನ್ನು ಕಡಿಮೆ ಮಾಡಲು ಇದು ಸಹಕಾರಿ. ಇದೊಂದು ಜನಪದ ವೈದ್ಯ. ಹಿಂದೂ ಸಂಸ್ಕೃತಿಯಲ್ಲಿ ಜೀರಿಗೆಗೆ ಇರುವ ಮಾನ್ಯತೆಯನ್ನು ಕುರಿತಂತೆ ಪ್ರಸಿದ್ಧ ತ್ರಿಪದಿಯೊಂದು ಇದೆ.

*ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ*
*ಎಳ್ಳು ಜೀರಿಗೆ ಬೆಳಿಯೋಳ ಭೂಮ್ತಾಯ*
*ಎದ್ದೊಂದು ಗಳಿಗೆ ನೆನದೇನ*

ಎಳ್ಳು ಜೀರಿಗೆ ಬೆಳೆಯುವ ಭೂಮಿತಾಯಿಯನ್ನು ಜನಪದರು ಗೌರವದಿಂದ ನೆನೆಯುವ ಪರಿಯಿದು.

**ಕಬ್ಬು :** ಕಬ್ಬು ಕೆಲವು ಶುಭ ಸಮಾರಂಭಗಳಲ್ಲಿ ಬಾಳೆಯಷ್ಟೇ ಪ್ರಾಧಾನ್ಯ ಪಡೆದುಕೊಂಡಿದೆ. ಕರ್ನಾಟಕದಲ್ಲಿ ಸಂಕ್ರಾಂತಿ ಹಬ್ಬದಂದು ವಿಶೇಷವಾಗಿ ಎಳ್ಳುಬೆಲ್ಲದ ಜೊತೆಗೆ ಕಬ್ಬನ್ನು ಹಂಚುವುದುಂಟು. ಚಳಿಗಾಲದಲ್ಲಿ ಬರುವ ಸಂಕ್ರಾಂತಿಯಲ್ಲಿ ಇವನ್ನೆಲ್ಲ ಉಪಯೋಗಿಸುವುದರ ಉದ್ದೇಶ ಒಣಚರ್ಮ ಬಿರಿದು ನವೆ ಆಗುವುದನ್ನು ತಡೆಯುತ್ತಿದೆ. ಗೌರಿ ಗಣೇಶ, ಆಯುಧ ಪೂಜೆಗಳಲ್ಲೆಲ್ಲ ಶುಭ ಸೂಚಕವಾಗಿ ಬಾಳೆ ಮತ್ತು ಕಬ್ಬಿನ ಎಳೆ ದಿಂಡುಗಳನ್ನು ಕಟ್ಟುತ್ತಾರೆ. ಹಸುರು ಜೀವನದ ಉಸಿರು ಎಂಬ ಚಿಂತನೆಗಳನ್ನು ಇಟ್ಟುಕೊಂಡ ಜನ ಕಬ್ಬು-ಬಾಳೆ, ತೆಂಗು, ಮಾವು, ಬೇವುಗಳನ್ನು ಬಳಸುವುದರೊಂದಿಗೆ ವೈಜ್ಞಾನಿಕ ಅರಿವು ಕಂಡುಕೊಂಡಿದ್ದಾರೆ. ಇಲ್ಲಿ ಬಳಸುವ ಹಸುರುಗಳಲ್ಲಿ ಕೆಲ ದಿನಗಳಾದರು ತಾಜಾತನವನ್ನು ಹೊಂದಿರುತ್ತದೆ.

ಒಟ್ಟಿನಲ್ಲಿ ನೈಸರ್ಗಿಕವಾಗಿ ದೊರೆಯುವ ಎಲ್ಲ ಸಸ್ಯಗಳು ಮಾನವನ ಉಪಯೋಗಕ್ಕೆ ಬರುತ್ತವೆ. ಅವುಗಳ ಪ್ರಯೋಜನವನ್ನರಿತು ತನ್ನ ಬದುಕಿನಲ್ಲಿ ಬಳಸತೊಡಗಿದ. ಮಾನವನ ಬದುಕಿನ ಅವಿಭಾಜ್ಯ ಅಂಗಗಳೇ ಆಗಿ ಜೀವನಪರ್ಯಂತ ಒಂದಲ್ಲ ಒಂದು ರೀತಿಯಲ್ಲಿ ಉಪಯೋಗಕ್ಕೆ ಬಂದವು. ಆದ್ದರಿಂದ ಇಂತಹ ಅಮೂಲ್ಯ ಸಸ್ಯಸಂಪತ್ತನ್ನು ದೈವ ಸಮಾನವೆಂದು ಬಗೆದು ಪೋಷಿಸಿ ಬೆಳೆಸುವುದರ ಜೊತೆಗೆ ಪೂಜಿಸತೊಡಗಿದ. ಅವುಗಳನ್ನು ಕುರಿತು ಗಾದೆ, ಒಗಟು, ಹಾಡು, ಕಥೆ, ಪುರಾಣ, ಐತಿಹ್ಯಗಳು ಹುಟ್ಟಿಕೊಂಡವು. ಕೆಲವು ಸಸ್ಯಗಳು ಔಷಧೀಯ ಗುಣಗಳನ್ನು ಹೊದಿರುವುದರಿಂದ ಅವನ್ನು ವಿಶೇಷ ಮುತುವರ್ಜಿ ವಹಿಸಿ ಮನೆಯ ಅಂಗಳದಲ್ಲೊ, ಉದ್ಯಾನವನಗಳಲ್ಲೊ, ದೇವಾಲಯಗಳಲ್ಲೆ ಬೆಳೆಸತೊಡಗಿದ. ಸಸ್ಯಗಳಿಲ್ಲದೆ ಮಾನವರಿಲ್ಲ ಎಂಬ ಸತ್ಯ ಅರಿವಾದಾಗ ಅವು ಜನಪದರ ಬಾಳಿನಲ್ಲಿ ಹಾಸು ಹೊಕ್ಕಾದುವು. ಸಸ್ಯ ಪ್ರಪಂಚಕ್ಕೆ ಕೃತಜ್ಞರಾಗಲು ಅವುಗಳನ್ನು ಆಚರಣೆಗಳಲ್ಲಿ ಬಳಸತೊಡಗಿದರು. ಆ ಮೂಲಕ ದೈವತ್ವದ ಪಟ್ಟವನ್ನು ಸಸ್ಯಗಳಿಗೆ ನೀಡುತ್ತಾ ಹೋದರು. ಮಾನವ ಸೃಷ್ಟಿಯನ್ನು ಕುರಿತಂತೆ ಹಲವಾರು ಪುರಾಣ, ಐತಿಹ್ಯ, ಕಥೆಗಳನ್ನು ಸಸ್ಯಗಳೊಂದಿಗೆ ಹೋಲಿಸಿ ಹೇಳುವಲ್ಲಿ ಸಸ್ಯ ಪ್ರಪಂಚಕ್ಕೆ ಇರುವ ಮಾನ್ಯತೆ ಎಂಥದು ಎಂಬುದನ್ನು ಸಾಬೀತು ಪಡಿಸಿದರು. ಉದಾಹರಣೆಗೆ ಆಲ, ಅರಳಿ, ಅತ್ತಿ, ವೀಳ್ಯ, ತೆಂಗು, ಬನ್ನಿ ಇತ್ಯಾದಿ. ಉಪಯೋಗಕ್ಕೆ

ಬರುವ ವಸ್ತುವನ್ನು ಗೌರವಿಸುವುದು ಸಾಮಾನ್ಯ ಅದರಂತೆ ಸಸ್ಯಗಳಿಗೂ ಆ ಮಾನ್ಯತೆ ದೊರಕಿದೆ. ಬನ್ನಿಮರ ಅಪರೂಪವಾಗುತ್ತಿದೆ. ಆಲ, ಅರಳಿಗಳು ಹೆಚ್ಚು ಪ್ರದೇಶವನ್ನು ಆವರಿಸಿಕೊಳ್ಳುತ್ತವೆ ಎಂದು ಅವುಗಳ ಸಂತತಿಯನ್ನು ನಾಶ ಮಾಡುತ್ತಿದ್ದಾರೆ. ಇದರಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ. ಈ ನಿಟ್ಟಿನಲ್ಲಿ ಆಚರಣಾತ್ಮಕ ಸಸ್ಯಗಳ ಪ್ರಯೋಜನ, ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳಲ್ಲಿ ಸಸ್ಯಗಳಿಲ್ಲದೆ ಯಾವ ಕಾರ್ಯವೂ ಜರುಗುವುದೇ ಇಲ್ಲ ಎಂಬ ಸತ್ಯದ ಅರಿವಾಗಬೇಕಿದೆ. ಆ ಮೂಲಕ ಸಂಪ್ರದಾಯಸ್ಥ ಮನೆ - ಮನಗಳನ್ನು ತಲುಪಿ ಮುಂದಿನ ಪೀಳಿಗೆಗೂ ಇಂತಹ ಅಪರೂಪದ ಆವಶ್ಯಕವಾದ ಸಸ್ಯ ಸಂಪತ್ತು ಉಳಿಯಲಿ ಎಂಬುದೇ ನಮ್ಮೆಲ್ಲರ ಹಾರೈಕೆ. ತಾಯಿಯನ್ನು ಪೋಷಿಸಿದರೆ ತಾನೆ ಆರೋಗ್ಯವಂತ ಮಕ್ಕಳನ್ನು ಪಡೆಯಲು ಸಾಧ್ಯ. ಆ ನಿಟ್ಟಿನಲ್ಲಿ ಯುವ ಪೀಳಿಗೆ ಸಸ್ಯದ ಜೊತೆ ಜೊತೆಗೆ ಮಾನವನ ಉಳಿವು ಬೆಳವಣಿಗೆ ಎಷ್ಟು ಆವಶ್ಯಕವೋ ಅಷ್ಟೇ ಮರಗಳು ಅಗತ್ಯ ಎಂಬುದನ್ನು ಮರೆಯಬಾರದು. ಕನಿಷ್ಠ ಕೃಷಿಯೋಗ್ಯವಲ್ಲದ ಭೂಮಿಯಲ್ಲಾದರೂ ಎಲ್ಲಾ ತರಹದ ಉಪಯುಕ್ತ ಮರಗಳನ್ನು ಬೆಳೆಸಿ ಸಾವಿರಾರು ಪಕ್ಷಿ ಸಂಕುಲವನ್ನು, ವಿನಾಶದ ಅಂಚಿನಲ್ಲಿರುವ ಪ್ರಾಣಿಗಳನ್ನು ಉಳಿಸಬೇಕಿದೆ. ಇದರಿಂದ ನೆರಳು ಕೊಡುವ ಮರಗಳನ್ನು ನೆಡುವುದರಿಂದ ಬೇಸಗೆಯಲ್ಲಿ ಜಾನುವಾರುಗಳಿಗೆ ಮೇವು ಸಿಗುತ್ತದೆ. ಹಾಗೆಯೇ ಮರಗಳಿದ್ದರೆ ತಾನೆ ಮಳೆ ಬರುವುದು!

**ಗ್ರಂಥ ಋಣ**


ವನಸಿರಿ, ಅಜ್ಜಂಪುರ ಕೃಷ್ಣಸ್ವಾಮಿ

ಸುಗಂಧ ದ್ರವ್ಯ ಸಸ್ಯಗಳು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ

ಪೂಜಾ ವೃಕ್ಷಗಳು, ಸತ್ಯವತಿ ಆದ್ಯ

ಮನೆಯಂಗಳದಲ್ಲಿ ಆಯುರ್ವೇದ, ಎಂ.ಆರ್. ಶಾನಭಾಗ

ಔಷಧಿಯುಕ್ತ ಫಲ ಪುಷ್ಪಗಳು, ಬೆಸೂರು ನಂಜಣ್ಣ

ಆಯುರ್ವೇದ, ಡಾ.ಹೋ. ನಾಗರತ್ನ

ಸಸ್ಯ ಪುರಾಣ, ಬಿ.ಜಿ.ಎಲ್. ಸ್ವಾಮಿ

ಕನ್ನಡ ಜಾನಪದ ವಿಶ್ವಕೋಶ


*ಎಸ್.ಕೆ.ಎನ್.*

**ನವಣೆ** ನವಣೆ ಇದೊಂದು ಕಿರುಧಾನ್ಯ.ಮೂರರಿಂದ ಐದು ಅಡಿ ಎತ್ತರ ಬೆಳೆಯುತ್ತದೆ. ಜಡೆಯಂತೆ ಇಳಿಬಿದ್ದು, ಗಾಳಿಗೆ ತೊನೆಯುವ ಈ ಧಾನ್ಯದ ಪರಿಚಯ ಎಲ್ಲ ಪ್ರದೇಶದ ರೈತರಿಗೆ ಇದೆ. ಸಾಮಾನ್ಯವಾಗಿ ಎಲ್ಲ ತರದ ಮಣ್ಣಿನಲ್ಲೂ ಬೆಳೆಯ ಬಲ್ಲದು. ಇದು ಮಳೆ ಆಶ್ರಿತ ಬೆಳೆ. ದಕ್ಷಿಣ ಕರ್ನಾಟಕದಲ್ಲಿ ರಾಗಿ ಮತ್ತು ಜೋಳದ ಸಾಲು ಬೆಳೆಯಾಗಿ, ಮಿಶ್ರ ಬೆಳೆಯಾಗಿ ಬೆಳೆದರೆ, ಉತ್ತರ ಕರ್ನಾಟಕದಲ್ಲಿ ನವಣೆಯನ್ನು ಏಕ ಬೆಳೆಯಾಗಿ ಬೆಳೆಯುವ ಪದ್ಧತಿಯಿದೆ. ಉತ್ತು ಹಸನು ಮಾಡಿ ಹೊಲಕ್ಕೆ ಬಿತ್ತಿದರೆ ಸಾಕು ಬೆಳೆ ಚೆನ್ನಾಗಿ ಬರುತ್ತದೆ. ಒಂದೆರಡು ಸಾರಿ ಕುಂಟೆ ಹೊಡೆಯಬೇಕು. ಎಕರೆಗೆ ನಾಲ್ಕರಿಂದ ಐದು ಚೀಲ ಇಳುವರಿ ಬರುತ್ತದೆ. ಚಿಕ್ಕಮಗಳೂರು, ಕಡೂರು, ತರೀಕೆರೆ ಮುಂತಾದ



ಸ್ಥಳಗಳಲ್ಲಿ ಇಂದು ಕೂಡ ಎಕರೆಗಟ್ಟಲೆ ನವಣೆ ಬೆಳೆಯುತ್ತಾರೆ. ದನದ ಬಾಲದ ಕುಚ್ಚಿನ ರೀತಿ ದಪ್ಪಗಿರುವ ಕುಚ್ಚು ನವಣೆ, ಜಡೆಯಂತೆ ಇಳಿಬಿದ್ದ ಜಡೆ ನವಣೆ, ಕುಯಿಲು ನವಣೆ ಹೀಗೆ ಹಲವಾರು ತಳಿಗಳಿವೆ. ಈ ಧಾನ್ಯ ಊಟಕ್ಕೂ ಯೋಗ್ಯವಾದುದು. ಹಸುಗಳಿಗೆ ಉತ್ತಮ ಮೇವು, ರೋಗ ಬಾಧೆ ಕೀಟಗಳ ಕಾಟ ನವಣೆ ಧಾನ್ಯಕ್ಕೆ ಇರುವುದಿಲ್ಲ.

ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಹಲವಾರು ತಳಿಗಳನ್ನು ರೈತರು ವೈವಿಧ್ಯಮಯವಾಗಿ ಬೆಳೆಯುತ್ತಾರೆ. ಎಡೆಯೂರು ನವಣೆ' ಒಳ್ಳೆಯ ರುಚಿ ನೀಡುತ್ತದೆ. ಹಸುಗಳಿಗೆ ಮೇವು. ಹೆಚ್ಚಿನದಾಗಿ ಕೊಪ್ಪಳ ಜಿಲ್ಲೆಯಲ್ಲಿ ಈ ತಳಿಯನ್ನು ಬೆಳೆಯುತ್ತಾರೆ. 'ಕೆಂಪು ನವಣೆ' ಇದು ಕೆಂಪು ಕಾಳಿನ ತಳಿಯಾಗಿದೆ. ಕಾಂಡದಪ್ಪವಾಗಿದ್ದು ಎತ್ತರವಾಗಿ ಬೆಳೆಯುತ್ತದೆ. ಮುಂಗಾರು ಬಿರುಸಾಗಿರುತ್ತದೆ. 'ಮರ ನವಣೆ' ಎತ್ತರವಾಗಿ ಬೆಳೆಯುತ್ತದೆ. ಕಾಳು ಕಂದು ಬಣ್ಣದ್ದಾಗಿದ್ದು ಕಾಂಡ ಬಿಳಿ ಬಣ್ಣದಿಂದ ಕೂಡಿರುತ್ತದೆ. ತೆನೆಯಲ್ಲಿ ತೆಳುವಾಗಿ ಮುಳ್ಳುಗಳಿರುತ್ತವೆ. ಇಳುವರಿ ಚೆನ್ನಾಗಿ ಬರುತ್ತದೆ. ತೆನೆ ಉದ್ದವಾಗಿದ್ದು ಮಳೆ ಕಡಿಮೆಯಾದರೂ ಈ ಬೆಳೆ ಚೆನ್ನಾಗಿಯೇ ಬರುತ್ತದೆ. 'ಹಾಲುನವಣೆ' ಇದರ ತೆನೆ ಅಪ್ಪಟ ಬಿಳಿ. ಚಿಕ್ಕ ಚಿಕ್ಕ ತೆನೆಗಳು ಕಂಡುಬರುತ್ತವೆ. ಇದರ ಎತ್ತರಮಧ್ಯಮ. ಹಾಲುದುಂಬುವಾಗ ತೆನೆಗಳನ್ನು ಹಿಂಡಿದರೆ ಹಾಲು ಬರುತ್ತದೆ. ಈ ಕಾರಣದಿಂದಲೇ ಹಸು ಕರುಗಳಿಗೆ ಇದು ಒಳ್ಳೆಯ ಮೇವು ಎನಿಸಿದೆ. ಅನ್ನ ಮೃದುವಾಗಿರುತ್ತದೆ. ಇಳುವರಿ ಸಾಧಾರಣವಾಗಿದ್ದರೂ ಮನೆ ಬಳಕೆಗೆ ಒಳ್ಳೆಯ ತಳಿ. ನವಣೆ ತಳಿಯಲ್ಲಿ 'ಉರುಬಲ' ಎಂಬ ತಳಿಯಿದೆ. ವಿಶೇಷವಾಗಿ ಕುಷ್ಟಗಿ ಭಾಗದಲ್ಲಿ ಬೆಳೆಯುತ್ತಾರೆ. ಕೆಂಪು ಮಣ್ಣಿನಲ್ಲಿ ಬೆಳೆದರೆ ಉತ್ತಮ ಇಳುವರಿ ಬರುತ್ತದೆ.

'ಹುರಕಲಿ ನವಣೆ' ಈ ತಳಿಯನ್ನು ಮುಂಗಾರು ಮಳೆಯಲ್ಲಿ ರೈತರು ಬಿತ್ತುತ್ತಾರೆ. ಬಿಳಿಯ ಕಾಳಿನ ಉದ್ದ ತೆನೆ ಇದಾಗಿದೆ. ಬಿಳಿ ಕಾಳು, ಸಿಪ್ಪೆ ಕೂಡ ಬಿಳಿಯಾಗಿಯೇ ಇರುತ್ತದೆ. ಇಳುವರಿ ಉತ್ತಮ. ಅನ್ನ ಒಳ್ಳೆ ರುಚಿಯಾಗಿರುತ್ತದೆ. 'ಕುಚ್ಚುನವಣೆ'ಯ ಗರಿ ಅಗಲವಾಗಿದ್ದು, ತೆನೆ ಮಾತ್ರ ಕುಚ್ಚಿನ ಆಕಾರದಿಂದ ಕೂಡಿರುತ್ತದೆ. ಗರಿಷ್ಟ ರುಚಿ. 'ಹುಲ್ಲು ನವಣೆ'ಯ ತೆನೆಯಲ್ಲಿ ಮುಳ್ಳುಗಳ ರಚನೆಯಿರುತ್ತದೆ. ಇದರ ಕಡ್ಡಿ ಸಣ್ಣದು. ಸಾಧಾರಣ ಎತ್ತರ ಬೆಳೆಯುವ ಧಾನ್ಯವಾಗಿದ್ದು ಕುಷ್ಟಗಿ ಭಾಗದಲ್ಲಿ ಹೆಚ್ಚಾಗಿ

ಬೆಳೆಯುತ್ತಾರೆ. 'ಕುಯಿಲು ನವಣೆ'ಯನ್ನು ಕಾವೇರಿ ಹೊಳೆ ಬಯಲಿನ ಕಾಡು ಹಳ್ಳಿಯ ರೈತರು ಬೆಳೆಯುತ್ತಾರೆ. ತಿಂಗಳಿಗೆ ಕುಯಿಲಿಗೆ ಬರುವ ಬೆಳೆ ಇದಾಗಿದೆ. 'ಜಡೆ ನವಣೆ' ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಲವಾರು ಪ್ರದೇಶಗಳಲ್ಲಿ ಬೆಳೆಯುತ್ತಾರೆ. ನಾಲ್ಕು ತಿಂಗಳ ಅವಧಿಯ ಬೆಳೆ ಇದಾಗಿದೆ. ರಾಗಿಯ ಜೊತೆ ಸಾಲು ಬೆಳೆಯಾಗಿಯೂ ಬೆಳೆಯುತ್ತಾರೆ. ತೆನೆಗಳು ಉದ್ದವಾಗಿರುತ್ತವೆ ಹಾಗೂ ಕೆಂಪು ಕಾಳಿನಿಂದ ಕೂಡಿರುತ್ತದೆ. 'ತುಪ್ಪದ ನವಣೆ'ಯು ದಪ್ಪ ತೆನೆಯಿಂದ ಕೂಡಿರುತ್ತದೆ. ಕಡ್ಡಿ ದಪ್ಪನಾಗಿರುತ್ತದೆ. ಅಗಲವಾದ ಎಲೆಗಳಿಂದ ಸಮೃದ್ಧವಾಗಿ ಬೆಳೆಯುವ ತಳಿ ಇದಾಗಿದೆ. 'ಕೆಂಪು ನವಣೆ'ಯಂತೂ ಎತ್ತರವಾಗಿ ಬೆಳೆಯುತ್ತದೆ. ಕಾಳು ಕಂದು ಬಣ್ಣದಲ್ಲಿರುತ್ತದೆ. ತೆನೆಯಲ್ಲಿ ಮುಳ್ಳುಗಳಿರುತ್ತವೆ. 'ಕರಿ ನವಣೆ'ಯ ತಳಿಯನ್ನು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ತುರುವೇಕೆರೆ ಭಾಗಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತಾರೆ. 'ಬಿಳಿ ನವಣೆ'ಯನ್ನು - ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿಬೆಳೆಯುತ್ತಾರೆ ಇದರ ಕಾಳಿನ ಸಿಪ್ಪೆ ಮೃದುವಾಗಿರುವುದರಿಂದ ಸುಲಭವಾಗಿ ಅಕ್ಕಿ ಮಾಡಬಹುದು. ಅನ್ನ ಮತ್ತು ಉಪ್ಪಿಟ್ಟು ತಯಾರಿಕೆಗೆ ಅಮೂಲ್ಯವಾದ ಧಾನ್ಯವಾಗಿದೆ. 'ಜೊತಗುನವಣೆ' - ಈ ನವಣೆಯು ಕುಚ್ಚು ನವಣೆಯನ್ನು ಹೋಲುತ್ತದೆ. ಇದನ್ನು ಏಕ ಬೆಳೆಯಾಗಿಯೂ ಬೆಳೆಯಬಹುದು. ಕಲಘಟಗಿ, ಹುಬ್ಬಳ್ಳಿ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಹಾಲು ನವಣೆ, ಕೆಂಪು ನವಣೆಯನ್ನು ಹೆಚ್ಚಿನದಾಗಿ ಬೆಳೆಯುತ್ತಾರೆ.

ನವಣೆ ಅಕ್ಕಿಯಿಂದ ಹಲವಾರು ಅಡುಗೆಗಳ ಜೊತೆಗೆ ಹಲವಾರು ಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಬಹುದು. ನವಣೆ ಉಂಡೆ, ನವಣೆ ಆಲಮಂಡಿಗೆ, ನವಣೆ ರೊಟ್ಟಿ, ನವಣೆ ಹಪ್ಪಳ, ನವಣೆಗಿಣ್ಣು, ನವಣೆ ಹೋಳಿಗೆ ಮೊದಲಾದ ಬಗೆ ಬಗೆಯ ತಿನಿಸುಗಳನ್ನು ಮಾಡಬಹುದು. ಆರೋಗ್ಯಕ್ಕೆ ಉತ್ತಮವಾದ ಪೌಷ್ಟಿಕವಾದ ಆಹಾರವೂ ಆಗಿದೆ.

***ಕೆ.ಟಿ.ಕೆ.***

**ನಾಲೆ** ವ್ಯವಸಾಯಕ್ಕೆ ಕೃತಕವಾಗಿ ನಿರ್ಮಿಸಿಕೊಂಡ ನೀರಾವರಿ ವ್ಯವಸ್ಥೆಗಳಲ್ಲಿ ಒಂದು. ಇದರ ಇತಿಹಾಸ ಅತ್ಯಂತ ಪ್ರಾಚೀನವಾದುದು. ಪ್ರಪಂಚದ ಎಲ್ಲ ಭಾಗಗಳಲ್ಲೂ ನಾಲೆಯ ವ್ಯವಸ್ಥೆ ಇರುವುದು ತಿಳಿದುಬರುತ್ತದೆ. ನಾಲೆಗಳನ್ನು ರೈತನ ಜೀವನಾಡಿಗೆ ಹೋಲಿಸಬಹುದು. ನಿಷ್ಪ್ರಯೋಜಕವಾಗಿ ಹರಿದು ಹೋಗುವ ಅಪಾರ ಪ್ರಮಾಣದ ನೀರನ್ನು ತಡೆದು, ಬೇಕಾದ ಹಾಗೆ ಬಳಸಿಕೊಳ್ಳುವ ವಿಧಾನವಿದು. ನಾಲೆಗಳನ್ನು ಸಾಮಾನ್ಯವಾಗಿ ಜೀವನದಿಗಳ ಹಾಗೆ ಸದಾ ಹರಿಯುವಂತೆ ನಿರ್ಮಿಸಿಕೊಳ್ಳುವುದು ಸಹಜ. ನಾಗರಿಕತೆ ಬೆಳೆದಂತೆ ನಾಲೆಗಳ ರಚನಾ ಕಾರ್ಯ ಹೆಚ್ಚುತ್ತಾ ಹೋಯಿತು.

ನದಿಗಳು ದೇಶದ ಒಗ್ಗಟ್ಟಿನ ಪ್ರತೀಕ. ಯಾವುದೋ ರಾಜ್ಯದಲ್ಲಿ ಹುಟ್ಟಿದ ನದಿ ಮತ್ತೊಂದು ರಾಜ್ಯದಲ್ಲಿ ಉಪಯೋಗವಾಗುವುದರಿಂದ ಪರಸ್ಪರ ಸ್ನೇಹ ಸಂಬಂಧಗಳು ಅನಿವಾರ್ಯವಾಗಿ ಬೆಳೆಯುತ್ತವೆ. ಭಾರತದ ನಕ್ಷೆಯನ್ನು ಗಮನಿಸಿದಾಗ ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ನದಿಯಿಂದ ನದಿಗೆ ನೀರು ಹರಿಸಿ ರಾಜ್ಯದಿಂದ ರಾಜ್ಯಕ್ಕೆ ನದೀ ಜೋಡಣೆ ಮಾಡುವುದರಿಂದ ಪರಸ್ಪರ ಒಪ್ಪಂದಗಳ ಮೂಲಕ ನದಿನೀರಿನ ಹಂಚಿಕೆ ವಿಷಯದಲ್ಲಿ ನಿಯಮಗಳು ರೂಪಿತಗೊಳ್ಳುತ್ತವೆ. ನದಿ ನೀರಿಗೆ ಅಣೆಕಟ್ಟು ಕಟ್ಟುವುದು ಪ್ರಮುಖವಾಗಿ ಸಂಭವನೀಯ ಅವಘಡಗಳನ್ನು ತಡೆಯುವ ಸಲುವಾಗಿ ಮತ್ತು ಕ್ಷಾಮಡಾಮರಗಳನ್ನು ಎದುರಿಸುವ ಸಲುವಾಗಿ. ರೈತನ ಕಣಜದಲ್ಲಿ ದವಸ ಧಾನ್ಯಗಳಿರುವ ಹಾಗೆ ಇಂಥ ಅಮೂಲ್ಯ ಜಲನಿಧಿಯನ್ನು ಶೇಖರಿಸಿಟ್ಟುಕೊಳ್ಳುವುದು ರೈತನ ಜಾಣ್ಮೆಯ ಪ್ರತೀಕವೇ ಸರಿ. ಹೀಗೆ ಶೇಖರಿಸಿದ ನೀರನ್ನು ರೈತನ ಜಮೀನಿಗೆ ಹರಿಸುವ ನಾಲೆಗಳು ಆಯಾಯ ಭೂಲಕ್ಷಣಗಳಿಗನುಗುಣವಾಗಿ ಹಾಗೂ ನೀರಿನ ಪ್ರಮಾಣವನ್ನನುಸರಿಸಿ ಉದ್ದ, ಅಗಲ ಮತ್ತು ಆಳಗಳಲ್ಲಿ ವ್ಯತ್ಯಾಸ ಹೊಂದಿರುತ್ತವೆ.

ನಾಲೆಗಳಿಂದ ಆಗುವ ಉಪಯೋಗಗಳು ಹಲವು. ಆಯಾ ಪ್ರದೇಶ, ವಾಯುಗುಣ, ಭೌಗೋಳಿಕತೆಗೆ ಅನುಗುಣವಾಗಿ ಅಲ್ಲಲ್ಲಿಯ ಸ್ವಾಭಾವಿಕ ಸಂಪತ್ತನ್ನು ಶ್ರೀಮಂತಗೊಳಿಸಬಲ್ಲ ಪ್ರಮುಖ ಅಂಶಗಳಲ್ಲಿ ಇದೂ ಒಂದು. ಸರ್ವಋತು ನದಿಗಳ ಮೂಲಕ ನಾಲೆಗಳಿಗೆ ನೀರನ್ನು ಹರಿಸುವುದರಿಂದ ಬಹುವಾರ್ಷಿಕ ಬೆಳೆಗಳಾದ- ತೆಂಗು, ಕಂಗು, ಮಾವು, ಬೇವು ಹಾಗೂ ಹಲವು ವಾಣಿಜ್ಯ ಬೆಳೆಗಳನ್ನು ಬೆಳೆಯಬಹುದು.ಎರಡು ಮೂರು ನೀರಾವರಿ ಬೆಳೆಗಳನ್ನು ಬೆಳೆಸಲು ಅವಕಾಶವಾಗುತ್ತದೆ. ಸರ್ವಋತು ನದಿಗಳಲ್ಲದೆ ಮಳೆಗಾಲದಲ್ಲಿ ಮಾತ್ರ ಹರಿಯುವ ನದಿಗಳಿಗೂ ಸಣ್ಣ ಪ್ರಮಾಣದ ನಾಲೆಗಳನ್ನು/ಕಾಲುವೆಗಳನ್ನು ಜೋಡಿಸಿ ಅಲ್ಪಾವಧಿಯ ಬೆಳೆಗಳಾದ ಮೆಣಸಿನ ಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಹಿಪ್ಪುನೇರಳೆ ಬೆಳೆಸಬಹುದು. ಜೊತೆಗೆ ವೀಳ್ಯದೆಲೆ ಇತ್ಯಾದಿ ಕೈತೋಟಗಳನ್ನು ಮಾಡಿಕೊಳ್ಳಬಹುದು.

ದಕ್ಷಿಣ ಭಾರತದ ಕೃಷಿ ಪದ್ಧತಿಯಲ್ಲಿ ಪ್ರಧಾನ ಪಾತ್ರ ನಾಲೆಗಳದೇ. ಕಾವೇರಿ, ಕೃಷ್ಣ, ತುಂಗ, ಭದ್ರ, ಗೋದಾವರಿ, ನೇತ್ರಾವತಿ, ವಾರಾಹಿ ಮುಂತಾದ ನದಿಗಳನ್ನು ಇಲ್ಲಿ ಉದಾಹರಿಸಬಹುದು. ಕಾಲುವೆಗಳ ಉಪಯೋಗ ಬಹು ವಿಧವಾದುದು. ಪ್ರಾಣಿ ಪಕ್ಷಿಗಳಿಂದ ಹಿಡಿದು ಮಾನವನ ದಾಹ ನೀಗಿಸುವ ತನಕ ಸಕಲ ಕಾರ್ಯಗಳಲ್ಲೂ ಇದು ಮಾತೃದೇವತೆಯಾಗಿ ಮಾನವನ ವಿಕಾಸಕ್ಕೆ ಪೋಷಕವಾಗಿ ಕೆಲಸ ಮಾಡುತ್ತದೆ.

***ವಿ.ಆರ್.ಬಿ.***

**ನಿಂಬೆ** ಸಿಟ್ರಿಕ್ ಜಾತಿಗೆ ಸೇರಿದ ನಿಂಬೆಹಣ್ಣನ್ನು ಇಂಗ್ಲಿಷ್‌ನಲ್ಲಿ 'ಲೆಮನ್' ಎಂದು ಕರೆಯುತ್ತಾರೆ. ತೆಲುಗಿನಲ್ಲಿ ನಿಮ್ಮ ಪಂಡು ಎಂದೂ ತಮಿಳಿನಲ್ಲಿ ಎಲುಮಿಚ್ಚೈ ಪಳಂ ಎಂದೂ ಮಲಯಾಳದಲ್ಲಿ ಚೆರ್ ನಾರ್‌ಙ ಎಂದೂ ಕರೆಯುವರು. ಇದರ ಹೂವು ಬಿಳಿ, ಹಣ್ಣು ಗೋಳಾಕಾರ ಇಲ್ಲವೇ ದುಂಡಾಕಾರವಾಗಿರುತ್ತದೆ. ರುಚಿಯಲ್ಲಿ ಹುಳಿ, ನುಣುಪಾದ ಸಿಪ್ಪೆ, ನಸುಹಳದಿ ಬಣ್ಣ ಇದರದು, ಇವುಗಳನ್ನು ಪಾನೀಯಗಳು, ಉಪ್ಪಿನಕಾಯಿ, ಸಿಟ್ರಿಕ್ ಆಮ್ಲ, ಸೌಂದರ್ಯವರ್ಧಕಗಳ ತಯಾರಿಕೆ ಹಾಗೂ ಅಡುಗೆಯಲ್ಲಿ ಉಪಯೋಗಿಸುತ್ತಾರೆ. ನಿಂಬೆ ಹಣ್ಣಿನಲ್ಲಿ 'ಸಿ' ಜೀವಸತ್ವದ ಪ್ರಮಾಣ ಅಧಿಕವಾಗಿರುತ್ತದೆ.

ನಿಂಬೆ ಬೆಳೆಗೆ ನೀರು ಬಸಿದು ಹೋಗುವಂತಹ 2-3 ಮೀ. ಆಳದ ಗೋಡು ಮಣ್ಣು ಒಳ್ಳೆಯದು. ನೀರು ನಿಲ್ಲುವಂತಹ ಮತ್ತು ಜೌಗು ಭೂಮಿ ಈ ಬೆಳೆಗೆ ಯೋಗ್ಯವಲ್ಲ. ತೇವಾಂಶ ಯುಕ್ತ ಉಷ್ಣ ಹವಾಗುಣ

ಬೇಕು. ಕಡಿಮೆ ತಾಪಮಾನ ಇದು ತಡೆಯುವುದಿಲ್ಲ. ಬಿರುಗಾಳಿ ಬೀಸದ ಒಣಹವೆ ಇರುವಲ್ಲಿ ಚೆನ್ನಾಗಿ ಬೆಳೆಯಬಹುದು.



**ನಿಂಬೆ ತಳಿಗಳು :** ನಿಂಬೆಯನ್ನು ವಿವಿಧ ಪ್ರದೇಶಗಳಲ್ಲಿ ಹಾಗೂ ಮನೆಯ ಹಿತ್ತಲುಗಳಲ್ಲಿ ಬೆಳೆಸಲಾಗುತ್ತದೆ.

ಇದರಲ್ಲಿ ಗಂಜನಿಂಬೆ, ಕಾಗಜಿ ನಿಂಬೆ, ಬೀಜರಹಿತ ನಿಂಬೆ ಅಥವಾ ತಾಹಿತಿ ನಿಂಬೆ ಮತ್ತು ರಂಗ ಪುರ ಎಂಬ ವಿಧಗಳಿವೆ.

**ಕಾಗಜಿನಿಂಬೆ :** ಆರ್ಥಿಕ ಬೆಳೆ. ಇದು ಕಿತ್ತಳೆ ಮರದಷ್ಟೇ ಎತ್ತರವಿದ್ದು, ಅಧಿಕ ಫಸಲನ್ನು ಕೊಡುತ್ತದೆ. ಒಣಹವೆ ಮಿತ ತೇವಾಂಶವಿರುವ ಚಳಿರಹಿತ ಪ್ರದೇಶ ಈ ಬೆಳೆಗೆ ಯೋಗ್ಯ. ಅಧಿಕ ತೇವಾಂಶ ಮತ್ತು ಹೆಚ್ಚು ಮಳೆ ಬೀಳುವ ಕಡೆ ಕ್ಯಾಂಕರ್ ರೋಗ ತಗಲುವ ಸಂಭವಿರುತ್ತದೆ.

ತಾಹಿತಿ ನಿಂಬೆಯು ಕಾಗಜಿ ನಿಂಬೆಗಿಂತ ಚಿಕ್ಕದಾಗಿದ್ದು, ಕಡಿಮೆ ಫಸಲನ್ನು ಕೊಡುತ್ತದೆ. ಗಿಡಗಳಲ್ಲಿ ಮುಳ್ಳು ಕಡಿಮೆ ಇದ್ದು, ರೋಗ ನಿರೋಧಕ ಸಾಮರ್ಥ್ಯವನ್ನು ಹೊಂದಿದೆ.

**ರಂಗಪುರ :** ನಿಂಬೆ ಜಾತಿಗೆ ಸೇರಿದ ಕಹಿ ಮತ್ತು ಕಿತ್ತಳೆ ಮಿಶ್ರಿತ ತಳಿ. ಸಡಿಲವಾದ ಸಿಪ್ಪೆಯಿರುವ ಚಿಕ್ಕ ಕಿತ್ತಳೆಯನ್ನು ಹೋಲುವುದರಿಂದ ಇದನ್ನು 'ಮಾಂಡೆರಿನ್' ಕಿತ್ತಳೆ ಎಂದು ಕರೆಯಲಾಗುತ್ತದೆ.

**ಸಿಹಿನಿಂಬೆ :** ಮನೆಯ ಹಿತ್ತಲುಗಳಲ್ಲಿ ಬೆಳೆಯುವ ಮಿಶ್ರತಳಿ. ರುಚಿಯಲ್ಲಿ ಸಿಹಿಯಾಗಿದ್ದು, ಉತ್ತರ ಭಾರತದಲ್ಲಿ ವಾಣಿಜ್ಯ ಬೆಳೆಯಾಗಿದೆ. ದಕ್ಷಿಣ ಭಾರತದಲ್ಲಿ ಮನೆಯ ಬಳಕೆಗೆ ಬೇಕಾದ ಪ್ರಮಾಣದಲ್ಲಿ ಬೆಳೆಸುತ್ತಾರೆ. ಗಿಡದೊಡ್ಡದಾಗಿದ್ದು ಅಧಿಕ ಫಸಲನ್ನು ಕೊಡುತ್ತದೆ. ಗಾತ್ರದಲ್ಲಿ ಚಿಕ್ಕ ಕಿತ್ತಳೆಯಷ್ಟಿರುತ್ತದೆ.

**ಗಜನಿಂಬೆ :** ನಿಂಬೆಗಿಂತ ಗಾತ್ರದಲ್ಲಿ ದೊಡ್ಡದಾಗಿದ್ದು, ಮರ ಬೆಳೆದು ಹಬ್ಬುತ್ತದೆ. ಇದರ ಹೂವು ನೇರಳೆ ಬಣ್ಣ.ಇದರ ಸಿಪ್ಪೆ ದಪ್ಪವಾಗಿದ್ದು, ತಿರುಳು ನಸುಹಳದಿ. ನಿಂಬೆ ತಳಿಯಷ್ಟು ಇದು ಹುಳಿಯಾಗಿರುವುದಿಲ್ಲ. ಗಜನಿಂಬೆಯಲ್ಲಿ ಇಟಾಲಿಯನ್, ಯುರೇಖ, ಲಿಬ್ಬನ್ ಸೆವಿಲ್ಲೆ ಎಂಬ ವಿಧಗಳಿವೆ.

**ಇಟಾಲಿಯನ್ ಗಜ ನಿಂಬೆ :** ಭಾರತದಲ್ಲಿ ನಾನಾ ತರಹದ ಹವಾಗುಣಗಳಿಗೆ ಹೊಂದಿಕೊಂಡು ಬೆಳೆಯುತ್ತದೆ. ಇದು ಬೀಜರಹಿತವಾಗಿದ್ದು, ರಸ ಹೆಚ್ಚಾಗಿರುತ್ತದೆ. ಉಪ್ಪಿನಕಾಯಿ ಮತ್ತು ತಂಪು ಪಾನೀಯಗಳಿಗೆ ಹೆಚ್ಚಾಗಿ ಉಪಯೋಗಿಸುತ್ತಾರೆ.

**ಕಾಡುಗಜ ನಿಂಬೆ :** ಇದನ್ನು 'ಗಾಲ್ಗಲ್' ಎಂದು ಕರೆಯುತ್ತಾರೆ. ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಗಾತ್ರದಲ್ಲಿ ದೊಡ್ಡದಾಗಿದ್ದು ಅಧಿಕ ಉಷ್ಣ ಮತ್ತು ಚಳಿಗೆ ಹೊಂದಿಕೊಂಡು ಬೆಳೆಯುವ ಸಾಮರ್ಥ್ಯವನ್ನು ಹೊಂದಿದೆ.

ನಿಂಬೆಯಲ್ಲಿ ಬೀಜದಿಂದ ವೃದ್ಧಿಪಡಿಸಿದ ಸಸಿಗಳನ್ನು, ಗಜ ನಿಂಬೆಯಲ್ಲಿ ಕಣ್ಣು ಕಸಿ ಮಾಡಿದ ಗಿಡಗಳನ್ನು ನಾಟಿಗಾಗಿ ಉಪಯೋಗಿಸುತ್ತಾರೆ. ರಂಗಪೂರ್ ನಿಂಬೆಯ ಮೇಲೆ ಕಣ್ಣು ಕಸಿಮಾಡಿದ ಗಿಡಗಳನ್ನು ಕಪ್ಪು ಮಣ್ಣಿನ ಪ್ರದೇಶದಲ್ಲಿ ಉಪಯೋಗಿಸಿದರೆ, ಕಾಡುಗಜ ನಿಂಬೆಯ ಮೇಲೆ ಕಣ್ಣು ಕಸಿಮಾಡಿದ ಗಿಡಗಳನ್ನು ಹಗುರವಾದ ಕೆಂಪು ಮಣ್ಣಿನ ಪ್ರದೇಶದಲ್ಲಿ ಉಪಯೋಗಿಸುತ್ತಾರೆ. 'ಟ್ರಿಸ್ಟೀಜಾ' ಎಂಬ ನಂಜುರೋಗದಿಂದ ರಕ್ಷಿಸಲ್ಪಟ್ಟ ಹಾಗೂ ರೋಗ ನಿರೋಧಕ ಶಕ್ತಿಯಿರುವ ಗಿಡಗಳನ್ನು ಉಪಯೋಗಿಸಬಹುದು.

**ಬೇಸಾಯ :** ಹೆಕ್ಟೇರಿಗೆ 400 ಕಣ್ಣು ಕಸಿ ಮಾಡಿದ ಅಥವಾ ಬೀಜದಿಂದ ವೃದ್ಧಿಪಡಿಸಿದ ಸಸಿಗಳು ಬೇಕಾಗುತ್ತದೆ. ಒಂದು ಸಸಿಗೂ ಮತ್ತೊಂದು ಸಸಿಗು ಐದು ಮೀ. ಅಂತರವಿರಬೇಕು. ಗಿಡಕ್ಕೆ 20. ಕಿ.ಗ್ರಾಂ. ಕೊಟ್ಟಿಗೆ ಗೊಬ್ಬರ ಬೇಕಾಗುತ್ತದೆ.

**ಸಸ್ಯಾಭಿವೃದ್ಧಿ -** ಸಸಿ ಬೆಳೆಸಲು ಬಿತ್ತನೆ ಬೀಜ ದೊಡ್ಡದಾದ ರಸಭರಿತ ತೆಳು ಸಿಪ್ಪೆಯ ಹಣ್ಣನ್ನು ಆರಿಸಬೇಕು. ಬಿತ್ತನೆಗಾಗಿ 8 ಮೀ. ಉದ್ದ ಒಂದು ಮೀ. ಅಗಲ ಮಡಿಗಳನ್ನು ಸಿದ್ಧಪಡಿಸಿ, ಪ್ರತಿ ಮಡಿಗೆ ಆರು ಬುಟ್ಟಿಗಳಷ್ಟು ಎಲೆ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಬೇಕು. ಮರಳನ್ನು ಸಸಿ ಮಡಿಗಳ ಮೇಲೆ 2 ಸೆಂ.ಮೀ. ದಪ್ಪವಾಗಿ ಹರಡಬೇಕು. ಅನಂತರ ಬೀಜಗಳನ್ನು 10 ಸೆಂ.ಮೀ. ಅಂತರದ ಸಾಲುಗಳಲ್ಲಿ 5 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು. ಸಸಿಗಳು 5-7 ಸೆಂ.ಮೀ ಎತ್ತರ ಬೆಳೆದಾಗ ಅವುಗಳನ್ನು ಎರಡನೇ ಸಸಿ ಮಡಿಗೆ ವರ್ಗಾಯಿಸಿ, 60 ಸೆಂ.ಮೀ. ಅಂತರದ ಸಾಲುಗಳಲ್ಲಿ 22 ಸೆಂ.ಮೀ. ಅಂತರದಲ್ಲಿ ನಾಟಿ ಮಾಡಬೇಕು. ಅಶಕ್ತ ಗಿಡಗಳನ್ನು ತೆಗೆದುಹಾಕಬೇಕು.

**ನಾಟಿ ಮಾಡುವುದು :** ಬೆಳೆ ಮಾಡುವ ಪ್ರದೇಶವನ್ನು ಚೆನ್ನಾಗಿ ಉಳುಮೆ ಮಾಡಿ ಸಿದ್ದ ಪಡಿಸಿಕೊಳ್ಳಬೇಕು. 0.75 ಘನ ಮೀ. ಗಾತ್ರದ ಗುಣಿಗಳನ್ನು ತೆಗೆದು ಮೇಲ್ಮಣ್ಣು ಮತ್ತು ಕೊಟ್ಟಿಗೆ ಗೊಬ್ಬರ ಮಿಶ್ರಣ ಮಾಡಿ ತುಂಬ ಬೇಕು. ಅನಂತರ ಸಸಿಗಳನ್ನು ಗುಣಿಯ ಮಧ್ಯದಲ್ಲಿ ನಾಟಿ ಮಾಡಬೇಕು.

ನಾಟಿ ಮಾಡಿದ ಕೂಡಲೆ ಸಸಿಗಳಿಗೆ ಕೋಲಿನ ಆಸರೆ ಕೊಟ್ಟು ಕಟ್ಟಬೇಕು. ಗಿಡ 0.2 ಮೀ ಎತ್ತರ ಬೆಳೆಯುವವರೆಗೂ ಪಕ್ಕದಲ್ಲಿ ಬರುವ ಕವಲುಗಳನ್ನು ತೆಗೆಯುತ್ತಿರಬೇಕು. ಅನಾವಶ್ಯಕವಾಗಿ ಬೆಳೆದ ಮತ್ತು ಒಣಗಿದ ಕವಲುಗಳನ್ನು ಕತ್ತರಿಸಿ, ಗಿಡದ ಸುತ್ತಲೂ ಮಣ್ಣನ್ನು ಸಡಿಲಪಡಿಸಿ ಪಾತಿಗಳಲ್ಲಿ ಹೊದಿಕೆ ಹಾಕಿ ನಿಯಮಿತವಾಗಿ ಕಳೆ ತೆಗೆಯಬೇಕು. ಮಣ್ಣು ಮತ್ತು ಹವಾಗುಣಕ್ಕೆ ಅನುಸಾರವಾಗಿ ದಿನಕ್ಕೆ ಒಮ್ಮೆ ನೀರನ್ನು ಹಾಯಿಸಬೇಕು. ಕೊಟ್ಟಿಗೆ ಗೊಬ್ಬರವನ್ನು ಅಥವಾ ರಸ ಗೊಬ್ಬರಗಳನ್ನು ಮೂರು ಕಂತುಗಳಲ್ಲಿ ಒದಗಿಸಬೇಕು.

ಬೀಜರಹಿತ ಇಟಾಲಿಯನ್ ಗಜ ನಿಂಬೆಯಲ್ಲಿ ಕಣ್ಣು ಕಸಿ ಕ್ರಮ ಬಳಕೆಯಲ್ಲಿದೆ. ಕಾಗಜಿ ನಿಂಬೆಗಳನ್ನು ಮಣ್ಣಿನ ಗುಣವನ್ನರಿತು. 5-7 ಮೀ. ಅಂತರದಲ್ಲಿ ಬೆಳೆಸಲಾಗುತ್ತದೆ. ಇಟಾಲಿಯನ್ ಗಜ ನಿಂಬೆ ಮತ್ತು ರಂಗಪುರ ನಿಂಬೆ ಹಬ್ಬಿ ಬೆಳೆಯುವುದರಿಂದ ಅವುಗಳಲ್ಲಿ ಶಾಖೆಗಳನ್ನು ನೆಲದಿಂದ ಮೇಲಕ್ಕೆತ್ತಿ ಕಟ್ಟಿ ಫಲಗಳು ನೇತಾಡುವಂತೆ ಇರಿಸಬೇಕು. ಇಲ್ಲವಾದರೆ ಫಲಗಳು ನೆಲದ ಸಂಪರ್ಕಕ್ಕೆ ಬಂದು ಕೊಳೆಯಬಹುದು. ಬಿಸಿಲಿನ ಜಳ ಹೆಚ್ಚಾದರೂ ಫಲಗಳನ್ನು ಪೆಟ್ಟಿಗೆಗಳಿಂದ ಮುಚ್ಚಿ ಸುಡಗಾಯವಾಗದಂತೆ ಜಾಗ್ರತೆ ವಹಿಸಬೇಕು.



**ಕೊಯ್ಲು ಮತ್ತು ಇಳುವರಿ :** ಸಾಮಾನ್ಯವಾಗಿ ನಾಟಿಮಾಡಿದ ಮೂರು ಮತ್ತು ನಾಲ್ಕನೇ ವರ್ಷದಿಂದ ಇಳುವರಿ ಪ್ರಾರಂಭವಾಗುತ್ತದೆ. ಹೂ ಬಿಟ್ಟ ಆರು ತಿಂಗಳಿಗೆ ನಿಂಬೆ ಹಣ್ಣು ಕೊಯ್ಲಿಗೆ ಬರುತ್ತದೆ. ವರ್ಷದಲ್ಲಿ ಎರಡು ಬಾರಿ ಎಂದರೆ ಜುಲೈ - ಸೆಪ್ಟೆಂಬರ್ ಮತ್ತು ಮಾರ್ಚ್ - ಜೂನ್ ತಿಂಗಳುಗಳಲ್ಲಿ ಬೆಳೆ ಕೊಯ್ಲು ಮಾಡಲಾಗುತ್ತದೆ. ಸುಮಾರು ಎಂಟು ವರ್ಷದ ನಿಂಬೆ ಗಿಡ 1000 ದಿಂದ 1200 ಹಣ್ಣುಗಳನ್ನು ಅಥವಾ ಪ್ರತಿ ಹೆಕ್ಟೇರಿಗೆ 25 ಟನ್ನು ಪಡೆಯಬಹುದು.

ಒಂದೇ ಮರದಲ್ಲಿ ಬೇರೆ ಬೇರೆ ಹಂತದಲ್ಲಿ ಪಕ್ವವಾಗುತ್ತಿರುವ ಕಾಯಿಗಳಿರುವುದರಿಂದ ಅವುಗಳನ್ನು ಏಕಕಾಲದಲ್ಲಿ ಕೊಯ್ಲು ಮಾಡುವಂತಿಲ್ಲ. ಗಜನಿಂಬೆಗಳನ್ನು ಕೈಕತ್ತಿಯಿಂದ ತೊಟ್ಟು ಸಹಿತ ಕಿತ್ತು ಸಂಗ್ರಹಿಸಲಾಗುತ್ತದೆ. ಕಾಗಜಿ ನಿಂಬೆಯನ್ನು ಕಬ್ಬಿಣದ ಕೊಂಡಿಯಿಂದ ದೋಟಿಯಿಂದ ಕೀಳ ಬೇಕಾಗುತ್ತದೆ. ರಂಗಪುರ ನಿಂಬೆ ಹೆಚ್ಚು ಇಳುವರಿ ಕೊಡುತ್ತದೆ. ಇಟಾಲಿಯನ್‌ಗಾಲ್ಗಲ್ ಗಜ ನಿಂಬೆಗಳು ಇದಕ್ಕಿಂತ ಸ್ವಲ್ಪ ಕಡಿಮೆ ಇಳುವರಿಯನ್ನು ಕೊಡುತ್ತವೆ. ಕಾಗಜಿ ನಿಂಬೆಯ ಸಿಪ್ಪೆ ಗಟ್ಟಿಯಾಗಿರುವುದರಿಂದ ಅವುಗಳ ಸಾಗಾಣಿಕೆ ಸುಲಭ. ಅಲ್ಲದೆ ಅವು ಹೆಚ್ಚು ಕಾಲ ಕೆಡದೆ ಸಂಗ್ರಹಣ ಸ್ಥಿತಿಯಲ್ಲಿ ಉಳಿಯುತ್ತವೆ. ಅವುಗಳನ್ನು ಬಿದಿರಿನ ಬುಟ್ಟಿಗಳಲ್ಲಿ ತುಂಬಿ ದೂರದ ಮಾರುಕಟ್ಟೆಗಳಿಗೆ ಸುಲಭವಾಗಿ ಕೆಡದಂತೆ ಸಾಗಾಣಿಕೆ ಕಳುಹಿಸಬಹುದು.

**ಕೀಟಗಳು :** ಕಾಂಡ ಕೊರೆಯುವ ಹುಳು, ನಿಂಬೆ ಪತಂಗ, ಎಲೆ ಸುರಂಗ, ಎಲೆ ತಿನ್ನುವ ಕೀಟ ಸಸ್ಯಹೇನು ಶುಲ್ಕ ಕೀಟ, ಹಿಟ್ಟು ತಿಗಣೆ, ನುಸಿ, ಬಿಳಿ ನೊಣ ಮತ್ತು ಗೊಣ್ಣೆಹುಳು ಈ ಮೊದಲಾದ ಕೀಟಗಳ ಬಾಧೆ ನಿಂಬೆ ಗಿಡಕ್ಕೆ ಕಾಡುತ್ತದೆ.

**ರೋಗಗಳು :** ದುಂಡಾಣು ಕಜ್ಜಿರೋಗ, ಟ್ರಿಸ್ಟೀಜಾ ನಂಜುರೋಗ, ಬೂದಿರೋಗ, ಕಾಂಡ ಒಣಗುವ ರೋಗ (ಹಿಮ್ಮರಣ) ಎಲೆ ಹಳದಿ ರೋಗಬರುತ್ತವೆ.

**ಉಪಯೋಗಗಳು :** ಎದೆನೋವು, ದೃಷ್ಟಿ ಮಾಂದ್ಯತೆ, ಕೂದಲುಗಳ ಬೆಳವಣಿಗೆ, ಪಿತ್ತದಿಂದ ಆಗುವ ತಲೆನೋವು, ಬಾಯಾರಿಕೆ, ಮೂತ್ರಬಾಧೆ, ರಕ್ತದ ಒತ್ತಡ, ಹಸಿವು, ಅಜೀರ್ಣ, ಭೇದಿ, ವಾಂತಿ, ಆಯಾಸ ಪರಿಹಾರ, ಹೀಗೆ ಹತ್ತು ಹಲವು ತೊಂದರೆಗಳಿಗೆ ನಿಂಬೆ ಹಣ್ಣನ್ನು ಉಪಯೋಗಿಸಲಾಗುತ್ತದೆ.

**ಅಡುಗೆಗಳಲ್ಲಿ :** ಚಿತ್ರಾನ್ನ ಕೋಸಂಬರಿ, ಸಾಂಬಾರು, ಬಿರಿಯಾನಿ ಹಾಗೂ ತರಕಾರಿ, ಮೀನು, ಮಾಂಸಗಳೊಂದಿಗೆ ರುಚಿ ಹಾಗೂ ಸುವಾಸನೆ ಹೆಚ್ಚಿಸುವುದಕ್ಕಾಗಿ ಬಳಸಬಹುದು.

ನಿಂಬೆ ಸಿಪ್ಪೆಯಿಂದ ಎಣ್ಣೆಯನ್ನು ತಯಾರಿಸಲಾಗುತ್ತಿದೆ. ಈ ಎಣ್ಣೆಯನ್ನು ನಾನಾ ತರಹದ ಸುಗಂಧಪೂರಿತ ತೈಲಗಳು, ಸಾಬೂನು, ಸುವಾಸನಾಯುಕ್ತ ವಸ್ತುಗಳು ಹಾಗೂ ಔಷಧಿ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ನಿಂಬೆಹಣ್ಣಿನ ಬಳಕೆಯಿಂದ ಚರ್ಮವನ್ನು ಸೌಮ್ಯವಾಗಿ ಶುಚಿಯಾಗಿರಿಸಬಹುದು. ಪೂಜಾ ಕಾರ್ಯಗಳಲ್ಲಿ ಸಭೆ ಸಮಾರಂಭಗಳಲ್ಲಿ ನಿಂಬೆ ಹಣ್ಣನ್ನು ಬಳಸುತ್ತಾರೆ. ಇತರೆ ತರಕಾರಿ ಹಣ್ಣುಗಳಿಗಿಂತ ನಿಂಬೆಹಣ್ಣಿಗೆ ವಿಶಿಷ್ಟಗುಣ ಇದೆ.

*ಎಸ್. ಬಿ.*

**ನೀರಬೇಲಿ** ಸಾಧಾರಣ ಬೇಲಿಗಳನ್ನು ತೋಡಿಗೆ ಅಡ್ಡಲಾಗಿ ಹಾಕುವುದು ಸಾಧ್ಯವಿಲ್ಲ. ಹಾಗಾಗಿ ಕಾಸರಗೋಡಿನ ಸುತ್ತುಮುತ್ತಲ ಕರೆನಾಡಿನ ಕೃಷಿಕರು ನೀರಬೇಲಿಯನ್ನು ವಿನ್ಯಾಸಗೊಳಿಸಿದ್ದಾರೆ. ನಿರ್ದಿಷ್ಟ ಗಾತ್ರದಲ್ಲಿ ತುಂಡರಿಸಿದ ಬಿದಿರಿನ ಮುಳ್ಳುಗಳನ್ನು ಬೇಕಾದ ಅಗಲಕ್ಕೆ ಹರಡಿ, ಅದರ ಎರಡೂ ಬದಿಗಳಿಗೆ ಕಂಗಿನ ಸಲಿಕೆಗಳನ್ನು ಕಟ್ಟಿ, ತಡಿಕೆಯಂತಹ ರಚನೆಯನ್ನು ಸಿದ್ಧಗೊಳಿಸಲಾಗುತ್ತದೆ. ತೋಟ, ಗದ್ದೆಗಳ ಬದಿಯಿಂದ ಹರಿದು ಹೋಗುವ ತೋಡುಗಳ ಎರಡೂ ಬದಿಗಳಿಗೆ ಗಟ್ಟಿ ಗೂಟಗಳನ್ನು ಹಾಕಲಾಗುತ್ತದೆ. ಆಮೇಲೆ ಇದನ್ನೆತ್ತಿ ಗೂಟಗಳಿಗೆ ಕಟ್ಟುತ್ತಾರೆ. ಎರಡೂ ಗೂಟಗಳ ಮೇಲುತುದಿಗಳನ್ನು ಮಾತ್ರ ಆಧರಿಸಿ ತೋಡಿನ ತಳದಿಂದ ತುಸು ಮೇಲೆ, ಅಗತ್ಯಕ್ಕಿಂತ ಹೆಚ್ಚು ತೆರೆದುಕೊಳ್ಳದಂತೆ ನೀರಬೇಲಿಯನ್ನು ರಚಿಸಿರುತ್ತಾರೆ. ತೋಡಿನ ಅಗಲ, ಎತ್ತರಗಳಿಗೆ ಇದು ಸರಿಯಾಗಿ ಹೊಂದಿಕೊಳ್ಳಬೇಕು. ಮತ್ತು ನೀರಿನ ಪ್ರವಾಹದ ರಭಸಕ್ಕೆ ಅನುಗುಣವಾಗಿ ಹಿಂದೆಮುಂದೆ ಚಲಿಸುವಂತಿರಬೇಕು. ಈ ಚಲನೆಯಿಂದಾಗಿ ನೀರಿನಲ್ಲಿ ಹರಿದು ಬರುವ ಕಸಕಡ್ಡಿಗಳು ಕಟ್ಟಿನಿಲ್ಲಲು ಅವಕಾಶವಿರುವುದಿಲ್ಲ. ತೋಡಿನ ಮೂಲಕ ಹೊರಗಿನಿಂದ ದನಕರುಗಳು ಒಳಕ್ಕೆ ನುಸುಳದಂತೆ ತಡೆಯುವುದು ನೀರಬೇಲಿಯ ಮೊದಲ ಉದ್ದೇಶ. ತೆಂಗಿನ ಕಾಯಿ ಮೊದಲಾದ ಕೃಷಿ ಉತ್ಪನ್ನಗಳು ನೀರಿನಲ್ಲಿ ಕೊಚ್ಚಿ ಹೊರಗೆ ಹೋಗದಂತೆ ತಡೆಯುವುದು ಎರಡನೇ ಉದ್ದೇಶ. ನೀರಿಗೆ ಅಡ್ಡಲಾಗಿ ಹಾಕುವ ಬೇಲಿಯಾದ್ದರಿಂದ ಇದಕ್ಕೆ ನೀರಬೇಲಿ ಎಂದು ಹೆಸರು.

*ಆರ್. ಕೆ. ಬಿ.*

**ನೀರಾವರಿ** ಸ್ವಾಭಾವಿಕ ಮಳೆ ನೀರಿಲ್ಲದೆ, ವ್ಯವಸಾಯಕ್ಕೆ ಬೇಕಾದ ನೀರನ್ನು ಕೃತಕವಾಗಿ ಒದಗಿಸುವುದಕ್ಕೆ ನೀರಾವರಿ ಎನ್ನುವರು. ನದಿ, ಕೆರೆ, ಬಾವಿಗಳಿಂದ ನಾಲೆ, ಕಾಲುವೆಗಳಿಂದ ನೀರನ್ನು ಬೇಕಾದ ಹಾಗೆ ವ್ಯವಸಾಯಕ್ಕನುಗುಣವಾಗಿ ಬಳಸಿಕೊಳ್ಳುವ ವಿಧಾನವಿದು. ಏತ, ಕಪಿಲೆ, ಗೂಡುಹಾಕುವುದು, ಕಾಲುವೆಗಳ ನೀರನ್ನು ಹಾಯಿಸುವುದಿತ್ತು. ನದಿಗಳಿಗೆ ಅಣೆಕಟ್ಟು ಕಟ್ಟಿ ಜಲಸಂಗ್ರಹಾಗಾರಗಳಲ್ಲಿ ನೀರನ್ನು ಸಂಗ್ರಹಿಸಿ ಯಂತ್ರಗಳ ಸಹಾಯದಿಂದ ಬಳಸಲಾಗುವುದು.

ಈಜಿಪ್ಟ್, ಮೆಸಪೋಟೇಮಿಯ ನಾಗರಿಕತೆಗಳಲ್ಲಿ ನದಿಗೆ ಅಣೆಕಟ್ಟು ಕಟ್ಟಿದ್ದ ವಿಷಯ ಕ್ರಿಸ್ತಪೂರ್ವದಲ್ಲೇ ತಿಳಿದುಬರುತ್ತದೆ. ಈ ಕಾಲಕ್ಕಾಗಲೇ ನೀರನ್ನು ವ್ಯವಸ್ಥಿತ ರೀತಿಯಲ್ಲಿ ಪೋಲಾಗದಂತೆ ಸಂಗ್ರಹಿಸಿ ರೈತರಿಗೆ ಹಂಚುವ ವೈಜ್ಞಾನಿಕ ವಿಧಾನವನ್ನು ಈಜಿಪ್ಷಿಯನ್ನರು ಬಲ್ಲವರಾಗಿದ್ದರು.

ಇತಿಹಾಸ ಪೂರ್ವಕಾಲದಲ್ಲೇ ನೀರಿನ ಪ್ರಾಮುಖ್ಯವನ್ನು ಭಾರತೀಯರು ಅರಿತಿದ್ದರು. ಅಂದು ಅವರು ನಿರ್ಮಿಸಲು ಯೋಜಿಸಿದ ಕೆರೆ, ಕಟ್ಟೆ, ಕಾಲುವೆ, ಅಣೆಕಟ್ಟು ಮತ್ತು ನಾಲೆಗಳು ಇಂದು ಕೂಡಾ ರೈತ ಬೇಸಾಯಮಾಡಲು ಮಾರ್ಗಸೂಚಿಗಳಾಗಿವೆ.



**ನೀರಾವರಿಯ ಉಪಯೋಗಗಳು :** ಬೆಳೆಗಳನ್ನು ಕಾಪಾಡುವುದು, ಮಳೆ ಕೈಕೊಟ್ಟಾಗ ಬಿತ್ತಿದ ಬೀಜ, ಬೆಳೆದ ಪೈರು, ಫಲಬಿಡುವ ಗಿಡಮರಗಳಿಗೆ ನೀರಾವರಿಯೇ ಜೀವಾಳ. ಭೂಗುಣ, ವಾಯುಗುಣ ಮಳೆಯ ಪ್ರಮಾಣ ಹಾಗೂ ಬೆಳೆಗಳನ್ನಾಧರಿಸಿ ನೀರಿನ ಉಪಯೋಗವಾಗುತ್ತದೆ.

**ನೀರಾವರಿಯನ್ನು ನಾಲ್ಕು ರೀತಿ ವಿಂಗಡಿಸಬಹುದು :** ಅಂತರ್ಜಲ, ಕೆರೆ, ಕಾಲುವೆ, ವಿವಿಧೋದ್ದೇಶ ಯೋಜನೆಗಳು. ಆಯಾ ಪ್ರದೇಶದಲ್ಲಿ ಬೀಳುವ ಮಳೆಯ ಪ್ರಮಾಣವನ್ನು ಆಧರಿಸಿ ಅಂತರ್ಜಲವನ್ನು ನಿರ್ಧರಿಸಬಹುದು. ಪ್ರಾಚೀನ ಕಾಲದಿಂದಲೂ ಅಂತರ್ಜಲ ಉಪಯೋಗಿಸುವ ವಿಧಾನ ರೈತನಿಗೆ ತಿಳಿದಿತ್ತು. ನೀರಿನ ಪಸೆ ಇರುವ ಜಾಗ ಗುರುತಿಸಿ ಬಾವಿ ತೋಡಿ ನೀರನ್ನು ಬಳಸಿಕೊಳ್ಳುತ್ತಿದ್ದರು. ಇದಕ್ಕೆಂದೇ ಜಲಶಾಸ್ತ್ರ ತಜ್ಞರು ಇದ್ದರು.

ಬಾವಿಗಳಲ್ಲಿ ನೆಲಬಾವಿ ಮತ್ತು ಕೊಳವೆಬಾವಿ ಎಂದು ಎರಡು ವಿಧ. ನೀರಾವರಿ ನೆಲಬಾವಿಗಳನ್ನೇ ಅವಲಂಬಿಸಿದೆ. ಅಂತರ್ಜಲ ಹೆಚ್ಚಾಗಿದ್ದ



ಪ್ರದೇಶಗಳಲ್ಲಿ ಕಡಿಮೆ ಆಳದ ಬಾವಿಗಳಲ್ಲೇ ಹೆಚ್ಚು ನೀರು ಸಂಗ್ರಹ ವಾಗುತ್ತಿದ್ದು ಒಂದು ಬಾವಿಯಿಂದ ಒಂದೆರಡು ಎಕರೆ ಜಮೀನಿನಲ್ಲಿ ಬೆಳೆ ತೆಗೆಯಬಹುದಾಗಿತ್ತು. ಹೆಚ್ಚೆಂದರೆ 15-20 ಅಡಿ ಆಳದ ಬಾವಿಗಳನ್ನಷ್ಟೇ ತೋಡುತ್ತಿದ್ದರು. ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಬಾವಿಗಳ ಆಳ 60-80 ಅಡಿಗಳಷ್ಟಿರುತ್ತಿದ್ದುದುಂಟು. ಕಾಲಕ್ರಮೇಣ ಈ ಬಾವಿಗಳ ನೀರು ಇಂಗಿ ಬರಿದಾದವು. ನೀರಿಗಾಗಿ ಪರಿತಪಿಸಿದ ಜನ ಅನಿವಾರ್ಯತೆ ಆವಿಷ್ಕಾರದ ತಾಯಿ ಎಂಬಂತೆ ಕೊಳವೆ ಬಾವಿಗಳ ಮೊರೆಹೊಕ್ಕರು. ಇಪ್ಪತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಕೊಳವೆ ಬಾವಿಗಳಿಂದಲೇ ನೀರಾವರಿ ನಡೆಯುತ್ತಿದೆ. ಇದರಿಂದ ಅಂತರ್ಜಲ ಮಟ್ಟವೂ ಕುಸಿಯಿತು. ಬಾವಿ, ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್‌ಸೆಟ್ ಅಳವಡಿಸಿ ಸಾಗುವಳಿ ಮಾಡುವುದು ರೈತನಿಗೆ ವರದಾನವಾಯಿತು.



**ಕೆರೆ ನೀರಾವರಿ :** ಬೆಟ್ಟ, ಗುಡ್ಡ, ಘಟ್ಟ ಪ್ರದೇಶಗಳಲ್ಲಿ ಬಿದ್ದ ಮಳೆ ನೀರು ಹರಿದು ಬರುವೆಡೆಗಳಲ್ಲಿ ಅಡ್ಡಲಾಗಿ ಕಟ್ಟೆ ಕಟ್ಟುತ್ತಿದ್ದುದು ಕೆರೆ ಎನಿಸಿಕೊಂಡಿತು. ಪ್ರಾಚೀನ ಕಾಲದಲ್ಲಿ ಕೆರೆಗಳು ವಿಸ್ತಾರವಾಗಿದ್ದು ಸಾವಿರಾರು ಎಕರೆ ಪ್ರದೇಶಕ್ಕೆ ನೀರೊದಗಿಸುತ್ತಿದ್ದುದುಂಟು. ಇದರಿಂದ ಉತ್ತೇಜಿತರಾದ ಕೃಷಿಕರು ಕೆರೆಗಳ ನಿರ್ಮಾಣದಲ್ಲಿ ಆಸಕ್ತರಾದರು. ಭಾರತದಲ್ಲಿ ನೀರಾವರಿಗೆ ನದಿಗಳನ್ನು ಬಿಟ್ಟರೆ ಎರಡನೆಯ ಸ್ಥಾನ ಕೆರೆಗಳದ್ದು. ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಹೆಚ್ಚು ಕೆರೆಗಳಿವೆ. ಸುತ್ತಮುತ್ತಲಿಂದ ಮಳೆ ನೀರು ಹರಿದು ಬಂದು ಸಣ್ಣ ಕೆರೆಗಳುಂಟಾಗುತ್ತವೆ. ನದಿಗಳ ನೀರನ್ನುಕಾಲುವೆಗಳ ಮೂಲಕ ಹರಿಸಿ ದೊಡ್ಡಕೆರೆಗಳನ್ನು

ನಿರ್ಮಿಸಲಾಗುತ್ತದೆ. ಕೆರೆಯ ನೀರು ಕೋಡಿ ಹರಿಯುವ ಮೂಲಕ ಕೆಲವು ಕೆರೆಗಳು ಆಗುವುದುಂಟು. ಹೂಳೆತ್ತಿ ಏರಿಯನ್ನು ಭದ್ರಗೊಳಿಸುವುದರಿಂದ ಕೆರೆಗಳಲ್ಲಿ ಹೆಚ್ಚು ನೀರನ್ನು ಸಂಗ್ರಹಿಸಲು ಸಾಧ್ಯವಾಗುವುದು. ಇದರಿಂದ ಅಂತರ್ಜಲ ಮಟ್ಟವೂ ಹೆಚ್ಚುತ್ತದೆ.

**ಕಾಲುವೆ ನೀರಾವರಿ :** ಎತ್ತರ ಪ್ರದೇಶದಲ್ಲಿ ಬಿದ್ದ ಮಳೆ ನೀರು ಮತ್ತು ನದಿ ನೀರನ್ನು ಕಾಲುವೆಗಳ ಮೂಲಕ ಹರಿಸಿ ಕೃಷಿಗೆ ಬಳಸಿಕೊಳ್ಳುವುದುಂಟು. ಇದನ್ನು ಕಾಲುವೆ ನೀರಾವರಿ ಎನ್ನುವರು. ಈ ಪದ್ಧತಿಯಲ್ಲಿ ನೀರು ಶೇಖರಣೆ ಸಾಧ್ಯವಿಲ್ಲ. ನದಿ ನೀರಿನ ಹರಿವು ಹೆಚ್ಚಾದಾಗ ಮಾತ್ರ ಕಾಲುವೆ ನೀರಾವರಿ ಸಾಧ್ಯ. ಇತ್ತೀಚೆಗೆ ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ ಮಳೆ ಬಿದ್ದಾಗ, ಮಳೆನೀರು ಸಂಗ್ರಹಿಸಿಕೊಳ್ಳುವ ಪರಿಪಾಠ ಹೆಚ್ಚಾಗುತ್ತಿದೆ.

**ವಿವಿಧೋದ್ದೇಶ ಯೋಜನೆಗಳು :** ನದಿಗೆ ಅಡ್ಡಲಾಗಿ ಬೃಹತ್‌ಪ್ರಮಾಣದ ಅಣೆಕಟ್ಟು ಕಟ್ಟಿ, ಜಲಾಶಯ ನಿರ್ಮಿಸಿ ಲಕ್ಷಾಂತರ ಹೆಕ್ಟೇರ್ ಭೂಪ್ರದೇಶಕ್ಕೆ ನೀರೊದಗಿಸುವ ಯೋಜನೆಗಳು ಭಾರತ ದೇಶದಾದ್ಯಂತ ನಿರ್ಮಾಣವಾಗಿವೆ. ಬೇಸಾಯದ ಜೊತೆಗೆ ವಿದ್ಯುದುತ್ಪಾದನೆ, ಮೀನುಗಾರಿಕೆ ಅಭಿವೃದ್ಧಿ, ನೆರೆಹಾವಳಿ ತಡೆ, ಜಲಮಾರ್ಗ ನಿರ್ಮಾಣ, ವಿಹಾರಕೇಂದ್ರಗಳ ನಿರ್ಮಾಣ ಇತ್ಯಾದಿ ಅನುಕೂಲಗಳನ್ನೊದಗಿಸುವುದು ವಿವಿಧೋದ್ದೇಶ ಯೋಜನೆಗಳ ಗುರಿ.

*ಎ.ಬಿ.ಪಿ.*

**ನೀರುಬೆಡಿ** ನೀರುಬೆಡಿ ಕೃಷಿ ಭೂಮಿಗೆ ಕಾಡು ಪ್ರಾಣಿಗಳು ಬಾರದಂತೆ ತಡೆಯುವ ಸರಳ ಉಪಕರಣ. ರಾತ್ರಿ ಹೊತ್ತಿನಲ್ಲಿ ಗದ್ದೆಗಳಿಗೆ ನುಗ್ಗಿ ಪೈರನ್ನು ತಿನ್ನುವ ಮೊಲದಿಂದ ತೊಡಗಿ ಕೆಸರಲ್ಲಿ ಹೊರಳಾಡಿ ಕೃಷಿಯನ್ನು ನಾಶಮಾಡುವ ಹಂದಿಯವರೆಗೆ ಹೆಚ್ಚಿನೆಲ್ಲ ಪ್ರಾಣಿಗಳನ್ನೂ ಹೆದರಿಸಿ ಓಡಿಸಲು ಕಾಸರಗೋಡು ಪ್ರದೇಶದ ಕೃಷಿಕರು ಈ ಸರಳ ವಿನ್ಯಾಸವನ್ನು ಬಳಸುವುದುಂಟು. ಏಳೆಂಟು ಅಡಿ ಎತ್ತರದಿಂದ ಹರಿಯುವ ನೀರು, ಆರು ಅಡಿ ಉದ್ದದ ಓಟೆ ಬಿದಿರಿನ ತುಂಡು, ಅದನ್ನು ಆಧರಿಸಲು ಐದು ಅಡಿ ಉದ್ದದ ಎರಡು ಮರದ ಕಂಬಗಳು, ತಟ್ಟಿದರೆ ಶಬ್ದ ಮಾಡುವ ತಗಡಿನ ಒಂದು ಡಬ್ಬಿ, ಒಂದು ಹರಕು ಬಟ್ಟೆಯ ತುಂಡು - ಇಷ್ಟಿದ್ದರೆ ನೀರುಬೇಡಿಯನ್ನು ತಯಾರಿಸಬಹುದು.

ಒಂದು ಬದಿಯಲ್ಲಿ ಬಿದಿರಿನ ಓಟೆ ತೆರೆದು ಸಿಗುವಂತೆಯೂ, ಇನ್ನೊಂದು ಬದಿಯಲ್ಲಿ ತೆರೆದು ಸಿಗದಂತೆಯೂ ಕತ್ತರಿಸಬೇಕು. ಓಟೆ ತೆರೆದು ಸಿಕ್ಕಿದ ಭಾಗಗಳನ್ನು ಮೇಲೆ ಬರುವಂತೆ, ಅಂದರೆ ಇನ್ನೊಂದು ಬದಿ ತುಸು ಭಾರ ಬರುವಂತೆ ಬಿದಿರಿನ ಮಧ್ಯಕ್ಕೆ ತೂತು ಕೊರೆದು ನೆಲದಲ್ಲಿ ನೆಟ್ಟ ಎರಡು ಮರದ ಕಂಬಗಳಿಗೆ ಕೋಲಿನ ಸಹಾಯದಿಂದ ಜೋಡಿಸಬೇಕು. ಬಿದಿರಿನ ಕೆಳ ಭಾಗಕ್ಕೆ ತೆಳ್ಳಗೆ ಬಟ್ಟೆ ಸುತ್ತಿ ಅದರ ಅಡಿಯಲ್ಲಿ ಡಬ್ಬಿಯನ್ನು ಜೋಡಿಸಬೇಕು.

ಎತ್ತರದಿಂದ ಹರಿಯುವ ನೀರನ್ನು ಬಿದಿರಿನ ಮೇಲು ತುದಿಗೆ ಹಾಯಿಸಿ ನೀರುಬೆಡಿಯನ್ನು ಚಲಾಯಿಸುತ್ತಾರೆ. ನೀರು ತುಂಬುವಾಗ ನೀರಿನ ಭಾರಕ್ಕೆ ಮೇಲುತುದಿ ಕೆಳಕ್ಕೂ ಕೆಳತುದಿ ಮೇಲಕ್ಕೂ ಚಾಚುತ್ತದೆ. ಮೇಲುತುದಿ ಕೆಳಗೆ ಬಂದೊಡನೆ ನೀರು ಚೆಲ್ಲಿ ಹೋಗಿ ತಕ್ಷಣ ಅದು ಮೇಲಕ್ಕೆ ಜಿಗಿಯುತ್ತದೆ. ಇನ್ನೊಂದು ತುದಿ ಡಬ್ಬಿಗೆ ಬಡಿದು ಶಬ್ದವಾಗುತ್ತದೆ. ಓಟೆಯಲ್ಲಿ ಮತ್ತೆ ನೀರು ತುಂಬತೊಡಗುತ್ತದೆ. ತುಂಬಿದೊಡನೆ ಮತ್ತೆ ಅದೇ ಕ್ರಿಯೆ ಆವರ್ತಿಸಿ ಮತ್ತೆ ಶಬ್ದವಾಗುತ್ತದೆ. ಬಿದಿರಿನ ಉದ್ದ ಹೆಚ್ಚಿಸಿ ಶಬ್ದವನ್ನು ಹೆಚ್ಚಿಸಬಹುದು. ನೀರನ್ನು ನಿಯಂತ್ರಿಸಿ ಶಬ್ದ ಹುಟ್ಟುವ ಕಾಲಾವಕಾಶವನ್ನು ಹೆಚ್ಚಿಸಬಹುದು.

ಎತ್ತರದಿಂದ ಹರಿದುಬರುವ ನೀರಿನ ಉಪಲಬ್ಧತೆ ಇದ್ದಾಗ ಮಾತ್ರ ನೀರುಬೆಡಿ ಕ್ರಿಯಾಶೀಲವಾಗಿರುತ್ತದೆ. ರಾತ್ರಿಯಿಡೀ ಆವರ್ತಿಸುವ ನೀರುಬೆಡಿಯ ಶಬ್ದ ಪ್ರಾಣಿಗಳಿಗೆ ಭಯಹುಟ್ಟಿಸಿ ಅವು ಕೃಷಿಭೂಮಿಗೆ ಬಾರದಂತೆ ತಡೆಯುತ್ತದೆ.

*ಆರ್.ಕೆ.ಬಿ.*

**ನೀಲಗಿರಿ(ಯೂಕಲಿಪ್ಟಸ್)** ಇತ್ತೀಚಿಗೆ ಎಲ್ಲೆಲ್ಲಿಯೂ ಹರಡಿಕೊಂಡಿರುವ ವಿಶೇಷವಾಗಿ ರಸ್ತೆಗಳ ಇಕ್ಕೆಲಗಳಲ್ಲಿ, ಬಂಜರು ಭೂಮಿ, ಬೆಟ್ಟಗುಡ್ಡಗಳಲ್ಲೆಲ್ಲಾ ಬೆಳೆಸಲಾಗಿರುವ 'ಯೂಕಲಿಪ್ಟಸ್‌ಮರ', 'ನೀಲಗಿರಿ', ಮರವೆಂದೇ ಜನಜನಿತವಾಗಿದೆ. ಇದರ ಮೂಲ ಆಸ್ಟ್ರೇಲಿಯಾ ಖಂಡವಾಗಿದ್ದು, ಭಾರತಕ್ಕೆ ಮೊದಲು 1843 ರಲ್ಲಿ ಪ್ರವೇಶವಾಗಿ ನೀಲಗಿರಿ (ಊಟಿ)ಯಲ್ಲಿ ಬೆಳಸಲಾಯಿತು. ಭಾರತದ ಈ ಸ್ಥಳನಾಮವೇ ಇದಕ್ಕೆ ಅಂಟಿಕೊಂಡಿತೆನ್ನಬಹುದು.



**ಪ್ರಭೇದಗಳು :** ಈ ಸಸ್ಯ ಮಿರ್ಟೇಸಿ ಸಸ್ಯ ಕುಟುಂಬವರ್ಗಕ್ಕೆ ಸೇರಿದೆ. ಇದು 40 ಪ್ರಭೇದಗಳನ್ನು ಹೊಂದಿದೆ. ಮುಖ್ಯವಾಗಿ ಯೂಕಲಪ್ಟಸ್, ಗ್ಯಾಬುಲಸ್, ಮಾರ್ಜಿನೇಟ್, ರೂಬಸ್ಟ್ ಅಮಿಗ್ಡಲಿನ, ಓಲಿಯೋಸ್ ಮತ್ತು ಸಿಟ್ರಿಯೊಗಳನ್ನು ಹೆಸರಿಸಬಹುದು. ಶೀಘ್ರವಾಗಿಯೂ,

ಎತ್ತರವಾಗಿಯೂ ಬೆಳೆಯುವುದು ಇದರ ವೈಶಿಷ್ಟ್ಯವಾಗಿದ್ದು ಸುಮಾರು 150 ಅಡಿಗಳಿಗಿಂತಲು ಎತ್ತರವಾಗಿ ಬೆಳೆಯಬಲ್ಲದು. ಗರಿಷ್ಠ ಎತ್ತರ ಮತ್ತು ದಪ್ಪದ ಮರ ಟಾಸ್ಮೇನಿಯಾದಲ್ಲಿ ಕಂಡು ಬಂದಿದ್ದು ದಾಖಲಾಗಿದೆ. ಉಷ್ಣ, ಶೀತ, ಜೌಗು, ಮತ್ತು ಮರಳು ಮುಂತಾದ ಎಲ್ಲಾ ಬಗೆಯ ವಾತಾವರಣ ಮತ್ತು ಭೂಮಿಗೆ ಹೊಂದಿಕೊಂಡು ಬೆಳೆಯುವ ಪ್ರಭೇದಗಳಿವೆ.

**ಬಿತ್ತನೆ :** ಈ ಮರ ಬಿಳಿ ಬಣ್ಣದ ಹೂಗಳನ್ನು ಹೊಂದಿದ್ದು ಕ್ರಮೇಣ ಕಾಯಿಗಳಾಗುತ್ತವೆ. ಕಾಯಿಗಳು ಬುಗುರಿಯಾಕಾರದಲ್ಲಿದ್ದು, ಮೇಲ್ಭಾಗದಲ್ಲಿ ರಂಧ್ರಗಳಿರುತ್ತವೆ. ಈ ರಂಧ್ರಗಳಿಂದ ಬೀಜಗಳು ಹೊರಬರುತ್ತವೆ. ಇವು ತುಂಬಾ ಸಣ್ಣದಾಗಿದ್ದು, ಒಟ್ಲು ಹಾಕಿ ಇವುಗಳಿಂದ ಸಸಿಗಳನ್ನು ಬೆಳೆಸುತ್ತಾರೆ. ಹೀಗೆ ಬೆಳೆದ ಸಸಿಗಳನ್ನು ಕಿತ್ತು ಬೇಕಾದ ಕಡೆನೆಟ್ಟು ಬೆಳೆಸುತ್ತಾರೆ. ಮೈದಾನ ಪ್ರದೇಶಗಳಲ್ಲಿ ಬೆಳೆಸಲು ಮೆಲನೋಫ್ಲೋಯ ಮತ್ತು ಮೈಕ್ರೋತೀರ ತಳಿಗಳು ಯುಕ್ತವಾದರೆ, ಬೈಕಲರ್, ಬಾಟ್ರಿಯೊಯ್ಡಿಸ್ ಯುಜಿನಾಯ್ಡಿಸ್ ತಳಿಗಳು ಹುಲುಸಾಗಿ ಬೆಳೆಯಬಲ್ಲವು.

**ಲಕ್ಷಣ ಮತ್ತು ವೈಶಿಷ್ಟ್ಯ :** ಕಾಂಡದ ತೊಗಟೆ ಬಲಿತಂತೆಲ್ಲ ಸುಲಿದುಕೊಂಡಿರುವುದು, ಎಲೆಗಳು ಸದಾ ಹಸುರಾಗಿರುವುದು ಇದರ ವಿಶಿಷ್ಟಲಕ್ಷಣ. ಭೂಮಿ ಆಳದಿಂದಲೂ ನೀರನ್ನು ಹೀರಿಕೊಳ್ಳುವ ಗುಣ ಇರುವುದರಿಂದ ಹೆಚ್ಚು ನೀರನ್ನು ಬಯಸುವುದಿಲ್ಲ. ನೆಲದ ಸತ್ವ - ಸಾರವನ್ನು ಸಮರ್ಥವಾಗಿ ಸೆಳೆಯುವ ಶಕ್ತಿ ಇರುವ ಕಾರಣ ಗೊಬ್ಬರದ ಅವಶ್ಯಕತೆಯೂ ಬೇಕಿಲ್ಲ. ಇಂತಹ (Allelopathic effect) ಗುಣದಿಂದಾಗಿಯೇ ಇದರ ಸುತ್ತ-ಮುತ್ತ 15-20 ಚದುರ ಅಡಿಗಳ ಅಂತರದಲ್ಲಿ ಇತರ ಸಸ್ಯಗಳು ಬೆಳೆಯಲಾರವು. ಈ ಕಾರಣದಿಂದಾಗಿಯೇ ರೈತರ ಅವ ಕೃಪೆಗೆ ಪಾತ್ರವಾಗಿತ್ತು. ನೆಲದ ಸಾರವನ್ನು ಜೊತೆಗೆ ತೇವಾಂಶವನ್ನೆಲ್ಲಾ ಹೀರಿಕೊಂಡು ಬಂಜರಾಗಿಸುತ್ತದೆ, ಇದನ್ನು ಬೆಳೆಸಬಾರದು ಎಂದೇ ಪ್ರಚಾರವಾಗಿತ್ತು. ಆದರೆ ಈಗ ಮನೋಧರ್ಮ ಮರೆಯಾಗಿ ರೈತರು ತಮ್ಮ ಜಮೀನುಗಳ ಅಂಚಿನ ಬದುಗಳ ಮೇಲೆ ಸಾಲಾಗಿ ಬೆಳೆಸಿ ಲಾಭ ಪಡೆಯುತ್ತಿದ್ದಾರೆ. ಅಲ್ಲದೆ ಕೃಷಿ ಕಾರ್ಯಕ್ಕೆ ಕೃಷಿ ಕಾರ್ಮಿಕರ ಕೊರತೆ ಮತ್ತು ಇನ್ನಿತರ ಕಾರಣಗಳಿಂದಾಗಿ ಜಮೀನುಗಳಲ್ಲಿ ಹೆಚ್ಚು ಆರೈಕೆಯನ್ನು ಮತ್ತು ಶ್ರಮವನ್ನು ಬಯಸದ ನೀಲಗಿರಿ ನೆಡುತೋಪುಗಳನ್ನೇ ರೈತರು ಅನೇಕ ಕಡೆ ಬೆಳೆಸುತ್ತಿರುವುದನ್ನು ಕಾಣಬಹುದಾಗಿದೆ.

**ಉಪಯೋಗ :** ನೀಲಗಿರಿ ಎಲೆ ಮತ್ತು ಕಾಂಡದಿಂದ ತೈಲವನ್ನು ತೆಗೆಯಲಾಗುತ್ತದೆ. ಇದು ಔಷಧಿಯಾಗಿ ಸೀತ, ಕೀಲುನೋವು ಇತ್ಯಾದಿಗಳಿಗೆ ಬಳಕೆಯಾಗುತ್ತದೆ. ಜಿರಾಸಿನೈಲ್ ಅಸಿಟೇಲ್, ಎಂಡೆಸ್ಮಾಲ್ ಮುಂತಾದ ಪ್ರಭೇದಗಳಲ್ಲಿ ಸುಗಂಧ ರಸಾಯನಿಕಗಳು ಇರುವುದರಿಂದ ಸುಗಂಧದ್ರವ್ಯ ತಯಾರಿಕೆಯಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.

ಅಸ್ಟ್ರಿಂಜಿನ್ಸ್ ಮತ್ತು ರಿಡಂಕ್ ಎಂಬ ಪ್ರಭೇಧಗಳಲ್ಲಿ 'ಟ್ಯಾನಿನ್' ಎಂಬ ರಾಸಾಯನಿಕ ಇರುವುದರಿಂದ ಚರ್ಮಹದಮಾಡಲು ಉಪಯೋಗಿಸುತ್ತಾರೆ. 'ರೆನ್ನಾನ್ಸ್' ಎಂಬ ಪ್ರಭೇದದ ಮರದಿಂದ ಮದ್ಯಸಾರವನ್ನು ಉತ್ಪಾದಿಸಲು ಸಾಧ್ಯವಿದೆ. 'ಮುನ್ನಾ' ಎಂಬ ಪ್ರಭೇದದ ಮರದಿಂದ ಒಂದು ಬಗೆಯ 'ಮಕರಂಧ' ಸ್ರವಿಸುತ್ತದೆ. ಇದಕ್ಕೆ 'ಮುನ್ನಾ' ಎಂದೇ ಹೆಸರು. ಇದು ಮರದಿಂದ ಸ್ರವಿಸಿದಂತೆ ಉಂಡೆಯಾಗಿ ಗಟ್ಟಿಯಾಗುತ್ತದೆ. ಇದರಲ್ಲಿ 'ಶರ್ಕರ' ಪದಾರ್ಥಗಳು ಅಧಿಕವಾಗಿರುತ್ತವೆ.

ಮತ್ತೆ ಕೆಲವು ಪ್ರಭೇದಗಳಿಂದ 'ಕಿಮೊ' ಎಂಬ ಗೋಂದು (ಅಂಟು) ದೊರೆಯುತ್ತದೆ. ಇದು ಚರ್ಮ ಹದಮಾಡುವಲ್ಲಿ ಮತ್ತು ಬಣ್ಣ ತಯಾರಿಕೆಯಲ್ಲಿ ಹೆಚ್ಚು ಬಳಕೆಯಾಗುತ್ತದೆ. ಈ ಮರದ ಕಾಂಡ ಗಟ್ಟಿಯಾಗಿರುವುದರಿಂದ ರೈಲ್ವೆ ಸ್ಲೀಪರ್ ಮತ್ತು ಹಡಗು ನಿರ್ಮಾಣದಲ್ಲಿ ಬಳಸಲ್ಪಡುತ್ತಿದೆ. ಮನೆ ಸಾಮಾನುಗಳು ಅಂದರೆ ಜಂತಿ, ತೊಲೆ, ರೀಪರ್‌ಗಳಾಗಿಯೂ ಬಳಸಬಹುದು. ಆದರೆ ಸೀಳು ಬಿಡುವ ಕಾರಣದಿಂದಾಗಿ ಉತ್ತಮ ದರ್ಜೆಯ ಮನೆಗಳಿಗೆ ಬಳಸುವುದಿಲ್ಲ. ಕೊಟ್ಟಿಗೆ, ಗೋದಾಮು, ಕಾರ್‌ಶೆಡ್ ಮುಂತಾದವನ್ನು ನಿರ್ಮಿಸಲು ಬಳಸುತ್ತಾರೆ. ತೈಲದ ಅಂಶವಿರುವ ಕಾರಣದಿಂದಾಗಿ ಗೆದ್ದಲು ಅಥವಾ ಕುಟ್ಟೆ ಹಿಡಿಯುವ ಸಾಧ್ಯತೆ ಕಡಿಮೆ.

ಇತ್ತೀಚೆಗೆ ರೇಯಾನ್ (ಕೃತಕ ರೇಷ್ಮೆ) ತಯಾರಿಕೆಯಲ್ಲಿಯೂ ಹೆಚ್ಚಾಗಿ ಬಳಕೆಯಾಗುತ್ತಿದೆ. ಅಲ್ಲದೆ ಕಾಗದ ತಯಾರಿಕೆಯಲ್ಲಿ ಇದರ ಉಪಯೋಗ ಸಾಕಷ್ಟಿದೆ. ಜೌಗು ಪ್ರದೇಶ, ಮೊರಡಿಗಳಲ್ಲಿ ಬೆಳೆಸುವುದರಿಂದ ಆ ನೆಲದ ನೈಸರ್ಗಿಕ ಸ್ವಭಾವವನ್ನೇ ಮಾರ್ಪಡಿಸುವುದು ಸಾಧ್ಯವಿದೆ. ಅರಣ್ಯ ಇಲಾಖೆ ಕಲ್ಲು - ಬುರುಜಗಳಿಂದ ಕೂಡಿದ ಬೆಟ್ಟ - ಗುಡ್ಡಗಳಲ್ಲಿ ವಿಶೇಷವಾಗಿ ಈ ಗಿಡಗಳನ್ನು ಬಳಸಲಾಗುವುದು.

ಇಷ್ಟೇ ಅಲ್ಲದೆ ಭೂಸವಕಳಿಯಾಗುವ ಕಡೆ ಬೆಳೆಸುವುದರಿಂದ ಸವಕಳಿಯನ್ನು ತಡೆಗಟ್ಟಿ ಭೂಸಾರ ಮತ್ತು ಫಲವತ್ತಾದ ಮಣ್ಣು ಕೊಚ್ಚಿ ಹೋಗುವುದನ್ನು ತಡೆಗಟ್ಟಬಹುದು. ಮತ್ತೆ ಕೆಲವು ಕಡೆ ರಭಸವಾಗಿ ಗಾಳಿ ಬೀಸುತ್ತದೆ. ಇಂತಹ ಕಡೆ ಹೆಚ್ಚಾಗಿ ಈ ಮರಗಳನ್ನು ಬೆಳೆಸಿದರೆ 'ಗಾಳಿ ಹೊಡೆತದ' ಸಮಸ್ಯೆಗೂ ಪರಿಹಾರ ಸಾಧ್ಯ. ಟಮ್ಯಾಟೋ ಸಸಿಗಳನ್ನು ಬೆಳೆಸಲು ಇದರ ಕಡ್ಡಿಗಳನ್ನು ಆಧಾರವಾಗಿ ಬಳಸುತ್ತಾರೆ. ತಾರಿಸಿ ಹಾಕುವ ಸಂದರ್ಭದಲ್ಲಿ ಈ ಮರವನ್ನು 'ಸೆಂಟ್ರಿಂಗ್'ಗೆ ಬಳಸುತ್ತಾರೆ.

ಹೀಗೆ ಹಲವು ಹತ್ತು ಉಪಯೋಗಗಳನ್ನು ಹೊಂದಿರುವ ಆಸ್ಟ್ರೇಲಿಯಾ ಮೂಲದ ಈ ಮರ ಭಾರತ ದೇಶಕ್ಕೂ ಪ್ರವೇಶಿಸಿ ಎಲ್ಲೆಲ್ಲೂ ಸುತ್ತಮುತ್ತಲೂ ವ್ಯಾಪಿಸಿಕೊಂಡಿರುವುದನ್ನು ಕಾಣಬಹುದು.

*ಎನ್‌ಎ.ಆರ್.*

**ನುಗ್ಗೆ** ನುಗ್ಗೆಕಾಯಿ ಮರದಲ್ಲಿ ಬೆಳೆಯುವ ವಿಶಿಷ್ಟವಾದ ತರಕಾರಿ. ನೀರು, ಗೊಬ್ಬರ ಇಲ್ಲದೆಯೂ ಪ್ರಕೃತಿದತ್ತವಾಗಿ ಬೆಳೆಯುವ ಸಾಮರ್ಥ್ಯ ಇದಕ್ಕಿದೆ. ಭಾರತದ ವಾಯವ್ಯ ಪ್ರದೇಶ ಇದರ ತವರೂರು. ದಕ್ಷಿಣ ಭಾರತದ ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಆಂಧ್ರಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ನುಗ್ಗೆಕಾಯಿ ರುಚಿಗೆ ಹೆಸರಾಗಿದೆ. ಕಾಯಿ ಅಲ್ಲದೆ ಅದರ ಹೂವು ಮತ್ತು ಸೊಪ್ಪುಗಳೂ ರುಚಿಕರ. ಇದರ ಬೀಜಗಳಿಂದ ಬರುವ ಎಣ್ಣೆಗೆ ಬಿನ್‌ಆಯಿಲ್ ಎಂದು ಕರೆಯುವರು. ಬೀಜದಿಂದ ಎಣ್ಣೆ ತೆಗೆದ ಅನಂತರ ಉಳಿಯುವ ಹಿಂಡಿ ದನಗಳಿಗೆ ಒಳ್ಳೆಯ ಮೇವು. ನುಗ್ಗೆ ತೊಗಟೆಯಿಂದ ನಾರನ್ನು ಉತ್ಪಾದಿಸುವರು.



**ಇತಿಹಾಸ :** ಮೊರಿಂಗೇಸಿ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಮೋರಿಂಗಾ ಟೆರಿಗೊಸ್ಪರ್ಮಾ. ಮರದ ಎತ್ತರ ಸುಮಾರು 5-6 ಮೀ. ತೊಗಟೆ ಬೂದು ಬಣ್ಣವಿದ್ದು, ಎಲೆಗಳು ತೆಳುವಾಗಿ ಜೋಡಣೆಯಾಗಿರುವ ಗರಿಗಳ ರಚನೆಯುಳ್ಳದ್ದು. ಹೂಗಳು ಬಿಳುಪು, ಸ್ವಲ್ಪಮಟ್ಟಿಗೆ ಸುವಾಸನೆಯುಳ್ಳದ್ದು. ಕಾಯಿಯ ಒಳಗೋಡೆಯ ಅಂಚಿಗೆ ಬೀಜ ಅಂಟಿಕೊಂಡಿದ್ದು, ಕಾಯಿ ಬಲಿತು ಒಣಗಿದರೂ ಸಿಡಿದು ಹಾರದೇ ಇರುವುದು ಹಾಗೂ ರೆಕ್ಕೆಗಳಿಂದ ಕೂಡಿದ ಬೀಜ ಇದರ ವೈಶಿಷ್ಟ್ಯವಾಗಿದೆ.

ನುಗ್ಗೆ ಬಹುಬೇಗ ಬೆಳೆಯಬಲ್ಲ ಮರ. ಕಾಂಡದ ದಪ್ಪ 1.2 ರಿಂದ 1.5 ಅಡಿ ಇದ್ದು, ರೆಂಬೆಗಳು ಮೋಟಾಗಿರುತ್ತವೆ. ಹಾಗೂ ಕಾಂಡ ಮತ್ತು ಬಲಿತ ರೆಂಬೆಗಳಲ್ಲಿಯ ತೊಗಟೆಯು ಬೂದು ಬಣ್ಣದಿಂದ ಕೂಡಿದ್ದು ಮೆತ್ತಗೆ ಬೆಂಡಿನಂತೆ ಇರುತ್ತದೆ. ಎಲೆ ತೊಟ್ಟುಗಳಿದ್ದ ಜಾಗದಲ್ಲಿ ಕುದುರೆ ಲಾಳದ ಆಕಾರವಿರುವ ಕುಸಿದ ಮಚ್ಚೆಗಳಿರುತ್ತವೆ.

ಕಟ್ಟಿಗೆ ಮೃದು, ಹಗುರ ಹಾಗೂ ರಂಧ್ರದಿಂದ ಕೂಡಿರುತ್ತದೆ. ಬಾಳಿಕೆ ಕಡಿಮೆ ಎಲೆ ತೊಟ್ಟು ಸ್ವಲ್ಪ ಉದ್ದ. ಎಲೆಗಳು ಸುಳಿಭಾಗದಲ್ಲಿ ಗುಂಪಾಗಿರುತ್ತವೆ. ಅವುಗಳ ಬಣ್ಣ ಹಸುರು. ಹಾಗೂ ಅದರ ಉಪ ಎಲೆಗಳಿಗೆ ಪುಟ್ಟ ತೊಟ್ಟು ಇರುತ್ತದೆ. ಎಲೆಗಳು ಎಳೆಯದಿದ್ದಾಗ ಅವುಗಳ ಮೇಲೆ ನವಿರಾದ ತುಪ್ಪಳ ಇರುತ್ತದೆ.

ನುಗ್ಗೆಯ ಹೂವು ಗೊಂಚಲುಗಳಲ್ಲಿ ಬಿಡುತ್ತವೆ. ಹೂಗೊಂಚಲುಗಳು ಎಲೆಗಳ ಕಂಕುಳಲ್ಲಿ ಮೂಡುವುವು. ಹೂವಿಗೆ ದ್ವಿಲಿಂಗಿಗಳಿರುತ್ತವೆ. ಹೂ, ಮೊಗ್ಗುಗಳ ಮೇಲೆ ತುಪ್ಪಳ ಇರುತ್ತದೆ. ಬಿಡಿ ಮೊಗ್ಗು 0.7 ರಿಂದ 1.0 ಸೆಂ. ಮೀ. ಉದ್ದವಿದ್ದು ಬಣ್ಣ ಹಸುರಾಗಿರುತ್ತವೆ.

ಕಾಯಿಗಳು ಕೋಲಿನಂತೆ ಉದ್ದವಾಗಿದ್ದು ನೆಲಮುಖವಾಗಿ ಇಳಿಬಿದ್ದಿರುತ್ತವೆ. ಬಲಿತಾಗ ದುಂಡಗೆ ಇಲ್ಲವೆ ಮುಮ್ಮೂಲೆಗಳಿಂದ ಕೂಡಿದ್ದು; ತುದಿಭಾಗ ಚೂಪಾಗಿರುತ್ತದೆ.ಕಾಯಿಗಳ ಉದ್ದದಲ್ಲಿ ಬಹಳಷ್ಟು ವ್ಯತ್ಯಾಸವಿರುತ್ತದೆ. 30 ರಿಂದ 100 ಸೆಂ.ಮೀ.ಗಳಷ್ಟು ಉದ್ದವಿರುವುದುಂಟು, ಮೇಲಿನ ಸಿಪ್ಪೆ ಹಸುರು ಇಲ್ಲವೇ ಕಂದು. ತಿರುಳು ಸ್ಪಂಜಿನಂತೆ ಮೃದುವಾಗಿದ್ದು ಬೀಜ ಒತ್ತಿದ ಭಾಗ ಅರ್ಧಚಂದ್ರಾಕೃತಿಯಲ್ಲಿರುತ್ತವೆ. ಬೀಜ ಗುಂಡಗೆ ಬಟಾಣಿ ಕಾಳಿನಂತಿದ್ದು ಸುಮಾರು 1 ಸೆಂ.ಮೀ. ದಪ್ಪವಿರುತ್ತದೆ. ಪ್ರತಿ ಬೀಜ ಹೊರ ಅಂಚಿನಲ್ಲಿ ಮೂರು ರೆಕ್ಕೆಗಳಿರುತ್ತವೆ. ಹಾಗೂ ಭ್ರೂಣದಲ್ಲಿ ತೈಲ ಪದಾರ್ಥವಿರುತ್ತವೆ.

**ಸಸ್ಯಾಭಿವೃದ್ಧಿ :** ನುಗ್ಗೆಯನ್ನು ಬೀಜ ಊರಿ ಹಾಗೂ ನಿರ್ಲಿಂಗ ವಿಧಾನಗಳಲ್ಲಿ ವೃದ್ಧಿ ಮಾಡಬಹುದು, ಇದೊಂದು ಅನ್ಯ-ಪರಾಗಸ್ಪರ್ಶದಿಂದ ಕೂಡಿದ ಬೆಳೆ. ಹೂವುಗಳು ಬಿಡುವಾಗ ಹೂಗೊಂಚಲುಗಳನ್ನು ಬಟ್ಟೆಯ ಮಸ್ಲಿನ್ ಚೀಲ ಹೊದಿಸಿ ಕಟ್ಟಿದಲ್ಲಿ ಅವುಗಳು ಸ್ವ-ಪರಾಗಸ್ಪರ್ಶಗೊಳ್ಳುತ್ತವೆ. ಪೂರ್ಣವಾಗಿ ಬಲಿತು ಪಕ್ವಗೊಂಡು ಒಣಗಿದ ಕಾಯಿಗಳನ್ನು ಬಿಡಿಸಿ ಮಾಡಿದ ಗಟ್ಟಿಬೀಜವನ್ನು ಮಾತ್ರವೇ ಬಿತ್ತನೆ ಮಾಡಬೇಕು. ಬೀಜವನ್ನು ಪಾಲಿಥೀನ್ ಚೀಲಗಳಲ್ಲಿ ಬಿತ್ತುವುದು ಒಳ್ಳೆಯದು ಮರಳು ಮತ್ತು ಕೊಳೆತ ತಿಪ್ಪೆಗೊಬ್ಬರವನ್ನು ಬೆರಸಿ ಸಿದ್ಧಗೊಳಿಸಿದ ಮಿಶ್ರಣವನ್ನು ಚೀಲಗಳಲ್ಲಿ ತುಂಬಿ, ತಲಾ ಒಂದರಂತೆ ಬೀಜ ಊರಿ ನೀರು ಕೊಡುತ್ತಿದ್ದಲ್ಲಿ 4-5 ದಿನಗಳಲ್ಲಿ ಮೊಳಕೆಯೊಡೆಯುತ್ತವೆ. ಒಂದು ತಿಂಗಳಿನಲ್ಲಿ ನಾಟಿ ಮಾಡಲು ಸಿದ್ಧವಾಗುತ್ತವೆ.

ನಿರ್ಲಿಂಗ ವಿಧಾನಗಳಲ್ಲಿ ಬಲಿತ ರೆಂಬೆಯ ತುಂಡುಗಳನ್ನು ನೆಟ್ಟು ಬೆಳೆಸಬಹುದು. ಇದು ಸುಲಭದ ಪದ್ಧತಿಯೇನೋ ನಿಜ. ಆದರೆ ಸಾಕಷ್ಟು ಸಂಖ್ಯೆಯ ರೆಂಬೆಯ ತುಂಡುಗಳು ಸಿಗುವುದು ಕಷ್ಟ. ಹಾಗೂ ನುಗ್ಗೆಯನ್ನು ಕಣ್ಣು ಕೂಡಿಸಿ ಕಸಿ ಮಾಡಿ ಗೂಟಕಟ್ಟಿ ಸಹ ವೃದ್ಧಿ ಮಾಡಬಹುದು.

**ಭೂಮಿ ಸಿದ್ಧತೆ ಮತ್ತು ಬಿತ್ತನೆ :** 22.5 ಮೀ. ಅಂತರದಲ್ಲಿ 30 ಘನ ಸೆಂ.ಮೀ. ಗಾತ್ರದ ಗುಂಡಿಗಳನ್ನು ತೆಗೆದು ಬಿಸಿಲಿಗೆ ಬಿಡಬೇಕು. ಗುಂಡಿಗಳನ್ನು ತೋಡಲು ಮೇ-ಜೂನ್ ಉಪಯುಕ್ತ ಕಾಲ. ಅನಂತರ ಗುಂಡಿಗಳಿಗೆ ತಿಪ್ಪೆಗೊಬ್ಬರ ಮತ್ತು ಮೇಲ್ಮಣ್ಣುಗಳನ್ನು ತುಂಬಿ ನೀರು ಕೊಟ್ಟರೆ ಆ ಮಿಶ್ರಣ ಚೆನ್ನಾಗಿ ಕುಳಿತುಕೊಳ್ಳುತ್ತದೆ. ಮಳೆಗಾಲದ ಅನಂತರ ತಲಾ ಒಂದರಂತೆ ಸಸಿಗಳನ್ನು ನೆಟ್ಟು ಆಸರೆಗೆ ಕೋಲು ಸಿಕ್ಕಿಸಬೇಕು. ಸಸಿಗಳು ಸುಮಾರು 1 ಮೀ. ಎತ್ತರಕ್ಕೆ ಬೆಳೆದಾಗ ಅವುಗಳ ಸುಳಿಯನ್ನು ಚಿವುಟಿ ಹಾಕಿದರೆ ಮೋಸುಗಳು ಬೆಳೆದು ಸುತ್ತ ಹರಡಿ ಬೆಳೆಯುತ್ತವೆ. ಆಗ ಅದರ ನೆತ್ತಿ ಅಗಲವಾಗಿ ಹರಡಿ ಬೆಳೆದು ಛತ್ರಿಯಂತೆ ಕಾಣುವುದು. ಅದರಿಂದ ಹೆಚ್ಚಿನ ಪ್ರಮಾಣದಲ್ಲಿ ಹೂವುಬಿಟ್ಟು ಅಧಿಕ ಫಸಲು ಸಾಧ್ಯವಾಗುತ್ತದೆ.

**ಗೊಬ್ಬರ :** ನುಗ್ಗೆ ಗಿಡಗಳಿಗೆ ಗೊಬ್ಬರ ಕೊಡುವ ರೂಢಿ ಇಲ್ಲ. ಪ್ರತಿ ವರ್ಷ ಗಿಡಕ್ಕೆ 10-20 ಕಿ.ಗ್ರಾಂ. ತಿಪ್ಪೆಗೊಬ್ಬರ ಕೊಡುವುದು ಲಾಭದಾಯಕ. "ತಮಿಳುನಾಡು ಕೃಷಿ ವಿಶ್ವವಿದ್ಯಾಲಯದ ಕೊಯಮತ್ತೂರು ಕೇಂದ್ರವು ಪ್ರತಿಗಿಡಕ್ಕೆ ವರ್ಷಕ್ಕೆ 7.5 ಕಿ.ಗ್ರಾಂ. ತಿಪ್ಪೆಗೊಬ್ಬರ ಮತ್ತು 370 ಗ್ರಾಂ. ಅಮೋನಿಯಂ ಸಲ್ಫೇಟ್‌ಗಳನ್ನು ಡಿಸೆಂಬರ್‌ನಲ್ಲಿ ಕೊಡುವುದರಿಂದ ಅಧಿಕ ಇಳುವರಿ ಸಾಧ್ಯವಾಗಿದ್ದಾಗಿ ವರದಿಮಾಡಿದೆ."

**ಮಿಶ್ರ ಅಥವಾ ಅಂತರ ಬೆಳೆಯಾಗಿ ನುಗ್ಗೆ :** ನುಗ್ಗೆಯನ್ನು ಶುದ್ಧ ಬೆಳೆಯಾಗಿ ಬೆಳೆಯುವುದುಂಟು ಮಿಶ್ರ ಬೆಳೆಯಾಗಿ ಸಾಮಾನ್ಯವಾಗಿ ಎಲೆ ತೋಟಗಳಲ್ಲಿ ಇದರ ಗಿಡಗಳ ಆಸರೆಯಾಗಿ ಬೆಳೆಯುತ್ತಾರೆ. ತೆಂಗು, ಸಪೋಟ ಮಾವು ಬೆಳೆಗಳಲ್ಲಿ 3-4 ವರ್ಷಗಳವರೆಗೆ ಅಂತರ ಬೆಳೆಯಾಗಿ ಬೆಳೆಯುತ್ತಾರೆ. ಅಂತರ ಬೇಸಾಯ ಕ್ರಮದಲ್ಲಿ ಕಳೆಗಳನ್ನು ಕಿತ್ತು ಹಾಕಿ ಪಾತಿಗಳನ್ನು ಹಿಗ್ಗಿಸಿ, ಒಣಹುಲ್ಲು, ಅಥವಾ ಎಲೆಗಳನ್ನು ಮಂದವಾಗಿ ಹರಡಬೇಕು. ಆಗ ತೇವಾಂಶ ಹೆಚ್ಚು ಕಾಲ ಉಳಿಯುತ್ತದೆ. ಮಣ್ಣಿನ ಫಲವತ್ತೆಯನ್ನು ಸುಧಾರಿಸುತ್ತದೆ.

**ತಳಿಗಳು : 1. ಜಾಫ್ನಾ :** ಇದು ಶ್ರೀಲಂಕಾದ ತಳಿ. ದಕ್ಷಿಣ ಭಾರತದಲ್ಲಿ ಬಹಳ ಮುಖ್ಯವಾದುದು. ಇದರ ಕಾಯಿಗಳು 60-90 ಸೆಂ.ಮೀ. ಉದ್ದವಿದ್ದು, ಮೃದುವಾದ ತಿರುಳನ್ನು ಹೊಂದಿರುತ್ತವೆ. ಇದರಲ್ಲಿ ಎರಡು ಬಗೆ, : ಚವಕಚೇರಿ ಮುರುಂಗಾಯ್ ಮತ್ತು ಚೆಮ್ ಮುರುಂಗಾಯ್, ಚವಕಚೇರಿ ಮುರಂಗಾಯ್‌ನ ಕಾಯಿಗಳು 90-120 ಸೆಂ.ಮೀ. ಉದ್ದವಿರುತ್ತವೆ. ಹಾಗೂ ಚೆಮ್ ಮುರುಂಗಾಯ್‌ನ ಕಾಯಿಗಳ ತುದಿ ಕೆಂಪು ಬಣ್ಣವಿರುತ್ತದೆ.

**2. ಪೂನ ಮುರಂಗಾಯ್ :** ಈ ಕಾಯಿಗಳು ತಿನ್ನಲು ರುಚಿಯಾಗಿರುತ್ತವೆ. ಹಾಗೂ ಅಧಿಕವಾದ ತಿರುಳನ್ನು ಹೊಂದಿರುತ್ತವೆ.

**3. ಕೋಡಿಕ್ಕಲ್ ಮುರಂಗಾಯ್ :** ಈ ಕಾಯಿಗಳು ಮೋಟು, 15-25 ಸೆಂ.ಮೀ. ಉದ್ದವಿರುತ್ತವೆ. ಹಾಗೂ ಪೌಷ್ಠಿಕಾಂಶದ ಗುಣವನ್ನು ಹೊಂದಿರುತ್ತವೆ.

**4. ಪಾಲ ಮುರಂಗಾಯ್ :** ಇದರ ಕಾಯಿಗಳಲ್ಲಿ ತಿರುಳು ಸಾಕಷ್ಟಿರುತ್ತದೆ. ಆದರೆ ರುಚಿಯಲ್ಲಿ ಕಹಿಯಾಗಿರುತ್ತದೆ. ಹಾಗೂ ಕಾಯಿಗಳು ಉದ್ದವಾಗಿರುತ್ತವೆ.

**5. ಪಿಕೆಎಂ-1 :** ಈ ತಳಿಯು ತಮಿಳುನಾಡು ಕೃಷಿವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಪೆರಿಯಾಕುಳಂ ಸಂಶೋಧನಾ ಕೇಂದ್ರದ ಕೊಡುಗೆ. ಗಿಡಗಳು ಬಲು ಗಿಡ್ಡವಾಗಿದ್ದು, ವಿರಳ ನೆತ್ತಿಯಿಂದ ಕೂಡಿರುತ್ತವೆ. ಸಸಿಗಳನ್ನು ನೆಟ್ಟ ಆರು ತಿಂಗಳಲ್ಲಿಯೇ ಹೂವು ಬಿಟ್ಟು ಕಾಯಿ ಕಚ್ಚುತ್ತವೆ. ಪ್ರತಿಗಿಡದಲ್ಲಿ ವರ್ಷಕ್ಕೆ 300-400 ಕಾಯಿಗಳಷ್ಟು ಇಳುವರಿ ಸಿಗುತ್ತದೆ. ಹಾಗೂ ತಿನ್ನಲು ಬಲು ರುಚಿಯಾಗಿರುತ್ತವೆ.

**6. ಜಿಕೆವಿಕೆ-1 :** ಇದೊಂದು ಗಿಡ್ಡತಳಿ, ಅಧಿಕ ಇಳುವರಿ ಕೊಡುತ್ತದೆ. ಇದು ಬೆಂಗಳೂರು ವಿಶ್ವವಿದ್ಯಾನಿಲಯದ ಕೊಡುಗೆಯಾಗಿದೆ. ಸುಮಾರು 3-4 ವರ್ಷಗಳವರೆಗೂ ಫಸಲು ಸಿಗುತ್ತದೆ. ಕಾಯಿಗಳು ದಪ್ಪನಾಗಿದ್ದು ಅಧಿಕ ತಿರುಳನ್ನು ನೀಡುತ್ತವೆ.

**7. ಧನ್‌ರಾಜ್ :** ಈ ತಳಿ ಧಾರವಾಡ ವಿಶ್ವವಿದ್ಯಾಲಯದ ಕೊಡುಗೆ. ಇದರ ಕಾಯಿಗಳು ಮೋಟಾಗಿದ್ದು, ರಸವತ್ತಾಗಿರುತ್ತದೆ. ಇದು ಏಕವಾರ್ಷಿಕ ಬೆಳೆಯಾಗಿದ್ದು ಹೆಚ್ಚು ಫಸಲನ್ನು ಕೊಡುವ ತಳಿಯಾಗಿದೆ.

**ನುಗ್ಗೆಯಲ್ಲಿರುವ ಪೌಷ್ಟಿಕ ಗುಣಗಳು :** ನುಗ್ಗೆಸೊಪ್ಪು, ಕಾಯಿ, ಹೂವು, ತೊಗಟೆ ಮತ್ತು ಬೀಜಗಳು ಪೌಷ್ಟಿಕ ಆಹಾರಗಳು, ಅವುಗಳಲ್ಲಿ ಶರೀರದ ಬೆಳೆವಣಿಗೆಗೆ ಬೇಕಾದ ಶರ್ಕರಪಿಷ್ಠ, ಪ್ರೊಟೀನ್, ಕೊಬ್ಬು, ಖನಿಜ ಪದಾರ್ಥ ಹಾಗೂ ಜೀವಸತ್ವಗಳು ಅಧಿಕ ಪ್ರಮಾಣದಲ್ಲಿರುತ್ತವೆ. ನುಗ್ಗೆಯಲ್ಲಿ ಗಜ್ಜರಿ (ಕ್ಯಾರೆಟ್)ಗಿಂತ ನಾಲ್ಕುಪಟ್ಟು ಅಧಿಕ ವಿಟಮಿನ್ 'ಎ' ಹಾಗೂ ಕಿತ್ತಳೆಗಿಂತ ಏಳು ಪಟ್ಟು ಅಧಿಕ ವಿಟಮಿನ್ ಸಿ ಇದೆ, ಹಾಲಿಗಿಂತ ಎರಡು ಪಟ್ಟು ಕ್ಯಾಲ್ಸಿಯಂ, ಬಾಳೆಹಣ್ಣಿಗಿಂತ ನಾಲ್ಕು ಪಟ್ಟು ಪೊಟ್ಯಾಷಿಯಂ ಅಂಶವನ್ನು ನುಗ್ಗೆ ಹೊಂದಿದೆ, ನುಗ್ಗೆ ರಸಕ್ಕೆ ಜೇನುತುಪ್ಪ ಬೆರೆಸಿ ಕುಡಿದರೆ ಕೆಮ್ಮು ನಿವಾರಣೆಯಾಗುತ್ತದೆ. ನುಗ್ಗೆ ಎಲೆಯನ್ನು ಕುದಿಸಿ ಬಾಣಂತಿಯರಿಗೆ ಕೊಡುವುದರಿಂದ ಎದೆ ಹಾಲು ಹೆಚ್ಚಾಗುತ್ತದೆ.

**ಔಷಧಿ ಗುಣಗಳು :** ನುಗ್ಗೆಯಲ್ಲಿ ಪೌಷ್ಟಿಕಾಂಶದ ಗುಣ ಇರುವಂತೆ ರೋಗ ನಿರೋಧಕವಾದ ಗುಣವೂ ಇದೆ. ನುಗ್ಗೆ ಸೊಪ್ಪನ್ನು ತಿನ್ನುತ್ತಿದ್ದಲ್ಲಿ ನೆಗಡಿ ಶೀತ, ಜೀರ್ಣಕೋಶದ ತೊಂದರೆಗಳು ಹೊರತಾಗುತ್ತವೆ. ಇದರಿಂದ ಜೀರ್ಣಶಕ್ತಿ ಹೆಚ್ಚುತ್ತದೆ. ವ್ರಣ, ಗಾಯ, ಉರಿ, ಊತ ಮುಂತಾದವುಗಳು ಕಂಡುಬಂದಲ್ಲಿ ನುಗ್ಗೆ ಎಲೆಗಳನ್ನು ನುಣ್ಣಗೆ ಅರೆದು ಪಟ್ಟು ಹಾಕುವುದರಿಂದ ಗುಣವಾಗುತ್ತವೆ.

ದವಡೆಯಿಂದ ರಕ್ತ ಸೋರುವ ಪಯೋರಿಯಾ ವ್ಯಾಧಿಗೆ ಅದು ಒಳ್ಳೆಯದು. ಹಾಗೂ ಇದರ ಸೊಪ್ಪಿನಲ್ಲಿ ಅಧಿಕ ಪ್ರಮಾಣದಲ್ಲಿ 'ಎ ಜೀವಸತ್ವ ಇರುವ ಕಾರಣ ಕಣ್ಣುಗಳ ದೃಷ್ಟಿ ತೀಕ್ಷ್ಣಗೊಳ್ಳುತ್ತದೆ. ಹಾಗೂ ಸ್ಕರ್ವಿ ರೋಗ ಗುಣವಾಗುತ್ತದೆ. ನುಗ್ಗೆ ಕಾಯಿಗಳನ್ನು ಬೇಯಿಸಿ ತಿನ್ನುವುದರಿಂದ ಶುದ್ಧರಕ್ತ ಹೆಚ್ಚುತ್ತದೆ. ಹೃದಯ ರೋಗ ಪೀಡಿತರು ಅವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಿನ್ನಬೇಕು. ಆದ್ದರಿಂದ ಜಲೋದರಕ್ಕೆ ಒಳ್ಳೆಯದು.

ಕೆಂಪು ನುಗ್ಗೆ ಹೂವುಗಳನ್ನು ತಿನ್ನುವುದರಿಂದ ವಾಯುಬಾಧೆ ಮತ್ತು ಮಲಬದ್ಧತೆಗಳು ದೂರವಾಗುತ್ತವೆ. ಅವುಗಳಲ್ಲಿ ಮೂತ್ರವರ್ಧಕ ಗುಣಗಳಿವೆ. ಹಾಗೂ ನುಗ್ಗೆ ಬೀಜಗಳಲ್ಲಿ ಅಣುಜೀವಿ ನಿರೋಧಕ ಶಕ್ತಿಯಿದೆ. ಬಿಕ್ಕಳಿಕೆ, ದಮ್ಮು, ಪಿತ್ತಜನಕಾಂಗದ ತೊಂದರೆಗಳು ಮತ್ತು ಸೊಂಟದ ನೋವು ದೂರವಾಗುತ್ತವೆ. ಹಾಗೂ ಹಸಿ ಬೇರುಗಳ ಕಷಾಯ ಗಂಟಲು ನೋವು, ಬಾಯಿ ಹುಣ್ಣುಗಳಿಗೆ ಲಾಭದಾಯಕ. ಇದನ್ನು ಹಾಲಿನೊಂದಿಗೆ ಅರೆದು ಹಣೆಯ ಮೇಲೆ ಪಟ್ಟು ಹಾಕಿದಲ್ಲಿ ತಲೆನೋವು ಗುಣವಾಗುತ್ತದೆ.

**ಕೀಟ ಮತ್ತು ರೋಗಗಳು**

**1. ಎಲೆ ತಿನ್ನುವ ಕಂಬಳಿ ಹುಳು :** ಈ ಕಂಬಳಿ ಹುಳುಗಳಿಗೆ ಮೈಮೇಲೆಲ್ಲಾ ಕೂದಲುಗಳಿರುತ್ತವೆ. ಈ ಕೀಟಗಳು ಎಲೆಗಳಲ್ಲಿಯ ಹಸುರು ಭಾಗವನ್ನೆಲ್ಲಾ ತಿಂದು ಹಾಳು ಮಾಡುತ್ತವೆ. ಇದರಿಂದ ಮರಗಳು ಬೋಳಾಗುತ್ತವೆ. ಹಾಗೂ ಇವುಗಳೆಲ್ಲಾ ಉದುರಿ ಅದರ ಸಂತತಿಯೇ ನಾಶವಾಗುತ್ತದೆ.

**2. ಕಂದು ಬಣ್ಣದ ಪತಂಗ :** ಕಂಬಳಿ ಹುಳುಗಳು ಮೋಟಾಗಿ ಕಂದು ಬಣ್ಣದಿಂದ ಕೂಡಿರುತ್ತವೆ, ಅವುಗಳ ಮೈಮೇಲೆ ಕುರುಚಲು ಕೂದಲು ಹರಡಿರುತ್ತವೆ. ಪ್ರಾಯದ ಪತಂಗಗಳು ಎಲೆಗಳ ಮೇಲೆ ಮೊಟ್ಟೆ ಇಡುತ್ತವೆ. ಮೊಟ್ಟೆಯಿಂದ ಹೊರಬಂದ ಹುಳುಗಳು ಎಲೆಗಳನ್ನು ತಿಂದು ಹಾಳು ಮಾಡುತ್ತವೆ.

**3. ತೊಗರಿ ಗಿಡಗಳಿಗೆ ಬೀಳುವ ಕಂಬಳಿ ಹುಳು :** ಇದರ ಕಾಟ ಚಳಿಗಾಲದಲ್ಲಿ ಜಾಸ್ತಿ. ಈ ಹುಳುಗಳ ಬಣ್ಣ ಕಂದು. ಇದು ಸಹ ಮೊಟ್ಟೆ

ಇಡುತ್ತದೆ. ಮೊಟ್ಟೆಯಿಂದ ಹೊರಬಂದ ಹುಳುಗಳು ಎಲೆಯನ್ನು ತಿಂದು ನಾಶ ಮಾಡುತ್ತವೆ.

**4. ಮೊಗ್ಗು ಕೊರೆಯುವ ಹುಳು :** ಹೂ ಮೊಗ್ಗು ಅರಳುವ ಮುಂಚೆ ಈ ಕಂಬಳಿ ಹುಳುಗಳು ಕೊರೆದು ಒಳಗೆ ಸೇರಿಕೊಂಡು ಆ ಭಾಗವನ್ನೆಲ್ಲಾ ತಿನ್ನಲು ಪ್ರಾರಂಭಿಸುತ್ತವೆ. ಇದರಿಂದ ಹೂ ಮೊಗ್ಗುಗಳು ಉದುರಿ ಬೀಳುತ್ತವೆ.

**5. ನುಶಿ :** ಈ ಸೂಕ್ಷ್ಮ ಕೀಟಗಳು ಎಲೆ ಹಾಗೂ ಹೂಗಳಿಗೆ ಹಾನಿಯನ್ನುಂಟು ಮಾಡುತ್ತವೆ. ಇದರಿಂದ ಎಲೆಗಳು ಹೂಗಳು ಒಣಗಿ ಉದುರುತ್ತವೆ.

**6. ಶಲ್ಕ ಕೀಟಗಳು :** ಈ ಕೀಟಗಳು ಗಿಡದ ಚಿಗುರು ಎಲೆ ಮತ್ತು ಎಳೆಯ ಹೀಚುಗಳ ಹಸುರು ಭಾಗವನ್ನು ಕೆರೆದು ತಿನ್ನುತ್ತವೆ. ಚಳಿಗಾಲದಲ್ಲಿ ಇವುಗಳ ಹಾವಳಿ ಜಾಸ್ತಿಯಾಗಿರುತ್ತದೆ.

**7. ಸಸ್ಯಹೇನು :** ಈ ಕೀಟಗಳು ಎಲೆಗಳಲ್ಲಿನ ರಸವನ್ನು ಹೀರುತ್ತವೆ. ಹಳದಿ ಬಣ್ಣದ ಮೆತು ಶರೀರವನ್ನು ಹೊಂದಿರುತ್ತವೆ. ಗುಂಪು ಗುಂಪಾಗಿ ಸೇರಿ ಎಲೆಗಳ ತಳಭಾಗವನ್ನು ಧಾಳಿಮಾಡುತ್ತವೆ.

**8. ಕಾಂಡ ಕೊರೆಯುವ ಹುಳು :** ಈ ಹುಳುಗಳು ತೊಗಟೆಯಲ್ಲಿ ರಂಧ್ರಗಳನ್ನು ಮಾಡಿ ಕಾಂಡದೊಳಗೆ ಪ್ರವೇಶಿಸುತ್ತವೆ. ಅನಂತರ ಕಟ್ಟಿಗೆ ಹಾಗೂ ತೊಗಟೆಗಳನ್ನು ತಿನ್ನಲು ಪ್ರಾರಂಭಿಸುತ್ತವೆ. ಪ್ರಾಯದ ಕೀಟ ಸಣ್ಣ ದುಂಬಿ, ಅವುಗಳ ಹಿಕ್ಕೆ ಮರದ ಪುಡಿ ಮುಂತಾದವು ರಂಧ್ರಗಳ ಹೊರಗೆ ನೇತಾಡುತ್ತಿರುತ್ತವೆ.

**9. ಕಾಯಿ ಕೊರೆಯುವ ನೊಣ :** ಇದರ ಎಳೆಯ ಮರಿಗಳು ಕಾಯಿಗಳನ್ನು ಕೊರೆದು ತೂತು ಮಾಡಿ ಹಾಳು ಮಾಡುತ್ತವೆ. ಆಗ ಕಾಯಿಗಳು ತುದಿಯ ಕಡೆಯಿಂದ ಒಣಗುತ್ತಾ ಹೋಗುತ್ತವೆ.

**10. ಬೇರು ಕೊಳೆಯುವ ರೋಗ :** ಇದಕ್ಕೆ ಡಿಪ್ಲೋಡಿಯ ಪ್ರಭೇದದ ರೋಗಾಣು ಕಾರಣ. ಇದರ ಹಾವಳಿಗೆ ಎಲ್ಲಾ ವಯಸ್ಸಿನ ಗಿಡಮರಗಳು ತುತ್ತಾಗುತ್ತವೆ. ರೋಗ ಪೀಡಿತ ಮರಗಳಲ್ಲಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರುತ್ತವೆ. ಬುಡಭಾಗ ಕೊಳೆತು ಹಾಳಾಗುತ್ತದೆ.

**ರೋಗಗಳ ನಿಯಂತ್ರಣ/ಹತೋಟಿ :** 10-20 ಮಿ.ಮೀ. ರೋಗಾರ್ ಇಲ್ಲವೇ ಮೆಟಾಸಿಸ್ಟ್ ಕ್ವೆನ್ನಾಬೆಯನ್ನು 10 ಲೀ. ನೀರಿಗೆ ಬೆರಸಿ ಗಿಡಕ್ಕೆ ಸಿಂಪಡಿಸುವುದರಿಂದ ಎಲೆ ತಿನ್ನುವ ಕಂಬಳಿ ಹುಳು, ಕಂದು ಬಣ್ಣದ ಪತಂಗದಿಂದ ಉಂಟಾಗುವ ತೊಂದರೆಯನ್ನು ತಡೆಗಟ್ಟಬಹುದು.

10 ಲೀ. ನೀರಿಗೆ 20 ಮಿ.ಲೀ. ಲೆಬಾಸಿಡ್ ಬೆರೆಸಿ ಬೆಳೆಯ ಮೇಲೆ ಸಿಂಪಡಿಸುವುದರಿಂದ ತೊಗರಿ ಗಿಡಗಳಿಗೆ ಬೀಳುವ ಕಂಬಳಿ ಹುಳುಗಳು ಕಾಟದಿಂದ ನಿಯಂತ್ರಿಸಬಹುದು.

ಯುಕ್ತವಾದ ರಾಸಾಯನಿಕ ಕೀಟನಾಶಕಗಳನ್ನು ಹಾಗೂ 10 ಲೀ. ನೀರಿಗೆ 10 ಮಿ.ಲೀ. ಮೆಟಾಸಿಸ್ಟಾರ್‍ಸ್ ಕೀಟನಾಶಕ ಬೆರೆಸಿ ಸಿಂಪಡಿಸುವುದರಿಂದ ಮೊಗ್ಗು ಕೊರೆಯುವ ಹುಳು, ಸಸ್ಯಹೇನು, ನುಶಿ, ಹಾಗೂ ಶಲ್ಕ ಕೀಟಗಳಿಂದ ಉಂಟಾಗುವ ತೊಂದರೆಯಿಂದ ನಿಯಂತ್ರಿಸಬಹುದು.

ಚೂಪಾದ ಸಣ್ಣ ತಂತಿಯ ಮೊನೆಯನ್ನು ತೂರಿಸಿ ಚುಚ್ಚಿದರೆ ಸಾಕು. ಪೆಟ್ರೋಲ್ ಅದ್ದಿದ ಹತ್ತಿಯ ಸಿಂಬಿಯನ್ನು ರಂಧ್ರಗಳೊಳಕ್ಕೆ ತುರುಕಿ ಅದರ ಮೇಲೆ ಕೆಸರು ಮಣ್ಣನ್ನು ಮೆತ್ತಿದಲ್ಲಿ ಕಾಂಡ ಕೊರೆಯುವ ಹುಳುಗಳು ಉಸಿರುಕಟ್ಟಿ ಸಾಯುತ್ತವೆ.

10 ಲೀ. ನೀರಿಗೆ 10 ಮಿ.ಲೀ. ಮ್ಯಾಲಾಥಿಯಾನ್ ಕೀಟನಾಶಕ ಮತ್ತು 100 ಗ್ರಾಂ. ಸಕ್ಕರೆ ಬೆರೆಸಿ ಸಿಂಪಡಿಸಿದಾಗ ಕಾಯಿ ಕೊರೆಯುವ ರೋಗದಿಂದ ನಿಯಂತ್ರಿಸಬಹುದು.

ಬೇರು ಕೊರೆಯುವ ರೋಗದಿಂದ ನಿಯಂತ್ರಿಸಲು ಬುಡದ ಸುತ್ತ ಇರುವ ಮಣ್ಣನ್ನು ಸಡಿಲಿಸಿ ಶೇ. 1ರಷ್ಟು ಬೋರ್ಡೋ ದ್ರಾವಣ ಸುರಿಸಬೇಕು. ಹಾಗೂ ಸೆರಸಾನ್ ಬಳಸಬಹುದು.

*ಆರ್.ಡಿ.*


**ನೆಲಗಡಲೆ** ಇಂಗ್ಲಿಷ್‌ನಲ್ಲಿ ಗ್ರೌಂಡ್ ನಟ್ ಎಂದೂ ಕನ್ನಡದಲ್ಲಿ ಶೇಂಗಾ ಎಂದೂ ಕರೆಯುತ್ತಾರೆ. ಇದು ವಾಣಿಜ್ಯ ಬೆಳೆ. ಅಮೆರಿಕಾ ಮತ್ತು ಆಫ್ರಿಕಾಗಳು ಹೆಚ್ಚು ಶೇಂಗಾ ಬೆಳೆಯುವ ಪ್ರದೇಶಗಳು. ಈಸ್ಟ್ ಇಂಡಿಸ್, ಬರ್ಮ, ಕೊಚ್ಚಿನ್ ಚೀನಾ ದೇಶಗಳಲ್ಲೂ ಬೆಳೆಯುವರು. ಭಾರತದಲ್ಲೂ ನೆಲಗಡಲೆಯನ್ನು ಅಧಿಕವಾಗಿ ಬೆಳೆಯುತ್ತಾರೆ. ಪ್ರಪಂಚದಲ್ಲಿ ಬೆಳೆಯುವ ಎಣ್ಣೆಯ ಬೀಜಗಳಲ್ಲೆಲ್ಲಾ ಇದು ಬಹು ಮುಖ್ಯವಾದುದಾಗಿದೆ. ಹೆಚ್ಚು ಹಣಗಳಿಕೆಯ ಎಣ್ಣೆಯ ಬೀಜವಿದು. ಪ್ರಪಂಚದ ಎಲ್ಲಾ ಕಡೆಗಳಲ್ಲೂ ವಿಶೇಷವಾಗಿ ಕಡಲೆಕಾಯಿ ಬೆಳೆಯುತ್ತಾರೆ. ತೆಲುಗಿನಲ್ಲಿ 'ವೇರುಸೆನಗ'



ಎಂದೂ ತಮಿಳಿನಲ್ಲಿ 'ವೇರ್‌ಕಡಲೈ', ಎಂತಲೂ ಹಿಂದಿಯಲ್ಲಿ 'ಪಲೀ' ಎಂದೂ ಕರೆಯುತ್ತಾರೆ.

ನೆಲಗಡಲೆ ಬೆಳೆಯಲು ಕೆಬ್ಬೆನೆಲ, ಮರಳು ಮಿಶ್ರಣದ ಗೋಡು ನೆಲ ಮೆಕ್ಕಲು ಮಣ್ಣು ಮೃದುವಾದ ಮಣ್ಣಿನ ನೆಲ ಯೋಗ್ಯ.

ನೆಲಗಡಲೆಯಲ್ಲಿ ದೀರ್ಘಾವಧಿ ಮತ್ತು ಅಲ್ಪಾವಧಿ ಬೆಳೆ ಎಂದು ಎರಡು ವಿಧಗಳು. ದೀರ್ಘಾವಧಿ ಬೆಳೆ, ಸುಮಾರು 150 ದಿನಗಳಲ್ಲಿ ಫಸಲು ಬಿಟ್ಟರೆ ಅಲ್ಪಾವಧಿ ಬೆಳೆ 90 ರಿಂದ 100 ದಿನಗಳಲ್ಲಿ ಕೊಡುತ್ತದೆ. ಸಾಧಾರಣವಾಗಿ ನೀರಾವರಿ ಅವಲಂಬಿಸಿ ಬೆಳೆಯುವವರು ಅಲ್ಪಾವಧಿಯ ಜಾತಿಯನ್ನೇ ಬೆಳೆಯುತ್ತಾರೆ. ಖುಷ್ಕಿ ಭೂಮಿಯಲ್ಲಿ ಬೆಳೆದರೆ ದೀರ್ಘಾವಧಿ ಜಾತಿಯನ್ನೆ ಬೆಳೆಯುವುದು ಒಳ್ಳೆಯದು. ಖುಷ್ಕಿ ಬೆಳೆಯಾಗಿ ಇದನ್ನು ಬೆಳೆಯುವುದರಿಂದ ಮುಂದೆ ಬೆಳೆಯುವ ಫಸಲುಗಳು (ರಾಗಿ, ಜೋಳ) ತಕ್ಕಷ್ಟು ಹುಲಸಾಗಿ ಬೆಳೆಯುತ್ತವೆ. ಅಲ್ಪಾವಧಿಯ ಜಾತಿಗಳನ್ನು ಮುಂಗಾರಿನ ಮುಂಬೆಳೆಯಾಗಿ ಅಥವಾ ಹಿಂಗಾರಿನ ಹಿಂಬೆಳೆಯಾಗಿ ಬೆಳೆಯುವುದರಿಂದ ಮುಂದೆ ಬೆಳೆಯುವ ಪರ್ಯಾಯ ಬೆಳೆಗೆ ಸಾಕಷ್ಟು ಕಾಲಾವಕಾಶ ದೊರೆತು ವರ್ಷದಲ್ಲಿ ಎರಡು ಬೆಳೆಗಳನ್ನು ಚೆನ್ನಾಗಿ ತೆಗೆಯಲು ಅವಕಾಶವಾಗುತ್ತದೆ.



ಮುಂಗಾರಿನಲ್ಲಿಮುಂಬೆಳೆಯಾಗಿ ಬೆಳೆದರೆ ಈ ಅಲ್ಪಾವಧಿ ಬೆಳೆ ಮುಂದಿನ ಬೆಳೆಗಳಾದ ರಾಗಿ, ಜೋಳ, ಹುರುಳಿ. ಹೆಸರು ಬೆಳೆಯಲು ಸಾಧ್ಯವಾಗುತ್ತದೆ. ಅಲಸಂದೆಗೆ ಯಾವ ಮಣ್ಣು, ಕಾಲ, ಹವಾಗುಣ ಬೇಕೋ ಅದೇ ಈ ಬೆಳೆಗೂ ಬೇಕು. ಹಾಗಾಗಿ ಇವೆರಡು ಬೆಳೆಯೂ ಸಾಮಾನ್ಯವಾಗಿ ಮುಂಗಾರಿನಲ್ಲಿ ಬೆಳೆಯುವುದು ವಾಡಿಕೆ. ಇದರ ಜೊತೆಗೆ ತೊಗರಿ, ಹರಳು, ಜೋಳ, ಸಜ್ಜೆಗಳೊಡನೆ ಮಿಶ್ರ ಬೆಳೆಯಾಗಿ ಬೆಳೆಯುತ್ತಾರೆ. ಕೆಲವು ಪ್ರದೇಶದಲ್ಲಿ ಹತ್ತಿಯೊಡನೆ ಬೆಳೆಯುತ್ತಾರೆ.

**ಬಿತ್ತನೆ :** ನೆಲಗಡಲೆಯನ್ನು ಕರ್ನಾಟಕದಲ್ಲಿ ಕೆಬ್ಬೆ ಹೊಲಗಳಲ್ಲಿ ಹೆಚ್ಚಿಗೆ ಬೆಳೆಯುವುದರಿಂದ ಬಿತ್ತುವ ಮೊದಲು ಭೂಮಿಯನ್ನು ಚೆನ್ನಾಗಿ ಆಳವಾಗಿ ಉಳುಮೆ ಮಾಡಬೇಕು. ಉಳುಮೆ ಮಾಡುವಾಗ ಎರಡು ಸಾಲು ಮೂರು ಸಾಲುಗಳಿಗೆ ಅಡ್ಡಲಾಗಿಯೂ ಉದ್ದವಾಗಿಯೂ ಹಲುಬೆಯನ್ನು ಒಡೆದು ನೆಲವನ್ನು ಮಟ್ಟವಾಗಿಸಬೇಕು. ಉಳುಮೆ ಮಾಡಿದ ಮಣ್ಣು ಹುಡಿ - ಹುಡಿಯಾಗಿರಬೇಕು. ಮೇ ತಿಂಗಳಿನಲ್ಲಿ ಮುಂಗಾರು ಪ್ರಾರಂಭವಾಗುವುದರಿಂದ ಈ ಅವಧಿಯಲ್ಲಿ ಅಲ್ಪಾವಧಿಯ ಬೀಜವನ್ನು ಬಿತ್ತಬೇಕು. ಶೇಂಗಾದ ಜೊತೆ ತೊಗರಿ ಸೋಯಬಿನ್ ಬೆಳೆಯಬಾರದು. ಗಿಡಗಳ ಮೇಲೆ ಗುಲಗಂಜಿ ಹುಳುಗಳು ಹೆಚ್ಚಾಗಿದ್ದರೆ ಆಗಸ್ಟ್‌ತಿಂಗಳಲ್ಲಿ ಕೀಟನಾಶಕವನ್ನು ಉಪಯೋಗಿಸಬೇಕು. ಮುಂಗಾರಿನ ಖುಷ್ಕಿ ಬೆಳೆಯಾದರೆ ಮೇ / ಜೂನ್ ತಿಂಗಳಲ್ಲಿ ಬಿತ್ತಬೇಕು. ಹಬ್ಬುಗಡಲೆಯಾದರೆ ಜೂನ್ ಕೊನೆಯಿಂದ ಜುಲೈ ಕೊನೆವರೆಗೆ ಬಿತ್ತಬಹುದು. ಮುಂಗಾರಿನ ಬೆಳೆ ಡಿಸೆಂಬರ್ - ಕೊನೆಯಿಂದ ಜನವರಿ ಕೊನೆವಾರದಲ್ಲಿ ಬಿತ್ತಬೇಕು. ರಾಸಾಯನಿಕ ಗೊಬ್ಬರಗಳನ್ನು ಬಳಸುವುದಾದರೆ ನೀರಾವರಿ ಬೆಳೆಗೆ ಒಂದು ಎಕರೆಗೆ ಸಾರಜನಕ 10 ಕೆ.ಜಿ., ರಂಜಕ 30 ಕೆ.ಜಿ., ಪೊಟ್ಯಾಷ್ 10 ಕೆ.ಜಿ. ಖುಷ್ಕಿಯಾದರೆ, ಸಾರಜನಕ 10 ಕೆ.ಜಿ., ರಂಜಕ 20 ಕೆ.ಜಿ., ಪೊಟ್ಯಾಷ್ 10 ಕೆ.ಜಿ. ಒಂದು ಎಕರೆಗೆ ಬಳಸಬೇಕು. ಒಂದು ಎಕರೆಗೆ ಬೇಕಾಗುವ ಬೀಜಗಳನ್ನು 150 ಗ್ರಾಂ ರೈಜೋಬಿಯಂ ಕಲ್ಚರ್‌ನಿಂದ ಉಪಚರಿಸಿ ಬಿತ್ತಬೇಕು.

ಶೇಂಗಾ ಬೀಜವನ್ನು ಕೈಯಿಂದ ಎರಚಿ ಬಿತ್ತುವುದು, ನೇಗಿಲ ಸಾಲುಗಳಲ್ಲಿ ಬಿತ್ತುವುದು ಮತ್ತು 3.4 ಸಾಲುಗಳಾಗಿ ಬೀಳುವ ಸಡ್ಡೆ, ಕೂರಿಗೆಗಳಲ್ಲಿ ಬಿತ್ತುವುದು ವಾಡಿಕೆ. ಮೈಸೂರಿನ ಪ್ರಾಂತ್ಯಗಳಲ್ಲಿನೇಗಿಲ ಸಾಲುಗಳಿಗೆ ಹಲುಬೆ ಹೊಡೆದು ಬಿತ್ತುವುದು ಬಳಕೆಯಲ್ಲಿದೆ. ಸಾಲುಗಳಲ್ಲಿ ಬಿತ್ತುವುದಾದರೆ 15-18 ಅಂಗುಲಗಳ ಅಂತರ, ಬೀಜದಿಂದ ಬೀಜಕ್ಕೆ 8 - 9 ಅಂಗುಲ ದೂರ ವಿರುವ ಹಾಗೆ ಬಿತ್ತಬೇಕು. ಗೊಂಚಲು ಜಾತಿಯ ಬೀಜವನ್ನು 15 ಅಂಗುಲ ಅಂತರದ ಸಾಲುಗಳಲ್ಲಿ 6 ರಿಂದ 8 ಅಂಗುಲಗಳ ಅಂತರದಲ್ಲಿ ಬಿತ್ತುತ್ತಾರೆ.

ಹಂಬುಗಡಲೆ ಬಿತ್ತನೆಗೆ ಎಕರೆಗೆ 30 ರಿಂದ 50 ಕೆ.ಜಿ. ಬೀಜವು, ಗೊಂಚಲು ಜಾತಿಯಾದರೆ 35-40 ಕೆ.ಜಿ. ಬೀಜ ಬೇಕಾಗುತ್ತದೆ. ಹದವಿದ್ದ ಭೂಮಿಗೆ ಬಿತ್ತನೆ ಅಷ್ಟು ಆಳಕ್ಕೆ ಬೀಳದೆ ಸರಿಯಾದ ರೀತಿಯಲ್ಲಿ ಬಿತ್ತಿದ್ದರೆ ಬೀಜವು 7 ರಿಂದ 8 ದಿನಗಳಲ್ಲಿ ಮೊಳಕೆ ಕಾಣುತ್ತದೆ. ಒಂದು ಎಕರೆಗೆ 350 ರಿಂದ 500 ಕೆ.ಜಿ. ವರೆಗೆ ಇಳುವರಿ ಸಿಗುತ್ತದೆ.

ಕರ್ನಾಟಕದಲ್ಲಿ ಇದನ್ನು ಮದನಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ, ಶಿರಾ ಶ್ರೀನಿವಾಸಪುರಗಳಲ್ಲಿ ಹೆಚ್ಚು ಬೆಳೆಯುತ್ತಾರೆ. ಈ ಪ್ರದೇಶಗಳು ಕಡಲೆಕಾಯಿ ಬೆಳೆಯಲು ಉತ್ತಮವಾದ ಮಣ್ಣು ಹವಾಗುಣ ಹೊಂದಿದೆ. ಮೇ ತಿಂಗಳಲ್ಲಿ ಬಿತ್ತಿದರೆ, ನವೆಂಬರ್ ತಿಂಗಳಲ್ಲಿ ಕೀಳಲು ಸಿದ್ಧವಾಗುತ್ತದೆ. ಗಿಡದಿಂದ ಕಾಯಿಯನ್ನು ಬೇರ್ಪಡಿಸಿದ ಮೇಲೆ ಎಲೆಯಿಂದ ಕೂಡಿರುವ ಕಡಲೆ ಗಿಡವನ್ನು ಮೆದೆ ಹಾಕಿ ಹುರುಳಿ ಹೊಟ್ಟು, ಅವರೆ ಹೊಟ್ಟುಗಳೊಡನೆ ಸೇರಿಸಿ ದನಕರುಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ. ಕಡಲೆಗಿಡವನ್ನು ಕಾಯಿ ಬಿಡಿಸಿಕೊಂಡು ಹಾಗೆಯೇ ಭೂಮಿಯೊಳಕ್ಕೆ ಉತ್ತು ನೆಲವನ್ನು ಮತ್ತಷ್ಟು ಸಾರವುಳ್ಳದ್ದಾಗಿ ಮಾಡಬಹುದು. ನೀರಾವರಿ ಇರುವ ಕಡೆ ಈ ಪದ್ಧತಿ ಹೆಚ್ಚು. ಶೇಂಗಾ ಬೆಳೆಯನ್ನು ಹಾಳು ಮಾಡುವ ಕಂಬಳಿ ಹುಳು, ಇಲಿ, ಕಾಡುಹಂದಿ, ಕಾಗೆ, ನರಿಗಳಿಂದ ರಕ್ಷಣೆ ಪಡೆಯಲು ರೈತರು ಅನೇಕ ಉಪಾಯಗಳನ್ನು ಕಂಡು ಕೊಂಡಿದ್ದಾರೆ.

**ಉಪಯೋಗ :** ಇದರ ಬೀಜವನ್ನು ಹುರಿದು ಉಪ್ಪು ಸೇರಿಸಿ ತಿನ್ನುತ್ತಾರೆ. ಸಾಬೂನು ಮಾಡಲು ಇದರ ಹಿಂಡಿಯನ್ನು ದನಕರುಗಳಿಗೆ ಮೇವಾಗಿ, ಕೆಲವು ವಿಧವಾದ ಸಿಡಿ ಮದ್ದುಗಳ ತಯಾರಿಕೆಗೆ, ಕಡ್ಲೆಮಿಠಾಯಿ, ರವೆವುಂಡೆ, ತಂಬಿಟ್ಟು, ಚಿತ್ರಾನ್ನ, ಹುಳಿಯನ್ನ, ಶ್ಯಾವಿಗೆಬಾತುಗಳಿಗೆ ಬಳಸುತ್ತಾರೆ. ಇತ್ತೀಚೆಗೆ ರಾಜಸ್ಪೆಷಲ್ ಎಂದು ಮಾಡುತ್ತಾರೆ. ಚುರುಮುರಿಗೆ ಹುರಿಗಡಲೆಯನ್ನು ಬಳಸುತ್ತಾರೆ. ಇದನ್ನು ಬಡವರ ಬಾದಾಮಿ ಎಂದು ಕರೆಯುವರು. ಗಾಂಧೀಜಿಯವರಿಗೆ ಕಡಲೆಕಾಯಿ ಅಚ್ಚುಮೆಚ್ಚು. ಕರ್ನಾಟಕದ

ಬೆಂಗಳೂರಿನ ಬಸವನ ಗುಡಿಯಲ್ಲಿ ವರ್ಷಕ್ಕೊಮ್ಮೆ ಕಡಲೆಕಾಯಿ ಪರುಷೆ ಕಾರ್ತಿಕ ಮಾಸದಲ್ಲಿ ನಡೆಯುತ್ತದೆ.

*ಕೆ.ಎಸ್.*

**ನೆಲನೆಲ್ಲಿ** ಭಾರತದ ಎಲ್ಲ ಪ್ರದೇಶದಲ್ಲಿ ಕಂಡುಬರುವ ಒಂದು ಪುಟ್ಟ ಸಸ್ಯ. ಸಂಸ್ಕೃತದಲ್ಲಿ ಭೂಮ್ಯಾಮಲಕ, ಹಿಂದಿಯಲ್ಲಿ ಪಾತಾಲ ಅಂವಲಾ ಹಾಗೂ ಇಂಗ್ಲಿಷ್‌ನಲ್ಲಿ ಫಿಲ್ಲಂತಸ್ ಅಮರಸ್ ಎಂದು



ಕರೆಯುತ್ತಾರೆ. ಇದು ಮಳೆಗಾಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಎಲೆಗಳು ಚಿಕ್ಕವು, ಹೂವಿನ ಬಣ್ಣ ಹಳದಿ. ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ ಹಸುರು ಬಣ್ಣದ ಕಾಯಿ ಕಾಣಬಹುದು.

ಭಾರತದ ಮಹಾರಾಷ್ಟ್ರ, ಉತ್ತರಪ್ರದೇಶ, ಪಂಜಾಬ್, ಬಿಹಾರ, ಒರಿಸ್ಸಾ, ಆಂಧ್ರಪ್ರದೇಶ, ಮಧ್ಯಪ್ರದೇಶ, ಕರ್ನಾಟಕ ಮತ್ತು ಪಶ್ಚಿಮ ಬಂಗಾಳದಲ್ಲಿ ನೆಲನೆಲ್ಲಿ ಬೆಳೆಯುತ್ತದೆ. ಇದರ ಮೂಲ ಸ್ಥಳ ಭಾರತ. ಇದು ಶ್ರೀಲಂಕ, ಇಂಡೋನೇಷಿಯ, ಪೆಸಿಫಿಕ್ ದ್ವೀಪಗಳು ಮತ್ತು ವೆಸ್ಟ್‌ಇಂಡೀಸ್‌ಗಳಲ್ಲಿ ಬೆಳೆಯುತ್ತದೆ.

'ಪೈಲಂಥಸ್ ಅಮರಸ್' ಎಂಬ ಸಸ್ಯನಾಮವುಳ್ಳ ನೆಲನೆಲ್ಲಿ ಯುಫೋರ್ಬಿಯೇಸೀ ಕುಟುಂಬಕ್ಕೆ ಸೇರಿದೆ. ಈ ಕುಟುಂಬದಲ್ಲಿ 321 ಜಾತಿಗೆ ಸೇರಿದ 7,950 ಪ್ರಭೇದಗಳಿವೆ. ಕರ್ನಾಟಕದಲ್ಲಿ ಐದು ಜಾತಿಗೆ ಸೇರಿದ 158 ಪ್ರಭೇದಗಳಿವೆ.

ಇದರ ವೈಜ್ಞಾನಿಕ ಹೆಸರು ಫಿಲ್ಲನ್‌ತಸ್ ನಿರುರಿ, ಫಿಲ್ಲನ್‌ತಸ್ ಅನರಸ್. ಇದು ವಾರ್ಷಿಕ ಸಸ್ಯ. ಇದರಲ್ಲಿ ಮೂರು ಬಗೆ- ಬೆಟ್ಟದ ನೆಲ್ಲಿ, ಕಿರುನೆಲ್ಲಿ ಮತ್ತು ನೆಲನೆಲ್ಲಿ. ನೆಲನೆಲ್ಲಿಯಲ್ಲಿ ಎರಡು ವಿಧ- ಕೆಂಪು ನೆಲನೆಲ್ಲಿ, ಬಿಳಿನೆಲ್ಲಿ. ಸಸ್ಯ ಸಣ್ಣದಾಗಿದ್ದು ಮನೆ ಅಂಗಳದಲ್ಲಿ, ಹಿತ್ತಿಲಿನಲ್ಲಿ, ಗದ್ದೆ ಮತ್ತು ಬಯಲು ಪ್ರದೇಶದಲ್ಲಿ ತನ್ನಷ್ಟಕ್ಕೆ ತಾನೆ ಹುಲುಸಾಗಿ ಬೆಳೆದಿರುತ್ತದೆ.

ನೆಲನೆಲ್ಲಿ ಕಾಯಿಯು ಬೆಟ್ಟದ ನೆಲ್ಲಿಕಾಯಿಯ ಆಕಾರದಲ್ಲಿದ್ದರೂ ಗಾತ್ರದಲ್ಲಿ ಬಹಳ ಚಿಕ್ಕದು. ಇದನ್ನು ಸಸ್ಯವೈಜ್ಞಾನಿಕ ಭಾಷೆಯಲ್ಲಿ ಕ್ಯಾಪ್ಸೂಲ್ ಎಂದು ಕರೆಯುತ್ತಾರೆ. ಇದರ ಬೇರುಗಳು ನೇರವಾಗಿದ್ದು ನಾರಿನಂತಹ ಉಪಬೇರುಗಳನ್ನು ಹೊಂದಿರುತ್ತದೆ. ಬೇರುಗಳ ಉದ್ದ 2.5 ರಿಂದ 11 ಸೆಂ.ಮೀ.ಗಳು. ಕಾಂಡವು ತೆಳ್ಳಗೆ, ಕೊಳವೆಯಾಕಾರದಲ್ಲಿರುತ್ತದೆ. ಇದು 20-75 ಸೆಂ.ಮೀ. ಉದ್ದವಾಗಿದ್ದು, ಗಿಡದ ಮೇಲ್ಭದಿಯಲ್ಲಿ ಎಲೆಗಳ ಸಮೂಹ ಇರುತ್ತದೆ. ಎಲೆಗಳು ಸಂಯುಕ್ತವಾಗಿದ್ದು ಪರ್ಯಾಯ ಜೋಡಣೆಯಲ್ಲಿರುತ್ತವೆ.

**ಕೃಷಿ :** ಎಲ್ಲಾ ವಿಧದ ಮಣ್ಣಿನಲ್ಲಿ ಬೆಳೆಯಬಹುದಾದ ಇದನ್ನು ಬೀಜಗಳ ಮೂಲಕ ಬೆಳೆಯಬಹುದು. ಇದರ ಕೃಷಿ ಅಲ್ಪಾವಧಿಯಾಗಿದ್ದು ನಿರ್ವಹಣೆಗೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಇಲ್ಲ. ಭಾರತದ ಹಿಮಾಲಯ ಪ್ರದೇಶವನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಕಡೆ ಬೆಳೆಯಬಹುದು. ಒಂದು ವರ್ಷದಲ್ಲಿ ಬೆಳೆದು ಕಟಾವಿಗೆ ಬರುತ್ತದೆ.

ನೆಲನೆಲ್ಲಿ ಸಸ್ಯಾಭಿವೃದ್ಧಿಗಾಗಿ ಏರುಮಡಿಗಳನ್ನು ಮಾಡಬಹುದು. ಮಳೆಗಾಲ ಆರಂಭವಾಗುವ ಸಮಯದಲ್ಲಿ ಸಸಿ ನಾಟಿ ಮಾಡುವುದು ಯೋಗ್ಯ. ಒಂದು ತಿಂಗಳ ಸಸಿಗಳನ್ನು ನಾಟಿ ಮಾಡಲು ಉಪಯೋಗಿಸಬಹುದು. ಸಸಿಯಿಂದ ಸಸಿಗೆ 15 ಸೆಂ.ಮೀ. ಅಂತರವಿರಬೇಕು.

ಹಟ್ಟಿಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಎರೆಗೊಬ್ಬರವನ್ನು ಒದಗಿಸಬಹುದು. 10-15 ದಿನಗಳಿಗೊಮ್ಮೆ ಗಿಡಗಳ ನಡುವೆ ಬೆಳೆಯುವ ಕಳೆಯನ್ನು ತೆಗೆಯಬೇಕು.

ನಾಟಿ ಮಾಡಿದ 3-4 ತಿಂಗಳ ಅನಂತರ ಗಿಡಗಳು ಬಲಿಯುತ್ತವೆ. ಮಳೆಗಾಲ ಮುಗಿದ ಮೇಲೆ ಗಿಡಗಳಲ್ಲಿ ಸಾಕಷ್ಟು ಎಲೆಗಳಿರುವಾಗಲೇ ಕಟಾವು ಮಾಡಬೇಕು. ಔಷಧಿಗಳ ತಯಾರಿಕೆ ಮತ್ತು ಕೆಲಬಗೆಯ ಟಾನಿಕ್‌ಗಳಲ್ಲಿ ಇದನ್ನು ಬಳಸುತ್ತಾರೆ. ಒಂದು ಎಕರೆಗೆ 2-3 ಟನ್‌ಗಳಷ್ಟು ತಾಜಾ ಗಿಡಗಳು ಸಿಗುತ್ತವೆ.

**ಆಯುರ್ವೇದದಲ್ಲಿ ನೆಲನೆಲ್ಲಿ :** ಅಲ್ಸರ್‌ನ್ನು ನಿವಾರಿಸುತ್ತದೆ. ಮೂತ್ರಜನಕಾಂಗವ್ಯೂಹದಲ್ಲಿರುವ ಸಮಸ್ಯೆಗಳನ್ನು ಮತ್ತು ಮಧುಮೇಹವನ್ನು ನಿವಾರಿಸುತ್ತದೆ. ಕೆಮ್ಮು, ದಮ್ಮು ಮೊದಲಾದ ಶ್ವಾಸಕೋಶದ ಕಾಯಿಲೆಗಳನ್ನು ನಿವಾರಿಸುತ್ತದೆ. ಬಾಯಾರಿಕೆಯನ್ನು ತಣಿಸುತ್ತದೆ. ಎಲ್ಲ ಬಗೆಯ ಚರ್ಮರೋಗಗಳನ್ನೂ ನಿವಾರಿಸುತ್ತದೆ. ಪಾಂಡುರೋಗವನ್ನು, ರಕ್ತಹೀನತೆಯನ್ನು ನಿವಾರಿಸುತ್ತದೆ.ಕಾಮಾಲೆ ರೋಗಕ್ಕೆ ಇದು ಉತ್ತಮ ಔಷಧಿ.

*ಎನ್.ಸಿ.*

**ನೆಲ ಬಗೆಯುವ ಉಪಕರಣಗಳು** ರೈತನ ಕೃಷಿಗೆ ನೆಲ ಬಗೆಯುವ ಉಪಕರಣಗಳು ಅತ್ಯಗತ್ಯ. ಸಣ್ಣಭೂಹಿಡುವಳಿದಾರರು, ಕೈತೋಟ, ಹೂತೋಟ ಮಾಡುವವರಿಗೆ ಈ ಉಪಕರಣಗಳು ಅತ್ಯಮೂಲ್ಯ. ಹೊಲ, ಗದ್ದೆ ಕೆಲಸಗಳಿಗೂ ಇವು ಮುಖ್ಯ. ಒಟ್ಟಾರೆ ಕೃಷಿ ಜೀವನದ ಎಲ್ಲ ಹಂತಗಳಿಗೂ ನೆಲ ಬಗೆಯುವ ಉಪಕರಣಗಳು ಬೇಕು. ಇವುಗಳಿಗೆ ಎಲ್ಲ ಕೃಷಿ ವಲಯಗಳಲ್ಲೂ ಒಂದೇ ಹೆಸರು. ಒಂದೇ ತಂತ್ರಜ್ಞಾನ. ಬಳಕೆಯಲ್ಲಿ ಮಾತ್ರ ತುಸು ವ್ಯತ್ಯಾಸ. ಇವು ತಲೆತಲಾಂತರದಿಂದಲೂ ಬಳಕೆಯಲ್ಲಿವೆ.

**ಹಾರೆ ಕೋಲು :** ಹಾರೆಗಳ ಪೈಕಿ ಹಾರೆಕೋಲು ಒಂದು ಬಗೆಯದು. ನೋಡುವುದಕ್ಕೆ ಕಬ್ಬಿಣದ ಕೋಲಿನ ಹಾಗೆ ಕಾಣುವ ಈ ಉಪಕರಣದ ಒಂದು ಭಾಗವನ್ನು ತೆಳುವಾಗಿ, ಅತ್ಯಂತ ಚೂಪಾಗಿ ಮಾಡಲಾಗುತ್ತದೆ. ಒಂದು ಬಾರಿ ಇದನ್ನು ರಭಸವಾಗಿ ಭೂಮಿಗೆ ಬಗೆದರೆ ಕನಿಷ್ಠ ಒಂದೂವರೆ ಅಡಿಯಷ್ಟು ಆಳದ ಗುಂಡಿ ನಿರ್ಮಾಣವಾಗುತ್ತದೆ. ಇದು ಸಾಮಾನ್ಯವಾಗಿ ಅರ್ಧ ಹಿಡಿಯಷ್ಟು ದಪ್ಪವಿರುತ್ತದೆ. ಉದ್ದ, ಯಾವ ಕೆಲಸಕ್ಕೆ ಬಳಸುತ್ತೇವೆನ್ನುವುದರ ಮೇಲೆ ನಿರ್ಧಾರವಾಗುತ್ತದೆ. ಗಡಸು ಕಬ್ಬಿಣದಿಂದ ಮಾಡುವ ಉಪಕರಣವ ಕೈಗೆ ಹಿಡಿದುಕೊಳ್ಳಲು ಬಿಗಿ ಸಿಗಲಿ ಎಂದು ಹಾರೆಕೋಲಿನ ಮೇಲೆ ಷಟ್ಕೋನ ಚಿತ್ರಗಳನ್ನು ರಚಿಸಿರುತ್ತಾರೆ. ತೋಟಗಾರಿಕಾ ಬೆಳೆಗಳನ್ನು ಬೆಳೆಯುವವರು, ರಸ್ತೆ ಕೆಲಸ ಮಾಡುವವರು, ಬಾವಿ ತೋಡುವವರು ಅಥವಾ ಯಾವುದೇ ಆಳವಾದ ಗುಂಡಿ ತೆಗೆಯುವ ಕೆಲಸಕ್ಕೆ ಈ ಹಾರೆ ಕೋಲನ್ನು ಬಳಸುತ್ತಾರೆ.

ಒಂದೊಂದು ಕೃಷಿಗೆ ಒಂದೊಂದು ಅಳತೆಯ ಹಾರೆಕೋಲನ್ನು ಬಳಸುತ್ತಾರೆ. ತೆಂಗಿನ ಸಸಿಗಳನ್ನು ನೆಡಲು, ಕಡಗು, ಕಾಲುವೆ, ಕಟ್ಟಡ ನಿರ್ಮಾಣದ ತಳಹದಿ ತೆಗೆಯಲು, ಗುಡ್ಡಗಳನ್ನು ಕಡಿಯಲು ದೊಡ್ಡಹಾರೆ ಅಂದರೆ ಆರು ಅಡಿ ಉದ್ದವಿರುವ ಹಾರೆಕೋಲು ಬೇಕು. ಈ ಹಾರೆಕೋಲಿನ ತುದಿ ಸಾಮಾನ್ಯವಾಗಿ ಮೊಗಚು ಕೈಯ ಮುಂಭಾಗದಷ್ಟು ಅಗಲವಾಗಿರುತ್ತದೆ. ಒಂದೂವರೆ ಅಡಿ ಭೂಮಿ ಬಗೆದು ಬಾಳೆ, ಮಾವು, ಸಪೋಟ, ಸೀಬೆ, ನಿಂಬೆಯಂತಹ ಗಿಡಗಳನ್ನು ನೆಡುವುದಕ್ಕೆ ನಾಲ್ಕೂವರೆ ಅಡಿಯ ಸಣ್ಣ ಹಾರೆ ಸಾಕು, ತರಕಾರಿ ಬಳ್ಳಿಗೆ, ಚಪ್ಪರ ನಿರ್ಮಾಣಕ್ಕೆ ಮೂರು ಅಡಿ ಸಣ್ಣ ಹಾರೆ ಸಾಕು. ಇವುಗಳ ಮೂತಿ ಚೂಪಾಗಿದ್ದು, ಅತಿ ವೇಗವಾಗಿ ಗುಂಡಿ ತೆಗೆಯಲು ಸಹಾಯವಾಗುತ್ತವೆ.

**ಹೊಸರೂಪದ ಹಾರೆ :** ಹಳೇ ಹಾರೆಗೆ ನಾಲ್ಕು ಅಡಿ ಉದ್ದದ ಒಂದು ಇಂಚಿನ ಜಿ.ಐ. ಪೈಪನ್ನು ವೆಲ್ಡ್ ಮಾಡಿದ್ದು, ಈ ಉಪಕರಣವನ್ನು ಮರಕೆಲಸದ ಉಳಿಯಂತೆ ಅಥವಾ ಗುದ್ದಲಿಯಂತೆ ನೇರವಾಗಿ ಮೇಲಕ್ಕೆತ್ತಿ ಕೊಚ್ಚಿ ಹೊಂಡದ ಬದಿಗಳನ್ನು ಅಗೆಯಲು ಸಾಧ್ಯ. ಒಬ್ಬ ಆಳು ಇದನ್ನು ಉಪಯೋಗಿಸಿ ತಲಾ 16-18 ಹೊಂಡಗಳನ್ನು ತೆಗೆಯುತ್ತಾರೆ. ಅಡಕೆ ತೋಟದಲ್ಲಿ ಒಳಚರಂಡಿ ಕಾಲುವೆಗಳನ್ನು ಅಗೆಯುವಾಗ 10 ಇಂಚು ಅಗಲಕ್ಕೆ ಎರಡು ಅಡಿ ಆಳದವರೆಗೆ ಸಲೀಸಾಗಿ ಬದಿ ಕಡಿಯಬಹುದು. ಈ ಉಪಕರಣವು ಅಡಕೆ ಮರದ ಅಥವಾ ಇತರ ಬೇರುಗಳನ್ನು ಮಣ್ಣಿನ ಜತೆ ಲಂಬವಾಗಿ (ಅಡ್ಡಕ್ಕೆ) ಕತ್ತರಿಸುವುದರಿಂದ ಕಣಿವೆಗಳನ್ನು ಚೊಕ್ಕವಾಗಿ, ಶೀಘ್ರವಾಗಿ ಅಗೆಯಲು ಬಹಳ ಅನುಕೂಲವಾಗುತ್ತದೆ. ಈ ಉಪಕರಣ ಸುಮಾರು ಐದು - ಆರು ಕೆ.ಜಿ. ತೂಕವಿರುತ್ತದೆ.


**ಗುದ್ದಲಿ :** ಇದು ನೆಲಬಗೆಯುವ ಮತ್ತೊಂದು ಉಪಕರಣ. ಗುದ್ದಲಿಗೆ ಕರ್ನಾಟಕದ ವಿವಿಧೆಡೆ ಹಲವು ಹೆಸರುಗಳಿವೆ. ಕೋಲು ಗುದ್ದಲಿ, ಚಪ್ಪೆ ಗುದ್ದಲಿ, ಪಂಟೆ ಗುದ್ದಲಿ, ಕೈ ಗುದ್ದಲಿ, ಕಳೆ ಗುದ್ದಲಿ ಮುಂತಾದ ಹೆಸರಿನಿಂದ ಕರೆಯುತ್ತಾರೆ. ಆದರೆ ಕಾರ್ಯವಿಧಾನ ಮಾತ್ರ ಒಂದೆ.

ಗುಡ್ಡೆ ಹಾಕಿದ ಮಣ್ಣನ್ನು, ತೆಂಗು, ಮಾವು, ಹಲಸು, ಸೀಬೆ, ಸಪೋಟ, ಗಿಡಗಳ ಪಾತಿಯನ್ನು ಸಡಿಲ ಮಾಡಲು ಕೋಲು ಗುದ್ದಲಿಯನ್ನು ಬಳಸುತ್ತಾರೆ. ಈ ಗುದ್ದಲಿಯ ಕಾವು (ಹಿಡಿ) ಜಾಲಿ ಮರದಿಂದ ಮಾಡಿರುವಂಥದ್ದು. ಕೆಲವು ಪ್ರದೇಶಗಳಲ್ಲಿ ನೀಲಗಿರಿ ಮರವನ್ನು ಕಾವಾಗಿ ಬಳಸುತ್ತಾರೆ. ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದ ಕೆಲವೆಡೆಗಳಲ್ಲಿ ಈ ಗುದ್ದಲಿಗಳಿಗೆ ದುಬಾರಿ ಮರಗಳ ಕಾವನ್ನೇ ಬಳಸುತ್ತಾರೆ. ಕಾವು ಮತ್ತು ಗುದ್ದಲಿ ಬಾಯಿಯ ಅಂತರ ಕಡಿಮೆ ಇದ್ದು, ಇದರಿಂದ ಮಣ್ಣನ್ನು ಸುಲಭವಾಗಿ ಕಡಿಯಬಹುದು.

ಕೋಲು ಗುದ್ದಲಿಯಲ್ಲಿ ಮೂರು ವಿಧ. ದೊಡ್ಡ ಗುದ್ದಲಿ, ಮಧ್ಯಮ ಗುದ್ದಲಿ ಹಾಗೂ ಸಣ್ಣ ಗುದ್ದಲಿ. ದೊಡ್ಡ ಗುದ್ದಲಿಯನ್ನು ಮೊದಲೇ ಹೇಳಿದಂತೆ ಗುಡ್ಡೆ ಕಡಿಯಲು, ಗಿಡ - ಮರಗಳ ಪಾತಿ ಸಡಿಲ ಮಾಡಲು ಬಳಸುತ್ತಾರೆ. ಮಧ್ಯಮ ಗಾತ್ರದ ಗುದ್ದಲಿಯನ್ನು ನರ್ಸರಿ, ಸೊಪ್ಪಿನ ಮಡಿ ತಯಾರಿಕೆ, ಸಸಿ ಮಡಿ ಪದ್ಧತಿಯಲ್ಲಿ ಮಣ್ಣು ಅಗೆಯಲು ಬಳಸುತ್ತಾರೆ. ಸಣ್ಣಗುದ್ದಲಿ ಅಥವಾ ಕೈ ಗುದ್ದಲಿ ಮನೆಯಂಗಳದ ಅಥವಾ ಹಿತ್ತಲಿನಲ್ಲಿಯ ಹೂ ಗಿಡಗಳು, ಹಣ್ಣಿನ ಗಿಡಗಳನ್ನು ನೆಡಲು ಅಥವಾ ಕುಂಡ ಕೃಷಿಯಲ್ಲಿ ಬಳಸುವರು.

**ಕಳೆ ಗುದ್ದಲಿ :** ಗುದ್ದಲಿಯ ಒಂದು ಬಗೆ. ಪಾತಿ ಮಾಡಲು, ಕಳೆ ಕೀಳಲು, ತೋಟ ಗದ್ದೆಗಳಲ್ಲಿ ದಿಬ್ಬಗಳನ್ನು ಕಟ್ಟಲು ಇದನ್ನು ಬಳಸಲಾಗುತ್ತದೆ. ಈ ಸಾಂಪ್ರದಾಯಿಕ ಗುದ್ದಲಿ ಹೆಚ್ಚು ಶ್ರಮ ದಾಯಕ. ಕುಕ್ಕರುಗಾಲಿನಲ್ಲಿ ಕುಳಿತೇ ಇದರಿಂದ ಕೆಲಸ ಮಾಡಲಾಗುತ್ತದೆ. ಇತ್ತೀಚೆಗೆ ಸುಧಾರಿತ ಕಳೆ ಗುದ್ದಲಿಯನ್ನು ತಯಾರಿಸಲಾಗಿದೆ. ಸುಧಾರಿತ ಗುದ್ದಲಿಯಿಂದ ಸಾಂಪ್ರದಾಯಿಕ ಗುದ್ದಲಿಗಿಂತಲೂ 5-6 ಪಟ್ಟು ವೇಗವಾಗಿ ಕೆಲಸ ಮಾಡಬಹುದಾಗಿದೆ.

**ಪಿಕಾಸಿ :** ನೆಲ ಬಗೆಯುವ ಉಪಕರಣಗಳಲ್ಲಿ ಪಿಕಾಸಿಯೂ ಒಂದು. ಗುದ್ದಲಿಯನ್ನೇ ಹೋಲುವ ಪಿಕಾಸಿಗೆ ಎರಡು ಬಾಯಿ, ಒಂದು ಕಾವು. ಒಂದು ಬಾಯಿ ಚೂಪಾಗಿದ್ದು, ಮತ್ತೊಂದು ಬಾಯಿ ಚಪ್ಪಟೆಯಾಗಿರುತ್ತದೆ. ಸಣ್ಣ ಹಿಡುವಳಿದಾರರು, ಕಾಯಂ ಆಗಿ ತೋಟಗಾರಿಕೆ ಬೆಳೆಯನ್ನೇ ನಂಬಿರುವ ರೈತರು ಇದನ್ನು ಬಳಸುತ್ತಾರೆ. ತರಕಾರಿ ಬೆಳೆಯುವುದನ್ನು ವೃತ್ತಿಯಾಗಿಸಿಕೊಂಡವರು ಸೊಪ್ಪಿನ ಮಡಿಯಂತಹ ಮಣ್ಣಿನ ಹಾಸಿಗೆಗಳನ್ನು ಸದಾ ಸಿದ್ಧಪಡಿಸುವವರಿಗೆ,



30. Sickle 31. Turmeric rhizome dibbler 32. Iron plough
33. Spade 34. Hand hoe 35. Turmeric harvester 36. Turmeric harvester

ಕೈತೋಟ ಮಾಡುವವರಿಗೆ, ಈ ಪಿಕಾಸಿ ಉಪಯೋಗಕ್ಕೆ ಬರುತ್ತದೆ. ಗಡಸು ಕಬ್ಬಿಣದಿಂದ ತಯಾರಿಸುವ ಇದಕ್ಕೆ ಹಗುರವಾದ ಹಾಗೂ ಗಟ್ಟಿಯಾದ ಕಾವು ಜೋಡಿಸಲಾಗುತ್ತದೆ. ಪಿಕಾಸಿಯ ಎರಡೂ ಭಾಗಗಳೂ ತುಸು ಬಾಗಿರುತ್ತವೆ. ಚೂಪಾದ ಭಾಗದಿಂದ ಮಣ್ಣನ್ನು ಸಡಿಲ ಮಾಡಿಕೊಂಡು, ಚಪ್ಪಟ್ಟೆಯಾದ ಭಾಗದಿಂದ ಸಡಿಲವಾದ ಮಣ್ಣನ್ನು ಅಗೆಯುವರು. ಹಾಗಾಗಿ ಇದು ನರ್ಸರಿ ಹಾಗೂ ಸೊಪ್ಪಿನ ಮಡಿಗಳಲ್ಲಿ ಹೆಚ್ಚು ಬಳಕೆಯಾಗುತ್ತದೆ. ಈ ಉಪಕರಣಕ್ಕೆ ಎಲ್ಲಾ ಕೃಷಿ ವಲಯಗಳಲ್ಲೂ ಒಂದೇ ಹೆಸರಿದೆ.

**ಸಲಿಕೆ :** ನೆಲ ಬಗೆಯುವ ಎಲ್ಲ ಉಪಕರಣಗಳ ಜೊತೆ ಹಾಗೂ ಸಾಗಾಟದ ಉಪಕರಣಗಳ ಜೊತೆಯೂ 'ಸಂಗಾತಿ' ಉಪಕರಣವಾಗಿ ಕೆಲಸ ಮಾಡುತ್ತದೆ. ಸಲಿಕೆ ಇಲ್ಲದಿದ್ದರೆ ಒಂದೆಡೆಯಿಂದ ಮತ್ತೊಂದೆಡೆಗೆ ಮಣ್ಣು ಸಾಗಿಸುವುದು ತುಂಬಾ ಕಷ್ಟ. ಕೆಲವು ರೈತರು ಇಂಥ ಸಲಿಕೆಗೆ 'ಚಲಿಕೆ' ಎಲೆಕೊಟ್ಟು ಎನ್ನುತ್ತಾರೆ. ಇನ್ನು ಕೆಲವು ಪ್ರದೇಶಗಳಲ್ಲಿ ಮಣ್ಣೆತ್ತುವ ಗುದ್ದಲಿ ಎನ್ನುವರು. ಮಣ್ಣನ್ನು ಸಲೀಸಾಗಿ ತುಂಬಲು ಸಹಕಾರಿಯಾಗುವ ಈ ಉಪಕರಣಕ್ಕೆ 'ಸಲಿಕೆ' ಎಂಬ ಹೆಸರು ಬಂದಿರಬಹುದು ಎಂಬುದು ಗ್ರಾಮೀಣರ ಅಭಿಪ್ರಾಯ.

ಸಲಿಕೆಗೆ ಎರಡು ಭಾಗವಿದೆ. ಒಂದು ತಟ್ಟೆ (ಪ್ಲೇಟ್) ಮತ್ತು ಕಾವು. ಕಾವು ಮತ್ತು ಪ್ಲೇಟ್‌ಮಧ್ಯೆ ಅಂತರ ದೊಡ್ಡದಾಗಿರುತ್ತದೆ. ಪ್ಲೇಟ್‌ಗಾತ್ರ ಆಯಾ ಕೆಲಸ, ಆಯಾ ಪ್ರದೇಶದ ಬೆಳೆ, ಜಮೀನಿನ ವಿಸ್ತೀರ್ಣದ ಮೇಲೆ ಅವಲಂಬಿತವಾಗಿರುತ್ತದೆ. ಸಲಿಕೆಯನ್ನು ಮುಖ್ಯವಾಗಿ ಮಣ್ಣು ತುಂಬಲು ಬಳಸುತ್ತಾರೆ. ಹಾರೆ, ಪಿಕಾಸಿ, ಗುದ್ದಲಿಯಿಂದ ಅಗೆದ ಮಣ್ಣನ್ನು ತುಂಬಲು ಸಲಿಕೆ ಬಳಕೆಯಾಗುತ್ತದೆ. ಗೊಬ್ಬರ ಸಾಗಾಟಕ್ಕೆ ಅಂದರೆ ಎತ್ತಿನ ಗಾಡಿಗೆ ಗೊಬ್ಬರ ತುಂಬುವಾಗ ಸಲಿಕೆ ಉಪಯೋಗವಾಗುತ್ತದೆ. ಹೊಸದಾಗಿ ಗಿಡಗಳನ್ನು ನೆಡುವವರು, ಗಿಡಗಳಿಗೆ ಪಾತಿ ಮಾಡುವವರು, ಮೆದುವಾದ ನೆಲದಲ್ಲಿ ಗುಂಡಿ ತೆಗೆಯುವವರು ಸಲಿಕೆ ಬಳಸುತ್ತಾರೆ. ಮೆದುವಾದ ಮಣ್ಣಿನ ಗುಡ್ಡೆಗಳನ್ನು ಕಡಿಯಲೂ ಸಲಿಕೆ ಬಳಕೆಯಾಗುತ್ತದೆ. ಸಿಮೆಂಟ್ ಕೆಲಸಕ್ಕೆ, ಮಣ್ಣು ಹೊತ್ತು ಹಾಕುವ ಕೆಲಸಕ್ಕೆ, ತಳಹದಿ ಮಣ್ಣು ಎತ್ತಿ ಹೊರ ಹಾಕಲು ಸಲಿಕೆ ಬಳಸುತ್ತಾರೆ. ಸಣ್ಣ ಸಣ್ಣ ಕಾಲುವೆ ನಿರ್ಮಿಸುವಾಗ ತಟ್ಟೆ / ಮಂಕರಿ / ಪುಟ್ಟಿ ಮಾಡುವ ಕೆಲಸವನ್ನು ಈ ಸಲಿಕೆ ಮಾಡುತ್ತದೆ. ಅರ್ಧ ಅಡಿ, ಒಂದು ಅಡಿ ಕಂದಕ ತೆಗೆಯಲು ಬಳಸುವ ಸಲಿಕೆಯ ತಟ್ಟೆ ಕಿರಿದಾಗಿರುತ್ತದೆ. ಕೈ ತೋಟದ ಕೆಲಸದಲ್ಲಿ ಮಣ್ಣು ಹರಡಲು ಬಳಸುವ ಸಲಿಕೆ ಕೂಡ ಚಿಕ್ಕದಾಗಿರುತ್ತದೆ.

ಎರಡು ಮೂರು ದಶಕಗಳ ಹಿಂದೆ ನೆಲಬಗೆಯುವ ಉಪಕರಣಗಳ ಜೊತೆ ಸಲಿಕೆ ಕಾಯಂ ಆಗಿ ಇರುತ್ತಿತ್ತು. ತಂತ್ರಜ್ಞಾನ ಬೆಳೆದಂತೆಲ್ಲ ಜೆಸಿಬಿ ಇಟಾಚಿ ಯಂತ್ರಗಳ ಅಬ್ಬರ ಹೆಚ್ಚಿರುವುದರಿಂದ ಎಲ್ಲೋ ಕೆಲವು ರೈತರು ಸಲಿಕೆಯನ್ನು ಬಳಸುತ್ತಿದ್ದಾರೆ.ಒಂದೊಂದು ಕೆಲಸಕ್ಕೆ ಒಂದೊಂದು ಅಳತೆಯ ಸಲಿಕೆ ಬಳಕೆಯಾಗುತ್ತದೆ. ಉದಾಹರಣೆಗೆ ಮಣ್ಣು ಎತ್ತಿ ಹಾಕಲು ಸಲಿಕೆಯ ಪ್ಲೇಟ್ ಅಗಲವಾಗಿರುತ್ತದೆ. ಕಾವು ಮಧ್ಯಮ ಗಾತ್ರದಲ್ಲಿರುತ್ತದೆ. ಕಾವು ಉದ್ದ ಮಾಡಿಕೊಳ್ಳುವವರೂ ಇದ್ದಾರೆ. ಅದು ಕೃಷಿ ವಲಯದಲ್ಲಿ ಕಡಿಮೆ. ಸಲಿಕೆಯಲ್ಲಿ ಸವೆಯುವ ಭಾಗವೆಂದರೆ ಪ್ಲೇಟ್, ಸವೆದು ಚಿಕ್ಕದಾದಂತೆ ಕಾವನ್ನು ಚಿಕ್ಕದಾಗಿಸಿ ದನದ ಕೊಟ್ಟಿಗೆಯಲ್ಲಿ ಸಗಣಿ ಬಾಚಲು, ತಿಪ್ಪೆ ಗೊಬ್ಬರವನ್ನು ತೋಟಕ್ಕೆ ಸಾಗಿಸುವಾಗ ಟ್ರಾಕ್ಟರ್‌ಗೆ ಗೊಬ್ಬರ ತುಂಬಲು ಬಳಸಲಾಗುತ್ತದೆ. ಒಂದು ಮಾತಿದೆ, 'ಹಾರೆ, ಮಂಕ್ರಿ ಗಂಡ ಹೆಂಡತಿ ಆದ್ರೆ, ಸಲಿಕೆ ಮಗ ಇದ್ದಂಗೆ ಈ ಮೂರು ಒಟ್ಟಿಗೆ ಸೇರಿದ್ರೆ ಒಂದು ಸಣ್ಣ ಕುಟುಂಬ ಇದ್ದಂಗೆ' ಅಂಥ.

**ಎ.ಕೆ.ಎಚ್.**

## ನೆಲ್ಲಿ

ಔಷಧೀಯ ಗುಣವಿರುವ ಸಸ್ಯವಿದು. ಇದು ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಎಂಬ್ಲಿಕ ಅಫಿಸಿನ್ಯಾಲಿಸ್. ಕನ್ನಡದಲ್ಲಿ ನೆಲ್ಲಿ, ಬೆಟ್ಟದ ನೆಲ್ಲಿ ಎಂದೂ ಸಂಸ್ಕೃತದಲ್ಲಿ ಆಮಲಕಿ ಎಂದೂ ಇಂಗ್ಲಿಷಿನಲ್ಲಿ ಇಂಡಿಯನ್ ಗೂಸ್‌ಬೆರ್ರಿ ಎಂದೂ ಕರೆಯುತ್ತಾರೆ. ಭಾರತದ ಅನೇಕ ಭಾಗಗಳಲ್ಲಿ ಮತ್ತು ಬರ್ಮಾ ದೇಶದ ಅನೇಕ ಪ್ರದೇಶಗಳಲ್ಲಿ, ಉಷ್ಣವಲಯಗಳಲ್ಲೂ ಹುಲುಸಾಗಿ ಬೆಳೆಯುತ್ತದೆ. ಕರ್ನಾಟಕಾದ್ಯಂತ ಇದರ ಕೃಷಿಯುಂಟು. ಪೋಷಕಾಂಶಗಳು ಅಧಿಕವಾಗಿರುವುದರಿಂದ ಆರ್ಥಿಕ ದೃಷ್ಟಿಯಿಂದಲೂ ಇದರ ಕೃಷಿ ಹೆಚ್ಚಾಗಿದೆ.

**ಸಸ್ಯ ಸ್ವರೂಪ :** 35-40 ಅಡಿ ಎತ್ತರ ಬೆಳೆಯುವ ಸ್ವಲ್ಪ ಈ ಮರ ಜಿಗುಟು. ಬಣ್ಣ ಬೂದು. ಸೀಗೆ ಎಲೆಯಾಕಾರದ ತಿಳಿ ಹಸುರು ಬಣ್ಣದ ಒತ್ತೊತ್ತಾದ ಎಲೆಗಳು ಪರ್ಯಾಯವಾಗಿ ಜೋಡಣೆಗೊಂಡು ಸಂಯುಕ್ತ ಮಾದರಿಯಲ್ಲಿ ಇರುತ್ತವೆ. ಈ ಮರದಲ್ಲಿ ಅಧಿಕ ಗಂಡು ಮತ್ತು ವಿರಳ ಹೆಣ್ಣು ಹೂಗಳಿರುತ್ತವೆ. ವರ್ಷದ ಕೊನೆಯ ಮೂರು ತಿಂಗಳು ಫಸಲು ಬರುವ ಸಮಯ.



**ಕೃಷಿ :** ಬೀಜಗಳಿಂದಲೇ ಸಸ್ಯ ಅಭಿವೃದ್ಧಿ. ಆದರೂ ಹೆಚ್ಚು ಮರಗಳನ್ನು ಬೆಳೆಸುವವರು ಕಸಿ ವಿಧಾನವನ್ನು ಅಳವಡಿಸಿಕೊಳ್ಳುವರು. ಉತ್ತಮ ಜಾತಿಯ ಮರಗಳಿಂದ ಮತ್ತು ಬೀಜಗಳಿಂದಲೂ ಸಸ್ಯಾಭಿವೃದ್ಧಿಯಾಗುವುದಾದರೂ ಕಸಿ ಮಾಡುವ ವಿಧಾನದಿಂದ ಬೇಗನೆ ಫಸಲನ್ನು ಪಡೆಯಬಹುದು. ಬೀಜವನ್ನು ಒಟ್ಲು ಪಾತಿಯಲ್ಲಿ ನೆಟ್ಟು ಬೆಳೆಸಿ ಸುಮಾರು ಎಂಟು ತಿಂಗಳ ಅನಂತರ ನೆಡಲು ಉಪಯೋಗಿಸುವರು. ಬೀಜಗಳಿಂದ ಸಸ್ಯಾಭಿವೃದ್ಧಿ ಮಾಡುವಾಗ ಮರದಿಂದ ಸಂಗ್ರಹಿಸಿದ ಹಣ್ಣುಗಳನ್ನು ಕೂಡಲೇ ಬಿತ್ತನೆಗಾಗಿ ಉಪಯೋಗಿಸಬೇಕು, ಇಲ್ಲವಾದರೆ ಮೊಳಕೆಯೊಡೆಯುವ ಪ್ರಮಾಣ ಕಡಿಮೆಯಾಗುತ್ತದೆ. ಒಂದೆರಡು ದಿವಸ ನೀರಿನಲ್ಲಿ ನೆನೆಸಿ, ಒಟ್ಲು ಪಾತಿಯಲ್ಲಿ ತುಂಬಾ ಆಳಕ್ಕೆ ಹೋಗದ ಹಾಗೆ ಮಣ್ಣಿನ ಮೇಲ್ಪದರದಲ್ಲೇ ಬಿತ್ತಬೇಕು. ತೋಪುಗಳಂತೆ ಬೆಳೆಸುವವರು ಇಳುವರಿಗಾಗಿ ನಾಲ್ಕು ವರ್ಷ ಕಾಯಬೇಕಾಗಿರುವುದರಿಂದ ಅಲ್ಲಿಯ ತನಕ ಇಂಥ ತೋಪುಗಳ ಬಯಲಿನಲ್ಲಿ ಕಡಿಮೆ ಅವಧಿಯಲ್ಲಿ ಇಳುವರಿ ಕೊಡುವ ಹುರುಳಿ, ರಾಗಿ, ಸಜ್ಜೆ, ನವಣೆ, ತೊಗರಿ ಇತ್ಯಾದಿ ಬೆಳೆಗಳನ್ನು ಮಾಡಬಹುದು. ಗಿಡಕ್ಕೆ ಅಪಾಯ ಮಾಡದ ಪಪ್ಪಾಯಿ, ನುಗ್ಗೆ, ಬಾಳೆ, ನಿಂಬೆ, ಸೀಬೆ

ಗೀಡಗಳನ್ನೂ ಬೆಳೆಸಬಹುದು. ಆದರೆ ಇಳುವರಿ ಕೊಡಲು ಆರಂಭವಾದಂತೆ ಮಿಶ್ರ ಬೆಳೆಗಳನ್ನು ಕಡಿಮೆ ಮಾಡಿ ಆಗಾಗ ಉತ್ತಿ ಮಣ್ಣನ್ನು ಸಡಿಲಗೊಳಿಸಿ ಗರಿಕೆ ಮುಂತಾದ ಕಳೆ ತೆಗೆದು ಬುಡದ ಸುತ್ತ ಪಾತಿ ಮಾಡಿ ಮಳೆಗಾಲದಲ್ಲಿ



ಹೆಚ್ಚು ನೀರು ಸಂಗ್ರಹವಾಗುವಂತೆ ನೋಡಿಕೊಳ್ಳಬೇಕು. ಸಸಿಯಿಂದ ಸಸಿಗೆ ಸುಮಾರು 20 ಅಡಿ ಅಂತರವಿರಬೇಕು. ಇದರ ಕಾಯಿ ಗುಂಡಗಿದ್ದು ಸಾಧಾರಣ ಗೋಲಿ ಗಾತ್ರವಿರುತ್ತದೆ. ಬೀಜ ಷಟ್ಕೋನಾಕೃತಿಯಲ್ಲಿರುತ್ತದೆ.


**ಉಪಯೋಗಗಳು** : ಇದಕ್ಕೆ ತಂಪುಕಾರಕ ಗುಣವಿದ್ದು ಶರೀರದಲ್ಲಿ ಹುಟ್ಟುವ ಸಕಲ ಕಾಯಿಲೆಗಳನ್ನು ನೀವಾರಿಸಬಲ್ಲದು. ಉಪ್ಪಿನಕಾಯಿ, ಜಾಮ್ ಇತ್ಯಾದಿಗಳ ತಯಾರಿಕೆಗೂ ಬಳಸುವರು. ಸಿ, ಜೀವಸತ್ವ ಹೆಚ್ಚಾಗಿದ್ದು ಕಣ್ಣಿನ ಕಾಯಿಲೆ, ಕಾಮಾಲೆ, ನೆಗಡಿ ಇತ್ಯಾದಿಗಳಿಗೆ ಔಷಧವಾಗಿ ಬಳಕೆಗೊಳ್ಳುತ್ತದೆ. ಆಮಶಂಕೆ ನಿವಾರಣೆಗೂ, ಬೀಜಗಳು ಕೆಮ್ಮು ಮತ್ತು ಜ್ವರಕ್ಕೂ ಒಳ್ಳೆಯದು. ಈ ಸಸ್ಯದ ಎಲ್ಲ ಭಾಗವೂ ಉಪಯುಕ್ತ ಭೃಂಗಾಮಲಕ ತೈಲ ತಯಾರಿಕೆಗೂ ಬಣ್ಣದ ತಯಾರಿಕೆಗೂ ಇದರ ಕಾಯಿ ಮತ್ತು ಎಲೆಗಳು ಉಪಯುಕ್ತ ನೆಲ್ಲಿಕಾಯಿ ಮೊರಬ್ಬ ತಯಾರಿಸಿ ಅನೇಕ ದಿನಗಳ ಕಾಲ ಬಳಸಬಹುದು.

*ಎಸ್.ವಿ.*

**ನೇಗಿಲು** ಕೃಷಿ ಉಪಕರಣಗಳಲ್ಲೆಲ್ಲಾ ಅತ್ಯಂತ ಪ್ರಮುಖವಾದುದು ಪ್ರಾಚೀನವಾದುದು ನೇಗಿಲು. ಮಾನವನ ಇತಿಹಾಸದಲ್ಲಿ ಪ್ರಥಮವಾಗಿ ವ್ಯವಸಾಯ ಆರಂಭಿಸಿದಾಗಲೇ ಭೂಮಿಯನ್ನು ಉಳಲು ಉಪಯೋಗಿಸಿದ ಮರದ ಕವಲೇ ನೇಗಿಲಾಗಿದೆ.

**ನೇಗಿಲು ಅಥವಾ ನಾಡ ನೇಗಿಲು :** ಇದು ಜಾಲಿ, ಬೇವು ಮುಂತಾದ ಗಟ್ಟಿ ಮರಗಳಿಂದ ತಯಾರಿಸುವ ಸಾಧಾರಣ ಮರದ ನೇಗಿಲು. ನೇಗಿಲ ಚೂಪಾದ ತುದಿಗೆ ಕಬ್ಬಿಣದ ಕುಳ (ಗುಳ) ಜೋಡಿಸಿರುತ್ತಾರೆ. ಆ ಗುಳ ನೆಲವನ್ನು ಕೊರೆದು ಚಲಿಸಲು ಹಗುರ ಮಾಡುತ್ತದೆ. ನೇಗಿಲ ಚೂಪಾದ ತುದಿಯ ಮೇಲೆ ನೀಳವಾದ ಮರ ಅಥವಾ ಬಿದಿರನ್ನು ಜೋಡಿಸಿ ನೊಗಕ್ಕೆ ಕಟ್ಟಲು ಅನುಕೂಲವಾಗುವಂತೆ ನೇರವಾದ ಹಿಡಿಯೊಂದನ್ನು ಜೋಡಿಸಲಾಗಿರುತ್ತದೆ. ಸಾಮಾನ್ಯವಾಗಿ ನಾಡ ನೇಗಿಲು ಒಂದು ಅಥವಾ ಎರಡು ತುಂಡುಗಳ ಜೋಡಣೆಯಿಂದಾಗಿರಬಹುದು. ಗುಳ ಮಾತ್ರ ಕಬ್ಬಿಣ ಅಥವಾ ಮೃದು ಉಕ್ಕಿನದಾಗಿರುತ್ತದೆ. ಈ ನೇಗಿಲನ್ನು ಎಳೆಯಲು ಜೋಡೆತ್ತು ಬಳಸುತ್ತಾರೆ.


**ನೇಗಿಲಿನ ಬಗೆಗಳು :** ಆಯಾ ಪ್ರದೇಶಗಳಲ್ಲಿಯ ಭೂಗುಣ, ಬೆಳೆ ವೈವಿಧ್ಯತೆಗೆ ಅನುಗುಣವಾಗಿ ನೇಗಿಲುಗಳನ್ನು ಬಳಸಲಾಗುತ್ತದೆ. ಹೆಚ್ಚು ಮಳೆಯಾಗುವ ಕೊಡಗು ಕರಾವಳಿ ಪ್ರದೇಶಗಳಲ್ಲಿ ಬಹಳ ಆಳವಾಗಿ ಉಳಬೇಕಾಗಿಲ್ಲವಾದರಿಂದ ಮೇಲ್ಪದರ ಮಾತ್ರ ಕೆಸರು ಮಾಡಲು ಬಾತುಕೋಳಿ ಕಾಲಿನ ಆಕಾರದ ನೇಗಿಲುಗಳನ್ನು ಬಳಸುತ್ತಾರೆ. ಗಡಸು ಭೂಮಿಯಲ್ಲಿ ಹೆಚ್ಚು ಆಳ ಕೊರೆಯಬೇಕಾದ ಬಯಲು ಭೂಮಿಗಳಲ್ಲಿ ನೇಗಿಲು ದೊಡ್ಡದಾಗಿರುತ್ತದೆ. ಇದರಿಂದ ಭೂಮಿಯಲ್ಲಿ ಸುಲಭವಾಗಿ ಹರಿಯಲು ಸಾಧ್ಯ. ಹೀಗೆ 'ನೇಗಿಲು'ಗಳಲ್ಲಿ ಹಲವಾರು ವಿಧಗಳಿದ್ದು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ.ಮೈಸೂರಿನ ಕಡೆ ಉಳುಮೆ ಮಾಡಿ ಸವೆದ ನೇಗಿಲನ್ನು ಅರ್ಧ ನೇಗ್ಲು ಎಂತಲೂ ಒಂಟಿ



ಮೇಡಿಯ ನೇಗಿಲನ್ನು ಒಂಟಕ್ಕಿ ನೇಗ್ಲು ಎಂದು ಕರೆಯುವರು. ಒಂದು ಹಿಡಿಯಿರುವ ನೇಗಿಲನ್ನು ಒಂದ್ರಕ್ಕೆ ನೇಗಿಲು ಎನ್ನುವರು. ಕಬ್ಬಿಣದ ನೇಗಿಲನ್ನು ಉತ್ತರ ಕನ್ನಡದಲ್ಲಿ ಕಬಣ್ ನೇಗ್ಲು, ಕಬ್ಣದ್ ನೇಗ್ಲು ಎಂದರೆ ಮೈಸೂರಿನ ಕಡೆ ಕಬ್ಣನೇಗ್ಲು, ಕಬ್ಬಿಣದ ನೇಗ್ಲು, ಕಬ್ಬಿಣದ್ ನೇಗ್ಲು, ಕಬ್ಣಿಡ್ನೇಗ್ಲು, ಕಬ್ಬಿಣದ ನೇಗಿಲು, ಕಬ್ಬಿಣ್ಣೇಗ್ಲಿ ಎನ್ನುತ್ತಾರೆ. ಕೋಲಾರ ಮತ್ತು ಬೆಂಗಳೂರಿನ ಕಡೆ ಕಬ್ಣಿದ್ ನೇಗ್ಲು, ಕಬ್ಬಿಣ ನೇಗಿಲು, ಕಬ್ಬಿಣ್ಣೇಗ್ಲಿ ಎಂದು ಕರೆಯುವರು. ದಕ್ಷಿಣ ಕನ್ನಡದಲ್ಲಿ ಮೆದು ಭೂಮಿಯನ್ನು ಉಳಲು ಬಳಸುವ ಚಿಕ್ಕ ನೇಗಿಲು ಕಬ್ಬಿಣದಾಗಿದ್ದು ಅದನ್ನು ಕಬ್ಬಿಣ ರಂಟೆ, ಕರ್ಬದ ನಾಯರ್ ಎಂತಲೂ ಒಣಭೂಮಿಯನ್ನು ಉಳಲು ಬಳಸುವ ದೊಡ್ಡ ನೇಗಿಲನ್ನು ಪೊಡಿಯರ್ ಎನ್ನುತ್ತಾರೆ. ಅಲ್ಲದೇ ದಕ್ಷಿಣ ಕನ್ನಡದಲ್ಲಿ ಬಲಿಷ್ಠವಾದ ದೊಡ್ಡ ನೇಗಿಲನ್ನು ಮಣಿಹೊಳ್ಪ್ ಎಂದು ಕರೆಯುತ್ತಾರೆ.

ಕಬ್ಬಿನ ತೋಟ ಮತ್ತು ಜೋಳದ ಬೆಳೆಯಲ್ಲಿ ಸಾಲು ಹೊಡೆಯಲು ಬಳಸುವ ನೇಗಿಲನ್ನು ಬೆಂಗಳೂರಿನ ಕಡೆ ಕೂರ್ಪಾರ್ನೇಗ್ಲು ಎನ್ನುವರು. ಸವೆದಿರುವ ಸಾಲು ಹೊಡೆಯಲು ಬಳಸುವ ನೇಗಿಲನ್ನು ಕೊಣಮ್ನೇಗ್ಲು ಮೋಟು ನೇಗ್ಲು ಎಂತಲೂ ಹಾಗೂ ಗಟ್ಟಿಯಾದ ನೆಲವನ್ನು ಉಳಲು ಬಳಸುವ ನೇಗಿಲನ್ನು ಕೊಣ್ಣೆನೇಗ್ಲು ಎಂತಲೂ ಮೈಸೂರು ಭಾಗದಲ್ಲಿ ಕರೆಯಲಾಗುತ್ತದೆ. ಚಿಕ್ಕ ಸಾಲುಗಳನ್ನು ಹೊಡೆಯಲು ಬಳಸುವ ನೇಗಿಲನ್ನು ಕೋಲಾರದಲ್ಲಿ 'ಗೂನಮ್ನೇಗ್ಲು' ಎಂದೂ ಇತರೇ ಗಾತ್ರದ ಸಾಲು ಹೊಡೆಯಲು ಬಳಸುವ ನೇಗಿಲನ್ನು 'ಜನ್ತಾ ನೇಗ್ಲು' ಎನ್ನುತ್ತಾರೆ. ಇದರೊಂದಿಗೆ, ಯಡ್‌ಮೇಳಿನೇಗ್ಲು, ಯಣ್ಬ್ರಣ್ ನೇಗ್ಲು, ಯನ್ನೇಗ್ಲು, ಸಾದಾನೇಗಿಲು, ಸೀಮೆನೇಗಿಲು, ಹಗುರಾದ ನೇಗ್ಲು, ಕಟ್ಗಿಮಡ್ಕೆ, ಕಬ್ಬಿಣದ ಮಡ್ಕೆ ಮುಂತಾದ ಬಗೆಯ ನೇಗಿಲುಗಳು ನಾಡಿನಾದ್ಯಂತ ಬಳಕೆಯಲ್ಲಿವೆ. ಬಯಲುಸೀಮೆಯಲ್ಲಿ ನೇಗಿಲನ್ನು ಏರು, ನೇಗ್ಲಿ, ನೇಗ್ಲು ಎಂದು ಕರೆಯುವಂತೆ, ಉತ್ತರ ಕರ್ನಾಟಕದಲ್ಲಿ ನೇಗಿಲನ್ನು 'ಮಡಿಕೆ' ಎಂದು ಕರೆಯುತ್ತಾರೆ. ಇಲ್ಲಿ ಹತ್ತು ಎತ್ತಿನ ಮಡಿಕೆ, ಆರು ಎತ್ತಿನ ಮಡಿಕೆ, ನಾಲ್ಕು ಎತ್ತಿನ ಮಡಿಕೆ, ರಂಟೆ ಮಡಿಕೆ, ಕಬ್ಬಿಣ ಮಡಿಕೆ, ಬೀಜ ಮಡಿಕೆ ಎಂದು ಹಲವಾರು ವಿಧಗಳಿವೆ. ಹತ್ತು ಎತ್ತಿನ ಮಡಿಕೆಯಂತಹ ದೊಡ್ಡ ಮಡಿಕೆಗಳನ್ನು ಉಳುಮೆ ಮಾಡುವುದು ಈಗ ಸಂಪೂರ್ಣವಾಗಿ ನಿಂತಿದ್ದು ಕೇವಲ ರಂಟೆ ಮಡಿಕೆ ಮಾತ್ರ ಬಳಕೆಯಾಗುತ್ತಿದೆ.

**ನೇಗಿಲಿನ ಸ್ವರೂಪ :** ನೇಗಿಲು ಇಡಿಯಾಗಿ ಒಂದೇ ಉಪಕರಣ. ಆದರೆ ಅದರ ಭಾಗಗಳಾದ ಬಾಳು, ಹಿಡಿಕೆ, ಈಸು, ಕುಳ ಮತ್ತು ಜೋಡಣೆಯಾಗುವ ನೊಗ, ಚಿಟಿಕೆಗಳು ತಮ್ಮದೇ ಆದ ಮಹತ್ವವನ್ನು ಪಡೆದಿವೆ. ಬಾಳು ದಪ್ಪವಾಗಿದ್ದು ಇನ್ನುಳಿದ ಭಾಗಗಳನ್ನು ಅದು ಹಿಡಿದಿಡುತ್ತದೆ. ಗುಳ (ಕುಳ) ಭೂಮಿಯಲ್ಲಿ ಚಲಿಸುವ ಕಬ್ಬಿಣದ ಭಾಗ. ಈಸು ಇದು ನೇಗಿಲು ಮತ್ತು ನೊಗಕ್ಕೆ ಸಂಪರ್ಕ ಕಲ್ಪಿಸಿ ನೊಗದಿಂದ ನೇಗಿಲನ್ನು ಎಳೆಯುವ ಸಾಧನ. ಇದು 5 ರಿಂದ 4 ಮೀ. ಉದ್ದ, 5 ರಿಂದ 10 ಸೆಂ.ಮೀ. ದಪ್ಪವಾಗಿರುತ್ತದೆ. ಇವೆಲ್ಲವನ್ನು ನಿಯಂತ್ರಿಸಿ ನೇಗಿಲನ್ನು ನಿರ್ವಹಣೆ ಮಾಡುವ ಭಾಗವೇ ಹಿಡಿಕೆ (ಮೇಡಿ).





ಉಳುವ ಹೊತ್ತಿನಲ್ಲಿ ಈ ಎಲ್ಲ ಭಾಗಗಳನ್ನು ಸರಿಯಾಗಿ ಜೋಡಿಸಿಕೊಂಡು ಎತ್ತುಗಳನ್ನು ಕಟ್ಟಿ ಉಳುಮೆ ಮಾಡುತ್ತಾರೆ. ನೇಗಿಲು 'ವಿ' ಆಕಾರದಲ್ಲಿ ಭೂಮಿಯನ್ನು ಸೀಳುತ್ತಾ ಹೋಗುತ್ತದೆ. ಉಳುವೆ ಎಲ್ಲ ಭೂಮಿಗೂ ಒಂದೇ ತೆರವಾಗಿ ಮಾಡುವುದಿಲ್ಲ. ಕೆಲವೊಂದು ಬೆಳೆಗೆ ಆಳವಾಗಿ, ಕೆಲವೊಂದಕ್ಕೆ ತೇಲಿಸಿ ಉಳುಮೆ ಮಾಡಬೇಕಾಗುತ್ತದೆ. ಆಳವಾಗಿ ಉಳುಮೆ ಮಾಡುವವರು ನೊಗವನ್ನು ಈಸಿನ ಕೆಳಭಾಗಕ್ಕೆ ನೊಗ ಕಟ್ಟುತ್ತಾರೆ. ಆಳ ಬೇಡ ಎಂದಾಗ ಅದೇ ನೊಗವನ್ನು ಸ್ವಲ್ಪ ಮೇಲ್ಭಾಗಕ್ಕೆ ಕಟ್ಟುತ್ತಾರೆ. ನೊಗವನ್ನು ಸ್ವಲ್ಪ ಹಿಂದೆ ಮುಂದೆ ಮಾಡಿದರೂ ಆಳವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಒಮ್ಮೊಮ್ಮೆ ಹೆಚ್ಚು ಆಳಬೇಕು ಎಂದಾಗ ಈಸಿನ ಮೇಲೆ ಕಾಲು ಇಟ್ಟು ಭಾರ ಹಾಕಿ ಉಳುಮೆ ಮಾಡಲಾಗುತ್ತದೆ. ಬೇಕಾದ 'ಆಳ'ದ ಅರಿವು ಕೃಷಿಕರ ಅನುಭವದಲ್ಲಿ ಅವರ ಕಣ್ಣಳತೆಯಲ್ಲಿ ನಿರ್ಧಾರಿತವಾಗುತ್ತದೆ.

ಬಯಲು ಸೀಮೆಯಲ್ಲಿ ಮರದ ನೇಗಿಲನ್ನು ಬಿತ್ತಲು ಬಳಸುವಾಗ ನೇಗಿಲಿನ ಬಾಳಿಗೆ ಎಳೆಸಡ್ಡೆ ಕಟ್ಟಿ, ಸಡ್ಡೆಯಿಂದ ನೇಗಿಲಿನ ತೆರೆದ ಸಾಲಿನಲ್ಲಿ ಬೀಜಗಳನ್ನು ಹಾಕುತ್ತಾರೆ. ನೇಗಿಲಿನಿಂದ ಗೊಬ್ಬರ ಹಾಕಲು ಈಸಿನ ಮೇಲೆ ಒಂದು ಕಬ್ಬಿಣದ ಪಟ್ಟಿ ಬಡಿದು ಬಾಳಿನಲ್ಲಿ ತೂತು ತೆಗೆದು ಸೆಡ್ಡೆಯ ಮುಖಾಂತರ ಗೊಬ್ಬರವನ್ನು ಆಳವಾಗಿ ಹರಗುತ್ತಾರೆ. ಉತ್ತರ



ಕರ್ನಾಟಕದಲ್ಲಿ ಬಿತ್ತನೆ ಅನಂತರ ಬಂದ ಬೆಳೆಯಲ್ಲಿ ಬೀಜ ಹುಟ್ಟದಿದ್ದರೆ, ಅಂಥ ಸಾಲುಗಳ ನಡುವೆ ದೊಡ್ಡ ದೊಡ್ಡ ಉಪಕರಣಗಳಿಂದ ಮರು ಬಿತ್ತನೆ ಕಷ್ಟ. ಅದಕ್ಕಾಗಿಯೇ ಕೇವಲ ಕೈಯಿಂದಲೇ ಹೊಡೆಯುವಂತಹ ಚಿಕ್ಕ ಮಡಿಕೆ ಬಳಸಿ ಬೀಜ ಹುಟ್ಟದ ಸ್ಥಳದಲ್ಲಿ ಬಿತ್ತನೆ ಮಾಡುತ್ತಾರೆ. ಇದಕ್ಕೆ ಬೀಜ ಮಡಿಕೆಯಂತಲೇ ಕರೆಯುತ್ತಾರೆ. ಇದರೊಂದಿಗೆ ಸುಮಾರು 3 ಅಡಿ ಆಳದವರೆಗೂ ಇಳಿದು ಉಳುಮೆ ಮಾಡುವ 'ಕಬ್ಬಿಣ ಮಡಿಕೆ'ಗಳೂ ಉತ್ತರ ಕರ್ನಾಟಕದಲ್ಲಿದ್ದವು. ಈ ಮಡಿಕೆಗೆ ಆರು ಎತ್ತುಗಳನ್ನು ಏಕಕಾಲಕ್ಕೆ ಹೂಡಿ ಉಳುಮೆ ಮಾಡಲಾಗುತ್ತಿತ್ತು. ಇದು ತಳದಲ್ಲಿರುವ ಕೊಳೆಯಂತಹ ಕಸ, ಕಡ್ಡಿ, ಬೇರುಗಳನ್ನು ಕಿತ್ತೆಸೆದು ಸಂಪೂರ್ಣವಾಗಿ ಕಳೆ ನಿರ್ಮೂಲನೆ ಮಾಡುವುದಲ್ಲದೆ, ಪೆಂಟಿ ಪೆಂಟಿ ಮಣ್ಣನ್ನು ತಳಮೇಲು ಮಾಡುತ್ತಿತ್ತು. ಆದರೆ ಇಂದು ಹಳ್ಳಿಗಳಲ್ಲಿ ಟ್ರ್ಯಾಕ್ಟರ್ ಪ್ರಭಾವದಿಂದ ಈ ಕಬ್ಬಿಣ ಮಡಿಕೆಗಳು ಮೂಲೆ ಗುಂಪಾಗಿವೆ.

ಭೂಮಿಯನ್ನು ನೇಗಿಲಿನಿಂದ ಉಳುಮೆ ಮಾಡಿದ ಅನಂತರ ದಪ್ಪ ದಪ್ಪ ಹೆಂಟೆಗಳೇನಾದರು ಉಳಿದರೆ ಅವುಗಳನ್ನು ಪುಡಿ ಮಾಡಲು ನೇಗಿಲಿಗಿಂತ ಭಿನ್ನವಾಗಿ ಹೆಂಟೆ / ಕುಂಟೆ / ಗುಂಟೆ ಹೊಡೆವ ಉಪಕರಣಗಳನ್ನು ಕೃಷಿಯಲ್ಲಿ ಬಳಸಲಾಗುತ್ತದೆ. ಈ ಉಪಕರಣಗಳು ನೇಗಿಲಿನಂತೆ ಮರದ ಹಲಗೆ ಮುಂತಾದ ಉಪಕರಣಗಳ ಸಹಾಯದಿಂದ ನಿರ್ಮಿಸಿ ಬಳಸುವುದು ಕೃಷಿಕಾರರ ಕೌಶಲ್ಯ, ತಿಳುವಳಿಕೆ ಮತ್ತು ಅನುಭವಸಿದ್ಧಿಯನ್ನು ಪ್ರದರ್ಶಿಸುತ್ತದೆ.

ಬಿತ್ತನೆಯ ಅನಂತರದಲ್ಲಿ ಬೆಳೆ ಹುಲುಸಾಗಿ ಬಂದಾಗ ಉಳುಮೆ ಮಾಡಿದ್ದ ಸಾಲುಗಳು ಸಮತಟ್ಟಾಗಿದ್ದಾಗ ಮತ್ತೆ ಸಾಲು ಹೊಡೆಯುವುದು ಅನಿವಾರ್ಯ. ಹುಲುಸಾಗಿ ಬೆಳೆದ ಬೆಳೆಯನ್ನು ಕಾಪಾಡಿಕೊಂಡು ಫಸಲನ್ನು ಪಡೆಯಲು ಸಾಲುಗಳನ್ನು ಹೊಡೆಯಲಾಗುತ್ತದೆ. ಅದು ನೇಗಿಲಿನಿಂದ ದುಸ್ಸಾಧ್ಯ. ಅದಕ್ಕಾಗಿ ಕೌಶಲ್ಯ ಕೃಷಿಕರು ಕೈ ನೇಗಿಲಿನಂತಿರುವ ಚಿಕ್ಕ ಚಿಕ್ಕ ಉಪಕರಣಗಳನ್ನು ಕಂಡು ಕೊಂಡಿದ್ದಾರೆ. ಅವುಗಳೆಂದರೆ ಗುದ್ದಲಿ, ಆರೆ, ವರಾರಿ, ಚನಿಕೆ ಮುಂತಾದವು. ಇವುಗಳಿಂದ ಬೆಳೆಯ ಮಧ್ಯೆ ನೇಗಿಲಿನಂತೆ ಸಾಲುಗಳನ್ನು ಹೊಡೆಯಲಾಗುತ್ತದೆ. ಕಳೆಯನ್ನು ತೆಗೆಯಲಾಗುತ್ತದೆ. ಆರಂಭದಲ್ಲಿ ಉಳುಮೆ ಮಾಡಿ ಭೂಮಿಯನ್ನು ಹದಗೊಳಿಸಿಕೊಂಡಂತೆ ಅನಂತರವೂ ಭೂಮಿಯನ್ನು ಹದವಾಗಿಸಿಕೊಳ್ಳಲು ನೇಗಿಲಿನಂತೆ ಈ ಚಿಕ್ಕ ಕೈ ಉಪಕರಣಗಳನ್ನು ಬಳಸಲಾಗುತ್ತದೆ.

*ಬಿ.ಕೆ.ಎಂ.*

**ನೇರಳೆ** ಇದು ನಿತ್ಯಹರಿದ್ವರ್ಣದ ಮರ. ಇದಕ್ಕೆ ಭಾರತ, ಪಾಕಿಸ್ತಾನ, ಇಂಡೋನೇಷ್ಯಾ ಮೂಲ. ಇತ್ತೀಚಿನ ದಿನಗಳಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ನೇರಳೆ ಮರ ಸು. 30 ಮೀ. ಎತ್ತರ ಬೆಳೆಯುತ್ತದೆ. ಇದು ಸಿಜಿಗಿಯಮ್ ಕುಮಿನಿ ಎಂಬ ಸಸ್ಯವರ್ಗಕ್ಕೆ ಸೇರಿದ್ದು 100 ವರ್ಷಗಳವರೆಗೆ ಬಾಳುತ್ತದೆ. ಹಾಗೂ ವರ್ಷಕ್ಕೊಮ್ಮೆ ಮಾತ್ರ ಹಣ್ಣುಗಳನ್ನು ಕೊಡುತ್ತದೆ.

**ಪೌಷ್ಟಿಕ ಗುಣಗಳು :** ನೇರಳೆ ಹಣ್ಣಿನಲ್ಲಿ ಸಸಾರಜನಕ, ಎ, ಬಿ, ಸಿ ಜೀವಸತ್ವ, ಸುಣ್ಣರಂಜಕ ಮತ್ತು ಕಬ್ಬಿಣದ ಖನಿಜಾಂಶಗಳು ಹೆಚ್ಚಾಗಿವೆ. ಇದನ್ನು ತಿನ್ನುವುದರಿಂದ ನಾನಾ ತರಹದ ರೋಗಗಳ ನಿವಾರಣೆಗೆ ಸಹಾಯವಾಗುತ್ತದೆ. ಹಾಗೂ ಇದರಲ್ಲಿ ಶೇ. 40 ಅಧಿಕ Antioxidants

ಅಂಶವಿರುವುದರಿಂದ ಕೊಲೆಜಿನ್ ಉತ್ಪತಿಗೆ ಸಹಾಯಮಾಡುತ್ತದೆ. ಇದರ ಬೀಜದಲ್ಲಿ ಕಾರ್ಬೋಹೈಡ್ರೇಟ್ಸ್, ಕ್ಯಾಲ್ಸಿಯಂ ಅಧಿಕವಾಗಿ ದೊರೆಯುತ್ತದೆ.

**ಔಷಧೀಯ ಗುಣಗಳು :** ಸಿಹಿಮೂತ್ರರೋಗ, ಅತಿ ಋತುಸ್ರಾವ, ಮಕ್ಕಳಿಗೆ ಬಾಯಿ ಹುಣ್ಣಾಗುವುದು. ಹಾಗೂ ಬಾಯಿ ದುರ್ಗಂಧ ನಿವಾರಣೆಯಾಗುತ್ತದೆ. ಗಂಟಲು ನೋವು, ಗೊರಲು, ಉಬ್ಬಸ ಮುಂತಾದ



ನೋವುಗಳು ನಿವಾರಣೆಯಾಗುತ್ತವೆ. ಇದರ ಬೀಜವನ್ನು ನಿಯಮಿತವಾಗಿ ಸೇವಿಸುತ್ತಾ ಬಂದಲ್ಲಿ ಸಿಹಿ ಮೂತ್ರ ಕಾಯಿಲೆ ಕಡಿಮೆಯಾಗುತ್ತದೆ. ಜೇನುತುಪ್ಪ ಮತ್ತು ನೇರಳೆ ರಸವನ್ನು ಮಿಶ್ರಣ ಮಾಡಿ ಸೇವಿಸುವುದರಿಂದ ಮೂಲವ್ಯಾಧಿ ಮಾಯವಾಗುತ್ತದೆ. ಎಲೆಗಳನ್ನು ಜಗಿವುದರಿಂದ ಹಲ್ಲುಗಳು ಹೊಳೆಯುತ್ತವೆ. ಆಯುರ್ವೇದ, ಯುನಾನಿ, ಚೀನಿ ಔಷಧಿಯಾಗಿಯೂ ಬಳಸಲಾಗುತ್ತದೆ.

**ಬೆಳೆಸುವ ವಿಧಾನ :** ನೇರಳೆ ಬೀಜವನ್ನು ತೆಗೆದ 4-5 ದಿನಗಳಲ್ಲಿ ನಾಟಿ ಮಾಡಬೇಕು. ಅನಂತರ ಇದರ ಸಸಿಗಳನ್ನು ಮಡಿಗಳಲ್ಲಿ ಅಥವಾ ಪಾಲಿಥೀನ್ ಚೀಲಗಳಲ್ಲಿ ನೆಟ್ಟು ಬೆಳೆಸಬೇಕು. ನೇರಳೆ ಸಸಿಯನ್ನು ನೆಡಲು ಸ್ಥಳವನ್ನು ಚೆನ್ನಾಗಿ ಉಳುಮೆ ಮಾಡಿ ಸಿದ್ಧಪಡಿಸಿಕೊಳ್ಳಬೇಕು. ಅನಂತರ ಗಿಡವನ್ನು ನೆಡುವ ಸಂದರ್ಭದಲ್ಲಿ ಕೊಟ್ಟಿಗೆ ಗೊಬ್ಬರ ಕೊಟ್ಟು ಕೋಲಿನ ಆಸರೆಯಿಂದ ನೆಡಬೇಕು.

10 ಮೀ. ದೂರದಲ್ಲಿ ಪ್ರತಿ ಹೆಕ್ಟೇರಿಗೆ 100 ಗಿಡಗಳನ್ನು ನೆಡಬಹುದು. ಆರಂಭದ ಹಂತದಲ್ಲಿ ಇದಕ್ಕೆ ಕೊಟ್ಟಿಗೆ ಗೊಬ್ಬರವನ್ನು ಹೆಚ್ಚಾಗಿ ಕೊಡಬೇಕು. ಅನಂತರದ ದಿನಗಳಲ್ಲಿ ಅಂದರೆ ಇದು ಫಸಲು ನೀಡುವ ಸಂದರ್ಭದಲ್ಲಿ ರಾಸಾಯನಿಕ ಗೊಬ್ಬರವನ್ನು ನೀಡುವುದು. ಇದರಿಂದ ಉತ್ತಮ ಫಲ ದೊರೆಯುತ್ತದೆ.

**ಜಂಬು ನೇರಳೆ :** ಕರ್ನಾಟಕದ ಮಲೆನಾಡು ಮತ್ತು ಒಣಹವೆ ಪ್ರದೇಶಗಳಲ್ಲಿ ಹೆಚ್ಚಾಗಿ ಜಂಬುನೇರಳೆ ಹಣ್ಣನ್ನು ಬೆಳೆಯುತ್ತಾರೆ. ಆದರೆ ಇದನ್ನು ನೆಡು ತೋಪುಗಳಲ್ಲಿ ಬೆಳೆಯಲು ಆಗುತ್ತಿಲ್ಲ. ಅತಿ ಹೆಚ್ಚಾಗಿ ರಸ್ತೆಯ ಬದಿಯಲ್ಲಿ ಸಾಲು ಮರವನ್ನಾಗಿ ಬೆಳೆಯಲಾಗುತ್ತದೆ. ನೇರಳೆ ಅತಿತೇವವಿರುವ ಜೌಗು ಪ್ರದೇಶಗಳಲ್ಲಿ ಸಮೃದ್ಧಿಯಾಗಿ ಬೆಳೆಯಬಹುದು. ಜಂಬು ನೇರಳೆಯು ಸಹ ಆರೋಗ್ಯವರ್ಧಕ ಗುಣಗಳನ್ನು ಹೊಂದಿದೆ. ಇದರ ಹಣ್ಣು ದಪ್ಪದಾಗಿದ್ದು ಮೇಲೆಲ್ಲಾ ನುಣಪನ್ನು ಹೊಂದಿರುತ್ತದೆ. ಹಾಗೂ ಬೀಜ ಹಸುರು ಬಣ್ಣದಿಂದ ಕೂಡಿರುತ್ತದೆ. ಇದು ವಾರ್ಷಿಕ ಬೆಳೆ. ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಫಲವನ್ನು ನೀಡುತ್ತದೆ.

**ನಕ್ಷತ್ರ ನೇರಳೆ :** ಕರಾವಳಿ ಮತ್ತು ಮಲೆನಾಡಿನಲ್ಲಿ ಹೆಚ್ಚಾಗಿ ಕಂಡುಬರುವ ಆಕರ್ಷಕ ಬಣ್ಣದ ಹಣ್ಣನ್ನು ನಕ್ಷತ್ರನೇರಳೆ, ಸ್ಟಾರ್ ಆಪಲ್ ಎಂದು ಕರೆಯುವರು. ಜಂಬು ನೇರಳೆ ಅಥವಾ ಪನ್ನೇರಳೆ ಜಾತಿಗೆ ಸೇರಿದ ಇದರ ವಿಶೇಷವೆಂದರೆ ಈ ಮರ ಗಿಡ್ಡವಾಗಿದ್ದು ಎಲೆಗಳು ವರ್ಷವಿಡೀ ಹಸುರಾಗಿರುತ್ತವೆ. ಹಣ್ಣುಗಳು ನಕ್ಷತ್ರದ ಆಕಾರವನ್ನು ಹೊಂದಿರುತ್ತವೆ. ಹಾಗೂ ನಸು ನೇರಳೆ ಬಣ್ಣದಿಂದ ಕೂಡಿರುತ್ತವೆ. ಆದ್ದರಿಂದಲೇ ಇದನ್ನು ನಕ್ಷತ್ರ ನೇರಳೆ ಎನ್ನುವರು. ಇದರ ಸೌಂದರ್ಯವೇ ನಯನ ಮನೋಹರ.

ಸಾಮಾನ್ಯವಾಗಿ ವರ್ಷದಲ್ಲಿ ಎರಡು ಬಾರಿ ಕಾಯಿ ಬಿಡುವುದಾದರೂ ಕೆಲವು ತಳಿಗಳು ವರ್ಷಪೂರ್ತಿ ಫಲವನ್ನು ಕೊಡುತ್ತವೆ. ಹೆಚ್ಚು ನೀರಿನ ಅಂಶವನ್ನು ಹೊಂದಿದ್ದು, ಹುಳಿ-ಸಿಹಿಯಿಂದ ಕೂಡಿದ್ದು ಸವಿಯಲು ರುಚಿಯಾಗಿರುತ್ತದೆ. ಪಾನೀಯ ಜಾಮ್, ಗೊಜ್ಜು ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದನ್ನು ಮನೆಯ ಮುಂದೆ ಅಥವಾ ಹಿತ್ತಲಲ್ಲಿ ತೋಟದ ಬದಿಗಳಲ್ಲಿ, ಬೇಲಿಗಳಲ್ಲಿ ಬೆಳೆಯಬಹುದು. ಹಾಗೂ ಹೂವಿನ ತೋಟದಲ್ಲಿ ಅಲಂಕಾರಿಕ ಸಸ್ಯವಾಗಿಯೂ ಬೆಳೆಯುತ್ತಾರೆ. ಬೀಜದಿಂದ ಹಾಗೂ ಕಸಿ ಕಟ್ಟುವಿಕೆಯಿಂದ ಸಸ್ಯಾಭಿವೃದ್ಧಿ ಮಾಡಬಹುದು.

ಈ ಗಿಡಕ್ಕೆ ಫಲವತ್ತಾದ ಮಣ್ಣು, ಬೂದಿ, ಕೊಟ್ಟಿಗೆ ಗೊಬ್ಬರದ ಆರೈಕೆ ಸಾಕು. ನೀರು ಬಸಿದು ಹೋಗುವ ಪ್ರದೇಶದಲ್ಲಿ ಹುಲುಸಾಗಿ ಬೆಳೆಯುತ್ತವೆ. ನೆಟ್ಟ ಮೂರು ವರ್ಷಗಳಲ್ಲೇ ಫಲ ನೀಡುತ್ತದೆ. ಪ್ರತಿ ಒಂದು ಗಿಡ ಸಾವಿರಾರು ಹಣ್ಣುಗಳನ್ನು ಬಿಡುತ್ತದೆ.

**ನೇರಳೆಯ ಉಪಯೋಗಗಳು :** ಪಾನೀಯ, ಮತ್ತು ಉಪ್ಪಿನಕಾಯಿ ತಯಾರಿಕೆಯಲ್ಲಿ, ಜೆಲ್ಲಿ, ಜಾಮ್, ವೈನ್, ವಿನೇಗರ್ ಔಷಧಿಯ ತಯಾರಿಕೆಯಲ್ಲೂ ಉಪಯೋಗಿಸುವರು. ನೇರಳೆ ಹಣ್ಣಿನ ಬೀಜಗಳನ್ನು ಹುಡಿ ಮಾಡಿ ಪಶುಗಳಿಗೆ ಆಹಾರವಾಗಿ ಬಳಸುವರು. ನೇರಳೆ ಮರದಿಂದ ಪೀಠೋಪಕರಣ, ದೋಣಿ, ರೈಲ್ವೆ, ಪಟ್ಟಿ ಇತ್ಯಾದಿಗಳನ್ನು ತಯಾರಿಸುವರು. ಬೀಜದ ಪುಡಿಯನ್ನು ಸಕ್ಕರೆ ಕಾಯಿಲೆಯ ಉಪಚಾರಕ್ಕೆ ಬಳಸುವರು. ಕಾಂಡದ ತೊಗಟೆ, ಬೀಜ, ಎಲೆ ಮತ್ತು ಹಣ್ಣುಗಳ ಕಷಾಯವನ್ನು ಕಾಯಿಲೆಗಳ ಉಪಚಾರಕ್ಕೆ ಬಳಸುವರು. ಮರದ ತೊಗಟೆಯನ್ನು ಕಾರ್ಖಾನೆಗಳಲ್ಲಿ ಬಣ್ಣ ಹಾಕಲು, ಚರ್ಮ ಹದಗೊಳಿಸಲು ಉಪಯೋಗಿಸುತ್ತಾರೆ. ಹಣ್ಣು ಮತ್ತು ಎಲೆಗಳು ಆರೋಗ್ಯವರ್ಧಕ.

***ಆರ್.ಡಿ.***

**ನೋಣಿ** 'ರೂಬಿಯೇಸೀ' ಕುಟುಂಬಕ್ಕೆ ಸೇರಿರುವ ನೋಣಿಯನ್ನು ಸಸ್ಯವಿಜ್ಞಾನದಲ್ಲಿ 'ಮೊರಿಂಡಾ ಸಿಟ್ರಿಫೋಲಿಯಾ' ಎಂದು ಗುರುತಿಸಲಾಗಿದೆ. ನೋಣಿಯ ತವರೂರು ಪಾಲಿನೇಷಿಯಾ. ಚೀನಾ, ಭಾರತ ಮೊದಲಾದ ಹಲವು ದೇಶಗಳಲ್ಲಿ ಸುಮಾರು ಎರಡು ಸಾವಿರ ವರ್ಷಗಳಿಗೂ ಹಿಂದಿನಿಂದಲೂ ನೋಣಿಯ ಬಳಕೆಯಿದೆ.

**ಪ್ರಭೇದಗಳು : 1. ಬ್ರಾಕ್ಟಿಯೇಟಾ :** ಇಂಡೋನೇಷಿಯಾ ಮುಂತಾದೆಡೆಗಳಲ್ಲಿ ಕಂಡುಬರುವ ಈ ಪ್ರಭೇದದ ಸಸ್ಯಗಳು ಚಿಕ್ಕಗಾತ್ರದ ಹಣ್ಣುಗಳನ್ನು ಬಿಡುತ್ತವೆ.

**2. ಪೊಟ್ಟೇರಿ :** ಇದು ಒಂದು ಬಗೆಯ ಅಲಂಕಾರಿಕ ಗಿಡವಾಗಿದ್ದು, ಪೆಸಿಫಿಕ್ ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಪ್ರಭೇದದ ಸಸ್ಯಗಳು ಹಸುರು, ಬಿಳಿ ಎಲೆಗಳಿಂದ ಕೂಡಿರುತ್ತವೆ.

**ಸಸ್ಯವಿವರ :** ನೋಣಿ ನಿತ್ಯ ಹಸುರಾಗಿರುವ ಮಧ್ಯಮ ಗಾತ್ರದ ಮರ. ಸುಮಾರು 10-30 ಅಡಿಗಳಷ್ಟು ಎತ್ತರ ಬೆಳೆಯಬಲ್ಲದು. ಎಲೆಗಳು ಹೊಳಪಾಗಿದ್ದು, 20-45 ಸೆಂ.ಮೀ. ಉದ್ದ, 8-25 ಸೆಂ.ಮೀ. ಅಗಲವಿರುತ್ತವೆ. ಇದು ವರ್ಷವಿಡೀ ಕಾಯಿಗಳನ್ನು ಬಿಡುತ್ತದೆ. ಕಾಯಿಗಳು ತಿಳಿಹಸುರು ಬಣ್ಣದಲ್ಲಿದ್ದು, ಮೇಲ್ಮೈ ಸೀತಾಫಲ ಹಣ್ಣಿನಂತಿರುತ್ತದೆ. ಬಲಿತಕಾಯಿಗಳನ್ನು ಕಿತ್ತಿಟ್ಟರೆ ಎರಡು ಮೂರು ದಿನಗಳಲ್ಲಿ ಹಣ್ಣಾಗುತ್ತವೆ. ಹಣ್ಣಿನ ಸಿಪ್ಪೆ ಕಂದು ಬಣ್ಣದಲ್ಲಿದ್ದು, ಮೆತ್ತಗಿರುತ್ತದೆ. ಇದರ ವಾಸನೆ ಬಹಳ ಕೆಟ್ಟದ್ದಾಗಿರುತ್ತದೆ. ಬೀಜಗಳು ಸೇಬಿನ ಬೀಜವನ್ನು ಹೋಲುವಂತಿದ್ದು, ತುದಿಯಲ್ಲಿ ಗಾಳಿಕೋಶವಿರುತ್ತದೆ.

ನೋಣಿ ಸಸ್ಯ ಎಲ್ಲ ಕಡೆಗಳಲ್ಲಿಯೂ ಇದೇ ಲಕ್ಷಣಗಳನ್ನು ಹೊಂದಿರುವುದಿಲ್ಲ. ಭಿನ್ನ ಭೌಗೋಳಿಕ ಅಂಶಗಳ ಕಾರಣದಿಂದಾಗಿ ಎತ್ತರ, ಎಲೆಯ ರಚನೆ, ಹಣ್ಣಿನ ಗಾತ್ರ, ಬೀಜಗಳ ಸಂಖ್ಯೆ- ಇವುಗಳಲ್ಲಿ ಸ್ವಲ್ಪ ಪ್ರಮಾಣದ ವ್ಯತ್ಯಾಸ ಕಂಡುಬರುತ್ತದೆ.

**ಕೃಷಿ :** ಬೀಜ ಮತ್ತು ಕಾಂಡದ ತುಂಡುಗಳಿಂದ ಕೃಷಿ ಮಾಡಬಹುದು. ನೋಣಿಯು ವರ್ಷವಿಡೀ ಹೂ ಬಿಡುವುದರಿಂದ ಹಣ್ಣುಗಳು ಯಾವಾಗಲೂ ದೊರೆತು ಬೀಜಗಳು ಲಭ್ಯವಾಗುವುದರಿಂದ ಯಾವುದೇ ಕಾಲದಲ್ಲಾದರೂ ಕೃಷಿ ಮಾಡಬಹುದು. ಹಣ್ಣು ಚೆನ್ನಾಗಿ ಮಾಗಿದ ಅನಂತರ ಬೀಜಗಳನ್ನು ಬೇರ್ಪಡಿಸಿ, ಬೀಜಗಳಿಗೆ ಅಂಟಿರುವ ತಿರುಳನ್ನು ಚೆನ್ನಾಗಿ ತೊಳೆದು ಬೀಜಗಳಲ್ಲಿಯ ನೀರಿನ ಅಂಶ ಹೋಗುವಂತೆ ಒಣಗಿಸಬೇಕು. ಬೀಜಗಳನ್ನು ಒಂದು ವರ್ಷದವರೆಗೂ ಉಪಯೋಗಿಸಬಹುದು. ಪಾಲಿಥೀನ್ ಚೀಲಗಳಲ್ಲಿ ಇಲ್ಲವೆ ಮಡಿಗಳಲ್ಲಿ ಸಸಿಗಳನ್ನು ಮಾಡಿಕೊಂಡು ಹೊಲಗಳಲ್ಲಿ ನಾಟಿ ಮಾಡಬಹುದು. ಇಲ್ಲವೆ ಹೊಲದಲ್ಲೆ ನೇರವಾಗಿ ಬೀಜ ಬಿತ್ತಿ, ಅಲ್ಲಿಯೇ ಸಸಿಗಳು ಬೆಳೆಯುವಂತೆ ಮಾಡಬಹುದು.

ಕಾಂಡದ ತುಂಡನ್ನು ನಾಟಿ ಮಾಡಿಯೂ ಅಭಿವೃದ್ಧಿಪಡಿಸಬಹುದು. 30-40 ಸೆಂ.ಮೀ. ಉದ್ದದ ಕಾಂಡವನ್ನು ನಾಟಿ ಮಾಡಬೇಕು. ಎರಡು-ಮೂರು ವಾರಗಳಲ್ಲಿ ಬೇರು ಬಿಟ್ಟು, ಎರಡು ತಿಂಗಳ ಅನಂತರ ಗಿಡವಾಗಿ ಬೆಳೆಯುತ್ತದೆ.

ನೋಣಿ ಯಾವುದೇ ಪರಿಸರದಲ್ಲಿ ಬೆಳೆಯುವ ಸಾಮರ್ಥ್ಯವನ್ನು ಹೊಂದಿದ್ದರೂ ಇದಕ್ಕೂ ಕೀಟಗಳು, ರೋಗಗಳ ತೊಂದರೆ ತಪ್ಪಿದ್ದಲ್ಲ. ಗಿಡ ಹೇನು, ಎಲೆಕೊರಕ, ಬಿಳಿ ನೊಣ, ಕಂಬಳಿ ಹುಳುಗಳು, ರಸ ಹೀರುವ ಕೀಟಗಳಿಂದ ನೋಣಿಯ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

**ಉಪಯೋಗಗಳು :** ನೋಣಿ ಬಹೂಪಯೋಗಿ ಸಸ್ಯವಾಗಿದೆ. ಸಮುದ್ರ ತೀರದಲ್ಲಿ ಗಾಳಿಯಲ್ಲಿ ತೇಲಿ ಬರುವ ಉಪ್ಪಿನ ಅಂಶದಿಂದಾಗಿ ಎಲ್ಲ ಬಗೆಯ ಸಸ್ಯಗಳು ಬೆಳೆಯಲಾರವು. ಆದರೆ ನೋಣಿ ಈ ಉಪ್ಪಿನ ಅಂಶವನ್ನೆ ತನ್ನ ಬೆಳೆವಣಿಗೆಗೆ ಬಳಸಿಕೊಂಡು ಕಡಲಿಗೆ ತೀರಾ ಹತ್ತಿರದಲ್ಲಿಯೂ ಚೆನ್ನಾಗಿ ಬೆಳೆಯುತ್ತದೆ. ನೋಣಿಯ ಈ ಸೌಲಭ್ಯವನ್ನು ಬಳಸಿಕೊಂಡು ಕರಾವಳಿ ಪ್ರದೇಶಗಳಲ್ಲಿ ಈ ಮರಗಳನ್ನು ಬೆಳೆಸಿ ಪ್ರವಾಹಗಳನ್ನು ತಡೆಯಬಹುದು. ನೋಣಿಯ ಹಣ್ಣನ್ನು ರಸ ಮತ್ತು ಕಷಾಯಕ್ಕಾಗಿ ಬಳಸುವುದರೊಂದಿಗೆ ಆಹಾರವಾಗಿಯೂ ಇದರ ಉಪಯೋಗವಿದೆ. ಇದರ ತೊಗಟೆಯಿಂದ ಕೆಂಪು ವರ್ಣಕಾರಕವನ್ನು, ಬೇರಿನಿಂದ ಅರಿಸಿನ ವರ್ಣಕಾರಕವನ್ನು ತಯಾರಿಸುತ್ತಾರೆ. ನೋಣಿ ಬೀಜಗಳಲ್ಲಿ ಲಘು ಕೀಟನಾಶಕ ಗುಣವಿದ್ದು, ಇದರ ತೈಲದಿಂದ ತಲೆಯಲ್ಲಿರುವ ಹೇನನ್ನು ನಿವಾರಿಸಬಹುದು.

*ವಿ.ಎನ್.ಕೆ.*

**ಪಡವಲಕಾಯಿ** ಈ ಕಾಯಿ ಕುಕುರ್ಬಿಟೇಸೀ ಕುಟುಂಬಕ್ಕೆ ಸೇರಿದುದಾಗಿದೆ. ಇದರ ಉಗಮ ಸ್ಥಾನವನ್ನು ಭಾರತ ಮತ್ತು ಮಲಯ ದೇಶಗಳೆಂದು ನಂಬಲಾಗಿದೆ. ಭಾರತದ ಎಲ್ಲೆಡೆ ಇದನ್ನು ಬೆಳೆಯಲಾಗುತ್ತದೆ. ಇದರ ಸಸ್ಯ ವೈಜ್ಞಾನಿಕ ನಾಮ ಟ್ರೈಕೋಸ್ಯಾಂತೆಸ್ ಆಂಗ್ವಿನಾಎಲ್.




ಮರಳು ಮಿಶ್ರಿತವಾದ ಗೋಡು ಮಣ್ಣಿನ ಭೂಮಿಯನ್ನು ಚೆನ್ನಾಗಿ ಉತ್ತು ಒಂದು ಎಕರೆಗೆ 4 ರಿಂದ 5 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನೊಂದಿಗೆ ಮಿಶ್ರಣ ಮಾಡಬೇಕು. ಎಕರೆಗೆ 2 ರಿಂದ 2.5 ಕೆ.ಜಿ. ಬಿತ್ತನೆ ಬೀಜವನ್ನು 4.5 ರಿಂದ 7.5 ಅಡಿ ಅಂತರದ ಸಾಲುಗಳಲ್ಲಿ 2 ರಿಂದ 4 ಅಡಿ ಅಂತರದಲ್ಲಿ ಬಿತ್ತಬೇಕು. ಅನಂತರ ರಾಸಾಯನಿಕ ಗೊಬ್ಬರಗಳನ್ನು ಹಾಕಬೇಕು. ಇದರ ಉತ್ತಮ ಬೆಳೆವಣಿಗೆಗೆ ಹೆಚ್ಚು ಉಷ್ಣತೆ ಮತ್ತು ಆರ್ದ್ರತೆ ಒಳ್ಳೆಯದು. ಆದ್ದರಿಂದ ಬೇಸಗೆಯಲ್ಲಿ ಬೆಳೆಸಲಾಗುತ್ತದೆ. ಬೀಜಗಳು ಬಿತ್ತಿದ 10 ದಿನಗಳಲ್ಲಿ ಮೊಳೆಯುತ್ತವೆ. ಗಿಡಗಳ ಪಕ್ಕದಲ್ಲಿ ಆಧಾರ ಒದಗಿಸಿ 6-7 ಅಡಿಗಳ ಎತ್ತರದ ಚಪ್ಪರಗಳ ಮೇಲೆ ಹಬ್ಬಿಸಬೇಕು. ಕಾಯಿಯಾಗುವಾಗ ಅವುಗಳ ತುದಿಗೆ ಸ್ವಲ್ಪ ಭಾರವನ್ನು ಕಟ್ಟಿದರೆ ನೀಳವಾಗಿ

ಬೆಳೆಯುತ್ತವೆ. ಬೆಳೆದ ಕಳೆಯನ್ನು ಆಗಾಗ್ಗೆ ತೆಗೆಯಬೇಕು. ಬೇಸಗೆಯಲ್ಲಿ ಬೆಳೆಯುವುದರಿಂದ ಹೆಚ್ಚು ನೀರು ಬೇಕಾಗುತ್ತದೆ. ಪಾತಿಗಳಲ್ಲಿ ಹೊದಿಕೆ ವಸ್ತುಗಳನ್ನು ಹಾಡುವುದರಿಂದ ತೇವಾಂಶ ಸಂರಕ್ಷಣೆಯಾಗುತ್ತದೆ. 5-6 ದಿವಸಗಳಿಗೊಮ್ಮೆ ನೀರು ಒದಗಿಸಬೇಕು.

ಗಿಡಗಳಿಗೆ ರೋಗ ಬಾರದಂತೆ ಮತ್ತು ಕೀಟಗಳು ಹತ್ತದಂತೆ ಔಷಧಿಯನ್ನು ಸಿಂಪಡಿಸಬೇಕು. ಬೀಜ ಬಿತ್ತಿದ 10 ವಾರಗಳ ಅನಂತರ ಕಾಯಿ ಕೊಯ್ಲಿಗೆ ಬರುತ್ತದೆ. ಒಂದು ಎಕರೆಗೆ 4 ಟನ್ ಇಳುವರಿ ಪಡೆಯಬಹುದು.

**ಉಪಯೋಗಗಳು :** ಇದರ ಎಳೆಕಾಯಿಗಳನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಕಾಯಿಗಳಿಂದ ಹುಳಿ, ಪಲ್ಯ, ಸಾಂಬಾರುಗಳನ್ನು ತಯಾರಿಸಬಹುದು. ಪಡುವಲ ಬೀಜ ಮತ್ತು ಬೇರನ್ನು ದೇಸಿ ಔಷಧಿಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಇದರಲ್ಲಿ ಪಿಷ್ಟ, ಸಾರಜನಕ ಕೊಬ್ಬು, ಸುಣ್ಣ, ರಂಜಕ ಮತ್ತು ಕಬ್ಬಿಣದ ಅಂಶಗಳಿವೆ. ಮೈ ನವೆಗೆ ಇದರ ಎಲೆಗಳನ್ನು ಅರಿಶಿನದೊಂದಿಗೆ ಅರೆದು ಹಚ್ಚಿಕೊಳ್ಳಬಹುದು. ಇದನ್ನು ಮೈಸೂರು ಕಡೆ ಹಳ್ಳದಕಾಯಿ, ಬೆಂಗಳೂರು - ಕಡೆ ಹಡ್ಲಕಾಯಿ, ಅಡ್ಲೆಕಾಯಿ, ಪೊಡ್ಲಕಾಯಿ, ಪಳ್ಳಕಾಯಿ ಎನ್ನುತ್ತಾರೆ.

ಇದು ಹಸುರು ಮತ್ತು ಬಿಳಿ ಬಣ್ಣಗಳಲ್ಲಿದ್ದು ಉದ್ದವಾಗಿಯೂ ಕೆಲವೊಮ್ಮೆ ಮೋಟಾಗಿಯೂ ಇರುತ್ತದೆ. ಸಾಮಾನ್ಯವಾಗಿ ಮನೆಯಂಗಳಗಳಲ್ಲಿ ಕಮಾನು ಮತ್ತು ಚಾವಣಿಗಳ ಮೇಲೆಯೂ ಹಬ್ಬಿಸಲಾಗುತ್ತದೆ.

**ಆಕರ :** ಬಳ್ಳಿ ತರಕಾರಿಗಳು ಮತ್ತು ಅಂತರ್ಜಾಲ ಮಾಹಿತಿ.

***ಕೆ.ಎಲ್.***

**ಪನ್ರುತ್ತಿಯ ಹಲಸು** ತಮಿಳುನಾಡಿನ ಎಲ್ಲ ಪ್ರದೇಶಗಳಲ್ಲಿ ಹಲಸಿನ ಕೃಷಿಯನ್ನು ಅಲ್ಪ ಪ್ರಮಾಣದಲ್ಲಿ ಕಂಡರೆ ಪೂರ್ವಕರಾವಳಿಯ ಕಡಲೂರು ಜಿಲ್ಲೆಯಲ್ಲಿರುವ ಪನ್ರುತ್ತಿ ಎಂಬ ಊರು ಹಲಸಿನ ಕೃಷಿಗೆ ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿದೆ. ಇಲ್ಲಿಯ ಹಣ್ಣುಗಳು ಹೆಚ್ಚು ರುಚಿಯುಳ್ಳ ಸೊಳೆಗಳನ್ನು (ತೊಳೆ) ನೀಡುವುದರಿಂದ ತಮಿಳುನಾಡಿನ ಹೊರಗೂ ಇದರ ಬೇಡಿಕೆಯಿದೆ. ಈ ಭಾಗದ ಕೃಷಿ ಭೂಮಿಯಲ್ಲಿ ಎಲ್ಲೆಡೆ ಕಂಡುಬರುವವು ಹಲಸಿನ ತೋಟಗಳೇ. ಇಲ್ಲಿಯ ಅನೇಕ ರೈತರ ಮುಖ್ಯ ಕೃಷಿಯೂ ಇದೇ ಆಗಿದೆ. ಈ ಹಣ್ಣಿನ ವಿಶೇಷತೆಯನ್ನು ಗುರುತಿಸಿದ ತಮಿಳುನಾಡಿನ ಕೃಷಿ ವಿಶ್ವವಿದ್ಯಾಲಯದ ಪಾಲೂರು ತರಕಾರಿ ಸಂಶೋಧನಕೇಂದ್ರ ಕೆಲವು ತಳಿಗಳನ್ನು ಅಭಿವೃದ್ಧಿಪಡಿಸಿದೆ. ಈ ಪೈಕಿ ಪಾಲೂರು-1, ಪಾಲೂರು-2 ಜನಪ್ರಿಯವಾಗಿದೆ. ಪಾಲೂರು-1 ವರ್ಷದಲ್ಲಿ ಎರಡು ಫಸಲು ನೀಡುವ ತಳಿ. ಈ ಕೇಂದ್ರ ಪ್ರತಿವರ್ಷ ಮೇಲಿನ ಎರಡೂ ತಳಿಗಳಿಂದ ಹಲವು ಬಗೆಯ ಸಂಕರ ತಳಿಗಳನ್ನು ಅಭಿವೃದ್ಧಿಪಡಿಸಿ ಕೃಷಿಕರಿಗೆ ಒದಗಿಸುತ್ತಿದೆ.

ಪನ್ರುತ್ತಿ ಗ್ರಾಮವೊಂದರಲ್ಲಿಯೇ ನೂರಾರು ಹಲಸಿನ ತಳಿಗಳಿವೆ. ಒಂದು ಅಂದಾಜಿನ ಪ್ರಕಾರ ಶೇಕಡಾ 2-5, ವರ್ಷಕ್ಕೆರಡು ಬಾರಿ ಫಸಲು ನೀಡುವ ತಳಿಗಳು ಇಲ್ಲಿ ಕಾಣಸಿಗುತ್ತವೆ. ಹಾಗೆಯೇ ಇಲ್ಲಿಯ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ನೂರಾರು ತಳಿಗಳು ಎಲ್ಲ ಕಾಲಗಳಲ್ಲೂ (ವರ್ಷಪೂರ್ತಿ) ಇಳುವರಿ ಕೊಡುತ್ತವೆ. ಆದ್ದರಿಂದ ಪನ್ರುತ್ತಿ ಗ್ರಾಮವನ್ನು ಹಲಸು ತಳಿಗಳ ಕಾಶಿ ಎಂದು ಹೇಳಬಹುದು. ಸಾಮಾನ್ಯವಾಗಿ ಹಲಸಿನ ಮರಗಳನ್ನು ಪ್ರತ್ಯೇಕ ತೋಪುಗಳಂತೆ ಬೆಳೆಯುವುದು ಅಪರೂಪ. ಆದರೆ ಈ ಹಳ್ಳಿಯ ವಿಶೇಷವೆಂದರೆ ವಾಣಿಜ್ಯದ ದೃಷ್ಟಿಯಿಂದ ಹಲಸು ಕೃಷಿಯಲ್ಲಿ ತೊಡಗಿರುವುದು. ಅತ್ಯಂತ ಲಾಭದಾಯಕವೂ ಸರಳವೂ ಆದ ಕೃಷಿಯಿದು. ಒಮ್ಮೆ ಸಸಿ ನೆಟ್ಟು ಸ್ವಲ್ಪಕಾಲದ ತನಕ ಪೋಷಿಸಿದರೆ ನಿರಂತರವಾಗಿ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಫಸಲು ನೀಡುತ್ತಲೇ ಇರುತ್ತದೆ. ಹೆಚ್ಚು ರೋಗರುಜಿನಗಳು ಅಂಟದ, ನೀರುಗೊಬ್ಬರಗಳನ್ನು ಬಯಸದ ಹಲಸಿನ ಕೃಷಿಯತ್ತ ಸಂಶೋಧನ ಕೇಂದ್ರಗಳು ಗಮನ ಹರಿಸಿರುವುದು ಸ್ವಾಗತಾರ್ಹ. ಇಲ್ಲಿಯ ಹಣ್ಣೂ ಅಷ್ಟೇ, ಬಲು ರುಚಿ. ಕಡಲಕರೆಯ ಜಂಬಿಟ್ಟಿಗೆ ಮಣ್ಣು. ಕಡಿಮೆ ಮಳೆ ಮತ್ತು ದೀರ್ಘಕಾಲದ ಬೇಸಗೆ ಅಥವಾ ಒಣ ಹವಾಗುಣ - ಪನ್ರುತ್ತಿಯ ಹಲಸಿಗೆ ಈ ಪ್ರಸಿದ್ಧಿ ತಂದಿದೆ.

ಪನ್ರುತ್ತಿಯಲ್ಲಿ ವರ್ಷಪೂರ್ತಿ ಹಲಸಿನ ಹಣ್ಣು ಸಿಗುತ್ತದೆ. ಏಪ್ರಿಲ್‌ನಿಂದ ಜೂನ್ ತನಕ ಏರು ಸೀಸನ್. ಸೆಪ್ಟೆಂಬರ್ ಹೊತ್ತಿಗೆ ಎರಡು ಬಾರಿ ಬೆಳೆ ಕೊಡುವ ಮರಗಳ ಎರಡನೇ ಫಸಲು ಸಿದ್ಧವಾಗಿರುತ್ತದೆ. ಇನ್ನು ಕೆಲವು ಅಪೂರ್ವವಾದರೂ - ವರ್ಷವಿಡೀ ಬೆಳೆ ಕೊಡುವ ಮರಗಳೂ ಇವೆ. ಹೀಗಾಗಿ ವರುಷದ ಎಲ್ಲಾ ದಿನ ಬಹು ಚಿಕ್ಕ ಪ್ರಮಾಣದಲ್ಲಾದರೂ ಇಲ್ಲಿ ಹಣ್ಣು ಸಿಕ್ಕಿಯೇ ಸಿಕ್ಕುತ್ತದೆ.

ಇಲ್ಲಿ ಹಣ್ಣುಗಳ ಕೊಯ್ಲನ್ನು ಬಹಳ ಎಚ್ಚರದಿಂದ ಮಾಡುತ್ತಾರೆ. ಮರ ಏರಿ, ಕಾಯಿಗೆ ಹಗ್ಗ ಕಟ್ಟಿ ಜಾಗ್ರತೆಯಿಂದ ಇಳಿಸುತ್ತಾರೆ. ಹಣ್ಣಿನ ಗುಣಮಟ್ಟ ಕಾಪಾಡುವುದರಲ್ಲಿ ಈ ನಾಜೂಕಿನ ಕೊಯ್ಲಿನ ಪಾತ್ರವೂ ಇದೆ. ಪನ್ರುತ್ತಿಯ ಹಲಸು ಚೆನ್ನೈಯೂ ಸೇರಿದಂತೆ ರಾಜ್ಯದ ಹಲವೆಡೆಗಳಿಗೆ ಮಾತ್ರವಲ್ಲ ಮುಂಬಯಿಗೂ ಹೋಗುತ್ತದೆ.

ಚಿಕ್ಕ ಪ್ರಮಾಣದಲ್ಲಿ ಬೆಳೆಯುವ ಕೃಷಿಕರು ತಾವೇ ಹಲಸನ್ನು ಕೊಯ್ದು ಪನ್ರುತ್ತಿಯ ರಖಂ ಮಂಡಿಗೆ ಒಯ್ದು ಮಾರುವುದಿದೆ. ಇಂಥವರಿಗೆ ಸ್ವಲ್ಪ ಹೆಚ್ಚಿನ ಬೆಲೆ - ಕಾಯಿ ಒಂದಕ್ಕೆ ನೂರರಿಂದ ನೂರ ಐವತ್ತು ರೂಪಾಯಿ ಸಿಗುತ್ತದೆ.

ಕೆಲವೇ ಕೆಲವು ರೈತರು ಕೊಯ್ದ ಹಲಸನ್ನು ಪಾರ್ಟ್ ಲೋಡ್ ಆಗಿ ಚೆನ್ನೈಯ ಕೊಯಂಬೇಡು ರಖಂ ಮಾರುಕಟ್ಟೆಗೆ ಕಳಿಸುತ್ತಾರೆ. ಇವರು ಕಮಿಶನ್ ಕೊಡಬೇಕಾಗುತ್ತದೆ. ಆದರೆ ಇವರಿಗೆ ಉಳಿದವರಿಗಿಂತ ಹೆಚ್ಚಿನ ಬೆಲೆ ಸಿಗುತ್ತದೆ.

ಪನ್ರುತ್ತಿ ಮಂಡಿಯಲ್ಲಿ ಹಣ್ಣಿನ ಗುಣಮಟ್ಟ ಅನುಸರಿಸಿ ಇಡೀ ಹಣ್ಣಿಗೆ ಕಿಲೋಗೆ ಹತ್ತರಿಂದ ಹನ್ನೆರಡು ರೂಪಾಯಿ ಸಿಗುತ್ತದೆ. ಆದರೆ ತೋಟದಿಂದಲೇ ಮಾರುವ ಬೆಳೆಗಾರರು ತಲಾ ಕಾಯಿಗೆ 60ರಿಂದ 80 ರೂಪಾಯಿಗೆ ತೃಪ್ತರಾಗಬೇಕಾಗುತ್ತದೆ. ಆದರೂ ಪನ್ರುತ್ತಿಯಲ್ಲಿ ಹಲಸಿಗೆ ಬಹುತೇಕ ನಿಶ್ಚಿತ ದರಕ್ಕೆ ಸದಾಕಾಲ ಕೊಳ್ಳುಗರಿದ್ದಾರೆ. ಈ ದೇಶದ ಇತರ ಬಹುತೇಕ ಜಾಗಗಳಲ್ಲಿ ಹೀಗಿಲ್ಲ!

ದೇಶದ ಇತರೆಡೆ ಎಲ್ಲೂ ಹಲಸಿನಲ್ಲಿ ಮಾಡದ ಒಂದು ಕೃಷಿಕ್ರಮವನ್ನು ಪನ್ರುತ್ತಿಯಲ್ಲಿ ಅನುಸರಿಸುತ್ತಾರೆ. ಬೇರೆಡೆ ಮೂಡಿಬಂದ ಎಲ್ಲ ಹಲಸಿನ ಮಿಡಿಗಳನ್ನು ಬೆಳೆಯಬಿಡುತ್ತಾರೆ. ಪನ್ರುತ್ತಿಯಲ್ಲಿ ಹಾಗಲ್ಲ

ಒಂದು ತೊಟ್ಟಿನಲ್ಲಿ ಒಂದೇ ಕಾಯಿ. ಹೆಚ್ಚು ಇರುವುದನ್ನು, ಪೀಚು, ದುರ್ಬಲ ಹಾಗೂ ಆಕಾರದಲ್ಲಿ ಇಟ್ಟಿರುವ ಎಳೆ ಹಲಸೆಲ್ಲವನ್ನೂ ಕತ್ತರಿಸಿ ತೆಗೆಯುತ್ತಾರೆ. ಇಲ್ಲಿಯ ರೈತರಲ್ಲಿ ಮರದ ಬೆಳೆವಣಿಗೆ ನೋಡಿ ಎಷ್ಟು ಹಲಸಿನಕಾಯಿ ಬೆಳೆಯಲು ಬಿಡಬಹುದು ಎನ್ನುವ ಕಲ್ಪನೆ ಇರುತ್ತದೆ. ಉದಾಹರಣೆಗೆ ಹದಿನೈದು ವರ್ಷ ಪ್ರಾಯದ ಮರದಲ್ಲಿ 20-25 ಕಾಯಿ ಬಿಡುತ್ತಾರೆ. ಹೀಗೆ ಹೆಚ್ಚುವರಿ ಹಲಸಿನ ಮಿಡಿಗಳನ್ನು ಕತ್ತರಿಸಿ ತೆಗೆಯುವುದನ್ನು 'ಥಿನ್ನಿಂಗ್' ಎಂದು ಕರೆಯುತ್ತಾರೆ.

ಥಿನ್ನಿಂಗಿನಿಂದ ಹೆಚ್ಚು ಪ್ರಯೋಜನವಿದೆ. ಹಲಸು ಪೊಳ್ಳಾಗದೆ ದುಂಡುದುಂಡಾಗಿ ದೊಡ್ಡದಾಗುತ್ತದೆ. ಸೊಳೆಗಳೂ ದಪ್ಪ, ದೊಡ್ಡದಾಗಿ ರುಚಿಕರವಾಗಿರುತ್ತವೆ. ಎಳೆ ಹಲಸು ಒಂದರ ಮೇಲೆ ಒಂದು ಬೆಳೆಯುವಾಗ ಅವುಗಳ ಹೊರಮೈ ಪರಸ್ಪರ ಸ್ಪರ್ಶಿಸುವಲ್ಲೇ ಕೀಟಹಾವಳಿ ಉಂಟಾಗುತ್ತದೆ. ಥಿನ್ನಿಂಗ್ ಈ ಥರದ ಕೀಟಬಾಧೆಯನ್ನೂ ತಡೆಯುತ್ತದೆ.

ಪನ್ನುತ್ತಿಯಲ್ಲಿ ಹಲಸಿನ ಬೆಳೆಗೆ ನೀರು ಕೊಡವವರಿದ್ದಾರೆ. ಗೊಬ್ಬರ ಕೊಡುತ್ತಾರೆ. ಕೆಲವು ಮಂದಿ ಕೀಟನಾಶಕಗಳ ಸಿಂಪಡಣೆಯನ್ನೂ ಮಾಡುತ್ತಾರೆ. ಆದರೆ ಇಲ್ಲಿ ತಾಯಿಗುಣ ಹೊಂದಿರುವ ಕಸಿ ಗಿಡಗಳನ್ನು ನೆಡುವ ಸಂಪ್ರದಾಯವಿಲ್ಲ. ಎಲ್ಲರೂ ಬೀಜದಿಂದ ಮಾಡಿದ ಗಿಡವನ್ನೇ ಬಯಸುತ್ತಾರೆ. ಹಲಸಿನ ಮರದ ಮೋಪಿನ ಮೇಲೆ ಈ ರೈತರ ದೃಷ್ಟಿ ಇರುವುದೇ ಇದಕ್ಕೆ ಮುಖ್ಯ ಕಾರಣ.

*ಎಸ್.ಪಿ.*

**ಪರಂಗಿ ಗಿಡ (ಪಪ್ಪಾಯಿ)** ಇದರ ವೈಜ್ಞಾನಿಕ ಹೆಸರು ಕ್ಯಾರಿಕ ಪಪ್ಪಾಯ್. ಇದು ಕ್ಯಾರಿಕೇಸಿ ಕುಟುಂಬಕ್ಕೆ ಸೇರಿದೆ. ಕನ್ನಡದಲ್ಲಿ ಇದನ್ನು ಪರಂಗಿಹಣ್ಣು ಎಂದು ಕರೆಯುತ್ತಾರೆ. ಪರಂಗಿ ಹಣ್ಣು ದೇಶೀಯ ಬೆಳೆಯಲ್ಲವಾದರೂ ಭಾರತದಲ್ಲಿ ಈ ಹಣ್ಣಿಗೆ ಹೆಚ್ಚು ಬೇಡಿಕೆ ಇದೆ. ಹೆಚ್ಚು ಪೋಷಕಾಂಶವುಳ್ಳ ಕಡಿಮೆ ಬೆಲೆಯಲ್ಲಿ ದೊರೆಯುವ ಆಕರ್ಷಣೀಯ ಹಣ್ಣು. ಇದು ಮೊದಲು ಮೆಕ್ಸಿಕೋದಲ್ಲಿ ಅನೇಕ ಪ್ರಭೇದಗಳೊಡನೆ ನಡೆದ ತಳೀಕರಣದಿಂದ ದೊರೆತ ಮಿಶ್ರತಳಿ. ಅಮೆರಿಕದವರಿಂದ ಭಾರತೀಯರಿಗೆ ಇದರ ಪರಿಚಯವಾಯಿತು. ಪೆಸಿಫಿಕ್ ದ್ವೀಪ ಸಮೂಹದಲ್ಲಿ ತುಂಬಾ ಹಿಂದಿನಿಂದಲೂ ಇದನ್ನು ಬೆಳೆಸುತ್ತಿದ್ದರು.

ವಾನ್‌ಲಿನ್ ಕಾಟನ್ - ಎಂಬುವನು ಸಮುದ್ರ ಪ್ರವಾಸ ಪ್ರಾರಂಭಿಸಿದ ಮೇಲೆ (1577) ಇದು ಭಾರತವನ್ನು ತಲುಪಿತು. ಕ್ರಮೇಣ 1656ರಲ್ಲಿ ಭಾರತದ ಮೂಲಕ ಚೀನ ದೇಶವನ್ನು ಪ್ರವೇಶಿಸಿತು.

ಪರಂಗಿಹಣ್ಣಿನಲ್ಲಿ ಸುಮಾರು 25 ಪ್ರಭೇದಗಳಿವೆ. ಭಾರತದಲ್ಲಿ ಕ್ಯಾರಿಕ್ ಪಪ್ಪಾಯ ಮಾತ್ರ ಬೆಳೆಯುತ್ತಾರೆ.

**ಸಸ್ಯಾಭಿವೃದ್ಧಿ :** ಇವು ಏಕಲಿಂಗಿ ಸಸ್ಯಗಳಾಗಿರುವುದರಿಂದ ಉತ್ತಮ ಜಾತಿಯ ದೊಡ್ಡ ಗಾತ್ರದ ಹಣ್ಣನ್ನು ಮಾತ್ರ ಬೀಜ ರೀತಿಯಲ್ಲಿ ಸ್ವೀಕರಿಸಿ, ಸಸಿಯನ್ನು ವೃದ್ಧಿ ಮಾಡುತ್ತಾರೆ. ಕಸಿ ಮತ್ತು ಕಟಿಂಗ್ ಮೂಲಕ ಸಸ್ಯಾಭಿವೃದ್ಧಿ ಮಾಡಬಹುದಾದರೂ ಅವು ದುರ್ಬಲವಾಗಿದ್ದು ಗಿಡ ಬೆಳೆಯಲು ಅಷ್ಟು ಉಪಯುಕ್ತವಲ್ಲ. ಸಸಿಗಳನ್ನು ಬೆಳೆಸಲು ಉದ್ದೇಶಿತ ಜಾಗದಲ್ಲಿ ನಾಲ್ಕೈದು ಬೀಜಗಳನ್ನು ನೆಟ್ಟು ಅಲ್ಲಿಯೇ ಗಿಡ ಬೆಳೆಯುವಂತೆ ಮಾಡುವ ಪದ್ಧತಿ ದಕ್ಷಿಣ ಭಾರತದಲ್ಲಿ ರೂಢಿಯಲ್ಲಿದೆ. ತೋಟದ ಅಂಚಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬೆಳೆಸುವವರು ಈ ಪದ್ಧತಿಯನ್ನು ಅನುಸರಿಸುತ್ತಾರೆ. ಪ್ರತ್ಯೇಕವಾಗಿ ವಾಣಿಜ್ಯ ಬೆಳೆಯಾಗಿ ಮಾಡುವವರು. ಒಟ್ಟು ಪಾತಿಗಳಲ್ಲಿ ಸಸಿಗಳನ್ನು ಬೆಳೆಸಿಕೊಂಡು ಅನಂತರ ನೆಡುತ್ತಾರೆ.

ಬೇಸಗೆಯಲ್ಲಿ ಸಸಿಗಳನ್ನು ಪಾತಿಗಳಲ್ಲಿ ಬೆಳೆಸಿಕೊಂಡು 30-40 ದಿನಗಳ ಅನಂತರ ಸಿದ್ಧಪಡಿಸಿಕೊಂಡಿರುವ ಗುಂಡಿಗಳಲ್ಲಿ ನೆಟ್ಟು ಬೆಳೆಸುತ್ತಾರೆ.



**ನೆಡುವ ವಿಧಾನ :** ಗಿಡದಿಂದ ಗಿಡಕ್ಕೆ ಎಂಟು ಅಡಿ ಅಂತರವಿರುವಂತೆ 1½ ಅಡಿ ಅಗಲ, ಒಂದೂವರೆಯಿಂದ ಎರಡು ಅಡಿ ಆಳದ ಗುಂಡಿಯನ್ನು ತೋಡಿ ಅದರಲ್ಲಿ ಕೊಟ್ಟಿಗೆ ಗೊಬ್ಬರ ಹಸುರೆಲೆ ಗೊಬ್ಬರವನ್ನು ಒಂದು ಅಡಿಯವರೆಗೆ ತುಂಬಿ ಮೇಲೆ ನಾಲ್ಕು ಅಂಗುಲ ಮರಳನ್ನು ಸುರಿದು ಒಂದು ಗುಂಡಿಗೆ ಎರಡು ಸಸಿಗಳನ್ನು ನೆಡಬೇಕು. ಸಸಿಗಳು ಬಾಗದಂತೆ ಕಡ್ಡಿಯನ್ನು ಆಧಾರವಾಗಿ ಕೊಟ್ಟು ದಾರದಿಂದ ಕಟ್ಟಬೇಕು. ಸಸಿ ಚಿಗುರೊಡೆದು ಬೇರು ಬಿಡುವವರೆಗೆ ಸ್ವಲ್ಪ ನೆರಳನ್ನು ಕೊಡುವುದು ಒಳ್ಳೆಯದು. ಗಿಡ ಬೆಳೆಯುವವರೆಗೆ ಚೆನ್ನಾಗಿ ನೀರನ್ನು ಕೊಡಬೇಕು. ಗಂಡು ಸಸಿಗಳಿದ್ದರೆ ಪತ್ತೆ ಹಚ್ಚಿ ಕಿತ್ತು ಹಾಕಬೇಕು. ಪಪ್ಪಾಯಿಯಲ್ಲಿ ಗಂಡು ಮತ್ತು ಹೆಣ್ಣು ಜಾತಿಯ ಮರಗಳೂ ಇರುತ್ತವೆ. ಕೆಲವು ಮರಗಳು ದ್ವಿಲಿಂಗ ಹೂಗಳನ್ನು ಬಿಡುತ್ತವೆ.

ಪಪ್ಪಾಯಿ ಬರಡು ನೆಲ, ಖುಷ್ಕಿ ಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ಭಾರತ ಪಪ್ಪಾಯಿ ಬೆಳೆಗೆ ಯೋಗ್ಯವಾದ ಭೂಗುಣವನ್ನು ಹೊಂದಿದೆ. ನೀರು ಬಸಿದು ಹೋಗುವ ಕೆಂಪು ಮಣ್ಣು ಹಾಗೂ ಮರಳು ಮಿಶ್ರಿತ ಗೋಡು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಹಣ್ಣು

ಸಿಹಿಯಾಗಿರಬೇಕಾದರೆ ನೇರ ಬಿಸಿಲು ಬೀಳುವ ಜಾಗದಲ್ಲಿ ಬೆಳೆಯಬೇಕು. ನೆರಳಿನಲ್ಲಿ ಬೆಳೆದ ಹಣ್ಣು ಸಪ್ಪೆಯಾಗಿರುತ್ತದೆ. ಆದರೆ ಕರ್ನಾಟಕದ ಕೊಡಗಿನಲ್ಲಿ ಬೆಳೆದ ಹಣ್ಣು ಇದಕ್ಕೆ ಅಪವಾದ ಇಲ್ಲಿ ನೆರಳಿನಲ್ಲಿ ಬೆಳೆದ ಹಣ್ಣು ಸಹ ರುಚಿಯಾಗಿರುತ್ತದೆ. ಕಾರಣ ಮರದ ತುಂಬ ಎಲೆಗಳಿದ್ದರೂ ಸೂರ್ಯನ ಕಿರಣಗಳನ್ನು ಹೀರಿಕೊಂಡು ತಾಪವನ್ನು ನೀಡುತ್ತವೆ. ರಾಯಚೂರು, ಕೋಲಾರ, ಮೊದಲಾದ ಭಾಗಗಳಲ್ಲಿ ಎಲೆ ಕಡಿಮೆಯಿದ್ದರೂ ಬಿಸಿಲು ಹೆಚ್ಚಾಗಿರುವುದರಿಂದ ಹಣ್ಣು ರುಚಿಯಾಗಿರುತ್ತದೆ. ಪಪ್ಪಾಯಿಯನ್ನು ಸಾಮಾನ್ಯವಾಗಿ ತೋಟದ ಬದುಗಳಲ್ಲಿ ಬೆಳೆಯುವುದಾದರೂ ಇದು ಲಾಭದಾಯಕ ಬೆಳೆಯಾದುದರಿಂದ ಇತ್ತೀಚೆಗೆ ಪ್ರತ್ಯೇಕವಾಗಿ ತೋಟ ಮಾಡಿ ಬೆಳೆಯುತ್ತಿದ್ದಾರೆ. ಪರಂಗಿ ಹಣ್ಣುಗಳಲ್ಲಿ ಕೆಂಪು, ಗುಲಾಬಿ, ಕೆಂಪು ಕಡು ಹಳದಿ, ಕಿತ್ತಳೆ ಬಣ್ಣದ ತಿರುಳಿನಂತಿರುವ ಹಣ್ಣುಗಳು ಇವೆ. ಕೆಂಪು ಹಳದಿ ಹಣ್ಣುಗಳನ್ನು ಹಿತ್ತಲುಗಳಲ್ಲಿ, ಬೇಲಿ ಸಾಲುಗಳಲ್ಲಿ ಬೆಳೆಯುತ್ತಾರೆ. ಕೊಡಗಿನಲ್ಲಿ ಹನಿಡ್ಯೂ, ವಾಷಿಂಗ್‌ಟನ್, ಸೋಲೋ ತಳಿಗಳನ್ನು ಕೃಷಿ ಮಾಡುತ್ತಾರೆ.

ಪರಂಗಿಯಲ್ಲಿ ನಿರ್ದಿಷ್ಟವಾದ ಯಾವುದೇ ಜಾತಿಯನ್ನು ಅದರ ಗುಣ ವೈಶಿಷ್ಟ್ಯದಿಂದ ಹೇಳಲು ಸಾಧ್ಯವಿಲ್ಲ. ಹನಿಡ್ಯೂ, ವಾಷಿಂಗ್‌ಟನ್ ಮತ್ತು ಬೆಂಗಳೂರು ಪರಂಗಿ ಮುಖ್ಯವಾದ ಮೂರು ಜಾತಿಗಳನ್ನು ಗುರುತಿಸಿಕೊಂಡಿದ್ದಾರೆ. ಪರಂಗಿ ಹಣ್ಣಿನಲ್ಲಿ ಹೆಣ್ಣು ಹೂವು ಪರಕೀಯ ಪರಾಗವನ್ನು ಹೊಂದಿ ಕಾಯಿ ಬಿಡುವುದರಿಂದ ಹಾಗೂ ನಿಗದಿಯಾದ ಒಂದೇ ಜಾತಿಯ ಹಣ್ಣುಗಳು ಬಿಡುವುದರಿಂದ ನಿರ್ದಿಷ್ಟ ಜಾತಿಯನ್ನು ಗುರುತಿಸಲು ಆಗಿಲ್ಲ.

**ಹನಿಡ್ಯೂ ಜಾತಿ :** ಹಣ್ಣುಗಳು ಗುಂಡಾಗಿರುತ್ತವೆ. ಕೊಕ್ಕು ಚಾಚಿ ಕೊಂಡು ಉಬ್ಬಿದಂತಿರುತ್ತದೆ. ಹಣ್ಣು ಕೆಂಪು ಮಿಶ್ರಿತ ಹಳದಿ ಬಣ್ಣದಿಂದ ಕೂಡಿರುತ್ತದೆ. ತುಂಬಾ ರುಚಿಯಾಗಿರುವ ಈ ಹಣ್ಣಿನ ತೂಕ ಸುಮಾರು 10-12 ಕೆ.ಜಿ.

**ವಾಷಿಂಗ್‌ಟನ್ ಜಾತಿ :** ಹಣ್ಣು ಗುಂಡಾಗಿದ್ದು ಸಾಧಾರಣ ಗಾತ್ರವಿರುತ್ತದೆ. ಹಳದಿ ಬಣ್ಣದಿಂದ ಕೂಡಿದ್ದು ಇದರ ತಿರುಳು ಕೇಸರಿ ಬಣ್ಣವನ್ನು ಹೊಂದಿರುತ್ತದೆ. ತೂಕ 3-4 ಕೆ.ಜಿ. ಬರಬಹುದು. ತಿನ್ನಲು ಸಿಹಿಯಾಗಿರುತ್ತದೆ.

**ಬೆಂಗಳೂರು ಜಾತಿ :** ಈ ಹಣ್ಣು ಹಳದಿ ಬಣ್ಣದ್ದಾಗಿದ್ದು ತಿರುಳು ಸಹ ಕೆಂಪು ಮಿಶ್ರಿತ ಹಳದಿ. ಹಣ್ಣು ಉದ್ದವಾಗಿದ್ದು ಸುತ್ತಲೂ ಹಳ್ಳ ದಿನ್ನೆಗಳನ್ನು ಹೊಂದಿರುತ್ತದೆ. ಮೇಲ್ಭಾಗ ದಪ್ಪ. ಕೆಳಭಾಗ ಸಣ್ಣ. 10-12 ಕೆ.ಜಿ. ತೂಕವಿರುತ್ತದೆ. ಹಣ್ಣು ತಿನ್ನಲು ತುಂಬಾ ರುಚಿ.

ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ಬೆಳೆಯಲು ಈ ಜಾತಿಗಳು ಯೋಗ್ಯವಾದವು. ಮರ ಒಳಗೆ ಟೊಳ್ಳಾಗಿರುವುದರಿಂದ ಜೋರಾಗಿ ಗಾಳಿ ಬೀಸಿದರೆ ಮುರಿದು ಬೀಳುತ್ತವೆ. ಆದುದರಿಂದ ಗಾಳಿ ತಡೆಗಾಗಿ ಇತರ ಮರಗಳನ್ನು ಅಥವಾ ಎತ್ತರವಾದ ಬೇಲಿಯನ್ನು ನಿರ್ಮಾಣ ಮಾಡಿಕೊಳ್ಳಬೇಕು. ಗಿಡಗಳಿಗೆ ಹದವಾಗಿ ನೀರನ್ನು ಕೊಡಬೇಕು. ಬುಡದಲ್ಲಿ ಸದಾ ನೀರು ನಿಲ್ಲಬಾರದು. ಬುಡದಿಂದ ಇಳಿಜಾರು ಮಾಡಿ ಹೆಚ್ಚಿನ ನೀರು ಜಾರಿ ಹೋಗುವಂತೆ ಮಾಡಬೇಕು. ಮಳೆಗಾಲದಲ್ಲಿ ಹೆಚ್ಚು ನೀರು ಬೇಕಿಲ್ಲ.

**ಗೊಬ್ಬರ :** ಪರಂಗಿ ಗಿಡಗಳು ನೆಲದಲ್ಲಿರುವ ಸತ್ವವನ್ನು ಚೆನ್ನಾಗಿ ಹೀರಿಕೊಳ್ಳುತ್ತವೆ. ಸಸಿಗಳನ್ನು ನೆಡುವಾಗ ಪಾತಿಯ ತುಂಬ ಚೆನ್ನಾಗಿ ಕೊಳೆತ ಯಾವುದೇ ಗೊಬ್ಬರವನ್ನು ಕೊಟ್ಟು ಮಣ್ಣು ಮುಚ್ಚಬೇಕು. ಮರ ಬೆಳೆದಂತೆಲ್ಲ ಹೆಚ್ಚು ಗೊಬ್ಬರವನ್ನು ಕೊಡುತ್ತಿರಬೇಕು. ಹೂ ಕಚ್ಚುವಾಗ ಸಾಕಷ್ಟು ಗೊಬ್ಬರವನ್ನು ಕೊಟ್ಟರೆ ಉತ್ತಮ ಇಳುವರಿಯನ್ನು ಕೊಡುತ್ತವೆ. ಇವುಗಳ ಜೀವಿತ ಅವಧಿ 10-12 ವರ್ಷವಾದರೂ ಇಳುವರಿ ಮಾತ್ರ 5-6 ವರ್ಷಗಳವರೆಗೆ ಚೆನ್ನಾಗಿಕೊಡುತ್ತವೆ. ಗಿಡಗಳನ್ನು ಪ್ರತ್ಯೇಕ ತೋಟದಂತೆ ಬೆಳೆಸುವಾಗ ಸಸಿಗಳು ದೊಡ್ಡದಾಗಿ ಚೆನ್ನಾಗಿ ನೆರಳು ಕಟ್ಟುವವರೆಗೆ, ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಟೊಮ್ಯಾಟೋ, ಮೆಣಸಿನ ಗಿಡ, ತಿಂಗಳ ಹುರುಳಿ, ಮತ್ತಿತರ ತರಕಾರಿ ಬೆಳೆಗಳಾದ, ಅಲಸಂದೆ, ಅವರೆ, ಗೋರಿಕಾಯಿ, ಮೂಲಂಗಿಸೊಪ್ಪು, ಬೇಲಿಯ ಸುತ್ತ ಹೀರೇ, ಹಾಗಲ, ಮೊದಲಾದ ಅಲ್ಪಾವಧಿಯ ಬೆಳೆಗಳನ್ನು ಮಾಡಿಕೊಳ್ಳಬಹುದು. ಆದರೆ ಪರಂಗಿ ಮರದ ಬೇರುಗಳು ಸ್ವಲ್ಪ ಮೇಲೆಯೇ ಇರುವುದರಿಂದ ಮತ್ತು ಅಷ್ಟೇನು ಗಟ್ಟಿಯಾಗಿಲ್ಲದಿರುವುದರಿಂದ ಉಳುಮೆ ಮಾಡುವಾಗ ಅಥವಾ ಅಗೆಯುವಾಗ ಬೇರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಹುಲ್ಲು ಕಸಕಡ್ಡಿ ಮತ್ತು ಬೇಡವಾದ ಗಿಡಗಳನ್ನು ಮಾತ್ರ ಸಸಿಗೆ ಗಾಯವಾಗದಂತೆ ಎಡಕೋಲು ಗುದ್ದಲಿಗಳಿಂದ ಅಗೆದು ತೆಗೆಯಬೇಕು.

**ಬೆಳವಣಿಗೆ :** ಸಸಿ ನೆಟ್ಟ ಮೇಲೆ ಗಿಡ 6-7 ತಿಂಗಳಲ್ಲಿ ಹೂ ಬಿಡಲು ಆರಂಭಿಸುತ್ತದೆ. ಬೇಗನೆ ಹೂ ಬಿಟ್ಟರೆ ಫಲ ಸರಿಯಾಗಿ ಬರುವುದಿಲ್ಲ. ಇಂಥ ಹೂವುಗಳನ್ನು ಕಿತ್ತು ಹಾಕುವುದು ಒಳ್ಳೆಯದು. ಅಂತೆಯೇ ಹೆಚ್ಚಾಗಿರುವ ಎಲೆಗಳನ್ನು ಕೊಳವೆಗಳನ್ನು ಐದಾರು ಅಂಗುಲ ಬಿಟ್ಟು ಕತ್ತರಿಸಿದರೆ, ಬೆಳೆಯುತ್ತಿರುವ ಗಿಡಕ್ಕೆ ಹೆಚ್ಚಿನ ಪೋಷಕಾಂಶ ಸಿಕ್ಕಿ ಕಾಂಡ ಬಲಷ್ಠವಾಗುತ್ತದೆ.

ಪರಂಗಿ ಗಿಡ ವರ್ಷ ಪೂರ ಫಸಲು ಕೊಡುತ್ತದೆ. ಬೇಸಗೆಯಲ್ಲಿ ಹೆಚ್ಚು ಇಳುವರಿಯನ್ನು ಕೊಡುತ್ತದೆ. ಕಾಯಿಗಳು ತಳದಿಂದ ಬಲಿಯುತ್ತಾ ಹೋಗುತ್ತವೆ. ಕಾಯಿಗಳ ಮೇಲೆ ಹಳದಿ ಬಣ್ಣದ ಪಟ್ಟೆಗಳು ಕಾಣಿಸಿಕೊಂಡಾಗ ಬಲಿತಿದೆ ಎಂದು ತಿಳಿಯಬೇಕು. ಕಾಯಿಗಳು ಗಿಡದ ತುಂಬ ಇದ್ದು ಸಣ್ಣಕ್ಕಿದ್ದರೆ ಮಧ್ಯೆ ಮಧ್ಯೆ ಕೆಲವು ಸಣ್ಣ ಗಾತ್ರದ ಕಾಯಿಗಳನ್ನು ಕಿತ್ತರೆ ಉಳಿದ ಕಾಯಿಗಳು ದೊಡ್ಡದಾಗಲು ಅನುಕೂಲವಾಗುತ್ತದೆ. ಒಂದು ಎಕರೆಯಲ್ಲಿ ಸುಮಾರು 10-12 ಗಾಡಿಯಷ್ಟು ಹಣ್ಣುಗಳನ್ನು ಪಡೆಯಬಹುದು. ತುಂಬಾ ಎತ್ತರವಾಗಿ ಬೆಳೆದಾಗ ಗಿಡಗಳ ಮೇಲ್ಭಾಗವನ್ನು ಕತ್ತರಿಸಿ ಅದು ಕೊಳೆತು ಹೋಗದಂತೆ ಮಡಕೆ ಅಥವಾ ಬಟ್ಟೆ ಮುಚ್ಚಿ ಗಿಡಕ್ಕೆ ನೀರು ಕೊಡುತ್ತಿದ್ದರೆ ಕಾಂಡದ ಸುತ್ತ ಇರುವ ಕಣ್ಣುಗಳಿಂದ ಚಿಗುರೊಡೆದು ರೆಂಬೆಗಳು ಮೂಡುತ್ತವೆ. ಅವುಗಳಲ್ಲಿ ಎರಡು ರೆಂಬೆಗಳನ್ನು ಉಳಿಸಿಕೊಂಡು ಉಳಿದವನ್ನು ಕತ್ತರಿಸಿದರೆ ರೆಂಬೆಗಳಲ್ಲಿ ಕೆಳಮಟ್ಟದಲ್ಲಿಯೇ ಕಾಯಿಗಳು ಸಿಗುತ್ತವೆ.

**ಉಪಯೋಗ :** ಪರಂಗಿಹಣ್ಣು ಹೆಚ್ಚು ಆರೋಗ್ಯಕರ ಗುಣಗಳನ್ನು ಹೊಂದಿದೆ. ಮಲೇರಿಯ ಜ್ವರದ ಗಡ್ಡೆಯಿರುವವರು, ಹಣ್ಣನ್ನು ಉಪಯೋಗಿಸಿದರೆ ಜ್ವರದ ಗೆಡ್ಡೆ ಕ್ರಮೇಣ ಕರಗಿ ಹೋಗುತ್ತದೆ.

ಕಾಯಿಯಿಂದ ವಿವಿಧ ರೀತಿಯ ಕೂಟು ಮತ್ತು ಪಲ್ಯ ಮಾಡುತ್ತಾರೆ. ಕೆಲವರು ತರಕಾರಿಯಂತೆ ಸಾರಿಗೂ ಬಳಸುತ್ತಾರೆ. ಇದರಲ್ಲಿ ಹಾಲಿನ

ಅಂಶವಿರುವುದರಿಂದ ಈ ಹಾಲನ್ನು ವಿವಿಧ ಔಷಧಿಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಬಟ್ಟೆಗಳ ಮೇಲೆ ಕರೆಗಳಿದ್ದರೆ ಪರಂಗಿಹಾಲನ್ನು ನೀರಿನಲ್ಲಿ ಸೇರಿಸಿ ತೊಳೆಯುತ್ತಾರೆ.

ಪರಂಗಿಗೆ ಹೆಚ್ಚಿನ ರೋಗ ರುಜಿನಗಳ ಕಾಟವಿಲ್ಲ. ಆದರೆ ಹೆಚ್ಚು ನೀರು ಕೊಟ್ಟರೆ ಕೊಳೆತು ಹೋಗುತ್ತದೆ. ಕಡಿಮೆ ನೀರು ಕೊಟ್ಟರೆ ಇಳುವರಿ ಕಡಿಮೆಯಾಗುತ್ತದೆ. ತುಂಬಾ ನೀರಿನ ಕೊರತೆಯಾದರೆ ಸತ್ತು ಹೋಗುತ್ತದೆ. ಚಳಿಗಾಲದಲ್ಲಿ ಬೂದಿಯಂಥ ಬೂಸ್ಟ್ ಹಣ್ಣಿನ ಮೇಲೆ ಬೆಳೆಯುವ ಸಂಭವವುಂಟು. ಅಂಥ ಮರಗಳಿಗೆ ಸೀಮೆ ಎಣ್ಣೆ ಬೂದಿ ಸಿಂಪಡಿಸಿದರೆ ಗುಣವಾಗುತ್ತದೆ.

*ವಿ.ಆರ್.ಬಿ.*

**ಪರುತ್ತಿ (ಹತ್ತಿ)** ಆಹಾರ, ಉಡುಪು, ನಿದ್ರೆ ಈ ಮೂರು ಮಾನವನ ಜೀವನದ ಮೂಲ ಭೂತ ಆವಶ್ಯಕತೆಗಳು. ಇವುಗಳಿಲ್ಲದೆ ಅವನು ಬದುಕಲು ಸಾಧ್ಯವಿಲ್ಲ. ಆಹಾರ ಇಂದು ಪರಿಪೂರ್ಣತೆಯನ್ನು ಪಡೆದುಕೊಂಡಿದೆ.

**ಹತ್ತಿಯ ವಿವರ :** ಪ್ರಪಂಚಾದ್ಯಂತ 70 ದೇಶಗಳಲ್ಲಿ 10 ಕೋಟಿ ಎಕರೆಯ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯಲಾಗುತ್ತದೆ. ಸು. 10 ರಿಂದ 12 ಕೋಟಿ ಬೇಲು ಹತ್ತಿಯು ಉತ್ಪತ್ತಿಯಾಗುತ್ತದೆ. ಹತ್ತಿಯನ್ನು ಹೆಚ್ಚಾಗಿ ಬೆಳೆಯುವ ದೇಶಗಳು 1. ಭಾರತ, 2. ಪಾಕಿಸ್ತಾನ, 3. ಚೀನಾ, 4. ಉಜ್ಬೆಕಿಸ್ತಾನ, 5. ಅಮೆರಿಕ.

**ಭಾರತ :** ಭಾರತದಲ್ಲಿ ಸು. 2,10,000 ಎಕರೆ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯಲಾಗುತ್ತದೆ. ಹತ್ತಿಗೆ ಸಂಬಂಧಿಸಿದ ಕಸುಬಿನಲ್ಲಿ ಸಾಕಷ್ಟು ಕುಟುಂಬಗಳು ತೊಡಗಿವೆ. ಹತ್ತಿಯ ಉತ್ಪತ್ತಿಯಿಂದ ಹಿಡಿದು ಅದು ಬಟ್ಟೆಯಾಗಿ ಅಂಗಡಿಗಳಿಗೆ ಬಂದು ವ್ಯಾಪಾರ ನಡೆಸುವವರೆಗೂ ಸಾಕಷ್ಟು ಜನರು ಉದ್ಯೋಗದ ಅವಕಾಶಗಳನ್ನು ಪಡೆದಿದ್ದಾರೆ. ಭಾರತದಲ್ಲಿ ಹತ್ತಿಯನ್ನು ನೀರಾವರಿ ಮತ್ತು ಖುಷ್ಕಿ (ಶುಷ್ಕ) ಭೂಮಿ ಎರಡರಲ್ಲೂ ಬೆಳೆಯುತ್ತಾರೆ.

**ತಮಿಳುನಾಡಿನ ಹತ್ತಿ :** ತಮಿಳುನಾಡಿನಲ್ಲಿ ಸು. ನಾಲ್ಕೂವರೆ ಲಕ್ಷ ಎಕರೆ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಸುತ್ತಾರೆ. ಭಾರತದ ಒಟ್ಟು ಹತ್ತಿ ಬೆಳೆಯಲ್ಲಿ ತಮಿಳುನಾಡಿನ ಪಾಲು ಶೇ. 2. ವರ್ಷದಿಂದ ವರ್ಷಕ್ಕೆ ಹತ್ತಿ ಬೆಳೆಯುವ ಪ್ರಮಾಣ ಕಡಿಮೆಯಾಗುತ್ತಾ ಬರುತ್ತಿದೆ. ಹತ್ತಿಗೆ ಬರುವ ರೋಗಗಳು ಹೆಚ್ಚು. ಇದರಿಂದ ವರ್ಷದಿಂದ ವರ್ಷಕ್ಕೆ ಉತ್ಪತ್ತಿ ಕಡಿಮೆಯಾಗುತ್ತದೆ. ತಮಿಳುನಾಡಿನಲ್ಲಿ ಸಿಗುವ ಹತ್ತಿಯ ಪ್ರಮಾಣ 5 ಲಕ್ಷ ಬೇಲುಗಳು. ಆದರೆ ತಮಿಳುನಾಡಿನಲ್ಲಿ ಸಾಕಷ್ಟು ಹತ್ತಿ ಗಿರಣಿಗಳು ಇಲ್ಲ. ಭಾರತದಲ್ಲಿ ಒಟ್ಟು ಹತ್ತಿ ಗಿರಣಿಗಳಲ್ಲಿ ಶೇ. 40 ರಷ್ಟು ತಮಿಳು ನಾಡಿನಲ್ಲಿ ಇದೆ. ತಮಿಳುನಾಡಿನ ಆವಶ್ಯಕತೆಗೆ ಬೇಕಾದ ಹತ್ತಿಯ ಪ್ರಮಾಣ 45 ಲಕ್ಷ ಉತ್ಪತ್ತಿ ಮಾತ್ರ 5 ಲಕ್ಷ ಬೇಲು ಮಾತ್ರ ಆದ್ದರಿಂದ ಉಳಿದ 40 ಲಕ್ಷ ಬೇಲನ್ನು ಬೇರೆ ರಾಜ್ಯಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಇದನ್ನು ನೋಡಿದರೆ ಹತ್ತಿಗೆ ಒಳ್ಳೆಯ ಬೆಲೆ ಇದೆ ಎನಿಸಿದರೂ ಕೆಲವು ಸಂದರ್ಭಗಳಲ್ಲಿ ಒಳ್ಳೆಯ ದರ ಸಿಗುವುದೇ ಇಲ್ಲ.

ಯೋಗ್ಯ ಸಮಯದಲ್ಲಿ ಬೀಜ ಬಿತ್ತಿ ಆವಶ್ಯಕ ಕ್ರಮಗಳನ್ನು ಕೈಗೊಂಡರೆ ಉತ್ತಮ ಬೆಳೆಯನ್ನು ಪಡೆಯಬಹುದು. ಸಾಮಾನ್ಯವಾಗಿ ಆಷಾಢ ಮಾಸದಲ್ಲಿ ಬಿತ್ತನೆ ಮಾಡುತ್ತಾರೆ. ಈಶಾನ್ಯ ಮಾರುತಗಳಿಂದ ಬೀಳುವ ಮಳೆಯ ಕಾಲದಲ್ಲಿ ಹತ್ತಿ ಒಡೆಯಲು ಪ್ರಾರಂಭವಾಗುತ್ತದೆ. ಎಲೆಗಳು ಹೆಚ್ಚಾಗಿ ಇದ್ದಾಗ ಸರಿಯಾಗಿ ಹತ್ತಿ ಒಡೆಯುವುದಿಲ್ಲ. ಕಾಯಿಗಳು ಕೊಳೆತು ಕೆಳಗೆ ಬೀಳುತ್ತವೆ. ಕೆಲವು ತಿಂಗಳಿನಲ್ಲಿ ಕ್ರಿಮಿಕೀಟಗಳ ಬಾಧೆಯು ಅಧಿಕವಾಗಿರುತ್ತದೆ. ಈ ಬೆಳೆಗೆ ಬಿಸಿಲು ಹೆಚ್ಚಿರಬೇಕು. ಬಿಸಿಲು ಚೆನ್ನಾಗಿ ಬೀಳಬೇಕೆಂದು ಎಲೆಗಳನ್ನು ಕಿತ್ತು ದನಗಳಿಗೆ ಮೇವಾಗಿ ಹಾಕುತ್ತಾರೆ.

ಹತ್ತಿ ಬೆಳೆಯುವಾಗ ಮೈಯೆಲ್ಲ ಕಣ್ಣಾಗಿದ್ದರೆ ಮಾತ್ರ ಲಾಭ ಪಡೆಯಲು ಸಾಧ್ಯ. ಕೊಯಮತ್ತೂರು ಜಿಲ್ಲೆಯ ಭಾಗಗಳಲ್ಲಿ ವ್ಯವಸಾಯ ಕಡಿಮೆಯಾಗುತ್ತಾ ಬರುತ್ತಿದೆ. ಕೃಷಿಗೆ ತಗಲುವ ಖರ್ಚುಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಬೇಕು. ರಾಸಾಯನಿಕ ಗೊಬ್ಬರಕ್ಕೆ ಬದಲಾಗಿ ಕೊಟ್ಟಿಗೆ ಗೊಬ್ಬರವನ್ನು ಹೆಚ್ಚು ಬಳಸಬೇಕು ಇದಿರಂದ ನಷ್ಟ ಆಗುವುದಿಲ್ಲ.

**ಹತ್ತಿ ಬೆಳೆಸುವ ಕ್ರಮ :** ಮೊದಮೊದಲು ರಾಗಿ ಹೊಲದಲ್ಲಿ ಮಿಶ್ರ ಬೆಳೆಯಾಗಿ ಹತ್ತಿಯನ್ನು ಬೆಳೆಸುತ್ತಿದ್ದರು. ರಾಗಿ ಬೆಳೆಸಲು ಕೊಟ್ಟಿಗೆ ಗೊಬ್ಬರವನ್ನೇ ಹಾಕುತ್ತಿದ್ದರು. ಇದರಿಂದ ರಾಗಿ ಬೆಳೆದ ಹೊಲದಲ್ಲಿ ಹತ್ತಿ ಚೆನ್ನಾಗಿ ಬೆಳೆಯುತ್ತಿತ್ತು. ಇಂದು ರಾಗಿ ಬೆಳೆಸುವುದು ಕಡಿಮೆಯಾಗಿದೆ. ಬತ್ತ ಬೆಳೆದ ಗದ್ದೆಯಲ್ಲೂ ಹತ್ತಿ ಚೆನ್ನಾಗಿ ಬರುವುದು. ಆದರೆ ಯೋಗ್ಯ ನೀರಾವರಿ ಇಲ್ಲದ ಕಡೆಗಳಲ್ಲಿ ಬತ್ತವನ್ನು ಬೆಳೆಸುವುದಕ್ಕೆ ಆಗುವುದಿಲ್ಲ. ಹತ್ತಿ ಹಾಕಿದ ನೆಲದಲ್ಲೇ ಮತ್ತೆ ಮತ್ತೆ ಹತ್ತಿಯನ್ನು ಬೆಳೆಸಬಾರದು. ಹತ್ತಿ ಬೆಳೆಯುವವರಿಗೆ ಸರ್ಕಾರ ಸಹಾಯ ಇಲ್ಲವೇ ಪ್ರೋತ್ಸಾಹ ಧನ ಕೊಡಬೇಕು. ಅಮೆರಿಕದಂತಹ ದೇಶಗಳು ಹತ್ತಿ ಬೆಳೆಯುವವರಿಗೆ ಸಹಾಯ ಧನ ಕೊಡುತ್ತವೆ. ಸಹಾಯಧನ ಸಿಕ್ಕರೆ ರೈತರಲ್ಲಿ ಹತ್ತಿ ಬೆಳೆಯಬೇಕೆಂಬ ಉತ್ಸಾಹ ಚಿಗುರೊಡೆಯುವುದು. ಹತ್ತಿಯಲ್ಲಿಯ ವಿಧಗಳು ಮತ್ತು ಅದಕ್ಕೆ ತಕ್ಕ ಕಾಲ ತಿಳಿದುಕೊಂಡು ನಾಟಿ ಮಾಡಬೇಕು.

**ಭಾದ್ರಪದ ಮಾಸ :** ಹತ್ತಿ ಬೆಳೆಯಲು ಯೋಗ್ಯ ಕಾಲ. ಈ ಅವಧಿಯಲ್ಲಿ ಎರಡು ರೀತಿಯ ಭೂಮಿಯಲ್ಲಿ ಹತ್ತಿ ಬೆಳೆಯುವರು.

1. ನೀರಾವರಿ 2. ಖುಷ್ಕಿ ಭೂಮಿಯಲ್ಲಿ ಹತ್ತಿ ಬೆಳೆಯುವುದು.

ನೀರಾವರಿಯಲ್ಲಿ ಬೆಳೆಯುವ ಹತ್ತಿಯ ವಿಧಗಳು. 1. ಎಲ್.ಆರ್.ಎ.-5166, 2. ಎಂ.ಸಿ.ಯು-5, 3. ಎಂ.ಸಿ.ಯು-9, 4. ಸುವಿನ್, 5. ವರಲಕ್ಷ್ಮಿ.

ಖುಷ್ಕಿ (ಮಳೆಆಶ್ರಿತ) ಭೂಮಿಯಲ್ಲಿ ಬೆಳೆಯುವ ಹತ್ತಿಯ ವಿಧಗಳು. 1. ಎಲ್.ಆರ್.ಎ.-5166, 2. ಎಂ.ಸಿ.ಯು.-5, 3. ಕೆ.-10 4. ಕೆ.-11,

ಬೇಸಗೆಯಲ್ಲಿ ಬೆಳೆ ಬೆಳೆಯುವಾಗ ಈ ತಳಿಯನ್ನು ಕೃಷಿಮಾಡಬಹುದು. ತಂಜಾವೂರಿನಲ್ಲಿ ಬತ್ತದ ಕೊಯ್ಲು ಮುಗಿದ ಅನಂತರ ಬಾವಿ ನೀರಾವರಿಯಲ್ಲಿ ಮಾಡಬಹುದು. ಬೇಸಗೆಗೆ ಯೋಗ್ಯವಾದ ವಿಧಗಳು : ಎಲ್.ಆರ್.ಎ.-5166, ಎಂ.ಸಿ.ಯು.-5, ಎಂ.ಸಿ.ಯು.-7, ಎಂ.ಸಿ.ಯು.-9, ಎಸ್.ವಿ.ಪಿ.ಆರ್.-2 ಇವುಗಳಲ್ಲದೆ ಹಲವು ಖಾಸಗಿ

ಇಲಾಖೆಗಳು ಬಲಿಷ್ಠವಾದ ಅಂಗಾಂಶ ಕಸಿ ವಿಧಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತಿದ್ದಾರೆ. ಅವುಗಳ ಬಗ್ಗೆ ರೈತರು ತಿಳಿದು ಹತ್ತಿ ಬೇಸಾಯವನ್ನು ಮಾಡಬೇಕು.

**ಮಣ್ಣು :** ಕಪ್ಪು ಮಣ್ಣಿನ ನೆಲದಲ್ಲಿ ಹತ್ತಿ ಚೆನ್ನಾಗಿ ಬರುವುದು. ಮಳೆ ಬಿದ್ದರೆ ಹೊಲದಲ್ಲಿ ಬಿತ್ತನೆ ಮಾಡುವರು. ಕಪ್ಪು ಮಣ್ಣು ಅಥವಾ ಮೆಕ್ಕಲು ಮಣ್ಣಿಗೆ ನೀರನ್ನು ಹೀರಿಕೊಳ್ಳುವ ಸಾಮರ್ಥ್ಯ ಇದೆ. ಆದ್ದರಿಂದ ಮಳೆಗಾಲದಲ್ಲಿ ಹತ್ತಿ ಚೆನ್ನಾಗಿ ಬೆಳೆಯುವುದು. ಕಾಲ ಕಾಲಕ್ಕೆ ತಕ್ಕಂತೆ ಕಳೆಯನ್ನು ತೆಗೆಯಬೇಕು. ಜನವರಿ ತಿಂಗಳ ಮೊದಲಲ್ಲಿ ಹತ್ತಿ ಬಿಡುವುದಕ್ಕೆ ಪ್ರಾರಂಭವಾಗುತ್ತದೆ. ಖರ್ಚಿಲ್ಲದೆ ಎಕರೆಗೆ 5 ರಿಂದ 7 ಕ್ವಿಂಟಾಲ್‌ವರೆಗೆ ಹತ್ತಿ ಸಿಗುವುದು. ಹತ್ತಿ ಗಿಡದಲ್ಲಿ ಒಡೆದು ವೈಶಾಖ ತಿಂಗಳ ಬಿಸಿಲಿನಲ್ಲಿ ಒಣಗಿಬಾಗುವುದು. ಒಳ್ಳೆಯ ಕಾಲುವೆ ನೀರಾವರಿ ಇರುವ ಕೆಂಪು ಮಣ್ಣು ಇತರೆ ಕಡಿಮೆ ಸಾರವುಳ್ಳ ಎಲ್ಲಾ ಮಣ್ಣಿನಲ್ಲೂ ಹತ್ತಿಯನ್ನು ಬೆಳೆಯಬಹುದು. ಫಲವತ್ತಾದ ತೋಟದಲ್ಲಿ ಕಾಲುವೆ ನೀರಾವರಿಯಿಂದ ಚೆನ್ನಾಗಿ ಬೆಳೆಯಬಹುದು. ಮೆಕ್ಕಲು ಮಣ್ಣು ಇದಕ್ಕೆ ಯೋಗ್ಯವಾದದ್ದು.

**ಮಣ್ಣು ಹದಗೊಳಿಸುವುದು :** ಹತ್ತಿ ಬೆಳೆಯಲು ನೆಲವನ್ನು ಚೆನ್ನಾಗಿ ಉಳಬೇಕು. ಕೊಳೆತ ಕೊಟ್ಟಿಗೆ ಗೊಬ್ಬರವನ್ನು ಎಕರೆಗೆ 30 ಗಾಡಿಗೆ ಕಡಿಮೆಯಾಗದಂತೆ ಹಾಕಬೇಕು. ಅಲ್ಲದೆ ಕಾಂಪೋಸ್ಟ್ ಗೊಬ್ಬರವನ್ನು ಹಾಕಬಹುದು. ಆದರೆ ಗೊಬ್ಬರ ಚೆನ್ನಾಗಿ ಕೊಳೆತಿರಬೇಕು. ಅಲ್ಲದೆ ಮಣ್ಣಿನ ಹೆಂಟೆಗಳು ಹುಡಿಯಾಗುವಂತೆ ಮಾಡಬೇಕು. ಕೊನೆಯ ಉಳುಮೆಯಲ್ಲಿ, ಎಕರೆಗೆ 100 ಕಿಲೋ. ಸೂಪರ್‌ಪಾಸ್ಪೇಟ್, 50 ಕಿಲೋ ಪೊಟಾಶ್ ಹಾಕಿ ಹಗುರವಾಗಿ ಉಳುಮೆ ಮಾಡಬೇಕು. ಗೊಬ್ಬರವನ್ನು ಚೆನ್ನಾಗಿ ಮಣ್ಣಿನೊಡನೆ ಬೆರೆಯುವಂತೆ ನೋಡಿಕೊಳ್ಳಬೇಕು. ಸರಿಯಾಗಿ ಬೆರೆತಿಲ್ಲವೆಂದರೆ ಮತ್ತೊಮ್ಮೆ ಉಳುವುದು ಒಳ್ಳೆಯದು.

**ಅಂತರ :** ಮಣ್ಣು ಫಲವತ್ತತೆಯಿಂದ ಕೂಡಿದ್ದರೆ, ಸಾಲಿನಿಂದ ಸಾಲಿಗೆ 4 ಅಡಿ, ಗಿಡದಿಂದ ಗಿಡಕ್ಕೆ ಎರಡು ಅಡಿಅಂತರ ಇರುವಂತೆ ನೋಡಿಕೊಳ್ಳಬೇಕು. ಮಣ್ಣಿನ ಫಲವತ್ತತೆ ಕಡಿಮೆ ಇದ್ದರೆ ಸಾಲಿನಿಂದ ಸಾಲಿಗೆ 2ಯಿಂದ 3 ಅಡಿ, ಗಿಡದಿಂದ ಒಂದು ರಿಂದ ಎರಡು ಅಡಿ ಅಂತರ ಬಿಡಬೇಕಾಗುತ್ತದೆ. ಈ ಅಂತರವನ್ನು ಭೂಮಿಗೆ ಅನುಸಾರವಾಗಿ ಬಿಡಬೇಕು. ಅಲ್ಲದೆ ವ್ಯವಸಾಯದ ರೀತಿಯನ್ನು ಅನುಸರಿಸಿ ಅಂತರವನ್ನು ನಿರ್ಧರಿಸಬಹುದು. ಖುಷ್ಕಿ ಭೂಮಿಯಾದರೆ ಅಂತರವನ್ನು ಕಡಿಮೆ ಮಾಡಿಕೊಳ್ಳಬಹುದು. ಮಳೆ ಸರಿಯಾಗಿ ಇಲ್ಲದಿದ್ದರೆ ಕೆಲವು ಗಿಡಗಳು ಸತ್ತು ಹೋಗಬಹುದು. ಆದ್ದರಿಂದ ಒತ್ತೊತ್ತಾಗಿ ನಾಟಿ ಮಾಡಬೇಕು. ಮಳೆ ಸರಿಯಾದ ಸಮಯಕ್ಕೆ ಬಂದು ಗಿಡ ಚೆನ್ನಾಗಿ ಬೆಳೆದರೆ ಆವಶ್ಯಕತೆಗೆ ತಕ್ಕಂತೆ ಅಂತರ ಬಿಟ್ಟು ಒತ್ತೊತ್ತಾಗಿರುವ ಗಿಡಗಳನ್ನು ತೆಗೆದು ಹಾಕಬಹುದು. ಬಹುಪಾಲು ಗಿಡಗಳನ್ನು ಕಿತ್ತು ಹಾಕುವ ಸನ್ನಿವೇಶ ಬರುವುದಿಲ್ಲ. ಮಳೆಯೇ ಸರಿಯಾಗಿ ಬರುವುದಿಲ್ಲವಾದ್ದರಿಂದ ಸದೃಢವಾದ ಆರೋಗ್ಯವಂತ ಗಿಡಗಳಿಂದ ಬಿತ್ತನೆ ಬೀಜಗಳನ್ನು ಸಂಗ್ರಹಿಸಿ ಕೃಷಿ ಮಾಡುವುದು ಒಳ್ಳೆಯದು. ಹತ್ತಿ ಗಿಡ ಹುರುಳಿಯಂತೆ ಮಳೆ ಇಲ್ಲದಿದ್ದರೂ ಬೆಳೆಯಬಲ್ಲದು.

1 ಕಿಲೋ ಬೀಜಕ್ಕೆ 100 ಮಿಲಿ ಗಂಧಕಾಮ್ಲವನ್ನು ನೀರಿನಲ್ಲಿ ಬೆರೆಸಿ ಒಂದು ಪ್ಲಾಸ್ಟಿಕ್ ಬಕೆಟ್‌ನಲ್ಲಿ ಇಟ್ಟುಕೊಳ್ಳಬೇಕು. ಹತ್ತಿ ಬೀಜಗಳನ್ನು ಆ ದ್ರಾವಣದಲ್ಲಿ ಹಾಕಿ 2, 3 ನಿಮಿಷದವರೆಗೆ ತಿರುಗಿಸಬೇಕು. ಹಾಗೇ ಮಾಡುವುದರಿಂದ ಬೀಜದ ಮೇಲೆ ಉಳಿದುಕೊಂಡಿರುವ ಅಲ್ಪ ಸ್ವಲ್ಪ ಹತ್ತಿಯೂ ನಾಶವಾಗಬಹುದು. ಈ ಪ್ರಕ್ರಿಯೆಯೆ ಅನಂತರ ಬೀಜಗಳನ್ನು ಒಳ್ಳೆಯ ನೀರಿನಲ್ಲಿ 3, 4 ಸಲ ಚೆನ್ನಾಗಿ ತೊಳೆಯಬೇಕು. ಹೀಗೆ ತೊಳೆಯುವಾಗ ನಕಲಿ ಬೀಜಗಳು ನೀರಿನ ಮೇಲೆ ತೇಲುತ್ತವೆ. ಆಗ ಅವುಗಳನ್ನು ಬೇರ್ಪಡಿಸಬೇಕು. ಹತ್ತಿ ಬೀಜದಲ್ಲಿ ಉಳಿದಿರುವ ಅಲ್ಪ ಸ್ವಲ್ಪ ಹತ್ತಿಯಲ್ಲಿಯೇ ಕೆಂಪು ಕಾಯಿ ಹುಳುವಿನ ಸಂತತಿ, ಜೀವಿಸುತ್ತದೆ. ಹೀಗೆ ಬೀಜದ ಮೇಲಿನ ಹತ್ತಿಯನ್ನು ನಿವಾರಿಸಿದರೆ ಹುಳುಗಳ ಕಾಟ ಅನಂತರದ ಕಾಲದಲ್ಲಿ ಬಹು ಕಡಿಮೆಯಾಗಿ ಬಿಡುವುದು. ಬೀಜ ಚೆನ್ನಾಗಿ ಮೊಳಕೆ ಒಡೆಯುವುದು. ತೇವಾಂಶವಿರುವ ಮಣ್ಣಿನಲ್ಲಿ ಬೀಜವನ್ನು ನಾಟಿ ಮಾಡಿದ ಮೇಲೆ ಮೊಳಕೆ ಬರದೆ ಹೋದರೆ ಅದೇ ಗುಳಿಯಲ್ಲಿ ಮತ್ತೊಂದು ಬೀಜವನ್ನು ನಾಟಿ ಮಾಡಬೇಕು.

**ಬೀಜದ ಹದ :** ಬೀಜವನ್ನು ಸರಿಯಾದ ರೀತಿಯಲ್ಲಿ ಹದ ಮಾಡುವುದು ಬಹು ಅಗತ್ಯ. ಕೆಲವು ಕಾಯಿ ಹುಳುಗಳು ಬೀಜಗಳಿಂದ ಹರಡುತ್ತವೆ. ರಾಸಾಯನಿಕಗಳಿಂದ ಬೀಜದ ಮೇಲಿನ ಹತ್ತಿಯನ್ನು ನಿವಾರಿಸಿದ ಮೇಲೆ ನೆರಳಿನಲ್ಲಿ ಒಣಗಲು ಬಿಡಬೇಕು. ಆ ರೀತಿ ಒಣಗಿದ ಬೀಜಗಳನ್ನು ಬಿಳಿ ಮೊಟ್ಟೆಗಳಿಂದ ಕಾಪಾಡಬೇಕು. ಅದಕ್ಕೆ ಪಾವಿಸ್ಟಿನ್ ಔಷಧಿಯನ್ನು 1 ಲೀಟರ್ ನೀರಿಗೆ 2 ಗ್ರಾಂ ಪ್ರಮಾಣದಲ್ಲಿ ಬೆರೆಸಿ, ಬೀಜಗಳನ್ನು ಅದರಲ್ಲಿ ಹಾಕಿ ಒಂದು ದಿನ ಹಾಗೆಯೇ ಇಟ್ಟು ಅನಂತರ ಬಿತ್ತಬೇಕು.

ಬಹುಪಾಲು ರೈತರು ಸೂಕ್ಷ್ಮ ರಾಸಾಯನಿಕಗಳನ್ನು ಬೀಜಗಳಿಗೆ ಹಾಕುವುದಿಲ್ಲ. ಒಳ್ಳೆಯ ಬೆಳೆ ತೆಗೆಯಲು ಸೂಕ್ಷ್ಮ ರಾಸಾಯನಿಕಗಳು ಅತ್ಯಂತ ಆವಶ್ಯಕ. ಇದಕ್ಕೆ ಅಶೋಕ್ ಪೈರು ಇಲಾಖೆಯವರು ನೀಡುವ ಸೂಕ್ಷ್ಮ ರಾಸಾಯನಿಕಗಳನ್ನು ಮಿಶ್ರಣವಾಗಿ ಬಳಸಬೇಕು. ಬೀಜದ ಮೇಲಿನ ಹತ್ತಿಯನ್ನು ನಿವಾರಿಸಿದ 24 ಗಂಟೆಗಳು ಆದ ಮೇಲೆ 200 ಗ್ರಾಂ. ರಾಸಾಯನಿಕ ದ್ರವಗಳನ್ನು ಬೀಜದೊಡನೆ ಬೆರೆಸಿ ಸುಮಾರು ಅರ್ಧ ಗಂಟೆ ನೆರಳಿನಲ್ಲಿ ಒಣಗಿಸಿ ತದನಂತರ ನಾಟಿ ಮಾಡಬೇಕು.

**ನಾಟಿ :** ಸಡಿಲಗೊಂಡ ನೆಲವನ್ನು ಸಲಕರಣೆಗಳಿಂದ ಕೆತ್ತಿ ಬೀಜಗಳನ್ನು ನೆಟ್ಟು ತೆಳುವಾಗಿ ನೀರು ಹಾಯಿಸಬೇಕು. ಈ ವಿಧಾನದಲ್ಲಿ ಸಮಸ್ಯೆ ಇದೆ. ನೀರು ಹಾಯಿಸಿ ಮಣ್ಣು ಗಟ್ಟಿಯಾದರೆ ಇಲ್ಲವೇ ಬೀಜ ಆಳಕ್ಕೆ ಹೋಗಿದ್ದರೆ ಮೊಳಕೆ ನಿಧಾನವಾಗಿ ಬರುತ್ತದೆ. ಇದನ್ನು ತಡೆಯಲು ನೀರು ಹಾಯಿಸಿದ ಮೇಲೆ ಬೀಜಗಳನ್ನು ನೆಡಬೇಕು. ಇದರಿಂದ ಬೀಜ ಬೇಗ ಮೊಳಕೆ ಒಡೆಯುವುದು. ಮೊಳಕೆ ಬರದಿದ್ದರೆ ಮತ್ತೆ ಒಂದು ಸಲ ನೀರನ್ನು ಸ್ವಲ್ಪ ಪ್ರಮಾಣದಲ್ಲಿ ಹಾಯಿಸಬೇಕು. ಗಿಡದಿಂದ ಗಿಡಕ್ಕೆ ಎರಡು ಅಡಿ ಅಂತರ ಇರಬೇಕು. ಅಂತರವು ಮಣ್ಣಿನ ಸತ್ವ ಮತ್ತು ಗೊಬ್ಬರವನ್ನು ಅವಲಂಬಿಸಿದೆ. ಅಂತರ ಕಡಿಮೆಯಾದರೆ ಗಿಡ ಚೆನ್ನಾಗಿ ಸೊಂಪಾಗಿ ಬಂದು ಕಾಯಿಗಳು ಕೊಳೆತು ಹೋಗುತ್ತವೆ.

**ಗೊಬ್ಬರ :** ಕೊಟ್ಟಿಗೆ ಗೊಬ್ಬರದೊಡನೆ ಬೇವಿನ ಹಿಂಡಿಯನ್ನು ಎಕರೆಗೆ 200 ಕಿಲೋ. ಹಾಕಬಹುದು. ರಾಸಾಯನಿಕ ಗೊಬ್ಬರ ಹಾಕುವುದಕ್ಕೆ ಮೊದಲು ಭೂಮಿಯನ್ನು ಪರೀಕ್ಷೆ ಮಾಡಿಸಬೇಕು. ಪರೀಕ್ಷೆ ಮಾಡದೆ ರಾಸಾಯನಿಕ ಗೊಬ್ಬರ ನೆಲಕ್ಕೆ ಹಾಕುವುದು ವ್ಯರ್ಥ.

ಹತ್ತಿಗೆ ಮಣ್ಣಿನ ಸತ್ತ್ವ, ಗೊಬ್ಬರ ಹೆಚ್ಚು ಉಪಯೋಗಕಾರಿ. ಆದ್ದರಿಂದ ಹಸುರೆಲೆಗೊಬ್ಬರದಿಂದ ಪೂರ್ಣವಾದ ಫಲ ಪಡೆಯಲು ಮಣ್ಣು ಫಲವತ್ತತೆಯಿಂದ ಕೂಡಿರಬೇಕು. ಎಕರೆಗೆ 24:12:12 ಕಿಲೋ ಎಂಬ ಅಳತೆಯ ಅನುಪಾತದಲ್ಲಿ ಹಸುರೆಲೆ, ಬೂದಿ, ಕೊಟ್ಟಿಗೆ ಗೊಬ್ಬರವನ್ನು ಹಾಕಬೇಕು. ಇಂತಹ ಮಿಶ್ರ ಗೊಬ್ಬರವಾಗಿ ಗಿಡ ನೆಟ್ಟು 30 ದಿನಗಳು ಆದ ಮೇಲೆ 4 ದಿನಗಳ ಮುಂಚೆ ಹಾಕಿ ಮಣ್ಣು ಕಟ್ಟಬೇಕು. ಆಮೇಲೆ ನೀರು ಹಾಯಿಸಬೇಕು. ಎರಡನೇ ಸಲ ಕೇವಲ ಗೊಬ್ಬರವನ್ನು ಹಾಕಿದರೆ ಸಾಕು. ಕಳೆ ಕಿತ್ತ ಮೇಲೆ ಗಿಡಕ್ಕೆ ಯೂರಿಯ ಹಾಕಿ ನೀರು ಹಾಯಿಸಬೇಕು.

ಹತ್ತಿಯಲ್ಲಿ ಪೀಚುಗಳು ಉದುರುವುದು ಸರ್ವೇ ಸಾಮಾನ್ಯ. ಇದಕ್ಕೆ ಹಲವು ಕಾರಣಗಳಿವೆ. ನೆಲದಲ್ಲಿ ತಕ್ಕಷ್ಟು ಸತ್ತ್ವವಿಲ್ಲದಿದ್ದರೂ ಹೆಚ್ಚು ಮಳೆ ಬಿದ್ದು ಗಿಡ ಸೊಂಪಾಗಿ ಬೆಳೆದಾಗಲೂ ಅದಕ್ಕೆ ಚೆನ್ನಾಗಿ ನೀರು ಹಾಯಿಸಿ ದಿಢೀರನೇ ನೀರಿನ ಕೊರತೆ ಹಾಗೂ ಕ್ರಿಮಿಕೀಟಗಳ ಬಾಧೆಯಿಂದಲೂ ಪೀಚು ಉದುರುತ್ತದೆ. ಅಧಿಕವಾಗಿ ಪೀಚು ಉದುರುವುದನ್ನು ನಿಯಂತ್ರಿಸಲು, ಒಳ್ಳೆಯ ಇಳುವರಿಯನ್ನು ಪಡೆಯಲು ಈ ರೀತಿ ಮಾಡಬೇಕು. 10 ಲೀಟರ್ ನೀರಿಗೆ 3 ಮೀ ಪ್ರಮಾಣದಲ್ಲಿ ವಿಳಾನೊಪಿಕ್ಸ್ ರಾಸಾಯನಿಕವನ್ನು ಬೆರೆಸಿ ಸಿಂಪಡಿಸಬಹುದು. ಗಿಡವು ಚೆನ್ನಾಗಿ ರಂಬೆಕೊಂಬೆಗಳನ್ನು ಬಿಟ್ಟು ಹರಡಿಕೊಂಡಿದ್ದರೆ ಎಕರೆಗೆ 150 ಲೀಟರ್ ಔಷಧೀಯ ಮಿಶ್ರಣದ ನೀರು ಬೇಕಾಗುವುದು. ಗಿಡ ಚೆನ್ನಾಗಿ ನೆನೆಯುವಂತೆ ಸಿಂಪಡಿಸಬೇಕು. ಇದನ್ನು ಸಿಂಪಡಿಸಲು ಉಪಯೋಗಿಸುವ ನೀರು ಶುದ್ಧವಾಗಿರಬೇಕು. ಬೇಕಾದರೆ ಈ ಕಾರ್ಯವನ್ನು ಮಳೆಯ ನೀರಿನ ಸಂಗ್ರಹಣೆಯಿಂದಲೂ ಮಾಡಬಹುದು, ಅದು ಇನ್ನೂ ಉತ್ತಮವಾದದ್ದು. ಈ ಮಿಶ್ರಣವನ್ನು ಗಿಡಕ್ಕೆ 70 ದಿನ ಆದ ಮೇಲೆ ಸಿಂಪಡಿಸಬೇಕು. 15 ದಿನದ ಅಂತರದಲ್ಲಿ ಎರಡು ಸಲ ಸಿಂಪಡಿಸಬೇಕು.

**ಚಿಗುರು ಚಿವುಟುವುದು :** ಗಿಡವು ಸಮೃದ್ಧವಾಗಿ ಬೆಳೆದಿರುವಾಗ ಮಾತ್ರ ಚಿಗುರು ಚಿವುಟಬೇಕು. ಸಾಮಾನ್ಯವಾಗಿ ಖುಷ್ಕಿ ಭೂಮಿಯಲ್ಲಿ ಸಾಕಾದಷ್ಟು ನೀರು, ಗೊಬ್ಬರವು ಸಿಗುವುದಿಲ್ಲವಾದ್ದರಿಂದ ಗಿಡಗಳು ಚೆನ್ನಾಗಿ ಬೆಳೆಯುವುದಿಲ್ಲ. ಆದರೆ ಒಳ್ಳೆಯ ಪೋಷಣೆ ಮತ್ತು ಮಣ್ಣು ಫಲವತ್ತಾಗಿದ್ದರೆ ಗಿಡಗಳು ಉತ್ತಮವಾಗಿ ಬೆಳೆಯುತ್ತವೆ.

ಸಾಧಾರಣವಾಗಿ ಹತ್ತಿಗೆ ರಾತ್ರಿಯಲ್ಲಿ ವಾರಕ್ಕೊಮ್ಮೆ ನೀರು ಹಾಯಿಸುವರು. ನೀರು ಹಾಯಿಸುವುದಕ್ಕೆ ಹಿಂದಿನ ದಿನ ಚಿಗುರು ಚಿವುಟಬೇಕು. ಲೇಸಾಗಿ ಕೊನೆಯನ್ನು ಚಿವುಟಿ ಬೀಸಾಕಬೇಕು. ಬಹುಪಾಲು ಈ ಕೆಲಸವನ್ನು ಬೆಳಗಿನ ಸಮಯದಲ್ಲಿ ಮಾಡಬೇಕು. ಮಾರನೆಯ ದಿನ ನೀರು ಹಾಯಿಸಬೇಕು. ಅನಂತರ ಮುರಿದ ಜಾಗದಲ್ಲಿ ಹಲವು ರಂಬೆಕೊಂಬೆಗಳು ಒಡೆಯುವುದು. ಇದರಿಂದ ಗಿಡದಲ್ಲಿ ಅಧಿಕ ಪೀಚು ಕಚ್ಚುವುದು. ಅಲ್ಲದೆ ಬೇಕಿಲ್ಲದ ಎಲೆಗಳು ಸೊಂಪಾಗಿ ಬೆಳೆಯುವುದನ್ನು ತಪ್ಪಿಸಬಹುದು. ಕಾಯಿಗಳು ಚೆನ್ನಾಗಿ ಬಲಿಯಲು ಸಹಾಯಕ. ಹತ್ತಿಯ ಬಿರಿಯುವಿಕೆ ಉತ್ತಮವಾಗುವುದು. ಇದಕ್ಕೆ ಔಷಧಿ ಸಿಂಪಡಿಸುವುದು ಬಹು ಸುಲಭ. ಗಿಡ ನೇರವಾಗಿ ಬೆಳೆದು ಒಂಟಿ ರೆಂಬೆಯಿಂದ ಕೂಡಿದರೆ ಕಾಯಿಗಳು ಹೆಚ್ಚು ಹಿಡಿಯುವುದು. ಹಾಗೆಯೇ ಯೋಗ್ಯ ಕಾಲದಲ್ಲಿ ಚಿಗುರನ್ನು ಚಿವುಟಬೇಕು. ಸಾಮಾನ್ಯವಾಗಿ ಹಲವು ರೈತರು ಇದನ್ನು ಮಾಡುವುದಿಲ್ಲ. ಉತ್ತಮ ಬೆಳೆಗೆ ಚಿಗುರು ಮುರಿಯುವುದು ಆವಶ್ಯಕ. ಅದರಿಂದ ಅಧಿಕ ಬೆಳೆ ಪಡೆಯಲು ಸಾಧ್ಯ.

**ಗಿಡದ ರಕ್ಷಣೆ :** ಹತ್ತಿಗೆ ಕ್ರಿಮಿಕೀಟಗಳ ಬಾಧೆ ಅಧಿಕ. ಇದರಿಂದ ಹತ್ತಿಯಲ್ಲಿ ಶೇ. 20 ರಿಂದ 25 ಭಾಗ ಬೆಳೆ ಕಡಿಮೆಯಾಗುವುದು. ಲಕ್ಷ್ಯ ವಹಿಸಿ ಎಚ್ಚರಿಕೆಯಿಂದ ರಕ್ಷಣೆ ಮಾಡಿದರೆ ಹೆಚ್ಚಿನ ಆದಾಯ ಪಡೆಯಬಹುದು.

**ಮಿಶ್ರ ಬೆಳೆಯಾಗಿ ಹತ್ತಿ :** ಹತ್ತಿಯೊಂದಿಗೆ ಕೆಲವು ಮಿಶ್ರ ಬೆಳೆಗಳನ್ನು ಬೆಳೆಯಬಹುದು. ಇದರಿಂದ ಕೀಟ ಬಾಧೆಯನ್ನು ತಪ್ಪಿಸಬಹುದು. ಕೆಲವು ಮಿಶ್ರ ಬೆಳೆ ಹತ್ತಿಗೆ ಸಹಕಾರಿ.

**ಹತ್ತಿಯನ್ನು ಬಾಧಿಸುವ ರೋಗಗಳು :** ಹತ್ತಿಗೆ ಬರುವ ರೋಗಗಳು ಹಲವು. ಅವುಗಳಿಂದ ಹತ್ತಿಯನ್ನು ರಕ್ಷಿಸಿದರೆ ಇಳುವರಿ ಹೆಚ್ಚಾಗುವುದು. ರೋಗ ಬರದಂತೆ ತಡೆಗಟ್ಟಲು ಬೀಜ ರಕ್ಷಣೆ ಮಾಡಬೇಕು. ಅಲ್ಲದೆ ಅದರ ಜೊತೆ ಮಿಶ್ರ ಬೆಳೆಯನ್ನು ಬೆಳೆಯುವುದು. ರೋಗ ಬರುವ ಮುಂಚೆ ಇಲ್ಲವೇ ಆರಂಭದಲ್ಲೇ ಪತ್ತೆ ಹಚ್ಚಿ ಔಷಧಿ ಸಿಂಪಡಿಸಿ ರಕ್ಷಣೆ ಮಾಡಬೇಕು. ಹತ್ತಿಗೆ ಬರುವ ರೋಗಗಳು. 1. ಬೇರು ಕೊಳೆಯುವ ರೋಗ, 2. ಬಿಳಿ ನೊಣದ ಬಾಧೆ, 3. ಎಲೆ ಕರುಕಲು ರೋಗ, 4. ಎಲೆ ಚುಕ್ಕಿರೋಗ, 5. ಕಾಯಿ ಕೊಳೆಯುವ ರೋಗ.

**ಬೇರು ಕೊಳೆಯುವ ರೋಗ :** ಈ ರೋಗ ಹತ್ತಿಯನ್ನು ಅಧಿಕವಾಗಿ ಬಾಧಿಸುವುದು. ಇದು ಹೆಚ್ಚು ಅನಾಹುತವನ್ನು ಉಂಟು ಮಾಡಿ ಹತ್ತಿಯ ಇಳುವರಿಯನ್ನು ಕಡಿಮೆಗೊಳಿಸುತ್ತದೆ. ಗಿಡ ಚಿಕ್ಕದಾಗಿರುವಾಗಲೇ ಈ ರೋಗ ಬಾಧಿಸುತ್ತದೆ. ಈ ಬಾಧೆಗೆ ಒಳಗಾದ ಗಿಡ ಬಾಡಿ ಒಣಗಿ ಹೋಗುತ್ತದೆ. ಗಿಡವನ್ನು ಸೂಕ್ಷ್ಮವಾಗಿ ನೋಡಿದರೆ ದಂಟಿನ ಕೆಳಭಾಗದಲ್ಲಿ ಕಪ್ಪು ಅರಿಸಿನ ಮಿಶ್ರಿತ ದಿಣ್ಣೆಗಳು ಇರುವುದು. ಗಿಡ ನಿಂತಿರುವಾಗಲೇ ಮುಟ್ಟಿದ ತಕ್ಷಣ ಹಾಗೆಯೇ ಕಳಚಿಕೊಂಡು ಬೀಳುವುದು. ಹತ್ತಿ ಬೆಳೆಯುವ ಹೊಲವನ್ನು ಬೇಸಗೆ ಕಾಲದಲ್ಲಿ ಚೆನ್ನಾಗಿ ಉಳುಮೆ ಮಾಡಬೇಕು. ಇದರಿಂದ ಮಣ್ಣಿನಲ್ಲಿರುವ ಕ್ರಿಮಿಕೀಟಗಳು ಮೇಲೆ ಬಂದು ಬೇಸಗೆಯ ಉರಿಬಿಸಿಲಿನಲ್ಲಿ ಒಣಗಿ ನಾಶವಾಗುತ್ತವೆ. ಮೊದಲೇ ತಿಳಿಸಿದಂತೆ ಬೀಜವನ್ನು ಸಿದ್ಧಪಡಿಸಿ ನೆಡಬೇಕು. ಕೊನೆಯ ಉಳುಮೆಯಲ್ಲಿ ಕೊಳೆತ ಕೊಟ್ಟಿಗೆ ಗೊಬ್ಬರವನ್ನು ಬೇವಿನ ಹಿಂಡಿಯೊಡನೆ ಬೆರೆಸಿ ಹೊಲಕ್ಕೆ ಹಾಕಿ ಉಳುಮೆ ಮಾಡಬೇಕು. ಈ ಮಾದರಿಯನ್ನು ಅನುಸರಿಸಿದರೆ, ಬೇರು ಕೊಳೆಯುವ ರೋಗವನ್ನು ತಡೆಗಟ್ಟಬಹುದು.

**ಬಿಳಿ ನೊಣದ ಬಾಧೆ :** ಇದು ಗಿಡದ ಸಾರವನ್ನು ಹೀರುವ ನೊಣ. ಎಲೆಯ ಕೆಳ ಭಾಗದಲ್ಲೇ ಇದರ ಜೀವನ. ಅಲ್ಲೇ ಹೇರಳವಾದ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಯಿಂದ ಹೊರಬರುವ ಜೀವಿ ಅರಿಸಿನ ಬಣ್ಣದಲ್ಲಿರುತ್ತದೆ. ಇವು ಗಿಡದ ಸಾರವನ್ನು ಮಾತ್ರ ಹೀರಿಕೊಂಡು, ಜೇನಿನಂತೆ ಒಂದು ದ್ರವ್ಯವನ್ನು ಹೊರಹಾಕುತ್ತದೆ. ಅದನ್ನು ಮುಟ್ಟಿ ನೋಡಿದರೆ ಅಂಟು ಅಂಟಾಗಿರುವುದು. ಇವು ಹೊರ ಹಾಕಿದ ಆ ದ್ರವ ಎಲೆಗಳ ಮೇಲೆ ಹರಡಿರುತ್ತದೆ. ಇದರಿಂದ ಎಲೆಗಳ ಮೇಲೆ ಕಪ್ಪು ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಸಸ್ಯಗಳ ಬೆಳವಣಿಗೆಗೆ ಸೂರ್ಯನ ಶಾಖ ಮತ್ತು ಬೆಳಕು ಆವಶ್ಯಕ. ಈ ದ್ರವ ಪಸರಿಸಿರುವ ಎಲೆಗಳು ಸೂರ್ಯನ ಕಿರಣಗಳನ್ನು ಹೀರಿಕೊಳ್ಳುವುದಿಲ್ಲ. ಇದರಿಂದ ಗಿಡದ ಬೆಳವಣಿಗೆ ಕುಂಟಿತವಾಗುವುದು. ಅಲ್ಲದೆ ಎಲೆಗಳು ಉದುರಿ ಹೋಗುವುದು. ಹತ್ತಿಯ ಗುಣಮಟ್ಟ ಕಡಿಮೆಯಾಗುವುದು. ಬಿಳಿ ನೊಣ ವಂಶಾಭಿವೃದ್ಧಿಯನ್ನು ವೇಗವಾಗಿ ನಡೆಸುತ್ತದೆ. ಕೆಲವು ತಳಿಗಳು ಈ

ಬಿಳಿ ನೊಣಗಳನ್ನು ಎದುರಿಸುವ ಶಕ್ತಿಯನ್ನು ಪಡೆದುಕೊಂಡಿದೆ. ಅಂತಹ ತಳಿಗಳ ಪೈರನ್ನು ನಾಟಿ ಮಾಡಬೇಕು. ಎಲ್.ಕೆ. 861, ಕಾಂಚನ, ಸುಪ್ರಿಯ ಮೊದಲಾದವು ಈ ರೋಗವನ್ನು ಎದುರಿಸುವ ಸಾಮರ್ಥ್ಯ ಹೊಂದಿವೆ.

ಬಿಳಿನೊಣಗಳ ನಾಶಕ್ಕೆ ಬೇವಿನ ಎಣ್ಣೆ ಉಪಯೋಗಕಾರಿಯಾದುದು. ಒಂದು ಲೀಟರ್ ಬೇವಿನ ಎಣ್ಣೆಯನ್ನು ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಹೀಗೆ ಸಿಂಪಡಿಸುವಾಗ ಸೋಪಿನ ನೀರನ್ನು ಸೇರಿಸಿಕೊಳ್ಳಬೇಕು. 1 ಎಕರೆಗೆ 1 ಲೀಟರ್ ಬೇವಿನ ಎಣ್ಣೆ ಸಾಕಾಗುವುದು. ಟಿರೆಯ ಸೋಪಾಸ್ ಕ್ರಿಮಿನಾಶಕ ಔಷಧಿಯನ್ನು ಎಕರೆಗೆ ಮುಕ್ಕಾಲು ಲೀಟರಿನಂತೆ ಬೇಕಾದಷ್ಟು ನೀರನ್ನು ಬೆರೆಸಿ ಸಿಂಪಡಿಸಿದರೆ ಈ ರೋಗವನ್ನು ತಡೆಗಟ್ಟಬಹುದು.

**ಎಲೆ ಕರುಕಲು ರೋಗ :** ಎಳೆಯ ಗಿಡದಿಂದ ಹಿಡಿದು ದೊಡ್ಡ ಗಿಡದವರೆಗೂ ಎಲ್ಲಾ ಕಾಲದಲ್ಲೂ ಈ ರೋಗ ಬಾಧಿಸುತ್ತದೆ. ಎಲೆಗಳಲ್ಲಿ ಸಣ್ಣ ಸಣ್ಣ ಚುಕ್ಕಿಗಳು ಕಾಣಿಸಿಕೊಳ್ಳುವುದು. ಸ್ವಲ್ಪ ದಿನಗಳ ಅನಂತರ ಎಲೆಗಳು ಕರುಕಲು ಆಗಿ ತೆಳುಕೆಂಪು ಬಣ್ಣಕ್ಕೆ ತಿರುಗುತ್ತವೆ. ಅನಂತರ ಎಲೆಗಳು ಹಣ್ಣಾಗಿ ಬಿಡುತ್ತವೆ. ಸ್ವಲ್ಪ ದಿನಗಳು ಕಳೆದ ಮೇಲೆ ಎಲೆಗಳು ಉದುರಿ ಹೋಗುವುದು. ಇದು ಎಲೆಯ ತೊಟ್ಟುಗಳನ್ನು ಬಾಧಿಸಿ ಬಲಹೀನವಾಗುವಂತೆ ಮಾಡುತ್ತದೆ. ಈ ರೋಗ ಕಾಯಿಗಳನ್ನು ಸಹ ಬಾಧಿಸುವುದು. ಹೀಗೆ ರೋಗಕ್ಕೆ ತುತ್ತಾದ ಕಾಯಿಗಳು ಒಡೆಯುವಾಗ ಹತ್ತಿಯ ಎಲೆಗಳು ಹಳದಿಯ ಬಣ್ಣಕ್ಕೆ ತಿರುಗುತ್ತವೆ.

ಸ್ವಲ್ಪ ದಿನ ಮಳೆಬಿದ್ದು ಅನಂತರ ಬಿಸಿಲು ಹೆಚ್ಚಾದರೆ ಈ ರೋಗಕ್ಕೆ ಸಂಭ್ರಮ. ಶರವೇಗದಲ್ಲಿ ರೋಗ ಹರಡುತ್ತದೆ. ಬೂದಿ ಶಕ್ತಿಯ ಕೊರತೆಯು ಈ ರೋಗಕ್ಕೆ ಕಾರಣವಾಗುತ್ತದೆ. ಸೂಕ್ಷ್ಮ ಜೀವಿಗಳು, ಹತ್ತಿಯ ಹೂವಿನ ಎಸಳಿನಿಂದ, ಒಣಗಿದ ಎಲೆಗಳಿಂದ ರೋಗ ಹರಡುತ್ತವೆ. ಎಲೆಗಳಲ್ಲಿ ಇರುವ ಬ್ಯಾಕ್ಟೀರಿಯಾಗಳು ಹಲವು ದಿನ ಜೀವಿಸುತ್ತವೆ. ಗಾಳಿ ಮತ್ತು ಮಳೆಯಿಂದ ಈ ರೋಗವು ವೇಗವಾಗಿ ಹರಡುತ್ತದೆ.

ಈ ರೋಗವನ್ನು ಕಡಿಮೆ ಮಾಡುವುದು ಕಷ್ಟ. ಬೀಜಗಳನ್ನು ಸ್ವಂಯ ರಕ್ಷಿಸಿ ನೆಡಬೇಕು. ಹತ್ತಿ ಬೆಳೆದ ನೆಲದಲ್ಲಿಯೇ ಮತ್ತೆ ಮತ್ತೆ ಹತ್ತಿ ಬೆಳೆಯಬಾರದು. ಧಾನ್ಯವನ್ನು ಬೆಳೆದ ಭೂಮಿಯಲ್ಲಿ ಹತ್ತಿಯನ್ನು ಬೆಳೆದರೆ ಸಮೃದ್ಧವಾದ ಬೆಳೆ ಬರುವುದು.

**ಎಲೆ ಚುಕ್ಕಿ ರೋಗ :** ಈ ರೋಗವು ಗಿಡದ ಎಲ್ಲಾ ಭಾಗಗಳಲ್ಲೂ ಬರುವುದು. ಗಿಡಕ್ಕೆ 45 ರಿಂದ 60 ದಿನಗಳು ಆಗುವಾಗ ಈ ರೋಗದ ಬಾಧೆ ತೀವ್ರವಾಗಿರುತ್ತದೆ. ಎಲೆಗಳ ಮೇಲ್ಭಾಗದಲ್ಲಿ ಚುಕ್ಕೆ ಗೋಚರಿಸಿ ಎಲೆಗಳು ಉದುರು ರೋಗ ಹೆಚ್ಚಾದರೆ ಗಿಡದ ದಂಟು, ಕಾಯಿ ಎಲ್ಲವನ್ನೂ ಬಾಧಿಸಿ ಹಾಳುಗೆಡವಬಹುದು.

ಈಶಾನ್ಯ ಮುಂಗಾರು ಮಳೆ ಚುರುಕುಗೊಂಡರೆ ಈ ರೋಗ ವೇಗವಾಗಿ ಹರಡುವುದು. ಅಲ್ಲದೆ ಗಿಡಗಳು ಒತ್ತೊತ್ತಾಗಿದ್ದರೂ ರೋಗದ ಬಾಧೆ ಹೆಚ್ಚಾಗುವುದು. ಇದನ್ನು ತಡೆಯಲು ಪಾವಿಸ್ಟನ್‌ನ್ನು ಒಂದು ಲೀಟರ್ ನೀರಿಗೆ ಒಂದು ಗ್ರಾಂ ಅಳತೆಯಲ್ಲಿ ಬೆರೆಸಿ ಸಿಂಪಡಿಸಬೇಕು. ಗಂಧಕಾಮ್ಲವನ್ನು ಅದೇ ಅಳತೆಯಲ್ಲಿ ಬೆರೆಸಿ, ಸಿಂಪಡಿಸಿ ಕಡಿಮೆ ಮಾಡಬಹುದು.

**ಕಾಯಿ ಕೊಳೆಯುವ ರೋಗ :** ಹತ್ತಿಯ ಕಾಯಿಗಳು ಹಚ್ಚ ಹಸುರಿನ ಬಣ್ಣದಿಂದ ಕೂಡಿ ಆರೋಗ್ಯಕರವಾಗಿ ಇರಬೇಕು. ಹಾಗಿಲ್ಲದೆ ಕಾಯಿಯ ಮೇಲ್ಭಾಗದಲ್ಲಿ ಕಪ್ಪು ಚುಕ್ಕಿಗಳು ಇಲ್ಲವೇ ಹಳದಿ ಬಣ್ಣದ ಚುಕ್ಕಿಗಳು ಇದ್ದರೆ ಕಾಯಿ ಕೊಳೆತದ ಆರಂಭ ಎಂದು ತಿಳಿಯಬೇಕು. ಈ ರೋಗದಿಂದ ಕಾಯಿಯ ಒಳ ಭಾಗದ ಬೀಜ ಕೊಳೆತು ಹೋಗುವುದು. ಕಾಯಿಯನ್ನು ಮೂಸಿ ನೋಡಿದರೆ ಒಂದು ರೀತಿಯ ಕರುಕಲು ವಾಸನೆ ಬರುವುದು. ರೋಗದ ಕಾಯಿ ಬಲಿಯದೆ ಉದುರಿ ಹೋಗುತ್ತದೆ. ಕಾಯಿಗಳು ಪೀಚಾಗಿರುವಾಗ ಮಳೆ ಜೋರಾಗಿ ಬಿದ್ದರೆ ರೋಗ ತೀವ್ರತೆ ಹೆಚ್ಚಾಗುತ್ತದೆ. ಇದಕ್ಕೆ ಇನ್ನೊಂದು ಕಾರಣ ಎಲೆಗಳ ಸತ್ವ ಹೆಚ್ಚಾಗುವುದು. ಅಲ್ಲದೆ ಗಿಡಗಳನ್ನು ಒತ್ತಾಗಿ ನಾಟಿ ಮಾಡಿದರೂ ಈ ರೋಗ ಬರುತ್ತದೆ.

ರೋಗ ಬರುವುದಕ್ಕೂ ಮುಂಚೆಯೇ ಒಂದು ಲೀಟರ್‌ಗೆ ಒಂದು ಗ್ರಾಂ ಅಳತೆಯಲ್ಲಿ ಟೈತ್ರೇನ್ ಔಷಧಿಯನ್ನು ಕ್ರಿಮಿನಾಶಕದ ಔಷಧಿಯೊಡನೆ ಸೇರಿಸಿ ಸಿಂಪಡಿಸಬೇಕು. ಈ ಮಿಶ್ರಣವನ್ನು ಎರಡು ಮೂರು ಸಲ 45 ದಿನಗಳಲ್ಲಿ ಸಿಂಪಡಿಸಬೇಕು. 15 ದಿನಗಳ ಅಂತರದಲ್ಲಿ ಸಿಂಪಡಿಸುವುದು ಉತ್ತಮ. ಪಾವಿಸ್ಟನ್ ಔಷಧಿಯನ್ನು ಇದೇ ಅಳತೆಯಲ್ಲಿ ಸಿಂಪಡಿಸಬಹುದು.

**ಉತ್ತಮ ಬೆಳೆ :** ವಾಣಿಜ್ಯ ಬೆಳೆಯ ಪಟ್ಟಿಯಲ್ಲಿ ಹತ್ತಿಗೆ ಮೊದಲ ಸ್ಥಾನವಿದೆ. ರೈತರು ಹತ್ತಿಯಲ್ಲಿ ಉತ್ತಮ ಇಳುವರಿ ಪಡೆಯಲು ಈ ಕ್ರಮಗಳನ್ನು ಅನುಸರಿಸಬೇಕು.

1. ಯೋಗ್ಯ ಕಾಲವನ್ನು ಆಯ್ಕೆ ಮಾಡಿಕೊಳ್ಳಬೇಕು, 2. ಪರೀಕ್ಷಿಸಿದ ಬೀಜಗಳನ್ನೇ ತಂದು ನಾಟಿ ಮಾಡಬೇಕು, 3. ಬೀಜಗಳನ್ನು ಸಂರಕ್ಷಿಸುವುದು ತುಂಬ ಆವಶ್ಯಕ, 4. ಭೂಮಿಯ ಫಲವತ್ತತೆಗೆ ತಕ್ಕಂತೆ ಅಂತರ ಇರಬೇಕು, 5. ಆವಶ್ಯಕವಾಗಿ ಕೊಳೆತ ಗೊಬ್ಬರದೊಡನೆ ಎಕರೆಗೆ 100 ಕಿಲೋ ಬೇವಿನ ಹಿಂಡಿಯನ್ನು ಕೊನೆಯ ಉಳುಮೆಯಲ್ಲಿ ಹಾಕಬೇಕು, 6. ರೋಗ ಎದುರಿಸುವ ಸಾಮರ್ಥ್ಯವಿರುವ ವಿಧಗಳನ್ನೇ ನಾಟಿ ಮಾಡಬೇಕು, 7. ಹತ್ತಿ ಬೆಳೆದ ನೆಲದಲ್ಲೇ ಮತ್ತೆ ಹತ್ತಿ ಬೆಳೆಯಬಾರದು, 8. ಮಿಶ್ರ ಬೆಳೆಯಾಗಿ (ಅಂತರ ಬೆಳೆ) ಅಲಸಂದೆ ಕಾಳು, ಹೆಸರು ಕಾಳು ಮೊದಲಾದವುಗಳನ್ನು ಬೆಳೆಸಬಹುದು, 9. ರೋಗವಿದೆಯೆಂದು ಆವಶ್ಯಕತೆಗಿಂತ ಹೆಚ್ಚಾಗಿ ಔಷಧಿ ಸಿಂಪಡಿಸಬಾರದು, 10. ಮಣ್ಣಿನ ಪರೀಕ್ಷೆ ಮಾಡಿಯೇ ಗೊಬ್ಬರ ಹಾಕಬೇಕು, 12. ಔಷಧಿ ಅಂಗಡಿಯವರು ಶಿಫಾರಸ್ಸು ಮಾಡಿದ ಔಷಧಿಯನ್ನು ತಂದು ಗಿಡಕ್ಕೆ ಸಿಂಪಡಿಸಬಾರದು, 13. ಹತ್ತಿರದಲ್ಲಿರುವ ಕೃಷಿ ಇಲಾಖೆಯನ್ನು ಸಂಪರ್ಕಿಸಿ, ಅವರಿಂದ ಮಾಹಿತಿಯನ್ನು ಪಡೆದು ಕಾರ್ಯೋನ್ಮುಖರಾಗಬೇಕು, 14. ಸೂಕ್ಷ್ಮ ಸತ್ವಕೊಡುವುದು ಉತ್ತಮ, 15. ಅಗತ್ಯಕ್ಕೆ ತಕ್ಕಂತೆ ನೀರು ಹಾಯಿಸಬೇಕು, 16. ಯಾವಾಗಲೂ ಒಡೆಯುವ (ಬಿರಿಯುವ) ಹತ್ತಿಯನ್ನು ಬೆಳಗಿನ ಸಮಯದಲ್ಲಿ ಬಿಡಿಸಬೇಕು.

ಹತ್ತಿಯ ಕೃಷಿ ಕ್ರಮವು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಹೊಂದುವುದು. ಎಕರೆಗೆ ಇಷ್ಟು ಕ್ವಿಂಟಾಲ್ ಬೆಳೆ ಬೆಳೆಯಬೇಕು ಎಂದು ಒಂದು ಲೆಕ್ಕ ಹಾಕಿ ಖರ್ಚು ಮಾಡಿದರೂ ಕಾಲಾದ ಬದಲಾವಣೆ, ರೋಗಗಳ ಬಾಧೆ ಮೊದಲಾದ ಕಾರಣಗಳಿಂದ ಯೋಚಿಸಿದ ಹಾಗೆ ಫಸಲನ್ನು ಪಡೆಯಲಾಗುವುದಿಲ್ಲ.

*ಎಂ.ಪಿ.*

**ಪರ್ಯಾಯ ಬೆಳೆಗಳು** ನಿರ್ದಿಷ್ಟ ಕೃಷಿ ಭೂಮಿಯಲ್ಲಿ ಸತತ ಒಂದೇ ಬೆಳೆ ತೆಗೆಯದೆ ಸರದಿಯ ಮೇಲೆ ಆವರ್ತ ಬೆಳೆ ಮಾಡುವ ಕ್ರಮವಿದು. ಮಣ್ಣಿನ ಫಲವತ್ತತೆಯನ್ನು ಕಾಪಾಡಲು ರೈತ ಕಂಡುಕೊಂಡ ಫಲಪ್ರದವಾದ ಪರ್ಯಾಯ ವೈಜ್ಞಾನಿಕ ವಿಧಾನ. ಮೊದಲ ಬೆಳೆ ಭೂಮಿಯ ಸಾರವನ್ನೆಲ್ಲ ಹೀರಿಬಿಡುವಂಥದ್ದಾಗಿದ್ದರೆ ಮುಂದಿನ ಬೆಳೆ ಮಣ್ಣಿಗೆ ಫಲವತ್ತತೆ ಕೊಡುವ ಹಾಗೂ ಕಡಿಮೆ ಅವಧಿಯ ಬೆಳೆಯಾಗಿರುತ್ತದೆ. ಏಕದಳ ಧಾನ್ಯ (ಉದಾ : ರಾಗಿ, ಬತ್ತ, ಜೋಳ ಇತ್ಯಾದಿ) ಬೆಳೆದ ಮೇಲೆ ದ್ವಿದಳ ಧಾನ್ಯಗಳನ್ನು (ಉದಾ : ಹುರುಳಿ, ಕಡಲೆಕಾಯಿ, ಕಡಲೆ, ದನಿಯ ಇತ್ಯಾದಿ) ಬೆಳೆಯುವುದು ಉಚಿತ ಎಂಬುದು ರೈತರ ಅನುಭವ ಜನ್ಯ ವಿಚಾರ. ನೀರಾವರಿ ಪ್ರದೇಶಗಳಲ್ಲಿ ಕಬ್ಬು, ಬತ್ತ ಇತ್ಯಾದಿ ಬೆಳೆಗಳನ್ನು ಮತ್ತೆ ಮತ್ತೆ ಮಾಡುತ್ತಾ ಹೋಗುವುದರಿಂದಲೂ ನೆಲ ಬರಡಾಗುತ್ತದೆ. ಇಂಥ ಭೂಮಿಯಲ್ಲೂ ನೀರಾವರಿ ವ್ಯವಸ್ಥೆ ಕಡಿಮೆಯಾದಾಗ ಮಳೆ ಕೈಕೊಟ್ಟಾಗಲೂ ಆಲೂಗಡ್ಡೆ, ಟೊಮ್ಯಾಟೋ ಮೊದಲಾದ ಬೆಳೆ ಬೆಳೆಸುವುದು ಉತ್ತಮ.

**ಪರ್ಯಾಯ ಬೆಳೆಗಳಿಂದಾಗುವ ಪ್ರಯೋಜನಗಳು ಹಲವು :** ರೋಗರುಜಿನಗಳು ಅಥವಾ ಕ್ರಿಮಿಕೀಟಗಳ ಬಾಧೆಯನ್ನು ನಿಯಂತ್ರಿಸಲು; ಮಣ್ಣಿನ ಸತ್ತ್ವವನ್ನು ಹೆಚ್ಚಿಸಲು; ಇಳುವರಿ ಪ್ರಮಾಣ ದ್ವಿಗುಣಗೊಳ್ಳಲು; ಮಣ್ಣಿನ ಯಥಾಸ್ಥಿತಿಯನ್ನು ರಕ್ಷಿಸಲು; ಪ್ರತಿಕೂಲ ಹವಾಗುಣದಿಂದ ಇಳುವರಿಗೆ ನಷ್ಟವಾಗದಂತೆ ನೋಡಿಕೊಳ್ಳುವುದು ಇತ್ಯಾದಿ.

ದಕ್ಷಿಣ ಭಾರತದಲ್ಲಿ ರೈತ ತನ್ನ ಅನುಭವದಿಂದ ಕಂಡುಕೊಂಡ ಈ ಪದ್ಧತಿಯಲ್ಲಿ ಬಹುಮುಖ್ಯವಾದುದು ಹಿಂಗಾರಿನ ಬೆಳೆಗಳು ಬೇರೆ ಮತ್ತು ಮುಂಗಾರಿನಲ್ಲಿ ಬೆಳೆಯುವ ಬೆಳೆಗಳೇ ಬೇರೆ ಎಂಬುದು. ಮುಂಗಾರಿನಲ್ಲಿ ಬತ್ತ, ರಾಗಿ, ಜೋಳ ಮೊದಲಾದ ಏಕದಳ ಧಾನ್ಯ ಬೆಳೆದರೆ ಹಿಂಗಾರಿನಲ್ಲಿ ತೊಗರಿ, ಅವರೆ, ಹೆಸರು, ಉದ್ದು, ಹುರುಳಿ ಇತ್ಯಾದಿ ದ್ವಿದಳ ಧಾನ್ಯಗಳನ್ನು ಬೆಳೆಯುವರು.

*ಕೆ.ಎ.ಎಂ.*

**ಪಶುಗಳಲ್ಲಿ ರೋಗ ನಿಯಂತ್ರಣ ಕ್ರಮಗಳು** ಪಶುಗಳಿಗೆ ಮುಖ್ಯವಾಗಿ ಹಸು, ಕರು, ಎತ್ತು, ಎಮ್ಮೆಗಳಿಗೆ ಕೆಲವೊಮ್ಮೆ ವಿವಿಧ ರೋಗಗಳು ಕಾಣಿಸಿಕೊಂಡು ಬಾಧೆ ನೀಡುತ್ತವೆ. ಈ ರೋಗಗಳನ್ನು ನಿಯಂತ್ರಿಸಿ ನಿವಾರಿಸುವ ಹಲವು ಮಾರ್ಗಗಳನ್ನು ರೈತರು ಕಂಡುಕೊಂಡಿದ್ದಾರೆ. ಅವುಗಳಲ್ಲಿ ಕೆಲವನ್ನು ಅವಲೋಕಿಸಬಹುದು.

ದನಕರುಗಳಿಗೆ ವಿಪರೀತ ಭೇದಿಯಾಗುತ್ತಿದ್ದಲ್ಲಿ ನಿವಾರಣೆ ಮಾಡಲು ನಾಲ್ಕೈದು ಲೀಟರ್ ನೀರಿಗೆ ಒಂದೆರಡು ಹಿಡಿಯಷ್ಟು ಅಡುಗೆ ಉಪ್ಪನ್ನು ಬೆರೆಸಿ ಕುಡಿಸುವುದರಿಂದ ಅಥವಾ ಉಪ್ಪನ್ನು ನೆಲ್ಲು ಹುಲ್ಲಿನೊಂದಿಗೆ ತಿನ್ನಿಸುವುದರಿಂದ ಹೋಗಲಾಡಿಸಬಹುದು. ಉಪ್ಪಿನ ದ್ರಾವಣ ಎಲೆಕ್ಟ್ರೋಲೈಟ್‌ಗಳ ಅಸಮತೋಲನವನ್ನು ಸರಿಪಡಿಸುತ್ತದೆ.

ದನಕರುಗಳ ಹೊಟ್ಟೆಯಲ್ಲಿ ಜಂತು ಹುಳುಗಳ ಬಾಧೆಯಿದ್ದರೆ ಅವು ಸರಿಯಾಗಿ ಮೇವು ತಿನ್ನುವುದಿಲ್ಲ. ಅಂತಹ ಸಮಯದಲ್ಲಿ ಎಳೆಯ ಪಪ್ಪಾಯಿ ಬೀಜಗಳನ್ನು ನುಣ್ಣಗೆ ಅರೆದು ನೀರಿನೊಂದಿಗೆ ಬೆರೆಸಿ ಕುಡಿಸುತ್ತಾರೆ. ಪಪ್ಪಾಯಿ ಬೀಜಗಳಲ್ಲಿ ಜಂತುನಾಶಕ ಗುಣವಿರುವುದರಿಂದ ಈ ರೋಗದ ಬಾಧೆಯನ್ನು ನಿವಾರಿಸಬಹುದು.

ಹಸು, ಕರು, ಎತ್ತು, ಎಮ್ಮೆಗಳ ಮೈಯನ್ನು ಕೆಲವೊಮ್ಮೆ ಕಾಗೆಗಳು ಕುಕ್ಕಿ ಗಾಯಗೊಳಿಸಿರುತ್ತವೆ. ಮರಕ್ಕೋ, ಗೋಡೆಗೋ ಮೈ ಉಜ್ಜಿ ಗಾಯಮಾಡಿಕೊಂಡಿರುತ್ತವೆ. ಆ ಸ್ಥಳಕ್ಕೆ ಸಗಣಿಯನ್ನು ಮೆತ್ತುತ್ತಾರೆ. ಸಗಣಿಯಲ್ಲಿ ಕ್ರಿಮಿ ನಾಶಕ ಗುಣಗಳಿದ್ದು ಗಾಯ ಬೇಗ ವಾಸಿಯಾಗುತ್ತದೆ. ಪಶುಗಳ ಮೈಯಲ್ಲಿ ಗಾಯಗಳಾಗಿ ಕೀವು ಕಾಣಿಸಿಕೊಂಡರೆ ನೊಣಗಳು ಮುತ್ತಿಕೊಳ್ಳದಂತೆ ಹೊಂಗೆ ಎಣ್ಣೆಯನ್ನು ಲೇಪಿಸುತ್ತಾರೆ. ಹೊಂಗೆ ಎಣ್ಣೆಗೆ ಕ್ರಿಮಿನಾಶಕ ಗುಣವಿರುವುದರಿಂದ ಕೀವು ತುಂಬಿಕೊಳ್ಳಲು ಹಾಗೂ ನೊಣಗಳು ಮುತ್ತಿಕೊಳ್ಳಲು ಅವಕಾಶ ಕೊಡುವುದಿಲ್ಲ.

ಉಳುಮೆ ಮಾಡುವ ಎತ್ತುಗಳಲ್ಲಿ ನೊಗ ಹೊತ್ತು ಹೆಗಲಿನಲ್ಲಿ ಸೀಳುಗಳುಂಟಾಗಿ ಅದರ ಬಾಧೆಯಿಂದ ಯಾತನೆ ಪಡುತ್ತಿದ್ದರೆ ಹುರುಳಿಯನ್ನು ನೀರಿನೊಂದಿಗೆ ನುಣ್ಣಗೆ ಅರೆದು ನಾಲ್ಕೈದು ಬಾರಿ ಗಾಯದ ಜಾಗಕ್ಕೆ ಕಟ್ಟಿದರೆ ಗಾಯ ವಾಸಿಯಾಗುತ್ತದೆ. ಹುರುಳಿಯಲ್ಲಿ ಅಣು ಜೀವಿ ಪ್ರತಿರೋಧಕ ಗುಣಗಳಿರುವುದರಿಂದ ಬೇಗ ಗುಣವಾಗುತ್ತದೆ. ಹಾಗೆಯೇ ಗಾಯದ ಜಾಗಕ್ಕೂ ಅರಿಸಿನದ ಪುಡಿಯನ್ನು ಮೆತ್ತುತ್ತಾರೆ. ಇದರಲ್ಲಿ ಕ್ರಿಮಿನಾಶಕ ಗುಣವಿರುವುದರಿಂದ ಗಾಯ ಕೀವು ಕಟ್ಟದೆ ಬೇಗ ಶಮನವಾಗುತ್ತದೆ.

ಎತ್ತುಗಳಿಗೆ ಗೊರಸಲು ರೋಗ ಬಂದಾಗ ಅವುಗಳನ್ನು ಸುಡು ಬಿಸಿಲಿನಲ್ಲಿ ನಿಲ್ಲಿಸಿ ಕಾಲಿನ ಗೊರಸುಗಳ ಸುತ್ತ ಬಿಸಿ ಮರಳನ್ನು ಹಾಕುತ್ತಾರೆ. ಹೀಗೆ ಮಾಡಿದಾಗ ಕ್ರಿಮಿಗಳು ಸಾಯುತ್ತವೆ. ಹಾಗೆಯೇ ಗೊರಸುಗಳ ಗಾಯದ ಭಾಗಗಳಿಗೆ ಹೊಂಗೆ ಎಣ್ಣೆಯನ್ನು ಸವರುತ್ತಾರೆ. ಹೊಂಗೆ ಎಣ್ಣೆ ನೋವನ್ನು ಶಮನಗೊಳಿಸಿ ಕ್ರಿಮಿ ಕೀಟಗಳು ಸಾಯುವಂತೆ ಮಾಡುತ್ತದೆ.

ಹಸು, ಕರು, ಎಮ್ಮೆ, ಎತ್ತು, ಕುರಿ, ಮೇಕೆ ಈ ಎಲ್ಲಾ ಜಾನುವಾರುಗಳಿಗೆ ಕೆಲವೊಮ್ಮೆ ನೆಗಡಿ, ಕೆಮ್ಮು, ಅಜೀರ್ಣ ಮುಂತಾದ ವ್ಯಾಧಿಗಳು ಕಾಣಿಸಿಕೊಂಡಾಗ ಸ್ಥಳೀಯವಾಗಿ ಸಾಮಾನ್ಯವಾದ ಚಿಕಿತ್ಸೆ ನೀಡಿ ಗುಣಪಡಿಸಲಾಗುತ್ತದೆ. ಹಸಿಶುಂಠಿ, ಈರುಳ್ಳಿ, ಜೀರಿಗೆ, ಬೆಳ್ಳುಳ್ಳಿ, ಬೆಲ್ಲವನ್ನು ನುಣ್ಣಗೆ ಅರೆದು ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ ತಿನ್ನಿಸುತ್ತಾರೆ. ಕೆಲವೊಮ್ಮೆ ದನಗಳ ಹೊಟ್ಟೆಯಲ್ಲಿ ಗಾಳಿ ತುಂಬಿಕೊಂಡು ಮೆಲುಕು ಹಾಕದೆ, ತಿಂದ ಮೇವು ಜೀರ್ಣವಾಗದೆ ಒದ್ದಾಡುತ್ತಿರುತ್ತವೆ. ಇವನ್ನು ಹೋಗಲಾಡಿಸಲು ಹಸಿಶುಂಠಿ, ಬೆಲ್ಲ, ಈರುಳ್ಳಿ ಮತ್ತು ಹಿಂಗನ್ನು ನುಣ್ಣಗೆ ಕುಟ್ಟಿ ಮುದ್ದೆಯಂತೆ ಮಾಡಿ ತಿನ್ನಿಸಿದರೆ ಅಜೀರ್ಣದ ತೊಂದರೆ ನಿವಾರಣೆಯಾಗುತ್ತದೆ. ಹೊಟ್ಟೆಯೊಳಗಿನ ಗಾಳಿ ಹೊರಬಂದು ತಿಂದ ಮೇವು ಸುಲಭವಾಗಿ ಜೀರ್ಣವಾಗುತ್ತದೆ.

ಹಸು, ಎಮ್ಮೆಗಳಲ್ಲಿ ಕರು ಹಾಕಿದ ಒಂದೆರಡು ತಾಸುಗಳಲ್ಲಿ ಸತ್ತೆ ಅಥವಾ ಮಾಸು ಬೀಳುವುದು ಸಾಮಾನ್ಯ. ಎಳ್ಳು, ಬೆಲ್ಲ, ವೀಳ್ಯದೆಲೆ ಹಾಗೂ ಬಿದಿರಿನ ಎಲೆಗಳನ್ನು ತಿನ್ನಿಸುತ್ತಾರೆ. ಇವುಗಳಲ್ಲಿ ಗರ್ಭಾಶಯವನ್ನು ಸಂಕುಚಿತಗೊಳಿಸುವ ಹಾಗೂ ಗರ್ಭಾಶಯಕ್ಕೂ ಶಕ್ತಿ ನೀಡುವ ಗುಣಗಳಿದ್ದು, ಗರ್ಭಾಶಯದ ಜಡತ್ವ ಹಾಗೂ ನಿಶ್ಶಕ್ತಿಯನ್ನು

ನಿವಾರಿಸುತ್ತದೆ. ಹಸು ಅಥವಾ ಎಮ್ಮೆ, ಕರು ಹಾಕಿದಾಗ ಆ ಎಳೆಯ ಕರುವಿಗೆ ಅದರ ತಾಯಿಯ ಗಿಣ್ಣು ಹಾಲನ್ನು ಕುಡಿಸಬೇಕು. ಗಿಣ್ಣು ಹಾಲು ಕರುವಿಗೆ ರೋಗ ನಿರೋಧಕ ಶಕ್ತಿಯನ್ನು ನೀಡುತ್ತದೆ. ಒಂದು ವೇಳೆ ಕುಡಿಯದಿದ್ದರೆ ನಿಶ್ಯಕ್ತಿಯಿಂದ ಬಳಲುತ್ತದೆ. ಆದುದರಿಂದ ಕರು ಹುಟ್ಟಿದ ತಕ್ಷಣ ಮಿತ ಪ್ರಮಾಣದಲ್ಲಿ ಗಿಣ್ಣು ಹಾಲು ಕುಡಿಯುವಂತೆ ನೋಡಿಕೊಳ್ಳಬೇಕು. ಹಾಗೆಯೇ ಹೆಚ್ಚಿನ ಪ್ರಮಾಣದಲ್ಲಿ ಕುಡಿದರೂ ಅಜೀರ್ಣವಾಗಿ ಭೇದಿಯಾಗುತ್ತದೆ.

ಎಮ್ಮೆಗಳಿಗೆ ಕೆಲವೊಮ್ಮೆ ನೀಲಿ ನಾಲಗೆ ರೋಗ ಕಾಣಿಸಿಕೊಳ್ಳುವುದುಂಟು. ಎಮ್ಮೆಗಳ ನಾಲಗೆಯ ಬುಡದ ತಳಭಾಗ ಊದಿಕೊಳ್ಳುತ್ತದೆ. ಇದರಿಂದ ಮೇವು ತಿನ್ನಲು ಆಗದೆ ಚಡಪಡಿಸುತ್ತಿರುತ್ತವೆ. ಅವುಗಳ ನಾಲಗೆ ಬುಡದ ತಳಭಾಗ ಊದಿಕೊಳ್ಳಲು ರೋಗಾಣುಗಳ ಸೋಂಕು ಕಾರಣವಾಗಿರುತ್ತದೆ. ಈ ರೋಗದಿಂದಾಗಿ ನರಗಳು ಬಿಗಿಗೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಬಿಗಿಗೊಂಡ ನರಗಳನ್ನು ಮುಳ್ಳಿನಿಂದ ಚುಚ್ಚಿ ರಕ್ತಸ್ರಾವವಾಗುವಂತೆ ಮಾಡಬೇಕು. ಗಾಯವಾದ ನರಗಳಿಗೆ ಉಪ್ಪನ್ನು ಸವರಿದರೆ ವಾಸಿಯಾಗುತ್ತದೆ. ನೀಲಿ ನಾಲಗೆ ರೋಗವೂ ಗುಣವಾಗುತ್ತದೆ.

ರೈತರು ದನಗಳ ಕೊಟ್ಟಿಗೆಯಲ್ಲಿ ಸಾಂಬ್ರಾಣಿಯ ಹೊಗೆ ಹಾಕುತ್ತಾರೆ. ಹೀಗೆ ಮಾಡುವುದರಿಂದ ನೊಣ, ಸೊಳ್ಳೆ ಮುಂತಾದ ಕ್ರಿಮಿ ಕೀಟಗಳು ಸತ್ತು ಹೋಗುತ್ತವೆ.

ಹಾಗಾಗಿ ಸಂಜೆಯಾಗುತ್ತಲೇ ದನಗಳ ಕೊಠಡಿಯಲ್ಲಿ ಹೊಗೆ ಹಾಕಿ ಅವು ನೆಮ್ಮದಿಯಿಂದ ಹುಲ್ಲು ಮೇಯಲು ಹಾಗೂ ಮಲಗಲು ಉತ್ತಮ ಸ್ಥಿತಿ ನಿರ್ಮಾಣ ಮಾಡಲಾಗುತ್ತದೆ.

ಹಸು, ಎಮ್ಮೆಗಳು ಬೆದೆಗೆ ಬಾರದೆ ಗೊಡ್ಡಾಗಿ ಉಳಿದಿದ್ದಲ್ಲಿ ಅವುಗಳಿಗೆ ದ್ವಿದಳ ಧಾನ್ಯಗಳಾದ ಹುರುಳಿ, ಉದ್ದು, ಹೆಸರು ಕಾಳುಗಳನ್ನು ತಿನ್ನಿಸುತ್ತಾರೆ. ಈ ಕಾಳುಗಳಲ್ಲಿ ಸಾರಜನಕ ಹಾಗೂ ಹಾರ್ಮೋನ್ ಅಂಶ ಇರುವುದರಿಂದ ಬೇಗ ಬೆದೆಗೆ ಬಂದು ಗರ್ಭಧರಿಸುತ್ತವೆ.

ಹಸುರು ಮೇವು ಯಥೇಚ್ಛವಾಗಿ ಸಿಗುವ ಕಾಲದಲ್ಲಿ ಜಾನುವಾರುಗಳಿಗೆ ನಾಲಗೆ ಜಡ್ಡು ಕಟ್ಟಿರುತ್ತದೆ. ಆಗ ಹೆಚ್ಚಿನ ಪ್ರಮಾಣದಲ್ಲಿ ಜೊಲ್ಲುರಸ ಉತ್ಪತ್ತಿಯಾಗುವಂತೆ ಮಾಡಿ ಜೀರ್ಣಶಕ್ತಿ ಹೆಚ್ಚಿಸಲು ಜಾನುವಾರುಗಳ ನಾಲಗೆಗೆ ಉಪ್ಪು ಮತ್ತು ಹಸಿ ಮೆಣಸಿನಕಾಯಿಗಳನ್ನು ನುಣ್ಣಗೆ ಅರೆದು ತಿಕ್ಕುತ್ತಾರೆ. ಅಲ್ಲದೆ ಖಾರದ ಮಜ್ಜಿಗೆಯನ್ನು ಕುಡಿಸುತ್ತಾರೆ. ಇದರಿಂದ ನಾಲಗೆಯ ಜಡ್ಡು ನಿವಾರಣೆಯಾಗುತ್ತದೆ.


ಬಂಡಿ ಎಳೆಯುವ ಹಾಗೂ ಉಳುಮೆಯಲ್ಲಿ ತೊಡಗುವ ಎತ್ತುಗಳಿಗೆ ಮಾಮೂಲು ಮೇವಿನ ಜೊತೆಗೆ ವಿಶೇಷವಾದ ಆಹಾರವನ್ನು ನೀಡಿ ಕೃಶವಾಗದಂತೆ ನೋಡಿಕೊಳ್ಳಲಾಗುತ್ತದೆ. ನೀರಿನಲ್ಲಿ ನೆನೆಸಿಟ್ಟು ರುಬ್ಬಿದ ಹುರುಳಿ ಹಾಗೂ ಬೇಯಿಸಿದ ಹುರುಳಿಯನ್ನು ತಿನ್ನಿಸುತ್ತಾರೆ. ಕೆಲವರು ಎತ್ತುಗಳಿಗೆ ಪಪ್ಪಾಯಿಹಣ್ಣು, ರಾಗಿಮುದ್ದೆ, ರಾಗಿರೊಟ್ಟಿ, ತುಪ್ಪ ತಿನ್ನಿಸುತ್ತಾರೆ. ಇದರಿಂದ ಹೆಚ್ಚಿನ ಶಕ್ತಿ ಬರುತ್ತದೆ. ದುಡಿಮೆಯಿಂದಾದ ಆಯಾಸ ನಿವಾರಣೆಯಾಗಿ ಮತ್ತಷ್ಟು ಬಲ ವೃದ್ಧಿಯಾಗಿ ಹೊಳಪಿನಿಂದ ಕಂಗೊಳಿಸುತ್ತವೆ. ಹೀಗೆ ನಮ್ಮ ಗ್ರಾಮೀಣ ಜನರು ಸ್ಥಳೀಯವಾಗಿ ಸುಲಭವಾಗಿ ಸಿಗುವ ಧಾನ್ಯಗಳು, ಗಿಡ ಮೂಲಿಕೆಗಳಿಂದ ಪಶುಗಳಲ್ಲಿ ಕಾಣಿಸಿಕೊಳ್ಳುವ ರೋಗಗಳನ್ನು ನಿಯಂತ್ರಿಸುವ ಕ್ರಮಗಳನ್ನು ಕಂಡುಕೊಂಡಿದ್ದಾರೆ.

*ಪಿ.ಸಿ.ಡಿ.*

**ಪಾತಿಭೂಮಿ** ಸಸಿಗಳನ್ನು ಬೆಳೆಯಲು ಕೊಟ್ಟಿಗೆ ಗೊಬ್ಬರದಿಂದ ಹದಗೊಳಿಸಿದ ಅತಿ ಚಿಕ್ಕದಾದ ಭೂಮಿ. ಪಾತಭೂಮಿಯನ್ನು ಸಸಿ ಮಡಿ ಎಂದು ಕರೆಯುತ್ತಾರೆ. ಇದರಲ್ಲಿ ಮೂರು ವಿಧಗಳಿವೆ.

**1. ಕೆಸರು ಗದ್ದೆಗೆ ನಾಟಿಮಾಡುವ ಬತ್ತದ ಸಸಿಗಳನ್ನು ಬೆಳೆಯಲು ಮಾಡುವ ಕೆಸರು ಪಾತಿಭೂಮಿ :** ರೈತರು ಕೆಸರುಗದ್ದೆಯನ್ನು ಮಾಡುವ ಮೊದಲು ಗದ್ದೆಯ ಈಶಾನ್ಯ ದಿಕ್ಕಿನಲ್ಲಿ ಪಾತಿಭೂಮಿಯನ್ನು ಆಯ್ಕೆ ಮಾಡುತ್ತಾರೆ. ಒಂದು ಎಕರೆ ಗದ್ದೆಗೆ ಸರಿ ಸುಮಾರು 20 x 30 ಅಡಿಗಳಷ್ಟು ಪಾತಿಭೂಮಿ ಮಾಡುತ್ತಾರೆ. ಗದ್ದೆಯನ್ನು ಹದಗೊಳಿಸುವ ಮೊದಲು ಪಾತಿಭೂಮಿ ಹದಗೊಳಿಸುತ್ತಾರೆ. 20 x 30 = 600 ಚದರ ಅಡಿಗಳಷ್ಟು ಜಮೀನಿಗೆ ನೀರು ಕಟ್ಟಿ ಚೆನ್ನಾಗಿ ನೆನೆಸಿ ಮೂರು ಸಾಲು ಕೆಸರು ಗದ್ದೆ ಮಾಡುತ್ತಾರೆ. ಅದಕ್ಕೆ ಸಾವಯವ / ಕೊಟ್ಟಿಗೆ ಗೊಬ್ಬರ ಹಾಕಿ ಚೆನ್ನಾಗಿ ಭೂಮಿಯ ಜೊತೆ ಬೆರೆಯುವಂತೆ ಮಾಡುತ್ತಾರೆ. ಪಾತಿ ಭೂಮಿಗೆ ಸಾವಯವ ಅಂದರೆ ಗ್ಲಿರ್‌ಸೀಡಿಯಾ ಸೊಪ್ಪು / ಹೊಂಗೆ ಸೊಪ್ಪು ಹಾಕಿ ತುಳಿದು ಕೆಸರಿನ ತಳಭಾಗಕ್ಕೆ ಹೋಗುವಂತೆ ಮಾಡುತ್ತಾರೆ. ಆಗ ಕೆಸರು ಬಹಳ ಕಳಿಯುತ್ತದೆ. 15 ದಿನಗಳ ಅನಂತರ ಮೇಲ್ಭಾಗದ ಕೆಸರನ್ನು ಕಾಲಾಡಿ ಪಾತಿಭೂಮಿ ತಯಾರಿಸುತ್ತಾರೆ. 20 ಅಂಗಲ x 30 ಉದ್ದ ಪಾತಿಭೂಮಿಯನ್ನು ಸಾಮಾನ್ಯವಾಗಿ ಎರಡು ಭಾಗ ಮಾಡಿಕೊಳ್ಳುತ್ತಾರೆ. ಸುತ್ತಲೂ ಕೆಸರಿನಿಂದ ಬದುವನ್ನು ಹಾಕಿ ಮಧ್ಯದಲ್ಲಿ ಅಂದರೆ 10 x 30 ಅಂಗುಲ ಬರುವಂತೆ ಕಾಲುವೆಯನ್ನು ತೋಡುತ್ತಾರೆ.

ಸಾಮಾನ್ಯವಾಗಿ ಪಾತಿಭೂಮಿ ಒಂದು ಕಡೆ ಇಳಿಜಾರಾಗಿರುತ್ತದೆ. ಇಳಿಜಾರು ಮಾಡಲು ಕಾರಣವೇನೆಂದರೆ ಮೊಳಕೆ ಬಂದ ಬತ್ತವನ್ನು (ಬೀಜದ ಬತ್ತವನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಕಳೆಯ ಬೀಜವಿಲ್ಲದಂತೆ ಮಾಡಿ ಬತ್ತವನ್ನು 24 ಗಂಟೆ ನೀರಿನಲ್ಲಿ ನೆನೆಸುತ್ತಾರೆ. ಅನಂತರ ನೀರನ್ನು ಬಸಿದು ಒಂದು ಮಂಕರಿಯ ತಳಭಾಗಕ್ಕೆ ಗೋಣಿತಾಟನ್ನು ಹಾಸಿ ಅದರಲ್ಲಿ ನೆನೆದ ಬತ್ತವನ್ನು ಹಾಕಿ 24 ಗಂಟೆಗಳು ಶಾಖ ಕೊಡುತ್ತಾರೆ. ಮಧ್ಯದಲ್ಲಿ 8 ಗಂಟೆಗೆ ಒಮ್ಮೆ ನೀರು ಹಾಕಿ ಪುನಃ ಶಾಖಕ್ಕೆ ಒಳಪಡಿಸಿದಾಗ 24 ಗಂಟೆಯ ಅನಂತರ ಬತ್ತ ಮೊಳಕೆ ಬರುತ್ತದೆ.





ಇಳಿಜಾರಾದ ಪಾತಿ ಭೂಮಿಯೊಳಗೆ ಬಿತ್ತುವವರು ಪಾತಿ

ಮಡಿ (ಭೂಮಿ)ಯಿಂದ ಹೊರಗೆ ನಿಂತು ಹದವಾಗಿ ಎರಚುತ್ತಾರೆ. ಎರಚಿದ ಬತ್ತ ಹದವಾಗಿ, ನಯವಾಗಿರುವ ಕೆಸರಿನ ಒಳಕ್ಕೆ ಹೋಗಿ ಸೇರಿಕೊಳ್ಳುತ್ತದೆ. ಆಗ ಅದರಲ್ಲಿಯ ನೀರನ್ನು ಹೊರಬಿಡಬೇಕು. 12 ಗಂಟೆಯ ಅನಂತರ ಪುನಃ ನೀರನ್ನು ಹಾಯಿಸಬೇಕು. ಆ ನೀರು 3-4 ಗಂಟೆ ಕಾಲ ಪಾತಿ ಭೂಮಿಯಲ್ಲಿರಬೇಕು. ಪುನಃ ಖಾಲಿ ಮಾಡಬೇಕು. ಈ ರೀತಿಯಾಗಿ 3-4 ಬಾರಿ ಮಾಡಿದ ಮೇಲೆ ಯಾವಾಗಲೂ ಪಾತಿ ಭೂಮಿಯಲ್ಲಿ ನೀರಿರುವಂತೆ ನೋಡಿಕೊಳ್ಳಬೇಕು. ಅಂಥ ನಯವಾದ ಕೆಸರಿನಲ್ಲಿ ಬತ್ತ ಬೇರು ಬಿಟ್ಟು ಒಟ್ಟು ಚೆನ್ನಾಗಿ ಬರುತ್ತದೆ. ಆ ವೇಳೆಗೆ ಸಸಿ ಪೈರು ಹಸುರಾಗಿರುತ್ತದೆ. ಒಂದು ತಿಂಗಳಿಗೆ ಅಥವಾ 25 ದಿನಗಳಿಗೆ ಬಂದ ಸಸಿ ಪೈರನ್ನು ಪಾತಿ ಭೂಮಿಯಿಂದ ಕಿತ್ತು ಹದಗೊಳಿಸಿದ ಕೆಸರು ಗದ್ದೆಯಲ್ಲಿ ನಾಟಿ ಮಾಡುತ್ತಾರೆ.


**2. ಹೊಲಕ್ಕೆ ನಾಟಿ ಮಾಡುವ ರಾಗಿ ಪೈರನ್ನು ಬೆಳೆಯಲು ಮಾಡುವ ಒಣ ಪಾತಿ ಭೂಮಿ :** ರಾಗಿಯಲ್ಲಿ ಅನೇಕ ವಿಧಗಳಿವೆ. ಪ್ರಧಾನವಾಗಿ ಎರಡು ಭಾಗ ಮಾಡಬಹುದು. 1. ಹೈನ್‌ರಾಗಿ 2. ಕಾರ್‌ರಾಗಿ (ಹೈಬ್ರಿಡ್) ಸಾಮಾನ್ಯವಾಗಿ ಹೈನ್‌ರಾಗಿಯನ್ನು ಬಿತ್ತುವಾಗ ನೇರವಾಗಿ ಬಿತ್ತುವ ಹೊಲವನ್ನೆಲ್ಲಾ ಪಾತಿಭೂಮಿ ಎಂದು ರೈತರು ಭಾವಿಸಿ ಹೊಲವನ್ನು ಚೆನ್ನಾಗಿ ಗೈದು ಮೂರುಬಾರಿ ಹದಗೊಳಿಸಿ, ಕಳೆ, ಕಡ್ಡಿ ಕಸವನ್ನು ತೆಗೆದು ಪೂರ್ಣ ಹೊಲದ ವಿಸ್ತೀರ್ಣವನ್ನು ಒಂದೇ ಪಾತಿ ಭೂಮಿ ಎಂದು ತಿಳಿದು ನೇಗಿಲಿನಲ್ಲಿ ಮೊದಲೇ ಸಾಲು ಹೊಡೆಯುತ್ತಾರೆ. ಮಳೆ ಬಂದು ಹದ ಇದ್ದಾಗ ರಾಗಿಯನ್ನು ಹೊಲಕ್ಕೆ ಎರಚುತ್ತಾರೆ. ಅನಂತರ ಹಲುಬೆ ಹೊಡೆದು ರಾಗಿಯನ್ನು ಮುಚ್ಚುತ್ತಾರೆ. 2-3 ದಿನಗಳಲ್ಲಿ ರಾಗಿ ಮೊಳೆತು ಪೈರು ಕಾಣಿಸುತ್ತದೆ. ಪೈರು ಅರ್ಧ ಅಡಿ ಎತ್ತರ ಬಂದಾಗ ಸಾಲಿನ ಮಧ್ಯ ಇರುವ ರಾಗಿ ಪೈರು ಮತ್ತು ಕಳೆಯನ್ನು ಎಡಗುಂಟೆ ಹಾಕಿ ಕಳೆಯುತ್ತಾರೆ. ಆಗ ಪೈರು ನಾಟಿ ಮಾಡಿದಂತೆ ಸಾಲಾಗಿ ಕಾಣಿಸುತ್ತದೆ. ಒಂದು ವೇಳೆ ಪೈರು ಒತ್ತಾಗಿದ್ದರೆ ಸಾಲಿನ ವಿರುದ್ಧವಾಗಿ ಹಲುಬೆ ಹೊಡೆದು ಪೈರನ್ನು ವಿರಳಗೊಳಿಸುತ್ತಾರೆ. ಈ ಬೇಸಾಯ ಕ್ರಮ ಮಳೆ ಆಶ್ರಯದಲ್ಲಿ ಮಾತ್ರ.

ಹೈಬ್ರಿಡ್ ರಾಗಿಯನ್ನು ಬೆಳೆಯಲು ಪ್ರತ್ಯೇಕವಾದ ಪಾತಿಭೂಮಿ ತಯಾರಿಸುತ್ತಾರೆ. ಒಂದು ಎಕರೆಗೆ ಬೇಕಾಗುವ ತಳಿ ಬಿತ್ತನೆ ರಾಗಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಹೊಲದಲ್ಲಿ ದಾರಿಗೆ ಸಮೀಪವಿರುವ ಜಾಗದಲ್ಲಿ ಪಾತಿ ಭೂಮಿ ಆಯ್ಕೆ ಮಾಡಿಕೊಳ್ಳುವರು. ಏಕೆಂದರೆ ಅಲ್ಲಿ ಬೆಳೆದ ಪೈರನ್ನು ಬೇರೆ ಹೊಲಗಳಿಗೂ ಸಾಗಿಸಲು ಅನುಕೂಲ ವಾಗುತ್ತದೆ. ಮೂರ್‍ನಾಲ್ಕು ಸಾಲು ಚೆನ್ನಾಗಿ ಗೈದು ಭೂಮಿ ಹದಗೊಳಿಸುತ್ತಾರೆ. ಅದರಲ್ಲಿರುವ ಕಡ್ಡಿ, ಕಸ, ಕಲ್ಲುಗಳನ್ನು ಆಯ್ದು ಆಚೆ ಹಾಕುತ್ತಾರೆ. ಕಳಿತ ಕೊಟ್ಟಿಗೆ ಗೊಬ್ಬರವನ್ನು ಪಾತಿ ಭೂಮಿಯ ಮೇಲ್ಭಾಗಕ್ಕೆ ಎಲ್ಲಾ ಕಡೆಯೂ ಬೀಳುವಂತೆ ಎರಚುತ್ತಾರೆ. ಅನಂತರ ತಳಿ ರಾಗಿಯನ್ನು ಎರಚುತ್ತಾರೆ. ಉದಾಹರಣೆಗೆ 20 x 30 ವಿಸ್ತೀರ್ಣದಲ್ಲಿ ಪಾತಿ ಭೂಮಿ ಇದ್ದರೆ ಮೊದಲು 20 x 30 ವಿಸ್ತೀರ್ಣದ ಸುತ್ತಲೂ ಕಾಲುವೆ ತೆಗೆಯುತ್ತಾರೆ. ಕಾಲುವೆ ತೆಗೆಯುವಾಗ ಬಂದ ಮಣ್ಣನ್ನು ಪಾತಿ ಭೂಮಿಯ ಮೇಲ್ಭಾಗಕ್ಕೆ ಎರಚುತ್ತಾರೆ.




ಮಳೆಗಾಲದಲ್ಲೂ ಈ ಪಾತಿಭೂಮಿಯಲ್ಲಿ ಪೈರು ಚೆನ್ನಾಗಿ ಬರುತ್ತದೆ. ಮಳೆ ಇಲ್ಲದಿದ್ದರೆ ಕಾಲುವೆಯಲ್ಲಿ ನೀರು ಬಿಟ್ಟು ಕೊಂಡು ತಟ್ಟೆಯನ್ನುಪಯೋಗಿಸಿಕೊಂಡು ಪಾತಿಭೂಮಿಗೆ ನೀರು ಎರಚುತ್ತಾರೆ. ನೀರನ್ನು ಹಾಯಿಸಬಾರದು. ಎರಚಬೇಕು. ರಾಗಿಯು ಮಣ್ಣಿನ ಮೇಲ್ಭಾಗದಲ್ಲಿದ್ದು ಗೊಬ್ಬರದ ಸಹಾಯದಿಂದ ಪೈರು ಹುಲುಸಾಗಿ ಬರುತ್ತದೆ. ಕೀಳಲು ಸುಲಭವಾಗಿರುತ್ತದೆ. ಸುಮಾರು 25 ರಿಂದ 30 ದಿನಗಳಲ್ಲಿ ಕಿತ್ತು ನಾಟಿ ಮಾಡಬಹುದು.

**3. ಸೊಪ್ಪುಗಳನ್ನು ಬೆಳೆಯಲು ಮಾಡುವ ಪಾತಿಭೂಮಿ :** ರೈತರು ಮನೆಗೆ ಬೇಕಾಗುವ ತರಕಾರಿ ಮತ್ತು ಸೊಪ್ಪನ್ನು ಮನೆಯ ಪಕ್ಕದಲ್ಲಿರುವ ಜಮೀನಿನಲ್ಲಿ ಬೆಳೆದುಕೊಳ್ಳುತ್ತಾರೆ. ಈ ಜಮೀನು ದನಕರುಗಳಿಗೆ ಹುಲ್ಲು ಹಾಕುವ ಮೆದೆ (ಬಣವೆ) ಜಾಗ ಆಗಿರುತ್ತದೆ ಅಥವಾ ಮನೆ ಪಕ್ಕದಲ್ಲಿ ಇರುವ ಜಾಗವನ್ನು ಉಪಯೋಗಿಸಿಕೊಳ್ಳುತ್ತಾರೆ.




ಕಲ್ಲು/ಇಟ್ಟಿಗೆ/ ಹೆಂಚು

ಸೊಪ್ಪು / ತರಕಾರಿ ಬೆಳೆಯಲು ರೈತರು ಎರಡು ಕ್ರಮ ಅನುಸರಿಸುತ್ತಾರೆ. ಮನೆಗೆ ಮಾತ್ರ ಬೆಳೆಯುವುದಾದರೆ ಮನೆಯ ಪಕ್ಕದ ಹಿತ್ತಲಿನಲ್ಲಿಯೂ, ಮಾರುಕಟ್ಟೆಯಲ್ಲಿ ಮಾರಿ ಆರ್ಥಿಕವಾಗಿ ಸಬಲರಾಗಲು ತೋಟದಲ್ಲಿ ಅಂದರೆ ಅಡಕೆ / ತೆಂಗುಗಳ ನಡುವೆ ಅಥವಾ ಖಾಲಿ ಜಾಗದಲ್ಲಿಯೂ ಪಾತಿ ಭೂಮಿ ಸಿದ್ಧಮಾಡುತ್ತಾರೆ.

ಮನೆಯ ಪಕ್ಕದಲ್ಲಿ ಸಿದ್ಧಪಡಿಸಿದ ಪಾತಿಭೂಮಿ ಚಿಕ್ಕದಾಗಿದ್ದು ಅದನ್ನು ಒಂದು ಅಡಿ ಇಳಿ ಅಗೆತ ಮಾಡಿ ಸುಮಾರು 15 ದಿನಗಳ ಕಾಲ ಒಣಗಿಸುತ್ತಾರೆ. ಅನಂತರ ಕೊಟ್ಟಿಗೆ ಗೊಬ್ಬರ ಹಾಕಿ ಪುನಃ ಅಗೆದು ಹದಗೊಳಿಸುತ್ತಾರೆ. ಸಾಮಾನ್ಯವಾಗಿ ಒಂದು ಪಾತಿ ಭೂಮಿ 2 x 3 ಅಡಿ ಇರುವಂತೆ ಭಾಗ ಮಾಡಿ ಬೇಕಾದ ಸೊಪ್ಪಿನ ಬೀಜ ಬಿತ್ತುತ್ತಾರೆ.

ಚಿತ್ರದಲ್ಲಿ ಕಾಣಿಸಿರುವಂತೆ ಮಧ್ಯದಲ್ಲಿ ಒಂದು ಕಲ್ಲು ಹಾಕಿರುತ್ತಾರೆ. ಮೊಳಕೆ ಬರುವವರೆಗೆ ಜರಡಿಯಲ್ಲಿ ನೀರನ್ನು ಹಾಕುತ್ತಾರೆ. ಜರಡಿಯಲ್ಲಿ ಹಾಕಲು ಅನುಕೂಲವಾಗುವಂತೆ ಮಧ್ಯದಲ್ಲಿರುವ ಕಲ್ಲು

ಉಪಯೋಗವಾಗುತ್ತದೆ. ಸೊಪ್ಪು ಭೂಮಿಯಿಂದ ಒಂದೆರಡು ಇಂಚು ಬೆಳೆದ ಅನಂತರ ಬಿಂದಿಗೆಯಲ್ಲಿಯೇ ನೀರು ಹಾಕುತ್ತಾರೆ. ಆ ಭೂಮಿಯಲ್ಲಿ ವಿವಿಧ ಬಗೆಯಸೊಪ್ಪು ಹಾಗೂ ತರಕಾರಿ ಬೆಳೆಯುತ್ತಾರೆ. ಉದಾಹರಣೆಗೆ ದಂಟು, ಅರಿವೆ ಸೊಪ್ಪು, ಸಬ್ಬಸಿಗೆ, ಕೊತ್ತಂಬರಿ ಮುಂತಾದ ಸೊಪ್ಪುಗಳನ್ನು ಜೊತೆಯಲ್ಲಿಯೇ ಬೆಳೆಯುತ್ತಾರೆ. ಬದುಗಳಲ್ಲಿ ಮೂಲಂಗಿ ಹಾಗೂ ಹುಳಿ ಬಸಲೇ, ಚಕೋತ ಸೊಪ್ಪು ಮುಂತಾದವುಗಳನ್ನು ಬೆಳೆಯುತ್ತಾರೆ. ಈ ಪಾತಿ ಭೂಮಿಯಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ. ದೊಡ್ಡ ದೊಡ್ಡ ಪಾತಿಭೂಮಿಗಳಲ್ಲಿ ಹುರುಳಿಕಾಯಿ, ಬದನೆಕಾಯಿ ಹಾಗೂ ಬದುಗಳಲ್ಲಿ ಹಾಗಲಕಾಯಿ ಹೀರೆಕಾಯಿ, ತೊಂಡೆಕಾಯಿ ಮುಂತಾದ ಬಳ್ಳಿಗಳಲ್ಲಿ ಬಿಡುವ ತರಕಾರಿಗಳನ್ನು ಬೆಳೆಯುವರು.

*ಆರ್.ಎಚ್.ಎನ್.*

**ಪುನರ್ಪುಳಿ** ಆಮ್ ಸೋಲ್, ಸಾರಾಮ್ಲ, ಬೀರುಂಡ, ಮುರುಗಲು ಎಂಬ ಹೆಸರುಗಳಿಂದ ಕರೆಯುವ ಇದು ಕೋಕಂ ಎಂದು ಜನಪ್ರಿಯವಾಗಿದೆ. ಕ್ಲೂಸಿಯೇಸಿಯ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಗಾರ್ಸಿನಿಯ ಇಂಡಿಕ. ಇದರಲ್ಲಿ ಕೆಂಪು ಮತ್ತು ಬಿಳಿ ಎಂಬ ಎರಡು ಪ್ರಭೇದಗಳಿವೆ. ದಪ್ಪವಾಗಿ ಬೆಳೆಯದ, ಹಸುರಿನಿಂದ ಕೂಡಿದ ಮರವಿದು. ಎಲೆಗಳು ಗುಂಡಾಗಿರುತ್ತವೆ. ರೆಂಬೆಗಳು ಜೋತು ಬಿದ್ದಂತಿರುವುದು ಸಾಮಾನ್ಯ. ಎಲೆಯ ರುಚಿ ಹುಳಿ.



**ಕೃಷಿ :** 10-15 ಮೀ. ಎತ್ತರ ಬೆಳೆಯಬಲ್ಲ ಇದು ಖುಷ್ಕಿ ಬೆಳೆ. ಎಲ್ಲ ರೀತಿಯ ಮಣ್ಣು ಮತ್ತು ಹವಾಗುಣಗಳಲ್ಲಿ ಕೃಷಿ ಮಾಡಬಹುದು. ಸಸ್ಯಾಭಿವೃದ್ಧಿ ಕಸಿಕಟ್ಟುವುದರ ಮೂಲಕ ನಡೆಯುತ್ತದೆ. ಬೀಜದಿಂದ ಸಸ್ಯಾಭಿವೃದ್ಧಿ ಮಾಡುವುದು ಕಡಿಮೆ. ಸಸಿ ನೆಟ್ಟ ಮೇಲೆ ತಿಪ್ಪೆಗೊಬ್ಬರವನ್ನು ಕೊಟ್ಟಲ್ಲಿ ಉತ್ಕೃಷ್ಟವಾಗಿ ಬೆಳೆದು ಕಡಿಮೆ ಅವಧಿಯಲ್ಲಿ ಉತ್ತಮ ಇಳುವರಿ ಕೊಡುತ್ತದೆ. ಸಾಮಾನ್ಯವಾಗಿ ಜುಲೈ - ಆಗಸ್ಟ್ ತಿಂಗಳಲ್ಲಿ ಸಸಿಯನ್ನು ನಾಟಿ ಮಾಡುವರು. ಮಾರ್ಚ್‌ನಿಂದ ಮೇ ತಿಂಗಳ ಅವಧಿಯಲ್ಲಿ ಫಸಲು ಕೊಡಲು ಆರಂಭಿಸುತ್ತದೆ. ಒಂದು ಎಕರೆಗೆ ಮೂರು ಟನ್ ಇಳುವರಿ ಪಡೆಯಬಹುದು. ಭಾರತ ಮೂಲದ ಸಸ್ಯವಾದ ಇದು ಅನೇಕ ರಾಜ್ಯಗಳಲ್ಲಿ ಕೃಷಿಯಲ್ಲಿದೆ. ಕರ್ನಾಟಕದ ಕೊಡಗು, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇದರ ತವರು ಪಶ್ಚಿಮ ಘಟ್ಟ ಎಂದು ಗುರುತಿಸಲಾಗಿದೆ.

**ಉಪಯೋಗ :** ಕಲ್ಪವೃಕ್ಷ ಎಂದು ಸಹ ಕರೆಯುವ ಇದರ ಎಲೆ, ಸಿಪ್ಪೆ ಹಾಗೂ ಬೀಜಗಳಲ್ಲಿ ಔಷಧೀಯ ಗುಣಗಳಿವೆ. ಪಿತ್ತನಿವಾರಣೆ, ರಕ್ತ ಶುದ್ಧಿ, ತಲೆ ಸುತ್ತು ಮೂಲವ್ಯಾಧಿ, ಅತಿಸಾರ, ಹೃದಯ ಸಂಬಂಧಿ ಕಾಯಿಲೆಗಳಿಗೆ ಇದು ಉತ್ತಮ ಔಷಧಿ ಎಂದು ತಿಳಿದುಬಂದಿದೆ. ಜೀರಿಗೆ, ಕಾಳುಮೆಣಸು ಮತ್ತು ಶ್ರೀಗಂಧದ ಜೊತೆಗೆ ಸಿಪ್ಪೆಯನ್ನು ಅರೆದು ನಿಂಬೆ ಹುಳಿ ಅಥವಾ ಮಜ್ಜಿಗೆ ಸೇರಿಸಿ ಕುಡಿಯಬಹುದು. ಸಿಪ್ಪೆಯನ್ನು ನೀರಿನಲ್ಲಿ ನೆನೆಸಿ ಅದರ ರಸವನ್ನು ಖಾಲಿ ಹೊಟ್ಟೆಗೆ ಸೇವಿಸುವುದರಿಂದ ಗ್ಯಾಸ್‌ಟ್ರಬಲ್ ನಿವಾರಣೆಯಾಗುವುದು. ಇದರ ಬೀಜದಲ್ಲಿ ಜಿಡ್ಡಿನಂಶವಿರುವುದರಿಂದ ಅರೆದು ಅಂಗಾಲು ಬಿರುಕುಗಳಿಗೆ ಔಷಧಿಯಾಗಿ ಬಳಸುವರು. ಬಲಿತ ಹಣ್ಣುಗಳನ್ನು ಕೊಯ್ದು ಉಪ್ಪು ಮತ್ತು ಸಕ್ಕರೆ ಬೆರೆಸಿ ಒಂದೆರಡು ದಿನ ಬಿಟ್ಟರೆ ಅದರಿಂದ ಕೆಂಪು ಬಣ್ಣದ ರಸ ಒಸರಲು ಆರಂಭಿಸುತ್ತದೆ. ಆಗ ಸಿಪ್ಪೆಗೆ ಸ್ವಲ್ಪ ಉಪ್ಪು ಸವರಿ ನೆರಳಲ್ಲಿ ಒಣಗಿಸಿ ಸಂಸ್ಕರಿಸಿಟ್ಟು ಅಡುಗೆಗೆ ಹುಣಸೆಹಣ್ಣಿನ ಬದಲು ಉಪಯೋಗಿಸುವರು. ಇತ್ತೀಚೆಗೆ ಇದರ ಬೇಡಿಕೆ ಹೆಚ್ಚಾಗಿದ್ದು. ಇದರ ಕೃಷಿಯನ್ನು ಕೆಲವು ರೈತರು ಕೈಗೊಳ್ಳುತ್ತಿದ್ದಾರೆ.

*ಬಿ.ವಿ.*

**ಪೇರಲೆ** ಕರ್ನಾಟಕದಲ್ಲಿ ಹುಬ್ಬಳ್ಳಿ ಧಾರವಾಡದ ಕಡೆ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಹಣ್ಣಿನ ಗಾತ್ರ ಮುಷ್ಟಿಯಲ್ಲಿ ಹಿಡಿಯುವಷ್ಟು ಇರುತ್ತದೆ. ಸಿಹಿಯಾದ ರುಚಿಯುಳ್ಳ ಈ ಹಣ್ಣಿನಲ್ಲಿ ಬೀಜ ಮಾತ್ರ ಬಲುಗಟ್ಟಿ. ಒಂದು ಎಕರೆ ಪ್ರದೇಶದಲ್ಲಿ ನೂರು ಮರಗಳನ್ನು ಬೆಳೆಸಬಹುದು. ಗಿಡದಿಂದ ಗಿಡಕ್ಕೆ 15 ಅಡಿಗಳಷ್ಟು ಅಂತರವಿರಬೇಕು. ಬೀಜದಿಂದ ಸಸ್ಯಾಭಿವೃದ್ಧಿ.ಕೆಂಪು ಮಣ್ಣು ಒಳ್ಳೆಯದು. ಮೂರು ಅಡಿ ಆಳ ಅಷ್ಟೇ ಅಗಲದ ಗುಂಡಿಯನ್ನು ತೆಗೆದು ನೆಡಬೇಕು. ಸುಮಾರು ಮೂರು ವರ್ಷಗಳವರೆಗೆ ಪ್ರತಿದಿನ ನೀರನ್ನು ಕೊಡಬೇಕು. ಇದು ಫಸಲನ್ನು ಬಿಡುವುದು ನಾಲ್ಕನೇ ವರ್ಷದಿಂದ. ಎತ್ತರವಾಗಿ



ದೃಢವಾಗಿ ಮರ ಬೆಳೆಯಲು, ಪಕ್ಕದಲ್ಲಿ ಬರುವ ಕಂದುಗಳನ್ನು ಮೂರು ಅಡಿ ಎತ್ತರದವರೆಗೆ ಕತ್ತರಿಸಬೇಕು.

ಹತ್ತು ವರ್ಷದ ಮರ ಹೆಚ್ಚು ಫಲವನ್ನು ಕೊಡುತ್ತದೆ. ಒಂದು ವರ್ಷದಲ್ಲಿ ಎರಡು ಸಲ ಹಣ್ಣನ್ನು ನಿರೀಕ್ಷಿಸಬಹುದು. ಬೇಸಗೆಯಲ್ಲಿ ಹಣ್ಣಿನ ರುಚಿ ಹೆಚ್ಚು. ಗಿಡ ಚೆನ್ನಾಗಿ ಬೆಳೆಯಲು, ಮಳೆ ಬಿದ್ದ ದಿನ ಕೊಟ್ಟಿಗೆ ಗೊಬ್ಬರ ಉಪ್ಪು ಸೇರಿಸಿ ಗಿಡದ ಸುತ್ತಲೂ ಸುರಿದು ಮಣ್ಣು ಏರಿಸಬೇಕು. ಸಾಮಾನ್ಯವಾಗಿ ಇದಕ್ಕೆ ಯಾವುದೇ ರೋಗ ತಗುಲುವುದಿಲ್ಲ. ಆಲಿಕಲ್ಲು ಬಿದ್ದರೆ ಹಣ್ಣಿನ ಮೇಲೆ ಕಪ್ಪು ಚುಕ್ಕೆ ಬೀಳುತ್ತದೆ. ಮಾಗಿದ ಹಣ್ಣನ್ನು ಐದು ದಿನಗಳವರೆಗೆ ಇಡಬಹುದು.

ಪೇರಲೆಯಲ್ಲಿ ಜವಾರಿ ಜಾತಿಯದು ಉತ್ತಮ ತಳಿ. ಇದು ಸುಮಾರು 20 ವರ್ಷಗಳವರೆಗೂ ಫಸಲು ಬಿಡುತ್ತದೆ. ಫಸಲು ಕಡಿಮೆ ಎನಿಸಿದಾಗ ಬುಡದಿಂದ ಮೂರಡಿ ಬಿಟ್ಟು ಮರವನ್ನು ಕತ್ತರಿಸಿದರೆ ಚಿಗುರೊಡೆದು ಮೂರು ವರ್ಷಗಳ ಕಾಲ ಫಲವನ್ನು ಕೊಡುತ್ತದೆ. ಪಕ್ಕದಲ್ಲಿ ಬರುವ ರೆಂಬೆಗಳನ್ನು ಕತ್ತರಿಸಿ ಬಲಿಷ್ಠವಾದುದನ್ನು ಉಳಿಸಿಕೊಳ್ಳಬೇಕು.

ಪೇರಲೆ ಹಣ್ಣಾದಾಗ ಗುಬ್ಬಿ, ಬಾವಲಿ, ಗಿಳಿಗಳು ತಿನ್ನಲು ಬರುತ್ತವೆ. ಈ ಕೃಷಿ ಮಾಡುವವರು ಗೇಣಿಗೆಯವರು. ಸೆಪ್ಟೆಂಬರ್ - ಅಕ್ಟೋಬರ್ ತಿಂಗಳಲ್ಲಿ ಜವಾರಿ ಜಾತಿ ಉತ್ತಮ ಇಳುವರಿ ಕೊಡುತ್ತದೆ. ಇದು ನವಿಲೂರು ಪೇರಳೆ ಎಂದೇ ಹೆಸರಾಗಿದೆ. ಇತ್ತೀಚೆಗೆ ಬೇರೆ ಕಡೆಯೂ ಬೆಳೆಯುತ್ತಿದ್ದಾರೆ.

*ಎಸ್.ವಿ.*

**ಪೊಕ್ಕಾಳಿ (ಕೇರಳದ ಬತ್ತ ಬೇಸಾಯ)** ಅರಸೊತ್ತಿಗೆಗಳ ಕಾಲದಲ್ಲಿದ್ದ ನೀರಾವರಿ ಬೇಸಾಯ ಪದ್ಧತಿಯೇ ಮುಂದೆ 'ಪೊಕ್ಕಾಳಿ' ಎನ್ನುವ ಕೇರಳದ ವಿಶಿಷ್ಟವಾದ ಬತ್ತ ಬೇಸಾಯ ಕ್ರಮವಾಗಿ ಬೆಳೆದು ಬಂದಿತು. ಇದೀಗ ಕೇರಳದ ಪಾರಂಪರಿಕ ಬತ್ತದ ಬೇಸಾಯ ಕ್ರಮ ಎಂಬ ಜಾಗತಿಕ ಅಂಗೀಕಾರ ದೊರೆತಿದೆ. ಇದು ಹೊಳೆ, ತೋಡುಗಳ ನೀರಿಗೆ ಅಡ್ಡಗಟ್ಟೆ ಹಾಕಿ ಅದರ ನೀರನ್ನು ಗದ್ದೆ ಬೇಸಾಯಕ್ಕೆ ಬಳಸುವ ಕ್ರಮದ ಮುಂದುವರಿಕೆ. ಈ ಗದ್ದೆಗಳಲ್ಲಿ ಸಿಗಡಿಸಾಕಣೆಯನ್ನೂ ಮಾಡಲಾಗುತ್ತದೆ. ವರ್ಷಕ್ಕೆ ಒಂದೇ ಬೆಳೆ ಮಾಡುವ ಇದು ಸಿಗಡಿಸಾಕಣೆ ಮತ್ತು ಬತ್ತದ ಬೇಸಾಯಗಳ ಸಂಯುಕ್ತ ವ್ಯವಸಾಯ ಎನ್ನಬಹುದು. ಸೌರಮಾನ ಸಂಪ್ರದಾಯದ ಹೊಸ ವರ್ಷಾರಂಭ ಮೇಷಮಾಸದಲ್ಲಿ ಬರುವ ವಿಷು. ಈ ಹಬ್ಬದ ಬಳಿಕ ಬರುವ ಮಳೆಯನ್ನು ಅವಲಂಬಿಸಿಕೊಂಡು ಮಾಡುವ ಬತ್ತದ ಕೃಷಿಯೇ ಪೊಕ್ಕಾಳಿ. ಮೇಷ (ಸಾಮಾನ್ಯವಾಗಿ ಏಪ್ರಿಲ್ ತಿಂಗಳು) ತಿಂಗಳಿನ ಹೊತ್ತಿಗೆ ಸಿಗಡಿ ಸಾಕಣೆ ಮುಗಿಯುತ್ತದೆ. ಆಗ ಅಲ್ಲಿನ ನೀರನ್ನು ಹೊರಕ್ಕೆ ಬಿಟ್ಟು ಮಣ್ಣನ್ನು ಒಣಗಲು ಬಿಡುತ್ತಾರೆ. ಹಾಗೆ ಬಿಸಿಲಿಗೆ ಒಣಗಿದ ಮಣ್ಣನ್ನು ಹದಗೊಳಿಸುತ್ತಾರೆ. ಮಳೆ ಸುರಿದು ಮಣ್ಣಿನ ಉಪ್ಪಿನ ಅಂಶ ತೊಳೆದು ಹೋದ ಮೇಲೆ ಬೀಜ ಬಿತ್ತುತ್ತಾರೆ.

ತೆಂಗಿನ ಗರಿಯಿಂದ ಮಾಡಿದ ಬುಟ್ಟಿಯಲ್ಲಿ ಒಂದು ಜಾತಿಯ ಎಲೆಯನ್ನು ಹಾಸಿ ಅದರೊಳಗೆ ಬೀಜವನ್ನು ಸಂಗ್ರಹಿಸಿದ ಒಂದು ತಿಂಗಳ ಬಳಿಕ ಅದನ್ನು ಬಿಡಿಸಿ ತೆರೆದಿಡಬೇಕು. ಬೀಜ ಬಿತ್ತುವ ಒಂದೋ ಎರಡೋ ದಿನಗಳ ಮೊದಲು ಬೀಜವಿರುವ ಮೂಟೆಯನ್ನು ಕೊಳದಲ್ಲೋ ಬಾವಿಯಲ್ಲೋ ಇಳಿಸಿ ನೀರಿನಲ್ಲಿ ನೆನೆಯಬಿಡಬೇಕು. ಬಳಿಕ ಅದನ್ನು ತೆಗೆದು ಬಿತ್ತಬೇಕು. ಹಿಂದೆ ಚಿಕ್ಕ ದೋಣಿಗಳಲ್ಲಿ ಬೀಜವನ್ನು ಹರವಿ ನೀರು ಸಿಂಪಡಿಸಿ ಬಳಿಕ ಬೀಜ ಬಿತ್ತುತ್ತಿದ್ದರು.

ಪೊಕ್ಕಾಳಿ ಬೇಸಾಯದಲ್ಲಿ ತೆಂಕು, ಬಡಗು ಎಂಬೆರಡು ಸಂಪ್ರದಾಯಗಳಿವೆ. ಇವೆರಡರ ಸಾಗುವಳಿಕ್ರಮದಲ್ಲಿ ವ್ಯತ್ಯಾಸವಿದೆ. ತೆಂಕು ವಿಧಾನದಲ್ಲಿ ಬೀಜ ಬಿತ್ತಿದ ಐದು ದಿನಗಳವರೆಗೆ ಗದ್ದೆಯಲ್ಲಿ ನೀರು ತುಂಬಿಸಿಡುತ್ತಾರೆ. ಬಡಗು ಸಂಪ್ರದಾಯದಲ್ಲಿ ಮೂರು ದಿನಗಳ ಅನಂತರ ಸ್ವಲ್ಪ ಸ್ವಲ್ಪವಾಗಿ ನೀರು ಕೊಡುವ ವ್ಯವಸ್ಥೆಯಿದೆ. ಗೊಬ್ಬರದ ಬಳಕೆ ಹಿಂದೆ ಇದ್ದಿರಲಿಲ್ಲವಾದರೂ ಈಗ ಇದೆ.

ವರ್ಷದಲ್ಲಿ ಒಮ್ಮೆ ಮಾತ್ರ ಬೆಳೆ ತೆಗೆಯುವ ಪೊಕ್ಕಾಳಿಗೆ ವಿಶೇಷವಾದ ಆರೈಕೆ ಅಗತ್ಯವಿಲ್ಲ. ಪೊಕ್ಕಾಳಿ ಸಾಗುವಳಿಗೆ ಬರುವ ಕೀಟ - ಪಕ್ಷಿಗಳ ಬಾಧೆಗೆ ನೈಸರ್ಗಿಕ ವಿಧಾನದಲ್ಲಿ ತಡೆ ಹಾಕಲಾಗುತ್ತಿತ್ತು. ಕೀಟಗಳನ್ನು ಓಡಿಸುವುದಕ್ಕೆ ಇಂಗು - ಬೆಳ್ಳುಳ್ಳಿಯ ದ್ರಾವಣ ಸಿಂಪಡಿಸುತ್ತಿದ್ದರು. ಒಂದು ಜಾತಿಯ ಕೊಳೆಯಿಸಿದ ಕಾಯಿ, ಮೀನು, ಮೀನೆಣ್ಣೆ - ಹೀಗೆ ದುರ್ಗಂಧ ಬೀರುವ ವಸ್ತುಗಳನ್ನು ಬಳಸುತ್ತಿದ್ದರು. ತೆನೆಕಟ್ಟುವ ಹೊತ್ತಿಗೆ ಹಕ್ಕಿಗಳ ಬಾಧೆಯುಂಟಾದರೆ ಅವುಗಳನ್ನು ಓಡಿಸುವುದಕ್ಕೆ ಬಿಳಿ ಬಟ್ಟೆಯನ್ನು ತೋರಣದಂತೆ ಕಟ್ಟುವುದು, ಬೆರ್ಚಪ್ಪ ನಿಲ್ಲಿಸುವುದು, ಹಕ್ಕಿಗಳ ಬೊಂಬೆಗಳನ್ನು ಮಾಡಿ ತೂಗಾಡಿಸುವುದು ಸಾಮಾನ್ಯವಾಗಿತ್ತು.

ಜಲಸೇಚನ ಏತ, ಚಕ್ರ, ದಂಬೆ, ತೋಕುದಂಬೆಗಳಿಂದ ಆಗುತ್ತಿತ್ತಾದರೆ ಈಗ ಅವುಗಳ ಸ್ಥಾನವನ್ನು ಯಂತ್ರಗಳು ಆಕ್ರಮಿಸಿಕೊಂಡಿವೆ. ಬಡಗು ಸಂಪ್ರದಾಯದಲ್ಲಿ ವೃಷಭಮಾಸದಲ್ಲಿ ಬಿತ್ತಿದರೆ ತುಲಾ - ವೃಶ್ಚಿಕ (ಅಕ್ಟೋಬರ್)ದಲ್ಲಿ ಕೊಯ್ಯಲಾಗುತ್ತದೆ. ಆದರೆ ತೆಂಕು ಕ್ರಮದಲ್ಲಿ ಅದೇ ಸಮಯದಲ್ಲಿ ಬಿತ್ತಿ ವೃಶ್ಚಿಕ (ಸೆಪ್ಟೆಂಬರ್) ತಿಂಗಳಿನಲ್ಲಿ ಕಟಾವು ಮಾಡಲಾಗುತ್ತದೆ. ಬೆಳೆ ಕೊಯ್ಲಿನ ಆರಂಭಕ್ಕೆ ಒಂದು ಹಿಡಿ ತೆನೆಯನ್ನು ಕೊಯಿದು ಹರಕೆಯಾಗಿ ತೆಗೆದಿಡುವುದಿದೆ. ಬತ್ತ ಒಕ್ಕುವ ಮೊದಲು ಒಂದಷ್ಟು ಬತ್ತವನ್ನು ತೆಗೆದು ಅದರಿಂದ ಅವಲಕ್ಕಿ ತಯಾರಿಸಿ ಕೆಲಸಗಾರರಿಗೆ ಲಘೂಪಹಾರ ಕೊಡುವ ಕ್ರಮವಿದ್ದಿತು.

ಹಸ್ತ, ಭರಣಿ ಮೊದಲಾದ ವಿಶೇಷ ನಕ್ಷತ್ರಗಳ ದಿನದಂದು ಬಿತ್ತನೆ ನಡೆಯುತ್ತಿತ್ತು. ಬಿತ್ತನೆಗೆ, ಕೊಯ್ಲಿಗೆ ಮೊದಲು ದೇವಾಲಯಗಳಲ್ಲಿ ಕೃಷಿಕನ, ದನಿಯ ವತಿಯಿಂದ ಬೇರೆಬೇರೆ ಪೂಜೆಗಳನ್ನು ನಡೆಸುತ್ತಿದ್ದರು ; ಕ್ರಿಶ್ಚಿಯನ್ ಮತಾವಲಂಬಿಗಳಾದರೆ ಚರ್ಚಿನ ಧರ್ಮಗುರುಗಳು ಬಂದು ಕೊಯ್ಲಿಗೆ ಬಂದ ಪೈರಿಗೆ ಪವಿತ್ರಜಲ ಪ್ರೋಕ್ಷಿಸುತ್ತಿದ್ದರು.

*ಎಸ್.ಎಸ್.ಬಿ.*

**ಪೊಟ್ಲಕಾಯ (ಪಡವಲಕಾಯಿ)** 'ಗುಜ್ಜುಪೊಟ್ಲ' ('ಲಿಂಗಪೊಟ್ಲ') ಮತ್ತು 'ಚೇತಿಪೊಟ್ಲ' ('ಚೇದುಪೊಟ್ಲ') ಎಂದು ಪಡುವಲಕಾಯಿಯಲ್ಲಿ ಎರಡು ಬಗೆ. 'ಚೇದುಪೊಟ್ಲ'ವನ್ನು 'ಅಡವಿಪೊಟ್ಲ' ಎಂದು ಸಹ ಕರೆಯುತ್ತಾರೆ. ತರಕಾರಿಯಾಗಿ ಬಳಸುವ ಗುಜ್ಜು ಅಥವಾ ಲಿಂಗಪೊಟ್ಲಕಾಯಿಯಲ್ಲಿ ಒಂದು ಉದ್ದವಾಗಿದ್ದರೆ ಇನ್ನೊಂದು ಗಿಡ್ಡವಾಗಿ

ಕೊಂಚ ದಪ್ಪವಾಗಿರುತ್ತದೆ. ಎರಡನೆಯ ಬಗೆಯನ್ನು 'ಪಿಚ್ಚಕಪೊಟ್ಲ' ಎನ್ನುತ್ತಾರೆ.

ಸಂಸ್ಕೃತದಲ್ಲಿ ಗುಜ್ಜುಪೊಟ್ಲ ಬಳ್ಳಿಯನ್ನು 'ಚಿಚಿಣ್ಡಾ' ಎನ್ನುತ್ತಾರೆ. ಬೆಳದಿಂಗಳ ರಾತ್ರಿಗಳಲ್ಲಿ ಹೆಚ್ಚು ಹೊಳಪನ್ನು ಕೊಡುವುದರಿಂದ ಈ ಬಳ್ಳಿಯನ್ನು 'ಜ್ಯೋತ್ಸ್ನೀ' ಎಂದು ಸಹ ಕರೆಯುತ್ತಾರೆ. ಬಿಳುಪಿರುವ ಇದರ ಹೂಗಳು ಬಲೆ (ಜಾಲರಿ)ಯಂತಿರುತ್ತವೆ. ಆದುದರಿಂದ ಈ ಬಳ್ಳಿಯನ್ನು 'ಜಾಲೀ' ಎನ್ನುತ್ತಾರೆ. ಸಂಸ್ಕೃತದಲ್ಲಿ ಇದಕ್ಕೆ 'ಸ್ವಾದುಪಟೋಲಃ' ಎಂಬ ಹೆಸರೂ ಇದೆ. ಚೇದು ಪೊಟ್ಲ ವೇಗವಾಗಿ ವ್ಯಾಪಿಸುವುದರಿಂದ ಇದನ್ನು 'ಪಟೋಲಃ' ಎಂದೂ; ಕಹಿಯಾಗಿ (ಚೇದುಗಾ) ಇರುವುದರಿಂದ 'ತಿಕ್ತಕಃ' ಎಂದೂ; ತಿಂದರೆ ದೇಹಕ್ಕೆ ಪುಷ್ಟಿ ಉಂಟಾಗುವುದರಿಂದ 'ಪಟುಃ' ಎಂದೂ ಕರೆಯುತ್ತಾರೆ. ಸಂಸ್ಕೃತ ಶಬ್ದ 'ಪಟೋಲ'ದಿಂದ 'ಪೊಟ್ಲ' ಶಬ್ದವೇರ್ಪಟ್ಟಿದೆ. ಗುಬ್ಬಚ್ಚಿ ಪಡುವಲಬಳ್ಳಿ ('ಪಿಚ್ಚುಕ ಪೊಟ್ಲತೀಗ')ಯನ್ನು ಪಟೋಲಿಕಾ ಎನ್ನುತ್ತಾರೆ.

'ಗುಜ್ಜುಪೊಟ್ಲ'ದಲ್ಲಿ ಎರಡು ಬಗೆಯಿವೆ. 'ಪೊಡುಗು ಪೊಟ್ಲ' (ಉದ್ದವಾದ ಪಡವಲಕಾಯಿ)ವನ್ನು ಹಿಂದಿಯಲ್ಲಿ 'ಚಾಚ್ಚಿಣ್ಡಾ' ಎಂದೂ, 'ಪಿಚ್ಚುಪೊಟ್ಲ'ವನ್ನು 'ಪರವಲ್' ಎಂದೇ ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ ಹಾವಿನಂತಹ ಆಕಾರವಿರುವುದರಿಂದ 'ಪೊಡುಗು ಪೊಟ್ಲ'ವನ್ನು 'ಸ್ನೇಕ್‌ಗಾರ್ಡ್' ಎಂದೂ, ಚೂಪಾದ ಕಾಯಿಗಳಿರುವುದರಿಂದ 'ಪಿಚ್ಚುಕಪೊಟ್ಲ'ವನ್ನು 'ಪಾಯಿಂಟೆಡ್ ಗ್ವಾರ್ಡ್' ಎನ್ನುತ್ತಾರೆ. ಸೌತೆ, ಸೋರೆ, ಹೀರೆ ಬಳ್ಳಿಗಳಂತೆ ಪಡವಲಾಕಿಯ ಬಳ್ಳಿಯು ಕುಕುರ್ಬಿಟೇಸೀ ಕುಟುಂಬಕ್ಕೆ ಸೇರಿದೆ. 'ಪೊಡಗುಪೊಟ್ಲ' ಬಳ್ಳಿಯ ವೈಜ್ಞಾನಿಕ ಹೆಸರು 'ಟ್ರೈಕೋಸ್ಯಾಂತಸ್ ಅಂಗ್ವಿನ'. ಗ್ರೀಕ್ ಭಾಷೆಯಲ್ಲಿ 'ತ್ರಿಕ್ಸ್' ಎಂದರೆ ಕೂದಲು. ಯಾಂಥೂಸ್ ಎಂದರೆ ಹೂವು. ಬಿಳಿಯ ಪಡವಲಜಾತಿ ಹೂದಳಗಳಿಗೆ ಕೂದಲಿಗಿರುವ ಜುಂಕೆಗಳ ಕಾರಣದಿಂದ ಈ 'ಟ್ರೈಕೋ ಸೈಂತಸ್' ಎಂಬ ಹೆಸರು ಬಂದಿದೆ. ಈ ಜುಂಕೆಗಳ ಕಾರಣದಿಂದ ಪಡವಲ ಕಾಯಿ ಹೂಗಳು ನೋಡಲು ಬಲೆಗಳಂತೆ ಕಾಣುತ್ತವೆ. ಆದುದರಿಂದಲೇ ಬಳ್ಳಿಗೆ 'ಜಾಲೀ' ಎಂಬ ಸಂಸ್ಕೃತ ಹೆಸರು ಬಂದಿದೆ. ಯಾಂಗ್ವಿನಾ ಎಂದರೆ 'ಹಾವಿನಂತೆ ಇರುವುದು' ಎಂದು ಅರ್ಥ. 'ಪಿಚ್ಚುಕಪೊಟ್ಲ'ದ ಶಾಸ್ತ್ರೀಯನಾಮ ಟ್ರೈಕೋಸಾಂತೆಸ್ ಡಯೋಯಿಕಾ.

ಪೊಡಗುಪೊಟ್ಲ ಸ್ಪ್ರಿಂಗ್‌ಗಳಂತೆ ಟೆಂಡ್ರಿಲ್ಸ್ ಸಹಾಯದಿಂದ ಮೇಲಕ್ಕೇರುವ ಸಣ್ಣದಾದ ಏಕವಾರ್ಷಿಕ ಬಳ್ಳಿಯ ಸಸಿ. ಎಲೆಗಳು ತೆಳುವಾಗಿ ಹೃದಯಾಕಾರದಲ್ಲಿದ್ದು, ಆಳವಾದ ಸೀಳಿರುತ್ತವೆ. ಇದರ ಬಿಳಿ ಹೂಗಳು ಏಕಲಿಂಗಿಗಳು ಅಂದರೆ ಹೆಣ್ಣು ಹೂಗಳು, ಗಂಡು ಹೂಗಳು ಬೇರೆ ಬೇರೆಯಾಗಿರುತ್ತವೆ. ಒಂದೆ ಬಳ್ಳಿಯ ಮೇಲೆ ಗಂಡು ಹೂಗಳು ಗೊಂಚಲಾಗಿಯೂ, ಹೆಣ್ಣು ಹೂಗಳು ಒಂಟಿಯಾಗಿಯೂ ಇರುತ್ತವೆ. ಪಡವಲಕಾಯಿ ಹೂಗಳು ಮೇಲಿಂದ ನೋಡಿದರೆ ನಕ್ಷತ್ರದ ಆಕಾರದಲ್ಲಿರುತ್ತವೆ. ವ್ಯೋಮದಲ್ಲಿಯ ಪುಷ್ಯಮೀ ನಕ್ಷತ್ರ ಮಂಡಲ ಪಡವಲ ಹೂವಿನಂತೆ ಇರುವುದರಿಂದ ಅದನ್ನು 'ಪೊಟ್ಲಪೂಚುಕ್ಕ' (ಪಡವಲ ಹೂ ನಕ್ಷತ್ರ) ಎನ್ನುತ್ತಾರೆ. ಕರ್ಕಾಟಕ ರಾಶಿಯಲ್ಲಿರುವ ಮೂರು ನಕ್ಷತ್ರಗಳನ್ನು ಸೇರಿಸಿ ಪುಷ್ಯನಕ್ಷತ್ರ ಮಂಡಲವೆನ್ನುತ್ತಾರೆ. ಆದುದರಿಂದಲೇ ಪುಷ್ಯ (ತಿಷ್ಯ) ಮಾಸವನ್ನು 'ಪೊಟ್ಲ ಪೊಚುಕ್ಕ ನೆಲ' (ಪಡವಲ ಹೂ ನಕ್ಷತ್ರ ಮಾಸ) ಎಂದೂ ಕರೆಯುತ್ತಾರೆ.

ಪಿಚ್ಚುಕಪೊಟ್ಲ ಬಹುವಾರ್ಷಿಕ ಸಸ್ಯ. ಪಡವಲ ಜಾತಿ ದಶಿಯಾದಲ್ಲಿನ ಅತ್ಯುಷ್ಣ ಪ್ರಾಂತ್ಯಗಳಲ್ಲಿ ವಿಸ್ತಾರವಾಗಿ ಬೆಳೆಯುತ್ತದೆ. ಪೂರ್ವ ಆಫ್ರಿಕಾ, ಆಸ್ಟ್ರೇಲಿಯಾ, ಪಾಲಿನೇಷಿಯಾ (ಫೆಸಿಫಿಕ್ ಸಾಗರದ 180ನೆಯ ಮೆರಿಡಿಯನ್‌ಗೆ ಪೂರ್ವದಲ್ಲಿರುವ ಹವಾಯಿ, ಸಮೋವಾ, ಟೊಂಗಾ ಇತ್ಯಾದಿ ದ್ವೀಪಗಳ ಸಮೂಹ)ಗಳಲ್ಲಿಯೂ ಇದು ವಿಸ್ತರಿಸಿದೆ.

ತೆಲುಗು ಸಾಹಿತ್ಯದಲ್ಲಿ ಕ್ರಿ.ಶ. 15ನೆಯ ಶತಮಾನದ ಶ್ರೀನಾಥ ಕವಿ ತನ್ನ 'ಕಾಶೀಖಂಡಮು' ಎಂಬ ಕಾವ್ಯದಲ್ಲಿ ಪಡವಲ ಕಾಯಿಯನ್ನು 'ಪಟೋಲಿಕಾ' ಎಂದು ಪ್ರಸ್ತಾಪ ಮಾಡಿದ್ದಾನೆ. ಪಡವಲಕಾಯಿಯ ತವರು ಮಲೇಷಿಯಾ ಎಂದು ತಿಳಿಯುತ್ತದೆ. ಪೊಟ್ಲೂರು, ಪೊಟ್ಲಕಾಡು, ಪೊಟ್ಲದುರ್ತಿ ಇತ್ಯಾದಿ ಗ್ರಾಮನಾಮಗಳು. ಪೊಟ್ಲೂರಿ, ಪೊಟ್ಲಪಾಟಿ ಮುಂತಾದ ಮನೆ ಹೆಸರುಗಳು ತೆಲುಗು ಪ್ರದೇಶಗಳೊಂದಿಗೆ ಪಡವಲಕಾಯಿಗಿರುವ ಪ್ರಾಚೀನ ಅನುಬಂಧವನ್ನು ತಿಳಿಸುತ್ತವೆ.

**ಬೆಳೆಸುವ ವಿಧಾನ :** ದಕ್ಷಿಣ ಭಾರತದಲ್ಲಿ ಪಡವಲಕಾಯಿಗಳನ್ನು ಹೊಲಗಳಲ್ಲಿಯೇ ಸಾಗುವಳಿ ಮಾಡುತ್ತಾರೆ. 'ವೈಟ್‌ಲಾಂಗ್' 'ಗ್ರೀನ್‌ಲಾಂಗ್' ಎಂಬ ತಳಿಗಳನ್ನು ರೈತರು ಹೆಚ್ಚಾಗಿ ಬೆಳೆಸುತ್ತಿದ್ದಾರೆ. ತಮಿಳುನಾಡಿನ ರೈತರು 'ಪನ್ನೀ ಪುದಲ್', 'ಆಡುತುರೈ' ತಳಿಗಳ ಸಾಗುವಳಿಯನ್ನು ಹೆಚ್ಚು ಬಯಸುತ್ತಾರೆ. ನದೀತೀರಗಳಲ್ಲಿಯ ಮೆಕ್ಕಲು ನೆಲದಲ್ಲಿ ಪಡವಲಕಾಯಿ ಗಿಡಗಳು ಸಮೃದ್ಧಿಯಾಗಿ ಬೆಳೆಯುತ್ತವೆ. ಚೆನ್ನಾಗಿ ಬಲಿತ ಕಾಯಿಯಿಂದ ಶೇಖರಿಸಿದ ಬೀಜಗಳನ್ನು ಒಣಗಿಸಿ, ಸಗಣಿಯಲ್ಲಿ ಮಿಶ್ರಮಾಡಿ ಬೆರಣಿಯಾಗಿ ತಟ್ಟಿ ದಾಸ್ತಾನು ಮಾಡುತ್ತಾರೆ. ಸಾಧಾರಣವಾಗಿ ಪಡವಲ ಬೀಜಗಳು 7ರಿಂದ 10 ದಿನಗಳೊಳಗೆ ಮೊಳಕೆಯೊಡೆದರೆ ಸಗಣಿಯಲ್ಲಿ ದಾಸ್ತಾನು ಮಾಡಿದ ಬೀಜಗಳು ಇನ್ನು ಸ್ವಲ್ಪ ತ್ವರಿತವಾಗಿ ಚೆನ್ನಾಗಿ ಮೊಳೆಯುತ್ತವೆ. ಪಡವಲ ತೋಟಗಳಲ್ಲಿ ಬಳ್ಳಿಗಳಿಗೆ ಚಪ್ಪರ ಹಾಕುವುದು ಸಹಜ. ಒಂದು ಪಾತಿಯಲ್ಲಿ ಬಿತ್ತಿದ ಮೂರು ಅಥವಾ ನಾಲ್ಕು ಬೀಜಗಳಿಂದ ಮೊಳಕೆಯೆದ್ದ ಸಸಿಗಳಲ್ಲಿ ಬಲಹೀನವಾದವುನ್ನು ಕಿತ್ತೆಸೆದು ಬಲವಾದ ಒಂದೆರಡು ಸಸಿಯನ್ನು ಉಳಿಸಿಕೊಳ್ಳಬೇಕು. ತೋಟದಲ್ಲಿರುವ ಒಟ್ಟು 'ಪಿಚ್ಚುಕಪೊಟ್ಲ' ಮೊಳಕೆಗಳಲ್ಲಿ ಕನಿಷ್ಠ ನಾಲ್ಕನೆಯ ಒಂದು ಭಾಗವನ್ನು ಗಂಡು ಮೊಳಕೆಗಳಿರುವಂತೆ ನೋಡಿಕೊಳ್ಳಬೇಕು. ಆಗಲೇ ಪರಾಗ ಸಂಪರ್ಕ ಸಕ್ರಮವಾಗಿ ನಡೆದು ಅಧಿಕ ಇಳುವರಿ ಪಡೆಯಬಹುದು. ಪಡವಲಕಾಯಿ ಅತಿ ಶೀಘ್ರವಾಗಿ ಬೆಳೆಯುವ ಕಾರಣದಿಂದ ಕೇವಲ 7-8 ವಾರಗಳಲ್ಲಿ ಪಡವಲಕಾಯಿಗಳು ಕಟಾವಿಗೆ ಬರುತ್ತವೆ. ಆರುವಾರಗಳ ಕಾಲ ಫಲ ಕೊಡುತ್ತಲೇ ಇರುತ್ತದೆ. ಪ್ರತಿ ಮೊಳಕೆಗೂ ಒಂದೊಂದು ಕೆ.ಜಿ. ಭಾರವಿರುವ ಕಾಯಿ 50ರವರೆಗೂ ಬಿಡುತ್ತವೆ. 5 ಕೆ.ಜಿ. ಭಾರವಿರುವ ಪಡವಲಕಾಯಿ ಬಿಡುವ ಸಂದರ್ಭಗಳೂ ಇರುತ್ತವೆ. ಸಾಧಾರಣ ಪರಿಸ್ಥಿತಿಯಲ್ಲಿ ಹೆಕ್ಟೇರ್‌ಗೆ 100 ಕ್ವಿಂಟಾಲ್‌ವರೆಗೂ ಉತ್ಪನ್ನವಿರುತ್ತದೆ. ಸಗಣಿಯಗೊಬ್ಬರ ಬಳಸಿದರೆ ಹೆಚ್ಚು ಉತ್ಪಾದನೆಯಾಗುವ ಸಂಭವವಿದೆ. ಹೆಕ್ಟೇರ್‌ಗೆ 670 ಕ್ವಿಂಟಾಲಂಗಳ ಪಡವಲ ಕಾಯಿಯನ್ನು ಬೆಳೆಸಿದ ಕೃಷಿಕರಿದ್ದಾರೆ.

ಪಡವಲಕಾಯಿಯಲ್ಲಿ ಖನಿಜ ಲವಣಗಳು, ವಿಟಮಿನ್‌ಗಳು (ಸಿ ವಿಟಮಿನ್ ಹೊರತು) ಪುಷ್ಕಳವಾಗಿರುವುದರಿಂದ ಇದು ಹಸಿವನ್ನು ಹೆಚ್ಚು ಮಾಡುತ್ತದೆ. ಅಜೀರ್ಣವನ್ನು ಹೋಗಲಾಡಿಸುತ್ತದೆ. ಪಡವಲ ಬೇರುಗಳು, ಬೀಜಗಳು ಹೊಟ್ಟೆಯಲ್ಲಿಯ ಕ್ರಿಮಿಗಳನ್ನು ನಾಶಪಡಿಸುತ್ತವೆ.

ಭೇದಿಯಾಗುವುದನ್ನು ತಡೆಯುತ್ತದೆ. ಸಿಫಿಲಿಸ್ ಅಂತಹ ಭಯಂಕರವಾದ ವ್ಯಾಧಿಗಳಿಗೆ ಪಡವಲ ಬೇರುಗಳು ಬೀಜಗಳು ದಿವ್ಯೌಷಧಗಳು. ಕ್ಯಾನ್ಸರ್ ರೋಗಿಗಳಿಗೆ ಪಿಚ್ಚುಕಪೊಟ್ಲ ಉತ್ತಮವಾದದ್ದು.

ಚೇದುಬೊಟ್ಲ ('ಚೇತಿಪೊಟ್ಲ' ಅಥವಾ 'ಅಡವಿಪೊಟ್ಲ') ಜ್ವರಹಾರಿಣಿಯಾಗಿ ಪ್ರಖ್ಯಾತವಾಗಿದೆ. ಈ ಚೇದುಪೊಟ್ಲ ಎಲೆಗಳ ರಸವನ್ನು ಬೋಳುತಲೆಗೆ ಹಚ್ಚಿದರೆ ಕೂದಲು ಬೆಳೆಯುತ್ತದೆಂದು ತಿಳಿದು ಬರುತ್ತದೆ.

*(ಆಕರ : ಆಂಧ್ರಜ್ಯೋತಿ : 25.8.2013)*

***ಎಂ.ಜಿ.ಎಸ್.***

**ಪೊದ್ದು ತಿರುಗುಡು ಪೂ (ಸೂರ್ಯಕಾಂತಿ)** ದಕ್ಷಿಣ ಅಮೆರಿಕಾದ ಸಸ್ಯವಾದ ಇದು ಆಸ್ಟರೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ನಾಮ ಹೇಲಿಯಾಂತಸ್ ಅನ್ನೂಸ್. ಇಂಗ್ಲಿಷಿನಲ್ಲಿ ಸನ್‌ಫ್ಲವರ್, ಸಂಸ್ಕೃತದಲ್ಲಿ ಸೂರ್ಯಮುಖಿ, ತೆಲುಗಿನಲ್ಲಿ ಆದಿತ್ಯಭಕ್ತಿ ಚೆಟ್ಟು, ಪೊದ್ದು ತಿರುಗುಡು, ತಮಿಳಿನಲ್ಲಿ ಶೂರಿಯಾಗಾಂಧಿ, ಮಲಯಾಳದಲ್ಲಿ ಸೂರ್ಯಕಾಂತಿ ಎಂದು ಕರೆಯುವರು. ಇದು ಮೂಲಿಕಾ ಸಸ್ಯವರ್ಗಕ್ಕೆ ಸೇರಿದೆ. ಈ ಸಸ್ಯದ ಕಾಂಡ ಮೃದು. ಬೇರುಗಳು ಗುಂಪುಗುಂಪಾಗಿರುತ್ತವೆ. ಸರಳ ಅಥವಾ ಸಂಯುಕ್ತ ಮಾದರಿಯ ಎಲೆಗಳು ಅಂಚುಗಳಲ್ಲಿ ಸೀಳುಗಳಿರುತ್ತವೆ.

**ಸೂರ್ಯಕಾಂತಿ ಹೂವಿನ ತಳಿಗಳು :** ಕೆ.ಬಿ.ಎಸ್.ಎಚ್-1 ತಳಿ, 90-95 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಎಕರೆಗೆ 6 ಕ್ವಿಂಟಾಲ್ ಇಳುವರಿ ಕೊಡುತ್ತದೆ. ಬೀಜಗಳಲ್ಲಿ ಶೇ 42 ಎಣ್ಣೆಯಿರುತ್ತದೆ. ಕೆ.ಬಿ.ಎಸ್.ಎಚ್.-44 ತಳಿ ಅವಧಿ. 95 ದಿನಗಳು. ಎಕರೆಗೆ 5-6 ಕ್ವಿಂಟಾಲ್‌ಗಳ ಫಸಲು ಕೊಡುತ್ತದೆ. ಎಸ್.ಡಿ.ಎಸ್.ಎಚ್-1 ಬೆಳೆಯಕಾಲ 80 ದಿನಗಳು, ಎಕರೆಗೆ 6 ಕ್ವಿಂಟಾಲ್. ಉತ್ಪಾದನೆ ಕೊಡುತ್ತದೆ. ಎ.ಪಿ.ಎಸ್-66 ಬಗೆ 90 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಎಕರೆಗೆ 7 ಕ್ವಿಂಟಾಲ್‌ಗಳ ಫಸಲು ನೀಡುತ್ತದೆ.

**ಬಿತ್ತನೆಯ ಕಾಲ :** ರಬಿ ನವೆಂಬರ್, ಡಿಸೆಂಬರ್ ಮಾಸಗಳಲ್ಲಿಯೂ, ಬೇಸಗೆಯಲ್ಲಿ (ನೀರಾವರಿಯಿಂದ) ಜನವರಿ ಎರಡನೇ ಪಕ್ಷದಿಂದ ಫೆಬ್ರುವರಿ ಮೊದಲ ಪಕ್ಷದವರೆಗೂ ಬಿತ್ತನೆ ಮಾಡಬಹುದು. ಬತ್ತದ ಅನಂತರ ಸೂರ್ಯಕಾಂತಿಯನ್ನು ಬಿತ್ತುವ ಪಕ್ಷದಲ್ಲಿ ಡಿಸೆಂಬರ್ ಕೊನೆಯ ವಾರದಿಂದ ಜನವರಿ ಮೊದಲನೆಯ ವಾರದವರೆಗೆ ಬಿತ್ತಬಹುದು. ಹೂವು ಬಿಟ್ಟು ಬೀಜ ದೃಢವಾಗುವ ಸಮಯದಲ್ಲಿ 12 ಗಂಟೆಗಳ ಕಾಲ ಬಿಸಲಿದ್ದರೆ ಜಿಡ್ಡಿನ ಅಂಶ ಹೆಚ್ಚಾಗಿರುತ್ತದೆ. ಕೊಳಚೆನೀರು ಸರಬರಾಜಾಗುವ ನೆಲ ಸೂರ್ಯಕಾಂತಿ ಸಾಗುವಳಿಗೆ ಅನುಕೂಲ. ಆಮ್ಲ, ಚೌಳು, ಕೊಳಚೆ ನೀರು ಸೌಕರ್ಯವಿಲ್ಲದ ನೆಲಗಳು ಉಪಯೋಗವಿರುವುದಿಲ್ಲ. ಸೂರ್ಯಕಾಂತಿಯನ್ನು ಒಂದೇ ಬೆಳೆ ಅಥವಾ ಕಡಲೆಕಾಯಿ + ಸೂರ್ಯಕಾಂತಿ 4:2 ಪ್ರಮಾಣದಲ್ಲಾಗಲೀ, ತೊಗರಿ+ಸೂರ್ಯಕಾಂತಿ 1:2 ಪ್ರಮಾಣದಲ್ಲಾಗಲೀ ಮಿಶ್ರ ಬೆಳೆಗಳನ್ನಾಗಿ ಬಿತ್ತಬಹುದು.

**ಬಿತ್ತುವ ವಿಧಾನ :** ಎಕರೆಗೆ ಎರಡು ಕಿಲೋ ಬೀಜ ಬೇಕು. ಭಾರವಾದ ನೆಲಗಳಲ್ಲಾದರೆ ಸಾಲುಗಳ ಮಧ್ಯೆ 60 ಸೆಂ.ಮೀ. ಸಸಿಗಳ ಮಧ್ಯೆ 30 ಸೆಂ.ಮೀ. ಹಗುರವಾದ ನೆಲಗಳಲ್ಲಿ ಸಾಲುಗಳ ಮಧ್ಯೆ 45 ಸೆಂ.ಮೀ. ಸಸಿಗಳ ಮಧ್ಯೆ 30 ಸೆಂ.ಮೀ. ಎಡೆಯಿರುವಂತೆ ಪಾತಿಗೆ ಎರಡು ಬೀಜಗಳನ್ನಿಡಬೇಕು. ಫಸಲು ಎಳಸಾಗಿದ್ದಾಗ ಬರುವ ಆಲ್ಟರ್ನೇರಿಯಾ ಮಚ್ಚೆ ಸೋಂಕು ರೋಗ (ಮಚ್ಚ ತೆಗುಲು)ವನ್ನು ತಡೆಯಲು ಕ್ವಿಂಟಾಲ್ (ಇಪ್ರೋಡಿಮಾನ್ ಶೇಕಡ 25 + ಕಾರ್ಬಂಡಜಿಮ್ ಶೇಕಡ 25) ಎಂಬ ಔಷಧವನ್ನು ಒಂದು ಕಿಲೋಬೀಜಕ್ಕೆ ಎರಡು ಗ್ರಾಂ ಬಳಸಿ ಬೀಜ ಶುದ್ಧಿ ಮಾಡಿಕೊಳ್ಳಬೇಕು. ನೈಕ್ರೋಸಿಸ್ ವೈರಸ್ ಸೋಂಕುರೋಗವು ಹೆಚ್ಚಾಗಿರುವ ಸ್ಥಳಗಳಲ್ಲಿ ಕಿಲೋಬೀಜಕ್ಕೆ ಐದು ಗ್ರಾಂ ಇಮಿಡಾಕ್ಲೋಪಿಡನ್ನು ಮಿಶ್ರಮಾಡಿ ಬೀಜ ಶುದ್ಧಿ ಮಾಡಿಕೊಳ್ಳಬೇಕು. ಮೊಳಕೆಯೊಡೆದ 10-15 ದಿನಗಳ ಬಳಿಕ ಪಾತಿಗೆ ಒಂದೇ ಸಸಿಯನ್ನು ಇರಿಸಿ ಮಿಕ್ಕ ಸಸಿಗಳನ್ನು ತೆಗೆದು ಹಾಕಬೇಕು. ಮೊಳಕೆಯೇಳದೆ ಇರುವ ಕಡೆ ಇನ್ನೊಮ್ಮೆ ಬೀಜವನ್ನು ಬಿತ್ತಿದರೆ ಹೊಲದಲ್ಲಿ ಸಸಿಗಳ ಪ್ರಮಾಣ ಚೆನ್ನಾಗಿರುತ್ತದೆ.

**ಗೊಬ್ಬರಗಳು :** ಬಿತ್ತನೆ ಮಾಡುವ 2-3 ವಾರಗಳ ಮುಂಚೆ ಎಕರೆಗೆ 3 ಟನ್‌ಗಳ ದನಗಳ ಗೊಬ್ಬರವನ್ನು ಚೆಲ್ಲಿ ಉಳುಮೆ ಮಾಡಬೇಕು. ಬಿತ್ತನೆ ಮಾಡುವಾಗ ಎಕರೆಗೆ 26 ಕಿಲೋ ಯೂರಿಯಾ, ಬಿತ್ತಿದ 30 ದಿನಗಳಿಗೆ 13 ಕಿಲೋ ಯೂರಿಯಾ, 50 ದಿನಗಳಿಗೆ ಹೂವು ವಿಕಸನಗೊಳ್ಳುವ ಸಮಯದಲ್ಲಿ 13 ಕಿಲೋ ಯೂರಿಯಾ ಹಾಕಬೇಕು. ಎಕರೆಗೆ ಭಾಸ್ವರ 150 ಕಿಲೋ ಸಿಂಗಿಲ್ ಸೂಪರ್ ಫಾಸ್ಫೇಟ್ ರೂಪದಲ್ಲಿಯೂ 20 ಕಿಲೋ ಮ್ಯೂರೇಟ್ ಆಫ್ ಪೊಟಾಷ್‌ನ್ನು ಕೊನೆಯ ಉಳುಮೆಯಲ್ಲಿ ಹಾಕಿಕೊಳ್ಳಬೇಕು. ಗೊಬ್ಬರ ಹಾಕುವಾಗ ನೆಲದಲ್ಲಿ ಸಾಕಷ್ಟು ತೇವ ಇರಬೇಕು. ಗಂಧಕ ಕಡಿಮೆಯಿರುವ ನೆಲಗಳಲ್ಲಿ ಎಕರೆಗೆ 55 ಕಿಲೋ ಜಿಪ್ಸಂ ಹಾಕಿದರೆ ಎಣ್ಣೆಯ ಅಂಶ ಹೆಚ್ಚಾಗುತ್ತದೆ. ಹೂವು ಅರಳುವಾಗ ಲೀಟರ್ ನೀರಿಗೆ 2 ಗ್ರಾಂ ಬೊರಾಕ್ಸ್ ಸೇರಿಸಿ 200 ಲೀಟರ್‌ಗಳ ದ್ರಾವಣವನ್ನು ಒಂದು ಎಕರೆ ಬೆಳೆಯ ಮೇಲೆ ಸಿಂಪಡಿಸಿದರೆ ಜೊಳ್ಳು ಬೀಜ ಕಡಿಮೆಯಾಗುತ್ತವೆ. ಮೊದಲು ಬೊರಾಕ್ಸನ್ನು ಬಿಸಿ ನೀರಿನಲ್ಲಿ ಕರಗಿಸಿ, ಅನಂತರ ಪಿಚಕಾರಿ ಮಾಡಬೇಕು ಅಥವಾ ಕೊನೆಯ ಉಳುಮೆಯಲ್ಲಿ 8 ಕಿಲೋ ಬೋರಿಕ್ ಆಮ್ಲವನ್ನು ಎಕರೆಗೆ ಹಾಕಿಕೊಳ್ಳಬೇಕು.

**ನೀರಿನ ನಿರ್ವಹಣೆ :** ಹಗುರವಾದ ನೆಲಗಳಲ್ಲಿ 6-10 ದಿನಗಳಿಗೆ ಒಂದು ಬಾರಿ, ಭಾರವಾದ ನೆಲಗಳಲ್ಲಿ 15-20 ದಿನಗಳಿಗೆ ಒಂದು ಸಲ ನೀರನ್ನು ಕೊಡಬೇಕು. ಮೊಗ್ಗಾಗುವ ಸಮಯದಲ್ಲಿ, ಹೂವು ವಿಕಸನಗೊಳ್ಳುವ ಕಾಲ, ಬೀಜ ಬಿತ್ತುವಾಗ, ನೀರಿನ ಅಭಾವವಿಲ್ಲದಂತೆ ನೋಡಿಕೊಳ್ಳಬೇಕು. ನೀರಿನ ಲಭ್ಯತೆ ಕಡಿಮೆಯಿದ್ದಲ್ಲಿ ಸಾಲು ಬಿಟ್ಟು ಸಾಲು ಪದ್ಧತಿಯಲ್ಲಿ ನೀರನ್ನು ಬಿಡಬೇಕು. ಇದರಿಂದ ನೀರಿನ ಬಳಕೆಯ ಸಾಮರ್ಥ್ಯ ಹೆಚ್ಚಾಗುತ್ತದೆ.

**ಕಳೆ ನಿವಾರಣೆ :** ಬಿತ್ತನೆ ಮಾಡಿದ 48 ಗಂಟೆಗಳೊಳಗೆ ಪೆಂಡಿ ಮಿಥಾಲಿನ್ (ಶೇಕಡ 30) ಎಕರೆಗೆ 200 ಲೀ. ನೀರಿನಲ್ಲಿ ಮಿಶ್ರಮಾಡಿ ನೆಲದ ಮೇಲೆ ಸಿಂಪಡಿಸಿ 25 ದಿನಗಳಲ್ಲಿ ಕಳೆಯನ್ನು ನಿವಾರಿಸಬಹುದು. ಅನಂತರ ಅಂತರ ಕೃಷಿ ಮಾಡಬೇಕು.

**ಸಸ್ಯ ರಕ್ಷಣೆ :** ಎಲೆ ತಿನ್ನುವ ಕೀಟಗಳ ಹಾವಳಿ ಹೆಚ್ಚಾಗಿದ್ದರೆ, ಲೀ. ನೀರಿಗೆ 2 ಮಿ.ಲೀ. ಕ್ಲೋರಿ ಪೈರಿಫಾಸ್ ಅಥವಾ ಎನ್.ಪಿ.ವಿ. 200

ಲಾರ್ವಾಗಳಿಗೆ ಸಮಾನವಾದ ಔಷಧವನ್ನು ಎಕರೆ ಬೆಳೆಯ ಮೇಲೆ ಎರಚಬೇಕು. ರಸವನ್ನು ಹೀರುವ ಕೀಟ ನಿವಾರಣೆಗೆ ಹೊಲದ ಸುತ್ತಲೂ ಕಳೆಯನ್ನು ನಿವಾರಿಸಬೇಕು. ಆಲ್ಟರ್ನೇರಿಯಾ, ಎಲೆಮಚ್ಚೆಸೋಂಕುರೋಗ ನಿವಾರಣೆಗೆ ಪ್ರಾಪಿಕೊನಜೋಲ್ ಒಂದು ಗ್ರಾಂ ಲೀಟರ್ ನೀರಿಗೆ ಮಿಶ್ರಮಾಡಿ ಚೆಲ್ಲಬೇಕು. ಬೂದಿಸೋಂಕುರೋಗ (ಬೂಡಿದ ತೆಗುಲು) ಹೂ ಹೊಲಸು ಸೋಂಕು ರೋಗ (ಪುವ್ವುಕುಳ್ಳು). ನಿವಾರಣೆಗೆ ಕಾಪರ್ ಆಕ್ಸೀ ಕ್ಲೋರೈಡ್ ಒಂದು ಲೀ. ನೀರಿಗೆ 3 ಗ್ರಾಂ ಮಿಶ್ರಮಾಡಿ ಸಿಂಪರಣೆ ಮಾಡಬೇಕು. ಬೀಜ ಬರುವ ಸಂದರ್ಭದಲ್ಲಿ ಪಕ್ಷಿಗಳ ನಿವಾರಣೆಗೆ ಹೊಳಪು ರಿಬ್ಬನ್‌ಗಳನ್ನು ಕಟ್ಟಬೇಕು.

(ಆಕರ : ನ್ಯೂಸ್‌ಟುಡೇ, ಎಮ್ಮಿಗನೂರು ವ್ಯವಸಾಯ), ಈ ನಾಡು 25.10.2013

*ಎಂ.ಜಿ.ಎಸ್.*

**ಪೋಡು ವ್ಯವಸಾಯ** ಬುಡಕಟ್ಟು ಜನ ವಾಸಿಸುವ ಸ್ಥಳಗಳಿಗೆ ಪೋಡು ಎಂದು ಹೆಸರು. ಆಂಧ್ರಪ್ರದೇಶದಲ್ಲಿಯ 33 ಬುಡಕಟ್ಟುಗಳಿವೆ. 'ಕೊಂಡರೆಡ್ಲು' ಎಂಬ ಬುಡಕಟ್ಟಿನವರು ಗೋದಾವರಿ ನದಿಯ ಎರಡು ಕಡೆಗಳಲ್ಲಿ ವಾಸಮಾಡುತ್ತಿದ್ದಾರೆ. ಖಮ್ಮಂ ಜಿಲ್ಲೆಯ ಭದ್ರಾಚಲ ಪ್ರದೇಶದಿಂದ ಪೂರ್ವ ಗೋದಾವರಿ ಜಿಲ್ಲೆಯ ದೇವೀಪಟ್ನಂ, ಪಶ್ಚಿಮಗೋದಾವರಿ ಜಿಲ್ಲೆಯ ಪೋಲವರಂ ಹಾಗೂ ವಿಶಾಖಪಟ್ನಂ ಜಿಲ್ಲೆಯಲ್ಲಿಯೂ ಇವರು ಹರಡಿದ್ದಾರೆ. ಇವರನ್ನು 'ಪಾಂಡವರೆಡ್ಲು', 'ಹಿಲ್‌ರೆಡ್ಲು' ಎಂದು ಕರೆಯುತ್ತಾರೆ. ಇವರು ಅರಣ್ಯ ಪ್ರದೇಶಗಳಲ್ಲಿ ಮರಗಳನ್ನು ಕಡಿದು, ಅವುಗಳಿಗೆ ಬೆಂಕಿ ಹಚ್ಚಿ, ಆ ಪ್ರದೇಶಗಳಲ್ಲಿ ಫಸಲು ಬೆಳೆಸುತ್ತಾರೆ.

'ಕೋಯ' ಬುಡಕಟ್ಟುಗಳಂತೆಯೇ 'ಕೊಂಡರೆಡ್ಡಿ'ಗಳ ಮುಖ್ಯವಾದ ವೃತ್ತಿ ವ್ಯವಸಾಯ. ಈ ಪೋಡು ವ್ಯವಸಾಯವನ್ನು ಭಾರತದ ಭಿನ್ನ ಪ್ರದೇಶಗಳಲ್ಲಿ ವಿಭಿನ್ನವಾದ ಹೆಸರುಗಳಲ್ಲಿ ಕರೆಯುವುದುಂಟು. ಅಸ್ಸಾಂ, ಮೇಘಾಲಯ ತ್ರಿಪುರ, ಮಿಜೋರಾಂ, ಅರುಣಾಚಲ್ ಪ್ರದೇಶಗಳಲ್ಲಿ ಇದನ್ನು 'ಜುಮ್' ಎಂದು ಕರೆಯುತ್ತಾರೆ. ಮಧ್ಯಪ್ರದೇಶದಲ್ಲಿ 'ಬೇವಾರು' ಅಥವಾ 'ದಹ್ಯಾ' ಎಂದೂ ಉತ್ತರ ಒಡಿಶಾದಲ್ಲಿ 'ಕೊಮಾನು' ಅಥವಾ 'ಬ್ರಿಂಜಾಲ್' ಎಂದು ಕರೆಯುವುದುಂಟು. ಕೇರಳದಲ್ಲಿನ ಬುಡಕಟ್ಟು ಜನಾಂಗದವರು 'ಕೊತ್ತುಕಾಡ್' (ಕಾಡನ್ನು ಕಡೆಯುವುದು) 'ಕರಿಕಾಡು' ಕಾಡನ್ನು ಸುಡುವುದು, ಕಾಲೇವಾರಿ ಚುಡಲ್ ಪಂಜಕಾಂಡ್ ವಿರುಪ ಕೃಷಿ ಮುಂತಾದ ಹೆಸರುಗಳಲ್ಲಿ ಈ ಕೃಷಿ ಪದ್ಧತಿ ಇದೆ. ಕೊಂಡ ರೆಡ್ಡಿಗಳಿಗೆ ವ್ಯವಸಾಯಾಧಾರ ಪೋಡು.

ಒಂದು ಪ್ರದೇಶದಲ್ಲಿ ಹಂಗಾಮಿಯಾಗಿ ಬೇಸಾಯ ಮಾಡುವುದು, ಅನಂತರ ಆ ನೆಲದಲ್ಲಿ ಫಸಲು ಬೆಳಸದೇ ಇಡುವುದು ಪೋಡು ವ್ಯವಸಾಯದಲ್ಲಿ ಮುಖ್ಯವಾಗಿ ನಡೆಯುತ್ತದೆ. ಬೆಟ್ಟದ ಸರಿಗಳಲ್ಲಿನ ಕಾಡುಗಳನ್ನು ಕಡಿದು ಮರಗಳ ಮೂಲಗಳನ್ನು, ಚಿಕ್ಕ ಪೊದೆಗಳನ್ನು ಸುಡುತ್ತಾರೆ.

ಆ ಬೂದಿಯನ್ನು ಮೇಲೆ ಬೀಜಗಳನ್ನು ಚೆಲ್ಲುತ್ತಾರೆ. ಮಳೆ ಬಂದ ಅನಂತರ ಇವು ಮೊಳಕೆ ಬಂದು ಫಸಲು ಬೆಳೆಯುತ್ತವೆ. ಕೊಯ್ಲಿಗೆ ಬಂದಾಗ ಹಬ್ಬ ಮಾಡಿ ಫಸಲನ್ನು ಕೊಯ್ದು ಧಾನ್ಯ ಮಾಡಿಕೊಳ್ಳುತ್ತಾರೆ. ಒಂದೇ ಪ್ರದೇಶದಲ್ಲಿ ಹೆಚ್ಚು ಬಾರಿ ಕೃಷಿ ಮಾಡಬಾರದೆಂಬುದು ಪೋಡು ವ್ಯವಸಾಯದಲ್ಲಿ ಕಾಣಬಹುದಾದ ವೈಶಿಷ್ಟ್ಯ.

ಕೊಂಡರೆಡ್ಡಿಗಳು ಪೋಡನ್ನು ವರ್ಷಕ್ಕೊಮ್ಮೆಯಾಗಲಿ, ಎರಡು ವರ್ಷಗಳಿಗೊಮ್ಮೆಯಾಗಲಿ ಬದಲಾಯಿಸಿ ಇನ್ನೊಂದು ಪ್ರದೇಶದಲ್ಲಿ ಪೋಡು ಮಾಡುತ್ತಾರೆ. ಹೀಗೆ ಮಾಡುವುದರಿಂದ ಭೂಮಿ ಫಲವತ್ತಾಗಿದ್ದು ಬೆಳೆಗಳು ಚೆನ್ನಾಗಿ ಬೆಳೆಯುತ್ತದೆಂಬ ನಂಬಿಕೆ. ಇದನ್ನು 'ಮಾರ್ಕುಡಿ ವ್ಯವಸಾಯಂ' (ಬದಲಾವಣೆ ಕೃಷಿ) ಎನ್ನುತ್ತಾರೆ. ಇವರು ಪೋಡು ವ್ಯವಸಾಯದಲ್ಲಿ ಜೋಳ, ಮುಸುಕಿನ ಜೋಳ, 'ಸಾಮೆ', 'ಆರಕುಲು', ಬುಡಮೆ ಬೆಳೆಸುತ್ತಾರೆ. ಬೇಳೆ ಧಾನ್ಯಗಳನ್ನು ಸಹ ಬೆಳೆಸುತ್ತಾರೆ.

ಪೋಡನ್ನು ಕಡಿಯುವುದು, ಸುಡುವುದು, ಬೀಜ ಬಿತ್ತುವುದು ಮುಂತಾದ ಕೃಷಿ ಕೆಲಸಗಳನ್ನು ಮಾಡುವಾಗ ಹಾಡುಗಳನ್ನು ಹಾಡುವುದುಂಟು.

**ಆಕರ**

ಜಾನಪದ ವಿಜ್ಞಾನಾಧ್ಯಯನಂ - ಜಿ.ಎಸ್.ಮೋಹನ್

ತೂರ್ಪು ಗೋದಾವರಿ ಜಿಲ್ಲಾ ಗಿರಿಜನ ಕೊಂಡರೆಡ್ಲ ಆಚಾರಾಲು (ಅಮುದ್ರಿತ ಪಿಎಚ್.ಡಿ. ಪ್ರೌಢಪ್ರಬಂಧ) - ಪಿ.ಎಮ್. ಮುನಿರೆಡ್ಡಿ

ಭಾರತೀಯ ಗಿರಿಜನುಲು, ನದೀಂ ಹಸನೈನ್

*ಎಂ.ಜಿ.ಎಸ್.*

**ಬಂಡಿ** ರೈತನ ಕೃಷಿ ಬದುಕಿನಲ್ಲಿ ಅತ್ಯಂತ ಮುಖ್ಯವಾದುದು. ಹಳೇ ಮೈಸೂರು ಪ್ರಾಂತ್ಯದಲ್ಲಿ ಬಂಡಿಗೆ ಚಕ್ಕಡಿ ಅಥವಾ ಗಾಡಿ ಎನ್ನುತ್ತಾರೆ. ಕರ್ನಾಟಕದಲ್ಲಿ ಎಲ್ಲ ಭಾಗದಲ್ಲೂ ಬಂಡಿ ತಂತ್ರಜ್ಞಾನ ಒಂದೇ ಇದ್ದರೂ ಮೇಲ್ಮೈ ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆಯಾಗುತ್ತದೆ. ಬಳಕೆಯಲ್ಲಿಯೂ ವ್ಯತ್ಯಾಸವಿರುತ್ತದೆ. ಬಯಲು ಸೀಮೆಯಲ್ಲಿ ಒಂದು ಕಡೆ ತೋಟಗಾರಿಕೆ ಬೆಳೆಗಳನ್ನು ಸಾಗಿಸುವುದಕ್ಕಾಗಿ ಬಳಸಿದರೆ ಮತ್ತೊಂದೆಡೆ ಬೀಜ, ಗೊಬ್ಬರ, ಮಣ್ಣು, ಸಾಗಿಸಲು ಬಳಸುತ್ತಾರೆ.

ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಭಾಗದ ಗಾಡಿಗಳನ್ನು ಪರಸ್ಪರ ಹೋಲಿಸಿದರೆ ಸ್ವಲ್ಪ ಬದಲಾವಣೆಯನ್ನು ಗಮನಿಸಬಹುದು. ಕಾರಣ ಉತ್ತರ ಕರ್ನಾಟಕದ ಗಟ್ಟಿ ನೆಲಕ್ಕೆ ಹೊಂದುವ ರೀತಿಯಲ್ಲಿ ತಯಾರಿಸಿದರೆ, ಹೈದರಾಬಾದ್ ಕರ್ನಾಟಕದ ಬಿರುಸು ಮಣ್ಣಿಗೆ ಹೊಂದುವಂತೆ ಬಂಡಿಗಳು ಸ್ವಲ್ಪ ವಿಭಿನ್ನವಾಗಿವೆ. ಆಯಾ ಪ್ರದೇಶದ ಜನರು ಅವಲಂಬಿಸಿದ ಕಸುಬು, ವಾಯುಗುಣ, ನೆಲದ ಗುಣಕ್ಕೆ ಹೊಂದುವಂತೆ ಬಂಡಿಗಳ ವಿನ್ಯಾಸ ಕೂಡ ಮಾರ್ಪಾಡಾಗಿರುತ್ತದೆ.


ಜಾಲಿ ಹಾಗೂ ಕೊಂಚ ಬೊಂಬು, ತೇಗದ ಮರಗಳಿಂದ ತಯಾರಿಸುವ ಈ ಬಂಡಿಗಳಲ್ಲಿ ಮರ, ಈಸು, ಕುಂಭ, ಬುಟೇವು, ಚಟ್ಟು, ಕಬ್ಬಿಣ ಪಟ್ಟಿ, ಹಲ್ಲು, ನೊಗ - ಮೊದಲಾದವು ಗಾಡಿಯ ಅಂಗಗಳು. ಗೊಬ್ಬರ ಬಂಡಿ, ಹೆಳವರ ಬಂಡಿಯಂತಹ ಚಿಕ್ಕ ಪುಟ್ಟ ಬಂಡಿಗಳೂ ಅಲ್ಲಲ್ಲಿ ಕಂಡುಬರುತ್ತವೆ.

**ಸಾಮಾನ್ಯ ಬಂಡಿಯ ವಿನ್ಯಾಸ :** ಬಂಡಿಗಳ ಚಕ್ರಗಳ ತಯಾರಿಕೆ ಕಬ್ಬಿಣ ಹಾಗೂ ಮರ ಮಿಶ್ರಿತ. ಒಂದು ಚಕ್ರದಲ್ಲಿ ನಾಲ್ಕೈದು ಭಾಗಗಳಿವೆ. ಮೊದಲನೆಯದು ಚಕ್ರದ ಹೊರ ಮೈಗೆ ಹೊದಿಸಿರುವ ಕಬ್ಬಿಣದ ಬಳೆ. ಇದು ಮರ ಸವೆಯದಂತೆ ಕಾಪಾಡುವುದರ ಜೊತೆಗೆ ಇಡೀ ಚಕ್ರದ ಬಿಡಿ ಭಾಗಗಳನ್ನು ಬಿಗಿಯಾಗಿ ಹಿಡಿದಿಡುತ್ತದೆ. ಮಣ್ಣಿನಲ್ಲಿ ಚಕ್ರ ಹೂತು ಹೋಗದಂತೆ ಮುಂದಿನ ಭಾಗ ಚಕ್ರಕ್ಕೆ ಹೊದಿಸಿರುವ ಮರ, ಅದೇ 'ಹೊಟ್ಟೆ ಮರ'. ಒಂದು ಚಕ್ರದ ಸುತ್ತ ಆರು ಹೊಟ್ಟೆ ಮರಗಳಿರುತ್ತವೆ. ಹನ್ನೆರಡು ಅರೆಕೋಲು ಜೋಡಿಸಿರುತ್ತಾರೆ. ಅಂದರೆ ಒಂದು ಹೊಟ್ಟೆ ಮರಕ್ಕೆ ಎರಡು ಅರೆಕೋಲು, ಪ್ರತಿ ಅರೆಕೋಲನ್ನು ಒಂದು ಕೇಂದ್ರಕ್ಕೆ ಜೋಡಿಸುತ್ತಾರೆ. ಹಾಗೆ ಸೇರಿಸುವ ಜಾಗವೇ 'ಗುಂಬ'. ಈ 'ಗುಂಬ'ವನ್ನು ದಪ್ಪವಾದ ಜಾಲಿ ಮರದಿಂದ ಮಾಡಿರುತ್ತಾರೆ.

ಹೀಗೆ ವಿನ್ಯಾಸವಿರುವ ಎರಡು ಚಕ್ರಗಳನ್ನು ಸಿದ್ಧಪಡಿಸಿಕೊಂಡು ಇವೆರಡನ್ನು ಒಂದು ಕಬ್ಬಿಣದ ರಾಡಿನಿಂದ ಜೋಡಿಸುತ್ತಾರೆ. ಇದೇ ಗಾಡಿಯ ಅಚ್ಚು. ಅಚ್ಚಿನ ಮೇಲ್ಭಾಗಕ್ಕೆ ದಪ್ಪನಾದ ಎರಡೂವರೆ ಅಥವಾ ಮೂರು ಅಡಿ ಉದ್ದದ ಮರದ ಕೊರಡು ಇದ್ದು ಇದನ್ನು ಮೇಲಚ್ಚು ಎನ್ನುತ್ತಾರೆ. ಮೇಲಚ್ಚು ಸಿದ್ಧವಾದರೆ ಗಾಡಿಯ ಅರ್ಧಭಾಗ ತಯಾರಿಸಿದಂತೆಯೇ. ಅನಂತರ ಗಾಡಿಯ ಪ್ರಧಾನಭಾಗವೇ ಮೂಕು. ಮೂಕು ಎಂದರೆ ಗಾಡಿಯನ್ನು ನಿಯಂತ್ರಿಸುವ ಕೊರಡು. ಇದು 14 ರಿಂದ 16 ಅಡಿ ಉದ್ದವಿರುವ ಒಂದೇ ಮರದ ಕೊರಡು. ಈ ಕೊರಡನ್ನು ಮೇಲಚ್ಚಿನ ಮೇಲಿಟ್ಟು ಅರ್ಧ ಅಂಗುಲ ರಂಧ್ರ ಮಾಡಿ, ಮೊಳೆ ಹಾಕಿ ಬಂಧಿಸುತ್ತಾರೆ. ಇದಕ್ಕೆ ಎದೆ ಮೊಳೆ ಎನ್ನುತ್ತಾರೆ. ಅನಂತರ ಗಾಡಿಯ ತೊಟ್ಟಿ ಕಟ್ಟುವ ಕೆಲಸ ಮುಖ್ಯವಾದುದು. ಅಂದರೆ ಸಾಮಾನು ಸಾಗಿಸುವ ಭಾಗವೇ ತೊಟ್ಟಿ. ಬಂಡಿಯ ಪಾರಿಯ ಮೇಲ್ಭಾಗಕ್ಕೆ ಆರು ರಂಧ್ರಗಳನ್ನು ಮಾಡಿ ಒಂದೂವರೆ ಮೊಳೆ ಉದ್ದದ ಗುಜ್ಜು (ಗೂಟ ಅಥವಾ ಕಾಳಗ)ಗಳನ್ನು ನೆಟ್ಟು, ಗುಜ್ಜಿನ ಸಹಾಯದಿಂದ ಗಾಡಿಗೆ ತಡಿಕೆ ಅಥವಾ ಹಲಗೆ ಜೋಡಿಸಿ ತೊಟ್ಟಿಯನ್ನು ಸಿದ್ಧಪಡಿಸಿ ಸಾಮಾನು ಸರಂಜಾಮುಗಳನ್ನು ಸಾಗಿಸುತ್ತಾರೆ. ಇದು ಬಂಡಿ / ಗಾಡಿ / ಚಕ್ಕಡಿಯ ವಿನ್ಯಾಸ.

**ಬಂಡಿಯ ವಿಧಗಳು :** ಬಂಡಿಯನ್ನು ತಯಾರಿಸುವ ವಿಧಾನ ಒಂದೇ ಇದ್ದರೂ, ಅವುಗಳ ವಿನ್ಯಾಸಗಳಲ್ಲಿ ಭಿನ್ನತೆ ಇರುತ್ತದೆ. ಟೈರು ಗಾಡಿ, ಮರದ ಗಾಡಿಗಳಲ್ಲಿಯ ಬದಲಾವಣೆ ಅಷ್ಟೇನು ಮುಖ್ಯವೆನಿಸದೇ ಹೋದರೂ ಟೈರು ಗಾಡಿಗಿಂತ ಮರದ ಗಾಡಿಗಳು ಎತ್ತುಗಳಿಗೆ ಶ್ರಮ ಕೊಡುವುದಿಲ್ಲ. ಎಂಥ ಚಿಕ್ಕ ಜಾಗದಲ್ಲೂ ಸಂಚರಿಸುತ್ತವೆ. ಆದ್ದರಿಂದಲೇ 'ಗಾಡಿ ಜಾಡು' ಎಂಬ ಪದ ಚಾಲ್ತಿಗೆ ಬಂದದ್ದು. ಬಂಡಿಯ ವಿನ್ಯಾಸದ ಆಧಾರದ ಮೇಲೆ ಅವುಗಳನ್ನು ಬೇರೆ - ಬೇರೆ ಹೆಸರುಗಳಿಂದ ಗುರುತಿಸುವುದುಂಟು.

**ತಡಿಕೆ ಗಾಡಿ :** ಬಯಲು ಸೀಮೆಯಲ್ಲಿ ಇದನ್ನು ಬಳಸುತ್ತಾರೆ. ಕಾರಣ ಜಮೀನಿಗೂ ಮನೆಗೂ ಬಹಳ ದೂರವಿರುವುದರಿಂದ ಈ ಭಾಗದ ರೈತರಿಗೆ ಸಾಗಾಟ ತುಂಬಾ ಶ್ರಮದಾಯಕವಾದದ್ದು. ಆದುದರಿಂದ ಎತ್ತರದ ಬಂಡಿಗಳನ್ನು ಬಳಸುತ್ತಾರೆ. ಅಗಲವಾದ ಚಕ್ರವುಳ್ಳ, ಉದ್ದ ಮೂಕಿನ, ಅಗಲ ತೊಟ್ಟಿಯ, ಗಾಡಿಗಳನ್ನು ಬಳಸುತ್ತಾರೆ. ತೆಂಗಿನ ಕಾಯಿ, ಅಡಕೆ



ಸಾಗಿಸಲು ತಡಿಕೆ ಗಾಡಿಯನ್ನು ಬಳಸುತ್ತಾರೆ. ತಡಿಕೆ ಮೂರು ಅಡಿ ಎತ್ತರವಿದ್ದು ಒಂದು ಬಾರಿಗೆ ಇನ್ನೂರು ಕಾಯಿಯವರೆಗೂ ತುಂಬಬಹುದು.

**ಹಲಗೆಬಂಡಿ :** ಗೊಬ್ಬರ ಸಾಗಿಸಲು ಇದು ಸಹಕಾರಿ. ಇದಕ್ಕೆ ತಡಿಕೆ ಇರುವುದಿಲ್ಲ. ಬದಲಿಗೆ ಒಂದೂವರೆ ಅಡಿ ಅಗಲ, ಆರು ಅಡಿ ಉದ್ದದ ಎರಡು ಹಲಗೆಗಳನ್ನು ಬಳಸುತ್ತಾರೆ.

**ಅಮಲ್ದಾರರ ಬಂಡಿ :** 40-50ರ ಶಕದಲ್ಲಿ ಅಮಲ್ದಾರರು ಜಮಾಬಂದಿಗೆ ತಡಿಕೆ ಬಂಡಿಗಳನ್ನು ಏರಿಕೊಂಡು ಗ್ರಾಮಗಳನ್ನು ಸುತ್ತುತ್ತಿದ್ದರಿಂದ ಅವುಗಳನ್ನು ಅಮಲ್ದಾರರ ಬಂಡಿ ಎಂದು ಕರೆಯುವ ಪ್ರತೀತಿ ಇದೆ. ತಡಿಕೆ ಗಾಡಿಗಳಿಗೆ ಬಿದಿರಿನ ಕಮಾನು ಕಟ್ಟಿ ಅದಕ್ಕೆ ಬಣ್ಣ ಬಣ್ಣ ಬಟ್ಟೆ ಹೊದಿಸಿ, ಬಂಡಿಯ ಕೆಳಭಾಗದಲ್ಲಿ ಮೇವು, ಸಾಮಾನು ಸರಂಜಾಮುಗಳನ್ನು ಶೇಖರಿಸಿಟ್ಟುಕೊಂಡರೆ, ಮೂಕಿನ ಕೆಳಭಾಗದಲ್ಲಿ ಲಾಟೀನು, ಕಂದೀಲು, ಸೀಮೆಎಣ್ಣೆ ಹರಳೆಣ್ಣೆ ಮೊದಲಾದ ಪರಿಕರಗಳನ್ನು ಸಂಗ್ರಹಿಸಿಡಲಾಗುತ್ತಿತ್ತು. ದೂರದ ಸಂಬಂಧಿಕರ ಮನೆಗೆ, ಜಾತ್ರೆಗೆ ದೇವಸ್ಥಾನಗಳಿಗೆ ಹೋಗಲು ಈ ಬಂಡಿಗಳನ್ನು ಬಳಸಲಾಗುತ್ತಿತ್ತು.

**ಗೆರೆಸ ಬಂಡಿ :** ಬಯಲು ಸೀಮೆ ರೈತರು, ಕಾಡು ಹಳ್ಳಿಗಳ ರೈತರು ಗದ್ದೆ, ಹೊಲಗಳಲ್ಲಿ ಗೊಬ್ಬರ ಸಾಗಿಸಲು ಬಳಸುತ್ತಿದ್ದ ಏಕೈಕ ಬಂಡಿ ಗೆರೆಸ ಬಂಡಿ. ಈಗ ಇದು ಕೃಷಿ ವಲಯದಿಂದಲೇ ನಾಪತ್ತೆಯಾಗಿದೆ. ಈ ಗೆರೆಸ ಹೊಲದ ಮೂಲೆ - ಮೂಲೆಗೂ ಗೊಬ್ಬರವನ್ನು ಸಾಗಿಸುತ್ತದೆ. ಒಂದು ಗೆರೆಸದಿಂದ ಒಂದು ಸಲಕ್ಕೆ 6 ರಿಂದ 8 ಬುಟ್ಟಿ ಗೊಬ್ಬರ ಸಾಗಿಸಬಹುದು.

**ಚೋಟಾ ಬಂಡಿ :** ಬೆಂಗಳೂರು ಸಮೀಪದ ಕನಕಪುರ ಹಾಗೂ ತಮಿಳುನಾಡು -ಕರ್ನಾಟಕ ಭಾಗಗಳಲ್ಲಿ ಇಂಥ ಗಾಡಿಗಳು ಬಳಕೆಯಲ್ಲಿವೆ. ಚೋಟಾ ಬಂಡಿ ಹೆಸರೇ ಸೂಚಿಸುವಂತೆ ಚಿಕ್ಕದಾದರೂ ಗಾತ್ರದಲ್ಲಿ ಜಮೀನಿಗೆ ಗೊಬ್ಬರ ಸಾಗಿಸಲು ಹೇಳಿ ಮಾಡಿಸಿದಂತಿದೆ. ಮರದ ಗಾಲಿಗಳ ಮೇಲೆ ಟೈರ್ ಜೋಡಿಸಿರುವುದರಿಂದ ಚಕ್ರ ಸವಿಯುವ ಭಯವಿಲ್ಲ. ಆದರೆ ಹೆಚ್ಚು ಭಾರದ ವಸ್ತುಗಳನ್ನು ಸಾಗಿಸಲು ಸಾಧ್ಯವಿಲ್ಲ.

**ವಡ್ಡರ ಬಂಡಿ :** ಸುಮಾರು ನೂರು ವರ್ಷಗಳಷ್ಟು ಹಿಂದೆ ಭಾರಿ ಗಾತ್ರದ ವಸ್ತುಗಳ ಸಾಗಾಣಿಕೆಗೆ ವಡ್ಡರ ಬಂಡಿ ಬಹು ಜನಪ್ರಿಯವಾಗಿತ್ತು. ಸಾಮಾನ್ಯವಾಗಿ ಮರದ ದಿಮ್ಮಿಗಳನ್ನು ದೊಡ್ಡ ದೊಡ್ಡ ಹೆಬ್ಬಂಡೆಗಳನ್ನು, ಕಾಡುಗಲ್ಲುಗಳನ್ನು ಬೆಟ್ಟದಿಂದ ಅರಣ್ಯದಿಂದ ಸಾಗಿಸುವುದಕ್ಕಾಗಿ ವಿಶೇಷವಾಗಿ ಇಂತಹ ಬಂಡಿಗಳನ್ನು ನಿರ್ಮಿಸುತ್ತಿದ್ದರು. ಇಂದು ಇದು ಉಪಯೋಗದಲ್ಲಿಲ್ಲ.

ಭಾರಿ ಶಕ್ತಿಯ ಈ ಬಂಡಿಗೆ ಹೇರಿದ ವಸ್ತುವಿನ ತೂಕಕ್ಕನುಸಾರವಾಗಿ ಒಂದು ಜೊತೆ, ಎರಡು ಜೊತೆ, ಕೊಬ್ಬಿದ ಕೋಣಗಳನ್ನು ಕಟ್ಟಿ ಎಳೆಸುತ್ತಿದ್ದರು. ರಾಯಚೂರು ಕೋಟೆಯ ಕಲ್ಲುಗಳನ್ನು ಇಂತಹ ಬಂಡಿಗಳಿಂದಲೇ ತಂದಿರುವುದಕ್ಕೆ ಕೋಟೆಯ ಕಲ್ಲೊಂದರ ಮೇಲೆ ಕೆತ್ತಿದ ಕಲ್ಲು ಸಾಗಿಸುವ ರೇಖಾ ಚಿತ್ರ ಸಾಕ್ಷಿಯಾಗಿದೆ. ಟ್ರ್ಯಾಕ್ಟರ್, ಕ್ರೇನ್‌ಗಳು ಬಂದ ಬಳಿಕ ಈ ವಡ್ಡರ ಬಂಡಿಗಳು ಕಣ್ಮರೆಯಾದುವು.

**ಮಲೆನಾಡು ಬಂಡಿಗಳು:** ಮಲೆನಾಡಿನಲ್ಲಿ ತೋಟದಲ್ಲೇ ಮನೆಗಳಿರುವುದರಿಂದ ಅವರಿಗೆ ಎತ್ತುಗಳಿಂದೆಳೆಸುವ ಬೃಹದಾಕಾರದ ಬಂಡಿ ಅಗತ್ಯವಿಲ್ಲ. ಹಾಗಾಗಿ ಬಂಡಿ ತಂತ್ರಜ್ಞಾನವನ್ನೇ ಆಧರಿಸಿ ಅಲ್ಲಿಯ ರೈತರು ಕೆಲವೊಂದು ಕೈಗಾಡಿಗಳನ್ನು ತಯಾರಿಸಿಕೊಳ್ಳುತ್ತಾರೆ. ಕೈಗಾಡಿ, ತಳ್ಳುಗಾಡಿ, ಭಾಗ್ಯಲಕ್ಷ್ಮಿಗಾಡಿಗಳು ಮಲೆನಾಡಿನ ಬಂಡಿಗಳಾಗಿವೆ. ಏಕ ಚಕ್ರ, ದ್ವಿಚಕ್ರ ಮತ್ತು ಮೂರು ಚಕ್ರಗಳಿಂದ ತಯಾರಿಸುವ ಈ ಬಂಡಿಗಳನ್ನು ಒಬ್ಬನೇ ತನ್ನ ಸ್ವಂತ ಶಕ್ತಿಯಿಂದ ಎಳೆದು ವಸ್ತುಗಳನ್ನು ಸಾಗಿಸುತ್ತಾನೆ. ಇವುಗಳಿಗೆ ಜಾನುವಾರುಗಳನ್ನು ಬಳಸುವ ಅಗತ್ಯವಿರುವುದಿಲ್ಲ. ಇಂದು ಮರದ ಚಕ್ರವಿರುವ ಗಾಡಿಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ನಾಗರಿಕತೆಯ ನಾಗಾಲೋಟದಿಂದ ದೇಸಿ ಪರಿಕರಗಳು ನಶಿಸಿ ಹೋಗುತ್ತಿರುವುದು ವಿಷಾದದ ಸಂಗತಿ.

*ಆರ್.ಎಚ್.ಎನ್.*

**ಬಜೆ** ಅರೇಸೀ (ಏರೇಸೀ) ಕುಟುಂಬಕ್ಕೆ ಸೇರಿದ ಏಕದಳ ಮೂಲಿಕೆ ಸಸ್ಯ (ಸ್ವೀಟ್ ಫ್ಲ್ಯಾಗ್). ಅಕೋರಸ್ ಕ್ಯಾಲಮಸ್ ಮತ್ತು ಅಕೋರಸ್ ಗ್ರಾಮಿನಿಯಸ್ ಎಂಬುವು ಇದರ ವೈಜ್ಞಾನಿಕ ಹೆಸರುಗಳು. ಅಮೂಲ್ಯವಾದ ಔಷಧೀಯ ಗುಣಗಳನ್ನು ಹೊಂದಿದೆ. ಇದು ವಾಣಿಜ್ಯ ಬೆಳೆಯೂ ಸ್ವಾಭಾವಿಕ ಬೆಳೆಯೂ ಆಗಿದೆ. ರಷ್ಯಾ, ಮಧ್ಯ ಯುರೋಪ್, ರುಮೇನಿಯಾ, ಭಾರತ ಮತ್ತು ಜಪಾನ್ ದೇಶಗಳು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಿದ್ದರೆ, ಉತ್ತರ ಅಮೆರಿಕ, ಯುರೋಪ್ ಮತ್ತು ಏಷ್ಯಾಖಂಡಗಳಲ್ಲಿಯ ನದಿ ದಂಡೆಗಳು, ಕೆರೆಯ ಅಕ್ಕಪಕ್ಕ ಹಾಗೂ ನೀರು ನಿಲ್ಲುವ ಭಾಗಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಭಾರತದಲ್ಲಿ ಕರ್ನಾಟಕ, ಮಣಿಪುರ, ಕಾಶ್ಮೀರ ಅರುಣಾಚಲಪ್ರದೇಶ, ಮೇಘಾಲಯ ಹಾಗೂ ಹಿಮಾಲಯದ ತಪ್ಪಲು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಕರ್ನಾಟಕದ ತುಮಕೂರು ಜಿಲ್ಲೆಯ ಕೊರಟಗೆರೆ ಇದರ ಬೇಸಾಯಕ್ಕೆ ಹೆಸರುವಾಸಿ. ಕೊರಟಗೆರೆ ಒಂದರಲ್ಲೇ 40 ಹೆಕ್ಟೇರ್ ವಿಸ್ತೀರ್ಣದಲ್ಲಿ ಇದರ ಬೇಸಾಯ ಮಾಡುತ್ತಿದ್ದು ವಾರ್ಷಿಕ 400 ಟನ್‌ಗಳ ಉತ್ಪತ್ತಿಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಚಿತ್ರದುರ್ಗ, ಹಾಸನ ಮುಂತಾದ ಜಿಲ್ಲೆಗಳಲ್ಲೂ ಇದರ ಬೇಸಾಯ ಪ್ರಾರಂಭಿಸಿದ್ದಾರೆ.

**ಸಸ್ಯ ವರ್ಣನೆ :** ಸು.60 ಸೆಂ.ಮೀ.ಗಿಂತ ಹೆಚ್ಚು ಎತ್ತರಕ್ಕೆ ಬೆಳೆಯುತ್ತದೆ. ಇದರ ಬೇರು, ಕಾಂಡ ನೆಲದಡಿಯಲ್ಲಿ ಹರಡಿಕೊಂಡಿರುತ್ತದೆ. ಎಲೆಗಳು 1-2 ಸೆಂ.ಮೀ. ಉದ್ದವಿದ್ದು ಕಿರಿದಾಗಿರುತ್ತವೆ. ಅಗಲ 1 ರಿಂದ 5.75 ಸೆಂ.ಮೀ.ಗಳಾಗಿದ್ದು, ಕಾಂಡದ ಉದ್ದಕ್ಕೂ ಸರಳ ರೀತಿಯ ಎಲೆಗಳು ಎರಡು



ಸಾಲುಗಳಲ್ಲಿ ದಟ್ಟವಾಗಿ ಜೋಡಣೆಗೊಂಡಿರುತ್ತವೆ. ಬಹುಮಟ್ಟಿಗೆ ಖಸ್‌ಹುಲ್ಲಿನ ಎಲೆಗಳನ್ನು ಹೋಲುತ್ತದೆ. ಇದರಲ್ಲಿ ತೊಟ್ಟು ಮತ್ತು ಅಲಗು ಎಂಬ ವ್ಯತ್ಯಾಸವಿಲ್ಲ. ಎಲೆಗಳ ಬಣ್ಣ ಹೊಳಪು ಹಸುರು. ಅಂಚು ಅಲೆಯಾಕಾರವಾಗಿದ್ದು ಮಧ್ಯಭಾಗ ದಪ್ಪವಾಗಿರುತ್ತದೆ. ಬೇಸಗೆಯ ಆರಂಭದಲ್ಲಿ ಹೂ ಬಿಡುವುದು ಸಾಮಾನ್ಯ. ಹೂಗಳು ದ್ವಿಲಿಂಗಿಗಳು; ಸ್ಪೇಡಿಕ್ಸ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಪ್ರತಿ ಹೂವಿನಲ್ಲೂ ಹಡೆಯಾಕಾರದ 6 ಪುಷ್ಪಪತ್ರಗಳು, 6 ಕೇಸರಗಳು, 2-4 ಕಾರ್ಪೆಲುಗಳ ಅಂಡಾಶಯಗಳಿವೆ.

**ಬೆಳೆಯುವ ವಿಧಾನ :** ಬಜೆಯ ಕಾಂಡದ ತುದಿಗಳನ್ನು ಕತ್ತರಿಸಿ ಬಿತ್ತುವುದು ಸಾಮಾನ್ಯ. ಈ ತುದಿಗಳಿಗೆ ಮೊಳಕೆಗಳೆಂದೇ ಹೆಸರು. ಬೆಳೆ ಕೊಯ್ಲು ಮಾಡಿದ ಅನಂತರ ಬಲಿತ ಕಾಂಡ ಹಾಗೂ ಎಳೆಯ ತುದಿಗಳನ್ನು ಬೇರ್ಪಡಿಸಿ ಕೇವಲ ಎಳೆಯ ತುದಿ ಭಾಗಗಳನ್ನು ಮಾತ್ರ ಆರಿಸಿ ಬಿತ್ತನೆಗೆ ಬಳಸುತ್ತಾರೆ. ಬಿತ್ತನೆ ಮಾಡಿದ 10 ರಿಂದ 11 ತಿಂಗಳುಗಳಲ್ಲಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಆಗ ಬಜೆಯು ಕುಯ್ಲಿಗೆ ಸಿದ್ಧವಾಗಿದೆ ಎಂದರ್ಥ. ಕೊಯ್ಲು ಮಾಡಿದ ತಕ್ಷಣವಾದರೂ ಬಿತ್ತಬಹುದು. ಅಲ್ಲದೆ ತಡವಾಗುವುದಿದ್ದಲ್ಲಿ ಬಿತ್ತನೆ ಸಾಮಗ್ರಿಯನ್ನು ತರಗೆಲೆಗಳನ್ನು ಹರಡಿ ಒಂದು ವಾರದವರೆಗೆ ಮುಚ್ಚಿಟ್ಟು ಅನಂತರ ಬಿತ್ತಬಹುದು. ಭೂಮಿಯನ್ನು 2-3 ಬಾರಿ ಆಳವಾಗಿ ಉಳುಮೆ ಮಾಡಿ ಸಮ ಮಾಡಬೇಕು. ಬಹುಮಟ್ಟಿಗೆ ಇದರ ಸಿದ್ಧತೆ ಬತ್ತದ ಪೈರನ್ನು ನಾಟಿ ಮಾಡುವ ರೀತಿಯಲ್ಲಿ ಇರುತ್ತದೆ. ಸಾಲುಗಳ ನಡುವೆ 30 ಸೆಂ.ಮೀ. ಮತ್ತು ಸಾಲಿನಲ್ಲಿ 15 ಸೆಂ.ಮೀ. ಅಂತರವಿರುವಂತೆ ಬಿತ್ತಬೇಕು. ಬಿತ್ತುವ ಆಳ 5 ಸೆಂ.ಮೀ.ಗಳಷ್ಟಿದ್ದರೆ ಸಾಕು. ಬಿತ್ತನೆಗೆ ಮಾರ್ಚ್-ಮೇ ತಿಂಗಳುಗಳಾದರೆ ಉತ್ತಮ.

**ಹವಾ ಮತ್ತು ಭೂಗುಣ :** ವರ್ಷದ 12 ತಿಂಗಳುಗಳಲ್ಲೂ ಬೆಳೆಯಬಹುದಾದಂತಹ ಬೆಳೆ. ಬತ್ತದ ಬೇಸಾಯವನ್ನು ಹೋಲುವಂತಹದ್ದಾಗಿದ್ದು, ತೇವದ ವಾತಾವರಣ ಹೆಚ್ಚು ಯುಕ್ತ. ಬತ್ತದ ಗದ್ದೆಗಳಂತೆಯೇ ಬದುಗಳನ್ನು ಮಾಡಿ ಸದಾ ನೀರು ನಿಲ್ಲುವಂತೆ ಮಾಡಬೇಕು. ಇದಕ್ಕೆ ಗೋಡುಮಣ್ಣು, ಮೆಕ್ಕಲು ಮಣ್ಣು ಇದ್ದರೆ ಒಳ್ಳೆಯದು. ಸದಾಕಾಲ ಮಣ್ಣು ಹಸಿಯಾಗಿರಬೇಕು. ಫಲವತ್ತಾದ ಮಣ್ಣಿನಲ್ಲಿ ಹುಲುಸಾಗಿ ಬೆಳೆಯುತ್ತದೆ.

**ಬೇಸಾಯದ ವಿಧಗಳು : ನೀರಾವರಿ :** ಬತ್ತದ ಬೆಳೆಯ ರೀತಿಯಲ್ಲಿ ಯಾವಾಗಲೂ ನೀರು ನಿಂತಿರಬೇಕು. ಪ್ರಾರಂಭದಲ್ಲಿ 2 ಸೆಂ.ಮೀ.ಗಳಷ್ಟು ನೀರು ಇದ್ದರೆ ಬೆಳವಣಿಗೆಯಾದಂತೆ 10 ಸೆಂ.ಮೀ.ಗಳಷ್ಟು ಹೆಚ್ಚಿಸಬೇಕು.

**ಗೊಬ್ಬರ :** ಈ ಬೆಳೆಯನ್ನು ಬರಡು ಭೂಮಿಯಲ್ಲಿ ಬೆಳೆಯಲು ಸಾಧ್ಯವಿಲ್ಲ. ಉತ್ತಮ ಪ್ರಮಾಣದ ಫಲವತ್ತತೆ ಇರಬೇಕು. ಬಿತ್ತನೆಯನ್ನು ಮಾಡುವ ಮೊದಲೇ ಕೊಟ್ಟಿಗೆ ಗೊಬ್ಬರ ಅಥವಾ ಸಾವಯವ ಗೊಬ್ಬರವನ್ನು ಭೂಮಿಯಲ್ಲಿ ಹರಡಬೇಕು. ಬಿತ್ತನೆಯನ್ನು ಮಾಡಿದ ಅನಂತರ ಮೂರು ಸಮ ಕಂತುಗಳಲ್ಲಿ ಗೊಬ್ಬರ ಹಾಕಬೇಕು.

ಸಾವಯವ ಗೊಬ್ಬರದ ಜೊತೆ ಅಮೋನಿಯಂ ಸಲ್ಫೇಟ್, ಸೂಪರ್ ಫಾಸ್ಫೇಟ್, ಮ್ಯೂರೇಟ್ ಆಫ್ ಪೊಟ್ಯಾಷ್ ರಾಸಾಯನಿಕ ಗೊಬ್ಬರಗಳನ್ನು ಕೊಡಬೇಕಾಗುತ್ತದೆ. ಅಲ್ಲದೇ ಗದ್ದೆ ಉಳುಮೆ ಮಾಡುವಾಗ ವಿವಿಧ ರೀತಿಯ ಹಸಿ ಎಲೆಗಳನ್ನು ಗದ್ದೆಯಲ್ಲಿ ಹಾಕಿ ಕೊಳೆಸುವುದರಿಂದ ಭೂಮಿಯ ಫಲವತ್ತತೆ ಹೆಚ್ಚುವುದಲ್ಲದೆ ಬೆಳೆಯು ಹುಲುಸಾಗಿ ಬರುತ್ತದೆ.

**ಉಪಯೋಗ :** ಬಜೆಯ ಕಾಂಡವು ಬಹು ಉಪಯುಕ್ತವಾಗಿದೆ. ಇದರ ಗುಪ್ತಕಾಂಡಗಳನ್ನು ಒಣಗಿಸಿ ಮದ್ಯ ತಯಾರಿಸಲು, ಸೌಂದರ್ಯ ಸಾಧನಗಳಲ್ಲಿ ಬೆರೆಸಲು ಬಳಸುತ್ತಾರೆ. ಇದರಲ್ಲಿ ಅಸರೋನ್ ಸೆಸ್ಕ್ವಿಟರ್ಪೆಂಟೈನ್ ಎಂಬ ಆಲ್ಕೋಹಾಲ್ ಅಂಶಗಳಿವೆ. ಕ್ಯಾಲಮಸ್ ಎಂಬ ಸುಗಂಧ ತೈಲವನ್ನು ತಯಾರಿಸಲು ಬಳಸುತ್ತಾರೆ. ಈ ಸುಗಂಧದೆಣ್ಣೆಯಲ್ಲಿ ಅಸರೋನ್, ಕೆಲಮನಾಲ್, ಕೆಲಮೇನ್, ಮೀಥೈಲ್ ಮುಂತಾದ ಅಂಶಗಳಿರುತ್ತವೆ. ಇವುಗಳ ಜೊತೆಗೆ ಅಲ್ಪ ಪ್ರಮಾಣದಲ್ಲಿ ಆಲ್ಪ ನ್ಯಾಫ್ತಲಿಕ್ ಆಮ್ಲ, ಪಾಮಿಟಿಕ್ ಆಮ್ಲ, ಬ್ಯುಟರಿಕ್ ಆಮ್ಲ ಮುಂತಾದವುಗಳೂ ಸಹ ಇರುತ್ತವೆ. ಈ ಸುಗಂಧ ತೈಲವನ್ನು ಕೇಶ ತೈಲಗಳು, ಅಗರಬತ್ತಿಯಂತಹ ವಸ್ತುಗಳಿಗೆ ಪರಿಮಳ ಸಾಧಕವಾಗಿ ಉಪಯೋಗಿಸುತ್ತಾರೆ. ಅದು ಹಳದಿ ಕಂದು ಬಣ್ಣದ ತೈಲವಾಗಿದೆ.

ಬೇರು-ಕಾಂಡಗಳಲ್ಲಿ ಅಧಿಕ ಪ್ರಮಾಣದ ಪಿಷ್ಟವಿದ್ದು, ಬೆವರೋತ್ಪಾದಕ ಗುಣವನ್ನು ಹೊಂದಿರುತ್ತವೆ. ಅಸ್ತಮಾ, ವಾಂತಿಕಾರಕ, ಆಮಶಂಕೆ, ಅಜೀರ್ಣದ ತೊಂದರೆಗಳು, ಬಾಯಿವಾಸನೆ, ಗಂಟಲಿನ ಕಿರಿಕಿರಿ ನಿವಾರಕವಾಗಿ ಅಲ್ಲದೇ ವಿಷಜಂತುಗಳ ಕಡಿತದ ಚಿಕಿತ್ಸೆಗೂ ಸಹಕಾರಿಯಾಗಿದೆ. ಜ್ಞಾಪಕ ಶಕ್ತಿಯನ್ನು ಹೆಚ್ಚಿಸುತ್ತದೆ. ಧೂಪ, ಹವನಗಳಲ್ಲೂ ಬಜೆಯನ್ನು ಬಳಸುವುದುಂಟು. ಬೆಳ್ಳುಳ್ಳಿ, ಜೀರಿಗೆ, ಉಪ್ಪು, ಸಕ್ಕರೆಯೊಂದಿಗೆ ಬಜೆಯನ್ನು ಬೆರೆಸಿ ತಯಾರಿಸಿದ ಅರಾಚಾ ಎಂಬುದು ಕುದುರೆಗಳ ಬಲಸಂವರ್ಧನೆಗೆ ಅತ್ಯುತ್ತಮ ಆಹಾರ. ತಾಜಾ ಬೇರು ಕಾಂಡಗಳನ್ನು ಸಿಹಿ ಮಿಠಾಯಿಗಳಲ್ಲೂ ಬಳಸುತ್ತಾರೆ. ದನಕರುಗಳ ಕಾಲು ಬಾಯಿ ಹುಣ್ಣು ರೋಗಕ್ಕೆ ಬಜೆಯ ಎಲೆಗಳಿಂದ ತಯಾರಿಸಿದ ತೈಲವು ಉತ್ತಮ ಔಷಧವಾಗಿದೆ. ಬಟ್ಟೆಗಳೊಂದಿಗೆ ಕಾಂಡ ಬೇರುಗಳನ್ನು ಇಡುವುದರಿಂದ ಹುಳುಗಳಿಂದ ಸಂರಕ್ಷಿಸಬಹುದು. ಅಲ್ಲದೇ ಹೇನು, ತಿಗಣೆ ಕೀಟನಾಶಕವಾಗಿಯೂ ಉಪಯೋಗಿಸಬಹುದು.

ಬಜೆಯು ವರ್ಷದ ಬೆಳೆಯಾಗಿದ್ದು, ಔಷಧೀಯ ಸಸ್ಯವಾಗಿ ಬಹಳ ಉಪಯುಕ್ತವಾಗಿದೆ. ಈ ಬೆಳೆಯನ್ನು ಪೀಡಿಸುವ ರೋಗಗಳು ಹಾಗೂ ಕೀಟಗಳೂ ಎಲ್ಲೂ ವರದಿಯಾಗದಿರುವುದು ವಿಶೇಷ. ಒಟ್ಟಾರೆಯಾಗಿ ಭಾರತ ದೇಶದಲ್ಲೆಡೆ ಇದು ಕೃಷಿಯಲ್ಲಿದೆ. ಜಪಾನ್, ಉತ್ತರ ಅಮೆರಿಕಾ, ಯೂರೋಪ್ ಮೂಲಸ್ಥಳವಾಗಿದ್ದು, ಪ್ರಸ್ತುತದಲ್ಲಿ ಭಾರತವೂ ಸೇರಿದಂತೆ ಜಗತ್ತಿನ ಹಲವಾರು ದೇಶಗಳ ಬೆಳೆಯಾಗಿ ಬಳಕೆಯಲ್ಲಿದೆ.

**ಪರಾಮರ್ಶನ ಗ್ರಂಥಗಳು**


ಸುಗಂಧ ಸಸ್ಯಗಳು, ಡಾ. ಎಂ. ಎ. ನಾರಾಯಣ ರೆಡ್ಡಿ

ಕನ್ನಡ ವಿಶ್ವಕೋಶ. ಸಂ.12

ಪ್ರಜಾವಾಣಿ ಪತ್ರಿಕೆ (ಕರ್ನಾಟಕ ದರ್ಶನ - ಕೃಷಿ) ದಿನಾಂಕ 19.3.2012


*ಎಂ.ಎಂ.*

**ಬಟಾಣಿ (ಪೀ)** ಬಟಾಣಿ ಆಹಾರ ಧ್ಯಾನಗಳಲ್ಲೊಂದು. ಇದನ್ನು ಆಂಗ್ಲಭಾಷೆಯಲ್ಲಿ ಪೀ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಬಟಾಣಿಯನ್ನು ಜೂನ್‌ನಿಂದ ಅಕ್ಟೋಬರ್ ತಿಂಗಳವರೆಗೆ ಬಿತ್ತಿ ಬೆಳೆಯುತ್ತಾರೆ. ಇದು ಅತಿ ಹೆಚ್ಚಾದ ಬಿಸಿಲು, ಮಳೆ, ಚಳಿಯ ಪರಿಸರಕ್ಕೆ ಹೊಂದಿಕೊಳ್ಳುವುದಿಲ್ಲ. ಒಂದು ಸಮಸ್ಥಿತಿಯುಳ್ಳ ಸಮಶೀತೋಷ್ಣದ ವಾತಾವರಣದಲ್ಲಿ ಬೆಳೆಸುವ ಬಟಾಣಿ ಒಳ್ಳೆಯ ಫಸಲು ನೀಡುತ್ತದೆ.



**ಬೇಸಾಯ :** ಭೂಮಿಯನ್ನು ಮುಂಗಾರು ಪ್ರಾರಂಭಕ್ಕೆ ಮುನ್ನವೆ ಚೆನ್ನಾಗಿ ಉಳುಮೆ ಮಾಡಬೇಕು. ಮಣ್ಣು ಚೆನ್ನಾಗಿ ಒಣಗಿದ ಮೇಲೆ ಮತ್ತೆ ಉಳುಮೆ ಮಾಡಬೇಕು. ಹೀಗೆ ನಾಲ್ಕೈದು ಬಾರಿ ಒಣಗಿಸಿ ಉಳುಮೆ ಮಾಡಿದಷ್ಟು ಒಳ್ಳೆಯದು. ಕೊಟ್ಟಿಗೆ ಗೊಬ್ಬರ ಮತ್ತು ಕೆಮ್ಮಣ್ಣನ್ನು ಎರಚಿ ಉಳುಮೆ ಮಾಡುವುದು ಉತ್ತಮ. ಒಂದು ಎಕರೆಗೆ ಹದಿನೈದರಿಂದ ಇಪ್ಪತ್ತು ಗಾಡಿಯಷ್ಟು ಕೊಟ್ಟಿಗೆ ಗೊಬ್ಬರ ಏಳೆಂಟು ಗಾಡಿ ಕೆಮ್ಮಣ್ಣು ಹಾಕಬೇಕು. ಎಲ್ಲವೂ ಮಣ್ಣಿಗೆ ಮಿಶ್ರಣವಾದ ಮೇಲೆ ಹಲುಬೆಯಿಂದ ಉದ್ದಕ್ಕೂ ಅಗಲಕ್ಕೂ ಸಮ ತಟ್ಟಾಗುವಂತೆ ಮಾಡಬೇಕು. ಇದಾದ ಅನಂತರ ಮೂರಡಿಗೊಂದು ಸಾಲು ಬರುವಂತೆ ನೇಗಿಲು ಹೊಡೆಯಬೇಕು. ಪ್ರತಿ ಸಾಲಿಗೂ ಬೀಜದಿಂದ ಬೀಜಕ್ಕೆ ಒಂಬತ್ತರಿಂದ ಹತ್ತು ಅಂಗುಲದಷ್ಟು ದೂರಕ್ಕೆ ಅರ್ಧ ಅಂಗುಲ ಆಳಕ್ಕೆ ಬೀಜ ನೆಡಬೇಕು. ಬಿತ್ತಿದ ಬೀಜ ಐದಾರು ದಿನಗಳಲ್ಲಿ ಮೊಳಕೆಯಾಗಿ ಹೊರಗೆ ಬರುತ್ತದೆ. ಗಿಡವು ಅರ್ಧ ಅಡಿ ಎತ್ತರ ಬೆಳೆಯುತ್ತಿದ್ದಂತೆ ಬಳ್ಳಿಯು ಹಬ್ಬುವಂತೆ, ಪ್ರತಿ ಸಾಲುಗಳಲ್ಲೂ ತೆಳ್ಳನೆಯ ಮತ್ತು ನೇರವಾಗಿ ನಿಂತುಕೊಳ್ಳುವಂತಹ ಬಿದಿರು ಅಥವಾ ಗಟ್ಟಿಯಾದ ಕಡ್ಡಿಗಳನ್ನು ನೆಟ್ಟು ಬಳ್ಳಿ ಹಬ್ಬಿಕೊಳ್ಳಲು ಅನುಕೂಲವಾಗುವಂತೆ ಮಾಡಬೇಕು. ಬೀಜ ಬಿತ್ತಿದ ದಿನದಿಂದ ಸುಮಾರು ಎರಡೂವರೆ ತಿಂಗಳಿಗೆ ಕಾಯಿ ಕಚ್ಚುತ್ತದೆ. ಆಗಿಂದಾಗ್ಗೆ ಕಳೆಯನ್ನು ಕಿತ್ತು ಹದವರಿತು ನೀರು ಹಾಕುತ್ತಿರಬೇಕು. ರೋಗ ರುಜಿನಗಳು ಬಾರದಂತೆ ಮುನ್ನೆಚ್ಚರಿಕೆ ವಹಿಸಬೇಕು.

**ಭೂಗುಣ :** ಬಟಾಣಿ ಮೆಕ್ಕಲು ಮಣ್ಣು, ಮರಳು ಮಿಶ್ರಿತ ಜೇಡಿಮಣ್ಣು ಹಾಗೂ ಕೆಬ್ಬೆ ಮಣ್ಣುಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ಮುಖ್ಯವಾಗಿ ಬಟಾಣಿ ಬೆಳೆಗೆ ಮರಳು ಮಿಶ್ರಿತವಾದ ಮಣ್ಣು ಮತ್ತು ಸಮಶೀತೋಷ್ಣವುಳ್ಳ ವಾತಾವರಣ ತುಂಬಾ ಅನುಕೂಲಕರವಾಗಿರುತ್ತದೆ.

**ಬಿತ್ತನೆ :** ಬಟಾಣಿಯನ್ನು ಬಿತ್ತನೆ ಮಾಡಲು ಒಂದು ಎಕರೆಗೆ ಸುಮಾರು ಇಪ್ಪತ್ತು ಸೇರಿನಷ್ಟು ಬೀಜ ಬೇಕಾಗುತ್ತದೆ. ಬಿತ್ತನೆ ಬೀಜವನ್ನು ತಾವೇ ಜಮೀನಿನಲ್ಲಿ ಈ ಹಿಂದೆ ಬೆಳೆದ ಫಸಲಿನಲ್ಲೂ ಮಾಡಿಕೊಳ್ಳಬಹುದು. ಬಿತ್ತನೆ ಬೀಜ ಉತ್ತಮವಾಗಿರಬೇಕು.

**ತಳಿಗಳು :** ಬಟಾಣಿಯಲ್ಲಿ ಮುಖ್ಯವಾಗಿ ಎರಡು ಜಾತಿಗಳಿವೆ 1. ಗಿಡ್ಡಜಾತಿ, 2. ದೊಡ್ಡಜಾತಿ. ಗಿಡ್ಡಜಾತಿಯ ಬಟಾಣಿ ಎರಡು ಅಡಿಯಷ್ಟು ಎತ್ತರಕ್ಕೆ ಬೆಳೆದು ಗಿಡ್ಡ ಮತ್ತು ಗುಂಡನೆಯ ಕಾಯಿಗಳನ್ನು ಬಿಡುತ್ತದೆ. ದೊಡ್ಡ ಜಾತಿಯ ಬಟಾಣಿ ನಾಲ್ಕೈದು ಅಡಿ ಎತ್ತರದವರೆಗೂ ಬೆಳೆದು ಉದ್ದನೆಯ ಕಾಯಿಗಳನ್ನು ಬಿಡುತ್ತದೆ. ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲಿ ಹೆಚ್ಚಾಗಿ ದೊಡ್ಡ ಜಾತಿಯ ಬಟಾಣಿಯನ್ನು, ಗುಡ್ಡಗಾಡು ಪ್ರದೇಶಗಳಲ್ಲಿ ಗಿಡ್ಡ ಜಾತಿಯ ಬಟಾಣಿ ಬೆಳೆಯುವುದನ್ನು ಕಾಣಬಹುದು.

**ರೋಗಗಳು :** ಬಟಾಣಿ ಬೆಳೆಗೆ ಬೂದಿರೋಗ, ಬೇರುಕೊಳೆರೋಗ, ತುಕ್ಕು ರೋಗ ಬರುತ್ತವೆ. ಇವು ಮೊದಲು ಎಲೆಯಲ್ಲಿ ಅನಂತರ ಕಾಂಡ, ಕಾಯಿಗಳ ಮೇಲೆ ಬೂದು ಬಣ್ಣದ ಮಚ್ಚೆಗಳಂತೆ ಕಾಣಿಸಿಕೊಳ್ಳುತ್ತವೆ. ಇದರ ಪರಿಣಾಮ ಹಳದಿ ಬಣ್ಣಕ್ಕೆ ತಿರುಗಿ ಹೂವು, ಕಾಯಿ ಬಿಡುವುದಿಲ್ಲ. ರೋಗದ ತೀವ್ರತೆ ಹೆಚ್ಚಾದಂತೆ ಎಲೆಗಳು ಉದುರುತ್ತಾ ಹೋಗುತ್ತವೆ. ಆದುದರಿಂದ ಮುನ್ನೆಚ್ಚರಿಕೆಯಾಗಿ ರೋಗದ ಸುಳಿವು ಕಾಣಿಸುತ್ತಲೇ ನಿಯಂತ್ರಿಸಲು ನೀರಿನಲ್ಲಿ ಕರಗುವ 30 ಗ್ರಾಂ ಗಂಧಕ ಅಥವಾ 10 ಗ್ರಾಂ ಡೈನೋಕ್ಯಾಪನ್ನು 10 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಅಗತ್ಯವೆನಿಸಿದರೆ ವಾರಕ್ಕೊಮ್ಮೆ ಎರಡು ಬಾರಿ ಸಿಂಪಡಿಸುವುದರಿಂದ ರೋಗವನ್ನು ನಿಯಂತ್ರಿಸಬಹುದು.

**ಕೊಯ್ಲು :** ಬಟಾಣಿಯ ಕಾಯಿಗಳು ಬಲಿತು ಹಸುರು ಬಣ್ಣದಿಂದ ತಿಳಿ ಹಸುರು ಬಣ್ಣಕ್ಕೆ ತಿರುಗುತ್ತವೆ. ಆಗ ಕಾಯಿಗಳು ಬೀಜದಿಂದ ತುಂಬಿರುತ್ತವೆ. ವಾರಕ್ಕೊಮ್ಮೆ ಎರಡು ತಿಂಗಳವರೆಗೂ ಬಟಾಣಿಯ ಫಸಲು ಸಿಗುತ್ತದೆ. ಫಲವತ್ತಾದ ಭೂಮಿ ಮತ್ತು ಹದವಾದ ನೀರು ಬಟಾಣಿ ಬೆಳೆಯ ಇಳುವರಿಯನ್ನು ನಿರ್ಧರಿಸುತ್ತವೆ. ಸಾಧಾರಣವಾಗಿ ಒಂದು ಎಕರೆಗೆ ನಾಲ್ಕು ಕ್ವಿಂಟಾಲ್ ಇಳುವರಿ ಸಿಗುತ್ತದೆ.



**ಉಪಯೋಗ :** ಬಟಾಣಿಯಿಂದ ಪಲ್ಯ, ಉಸಲಿ ಮಾಡಬಹುದು. ಹಾಗೆಯೇ ಆಲೂಗೆಡ್ಡೆ ಕುರ್ಮ, ಪಲಾವ್‌ಗೆ ವಿಶೇಷವಾಗಿರುತ್ತದೆ. ಬಟಾಣಿಯೊಂದಿಗೆ ಕ್ಯಾರೆಟ್, ಹೂಕೋಸು, ಹುರುಳಿಕಾಯಿಯಿಂದ ಮಾಡಿದ ಪಲ್ಯ ತುಂಬಾ ಸೊಗಸಾಗಿರುತ್ತದೆ. ಇದನ್ನು ಪೂರಿ, ದೋಸೆ, ಚಪಾತಿಯೊಂದಿಗೆ ತಿನ್ನಲು ಬಲು ರುಚಿ.

**ಔಷಧಿ ಗುಣ :** ಬಟಾಣಿಯನ್ನು ಬೇಯಿಸಿ ಬಸಿದ ಕಟ್ಟಿಗೆ ಟೊಮ್ಯಾಟೋ ರಸ ಸೇರಿಸಿ ಕುಡಿದರೆ ಒಳ್ಳೆಯದು. ಇದರಲ್ಲಿ ಉತ್ತಮ ಪೋಷಕಾಂಶಗಳಿರುತ್ತವೆ. ಹಾಗೆಯೇ ಹುರಿದ ಬಟಾಣಿಯನ್ನು ಕಿತ್ತಳೆ ಸಿಪ್ಪೆ ಸೇರಿಸಿ ಹಾಲಿನಲ್ಲಿ ಅರೆದು ಚರ್ಮಕ್ಕೆ ಹಚ್ಚಿ ಸ್ವಲ್ಪ ಸಮಯದ ಅನಂತರ ತೊಳೆದುಕೊಂಡರೆ ಕಾಂತಿ ಹೆಚ್ಚುತ್ತದೆ. ಅದೇ ರೀತಿ ಚಳಿ ಮತ್ತು ಮಳೆಗಾಲದಲ್ಲಿ ಕೈ ಕಾಲುಗಳ ಬೆರಳುಗಳು ಸುಲಿದಂತಾದಾಗ ಬಟಾಣಿ ಕಷಾಯದೊಂದಿಗೆ ಕೊಬ್ಬರಿ ಎಣ್ಣೆ ಸೇರಿಸಿ ತೊಳೆದರೆ ನಿವಾರಣೆಯಾಗುವುದು.

*ಪಿ.ಸಿ.ಡಿ.*

**ಬತ್ತ** ಬತ್ತ ಪ್ರಮುಖ ಆಹಾರ ಧಾನ್ಯಗಳಲ್ಲಿ ಒಂದು. ಇದನ್ನು ಪ್ಯಾಡಿ, ಎಂದು ಆಂಗ್ಲ ಭಾಷೆಯಲ್ಲಿ ಕರೆಯುತ್ತಾರೆ. ಇದು ಪೋಯೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು 'ಒರೈಜ ಸೇಟಿವ' ಎಂದು. ಅತಿ ಪುರಾತನ ಕಾಲದಿಂದಲೂ ಕೃಷಿಯಲ್ಲಿರುವ ಆಹಾರ ಧಾನ್ಯ. ಇದನ್ನು ಚೀನಾ, ಜಾವ, ಭಾರತ ಮತ್ತು ಪೂರ್ವಆಫ್ರಿಕ ದೇಶಗಳಲ್ಲಿ ಬೆಳೆಯುತ್ತಿದ್ದುದು ಕಂಡುಬರುತ್ತದೆ.



**ಬತ್ತದ ತಳಿಗಳು :** ಬತ್ತ ಹುಲ್ಲಿನ ಜಾತಿಗೆ ಸೇರಿರುವ ಸಸ್ಯ. ಆಫ್ರಿಕಾದ ಬರಪೀಡಿತ ಪ್ರದೇಶಗಳಿಂದ ಹಿಡಿದು ಸದಾ ಮಳೆಬೀಳುವ ಏಷ್ಯಾದ ಬತ್ತದ ಗದ್ದೆಗಳವರೆಗೂ ಬೆಳೆಯುವ ಸಾಮರ್ಥ್ಯವಿರುವ ಬತ್ತದಲ್ಲಿ ಅನೇಕ ಜಾತಿಗಳಿವೆ. ಹಸುರು ಕ್ರಾಂತಿಗೆ ಮೊದಲು ಭಾರತದ ರೈತರು 30 ಸಾವಿರಕ್ಕೂ ಅಧಿಕ ಬತ್ತದ ತಳಿಗಳನ್ನು ಬೆಳೆಸುತ್ತಿದ್ದರೆಂದು ಅಂದಾಜು. ಅಧಿಕ ಇಳುವರಿ ತಳಿಗಳಿಂದ ಈಗ ಬತ್ತದ ವೈವಿಧ್ಯತೆ ನಾಶವಾಗಿದೆ.

ಗುಜರಾತಿನ ಲೋಥಾಲದಲ್ಲಿ ದೊರೆತ ಅವಶೇಷಗಳಿಂದ ಬತ್ತ ಕ್ರಿ.ಪೂ. 2300ರಲ್ಲಿ ಸಾಗುವಳಿಯಲ್ಲಿ ಇದ್ದದ್ದು ತಿಳಿಯುತ್ತದೆ. ಭಾರತವೇ ಬತ್ತದ ತವರು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಜಪಾನ್, ದಕ್ಷಿಣ ಕೊರಿಯ, ಉತ್ತರ ಚೀನ, ನ್ಯೂಸೌತ್ ವೇಲ್ಸ್, ಇಟಲಿ, ಸ್ಪೇನ್, ಫ್ರಾನ್ಸ್, ಪೋರ್ಚುಗಲ್, ಕ್ಯಾಲಿಫೋರ್ನಿಯ ಮತ್ತು ದಕ್ಷಿಣ ಅಮೆರಿಕಾದಲ್ಲಿ 300 ಉ.ಅಕ್ಷಾಂಶದಾಚೆ ಜಪಾನಿಕ ಜಾತಿಗಳು ಸಾಗುವಳಿಯಲ್ಲಿವೆ. ಇಂಡಿಕ ಜಾತಿಗಳು ವಿಷುವದ್ವೃತ್ತದಿಂದ 300 ದ ಅಕ್ಷಾಂಶದವರೆಗೆ ಬೆಳೆಯುತ್ತಿರುವುದು ಕಂಡುಬರುತ್ತದೆ. ಆಫ್ರಿಕಾದಲ್ಲಿ ಗ್ಲಾಬೆರಿಯಾ ಜಾತಿಗಳು ಸಾಮಾನ್ಯವಾಗಿ ಸಾಗುವಳಿಯಲ್ಲಿವೆ.

ಚೀನಾ ಹೊರತುಪಡಿಸಿದರೆ ಭಾರತ ವಿಶ್ವದಲ್ಲಿ ಅತಿ ಹೆಚ್ಚು ಬತ್ತ ಬೆಳೆಯುವ ರಾಷ್ಟ್ರವಾಗಿದೆ. ಜೊತೆಗೆ ಪ್ರಮುಖ ರಫ್ತು ರಾಷ್ಟ್ರ ಎನಿಸಿದೆ. ಬತ್ತ ಬೆಳೆಯುವಲ್ಲಿ ದೇಶದಲ್ಲಿ ಬಂಗಾಳ ಮೊದಲ ಸ್ಥಾನದಲ್ಲಿದ್ದರೆ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ, ಭಾರತದಲ್ಲಿ ಸು. 5000ಕ್ಕೂ ಹೆಚ್ಚು ಬತ್ತದ ತಳಿಗಳಿವೆ. ವಾತಾವರಣದ ಬೇರೆ-ಬೇರೆ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತಹ ಅನೇಕ ಬಗೆಗಳು ಇವೆ. ಭಾರತದ ಬೇರೆ-ಬೇರೆ ಪ್ರದೇಶಗಳಲ್ಲಿ ಸು. 450 ತಳಿಗಳನ್ನು ವಿಸ್ತಾರವಾದ ಕ್ಷೇತ್ರಗಳಲ್ಲಿ ಬೆಳೆಯುತ್ತಾರೆ. ಅವುಗಳಲ್ಲಿ ಬೇರೆ-ಬೇರೆ ರಾಜ್ಯಗಳ ಕೆಲವು ಬತ್ತದ ತಳಿಗಳೆಂದರೆ - ಎಂ.ಟಿ.ಯು. -1, ಎಂ.ಟಿ.ಯು.-15 ಮತ್ತು ಎಚ್.ಆರ್.-19 (ಆಂಧ್ರಪ್ರದೇಶ ಚಿನ್ಸುರಾ-7, (ಪಶ್ಚಿಮ ಬಂಗಾಳ), ತೋಳಂಬಾ (ಮಹಾರಾಷ್ಟ್ರ), ಕ್ರಾಸ್-4 ಮತ್ತು ಕ್ರಾಸ್-18 (ಮಧ್ಯಪ್ರದೇಶ), ಜಿ.ಇ.ಬಿ.-24, ಸಿ.ಓ.-2, ಸಿ.ಓ.-25 ಮತ್ತು ಟಿ.ಕೆ.ಎಂ. - 6 (ತಮಿಳುನಾಡು), ಟಿ-141 ಮತ್ತು ಎಸ್.ಆರ್.26-ಬಿ ಬಾಸುಮತಿ - 370 (ಪಂಜಾಬ್) ಟಿ-136 (ಉತ್ತರ ಪ್ರದೇಶ) ಮುಗದ ಜಾತಿಗಳು ಎಸ್-661, ಎಸ್-317, ಪಿ.ಟಿ.ಬಿ. - 10, ಎಂ.ಜಿ.-1, (ಕರ್ನಾಟಕ) ಜಾತಿಗಳು.

GEB-24ಎಂಬ ತಳಿ ಭಾರತದ ಅನೇಕ ರಾಜ್ಯಗಳಲ್ಲಿಯೂ ಪಾಕಿಸ್ತಾನ ಹಾಗೂ ಆಫ್ರಿಕ ದೇಶದ ಕೆಲವು ಪ್ರದೇಶಗಳಲ್ಲಿಯೂ ಬೇಸಾಯದಲ್ಲಿದೆ. ತೆನೆ ಮಾಗುವ ಅವಧಿಯನ್ನು ಗಮನಿಸಿ ಬತ್ತದ ಜಾತಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸುವ ಕ್ರಮ ಉಂಟು. ಅತಿ ಮುಂಫಲ 110 ದಿವಸ ಮತ್ತು ಅದಕ್ಕೂ ಮುಂಚಿತವಾಗಿ ಮಾಗುವುವು. ಹಿಂಫಲ 150 ರಿಂದ 180 ದಿವಸಗಳಲ್ಲಿ ಮಾಗುವುದು. ಅತಿ ಹಿಂಫಲ 180ಕ್ಕಿಂತ ಹೆಚ್ಚುದಿವಸಗಳಲ್ಲಿ ಮಾಗುವುವು. ಇವುಗಳ ಪೈಕಿ ಮುಂಫಲ ತಳಿಗಳು ಭಾರತದ ದೃಷ್ಟಿಯಿಂದ ಉತ್ತಮವಾದವು. ಮಳೆಯನ್ನೇ ಆಶ್ರಯಿಸಿ ಬೆಳೆಯಲು ಇವು ಯೋಗ್ಯವಾಗಿವೆಯಲ್ಲದೇ ನೀರಾವರಿಯ ಆಶ್ರಯದಲ್ಲಿ ಎರಡು ಮೂರು ಬೆಳೆಗಳನ್ನು ತೆಗೆಯಲು ಕೂಡ ಯೋಗ್ಯ.

ಹಾಗೆಯೇ ಬೇರೆ-ಬೇರೆ ರಾಜ್ಯಗಳಲ್ಲಿ ತೇಲುವ ಜಾತಿಯ ಬತ್ತವನ್ನು ಬೆಳೆಯುತ್ತಾರೆ. ಕರಾವಳಿಯ ಪ್ರದೇಶಗಳಲ್ಲಿ ಸಮುದ್ರದ ನೀರಿನಿಂದ ಕೆಳಭಾಗಕ್ಕೆ ಬೆಳೆಯುವುದುಂಟು. ಭಾರತೀಯ ಜಾತಿಗಳ ದಂಟು ಸಾಮಾನ್ಯವಾಗಿ ದುರ್ಬಲವಾಗಿರುವುದರಿಂದ ಮಾಗುವ ಪೂರ್ವದಲ್ಲಿ ಪೈರು ನೆಲಕ್ಕೊರಗುವ ಸಂಭವ ಹೆಚ್ಚು. ಅತಿ ತಡವಾಗಿ ಮಾಗುವ ಜಾತಿಗಳು ಹೇರಳವಾಗಿವೆ. ಆದ್ದರಿಂದ ಅಲ್ಪ ಕಾಲದಲ್ಲಿ ಮಾಗುವ, ಒರಗದ ಹಾಗೂ ಕಾಳು ಉದುರಿಸದ ಜಾತಿಗಳನ್ನು ತಳೀಕರಣದ ಮೂಲಕ ರೂಪಿಸಲಾಗಿದೆ.

ಬೆಂಕಿರೋಗ (ಬ್ಲಾಸ್ಟ್) ನಿರೋಧಕ ಜಾತಿಗಳನ್ನು ರೂಪಿಸಲಾಗಿದೆ. ಇವುಗಳ ಪೈಕಿ ಸಿ.ಓ.-25, ಸಿ.ಓ.-29, ಸಿ.ಓ.-30, ಎಂ.-249 ಗಳು ಮುಖ್ಯ. ಇಂಡೋ ಜಪಾನಿನ ಮಿಶ್ರತಳಿಗಳನ್ನು ಭಾರತದ ಬೇರೆ-ಬೇರೆ ಭಾಗಗಳಲ್ಲಿ ಈಗಾಗಲೇ ಕೃಷಿ ಮಾಡಲಾಗಿದೆ. ಇಳುವರಿಯಲ್ಲಿ ಇವು ದೇಶಿಯ ತಳಿಗಳನ್ನು ಮೀರಿಸಿವೆ. ಅಲ್ಲದೆ, ಯಾವುದೇ ಅವಧಿಯಲ್ಲಿ ಇವು ಬೆಳೆಯಬಲ್ಲವು. ಇತ್ತೀಚೆಗೆ ಫಿಲಿಫೈನ್ಸ್ ದೇಶದಿಂದ ತೈಚುಂಗ್-65, ತೈನಾನ್-3, ತೈಟುಂಗ್, ನೇಟಿವ್-1, ಐ.ಆರ್.-8, ಮುಂತಾದ ಜಾತಿಗಳನ್ನು ತರಿಸಿ ದೇಶದ ವಿವಿಧ ಭಾಗಗಳಲ್ಲಿ ಬೆಳೆಸಿ ಸಾಗುವಳಿ ವಿಧಾನದಲ್ಲಿ ಬದಲಾವಣೆ ಮಾಡಿಕೊಂಡು ಹೆಚ್ಚು ಗೊಬ್ಬರ ಉಪಯೋಗಿಸಿ, ಕೀಟ ಹಾಗೂ ರೋಗಗಳಿಂದ ಬೆಳೆಯನ್ನು ರಕ್ಷಿಸಿಕೊಂಡಲ್ಲಿ ಇಳುವರಿಯನ್ನು ಸಾಕಷ್ಟು ಹೆಚ್ಚಿಸಬಹುದಾಗಿದೆ.

ಭಾರತದಲ್ಲಿ ಮಳೆ ಆಶ್ರಯದ ಪ್ರದೇಶಗಳೇ ಹೆಚ್ಚಿರುವುದರಿಂದ ಮುಂಗಾರು ಮಳೆಯನ್ನೇ ಬತ್ತದ ಕೃಷಿಗೆ ಅವಲಂಬಿಸಿದೆ. 1/3 ಭಾ ಮಾತ್ರ ನೀರಾವರಿ ಸೌಲಭ್ಯವಿದೆ. ಇಲ್ಲಿ ಬತ್ತವೆ ಮುಖ್ಯ ಬೆಳೆ. ಅಸ್ಸಾಂ, ಪಶ್ಚಿಮ ಬಂಗಾಳ, ದಕ್ಷಿಣ ಬಿಹಾರ್ ಹಾಗೂ ಒರಿಸ್ಸಾಗಳ ಒಟ್ಟು ಕ್ಷೇತ್ರದ ಶೇ. 80 ರಷ್ಟು ಕ್ಷೇತ್ರ ಬತ್ತದ ಬೇಸಾಯಕ್ಕೆ ಮೀಸಲಾಗಿದೆ.

ವರ್ಷದಲ್ಲಿ ಬತ್ತ ಬೆಳೆಯುವ ಮೂರು ನಿರ್ದಿಷ್ಟ ಕಾಲಗಳುಂಟು. ಮುಂಗಾರು, ಹಿಂಗಾರು ಹಾಗೂ ಬೇಸಗೆ ಕಾಲಗಳು. ಜೂನ್-ಜುಲೈ ತಿಂಗಳುಗಳಲ್ಲಿ ಬಿತ್ತಿದ ಪೈರನ್ನು ಸೆಪ್ಟಂಬರ್ ಡಿಸೆಂಬರ್‌ಗಳಲ್ಲಿ ಕೊಯ್ಯಲಾಗುತ್ತದೆ. 150ರಿಂದ 180 ದಿವಸಗಳಲ್ಲಿ ಮಾಗುವ ತಳಿಗಳು ಈ ಬೇಸಾಯಕ್ಕೆ ಉತ್ತಮ. ಹಿಂಗಾರು ಬೆಳೆಯನ್ನು ಡಿಸೆಂಬರ್-ಜನವರಿ ತಿಂಗಳಲ್ಲಿ ಬಿತ್ತಿ ಮಾರ್ಚ್ ತಿಂಗಳಲ್ಲಿ ಕೊಯ್ಯಲಾಗುತ್ತದೆ. ಅನಂತರ ಬೇಸಗೆ ಬೆಳೆಯನ್ನು ತೆಗೆದು ಪುನಃ ಮುಂಗಾರು ಬೆಳೆಗೆ ಅನುವು ಮಾಡಿಕೊಳ್ಳುತ್ತಾರೆ.



ಗದ್ದೆಯಲ್ಲಿ ಬಿತ್ತಿದ ಅಥವಾ ನಾಟಿ ಮಾಡಿದಲ್ಲಿಂದ ಕೊಯ್ಲಿನ ತನಕವೂ ನೀರು ನಿಲ್ಲುವ ಪ್ರದೇಶಗಳು ಬಹುವಿಶಾಲವಾಗಿವೆ. ಕೇವಲ ಮಳೆಯ ಆಶ್ರಯದಿಂದ ಬೆಳೆಯುವ ಬತ್ತದ ಕ್ಷೇತ್ರ ಕಡಿಮೆ ಇದ್ದು ಒಟ್ಟು ಕ್ಷೇತ್ರದ ಶೇ. 10 ಮಾತ್ರ ಇರುವುದು. ಬೀಜವನ್ನು ಚೆಲ್ಲಿ ಅಥವಾ ಕೂರಿಗೆ ಇಲ್ಲವೆ ಕೈಯಿಂದ ಪೈರನ್ನು ಊರಿ ಬಿತ್ತನೆ ಮಾಡಲಾಗುತ್ತದೆ. ಅಸ್ಸಾಂ, ಕರ್ನಾಟಕ ಕೇರಳದ ಕೆಲಭಾಗಗಳಲ್ಲಿ ಕಾಡು ಕಡಿದು ಭೂಮಿಯನ್ನು ಹಸನು ಮಾಡಿ ಬತ್ತ ಬೆಳೆಯುವ ವಾಡಿಕೆಯುಂಟು. ಭೂಸಾರ ಕಡಿಮೆಯಾದಂತೆ ಬೇರೆ ಕಾಡಿಗೆ ಸ್ಥಳಾಂತರಿಸುತ್ತ ನೆಲವನ್ನು ಹೊಸದಾಗಿ ಹದ ಮಾಡಿ ಸಾಗುವಳಿಯನ್ನು ಬದಲಿಸುತ್ತ ಹೋಗುವ ವಾಡಿಕೆ ಇದೆ. ಇದಕ್ಕೆ 'ಕುಮರಿ' ಅಥವಾ ಪೂನಮ್ ಪದ್ಧತಿ ಎಂದು ಕರೆಯುತ್ತಾರೆ.

**ಸಾಗುವಳಿ ಕ್ರಮಗಳು :** ಬೀಜವನ್ನು ನೇರವಾಗಿ ಬಿತ್ತುವ ಅಥವಾ ಮಡಿಗಳಲ್ಲಿ ಪೈರನ್ನು ಬೆಳೆಸಿ ಗದ್ದೆಗಳಲ್ಲಿ ನಾಟಿ ಮಾಡುವ ಪದ್ಧತಿಗಳಿವೆ. ನಾಟಿ ಪದ್ಧತಿಯಿಂದ ಶೇ. 25 ರಷ್ಟು ಅಧಿಕ ಫಸಲು ದೊರೆಯುವುದು ಕಂಡುಬರುತ್ತದೆ. ಆಳುಗಳು ಅಥವಾ ನೀರಾವರಿಯ ಕೊರತೆ ಇದ್ದಕಡೆ ಬೀಜವನ್ನು ನೇರವಾಗಿ ಬಿತ್ತಲಾಗುತ್ತದೆ. ನಾಟಿ ಪದ್ಧತಿಯ ಬದಲು ಬೀಜವನ್ನು ಬಿತ್ತುವ ಸುಲಭ ಪದ್ಧತಿ ಅನುಸರಿಸಿ ಅಧಿಕ ಫಸಲು ತೆಗೆಯುವ ವಿಧಾನವನ್ನು ಕಂಡುಕೊಳ್ಳುವ ಪ್ರಯತ್ನ ನಡೆದಿದೆ.

ಸಸಿಗಳನ್ನು ಮಡಿಗಳಲ್ಲಿ ಬೆಳೆಸಿ ನಾಟಿ ಮಾಡುವುದು ರೂಢಿ. ಗದ್ದೆಯಲ್ಲಿ ನೀರು ಕಟ್ಟಿ ರಂಟೆ ಹೊಡೆದು ಮೊಳಕೆಯೊಡೆದ ಬೀಜವನ್ನು ಅಡ್ಡವಾಗಿ ಚೆಲ್ಲಿ ಸಸಿಗಳನ್ನು ಬೆಳೆಸುವ ಕ್ರಮ ಹೆಚ್ಚು. ಏರುಮಡಿಗಳನ್ನು ಮಾಡಿ ಸಾಲಿನಲ್ಲಿ ಬೀಜಗಳನ್ನೂರಿ ಅಗೆಗಳನ್ನು ಬೆಳೆಸುವುದರಿಂದ ಸದೃಢವಾದ ಸಸಿಗಳು ಬೆಳೆದು ಅಧಿಕ ಫಲ ಹೆಚ್ಚುವುದೆಂಬ ವಿಷಯ ತಿಳಿದು ಬಂದಿದೆ. ಜಪಾನಿ ಪದ್ಧತಿಯಲ್ಲಿ ಏರುಮಡಿ ಹಾಗು ಅಗೆಗಳನ್ನು ಸಾಲಿನಲ್ಲಿಯೇ ನಡೆಸಬೇಕೆಂಬುದಕ್ಕೆ ವಿಶೇಷ ಪ್ರಾಶಸ್ತ್ಯ ಕೊಡಲಾಗಿದೆ.

ಬತ್ತ ಕರ್ನಾಟಕದ ಬಹುಮುಖ್ಯ ಆಹಾರ ಧಾನ್ಯ ಹಾಗೂ ಕರ್ನಾಟಕದ ಪ್ರಮುಖ ನೀರಾವರಿ ಬೆಳೆ. ಇದನ್ನು ಸುಮಾರು 15.39 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತದೆ. ವಾರ್ಷಿಕ ಉತ್ಪಾದನೆ 42.97 ಲಕ್ಷ ಮೆಟ್ರಿಕ್ ಟನ್‌ಗಳು. ಮುಖ್ಯವಾಗಿ ಎಲ್ಲಾ ಜಲಾಶಯಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ.

ಬತ್ತವನ್ನು ಕರ್ನಾಟಕದಲ್ಲಿ ಶಿವಮೊಗ್ಗ, ಮಂಡ್ಯ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಮೈಸೂರು, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಸಾಗುವಳಿ ಮಾಡುತ್ತಾರೆ. ನೀರಾವರಿ ಸೌಲಭ್ಯ ಚೆನ್ನಾಗಿರುವಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುವುದುಂಟು.

ಬತ್ತ-ಅಕ್ಕಿ ಬೆಲೆ, ಯಾವ ತಳಿ, ಎಷ್ಟು ಹಳೆಯದ್ದು ಎಂಬ ಅಂಶಗಳನ್ನು ಆಧರಿಸಿದೆ. ಬತ್ತದ ಕಾಳು ಒಂದೇ ಗಾತ್ರದಲ್ಲಿರಬೇಕು. ಗುಣಮಟ್ಟವಿದ್ದಲ್ಲಿ, ಸಾಕಷ್ಟು ಹಳೆಯ ಬತ್ತವಾಗಿದ್ದಾರೆ. ಉತ್ತಮ ಬೆಲೆ ಲಭ್ಯ.

ಕರ್ನಾಟಕದಲ್ಲಿ ಮಳೆ, ಕಾಲುವೆ,ಕೆರೆ ಹಾಗೂ ಬಾವಿಗಳು ಬತ್ತಬೆಳೆಯ ನೀರಿನ ಆಶ್ರಯವಾಗಿವೆ. ತೀರ ಪ್ರದೇಶ ಹಾಗೂ ಘಟ್ಟ ಪ್ರದೇಶಗಳಲ್ಲಿ ಮಳೆಯ ನೀರಿನ ಆಶ್ರಯದಲ್ಲೇ ಮುಂಗಾರು ಬೆಳೆಯನ್ನು ಬೆಳೆಯುತ್ತಾರೆ. ಭದ್ರಾ, ತುಂಗಭದ್ರಾ, ಕೃಷ್ಣರಾಜ ಸಾಗರ ಹೇಮಾವತಿ, ಆಲಮಟ್ಟಿ, ನಾರಾಯಣಪುರ, ಘಟಪ್ರಭಾ, ಮಲಪ್ರಭಾ ವಾಣೀವಿಲಾಸ ಸಾಗರ, ಲಿಂಗನಮಕ್ಕಿ, ಕಬಿನಿ ಮುಂತಾದ ಜಲಾಶಯಗಳ ನೀರಿನ ಮೂಲಾಧಾರ ಕೆರೆ ಹಾಗೂ ಏತ ನೀರಾವರಿಗಳು ಪ್ರಾಚೀನ ಕಾಲದಿಂದ ಬತ್ತದ ಬೆಳೆಯ ನೀರಾವರಿ ಮೂಲಗಳಾಗಿದ್ದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು, ಹಿಂಗಾರು ಮತ್ತು ಕಾರು (ಖಾರಿಫ್, ರಬಿ, ಬೇಸಗೆ) ಅಂದರೆ ಕ್ರಮವಾಗಿ ಜೂನ್, ಅಕ್ಟೋಬರ್ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಇತರೆ ಜಿಲ್ಲೆಗಳಲ್ಲಿ ಜೂನ್ ಮತ್ತು ಜುಲೈನಲ್ಲಿ ಬಿತ್ತನೆ ಮಾಡಿ ಮಳೆಗಾಲದ ಬೆಳೆಯನ್ನು ಮತ್ತು ಜನವರಿ ಅಥವಾ ಫೆಬ್ರವರಿಯಲ್ಲಿ ಬಿತ್ತನೆ ಮಾಡಿ ಬೇಸಗೆ ಬೆಳೆಯನ್ನು ಪಡೆಯಲಾಗುತ್ತದೆ. ದಕ್ಷಿಣದ ಜಿಲ್ಲೆಗಳಲ್ಲಿ ಉತ್ತರದ

ಜಿಲ್ಲೆಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಕೆರೆ, ಬಾವಿ ಮತ್ತು ಶ್ಯಾನೆ ನೀರಿನ ಆಶ್ರಯದಲ್ಲಿ ಬೇಸಗೆ ಬೆಳೆಯನ್ನು ಮಾಡಲಾಗುತ್ತದೆ.

ಕರ್ನಾಟಕದಲ್ಲಿ ಬತ್ತ ಬೆಳೆಯುವ ಭೂಮಿಯ ವಿಸ್ತೀರ್ಣ (ಲಕ್ಷ ಹೆಕ್ಟೇರುಗಳಲ್ಲಿ)

| | |
|---|---|
| 1960-61 | 10.28 |
| 1971-1 | 1.70 |
| 1980-81 | 11.14 |
| 1990-91 | 11.73 |
| 2000-09 | 14-84 |
| 2010-11 | 15.39 |

ಕರ್ನಾಟಕದಲ್ಲಿ ಬತ್ತದ ಉತ್ಪಾದನೆ (ಲಕ್ಷ ಟನ್ನುಗಳಲ್ಲಿ)

| | |
|---|---|
| 1980-81 | 22.58 |
| 1990-91 | 24.28 |
| 2000-01 | 38.47 |
| 2005-06 | 39.99 |
| 2009-10 | 38.76 |
| 2010-11 | 42.97 |

ಕರ್ನಾಟಕದಲ್ಲಿ ಬತ್ತದ ಸರಾಸರಿ ಇಳುವರಿ

| | |
|---|---|
| 2000-01 | 2730 |
| 2005-06 | 2834 |
| 2007-08 | 2875 |
| 2008-09 | 2644 |
| 2009-10 | 2614 |

**ವಿವಿಧ ತಳಿಗಳು :** ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಸುಮಾರು 60ಕ್ಕೂ ಹೆಚ್ಚು ತಳಿಗಳು ಬಳಕೆಯಲ್ಲಿವೆ. ಮೈದಾನ ಪ್ರದೇಶದಲ್ಲಿ ಕೊಯಮತ್ತೂರು ಸಣ್ಣ, ಬಂಗಾರ ಸಣ್ಣ, ಬಂಗಾರಕೋವಿ, ರತ್ನ ಚೂಡಿ, ಬಂಗಾರ ಕಡ್ಡಿ, ಚೈನಾ, ಹಾಲುಬ್ಬಲು, ಜಿ.ಇ.ಜಿ 24, ಎಚ್.ಆರ್. 35, ದೊಡ್ಡ ಬೈರ, ಗಿಡ್ಡಬೈರ, ಆಲೂರು ಸಣ್ಣ, ಜೇನುಗೂಡು, ಹಂಸ, ಜಯ ಬತ್ತ ಇತ್ಯಾದಿ, ತಳಿಗಳನ್ನು ರಾಜ್ಯದಲ್ಲಿ ಬೇರೆ-ಬೇರೆ ಪರಿಸರಕ್ಕೆ ಹೊಂದಿಕೊಳ್ಳುವಂತೆ ಬೇಸಾಯ ಮಾಡುವರು.

**ಉತ್ತಮ ಬೀಜದ ಆಯ್ಕೆ ಮತ್ತು ಗುಣಮಟ್ಟ ರಕ್ಷಣೆ :** ಬಿತ್ತನೆಗೆ ಗುಣಮಟ್ಟದ ಬೀಜವನ್ನೇ ಬಳಸಬೇಕು. ಆದ್ದರಿಂದ ರೈತರು ಅವರು ಬೆಳೆದ ಬೆಳೆಯಲ್ಲಿಯೇ ಬೀಜದ ಆಯ್ಕೆ ಮಾಡಬೇಕಾಗಿದ್ದು, ಇದಕ್ಕೆ ಉಪ್ಪು ನೀರಿನ ದ್ರಾವಣವನ್ನು ತಯಾರಿ ಮಾಡಿಕೊಳ್ಳಬೇಕು. 1:4 ಪ್ರಮಾಣದ ದ್ರಾವಣದಲ್ಲಿ ಬೀಜವನ್ನು ನೆನೆಸಿದ್ದಲ್ಲಿ ಜೊಳ್ಳು ಬೀಜವು ತೇಲಿ, ಉತ್ತಮ ಬೀಜವು ತಳದಲ್ಲಿರುತ್ತದೆ. ಅದನ್ನು ಶುದ್ಧವಾದ ನೀರಿನಿಂದ 2-3 ಬಾರಿ ತೊಳೆದು, ಒಣಗಿಸಿ ಬಿತ್ತನೆಗೆ ಉಪಯೋಗಿಸುವುದು ಯೋಗ್ಯ.

**ಸಸಿಮಡಿ ತಯಾರಿ :** ಒಂದು ಹೆಕ್ಟೇರ್ ಪ್ರದೇಶಕ್ಕೆ 750 ಚ.ಮೀ. ನಷ್ಟು ಸಸಿ ಮಡಿ ಬೇಕಾಗುತ್ತದೆ. ಒಂದು ಸಸಿ ಮಡಿಯು 7.5 ಮೀ. ಉದ್ದ, 1.2 ಮೀ. ಅಗಲ ಹಾಗೂ 10 ಸೆಂ.ಮೀ. ಎತ್ತರವಿರಬೇಕು. ಈ ರೀತಿಯ 75 ಸಸಿ ಮಡಿಗಳು ಪ್ರತಿ ಹೆಕ್ಟೇರಿಗೆ ಬೇಕಾಗುತ್ತದೆ. ಪ್ರತಿ ಸಸಿ ಮಡಿಗೆ 25 ಕೆ.ಜಿ. ಹಸಿಗೊಬ್ಬರ, 90 ಗ್ರಾಂ ಸಾರಜನಕ, 45 ಗ್ರಾಂ ರಂಜಕ ಹಾಗೂ 45 ಗ್ರಾಂ ಪೊಟ್ಯಾಷ್ ಗೊಬ್ಬರ ಕೊಡಬೇಕು. ಹೀಗೆ ಒಣ ಸಸಿ ಮಡಿ ಮತ್ತು ಕೆಸರು ಸಸಿ ಮಡಿಗಳನ್ನು ತಯಾರಿಸಬಹುದು.

**ಡಪಾಗ್(ಚಾಪೆ) ಪದ್ಧತಿ :** ಈ ಪದ್ಧತಿಯು ಯಂತ್ರೋಪಕರಣದಿಂದ ನಾಟಿ ಮಾಡುವ ಪ್ರದೇಶಕ್ಕೆ ಯುಕ್ತವಾಗಿರುತ್ತವೆ. ರಾಜ್ಯದ ಕೃಷಿ ವಿಶ್ವವಿದ್ಯಾಲಯ ಮತ್ತು ಭಾರತ ಕೃಷಿ ಅನುಸಂಧಾನ ಪರಿಷತ್ತು ಮತ್ತು ರಾಜ್ಯದ ಕೃಷಿ ವಿಶ್ವವಿದ್ಯಾಲಯದ ಸಂಶೋಧನೆಯಿಂದ ಫಲಿಸಿದ ನಪುಂಸಕ ಬತ್ತ ಎಂಬುದು ಇಂಡಿಕಾ ಗುಂಪಿನ ಬತ್ತಗಳಲ್ಲಿ ಪ್ರಪಂಚದಲ್ಲೇ ಮೊದಲನೆಯದಾಗಿದ್ದು ಇದರ ಪ್ರಯೋಜನಗಳು ಇತರ ರಾಜ್ಯಗಳಿಗೆ ಮಾತ್ರವಲ್ಲ ಇತರ ರಾಷ್ಟ್ರಗಳಿಗೂ ದೊರೆತಿವೆ.

ಒಟ್ಟಾರೆ ನೀರಾವರಿ ಪ್ರದೇಶದಲ್ಲಿ ಹೆಚ್ಚಾಗಿ ರೈತರು ಬತ್ತ, ಹತ್ತಿ ಬೆಳೆಯ ಕಡೆ ವಾಲಿದ್ದಾರೆ. ತ್ವರಿತವಾಗಿ ಕೃಷಿ ಕಾಮಗಾರಿಗಳನ್ನು ನಿರ್ವಹಿಸಲು ಸಾಂಪ್ರದಾಯಿಕ ಸಾಧನೆಗಳಲ್ಲದೆ ಆಧುನಿಕವಾದ ಟ್ರಾಕ್ಟರ್ ಸಹಾಯದಿಂದ ನೇಗಿಲು, ರಂಟೆ ಹೊಡೆಯುವುದು ಅವಲಂಬಿಸಿದ್ದಾರೆ. ಕೃಷಿಗೆ ಅಗತ್ಯವಾದ ಜಾನುವಾರುಗಳನ್ನು ಸಾಕಲು ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ಬತ್ತ ಕೃಷಿ ವ್ಯವಸ್ಥೆ ಉಲ್ಟಾಪಲ್ಟಾ ಆಗಿಬಿಟ್ಟಿದೆ.

ಬತ್ತದ ಕೊಯ್ಯಲು, ಬತ್ತವನ್ನು ಗಿರಣಿಗಳಲ್ಲಿ ಒಡೆದು ಅಕ್ಕಿ ಮಾಡುವ ವಿಧಾನವೇ ಸಾರ್ವತ್ರಿಕ ರೂಢಿಯಾಗಿದೆ. ದೇಸಿ ಪದ್ಧತಿಗಳ ಮೂಲಕ ಬತ್ತ ಪೈರು ಬಿಡುವ, ನಾಟಿಮಾಡುವ, ಕಳೆ ಕೀಳುವ, ಕೊಯ್ಯುವ, ಅದನ್ನು ಒಡೆದು ತೂರುವ ಶೇಖರಿಸುವ ಯಾವುದೇ ಪದ್ಧತಿಗಳು ಮರೆಯಾಗುತ್ತಿವೆ.

ಅಕ್ಕಿಯಿಂದ ಅವಲಕ್ಕಿ, ಮಂಡಕ್ಕಿ (ಪುರಿ) ಬತ್ತದ ಅರಳು ಮೊದಲಾದ ತಿನಿಸುಗಳನ್ನು ತಯಾರಿಸುವರು. ಇತ್ತೀಚೆಗೆ ಬತ್ತದ ಬೆಳೆಗೆಂದೇ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡು ಹಣಕಾಸನ್ನು ಒದಗಿಸುತ್ತಿದೆ. ರೈತರಿಗೆ ಸಾಲ, ಯುಕ್ತ ಬೆಲೆ ನಿಗದಿ ಇತ್ಯಾದಿಯಾಗಿ ಪ್ರಗತಿದಾಯಕ ಕೆಲಸಗಳನ್ನು ಮಾಡುತ್ತಿದೆ.

**ಒಣಭೂಮಿ ತಳಿಗಳು :** ಬೆಂಗಳೂರು, ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಣಭೂಮಿ ಬತ್ತದ ತಳಿಗಳ ಕೃಷಿ ಇವತ್ತಿಗೂ ನಡೆಯುತ್ತದೆ. ದಪ್ಪಕಾಳಿನ ಕೆಂಪು ಅಕ್ಕಿಯ ಒಣಭೂಮಿಯ ತಳಿಗಳು ಎಕರೆಗೆ 10 ರಿಂದ 12 ಮೂಟೆ ಇಳುವರಿ ನೀಡುತ್ತದೆ.

**1. ಕರಿಮುಂಡಗನ ಬತ್ತ :** ನಾಲ್ಕುವರೆ ತಿಂಗಳ ಬೆಳೆ. ದಪ್ಪನಾದ ಕಪ್ಪುಕಾಳಿನ ತಳಿ ಕಾಳಿನ ತುದಿಯಲ್ಲಿ ಬಿಳಿ ಪಟ್ಟಿಯಿರುತ್ತದೆ. ಗಟ್ಟಿಯಾಗಿದ್ದು, ಬರನಿರೋಧಕ ಗುಣವಿದೆ. ಸದಾ ತೇವ ಇರುವ ಜಾಗ ಉಪಯುಕ್ತ. ಬೇಗ ಕುಯಿಲಿಗೆ ಬರುವ ಈ ತಳಿಗೆ ಹಕ್ಕಿ ಇಲಿಗಳು ಮುಗಿ ಬೀಳುವುದುಂಟು. ಎಕರೆಗೆ 12 ರಿಂದ 15 ಚೀಲ ಇಳುವರಿ ಬರುತ್ತದೆ. ಇದು ಸಹಜ ಕೃಷಿಗೆ ಒಗ್ಗಿಕೊಳ್ಳುತ್ತದೆ.

**2. ಬಿಳಿ ಮುರುಡುಗನ ಬತ್ತ :** 5 ತಿಂಗಳ ಅವಧಿಯ ತಳಿ. ಹೊಳಲ್ಕೆರೆ ಪ್ರದೇಶದ ಒಣಭೂಮಿ ಬತ್ತದ ತಳಿ ಇದಕ್ಕೆ ಎಲೆ ಸುರುಳಿ ಬಾದೆ ಇದೆ. ಒಣಹುಲ್ಲಿನ ದಪ್ಪಕಾಳಿನ ತಳಿ, ನೀರಾವರಿ ಗದ್ದೆಗಳಲ್ಲಿ ಬೀಜವರಚಿ ಕೂಡ ಬೆಳೆಯಬಹುದು.

**3 ಪುಟ್ಟ ಬತ್ತ :** ಮಂಡ್ಯ ಜಿಲ್ಲೆಯ ನಾಗಮಂಗಲ ಪ್ರದೇಶದ ಒಣಭೂಮಿ ತಳಿ. ಹೆಚ್ಚು ನೀರು ಬೇಕಾಗುತ್ತದೆ. ಮಳೆ ಹದವಾಗಿ ಆಗುತ್ತಿದ್ದರೆ ಉತ್ತಮವಾಗಿ ಬೆಳೆಯುತ್ತದೆ. ದಪ್ಪಕಾಳಿನ ಈ ತಳಿ ಸಾಧಾರಣ ಇಳುವರಿ ಕೊಡುತ್ತದೆ. ಸಾಧಾರಣ ಎತ್ತರ ಬೆಳೆಯುತ್ತದೆ. ಇದು ನಾಲ್ಕುವರೆಯಿಂದ ಐದು ತಿಂಗಳ ತಳಿ.

**4. ಕರವೆ ಕಲಂಜಿ :** ತಮಿಳುನಾಡು ಮೂಲದ ತಳಿ. ತೆನೆಗಳು ಉದ್ದವಾಗಿದ್ದು, ಬಾಳೆಗೊನೆಯಂತೆ ಬಾಗುತ್ತವೆ. ಇದು ಎತ್ತರ ಬೆಳೆಯುವುದರಿಂದ ಮಳೆ ಗಾಳಿಗೆ ನೆಲಕಚ್ಚುತ್ತದೆ. ಕೀಟ, ರೋಗ ಮತ್ತು ಬರನಿರೋಧಕ ಗುಣ ಹೊಂದಿದೆ. ಅವಧಿ 5 ತಿಂಗಳು.

**5. ಕಲುರನ್‌ದೈಕಾರ್ :** ತಮಿಳುನಾಡು ಮೂಲದ ಒಣಭೂಮಿ ಬತ್ತದ ತಳಿ. ಹೆಚ್ಚು ಎತ್ತರ ಬೆಳೆಯುವುದಿಲ್ಲ. ಕಾಳು ಮತ್ತು ಹುಲ್ಲಿನ ಇಳುವರಿ ಸಾಧಾರಣ. ದಪ್ಪಕಾಳಿನ, ಕೆಂಪು ಅಕ್ಕಿಯ ತಳಿ ಅವಧಿ ಐದು ತಿಂಗಳು.

**6. ಗೂಡು ನೆಲ್ಲು :** ಚಿಕ್ಕದಾದ ಗುಂಡನೆಯ ಕಾಳುಗಳು ಹೆಚ್ಚು ಆರೈಕೆ ಇಲ್ಲದೆ ಬೆಳೆಯುತ್ತದೆ. ಅನ್ನ ಬಹುರುಚಿ. ಸಾಧಾರಣ ಇಳುವರಿ ನೀಡುತ್ತದೆ. ಅವದಿ ನಾಲ್ಕೂವರೆ ತಿಂಗಳು.

**7. ಆನೆಕೊಂಬಿನ ಬತ್ತ :** 3 ತಿಂಗಳಿಗೆ ಕೊಯಿಲಾಗುವ ಕಡಿಮೆ ಅವಧಿಯ ತಳಿ. ಬತ್ತ ಮತ್ತು ಅಕ್ಕಿ ಎರಡು ಬಿಳಿ ಬಣ್ಣ, ಗಿಡ್ಡ ತಳಿ. ಹೆಚ್ಚು ಮಳೆ ಬೇಕಾಗುವುದಿಲ್ಲ. ಕೀಟ ರೋಗ ಬಾದೆ ಇರುವುದಿಲ್ಲ. ಬತ್ತದು ತುದಿಯಲ್ಲಿ ಅರ್ಧ ಅಂಗುಲ ಮುಳ್ಳಿನಂತೆ ಇರುತ್ತದೆ. ಅವಲಕ್ಕಿ ಮತ್ತು ಪುರಿ ಮಾಡಲು ಉತ್ತಮ ಆನೇಕಲ್, ಕನಕಪುರ, ಸಾತನೂರು ಪ್ರದೇಶದಲ್ಲಿ ಜನಪ್ರಿಯ.

**8. ಒಂದೂವರೆ ಬತ್ತ :** ಐದು ತಿಂಗಳ ದೀರ್ಘಾವಧಿ ತಳಿ, ಹೆಚ್ಚು ಎತ್ತರ ಬೆಳೆಯುತ್ತದೆ. ಒಣಭೂಮಿ ತಳಿಯಾದರು ಉತ್ತಮ ಇಳುವರಿ ಕೊಡುತ್ತದೆ. ಸಿಪ್ಪೆ ತೆಳು, ಬೆಂಗಳೂರು ಗ್ರಾಮಾಂತರ ಪ್ರದೇಶದ ಹೊಲಗಳಲ್ಲಿ ಕಂಡುಬರುತ್ತದೆ.

**9. ಕೆಂಪು ಮುಂಗಡ :** ಕಾಂಡ ತಿಳಿಗೆಂಪು ಮತ್ತು ದಪ್ಪ, ನೀರು ಹೆಚ್ಚು ಬೇಕು. ಉತ್ತಮ ಕಳೆ ನಿಯಂತ್ರಕ ಅಕ್ಕಿಯು ಕೆಂಪು ಬಣ್ಣ, ರೋಗ, ಕೀಟಬಾಧೆ ಇಲ್ಲ. ಬೆಂಗಳೂರು ಗ್ರಾಮಾಂತರದಲ್ಲಿ ಜನಪ್ರಿಯ ಐದು ತಿಂಗಳಿಗೆ ಕುಯಿಲಿಗೆ ಬರುವ ಎತ್ತರದ ತಳಿ ಇದು.

**10. ಮುರಡಿ :** ನಾಲ್ಕೂವರೆ ತಿಂಗಳಿಗೆ ಕಟಾವಿಗೆ ಬರುವ ತಮಿಳುನಾಡಿನ ಮೂಲದ ತಳಿ. ಕಪ್ಪು ಮಣ್ಣಿಗೆ ಯುಕ್ತ. ಎಕರೆಗೆ 10 ರಿಂದ 2 ಚೀಲ ಇಳುವರಿ ಕೊಡುತ್ತದೆ. ಕಂದು ಬಣ್ಣ, ಕೀಟರೋಗ ಮತ್ತು ಬರನಿರೋಧಕ ಶಕ್ತಿ ಇದೆ.

**11. ಮುಂಗಡ :** 5 ತಿಂಗಳಿಗೆ ಕೊಯ್ಲು, ಬರ ನಿರೋಧಕ ತಳಿ, ಗಾಳಿ ಮಳೆಯನ್ನು ತಡೆಯುವ ಶಕ್ತಿ ಹೊಂದಿದೆ. ಕಾಳು ಮತ್ತು ಹುಲ್ಲಿನ ಇಳುವರಿ ಉತ್ತಮ, ಕೀಟ ಮತ್ತು ರೋಗ ನಿರೋಧಕ ತಳಿ.

**12. ದೊಡ್ಡಿ ಬತ್ತ :** ತುಮಕೂರು, ತಿಪಟೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಹುಪಾಲು ಹಳ್ಳಿಗಳಲ್ಲಿ ಬೆಳೆಯುವ ತಳಿ. ಬಲಿಷ್ಟಕಾಂಡ ಹೊಂದಿರುತ್ತದೆ. ನಾಲ್ಕುವರೆ ತಿಂಗಳ ಅವಧಿ. ಕೀಟರೋಗದ ಭಯವಿಲ್ಲ. ಉತ್ತಮ ಹುಲ್ಲು ಮತ್ತು ಕಾಳಿನ ಇಳುವರಿ ಇದೆ.

**13. ಕಿಲೋಗಯ :** ನಾಲ್ಕೂವರೆ ತಿಂಗಳ ತಳಿ, ಕಾಳಿನ ತುದಿಯಲ್ಲಿ ಕಪ್ಪು ಮಚ್ಚೆ ಇರುತ್ತದೆ. ನೋಡಲು ಬಹಳ ಚಂದ. ಕಾಂಡಕೊರಕ ಕೀಟದ ಹಾವಳಿಗೆ ಕೆಲವೊಮ್ಮೆ ತುತ್ತಾಗುತ್ತದೆ.

**14. ಕರಿನೆಲ್ಲು :** ಮೂರುವರೆಯಿಂದ ನಾಲ್ಕು ತಿಂಗಳ ಅವಧಿಯ ತಳಿ. ಗಾಳಿಯ ಹೊಡೆತ ತಡೆಯಲಾರದು. ಕಪ್ಪು ಬಣ್ಣ, ಕಾಳು ಮತ್ತು ಹುಲ್ಲಿನ ಇಳುವರಿ ಸಾಧಾರಣ.

**15. ಸಣ್ಣ ಮುಂಡುಗ :** ಈ ತಳಿ ತಗ್ಗು ಪ್ರದೇಶಕ್ಕೆ ಯುಕ್ತವಾದುದು. ಸಾಧಾರಣ ಎತ್ತರ ಮಧ್ಯಮಗಾತ್ರದ ಅಕ್ಕಿ ಸಣ್ಣಮುಂಡುಗ ತಳಿಯ ವೈಶಿಷ್ಟ್ಯ. ಕನಕಪುರದಲ್ಲಿ ಕಾಡುಗಳಲ್ಲಿ ಕಂಡುಬರುತ್ತದೆ, ಅವಧಿ ಮೂರುವರೆ ತಿಂಗಳು.

**16. ದೊಡ್ಡ ಬೈರ ನೆಲ್ಲು :** ನೀರಾವರಿ ಮತ್ತು ಒಣಭೂಮಿ ಎರಡಕ್ಕೂ ಯುಕ್ತವಾದ ತಳಿ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ, ಕೀಟ ಮತ್ತು ರೋಗಭಾದೆ ಇಲ್ಲ. ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಬತ್ತ ಈಗಲು ಜನಪ್ರಿಯ 'ಬೈರನೆಲ್ಲು' ಅಥವಾ ತೆಲುಗಿನಲ್ಲಿ 'ಬೈರೋಡ್ಲು' ಎಂದು ಕರೆಯುತ್ತಾರೆ. ಸಾವಯವ ಕೃಷಿಗೆ ಒಗ್ಗುವ ಅಪರೂಪದ ತಳಿ. ಅವಧಿ 5 ತಿಂಗಳು.

**17. ಮರನೆಲ್ಲು :** 5 ತಿಂಗಳಿಗೆ ಕಟಾವು. ತಮಿಳುನಾಡಿನ ಡೆಂಕಣೆಕೋಟದ ತಳಿ, ಸಿಪ್ಪೆ ಹಳದಿ ಬಣ್ಣ, ಅಕ್ಕಿ ಕೆಂಪು, ರೋಗ ಮತ್ತು ಕೀಟದ ಬಾಧೆ ಇಲ್ಲ. ಬರ ನಿರೋಧಕತೆ ಹೆಚ್ಚು. ಅನ್ನರುಚಿಕರ ಪುರಿ ಮಾಡಲು ಯುಕ್ತ.

**18. ಸಾಲು ಬತ್ತ :** ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಯ ಮರುಭೂಮಿ ಪ್ರದೇಶದ ತಳಿಕೀಟ ಮತ್ತು ರೋಗದ ಬಾದೆ ಇಲ್ಲ. ಮರಳು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಫಲವತ್ತತೆ ಕಡಿಮೆ ಇದ್ದರೂ ಬೆಳೆಯಬಹುದು, ಅವಧಿ 5 ತಿಂಗಳು.

**19. ಮಾಡು ಮೂಲಂಗಿ :** ನಾಲ್ಕೂವರೆ ತಿಂಗಳಿಗೆ ಕೊಯ್ಲು, ಅರೆ ಮತ್ತು ಒಣ ಪ್ರದೇಶದಲ್ಲಿ ಬೆಳೆಯುವ ಬೆಳೆ. ಬರತಡೆಯುವ ಸಾಮರ್ಥ್ಯ ಇದೆ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ.

**20. ಜೇನುಗೂಡು :** ನಾಲ್ಕೂವರೆ ತಿಂಗಳ ತಳಿ, ನೀರಾವರಿ ಮತ್ತು ಒಣಭೂಮಿ, ಎರಡರಲ್ಲೂ ಬೆಳೆಯಬಹುದು. ಹೆಚ್ಚು ಉದ್ದ ಬೆಳೆಯುತ್ತದೆ, ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ.

ನೀರಾವರಿ ಬತ್ತದ ತಳಿಗಳು

**1. ಸುಗದಾಸ್ :** ಐದು ತಿಂಗಳಿಗೆ ಕೊಯ್ಲಾಗುವ ತಳಿ, ತಂಪಾದ ಪ್ರದೇಶಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಕಾಳು ಬಲಿಯುವ ಕಾಲಕ್ಕೆ ಕೆಂಪು

ಬಣ್ಣವಿದ್ದು, ಕಟಾವು ಮಾಡುವ ಅವಧಿಗೆ ಕಪ್ಪುಬಣ್ಣಕ್ಕೆ ತಿರುಗುತ್ತದೆ. ಹುಲ್ಲು ಮತ್ತು ಕಾಳಿನ ಇಳುವರಿ ಸಾಧಾರಣ.

**2. ತೂಯಮಲ್ಲಿ :** ಇದು ಬಿಳಿತೆನೆಯ ದೀರ್ಘಾವಧಿ ಬತ್ತ. ಕೆರೆ ಆಶ್ರಿತ ನೀರಾವರಿ ಗದ್ದೆಗಳಿಗೆ ಹೇಳಿ ಮಾಡಿಸಿದ ತಳಿ, ಕಾಳುಗಳು ಉದ್ದ ಮತ್ತು ಸಣ್ಣ. ರೋಗ ಮತ್ತು ಕೀಟದ ಬಾಧೆ ಕಡಿಮೆ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ, ಅವಧಿ 5 ತಿಂಗಳು.

**3. ಹಾಲುಬ್ಬಲು :** ತುಮಕೂರು ಸುತ್ತಮುತ್ತಲ ಕೆರೆ ನೀರಾವರಿ ಪ್ರದೇಶ. ಇದರ ಮೂಲ ಸ್ಥಾನ, ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ. ವಿಶೇಷವೆಂದರೆ ಕಾಳು ಬಲಿತ ಕಾಲಕ್ಕೆ ಇಲಿಗಳ ಕಾಟ ಇರುವುದಿಲ್ಲ, ಮುಂಗಾರು ಬಿತ್ತನೆಗೆ ಯುಕ್ತ. ಕಾಲ ಅವಧಿ ಐದು ತಿಂಗಳು.

**4. ಆಲೂರು ಸಣ್ಣ :** ಹೆಚ್ಚಾಗಿ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬೆಳೆಯುತ್ತಾರೆ. ನಿತ್ಯಬಳಕೆಗೆ ಅತ್ಯುತ್ತಮವಾದುದು, ಈ ಬೆಳೆಗೆ ಮರಳುಮಿಶ್ರಿತ ಜೇಡಿ ಮಣ್ಣು ಯುಕ್ತ. ಹುಳು ಮತ್ತು ರೋಗಬಾಧೆ ಕಡಿಮೆ. ಅಕ್ಕಿ ತೆಳು. ಅವಧಿ 5 ತಿಂಗಳು.

**5. ಸೇಲಂ ಸಣ್ಣ :** ನಾಲ್ಕೂವರೆ ತಿಂಗಳಿನ ತಳಿ, ಬತ್ತ ಚಿನ್ನದ ಬಣ್ಣಕ್ಕಿದ್ದು, ಅಕ್ಕಿ ಬಿಳುಪು, ಕೊಟ್ಟಿಗೆ ಗೊಬ್ಬರದಲ್ಲಿಯೇ 25 ರಿಂದ 28 ಚೀಲ ಇಳುವರಿ ನಿರೀಕ್ಷಿಸಬಹುದು, ತಮಿಳುನಾಡು ನಾಡು ಮೂಲದ ಈ ತಳಿ ಈಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜನಪ್ರಿಯ.

**6. ಮುಂಗೇಸರಿ :** ಇದು ನೀರಾವರಿ ತಳಿಯಾದರೂ ಬತ್ತ ಮತ್ತು ಅಕ್ಕಿ ಎರಡೂ ಕೆಂಪು, ಇದನ್ನು ಚನ್ನರಾಯಪಟ್ಟಣ, ತಿಪಟೂರು ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಈ ಅಕ್ಕಿಯ ಗಂಜಿ ಸಕ್ಕರೆ ಪಾಯಸದಂತಿರುತ್ತದೆ. ಇದರ ಅವಧಿ ಐದು ತಿಂಗಳು.

**7. ರತ್ನ ಚೂಡಿ :** ಕರಾವಳಿ, ಮಳೆನಾಡು, ಬಯಲು ಸೀಮೆಯಲ್ಲೆಲ್ಲಾ ಈ ಬತ್ತದ ಪರಿಚಯವಿದೆ, ಇದು ರತ್ನದಂತೆ ಹೊಳೆಯುತ್ತದೆ, ಸಾಧಾರಣ ಎತ್ತರ, ಕಾಂಡ ಸಣ್ಣ, ಅಕ್ಕಿ ಬಿಳುಪು, ತೆನೆ ಬಹಳ ಉದ್ದ.

**8. ಜೋಳಗ :** ಮಲೆನಾಡಿಗರು ಇದನ್ನು 'ಬತ್ತದ ತಾಯಿ' ಎನ್ನುತ್ತಾರೆ. ಅವಧಿ 6 ತಿಂಗಳು. ಸದಾ ನೀರು ಹರಿಯುವ ಕಡೆ ಹಾಕಿದರೂ ಕೊಳೆಯದು, ಬೀಳದು, ರೋಗ, ಕೀಟಬಾಧೆ ಇಲ್ಲವೇ ಇಲ್ಲ.

**9. ರಾಜಮುಡಿ :** ಐದು ತಿಂಗಳ ತಳಿ, ಹಾಸನ, ಮಂಡ್ಯ, ಮೈಸೂರು ಪ್ರದೇಶದಲ್ಲಿ ಜನಪ್ರಿಯ. ರಾಸಾಯನಿಕ ಕೃಷಿಗೆ ಹೊಂದುವುದೇ ಇಲ್ಲ. ಮೈಸೂರು ಮಹಾರಾಜರಿಗೆ ಇದರ ಅಕ್ಕಿ ತುಂಬಾ ಇಷ್ಟವಾಗುತ್ತಿತ್ತು ಎಂಬುದು ಹಳೆಯ ತಲೆಮಾರಿನ ರೈತರ ಮಾತು.

**10. ಕೆಂಪ ಸಡಿ :** ಉತ್ತರ ಕನ್ನಡ ಜಿಲ್ಲೆ ಇದರ ತವರು. ಇದಕ್ಕೆ ಕೋಠಕಣೆ ಜಡ್ಡು ಎಂಬ ಹೆಸರೂ ಉಂಟು. ರೋಗಬಾಧೆ ವಿರಳ. 6 ತಿಂಗಳಿಗೆ ಕಟಾವು. ಎಕರೆಗೆ 20 ಕೆ.ಜಿ. ಬತ್ತ ಬಿತ್ತನೆಗೆ ಬೇಕು.

**11. ಸ್ವಾತಿ ಬತ್ತ :** ಐದೂವರೆ ತಿಂಗಳ ದೀರ್ಘಾವದಿ ತಳಿ. ಸಣ್ಣ ಸ್ವಾತಿ, ದಪ್ಪಸ್ವಾತಿ ಎರಡು ವಿಧ, ಯಾವ ಸಮಯದಲ್ಲಿ ನಾಟಿ ಮಾಡಿದರೂ ತೆನೆ ಬರುವುದು ಮಾತ್ರ ಸ್ವಾತಿ ಮಳೆಗೆ, ಎತ್ತರ ಜಾಸ್ತಿ, ತಿಪಟೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಳೆಯುತ್ತಾರೆ.

**12. ಮಾದಿಗ ಬತ್ತ :** ಬತ್ತ ಕಪ್ಪಾಗಿರುವುದರಿಂದ ಹಾಗೆ ಕರೆಯುತ್ತಾರಂತೆ, ಇದರ ಅಕ್ಕಿ, ಅನ್ನವನ್ನು ದೇವರ ಎಡೆಗೂ ಬಳಸುವುದಿಲ್ಲ, ಅವಧಿ ನಾಲ್ಕು ತಿಂಗಳು, ತುಮಕೂರು ಕಡೆ ಕಾಣಸಿಗುತ್ತದೆ.

**13 ಗಡಲ ಬತ್ತ :** 5 ತಿಂಗಳು ಅವಧಿ. ತುಮಕೂರು ಪ್ರದೇಶದ ತಳಿ, ಅನ್ನ ಬೆಂದಾಗ ಒಳ್ಳೆಯ ಪರಿಮಳ ಇರುತ್ತದೆ. ಕಜ್ಜಾಯ, ತಂಬಿಟ್ಟು, ಮಾಡಲೆಂದೇ ರೈತರು ಇದನ್ನು ಬೆಳೆಯುತ್ತಾರೆ. ಕಾಳಿಗಿಂತ ಹುಲ್ಲಿನ ಇಳುವರಿ ಜಾಸ್ತಿ.

**14. ಸಣ್ಣವಾಳ್ಯ :** ಮಲೆನಾಡುಪ್ರದೇಶದ ದೀರ್ಘಾವಧಿ ತಳಿ, ಜೂನ್‌ಗೆ ನರ್ಸರಿ, ಜುಲೈನಲ್ಲಿ ನಾಟಿ, ನವೆಂಬರ್‌ಗೆ ಕೊಯ್ಲು, ಹೆಚ್ಚು ಮಳೆ ಬೀಳುವ ಪ್ರದೇಶಕ್ಕೆ ಯುಕ್ತ.

**15. ಕಣ್ಣುರತ್ನ ಚೂಡಿ :** ನಾಲ್ಕೂವರೆ ತಿಂಗಳ ಕಾರವಾರ ಮೂಲದ ತಳಿ.ನಾಟಿಗೂ ಯುಕ್ತ, ಸ್ವತಃ ಕಳೆ ನಿಯಂತ್ರಕ ಬತ್ತ ಆಕರ್ಷಕ ಕೆಂಪು ಬಣ್ಣಕ್ಕಿದ್ದು, ತೆನೆಯತುದಿಯಲ್ಲಿ ಬಿಳಿಯ ಕಣಗಳಿದ್ದು, ಆಕರ್ಷಕವಾಗಿರುತ್ತದೆ. ಆ ಕಾರಣಕ್ಕೆ ಕಣ್ಣುರತ್ನ ಚೂಡಿ ಎಂದು ಹೆಸರು.

**16. ಅತಿಕಾರ :** 110-120 ದಿನಗಳ ಸುಗ್ಗಿ ಬತ್ತದ ಕೆಂಪುಬಣ್ಣದ ತಳಿ. ಭೂತದ ಪೂಜೆಗೆ ಬಹು ಪ್ರಶಸ್ತವಾದುದು, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಂಡುಬರುತ್ತದೆ.

**ರೋಗಗಳು :** ಬತ್ತಕ್ಕೆ ತಗಲುವ ರೋಗಗಳಲ್ಲಿ ಬೂಷ್ಟು ರೋಗ ಅಧಿಕವಿದ್ದು ಬೆಳೆಗೆ ಬಾರಿ ಪ್ರಮಾಣದ ನಷ್ಟ ತಂದೊಡ್ಡುತ್ತದೆ. ಬೆಂಕಿ ರೋಗ (ಬ್ಲಾಸ್ಟ್) ಹಾಗೂ ಕಂದು ಚುಕ್ಕೆ ರೋಗ ಕೂಡ ಮುಖ್ಯವಾದವು. ಬೆಂಕಿ ರೋಗಕ್ಕೆ ಪೈರಿಕ್ಯುಲೇರಿಯ ಒರೈಜೆ ಎಂಬ ಶಿಲೀಂಧ್ರ ಕಾರಣ. ಇದು ಬೆಳೆಯ ಎಲ್ಲ ಹಂತಗಳಲ್ಲಿ ಆವರಿಸಿ ಬೆಳೆವಣಿಗೆಯನ್ನು ಕುಗ್ಗಿಸುತ್ತದೆ. ತೆನೆಯ ಕೆಳಭಾಗಕ್ಕೆ ಆವರಿಸಿದರೆ ಕಾಳುಕುಂಬದೆ ಜೊಳ್ಳಾಗಿ ಉಳಿದು ಅಪಕ್ವ ಸ್ಥಿತಿಯಲ್ಲಿಯೇ ಮುರಿದು ಬೀಳುವುದು.

ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಾರಜನಕ ಕೊಡುವುದರಿಂದ ದೇಟು ಕೊಳೆಯೆಂಬ ರೋಗ ತಗಲುತ್ತದೆ. ಬೆಳೆ ಮಾಗುವ ಪೂರ್ವದಲ್ಲಿ ನೀರನ್ನು ಗದ್ದೆಗಳಿಂದ ತೆಗೆಯುವುದರಿಂದ ಈ ರೋಗದಿಂದಾಗಬಹುದಾದ ಹಾನಿಯನ್ನು ನಿವಾರಿಸಬಹುದು. ಕೀಟಗಳಲ್ಲಿ ಕಾಂಡ ಕೊರೆಯುವ ಹುಳು ಬಲು ದೊಡ್ಡ ಪ್ರಮಾಣದಲ್ಲಿ ಬೆಳೆಯನ್ನು ಹಾನಿಗೀಡುಮಾಡುತ್ತದೆ. ಇದು ಕಾಂಡವನ್ನು ಕೊರೆಯುವುದರಿಂದ ಬೆಳೆಯುವ ಕುಡಿ ಕಮರಿಹೋಗಿ ತೆನೆ ಕಟ್ಟುವುದಿಲ್ಲ. ಸಸ್ಯಗಳ ಬೆಳೆವಣಿಗೆಯ ಉದಕ್ಕೂ ಈ ಕೀಟಬಾದೆ ತಗಲುವುದರಿಂದ ಇದನ್ನು ತಪ್ಪಿಸುವುದು ಪ್ರಯಾಸದ ಕೆಲಸ.

ಬತ್ತದ ತಿಗಣೆಗಳು ಕಾಳುಗಳ ಹಾಲನ್ನು ಹೀರುವುದರ ಮೂಲಕ ಹಾನಿ ಉಂಟಾಗುತ್ತದೆ. ಚಿಟ್ಟೆಗಳು ಎಲೆಗಳನ್ನು ಕುಡಿಗಳನ್ನು ತಿನ್ನುವುದರಿಂದ ಬೆಳೆಯನ್ನು ಕುಗ್ಗಿಸುತ್ತವೆ. ಈ ಕೀಟಗಳನ್ನು ಬಿಎಚ್‌ಡಿ ಅಥವಾ ಡಿಡಿಟಿ ಕೀಟನಾಶಕಗಳಿಂದ ನಿಯಂತ್ರಿಸಬಹುದು. ಕೊಯ್ಲಿಗೆ 15-20 ದಿವಸ ಮುಂಚಿತವಾಗಿ ಗದ್ದೆಯಿಂದ ನೀರನ್ನು ತೆಗೆದರೆ ಕಾಳುಗಳು ಒಂದೇ ಸಮವಾಗಿ ಮಾಗುತ್ತದೆ. ಕಾಳಿನಲ್ಲಿಯ ಆರ್ದ್ರತೆ ಅತಿ ಕಡಿಮೆ ಪ್ರಮಾಣದಲ್ಲಿ ಉಳಿಯುವಂತೆ ಮಾಡಿದರೆ ಉತ್ತಮ ದರ್ಜೆಯ ಬತ್ತ ಪಡೆಯಬಹುದು. ಬತ್ತವನ್ನು ಕೊಯ್ದನಂತರ ಕೂಳೆ ಬೆಳೆಯನ್ನು ತೆಗೆದುಕೊಳ್ಳುವ ಪರಿಪಾಠ ಕೆಲ ಪ್ರದೇಶಗಳಲ್ಲಿ ಪ್ರಚಲಿತವಿದೆ. ಕೂಳೆ

ಬೆಳೆಗಾಗಿಯೇ ಬೆಳೆಯುವ ಪ್ರತ್ಯೇಕ ತಳಿಗಳೂ ಉಂಟು. ಇವುಗಳಿಂದ ಸಾಕಷ್ಟು ಮೊತ್ತದ ಇಳುವರಿ ಸಿಗುವುದು.

ಬತ್ತದ ಸಿವುಡುಗಳನ್ನು ಮರದ ಹಲಗೆಯ ಮೇಲೆ ಬಡಿಯುವುದರಿಂದ ಅಥವಾ ಸಿವುಡುಗಳನ್ನು ದುಂಡಗೆ ಹರಿವಿ ಎತ್ತುಗಳನ್ನು ಹೂಡಿ (ಹಂತಿಕಟ್ಟಿ) ತುಳಿಸುವುದರಿಂದ ಕಾಳು ಬೇರಾಗುವುವು. ಗಾಳಿಯಲ್ಲಿ ತೂರಿ ಕಾಳನ್ನು ಹಸನು ಮಾಡಲಾಗುತ್ತದೆ.

ಬತ್ತವನ್ನು ಪಣತ ಹಾಗು ಕಣಜಗಳಲ್ಲಿ ಸಂಗ್ರಹಿಸಿಡುವ ಪರಿಪಾಠ ಉಂಟು. ದೊಡ್ಡ ದೊಡ್ಡ ಸಂಗ್ರಹಾಗಾರಗಳಲ್ಲಿ ಗೋಣಿಚೀಲಗಳಲ್ಲಿಡುತ್ತಾರೆ. ಬತ್ತದ ಹುಲ್ಲಿನಿಂದ ಹೆಣೆದ ಗೂಡೆಗಳಲ್ಲಿಯೂ ಸಂಗ್ರಹಿಸುವುದುಂಟು.

*ಎನ್.ಸಿ.*

**ಬತ್ತ ಕುಟ್ಟುವುದು** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಂತ್ರಿಕ ಕೃಷಿ ಪದ್ಧತಿ ಆರಂಭ ಆಗುವ ಮೊದಲು ಅಕ್ಕಿ ಮಾಡುವ ಕ್ರಮ ಅತೀ ತ್ರಾಸದಾಯಕವಾಗಿತ್ತು. 'ಬತ್ತ ಕುಟ್ಟಿದರೆ ಅಕ್ಕಿಯಾದೀತು' ಎಂಬ ಗಾದೆ ಮಾತು ತುಳುನಾಡಿನಲ್ಲಿ ಪ್ರಚಲಿತ. ಬೇಸಾಯದ ಯಾವುದೇ ಕೆಲಸದಲ್ಲಿ ಸೋಮಾರಿತನ ತೋರಿಸಬಹುದು, ಮೋಸ ಮಾಡಬಹುದು, ಆದರೆ ಬತ್ತ ಕುಟ್ಟುವುದು ಮತ್ತು ಏತದಿಂದ ನೀರು ಸೇದುವ ಕೆಲಸದಲ್ಲಿ ಮೋಸ ಮಾಡಿದರೆ ಅವನ ಗುಟ್ಟು ರಟ್ಟಾಗುತ್ತದೆ. ಕೆಲಸ ಪೂರೈಸುವುದಿಲ್ಲ. ಬಾವಿಯಿಂದ ನೀರು ಮೇಲೆ ಬರುವುದಿಲ್ಲ. ಬತ್ತ ಅಕ್ಕಿಯಾಗುವುದಿಲ್ಲ.

ಕೃಷಿಕರಿಗೆ 'ನೇಗಿಲ ಯೋಗಿ' ಎನ್ನುತ್ತಾರೆ. ಅಂದರೆ ಬೇಸಾಯ ಎನ್ನುವುದೇ ಒಂದು ಯೋಗ. ರೈತನಿಗೆ ಬೇರೆ ಯೋಗ ವ್ಯಾಯಾಮದ ಅಗತ್ಯ ಇಲ್ಲ. ಪ್ರತಿಯೊಂದು ಅವಯವಗಳಿಗೆ ಬೇಕಾಗುವ ವ್ಯಾಯಾಮ ಕೃಷಿ ಕೆಲಸಗಳಲ್ಲಿ ದೊರೆಯುತ್ತದೆ. ಆದುದರಿಂದಲೇ "ಬೇಸಾಯಗಾರ ಬೇಗ ಸಾಯಲಾರ" ಎಂಬ ನಾಣ್ಣುಡಿ ಬಂದಿರಬಹುದು. ಬತ್ತ ಕುಟ್ಟುವಿಕೆ ಒಂದು ದೊಡ್ಡ ಯೋಗ ಎನ್ನಬಹುದು.

ನೆಲದಲ್ಲಿ ಒಂದು ಅಡಿ ಆಳದ ಹೊಂಡ ಮಾಡಿ ಹೊಂಡದ ಅಡಿಗೆ ಕಲ್ಲು ಇಟ್ಟು ಹೊಂಡವನ್ನು ಸೆಗಣಿ ಸಾರಿಸಿ ಕಲ್ಲಿನಿಂದ ಅರೆದು ತಯಾರಿಸುತ್ತಾರೆ. ಒಂದೇ ಜಾಗದಲ್ಲಿ ಅಂದರೆ ಅಂಗಳದ ಮೂಲೆಯಲ್ಲಿ ಅಥವಾ ಹಟ್ಟಿಯ ಒಳಗಡೆ 'ಬಾರಕಲ' (ಬತ್ತದ ಕಳ) ಅಂದರೆ ಬತ್ತ ಕುಟ್ಟುವ ಜಾಗ ಎಂದು ನಾಲ್ಕೈದು ಹೊಂಡಗಳಿರುವಂತೆ ಮಾಡಲಾಗುತ್ತದೆ. ತುಳುವಿನಲ್ಲಿ ಇದನ್ನು 'ಬಾರಗುರಿ' ಎನ್ನುತ್ತಾರೆ. ಆ ಹೊಂಡದಲ್ಲಿ ಬತ್ತವನ್ನು ಹಾಕಿ ಒನಕೆಯ ಮೂಲಕ ಕುಟ್ಟಿ ಬತ್ತದ ಸಿಪ್ಪೆ ತೆಗೆದು ಹದ ಮಾಡಿ ಅಕ್ಕಿ ಮಾಡುವುದೇ ಬತ್ತ ಕುಟ್ಟುವುದು. ಇದು ಅತೀ ಶ್ರಮದ ಕೆಲಸ. ಗಂಡಸರು ಹೆಂಗಸರು ಎಂಬ ಭೇದವಿಲ್ಲದೆ ಈ ಕೆಲಸವನ್ನು ಮಾಡುತ್ತಾರೆ. ಹೀಗೆ ಕುಟ್ಟಿದ ಅಕ್ಕಿಗೆ ಹಿಂದಿನ ದಿನಗಳಲ್ಲಿ ಬಾರೀ ಬೇಡಿಕೆ ಇತ್ತು. ಗೇಣಿ ಕೊಡುವ ಸಂದರ್ಭಗಳಲ್ಲಿ ಕುಟ್ಟಿದ ಕುಚ್ಚಲಕ್ಕಿಯನ್ನು ಮುಡಿ ಕಟ್ಟಿ ಎರಡು ವರ್ಷಗಳವರೆಗೆ ಇಡುವ ಕ್ರಮ ಇತ್ತು. ರೈತರು ಅಕ್ಕಿ ಮಾಡುವ ಸಂದರ್ಭದಲ್ಲಿ ತುಂಬಾ ಶ್ರಮ ವಹಿಸುತ್ತಿದ್ದರು. ಒಂದು ಮುಡಿ ಅಕ್ಕಿಯ ಬತ್ತವನ್ನು ಕುಟ್ಟಬೇಕಾದರೆ ಕನಿಷ್ಠ 3 ಜನ ಬೇಕಾಗುತ್ತದೆ. ಒಬ್ಬೊಬ್ಬರು ಒಂದೊಂದು ಕಳಸಿಗೆ ಅಂದರೆ 14 ಸೇರು ಅಕ್ಕಿಯ ಬತ್ತವನ್ನು ಕುಟ್ಟುವುದು ಕ್ರಮ. ಹೀಗೆ 42 ಸೇರು ಅಕ್ಕಿ ಅಂದರೆ 3 ಕಳಸೆ ಅಕ್ಕಿ ಒಂದು ಮುಡಿ. ಈಗಿನ ಅಳತೆ ಪ್ರಮಾಣದಲ್ಲಿ 38 ಕಿಲೋ ಅಕ್ಕಿ ಆಗುತ್ತದೆ. ಒಂದು ಮುಡಿ ಅಕ್ಕಿ ಕುಟ್ಟಬೇಕಾದರೆ ಮೂರು ಜನಕ್ಕೆ 3 ಗಂಟೆ ಕಾಲಾವಧಿ ಬೇಕಾಗುತ್ತದೆ.

ಕುಟ್ಟಿದ ಅಕ್ಕಿಯಲ್ಲಿ ಕುಚ್ಚಲು ಮತ್ತು ಬೆಳ್ತಿಗೆ ಎಂದು ಎರಡು ವಿಧ. ಬತ್ತವನ್ನು ಬೇಯಿಸಿ ಒಣಗಿಸಿ ಅಕ್ಕಿ ಮಾಡಿದರೆ ಅದು ಕುಚ್ಚಲು. ಬತ್ತವನ್ನು ಬೇಯಿಸದೆ ಒಣಗಿಸಿ ಅಕ್ಕಿ ಮಾಡಿದರೆ ಅದು ಬೆಳ್ತಿಗೆ ಅಕ್ಕಿಯಾಗುತ್ತದೆ. ಬೆಳ್ತಿಗೆ ಅಕ್ಕಿ ಮಾಡಬೇಕಾದರೆ ಬೆಳ್ಳನೆಯ ಉತ್ತಮ ತಳಿಯ ಬತ್ತವನ್ನು ಆಯ್ಕೆ ಮಾಡುತ್ತಾರೆ. ಬತ್ತ ಕುಟ್ಟುವ ಸಂದರ್ಭದಲ್ಲಿ ಹಿಂದಿನ ದಿನ ಬತ್ತವನ್ನು ಭರಣಿಯಲ್ಲಿ ನೆನೆ ಹಾಕಿ ಅನಂತರ ದೊಡ್ಡ ಹಂಡೆಗೆ ತುಂಬಿಸಿ ಬೇಯಿಸುವರು. ಬೆಂದು ಬತ್ತ ಒಡೆಯಿತು ಎಂದು ತಿಳಿದಾಗ ಬೆಂಕಿಯನ್ನು ಆರಿಸಿ ಒಂದು ಎರಡು ಗಂಟೆಗಳ ಕಾಲ ಆರಲು ಬಿಟ್ಟು ಹಂಡೆಯಿಂದ ಹೊರಗೆ ಹಾಕುವರು. ಅನಂತರ ಅಂಗಳಕ್ಕೆ ಬಿಡಿಸಿ ಹರಡಿ ಒಣಗಿಸುವರು. ಸಾಮಾನ್ಯವಾಗಿ ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ಬತ್ತ ಕುಟ್ಟುವ ಕೆಲಸವನ್ನು ಕೃಷಿಕರು ಮಾಡುತ್ತಿದ್ದರು.

*ಜಿ.ಎ.ಎಸ್.*

**ಬತ್ತ-ಸತ್ಯ ಮತ್ತು ನಂಬಿಕೆ** ಹಿಂದೆ ಭಾರತ ದೇಶದ ಹಿಮಾಲಯ ಪರ್ವತ ಶ್ರೇಣಿಯ ವಾಯವ್ಯಭಾಗದ ತಪ್ಪಲುಗಳಲ್ಲಿ 'ಇಂಡಿಕಾ' ಎಂದು ಹೆಸರಿಸಲಾದ ಒಂದು ರೀತಿಯ ಕಾಡು ತಳಿಯ ಬತ್ತ ಬೆಳೆಯುತ್ತಿದ್ದಿತು. ಈ ತಳಿಗೆ ಹವಾಗುಣದ ವೈಪರೀತ್ಯಗಳನ್ನು ತಡೆದುಕೊಳ್ಳುವ ಸಾಮರ್ಥ್ಯವಿದ್ದಿತು. ಅಲ್ಲಿಂದ ಅದು ದೇಶದ ದಕ್ಷಿಣಭಾಗವನ್ನೊಳಗೊಂಡಂತೆ ಇತರ ಭಾಗಗಳಿಗೆ ವ್ಯಾಪಿಸಿತು. ಕ್ರಮೇಣ ಏಷ್ಯಾ ಖಂಡದ ಬೇರೆ ಬೇರೆ ಪ್ರದೇಶಗಳಲ್ಲಿ ಬತ್ತದ ಕೃಷಿ ಬಳಕೆಗೆ ಬಂದಿತು. ಕೃಷಿ ಮಾಡುವ ವಿಧಿವಿಧಾನಗಳು ಮಾತ್ರ ಆಯಾ ಪ್ರದೇಶದ ಜನರ ಅನುಭವಗಮ್ಯವಾದ ಕ್ರಮದಲ್ಲಿ ರೂಢಿಗತವಾಯಿತು. ಆದರೂ ಇಂದಿನ ದಿನಗಳಲ್ಲಿ ನಡೆಸಲಾಗುವ ಆಧುನಿಕ ತಾಂತ್ರಿಕ ಹಿನ್ನೆಲೆಯ ಬತ್ತದ ಕೃಷಿವಿಧಾನ ಕಡಲಮಾರ್ಗವಾಗಿ ಭಾರತಕ್ಕೆ ಬಂದಿತು. ಚೀನಾದೇಶದಲ್ಲಿ ಕ್ರಿ.ಪೂ. 2500ರ ಹೊತ್ತಿಗೇ ಬತ್ತದ ಕೃಷಿ ಮಾಡಲಾಗುತ್ತಿತ್ತು.

ಬೈಬಲಿನಲ್ಲಿ ಬತ್ತದ ಉಲ್ಲೇಖವಿಲ್ಲ, ಎಂದರೆ ಯೇಸುಕ್ರಿಸ್ತನ ಕಾಲಕ್ಕೆ ಬತ್ತ ಆ ಪ್ರದೇಶವನ್ನು ತಲಪಿರಲಿಲ್ಲ. ಅಲೆಕ್ಸಾಂಡರ್ ಬತ್ತವನ್ನು ತನ್ನ ಜತೆ ಕೊಂಡೊಯ್ದಿದ್ದ ಎನ್ನಲಾಗುತ್ತದೆ. ಅವನ ಗುರು ಅರಿಸ್ಟಾಟಲ್ ಬತ್ತದ ಕುರಿತು ಅಧ್ಯಯನ ನಡೆಸಿದ ಮೊದಲ ಯುರೋಪಿಯನ್. ಆತ ಅದನ್ನು ಒರೈಸೋನ್ ಎಂದು ಕರೆದ. ಅರಬ್ ವ್ಯಾಪಾರಿಗಳು ಬತ್ತವನ್ನು ಇರಾನ್, ಈಜಿಪ್ಟ್ ದೇಶಗಳಿಗೆ ತಲುಪಿಸಿದರು. ಅಲ್ಲಿಂದ ಸ್ಪೈನ್, ಇಟಲಿ ಮೊದಲಾದ ಯೂರೋಪಿಯನ್ ರಾಷ್ಟ್ರಗಳಿಗೆ ಬತ್ತ ಪಯಣಿಸಿತು. 1609ರಲ್ಲಿ ಅಮೆರಿಕಾದ ವರ್ಜೀನಿಯದಲ್ಲಿ ಮೊದಲು ಬತ್ತ ಬೆಳೆಯಲಾಯಿತು. ಕ್ರಿ.ಶ. 1700ರಲ್ಲಿ ರಷ್ಯಾದ ಒಂದನೇ ಪೀಟರ್ ಬತ್ತದ ಕೃಷಿ ಆರಂಭಿಸಿದನಂತೆ. ಆ ಕಾಲದಲ್ಲಿ ರಾಜ್ಯವಾಳುತ್ತಿದ್ದ ಶುನ್‌ನಂಗ್ ತನ್ನ ಪ್ರಜೆಗಳಿಗೆ ಐದು ಧಾನ್ಯಗಳನ್ನು ಕೃಷಿ ಮಾಡುವ ವಿದ್ಯೆ ಕಲಿಸಿದ್ದನಂತೆ. ಬತ್ತ ಅದರಲ್ಲೊಂದು ಧಾನ್ಯವಾಗಿದ್ದಿತು.

ಸಮುದ್ರಮಾರ್ಗವಾಗಿ ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದ ಪ್ರಾಚೀನಕಾಲದಲ್ಲಿ ಹಡಗುಗಳ ಮೂಲಕ ಜಗತ್ತಿನ ಎಲ್ಲೆಡೆ ಸಂಚರಿಸುತ್ತಿದ್ದ

ನಾವಿಕರು ಬತ್ತವನ್ನು ಪ್ರಪಂಚದ ಎಲ್ಲ ಕಡೆಗಳಿಗೂ ತಲುಪಿಸುವ ಕೆಲಸ ಮಾಡಿದರು. ಪ್ರಯೋಜನಗಳ ಕುರಿತು ಸರಿಯಾಗಿ ತಿಳಿದಿರದಿದ್ದರೂ ಜನ ಅದಕ್ಕೆ ವಿನಿಮಯವಾಗಿ ಚಿನ್ನ, ಬೆಳ್ಳಿಗಳಂತಹ ಅಮೂಲ್ಯ ವಸ್ತುಗಳನ್ನು ನೀಡುತ್ತಿದ್ದರು. ಎಂದರೆ ಅವರಿಗೆ ಅದು ಅಪೂರ್ವ ಮತ್ತು ಅಗತ್ಯ ವಸ್ತು ಎನ್ನುವುದಷ್ಟೇ ಗೊತ್ತಿದ್ದಹಾಗೆ ತೋರುತ್ತದೆ. ಭಾರತಕ್ಕೊಂದು ಜಲಮಾರ್ಗವನ್ನು ಕಂಡುಹಿಡಿಯುವ ಯುರೋಪಿಯನ್ ಪ್ರಯತ್ನಗಳಿಗಿಂತಲೂ ಮೊದಲೇ ತಲೆಹೊರೆಯಾಗಿ, ನೆಲಮಾರ್ಗವಾಗಿ ಸಂಬಾರವಸ್ತುಗಳಂತೆ ಬತ್ತವೂ ಸಾಗಾಣಿಕೆಯಾಗುತ್ತಿದ್ದಿರಬಹುದು.

ಬತ್ತದ ಉದ್ಭವ ಹೇಗಾಯಿತು ಎನ್ನುವುದರ ಕುರಿತು ಹಲವು ಜನಪದೀಯ ಕಥೆಗಳು ಪ್ರಚಲಿತವಾಗಿವೆ. ಜಪಾನೀ ನಂಬಿಕೆಯಂತೆ ಸ್ವರ್ಗವಾಸಿಯಾದೊಂದು ಹಂಸ ಸೂರ್ಯದೇವನಿಗೆ ಬತ್ತದ ಬೀಜವನ್ನು ಕೊಡುತ್ತದೆ. ಅವನು ಅದನ್ನು ಬಿತ್ತಿ ಬೆಳೆಸಿ ಬತ್ತದ ಕೃಷಿಗೆ ಮೊದಲಿಗನಾಗುತ್ತಾನೆ. ಈ ಸ್ವರ್ಗದ ಬೆಳೆಯ ಮೊದಲ ಫಲವನ್ನು ನಿನಿಶಿ ರಾಜಕುಮಾರನಿಗೆ ಕೊಟ್ಟು ಅದನ್ನು ಅಷ್ಟದ್ವೀಪಗಳ (ಜಪಾನ್) ನಾಡಿಗೆ ಕೊಂಡೊಯ್ಯುವಂತೆ ಆಜ್ಞಾಪಿಸುತ್ತಾನೆ. ಹೀಗೆ ನಿನಿಶಿ ರಾಜಕುಮಾರನ ಮೂಲಕ ಬತ್ತ ಸ್ವರ್ಗದಿಂದ ಭೂಮಿಗೆ ಇಳಿದು ಬರುತ್ತದೆ.

ತಾಯ್ ನಿವಾಸಿಗಳು ಇದರ ದ್ರಷ್ಟಾರ ವಿಷ್ಣುದೇವ ಎಂಬುದಾಗಿ ನಂಬುತ್ತಾರೆ. ವಿಷ್ಣು ಮಳೆದೇವರಾದ ಇಂದ್ರನೊಡನೆ ಭೂವಾಸಿಗಳಾದ ಮನುಷ್ಯರಿಗೆ ಬತ್ತದ ಕೃಷಿ ಮಾಡುವ ವಿಧಾನವನ್ನು ಕಲಿಸಿಕೊಡುವಂತೆ ಹೇಳುತ್ತಾನೆ. ಅದರಂತೆ ಇಂದ್ರ ಈ ವಿದ್ಯೆಯನ್ನು ಮನುಷ್ಯರಿಗೆ ಹೇಳಿಕೊಡುತ್ತಾನೆ.

ಅರುಣಾಚಲ ಪ್ರದೇಶದ ಜನರಲ್ಲಿ ವಾಸ್ತವಕ್ಕೆ ಹತ್ತಿರವಾದ ನಂಬಿಕೆಯೊಂದಿದೆ. ಅಲ್ಲಿನ ಎಲೋಂಗ್ ಗ್ರಾಮದಲ್ಲಿಯ ಒಬ್ಬ ಮೂಲನಿವಾಸಿ ಹೆಂಗಸು ಬತ್ತದ ಕೃಷಿಯಲ್ಲಿ ತೊಡಗಿದ್ದಳು. ಅಲ್ಲಿಯ ಒಂದು ದೇವಾಲಯದಲ್ಲಿ ಈ ಹೆಂಗಸಿನ ಚಿತ್ರವನ್ನು ಬರೆಯಲಾಗಿದೆಯಂತೆ.

ಫಿಲಿಫೈನ್ಸ್ ಜನರಲ್ಲಿ ಪ್ರಚಲಿತವಾಗಿರುವ ಕಥೆ ಇದಕ್ಕಿಂತ ಭಿನ್ನವೂ, ಮನುಷ್ಯ ಜೀವನಕ್ಕೆ ಹತ್ತಿರವಾದದ್ದೂ ಆಗಿದೆ. ಅಗಾಮಿ ಎಂಬಾಕೆ ಅತ್ಯಂತ ದರಿದ್ರ ಕುಟುಂಬಕ್ಕೆ ಸೇರಿದ ಒಬ್ಬ ಹೆಣ್ಣು ಮಗಳು. ಅವರ ಕುಟುಂಬ ತಲೆತಲಾಂತರದಿಂದ ಊರ ಸಿರಿವಂತರೊಬ್ಬರ ಮನೆಯಲ್ಲಿ ಜೀತದಾಳುಗಳಾಗಿ ಬದುಕುತ್ತಿದ್ದರು. ಅಗಾಮಿಯ ತಾಯಿ ಮೊದಲೇ ತೀರಿಹೋಗಿದ್ದಳು. ತಂದೆ ಜೀತದಾಳಾಗಿದ್ದ. ಒಂದು ದಿನ ಆಕೆ ಕಾಡಿನಿಂದ ಹರಿದುಬರುವ ಝರಿಯೊಂದರ ನೀರಿನಲ್ಲಿ ಕಾಲು ಇಳಿಬಿಟ್ಟು ಕುಳಿತುಕೊಂಡು ತನ್ನ ತಂದೆಯ ಕಷ್ಟಜೀವನವನ್ನು ನೆನೆದು ಕಣ್ಣೀರಿಡುತ್ತಾಳೆ. ಆಗ ನೀರಿನಲ್ಲಿ ಚಿನ್ನದ ತೆನೆಯೊಂದು ತೇಲಿಬರುತ್ತದೆ. ಅವಳು ಅದನ್ನು ಮಣ್ಣಿನಲ್ಲಿ ಹೂಳುತ್ತಾಳೆ. ಅಲ್ಲಿ ಅದು ಬೆಳೆದು ಮತ್ತಷ್ಟು ಚಿನ್ನದ ತೆನೆಗಳು ದೊರೆಯುತ್ತವೆ. ತಂದೆ ಮಗಳು ಇಬ್ಬರೂ ಸೇರಿ ಇನ್ನಷ್ಟು ವ್ಯಾಪಕವಾಗಿ ಈ ಚಿನ್ನದ ಬೆಳೆಯನ್ನು ಮಾಡುತ್ತಾರೆ. ಇದನ್ನು ಉಪಯೋಗಿಸಿಕೊಂಡು ಧನಿಕನ ಜೀತದಿಂದ ಬಿಡುಗಡೆಗೊಂಡು ಆ ಕುಟುಂಬ ಸ್ವತಂತ್ರವಾಗುತ್ತದೆ. ಈ ಚಿನ್ನದ ತೆನೆಯೇ ಬತ್ತದ ತೆನೆ.

ಫಿಲಿಫೈನ್ಸಿನ ಮೂಲನಿವಾಸಿಗಳಾದ ಇಗಾರೋಟುಗಳು ಹೇಳುವ ಕಥೆ ದೇವರ ದಯೆಯ ಕುರಿತದ್ದಾಗಿದೆ. ಮೀನುಹಿಡಿಯುವ ಮುಕ್ಕುವ ಜನಾಂಗದ ಕಷ್ಟಮಯ ಜೀವನವನ್ನು ಮನಗಂಡ ದೇವರು ಅವರಿಗೆ ಚಿನ್ನ ಬೆಳೆಯುವ ದ್ವೀಪಗಳ ಕುರಿತು ತಿಳಿಸಿಕೊಟ್ಟರು. ಅವರು ದೋಣಿಯ ಮೂಲಕ ಅಲ್ಲಿಗೆ ಹೋಗಿ ನೋಡಿದರೆ ಅದು ಸೂರ್ಯಪ್ರಕಾಶಕ್ಕೆ ಹೊಳೆಯುವ ಒಂದು ರೀತಿಯ ಧಾನ್ಯವಾಗಿದ್ದಿತು. ಅದುವೇ ಬತ್ತದ ಬೆಳೆ. ಮುಕ್ಕುವ ಜನಾಂಗ ಇಂದಿಗೂ ಅಕ್ಕಿಯ ಅನ್ನವನ್ನು ಉಂಡು ಕಡಲಿಗೆ ಹೋಗುತ್ತಾರೆ.

**ಸರ್ವಾದರಣೀಯವಾದ ಬತ್ತ :** ಬತ್ತಕ್ಕೆ ತುಂಬ ಅದರಣೀಯವಾದ, ದೈವಿಕವಾದ ಸ್ಥಾನವಿದೆ. ಈ ನಂಬಿಕೆಗೆ ಲಕ್ಷಾಂತರ ವರ್ಷಗಳ ಇತಿಹಾಸವಿದೆ. ಜಪಾನಿನಲ್ಲಿ ಬತ್ತಕ್ಕೆ ಬಹಳ ಗೌರವದ ಸ್ಥಾನವಿದೆ. ಅಲ್ಲಿ ಬಹಳ ಕಡೆ ಬತ್ತದ ದೇವತೆಯಾದ 'ಜಿಸೋ' ವಿನ ದೇವಾಲಯಗಳನ್ನು ಕಾಣಬಹುದು. ಈ ದೇವತೆಯ ಕಾಲುಗಳು ಕೆಸರುಮೆತ್ತಿಕೊಂಡ ಸ್ಥಿತಿಯಲ್ಲಿವೆ. ಒಮ್ಮೆ ಜಿಸೋದೇವರ ಭಕ್ತನಾದ ಒಬ್ಬ ಕೃಷಿಕ ರೋಗಪೀಡಿತನಾದ. ಅವನಿಗಾಗಿ ಜಿಸೋ ಇರುಳಿಡೀ ತನ್ನ ಭಕ್ತನ ಗದ್ದೆಯಲ್ಲಿ ದುಡಿದನಂತೆ. ಅದರ ಕುರುಹಾಗಿ ಕಾಲುಗಳಿಗೆ ಕೆಸರು ಮೆತ್ತಿಕೊಂಡಿತು. ಅದುವೇ ಜಿಸೋ ದೇವತೆಯ ಕಾಲುಗಳಲ್ಲಿರುವ ಕೆಸರಿನ ಗುರುತು. ಜಪಾನಿನಲ್ಲಿ ನಾಟಿ ಕಳೆದ ಮೇಲೆ ಕೃಷಿಕರು ತಾವು ಪರಸ್ಪರ ಹಾಗೂ ಜಿಸೋದೇವತೆಯ ಮೇಲೂ ಕೆಸರೆರಚುವ ಸಂಪ್ರದಾಯವಿದೆ. ಹಾಗೆ ಮಾಡಿದಾಗ ಜಿಸೋ ತಮ್ಮ ಬತ್ತದ ಬೆಳೆಯನ್ನು ಸಂರಕ್ಷಿಸುತ್ತಾನೆ. ಎಂದು ಅವರು ನಂಬುತ್ತಾರೆ. ಬತ್ತಕ್ಕೆ ಮನೆಯ ಹಿರಿಯಸದಸ್ಯನ ಸ್ಥಾನವಿದೆ. ಬತ್ತವನ್ನು ಅಸಡ್ಡೆಯಿಂದ ಕಾಣುವ ಅಥವಾ ಎಸೆದುಬಿಡುವವನು ಕುರುಡನಾಗುತ್ತಾನೆ ಇಲ್ಲವೆ ಸತ್ತ ಬಳಿಕ ನರಕಕ್ಕೆ ಹೋಗುತ್ತಾನೆ ಎನ್ನುವ ನಂಬಿಕೆಯಿದೆ. ಬತ್ತದ ಹುಲ್ಲಿನಿಂದ ಹೆಣೆಯಲಾದ ಹಗ್ಗ ಜಪಾನೀಯರ ಹೊಸವರ್ಷದ ಪ್ರತೀಕವಾಗಿದೆ. ಪ್ರತಿ ತಿಂಗಳ 1, 15, 28 ಈ ದಿನಗಳಲ್ಲಿ ಜೆಕಿ-ಹಾನ್ ಎಂಬುದಾಗಿ ಕರೆಯಲಾಗುವ ಕೆಂಪು ಬತ್ತ ಮತ್ತು ಬೀನ್ಸ್ ಬೆರೆಸಿ ಅಡುಗೆ ಮಾಡಿ ಉಣ್ಣುವುದು ಅವರ ಸಂಪ್ರದಾಯ. ಚೀನದಲ್ಲೂ ಇಂಥದೇ ಆಚರಣೆಯಿದೆ.

ಕ್ಯಾಲಿಫೋರ್ನಿಯದ ಲೂಸಿಯಾದಲ್ಲಿನ ಕ್ರೌಲಿಯಲ್ಲಿ ಅಂತಾರಾಷ್ಟ್ರೀಯ ಬತ್ತದಉತ್ಸವದಲ್ಲಿ ರಾಣಿಯನ್ನು ಆರಿಸಲಾಗುತ್ತದೆ. ಕೊರಿಯದಲ್ಲಿ ಪ್ರತಿಯೊಂದು ಕುಟುಂಬವೂ ತಮ್ಮಲ್ಲಿನ ಪಾತ್ರೆಯೊಂದರ ತುಂಬ ಬತ್ತದ ಬೀಜವನ್ನು ಇಟ್ಟುಕೊಳ್ಳುವುದಿದೆ. ಇದು ಎಷ್ಟು ಶ್ರದ್ಧೆಯಿಂದ ಆಚರಿಸಲಾಗುತ್ತದೆ ಎಂದರೆ ಅದನ್ನು ಸ್ಪರ್ಶಿಸುವುದು ಕೂಡ ನಿಷಿದ್ಧ.

ಭಾರತದಲ್ಲಿ ಯಾವ ಪೂಜೆಯೂ ಬತ್ತವಿಲ್ಲದೆ ಪರಿಪೂರ್ಣವಾಗುವುದಿಲ್ಲ. ಮದುವೆಯಲ್ಲಂತೂ ಬತ್ತ ಪ್ರಮುಖಪಾತ್ರ ವಹಿಸುತ್ತದೆ. ವಾಸ್ತವವಾಗಿ ಇದೊಂದು ಸಾಂಕೇತಿಕಕ್ರಿಯೆ. ತೆನೆಯಲ್ಲಿನ ಬತ್ತದ ಕಾಳುಗಳಂತೆ ನಾವು ಒಂದಾಗಿ ಬದುಕು ಸಾಗಿಸುತ್ತೇವೆ ಎನ್ನುವುದನ್ನು ಇದು ಸೂಚಿಸುತ್ತದೆ.

**ಬತ್ತದೇವತೆ ಮತ್ತು ತಾಯಿಬತ್ತ :** ಬರ್ಮಾ ದೇಶದ ಕಾನೇ ಮೂಲನಿವಾಸಿಗಳು ಅಲ್ಲಿ ಬತ್ತ ದೈವವಿದೆ ಎಂದು ನಂಬುತ್ತಾರೆ. ಅವರು ಆ ದೇವತೆಯನ್ನು ಕೀಲಾ ಎಂಬ ಹೆಸರಿನಿಂದ ಕರೆಯುತ್ತಾರೆ. ಸುಮಾತ್ರಾ, ಬಾಲಿ ದ್ವೀಪಗಳ ಜನರು ಬತ್ತವನ್ನು ತಾಯಿಯೆಂದು ಪರಿಗಣಿಸುತ್ತಾರೆ. ಬೆಳೆ ಕೊಯ್ಯುವುದಕ್ಕೆ ಮೊದಲು ಅತ್ಯಂತ ಒಳ್ಳೆಯ ಕದಿರುಗಳನ್ನು ತೆಗೆದು

ಅದಕ್ಕೆ 'ದೇವಿಶ್ರೀ' ಎಂಬ ಹೆಸರನ್ನು ಕೊಟ್ಟು ಅವುಗಳನ್ನು ತಲೆಯ ಮೇಲೆ ಹೊತ್ತು ನರ್ತಿಸುತ್ತಾರೆ. ಆ ಬಳಿಕವಷ್ಟೇ ಅವರು ಕೊಯ್ಲಿಗಾಗಿ ಬತ್ತದ ಗದ್ದೆಗಳಿಗೆ ಹೋಗುತ್ತಾರೆ.

ಬಾಲಿದ್ವೀಪದ ಕೆಲ ಕೃಷಿಕರು 'ಪಾಡಿಬಾಲಿ' ಎಂಬ ನಾಟಿ ಬತ್ತದ ತಳಿಯೊಂದನ್ನು ಇಂದಿಗೂ ಕೃಷಿ ಮಾಡುತ್ತಾರೆ. ಈ ಬತ್ತದ ಪೈರು ಒಂದಾಳು ಎತ್ತರವಿರುತ್ತದೆ. ಬೆಳೆಕಟಾವಿಗೆ ಅವರು 'ಆನಿ-ಆನಿ' ಎನ್ನುವ ಪುಟ್ಟ ಕತ್ತಿಯನ್ನು ಉಪಯೋಗಿಸುತ್ತಾರೆ. ಕೊಯ್ಲಿಗೆ ಗದ್ದೆಗಿಳಿಯುವಾಗ ಕತ್ತಿಯನ್ನು ಕಂಡ ಬತ್ತದ ಪೈರು ಭಯಗೊಳ್ಳದಿರುವುದಕ್ಕಾಗಿ ಅವರು ತಮ್ಮಲ್ಲಿರುವ ಕತ್ತಿಯನ್ನು ಅಡಗಿಸಿಟ್ಟುಕೊಂಡಿರುತ್ತಾರೆ. ವಿಯೆಟ್ನಾಮೀ ಕೃಷಿಕರು ಕುಟುಂಬದ ಅತ್ಯಂತ ಕಿರಿಯ ತಾಯಿಯಲ್ಲಿ (ಹೆಂಗಸು) ಬತ್ತ ವಾಸಿಸುತ್ತದೆ ಎಂಬುದಾಗಿ ನಂಬುತ್ತಾರೆ.

ಹಿಂದೆ ಬತ್ತವನ್ನು ಈಗಿನಂತೆ ವ್ಯವಸ್ಥಿತವಾಗಿ ಕೃಷಿ ಮಾಡುತ್ತಿರಲಿಲ್ಲ. ಮಾತ್ರವಲ್ಲ ಅದರ ಗಾತ್ರ, ರೂಪವೂ ಈಗಿನಂತಿರಲಿಲ್ಲ. ಅದು ಗುಂಡಗಿದ್ದು ತೆಂಗಿನಕಾಯಿಯಷ್ಟು ದೊಡ್ಡದಿದ್ದಿತು. ಪಕ್ವವಾಗಿ ಬೆಳೆದಾಗ ಅವುಗಳು ಉರುಳುರುಳುತ್ತ ಕೃಷಿ ಸ್ಥಳಗಳಿಂದ ರೈತರ ಗುಡಿಸಲುಗಳಿಗೆ ಬರುತ್ತಿದ್ದುವಂತೆ. ಬತ್ತವನ್ನು ಸ್ವಾಗತಿಸುವುದಕ್ಕಾಗಿ ರೈತರು ತಮ್ಮ ಗುಡಿಸಲುಗಳನ್ನು ಸಿಂಗರಿಸುತ್ತಿದ್ದರಂತೆ. ಒಮ್ಮೆ ಸೋಮಾರಿಯಾದ ವಿಯೆಟ್ನಾಮೀ ರೈತ ತನ್ನ ಗುಡಿಸಲನ್ನು ಅಲಂಕರಿಸಲು ಮರೆತು ಬಾಗಿಲು ಹಾಕಿ ಮಲಗಿಬಿಟ್ಟಿದ್ದನಂತೆ. ಗುಡಿಸಲಿಗೆ ಬಂದ ಬತ್ತದ ಮಣಿಗಳಿಗೆ ಅತೀವವಾದ ಕೋಪಬಂದಿತು. ಅದರ ತಾಪದಿಂದ ಸಂಕುಚಿತಗೊಂಡು ಇಂದಿನ ಈ ರೂಪವನ್ನು ಹೊಂದಿದುವು. ಮಾತ್ರವಲ್ಲ, ಅವುಗಳು ತಮಗೆತಾವೇ ಮನೆಗಳಿಗೆ ಬರುವ ಸಂಪ್ರದಾಯ ನಿಂತುಹೋಯಿತು.

**ಬತ್ತದ ಬಣ್ಣ :** ಬಿಳಿ, ಕಪ್ಪು, ಕೆಂಪು ಎಂಬೀ ಬಣ್ಣಗಳಲ್ಲಿ ಬತ್ತದ ಹೊರಸಿಪ್ಪೆ ಕಾಣುತ್ತದೆ. ಬತ್ತಕ್ಕೆ ಈ ಬಣ್ಣಸಿಕ್ಕಿದ ಕುರಿತ ಕಥೆಗಳು ಕೆಲವು ದೇಶದಲ್ಲಿ ಪ್ರಚಲಿತವಿದೆ. ಜಪಾನೀ ಕಥೆಯೊಂದು ಹೀಗಿದೆ : ಬತ್ತದ ಸಸಿಗಳು ಎಲ್ಲ ಕಾಲದಲ್ಲೂ ಇರುತ್ತಿದ್ದರೂ ಅವು ನಿಶ್ಚಿತಕಾಲದಲ್ಲಿ ಹೂವಾಗುವ, ಪೈರಾಗುವ ರೀತಿಯಲ್ಲಿರಲಿಲ್ಲ. ಒಮ್ಮೆ ಕುಯಾನ್‌ಯಿನ್‌ಎಂಬ ದೇವತೆ ತನ್ನ ಮೊಲೆಹಾಲನ್ನು ಬತ್ತದ ಸಸಿಗಳಿಗೆ ಚೆಲ್ಲಿದಳು. ಆಗ ಕದಿರುಗಳಲ್ಲೆಲ್ಲ ಬತ್ತದ ಮಣಿಗಳು ತುಂಬಿದುವು. ಬಳಿಕ ಆ ದೇವರೆ ತನ್ನ ಮೊಲೆಗಳನ್ನು ಮತ್ತಷ್ಟು ಬಲವಾಗಿ ಒತ್ತಿದಳು. ಆಗ ಹಾಲಿಗೆ ಬದಲಾಗಿ ನೆತ್ತರು ಬರುತ್ತದೆ. ಹೀಗಾದ ಕಾರಣ ಬತ್ತಕ್ಕೆ ಕೆಂಪು ಬಣ್ಣ ಬಂದಿತು.

ಬಾಲಿದ್ವೀಪದಲ್ಲಿ ಇನ್ನೊಂದು ಕಥೆ ಪ್ರಚಾರದಲ್ಲಿದೆ. ಬತ್ತಾರಾಸಿವಾ ಎನ್ನುವ ದೇವತೆ ಒಮ್ಮೆ ಪಕ್ಷಿಯೊಂದಕ್ಕೆ ಸ್ವಲ್ಪ ಬತ್ತವನ್ನು ಕೊಟ್ಟು ಅವುಗಳನ್ನು ಭೂಮಿಗೆ ಕೊಂಡೊಯ್ಯುವಂತೆ ಹೇಳಿತು. ಪಕ್ಷಿ ಅವುಗಳ ಬಣ್ಣವನ್ನು ಅನುಸರಿಸಿ ಬಿಳಿ, ಕಪ್ಪು, ಕೆಂಪು, ಹಳದಿ - ಹೀಗೆ ವರ್ಗೀಕರಿಸಿ ಭೂಮಿಯ ಕಡೆಗೆ ಹೊರಟಿತು. ಮಾರ್ಗಮಧ್ಯದಲ್ಲಿ ಅದಕ್ಕೆ ಅಸಾಧ್ಯವಾದ ಹಸಿವು ಉಂಟಾಯಿತು. ಪಕ್ಷಿ ಹಳದಿ ಬಣ್ಣದ ಬತ್ತವನ್ನು ತಿಂದು ತನ್ನ ಹಸಿವನ್ನು ನೀಗಿಸಿಕೊಂಡಿತು. ಉಳಿದ ಮೂರು ಬಣ್ಣಗಳ ಬತ್ತ ಭೂಮಿಗೆ ತಲುಪಿತು. ಹೀಗೆ ಹಳದಿಬಣ್ಣದ ಬತ್ತ ಎಂದೆಂದಿಗೂ ಇಲ್ಲವಾಯಿತು.

**ಅದ್ಭುತ ಶಕ್ತಿಯ ಧಾನ್ಯ :** ಎಂತಹ ಪ್ರತಿಕೂಲ ಹವಾಗುಣದಲ್ಲೂ ಬೆಳೆಯುವ ಅದ್ಭುತ ಸಸ್ಯ ಬತ್ತ. ಒಣಭೂಮಿ, ಜವುಗು - ಹೀಗೆ ಯಾವುದೇ ಕಡೆ ಬತ್ತ ಬೆಳೆಯುತ್ತದೆ. ಅಷ್ಟು ಮಾತ್ರವಲ್ಲ. ಅದು ಔಷಧೀಯ ಗುಣವುಳ್ಳ ಧಾನ್ಯವೂ ಹೌದು. ಬತ್ತದ ಅದ್ಭುತ ಗುಣಗಳನ್ನು ವರ್ಣಿಸುವ ಅನೇಕ ಕಥೆಗಳಿವೆ. ಸಹಸ್ರಾರು ವರ್ಷಗಳ ಹಿಂದೆ ಮಹಾಪ್ರಳಯವಾದಾಗ ಜಗತ್ತಿನ ಜೀವಜಾಲಗಳೆಲ್ಲ ನಾಶವಾದವು. ಮನುಷ್ಯ ಮಾತ್ರವೆ ಬದುಕಿ ಉಳಿದವನು. ಅವನ ಜತೆಗೆ ಎರಡು ಬಗೆಯ ಧಾನ್ಯಗಳು ಉಳಿದುಕೊಂಡಿದ್ದುವು.

ಬತ್ತ ಮತ್ತು ಬಾರ್ಲಿ. ಎರಡಕ್ಕೂ ಗಟ್ಟಿಯಾದ ಹೊರಹೊದಿಕೆಯಿದ್ದ ಕಾರಣ ಅವೆರಡೂ ಉಳಿದುಕೊಂಡುವಂತೆ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಷಷ್ಟಿಕ' ಎಂಬ ಹೆಸರಿನ ಅರುವತ್ತು ದಿನಗಳಲ್ಲಿ ಬೆಳೆಯುವ ಒಂದು ಜಾತಿಯ ಬತ್ತವನ್ನು ಉಲ್ಲೇಖಿಸಲಾಗಿದೆ. ಈಗ ಇದನ್ನು 'ಸಾತಿ' ಎಂದು ಕರೆಯುತ್ತಾರೆ. ಈ ಸಾತಿ ಬತ್ತದ ಔಷಧೀಯ ಗುಣಗಳ ಕುರಿತು ಒಂದು ಕಥೆಯಿದೆ : ಗೌತಮಬುದ್ಧನಿಗೆ ನಾಗಾರ್ಜುನ ಎಂಬೊಬ್ಬ ಶಿಷ್ಯನಿದ್ದ. ಅವನೊಬ್ಬ ರಸವಿದ್ಯೆ ಬಲ್ಲವನಾಗಿದ್ದ. ವಿಶೇಷವಾದ ರೀತಿಯಲ್ಲಿ ತಯಾರಿಸಲಾದ ಒಂದು ವಿಧದ ಅಂಟನ್ನು ಅಂಗಾಲಿಗೆ ಹಚ್ಚಿ ಮಾಯವಾಗುವ ವಿದ್ಯೆ ತಿಳಿದಿರುವ ಒಬ್ಬ ಸನ್ಯಾಸಿಯ ಬಳಿ ಶಿಷ್ಯತ್ವವನ್ನು ಸ್ವೀಕರಿಸಿ ಈ ಮಾಯವಾಗುವ ವಿದ್ಯೆಯನ್ನು ಕಲಿಯಲು ಮುಂದಾದ. ಹೇಗೊ ಅದನ್ನು ತಿಳಿದುಕೊಂಡು ಗುರುವಿಗೆ ತಿಳಿಯದಂತೆ ಅಂಟನ್ನು ತಯಾರಿಸಿ ಅಂಗಾಲಿಗೆ ಹಚ್ಚಿ ಮಾಯವಾದ. ಆದರೆ ಸ್ವಲ್ಪ ಹೊತ್ತಿನಲ್ಲಿಯೆ ಅವನು ಭೂಮಿಗೆ ಬಿದ್ದ. ಇದು ಅನೇಕಬಾರಿ ಪುನರಾವರ್ತನೆಯಾಯಿತು. ಮೈಕೈಗೆಲ್ಲ ಗಾಯಗಳಾದುವು. ಕೊನೆಗೆ ನಾಗಾರ್ಜುನನು ಗುರುವಿನಲ್ಲಿ ತಪ್ಪೊಪ್ಪಿಕೊಂಡು ಅದರ ರಹಸ್ಯವನ್ನು ಕೇಳಿದ. ಗುರು ಆ ಅಂಟಿಗೆ ಸೇರಿಸಬೇಕಾಗಿದ್ದ ಒಂದು ವಸ್ತುವನ್ನು ಕುರಿತು ಹೇಳುತ್ತಾನೆ ಅದೇ ಸಾತಿ ಅಕ್ಕಿಯ ಹಿಟ್ಟು.

**ಸ್ವಾದಿಷ್ಟವಾದ ಆಹಾರ :** ರಾಸಾಯನಿಕಗಳನ್ನು ಬಳಸಿದ ಆಹಾರವಸ್ತುಗಳನ್ನು ಸೇವಿಸುವ ಈಗಿನ ತಲೆಮಾರಿನವರಿಗೆ ಅಕ್ಕಿಯ ನಿಜವಾದ ರುಚಿ ಗೊತ್ತಿರಲು ಸಾಧ್ಯವಿಲ್ಲ. ಸತ್ತ್ವಯುತವಾದ ಕೆಸರುಗದ್ದೆಯಲ್ಲಿ ಬೆಳೆಸಲಾದ ಬತ್ತದ ಅನ್ನದ ರುಚಿಯೇ ಬೇರೆ. ಇದರ ಕುರಿತು ಕಥೆಯೊಂದಿದೆ. ಒಮ್ಮೆ ಕಾಡಿಗೆ ಹೋಗಿದ್ದ ಬೇಟೆಗಾರರಿಗೆ ಬಹಳ ಹಸಿವಾಗುತ್ತದೆ. ಅಲ್ಲೊಂದು ಗುಡಿಸಲಿನಲ್ಲಿ ಬಾಳೆಎಲೆಯ ಮೇಲೆ ಅವರಿಗೆ ಅಕ್ಕಿಯ ಅನ್ನ ಬಡಿಸಲಾಗುತ್ತದೆ. ಅನ್ನ ಅವರಿಗೆ ಹುಳುಗಳಂತೆ ತೋರಿ ಅದನ್ನು ಎಸೆದು ಮತ್ತೆ ಕಾಡಿಗೆ ಹೋಗುತ್ತಾರೆ. ಹಲವು ದಿವಸಗಳ ಕಾಲ ಕಾಡಿನಲ್ಲಿ ಅಂಡಲೆದ ಅವರಿಗೆ ತಿನ್ನಲು ಏನೂ ಸಿಕ್ಕದೆ ಇನ್ನೊಂದು ಗುಡಿಸಲಿಗೆ ಹೋಗುತ್ತಾರೆ. ಅಲ್ಲಿಯೂ ಅನ್ನದ ಸತ್ಕಾರ,ನಡೆಯುತ್ತದೆ. ಮೊದಲು ಹಿಂಜರಿದರೂ ಮತ್ತೆ ಸ್ವಲ್ಪ ಸ್ವಲ್ಪವಾಗಿ ತಿಂದಾಗ ಅದರ ಅದ್ಭುತ ರುಚಿಯ ಅರಿವಾಯಿತು. ಮತ್ತೆ ಮತ್ತೆ ಕೇಳಿ ಹಾಕಿಸಿಕೊಂಡು ಹೊಟ್ಟೆತುಂಬ ಉಂಡರಂತೆ. ಅಲ್ಲಿಂದ ಹಿಂದಿರುಗುವಾಗ ತಾವೂ ಆ ಬೆಳೆ ಬೆಳೆಸುವುದಕ್ಕಾಗಿ ಬತ್ತದ ಬೀಜವನ್ನು ಕೇಳಿ ಕೊಂಡೊಯ್ದರಂತೆ. ಬತ್ತಕ್ಕೆ ಮಲಯಾಳ ಭಾಷೆಯಲ್ಲಿ 'ನೆಲ್ಲ್' ಎಂದು ಅಕ್ಕಿಗೆ 'ಅರಿ' ಎಂದು ಹೆಸರಿದೆ. ಇದು ತಮಿಳು ಅಥವಾ ದ್ರಾವಿಡ ಮೂಲದ 'ಅರಿಸಿ'ಯಿಂದ ಬಂದಿತು. ಕೇರಳೀಯರ ಪ್ರಮುಖ ಆಹಾರ ಕುಚ್ಚಿಲಕ್ಕಿ, ಪಾಲಕ್ಕಾಡ್ ಜಿಲ್ಲೆಯ ಕುಟ್ಟನಾಡು ಕೇರಳದ ಬತ್ತದ ಕಣಜ ಎನ್ನುವ ಹಿರಿಮೆಗೆ ಪಾತ್ರವಾಗಿದೆ. ಕಣ್ಣೂರಿಗೆ ಹತ್ತಿರದ ಅರಳು ಇನ್ನೊಂದು ಬತ್ತ ಬೆಳೆಯುವ ಕೇಂದ್ರ. ಹಾಗೆಂದು ಇತರ ಕಡೆ ಬತ್ತ ಬೆಳೆಯುತ್ತಲೇ ಇಲ್ಲ ಎಂದಲ್ಲ. ಕೇರಳದ ಎಲ್ಲ ಜಿಲ್ಲೆಗಳಲ್ಲೂ

ಬತ್ತ ಬೆಳೆಯಲಾಗುತ್ತದೆ. ಪ್ರಾಯಶಃ ಇದಕ್ಕೆ ಕೇರಳದಲ್ಲಿ ದೊರೆಯುವ ಮಳೆ ಹಾಗೂ ನೀರಿನ ಸೌಕರ್ಯವೂ ಕಾರಣವಾಗಿರಬಹುದು.

*ಎಸ್.ಎಸ್.ಬಿ*

**ಬದನೆ** ಭಾರತ ಬದನೆ ಬೆಳೆಯುವುದರಲ್ಲಿ ಎರಡನೇ ಸ್ಥಾನದಲ್ಲಿದೆ. ಏಷ್ಯಾಖಂಡದ ಬಹುತೇಕ ಎಲ್ಲ ಭಾಗಗಳಲ್ಲೂ ಬದನೆಯನ್ನು ಬೆಳೆಯುತ್ತಾರೆ. ಇದನ್ನು ಎಲ್ಲಾ ಋತುಗಳಲ್ಲೂ ಎಲ್ಲ ತರಹದ ಮಣ್ಣುಗಳಲ್ಲೂ ಬೆಳೆಯಬಹುದು. ನೀರು ಬಸಿದುಹೋಗುವಂತಹ ಜೇಡಿಮಣ್ಣು ಈ ಬೆಳೆಗೆ ಯೋಗ್ಯವಾದುದು. ಇಳಿಜಾರು ಪ್ರದೇಶದಲ್ಲಿ ಬೇಸಗೆಯಲ್ಲಿ ಬೆಳೆಯುತ್ತಾರೆ. ಜೂನ್-ಜುಲೈ, ಅಕ್ಟೋಬರ್-ನವೆಂಬರ್ ಮತ್ತು ಜನವರಿ-ಫೆಬ್ರುವರಿ ತಿಂಗಳುಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.



**ತಳಿಗಳು :**

**ಮಳಾಪುರ :** ಇದು ಧಾರವಾಡದ ಸ್ಥಳೀಯ ತಳಿ. ಕಾಯಿಗಳು ದುಂಡಗೆ ಇದ್ದು, ನೇರಳೆ ಬಣ್ಣವನ್ನು ಹೊಂದಿರುತ್ತವೆ.

**ಮಟ್ಟಿಗುಳ್ಳ :** ಉಡುಪಿ ಜಿಲ್ಲೆಯ ಮಟ್ಟಿ ಎಂಬ ಪ್ರದೇಶದಲ್ಲಿ ಬೆಳೆಯುವ ಬದನೆಗೆ ಮಟ್ಟಿಗುಳ್ಳ ಎಂದು ಹೆಸರು. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇದನ್ನು ಬೆಳೆಯುವುದಿದೆ. ಇದು ಸ್ವಾಧಿಷ್ಟವಾಗಿದ್ದು ಪೌಷ್ಟಿಕಾಂಶದಿಂದ ಕೂಡಿದ್ದು ಆಕಾರದಲ್ಲಿ ಗುಂಡಗಿದ್ದು ಬೊಗಸೆ ತುಂಬ ಹಿಡಿಯದಷ್ಟು ಗಾತ್ರವಿರುತ್ತದೆ. ತೊಟ್ಟಿನ ಭಾಗದಲ್ಲಿ ಬಿಳಿ ಪಟ್ಟೆಗಳಿದ್ದು ಮುಳ್ಳುಗಳಿಂದ ಕೂಡಿರುತ್ತದೆ.

**ವೆಸ್ಟ್‌ಕೋಸ್ಟಕೌಂಡ್ :** ಈ ತಳಿಯು ಕರಾವಳಿ ಪ್ರದೇಶದಲ್ಲಿ ಕಂಡುಬರುತ್ತದೆ. ಕಾಯಿಗಳು ದುಂಡನೆಯ ಆಕಾರ ಹೊಂದಿದ್ದು ದೊಡ್ಡಗಾತ್ರ ಪಡೆದಿವೆ. ಇದು ದುಂಡಾಣು ಸೊರಗು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ.

**ಪೂಸಾಕ್ರಾಂತಿ :** ಕಾಯಿಗಳು ನೇರಳೆ ಬಣ್ಣ ಹೊಂದಿದ್ದು, ಅಂಡಾಕಾರದಲ್ಲಿವೆ.

**ಅರ್ಕಾಕೇಶವ್ :** ಹೆಚ್ಚು ಇಳುವರಿ ನೀಡುವ, ದುಂಡಾಣುರೋಗ ನಿರೋಧಕ ಶಕ್ತಿಯುಳ್ಳ ತಳಿ. ಗಿಡಗಳು ಪೊದೆಯಾಕಾರವಾಗಿ ಬೆಳೆಯುತ್ತವೆ. ನೇರಳೆ ವರ್ಣದ ಹೂಗಳನ್ನು, ಕೆಂಪು ನೇರಳೆ ವರ್ಣದ ಸ್ವಲ್ಪ ಉದ್ದನೆಯ ಗಾತ್ರದ ಕಾಯಿಗಳನ್ನು ಗೊಂಚಲುಗಳಲ್ಲಿ ಬಿಡುತ್ತದೆ. ಕಾಯಿಗಳು ಒಗರಾಗಿರದೆ ಅಡುಗೆಗೆ ಉತ್ತಮವಾಗಿವೆ.

**ಅರ್ಕಾನವನೀತ :** ಇದು ಸಂಕರಣ ತಳಿಯಾಗಿದೆ. ಕಾಯಿಗಳು ದುಂಡಾಗಿದ್ದು, ಕಪ್ಪುನೇರಳೆ ಬಣ್ಣವನ್ನು ಹೊಂದಿವೆ.

**ಕರಾವಳಿ ಬದನೆ :** ಇದರಲ್ಲಿ ನೀಲಗಿರಿ ಮತ್ತು ಪೇರಂಪಳ್ಳಿಎಂಬ ಎರಡು ಬಗೆಗಳಿವೆ.

**ಮುಸುಕು ಬದನೆ :** ಇದು ಅನೇಕ ವರ್ಷಗಳ ಕಾಲ ಫಸಲು ನೀಡುವ ಬದನೆ ಜಾತಿ. ಕಾಯಿ ಮೃದುವಾಗಿದ್ದು ಅಡುಗೆಗೆ ರುಚಿಕರವಾಗಿರುತ್ತದೆ. ಬಣ್ಣ ವಿಶಿಷ್ಟವಾಗಿರುತ್ತದೆ.

**ಕೊತ್ತಿತಲೆ ಬದನೆ :** ಬೆಂಗಳೂರಿನ ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ವರ್ಷಪೂರ್ತಿ ಫಸಲು ನೀಡುತ್ತದೆ. ಗಾತ್ರ ಬೆಕ್ಕಿನ ತಲೆಯಷ್ಟಿರುವುದರಿಂದ ಕೊತ್ತಿ ತಲೆ ಬದನೆ ಎಂದು ಕರೆಯುವರು.

**ಈರನಗೆರೆ ಬದನೆ :** ಮೈಸೂರಿನ ಮೂಲದ ತಳಿಯಾಗಿದ್ದು ತಿನ್ನಲು ರುಚಿಕರವಾಗಿರುತ್ತದೆ. ಕಡು ನೇರಳೆ ಬಣ್ಣ ಹೊಂದಿದ್ದು. ತೆಳ್ಳಗೆ ಚಿಕ್ಕ ಗಾತ್ರದಾಗಿದ್ದು ಗಿಡದ ತುಂಬ ಗೊಂಚಲು ಗೊಂಚಲಾಗಿ ಕಾಯಿ ಬಿಡುತ್ತದೆ. ಇತ್ತೀಚೆಗೆ ತಿಪಟೂರು ಭಾಗದಲ್ಲೂ ಬೆಳೆಯುತ್ತಿದ್ದಾರೆ. ಇದು ಬಹುವಾರ್ಷಿಕ ಬೆಳೆ.



**ಜೋಳ ಬದನೆ :** ಸಿರಸಿ ಕಡೆ ಜೋಳ ಬದನೆ, ಬಿಳಿ ಬದನೆ, ಗುಂಡು ಬದನೆ ತಳಿಗಳನ್ನು ಬೆಳೆಯುವವರು ಯಲ್ಲಾಪುರದ ಕಡೆ ಕರಿಬದನೆ,



ಬಿಳಿಬದನೆ, ಪಟ್ಟೆ ಬದನೆ, ಬಾಸಲ ಬದನೆ ತಳಿಗಳನ್ನೂ ಜಮಖಂಡಿ ಕಡೆ ಕಡಬಟ್ಟ್ಯ ಬದನೆ, ಬೆಟಗೇರಿ ಕಾಯಿ ತಳಿಗಳನ್ನು ಬೆಳೆದರೆ ಕಲಘಟಗಿಯಲ್ಲಿ ಹಸುರು ಬದನೆ, ಕರಿ ಬದನೆ, ಹಿತ್ತಲ ಬದನೆ, ಮರ ಬದನೆ ತಳಿಗಳನ್ನು ಬೆಳೆಯುವರು. ಬೆಳಗಾವಿ ಪ್ರದೇಶದಲ್ಲಿ ಬೆಳವಂಕಿ ಮತ್ತು ಗೋರಬಾಳ ಬದನೆ ತಳಿಗಳು ಹಿಂದೆ ಜನಪ್ರಿಯವಾಗಿದ್ದುವು.

ಬದನೆ ಗಿಡದ ಎಲೆಗಳು ಹಸುರು ಬಣ್ಣದಿಂದ ಕೂಡಿದ್ದು, ಅಗಲವಾಗಿದ್ದು ಒರಟಾಗಿರುತ್ತವೆ. ಖಾಂಡ ಮುಳ್ಳು ಮುಳ್ಳಾಗಿರುತ್ತದೆ. ಮೊದಲು ಹೂಗಳು ಬಿಡುತ್ತವೆ. ಆ ಹೂವು ನೇರಳೆ ಮತ್ತು ಬಿಳಿ ಬಣ್ಣದಿಂದ ಕೂಡಿರುತ್ತವೆ. ಹೂವುಗಳು ದುಂಬಿಗಳನ್ನು ಅಷ್ಟೇನು ಆಕರ್ಷಿಸುವುದಿಲ್ಲ. ಗಿಡದಲ್ಲಿ ಮೊದಲು ಹೂ ಬಿಟ್ಟಾಗ ಕಾಯಿ ಕೊಡುವುದಿಲ್ಲ. ಎರಡನೇ ಬಾರಿಗೆ ಹೂ ಬಿಟ್ಟಾಗ ಕಾಯಿ ಆಗುತ್ತದೆ. ಹೂವಿನ ದಳಗಳು ಉದುರಿದ ಮೇಲೆ ಉಳಿದ ಹಳದಿ ಬಣ್ಣದಿಂದ ಕೂಡಿದ ಪುಷ್ಪ ಕೇಸರವು ಬದನೆಕಾಯಿಯ ಹಸುರಿನ ತೊಟ್ಟು ಆಗುತ್ತದೆ. ಇದರಲ್ಲಿ ಹೆಚ್ಚಾಗಿ 'ಎ' ಮತ್ತು 'ಬಿ' ಜೀವಸತ್ವಗಳು, ನಾರಿನಂಶ, ಪ್ರೋಟೀನ್, ಕ್ಯಾಲ್ಸಿಯಂ, ಕಬ್ಬಿಣಾಂಶ ಇದ್ದು, ಇದು ಮಧುಮೇಹ ರೋಗಿಗಳಿಗೆ ಒಳ್ಳೆಯದು.

**ಬೇಸಾಯ :**ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿಯೂ ಇರಬಾರದು. ಒಣಗಿಯೂ ಇರಬಾರದು. ಮಣ್ಣಿನ ಫಲವತ್ತತೆ ಎಷ್ಟು ಚೆನ್ನಾಗಿರುತ್ತದೋ ಬೆಳೆ ಕೂಡ ಅಷ್ಟೇ ಚೆನ್ನಾಗಿರುತ್ತದೆ. ಬದನೆ ಬೆಳೆಯುವುದಕ್ಕೆ ಬೆಚ್ಚಗಿನ ವಾತಾವರಣ ಬೇಕು. ಬೆಂಗಳೂರು ಇಂತಹ ಹವಾಗುಣ ಹೊಂದಿರುವುದರಿಂದ ವರ್ಷಪೂರ್ತಿ ಬದನೆಯನ್ನು ಬೆಳೆಯಬಹುದು. ಬದನೆ ಬೆಳೆಯುವುದಕ್ಕೆ ಒಂದು ಎಕರೆ ಭೂಮಿಗೆ 200 ಗ್ರಾಂ ಬೀಜಗಳು ಸಾಕಾಗುತ್ತದೆ. ಭೂಮಿಯನ್ನು ನಾಲ್ಕೈದು ಬಾರಿ ಉಳುಮೆ ಮಾಡಿ, 25 ರಿಂದ 30 ಟನ್ ಕೊಳೆತಿರುವ ಕೊಟ್ಟಿಗೆ ಗೊಬ್ಬರವನ್ನು ಹಾಕಿದರೆ ಬೆಳೆ ಉತ್ತಮ ಇಳುವರಿ ಕೊಡುತ್ತದೆ.

ಬದನೆ ಸಸಿಗಳಿಗೆ ನಾಲ್ಕರಿಂದ ಐದು ದಿನಗಳಿಗೊಮ್ಮೆ ನೀರನ್ನು ಹಾಯಿಸಬೇಕು. ಪ್ರತಿಸಲ ಮೇಲುಗೊಬ್ಬರ ಹಾಕಿದ ಮೇಲೆ ಮಣ್ಣು ಏರಿಸಬೇಕು. ಭೂಮಿಯನ್ನು ಕಳೆರಹಿತವಾಗಿಡಬೇಕು. ಹನಿ ನೀರಾವರಿ ಬಳಸುವುದು ಈ ಬೆಳೆಗೆ ಹೆಚ್ಚು ಯುಕ್ತ. ಇದರಿಂದ ಕಳೆಗಳನ್ನು ಕಡಿಮೆ ಮಾಡಬಹುದು. ತೇವಾಂಶವು ಮಿತವಾಗಿರುತ್ತದೆ. ಇಳುವರಿಯೂ ಹೆಚ್ಚಾಗುತ್ತದೆ.

**ಕೀಟಬಾಧೆ :** ಬದನೆ ಸಸ್ಯಗಳು ಕೀಟಗಳು ಮತ್ತು ರೋಗಗಳಿಗೆ ತುತ್ತಾಗಿ ಹಾನಿಗೆ ಒಳಗಾಗುತ್ತವೆ.ಗುಲಗಂಜಿ ಹುಳು, ಜಿಗಿಹುಳು, ಕಾಂಡಕೊರೆಯುವ ಹುಳು, ಕುಡಿ ಮತ್ತು ಕಾಯಿ ಕೊರೆಯುವ ಹುಳು, ನುಸಿ, ಮೂತಿಹುಳು, ಕತ್ತರಿಸುವ ಹುಳು ಮುಂತಾದ ಕೀಟಗಳು ಎಲೆಗಳನ್ನು ಬಾಧಿಸುವುದಲ್ಲದೆ. ಅದರ ರಸವನ್ನು ಹಾಗೂ ಹೂವಿನ ಮೊಗ್ಗುಗಳಿಂದ ರಸವನ್ನು ಹೀರುತ್ತದೆ. ಅನಂತರ ಈ ಭಾಗಗಳು ಒಣಗುತ್ತವೆ. ಇನ್ನೂ ಕೆಲವು ಕೀಟಗಳು ಕಾಂಡ, ಬೇರು, ಎಲೆಗಳ ಅಂಚನ್ನು ತಿನ್ನುತ್ತವೆ. ಇದರಿಂದ ಸಸಿಗಳು ಒಣಗಿ ಬದನೆ ಹಾಳಾಗುವ ಅಥವಾ ಇಳುವರಿ ಕಡಿಮೆಯಾಗುವ ಸಾಧ್ಯತೆ ಇದೆ.

**ರೋಗಗಳು :** ಬೂದಿ ರೋಗ, ಮಡಿಯಲ್ಲಿ ಸಸಿ ಸಾಯುವುದು, ಹಣ್ಣು ಕೊಳೆ ರೋಗ, ಎಲೆ ಚುಕ್ಕೆ ರೋಗ ಮುಂತಾದ ರೋಗಕ್ಕೆ ಒಳಗಾದ ಸಸ್ಯಗಳು ಫಲ ಕೊಡುವುದಿಲ್ಲ. ಹಾಗೂ ಗಿಡದ ಎಲೆಗಳ ಬೆಳವಣಿಗೆ ಕುಂಠಿತವಾಗುತ್ತದೆ. ಕಪ್ಪಾದ ಚುಕ್ಕೆಗಳಿಂದ ಗಿಡ ಬಾಡುತ್ತದೆ. ಹೀಗೆ ಬದನೆಗಿಡ ಹಲವು ರೋಗಗಳಿಗೆ ತುತ್ತಾಗಿ ಬೆಳೆ ನಾಶವಾಗುವ ಸಾಧ್ಯತೆಗಳಿರುತ್ತವೆ. ಈ ರೋಗಗಳಿಂದ ಬೆಳೆಯನ್ನು ಸಂರಕ್ಷಿಸಬೇಕೆಂದರೆ ಹಲವು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಬೇಕು. ರೋಗ ಬಂದ ಗಿಡವನ್ನು ಕಿತ್ತು ನಾಶಪಡಿಸಬೇಕು. ಬಿತ್ತನೆಗೆ ಮುನ್ನ ಸಾಕಷ್ಟು ಕೊಟ್ಟಿಗೆ ಗೊಬ್ಬರವನ್ನು ಹಾಕಬೇಕು. ಬದನೆ ಬೆಳೆಯುವ ಭೂಮಿಯಲ್ಲಿ ಆಲೂಗಡ್ಡೆ, ಟೊಮ್ಯಾಟೊ, ಮೆಣಸಿನಕಾಯಿ ಮತ್ತು ತಂಬಾಕು ಬೆಳೆಯಬಾರದು. ಈ ಬೆಳೆಗಳನ್ನು ಬೆಳೆದರೆ ನಾಲ್ಕು ವರ್ಷದವರೆಗೂ ಬದನೆಯನ್ನು ಬೆಳೆಯಲು ಸಾಧ್ಯವಾಗುವುದಿಲ್ಲ. ಅಲ್ಲದೆ ಈ ಬೆಳೆಗಳಿಂದ ಬದನೆ ಗಿಡ ದುಂಡಾಣು ಸೊರಗು ರೋಗಕ್ಕೆ ತುತ್ತಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಕುಲಾಂತರಿ ತಳಿ (BT) ಬದನೆಯನ್ನು ಬೆಳೆಯಲು ಮುಂದಾಗಿರುವುದರಿಂದ, ಸಾಂಪ್ರದಾಯಿಕ ಕೃಷಿಕನಿಗೆ ಇದು ಶತ್ರುವಾಗಿದೆ. ಇದರಿಂದ ಇಳುವರಿಯು ಕಡಿಮೆಯಾಗಿ ಕೃಷಿಕ ಕಂಗಾಲಾಗುವ ಸ್ಥಿತಿ ನಿರ್ಮಾಣವಾಗಿದೆ.

*ಎಸ್.ಎಸ್.*

**ಬರಗು** ಆಹಾರ ಧಾನ್ಯಗಳಲ್ಲಿ ಒಂದು. ಇದನ್ನು ಕಾಮನ್ ಮಿಲ್ಲೆಟ್, ಕ್ರೋಸೊ ಮಿಲ್ಲೆಟ್ ಅಥವಾ ಹಾಗ್ ಮಿಲ್ಲೆಟ್ ಎಂದು ಕರೆಯುವರು. ಸಾವೆ, ಗಿನಿ ಹುಲ್ಲು, ಶುಂಠಿ ಹುಲ್ಲುಗಳ ಹತ್ತಿರ ಸಂಬಂಧಿ. ಇದರ ವೈಜ್ಞಾನಿಕ ಹೆಸರು ಪ್ಯಾನಿಕಮ್ ಮಿಲೇಸಿಯಮ್. ಇದರಲ್ಲಿ ಎಫ್ಯೂಸಮ್ ಮತ್ತು ಕಾಂಟ್ರಾಕ್ಟಮ್ ಎಂದು ಎರಡು ವಿಧ. ಗೋಧಿ ಜಾತಿಗೆ ಸೇರಿದ ಪ್ರಾಚೀನವಾದ ಆಹಾರ ಧಾನ್ಯ. ಇದರ ಮೂಲಸ್ಥಾನ ಏಷ್ಯಾ. ಭಾರತದ ಎಲ್ಲ ಭಾಗಗಳಲ್ಲೂ ಬೆಳೆಯುತ್ತದೆ. ದಕ್ಷಿಣ ಭಾರತದ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡಿನಲ್ಲಿ ಇದರ ಕೃಷಿ ಹೆಚ್ಚಾಗಿ ಕಂಡುಬರುತ್ತದೆ. ಎಂಥ ವಾತಾವರಣದಲ್ಲೂ, ಮಣ್ಣಿನಲ್ಲೂ ಬೆಳೆಯಬಲ್ಲ ಗುಣ ಇದರದು. ಅತಿ ಕಡಿಮೆ ಅವಧಿಯಲ್ಲಿ ಬೆಳೆಯಬಲ್ಲ ಇದಕ್ಕೆ ಹೆಚ್ಚಿನ ನೀರಿನ ಅಗತ್ಯವಿಲ್ಲ. ನಿರುಪಯುಕ್ತ ಭೂಮಿಯಲ್ಲೂ ಬೆಳೆಯುವಂಥದು. ಬರಗಾಲದಲ್ಲೂ ಬದುಕು ನೀಗಿಸಬಲ್ಲ ಬರಗು ಎಂದು ವೈಶಿಷ್ಟ್ಯ ಪಡೆದಿದೆ. ಅತಿಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಮತ್ತು ಸಕಾಲಕ್ಕೆ ಮಳೆ ಬಾರದಿದ್ದಾಗ ಹಿಂಗಾರು ಬೆಳೆಯಾಗಿ ಇದರ ಕೃಷಿ ಮಾಡುವುದುಂಟು. ಸುಮಾರು ಮೂರು ತಿಂಗಳ ಅಲ್ಪಾವಧಿ ಬೆಳೆಯಾದ ಇದನ್ನು ಕೂರಿಗೆಯ ಮೂಲಕ ಅಥವಾ ಕೈಯಿಂದ ಬಿತ್ತುವರು. ಫಲ ಬಂದಾಗ ಬುಡಸಹಿತ ಕಿತ್ತು ಕೂಡಲೇ ತೆನೆಯಿಂದ ಬೀಜವನ್ನು ಬೇರ್ಪಡಿಸಬೇಕು. ದನಗಳನ್ನು ಅಥವಾ ರೋಣುಗಲ್ಲನ್ನು ಉಪಯೋಗಿಸಿ ಒಕ್ಕಣೆ ಮಾಡುತ್ತಾರೆ. ಒಂದು ಎಕರೆಗೆ ಸು. 250-300 ಕೆಜಿ. ಯಿಂದ 600-700 ಕೆಜಿ. ವರೆಗೂ ಬೆಳೆಯುವುದುಂಟು. ಇದನ್ನು ಅನ್ನ, ರೊಟ್ಟಿ, ಗಂಜಿ ಮತ್ತು ಬ್ರೆಡ್ಡಿಗಾಗಿ ಬಳಸುವರು. ದನಗಳಿಗೂ ಇದು ಉತ್ತಮ ಆಹಾರ.

*ಎಸ್.ವಿ.*

**ಬಸಳೆ** ಬಸಳೆ ಬಹುವಾರ್ಷಿಕ ಸಸ್ಯ. ಇದರ ಪ್ರತಿಯೊಂದು ಭಾಗವೂ ಲೋಳೆಯಿಂದ ಆವೃತಗೊಂಡಿರುತ್ತದೆ. ಇದನ್ನು ಸಾಕಷ್ಟು ಜನರು ತಮ್ಮ ಮನೆಯಂಗಳದಲ್ಲಿ ಬೆಳೆಸುವುದು ಸರ್ವೆ ಸಾಮಾನ್ಯ. ಬಸಳೆಯ ಎಲೆ, ಕಾಂಡಗಳನ್ನು ಅಡುಗೆಯಲ್ಲಿ ಬಳಸುತ್ತಾರೆ. ಇದರಲ್ಲಿ ಅಧಿಕ ಪ್ರಮಾಣದ ಬಹು ಜೀವಸತ್ವಗಳಿವೆ.



ಬಸಳೆ ಚಿನಿಪೋಡಿಯೇಸಿ ಕುಟುಂಬಕ್ಕೆ ಸೇರಿದ ಸಸ್ಯ. ಇದರಲ್ಲಿ ಎರಡು ವಿಧ. ಕೆಂಪುಬಸಳೆ, ಬಿಳಿಬಸಳೆ, ಸಂಸ್ಕೃತದಲ್ಲಿ ಇದನ್ನು ಅಪೋದಿಕ, ಪೋತಕಿ, ಅಮೃತವಲ್ಲರಿ ಮುಂತಾಗಿ ಕರೆಯುವರು. ಕನ್ನಡದಲ್ಲಿ ಬಸಳೆ ಎಂದೇ ಪರಿಚಿತಗೊಂಡಿದೆ. ಇಂಗ್ಲಿಷಿನಲ್ಲಿ ಇಂಡಿಯನ್ ಸ್ಪಿನಾಚ್, ಸಿಲೋನ್ ಸ್ಪಿನಾಚ್, ವೀನ್‌ಸ್ಪಿನಾಚ್ ಎಂದು ಮುಂತಾಗಿ ಕರೆಯುತ್ತಾರೆ. ಇದರ ತವರೂರು ಭಾರತ ಮತ್ತು ಚೀನಾ. ಬಸಳೆಯ ಎಲೆ ಮತ್ತು ಮೃದುವಾದ ಚಿಗುರನ್ನು ತರಕಾರಿಯಾಗಿ ಬಳಸುವರು. ಇದರ ರುಚಿ ಸಿಹಿಯಾಗಿದ್ದು, ಶರೀರದ ಬೆಳವಣಿಗೆಗೆ ಬೇಕಾದ ಜೀವಸತ್ವಗಳಾದ ಕ್ಯಾಲ್ಸಿಯಂ, ವಿಟಮಿನ್ ಎ.ಬಿ.ಸಿ. ಪ್ರೋಟೀನ್‌ಗಳು ಅಧಿಕ ಸಂಖ್ಯೆಯಲ್ಲಿ ಸಿಗುವುವು. ಇದೊಂದು ಉಷ್ಣವಲಯದ ಸೊಪ್ಪುತರಕಾರಿ. ದಕ್ಷಿಣ ಭಾರತದಲ್ಲಿ ವರ್ಷಾದ್ಯಂತ ಬೆಳೆಸುತ್ತಾರೆ. ಹೆಚ್ಚು ಫಲವತ್ತಾದ ಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತಿದೆ. ಮರಳು ಮಿಶ್ರಿತ ಗೋಡು ಮಣ್ಣು ಹಾಗೂ ಕೆಂಪು ಮಣ್ಣು ಈ ಬೆಳೆಗೆ ಉತ್ತಮ. ಬಸಳೆಯನ್ನು ಬೀಜ ಮತ್ತು ಕಾಂಡದ ತುಂಡುಗಳ ಮೂಲಕ ಬೆಳೆಸಬಹುದು. ಉತ್ತರ ಭಾರತದಲ್ಲಿ ಚಳಿಗಾಲ ಮುಗಿದ ಮೇಲೆ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬಿತ್ತನೆ ಮಾಡುವರು. ದಕ್ಷಿಣ ಭಾರತದಲ್ಲಿ ಅಕ್ಟೋಬರ್-ನವೆಂಬರ್ ತಿಂಗಳು ಉತ್ತಮ ಕಾಲ. ಸಸಿಗಳು ಸಾಕಷ್ಟು ದೊಡ್ಡವಾದ ಮೇಲೆ ಅವುಗಳನ್ನು ಕಿತ್ತು ಗುಂಡಿಗಳಿಗೆ ಸ್ಥಳಾಂತರಿಸಬೇಕು. ಕಾಂಡದ ತುಂಡುಗಳಿಂದ ಬಿತ್ತನೆ ಮಾಡುವುದಾದರೆ ಮಳೆಗಾಲ ಉತ್ತಮ. 45 ಸೆಂ.ಮಿ. ಗಾತ್ರದ ಗುಂಡಿಗಳನ್ನು ತೆಗೆದು ಬಿಸಲಿಗೆ ಸ್ವಲ್ಪ ಕಾಲ ಬಿಟ್ಟು ಸಮಪ್ರಮಾಣದಲ್ಲಿ ತಿಪ್ಪೆಗೊಬ್ಬರ ಮತ್ತು ಮೇಲ್ಮಣ್ಣುಗಳಿಂದ ತುಂಬಿ ನೀರು ಹಾಯಿಸುವುದು.

ಬಸಳೆ ಅಧಿಕ ಫಲವತ್ತು ಮತ್ತು ನೀರನ್ನು ಬಯಸುವಂತಹ ಬಳ್ಳಿಯಾಗಿದೆ. ಪ್ರತಿ ಬಳ್ಳಿಗೆ ಕೊಟ್ಟಿಗೆ ಗೊಬ್ಬರವನ್ನು ವರ್ಷಕ್ಕೆ ಎರಡು ಬಾರಿ ಕೊಡಬೇಕು. ಬಸಳೆಗೆ ಚೆನ್ನಾಗಿ ನೀರು ಒದಗಿಸುವುದರಿಂದ ಹುಲುಸಾಗಿ ಬಳ್ಳಿಗಳು ಬೆಳೆಯುತ್ತವೆ. ಮಳೆಗಾಲದಲ್ಲಿ ಬಸಳೆಗೆ ನೀರಿನ ಆವಶ್ಯಕತೆಯಿಲ್ಲ. ಬೇಸಗೆಯಲ್ಲಿ ವಾರಕ್ಕೊಮ್ಮೆ ನೀರು ಕೊಡಬೇಕು. ಪ್ರತಿ ನಾಲ್ಕು ಸಾರಿ ನೀರು ಕೊಟ್ಟಾಗ ಒಮ್ಮೆ ಗುಂಡಿಯಲ್ಲಿನ ಮಣ್ಣನ್ನು ಸಡಿಲಿಸುವುದರಿಂದ ಬಸಳೆಯ ಬೇರು ಆಳಕ್ಕೆ ಇಳಿದಿರುವುದಿಲ್ಲವಾದ್ದರಿಂದ ಬಳ್ಳಿಗಳು ಚೆನ್ನಾಗಿ ಹರಡಿ ಬೆಳೆಯಲು ಸಹಾಯಕವಾಗುವುದು ಹಾಗೂ ಕಳೆಗಳು ಬರುವುದಿಲ್ಲ. ಬೀಜ ಬಿತ್ತಿ ಬೆಳೆಸಿದಲ್ಲಿ 10 ರಿಂದ 12 ವಾರಗಳಲ್ಲಿ ಸೊಪ್ಪನ್ನು ಕೊಯ್ಯಬಹುದು. ಹಂಬುಗಳ ಮೂಲಕ ನಾಟಿ ಮಾಡಿದರೆ 6 ವಾರಗಳ ಅನಂತರ ಸೊಪ್ಪನ್ನು ಕೊಯ್ಯಬಹುದು. ದಕ್ಷಿಣ ಭಾರತದ ಹವಾಗುಣ ಮತ್ತು ಭೂಗುಣಗಳಲ್ಲಿ ನೆಟ್ಟ 45 ದಿನಗಳಲ್ಲಿ ಆರಂಭದ ಕೊಯ್ಲನ್ನು ಪಡೆಯಬಹುದು. ವಾರಕ್ಕೊಮ್ಮೆ ಸೊಪ್ಪನ್ನು ಕೊಯ್ಯಬಹುದು. ಉತ್ತರ ಭಾರತದ ಹವಾಗುಣದಲ್ಲಿ ಹೆಕ್ಟೇರಿಗೆ 14 ರಿಂದ 18.5ಟನ್‌ಗಳಷ್ಟು ಸೊಪ್ಪನ್ನು ಪಡೆಯಬಹುದಾಗಿದೆ. ದಕ್ಷಿಣಭಾರತದಲ್ಲಿ ಇನ್ನೂ ಹೆಚ್ಚಿನ ಇಳುವರಿ ಸಾಧ್ಯ. ಈ ಬೆಳೆಗೆ ರೋಗಗಳು ಕಡಿಮೆ.

*ಎಸ್.ಕೆ.ಎಸ್.*

**ಬಳ್ಳಿಗಳು** ಅಲಂಕಾರ, ನೆರಳು, ಹಣ್ಣು ಹೂ, ತರಕಾರಿ, ಔಷಧಿಗಾಗಿ ಬೆಳೆಸುವಂಥವು. ಕೆಲವು ಬಳ್ಳಿಯ ಕಾಂಡಗಳು ಅತ್ಯಂತ ಗಟ್ಟಿಯಾಗಿಯೂ ಹಲವು ಸೂಕ್ಷ್ಮವಾಗಿಯೂ ಮೃದುವಾಗಿಯೂ ಇರುತ್ತವೆ. ಇವು ಇತರ ಮರಗಳನ್ನು ಆಶ್ರಯಿಸಿ ಬೆಳೆಯುವುವು. ಇವುಗಳನ್ನು ಅಡರುಬಳ್ಳಿಗಳು, ಏರುಬಳ್ಳಿಗಳು, ಹಬ್ಬು ಬಳ್ಳಿಗಳು, ಸುರುಳಿ ಬಳ್ಳಿಗಳು, ಲತೆಗಳು ಎನ್ನುವರು. ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಫಲವತ್ತಾದ ಮಣ್ಣಿನಲ್ಲಿ ನೆರಳಿನಲ್ಲಿ ಬೆಳೆಯುವುದರಿಂದ ಬಳ್ಳಿಯ ಕಾಂಡ ಮೃದುವಾಗಿರುತ್ತದೆ. ಕೆಲವು ಬಳ್ಳಿಗಳು ರಸಭರಿತ ಹಣ್ಣುಗಳನ್ನು ಕೊಡುತ್ತವೆ ಹಾಗೂ ವಿಶಾಲವಾದ ಎಲೆಗಳನ್ನು ಹೊಂದಿರುತ್ತವೆ. ಮತ್ತೆ ಕೆಲವು ಸಣ್ಣ ಎಲೆಗಳಿಂದ ಕೂಡಿದ್ದು ಬಳ್ಳಿ ನೀಳವಾಗಿದ್ದು ಫಲರಹಿತವಾಗಿರುತ್ತವೆ.

ಬಳ್ಳಿ ಸಸ್ಯಗಳ ದಾಖಲೆಗಳು ಪ್ರಾಗಿತಿಹಾಸ ಕಾಲದಿಂದಲೂ ಇವೆ. ಕೆಲವು ಪುರಾಣಗಳಲ್ಲೂ ಇವುಗಳ ಉಲ್ಲೇಖಗಳುಂಟು. ಉದ್ಯಾನವನಗಳು ಋಷ್ಯಾಶ್ರಮಗಳು, ಮಂಟಪಗಳು - ಇಲ್ಲೆಲ್ಲ ಬಳ್ಳಿಗಳಿಗೆ ಸ್ಥಾನವಿತ್ತು. ಅಂದಿನಿಂದ ಇಂದಿನ ತನಕ ಜನಪ್ರಿಯವಾಗಿರುವ ಈ ಬಳ್ಳಿಗಳು ಅರಮನೆಯ ಆವರಣ, ಸಾರ್ವಜನಿಕ ಕಟ್ಟಡಗಳ ಆವರಣ, ಪ್ರವಾಸಿ ಬಂಗಲೆಗಳು, ಶಾಲಾ ಕಾಲೇಜು ವಿಶ್ವ ವಿದ್ಯಾಲಯಗಳ ಆವರಣ ಮುಂತಾದಡೆಗಳಲ್ಲೆಲ್ಲ ಕಂಗೊಳಿಸುತ್ತಿವೆ. ಕೆಲವು ಬಳ್ಳಿಗಳು ಆಶ್ರಯ ವಸ್ತುಗಳನ್ನು ಏರಿ ಬೆಳೆಯದೆ ಪೊದೆಗಳಂತೆ ಬೆಳೆದರೆ ಕೆಲವು ಹಬ್ಬು

ಬಳ್ಳಿಗಳಂತೆ ಬೆಳೆದು ಆಶ್ರಯ ದೊರೆತಾಗ ಬೇಕಾದ ಅಂಗಾಂಗ ಸೃಷ್ಟಿಸಿಕೊಂಡು ಅಡರುತ್ತವೆ. ಇವು ಸುರುಳಿಯಂಥ ಹಿಡಿಯಾಗಿಯೊ ಬಾಗಿದ ಮುಳ್ಳಿನಂತೆಯೊ ಇದ್ದು ಆಶ್ರಯ ಮರಗಳನ್ನು ಹತ್ತಿ ಬೆಳೆಯುವ ಗುಣ ಹೊಂದಿವೆ. ಕೆಲವು ಬೆತ್ತದ ಗಿಡಗಳಿಗೆ ಹಾಗೂ ಇತರ ಕೆಲವು ಬಳ್ಳಿಗಳಿಗೆ ಕೊಕ್ಕೆಯಾಕಾರದ ಮುಳ್ಳುಗಳಿದ್ದು ಉಷ್ಣವಲಯದ ಕಾಡುಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತವೆ. ಇದಲ್ಲದೆ ಲಂಟಾನ, ಎಲಚಿ ಪ್ರಭೇದದ ಬಳ್ಳಿಗಳು ಹೀಗೆ ಬೆಳೆಯುವಂಥವು.

ಬಳ್ಳಿಗಳನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. 1. ಬಳ್ಳಿಯ ತುದಿ ಸುರುಳಿಯಾಕಾರದಲ್ಲಿರುವಂಥವು, 2. ಬೇರು ಬಳ್ಳಿಗಳು, 3. ಉಯ್ಯಾಲೆ ಬಳ್ಳಿಗಳು. ಮೊದಲನೆಯ ಪ್ರಕಾರದ ಬಳ್ಳಿಗಳಲ್ಲಿ ಎಲೆಯ ಕುಡಿಯ ಸುರುಳಿಗಳ ಸಹಾಯದಿಂದಲೂ ಮತ್ತೊಂದು ಎಲೆಯ ಸುರುಳಿಯೊಂದಿಗೆ ಸುತ್ತಿಕೊಂಡು ಬೆಳೆಯುತ್ತವೆ. ಈ ಪ್ರಭೇದದಲ್ಲಿ ಎಲೆಯ ಒಂದು ಭಾಗ ಅಥವಾ ಇಡೀ ಎಲೆ ಸುರುಳಿಯಂತೆ ಮಾರ್ಪಡುತ್ತದೆ. ಇದು ಮೃದುವಾಗಿಯೂ ಸುತ್ತಿದ ತಂತಿಯಂತೆಯೂ ಚಾವಟಿಯಂತೆಯೂ ಇದ್ದು ಆಶ್ರಯ ಮರವನ್ನು ಅಪ್ಪಿ ಬೆಳೆಯಲು ಸಹಕಾರಿ. ಈ ಜಾತಿಯ ಕೆಲವು ಸಸ್ಯಗಳಾದ ಬಟಾಣಿ, ಬೀನ್ಸ್‌ಗಳ ಮೇಲ್ತುದಿಯ ಎಲೆಗಳೇ ಸುರುಳಿಯಾದರೆ ತೊಗರಿ ಗಿಡದಲ್ಲಿ ಇಡೀ ಎಲೆಯೇ ಸುರುಳಿಯಾಗಿ ಮಾರ್ಪಾಡಾಗುತ್ತದೆ. ಕೆಲವು ಸಸ್ಯಗಳಲ್ಲಿ ಎಲೆಯ ತೊಟ್ಟು ಸುರುಳಿಯಂತಾದರೆ, ಇನ್ನೂ ಕೆಲವಲ್ಲಿ ಹೂಗಳೇ ಸುರುಳಿ ರೂಪ ಹೊಂದುತ್ತವೆ. ಕಾಂಡದ ತುದಿ ಸೂಕ್ಷ್ಮವಾಗಿದ್ದು ಬೆಳವಣಿಗೆಗೆ ಸಹಾಯಕವಾಗಿವೆ. ದ್ರಾಕ್ಷಿ ಬಳ್ಳಿಯಲ್ಲಿ ಕಾಂಡದ ತುದಿ ಅಥವಾ ಕವಲು ಬಳ್ಳಿಯ ಕುಡಿಗಳೇ ಸುರುಳಿಗಳಾಗುತ್ತವೆ. ಕೆಲವು ಜಾತಿಯ ಬಳ್ಳಿಗಳಲ್ಲಿ ಅಂಟಿನಂಥ ದ್ರವ ವಸ್ತುವಿದ್ದು ಆಸರೆ ಕೊಡುವ ವಸ್ತುವನ್ನು ಅಡರಿ ಅಂಟಿದಂತೆ ಬೆಳೆಯುತ್ತವೆ.

ಎರಡನೆಯ ಪ್ರಕಾರದಲ್ಲಿ ಗಿಣ್ಣಿನ ಭಾಗದಿಂದ ಬಿಳಲು ಬೇರುಗಳು ಹುಟ್ಟಿ ಬಳ್ಳಿಗಳು ಬೆಳೆಯಲು ಸಹಕಾರಿಯಾಗುತ್ತವೆ. ಇವುಗಳ ತುದಿಯಲ್ಲೂ ಅಂಟಿನಂತಹ ಪದಾರ್ಥವಿದ್ದು ಆಶ್ರಯ ವಸ್ತುವನ್ನು ಅಪ್ಪಿ ಹಿಡಿಯಲು ಸಾಧ್ಯವಾಗುತ್ತದೆ. ಉದಾ : ವೀಳ್ಯದೆಲೆ ಮತ್ತು ಮೆಣಸು. ಕೆಲವು ಬಳ್ಳಿಗಳ ಬೇರುಗಳು ಆಶ್ರಯ ಮರದ ಕಾಂಡದೊಳ ಹೊಕ್ಕು ಆಹಾರವನ್ನು ಪಡೆದು ಬೆಳೆಯುತ್ತವೆ.

ಮೂರನೆಯ ಪ್ರಕಾರದವು ದಟ್ಟವಾದ ಕಾಡುಗಳಲ್ಲಿ ದೃಢವಾಗಿ ಬೆಳೆದು ಹಬ್ಬುವ ಬಹುವಾರ್ಷಿಕ ಬಳ್ಳಿಗಳು. ಆಶ್ರಯ ಮರಗಳನ್ನು ಏರಿ ಬೆಳೆಯುತ್ತಾ ಸಾಗಿ ಸೂರ್ಯನ ಕಿರಣಗಳಿಗೆ ಒಡ್ಡಿಕೊಳ್ಳುತ್ತವೆ. ಬಲು ಗಟ್ಟಿಯಾದ ಈ ಬಳ್ಳಿಗಳು ಮರದಿಂದ ಮರಕ್ಕೆ ಹಬ್ಬಿ ಹೆಣೆದುಕೊಂಡು ಉಯ್ಯಾಲೆಯಂತೆ ಇಳಿ ಬಿದ್ದಿರುತ್ತವೆ. ಉದಾ : ಮಾಧವೀಲತೆ, ಕೈವಲ್ಯ ಬಳ್ಳಿ. ಇವು ಕಾಡು ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು, ಪ್ರಾಣಿಗಳನ್ನು ಬೇಟೆಯಾಡಲು, ಕಳ್ಳಕಾಕರನ್ನು ಸೆರೆ ಹಿಡಿಯಲು ಕಾಡುವಾಸಿಗಳಿಗೆ ಉಪಯುಕ್ತ.

**ಇತರೆ ಬಳ್ಳಿಗಳು :** ದಕ್ಷಿಣ ಭಾರತದಲ್ಲಿ ಕೆಲವು ಬಳ್ಳಿಗಳನ್ನು ಅಲಂಕಾರಕ್ಕಾಗಿ, ನೆರಳಿಗಾಗಿ, ಔಷಧಿಗಾಗಿ ಕೃಷಿ ಮಾಡಿ ಬೆಳೆಸುತ್ತಾರೆ. ತೋಟಗಾರಿಕೆ ಇಲಾಖೆಯವರು ನರ್ಸರಿ ಅಥವಾ ಸಸಿ ಬೆಳೆಸಲು ನೆರಳಿಗಾಗಿ ಹಳದಿ ಹೂ, ಆಡು ಹೂ ಬಳ್ಳಿ, ಕಾಮನ ಬಿಲ್ಲು ಬಳ್ಳಿ ಮುಂತಾದುವನ್ನು ಬೆಳೆಸುತ್ತಾರೆ. ಅಲಂಕಾರಕ್ಕಾಗಿ ಬೋಗನ್‌ವಿಲ್ಲ (ಕಾಗದದ ಹೂ) ಜಾಜಿ, ಮಲ್ಲಿಗೆ ಮುಂತಾದವನ್ನು ಬೆಳೆಸುತ್ತಾರೆ. ತರಕಾರಿಗಾಗಿ ಚಪ್ಪರದವರೆ, ಕುಂಬಳ, ಚಪ್ಪರ ಬದನೆ, ಹೀರೆಕಾಯಿ, ಹಾಗಲಕಾಯಿ, ಬಸಳೆ, ಕಲ್ಲಂಗಡಿ ಮುಂತಾದುವನ್ನು ಬೆಳೆಸುವುದಿದೆ. ಔಷಧಿಗಾಗಿ ಶತಾವರಿ, ಗುಲಗಂಜಿಬಳ್ಳಿ, ಸೊಗದೆಬೇರು, ಕಿರುಮಂಜಿ, ಆಕಾಶ ಗರುಡ ಬಳ್ಳಿ, ಉಗುರುಸುತ್ತುಬಳ್ಳಿ, ಅಮೃತಬಳ್ಳಿ, ನಾಗದಾಳಿ ಬಳ್ಳಿ ಮುಂತಾದವುಗಳ ಕೃಷಿ ನಡೆಯುತ್ತಿದೆ.

*ಜೆ.ಎಸ್.*

**ಬಳ್ಳಾರಿ ಜಿಲ್ಲೆಯ ಕೃಷಿ** ಕರ್ನಾಟಕ ರಾಜ್ಯದ ಈಶಾನ್ಯ ಭಾಗದಲ್ಲಿರುವ ಒಂದು ಜಿಲ್ಲೆ. ಬಳ್ಳಾರಿ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಇದು ತಕ್ಕಮಟ್ಟಿಗೆ ದೊಡ್ಡ ಜಿಲ್ಲೆ. ಬಳ್ಳಾರಿ, ಹಗರಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸಿರಗುಪ್ಪ ಹಾಗೂ ಸಂಡೂರು - ಇವಿಷ್ಟು ತಾಲ್ಲೂಕುಗಳನ್ನು ಒಳಗೊಂಡ ಸದರಿ ಜಿಲ್ಲೆಯ ಜನಸಂಖ್ಯೆ 25,32,385 (2011) ಭೌಗೋಳಿಕ ವಿಸ್ತೀರ್ಣ 8419 ಚ.ಕಿ.ಮೀ (2011ರ ಜನಗಣತಿ ಅನ್ವಯ) ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಇದರ ಪಾಲು ಶೇ. 4.38.

ಜಿಲ್ಲೆಯ ಪಶ್ಚಿಮ, ವಾಯವ್ಯ, ಉತ್ತರ ಮತ್ತು ಈಶಾನ್ಯದ ಗಡಿಯಾಗಿ ಹರಿಯುತ್ತಿರುವ 'ತುಂಗಭದ್ರಾ' ನದಿ ಈ ಜಿಲ್ಲೆಯನ್ನು ಧಾರವಾಡ ಜಿಲ್ಲೆಯಿಂದಲೂ ಉತ್ತರದಲ್ಲಿ ರಾಯಚೂರು ಜಿಲ್ಲೆಯಿಂದಲೂ ಬೇರ್ಪಡಿಸುತ್ತದೆ. ಜಿಲ್ಲೆಯ ಹೆಚ್ಚುಭಾಗ ತುಂಗಭದ್ರಾ ನದಿಯ ಕಡೆ ಉತ್ತರಕ್ಕೆ ಇಳಿಜಾರಾಗಿದೆ.

**ಮೇಲ್ಮೈ ಲಕ್ಷಣ :** ಜಿಲ್ಲೆಯ ವಾಯವ್ಯದಿಂದ ಆಗ್ನೇಯದವರೆಗೂ ಹಬ್ಬಿರುವ ಸಂಡೂರು ಬೆಟ್ಟಗಳು ಜಿಲ್ಲೆಯನ್ನು ಪೂರ್ವ-ಪಶ್ಚಿಮವಾಗಿ ವಿಂಗಡಿಸಿವೆ. ಪೂರ್ವಭಾಗ ಬಳ್ಳಾರಿ ಮತ್ತು ಸಿರಗುಪ್ಪ ತಾಲ್ಲೂಕುಗಳನ್ನೊಳಗೊಂಡಿದ್ದರೆ, ಪಶ್ಚಿಮ ಭಾಗ ಉಳಿದ ತಾಲ್ಲೂಕುಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿದೆ.

ಪಶ್ಚಿಮದಲ್ಲಿ ಕಪ್ಪು ಮಣ್ಣಿನ ಬಯಲು ಹೆಚ್ಚು. ಉಳಿದ ಕಡೆ ಮರಳು ಮಿಶ್ರಿತ ಮತ್ತು ಕೆಂಪು ಮಣ್ಣಿನ ಪ್ರದೇಶ ಇದೆ. ಹಡಗಲಿ ಹೊರತು ಮಾಡಿ ಉಳಿದೆಡೆ ಕಾಡು ಮತ್ತು ಬೆಟ್ಟಗುಡ್ಡಗಳು ಕಾಣಸಿಗುತ್ತವೆ. ಬೆಟ್ಟಸಾಲಿನ ನಡುವೆ ಒಂದು ಕಡೆ ಎರಡು ಕಮರಿಗಳಿವೆ (ನಾರಿ ಹಳ್ಳದ ಬಳಿ).

ಈ ಶ್ರೇಣಿಯ ದಕ್ಷಿಣ ಭಾಗದಲ್ಲಿರುವ ಕುಮಾರಸ್ವಾಮಿ ದೇವಾಲಯವಿರುವ ಬೆಟ್ಟವು 1036 ಮೀ. ಎತ್ತರದಲ್ಲಿದೆ. ಮಧ್ಯದ ರಾಮನಮಲೈ ಬೆಟ್ಟ 992 ಮೀ ಎತ್ತರದಲ್ಲಿದ್ದರೆ, ತೀರ ಉತ್ತರದ ಕಡೆ ಮುಖ ಮಾಡಿ ನಿಂತಿರುವ ಜಂಬುನಾಥ ಶಿಖರದ ಎತ್ತರ ಸುಮಾರು 908 ಮೀ. ಇಲ್ಲಿಯ ತಾಮ್ರ ಪರ್ವತ ಶ್ರೇಣಿ ಅಥವಾ ಸುಗ್ಗಮಹಾದೇವಿಬೆಟ್ಟ ದರೋಜಿ ಕೆರೆಯವರೆಗೆ ಬರೋಬ್ಬರಿ 428 ಕಿ.ಮೀ.ವರೆಗೂ ವ್ಯಾಪಿಸಿದೆ. ಇದರಲ್ಲಿಯ ಅತ್ಯುನ್ನತ ಶಿಖರದ ಎತ್ತರ ಸು. 1002 ಮೀ.

**ಹವಾಗುಣ :** ಕರ್ನಾಟಕದ ಈಶಾನ್ಯ ಭಾಗದಲ್ಲಿ ಉತ್ತರ ಅಕ್ಷಾಂಶ $15^0 30'$-$15^0 50'$ ಮತ್ತು ಪೂರ್ವರೇಖಾಂಶ $75^0 40'$-$77^0 11'$ಗಳ ನಡುವೆ ಬಳ್ಳಾರಿ ಜಿಲ್ಲೆ ಕಂಡುಬರುತ್ತದೆ.

ಇಲ್ಲಿ ವರ್ಷದ ಹೆಚ್ಚು ಕಾಲ ಒಣಹವೆ ಇರುತ್ತದೆ. ಮಾರ್ಚ್‌ನಿಂದ ಮೇತನಕ ಬೇಸಗೆಯ ಉಷ್ಣಾಂಶ ಹೆಚ್ಚು. ಜೂನ್‌ನಿಂದ ನವೆಂಬರ್ ತನಕ


ಒಣಹವೆ ಕೂಡಿ ನೆಲದಲ್ಲಿ ತಂಪು ಹವೆ ಜಿನುಗುತ್ತಿರುತ್ತದೆ. ಉಷ್ಣತೆ ಕಡಿಮೆ ಇರುವ ಡಿಸೆಂಬರ್ ಮಾಹೆಲ್ಲಿ ಸರಾಸರಿ ದಿನದ ಗರಿಷ್ಠ ಉಷ್ಣತೆ $29.7^0$ ಸೆ. ಇದ್ದರೆ, ದಿನದ ಸರಾಸರಿ ಕನಿಷ್ಠ ಉಷ್ಣತೆ $16.07^0$ ಸೆ. ಇರುತ್ತದೆ. ಅತ್ಯಂತ ತಾಪಭರಿತ ಏಪ್ರಿಲ್ ತಿಂಗಳು ದಿನದ ಗರಿಷ್ಠ ಉಷ್ಣಾಂಶ $39.02^0$ ಸೆ. ಹೊಂದಿದ್ದರೆ ದೈನಿಕ ಕನಿಷ್ಠ ಉಷ್ಣಾಂಶ $25.02^0$ ಸೆ. ಮಾತ್ರ ದಾಖಲಾಗಿರುತ್ತದೆ. ಈ ಜಿಲ್ಲೆಯ ವಾರ್ಷಿಕ ಮಳೆ ಸರಾಸರಿ 641 ಸೆಂ.ಮೀ. ಮಾತ್ರ.

**ಮಳೆ :** ಜಿಲ್ಲೆಯಲ್ಲಿ ಹೆಚ್ಚು ಕಾಡಿಲ್ಲ. ಹಾಗಾಗಿ ಮಳೆ ಪ್ರಮಾಣವು ಕಡಿಮೆಯೇ. ಮಾಸಿಕವಾರು ಜಿಲ್ಲೆಯ ವಾಸ್ತವ ಹಾಗೂ ವಾಡಿಕೆ ಮಳೆ ಇಂತಿದೆ.

2008ರ ಅಧ್ಯಯನದ ಪ್ರಕಾರ ಜಿಲ್ಲೆಯಲ್ಲಿ ಜನವರಿ ತಿಂಗಳಲ್ಲಿ ವಾಡಿಕೆ ಮಳೆ 02 ಸೆಂ.ಮೀ. ಇದ್ದರೆ ವಾಸ್ತವ ಮಳೆ '00' ಎಂದು ದಾಖಲಾಗಿದೆ. ಕ್ರಮವಾಗಿ ಫೆಬ್ರುವರಿಯಲ್ಲಿ ವಾಡಿಕೆ ಮಳೆ 02 ಸೆಂ.ಮೀ. ಎಂದಿದ್ದರೆ, ವಾಸ್ತವ ಮಳೆ 10 ಸೆಂ.ಮೀ. ಎಂದು ದಾಖಲಾಗಿದೆ. ಮಾರ್ಚಿಯಲ್ಲಿ 03 ಸೆಂ.ಮೀ. ಮತ್ತು 114 ಸೆಂ.ಮೀ., ಏಪ್ರಿಲ್‌ನಲ್ಲಿ 29 ಸೆಂ.ಮೀ. ಮತ್ತು 08 ಸೆಂ.ಮೀ., ಮೇನಲ್ಲಿ 71 ಸೆಂ.ಮೀ. ಮತ್ತು 47 ಸೆಂ.ಮೀ., ಜೂನ್‌ನಲ್ಲಿ 73 ಸೆಂ.ಮೀ. ಮತ್ತು 31 ಸೆಂ.ಮೀ., ಜುಲೈನಲ್ಲಿ 84 ಸೆಂ.ಮೀ. ಮತ್ತು 35 ಸೆಂ.ಮೀ., ಆಗಸ್ಟ್‌ನಲ್ಲಿ 93 ಸೆಂ.ಮೀ., ಮತ್ತು 104 ಸೆಂ.ಮೀ. ಸೆಪ್ಟೆಂಬರ್‌ನಲ್ಲಿ 137 ಸೆಂ.ಮೀ. ಮತ್ತು 151 ಸೆಂ.ಮೀ., ಅಕ್ಟೋಬರ್‌ನಲ್ಲಿ 104 ಸೆಂ.ಮೀ. ಮತ್ತು 72 ಸೆಂ.ಮೀ., ನವೆಂಬರ್‌ನಲ್ಲಿ 31 ಸೆಂ.ಮೀ. ಮತ್ತು 69 ಸೆಂ.ಮೀ., ಡಿಸೆಂಬರ್‌ನಲ್ಲಿ 135 ಸೆಂ.ಮೀ ಮತ್ತು ವಾಸ್ತವ ಮಳೆ 141 ಸೆಂ.ಮೀ ಎಂದು ದಾಖಲಾಗಿದೆ.

ವಾರ್ಷಿಕ ವಾಡಿಕೆ ಮಳೆ ಪ್ರಮಾಣ 627 ಸೆಂ.ಮೀ. ಇದ್ದರೆ ವಾಸ್ತವ ಮಳೆ 641 ಸೆಂ.ಮೀ. ಎಂದು ದಾಖಲಾಗಿದೆ. (ಡೈರೆಕ್ಟೊರೇಟ್ ಆಫ್ ಎಕನಾಮಿಕ್ಸ್ ಅಂಡ್ ಸ್ಟ್ಯಾಟಿಸ್ಟಿಕ್ಸ್)

**ಅರಣ್ಯ :** ಬಳ್ಳಾರಿ ಜಿಲ್ಲೆಯಲ್ಲಿ ದಟ್ಟ ಅರಣ್ಯಗಳು ಇಲ್ಲವೆನ್ನ ಬಹುದು. ಸಂಡೂರು ತಾಲ್ಲೂಕಿನ ಬೆಟ್ಟ ಪ್ರದೇಶಗಳನ್ನು ಬಿಟ್ಟರೆ ಉಳಿದೆಡೆ ಗಿಡಮರಗಳು ವಿರಳ. ಜಿಲ್ಲೆಯ ಭೌಗೋಳಿಕ ಕ್ಷೇತ್ರ 8,450 ಚ.ಕಿ.ಮೀ.




ಗಳಾದರೆ ಇದರಲ್ಲಿ ಕ್ರಮವಾಗಿ ದಟ್ಟವಾದ ಅರಣ್ಯ ಭಾಗ ಶೂನ್ಯವಾಗಿದ್ದು ಸಾಧಾರಣ ದಟ್ಟವೆಂದೂ ಕರೆಯಲಾಗದ ಭೂಭಾಗ 110 ಚ.ಕಿ.ಮೀ ಇದೆ. ವಿರಳವಾದ ಮರಗಳ ಹಂಚಿಕೆಯ ಅರಣ್ಯ ಪ್ರಮಾಣ 662 ಚ.ಕಿ.ಮೀ ಇದ್ದರೆ, ಕುರುಚಲು ಸಸ್ಯವರ್ಗದ 253 ಚ.ಕಿ.ಮೀ.ನಷ್ಟಿದೆ. ಇದು ಭೌಗೋಳಿಕ ಕ್ಷೇತ್ರದ ಶೇ. 9.14ರನ್ನು ಆವರಿಸಿಕೊಂಡಿದೆ.

ಇಲ್ಲಿ ಕಮ್ಮರ, ದಿಂಡಿಗ, ಹರಗಲು ಹಾಗೂ ಇತರೆ ಸಣ್ಣ ಜಾತಿಯ ಮರಗಳಿವೆ. ಸಂಡೂರು ಶ್ರೇಣಿಯಲ್ಲಿ ಮಾತ್ರ ಶ್ರೀಗಂಧ ಮತ್ತು ಬೀಟೆ ಸಿಗುತ್ತವೆ. ಕೂಡ್ಲಿಗಿ ಪಾಲಿಗೆ ಈಚಲು ಹೇರಳ ಸಿಕ್ಕಿದರೆ ಜಿಲ್ಲೆಯ ಪೂರ್ವದ ಕಡೆ ಹುಣಿಸೆ, ಬೇವು, ಮಾವು, ತೂಪರ, ಸೀತಾಫಲ ದೊರೆಯುತ್ತವೆ. (ಇಂಡಿಯಾಸ್ ಸ್ಟೇಟ್ಸ್ ಆಫ್ ಫಾರೆಸ್ಟ್ 2009)

**ಕೃಷಿ ಭೂಮಿ ವಿಸ್ತರಣೆ ಮತ್ತು ಭೂ ಉಪಯೋಗ :** ಜಿಲ್ಲೆಯ ಒಟ್ಟು ಭೌಗೋಳಿಕ ಕ್ಷೇತ್ರ 8,13,196 ಹೆಕ್ಟೇರ್ (ಶೇ. 4.26) ಇದರಲ್ಲಿ ಅರಣ್ಯದ ಭಾಗ 9,7,017 ಹೆಕ್ಟ್ಟರ್ (ಶೇ. 3.15) ವ್ಯವಸಾಯಕ್ಕೆ ದೊರೆಯದ ಹಾಗೂ ವ್ಯವಸಾಯೇತರ ಬಳಕೆ 68,623 ಹೆಕ್ಟೇರ್ (ಶೇ. 5.01) ಇನ್ನು ಬರಡು ಮತ್ತು ವ್ಯವಸಾಯ ಯೋಗ್ಯವಲ್ಲದ ಭೂ ಭಾಗ - 53,477 ಹೆಕ್ಟೇರ್ (ಶೇ. 6.78). ಬಳಕೆಯಾಗದ ವ್ಯವಸಾಯ ಭೂಮಿ 24,839 ಹೆಕ್ಟೇರ್ (ಶೇ. 4.23) ವೃಕ್ಷಬೆಳೆ ಹಾಗೂ ಇತರೆ ಎಂದು 36060 ಹೆಕ್ಟೇರ್ (1.24) ಬಳಕೆಯಾದರೆ, ಬೀಳು ಭೂಮಿ ಪ್ರಮಾಣ 68,269 ಹೆಕ್ಟೇರ್ (5.41). ಇನ್ನು ಸಾಗುವಳಿಗೆ 4,64,061 ಹೆಕ್ಟೇರ್ (4.45) ಬಳಕೆಯಾದರೆ, ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಮಾಡುವ ಪ್ರದೇಶ ಶೇ 5.59ನ್ನು ಅರ್ಥಾತ್ 1,38,377 ಹೆಕ್ಟೇರನ್ನು ಒಳಗೊಂಡಿದೆ.

**ಮಣ್ಣು :** ಜಿಲ್ಲೆಯಲ್ಲಿ ಕಪ್ಪು ಮತ್ತು ಕೆಂಪು ಮಿಶ್ರಿತ ಮಣ್ಣಿದೆ. ಈ ಮಣ್ಣಿನಲ್ಲಿ ಜೋಳ, ಹತ್ತಿ, ಮೆಣಸಿನಕಾಯಿ, ಗೋಧಿ, ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ.

ನೀರಾವರಿ ದೊರೆತ ಕಡೆ ಬತ್ತ, ಕಬ್ಬು, ಹತ್ತಿ, ಬಾಳೆ, ಮೆಣಸಿನಕಾಯಿಗಳನ್ನು ಬೆಳೆಯಲಾಗುತ್ತದೆ.

**ನೀರಾವರಿ ಸೌಕರ್ಯಗಳು :** ಬಳ್ಳಾರಿ ಜಿಲ್ಲೆ ಇಂದು ಅಧಿಕ ಪ್ರಮಾಣದಲ್ಲಿ ನೀರಾವರಿ ಸೌಕರ್ಯ ಪಡೆದಿರುವ ಜಿಲ್ಲೆಗಳಲ್ಲಿ ಒಂದು. ತುಂಗಭದ್ರ ಜಲಾಶಯ ಯೋಜನೆ ಕಾರ್ಯಗತವಾದಾಗ (1953) ಈ ಜಿಲ್ಲೆಯಲ್ಲಿ 'ಹಸುರು ಕ್ರಾಂತಿ' ಆರಂಭವಾಯ್ತು. 1970-71ರ ಹೊತ್ತಿಗೆ ಸು. 73,385 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿತ್ತು. ಅದರಲ್ಲಿ ತುಂಗಭದ್ರ ಜಲಾಶಯ ಮತ್ತು ಭದ್ರಾ ಯೋಜನೆಗಳಿಂದ ಕ್ರಮವಾಗಿ 37,150 ಹೆ. ಮತ್ತು 4047 ಹೆ. ಹಾಗೆಯೇ ವಿಜಯನಗರ ಕಾಲದಲ್ಲಿ ನಿರ್ಮಿಸಿದ ನಾಲೆಗಳಿಂದ ಸು. 7,120 ಹೆ. ಹಗರಿ ಬೊಮ್ಮನಹಳ್ಳಿ ಯೋಜನೆಯಿಂದ 2,975 ಹೆ. ಹಳೆಯ ಕೆರೆಗಳಿಂದ 7.298 ಹೆ. ಹೊಸಕೆರೆಗಳಿಂದ 2,069 ಮತ್ತು ಮತ್ತಿತರ ಮೂಲಗಳಿಂದ 937 ಹೆ.ಗಳು ನೀರಾವರಿ ಸೌಲಭ್ಯ ಪಡೆಯಲಾಗುತ್ತದೆ. ಹಗರಿ ಬೊಮ್ಮನಹಳ್ಳಿ ಮತ್ತು ಸಿರಗುಪ್ಪ ಬಳಿ 1906 ಮತ್ತು 1937ರಷ್ಟು ಹಿಂದೆಯೇ ಆಗಿನ ಮದ್ರಾಸು ಸರ್ಕಾರ ಪ್ರಾರಂಭಿಸಿದ್ದ ವ್ಯವಸಾಯ ಸಂಶೋಧನ ಕೇಂದ್ರಗಳಿವೆ. ಬಳ್ಳಾರಿಯಲ್ಲಿ 1954ರಲ್ಲಿ ಕೇಂದ್ರ ಸರ್ಕಾರ ಸ್ಥಾಪಿಸಿದ ದಕ್ಷಿಣ ಪ್ರಾದೇಶಿಕ ಮಣ್ಣು ಮತ್ತು ಸಂರಕ್ಷಣಾ ಸಂಶೋಧನ ಉಪಕೇಂದ್ರವಿದೆ.

ಹೊಸಪೇಟೆ ಬಳಿ ಕಂಪ್ಲಿಯಲ್ಲಿ ವ್ಯವಸಾಯ ತರಬೇತಿ ಶಾಲೆ ಇದೆ. ಜಿಲ್ಲೆಯ ಈ ವಿವಿಧ ಸಂಸ್ಥೆಗಳ ಜತೆಗೆ ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ಸೇರಿಕೊಂಡು ಈ ಜಿಲ್ಲೆಯ ವ್ಯವಸಾಯ ಕ್ಷೇತ್ರದಲ್ಲಿ ವೈಜ್ಞಾನಿಕ ಸಾಗುವಳಿ ಹಾಗೂ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಲು ಸಹಾಯಕವಾಗಿವೆ. 1970-71ರಿಂದ ಒಣಭೂಮಿ ವ್ಯವಸಾಯಾಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಗಿದೆ.

ಮೀನುಗಾರಿಕೆಗೂ ಈ ಜಿಲ್ಲೆಯಲ್ಲಿ ತುಂಬಾ ಅವಕಾಶಗಳಿವೆ. ತುಂಗಭದ್ರ ಜಲಾಶಯದಲ್ಲೇ ವರ್ಷಕ್ಕೆ ಸುಮಾರು 600 ಟನ್ನುಗಳಷ್ಟು ಮೀನು ಹಿಡಿಯಲಾಗುತ್ತಿದೆ. ಜಿಲ್ಲೆಯಲ್ಲಿ ಅನೇಕ ಪಶು ವೈದ್ಯಾಲಯಗಳು, ಕೃತಕ ಗರ್ಭಧಾರಣ ಕೇಂದ್ರಗಳೂ ಇವೆ. ಕುರಿಕುಪ್ಪೆಯಲ್ಲಿ 1948-49ರಲ್ಲಿ ಆಗಿನ ಮದರಾಸು ಸರ್ಕಾರ ಸ್ಥಾಪಿಸಿದ ಕುರಿ ಮತ್ತು ದನದ ಸಂಯುಕ್ತ ಫಾರಂ ಇದೆ. ಕುರಿಕುಪ್ಪೆ ಫಾರಮ್ಮಿಗೆ ಸೇರಿದಂತೆ ಕೋಳಿ ಸಾಕಣೆ ಕೇಂದ್ರ ಪ್ರಾರಂಭವಾಗಿದೆ.

**ಜಿಲ್ಲೆಯ ನಿವ್ವಳ ನೀರಾವರಿ ಪ್ರದೇಶ (2010) :** ಕಾಲುವೆಗಳಿಂದ ಶೇ 7.6 (77836 ಹೆಕ್ಟೇರ್), ಕೆರೆಗಳಿಂದ ಶೇ. 1.2 (2253 ಹೆಕ್ಟೇರ್), ಬಾವಿಗಳಿಂದ ಶೇ. 2.2 (8330 ಹೆಕ್ಟೇರ್) ಕೊಳವೆ ಬಾವಿಗಳಿಂದ ಶೇ. 5.8 (54.245ಹೆ), ಏತ ನೀರಾವರಿಯಿಂದ 20.261 ಹೆ. ಇತರೆ ಮೂಲಗಳಿಂದ 4.961 ಹೆಕ್ಟೇರ್ ಪ್ರದೇಶ ನಿವ್ವಳ ನೀರಾವರಿ ಪ್ರದೇಶವಾಗಿದೆ ಎಂದು 2010ರ ಅಂಕಿ ಅಂಶಗಳು ದಾಖಲಿಸುತ್ತವೆ.

**ಬೆಳೆ ವೈವಿಧ್ಯ :** ಬಳ್ಳಾರಿ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಅರ್ಧಭಾಗ ಪೂರ್ತಿ ವ್ಯವಸಾಯಕ್ಕೆ ವಿನಿಯೋಗವಾಗುತ್ತದೆ. ಇದರಲ್ಲಿ ಬತ್ತ, ರಾಗಿ, ಜೋಳ, ಸಜ್ಜೆ, ದ್ವಿದಳ ಧಾನ್ಯಗಳು, ಕಬ್ಬು, ತೆಂಗು, ಕಡಲೆಕಾಯಿ, ಹತ್ತಿ ಬೆಳೆಯುತ್ತಾರೆ. ಬಾಳೆ, ಮಾವು ಮತ್ತು ನಿಂಬೆ ಹಣ್ಣಿನ ಉತ್ಪನ್ನವೂ ಇದೆ. ತರಕಾರಿ ಎಂದು ಮೆಣಸಿನಕಾಯಿ, ಈರುಳ್ಳಿ, ಟೊಮ್ಯಾಟೊ, ಬದನೆಕಾಯಿ, ಇತ್ಯಾದಿಗಳನ್ನು ತೆಗೆಯುತ್ತಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಉತ್ಪನ್ನವಾದ ಬೆಳೆಗಳ ವಿವರ (1998-99)

ನೆಲಗಡಲೆ - 86,799 ಟನ್

ಕಬ್ಬು - 654,922 ಟನ್

ಹತ್ತಿ - 85,696 ಟನ್

ಕಡಲೆ - 6070 ಟನ್

ತೊಗರಿ - 2,234 ಟನ್

ಇತರೆ ದ್ವಿದಳ ಧಾನ್ಯಗಳು - 809 ಟನ್

ಒಟ್ಟು ದ್ವಿದಳ ಧಾನ್ಯಗಳು - 15851 ಟನ್

**ಮುಖ್ಯ ಬೆಳೆಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)**

ಬತ್ತ - 68,854 ಹೆಕ್ಟೇರ್

ರಾಗಿ - 6,547 ಹೆಕ್ಟೇರ್

ಜೋಳ - 94,463 ಹೆಕ್ಟೇರ್

ಸಜ್ಜೆ - 170524 ಹೆಕ್ಟೇರ್

ಮುಸುಕಿನ ಜೋಳ - 32090 ಹೆಕ್ಟೇರ್

ಗೋಧಿ - 2382 ಹೆಕ್ಟೇರ್

ಇತರೆ ಏಕದಳ ಧಾನ್ಯಗಳು ಮತ್ತು ತೃಣಧಾನ್ಯಗಳು - 24,225 ಹೆಕ್ಟೇರ್

**ಬೆಳೆಗಳು :** ತೋಟಗಾರಿಕೆ ಇಲಾಖೆ ತೆಂಗು ಮತ್ತು ಗೋಡಂಬಿ ಬೆಳೆಯುವ ಪ್ರದೇಶವನ್ನು ವಿಸ್ತರಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಮೇಲೆ ಉಲ್ಲೇಖಿಸಿದ ಕೆಲವು ಬೆಳೆಗಳನ್ನು ಎಷ್ಟು ಹೆಕ್ಟೇರ್/ಟನ್ನುಗಳಲ್ಲಿ ಬೆಳೆಯಲಾಗುತ್ತಿದೆ ಎಂಬ ಅಂಕಿ ಅಂಶಗಳು ಇಂತಿವೆ. ಬತ್ತವನ್ನು 117.9 ಸಾವಿರ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗಿತ್ತು. ಉತ್ಪಾದನೆ - 393.2 ಸಾವಿರ ಟನ್‌ಗಳಾಗಿತ್ತು. (2009) ಜೋಳ 64.5 ಸಾವಿರ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗಿತ್ತು. ಇದರಲ್ಲಿ ಆದ ಉತ್ಪಾದನೆ - 113.3 ಸಾವಿರ ಟನ್. ಹತ್ತಿಯನ್ನು 26.6 ಸಾವಿರ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗಿದ್ದು, 89.7 ಸಾವಿರ ಟನ್ ಉತ್ಪಾದನೆ ಮಾಡಲಾಗಿತ್ತು. ಹಿಪ್ಪುನೇರಳೆ ಸೊಪ್ಪನ್ನು 1100 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗಿದ್ದು, 633.00 ಟನ್ ರೇಷ್ಮೆ ಗೂಡುಗಳ ಉತ್ಪಾದನೆಯನ್ನು ತೆಗೆಯಲಾಗಿದೆ.

**ಪುಷ್ಪ ವೈವಿಧ್ಯತೆ :** ಬಳ್ಳಾರಿಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ಪುಷ್ಪಗಳನ್ನು ಬೆಳೆಯುತ್ತಾರೆ. ಕೊಟ್ಟೂರು ತಾಲ್ಲೂಕಿನಲ್ಲಿ ಮಲ್ಲಿಗೆ ಮತ್ತು ಕಾಕಡ ಬೆಳೆದರೆ, ಹೂವಿನ ಹಡಗಲಿಯಲ್ಲಿ 'ಸೇವಂತಿಗೆ' ಮತ್ತು 'ಕನಕಾಂಬರ' ಸೊಬಗು, ಶ್ರೀಮಂತಿಕೆ ಕಾಣಬಹುದು.

**ಸಹಜ ಕೃಷಿಗೆ ಒಲವು :** 2007-2008 ವರ್ಷಗಳಿಂದ ಸಹಜ ಸಾಗುವಳಿಯತ್ತ ಸದರಿ ಜಿಲ್ಲೆಯ ಕೃಷಿಕರು ಆಸ್ಥೆ ತಾಳುತ್ತಿದ್ದಾರೆ.

ಸಾವಯವ ಕೃಷಿ ನೆಪದಲ್ಲಿ ಈರುಳ್ಳಿ, ಜೋಳ, ಮೆಕ್ಕೆಜೋಳ, ನವಣೆ, ರಾಗಿ ಬೆಳೆಯುತ್ತಿದ್ದಾರೆ. ಬೆಳೆಗಳಿಗೂ ಕೂಡ ಸಾವಯವ ಗೊಬ್ಬರ ಹಾಕುತ್ತಿದ್ದಾರೆ. ವಿಶೇಷವಾಗಿ ಕಾಂಪೋಸ್ಟ್ ಗೊಬ್ಬರ, ಎರೆಹುಳು ಗೊಬ್ಬರ, ಸುಧಾರಿತ ಗೊಬ್ಬರ, ದ್ರವಗೊಬ್ಬರ (ಮಜ್ಜಿಗೆ ದ್ರಾವಣ)ಗಳನ್ನು ಬಳಸುತ್ತಿದ್ದಾರೆ.

**ತರಕಾರಿ ಬೆಳೆ :** ತರಕಾರಿಗಳನ್ನು ಮಾರುಕಟ್ಟೆ ಸಲುವಾಗಿ ಬೆಳೆಯುವುದು ಇಲ್ಲಿ ತೀರಾ ಕ್ವಚಿತ್ತಾಗಿ ಮಾತ್ರ. ಮನೆ ಮುಂಭಾಗವೊ, ಹಿತ್ತಲಲ್ಲೋ ಕೆಲವನ್ನು ಬೆಳೆಯುತ್ತಾರೆ. ಇತ್ತೀಚೆಗೆ ಅರ್ಧ ಎಕರೆಯೊ, ಒಂದು ಎಕರೆಯಲ್ಲೋ ಕೆಲ ತರಕಾರಿಗಳನ್ನು ಬೆಳೆಯುತ್ತಾರೆ. ಮುಖ್ಯವಾಗಿ ಬೆಂಡೆಕಾಯಿ, ಹೀರೆಕಾಯಿ, ಜವಾರಿ ತಳಿ, ಮೆಣಸಿನಕಾಯಿ ಬೆಳೆಯುತ್ತಾರೆ.

**ವಾಣಿಜ್ಯ ಬೆಳೆಗಳು :** ನೀರಾವರಿ ಸೌಲಭ್ಯ ಇರುವ ತಾಲ್ಲೂಕುಗಳಲ್ಲಿ ಕ್ವಚಿತ್ತಾಗಿ ಈರುಳ್ಳಿ, ಮೆಂತ್ಯೆ, ಧನಿಯಾ, ಬೆಳ್ಳುಳ್ಳಿ ಬೆಳೆಯುತ್ತಾರೆ.

**ಹೈನುಗಾರಿಕೆ :** ಜಿಲ್ಲೆಯಲ್ಲಿ ಹೈನುಗಾರಿಕೆಯೂ ಒಂದು ಮುಖ್ಯ ಆರ್ಥಿಕ ಮೂಲವಾಗಿದೆ. ಅಂಕಿ-ಅಂಶಗಳ ಪ್ರಕಾರ ಸ್ಥಳೀಯವಾಗಿ 35,9649 ದನಗಳಿದ್ದರೆ, ವಿದೇಶಿ ತಳಿಗಳ ಸಂಖ್ಯೆ - 09 ತಳಿಸಂಕರದ ಸಂಖ್ಯೆ 9326, ಒಟ್ಟು 3,68,984 ದನಗಳನ್ನು ಜಿಲ್ಲೆ ಒಳಗೊಂಡಿದೆ. ರಾಜ್ಯವಾರು ಹಾಲಿನ ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯ ಪಾಲು ಶೇ 3.7ರಷ್ಟಿದೆ.*

**ಕೃಷಿ ಉಪಕರಣಗಳು :** ಪ್ರಾಯಶಃ ಜಗತ್ತಿನ ಎಲ್ಲಾ ಕಡೆಯೂ ಇರುವ ಈ ವ್ಯವಸಾಯ ಎಂಬ ವೃತ್ತಿ ಇಂದು ಬೇರೆ ಬೇರೆ ದಾರಿಗಳಲ್ಲಿ ಹೊರಳಿ, ವರ್ಧಿಸಿತ್ತಾ ಬಂದಿದೆ. ಪ್ರಗತಿ ಹೊಂದಿದ ಪಾಶ್ಚಾತ್ಯ ದೇಶಗಳಲ್ಲಿ ಆಧುನಿಕ ಯಂತ್ರೋಪಕರಣಗಳ ಬಳಕೆ ಯಥೇಚ್ಛ ಇದ್ದರೆ ಅದಿಲ್ಲದ ದೇಶಗಳು ಇನ್ನೂ ಸಾಂಪ್ರದಾಯಿಕತೆಗೆ ಜೋತು ಬಿದ್ದಿರುವುದರಿಂದ. ಇಳುವರಿಯಲ್ಲಿ ವ್ಯತ್ಯಯ ಇದ್ದರೂ ಅಷ್ಟಿಷ್ಟು ಆರೋಗ್ಯದಿಂದಿರಲು ಸಾಧ್ಯವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕೃಷಿಗೆ ಬಳಸುವ ಉಪಕರಣಗಳು ಇಂತಿವೆ.

| | |
|---|---|
| ಇರುಕ್‌ಗುಂಟೆ | ಇರುಕ್ ಕುಡವನ್ನು ಸೇರಿಸುವ ಕುಂಟೆ |
| ಕಿರಿಗುಂಟೆ | ಬೆಳೆ ಸಣ್ಣದಿರುವಾಗ ಬಳಸುವ ಕುಂಟೆ |
| ಚೋಟುಗುಂಟೆ | ಬೆಳೆ ಎತ್ತರವಿದ್ದಾಗ ಅದರ ನಡುವೆ ಕಳೆಯನ್ನು ತೆಗೆಯಲು ಬಳಸುವ ಕುಂಟೆ |
| ಜಂತು | ತೆನೆ ಜಗ್ಗಲು ಬಳಸುವ ಉಪಕರಣ |
| ಜಂತೆ | ಬೆಳೆಯ ನಡುವೆ ಕಳೆ ತೆಗೆಯಲು ಬಳಸುವ ಕುಂಟೆಯ ಭಾಗ. ಕುಂಟೆಯ ದಿಂಡು ಚಿಪ್ಪನ್ನು ಹಿಡಿದುಕೊಂಡಿರುವ ಮರದ ತುಂಡು. |
| ತೂಮುಗುಂಟೆ | ಬೆಳೆಯ ನಡುವೆ ಕಳೆ ತೆಗೆಯಲು ಎತ್ತುಗಳನ್ನು ಕಟ್ಟಿ ಹೊಡೆಯುವ, ಕುಂಟೆಯ ಅರ್ಧದಷ್ಟಿರುವ ಉಪಕರಣ |
| ತೆರಪ್ಲಿ ಗುಂಟೆ | ದೊಡ್ಡ ಕುಂಟೆ |
| ಪೊಳು ಗುಂಟೆ | ಐದು ಗೇಣುಳ್ಳ ಕುಂಟೆ |

| | |
|---|---|
| ಬಳಗುಂಟೆ | ಬಿತ್ತುವ ಕೂರಿಗೆಯ ಹಿಂದೆ ಸಾಲು ಮುಚ್ಚಲು ಬಳಸುವ ಕುಂಟೆ |
| ಕಬ್ಬಿಣದ ಲಳಿಗೆ | ಹತ್ತಿಯ ಕಾಳನ್ನು ಬಿತ್ತಲು ಬಳಸುವ ಕೂರಿಗೆ |
| ಬಾರಾಲಳಿಗೆ | ಆರು ತಾಳುಗಳಿರುವ ಕೂರಿಗೆ. ಒಂದು ಸುತ್ತಿಗೆ ಹನ್ನೆರಡು ಸಾಲುಗಳಲ್ಲಿ ಬಿತ್ತನೆ ಯಾಗುತ್ತದೆ. |

ಇವಲ್ಲದೆ ಸಾಂಪ್ರದಾಯಿಕ ಉಪಕರಣಗಳಾದ (ಇವೂ ರಾಜ್ಯದ ಭಾಗಶಃ ಎಲ್ಲಾ ಭಾಗಗಳಲ್ಲೂ ಬಳಕೆಯಲ್ಲಿವೆ) ಬಾಂಡ್ಲಿ, ಗುದ್ದಲಿ, ಪಿಕಾಸಿ, ಮಂಕ್ರಿ, ನೇಗಿಲು, ಕೂರಿಗೆ ಇತ್ಯಾದಿ.

ಇಷ್ಟೆಲ್ಲಾ ವೈವಿಧ್ಯ ಉಳ್ಳ ಬಳ್ಳಾರಿಗೆ ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯೂ ಇದೆ. ಬಳ ಎಂಬ ರಾಕ್ಷಸನನ್ನು ಇಂದ್ರನು ಕೊಂದ ಸ್ಥಳವೇ ಬಳ್ಳಾರಿ ಎಂದಾಯಿತು ಎಂಬುದು ಸ್ಥಳ ಐತಿಹ್ಯ.

ಅಲ್ಲದೆ, ಬಳ್ಳಾರಿಯಲ್ಲಿರುವ ದುರ್ಗಮ್ಮ ದೇವತೆಯನ್ನು ಬಳ್ಳಾರಿ ಎಂದು ಕರೆಯುತ್ತಿದ್ದರಾದ್ದರಿಂದ ಊರಿಗೆ ಇದೇ ಹೆಸರು ನಿಂತಿತು ಎಂದು ಹೇಳಲಾಗಿದೆ.

ಈ ಜಿಲ್ಲೆಗೆ ಬಳ್ಳಾರಿ ಎಂಬ ಹೆಸರಿದ್ದುದು 12ನೆಯ ಶತಮಾನದ ಹೊಯ್ಸಳರ ಶಾಸನಗಳಿಂದ ತಿಳಿದು ಬರುತ್ತದೆ. ಜಿಲ್ಲೆಯ ಇತಿಹಾಸ ಮೌರ್ಯರ ಕಾಲದಲ್ಲಿ ಆರಂಭವಾಗಿ -ಬಾದಾಮಿ ಚಾಲುಕ್ಯರು - ರಾಷ್ಟ್ರಕೂಟರು - ನೊಳಂಬರು - ಗಂಗರು ಮುಂದೆ ಮಹಮ್ಮದ್ ಬಿನ್ ತೊಘಲಕ್ ಮೊದಲಾದವರು ಈ ಜಿಲ್ಲೆಯನ್ನು ಆಳಿದರು. ಮುಂದೆ 300 ವರ್ಷ 'ವಿಜಯನಗರ ಸಾಮ್ರಾಜ್ಯ' ಇಲ್ಲಿ ನೆಲೆಗೊಳ್ಳುತ್ತದೆ. ಚರಿತ್ರೆಯ ಸುವರ್ಣ ಪುಟಗಳು ಇಲ್ಲಿ ದಾಖಲಾಗಿವೆ. ಅನಂತರ ಆದಿಲ್‌ಷಾಹಿ-ಮರಾಠ-ಮೊಘಲರು-ಮೈಸೂರಿನ ಹೈದರ್ ಆಲಿ, ಟಿಪ್ಪು - ಅನಂತರ ರ 1800ರ ಹೊತ್ತಿಗೆ ಬ್ರಿಟೀಷರ ಕೈಸೇರಿ ಮುಂದೆ ಆಂಧ್ರಪ್ರದೇಶ ಸ್ಥಾಪನೆಗೊಂಡ ಮೇಲೆ ಇದು ಮೈಸೂರು ಸಂಸ್ಥಾನ ಸೇರಿ ಕರ್ನಾಟಕದ ಬಳ್ಳಾರಿ ಜಿಲ್ಲೆಯಾಗಿ ಹೊಸ ಹುಟ್ಟು ಪಡೆಯಿತು.

**ಸಹಾಯಕ ಗ್ರಂಥಗಳು**


ಕನ್ನಡ ವಿಷಯ ವಿಶ್ವಕೋಶ -ಭೂಗೋಳ ವಿಜ್ಞಾನ, ಕು.ಕ.ಅ.ಸಂಸ್ಥೆ, ಮೈಸೂರು 2009

ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ - ಸಂ 02, ಕು.ಕ.ಅ.ಸಂಸ್ಥೆ, ಮೈಸೂರು, (2005)

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ, ಡಾ. ರಂಗನಾಥ, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರಥಮ ಮುದ್ರಣ 2012

ಕೃಷಿ ಕೈಪಿಡಿ - ಸಂಯೋಜನೆ : ಕೆ.ವಿ. ನಾರಾಯಣ, ಕನ್ನಡ ವಿ.ವಿ. ಹಂಪಿ.



**ಸಹಾಯಕ ವಕ್ತೃ**

ಕೊಟ್ರೇಶ್ ಹಯ್ಯಾಳ, ಸಾವಯವ ಕೃಷಿ ತಜ್ಞ, ಬಳ್ಳಾರಿ

*ಎ.ಜಿ.*

**ಬಳ್ಳಿ ತರಕಾರಿಗಳು** ತರಕಾರಿಗಳಲ್ಲಿ ಹಲವು ವಿಧಗಳಿವೆ. ಗಿಡದಲ್ಲಿ ಬೆಳೆಯುವ ತರಕಾರಿಗಳು, ಬಳ್ಳಿಯಿಂದ ಬೆಳೆಯುವ ತರಕಾರಿಗಳು ಹಾಗೂ ಭೂಮಿಯ ಒಳಗೆ ಬೆಳೆಯುವ ತರಕಾರಿಗಳು. ಬಳ್ಳಿಯಿಂದ ಬೆಳೆಯುವ ತರಕಾರಿಗಳಲ್ಲಿ ಪ್ರಮುಖವಾದವು ಕುಂಬಳಕಾಯಿ, ಹಾಗಲಕಾಯಿ, ಸೋರೆಕಾಯಿ, ಪಡವಲಕಾಯಿ, ತೊಂಡೆಕಾಯಿ, ಚಪ್ಪರದವರೆಕಾಯಿ, ಬೂದುಕುಂಬಳ, ತುಪ್ಪೀರೆಕಾಯಿ, ಹೀರೆಕಾಯ ಮೊದಲಾದವುಗಳು.

**1. ಕುಂಬಳಕಾಯಿ (ಸಿಹಿಕುಂಬಳ) :** ಇದರಲ್ಲಿ ಪ್ರಮುಖವಾಗಿ 'ಎ' ಜೀವಸತ್ವ ಇದೆ. ರೈತರು ಕಡಿಮೆ ಖರ್ಚಿನಲ್ಲಿ ಹೆಚ್ಚು ಬೆಳೆಯಬಹುದಾದ ತರಕಾರಿಯಾಗಿದ್ದು, 3 ರಿಂದ 4 ತಿಂಗಳವರೆಗೆ ಸಂರಕ್ಷಿಸಿ ಇಡಬಹುದಾದ್ದರಿಂದ



ರೈತರಿಗೆ ವರದಾನವಾಗಿದೆ. ಬಳ್ಳಿಯಲ್ಲಿ ಹಣ್ಣಾದ ಕುಂಬಳಕಾಯಿಯ ಬೀಜಗಳನ್ನು ಬೂದಿಬೆರೆಸಿ ಒಣಗಿಸಿ ಒಂದು ಮಡಕೆಯಲ್ಲಿ ಬಿತ್ತನೆಗಾಗಿ ಶೇಖರಿಸಿಡುತ್ತಾರೆ. ವರ್ಷದಲ್ಲಿ ಯಾವ ಕಾಲದಲ್ಲಾದರೂ ಬೆಳೆಯಬಹುದಾಗಿರುತ್ತದೆ. ಬೀಜ ಬಿತ್ತನೆ ಮಾಡಲು, ಭೂಮಿಯನ್ನು ಆಳವಾಗಿ ಉಳುಮೆ ಮಾಡಿ ಸಿದ್ಧಪಡಿಸಬೇಕು. ಕನಿಷ್ಠ 2 ರಿಂದ 3 ಮೀಟರ್ ಅಗಲದ ಸಾಲುಗಳಲ್ಲಿ 90 ಸೆಂ.ಮೀ. ಅಂತರವಿಟ್ಟು, ಮಡಿಗಳನ್ನು ನಿರ್ಮಿಸಬೇಕು. ಈ ಮಡಿಗಳಿಗೆ ಕೊಟ್ಟಿಗೆ ಗೊಬ್ಬರ ಹಾಗೂ ಶೇ. 50 ಸಾರಜನಕ, ಪೂರ್ತಿ ಪ್ರಮಾಣದ ರಂಜಕ ಹಾಗೂ ಪೊಟ್ಯಾಷ್ ಒದಗಿಸುವ ರಾಸಾಯನಿಕ ಗೊಬ್ಬರಗಳನ್ನು ಕೊಟ್ಟು ಮಣ್ಣಿನಲ್ಲಿ ಚೆನ್ನಾಗಿ ಬೆರೆಸಬೇಕು. ಪ್ರತಿ ಮಡಿಯಲ್ಲಿ 3 ರಿಂದ 4 ಬೀಜಗಳನ್ನು ಬಿತ್ತಿ ತೆಳುವಾಗಿ ನೀರು ಹಾಯಿಸಬೇಕು. ಬಿತ್ತಿದ 25 ದಿವಸಗಳ ಅನಂತರ ಉಳಿದ ಶೇ. 50 ಸಾರಜನಕವನ್ನು ಸಸಿಯಿಂದ 8 ರಿಂದ 10 ಸೆಂ.ಮೀ. ದೂರದಲ್ಲಿ ಮೇಲು ಗೊಬ್ಬರವಾಗಿ ಕೊಡಬೇಕು.

ಕುಂಬಳಕಾಯಿ ಹೂ ಬಿಟ್ಟ ಅನಂತರ 30-35 ದಿವಸಗಳಲ್ಲಿ ಕೊಯ್ಲಿಗೆ ಬರುತ್ತದೆ. ಮೊದಲನೆಯ ಕೊಯ್ಲು ಬಿತ್ತಿದ 80 ದಿವಸಗಳ ಅನಂತರ ಬರುತ್ತದೆ. ಹೆಕ್ಟೇರಿಗೆ 30,000 ಕಿ.ಗ್ರಾಂ. ಇಳುವರಿ ಬರುತ್ತದೆ.

ಕುಂಬಳಕಾಯಿಗೆ ಕಂಬಳಿಹುಳ, ಹೇನು, ನಾತಹುಳು, ಹಣ್ಣುನೊಣ ಮುಂತಾದ ಕೀಟಗಳ ಬಾಧೆ, ಬೂಜ ತುಪ್ಪಟ ರೋಗ, ಬೂದಿ ರೋಗ ಮತ್ತು ನಂಜುರೋಗ ಬರುತ್ತದೆ.

**ಮಣ್ಣು :** ಕುಂಬಳಕಾಯಿ ಬೆಳೆಯಲು ನೀರು ಬಸಿದು ಹೋಗುವಂತಹ ಮತ್ತು ಮರಳು ಮಿಶ್ರಿತ ಕೆಂಪುಮಣ್ಣು ಬಹಳ ಯೋಗ್ಯವಾದುದು. ಮಧ್ಯಮ ಕಪ್ಪು ಮತ್ತು ಗೋಡು ಮಣ್ಣುಗಳಲ್ಲಿಯೂ ಕೂಡ ಚೆನ್ನಾಗಿ ಬೆಳೆಯುತ್ತದೆ. ದಕ್ಷಿಣ ಒಣ ಪ್ರದೇಶಗಳಲ್ಲಿ ಜೂನ್-ಜುಲೈ ಮತ್ತು ಜನವರಿ-ಫೆಬ್ರವರಿ ತಿಂಗಳಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಜನವರಿ-ಫೆಬ್ರವರಿ ತಿಂಗಳುಗಳು ಬೆಳೆಯನ್ನು ಪ್ರಾರಂಭಿಸುತ್ತಾರೆ. ಭಾರತದ ಹಾಗೂ ಇತರ ಬೇರೆ ಬೇರೆ ತೋಟಗಾರಿಕಾ ಸಂಸ್ಥೆಯಿಂದ ಅಭಿವೃದ್ಧಿಪಡಿಸಲಾದ ತಳಿಗಳೆಂದರೆ ಅರ್ಕಾ ಸೂರ್ಯಮುಖಿ, ಅರ್ಕಾಚಂದನ್, ಸಿ.ಓ.-1, ಹೈಬ್ರಿಡ್ ಸ್ಕ್ವಾಷ್, ಪೆಟ್ಪಿವಾನ್ ಮುಂತಾದವುಗಳಾಗಿವೆ.

**ಬೂದು ಗುಂಬಳಕಾಯಿ :** ಉತ್ತಮ ಔಷಧಿಯ ಗುಣವನ್ನು ಹೊಂದಿರುವ ಬೂದು ಗುಂಬಳ ಸಿಹಿ ತಿನಿಸುಗಳು ಹಾಗೂ ಖಾರದ ಅಡುಗೆಗೆ ರುಚಿಕರ ತರಕಾರಿಯಾಗಿದ್ದು, ಇದರಲ್ಲಿ ಜೀವಸತ್ವ ಹೆಚ್ಚಿಗೆ ಇರುತ್ತದೆ.



ಕುಂಬಳಕಾಯಿಯಂತೆ ಇದನ್ನು ಕೂಡ ಹೆಚ್ಚು ದಿನಗಳವರೆಗೆ ಕೆಟ್ಟು ಹೋಗದಂತೆ ಶೇಖರಿಸಿ ಇಡಬಹುದು.

ಮರಳು ಮಿಶ್ರಿತ ಹಗುರವಾದ ಮಣ್ಣಿನಲ್ಲಿ ಬೆಳೆಯಬಹುದಾಗಿದ್ದು, ಮಳೆ ಬೀಳುವ ಪ್ರದೇಶಗಳಲ್ಲಿ ಜೂನ್-ಜುಲೈ ತಿಂಗಳಲ್ಲಿ, ದಕ್ಷಿಣ ಒಣಪ್ರದೇಶ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಅಕ್ಟೋಬರ್-ಡಿಸೆಂಬರ್ ತಿಂಗಳಲ್ಲಿ ಹಾಗೂ ನೀರಾವರಿ ಪ್ರದೇಶಗಳಲ್ಲಿ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಸಹ ಬೆಳೆಯಬಹುದಾದ ತರಕಾರಿಯಾಗಿದೆ.

ಉಳುಮೆ ಮಾಡಿ ಸಿದ್ಧಪಡಿಸಿದ ಭೂಮಿಯಲ್ಲಿ ದುಂಡಾದ ಮಡಿಗಳನ್ನು 120 ಸೆಂ.ಮೀ. ಅಂತರದಲ್ಲಿ ಹಾಗೂ 240 ರಿಂದ 300 ಸೆಂ.ಮೀ. ಅಂತರದ ಸಾಲುಗಳಲ್ಲಿ ಮಾಡಬೇಕು. ಅನಂತರ ಮಡಿಗಳಿಗೆ ಕೊಟ್ಟಿಗೆ ಗೊಬ್ಬರ ಕಾಂಪೋಸ್ಟ್ ಹಾಗೂ ಶೇ. 50 ಸಾರಜನಕ ಹಾಗೂ ರಂಜಕವನ್ನು ಮಣ್ಣಿನಲ್ಲಿ ಬೆರೆಸಬೇಕು. ಪ್ರತಿ ಮಡಿಗೆ 3 ರಿಂದ 4 ಬೀಜಗಳನ್ನು ಊರಬೇಕು. ಉಳಿದ ಶೇ. 50ರ ಸಾರಜನಕವನ್ನು ಬಿತ್ತನೆಯಾದ 4 ವಾರಗಳ ನಂತರ ಕೊಡಬೇಕು. ಭೂಮಿಗೆ ಅನುಗುಣವಾಗಿ 5 ರಿಂದ 7 ದಿವಸಗಳ ಅಂತರದಲ್ಲಿ ನೀರು ಕೊಡಬೇಕು. ಬಿತ್ತನೆಯಾದ 3 ವಾರಗಳ ಅನಂತರ ಪ್ರತಿ ಮಡಿಗೆ 1 ಸಸಿ ಬಿಟ್ಟು ಉಳಿದ ಗಿಡಗಳನ್ನು ಕಿತ್ತು ಹಾಕಬೇಕು ಪ್ರತಿ ಸಸಿಯ ಬಳ್ಳಿ ಹಬ್ಬಿಕೊಳ್ಳಲು ಆಧಾರವಾಗಿ ಅಚ್ಚೆಗಳನ್ನು ಊರುಗೋಲಾಗಿ ನೀಡಿ ಚಪ್ಪರದಂತೆ ಉದ್ದಕ್ಕೂ ಹಬ್ಬಿಸಬೇಕು. ಕಾಯಿಗಳು ಬಲಿತಾಗ ಅವುಗಳ ಮೇಲೆ ಸಣ್ಣದಾದ ಮುಳ್ಳುಗಳಿದ್ದು ಅದರ ಮೇಲೆ ನೀಲಿಮಿಶ್ರಿತ ಬೂದುಬಣ್ಣದ ಮೇಣದ ಲೇಪನ ಬರುತ್ತದೆ. ಪ್ರತಿ ಹೆಕ್ಟೇರಿಗೆ 25,000 ಕೆ.ಜಿ. ಇಳುವರಿ ಬರುತ್ತದೆ.

ಕುಂಬಳಕಾಯಿಗೆ ಹತ್ತುವ ರೋಗಗಳು ಬೂದುಗುಂಬಳಕಾಯಿಗೂ ಹತ್ತುತ್ತವೆ. ಸದರಿ ಸಸ್ಯಕ್ಕೆ ಅನುಸರಿಸುವ ಸಂರಕ್ಷಣಾ ವಿಧಾನವನ್ನೇ ಇದಕ್ಕೂ ಅನುಸರಿಸಬೇಕು.

**ತೊಂಡೆಕಾಯಿ :** ಇದು ಬಹುವಾರ್ಷಿಕ ಫಲಕೊಡುವ ಬಳ್ಳಿ. ಸಾಧಾರಣ ಪ್ರಮಾಣದಲ್ಲಿ ಸಾರಜನಕ 'ಎ' ಮತ್ತು 'ಬಿ' ಅನ್ನಾಂಗಗಳನ್ನು



ಹೊಂದಿರುತ್ತದೆ. ಈ ಬೆಳೆಗೆ ಚೆನ್ನಾಗಿ ನೀರು ಬಸಿದು ಹೋಗುವಂತಹ ಆಳವಾದ ಗೋಡು ಮಣ್ಣು ಉಪಯುಕ್ತ. ದಕ್ಷಿಣ ಭಾಗದ ಒಣ ಪ್ರದೇಶಗಳಲ್ಲಿ ಜೂನ್-ಜುಲೈ ಮತ್ತು ಕರಾವಳಿ ಪ್ರದೇಶಗಳಲ್ಲಿ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಬೆಳೆಯಲು ಉತ್ತಮವಾದುದಾಗಿದೆ.

ಭೂಮಿಯನ್ನು ಎರಡು ಮೂರು ಬಾರಿ ಉಳುಮೆ ಮಾಡಿ ಹದಗೊಳಿಸಿದ ಮೇಲೆ 60 ಘನ ಸೆಂ.ಮೀ. ಗುಣಿಗಳನ್ನು 180 ಸೆಂಮೀ. ಅಂತರದ ಸಾಲುಗಳಲ್ಲಿ ತೆಗೆಯಬೇಕು. ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿದ ಕೊಟ್ಟಿಗೆ ಗೊಬ್ಬರ ಮತ್ತು ಮೇಲು ಮಣ್ಣಿನಿಂದ ಗುಣಿಗಳನ್ನು ತುಂಬಬೇಕು. ಒಂದು ಗುಣಿಯಲ್ಲಿ 3 ತುಂಡುಗಳನ್ನು ನೆಡಬೇಕು. ಬಳ್ಳಿಗಳನ್ನು ಚಪ್ಪರದ ಮೇಲೆ ಹರಡುವಂತೆ ಮಾಡಬೇಕು. 16 ತಿಂಗಳುಗಳಲ್ಲಿ ಹಂದರದ ತುಂಬ ಬಳ್ಳಿಗಳು ಹರಡುತ್ತವೆ. ಗೊಬ್ಬರವನ್ನು 3 ಭಾಗಗಳಲ್ಲಿ 4 ತಿಂಗಳ ಅಂತರದಲ್ಲಿ ಕೊಡಬೇಕು.

ತೊಂಡೆ ಬಳ್ಳಿಗೆ ಕುಂಬಳ ದುಂಬಿ, ಹೇನು ಮತ್ತು ಹಣ್ಣು ನೊಣ ಕೀಟಗಳ ಬಾಧೆ ಕಂಡುಬರುತ್ತದೆ. ಬೂಜು ತುಪ್ಪಟ ರೋಗ, ಬೂದಿ ರೋಗ ಹಾಗೂ ನಂಜು ರೋಗಗಳು ಕಂಡುಬರುತ್ತವೆ. ಕುಂಬಳ ಕಾಯಿಗೆ ಸೂಚಿಸಲಾದ ಸಸ್ಯ ಸಂರಕ್ಷಣಾ ಕ್ರಮಗಳನ್ನೆ ಈ ಬೆಳೆಗೂ ಅನುಸರಿಸಬೇಕು. ಬಳ್ಳಿಗಳು 6 ತಿಂಗಳ ಅನಂತರ ಫಲಬಿಡಲು ಪ್ರಾರಂಭಿಸಿ, ವರ್ಷವಿಡೀ ಕಾಯಿ ಕೊಡುತ್ತವೆ. 3-4 ದಿನಗಳಿಗೊಮ್ಮೆ ಕೊಯ್ಲು ಮಾಡಬಹುದು.

**ಸೀಮೆ ಬದನೆಕಾಯಿ :** ಸೀಮೆ ಬದನೆಯಲ್ಲಿ ಹಸುರು ಹಾಗೂ ಬಿಳಿ ಬಣ್ಣದ ತಳಿಗಳಿವೆ. ಇದು ಬಹುವಾರ್ಷಿಕ ತರಕಾರಿ ಬೆಳೆ. ಇದಕ್ಕೆ ತಣ್ಣಗಿರುವ ಹವಾಗುಣ ಉಪಯುಕ್ತ.

ಚೆನ್ನಾಗಿ ನೀರು ಬಸಿದು ಹೋಗವಂತಹ ಫಲವತ್ತಾದ ಮಣ್ಣು ಸೀಮೆ ಬದನೆ ಬೆಳೆಗೆ ಯೋಗ್ಯವಾದುದು. ಎರಡು ಅಡಿ ಆಳದ ಗುಣಿಗಳನ್ನು ಹತ್ತು ಅಡಿ ಅಂತರದಲ್ಲಿ ತೆಗೆಯಬೇಕು. ಗುಣಿಗಳನ್ನು ಕೊಟ್ಟಿಗೆ ಗೊಬ್ಬರ, ಮೇಲ್ಮಣ್ಣಿನಿಂದ ತುಂಬಿ ಮೊಳಕೆಯೊಡೆದ ಕಾಯಿಗಳನ್ನು ಪ್ರತಿಗುಣಿಗೆ ಒಂದರಂತೆ ನಾಟಿ ಮಾಡಬೇಕು. ಬಳ್ಳಿಗಳನ್ನು ಚಪ್ಪರಕ್ಕೆ ಹಬ್ಬಿಸಿ ಗುಣಿಗಳಲ್ಲಿ ಕಳೆ ತೆಗೆಯಬೇಕು. ಬಳ್ಳಿಗಳು 5 ತಿಂಗಳಲ್ಲಿ ಹಬ್ಬಿಕೊಳ್ಳುತ್ತವೆ. ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಭೂಮಿ ಮಟ್ಟಕ್ಕೆ ಕತ್ತರಿಸಬೇಕು. ಪ್ರತಿ ಹೆಕ್ಟೇರಿಗೆ 50,000 ಕೆ.ಜಿ. ಇಳುವರಿ ಪಡೆಯಬಹುದು. ಸಾರಜನಕ, ರಂಜಕ, ಪೊಟ್ಯಾಷ್‌ನ್ನು ರಸಗೊಬ್ಬರಗಳಾಗಿ ಬಳಸಬಹುದು. ಬೆಳೆಗೆ ರೋಗ ತಗುಲಿದಾಗ ಕುಂಬಳ ಬೆಳೆಗೆ ಅನುಸರಿಸುವ ವಿಧಾನಗಳನ್ನೇ ಅನುಸರಿಸಬೇಕು.

**ಸೌತೆಕಾಯಿ :** ಬಾಯಾರಿಕೆಗೆ ತಂಪೆರೆಯುವ ಜನಪ್ರಿಯ ತರಕಾರಿಗಳಲ್ಲಿ ಸೌತೆಕಾಯಿ ಪ್ರಮುಖವಾದುದು. ಬಲಿತ



ಸೌತೆಕಾಯಿಯನ್ನು ಅಡುಗೆಯಲ್ಲಿ ಬಳಸಿದರೆ, ಎಳೆಯ ಕಾಯಿಯನ್ನು ತಾಜಾ ರೂಪದಲ್ಲಿ ತಿನ್ನಲು ಬಳಸುತ್ತಾರೆ. ಅತ್ಯಂತ ಕಡಿಮೆ ಕ್ಯಾಲೋರಿ ಹೊಂದಿರುವ ಇದು ಮುಖದ ಸೌಂದರ್ಯಕ್ಕೂ ಉಪಯುಕ್ತವಾದುದು. 'ಎ' ಮತ್ತು 'ಸಿ' ಜೀವಸತ್ವವನ್ನು ಹೊಂದಿದೆ.

ಇದು ಉಷ್ಣವಲಯದ ತರಕಾರಿಯಾಗಿದ್ದು ಬೇಸಗೆ ಕಾಲದಲ್ಲಿ ಚೆನ್ನಾಗಿ ಬೆಳೆಯುವುದು. ಮರಳು ಅಥವಾ ಮರಳು ಮಿಶ್ರಿತ ಜೇಡಿ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ನೀರು ಬಸಿದು ಹೋಗುವ ಜೇಡಿ ಮಣ್ಣು ಅಥವಾ ಜಂಬಿಟ್ಟಿಗೆ ಮಣ್ಣಿನಲ್ಲಿ ಕೂಡ ಇದನ್ನು ಬೆಳೆಯಬಹುದು. ಜನವರಿ-ಫೆಬ್ರವರಿ ತಿಂಗಳುಗಳು ಸೌತೆಕಾಯಿ ಬೆಳೆಯಲು ಉತ್ತಮ ಅವಧಿ.

ಭೂಮಿಯನ್ನು 2-3 ಬಾರಿ ಚೆನ್ನಾಗಿ ಹದಗೊಳಿಸಿದ ಅನಂತರ 1.5 ಮೀ ರಿಂದ 2 ಮೀ. ಅಂತರದಲ್ಲಿ ಹಳ್ಳ ತೆಗೆಯಬೇಕು. ಚೆನ್ನಾಗಿ ಕಳಿತ ಸಾವಯವ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸಬೇಕು. ಬೀಜ ಬಿತ್ತನೆ ಮಾಡುವ ಮುಂಚೆ ಬಿತ್ತಿದ 10-12 ದಿನಗಳಲ್ಲಿ ಬಂದಿರುವ ಸಸಿಗಳಲ್ಲಿ ಪ್ರತಿ ಮಡಿಗೆ ಒಂದು ಅಥವಾ ಎರಡು ಸಸಿಗಳು ಉಳಿಯುವಂತೆ ಬಿಟ್ಟು ಉಳಿದವನ್ನು ಕಿತ್ತು ಹಾಕಬೇಕು.

ಬಳ್ಳಿಗಳಲ್ಲಿ ಶೀಘ್ರ ಹೆಚ್ಚು ಹೂವುಗಳು ಬಿಟ್ಟು ಬೇಗನೆ ಕಾಯಿಗಳು ಕೊಯ್ಲಿಗೆ ಬರುವಂತೆ ಮಾಡಲು ಹಾಗೂ ಹೆಚ್ಚಿನ ಇಳುವರಿಯನ್ನು ಪಡೆಯಲು ಇಥ್ರೇಲ್ ದ್ರಾವಣವನ್ನು 250 ಪಿ.ಪಿ.ಎಮ್ ಅನ್ನು ಬಳ್ಳಿಗಳಿಗೆ 2-4 ಎಲೆಗಳು ಬಂದ ಅನಂತರ ಸಿಂಪರಣೆ ಮಾಡಬಹುದು. ಕೊಟ್ಟಿಗೆ ಗೊಬ್ಬರ, ರಾಸಾಯನಿಕ ಗೊಬ್ಬರಗಳನ್ನು ಬಳಸಬೇಕು.

ಬೀಜ ಬಿತ್ತಿದ ನಾಲ್ಕು ವಾರಗಳ ಅನಂತರ ಉಳಿದ ಶೇ. 50ರ ಸಾರಜನಕ ರಾಸಾಯನಿಕ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಿ ಏರು ಮಡಿಗಳಾಗಿ ಮಣ್ಣನ್ನು ಚೆನ್ನಾಗಿ ವಿಸ್ತರಿಸಬೇಕು. ಪ್ರತಿ 4 ರಿಂದ 5 ದಿನಗಳಿಗೊಮ್ಮೆ ನೀರು ಕೊಡಬೇಕು.

ಕೆಂಪು ಕುಂಬಳದುಂಬಿ, ಕತ್ತರಿಸುವ ಹುಳು, ಹಣ್ಣು ನೊಣದಂತಹ ಕೀಟಗಳ ಬಾಧೆ ಬೂದಿ ರೋಗ, ಚಿಬ್ಬು ರೋಗ, ಬೂಜು ತುಪ್ಪಟ ರೋಗಗಳು ಕಂಡುಬರುತ್ತವೆ.

ಕುಂಬಳಕಾಯಿಗೆ ಅನುಸರಿಸುವ ಸಸ್ಯ ಸಂರಕ್ಷಣಾ ಕ್ರಮಗಳನ್ನೇ ಇದಕ್ಕೂ ಅನುಸರಿಸಬೇಕು. ಬಿತ್ತಿದ 45 ರಿಂದ 60 ದಿನಗಳಲ್ಲಿ ಕಟಾವಿಗೆ ಸಿದ್ಧವಾಗುವುದು. ಪ್ರತಿ ಹೆಕ್ಟೇರಿಗೆ ಇಳುವರಿಯ ಪ್ರಮಾಣ 15,000 ಕೆ.ಜಿ.ಯಿಂದ 20,000 ಕೆ.ಜಿ. ಇರುತ್ತದೆ.

**ಸೋರೆಕಾಯಿ :** ಸೋರೆಕಾಯಿಯನ್ನು ಎಲ್ಲಾ ಮಣ್ಣುಗಳಲ್ಲಿಯೂ ಬೆಳೆಯಬಹುದು. ಆದರೆ ಇದು ನೀರು ಬಸಿದು ಹೋಗುವಂತಹ ಗೋಡು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಸೋರೆಕಾಯಿಯನ್ನು ಕರ್ನಾಟಕದ



ಎಲ್ಲಾ ಪ್ರದೇಶಗಳಲ್ಲಿ ಬೆಳೆಯಲಾಗು ತ್ತದೆ. ಇದು ಕಬ್ಬಿಣಾಂಶ ಮತ್ತು ಜೀವಸತ್ವಗಳನ್ನು ಹೊಂದಿರುತ್ತದೆ.

ಚೆನ್ನಾಗಿ ಹದಗೊಳಿಸಿದ ಭೂಮಿಯಲ್ಲಿ ಪ್ರತಿಯೊಂದು ಸಾಲಿಗೂ 180 ಸೆಂ.ಮೀ. ಮಡಿಯಿಂದ ಮಡಿಗೆ 90ಸೆಂ.ಮೀ. ಅಂತರ ಬಿಟ್ಟು ದುಂಡಾದ ಮಡಿಗಳನ್ನು ಮಾಡಬೇಕು. ಅನಂತರ ಕೊಟ್ಟಿಗೆ ಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಮಡಿಯಲ್ಲಿ ಚೆನ್ನಾಗಿ ಬೆರೆಸಬೇಕು. ತೆಳುವಾಗಿ ನೀರು ಹಾಯಿಸಿ, ಚಪ್ಪರ ಹಾಕಿ ಬಳ್ಳಿ ಹಬ್ಬುವಂತೆ ನೋಡಿಕೊಳ್ಳಬೇಕು.

ಕೆಂಪು ಕುಂಬಳ ದುಂಬಿ ಮತ್ತು ಹೇನು ಕೀಟಗಳ ಬಾಧೆ, ಹಾಗೂ ಚಿಬ್ಬು ರೋಗ, ಬೂದಿರೋಗ, ಸ್ಕ್ಲೀರೋಶಿಯಂಸೊರಗುರೋಗ ಹಬ್ಬುತ್ತವೆ. ಕುಂಬಳ ಕಾಯಿಗೆ ಸೂಚಿಸಲಾದ ಸಸ್ಯ ಸಂರಕ್ಷಣಾ ಕ್ರಮಗಳನ್ನೇ ಈ ಬೆಳೆಗೂ ಅನುಸರಿಸಬೇಕು. ಇಳುವರಿ ಪ್ರತಿ ಹೆಕ್ಟೇರಿಗೆ 20,000 ದಿಂದ 25,000 ಕಿ.ಗ್ರಾಂ. ಬರುತ್ತದೆ.

**ಹಾಗಲಕಾಯಿ :** ಹಾಗಲಕಾಯಿ ಒಂದು ಉತ್ತಮ ತರಕಾರಿ. ಭಾರತದಾದ್ಯಂತ ಇದು ಕಂಡುಬರುತ್ತದೆ. ಇದು ಕಹಿರಸವುಳ್ಳದ್ದಾಗಿದ್ದು, ಅಧರಕ್ಕೆ ಕಹಿ ಉದರಕ್ಕೆ ಸಿಹಿಯನ್ನು ನೀಡುತ್ತದೆ. ಅಡುಗೆಯಲ್ಲಿ ಮಸಾಲೆ ಹಾಕಿ ಸಾರು, ಗೊಜ್ಜುಗಳಾಗಿ ಬಳಸುತ್ತಾರೆ. ಉಪ್ಪಿನಕಾಯಿಯಾಗಿಯೂ ಉಪಯುಕ್ತವಿದೆ. ಹಾಗಲಕಾಯಿ ಎಂದೇ ಚಿರಪರಿಚಿತವಾಗಿರುವ ಇದನ್ನು



ಸಂಸ್ಕೃತದಲ್ಲಿ ಕಾರವಲ್ಲಿ, ಕಠಿಲ್ಲ ಎಂದೂ ಆಂಗ್ಲಭಾಷೆಯಲ್ಲಿ ಬಿಟ್ಟರ್ ಗಾರ್ಡ್ ಎಂದೂ ತೆಲುಗಿನಲ್ಲಿ ಕಾಕರಕಾಯಿ ಎಂದೂ ಕರೆಯುತ್ತಾರೆ.

ಹಾಗಲಕಾಯಿ ಜಠರದಲ್ಲಿಯ ಆಮ್ಲೀಯತೆಯನ್ನು ಕಡಿಮೆಮಾಡಿ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಪ್ರತಿದಿನ ಹಾಗಲಕಾಯಿ ಪಲ್ಯವನ್ನು ತಯಾರಿಸಿಕೊಂಡು ಆಹಾರದಲ್ಲಿ ಸೇವಿಸುತ್ತಾ ಬಂದರೆ ದೇಹದಲ್ಲಿ ಕಂಡರಿಯದ ರೋಗಗಳಿದ್ದರೆ ತಂತಾನೆ ನಿವಾರಣೆಯಾಗುತ್ತವೆ ಮತ್ತು ರಕ್ತ ಶುದ್ಧಿಯಾಗುತ್ತದೆ. ಹಸಿವು ಉಂಟಾಗುವಂತೆ ಮಾಡುತ್ತದೆ. 'ಎ' ಜೀವಸತ್ವದ ಪ್ರಮಾಣ ಈ ತರಕಾರಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಕಣ್ಣಿಗೆ ಸಂಬಂಧಿಸಿದ ರೋಗಗಳಿಗೆ ಇದು ಉತ್ತಮವಾದ ಪರಿಹಾರವನ್ನು ನೀಡುತ್ತವೆ. ಅಲ್ಸರ್, ಅತಿಸಾರ, ಕೆಮ್ಮು, ಮೂಲವ್ಯಾದಿ, ಚರ್ಮರೋಗಗಳು, ವ್ರಣಗಳು ಮುಂತಾದ ದೋಷಗಳು ಇದರ ಸೇವನೆಯಿಂದ ದೂರವಾಗುವುವು. ಸಕ್ಕರೆ ಕಾಯಿಲೆ ರೋಗಿಗಳು ಪ್ರತಿದಿನ ಹಾಗಲಕಾಯಿಯನ್ನು ಊಟದಲ್ಲಿ ಬಳಸುವುದರಿಂದ ಸಕ್ಕರೆ ಅಂಶವನ್ನು ಹತೋಟಿಯಲ್ಲಿಡಬಹುದು.

ಸಿಡುಬು, ದಡಾರ, ಸೀತಾಳೆ, ಅಮ್ಮ ಇವುಗಳಿಂದಾಗಿ ಉಂಟಾಗುವ ಜ್ವರ, ಮೈಮೇಲಿನ ಗಂದೆಗಳಿಗೆ, ಹಾಗಲ ಎಲೆಗಳ ರಸವನ್ನು ಶುದ್ಧವಾದ ಅರಿಸಿನಪುಡಿಯಲ್ಲಿ ಮಿಶ್ರಗೊಳಿಸಿ ಅವರೆಕಾಳಿನಷ್ಟು ಗಾತ್ರದ ಮಿಶ್ರಣವನ್ನು ಹೊಟ್ಟೆಗೆ ಸೇವಿಸಬೇಕು ಮತ್ತು ಉಳಿದ ಮಿಶ್ರಣವನ್ನು ದೇಹಕ್ಕೆ ಲೇಪಿಸಿ ಕೆಲಸಮಯದ ಅನಂತರ ಸ್ನಾನಮಾಡುವುದರಿಂದ ದೇಹದ ಒಳಗಿರುವ ದೋಷಗಳು ನಿವಾರಣೆಯಾಗಿ ಆರೋಗ್ಯ ಉತ್ತಮಗೊಳ್ಳುವುದು.

ಕ್ಯಾಲ್ಸಿಯಂ, ಪ್ರೋಟೀನ್, ಮೇದಸ್ಸು, ಶರ್ಕರಪಿಷ್ಠಗಳು, ಖನಿಜಾಂಶಗಳು, ರಂಜಕ, ಕಬ್ಬಿಣ 'ಎ' ಜೀವಸತ್ವ, 'ಬಿ' ಜೀವಸತ್ವವನ್ನೊಳಗೊಂಡ ಉತ್ಕೃಷ್ಟವಾದ ತರಕಾರಿ ಈ ಸೇವನೆಯಿಂದ ಹೆಚ್ಚಿನ ಪೋಷಕಾಂಶಗಳು ದೇಹವನ್ನು ಸೇರುತ್ತವೆ. ಆರೋಗ್ಯಭರಿತ ಜೀವನಕ್ಕೆ ವಾರಕ್ಕೊಮ್ಮೆ ಇಲ್ಲವೇ ಎರಡು ಬಾರಿ ಹಾಗಲಕಾಯಿಯ ತಿನಿಸನ್ನು ಮಾಡಿ ಸೇವಿಸುವುದು ಒಳಿತು.

*ಎಸ್.ಎಂ.*

**ಬಾಗಲಕೋಟೆ ಜಿಲ್ಲೆಯ ಕೃಷಿ** ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಜಿಲ್ಲೆಯ ಆಡಳಿತ ಕೇಂದ್ರವಾದ ಬಾಗಲಕೋಟೆ ರಾಜ್ಯದ ಉತ್ತರ ಭಾಗದಲ್ಲಿ 15°48' ರಿಂದ 16°46' ಉ.ಅ. ಮತ್ತು 74°59' ರಿಂದ 76°20' ಪೂ.ರೇ.ದವರೆಗೂ ವಿಸ್ತರಿಸಿದೆ. ಜಿಲ್ಲೆಯ ಪೂರ್ವದಲ್ಲಿ ರಾಯಚೂರು, ವಾಯವ್ಯ ಮತ್ತು ಪಶ್ಚಿಮದಲ್ಲಿ ಬೆಳಗಾಂವಿ, ದಕ್ಷಿಣಕ್ಕೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳು ಸುತ್ತುವರಿದಿವೆ. ಜಿಲ್ಲೆ 6 ತಾಲ್ಲೂಕುಗಳು ಮತ್ತು 18 ಹೋಬಳಿಗಳು, 608 ಗ್ರಾಮಗಳಿಂದ ಕೂಡಿದ್ದು 6,594 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ.

ಇದು ಹಿಂದೆ ತಾಲ್ಲೂಕಾಗಿದ್ದು ಬಿಜಾಪುರ ಜಿಲ್ಲೆಯ ಒಂದು ಭಾಗವಾಗಿತ್ತು. 1997 ಆಗಸ್ಟ್ 15 ರಂದು ಪ್ರತ್ಯೇಕ ಜಿಲ್ಲೆಯಾಯಿತು. ಬಾಗಲಕೋಟೆ, ಬಾದಾಮಿ, ಬೀಳಗಿ, ಹುನಗುಂದ, ಜಮಖಂಡಿ ಮತ್ತು ಮುಧೋಳ ತಾಲ್ಲೂಕುಗಳು ಬಾಗಲಕೋಟೆ ಜಿಲ್ಲೆಗೆ ಸೇರಿವೆ.

**ಮೇಲ್ಮೈ ಲಕ್ಷಣ :** ಜಿಲ್ಲೆಯ ಭೂ ಪ್ರದೇಶ ಕರಿಎರೆ ಮಣ್ಣಿನಿಂದ ಕೂಡಿದ ಒಣಹವೆಯ ಬಯಲುಸೀಮೆ. ಪ್ರಾಕೃತಿಕ ಸಂಪತ್ತಾದ ಅಪೂರ್ವ ಶಿಲೆಗಳಿಂದಾಗಿ ಗಣಿಗಾರಿಕೆ ಇಲ್ಲಿಯ ಪ್ರಮುಖ ಉದ್ಯಮವಾಗಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಮೂರು ಬೆಟ್ಟಸಾಲುಗಳನ್ನು ಕಾಣಬಹುದು. ಕಲಾದಗಿಯ ಆಗ್ನೇಯಕ್ಕೆ ತುಳಸಿಗೇರಿಯ ಬಳಿ ಬೆಟ್ಟ 620 ಮೀ. ಎತ್ತರವಿದ್ದು ಮುಚಕಂಡಿ ಹಾಗೂ ಶಿರೂರಿನ ಬಳಿ ಇರುವ ಬೆಟ್ಟಗಳು ಅನುಕ್ರಮವಾಗಿ 630 ಮೀ. ಮತ್ತು 591 ಮೀ. ಎತ್ತರವಾಗಿವೆ. ವಾಯವ್ಯದಲ್ಲಿ ಜಮಖಂಡಿ ಬೆಟ್ಟಗಳು, ದಕ್ಷಿಣದಲ್ಲಿ ಬಾದಾಮಿ ಬೆಟ್ಟಗಳನ್ನು ಬಿಟ್ಟರೆ ಈ ಜಿಲ್ಲೆ ಸಮತಟ್ಟಾಗಿದೆ. ಬೆಳಗಾಂವಿಯಿಂದ ಹರಿದು ಬರುವ ಕೃಷ್ಣ ನದಿಯು ಜಮಖಂಡಿಯನ್ನು ಪ್ರವೇಶಿಸಿ ಅನಂತರ ಜಿಲ್ಲೆಯ ಅಂಚಿನಲ್ಲಿ ಹರಿಯುತ್ತದೆ. ಘಟಪ್ರಭಾ ಮತ್ತು ಮಲಪ್ರಭಾ ನದಿಗಳು ಕೃಷ್ಣನದಿಯ ಉಪನದಿಗಳಾಗಿದ್ದು ಜಿಲ್ಲೆಯ ನೀರಾವರಿಗೆ ಉಪಯುಕ್ತವಾಗಿವೆ.

**ವಾಯುಗುಣ :** ಬಾಗಲಕೋಟೆ ಹೆಚ್ಚಿನ ಉಷ್ಣಾಂಶವುಳ್ಳ ಜಿಲ್ಲೆ. ಇಲ್ಲಿ ಚಳಿಗಾಲದ ಹಗಲಿನ ವೇಳೆ 29°-30° ಸೆ. ರಾತ್ರಿ ವೇಳೆ 15°-18° ಸೆ. ಉಷ್ಣಾಂಶವಿರುತ್ತದೆ. ಬೇಸಗೆಯಲ್ಲಿ ಹಗಲು 36°-39°. ರಾತ್ರಿ ವೇಳೆ 27°-28° ಸೆ.

**ಖನಿಜ ಸಂಪತ್ತು :** ಈ ಜಿಲ್ಲೆಯಲ್ಲಿ ಖನಿಜ ಸಂಪತ್ತು ಹೇರಳವಾಗಿದೆ. ಸುಣ್ಣಕಲ್ಲು, ಕಬ್ಬಿಣದ ಅದುರು, ಸಿಲಿಕ ಹಾಗೂ ಕಲ್ನಾರು, ಸುಣ್ಣಶಿಲೆ ನಿಕ್ಷೇಪಗಳು ಇಲ್ಲಿ ಮುಖ್ಯವಾದವು. ಬಾಗಲಕೋಟೆ, ಹಾವೇರಿ ಬಳಿ ಇರುವ ಹದ್ದನಕೇರಿ ಪ್ರದೇಶ ಮತ್ತು ಮುಧೋಳ ತಾಲ್ಲೂಕಿನ ಚೌದರಿಮಾನ್ಯ ಮತ್ತು ಲೋಕಾಪುರ ಪ್ರದೇಶಗಳಲ್ಲಿ ಪ್ರಮುಖವಾಗಿ ಇವನ್ನು ಕಾಣಬಹುದು. ಕಬ್ಬಿಣದ ಅದುರು ಸಿಗುವ ಪ್ರಮುಖ ಸ್ಥಳಗಳು ಹುನಗುಂದ ತಾಲ್ಲೂಕಿನ ರಾಮಥಾಳ, ಬಾಗಲಕೋಟೆ ಬಳಿ ಹಾಗೂ ಬಾದಾಮಿ ತಾಲ್ಲೂಕಿನ ಮಹಾಕೂಟಪ್ರದೇಶ ಹಾಗೂ ಯಲ್ಲನಹಟ್ಟಿ ಗ್ರಾಮದ ಸಮೀಪ ಕಲ್ನಾರಿನ ಶಿಲಾನಿಕ್ಷೇಪಗಳಿವೆ.


**ಮಳೆ :** ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 513 ಮಿ.ಮೀ. ಇದ್ದು 2001-201ರ ಜನವರಿ ಮೇ, ಜೂನ್ ತಿಂಗಳಲ್ಲಿ 422 ಮಿ.ಮೀ. ಮಳೆಯಾಗಿದ್ದು ವಾಡಿಕೆ ಮಳೆ ಸರಾಸರಿ 421 ಮಿ.ಮೀ. ಬಾದಾಮಿಯಲ್ಲಿ ವಾಡಿಕೆ ಮಳೆ 590 ಮಿ.ಮೀ. ಇದ್ದು ಮಳೆಯ ಪ್ರಮಾಣ 429 ಆಗಿರುತ್ತದೆ. ಜಮಖಂಡಿಯಲ್ಲಿ ವಾಡಿಕೆ ಮಳೆ 544 ಮಿ.ಮೀ. ಇದ್ದು ಮಳೆಯ ಪ್ರಮಾಣ 461 ಮಿ.ಮೀ. ಆಗಿತ್ತು.

**ಕೃಷಿ ಭೂಮಿ : ವಿಸ್ತೀರ್ಣ :** ಇದು ವಾರ್ಷಿಕವಾಗಿ ಸಾಧಾರಣ ಮಳೆಯನ್ನು ಪಡೆಯುವ ಜಿಲ್ಲೆಯಾಗಿದೆ; ಕೃಷಿಗೆ ಯೋಗ್ಯವಾದ ಪ್ರದೇಶವನ್ನು ಹೊಂದಿದ್ದು ಸಮೃದ್ಧವಾದ ಜಲಸಂಪತ್ತನ್ನು ಕಾಣಬಹುದು.

**ಅ. ಭೂ ಹಿಡುವಳಿದಾರರು :** ಜಿಲ್ಲೆಯಲ್ಲಿ 487116.14 ಕೃಷಿ ಭೂಮಿ ಇದ್ದು 227731 ಭೂ ಹಿಡುವಳಿದಾರರಿದ್ದಾರೆ. ಇದರಲ್ಲಿ 2010-2011ರ ಪ್ರಕಾರ 3233.89 ಹೆ. ವಿಸ್ತೀರ್ಣಕ್ಕೆ 9834 ಪರಿಶಿಷ್ಟ ಜಾತಿ ಅತಿ ಸಣ್ಣ ಭೂ ಹಿಡುವಳಿದಾರಿರುವುದು ಕಂಡುಬರುತ್ತದೆ. ಪುರುಷರು 7092 ಮಹಿಳೆಯರು 2751.

**ಪರಿಶಿಷ್ಟಜಾತಿ**

| | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಹಿಡುವಳಿದಾರರು | ಮಹಿಳೆ | ಪುರುಷ |
|---|---|---|---|---|
| ಅತಿ ಸಣ್ಣಹಿಡುವಳಿದಾರರು | 3233.89 | 9834 | 2751 | 7092 |
| ಸಣ್ಣ ಭೂಹಿಡುವಳಿದಾರರು | 10364.14 | 7285 | 1538 | 5747 |
| ಅರೆ ಮಧ್ಯಮ ಹಿಡುವಳಿದಾರರು | 8462.07 | 5847 | 603 | 5244 |
| ಮಧ್ಯಮ ಭೂಹಿಡುವಳಿದಾರರು | 3483.93 | 617 | 93 | 524 |
| ದೊಡ್ಡ ಭೂ ಹಿಡುವಳಿದಾರರು | 909.32 | 64 | 17 | 47 |
| **ಒಟ್ಟು** | **27421.51** | **19474** | **4591** | **14883** |



**ಪರಿಶಿಷ್ಟ ಪಂಗಡ**

| | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಹಿಡುವಳಿದಾರರು | ಮ. | ಪು. |
|---|---|---|---|---|
| ಅತಿ ಸಣ್ಣಹಿಡುವಳಿದಾರರು | 2039.5 | 3510 | 656 | 2854 |
| ಸಣ್ಣ ಭೂಹಿಡುವಳಿದಾರರು | 4694.91 | 3254 | 529 | 2725 |
| ಅರೆ ಮಧ್ಯಮ ಭೂಹಿಡುವಳಿದಾರರು | 5610.84 | 2091 | 279 | 1812 |
| ಮಧ್ಯಮ ಭೂಹಿಡುವಳಿದಾರರು | 4153.41 | 742 | 99 | 643 |
| ದೊಡ್ಡ ಭೂಹಿಡುವಳಿದಾರರು | 765.18 | 60 | 11 | 49 |
| ಒಟ್ಟು | **17263.84** | **9998** | **1436** | **8562** |

**ಸಾಮಾನ್ಯ ವರ್ಗ**

| | ವಿಸ್ತೀರ್ಣ(ಹೆಕ್ಟೇರುಗಳಲ್ಲಿ) | ಹಿಡುವಳಿ | ಮಹಿಳೆ | ಪುರುಷ |
|---|---|---|---|---|
| ಅತಿ ಸಣ್ಣ ಹಿಡುವಳಿದಾರರು | 32862.67 | 56389 | 8606 | 47783 |
| ಸಣ್ಣ ಭೂಹಿಡುವಳಿದಾರರು | 94315.01 | 64809 | 9583 | 55223 |
| ಅರೆ ಮಧ್ಯಮ ಹಿಡುವಳಿದಾರರು | 132895.37 | 48726 | 6301 | 42425 |
| ಮಧ್ಯಮ ಭೂಹಿಡುವಳಿದಾರರು | 136827.87 | 23844 | 2855 | 20989 |
| ದೊಡ್ಡ ಭೂಹಿಡುವಳಿದಾರರು | 35871.63 | 2532 | 303 | 2229 |
| ಒಟ್ಟು | **439316.88** | **196817** | **27703** | **169114** |

ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಸಾಮಾನ್ಯ ವರ್ಗದ ಹಿಡುವಳಿದಾರರು ಹೆಚ್ಚಾಗಿದ್ದು ಭೂ ಹಿಡುವಳಿ ವಿಭಾಗವಾಗಿ ಇದೆಯೇ ಹೊರತು ಇದನ್ನು ಕೃಷಿ ಉಪಯೋಗಕ್ಕೆ ಬಳಸಿರುವುದುರ ಪ್ರಮಾಣ ಕಡಿಮೆಯಾಗಿರುವುದನ್ನು ಕಾಣಬಹುದು.

**ಭೂ ಉಪಯೋಗ :** ಜಿಲ್ಲೆಯ ಒಟ್ಟು ವ್ಯವಸಾಯ ಮತ್ತು ತೋಟಗಾರಿಕೆ ಭೌಗೋಳಿಕ ವಿಸ್ತೀರ್ಣ 658877 ಹೆ. ವಿಸ್ತೀರ್ಣದಲ್ಲಿ 2011-12 ವಾರ್ಷಿಕ ಬೆಳೆಗಳ ವರದಿಗಳ ಪ್ರಕಾರ 81126 ಹೆ.ವಿ. ಅರಣ್ಯಪ್ರದೇಶ 53642 ಹೆ. ಪ್ರದೇಶ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ 5738 ಹೆ.ಸಾಗುವಳಿ ಮಾಡದಿರುವ ಇತರ ಭೂಮಿ ಹಾಗೂ 40790 ಹೆ. ಬೀಳು ಭೂಮಿ 616301 ಹೆ. ಪ್ರದೇಶ ಬಿತ್ತನೆಯಾದ ಪ್ರದೇಶವಾಗಿದೆ.

**ಕೃಷಿ :** 2011-12ನೇ ಸಾಲಿನಲ್ಲಿ ಬಾದಾಮಿ 139420 ಹೆ., ಬಾಗಲಕೋಟೆ 93627 ಹೆ, ಬೀಳಗಿ 78169 ಹೆ., ಹುನಗುಂದ 135358 ಹೆ., ಜಮಖಂಡಿ 116853 ಹೆ., ಮುಧೋಳ 95450 ಹೆ.ಒಟ್ಟು 658877 ಹೆ.ಗಳಲ್ಲಿ ಭೂಮಿ ಬಿತ್ತನೆ ಬೆಳೆಗೆ ಲಭ್ಯವಾಗಿದೆ. ಅರಣ್ಯಕ್ಕೆ 81126 ಹೆ. ಪ್ರದೇಶ ಸಾಗುವಳಿ ಲಭ್ಯವಿಲ್ಲದಿರುವ ಭೂಮಿ 53642, ಸಾಗುವಳಿ ಮಾಡದಿರುವ ಇತರ ಭೂಮಿ 5738, ಬೀಳು ಭೂಮಿ 40790, ಬಿತ್ತನೆಯಾದ ಪ್ರದೇಶ 616301, ನೀರಾವರಿಯಾದ ನಿವ್ವಳ ಪ್ರದೇಶ 9850 ಹೆ. ಪ್ರದೇಶ.

ಒಟ್ಟು ಕೃಷಿಗೆ ಉಪಯೋಗಿಸುವ ಭೂಮಿಯನ್ನು ಗಮನಿಸಿದಾಗ ಕೃಷಿಯೇತರ ಚಟುವಟಿಕೆಗೆ ಬಳಸಿರುವುದು ಹೆಚ್ಚಾಗಿ ಕಂಡುಬರುತ್ತದೆ. ಜಿಲ್ಲೆಯ ದಕ್ಷಿಣ ಪ್ರದೇಶದಲ್ಲಿ ದಟ್ಟವಾದ ಕಪ್ಪು ಮಣ್ಣು, ಉತ್ತರ ಹಾಗೂ ಪಶ್ಚಿಮ ಭಾಗಗಳಲ್ಲಿ ಮಧ್ಯಮ ಪ್ರಮಾಣದ ಕಪ್ಪು ಮಣ್ಣಿದೆ.

**ಕಾಡುಗಳು :** ಜಿಲ್ಲೆಯಲ್ಲಿ 81,000 ಹೆ. ಅರಣ್ಯವಿದೆ. ಅರಣ್ಯಪ್ರದೇಶ ಹೆಚ್ಚಾಗಿದ್ದರೂ ಹೆಚ್ಚು ಮಳೆ ಬೀಳದ ಕಾರಣ ಇಲ್ಲಿಯ ಅರಣ್ಯಗಳು ದಟ್ಟವಾಗಿಲ್ಲ. ಜಿಲ್ಲೆಯ ಅರಣ್ಯ ಪ್ರದೇಶವನ್ನು ಉಷ್ಣವಲಯದ ಒಣ ಮುಳ್ಳುಗಂಟಿಗಳ ವಿಭಾಗಕ್ಕೆ ಸೇರಿಸಲಾಗಿದೆ. ಬೆಟ್ಟಗುಡ್ಡಗಳ ಮತ್ತು ನದಿ ತೀರದ ಕಾಡುಗಳಲ್ಲಿ ಕಕ್ಕೆ, ದಿಂಡಲು, ಗಂಧ ಮುಂತಾದ ಮರಗಳಿವೆ. ಮೈದಾನ ಪ್ರದೇಶದ ಕಾಡುಗಳಲ್ಲಿ ಹೆಚ್ಚಾಗಿ ಜಾಲಿಮರಗಳನ್ನು ಕಾಣಬಹುದು. ಜೊತೆಗೆ ಬೇವು, ಹುಣಿಸೆ, ನೇರಳೆ, ಆಲ, ಮಾವು ಮುಂತಾದ ಮರಗಳು ಕಂಡುಬರುತ್ತವೆ ಮತ್ತು ಜಮಖಂಡಿ, ಬಾದಾಮಿ, ಮುಧೋಳ ಮತ್ತು ಬೀಳಗಿ ತಾಲ್ಲೂಕುಗಳಲ್ಲಿ ಅರಣ್ಯಪ್ರದೇಶವನ್ನು ಕಾಣಬಹುದು. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ 81126 ಹೆ. ಪ್ರದೇಶದಲ್ಲಿ ಅರಣ್ಯ ವ್ಯಾಪಿಸಿದೆ.

**ನೀರಾವರಿ ಸೌಕರ್ಯಗಳು :** ಈ ಜಿಲ್ಲೆ ಸಮೃದ್ಧ ನೀರಾವರಿ ಸೌಕರ್ಯವನ್ನು ಹೊಂದಿದೆ. ಈ ಪ್ರದೇಶದಲ್ಲಿ ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ಪ್ರಮುಖ ನದಿಗಳು ಹರಿಯುತ್ತವೆ. ಈ ನದಿಗಳು ಫಲವತ್ತಾದ ತೀರಪ್ರದೇಶವನ್ನು ಹೊಂದಿದ್ದು ಕೃಷಿ ಹಾಗೂ ವಾಣಿಜ್ಯ ಬೆಳೆಗಳ ಚಟುವಟಿಕೆಗೆ ಉಪಯುಕ್ತವಾಗಿವೆ. ಕರ್ನಾಟಕದ ಪ್ರಮುಖ ನದಿಯಾದ ಕೃಷ್ಣಾ ನದಿಯ ಜಲಾನಯನ ಕ್ಷೇತ್ರ 1,13,271 ಚ.ಕಿ.ಮೀ. ಇದ್ದು ರಾಜ್ಯದ ಒಟ್ಟು ವಿಸ್ತೀರ್ಣದ ಶೇ. 59.06 ವ್ಯಾಪಿಸಿಕೊಂಡಿದೆ. ಸಹ್ಯಾದ್ರಿ ಶ್ರೇಣಿಯಲ್ಲಿರುವ ಮಹಾರಾಷ್ಟ್ರದ ಸತಾರಾ ಜಿಲ್ಲೆಯ

ಮಹಾಬಲೇಶ್ವರದಲ್ಲಿ ಉಗಮವಾಗುವ ಈ ನದಿ ಜಮಖಂಡಿ ತಾಲ್ಲೂಕಿನ ಮುತ್ತೂರು ಬಳಿ ಬಾಗಲಕೋಟೆ ಜಿಲ್ಲೆಯ ಪ್ರವೇಶಿಸುತ್ತದೆ.

ಕೃಷ್ಣಾನದಿಯ ಪ್ರಮುಖ ಉಪನದಿಯಾದ ಘಟಪ್ರಭಾ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಪಶ್ಚಿಮಘಟ್ಟದಲ್ಲಿ ಸುಮಾರು 884 ಮೀ. ಎತ್ತರದಲ್ಲಿ ಉಗಮಿಸಿ ಪೂರ್ವದ ಕಡೆಗೆ ರತ್ನಗಿರಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಹರಿದು ಬೆಳಗಾಂವಿ ಜಿಲ್ಲೆಯನ್ನು ಪ್ರವೇಶಿಸುವುದು. ಇದನ್ನು ಸೇರುವ ಉಪನದಿಗಳೆಂದರೆ ಹಿರಣ್ಯಕೇಶಿ ಮತ್ತು ಮಾರ್ಕಂಡೇಯ. ಘಟಪ್ರಭಾ ನದಿ ಗೋಕಾಕ್ ಪಟ್ಟಣದ ಪಶ್ಚಿಮದಲ್ಲಿ 53 ಮೀ. ಎತ್ತರದಿಂದ ದುಮುಕಿ ಪ್ರಸಿದ್ಧವಾದ ಗೋಕಾಕ್ ಜಲಪಾತವನ್ನು ನಿರ್ಮಿಸಿದೆ.

ಮಲಪ್ರಭಾ ನದಿ ಕೃಷ್ಣಾನದಿಯ ಮತ್ತೊಂದು ಪ್ರಮುಖ ಉಪನದಿ. ಈ ನದಿಯು ಬೆಳಗಾಂವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಪಶ್ಚಿಮ ಭಾಗದ ಘಟ್ಟದಲ್ಲಿ ಕನ್‌ಕುಂಬಿ ಸಮೀಪದಲ್ಲಿ ಉಗಮಿಸಿ ಪೂರ್ವದ ಕಡೆಗೆ ಹರಿದು ಬಾಗಲಕೋಟೆ ಜಿಲ್ಲೆಯನ್ನು ಪ್ರವೇಶಿಸುವುದು. ಈ ನದಿಯ ಉದ್ದ ಒಟ್ಟು 304 ಕಿ.ಮೀ. ಸವದತ್ತಿಯ ಬಳಿ ಈ ನದಿ ಆಳವಾದ ಕಂದರದಲ್ಲಿ ಹರಿಯುತ್ತಿದ್ದು ಇದನ್ನು 'ನವಿಲು ತೀರ್ಥ' ವೆಂದು ಕರೆಯುವರು. ನದಿಗೆ ಅಡ್ಡಗಟ್ಟೆಯನ್ನು ಕಟ್ಟಿ ಪ್ರಸಿದ್ಧವಾದ ಮಲಪ್ರಭಾ ಜಲಾಶಯವನ್ನು ನಿರ್ಮಿಸಲಾಗಿದೆ.

ಜಿಲ್ಲೆಯಲ್ಲಿ 57775 ಹೆಕ್ಟೇರ್ ಪ್ರದೇಶ ಕಾಲುವೆಗಳಿಂದಲೂ 759 ಹೆಕ್ಟೇರ್ ಕೆರೆಗಳಿಂದಲೂ 9850 ಹೆ. ಬಾವಿಗಳಿಂದಲೂ 97858 ಹೆ. ಪ್ರದೇಶ ಕೊಳವೆ ಬಾವಿಗಳಿಂದಲೂ 2895 ಏತ ನೀರಾವರಿಯಿಂದಲೂ ನೀರಾವರಿ ಸೌಲಭ್ಯ ಇದೆ. ಇದಲ್ಲದೆ ರೈತರು ಇತರ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆಯುತ್ತಿದ್ದಾರೆ. (2011-12) ನೀರಾವರಿಯಲ್ಲಿ ಕೃಷಿಕರು ಬಾವಿ, ಅಂತರ್ಜಲವನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಕೆರೆಗಳ ಸಂಖ್ಯೆ ಕಡಿಮೆಯಾಗಿರುವುದನ್ನು ಕಾಣಬಹುದು.

**ಬೆಳೆಗಳು :** ಜಿಲ್ಲೆಯಲ್ಲಿ ಮುಂಗಾರು, ಹಿಂಗಾರು ಋತುವಿನಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿಯ ಪ್ರಮುಖ ಆಹಾರ ಧಾನ್ಯಗಳು ಬತ್ತ, ಜೋಳ, ರಾಗಿ, ಸಜ್ಜೆ, ಮುಸುಕಿನ ಜೋಳ, ಗೋದಿ. ದ್ವಿದಳ ಧಾನ್ಯಗಳಾದ ತೊಗರಿ, ಹುರುಳಿ, ಉದ್ದು, ಹೆಸರು, ಅಲಸಂದಿ, ಕಡಲೆ ಹಾಗೂ ಎಣ್ಣೆ ಕಾಳುಗಳಾದ ಶೇಂಗಾ, ಸೂರ್ಯಕಾಂತಿ, ಕುಸುಮೆ, ಹರಳು, ಎಳ್ಳು ಮುಂತಾದವುಗಳ ಜೊತೆಗೆ ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು, ತಂಬಾಕು ಬೆಳೆಯುತ್ತಾರೆ. ತೋಟದ ಬೆಳೆಗಳಾದ ತೆಂಗು, ಅಡಕೆ, ಏಲಕ್ಕಿ, ಮೆಣಸು, ಗೋಡಂಬಿ, ಕೊಕೋ ಇವುಗಳ ಜೊತೆಗೆ ತರಕಾರಿಗಳನ್ನು ಸಹ ಬೆಳೆಯುವರು.

**ಆಹಾರ ಮತ್ತು ಆಹಾರೇತರ ಬೆಳೆಗಳು :** ಜಿಲ್ಲೆಯಲ್ಲಿ 2009-10ನೇ ಸಾಲಿನಲ್ಲಿ ಬತ್ತದ ಬೆಳೆ 133 ಹೆಕ್ಟೇರ್ ಇದ್ದರೆ 2011-12ನೇ ಸಾಲಿನಲ್ಲಿ 85 ಹೆ. ಈ ಇಳುವರಿಯನ್ನು ಗಮನಿಸಿದರೆ 2011-12ರಲ್ಲಿ ಕಡಿಮೆಯಾಗಿರುವುದು ಸ್ಪಷ್ಟವಾಗುತ್ತದೆ.

ಒಟ್ಟಾರೆ ಏಕದಳ ಧಾನ್ಯಗಳು, 2009-2010ರಲ್ಲಿ 267743 ಇದ್ದರೆ 2011-12ರಲ್ಲಿ 252480 ಹೆ. ಇಲ್ಲಿಯೂ ಇಳುವರಿ ಕಡಿಮೆಯಾಗಿರುವುದನ್ನು ಗಮನಿಸಬಹುದು.

ದ್ವಿದಳ ಧಾನ್ಯಗಳು 2009-10ರಲ್ಲಿ 379965 ಹೆಕ್ಟೇರ್, 2011-12ರಲ್ಲಿ 22460 ಹೆ.

**ಎಣ್ಣೆ ಕಾಳು** 2009-10ರಲ್ಲಿ 95356 ಹೆ.

2011-12ರಲ್ಲಿ 80201 ಹೆ.

**ವಾಣಿಜ್ಯ ಬೆಳೆಗಳು :**

| | 2009-10 | 2011-12 |
|---|---|---|
| ಹತ್ತಿ | 2824 ಹೆ. | 1881 ಹೆ. |
| ಕಬ್ಬು | 63833 ಹೆ. | 116199 ಹೆ. |
| ತಂಬಾಕು | 1 ಹೆ. | 0 ಹೆ. |

ಒಟ್ಟಿನಲ್ಲಿ ಆಹಾರಧಾನ್ಯಗಳ ಬೆಳೆವಣಿಗೆ ವಿವರಣೆಯನ್ನು ಗಮನಿಸಿದಾಗ ವರ್ಷದಿಂದ ವರ್ಷಕ್ಕೆ ಇಳುವರಿ ಕಡಿಮೆಯಾಗಿರುವುದನ್ನು ನೋಡಬಹುದು.

**ಕೃಷಿ ಉತ್ಪಾದನೆ :** ಜಿಲ್ಲೆಯಲ್ಲಿ 2010-11ರಲ್ಲಿ 1890826 ಹೆ. ಪ್ರದೇಶ ಕೃಷಿಗೆ ಒಳಪಟ್ಟಿದೆ. ಜಿಲ್ಲೆಯ ಒಟ್ಟು ಭೂ ವಿಸ್ತೀರ್ಣ 16575 ಚ.ಕೀ. ಇರುತ್ತದೆ. ಅದರಲ್ಲಿ ತೋಟದ ಬೆಳೆಗಳು, ಹಣ್ಣಿನ ಬೆಳೆಗಳು ಇತ್ಯಾದಿ ಇಂತಿವೆ:

**ತೋಟದ ಬೆಳೆಗಳು :** ಜಿಲ್ಲೆಯಲ್ಲಿ ತೆಂಗು, ಅಡಕೆ, ಏಲಕ್ಕಿ, ಮೆಣಸು, ಗೋಡಂಬಿ, ಕೊಕೋ ಮುಂತಾದವು.

| | | | | |
|---|---|---|---|---|
| ತೆಂಗು | - | 2009-10 | 514 | ಹೆಕ್ಟೇರ್ |
| ಅಡಕೆ | - | 2009-10 | 0 | ಹೆಕ್ಟೇರ್ |
| ಏಲಕ್ಕಿ | - | 2009-10 | 0 | ಹೆಕ್ಟೇರ್ |
| ಮೆಣಸು | - | 2009-10 | 0 | ಹೆಕ್ಟೇರ್ |
| ಗೋಡಂಬಿ | - | 2009-10 | 1 | ಹೆಕ್ಟೇರ್ |
| ಕೋಕೊ | - | 2009-10 | 0 | ಹೆಕ್ಟೇರ್ |

**ಹಣ್ಣಿನ ಬೆಳೆಗಳು :**

| | | | |
|---|---|---|---|
| ಬಾಳೆ | 2009-10 | 1575 | ಹೆಕ್ಟೇರ್ |
| ಮಾವು | 2009-10 | 291 | ಹೆಕ್ಟೇರ್ |
| ನಿಂಬೆ | 2009-10 | 604 | ಹೆಕ್ಟೇರ್ |
| ಪೈನಾಪಲ್ | 2009-10 | 0 | ಹೆಕ್ಟೇರ್ |
| ಸೀಬೆ | 2009-10 | 80 | ಹೆಕ್ಟೇರ್ |
| ದ್ರಾಕ್ಷಿ | 2009-10 | 1221 | ಹೆಕ್ಟೇರ್ |
| ಸಪೋಟ | 2009-10 | 755 | ಹೆಕ್ಟೇರ್ |
| ದಾಳಿಂಬೆ | 2009-10 | 1931 | ಹೆಕ್ಟೇರ್ |
| ಪಪ್ಪಾಯ | 2009-10 | 207 | ಹೆಕ್ಟೇರ್ |

**ತರಕಾರಿ ಬೆಳೆಗಳು :**

| | | | |
|---|---|---|---|
| ಆಲೂಗಡ್ಡೆ | 2009-10 | 0 | ಹೆಕ್ಟೇರ್ |
| ಟೊಮ್ಯಾಟೊ | 2009-10 | 638 | ಹೆಕ್ಟೇರ್ |
| ಬದನೆ | 2009-10 | 793 | ಹೆಕ್ಟೇರ್ |
| ಹುರಳಿಕಾಯಿ | 2009-10 | 0 | ಹೆಕ್ಟೇರ್ |
| ಗೋರಿಕಾಯಿ | 2009-10 | 0 | ಹೆಕ್ಟೇರ್ |
| ಈರುಳ್ಳಿ | 2009-10 | 20320 | ಹೆಕ್ಟೇರ್ |
| ಹಸುರು ಮೆಣಸಿನಕಾಯಿ | 2009-10 | 0 | ಹೆಕ್ಟೇರ್ |
| ಸೊಪ್ಪಿನ ತರಕಾರಿಗಳು | 2009-10 | 0 | ಹೆಕ್ಟೇರ್ |

**ಏಕದಳ ಧಾನ್ಯಗಳು :**

| | | | | | | |
|---|---|---|---|---|---|---|
| ಬತ್ತ | 2009-10 | 133 | ಹೆ. | 2011-12 | 85 | ಹೆ. |
| ಜೋಳ | 2009-10 | 115557 | ಹೆ. | 2011-12 | 111391 | ಹೆ. |
| ಸಜ್ಜೆ | 2009-10 | 43613 | ಹೆ. | 2011-12 | 33222 | ಹೆ. |
| ಮುಸುಕಿನ ಜೋಳ | 2009-10 | 82030 | ಹೆ. | 2011-12 | 82081 | ಹೆ. |
| ರಾಗಿ | 2009-10 | 0 | ಹೆ. | 2011-12 | 0 | ಹೆ. |
| ಗೋಧಿ | 2009-10 | 26356 | ಹೆ. | 2011-12 | 25676 | ಹೆ. |

**ದ್ವಿದಳ ಧಾನ್ಯಗಳು :**

| | | | | | | |
|---|---|---|---|---|---|---|
| ತೊಗರಿ | 2009-10 | 4811 | ಹೆ. | 2011-12 | 7437 | ಹೆ. |
| ಹುರುಳಿ | 2009-10 | 702 | ಹೆ. | 2011-12 | 1656 | ಹೆ. |
| ಉದ್ದು | 2009-10 | 118 | ಹೆ. | 2011-12 | 32 | ಹೆ. |
| ಹೆಸರು | 2009-10 | 36714 | ಹೆ. | 2011-12 | 42815 | ಹೆ. |
| ಅವರೆ | 2009-10 | 174 | ಹೆ. | 2011-12 | 112 | ಹೆ. |
| ಅಲಸಂದಿ | 2009-10 | 1085 | ಹೆ. | 2011-12 | 1051 | ಹೆ. |
| ಕಡಲೆ | 2009-10 | 39260 | ಹೆ. | 2011-12 | 75580 | ಹೆ. |

**ಎಣ್ಣೆ ಕಾಳುಗಳು :**

| | | | | | | |
|---|---|---|---|---|---|---|
| ಶೇಂಗಾ | 2009-10 | 23808 | ಹೆ. | 2011-12 | 21212 | ಹೆ. |
| ಸೂರ್ಯಕಾಂತಿ | 2009-10 | 24551 | ಹೆ. | 2011-12 | 49449 ಹೆ. | |
| ಕುಸುಮೆ | 2009-10 | 2570 | ಹೆ. | 2011-12 | 2500 | ಹೆ. |
| ಹರಳು | 2009-10 | 0 | ಹೆ. | 2011-12 | 20 | ಹೆ. |
| ಎಳ್ಳು | 2009-10 | 2350 | ಹೆ. | 2011-12 | 1949 | ಹೆ. |
| ಅಗಸೆ | 2009-10 | 235 | ಹೆ. | 2011-12 | 1758 | ಹೆ. |
| ಸೋಯ ಅವರೆ | 2009-10 | 2035 | ಹೆ. | 2011-12 | 3026 | ಹೆ. |
| ಹುಚ್ಚೆಳ್ಳು | 2009-10 | 58 | ಹೆ. | 2011-12 | 178 | ಹೆ. |

**ವಾಣಿಜ್ಯ ಬೆಳೆಗಳು :**

| | | | | | | |
|---|---|---|---|---|---|---|
| ಹತ್ತಿ | 2009-10 | 2824 | ಹೆ. | 2011-12 | 1881 | ಹೆ. |
| ಕಬ್ಬು | 2009-10 | 63833 | ಹೆ. | 2011-12 | 116199 | ಹೆ. |
| ತಂಬಾಕು | 2009-10 | 1 | ಹೆ. | 2011-12 | 0 | ಹೆ. |

ಒಟ್ಟಾರೆ ಜಿಲ್ಲೆಯ ಕೃಷಿ ಉತ್ಪನ್ನಗಳನ್ನು ಗಮನಿಸಿದಾಗ ವರ್ಷದಿಂದ ವರ್ಷಕ್ಕೆ ಇಳುವರಿ ಕಡಿಮೆಯಾಗಿರುವುದನ್ನು ಕಾಣಬಹುದು. ಮಳೆಯನ್ನು ಆಧರಿಸಿರುವುದರಿಂದ ಈ ರೀತಿಯ ಏರಿಳಿತ ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು :**


ಕನ್ನಡ ವಿಷಯ ವಿಶ್ವಕೋಶ, ಭೂಗೋಳ ವಿಜ್ಞಾನ

ಕರ್ನಾಟಕ ಪ್ರಾದೇಶಿಕ ಭೂಗೋಳ - ಡಾ. ರಂಗನಾಥ

ಅಂತರ್ಜಾಲ : ಬಾಗಲಕೋಟೆ ಜಿಲ್ಲೆಯ ಅಂಕಿ ಅಂಶಗಳ ನೋಟ 2009-10, 2011-12 ಕರ್ನಾಟಕ ಸರ್ಕಾರ ಪ್ರಕಟಣೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಬಾಗಲಕೋಟೆ ಜಿಲ್ಲೆ


*ವಿ.ಎಲ್.ಕೆ.*

**ಬಾಗೆ** ಇದರ ಮೂಲ ಸ್ಥಳ ಭಾರತ. ಇದು ಫ್ಯಾಬೇಸೀ ಕುಟುಂಬದ ಮೀಮೋಸೀ ಉಪಕುಟುಂಬಕ್ಕೆ ಸೇರಿದ್ದು, ಇದರ ವೈಜ್ಞಾನಿಕ ಹೆಸರು ಅಲ್ಬೀಜಿಯ ಲೆಬಕ್. ಸಂಸ್ಕೃತದಲ್ಲಿ ಶಿರೀಷ ಎಂದೂ ಇಂಗ್ಲಿಷಿನಲ್ಲಿ ಈಸ್ಟ್ ಇಂಡಿಯನ್ ವಾಲ್‌ನಟ್ ಅಥವಾ ಫ್ಲೈಟ್ರೀ ಎನ್ನುತ್ತಾರೆ. ಬೌದ್ಧರ ಪವಿತ್ರ ಮರವಿದು. ಭಾರತದ ದಕ್ಷಿಣ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಹಿಮಾಲಯದ ಪ್ರದೇಶಗಳಲ್ಲೂ ಬೆಳೆಯುವುದು. ಸು. 40-50 ಅಡಿ ಎತ್ತರ ಬೆಳೆಯುತ್ತದೆ. ಇದರ ತೊಗಟೆ ಬೂದು ಅಥವಾ ಕಂದು ಬಣ್ಣ. ಎಲೆಗಳು ಸಂಯುಕ್ತ ಮಾದರಿಯವು. ಪುಷ್ಪಗುಚ್ಛಗಳು ಒತ್ತಾಗಿದ್ದು ಚೆಂಡಿನಾಕಾರದಲ್ಲಿರುತ್ತವೆ. ಆಕರ್ಷಕವಲ್ಲದ ಮಾಸಲು ಬಿಳಿಬಣ್ಣದ ಹೂಗಳು. ಉದ್ದವಾದ ಕೇಸರಗಳುಳ್ಳ ಇವು ಪರಿಮಳಭರಿತವಾಗಿರುತ್ತವೆ. ಏಪ್ರಿಲ್-ಮೇ ತಿಂಗಳಿನಲ್ಲಿ ಹೂ ಬಿಟ್ಟರೆ ಸೆಪ್ಟಂಬರ್-ಅಕ್ಟೋಬರ್‌ನಲ್ಲಿ ಫಲ ನೀಡುತ್ತವೆ. ಅತಿ ಶೀಘ್ರವಾಗಿಯೂ ಹುಲುಸಾಗಿಯೂ ಬೆಳೆಯುವ ಈ ಮರ ರಸ್ತೆಗಳ ಇಕ್ಕೆಲಗಳಲ್ಲಿ ಸಾಲುಮರವಾಗಿ ಬೆಳೆಸುವುದುಂಟು. ಇದನ್ನು ಬೀಜ ಅಥವಾ ಕಾಂಡಗಳಿಂದ ಬೆಳೆಸಬಹುದು. ರೆಂಬೆಕೊಂಬೆಗಳು ಸಮೃದ್ಧವಾಗಿ ಬೆಳೆಯುವುದರಿಂದ ಕಾಫೀ, ಟೀ ತೋಟಗಳಲ್ಲಿ ನೆರಳಿಗಾಗಿ ಬೆಳೆಸುವುದುಂಟು. ಬಲಿತ ಮರದಿಂದ ಸಾಮಾನ್ಯ ದರ್ಜೆಯ ಚೌಬೀನೆ ದೊರೆಯುತ್ತದೆ. ಪೀಠೋಪಕರಣಗಳಿಗಾಗಿ, ಕೃಷಿ ಉಪಯೋಗಿ ವಸ್ತುಗಳಾದ ಚಕ್ರ, ಕಬ್ಬುಗಾಣ, ಎಣ್ಣೆಗಾಣ, ರೈಲು ಸಂಬಂಧಿ ಉಪಕರಣಗಳು, ಕೃಷಿ ಮತ್ತು ಉದ್ಯಮ ಉಪಕರಣಗಳು, ಕಿಟಕಿ, ಬಾಗಿಲು ಇತ್ಯಾದಿ ತಯಾರಿಸಲು ಉಪಯುಕ್ತವಾದ ಮರವಿದು. ಬಾಗೆಮರದ ಸೊಪ್ಪನ್ನು ಮೇವಿಗಾಗಿಯೂ ಗೊಬ್ಬರಕ್ಕಾಗಿಯೂ ಬಳಸುವರು. ಸಾಬೂನಿನ ಬದಲು ಇದರ ತೊಗಟೆಯನ್ನು ಪುಡಿ ಮಾಡಿ ಬಳಸುವರು. ಇದರ ತೊಗಟೆಯಲ್ಲಿ ಔಷಧೀಯ ಗುಣವಿದೆ. ನಾರಿನಿಂದ ಮೀನಿನ ಬಲೆಗಳನ್ನು ನೇಯುವುದುಂಟು.

ಇದನ್ನು ಸಹಜವಾಗಿ ಎಲ್ಲ ಬಗೆಯ ಮಣ್ಣು ಮತ್ತು ಹವಾಗುಣಗಳಲ್ಲಿ ಬೆಳೆಸಬಹುದು. ವಿಶೇಷ ಮುತುವರ್ಜಿ ವಹಿಸುವ ಅಗತ್ಯವಿಲ್ಲದಿದ್ದರೂ ಸಸಿ ಬೆಳೆಯುವವರೆಗೆ ಜಾನುವಾರುಗಳಿಗೆ ಸಿಗದಂತೆ ಕಾಪಾಡಬೇಕು.

*ಎನ್.*

**ಬಾದಾಮಿ** ಪುಷ್ಟಿದಾಯಕ ಬೀಜ ನೀಡುವ ಮರ. ರೋಸೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಪ್ರೂನಸ್ ಅಮಿಗ್ಡಾಲಿಸ್ ಅಥವಾ ಪ್ರೂನಸ್ ಕಮ್ಯೂನಿಸ್. ಇಂಗ್ಲಿಷಿನಲ್ಲಿ ಆಲ್ಮಂಡ್ ಎಂತಲೂ ಕನ್ನಡ, ತೆಲುಗುಗಳಲ್ಲಿ ಬಾದಾಮಿ ಎಂತಲೂ ಕರೆಯುವುದಿದೆ. ಸಕ್ಕರೆ ಬಾದಾಮಿ (ಏಪ್ರಿಕಾಟ್), ಚೆರ್ರಿ, ಪ್ಲಮ್, ಪೀಚ್ ಮೊದಲಾದ ಹಣ್ಣು ಬಿಡುವ ಮರಗಳ ಜಾತಿಗೆ ಸೇರಿದ್ದು. ಇದರ ಮೂಲಸ್ಥಾನ ಪಶ್ಚಿಮ ಏಷ್ಯ. ಇದರಲ್ಲಿ ಅಮಿಗ್ಡಾಲಿಸ್, ಅಮಾರ ಮತ್ತು ಸೇಟಿವ ಎಂದು ಮೂರು ಬಗೆ. ಮೊದಲನೆಯ ಪ್ರಭೇದ ಪಶ್ಚಿಮ ಏಷ್ಯ, ಗ್ರೀಸ್ ಮತ್ತು ಉತ್ತರ ಆಫ್ರಿಕಗಳಲ್ಲಿ ಕಾಡುಗಿಡವಾಗಿ ಬೆಳೆಯುವಂಥದ್ದು. ಇನ್ನೆರಡು ಪ್ರಭೇದಗಳನ್ನು ಕೃಷಿ ಮಾಡಿ ಬೆಳೆಸಲಾಗುತ್ತದೆ. ಅಮಾರ ಜಾತಿ ಕಹಿಯಾಗಿಯೂ ಸೇಟಿವ ಜಾತಿ ಸಿಹಿಯಾಗಿಯೂ ಇರುತ್ತದೆ.



ಕ್ರಿ.ಪೂ. 10ನೇ ಶತಮಾನದಿಂದಲೂ ಬಾದಾಮಿ ಬೇಸಾಯದಲ್ಲಿದೆ. ಗ್ರೀಸ್‌ನಲ್ಲಿ ಇದರ ಬೇಸಾಯ ಆರಂಭವಾದುದು ಕ್ರಿ.ಪೂ. 5ನೇ ಶತಮಾನದಲ್ಲಿ ಎಂದು ತಿಳಿದುಬಂದಿದೆ. ದಕ್ಷಿಣ ಯುರೋಪ್, ಅಮೆರಿಕ ಸಂಯುಕ್ತ ಸಂಸ್ಥಾನ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಭಾರತ ಮುಂತಾದೆಡೆಗಳಲ್ಲಿ ಇದರ ಕೃಷಿ ಇಂದೂ ಇದೆ. ಭಾರತದ ಕಾಶ್ಮೀರ ಭಾಗದಲ್ಲಿ ಬಾದಾಮಿ ಕೃಷಿ ಪ್ರಸಿದ್ಧವಾಗಿದ್ದು, ಅಲ್ಲಿ ಬಾದಾಮಿ ತೋಟಗಳೇ ಉಂಟು. ಹಿಮಾಚಲ ಪ್ರದೇಶ, ಉತ್ತರ ಪ್ರದೇಶಗಳಲ್ಲೂ, ದಕ್ಷಿಣ ಭಾರತದ ರಾಜ್ಯಗಳಲ್ಲೂ ಅತಿ ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಾರೆ.

ಬಾದಾಮಿ ಮರ 30 ಅಡಿ ಎತ್ತರ ಬೆಳೆಯುತ್ತದೆ. ಎಲೆಗಳು ದೋಣಿಯಾಕಾರದವು. ಹೂಗಳು ನಸುಗೆಂಪು ಅಥವಾ ಬಿಳಿಬಣ್ಣವಿದ್ದು ಒಂಟಿಯಾಗಿ ಅರಳುತ್ತವೆ. ಹಣ್ಣು ಅಷ್ಟಿಫಲ ಮಾದರಿಯಾಗಿದ್ದು ಚಿಪ್ಪು ಒರಟು. ಕಂದು ಬಣ್ಣದ ತೆಳು ಪೊರೆಯುಳ್ಳ ಕೋಶ ಇದರದು. ಇದನ್ನೇ ಪಪ್ಪು ಎಂದು ಕರೆಯಲಾಗುವುದು. ಕಹಿ ಮತ್ತು ಸಿಹಿ ಬಾದಾಮಿ ಎರಡನ್ನೂ ಬೆಳೆಸಿದರೂ ಒಂದೊಂದರ ಉಪಯೋಗವೂ ಬೇರೆ ಬೇರೆ. ಕಹಿ ಬಾದಾಮಿಯನ್ನು ಕೇವಲ ಎಣ್ಣೆಗೂ ಸಿಹಿ ಬಾದಾಮಿಯನ್ನು ಹಲವು ರೀತಿಯ ಉಪಯೋಗಕ್ಕಾಗಿಯೂ ಬೆಳೆಸುವರು. ಸಿಹಿ ಬಾದಾಮಿಯಲ್ಲಿ ಮೂರು ಬಗೆ : ಗಡಸು, ಮೃದು ಮತ್ತು ತೆಳು ಚಿಪ್ಪುಳ್ಳಂಥವು.

ಶುಷ್ಕ ಹವೆಯುಳ್ಳ ತಂಪಾದ ಪ್ರದೇಶಗಳಲ್ಲಿ ಇದರ ಕೃಷಿಯನ್ನು ಮಾಡಲಾಗುತ್ತದೆ. ಕಾಯಿ ಮಾಗುವ ಸಮಯದಲ್ಲಿ ಶುಷ್ಕ ವಾತಾವರಣ

ಅತ್ಯಗತ್ಯ. ಹೆಚ್ಚು ತೇವಾಂಶ ಬಯಸುವ ಇದು ಆಳವಾಗಿ ಬೇರನ್ನು ಬಿಟ್ಟು ದೃಢವಾಗಿ ನಿಲ್ಲಬಲ್ಲುದು. ನೀರು ಬಸಿದು ಹೋಗುವಂತಿದ್ದು ಮಣ್ಣು ಫಲವತ್ತಾಗಿರಬೇಕು. ಸಾಮಾನ್ಯವಾಗಿ ಸಸ್ಯಾಭಿವೃದ್ಧಿ ಬೀಜದಿಂದಲೇ. ಸಕ್ಕರೆ ಬಾದಾಮಿ, ಪೀಚ್, ಪ್ಲಮ್ ಮುಂತಾದ ಸಸಿಗಳನ್ನು ಕಣ್ಣು ಕಸಿ, ಚಾವಟಿ ಕಸಿ, ನಾಲಗೆ ಕಸಿ ವಿಧಾನಗಳಿಂದ ಸಿದ್ಧಪಡಿಸಿಕೊಳ್ಳಬಹುದು. ಸಸಿ ನೆಡಲು 3 x 3 ಅಡಿ ಗುಂಡಿಯನ್ನು 25 ಅಡಿ ಅಂತರದಲ್ಲಿ ತೋಡಿ ಸರಿಯಾದ ಪ್ರಮಾಣದಲ್ಲಿ ಗೊಬ್ಬರ, ಮರಳುಮಿಶ್ರಿತ ಗೋಡು ಮಣ್ಣು ಬೆರೆಸಿ ತುಂಬಿ 15 ದಿನಗಳ ತನಕ ಕೊಳೆಯಲು ಬಿಟ್ಟು ಸಸಿ ನೆಡಲಾಗುತ್ತದೆ. ನೆಟ್ಟ ನಾಲ್ಕು ವರ್ಷಗಳ ಅನಂತರ ಫಲ ನೀಡುತ್ತದೆ. ಜುಲೈ ಮತ್ತು ಸೆಪ್ಟೆಂಬರ್ ಅವಧಿಯಲ್ಲಿ ಕೊಯ್ಲಿಗೆ ಬರುತ್ತದೆ. ಫಲ ಬಿಟ್ಟ ಕಾಲದಿಂದ ಸುಮಾರು ಹತ್ತು ವರ್ಷಗಳ ತನಕ ಉತ್ತಮ ಇಳುವರಿ ಕೊಡುತ್ತದೆ. ಹೊರಸಿಪ್ಪೆ ಸೀಳಿದಂತೆ ಇದ್ದರೆ ಹಣ್ಣು ಪಕ್ವವಾಗಿದೆ ಎಂದು ತಿಳಿಯಬೇಕು.

ಬೀಜ ಸಂಸ್ಕರಣೆಯಲ್ಲಿ ಬಹಳ ಎಚ್ಚರಿಕೆ ವಹಿಸಬೇಕು. ಚಿಪ್ಪುಗಳನ್ನು ನೀರಾವಿಯಲ್ಲಿಟ್ಟು ಗಂಧಕದ ಹೊಗೆ ಕೊಡುವುದು, ಒಳಗಿನ ಚಿಪ್ಪು ತೆಗೆದು ಅಲ್ಪಕಾಲ ಬಿಸಿಲಿನಲ್ಲಿ ಒಣಗಿಸುವುದು- ಹೀಗೆ ಹದವರಿತು ಮಾಡಿದರೆ ಬೀಜಕ್ಕೆ ಆಕರ್ಷಣೀಯ ಬಣ್ಣ ಬರುತ್ತದೆ. ಬಾದಾಮಿ ಕಾಯಿಯನ್ನು ಸಂಸ್ಕರಿಸಿದ ಮೇಲೆ ಅದರ ಗುಣಮಟ್ಟಕ್ಕನುಗುಣವಾಗಿ ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂದು ವಿಂಗಡಿಸಿ ಆರು ತಿಂಗಳ ತನಕ ಕಾಪಿಡಬಹುದು.

ಈ ಮರಕ್ಕೆ ಮೂತಿಹುಳು ಮತ್ತು ಇತರ ಕೀಟಗಳು, ಖನಿಜ ಕೊರತೆಯಿಂದುಂಟಾಗುವ ಹಲವು ರೋಗಗಳು ಕಾಡುತ್ತವೆ.

ಪುಷ್ಟಿದಾಯಕವಾದ ಇದರ ಬೀಜಗಳನ್ನು ರಕ್ತಹೀನತೆ, ನಿಶ್ಯಕ್ತಿ, ನರದೌರ್ಬಲ್ಯವಿರುವವರಿಗೆ ನೀಡುವುದು ವಾಡಿಕೆ. ಹಸಿಯಾಗಿಯೂ



ಹುರಿದೂ ಕರಿದೂ ಉಪಯೋಗಿಸಬಹುದು. ಸಿಹಿತಿಂಡಿಗಳಲ್ಲೂ ಇದು ಬಳಕೆಯಲ್ಲಿದೆ. ಸಿಹಿಬೀಜದ ಬಾದಾಮಿ ಎಣ್ಣೆ ಸೌಂದರ್ಯವರ್ಧಕವಾಗಿಯೂ ಉಪಯುಕ್ತ. ಮಧುಮೇಹ ರೋಗಿಗಳಿಗೆ ಉತ್ತಮ ಆಹಾರ. ಯಥೇಚ್ಚವಾಗಿ ಬೆಳೆಯುವೆಡೆ ಎಳಸು ಬೀಜಗಳನ್ನು ಉಪ್ಪಿನಕಾಯಿಗೆ ಬಳಸುವರು. ಈ ಬೀಜದಲ್ಲಿ ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ನಿಕೊಟಿನಿಕ್ ಆಮ್ಲ, ರೈಬೊಫ್ಲೇವಿನ್ ಫೋಲಿಕ್ ಆಮ್ಲ ಇತ್ಯಾದಿ ಅಂಶಗಳು ಅಧಿಕವಾಗಿವೆ.

*ಆರ್.ಎಂ.ಎ.*

**ಬಾರಿ / ಬ್ಯಾರಿ** ಕಪಿಲೆಯಿಂದ ಬಾವಿಯ ನೀರನ್ನು ಮೇಲೆತ್ತುವಾಗ, ಗಾಣದಲ್ಲಿ ಎಣ್ಣೆ ಹಾಗೂ ಕಬ್ಬಿನಿಂದ ಹಾಲು ತೆಗೆಯುವಾಗ ಈ ಕ್ರಿಯೆಯಲ್ಲಿ ಭಾಗವಹಿಸುವ ಎತ್ತುಗಳು ನಿಗದಿತ ಜಾಗದಲ್ಲಿ ಓಡಾಡುತ್ತವೆ. ಆ ಜಾಗವನ್ನು ಬಾರಿ ಎಂದು ಕರೆಯುತ್ತಾರೆ. ಇದು ಸಮತಟ್ಟಾಗಿ ಹಾಗೂ ಇಳಿಜಾರಾಗಿ ಇರುತ್ತದೆ. ಕೃಷಿಕರ ಜೀವನದಲ್ಲಿಬಾರಿ ತನ್ನದೆ ಆದ ಪಾತ್ರವನ್ನು ನಿರ್ವಹಿಸುತ್ತವೆ. ಇದನ್ನು ಕಪಿಲೆ ಬಾರಿ ಮತ್ತು ಗಾಣ ಬಾರಿ ಎಂದು ವಿಂಗಡಿಸಬಹುದು.

**ಕಪಿಲೆ ಬಾರಿ :** ಬಾವಿಯ ಆಳವನ್ನು ಅವಲಂಬಿಸಿ ಬಾರಿಯನ್ನು ಸಿದ್ಧಪಡಿಸುತ್ತಾರೆ. ಎರಡು ಎತ್ತುಗಳು ಲೀಲಾಜಾಲವಾಗಿ ಓಡಾಡುವಷ್ಟು ಅಗಲದ ಈ ಬಾರಿ ಇಳಿಜಾರಾಗಿರುತ್ತದೆ. ಇದನ್ನು ಸಾಮಾನ್ಯವಾಗಿ ಪೂರ್ವ ಅಥವಾ ಉತ್ತರ ದಿಕ್ಕುಗಳಿಗೆ ಅಭಿಮುಖವಾಗಿ ನಿರ್ಮಿಸಿರುತ್ತಾರೆ ಹಾಗೂ ಬಾವಿಯ ಮೆಟ್ಟಿಲುಗಳ ಕ್ರಮ (ಬಲಸುತ್ತು ಅಥವಾ ಎಡಸುತ್ತು)ವನ್ನು ಅನುಸರಿಸಿ, ಕಪಿಲೆ ಮೆಟ್ಟಿಲುಗಳಿಗೆ ತಾಕದಂತೆ ಎಚ್ಚರ ವಹಿಸಿ ಬಾರಿಯನ್ನು ಕಟ್ಟುತ್ತಾರೆ. ಇದಕ್ಕಾಗಿ ಮೊದಲೇ ಇಳಿಜಾರಾಗಿರುವ ಪ್ರದೇಶವನ್ನು ಆಯ್ಕೆ ಮಾಡುವುದುಂಟು. ಇಲ್ಲವೇ ಬಾವಿ ಅಗೆಯುವಾಗ ಬಾವಿಯ ಮಣ್ಣನ್ನು ಬಾರಿಗೆ ಹಾಕಿ ತಮಗೆ ಬೇಕಾದಂತೆ ಸಿದ್ಧಪಡಿಸಿಕೊಳ್ಳುವುದುಂಟು.

ಬಾರಿಯ ನೇರಕ್ಕೆ ಬಾವಿಗೆ ಐದು ಸಾಲು ಕಲ್ಲುಕಟ್ಟಡ (3ಅಡಿ) ಕಟ್ಟಿ ಅದರ ಮೇಲೆ ವಿಸ್ತಾರವಾದ ಕಲ್ಲು ಹಾಸಿ, ಕಲ್ಲು ಹಾಗೂ ಕಟ್ಟಡದ ನಡುವೆ ಅರ್ಧಮೀಟರ್ ಇರುವ ಎರಡು ಕಂಬ (ನಾಲ್ಕು ಬೆರಳು ದಪ್ಪದ ರಂಧ್ರವಿರುವ)ಗಳನ್ನು ಕೂರಿಸುತ್ತಾರೆ. ಈ ಕಂಬಗಳಿಗೆ ಕೂಚ (ಕೋಲಾರ, ಆಂಧ್ರಪ್ರದೇಶ) ಎಂದು ಕರೆಯುತ್ತಾರೆ. ಕೂಚದ ರಂಧ್ರಗಳಿಗೆ ದಪ್ಪನೆಯ 2ರಿಂದ 3 ಅಡಿ ಉದ್ದನೆಯ ಮರದ ಕಡ್ಡಿಗಳನ್ನು ಓರೆಯಾಗಿ ಸೇರಿಸಿ ಬಾವಿಯ ಕಡೆಗೆ ನಿಲ್ಲುವಂತೆ ಮಾಡಿ ಅದಕ್ಕೆ ರಾಟೆಯನ್ನು ಕಟ್ಟುತ್ತಾರೆ. ರಾಟೆಯ ಎತ್ತರ ಸೇರಿದಂತೆ ಬಾರಿಯ ಇಳಿಜಾರಿನ ಘಾತದ ಅಂತರ ಬಾವಿಯ ಆಳದಷ್ಟಿರುತ್ತದೆ. ಇದರ ಮುಖ್ಯಪರಿಕರಗಳು ರೇವು (ಬಾವಿಯಲ್ಲಿ ನೀರು ಮುಳುಗುವ ಜಾಗ), ಕಪಿಲೆ, ವರ್ಜಿಹಗ್ಗ, ಕೊಂಡಿ, ನೊಗ, ನೊಗದ ಬಳೆ (ಬಳಗ) ಮತ್ತು ಎತ್ತುಗಳು. ರಾಟೆಯ ಮೇಲಿನ ವರ್ಜಿಹಗ್ಗಕ್ಕೆ ಕಪಿಲೆ ಬಾನಿಯನ್ನು ಕಟ್ಟಿ ಮತ್ತೊಂದು ತುದಿಯನ್ನು ಕೊಂಡಿಯ ಮೂಲಕ ನೊಗಕ್ಕೆ ಕಟ್ಟಿರುತ್ತಾರೆ. ಇನ್ನೊಂದು ಸಣ್ಣ ಹಗ್ಗ (ತೊಂಡಲ ಹಗ್ಗ)ವನ್ನು ಬಾನಿಯ ತಳದ ಚರ್ಮದ ಚೀಲಕ್ಕೆ ಕಟ್ಟಿದ ಅದರ ಮತ್ತೊಂದು ತುದಿ ಕೊಂಡಿಯ ಮೂಲಕ ಹಾದು ಎತ್ತುಗಳನ್ನು ನಿಯಂತ್ರಿಸುವ ವ್ಯಕ್ತಿಯ ಕೈಯಲ್ಲಿರುತ್ತದೆ. ಈ ಸಣ್ಣ ಹಗ್ಗದ ಸಹಾಯದಿಂದಲೇ ಕಪಿಲೆ ಬಾನಿಗೆ ನೀರನ್ನು ತುಂಬಿಸುವುದು ಮತ್ತು ಸುರಿಯುವುದು. ನೊಗವನ್ನು ಎತ್ತುಗಳ ಹೆಗಲಿಗೆ ಕಟ್ಟುತ್ತಾರೆ. ಎತ್ತುಗಳು ಬಾರಿಯ ಆರಂಭದಲ್ಲಿದ್ದಾಗ, ಬಾವಿಯಲ್ಲಿರುವ ಬಾನಿಯು ಎತ್ತು ಇಳಿಜಾರಿಗೆ ಇಳಿದಂತೆಲ್ಲಾ ಮೇಲೆ ಬರುತ್ತದೆ. ತೊಂಡಲ ಹಗ್ಗವನ್ನು ತುಳಿದಾಗ ಬಾನಿಯ ನೀರು ರಾಟೆಕಟ್ಟೆಯ ಮುಂದೆ ಸುರಿಯುತ್ತದೆ. ಬಾವಿಯಲ್ಲಿ ಹೆಚ್ಚು ನೀರಿದ್ದರೆ ಎತ್ತುಗಳು ಅರ್ಧ ಬಾರಿಯಷ್ಟು ಸಾಗಿ ಹಿಂದಿರುಗುತ್ತವೆ. ನೀರು ಆಳದಲ್ಲಿದ್ದರೆ ಮಾತ್ರ ಸಂಪೂರ್ಣ ಬಾರಿಯನ್ನು ಉಪಯೋಗಿಸುತ್ತಾರೆ.

**ಗಾಣ ಬಾರಿ :** ಎಣ್ಣೆ ಗಾಣ ಹಾಗೂ ಕಬ್ಬಿನ ಗಾಣಗಳಲ್ಲಿಯು ಬಾರಿ ಪ್ರಮುಖವೆನಿಸಿದೆ. ಇದು ಸುಮಾರು ಹತ್ತರಿಂದ ಹದಿನೈದು ಅಡಿ

ಉದ್ದಗಲಗಳನ್ನು ಹೊಂದಿದ್ದು ವೃತ್ತಾಕಾರದಲ್ಲಿರುತ್ತದೆ. ಮಧ್ಯದಲ್ಲಿ ಗಾಣವನ್ನು ಇಟ್ಟಿದ್ದು ಗಾಣದ ಸುತ್ತ ಎತ್ತುಗಳು ಸುತ್ತುತ್ತವೆ. ಇದರಲ್ಲಿ ಒಂಟಿ ಎತ್ತಿನ ಗಾಣ ಹಾಗೂ ಜೋಡಿ ಎತ್ತಿನ ಗಾಣಗಳೂ ಇವೆ. ಗಾಣಕ್ಕೆ ಹೊಂದಿಸಿರುವ ಉದ್ದನೆಯ ಮರಕ್ಕೆ ಎತ್ತುಗಳನ್ನು ಕಟ್ಟಿರುತ್ತಾರೆ. ಎತ್ತು ಬಾರಿ (ಗಾಣದ ಸುತ್ತ ಸುತ್ತುತ್ತಿರುವಾಗ ಗಾಣದಲ್ಲಿಯ ಎಣ್ಣೆಕಾಳುಗಳು ಚೆನ್ನಾಗಿ ಅರೆದು ಎಣ್ಣೆ ಬಿಡಲಾರಂಭಿಸುತ್ತದೆ. (ಹಾಗೆಯೇ ಕಬ್ಬಿಣ ಗಾಣದಲ್ಲಿ ಕಬ್ಬಿನ ರಸ ಸಿಗುತ್ತದೆ). ಎತ್ತುಗಳು ಬಾರಿಯಲ್ಲಿ ದೀರ್ಘ ಸಮಯ ಓಡಾಡಬೇಕಾಗಿರುವುದರಿಂದ ಸಾಧ್ಯವಾದಷ್ಟು ಮೃದುವಾಗಿಸಿ ರುತ್ತಾರೆ (ಅಗೆದು ಮಣ್ಣನ್ನು ಸಡಿಲಿಸಿ) ಹಾಗೂ ತಂಪಾದ ಸಮಯದಲ್ಲಿ ಗಾಣ ಹೊಡೆಯುತ್ತಾರೆ. ಬಾರಿಯನ್ನು ಕಲ್ಲು ಕಟ್ಟಡದಂತೆ ಕಟ್ಟಿ ಮಣ್ಣು ತುಂಬಿ ಸಿದ್ಧ ಮಾಡುವುದುಂಟು. ಕಪಿಲೆ ಬಾರಿಗೆ ಇಕ್ಕೆಲಗಳಲ್ಲಿ ಕಟ್ಟಡ ಕಟ್ಟಿದರೆ ಗಾಣ ಬಾರಿಗೆ ವೃತ್ತಾಕಾರದ ಕಟ್ಟಡ (ಐದರಿಂದ ಎಂಟು ಸಾಲು) ಕಟ್ಟಿ ಮಣ್ಣು ತುಂಬುವರು.

ಕಪಿಲೆ ಅಥವಾ ಗಾಣ ಹೊಡೆಯುವಾಗ ಶ್ರಮ ಮರೆಯಲು, ಬೇಸರ ಕಳೆಯಲು ಹಾಡುಗಳನ್ನು ಹಾಡುತ್ತಿದ್ದುದುಂಟು. ಗಾಣ ಬಾರಿಯಲ್ಲಿ ಕೆಲವೊಮ್ಮೆ ವ್ಯಕ್ತಿ ಇಲ್ಲದೆಯೇ ಎತ್ತುಗಳು ಸುತ್ತುತ್ತಿರುತ್ತವೆ. ಆದರೆ ಕಪಿಲೆ ಬಾರಿಯಲ್ಲಿ ಕಪಿಲೆಯನ್ನು ಬಾವಿಗೆ ಇಳಿಸಲು, ನೀರು ತುಂಬಿಸಲು ಹಾಗೂ ಮೇಲೆ ಬಂದ ನೀರನ್ನು ಸುರಿಯಲು ಎತ್ತುಗಳನ್ನು ಬಾರಿಯಲ್ಲಿ ಮುಂದಕ್ಕೆ ಹಾಗೂ ಹಿಂದಕ್ಕೆ ಕರೆತರಲು ಒಬ್ಬ ಅನುಭವಿ ವ್ಯಕ್ತಿ ಇರಲೇಬೇಕಾಗುತ್ತದೆ.

**ವಕ್ತೃಗಳು :** ರಾಮಕೃಷ್ಣಪ್ಪ, ಸೂಲಿಕುಂಟೆ, ಬಂಗಾರಪೇಟೆ

ಶ್ರೀನಿವಾಸಮೂರ್ತಿ, ಬಂಡಾರಹಳ್ಳಿ, ಕೋಲಾರ

*ಎನ್. ಆರ್.*

**ಬಾರೆಹಣ್ಣು** ಕರ್ನಾಟಕದ ಕೆಲವೇ ಭಾಗಗಳಲ್ಲಿ ಬೆಳೆಯುವ ತಳಿ. ಇದರಲ್ಲಿ ಅರಿಸಿನ, ಹಸುರು ಮತ್ತು ಕಂದು, ಕೆಂಪು ಬಣ್ಣದ ಜಾತಿಗಳಿವೆ. ಸಾಮಾನ್ಯವಾಗಿ ನವೆಂಬರ್ ತಿಂಗಳು ಕಳೆಯುತ್ತಿದ್ದಂತೆ ಚಳಿಗಾಲದಲ್ಲಿ ಫಸಲು ಕೊಡುತ್ತದೆ. ವೃತ್ತಾಕಾರ, ಮೊಟ್ಟೆಯಾಕಾರ ಮತ್ತು ಚಪ್ಪಟೆಯಾಕಾರದಲ್ಲಿ ಹಣ್ಣನ್ನು ಕೊಡುವ ವಿವಿಧ ತಳಿಯ ಸಸಿಗಳಿವೆ. ಕರ್ನಾಟಕದಲ್ಲಿ ಇಂಡಿ ತಾಲ್ಲೂಕಿನಲ್ಲಿ ವಿಶೇಷವಾಗಿ ಬೆಳೆಯುತ್ತಾರೆ.

**ಬಿತ್ತನೆ ಮತ್ತು ನೆಲ :** ಯಾವುದೇ ಮಣ್ಣಿನಲ್ಲಿ ಯಾವುದೇ ಹವಾಗುಣದಲ್ಲಿ ವರ್ಷದ ಎಲ್ಲಾ ಋತುಗಳಲ್ಲಿಯೂ ಫಸಲನ್ನು ಕೊಡುತ್ತದೆ. ಮುರಕಲ್ಲು, ಗೊರಜು, ಬರಡು ನೆಲದಲ್ಲೂ ಸಿಹಿಯಾದ ಹಣ್ಣನ್ನು ಕೊಡುವುದು ಇದರ ವಿಶೇಷ. ಕಡುಬಿಸಿಲಿನಲ್ಲಿ, ಕೊರೆಯುವ ಚಳಿ ಇರಲಿ; ಮಳೆಯಥೇಚ್ಛವಾಗಿ ಸುರಿಯಲಿ ತನ್ನ ಪಾಡಿಗೆ ತಾನು ಬೆಳೆದು ಹಣ್ಣನ್ನು ಕೊಡುವ ಗುಣವನ್ನು ಹೊಂದಿದೆ. ನೀರು ಬಸಿದು ಹೋಗುವ ಮರಳು ಮಿಶ್ರಿತ ಮಣ್ಣು, ಮಡ್ಡಿ, ಕಲ್ಲು, ಬೆಟ್ಟ, ಹಳ್ಳ, ದಿನ್ನೆ ಎನ್ನದೆ ಎಲ್ಲಿ ಬೇಕಾದರೂ ಸಸಿನೆಟ್ಟು ಬೆಳಸಿ ಫಲ ಪಡೆಯಬಹುದು.


**ನಾಟಿ :** ಸಸಿಯಿಂದ ಸಸಿಗೆ 15 ಅಡಿ ಅಂತರವಿರಬೇಕು. ಮೂರು ಅಡಿ ಅಗಲ, ಮೂರು ಅಡಿ ಆಳದ ಗುಂಡಿಯನ್ನು ತೋಡಿ, ಅದರಲ್ಲಿ ಮುಕ್ಕಾಲು ಭಾಗ ಕೊಳೆತ ಕೊಟ್ಟಿಗೆ ಗೊಬ್ಬರವನ್ನು ತುಂಬಿ ಮೇಲೆ ಎರಡಿಂಚು ಮರಳನ್ನು ಸೇರಿಸಿ ಒಂದೆರಡು ವಾರ ಕೊಳೆಯಲು ಬಿಟ್ಟು.



ಸಸಿಯನ್ನು ನೆಡಬಹುದು. ಮೂಲ ಸಸಿಯ ಬೀಜ ಇಲ್ಲವೆ ಕಣ್ಣು ಕಸಿ ಮಾಡಲು ನಾಟಿ ತಳಿಯ ಬೀಜವನ್ನು ಉಪಯೋಗಿಸಬಹುದು. ಕಸಿ ಮಾಡಿದ ಗಿಡವನ್ನು ಒಂದು ವರ್ಷ ಕಾಲ ನೆರಳಿನಲ್ಲಿ ಬೆಳೆಸಿ ನೆಟ್ಟರೆ ಅದೇ ವರ್ಷ ಫಲ ಕೊಡಲಾರಂಭಿಸುತ್ತದೆ. ಚೆನ್ನಾಗಿ ಬೇರು ಬಿಟ್ಟು ಬೆಳೆಯುವವರೆಗೆ ನೀರನ್ನು ಕೊಡಬೇಕು. ಸಸಿ ನೆಡಲು ಏಪ್ರಿಲ್ ಮೇ ತಿಂಗಳು ಯೋಗ್ಯವಾದ ಕಾಲ. ಗಿಡ ಬೆಳೆದಂತೆಲ್ಲಾ ಇಳುವರಿಯೂ ಹೆಚ್ಚಾಗುತ್ತದೆ. ವರ್ಷಕ್ಕೊಮ್ಮೆ ಅಡ್ಡಾದಿಡ್ಡಿ ಬೆಳೆದ ರೆಂಬೆಗಳನ್ನು ಸವರಿ ಪಾತಿಯನ್ನು ಕೆದಕಿ ಗೊಬ್ಬರವನ್ನು ಕೊಡಬೇಕು. ಅನೇಕ ಕೃಷಿಕರಿಗೆ ಇದರ ಪರಿಚಯವಿಲ್ಲ. ಇದರ ಪರಿಚಯವಿರುವ ರೈತರು ತಮ್ಮ ಜಮೀನುಗಳಲ್ಲಿ ಇತ್ತೀಚೆಗೆ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಒಂದು ಎಕರೆಯಲ್ಲಿ 150 ಸಸಿಗಳನ್ನು ನೆಡಬಹುದು. ರೋಗ ರುಜಿನಗಳ ಬಾಧೆಯಿಲ್ಲ. ಮಾರಾಟದ ತೊಂದರೆಯಿಲ್ಲ.

*ಎಸ್. ವಿ.*

**ಬಾವಿ** ಭೂಗರ್ಭದಲ್ಲಿರುವ ದ್ರವ ರೂಪದ ವಸ್ತುವನ್ನು ಹೊರತೆಗೆಯಲು ಮಾಡಿಕೊಂಡ ವಿಧಾನ. ಕೇವಲ ನೀರನ್ನು ಮಾತ್ರವಲ್ಲದೆ ಪೆಟ್ರೋಲ್, ಸೀಮೆಎಣ್ಣೆ ಮತ್ತಿತರ ನೈಸರ್ಗಿಕ ಅನಿಲಗಳನ್ನು ಹೊರತೆಗೆಯಲು ಬಾವಿಗಳನ್ನು ತೋಡಲಾಗುತ್ತದೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬಾವಿಗಳನ್ನು ಈ ಕಾರಣಗಳಿಗೆ ತೋಡುವರಾದರೂ ದಕ್ಷಿಣ ಭಾರತದಲ್ಲಿ ಬಹುತೇಕ ಬಾವಿಗಳು ನೀರಿನ ಉಪಯೋಗ ಕ್ಕಾಗಿ ನಿರ್ಮಾಣ ವಾಗಿರುತ್ತವೆ.



ಬಾವಿಗಳನ್ನು ಅವುಗಳ ಉಪ ಯುಕ್ತತೆ, ಆಕಾರ, ಆಳ, ಅಗಲಗಳಿಗೆ ಅನುಗುಣವಾಗಿ

ನಿರ್ಮಿಸಿಕೊಳ್ಳುತ್ತಾರೆ. ಉಪಯುಕ್ತ ಬಾವಿಗಳಲ್ಲಿ ಉತ್ಪಾದನಾ ಬಾವಿ, ಅಂತರ್ಗತ ಬಾವಿ, ಸಮೀಕ್ಷಣಾ ಬಾವಿ ಎಂದು ಮರು ವಿಂಗಡಣೆ ಮಾಡಬಹುದು. ಉತ್ಪಾದನಾ ಬಾವಿಯನ್ನು ಮನೆ ಬಳಕೆಗಾಗಿ ಮತ್ತು ಕುಡಿಯುವ ನೀರಿಗಾಗಿ ವ್ಯವಸಾಯಕ್ಕೋಸ್ಕರ ನಿರ್ಮಿಸುತ್ತಾರೆ. ಹಾಗೆಯೇ ಪೆಟ್ರೋಲು, ಸೀಮೆ ಎಣ್ಣೆ ಮತ್ತಿತರ ರಾಸಾಯನಿಕ ವಸ್ತುಗಳನ್ನು ಪಡೆಯಲು ತೋಡಿದ ಬಾವಿಗಳು ಪ್ರಪಂಚಾದ್ಯಂತ ಹೆಚ್ಚಾಗಿ ಕಂಡುಬರುವಂಥವು. ಭೂಮಿಯೊಳಕ್ಕೆ ಅನಿಲ ಅಥವಾ ದ್ರವರೂಪದ ವಸ್ತುಗಳನ್ನು ಹೊಗಿಸಲು ಬಳಸುವ ಬಾವಿಗಳು ಅಂತರ್ಗತ ಬಾವಿಗಳು. ಸಮುದ್ರದ ಉಪ್ಪುನೀರು ಅಥವಾ ಅಶುದ್ಧ ನೀರು ಸಿಹಿನೀರನ್ನು ಕಲುಷಿತಗೊಳಿಸದ ಹಾಗೆ ಅಂತರ್ಗತ ಬಾವಿಗಳನ್ನು ತೋಡಿ ನೀರಿನ ಒತ್ತಡವನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ಭೂಮ್ಯಂತರ್ಗತ ನೀರಿನ ಮಟ್ಟವನ್ನು ಅಳೆಯಲು ಮತ್ತು ಅನಿಲಗಳ ಪ್ರಮಾಣ ತಿಳಿಯಲು ಸಮೀಕ್ಷಣಾ ಬಾವಿಯನ್ನು ತೋಡುವರು.

**ಬಾವಿ ನಿರ್ಮಾಣ :** ಸಾಮಾನ್ಯವಾಗಿ ನೀರಿನ ಸೆಲೆ ಇರಬಹುದಾದ ಎಡೆಗಳಲ್ಲಿ ಬಾವಿ ತೋಡುವುದು ಕ್ರಮ. ಮುಖ್ಯವಾಗಿ ತೋಡು ಬಾವಿ, ಕೊಳವೆ ಬಾವಿ, ಕೊರೆದಬಾವಿ, ನೀರ್ಕೊರೆತ ಬಾವಿ ಮತ್ತು ಬೈರಿಗೆ ಬಾವಿ ಎಂದು ಐದು ಬಗೆ.

**ತೋಡುಬಾವಿ:** ಅತ್ಯಂತ ಪ್ರಾಚೀನ ಕಾಲದಿಂದಲೂ ಮಾನವ ವಾಸಿಸುವ ಪ್ರದೇಶದಲ್ಲಿ ನೀರಿಗಾಗಿ ಮತ್ತು ವ್ಯವಸಾಯಕ್ಕಾಗಿ



ತೋಡುಬಾವಿಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಇವು ಲಂಬವಾಗಿ, ಗುಂಡಾಗಿ, ಅಂಡಾಕಾರವಾಗಿ, ಚಚ್ಚೌಕವಾಗಿ ಹಾಗೂ ನೀಳಚೌಕವಾಗಿರುತ್ತವೆ. ಕೆಲವು ಕಡೆ ಸುರಂಗಬಾವಿ ಮತ್ತು ಜಲಮಂಚ ಬಾವಿಗಳೂ ಇವೆ. ಅಪೂರ್ವವಾಗಿ ಕೆಲವೆಡೆ ಹೆಚ್ಚು ಜಲ ಒತ್ತಡವಿದ್ದು ನೀರು ಚಿಮ್ಮಿದರೆ ಅಂಥವನ್ನು ಕಾರಂಜಿ ಬಾವಿಗಳೆಂದು ಕರೆಯುತ್ತಾರೆ. ತೋಡುಬಾವಿಗಳು ಅಂತರ್ಜಲ ಲಭ್ಯತೆಗೆ ಅನುಗುಣವಾಗಿರುತ್ತವೆ. ಮರಳು ಪ್ರದೇಶ ಅಥವಾ ಸಡಿಲ ಮಣ್ಣುಗಳಿರುವೆಡೆ ಬಾವಿಗಳಿಗೆ ಕೆಳಹಂತದಿಂದ ಕಲ್ಲು ಕಟ್ಟಡ ಕಟ್ಟಿ ಇಳಿಯಲು ಮೆಟ್ಟಿಲುಗಳನ್ನೂ ನಿರ್ಮಿಸುವುದಿದೆ.

**ಕೊಳವೆ ಬಾವಿ :** ಬೈರಿಗೆಯಂತಹ ಯಂತ್ರದ ಸಹಾಯದಿಂದ ಕೊರೆಯುವ ಬಾವಿ.

**ಕೊರೆದ ಬಾವಿ :** ಬಂಡೆಯಂತಹ ಕಠಿಣ ಭೂಭಾಗಗಳಲ್ಲಿ ಉಕ್ಕಿನ ಕಾಂಡದ (100 ಕೆಜಿ. ತೂಕದ) ತುಂಡನ್ನು ಸುತ್ತಿಗೆಯಂತೆ ಬಳಸಿ ಶಿಲಾಪದರಗಳನ್ನು ಪುಡಿ ಮಾಡಿ ಕೊರೆದಂಥವು.

**ನೀರ್ಕೊರೆತ ಬಾವಿ :** ಅತಿರಭಸದಿಂದ ನುಗ್ಗುವ ನೀರಿಗೆ ಕೊಳವೆ ಅಳವಡಿಸಿ ನಿರ್ಮಿಸಿಕೊಳ್ಳುವಂಥದ್ದು.

**ಬೈರಿಗೆ ಬಾವಿ :** ಶಿಲಾ ಸಮೂಹಗಳಲ್ಲಿರಬಹುದಾದ ಜಲವನ್ನು ಹೊರ ತೆಗೆಯುವ ವಿಧಾನವಿದು.

**ಉಪಯೋಗಗಳು :** ಗೃಹೋಪಯೋಗಕ್ಕೆ ಬಾವಿ ನೀರು ಅತ್ಯಮೂಲ್ಯ. ಅದಕ್ಕಿಂತ ಮಿಗಿಲಾಗಿ ಸಣ್ಣ ಹಿಡುವಳಿದಾರರಿಗೆ ಬಾವಿ ನೀರೇ ಪ್ರಮುಖ. ಜಮೀನಿನ ವಿಸ್ತಾರಕ್ಕನುಗುಣವಾಗಿ, ಅಂತರ್ಜಲ ಪ್ರಮಾಣವನ್ನಾಧರಿಸಿ ಬಾವಿಗಳ ಆಳ, ಅಗಲಗಳು ನಿರ್ಧಾರವಾಗುತ್ತವೆ. ಸಾಮಾನ್ಯವಾಗಿ ಕೆರೆಯ ಸುತ್ತಮುತ್ತ ಅಥವಾ ನದಿಗಳ ಸನಿಹದಲ್ಲಿ, ಘಟ್ಟಪ್ರದೇಶದ ಇಳಿಜಾರು ಭಾಗಗಳಲ್ಲಿ,



ಗುಡ್ಡಗಳ ಕೆಳಭಾಗಗಳಲ್ಲಿ, ಜೌಗು ಪ್ರದೇಶದಲ್ಲಿ, ಕುಂಟೆಗಳ ಸನಿಹದಲ್ಲಿ ಬಾವಿಗಳನ್ನು ತೋಡುತ್ತಾರೆ. ಬಾವಿಗಳು ಕೃಷಿಗಷ್ಟೇ ಅಲ್ಲದೆ ಅಂತರ್ಜಲ ಸಂರಕ್ಷಣೆ ಮತ್ತು ಸಮೃದ್ಧಿಯಲ್ಲೂ ಉಪಯೋಗವಾಗುತ್ತವೆ. ದಕ್ಷಿಣ ಭಾರತದಲ್ಲಿ ಬಾವಿಗಳು ಕನಿಷ್ಠ 20 ಅಡಿಯಿಂದ 120 ಅಡಿವರೆಗೂ ಆಳವಾಗಿರುತ್ತವೆ. ಬಾವಿ ನೀರಿನಿಂದ ಬೆಳೆಯುವ ಬೆಳೆಗಳು ಆಯಾ ಪ್ರದೇಶದಲ್ಲಿ ದೊರೆಯುವ ನೀರಿಗನುಗುಣವಾಗಿರುತ್ತವೆ. ನದಿ ಅಥವಾ ಕೆರೆ ದಡದ ಇಳಿಜಾರಿನಲ್ಲಿರುವ ಬಾವಿಗಳಲ್ಲಿ ವರ್ಷವಿಡೀ ನೀರಿರುವುದರಿಂದ ಇಂಥ ಜಮೀನುಗಳಲ್ಲಿ ವೀಳ್ಯದೆಲೆ ತೋಟ, ಹೂವಿನತೋಟ, ಅಡಕೆ ಮತ್ತು ತೆಂಗು ಮುಂತಾದ ಬಹುವಾರ್ಷಿಕ ಬೆಳೆಗಳನ್ನು ತೆಗೆಯುತ್ತಾರೆ. ಸಾಮಾನ್ಯವಾಗಿ ಇವುಗಳ ವ್ಯಾಪ್ತಿ ಒಂದೆರಡು ಎಕರೆಗಳು ಆಗಿರುತ್ತದೆ. ಇತರ ಭೂಪ್ರದೇಶದಲ್ಲಿ ತೋಡಿರುವ ಬಾವಿಗಳಿಂದ ಅಲ್ಪಾವಧಿ ಬೆಳೆಗಳಾದ ಈರುಳ್ಳಿ, ಬೆಳ್ಳುಳ್ಳಿ, ಮೆಣಸಿನಕಾಯಿ, ಟೊಮ್ಯಾಟೊ, ಮುಸುಕಿನ ಜೋಳ, ಹಿಪ್ಪುನೇರಳೆ, ತರಕಾರಿ ಬೆಳೆಗಳಾದ ಆಲೂಗೆಡ್ಡೆ, ಕೋಸು, ಬೀಟ್‌ರೂಟ್, ಮೂಲಂಗಿ ಇತ್ಯಾದಿಗಳನ್ನು ಬೆಳೆಯಬಹುದು. ಅಲ್ಲದೆ ಮನೆಯ ಅಂಗಳದಲ್ಲೂ ಕೆಲವರು ಬಾವಿ ತೋಡಿ ಕೈತೋಟ ಮಾಡಿಕೊಳ್ಳುತ್ತಿದ್ದುದುಂಟು. ಊರಿನ ಸನಿಹದಲ್ಲಿ ಸರ್ಕಾರಿ ಭೂಮಿ ಲಭ್ಯವಿದ್ದರೆ ಅಥವಾ ಸಾಮೂಹಿಕವಾಗಿ ಒಂದೆಡೆ ನಿರ್ದಿಷ್ಟ ಜಾಗ ಗೊತ್ತುಮಾಡಿ ಅಲ್ಲಿ ಸೊಪ್ಪು, ತಿಂಗಳ ಹುರುಳಿ ಮುಂತಾದ ತಿಂಗಳು ಬೆಳೆಗಳನ್ನು ಬೆಳೆಯುತ್ತಿದ್ದರು. ಸೇದುಬಾವಿಗಳಲ್ಲಿ ಕಡಿಮೆ ನೀರಿರುತ್ತದೆ. ಇವು ಊರಿನ ಹೊರಭಾಗದಲ್ಲಿ ಅಥವಾ ಮನೆ ಅಂಗಳದಲ್ಲಿದ್ದು ದನಕರುಗಳಿಗೆ ಮತ್ತು ಮನೆಗೆ ಉಪಯೋಗ ವಾಗುತ್ತದೆ. ತೋಟದ ಬಾವಿಗಳಿಂದ ಏತ, ಕಪಿಲೆ ಮತ್ತು ಪಂಪ್ ಸೆಟ್ಟುಗಳ ಮೂಲಕ ನೀರೆತ್ತಿ ಉಪಯೋಗಿಸಲಾಗುತ್ತದೆ.

*ಎಸ್.ವಿ.*

**ಬಾಳೆ** 'ಬಾಳೆಯ ಬೆಳೆದರೆ ಬಂಗಾರವಾದೀತು ಬಾಳು' ಎನ್ನುವಂತೆ ಇಂದಿನ ಜಾಗತಿಕ ಮಾರುಕಟ್ಟೆಯಲ್ಲಿ ಬಾಳೆಹಣ್ಣು ತನ್ನದೇ ಆದ ಸ್ಥಾನ ಪಡೆದಿದೆ. ಪ್ರಪಂಚದ ಹಲವು ದೇಶಗಳು ಇಂದು ಬಾಳೆಯನ್ನು ಪ್ರಮುಖ ಹಣ್ಣಿನ ಬೆಳೆಯೆಂದು ಪರಿಗಣಿಸಿವೆ. ಅದರಲ್ಲಿ ಭಾರತವೂ ಒಂದು. ನೂರು ಗ್ರಾಂ ತೂಕದ ಬಾಳೆ ಹಣ್ಣು ತಿನ್ನುವುದರಿಂದ ದಿನ ಒಂದಕ್ಕೆ ಬೇಕಾಗುವ 2400 ಕ್ಯಾಲೊರಿಗಳಷ್ಟು ಶಕ್ತಿಯನ್ನು ನೀಡಬಲ್ಲುದಾಗಿದೆ. ಹೀಗಾಗಿ ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಆಹಾರ ಮತ್ತು ಪೌಷ್ಟಿಕಾಂಶದ ಕೊರತೆಯನ್ನು ನೀಗಿಸುವಲ್ಲಿ ಬಾಳೆಹಣ್ಣಿನ ಬೇಸಾಯ ಹೆಚ್ಚು ಮಹತ್ತ್ವದ್ದಾಗಿದೆ. ಭಾರತದ ಪ್ರಧಾನ ಹಣ್ಣಿನ ಬೆಳೆಗಳಲ್ಲಿ ಬಾಳೆ ಎರಡನೇ ಸ್ಥಾನದಲ್ಲಿದೆ.



**ಬಾಳೆ ಸ್ವರೂಪ :** ಬಾಳೆ ಉಷ್ಣವಲಯ ದೇಶದ ಬೆಳೆಯಾಗಿದ್ದು, 12 ರಿಂದ 15 ತಿಂಗಳ ಅವಧಿಯಲ್ಲಿ ಇಳುವರಿಯನ್ನು ಕೊಡುತ್ತದೆ. ಹೆಚ್ಚು ನೀರಿನ ಅಂಶವನ್ನು ಬೇಡುವ ಬಾಳೆ ಬೇಸಾಯ, ತಳಿಗಳಿಗೆ ಅನುಗುಣವಾಗಿ ಸ್ವಲ್ಪ ವ್ಯತ್ಯಾಸವನ್ನು ಕಾಣುತ್ತೇವೆ. ಬಾಳೆಯು ಅಡುಗೆ ಬಾಳೆಯಾಗಿ, ಆಹಾರವಾಗಿ, ಹಣ್ಣಿನ ಪ್ರಭೇದವೂ ಆಗಿ ಭಾರತದಲ್ಲಿ ಕಂಡುಬರುತ್ತದೆ. ಒಟ್ಟಾರೆ ಮಾನವ ಮೊತ್ತಮೊದಲು ನೆಟ್ಟು ಬೆಳೆಸಿದ ಸಸಿಗಳಲ್ಲಿ ಬಾಳೆಯೂ ಒಂದು. ಕದಳಿ, ಕದಳೀವನ ಮುಂತಾದ ಪದಗಳು ಪ್ರಾಚೀನ ಸಾಹಿತ್ಯದಲ್ಲಿ ಸಿಗುತ್ತವೆ. ದಕ್ಷಿಣ ಭಾರತದ ವಿವಿಧ ಭಾಷೆಗಳಾದ ತಮಿಳಿನಲ್ಲಿ ವಾಳೆ, ಮಲಯಾಳಂನಲ್ಲಿ ವಾಳ, ತೆಲುಗಿನಲ್ಲಿ ಅರಟಿ ಎಂದು ಇದನ್ನು ಕರೆಯುತ್ತಾರೆ.

ಬಾಳೆ ಮೃದು ಕಾಂಡದ, ರಸಭರಿತ ಸಸ್ಯವಾಗಿದ್ದು, ಇದರ ಬಲಿಷ್ಠವಾದ ಕಾಂಡ, ಬೇರು ನೆಲದೊಳಗಿರುತ್ತದೆ. ಇಲ್ಲಿ ಒಂದು ಬಗೆಯ ಬೇರು ಕೆಳಮುಖವಾಗಿ ವೃದ್ಧಿ ಹೊಂದಿದರೆ, ಇನ್ನೊಂದು ಬಗೆಯ ಬೇರು, ಮೇಲ್ಮಣ್ಣಿನ ಪದರಗಳಲ್ಲಿ ಸಮತಲವಾಗಿ ವೃದ್ಧಿಹೊಂದುತ್ತವೆ. ಬೇರುಕಾಂಡದಲ್ಲಿ ಅಸಂಖ್ಯಾತ ಮೊಗ್ಗುಗಳಿದ್ದು, ಅವು ಚಿಗುರಿ ಹೊಸ ಸಸಿಯಾಗಿ ಬೆಳೆಯುತ್ತವೆ. ಎಲೆ ತೊಟ್ಟಿನ ಪಟ್ಟೆಗಳು ಒಂದರ ಮೇಲೊಂದರಂತೆ ಆತುಕೊಂಡು ಬೆಳೆಯುತ್ತವೆ. ಪೂರ್ಣ ಬೆಳೆದಾಗ ಗಿಡಗಳ ಎತ್ತರ 2 ರಿಂದ 6 ಮೀಟರ್‌ಗಳಷ್ಟಿರುತ್ತದೆ. ಎಲೆಗಳು ಆ ಬೇರಿನಿಂದ ದಸಿಗಳಾಗಿ ಮೇಲೆ ಮೂಡಿ ಒಂದರ ಅನಂತರ ಮತ್ತೊಂದರಂತೆ ಅಗಲವಾಗುತ್ತಾ ಬೆಳೆಯುತ್ತವೆ. ಹಣ್ಣಾದ ಮೇಲೆ ಒಣಗುತ್ತವೆ. ದಿಂಡಿನ ಮಧ್ಯೆ ಹೂಗೊನೆ ಹಾದು ಸುಳಿಯಲ್ಲಿ ಹೊರಬಂದು ಹೂವಾಗಿ ಚಿಪ್ಪುಗಳಲ್ಲಿ ಗೊನೆಯು ಉದ್ದಕ್ಕೆ ಬಿಡುವುದು. ಈ ಚಿಪ್ಪುಗಳ ಮೇಲೆ ರಕ್ಷಾದಳವಿದ್ದು ಕಾಯಿ ಕಚ್ಚಿದ ಬಳಿಕ ಅದು ಬೇರ್ಪಡುತ್ತದೆ. ಬಾಳೆ ಗೊನೆಯ ಬುಡಭಾಗದ ಹೂವು ಹೆಣ್ಣು ಹೂವೆಂದೂ, ಮಧ್ಯಭಾಗದ ಹೂವನ್ನು ಮಧ್ಯವರ್ತಿ ಹೂವೆಂದೂ, ತುದಿಯ ಹೂವನ್ನು ಗಂಡು ಹೂವೆಂದೂ ಕರೆಯಲಾಗುತ್ತದೆ. ಒಂದು ಚಿಪ್ಪಿನಲ್ಲಿ ಸುಮಾರು 10 ರಿಂದ 20 ರಷ್ಟು ಕಾಯಿಗಳನ್ನೂ ಕೆಲವು ತಳಿಗಳಲ್ಲಿ ಕಾಣುತ್ತೇವೆ. ಗೊನೆಯಲ್ಲಿ 150 ಕ್ಕೂ ಹೆಚ್ಚು ಸಂಖ್ಯೆಯ ಹಣ್ಣುಗಳನ್ನು ಪಡೆಯಬಹುದು.

ಭಾರತದಲ್ಲಿ ತಮಿಳುನಾಡು, ಕೇರಳ, ಅಸ್ಸಾಂ, ಮಹಾರಾಷ್ಟ್ರ, ಆಂಧ್ರಪ್ರದೇಶ, ಬಿಹಾರ್, ಗುಜರಾತ್, ಪಶ್ಚಿಮಬಂಗಾಳ ಮತ್ತು ಮಧ್ಯಪ್ರದೇಶಗಳಲ್ಲಿ ಬಾಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ.

**ಬಾಳೆ ಬೇಸಾಯ :** ದಕ್ಷಿಣ ಭಾರತದ ರೈತರಿಗೆ ಇದೊಂದು ಲಾಭದಾಯಕ ಹಣ್ಣಿನ ಬೆಳೆಯಾಗಿದೆ. ಬಾಳೆ ಗಿಡಕ್ಕೊಂದು ಗೊನೆ ಕೊಟ್ಟರೂ ಅದು ಸುಮಾರು 10 ರಿಂದ 30 ಕೆ.ಜಿ. ಯಷ್ಟು ತೂಗುತ್ತದೆ. ಸಾಮಾನ್ಯವಾಗಿ ನೀರಿನ ವ್ಯವಸ್ಥೆಯಿರುವ ಮಣ್ಣಿನಲ್ಲಿ ಬಾಳೆಯನ್ನು ಬೆಳೆಯಬಹುದು. ನಿಯಮಿತವಾದಷ್ಟು ಸಾವಯವ ಗೊಬ್ಬರ ನೀಡುವುದರಿಂದಲೇ ಉತ್ತಮ ಫಸಲನ್ನು ಪಡೆಯಬಹುದು.

ಬಾಳೆ ಬೇಸಾಯಕ್ಕೆ ಭೂಮಿ ಸಿದ್ಧಗೊಳಿಸುವಿಕೆ ಅತಿಮುಖ್ಯವಿದ್ದು ಭೂಮಿಯನ್ನು ಒಂದೆರಡು ಸಾರಿ ಆಳವಾಗಿ ಉಳುಮೆ ಮಾಡಿ ಗುಂಡಿಗಳನ್ನು ಸಮಪ್ರಮಾಣದ ಮೇಲ್ಮಣ್ಣು ಮತ್ತು ಕೊಳೆತ ತಿಪ್ಪೆಗೊಬ್ಬರ ಮಿಶ್ರಣದಿಂದ ಭರ್ತಿ ಮಾಡಿದಲ್ಲಿ ಅದು ಚೆನ್ನಾಗಿ ಕಳಿತುಕೊಳ್ಳುತ್ತದೆ. ಗುಂಡಿಗಳ ಗಾತ್ರ 45 ರಿಂದ 60 ಸೆಂ.ಮೀ. ಉದ್ದಗಲ ಮತ್ತು ಆಳವಿರಬೇಕು. ಗಿಡಗಳ ನಡುವಣ ಅಂತರ, ಹೆಕ್ಟೇರಿಗೆ ಬೇಕಾಗುವ ಕಂದುಗಳ ಸಂಖ್ಯೆಯು ಭೂಮಿಯ ಫಲವತ್ತತೆ, ಮಣ್ಣಿನ ಮೇಲ್ಮೈ ಮುಂತಾದ ಅಂಶಗಳ ಮೇಲೆ ವ್ಯತ್ಯಾಸಗೊಳ್ಳುತ್ತದೆ.

ದಕ್ಷಿಣ ಭಾರತದಲ್ಲಿ ಚಳಿಗಾಲವನ್ನುಳಿದು ವರ್ಷದ ಇತರ ಎಲ್ಲಾ ತಿಂಗಳುಗಳಲ್ಲಿ ಕಂದುಗಳನ್ನು ನೆಡಬಹುದು. ಹೆಚ್ಚಾಗಿ ನೆಡುವುದು ಮುಂಗಾರಿನ ಪ್ರಾರಂಭದಲ್ಲಿ. ಜೂನ್-ಜುಲೈ ತಿಂಗಳುಗಳಲ್ಲಿ ಹೆಚ್ಚು ಮಳೆಯಾಗುವಾಗ ನೆಡಬಾರದು. ಕರ್ನಾಟಕ, ಆಂಧ್ರಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಕಂದುಗಳನ್ನು ನೆಡಲು ಜೂನ್ ತಿಂಗಳ ಕೊನೆ ಅತ್ಯುತ್ತಮ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಗಿಡವೊಂದಕ್ಕೆ 180 ಗ್ರಾಂ ಸಾರಜನಕ, 108 ಗ್ರಾಂ ರಂಜಕ ಮತ್ತು 225 ಗ್ರಾಂ ಪೊಟ್ಯಾಷ್ ಸತ್ವಗಳನ್ನು ಶಿಫಾರಸ್ಸು ಮಾಡುತ್ತದೆ. ಬಾಳೆಗೆ ಹೆಚ್ಚಿನ ಪೋಷಕಾಂಶಗಳು ಮತ್ತು ಆರೈಕೆ ಬೇಕಾಗುವುದರಿಂದ ಬೇಸಾಯದಲ್ಲಿ ನಿಯಮಿತವಾಗಿ, ಗೊಬ್ಬರವನ್ನು ಒದಗಿಸಬೇಕಿದೆ. ಬಾಳೆ ತೇವಾಂಶ ಬೇಡುವುದರಿಂದ ಮಣ್ಣಿನಲ್ಲಿ ತೇವಾಂಶ ಉಳಿವಂತೆ ತರಗೆಲೆಯನ್ನು ಮಂದವಾಗಿ ಹರಡುವುದು ಒಳ್ಳೆಯದು. ಸ್ವಚ್ಛತೆ ಕಾಪಾಡಿಕೊಳ್ಳುವುದರಿಂದ ಶಿಲೀಂಧ್ರದಿಂದ ಬರಬಹುದಾದ ರೋಗಗಳನ್ನು ನಿಯಂತ್ರಿಸಬಹುದು. ಇತ್ತೀಚಿನ ಸಂಶೋಧನೆಯಾದ ತುಂತುರು ನೀರಾವರಿಯಿಂದ ಬೇಗ ಮತ್ತು ಹೆಚ್ಚು ಇಳುವರಿ ಪಡೆಯಬಹುದು.

**ಮಣ್ಣಿನ ಗುಣ :** ಬಾಳೆಗೆ ನಿರ್ದಿಷ್ಟವಾದ ಮಣ್ಣಿನ ಭೂಮಿ ಬೇಕಿಲ್ಲ. ಆಳವಿರುವ ಸಾರವತ್ತಾದ ಮತ್ತು ತೇವಾಂಶವನ್ನು ಹಿಡಿದಿಡುವ ಮಣ್ಣಾದರೆ

ಸಾಕು. ಮಣ್ಣು ನಾಲ್ಕರಿಂದ ಆರು ಅಡಿಯಷ್ಟು ಆಳವಿರಬೇಕು. ಕಾರಣ ಬಾಳೆಯ ಬೇರುಗಳು ಹೆಚ್ಚಾಗಿ ಹರಡುವುದು ಮೇಲ್ಮಣ್ಣಿನಲ್ಲಿ ಮಾತ್ರ. ಹೀಗಾಗಿ ಒಂದೆರಡು ಅಡಿಗಳ ಆಳದವರೆಗೆ ಬಾಳೆಯ ಮೇಲ್ಪದರದ ಬೇರುಗಳಿರುತ್ತವೆ ಹೀಗಾಗಿ ಈ ಮಣ್ಣಿನಲ್ಲಿ ಸಾಕಷ್ಟು ಸಾವಯವ ಪದಾರ್ಥವಿರುವುದು ಅಗತ್ಯ. ಮರಳುಮಿಶ್ರಿತ ಮಣ್ಣು,



ಕೆಂಪುಗೋಡುಮಣ್ಣು ಮತ್ತು ಆಳವಿರುವ ಮೆಕ್ಕಲುಮಣ್ಣು ಸಹ ಬಾಳೆ ಬೆಳೆಗೆ ಯೋಗ್ಯ. ಇದು ಬೆಟ್ಟ ಪ್ರದೇಶ ಗಳ ತಪ್ಪಲಿನ ಕೆಂಪುಗೋಡು ಮಣ್ಣಿ ನಲ್ಲೂ ಬೆಳೆಯು ತ್ತದೆ. ಸುಣ್ಣದ ಅಂಶದಿಂದ ಕೂಡಿದ ಮಣ್ಣಿನಲ್ಲಿ ಹಾಗೂ ಸ್ವಲ್ಪಮಣ್ಣಿನ ಕ್ಷಾರವಿರುವಲ್ಲಿ ಲಾಭದಾಯಕವಾಗಿ ಬಾಳೆ ಬೆಳೆಯ ಬಹುದು. ಆದರೆ ಇಲ್ಲಿ ಸಾವಯವ ಗೊಬ್ಬರದ ಬಳಕೆ ಅಗತ್ಯ. ನದಿ ದಂಡೆಯ ಕಪ್ಪು ಜಿಗಟು ಅಥವಾ ಜೇಡಿಮಣ್ಣು, ನುರುಜು ಭೂಮಿ ಬಾಳೆ ಬೆಳೆಯಲು ಅಷ್ಟು ಯೋಗ್ಯವಲ್ಲ.

**ಹವಾಗುಣ :** ಬಾಳೆಯನ್ನು ಸಮುದ್ರ ಮಟ್ಟದಿಂದ 1800 ಮೀ. ಎತ್ತರದವರೆಗೆ ಬೆಳೆಯಬಹುದು. ಬಾಳೆ ಬೆಳೆವಣಿಗೆಗೆ ತಿಂಗಳಿಗೆ 100 ಮಿ.ಮೀ. ಮಳೆ ಸಾಕು. ಉಷ್ಣತೆ $10^o$ ಸೆ. ಯಿಂದ $40^o$ ಸೆ. ಇರಬೇಕು. ಸರಾಸರಿ ಉಷ್ಣತೆ $25^o$ಸೆ. ಇದ್ದಲ್ಲಿ ಉತ್ತಮ. ಬೇಸಗೆಯ ಸುಡುಗಾಳಿ, ಚಳಿಗಾಲದ ಹಿಮ ಎರಡೂ ಬಾಳೆಗೆ ಹಾನಿಕಾರಕ. ಚಳಿಯು ಗಿಡಗಳ ನೈಜ ಬೆಳೆವಣಿಗೆ ಮತ್ತು ಆಕಾರಕ್ಕೆ ಧಕ್ಕೆ ಉಂಟುಮಾಡುತ್ತದೆ. ತಂಪಾದ ಹವೆಯಲ್ಲಿ ಹಣ್ಣು ಬಲಿತು ಕೊಯ್ಲಿಗೆ ಬರುವುದು ನಿಧಾನ. ಬೇಸಗೆಯ ಸುಡುಗಾಳಿ ಎಲೆಗಳ ತೇವಾಂಶ ಹೀರಿ ಒಣಗುವಂತೆ ಮಾಡುತ್ತದೆ. ಬಿರುಗಾಳಿ, ಚಂಡಮಾರುತಗಳ ಹೊಡೆತ ಗಿಡಗಳನ್ನು ಬುಡಸಮೇತ ಮುರಿದು ಬೀಳಿಸುತ್ತವೆ. ಮೃದುಕಾಂಡ ಹೊಂದಿರುವ ಈ ಗಿಡಗಳಿಗೆ ರಕ್ಷಣೆ ಅಗತ್ಯವಿದೆ.

**ನೀರಾವರಿ :** ಬಾಳೆ ಬೆಳೆಯಲು ಹೆಚ್ಚು ಮಳೆಯಾಗುವ, ಹೆಚ್ಚು ಉಷ್ಣಾಂಶವಿರುವ ಪ್ರದೇಶ ಒಪ್ಪುತ್ತದೆ. ಇದು ಉಷ್ಣವಲಯದ ಹಣ್ಣಿನ ಬೆಳೆ. ಬೆಚ್ಚಗಿನ ಮತ್ತು ತೇವಾಂಶದಿಂದ ಕೂಡಿದ ಹವೆಯಲ್ಲಿ ಹುಲುಸಾಗಿ ಬೆಳೆಯುತ್ತದೆ. ಸಮಭಾಜಕ ವೃತ್ತದ ಎರಡೂ ಕಡೆಗಳಲ್ಲಿ ಉಷ್ಣಾಂಶದಿಂದ ಕೂಡಿದ ಪ್ರದೇಶಗಳಲ್ಲಿ ಬಾಳೆಯ ಬೇಸಾಯ ಹೆಚ್ಚು. ಅಧಿಕ ಮಳೆಯಾಗುವ ಪ್ರದೇಶಗಳಲ್ಲಿ ಇದನ್ನು ಮಳೆಯ ಆಸರೆಯಲ್ಲಿಯೇ ಬೆಳೆಯುವುದುಂಟು. ದಕ್ಷಿಣ ಭಾರತದ ಕೇರಳ, ತಮಿಳುನಾಡು, ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳಲ್ಲಿ ಬಾಳೆಯ ಬೇಸಾಯ ಮಾಡುತ್ತಾರೆ. ಈ ಪ್ರದೇಶಗಳು ಸಮುದ್ರಕ್ಕೆ ತೀರಾ ಹತ್ತಿರವಿದ್ದು ವರ್ಷದಲ್ಲಿ ಸುಮಾರು 8 ತಿಂಗಳ ಕಾಲ (ಏಪ್ರಿಲ್‌ನಿಂದ ನವೆಂಬರ್‌ವರೆಗೆ) ಮಳೆ ಸಮನಾಗಿ ಹಂಚಿಕೆಯಾಗಿರುತ್ತದೆ. ಉಳಿದ ನಾಲ್ಕು ತಿಂಗಳ ಕಾಲ (ಡಿಸೆಂಬರ್‌ನಿಂದ ಮಾರ್ಚ್‌ವರೆಗೆ) ನೀರು ಹಾಯಿಸಬೇಕು.

**ಪ್ರಭೇದ ಮತ್ತು ವರ್ಗೀಕರಣ :** ಬಾಳೆ ಮ್ಯೂಸೇಸೀ ಕುಟುಂಬಕ್ಕೆ ಸೇರಿದ ಏಕದಳ ಸಸ್ಯ, ಮ್ಯೂಸ ಉಪವರ್ಗದಲ್ಲಿ ಮ್ಯೂಸ ಪ್ಯಾರಾಡಿಸಿಯೈ, ಮ್ಯೂಸ ಸೇಪಿಯೆಂಟಂ, ಮ್ಯೂಸ ಟೆಕ್ಸ್‌ಟೈಲಿಸ್, ಮ್ಯೂಸ ಬಾಸ್ಜೊ, ಮ್ಯೂಸ ಕ್ಯಾವೆಂಡಿಷಿಯೈ ಮುಂತಾದ ಹಲವಾರು ಪ್ರಭೇದಗಳನ್ನು ಕಾಣುತ್ತೇವೆ. ಮ್ಯೂಸೇಸೀ ಕುಟುಂಬದಲ್ಲಿ ಎರಡು ಉಪವರ್ಗಗಳಿದ್ದು, ಅವುಗಳೆಂದರೆ: ಎನ್ಸೆಟೆ, ಮ್ಯೂಸ.

ಎನ್ಸೆಟೆ ಉಪವರ್ಗವು ಬಹು ಹಳೆಯದು. ಇದರ ಉಗಮಸ್ಥಾನ ಬಹುಶಃ ಏಷ್ಯಾ ಇರಬಹುದೆಂದು ಅಂದಾಜು. ಇದರಲ್ಲಿ 6 ರಿಂದ 7 ಪ್ರಭೇದಗಳಿವೆ.

ಮ್ಯೂಸದಲ್ಲಿ ಸುಮಾರು 40 ಪ್ರಭೇದಗಳನ್ನು ಕಾಣುತ್ತೇವೆ. ಇವುಗಳಲ್ಲಿ : ಮ್ಯೂಸ ಅಕ್ಯುಮಿನೇಟ್, ಮ್ಯೂಸ ಬಾಲ್ಬಿಸಿಯನ್, ಮ್ಯೂಸ ಲ್ಯಾಟೆರಿಟ, ಅನೈಕೊಂಬನ್, ಮಟ್ಟೆ , ಸಣ್ಣಚೆನ ಕದಳಿ, ಕದಳಿ, ನಮರೈ, ನೈಪೂವನ, ಕುಣ್ಣನ್, ನಾಟ್ಟೆಪೂವನ್, ಡ್ವಾರ್ಫ್ ಕ್ಯಾವೆಂಡಿಷ್, ರೋಬಸ್ಟ್, ಚೆನ್ ಕದಳಿ, ಚಕ್ಕರ್ ಕೇಳಿ, ಪೂವನ, ರಸತಾಳಿ, ಪಚನಾಡನ್, ಕುಳ್ಳನ್, ವಿರೂಪಾಕ್ಷಿ, ನೇಂದ್ರನ, ಚಿನಾಲಿ, ನಲ್ಲಬೂಂಥ, ಮಂಥನ್, ಕುರಿಬೊಂಥ, ಪೇಯನ್, ಕರ್ಪೂರವಲ್ಲಿ ಹೀಗೆ ಇವೆಲ್ಲವು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ಬೆಳೆಯುವ ಬಾಳೆ ಪ್ರಭೇಧಗಳಾಗಿವೆ. ಇವು ಗಿಡಗಳ ಮೇಲ್ಮೈ ಲಕ್ಷಣಗಳನ್ನು ಪ್ರಮುಖ ಆಧಾರವಾಗಿ ಹೊಂದಿದೆ.

**ತಳಿಗಳು :** ಭಾರತದಲ್ಲಿ ಸುಮಾರು 250ಕ್ಕಿಂತ ಅಧಿಕ ತಳಿಗಳಿದ್ದು, ಒಂದೇ ತಳಿಯನ್ನು ವಿಭಿನ್ನ ಹೆಸರುಗಳಿಂದ ಗುರುತಿಸಿದ್ದಾರೆ. ವಾಸ್ತವವಾಗಿ 60 ರಿಂದ 70 ತಳಿಗಳು ಮಾತ್ರ ಇವೆ. ಭಾರತದಲ್ಲಿ ಪ್ರಮುಖವಾಗಿ ಕಂಡುಬರುವ ವಿವಿಧ ತಳಿಗಳನ್ನು ಅವುಗಳ ಗುಣಲಕ್ಷಣಗಳನ್ನು ಹೀಗೆ ವಿವರಿಸಬಹುದು.

**ಪೂವನ್ :** ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳಗಳ ವಾಣಿಜ್ಯತಳಿ, ಇದಕ್ಕೆ ಚಂಪ, ಲಾಲ್‌ವೆಲ್ಚಿ, ಕರ್ಪೂರ, ಚಕ್ಕರಕೇಳಿ, ಪಾಲಯನ್, ರೋಡನ್, ದೇವವಾಳೈ, ಕದಳಿ, ಬಂಗಲೊವಾಳೈ, ಚಿನಿಚಂಪ, ಮೈಸೂರು ಬಾಳೆ ಮುಂತಾದ ಹೆಸರುಗಳಿವೆ. ಟ್ರಿನಿಡ್ಯಾಡ್‌ನಲ್ಲಿ ಫಿಲ್ ಬ್ಯಾಸ್ಕೆಟ್ ಹಾಗೂ ಮೈಸೂರ್ ಎನ್ನುತ್ತಾರೆ. ಎಲ್ಲಾ ತಳಿಗಳ ಪೈಕಿ ಹೆಚ್ಚು ಕ್ಷೇತ್ರ ಇರುವುದು ಇದರಲ್ಲಿಯೇ. ಚಿಗುರೆಲೆಗಳ ಮಧ್ಯನರದ ತಳಭಾಗ ಕೆನ್ನಿಲು ಗುಲಾಬಿ ಬಣ್ಣದ್ದಿರುತ್ತದೆ. ಇದನ್ನು ಗದ್ದೆಗಳಲ್ಲಿ ಹಾಗೂ ಅಲ್ಪಸ್ವಲ್ಪ ನೀರಾವರಿ ಇರುವೆಡೆಗಳಲ್ಲಿ ಬೆಳೆಯಬಹುದು. ಇದು ಹೆಚ್ಚು ಫಸಲು ಬಿಡುವ ತಳಿ, ಗೊನೆಗಳು ದೊಡ್ಡವು. ಹಣ್ಣು ಒತ್ತಾಗಿ ಪೇರಿಸಿದಂತಿರುತ್ತವೆ. ಗಾತ್ರದಲ್ಲಿ ಸಣ್ಣದಿಂದ ಮಧ್ಯಮವಿರುತ್ತವೆ. ಗೊನೆಗೆ ಬಿಗುವಾಗಿ ಅಂಟಿಕೊಂಡಿರುತ್ತವೆ. ಗೊನೆಗಳಲ್ಲಿ ತಲಾ 225 ಹಣ್ಣು ಇರುತ್ತವೆ. ಗೊನೆಗಳ ತೂಕ 20 ರಿಂದ 30 ಕಿ.ಗ್ರಾಂ.ಗಳಷ್ಟಿರುತ್ತದೆ. ಹಣ್ಣಿನ ತುದಿ ಭಾಗ ಸ್ಫುಟವಾಗಿರುತ್ತದೆ. ಸಿಪ್ಪೆಯು ಬಣ್ಣ ಬಂಗಾರ ಹಳದಿ, ಕೆಲವೊಮ್ಮೆ ಕೆಂಪುಛಾಯೆ

ಇರುವುದುಂಟು. ತಿರುಳು ಬಿಗುವಾಗಿ ಸಿಹಿ ಹುಳಿಗಳ ಮಿಳಿತವಿದ್ದು ತಿನ್ನಲು ರುಚಿ. ತಿರುಳಿನಲ್ಲಿ ಭಾಗಶಃ ವೃದ್ಧಿಹೊಂದಿದ ಬೀಜ ಇರುತ್ತದೆ.

**ಬಸ್ರಾಯ್ ಗುಜ್ಜುಬಾಳೆ :** ಇದಕ್ಕೆ ಡ್ವಾರ್ಫ್ ಕ್ಯಾವೆಂಡಿಷ್, ಲೋಟನ್ ಕಾಬೂಲಿ, ವಾಮನ್ ಕೇಲಿ, ಪಚ್ಚವಾಳೈ, ಮಾರಿಷಸ್, ಕುಳಿವಾಳೈ, ಭೂಸಾವಲ್, ಚುಕ್ಕೆಬಾಳೆ, ಹಿರ್ವಿ, ಕ್ಯಾನರಿಬಾಳೆ ಮುಂತಾದ ಹೆಸರುಗಳಿವೆ. ಇದು ಹವಾಯಿ ದೇಶದ ತಳಿ, ಸಾಧಾರಣ ಎತ್ತರಕ್ಕೆ ಹಾಗೂ ಕೆಲವು ಬಗೆಗಳು ಹೆಚ್ಚು ಎತ್ತರಕ್ಕೂ ಬೆಳೆಯುತ್ತವೆ. ಅಧಿಕ ಇಳುವರಿಯನ್ನು ನೀಡುತ್ತವೆ. ಪ್ರಸಕ್ತ ಜನಪ್ರಿಯ ತಳಿಯಾಗಿದೆ. ಇದು ಒಣಪ್ರದೇಶದ ಬೆಳೆ. ಗೊನೆ ಹಾಗೂ ಹಣ್ಣುಗಳು ದೊಡ್ಡವಿದ್ದು ಬಿಲ್ಲಿನಂತೆ ಬಾಗಿರುತ್ತವೆ. ಸಿಪ್ಪೆ ಹಸುರು ಬಣ್ಣವಿದ್ದು ಮಂದವಾಗಿರುತ್ತದೆ. ಗೊನೆಯಲ್ಲಿ 130ರ ವರೆಗೆ ಹಣ್ಣುಗಳಿರುತ್ತವೆ. ಹೆಚ್ಚಿನ ಉಷ್ಣತೆಯಲ್ಲಿ ಪಕ್ವಗೊಂಡ ಹಣ್ಣುಗಳ ಸಿಪ್ಪೆಯಲ್ಲಿ ಕಪ್ಪುಚುಕ್ಕೆ ಕಾಣಿಸಿಕೊಳ್ಳುತ್ತವೆ. ಇದು ಸಂಗ್ರಹಣೆಯಲ್ಲಿ ಹೆಚ್ಚು ಕಾಲ ಉಳಿಯುವುದಿಲ್ಲ. ಮಹಾರಾಷ್ಟ್ರದಲ್ಲಿ ಬೆಳೆದ ಬಹುಭಾಗ ಫಸಲು ಉತ್ತರ ಭಾರತದ ಮಾರುಕಟ್ಟೆಗಳಲ್ಲಿ ಮಾರಾಟಗೊಳ್ಳುತ್ತದೆ. ಮಧ್ಯಪ್ರದೇಶ, ಆಂಧ್ರಪ್ರದೇಶ, ಒರಿಸ್ಸಾ ಮುಂತಾದೆಡೆ ಸ್ವಲ್ಪಮಟ್ಟಿಗೆ ಬೆಳೆಯುತ್ತಾರೆ.

**ಪಚ್ಚಬಾಳೆ :** ಇದಕ್ಕೆ ಹಸುರು ಬಾಳೆ, ಪಚ್ಚಬಾಳೆ, ಬಾಂಬೆಗ್ರೀನ್, ಪೆದ್ದಪಚ್ಚ ಅರಟಿ, ಹರಿಚಾವಲ್, ರೊಬಸ್ಟ್, ಸುಪ್ರಿ ಮುಂತಾದ ಹೆಸರುಗಳಿವೆ. ಬಹುಮಟ್ಟಿಗೆ ಬಸ್ರಾಯ್ ಬಾಳೆಯಂತೆ ಇರುತ್ತದೆಯಾದರೂ ಪೂರ್ಣ ಮಾಗಿದರೂ ಹಣ್ಣು ಹಸುರಾಗೇ ಇರುತ್ತದೆ. ಗಿಡಗಳು ಎತ್ತರಕ್ಕೆ ಬೆಳೆಯುತ್ತವೆ. ಗಾತ್ರದಲ್ಲಿ ದೊಡ್ಡವು. ಗೊನೆ ದೊಡ್ಡವಿದ್ದು ಸಮನಾಗಿ ತುಂಬಿರುತ್ತವೆ. ಹಣ್ಣು ಸ್ವಲ್ಪಮಟ್ಟಿಗೆ ನೇರವಿರುತ್ತವೆ. ಸಿಪ್ಪೆ ಮಂದವಿದ್ದು ತಿರುಳು ಮೃದು, ರುಚಿಯಲ್ಲಿ ಸಿಹಿ. ಗುಣಮಟ್ಟ ಉತ್ತಮವಾಗಿದ್ದು ಸಂಗ್ರಹಣೆ ಸಹ ಉತ್ತಮ. ಗೊನೆ 30 ಕಿ.ಗ್ರಾಂ. ವರೆಗೆ ತೂಕ ವಿದ್ದು 160ಕ್ಕೂ ಹೆಚ್ಚು ಹಣ್ಣು ಇರುತ್ತವೆ. ತೇವಾಂಶದ ಕರಾವಳಿ ಪ್ರದೇಶಗಳಲ್ಲಿ, ಮುಂಬಯಿಯ ಬಸ್ಸೀನ್‌ನಲ್ಲಿ, ಆಂಧ್ರದ ಕರ್ನೂಲ್ ಜಿಲ್ಲೆಯಲ್ಲಿ, ಕರ್ನಾಟಕ, ತಮಿಳುನಾಡುಗಳಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ.

**ರಸಬಾಳೆ :** ರಸತಾಳಿ, ಮುಥೇಲಿ, ರಸಕೇಳಿ, ಮಾಲ್ಭೋಗ್, ಅಮೃತಪಾಣಿ, ಸೋನ್‌ಕೇಲ್, ಮಾರ್ಟಮನ್, ಸಿಲ್ಕ್‌ಫಿರ್ ಮುಂತಾದ ಹೆಸರುಗಳಿವೆ. ಮೈಸೂರು ಜಿಲ್ಲೆಯ 'ನಂಜನಗೂಡು ರಸಬಾಳೆ' ಎಂದರೆ ಪ್ರಪಂಚದಲ್ಲಿಯೇ ಪ್ರಸಿದ್ಧ. ತಮಿಳುನಾಡಿನ ಸೇಲಂ, ತಂಜಾವೂರು ಮತ್ತು ತಿರುಚ್ಚಿನಾಪಳ್ಳಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಸುಲಿದು ತಿನ್ನುವ ಬಾಳೆಗಳಲ್ಲಿ ಇದು ಶ್ರೇಷ್ಠವಾದುದು. ಗಿಡಗಳು ಎತ್ತರಕ್ಕೆ ಬೆಳೆಯುತ್ತವೆ. ಹಸಿಕಾಂಡ ಹಳದಿಹಸುರು ಬಣ್ಣದಿದ್ದು ಕಂದು ಮಚ್ಚೆಗಳಿಂದ ಕೂಡಿರುತ್ತದೆ. ಎಲೆ ತೊಟ್ಟುಗಳು ಮತ್ತು ಅಂಚು ಪಟ್ಟೆಗಳು ಕೆಂಪು ಬಣ್ಣದಿರುತ್ತವೆ. ಬಲವಾದ ಗಾಳಿ ಬೀಸಿದರೂ ಗಿಡಗಳು ಮುರಿದು ಬೀಳುವುದಿಲ್ಲ. ಗೊನೆ ಸಾಧಾರಣ ತೂಕ ಹೊಂದಿದ್ದು 80 ರಿಂದ 130 ಹಣ್ಣುಗಳು ಇರಬಹುದು. ಸಿಪ್ಪೆಯ ಬಣ್ಣ ದಂತ ಬಿಳುಪು, ತೆಳ್ಳಗೆ ನಯವಾಗಿರುತ್ತದೆ. ತಿರುಳು ಸಿಹಿ, ಮಧುರವಾಗಿದ್ದು, ತಿನ್ನಲು ಪಿಷ್ಟದಂತೆ, ವಾಸನೆ ಸೇಬು ಹಣ್ಣಿನಂತೆ, ಹಣ್ಣು ಮಂದಗತಿಯಲ್ಲಿ ಪಕ್ವಗೊಳ್ಳುತ್ತವೆ. ಇದರ ಸಂಗ್ರಹಣಾ ಗುಣ ಅತ್ಯುತ್ತಮ, ಗೊನೆ ಸ್ವಲ್ಪ ಅಲುಗಾಡಿಸಿದರೂ ಹಣ್ಣು ಉದುರುತ್ತವೆ.

**ಸಫೇದ್ ವಲ್ಚಿ :** ಇದಕ್ಕೆ ಏಲಕ್ಕಿ ಬಾಳೆ, ನಿಟ್ಕ ಬಾಳೆ, ದೇವಬಾಳೆ ಕದಳಿ, ಸೊನೇರಿ, ನೈಪೂವನ್, ನಾಳಿ ಪೂವನ್ ಮುಂತಾದ ಹೆಸರುಗಳು. ಮಹಾರಾಷ್ಟ್ರದ ಥಾಣಾ ಮತ್ತು ನಾಸಿಕ್ ಜಿಲ್ಲೆಗಳು, ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು, ಕೇರಳ, ತಮಿಳುನಾಡು ವಿವಿಧೆಡೆ ಹೆಚ್ಚಾಗಿ ಕಂಡುಬರುತ್ತದೆ. ಸುಲಿದು ತಿನ್ನುವ ಬಾಳೆಗಳಲ್ಲಿ ಅತ್ಯಂತ ಕೋಮಲವಿರುವ ತಳಿ. ತೆಂಗು ಮತ್ತು ಅಡಿಕೆ ತೋಟಗಳಲ್ಲಿ ಬೆಳೆಯುತ್ತಾರೆ. ಇದರ ಹಣ್ಣನ್ನು ಕೇರಳದ ದೇವಾಲಯಗಳಲ್ಲಿ ಪೂಜೆಗೆ ಬಳಸುತ್ತಾರೆ. ಹಾಗಾಗಿ ಇದನ್ನು ನೈಪೂವನ್ ಎನ್ನುವರು. ಗಿಡಗಳು ಎತ್ತರಕ್ಕೆ ತೆಳ್ಳಗೆ ಕೃಶವಾಗಿರುತ್ತದೆ. ಬಣ್ಣ ಹಳದಿ. ಗೊನೆ ತೂಕ 12 ಕಿ.ಗ್ರಾಂ.ಗಳಷ್ಟಿದ್ದು, 150 ಹಣ್ಣು ಇರುತ್ತವೆ. ಹಣ್ಣು ತೆಳ್ಳಗಿದ್ದು, ಸಣ್ಣಗಿರುತ್ತವೆ. ಸಿಪ್ಪೆತೆಳು, ಕಾಗದದಂತೆ ತಿರುಳುಬಿಗುವಾಗಿದ್ದು, ಹಾಲು ಬಿಳುಪು ಬಣ್ಣವಿದ್ದು ತಿನ್ನಲು ಪಿಷ್ಟದಂತ ಸಿಹಿಯಾಗಿದ್ದು ಸುವಾಸನೆಯಿಂದ ಕೂಡಿರುತ್ತದೆ. ಸಂಗ್ರಹಣೆಯಲ್ಲೂ ಉಪಯುಕ್ತ ತಳಿ.

**ಚಂದ್ರಬಾಳೆ :** ಕುಂಕುಮ ಬಾಳೆ, ಕೆಂಪು ಬಾಳೆ, ಚಿನ ಕದಳಿ, ಸೆವ್ವಾಳೈ, ಅನುಪಾನ್, ಲಾಲ್‌ಕೇಲ ಮುಂತಾದ ಹೆಸರುಗಳಿವೆ. ಇದು ಹೆಚ್ಚು ಕಸುವಿನಿಂದ ಕೂಡಿದ ತಳಿ. ಇವು ಸುಮಾರು 4½ ಮೀ. ಬೆಳೆಯುತ್ತವೆ. ನೀಲಗಿರಿ ಬೆಟ್ಟಗಳ ತಪ್ಪಲಲ್ಲಿ, ಮಹಾರಾಷ್ಟ್ರದ ಥಾಣಾ ಮತ್ತು ಪುಣೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಣ್ಣಿನ ಸಿಪ್ಪೆ ನೀಲಿಗೆಂಪು ಬಣ್ಣವಿರುತ್ತವೆ. ಗೊನೆ ಒತ್ತಾಗಿದ್ದು ಆಕರ್ಷಕ ಕೆನ್ನೀಲಿ ಹಣ್ಣುಗಳಿಂದ ಕೂಡಿರುತ್ತದೆ. ಹಣ್ಣು ಗಾತ್ರದಲ್ಲಿ ದೊಡ್ಡವು. ಸ್ವಲ್ಪ ಬಾಗಿದ್ದು ದಪ್ಪನಾಗಿ ಮೋಟಾಗಿರುತ್ತದೆ. ಮಂದವಾದ ಸಿಪ್ಪೆ, ತಿರುಳು ಕೇಸರಿ ಬಣ್ಣ ಬಿಗುವಾಗಿ ತೇವದಿಂದ ಕೂಡಿರುತ್ತವೆ. ಚೆನ್ನಾಗಿರುವ ಗೊನೆಯಲ್ಲಿ ಸುಮಾರು 100 ಹಣ್ಣುಗಳಿರುತ್ತವೆ. ಗೊನೆಯ ತೂಕ 18 ರಿಂದ 22 ಕಿ.ಗ್ರಾಂ.ಗಳಷ್ಟು ಗುಣಮಟ್ಟದಲ್ಲಿ ಪೂವನ್ ಹಣ್ಣಿನಂತೆ, ಕರಾವಳಿಯಲ್ಲಿ ಬಹು ಚೆನ್ನಾಗಿ ಫಲಿಸುತ್ತದೆ. ಇವು ಹೆಚ್ಚಿನ ಫಲವತ್ತತೆಯನ್ನು ಬಯಸುತ್ತವೆ.

**ಸಣ್ಣ ಚೆನ ಕದಳಿ :** ಇದು ಚಂದ್ರ ಬಾಳೆಯಲ್ಲಿನ ವಿಶಿಷ್ಟ ಬಗೆ. ದಕ್ಷಿಣ ಭಾರತದ ಹಲವಾರು ಕಡೆಗಳಲ್ಲಿ ಕಂಡುಬರುತ್ತದೆ. ಗಿಡಗಳು ಕೃಶವಾಗಿ ಕಡಿಮೆ ಕಸುವಿನಿಂದ ಕೂಡಿರುತ್ತವೆ. ಹಣ್ಣು ಗಾತ್ರದಲ್ಲಿ ಸಣ್ಣದು. ತುದಿ ಭಾಗ ಬಲು ಉದ್ದ, ತುದಿಯಲ್ಲಿ ಶಲಾಕೆಯ ಕೊಳೆ ಬಹುಕಾಲ ಹಣ್ಣಿಗೆ ಅಂಟಿಕೊಂಡೇ ಇರುವುದು. ಹಣ್ಣಿನ ಸಿಪ್ಪೆ ಬಿಳಿ ಹಸುರುಗೆಂಪು ಬಣ್ಣವಿರುತ್ತದೆ.

**ತೆಲ್ಲಚಕ್ರಕೇಳಿ :** ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಗಳಲ್ಲಿ ಬೆಳೆಯುತ್ತಾರೆ. ಗಿಡಗಳ ಎತ್ತರ 2.4 ಮೀ. ಹಣ್ಣು ದೊಡ್ಡವು. ಸಿಪ್ಪೆ ಹಳದಿ ಬಣ್ಣವಿದ್ದು, ಮಂದವಾಗಿರುತ್ತದೆ. ತಿರುಳು ಮೃದು, ಬಲು ಸಿಹಿ, ಬಾಯಲ್ಲಿಟ್ಟರೆ ಕರಗುವಂತಿದ್ದು ಸುವಾಸನೆಯಿಂದ ಕೂಡಿರುತ್ತದೆ.

**ಚಕ್ಕಕೇಳಿ :** ಇದಕ್ಕೆ ಚಕ್ಕರ ಕೇಳಿ, ರಾಜಬಾಳೆ, ತೇನ್ ಕದಳಿ ಮುಂತಾದ ಹೆಸರುಗಳಿವೆ. ಆಂಧ್ರಪ್ರದೇಶದ ಉತ್ತರ ಭಾಗದ ಜಿಲ್ಲೆಗಳಲ್ಲಿ ಇದು ಅತ್ಯುತ್ತಮ ಬಾಳೆ ಎನಿಸಿಕೊಂಡಿದೆ. ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ ವೀಳೆದೆಲೆಯ ತೋಟಗಳ ಅಂಚಿನಲ್ಲಿ ಇದನ್ನು ಬೆಳೆಯುತ್ತಾರೆ. ಗಿಡಗಳು ತೆಳ್ಳಗೆ ಕೃಶವಾಗಿರುತ್ತವೆ. ಎಲೆ ತೊಟ್ಟಿನ ಅಂಚುಗಳು ಅಗಲವಾಗಿ ಹರಡಿದ್ದು ಕೆಂಪಗಿರುತ್ತವೆ. ಇದು ಹವಾಗುಣದ ದೃಷ್ಟಿಯಿಂದ ಸುಲಭವಾಗಿ ಹೊಂದಿಕೊಳ್ಳಲಾರದು. ಗೊನೆಗಳು ಭಾರವಾಗಿರುವುದಿಲ್ಲ. ಹಣ್ಣು ಸ್ವಲ್ಪ

ಬಾಗಿರುತ್ತವೆ. ಅವುಗಳ ತುದಿಭಾಗ ಸ್ಫುಟ; ಸಿಪ್ಪೆ ಮಂದ. ತಿರುಳು ಹಳದಿ ಬಣ್ಣವಿದ್ದು, ರಸವತ್ತಾಗಿರುತ್ತದೆ. ರುಚಿಯಲ್ಲಿ ಮಧುರ. ಹಣ್ಣು ಪೂರ್ತಿ ಕಳಿತಾಗಲೂ ಸಹ ತೊಟ್ಟು ಮತ್ತು ತುದಿ ಭಾಗದಲ್ಲಿ ಹಸುರಾಗಿಯೇ ಇರುತ್ತವೆ.

**ಗ್ರೋಮಿಷೆಲ್ :** ಅಮೆರಿಕಾ, ಇಂಗ್ಲೆಂಡ್ ಮತ್ತು ಕ್ಯಾರಿಬಿಯನ್ ದೇಶಗಳಲ್ಲಿ ಇದನ್ನು ಮಾರ್ಟನಿಕ್‌ಫಿಗ್ ಮತ್ತು ಜಮೈಕನ್ ಬನಾದ ಎಂದರೆ, ಮಲೇಷ್ಯಾದಲ್ಲಿ ಪಿಸಾಂಗ್ ಸಾಕ್ ಹಿಜಾವ್, ಹವಾಯಿಯಲ್ಲಿ ಬ್ಲ್ಯೂಫೀಲ್ಡ್ ಮತ್ತು ಶ್ರೀಲಂಕಾದಲ್ಲಿ ಅನಮಾಲು ಎನ್ನುತ್ತಾರೆ. ಇದು ಜಮೈಕಾದ ತಳಿ, ಪ್ರಪಂಚದ ಸುಲಿದು ತಿನ್ನುವ ಬಾಳೆಗಳ ಪೈಕಿ ಅತ್ಯಂತ ಶ್ರೇಷ್ಠ ಬಾಳೆ ಇದು. ಹಣ್ಣಿನ ಗುಣಮಟ್ಟ, ಗಾತ್ರ, ರುಚಿ ಮತ್ತು ಸಿಪ್ಪೆಯ ಬಣ್ಣ ಆಕರ್ಷಕ. ಹಣ್ಣು ಜಜ್ಜಿ ಹಾಳಾಗುವುದಿಲ್ಲ. ಗೊನೆ ಸಮತೋಲವಾಗಿರುತ್ತದೆ. ಇಳುವರಿ ಅಧಿಕ. ಈ ತಳಿಯಲ್ಲಿಯ ನ್ಯೂನತೆ ಎಂದರೆ ಬಾಡುವ ರೋಗಕ್ಕೆ ಸುಲಭವಾಗಿ ತುತ್ತಾಗುವುದು. ಪಶ್ಚಿಮ ಬಂಗಾಳದ ಕೃಷಿನಗರ್ ಮತ್ತು ಚಿನ್ಸುರಾಗಳಲ್ಲಿ ಇದರ ಬೇಸಾಯವಿದೆ. ಹಣ್ಣನ್ನು ಶೈತ್ಯಾಗಾರಗಳಲ್ಲಿ 15-20 ದಿನಗಳವರೆಗೆ ಇಟ್ಟರೂ ಸಹ ಅವು ಹಾಳಾಗುವುದಿಲ್ಲ.

**ಜೈಂಟ್ ಗವರ್ನರ್ :** ಇದರ ಬೇಸಾಯ ಪಶ್ಚಿಮ ಬಂಗಾಳದಲ್ಲಿ ಹೆಚ್ಚು. ಇವು ಸಾಧಾರಣ ಎತ್ತರಕ್ಕೆ ಬೆಳೆಯುತ್ತವೆ. ಹಣ್ಣು ದೊಡ್ಡವು. ಸಿಪ್ಪೆಯ ಬಣ್ಣ ಹಸುರು ಹಳದಿ ಇರುತ್ತದೆ. ಗೊನೆಯ ತೂಕ ಸರಾಸರಿ 15 ಕಿ.ಗ್ರಾಂ. ತಿರುಳು ಬಿಗುವಾಗಿದ್ದು ರುಚಿಯಲ್ಲಿ ಸಿಹಿಯಾಗಿರುತ್ತದೆ. ಇದು ಎಲೆ ಚುಕ್ಕೆ ರೋಗಕ್ಕೆ ಸುಲಭವಾಗಿ ತುತ್ತಾಗುತ್ತದೆಯಾದರೂ ಬಾಡುವ ರೋಗವನ್ನು ನಿರೋಧಿಸಬಲ್ಲದು.

**ಜೀರಿಗೆ ಬಾಳೆ :** ಇದಕ್ಕೆ ಕಣ್ಣನ್, ಪೊಟ್ಟಮೋಕಿರಿ ಮುಂತಾದ ಹೆಸರುಗಳಿವೆ. ಕೇರಳದ ಉತ್ತಮ ತಳಿಗಳಲ್ಲಿ ಇದೂ ಒಂದು. ಇದರ ಗಿಡಗಳು ಸಾಧಾರಣ ಎತ್ತರ ಇರುತ್ತವೆ. ಸಿಪ್ಪೆ ತೆಳು, ಬೆಳ್ಳಗಿರುತ್ತದೆ. ತಿರುಳು ಬಿಗುವಾಗಿ, ರುಚಿಯಾಗಿರುತ್ತದೆ. ಇದರ ತಿರುಳನ್ನು ಒಣಗಿಸಿ ಗಿರಣಿಗೆ ಕೊಟ್ಟು ತಯಾರಿಸಿದ ಹಿಟ್ಟನ್ನು ಶಿಶುಗಳ ಆಹಾರವಾಗಿ ಬಳಸುತ್ತಾರೆ. ಇದರಲ್ಲಿ ಹಲವಾರು ಬಗೆಗಳಿವೆ. ಕಣ್ಣನ್, ವೆಣ್ಣೀರು, ಕಣ್ಣನ್, ತೇನ್ ಕಣ್ಣನ್ ಮತ್ತು ತಟ್ಟೆಲ್ಲಾ ಕಣ್ಣನ್ ಮುಖ್ಯವಾದುವು. ಅಡಕ್ಕ ಕಣ್ಣನ್, ಬಗೆಯಲ್ಲಿನ ಹಣ್ಣು ಬಲು ಸಣ್ಣವು. ಅವು ಉರುಳೆಯಂತಿದ್ದು ಹೆಚ್ಚು ಕಡಿಮೆ ಅಡಕೆಕಾಯಿಯಂತೆ ಇರುತ್ತವೆ. ವೆಣ್ಮೇರು ಕಣ್ಣನ್ ಬಗೆಯಲ್ಲಿ ಹಣ್ಣು ಸ್ವಲ್ಪ ದೊಡ್ಡವು. ಸಿಪ್ಪೆಯ ಮೇಲೆ ಬೂದಿ ಬಣ್ಣದ ನವಿರಾದ ಧೂಳು ಕುಳಿತಿರುತ್ತದೆ. ತೇನ್ ಕಣ್ಣನ್ ಬಲು ರುಚಿಯಿಂದ ಕೂಡಿದ ಬಗೆ. ತಟ್ಟೆಲ್ಲಾ ಕಣ್ಣನ ಬಗೆಯಲ್ಲಿ ಹಣ್ಣು ದೊಡ್ಡವಿರುತ್ತವೆ. ಹಣ್ಣು ವಕ್ರವಕ್ರವಾಗಿ ಉಬ್ಬಿದ್ದು ಉದ್ದವಾದ ತುದಿಭಾಗದಿಂದ ಕೂಡಿರುತ್ತವೆ. ನೇಂದ್ರ ಕಣ್ಣನ್ ಬಗೆಯು ವಿಶಿಷ್ಟವಿದ್ದು ದೊಡ್ಡಗಾತ್ರದಲ್ಲಿ ಹಣ್ಣು ಬಿಡುತ್ತದೆ. ಹಣ್ಣು ಏಣುಗಳನ್ನು ಹೊಂದಿದ್ದು, ಉದ್ದವಾದ ತುದಿಯಿಂದ ಕೂಡಿರುತ್ತವೆ. ಸಿಪ್ಪೆ ಸಾಧಾರಣ ಮಂದ, ತಿರುಳು ಬೆಳ್ಳಗಿದ್ದು, ಬಿಗುವಾಗಿ ಸಿಹಿಯಾಗಿರುತ್ತದೆ.

**ಅಮೃತಸಾಗರ್ :** ಇದರ ಉಗಮಸ್ಥಾನ ಪಶ್ಚಿಮ ಬಂಗಾಳ, ಭಾರತದ ಉತ್ಕೃಷ್ಟ ತಳಿಗಳಲ್ಲಿ ಇದೂ ಒಂದು. ಇದರ ಬೇಸಾಯ ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತದೆಯಷ್ಟೆ. ಗಿಡಗಳು ಕೃಶವಾಗಿದ್ದು ಸಾಧಾರಣ ಎತ್ತರಕ್ಕೆ ಬೆಳೆಯುತ್ತವೆ. ಗೊನೆಗಳು ಗಾತ್ರದಲ್ಲಿ ಸಣ್ಣವಿರುತ್ತವೆಯಾದರೂ ಹಣ್ಣು ಮಾತ್ರ ದೃಢವಾಗಿರುತ್ತದೆ. ಸಿಪ್ಪೆ ಸಾಧಾರಣ ಮಂದ, ತಿರುಳು. ಬೆಳ್ಳಗೆ, ಹಿಟ್ಟಿನಂತಿರುತ್ತದೆ. ರುಚಿಯಲ್ಲಿ ಬಲು ಮಧುರ. ಇದರ ಬೇಸಾಯವನ್ನು ವಿಸ್ತರಿಸುವುದು ಲಾಭದಾಯಕ.

**ರಾಜಾಪುರಿ :** ಇದಕ್ಕೆ ಕುಳ್ಳನ್, ವಾಳ ಮುಂತಾದ ಹೆಸರುಗಳಿವೆ. ಇದರ ಬೇಸಾಯ ದಖ್ಖನ್ ಪ್ರಸ್ಥಭೂಮಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಗಿಡಗಳ ಹಸಿಕಾಂಡ ಬಲವಾಗಿರುತ್ತದೆ: ಎಲೆ ತೊಟ್ಟಿನ ಬುಡಭಾಗ ಅಗಲಗೊಂಡಿರುತ್ತದೆ. ಗೊನೆಯ ತುದಿಯಲ್ಲಿ ಗಂಡು ಹೂ ಹಾಗೂ ಅವುಗಳ ರಕ್ಷಾಪತ್ರಗಳು ಉದ್ದಕ್ಕೆ ಅಂಟಿಕೊಂಡಿರುತ್ತವೆ. ಹಣ್ಣು ಗಾತ್ರದಲ್ಲಿ ಸಾಧಾರಣ, ಗುಣಮಟ್ಟ ಚೆನ್ನಾಗಿರುತ್ತದೆ. ಸಿಪ್ಪೆ ಸಾಧಾರಣ ಮಂದ, ಹೊಳಪು ಹಳದಿ ಬಣ್ಣ, ತಿರುಳು ರುಚಿಯಲ್ಲಿ ಮಧುರ ಸ್ಪರ್ಶಕ್ಕೆ ಮೃದುವಾಗಿರುತ್ತದೆ. ಹಣ್ಣುಗಳ ಸಂಗ್ರಹಣಾ ಗುಣ ಚೆನ್ನಾಗಿದೆ. ಗೊನೆಗಳು ಸರಾಸರಿ 12 ರಿಂದ 15 ಕಿ.ಗ್ರಾಂ. ತೂಗುತ್ತವೆ. ಒಂದರಲ್ಲಿ 100 ಹಣ್ಣು ಇರಬಹುದು. ಸಾಮಾನ್ಯ ಗಿಡಗಳ ಗಾತ್ರಕ್ಕೆ ಹೋಲಿಸಿದರೆ ಇದರ ಗೊನೆ ಸಣ್ಣವಿದ್ದು, ಈ ತಳಿಯ ಕೃಷಿ ತಮಿಳುನಾಡಿನಲ್ಲಿ ಅಲ್ಲಲ್ಲಿ ಉಳಿದಿದೆ.

**ಪಚ್ಚನಾಡನ್ :** ಇದಕ್ಕೆ ಕಾಳಿ, ಲಾಡನ್, ಗಾಳಿಬಾಳೆ, ಸಲ್ದತ್ತ ಮುಂತಾದ ಹೆಸರುಗಳಿವೆ. ದಕ್ಷಿಣ ಭಾರತದ ಹೆಸರಾಂತ ತಳಿಗಳಲ್ಲಿ ಇದೂ ಒಂದು. ಹಣ್ಣು ಮೂಲೆಗಳಿಂದ ಕೂಡಿದ್ದು ಮಂದ ಸಿಪ್ಪೆ, ಮೊಂಡು ತುದಿಯನ್ನು ಹೊಂದಿರುತ್ತವೆ. ತಿರುಳು ಮೃದುವಾಗಿ ಸಿಹಿಯಾಗಿರುತ್ತದೆ.

**ಮಣ್ಣನ್ :** ಇದು ಕೇರಳದಲ್ಲಿ ಹೆಸರಾಂತ ತಳಿ. ಗಿಡಗಳು ಕಸುವಿನಿಂದ ಕೂಡಿರುತ್ತವೆ. ಹಣ್ಣುಗಳ ಉದ್ದಕ್ಕೆ ಏಣುಗಳಿರುತ್ತವೆ. ಸಿಪ್ಪೆಮಂದ, ತಿರುಳು ಕೆನೆ ಬಿಳುಪು ಬಣ್ಣದ್ದಿರುತ್ತದೆ. ಹಣ್ಣುಗಳ ಗುಣಮಟ್ಟ ಸಾಧಾರಣ.

**ಪೇಯನ್ :** ಇದಕ್ಕೆ ಪೇಯಲಾಡನಂ, ಪೂತಿಬಾಳೆ, ಭೂರ್ಕೆಲ್ ಮುಂತಾದ ಹೆಸರುಗಳಿವೆ. ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ ಇದು ಹೆಸರಾಂತ ತಳಿ. ಹಣ್ಣುಗಳ ಉದ್ದಕ್ಕೆ ಏಣುಗಳಿರುತ್ತವೆ. ಸಿಪ್ಪೆ ಮಂದ, ತಿರುಳು ಬೆಳ್ಳಗಿದ್ದು, ತಿನ್ನಲು ಮೃದು, ಸಿಹಿಯಾಗಿರುತ್ತವೆ. ಮೂಲವ್ಯಾಧಿಯಿಂದ ನರಳುತ್ತಿರುವವರಿಗೆ ಇದನ್ನು ತಿನ್ನಲು ನಿರ್ದೇಶಿಸುತ್ತಾರೆ. ಇದರ ಗಿಡಗಳು ಬಹಳ ಎತ್ತರಕ್ಕೆ ಬೆಳೆಯುತ್ತವೆ.

**ಬಿಂಗನ್ :** ಬಿಂಗನ್ ತಳಿಯ ಗಿಡಗಳು ಗಾತ್ರದಲ್ಲಿ ಸಾಧಾರಣ, ಗೊನೆಗಳು ಸಣ್ಣವು. ಹಣ್ಣು ಸಣ್ಣ, ಉದ್ದ, ಚೂಪುತುದಿಯಿಂದ ಕೂಡಿರುತ್ತದೆ. ಸಿಪ್ಪೆ ತೆಳುವಿದ್ದು, ತಿರುಳು ಕೆನೆ ಬಿಳುಪು ಬಣ್ಣ ಮತ್ತು ಮೃದು ಸಿಹಿಯಾಗಿರುತ್ತದೆ. ಸುವಾಸನೆಯಿಂದ ಕೂಡಿದ್ದು ಕೇರಳದಲ್ಲಿ ಇದರ ಬೇಸಾಯ ಕಂಡುಬರುತ್ತದೆ.

**ಆನೆಕೊಂಬನ್ :** ಇದಕ್ಕೆ ಕೊಮ್ಮು ಅರಟಿ ಎಂಬ ಹೆಸರಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಇದರ ಬೇಸಾಯ ಸ್ವಲ್ಪಮಟ್ಟಿಗೆ ಇದೆ. ಗಿಡಗಳು ತೆಳ್ಳಗಿದ್ದು, ಸಾಧಾರಣ ಎತ್ತರವಿರುತ್ತವೆ. ಗೊನೆ ಸಣ್ಣವು. ಹಣ್ಣು ಉದ್ದನಾಗಿ ಬಾಗಿರುತ್ತದೆ. ಗಾತ್ರದಲ್ಲಿ ಸಣ್ಣವಿರುತ್ತವೆ. ಸಿಪ್ಪೆ ಸಾಧಾರಣ ಮಂದವಿದ್ದು ಪೂರ್ಣ ಕಳಿತಾಗ ಬಂಗಾರ ಹಳದಿ ಬಣ್ಣವಿರುತ್ತದೆ. ತಿರುಳಿನ ಬಣ್ಣ ಹಳದಿ ಬಿಳುಪು, ಮೃದುವಾಗಿ ಸಿಹಿಯಾಗಿರುತ್ತದೆ.

**ಸುಗಂಧಿ :** ಇದರ ಗಿಡಗಳು ಸಾಧಾರಣ ಎತ್ತರವಿದ್ದು ಬಲವಾಗಿರುತ್ತದೆ. ಗಿಡದ ಬುಡದಲ್ಲಿ ಸುಮಾರು ಸಂಖ್ಯೆಯ ಕಂದುಗಳು ಹುಟ್ಟುತ್ತವೆ. ಗೊನೆಗಳು ಸಮತೋಲವಾಗಿ ತುಂಬಿದ್ದು ಬಲವಾಗಿರುತ್ತವೆ. ಗೊನೆ ಹಾಗೂ ಹಣ್ಣು ಪೂವನ್ ತಳಿಯಲ್ಲಿದ್ದಂತೆ. ಹಣ್ಣು ಸ್ವಲ್ಪ ದಪ್ಪ, ಸಿಪ್ಪೆ ಸಾಧಾರಣ ಮಂದವಿದ್ದು, ಹಳದಿ ಬಣ್ಣವಿರುತ್ತದೆ. ತಿರುಳಿನ ಗುಣಮಟ್ಟ ಉತ್ತಮ.

**ವಿರೂಪಾಕ್ಷಿ ಮತ್ತು ನಿರುಮಲೈ :** ಇವುಗಳನ್ನು ಬೆಟ್ಟದ ಬಾಳೆಗಳು ಎನ್ನುತ್ತಾರೆ. ತಮಿಳುನಾಡಿನ ಕೆಲವು ಪ್ರದೇಶಗಳಲ್ಲಿ ಇವುಗಳನ್ನು ಮೂಲವಾಳೈ ಎನ್ನುತ್ತಾರೆ. ಪಳನಿ ಬೆಟ್ಟಗಳ ತಪ್ಪಲು ಪ್ರದೇಶದಲ್ಲಿ ಇವುಗಳ ಬೇಸಾಯ ಹೆಚ್ಚು. ಇವುಗಳನ್ನು ವೆಲ್ಲವಾಳೈ ಎನ್ನುವುದುಂಟು. ಈ ಬಾಳೆಗಳ ಪೈಕಿ ಹೆಚ್ಚು ವಾಣಿಜ್ಯವಾಗಿ ಇರುವುದು ವಿರೂಪಾಕ್ಷಿಯೇ. ನಿರುಮಲೈ ತಳಿಯ ಹಣ್ಣುಗಳಲ್ಲಿ ಸಿಪ್ಪೆ ತೆಳ್ಳಗಿದ್ದು ಸುಲಿದಾಗ ಸುಲಭದಿ ಕಿತ್ತುಬರುತ್ತವೆ. ಆದರೆ ಈ ತಳಿಯಲ್ಲಿ ಸಿಪ್ಪೆಯ ಒಳಭಾಗದ ಮೃದು ಪದಾರ್ಥ ತಿರುಳಿಗೆ ಅಂಟಿಕೊಂಡಿರುತ್ತದೆ. ಹೆಚ್ಚು ರುಚಿಕರವಾಗಿರುತ್ತದೆ. ಕಾರಣ ಈ ಹಣ್ಣು ಹುಳಿ ಸಿಹಿಗಳ ಸಮ್ಮಿಶ್ರ ರುಚಿಯಿಂದ ಕೂಡಿರುತ್ತವೆ. ಪಳನಿ ಪಂಚಾಮೃತ ಈ ಹಣ್ಣುಗಳಿಂದಲೇ ತಯಾರಾಗುತ್ತದೆ. ಇದೇ ಗುಂಪಿನ ಮತ್ತೊಂದು ತಳಿ ಕೃಷ್ಣಬಾಳೆ ಇದರ ಗೊನೆ ಸರಾಸರಿ 12 ಕಿ.ಗ್ರಾಂ. ತೂಕವಿದ್ದು, 90 ರವರೆಗೆ ಹಣ್ಣುಗಳು ಇರುತ್ತವೆ.

ಇವಲ್ಲದೆ ಮಹಾರಾಷ್ಟ್ರದ ಆಲ್ಫ, ಹಜಾರ, ಕರ್ನಾಟಕದ ಕರ್ಪೂರ ಬಾಳೆ, ಪಶ್ಚಿಮ ಬಂಗಾಳದ ಕಂತಾಳಿ ಮುಂತಾದುವುಗಳನ್ನು ಅಲ್ಪಸ್ವಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಈ ಮೇಲಿನ ಎಲ್ಲ ತಳಿಗಳನ್ನು ಆಹಾರ ಪದಾರ್ಥವಾಗಿ ಪೂರ್ಣವಾಗಿ ತಿಂದು ಪೌಷ್ಠಿಕಾಂಶವನ್ನು ಜೀರ್ಣಿಸಿಕೊಳ್ಳಬಹುದಾದ ಜನಪ್ರಿಯ ತಳಿಗಳಾಗಿವೆ.

**ಅಡುಗೆ ಬಾಳೆಗಳು :** ಪೂರ್ಣ ಮಾಗಿದರೂ ಸಹ ಈ ಹಣ್ಣನ್ನು ತಿಂದು ಜೀರ್ಣಿಸಿಕೊಳ್ಳುವುದು ಕಷ್ಟ. ಹಾಗಾಗಿ ಬೇಯಿಸಿ ಇಲ್ಲವೇ ತರಕಾರಿಯಾಗಿ ಬಳಸುವುದು ಸಾಮಾನ್ಯ. ಈ ಗುಂಪಿನಲ್ಲಿ ನೇಂದ್ರ, ಮಧುರಂಗ, ಬತೀಸ ಮುಂತಾದವು ಮುಖ್ಯವಾದುವು.

**ನೇಂದ್ರಬಾಳೆ :** ನೇಂದ್ರನ್, ರಾಚೇಲಿ, ಫ್ರೆಂಚ್ ಪ್ಲಾಂಟನ್, ಎಲೆರಿ, ಕಾಯಿಬಾಳೆ, ಮರಬಾಳೆ ಮುಂತಾಗಿ ಅನೇಕ ಹೆಸರುಗಳಿವೆ. ಕೇರಳದಲ್ಲಿ ಇದರ ಬೇಸಾಯ ವ್ಯಾಪಕವಿದೆ. ಹಣ್ಣುಗಳು ಮೂಲೆಯಿಂದ ಕೂಡಿದ್ದು 30 ಸೆಂ.ಮೀ. ಉದ್ದವಿರುತ್ತವೆ. ತೇವದಿಂದ ಕೂಡಿದ ಹವಾಗುಣದಲ್ಲಿ ಚೆನ್ನಾಗಿ ಫಲಿಸುತ್ತದೆ. ಈ ಹಣ್ಣುಗಳು ಬಲಿತು ಪಕ್ವಗೊಳ್ಳಲು ದೀರ್ಘಕಾಲ ಹಿಡಿಯುತ್ತವೆ.

**ಟೈಗರ್ ಪ್ಲಾಂಟನ್ :** ಸಿಪ್ಪೆಯ ಮೇಲೆಲ್ಲಾ ಗುಂಡಗಿನ ಕಪ್ಪು ಚುಕ್ಕೆಗಳಿದ್ದು ಅವು ಚಿರತೆಯ ಮೈಮೇಲಿನ ಚುಕ್ಕೆಗಳಂತಿರುತ್ತವೆ.

**ಕೊಂಬು ಬಾಳೆ :** ಇದನ್ನು ಹಾರ್ನ್ ಪ್ಲಾಂಟನ್ ಎನ್ನುತ್ತಾರೆ. ಇದು ಹೆಚ್ಚು ಮುಂಜಿಲಾನಂತೆ ಇರುತ್ತದೆ. ಮಲಬಾರ್ ತೀರದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**ಬಿಳಿ ಬಾಳೆ :** ಇದನ್ನು ವೈಟ್ ಪ್ಲಾಂಟನ್ ಎನ್ನುತ್ತಾರೆ. ತಿರುಳು ಬೆಳ್ಳಗಿರುವುದೇ ಈ ಹೆಸರು ಬರಲು ಕಾರಣ.

**ಮಧುರಂಗ ಬಾಳೆ :** ಮಂಥನ್ ಬತೀಸ, ಕಾಂಚ್‌ಕೇಲ, ಖಸಾಡಿಯಾ, ಬನಕೇಲ್, ಬೈನ್ಸ್, ಪೊಂದನ್, ಮಾಗಕಾಯ್, ಜಾಂಡಬಾಳೆ, ತೆಳುದನಿ ಮುಂತಾದ ಹೆಸರುಗಳಿವೆ. ಗಿಡಗಳು ಗಡಸುತರವಿದ್ದು ಎತ್ತರಕ್ಕೆ ಬೆಳೆಯುತ್ತವೆ. ಬರಗಾಲದ ಪರಿಸ್ಥಿತಿಗಳನ್ನು ಸಮರ್ಥವಾಗಿ ತಡೆದುಕೊಳ್ಳಬಲ್ಲದು. ತಮಿಳುನಾಡಿನ ಗದ್ದೆ ಭೂಮಿಗಳಲ್ಲಿ, ಜಮೀನುಗಳಲ್ಲಿ ಸಂಪ್ರದಾಯವಾಗಿ ಬಹು ಹಿಂದಿನಿಂದ ಇದನ್ನು ಬೆಳೆಯುತ್ತಾರೆ. ದೃಢವಾಗಿದ್ದು ತಿಳಿ ಹಸುರು ಬಣ್ಣವಿರುತ್ತವೆ. ಹಣ್ಣುಗಳು ಸ್ವಲ್ಪಬಾಗಿದ್ದು ತುದಿಯಲ್ಲಿ ಮೊಂಡಾಗಿರುವುವು. ಸಿಪ್ಪೆ ಮಂದ, ಬಣ್ಣ ಹಸುರು. ಪೂರ್ಣ ಕಳಿತಾಗ ಸುಲಿದು ತಿನ್ನಬಹುದು. ಇವು ಕೊಯ್ಲಿಗೆ ಬರಲು 15 ತಿಂಗಳು ಬೇಕು. ಗೊನೆಯಲ್ಲಿ 100ರವರೆಗೆ ಹಣ್ಣು ಇರುತ್ತವೆ.

**ಮಿಶ್ರ ತಳಿಗಳು :** ಇವುಗಳ ಮಿಶ್ರತಳಿ ವೃದ್ಧಿ ಬಲುಕಷ್ಟದ್ದಾಗಿದೆ. ದಕ್ಷಿಣ ಭಾರತದ ಬಹುತೇಕ ತಳಿಗಳು ತ್ರಿಜೋಡಿ ವರ್ಣತಂತುಗಳಿಂದ ಕೂಡಿರುತ್ತವೆ. 1949ರಲ್ಲಿ ನಮ್ಮಲ್ಲಿ ಈ ಸಂಕರಣ ಪ್ರಾರಂಭವಾಯಿತು. ಐಸಿ1, ಮೊದಲ ಮಿಶ್ರತಳಿಯಾಗಿದೆ. ಲಭ್ಯವಿರುವ ಇತರ ಮಿಶ್ರತಳಿಗಳೆಂದರೆ ಐಸಿ2, ಎಸ್19, ಜೆ1877 ಮತ್ತು ಬಾಡ್ಲೆಸ್ ಆಲ್ಟಪೋರ್ಟ್. ಎಚ್ 135 ಹೊಸ ಮಿಶ್ರತಳಿಗಳು ಜನಪ್ರಿಯವಾಗುತ್ತಿದೆ. ಈ ಮಿಶ್ರತಳಿ ಬಹುಮಟ್ಟಿಗೆ ವಿರೂಪಾಕ್ಷಿಯಂತಿರುತ್ತದೆ. ಇದನ್ನು ಮೈದಾನ ಪ್ರದೇಶಗಳಲ್ಲಿ ಯಶಸ್ವಿಯಾಗಿ ಬೆಳೆಯಬಹುದು.

**ಪ್ರಾದೇಶಿಕ ತಳಿಗಳು :** ಪ್ರತಿಯೊಂದು ಪ್ರದೇಶಗಳಲ್ಲಿ ತಮ್ಮದೇ ಆದ ವಿಶಿಷ್ಟ ತಳಿಗಳನ್ನು ಹೆಚ್ಚಾಗಿ ಬೆಳೆಯುವುದನ್ನು ಕಾಣುತ್ತೇವೆ. ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿ ರಸಬಾಳೆ, ಪಚ್ಚಬಾಳೆ, ಅಡುಗೆಬಾಳೆ, ಏಲಕ್ಕಿರಸಬಾಳೆ, ಕಾಡುಬಾಳೆ ಮುಂತಾದ ಕೆಲವು ತಳಿಗಳ ಅತಿಹೆಚ್ಚು ಬೇಸಾಯನ್ನು ಕಾಣುತ್ತೇವೆ. ಅದರಲ್ಲೂ 'ನಂಜನಗೂಡು ರಸಬಾಳೆ' ಅತ್ಯಂತ ಜನಪ್ರಿಯ ಮತ್ತು ಸಿಹಿಯಾದ ಹಣ್ಣಾಗಿತ್ತು. ದುರಂತವೆಂದರೆ, ಈ ತಳಿಗಳು ತಮ್ಮ ಮೂಲಸ್ಥಳದಲ್ಲೇ ಕಣ್ಮರೆಯಾಗುತ್ತಿವೆ. ಇಂತಹ ಪ್ರಾದೇಶಿಕ ವಿಶಿಷ್ಟತೆಯ ತಳಿಗಳನ್ನು ಉಳಿಸಿಕೊಳ್ಳುವ ಅಗತ್ಯವಿದೆ.

**ಕೀಟ ಮತ್ತು ರೋಗಗಳು :** ಶಿಲೀಂಧ್ರದಿಂದ ಹರಡುವ 'ಪನಾಮ ಬಾಡುವ ರೋಗ'ವಿದ್ದು, ನೀರು ಸರಿಯಾಗಿ ಬಸಿಯದೇ ಇರುವ ಭೂಮಿಯಲ್ಲಿ ಇದರ ಹಾವಳಿ ಹೆಚ್ಚು. ಸುಳಿಯಲ್ಲಿಯ ಎಲೆಗಳು ಒತ್ತಾಗಿ ಪೇರಿಸಿದಂತೆ, ಸಣ್ಣಗೆ ಚೂಪಾಗಿದ್ದು, ಎಲೆ, ತೊಟ್ಟಿನಲ್ಲಿ ಅಲ್ಲಲ್ಲಿ ದಟ್ಟ ಹಸುರು ಗೆರೆಗಳಿದ್ದು ಅವು ಅಲ್ಲಲ್ಲಿ ಶಿಥಿಲಗೊಂಡಿರುತ್ತವೆ. ಇದನ್ನು ಗೊಂಚಲು ಸುಳಿರೋಗ ಅಥವಾ 'ಬಂಚಿಟಾಪ್' ನಂಜುರೋಗವೆಂದು ಕರೆಯುತ್ತಾರೆ. ಬಿಸಿಲಿನಿಂದ, ಗೊನೆಯ ಹಿಡಿಭಾಗ ಕೊಳೆವುದನ್ನು ಕಾಣುತ್ತೇವೆ. ಇದೂ ಒಂದು ಬಗೆಯ ಶಿಲೀಂಧ್ರ ರೋಗ. 'ಸಿಗಟೋಕ' ಎನ್ನುವ ಎಲೆಚುಕ್ಕೆ ರೋಗ. ಎಲೆಗಳ ಮೇಲೆಲ್ಲಾ ಬಿಳಿ, ಹಳದಿ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಅನಂತರ ಹಿಗ್ಗಿ ಮೊಟ್ಟೆಯಾಕಾರ ಹೊಂದಿ ಬಿಳಿಬೂದು ಬಣ್ಣ ಹೊಂದಿ ಕಂದು ಸುತ್ತ ಉಂಗುರ ಏರ್ಪಡುತ್ತದೆ. ಆಂಥ್ರಾಕ್ನೋಸ್ ಎಂಬುದು ಮತ್ತೊಂದು ಶಿಲೀಂಧ್ರ ರೋಗವಾಗಿದೆ. ಇದರಿಂದ ಕಳಿತ ಹಣ್ಣುಗಳ ಸಿಪ್ಪೆ ಮೇಲೆ ಕಪ್ಪು ಬಣ್ಣದ ಗುಂಡು ಮಚ್ಚೆ ಬಿದ್ದು ತಿರುಳು ಕೊಳೆತು ಹಾಳಾಗುತ್ತದೆ. ದಿಂಡುಕೊಳೆಯುವ ರೋಗ ಹಾಗೂ ಎಲೆಗಳಲ್ಲಿ ಬಿಳಿಯ ಗೆರೆ ಮೂಡುವ ವರ್ಣ ವಿನ್ಯಾಸ/ನಂಜುರೋಗ ಕಂಡುಬರುತ್ತದೆ. ಹಣ್ಣುಗಳ ಕುಳಿರೋಗ, ಕಂದುಮಚ್ಚೆರೋಗ, ವಜ್ರಮಚ್ಚೆರೋಗ,

ಚುಟ್ಟಾತುದಿರೋಗ, ಬೇರುಗೆಡ್ಡೆಕೊಳೆಯುವ ರೋಗ, ಹಳದಿಕಾಯಿ ಕಂಡುಬರುವ ಮೇಕೊ ರೋಗ ಮುಂತಾದ ರೋಗಗಳು ಬಾಳೆಗಿಡಗಳನ್ನು ಬಾಧಿಸುತ್ತವೆ. ಸೂಕ್ತವಾದ ನೀರಾವರಿ, ಸ್ವಚ್ಛವಾದ ಭೂಮಿಯನ್ನು ಹೊಂದಿ, ನಿಯಮಿತ ಬೇಸಾಯವನ್ನು ಮಾಡುವುದರಿಂದ ಇಂತಹ ರೋಗಗಳನ್ನು ನಿಯಂತ್ರಿಸಬಹುದಾಗಿದೆ. ಗಿಡಗಳ ಅತಿ ಎತ್ತರವನ್ನು ಕುಂಠಿತಗೊಳಿಸುವುದು. ಕಂದುಗಳ ಸಂಖ್ಯೆಯನ್ನು ಹೆಚ್ಚಿಸುವುದು, ಗೊನೆ ತಳ್ಳುವ ಮತ್ತು ಕೊಯ್ಲುಗಳ ಅವಧಿಯನ್ನು ಕಡಿಮೆ ಮಾಡಲು, ಇಳುವರಿ ಹೆಚ್ಚಿಸಲು, ಗುಣಮಟ್ಟ ಸುಧಾರಿಸಲು, ಬೀಜ ನಿವಾರಣೆಗೆ, ತಿರುಳಲ್ಲಿ ಉಂಡೆಗಳಿರುವುದನ್ನು ತಪ್ಪಿಸಲು ಹಣ್ಣನ್ನು ಬೇಗ ಪಕ್ವಗೊಳಿಸುವುದಕ್ಕಾಗಿ ಹೀಗೆ ಹಲವು ಕಾರ್ಯಗಳಿಗೆ ಚೋದಕ ಸಿಂಪಡನೆ ಮಾಡುವುದು ಬಹು ಉಪಯುಕ್ತವಾಗಿದೆ.

**ಕೊಯ್ಲು ಮತ್ತು ಇಳುವರಿ :** ಆರೋಗ್ಯದಿಂದ ಕೂಡಿದ ಬಾಳೆ ಗಿಡವು ತನ್ನ ಜೀವಮಾನದಲ್ಲಿ 35 ರಿಂದ 50 ಎಲೆಗಳನ್ನು ತಳ್ಳುತ್ತದೆ. ಗೊನೆ ತಳ್ಳಿದ ಅನಂತರ ಎಲೆಗಳು ಹುಟ್ಟುವುದಿಲ್ಲ. ಹಣ್ಣುಗಳ ವೃದ್ಧಿಯಲ್ಲಿ ಎರಡು ಮುಖ್ಯ ಹಂತಗಳಿವೆ. ಬೇಸಾಯದ ಬಹುತೇಕ ತಳಿಗಳಿಗೆ ಪರಾಗಸ್ಪರ್ಶ ಬೇಕಾಗಿಲ್ಲ. ತಿರುಳು ವೃದ್ಧಿ ಹೊಂದಿ ಬೆಳೆಯಲು ಕಣಗಳ ಹಿಗ್ಗುವಿಕೆಯೇ ಕಾರಣ. ಬೀಜದಿಂದ ಕೂಡಿದ ಬಗೆಗಳಲ್ಲಿಯ ಹಣ್ಣುಗಳ ಗಾತ್ರದಲ್ಲಿಯ ಹೆಚ್ಚಳ ಒಂದೇ ತೆರನಾಗಿರುತ್ತದೆ.

ಕಂದುಗಳನ್ನು ನೆಟ್ಟ ಅನಂತರ ಗೊನೆ ತಳ್ಳಲು 7 ರಿಂದ 15 ತಿಂಗಳ ಕಾಲ ಹಿಡಿಸುತ್ತದೆ. ಮುಂದಿನ ಮೂರು ನಾಲ್ಕು ತಿಂಗಳಲ್ಲಿ ಅವು ಕೊಯ್ಲಿಗೆ ಸಿದ್ಧಗೊಳ್ಳುತ್ತವೆ. ಕೆಲವೊಂದು ತಳಿಗಳಲ್ಲಿ ಕಂದುಗಳನ್ನು ನೆಟ್ಟ 10 ತಿಂಗಳಲ್ಲಿ ಗೊನೆಗಳು ಇಣುಕುವುದುಂಟು. ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಗಳಲ್ಲಿ ಈ ಅವಧಿಯು 9 ರಿಂದ 13 ತಿಂಗಳಷ್ಟಿರುತ್ತದೆ. ಗೊನೆ ಇಣುಕಿದ ಸುಮಾರು 90 ರಿಂದ 120 ದಿನಗಳಲ್ಲಿ ಹಣ್ಣನ್ನು ಕೊಯ್ಲು ಮಾಡಬಹುದು. ಹೆಚ್ಚು ಎತ್ತರಕ್ಕೆ ಬೆಳೆಯುವ ತಳಿಗಳ ಅವಧಿಯೂ ಹೆಚ್ಚಾಗಿರುತ್ತದೆ. ಬಾಳೆಯನ್ನು ಗಿಡದಲ್ಲಿ ಮಾಗಲು ಬಿಡುವುದರಿಂದ ಸಮಯ ಹಾಳಾಗುತ್ತದೆ. ಹಾಗೂ ಕಾಯಿ ಬಲಿತಂತೆಲ್ಲ ಬಿರಿಯುತ್ತವೆ ಮತ್ತು ಪಕ್ವಗೊಳ್ಳುವಲ್ಲಿ ವೈವಿಧ್ಯತೆ ಉಂಟಾಗುತ್ತದೆ. ಹೀಗಾಗಿ ದಟ್ಟಹಸುರಿನಿಂದ ಬಿಳಿ ಹಸುರು ಬಣ್ಣಕ್ಕೆ ಬದಲಾಗುತ್ತಲೆ, ಸಿಪ್ಪೆಯಲ್ಲಿ ಏಣುಗಳು ಮಾಯವಾಗಿ ಹಣ್ಣು ದುಂಡಾಗುತ್ತವೆ. ಈ ಹಂತದಿ ಎಲೆಗಳು ಒಣಗುತ್ತವೆ, ಕಾಯಿಗಳ ತುದಿ ಶಲಾಕೆಯ ಉಳಿಕೆ ಭಾಗ ಸ್ವಲ್ಪ ತಡವಿದರೆ ಸಾಕು ಉದಿರಿ ಬೀಳುತ್ತವೆ. ಇವು ಕೊಯ್ಲು ಮಾಡಲು ಸಿದ್ಧವಿರುವ ಹಣ್ಣಿನ ಲಕ್ಷಣಗಳಾಗಿವೆ.

ಕೊಯ್ಲು ಮಾಡುವಾಗ ಇಡೀ ಗೊನೆಯನ್ನು ಬುಡಕ್ಕೆ ಕತ್ತರಿಸಿ ತೆಗೆಯುವುದು ಸಾಮಾನ್ಯ. ಬುಡದಲ್ಲಿಯ ಬಾಗಿದ ತೊಟ್ಟು ಭಾಗ ಸುಮಾರು 30 ಸೆಂ.ಮೀ. ಉದ್ದ ಇರುವಂತೆ ಕತ್ತರಿಸಿ ತೆಗೆದಲ್ಲಿ ಅದು ಎತ್ತಿ ಇಳಿಸಲು ಸುಲಭ. ತೊಟ್ಟಿನ ಕಚ್ಚುಗಾಯಕ್ಕೆ ವ್ಯಾಸಲಿನ್ ಇಲ್ಲವೇ ಕರಗಿದ ಮೇಣ ಬಳಿಯುವುದರಿಂದ ರೋಗಾಣು ಪ್ರವೇಶ ನಿಯಂತ್ರಿಸಿ, ಹಣ್ಣು ಬಹುಕಾಲ ಆಕರ್ಷಕವಾಗಿರಿಸಬಹುದು.

ಇಳುವರಿಯ ಪ್ರಮಾಣವು ತಳಿ, ಅಂತರ ಬೇಸಾಯ ಕ್ರಮಗಳಿಗನುಗುಣವಾಗಿ ವ್ಯತ್ಯಾಸಗೊಳ್ಳುತ್ತದೆ. ಭಾರತ ದೇಶದಲ್ಲಿ ಸರಾಸರಿ ಫಸಲು ಹೆಕ್ಟೇರಿಗೆ 25 ಟನ್ನುಗಳಷ್ಟಿದೆ. ಎತ್ತರದ ತಳಿಗಳಲ್ಲಿ 15 ರಿಂದ 20 ಟನ್ ಇಳುವರಿ ಸಾಧ್ಯ. ರೊಬಸ್ಟದಲ್ಲಿ 45 ಟನ್ ಮತ್ತು ಬಸ್ರಾಯ್ ಪೂವನ ಮುಂತಾದುವುಗಳಲ್ಲಿ ಹೆಕ್ಟೇರಿಗೆ 37.5 ರಿಂದ 50 ಟನ್ ಇಳುವರಿ ಸಾಧ್ಯ. ಕೆಲವೆಡೆ ಹೆಕ್ಟೇರಿಗೆ 100 ಟನ್ ಸಿಕ್ಕಿರುವ ಉದಾಹರಣೆಗಳಿವೆ. ನೀರಾವರಿ ಸೌಲಭ್ಯವಿರದ ಕಡೆಗಳಲ್ಲಿ ಹೆಕ್ಟೇರಿಗೆ 5 ರಿಂದ 6.25 ಟನ್ನುಗಳಷ್ಟು ಕಡಿಮೆ ಇಳುವರಿಯೂ ಕಂಡುಬಂದಿದೆ. ಬೆಟ್ಟದ ಬಾಳೆಗಳು ಹೆಕ್ಟೇರಿಗೆ 15 ರಿಂದ 17.5 ಟನ್ ಹಣ್ಣನ್ನು ಕೊಡಬಲ್ಲವು.

**ಇತರೆ ಹಣ್ಣಿನ ಬೆಳೆಗಳು ಮತ್ತು ಬಾಳೆ :** ಇತರೆ ಹಣ್ಣುಗಳ ಬೆಳೆಗೆ ಹೋಲಿಸಿದಲ್ಲಿ ಲಾಭದಾಯಕವಾಗಿ ಬೆಳೆಯಬಲ್ಲ ಬೇಸಾಯವಾಗಿ ಬಾಳೆ ಕಂಡುಬರುತ್ತದೆ. ತ್ರಾಸವಿಲ್ಲದೇ ಕಡಿಮೆ ಖರ್ಚಿನಲ್ಲೇ ಈ ಬೆಳೆಯನ್ನು ಮಾಡಬಹುದು. ಸಾಮಾನ್ಯವಾಗಿ ಎಲ್ಲಾ ಬಗೆಯ ಮಣ್ಣುಗಳಲ್ಲೂ ಬಾಳೆ ಬೆಳೆಯುವುದರಿಂದ ಇದೊಂದು ಸಾರ್ವತ್ರಿಕ ಹಣ್ಣಿನ ಬೆಳೆಯಾಗಿದೆ. ಹಾಗೂ ಅತ್ಯಂತ ಪೌಷ್ಟಿಕ, ಸುಲಭ ಲಾಭದ ಹಣ್ಣುಗಳಲ್ಲಿ ಒಂದಾಗಿದೆ.

**ಆಧಾರ :**

ಪ್ರಧಾನ ಹಣ್ಣಿನ ಬೆಳೆಗಳು - ಬಾಳೆ, ಎಂ.ಎ. ನಾರಾಯಣರೆಡ್ಡಿ, ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560 024

2003, ಮಾಹಿತಿ ಮತ್ತು ಚಿತ್ರ ಋಣ : ಅಂತರ್ಜಾಲ ತಾಣಗಳು

*ಎ.ಎಸ್.ಎಸ್.*

**ಬಿಂದಿಗೆ ಗಿಡ** ಆಲಂಕಾರಿಕ ಸಸ್ಯಗಳಲ್ಲಿ ಒಂದು. ದಾಸವಾಳ, ಬೆಂಡೆ ಇತ್ಯಾದಿಗಳ ಕುಟುಂಬಕ್ಕೆ ಸೇರಿದುದಾಗಿದೆ. ಇಂಗ್ಲಿಷಿನಲ್ಲಿ ಇದನ್ನು ಹಾಲಿಹಾಕ್ ಎಂದು ಕರೆಯುವರು. ಇದರ ವೈಜ್ಞಾನಿಕ ಹೆಸರು ಆಲ್ತೀಯ ರೋಸಿಯ. ದಾಸವಾಳ ಗಿಡದಂತೆ ಕಾಣುವ ಇದು ಸುಮಾರು ಎಂಟು ಅಡಿ ಎತ್ತರದವರೆಗೂ ಬೆಳೆಯಬಲ್ಲುದು. ಇದು ವಾರ್ಷಿಕ ಸಸ್ಯ. ಹಸ್ತಾಕಾರದ ಸರಳ ಎಲೆಗಳಿಗೆ ರೋಮಗಳಿರುತ್ತವೆ. ಕಾಂಡದ ಮೇಲೂ ರೋಮಗಳಿದ್ದು ಕಾಂಡದ ಪ್ರತಿಕಂಕುಳಲ್ಲೂ ಒಂದು ಹೂ ಬಿಡುತ್ತದೆ. ನೋಡಲು ಆಕರ್ಷಕವಾಗಿರುವ ಇದರ ಹೂಗಳು ಬಿಳಿ, ನಸುಗೆಂಪು ಇಲ್ಲವೆ ಕೆಂಪು ಬಣ್ಣ ಇರುತ್ತವೆ. ಬೀಜಗಳಿಂದ ಸಸ್ಯಾಭಿವೃದ್ಧಿ ಮಾಡಲಾಗುವುದು. ಬೀಜಬಿತ್ತಿದ ಮೂರು ತಿಂಗಳೊಳಗೆ ಹೂ ಬಿಟ್ಟು ಐದು ತಿಂಗಳೊಳಗೆ ಫಲ ಕೊಡುತ್ತದೆ. ಸಸ್ಯದ ಯಾವುದೇ ಭಾಗವನ್ನು ಚಿವುಟಿದರೂ ಒಂದು ಬಗೆಯ ಅಂಟು ದ್ರವ ಸ್ರವಿಸುತ್ತದೆ. ಹೂಗಳ ರಸ ಆಮಶಂಕೆ ನಿವಾರಕ. ಗಾಯಗಳಿಗೆ ಇದರ ಎಲೆಗಳನ್ನು ಅರೆದು ಹಚ್ಚುವುದಿದೆ. ಸುಟ್ಟಗಾಯುಗಳಿಗೂ ಇದರ ಹೂ ಮತ್ತು ಎಲೆಗಳನ್ನು ಉಪಯೋಗಿಸುವರು. ಉದ್ಯಾನವನಗಳಲ್ಲಿ, ಶಾಲಾ ಕಾಲೇಜು ಆವರಣಗಳಲ್ಲಿ, ಕಛೇರಿಗಳ ಅಂಗಳಗಳಲ್ಲಿ ಬೆಳೆಸುವರು.

*ಪಿ.ಸಿ.ಎಸ್.*

**ಬಿಜಾಪುರ ಜಿಲ್ಲೆಯ ಕೃಷಿ** ಪಂಚನದಿಗಳ ನಾಡು ಎಂದೇ ಪ್ರಸಿದ್ಧವಾಗಿರುವ ಬಿಜಾಪುರ ಜಿಲ್ಲೆ ಕರ್ನಾಟಕ ರಾಜ್ಯದ ವಿಸ್ತೀರ್ಣದ ಶೇ. 8.9ರಷ್ಟು ದೊಡ್ಡದಾಗಿದ್ದು ಬಾದಾಮಿ, ಬಾಗಲಕೋಟೆ, ಬಸವನ ಬಾಗೇವಾಡಿ, ಬೀಳಗಿ, ಮುಧೋಳ, ಮುದ್ದೇಬಿ ಹಾಳ, ಹುನಗುಂದ, ಬಿಜಾಪುರ, ಜಮಖಂಡಿ, ಸಿಂದಗಿ ಮತ್ತು ಇಂಡಿ ಎಂಬ ಹನ್ನೊಂದು ತಾಲ್ಲೂಕುಗಳನ್ನು ಹೊಂದಿತ್ತು.

ಇದು 1997ರಲ್ಲಿ ವಿಭಜನೆಗೊಂಡು ವಿಜಾಪುರ ಮತ್ತು ಬಾಗಲಕೋಟೆ ಎಂಬ ಎರಡು ಜಿಲ್ಲೆಗಳಾಗಿ ಮಾರ್ಪಟ್ಟವು.

ಬಿಜಾಪುರ (ವಿಜಾಪುರ) ಜಿಲ್ಲೆಯು ಅಭಿವೃದ್ಧಿ ಮತ್ತು ಕೃಷಿಯಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. ಇದು ಬಿಜಾಪುರವನ್ನು ಜಿಲ್ಲಾ ಕೇಂದ್ರವಾಗಿರಿಸಿಕೊಂಡು ಬಸವನ ಬಾಗೇವಾಡಿ, ಇಂಡಿ, ಮುದ್ದೇಬಿಹಾಳ ಮತ್ತು ಸಿಂದಗಿ ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣ 10,536 ಚದರ ಕಿಲೋಮೀಟರ್. ಜಿಲ್ಲೆಯಲ್ಲಿ ಒಟ್ಟು 648 ಹಳ್ಳಿಗಳಿವೆ.

ಇತಿಹಾಸ, ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಗಳನ್ನು ಅವಲೋಕಿಸಿದಾಗ ವಿಜಾಪುರ ಜಿಲ್ಲೆಯು ಜಗತ್ತಿನ ಭೂಪಟದಲ್ಲಿ ಕರ್ನಾಟಕದ ಹೆಗ್ಗಳಿಕೆಯನ್ನು ಬಿಂಬಿಸುತ್ತದೆ. 10-12ನೇ ಶತಮಾನದಲ್ಲಿ ಇದು ವಿಜಾಪುರವೆಂದು ಇತಿಹಾಸದ ಪುಟಗಳಲ್ಲಿ ಉಲ್ಲೇಖಿತವಾಗಿದೆ. ಈ ಪ್ರದೇಶವನ್ನು ಚಾಲುಕ್ಯರು, ರಾಷ್ಟ್ರಕೂಟರು, ಆದಿಲ್‌ಶಾಹಿ, ನಿಜಾಮರು, ಮರಾಠರು ಮತ್ತು ಬ್ರಿಟಿಷರು ಆಳಿದ್ದಾರೆ.

ವಿಜಾಪುರ ಜಿಲ್ಲೆಯು ಕೃಷ್ಣಾ ಮತ್ತು ಭೀಮಾ ನದಿಗಳ ನಡುವೆ ಇದ್ದು ಇದರ ಮಧ್ಯೆ 'ಡೋಣಿ' ನದಿಯು ಹರಿಯುತ್ತಿದೆ. ಇದರಿಂದಾಗಿ ಇಲ್ಲಿಯ ಫಲವತ್ತಾದ ಕಪ್ಪು ಮಣ್ಣಿನಲ್ಲಿ ಜೋಳ, ಗೋಧಿ, ಕುಸುಬಿ ಸೂರ್ಯಕಾಂತಿಯಂಥ ಬೆಳೆಯನ್ನು ಬೆಳೆಯಲಾಗುತ್ತದೆ.


**ಜಿಲ್ಲೆಯ ಮೇಲ್ಮೈ ಲಕ್ಷಣ :** ವಿಜಾಪುರ ಜಿಲ್ಲೆಯು ದಖನ್ ಪ್ರಸ್ಥಭೂಮಿಯ ಶುಷ್ಕ ವಲಯದಲ್ಲಿದೆ. ದಖನ್ ಟ್ರ್ಯಾಪ್, ಕಲಾದಗಿ ಶಿಲಾವರ್ಗ ಮತ್ತು ಪರ್ಯಾಯ ದ್ವೀಪದ ನೈಸ್ ಶಿಲಾವರ್ಗದಿಂದ ಕೂಡಿದೆ. ಭೀಮಾ ಮತ್ತು ಕೃಷ್ಣಾ ನದಿಗಳ ನಡುವಿನ ಪ್ರದೇಶ ಮುಖ್ಯವಾಗಿ ಟ್ರ್ಯಾಪ್ ಕಲ್ಲಿನ ಗುಡ್ಡಗಳಿಂದ ಕೂಡಿದೆ. ಬಾಗೇವಾಡಿ, ಸಿಂದಗಿ ಮುದ್ದೇಬಿಹಾಳ ತಾಲ್ಲೋಕುಗಳಲ್ಲಿ ಸ್ಥಳೀಯ ನೈಸ್ ಶಿಲಾಗುಡ್ಡಗಳು ಮತ್ತು ಇತರ ರೂಪಾಂತರ ಶಿಲಾವರ್ಗಗಳಿವೆ. ಬಿಜಾಪುರ ಜಿಲ್ಲೆಯಲ್ಲಿರುವ ಎಲ್ಲಾ ಶಿಲಾವರ್ಗಕ್ಕೂ ಪರ್ಯಾಯ ದ್ವೀಪ ನೈಸ್ ಶಿಲಾ ಸಂಕೀರ್ಣವೇ ಮೂಲ ಶಿಲೆಯಾಗಿದೆ. ನೈಸ್ ಶಿಲೆ ಮುಖ್ಯವಾಗಿ ಮುದ್ದೇಬಿಹಾಳ ತಾಲ್ಲೋಕಿನಲ್ಲಿ ಕಂಡುಬರುತ್ತವೆ.

ಜಿಲ್ಲೆಯನ್ನು ಭೀಮಾ ಕಣಿವೆ, ಮಧ್ಯದ ಪ್ರಸ್ಥಭೂಮಿ, ಡೋಣಿ ಕಣಿವೆ, ಕೃಷ್ಣಾ ಕಣಿವೆ, ದಕ್ಷಿಣದ ಶ್ರೇಣಿಗಳು, ಆಗ್ನೇಯದ ಗುಡ್ಡಗಳು, ಬಿಜಾಪುರದ ಪ್ರದೇಶಗಳು ಎಂದು ವಿಭಾಗ ಮಾಡಿಕೊಳ್ಳಬಹುದು. ಭೀಮಾ ಕಣಿವೆ ಭೀಮಾ ನದಿಯ ದಕ್ಷಿಣ ದಂಡೆಯಲ್ಲಿ 6ರಿಂದ 12 ಕಿ.ಮೀ. ಅಗಲವಾಗಿ ನದಿಯ ಉದ್ದಕ್ಕೂ ಹರಡಿದೆ. ಕಣಿವೆ ಪ್ರದೇಶವು ಕೃಷಿ ಯೋಗ್ಯ ಭೂಮಿಯಾಗಿದ್ದು ಫಲವತ್ತತೆಯಿಂದ ಕೂಡಿದೆ.

ಮಧ್ಯದ ಪ್ರಸ್ಥಭೂಮಿ ಭೀಮಾ ಕಣಿವೆಯ ದಕ್ಷಿಣಕ್ಕೆ ಬರುತ್ತದೆ. ಈ ವಲಯದಲ್ಲಿ ಬಿಜಾಪುರ ಜಿಲ್ಲಾ ಕೇಂದ್ರ ಪಸರಿಸಿದೆ. ಬಿಜಾಪುರ ಜಿಲ್ಲೆಯ ಒಟ್ಟು 10541 ಚ.ಕಿ.ಮೀ ಹೊಂದಿದ್ದು, ಪೂರ್ವಕ್ಕೆ ಗುಲ್ಬರ್ಗ ಜಿಲ್ಲೆ, ದಕ್ಷಿಣಕ್ಕೆ ರಾಯಚೂರು ಜಿಲ್ಲೆ, ದಕ್ಷಿಣ ಮತ್ತು ಪಶ್ಚಿಮಕ್ಕೆ ಬಾಗಲಕೋಟೆ ಪಶ್ಚಿಮಕ್ಕೆ ಬೆಳಗಾವಿ, ಉತ್ತರ-ಪಶ್ಚಿಮಕ್ಕೆ ಮಹಾರಾಷ್ಟ್ರದ ಸಾಂಗಲಿ ಹಾಗೂ ಉತ್ತರಕ್ಕೆ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯು ಸುತ್ತುವರಿದಿದೆ.

ಬಿಜಾಪುರ ಜಿಲ್ಲೆಯಲ್ಲಿ ಹರಿಯುವ ಎರಡು ಮುಖ್ಯ ನದಿಗಳು ಕೃಷ್ಣಾ ಮತ್ತು ಭೀಮಾ. ಬಿಜಾಪುರ ಪಟ್ಟಣವು ಬೆಂಗಳೂರಿನಿಂದ 535 ಕಿ.ಮೀ., ಪುಣೆಯಿಂದ 350 ಕಿ.ಮೀ., ಮುಂಬೈಯಿಂದ 500 ಕಿ.ಮೀ., ಹೈದರಾಬಾದ್‌ನಿಂದ 380 ಕಿ.ಮೀ., ಗೋವಾದಿಂದ 310 ಕಿ.ಮೀ., ಗುಲ್ಬರ್ಗಾದಿಂದ 165 ಕಿ.ಮೀ., ಧಾರವಾಡದಿಂದ 200 ಕಿ.ಮೀ., ಹುಬ್ಬಳ್ಳಿಯಿಂದ 190 ಕಿ.ಮೀ., ಮತ್ತು ಬೆಳಗಾವಿಯಿಂದ 210 ಕಿ.ಮೀ., ದೂರದಲ್ಲಿದೆ.

ಜಿಲ್ಲೆ ಕರ್ನಾಟಕ ರಾಜ್ಯದ ಶೇ, 5.49ರಷ್ಟು ವಿಸ್ತೀರ್ಣವನ್ನು ಹೊಂದಿದೆ. ಭೌಗೋಳಿಕವಾಗಿ 15.500 ಉತ್ತರ ಅಕ್ಷಾಂಶ, 74.540 ಪೂರ್ವ ಅಕ್ಷಾಂಶ, 17 x 280 ಉತ್ತರ ರೇಖಾಂಶ, 760 x 28 ಪೂರ್ವ ರೇಖಾಂಶದಲ್ಲಿ ಕಂಡುಬರುತ್ತದೆ. ಬಿಜಾಪುರ ಜಿಲ್ಲೆಯು ಸಮುದ್ರ ಮಟ್ಟಕ್ಕಿಂತ ಸರಾಸರಿ 606 ಮೀ ಎತ್ತರವಿದೆ.



**ಹವಾಗುಣ :** ಬಿಜಾಪುರ ಜಿಲ್ಲೆಯು ಸಾಧಾರಣ ಹಿತಕರವಾದ ಹವಾಗುಣ ಹೊಂದಿದೆ. ಇಲ್ಲಿ ಸಾಧಾರಣ ಮಳೆಯಾಗುತ್ತದೆ. ಕಾಲಾವಧಿಯ ಆಧಾರದ ಮೇಲೆ ಋತುಗಳನ್ನು ವಿಂಗಡಿಸಬಹುದಾಗಿದೆ. ಬೇಸಗೆಯ ಏಪ್ರಿಲ್‌ನಲ್ಲಿ ಬಿಜಾಪುರ ಜಿಲ್ಲೆಯು ರಾಜ್ಯದಲ್ಲಿಯೇ 42.7 ಡಿಗ್ರಿಯಷ್ಟು ಅತಿ ಹೆಚ್ಚು ಉಷ್ಣತೆ ಹೊಂದುವ ಪ್ರದೇಶವಾಗಿದ್ದು, ಡಿಸೆಂಬರ್ ತಿಂಗಳಿನಲ್ಲಿ 9.5 ಡಿಗ್ರಿಯಷ್ಟು ಅತಿ ಕಡಿಮೆ ಉಷ್ಣತೆಯನ್ನು ಹೊಂದಿರುತ್ತದೆ.

ಬೇಸಗೆ ಕಾಲ - 350 ಸೆಂ.ನಿಂದ 420 ಸೆಂ.ವರೆಗೆ ಉಷ್ಣತೆ ಇರುತ್ತದೆ. ಚಳಿಗಾಲ ಮತ್ತು ಮಳೆಗಾಲದಲ್ಲಿ - $180^0$ ನಿಂದ $280^0$ ಇರುತ್ತದೆ. ಜಿಲ್ಲೆ ಗಾಳಿಯ ಸರಾಸರಿ ವೇಗ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಕ್ರಮವಾಗಿ 18.2 ಕಿ.ಮೀ. 19.6 ಕಿ.ಮೀ. 17.5 ಕಿ.ಮೀ.ಗಳಷ್ಟು ಇರುತ್ತದೆ.

**ಮಳೆ :** ಇಲ್ಲಿ ಸಾಮಾನ್ಯವಾಗಿ ಒಣ ವಾಯುಗುಣವಿದ್ದುದರಿಂದ ವರ್ಷದಲ್ಲಿ ವಾರ್ಷಿಕ ಸರಾಸರಿ 37 ದಿವಸ ಮಳೆಯಾಗುವುದರಿಂದ ಒಣ ದಿನಗಳೇ ಅಧಿಕವಾಗಿರುತ್ತದೆ. ಜೂನ್‌ನಲ್ಲಿ ಭಾರತ ಪ್ರವೇಶಿಸುವ ಮಾನ್‌ಸೂನ್ ಮಾರುತದಿಂದ ಇಲ್ಲಿ ಮಳೆಯಾಗುವುದರಿಂದ ಮುಂಗಾರು ಮಳೆಯ ಕಾಲ ಜೂನ್‌ನಿಂದ ಸೆಪ್ಟೆಂಬರ್‌ತನಕ ಇರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಅಧಿಕ ಉಷ್ಣತೆ ಇರುವುದರಿಂದ 2013 ಬಿಜಾಪುರ ತಾಲ್ಲೂಕು ಬರಪೀಡಿತ ತಾಲ್ಲೂಕಾಗಿದೆ.

ಜಿಲ್ಲೆ ಹೆಚ್ಚು ಬಯಲು ಸೀಮೆಯಿಂದ ಕೂಡಿರುವುದರಿಂದ ಪರ್ವತ, ಬೆಟ್ಟಗುಡ್ಡಗಳು, ಕಾಡುಗಳು ಅತ್ಯಂತ ಕಡಿಮೆಯಾಗಿವೆ. ವರ್ಷದ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ಕ್ರಮವಾಗಿ 61.1, 77.1 74.5, 62.1 ಮತ್ತು 51.6 ಸೆಂ. (ಅತ್ಯಧಿಕ) ಮಳೆ ಬೀಳುತ್ತದೆ.

ಜಿಲ್ಲೆಯ ಸರಾಸರಿ ವಾರ್ಷಿಕ ಮಳೆಯು 300 ರಿಂದ 600 ಮಿ.ಮೀಗಳಷ್ಟು ಆಗಿರುತ್ತದೆ. 2011ರ ವಾರ್ಷಿಕ ಸರಾಸರಿ ಮಳೆಯು 367.5 ಮಿ.ಮೀ. ಆಗಿದೆ. 2013ರ ಜನವರಿಯಿಂದ ಅಕ್ಟೋಬರ್‌ರವರೆಗೆ 280 ಮಿ.ಮೀ. ಮಳೆಯಾಗಿದ್ದು ವಾಡಿಕೆ ಮಳೆ ಸರಾಸರಿ 330 ಮಿ.ಮೀ. ಆಗಿದೆ.

2011-12ನೇ ಸಾಲಿನ ಮಳೆಯ ಸರಾಸರಿಯ ವಿವರವನ್ನು ಗಮನಿಸಿದಾಗ ಬಸವನ ಬಾಗೇವಾಡಿಯಲ್ಲಿ ವಾಡಿಕೆ ಮಳೆ 655 ಮಿ.ಮೀ. ಇದ್ದು ವಾಸ್ತವಿಕವಾಗಿ 419 ಮಿಮಿ ಆಗಿದೆ. ವಿಜಾಪುರ 646 ಇದ್ದು ವಾಸ್ತವಿಕ 278.7ಮಿ.ಮೀ ಮಳೆ ಪ್ರಮಾಣ ಇದೆ. ಇಂಡಿ ತಾಲ್ಲೂಕಿನಲ್ಲಿ ವಾಡಿಕೆ 619 ಇದ್ದು ವಾಸ್ತವಿಕ 376.4 ಮಿ.ಮೀ. ಇದೆ. ಮುದ್ದೇಬಿಹಾಳದಲ್ಲಿ ವಾಡಿಕೆ 609 ಇದ್ದು 412.0 ಮಿಮೀ ಆಗಿದೆ. ಮತ್ತು ಸಿಂದಗಿ 629 ಇದ್ದು 351 ಮಿಮೀ ಮಳೆಯಾಗಿದೆ.

**ಕೃಷಿಭೂಮಿ ವಿಸ್ತೀರ್ಣ :** ಈ ಜಿಲ್ಲೆ ವರ್ಷವಿಡೀ (ನದಿಗಳನ್ನು ಹೊಂದಿದ್ದರೂ) ಬರವನ್ನು ಎದುರಿಸುತ್ತದೆ. ವಾರ್ಷಿಕವಾಗಿ ಸಾಧಾರಣ ಮಳೆಯನ್ನು ಪಡೆಯುವ ಜಿಲ್ಲೆಯಾಗಿದ್ದು ಕೃಷಿಗೆ ಯೋಗ್ಯ ಭೂಮಿ ಹೊಂದಿದೆ. ಇಲ್ಲಿಯ ಜನರ ಪ್ರಮುಖ ಉದ್ಯೋಗ ಕೃಷಿ. ಆಗಿದೆ. ಶೇ 80ರಷ್ಟು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಇಲ್ಲಿನ ಜನ ಹೆಚ್ಚು ಶ್ರಮಿಕರು, ಪ್ರಾಮಾಣಿಕರು, ಕೃಷಿ ಕೆಲಸವಿಲ್ಲದಿದ್ದಾಗ ಇತರ ಕಸುಬುಗಳನ್ನು ಮಾಡುತ್ತಾ 'ಗುಳೆ' ಹೋಗುತ್ತಾರೆ. ಆದರೂ ಕೃಷಿಯೇ ಇಲ್ಲಿ ಪ್ರಧಾನವಾದ್ದರಿಂದ ಇದು ಕೃಷಿಯೋಗ್ಯ ಭೂಮಿಯನ್ನು ಹೊಂದಿದೆ. ಜಿಲ್ಲೆಯಲ್ಲಿ ಒಟ್ಟು 950332 ಕೃಷಿ ಹಿಡುವಳಿದಾರರಿದ್ದು ಸುಮಾರು 10,37,957 ಹೆಕ್ಟೇರ್ ಪ್ರದೇಶದಲ್ಲಿ ಸಾಗುವಳಿಯಾಗಿದೆ.

**ಭೂ ಹಿಡುವಳಿದಾರರು :** ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 342203 ಭೂ ಹಿಡುಳಿದಾರರಿದ್ದು 950332 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ 47440 ಭೂ ಹಿಡುವಳಿದಾರರು ಸುಮಾರು 99177 ಹೆಕ್ಟೇರ್ ಪ್ರದೇಶದಲ್ಲಿ ಕೃಷಿಯಲ್ಲಿ ನಿರತರಾಗಿದ್ದಾರೆ. ಪರಿಶಿಷ್ಟ ಪಂಗಡದ 2631 ಭೂಹಿಡುವಳಿದಾರರು 292094ರಷ್ಟು ಭೂ ಹಿಡುಳಿದಾರರಿದ್ದು 844500ರಷ್ಟು ಪ್ರದೇಶದಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿದ್ದಾರೆ. ಇವರುಗಳಲ್ಲಿ ಪರಿಶಿಷ್ಟ ಜಾತಿಯ ಅತಿಸಣ್ಣ ಭೂ ಹಿಡುವಳಿದಾರರು 10.055ರಷ್ಟು, ಸಣ್ಣ ಭೂಹಿಡುವಳಿದಾರರು 19507 ಭೂ ಹಿಡುವಳಿದಾರರು ಮತ್ತು 420 ದೊಡ್ಡ ಭೂ ಹಿಡುವಳಿದಾರರು ಕಂಡುಬರುತ್ತಾರೆ. ಪರಿಶಿಷ್ಟ ಪಂಗಡದಲ್ಲಿ 486ಅತಿ ಸಣ್ಣ ಹಿಡುವಳಿದಾರರಿದ್ದು, 1022 ಮಂದಿ ಸಣ್ಣ ಭೂ ಹಿಡುವಳಿದಾರರು ಕಂಡುಬರುತ್ತಾರೆ. ಆದರೂ ನೀರಾವರಿ ಸೌಲಭ್ಯವಿರದ ಕಾರಣ ಹೆಚ್ಚೇನೂ ಬೆಳೆಯುವುದಿಲ್ಲ. ಇಷ್ಟು ಭೂ ಹಿಡುವಳಿದಾರರು ಮತ್ತು ಕೃಷಿಗೆ ಯೋಗ್ಯ ಭೂಮಿ ಇದ್ದರೂ ಕೂಡ ನೀರು ಇಲ್ಲಿನ ಜನತೆಗೆ ಮರೀಚಿಕೆ ಆಗಿಬಿಟ್ಟಿದೆ.

**ಭೂಮಿಯ ಉಪಯೋಗ :** ಬಿಜಾಪುರ ಜಿಲ್ಲೆಯ ಒಟ್ಟು ಭೌಗೋಳಿಕವಾಗಿ 10,53471 ಚ.ಕಿ.ಮೀ. ವಿಸ್ತೀರ್ಣದಲ್ಲಿ 2010-11ರ ವಾರ್ಷಿಕ ಬೆಳೆಗಳ ವರದಿಗಳ ಪ್ರಕಾರ ಕೇವಲ 1979 ಹೆಕ್ಟೇರ್ ಅರಣ್ಯ ಪ್ರದೇಶ, 67063 ಹೆಕ್ಟೇರ್ ಪ್ರದೇಶ ಭೂ ಬಳಕೆ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ, 16393 ಹೆಕ್ಟೇರ್ ಸಾಗುವಳಿ ಮಾಡದಿರುವ ಇತರ ಭೂಮಿ, 10,37,957 ನಿವ್ವಳ ಬಿತ್ತನೆ (ಸಾಗುವಳಿ)ಯಾಗಿರುವ ಪ್ರದೇಶವಾಗಿದೆ. 92681 ಹೆಕ್ಟೇರ್ ಬೀಳು ಬಿದ್ದ ಭೂಮಿಯಾಗಿದೆ. 36028 ಹೆಕ್ಟೇರ್ ಪ್ರದೇಶವು ವ್ಯವಸಾಯೇತರ ಸಾಗುವಳಿಗೆ ಬಳಸಿರುವ ಪ್ರದೇಶವಾಗಿದೆ.

**ಕೃಷಿ** : 2011-12ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೋಕು 156941 ಹೆಕ್ಟೇರ್, ವಿಜಾಪುರದ 219973 ಹೆಕ್ಟೇರ್ ಪ್ರದೇಶದಲ್ಲಿ, ಇಂಡಿಯ 188809 ಹೆಕ್ಟೇರ್ ಪ್ರದೇಶದಲ್ಲಿ, ಮುದ್ದೇಬಿಹಾಳದಲ್ಲಿ 122707ರಷ್ಟು, ಸಿಂದಗಿ ತಾಲ್ಲೋಕಿನಲ್ಲಿ 188904 ಹೆಕ್ಟೇರ್, ಬಿತ್ತನೆಯಾಗಿತ್ತು. ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಅರಣ್ಯ ಪ್ರದೇಶವು 1977ರಷ್ಟು ಹೆಕ್ಟೇರ್ ಪ್ರದೇಶ ವಿಸ್ತಾರವಾಗಿದ್ದು ಹೆಚ್ಚು ಬಯಲಿನಿಂದ ಕೂಡಿದ್ದಾಗಿದೆ.

2011-12ನೆಯ ಸಾಲಿನಲ್ಲಿ ಒಟ್ಟು ಇಡೀ ಜಿಲ್ಲೆಯಲ್ಲಿ ಬಿತ್ತನೆಯಾದ ಪ್ರದೇಶ 1037957 ಹೆಕ್ಟೇರ್. ಇದರಲ್ಲಿ ಸುಮಾರು ಕಾಲುವೆಗಳಿಂದ, ಕೆರೆಗಳಿಂದ ಮತ್ತು ಬಾವಿಗಳಿಂದ ಒಟ್ಟು ನೀರಾವರಿ ವಿಸ್ತೀರ್ಣವು ಕ್ರಮವಾಗಿ 106962, 1908 ಮತ್ತು 96515 ಹೆಕ್ಟೇರ್ ಪ್ರದೇಶವು ಬರುತ್ತದೆ. 36027 ಹೆಕ್ಟೇರ್ ಪ್ರದೇಶವು ಕೃಷಿಯೇತರ ಪ್ರದೇಶವಾಗಿದೆ. 29059 ಹೆಕ್ಟೇರ್ ಬಂಜರು ಪ್ರದೇಶವಾಗಿದೆ. 9575 ಹೆಕ್ಟೇರ್ ಖಾಯಂ

ಗೋಮಾಳವಾಗಿ ಪರಿವರ್ತಿತವಾಗಿದೆ ಮತ್ತು 1316 ಹೆಕ್ಟೇರ್ ಪ್ರದೇಶವು ವೃಕ್ಷ ಮತ್ತು ತೋಪುಗಳಿಂದ, 92681 ಹೆಕ್ಟೇರ್ ಪ್ರದೇಶವು ಬೀಳು ಭೂಮಿಯಿಂದ ಕೂಡಿದೆ.

ಹೆಚ್ಚು ಬಯಲು ಸೀಮೆಯಾದ್ದರಿಂದ ಇಲ್ಲಿ ಅರಣ್ಯ ಪ್ರದೇಶಕ್ಕಿಂತ ಕೃಷಿಗೆ ಹೆಚ್ಚು ಭೂಮಿಯನ್ನು ವಿಸ್ತರಿಸಿಕೊಂಡಿದೆ. ಇಲ್ಲಿ ಕೃಷಿಯೇತರ ಭೂಮಿ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇ 25ರಷ್ಟು ಇದ್ದು ಉಳಿದಂತೆ ಕೃಷಿಗೆ ಬಳಕೆಯಾಗುತ್ತಿದೆ. ಆದರೆ ನೀರಾವರಿ ಸೌಲಭ್ಯ ಹೆಚ್ಚು ಇಲ್ಲದ ಕಾರಣವಾಗಿ ಕೃಷಿಗೆ ಬಳಕೆಯಾಗುತ್ತಿರುವುದು ಕೂಡ ಕಡಿಮೆ ಪ್ರದೇಶವಾಗಿದೆ. ಕೃಷಿ ಯೋಗ್ಯ ಪ್ರದೇಶವಾದರೂ ಮಳೆಯಾಶ್ರಿತವಾದ್ದರಿಂದ ಈ ಭೂಮಿಯನ್ನು ಕೃಷಿಯೇತರ ಉಪಯೋಗಕ್ಕೆ ಬಳಸಲಾಗುತ್ತಿದೆ.

ಬಿಜಾಪುರ ಜಿಲ್ಲೆಯಲ್ಲಿ ದಾಳಿಂಬೆ ಮತ್ತು ಕಿತ್ತಳೆ ಯಥೇಚ್ಛವಾಗಿ ಬೆಳೆಯುತ್ತದೆ. ಇಲ್ಲಿ ಹಣ್ಣು, ತರಕಾರಿ ಬೆಳೆಯುವುದೇ ಅತಿ ಹೆಚ್ಚು ಕಂಡುಬರುತ್ತದೆ.

**ಭೂಗುಣ** : ಬಿಜಾಪುರ ಜಿಲ್ಲೆಯ ಅಧಿಕ ಭಾಗ ಕಪ್ಪು ಎರೆಮಣ್ಣಿನಿಂದಕೂಡಿದೆ. ಕಪ್ಪು ಮಣ್ಣಿನ ಭೂಮಿ ಹೆಚ್ಚು ಫಲವತ್ತಾಗಿದ್ದು ಜೋಳ, ಹತ್ತಿ, ನೆಲಗಡಲೆ, ತೊಗರಿ ಮೊದಲಾದ ಬೆಳೆಗಳಿಗೆ ಉತ್ಕೃಷ್ಟವಾಗಿದೆ. ಇಲ್ಲಿಯ ಮುಖ್ಯನದಿ ಡೋಣಿ ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳಗಾವಿ ಮೂಲಕ ಹಾದು ಬಿಜಾಪುರ ತಾಲ್ಲೂಕನ್ನು ಪ್ರವೇಶಿಸುತ್ತದೆ. ಬಿಜಾಪುರ, ಬಸವನ ಬಾಗೇವಾಡಿ ಮತ್ತು ಮುದ್ದೇಬಿಹಾಳದಲ್ಲಿ ಹರಿಯುವ ಈ ನದಿ ಕೃಷ್ಣಾ ನದಿಗೆ ತಾಳಿಕೋಟೆಯ 20 ಕಿ.ಮೀ.ಆಚೆಗೆ ಸೇರಿಕೊಳ್ಳುತ್ತದೆ. ಡೋಣಿ ಮಳೆಗಾಲದಲ್ಲಿ ಬಿರುಸಾಗಿ ಹರಿದರೆ ಬೇಸಗೆಯಲ್ಲಿ ಬತ್ತಿಕೊಂಡಿರುತ್ತದೆ. ಅದರ ಪಾತ್ರದಲ್ಲಿ ಕೆಸರು ಮಣ್ಣು ತುಂಬಿರುತ್ತದೆ. ಬಿಜಾಪುರದ ಒಣ ಪ್ರದೇಶದಲ್ಲಿ ಹರಿಯುವ ಈ ನದಿ ವ್ಯವಸಾಯಕ್ಕೆ ತುಂಬಾ ಅನುಕೂಲಕರವಾಗಿದ್ದು "ಡೋಣಿ ಬೆಳೆದರೆ ಓಣೆಲ್ಲ ಜೋಳ" ಎಂಬ ನಾಣ್ಣುಡಿಯಂತೆ ಆಲಮಟ್ಟಿ ಜಲಾಶಯದಿಂದ ಬಿಜಾಪುರದ ಲಕ್ಷಾಂತರ ಎಕರೆ ಭೂಮಿಗೆ ನೀರಾವರಿ ಸೌಲಭ್ಯವಿದೆ.(ಕೃಷ್ಣಾನದಿ)

**ಕಾಡುಗಳು :** ಬಿಜಾಪುರ ಜಿಲ್ಲೆಯ ಅರಣ್ಯ ಸಂಪತ್ತು ಅಲ್ಪ. ಮೊದಲೇ ತಿಳಿಸಿದಂತೆ ಒಟ್ಟು 865.06ಚ.ಕಿ.ಮೀ ಅರಣ್ಯ ಪ್ರದೇಶವಿದೆ. ಇದು ಜಿಲ್ಲೆಯ ವಿಸ್ತೀರ್ಣದ ಶೇ. 5.1ರಷ್ಟು ಮಾತ್ರ. ಇಲ್ಲಿಯ ಅರಣ್ಯ ಕುರುಚಲು ಮತ್ತು ಮುಳ್ಳು ಮರಗಳಿಂದ ಕೂಡಿದೆ. ಜಿಲ್ಲೆಯ ಪಶ್ಚಿಮ ಮತ್ತು ದಕ್ಷಿಣ ಭಾಗದಲ್ಲಿರುವ ಈ ಕಾಡುಗಳಲ್ಲಿ ಕಕ್ಕೆ, ದಿಂಡಿಲು, ಗಂಧ, ನೇರಳೆ, ಆಲ ಮೊದಲಾದ ಮರಗಳಿವೆ. ಜಿಲ್ಲೆಯ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಕಾಡುಗಳೇ ಇಲ್ಲ. ಉಳಿದ ಭಾಗಗಳಲ್ಲಿ ಜಾಲಿಮರಗಳೇ ಹೆಚ್ಚು. ಬೇವು, ಹುಣಸೆ ಮೊದಲಾದ ಮರಗಳು ಇವೆ.

**ನೀರಾವರಿ ಸೌಕರ್ಯ :** 'ಪಂಚನದಿಗಳ' ನಾಡು ಎಂದು ಕರೆಯಿಸಿಕೊಂಡಿದ್ದ ವಿಜಾಪುರ ಜಿಲ್ಲೆಯು ಎರಡು ಜಿಲ್ಲೆಗಳಾಗಿ (ಹೊಸದಾಗಿ ಬಾಗಲಕೋಟೆ) ವಿಭಜನೆ ಆದ ಮೇಲೆ ನದಿ ಹರಿಯುವ ಪ್ರದೇಶಗಳು ಮತ್ತು ನದಿಗಳು ಬಾಗಲಕೋಟೆ ಜಿಲ್ಲೆಗೆ ಸೇರಿಕೊಂಡವು. ಆಗಾಗಿ ಭೀಮಾ ಮತ್ತು ಡೋಣಿ ನದಿಗಳೇ ಇಲ್ಲಿಯ ನೀರಾವರಿಗೆ ಮೂಲ.

ಜಿಲ್ಲೆಯ ಒಟ್ಟು ನೀರಾವರಿ ನಿವ್ವಳ ವಿಸ್ತೀರ್ಣವು ಐದು ತಾಲ್ಲೂಕುಗಳಾದ ಬಸವನ ಬಾಗೇವಾಡಿ, ವಿಜಾಪುರ, ಇಂಡಿ, ಮುದ್ದೇಬಿಹಾಳ ಮತ್ತು ಸಿಂದಗಿ ಸೇರಿ ಒಟ್ಟು 205385 ಹೆಕ್ಟೇರ್ ಪ್ರದೇಶವನ್ನೊಳಗೊಂಡಿದೆ. ಜಿಲ್ಲೆಯಲ್ಲಿ ಹರಿಯುತ್ತಿರುವ ಕೃಷ್ಣಾನದಿಗೆ ಅಡ್ಡಲಾಗಿ ಕಟ್ಟಿರುವ ಆಲಮಟ್ಟಿ ಜಲಾಶಯವು ಬಿಜಾಪುರ ಜಿಲ್ಲೆಯ ಲಕ್ಷಾಂತರ ಭೂಮಿಗೆ ನೀರನ್ನು ಒದಗಿಸುತ್ತದೆ. ಈ ಜಿಲ್ಲೆಯಲ್ಲಿ ಕೃಷ್ಣಾನದಿಯ ಹರಿವಿನ ಉದ್ದ 201 ಕಿ.ಮೀ.ನಷ್ಟು ಉದ್ದವಾಗಿ, ವಿಸ್ತಾರವಾಗಿ ಕೃಷ್ಣೆಯ ಉಪನದಿ ಭೀಮಾ ನದಿಯಾಗಿದೆ. ಆಲಮಟ್ಟಿ ಅಣೆಕಟ್ಟು ಇಡೀ ಜಿಲ್ಲೆಯಲ್ಲಿರುವ ಏಕೈಕ ಅಣೆಕಟ್ಟಾಗಿದ್ದು ಕಾಲುವೆಗಳಾದ ನಾರಾಯಣಪುರ ಎಡದಂಡೆ ಕಾಲುವೆಗಳು ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೂ ಸ್ವಲ್ಪ ಪ್ರಮಾಣದಲ್ಲಿ ನೀರುಣಿಸುತ್ತದೆ.

ಜಿಲ್ಲೆಯಲ್ಲಿ 106962 ಹೆಕ್ಟೇರ್ ಕಾಲುವೆಗಳಿಂದಲೂ 1908 ಹೆ. 96515 ಹೆಕ್ಟೇರ್ ಬಾವಿಗಳಿಂದಲೂ ನೀರಾವರಿ ಸೌಲಭ್ಯ ಹೊಂದಿದೆ. ಇದಲ್ಲದೆ ರೈತರು ಕೊಳವೆ ಬಾವಿಗಳಿಂದಲೂ 91651 ಹೆಕ್ಟೇರ್ ಪ್ರದೇಶ ಸೌಲಭ್ಯವನ್ನೊಳಗೊಂಡಿದೆ. 2010-11ರ ಕೃಷಿ ವರದಿಯನ್ನು ಗಮನಿಸಿದಾಗ ಬಿಜಾಪುರ ಜಿಲ್ಲೆಯು ಕೃಷಿಗಾಗಿ ಕೆರೆಗಳು, ಬಾವಿಗಳು, ಅಣೆಕಟ್ಟುಗಳು ಮತ್ತು ನದಿಗಳನ್ನು ಅವಲಂಬಿಸಿರುವುದನ್ನು ನಾವು ಗಮನಿಸಬಹುದು.

**ದೇಶಿ ನೀರಾವರಿ ಪದ್ಧತಿ** : ಪ್ರಾಚೀನ ಕಾಲದಿಂದಲೂ ರೈತನು ತನ್ನ ವ್ಯವಸಾಯ ಭೂಮಿಗೆ ನೀರುಣಿಸಲು ಮತ್ತು ಉತ್ತಮವಾದ ಬೆಳೆಗಳನ್ನು ತೆಗೆಯಲು ಸಾಕಷ್ಟು ನೀರಿನ ಮೂಲಗಳನ್ನು ಕಂಡುಕೊಂಡಿದ್ದಾನೆ. ಈ ಹಿನ್ನೆಲೆಯಿಂದ ನೋಡಿದಾಗ ರೈತರು ವ್ಯವಸಾಯ ಮಾಡುವಾಗ ಬೆಳೆಗಳಿಗೆ ಕೆರೆಗಳು, ಬಾವಿಗಳು, ಅಣೆಕಟ್ಟುಗಳು ಮತ್ತು ನದಿಯ ಮುಖಾಂತರ ನೀರು ಪಡೆಯುತ್ತಾರೆ.

ರೈತರು ವ್ಯವಸಾಯ ಮಾಡುವಾಗ ತಾವು ಬೆಳೆಯುವಂತಹ ಬೆಳೆಗಳಿಗೆ ಸಮೀಪದಲ್ಲಿರುವಂತಹ ಕೆರೆಗಳು ಮತ್ತು ಕಾಲುವೆಗಳಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಿ ಅಥವಾ ತಡೆಗೋಡೆ ಕಟ್ಟಿ ಫಸಲುಗಳಿಗೆ ಹಾಯಿಸುತ್ತಾರೆ. ಅವುಗಳ ವಿವಿಧ ವಿಧಾನಗಳು ಈ ಕೆಳಗಿನಂತೆ ಇವೆ.

**ಹನಿ ನೀರಾವರಿ ಪದ್ಧತಿ :** ಬಿಜಾಪುರದಂತಹ ಜಿಲ್ಲೆಗೆ ಹನಿ ನೀರಾವರಿ ಪದ್ಧತಿಯೇ ಉತ್ತಮವಾದದ್ದು. ಸಾಕಷ್ಟು ನೀರಿನ ಸವಲತ್ತು ಇಲ್ಲದಿರುವುದೇ ಇದಕ್ಕೆ ಕಾರಣ. ಹಾಗಾಗಿ ಇಂದು ಬಿಜಾಪುರ ಹಾಗೂ ಇಂತಹ ಹಲವಾರು ಜಿಲ್ಲೆಗಳಲ್ಲಿ ಹನಿ ನೀರಾವರಿ ಪದ್ಧತಿಯನ್ನು ರೈತರು ಅನುಸರಿಸಿಕೊಂಡು ಬರುತ್ತಿದ್ದಾರೆ. ನೀರು ಫಸಲಿನ ಪೈರು, ಗಿಡಗಳಿಗೆ ಬೇರಿಗೇ ತೊಟ್ಟಿಕ್ಕುವಂತೆ ಗಿಡದ ಕಾಂಡದ ಹತ್ತಿರವೇ ಪ್ರತಿ ಗಿಡಗಳಿಗೂ ನೀರು ಸದಾ ಜಿನುಗುವಂತೆ ಒಂದು ಉದ್ದನೆಯ ಕಪ್ಪು ಪೈಪನ್ನು ಅಳವಡಿಸಿರುತ್ತಾರೆ. ಇದರಿಂದಾಗಿ ಏಕಕಾಲಕ್ಕೆ ಹೆಚ್ಚು ಪ್ರದೇಶಕ್ಕೆ ನೀರನ್ನು ಹಾಯಿಸಿದಂತೆ ಆಗುತ್ತದೆ. ಮತ್ತು ನೀರು ಪೋಲಾಗದಂತೆಯೂ ತಡೆಗಟ್ಟಬಹುದು. ಬಿಜಾಪುರದಲ್ಲಿಯ ರೈತರಿಗೆ ಇದು ಅತ್ಯಂತ ಉಪಕಾರಿಯಾಗಿದೆ.

**ಅಡ್ಡನೀರು ಪದ್ಧತಿ :** ಕಾಲುವೆಗಳಿಗೆ ಮತ್ತು ಹರಿಯುವ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ ಅದನ್ನು ಫಸಲಿಗೆ ಹಾಯಿಸಿಕೊಂಡು ಬೆಳೆ ತೆಗೆಯುತ್ತಾರೆ. ಪ್ರಸ್ತುತ ಬಿಜಾಪುರದಲ್ಲಿ

ಆಲಮಟ್ಟಿ ಅಣೆಕಟ್ಟು ಏಕಮಾತ್ರವಾಗಿದ್ದು ಇದು ಸುತ್ತಮುತ್ತಲಿನ ಪ್ರದೇಶಕ್ಕೆ ನೀರುಣಿಸುತ್ತದೆ.

**ಬಾವಿ ನೀರಾವರಿ :** ಬಾವಿ ನೀರಾವರಿ ಪದ್ದತಿಯಲ್ಲಿ ಎರಡು ರೀತಿ: ಮೊದಲನೆಯದು ತೆರೆದ ಬಾವಿ ನೀರಾವರಿ ಪದ್ಧತಿ ಎರಡನೆಯದು ಕೊಳವೆ ಬಾವಿ ಪದ್ಧತಿ. ಬಿಜಾಪುರಾದ್ಯಂತ ಅಲ್ಲಲ್ಲಿ ತೆರೆದ ಬಾವಿಗಳು ಕಂಡುಬರುತ್ತವೆ. ಆದರೆ ಹೆಚ್ಚಾಗಿ ಕೊಳವೆ ಬಾವಿ ಕೊರೆದು ಬೆಳೆಗಳಿಗೆ ನೀರಾವರಿ ಅಳವಡಿಸಿಕೊಂಡಿರುವುದೇ ಹೆಚ್ಚು. ಅಂತರ್ಜಲ ಕುಸಿಯುತ್ತಿರುವುದರಿಂದಾಗಿ ಕೊಳವೆ ಬಾವಿಗಳು ಅಲ್ಲಲ್ಲಿ ಬರಿದಾಗುತ್ತವೆ.

**ಬೆಳೆಗಳು :** ಜಿಲ್ಲೆಯಲ್ಲಿ ಮಳೆಯಾಶ್ರಿತ ಕೃಷಿಯಾಗುವುದರಿಂದ ಇಲ್ಲಿ ಮುಂಗಾರು, ಹಿಂಗಾರು ಋತುಗಳಲ್ಲಿ ಪ್ರಮುಖವಾಗಿ ಆಹಾರ ಧಾನ್ಯಗಳಾದ ಜೋಳ, ಗೋಧಿ, ಮೆಕ್ಕೆ ಜೋಳ, ಸಜ್ಜೆ ಮುಂತಾದವನ್ನು ಬೆಳೆಯುತ್ತಾರೆ. ದ್ವಿದಳ ಧಾನ್ಯಗಳಾದ ತೊಗರಿ, ಹೆಸರು, ಕಡಲೆ, ಹುರುಳಿ,ಅಲಸಂದೆ, ಅವರೆ ಹಾಗೂ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಹಿಂಗಾರಿನ ಅನಂತರ ಬೇಸಗೆಯಲ್ಲಿ ಕೃಷಿಗೆ ಯೋಗ್ಯವಾದ ವಾತಾವರಣವಿರುವ ಕಾರಣ ಈ ಸಂದರ್ಭದಲ್ಲಿ ಬೆಳೆಗಳು ಕಡಿಮೆ ಪ್ರಮಾಣದಲ್ಲಿ ಇರುತ್ತವೆ. ಇಲ್ಲಿಯ ಪ್ರಮುಖ ವಾಣಿಜ್ಯ ಬೆಳೆಗಳೆಂದರೆ ದ್ರಾಕ್ಷಿ, ದಾಳಿಂಬೆ, ಚಿಕ್ಕು(ಸಪೋಟ), ನಿಂಬೆ, ಹೂವು, ಬಾಳೆ, ಬಾರಿ ಹಣ್ಣು, ಕಬ್ಬು, ಸೂರ್ಯಕಾಂತಿ, ಅರಿಸಿನ, ಪರಂಗಿ (ಪಪ್ಪಾಯಿ) ಕಲ್ಲಂಗಡಿ, ಉಳ್ಳಾಗಡ್ಡಿ (ಈರುಳ್ಳಿ) ಮತ್ತು ಶೇಂಗಾ (ಕಡಲೆಕಾಯಿ) ಇತ್ಯಾದಿ.

ನದಿಬಯಲು ಪ್ರದೇಶಗಳಲ್ಲಿ ಮಾತ್ರ ಬತ್ತ, ರಾಗಿ, ಜೋಳ ಬೆಳೆಗಳನ್ನು ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ.

2010-11ರ ಕೃಷಿ ಬೆಳೆಗಳ ಅಂಕಿ ಅಂಶಗಳ ಪ್ರಕಾರ ಬತ್ತವನ್ನು ಮುದ್ದೇಬಿಹಾಳದ 16 ಹೆಕ್ಟೇರ್ ಪ್ರದೇಶ, ಸಿಂದಗಿಯ 55 ಹೆಕ್ಟೇರ್ ಪ್ರದೇಶಗಳಲ್ಲಿ ಮಾತ್ರ ಬೆಳೆಯಲಾಗುತ್ತಿದೆ. ಇಂಡಿ, ಬಿಜಾಪುರ ಮತ್ತು ಬ.ಬಾಗೇವಾಡಿ ತಾಲ್ಲೂಕುಗಳು ಅತಿ ಹಿಂದುಳಿದ ಮತ್ತು ಬರಪೀಡಿತ ಪ್ರದೇಶಗಳಾದ್ದರಿಂದ ಇಲ್ಲಿ ಬತ್ತದ ಬೆಳೆ ಮತ್ತು ರಾಗಿ ಬೆಳೆ ಸಾಧ್ಯವಾಗಿಲ್ಲ.

**ಆಹಾರ ಮತ್ತು ಆಹಾರೇತರ ಬೆಳೆಗಳು :** ಬಿಜಾಪುರ ಜಿಲ್ಲೆಯಲ್ಲಿ 2007-08 ಸಾಲಿನಲ್ಲಿ ಇಂಡಿ, ಮುದ್ದೇಬಿಹಾಳ ಮತ್ತು ಸಿಂದಗಿ ಈ ಮೂರು ತಾಲ್ಲೂಕುಗಳಲ್ಲಿ ಮಾತ್ರವೇ ಕ್ರಮವಾಗಿ 21,206 ಹೆಕ್ಟೇರ್ 20 ಹೆಕ್ಟೇರ್ ವಿಸ್ತೀರ್ಣದಲ್ಲಿ ಬತ್ತದ ಬೆಳೆ ಇದೆ. ಕಾರಣ ಈ ಜಿಲ್ಲೆಯು ಮಳೆಯಾಶ್ರಿತ ಪ್ರದೇಶವಾಗಿರುವುದರಿಂದ ಬತ್ತ ಬೆಳೆಯಲು ಯೋಗ್ಯವಾದ ವಾತಾವರಣ ಕಂಡುಬರುವುದಿಲ್ಲ. ಆದರೆ ಏಕದಳ ಧಾನ್ಯಗಳಾದ ಜೋಳ (ಮೆಕ್ಕೆಜೋಳ) ಮುಸುಕಿನ ಜೋಳ, ಸಜ್ಜೆ ಮತ್ತು ಗೋಧಿಯನ್ನು ಅತಿ ಹೆಚ್ಚು ಆಹಾರ ಬೆಳೆಗಳಾಗಿ ಬೆಳೆಯುತ್ತಾರೆ. ದ್ವಿದಳ ಧಾನ್ಯಗಳಾದ ಕಡಲೆ, ತೊಗರಿ, ಎಣ್ಣೆ ಕಾಳುಗಳಾದ ಸೂರ್ಯಕಾಂತಿ ಮತ್ತು ಶೇಂಗಾ ಬೆಳೆಗಳನ್ನು ಈ ಜಿಲ್ಲೆಯಲ್ಲಿ ಅಧಿಕವಾಗಿ ಬೆಳೆಯಲಾಗುತ್ತದೆ. ಕಬ್ಬು ಮತ್ತು ಆಹಾರೇತರ ಬೆಳಗಳಾದ ತಂಬಾಕು, ಹತ್ತಿ ಕೂಡ ಇಲ್ಲಿ ಅತಿ ಹೆಚ್ಚು ಬೆಳೆಯುವಂತಹ ಆಹಾರೇತರ ಬೆಳೆಗಳು.

2007-08ರ ಅಂಕಿ ಅಂಶಗಳನ್ನು ಗಮನಿಸಿದಾಗ ಏಕದಳ ಧಾನ್ಯಗಳಾದ ಬತ್ತ, ಜೋಳ, ಸಜ್ಜೆಯನ್ನು 3,44,019ರಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಮುಸುಕಿನ ಜೋಳ ಮತ್ತು ಗೋಧಿಯನ್ನು ಒಟ್ಟು 1,27,388 ಹೆಕ್ಟೇರ್‌ನಲ್ಲಿ ಬೆಳೆಯಲಾಗಿದೆ. ಹೀಗೆ ಒಟ್ಟು 4,71,472ರಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ.

ದ್ವಿದಳ ಧಾನ್ಯಗಳಾದ ಕಡಲೆ, ತೊಗರಿಯು ಒಟ್ಟು 1,10,022 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು ಶೇಂಗಾ ಸೂರ್ಯಕಾಂತಿಯನ್ನು ಒಟ್ಟು 2,35,705 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಒಟ್ಟು ಆಹಾರ ಧಾನ್ಯಗಳು 7,24,051 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು, ಒಟ್ಟು ಎಣ್ಣೆ ಕಾಳುಗಳು 249375 ಹೆಕ್ಟೇರ್ ಪ್ರದೇಶದಲ್ಲಿಯೂ, ಒಟ್ಟು ಹಣ್ಣುಗಳನ್ನು ಸುಮಾರು 19017 ಹೆಕ್ಟೇರ್ ಮತ್ತು ಒಟ್ಟು ತರಕಾರಿಗಳು 20243 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು.

ಕಬ್ಬು ಬೆಳೆಯನ್ನು ಒಟ್ಟು 40915ರಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು, ಹತ್ತಿಯನ್ನು 4100 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಒಟ್ಟಾರೆ ಎಲ್ಲಾ ಬೆಳೆಗಳು 10,60,841 ರಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು, ಈ ಎಲ್ಲಾ ಬೆಳೆಗಳಿಗೂ ಒಟ್ಟು 38476 ಟನ್ ಸಾರಜನಕ, ರಂಜಕ, ಪೊಟ್ಯಾಷ್ ರಾಸಾಯನಿಕ ಗೊಬ್ಬರಗಳನ್ನು ಬಳಸಲಾಗಿದೆ. ಸಾರಜನಕ 19597 ಟನ್, ರಂಜಕ 12744 ಟನ್, ಪೊಟ್ಯಾಷ್ 6135 ಟನ್ ಬಳಸಲಾಗಿದೆ.

**ರೇಷ್ಮೆ ಕೃಷಿ :** ರೇಷ್ಮೆ ಕೃಷಿಯು ಈ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಇದೆ. ನಾಲ್ಕು ತಾಲ್ಲೂಕುಗಳ ಒಟ್ಟು 216.20 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯನ್ನು ಬೆಳೆಯಲಾಗಿದೆ. ಇದನ್ನು ಬಳಸಿಕೊಂಡು ನಾಲ್ಕು ತಾಲ್ಲೂಕಿನ 245 ರೈತರು 66.969 ಟನ್ ರೇಷ್ಮೆಯನ್ನು ಉತ್ಪಾದಿಸಿದ್ದಾರೆ.

**ಪಶುಪಾಲನೆ :** ಯಾವುದೇ ಕೃಷಿ ಕೆಲಸಕ್ಕೂ ಹಿಂದೆ ಪ್ರಾಣಿಗಳನ್ನು ಬಳಸಿಕೊಳ್ಳುತ್ತಿದ್ದರು. ಬಿಜಾಪುರ ಜಿಲ್ಲೆಯು ಅತ್ಯಂತ ಹಿಂದುಳಿದಿರುವ ಪ್ರದೇಶವಾಗಿರುವುದರಿಂದ ಪಶುಪಾಲನೆಯು ಕೂಡ ಇವರಿಗೆ ಜೀವನಾಧಾರವಾಗಿದೆ. ಇಲ್ಲಿ ಮಿಶ್ರತಳಿ 1204 ರಾಸುಗಳು, 191287 ಎಮ್ಮೆಗಳು ಮತ್ತು ಸ್ಥಳೀಯವಾಗಿ 337031 ಕುರಿಗಳು ಕಂಡುಬರುತ್ತವೆ. ವ್ಯವಸಾಯದ ಇನ್ನೊಂದು ಅಂಗವಾಗಿ ಪಶುಪಾಲನೆ ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು**


ಕನ್ನಡ ವಿಷಯ ವಿಶ್ವಕೋಶ, ಭೂಗೋಳ ವಿಜ್ಞಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ಬಿಜಾಪುರ ಜಿಲ್ಲೆಯ ವೆಬ್‌ಸೈಟ್


*ಎಂ.ಜಿ.*

**ಬಿದಿರು** ಬಿದಿರು ಕಾಡು ಬೆಳೆಯಾದರೂ ಅಲಂಕಾರಕ್ಕೆಂದು ಉದ್ಯಾನವನಗಳಲ್ಲೂ ಮನೆಯಂಗಳದಲ್ಲೂ ಬೆಳೆಯುತ್ತಿದ್ದಾರೆ. ಹುಲ್ಲಿನ ಜಾತಿಗೆ ಸೇರಿದ ಇದು ಪೋಯೇಸೀ ಕುಟುಂಬದ ಬ್ಯಾಂಬೂಸೊಯಿಡೇಸಿ ಉಪಕುಟುಂಬಕ್ಕೆ ಸೇರಿದೆ. ಸಂಸ್ಕೃತದಲ್ಲಿ ವಂಶ, ವೇಣು, ಯುವಫಲ, ಶತಪರ್ವ ಎಂದೂ ತಮಿಳಿನಲ್ಲಿ ವಯಿರ್ ತೆಲುಗಿನಲ್ಲಿ ವೆದುರು ಎಂದೂ ತುಳುಭಾಷೆಯಲ್ಲಿ ಬೆದ್ರ್ ಎಂದೂ ಇಂಗ್ಲಿಷಿನಲ್ಲಿ ರೋರ್ನ್ಯ ಬ್ಯಾಂಬೂ ಎಂದು ಕರೆಯುವರು.

**ಇತಿಹಾಸ :** ಬಿದಿರಿಗೆ ಸಮೃದ್ಧವಾದ ಇತಿಹಾಸವಿದೆ, ಚೀನಿಯರ ಪ್ರಾಚೀನ ಶಬ್ದಕೋಶ ಎರ್ಹ್ವ-ಯೋದಲ್ಲಿ ಕ್ರಿ.ಪೂ. 1000 ವರ್ಷಗಳ ಹಿಂದೆ ಬಿದಿರಿಗೆ 'ಸಾವೋ' ಒಂದು ಹುಲ್ಲು ಎಂದು ಹೇಳಿದೆ. ಚೀನಿಯರು 3000 ವರ್ಷಗಳ ಹಿಂದೆಯೆ ಬಿದಿರಿನ ಉಪಯೋಗ ಅರಿತಿದ್ದರು. ಚೀನದಲ್ಲಿ ಕ್ರಿ.ಪೂ. 2ನೆಯ ಶತಮಾನದಷ್ಟು ಹಳೆಯದಾದ ಹ್ಯಾನ್ ವಂಶದ ಗೋರಿಯಲ್ಲಿ 312 ತೆಳುವಾದ ಸೀಳುಗಳ ಬಿದಿರಿನ ಕಟ್ಟು ಸಿಕ್ಕಿದೆ. ಮಾರ್ಕೋಪೋಲೋನ ಬರಹಗಳಲ್ಲಿ ಬಿದಿರಿನ ಉಲ್ಲೇಖವಿದೆ, ಸುಮಾರು ಕ್ರಿ.ಪೂ. 552ರಲ್ಲಿ ರೇಷ್ಮೆಯ ತತ್ತಿ ಮತ್ತು ಹಿಪ್ಪೆ ನೇರಳೆ ತುಂಡುಗಳನ್ನು ಬಿದಿರಿನ ಅಂಡೆಯಲ್ಲಿ ಚೀನಾದಿಂದ ಯುರೋಪ್‌ಗೆ ಸಾಗಿಸಿದ್ದರು. ಬಿದಿರನ್ನು ಕುರಿತು ಜಗತ್ತಿನ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖ ಸಿಗುತ್ತದೆ. ಭಾರದಲ್ಲಿ ಬಿದಿರು ಕಟ್ಟಡ ಸಾಮಗ್ರಿಯಾಗಿ ವೇದಗಳ ಕಾಲದಿಂದಲೂ ಬಳಕೆಯಲ್ಲಿದೆ.



ಬಿದಿರನ್ನು ಕುರಿತಂತೆ ಸಾಹಿತ್ಯದಲ್ಲೂ ಹಲವು ಉಲ್ಲೇಖಗಳಿವೆ. ಆದಿಕವಿ ಪಂಪ, ಪಂಪಭಾರತದ ಒಂಬತ್ತನೆಯ ಆಶ್ವಾಸದಲ್ಲಿ ದಂಡಿಗೆಗೆ ವೇಣುವನಂಗಳು, ಮನೆಗಂಬಕ್ಕೆ ಪೆರ್ಮರಂಗಳಂ (ದಂಡಿಗೆ-ಪಲ್ಲಕ್ಕಿ, ವೇಣು ವನ-ಬಿದಿರು ಬನ) ಎಂದೂ, ಹತ್ತನೆಯ ಆಶ್ವಾಸದ 51ನೆಯ ಪದ್ಯದಲ್ಲಿ 'ಬಿದಿರ ಸಿಡಿಂಬಿನ ಪೊದಜೊಳಗೆ ಮಱೆದೊಟಗಿದ ಮೃಗರಾಜನಂತೆ' ಎಂದು ಹೇಳಿದ್ದಾರೆ. ವಡ್ಡಾರಾಧನೆ (8-26), ಪಂಪರಾಮಾಯಣ, ಸರ್ವಜ್ಞನ ತ್ರಿಪದಿಗಳು, ಜನಪದ ಹಾಡುಗಳು ಇನ್ನೂ ಮುಂತಾದ ಕೃತಿಗಳಲ್ಲಿ ಬಿದಿರಿನ ಪ್ರಸ್ತಾಪವಿದೆ.

ಯುರೋಪ್ ಮತ್ತು ಅಂಟಾರ್ಟಿಕ ಖಂಡಗಳನ್ನು ಹೊರತುಪಡಿಸಿ ಉಳಿದ ಎಲ್ಲ ಖಂಡಗಳಲ್ಲೂ ಬಿದಿರಿನ ಉಪಯೋಗ ಕಂಡುಬರುತ್ತದೆ. ದಕ್ಷಿಣ ಏಷ್ಯಾದಲ್ಲಿ ಇದರ ಪ್ರಮಾಣ ಹೆಚ್ಚು. ಭಾರತದಿಂದ ಚೀನ, ಜಪಾನ್‌ವರೆಗಿನ ಆಗ್ನೇಯ ಹಾಗೂ ಈಶಾನ್ಯ ಏಷ್ಯದ ದೇಶಗಳಲ್ಲಿ ಬಿದಿರಿನ ಪ್ರಭೇದಗಳನ್ನು ಗರಿಷ್ಠ ಪ್ರಮಾಣದಲ್ಲಿ ನೋಡಬಹುದು. ಆಫ್ರಿಕವೂ ಬಿದಿರಿನ ಸಸ್ಯ ಸಂಪತ್ತಿಗೆ ಹೆಸರಾಗಿದೆ. ಮ್ಯಾಲಗ್ಯಾಸಿಯಲ್ಲಂತೂ ಅತ್ಯಧಿಕ. ಸಂಖ್ಯೆಯ ಸ್ಥಾನಿಕ ಪ್ರಭೇದಗಳನ್ನು (ಎಂಡೆಮಿಕ್ ಸ್ಪೀಶೀ) ನೋಡಬಹುದು. ಇಲ್ಲಿಯ ಪ್ರಭೇದಗಳ ಸಂಖ್ಯೆ ಆಫ್ರಿಕಾದಲ್ಲಿ ಕಾಣಸಿಗುವ ಎಲ್ಲ ಪ್ರಭೇದಗಳಿಗಿಂತ ಹೆಚ್ಚು. ಆಸ್ಟ್ರೇಲಿಯಾದಲ್ಲೂ ಬಿದಿರಿನ ಪ್ರಭೇದಗಳು ಅಧಿಕ ಸಂಖ್ಯೆಯಲ್ಲಿವೆ. ಪಶ್ಚಿಮಗೋಳಾರ್ಧದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ದಕ್ಷಿಣ ಭಾಗದಿಂದ ಹಿಡಿದು ಅರ್ಜಂಟೈನ, ಚಿಲಿಗಳ ದಕ್ಷಿಣ ಅಂಚಿನವರೆಗೂ ಬಿದಿರಿನ ವ್ಯಾಪ್ತಿಯುಂಟು, ಟಿಬೆಟ್ ಮತ್ತು ಚೀನಗಳ ಉತ್ತರ ಹಾಗೂ ವಾಯವ್ಯ ದಿಕ್ಕಿನಲ್ಲಿ ಯೂರೋಪ್ ಭಾಗದಲ್ಲಿ ಬಿದಿರು ಸ್ವಾಭಾವಿಕವಾಗಿ ಬೆಳೆದಿಲ್ಲವಾದರೂ ಬೇರೆಡೆಯಿಂದ ತಂದು ಬೆಳೆಸಿದ ಪ್ರಭೇದಗಳನ್ನು ಕಾಣಬಹುದು.

**ವಾಯುಗುಣ :** ಬಿದಿರು ಉಷ್ಣವಲಯ ಮತ್ತು ಉಪ ಉಷ್ಣವಲಯಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಸಮುದ್ರ ಮಟ್ಟದಿಂದ ಸುಮಾರು 3000 ಮೀ. ಎತ್ತರ ಪ್ರದೇಶಗಳಲ್ಲಿಯೂ ಬೆಳೆಯುತ್ತದೆ. ಇದು $48^0$F ನಿಂದ $97^0$F ಉಷ್ಣತೆ ಇರುವ ಪ್ರದೇಶಗಳಲ್ಲೂ ಕಂಡುಬರುತ್ತದೆ. ಆಯಾ ಪ್ರದೇಶದ ಹವಾಗುಣ, ಫಲವತ್ತತೆಗೆ ಅನುಸಾರವಾಗಿ ಬಿದಿರಿನ ಬೆಳವಣಿಗೆ ಇದೆ. 750 ಮೀ.ಮೀ.ನಿಂದ 5,000 ಮಿ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಬಿದಿರು ಕಂಡುಬರುತ್ತದೆ.

**ಪ್ರಭೇದಗಳು :** ಪ್ರಪಂಚದಲ್ಲಿ 550 ಜಾತಿಯ ಬಿದಿರು ಸಸ್ಯಗಳಿವೆ, ಭಾರತದಲ್ಲಿ 136 ಜಾತಿ ಇವೆ. ಆದರೆ ಗೋಚರಿಸುವುದು ಕೇವಲ 40 ಬಗೆಯ ಬಿದಿರುಗಳು ಮಾತ್ರ. ಅವುಗಳಲ್ಲಿ ಅರುಂಡಿನೇರಿಯಾ, ಬ್ಯಾಂಬೂಸ, ಡೆಂಡ್ರೊಕೆಲಾಮಸ್, ಆಕ್ಲಾಂಡ್ರ, ಆಕ್ಸಿಟನ್ಯಾಂತೆರ, ಸೆಫಲೊಸ್ಟಾಕಿಯಮ್, ಜೈಗಾಂಟೊಕ್ಲೋವ, ಡೈನೊಕ್ಲೋವ, ಮೆಲೊಕ್ಯಾನ ಮುಂತಾದ ಜಾತಿಗಳು ಭಾರತದಲ್ಲಿ ಕಂಡುಬರುತ್ತದೆ. ಬಿದಿರು ಹೂ ಬಿಡುವುದು 32 ವರ್ಷಗಳ ಅನಂತರ ಮತ್ತೆ 60 ವರ್ಷ, 120 ವರ್ಷಗಳ ಕಾಲ ಬಾಳಿ ಹೂಬಿಟ್ಟು ಬತ್ತ ನೀಡಿ ಒಣಗುವ ಜಾತಿಗಳೂ ಇವೆ. ಬಿದಿರಿನ ಮೇಲೆ ಸಾಮಾನ್ಯವಾಗಿ ಮುಳ್ಳುಗಳಿದ್ದರೂ, ಮುಳ್ಳಿಲ್ಲದ ಪ್ರಭೇದಗಳನ್ನು ಕಾಣಲು ಸಾಧ್ಯ. ಗೆಣ್ಣುಗಳು ಹತ್ತಿರ-ಹತ್ತಿರು ಇರುವ ಬಿದುರಿನಂತೆ ದೂರ-ದೂರ ಇರುವ ಬಿದಿರು ಇದೆ. ಬಿದಿರಿನ ಮರಗಳು ಗುಂಪು-ಗುಂಪಾಗಿ ಬೆಳೆಯುವುದು ಅದರ ವೈಶಿಷ್ಟ್ಯ. ಬಿದಿರು ಸಾಮಾನ್ಯವಾಗಿ ನವೆಂಬರ್-ಡಿಸೆಂಬರ್ ತಿಂಗಳಿನಲ್ಲಿ ಹೂಬಿಡುತ್ತದೆ. ಬಿದಿರು ಹೂವಾಗುವಿಕೆಯಲ್ಲಿ ವಿರಳ ಮತ್ತು ದಟ್ಟವಾಗಿಯೂ ಹೂವಾಗುವ ಪ್ರಭೇದ ಹಾಗೂ ಪ್ರತಿವರ್ಷವೂ ಹೂವಾಗುವ ಪ್ರಭೇದಗಳನ್ನು ಗುರುತಿಸಬಹುದು.

ಬಿದಿರಿನಲ್ಲಿ ಮೆದುಕಾಂಡದ ಬಿದಿರುಗಳು ಮತ್ತು ದಾರುಮಯ ಕಾಂಡದ ಬಿದಿರುಗಳು ಎಂಬ ಎರಡು ಪ್ರಭೇದಗಳನ್ನು ಪ್ರಮುಖವಾಗಿ ಕಾಣಬಹುದು. ಮೆದುಕಾಂಡದ ಬಿದಿರು ಕಾಡಿನ ಕೆಳಸ್ತರದಲ್ಲಿ ಬೆಳೆಯುತ್ತದೆ. ಹೆಸರಿನಂತೆ ಮೃದುವಾಗಿದ್ದು ಅದರ ಕಾಂಡದ ಕವಲೊಡೆಯುವಿಕೆ ಹಾಗೂ ಪ್ರಕಟ ವ್ಯವಸ್ಥೆ ಸರಳವಾಗಿದೆ. ಸಸ್ಯಾಭಿವೃದ್ಧಿ ಪರಾಗಾರ್ಪಣಾಕ್ರಿಯೆ ಕೀಟಗಳ ನೆರವಿನಿಂದ ನಡೆಯುತ್ತದೆ. ದಾರುಮಯ ಕಾಂಡದ ಬಿದಿರುಗಳು ಬಲುಗಟ್ಟಿ. ಕಾಂಡದ ಕವಲೊಡೆಯುವಿಕೆ ಮತ್ತು ಪ್ರಕಂದ ವ್ಯವಸ್ಥೆ ಸಂಕೀರ್ಣವಾಗಿದ್ದು, ಇವು ಸಾಮಾನ್ಯವಾಗಿ ಬಯಲು ಪ್ರವೇಶದಲ್ಲಿ ಬೆಳೆಯುತ್ತವೆ. ಪರಾಗಾರ್ಪಣ ಕ್ರಿಯೆ ಗಾಳಿಯ ಸಹಾಯದಿಂದ ನಡೆಯುತ್ತದೆ. ಆದರೆ ಹೂಬಿಡುವುದೇ ಅಪರೂಪ (30-120 ವರ್ಷಗಳ ಅವಧಿಗೆ ಒಂದು ಸಲ). ಆದ್ದರಿಂದ ಪರಾಗಾರ್ಪಣೆ ಬಲು

ವಿರಳ. ಸಸ್ಯ ಹಾಗೂ ಎಲೆಗಳ ಗಾತ್ರದಲ್ಲೂ ಬಿದಿರುಗಳಲ್ಲಿ ಅಗಾಧ ವ್ಯತ್ಯಾಸವುಂಟು.

**ಕೃಷಿ :** ಸ್ವಾಭಾವಿಕವಾಗಿ ಬೆಳೆಯುವ ಕಾಡು ಸಸ್ಯವಾದರೂ ಚೀನ ಮತ್ತು ಜಪಾನಿನಲ್ಲಿ ಬಿದಿರನ ಕೃಷಿ ವ್ಯಾಪಕವಾಗಿ ಕಂಡುಬರುತ್ತವೆ. ಇತ್ತೀಚಿಗೆ ಭಾರತದಲ್ಲಿ ಬಿದಿರಿನ ಕೃಷಿಯ ಆಸಕ್ತಿ ಬೆಳೆದಿದೆ. ಬಿದಿರುಗಳನ್ನು ಬೀಜದ ಮೂಲಕ ಮತ್ತು ಕಾಂಡ ತುಂಡುಗಳಿಂದ ವೃದ್ಧಿಸಬಹುದು. ಬಹುತೇಕ ಪ್ರಭೇದಗಳು ಹೂ ಬಿಡುವುದೇ ಅಪರೂಪವಾದ್ದರಿಂದ ಕಾಂಡದ ತುಂಡಿನ ವ್ಯವಸಾಯ ಹೆಚ್ಚು ರೂಢಿಯಲ್ಲಿದೆ. ಇದು ಬಲುವೇಗವಾಗಿ ಬೆಳೆಯುವ ಸಸ್ಯಗಳ ಪೈಕಿ ಒಂದಾಗಿದ್ದು, ದಿನವೊಂದಕ್ಕೆ 3-4 ಅಂಗುಲಗಳಷ್ಟು ಶೀಘ್ರವಾಗಿ ಬೆಳೆಯುತ್ತದೆ. ಪೋಷಿಸಿದಷ್ಟು ಚೆನ್ನಾಗಿ ಬೆಳೆಯುವಂಥದಾಗಿದ್ದು, ಫಲವತ್ತಾದ ಗೋಡು ನೆಲ ಇದರ ಬೆಳವಣಿಗೆಗೆ ಪೂರಕ. ಕಾಂಡದ ತುಂಡು ನೆಟ್ಟ ಅನಂತರ ಒಂದೆರಡು ವರ್ಷ ನೀರುಣಿಸುತ್ತಾ, ಯುಕ್ತ ಪೋಷಕಾಂಶವನ್ನು ನೀಡಿ ಮಣ್ಣು ಕೊಚ್ಚಿ ಹೋಗದಂತೆ ನೋಡಿಕೊಂಡರೆ ಬಿದಿರು ಹುಲುಸಾಗಿ ಬೆಳೆಯುತ್ತದೆ. ಬೆಳವಣಿಗೆಯ ಕಾಲದಲ್ಲಿ ಯಥೇಚ್ಛವಾಗಿ ನೀರುಣಿಸುವುದು ಅಗತ್ಯ. ಅಲ್ಲದೇ ಎಳೆಯ ಗಿಡಗಳನ್ನು ಗಾಳಿಯಿಂದ ರಕ್ಷಿಸಬೇಕು.

ಬೀಜವನ್ನು ಒಟ್ಲುಗಳಲ್ಲಿ ಬೆಳೆಸಿ ಅನಂತರ ಕೃಷಿ ಮಾಡುತ್ತಾರೆ. 8 x 8 ಮೀ. ಅಂತರದಲ್ಲಿ ಗುಂಡಿಯನ್ನು ತೆಗೆದು ನಾಲ್ಕಾರು ಸಸಿಗಳನ್ನು ಒಂದೆಡೆ ನಾಟಿ ಮಾಡುವರು. ಗಳುವಿನ ತುಂಡುಗಳನ್ನು ನಾಟಿ ಮಾಡಬೇಕಾದಾಗ ಬೆಳೆದಿರುವ ಬಿದಿರುಗಳುವನ್ನು ಆಯ್ಕೆ ಮಾಡಿ, ಅದರಲ್ಲಿ ಎರಡು ಗೆಣ್ಣು ಇರುವಂತೆ ಕತ್ತರಿಸುತ್ತಾರೆ (ಕೆಲವು ಪ್ರಭೇದಗಳಲ್ಲಿ ಒಂದೇ ಗೆಣ್ಣನ್ನು ಇಟ್ಟು ಗೆಣ್ಣುಗಳ ಅಂತರದ ಮಧ್ಯ ಭಾಗದಲ್ಲಿ ಕತ್ತರಿಸುತ್ತಾರೆ). ಒಂದು ಗೆಣ್ಣು ಮಣ್ಣಿನ ಒಳಗಡೆ ಇರುವಂತೆ ಮಾಡಿ ಮಣ್ಣು ಮುಚ್ಚುತ್ತಾರೆ. ಮೇಲ್ಭಾಗದ ಗೆಣ್ಣು ಚಿಗುರುತ್ತಿದ್ದಂತೆ, ಭೂಮಿಯಲ್ಲಿಯ ಗೆಣ್ಣು ಬೇರು ಬಿಡುತ್ತಾ ನೆಲದ ತೇವಾಂಶವನ್ನು ಹೀರಲಾರಂಭಿಸುತ್ತದೆ.

ಪ್ರಕಾಂಡವನ್ನು ನಾಟಿ ಮಾಡುವ ವಿಧಾನವೂ ಬಳಕೆಯಲ್ಲಿದ್ದು ಹೂಬಿಡದೇ ಇರುವ ಪ್ರಭೇದದ ಬಿದಿರನ್ನು ಬೆಳೆಸಲು ಈ ವಿಧಾನ ಅನುಸರಿಸುತ್ತಾರೆ. ಪ್ರಕಾಂಡವನ್ನು ಕತ್ತರಿಸಿ ನಾಟಿ ಮಾಡಿದರೆ ಪ್ರಕಾಂಡದ ಮೇಲಿರುವ ಮೊಗ್ಗು ಚಿಗುರಿ ಬೆಳೆಯುತ್ತದೆ. ಬಾಂಬುಸಾ ವಲ್ಗ್ಯಾರಿಸ್ ಹಾಗೂ ಬಾಂಬುಸಾಟಲ್ಡಾ ಪ್ರಭೇದದ ಬಿದಿರು ಇದಕ್ಕೆ ಉದಾಹರಣೆ. ಪ್ರಕಾಂಡದ ನಾಟಿಯಲ್ಲಿ ಮೋನೋಪೋಡಿಯಲ್ ಮತ್ತು ಸಿಂಪೋಡಿಯಲ್ ಎಂದು ಎರಡು ಬಗೆ. ಮೋನೋಪೋಡಿಯಲ್ ವಿಧಾನದಲ್ಲಿ ಪ್ರಕಾಂಡದ ಮೊಗ್ಗು ಬೆಳೆದು ಒತ್ತಾಗಿ ಗೆಣ್ಣುಗಳನ್ನು ಹೊಂದಿದ್ದು ಮೊಳಕೆಗಳು ಬಿಡಿಬಿಡಿಯಾಗಿ ಭೂಮಿಯ ಮೇಲ್ಭಾಗಕ್ಕೆ ಬರುತ್ತವೆ. ಸಿಂಪೋಡಿಯಲ್ ವಿಧಾನದಲ್ಲಿ ಪ್ರಕಾಂಡಗಳಲ್ಲಿಯ ಮೊಗ್ಗುಗಳು ಬುಗುರಿಯಂತಿದ್ದು, ಆಹಾರ ಸಂಗ್ರಹಣೆಯ ಅನಂತರ ಒತ್ತೊತ್ತಾಗಿ ಭೂಮಿಯ ಮೇಲಸ್ತರಕ್ಕೆ ಬರುತ್ತವೆ.

**ಆಹಾರ ಪದಾರ್ಥವಾಗಿ ಬಿದಿರು :** ಎಳೆಯ ಬಿದಿರಿನ ಬುಡದ ಭಾಗವನ್ನು 'ಕಳಲೆ' ಎಂದು ಕರೆಯುತ್ತಾರೆ. ಇದು ಆಹಾರ ಪದಾರ್ಥವಾಗಿ ಜನಪ್ರಿಯವಾಗಿದ್ದು, ಪಲ್ಯ, ಸಾಂಬಾರು, ಉಪ್ಪಿನಕಾಯಿ ಹೀಗೆ ವಿವಿಧ ಖಾದ್ಯಗಳನ್ನು ತಯಾರಿಸುತ್ತಾರೆ. ಕಳಲೆಯನ್ನು ಮೂರು ದಿನಗಳ ಕಾಲ ನೀರಿನಲ್ಲಿ ನೆನೆಸಿ ತದನಂತರ ಬಳಸಬೇಕು. ಇಲ್ಲದಿದ್ದರೆ ಅದು ವಿಷಕಾರಿಯಾಗುತ್ತದೆ. ಕಳಲೆಯನ್ನು ಸಂಸ್ಕರಿಸಿದ ಅನಂತರ ಅದರ ಸಿಪ್ಪೆಯ ತುಂಡು ಇತ್ಯಾದಿಗಳು ಜಾನುವಾರುಗಳ ಬಾಯಿಗೆ ಸಿಕ್ಕದಂತೆ ನೋಡಿಕೊಳ್ಳಬೇಕು. ಬಿದಿರಿನ ಕಾಳೇ ಬಿದಿರಕ್ಕಿ ಎಂದು ಪ್ರಸಿದ್ಧವಾಗಿದ್ದು, ಇದು ಅಕ್ಕಿ-ಗೋಧಿಗಿಂತ ಹೆಚ್ಚು ಪೌಷ್ಠಿಕವಾದ ಆಹಾರ ಪದಾರ್ಥವಾಗಿದೆ.

**ಔಷಧೀಯ ಗುಣಗಳು :** ಗಾಯ ಮತ್ತು ಬಾವುಗಳಿಗೆ ಬಿದಿರಿನ ಚಿಗುರೆಲೆ ಬಹಳ ಪ್ರಯೋಜನಕಾರಿ, ಎಳೆ ಬಿದಿರಿನ ಕಷಾಯ ಕೆಮ್ಮು ನಿವಾರಕ, ರಜೋರೋಧಕ, ಕಳಲೆಯು ರಕ್ತಶೋಧಕದಂತೆ ಕೆಲಸ ನಿರ್ವಹಿಸುತ್ತದೆ. ಇದರಿಂದ ಬಾಣಂತಿಯರಿಗೆ ಪ್ರಯೋಜನ ಹೆಚ್ಚು. ಬಿದಿರಿನ ಮರದಿಂದ ಅಂಟಿನಂತೆ ಜಿನುಗುವ ರಸಕ್ಕೆ ವಂಶಲೋಚನ ಎಂದು ಹೆಸರು. ಇದರ ಉಪಯೋಗ ಅನನ್ಯ. ಹೃದ್ರೋಗ, ರಕ್ತ-ಪಿತ್ತ, ರಕ್ತ-ಕ್ಷಯ, ಚರ್ಮರೋಗ, ವಾಂತಿ, ಅತಿಸಾರ, ಸಾಮಾನ್ಯ ದೌರ್ಬಲ್ಯ, ಮೂತ್ರ ತಡೆ ಹಾಗೂ ಜ್ವರಕ್ಕೆ ದಿವ್ಯೌಷಧ. ಆಯುರ್ವೇದದ ಔಷಧಿಯಾದ ತಾಲೀಸಾದಿ ಚೂರ್ಣ, ಸೀತೋಪಲಾದಿ ಚೂರ್ಣಗಳಲ್ಲಿ ವಂಶಲೋಚನವನ್ನು ಬಳಸುತ್ತಾರೆ. ಸೀತೋಪಲಾದಿ ಚೂರ್ಣವು ಗಟ್ಟಿ ಕಫವನ್ನು ಹೊಡೆದೋಡಿಸಲು ಪರಿಣಾಮಕಾರಿ. ಬಿದಿರಿನ ಮೇಲ್ಮೈಯಲ್ಲಿ ಶೇಖರಗೊಳ್ಳುವ ಮೇಣ ತುಂಬ ಉಪಯುಕ್ತ ವಸ್ತುವೆನಿಸಿದೆ. ಪೊಳ್ಳು ಬೊಂಬಿನೊಳಗೆ ಸಂಗ್ರಹವಾಗುವ ಹರಳಿನ ರೀತಿಯ ಬಿದಿರುಪ್ಪು (ಟ್ಯಾಬಷಿಯರ್) ಔಷಧಿಯಾಗಿಯೂ ರಾಸಾಯನಿಕ ಕ್ರಿಯೆಗಳಲ್ಲಿ ವೇಗವರ್ಧಕವಾಗಿಯೂ ಬಳಕೆಯಾಗುತ್ತದೆ.

**ಬಿದಿರಿನ ರಚನೆ :** ಬಿದಿರಿನ ರಚನೆಯಲ್ಲಿ ಮುಖ್ಯವಾಗಿ ಮೂರು ವಿಧಗಳನ್ನು ಗುರುತಿಸಬಹುದು. ದೊಡ್ಡ ಬಿದಿರು, ದಟ್ಟ ಬಿದಿರು, ಪೊಳ್ಳು ಬಿದಿರು.

**1) ದೊಡ್ಡ ಬಿದಿರು :** ಗಾತ್ರದಲ್ಲಿ ಹೆಚ್ಚಾಗಿದ್ದು ಭಿತ್ತಿಯ ಪ್ರಮಾಣ ಮಧ್ಯಮವಾಗಿರುತ್ತದೆ. ಒಳಭಾಗವೂ ಹೆಚ್ಚು ಪೊಳ್ಳಾಗಿರುತ್ತದೆ. ಸಾಮಾನ್ಯ ಹೊಡೆತಕ್ಕೆ ಮುರಿಯಲಾರದು. 15 ಸೆಂ.ಮೀ. ದಿಂದ 20 ಸೆಂ.ಮೀ. ವ್ಯಾಸದಲ್ಲಿ ಬೆಳೆಯಬಲ್ಲದು. ಬಿ. ಅರುಂಡಿನೇಸಿಯಾ ಪ್ರಭೇದವು ಇಂಥ ರಚನೆಯಲ್ಲಿ ಕಂಡುಬರುತ್ತದೆ.

**2) ದಟ್ಟ ಬಿದಿರು :** ಈ ಪ್ರಕಾರದಲ್ಲಿ ಭಿತ್ತಿಯು ಹೆಚ್ಚು ದಪ್ಪವಾಗಿದ್ದು ಒಳಗಡೆ ಪೊಳ್ಳಾಗಿರುವ ಭಾಗ ಅತಿ ಕಡಿಮೆಯಾಗಿರುತ್ತದೆ. ಬಿದಿರು ಗಾತ್ರದಲ್ಲಿ ಮಧ್ಯಮವಾಗಿರುತ್ತದೆ. ಸುಲಭವಾಗಿ ಮುರಿಯಲಾರದು. ಸಾಮಾನ್ಯವಾಗಿ ಡಿ. ಸ್ಟ್ರಿಕ್ಟಸ್ ಪ್ರಭೇದವು ಈ ರೀತಿಯ ರಚನೆಯಲ್ಲಿ ಕಂಡುಬರುವದು.

**3) ಪೊಳ್ಳು ಬಿದಿರು :** ಗಾತ್ರದಲ್ಲಿ ಮಧ್ಯಮವಾಗಿದ್ದು ಭಿತ್ತಿ ತೆಳುವಾಗಿರುತ್ತದೆ. ಪೊಳ್ಳು ಹೆಚ್ಚಾಗಿದ್ದು ಸುಲಭದಲ್ಲಿ ಒಡೆಯುವಂತಿರುತ್ತದೆ. 5 ಸೆಂ.ಮೀ. ನಿಂದ 6 ಸೆಂ.ಮಿ. ವ್ಯಾಸದಷ್ಟು ಗಾತ್ರದಲ್ಲಿ ಬೆಳೆಯಬಲ್ಲದು. ಈ ರೀತಿಯ ರಚನೆಗೆ ಮೆಲೊಂಕನಾ ಬ್ಯಾಂಬೂ ಸಾಯ್ಡಿಸ್ ಉದಾಹರಣೆಯಾಗಬಲ್ಲದು.

**ಬಿದಿರು ಹೂವಾಗುವಿಕೆ :** ಸಾಮಾನ್ಯವಾಗಿ ನವೆಂಬರ್ - ಡಿಸೆಂಬರ್ ತಿಂಗಳಿನಲ್ಲಿ ಮೆಳೆಗಳ ಎಲೆಗಳು ಉದುರಲು ಪ್ರಾರಂಭವಾದಂತೆ ಗಂಟುಗಳಲ್ಲಿ ದಂಡೆಗಳಂತೆ ಹೂಕಾಣಿಸಿಕೊಳ್ಳುತ್ತದೆ. ಬಿದಿರು

ಹೂವಾಗುವಿಕೆಯಲ್ಲಿ ಮೂರು ವಿಧ. 1. ವಿರಳ ಮತ್ತು ದಟ್ಟವಾಗಿಯೂ ಹೂವಾಗುವ ಪ್ರಭೇದ, 2. ದಟ್ಟವಾಗಿಯೇ ಹೂಬಿಡುವಿಕೆ, 3. ಪ್ರತಿವರ್ಷವೂ ಹೂವಾಗುವುದು.

ಮೊದಲನೆಯ ವಿಧದಲ್ಲಿ ಬಿ. ಅರುಂಡಿನೇಸಿಯಾ ಮತ್ತು ಡಿ. ಸ್ಟ್ರಿಕ್ಟಸ್ ಪ್ರಭೇದಗಳು ಬರುತ್ತವೆ. ಒಂದೇ ಗಳುವಿನಲ್ಲಿ ಹೂಕಾಣಿಸಿ ಕೊಳ್ಳಬಹುದು. ಇಲ್ಲವೇ ಮೆಳೆಯ ಎಲ್ಲಾ ಗಳುವಿನಲ್ಲೂ ಹೂ ಕಂಡುಬರುತ್ತದೆ. ಹೂಬಿಟ್ಟ ಅನಂತರ ಬಿದಿರು ಸಾಯುತ್ತದೆ.

ದಟ್ಟವಾಗಿ ಹೂ ಬಿಡುವಿಕೆಯಲ್ಲಿ ಬಿ. ಪೋಲಿಮಾರ್ಫಾ, ಮೆಲಂಕೊನಾ ಬಾಂಬು ಸೊಯ್ಡೀಸ್, ಬಿ. ಆರುಂಡಿನೇಸಿಯಾ ಪ್ರಭೇದಗಳು ಬರುತ್ತವೆ. ಸುತ್ತಮುತ್ತಲಿನ ಪ್ರದೇಶಗಳ ಎಲ್ಲ ಮೆಳೆಗಳುವಿನಲ್ಲೂ ಹೂಕಂಡುಬರುವುದು, ಇದರಲ್ಲೂ ಹೂಬಿಟ್ಟನಂತರ ಗಳು ಸಾಯುವುದು.

ಪ್ರತಿವರ್ಷ ಹೂವಾಗುವ ಪ್ರಭೇದ ಓಕ್ಲಾಂಡ್ರಾ ರೀಡಿಯೈ. ಎಲ್ಲಾ ಪ್ರಭೇದಗಳು ಹೂವಾಗುತ್ತಿರುವಂತೆ ಎಲೆಗಳು ಉದುರಲಾರಂಭಿಸಿದರೆ, ಈ ಪ್ರಭೇಧ ಹೂ ಬಿಟ್ಟನಂತರವೂ ಎಲೆ ಉದುರುವುದು ಕಂಡು ಬರುವುದಿಲ್ಲ. ಅಲ್ಲದೇ 'ಗಳು' ಸಾಯುವುದಿಲ್ಲ. ಕರ್ನಾಟಕದಲ್ಲಿ ಡೆಂಡ್ರೋಕಾಲಾಮಸ್ ಸ್ಟ್ರಿಕ್ಟಸ್ ಪ್ರಭೇದ 30-40 ವರ್ಷದ ಅವಧಿಯಲ್ಲಿ ಹೂ ಬಿಟ್ಟರೆ ಬಾಂಬುಸಾ ಆರುಂಡಿನೇಸಿಯಾ 32 ರಿಂದ 50 ವರ್ಷಗಳ ಅವಧಿಯ ಅನಂತರ ಹೂ ಬಿಡುತ್ತವೆ. ಜಪಾನಿನ ಬ್ಲಾಕ್ ಬಾಂಬು 120 ವರ್ಷಗಳಿಗೊಮ್ಮೆ ಹೂಬಿಡುತ್ತದೆ.

**ಇತರ ಉಪಯೋಗಗಳು :** ಬಿದಿರಿನ ಉಪಯೋಗ ಅನನ್ಯವಾಗಿದ್ದು, ಅವು ಭಾರತ, ಚೀನಾ, ಜಪಾನ್ ಹಾಗೂ ಇತರ ಆಗ್ನೇಯ ಏಷ್ಯಾದೇಶಗಳಲ್ಲಂತೂ ಅಲ್ಲಿಯ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಮಾನವನ ಹುಟ್ಟಿನಿಂದ ಆರಂಭವಾಗಿ ಸಾಯುವವರೆಗೂ ಬಿದಿರು ಒಂದಲ್ಲ ಒಂದು ರೀತಿಯಲ್ಲಿ ಸಹಾಯಕವಾಗಿದೆ. ಬಿದಿರು ಮನೆಗಳ ನಿರ್ಮಾಣದ ವಸ್ತುವಾಗಿ, ಆಹಾರವಾಗಿ, ಔಷಧಿಯಾಗಿ, ಕಾಗದ, ರಯಾನ್ ಬಟ್ಟೆ ಮತ್ತಿತರ ಸಾಮಗ್ರಿಗಳ ತಯಾರಿಕೆಯ ಕಚ್ಚಾ ಪದಾರ್ಥವಾಗಿ, ಕರಕುಶಲ ಕಲೆಗೆ ಒದಗುವ ವಸ್ತುವಾಗಿ ಬಹಳ ಪ್ರಯೋಜನಕಾರಿ. ಕೃಷಿಯಲ್ಲಿ ಬಳಸುವ ವಿವಿಧ ಉಪಕರಣಗಳು, ತೆಪ್ಪ, ದೋಣಿ, ಹಾವಿಪಟಗಳು, ದೀಪದ ಕಂಬ, ಏಣಿ, ತೊಟ್ಟಿಲು, ಕೊಳಲು, ಪೀಠೋಪಕರಣಗಳು ಇತ್ಯಾದಿಗಳ ತಯಾರಿಕೆಯಲ್ಲಿ, ಬಿದಿರು ಪ್ರಮುಖ ಪಾತ್ರವನ್ನು ವಹಿಸುತ್ತದೆ. ತುಂಬ ವ್ಯಾಪಕವಾದ ಪ್ರಕಂದ ಹಾಗೂ ಬೇರು ವ್ಯವಸ್ಥೆ ಬಿದಿರಿನಲ್ಲಿರುವುದರಿಂದ ಇದು ಭೂಸವೆತವನ್ನು ತಡೆಯುತ್ತದೆ. ಎಲೆಗಳು ಉತ್ತಮ ಗೊಬ್ಬರ ಒದಗಿಸುವುದಲ್ಲದೆ ಗಾಳಿ, ಬಿಸಿಲುಗಳನ್ನು ತಡೆಯುತ್ತದೆ. ಮಲೆನಾಡಿನಲ್ಲಿ ಬೊಂಬನ್ನು ಉದ್ದುದ್ದ ಸೀಳಿ ನೀರು ಹಾಯಿಸಲು ಬಳಸುತ್ತಾರೆ. ಕಬ್ಬಿಣದ ಬದಲಾಗಿ ಬಳಸುವ ಪ್ರಯೋಗಗಳು ನಡೆದಿವೆ.

**ಇತರೆ ಅಂಶಗಳು :** ಬಿದಿರಿನ ಗಮನೀಯ ವೈಶಿಷ್ಟ್ಯ ಅದರ ತೀವ್ರ ಬೆಳವಣಿಗೆ ಮತ್ತು ಬದುಕಿನ ಗಟ್ಟಿತನ. ಬಿದಿರು ಬಿಡುವ ಕಾಳಿನಿಂದ ಜನಜೀವನದ ಆರ್ಥಿಕ ವ್ಯವಸ್ಥೆಯೇ ಅಸ್ತವ್ಯಸ್ತಗೊಳ್ಳುತ್ತದೆ ಎಂಬ ಮಾತಿದೆ. ಹೂಬಿಟ್ಟು ಹಿಂಡಲಿನಲ್ಲಿಯ ಬಿದಿರೆಲ್ಲ ಸಾಯುವುದರಿಂದ ಬಡಜನ ಬಿದಿರು ಸಿಕ್ಕದೆ ಪರದಾಡಬೇಕಾಗುತ್ತದೆ. ಬಿದಿರಿನ ಮಹಾಪೂರದಿಂದಾಗಿ ಇಲಿ ಹೆಗ್ಗಣಗಳು ಹೆಚ್ಚಾಗಿ ಬೇರೆ ಕಾಳು-ಕಡ್ಡಿಗಳೂ ನಾಶವಾಗುತ್ತವೆ. ಜೊತೆಗೆ ಟೈಫಾಯಿಡ್, ಪ್ಲೇಗ್ ಮುಂತಾದ ರೋಗಗಳು ಸಂಭವಿಸಬಹುದು.

ಬಿದಿರು ಇಷ್ಟೆಲ್ಲಾ ವಿಶಿಷ್ಟ ಗುಣಗಳನ್ನು ಹೊಂದಿದ್ದರೂ ಇಂದಿನ ನಗರೀಕರಣ ಪ್ರಕ್ರಿಯೆಯಲ್ಲಿ ಅವನತಿಯ ಹಂತವನ್ನು ತಲುಪಿರುವುದು ಶೋಚನೀಯ. ಆಧುನಿಕ ಬದುಕು ಬಿದಿರಿಗೆ ಪರ್ಯಾಯವಾದ ವಸ್ತುವನ್ನು ಕಂಡುಕೊಂಡಿರುವುದು ಸಹ ಅದರ ನಾಶಕ್ಕೆ ಕಾರಣ. ಹೆಚ್ಚುತ್ತಿರುವ ಜನಸಂಖ್ಯೆ, ಕಾಡಿನ ನಾಶ, ನಗರೀಕರಣ, ಕಾಡ್ಗಿಚ್ಚು, ಅರಣ್ಯ ಒತ್ತುವರಿ, ಇತ್ಯಾದಿಗಳಿಂದ ಬಿದಿರಿನ ಸಂಕುಲಕ್ಕೆ ಅಪಾಯ ಒದಗಿವೆ. ಆದರೂ ಈಗೀಗ ಅಲಂಕಾರಕ್ಕೆ ಅವನ್ನು ಉದ್ಯಾನವನಗಳಲ್ಲೂ ಮನೆಯಂಗಳದಲ್ಲೂ ಬೆಳೆಸುತ್ತಿರುವುದು ಆಶಾದಾಯಕ.

*ಆರ್.ಪಿ.ಕೆ.*

**ಬಿಲ್ವ** ಔಷಧೀಯ ಗುಣವುಳ್ಳ ಮರ. ರುಟೇಸಿ ಸಸ್ಯವರ್ಗಕ್ಕೆ ಸೇರಿದೆ. ವೈಜ್ಞಾನಿಕ ಹೆಸರು ಏಗಲ್ ಮಾರ್ಮೆಲಾಸ್. ಇಂಗ್ಲಿಷ್‌ನಲ್ಲಿ ಬೆಂಗಾಲ್ ಕ್ವಿನ್ಸ್, ಸ್ಟೋನ್ ಆಪಲ್, ವುಡ್ ಆಪಲ್ ಎನ್ನುತ್ತಾರೆ. ಈ ಮರ ಮುಳ್ಳುಗಳಿಂದ ಆವೃತವಾಗಿರುತ್ತದೆ. ಭಾರತದಲ್ಲಿ ಮಾತ್ರವಲ್ಲದೆ ಬಲುಚಿಸ್ತಾನ, ನೇಪಾಳ, ಪಾಕಿಸ್ತಾನ, ಬಾಂಗ್ಲಾದೇಶ, ವಿಯೆಟ್ನಾಂ, ಲಾವೋಸ್, ಕಾಂಬೋಡಿಯಾ, ಥಾಯ್ಲೆಂಡ್, ಮ್ಯಾನ್ಮಾರ್, ಚೀನಾ ಮತ್ತು ಶ್ರೀಲಂಕದಲ್ಲೂ ಇದನ್ನು ಬೆಳೆಯುತ್ತಾರೆ. ಸುವಾಸನೆಯಿಂದ ಕೂಡಿರುವ ಎಲೆಗಳು ಪರ್ಯಾಯ ಜೋಡಣೆಯಲ್ಲಿರುತ್ತವೆ. ದ್ವಿಲಿಂಗಿ ಮತ್ತು ಏಕಲಿಂಗಿ ಹೂಗಳನ್ನು ಕಾಣಬಹುದು.




ಹೂ ಹಸುರು ಮಿಶ್ರ ಬಿಳಿ ಬಣ್ಣದ್ದಾಗಿದ್ದು ಪರಿಮಳದಿಂದ ಕೂಡಿರುತ್ತದೆ. ವಿಶೇಷವಾಗಿ ಶಿವನ ಪೂಜೆಗೆ ಎಲೆಗಳನ್ನು ಬಳಸುತ್ತಾರೆ. ಬಿಲ್ವದ ಹಣ್ಣುಗಳು ದುಂಡಾಗಿರುತ್ತವೆ. ಕಾಯಿ ಹಸುರಾಗಿದ್ದು ಹಣ್ಣು ಬೂದು ಬಣ್ಣದ್ದಾಗಿರುತ್ತದೆ.

ಬಿಲ್ವವನ್ನು ಎತ್ತರವಾದ ಪ್ರದೇಶದಲ್ಲಿ ಬೆಳೆಯುತ್ತಾರೆ. ಶೀತಲ ಪ್ರದೇಶವಿದ್ದರೂ ತೊಂದರೆ ಇಲ್ಲ. ಜೌಗುನೆಲ, ಕ್ಷಾರಭರಿತ ನೆಲ, ಜೇಡಿ

ಮಣ್ಣಿನಲ್ಲಿ ಬೆಳೆಯಬಹುದು. ಸಸ್ಯಾಭಿವೃದ್ಧಿ ಬೀಜಗಳಿಂದ ಜೊತೆಗೆ ಬಡ್ಡಿಂಗ್, ಗ್ರಾಫ್ಟಿಂಗ್ ಮೊದಲಾದ ನಿರ್ಲಿಂಗ ಪದ್ಧತಿಯಿಂದಲೂ ಬೆಳೆಸುತ್ತಾರೆ. ಹೆಚ್ಚು ಇಳುವರಿ ಕೊಡುವ ಮರದಿಂದ ದೊಡ್ಡ ಗಾತ್ರದ ಬಿಲ್ವದ ಹಣ್ಣನ್ನು ಆಯ್ಕೆ ಮಾಡಿಕೊಳ್ಳಬೇಕು. ಹಣ್ಣಿನ ತಿರುಳನ್ನು ತೆಗೆದು ಬೀಜಗಳನ್ನು ಬೇರ್ಪಡಿಸಿಕೊಂಡು ಚೆನ್ನಾಗಿ ತೊಳೆದು ನೆರಳಿನಲ್ಲಿ ಒಣಗಿಸಬೇಕು. ಅನಂತರ ನೀರಿನಲ್ಲಿ ಹಾಕಿದಾಗ ಜೊಳ್ಳು ಬೀಜಗಳು ಮೇಲಕ್ಕೆ ತೇಲುತ್ತಿರುತ್ತವೆ. ಗಟ್ಟಿಯಾದ ಬೀಜವನ್ನು ಮಾತ್ರ ಆರಿಸಿಕೊಳ್ಳಬೇಕು. ಆಯ್ಕೆ ಮಾಡಿದ ಬೀಜಗಳನ್ನು ಏರು ಮಡಿಯಲ್ಲಿ ಅಥವಾ ಮಣ್ಣು, ಮರಳು ಮತ್ತು ಗೊಬ್ಬರ (ಸಾವಯವ) ತುಂಬಿಸಿದ ಪ್ಲಾಸ್ಟಿಕ್ ಚೀಲಗಳಲ್ಲಿ ಬಿತ್ತನೆ ಮಾಡಬೇಕು. ದಿನನಿತ್ಯ ನೀರು ಚಿಮುಕಿಸುತ್ತಾ ಇರಬೇಕು. ಸುಮಾರು ನಾಲ್ಕು ವಾರಗಳಲ್ಲಿ ಬೀಜಗಳು ಮೊಳಕೆಯೊಡೆಯುತ್ತವೆ. ಒಂದು ವರ್ಷದವರೆಗೆ ಹದವಾಗಿ ನೀರುಕೊಟ್ಟು ಅನಂತರ ನಾಟಿ ಮಾಡಬಹುದು. ಬೇರು ಚಿಗುರು ಕಸಿ ಮತ್ತು ಕಣ್ಣು ಕೂಡಿಸಿಯೂ ರೆಂಬೆ ತುಂಡು ಮತ್ತು ಮೇಲ್ ಕಸಿ ವಿಧಾನದಿಂದಲೂ ಸಸ್ಯಾಭಿವೃದ್ಧಿ ಮಾಡಬಹುದು. ಮಳೆಗಾಲದಲ್ಲಿ ಚೆನ್ನಾಗಿ ಬಲಿತ ರೆಂಬೆ ತುಂಡನ್ನು ನೆಲದಲ್ಲಿ ನೆಡಬಹುದು.

**ನಾಟಿ :** ಒಂದು ಮೀಟರ್ ಆಳ, ಅಗಲ ಮತ್ತು ಉದ್ದ ಇರುವ ಗುಂಡಿಯನ್ನು ತೋಡಿ ಸಾವಯವ ಗೊಬ್ಬರ ಮತ್ತು ಮೇಲ್ಮಣ್ಣನ್ನು ಸಮಪ್ರಮಾಣದಲ್ಲಿ ಮಿಶ್ರ ಮಾಡಿ ತುಂಬಬೇಕು. ಒಂದು ವರ್ಷದ ಸಸಿಗಳನ್ನು ಹೆಪ್ಪು ಸಮೇತ ತಂದು ಮೊದಲೆ ಸಿದ್ಧಮಾಡಿಕೊಂಡಿದ್ದ ಗುಂಡಿಗೆ ನೆಡಬೇಕು. ಸಸಿಯಿಂದ ಸಸಿಗೆ ಸುಮಾರು 10 ಮೀಟರ್ ಅಂತರ ಇರಬೇಕು. ಸಸಿ ನಾಟಿಯನ್ನು ಮಳೆಗಾಲದಲ್ಲಿ ಮಾಡುವುದು ಉತ್ತಮ. 120 ರಿಂದ 150 ಸಸಿಗಳನ್ನು ಒಂದು ಹೆಕ್ಟೇರ್‌ನಲ್ಲಿ ನಾಟಿ ಮಾಡಬಹುದು. ಬಿಲ್ವ ಮರಕ್ಕೆ ಶಿಲೀಂಧ್ರ ಬಾಧೆ ತಟ್ಟದಂತೆ ಬೋರ್ಡೋ ದ್ರಾವಣವನ್ನು ಶೇ. ಒಂದರ ಪ್ರಮಾಣದಲ್ಲಿ ಸಿಂಪಡಿಸಬೇಕು. ಎಲೆಗಳಲ್ಲಿ ಕೀಟಬಾಧೆ ಕಂಡುಬಂದರೆ ದೇಸೀ ಔಷಧವಾದ ಬೇವಿನ ಎಣ್ಣೆಯನ್ನು ಸಿಂಪಡಿಸಬಹುದು.

ಬಿಲ್ವ ಮರ ಎಂಟು ವರ್ಷದ ಅನಂತರ ಫಸಲು ಕೊಡಲು ಪ್ರಾರಂಭಿಸುತ್ತದೆ. ಹದಿನೈದು ವರ್ಷಗಳ ಬಳಿಕ ಹೆಚ್ಚಿನ ಪ್ರಮಾಣದಲ್ಲಿ ಫಸಲನ್ನು ನೀಡುತ್ತದೆ. ಮರ ಬೆಳೆದಂತೆಲ್ಲಾ ಹೆಚ್ಚು ಫಸಲು ಮತ್ತು ಆರೋಗ್ಯವಂತ ಹಣ್ಣುಗಳನ್ನು ನೀಡುತ್ತದೆ. ಒಂದು ಮರ ಸರಾಸರಿ 200 ರಿಂದ 400 ಹಣ್ಣುಗಳನ್ನು ಕೊಡುತ್ತದೆ. ಹಣ್ಣುಗಳನ್ನು ಜೋಪಾನವಾಗಿ ಕೊಯ್ಯಬೇಕು. ಕೆಳಗೆ ಬೀಳಿಸಬಾರದು. ಕೊಯ್ದ ಹಣ್ಣನ್ನು ಎರಡು ವಾರಗಳವರೆಗೆ ಇಡಬಹುದು. ಶೀತಲಗೃಹಗಳಲ್ಲಿ ಸುಮಾರು ನಾಲ್ಕು ತಿಂಗಳವರೆಗೆ ಸಂರಕ್ಷಿಸಬಹುದು. ಆದರೆ ಕೆಲವು ಸಲ ಹಣ್ಣಿನ ತೊಟ್ಟಿನ ಭಾಗದಲ್ಲಿ ಶಿಲೀಂಧ್ರ ಬಾಧೆ ಕಾಣಿಸಿಕೊಂಡು ಹಾಳಾಗಬಹುದು. ಹಾಗಾಗಿ ಸಂರಕ್ಷಣೆಯ ಸಂದರ್ಭದಲ್ಲಿ ಬಹಳ ಜಾಗ್ರತವಾಗಿರಬೇಕು.

ಸರ್ವರೋಗನಿವಾರಕವಾದ ಬಿಲ್ವವನ್ನು ಅನೇಕ ರೀತಿಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಹಣ್ಣಿನ ತಿರುಳನ್ನು ಗಾರೆ ತಯಾರಿಕೆಯಲ್ಲಿ, ಜಲವರ್ಣದಲ್ಲಿ, ಸಾಬೂನಿನಲ್ಲಿ, ಗಟ್ಟಿಯಾದ ಚಿಪ್ಪನ್ನು ನಶ್ಯ ತುಂಬಲು ಡಬ್ಬಿಯಂತೆ, ಮರವನ್ನು ಕೃಷಿ ಮತ್ತು ಇತರ ಉಪಕರಣಗಳ ಬಳಕೆಯಲ್ಲಿ, ಅಂಟನ್ನು ವಾರ್ನಿಷ್ ತಯಾರಿಕೆಯಲ್ಲಿ, ತಿರುಳನ್ನು ಬಳಸಿ ಉಪ್ಪಿನಕಾಯಿಯಾಗಿ, ಬಿಲ್ವ ಪಾನಕವನ್ನು, ಮಿಠಾಯಿಯನ್ನು, ಎಳೆಯ ಚಿಗುರನ್ನು ತರಕಾರಿಯಾಗಿ, ಆಭರಣ ತಯಾರಿಕೆಯಲ್ಲಿ, ಸುಗಂಧದ್ರವ್ಯ ತಯಾರಿಕೆಯಲ್ಲಿ, ತೊಗಟೆಯಿಂದ ಗೋಂದು ಮತ್ತು ಕೇಶತೈಲ ತಯಾರಿಕೆಯಲ್ಲೂ ಬಳಸಲಾಗುತ್ತದೆ.

*ಕೇ.ಪಿ.ಕೆ.*

**ಬಿಲ್ವಾರ (ಸಿಲ್ವರ್ ಓಕ್)** ಬಿಲ್ವಾರ ವಿದೇಶಿ ತಳಿ. ಇದು ಭಾರತಕ್ಕೆ ಬಂದುದು 18ನೇ ಶತಮಾನದ ಅಂತ್ಯದಲ್ಲಿ. ಭಾರತದಲ್ಲಿ ಕಾಫಿ, ಟೀ ಸಸಿಗಳನ್ನು ಬೆಳೆಸಲು ಆರಂಭಿಸಿದಾಗ ಅವುಗಳ ನೆರಳಿಗಾಗಿ ಇಂಥ ಸಸಿಗಳ ಅಗತ್ಯಬಿತ್ತು. ನೆಡು ತೋಪುಗಳಿಲ್ಲದೆ ಕಾಫಿ, ಟೀ ಕೃಷಿ ಮಾಡಲು ಸಾಧ್ಯವಿಲ್ಲ. ಈ ಗಿಡಗಳಿಗೆ ನೆರಳು-ಬೆಳಕುಗಳನ್ನು ಸರಿಯಾದ ರೀತಿಯಲ್ಲಿ ಒದಗಿಸಲು ನಾನಾ ತರದ ನೆರಳು ಕೊಡುವ ಸಸಿಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳಲಾಯಿತು. ಇವು ಬಿಸಿಲು ಕಾಲದಲ್ಲಿ




ನೆರಳನ್ನು ಚಳಿಗಾಲದಲ್ಲಿ ಸೂರ್ಯನ ಕಿರಣಗಳನ್ನು ಒಳಬಿಟ್ಟು ಬೆಳಕನ್ನು ನೀಡುವುದರಿಂದ ಹೆಚ್ಚು ಇಳುವರಿಯನ್ನು ಪಡೆಯಲು ಸಾಧ್ಯ ಎಂದು ಕೃಷಿಕರ ಅನುಭವಕ್ಕೆ ಬಂದಂತೆಲ್ಲಾ ಈ ನೆರಳು ಸಸಿಗಳ ಬೇಡಿಕೆ ಹೆಚ್ಚಾಯಿತು. ವಾತಾವರಣವನ್ನು, ಹವಾಗುಣವನ್ನು ಹತೋಟಿಯಲ್ಲಿಡಲು ಇಂಥ ಎತ್ತರವಾಗಿ ಬೆಳೆಯುವ ಮರಗಳಿಂದ ಮಾತ್ರ ಸಾಧ್ಯ ಎಂಬ ಕಾರಣಕ್ಕೆ ಎತ್ತರವಾಗಿ ಮತ್ತು ಶೀಘ್ರವಾಗಿ ಬೆಳೆಯುವ ಕೆಲವು ಜಾತಿಯ ಮರಗಳನ್ನು ಹೊರದೇಶದಿಂದ ತಂದರು. ಅಂಥವುಗಳಲ್ಲಿ ಬಿಲ್ವಾರ ಅಥವಾ ಸಿಲ್ವರ್ ಓಕ್ ಸಹ ಒಂದು. ಇದು ವೇಗವಾಗಿ ಮತ್ತು ದಟ್ಟವಾಗಿ ಬೆಳೆದು ರೆಂಬೆ ಕೊಂಬೆಗಳಿಂದ ಹೆಚ್ಚು ನೆರಳನ್ನು ಕೊಡುವ ಜಾತಿಯೆಂದು ಬಗೆದು ಭಾರತದಲ್ಲಿ ಕಾಫಿ ಮತ್ತು ಟೀ ತೋಟಗಳ ಸುತ್ತ ಇದನ್ನು ನೆಟ್ಟು

ಬೆಳೆಯಲಾರಂಭಿಸಿದರು. ಈ ಸಸಿಗಳನ್ನು ಪ್ರತ್ಯೇಕವಾಗಿ ನದೀ ತೀರಗಳಲ್ಲಿ, ಬೆಟ್ಟಗುಡ್ಡಗಳ ಕಣಿವೆಗಳಲ್ಲಿ ಬೆಳೆಸುತ್ತಾರೆ. ಹೆಚ್ಚು ಬೆಲೆ ಬಾಳುವ ಲಾಭದಾಯಕ ಮರವಾದರೂ ಈ ಜಾತಿಯ ತೋಪುಗಳು ಇತ್ತೀಚೆಗೆ ಕಣ್ಮರೆಯಾಗುತ್ತಿವೆ. ಇದರ ಸ್ಥಾನವನ್ನು ನೀಲಗಿರಿ (ಯೂಕ ಲಿಪ್ಟಸ್) ಮರ ಆಕ್ರಮಿಸಿದೆ. ಕಾರಣ ಬೆಳೆವಣಿಗೆಯ ಅವಧಿ ತುಂಬಾ ಹೆಚ್ಚಾದುದರಿಂದ .ಕಡಿಮೆ ಅವಧಿಯಲ್ಲಿ ಬೆಳೆಯುವ ನೀಲಗಿರಿ ಮರಗಳನ್ನು ತೋಪುಗಳಂತೆ ಬೆಳೆಯುತ್ತಿದ್ದಾರೆ. ಮರವನ್ನು ಕೊಯ್ದ ಮೇಲೆ ಮತ್ತೆ ಚಿಗುರೊಡೆದು ನಾಲ್ಕಾರು ಮರಗಳಂತೆ ಬೆಳೆಯುತ್ತವೆ. ಅದರಲ್ಲಿ ದೃಢವಾಗಿ ನೇರವಾಗಿ ಬೆಳೆಯಬಲ್ಲ ಎರಡು ಮೂರು ಟಿಸಿಲುಗಳನ್ನು ಬಿಟ್ಟು ಉಳಿದವನ್ನು ಸವರಿ ಬೆಳೆಸುತ್ತಾರೆ.

*ವಿ.ಆರ್.ಬಿ.*

**ಬೀಜರಹಿತ ಸಸ್ಯಾಭಿವೃದ್ಧಿ** ಕಾಂಡ, ರೆಂಬೆ, ಬಳ್ಳಿಗಳನ್ನು ನೆಟ್ಟು ಸಸ್ಯಾಭಿವೃದ್ಧಿ ಮಾಡುವ ಕ್ರಮ. ಇದನ್ನೇ ನಿರ್ಲಿಂಗ ರೀತಿಯ ವಂಶಾಭಿವೃದ್ಧಿ ಎನ್ನುವರು. ಶೀಘ್ರವಾಗಿ ಫಲ ನೀಡವಂತಹದ್ದು; ಹೀಗೆ ಸಸ್ಯವನ್ನು ಅಭಿವೃದ್ಧಿ ಪಡಿಸುವುದರಿಂದ, ತಾಯಿ ಸಸ್ಯದ ತದ್ರೂಪಿ ಗುಣಗಳು ಇವುಗಳಿಗೆ ರವಾನೆಯಾಗುವುದರ ಮೂಲಕ ಅದೇ ತೆರನಾದ ಉತ್ಪನ್ನವನ್ನು ಪಡೆಯಬಹುದು. ಬೀಜಗಳನ್ನು ಬಿತ್ತಿ ಬೆಳೆಯುವಾಗ ಕೆಲವೊಮ್ಮೆ ಫಸಲಿನ ಸ್ವರೂಪ ಬದಲಾಗುವ ಅವಕಾಶವಿರುತ್ತದೆ.

**ಸಸ್ಯಾಭಿವೃದ್ಧಿ ವಿಧಾನ :** ಬೇರು, ಕಂದು, ಗೆಡ್ಡೆ ಮತ್ತು ರೆಂಬೆಗಳಿಂದ ಕೆಲವನ್ನು ವೃದ್ಧಿ ಮಾಡಿದರೆ. ಕಣ್ಣು, ಕಾಂಡದ ಕೆಲವು ಭಾಗಗಳ ಮೂಲಕವು ಸಸ್ಯಾಭಿವೃದ್ಧಿಯನ್ನು ಮಾಡಬಹುದು. ಇದು ಆಯಾ ಪ್ರಭೇದವನ್ನು ಅನುಸರಿಸಿ ಕೃಷಿ ಮಾಡುವ ಪರಿ.

ಈ ಕ್ರಮದಲ್ಲಿ 2 ವಿಧ : 1. ಮೂಲ ಗಿಡದ ರೆಂಬೆಯಲ್ಲಿ ಬೇರು ಬಿಡಿಸುವಿಕೆ, 2. ಬೇರು ಬಿಟ್ಟಿರುವ ಸಸ್ಯ ಭಾಗಗಳನ್ನು ಜೋಡಿಸುವುದು. ಬೇರು ಬಿಡಿಸುವ ವಿಧಾನದಲ್ಲಿ ಮೂಲ ಸಸ್ಯದ ರೆಂಬೆಗೆ ಕಸಿ ಮಾಡುವುದು ಹಾಗೂ ಮೂಲ ಸಸ್ಯದಿಂದ ರೆಂಬೆಯನ್ನು ಕತ್ತರಿಸಿ ನೆಟ್ಟು ಬೇರು ಬಿಡುವಂತೆ ಮಾಡುವುದು. ತಾಯಿ ಗಿಡದಲ್ಲಿಯೇ ವಿವಿಧ ಸಸಿಗಳು ಬೇರು ಬಿಟ್ಟು ಬೆಳೆಯುವ ವಿಧಾನ.

ಕಾಂಡದ ಬುಡದಿಂದ ಕಂದುಗಳು ಹೊರಡುವುದಕ್ಕೆ, ಉದಾಹರಣೆ ಬಾಳೆ, ರೊಟ್ಟಿಹಣ್ಣು ಭೂತಾಳೆ, ಲೋಳೆಸರ ಇತ್ಯಾದಿ. ಬಳ್ಳಿ ಜಾತಿಯ ಸಸ್ಯಗಳಿಗೆ ಉದಾಹರಣೆ : ವೀಳ್ಯದೆಲೆ, ಕಾಕಡ, ಮಲ್ಲಿಗೆ ಇತ್ಯಾದಿ. ಈ ಬಗೆಯ ಸಸ್ಯಗಳನ್ನು ಬುಡ ಸಹಿತ ಕಿತ್ತು ಬೇರೆಡೆ ನೆಟ್ಟರೆ ಹೊಸ ಗಿಡ ಸುಲಭವಾಗಿ ಬೆಳೆಸಬಹುದು. ಆರಂಭದ ಘಟ್ಟದಲ್ಲಿ ನೆಲದ ಮೇಲೆ ಹರಡಿದ ರೆಂಬೆಗಳ ತೊಗಟೆ ಆಕಸ್ಮಿಕವಾಗಿ ಕಿತ್ತು ಹೋಗಿ ಆ ಭಾಗದ ಮೇಲೆ ಮಣ್ಣು ಬಿದ್ದು ರೆಂಬೆ ಬೇರು ಬಿಟ್ಟು ಸ್ವತಂತ್ರವಾಗಿ ಬೆಳೆದುದನ್ನು ಗಮನಿಸಿದ ರೈತ ಈ ವಿಧಾನವನ್ನು ಸಸ್ಯಾಭಿವೃದ್ಧಿಗೆ ಬಳಸಿದ. ಇದರಿಂದ ಹರ್ಷಿತನಾದ ರೈತ ಅನೇಕ ನವೀನ ಮಾದರಿಯ ವಿಧಾನಗಳ ಮೂಲಕ ಸಸ್ಯಾಭಿವೃದ್ಧಿ ಪಡಿಸುವುದನ್ನು ಕಲಿತ. 1. ರೆಂಬೆಗಳಲ್ಲಿ ಬೇರು ಬಿಡಬಹುದಾದ ಮರಗಳನ್ನು ಆಯ್ಕೆ ಮಾಡಿ ಬಲಿತ ರೆಂಬೆಗಳನ್ನು ನೆಲದ ಮೇಲೆ ಬಾಗಿಸಿ ಚಾಕುವಿನಿಂದ ಸ್ವಲ್ಪ ಭಾಗದ ತೊಗಟೆ ಬಿಡಿಸಿ ಮಣ್ಣಿನಲ್ಲಿ ಹೂತು ಬೇಕಾದ ಪೋಷಣೆ ನೀಡಿ ಬೇರು ಬಿಡುವ ತನಕ ಕಾಪಾಡಬೇಕು. 2. ಬಳ್ಳಿಗಳನ್ನೂ ರೆಂಬೆಗಳನ್ನು ನೆಲದ ಮೇಲೆ ಸುರುಳಿ ಸುತ್ತಿ ಹೂತು ಮೇಲೇಳದಂತೆ ಭಾರವಾದ ವಸ್ತು ಬಿಟ್ಟು ಪೋಷಿಸಬೇಕು. 3. ಕೆಲವು ಜಾತಿಯ ಗಿಡಗಳ ಬಲಿತ ರೆಂಬೆಗಳಲ್ಲಿ ಉಂಗುರಾಕಾರದಲ್ಲಿ ತೊಗಟೆಯನ್ನು ನುಲಿದು ತೇವಾಂಶವಿರುವ ಮಣ್ಣು ಗೊಬ್ಬರ ತುಂಬಿದ ಪ್ಲಾಸ್ಟಿಕ್ ಚೀಲವನ್ನು ಕಟ್ಟುವುದರಿಂದ ಉಂಗುರಾಕಾರದ ಸುತ್ತಲೂ ಬೇರುಗಳು ಬಂದು ಹೊಸ ಸಸ್ಯ ವೃದ್ಧಿ ಮಾಡಬಹುದು, 4. ಬಲಿತ ಗಿಡದ ರೆಂಬೆಯನ್ನು ಮೇಲ್ಮುಖವಾಗಿ ಸೀಳಿದಂತೆ ಮಾಡಿ ಆ ಭಾಗದಲ್ಲಿ ತೇವದಿಂದ ಕೂಡಿರುವ ನಾರು ಅಥವಾ ಮೃದುವಾದ, ಬೇರು ಬಿಡಲು ಸಹಾಯಕವಾಗುವ ಯಾವುದಾದರೂ ವಸ್ತುವನ್ನಿಟ್ಟು ಪಾಲಿಥೀನ್ ಕಾಗದ ಕಟ್ಟಿದರೆ, ಸೀಳು ಬಿಟ್ಟ ಜಾಗದಲ್ಲಿ ಬೇರು ಹೊರಟು ತೇವಾಂಶವಿರುವ ವಸ್ತುವಿನಲ್ಲಿ ಕಾಣಿಸಿಕೊಳ್ಳುತ್ತವೆ. ಆಲಂಕಾರಿಕ ಸಸ್ಯಗಳಾಗಿದ್ದಲ್ಲಿ ಕುಂಡಗಳಲ್ಲಿಯೂ ಇನ್ನಿತರ ಸಸ್ಯಗಳನ್ನು ನೆಲದ ಮೇಲೂ ಬೆಳೆಸಬಹುದು.

**ನಿರ್ಲಿಂಗ ಸಸ್ಯಾಭಿವೃದ್ಧಿಯ ಇತರ ವಿಧಾನಗಳು :** ಈರುಳ್ಳಿ, ಲಿಲ್ಲಿ, ಭೂತಾಳೆ, ಜರಿ ಇತ್ಯಾದಿ ಸಸ್ಯಗಳ ಎಲೆಗಳೇ ಮಾರ್ಪಟ್ಟು ಕಂದುಗಳಾಗುತ್ತವೆ. ಇವುಗಳನ್ನು ಹೂತು ಹೊಸ ಸಸ್ಯ ಬೆಳೆಸಬಹುದು. ಶುಂಠಿ, ಅರಿಸಿನ ಮುಂತಾದ ಸಸ್ಯಗಳ ಕಾಂಡ ಭಾಗಗಳು ನೆಲದೊಳಗೆ ಗೆಡ್ಡೆಗಳಂತೆ ಬೆಳೆದಿರುತ್ತವೆ. ಇವುಗಳನ್ನು ನೆಟ್ಟು ಹೊಸ ಸಸ್ಯಗಳನ್ನು ಪಡೆಯಬಹುದು. ಎಲೆಯ ಕೂಳೆಯನ್ನು ಕತ್ತರಿಸಿ ನೆಟ್ಟು ಬೆಳೆಸಬಹುದಾದ ಅನಾನಸ್‌ನಂಥ ಸಸ್ಯಗಳೂ ಉಂಟು. ಕೆಲವು ಪ್ರಭೇದಗಳಲ್ಲಿ ಗೆಡ್ಡೆಗೆ ಅಂಟಿಕೊಂಡಿರುವ ಸಣ್ಣ ಸಣ್ಣ ಗೆಡ್ಡೆಗಳನ್ನು ನೆಟ್ಟು ಬೆಳೆಸಬಹುದು. ಉದಾ : ಡ್ಯಾಫೋಡಿಲ್, ಟುಲಿಪ್ ಇತ್ಯಾದಿ. ಮತ್ತೊಂದು ಬಗೆಯೆಂದರೆ ಗೆಡ್ಡೆಯ ಕಣ್ಣಿನಿಂದಲೇ ಹೊಸ ಸಸ್ಯಾಭಿವೃದ್ಧಿ ಮಾಡುವುದು. ಉದಾ : ಆಲೂಗಡ್ಡೆ, ಸುವರ್ಣಗೆಡ್ಡೆ ಇತ್ಯಾದಿ. ಗುಲಾಬಿ, ಬ್ರಹ್ಮಕಮಲ ಮೊದಲಾದ ಜಾತಿಗಳಲ್ಲಿ ರೆಂಬೆಗಳನ್ನು ಕತ್ತರಿಸಿ ಮರಳು ಮಿಶ್ರಿತ ಮಣ್ಣಿನಲ್ಲಿ ನೆಟ್ಟು, ತೇವ ಆರದಂತೆ ಚಿಗುರೊಡೆಯುವ ತನಕ ನೆರಳಿನಲ್ಲಿ ಪೋಷಿಸಿ ಬೆಳೆಸಬಹುದು.

ಈ ವಿಧಾನಗಳ ಮುಂದುವರಿಕೆಯಾಗಿ ಪ್ರಸ್ತುತ ಒಂದೇ ಗಿಡದಲ್ಲಿ ವಿವಿಧ ಬಗೆಯ ಹಣ್ಣುಗಳು, ವಿವಿಧ ಬಣ್ಣದ ಹೂಗಳು ಬಿಡುವಂತೆ ನವೀನ ಮಾದರಿಯ ಕೃಷಿಯನ್ನು ಅಳವಡಿಸಿಕೊಂಡಿರುವುದುಂಟು.

*ಎಸ್.ವಿ.*

**ಬೀಟ್‌ರೂಟ್** ಚೀನೋಪೋಡಿಯೇಸಿ ಕುಟುಂಬಕ್ಕೆ ಸೇರಿದ ಬೀಟ್‌ರೂಟ್ ಅನ್ನು ಸಸ್ಯಶಾಸ್ತ್ರದ ಪರಿಭಾಷೆಯಲ್ಲಿ ಬೀಟಾವಲ್ಗಾರಿಸ್ ಎಂದು ಕರೆಯುತ್ತಾರೆ. ಯೂರೋಪಿನಲ್ಲಿ ಜನ್ಮ ತಾಳಿದ ಇದು ಪ್ರಪಂಚದ ಇತರ ಭಾಗಗಳಿಗೆ ಹರಡಿಕೊಂಡಿದೆ. ಇದನ್ನು ಕ್ರಿ.ಶ. 1558ರಲ್ಲಿ ಜರ್ಮನಿಯಲ್ಲೂ, 1576 ರಲ್ಲಿ ಇಂಗ್ಲೆಂಡ್‌ನಲ್ಲೂ ಬೆಳೆಯುತ್ತಿದ್ದರೆಂದು ದಾಖಲೆಗಳು ಹೇಳುತ್ತವೆ. ರೋಮ್‌ನಲ್ಲಿ ಹೆಚ್ಚಾಗಿ ಪಶು ಆಹಾರವಾಗಿ ಬಳಕೆಯಾಗುತ್ತಿದ್ದ ಈ ಬೆಳೆ ಇಂದು ಸುಧಾರಿತ ಬೆಳೆಗಳ ಬೇಸಾಯದಲ್ಲಿದೆ. ಇದು ಉತ್ತಮ ತರಕಾರಿಯಲ್ಲದೇ ಸಕ್ಕರೆಯ ಮೂಲವೂ ಆಗಿದೆ.

**ಹವಾಗುಣ :** ಬೀಟ್‌ರೂಟನ್ನು ಎಲ್ಲಾ ವಿಧದ ಮಣ್ಣುಗಳಲ್ಲಿ ಬೆಳೆಸುವ ಸಾಧ್ಯತೆಯಿದ್ದರೂ ಜಿಗುಟಿಲ್ಲದ ಉದುರು ಗೋಡು ಮಣ್ಣು ಯೋಗ್ಯವಾದುದು. ಫಲವತ್ತಾದ ಭೂಮಿಯಲ್ಲಿ ಹೆಚ್ಚು ಇಳುವರಿ ನೀಡುತ್ತದೆ. ಜೇಡಿ ಮಣ್ಣಿನಲ್ಲಿ ಬೇರುಬೆಳೆವಣಿಗೆ ಸರಿಯಾಗಿರುವುದಿಲ್ಲ. ಬಿಸಿ ವಾತಾವರಣದಲ್ಲಿ ಚೆನ್ನಾಗಿ ಬೆಳೆಯಬಲ್ಲದು. ಆದರೂ ಚಳಿಗಾಲಕ್ಕೆ ಹೇಳಿ ಮಾಡಿಸಿದಂತಹ ಬೆಳೆ ಆದುದರಿಂದ ಕರ್ನಾಟಕದಲ್ಲಿ ಚಳಿಗಾಲದ ಬೆಳೆಯನ್ನು ಅಕ್ಟೋಬರ್-ನವೆಂಬರ್‌ನಲ್ಲಿಯೂ ಮತ್ತು ಮುಂಗಾರು ಬೆಳೆಯನ್ನು ಜೂನ್-ಜುಲೈನಲ್ಲೂ ಬಿತ್ತುತ್ತಾರೆ.



**ಬಿತ್ತನೆ ಮತ್ತು ನಾಟಿ :** ಬೀಟ್‌ರೂಟ್ ಬೆಳೆಯುವ ಭೂಮಿಯನ್ನು 3-4 ಸಾರಿ ಅಗೆದು ಅಥವಾ ಹೊಸದಾಗಿ ಉಳುಮೆ ಮಾಡಿ, ಎಕರೆಗೆ 8 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಮಿಶ್ರ ಮಾಡಬೇಕು. 1 ಅಡಿ ಸಾಲುಗಳಲ್ಲಿ ಮುಕ್ಕಾಲು ಅಡಿಗೆ ಬಂದರಂತೆ ಬೀಜವನ್ನು ಬಿತ್ತನೆ ಮಾಡಬೇಕು. ಸಸಿ ಬಂದ ಬಳಿಕ ಗಿಡದಿಂದ 3 ಅಂಗುಲ ದೂರದಲ್ಲಿ ಮೇಲು ಗೊಬ್ಬರವನ್ನು ಒದಗಿಸಬೇಕು. ಈ ಅಂತರದಲ್ಲಿ ಬೀಜವನ್ನು ಬಿತ್ತಲು ಎಕರೆಗೆ ಒಂದು ಕಿಲೋ ಬೀಜದ ಆವಶ್ಯಕತೆ ಇದೆ.

**ನೀರಾವರಿ :** ಉತ್ತಮ ಗುಣಮಟ್ಟದ ಗೆಡ್ಡೆಗಳನ್ನು ಪಡೆಯಲು ಮತ್ತು ಉತ್ತಮ ಬೀಜ ಮೊಳೆಯುವಿಕೆಗೆ ಒಳ್ಳೆಯ ನೀರಾವರಿ ಅಗತ್ಯ. ನೀರಿನ ಕೊರತೆಯು ಸಣ್ಣ ಗೆಡ್ಡೆಗಳ ಉತ್ಪನ್ನಕ್ಕೆ ಕಾರಣವಾಗುತ್ತದೆ. ಕಳೆಯು ಇಳುವರಿಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಆದುದರಿಂದ ಕಳೆ ನಿರ್ಮೂಲನೆ ಒಂದು ಅವಶ್ಯಕವಾದ ಕೆಲಸ. ಭಾರತದಲ್ಲಿ ಕೈಯಿಂದ ಕಳೆ ತೆಗೆಯುವರು. ಉಳುಮೆಯಿಂದ ಕಳೆ ತೆಗೆಯಬಹುದಾದರೂ ಆಳವಾದ ಉಳುಮೆ ಒಳ್ಳೆಯದಲ್ಲ. ಒಂದು ಅಥವಾ ಎರಡು ಬಾರಿ ಮಣ್ಣು ಏರು ಹಾಕಿದರೆ ಗೆಡ್ಡೆ ಬೆಳೆವಣಿಗೆ ಉತ್ತಮ.

**ರೋಗಗಳು :** ಬೀಟ್‌ರೂಟ್ ಸಸ್ಯಕ್ಕೆ ತಗಲುವ ರೋಗವೆಂದರೆ ಎಲೆಚುಕ್ಕೆ ರೋಗ. ಈ ರೋಗವು ಎಲೆಗಳ ಮೇಲೆ ಕಂದುಬಣ್ಣದ ಚುಕ್ಕೆಗಳೋಪಾದಿಯಲ್ಲಿ ಕಾಣಿಸಿಕೊಳ್ಳುತ್ತದೆ. ರೋಗದ ಪ್ರಮಾಣ ಹೆಚ್ಚಿದಂತೆಲ್ಲಾ ಈ ಚುಕ್ಕೆಗಳು ವಿಶಾಲವಾಗುತ್ತವೆ. ಈ ರೋಗ ಬೇರುಗಳ ಮೇಲೆ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. ಇದರ ನಿಯಂತ್ರಣಕ್ಕೆ ಗಂಜಲ, ಬೇವಿನ ಸೊಪ್ಪಿನ ಪುಡಿ, ಬೇವಿನೆಣ್ಣೆಯನ್ನು ನೀರಿನಲ್ಲಿ ಬೆರೆಸಿ ಸರಿಪಡಿಸಬೇಕು.

**ಇಳುವರಿ :** ಬೀಟ್‌ರೂಟಿನ ಕೊಯ್ಲು ಸ್ವಲ್ಪಮಟ್ಟಿಗೆ ಮೂಲಂಗಿಯನ್ನೇ ಹೋಲುತ್ತದೆ. ಗೆಡ್ಡೆಗಳು 3-5 ಸೆಂ.ಮೀ. ವ್ಯಾಸವನ್ನು ಮುಟ್ಟಿದಾಗ ಕೊಯ್ಲಿಗೆ ಯುಕ್ತವೆಂದು ಭಾವಿಸಬೇಕು. ಎಲೆಗಳು ನಸುಹಳದಿ ಬಣ್ಣಕ್ಕೆ ತಿರುಗುವುದು ಕೂಡ ಪಕ್ವತೆಯ ಮತ್ತೊಂದು ಸೂಚನೆ. ಗೆಡ್ಡೆಯನ್ನು ಗುದ್ದಲಿಯ ಸಹಾಯದಿಂದ ಅಗೆದು ಅನಂತರ ಎಲೆಗಳನ್ನು ಬಿಡಿಸಿ ಮಾರುಕಟ್ಟೆಗೆ ಒಯ್ಯಲಾಗುವುದು. ಕೊಯ್ಲಾದ ಕೂಡಲೆ ಎಲೆ ತೆಗೆದರೆ ಗೆಡ್ಡೆಯ ಜೀವಿತಾವಧಿ ಹೆಚ್ಚುತ್ತದೆ. ಹೆಚ್ಚು ಬಲಿತ ಅಥವಾ ಬಹಳ ದಪ್ಪವಾದ ಗೆಡ್ಡೆಗಳಿಗೆ ಬೇಡಿಕೆ ಇಲ್ಲ. ಏಕೆಂದರೆ ಈ ಗೆಡ್ಡೆಗಳು ಗಡಸು ಮತ್ತು ಒರಟಾಗಿದ್ದು ಇವುಗಳ ಮೇಲ್ಭಾಗದಲ್ಲಿ ಸೀಳುಗಳು ಕಾಣಿಸಿಕೊಳ್ಳುತ್ತವೆ. ಬೆಳೆ ಕೊಯ್ಲಿಗೆ ಮುಟ್ಟಲು ಸುಮಾರು ಮೂರು ತಿಂಗಳ ಅವಧಿ ಬೇಕಾಗುತ್ತದೆ. ಪ್ರತಿ ಎಕರೆಯಿಂದ 7 ರಿಂದ 8 ಟನ್ ಇಳುವರಿ ದೊರೆಯುವ ಸಾಧ್ಯತೆ ಇದೆ.

**ತಳಿಗಳು :** ಬೀಟ್‌ರೂಟ್‌ನಲ್ಲಿ ಎರಡು ಬಗೆಯ ತಳಿಗಳಿವೆ. ಮೊದಲನೆಯ ಬಗೆಯಲ್ಲಿ ಗೆಡ್ಡೆಗಳು ಗೋಳಾಕಾರದಂತೆ ಕಂಡರೂ ಚಪ್ಪಟೆಯಾಕಾರದಾಗಿರುತ್ತವೆ. ಗೆಡ್ಡೆ ಮಧ್ಯಮ ಕೆಂಪು ಬಣ್ಣವಿದ್ದು ಬುಗುರಿ ಆಕಾರವಿರುತ್ತದೆ. ತಿರುಳು ಕಡುಕೆಂಪು, ಎಲೆಗಳು ವಿಶಾಲವಾಗಿರುತ್ತವೆ. ಹೆಚ್ಚು ಇಳುವರಿ ಕೊಡುವ ಕಡುಹಸುರು ಕೆಂಪು ಮಿಶ್ರಿತ ಈ ತಳಿ 80-100 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಮತ್ತೊಂದು ತಳಿಯಲ್ಲಿ ಗೆಡ್ಡೆ ದುಂಡಾಗಿದ್ದು ಚಿಕ್ಕ ಚಿಕ್ಕ ಗೆಡ್ಡೆಗಳು ಕಡುಕೆಂಪು ಬಣ್ಣದಿಂದ ಅತ್ಯಾಕರ್ಷಕವಾಗಿರುತ್ತವೆ. ತಿರುಳು ಸಹ ಕಡು ಕೆಂಪಾಗಿದ್ದರೂ ತಿಳಿ ಕೆಂಪು ಬಣ್ಣದ ವಲಯಗಳನ್ನು ಹೊಂದಿರುತ್ತದೆ. ಗೆಡ್ಡೆ ಮೃದುವಾಗಿರುತ್ತದೆ.



ಭಾರತದಾದ್ಯಂತ ಬೇಸಾಯದಲ್ಲಿರುವ ಈ ಗೆಡ್ಡೆ ಉತ್ತಮ ಪೋಷಕಾಂಶಗಳನ್ನು ಹೊಂದಿದೆ. ತಾಜಾ ಬೀಟ್‌ರೂಟನ್ನು ಜೇನಿನೊಂದಿಗೆ ಸೇವಿಸಿದರೆ 'ಸಿ' ಜೀವಸತ್ವದ ಪೂರೈಕೆ ಆಗುತ್ತದೆ. ಬೀಟ್‌ರೂಟ್ ರಸಕ್ಕೆ ಜೇನುತುಪ್ಪ ಸೇರಿಸಿ 1-2 ಚಮಚ ಕೊಡುವುದರಿಂದ ರಕ್ತ ಹೀನತೆಯನ್ನು ನಿವಾರಿಸುತ್ತದೆ.

*ಎನ್. ಆರ್.*

**ಬೀಟೆ** ಇದೊಂದು ಉತ್ತಮ ಚೌಬೀನೆ ಮರ. ಫ್ಯಾಬೇಸೀ ಪ್ರಧಾನ ಕುಟುಂಬ. ಉಪಕುಟುಂಬ ಪ್ಯಾಪಿಲಿಯೋನೇಸೀ. ಇದರ ವೈಜ್ಞಾನಿಕ ಹೆಸರು ಡಾಲ್‌ಬರ್ಜಿಯ ಲ್ಯಾಟಿಫೋಲಿಯ. ಭಾರತದೆಲ್ಲೆಡೆ ಬೆಳೆಯುವ ಸಸ್ಯವಿದು. ಇದರ ಪರ್ಯಾಯ ನಾಮ ತೊಡೆಗಟ್ಟಿ. ರೋಸ್‌ವುಡ್, ಈಸ್ಟ್ ಇಂಡಿಯನ್ ರೋಸ್‌ವುಡ್, ಬಾಂಬೆ ಬ್ಲಾಕ್‌ವುಡ್ ಎಂದು ಇಂಗ್ಲಿಷಿನಲ್ಲಿ ಕರೆಯುತ್ತಾರೆ. ಅತ್ಯಂತ ಎತ್ತರವಾಗಿ ಬೆಳೆಯುವ ಮರವಿದು. ಮಣ್ಣು



ಫಲವತ್ತಾಗಿದ್ದು ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ 150 ಅಡಿಯಷ್ಟು ಎತ್ತರವಾಗಿಯೂ ಬೆಳೆಯುತ್ತದೆ. ಈ ಮರದಿಂದ 80 ಅಡಿ ಎತ್ತರದ ನೇರವಾದ ಏಕ ಕಾಂಡವನ್ನು ನಿರೀಕ್ಷಿಸಬಹುದು. ಕೆಲವು ಭಾಗಗಳಲ್ಲಿ ಮರದ ಸುತ್ತಳತೆ 25 ಅಡಿವರೆಗೂ ವಿಸ್ತಾರವಾಗಿ ಬೆಳೆಯುವುದುಂಟು. ಈ ಮರವನ್ನು ಉಪಯೋಗಿಸಲು ಎರಡು ಅಡಿ ಸುತ್ತಳತೆಯಾದರೂ ಬೆಳೆದಿರಬೇಕು.

ಬೃಹತ್ ಗಾತ್ರದ ಮರಗಳನ್ನು ಸದಾ ಹರಿಯುವ ತೊರೆಗಳಲ್ಲಿ, ಹಳ್ಳಗಳ ಬದಿಗಳಲ್ಲಿ ಕಾಣಬಹುದು. ಸಸಿಯಾಗಿದ್ದಾಗ ನೆರಳನ್ನು ಬಯಸಿದರೂ ಬೆಳೆದಂತೆಲ್ಲ ಪ್ರಖರವಾದ ಬಿಸಿಲಿರಬೇಕು. ಬೀಟೆಯ ವಿಶಿಷ್ಟ ಗುಣವೆಂದರೆ ಬಲಿತಂತೆಲ್ಲ ಸುತ್ತಲೂ ಹರಡುವ ಬೇರುಗಳು ಚಿಗುರೊಡೆದು ಸಸಿಗಳೇಳುತ್ತವೆ. ಇವನ್ನು ಬೇರ್ಪಡಿಸಿ ಬೇರೆಡೆ ನೆಟ್ಟು ಸ್ವತಂತ್ರ ಮರವಾಗಿ ಬೆಳೆಸಬಹುದು. ದೀರ್ಘಾವಧಿಯ ಇದನ್ನು ಬೆಳೆಯಲು ಬೀಜ ಸಸ್ಯಾಭಿವೃದ್ಧಿಯೇ ಉತ್ತಮ ವಿಧಾನ.

ಪರ್ಣಪಾತಿಯೂ ನಿತ್ಯಹರಿದ್ವರ್ಣವೂ ಆಗಿರುವ ಮರವಿದು. ಇದರ ತೊಗಟೆ ತೆಳುವಾಗಿದ್ದು ಬೂದು ಬಣ್ಣದಿಂದ ಕೂಡಿದೆ. ಪರ್ಯಾಯ ಜೋಡಣೆಯ ಸಂಯುಕ್ತ ಮಾದರಿಯ ಎಲೆಗಳಿವೆ. ಪರಿಮಳಭರಿತವಾದ ಸಣ್ಣಗಾತ್ರದ ಬಿಳಿ ಹೂಗಳನ್ನು ಹೊಂದಿದೆ. ಹುಳು ಹುಪ್ಪಟೆಗಳ ಉಪದ್ರವಕ್ಕೆ ತುತ್ತಾಗದ ಈ ಮರ ಕೆಂಪು ಮಿಶ್ರಿತ ಕಪ್ಪು ಬಣ್ಣದ್ದು. ಇತರ ಚೌಬೀನೆ ಮರಗಳಿಗಿಂತ ಗಟ್ಟಿಯಾದ ಇದು ದೀರ್ಘ ಬಾಳಿಕೆ ಬರುವಂಥದು. ಸರಳ ಸಂಸ್ಕರಣ ಯೋಗ್ಯವಾದ ಈ ಮರವನ್ನು ಸುಲಭವಾಗಿ ಕೊಯ್ಯಲು ಸಾಧ್ಯವಿಲ್ಲ. ಎಲ್ಲ ಬಗೆಯ ಗೃಹೋಪಯೋಗಿ ಉಪಕರಣಗಳಿಗೂ ಯೋಗ್ಯವಾದ ಮರವಿದು.

*ಆರ್.ಎಂ.ಎ.*

**ಬೀದರ್ ಜಿಲ್ಲೆಯ ಕೃಷಿ** ಬೀದರ್ ಕರ್ನಾಟಕ ರಾಜ್ಯದ ಗುಲಬರ್ಗಾ ವಿಭಾಗಕ್ಕೆ ಸೇರಿದ ಒಂದು ಜಿಲ್ಲೆ, ತಾಲ್ಲೂಕು ಹಾಗೂ ಪಟ್ಟಣ. ರಾಜ್ಯದ ಉತ್ತರ ತುದಿಯಲ್ಲಿರುವ ಈ ಜಿಲ್ಲೆಯನ್ನು ಪೂರ್ವದಲ್ಲಿ ಆಂಧ್ರಪ್ರದೇಶದ ಮೇಡಕ್ ಮತ್ತು ನಿಜಾಮಾಬಾದ್ ಜಿಲ್ಲೆಗಳು, ಉತ್ತರ ಮತ್ತು ಪಶ್ಚಿಮದಲ್ಲಿ ಮಹಾರಾಷ್ಟ್ರ ರಾಜ್ಯದ ನಾಂದೇಡ್ ಮತ್ತು ಉಸ್ಮಾನಾಬಾದ್ ಜಿಲ್ಲೆಗಳು, ದಕ್ಷಿಣದಲ್ಲಿ ಗುಲಬರ್ಗಾ ಜಿಲ್ಲೆಯ ಆಳಂದ, ಗುಲಬರ್ಗಾ ಮತ್ತು ಚಿಂಚೋಳಿ ತಾಲ್ಲೂಕುಗಳು ಸುತ್ತುವರಿದಿವೆ. ಜಿಲ್ಲೆಯಲ್ಲಿ ಔರಾದಾ, ಬೀದರ್, ಭಾಲ್ಕಿ, ಹುಮನಾಬಾದ್ ಮತ್ತು ಬಸವ ಕಲ್ಯಾಣ ತಾಲ್ಲೂಕುಗಳು, 617 ಗ್ರಾಮಗಳು ಮತ್ತು 5 ನಗರಗಳು ಇವೆ.

**ಮೇಲ್ಮೈ ಲಕ್ಷಣ :** ಬೀದರ್ ಜಿಲ್ಲೆ ದಖನ್ ಪ್ರಸ್ಥಭೂಮಿಯ ಒಂದು ಭಾಗ. ಹೆಚ್ಚು ಬೆಟ್ಟ ಗುಡ್ಡಗಳಿಲ್ಲದ ವಿಶಾಲ ಮಟ್ಟಸ ಪ್ರದೇಶಗಳಿಂದ ಕೂಡಿದೆ. ಔರಾದ ಮತ್ತು ಭಾಲ್ಕಿ ತಾಲ್ಲೂಕುಗಳು ಕಪ್ಪು ಮಣ್ಣಿನ ಪ್ರದೇಶ. ಹುಮಾನಾಬಾದ್, ಬಸವ ಕಲ್ಯಾಣ ಹಾಗೂ ಬೀದರ್‌ಗಳಲ್ಲಿ ಜಂಬುಕಲ್ಲಿನ ಮಿಶ್ರಣವಿರುವ ಭೂಮಿ ಇದೆ. ಈ ಜಿಲ್ಲೆಯ ಯಾವ ಭಾಗದಲ್ಲೂ ಖನಿಜ ನಿಕ್ಷೇಪಗಳಿಲ್ಲ.

**ವಿಸ್ತೀರ್ಣ :** ಬೀದರ್ ಕರ್ನಾಟಕ ರಾಜ್ಯದ 19ನೇ ದೊಡ್ಡ ಜಿಲ್ಲೆ. 5.448 ಚ.ಕಿ.ಮೀ ವಿಸ್ತೀರ್ಣ ಹೊಂದಿರುವ ಈ ಜಿಲ್ಲೆಯು $17^{0}30'$-$18^{0}30'$ ಉತ್ತರ ಅಕ್ಷಾಂಶ ಹಾಗೂ $76^{0}42'$-$77^{0}36'$ ಪೂರ್ವ ರೇಖಾಂಶಗಳ ನಡುವೆ ಹಬ್ಬಿದೆ.

**ಹವಾಗುಣ :** ಜಿಲ್ಲೆಯ ಉತ್ತರ ಭಾಗ ಸಮತಟ್ಟಾಗಿದ್ದು, ದಕ್ಷಿಣ ಭಾಗ ಪ್ರಸ್ಥಭೂಮಿಯಾಗಿದೆ. ಸಮುದ್ರ ಮಟ್ಟದಿಂದ 715 ಮೀ ಎತ್ತರವಿದ್ದು ಇಲ್ಲಿಯ ಹವಾಗುಣ ಹಿತಕರವಾಗಿದೆ. ಫೆಬ್ರುವರಿಯಿಂದ ಜೂನ್‌ವರೆಗೆ ಬೇಸಗೆ, ಜೂನ್‌ನಿಂದ ಅಕ್ಟೋಬರ್‌ತನಕ ಮಳೆ. ವಾರ್ಷಿಕ ಸರಾಸರಿ ಮಳೆ 848.80 ಮಿ.ಮೀ. ಜಿಲ್ಲೆಯಲ್ಲಿ 27,707 ಹೆ. ಪ್ರದೇಶದಲ್ಲಿ ಅರಣ್ಯವಿದೆ. (2001)

**ನದಿಗಳು :** ಮಾಂಜಾರಾ ಇಲ್ಲಿಯ ಪ್ರಮುಖ ನದಿ. ಗೋದಾವರಿಯ ಉಪನದಿಯಾಗಿರುವ ಇದು ಜಿಲ್ಲೆಯ ಮಧ್ಯದಲ್ಲಿ ಉಗಮಿಸಿ ಪೂರ್ವಾಭಿಮುಖವಾಗಿ ಭಾಲ್ಕಿ, ಔರಾದ್, ಬೀದರ್ ತಾಲ್ಲೂಕುಗಳ ಗಡಿಯಲ್ಲಿ ಸಾಗಿ ಮುಂದೆ ಸ್ವಲ್ಪ ದೂರ ಆಂಧ್ರಪ್ರದೇಶದಿಂದ ಬೀದರ್ ಜಿಲ್ಲೆಯನ್ನು ವಿಂಗಡಿಸುವ ಗಡಿಯಾಗಿಯೂ ಹರಿಯುತ್ತದೆ. ಜಿಲ್ಲೆಯಲ್ಲಿ ಈ ನದಿಯ ಹರಿವಿನ ಉದ್ದ 97 ಕಿ.ಮೀ. ನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ 1,295 ಚ.ಕಿ.ಮೀ. ಕಾರಂಜ ಈ ಜಿಲ್ಲೆಯ ಮತ್ತೊಂದು ಮುಖ್ಯನದಿ. ಇದು ಭಾಲ್ಕಿ ತಾಲ್ಲೂಕಿನಲ್ಲಿ ವಾಯುವ್ಯಾಭಿಮುಖವಾಗಿ ಹರಿದು, ಮಾಂಜಾರಾ ನದಿಯನ್ನು ಸೇರುವುದು. ಮುಲ್ಲಾಮಾರಿ ನದಿ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಹುಟ್ಟಿ ಆಗ್ನೇಯಾಭಿಮುಖವಾಗಿ ಹರಿದು ಗುಲಬರ್ಗಾ ಜಿಲ್ಲೆಯನ್ನು ಪ್ರವೇಶಿಸುವುದು.

**ಚಿಕ್ಕ ನದಿಗಳು :** ಚುಳಕಿ, ಗಂಡೋರಿ, ನಗರವಾಲಾ, ಹುಡಗಿ ಹಾಗೂ ಹಳ್ಳಿಖೆಡನಾಲಾ - ಜಿಲ್ಲೆಯ ನೈಋತ್ಯದಲ್ಲಿ ಬೆಣ್ಣೆತೊರೆ ಜಿಲ್ಲೆಯ ಗಡಿಯನ್ನು ಮುಟ್ಟಿ ಹೋಗುತ್ತದೆ. ಇತ್ತೀಚೆಗೆ ಜಿಲ್ಲೆಯಲ್ಲಿ ಮೂರು ನೀರಾವರಿ ಯೋಜನೆಗಳು ಪ್ರಾರಂಭವಾಗಿವೆ. ಕಾರಂಜಾ, ಚುಳಕಿನಾಲಾ

ಹಾಗೂ ಮುಲ್ಲಾಮಾರಿ ನದಿಗಳಿಗೆ ಅಣೆಕಟ್ಟು ಕಟ್ಟಲಾಗಿದೆ. ಹಳ್ಳಿಖೇಡದ ಹತ್ತಿರ ಕಾರಂಜಿ ನದಿಗೆ ಅಣೆಕಟ್ಟೆ ನಿರ್ಮಿಸಲಾಗಿದೆ.

**ಮುಖ್ಯ ಬೆಳೆಗಳು :** ಹತ್ತಿ, ಜೋಳ, ಸಜ್ಜೆ, ನವಣೆ, ಕುಸುಬೆ, ಶೇಂಗಾ, ಬಾರ್ಲಿ, ಬತ್ತ, ಮುಸುಕಿನ ಜೋಳ, ತೊಗರಿ, ಹುರುಳಿ, ಹೆಸರು (ದ್ವಿದಳ ಧಾನ್ಯಗಳು) ಹೊಗೆಸೊಪ್ಪು, ಕಬ್ಬು, ಸೂರ್ಯಕಾಂತಿ ಬೆಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಬದನೆಕಾಯಿ, ಆಲೂಗಡ್ಡೆ, ಈರುಳ್ಳಿ, ಕೊತ್ತಂಬರಿ, ಮೆಣಸಿನಕಾಯಿ, ಬೆಳ್ಳುಳ್ಳಿ, ಈರುಳ್ಳಿ ಇತ್ಯಾದಿ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ.


**ಉದ್ಯಮಗಳು** : ಖಂಡಸಾರಿ ಸಕ್ಕರೆ ಕಾರ್ಖಾನೆ, ಸಾಬೂನು ಕಾರ್ಖಾನೆ, ಶೇಂಗಾ ಸುಲಿಯುವ ಕಾರ್ಖಾನೆ, ಎಣ್ಣೆ ಗಿರಣಿಗಳು, ಆಲೀವ್ ಎಣ್ಣೆ ಗಿರಣಿ ಹತ್ತಿ ಹಾಗೂ ಉಣ್ಣೆಯ ಕೈಮಗ್ಗ ಮತ್ತು ಯಾಂತ್ರಿಕ ನೇಯ್ಗೆ ಕೇಂದ್ರಗಳು, ಚರ್ಮ ಮತ್ತು ನಾರಿನ ವಸ್ತುಗಳ ಉತ್ಪಾದನೆ, ಮರಗೆಲಸ, ತಾಮ್ರ ಮತ್ತು ಸತು ಮತ್ತಿತರ ಲೋಹಗಳ ಮಿಶ್ರಣದಿಂದ ತಯಾರಿಸಲಾಗುವ ಕಲಾತ್ಮಕ ಕುಸುರಿಯ ಬಿದರಿ ವಸ್ತುಗಳ ತಯಾರಿಕೆ, ಗಾಜು, ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳ ತಯಾರಿಕೆ, ಕೃಷಿ ಉಪಕರಣ ಮತ್ತು ಗೊಬ್ಬರ ಕಾರ್ಖಾನೆ ಮುಂತಾದ ಕೈಗಾರಿಕೆಗಳು ಗೃಹೋದ್ಯಮ ಗಳು ಇಲ್ಲಿವೆ.

**ಕೃಷಿ ಸಂಬಂಧಿತ ಅಂಕಿ ಅಂಶಗಳ ನೋಟ :** ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಇವರು 2011-12ನೇ ಸಾಲಿನಲ್ಲಿ ಹೊರತಂದಿರುವ 'ಬೀದರ ಜಿಲ್ಲೆಯ ಅಂಕಿ ಅಂಶಗಳ ನೋಟ'ದ ಅಂತರ್ಜಾಲದ ಮಾಹಿತಿಯನ್ನು ಆಧರಿಸಿ ಬೀದರ ಜಿಲ್ಲೆಯ ಐದು ತಾಲ್ಲೂಕುಗಳ ಒಟ್ಟು ಮಾಹಿತಿಯನ್ನು ಕೃಷಿ ಸಂಬಂಧಿತ ಅಂಕಿ ಅಂಶಗಳ ಸೂಚಿತ ವಿಷಯಗಳ ವಿವರಣೆ ರೂಪದಲ್ಲಿ ತಿಳಿಸಲಾಗಿದೆ.

**ವಾರ್ಷಿಕ ಮಳೆ ಮತ್ತು ಮಳೆ ದಿನಗಳು :** ಐದು ತಾಲ್ಲೂಕುಗಳಲ್ಲಿರುವ ಮಳೆ ಮಾಪನ ಕೇಂದ್ರಗಳ ಸಂಖ್ಯೆ 37. 2001ರಿಂದ 2011ರವರೆಗೆ ವಾರ್ಷಿಕ ವಾಸ್ತವಿಕ ಮಳೆಯ ಪ್ರಮಾಣ : 2001ರಲ್ಲಿ 809 ಮಿ.ಮೀ. ಮಳೆಯಾಗಿದ್ದರೆ 2011ರಲ್ಲಿ 810.12 ಮಿ.ಮೀ. ಮಳೆಯಾಗಿದೆ.

**ಮಾಸಿಕವಾರು ವಾಸ್ತವ ಮತ್ತು ವಾಡಿಕೆ ಮಳೆ :** ಬೀದರ್ ಜಿಲ್ಲೆಯಲ್ಲಿ ಜೂನ್‌ನಿಂದ ಅಕ್ಟೋಬರ್‌ತನಕ ಮಳೆಯ ಪ್ರಮಾಣ ಅಧಿಕವಾಗಿರುತ್ತದೆ. ಈ ಅವಧಿಯಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 848.80 ಮಿ.ಮೀ. ಜೂನ್ ತಿಂಗಳಲ್ಲಿ ವಾಡಿಕೆ ಮಳೆಯ ಪ್ರಮಾಣ 139 ಮಿ.ಮೀ. ಇದ್ದರೆ ವಾಸ್ತವಿಕ (2011) ಮಳೆಯ ಪ್ರಮಾಣ 111.30 ಮಿ.ಮೀ. ಅಕ್ಟೋಬರ್ ತಿಂಗಳಲ್ಲಿ ಮಳೆಯು ಪ್ರಮಾಣ ಕಡಿಮೆಯಾಗುತ್ತದೆ. ಆ ತಿಂಗಳಲ್ಲಿ ವಾಡಿಕೆ ಮಳೆಯ ಪ್ರಮಾಣ 82 ಮಿ.ಮೀ ಇದ್ದರೆ ವಾಸ್ತವಿಕ ಮಳೆಯ ಪ್ರಮಾಣ 34.0 ಮಿ.ಮೀ. ಬಿದ್ದಿರುವುದು ದಾಖಲಾಗಿದೆ.

**ಭೂಮಿಯ ಬಳಕೆ (2011-12ನೇ ಸಾಲಿನ ASCR ವರದಿ ಅನ್ವಯ):** ಬೀದರ್ ಜಿಲ್ಲೆಯ ಐದು ತಾಲ್ಲೂಕುಗಳ ಒಟ್ಟು ಭೌಗೋಳಿಕ ವಿಸ್ತೀರ್ಣ 541765 ಹೆ. ಇದರಲ್ಲಿ 27707 ಹೆ. ಭೂ ಪ್ರದೇಶ ಅರಣ್ಯದಿಂದ ಕೂಡಿದೆ.



**ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ :** ಒಟ್ಟು ಪ್ರಮಾಣ 41133 ಹೆ. ಭೂಪ್ರದೇಶ. ಇದರಲ್ಲಿ 22006 ಹೆ. ಭೂ ಪ್ರದೇಶ ವ್ಯವಸಾಯೇತರ ಚಟುವಟಿಕೆಗಳಿಗಾಗಿ ಬಳಕೆಯಾಗುತ್ತಿದ್ದರೆ, 19127 ಹೆ. ಭೂ ಪ್ರದೇಶ ಬಂಜರು ಭೂಮಿಯಾಗಿದೆ.

ಸಾಗುವಳಿ ಮಾಡದಿರುವ ಇತರ ಭೂಮಿಯ ಪ್ರಮಾಣ ಒಟ್ಟು 44261 ಹೆ. ಇದರಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿಯ ಪ್ರಮಾಣ 19382ಹೆ., ಖಾಯಂ ಗೋಮಾಳ 13964 ಹೆ., ವೃಕ್ಷ ಮತ್ತು ತೋಪುಗಳು 10915 ಹೆ. ಭೂಪ್ರದೇಶದಲ್ಲಿ ಹಂಚಿಕೆಯಾಗಿದೆ.

**ಬೀಳು ಭೂಮಿ :** ಬೀದರ್ ಜಿಲ್ಲೆಯಲ್ಲಿರುವ ಬೀಳು ಭೂಮಿಯ ಒಟ್ಟು ಪ್ರಮಾಣ 77872 ಹೆ. ಇದರಲ್ಲಿ 37597 ಹೆ. ಭೂಪ್ರದೇಶ ಚಾಲ್ತಿಯಲ್ಲಿದ್ದರೆ ಉಳಿದ 40275 ಹೆ. ಭೂ.ಪ್ರದೇಶ ಬೇರೆ ಬೇರೆ ರೂಪದಲ್ಲಿ ಬೀಳು ಬಿದ್ದಿದೆ.

**ಬಿತ್ತನೆಯಾದ ಪ್ರದೇಶ :** ಒಟ್ಟು ಕೃಷಿ ಭೂಮಿ 415695 ಹೆ. ವಿಸ್ತೀರ್ಣ ಹೊಂದಿದ್ದು ಬಿತ್ತನೆಯಾದ ನಿವ್ವಳ ಭೂಮಿಯ ಪ್ರಮಾಣ 350792 ಹೆ. ಒಂದಕ್ಕಿಂತ ಹೆಚ್ಚು ಬಿತ್ತನೆಯಾದ ಪ್ರದೇಶದ ಪ್ರಮಾಣ 64903 ಹೆ. ವಿಸ್ತೀರ್ಣ ಹೊಂದಿದೆ.

**ಕೃಷಿ ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ :** (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೃಷಿ ಗಣತಿ 2010-11ನೇ ಸಾಲು ಇದರ ಮಾಹಿತಿಯ ಆಧಾರದ ಮೇಲೆ)

ಭೂ ಹಿಡುವಳಿದಾರರನ್ನು ಜಾತಿ ಮತ್ತು ಪಂಗಡದ ಆಧಾರದ ಮೇಲೆ ಜೊತೆಗೆ ಅವರು ಹೊಂದಿರುವ ಭೂಮಿಯ ಪ್ರಮಾಣದ ಆಧಾರದಲ್ಲಿ ವಿಂಗಡಿಸಲಾಗಿದೆ.

ಅತಿಸಣ್ಣ ಭೂ ಹಿಡುವಳಿದಾರರು 1 ಹೆ.ಗಿಂತ ಕಡಿಮೆ ಭೂಮಿ ಇರುವವರು

ಸಣ್ಣ ಭೂ ಹಿಡುವಳಿದಾರರು 1ರಿಂದ 2 ಹೆ.ಗಿಂತ ಕಡಿಮೆ ಭೂಮಿ ಇರುವವರು.

ಅರೆ ಮಧ್ಯಮ ಭೂ ಹಿಡುವಳಿದಾರರು 2ರಿಂದ 4 ಹೆ. ಭೂಮಿ ಇರುವವರು

ಮಧ್ಯಮ ಭೂ ಹಿಡುವಳಿದಾರರು 4ರಿಂದ 10 ಹೆ. ಭೂಮಿ ಇರುವವರು.

ದೊಡ್ಡ ಭೂ ಹಿಡುವಳಿದಾರರು 10 ಹೆ. ಮೇಲ್ಪಟ್ಟು ಭೂಮಿ ಇರುವವರು.

ಅತಿ ಸಣ್ಣ ಭೂಹಿಡುವಳಿದಾರರು ಪರಿಶಿಷ್ಟ ಜಾತಿ ಭೂಹಿಡುವಳಿದಾರರನ್ನು ಪ್ರಮುಖವಾಗಿ ಪರಿಗಣಿಸಿರುವ ಈ ಭಾಗದಲ್ಲಿ ಇವರ ಒಟ್ಟು ಸಂಖ್ಯೆ 11636 ಇದರಲ್ಲಿ 9342 ಪುರುಷರು 2294 ಮಹಿಳೆಯರು ಇದ್ದಾರೆ. ಅತಿ ಸಣ್ಣ ಭೂ ಹಿಡುವಳಿದಾರರಾಗಿ ಪುರುಷರು ಹೊಂದಿರುವ ಒಟ್ಟು ಭೂ ವಿಸ್ತೀರ್ಣ 5097.38 ಹೆ. ಮಹಿಳೆಯರು 1481.24 ಹೆ. ಒಟ್ಟು 6578.62 ಹೆ.ನಷ್ಟು ಅತಿ ಸಣ್ಣ ಭೂಹಿಡುವಳಿದಾರರಿದ್ದಾರೆ.

| **ಪರಿಶಿಷ್ಟ ಪಂಗಡ** | **ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ)** |
|---|---|
| ಪುರುಷರು 6910 | 3889.02 |
| ಮಹಿಳೆಯರು 1617 | 929.63 |
| ಒಟ್ಟು 8527 | 4818.65 |

| **ಇತರೆ ವರ್ಗ** | **ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ)** |
|---|---|
| ಪುರುಷರು 47171 | 25855.84 |
| ಮಹಿಳೆಯರು 13312 | 7559.81 |
| ಒಟ್ಟು 60453 | 33415.65 |

**ಸಣ್ಣ ಹಿಡುವಳಿದಾರರು :** ಒಂದರಿಂದ ಎರಡು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಹೊಂದಿರುವವರನ್ನು ಸಣ್ಣ ಭೂ ಹಿಡುವಳಿದಾರರು ಎಂದು ಗುರುತಿಸಲಾಗಿದೆ.

| **ಪರಿಶಿಷ್ಟ ಜಾತಿ** | **ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ)** |
|---|---|
| ಪುರುಷರು 9889 | 13760.34 |
| ಮಹಿಳೆಯರು 1930 | 2678.58 |
| ಒಟ್ಟು 11819 | 1638.92 |

| **ಪರಿಶಿಷ್ಟ ಪಂಗಡ** | **ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ)** |
|---|---|
| ಪುರುಷರು 7498 | 10575.34 |
| ಮಹಿಳೆಯರು 1659 | 2320.59 |
| ಒಟ್ಟು 9157 | 12895.93 |

| **ಇತರೆ ವರ್ಗದವರು** | **ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ)** |
|---|---|
| ಪುರುಷರು 59902 | 84964.39 |
| ಮಹಿಳೆಯರು 15739 | 22530.04 |
| ಒಟ್ಟು 75641 | 107497.43 |

**ಅರೆಮಧ್ಯಮ ಭೂಹಿಡುವಳಿದಾರರು :** 2ರಿಂದ 4 ಎಕರೆ ಭೂಮಿಯನ್ನು ಹೊಂದಿರುವವರು

| **ಪರಿಶಿಷ್ಟ ಜಾತಿ** | **ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ)** |
|---|---|
| ಪುರುಷರು 4140 | 10328.23 |
| ಮಹಿಳೆಯರು 691 | 1503.23 |
| ಒಟ್ಟು 4831 | 12031..46 |

| ಪರಿಶಿಷ್ಟ ಪಂಗಡ | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರು 3686 | 9708.48 |
| ಮಹಿಳೆಯರು 650 | 1672.77 |
| ಒಟ್ಟು 4336 | 11381.25 |

| ಇತರರು | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರು 37080 | 118788.08 |
| ಮಹಿಳೆಯರು 8005 | 24496.63 |
| ಒಟ್ಟು 45085 | 43284.71 |

**ಮಧ್ಯಮ ಭೂ ಹಿಡುವಳಿದಾರರು :** 4ರಿಂದ 10 ಎಕರೆ ಭೂಮಿಯನ್ನುಹೊಂದಿರುವವರು

| ಪರಿಶಿಷ್ಟ ಜಾತಿ | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರು 831 | 4582.03 |
| ಮಹಿಳೆಯರು 79 | 407.12 |
| ಒಟ್ಟು 910 | 4989.15 |

| ಪರಿಶಿಷ್ಟ ಪಂಗಡ | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರು 978 | 5383.23 |
| ಮಹಿಳೆಯರು 125 | 673.66 |
| ಒಟ್ಟು 1103 | 6056.89 |

| ಇತರರು | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರು 13213 | 75527.40 |
| ಮಹಿಳೆಯರು 2134 | 12078.68 |
| ಒಟ್ಟು 15347 | 87606.08 |

**ದೊಡ್ಡ ಭೂ ಹಿಡುವಳಿದಾರರು :** 10 ಹೆಕ್ಟೇರ್ ಮೇಲ್ಪಟ್ಟು ಭೂಮಿ ಹೊಂದಿರುವವರು

| ಪರಿಶಿಷ್ಟ ಜಾತಿ | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರು 88 | 1197.16 |
| ಮಹಿಳೆಯರು 03 | 37.89 |
| ಒಟ್ಟು ಸಂಖ್ಯೆ 91 | 1235.05 |

| ಪರಿಶಿಷ್ಟ ಪಂಗಡ | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರು 72 | 921.82 |
| ಮಹಿಳೆಯರು 10 | 112.84 |
| ಒಟ್ಟು ಸಂಖ್ಯೆ 82 | 1034.66 |

| ಇತರರು | ಹೊಂದಿರುವ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|
| ಪುರುಷರ 1643 | 21763.46 |
| ಮಹಿಳೆಯರ 250 | 3234.37 |
| ಒಟ್ಟು ಸಂಖ್ಯೆ 1893 | 24997.83 |

**ನೀರಾವರಿ :** ಕೃಷಿಗೆ ನೀರೇ ಪ್ರಮುಖ. ಬೀದರ್ ಜಿಲ್ಲೆಯಲ್ಲಿ ನೀರಾವರಿಗಾಗಿ ಹಲವು ಮೂಲಗಳಿವೆ. ಅವು ಮುಂದಿನಂತಿವೆ.

**ಕಾಲುವೆ :** ಬೀದರ್ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಕಂಡುಬರುವ ಕಾಲುವೆಗಳ ಒಟ್ಟು ಉದ್ದ 180 ಕಿ.ಮೀ. ಕಾಲುವೆಯಿಂದ ಹರಿದು ಬರುವ ನೀರನ್ನು ಬಳಸಿಕೊಂಡು ಕೃಷಿಯನ್ನು ಮಾಡಲಾಗುತ್ತದೆ. ಕಾಲುವೆಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ 7771ಹೆ. ಭೂಪ್ರದೇಶ. ನಿವ್ವಳ ನೀರಾವರಿ ವಿಸ್ತೀರ್ಣ 6803 ಹೆ. ಭೂ ಪ್ರದೇಶ ಕಾಲುವೆಗಳಿಂದ ಉಪಯೋಗವನ್ನು ಪಡೆದುಕೊಳ್ಳುತ್ತಿದೆ.

**ಕೆರೆ:** ಈ ಜಿಲ್ಲೆಯಲ್ಲಿ 85 ಕೆರೆಗಳಿವೆ. ಇವುಗಳ ಸಹಾಯದಿಂದ ಒಟ್ಟು ನೀರಾವರಿಯಾದ ಕೃಷಿ ಭೂಮಿಯ ವಿಸ್ತೀರ್ಣ 1262 ಹೆ. ಭೂ ಪ್ರದೇಶ. ಇದರಲ್ಲಿ ನಿವ್ವಳ ನೀರಾವರಿ ವಿಸ್ತೀರ್ಣ 953 ಹೆ.

**ಬಾವಿ :** ಈ ಜಿಲ್ಲೆಯ ಒಟ್ಟು ಬಾವಿಗಳ ಸಂಖ್ಯೆ 17044. ಇಷ್ಟು ಬಾವಿಗಳಿಂದ ಕೃಷಿ ಕ್ಷೇತ್ರದಲ್ಲಿ ಒಟ್ಟು ನೀರಾವರಿಯಾದ ಭೂ ವಿಸ್ತೀರ್ಣ 24747 ಹೆ.ಗಳಷ್ಟು ಇದರಲ್ಲಿ ನಿವ್ವಳ ನೀರಾವರಿ ಭೂ ವಿಸ್ತೀರ್ಣ 23373 ಹೆ.

**ಕೊಳವೆ ಬಾವಿ :** ಇಲ್ಲಿಯ ಒಟ್ಟು ಕೊಳವೆ ಬಾವಿಗಳ ಸಂಖ್ಯೆ 9658. ಇಷ್ಟು ಕೊಳವೆ ಬಾವಿಗಳಿಂದ ವ್ಯವಸಾಯಕ್ಕೆ ಯೋಗ್ಯವಾದ ಒಟ್ಟು ನೀರಾವರಿಯ ಭೂ ವಿಸ್ತೀರ್ಣ 28257 ಹೆ. ಭೂಮಿಯಲ್ಲಿ ನಿವ್ವಳ ನೀರಾವರಿ ಭೂ ವಿಸ್ತೀರ್ಣ 25983 ಹೆ.

**ಏತ ನೀರಾವರಿ :** ಇವುಗಳ ಸಂಖ್ಯೆ ಕೇವಲ 8. ಇವುಗಳ ಸಹಾಯದಿಂದ ನೀರಾವರಿಯಾದ ಒಟ್ಟು ಭೂ ವಿಸ್ತೀರ್ಣ 736 ಹೆ. ಪ್ರದೇಶ. ಇದರಲ್ಲಿ ನಿವ್ವಳ ನೀರಾವರಿಯಾದ ಒಟ್ಟು ಭೂ ವಿಸ್ತೀರ್ಣ - 734 ಹೆ.ರಷ್ಟಿದೆ. ಇತರೆ ಮೂಲಗಳಿಂದ 147.4 ಹೆ. ಭೂಪ್ರದೇಶ ಒಟ್ಟು ನೀರಾವರಿಯಾದ ಭೂ ಪ್ರದೇಶವಾಗಿದೆ. (2011-12)

**ಬೆಳೆಗಳು :**

**ಏಕದಳ ಧಾನ್ಯಗಳು :** ಬೀದರ್ ಜಿಲ್ಲೆಯ ಒಟ್ಟು ಐದು ತಾಲ್ಲೂಕುಗಳಲ್ಲಿ ವಿಸ್ತಾರವಾಗಿರುವ (ಏಕದಳ ಧಾನ್ಯಗಳಾದ ಬತ್ತ, ಜೋಳ, ಸಜ್ಜೆ, ಮೆಕ್ಕೆಜೋಳ, ರಾಗಿ, ಗೋಧಿ, ಇತರೆ ತೃಣ ಧಾನ್ಯಗಳು

ಮುಂತಾದವು) ಭೂಪ್ರದೇಶದಲ್ಲಿ ಎಷ್ಟೆಷ್ಟು ಎಕರೆ ಭೂ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತದೆ ಎಂಬುದರ ಮಾಹಿತಿಯನ್ನು ಮುಂದೆ ನೀಡಿದೆ:

ಬತ್ತ - 6489 ಹೆ. ಭೂಪ್ರದೇಶದಲ್ಲಿ ಬೆಳೆಯಲಾಗುವುದು (5 ತಾಲ್ಲೂಕುಗಳು ಸೇರಿದಂತೆ)

ಜೋಳ - 75806 ಹೆ. ಭೂಪ್ರದೇಶದಲ್ಲಿ ಬೆಳೆಯಲಾಗುವುದು

ಸಜ್ಜೆ - 6414 ಹೆ. ಭೂಪ್ರದೇಶದಲ್ಲಿ ಬೆಳೆಯಲಾಗುವುದು

ಮೆಕ್ಕೆಜೋಳ - 1527 ಹೆ. ಭೂಪ್ರದೇಶದಲ್ಲಿ ಬೆಳೆಯಲಾಗುವುದು

ಗೋಧಿ - 6908 ಹೆ. ಭೂಪ್ರದೇಶದಲ್ಲಿ ಬೆಳೆಯಲಾಗುವುದು

ಇತರೆ ತೃಣ ಧಾನ್ಯಗಳು - 48 ಹೆ. ಭೂ ಪ್ರದೇಶದಲ್ಲಿ ಬೆಳೆಯಲಾಗುವುದು.

**ದ್ವಿದಳ ಧಾನ್ಯಗಳು :** ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಅಲಸಂದೆ, ಕಡಲೆ - ಈ ದ್ವಿದಳ ಧಾನ್ಯಗಳನ್ನು ಬೆಳೆಯುವ ಒಟ್ಟು ಭೂ ವಿಸ್ತೀರ್ಣ ಇಂತಿದೆ:

ತೊಗರಿ - 76010 ಹೆ. ಭೂ ಪ್ರದೇಶ (ಒಟ್ಟು 5 ತಾಲ್ಲೂಕುಗಳು ಸೇರಿ ಈ ಅಂಶ ಮುಂದಿನ ದ್ವಿದಳ ಧಾನ್ಯಗಳಿಗೂ ಸಂಬಂಧಿಸುತ್ತದೆ.)

ಉದ್ದು - 29580 ಹೆ. ಪ್ರದೇಶ

ಹೆಸರು - 27097 ಹೆ. ಪ್ರದೇಶ

ಅವರೆ - 896 ಹೆ. ಪ್ರದೇಶ

ಅಲಸಂದೆ - 31 ಹೆ. ಪ್ರದೇಶ

ಕಡಲೆ - 37860 ಹೆ. ಪ್ರದೇಶ

ಒಟ್ಟು 172236 ಹೆ. ಪ್ರದೇಶದಲ್ಲಿ ಈ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ.

ಒಟ್ಟು ಆಹಾರ ಧಾನ್ಯಗಳನ್ನು 269428 ಹೆ. ಭೂ ಪ್ರದೇಶದಲ್ಲಿ ಹಣ್ಣುಗಳ ಬೆಳೆಗಳನ್ನು 1818 ಹೆ. ಭೂಪ್ರದೇಶದಲ್ಲಿ, ತರಕಾರಿ ಬೆಳೆಗಳನ್ನು 2804 ಹೆ. ಭೂ ಪ್ರದೇಶದಲ್ಲಿ ಬೆಳೆಯಲಾಗುತ್ತದೆ.

**ಎಣ್ಣೆ ಕಾಳುಗಳು :** ಶೇಂಗಾ, ಸೂರ್ಯಕಾಂತಿ, ಕುಸುಬೆ, ಹರಳು, ಎಳ್ಳು, ಅಗಸೆ, ಸೋಯಾ ಅವರೆ, ಹುಚ್ಚೆಳ್ಳು - ಈ ಎಣ್ಣೆ ಕಾಳುಗಳನ್ನು ಬೆಳೆಯುವ ಒಟ್ಟು ಭೂ ವಿಸ್ತೀರ್ಣ ಇಂತಿದೆ.

ಸೂರ್ಯಕಾಂತಿ - 5632 ಹೆ. ಭೂಪ್ರದೇಶ

ಶೇಂಗಾ - 860 ಹೆ. ಭೂ ಪ್ರದೇಶ

ಕುಸುಮೆ - 9423 ಹೆ. ಭೂ ಪ್ರದೇಶ

ಎಳ್ಳು - 3552 ಹೆ. ಭೂಪ್ರದೇಶ

ಅಗಸೆ - 160 ಹೆ. ಭೂ ಪ್ರದೇಶ

ಸೋಯಾ ಅವರೆ - 81066 ಹೆ. ಭೂಪ್ರದೇಶ

ಹುಚ್ಚೆಳ್ಳು - 2698 ಹೆ. ಭೂ ಪ್ರದೇಶ

ಒಟ್ಟು ಎಣ್ಣೆ ಕಾಳುಗಳನ್ನು 103391 ಹೆ. ಭೂಪ್ರದೇಶದಲ್ಲಿ ಬೆಳೆಯಲಾಗುತ್ತದೆ.

**ವಾಣಿಜ್ಯ ಬೆಳೆಗಳು :** ಹತ್ತಿ, ಕಬ್ಬು, ತಂಬಾಕು ಬೆಳೆಗಳನ್ನು ಬೆಳೆಯುವ ಒಟ್ಟು ಭೂ ವಿಸ್ತೀರ್ಣದ ಪ್ರಮಾಣ (ಐದು ತಾಲ್ಲೂಕುಗಳು ಒಳಗೊಂಡಂತೆ) ಹೀಗಿದೆ.

ಹತ್ತಿ - 632 ಹೆ. ಭೂ ಪ್ರದೇಶದಲ್ಲಿ ಬೆಳೆಯಲಾಗುವುದು.

ಕಬ್ಬು - 33701 ಹೆ. ಭೂ ಪ್ರದೇಶದಲ್ಲಿ ಬೆಳೆಯಲಾಗುವುದು

ಒಟ್ಟು ವಾಣಿಜ್ಯ ಬೆಳೆಗಳನ್ನು ಒಟ್ಟು 34333 ಹೆ. ಭೂ ಪ್ರದೇಶದಲ್ಲಿ ಬೆಳೆಯಲಾಗುವುದು.

**ಉತ್ಪಾದನೆಯ ಪ್ರಮಾಣ (ಮೆಟ್ರಿಕ್ ಟನ್‌ಗಳಲ್ಲಿ)**

ಆಧಾರ : FRE 2009-10 (ಐದು ತಾಲ್ಲೂಕುಗಳು ಸೇರಿ)

**ಏಕದಳ ಧಾನ್ಯಗಳು**

ಬತ್ತ - 7838,

ಜೋಳ - 57915

ಸಜ್ಜೆ - 3719

ಮೆ.ಜೋಳ - 1340

ಗೋಧಿ - 10820

ಇತರೆ ತೃಣ ಧಾನ್ಯಗಳು - 27

ಒಟ್ಟು ಏಕದಳ ಧಾನ್ಯಗಳು - 81659

**ದ್ವಿದಳ ಧಾನ್ಯಗಳು**

ತೊಗರಿ - 59288

ಉದ್ದು - 325

ಹೆಸರು - 188

ಅವರೆ - 684

ಅಲಸಂದೆ - 15

ಕಡಲೆ - 23965

ಒಟ್ಟು ಆಹಾರ ಧಾನ್ಯಗಳು - 84465

ಒಟ್ಟು ದ್ವಿದಳ ಧಾನ್ಯಗಳು - 166124

**ಎಣ್ಣೆ ಕಾಳುಗಳು**

ಶೇಂಗಾ - 541

ಸೂರ್ಯಕಾಂತಿ - 2264

ಕುಸುಮೆ - 13389

ಎಳ್ಳು - 639

ಅಗಸೆ - 49

ಸೋಯಾ ಅವರೆ - 20103

ಹುಚ್ಚೆಳ್ಳು - 748

ಒಟ್ಟು ಎಣ್ಣೆ ಕಾಳುಗಳು - 37733

**ವಾಣಿಜ್ಯ ಬೆಳೆಗಳು (ಟನ್‌ಗಳಲ್ಲಿ)**

ಹತ್ತಿ - 108

ಕಬ್ಬು - 2493

**ತೋಟದ ಬೆಳೆಗಳ ಉತ್ಪಾದನೆ (ಟನ್‌ಗಳಲ್ಲಿ)**

ತೆಂಗು - 8.80

ಗೋಡಂಬಿ - 284.55

ಬೀದರ್ - 2011-12

ಮಾಹಿತಿ : ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ,

**ಮುಖ್ಯ ತೋಟಗಾರಿಕೆ ಬೆಳೆಗಳ ಉತ್ಪಾದನೆ (ಹಣ್ಣುಗಳು) (ಮೆಟ್ರಿಕ್ ಟನ್‌ಗಳಲ್ಲಿ) (2011-12)**

ಬಾಳೆ - 17986.09
ಮಾವು - 13707.00
ನಿಂಬೆ - 3146.00
ಸೀಬೆ - 11900.00
ದ್ರಾಕ್ಷಿ - 5622.00
ಸಪೋಟಾ - 1230.00
ದಾಳಿಂಬೆ - 2000.00
ಪಪ್ಪಾಯ - 15145.00

**ಮುಖ್ಯ ತರಕಾರಿ ಬೆಳೆಗಳ ಉತ್ಪಾದನೆ : (ಮೆಟ್ರಿಕ್ ಟನ್‌ಗಳಲ್ಲಿ)**

ಅಂಕಿ ಅಂಶ **(2011-12)**
ಆಲೂಗಡ್ಡೆ - 2130.00
ಟೊಮ್ಯಾಟೊ - 34066.00
ಬದನೆ - 9900.00
ಹುರುಳಿಕಾಯಿ - 1424.00
ಗೋರಿಕಾಯಿ - 2436.00
ಈರುಳ್ಳಿ - 1572.00
ಹಸಿರು ಮೆಣಸಿನಕಾಯಿ - 7424.00
ಒಟ್ಟು ಸೊಪ್ಪಿನ ತರಕಾರಿಗಳು - 7286.00
ಒಟ್ಟು ಕುಂಬಳ ಜಾತಿ ತರಕಾರಿಗಳು - 13875.00
ಇಳುವರಿ (ಕೆ.ಜಿ/ಹೆಕ್ಟೇರ್‌ಗಳಲ್ಲಿ) ವರ್ಷ 2011-12
(Source - AS per FRE 2009-10)

**ಏಕದಳ ಧಾನ್ಯಗಳು**

ಬತ್ತ - 1208 ಕಿ.ಗ್ರಾಂ / ಹೆ
ಜೋಳ - 764 ಕಿ.ಗ್ರಾಂ /ಹೆ
ಸಜ್ಜೆ - 580 ಕಿ.ಗ್ರಾಂ / ಹೆ
ಮೆ.ಜೋಳ - 878 ಕಿ.ಗ್ರಾಂ / ಹೆ
ಗೋಧಿ - 1404 ಕಿ.ಗ್ರಾಂ / ಹೆ
ಇತರೆ ತೃಣ ಧಾನ್ಯಗಳು - 564 ಕಿ.ಗ್ರಾಂ / ಹೆ
ಒಟ್ಟು ಏಕದಳ ಧಾನ್ಯಗಳು - 793 ಕಿ.ಗ್ರಾಂ / ಹೆ

**ದ್ವಿದಳ ಧಾನ್ಯಗಳು**

ತೊಗರಿ - 780 ಕಿ.ಗ್ರಾಂ / ಹೆ
ಉದ್ದು - 11 ಕಿ.ಗ್ರಾಂ / ಹೆ
ಹೆಸರು - 7 ಕಿ.ಗ್ರಾಂ / ಹೆ
ಅವರೆ - 764 ಕಿ.ಗ್ರಾಂ / ಹೆ
ಅಲಸಂದೆ - 764 ಕಿ.ಗ್ರಾಂ /ಹೆ
ಕಡಲೆ - 633 ಕಿ.ಗ್ರಾಂ / ಹೆ
ಒಟ್ಟು ದ್ವಿದಳ ಧಾನ್ಯಗಳು 404 ಕಿ.ಗ್ರಾಂ / ಹೆ
ಒಟ್ಟು ಆಹಾರ ಧಾನ್ಯಗಳು - 538 ಕಿ.ಗ್ರಾಂ / ಹೆ

**ಎಣ್ಣೆ ಕಾಳುಗಳು**

ಶೇಂಗಾ - 628 ಕಿ.ಗ್ರಾಂ / ಹೆ
ಸೂರ್ಯಕಾಂತಿ - 402 ಕಿ.ಗ್ರಾಂ / ಹೆ
ಕುಸುಮೆ - 1421 ಕಿ.ಗ್ರಾಂ / ಹೆ
ಎಳ್ಳು - 180 ಕಿ.ಗ್ರಾಂ / ಹೆ
ಅಗಸೆ - 309 ಕಿ.ಗ್ರಾಂ / ಹೆ
ಸೋಯ ಅವರೆ - 248 ಕಿ.ಗ್ರಾಂ / ಹೆ
ಹುಚ್ಚೆಳ್ಳು - 277 ಕಿ.ಗ್ರಾಂ / ಹೆ
ಒಟ್ಟು ಎಣ್ಣೆ ಕಾಳುಗಳು 479 ಕಿ.ಗ್ರಾಂ / ಹೆ

**ವಾಣಿಜ್ಯ ಬೆಳೆಗಳು**

ಹತ್ತಿ - 390 ಕಿ.ಗ್ರಾಂ. ಹೆ
ಕಬ್ಬು - 74 ಟನ್ ಹೆ

**ರಾಸಾಯನಿಕ ಗೊಬ್ಬರದ ವಿತರಣೆ (ಟನ್‌ಗಳಲ್ಲಿ)**

ಮಾಹಿತಿ ಮೂಲ : ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೀದರ್

ಸಾರಜನಕ - 16914
ರಂಜಕ - 19081
ಪೊಟ್ಯಾಷ್ - 4216
ಒಟ್ಟು - 40211

**2011-12ನೇ ಸಾಲಿನಲ್ಲಿ ವಿತರಿಸಿದ ಬಿತ್ತನೆ ಬೀಜಗಳು (ಕ್ವಿಂಟಾಲ್‌ಗಳಲ್ಲಿ)**

ಬತ್ತ - 741.00
ಜೋಳ - 1889.00
ಸಜ್ಜೆ - 103.85
ಮೆ.ಜೋಳ - 146.33
ತೊಗರಿ - 955.30
ಹುರುಳಿ - ಮಾಹಿತಿ ಲಭ್ಯ ಇಲ್ಲ
ಉದ್ದು - 667.06
ಹೆಸರು - 297.65
ಕಡಲೆ - 6708.00
ಶೇಂಗಾ - ಮಾಹಿತಿ ಲಭ್ಯ ಇಲ್ಲ
ಸೂರ್ಯಕಾಂತಿ - 84.32
ಹತ್ತಿ - ಮಾಹಿತಿ ಲಭ್ಯವಿಲ್ಲ
ಇತರೆ - 32857.17

**2011-12ನೇ ಸಾಲಿನಲ್ಲಿ ರೈತರಿಗೆ ವಿತರಿಸಿದ ಕೃಷಿ ಪರಿಕರಗಳು (ಬೀದರ್ ಜಿಲ್ಲೆಯ ಐದು ತಾಲ್ಲೂಕುಗಳು ಸೇರಿದಂತೆ)**

1. ಟಿಲ್ಲರ್ - 2
2. ಪಂಪ್‌ಸೆಟ್ - 137
3. ಸಿಂಪರಣೆ ಯಂತ್ರ - 336
4. ಎರೆಹುಳು ಘಟಕಗಳು - 119

5. ಜೈವಿಕ ಗೊಬ್ಬರ - 417
6. ಸ್ಪ್ರೆಗಳು - 73
7. ನೀರಿನ ಸುರುಳಿಗಳು - 86
8. ಸಾಗುವಳಿ ಮಂತ್ರಗಳು - 32
9. ಮೇವು ಕತ್ತರಿಸುವ ಮಂತ್ರ - 5
10. ಹಸಿರು ಗೊಬ್ಬರದ ಬೀಜಗಳು - 180
11. ಕಟಾವು ಮಾಡುವ ಯಂತ್ರ - 320

**2011-12ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಅಭಿವೃದ್ಧಿಪಡಿಸಿದ ಕೃಷಿ ಭೂಮಿ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)**

**ಆಹಾರ ಭದ್ರತಾ ಮಿಷನ್ :** ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯ 5ತಾಲ್ಲೂಕುಗಳಲ್ಲಿ ಕಂಡುಬರುವ 123535 ಹೆ. ಭೂ ವಿಸ್ತೀರ್ಣವನ್ನು ದ್ವಿದಳ ಧಾನ್ಯಗಳನ್ನು ಬೆಳೆಯಲು ವಿಸ್ತರಿಸಲಾಯಿತು.

ಎಸೋಫಾಮ್ ಎಣ್ಣೆ ಕಾಳುಗಳಿಗಾಗಿ 19042 ಹೆ. ಭೂ ಪ್ರದೇಶವನ್ನು ಅಭಿವೃದ್ಧಿಪಡಿಸಲಾಯಿತು. ಅಷ್ಟೇ ಅಲ್ಲದೆ ಆತ್ಮಯೋಜನೆಯ ನೆರವಿನಿಂದ 28.8 ಹೆ. ಭೂಪ್ರದೇಶವನ್ನು ಅಭಿವೃದ್ಧಿಪಡಿಸಲಾಯಿತು.

**ರೇಷ್ಮೆ :** ಅಂಕಿ ಅಂಶಗಳನ್ನು ಉಪನಿರ್ದೇಶಕರು, ರೇಷ್ಮೆ ಇಲಾಖೆ, ಬೀದರ್ ಇವರು ನೀಡಿರುವ ಮಾಹಿತಿಯ ಆಧಾರದ ಮೇಲೆ ವಿವರ ಇಂತಿದೆ.

ಬೀದರ್ ಜಿಲ್ಲೆಯಲ್ಲಿ 2011-12ನೇ ಸಾಲಿನಲ್ಲಿ ಹಿಪ್ಪುನೇರಳೆ ಬೆಳೆಯನ್ನು 324 ಹೆಕ್ಟೇರ್ ಭೂ ವಿಸ್ತೀರ್ಣದಲ್ಲಿ ಬೆಳೆಯಲಾಗಿದೆ. 143.205 ಟನ್‌ಗಳನ್ನು ರೇಷ್ಮೆ ಗೂಡು ಉತ್ಪಾದನೆಯಾಗಿದೆ. ರೇಷ್ಮೆಯನ್ನು ಕೃಷಿಯನ್ನಾಗಿ ಮಾಡಿಕೊಂಡಿರುವ ಗ್ರಾಮಗಳ ಸಂಖ್ಯೆ ಸುಮಾರು 108.

**ರೇಷ್ಮೆ ಬೆಳೆ ಕೃಷಿಮಾಡುವ ರೈತರ ಸಂಖ್ಯೆ :** ಪ. ಜಾತಿ - 46, ಪ.ಪಂ. - 66, ಇತರೆ - 262, ಒಟ್ಟು 404 ರೈತರು ರೇಷ್ಮೆ ಬೆಳೆಯುತ್ತಿದ್ದಾರೆ.

**ಜಾನುವಾರು ಗಣತಿ - 2007**

(ಉಪನಿರ್ದೇಶಕರು: ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೀದರ್)


ದನಕರುಗಳು : ಸ್ಥಳೀಯ - 263836
ವಿದೇಶಿ - 000001
ಮಿಶ್ರತಳಿ - 13635
ಒಟ್ಟು 277471
ಎಮ್ಮೆಗಳು - 176769
ಕುರಿಗಳು - ಸ್ಥಳೀಯ 84661
ಮೇಕೆಗಳು - 188998
ಹಂದಿಗಳು - ಸ್ಥಳೀಯ - 18210
ವಿದೇಶಿ - 40
ಮಿಶ್ರತಳಿ - 369
ಒಟ್ಟು - 18616
ಮೊಲಗಳು - 48
ನಾಯಿಗಳು - 27194
ಒಟ್ಟು ಜಾನುವಾರುಗಳು - 777162
ಒಟ್ಟು ಕೋಳಿಗಳು - 161954

**ಪರಾಮರ್ಶನ ಗ್ರಂಥಗಳು**

ಅಂತರ್ಜಾಲ : www.bidar.nic.in
ದಿಕ್ಸೂಚಿ - ಕರ್ನಾಟಕ ಜಿಲ್ಲಾ ದರ್ಶನ - 2007 ಬೇದ್ರೆ ಮಂಜುನಾಥ
ಕರ್ನಾಟಕ ಪ್ರಾದೇಶಿಕ ಭೂಗೋಳ ವಿಜ್ಞಾನ - ಎಚ್. ರಂಗನಾಥ್ - ವಿದ್ಯಾನಿಧಿ ಪ್ರಕಾಶನ - ಗದಗ - 2011

*ಜಿ.ಎಂ.ಬಿ.*

**ಬೀಸುಕಲ್ಲು** ನೇಗಿಲು ರೈತನಿಗೆ ಹೇಗೆ ಯಂತ್ರವಾಗಿದೆಯೋ ಹಾಗೆ ರೈತ ಮಹಿಳೆಗೆ ರಾಗಿ ಕಲ್ಲು ಅಷ್ಟೇ ಹತ್ತಿರದ ನಂಟು. ಪ್ರತಿದಿನ ರಾತ್ರಿ ಇದರ ಹತ್ತಿರ ಕೂರಲೇಬೇಕು. ಯಾವುದೇ ಆಹಾರ ಧಾನ್ಯವನ್ನು ಹಿಟ್ಟು ಮಾಡಬೇಕಾದರು ಬೀಸುವ ಕಲ್ಲಿನ ಮೊರೆ ಹೋಗಲೇಬೇಕಾಗಿತ್ತು. ಬೀಸುಕಲ್ಲಿನ ವಿನ್ಯಾಸ ಬೀಸುವ ಕಲ್ಲನ್ನು ಎರಡು ಗಟ್ಟಿಮುಟ್ಟಾದ ದಪ್ಪ ಮತ್ತು ಒಂದೇ



ಅಗಲದ ಕಲ್ಲುಗಳನ್ನು ಬಳಸಿ ತಯಾರಿಸುತ್ತಾರೆ. ಇದನ್ನು ಸಾಮಾನ್ಯವಾಗಿ ತಜ್ಞರಾದ ಕಲ್ಲು ಕುಟಿಕರು ಮಾತ್ರ ತಯಾರಿಸಿ ಕೊಡುತ್ತಾರೆ. ಎರಡು ಕಲ್ಲುಗಳನ್ನು ಒಂದರ ಮೇಲೆ ಕೂರಿಸಿದರೆ ನಿಲ್ಲುವಂತೆ ಮತ್ತು ಅರಗಲು ಅನುಕೂಲವಾಗುವಂತೆ ರಂಧ್ರವನ್ನು ಮಾಡಿ ಅದಕ್ಕೆ ಅರ್ಧ ಅಡಿ ಎತ್ತರ ಒಂದು ಹಿಡಿ ಗಾತ್ರದ ಮರದ ಗೂಟವನ್ನು ಅಳವಡಿಸಿರುತ್ತಾರೆ. ಮೇಲಿನ ಕಲ್ಲಿನ ಒಂದು ಬದಿಯಲ್ಲಿ ಒಂದು ರಂಧ್ರವನ್ನು ಮಾಡಿ ಅದಕ್ಕೆ ಒಂದು ಅಡಿ ಎತ್ತರದ ಮತ್ತೊಂದು ಗೂಟವನ್ನು ಅಳವಡಿಸಬೇಕು. ಗೂಟಕ್ಕೆ ಮೇಲುಗಡೆ ಕೆಲವರು ಕಬ್ಬಿಣದ ಬಳೆಯನ್ನು ಜೋಡಿಸಿರುತ್ತಾರೆ. ರಾಗಿಯ ಹಿಟ್ಟು ಚದುರಿ ಹೋಗದ ಹಾಗೆ ಸುತ್ತಲೂ ಬಿದಿರಿನಿಂದ ತಯಾರಿಸಿದ 'ದಾಗರಿ'ಯನ್ನು ಮೊದಲು ಇಟ್ಟು ಅದರಲ್ಲಿ ರಾಗಿ ಕಲ್ಲನ್ನು ಕೂರಿಸಿ ಮೇಲಿನ ಕಲ್ಲಿನ ಮಧ್ಯದಲ್ಲಿರುವ ರಂಧ್ರಕ್ಕೆ ಎರಡು ಹಿಡಿ ರಾಗಿಯನ್ನು ಸುರಿದು ಬೀಸುತ್ತಾರೆ. ರಾಗಿ ಮುಗಿಯುತ್ತಿದ್ದಂತೆ ಮಧ್ಯೆ ಮಧ್ಯೆ ಮೇಲಿನ ಕಲ್ಲನ್ನು ಸ್ವಲ್ಪ ಮೇಲೆತ್ತಿ ರಾಗಿ ಹಿಟ್ಟನ್ನು ದಾಗಿರಿಗೆ ಬೀಳುವಂತೆ ಗೋರಿ ಸುರಿಯಬೇಕು.



ಗೂಟವನ್ನು ಹಿಡಿದು ಸುತ್ತುತ್ತಿದ್ದರೆ ರಾಗಿ ಕೆಳಗಿಳಿದು ಎರಡು ಕಲ್ಲುಗಳ ಮಧ್ಯೆ ಸಿಕ್ಕಿ ಹಿಟ್ಟಾಗಿ ಹೊರಗೆ ಉದುರುತ್ತದೆ.

ಅವರೆ ತೊಗರಿ ಮುಂತಾದ ದ್ವಿದಳ ಕಾಳುಗಳನ್ನು ಬೇಳೆ ಮಾಡಲು ಬೀಸುವ ಕಲ್ಲನ್ನು ಉಪಯೋಗಿಸುತ್ತಿದ್ದರು. ಸಾಮೆ ನವಣೆ ಸಜ್ಜೆಯಂತಹ ಧಾನ್ಯಗಳನ್ನು ಒನಕೆಯಿಂದ ಕುಟ್ಟಿ ಅಕ್ಕಿಯನ್ನು ಮಾಡಿ ಕೊಳ್ಳುವುದು ರೂಢಿಯಲ್ಲಿತ್ತು. ಕೆಲವರು ಇವುಗಳನ್ನು ರಾಗಿ ಕಲ್ಲಿನಿಂದ ಬೀಸಿ ನುಚ್ಚು ಮಾಡಿ ಅಡುಗೆಗೆ ಬಳಸುತ್ತಿದ್ದರು. ಹೆಚ್ಚು ಕಾಳುಗಳನ್ನು ಹಾಕಿಕೊಂಡು ಅಗುರವಾಗಿ ಮತ್ತು ವೇಗವಾಗಿ ಸುತ್ತಿದರೆ ಸಿಪ್ಪೆ ಮಾತ್ರ ಸುಲಿದು ಅಕ್ಕಿ, ಬೇಳೆ ದೊರೆಯುತ್ತಿತ್ತು. ಇದರ ಆಕಾರದಲ್ಲಿ ತುಸು ಬದಲಾವಣೆಯುಂಟು. ವೃತ್ತಾಕಾರದ ಕಲ್ಲಿನ ಒಂದು ಭಾಗದಲ್ಲಿ ಕಿವಿಯಂತೆ ಉದ್ದನೆಯ ಭಾಗವಿದ್ದು ಅದರಲ್ಲಿರುವ ರಂಧ್ರದಲ್ಲಿ ಗೂಟವನ್ನು ಹೊಡೆದು ಸುತ್ತಲು ಸಹಾಯಕವಾಗುವಂತೆ ಮಾಡಿಕೊಂಡಿರುತ್ತಾರೆ. ಕಾಳುಗಳನ್ನು ಸ್ವಲ್ಪ ಸ್ವಲ್ಪ ಸುರಿದು ಕಲ್ಲನ್ನು ಮೇಲಕ್ಕೆ ಎತ್ತಿ ಹರಡಿ ಸುತ್ತಿದರೆ ಕಾಳು ಒಡೆದು ಬೇಳೆ ಸಿಗುತ್ತದೆ. ಕಾಳುಗಳಿಗೆ ಕೆಂಮಣ್ಣು ಕಟ್ಟಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಬೀಸಿದರೆ ಕಾಳು ಪುಡಿಯಾಗದೇ ಒಳ್ಳೆಯ ಬೇಳೆಯನ್ನು ಪಡೆಯಬಹುದು. ಅಪರೂಪಕ್ಕೆ ಈಗಲೂ ಹಳ್ಳಿಗಳಲ್ಲಿ ಇವುಗಳನ್ನು ಕೆಲವರು ಉಪಯೋಗಿಸುವುದನ್ನು ನೋಡಬಹುದು.

*ಎಸ್.ವಿ.*

**ಬೂದುಗುಂಬಳ** ಕರ್ನಾಟಕ ಜನಪ್ರಿಯ ತರಕಾರಿಯಾದ ಬೂದುಗುಂಬಳಕಾಯಿ ಕ್ರಿ.ಶ. ಹತ್ತನೆಯ ಶತಮಾನದಿಂದೀಚೆಗೆ ನಮಗೆ ಪರಿಚಯವಾಗಿದೆ. ಸಂಸ್ಕೃತದಲ್ಲಿ ಇದಕ್ಕೆ 'ಕೂಷ್ಮಾಂಡ' ಎಂಬ ಹೆಸರಿದೆ. ಬಹಳ ದಿನಗಳವರೆಗೆ ಕೆಡದಂತೆ ಶೇಖರಣೆ ಮಾಡಬಹುದಾದ ಈ ಕಾಯಿಗಳಲ್ಲಿ ಎ, ಬಿ, ಮತ್ತು ಸಿ ಜೀವಸತ್ವ ಹೇರಳವಾಗಿ ಇರುತ್ತವೆ. ಈ ತರಕಾರಿಯಿಂದ ಉತ್ತಮವಾದ ಮಜ್ಜಿಗೆ ಹುಳಿ ತಯಾರಿಸುತ್ತಾರೆ. ಉತ್ತರ ಭಾರತದಲ್ಲಿ 'ಪೇಡಒದಿತ' ಎಂಬ ಹೆಸರಾದ ಸಿಹಿ ಪದಾರ್ಥವನ್ನು ಇದರಿಂದಲೇ ತಯಾರಿಸುತ್ತಾರೆ.

ಭಾರತದ ಕೆಳವರ್ಗದ ಜನರಲ್ಲಿ 'ತಾಳಿಕಿತ್ತಕಾಯಿ' ಎಂಬ ನಂಬಿಕೆ ಇದ್ದುಮನೆಯಲ್ಲಿ ಉಪಯೋಗಿಸುವುದಿಲ್ಲ. ಬೂದುಗುಂಬಳ ಬೆಳೆಯಲು



ಮರಳು ಮಿಶ್ರಿತ ಮಣ್ಣು ಉತ್ತಮ. ಮಣ್ಣು ಫಲವತ್ತಾಗಿದ್ದರೆ ಇದರಿಂದ ಹೆಚ್ಚು ಇಳುವರಿ ಪಡೆಯಬಹುದು. ಜೂನ್-ಜುಲೈ ತಿಂಗಳುಗಳಲ್ಲಿ ಮಳೆ ಬೀಳುವ ಪ್ರದೇಶದಲ್ಲಿ ಮುಖ್ಯ ಬೆಳೆಯಾಗಿ ಬೆಳೆಯಲಾಗುತ್ತದೆ. ದಕ್ಷಿಣ ಒಣ ಪ್ರದೇಶ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಅಕ್ಟೋಬರ್-ಡಿಸೆಂಬರ್ ತಿಂಗಳುಗಳಲ್ಲಿ ಬೆಳೆಯುತ್ತಾರೆ. ನೀರಾವರಿಪ್ರದೇಶಗಳಲ್ಲಿ ಫೆಬ್ರವರಿ - ಮಾರ್ಚ್ ತಿಂಗಳುಗಳಲ್ಲಿಯೂ ಬೆಳೆಯಬಹುದು.

**ಬೇಸಾಯ :** ಬೂದುಗುಂಬಳ ಬೇಸಾಯ ಮಾಡಬೇಕಾದರೆ ಪ್ರತಿ ಎಕರೆಗೆ ಎರಡು ಕಿ.ಗ್ರಾಂ. ಬೀಜಬೇಕಾಗುತ್ತದೆ. ಆರಂಭದಲ್ಲಿ ಐದು ಟನ್ ಸಗಣಿಗೊಬ್ಬರ, ಇಪ್ಪತ್ತು ಕೆ.ಜಿ. ಸಾರಜನಕ, ಇಪ್ಪತ್ತು ಕೆ.ಜಿ. ರಂಜಕ ಬೇಕಾಗುತ್ತದೆ. ಬೀಜ ಬಿತ್ತುವುದಕ್ಕೆ ಮುಂಚೆ ಭೂಮಿಯನ್ನು ಚೆನ್ನಾಗಿ ಹದಕ್ಕೆ ಬರುವಂತೆ ಉತ್ತು ಎಂಟರಿಂದ ಹತ್ತು ಅಡಿ ದೂರದ ಸಾಲುಗಳಲ್ಲಿ ನಾಲ್ಕು ಅಡಿ ಅಂತರದಲ್ಲಿ ಪಾತಿಗಳನ್ನು ಮಾಡಿ ಗೊಬ್ಬರವನ್ನು ಮಣ್ಣಿನಲ್ಲಿ ಮಿಶ್ರಣಮಾಡಿ ಪ್ರತಿಯೊಂದು ಪಾತಿಯಲ್ಲಿ ಮೂರರಿಂದ ನಾಲ್ಕು ಬೀಜಗಳನ್ನು ಬಿತ್ತಿ ಹದವಾಗಿ ನೀರು ಕೊಡಬೇಕು. ಮೂರು ವಾರಗಳ ಅನಂತರ ಉತ್ತಮ ಸಸಿಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಕಿತ್ತೆಸೆಯಬೇಕು. ನಾಲ್ಕು ವಾರಗಳ ಅನಂತರ ಆರಂಭದಲ್ಲಿ ಕೊಟ್ಟಷ್ಟೇ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡಬೇಕು. ಹದವರಿತು ನೀರು ಕೊಟ್ಟರೆ ಸಾಕು. ಆದರೆ ಭೂಮಿಯಲ್ಲಿ ಕಳೆಗಳು ಬರದಂತೆ ಎಚ್ಚರಿಕೆ ವಹಿಸಬೇಕು.

**ತಳಿಗಳು :** ಬೂದುಗುಂಬಳ ಕಾಯಿಯಲ್ಲಿ ಹಲವಾರು ತಳಿಗಳಿವೆ. ಸಿ.ಓ. 7, ಹೈಬ್ರಿಡ್ ತಳಿಯಾದ ಇದು ಮಧ್ಯಮ ಗಾತ್ರದ ಕಾಯಿಗಳನ್ನು ಬಿಡುತ್ತದೆ. ಇದರ ಅವಧಿ 120 ರಿಂದ 130 ದಿನಗಳು. ಸಿ.ಓ. 2, ಬಿತ್ತಿದ 85-90 ದಿನಗಳಲ್ಲಿ ಮೊದಲ ಕೊಯ್ಲಿಗೆ ಬರುವ ಶೀಘ್ರ ತಳಿ. ಜಿ.ಕೆ.ವಿ.ಕೆ. 1, ಇದು 1.5 ರಿಂದ 2 ಕಿ.ಗ್ರಾಂ. ತೂಕದ ಕಾಯಿಗಳನ್ನು ಬಿಡುವ ತಳಿ. ಅಲ್ಲದೆ, ಕೆಲವೊಂದು ಸ್ಥಳೀಯ ತಳಿಗಳೂ ಕೂಡ ರಾಜ್ಯದಲ್ಲಿ ಜನಪ್ರಿಯವಾಗಿವೆ. ಅನೇಕ ಶುಭ ಕಾರ್ಯಗಳಿಗೆ ಇದನ್ನು ಬಳಸುವುದಿದೆ.

ಆಯುರ್ವೇದದಲ್ಲಿ ಇದರ ಉಪಯೋಗ ಬಹಳ ಹೆಚ್ಚು. ಇದು ಶೀತಲವೆನಿಸಿರುವುದರಿಂದ ಶರೀರದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಇದರ ಬೀಜಕ್ಕೆ ಜಂತು ನಿವಾರಕ ಗುಣವಿದೆ. ಸಿಪ್ಪೆಯಿಂದ ತಯಾರಿಸಿದ ತೈಲ ಕೂದಲಿಗೆ ತಂಪು ಉಂಟುಮಾಡಿ, ಸೊಂಪಾಗಿ ಬೆಳೆಯಲು ಸಹಾಯ ಮಾಡುತ್ತದೆ. ಆಯುರ್ವೇದದಲ್ಲಿ ತಿಳಿಸಿರುವ ಕೂಷ್ಮಾಂಡ ರಸಾಯನ ಸೇವನೆಯು ಆರೋಗ್ಯ ವರ್ಧನೆ, ಇಂದ್ರಿಯ ಶಕ್ತಿಯ ವರ್ಧನೆ ಮತ್ತು ಮೇಧಾವಿತನ ಹೆಚ್ಚಿಸುತ್ತದೆಂದು ನಂಬಿಕೆಯಿದೆ. ಬೂದುಗುಂಬಳದ ಒಂದು ಲೋಟ ರಸವನ್ನು ಒಂದು ಚಮಚ ಜೇನಿನೊಂದಿಗೆ ನಿತ್ಯ ಸೇವಿಸಿದರೆ ಒಳ್ಳೆಯ ಮೂತ್ರೋತ್ತೇಜಕವಾಗಿ ಕೆಲಸ ಮಾಡುತ್ತದೆ. ಮೂಲವ್ಯಾಧಿಗೂ ಒಳ್ಳೆಯ ಔಷಧ. ಮುಟ್ಟಿನ ಕಾಲದಲ್ಲಾಗುವ ರಕ್ತಸ್ರಾವ, ಮೂಗು ಬಾಯಿಂದಾಗುವ ರಕ್ತಸ್ರಾವವು ಬೂದುಗುಂಬಳ ರಸವನ್ನು ಬೆಟ್ಟದ ನೆಲ್ಲಿಯ ರಸದೊಂದಿಗೆ ನಿತ್ಯ ಸೇವಿಸಿದರೆ ನಿವಾರಣೆಯಾಗುತ್ತದೆ.

ಬೂದುಗುಂಬಳ ಕಾಯಿಯಿಂದ ಹಲ್ವ, ಹುಳಿ, ಪಲ್ಯ, ಮಜ್ಜಿಗೆಹುಳಿ, ಸಂಡಿಗೆ ಇತ್ಯಾದಿ ತಿಂಡಿ ತಿನಿಸುಗಳನ್ನು ಸಿದ್ಧಪಡಿಸಿ ಆಹಾರವನ್ನು ನಿತ್ಯ ಬಳಸಬಹುದು.

*ಎಸ್.ಎಂ.ಬಿ.*

**ಬೂರುಗ** ಹಗುರ ಚೌಬೀನೆ ಮತ್ತು ಹತ್ತಿಗಾಗಿ ಉಪಯೋಗವಾಗುವ ಮರ. ಇದು ಬಾಂಬಕೇಸೀ ಕುಟುಂಬಕ್ಕೆ ಸೇರಿದೆ. ಬಾಂಬ್ಯಾಕಸ್ ಸೈಬ ಅಥವಾ ಬಾಂಬ್ಯಾಕಸ್ ಮಲಬಾರಿಕಮ್ ಎಂಬುದು ಇದರ ವೈಜ್ಞಾನಿಕ ಹೆಸರು. ಇದನ್ನು ಕೆಂಪು ಬೂರುಗ, ಮುಳ್ಳು ಬೂರುಗ ಎಂದೂ (ಕನ್ನಡ), ಇಂಗ್ಲಿಷಿನಲ್ಲಿ ಸಿಲ್ಕ್ ಕಾಟನ್ ಟ್ರೀ ಎಂದೂ ಕರೆಯುತ್ತಾರೆ. ಬಿಳಿಬೂರುಗದ ಪ್ರಭೇದವೂ ಇದರಲ್ಲಿದೆ. ಪ್ರಪಂಚಾದ್ಯಂತ ಉಷ್ಣ ಹಾಗೂ ಉಪೋಷ್ಣ ಪ್ರದೇಶಗಳಲ್ಲಿ ಬೆಳೆಯಬಲ್ಲದು. ಭಾರತ



ಹಾಗೂ ಅಂಡಮಾನ್ ದ್ವೀಪಗಳಲ್ಲಿ ಹೆಚ್ಚಾಗಿ ಬೂರುಗದ ಮರಗಳು ಕಂಡುಬರುತ್ತವೆ. ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಹಾಗೂ ನದಿ ಕಣಿವೆಗಳ ಭಾಗಗಳಲ್ಲಿ ಪರ್ಣಪಾತಿ ಕಾಡುಗಳಲ್ಲಿ ನಿತ್ಯಹರಿದ್ವರ್ಣ ಕಾಡುಗಳಲ್ಲಿ, ಬಯಲು ಪ್ರದೇಶಗಳಲ್ಲಿ, ಬೆಟ್ಟದ ತಪ್ಪಲುಗಳಲ್ಲಿ ಬೆಳೆಯುತ್ತದೆ.

ಬೂರುಗ ಮರ ಚೆನ್ನಾಗಿ ಬೆಳೆಯಲು ಫಲವತ್ತಾದ ಮಣ್ಣು ಬೇಕು. ಮರಳು ಮಿಶ್ರಿತ ಗೋಡು ಮಣ್ಣು, ಕಣಿವೆಯ ಇಳಿಜಾರಿನ ಮೆಕ್ಕಲು ಮಣ್ಣು, ಬೆಟ್ಟದ ಇಳಿಜಾರುಗಳಲ್ಲಿರುವ ಮಣ್ಣಿನಲ್ಲಿ ಉತ್ಕೃಷ್ಟವಾಗಿ ಬೆಳೆಯಬಹುದು. ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಬೆಳೆಯುತ್ತದಾದರೂ ಪ್ರಖರವಾದ ಬಿಸಿಲೂ ಬೇಕು.

ಬೂರುಗವನ್ನು ಬೀಜದಿಂದ ಮತ್ತು ಕಾಂಡದ ತುಂಡುಗಳನ್ನು ನೆಟ್ಟು ವೃದ್ಧಿಪಡಿಸಬಹುದು. ತೋಪುಗಳ ಹಾಗೆ ಬೆಳೆಸಬೇಕಾದವರು ಒಟ್ಲು ಸಿದ್ಧಪಡಿಸಿ ಬೀಜ ಬಿತ್ತಿ ಸಸಿಯನ್ನು ಸುಮಾರು ಎರಡು ವರ್ಷಗಳ ತನಕ ಬೆಳೆಸಿಕೊಂಡು ನಿರ್ದಿಷ್ಟ ಅಂತರದಲ್ಲಿ ನಾಟಿ ಮಾಡಬೇಕು. ಕಾಂಡದ ಮೂಲಕವೂ ಇದೇ ರೀತಿ ಸಸ್ಯಾಭಿವೃದ್ಧಿ ಮಾಡಬಹುದು. ಇತರ ಮರಗಳ ಜೊತೆ ಮಿಶ್ರಬೆಳೆಯಾಗಿಯೂ ಬೆಳೆಯುವುದುಂಟು.


ಬೃಹತ್‌ಗಾತ್ರದ ಮರವಾದ ಇದು 130-140 ಅಡಿ ಎತ್ತರ, ಸುಮಾರು 18-20 ಅಡಿ ಸುತ್ತಳತೆವರೆಗೂ ಬೆಳೆಯಬಲ್ಲದು. ಈ ಮರದ ವಿಶೇಷವೆಂದರೆ 60-70 ಅಡಿ ಎತ್ತರದವರೆಗೂ ಕವಲು ರೆಂಬೆಗಳು ಬೆಳೆಯದೆ ಮೇಲೆ ಮಾತ್ರ ಕವಲೊಡೆದು ಹರಡಿಕೊಳ್ಳುತ್ತವೆ. ಮರ ಬಲಿತಂತೆಲ್ಲ ತೊಗಟೆ ಹಸುರು ಬಣ್ಣದಿಂದ ಬೂದು ಬಣ್ಣಕ್ಕೆ ತಿರುಗುತ್ತದೆ. ಕೆಲವು ಪ್ರಭೇದಗಳಲ್ಲಿ ಕಾಂಡದ ಮೇಲೆ ಚೂಪಾದ ಮುಳ್ಳುಗಳು, ಅಂಗೈಯಾಕಾರದ ಸಂಯುಕ್ತ ಮಾದರಿಯ ಎಲೆಗಳೂ ಇರುತ್ತವೆ. ಈ ಮರ ಕಿತ್ತಳೆ, ಹಳದಿ, ಕೆಂಪು ಹೀಗೆ ಬಣ್ಣ ಬಣ್ಣದ ಮಾಸಲವಾದ ಹೂಗಳನ್ನು ರೆಂಬೆಯ ತುದಿಯಲ್ಲಿ ಬಿಡುತ್ತದೆ. ಐದು ಗುಂಪುಗಳಂತೆ ಕೂಡಿಕೊಂಡ ಹನ್ನೆರಡು ಕೇಸರಗಳಿದ್ದು ಒಟ್ಟು 60 ಆಗುತ್ತವೆ. ಕಾಯಿ ಅಂಡಾಕಾರವಾಗಿಯೂ, ನಾರುಮಯವಾಗಿಯೂ ಒರಟಾಗಿಯೂ ಇರುತ್ತದೆ. ಕಾಯಿಯ ಒಳಗೆ ಮೃದುವಾದ ಹತ್ತಿ ತುಂಬಿದ್ದು ಕಪ್ಪು ಬೀಜಗಳಿಂದ ಕೂಡಿರುತ್ತದೆ. ಬಲಿತ ಮರದ ಚೌಬೀನೆಯನ್ನು ಟೀ ಪೆಟ್ಟಿಗೆ, ಬೆಂಕಿಪೆಟ್ಟಿಗೆ, ಚಾವಣಿಯ ಹಲಗೆ, ಹಣ್ಣಿನ ಪೆಟ್ಟಿಗೆ, ಆಟಿಕೆ, ಕುಂಚದ ಹಿಡಿ, ಶವ ಪೆಟ್ಟಿಗೆ - ಮುಂತಾದ ಹಗುರವಾದ ಉಪಕರಣಗಳ ತಯಾರಿಕೆಯಲ್ಲಿ ಬಳಸಲಾಗುವುದು. ಇದರ ಹತ್ತಿ ಮೃದುವಾಗಿದ್ದು ಹಾಸಿಗೆ, ದಿಂಬು ಇತ್ಯಾದಿಗಳಿಗೆ ಉಪಯುಕ್ತ. ಈ ಮರದ ಗೋಂದಿಗೆ ಕೆಲವು ಔಷಧೀಯ ಗುಣಗಳಿವೆ. ಬೀಜಗಳಿಂದ ಎಣ್ಣೆ ತಯಾರಿಸುವುದುಂಟು. ಬೇರು ಹೂ, ಮೊಗ್ಗುಗಳು ತರಕಾರಿಯಾಗಿಯೂ ಬಳಸುವುದಿದೆ. ಮೃದುವಾದ ಬೇರನ್ನು ಸುಟ್ಟು ತಿನ್ನುವರು. ಈ ಮರದ ಪ್ರತಿಯೊಂದು ಭಾಗವೂ ಒಂದಿಲ್ಲೊಂದು ಬಗೆಯಲ್ಲಿ ಉಪಯುಕ್ತವೇ.

ಬಿಳಿ ಬೂರುಗ ಸಹ ಬೂರುಗದಷ್ಟೇ ಎತ್ತರ, ಗಾತ್ರವಿದ್ದು, ಅದೇ ಕುಟುಂಬಕ್ಕೆ ಸೇರಿರುವಂಥದು. ಬಿಳಿಬೂರುಗ ಜಲನಿರೋಧಕ ಗುಣ ಹೊಂದಿರುವುದರಿಂದ ಇದನ್ನು ಬಿರಡೆಗಳಿಗೂ, ಧ್ವನಿ ಆವಾಹಕವಾಗಿಯೂ ಶೀತನಿಯಂತ್ರಣ ಗುಣವಿರುವುದರಿಂದ ರೆಫ್ರಿಜರೇಟರುಗಳು, ಶೈತ್ಯಾಗಾರಗಳು, ಕಾರು ವಿಮಾನಗಳ ಕ್ಯಾಬಿನ್‌ಗಳು, ರೇಡಿಯೊ ಪ್ರಸರಣ ಸ್ಟುಡಿಯೊ, ಆಸ್ಪತ್ರೆಗಳಲ್ಲಿಯೂ ಸೊಂಟಕವಚ, ರಕ್ಷಾಬಟ್ಟೆ ಮುಂತಾದ ಜೀವರಕ್ಷಕ ಉಪಕರಣ ತಯಾರಿಕೆಯಲ್ಲಿಯೂ ಇದರ ಹತ್ತಿ ಉಪಯೋಗಕ್ಕೆ ಬರುತ್ತದೆ. ಇತರ ಹತ್ತಿಗಳೊಂದಿಗೆ ಮಿಶ್ರ ಮಾಡಿ ಕೆಲವು ಬಗೆಯ ಬಟ್ಟೆ ತಯಾರಿಸುತ್ತಾರೆ. ಬಹು ಉಪಯೋಗಿಯಾದ ಇದರಿಂದ ಬೆಂಕಿ ಕಡ್ಡಿ, ದೋಣಿ ತಯಾರಿಕೆ ಮಾಡಿದರೆ ಬೀಜದಿಂದ ತೆಗೆದ ಎಣ್ಣೆಯನ್ನು ಅಡುಗೆಗೂ ಇದರ ಎಲೆಯನ್ನು ಹಾಗೂ ಹಿಂಡಿಯನ್ನು ದನಕರುಗಳ ಮೇವಾಗಿಯೂ ಬಳಸಲಾಗುತ್ತದೆ. ಈ ಎಲ್ಲ ಉಪಯೋಗಗಳಿಂದ ಈ ಪ್ರಭೇದದ ಮರವನ್ನು ಅಲ್ಲಲ್ಲಿ ಬೆಳೆಸುತ್ತಿದ್ದಾರೆ.

*ಎಸ್.ವಿ.*

**ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೃಷಿ** ಬೆಂಗಳೂರು ಕರ್ನಾಟಕದ ರಾಜಧಾನಿ. ಕರ್ನಾಟಕದ ಅತ್ಯಂತ ದೊಡ್ಡನಗರ, ಇದನ್ನು ದಕ್ಷಿಣ ಪಿನಾಕಿನಿ ಮತ್ತು ಅರ್ಕಾವತಿ ನದಿ ಕಣಿವೆಗಳು ಜಿಲ್ಲೆಯ ನಡುವೆ ಬೇರ್ಪಡಿಸಿವೆ. ಇಂದು ಏಷ್ಯಾ ಖಂಡದಲ್ಲೇ ವೇಗವಾಗಿ ಬೆಳೆಯುತ್ತಿರುವ ನಗರವೆಂದು ಹೆಸರಾಗಿರುವ ಇದು ಭಾರತದ ಸಿಲಿಕಾನ್ ವ್ಯಾಲಿ ಎನಿಸಿಕೊಂಡಿದೆ. ಬೆಂಗಳೂರು 1986 ಆಗಸ್ಟ್ 15ರಂದು ಎರಡು ಜಿಲ್ಲೆಗಳಾಗಿ ವಿಭಾಗಿಸಲಾಯಿತು. ಪ್ರಸ್ತುತ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳು ಬರುತ್ತವೆ. ದೇವನಹಳ್ಳಿ, ನೆಲಮಂಗಲ, ದೊಡ್ಡಬಳ್ಳಾಪುರ, ಹೊಸಕೋಟೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 5814ಚ.ಕಿ.ಮೀ. ಇದು ರಾಜ್ಯದ ಶೇ. 3.02ರಷ್ಟು ಪ್ರದೇಶವನ್ನು ಹೊಂದಿದೆ. ಕರ್ನಾಟಕದ ಜಿಲ್ಲೆಗಳ ಪೈಕಿ ಇದರದು 16ನೆಯ ಸ್ಥಾನ. 35ಹೋಬಳಿ ಕೇಂದ್ರಗಳು, 1713 ಹಳ್ಳಿಗಳು, 9 ಪಟ್ಟಣ ಪಂಚಾಯ್ತಿ, 229 ಗ್ರಾಮ ಪಂಚಾಯಿತಿಯನ್ನು ಹೊಂದಿದೆ. ರಾಜ್ಯದ ಆಗ್ನೇಯ ದಿಕ್ಕಿನಲ್ಲಿರುವ ಈ ಜಿಲ್ಲೆ $12^o.15'$-$13^o.35'$ ಅಕ್ಷಾಂಶ ಮತ್ತು $77^o.05$ ರಿಂದ $78^o$ರೇಖಾಂಶದ ನಡುವೆ ವ್ಯಾಪಿಸಿದೆ. ಸಮುದ್ರ ಮಟ್ಟದಿಂದ 629 ಮೀ.ನಿಂದ 950 ಮೀ. ವ್ಯತ್ಯಾಸದ ಭೂಮೇಲ್ಮೈನ ಎತ್ತರವನ್ನು ಕಾಯ್ದುಕೊಂಡಿದೆ.

**ಭೌಗೋಳಿಕ ಲಕ್ಷಣ :** ಭೌಗೋಳಿಕವಾಗಿ ಜಿಲ್ಲೆಯು ಏರು ತಗ್ಗುಗಳಿಂದ ಕೂಡಿದೆ. ಅಲ್ಲಲ್ಲಿ ಚದುರಿದಂತೆ ಬೆಟ್ಟಗುಡ್ಡಗಳು, ಬೆಟ್ಟಗಳ ಸಾಲುಗಳಿದ್ದು ಕೊಂಚ ಮಟ್ಟಿನ ಪ್ರಸ್ಥಭೂಮಿಯಿಂದ ಕೂಡಿದೆ. ಕನಕಪುರ ತಾಲ್ಲೂಕಿನ ಹೆಚ್ಚು ಭಾಗ ಬೆಟ್ಟಗಳಿಂದ ಆವೃತವಾಗಿವೆ. ಇವು ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಪರ್ವತದಿಂದ ಮುಂದೆ ಸಾಗಿ ಪೂರ್ವ ಘಟ್ಟದವರೆಗೂ ಕಂಡುಬರುತ್ತದೆ. ಬಾಣಂತಿ ಮಾರಿಬೆಟ್ಟ ನರಸಿಂಹದೇವರ ಬೆಟ್ಟ, ಮುದುವಾಡಿ ಬೆಟ್ಟ, ಬಿಳಿಕಲ್ಲು ಬೆಟ್ಟ ಹಾಗೂ ಕೊಪ್ಪ ಬೆಟ್ಟ ಇವು ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಸುತ್ತುವರೆದಿರುವ ಪ್ರಮುಖ ಬೆಟ್ಟಗಳು.




ಮತ್ತೊಂದು ಪರ್ವತ ಶ್ರೇಣಿ ಕನಕಪುರ, ಚನ್ನಪಟ್ಟಣ, ರಾಮನಗರ, ಮಾಗಡಿಗಳನ್ನೊಳಗೊಂಡಿದೆ. ಇವಲ್ಲದೇ ಸಿದ್ದೇದೇವರ ಬೆಟ್ಟ, ಸಾವನದುರ್ಗ, ಶಿವಗಂಗಾ ಹಾಗೂ ನಿಜಗಲ್ಲು ಬೆಟ್ಟಗಳನ್ನು ಹೆಸರಿಸಬಹುದು.

ಜಿಲ್ಲೆಯ ನಾಲ್ಕು ತಾಲೂಕುಗಳಲ್ಲೂ ಸಾಮಾನ್ಯವಾಗಿ ಒಂದೇ ರೀತಿಯ ಹವಾಗುಣವಿರುತ್ತದೆ. ಬೇಸಗೆ ಕಾಲದಲ್ಲಿ ಗರಿಷ್ಠ $32^o$ c ನಷ್ಟು ಉಷ್ಣತೆ ಹೊಂದಿದ್ದು, ಚಳಿಗಾಲದಲ್ಲಿ ಕನಿಷ್ಠ $16^o$ c ನಷ್ಟು ಉಷ್ಣತೆ ಇರುತ್ತದೆ.

ಇಲ್ಲಿ ಏಪ್ರಿಲ್ ತಿಂಗಳಿನಿಂದಲೇ ಮುಂಗಾರಿನ ಹಂಗಾಮು ಆರಂಭವಾಗುತ್ತದೆ. ಸೆಪ್ಟೆಂಬರ್ ತನಕ ಮಳೆಯು ಸುರಿಯುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ವಿಪರೀತವಾಗಿ ಕುಂಠಿತಗೊಂಡಿದೆ. ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ತಿಂಗಳಿನಲ್ಲಿ ವಿಪರೀತ ಚಳಿ ಇರುತ್ತದೆ. ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ವಿಪರೀತ ಬಿಸಿಲು, ಕೆಲವೊಮ್ಮೆ ಅಕ್ಟೋಬರ್ ತಿಂಗಳಿನಲ್ಲೂ ಮಳೆ ಆಗುವುದುಂಟು. ಜಿಲ್ಲೆಯ ವಾರ್ಷಿಕ ಮಳೆ ಪ್ರಮಾಣ 790 ಮಿ.ಮೀ.

**ಭೂ ಹಿಡುವಳಿ ಮತ್ತು ಕೃಷಿಭೂಮಿಯ ವಿಸ್ತೀರ್ಣ**

| ಅತಿ ಸಣ್ಣ | | ಸಣ್ಣ | | ಅರೆ |
|---|---|---|---|---|
| ಮಧ್ಯಮ | ಮಧ್ಯಮ | | ದೊಡ್ಡದು | |
| ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ |
| ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| 97135 | 42453 | 29536 | 41194 | 14428 |
| 38756 | 5261 | 29461 | 645 | 8819 |

**ಅರಣ್ಯಸಂಪತ್ತು :** ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 585,431 ಹೆಕ್ಟೇರ್ ಇದ್ದು ಇದರಲ್ಲಿ ಅರಣ್ಯ ಪ್ರದೇಶ 81,268 ಹೆ.ವಿ. ಹೆಚ್ಚಿನ ಅರಣ್ಯ ಪ್ರದೇಶ ಕಂಡುಬರುವುದು. ರಾಮನಗರ ಮತ್ತು ಕನಕಪುರ ತಾಲ್ಲೂಕುಗಳಲ್ಲಿ. ತೇಗ, ಹೊನ್ನೆ, ಬೀಟೆ, ಹೊಂಗೆ, ಕರಚಿ, ದಿಂಡಿಗ, ಜಾಲರಿ, (ಅರಗು) ಇಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ನೆಲಮಂಗಲ ಹಾಗೂ ದೊಡ್ಡ ಬಳ್ಳಾಪುರದ ಕಡೆ ಕುರುಚಲು ಕಾಡುಗಳು ಕಂಡುಬರುತ್ತವೆ. ಮುತ್ತುಗ, ಕಕ್ಕೆ, ತಂಗಡಿ, ಈಚಲಮರಗಳು ಇಲ್ಲಿ ಹೇರಳವಾಗಿ ಕಂಡುಬರುತ್ತವೆ. ಅರಳಿ, ಆಲ, ಹಲಸು, ಬೇವು, ಬೇಲ, ನೇರಳೆ, ಸೀತಾಫಲ, ಮರಗಳು ಅಲ್ಲಲ್ಲಿ ಇವೆ. ಕನಕಪುರ, ಚೆನ್ನಪಟ್ಟಣ, ಮಾಗಡಿ ಮತ್ತು ಬೆಂಗಳೂರಿನ ಕೆಲವು ಭಾಗಗಳಲ್ಲಿ ಗಂಧದ ಮರಗಳು ಹೇರಳವಾಗಿವೆ.

**ಭೂಮಿಯ ಬಳಕೆ (ಹೆಕ್ಟೇರ್‌ಗಳಲ್ಲಿ)**

| ಭೌಗೋಳಿಕ ವಿಸ್ತೀರ್ಣ | ಅರಣ್ಯ | ಸಾಗುವಳಿ ಲಭ್ಯವಿಲ್ಲದಿರುವ ಭೂಮಿ ವ್ಯವಸಾಯೇತರ | ಸಾಗುವಳಿ ಮಾಡದಿರುವ ಇತರ ಭೂಮಿ ಬಂಜರು | ಒಟ್ಟು |
|---|---|---|---|---|
| 229519 | 11322 | 39391 | 11124 | 50515 |
| ಸಾಗುವಳಿಗೆ ಯೋಗ್ಯವಾದ ಬಂಜರು | ಖಾಯಂ ಗೋಮಾಳ | | | |
| 3898 | 3879 | | | |

ರಾಜಧಾನಿಗೆ ಹೊಂದಿಕೊಂಡಂತಿರುವ ಬೆಂಗಳೂರು ಗ್ರಾಮಾಂತರ ದಿನೇ ದಿನೇ ಬೆಳೆಯುತ್ತಿದೆ. ಈ ಬೆಳವಣಿಗೆಯ ಹಿಂದೆ ನಗರೀಕರಣದ ಕರಿನೆರಳು, ರಿಯಲ್ ಎಸ್ಟೇಟ್ ದಂಧೆಯ ಹಿನ್ನೆಲೆ, ಗ್ರಾಮೀಣ ಜನತೆಯ ವಲಸೆ, ಕೃಷಿ ಇಳುವರಿಯ ಕುಸಿತ ಇವೇ ಮೊದಲಾದ ಕಾರಣಗಳು ಕೃಷಿ ಪ್ರದೇಶ ಕಿರಿದಾಗುವಂತೆ ಮಾಡಿದೆ. 10 ವರ್ಷಗಳಲ್ಲಿ ಜಿಲ್ಲೆಯ ಕೃಷಿ ಭೂಮಿಯು ಗಣನೀಯವಾಗಿ ಕುಸಿದಿದೆ. ಗದ್ದೆಗಳು ಬೃಹತ್ ಕಟ್ಟಡಗಳಿಂದ ಆವೃತ್ತವಾಗಿದೆ.

ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ ತಾಲೂಕುಗಳನ್ನು ಒಳಗೊಂಡಂತೆ ಈ ಬಾರಿ ಅಂದರೆ 2012ರಲ್ಲಿ 57,037 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ. ಒಂದೇ ವರ್ಷದ ಅಂತರದಲ್ಲಿ ಸುಮಾರು 10 ಸಾವಿರ ಹೆಕ್ಟೇರ್ ಕೃಷಿ ಭೂಮಿ ಮಾಯವಾಗಿದೆ.

**ದೇವನಹಳ್ಳಿ ತಾಲೂಕು :** ದೇವನಹಳ್ಳಿ ತಾಲೂಕಿನಲ್ಲಿ ರೇಷ್ಮೆ ಬೆಳೆ ಹಾಗೂ ತೋಟಗಾರಿಕೆ ಪ್ರದೇಶ ಹೊರತುಪಡಿಸಿ, ಸುಮಾರು 10.470 ಹೆಕ್ಟೇರ್ ಭೂ ಪ್ರದೇಶದಲ್ಲಿ ಹಿಂಗಾರು ಮತ್ತು ಮುಂಗಾರು ಬೇಸಾಯವನ್ನು ಮಾಡಲಾಗುತ್ತದೆ.

ದೇವನಹಳ್ಳಿ ತಾಲೂಕಿನಲ್ಲಿ 20 ಗ್ರಾಮ ಪಂಚಾಯಿತಿಗಳು, 211 ಹಳ್ಳಿಗಳು ಇವೆ. ಪ್ರಸ್ತುತ ಸುಮಾರು 90% ರಷ್ಟು ಹಳ್ಳಿಗಳು ರಿಯಲ್ ಎಸ್ಟೇಟ್ ದಾಳಿಗೆ ಒಳಗಾಗಿವೆ. ದೇವನಹಳ್ಳಿ ಪಟ್ಟಣ ವ್ಯಾಪ್ತಿಯ 90% ಭೂಮಿ ಕೃಷಿ ಇಲ್ಲದೆ ಒಣಗುಡುತ್ತಿದೆ. ತಾಲೂಕಿನಲ್ಲಿ 60% ರಷ್ಟು ಕೃಷಿ ಮಂಗಮಾಯವಾಗಿದ್ದು ಪ್ರಸ್ತುತ 9,056 ಎಕರೆ ಜಮೀನು ಇದೆ. ಇದರಲ್ಲಿ 60,11 ಎಕರೆ ಕೃಷಿ ಭೂಮಿ ಇದೆ. ಉಳಿದ 3,044 ಎಕರೆ ಸರಕಾರಿ ಜಮೀನು.

**ನೆಲಮಂಗಲ :** ನೆಲಮಂಗಲ ಸಮೀಪದ ದಾಬಸ್‌ಪೇಟೆ ಸುತ್ತಮುತ್ತಲು ಅರಣ್ಯ ಪ್ರದೇಶವಿದೆ. ಇಲ್ಲಿ ಆನೆಗಳಿವೆ. ಈ ಪ್ರದೇಶದ ಜನರು ಹೆಚ್ಚಾಗಿ ರಾಗಿ, ಬಾಳೆ, ಬತ್ತ, ತೆಂಗು ಬೆಳೆಯುತ್ತಾರೆ.

ಹೆಚ್ಚು ಪ್ರಸ್ಥಭೂಮಿಯನ್ನು ಹೊಂದಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾಡುಗಳು ದಿನೇ ದಿನೇ ಕಡಿಮೆಯಾಗುತ್ತಿದ್ದು ಅರಣ್ಯ ಇಲಾಖೆ ಸಾಮಾಜಿಕ ಅರಣ್ಯಗಳನ್ನು ಬೆಳೆಸುವ ಯೋಜನೆಗಳನ್ನು ಹಾಕಿಕೊಂಡಿದ್ದು ಸಾಲು ಮರಗಳನ್ನು ಅಲ್ಲಲ್ಲಿ ಬೆಳೆಸಿದೆ. ಜಿಲ್ಲೆಯಲ್ಲಿ ಕಾಯ್ದಿರಿಸಿದ ಅರಣ್ಯ ಪ್ರದೇಶ. 1,07,811 ಚ.ಕಿ.ಮೀ. ಸಂರಕ್ಷಿತ ಅರಣ್ಯ ಪ್ರದೇಶ 827 ಚ.ಕಿ.ಮೀ. ಉಳಿದಂತೆ ಗ್ರಾಮಾಂತರ ಭಾಗದಲ್ಲಿ ಅರಣ್ಯ ವ್ಯಾಪಿಸಿದೆ.

**ಜೀವವೈವಿಧ್ಯ :** ಸಸ್ಯ ಸಂಕುಲದ ಬೆಳವಣಿಗೆಯಲ್ಲಿ ಇದು ತುಂಬಾ ಸಹಕಾರಿಯಾಗಿದೆ. ಬಹಳ ದೊಡ್ಡದಾದ ಮರಗಳು ವಿದೇಶೀ ಸಸ್ಯ ವರ್ಗ ಇಲ್ಲಿಯ ಪ್ರಕೃತಿಯನ್ನು ಇನ್ನೂ ಸುಂದರಗೊಳಿಸಿದೆ. ನೀಲಗಿರಿ, ಕಾಫಿ, ಅರೆಬಿಕಾ ಜೊತೆಯಲ್ಲಿ ಕೆಲವು ದೇಶೀಯ ತಳಿಗಳು ಸೇರಿಕೊಂಡಿದೆ. ಇಲ್ಲಿಯ ಕಾಡು, ಮೋಡಗಳನ್ನು ಸಾಂದ್ರೀಕರಿಸುವಲ್ಲಿ ಸಹಕಾರಿಯಾಗಿದ್ದು ತೇವಗೊಂಡಿರುವ ಕಾಡುಗಳು ಸಸ್ಯ ಮತ್ತು ಪ್ರಾಣಿಸಂಕುಲದ ಬೆಳವಣಿಗೆಗೆ ಪೂರಕವಾಗಿದೆ.

**ನೀರಾವರಿ ಸೌಕರ್ಯಗಳು :** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅರ್ಕಾವತಿ, ಪಿನಾಕಿನಿ ಎಂಬ ಎರಡು ನದಿಗಳಿವೆ.

**ಪಿನಾಕಿನಿ :** ಇದು ನದಿ ಪರ್ವತ ಶ್ರೇಣಿಯಲ್ಲಿ ಹುಟ್ಟುತ್ತದೆ. ಉತ್ತರ ದಿಕ್ಕಿಗೆ ಹರಿಯುವ ಪಿನಾಕಿನಿಯನ್ನು, ಉತ್ತರ ಪಿನಾಕಿನಿಯೆಂದು ಕರೆಯುವರು ಈ ನದಿ ಚಿತ್ರಾವತಿ ನದಿಯನ್ನು ಸೇರಿ ಪೆನೆಗೊಂಡೆ ಮೂಲಕ ಹರಿದು ಆಂಧ್ರ ಸೇರುತ್ತದೆ. ದಕ್ಷಿಣಾಭಿಮುಖವಾಗಿ ಹರಿಯುವ ಪಿನಾಕಿನಿಯು 'ದಕ್ಷಿಣ ಪಿನಾಕಿನಿ' ಎಂದು ಪ್ರಸಿದ್ಧಿಯನ್ನು ಪಡೆದಿದೆ. ಈ

ನದಿ ಕಂದಾವರ ಕೆರೆ, ಅಜ್ಜವಾರ ಕೆರೆ, ಶಿಡ್ಲಘಟ್ಟ, ಬದ್ದನ ಕೆರೆ, ಬೂದಿಗೆರೆ, ಹೊಸಕೋಟೆಕೆರೆ, ಯಲ್ಲಪ್ಪ ಶೆಟ್ಟರ್ ಕೆರೆ ಮತ್ತು ವರ್ತೂರ ಕೆರೆಯನ್ನು ಬಳಸಿ ಬಾಗಲೂರು ಮಾರ್ಗವಾಗಿ ಹರಿದು ತಮಿಳುನಾಡಿನ ಮೂಲಕ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಈ ನದಿಯ ಹರಿವಿನಲ್ಲಿ ಹೊಸಕೋಟೆ ಕೆರೆ, ವರ್ತೂರು ಕೆರೆ ಮತ್ತು ಶೆಟ್ಟರ ಕೆರೆ ಪ್ರಮುಖ ಪಾತ್ರ ನಿರ್ವಹಿಸುತ್ತವೆ.

**ಅರ್ಕಾವತಿ ನದಿ (ಜಲಾಶಯ) :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಹುಮುಖ್ಯ ನದಿಗಳಲ್ಲಿ ಅರ್ಕಾವತಿಯು ಒಂದಾಗಿದೆ. ನಂದಿ ಬೆಟ್ಟದಲ್ಲಿ ಹುಟ್ಟಿ ಚುಂಚಿ ಗ್ರಾಮದ ಬಳಿ ಜಲಪಾತವಾಗಿ ಧುಮುಕಿ ಕಾವೇರಿನದಿಯೊಂದಿಗೆ ಸಂಗಮವಾಗುತ್ತದೆ.

ಜಲಾಶಯದ ಗರಿಷ್ಠ ಮಟ್ಟ 20 ಮೀಟರ್‌ಗಳಾಗಿದ್ದು, ಪಕ್ಕದ ಹಳ್ಳಿಗಳು ಮುಳುಗಡೆಯಾಗಬಾರದೆಂಬ ಕಾರಣಕ್ಕಾಗಿ ಈ ನೀರಿನ ಮಟ್ಟವನ್ನು 15 ಮೀಟರ್‌ಗಳಿಗೆ ನಿಗದಿಪಡಿಸಲಾಗಿದೆ. ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಕೋಲಾರ, ಮತ್ತು ರಾಮನಗರ ಜಿಲ್ಲೆಯ ರೈತರಿಗೆ ಅರ್ಕಾವತಿ ಜೀವನದಿಯಾಗಿದೆ.

**ಬೆಂಗಳೂರು ಗ್ರಾಮಾಂತರ ಪ್ರದೇಶದ ಪ್ರಮುಖ ಕೆರೆಗಳು :** ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸುಮಾರು 128 ಕೆರೆಗಳಿವೆ ಎಂದು ಅಂದಾಜು. ಈ ಕೆರೆಗಳು ಕೃಷಿಗೆ ಹೆಚ್ಚು ಪೂರಕವಾದಂತಹ ವಾತಾವರಣವನ್ನು ಕಲ್ಪಿಸದಿರುವುದು ವಿಪರ್ಯಾಸವೇ ಸರಿ, ನಿರ್ವಹಣೆ ರಹಿತವಾದ ಕೆರೆಗಳ ಪುನರುತ್ಥಾನ ಯೋಜನೆಗಳು ಇನ್ನೂ ನಡೆಯಬೇಕಾಗಿದೆ.

**ಶೆಟ್ಟರ ಕೆರೆ (ಯಲ್ಲಮಲ್ಲಪ್ಪನ ಕೆರೆ) :** ಹೊಸಕೋಟೆಯಿಂದ ದಕ್ಷಿಣ ಪಿನಾಕಿನಿ ನದಿ ಮುಂದೆ ಸಾಗುತ್ತಾ, ಸೀಗೆಹಳ್ಳಿ, ಮಲ್ಲಸಂದ್ರ, ಕೊರಳೂರು ಮುಖೇನ ಹರಿದು, ಕೃಷ್ಣರಾಜಪುರದ ಹಾದಿಯಾಗಿ ಶೆಟ್ಟರ ಕೆರೆಗೆ ಹರಿಯುತ್ತದೆ. ಈ ನೀರು ತುಂಬಾ ವಿಷಪೂರಿತವಾಗಿರುವುದರಿಂದ ಕೃಷಿಗೆ ನಿರುಪಯುಕ್ತವಾಗಿ ಪರಿವರ್ತನೆಗೊಂಡಿದೆ. ಮುಂದೆ ಶೆಟ್ಟಿಹಳ್ಳಿ ಚೆನ್ನಸಂದ್ರ, ನಾಗೊಂಡಹಳ್ಳಿ, ಸಮೇತನಹಳ್ಳಿ ಮುಖೇನ ಹರಿದು, ಸಮೇತನ ಹಳ್ಳಿಯಲ್ಲಿ ವರ್ತೂರು ಕೆರೆಯೊಂದಿಗೆ ದಕ್ಷಿಣ ಪಿನಾಕಿನಿ ಸೇರಿ ತಮಿಳುನಾಡಿಗೆ ಹರಿಯುತ್ತದೆ.

ಹೊಸಕೋಟೆ ಕೆರೆ ಶೆಟ್ಟಿಕೆರೆ (ಯಲ್ಲಮಲ್ಲಪ್ಪನಕೆರೆ) ಹೊಸಕೋಟೆ ದೊಡ್ಡಮ್ಮಣ್ಣಿ ಕೆರೆ, ಚಿಕ್ಕಮ್ಮಣ್ಣಿ ಕೆರೆ, ವರ್ತೂರು ಕೆರೆ ಮುಂತಾದವು ಪ್ರಮುಖವಾದಂಥವು.

ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ವ್ಯಾಪ್ತಿಗೆ ಬರುವ ಸುಮಾರು 500 ಕ್ಕೂ ಅಧಿಕ ಕೆರೆಗಳ ಪುನಶ್ಚೇತನಗೊಳಿಸುವ ಕಾರ್ಯ ಭರದಿಂದ ಸಾಗಬೇಕಿದೆ. ಅದಕ್ಕಾಗಿ ರಾಜ್ಯ ಸರಕಾರ ಸುಮಾರು 900 ಕೋಟಿ ರೂಪಾಯಿ ಅನುದಾನದ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಸಲ್ಲಿಸಿದೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬಾವಿಗಳಿಂದ ಸುಮಾರು 65 ಹೆಕ್ಟೇರ್ ಪ್ರದೇಶಕ್ಕೆ ನೀರು ಉಣಿಸುತ್ತಿದೆ ಎಂದು ಅಂದಾಜಿಸಲಾಗಿದೆ. ಈ ಬಾವಿಗಳು ಕೃಷಿ ಚಟುವಟಿಕೆಗೆ ಪೂರಕ ಮಾತ್ರವಲ್ಲದೆ, ಕುಡಿಯುವ ನೀರಿನ ಆವಶ್ಯಕತೆಯನ್ನು ಪೂರೈಸುತ್ತವೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸುಮಾರು 29,969 ಹೆಕ್ಟೇರ್ ಪ್ರದೇಶಕ್ಕೆ ಸಾವಿರಾರು ಕೊಳವೆ ಬಾವಿಗಳು ನೀರನ್ನು ಉಣಿಸುತ್ತವೆ. ಸಾವಿರಕ್ಕೂ ಅಧಿಕ ಕೊಳವೆ ಬಾವಿಗಳಿವೆ. ಇನ್ನೂ ಏತ ನೀರಾವರಿಯಿಂದ 43 ಹೆಕ್ಟೇರ್ ಕೃಷಿ ಸಾಧ್ಯವಾಗಿದೆ.

ಬೆಂಗಳೂರು ಗ್ರಾಮಾಂತರ ಪ್ರದೇಶದ ಕೆರೆಗಳು ಸುಮಾರು 128 ಹೆಕ್ಟೇರ್ ಪ್ರದೇಶಕ್ಕೆ ನೀರು ಉಣಿಸುತ್ತದೆ. ಒಟ್ಟಾರೆ ಬಾವಿ, ಕೊಳವೆ ಬಾವಿ ಮತ್ತು ಕೆರೆ ನೀರಾವರಿಯಿಂದ ಒಟ್ಟು 30,007 ಹೆಕ್ಟೇರ್ ಭೂ ಪ್ರದೇಶದಲ್ಲಿ ಕೃಷಿಯು ಸರಾಗವಾಗಿ ಸಾಗುತ್ತಿರುವುದನ್ನು ಗಮನಿಸಬಹುದು.

**ಅಂತರ್ಜಲದ ಮಟ್ಟ :** ಜಿಲ್ಲೆಯಲ್ಲಿ ನೀರಾವರಿ ಭೂಮಿಯ ಪ್ರಮಾಣ ಶೇ. 28ರಷ್ಟಿದೆ. ನೀರಿಗಾಗಿ ಕೆರೆ, ಬೋರ್‌ವೆಲ್‌ಗಳ ಮೇಲಿನ ಅವಲಂಬನೆಯೇ ಹೆಚ್ಚಾಗಿದೆ. ಜಿಲ್ಲೆಯ ಬಹುತೇಕ ಪ್ರದೇಶದಲ್ಲಿ 1200 ಅಡಿ ಬಾವಿ ಕೊರೆದರೂ ನೀರು ಸಿಗುತ್ತಿಲ್ಲ. ಇದ್ದ ಕೊಳವೆ ಬಾವಿಗಳು ಬತ್ತಿ ಹೋಗುತ್ತಿರುವಂತಹ ಪರಿಸ್ಥಿತಿಯು ಅಲ್ಲಲ್ಲಿ ನಿರ್ಮಾಣವಾಗಿದೆ. ಈ ಕಾರಣದಿಂದ ರೇಷ್ಮೆ ಮತ್ತು ದ್ರಾಕ್ಷಿ ಉತ್ಪಾದನೆ ಮತ್ತಷ್ಟು ಕಡಿಮೆಯಾಗಿದೆ.

**ನೀರಾವರಿಯಾದ ನಿವ್ವಳ ಪ್ರದೇಶ ಹೆಕ್ಟೇರ್‌ಗಳಲ್ಲಿ**

| ಕಾಲುವೆಗಳಿಂದ | ಕೆರೆಗಳಿಂದ | ಬಾವಿಗಳಿಂದ | ಕೊಳವೆ ಬಾವಿಗಳಿಂದ | ಏತ ನೀರಾವರಿ ಮೂಲದಿಂದ | ಇತರೆ | ಒಟ್ಟು |
|---|---|---|---|---|---|---|
| 0 | 128 | 65 | 29969 | 43 | 0 | 30007 |

ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಧಾನ್ಯಗಳನ್ನು ಅಥವಾ ತರಕಾರಿಗಳನ್ನು ಅಥವಾ ಹಣ್ಣುಗಳನ್ನು ಅಥವಾ ತೋಟಗಳನ್ನು ಬೆಳೆಸುತ್ತಾರೆ. ಅವುಗಳ ವಿಸ್ತೀರ್ಣ, ವಿಶೇಷಗಳು :

**ಧಾನ್ಯಗಳು :** ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬತ್ತ, ರಾಗಿ, ಮುಸುಕಿನ ಜೋಳ, ಸಜ್ಜೆ, ತೊಗರಿ, ನೆಲಗಡಲೆ, ಧಾನ್ಯಗಳನ್ನು ಬೆಳೆಯುತ್ತಾರೆ.

**ರಾಗಿ :** ಇದರ ವೈಜ್ಞಾನಿಕ ಹೆಸರು 'ಎಲೂಸಿನ್ ಕೋರಕಾನ'. ಪ್ರಪಂಚದಲ್ಲಿ ಭಾರತವೇ ಅತೀ ಹೆಚ್ಚು ರಾಗಿ ಬೆಳೆಸುವ ದೇಶವೆಂದು ಹೆಸರುವಾಸಿಯಾಗಿದೆ. ಭಾರತದಲ್ಲಿ ಕರ್ನಾಟಕ ಅತ್ಯಧಿಕವಾಗಿ ಬೆಳೆಸುವ ರಾಜ್ಯವಾಗಿದೆ. ನೀರಾವರಿ ಸೌಲಭ್ಯವಿಲ್ಲದೆ ಮಳೆಯನ್ನೇ ನಂಬಿ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಈ ರಾಗಿಯನ್ನು ಬೆಳೆಯುತ್ತಾರೆ.

**ಕಾಬೂಲ್ ಕಡ್ಲೆ :** ದೇವನಹಳ್ಳಿಯ ಫಲವತ್ತಾದ ಮಣ್ಣಿನಲ್ಲಿ ಮುಂಗಾರಿನ ಬೀಟ್‌ರೂಟ್ ಕೃಷಿಯ ಅನಂತರದ ಬೆಳೆಯಾಗಿ 'ಕಾಬೂಲ್ ಕಡ್ಲೆ' ಬೇಸಾಯವನ್ನು ಪ್ರಾಯೋಗಿಕವಾಗಿ ರೈತರು ಆರಂಭಿಸಿದ್ದಾರೆ. ಪ್ರಸ್ತುತ ಇಲ್ಲಿಯ ಚಳಿಯ ವಾತಾವರಣವು ಈ ಕೃಷಿಗೆ ಯುಕ್ತವಾಗಿದೆ. ಅಲ್ಲದೆ ಈ ಪ್ರಯೋಗಕ್ಕೆ ಬೆಂಗಳೂರು ಕೃಷಿ ವಿಜ್ಞಾನ ಕೇಂದ್ರವು ಹಲವಾರು ಸಲಹೆಗಳನ್ನು ನೀಡಿದೆ ಎಂದು ಇಲ್ಲಿಯ ರೈತರು ತಿಳಿಸಿದ್ದಾರೆ.

**ಮುಸುಕಿನ ಜೋಳ :** ಮುಸುಕಿನ ಜೋಳವನ್ನು ಆಹಾರ ಧಾನ್ಯಗಳ ರಾಣಿ ಎಂದು ಕರೆಯುತ್ತಾರೆ. ಸಸ್ಯ ವಿಜ್ಞಾನದಲ್ಲಿ ಮುಸುಕಿನ ಜೋಳವನ್ನು 'ಜೀಯಾ ಮೇಯಸ್' ಎಂದು ಕರೆಯುತ್ತಾರೆ. ಇದು ಮೆಕ್ಸಿಕೋ ದೇಶಕ್ಕೆ ಸೇರಿದ್ದು ಇಂದು ಪ್ರಪಂಚಾದ್ಯಂತ ವ್ಯಾಪಕವಾಗಿ ಹಬ್ಬಿದೆ. ಭಾರತದಲ್ಲಿ ಮುಸುಕಿನ ಜೋಳ ಬೆಳೆಯುವ ರಾಜ್ಯಗಳ ಪೈಕಿ ಶೇ. 40 ರಷ್ಟು ಇಳುವರಿಯನ್ನು ಕರ್ನಾಟಕ ಕೊಡುಗೆಯಾಗಿ ನೀಡಿದೆ. ಈ ಬೆಳೆಯನ್ನು ನೀರಾವರಿ ಮತ್ತು ಮಳೆಯಾಶ್ರಿತ ಬೆಳೆಯಾಗಿ ಬೆಳೆಸುತ್ತಾರೆ. ಹೆಕ್ಟೇರ್‌ಗೆ ಸರಾಸರಿ 27.83 ಕ್ವಿಂಟಾಲ್ ಇಳುವರಿಯನ್ನು ನೀಡುತ್ತದೆ. ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನಲ್ಲಿ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಾರೆ.

**ಹೊಸ ಕೋಟೆಯ ಸ್ವೀಟ್ ಕಾರ್ನ್ ಮೆಕ್ಕೆಜೋಳ :** ಹೊಸಕೋಟೆ ತಾಲ್ಲೂಕು ತೋಟಗಾರಿಕೆ ಮತ್ತು ಬೈಟೆಕ್ ಕೃಷಿಯ ಬೆಳೆಗೆ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿಯ ಅನೇಕ ರೈತರು ಬಹಳ ಉತ್ತಮ ರೀತಿಯಲ್ಲಿ ಹೂ, ಹಣ್ಣು, ತರಕಾರಿ ಬೇಸಾಯ ಕೈಗೊಳ್ಳುತ್ತಾರೆ. 'ಜಿಯಾ ಮೆಸ ಕಾನ್‌ವರ್ ಸ್ಯಾಕರೇಟಿ ವೆರೈಟಿ' ಎಂಬ ವೈಜ್ಞಾನಿಕ ಹೆಸರುಳ್ಳ ಮೆಕ್ಕೆಜೋಳ ಪ್ರಭೇದವನ್ನು ಇವರು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಈ ಪ್ರಭೇದವು ಅಮೆರಿಕಾದಲ್ಲಿ ಹೆಚ್ಚು ಪ್ರಚಲಿತ. ಇತ್ತೀಚೆಗೆ ಹೈಬ್ರಿಡ್ ಮತ್ತು ಸುಧಾರಿತ ತಳಿಗಳು ಮಾರುಕಟ್ಟೆಗೆ ಬಂದಿದೆ.

**ದೊಡ್ಡ ಬೈರನೆಲ್ಲು (ಬತ್ತ) :** ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ದೊಡ್ಡ 'ಬೈರನೆಲ್ಲು' ಬೆಳೆಯುತ್ತಾರೆ. ಇದು ಅನೇಕ ರೋಗಗಳಿಗೆ ರಾಮಬಾಣವಿದ್ದಂತೆ ಇಲ್ಲಿಯ ಜನ ಎದೆನೋವು ಹಾಗೂ ರಕ್ತ ಭೇದಿಗೆ ಈ ನೆಲ್ಲು ಬಳಸಿ ಗಂಜಿ ಮಾಡಿ ಸೇವಿಸುತ್ತಾರೆ. ಇದರಿಂದ ರೋಗ ನಿವಾರಣೆಯಾಗುತ್ತದೆ ಎಂಬುದು ಇವರ ಅನಿಸಿಕೆ.

**ತರಕಾರಿಗಳು**

**ಬೀಟ್ ರೂಟ್ :** ಬೀಟ್‌ರೂಟ್ ಒಂದು ಉತ್ತಮ ತರಕಾರಿಯಾಗಿದ್ದು, ಇದನ್ನು ಹೆಚ್ಚಾಗಿ ಭಾರತದಲ್ಲಿ ಬೆಳೆಸಲಾಗುತ್ತದೆ. 'ಚಿನೋಪೂಡಿ ಯೇಸಿ' ಕುಟುಂಬಕ್ಕೆ ಸೇರಿದ ಇದನ್ನು ವೈಜ್ಞಾನಿಕವಾಗಿ 'ಬಿಟಾ ವಲ್ಗಾರೀಸ್' ಎಂದು ಕರೆಯುತ್ತಾರೆ. ಭಾರತದ ವಿವಿಧ ರಾಜ್ಯಗಳಲ್ಲಿ ಈ ತರಕಾರಿ ಬೆಳೆಯುತ್ತಿದ್ದು, ಕರ್ನಾಟಕ ಬಹು ಮುಖ್ಯ ಸ್ಥಾನವನ್ನು ಪಡೆದಿದೆ. ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಕೋಲಾರ, ಹಾಸನ ಜಿಲ್ಲೆಯ ರೈತರು ಈ ತರಕಾರಿ ಕೃಷಿಯಲ್ಲಿ ಹೆಚ್ಚಾಗಿ ತೊಡಗಿಕೊಂಡಿದ್ದಾರೆ.

ಮರಳು ಮಿಶ್ರಿತವಾದಂತಹ ಗೋಡು ಮಣ್ಣನ್ನು ಈ ಕೃಷಿಯಲ್ಲಿ ಬಳಸುವುದು ಉತ್ತಮ. ಏಕೆಂದರೆ ಈ ಮಣ್ಣು ನೀರನ್ನು ಚೆನ್ನಾಗಿ ಹೀರಿಕೊಳ್ಳುತ್ತದೆ. ಇದರ ಕೃಷಿಗೆ ಚಳಿಗಾಲ ಯುಕ್ತವಾದುದು. ಅಂದರೆ ಅಕ್ಟೋಬರ್-ನವೆಂಬರ್. ಮಳೆಗಾಲದ ಬೆಳೆಯನ್ನು ಪಡೆಯಲಿಚ್ಛಿಸುವ ರೈತರು ಜೂನ್, ಜುಲೈ ತಿಂಗಳಿನಲ್ಲಿ ಕೃಷಿ ಚಟುವಟಿಕೆ ಆರಂಭಿಸಬೇಕು. ಪ್ರಸ್ತುತ ಡೆಟ್ರಾಯಿಟ್, ಡಾರ್ಕರೆಟ್, ಕ್ರಿಮ್ಸನ್ ಗೋಲ್ಡ್ ತಳಿಗಳಿವೆ.

**ಹಣ್ಣುಗಳು ಮತ್ತು ತೋಟಗಳು :**

**1) ದೇವನಹಳ್ಳಿಯ ಅನಾಬ್ ಇಷಾಯಿ ದ್ರಾಕ್ಷಿ (ಒಣದ್ರಾಕ್ಷಿ)**

ಬೆಂಗಳೂರು ಗ್ರಾಮಾಂತರ ವ್ಯಾಪ್ತಿಗೆ ಒಳಪಡುವ ದೇವನಹಳ್ಳಿ ತಾಲ್ಲೂಕಿನಲ್ಲಿ ವರ್ಷಕ್ಕೆ500 ಹೆಕ್ಟೇರ್ 'ಅನಾಬ್ ಇಷಾಯಿ' ದ್ರಾಕ್ಷಿಯನ್ನು ಬೆಳೆಯಲಾಗುತ್ತದೆ.

**2) ಬೆಂಗಳೂರು ಬ್ಲೂ ದ್ರಾಕ್ಷಿ :** ಇದು ತುಂಬಾ ಪುರಾತನ ದೇಶಿಯ ತಳಿ. ಇದನ್ನು ಚಿಕ್ಕಬಳ್ಳಾಪುರ, ಹೊಸಕೋಟೆ, ದೇವನಹಳ್ಳಿ, ದೊಡ್ಡ ಬಳ್ಳಾಪುರದಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ವಾರಂಗಲ್ ಕಾಡಿನಿಂದ ತಂದು ಬೆಳೆಯುತ್ತಿದ್ದ ಈ ದೇಸಿಯ ತಳಿ'ವಾರ್ನಿಯರ್' ಜನಾಂಗದ ಆಸ್ತಿಯಾಗಿದೆ. ಇದಕ್ಕೆ 800 ವರ್ಷದ ಪುರಾತನ ಇತಿಹಾಸವಿದೆ.

ಕಾಯಿ ಇರುವ ಈ ದ್ರಾಕ್ಷಿ ಹಸಿರು ಬಣ್ಣ ತಾಳಿ, ಆಮೇಲೆ ನೇರಳೆ ಮತ್ತು ನೀಲಿ ಬಣ್ಣಕ್ಕೆ ತಿರುಗುತ್ತದೆ. ಹಣ್ಣಾದಂತೆ ಕಡುನೀಲಿ ಬಣ್ಣಹೊಂದಿ ತುಂಬಾ ಉತ್ತಮ ಪರಿಮಳ ಬರುತ್ತದೆ. ಈ ದ್ರಾಕ್ಷಿ ಬೆಳೆಗೆ ವಿಪರೀತ ಬಿಸಿಲು ಅಗತ್ಯ. ಅಡಿಯಲ್ಲಿ ತೇವಾಂಶ ಕೂಡ ಹೆಚ್ಚಿರಬೇಕು. ಬೆಂಗಳೂರು ಬ್ಲೂ ದ್ರಾಕ್ಷಿಯನ್ನು ವರ್ಷಕ್ಕೆ 2 ಬಾರಿ ಬೆಳೆಯುತ್ತಾರೆ. ಅಕ್ಟೋಬರ್ ತಿಂಗಳು ಹೆಚ್ಚು ಯುಕ್ತವಾದ ಸಮಯವಾಗಿದ್ದು ಮೊದಲ ಫಸಲು 120 ರಿಂದ 130 ದಿನಗಳಿಗೆ ಸಿಕ್ಕರೆ ; 2ನೇ ಫಸಲು 90 ದಿನಕ್ಕೆ ಸಿಗುತ್ತದೆ.

**ದವನ :** ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ರೈತರು ಹೆಚ್ಚಾಗಿ ಚಳಿಗಾಲದಲ್ಲಿ ಈ ಸೊಪ್ಪನ್ನು ಬೆಳೆಯುತ್ತಾರೆ. ಇದೊಂದು ಸುಗಂಧ ಬೀರುವ ಸಣ್ಣ ಹಸುರು ಸಸ್ಯ. ದಕ್ಷಿಣ ಭಾರತ ಮೂಲದ ಈ ಸಸ್ಯದ ವೈಜ್ಞಾನಿಕ ಹೆಸರು 'ಆ ಟೀರ ಮಿಷಿಯಾ ಪಲನ್ಸ್'. ಇದರ ಹೂ ಮತ್ತು ಎಲೆಯನ್ನು ಅಲಂಕಾರ ಮತ್ತು ಸುಗಂಧ ಎಣ್ಣೆ ಉತ್ಪಾದಿಸಲು ಬಳಸುತ್ತಾರೆ. ಒಂದು ಕೆ.ಜಿ. ಬಿತ್ತನೆ ಬೀಜಕ್ಕೆ 1500 ರಿಂದ 1800 ರೂ. ಇದರ ಎಣ್ಣೆಯನ್ನು ಫ್ರಾನ್ಸ್, ಅಮೆರಿಕಾ, ಜರ್ಮನಿ, ಜಪಾನ್ ಮತ್ತು ನೆದರ್‌ಲ್ಯಾಂಡ್ ದೇಶಗಳಿಗೆ ರಫ್ತು ಮಾಡಲಾಗುತ್ತದೆ.

ಎಣ್ಣೆಯನ್ನು ಸುಗಂಧ ದ್ರವ್ಯವಾಗಿ, ಗಾಯ, ಸೋಂಕು, ಕೆಮ್ಮು, ನೆಗಡಿಗೆ ಔಷಧವಾಗಿ ಬಳಸುತ್ತಾರೆ. ಪೌಡರ್, ಮೈಸೋಪು ಉತ್ಪಾದನೆಯಲ್ಲಿ ಹೆಚ್ಚಾಗಿ ಬಳಸಲ್ಪಡುತ್ತದೆ. ಪ್ರಸ್ತುತ ಒಂದು ಟನ್ ದವನದ ಸೊಪ್ಪಿಗೆ 4 ರಿಂದ 5 ಸಾವಿರ ರೂಪಾಯಿವರೆಗೂ ಬೆಲೆ ಇದೆ. ನೀರಾವರಿ ಸೌಲಭ್ಯ ಇರುವ ರೈತರಿಗೆ ಈ ಸೊಪ್ಪು ಬೆಳೆಯುವುದು ಸುಲಭ.

**ದೇವನಹಳ್ಳಿಯ ರೇಷ್ಮೆ ಬೆಳೆ :** ಕರ್ನಾಟಕದಲ್ಲಿ ರಾಮನಗರ ಜಿಲ್ಲೆ ಹೊರತುಪಡಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯೇ ಅತಿ ಹೆಚ್ಚು ರೇಷ್ಮೆ ಬೆಳೆಯುವ ಜಿಲ್ಲೆಯಾಗಿದೆ. ಈ ಬಾರಿ 2500 ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 3800 ರೈತರು ರೇಷ್ಮೆ ಬೆಳೆ ಬೆಳೆದಿದ್ದಾರೆ.

**ದೊಡ್ಡ ಬಳ್ಳಾಪುರದ ರೇಷ್ಮೆ ಸಾಕಾಣೆಯ ಹೊಸ ಪ್ರಯೋಗ :** ಇತ್ತೀಚಿನ ದಿನಗಳಲ್ಲಿ ಅಂದರೆ 2011ರಿಂದೀಚೆಗೆ ದೊಡ್ಡಬಳ್ಳಾಪುರ ವ್ಯಾಪ್ತಿಯಲ್ಲಿ ರೇಷ್ಮೆ ಸಾಕಾಣಿಕೆಯ ವೈಜ್ಞಾನಿಕ ವಿಧಾನಗಳು ಪರಿಚಯವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಇದರಲ್ಲಿ 'ಶೂಟ್‌ರೈವಿಂಗ್' (ರೆಂಬೆ ಸಾಕಾಣಿಕೆ

ಪದ್ಧತಿ) ಅತ್ಯಂತ ಸುಲಭ ಮತ್ತು ಲಾಭದಾಯಕವಾಗಿದೆ. 3 ಅಂತಸ್ತುಗಳನ್ನು ಮಾಡಿ ರೇಷ್ಮೆ ಹುಳು ಸಾಕಾಣಿಕೆ ಮಾಡಲಾಗುತ್ತದೆ. ಇದರಿಂದ ಪ್ರತಿದಿನವು ಪಿಕ್ಕೆ ಬದಲಿಸುವುದು ಕಷ್ಟ ಇಲ್ಲ.

**ಕಾಕಡ ಹೂವು :** ನೀರಾವರಿ ಸೌಲಭ್ಯಕ್ಕಿಂತಲೂ ಮಳೆಯ ಆಶ್ರಯದಲ್ಲಿಯೇ ಇದರ ಬೇಸಾಯ ನಡೆಯುತ್ತದೆ. ಡಿಸೆಂಬರ್ ಮತ್ತು ಜನವರಿ ತಿಂಗಳ ಚಳಿಗೆ ಹೂವಿನ ಇಳುವರಿ ತುಂಬಾ ಕಡಿಮೆ ಇರುತ್ತದೆ. ಈ ಬೇಸಾಯದಲ್ಲಿ ಕೊಟ್ಟಿಗೆ ಗೊಬ್ಬರ, ಕೆರೆ ಮಣ್ಣು ಇತ್ಯಾದಿಯನ್ನು ಗೊಬ್ಬರವಾಗಿ ಬಳಸಲಾಗುತ್ತಿದೆ.

ಪ್ರದೇಶದ ನೆಲದ ಗುಣ, ಸಾಂಪ್ರದಾಯಿಕ ಕೃಷಿ ವಿಧಾನ, ಗೊಬ್ಬರ ಬಳಕೆ, ದೇಶಿಯ ತಳಿಗಳು, ಅವುಗಳ ವೈಶಿಷ್ಟ್ಯ ಇವುಗಳನ್ನ ಅವಲಂಬಿಸಿ ಕೃಷಿ ಮಾಡಲಾಗುವುದು.

**ಸ್ಥಳೀಯ ತಳಿಗಳು :**

**ಆಲೂಗೆಡ್ಡೆ ಬೆಳೆ :** ಬೆಂಗಳೂರು ಗ್ರಾಮಾಂತರ ದೇವನಹಳ್ಳಿ ತಾಲ್ಲೂಕಿನಲ್ಲಿ ಸು. 250 ಹೆಕ್ಟೇರ್ ಭೂಪ್ರದೇಶದಲ್ಲಿ ಇದನ್ನು ಬೆಳೆಯುತ್ತಾರೆ. ಹವಾಗುಣಕ್ಕೆ ಅನುಗುಣವಾಗಿ 'ಜ್ಯೋತಿ' ಮತ್ತು 'ಕುಪ್ರಿ' ಎಂಬಂತಹ ತಳಿಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ.

**ಬಿತ್ತನೆ ವಿಧಾನ:** ಆಲೂಗೆಡ್ಡೆ ಕೃಷಿ ಮಾಡುವಂತಹ ಸಂದರ್ಭದಲ್ಲಿ ಸಾಲಿನಿಂದ ಸಾಲಿಗೆ ಒಂದೂವರೆ ಅಡಿ ಸ್ಥಳ ಬಿಟ್ಟು 1 ಅಡಿ ಅಂತರದಲ್ಲಿ ಬೀಜಗಳನ್ನು ಬಿತ್ತನೆ ಮಾಡಬೇಕು.

ಬಿತ್ತನೆ ಮಾಡುವುದಕ್ಕಿಂತಲೂ ಮೊದಲು ಪ್ರತಿ ಎಕರೆಗೆ ಶೇ. 50 ರಷ್ಟು 25 ಕೆ.ಜಿ. ಸಾರಜನಕವನ್ನು ಉಣಿಸಬೇಕು. ಶೇ. 40 ರಷ್ಟು ರಂಜಕವನ್ನು ನೀಡಬೇಕು. ನಾಲ್ಕು ವಾರಗಳು ಕಳೆದ ನಂತರ ಮತ್ತೊಮ್ಮೆ 1 ಎಕರೆಗೆ 25 ಕೆ.ಜಿ. ಸಾರಜನಕ ನೀಡಬೇಕು. ಗೊಬ್ಬರ ನೀಡಿದ ಭೂ ಮೇಲ್ಮೆಗೆ ತೆಳುವಾಗಿ ನೀರನ್ನು ಹಾಯಿಸಿ, ಬುಡಕ್ಕೆ ಮಣ್ಣನ್ನು ಏರಿಸಬೇಕು. ತೇವಾಂಶವನ್ನು ಪರಿಶೀಲಿಸಿ ವಾರಕ್ಕೊಮ್ಮೆ ಅಥವಾ ಆವಶ್ಯಕತೆಗೆ ತಕ್ಕಂತೆ ಸೀಮಿತವಾಗಿ ನೀರನ್ನು ಉಣಿಸಿ ಮಣ್ಣನ್ನು ಗುಡ್ಡಕ್ಕೆ ಏರಿಸಬೇಕು. ಇದರಿಂದ ಆಲೂಗೆಡ್ಡೆ ಗಾತ್ರವನ್ನು ಹೆಚ್ಚಿಸಬಹುದು.

**ರಾಗಿ :** ರಾಗಿಯಲ್ಲಿ ವಿವಿಧ ಬಗೆಯ ತಳಿಗಳನ್ನು ಬೆಳೆಯುವರು. ಅವುಗಳೆಂದರೆ : 1. ಅರುಣ, 2. ಉದಯ, 3. ಪೂರ್ಣ, 4. ಅನ್ನಪೂರ್ಣ, 5. ಶಕ್ತಿ. ಭಾರತ ಮತ್ತು ಆಫ್ರಿಕಾ ದೇಶದ ತಳಿಗಳನ್ನು ಸಮ್ಮಿಲನಗೊಳಿಸಿ ತಯಾರಿಸಿದ ತಳಿಯನ್ನು 'ಇಂಡಾಫ್' ಎನ್ನುವರು.

**ಉಂಡೆ :** (ಹಾವೇರಿ) ಈ ತಳಿಯ ಎತ್ತರ 3 ರಿಂದ 3.5 ಅಡಿ. ಇದರ ಬೆಳೆವಣಿಗೆಯ ಅವಧಿ 120 ರಿಂದ 130 ದಿನಗಳು.

**ಬಡಗು ಮತ್ತು ಬುಲ್ಡೆ (ಶಿಕಾರಿಪುರ) :** ದೇವನಹಳ್ಳಿ ತಾಲ್ಲೂಕಿನ ರೈತರು ಜಿ.ಪಿ.ಯು ಎಂಬ ರಾಗಿ ತಳಿ ಹೆಚ್ಚಾಗಿ ಬೆಳಸುತ್ತಾರೆ.

**ಮುಸುಕಿನ ಜೋಳ :** ರಾಜ್ಯದಲ್ಲಿ ಮುಖ್ಯವಾಗಿ ಲಭ್ಯವಿರುವ ತಳಿಗಳೆಂದರೆ ಗಂಗಾ 1, ಗಂಗಾ - 11, ಡೆಕ್ಕನ್ 101, ಎನ್.ಎ.ಸಿ. 6002, ಎನ್.ಎ.ಸಿ. 6004, ನಿತ್ಯಶ್ರೀ (ಎನ್.ವಿ.ಹೆಚ್.) ಇವೆಲ್ಲ ಖಾಸಗಿ ಕಂಪೆನಿಗಳ ವಿವಿಧ ಜಾತಿಯ ತಳಿಗಳಾಗಿದ್ದು ರಾಜ್ಯದಲ್ಲಿ ಇದನ್ನು 23.5 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು ಇದರ ಉತ್ಪಾದನೆಯು 27,30 ಲಕ್ಷ ಟನ್‌ಗಳಾಗಿದೆ.

**ಬೇಸಾಯ ಕ್ರಮ :** ಉಳುಮೆ ಮಾಡಿದ ಭೂಮಿಗೆ ಕೊಟ್ಟಿಗೆ ಗೊಬ್ಬರವನ್ನು ಸೇರಿಸಬೇಕು. ಎರಡು ವಾರಗಳ ಅನಂತರ ಬಿತ್ತನೆ ಬೀಜವನ್ನು ಸಾಲಿನಿಂದ ಸಾಲಿಗೆ ಎರಡು ಅಡಿ ಹಾಗೂ ಬೀಜದಿಂದ ಬೀಜಕ್ಕೆ ಒಂದು ಅಡಿ ಅಂತರದಲ್ಲಿ ಬಿತ್ತನೆ ಮಾಡಬೇಕು.

ಬೀಜ ಬಿತ್ತನೆ ಮಾಡುವುದಕ್ಕಿಂತ ಮುಂಚಿತವಾಗಿ ಸಾಲುಗಳಲ್ಲಿ ಮೂಲ ಗೊಬ್ಬರವಾಗಿ 100 ಕಿ.ಗ್ರಾಂ. ಸಾರಜನಕ, 50 ಕಿ.ಗ್ರಾಂ. ರಂಜಕ ಹಾಗೂ 50 ಕಿ.ಗ್ರಾಂ. ಪೊಟ್ಯಾಷ್ ಒದಗಿಸಬೇಕು. (ಒಂದು ಎಕರೆಗೆ ಅನ್ವಯವಾಗುವಂತೆ) ಬಿತ್ತನೆ ಮಾಡಿದ 10 ದಿವಸಕ್ಕೆಲ್ಲಾ ಎಲ್ಲಾ ಬೀಜಗಳು ಮೊಳಕೆ ಒಡೆಯುತ್ತವೆ. ಅನಂತರ ಕಳೆ ಬಂದಾಗ ಕಳೆ ನಿರ್ವಹಣೆಯನ್ನು ಕೈಗೊಳ್ಳಬೇಕು. 50ನೇ ದಿವಸಕ್ಕೆ ಸಾಲುಗಳ ಅಂತರದಲ್ಲಿ ಮಣ್ಣನ್ನು ಸಸಿಯ ಬುಡಕ್ಕೆ ಏರಿಸಬೇಕು. ಅನಂತರ ಜೈವಿಕ ಗೊಬ್ಬರ ಅಥವಾ ಯೂರಿಯವನ್ನು ಒದಗಿಸಬೇಕು. ಅಲ್ಲದೆ ಬಿತ್ತನೆಯಾದ 70ನೇ ದಿನಕ್ಕೆ ಹಾಗೂ ತೆನೆ ಹಾಲು ತುಂಬುವ ಸಮಯದಲ್ಲಿ 20 ಕಿ.ಗ್ರಾಂ. ಪೋಟ್ಯಾಷ್‌ನ್ನು ಒದಗಿಸಬೇಕು, ಆಯಾ ವಲಯ ಕೃಷಿ ಇಲಾಖೆ ಶಿಫಾರಸ್ಸು ಮಾಡಿದ ತಳಿಗಳನ್ನೇ ಬಳಸಿ, ಬಿತ್ತನೆಗೆ ಮುಂಚಿತವಾಗಿ ತಪ್ಪದೆ ಬೀಜೋಪಾಚಾರ ಮಾಡಿ, 60 ಸೆ.ಮೀ. ಸಾಲಿನಿಂದ ಸಾಲಿಗೆ ಹಾಗೂ 30 ಸೆ.ಮೀ. ಬೀಜದಿಂದ ಬೀಜಕ್ಕೆ ಅಂತರವನ್ನು ತಪ್ಪದೇ ಅನುಸರಿಸಿ, ಹೂ ಮತ್ತು ತೆನೆ ಬರುವಾಗ ತಪ್ಪದೆ ಭೂಮಿಗೆ ನೀರುಣಿಸಿ ಪೋಷಿಸಿದರೆ ಇಳುವರಿ ಹೆಚ್ಚಾಗುತ್ತದೆ.

**ರೇಷ್ಮೆ ಬೆಳೆಗೆ ಅವಶ್ಯಕವಾದ ಕಚ್ಚಾ ವಸ್ತು ಹಿಪ್ಪು ನೇರಳೆ :** ಹಿಪ್ಪು ನೇರಳೆಯು ರೇಷ್ಮೆ ತಯಾರಿಕೆಗೆ ಅವಶ್ಯಕವಾದಂತಹ ಮೂಲ ಕಚ್ಚಾ ವಸ್ತುವಾಗಿದ್ದು, ಇದರ ಬೇಸಾಯವು ದೇವನಹಳ್ಳಿ ದೊಡ್ಡ ಬಳ್ಳಾಪುರದಲ್ಲಿ ವ್ಯಾಪಕವಾಗಿರುವುದನ್ನು ಕಾಣಬಹುದು.

ಹಿಪ್ಪು ನೇರಳೆಗೆ ಅವಶ್ಯಕವಾದಂತಹ ಸಾವಯವ ಗೊಬ್ಬರವನ್ನು ಇಲ್ಲಿನ ಜನರೆ ತಯಾರಿಸುವುದನ್ನು ಕಾಣಬಹುದಾಗಿದೆ. ಕೆರೆ ಮಣ್ಣು ಗೊಬ್ಬರ ಹಾಗೂ ಎರೆಹುಳು ಗೊಬ್ಬರ ಬಳಕೆಗೆ ಹೆಚ್ಚು ಒತ್ತು ನೀಡಿದ್ದಾರೆ.

**ಬೆಂಗಳೂರು ಬ್ಲೂ ದ್ರಾಕ್ಷಿ :** ಕೊಟ್ಟಿಗೆ ಗೊಬ್ಬರ, ಎರೆ ಗೊಬ್ಬರ, ಬೇವಿನಹಿಂಡಿ, ಹೊಂಗೆ ಹಿಂಡಿ, ಜೀವಾಣು ಗೊಬ್ಬರ, ಕಡಲೆಕಾಯಿ, ಹರಳುಹಿಂಡಿ, ಹಸುರೆಲೆ, ನಾರು ಬೇರು, ಕುರಿಗೊಬ್ಬರ, ಹೀಗೆ ಎಲ್ಲಾ ಸಸ್ಯಜನ್ಯ ಮತ್ತು ಪ್ರಾಣಿ ಜನ್ಯ ಮೂಲವನ್ನು ಬಳಸಿಕೊಂಡು ಸಾವಯವ ಗೊಬ್ಬರವನ್ನು ಅಲ್ಲಿಯ ರೈತರು ದ್ರಾಕ್ಷಿ ಬೆಳೆಗಾಗಿ ತಯಾರಿಸುತ್ತಾರೆ. ಗೊಬ್ಬರದಲ್ಲಿ ಪೋಷಕಾಂಶದ ಕೊರತೆಯಾದರೆ ಎಲೆಗಳು ಬಣ್ಣಗೆಡುತ್ತದೆ. ಆಗ ಕಡ್ಲೆಕಾಯಿ ಹಿಂಡಿ, ಎರೆಗೊಬ್ಬರ, ಬೇವಿನಹಿಂಡಿ ನೀಡಬೇಕು. ಹಣ್ಣಿನ ಹೊಳಪನ್ನು ಹೆಚ್ಚಿಸುವುದಕ್ಕಾಗಿ ಕಡ್ಲೆಕಾಯಿ ಹಿಂಡಿ, ಭೂಮಿಗೆ ಉಣಿಸಬೇಕು.

ಇನ್ನೂ ಸಗಣಿ ಮತ್ತು ಗಂಜಲವನ್ನು 6 ತಿಂಗಳ ಕಾಲ ಕಲೆಸಿಟ್ಟು ಗಿಡ ಬೆಳೆಯುತ್ತಿರುವ ಸಂದರ್ಭದಲ್ಲಿ ಅದನ್ನು ಗಿಡದ ತಳ ಭಾಗಕ್ಕೆ ಉಣಿಸಬೇಕು. ಪ್ರತಿ ಹಂತದಲ್ಲೂ ನೀರುಣಿಸಿ, ಭೂಮಿ ತೇವಾಂಶ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು.

**ಆಕರ ಗ್ರಂಥ ಮತ್ತು ಅಂಕಣಗಳು**

ಕಂದಾಯ ಇಲಾಖೆ ವರದಿ, ಕರ್ನಾಟಕ ಸರಕಾರ

ಭೂಮಿಯೇ ಚಿನ್ನ, ಕೃಷಿ, ಕ್ಷೇತ್ರಕ್ಕೆ ಕನ್ನ (ಪ್ರಜಾವಾಣಿ) ಮಂಜುನಾಥ್ ಹೆಬ್ಬಾರ್

ಈ ಹಣ್ಣಿನೊಳಗೆ ಸೀತೆ ಹೇಗೆ ಬಂದಳು ? ಕಣಜ. Com

ಕೋಟಿ ಬೆಲೆಯ ನೆಲದಲ್ಲಿ ಬೆಂಗಳೂರು ಬ್ಲೂ - ಪೂರ್ಣಪ್ರಜ್ಞ ಕಣಜ. Com.

ದಕ್ಷಿಣ ಪಿನಾಕಿನಿ ನದಿಯ ನಕ್ಷೆ, ನಡೆ ಮತ್ತು ನೈಸರ್ಗಿಕ ಸಮೀಕ್ಷೆ - ಬೆಳಕಿಂಡಿ ಬ್ಲಾಗ್

ಆಲೂಗೆಡ್ಡೆ ಮತ್ತು ಅನಾಬ್ ಇ ಷಾಯಿದ್ರಾಕ್ಷಿ -ಪ್ರಜಾವಾಣಿ ವರದಿ ಭೂಜ್ಯನಾಯ್ಕ

ಬೀಟ್‌ರೂಟ್ ಕುರಿತ ಮಾಹಿತಿ - ವಾರ್ತಾಭಾರತಿ ವರದಿ ಬೆಂಗಳೂರು ಆವೃತ್ತಿ

ಇತರೆ ಮೂಲ - ಉದಯವಾಣಿ, ಅರಣ್ಯ ಇಲಾಖೆ, ವಿಕೀಪಿಡಿಯ ಇತ್ಯಾದಿ.

ಬೆಂಗಳೂರು ಬೆಡಗು - ಸಂ. ಡಾ. ಬೈರಮಂಗಲ ರಾಮೇಗೌಡ - ಕಸಾಪ - ಬೆಂಗಳೂರು 2011

ಬೆಂಗಳೂರಿನ ಇತಿಹಾಸ - ಬ.ನ. ಸುಂದರರಾವ್, ಅಂಕಿತ ಪುಸ್ತಕ ಪ್ರ. ಮು. 1985, ಮು. -2011

*ಎಸ್. ಜಿ.*

**ಬೆಂಗಳೂರು ಜಿಲ್ಲೆಯ ಕೃಷಿ** ಕರ್ನಾಟಕ ರಾಜ್ಯದ ರಾಜಧಾನಿ 'ಸಿಲಿಕಾನ್ ವ್ಯಾಲಿ' ಎಂದು ಪ್ರಸಿದ್ಧಿ ಪಡೆದ ನಗರ ಬೆಂಗಳೂರು. ಈ ಮೊದಲು 11 ತಾಲ್ಲೂಕುಗಳನ್ನು ಒಳಗೊಂಡಿದ್ದ ಈ ಜಿಲ್ಲೆ ಬೃಹತ್ತಾಗಿ ಬೆಳೆದುದರಿಂದ 1986 ಆಗಸ್ಟ್ 15ರಂದು ಆಡಳಿತಾನುಕೂಲಕ್ಕಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಾಗಿ ವಿಂಗಡಿಸಲಾಯಿತು. ಬೆಂಗಳೂರು ನಗರ ಜಿಲ್ಲೆ 03 ತಾಲ್ಲೂಕುಗಳಿಂದ ಕೂಡಿದೆ. ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕುಗಳನ್ನು ಒಳಗೊಂಡಿದೆ. ಕರ್ನಾಟಕದ ಪೂರ್ವಭಾಗದಲ್ಲಿ ಉ.ಅ. $12^{0}$-39' - $13^{0}$-18' ಮತ್ತು ಪೂರ್ವರೇಖಾಂಶ $77^{0}$-22'-$77^{0}$-52'ಗಳ ನಡುವೆ ಬೆಂಗಳೂರು ಜಿಲ್ಲೆ ಕಂಡುಬರುತ್ತದೆ. ಬೆಂಗಳೂರು ನಗರ ಜಿಲ್ಲೆಯ ಜನಸಂಖ್ಯೆ 95,88,910ರಷ್ಟಿದೆ.

**ಜಿಲ್ಲೆಯ ವಿಸ್ತೀರ್ಣ :** ಕರ್ನಾಟಕ ರಾಜ್ಯದ ಅತ್ಯಂತ ಮುಂದುವರಿದ ಜಿಲ್ಲೆಯಾದ ಬೆಂಗಳೂರು 2190 ಚ.ಕಿ.ಮೀ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ರಾಜ್ಯದ ವಿಸ್ತೀರ್ಣದಲ್ಲಿ ಶೇ. 1.4ರಷ್ಟು ಪಾಲನ್ನು ಪಡೆದಿದೆ. 2001ರ ಸಮೀಕ್ಷೆಯಂತೆ ತಾಲೂಕುವಾರು ವಿಸ್ತೀರ್ಣ - ಬೆಂಗಳೂರು ಉತ್ತರ ತಾಲ್ಲೂಕು ವಿಸ್ತೀರ್ಣ 487 ಚ.ಕಿ.ಮೀ., ಆನೇಕಲ್ ತಾಲ್ಲೂಕಿನ ಒಟ್ಟು ವಿಸ್ತೀರ್ಣ 5351 ಹೆಕ್ಟೇರ್ ವಿಸ್ತೀರ್ಣ ಹೊಂದಿವೆ. ರಾಜ್ಯದ ಜಿಲ್ಲೆಗಳಲ್ಲಿ ಅತ್ಯಂತ ಕಿರಿದಾದ ಮತ್ತು ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ಜಿಲ್ಲೆ ಬೆಂಗಳೂರು ನಗರ ಜಿಲ್ಲೆಯಲ್ಲಿ 17 ಹೋಬಳಿಗಳು, 681 ಗ್ರಾಮಗಳೂ, 15 ಗ್ರಾಮ ಪಂಚಾಯ್ತಿಗಳು, 9 ಪುರಸಭೆಗಳು ಇವೆ. ಈ ಜಿಲ್ಲೆ ಸಂಪೂರ್ಣವಾಗಿ ನಗರೀಕರಣಕ್ಕೆ ಒಳಪಟ್ಟಿರುವುದರಿಂದ ಕೃಷಿಯನ್ನು ಅಲ್ಪ ಪ್ರಮಾಣದಲ್ಲಿ ಕಾಣಬಹುದು. ಬೆಂಗಳೂರು ದಕ್ಷಿಣ ತಾಲ್ಲೂಕಿನ ಒಟ್ಟು ವಿಸ್ತೀರ್ಣ 539.4 ಚ.ಕಿ.ಮೀ. ಇದ್ದು ಇದರಲ್ಲಿ 509 ಚ.ಕಿ.ಮೀ. ಗ್ರಾಮೀಣ ಪ್ರದೇಶ ಉಳಿದದ್ದು ಕಾರ್ಖಾನೆಗಳು ಮತ್ತು ನಗರ ಪ್ರದೇಶಗಳನ್ನು ಒಳಗೊಂಡಿದೆ. 218 ಗ್ರಾಮಗಳಿವೆ.

ಬೆಂಗಳೂರು ಉತ್ತರ ತಾಲ್ಲೂಕು 173 ಗ್ರಾಮಗಳನ್ನು ಒಳಗೊಂಡಿದ್ದು ತಾಲ್ಲೂಕಿನ ಒಟ್ಟು ವಿಸ್ತೀರ್ಣ 487 ಚ.ಕಿ.ಮೀ. ಇದರಲ್ಲಿ 340.1 ಚ.ಕಿ.ಮೀ. ಗ್ರಾಮೀಣ ಪ್ರದೇಶ ಉಳಿದದ್ದು ನಗರ ಮತ್ತು ಕಾರ್ಖಾನೆ ಪ್ರದೇಶಗಳಿಂದ ಕೂಡಿದೆ.

ಆನೇಕಲ್ ತಾಲ್ಲೂಕು 5351 ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು, 235 ಹಳ್ಳಿಗಳನ್ನು ಒಳಗೊಂಡಿದೆ.

ರಾಜ್ಯದ 04 ಆಡಳಿತ ವಿಭಾಗಗಳಲ್ಲಿ ಬೆಂಗಳೂರು ವಿಭಾಗವು 09 ಜಿಲ್ಲೆಗಳನ್ನು ಒಳಗೊಂಡಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ ಮತ್ತು ದಾವಣಗೆರೆ. ಇದು ರಾಜ್ಯದ ಭೌಗೋಳಿಕ ಕ್ಷೇತ್ರದಲ್ಲಿ 25.91ರಷ್ಟು, ರಾಜ್ಯದ ಜನಸಂಖ್ಯೆಯಲ್ಲಿ ಶೇ 36.80ರಷ್ಟು ಒಳಗೊಂಡಿದೆ. ಇದರಲ್ಲಿ 51 ತಾಲ್ಲೂಕುಗಳು ಸೇರಿವೆ.

**ಮೇಲ್ಮೈ ಲಕ್ಷಣ :** ಕರ್ನಾಟಕದ ಪೂರ್ವ ಭಾಗದಲ್ಲಿ ಬರುವ ಬೆಂಗಳೂರು ಜಿಲ್ಲೆ ಏರುತಗ್ಗಿನ ಭೂಸ್ವರೂಪದಿಂದ ಕೂಡಿದೆ. ಜಿಲ್ಲೆಯು ಪೂರ್ಣವಾಗಿ ಗ್ರಾನೈಟ್ ಪ್ರದೇಶವಾಗಿದೆ. ಆದರೆ ಶಿಲಾರಚನೆಯಲ್ಲಿ ಇರುವ ಕಾಗೆ ಬಂಗಾರದ ಪ್ರಮಾಣ ಮತ್ತು ಅದು ರಚಿತವಾದ ಸ್ವರೂಪಗಳಲ್ಲಿ ವ್ಯತ್ಯಾಸಗಳಿದ್ದು ಬೇರೆ ಬೇರೆ ಪ್ರದೇಶಗಳಲ್ಲಿ ತಿಳಿಬೂದು ಬಣ್ಣದ ಶಿಲೆಗಳು ಹಾಗೂ ವಿವಿಧ ರಂಗಿನ ಶಿಲಾ ಸಮೂಹಗಳನ್ನು ಕಾಣಬಹುದು. ಈ ಪ್ರದೇಶವು ಸಮುದ್ರ ಮಟ್ಟಕ್ಕಿಂತ 900-1200 ಮೀ.ಗಳಷ್ಟು ಎತ್ತರವಾಗಿದೆ. ಪ್ರಸ್ಥಭೂಮಿಯು ಮೇಲೆತ್ತಲ್ಪಟ್ಟಿರುವ, ಆಳವಾಗಿ ಕೊರೆಯಲ್ಪಟ್ಟಿರುವ ಮೂಲತಃ ಮಟ್ಟಸವಾದ ಮೈದಾನವಾಗಿದೆ.

ಬೆಂಗಳೂರು ದಕ್ಷಿಣ ತಾಲೂಕಿನ ನೈಋತ್ಯ ಭಾಗದಲ್ಲಿ ಕಣಶಿಲೆಯ ಬೆಟ್ಟಗುಡ್ಡಗಳು ಇವೆ. ಉಳಿದ ಭಾಗ ಬಯಲು ಪ್ರದೇಶವಾಗಿದೆ. ವೃಷಭಾವತಿ ನದಿ ಬೆಂಗಳೂರು ನಗರದ ಗವಿಪುರದ ಕಡೆಯಿಂದ ಬಂದು ಕೆಂಗೇರಿ ಮುಖಾಂತರ ದಕ್ಷಿಣಕ್ಕೆ ಹರಿಯುತ್ತದೆ. ಪಿನಾಕಿನಿ ನದಿಯು ಹೆಸರಘಟ್ಟ ಜಲಾಶಯಕ್ಕೆ ನೀರುಣಿಸಿ ಮುಂದೆ ಹರಿದು ನೆಲಮಂಗಲ ತಾಲ್ಲೂಕಿನೆಡೆಗೆ ಸಾಗುತ್ತದೆ. ಬೆಂಗಳೂರಿನ ಆಗ್ನೇಯ ಭಾಗದಲ್ಲಿ ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನವನವಿದೆ. ಸಾಧಾರಣ ಮೇಲ್ಮೈ ಲಕ್ಷಣ ಹೊಂದಿರುವ ಜಿಲ್ಲೆಯು ರಾಜ್ಯದ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ಮೊದಲನೆ ಜಿಲ್ಲೆಯಾಗಿದೆ. ಜಿಲ್ಲೆ ಉತ್ತಮ ಮೇಲ್ಮೈ ಲಕ್ಷಣ ಹೊಂದಿದ್ದರೂ ನಗರೀಕರಣದ ಪ್ರಭಾವದಿಂದ ಕೃಷಿ ಭೂಮಿಯು ಸಂಪೂರ್ಣವಾಗಿ ಕಣ್ಮರೆಯಾಗುತ್ತಿದೆ.

**ಹವಾಗುಣ :** ಕರ್ನಾಟಕವೂ ಭಾರತದ ದಕ್ಷಿಣ ಭಾಗದಲ್ಲಿದ್ದು ಸಂಪೂರ್ಣವಾಗಿ ಉಷ್ಣವಲಯದಲ್ಲಿದೆ. ಬೆಂಗಳೂರು ಕೂಡ ಉಷ್ಣವಲಯದ


ಪ್ರದೇಶವಾಗಿರುವುದರೊಂದಿಗೆ ಸಮುದ್ರ ಮಟ್ಟಕ್ಕಿಂತ ಸರಾಸರಿ 900-1200 ಮೀಟರ್ ಎತ್ತರದಲ್ಲಿದೆ. ಜಿಲ್ಲೆಯ ಸರಾಸರಿ ಉಷ್ಣತೆಯು $18^{0}4'$-$28^{0}8'$ ಸೆಂ ನಡುವೆ ಇರುತ್ತದೆ. ಬೇಸಿಗೆಯಲ್ಲಿ ಉಷ್ಣತೆಯು ಹೆಚ್ಚಿದ್ದು ದಕ್ಷಿಣದ ಇತರೆ ಜಿಲ್ಲೆಗಳಂತೆ ಸಾಧಾರಣ ಮಟ್ಟದಲ್ಲಿರುತ್ತದೆ.

**ಮಳೆ :** ಮಳೆಯ ಪ್ರಮಾಣ ವಾರ್ಷಿಕ ಸರಾಸರಿ 46ರಿಂದ 200 ಸೆಂ.ಮೀ.ನಷ್ಟಿರುತ್ತದೆ. ಈ ಪ್ರದೇಶಗಳಲ್ಲಿ ಬೇಸಗೆಯ ಕೊನೆಯ ಭಾಗದಲ್ಲಿ ಮಾನ್ಸೂನ್ ಮಾರುತಗಳ ಆರಂಭಕ್ಕಿಂತ ಮೊದಲು ಧಾರಾಕಾರವಾದ ಮಳೆ ಬೀಳುತ್ತದೆ. ಅಲ್ಲದೆ ಮಾನ್ಸೂನ್ ಮಾರುತಗಳ ನಿರ್ಗಮನಕಾಲ ಮತ್ತು ಈಶಾನ್ಯ ಮಾರುತಗಳಿಂದಲೂ ಮಳೆ ಬೀಳುವುದು. ಆದರೆ ನೈಋತ್ಯ ಮಾನ್ಸೂನ್ ಮಾರುತಗಳಿಂದ ಬೀಳುವ ಮಳೆ ಕಡಿಮೆ. ಈ ಪ್ರದೇಶದ ಉತ್ತರದ ಆನೇಕಲ್ ತಾಲೋಕಿನಲ್ಲಿ ಸರಾಸರಿ ಮಳೆಯ ಪ್ರಮಾಣ 67 ಸೆಂ.ಮೀ ಇದೆ. 1995-2005ರ ಅಂಕಿ ಅಂಶದಂತೆ ಸರಾಸರಿ ಮಳೆ ಪ್ರಮಾಣ 831 ಮಿ.ಮೀ.ನಷ್ಟಿದೆ. ನೈರುತ್ಯ ಮಾನ್ಸೂನ್ ಮಾರುತಗಳಿಂದ ಶೇ 26.53ರಷ್ಟು ಮಳೆ ಪಡೆದರೆ ಮಾನ್ಸೂನ್ ಮಾರುತಗಳಿಂದ ಶೇ 18.53ರಷ್ಟು ಮಳೆಯನ್ನು ಈ ಭಾಗ ಪಡೆಯುತ್ತವೆ.

**ಕೃಷಿ ಭೂಮಿ ವಿಸ್ತರಣೆ :** ಜಿಲ್ಲೆಯ ಒಟ್ಟು ಭೂಭಾಗ 2174 ಚ.ಕಿ.ಮೀಗಳಾಗಿದ್ದು ಇದರಲ್ಲಿ ಅರಣ್ಯಭೂಮಿ 5055 ಹೆ., ವ್ಯವಸಾಯೇತರ ಭೂಮಿ 73600 ಹೆ. ಸಾಗುವಳಿಗೆ ಯೋಗ್ಯವಾಗಿದ್ದು 99389 ಹೆ. 2005-06ರ ಅಂಕಿ ಅಂಶದಂತೆ ಸಾಗುವಳಿಗೆ ಒಳಪಟ್ಟ ಪ್ರದೇಶ 3783 ಹೆ. ಮಧ್ಯಮ ಭೂ ಹಿಡುವಳಿದಾರರು 48525 ಜನರಿದ್ದು 214238 ಪ್ರದೇಶದಲ್ಲಿ ಸಣ್ಣ ಹಿಡುವಳಿದಾರರು 15656 ಜನರಿದ್ದು 22123 ಪ್ರದೇಶದಲ್ಲಿ ಕೃಷಿ ಮಾಡುತ್ತಿದ್ದಾರೆ. ಬೆಂಗಳೂರು ಜಿಲ್ಲೆ ಸಂಪೂರ್ಣವಾಗಿ ನಗರೀಕರಣಕ್ಕೆ ಒಳಪಟ್ಟಿರುವುದರಿಂದ ವರ್ಷದಿಂದ ವರ್ಷಕ್ಕೆ ಕೃಷಿಭೂಮಿ ಕಡಿಮೆಯಾಗುತ್ತಾ ಬರುತ್ತಿದ್ದು ಭೂ ಹಿಡುವಳಿದಾರರು ಕಡಿಮೆಯಾಗುತ್ತಿದ್ದಾರೆ. ಹಾಗೆಯೇ ಭೂಹಿಡುವಳಿದಾರರನ್ನು ನಿರ್ದಿಷ್ಟ ಸಂಖ್ಯೆಯಲ್ಲಿ ಗುರ್ತಿಸುವಷ್ಟು ಸಾಧ್ಯವಾಗುತ್ತಿಲ್ಲ.

**ಭೂ ಉಪಯೋಗ :** 2011-12ನೇ ಸಾಲಿನ ಸಮೀಕ್ಷೆಯಂತೆ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 2174 ಚ.ಕಿ.ಮೀ. ಗಳಾಗಿದ್ದು ಇದರಲ್ಲಿ ಅರಣ್ಯಭೂಮಿ 5055 ಹೆಕ್ಟೇರ್‌ನಷ್ಟಿದೆ. ಕೃಷಿಗೆ ಬಳಕೆಯಾಗುತ್ತಿರುವ ಭೂಮಿ 4911 ಹೆಕ್ಟೇರ್ ಕೃಷಿಯೇತರ ಭೂಮಿ 11530 ಹೆಕ್ಟೇರ್. ಕೃಷಿಗೆ ಬಳಸಬಹುದಾದ ಬೀಳುಭೂಮಿ 3783 ಹೆಕ್ಟೇರ್‌ನಷ್ಟಿದೆ. ಒಟ್ಟು ಸಾಗುವಳಿ ಪ್ರದೇಶದಲ್ಲಿ ಉದ್ದೇಶಿತ ಗುರಿ 0.34ರಷ್ಟಿದ್ದು ಇದರಲ್ಲಿ ನೀರಾವರಿ ಪ್ರದೇಶದಲ್ಲಿ 0.02ರಷ್ಟು ಮಳೆಯಾಶ್ರಿತದಲ್ಲಿ 0.27ರಷ್ಟು ಒಟ್ಟು ಶೇ. 0.29ರಷ್ಟು ಪ್ರದೇಶದಲ್ಲಿ ವ್ಯವಸಾಯ ಮಾಡಲಾಗುತ್ತಿದೆ.

**ಭೂಗುಣ :** ಜಿಲ್ಲೆಯು ಹೊಂದಿರುವ ಭೂಸ್ವರೂಪ, ಮಳೆ, ಉಷ್ಣಾಂಶ, ಹಂಚಿಕೆ, ಮಣ್ಣಿನ ಲಕ್ಷಣ, ಜಲಸಂಪತ್ತು ಇವೆ ಮೊದಲಾದ ಅಂಶಗಳಿಂದ ಭೂ ಗುಣವು ಉತ್ತಮವಾಗಿದೆ. ಬೆಂಗಳೂರು ನಗರಜಿಲ್ಲೆ ಪೂರ್ವ ಒಣವಲಯದಲ್ಲಿ ಕಂಡುಬರುತ್ತದೆ. ಈಶಾನ್ಯ ಮತ್ತು ನೈಋತ್ಯ ಮಾರುತಗಳು ಮತ್ತು ಈ ಮಾನ್ಸೂನ್ ಮಾರುತಗಳ ಆರಂಭಕ್ಕಿಂತ ಮೊದಲು ಬೀಳುವ ಮಳೆಯಿಂದ ಈ ಪ್ರದೇಶದಲ್ಲಿ ಹಿಂಗಾರು



ಬೇಸಾಯವನ್ನು ಮಾಡುತ್ತಾರೆ. ಹಿಂಗಾರು ಅವಧಿಯಲ್ಲಿ ಎಳ್ಳು ಅಲಸಂದೆಯನ್ನು ಬೆಳೆಯುತ್ತಾರೆ. ಖಾರಿಫ್ (ಮುಂಗಾರು) ಅವಧಿಯಲ್ಲಿ ರಾಗಿ, ಹುಚ್ಚೆಳ್ಳು, ಜೋಳ, ಅವರೆ, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬಿತ್ತನೆ ಮಾಡುವುದು ಕಂಡುಬರುತ್ತದೆ. ಮಳೆಯಾಶ್ರಯದಲ್ಲಿ ಬೆಳೆಯುವ ಬೆಳೆಯನ್ನು ಖುಷ್ಕಿ ಬೆಳೆಯೆಂದು, ನೀರಾವರಿ ಪ್ರದೇಶದಲ್ಲಿ ಬೆಳೆಯುವ ಬೆಳೆಯನ್ನು ತರಿ ಬೆಳೆಯೆಂದು ಕರೆಯುವರು. ಈ ಪ್ರದೇಶದಲ್ಲಿ ರಾಗಿ, ರೇಷ್ಮೆ ಕೃಷಿ ಮತ್ತು ಕೈ ತೋಟಗಾರಿಕೆ ಬೆಳೆಗಳು ಅತ್ಯಂತ ಪ್ರಸಿದ್ಧಿ ಪಡೆದಿವೆ.

**ಮಣ್ಣು :** ಕಣಶಿಲೆ ಮತ್ತು ನೀಸ್‌ಗಳಿಂದ ಉನ್ನತವಾದ ಕೆಂಪುಜೇಡಿ, ಕೆಂಪು ಕಲ್ಲು ಮತ್ತು ಮರಳುಮಿಶ್ರಿತ ಮಣ್ಣುಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತವೆ. ಅವು ಹಲವು ಅಂಗುಲದಿಂದ ಹಲವು ಅಡಿ ಮಂದವಾಗಿರಬಹುದು. ಸುಣ್ಣದ ಅಂಶ ಕಡಿಮೆ. ನೀರು ಸುಲಭವಾಗಿ ಬಸಿಯುವಂತಿರುತ್ತದೆ. ಆಹಾರಾಂಶಗಳು ಬಹಳ ಕಡಿಮೆ. ಮಣ್ಣಿನ ಕ್ರಿಯೆ ಅನಿಯತವಾಗಿದ್ದು, ನೀರು ಬಸಿಯದ ತಗ್ಗು ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ಕರಲಾಗಿ ಪರಿಣಮಿಸಬಹುದು. ಪೊಟಾಷ್ ಸಾಕಷ್ಟಿದ್ದರೂ ರಂಜಕಾಂಶ ಮತ್ತು ಜೈವಿಕ ವಸ್ತುಗಳ ಅಭಾವವಿದೆ. ಬೆಂ.ದಕ್ಷಿಣ ಮತ್ತು ಬೆಂ. ಉತ್ತರ, ನೆಲಮಂಗಲ ಪ್ರದೇಶದಲ್ಲಿ ಕೆಂಪುಜೇಡಿ ಮಣ್ಣು ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ ಆಲುಗಡ್ಡೆ, ಹಣ್ಣುಗಳು, ರಾಗಿ, ತೊಗರಿ, ಧಾನ್ಯ, ಎಣ್ಣೆ ಬೀಜಗಳನ್ನು ಬೆಳೆಯುತ್ತಾರೆ.

ನೆಲಮಂಗಲ, ಮಾಗಡಿ ಮತ್ತು ಕನಕಪುರ ಭಾಗದಲ್ಲಿ ಕಲ್ಲುಮಿಶ್ರಿತ ಜೇಡಿಮಣ್ಣು ದೇವನಹಳ್ಳಿ, ಹೊಸಕೋಟೆ ಪ್ರದೇಶದಲ್ಲಿ ಕೆಂಪು ಮರಳು ಮಿಶ್ರ ಜೇಡಿಮಣ್ಣು ಕಂಡುಬರುತ್ತದೆ.

**ಕಾಡುಗಳು :** ಬೆಂಗಳೂರು ಜಿಲ್ಲೆಯಲ್ಲಿ ನಗರೀಕರಣದ ಪ್ರಭಾವದಿಂದ ನೈಸರ್ಗಿಕ ಕಾಡುಗಳು ಕಣ್ಮರೆಯಾಗುತ್ತಿವೆ. ಜಿಲ್ಲೆಯ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನವು 104 ಚ.ಕಿ.ಮೀ.ಗಳಲ್ಲಿ ವ್ಯಾಪಿಸಿದೆ. ಇಲ್ಲಿ ಹಲವಾರು ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳನ್ನು ಕಾಣಬಹುದಾಗಿದೆ. ಜಿಲ್ಲೆಯ ಅಂಚಿನಲ್ಲಿ ಅಲ್ಲಲ್ಲಿ ಅತಿ ಸಣ್ಣ ಪ್ರಮಾಣದ ಕಾಡುಗಳನ್ನು ಕಾಣಬಹುದು. ವಿಪರ್ಯಾಸವೆಂದರೆ ಜಿಲ್ಲೆಯ ದಕ್ಷಿಣ ಭಾಗದಲ್ಲಿದ್ದ ನೈಸರ್ಗಿಕ ಕಾಡು ನಾಶವಾಗಿ ಕಾಂಕ್ರಿಟ್ ಕಾಡುಗಳು ತಲೆ ಎತ್ತುತ್ತಿವೆ. ಆದ್ದರಿಂದ ಕಾಡಿನ ಪ್ರಾಣಿಗಳು ನಾಡಿನತ್ತ ಧಾವಿಸುತ್ತಿವೆ. ಕಾಡಿನಲ್ಲಿ ಬೇವಿನಮರ, ಗೊಬ್ಬಳಿಮರ, ಶ್ರೀಗಂಧದ ಮರ, ಹೊಂಗೆಮರ, ಚುಜ್ಜುಲಿಮರ, ನೀಲಗಿರಿ ಮರಗಳು ಮತ್ತು ಉರುವಲಿಗೆ ಬಳಸುವ ಕುರುಚಲು ಗಿಡಗಳನ್ನು ಕಾಣಬಹುದು.

**ನೀರಾವರಿ ಸೌಕರ್ಯಗಳು :** ಜಿಲ್ಲೆಯಲ್ಲಿ ವೃಷಭಾವತಿ, ಅರ್ಕಾವತಿ, ಪಿನಾಕಿನಿ ನದಿಗಳು ಹರಿಯುತ್ತವೆ. ಆದರೆ ಈ ಸಣ್ಣ ನದಿಗಳಿಂದ ನೀರಾವರಿಗೆ ಯಾವುದೇ ಪ್ರಯೋಜನವಾಗಿಲ್ಲ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳ ಕೆಲವು ಕೆರೆಗಳಿಂದ ಸ್ವಲ್ಪಮಟ್ಟಿಗೆ ನೀರಾವರಿ ಸೌಲಭ್ಯವಿದೆ. ಬಾವಿ, ಕೊಳವೆಬಾವಿ ಮತ್ತು ಇತರೆ ಮೂಲಗಲಿಂದ ನೀರಾವರಿ ಸೌಲಭ್ಯವನ್ನು ಪಡೆಯಲಾಗುತ್ತಿದೆ. 2011-12ರ ಸಮೀಕ್ಷೆಯಂತೆ ಜಿಲ್ಲೆಯಲ್ಲಿ 628 ಬಾವಿಗಳಿದ್ದು 581 ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಲಾಗುತ್ತಿದೆ. ಜಿಲ್ಲೆಯ ಒಟ್ಟು 12756 ಕೊಳವೆ ಬಾವಿಗಳಿಂದ 2369 ಹೆಕ್ಟೇರ್ ಪ್ರದೇಶಗಳಿಗೆ ನೀರುಣಿಸಲಾಗುತ್ತಿದೆ. ಒಟ್ಟು ನೀರಾವರಿ ಪ್ರದೇಶ 13764 ಹೆಕ್ಟೇರ್ ಆಗಿದೆ. ಬೆಂಗಳೂರು ಜಿಲ್ಲೆಯಲ್ಲಿ ಕಾಲುವೆ ನೀರಾವರಿ ಸೌಲಭ್ಯವಿಲ್ಲ. ಜಿಲ್ಲೆಯ ಬಹುಭಾಗವು ಮಳೆಯಾಶ್ರಯವನ್ನು ಹೊಂದಿದ್ದು ಖುಷ್ಕಿ ಬೆಳೆಯನ್ನು ಬೆಳೆಯುತ್ತಾರೆ.

**ಬೆಳೆಗಳು :** ಜಿಲ್ಲೆಯಲ್ಲಿ ಆಹಾರ ಮತ್ತು ಆಹಾರೇತರ ಎರಡೂ ಬೆಳೆಗಳನ್ನು ನೋಡಬಹುದು. ಇವುಗಳನ್ನು ಹಿಂಗಾರು ಮತ್ತು ಮುಂಗಾರು ಅವಧಿಯಲ್ಲಿ ಬೆಳೆಯಲಾಗುತ್ತದೆ. 2011-12ನೇ ಸಾಲಿನ ಅಂಕಿ ಅಂಶಗಳ ಪ್ರಕಾರ ದ್ವಿದಳ ಧಾನ್ಯ ಬೆಳೆಗಳನ್ನು 4373 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಆಹಾರ ಧಾನ್ಯಗಳನ್ನು 32487 ಹೆಕ್ಟೇರ್ ಪ್ರದೇಶದಲ್ಲಿ, ಹಣ್ಣುಗಳನ್ನು 18093 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಬೆಂಗಳೂರು ನಗರ ಪ್ರದೇಶದಲ್ಲಿ ಶೇ 70ರಷ್ಟು ಗುಲಾಬಿ ಬೆಳೆಯನ್ನು ಬೆಳೆಯಲಾಗುತ್ತಿದೆ. ಆನೇಕಲ್‌ನ್ನು ಕರ್ನಾಟಕ ರಾಜ್ಯದ 'ರಾಗಿಯ ಕಣಜ' ಎಂದು ಕರೆಯುತ್ತಾರೆ. ಕರ್ನಾಟಕ ರಾಜ್ಯದ 'ರಾಗಿಯ ಬಟ್ಟಲು' ಎಂತಲೂ ಸಹ ಕರೆಯುತ್ತಾರೆ. ಮಳೆಯಾಶ್ರಿತ ಪ್ರದೇಶವಾದ್ದರಿಂದ ರಾಗಿಯನ್ನು ಅತ್ಯಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ರಾಗಿಯು ಈ ಪ್ರದೇಶದ ಸಾಂಪ್ರದಾಯಿಕ ಆಹಾರ ಧಾನ್ಯ. ಇದು ಅತಿ ಹೆಚ್ಚು ಪೌಷ್ಟಿಕತೆ ಹೊಂದಿರುವುದಲ್ಲದೆ ಬೆಲೆ ಕಡಿಮೆ. ರಾಗಿಯಲ್ಲಿ ಗಿಡ್ಡರಾಗಿ ಮತ್ತು ದೊಡ್ಡರಾಗಿ ಎಂಬ ಪ್ರಕಾರಗಳು ಸಹ ಇವೆ. ರಾಗಿಯನ್ನು ಮುಂಗಾರು, ಹಿಂಗಾರು ಹಾಗೂ ಬೇಸಗೆ ಈ 3 ವ್ಯವಸಾಯದ ಅವಧಿಗಳಲ್ಲಿ ಬೆಳೆಯಲಾಗುವುದು. ಬೆಂಗಳೂರು ಜಿಲ್ಲೆಯಲ್ಲಿ 47.9 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಒಟ್ಟು ಸಾಗುವಳಿ ಭೂಮಿಯಲ್ಲಿ 58% ರಾಗಿಯನ್ನು ಬೆಳೆಯುತ್ತಾರೆ. ವಾರ್ಷಿಕ ಇಳುವರಿ 138.8 ಟನ್‌ನಷ್ಟಿದೆ. ನೆಲಗಡಲೆ, ಸೂರ್ಯಕಾಂತಿ ಮೊದಲಾದ ಎಣ್ಣೆಕಾಳುಗಳು ಹಾಗೂ ಹಿಪ್ಪುನೇರಳೆ ಕೃಷಿ ಮಳೆಯಾಶ್ರಯದ ಮುಖ್ಯ ವಾಣಿಜ್ಯ ಬೆಳೆಗಳಾಗಿವೆ. ಈ ಪ್ರದೇಶವು ಕೈತೋಟಗಾರಿಕೆ ಬೆಳೆಗಳಿಗೆ ಹೆಚ್ಚು ಪ್ರಸಿದ್ಧಿ ಪಡೆದಿದೆ.

**ದ್ವಿದಳ ಧಾನ್ಯಗಳು :** ಈ ಭಾಗದಲ್ಲಿ ದ್ವಿದಳ ಧಾನ್ಯಗಳನ್ನು 31263 ಹೆಕ್ಟೇರ್‌ನಲ್ಲಿ ಬೆಳೆಯುತ್ತಾರೆ. ನೆಲಗಡಲೆ, ಹುರುಳಿ, ಅಲಸಂದೆ, ಅವರೆ, ಹುಚ್ಚೆಳ್ಳು ಮತ್ತು ತೃಣ ಧಾನ್ಯಗಳನ್ನು ಬೆಳೆಯುತ್ತಾರೆ. ಹುರುಳಿಯನ್ನು ರಾಗಿಯೊಡನೆ ಮಿಶ್ರ ಬೆಳೆಯಾಗಿ ಬೆಳೆಯುವರು. ಹುರುಳಿಯನ್ನು, ದ್ವಿದಳ ಧಾನ್ಯಗಳು ಹಾಗೂ ಎಣ್ಣೆ ಕಾಳುಗಳೊಡನೆ ಬಿತ್ತುವುದು ಸಾಮಾನ್ಯ. ಅವರೆಯನ್ನು ಮುಂಗಾರಿನಲ್ಲಿ ಬಿತ್ತನೆ ಮಾಡಿ ಚಳಿಗಾಲದ ಕೊನೆಯ ಭಾಗದಲ್ಲಿ ಕಟಾವು ಮಾಡುವರು. ಅವರೆ ಚಳಿಗಾಲದ ಒಂದು ಮುಖ್ಯ ಬೆಳೆ. ಅವರೆ ಮತ್ತು ಅಲಸಂದೆಯನ್ನು ಖಾರೀಫ್ ಹಾಗೂ ರಬಿ ಎರಡೂ ಅವಧಿಯಲ್ಲಿಯೂ ಬೆಳೆಯುವರು.

**ಎಣ್ಣೆ ಕಾಳುಗಳು :** ಈ ಪ್ರದೇಶದಲ್ಲಿ ಎಳ್ಳು, ನೆಲಗಡಲೆ, ಸೂರ್ಯಕಾಂತಿ, ಹುಚ್ಚೆಳ್ಳು, ಹರಳು ಮುಂತಾದ ಎಣ್ಣೆ ಕಾಳುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಎಳ್ಳು ಬರ ನಿರೋಧಕ ಗುಣವನ್ನು ಹೊಂದಿರುವ ಬೆಳೆಯಾದ್ದರಿಂದ ಅಧಿಕವಾಗಿ ಬೆಳೆಯಲಾಗುತ್ತದೆ. ಮಿಶ್ರಬೆಳೆಯಾಗಿ ಇದನ್ನು ಬೆಳೆಯುವುದು ರೂಢಿಯಲ್ಲಿದೆ. ಹರಳನ್ನು ಮುಂಗಾರು ಬೆಳೆಯಾಗಿ ಬಿತ್ತನೆ ಮಾಡಲಾಗುತ್ತದೆ. ಇದೂ ಸಹ ಬರ ನಿರೋಧಕ ಗುಣವನ್ನು ಹೊಂದಿದೆ. ಸೂರ್ಯ ಕಾಂತಿಯನ್ನು ಸ್ವಲ್ಪ ಪ್ರಮಾಣದಲ್ಲಿ ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಇದನ್ನು ಹಿಂಗಾರು ಮತ್ತು

ಮುಂಗಾರು ಎರಡೂ ಅವಧಿಗಳಲ್ಲಿಯೂ ಬೆಳೆಯುವರು. ನೆಲಗಡಲೆಯನ್ನು ಮುಂಗಾರು ಬೆಳೆಯಾಗಿ ಮೇ-ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡಲಾಗುತ್ತದೆ. ನೀರಾವರಿ ಸೌಲಭ್ಯವಿರುವೆಡೆಯಲ್ಲಿ ಬೇಸಗೆಯ ಬೆಳೆಯಾಗಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಎಣ್ಣೆ ಕಾಳುಗಳ ಜೊತೆಗೆ ಹಿಪ್ಪುನೇರಳೆಯನ್ನು ಅತ್ಯಧಿಕ ಪ್ರಮಾಣದಲ್ಲಿ ಸಾಂಬಾರು ಪದಾರ್ಥಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಬೆಳೆಯುವರು.

**ತೋಟಗಾರಿಕೆ ಬೆಳೆಗಳು :** ಈ ಪ್ರದೇಶವು ತೋಟಗಾರಿಕೆ ಬೆಳೆಗಳಿಗೆ ಅತ್ಯಧಿಕ ಪ್ರಸಿದ್ಧಿ ಪಡೆದಿದೆ. ಬೆಂಗಳೂರು ನಗರದ ವಿಸ್ತಾರವಾದ ಮಾರುಕಟ್ಟೆಗಳೂ, ಸಾರಿಗೆಯ ಅನುಕೂಲ ಉತ್ತಮವಾಗಿದೆ. ಈ ಕಾರಣಗಳಿಂದ ಬೇಸಾಯ ಪ್ರದೇಶದಲ್ಲಿ ಅಭಿವೃದ್ಧಿಯಾಗಿದೆ. ಮಾವಿನ ತೋಟಗಳು ಸಾಮಾನ್ಯವಾಗಿ ಕಂಡುಬರುತ್ತವೆ. 'ಬೆಂಗಳೂರು ಮಾವು' ಎಂದೇ ಪ್ರಸಿದ್ಧಿ ಪಡೆದಿದೆ. ಕರ್ನಾಟಕದಲ್ಲಿ ದ್ರಾಕ್ಷಿಯನ್ನು ಹೆಚ್ಚು ಬೆಳೆಯುವ ಪ್ರದೇಶ ಬೆಂಗಳೂರು. ತಳಿಯಲ್ಲಿ 'ಬೆಂಗಳೂರು ನೀಲಿದ್ರಾಕ್ಷಿ' ಎಂದೇ ಪ್ರಸಿದ್ಧಿ ಪಡೆದಿದೆ. ದಾಳಿಂಬೆ, ಸಪೋಟ, ಸೀಬೆ ತೋಟಗಳನ್ನು ದೊಡ್ಡ ಪ್ರಮಾಣದಲ್ಲಿ ಕಾಣಬಹುದಾಗಿದೆ.

**ತರಕಾರಿ ಬೆಳೆಗಳು** : ನಗರ ಮಾರುಕಟ್ಟೆ ವಿಸ್ತಾರವಾಗಿ ರುವುದರಿಂದ ತರಕಾರಿ ಬೆಳೆಗಳನ್ನು ಹೆಚ್ಚು ಬೆಳೆಯುತ್ತಾರೆ. ಕೊಳವೆ ಬಾವಿಯ ನೀರನ್ನು ಉಪಯೋಗಿಸಿ ತರಕಾರಿ ಬೆಳೆಯುತ್ತಾರೆ. ತರಕಾರಿಗಳಲ್ಲಿ ಬದನೆ, ಟೊಮ್ಯಾಟೋ, ಹಾಗಲಕಾಯಿ, ಹೀರೆಕಾಯಿ, ಹುರುಳಿಕಾಯಿ (ಬೀನ್ಸ್) ಕ್ಯಾರೆಟ್, ಮೆಣಸಿನಕಾಯಿ, ಮೂಲಂಗಿ, ಸೊಪ್ಪುಗಳು, ಬೆಂಡೆಕಾಯಿ, ಸೌತೆಕಾಯಿ, ಈರುಳ್ಳಿ, ಪಡವಲಕಾಯಿ, ನುಗ್ಗೆಕಾಯಿ, ಹೂಕೋಸು, ಎಲೆಕೋಸು, ಗೆಡ್ಡೆಕೋಸು, ಕುಂಬಳಕಾಯಿ, ಸೋರೆಕಾಯಿ ಇನ್ನು ಮುಂತಾದ ತರಕಾರಿಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ.

**ಪುಷ್ಪಕೃಷಿ** : ಕರ್ನಾಟಕವು ಪುಷ್ಪ ಕೃಷಿಯಲ್ಲಿ ಮುಂಚೂಣಿಯಲ್ಲಿದ್ದು ದೇಶದ ಒಟ್ಟು ಹೂವಿನ ಶೇ 75ರಷ್ಟನ್ನು ಉತ್ಪಾದಿಸುವರು. ಬೆಂಗಳೂರು ನಗರದಲ್ಲಿ ದೇಶದ ಮೊಟ್ಟಮೊದಲ ಪುಷ್ಪ ಮಾರುಕಟ್ಟೆಯನ್ನು ಸ್ಥಾಪಿಸಲಾಗಿದೆ. ಬೆಂಗಳೂರು ನಗರವು ಮುಂಬೈ ಮತ್ತು ದೆಹಲಿ ನಗರಗಳಂತೆಯೇ ಪ್ರಮುಖ ಪುಷ್ಪ ಮಾರುಕಟ್ಟೆಯ ಕೇಂದ್ರವಾಗಿ ಅಭಿವೃದ್ಧಿ ಹೊಂದಿದೆ. ಬೆಂಗಳೂರು ಗುಲಾಬಿ ಎಂದೇ ಪ್ರಸಿದ್ಧಿಯಾಗಿದ್ದು ಗುಲಾಬಿಯನ್ನು ಅತ್ಯಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಗುಲಾಬಿಯ ಜೊತೆಗೆ ಮಲ್ಲಿಗೆ, ಸೇವಂತಿಗೆ, ಕನಕಾಂಬರ, ಸುಗಂಧರಾಜ, ಚೆಂಡು ಹೂವು ಮತ್ತು ಜರ್ಬೆರಾದಂತಹ ಆಲಂಕಾರಿಕ ಹೂವುಗಳನ್ನು ಬೆಳೆಯುತ್ತಾರೆ. ಜರ್ಬೆರಾ ಹೂವುಗಳನ್ನು ದೊಡ್ಡ ದೊಡ್ಡ ಪಾಲಿ ಹೌಸ್‌ಗಳಲ್ಲಿ ಬೆಳೆಸುತ್ತಾರೆ. ಇಲ್ಲಿ ಉತ್ಪಾದಿಸಲ್ಪಡುವ ಹೂವುಗಳ ಸ್ವಲ್ಪಭಾಗವನ್ನು ಮಾತ್ರ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದು ಉಳಿದ ಬಹುಪಾಲನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತದೆ.

**ತೃಣ ಧಾನ್ಯಗಳು :** ಈ ಪ್ರದೇಶದಲ್ಲಿ ಸಜ್ಜೆ, ಹಾರಕ, ಸಾಮೆ, ಊದಲು, ನವಣೆ ಮುಂತಾದ ತೃಣ ಧಾನ್ಯಗಳನ್ನು ಅಲ್ಪಪ್ರಮಾಣದಲ್ಲಿ ಬೆಳೆಯುತ್ತಾರೆ.

**ಸೊಪ್ಪು ತರಕಾರಿ :** ಪಾಲಕ್ ಸೊಪ್ಪು, ಮೆಂತೆ, ಚಕ್ಕೋತ, ಚುಕ್ಕೇ ಸೊಪ್ಪು, ದಂಟಿನ ಸೊಪ್ಪು, ಗೋಣಿ ಸೊಪ್ಪು, ಬಸಳೆ ಸೊಪ್ಪು, ಅಪಸೆಣಬು, ಕೆಸವು, ಪುಂಡಿ ಮುಂತಾದವನ್ನು ಬೆಳೆಯುತ್ತಾರೆ.

**ಹೈನುಗಾರಿಕೆ :** ಈ ಪ್ರದೇಶವು ಹೈನುಗಾರಿಕೆಗೆ ಪ್ರಸಿದ್ಧಿ ಪಡೆದಿದೆ. ನಗರೀಕರಣದ ಪ್ರಭಾವದಿಂದ ನಗರದ ಹೊರ ಭಾಗದಲ್ಲಿ ಅಧಿಕ ಮಟ್ಟದಲ್ಲಿ ಹಾಲು ಉತ್ಪಾದನೆಯಾಗುತ್ತದೆ. ಹೈನುಗಾರಿಕೆಯಿಂದ ರೈತರು ಲಾಭ ಗಳಿಸುತ್ತಿದ್ದಾರೆ. ಸುಧಾರಿತ ತಳಿಗಳ ವರ್ಧನೆಯು ಅಧಿಕ ಮಟ್ಟದಲ್ಲಿದೆ.

**ಕುಕ್ಕುಟೋದ್ಯಮ (ಕೋಳಿಸಾಕಾಣಿಕೆ) :** ನಗರದ ಮಾರುಕಟ್ಟೆ ವಿಸ್ತಾರವಾಗಿದ್ದುದರಿಂದ ಬೇಡಿಕೆ ಹೆಚ್ಚಿರುವುದರಿಂದ ಕುಕ್ಕುಟೋದ್ಯಮ ಸಮೃದ್ಧವಾಗಿ ಬೆಳೆದಿದೆ.

**ಲಾಲ್‌ಬಾಗ್ ತೋಟಗಾರಿಕಾ ಕೇಂದ್ರ :** ತೋಟಗಾರಿಕೆ ಬೆಳೆಗಳ ಪ್ರಾತ್ಯಕ್ಷತೆ ಮತ್ತು ರೈತರಿಗೆ ಮಾಹಿತಿ, ತರಬೇತಿಯನ್ನು ಸಹ ಲಾಲ್‌ಬಾಗ್‌ನಲ್ಲಿ ನೀಡಲಾಗುತ್ತಿದೆ. ಸರಳೀಕೃತ ತೋಟಗಾರಿಕೆ ಕೃಷಿಯನ್ನು ಅಳವಡಿಸಿಕೊಳ್ಳಲು ರೈತರಿಗೆ ಸದಾ ಮಾರ್ಗದರ್ಶನ ಕೇಂದ್ರವಾಗಿದೆ.

**ಗಾಂಧಿ ಕೃಷಿ ವಿಜ್ಞಾನ ಕೇಂದ್ರ :** ಹೆಬ್ಬಾಳದಲ್ಲಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರವಿದ್ದು ಇಲ್ಲಿ ಪ್ರತಿವರ್ಷ ರಾಷ್ಟ್ರೀಯ ಕೃಷಿ ಮೇಳವನ್ನು ಏರ್ಪಡಿಸಿ ರೈತರಿಗೆ ಮಾರ್ಗದರ್ಶನ ನೀಡುತ್ತಾರೆ. ಅಂತಾರಾಷ್ಟ್ರೀಯ ಮಟ್ಟದ ವಸ್ತು ಪ್ರದರ್ಶನವನ್ನು ಏರ್ಪಡಿಸಿ ರೈತರಿಗೆ, ಸಲಹೆ ಸೂಚನೆ, ಬೀಜ ಮಾರಾಟ, ಪ್ರಾತ್ಯಕ್ಷಿಕೆಗಳನ್ನು ಇಲ್ಲಿ ಆಯೋಜಿಸಲಾಗುತ್ತದೆ. G.K.V.Kಯಲ್ಲಿ ಎಲ್ಲಾ ಮಾದರಿಯ ಬೆಳೆಗಳ ಮಾದರಿಗಳನ್ನು ನೋಡಬಹುದು.

**ಹಿಪ್ಪುನೇರಳೆ ಕೃಷಿ :** ಸಾಮಾನ್ಯವಾಗಿ ನೀರಾವರಿ ಪ್ರದೇಶದಲ್ಲಿ ರೇಷ್ಮೆ ಕೃಷಿ ಕ್ಷೇತ್ರಗಳು ಅತಿ ಚಿಕ್ಕದಾಗಿದ್ದು ಸಾಂದ್ರ ಮಾದರಿಯಲ್ಲಿ ನಿರ್ವಹಿಸಲ್ಪಡುತ್ತವೆ. ರೇಷ್ಮೆ ಕೃಷಿಗೆ ಹೆಚ್ಚು ಕೆಲಸಗಾರರ ಅಗತ್ಯವಿರುವುದರಿಂದ ಇದರ ಬೇಸಾಯವು ಸ್ಥಳೀಯವಾಗಿ ಹೆಚ್ಚಿನ ಉದ್ಯೋಗವನ್ನು ಒದಗಿಸುತ್ತದೆ.

**ಸಾಂಪ್ರದಾಯಿಕ ಕೃಷಿ ವಿಧಾನಗಳು :**

**ನಾಟಿ ಪದ್ಧತಿ :** ರಾಜ್ಯದಾದ್ಯಂತ ನಾಟಿಯ ವಿಧಾನದಿಂದ ಬತ್ತ ಮತ್ತು ರಾಗಿಯನ್ನು ಬೆಳೆಯುವಂತೆ ಜಿಲ್ಲೆಯಲ್ಲಿಯೂ ನಾಟಿಪದ್ಧತಿ ರೂಢಿಯಲ್ಲಿದೆ. ಕೃಷಿಭೂಮಿಯನ್ನು 3-4 ಬಾರಿ ಉಳುಮೆ ಮಾಡಿ ಸಿದ್ಧಗೊಳಿಸಿ ಪೈರುಗಳನ್ನು ಸಸಿಮಡಿಗಳಲ್ಲಿ ಬೆಳೆಸಿ 15ರಿಂದ 25 ದಿನಗಳ ಒಳಗೆ ನಾಟಿ ಮಾಡುತ್ತಾರೆ. ಬತ್ತದ ನಾಟಿಯಲ್ಲಿ ಜಪಾನ್ ನಾಟಿಪದ್ಧತಿ, ಶ್ರೀಪದ್ಧತಿ, ಹಾಗೂ ಸ್ಥಳೀಯ ಸಾಂಪ್ರದಾಯಿಕ ಪದ್ಧತಿಗಳಲ್ಲಿ ನಾಟಿ ಮಾಡುವುದನ್ನು ಕಾಣಬಹುದು.

**ಸಾಲು ಬಿಡುವುದು :** ರಾಗಿ ಮತ್ತು ದ್ವಿದಳ ಧಾನ್ಯಗಳನ್ನು ಸಾಲುಬಿಡುವ ಪದ್ಧತಿ ರೂಢಿಯಲ್ಲಿದೆ. ಸಾಲುಗಳ ಅಂತರ ರಾಗಿಯ ಬೆಳೆಯಲ್ಲಿ ಒಂದು ಒಂದೂವರೆ ಅಡಿ ಅಗಲವಿರುತ್ತದೆ. ರಾಗಿಯನ್ನು ಈ ಭಾಗದಲ್ಲಿ 'ಸೆಡ್ಡೆ' ಎನ್ನುವ ಬಿದಿರಿನ ಸಲಕರಣೆಯನ್ನು ಬಳಸಿಕೊಂಡು ಸಾಲು ಬಿಡುವುದನ್ನು ಕಾಣಬಹುದು.

**ಮಡಿಕಟ್ಟುವುದು :** ರಾಗಿ ಮತ್ತು ಬತ್ತದ ಪೈರುಗಳನ್ನು ಬೆಳೆಸಲು 3-4 ಅಡಿ ಅಗಲದ ಮತ್ತು 15-25 ಅಡಿ ಉದ್ದದ ಪಟಗಳನ್ನು ಮಾಡಿ ಕಾಂಪೋಸ್ಟ್ ಗೊಬ್ಬರ, ಬೀಜ ಹಾಕಿ, ಹೊದಿಕೆ ಹಾಕಿ ನೀರನ್ನು ಹದವಾಗಿ ಎರಚಿ ಮೊಳಕೆ ಬಂದ ಅನಂತರ ನೀರುಣಿಸಿ ಸಸಿ ಮಡಿ ಬೆಳೆಸುತ್ತಾರೆ.

**ಹರಕೆ :** ಇದು ಸಾಂಪ್ರದಾಯಿಕ ಕೃಷಿ ವಿಧಾನಗಳಲ್ಲೊಂದು. ಎರಡು ಅಥವಾ ಮೂರು ಕಬ್ಬಿಣದ ಗುಳಗಳಿಂದ ಮಾಡಿರುವ ಉಪಕರಣದಿಂದ ಉಳುಮೆ ಮಾಡುವ ವಿಧಾನವಾಗಿದೆ. ಸಾಲುಗಳ ಮಧ್ಯದಲ್ಲಿರುವ ಕಳೆಯನ್ನು ತೆಗೆಯಲು ಹರತೆಯೊಡೆಯುತ್ತಾರೆ. ರಾಗಿ ನಾಟಿಗೆ ಮರದ ನೇಗಿಲು ಬಳಸಿಕೊಂಡು ಹರಕೆಯೊಡೆಯುವುದು ಸಾಮಾನ್ಯ.

**ಕುಡಿ ಚಿವುಟುವುದು :** ತೊಗರಿ, ಅವರೆಗಿಡ, ಕುಂಬಳಗಿಡ ಇತ್ಯಾದಿ ಬೆಳೆಗಳಲ್ಲಿ ಕುಡಿಚಿವುಟುವುದು ಸರ್ವೆಸಾಮಾನ್ಯ. ಹೂ ಬಿಡುವ ಮುಂಚೆ ಗಿಡಗಳ ಕುಡಿಗಳನ್ನು ಚಿವುಟಿ ಹಾಕುತ್ತಾರೆ. ಇದರಿಂದ ಗಿಡಗಳ ಟಿಸಿಲುಗಳು ಹೆಚ್ಚಾಗಿ ಹೆಚ್ಚು ಕಾಯಿ ಕಟ್ಟುತ್ತದೆ.

**ಕಣ ಮಾಡುವುದು :** ಬೆಳೆದ ಧಾನ್ಯಗಳನ್ನು ಒಕ್ಕಣೆ ಮಾಡಲು ಕಣಗಳನ್ನು ಅವರವರ ಜಮೀನಿನಲ್ಲಿ ಮಾಡಿಕೊಳ್ಳುತ್ತಾರೆ. 15 x 20, 30 x 40 ಅಡಿಗಳವರೆಗೆ ಕಣಗಳನ್ನು ಮಾಡುವುದನ್ನು ಕಾಣಬಹುದು. ಕಣ ಮಾಡುವಾಗ ನಿರ್ದಿಷ್ಟ ಜಾಗದಲ್ಲಿ ನೆಲವನ್ನು ಸಮತಟ್ಟು ಮಾಡಿ, ದನಗಳನ್ನು ಬಳಸಿ ಕಣವನ್ನು ತುಳಿಸಿ ಗಟ್ಟಿ ಮಾಡಿ ಅನಂತರ ಈಚಲು ಮರದ ಸೋಗೆಗಳನ್ನು ಬರಲು ಮಾಡಿಕೊಂಡು ಕಣದಲೆಲ್ಲಾ ಎಳೆದು ಸಮತಟ್ಟು ಮಾಡಿ ಅನಂತರ ಹೊಸಕಣದ ಮೇಲೆ ಈಶಾನ್ಯ ಮೂಲೆಯಲ್ಲಿ ಸಗಣಿಯಿಂದ ಬಸವಣ್ಣನನ್ನು ಮಾಡಿ ಗರಿಕೆ ಮುಡಿಸಿ ಕಣದ ತುಂಬೆಲ್ಲಾ ಹುಚ್ಚೆಳ್ಳು ಹೂವು, ಅಣ್ಣೆ ಸೊಪ್ಪಿನ ಹೂವುಗಳನ್ನು ಹರಡಿ ಪೂಜೆ ಮಾಡಿ ಕಣವನ್ನು ಸಿಂಗರಿಸುವುದುಂಟು.

ಇತ್ತೀಚೆಗೆ ಸಮುದಾಯ ಕಣಗಳನ್ನು ಅಲ್ಲಲ್ಲಿ ನೋಡಬಹುದು. ಹಾಗೆಯೇ ತಂತ್ರಜ್ಞಾನ ಮುಂದುವರಿದಿರುವುದರಿಂದ ಇತ್ತೀಚಿನ ದಿನಗಳಲ್ಲಿ ರೈತರು ತಾವು ಬೆಳೆದ ಅಮೂಲ್ಯ ಬೆಳೆಗಳ ಪೈರನ್ನು ರಸ್ತೆಗಳಲ್ಲಿ ಹರಡಿ ಒಕ್ಕಣೆ ಮಾಡುವುದನ್ನು ಕಾಣುತ್ತೇವೆ. ವಿಪರ್ಯಾಸವೆಂದರೆ ರಸ್ತೆಗಳೇ ರೈತರ ಕಣಗಳಾಗುತ್ತಿವೆ. ಇವು ವಾಹನ ಸವಾರರ ಜೀವಕ್ಕೆ ಅಪಾಯವನ್ನೊಡ್ಡುತ್ತಿವೆ.

**ದೇಶೀ ತಳಿಗಳು : ಈರುಳ್ಳಿ :** ಸಣ್ಣ ಈರುಳ್ಳಿಯನ್ನು ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇದನ್ನು ರಾಜ ಈರುಳ್ಳಿ ಎನ್ನುವರು.

**ಕುಂಬಳ :** ದುಂಡಗಿನ ಕುಂಬಳವನ್ನು ಮತ್ತೆ ಸಿಹಿಗುಂಬಳ ಹಾಗೂ ಬೂದು ಕುಂಬಳವನ್ನು ಜಿಲ್ಲೆಯಲ್ಲಿ ಬೆಳೆಯುತ್ತಾರೆ.

**ತೊಂಡೆಕಾಯಿ :** ಜಿಲ್ಲೆಯಲ್ಲಿ ತೊಂಡೆಕಾಯಿಯನ್ನು ಬೆಳೆಯುತ್ತಾರೆ. ಮನೆಯ ಹಿತ್ತಲಿನಲ್ಲಿ ಚಪ್ಪರದ ತೊಂಡೆಕಾಯಿಯನ್ನು ವರ್ಷ ಪೂರ್ತಿ ಬೆಳೆಯುತ್ತಾರೆ.

**ಸೊಪ್ಪುಗಳು :** ಕೀರೆಸೊಪ್ಪು, ದಂಟಿನಸೊಪ್ಪು, ಹೊಲಸೊಪ್ಪುಗಳಲ್ಲಿ ಅಣ್ಣೆ ಸೊಪ್ಪು, ಚಿಲ್ಕೀರೆ ಸೊಪ್ಪು ಬೆಳೆಯುವುದನ್ನು ಕಾಣಬಹುದು.

### ಗೊಬ್ಬರಗಳು ಮತ್ತು ಕೀಟನಾಶಕಗಳು

**ಕೊಟ್ಟಿಗೆ ಗೊಬ್ಬರ :** ದನಕರುಗಳು, ಆಡು, ಕುರಿ, ಕೋಳಿ, ಎಮ್ಮೆ ಮೊದಲಾದವುಗಳ ಸಗಣಿಯನ್ನು ಒಂದೆಡೆ ಹಾಕಿ ಕರಗಿದ ಮೇಲೆ ಹೊಲಗದ್ದೆಗಳಲ್ಲಿ ಬಳಸುವ ಗೊಬ್ಬರವಿದು

**ನಾಟಿ ಗೊಬ್ಬರ :** ದನದ ಗೊಬ್ಬರವೇ ನಾಟಿ ಹಸುವಿನ ಗೊಬ್ಬರವಾಗಿದೆ.

**ಸೀಮೆ ಗೊಬ್ಬರ :** ರಾಸಾಯನಿಕ ಗೊಬ್ಬರ.

**ಗ್ಲಿರಿಸಿಡಿಯಾ :** ಹಸುರೆಲೆ ಗೊಬ್ಬರ.

**ಹಸುರೆಲೆ ಗೊಬ್ಬರ :** ಗಿಡಗೆಂಟೆಗಳ ಎಲೆ ಮತ್ತು ಸೊಪ್ಪು ಸೆದೆಗಳಿಂದ ತಯಾರಿಸಿದ ಗೊಬ್ಬರ.

**ಚೆಲ್ಲು ಗೊಬ್ಬರ :** ಹೊಲ ಗದ್ದೆಗಳಲ್ಲಿ ಗೊಬ್ಬರವನ್ನು ಚೆಲ್ಲುವುದು.

**ದ್ರವ ಗೊಬ್ಬರ :** ಗೊಬ್ಬರದ ಮಿಶ್ರಣವನ್ನು ನೀರಿನೊಂದಿಗೆ ಬೆರೆಸಿ ಕೊಡುವುದೇ ದ್ರವಗೊಬ್ಬರ.

ನೀರು ಗೊಬ್ಬರ, ಸಾಲುಗೊಬ್ಬರ, ಮೇಲ್ಗೊಬ್ರ ಇತ್ಯಾದಿ ವಿಧಾನಗಳನ್ನು ಕಾಣಬಹುದು.

### ಕೀಟನಾಶಕಗಳು

**ಎಕಾಲೆಕ್ಸ್ :** ಇದೊಂದು ಕೀಟ ನಾಶಕ ಔಷಧಿ.

**ಹಳದಿರೋಗ :** ಬತ್ತ, ತೊಗರಿ ಮುಂತಾದ ಬೆಳೆಗಳಿಗೆ ತಗಲುವ ರೋಗ.

**ಕಂದು ಜಿಗಿರೋಗ :** ಬತ್ತಕ್ಕೆ ಬರುವ ಸಾಮಾನ್ಯ ರೋಗ.

**ಕತ್ತರಿ ಹುಳು :** ಈ ಹುಳುವಿನಿಂದ ಬತ್ತದ ಬೆಳೆ ನಾಶವಾಗುತ್ತದೆ.

**ಕಬ್ಬಕ್ಕಿ :** ಬೆಳೆಗಳನ್ನು ಹಾಳು ಮಾಡುವ ಹಕ್ಕಿ.

**ಆಟಗಾಳಿ :** ಬೆಳೆಗಳಿಗೆ ರೋಗ ತರುವ ಗಾಳಿ.

### ಬಳಸುವ ಉಪಕರಣಗಳು

**ಹೆಗ್ಗುಂಟೆ :** ಇದು ನಾಡ ಕುಂಟೆಯೆಂದು ಹೆಸರು ಪಡೆದಿದೆ. ಮುಂಗಾರು ಮಳೆಯಾದಾಗ ಭೂಮಿಯಲ್ಲಿನ ತೇವಾಂಶ ಹಾಳಾಗದಂತೆ ಇದನ್ನು ಬಳಸಲಾಗುತ್ತದೆ.

**ಚಿಪ್ಪುಕುಂಟೆ :** ಒತ್ತಾಗಿರುವ ರಾಗಿಯ ಪೈರನ್ನು ವಿರಳಗೊಳಿಸಲು ಮತ್ತು ಸಾಲುಗಳಲ್ಲಿ ಕಳೆ ತೆಗೆಯಲು ಉಪಯೋಗಿಸಲಾಗುತ್ತದೆ.

**ನೇಗಿಲು :** ರಾಗಿ, ಬತ್ತ, ಕಬ್ಬು ಮೊದಲಾದ ಬೆಳೆಗಳನ್ನು ಬಿತ್ತನೆ ಮಾಡುವ ಮೊದಲು ಹೊಲ ಗದ್ದೆಗಳನ್ನು ಹಸನು ಮಾಡಲು ಬಳಸುವ ಕಬ್ಬಿಣದ ಉಪಕರಣ.

**ಹಲಗೆ ಹಲುಬೆ :** ಗದ್ದೆ ಮತ್ತು ಹೊಲಗಳಲ್ಲಿ ಬಿತ್ತನೆ ಮಾಡುವುದಕ್ಕೆ ಮುಂಚೆ ಅವುಗಳನ್ನು ಮಟ್ಟ ಮಾಡಲು ಇದು ಅನುಕೂಲ.

**ರಾಗಿ ಕೂರಿಗೆ :** ಕೂರಿಗೆ 8 ಅಂತರದಲ್ಲಿನ 6 ಹಲ್ಲುಗಳನ್ನು ಹೊಂದಿರುತ್ತದೆ. ಪ್ರತಿಸಲವು ಇದರಿಂದ 6 ಸಾಲು ಬಿತ್ತನೆ ಮಾಡಲು ಸಾಧ್ಯವಾಗುತ್ತದೆ.

**ಮಂಕ್ರಿ :** ಇದೊಂದು ಈಚಲು ಮರದ ಸೋಗೆಯಿಂದ ಅಥವಾ ಬಿದಿರಿನಿಂದ ಹೆಣೆದ ಬುಟ್ಟಿ. ಕಸ ಹಾಕಲು ಗೊಬ್ಬರ ಹೊರಲು ಇದನ್ನು ಬಳಸುವರು.

**ಅಡ್ಮೇಣಿ :** ಹೆಗ್ಗುಂಟೆ ಮತ್ತು ಇತರೆ ಹಸುನಗೊಳಿಸುವ ಸಾಧನಗಳಲ್ಲಿ ಬಳಸುವ ನಿಯಂತ್ರಕ ಸಾಧನ.

**ಅಂಚಿಕಾಣೆ :** ತೂರುವಾಗ ರಾಶಿಯನ್ನು ಸ್ವಚ್ಛ ಮಾಡಲು ಬಳಸುವ ಪೊರಕೆ.

**ಅಗೆವು :** ರಾಗಿಯನ್ನು ಶೇಖರಿಸಲು ಭೂಮಿಯನ್ನು ಆಳವಾಗಿ ತೆಗೆದು ನಿರ್ಮಿಸಿದ ವ್ಯವಸ್ಥೆ.

**ಅರಿವಿ :** ದವಸ ಧಾನ್ಯಗಳನ್ನು ಅತಿ ಸಣ್ಣ ಪ್ರಮಾಣದಲ್ಲಿ ಶೇಖರಿಸಲು ಬಳಸುವ ಸಾಧನ.

**ಯಾತ :** ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ.

**ತೆನೆ ಮುರಿಯುವುದು :** ಬೆಳೆದ ಪೈರಿನಿಂದ ತೆನೆಯನ್ನು ಮುರಿಯುವುದು.

**ಅಗೆ ಹಚ್ಚು :** ಸಸಿಗಳನ್ನು ಬೆಳೆಯಲು ಬೀಜ ಬಿತ್ತುವುದು.

**ಹರಗು :** ಭೂಮಿಯನ್ನು ಹದಮಾಡುವಿಕೆ.

**ತೊಡ್ಮರ :** ಗಾಡಿಯಲ್ಲಿ ಬಳಸುವ ಸಾಧನ.

**ಗುದಿ :** ತೆಂಗು, ಅಡಕೆ ಮುಂತಾದ ಮರಗಳನ್ನು ಹತ್ತುವಾಗ ಕಾಲಿಗೆ ಕಟ್ಟಿಕೊಳ್ಳುವ ಹಗ್ಗ.

**ಬಾಂಡ್ಲಿ :** ಮಣ್ಣು ತುಂಬಿಕೊಳ್ಳಲು ಬಳಸುವ ಸಾಧನ.

**ರಾಗಿ ಗುಳಿ :** ಭೂಮಿಯಲ್ಲಿ ರಾಗಿ ಶೇಖರಿಸಲು ಮಾಡಿಕೊಂಡಿರುವ ಸಾಧನ.

**ಮ್ಯರ್ಗಡ್ಸಿ :** ಕಣದಲ್ಲಿ ಹುಲ್ಲು ಕೆದಕಲು ಬಳಸುವ ಸಾಧನ.

**ಮರ :** ಕಣದಲ್ಲಿ ಧಾನ್ಯ ತೂರಲು ಬಳಸುವ ಬಿದಿರು ಅಥವಾ ತಗಡಿನಿಂದ ತಯಾರಿಸಿದ ಸಾಧನ.

**ಮೇಣಿ :** ನೇಗಿಲನ್ನು ಮತ್ತು ಕುಂಟೆಯನ್ನು ನಿಯಂತ್ರಿಸಲು ಇರುವ ಹಿಡಿ ಸೇರಿದ ಭಾಗ.

**ದಡಿ :** ನೇಗಿಲಿನಲ್ಲಿ ಜೋಡಿಸಿರುವ ಉದ್ದನೆಯ ಮರ.

**ಪಿಕಾಸಿ :** ನೆಲವನ್ನು ಅಗೆಯಲು ಬಳಸುವ ಸಾಧನ.

**ತಗ್ಬೆ :** ಹೊಲದಲ್ಲಿ ಮಟ್ಟ ಹೊಡೆಯಲು ಬಳಸುವ ಸಾಧನ.

**ಸಹಾಯಕ ಗ್ರಂಥಗಳು**


ಕನ್ನಡ ವಿಷಯ ವಿಶ್ವಕೋಶ - ಭೂಗೋಳ ವಿಜ್ಞಾನ

ಕನ್ನಡ ವಿಶ್ವಕೋಶ ಸಂಪುಟ 12

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ - ಡಾ. ರಂಗನಾಥ್

ಕರ್ನಾಟಕ ಭೂಗೋಳಶಾಸ್ತ್ರ - ಪಿ. ಮಲ್ಲಪ್ಪ

ಕರ್ನಾಟಕ ಸಂಕ್ಷಿಪ್ತ ಇತಿಹಾಸ - ಸೂರ್ಯನಾಥ ಕಾಮತ್

ಬೆಂಗಳೂರು ಜಿಲ್ಲೆಯ ಅಂಕಿ ಅಂಶಗಳ ನೋಟ - 2011-12

www.bangalore.com.&www.Raithamithra.com


**ವಕ್ತೃಗಳು**

ನಿಂಗಪ್ಪ, ಕೃಷಿಕ, ಆನೇಕಲ್ ತಾಲ್ಲೂಕು

ಡಾ.ಎಸ್.ನಾಗರಾಜ್, ಪ್ರಾಧ್ಯಾಪಕರು, ಜಿ.ಕೆ.ವಿ.ಕೆ. ಬೆಂಗಳೂರು

*ಎಂ.ಕೆ.ಎಸ್.*

**ಬೆಂಡೆ** ತರಕಾರಿಗಳ ಪೈಕಿ ಒಂದು. ಇದು ವರ್ಷ ಪೂರ್ತಿ ಫಸಲನ್ನು ಕೊಡುವ ಬೆಳೆ. ಉಷ್ಣವಲಯ ಮತ್ತು ಸಮಶೀತೋಷ್ಣವಲಯಗಳಲ್ಲೂ ಬೆಳೆಯಬಲ್ಲದು. ತೆಲುಗಿನಲ್ಲಿ ಬೆಂಡೆ ಕಾಯಿಯೆಂದೂ ತಮಿಳುನಲ್ಲಿ ವೆಂಡಕ್ಕಾಯ್ ಎಂದೂ ಹಿಂದಿಯಲ್ಲಿ ಬೇಂಡಿ ಎಂದೂ ಕರೆಯುತ್ತಾರೆ. ಉತ್ತರ ಭಾರತದಲ್ಲಿ ಭಿಂಡಿ, ಭೆಂಡಿ, ಭೆಂಡ್, ಭೆಂಡ ಎಂದು ಪರಿಚಿತವಾಗಿದೆ.

ಬೆಂಡೆ ಇಥಿಯೋಪಿಯಾ ಮತ್ತು ಸುಡಾನ್ ಮೂಲದ ಬೆಳೆ. ಅಮೇರಿಕಾದಲ್ಲೂ ಸಾಕಷ್ಟು ಸುಧಾರಿತ ಬೆಂಡೆ ತಳಿಗಳಿವೆ. ಆಫ್ರಿಕ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಇದನ್ನು ಓಕ್ರ ಎಂದು ಕರೆಯುತ್ತಾರೆ. ಭಾರತದಲ್ಲೂ ಸುಧಾರಿತ ತಳಿಗಳನ್ನು ಇತ್ತೀಚೆಗೆ ಬೆಳೆಯುತ್ತಿದ್ದಾರೆ. ಕರ್ನಾಟಕದಲ್ಲಿ ಸದಾ ಬೆಂಡೆ ಮತ್ತು ಹಾಲುಬೆಂಡೆ ಎಂದು ಎರಡು ವಿಧಗಳಿವೆ. ಬೆಂಡೆಯ ಮೇಲೆ ಮುಳ್ಳಿನಂತಹ ಕೂದಲುಗಳಿರದೆ ಮೇಲ್ಮೈ ಮೃದುವಾಗಿದ್ದು ಕಾಯಿ ತೆಳ್ಳಗೆ ಉದ್ದವಾಗಿದ್ದರೆ ಅದನ್ನು ಉತ್ತಮ ಜಾತಿಯ ಬೆಂಡೆ ಎಂದು ಕರೆಯುತ್ತಾರೆ.

**ಬಿತ್ತನೆ :** ತೋಟದ ಬದುಗಳಲ್ಲಿ ಸಾಲಾಗಿ ನೆಟ್ಟು ಬೆಳೆಸಲು ಯೋಗ್ಯವಾದ ಗಿಡ ಇದು. ಈರುಳ್ಳಿ, ಬೆಳ್ಳುಳ್ಳಿ, ಬೀನ್ಸ್ ಇತ್ಯಾದಿ



ಬೆಳೆಗಳ ಜೊತೆ ಮಿಶ್ರ ಬೆಳೆಯಾಗಿಯೂ ಬೆಳೆಯುತ್ತಾರೆ. ಮೆಕ್ಕಲು ಮಣ್ಣು ಮರಳು ಮಿಶ್ರಿತ ಹಗುರವಾದ ಜೇಡಿಮಣ್ಣು, ಕೆಬ್ಬೆಮಣ್ಣು, ಮರಳು ಮಿಶ್ರಿತ ಕಪ್ಪು ಅಥವಾ ಬೂದುಬಣ್ಣದ ಮಣ್ಣಿನಲ್ಲಿಯೂ ಇದು ಉತ್ತಮ ಇಳುವರಿ ಕೊಡುತ್ತದೆ.

**ಬೇಸಾಯ :** ಉತ್ತು ಹದಮಾಡಿದ ಭೂಮಿಯಲ್ಲಿ ಎರಡು ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಿ ಒಂದು ಅಡಿ ಅಂತರದಲ್ಲಿ ಬೀಜಗಳನ್ನು ನೆಡಬೇಕು. ಸರಿಯಾದ ಸಮಯಕ್ಕೆ ನೀರನ್ನು ಕೊಡುತ್ತಿದ್ದರೆ ಗಿಡ

ಹುಲುಸಾಗಿ ಬೆಳೆಯುತ್ತದೆ. ಒಂದಡಿ ಎತ್ತರಕ್ಕೆ ಬಂದಾಗ ಸುತ್ತ ಕೆದಕಿ ಮಣ್ಣನ್ನು ಒಂದೆರಡುದಿನ ಒಣಗಲು ಬಿಟ್ಟು ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಿ ಎರಡೂ ಕಡೆ ಏರಾಕಿ ನೀರನ್ನು ಕೊಡಬೇಕು. ಗಟ್ಟಿ ನೆಲವಾದರೆ ಆಗಾಗ ಕೆದಕಿ ಬೇರನ್ನು ಸಡಿಲಗೊಳಿಸಿ ಉಸಿರಾಡುವಂತೆ ನೋಡಿಕೊಂಡರೆ ಹೆಚ್ಚು ಇಳುವರಿಯನ್ನು ಪಡೆಯಬಹುದು.

**ತಳಿಗಳು :** ಒಣಭೂಮಿ ಪ್ರದೇಶಗಳಲ್ಲಿ - ದೊಡ್ಡ ಬೆಂಡೆ, ಬಿಳಿಗಿಡ್ಡ ಬೆಂಡೆ, ಮರಬೆಂಡೆ, ಮಿಕದ ಕೊಂಬಿನ ಬೆಂಡೆ, ಮುಳ್ಳು ಬೆಂಡೆ, ಬಹುವಾರ್ಷಿಕ ಶ್ರೀಲಂಕಾದ ಬೆಂಡೆ, ಹಸರು ಬೆಂಡೆಗಳನ್ನು ಬೆಳೆಯುತ್ತಾರೆ.

**ದೊಡ್ಡ ಬೆಂಡೆ :** ಇದು 3-4 ತಿಂಗಳ ಬೆಳೆ. ಇದರ ಮೂಲ ತಮಿಳುನಾಡು. ಹೆಚ್ಚು ಇಳುವರಿ ಕೊಡುವ ಗುಣವಿರುವ ಬೆಂಡೆ ಇದಾಗಿದ್ದು ಹಳದಿ ಮಿಶ್ರಿತ ಹಸುರು ಬಣ್ಣದ ಉದ್ದವಾದ ಸಾಕಷ್ಟು ದಪ್ಪಗಿರುವ ಕಾಯಿ ಬಿಡುತ್ತದೆ. ಈ ಬೆಳೆಗೆ ನೇರ ಬಿಸಿಲು ಬೀಳುವಂತಿದ್ದು ಒಳ್ಳೆ ಆರೈಕೆ ಮಾಡಿದರೆ ಪ್ರತಿ ಗಿಣ್ಣಿಗೂ ಕಾಯಿಕೊಡುತ್ತದೆ. ಇದರ ಹೂವು ದಾಸವಾಳದ ಹೂವನ್ನು ಹೋಲುತ್ತದೆ.

**ಬಿಳಿಗಿಡ್ಡ ಬೆಂಡೆ :** ಮೂರು ತಿಂಗಳ ಬೆಳೆ. ಗಿಡ ಗಿಡ್ಡವಾಗಿದ್ದು, ಕಾಯಿ ಸಹ ಗಿಡ್ಡಗೆ ದಪ್ಪಗೆ ಇರುತ್ತದೆ. ಇದರ ಬಣ್ಣ ಹಳದಿ ಮಿಶ್ರಿತ ಬಿಳಿ. ಈ ಬೆಂಡೆಯಲ್ಲಿ ನಾರಿನಾಂಶ ಹೆಚ್ಚಾಗಿದ್ದು ಸಾಧಾರಣ ಇಳುವರಿಯನ್ನು ಕೊಡುತ್ತದೆ. ರೋಗ ಮತ್ತು ಕೀಟ ಬಾಧೆ ಮುಕ್ತವಾದ ಇದು ಬೇಸಗೆಯಲ್ಲಿ ಒಳ್ಳೆಯ ಇಳುವರಿಯನ್ನು ಕೊಡುತ್ತದೆ.

**ಮರಬೆಂಡೆ :** ಇದು ವರ್ಷದಲ್ಲಿ ಫಲವನ್ನು ಕೊಡುವ ಜಾತಿ. ಹತ್ತರಿಂದ ಹದಿನೈದು ಅಡಿ ಎತ್ತರ ಬೆಳೆಯುತ್ತದೆ. ಹತ್ತಾರು ಕವಲೊಡೆದು ತೊಗರಿಗಿಡದಂತೆ ಬೆಳೆದು ಎಲ್ಲಾ ಕವಲುಗಳಲ್ಲೂ ಕಾಯಿ ಬಿಡುತ್ತದೆ. ಕರ್ನಾಟಕದಲ್ಲಿ ಮಧುಗಿರಿ ಮತ್ತು ಗೌರಿಬಿದನೂರು ಪ್ರದೇಶಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಹೊಲಗಳಲ್ಲಿ ಮಿಶ್ರತಳಿಯಾಗಿ ಬೆಳೆಯುತ್ತಾರೆ. ಮುಂಗಾರಿನಲ್ಲಿ ಬಿತ್ತನೆ ಮಾಡಿದರೆ ಶಿವರಾತ್ರಿಯ ವೇಳೆಗೆ ಕಾಯಿ ಸಿಗುತ್ತದೆ. ಹಳದಿಮಿಶ್ರಿತ ಹಸುರುಬಣ್ಣದ ಕಾಯಿ ಸಾಧಾರಣ ಗಾತ್ರವಿರುತ್ತದೆ. ಈ ಬೆಳೆಗೆ ಪ್ರತ್ಯೇಕಾರೈಕೆ ಬೇಕಿಲ್ಲ. ಒಣ ಪ್ರದೇಶಗಳಲ್ಲಿ ಮರ ಬೆಂಡೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಸಾರು ಮತ್ತು ಪಲ್ಯ ಮಾಡಿದರೆ ಒಳ್ಳೆಯ ರುಚಿಯನ್ನು ಕೊಡುತ್ತದೆ.

**ಮಿಕದ ಕೊಂಬಿನ ಬೆಂಡೆ :** ಇದು ಅತಿ ಕಡಿಮೆ ಅವಧಿಯ ಬೆಳೆ. ಎರಡು ತಿಂಗಳಿಗೆಲ್ಲ ಫಸಲನ್ನು ಕೊಡುತ್ತದೆ. ಗಿಡ ಚಿಕ್ಕದಿದ್ದರೂ ಕಾಯಿ ಮಾತ್ರ ಉದ್ದವಾಗಿರುತ್ತದೆ. ಬೆಂಡೆಗಳಲ್ಲೆಲ್ಲ ಹೆಚ್ಚು ಉದ್ದವಾಗಿ ಕಾಯಿ ಬಿಡುವ ತಳಿ ಇದು. ಜಿಂಕೆಯ ಕೊಂಬಿನ ಆಕಾರವಿರುವುದರಿಂದ ಮಿಕದ ಕೊಂಬಿನ ಬೆಂಡೆ ಎಂದು ಕರೆಯುತ್ತಾರೆ.

**ಬಹುವಾರ್ಷಿಕ ಬೆಂಡೆ :** ಇದು 5-6 ಅಡಿ ಗಳವರೆಗೆ ಬೆಳೆಯಬಲ್ಲದು. ಅಗಲವಾದ ಎಲೆಗಳು ಗಿಡ್ಡದಾದ ಕಾಯಿಗಳು ಇದರ ವೈಶಿಷ್ಟ್ಯ. ವರ್ಷವಿಡೀ ಫಸಲನ್ನು ಕೊಡುತ್ತದೆ. ಒಮ್ಮೆ ಫಸಲು ಕಡಿಮೆಯಾದರೆ ಅರ್ಧ ಅಡಿ ಬಿಟ್ಟು ಗಿಡವನ್ನು ಕತ್ತರಿಸಿದರೆ ಮತ್ತೆ ಚಿಗುರೊಡೆದು ಬೇಗನೆ ಬೆಳೆದು ಮತ್ತೆ ಫಸಲನ್ನು ಕೊಡುವುದು ಈ ಗಿಡದ ವಿಶೇಷ. ರೋಗಗಳು ಕಡಿಮೆ. ಇಳುವರಿಯೂ ಕಡಿಮೆ. ಮನೆ ಅಳತೆಗೆ ಬೆಳೆಯ ಬಹುದಾದ ಬೆಂಡೆ ಇದು.

**ಮುಳ್ಳುಬೆಂಡೆ :** ಮರದ ಬೆಂಡೆಯನ್ನು ಹೋಲುವ ಇದು 7-8 ಅಡಿ ಎತ್ತರ ಬೆಳೆಯಬಲ್ಲದು. ವರ್ಷ ಪೂರ್ತಿ ಇಳುವರಿಯನ್ನು ಕೊಡುತ್ತದೆ. ಕಾಯಿಯ ಮೇಲೆ ಮುಳ್ಳುಗಳಂತಹ ರೋಮಗಳಿರುತ್ತವೆ. ತಿನ್ನಲು ರುಚಿಯಾಗಿದ್ದು ವ್ಯಾಪಾರಕ್ಕೆ ಯೋಗ್ಯವಾದುದು.

**ಶ್ರೀಲಂಕಾದ ಬೆಂಡೆ :** ಮೂರು ತಿಂಗಳ ಬೆಳೆ. ಆಳೆತ್ತರ ಬೆಳೆಯುತ್ತದೆ. ಹಸುರು ಬಣ್ಣದ ನುಣಪಾದ ಹೊರ ಮೈಯ ಉದ್ದ ಕಾಯಿಗಳ ತಳಿ, ಪ್ರತಿ ಗಿಣ್ಣಿನಲ್ಲೂ ಕಾಯಿ ಬಿಡುತ್ತದೆ. ಈ ತಳಿ ಹೆಚ್ಚು ಲೋಳೆಯನ್ನು ಹೊಂದಿದ್ದು ಅಡುಗೆಗೆ ಉತ್ತಮವಾದುದು.



**ಉಪಯೋಗಗಳು :** ಬೆಂಡೆ ಕಾಯಿ ಗೊಜ್ಜು, ಪಲ್ಯ, ಹುಳಿ ಮುಂತಾದ ಅಡುಗೆಗಳಲ್ಲಿ ಬಳಸುತ್ತಾರೆ. ಮಕ್ಕಳಿಗೆ ಉಪ್ಪು ಮೆಣಸು ಸೇರಿಸಿ ಎಳೆಕಾಯನ್ನು ತಿನ್ನಿಸಬಹುದು. ಮೂಳೆ ಮೃದುವಾಗಿಯೂ ಕೂದಲು ಕೆಂಪಾಗಿಯೂ ಇರುವ ಮಕ್ಕಳಿಗೆ ತಿನಿಸಿದರೆ ಉಪಶಮನವಾಗುತ್ತದೆ. ಗರ್ಭಿಣಿ ಸ್ತ್ರೀಯರು ಬೆಂಡೆಯನ್ನು ಸೇವಿಸುವುದು ಒಳ್ಳೆಯದು. ಇದರಲ್ಲಿ ಶರೀರ ಪೋಷಣೆಗೆ ಬೇಕಾದ ಸುಣ್ಣದ ಅಂಶ, ರಂಜಕಾಂಶ ಮತ್ತು ಕಬ್ಬಿಣಾಂಶಗಳು ಹೆಚ್ಚಾಗಿರುವುದರಿಂದ ಎಲ್ಲ ವಯೋಮಾನದವರು ಇದನ್ನು ಬಳಸುತ್ತಾರೆ. ಬೆಂಡೆ ಕಾಯಿಯನ್ನು ಎಳೆಯದಾಗಿದ್ದಾಗಲೇ ಬಳಸಬೇಕು. ಬಲಿತರೆ ಲೋಳೆ ಮತ್ತು ನಾರು ಹೆಚ್ಚಾಗುತ್ತದೆ. ಇದರ ಲೋಳೆಯಲ್ಲಿ ವೈದ್ಯಕೀಯ ಗುಣಗಳು ಅಧಿಕವಾಗಿವೆ. ಇದು ಮುಟ್ಟು ದೋಷ ನಿವಾರಕ.

ಬೀಜವಿಲ್ಲದ ಕೋಮಲವಾದ ಬೆಂಡೆ ದೇಹಕ್ಕೆ ತಂಪನ್ನು ನೀಡುತ್ತದೆ. ಪಿತ್ತ ಶಾಮಕ ಮತ್ತು ಉರಿ ಶಾಮಕ ಗುಣವನ್ನು ಹೊಂದಿದೆ. ಎಳೆ ಕಾಯಿಯನ್ನು ಕಲ್ಲುಸಕ್ಕರೆಯೊಂದಿಗೆ ಸೇವಿಸಿದರೆ ಸ್ತ್ರೀಯರ ಬಿಳಿ ಸೆರಗು ಕಡಿಮೆಯಾಗುತ್ತದೆ. ನೆಗಡಿ ಮತ್ತು ಕೆಮ್ಮು ಬಂದಾಗ ಶುಂಠಿ ಮತ್ತು ಮೆಣಸು ಸೇರಿಸಿ ಸೇವಿಸಬಹುದು. ಸ್ನಾನದ ಚೂರ್ಣದಲ್ಲಿ ಒಣಗಿದ ಬೆಂಡೆಯನ್ನು ಪುಡಿ ಮಾಡಿ ಬೆರೆಸಿದರೆ ಚರ್ಮ ಮೃದುವಾಗುತ್ತದೆ. ಬಲಿತ ಬೆಂಡೆಯನ್ನು ಒಣಗಿಸಿ ದೋಸೆ ಹುದುಗಿನೊಂದಿಗೆ ತಿರುವಿಟ್ಟರೆ ದೋಸೆ ಮೃದುವಾಗಿರುತ್ತದೆ. ಸ್ಥೂಲ ದೇಹಗಳಿಗೆ ಬೆಂಡೆ ಉತ್ತಮ ಆಹಾರ. ಮಧುಮೇಹಿಗಳು ಧಾರಾಳವಾಗಿ ಬಳಸಿದರೆ ಮಲವಿಸರ್ಜನೆ ಸುಲಭವಾಗುತ್ತದೆ. ಇದರ ಬೀಜ ಮತ್ತು ಕಾಯಿಯಿಂದ ಶರಬತ್ ತಯಾರಿಸಿ ಕುಡಿದರೆ ದೇಹಕ್ಕೆ ತಂಪು.

**ಬಿತ್ತನೆ :** ಇದು ಬೇಸಗೆಯಲ್ಲಿ ಬೆಳೆಸಲು ಯುಕ್ತವಾದ ಬೆಳೆಯಾದುದರಿಂದ ಜನವರಿ-ಫೆಬ್ರವರಿ, ಜೂನ್-ಜುಲೈ, ತಿಂಗಳುಗಳಲ್ಲಿ ಬಿತ್ತನೆ ಮಾಡಬಹುದು. ಒಂದು ಎಕರೆಗೆ ಸುಮಾರು 3 ಕಿ.ಗ್ರಾಂ. ಬಿತ್ತನೆ ಬೀಜದ ಅವಶ್ಯಕತೆ ಇದೆ. ಬಿತ್ತುವ ಮೊದಲು 10 ಟನ್ ಕಾಂಪೋಸ್ಟ್ ಬೆರೆಸಬೇಕು.

**ನೀರಾವರಿ :** ಹವಾಗುಣ ಮತ್ತು ಮಣ್ಣಿನ ತೇವಾಂಶವಿರಬೇಕು. ಸಸ್ಯದ ಮತ್ತು ಕಾಯಿ ಬೆಳವಣಿಗೆಗೆ ಅನುವಾಗಲು ಬೇಸಗೆಯಲ್ಲಿ ಐದರಿಂದ ಆರು ದಿನಕ್ಕೊಮ್ಮೆ, ಮಳೆಗಾಲದಲ್ಲಿ ತಂಪಾದ ವಾತಾವರಣದಲ್ಲಿ 15 ದಿನಕ್ಕೊಮ್ಮೆ ನೀರು ಹಾಯಿಸಬೇಕು. ಕಳೆ ತೆಗೆಯುವಿಕೆ ಮತ್ತು ನೀರು ಹಾಯಿಸುವಿಕೆಯನ್ನು ಅಗತ್ಯತೆಗೆ ಅನುಗುಣವಾಗಿ ಅನುಸರಿಸಬೇಕು. ಮಳೆ ಹೆಚ್ಚಾದರೆ ಜೌಗು ನೀರನ್ನು ಬಸಿಯುವಂತೆ ಏರ್ಪಾಡು ಮಾಡಬೇಕು.

**ಸಸ್ಯಸಂರಕ್ಷಣೆ :** ಕೀಟಗಳು ಹುಳುಗಳು ಮತ್ತು ಚಿಟ್ಟೆಗಳು ಸಸ್ಯಗಳಿಂದ ರಸವನ್ನು ಹೀರುತ್ತವೆ. ಎಲೆಗಳು ಮುದುರಿ ಕೊಳ್ಳುತ್ತವೆ. ಹತ್ತಿಕಾಯಿ, ಚುಕ್ಕೆ ಹುಳು, ಇದು ಕಾಯಿಯನ್ನು ಕೊರೆದು ತೂತು ಮಾಡುತ್ತದೆ. ಕಾಯಿ ಎಳೆಸಿರಬೇಕಾದರೆ ಕೊಯ್ಲು ಮಾಡಬೇಕು.

ಹಳದಿನರ ಮಚ್ಚೆ ರೋಗ ಸಸ್ಯ ಬೆಳವಣಿಗೆಯ ಆರಂಭದಲ್ಲೇ ಕಂಡು ಬಂದರೆ ಅಂತಹ ಸಸಿಗಳನ್ನು ಕಿತ್ತು ಸುಡಬೇಕು. ರೋಗ ಹರಡುವ ನೊಣಗಳನ್ನು ನಿಯಂತ್ರಿಸಬೇಕು.

*ವಿ.ಆರ್.ಬಿ.*

**ಬೆತ್ತ** ಬೆತ್ತದಲ್ಲಿ ನಾಗಬೆತ್ತ, ಚಡಿ, ಬೆತ್ತದ ಬಳ್ಳಿ, ಸಣ್ಣಬೆತ್ತ, ಹಾಲು ಬೆತ್ತ, ನಾಯಿಬೆತ್ತ, ಹುಲ್ಲು ಬೆತ್ತ, ಕುಮರಿಬೆತ್ತ, ಚಿಡ್ಲು ಬೆತ್ತ, ಬಲೆಬೆತ್ತ, ಹಚ್ಚಿಮರ, ನಿಮಲ, ಶೀಲ, ಉದ್ದಾಲ, ವೇತನ ಎಂಬ ಪ್ರಭೇದಗಳನ್ನು ಕರ್ನಾಟಕದಲ್ಲಿ ಗುರುತಿಸಲಾಗಿದೆ.

ಪೀಠೋಪಕರಣ ತಯಾರಿಕೆಯಲ್ಲಿ ಇದು ಪ್ರಸಿದ್ಧಿ ಪಡೆದಿದೆ. ಅರಿಕೇಸಿ ಕುಟುಂಬಕ್ಕೆ ಸೇರಿದ ಈ ಸಸ್ಯದ ವೈಜ್ಞಾನಿಕ ಹೆಸರು ಕೆಲಾಮಸ್. ಉಷ್ಣ ಮತ್ತು ಉಪೋಷ್ಣ ವಲಯಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಇದರಲ್ಲಿ ಸು. 390 ಪ್ರಭೇದಗಳಿವೆ. ಭಾರತದಲ್ಲಿ 30 ಪ್ರಭೇದಗಳು ಮಾತ್ರ ಕಂಡುಬರುತ್ತವೆ. ಭಾರತಾದ್ಯಂತ ಬೆಳೆಯುವ ಇದು ಮುಖ್ಯವಾಗಿ ಹಿಮಾಲಯ ಪರ್ವತ ಪ್ರದೇಶ, ಅಸ್ಸಾಂ, ಕೇರಳ ಹಾಗೂ ಕರ್ನಾಟಕದ ಕೊಡಗು, ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ, ಮೈಸೂರಿನ ಕೆಲವು ಭಾಗಗಳಲ್ಲೂ ಇದು ಬೆಳೆಯುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಕೆಲಾಮಸ್ ರೊಟಾಂಗ್ ಮತ್ತು ಲ್ಯಾಟಿಫೋಲಿಯಸ್, ಅಂಡಮಾನ್ ದ್ವೀಪಗಳಲ್ಲಿ ಕೆಲಾಮಸ್ ಅಂಡಮಾನಿಕಸ್, ಅಸ್ಸಾಂ ಭಾಗಗಳಲ್ಲಿ ಕೆಲಾಮಸ್ ಫ್ಲ್ಯಾಜೆಲ್ಲಮ್ ಪ್ರಭೇದಗಳು ಪ್ರಮುಖವಾದಂಥವು. ಎಲ್ಲವೂ ಬಳ್ಳಿಯಂತೆ ಬೆಳೆಯುತ್ತವೆ.

ಬಳ್ಳಿಯಲ್ಲಿರುವ ಎಲೆಕವಚಗಳ ಮೇಲಿರುವ ಮುಳ್ಳುಗಳು ಕೊಕ್ಕೆಯಂತಿರುತ್ತವೆ. ಗಿಡ ಬೆಳೆದಂತೆ ಕಾಂಡವೂ ಬೆಳೆಯುತ್ತಾ ಹೋಗುವುದಾದರೂ ಬುಡದಿಂದ ತುದಿಯವರೆಗೆ ಗಾತ್ರದಲ್ಲಿ ಏಕಪ್ರಕಾರವಾಗಿರುತ್ತದೆ. ಇದರ ಕಾಂಡ ತುಂಬ ಗಟ್ಟಿ. ಅಗತ್ಯಕ್ಕನುಗುಣವಾಗಿ ಬಾಗುವ ಗುಣ ಇದರದು. ಒಂದು ಬಗೆಯ ರಾಸಾಯನಿಕ ಗುಣ ಹೊರಮೈಮೇಲೆ ಇರುವುದರಿಂದ ಕಾಂಡ ಮುಟ್ಟಿದರೆ ಜಾರುವಂತೆ ನುಣುಪಾಗಿದ್ದು ಹೊಳಪೂ ಇರುತ್ತದೆ. ಬಳ್ಳಿಗಳು ಮರದ ಮೇಲೆ ಏರುಮುಖವಾಗಿ ಬೆಳೆಯುತ್ತವೆ.

ಸಸ್ಯ ಬೆಳೆಯುವ ಅವಧಿ ಪ್ರಭೇದ ಮತ್ತು ಪ್ರದೇಶಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತದೆ. ಸಾಮಾನ್ಯವಾಗಿ ಬೆತ್ತ ಪಡೆಯಲು ಐದು ವರ್ಷವಾದರೂ ಕಾಯಬೇಕು. ನಿರುಪಯುಕ್ತ ಭೂಮಿಯಲ್ಲಿ ಬೆಳೆಯುವುದಾದರೂ ಇದರ ಉಪಯೋಗ ಹೆಚ್ಚಾಗಿರುವುದರಿಂದ ಅನವಶ್ಯವಾಗಿ ಹಾಳು ಮಾಡದೆ ಜೋಪಾನವಾಗಿ ಪೋಷಿಸಿ ಕಾಪಾಡುತ್ತಾರೆ. ಬೆತ್ತದ ಉಪಯೋಗಕ್ಕಾಗಿ ಬಲಿತ ಗಿಡದ ಬುಡವನ್ನು ನೆಲಮಟ್ಟಕ್ಕೆ ಕತ್ತರಿಸಿ ಕಾಂಡದ ತುದಿಯ ಭಾಗವನ್ನು ಬೇರ್ಪಡಿಸುವರು. ಅನಂತರ ಮುಳ್ಳುಗಳನ್ನು ಮರಕ್ಕೆ ಉಜ್ಜುವುದರ ಮೂಲಕ ಬೆತ್ತವನ್ನು ಶುದ್ಧಗೊಳಿಸಿಕೊಳ್ಳುತ್ತಾರೆ. ಬೆತ್ತವನ್ನು ಬಿಸಿಲಿನಲ್ಲಿ ಅಥವಾ ಬೆಂಕಿಯಲ್ಲಿ ತಮಗೆ ಬೇಕಾದ ಪ್ರಮಾಣಕ್ಕೆ ಒಣಗಿಸುವರು.

**ಉಪಯೋಗಗಳು :** ಬಹೂಪಯೋಗಿಯಾದ ಬೆತ್ತ ಹಗ್ಗದಿಂದ ಹಿಡಿದು ಮಗ್ಗದವರೆಗೆ ಬಳಕೆಯಲ್ಲಿದೆ. ಒಂದೊಂದು ಪ್ರಭೇದದ ಬೆತ್ತವೂ ಒಂದು ತೆರನಾದ ಉಪಯೋಗಕ್ಕೆ ಬರುತ್ತದೆ. ಕೆಲಮಸ್ ಎಕ್ಸ್‌ಟೆನ್ಸನ್ ಬೆತ್ತ ಅತ್ಯಂತ ಗಟ್ಟಿಯಾಗಿದ್ದು ಹಗ್ಗಕ್ಕೆ ಪರ್ಯಾಯವಾಗಿ ಸೇತುವೆಗಳ ನಿರ್ಮಾಣದಲ್ಲಿ ಬಳಕೆಯಾಗುತ್ತದೆ. ಕೆಲಮಸ್ ಲ್ಯಾಟಿಫೋಲಿಯಸ್ ಮತ್ತು ಕೆಲಮಸ್ ವಿಮಿನಾಲಿಸ್ ಗಾತ್ರದಲ್ಲಿ ದಪ್ಪವಾದುದು. ಇದನ್ನು ಮೇಜಿನ ಕಾಲುಗಳು, ಊರುಗೋಲುಗಳು, ಛತ್ರಿಯ ಹಿಡಿ, ಪೋಲೊ ಆಟದ ಕೋಲಾಗಿಯೂ ಬಳಸುವುದಿದೆ. ಕೆಲಸಮ್ ಸ್ಯೂಡೊ ವೈಕಾಲಿಸಿನ ಪ್ರಭೇದವನ್ನು ಪೆಟ್ಟಿಗೆಗಳನ್ನು ಮಾಡಿ ಮಿಲಿಟರಿಗೆ ಸಂಬಂಧಿಸಿದ ತೋಪುಗಳನ್ನು ಸಂರಕ್ಷಿಸಿಡಲು ಬಳಸುತ್ತಾರೆ. ಇಷ್ಟೇ ಅಲ್ಲದೆ ವಿವಿಧ ಪ್ರಭೇದದ ಬೆತ್ತಗಳನ್ನು ಕುರ್ಚಿ, ಮಂಚ, ಬುಟ್ಟಿ ತಯಾರಿಕೆಯಲ್ಲೂ ಉಪಯೋಗಿಸುವುದುಂಟು. ಬೆತ್ತ ಸೀಳಿ ಅಗತ್ಯಕ್ಕೆ ತಕ್ಕ ಅಳತೆಗೆ ಕತ್ತರಿಸಿ ಹೊಳಪಿನ ಪದರವನ್ನು ಬಿಡಿಸಿ ಹೆಣೆಯಲಾಗುತ್ತದೆ. ಇದರ ಬೇಡಿಕೆ ಹೆಚ್ಚಾಗಿರುವುದರಿಂದ ಬಂಗಾಳ, ಬಿಹಾರ, ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಕೆಲವು ಕೈಗಾರಿಕೆಗಳು ಇವೆ.

ಭಾರತದಲ್ಲಿ ಇದರ ಬಳಕೆ ಅತ್ಯಂತ ಪ್ರಾಚೀನವಾದುದು ಎಂದು ತಿಳಿದುಬಂದಿದೆ. ಇದರ ಪ್ರತಿಯೊಂದು ಭಾಗವೂ ಉಪಯುಕ್ತವೇ. ಹಣ್ಣು ಆಹಾರವಾಗಿಯೂ ಸೋಗೆ ಗುಡಿಸಿಲುಗಳ ಮೇಲ್ಹಾವಣಿಗೂ ಮನೆ ಮತ್ತು ತೋಟದ ಸುತ್ತ ಬೇಲಿಕಟ್ಟಲು ಉಪಯುಕ್ತ. ರಥ ಎಳೆಯುವ ಹಗ್ಗ, ಎತ್ತಿನಗಾಡಿಯ ಕಮಾನು, ಕಣಜ ಮುಚ್ಚಳ, ತಟ್ಟೆ, ಆಟದ ಸಾಮಾನು, ಪೊಲೀಸ್ ಬೆತ್ತ, ದೋಣಿಗಳ ಮತ್ತು ಪೀಠಾಸನಗಳ ಹಿಡಿಕೆಗಳು ಇತ್ಯಾದಿಗಳ ತಯಾರಿಕೆಯಲ್ಲಿ ಬೆತ್ತ ಹೆಚ್ಚು ಬಳಕೆಯಲ್ಲಿದೆ. ಭಾರತದಲ್ಲಿ ಕರ್ನಾಟಕ, ಒರಿಸ್ಸಾ, ಅಸ್ಸಾಂ ಮತ್ತು ಬಂಗಾಳ ಮುಂತಾದೆಡೆಗಳಲ್ಲಿ ಉತ್ಪಾದಿಸುವ ಬೆತ್ತದ ಸಾಮಗ್ರಿಗಳಿಗೆ ಹೊರದೇಶಗಳಲ್ಲಿ ಹೆಚ್ಚಿನ ಬೇಡಿಕೆಯಿದೆ.


*ಎಸ್.ವಿ.*

**ಬೆಳಗಾಂವಿ ಜಿಲ್ಲೆಯ ಕೃಷಿ** ಕರ್ನಾಟಕದ ಚರಿತ್ರೆಯಲ್ಲಿ ವಿಶಿಷ್ಟತೆಯಿಂದ ಗುರುತಿಸಿಕೊಂಡ ಜಿಲ್ಲೆ ಬೆಳಗಾಂವಿ. 1818ರಲ್ಲಿ ಬ್ರಿಟಿಷರು ಬೆಳಗಾಂವಿಯನ್ನು ವಶಪಡಿಸಿಕೊಂಡು, 1936ರಲ್ಲಿ ಜಿಲ್ಲೆಯಾಗಿ ರೂಪಿಸಿದರು. ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿದ್ದ ಇದು 1956 ನವೆಂಬರ್ 01 ರಂದು ಏಕೀಕರಣಗೊಂಡ ಕರ್ನಾಟಕದಲ್ಲಿ ಸೇರ್ಪಡೆಯಾಗಿ ಪರಿವರ್ತಿತವಾಯಿತು. ಕರ್ನಾಟಕದ ವಾಯವ್ಯ ಭಾಗದಲ್ಲಿ ಉ.ಅ. 15$^{o}$-23'-16$^{o}$-28' ಮತ್ತು ಪೂರ್ವರೇಖಾಂಶ 74$^{o}$-5'-75$^{o}$-28'ಗಳ ನಡುವೆ ಪಸರಿಸಿರುವ ಬೆಳಗಾಂವಿ ಉತ್ತರದಲ್ಲಿ ಮಹಾರಾಷ್ಟ್ರದ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳು, ಪಶ್ಚಿಮದಲ್ಲಿ ರತ್ನಗಿರಿ ಮತ್ತು ಕೊಲ್ಹಾಪುರ ಜಿಲ್ಲೆಗಳು ಹಾಗೆಯೇ ಒಕ್ಕೂಟ ಪ್ರದೇಶವಾದ ಗೋವ, ಪೂರ್ವದಲ್ಲಿ ಬಿಜಾಪುರ, ದಕ್ಷಿಣದಲ್ಲಿ ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳೊಂದಿಗೆ ಚಾಚಿಕೊಂಡಿದೆ.

**ಜಿಲ್ಲೆಯ ವಿಸ್ತೀರ್ಣ :** ಕರ್ನಾಟಕ ರಾಜ್ಯದ ಅತ್ಯಂತ ದೊಡ್ಡ ಜಿಲ್ಲೆಯಾದ ಬೆಳಗಾಂವಿ- 13454 ಚ.ಕಿ.ಮೀ. ಭೌಗೋಳಿಕ ವಿಸ್ತೀರ್ಣಹೊಂದಿದ್ದು, 2001ರ ಸಮೀಕ್ಷೆಯಂತೆ ತಾಲ್ಲೂಕುವಾರು ಅಥಣಿ-1995 ಚ.ಮಿ.ಕೀ. ಬೈಲಹೊಂಗಲ 1122 ಚ.ಕಿ.ಮೀ. ಬೆಳಗಾಂವಿ 1037 ಚ.ಕಿ.ಮೀ. ಚಿಕ್ಕೋಡಿ 1269 ಚ.ಕಿ.ಮೀ. ಗೋಕಾಕ 1529 ಚ.ಕಿ.ಮೀ. ಹುಕ್ಕೇರಿ 991 ಚ.ಕಿ.ಮೀ., ಖಾನಾಪುರ, 1748 ಚ.ಕಿ.ಮೀ. ರಾಯಭಾಗ 958 ಚ.ಕಿ.ಮೀ. ಮತ್ತು ಸವದತ್ತಿ 1580 ಚ.ಕಿ.ಮೀ. ವಿಸ್ತೀರ್ಣ ಹೊಂದಿವೆ. ಜಿಲ್ಲೆಯಲ್ಲಿ 10 ತಾಲ್ಲೂಕುಗಳು ಸೇರಿದಂತೆ 35 ಹೋಬಳಿಗಳು, 1180 ಗ್ರಾಮಗಳು, 17 ಪಟ್ಟಣಗಳು, 485 ಗ್ರಾಮ ಪಂಚಾಯಿತಿಗಳು ಇವೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 6.99 ರಷ್ಟು ಪ್ರದೇಶವನ್ನು ಒಳಗೊಂಡಿದ್ದು, 2011ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆಯು 4778439 ರಷ್ಟಿದೆ. ರಾಜ್ಯದ ನಾಲ್ಕು ಆಡಳಿತ ವಿಭಾಗಗಳಲ್ಲಿ ಬೆಳಗಾಂವಿಯೂ ಒಂದಾಗಿದ್ದು, 7 ಜಿಲ್ಲೆಗಳನ್ನು ಒಳಗೊಂಡಿದೆ. ಬೆಳಗಾಂವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಈ ಪರಿಧಿಯಲ್ಲಿದ್ದು ಶೇ. 24.21 ರಷ್ಟಿದೆ.

**ಮೇಲ್ಮೈ ಲಕ್ಷಣ :** ಕರ್ನಾಟಕದ ಉತ್ತರ ಮೈದಾನ ಪ್ರದೇಶದಲ್ಲಿ ಕಂಡುಬರುವ ಬೆಳಗಾಂವಿಯು, ಸವದತ್ತಿ ಮತ್ತು ಬಾದಾಮಿಯ ಪೂರ್ವದಲ್ಲಿ ಸುಣ್ಣದಕಲ್ಲಿನ ಕೆಲವು ಭಾಗಗಳನ್ನು ಹೊಂದಿದ್ದು ಸ್ತರಭಂಗದಿಂದ ಕೂಡಿವೆ. ಏರುತಗ್ಗಿನ ಭೂಸ್ವರೂಪಕ್ಕೆ ಇವು ಮಾದರಿಯಾಗಿವೆ. ಜಿಲ್ಲೆಯ ಪಶ್ಚಿಮದ ಅಂಚುಘಟ್ಟಗಳ ಪೂರ್ವಪಾರ್ಶ್ವದಲ್ಲಿ ಹರಡಿಕೊಂಡಿದೆ. ಪೂರ್ವದ ಬಹುಭಾಗ ಚಪ್ಪಟೆಯಾದ ಮೈದಾನ, ಪಶ್ಚಿಮದಲ್ಲಿ ಕಡಿದಾದ ದಿಣ್ಣೆಗಳಿಂದ ಕೂಡಿದ್ದು, ಈ ಕಡಿದಾದ ಇಳಿಜಾರು ಎಸ್‌ಕಾರ್ಪ್‌ಮೆಂಟ್ ಭೂಸ್ವರೂಪಕ್ಕೆ ಉತ್ತಮ ಉದಾಹರಣೆಯಾಗಿದೆ. ದಕ್ಷಿಣ ಭಾಗವು ಶಿಲೆಗಳಿಂದ ಕೂಡಿದ್ದು ಕೆಲವೆಡೆ ಧಾರವಾಡ ಸಿಸ್ಟ್ ಶಿಲೆಗಳು ಕಂಡುಬರುತ್ತವೆ. ಜಿಲ್ಲೆಯಲ್ಲಿ ಕೃಷ್ಣಾ, ಘಟಪ್ರಭ, ಮಲಪ್ರಭ ಮತ್ತು ದೋಣಿ ನದಿಗಳು ಹರಿಯುತ್ತಿವೆ. ಘಟಪ್ರಭ ನದಿಯು ಗೋಕಾಕ್ ಬಳಿ ಜಲಪಾತವನ್ನುಂಟು ಮಾಡಿದ್ದು, 'ಗೋಕಾಕ್ ಜಲಪಾತ'ವೆಂದೇ ಪ್ರಸಿದ್ಧಿಯಾಗಿದೆ. ಪಶ್ಚಿಮದ ತಡಿಯಲ್ಲಿ ದಟ್ಟವಾದ ಹಸುರು ಕಾನನಗಳಿದ್ದು, ಉತ್ತಮ ಮೇಲ್ಮೈಲಕ್ಷಣ ಹೊಂದಿರುವ ಜಿಲ್ಲೆಯು ರಾಜ್ಯದ ಅತಿಹೆಚ್ಚು ಜನಸಂಖ್ಯೆ ಹೊಂದಿದ ಎರಡನೆಯ ಜಿಲ್ಲೆಯಾಗಿದೆ. ಉತ್ತಮ ಆರ್ಥಿಕ ಚಟುವಟಿಕೆಗಳಿಂದ ಕೂಡಿರುವ ಇದು ಉತ್ತಮವಾದ ಮೇಲ್ಮೈಲಕ್ಷಣದಿಂದ ಕೂಡಿದೆ.

**ಹವಾಗುಣ :** ಕರ್ನಾಟಕವು ಭಾರತದ ದಕ್ಷಿಣ ಭಾಗದಲ್ಲಿದ್ದು, ಸಂಪೂರ್ಣವಾಗಿ ಉಷ್ಣವಲಯದಲ್ಲಿದೆ. ಬೆಳಗಾಂವಿ ಕೂಡ ಉಷ್ಣವಲಯದ ಪ್ರದೇಶವಾಗಿರುವುದರೊಂದಿಗೆ, ಸಮುದ್ರಮಟ್ಟಕ್ಕಿಂತ



ಸರಾಸರಿ 350 ರಿಂದ 600 ಮೀಟರ್ ಎತ್ತರದಲ್ಲಿದೆ. ಜಿಲ್ಲೆಯ ಉಷ್ಣತೆಯು ಸರಾಸರಿ 14$^{o}$ ಸೆಂ. - 35$^{o}$ಸೆ. ನಡುವೆ ಇದೆ. ಘಟ್ಟಪ್ರದೇಶಗಳು ಬೇಸಗೆಯಲ್ಲಿ ಸ್ವಲ್ಪ ತಂಪಾಗಿದ್ದು, ಉಳಿದಂತೆ ಉಷ್ಣತೆಯು ಉತ್ತರದ ಇತರ ಜಿಲ್ಲೆಗಳಿಗಿಂತ ಸ್ವಲ್ಪಭಿನ್ನವಾಗಿ ಕಂಡುಬರುತ್ತದೆ.

**ಮಳೆ :** ಜೂನ್ ಮತ್ತು ಸೆಪ್ಟಂಬರ್ ತಿಂಗಳಲ್ಲಿ ಬೀಸುವ, ನೈಋತ್ಯ ಮತ್ತು ಈಶಾನ್ಯ-ಮಾನ್ಸೂನ್ ಮಾರುತಗಳಿಂದ ಜಿಲ್ಲೆಯು ಮಳೆಯನ್ನು ಪಡೆಯುತ್ತದೆ. ಈ ಮಾರುತಗಳ ಕಾಲ ಸು. 100 ರಿಂದ 120 ದಿನಗಳವರೆಗಿದ್ದು, ವಾರ್ಷಿಕವಾಗಿ 127$^{o}$ ಸೆಂ.ಮೀ. ಮಳೆ ಬೀಳುತ್ತದೆ. 2011ರ ಸಮೀಕ್ಷೆಯಂತೆ 2005ರಲ್ಲಿ 1037.98 ಮಿ.ಮೀ. 2006ರಲ್ಲಿ 662.06 ಮಿ.ಮೀ. 2007ರಲ್ಲಿ 906.54 ಮಿ.ಮೀ. ಮತ್ತು 2011ರಲ್ಲಿ 842.89 ಮಿ.ಮೀ. ಮಳೆ ದಾಖಲಾಗಿದೆ. ಜಿಲ್ಲೆಯಲ್ಲಿ ವಾರ್ಷಿಕವಾಗಿ 520 ಮಳೆ ದಿನಗಳು ಕಂಡುಬರುವುದರೊಂದಿಗೆ ಇದು ತಾಲ್ಲೂಕುವಾರು- ಅಥಣಿ - 34. ಬೈಲಹೊಂಗಲ 52, ಬೆಳಗಾಂವಿ 84, ಚಿಕ್ಕೋಡಿ-50, ಗೋಕಾಕ-38, ಹುಕ್ಕೇರಿ-54, ಖಾನಾಪುರ-89, ರಾಯಭಾಗ-40, ರಾಮದುರ್ಗ-38 ಮತ್ತು ಸವದತ್ತಿ - 41 ದಿನಗಳು ದಾಖಲಾಗಿದೆ.

**ತಾಲ್ಲೂಕುವಾರು ಮಳೆ (ಮಿ. ಮೀಟರ್‌ಗಳಲ್ಲಿ)**

| ತಾಲ್ಲೂಕು | 2007 | 2008 | 2009 | 2010 | 2011 |
|---|---|---|---|---|---|
| ಅಥಣಿ | 523.4 ಮಿ.ಮೀ. | 550.0 | 818.3 | 740.0 | 405.6 ಮಿ.ಮೀ |
| ಬೈಲಹೊಂಗಲ | 805.2 | 712.4 | 967.1 | 841.1 | 563.1 |
| ಬೆಳಗಾಂವಿ | 1532.4 | 1324.2 | 1527.9 | 1252.2 | 1260.9 |
| ಚಿಕ್ಕೋಡಿ | 791.3 | 874.2 | 884 | 816.9 | 735.4 |
| ಗೋಕಾಕ್ | 350.4 | 548. | 759.6 | 495.8 | 425.7 |
| ಹುಕ್ಕೇರಿ | 528.6 | 613.6 | 951.3 | 881.9 | 539.7 |
| ಖಾನಪುರ | 2753.9 | 2214.9 | 3002.2 | 2022.4 | 2964.4 |
| ರಾಯಭಾಗ | 501.5 | 779.6 | 718.8 | 702.8 | 458.4 |
| ರಾಮದುರ್ಗ | 566.4 | 409.4 | 829.6 | 531.8 | 691.8 |
| ಸವದತ್ತಿ | 712.3 | 621.3 | 931.7 | 674.4 | 378.4 |

**ಕೃಷಿ ಭೂಮಿ ವಿಸ್ತೀರ್ಣ** : ಜಿಲ್ಲೆಯ ಕೃಷಿಭೂಮಿ ವಿಸ್ತೀರ್ಣವು ಭೌಗೋಳಿಕವಾಗಿ ಒಟ್ಟು 1344382 ಹೆಕ್ಟೇರ್‌ಗಳಾಗಿದ್ದು, ಇದರಲ್ಲಿ 69795 ಹೆಕ್ಟರೇರ್ ವ್ಯವಸಾಯೇತರ, 44342 ಹೆ. ಬಂಜರು, ಭೂಮಿ ಸೇರಿದಂತೆ 114137 ಹೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ. ಇದರಲ್ಲಿ 11465 ಹೆ. ಸಾಗುವಳಿಗೆ ಯೋಗ್ಯವಾಗಿದ್ದು ತಾಲೂಕುವಾರು ಇಂತಿದೆ. ಅಥಣಿ 3171 ಹೆ. ಬೆಳಗಾಂವಿ-2056 ಹೆ. ಚಿಕ್ಕೋಡಿ, 1648 ಹೆ. ಗೋಕಾಕ 254 ಹೆ. ಹುಕ್ಕೇರಿ - 147 ಹೆ. ಖಾನಪುರ - 3240 ಹೆ. ರಾಯಭಾಗ 884 ಹೆ. ಮತ್ತು ಸವದತ್ತಿ 65 ಹೆ. ಹೊಂದಿದ್ದು ಉಳಿದಂತೆ ಬೈಲಹೊಂಗಲ ಮತ್ತು ರಾಮದುರ್ಗದಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು-ಸೊನ್ನೆಯಾಗಿದೆ. ಖಾಯಂ ಗೋಮಾಳ ಜಿಲ್ಲೆಯಲ್ಲಿ 24807 ಹೆ. ವೃಕ್ಷ ಮತ್ತು ತೋಪುಗಳು. 3046 ಹೆ. ಕಾಣಬಹುದು, ಒಟ್ಟಾರೆ ರಾಜ್ಯದ ಕೃಷಿ ಭೂಮಿಯ ವಿಸ್ತೀರ್ಣದಲ್ಲಿ ಜಿಲ್ಲೆಯ ಪಾಲು ಶೇ. 7.99 ರಷ್ಟಿದೆ.

**ಭೂಹಿಡುವಳಿದಾರರು** : 2010-11ರ ವರದಿಯಂತೆ ಜಿಲ್ಲೆಯಲ್ಲಿ 487883 ಗಂಡಸರು, 42948 ಹೆಂಗಸರು. 104 ಸಂಘ ಸಂಸ್ಥೆಗಳು ಸೇರಿದಂತೆ 530935 ಭೂ ಹಿಡುವಳಿದಾರರಿದ್ದು, ತಾಲ್ಲೂಕುವಾರು ಅಥಣಿ 88176, ಬೈಲಹೊಂಗಲ 48613, ಬೆಳಗಾಂವಿ - 41161, ಚಿಕ್ಕೋಡಿ- 79176, ಗೋಕಾಕ - 58741, ಹುಕ್ಕೇರಿ - 15911, ಖಾನಾಪುರ - 33857, ರಾಯಭಾಗ - 45237, ರಾಮದುರ್ಗ-40365, ಮತ್ತು ಸವದತ್ತಿ 49698 ಭೂ ಹಿಡುವಳಿದಾರರು ಇದ್ದರೆ ಇದರಲ್ಲಿ ಪರಿಶಿಷ್ಟ ಜಾತಿಯ ಅತಿ ಸಣ್ಣ ಭೂಹಿಡುವಳಿದಾರರು - 23217 ಇದ್ದು 9773.2 ಹೆ. ಪ್ರದೇಶದಲ್ಲಿ ಕೃಷಿಕಾರ್ಯ ಕೈಗೊಂಡಿದ್ದಾರೆ. ಪರಿಶಿಷ್ಟ ಪಂಗಡದ 10698 ಭೂಹಿಡುವಳಿದಾರರು 973.2 ಹೆ. ಪ್ರದೇಶದಲ್ಲಿ ಕೃಷಿ ಕಾರ್ಯಕೈಗೊಂಡಿದ್ದಾರೆ. ಪರಿಶಿಷ್ಟ ಪಂಗಡದ 10698 ಭೂಹಿಡುವಳಿದಾರರು 5198.21 ಹೆ. ವಿಸ್ತೀರ್ಣದಲ್ಲಿ, ಮತ್ತು ಇತರ 181593 ಹಿಡುವಳಿದಾರರು 108484.67 ಹೆ.ವಿ.ದಲ್ಲಿ, ಸಣ್ಣ ಭೂಹಿಡುವಳಿದಾರ ಪೈಕಿ ಪರಿಶಿಷ್ಟಜಾತಿಯ 8201 ಹಿಡುವಳಿದಾರರು 11586.30 ಹೆ.ವಿ.ನಲ್ಲಿ ಪರಿಶಿಷ್ಟ ಪಂಗಡದ 6168 ಹಿಡುವಳಿದಾರರು 8828.49 ಹೆ.ವಿ. ಮತ್ತು ಇತರೆ 142710 ಹಿಡುವಳಿದಾರರು 202032.22 ಹೆ.ವಿ.ದಲ್ಲಿ; ಅರೆ ಮಧ್ಯಮ ಹಿಡುವಳಿದಾರರಲ್ಲಿ ಪರಿಶಿಷ್ಟ ಜಾತಿಯ 3999 ಹಿಡುವಳಿದಾರರು 10.445.41 ಹೆ. ವಿಸ್ತೀರ್ಣ, ಪರಿಶಿಷ್ಟ ಪಂಗಡದ 3605 ಹಿಡುವಳಿದಾರರು 9792.51 ಹೆ.ವಿ. ಮತ್ತು ಇತರೆ 97269 ಹಿಡುವಳಿದಾರರು 264000.49 ಹೆ.ವಿ. ಹೊಂದಿದ್ದಾರೆ, ಮಧ್ಯಮ ಭೂಹಿಡುವಳಿದಾರರಲ್ಲಿ ಪರಿಶಿಷ್ಟ ಜಾತಿಯ 1230 ಹಿಡುವಳಿದಾರರಿದ್ದು - 6797.46 ಹೆ.ವಿ. ಪರಿಶಿಷ್ಟ ಪಂಗಡದ ಹಿಡುವಳಿದಾರು 7527.01 ಹೆ.ವಿ. ಹಾಗೂ ಇತರೆ 45134 ಹಿಡುವಳಿದಾರರು 256914.64 ಹೆ.ವಿ. ಹೊಂದಿದ್ದಾರೆ. ದೊಡ್ಡ ಭೂಹಿಡುವಳಿದಾರರಲ್ಲಿ ಪರಿಶಿಷ್ಟ ಪಂಗಡದ 120 ಹಿಡುವಳಿದಾರರು 1707.94 ಹೆ.ವಿ. ಪರಿಶಿಷ್ಟ ಪಂಗಡದ 147 ಹಿಡುವಳಿದಾರರು 2087.30 ಹೆ.ವಿ. ಮತ್ತು ಇತರೆ 5656 ಭೂಹಿಡುವಳಿದಾರರು 83103.89 ಹೆ. ವಿಸ್ತೀರ್ಣವನ್ನು ಹೊಂದಿರುತ್ತಾರೆ.

2001ರ ಗಣತಿಯಂತೆ ಜಿಲ್ಲೆಯಲ್ಲಿ 681664 ಗ್ರಾಮೀಣ ಕೃಷಿ ಸಾಗುವಳಿದಾರರು, ನಗರಪ್ರದೇಶದಲ್ಲಿ 25549 ಕೃಷಿ ಸಾಗುವಳಿದಾರರು ಇದ್ದು 707213 ಜನ ಸಾಗುವಳಿಯನ್ನು ನಿರತರಾಗಿದ್ದಾರೆ. ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ 558079, ನಗರ ಪ್ರದೇಶದಲ್ಲಿ 29321 ಕೃಷಿಕಾರ್ಮಿಕರು ಇರುವುದರೊಂದಿಗೆ ಇವರ ಒಟ್ಟು ಸಂಖ್ಯೆ 587400 ಆಗಿದೆ.

**ಭೂ ಉಪಯೋಗ** : 2011-12ನೇ ಸಮೀಕ್ಷೆಯಂತೆ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 1344382 ಆಗಿದ್ದು, ಇದರಲ್ಲಿ ಅರಣ್ಯ-190424 ಹೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ 114137 ಹೆ. ಸಾಗುವಳಿಗೆ ಯೋಗ್ಯವಾದ ಭೂಮಿ 11465 ಹೆ. ಖಾಯಂ ಗೋಮಾಳ - 24807 ಹೆ, ವೃಕ್ಷ ಮತ್ತು ತೋಪುಗಳು 3046 ಹೆ. ವಿಸ್ತೀರ್ಣದಲ್ಲಿ ಬಳಕೆಯಾಗುತ್ತಿದ್ದು, 233923 ಹೆ. ಬೀಳುಭೂಮಿ ಮತ್ತು 1011264 ಹೆ. ಪ್ರದೇಶದಲ್ಲಿ ಬಿತ್ತನೆ ಮಾಡುವುದನ್ನು ಕಾಣಬಹುದಾಗಿದೆ.

**ಭೂಗುಣ :** ಜಿಲ್ಲೆಯು ಹೊಂದಿರುವ ಭೂಸ್ವರೂಪ, ಮಳೆ, ಉಷ್ಣಾಂಶದ ಹಂಚಿಕೆ, ಮಣ್ಣಿನ ಲಕ್ಷಣ ಜಲಸಂಪತ್ತು ಇವೆ ಮೊದಲಾದ ಅಂಶಗಳಿಂದ ಭೂಗುಣವು ಉತ್ತಮವಾಗಿದೆ. ರಾಮದುರ್ಗ, ಗೋಕಾಕ, ರಾಯಭಾಗ, ಸವದತ್ತಿ ಅಥಣಿ ವಲಯವು ಅತ್ಯಂತ ಶುಷ್ಕವಲಯವಾಗಿದೆ. ಈ ವಲಯ ಒಣಬೇಸಾಯಕ್ಕೆ ಹೆಸರುವಾಸಿ. ನೈಋತ್ಯ ಮತ್ತು ಈಶಾನ್ಯ ಮಾನ್ಸೂನ್ ಮಾರುತಗಳಿಂದ ಅತ್ಯಲ್ಪ ಮಳೆಪಡೆಯುವ ಈ ವಲಯ ರಬಿ (ಹಿಂಗಾರು) ಬೇಸಾಯಕ್ಕೆ ಪ್ರಸಿದ್ಧಿ. ಖಾರಿಫ್ (ಮುಂಗಾರು) ಅವಧಿಯಲ್ಲಿ ಜೋಳ, ಹತ್ತಿ, ಬಿತ್ತನೆ ಮಾಡುವುದು ಇಲ್ಲಿ ಕಂಡುಬರುತ್ತದೆ. ಚಿಕ್ಕೋಡಿ, ಹುಕ್ಕೇರಿ, ಬೆಳಗಾಂವಿ, ಬೈಲಹೊಂಗಲ ಪ್ರದೇಶ ಮತ್ತು ಉತ್ತರ ಸ್ಥಿತ್ಯಂತರ ವಲಯವೆಂದು ಕರೆಯುವರು. ಸಾಧಾರಣ ಆಳದವರೆಗಿನ ಕಪ್ಪುಮಣ್ಣು ಈ ವಲಯದಲ್ಲಿ ಹಂಚಿಕೆಯಾಗಿದೆ. ತೋಟದ ಬೆಳೆಗಳಿಗೆ ಸೀಮಿತವಾದ ಪ್ರದೇಶವನ್ನು ಭಾಗಾಯ್ತು ಎಂದು, ವ್ಯವಸಾಯಕ್ಕೆ ಯೋಗ್ಯವಾದ ಪ್ರದೇಶವನ್ನು ಖುಷ್ಕಿ ಎಂದು ಕರೆಯುವುದು ವಾಡಿಕೆ.

**ಮಣ್ಣು :** ಬೆಳಗಾಂವಿಯ ಪೂರ್ವದ ಭಾಗ ಚಪ್ಪಟೆಯಾದ ಮೈದಾನವಿದ್ದು ಅಲ್ಲಲ್ಲಿ ಕಡಿದಾದ ದಿಣ್ಣೆಗಳಿವೆ. ದಕ್ಷಿಣ ಭಾಗ ನೈಸ್ ಶಿಲೆಗಳಿಂದ ಕೂಡಿದ್ದು, ಅಲ್ಲಿ ಧಾರವಾಡ ವಿಭಾಗದ ಹೆಮಟೈಟ್ ಸಿಸ್ಟ್ ಶಿಲೆಗಳಿವೆ. ಮಧ್ಯಭಾಗದಲ್ಲಿ ಬೆಣಚುಕಲ್ಲು ಹಾಗೂ ಕಲಾದಗಿ ಗುಂಪಿನ ಸುಣ್ಣದ ಶಿಲಾಸ್ತರಗಳಿವೆ. ಪಶ್ಚಿಮ ಮತ್ತು ಉತ್ತರದ ಭಾಗದಲ್ಲಿ ಬೆಸಾಲ್ಟ್ ಹಾಗೂ ಲ್ಯಾಟರೇಟ್ ಶಿಲಾಸ್ತರಗಳುಂಟು. ನದಿಕೊಳ್ಳದಲ್ಲಿ ಪ್ಲೀಸ್ಟೋಸೀನ್ ಯುಗದ ರೇವೆಮಣ್ಣು, ಉಸುಕು ಮತ್ತು ಹರಳುಗಳು ಕಂಡುಬರುತ್ತವೆ. ಕಪ್ಪು, ಕೆಂಪು ಮತ್ತು ಉಸುಕು ಮಿಶ್ರಿತ ಕಪ್ಪು ಮಣ್ಣು ಜಿಲ್ಲೆಯಲ್ಲಿ ವ್ಯಾಪಕವಾಗಿದೆ. ಚಿಕ್ಕೋಡಿ, ಹುಕ್ಕೇರಿ, ಬೆಳಗಾಂವಿ ಮತ್ತು ಬೈಲಹೊಂಗಲ ಪ್ರದೇಶದಲ್ಲಿ ಸಾಧಾರಣ ಆಳದವರೆಗಿನ ಕಪ್ಪುಮಣ್ಣು ಹಂಚಿಕೆಯಾಗಿದೆ. ಅಲ್ಲಲ್ಲಿ ಕೆಂಪು ಮಣ್ಣು ಕಂಡುಬರುತ್ತಿದ್ದು, ಸ್ಥಳೀಯವಾಗಿ ಅದನ್ನು 'ಮಸಾರಿ ಮಣ್ಣು' ಎನ್ನುವರು. ಈ ವಲಯದಲ್ಲಿ ನೀರಾವರಿ ಕಡಿಮೆ. ಖುಷ್ಕಿ ಬೆಳೆಗೆ ಹೆಸರುವಾಸಿ. ಜೋಳ, ಮೆಣಸಿನಕಾಯಿ, ಹತ್ತಿ, ಕಡಲೆ (ಶೇಂಗ), ದ್ವಿದಳ ಧಾನ್ಯಗಳು ಇಲ್ಲಿಯ ಮುಖ್ಯ ಬೆಳೆಗಳು.

**ಕಾಡುಗಳು :** 2009ರ ವರದಿಯಂತೆ ಜಿಲ್ಲೆಯಲ್ಲಿ 17 ಚ.ಕಿ.ಮೀ. ಹೆಚ್ಚು ದಟ್ಟವಾದ ಅರಣ್ಯ. 757 ಚ.ಕಿ.ಮೀ. ಸಾಧಾರಣ ದಟ್ಟವಾದ ಅರಣ್ಯ. 318 ಚ.ಕಿ.ಮೀ. ವಿರಳವಾದ ಮರಗಳ ಹಂಚಿಕೆಯ ಅರಣ್ಯವಿದ್ದು, ಒಟ್ಟು 1092 ಚ.ಕಿ.ಮೀ. ಅರಣ್ಯ ಪ್ರದೇಶವನ್ನು ಹೊಂದಿದೆ. ಇದು ರಾಜ್ಯ ಶೇ. 8.14ರಷ್ಟಿದೆ. 467 ಚ.ಕಿ.ಮೀ. ಕುರುಚಲು ಸಸ್ಯವರ್ಗ ಕೂಡ ಜಿಲ್ಲೆಯಲ್ಲಿದೆ. 2010-11ರ ವರದಿಯಂತೆ ತಾಲ್ಲೂಕುವಾರು ಅಥಣಿ 581 ಹೆ., ಬೈಲಹೊಂಗಲ 7913 ಹೆ., ಬೆಳಗಾಂವಿ - 22643 ಹೆ. ಚಿಕ್ಕೋಡಿ 574 ಹೆ, ಗೋಕಾಕ 22284 ಹೆ. ಹುಕ್ಕೇರಿ - 13987 ಹೆ. ಖಾನಾಪುರ - 91309 ಹೆ. ರಾಯಭಾಗ - 2647 ಹೆ. ರಾಮದುರ್ಗ - 15081 ಹೆ. ಮತ್ತು ಸವದತ್ತಿ 13432 ಹೆ. ಪ್ರದೇಶದಲ್ಲಿ ಅರಣ್ಯ ಹೊಂದಿದೆ. ಆರ್ದ್ರ ಎಲೆಯುದುರುವ ಸಸ್ಯವರ್ಗ ಜಿಲ್ಲೆಯಲ್ಲಿ ಕಂಡುಬರುತ್ತದೆ. ತೇಗ, ಬೀಟೆ, ಹಳದಿ, ನೇರಳೆ ಮತ್ತು ಗೊಬ್ಬಳಿ ಮರಗಳು, ನೈಋತ್ಯ ಭಾಗದ ಅರಣ್ಯದಲ್ಲಿ ಬಿದಿರು, ಶ್ರೀಗಂಧ, ಮರಗಳು ಕಾಣುತ್ತವೆ. ಜಿಲ್ಲೆಯಲ್ಲಿ ಮೆದುತಿರುಳಿನ ಮರಗಳನ್ನು ಬೆಳೆಸಲಾಗುತ್ತದೆ. ಅಲ್ಲಲ್ಲಿ ಗೋಡಂಬಿ ಮರಗಳು ಕಂಡುಬರುತ್ತವೆ. 1974ರಲ್ಲಿ ಸ್ಥಾಪಿತವಾದ ಘಟಪ್ರಭ ರಾಷ್ಟ್ರೀಯ ಉದ್ಯಾನವನ ಮತ್ತು ನ್ಯಜೀವಿಧಾಮ ಪ್ರಾಣಿಪಕ್ಷಿಗಳ ಆಶ್ರಯತಾಣವಾಗಿದೆ.

**ನೀರಾವರಿ ಸೌಕರ್ಯಗಳು** : ಜಿಲ್ಲೆಯಲ್ಲಿ ಕೃಷ್ಣ, ಘಟಪ್ರಭ, ಮಲಪ್ರಭ, ದೋಣಿನದಿಗಳು ಹರಿಯುವುದರಿಂದ ಕೃಷಿಗೆ ಯೋಗ್ಯ ನೀರು ದೊರೆಯುತ್ತದೆ. ಜೊತೆಗೆ ಕಾಲುವೆ, ಕೆರೆ, ಬಾವಿ, ಕೊಳವೆಬಾವಿ, ಏತನೀರಾವರಿ ಮತ್ತು ಇತರ ಮೂಲಗಳಿಂದ ನೀರಾವರಿ ಸೌಕರ್ಯವನ್ನು ಪಡೆಯಲಾಗುತ್ತದೆ. 2011-12ರ ಸಮೀಕ್ಷೆಯಂತೆ 416ಕಿ.ಮೀ. ಉದ್ದ ಕಾಲುವೆ ನೀರಾವರಿ, 898 ಕೆರೆ ನೀರಾವರಿ, 62995 ಬಾವಿ ನೀರಾವರಿ, 26287 ಕೊಳವೆ ಬಾವಿಗಳಿಂದ ಕೊಳವೆ ನೀರಾವರಿ, 6513 ಏತ ನೀರಾವರಿಗಳು ಹಾಗೂ ಇತರೆ ಊಲಗಳಿಂದ ನೀರನ್ನು ಬಳಸಲಾಗುತ್ತಿದೆ. ಸವದತ್ತಿ 91 ಕಿ.ಮೀ. ಉದ್ದದ ಕಾಲುವೆ ನೀರಾವರಿಯನ್ನು ಹೊಂದಿದ್ದು ಇತರ ತಾಲ್ಲೂಕುಗಳಿಗಿಂತ ಹೆಚ್ಚು ಕಾಲುವೆ ನೀರಿನಿಂದ ಕೂಡಿದೆ, ಖಾನಾಪುರ 367 ಕೆರೆಗಳನ್ನು ಹೊಂದಿದ್ದು ಕೆರೆ ನೀರಾವರಿಯಲ್ಲಿ ಮೊದಲ ಸ್ಥಾನ ಪಡೆದಿದೆ. 15200 ಬಾವಿಗಳನ್ನು ಹೊಂದಿರುವ ಚಿಕ್ಕೋಡಿ ಬಾವಿ ನೀರಾವರಿಯಲ್ಲಿ ಜಿಲ್ಲೆಯಲ್ಲಿ ಮೊದಲ ಸ್ಥಾನಪಡೆದಿದೆ. ಬೈಲಹೊಂಗಲ 7534 ಕೊಳವೆ ಬಾವಿಗಳನ್ನು ಹೊಂದಿದ್ದು ಮೊದಲ ಸ್ಥಾನದಲ್ಲಿದೆ. ಅಥಣಿಯಲ್ಲಿ 4634 ಏತನೀರಾವರಿಗಳಿದ್ದು ಪ್ರಥಮ ಸ್ಥಾನದಲ್ಲಿದೆ, ಜೊತೆಗೆ ಇತರೆ ಮೂಲಗಳಿಂದಲೂ ನೀರನ್ನು ಪಡೆಯುವಲ್ಲಿ ಅಥಣಿ ಪ್ರಥಮವಾಗಿದೆ. ಸಾಂಪ್ರದಾಯಿಕ ಬಾವಿ ನೀರಾವರಿಯಲ್ಲಿ ಬೆಳಗಾಂವಿ ರಾಜ್ಯದಲ್ಲಿ ಇಂದಿಗೂ ಮೊದಲ ಸ್ಥಾನದಲ್ಲಿದ್ದು, ಇವು ಅಂತರ್ಜಲ ಮಟ್ಟವನ್ನು ಅವಲಂಬಿಸಿವೆ. ರಾಜ್ಯದ ಒಟ್ಟು ಬಾವಿನೀರಾವರಿಯಲ್ಲಿ ಶೇ. 16.5 ರಷ್ಟನ್ನು ಹೊಂದಿರುವ ಬೆಳಗಾವಿ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ.

**ಬೆಳೆಗಳು :** ಜಿಲ್ಲೆಯಲ್ಲಿ ಆಹಾರದ ಮತ್ತು ಆಹಾರೇತರ ಎರಡು ಬೆಳೆಗಳನ್ನು ನೋಡಬಹುದು. ಇವುಗಳನ್ನು ಖಾರಿಫ್ ಮತ್ತು ರಭಿ ಅವಧಿಯಲ್ಲಿ ಬೆಳೆಯುತ್ತಾರೆ. ಜೋಳದ ಉತ್ಪಾದನೆಯಲ್ಲಿ ರಾಜ್ಯದಲ್ಲಿ 5ನೇ ಸ್ಥಾನ ಮತ್ತು ಕಬ್ಬು ಉತ್ಪಾದನೆಯಲ್ಲಿ ಮೊದಲ ಸ್ಥಾನವನ್ನು ಜಿಲ್ಲೆ ಪಡೆದಿದೆ. 2011-12ರ ವರದಿಯಂತೆ ಜಿಲ್ಲೆಯಲ್ಲಿ ಬೆಳೆಯುವ ಬೆಳೆಗಳನ್ನು ವಿಸ್ತೀರ್ಣದಲ್ಲಿ ಈ ಮುಂದಿನಂತೆ ಕಾಣಬಹುದು. ಬತ್ತವನ್ನು 68307 ಹೆ. ಪ್ರದೇಶದಲ್ಲಿ ಬೆಳೆಯಲಾಗುವುದು. ಬೆಳಗಾಂವಿ ತಾಲ್ಲೂಕು ಹತ್ತಿ ಬೆಳೆಯುವಲ್ಲಿ ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿದೆ. 154736 ಹೆ. ಪ್ರದೇಶದಲ್ಲಿ ಜೋಳ ಬೆಳೆಯಲಾಗುವುದು. 46652 ಹೆ. ಪ್ರದೇಶದಲ್ಲಿ ಜೋಳ ಬೆಳೆಯುವುದರೊಂದಿಗೆ ಅಥಣಿ ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿದೆ.

ಸಜ್ಜೆಯನ್ನು 12459 ಹೆ. ಪ್ರದೇಶದಲ್ಲಿ ಬೆಳೆಯಲಾಗಿದ್ದು, ಜಿಲ್ಲೆಯಲ್ಲಿ ಸವದತ್ತಿ ಮೊದಲಸ್ಥಾನದಲ್ಲಿದೆ. ಇದು 2549 ಹೆ. ಪ್ರದೇಶದಲ್ಲಿ ಬೆಳೆಯುತ್ತದೆ. 147798 ಹೆ. ಪ್ರದೇಶದಲ್ಲಿ ಮುಸುಕಿನ ಜೋಳ ಬೆಳೆಯಲಾಗುತ್ತಿದ್ದು, 48094 ಹೆ. ಪ್ರದೇಶದಲ್ಲಿ ಬೆಳೆಯುವ ಗೋಕಾಕ್ ಮೊದಲ ಸ್ಥಾನದಲ್ಲಿದೆ. ರಾಗಿಯನ್ನು 525 ಹೆ. ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಗೋಧಿಯನ್ನು 44014 ಹೆ. ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಜಿಲ್ಲೆಯಲ್ಲಿ 12394 ಹೆ. ಪ್ರದೇಶದಲ್ಲಿ ಬೆಳೆಯುವ ಸವದತ್ತಿ ಪ್ರಥಮವಾಗಿದೆ.

**ದ್ವಿದಳ ಧಾನ್ಯಗಳು :** ಬೆಳಗಾಂವಿಯಲ್ಲಿ 4160 ಹೆ. ಪ್ರದೇಶದಲ್ಲಿ ತೊಗರಿಯನ್ನು ಬೆಳೆಯಲಾಗುತ್ತದೆ. ಹಾಗೆಯೆ 3629 ಹೆ. ಪ್ರದೇಶದಲ್ಲಿ ಹುರಳಿ, 3257 ಹೆ. ಪ್ರದೇಶದಲ್ಲಿ ಉದ್ದು, 17048 ಹೆ. ಪ್ರದೇಶದಲ್ಲಿ ಹೆಸರು, 738 ಹೆ.ನಲ್ಲಿ ಅವರೆ, 1817 ಹೆ.ನಲ್ಲಿ ಅಲಸಂದಿ, 52713 ಹೆ.ನಲ್ಲಿ ಕಡಲೆ, 84518 ಹೆ.ನಲ್ಲಿ ದ್ವಿದಳ ಧಾನ್ಯಗಳು, 514373 ಹೆ.ನಲ್ಲಿ ಆಹಾರಧಾನ್ಯಗಳನ್ನು, 9514 ಹೆ.ನಲ್ಲಿ ಹಣ್ಣುಗಳನ್ನು, 23471 ಹೆ.ನಲ್ಲಿ ತರಕಾರಿಗಳನ್ನು ಬೆಳೆಯಲಾಗುತ್ತದೆ.

**ಎಣ್ಣೆ ಕಾಳುಗಳು :** 2011-12ರ ಸಮೀಕ್ಷೆಯಂತೆ ಜಿಲ್ಲೆಯಲ್ಲಿ ಒಟ್ಟು 139019 ಹೆ. ಪ್ರದೇಶದಲ್ಲಿ ಎಣ್ಣೆ ಕಾಳುಗಳನ್ನು ಬೆಲೆಯಲಾಗಿದ್ದು, 36253 ಹೆ. ಪ್ರದೇಶದಲ್ಲಿ ಶೇಂಗಾ ಬೆಳೆಯಲಾಗಿತ್ತು. 11357 ಹೆ. ಪ್ರದೇಶದಲ್ಲಿ ಶೇಂಗಾ ಬೆಳೆಯುವ ಚಿಕ್ಕೋಡಿ ಜಿಲ್ಲೆ ಮೊದಲನೆಯದು. 16806 ಹೆ. ಪ್ರದೇಶದಲ್ಲಿ ಸೂರ್ಯಕಾಂತಿಯನ್ನು ಬೆಳೆಯಲಾಗಿದ್ದು, 8856 ಹೆ. ಪ್ರದೇಶದಲ್ಲಿ ಬೆಳೆಯುವ ಸವದತ್ತಿ ಮೊದಲನೆಯದಾಗಿದೆ. ಉಳಿದಂತೆ, 6059 ಹೆ.ನಲ್ಲಿ ಕುಸುಮೆ, 140 ಹೆ.ನಲ್ಲಿ ಹರಳು, 502 ಹೆ.ನಲ್ಲಿ ಎಳ್ಳು, 446 ನಲ್ಲಿ ಹುಚ್ಚೆಳ್ಳು, 126719 ಹೆ.ನಲ್ಲಿ ಇತರೆ ಎಣ್ಣೆ ಕಾಳುಗಳನ್ನು ಬೆಳೆಯುವುದು ದಾಖಲಾಗಿದೆ.

**ವಾಣಿಜ್ಯ ಬೆಳೆಗಳು :** 2009-10ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 63454 ಟನ್ ಹತ್ತಿಯನ್ನು ಉತ್ಪಾದನೆ ಮಾಡಲಾಗಿತ್ತು. 2011-12ನೇ ಸಾಲಿನಲ್ಲಿ ಒಟ್ಟು 38012 ಹೆ. ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯಲಾಗಿದ್ದು, 14267 ಹೆ. ನಲ್ಲಿ ಬೆಳೆಯುವ ಸವದತ್ತಿ ಜಿಲ್ಲೆಗೆ ಮೊದಲ ಸ್ಥಾನದಲ್ಲಿತ್ತು. ಕಬ್ಬು ಉತ್ಪಾದನೆಯಲ್ಲಿ 2009-10ನೇ ಸಾಲಿನಲ್ಲಿ 14972842 ಟನ್ ಉತ್ಪಾದನೆ ಮಾಡಲಾಗಿತ್ತು. 2011-12ನೇ ಸಾಲಿನಲ್ಲಿ 255253 ಹೆ.ನಲ್ಲಿ ಕಬ್ಬು ಬೆಳೆಯನ್ನು ಬೆಳೆಯಲಾಗಿತ್ತು. 52307 ಹೆ.ನಲ್ಲಿ ಕಬ್ಬು ಬೆಳೆಯುವ ಗೋಕಾಕ್ ಜಿಲ್ಲೆಗೆ ಮೊದಲನೆಯದಾಗಿದೆ. 2009-10ನೇ ಸಾಲಿನಲ್ಲಿ 19062 ಟನ್ ತಂಬಾಕನ್ನು ಉತ್ಪಾದನೆ ಮಾಡಲಾಗಿತ್ತು. 2011-12ನೇ ಸಾಲಿನಲ್ಲಿ 14746 ಹೆ. ಪ್ರದೇಶದಲ್ಲಿ ತಂಬಾಕು ಬೆಳೆಯಲಾಗಿದೆ. 10607 ಹೆ. ಬೆಳೆಯುವ ಚಿಕ್ಕೋಡಿ ಜಿಲ್ಲೆಗೆ ಮೊದಲನೆಯದಾಗಿದೆ. ಉಳಿದಂತೆ, 2009-10ನೇ ಸಾಲಿನಲ್ಲಿ 84042 ಟನ್, ಜೋಳ - 187694 ಟನ್, ಸಜ್ಜೆ 6290 ಟನ್, ಮುಸುಕಿನ ಜೋಳ, 343578 ಟನ್, ರಾಗಿ 1245 ಟನ್. ಗೋಧಿ 58995 ಟನ್, ತೊಗರಿ 1424 ಟನ್, ಹುರುಳಿ 1613 ಟನ್, ಉದ್ದು - 574 ಟನ್ ಉತ್ಪಾದನೆಯಾಗಿರುವುದರ ದಾಖಲಾಗಿದೆ. ಹಾಗೆಯೇ ಹೆಸರು - 3383 ಟನ್, ಅವರೆ - 323 ಟನ್ ಅಲಸಂಧಿ - 467 ಟನ್, ಕಡಲೆ - 3833 ಟನ್, ಹರಳು - 124 ಟನ್, ಎಳ್ಳು 109 ಟನ್, ಅಗಸೆ 492 ಟನ್, ಸೋಯಾ ಅವರೆ - 49318 ಟನ್, ಸೂರ್ಯಕಾಂತಿ 28160 ಟನ್, ಕುಸಮೆ - 5183 ಟನ್, ಹುಚ್ಚೆಳ್ಳು - 120ಟನ್, ತೆಂಗು - 402.57 ಟನ್, ಅಡಕೆ, 22.50 ಟನ್, ಗೋಡಂಬಿ - 8608.00 ಟನ್ ಉತ್ಪಾದನೆಯಾಗಿತ್ತು.

**2011-12ರಲ್ಲಿ ಉತ್ಪಾದನೆಯಾದ ಮುಖ್ಯ ತೋಟಗಾರಿಕೆ ಬೆಳೆಗಳ ವಿವರ :** ಬಾಳೆ - 75664.35 ಟನ್, ಮಾವು - 67910.47 ಟನ್, ನಿಂಬೆ - 7503.55 ಟನ್, ಸೀಬೆ-7829 ಟನ್, ದ್ರಾಕ್ಷಿ - 32021.38 ಟನ್, ಸಪೋಟ - 1955.08 ಟನ್, ದಾಳಿಂಬೆ - 2790.80 ಟನ್, ಪರಂಗಿ - 15551-75 ಟನ್ ಉತ್ಪಾದನೆ ಮಾಡಿರುವುದು ದಾಖಲಾಗಿದೆ.

**2011-12ರಲ್ಲಿ ಉತ್ಪಾದನೆಯಾದ ತರಕಾರಿಗಳ ವಿವರ :** ಆಲೂಗಡ್ಡೆ ಉತ್ಪಾದನೆಯಲ್ಲಿ ಬೆಳಗಾಂವಿ ತಾಲ್ಲೂಕು ಜಿಲ್ಲೆಯಲ್ಲಿ ಮೊದಲನೆಯದಾಗಿದ್ದು, 77490.00 ಮೆ.ಟನ್ ಉತ್ಪಾದಿಸಿದ್ದು - ಜಿಲ್ಲೆಯಲ್ಲಿ ಒಟ್ಟು - 87370.00 ಮೆ.ಟನ್ ಉತ್ಪಾದನೆ ಮಾಡಲಾಗಿತ್ತು. 185079.90 ಮೆ.ಟನ್ ಟೊಮ್ಯಾಟೊ, 60,337.55 ಮೆ.ಟನ್ ಬದನೆ, 7600.70 ಮೆ.ಟನ್ ಬೀನ್ಸ್. 4253.04 ಮೆ.ಟನ್ ಗೋರಿಕಾಯಿ, 15385.25 ಟನ್ ಈರುಳ್ಳಿ, 94393.60 ಮಿ. ಟನ್ ಹಸುರು ಮೆಣಸಿನಕಾಯಿ, 17432.46 ಮೆ.ಟನ್ ಒಟ್ಟು ಸೊಪ್ಪಿನ ತರಕಾರಿಗಳು, 15757.67 ಮೆ.ಟನ್ ಕುಂಬಳಕಾಯಿ ಜಾತಿಯ ತರಕಾರಿಗಳನ್ನು ಉತ್ಪಾದಿಸಲಾಗಿತ್ತು. ತಾಲ್ಲೂಕುವಾರು ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿ ತರಕಾರಿಯನ್ನು ಉತ್ಪಾದಿಸುವುದು ಕಾಣಬಹುದು. ಟೊಮ್ಯಾಟೋ, ಹಸುರು ಮೆಣಸಿನಕಾಯಿಯನ್ನು ಬೆಳಗಾಂವಿ ತಾಲ್ಲೂಕು ಹೆಚ್ಚು ಉತ್ಪಾದಿಸುತ್ತದೆ. ಇದು ಕ್ರಮವಾಗಿ 59466.00 ಮೆ.ಟನ್, 34320.00 ಮೆ.ಟನ್ ಆಗಿದೆ. ಬದನೆ ಉತ್ಪಾದನೆಯಲ್ಲಿ ಗೋಕಾಕ್ ಮೊದಲಿದ್ದು, 17366.00 ಮೆ.ಟನ್, ಬೀನ್ಸ್ ಉತ್ಪಾದನೆಯಲ್ಲಿ ಖಾನಾಪುರ 2350.00 ಮೆ.ಟನ್ ಉತ್ಪಾದಿಸುವುದರೊಂದಿಗೆ ಪ್ರಥಮ ಸ್ಥಾನದಲ್ಲಿದೆ. ಹಸುರು ಮೆಣಸಿನ ಕಾಯಿ ಉತ್ಪಾದನೆಯಲ್ಲಿ ಬೆಳಗಾಂವಿ ತಾಲ್ಲೂಕು ಮೊದಲಿದ್ದು 34320 ಮೆ.ಟನ್ ಉತ್ಪಾದಿಸುತ್ತದೆ. 118900.00 ಮೆ.ಟನ್ ಈರುಳ್ಳಿ ಉತ್ಪಾದಿಸುವ ಸವದತ್ತಿ, 3269.00 ಮೆ.ಟನ್. ಒಟ್ಟು ಸೊಪ್ಪಿನ ಉತ್ಪಾದನೆ ಮಾಡುವ ಚಿಕ್ಕೋಡಿ, ಜಿಲ್ಲೆ ಮೊದಲ ಸ್ಥಾನದಲ್ಲಿದೆ.

**ಹೂವಿನ ಬೆಳೆಗಳು :** ದೇಶದ ಒಟ್ಟು ಹೂವಿನ ಉತ್ಪಾದನೆಯಲ್ಲಿ ಶೇ. 75ರಷ್ಟು ಕರ್ನಾಟಕದಲ್ಲೆ ಉತ್ಪಾದನೆಯಾಗುತ್ತಿದ್ದು, ಇದರಲ್ಲಿ ಬೆಳಗಾಂವಿ ಜಿಲ್ಲೆಯ ಪಾಲು ಇದೆ. ಜಿಲ್ಲೆಯಲ್ಲಿ ಗುಲಾಬಿ, ಮಲ್ಲಿಗೆ, ಸೇವಂತಿಗೆ, ಕನಕಾಂಬರ, ಸುಗಂಧರಾಜ ಚಂಡುಹೂಗಳನ್ನು ಬೆಳೆಯಲಾಗುತ್ತದೆ. ಜೊತೆಗೆ ಆಲಂಕಾರಿಕ ಹೂ ಗಿಡಗಳನ್ನು, ಎಲೆಗಳನ್ನು ಬೆಳೆಯುವುದು ಕಂಡುಬರುತ್ತದೆ. ಇದರಿಂದಾಗಿ ಕರ್ನಾಟಕ ಸರ್ಕಾರ ಜಿಲ್ಲೆಯಲ್ಲಿ ಹೂವಿನ ಮಾರುಕಟ್ಟೆ ಸ್ಥಾಪಿಸಲು ಉದ್ದೇಶಿಸಿರುವುದು ಗಮನಾರ್ಹ ವಿಷಯವೆನ್ನಬಹುದು.

**ಸಂಬಾರ ಬೆಳೆಗಳು :** ಅಡುಗೆ ಪದ್ಧತಿಯಲ್ಲಿ ಅತ್ಯಂತ ಪ್ರಮುಖವಾದ ಸಾಂಬರ್ ಪದಾರ್ಥಗಳನ್ನು ಬೆಳೆಯುವಲ್ಲಿ ಜಿಲ್ಲೆಯು ಸ್ವಲ್ಪ ಹಿಂದಿದ್ದರೂ ಕೆಲವೊಂದು ಬೆಳೆಗಳನ್ನು ನಾವು ಇಲ್ಲಿ ಕಾಣಬಹುದು.

**ಅರಿಸಿನ :** ಉತ್ತಮ ಔಷಧೀಯ ಗುಣವನ್ನು ಹೊಂದಿರುವ ಅರಿಸಿನವನ್ನು ಬೆಳೆಯುವಲ್ಲಿ ಜಿಲ್ಲೆ ಎರಡನೆಯ ಸ್ಥಾನದಲ್ಲಿದೆ. 1999-2000ದ ಅಂಕಿ ಅಂಶದಂತೆ 2373 ಹೆಕ್ಟೇರ್ ಪ್ರದೇಶದಲ್ಲಿ ಅರಿಸಿನವನ್ನು ಬೆಳೆಯಲಾಗಿತ್ತು. 20917ಟನ್ ಉತ್ಪಾದನೆಯೊಂದಿಗೆ ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ. 15.3 ರಷ್ಟನ್ನು ಬೆಳಗಾಂವಿ ಉತ್ಪಾದಿಸಿತ್ತು. ಅರಿಸಿನದ ಉತ್ಪಾದನೆಯಲ್ಲಿ ಜಿಲ್ಲೆ ಇಂದಿಗೂ 2ನೇ ಸ್ಥಾನದಲ್ಲಿ ಮುಂದುವರಿಯುತ್ತಿರುವುದು ಕಂಡುಬರುತ್ತದೆ.

**ಏಲಕ್ಕಿ :** ಇದು 2-4 ಮೀಟರ್ ಎತ್ತರಕ್ಕೆ ಬೆಳೆಯುವ ಗಿಡ. $15^{O}$-$35^{O}$ ಸೆ. ಉಷ್ಣಾಂಶ ಮತ್ತು ವಾರ್ಷಿಕವಾಗಿ 150 ಸೆಂ.ಮೀ. ಮಳೆ ಇದಕ್ಕೆ ಬೇಕಾಗುತ್ತದೆ. 1999-2000ದಲ್ಲಿ ಜಿಲ್ಲೆಯಲ್ಲಿ 04 ಹೆಕ್ಟೇರ್ ಪ್ರದೇಶದಲ್ಲಿ ಏಲಕ್ಕಿ ಬೆಳೆಯಲಾಗಿದ್ದು, 700 ಟನ್ ಉತ್ಪಾದನೆಯಾಗಿರುವುದು ಕಂಡುಬರುತ್ತದೆ. ಇದು ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ. 18.5 ರಷ್ಟನ್ನು ಒಳಗೊಂಡಿದ್ದು, 3ನೇ ಸ್ಥಾನದಲ್ಲಿದೆ.

**ಮೆಣಸಿನಕಾಯಿ :** 1999-2000ನೇ ಸಾಲಿನಲ್ಲಿ 6.440 ಹೆಕ್ಟೇರ್ ಪ್ರದೇಶದಲ್ಲಿ ಮೆಣಸಿನಕಾಯಿಯನ್ನು ಬೆಳೆಯಲಾಗಿತ್ತು. ಇಂದು ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ. 2011-12ನೇ ಸಾಲಿನ ಅಂಕಿ ಸಂಖ್ಯೆಯಂತೆ 94393.25 ಮೆ.ಟನ್. ಹಸುರು ಮೆಣಸಿನಕಾಯಿಯನ್ನು ಉತ್ಪಾದಿಸಲಾಗಿದ್ದು, ಹಣ್ಣಾದ ಮೆಣಸಿನ ಕಾಯಿಗಳನ್ನು ಒಣಗಿಸಿ ಸಾಂಬಾರು ಪದಾರ್ಥವಾಗಿ ಬಳಸುವುದು ಜಿಲ್ಲೆಯಲ್ಲಿ ಕಂಡುಬರುವ ಅಂಶವಾಗಿದೆ.

**ಹುಣಿಸೆ :** ರಾಜ್ಯದ ಇತರೆ ಜಿಲ್ಲೆಗಳಲ್ಲಿ ಬೆಳೆಯುವಂತೆ ಜಿಲ್ಲೆಯಲ್ಲಿ ಅಲ್ಲಲ್ಲಿ ಹುಣಿಸೆ ಮರಗಳನ್ನು ಕಾಣಬಹುದು. ಇದು ಪ್ರಮುಖ ಸಾಂಬರ್ ಪದಾರ್ಥಗಳಲ್ಲಿ ಜಿಲ್ಲೆಯಾದ್ಯಂತ ಕಂಡುಬರುತ್ತದೆ.

**ಬೆಳ್ಳುಳ್ಳಿ :** 1999-200ದ ಅಂಕಿ ಸಂಖ್ಯೆಯಂತೆ ಜಿಲ್ಲೆಯು ಬೆಳ್ಳುಳ್ಳಿ ಉತ್ಪಾದನೆಯಲ್ಲಿ ರಾಜ್ಯದಲ್ಲೆ ಮೊದಲನೆ ಸ್ಥಾನದಲ್ಲಿತ್ತು. ಇದು ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ. 28.7 ರಷ್ಟಾಗಿದ್ದು, ಒಂದು ಮುಖ್ಯಬೆಳೆಯಾಗಿ ಕಂಡುಬರುತ್ತಿದೆ.

**ರೇಷ್ಮೆ ಕೃಷಿ :** ಹಿಪ್ಪನೇರಳೆಯು ಗಡಸು ಜಾತಿಗೆ ಸೇರಿದ ಸಸ್ಯ. ಬರಗಾಲವನ್ನು ನಿಭಾಯಿಸಬಲ್ಲದು. ಇದರ ಬೇಸಾಯಕ್ಕೆ 60 ರಿಂದ 120 ಸೆಂ.ಮೀ. ವಾರ್ಷಿಕ ಮಳೆ ಬೇಕಾಗುವುದು. ಜಿಲ್ಲೆಯಲ್ಲಿ ಹಿಪ್ಪನೇರಳೆ ಮೂಲದಿಂದ ರೇಷ್ಮೆಯನ್ನು ಬೆಳೆದು ಅನಂತರ ರೇಷ್ಮೆ ಹುಳುಗಳನ್ನು ಸಾಕಿ ಗೂಡುಗಳನ್ನು ಪಡೆಯುವುದು ಕಾಣಬಹುದು. ಜಿಲ್ಲೆಯಲ್ಲಿ ಹಿಪ್ಪನೇರಳೆಯನ್ನು ಮಳೆ ಹಾಗೂ ನೀರಾವರಿ ಎರಡೂ ಕ್ಷೇತ್ರಗಳಲ್ಲಿಯೂ ಬೆಳೆಯಲಾಗುವುದು. 1999-2000ದಲ್ಲಿ 500 ಹೆಕ್ಟೇರ್ ಪ್ರದೇಶದಲ್ಲಿ 205 ಟನ್‌ಗಳನ್ನು ಉತ್ಪಾದನೆ ಮಾಡಲಾಗಿದ್ದು, 2010-11ನೇ ಸಾಲಿನ ಹೊತ್ತಿಗೆ ಇದು 620 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತಾರಗೊಂಡಿದ್ದು 320 ಟನ್ ಉತ್ಪಾದನೆ ಮಾಡಿರುವುದು ಕಂಡುಬರುತ್ತದೆ.

**ಸಾಂಪ್ರದಾಯಿಕ ಕೃಷಿ ವಿಧಾನಗಳು**

**ನಾಟಿ :** ರಾಜ್ಯಾದ್ಯಂತ ನಾಟಿಯ ವಿಧಾನದಿಂದ ಬತ್ತ ಮತ್ತು ರಾಗಿಯನ್ನು ಬೆಳೆಯುವಂತೆ ಜಿಲ್ಲೆಯಲ್ಲಿ ನಾಟಿಮಾಡುವುದು ಕಾಣಬಹುದು. ಬತ್ತ ಮತ್ತು ರಾಗಿಯ ಪೈರುಗಳನ್ನು ಸಸಿ ಮಡಿಗಳಲ್ಲಿ ಬೆಳಸಿ 3-4 ವಾರಗಳ ಅನಂತರ ಗದ್ದೆಗಳಲ್ಲಿ ನಾಟಿಮಾಡುವುದು ಸಾಮಾನ್ಯವಾಗಿದೆ.

**ಸಾಲುಬಿಡುವುದು :** ರಾಗಿ ಮತ್ತು ದ್ವಿದಳ ಧಾನ್ಯಗಳನ್ನು ಸಾಲು ಬಿಡುವುದು ಜಿಲ್ಲೆಯಾದ್ಯಂತ ಕಂಡುಬರುತ್ತದೆ. ಸಾಲುಗಳು 01 ರಿಂದ 2 ಅಡಿ ಅಗಲದಲ್ಲಿದ್ದು, ಧಾನ್ಯಗಳನ್ನು ಸಾಲುಬಿಡುವುದು ಕಾಣಬಹುದು.

**ಮಡಿಕಟ್ಟು :** ಬತ್ತದ ಪೈರು ಹಾಗೂ ಹೊಗೆಸೊಪ್ಪಿನ (ತಂಬಾಕು) ಸಸಿಗಳನ್ನು 3 ಅಥವಾ 4 ಅಡಿ ಅಗಲದ ಹಾಗೂ ಸುಮಾರು 20 ರಿಂದ 40 ಅಡಿ ಉದ್ದದ ಪಟಗಳನ್ನು ಮಾಡುವ ಮೂಲಕ ಮಡಿಮಾಡಿ ಸಸಿಗಳನ್ನು ಬೆಳೆಸುವುದಕ್ಕೆ ಮಡಿಕಟ್ಟು ಎನ್ನುವರು.

**ಹರತೆ :** ಇದು ಸಾಮಾನ್ಯವಾಗಿ ಕಂಡುಬರುವ ಕೃಷಿ ವಿಧಾನ. ಎರಡು ಅಥವಾ ಮೂರು ತಾಳಗಳು (ಕಬ್ಬಿಣದ ಗುಳಗಳು) ಇರುವ ಉಪಕರಣ ಬಳಸಿ, ಉಳುಮೆ ಮಾಡುವ ವಿಧಾನವಿದು.

**ರಿಜ್ :** ಇದೊಂದು ಕಬ್ಬಿಣದ ಉಪಕರಣ. ಇದನ್ನು ತಂಬಾಕು ಕೃಷಿಯಲ್ಲಿ ಬಳಸಲಾಗುತ್ತದೆ. ಎರಡು ರೆಕ್ಕೆಗಳಿದ್ದು, ಮಣ್ಣನ್ನು ಏರುಕಟ್ಟಲು ಈ ಉಪಕರಣವನ್ನು ಬಳಸಲಾಗುತ್ತದೆ.

**ನೆಡುವುದು :** ಬೆಳಗಾಂವಿಯಲ್ಲಿ ಕಬ್ಬು ಮತ್ತು ಹತ್ತಿ ಬೆಳೆಗಳು ಪ್ರಧಾನವಾಗಿದ್ದು, ನಿರ್ದಿಷ್ಟಪಡಿಸಿದ ಸಾಲುಗಳಲ್ಲಿ ಬಿತ್ತನೆ ಮಾಡುವುದನ್ನು ನೆಡುವುದು ಎನ್ನುವರು.

**ಬ್ಯಾರನ್ :** ತಂಬಾಕು ಹದಮಾಡಲು ಬಳಸುವ ಮನೆಗಳಿಗೆ ಬ್ಯಾರನ್ ಎಂದು ಕರೆಯುವುದುಂಟು. ಇಟ್ಟಿಗೆ ಹಾಗೂ ಮಣ್ಣಿನಿಂದ ಕಟ್ಟಿದ ಮನೆಗಳಲ್ಲಿ, ಮರದ ಗಳಗಳು ಬಳಸಿ, ಹೊಗೆಸೊಪ್ಪನ್ನು ನೇತುಹಾಕಿ ಒಣಗಿಸುವ ಸಲುವಾಗಿ ನಿರ್ಮಿಸಿದ ಮನೆಗಳು.

**ಪ್ಲೂ ಕ್ಯೂರಿಂಗ್ :** ಹೊಗೆಸೊಪ್ಪನ್ನು ಬೆಳೆದ ಅನಂತರ ಎಲೆಗಳನ್ನು ಮುರಿದು ಕಡ್ಡಿಗೆ ಕಟ್ಟಿ, ವಿಶೇಷವಾಗಿ ನಿರ್ಮಿಸಿದ ಬ್ಯಾರನ್‌ಗಳಲ್ಲಿ ನೇತು ಹಾಕಿ, ಹೊರಗಿನ ಸಂಪರ್ಕ ಹೊಂದಿದ ಒಲೆಗಳಲ್ಲಿ ಬೆಂಕಿ ಹಾಕಿ ಪೈಪುಗಳನ್ನು (ತಗಡಿನ ಪೈಪು) ಬಿಸಿ ಮಾಡಿ, ಉಷ್ಣಾಂಶವನ್ನು ಹೆಚ್ಚಿಸುವ ಮೂಲಕ ಎಲೆಗಳನ್ನು ಒಣಗಿಸುವ ವಿಧಾನಕ್ಕೆ ಪ್ಲೂಕ್ಯೂರಿಂಗ್ ಎನ್ನುವರು.

**ಎಲೆ ಮುರಿಯುವುದು :** ರಾಜ್ಯದ ಇತರೆಡೆ ಹೊಗೆಸೊಪ್ಪನ್ನು ಆರಿಸುವಂತೆ ಜಿಲ್ಲೆಯಲ್ಲಿಯು ಕೂಡ ಆರಿಸುವುದನ್ನು ಕಾಣಬಹುದು. ಹೊಗೆಸೊಪ್ಪಿನ ಎಲೆಗಳು ಆರಿಸಲು ಬಂದಾಗ ಅವುಗಳನ್ನು ಮುರಿದು ಕಟ್ಟುವುದು ಕಾಣಬಹುದು. ಇದಕ್ಕೆ ಎಲೆ ಮುರಿಯುವುದು ಎನ್ನುವರು.

**ಸನ್ ಕ್ಯೂರಿಂಗ್ :** ಬೆಳಗಾಂವಿ ನಿಪ್ಪಾಣಿ ಹೊಗೆಸೊಪ್ಪಿಗೆ ಹೆಸರುವಾಸಿ. ಬೀಡಿ ಹೊಗೆಸೊಪ್ಪನ್ನು ಚಳಿಗಾಲದಲ್ಲಿ ಬೆಳೆಯುವುದು ಕಂಡುಬರುತ್ತದೆ. ಈ ಹೊಗೆಸೊಪ್ಪಿನ ಗಿಡಗಳನ್ನು ಕತ್ತರಿಸಿ ಬಿಸಿಲಿನಲ್ಲಿ ಒಣಗಿಸುವರು, ಇದನ್ನು 'ಸನ್‌ಕ್ಯೂರಿಂಗ್' ಎಂದು ಕರೆಯುವರು.

**ಬೇಲ್‌ಕಟ್ಟು:** ಹದಮಾಡಿದ ಹೊಗೆಸೊಪ್ಪು ಹಾಗೂ ಹತ್ತಿಯನ್ನು ನಿರ್ದಿಷ್ಟಪಡಿಸಿದ ತೂಕದವರೆಗೆ ಕಟ್ಟುವುದಕ್ಕೆ ಬೇಲ್‌ಕಟ್ಟು ಎಂದು ಕರೆಯುವರು.

ಇದಲ್ಲದೆ ರಾಜ್ಯದ ಇತರೆಡೆಯಲ್ಲಿ ಇರುವಂತೆ ಕಳೆಕೀಳುವುದು, ಉಳುಮೆ ಮಾಡುವುದು, ಬದು ನಿರ್ಮಿಸುವುದು, ಮಳೆ ನೀರಿಗೆ ಅಡ್ಡಲಾಗಿ ಸಾಲು ಮಾಡುವುದು ಹಾಗೂ ಬಿತ್ತುವುದು ಅಲ್ಲಲ್ಲಿ ಕಂಡುಬರುತ್ತದೆ.

**ದೇಶೀ ತಳಿಗಳು :**

**ನಿಪ್ಪಾಣಿ :** ಇದೊಂದು ದೇಶೀ ತಳಿಯ ಹೊಗೆಸೊಪ್ಪು, ಬೀಡಿ ಹಾಗೂ (ತಿನ್ನುವ) ಅಗಿಯುವ ಹೊಗೆಸೊಪ್ಪನ್ನು ಬಿಸಿಲಿನಲ್ಲಿ ಒಣಗಿಸಿ, ಬೀಡಿ ತಯಾರಿಕೆಯಲ್ಲಿ ಬಳಸುವ ತಳಿ.

**ಮುಳ್ಳುಗಾಯಿ :** ಒಂದು ಜಾತಿಯ ಬದನೆಕಾಯಿ, ಉಂಡಾಗಿದ್ದು, ತೆಳುನೇರಳೆ ಬಣ್ಣದಂತಿರುವ ಬಣ್ಣವನ್ನು ಹೊಂದಿರುತ್ತಾರೆ. ಇದನ್ನು ಎಣ್ಣೆಗಾಯಿ ಹಾಗೂ ಸಾಂಬಾರ್‌ಗಳಲ್ಲಿ ಬಳಸಲಾಗುವುದು.

**ಈರುಳ್ಳಿ :** ದಪ್ಪ ಈರುಳ್ಳಿ ಜಿಲ್ಲೆಯಲ್ಲಿ ಬೆಳೆಯುವುದರ ಜೊತೆಗೆ ನೊಜೆ ಈರುಳ್ಳಿ ಬೆಳೆಯನ್ನು ಕಾಣಬಹುದು. (ಸಣ್ಣ ಸಾಂಬರ್ ಈರುಳ್ಳಿ)

**ಕುಂಬಳ :** ವನಗುಂಬಳ (ಉದ್ದವಾಗಿ ಒನಕೆಯಂತಿರುವುದು ಬೂದು ಗುಂಬಳಗಳು ಜಿಲ್ಲೆಯಲ್ಲಿ ಕಾಣಬಹುದು.

**ತೊಂಡೆಕಾಯಿ :** ಚಪ್ಪರದ ತೊಂಡೆಕಾಯಿ ವರ್ಷಪೂರ್ತಿ ಅಲಲ್ಲಿ ಜಿಲ್ಲೆಯಲ್ಲಿ ಕಾಣಬಹುದು.

**ಸೊಪ್ಪುಗಳು :** ಧನಿಯ (ಕೊತ್ತಂಬರಿ) ಸೊಪ್ಪು, ದಂಟಿನ ಸೊಪ್ಪು, ಮೆಂತ್ಯಾ, ಪುದಿನ ಸೊಪ್ಪುಗಳನ್ನು ಬೆಳೆಯುವುದು ಜಿಲ್ಲೆಯಲ್ಲಿ ಸಾಮಾನ್ಯ.

**ಗೊಬ್ಬರಗಳು ಮತ್ತು ಕೀಟನಾಶಕಗಳು :**

2011-12ರ ಅಂಕಿ ಅಂಶದಂತೆ ಜಿಲ್ಲೆಯಲ್ಲಿ 192987.46 ಟನ್ ರಾಸಾಯನಿಕ ಗೊಬ್ಬರವನ್ನು ವಿತರಣೆ ಮಾಡಲಾಗಿದ್ದು, 98309.78 ಟನ್ ಸಾರಜನಕ, 61247.42 ಟನ್ ರಂಜಕ, 33430.26 ಟನ್ ಪೊಟ್ಯಾಶ್ ವಿತರಿಸಿರುವುದು ಕಂಡುಬರುತ್ತದೆ.

**ಕೊಟ್ಟಿಗೊಬ್ಬರ :** ದನಕರುಗಳು, ಎಮ್ಮೆ, ಆಡು, ಕುರಿ, ಕೋಳಿ ಮೊದಲಾದವುಗಳ ಸಗಣಿಯನ್ನು ಒಂದೆಡೆ ಹಾಕಿ, ಕೊಳೆತ ಅನಂತರ ಹೊಲಗದ್ದೆಗಳಲ್ಲಿ ಬಳಸಲಾಗುವುದು.

**ಕಾಂಪೋಸ್ಟ್ :** ಇತ್ತೀಚಿನ ದಿನಗಳಲ್ಲಿ ಜೈವಿಕ ಗೊಬ್ಬರದ ಮೂಲಕ ನೈಸರ್ಗಿಕ ಕೃಷಿಯಲ್ಲಿ ತೊಡಗಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ. ಇದರಲ್ಲಿ ತರಗೆಲೆ, ಕಸಕಡ್ಡಿ ಮೊದಲಾದವುಗಳನ್ನು ಕೊಳೆಹಾಕಿ ಕರಗಿದ ಅನಂತರ ಬೇಸಾಯಕ್ಕೆ ಬಳಸುವರು.

**ಎರೆಗೊಬ್ಬರ :** ಎರೆಹುಳುಗಳ ಘಟಕಗಳ ಮೂಲಕ ಕಸಕಡ್ಡಿಗಳನ್ನು ಕರಗಿಸಿ ಬಳಸುವುದು.

**ಸೆಗಣಿಗೊಬ್ಬರ :** ಗೋಬರ್ ಅನಿಲಗಳಲ್ಲಿ ಬಳಸಿದ ಸಗಣಿ ಕರಗಿದ ಮೇಲೆ ಅದನ್ನು ಗೊಬ್ಬರವಾಗಿ ಬಳಸುವುದು ಜಿಲ್ಲೆಯಲ್ಲಿ ಕಾಣಬಹುದು.

**ಕೀಟ ನಾಶಕಗಳು :**

**ಬೂದಿ :** ಹೊಗೆಸೊಪ್ಪು ಹದ ಮಾಡುವ ಬ್ಯಾರನ್‌ಗಳಲ್ಲಿ ಬರುವ ಬೂದಿ, ಹಾಗೂ ಮನೆಗಳಲ್ಲಿಯ ಬೂದಿಯನ್ನೇ ಹೊಲಗದ್ದೆಗಳಲ್ಲಿ ಬಳಸುವ ಮೂಲಕ ಕೀಟಬಾಧೆಯನ್ನು ನಿಯಂತ್ರಿಸುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ.

**ಮೈಲುತುತ್ತ :** ಹೊಗೆಸೊಪ್ಪು ಸಸಿಗಳನ್ನು ಮಡಿ ಮಾಡಲು ಬಳಸುವ ಕೀಟನಾಶಕ.

**ಬೇವಿನ ರಸ :** ಹೊಗೆಸೊಪ್ಪು ಸಸಿಗಳಿಗೆ ಬರುವ ಕೊಳೆರೋಗ ಹಾಗೂ ಇರುವೆ ಹತ್ತು ಮೊದಲಾದವುಗಳನ್ನು ತಡೆಯಲು ಬೇವಿನ ಸೊಪ್ಪನ್ನು ಚೆನ್ನಾಗಿ ಬೇಯಿಸಿ, ರಸವನ್ನು ಸಿಂಪಡಿಸುವುದರ ಮೂಲಕ ರೋಗನಿಯಂತ್ರಣ ಮಾಡಲಾಗುವುದು.

**ಗಂಜಲದ ಬಳಕೆ :** ಜಿಲ್ಲೆಯ ಕೆಲವು ಕಡೆಗಳಲ್ಲಿ ಗಂಜಲವನ್ನು ಸಸಿಗಳಿಗೆ ಸಿಂಪಡಿಸುವ ಮೂಲಕ ರೋಗ ನಿಯಂತ್ರಣ ಮಾಡುವರು.

2011-12ನೇ ಸಾಲಿನ ಸಮೀಕ್ಷೆಯಂತೆ ವ್ಯವಸಾಯಕ್ಕೆ ವಿತರಿಸಿದ ಪರಿಕರಗಳು. 91 ಅಗೆಯುವ ಟಿಲ್ಲರಗಳು, 1473 ಪಂಪ್‌ಸೆಟ್, 7220 ಸಿಂಪರಣೆಯಂತ್ರಗಳು, 73 ಎರೆಹುಳು ಘಟಕಗಳು, 2399 ಜೈವಿಕ ಗೊಬ್ಬರ, 792 ಸ್ಪ್ರೇಗಳು, 1354 ನೀರಿನ ಸುರಳಿಗಳು, 406 ಮೇವು ಕತ್ತರಿಸುವ ಯಂತ್ರಗಳನ್ನು ಬಳಸಿರುವುದನ್ನು ಕಾಣಬಹುದು.

**ಬಳಸುವ ಮುಖ್ಯ ಉಪಕರಣಗಳು :**

**ನೇಗಿಲು / ನೇಗಿಲ್ :** ರಾಗಿ, ಬತ್ತ, ಕಬ್ಬು, ತಂಬಾಕು ಮೊದಲಾದ ಬೆಳೆಗಳನ್ನು ಬಿತ್ತುವ ಮೊದಲು ಉಳುಮೆ-ಮಾಡಲು ಬಳಸುವ ಕಬ್ಬಿಣದ ಉಪಕರಣ.

**ಕುಂಟೆ :** ಹರತೆ ಮಾಡಲು ಬಳಸುವ ಎರಡು ಹಾಗೂ ಮೂರು ಕಬ್ಬಿಣದ ಗುಳಗಳನ್ನು ಮರದ ತುಂಡೊಂದಕ್ಕೆ ಸೇರಿಸಿ ಮಾಡಿದ ಉಪಕರಣ.

**ರಿಜ್ :** ಎರಡು ದೊಡ್ಡ ರೆಕ್ಕೆಗಳಿಂದ ಕೂಡಿದ ಕಬ್ಬಿಣದ ಉಪಕರಣ, ಇದನ್ನು ಮಣ್ಣು ಏರುಗಟ್ಟಲು ಬಳಸುವರು.

**ಬಾಣಿ :** ಎತ್ತು/ಹೋರಿ ಹಾಗೂ ಎಮ್ಮೆ ಮೊದಲಾದ ಪ್ರಾಣಿಗಳಿಗೆ ಕಲಗಚ್ಚು ಕುಡಿಸಲು ಬಳಸುವ ಪಾತ್ರೆ.

**ಮಕ್ರಿ :** ಇದೊಂದು ಬಿದುರಿನಿಂದ ಹೆಣೆದ ಪುಟ್ಟಿ, ಕಸ ಹಾಗೂ ಗೊಬ್ಬರ ಮೊದಲಾದವುಗಳನ್ನು ಹೊರಲು ಬಳಸುವರು.

**ಒನಕೆ :** ಬತ್ತ ಕುಟ್ಟಲು ಬಳಸುವ ಉಪಕರಣ.

**ಸಹಾಯಕ ಗ್ರಂಥಗಳು :**


ಕನ್ನಡ ವಿಶ್ವಕೋಶ ಸಂ. 12

ಕನ್ನಡ ವಿಷಯ ವಿಶ್ವಕೋಶ - ಭೂಗೋಳ ವಿಜ್ಞಾನ

ಕರ್ನಾಟಕದ ಭೂಗೋಳಶಾಸ್ತ್ರ, ಪ್ರೊ. ಪಿ. ಮಲ್ಲಪ್ಪ

ಕರ್ನಾಟಕದ ಸಂಕ್ಷಿಪ್ತ ಇತಿಹಾಸ. ಡಾ. ಸೂರ್ಯನಾಥ ಕಾಮತ್

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ- ಡಾ. ರಂಗನಾಥ

ಬೆಳಗಾಂವಿ ಜಿಲ್ಲೆಯ ಅಂಕಿ-ಅಂಶಗಳ ನೋಟ - 2011-12, www.BELGAUM.com


**ಸಹಾಯಕ ವಕ್ತೃಗಳು :**


ದೊಡ್ಡಮನಿ, ಕೃಷಿಕ-ಬೆಳಗಾವಿ ತಾಲ್ಲೂಕು, ಬೆಳಗಾಂವಿ

ಗಜಾನನ ನಾಯಕ ಸಹಾಯಕ ಪ್ರಾಧ್ಯಾಪಕ, ರಾಣಿಚನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾಂವಿ

*ಎಲ್. ಆರ್.*

**ಬೆಳೆ ಕೊಯ್ಯುವ ಸಲಕರಣೆಗಳು** ರೈತನಿಗೆ ಬಲಗೈ ಬಂಟನಾಗಿ ಕೃಷಿ ಉಪಕರಣಗಳು ಕೆಲಸ ಮಾಡುತ್ತವೆ. ಕೃಷಿ ಉಪಕರಣಗಳ ತಯಾರಿಕೆಗೆ ರೈತ ಬೇಸಗೆ ಕಾಲದಿಂದಲೇ ಶುರು ಮಾಡುತ್ತಾನೆ. ಅಂದರೆ ಕುಲುಮೆಗಾರನ ಹತ್ತಿರ ವ್ಯವಸಾಯಕ್ಕೆ ಬೇಕಾದಂಥ ಕೃಷಿ ಉಪಕರಣಗಳನ್ನು ಅಂದರೆ ಕುಡುಗೋಲು, ಉಜ್ಜರಿ, ಮಚ್ಚು, ಕೈಕೊಳ್ಳಿ ಮುಂತಾದವುಗಳನ್ನು ಹೇಳಿ ಮಾಡಿಸಿಕೊಳ್ಳುತ್ತಾನೆ.

ರೈತ ಎಷ್ಟೇ ಶ್ರಮವಹಿಸಿ ದುಡಿದು ಬೇಸಾಯ ಮಾಡಿರಲಿ, ಹಣ ಖರ್ಚು ಮಾಡಿ ಗೊಬ್ಬರ ಹಾಕಿರಲಿ, ಬೇಲಿ ಹಾಕಿ ಸಂರಕ್ಷಣೆ ಮಾಡಿರಲಿ, ಬೆಳೆ / ಫಸಲು ಪಕ್ವವಾದ ತರುವಾಯ ಕೊಯ್ಲು ಮಾಡಬೇಕು. ಇಲ್ಲವಾದರೆ ಬೆಳೆ ಉದುರಿ ಹೋಗುತ್ತದೆ. ಕುಡುಗೋಲು, ಉಜ್ಜರಿ, ಕೊಕ್ಕೆ, ಕೊಕ್ಕೆ ಕುಡುಗೋಲು, ಮುಂತಾದವು ಬಳಸುತ್ತಾ ಹೋದಂತೆ ಮೊಂಡಾಗುತ್ತವೆ. ಅಂತಹ ಸಂದರ್ಭದಲ್ಲಿ ಕುಲುಮೆಗಾರನ ಹತ್ತಿರ ತಟ್ಟಿಸಿ ಚೂಪು ಮಾಡಿಸುತ್ತಾರೆ. ಇಲ್ಲವೇ ಅರದಿಂದಲಾದರೂ ತಿಕ್ಕಿ ಚೂಪಾಗುವಂತೆ ಮಾಡುತ್ತಾರೆ. ಕೊಡಲಿ, ಕುಡುಗೋಲು ಮುಂತಾದ ವಸ್ತುಗಳನ್ನು ಉಜ್ಜಲು ಬಳಸುವ ಸಾಧನ ಅರ. ಕೆಲವೊಮ್ಮೆ ಕಲ್ಲಿಗೆ ಉಜ್ಜಿ / ಮಸೆದು ಚೂಪು ಮಾಡಿಕೊಳ್ಳುವುದನ್ನು ಸಹ ಕಾಣಬಹುದಾಗಿದೆ.



**ಕುಡುಗೋಲು :** ಕೃಷಿಯಲ್ಲಿ ಕುಡುಗೋಲಿನ ಪಾತ್ರ ಮಹತ್ತ್ವಪೂರ್ಣವಾದುದು. ಯಾವುದೇ ಬೆಳೆ ಹಾಕಿದರೂ ಕುಡುಗೋಲು ಇಲ್ಲದೆ ವ್ಯವಸಾಯ ಮಾಡುವುದು ಅಸಾಧ್ಯ. ಕೃಷಿಯಲ್ಲಿ ಅಷ್ಟೇ ಅಲ್ಲ ಗೃಹ ಬಳಕೆಯಲ್ಲಿಯೂ ಕುಡುಗೋಲು ಪ್ರಧಾನ ಪಾತ್ರ ವಹಿಸುತ್ತದೆ.

ಕುಡ್ಗ್ಲುಬಾಯಿ ಕುಡುಗೋಲಿನ ಹರಿತವಾದ ಭಾಗ. ಯಾವುದೇ ಬೆಳೆ ಕೊಯ್ಯಲು ಸಹಕಾರಿಯಾಗಿದೆ. ಕುಡುಗೋಲನ್ನು ಹಿಡಿದುಕೊಳ್ಳಲು ಅನುಕೂಲವಾಗಲೆಂದು ಮತ್ತು ಜಾರಿಹೋಗದಿರಲಿ ಎಂಬ ಕಾರಣದಿಂದ ಕುಡುಗೋಲಿಗೆ ಮರ ಹಿಡಿ ಹಾಕಲಾಗಿರುತ್ತದೆ. ಬತ್ತ, ರಾಗಿ, ಜೋಳ ಬೆಳೆಗಳನ್ನು ಕುಯ್ಯಲು ಕುಡುಗೋಲನ್ನು ಬಳಸಲಾಗುತ್ತದೆ. ಕಬ್ಬಿನ ಸೋಗು ಬಿಡಿಸಲು ಸಹ ಕುಡುಗೋಲನ್ನೇ ಬಳಸಲಾಗುತ್ತದೆ.




**ಉಜ್ಜರಿ :** ಇದು ಕುಡುಗೋಲಿನಂತೆ ಕಂಡರೂ ಸ್ವಲ್ಪ ಚಿಕ್ಕದಾಗಿರುತ್ತದೆ. ಉಜ್ಜರಿ ಹಿಡಿಯ ಹತ್ತಿರ ಬಳೆ ಇರುತ್ತದೆ, ಜಾರದಿರಲಿ ಎಂದು ಮರದ ಹಿಡಿಯನ್ನು ಉಜ್ಜರಿಗೂ ಹಾಕುವುದುಂಟು. ಹುಲ್ಲು ಕಟಾವಿಗೆ ಮತ್ತು ಚಿಕ್ಕ ಚಿಕ್ಕ ಕಳೆಗಳನ್ನು ತೆಗೆಯಲು ಇದನ್ನು ಬಳಸುತ್ತಾರೆ.



**ಕೊಕ್ಕೆ :** ಹಣ್ಣುಗಳನ್ನು ಕೊಯ್ಯುವ ಕಬ್ಬಿಣದ ಮೂತಿ ಇರುವ ಸಾಧನ. ಇದನ್ನು ಬಿದಿರಿನ ಕೋಲಿಗೆ ಕಟ್ಟಿರುತ್ತಾರೆ. ಸೀಬೆಹಣ್ಣು, ಸಪೋಟಹಣ್ಣು, ನೇರಳೆಹಣ್ಣು ಮುಂತಾದ ಹಣ್ಣುಗಳನ್ನು ಮರದಿಂದ ಕೀಳಲು ಬಳಸಲಾಗುತ್ತದೆ.



**ಕೊಕ್ಕೆ ಕುಡುಗ್ಲು :** ಕುಡುಗೋಲಿಗೆ ಬಿದಿರಿನ ಉದ್ದನೆಯ ಕೋಲನ್ನು ಸೇರಿಸಿರುತ್ತಾರೆ. ಇದನ್ನು ಎತ್ತರದಲ್ಲಿರುವ ನುಗ್ಗೆ ಸೊಪ್ಪು, ಅಗಸೆಸೊಪ್ಪು ಸೆಳೆಯಲು ಮತ್ತು ಎತ್ತರದಲ್ಲಿರುವ ಇತರ ಸೊಪ್ಪುಗಳನ್ನು ಮುಳ್ಳುಗಳನ್ನು ಕೀಳಲು ಕೊಕ್ಕೆ ಕುಡುಗ್ಲುಗಳನ್ನು ಉಪಯೋಗಿಸಲಾಗುವುದು.



**ಕಲ್ಲಿ :** ಮಾವಿನ ಹಣ್ಣು ಕುಯ್ಯಲು ಬಳಸುವ ಸಾಧನ. ಮರದ ಕೋಲಿಗೆ ಬುಟ್ಟಿ ರೀತಿ ಚೀಲವನ್ನು ಹೊಲಿಸಿಕೊಂಡು ಕಟ್ಟಿರುತ್ತಾರೆ. ಕೀಳುವಾಗ ಹಣ್ಣು ಕೆಳಗೆ ಬಿದ್ದು ಒಡೆದು ಹೋಗದಿರಲೆಂದು ಈ ಚೀಲವನ್ನು ಕಟ್ಟಿರುತ್ತಾರೆ. ಕೀಳುವಾಗ ಹಣ್ಣು ಚೀಲದ ಒಳಗಡೆ ಬೀಳುತ್ತದೆ. ಆಧುನಿಕ ಜಗತ್ತಿನಲ್ಲಿ ತಾಂತ್ರಿಕತೆಯಿಂದ ನವೀನ ಮಾದರಿಯ ಯಂತ್ರಗಳ ಬಳಕೆಯಾಗುತ್ತಿದ್ದರೂ, ಸಾಂಪ್ರದಾಯಿಕವಾಗಿ ರೈತರು ಬಳಸುತ್ತಿದ್ದ ಉಪಕರಣಗಳ ಆವಶ್ಯಕತೆ ಇಂದಿಗೂ ಇದೆ.

*ಎಸ್.ಕೆ.ಆರ್.*

**ಬೆಳೆ ಬಾಧಿಸುವ ಪಕ್ಷಿಗಳು ಮತ್ತು ಪ್ರಾಣಿಗಳು** ರೈತನ ಕೃಷಿ ಬದುಕಿನಲ್ಲಿ ಅನೇಕ ಪಕ್ಷಿಗಳು ಪ್ರಾಣಿಗಳು ಮಿತ್ರನಂತೆ ಸಹಕರಿಸಿ ಬೆಳೆಗಳ ಬೆಳವಣಿಗೆಗೆ ಪೂರಕವಾಗಿ ಸಹಕರಿಸುವುದುಂಟು. ಅಷ್ಟೇ ಪ್ರಮಾಣದಲ್ಲಿ ಇವು ರೈತನಿಗೆ ಕಂಟಕಪ್ರಾಯವಾಗಿಯೂ ಕಾಡುತ್ತವೆ. ಅಂಥವುಗಳಲ್ಲಿ ಕೆಲವು : ಬಾವಲಿ, ನವಿಲು, ಕಾಗೆ, ಗಿಳಿ, ಗುಬ್ಬಚ್ಚಿ, ಪಾರಿವಾಳ ಮುಂತಾದ ಪಕ್ಷಿಗಳು: ಕೋತಿ, ಆನೆ, ಕರಡಿ, ಹಂದಿ, ಮುಳ್ಳುಹಂದಿ, ನರಿ, ತೋಳ, ಇಣಚಿ, ಇಲಿ ಮೊದಲಾದ ಪ್ರಾಣಿಗಳು.

**ಪಕ್ಷಿಗಳು :** ಇವು ರೈತನ ಮಿತ್ರನಂತೆಯೂ ಶತ್ರುಗಳಂತೆಯೂ ಇರುವಂಥವು. ಕ್ರಿಮಿಕೀಟ ಹುಳು ಹುಪ್ಪಟೆಗಳನ್ನು ತಿಂದು ಬಿತ್ತಿದ ಬೆಳೆಯನ್ನು ಫಸಲು ಬರುವ ತನಕ ಕಾಪಾಡುತ್ತವೆ. ತೆನೆ ಬಲಿತು, ಕಾಯಿಮಾಗಿ, ಬೆಳೆ ಪಕ್ವವಾದಾಗ ಕಾಳನ್ನು, ಹಣ್ಣನ್ನು ತಿಂದು ರೈತನಿಗೆ ನಷ್ಟವನ್ನುಂಟು ಮಾಡುತ್ತವೆ. ರೈತರು ಇವುಗಳ ಉಪಟಳದಿಂದ ಪಾರಾಗಲು

ಕೆಲವು ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದಾರೆ. ಹೊಲದ ಅಥವಾ ತೋಟದ ಮಧ್ಯದಲ್ಲಿ ಬೆದರುಬೊಂಬೆ (ದೃಷ್ಟಿಗೊಂಬೆ) ನಿಲ್ಲಿಸುವುದು. ಸತ್ತ ಕಾಗೆಯ ರೆಕ್ಕೆಗಳನ್ನು ಕಡ್ಡಿಗೆ ಸಿಕ್ಕಿಸಿ ನೇತುಹಾಕುವುದು, ಕವಣೆ ಕಲ್ಲಿನಿಂದ ಬೀಸುವುದು, ಡಬ್ಬಗಳನ್ನು ಬಡಿದು ಶಬ್ದ ಮಾಡುವುದು ಅಲ್ಲಲ್ಲಿ ಕಡ್ಡಿಗಳನ್ನು ನೆಟ್ಟು ಪ್ಲಾಸ್ಟಿಕ್ ಹಾಳೆಗಳನ್ನು ಕಟ್ಟಿ ಶಬ್ದ ಬರುವಂತೆ ಮಾಡುವುದು, ಬಂದೂಕಿನಿಂದ ಗಾಳಿಯಲ್ಲಿ ಗುಂಡು ಹಾರಿಸುವುದು. ಪಕ್ಷಿಗಳನ್ನು ಉರುಲು ಹಾಕಿ ಅಥವಾ ಬೋನಿನ ಸಹಾಯದಿಂದ ಜೀವಂತವಾಗಿ ಹಿಡಿಯುವುದು ಇತ್ಯಾದಿ.

**ಕೋತಿಗಳು :** ಇವು ಇತರ ಎಲ್ಲ ಪ್ರಾಣಿಗಳಿಗಿಂತ ರೈತನಿಗೆ ಹೆಚ್ಚು ಉಪದ್ರವ ನೀಡುವಂಥವು. ನೆಲದೊಳಗಿನ, ನೆಲದ ಮೇಲಿನ ಮರದ ಮೇಲಿನ ಬೆಳೆಯನ್ನೂ ತಿನ್ನುವ ಪ್ರಾಣಿ. ಯಾವುದೇ ಬೇಲಿ, ಗೋಡೆ, ಮನೆ ಮಾಡು, ಕಂದವನ್ನು ಭೇದಿಸಿ ರೈತನನ್ನು ಕಾಡಿಸಿ ಎಲ್ಲ ಬಗೆಯ ಬೆಳೆಗಳನ್ನು ಹಾಳುಮಾಡುತ್ತವೆ. ಇದರಿಂದ ರಕ್ಷಣೆ ಪಡೆಯಲು ರೈತ ಕೆಲವು ಉಪಾಯಗಳನ್ನು ಕಂಡುಕೊಂಡಿದ್ದಾನೆ. ದೇವತಾಸ್ವರೂಪಿಯಾದ ಕೋತಿಯನ್ನು ಕೊಲ್ಲಬಾರದೆಂಬ ನಂಬಿಕೆಯುಳ್ಳ ರೈತಾಪಿ ಜನ ಕೋತಿ ಹಿಡಿಯುವವರಲ್ಲಿ ಪರಿಣಿತರಾದವರನ್ನು ಕರೆಸುವರು. ಇವರು ಎತ್ತಿನ ಗಾಡಿಯಲ್ಲಿ ಐದಡಿ ಉದ್ದ ನಾಲ್ಕು ಅಡಿ ಎತ್ತರ ಮೂರಡಿ ಪ್ರವೇಶದ್ವಾರ ಇರುವ ಬೋನನ್ನು ಕೋತಿಗಳು ಹೆಚ್ಚಾಗಿ ವಾಸಿಸುವ ಅಥವಾ ಬೆಳೆದ ಜಮೀನಿಗೆ ಪ್ರವೇಶ ಮಾಡುವ ಭಾಗದಲ್ಲಿ ಇಳಿಸುವರು. ಬೋನಿನ ಒಳಗೆ ಕೋತಿಗಳಿಗೆ ಪ್ರಿಯವಾದ ಆಹಾರವನ್ನು ಬೋನಿನೊಳಗೆ ಮತ್ತು ಬೋನಿನ ಪ್ರವೇಶದ್ವಾರದಲ್ಲಿಟ್ಟು ಒಂದೆರಡು ದಿನ ಅವು ನಿರ್ಭಯವಾಗಿ ಮೇಯಲು ಬಿಡುವರು. ಕೋತಿಗಳು ನಿರಾತಂಕವಾಗಿ ಮತ್ತು ಗುಂಪುಗುಂಪಾಗಿ ಆಹಾರ ತಿನ್ನಲು ಬೋನಿನೊಳಗೆ ನುಗ್ಗಿದಾಗ ಬೋನಿನ ದ್ವಾರದಿಂದ ಸುಮಾರು ದೂರದವರೆಗೆ ಬೋನನ್ನು ಮುಚ್ಚುವ ಹಲಗೆಯನ್ನು ಕಟ್ಟಿರುತ್ತಾರೆ. ಕೋತಿಗಳಿಗೆ ಕಾಣದಂತೆ ಮರೆಯಲ್ಲಿ ಕುಳಿತ ವ್ಯಕ್ತಿ ಹಗ್ಗವನ್ನು ಜಗ್ಗಿದ ಕೂಡಲೆ ಅದು ಪ್ರವೇಶದ್ವಾರವನ್ನು ಮುಚ್ಚಿ ಕೋತಿಗಳು ಹೊರಬರದಂತೆ ತಡೆಯುತ್ತದೆ. ಕೋತಿಗಳನ್ನು ಸುರಕ್ಷಿತವಾಗಿ ಎತ್ತಿನ ಗಾಡಿಗಳಲ್ಲಿ ಕೊಂಡೊಯ್ದು ಊರಿನ ಪರಿಸರದಿಂದ ದೂರ ಬಿಟ್ಟು ಬರುವರು. ಇದು ಒಂದು ಕ್ರಮವಾದರೆ ಫಸಲು ಬರುವ ಕಾಲದಲ್ಲಿ ಪಳಗಿದ ಸಾಕು ನಾಯಿಯನ್ನು ಬದುವಿನಲ್ಲಿ ಕಟ್ಟುವುದರ ಮೂಲಕ ಕೋತಿಗಳು ಬರದಂತೆ ತಡೆಯುವುದು ಇನ್ನೊಂದು ಕ್ರಮ. ಸುತ್ತಮುತ್ತಲಿನ ಜಮೀನಿನವರೆಲ್ಲ ಒಟ್ಟು ಸೇರಿ ಪಂಜುಗಳನ್ನು ಹಚ್ಚಿ ಮರಗಳಿಗೆ ಹತ್ತಿ ಓಡಿಸುವುದು ಮತ್ತೊಂದು ಕ್ರಮ.

**ಆನೆ :** ಸಾಮಾನ್ಯವಾಗಿ ಆನೆ ಗುಂಪಿನಲ್ಲಿದ್ದು ಕಾಡಿನ ಪರಿಸರದಲ್ಲಿ ಕಾಡಿನ ಅಂಚಿನಲ್ಲಿ ಬೆಳೆಯುವ ಬೆಳೆಗಳನ್ನು ತುಳಿದು, ಕೆಡವಿ ತಿಂದು ನಾಶಪಡಿಸುತ್ತವೆ. ಕಾಡಿನಲ್ಲಿ ನೀರು ದೊರೆಯದಿದ್ದಾಗ ಆಹಾರದ ಕೊರತೆಯಿದ್ದಾಗ ಆಹಾರಕ್ಕಾಗಿ ನೀರಿಗಾಗಿ ಹೊರಬರುವ ಇವು ಹಸುರಾಗಿ ಕಾಣುವ ಯಾವ ಬೆಳೆಯನ್ನು ಬಿಡುವುದಿಲ್ಲ. ಕಬ್ಬು, ಬಾಳೆ ತೋಟಕ್ಕೆ ನುಗ್ಗಿ ಹಾಳು ಮಾಡುವುದುಂಟು. ವರ್ಷಾನುಗಟ್ಟಲೆ ಕಷ್ಟಪಟ್ಟು ಬೆಳೆದ ಬೆಳೆಯನ್ನು ಕೆಲವೇ ನಿಮಿಷಗಳಲ್ಲಿ ಧ್ವಂಸಗೊಳಿಸುತ್ತವೆ. ಇವುಗಳಿಂದ ಬೆಳೆಗಳನ್ನು ರಕ್ಷಿಸಲು ರೈತ ಹರಸಾಹಸ ಮಾಡುತ್ತಾನೆ. ಒಂಟಿಯಾಗಿ ಕಾವಲು ಕಾಯುವಂತಿಲ್ಲ. ಮೈಮರೆತು ನಿದ್ದೆ ಮಾಡುವಂತಿಲ್ಲ. ಗುಂಪಿನಲ್ಲಿ ಹಗಲೂ ರಾತ್ರಿ ಕಾವಲು ಕಾಯುವುದು, ಬೆಂಕಿ ಹಚ್ಚಿಕೊಂಡು ಕೂರುವುದು ಒಂದು ಕ್ರಮವಾದರೆ ವಿಸ್ತಾರವಾದ ಕೃಷಿ ವಲಯದಲ್ಲಿ ಖಾಸಗಿಯಾಗಿ ಹಿಂದೆ ಕಂದಕಗಳನ್ನು ಕೊರೆದು ಇವುಗಳಿಂದ ರಕ್ಷಣೆ ಪಡೆಯುತ್ತಿದ್ದರು. ಇಂದು ಸರ್ಕಾರ ತಡೆಗೋಡೆಗಳು ಮತ್ತು ಕಂದಕ ನಿರ್ಮಿಸುವಲ್ಲಿ ಸಹಕರಿಸುತ್ತಿರುವುದು ಶ್ಲಾಘನೀಯ. ಕೈಗೆ ಬಂದ ತುತ್ತು ಬಾಯಿಗೆ ಬರದಂತಾದಾಗ ಪರಿತಪಿಸಿ ಅನ್ಯಮಾರ್ಗವಿಲ್ಲದೆ ವಿದ್ಯುತ್ ಬೇಲಿಗಳನ್ನು ನಿರ್ಮಿಸುವುದರ ಮೂಲಕ ಇವುಗಳ ಪ್ರಾಣಕ್ಕೆ ಸಂಚಕಾರ ಒಡ್ಡುತ್ತಿದ್ದಾನೆ.

**ಕರಡಿ :** ಇವು ಕೆಲವು ಭಾಗಗಳಲ್ಲಿ ಗೆಣಸು ಮತ್ತು ಹಲಸು ಬೆಳೆಯುವಲ್ಲಿ ಹಣ್ಣಾಗುವುದನ್ನೇ ಕಾಯುತ್ತಿದ್ದು ಸುವಾಸನೆ ಬೀರಿದಾಗ ಬೆಳೆಯನ್ನು ನಾಶಮಾಡುವುದುಂಟು. ರೈತ ಕರಡಿ ಓಡಿಸಲು ಬೆಂಕಿ ಹಚ್ಚಿಕೊಂಡು ಕಾವಲು ಕಾಯುವನು.

**ಹಂದಿ :** ಮುಳ್ಳು ಹಂದಿ (ಕಾಡು ಹಂದಿ) ನಾಡಹಂದಿ ಎಂದು ಎರಡು ಬಗೆ. ಇವು ಕಬ್ಬು, ಕಡಲೆಕಾಯಿ, ರಾಗಿ, ತೆನೆ ಬತ್ತ, ಗೆಣಸು ಮುಂತಾದ ಬೆಳೆಗಳನ್ನು ತಿಂದು ನಾಶಮಾಡುತ್ತವೆ. ಒರಟಾದ ಈ ಪ್ರಾಣಿಗಳಿಗೆ ಸಾಮಾನ್ಯ ಬೇಲಿಗಳು ರಕ್ಷಣೆ ನೀಡುವುದಿಲ್ಲ. ಇವುಗಳಿಂದ ಬೆಳೆ ರಕ್ಷಿಸಲು ಕಲ್ಲು ಚಪ್ಪಡಿಗಳ ಅಥವಾ ಸಿಮೆಂಟಿನ ಗೋಡೆ ನಿರ್ಮಿಸುವರು. ಸಿಡಿಮದ್ದು ಎಸೆಯುವುದು, ಬಲೆಕಟ್ಟುವುದು, ಉರುಲು ಹಾಕುವುದು, ಹಳ್ಳ ತೋಡಿ ಹಳ್ಳಕ್ಕೆ ಬೀಳುವಂತೆ ಮಾಡುವುದು, ತಂತಿ ಬೇಲಿಗೆ ವಿದ್ಯುತ್ ಹಾಯಿಸುವುದು ಇತ್ಯಾದಿ ಕ್ರಮಗಳನ್ನು ಅನುಸರಿಸುವರು.

ನರಿ, ತೋಳಗಳು ಎಲ್ಲ ಪ್ರದೇಶಗಳಲ್ಲೂ ಕಂಡುಬರುವುದಿಲ್ಲ. ಕಾಡಂಚಿನಲ್ಲಿರುವ ತೋಟಗಳಿಗೆ ನುಗ್ಗಿ ಹಾವಳಿ ಮಾಡುತ್ತವೆ. ಇವುಗಳಿಂದ ಬೆಳೆ ರಕ್ಷಿಸಲು ಬೆಂಕಿ ಹಾಕುವುದು, ರಾತ್ರಿ ಕಾವಲು ಕಾಯುವುದು, ಸಿಡಿಮದ್ದನ್ನಿಡುವುದು, ಬಲೆ ಬೀಸಿ ಹಿಡಿಯುವುದು ಮುಂತಾದ ಉಪಾಯಗಳನ್ನು ರೈತ ಕಂಡುಕೊಂಡಿದ್ದಾನೆ. ಒಟ್ಟಿನಲ್ಲಿ ಕೃಷಿಕ ಸಕಲ ಜೀವರಾಶಿಗಳ ಜೀವ ಉಳಿಸುತ್ತಾ ಬದುಕುವ ಆಸೆ ಮತ್ತು ಆಶಯ ಉಳ್ಳವನಾದರೂ ಅನೇಕ ವೇಳೆ ಸಂಕಟಕ್ಕೆ ಸಿಲುಕುತ್ತಾನೆ.

**ಇಲಿ :** ಸಸ್ತನಿ ಜಾತಿಗೆ ಸೇರಿದ ಪ್ರಾಣಿ. ಹೊಲ, ಗದ್ದೆ, ತೋಟ ಮತ್ತು ದಾಸ್ತಾನಿನಲ್ಲಿ ಧಾನ್ಯಗಳನ್ನು ಅಗಾಧ ಪ್ರಮಾಣದಲ್ಲಿ ತಿಂದು ಅಪಾರ ನಷ್ಟ ಮಾಡುವ ಪ್ರಾಣಿಗಳಲ್ಲಿ ಇಲಿಗಳು ಪ್ರಮುಖವಾಗಿ ಕಂಡುಬರುತ್ತವೆ.

**ಇಲಿಗಳಲ್ಲಿ ಅನೇಕ ಜಾತಿಗಳಿವೆ : ಮನೆ ಇಲಿ -** ಇದು ಮನೆ, ಗೋದಾಮು, ಉಗ್ರಾಣ, ಹಡಗು ಮತ್ತು ರೇವುಗಳಲ್ಲಿ ವಾಸಿಸುವುದರಿಂದ ಇದನ್ನು ಮನೆಇಲಿ, ಊರಿಲಿ ಎಂದೂ ಕರೆಯುತ್ತಾರೆ. ಇದರ ಬಣ್ಣ ಕಪ್ಪು. ಮನೆಇಲಿಗಳು ಮಹಡಿ ಮನೆಗಳಲ್ಲೂ ವಾಸಿಸುತ್ತವೆ. ಹುಲ್ಲು, ಛಾವಣಿಯಮಾಡು, ಹುಲ್ಲಿನಪದರಗಳು ಮಣ್ಣಿನ ಗೋಡೆಗಳು ಇತ್ಯಾದಿಗಳನ್ನು ಕೊರೆದು ಪ್ರವೇಶಿಸುತ್ತವೆ. ಸ್ವಾಭಾವಿಕವಾಗಿ ಇವುಗಳಿಗೆ ಮೇಲೆ ಹತ್ತುವ ಸಾಮರ್ಥ್ಯ ಇರುವುದರಿಂದ ಇವುಗಳ ವಾಸಕ್ಕೆ ಬಿಲಗಳು ಬೇಕಿಲ್ಲ. ಕಟ್ಟಡಗಳ ಮಾಡು, ಗೋಡೆಗಳಲ್ಲಿರುವ ಸಂದುಗಳು, ರಂಧ್ರಗಳು ಮರದ ಪೊಟರೆಗಳು, ಪೆಟ್ಟಿಗೆಗಳು, ಡಬ್ಬಗಳು, ಮೂಟೆಗಳು ಹುಲ್ಲಿನ ರಾಶಿ ಮೊದಲಾದ ಕಡೆ ಗೂಡು ಕಟ್ಟಿ ವಾಸಿಸುತ್ತವೆ. ಕೆಲವು ಸಲ ಈ ಜಾತಿಯ ಇಲಿಗಳು ಬಿಲ ತೋಡಿದರೂ ಅದು ಆಳವಿರುವುದಿಲ್ಲ. ಇವು ನೀರಿನಲ್ಲಿ ಈಜು ಬಲ್ಲವು.

**ಸಣ್ಣ ಜಾತಿಯ ಹೆಗ್ಗಣ :** ಮನೆ ಇಲಿಗಿಂತ ದೊಡ್ಡದು. ಮನೆ ಸುತ್ತಮುತ್ತ ಊರಿನ ಆಜು ಬಾಜು ಇವುಗಳ ವಾಸ. ಸಮಯ ಬಂದರೆ ಗಂಟೆಗಟ್ಟಲೆ ನೀರಿನಲ್ಲಿ ಈಜ ಬಲ್ಲ ಚುರುಕು ಪ್ರಾಣಿ. ಬತ್ತದ ಕಾಂಡ, ತೆನೆ, ಪೈರು, ಹುಲ್ಲುಗೆಡ್ಡೆ, ತರಕಾರಿಗಳು, ಹಣ್ಣುಗಳು, ಏಡಿ, ಬಸವನಹುಳು ಇತ್ಯಾದಿ ಇವುಗಳ ಆಹಾರ. ಬತ್ತ ಮತ್ತು ರಾಗಿಯ ತೆನೆಯನ್ನು ಕಡಿದು ಬಿಲ ತುಂಬುವುದರಲ್ಲಿ ನಿಸ್ಸೀಮ. ಇದರ ದೇಹದ ಬಣ್ಣ ಕಡುಕಂದು ಅಥವಾ ನಸುಕೆಂಪು. ಕೆಳಭಾಗ ಕಂದುಮಿಶ್ರಿತ ಬಿಳಿಬಣ್ಣ, ಬಾಲ ಕಪ್ಪು, ಗಿಡ್ಡತಲೆ. ಬಿಲವನ್ನು ಕೊರೆಯುವುದು ಇದಕ್ಕೆ ಪ್ರೀತಿಯ ಕೆಲಸ.

ಎಲ್ಲಿ ಹೆಚ್ಚು ಆಹಾರ ಮತ್ತು ನೀರು ಸಿಗುವುದೋ ಅಲ್ಲಿ ಅಧಿಕ ಸಂಖ್ಯೆಯಲ್ಲಿ ಬಿಲಗಳನ್ನು ತೋಡುತ್ತದೆ. ಒಂದು ಬಿಲಕ್ಕೆ ನಾಲ್ಕೈದು ದ್ವಾರಗಳಿರುತ್ತವೆ. ಬಿಲದ ಒಳಗೆ ವಿಶಾಲವಾದ ಎರಡೋ, ಮೂರೋ, ಗೂಡುಗಳನ್ನು ಮಾಡಿಕೊಳ್ಳುತ್ತದೆ. ಹೊಲದಲ್ಲಿ ತೆನೆ ಬಲಿಯುತ್ತಿರುವಂತೆ ಇವುಗಳ ಹಾವಳಿ ಹೆಚ್ಚಾಗುತ್ತದೆ. ಕತ್ತರಿಸಿದ ತೆನೆಗಳನ್ನು ಬಿಲದೊಳಗಿನ ಗೂಡುಗಳಲ್ಲಿ ತಂದು ತುಂಬುತ್ತವೆ. ಸಾಕಷ್ಟು ಮರಿಗಳನ್ನು ಮಾಡುತ್ತವೆ.

**ಮೃದುರೋಮದ ಇಲಿ :** ಇವುಗಳ ವಾಸ ಹೊಲಗಳಲ್ಲಿ. ಮೈಮೇಲೆ ಅತಿನುಣುಪಾಗಿರುವ ರೋಮಗಳಿರುತ್ತವೆ. ಜೋಡಿಯಾಗಿ ಅಥವಾ ಸಣ್ಣ ಗುಂಪುಗಳಾಗಿ ಜೀವಿಸುವುದು ಇವುಗಳ ಸ್ವಭಾವ. ಎಲ್ಲ ಇಲಿಗಳಿಗಿಂತ ಅತಿ ಚುರುಕು. ಈ ಜಾತಿಯ ಇಲಿ ಯಾವುದಾದರೂ ಸದ್ದು ಕಿವಿಗೆ ಬಿದ್ದರೆ ಹೊರ ಬರದಂತೆ ಇದ್ದು ಬಿಡುತ್ತವೆ. ಮೃದುವಾದ ಕಾಂಡ, ದವಸ ಧಾನ್ಯಗಳು, ಗಡ್ಡೆ ಗೆಣಸು ಮತ್ತು ಹುಲ್ಲಿನ ಬೇರುಗಳು ಇವುಗಳ ಆಹಾರ. ಇವುಗಳ ವಿಶೇಷವೆಂದರೆ ಬಿಲಗಳಲ್ಲಿ ಆಹಾರವನ್ನು ಶೇಖರಿಸುವುದಿಲ್ಲ. ಮುಂಭಾಗದ ಎರಡು ಕೈಗಳಿಂದ ಆಹಾರವನ್ನು ಇಣಚಿಯಂತೆ ತಿನ್ನುತ್ತವೆ.

ಇವುಗಳ ದೇಹ ಚಿಕ್ಕದು. ಕಿವಿಗಳು ದೊಡ್ಡವು. ಕಿವಿಗಳ ಮೇಲೆ ಈ ರೋಮಗಳಿರುತ್ತವೆ. ದೇಹದ ಬಣ್ಣ ಕಂದು, ಕೆಳಭಾಗ ನಸು ಬೂದು, ಕಾಲುಗಳ ಬಣ್ಣ ಬಿಳಿ. ಇವು ಹೊಲಗಳಲ್ಲಿ, ದಂಡೆ, ಪೊದರು, ಕಲ್ಲು ಸಂದುಗಳು, ಗೋಡೆಯ ಬಿರುಕುಗಳು, ಚಪ್ಪಡಿಗಳ ಕೆಳಭಾಗ ಹುಲ್ಲಿನ ಮೆದೆಗಳಲ್ಲಿ ಬಿಲಗಳನ್ನು ಮಾಡುತ್ತವೆ. ಬಿಲದ ಸುತ್ತ ಸಣ್ಣ ಸಣ್ಣ ಕಲ್ಲುಗಳನ್ನು ಜೋಡಿಸುವುದು ಇವುಗಳ ಸ್ವಭಾವ.. ಇದೇ ಕಲ್ಲುಗಳಿಂದ ಬಿಲದ ದ್ವಾರಗಳನ್ನು ಹಾವುಗಳು ಒಳಗೆ ಬರದಂತೆ ಮುಚ್ಚಿಡುವುದುಂಟು. ಬಿಲಕ್ಕೆ ಎರಡು ಮೂರು ದ್ವಾರಗಳಿದ್ದು ಕೆಲವು ದ್ವಾರಗಳು ಹೊರಗೆ ಕಾಣುವುದಿಲ್ಲ. ಬಿಲದ ಮೇಲೆ ಮುದ್ರೆಯಂತೆ ಸ್ವಲ್ಪ ಭಾಗವನ್ನು ಕೊರೆಯದೆ ಹಾಗೆ ಬಿಟ್ಟಿರುತ್ತವೆ. ಯಾವುದಾದರೂ ಆಪತ್ತು ಬಂದಾಗ ಈ ದ್ವಾರಗಳನ್ನು ಒಡೆದು ಹೊರಬರುತ್ತವೆ.

**ಸೊಂಡಿಲ ಇಲಿ (ಕಾಡು ಜಾತಿಯ ಇಲಿ) :** ಇವು ಇತರ ಜಾತಿಯ ಇಲಿಗಳಿಗಿಂತ ಗಾತ್ರದಲ್ಲಿ ದೊಡ್ಡವು. ಮೈಮೇಲೆ ತುಂಬ ರೋಮಗಳಿದ್ದು ಬೆನ್ನಿನ ಮೇಲೆ ಉದ್ದವಾದ ರೋಮಗಳ ಸಾಲುಗಳು ಇರುತ್ತವೆ. ಇವುಗಳಿಗೆ ಹೆಚ್ಚು ಧೈರ್ಯ. ಮನುಷ್ಯನ ಶಬ್ದ ಕೇಳಿದರೆ ಉದ್ರೇಕಗೊಂಡು ಹಿಂಗಾಲುಗಳಲ್ಲಿ ನಿಂತು ರೋಮವನ್ನು ನೆಟ್ಟಗೆ ಮಾಡಿ ಹಲ್ಲು ಕಿರಿದು ಶಬ್ದಮಾಡುತ್ತವೆ. ಸಾಮಾನ್ಯ ಹಳೇ ಮನೆಗಳ ಹಿತ್ತಿಲಲ್ಲಿ ಬಿಲಗಳನ್ನು ತೋಡಿ ರಾತ್ರಿ ಹೊತ್ತು ಮನೆಗಳನ್ನು ಪ್ರವೇಶಿಸುತ್ತವೆ.

ತೇವವಿರುವ ಸ್ಥಳಗಳಲ್ಲಿ ಹೆಚ್ಚಾಗಿ ಇವುಗಳ ವಾಸ. ಹೊಲಗದ್ದೆಗಳು, ತೋಟ, ಹುಲ್ಲುಗಾವಲು ಮತ್ತು ಬಂಜರು ಭೂಮಿಗಳಲ್ಲಿ ನೆಲೆಸಿರುತ್ತವೆ. ದವಸ ಧಾನ್ಯ, ಗಿಡಗಳ ಮೃದು ಕಾಂಡ, ಗಡ್ಡೆಗೆಣಸು, ಹುಲ್ಲು, ಗಡ್ಡೆ ತರಕಾರಿಗಳು, ಹಣ್ಣು ಹಂಪಲುಗಳು ಇವುಗಳ ಆಹಾರ. ಬಣ್ಣ ಕಡುಕಪ್ಪು ಮತ್ತು ಕಂದುಮಿಶ್ರಿತಬಿಳಿ. ಕಾಲುಗಳು ಬಿಳಿ ಬಣ್ಣದಾಗಿರುತ್ತವೆ.

**ವಾಸಸ್ಥಳಗಳು :** ಹೆಚ್ಚು ಇಲಿಗಳು ನಿಶಾಚರಿಗಳು. ಹಗಲೆಲ್ಲ ಬಿಲದಲ್ಲೇ ಇದ್ದು ಬಿಡುತ್ತವೆ. ಬಿಲಗಳನ್ನು ತೋಡಿರುವ ರೀತಿಯಿಂದ ಇಲಿಗಳ ಜಾತಿಗಳನ್ನು ಗುರುತಿಸಬಹುದು. ಮೂಲದ್ವಾರ ಮುಖ್ಯ ಪ್ರವೇಶದ್ವಾರ. ಒಳಗೆ ಹೋದಂತೆ ಅನೇಕ ಕವಲುಗಳಾಗಿ ಬೆಳೆಯುತ್ತದೆ. ಈ ಕವಲುಗಳಲ್ಲಿ ಕೆಲವು ಉಪದ್ವಾರಗಳು ದೂರದಲ್ಲಿ ಹೊರಗೆ ತೆರೆದಿರುತ್ತದೆ. ದ್ವಾರಗಳು ಹೆಚ್ಚಾದಷ್ಟು ಇಲಿಗಳ ಗುಂಪು ದೊಡ್ಡದಾಗಿರುತ್ತದೆ. ಹೀಗಿದ್ದರೆ ವೈರಿಗಳಿಂದ, ಹಾವು ಮುಂತಾದವುಗಳಿಂದ ತಪ್ಪಿಸಿಕೊಳ್ಳುವುದು ಸುಲಭ. ದ್ವಾರಗಳು ಬೇರೆ ಬೇರೆ ಭಾಗಗಳಲ್ಲಿ ತೆರೆದಿರುವುದರಿಂದ ಆಹಾರ ಸಂಗ್ರಹಣಾ ಕಾರ್ಯವು ಸುಲಭವಾಗುತ್ತದೆ. ಬಿಲಗಳ ಒಳಗೆ ಇದಕ್ಕಾಗಿ ಆಹಾರ ಶೇಖರಣ ಸ್ಥಳಗಳು, ಮರಿಗಳನ್ನು ಸಾಕುವ ಗೂಡುಗಳು ಪ್ರತ್ಯೇಕವಾಗಿರುತ್ತವೆ. ಮನೆಯಲ್ಲಿರುವ ಇಲಿಗಳು ಆಹಾರವಿರುವ ಕಡೆ ಸಣ್ಣ ಬಿಲವನ್ನು ಮಾಡಿಕೊಂಡಿರುತ್ತವೆ. ಮನೆಯೊಳಗಿನ ಮಂಚದ ಕೆಳಗೆ, ಮೂಟೆಗಳನ್ನು ಜೋಡಿಸಿಡುವ ಕಲ್ಲು ಮಂಚದ ಕೆಳಗೆ ಇವು ವಾಸಮಾಡುತ್ತವೆ. ಮಣ್ಣಿನ ಗೋಡೆಯಾದರೆ ಸಾಕಷ್ಟು ಮಣ್ಣಿನ ರಾಶಿ ಹೊರಗೆ ಕಾಣುತ್ತದೆ.

ಸಣ್ಣ ಜಾತಿಯ ಇಲಿ ಬೆಳೆದ ಪೈರಿನ ಮಧ್ಯೆ ಬಿಲ ಮಾಡುತ್ತವೆ. ತೇವವಿರುವ ಕಡೆ ಮೃದು ಮಣ್ಣನ್ನು ಬಿಲಗಳ ರಚನೆಗೆ ಆಯ್ಕೆ ಮಾಡಿಕೊಳ್ಳುತ್ತವೆ. ಕೆಲವು ಬಿಲಗಳು ಮೂರು ನಾಲ್ಕು ಅಡಿ ಆಳವೂ ಮೂವತ್ತರಿಂದ ಐವತ್ತು ಅಡಿ ಉದ್ದವಾಗಿಯೂ ಇರುತ್ತವೆ. ಬಾವಿ ಕಟ್ಟೆ, ಕೆರೆ ಕಟ್ಟೆ, ಮಣ್ಣಿನ ದಿಬ್ಬಗಳಲ್ಲಿ ವಾಸ ಮಾಡಲು ಇಲಿಗಳಿಗೆ ಯೋಗ್ಯ ಸ್ಥಳಗಳು. ಕೆಲವು ಕಡೆ ಕೂಲಿ ಆಳುಗಳನ್ನಿಟ್ಟು ಇಲಿಗಳನ್ನು ಹಿಡಿಸುವುದಿದೆ. ಇವುಗಳ ಉಪಟಳ ಅಂತಹುದು. ಗಂಡು ಮತ್ತು ಹೆಣ್ಣು ಇಲಿಗಳು ಪ್ರತ್ಯೇಕವಾಗಿ ವಾಸಿಸುತ್ತವೆ. ಈ ಜಾತಿಯ ಇಲಿಗಳ ಒಂದು ವಿಶಿಷ್ಟ ಗುಣ ಬಿಲದ ದ್ವಾರ ಯಾವಾಗಲೂ ತೆರೆದಿದ್ದು, ಹೊಸ ಮಣ್ಣು, ತಿಂದುಳಿದ ಕಾಳುಗಳು, ವಿಸರ್ಜಕ ಮೊದಲಾದವುಗಳಿಂದ ಮುಚ್ಚಿರುತ್ತವೆ. ಮುಖ್ಯ ದ್ವಾರದ ಸ್ವಲ್ಪ ದೂರದಲ್ಲಿಯೇ ಬಿಲವು 4-5 ಕವಲುಗಳಾಗಿ ಒಡೆಯುತ್ತದೆ.

**ಸಂತಾನಾಭಿವೃದ್ಧಿ :** ಇಲಿಗಳ ಸಂತಾನೋತ್ಪತ್ತಿ ತ್ವರಿತ ಗತಿಯಿಂದ ನಡೆಯುತ್ತದೆ. ಸಾಕಷ್ಟು ಆಹಾರ, ವಾಸಯೋಗ್ಯ ಸ್ಥಳ, ಒಳ್ಳೆಯ ಹವಾಗುಣವಿದ್ದರೆ ಇಲಿಗಳ ಸಂತಾನಾಭಿವೃದ್ಧಿ ಇನ್ನೂ ಹೆಚ್ಚಾಗಿ ನಡೆಯುತ್ತದೆ. ವರ್ಷದಲ್ಲಿ ಯಾವ ಕಾಲದಲ್ಲಾದರೂ ಸಂತಾನ ನಡೆಯಬಹುದು. ಇಲಿ ಮರಿ ಹಾಕಿದ ಮೂರು - ನಾಲ್ಕು ತಿಂಗಳಲ್ಲಿ ಮರಿ ದೊಡ್ಡದಾಗಿ ಮರಿ ಹಾಕಲು ತಯಾರಾಗುತ್ತದೆ. ಇವುಗಳ ಸರಾಸರಿ ಆಯಸ್ಸು ಆರು ತಿಂಗಳಾಗಿದ್ದರೂ, ಇಲಿ ಮೂರು ವರ್ಷದವರೆಗೆ ಜೀವಿಸಬಲ್ಲದು. ಎರಡರಿಂದ ಮೂರು ತಿಂಗಳ ಅವಧಿಯಂತೆ ವರ್ಷಕ್ಕೆ ನಾಲ್ಕ ರಿಂದ ಆರುಸಲ ಮರಿಗಳನ್ನಿಡುತ್ತದೆ. ಪ್ರತಿಯೊಂದು ಸಲ ಒಂದು ಹೆಣ್ಣು ಐದರಿಂದ ಹತ್ತು ಮರಿಗಳನ್ನಿಡಬಲ್ಲದು. ಒಂದು ಅಂದಾಜಿನ ಪ್ರಕಾರ ಒಂದು ಜೋಡಿ ಇಲಿ ಒಂದು ವರ್ಷದಲ್ಲಿ 50 ರಿಂದ 60 ಇಲಿಗಳನ್ನಿಡಬಲ್ಲದು. ಮರಿಗಳು ಹುಟ್ಟಿದಾಗ ಕೆಂಪಾಗಿದ್ದು ಮೈಮೇಲೆ ರೋಮಗಳಿರುವುದಿಲ್ಲ. ಕಣ್ಣುಗಳು ಮುಚ್ಚಿರುತ್ತವೆ. ಇಲಿ ಸಸ್ತನಿ ಜಾತಿಗೆ ಸೇರಿದ್ದಾಗಿದ್ದು ಮರಿಗಳಿಗೆ ಹಾಲು ಕೊಟ್ಟು ಸಾಕುತ್ತದೆ.

**ಇಲಿಗಳ ಹತೋಟಿ :** ರೈತನ ವೈರಿಗಳಾದ ಇವುಗಳ ಹತೋಟಿ ತುಂಬಾ ಕಷ್ಟ. ಆದರೂ ಇವುಗಳ ನಿಯಂತ್ರಣಕ್ಕಾಗಿ ಕೆಲವು ಕ್ರಮಗಳನ್ನು ರೈತ ಕಂಡು ಕೊಂಡಿದ್ದಾನೆ. ಇಲಿಗಳು ಬರದಂತೆ ಮಾಡುವುದು, ಇಲಿಗಳನ್ನು ನಾಶ ಮಾಡುವುದು.

**ಇಲಿಗಳು ಬರದಂತೆ ಮಾಡುವುದು :** ಇದಕ್ಕೆಂದು ಸಾಕು ಪ್ರಾಣಿಗಳನ್ನು ಮತ್ತು ಇಲಿಗಳ ಸ್ವಾಭಾವಿಕ ಶತ್ರುಗಳನ್ನು ಉಪಯೋಗಿಸುವುದು. ಮೊದಲನೆಯದು ಬೆಕ್ಕುಗಳನ್ನು ಮನೆಗಳಲ್ಲಿ ಸಾಕುವುದು. ಬೆಕ್ಕಿಗೆ ಇಲಿಯ ಆಹಾರವೆಂದರೆ ಪಂಚಪ್ರಾಣ. ಅದು ಇಲಿಗಳನ್ನು ಕೊಂದು ತಿನ್ನುವುದರಿಂದ ಅವು ಬೆಕ್ಕಿಗೆ ಭಯಪಟ್ಟು ಬೆಕ್ಕಿರುವ ಕಡೆ ವಾಸಿಸದೆ ದೂರ ಸರಿಯುತ್ತವೆ. ನಾಯಿಗಳು ಸಹ ಮನೆಯ ಇಲಿಗಳನ್ನು ಹಿಡಿದು ತಿನ್ನುತ್ತವೆ. ಬೆಕ್ಕು ನಾಯಿಗಳಲ್ಲದೆ ಗಿಡುಗ, ಗೂಬೆ ಮೊದಲಾದ ಪಕ್ಷಿಗಳು, ಹಾವು, ಮುಂಗುಸಿ, ಮುಳ್ಳುಹಂದಿ, ಮೊದಲಾದ ಪ್ರಾಣಿಗಳೂ ಇಲಿಯ ಶತ್ರುಗಳು.

ಇಲಿಗಳನ್ನು ಬೇಟೆಯಾಡಲು ಅನುಕೂಲವಾಗಲೆಂದು ಹೊಲಗಳಲ್ಲಿ ಅಲ್ಲಲ್ಲಿ ಕೋಲುಗಳನ್ನು ನೆಡುವುದು. ನೆಟ್ಟ ಕೋಲುಗಳ ಮೇಲೆ ಗೂಬೆಗಳು ರಾತ್ರಿವೇಳೆ ಕುಳಿತು ಹೊಂಚು ಹಾಕಿ ಬಿಲದಿಂದ ಹೊರ ಬರುವ ಇಲಿಗಳನ್ನು ಸುಲಭವಾಗಿ ಹಿಡಿದು ತಿನ್ನುತ್ತದೆ.

**ಆಹಾರದ ವಸ್ತುಗಳನ್ನು ಇಲಿಗಳಿಗೆ ಸಿಗದಂತೆ ಇಡುವುದು :** ಇದು ಎಲ್ಲಾ ಸಂದರ್ಭಗಳಲ್ಲೂ ಅನುಸರಿಸಲು ಸಾಧ್ಯವಿಲ್ಲ. ಆದರೆ ಕೆಲವು ಸನ್ನಿವೇಶಗಳಲ್ಲಿ ಈ ಕೆಲಸ ಮಾಡುವುದು ಸುಲಭ. ಉದಾಹರಣೆಗೆ ಮನೆಯಲ್ಲಿ ಅಡುಗೆ ಕೋಣೆಯಲ್ಲಿ ಇರುವ ಆಹಾರ ವಸ್ತುಗಳನ್ನು, ಆಹಾರ ಪದಾರ್ಥಗಳಿರುವ ಪಾತ್ರೆ ಮತ್ತು ಡಬ್ಬಿಗಳನ್ನು ಮುಚ್ಚಿಡುವುದು.

**ಮನೆ ಮತ್ತು ಗೋದಾಮುಗಳ ನೈರ್ಮಲ್ಯ :** ಇಲಿಗಳ ಹಾವಳಿ ಹೆಚ್ಚಾಗಿರುವ ಸ್ಥಳಗಳಲ್ಲಿ ಸುತ್ತಲ ಪರಿಸರವನ್ನು ಶುದ್ಧವಾಗಿಡಬೇಕು. ಕಸ ಕಡ್ಡಿ ತುಂಬಿದ ಹೊಲಸು ಮತ್ತು ಕತ್ತಲೆ ಪ್ರದೇಶಗಳಲ್ಲಿ ಇಲಿಗಳು ಅಧಿಕ ಸಂಖ್ಯೆಯಲ್ಲಿರುತ್ತವೆ. ಹೊಲಸು ಇಲ್ಲದಂತೆ ಮನೆ, ಉಗ್ರಾಣ, ಅಂಗಡಿ, ಮಳಿಗೆ ಇತ್ಯಾದಿಗಳನ್ನು ಶುಚಿಯಾಗಿಟ್ಟು ಕೊಳ್ಳುವುದರಿಂದ ಇಲಿಗಳ ವಾಸಕ್ಕೆ ಎಡೆಯಿಲ್ಲದಾಗಿ, ಸಂತಾನವೃದ್ಧಿಗೆ ಅವಕಾಶವಿರುವುದಿಲ್ಲ. ರಸ್ತೆ ಬದಿಯ ಕಸ ಕಡ್ಡಿ ಹೊಲಸು ಪದಾರ್ಥಗಳು ಇಲಿಗಳಿಗೆ ಅನುಕೂಲಸ್ಥಳಗಳಾಗಿವೆ. ಅಂತಹ ಸ್ಥಳಗಳನ್ನು ಆಗಾಗ ಶುದ್ಧ ಮಾಡಬೇಕು. ಇಲ್ಲವೆ ಇಲಿಗಳು ಪ್ರವೇಶಿಸದಂತೆ ಮುಚ್ಚಿಡಬೇಕು.

**ಇಲಿ ಪ್ರತಿಬಂಧಕ ಕಟ್ಟಡಗಳ ರಚನೆ :** ಗೋದಾಮು ಮತ್ತು ಕಟ್ಟಡಗಳ ರಚನೆಯು ದೀರ್ಘಕಾಲದ ಯೋಜನೆ ಮತ್ತು ಹೆಚ್ಚು ಪ್ರಯೋಜನಕಾರಿ. ಇಲಿಗಳ ಪ್ರತಿಬಂಧಕ. ಇಲಿಗಳು ತುಂಬ ಚುರುಕು ಪ್ರಾಣಿಗಳಾಗಿದ್ದು ಕಟ್ಟಡವನ್ನು ಯಾವ ಮೂಲೆಗಳಲ್ಲಾದರೂ ಪ್ರವೇಶ ಮಾಡಬಲ್ಲವು. ಚರಂಡಿಗಳು, ಗೋಡೆಯ ಬಳಿಯಿರುವ ಪೈಪುಗಳು, ಸರಿಯಾಗಿ ಮುಚ್ಚದ ಕಿಟಕಿ ಬಾಗಿಲುಗಳು, ಕಿರು ಕಿಟಕಿ ದ್ವಾರಗಳು, ಇವೆಲ್ಲ ಇಲಿಗಳು ಕಟ್ಟಡಗಳನ್ನು ಪ್ರವೇಶಿಸಲು ಇರುವ ರಹದಾರಿಗಳು. ಗೋಡೆ ಅಥವಾ ಕಟ್ಟಡಗಳ ತಳ ಕೊರೆದು ಅಥವಾ ಕಟ್ಟಡಗಳ ಸಮೀಪವಿರುವ ಮರದ ಕೊಂಬೆ, ಟೆಲಿಫೋನ್ ಕಂಬಗಳಿಂದಲೂ ಇಲಿಗಳು ಪ್ರವೇಶವನ್ನು ಮಾಡಬಹುದು. ಆಹಾರವನ್ನು ಸಾಗಿಸುವ ವಾಹನಗಳಲ್ಲೂ ಮೂಟೆಗಳ ಮಧ್ಯೆ ಅಥವಾ ಇತರ ವಸ್ತುಗಳೊಂದಿಗೆ ಅರಿವಿಗೆ ಬರದಂತೆ ಕಟ್ಟಡದ ಒಳಗೆ ಬಂದು ಬಿಡುತ್ತವೆ.

ಕಟ್ಟಡಗಳ ತಳಪಾಯವನ್ನು ಸಿಮೆಂಟನಿಂದ ನಿರ್ಮಿಸಬೇಕು ಮತ್ತು ಕಟ್ಟದ ಕೆಳಭಾಗದ ಐದು ಅಡಿಗಳವರೆಗಾದರೂ ಕಾಂಕ್ರೀಟ್ ಶುದ್ಧವಾಗಿ ಮಾಡಬೇಕು. ಆಗ ಇಲಿಗಳು ಒಳ ಸೇರದಂತೆ ಸ್ವಲ್ಪ ಮಟ್ಟಿಗಾದರೂ ತಡೆಯಬಹುದು.

### ಇತರ ವಿಧಾನಗಳು

**1. ಇಲಿಗಳನ್ನು ಕೊಲ್ಲುವುದು :** ಪ್ರಜ್ವಲಿಸುವ ಬೆಳಕನ್ನು ಇಲಿಗಳ ಮೇಲೆ ರಾತ್ರಿ ವೇಳೆ ನೇರವಾಗಿ ಬಿಟ್ಟರೆ ಕಣ್ಣು ಕಟ್ಟಿದಂತಾಗಿ ಚಲಿಸದೆ ನಿಂತು ಬಿಡುತ್ತವೆ. ಇಲ್ಲವೆ ನೇರವಾಗಿ ಬೆಳಕಿನ ಕಡೆಗೆ ನೋಡುತ್ತವೆ. ಈ ಸಂದರ್ಭದಲ್ಲಿ ಇಲಿಗಳನ್ನು ಕೊಲ್ಲುವುದು ಸುಲಭ. ಬೇಲಿಗಳಲ್ಲಿ ರಾತ್ರಿ ವೇಳೆ ಆಹಾರಕ್ಕಾಗಿ ಹೊರ ಬಂದಿರುವ ಇಲಿಗಳಿಗೆ ಒಂದು ಮೂಲೆಯಲ್ಲಿ ಬಲೆಯನ್ನು ಕಟ್ಟಿ ಮತ್ತೊಂದು ಬದಿಯಿಂದ ಕೋಲುಗಳಿಂದ ಶಬ್ದ ಮಾಡಿ ಬೇಲಿಯನ್ನು ಅಲುಗಾಡಿಸಿದರೆ ಇಲಿಗಳು ಬಲೆಗೆ ಬಂದು ಬೀಳುತ್ತವೆ.

**2. ಬಿಲಗಳನ್ನು ಅಗೆಯುವುದು :** ಹೊಲಗದ್ದೆಗಳ ಅಂಚುಗಳಲ್ಲಿ ಹೆಚ್ಚಾಗಿ ವಾಸಮಾಡುವ ಇಲಿಗಳು ಅಲ್ಲಿಯೇ ವಂಶಾಭಿವೃದ್ಧಿ ಮಾಡುತ್ತವೆ. ಹೊಲದ ಅಂಚುಗಳಲ್ಲಿರುವ ಬಿಲಗಳನ್ನು ಬೆಳೆಕೊಯ್ಲು ಮುಗಿಯುತ್ತಿದ್ದಂತೆ ಅಗೆದು ಇಲಿಗಳನ್ನು ಕೊಲ್ಲಬಹುದು. ಬಿಲದಲ್ಲಿಯ ತೆನೆಗಳನ್ನು ಸಂಗ್ರಹಿಸಬಹುದು. ಇಲಿಯನ್ನು ಹಿಡಿಯುವವರು ಇಲಿಗಳ ಹಿಕ್ಕೆಗಳಿಂದಲೂ ತರಬೇತಿ ನೀಡಿದ ನಾಯಿಗಳ ಸಹಾಯದಿಂದಲೂ ಇಲಿಗಳ ಮೂಲಗಳನ್ನು ಪತ್ತೆ ಮಾಡಿ ಕೊಲ್ಲುತ್ತಾರೆ.

**3.** ಆಹಾರಕ್ಕಾಗಿ ಇಲಿಗಳನ್ನು ಬೇಟೆಯಾಡಿ ಉಪಯೋಗಿಸುವವರು ಇದ್ದಾರೆ. ಅವರಿಂದಲೂ ಸ್ವಲ್ಪ ಮಟ್ಟಿನ ಇಲಿಗಳ ನಿಯಂತ್ರಣವಾಗುತ್ತದೆ.

**4. ವಿಷ ವಸ್ತುಗಳನ್ನಿಟ್ಟು ಕೊಲ್ಲುವುದು :** ಇಲಿಗಳಿಗೆ ಇಡುವ ವಿಷಕಾರಿಯಾದ ವಸ್ತುಗಳನ್ನು 'ಇಲಿನಾಶಕ' ಎಂದು ಕರೆಯುತ್ತಾರೆ. ಇಲಿಗಳನ್ನು ವಿಷಪದಾರ್ಥಗಳ ಉಪಯೋಗದಿಂದ ಕೊಲ್ಲುವ ಕ್ರಮವು ಬೇಗನೆ ಕೆಲಸ ಮಾಡುತ್ತದೆ. ಇಲಿಗಳಿಗೆ ವಿಷ ಮಿಶ್ರಿತ ಆಹಾರವನ್ನಿಟ್ಟು ಕೊಲ್ಲುವುದು ಎಲ್ಲಾ ಕ್ರಮಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾದುದು.

ಇಲಿಗಳು ಯಾವಾಗಲೂ ಅಡ್ಡಾಡುವ ದಾರಿಯಲ್ಲಿ ಹೊಸ ವಸ್ತುವನ್ನು ಕಂಡರೆ ಬೇಗನೆ ಮುಟ್ಟುವುದಿಲ್ಲ. ಮೂಸುವುದೂ ಇಲ್ಲ. ಆದ್ದರಿಂದ ವಿಷ ಮಿಶ್ರಿತ ಆಹಾರವನ್ನು ಒಮ್ಮೆಗೆ ಇಲಿಗಳ ಬಿಲದಲ್ಲಿ ಅಥವಾ ಸಂಚರಿಸುವ ದಾರಿಯಲ್ಲಿ ಇಟ್ಟರೆ ಅವು ಮುಟ್ಟದೇ ಇರಬಹುದು. ಸ್ವಲ್ಪ ದಿನ ಇಲಿಗಳಿಗೆ ರೂಢಿಯಾಗುವಂತೆ ವಿಷ ಮಿಶ್ರ ಮಾಡದ ಆಕರ್ಷಕ ಆಹಾರವನ್ನು ಇಡುವುದು ಅಗತ್ಯ. ಇದನ್ನು ಹಲವು ಕಡೆ ಇಡಬೇಕು. ವಿಷ ಮಿಶ್ರಿತ ಆಹಾರವನ್ನಿಡುವಾಗ ಇತರ ಪದಾರ್ಥಗಳು ಇಲಿಗೆ ಸಿಗದಂತೆ ಎಚ್ಚರ ವಹಿಸಬೇಕು. ಎರಡು ಮೂರು ತರಹ ಆಹಾರವನ್ನಿಟ್ಟರೆ ಇಲಿಗೆ ಯಾವುದು ಹೆಚ್ಚು ಆಕರ್ಷಕ ಎನಿಸುತ್ತದೆಯೋ ಅದನ್ನೇ ಮೊದಲು ತಿನ್ನುತ್ತದೆ. ಅಂಥ ಆಹಾರವನ್ನು ವಿಷ ಹಾಕಲು ಉಪಯೋಗಿಸಬೇಕು. ಚಿಕ್ಕ ಪ್ರಮಾಣದಲ್ಲಿ ಹಲವು ಕಡೆ ಔಷಧಿ ಇಟ್ಟರೆ ಹೆಚ್ಚು ಇಲಿಗಳು ಏಕ ಕಾಲಕ್ಕೆ ಸಾಯುತ್ತವೆ.

*ವಿ. ಆರ್. ಬಿ.*

**ಬೆಳೆ ಬಾಧಿಸುವ ಹುಳುಗಳು** ಬೆಳೆಯ ಶತೃಗಳಾದ ಹುಳು - ಹುಪ್ಪಟೆಗಳ ಉಗಮ ನಾಶ ಇವುಗಳ ಬಗೆಗೆ ಕಥೆಯೊಂದು ಹೀಗಿದೆ : ದ್ವಾಪರಯುಗದಲ್ಲಿ ಪಾಂಡವರು ಧರ್ಮದ ದಾರಿಯಲ್ಲಿ ನಡೆಯುತ್ತಾ, ಅಧರ್ಮದ ವಿರುದ್ಧ ಹೋರಡುತ್ತಾ ಬಂದರು. ಆದ ಕಾರಣದಿಂದಲೇ ಅವರು ತಮ್ಮ ಬದುಕಿನುದ್ದಕ್ಕೂ ನಾನಾ ರೀತಿಯ ಬವಣೆಗಳಿಗೆ ಒಳಗಾದರು. ವನವಾಸ ಅಜ್ಞಾತವಾದ ಅನುಭವಿಸಿದರು. ಹೀಗಾಗಿ ಸಹಜವಾಗಿಯೇ ಆ ಕಾಲದ ಜನ ಸಾಮಾನ್ಯರ ಮನಸ್ಸಿನಲ್ಲಿ ನೊಂದವರ ಪರವಾದ ನೋವುಗಳು ಬೆಳೆದು ಪಾಂಡವರು ಜನಪ್ರಿಯರಾದರು. ಇಂತಹ ಜನಪ್ರಿಯರಾದ ಪಾಂಡವರು ಕೊನೆಗೆ ಸ್ವರ್ಗಾರೋಹಣ ಮಾಡುವಾಗ ಜನರೆಲ್ಲ ಕಣ್ಣೀರುಡುತ್ತಾ ಅವರ ಹಿಂದೆ ಬಿದ್ದರು ತಡೆದರು, ಇಲ್ಲೇ ಉಳಿಯಬೇಕೆಂದು ಒತ್ತಾಯಿಸಿದರು. ಆಗ ಧರ್ಮರಾಯ ಜನರಿಗೆ ಸಾಂತ್ವನ ಹೇಳಿದ, ಸಮಯ ಬಂದಾಗ ಎಲ್ಲರೂ ಇಹಲೋಕ ಬಿಟ್ಟು ಪರಲೋಕಕ್ಕೆ ಹೋಗಲೇ ಬೇಕು ಎಂದು. ಆಗ ಜನ ನಮ್ಮನ್ನು ಕಾಪಾಡುವವರು ಯಾರು? ಲೋಕದಲ್ಲಿ ಧರ್ಮ ಉಳಿಯುವುದು ಹೇಗೆ? ಇತ್ಯಾದಿ ಪ್ರಶ್ನೆಗಳನ್ನು ಕೇಳ ತೊಡಗಿದರು. ಧರ್ಮರಾಯ ನೋಡಿ... ನಾವು ಸ್ವರ್ಗದಲ್ಲಿದ್ದರೂ ನಮ್ಮ ಸತ್ಯ, ನ್ಯಾಯ, ಧರ್ಮದ ಫಲವೆಲ್ಲ ನಿಮ್ಮೊಂದಿಗೇ ಇರುತ್ತದೆ. ನಾವು, ನಿಮ್ಮನ್ನು ಅಲ್ಲಿಂದಲೇ ನೋಡುತ್ತಾ ಸಂತೋಷವಾಗಿ ಇರುತ್ತೇವೆ. ನಿಮ್ಮ ಕಷ್ಟ - ನಷ್ಟ, ಆಗು - ಹೋಗುಗಳಿಗೆ ನಾವು ಅಲ್ಲಿಂದಲೇ ಆಗುತ್ತೇವೆ ಎಂದ. ಜನ ನಂಬುಗೆ ಏನು ? ಎಂದರು. ಆಗ ಧರ್ಮರಾಯ ತನ್ನಲ್ಲಿದ್ದ ಕೆಲವು ಬೀಜಗಳನ್ನು ಕೊಟ್ಟು 'ಇದನ್ನು ನೀವು ನಿಮ್ಮ ಹೊಲಗಳಲ್ಲಿ ಬಿತ್ತಿರಿ, ಬೆಳೆ ಬಂದು ಹೂ, ಕಾಯಿ ನಗುನಗುತ್ತಾ ಇದ್ದರೆ, ಅಲ್ಲಿ ನಾವೂ ನಗು ನಗುತ್ತಾ ಇರುವುದಲ್ಲದೆ, ನಮ್ಮ ಸತ್ಯ, ಧರ್ಮದ ಮೂಲಕ ಇಲ್ಲೇ ನಿಮ್ಮೊಂದಿಗೇ ಇದ್ದೇವೆ ಎಂದು ತಿಳಿಯಿರಿ' ಎಂದು ಹೇಳಿದ. ಜನ ಇವನ್ನು ಬಿತ್ತಲು ಮಳೆ ಬರಬೇಕಲ್ಲಾ ಎಂದರು. ಅದಕ್ಕೆ ಧರ್ಮರಾಯ 'ನಾವು ಸ್ವರ್ಗಕ್ಕೆ ಹೋದ ಮೇಲೆ ಭೀಮ ಅರ್ಜುನ ನೇಗಿಲು ಹೂಡಿ ಹೊಡೀತಾರೆ. ದ್ರೌಪದಿ ಮಳೆ ಬಿತ್ತುತ್ತಾಳೆ. ಎಂದ. ಅದರಂತೆ ಮಳೆ ಬಂತು. ಜನ ಬೀಜ ಬಿತ್ತಿದರು. ಗಿಡ ಹುಟ್ಟಿ ಹೂ ಬಿಟ್ಟು ಕಾಯಿ ಕಚ್ಚಿತು. ಆಗ ಜನ ಓ ಹೋ ಪಾಂಡವರು 'ಅವರೆ' ಎಂದು ಕೊಡರು. ಅಂದಿನಿಂದ ಆ ಗಿಡಗಳೇ 'ಅವರೆ' ಗಿಡಗಳಾದವು.

ಈ ವಿಷಯ ಸ್ವರ್ಗದಲ್ಲಿದ್ದ ಕೌರವರಿಗೆ ತಿಳಿಯಿತು. 'ಎಲಾ...! ಪಾಂಡವರು ಸ್ವರ್ಗಕ್ಕೆ ಬಂದ ಮೇಲೂ ಜನರ ಮನಸಲ್ಲಿ ಉಳಿಯೋದಕೆ ಈಥರಾ ವ್ಯವಸ್ಥೆ ಮಾಡಿ ಬಿಟ್ರಲ್ಲಾ...' ಅಂತ ಹೇಳಿ, ಅವರೆ ಮತ್ತು ಪಾಂಡವರ ಅಭಿಮಾನಿಗಳಾದ ಜನರ ಇತರ ಬೆಳೆಗಳಿಗೆ ನೂರೊಂದು ಜನಾನೂ ನೂರೊಂದು ಜಾತಿ ಹುಳುಗಳಾಗಿ ಹುಟ್ಟಿ ಅವರನ್ನು ನಾಶ ಮಾಡ್ತೀವಿ ಅಂತ ಶಪಥ ಮಾಡಿದರು. ಆವತ್ತಿನಿಂದಲೇ ಕೌರವರು ನೂರೊಂದು ಜಾತಿಯ ಹುಳುಗಳಾಗಿ ಭೂಮಿ ಮೇಲೆ ಹುಟ್ಟಿದರು. ಜನರ ಬೆಳೆಗಳನ್ನೆಲ್ಲಾ ತಿಂದು ನಾಶ ಮಾಡೋದುಕ್ಕೆ ಶುರು ಮಾಡಿದರು. ಈ ವಿಷಯ ತಿಳಿದ ಧರ್ಮರಾಯ ವಿಷಾತಿ ಮಳೆ ಹುಯ್ಸಿ ಅವುನ್ನ ಕೊಲ್ಲೋಕೆ ವ್ಯವಸ್ಥೆಮಾಡಿದ್ದಾನೆ. ಆದ್ರೆ ದುಷ್ಟ ಕೌರವರು, ದುಷ್ಟ ಮಾನವರು ಅಷ್ಟು ಸುಲಭವಾಗಿ ನಾಶವಾಗೋದಿಲ್ಲ. ಅದಕ್ಕೆ ಜನ ನಾನಾ ರೀತಿಯ ಔಷಧ ಪ್ರಯೋಗ ಕಲಿತಿದ್ದಾರೆ.

ಬೆಳೆಗಳನ್ನು ಬಾಧಿಸುವ ಹಲವಾರು ಹುಳುಗಳಿವೆ ಅವುಗಳಲ್ಲಿ ಪ್ರಮುಖವಾದುವು ಹೀಗಿವೆ :

**ಕಂಬಳಿ ಹುಳು :** ಕಂಬಳಿ ಹುಳುಗಳನ್ನು ಸಾಮಾನ್ಯವಾಗಿ ಕುರುಬರಹುಳ, ಎಂದೂ ಕರೆಯುತ್ತಾರೆ.ಇದರ ಮೈಮೇಲೆ ದಟ್ಟವಾದ ಕಂಬಳಿಯಂಥ ರೋಮಗಳಿರುವುದರಿಂದ ಈ ಹೆಸರು ಬಂದಿದೆ. ಕಂಬಳಿ ಹುಳುಗಳಲ್ಲಿ ಪ್ರಮುಖವಾಗಿ ಕಪ್ಪು ತಲೆ ಕಂಬಳಿ ಹುಳು, ಕೆಂಪು ತಲೆ ಕಂಬಳಿ ಹುಳುಗಳೆಂಬ ಭೇದಗಳಿವೆ.


**ಕಪ್ಪು ತಲೆ ಕಂಬಳಿ ಹುಳು :** ಆರ್ಕ್‌ಟಿಡೆ ಕುಟುಂಬಕ್ಕೆ ಸೇರಿದ ಪೆಕೆಲಿಯ ರಿಸಿನಿ ಎಂಬ ವೈಜ್ಞಾನಿಕ ನಾಮ ಇದಕ್ಕಿದೆ. ಈ ಹುಳು ಔಡಲ, ಕುಂಬಳ, ಸೋರೆ, ಹೀರೆ, ಅವರೆ, ನುಗ್ಗೆ, ಸೌತೆ ಗಿಡಗಳನ್ನು ಬಾಧಿಸುತ್ತದೆ. ಇವು ಬೆಳೆಗಳಿಗೆ ಒಮ್ಮೆ ತಗುಲಿಕೊಂಡರೆ



ಎಲೆಗಳನ್ನೆಲ್ಲಾ ತಿಂದು ಬರಿ ಕಾಂಡವನ್ನು ಮಾತ್ರ ಉಳಿಸುತ್ತವೆ. ಇವುಗಳನ್ನು ನಿಯಂತ್ರಿಸಲು ಕ್ವಿನಾಲ್ ಫಾಸ್ ಅಥವಾ ಫಾಸಲೋನ್ ಔಷಧವನ್ನು ಸಿಂಪಡಿಸುತ್ತಿದೆ; ಇದು ಹತ್ತಿ, ಕಡಲೆಕಾಯಿ ಗಿಡ, ತೊಗರಿ, ಹೆಸರು, ಹಲಸಂದೆ ಮುಂತಾದ ಅನೇಕ ಬೆಳೆಗಳನ್ನು ಬಾಧಿಸುವ ಹುಳು. ಇವು ತಂಡ ತಂಡವಾಗಿ ಬೆಳೆಗಳ ಮೇಲೆ ದಾಳಿ ಮಾಡುತ್ತವೆ.

**ಕೆಂಪು ತಲೆ ಕಂಬಳಿಹುಳು :** ಆರ್ಕ್‌ಟಿಡೆ ಕುಟುಂಬದ ಆಂಗ್ಯಾಕ್ಟ್ ಆರ್ಬಿಸ್‌ಟ್ರೈಗ ಎಂದು ವೈಜ್ಞಾನಿಕ ನಾಮವುಳ್ಳ ಕೀಟ. ಇದು ವಿವಿಧ ಬಗೆಯ ದ್ವಿದಳ ಧಾನ್ಯಗಳ ಬೆಳೆಗಳು, ರಾಗಿ, ಜೋಳ ಮುಖ್ಯವಾಗಿ ನೆಲಗಡಲೆ ಗಿಡಗಳಿಗೆ ಹೆಚ್ಚಾಗಿ ಕಾಡುತ್ತದೆ.

**ಜೀರುಂಡೆ :** ಇದು ಎಲೆ ತಿನ್ನುವ ಕೀಟ. ಇದರಲ್ಲಿ ಎಲೆ ಜೀರುಂಡೆ, ಗುಲಗಂಜಿ ಜೀರುಂಡೆ, ಹೂವಿನ ಜೀರುಂಡೆ, ನೆಲ ಜೀರುಂಡೆ, ಕಿತ್ತಳೆ ಪಟ್ಟೆಯ ಜೀರುಂಡೆ, ವೊದಲಾದ ವಿಧಗಳಿವೆ. ಜೀರುಂಡೆಗಳು ಸಾಮಾನ್ಯವಾಗಿ ಬದನೆ, ಟೊಮ್ಯಾಟೋ, ತೊಗರಿ, ಅವರೆ, ಅಲಸಂದೆ, ಆಲೂಗೆಡ್ಡೆ, ಸೌತೆ, ಹೊಗೆಸೊಪ್ಪು, ಹತ್ತಿ, ಮೆಣಸಿನ ಕಾಯಿ, ರಾಗಿ, ಜೋಳ ವೊದಲಾದ ಬೆಳೆಗಳನ್ನು ನಾಶಮಾಡುತ್ತವೆ.



**ತಗಣೆ :** ಈ ಜಾತಿಯ ಕೀಟಗಳು ಸಾಮಾನ್ಯವಾಗಿ ಎಲ್ಲ ಬಗೆಯ ಬೆಳೆಗಳ ಎಲೆ, ಕಾಂಡ, ಚಿಗುರು, ಬೇರು ಮೊದಲಾದ ಕಡೆ ಸೇರಿಕೊಂಡು ರಸವನ್ನು ಹೀರುತ್ತವೆ. ತಗಣೆಗಳಲ್ಲಿ ಬೇರು ತಗಣೆ, ಹಸುರು ತಗಣೆ, ಎಲೆ ತಗಣೆ,ಚಿಗುರು ತಗಣೆ ಗಬ್ಬು ತಗಣೆಗಳೆಂಬ ವಿಧಗಳಿವೆ.

**ಜಿಗಿಹುಳು :** ಇವು ಪ್ರಮುಖವಾಗಿ ಬತ್ತದ ಬೆಳೆಯನ್ನು ಕಾಡುತ್ತವೆ. ಬತ್ತದ ಕಾಂಡ ಭಾಗದಲ್ಲಿ ಸೇರಿ ಕಾಂಡವನ್ನು ಜಿಗಿದು ರಸ ಹೀರಿ ಪೈರು ಪೀಲವವಾಗುವಂತೆ ಮಾಡುತ್ತವೆ.

**ಕೊಂಡಲಿ ಹುಳು :** ಇದನ್ನು, ಗೌಣು ಹಾಕುವ ಹುಳು, ಹಸುರು ಹುಳವೆಂದೂ ಕರೆಯುತ್ತಾರೆ. ಇವು ಅವರೆ, ಅಲಸಂದೆ, ತೊಗರಿ,

ಸೋಯಾಬೀನ್ ಮೊದಲಾದ ಬೆಳೆಗಳಲ್ಲಿ ಕಾಟ ಕೊಡುತ್ತವೆ. ಕಾಯಿ ಮತ್ತು ಹೂವನ್ನು ಕೊರೆದು ತಿನ್ನುವುದು ಇವುಗಳ ಕೆಲಸ.

**ನುಸಿ :** ಈ ಹುಳುಗಳಿಗೆ ಕೀಡೆಹುಳುಗಳು, ಸೀಡೆ ಹುಳುಗಳು ಎಂಬ ಬೇರೆ ಬೇರೆ ನಾಮಗಳಿವೆ. ಟೆಟ್ರಾನಿಡೆ ಕುಟುಂಬದ ಅಕ್ಯಾರಿನ ವರ್ಗಕ್ಕೆ ಸೇರಿದ ಈ ಹುಳುಗಳಲ್ಲಿ ಕೆಂಪುನುಸಿ, ಬಲೆನುಸಿ, ತುಕ್ಕುನುಸಿ, ಬೊಬ್ಬೆನುಸಿ, ಕಪ್ಪು ನುಸಿ ಎಂಬ ಪ್ರಮುಖ ವಿಧಗಳಿವೆ. ಕಬ್ಬು, ಜೋಳ, ಅಲಸಂದೆ, ಅವರೆ, ತೆಂಗು ಮೊದಲಾದ ಬೆಳೆಗಳನ್ನು ಆವರಿಸಿ ರಸ ಹೀರಿ ಬೆಳೆಗಳನ್ನು ಹಾಳುಮಾಡುತ್ತವೆ.

**ನೊಣ :** ಇವುಗಳಲ್ಲಿ ಹೂಜಿನೊಣ, ಬಿಳಿನೊಣ, ಕಪ್ಪುನೊಣ, ಹಸುರು ನೊಣಗಳೆಂಬ ವಿಧಗಳಿವೆ. ಇವು ರೇಷ್ಮೆ, ಬೆಂಡೆ, ಹತ್ತಿ, ಸೌತೆ, ಬದನೆ, ಟೊಮ್ಯಾಟೋ ಮೊದಲಾದವುಗಳಲ್ಲಿ ಕಾಣುತ್ತವೆ. ಕೆಲವು ನೊಣಗಳು ವೈರಸ್‌ಗಳನ್ನು ಹರಡಿ, ರೇಷ್ಮೆ ಹುಳುವನ್ನು ಕೊರೆದು ಹಾಳು ಮಾಡುತ್ತವೆ.

**ಮಿಡತೆಗಳು :** ಇವುಗಳಲ್ಲಿ ನೆಲ ಮಿಡತೆ, ಹಸುರು ಮಿಡತೆ, ಪ್ರಮುಖವಾದವು. ಇವು ನಾನಾ ಬಗೆಯ ಬೆಳೆಗಳ ಎಲೆಗಳನ್ನು ತಿಂದು ನಾಶಮಾಡುತ್ತವೆ.

**ಹೇನು :** ನೆಲಗಡಲೆ, ತೊಗರಿ, ಕಬ್ಬು, ಜೋಳ, ಹೊಗೆಸೊಪ್ಪು, ಆಲೂಗಡ್ಡೆ ಕನಕಾಂಬರ ಮೊದಲಾದ ಬೆಳೆಗಳಲ್ಲಿ ಕಾಣಿಸಿಕೊಂಡು ರಸ ಹೀರಿ ಬೆಳೆಗಳನ್ನು ನಿಸ್ಸತ್ತ್ವಗೊಳಿಸುತ್ತವೆ.



**ಮೂತಿ ಹುಳು :** ಕರ್ಕುಲಿಯೊನಿಡೆ ಕುಟುಂಬದ ಕೊಲಿಯೊಪ್ಟೆರ ವರ್ಗಕ್ಕೆ ಸೇರಿದ ಈ ಹುಳುವಿನಲ್ಲಿ ಮೊಗ್ಗಿನ ಮೂತಿ ಹುಳು, ಬೂದು ಮೂತಿಹುಳು, ಎಲೆ ಮೂತಿಹುಳು, ಗಂಟು ಮೂತಿ ಹುಳು, ಮೊದಲಾದ ಭೇದಗಳಿವೆ. ದ್ವಿದಳ ಧಾನ್ಯ ಬೆಳೆಗಳ ಎಲೆ, ಕಾಂಡ, ಕಾಯಿ, ಹೂವುಗಳಿಗೆ ಹಾನಿಮಾಡುತ್ತವೆ.

**ಪಾಂಡು ಹುಳು :** ಪಾಂಡು ಎಂದರೆ ಬಿಳಿ ಎಂದರ್ಥ. ಈ ಹುಳು ಬಿಳಿ ಬಣ್ಣದ್ದು. ಇದು ಹಿಂದೆ ಪಾಂಡವರ ನಾಯಿ ಯಾಗಿತ್ತು ಎನ್ನುತ್ತಾರೆ. ಈ ಹುಳುವಿನ ಮೂತಿ ನಾಯಿ ಮೂತಿಯಂತಿರುವುದೇ ಹೆಸರು ಇಡಲು ಕಾರಣವಾಗಿದೆ. ಈ ಹುಳು, ಜೋಳ, ಅವರೆ, ಅಲಸಂದೆ ಮೊದಲಾದ ಬೆಳೆಗಳಲ್ಲಿ ಕಾಣಸಿಗುತ್ತದೆ. ಇದು ಎಲೆಗಳನ್ನು ತಿಂದು ನಾಶಮಾಡುತ್ತದೆ.



**ಇರುವೆ :** ಇರುವೆಗಳಲ್ಲಿ ಕೆಂಪಿರುವೆ, ಕಂದು ಇರುವೆಗಳು ಪ್ರಮುಖವಾದವು. ಇವು ಬೆಳೆಗಳಿಗೆ ಮುಖ್ಯವಾಗಿ ನೆಲಗಡಲೆ, ಜೋಳ, ಸಜ್ಜೆ ಮೊದಲಾದವುಗಳಿಗೆ ಬಾಧಿಸುತ್ತವೆ. ಕಂದಿರುವೆ ಮುಖ್ಯವಾಗಿ ಆಲೂಗಡ್ಡೆ, ಕಬ್ಬು ನೆಲಗಡಲೆ ಇನ್ನಿತರ ಗೆಡ್ಡೆ, ಕಾಯಿಗಳನ್ನು ತಿಂದು, ರಂಧ್ರಮಾಡಿ ನಾಶಮಾಡುತ್ತವೆ.

**ಎಲೆ ಗೂಡುಕಟ್ಟುವ ಹುಳುಗಳು :** ನೆಲಗಡಲೆ, ಆಲೂಗಡ್ಡೆ, ತೊಗರಿ, ಬದನೆ, ಮೆಣಸಿನಕಾಯಿ, ಹತ್ತಿ ಮೊದಲಾದ ಬೆಳೆಗಳಲ್ಲಿ ಎಲೆಗಳನ್ನು ಮುರುಟಿಸಿ ಗೂಡುಕಟ್ಟುತ್ತವೆ. ಎಲೆಗಳು ಆಹಾರ ಉತ್ಪಾದನೆ ಮಾಡದೆ ಬೆಳೆ ಸೊರಗುತ್ತದೆ. ಇವಲ್ಲದೆ, ಸೆಗಣಿ ಹುಳು, ಓಡು ಹುಳು, ಕಂಬಿಹುಳು, ಗೊಣ್ಣೆಹುಳು, ಕಾಯಿಕೊರಕ, ಕಾಂಡಕೊರಕ, ಬುವಾಡಿಹುಳು, ಬಸವನಹುಳು, ರೋಮದ ಹುಳು, ಪತಂಗ ಮೊದಲಾದ ಬೆಳೆ ಬಾಧಿಸುವ ಹುಳುಗಳಾಗಿ ಕಾಣಸಿಗುತ್ತವೆ.

ಇವುಗಳನ್ನು ಹತೋಟಿಯಲ್ಲಿಡಲು ಹಿಂದೆ ಬೇವಿನ ಹಿಂಡಿ, ಹೊಂಗೆ ಹಿಂಡಿ, ಬೇವಿನಸೊಪ್ಪು, ಘಾಟಿನಸೊಪ್ಪು, ಮೂಡೆಗಿಡ, ಮೆಣಸಿನ ಕಾಯಿ, ಎಕ್ಕದ ಗಿಡ, ತುಲಸಿ ಸೊಪ್ಪು, ತಂಬಾಕು ಸೊಪ್ಪು, ಆಡುಸೋಗೆ, ಕತ್ತಾಳೆರಸ ಮೊದಲಾದವುಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದುದುಂಟು. ಆದರೆ ಇತ್ತೀಚೆಗೆ ವೈಜ್ಞಾನಿಕ ಆವಿಷ್ಕಾರದ ರಾಸಾಯನಿಕ ಕೀಟನಾಶಕಗಳನ್ನು ಬಳಸುತ್ತಾರೆ.

**ಹುಳುಗಳ ಕುರಿತ ನಂಬಿಕೆಗಳು :**

ಗೊಣ್ಣೆಹುಳು ಹೆಚ್ಚಾಗಿ ಕಂಡರೆ ಮಳೆ ದೂರ
ಕೊಡತಿ ಹುಳು ಹೆಚ್ಚಾಗಿ ಕಾಣಿಸಿ ಕೊಂಡರೆ ಮಳೆ ಖಚಿತ
ಈಸಲು ಹುಳು ಒಡೆದು ಕಂಡರೆ ಮಳೆ ವಿಳಂಬ.
ಮರದ ತುಂಬ ಜೇಡ ಗೂಡುಕಟ್ಟಿ ಬಲೆ ಹೆಣೆದರೆ ಬರ.
ಕಂಬಳಿಹುಳು ಸಾಮೂಹಿಕವಾಗಿ ಬೆಳೆಗಳಿಗೆ ಮುತ್ತಿದರೆ ಬರ ಬರುವುದು.

**ಗಾದೆಗಳು :** 'ಹೇಲೊಳಗೆ ಬಾಲ ಹುಳು ಆಡಿದಂಗೆ'.
'ಮಿಡತೆ ಎಗರಾಡೋದ ಬಿಡಲ್ಲ, ಮಿಟುಕಲಾಡಿ ಮಿಡುಕಾಡೋದ ಬಿಡಲ್ಲ'
'ಕಂಬ್ಳಿ ಹುಳು ಹೊಕ್ಕೆ ಕಡಲೆ ಗಿಡದಂಗೆ
ಕೊಡತಿ ಹುಳ ಕೊಸರಾಡೋ ಹೊತ್ಗೆ, ಕೊತ್ತಿ ಬಂದು ಲಬಕ್ಕನೆ ಬಾಯ್ಗಾಕ್ಕಂಡ್ತಂತೆ
ಸಗಣಿ ಹುಳ ಉಂಡೆ ಉರುಳಿಸ್ತು, ಸರಸದಾಸೆ ಮಂಡೆ ಕೆರಳಿಸ್ತು.

***ಟಿ.ಕೆ.***

**ಬೆಳೆ ಸಂರಕ್ಷಣೆ** ಭಾರತದಲ್ಲಿ ಕೃಷಿಯನ್ನೇ ನಂಬಿ ಬದುಕುವವರ ಸಂಖ್ಯೆ ಹೆಚ್ಚು. ಆಧುನಿಕತೆ, ಉದಾರೀಕರಣ, ನಗರೀಕರಣ ಇತ್ಯಾದಿಗಳ ನಡುವೆ ಜನಪದರು ತಮ್ಮದೇ ಆದ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈಚೆಗೆ ಮಳೆಯಾಶ್ರಿತ ಭೂಮಿಗಳು ನೀರಾವರಿ ಭೂಮಿಗಳಾಗಿ ಪರಿವರ್ತನೆಗೊಂಡಿವೆ. ಕೆರೆಕಟ್ಟೆಗಳು, ನದಿ, ಕೊಳವೆಬಾವಿ, ತೊರೆಗಳು ಹಾಗೂ ತೆರೆದ ಬಾವಿ ಇತ್ಯಾದಿಗಳು ನೀರಾವರಿ ಮೂಲಗಳಾಗಿವೆ. ರಾಸಾಯನಿಕ ಗೊಬ್ಬರಗಳಿಂದ ಅಧಿಕ ಇಳುವರಿ ಪಡೆದರೂ, ಸಾಕಷ್ಟು ನಷ್ಟಗಳನ್ನು ಅನುಭವಿಸಿದ್ದಾರೆ. ತಾವು ಬೆಳೆದ ಬೆಳೆಯನ್ನು ಸಂರಕ್ಷಿಸಿಕೊಳ್ಳಲು ತಮ್ಮದೇ ಆದ ದೇಸಿ ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದಾರೆ. ಈ ತಂತ್ರೋಪಾಯಗಳು ಕೃಷಿಯಷ್ಟೇ ಪ್ರಾಚೀನವಾದವು. ಅವು ಕಾಲದ ಗಡಣದೊಳಗೆ ಬೆಂದು, ಪರಿವರ್ತನೆಗಳಿಗೆ ಒಳಪಟ್ಟು, ಹೊಸದನ್ನು ಸೇರಿಸಿಕೊಂಡು, ಸರಳ ವಿಧಾನದಲ್ಲಿ ಈಗಲೂ

ಪ್ರಚಲಿತವಾಗಿವೆ. ಜನಪದರು ಅನುಸರಿಸುವ ಈ ವಿಧಾನಗಳ ತಾಂತ್ರಿಕತೆ, ಪ್ರಯೋಗ, ಆಚರಣೆ ಮತ್ತು ಫಲಶ್ರುತಿಗಳು ಇವುಗಳ ಮೇಲೆ ಬೆಳಕು ಚೆಲ್ಲುವುದು ಇಲ್ಲಿಯ ಮುಖ್ಯ ಉದ್ದೇಶ.

ಅಧ್ಯಯನದ ದೃಷ್ಟಿಯಿಂದ ರಕ್ಷಣೋಪಾಯವನ್ನು ಕೆಳಗಿನಂತೆ ವಿಭಾಗಿಸಿಕೊಳ್ಳಬಹುದು.

ಬೆಳೆ ರಕ್ಷಣೆ

- ಮನುಷ್ಯ ನಿರ್ಮಿತ
  - ಶಬ್ದರಹಿತ ತಡೆ
    1. ಬೆದರುಗೊಂಬೆಗಳು
    2. ಬಿಳಿಕಲ್ಲು
    3. ಮಡಕೆ
    4. ಸತ್ತ ಪ್ರಾಣಿ ಹಾಗೂ ಪಕ್ಷಿಗಳನ್ನು ತೂಗು ಹಾಕುವುದು
    5. ಒಡೆದ ಕನ್ನಡಿಗಳು
    6. ಕಂದಕ
    7. ಒಡ್ಡು
    8. ಕಲ್ಲು ಬೇಲಿ
    9. ಬಲೆ ಹಾಗೂ ಉಳ್ಳ ಹಾಕುವುದು
  - ಶಬ್ದ ಸಹಿತತಡೆ
    - ಸ್ವಯಂಚಾಲಿತ
      1. ನೀರುದೊಂಡೆ
      2. ಚಿತ್ರದೊಂಟೆ
      3. ಸಿಡಿಮದ್ದು ಹಾಕುವುದು
      4. ಸಿಡಿ ಮದ್ದಿನ ಉಂಡೆ
      5. ಕಾಗದದ ಹಾರ

         ಮರದ ಎಲೆಗಳ ಹಾರ
      6. ಧ್ವನಿ ಸುರುಳಿಗಳ ಟೇಪಿನ ಹಾರ
      7. ಪ್ಲಾಸ್ಟಿಕ್‌ಹಾರ
      8. ಶಿಸ್ತು ಕಟ್ಟುವುದು
      9. ಕತ್ತರಿ
      10. ಉಳ್ಳ ಹಾಕುವುದು
    - ಮನುಷ್ಯ ಚಾಲಿತ
      1. ತಮಟೆ, ಡಬ್ಬಿ, ಇತ್ಯಾದಿಗಳನ್ನು ಬಡಿಯುವುದು
      2. ಚಪ್ಪಾಳೆ ತಟ್ಟುವುದು, ಬಾಯಿಯಿಂದ ಧ್ವನಿ ಮಾಡುವುದು
      3. ಸಿಡಿ ಮದ್ದು ಸುಡುವುದು
    - ಸಾಕುನಾಯಿಗಳಿಂದ
- ಅತಿಮಾನುಷ ಶಕ್ತಿಗಳಿಂದ
  1. ದೈವಗಳಿಂದ
  2. ಮಂತ್ರ ತಂತ್ರ ಆಚರಣೆ

**ಮನುಷ್ಯ ನಿರ್ಮಿತ ತಡೆ :** ಬೀಜವನ್ನು ಭೂಮಿಗೆ ಹಾಕುವುದರಿಂದ ಹಿಡಿದು ಫಸಲು ಕೈಗೆ ಬರುವವರೆಗೆ ಬೆಳೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಜೋಪಾನ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನಾ ತಂತ್ರೋಪಾಯಗಳನ್ನು ಮಾಡಬೇಕಾಗುತ್ತದೆ. ಶಬ್ದ ರಹಿತ ತಡೆ ವಿಧಾನಗಳಿಂದಲೂ ಶಬ್ದ ಸಹಿತ ವಿಧಾನಗಳಿಂದಲೂ ಬೆಳೆಯನ್ನು ರಕ್ಷಿಸಿಕೊಳ್ಳುತ್ತಾರೆ.ಮೇಲಿನ ಎರಡು ವಿಧಾನಗಳಲ್ಲೂ ಹಲವು ಬಗೆಗಳಿವೆ.ಒಂದು ವಿಧಾನವು ಒಂದು ತಿಂಗಳವರೆಗೆ ಬೆಳೆರಕ್ಷಣೆಗೆ ಬಳಸಿಕೊಳ್ಳಬಹುದು. ವಿಭಿನ್ನ ಮಾದರಿಯ ವಸ್ತುಗಳು ಹಾಗೂ ವಿಭಿನ್ನ ರೀತಿಯ ಧ್ವನಿ ತರಂಗಗಳನ್ನು ನೋಡಿದ, ಆಲಿಸಿದ ಪ್ರಾಣಿ, ಪಕ್ಷಿಗಳು ಹೆದರಿ ಆ ಪ್ರದೇಶದ ಕಡೆ ಸುಳಿಯುವುದಿಲ್ಲ. ಸುಲಭ ಹಾಗೂ ಸರಳವಾಗಿ ಬೆಳೆ ರಕ್ಷಣಾ ವಿಧಾನಗಳನ್ನು ಕೆಳಗಿನಂತೆ ನೋಡಬಹುದು.

**ಶಬ್ದರಹಿತ ತಡೆ :** ಬೆದರುಗೊಂಬೆಗಳು, ಬಿಳಿಕಲ್ಲು, ಮಡಕೆ, ಸತ್ತ ಪ್ರಾಣಿ ಹಾಗೂ ಪಕ್ಷಿಗಳನ್ನು ತೂಗು ಹಾಕುವುದು, ಒಡೆದ ಕನ್ನಡಿಗಳು. ಕಂದಕ, ಒಡ್ಡು, ಕಲ್ಲು ಬೇಲಿ ಬಲೆ ಹಾಗೂ ಉಳ್ಳ ಹಾಕುವುದು ಇತ್ಯಾದಿಗಳು ಮೇಲಿನ ವಿಭಾಗದಲ್ಲಿ ಬರುತ್ತವೆ. ಕಂದಕ, ಬಟ್ಟೆ ಹಾಗೂ ಕಲ್ಲು ಬೇಲಿಗಳು ಶಾಶ್ವತ ರಕ್ಷಣೆಯನ್ನು ಒದಗಿಸುತ್ತವೆ.

**ಬೆದರು ಬೊಂಬೆಗಳು :** ಪ್ರಾಚೀನ ಕಾಲದಿಂದಲೂ ಬೆದುರು ಗೊಂಬೆಗಳ ಬಳಕೆ ಇತ್ತೆಂದು ಪ್ರಾಚೀನ ಕಾವ್ಯಗಳು ದಾಖಲಿಸಿವೆ. ಬೆಳೆಗಳಿರುವ ಹೊಲಗಳಲ್ಲಿ ಅಲ್ಲಲ್ಲಿ ಕಂಬಗಳನ್ನು ನೆಟ್ಟು ಅವುಗಳಿಗೆ ಸತ್ತ ಪ್ರಾಣಿಯ ತಲೆ ಬುರುಡೆ, ಬಿಳಿಕಲ್ಲು ಹಾಗೂ ಸುಣ್ಣದಿಂದ ಮನುಷ್ಯನ ಕಣ್ಣು, ಕಿವಿ, ಬಾಯಿ ಬರೆದು ಮಡಕೆ ಇತ್ಯಾದಿಗಳನ್ನು ಇಡಲಾಗುವುದು. ದೂರದಿಂದ ನೋಡಿದ ಪ್ರಾಣಿ, ಪಕ್ಷಿಗಳಿಗೆ ಹೊಲದಲ್ಲಿ ಯಾರೋ ಕೆಲಸ ಮಾಡುತ್ತಿದ್ದಾರೆ. ಎನ್ನುವ ಭ್ರಮೆ ಮೂಡಿ ಅಲ್ಲಿಂದಲೇ ಕಾಲಿಗೆ ಬುದ್ಧಿ ಹೇಳುತ್ತವೆ. ಅಲ್ಲದೆ ಮನುಷ್ಯನನ್ನೇ ಹೋಲುವ ಗೊಂಬೆಗಳನ್ನು ನಿರ್ಮಿಸುತ್ತಾರೆ. ಒಂದು ಕಂಬವನ್ನು ನೆಟ್ಟು ಅದಕ್ಕೆ ಒಣ ಹುಲ್ಲನ್ನು ಮನುಷ್ಯನ ಆಕಾರಕ್ಕೆ ಕಟ್ಟಿ ಅನಂತರ ಉಪಯೋಗಿಸಿ ಬಿಟ್ಟ ಅಂಗಿ, ಪ್ಯಾಂಟು, ತೊಡಿಸಲಾಗುತ್ತದೆ. ತಲೆಯ ಭಾಗಕ್ಕೆ ಬಳಸಿದ ಕರಿಯ ಮಡಕೆಗೆ ಸುಣ್ಣದಿಂದ ಕಣ್ಣು, ಕಿವಿ, ಮೂಗು ಹಾಗೂ ಬಾಯಿ ಬರೆದು ಕಂಬದ ತುದಿಗೆ ಬೋರಲು ಹಾಕುತ್ತಾರೆ. ಇದು ದೂರದಿಂದ ನೋಡಿದವರಿಗೆ ಮನುಷ್ಯನೆ ನಿಂತು ಪೈರನ್ನು ನೋಡುತ್ತಿರುವಷ್ಟೇ ಸಹಜವಾಗಿ ಕಾಣುತ್ತದೆ. ಮೇಲೆ ಹೇಳಿದ ಹತ್ತಾರು ಬೆದರು ಬೊಂಬೆಗಳ ನಡುವೆ ಇಂತಹ ಸಹಜ ಬೆದರು ಬೊಂಬೆಗಳನ್ನು ನಿರ್ಮಿಸುವ ಪದ್ಧತಿ ಇದೆ. ಹೀಗೆ ಮಾಡುವುದರಿಂದ ಪ್ರಾಣಿ, ಪಕ್ಷಿ ಮತ್ತು ಮನುಷ್ಯರಿಂದ ನೇರವಾಗಿ ಆಗುವ ಹಾನಿಯನ್ನು ತಪ್ಪಿಸಲು ಸಹಾಯಕವಾಗಿವೆ. ಅಲ್ಲದೆ ಅವುಗಳು ಮಾಂತ್ರಿಕವಾಗಿಯೂ ಕಾರ್ಯನಿರ್ವಹಿಸುತ್ತವೆ. ಕೆಟ್ಟ ಕಣ್ಣಿನ ದೃಷ್ಟಿಯನ್ನು ತಡೆಯುವ ಶಕ್ತಿ ಬೆದರು ಗೊಂಬೆಗಳಿಗಿದೆ ಎಂದು ಬಲವಾಗಿ ನಂಬುತ್ತಾರೆ.

ಸತ್ತ ಪ್ರಾಣಿ ಹಾಗೂ ಪಕ್ಷಿಗಳನ್ನು ಹೊಲಗಳಲ್ಲಿ ಅಲ್ಲಲ್ಲಿ ತೂಗಿ ಹಾಕುವುದರಿಂದಲೂ ಬೆಳೆಯನ್ನು ರಕ್ಷಿಸಿಕೊಳ್ಳುತ್ತಾರೆ. ತೂಗು ಹಾಕಿದ ತಮ್ಮದೇ ಪಂಗಡದ ಪ್ರಾಣಿ ಅಥವಾ ಪಕ್ಷಿಯ ದೇಹ ಗಾಳಿಯಲ್ಲಿ ತೇಲಾಡುವುದನ್ನು ಕಂಡು ಭಯಗೊಂಡು ಓಡಿ ಹೋಗುತ್ತವೆ. ಹೀಗೆ ಹೆದರಿದ ಪ್ರಾಣಿ ಪಕ್ಷಿಗಳು ಹಲವು ದಿನಗಳವರೆಗೆ ಹೊಲದ ಕಡೆಗೆ ಸುಳಿಯಲಾರವು.

**ಕಂದಕ :** ಹೊಲದ ಸುತ್ತಲೂ ಆಳವಾದ ಕಂದಕವನ್ನು ಅಗೆಯಲಾಗುತ್ತದೆ. ಈ ಕಂದಕದ ಆಳ, ಅಗಲಗಳು ನಿರ್ಧಾರವಾಗುವುದು ರೈತನ ಆರ್ಥಿಕ ವಿಚಾರಗಳ ಮೇಲೆಯೇ. ಇದೇ ಆಧಾರದ ಮೇಲೆ ಹೆಚ್ಚು ಅಗಲ ಹೆಚ್ಚು ಆಳವನ್ನು ಹೊಂದಿದ ಕಂದಕಗಳು ಹೊಲಗಳಿಗೆ ಹೆಚ್ಚು ಭದ್ರತೆಯನ್ನು ಒದಗಿಸುತ್ತವೆ. ಕಂದಕದ ಮಣ್ಣನ್ನು ಮೇಲೆ ಎತ್ತಿ

ದಂಡೆಯನ್ನು ನಿರ್ಮಿಸುತ್ತಾರೆ. ದಂಡೆ ಹೊಲದ ಕಡೆ ಇದ್ದೂ ಕಂದಕ ಹೊರ ಭಾಗದಲ್ಲಿರುತ್ತದೆ. ಪ್ರಾಣಿಗಳು ಕಂದಕವನ್ನು ಹಾರುವ ಪ್ರಯತ್ನ ಮಾಡಿದರೂ ದಂಡೆಯನ್ನು ಏರಲಾರದೇ ಕಂದಕದ ಒಳಗೆ ಬೀಳುತ್ತವೆ. ಹೀಗಾಗಿ ಈ ವಿಧಾನದಿಂದ ಬೆಳೆಯನ್ನು ನೂರಕ್ಕೆ ನೂರು ಭಾಗ ರಕ್ಷಿಸಿಕೊಳ್ಳಬಹುದು. ದಂಡೆಯ ಮೇಲೆ ಮುಳ್ಳಿನ ಗಿಡಗಳನ್ನು ಬೆಳೆಸಲಾಗುತ್ತಿತ್ತು. ಈಚೆಗೆ ದಂಡೆಯ ಮೇಲೆ ಬೆಲೆ ಬಾಳುವ ತೇಗ, ಸಾಗುವಾನಿ, ಬೋಗಿ ಅಲ್ಲದೆ ಅನಾನಸ್, ನುಗ್ಗೆ, ಹಣ್ಣು, ತರಕಾರಿ ಗಿಡಗಳನ್ನು ಬೆಳೆಸುತ್ತಾರೆ. ಹೀಗೆ ಮಾಡುವುದರಿಂದ ಅನುಪಯುಕ್ತ ಸ್ಥಳವನ್ನು ಉಪಯುಕ್ತ ಮಾಡಿಕೊಂಡು ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಹಕಾರಿಯಾಗಿದೆ.

**ಕಲ್ಲು ಬೇಲಿ :** ಹೊಲದ ಸುತ್ತಲೂ ಕಾಡುಕಲ್ಲುಗಳಿಂದ ಎತ್ತರದ ಗೋಡೆ ನಿರ್ಮಿಸುತ್ತಾರೆ. ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಗೋಡೆಯ ಎತ್ತರ, ಅಗಲ ಹಾಗೂ ಬಳಸುವ ಕಲ್ಲುಗಳು ಇರುತ್ತವೆ. ಸಾಮಾನ್ಯವಾಗಿ ಎರಡು ಅಡಿ ಅಗಲ, ಆರು ಅಡಿ ಎತ್ತರವಿರುವ ಗೋಡೆಗಳು ಹೊಲಗಳಿಗೆ ಶಾಶ್ವತ ರಕ್ಷಣೆಯನ್ನು ಒದಗಿಸುತ್ತವೆ. ತೀರಾ ಎತ್ತರ ಹಾಗೂ ಅಗಲದ ತಡೆ ಗೋಡೆಗಳು ಹೊಲಗಳಿಗೆ ಹೆಚ್ಚು ಭದ್ರತೆಯನ್ನು ನೀಡುತ್ತವೆ. ರಕ್ಷಣಾ ಗೋಡೆಗಳ ಮೇಲೆ ಸಿಮೆಂಟನ್ನು ಹಾಕಿ ಅದರ ಮೇಲೆ ಒಡೆದ ಗಾಜಿನ ಚೂರುಗಳನ್ನು ನೆಟ್ಟಿರುತ್ತಾರೆ. ಈ ವಿಧಾನದಿಂದಲೂ ಬೆಳೆಗೆ ನೂರಕ್ಕೆ ನೂರರಷ್ಟು ರಕ್ಷಣೆ ದೊರಕುತ್ತದೆ.

**ಒಡ್ಡು :** ಹೊಲದ ಸುತ್ತ ಮುಳ್ಳು ಕಂಬಗಳಿಂದ ನಿರ್ಮಿಸಲಾದ ತಡೆ ಬೇಲಿ. ಕೆಳ ಹಾಗೂ ಮಧ್ಯಮವರ್ಗದ ರೈತರು ಹೆಚ್ಚಾಗಿ ಇದನ್ನು ನಿರ್ಮಿಸುತ್ತಾರೆ. ಪ್ರತಿ ವರ್ಷ ಬೇಲಿಯನ್ನು ದುರಸ್ತಿ ಮಾಡಿಕೊಳ್ಳಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಮುಳ್ಳು ಕಂಟಿಗಳು ವಿರಳವಾಗಿರುವುದರಿಂದ ಈ ತಡೆ ಬೇಲಿಗಳು ವಿರಳವಾಗಿವೆ. ಈ ಕಾರಣದಿಂದ ಮುಳ್ಳು ಬೇಲಿಯು ರೈತರಿಗೆ ದುಬಾರಿಯಾಗಿದೆ. ಈ ಬಗೆಯ ಬೇಲಿಗಳು ಕಾಡು ಪ್ರದೇಶದ ಹೊಲಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಮುಳ್ಳು ಬೇಲಿಯಿಂದ ಹಂದಿ ಇತ್ಯಾದಿ ಬಲಿಷ್ಠ ಮೃಗಗಳಿಂದ ಬೆಳೆಗೆ ರಕ್ಷಣೆ ಒದಗಿಸಲು ಸಾಧ್ಯವಿಲ್ಲ.

**ಬಲೆ ಮತ್ತು ಉರುಳು :** ಒಡ್ಡು ನಿರ್ಮಿಸಿದರೂ, ಹಂದಿಗಳಂಥ ಬಲಿಷ್ಠ ಪ್ರಾಣಿಗಳು ಬೆಳೆಯನ್ನು ಲೂಟಿ ಮಾಡುತ್ತವೆ. ಕಾಡಿನಲ್ಲಿಯೇ ಬೆಳೆದ ಪ್ರಾಣಿಗಳನ್ನು ಮುಳ್ಳಿನ ಬೇಲಿ ತಡೆಯಲು ಅಸಾಧ್ಯ. ಈ ಒಡ್ಡನ್ನು ಅಲ್ಲಲ್ಲಿ ಮುರಿದು ಪ್ರಾಣಿಗಳು ಓಡಾಡುತ್ತವೆ. ಆ ದಾರಿಗಳಲ್ಲಿ ಕಾಣದಂತೆ ಬಲೆ ಹಾಗೂ ಉರುಳು ಹಾಕಿ ಹಿಡಿಯುತ್ತಾರೆ. ದಾರಿಯ ಎರಡೂ ಬದಿಗೆ ಕಂಬಗಳನ್ನು ಗಟ್ಟಿಯಾಗಿ ನೆಟ್ಟು, ಕಂಬವೊಂದಕ್ಕೆ ತಂತಿಯ ಒಂದು ತುದಿಯನ್ನು ಭದ್ರವಾಗಿ ಕಟ್ಟಿ, ಉರುಳನ್ನು ಕಾಣದಂತೆ ಇಡುತ್ತಾರೆ. ಹೊರಗಿನಿಂದ ಬಂದ ಪ್ರಾಣಿಯ ಕೊರಳಿಗೆ ತಾಗಿದಾಗ ತಂತಿಯ ಉರುಳು ಬಿಗಿಯುತ್ತದೆ. ಇನ್ನೂ ಜೋರಾಗಿ ಎಳೆದಾಡಿದಾಗ ಪ್ರಾಣಿ ಕೊರಳು ಬಿಗಿದು, ಉಸಿರುಕಟ್ಟಿ ಸಾಯುತ್ತದೆ. ಕಾಲಿಗೆ ಉರುಳು ಸಿಕ್ಕರೆ ಪ್ರಾಣಿಗೆ ಅಪಾಯವಿಲ್ಲ. ಇದೇ ರೀತಿ ಬಲೆಯನ್ನು ಹಾಕಿ ಪ್ರಾಣಿಗಳನ್ನು ಹಿಡಿಯುತ್ತಾರೆ. ಇಂತಹ ವೇಳೆಯಲ್ಲಿ ಜನರು ಹೊಲದಲ್ಲಿಯೇ ಇರುವ ಹಕ್ಕೆ ಅಥವಾ ಕಾವಲು ಗುಡಿಸಲಲ್ಲಿ ಕಾದಿರುತ್ತಾರೆ. ಮೇಲಿನ ಎರಡೂ ವಿಧಾನಗಳಿಂದ ಹುಲಿ, ಚಿರತೆ, ಹಂದಿ, ಕುರಿ, ಜಿಂಕೆ, ನರಿ, ಮೊಲ ಇತ್ಯಾದಿ ಪ್ರಾಣಿಗಳನ್ನು ಹಿಡಿದು ಕೊಲ್ಲುತ್ತಾರೆ. ದಾರಿ ಮಾಡಿದ ಪ್ರಾಣಿಯ ಗಾತ್ರಕ್ಕೆ ಅನುಗುಣವಾಗಿ ಉರುಳಿನ ಎತ್ತರ ಹಾಗೂ ದಾರದ ಬಲಿಷ್ಠತೆಯು ಅವಲಂಬಿಸಿರುತ್ತದೆ. ಹಂದಿಗಾಗಿ ಒಡ್ಡಿದ ಉರುಳಿನಲ್ಲಿ ನರಿ ಬೀಳಲು ಸಾಧ್ಯವಿಲ್ಲ. ಹಾಗೆ ನರಿಗಾಗಿ ಒಡ್ಡಿದ ಉರುಳಿನಲ್ಲಿ ಹಂದಿ ಹಾಗೂ ಇತರ ಪ್ರಾಣಿಗಳು ಬೀಳಲು ಸಾಧ್ಯವಿಲ್ಲ. ದಾರಿ ಮಾಡಿದ ಪ್ರಾಣಿಯ ಚಲನವಲನ ಹಾಗೂ ಹೆಜ್ಜೆ ಗುರುತುಗಳನ್ನು ನೋಡಿಯೇ ಉರುಳನ್ನು ಒಡ್ಡಲಾಗುತ್ತದೆ. ಬೆಳೆ ರಕ್ಷಣೆಯ ವಿಧಾನಗಳಲ್ಲಿ ಇದು ಒಂದು. ಇದರ ಮೂಲಕ ಮಾಂಸಾಹಾರಿಗಳಿಗೆ ಮಾಂಸ ಲಭಿಸಿದಂತಾಗುತ್ತದೆ. ಬೆಳೆ ರಕ್ಷಣೆ ಕೇವಲ ಹತ್ತರಷ್ಟು ಮಾತ್ರ.

**ಶಬ್ದ ಸಹಿತ ತಡೆ :** ಬೆಳೆ ರಕ್ಷಣೆಯಲ್ಲಿ ಶಬ್ದ ಸಹಿತ ತಡೆ ಮಹತ್ವದ ಪಾತ್ರ ವಹಿಸಿದೆ. ಪಕ್ಷಿ ಹಾಗೂ ಪ್ರಾಣಿಗಳಿಂದ ಹಾಳುಗಟ್ಟುತ್ತಿರುವ ಪೈರಿನ ರಕ್ಷಣೆಗೆ ತಲೆಕೆಡಿಸಿಕೊಂಡ ಜನಪದರು ಕೆಲವು ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಅವುಗಳನ್ನು ಸ್ವಯಂ ಚಾಲಿತ ಶಬ್ದ ಸಹಿತ ಸಾಧನಗಳು, ಮನುಷ್ಯ ಚಾಲಿತ ಶಬ್ದ ಸಹಿತ ಸಾಧನಗಳು ಹಾಗೂ ನಾಯಿಗಳು ಇತ್ಯಾದಿಯಾಗಿ ವಿಂಗಡಿಸಿಕೊಳ್ಳಬಹುದು.

**ಸ್ವಯಂ ಚಾಲಿತ ಶಬ್ದ ಸಹಿತ ಸಾಧನಗಳು :** ಆಯಾಯ ಪ್ರದೇಶದಲ್ಲಿ ಲಭ್ಯವಾಗುವ ವಸ್ತುಗಳ ಮೇಲೆ ಅವಲಂಬಿತವಾಗಿವೆ. ನೀರು, ಬಿದಿರು, ಹಲಗೆ, ಡಬ್ಬಿ, ಸಿಡಿಮದ್ದು, ಕತ್ತದ ಹುರಿ, ಬೆಂಕಿ ಇತ್ಯಾದಿ. ಒಮ್ಮೆ ಮೇಲಿನ ವಸ್ತುಗಳಿಂದ ನಿರ್ಮಿಸಿದ ಸಾಧನವು ತನ್ನಷ್ಟಕ್ಕೆ ತಾನು ಶಬ್ದ ಹೊರಡಿಸುತ್ತಿರುತ್ತದೆ. ಈ ವಿಧಾನವು ಶೇಕಡ 80ರಷ್ಟು ರಕ್ಷಣೆ ಒದಗಿಸುತ್ತದೆ. ನೀರುದೊಂಟೆ, ನೀರು ಚಕ್ರ, ಸಿಡಿಮದ್ದಿನಸರ, ಸಿಡಿ ಮದ್ದಿನ ಉಳಿಕೆ ಇತ್ಯಾದಿಗಳನ್ನು ಹೆಸರಿಸಬಹುದು.

**ನೀರುದೊಂಟೆ :** ಹೊಲದಲ್ಲಿ ಮೇಲಿನಿಂದ ತಗ್ಗು ಪ್ರದೇಶಕ್ಕೆ ಬೀಳುವ ನೀರಿನ ಶಕ್ತಿಯನ್ನು ಬಳಸಿ, ಈ ಸಾಧನವನ್ನು ಚಲಿಸುವಂತೆ ವ್ಯವಸ್ಥೆ ಮಾಡುತ್ತಾರೆ. ನೀರು ಬೀಳುವ ತಗ್ಗಿನ ಪ್ರದೇಶದಲ್ಲಿ ಎರಡು ಬಲವಾದ ಗೂಟಗಳನ್ನು ನೆಟ್ಟು, ನಾಲ್ಕು ಇಂಚು ವ್ಯಾಸವುಳ್ಳ, ಇಪ್ಪತ್ತು ಇಂಚು ಉದ್ದದ ಬಿದಿರಿನ (ಸಿಲಿಂಡರ್) ಹಂಡೆಗೆ ಒಂದು ಭಾಗಕ್ಕೆ ನೀರು ತುಂಬುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ಹಂಡೆಯ ತಳ ಭಾಗದಿಂದ ನಾಲ್ಕು ಇಂಚು ಮೇಲೆ ಒಂದು ರಂಧ್ರವನ್ನು ಕೊರೆದು ಇಪ್ಪತ್ತು ಇಂಚಿನ ನೇರ ಕೋಲನ್ನು ರಂಧ್ರದೊಳಗೆ ಸೇರಿಸಿ ಬಿಗಿಗೊಳಿಸಿರುತ್ತಾರೆ. ಹಂಡೆಯ ಎರಡೂ ಬದಿಯ ಕೋಲು ಸಮಾನವಾಗಿರುವಂತೆ ಮಾಡುತ್ತಾರೆ. ತಗ್ಗಿನಲ್ಲಿ ನಿಲ್ಲಿಸಿದ ಗೂಟಗಳಲ್ಲಿ ಕೊರೆದ ರಂಧ್ರಗಳಲ್ಲಿ ಕೋಲಿನ ಎರಡು ಬದಿಯ ತುದಿಯನ್ನು ಸೇರಿಸುತ್ತಾರೆ. ಹಂಡೆಯ ತಳಭಾಗದಲ್ಲಿ ಡಬ್ಬಿಯನ್ನು ನೆಲಕ್ಕೆಭದ್ರಗೊಳಿಸಿ ಇಡಲಾಗುವುದು. ಹಂಡೆಯ ತುದಿಯ ಭಾಗದಿಂದ ಸುರಿದ ನೀರು ತುಂಬಿದ ತಕ್ಷಣ, ಹಂಡೆ ನೀರಿನ ಕಡೆ ಬಾಗಿ ತನ್ನಲ್ಲಿದ್ದ ನೀರನ್ನು ಸುರಿಯುತ್ತದೆ. ತಕ್ಷಣ ಮೊದಲ ಸ್ಥಿತಿಗೆ ಬರುತ್ತದೆ. ಹೀಗೆ ಬಂದಾಗ ಹಂಡೆಯ ತಳ ಡಬ್ಬಿಗೆ ಬಡಿದು ಶಬ್ದವು ಹೊರಹೊಮ್ಮುತ್ತದೆ. ನೀರು ಹರಿಯುವವರೆಗೂ ಈ ಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ. ನಿರಂತರ ಶಬ್ದ ಹೊರಡುವುದರಿಂದ ಪ್ರಾಣಿ, ಪಕ್ಷಿಗಳು ಬೆಳೆಯ ಕಡೆಗೆ ಸುಳಿಯುವುದಿಲ್ಲ. ಬೆಳೆ ರಕ್ಷಣೆಯ ಪ್ರಾಚೀನ ಮಾದರಿಯ ಸಾಧನದಿಂದ ಶೇಕಡ ತೊಂಬತ್ತು ಭಾಗ ರಕ್ಷಣೆ ಸಿಗುತ್ತದೆ. ಒಂದೇ ರೀತಿಯ ಶಬ್ದ ನಿರಂತರವಾಗಿ ಉಂಟಾಗುವುದರಿಂದ ರಕ್ಷಣಾ ಕಾರ್ಯಕ್ಕೆ ಧಕ್ಕೆ ಆಗದಿರಲಿಯೆಂದು ಬೇರೆ ಬೇರೆ ಧ್ವನಿ ತರಂಗಗಳನ್ನು ಉಂಟುಮಾಡುವ ಡಬ್ಬಿಗಳನ್ನು ಬಳಸುತ್ತಾರೆ. ಅಲ್ಲದೆ ಸ್ಥಳವನ್ನು ಬದಲಿಸುತ್ತಾರೆ.

**ಚಕ್ರದೊಂಟೆ (ನೀರು ಚಕ್ರ)** : ಟರ್‌ಬೈನ್ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಸಾಧನ. ನೀರು ಬೀಳುವ ತಗ್ಗಿನ ಪ್ರದೇಶದಲ್ಲಿ ಎರಡು ಕಂಬಗಳನ್ನು ನೆಟ್ಟು, ಕಂಬಗಳ ತುದಿಯ ಭಾಗದಿಂದ ಸ್ವಲ್ಪ ಕೆಳಭಾಗದಲ್ಲಿ ರಂಧ್ರವನ್ನು ಕೊರೆದು, ಎರಡು ಅಡಿ ಉದ್ದ, ಅರ್ಧ ಅಡಿ ಅಗಲವುಳ್ಳ ಹಗುರುವಾದ ಹಲಗೆಗಳಿಂದ ಚಕ್ರ ಮಾಡಿ, ಚಕ್ರದ ಮಧ್ಯ ರಂಧ್ರವನ್ನು ಮಾಡಿ, ರಂಧ್ರದಲ್ಲಿ ಕೋಲನ್ನು ಸೇರಿಸಿ, ಕಂಬಗಳ ಮಧ್ಯಭಾಗಕ್ಕೆ ಸೇರಿಸಿ, ತಿರುಗುವಂತೆ ಮಾಡುತ್ತಾರೆ. ಕಂಬಗಳ ಪಕ್ಕದಲ್ಲಿ ಡಬ್ಬಿಯನ್ನು ಇಟ್ಟು, ಇನ್ನೆರಡು ಕಂಬಗಳನ್ನು ನೆಟ್ಟು ಹಗುರವಾದ ಬಾರಿಸುವ ಕೋಲನ್ನು ದಾರದಿಂದ ಬಂಧಿಸಿ, ಕಂಬಗಳ ಮಧ್ಯೆ ಕಟ್ಟುತ್ತಾರೆ. ಬಾರಿಸುವ ಕೋಲಿನೊಂದು ತುದಿ, ಚಕ್ರದ ರೆಕ್ಕೆಯ ಕೆಳಗೂ, ಇನ್ನೊಂದೂ ತುದಿಯನ್ನು ಡಬ್ಬಿಯ ಮೇಲೂ ತಾಗುವಂತೆ ವ್ಯವಸ್ಥೆ ಮಾಡುತ್ತಾರೆ. ರೆಕ್ಕೆಯ ಇನ್ನೊಂದು ತುದಿಯಿಂದ ಬಿದ್ದ ನೀರು ಚಕ್ರವನ್ನು ನಿರಂತರವಾಗಿ ತಿರುಗುವಂತೆ ಮಾಡುತ್ತದೆ. ತಿರುಗುವ ಚಕ್ರ ಕೋಲನ್ನು ತಳಕ್ಕೆ ತಳ್ಳುತ್ತಿರುತ್ತದೆ. ಹೀಗೆ ತಳ್ಳಿದಾಗ ಕೋಲಿನ ಇನ್ನೊಂದು ತುದಿ ಡಬ್ಬಿಗೆ ದೂರ ಸರಿದು ಮತ್ತೆ ಮೊದಲಿನ ಸ್ಥಿತಿಗೆ ಬರುತ್ತದೆ. ಹೀಗೆ ಆಗುವಾಗ ಶಬ್ದ ನಿರಂತರವಾಗಿ ಹೊರಹೊಮ್ಮುತ್ತದೆ. ಮೇಲಿನ ಎರಡು ಕ್ರಮಗಳಲ್ಲಿ ಜನಪದರು ಖರ್ಚಿಲ್ಲದ ತಂತ್ರಗಾರಿಕೆ, ಅಪಾರ ಅನುಭವ ಹಾಗೂ ಪಾರಂಪರಿಕ ಜ್ಞಾನವನ್ನು ಕಾಣಬಹುದು. ಈಗಿನ ದುಬಾರಿ ಆಧುನಿಕ ಜೀವನದಲ್ಲೂ ತಮ್ಮ ಮೂಲ ಸೆಲೆಯನ್ನು ಬದಲಿಸಿಕೊಳ್ಳದೆ ಈ ಸಾಧನಗಳು ಬೆಳೆರಕ್ಷಣೆಯಲ್ಲಿತೊಡಗಿವೆ. ಖರ್ಚಿಲ್ಲದೆ, ತಾವೇ ಎಲ್ಲೆಂದರಲ್ಲಿ ನಿರ್ಮಿಸಬಹುದಾದ ಸರಳ ಸಾಧನವಾಗಿದ್ದು, ಬೆಳೆ ರಕ್ಷಣೆಯಲ್ಲಿ ಗಣನೀಯ ಕಾರ್ಯದಕ್ಷತೆ ಹೊಂದಿರುವುದರಿಂದ ಈ ಸಾಧನಗಳು ಜನಪ್ರಿಯವಾಗಿ ಈಗಲೂ ಬಳಕೆಯಲ್ಲಿದೆ.

**ಸಿಡಿಮದ್ದಿನ ಸರ** : ಈ ವಿಧಾನ ತೀರಾ ಇತ್ತೀಚಿನದೆಂದು ಹೇಳಬಹುದು. ಜನರಿಗೆ ಸಿಡಿಮದ್ದಿನ ತಿಳಿವಳಿಕೆ ಬಂದ ಬಳಿಕ ಬೆಳಕಿಗೆ ಬಂದ ಬೆಳೆ ರಕ್ಷಣೆಯ ತಂತ್ರಗಾರಿಕೆ. ಹತ್ತಾರು ಅಡಿ ಉದ್ದದ ನಾರಿನ ದಪ್ಪ ಹಗ್ಗ, ಬಿಡಿ ಪಟಾಕಿಗಳು ಹಾಗೂ ಬೆಂಕಿ ಈ ಸಾಧನಕ್ಕೆ ಬೇಕಾದ ವಸ್ತುಗಳು. ಮೊದಲು ಎಷ್ಟು ಗಂಟೆ ಸುಡುವ ಹಗ್ಗ ಬೇಕು ಎನ್ನುವುದನ್ನು ನಿರ್ಧರಿಸುತ್ತಾರೆ. ಹತ್ತು ನಿಮಿಷಕ್ಕೆ ಒಮ್ಮೆ ಬಿಡಿ ಪಟಾಕಿ ಸಿಡಿಯುವಂತೆ ವ್ಯವಸ್ಥೆ ಮಾಡುತ್ತಾರೆ. ಪಟಾಕಿಗಳನ್ನು ಹಗ್ಗದಲ್ಲಿ ಸೇರಿಸಿ, ಸರದಂತೆ ಮಾಡುತ್ತಾರೆ. ಒಂದು ಸರದಲ್ಲಿ ನೂರಕ್ಕೆ ಹೆಚ್ಚು ಪಟಾಕಿಗಳಿರುತ್ತವೆ. ಸಿಡಿಮದ್ದಿನ ಹಾರದ ಒಂದು ತುದಿಯನ್ನು ಪೈರಿನ ಮಧ್ಯೆ ನೆಟ್ಟ ಕಂಬದ ತುದಿಗೆ ಕಟ್ಟುತ್ತಾರೆ. ಕೆಲವು ಸಾರಿ ಮರದ ರಂಬೆಗಳಿಗೂ ಕಟ್ಟುವುದುಂಟು. ಸಿಡಿಮದ್ದಿನ ಸರವನ್ನು ಮಳೆ, ಇಬ್ಬನಿಯಿಂದ ಬೆಚ್ಚಗಿರಿಸಲು ಅಡಕೆ ಹಾಳೆಯ ಮೇಲು ಹೊದಿಕೆಯನ್ನು ಕಂಬದ ತುದಿಗೆ ಕಟ್ಟುತ್ತಾರೆ. ಹಗ್ಗದ ಇನ್ನೊಂದು ತುದಿಗೆ ಬೆಂಕಿಯನ್ನು ಹಚ್ಚುತ್ತಾರೆ. ಹಗ್ಗಕ್ಕೆ ತಗುಲಿದ ಬೆಂಕಿ ಪ್ರತಿ ಹತ್ತು ನಿಮಿಷಗಳಿಗೊಮ್ಮೆ ಸಿಡಿಮದ್ದುಗಳನ್ನು ಸಿಡಿಸಿ ಶಬ್ದ ಉಂಟು ಮಾಡುತ್ತದೆ. ಈ ವಿಧಾನದಿಂದ ಬೆಳೆ ರಕ್ಷಣೆ ಪೂರ್ಣ ಪ್ರಮಾಣದಲ್ಲಿ ಆದರೂ, ದುಬಾರಿಯಾಗಿದ್ದರಿಂದ ಬಹಳ ಕಡಿಮೆ.

**ಸಿಡಿಮದ್ದಿನ ಉಂಡೆ** : ಮೇಲ್ನೋಟಕ್ಕೆ ಮೇಲಿನ ಕ್ರಮದಂತೆ ಕಂಡರೂ ಇದು ಅದಕ್ಕಿಂತ ಭಿನ್ನವಾಗಿದೆ. ಕೋಳಿ ಅಥವಾ ಕುರಿಯ ಕರಳು, ಸಿಡಿಮದ್ದಿನ ಉಂಡೆ ಇದಕ್ಕೆ ಬೇಕಾದ ವಸ್ತುಗಳು, ಸಿಡಿಮದ್ದಿನ ಉಂಡೆಯನ್ನು ಕೋಳಿ ಅಥವಾ ಕುರಿಯ ಕರುಳಿನ ಮಧ್ಯೆ ಸೇರಿಸಿ, ಹಂದಿಗಳು ಹೊಲಗಳಿಗೆ ಬರುವ ದಾರಿಯಲ್ಲಿ ಇಡುತ್ತಾರೆ. ಮದ್ದಿನ ಉಂಡೆಯನ್ನು ಸಾಮಾನ್ಯವಾಗಿ ಸಂಜೆ ಇಟ್ಟು ಬೆಳಗ್ಗೆ ತೆಗೆದು ಬಿಡುತ್ತಾರೆ. ಕಾರಣ ಸಾಕು ಪ್ರಾಣಿಗಳಾದ ದನಕರು ಎಮ್ಮೆಗಳು ಈ ಮದ್ದಿನ ಉಂಡೆಯನ್ನು ತಿಂದು ಅಪಾಯವಾಗುವುದನ್ನು ತಪ್ಪಿಸುವ ಸದುದ್ದೇಶವಿದೆ. ಮದ್ದಿನ ಉಂಡೆಯನ್ನು ಕಾಣದ ಹಂದಿ ಕರುಳಿನ ಹೊಲಸನ್ನು ತಿನ್ನಲು ತೊಡಗುತ್ತದೆ. ತಿನ್ನುವ ಆತುರದಲ್ಲಿ ಅದರಲ್ಲಿದ್ದ ಗಟ್ಟಿ ಪದಾರ್ಥವನ್ನು ಜೋರಾಗಿ ಅಗಿದು ಬಿಡುತ್ತವೆ. ತಕ್ಷಣ ಮದ್ದಿನ ಉಂಡೆ ಸಿಡಿದು ಹಂದಿ ಸ್ಥಳದಲ್ಲೆ ಸಾಯುತ್ತದೆ. ಈ ವಿಧಾನದಿಂದ ಬೆಳೆ ರಕ್ಷಣೆಗಿಂತ ಮಾಂಸ ಭಕ್ಷಣೆಗೆ ಹೆಚ್ಚಿನ ಒತ್ತಿರುವುದು ಕಂಡುಬರುತ್ತದೆ. ಬೆಳೆ ರಕ್ಷಣೆಯ ಹಲವು ವಿಧಾನಗಳಲ್ಲಿಇದೂ ಒಂದು.

**ಕಾಗದದ ಹಾರ** : ಇದು ಖರ್ಚಿಲ್ಲದ ಸರಳ ವಿಧಾನ. ಹೊಲದ ತುಂಬಾ ಗೂಟಗಳನ್ನು ನೆಟ್ಟು, ದಾರವನ್ನು ಕಟ್ಟಿ, ಬಿಳಿಯ ಪೇಪರ್‌ಗಳನ್ನು ತೋರಣದಂತೆ ಅಂಟಿಸುತ್ತಾರೆ. ಗಾಳಿ ಬೀಸಿದಾಗಲೆಲ್ಲ ಕಾಗದ ಪಟಪಟ ಶಬ್ದ ಮಾಡುತ್ತದೆ. ಈ ಶಬ್ದ ನಿರಂತರವಾಗಿ ಹೊರಹೊಮ್ಮುತ್ತಿರುತ್ತದೆ. ಇದೇ ರೀತಿ ಪ್ಲಾಸ್ಟಿಕ್ ಪೇಪರ್‌ಗಳನ್ನು ಕಟ್ಟುತ್ತಾರೆ. ಈ ವಿಧಾನದಿಂದ ಪ್ರಾಣಿ ಪಕ್ಷಿಗಳು ಬೆಳೆಗೆ ಬಾರದಂತೆ ತಡೆಯಲು ಸಾಧ್ಯವಿದೆ. ಈ ವಿಧಾನ ಈಗಲೂ ಚಾಲ್ತಿಯಲ್ಲಿದೆ. ಬೆಲೆ ರಕ್ಷಣೆಯಲ್ಲಿ ಈ ವಿಧಾನ ಜನಪ್ರಿಯವಾಗಿದೆ.

**ಕ್ಯಾಸೆಟ್ ಟೇಪ್‌ನ ಹಾರ** : ಬಳಕೆಗೆ ಬಾರದ ಕ್ಯಾಸೆಟ್‌ಗಳ ಟೇಪ್‌ಗಳನ್ನು ಗದ್ದೆಯ ತುಂಬಾ ತೋರಣದಂತೆ ಕಟ್ಟುತ್ತಾರೆ. ಸಾಲಾಗಿ ನೆಟ್ಟ ಗೂಟಗಳಿಗೆ ಕಟ್ಟಿದ ಟೇಪ್ ಬಿಸಿಲಿನಲ್ಲಿ ಹೊಳೆದು, ಭಯವನ್ನುಂಟು ಮಾಡುವುದಲ್ಲದೆ, ಗಾಳಿ ಬೀಸಿದಾಗ ಧ್ವನಿಯನ್ನುಂಟುಮಾಡುತ್ತದೆ. ಬಿಸಿಲಿಗೆ ನಾನಾ ಬಣ್ಣಗಳಲ್ಲಿ ಹೊಳೆಯುವುದರಿಂದ ಪಕ್ಷಿಗಳು ಹೊಲದ ಕಡೆ ಸುಳಿಯಲಾರವು. ಈ ವಿಧಾನ ತೀರಾ ಈಚಿನದು. ಇದಕ್ಕೆ ಯಾವುದೇ ಖರ್ಚಿಲ್ಲ. ಈ ಕಾರಣದಿಂದಲೇ ಇದು ಬಹಳ ಜನಪ್ರಿಯವಾಗಿದೆ.

**ಶಿಸ್ತು ಕಟ್ಟುವುದು** : ಒಂದು ಸೂತ್ರ ವಿಧಾನಕ್ಕೆ ಬಂದೂಕನ್ನು ಕಟ್ಟಿ ಪ್ರಾಣಿಗಳನ್ನು ಕೊಲ್ಲುವುದೇ ಶಿಸ್ತು ವಿಧಾನ. ಪ್ರಾಣಿಗಳು ಹೊಲಕ್ಕೆ ಬರುವ ದಾರಿಯನ್ನು ಮೊದಲು ಗುರುತಿಸಿ, ಕೋವಿಯನ್ನು ಕಟ್ಟುತ್ತಾರೆ. ಬೆಳೆಯನ್ನು ಲೂಟಿ ಮಾಡಿದ ಹಾಗೂ ಹೆಜ್ಜೆ ಗುರುತಿನ ಆಧಾರದ ಮೇಲೆ ಶಿಸ್ತಿನ ಎತ್ತರ ಇತ್ಯಾದಿಗಳು ನಿರ್ಧಾರಗೊಳ್ಳುತ್ತವೆ. ಈ ವಿಧಾನದಿಂದ ಹುಲಿ, ಚಿರತೆ, ಕಾಡು ಹಂದಿ, ಕಾಡು ಕೋಣ, ಕುರಿ, ಜಿಂಕೆ, ನರಿ ಇತ್ಯಾದಿಗಳನ್ನು ಕೊಲ್ಲಬಹುದು. ಒಂದು ಪ್ರಾಣಿಯ ಅಳತೆಗೆ ಕಟ್ಟಿದ ಶಿಸ್ತಿನಲ್ಲಿ ಬೇರೊಂದು ಪ್ರಾಣಿಯನ್ನು ಕೊಲ್ಲಲಾಗುವುದಿಲ್ಲ. ಬೇರೆ ಬೇರೆ ಪ್ರಾಣಿಗಳ ಆಕಾರ ಎತ್ತರ ಒಂದೇ ತೆರನಾಗಿಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಈ ವಿಧಾನ ಬೆಳೆಯರಕ್ಷಣೆಯಲ್ಲಿ ಅಷ್ಟೇನು ಪರಿಣಾಮಕಾರಿಯಲ್ಲದಿದ್ದರೂ ಮಾಂಸಾಹಾರಿಗಳಿಗೆ ಗಣನೀಯ ಪ್ರಮಾಣದಲ್ಲಿ ಫಲಕಾರಿಯಾಗಿದೆ. ಈಚೀನ ದಿನಗಳಲ್ಲಿ ಈ ವಿಧಾನವನ್ನು ಬಳಸಿ ಹಂದಿಗಳನ್ನು ಹೆಚ್ಚಾಗಿ ಕೊಲ್ಲುತ್ತಾರೆ. ಸಂಜೆಯಾದ ಬಳಿಕ ಜನ ಹಾಗೂ ಸಾಕು ಪ್ರಾಣಿಗಳ ಓಡಾಟ ಪೂರ್ಣ ಪ್ರಮಾಣದಲ್ಲಿ ನಿಂತ ಮೇಲೆ ಬಂದೂಕನ್ನು ಕಟ್ಟಿ ನಸುಕಿನಲ್ಲಿಯೇ ಬಂದೂಕನ್ನು ಬಿಚ್ಚಿ ತರುತ್ತಾರೆ.

ಪ್ರಾಣಿಗಳು ಬೆಳೆಗೆ ಬರುವ ದಾರಿಗೆ ಸ್ವಲ್ಪ ದೂರ ಮರೆಯಲ್ಲಿ ನಾಲ್ಕು ಗೂಟಗಳನ್ನು ಆಳಕ್ಕೆ ನೆಡುತ್ತಾರೆ. ಎರಡೆರಡು ಕಂಬಗಳಿಗೆ ಅಡ್ಡ ಬಲಗುಗಳನ್ನು ಬಳ್ಳಿಯಿಂದ ಭದ್ರವಾಗಿ ಕಟ್ಟುತ್ತಾರೆ. ಈ ಬಲಗುಗಳು ಶಿಸ್ತಿಗೆ ಗುರಿಯಾಗುವ ಪ್ರಾಣಿಯ ಗುಂಡಿಕೆಯ ಎತ್ತರವನ್ನು ಅವಲಂಬಿಸಿರುತ್ತದೆ. ಈ ಅಡ್ಡ ಬಲಗುಗಳ ಮೇಲೆ ಈಡು ತುಂಬಿದ ಕೋವಿಯನ್ನು ಭದ್ರವಾಗಿ ಕಟ್ಟುತ್ತಾರೆ. ಬಂದೂಕಿನ ಹಿಂದಿನ ಭಾಗದ ಎರಡು ಅಡಿ ದೂರದಲ್ಲಿ ಎರಡು ಗೂಟಗಳನ್ನು ನೆಟ್ಟು, ಹಗ್ಗದ ತಿರುವಿನಲ್ಲಿ ಸೂತ್ರದ ಕಡ್ಡಿಯೊಂದನ್ನು ಕಟ್ಟುತ್ತಾರೆ. ಸೂತ್ರದ ಕಡ್ಡಿಯ ಎರಡೂ ತುದಿಗೆ ದಾರವನ್ನು ಕಟ್ಟುತ್ತಾರೆ. ಒಂದು ತುದಿಯ ದಾರವನ್ನು ಕೋವಿಯ ಹಿಂದಿನ ಗೂಟಕ್ಕೆ ಬಳಸಿ, ಬಂದೂಕಿನ ಬಾಯಿಯ ನೇರಕ್ಕೆ ಪ್ರಾಣಿಗಳು ನಡೆದಾಡುವ ದಾರಿಗೆ ಅಡ್ಡವಾಗಿ ಎಳೆದು ಗೂಟ ಒಂದಕ್ಕೆ ಕಟ್ಟುತ್ತಾರೆ. ಸೂತ್ರದ ಇನ್ನೊಂದು ತುದಿಯನ್ನು ಬಂದೂಕಿನ ಟ್ರಿಗರ್‌ಗೆ ತಾಗುವಂತೆ ಕಟ್ಟುತ್ತಾರೆ. ಬಂದೂಕಿಗೆ ಮಳೆ ಇಬ್ಬನಿಯಿಂದ ರಕ್ಷಿಸಲು ಅಡಕೆ ಹಾಳೆಯನ್ನು ಮುಚ್ಚುತ್ತಾರೆ. ಶಿಸ್ತು ಕಟ್ಟಿದ ಅನಂತರ ಬಂದೂಕಿನ ಟ್ರಿಗರ್‌ನ್ನು ಎಳೆದು, ಕಿವಿಗೆ ಕೇಪನ್ನು ಸೇರಿಸುತ್ತಾರೆ. ಕತ್ತಲೆಯಲ್ಲಿ ಕಾಡಿನಿಂದ ಹೊಲದ ಕಡೆ ಬರುವ ಪ್ರಾಣಿ ದಾರವನ್ನು ಸ್ಪರ್ಶ ಮಾಡಿದಾಗ ಅಡ್ಡಲಾದ ದಾರ ಸೂತ್ರದ ಕಡ್ಡಿಯನ್ನು ಜಗ್ಗುತ್ತದೆ. ತಕ್ಷಣ ಸೂತ್ರದ ಕಡ್ಡಿಯ ಇನ್ನೊಂದು ತುದಿಯ ದಾರ ಟ್ರಿಗರ್‌ನ್ನು ಎಳೆದು ಗುಂಡು ಹಾರುತ್ತದೆ. ಪ್ರಾಣಿ ಗುಂಡಿಗೆ ಬಲಿಯಾಗುತ್ತದೆ. ಈ ವಿಧಾನದಿಂದ ಜನರಿಗೂ ಸಾಕು ಪ್ರಾಣಿಗಳಿಗೂ ಅಪಾಯ ಒದಗುವುದರಿಂದ ಇದರ ಬಳಕೆ ಕಡಿಮೆಯಾಗಿದೆ.

**ಮನುಷ್ಯ ಚಾಲಿತ ತಡೆ :** ಹೊಲಗಳಲ್ಲಿ ಕಾವಲು ಹಕ್ಕೆಗಳನ್ನು ನಿರ್ಮಿಸಿಕೊಂಡು ಮನುಷ್ಯನೇ ಕಾಯುವ ಹಲವು ವಿಧಾನಗಳು ಈ ವಿಭಾಗದಲ್ಲಿ ಬರುತ್ತವೆ. ಈ ಎಲ್ಲಾ ವಿಧಾನಗಳಿಗೂ ಮನುಷ್ಯನ ಶಕ್ತಿ ಅಗತ್ಯವಾಗಿ ಬೇಕು. ಸಿಡಿಮದ್ದು ಹಾರಿಸುವುದು, ಡಬ್ಬಿ ಅಥವಾ ತಮಟೆ ಬಡಿಯುವುದು ; ಕಾವಲು ಹಕ್ಕೆ ಹಾಗೂ ಬೆಂಕಿ ಹಾಕಿಕೊಳ್ಳುವುದು ಇತ್ಯಾದಿಗಳು ಮುಖ್ಯವಾಗಿವೆ.

**ಸಿಡಿಮದ್ದು ಹಾರಿಸುವುದು :** ಬೆಳೆ ರಕ್ಷಣೆಯ ವಿಧಾನದಲ್ಲಿ ಇದು ದುಬಾರಿಯಾಗಿದ್ದು, ನೂರಾರು ಬಿಡಿ ಪಟಾಕಿಗಳನ್ನು ಚೀಲದಲ್ಲಿ ತುಂಬಿಕೊಂಡು ಬೆಳೆದ ಪೈರಿನ ಸುತ್ತಾ ತಿರುಗಾಡುತ್ತಾ ಕೈಯಲ್ಲಿ ಹಿಡಿದ ಪಂಜಿನಿಂದ ಪಟಾಕಿಗಳನ್ನು ಸಿಡಿಸಿ, ಶಬ್ದ ಮಾಡಿ ಪ್ರಾಣಿ, ಪಕ್ಷಿಗಳನ್ನು ಓಡಿಸುತ್ತಾರೆ. ಈ ವಿಧಾನವು ಶ್ರಮದಾಯಕ ಹಾಗೂ ಹೆಚ್ಚಿನ ಖರ್ಚಿನದು. ಈ ಕಾರಣಕ್ಕಾಗಿ ಇದರ ಬಳಕೆ ತೀರ ಕಡಿಮೆಯಾಗಿದೆ. ಇದೇ ರೀತಿಯಲ್ಲಿ ಇನ್ನೊಂದು ವಿಧಾನ ಸಿಡಿಮದ್ದಿನ ದಡಾಕಿಗಳನ್ನು ಅಲ್ಲಲ್ಲಿ ಸಿಡಿಸುತ್ತಾರೆ. ಇದಕ್ಕೆ ದಡಾಕಿ ಎನ್ನುವ ಮದ್ದು ತುಂಬಿ ಬಡಿಯುವ ಸಾಧನವನ್ನು ಬಳಸುತ್ತಾರೆ. ಕಬ್ಬಿಣದ ಈ ದಡಾಕಿಯು ಸುತ್ತಿಗೆಯ ಆಕಾರದಲ್ಲಿರುತ್ತದೆ. ಸುತ್ತಿಗೆಯ ಮಧ್ಯೆ ಎರಡು ಇಂಚು ರಂಧ್ರವನ್ನು ಕೊರೆದು ರಂಧ್ರವನ್ನು ಮುಚ್ಚುವ ಕಬ್ಬಿಣದ ನಾಲ್ಕು ಇಂಚಿನ ಬೆಣೆಯನ್ನು ಮಾಡಿರುತ್ತಾರೆ. ರಂಧ್ರಕ್ಕೆ ಗಂಧಕವನ್ನು ತುಂಬಿ, ಅದರ ಮೇಲೆ ಕಾಗದದ ಉಂಡೆಯನ್ನು ತುರುಕಿ ಅನಂತರ ಬೆಣೆಯನ್ನು ಸಿಕ್ಕಿಸಿ, ದಡಾಕಿಯನ್ನು ಸುತ್ತಿಗೆಯನ್ನು ಬಡಿಯುವಂತೆ ಜೋರಾಗಿ ಬಡಿಯುತ್ತಾರೆ. ಬಡಿದಾಗ ಬಂದೂಕಿನ ಶಬ್ದದಂತೆ ಶಬ್ದ ಹೊರ ಹೊಮ್ಮುತ್ತದೆ. ಈ ಸಾಧನವನ್ನು ಅಡಕೆ ತೋಟ ಕಾಯುವವರು ಹೆಚ್ಚಾಗಿ ಬಳಸುತ್ತಾರೆ. ಮಂಗಗಳನ್ನು ಬೆದರಿಸಲು ಇದು ಬಳಕೆಯಾಗುತ್ತದೆ. ಇದೇ ರೀತಿಯ ಇನ್ನೊಂದು ದೇಸಿ ಸಾಧನವನ್ನು ಬಿದಿರಿನಿಂದ ಮಾಡಿದ ಸೀಮೆಎಣ್ಣೆ ದಡಾಕಿ ಎಂದೇ ಕರೆಯುತ್ತಾರೆ. ಇಲ್ಲಿ ಗಂಧಕದ ಬದಲು ಸೀಮೆಎಣ್ಣೆ ಬಳಕೆಯಾಗುತ್ತದೆ. ಬಳಸುವ ವಿಧಾನವು ಬೇರೆಯದೇ ಆಗಿದೆ.

**ಡಬ್ಬ ಅಥವಾ ತಮಟೆಗಳನ್ನು ಬಡಿಯುವುದು :** ಖರ್ಚಿಲ್ಲದ ಒಂದು ಸರಳ ವಿಧಾನ. ಬೆಳೆದು ನಿಂತ ಪೈರಿನ ಹೊಲದಲ್ಲಿ ಸಂಚರಿಸುತ್ತಾ ಡಬ್ಬ ಅಥವಾ ತಮಟೆಗಳನ್ನು ಬಾರಿಸಿ, ಪ್ರಾಣಿ ಪಕ್ಷಿಗಳನ್ನು ಓಡಿಸುತ್ತಾರೆ. ಇದರ ಜೊತೆ ಜೊತೆ ಕಾವಲುಗಾರ ಕಾಕು, ಕೇಕೆ ಹಾಕುತ್ತಿರುತ್ತಾನೆ. ಅತಿ ಸುಲಭ ಬೆಳೆ ರಕ್ಷಣಾ ವಿಧಾನವಾಗಿದ್ದು, ಈಗಲೂ ಬಳಕೆಯಲ್ಲಿದೆ. ಇದರಲ್ಲೇ ಇನ್ನೊಂದು ವಿಧಾನವು ಇದೆ. ಪೈರಿನ ಮಧ್ಯೆ ಕಂಬವೊಂದನ್ನು ಗಟ್ಟಿಯಾಗಿ ನೆಟ್ಟು, ಅದಕ್ಕೆ ಡಬ್ಬಿಯನ್ನು, ತಮಟೆಯನ್ನು ಬಿಗಿಯಾಗಿ ಕಟ್ಟಿ, ಅದರ ಬಾರಿಸುವ ಕೋಲನ್ನು ಎದುರು ಕಟ್ಟುತ್ತಾರೆ. ಬಾರಿಸುವ ಕೋಲಿಗೆ ದಾರವನ್ನು ಕಟ್ಟಿ, ದಾರದ ಇನ್ನೊಂದು ತುದಿಯನ್ನು ಕಾವಲು ಮನೆಯಲ್ಲಿ ಕಟ್ಟಿಕೊಳ್ಳುತ್ತಾರೆ. ಕಾವಲುಗಾರ ಹಗ್ಗವನ್ನು ಹಿಡಿದು ಎಳೆದಾಗ ಪೈರಿನ ಮಧ್ಯೆ ಇರುವ ತಮಟೆಗೆ ಕೋಲು ಬಡಿದು ಶಬ್ದ ಮಾಡುತ್ತದೆ. ಇಲ್ಲಿ ಕಾವಲುಗಾರ ಕುಳಿತಲ್ಲಿಯೇ ಕಾರ್ಯ ನಿರ್ವಹಿಸುತ್ತಾನೆ.

**ಕಾವಲು ಹಕ್ಕೆ ಹಾಗೂ ಬೆಂಕಿ ಹಾಕಿಕೊಳ್ಳುವುದು :** ಪೈರು ಕಟಾವಿಗೆ ಬರುವ ಸಂದರ್ಭದಲ್ಲಿ ಬೆಳೆಗಾರ ತನ್ನ ಬೆಳೆಯನ್ನು ಹಗಲು ರಾತ್ರಿ ಎನ್ನದೇ ಕಾಯಬೇಕಾಗುತ್ತದೆ.ರಾತ್ರಿಯಲ್ಲಿ ಕಾವಲು ಮಾಡುವ ಅನಿವಾರ್ಯತೆ ಇರುವಾಗ ಅವನು ಸುರಕ್ಷಿತವಾಗಿ ಇರಲು ಹಕ್ಕೆಯನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಹೊಲದ ಎತ್ತರದ ಪ್ರದೇಶದಲ್ಲಿ ಸಣ್ಣ ಗುಡಿಸಲೊಂದನ್ನು ಕಟ್ಟಿಕೊಳ್ಳುತ್ತಾರೆ. ಕುಳಿತುಕೊಳ್ಳಲು ಅಥವಾ ಮಲಗಿಕೊಳ್ಳಲು ಅದರ ಒಳಗೆ ಮಂಚದ ಹಾಗೆ ಎತ್ತರದ ಅಟ್ಟವನ್ನು ನಿರ್ಮಿಸಿಕೊಳ್ಳುತ್ತಾರೆ. ಗುಡಿಸಿಲಿನ ಎದುರಿನಲ್ಲಿ ದೊಡ್ಡ ದೊಡ್ಡ ಮರದ ದಿಮ್ಮಿಗಳಿಗೆ ಬೆಂಕಿ ಹಚ್ಚುತ್ತಾರೆ. ರಾತ್ರಿಯಲ್ಲಿ ಬೆಂಕಿ ಧಗಧಗಿಸಿ ಉರಿಯುತ್ತಿರುತ್ತದೆ. ಬೆಂಕಿಯ ಬೆಳಕು ಹಾಗೂ ಕಾವಲುಗಾರನ ಬೊಬ್ಬೆಯನ್ನು ಕೇಳಿದ ಪ್ರಾಣಿಗಳು ಪೈರಿನ ಕಡೆಗೆ ಸುಳಿಯಲಾರವು.

**ಸಾಕು ನಾಯಿಗಳಿಂದ :** ಬೆಳೆದ ಬೆಳೆಯನ್ನು ಉಳಿಸಿಕೊಳ್ಳಲು ಏನೆಲ್ಲ ಪ್ರಯತ್ನ, ತಂತ್ರ ಮಾಡುವ ಜನಪದರು ತಮ್ಮ ನಿಷ್ಠೆಯ ಭಂಟ ನಾಯಿಯನ್ನು ಬಳಸಿಕೊಳ್ಳುತ್ತಾರೆ. ಹೊಲದಲ್ಲಿ ನಿರ್ಮಿಸಿದ ಹಕ್ಕೆಯಲ್ಲಿ ನಾಯಿಯನ್ನು ಕಟ್ಟಲಾಗುವುದು. ನಾಯಿಯು ಹೊಲಕ್ಕೆ ಬರುವ ಪ್ರಾಣಿ - ಪಕ್ಷಿಗಳನ್ನು ಕಂಡ ತಕ್ಷಣ ಬೊಗಳಲಾರಂಭಿಸುತ್ತದೆ. ನಾಯಿಯ ಬೊಗಳಿಕೆಗೆ ಬೆದರಿದ ಪ್ರಾಣಿ ಪಕ್ಷಿಗಳು ಓಡಿ ಹೋಗುತ್ತವೆ. ಮಂಗ, ನರಿ, ಹಂದಿ, ಮೊಲ ಇತ್ಯಾದಿಗಳು ನಾಯಿಯ ಬೊಗಳುವಿಕೆಯ ಸದ್ದಿಗೆ ಬೆದರಿ ಓಡುತ್ತವೆ.

**ಅತಿಮಾನುಷ ರಕ್ಷಣೆ :** ಬೆಳೆ ರಕ್ಷಣೆಯಲ್ಲದೆ ಆಸ್ತಿ-ಪಾಸ್ತಿ-ಜನ ಜಾನುವಾರುಗಳನ್ನು ಅತಿಮಾನುಷ ಶಕ್ತಿಗಳು ಕಾಯುತ್ತವೆ ಎಂದು ನಂಬುತ್ತಾರೆ. ಇದು ಕೇವಲ ನಂಬಿಕೆಯ ತಳಹದಿಯ ಮೇಲೆ ನಿಂತಿದೆ. ಇದರಿಂದ ಬೆಳೆ ಅಥವಾ ಇತರ ವಸ್ತುಗಳಿಗೆ ಮಾನವನಿಂದಾಗುವ ಹಾನಿಯು ಗಣನೀಯ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬರುತ್ತದೆ. ಪ್ರಾಣಿ, ಪಕ್ಷಿ ಇತ್ಯಾದಿಗಳ ಉಪಟಳವನ್ನು ನಿಯಂತ್ರಿಸುವ ಶಕ್ತಿಯೂ ಇದೆ ಎಂದು

ನಂಬುತ್ತಾರೆ. ಇದರಲ್ಲಿ ಅಭೌತಿಕ ಚೌಕಟ್ಟು ಹೊಲದ ಸುತ್ತ ನಿರ್ಮಾಣವಾಗಿ ಅದರ ಕಾವಲು ಹೊಣೆಯನ್ನು ಅಗೋಚರ ಶಕ್ತಿ ವಹಿಸುತ್ತವೆ ಎಂದು ನಂಬುತ್ತಾರೆ.

**ಕಾವಲು ದೈವಗಳು :** ತೋಟ, ಗದ್ದೆ, ಹೊಲಗಳ ಪಕ್ಕದಲ್ಲಿ ಕಾವಲು ದೈವಗಳ ಬನಗಳಿರುವುದು ಸಾಮಾನ್ಯ. ಅವುಗಳಲ್ಲಿ ಗ್ರಾಮದೇವತೆಗಳು, ಬ್ರಹ್ಮ, ಭೂತ, ಚೌಡಿ, ಮಾಸ್ತಿ, ಜಟಕ, ದುರ್ಗಿ, ಕಾಳಿ, ಮಾರಿ ಮುಖ್ಯವಾದವುಗಳು. ರಕ್ಷಣೆಯ ಜವಾಬ್ದಾರಿ ವಹಿಸಿಕೊಂಡ ಹೆಚ್ಚಿನ ದೈವಗಳಿಗೆ ಗುಡಿ-ಮೂರ್ತಿಗಳು ಇಲ್ಲ. ಮರದಡಿಯ ಗುಂಡನೆಯ ಕಾಡು ಕಲ್ಲೇ ಮೂರ್ತಿ, ಮರದ ನೆರಳೆ ಅವುಗಳ ಸೂರು. ಸಾಮಾನ್ಯವಾಗಿ ಗ್ರಾಮದೇವತೆಗಳಿಗೆ ಊರಿನ ಮಧ್ಯೆ ಗುಡಿಗಳಿರುತ್ತವೆ. ಕೆಲವು ಭಾಗಗಳಲ್ಲಿ ಮಾರಿ, ದುರ್ಗಿಗಳಿಗೆ ಮರದ ಆಶ್ರಯ ಸ್ಥಳ ಬುಡದಲ್ಲೆ. ದೈವಗಳಿಗೆ ಗುಡಿಗಳು ಇರಲಿ ಇಲ್ಲದಿರಲಿ, ಅವುಗಳಿಗಿರುವ ರಕ್ಷಣೆ ಜವಾಬ್ದಾರಿ ಒಂದೇ ತೆರನಾಗಿರುತ್ತದೆ. ಈ ಕಾವಲು ದೈವಗಳು ಆಶ್ರಯ ಪಡೆದ ಮರಗಳ ಗುಂಪಿಗೆ 'ದೇವರ ಬನ' ಎಂದು ಕರೆಯುತ್ತಾರೆ. ದೇವರ ಬನದಲ್ಲಿ ಬೆಳೆದ ಮರಗಳನ್ನು ಯಾರೂ ಕಡಿಯುವಂತಿಲ್ಲ. ಈ ಕಾರಣದಿಂದ ಅವು ಪೂಜನೀಯವಾಗಿ, ದೈವದ ರಕ್ಷಣೆಯಲ್ಲಿ ದಟ್ಟವಾಗಿ ಬೆಳೆದಿವೆ. ಮುಟ್ಟು, ಮೈಲಿಗೆ, ಸೂತಕ ಇತ್ಯಾದಿಗೆ ಒಳಪಟ್ಟವರು 'ಬನದ' ಕಡೆ ಯಾವ ಕಾರಣಕ್ಕೂ ಸುಳಿಯುವುದಿಲ್ಲ; ಸುಳಿದರೆ ಮನೆಯ ಬಾಗಿಲ ಹತ್ತಿರ ಮಾಯದ ಸರ್ಪ ಕಾಣಿಸಿಕೊಳ್ಳುತ್ತದೆಂದೂ ತಪ್ಪು ದಂಡ ಕಟ್ಟುವವರೆಗೆ ಅದು ಹೋಗುವುದಿಲ್ಲವೆಂದೂ ಜನರಲ್ಲಿ ನಂಬಿಕೆ ಇದೆ. ಮೇಲಿನ ಪ್ರತಿ ದೈವಗಳಿಗೂ ಒಂದೊಂದು ಅಭೌತಿಕವಾದಂಥ 'ಕಾವಲು ಗಡಿ'ಗಳಿರುತ್ತವೆ. ಕಾವಲು ಗಡಿ ಸಂಬಂಧಿಸಿದ ಹೊಲದ ಸುತ್ತಾ ಸುತ್ತುವರೆದಿರುತ್ತದೆ. ಬೆಳೆಯನ್ನು ನಾಶ ಮಾಡಲೋ ಕಡಿಯಲೋ ಬಂದ ಪ್ರಾಣಿ, ಪಕ್ಷಿ ಹಾಗೂ ಮನುಷ್ಯ ಈ ಗಡಿಯನ್ನು ದಾಟಲು ಸಾಧ್ಯವಿಲ್ಲವೆಂದು ನಂಬುತ್ತಾರೆ. ಹಾಗೆ ದಾಟಿ ಬಂದರೆ ಎದೆ ಒಡೆದು ಸತ್ತು ಹೋಗುತ್ತಾರೆಂದು ಹೇಳುತ್ತಾರೆ.

ಒಂದೊಂದು ಬನದಲ್ಲಿ ಆಶ್ರಯ ಪಡೆದ ದೈವ ಆಯಾಯ ಹೊಲದ ರಕ್ಷಣೆಯನ್ನು ಮಾಡುತ್ತಿರುತ್ತದೆ. ಊರು ಹಾಗೂ ಊರಿನ ಹೊಲದ ಒಟ್ಟು ರಕ್ಷಣೆಯ ಜವಾಬ್ದಾರಿಯನ್ನು ಆಯಾಯ ಊರಿನ ಗ್ರಾಮದೇವತೆಯರದಾಗಿರುತ್ತದೆ. ಅವುಗಳ ರಕ್ಷಣಾ ಗಡಿಯು ಆ ಗ್ರಾಮದ ಸುತ್ತಲೂ ಸುತ್ತಿಕೊಂಡಿರುತ್ತದೆ. ಹೀಗೆ ತಮ್ಮ ಹೊಲ, ದನಕರು, ಜನ, ಒಡವೆ, ವಸ್ತುಗಳನ್ನು ವರ್ಷವಿಡೀ ರಕ್ಷಿಸಿದ ದೈವಗಳಿಗೆ ಹರಕೆಯ ರೂಪದಲ್ಲಿ ಕೃತಜ್ಞತೆ ಸಲ್ಲಿಸುತ್ತಾರೆ. ಹರಕೆಗಳು ವರ್ಷಕ್ಕೆ ಒಂದು ಬಾರಿ ನಡೆಯುತ್ತವೆ. ಹರಕೆಗಳನ್ನು ಊರಿನ ಎಲ್ಲರೂ ಸೇರಿ ಆಚರಿಸುತ್ತಾರೆ. ಕೆಲವು ದೈವಗಳಿಗೆ ಕುಟುಂಬದವರು ಮಾತ್ರ ಹರಕೆ ಸಲ್ಲಿಸುವುದು ಉಂಟು. ಸಾಮಾನ್ಯವಾಗಿ ಗ್ರಾಮದೇವತೆಯ ಜೊತೆಗೆ ಎಲ್ಲಾ ದೇವತೆಗಳಿಗೂ ಊರೊಟ್ಟಿನ ಎಲ್ಲರೂ ಸೇರಿ ಹರಕೆ ಸಲ್ಲಿಸುವುದು ಕಂಡುಬರುತ್ತದೆ. ಹರಕೆಯಲ್ಲಿ ಮುಖ್ಯವಾಗಿ ಕುರಿ, ಕೋಳಿ, ಹಂದಿಗಳನ್ನು ಬಲಿ ಕೊಡುತ್ತಾರೆ. ಒಂದೊಂದು ಊರಿನಲ್ಲಿ ಒಂದೊಂದು ನಿಗದಿತ ದಿನದಲ್ಲಿ ಹರಕೆ ಸಲ್ಲಿಸುವುದು ಕಂಡುಬರುತ್ತದೆ. ಹೆಚ್ಚಾಗಿ ಮಹಾಲಯ ಅಮಾವಾಸ್ಯೆ ಹಾಗೂ ಹೋಳಿಹುಣ್ಣಿಮೆಯ ಮೂರು ದಿವಸ ಮೊದಲು ಹರಕೆ ಸಲ್ಲಿಸುವುದು ರೂಢಿಯಲ್ಲಿದೆ.

**ಮಂತ್ರ - ತಂತ್ರ ಆಚರಣೆ :** ಮಂತ್ರ- ತಂತ್ರಗಳು ಕೆಡುಕು ಮಾಡುವುದಕ್ಕೆ ಹೆಚ್ಚಾಗಿ ಬಳಕೆಯಾಗುತ್ತವೆ. ಆದರೆ ಮಂತ್ರ - ತಂತ್ರಗಳನ್ನು ಒಳ್ಳೆಯ ಕೆಲಸಕ್ಕೂ ಬಳಸುವುದನ್ನು ಇಲ್ಲಿ ಕಾಣಬಹುದು. ಪೈರಿನ ಮಧ್ಯೆ ಕಾವಲು ಹರೆ ಇರುವ ಕಂಬವನ್ನು ನೆಟ್ಟು ಅದರ ಮೇಲೆ ಬಿಳಿಕಲ್ಲು ಇಡುವುದು, ಶಾಂತಿ ಮಾಡುವುದು, ಮಗೆ ಮುಂಡುಗ, ಕಟ್ಟಜ್ಜಿ ಮಾಡುವುದು, ದೀಪಾವಳಿಯಲ್ಲಿ ದೀಪ ಹಚ್ಚುವುದು, ಚರಗಚೆಲ್ಲುವುದು, ಇನ್ನೂ ಮುಂತಾದ ಆಚರಣೆಗಳಲ್ಲಿ ಬೆಳೆಗಳಿಗೆ ಕೆಟ್ಟ ಶಕ್ತಿಗಳಿಂದ ಆಗುವ ತೊಂದರೆ ನಿವಾರಿಸುವ ಪ್ರತಿತಂತ್ರವಿದೆ ಎನ್ನುವುದು ಆಚರಣೆಗಾರರ ನಂಬಿಕೆ. ಮಗೆ ಮುಂಡುಗವನ್ನು ಮಗೆ ಮಳೆಯ ಯಾವುದಾದರೂ ಒಂದು ಅನುಕೂಲ ದಿನ ಹಾಕುವುದು ಪದ್ಧತಿ. ಸೂರ್ಯ ಹುಟ್ಟುವ ಮೊದಲು ಬರಿಮೈಯಲ್ಲಿ ಗದ್ದೆಗೆ ಹೋಗಿ ಮುಂಡುಗ ಎನ್ನುವ ಗಿಡವನ್ನು ನೆಟ್ಟು ಬರಬೇಕೆಂಬ ನಿಯಮವಿದೆ. ಹೀಗೆ ವಿಧಿವತ್ತಾಗಿ ಆಚರಿಸಿದ ವ್ಯಕ್ತಿಯ ಆಯಸ್ಸು ವೃದ್ಧಿಯಾಗುವುದೆಂದು, ಅದೇ ಬಗೆಯಲ್ಲಿ ಬತ್ತವು ಹೆಚ್ಚಾಗುತ್ತದೆಂದು ನಂಬುತ್ತಾರೆ. 'ಖಂಡುಗಕ್ಕೊಂದು ಮುಂಡುಗ ಹಾಕಿದರೆ ಶ್ರೇಯಸ್ಸು' ಎನ್ನುವ ಮಾತಿದೆ. ಈ ಆಚರಣೆಯ ಒಡಲಲ್ಲಿ ಕೀಟ ನಿಯಂತ್ರಣದ ತಂತ್ರವಿರುವುದನ್ನು ಕಾಣಬಹುದು. ಬಯಲಾದ ಗದ್ದೆಗಳಲ್ಲಿ ಹಕ್ಕಿಗಳು ಕುಳಿತು ವಿರಮಿಸಿ, ಹುಳು ಹುಪ್ಪಟೆ ಹುಡುಕುವುದಕ್ಕೆ ಇವು ಸಹಕಾರಿಯಾಗಿವೆ. ಇದೇ ಬಗೆಯ ಆಚರಣೆಯನ್ನು ಹೋಲುವ 'ಮುಷ್ಠ' ಪದ್ಧತಿಯು ಮಲೆನಾಡಿನ ಭಾಗದಲ್ಲಿದೆ. ಕಾಡಿನಲ್ಲಿ ದೊರಕುವ ವಾಟೆ ಸೊಪ್ಪು, ನೆಲ್ಲಿ ಸೊಪ್ಪು ಹಾಗೂ ಮುಕ್ಕುಡಕನ ಸೊಪ್ಪುಗಳನ್ನು ಕಡಿದು ತಂದು ಎಲ್ಲಾ ಗದ್ದೆಗಳಲ್ಲೂ ಗೂಟ ಹೊಡೆದು ನಿಲ್ಲಿಸುತ್ತಾರೆ. ಅಲ್ಲದೆ ಗದ್ದೆಗಳ ಒಳಭಾಗದಲ್ಲಿ ಮಾರಿಗೊಂದರಂತೆ ಸೊಪ್ಪಿನ ತುಂಡೇ ನೆಡುತ್ತಾರೆ. ಗಂಡಸರು ಮಾತ್ರ ಭಾಗವಹಿಸಿರುತ್ತಾರೆ. ಕಾಡಿನಿಂದ ಸೊಪ್ಪು ತರಲು ಹೋಗುವ ವ್ಯಕ್ತಿ ನಸುಕಿನಲ್ಲಿಯೇ ಎದ್ದು ಯಾರೊಂದಿಗೂ ಮಾತನಾಡದೇ ಬೆತ್ತಲೆ ಹೋಗಬೇಕೆಂದು ನಿಯಮವಿದೆ. ಈಚಿನ ದಿನಗಳಲ್ಲಿ ಸೊಪ್ಪು ತರುವ ವ್ಯಕ್ತಿ ಬೆತ್ತಲಾಗಿರುವುದಿಲ್ಲ.

ನಾಟಿ ಮಾಡಿದ ಸಸಿಗಳು ಬಹಳ ಎಳಸಾಗಿದ್ದು, ಅತಿವೃಷ್ಟಿಯಾಗಿ ಕರಗಿ ಹೋಗುತ್ತಿದ್ದರೆ ಅಂಥ ಗದ್ದೆಗಳಿಗೆ ಎರಕಲು ತುಂಡೇ ಹಾಕುತ್ತಾರೆ. ಸುಮಾರು ಮೂರು ಅಡಿ ಉದ್ದದ ನೆಲ್ಲಿ ಹರೆಯನ್ನು ಹವರು ಕಲೆಗೋಲು ಇಟ್ಟು ಕಡಿದು ಅದಕ್ಕೆ ಕೊಳೆ ಬಳ್ಳಿಯ ಒಂದು ಉಂಗುರ ಮಾಡಿ ಹಾಕಿ ಬೈನೆಸೊಪ್ಪನ್ನು ಸಿಕ್ಕಿಸಿ ಗದ್ದೆ ಎಲ್ಲಿ ಹೆಚ್ಚು ಕರಗುತ್ತದೋ ಅಲ್ಲಿ ಹೂಳುವುದು ಕ್ರಮ. ಕೃಷಿಕರು ಮಾಂತ್ರಿಕ ಶಕ್ತಿಯಲ್ಲಿ ನಂಬಿಕೆಯಿಟ್ಟು ಸೊಪ್ಪು ಇತ್ಯಾದಿ ವಸ್ತುಗಳನ್ನು ಭಕ್ತಿಪೂರ್ವಕವಾಗಿ ಹಾಕುತ್ತಾರೆ. ಮಾಂತ್ರಿಕಾಚರಣೆಯಲ್ಲಿ ಬಳಸಿದ ವಸ್ತುಗಳ ಔಷಧೀಯ ಗುಣದಿಂದ ಕ್ರಿಮಿಕೀಟಾದಿಗಳು ದೂರವಾದವೇ ಹೊರತು ಮಾಂತ್ರಿಕಾಚರಣೆಯಿಂದಲ್ಲ. ಒಟ್ಟಿನಲ್ಲಿ ಆಚರಣೆಯ ನೆವದಿಂದ ಗದ್ದೆಗಳಿಗೆ ಅನುಕೂಲವಾಯಿತು.

*ಆರ್.ಎಸ್.ಸಿ.*

**ಬೆಳ್ಳುಳ್ಳಿ** ಇದು ಲಿಲಿಯೇಸೀದ ಅಲ್ಲಿಯಂ ಜಾತಿಯ ಕುಟುಂಬಕ್ಕೆ ಸೇರಿದೆ. ಅಲ್ಲಿಯಂ ಸೇಟಿವಂ ಇದರ ಸಸ್ಯವೈಜ್ಞಾನಿಕ ಹೆಸರು. ತೆಲುಗಿನಲ್ಲಿ ತೆಲ್ಲಗಡ್ಡಲು ಎಂದೂ, ತಮಿಳಿನಲ್ಲಿ ಪೂಂಡು ಎಂದೂ, ಇಂಗ್ಲಿಷಿನಲ್ಲಿ ಗಾರ್ಲಿಕ್ ಎಂದೂ, ಸಂಸ್ಕೃತದಲ್ಲಿ ಲಕುನ, ಉಗ್ರಗಂಧ, ರಸೋನ ಎಂದೂ ಕರೆಯುತ್ತಾರೆ.

ಇದರ ಮೂಲಸ್ಥಾನ ಮಧ್ಯ ಏಷ್ಯಾ. ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಇದರ ಕೃಷಿ ಉಂಟು. ಇದು ಬಹುವಾರ್ಷಿಕ ಬೆಳೆ. ಈರುಳ್ಳಿಯ ಹತ್ತಿರ ಸಂಬಂಧಿ. ಇದರ ಎಲೆಗಳು ದಬ್ಬಳದಂತೆ ಕೊಳವೆಯಾಕಾರದಲ್ಲಿದ್ದು ಈರುಳ್ಳಿ ಎಲೆಗಿಂತ ಗಾತ್ರದಲ್ಲಿ ಸ್ವಲ್ಪ ಸಣ್ಣ ಗೆಡ್ಡೆಗಳು ಮಣ್ಣಿನ ಒಳಗೆ ಇದ್ದು ಹಲವು ಎಸಳುಗಳಿಂದ ಕೂಡಿರುತ್ತದೆ. ಇದರ ಕಟುವಾಸನೆಗೆ ಗೆಡ್ಡೆಯ ಒಳಗಿರುವ ಗಂಧಕಯುಕ್ತ ತೈಲ ಕಾರಣ.



**ಬೇಸಾಯಕ್ರಮ :** ತಂಪು ಹವೆಯಿಂದ ಕೂಡಿರುವ ಎತ್ತರವಾದ ಭೂಭಾಗಗಳಲ್ಲಿ ಬೆಳ್ಳುಳ್ಳಿ ಚೆನ್ನಾಗಿ ಬೆಳೆಯುತ್ತದೆ. ಇದಕ್ಕೆ ಭೂಮಿ ಹೆಚ್ಚು ಫಲವತ್ತಾದ ಭೂಮಿಯೇ ಬೇಕು. ಕೆಂಪುಮಣ್ಣು ಮತ್ತು ಮರಳು ಮಿಶ್ರಿತಗೋಡು ಮಣ್ಣುಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ಪ್ರತಿಯೊಂದು ಗೆಡ್ಡೆಯಲ್ಲಿಯೂ ಹಲವು ಎಸಳುಗಳಿದ್ದು ಚೆನ್ನಾಗಿ ಬಲಿತ ಆರೋಗ್ಯಕರವಾದ ಗೆಡ್ಡೆಗಳನ್ನು ಆಯ್ದು ಬಿಡಿಸಿ ಬಿತ್ತನೆಗೆ ಉಪಯೋಗಿಸುವರು. ನೆಲವನ್ನು ಮೂರ್‍ನಾಲ್ಕು ಬಾರಿ ಉತ್ತು ಕೊಟ್ಟಿಗೆ ಗೊಬ್ಬರವನ್ನು ಯಥೇಚ್ಛವಾಗಿ ಮಣ್ಣಿಗೆ ಬೆರೆಸಬೇಕು. ಹದಗೊಳಿಸಿದ ಭೂಮಿಯನ್ನು ಪಾತಿಗಳಾಗಿ ವಿಂಗಡಿಸಿ ಅರ್ಧಅಡಿ ಅಂತರದಲ್ಲಿ ಸಾಲುಗಳನ್ನು ಮಾಡಿಕೊಂಡು ಬೆಳ್ಳುಳ್ಳಿ ಎಸಳುಗಳನ್ನು ನೆಡುತ್ತಾರೆ. ಆರು ತಿಂಗಳ ಒಳಗಾಗಿ ಇವು ಬಲಿತು ಫಸಲನ್ನು ಕೊಡುತ್ತವೆ.

ನೂರು ಗ್ರಾಂ ಬೆಳ್ಳುಳ್ಳಿಯಲ್ಲಿರುವ ಪೌಷ್ಟಿಕಾಂಶಗಳು ಇಂತಿವೆ

| | |
|---|---|
| ತೇವಾಂಶ | 62.0 ಗ್ರಾಂ |
| ಸಸಾರಜನಕ | 6.1 ಗ್ರಾಂ |
| ಕೊಬ್ಬು | 0.1 ಗ್ರಾಂ |
| ಖನಿಜಗಳು | 1.0 ಗ್ರಾಂ |
| ನಾರು | 0.8 ಗ್ರಾಂ |
| ಇತರ ಶರ್ಕರ ಪಿಷ್ಟಾದಿಗಳು | 29.0 ಗ್ರಾಂ |
| ಕ್ಯಾಲೋರಿ | 142 |
| ಸುಣ್ಣ | 30 ಮಿ.ಗ್ರಾಂ |
| ರಂಜಕ | 310 ಮಿ.ಗ್ರಾಂ |
| ಕಬ್ಬಿಣ | 1.3 ಮಿ.ಗ್ರಾಂ |
| 'ಎ' ಅನ್ನಾಂಗ | ಇಲ್ಲ |
| ತಯಾಮಿನ್ | 0.16 ಮಿ.ಗ್ರಾಂ |
| ರಿಬೋಫ್ಲೇವಿನ್ | 0.23 ಮಿ.ಗ್ರಾಂ |
| ನಿಕೋಟಿನಿಕ್ ಆಮ್ಲ | 0.4 ಮಿ.ಗ್ರಾಂ |
| 'ಸಿ' ಅನ್ನಾಂಗ | 13 ಮಿ.ಗ್ರಾಂ |

ವಿಜ್ಞಾನಿ ಸಿಡ್ನಿ ಬೆಲ್ಮನ್ ಇಲಿಗಳ ಮೇಲೆ ಬೆಳ್ಳುಳ್ಳಿ ಎಣ್ಣೆ ಪ್ರಯೋಗಿಸಿದ. ಮಹಾಯುದ್ಧದ ಸಮಯದಲ್ಲಿ ಜೀವವಿರೋಧಕ ಔಷಧವಾಗಿ ಬಳಸಲಾಗುತ್ತಿತ್ತು. ಜೀರ್ಣಶಕ್ತಿ ಹೆಚ್ಚಿಸುವ ಗುಣವಿರುವ ಬೆಳ್ಳುಳ್ಳಿ ಖಾರವಾದ ಅಂಶ ಹೊಂದಿದೆ. ಜೈವಿಕ ಕೀಟನಾಶಕವಾಗಿಯೂ ಬಳಸಿಕೊಳ್ಳುತ್ತಿದೆ. ಕ್ಷಯರೋಗಕ್ಕೆ ಕಾರಣವಾದ ಟ್ಯೂಬರ್‌ಕ್ಯುಲಸ್ ಬ್ಯಾಕ್ಟೀರಿಯ ನಿವಾರಣೆಗೂ ಇದು ಉಪಯೋಗ ಎಂಬ ಅಂಶ ತಿಳಿದುಬಂದಿದೆ. ಗಂಧಕದ ಅಂಶ ಅಧಿಕ ಪ್ರಮಾಣ ಇದರಲ್ಲಿರುವುದರಿಂದ ಕ್ರಿಮಿಹರ, ವಾತಹರ ಹಾಗೂ ಹಲವು ಬಗೆಯ ಚರ್ಮವ್ಯಾಧಿಗಳನ್ನು ಗುಣಪಡಿಸುವ ಗುಣ ಬೆಳ್ಳುಳ್ಳಿಗಿದೆ. ಇದರಲ್ಲಿರುವ ಸೆಲಿನಿಯಂ ಎಂಬ ವಸ್ತು ಕ್ಯಾನ್ಸರ್ ಗೆಡ್ಡೆಗಳನ್ನು ಬೆಳೆಯದಂತೆ ಮಾಡಿ ಗೆಡ್ಡೆ ಕರಗಿಸುವ ಗುಣ ಹೊಂದಿದೆ. ಬೆಳ್ಳುಳ್ಳಿಯ ಮಾತ್ರೆಗಳು ಕೂಡ ಮಾರುಕಟ್ಟೆಯಲ್ಲಿ ಲಭ್ಯವಿದೆ.

*ಎಸ್.ಕೆ.ಎನ್.*

**ಬೇಲ** ಮುಳ್ಳು-ಕಂಟಿ ವರ್ಗಕ್ಕೆ ಸೇರಿದ ಬೇಲದ ಪಾರಿಭಾಷಿಕ ಪದ 'ಲಿಮೋನಿಯ ಅಸಿಡಿಸಿಮ' 'ಪೆರೋನಿಯ ಎಲಿಫೆಂಟಮ್'. ಇದು 'ರೂಟೇಸೀ' ಕುಟುಂಬಕ್ಕೆ ಸೇರಿದುದಾಗಿದೆ. ಕ್ರಿ.ಪೂ. 300 ಕ್ಕೂ ಹಿಂದೆ ರಚಿತವಾದ ಪ್ರಾಚೀನ ಭಾರತದ ಸಾಹಿತ್ಯ ಕೃತಿಗಳಲ್ಲಿ ಇದರ ಉಲ್ಲೇಖವಿದ್ದು, ಇದನ್ನು ನಿರ್ಲಿಂಗ ವಿಧಾನದಲ್ಲಿ, ವೃದ್ಧಿಪಡಿಸುವ ಬಗ್ಗೆ ಪ್ರಸ್ತಾಪವಿದೆ. ಪ್ರಸಿದ್ಧ ಚಾಣಕ್ಯನ 'ಅರ್ಥಶಾಸ್ತ್ರ'ದಲ್ಲಿ ಚರಕಸಂಹಿತೆ ಹಾಗೂ ಸುಶ್ರುತನ ಸುಶ್ರುತಸಂಹಿತಗಳಲ್ಲಿ ಇದರ ಔಷಧೀಯ ಗುಣಗಳನ್ನು ವರ್ಣಿಸಲಾಗಿದೆ. ಹಳ್ಳಕೊಳ್ಳ, ಕೊರಕಲು, ಇಳಿಜಾರು, ಕಣಿವೆ, ಬೆಟ್ಟ ಗುಡ್ಡಗಾಡು ಪ್ರದೇಶಗಳಲ್ಲಿ ಸಹಜವಾಗಿ ಬೆಳೆಯಬಲ್ಲದು.

ಬೇಲದ ತವರೂರು ಇಂಡೋ ಮಲಯ. ಬೇಲ ಬಾಂಗ್ಲಾದೇಶ, ಪಾಕಿಸ್ತಾನ, ಭಾರತ-ಶ್ರೀಲಂಕಾ, ಮತ್ತು ಇಂಡೋ ಚೈನಾ. ಜಾವ, ಮಲೇಷಿಯ ಮೊದಲಾದ ದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಅಭಿವೃದ್ಧಿಗೊಂಡಿದೆ. ಇಂಗ್ಲಿಷ್‌ನಲ್ಲಿ 'ವುಡ್ ಆಪಲ್', 'ಎಲಿಫೆಂಟ್ ಆಪಲ್', 'ಮಂಕಿಫ್ರೂಟ್, ಕರ್ಡ್‌ಫ್ರೂಟ್' ಎಂದೆಲ್ಲಾ ಕರೆಯುತ್ತಾರೆ. ಹೆಚ್ಚು ಪೌಷ್ಟಿಕಾಂಶವನ್ನು ಒಳಗೊಂಡಿರುವ ಈ ಬೇಲದ ಸೇವನೆಯಿಂದ

ಶರೀರದ ಬೆಳವಣಿಗೆಗೆ ಅಗತ್ಯವಿರುವ ವಿವಿಧ ಪೋಷಕಾಂಶಗಳು ಖನಿಜ ಪದಾರ್ಥ ಮತ್ತು ಜೀವಸತ್ವಗಳು ಸಾಕಷ್ಟು ಪ್ರಮಾಣದಲ್ಲಿ ಲಭಿಸುತ್ತವೆ.



ಕರ್ನಾಟಕದ ಕೆಲವು ಪ್ರದೇಶ ಒಣ ಮತ್ತು ಅರೆ ಒಣಪ್ರದೇಶವಾಗಿದ್ದು, ಇಲ್ಲಿಯ ಹವಾಗುಣ ಮತ್ತು ಭೂ ಮೇಲ್ಮೈ ಲಕ್ಷಣಗಳು ಈ ಬೇಲದ ಕೃಷಿಗೆ ಅತ್ಯುತ್ತಮ ಪ್ರದೇಶವಾಗಿದೆ.

ಬೇಲ ಸುಮಾರು ಎತ್ತರ ಬೆಳೆಯಬಲ್ಲದು. ಒರಟಾದ ಮುಳ್ಳಿನಿಂದ ಕೂಡಿದ ತೊಗಟೆಯನ್ನು ಹೊಂದಿರುತ್ತದೆ. ಇದರ ಎಲೆಗಳು ಮಂದ ಮೇಲ್ಪದರದಿಂದ ಕೂಡಿ ಚೂಪಾಗಿದ್ದು ತೇವಾಂಶದ ಮಿತವ್ಯಯ ಸಾಧ್ಯತೆಗೆ ಅನುಗುಣವಾಗಿರುತ್ತವೆ. ಮರವೊಂದಕ್ಕೆ ಸಾಮಾನ್ಯವಾಗಿ ಅದರ ಗಾತ್ರ ಮತ್ತು ವಿಸ್ತಾರಾನುಗುಣವಾಗಿ ನೂರರಿಂದ ಸಾವಿರದ ತನಕ ಹಣ್ಣುಗಳು ಬಿಡುತ್ತವೆ.

ಹುಳಿ ಸಹಿತ ಮಧುರವಾದ ಹಣ್ಣು. ನೋಡಲು ಕ್ರಿಕೆಟ್ ಬಾಲಿನಂತೆ ಆಕಾರದಲ್ಲಿ ಕಂಡರು ಒಡೆಯುವುದು ತುಂಬಾ ಕಠಿಣವೇನಲ್ಲ. ಇದರ ಹೊರಪದರ ಬಹಳ ಗಟ್ಟಿ. ಒಳಭಾಗದ ತಿರುಳು ನಾರು ಸಹಿತ ಬಿಳಿ ಬೀಜಗಳಿಂದ ಕೂಡಿರುತ್ತದೆ. ಬೆಲ್ಲ ಅಥವಾ ಸಕ್ಕರೆಯಿಂದ ಚೆನ್ನಾಗಿ ಮಿಶ್ರಮಾಡಿ ನೀರು - ಹಾಲು - ಜೇನುತುಪ್ಪಗಳನ್ನು ಸೇರಿಸಿ ಪಾನಕ ಮಾಡಿ ಕುಡಿಯಬಹುದು ಅಥವಾ ಚೆನ್ನಾಗಿ ಮಾಗಿದ ಹಣ್ಣಿನ ತಿರುಳನ್ನು ಬೆಲ್ಲದ ಜೊತೆ ಸೇರಿಸಿ ತಿನ್ನಬಹುದು.

**ಬಿತ್ತನೆ :** ಬೇಲದ ಬಿತ್ತನೆ ಕ್ರಮ ತುಂಬಾ ಸರಳ. ಮಳೆಗಾಲದಲ್ಲಿ ಕಾಡು ಪ್ರದೇಶಗಳಲ್ಲಿ ಅಥವಾ ಫಲವತ್ತಾದ ಭೂಪ್ರದೇಶಗಳಲ್ಲಿ ಬೀಜವನ್ನು ಬಿತ್ತನೆ ಮಾಡಿದರೆ ಸಾಕು ಅದು ವಾತಾವರಣದ ತೇವಾಂಶದಲ್ಲಿ ಮೊಳೆತು ಬೆಳೆಯುತ್ತದೆ. ಪ್ರಾಣಿ - ಪಕ್ಷಿಗಳಿಂದ ಕೂಡ ಪ್ರಸರಣಗೊಂಡು ಸ್ವಾಭಾವಿಕವಾಗಿ ಬೆಳೆಯುವುದುಂಟು.

ಮಾಸುಗೆಂಪು ಮತ್ತು ಹಸುರು ಬಣ್ಣದಿಂದ ಕೂಡಿದ್ದು, ಸಾಮಾನ್ಯವಾಗಿ ಉಭಯ ಲಿಂಗವಾಗಿ ಕಂಡುಬರುತ್ತದೆ. ದೊಡ್ಡ ಗಾತ್ರದ ಹಣ್ಣನ್ನು ಬಿಡುವ ಬಗೆಗಳನ್ನು ನಿರ್ಲಿಂಗ ವಿಧಾನಗಳಲ್ಲಿ ವೃದ್ಧಿಪಡಿಸುವುದು ಲಾಭದಾಯಕ. ಹಣ್ಣು ಗುಂಡಗೆ ಮತ್ತು ಮೊಟ್ಟೆಯಾಕಾರದಲ್ಲಿದ್ದು ಮೇಲ್ಪದರವು ಕಂದು ಮಿಶ್ರಿತ ಬಿಳಿ ವರ್ಣವಾಗಿರುತ್ತದೆ. ಕರಟ ಅಥವಾ ಚಿಪ್ಪು ಗಡುಸಾಗಿದ್ದು, ದಪ್ಪವಾಗಿರುತ್ತದೆ. ಒಳಗಿನ ತಿರುಳು ಕಂದುಮಿಶ್ರಿತ ಕೆಂಪಾಗಿದ್ದು ಸಿಹಿ ಮಿಶ್ರಿತ ಹುಳಿ ರುಚಿ. ಬಿಳಿ ಬೀಜ ಅದರ ತುಂಬ ಚದುರಿದಂತಿರುತ್ತದೆ.

**ನೀರಾವರಿ :** ಇದು ಕುಷ್ಕಿ ಬೆಳೆ ಸಸಿ ನೆಟ್ಟ ದಿನಗಳಲ್ಲಿ ನೀರನ್ನು ಕೊಡಬೇಕು. ಬೆಳೆದು ದೊಡ್ಡದಾದ ಹಾಗೆಲ್ಲ ಭೂಮಿಯಿಂದ ನೀರನ್ನು ಸಂಗ್ರಹಿಸಿಟ್ಟುಕೊಳ್ಳುತ್ತದೆ. ಕುಷ್ಕಿ ತೋಟಗಾರಿಕೆ ಮಾಡುವವರು ಬೇಸಗೆಯಲ್ಲಿ 20 ರಿಂದ 30 ದಿನಗಳಿಗೊಮ್ಮೆ ನೀರುಣಿಸಿದರೆ ಚೆನ್ನಾಗಿ ಬೆಳೆಯುತ್ತದೆ.

**ಗೊಬ್ಬರ :** ವಿಶೇಷವಾಗಿ ಹೊಲ - ಗದ್ದೆ, ಬದು - ಬಯಲು, ಬೇಲಿ-ಕಾನನದಲ್ಲಿ ಬೆಳೆಯುವ ಈ ಸಸ್ಯ ಅಲ್ಲಿ ಬಿದ್ದು ಕೊಳೆತ ಎಲೆ ಕಸ ಕಡ್ಡಿಯಿಂದ ಪೋಷಕಾಂಶವನ್ನು ಹೀರಿ ದೃಢವಾಗಿ ಬೆಳೆಯಬಲ್ಲದಾದರೂ ಮೇಲು ಗೊಬ್ಬರ ಕೊಟ್ಟರೆ ಸಮೃದ್ಧವಾಗಿ, ಸೊಂಪಾಗಿ ಬೆಳೆಯುತ್ತದೆ.

**ಬೆಳೆಯುವ ವಿಧಾನ :** ಪಕ್ವವಾದ ಹಣ್ಣಿನಿಂದ ಬೀಜಗಳನ್ನು ತೆಗೆದು ಒಣಗಿಸಿ ಮುಂಗಾರು ಮಳೆಗಾಲ (ಏಪ್ರಿಲ್, ಮೇ)ದಲ್ಲಿ ತಗ್ಗು ಪಾತಿಗಳಲ್ಲಿ ಅಥವಾ ಚೀಲಗಳಲ್ಲಿ ಬೀಜ ಊರುವ ಮೂಲಕ ಸಸಿ ಬೆಳೆಸಬಹುದು. ಅನಂತರ ಪೂರ್ವಭಾವಿಯಾಗಿ ಸಿದ್ಧಪಡಿಸಿದ ಪಾತಿಗಳಲ್ಲಿ ಸಸಿ ನೆಟ್ಟರೆ 10 ರಿಂದ 15 ವರ್ಷಗಳ ಬಳಿಕ ಮರ ಹೂಬಿಟ್ಟು ಕಾಯಿ ಬಲಿತು ಸುವಾಸನೆ ಭರಿತವಾದ ಹಣ್ಣು ತೊಟ್ಟು ಕಳಚಿ ಬೀಳುತ್ತದೆ. ವಾಣಿಜ್ಯ ದೃಷ್ಟಿಯುಳ್ಳ ಬೇಸಾಯಗಾರರು ಕಾಯಿ ಪಕ್ವತೆಗೆ ಬಂದ ಕೂಡಲೆ ಮರದಿಂದ ಕಿತ್ತು ಮಾರಾಟ ಮಾಡುತ್ತಾರೆ.

**ಉಪಯೋಗಗಳು :** ತಂಪು ಪಾನೀಯ ತಯಾರಿಸಲು ಬಳಸುತ್ತಾರೆ. ಜಲ್ಲಿ - ಜಾಮ್‌ನಂತಹ ಸಿಹಿ ಪೇಯಗಳನ್ನು ತಯಾರಿಸಲು ಬಳಸುತ್ತಾರೆ. ತಿರುಳನ್ನು ನೇರವಾಗಿ ಚಟ್ನಿ ಮಾಡಿ ಬಳಸಬಹುದು.

**ಔಷಧೀಯ ಪ್ರಯೋಜನಗಳು :** ತಿರುಳನ್ನು ಲಿವರ್ ಮತ್ತು ಕಾರ್ಡಿಯಾ ಟಾನಿಕ್ ಆಗಿ ಉಪಯೋಗಿಸುತ್ತಾರೆ. ಅತಿಸಾರ ಮತ್ತು ಆಮಶಂಕೆ ಭೇದಿಗೆ ಅಪಕ್ವವಾದ ತಿರುಳಿನಿಂದ ಕಷಾಯ ಮಾಡಿ ಕುಡಿಸಿದರೆ ಉಪಶಮನಗೊಳ್ಳುತ್ತದೆ. ತಾಜಾ ಎಲೆಗಳ ರಸ ಹಾಲು ಬೆಲ್ಲ ಸೇರಿಸಿ ಕುಡಿದರೆ ಪಿತ್ತ ಉಪಶಮನವಾಗುತ್ತದೆ. ಕರುಳಿನ ತೊಂದರೆಗಳು ನಿವಾರಣೆಯಾಗುತ್ತವೆ. ಹಾವು ಕಚ್ಚಿದರೆ ಎಲೆ - ಬೇರು - ಚಕ್ಕೆ ಮತ್ತು ತಿರುಳುಗಳಿಂದ ಔಷಧಿ ತಯಾರಿಸಿ ಉಪಯೋಗಿಸುತ್ತಾರೆ. ವಸಡು ಬಲಗೊಳ್ಳಲು ಹಾಗೂ ಗಂಟಲ ಹುಣ್ಣು ನಿವಾರಣೆಗೆ ಸಹಕಾರಿಯಾಗಿದೆ. ಅಜೀರ್ಣ, ಅಸ್ತಮ, ಶ್ವಾಸಕೋಶ ತೊಂದರೆಯ ಚಿಕಿತ್ಸೆಗೆ ಬಳಸುತ್ತಾರೆ. ಒಟ್ಟಾರೆ ಯುನಾನಿ ಪದ್ಧತಿಗಳಲ್ಲಿ ಹೆಚ್ಚಾಗಿ ಬಳಸುವರು. ಇದರಲ್ಲಿ ಎ, ಬಿ, ಸಿ ಜೀವಸತ್ವ ಇರುತ್ತದೆ.

*ಎಸ್.ವಿ.*

**ಬೇಲಿ** ಮನೆಗೆ ಬಾಗಿಲಿದ್ದಂತೆ ತೋಟಕ್ಕೆ ಬೇಲಿ. ಕೆಲವು ಬೆಳೆಗಳನ್ನು ಆರಂಭಿಸುವ ಮೊದಲೇ ಬೇಲಿ ಕಟ್ಟುವುದು ಅಗತ್ಯ. ಬೇಲಿಗಳಲ್ಲಿ ಪ್ರಧಾನವಾಗಿ ಎರಡು ವಿಧ. ಒಂದು ಸಜೀವ ಬೇಲಿ ಇನ್ನೊಂದು ನಿರ್ಜೀವ ಬೇಲಿ. ಯಾವ ತೋಟಕ್ಕೆ ಯಾವ ಬೇಲಿ ಎಂಬುದನ್ನು ರೈತ ನಿರ್ಧರಿಸಿಕೊಳ್ಳುತ್ತಾನೆ. ಬೇಲಿಯಿಂದ ರೈತನಿಗೆ ನಾನಾ ತೆರನಾದ ಉಪಯೋಗಗಳಿವೆ. ತೋಟಕ್ಕೆ ನೀರನ್ನು ಕಡಿಮೆ ಬಳಸಬಹುದು. ಗಾಳಿಯನ್ನು ತಡೆಯಬಹುದು. ಬೇಲಿಯ ಸೊಪ್ಪನ್ನು ಸವರಿ ಗೊಬ್ಬರವಾಗಿ ಬಳಸಬಹುದು. ಕಳ್ಳಕಾಕರಿಂದ ದನಕರುಗಳಿಂದ, ಪ್ರಾಣಿಗಳಿಂದ ಆಗುವ

ನಷ್ಟವನ್ನು ತಪ್ಪಿಸಬಹುದು. ಬೇಲಿಯ ಮೇಲೆ ಹಕ್ಕಿಗಳು ಗೂಡು ಕಟ್ಟಿ ಮರಿ ಮಾಡಿ ನೆಲೆ ನಿಲ್ಲುವುದರಿಂದ ಕ್ರಿಮಿಕೀಟಗಳನ್ನು ತಿಂದು ಬೆಳೆಗೆ ಸಹಾಯಕವಾಗುತ್ತವೆ. ಕೆಲವು ಜಾತಿಯ ಬೇಲಿಗಳಿಗೆ ಸೊಳ್ಳೆ ಮತ್ತು ನೊಣಗಳೇ ಶತ್ರು. ಔಷಧೀಯ ಗುಣವಿರುವ ಸಸಿಗಳು ಇರುತ್ತವೆ. ಇವು ರೋಗ ಕೀಟಗಳಿಗೆ ಮಾರಕವಾಗಿ ಕೆಲಸ ಮಾಡುತ್ತವೆ.

**ಬೇಲಿಯ ವಿಧಗಳು :** ಒತ್ತಾದ ಬೇಲಿ, ಅಗಲವಾದ ಬೇಲಿ, ಬಳ್ಳಿಗಳ ಬೇಲಿ, ಮುಳ್ಳುಗಳ ಬೇಲಿ, ಕೆಟ್ಟ ವಾಸನೆಯ ಬೇಲಿ, ಸುವಾಸನೆಯ ಬೇಲಿ, ಕಹಿ ರುಚಿಯ ಬೇಲಿ, ಅಡಕೆ ಧಾನ್ಯಬೇಲಿ, ಈಚಲು ಎಲೆ ಬೇಲಿ, ಸಾಲುಮರದ ಬೇಲಿ, ತಂತಿಯ ಬೇಲಿ, ಕಾಂಕ್ರೀಟ್ ಬೇಲಿ ಹೀಗೆ ಆಯಾ ಜಾಗ ಮತ್ತು ಅನುಕೂಲಕ್ಕೆ ತಕ್ಕಂತೆ ಬೇಲಿಯನ್ನು ಕೃಷಿಕರು ನಿರ್ಮಿಸಿಕೊಳ್ಳುತ್ತಾರೆ.

ಒಂದೇ ಜಾತಿಯ ಸಸ್ಯಗಳಿಂದ ಬೇಲಿ ಕಟ್ಟಬಾರದು. ಜಾನುವಾರುಗಳಿಗೆ ಮೇವಾಗುವಂತೆ ಬೇಲಿಗಳನ್ನು ನಿರ್ಮಿಸಬಾರದು. ಮರ ಅಥವಾ ದೊಡ್ಡದಾಗಿ ಬೆಳೆಯುವ ಬೇಲಿಗಳು ಎಲ್ಲ ಕಡೆ ಉಚಿತವಲ್ಲ. ಮಂಗಗಳು ಮರಗಳ ಮೂಲಕ ಬೇಲಿದಾಟಲು ಇದರಿಂದ ಅನುಕೂಲವಾಗುತ್ತದೆ. ಬೇಲಿಯ ಮಧ್ಯೆ ಮಧ್ಯೆ ಮುಳ್ಳು ಗಿಡಗಳನ್ನು ಬೆಳೆಸಿದರೆ ಹಂದಿಗಳು, ನರಿಗಳು, ಕುರಿಗಳು, ದನಗಳು ನುಗ್ಗುವುದಿಲ್ಲ.

ಒಡ್ಡು ಕಟ್ಟಿರುವ ಕಡೆ ಕಳ್ಳಿ ಜಾತಿಯ ಗಿಡಗಳನ್ನು ನೆಡಬಹುದು. ಜೊತೆಯಲ್ಲಿ ಮುಳ್ಳು ಜಾತಿಯ ಗಿಡಗಳನ್ನು ಬೆಳೆಸುವುದು ಒಳ್ಳೆಯದು.

**ಕತ್ತಾಳೆ ಬೇಲಿ :** ಕತ್ತಾಳೆ ಅನೇಕ ವರ್ಷಗಳ ಕಾಲ ಉಳಿಯಬಲ್ಲ ಸಸ್ಯ. ಮಳೆ ಆರಂಭವಾಗುವ ದಿನಗಳಲ್ಲಿ ತೋಟದ ಸುತ್ತ ಕತ್ತಾಳೆಯ ಸಸಿಗಳನ್ನು ನೆಟ್ಟರೆ ಚೆನ್ನಾಗಿ ಬೇರು ಬಿಟ್ಟು ಬೆಳೆಯುತ್ತವೆ. ಸಸಿಗಳನ್ನು ಎರಡು ಅಡಿ ಅಂತರದಲ್ಲಿ ಎರಡು ಸಾಲುಗಳಲ್ಲಿ ನೆಡಬೇಕು. ಒಮ್ಮೆ ಬೇರು ಬಿಡುವಷ್ಟು ಮಳೆ ನೀರು ಸಿಕ್ಕರೆ ಸಾಕು ಒಂದು ಗಿಡವೂ ಸಾಯದೆ ಹುಲುಸಾಗಿ ಬೆಳೆದು ಬಿಡುತ್ತವೆ. ನೀರನ್ನು ಕೊಡುವ ಅಗತ್ಯವಿಲ್ಲ. ಕತ್ತಾಳೆ ಸಸಿಗಳಲ್ಲಿ ಎರಡು ವಿಧ. ಬಿಳಿ ಕತ್ತಾಳೆ (ಸೀಮೆಕತ್ತಾಳೆ) ಮತ್ತು ಭೂತಾಳೆ ಸೀಮೆಕತ್ತಾಳೆ. ಬೆಳೆಯುವುದು ನಿಧಾನ ಮತ್ತು ಗಾತ್ರದಲ್ಲಿಚಿಕ್ಕದು. ಭೂತಾಳೆ ದೃಢವಾಗಿ ವೇಗವಾಗಿ ಬೆಳೆಯುತ್ತದೆ. ಇದರ ಎಲೆಗಳು ಉದ್ದವಾಗಿ ಅಗಲವಾಗಿದ್ದು ಗರಗಸದಂತೆ ಎಲೆಯ ಎರಡೂ ಅಂಚುಗಳಲ್ಲಿ ಮುಳ್ಳುಗಳಿರುತ್ತವೆ. ಎಲೆಯ ತುದಿಯಲ್ಲಿ ಚೂಪಾದ ಮುಳ್ಳು ದಬ್ಬಳದಂತೆ ಗಟ್ಟಿಯಾಗಿರುತ್ತದೆ. ಗಿಡ ಬೆಳೆದು ದೊಡ್ಡದಾದಾಗ ಉದ್ದನೆಯ ಮರದಂತೆ ಬೆಳೆಯುತ್ತದೆ. ಮರ ಬಲಿತಾಗ ಕತ್ತರಿಸಿ ಒಣಗಿಸಿದರೆ ಬೆಂಡಿನಂತೆ ನೀರಿನಲ್ಲಿ ತೇಲುವುದರಿಂದ ಈಜು ಕಲಿಯುವರು ಇದರ ತುಂಡನ್ನು ಸೊಂಟಕ್ಕೆ ಕಟ್ಟಿ ಕೊಳ್ಳುತ್ತಾರೆ. ಕತ್ತಾಳೆಗಿಡ ನಡು ವಯಸ್ಸಿನಲ್ಲಿದ್ದಾಗ ದಪ್ಪನಾದ ಕಾಂಡವನ್ನು ಬಗೆದರೆ ಒಳಗೆ ಕಲ್ಲು ಸಕ್ಕರೆಯಂಥ ಬೆಳ್ಳಗಿರುವ ಮೃದುವಾದ ಗೆಡ್ಡೆ ಸಿಗುತ್ತದೆ. ಇದನ್ನು ಹಿಂದೆ ಭೀಕರ ಬರಗಾಲದಲ್ಲಿ ಜನ ಬೇಯಿಸಿ ತಿನ್ನುತ್ತಿದ್ದರು. ಹಂದಿಗಳಿಗೂ ಇದು ಉತ್ತಮ ಆಹಾರ.

ಕತ್ತಾಳೆಯನ್ನು ಒಮ್ಮೆ ಬೆಳೆಸಿದರೆ ಮತ್ತೆ ಹೊಸದಾಗಿ ಬೇಲಿ ನಿರ್ಮಿಸುವ ಪ್ರಮೇಯವೇ ಬರುವುದಿಲ್ಲ. ಸಸಿ ಬೆಳೆದಂತೆಲ್ಲ ಅದರ ಬುಡದಲ್ಲಿ ಸಣ್ಣ ಸಣ್ಣ ಮೊಳಕೆಗಳು ಹುಟ್ಟಿ ತಾನಾಗೇ ಬೆಳೆಯುತ್ತವೆ. ಜಾನುವಾರುಗಳು, ಪ್ರಾಣಿಗಳು, ಕಳ್ಳ ಕಾಕರು ನುಗ್ಗದಂತೆ ದಟ್ಟವಾಗಿ ಬೆಳೆಯುತ್ತವೆ.

**ಲಾಂಟಾನ / ಚದುರಂಗಿ :** ಬೀಜಗಳಿಂದ ಸಸ್ಯಗಳು ಉತ್ಪಾದನೆಯಾಗುತ್ತವೆ. ಮಳೆಗಾಲದಲ್ಲಿ ಸಸಿಗಳನ್ನು ಕಿತ್ತು ತಂದು ತೋಟದ ಸುತ್ತ ಅಡಿಗೆ ಒಂದರಂತೆ ನೆಟ್ಟು ಸ್ವಲ್ಪ ದಿನ ಆರೈಕೆ ಮಾಡಿದರೆ ಸಾಕು ಹುಲುಸಾಗಿ ಬೆಳೆಯುತ್ತವೆ. ಅನಂತರ ನೀರನ್ನು ಕೊಡುವ ಅಗತ್ಯವಿಲ್ಲ. ಈ ಬೇಲಿ ಒತ್ತೊತ್ತಾಗಿ ಮುಳ್ಳು ಕಂಟಿಗಳಿಂದ ಕೂಡಿರುತ್ತದೆ. ಲಾಂಟಾನ ಹಾಗೂ ಚದುರಂಗಿ ಸೊಪ್ಪು ಬಲು ಬೇಗ ಕೊಳೆಯುವುದರಿಂದ, ಬೇಗನೆ ಬೆಳೆಯುವುದರಿಂದ ವರ್ಷದಲ್ಲಿ ಒಂದರೆಡು ಸಲ ಕತ್ತರಿಸಿ ಗೊಬ್ಬರಕ್ಕೆ ಬಳಸಿಕೊಳ್ಳಬಹುದು. ಇದರ ಗೊಬ್ಬರ ಮತ್ತು ಎಲೆ ಕಷಾಯಗಳು ಕೆಲವು ನೊಣಗಳನ್ನು ಮತ್ತು ಸೊಳ್ಳೆಗಳನ್ನು ನಾಶಮಾಡುತ್ತವೆ. ಬೀಜಗಳು ಉದುರುವ ತನಕ ಕತ್ತರಿಸದಿದ್ದರೆ ಉದುರುವ ಬೀಜಗಳು ಬಿದ್ದಲ್ಲೆಲ್ಲಾ ಬೆಳೆದು ಕಳೆಯಂತಾಗುತ್ತದೆ.

**ಜತ್ರೋಫಾ ವಿಷಕಾರಿ ಸಸ್ಯಗಳು :** ಕಹಿ, ವಿಷ ಇವುಗಳನ್ನು ಯಾವ ಜಾನುವಾರುಗಳೂ ಮೇಯುವುದಿಲ್ಲ. ಬೀಜದಿಂದ ಕಡ್ಡಿಯ ತುಂಡುಗಳನ್ನು ಅಥವಾ ಮರಿ ಕಂದುಗಳನ್ನು ನೆಟ್ಟು ಬೆಳೆಸಬಹುದು. ನೀರು ಗೊಬ್ಬರಗಳ ಅಗತ್ಯವಿಲ್ಲ. ಎಂಥ ಬಿಸಿಲಿನಲ್ಲೂ ಬರಗಾಲದಲ್ಲೂ ಬರುಡು ಭೂಮಿಯಲ್ಲೂ ಬೆಳೆದು ಉಳಿಯುತ್ತವೆ.

**ಚಿಗುರುಗೂಟದ ಬೇಲಿ :** ಮಲೆನಾಡಿನಲ್ಲಿ ಈ ತರದ ಬೇಲಿಗಳನ್ನು ಕಾಣಬಹುದು. ದಾಸವಾಳ, ಸರ್ವೆ, ಬಕುಳ ಮುಂತಾದ ಗಿಡಗಳ ಬಲಿತ ಕೊಂಬೆಗಳನ್ನು ಕಡಿದು ತೋಟದ ಸುತ್ತ ಅಂಚಿನಲ್ಲಿ ಸಾಲಾಗಿ ಅರ್ಧ ಅಡಿಗೆ ಒಂದರಂತೆ ನೆಡುತ್ತಾರೆ. ಇವು ಚಿಗುರುವವರೆಗೆ ಅಲುಗಾಡದಂತೆ ಅಡಕೆನಾರು ಅಥವಾ ತೆಂಗಿನ ಗರಿಗಳಿಂದ ಕಟ್ಟಿರುತ್ತಾರೆ. ಮಳೆಗಾಲದಲ್ಲಿ ನೆಡುವುದರಿಂದ ಎರಡು ಮೂರು ತಿಂಗಳಲ್ಲಿ ಚಿಗುರೊಡೆದು ದಟ್ಟವಾದ ಬೇಲಿ ನಿರ್ಮಾಣವಾಗಿರುತ್ತದೆ. ಗೂಟಗಳಿಗೆ ಅಲುಗಾಡಂತೆ ಬುಡಕ್ಕೆ ಅರ್ಧದಷ್ಟು ಮಣ್ಣನ್ನು ಏರಿಸಬೇಕು. ಬೇರುಗಳು ತೇಲದಂತೆ ಪ್ರತಿ ವರ್ಷ ಮಳೆಗಾಲದಲ್ಲಿ ಈ ರೀತಿ ಮಣ್ಣನ್ನು ಏರಿಸುತ್ತಾರೆ. ಎತ್ತರವಾಗಿ ಬೆಳೆದು ಮರಗಳಾದ ಮೇಲೆ ಸೌದೆಗೂ ಗೊಬ್ಬರಕ್ಕೂ ರೆಂಬೆಗಳನ್ನು ಕತ್ತರಿಸಿ ಉಪಯೋಗಿಸಬಹುದು.

ಬೇಲಿ ದಾಸವಾಳದ ಗಿಡಗಳು ಬಳ್ಳಿಯಂತೆ ತೆಳ್ಳಗಿರುತ್ತವೆ. ಕಡಿದಷ್ಟು ಚಿಗುರುವುದು ಇದರ ಗುಣ. ಈ ಸೊಪ್ಪನ್ನು ದನಕರುಗಳು ಮೇಯುತ್ತವೆ. ಕೆಲವರು ದನಕರುಗಳಿಗೆ ಕತ್ತರಿಸಿಕೊಂಡು ಹೋಗುತ್ತಾರೆ. ದಟ್ಟವಾಗಿ ಬೆಳೆಯುವುದರಿಂದ ಜಾನುವಾರುಗಳು ಸುಲಭವಾಗಿ ಒಳಗೆ ನುಗ್ಗಲಾರವು. ತುಂಬಾ ತೆಳ್ಳಗೆ ಬಳ್ಳಿಗಳಂತಿರುವುದರಿಂದ ಕೆಳಗೆ ಬಾಗದಂತೆ ಮರದ ಕಂಬಗಳನ್ನು ನೆಟ್ಟು ದಾರ ಅಥವಾ ತಂತಿ ಕಟ್ಟುತ್ತಾರೆ. ಬಳ್ಳಿಗಳು ಬೆಳೆದಂತೆಲ್ಲಾ ಕಂಬ ಮತ್ತು ತಂತಿಗಳಿಗೆ ಸುರುಳಿಯಂತೆ ಸುತ್ತುತ್ತಿರಬೇಕು. ಹೊಸದಾಗಿ ನೆಟ್ಟಾಗ ಮಾತ್ರ ಕಂಬಗಳಿಗೆ ಗಿಡಗಳಿಗೆ ಮಣ್ಣನ್ನು ಏರಿಸಿ ಆರೈಕೆ ಮಾಡಿದರೆ ಸಾಕು. ಬಳ್ಳಿಗಳಿಂದ ಸುತ್ತಿಕೊಳ್ಳುತ್ತಾ ಹೋಗಿ ಬೇಲಿ ಭದ್ರಗೊಳ್ಳುತ್ತದೆ. ಕೆಲವರು ಇದೇ ರೀತಿ (ಬೋಗನ್‌ವಿಲ್ಲಾ) - ಕಾಗದ ಹೂವು ಗಿಡಗಳನ್ನೂ ಬೆಳೆಸಿ ಬೇಲಿ ನಿರ್ಮಾಣ ಮಾಡಿರುತ್ತಾರೆ. ಅದು

ಹೂಬಿಟ್ಟು ದಟ್ಟವಾಗಿ ಪೊದೆಯಂತೆ ಒಳಗೆ ಯಾವ ಬೆಳೆಯಿದೆ ಎಂದು ಬಗ್ಗಿ ನೋಡಲು ಸಾಧ್ಯವಾಗದಷ್ಟು ಬೆಳೆಯುತ್ತದೆ. ಲಕ್ಕಿ / ನೆಕ್ಕಿ ಗಿಡ ಕಹಿ. ಸೊಳ್ಳೆಗಳಿಗೆ ಇದರ ವಾಸನೆ ಆಗದು. ಇಂತಹ ಅನೇಕ ಗಿಡಗಳನ್ನು ಬೇಲಿಯಂತೆ ಬೆಳೆಸಬಹುದು.

**ಇತರೆ ಬೇಲಿಗಳು :** ನಿಂಬೆ, ಗಜನಿಂಬೆ, ಮಾದಲ, ಈಳೆ, ಕಂಚಿ, ಚಕ್ಕೋತ ಮುಂತಾದ ಮುಳ್ಳಿನ ಗಿಡಗಳನ್ನು, ಬಿದಿರು, ಬೆತ್ತದ ಸಸಿ ಇತ್ಯಾದಿಗಳನ್ನು ಬೇಲಿಯಂತೆ ಬೆಳೆಸುವವರು ಇದ್ದಾರೆ.

**ಮುಳ್ಳಿನ ಗಿಡಗಳ ಬೇಲಿ :** ಕವಳಿ ಮುಳ್ಳು, ಪರಿಗೆ ಮುಳ್ಳು ಜಾಲಿಮುಳ್ಳು, ಕುಡ್ತೆ ಮುಳ್ಳು ಹಲಗೆ ಮುಳ್ಳು ಮೊದಲಾದ ಮುಳ್ಳಿನ ಪೊದೆಗಳ ಬೇಲಿಗಳನ್ನು ರೈತರು ನಿರ್ಮಿಸಿಕೊಳ್ಳುತ್ತಾರೆ.

**ಅಡಕೆಮರದ ಗೂಟ :** ದಬ್ಬೆಗಳಿಂದಲೂ ಬೇಲಿ (ತಡಿಕೆ) ಕಟ್ಟುವವರು ಇದ್ದಾರೆ. ಬಿದಿರು ದಬ್ಬೆ, ನಟ್ಟಾಣಿಕ ಬರಲು, ಬಿದಿರು ಬರಲು, ಈಚಲು ಗರಿ, ತಂಗಿನ ಗರಿಗಳು ಸಹ ಬೇಲಿ ಕಟ್ಟುವಲ್ಲಿ ಬಳಕೆಯಾಗುತ್ತವೆ.

**ಕಲ್ಲಿನ ಚಪ್ಪಡಿಗಳ ಬೇಲಿ :** ಬಯಲು ಸೀಮೆಯಲ್ಲಿ ಐದಡಿ ಅಳತೆಯ ಚಪ್ಪಡಿಗಳನ್ನು ತೋಟದ ಸುತ್ತ ಗೋಡೆಯಂತೆ ನೆಡುತ್ತಾರೆ.

ಕಲ್ಲಿನ ಹೊಲಗಳಲ್ಲಿ ಉಳುಮೆ ಮಾಡುವಾಗ ತೇಲುವ ಕಲ್ಲುಗಳನ್ನು ಆಯ್ದು ತಂದು ತೋಟದ ಸುತ್ತ ಕೋಟೆಯಂತೆ ಪೇರಿಸಿ ಬೇಲಿಯಂತೆ ಗೋಡೆ ಮಾಡಿಕೊಳ್ಳುತ್ತಾರೆ. ಮುಳ್ಳಿನ ಸಸಿಗಳನ್ನು ಬೆಳೆಸುವವರು ಇದ್ದಾರೆ. ಕರಾವಳಿ ತೀರದಲ್ಲಿ ಕೆಲವರು ಮಣ್ಣಿನ ಬೇಲಿಯನ್ನು ಕಟ್ಟುತ್ತಾರೆ.

ಹೀಗೆ ಬೇಲಿಗಳನ್ನು ನಿರ್ಮಿಸಿಕೊಂಡ ಮೇಲೆ ಅದರ ಒಳ ಬದಿಯಲ್ಲಿ ಬಿದಿರು ಜಾತಿಯ ಸಸ್ಯಗಳು, ಹೆಬ್ಬೇವು ಸಸಿಗಳನ್ನು ಬೆಳೆಸಬಹುದು. ಮುಳ್ಳಿನ ಬೇಲಿಯ ಒಳ ಭಾಗದಲ್ಲಿ ಹಲಸು, ತೇಗ, ಬಕುಳ, ದೇವಧಾರಿ, ಅಮಟೆ, ಬಿಂಬುಳಿ, ಕರಿ ಮಾದಲ, ಸಾಲ ಧೂಪ, ನುಗ್ಗೆ ಮಾವು ತೆಂಗು, ಪೇರಲ ದೊಡ್ಡ ಗೌರಿ ಮುಂತಾದ ನೇರವಾಗಿ ಮೇಲೇಳುವ ಗಿಡಗಳನ್ನು ಬೆಳೆಸಬಹುದು. ಬೇಲಿನ ಸಾಲಿನಲ್ಲಿ ಇವುಗಳನ್ನು ಒಂದಡಿ ಅಂತರದಲ್ಲಿ ನೆಡಬಹುದು. ಗಿಡಗಳಿಗೆ ಮೂರು ವರ್ಷಗಳ ಕಾಲ ಆರೈಕೆ ಮಾಡಿದರೆ, ಗಾಳಿಯನ್ನು ಮಳೆಯ ರಭಸವನ್ನು ತಡೆಯುತ್ತವೆ. ಬಿಸಿಲಿನ ತಾಪವನ್ನು ಕಡಿಮೆಮಾಡುತ್ತವೆ. ಎಲೆ ತೋಟಕ್ಕೆ ಎತ್ತರವಾದ ಗಾಳಿ ನುಗ್ಗದ ದಟ್ಟವಾದ ಬೇಲಿ ಇರಲೇಬೇಕು. ಬೇಲಿಯ ಸುತ್ತಲೂ ಸೊಪ್ಪಿನ ಮರಗಳನ್ನು ಬೆಳೆಸಿರುತ್ತಾರೆ. ಬಾಳೆ ತೋಟಕ್ಕೆ ಗಾಳಿಯನ್ನು ತಡೆಯಲು ಇಂತಹುದೇ ಬೇಲಿಯನ್ನು ಮಾಡಿಕೊಳ್ಳುತ್ತಾರೆ. ಕೆಲವು ಕಡೆ ಮುಳ್ಳು ತಂತಿನ ಬೇಲಿ ಸಿಮೆಂಟ್ ಕಂಬಗಳ ಬೇಲಿಯನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ನಿರ್ಮಾಣಮಾಡಿಕೊಳ್ಳುತ್ತಾರೆ.

*ವಿ. ಆರ್. ಬಿ.*

**ಬೇವು** ಇದು ಮಿಲಿಯೇಸಿ ಸಸ್ಯ ಕುಟುಂಬಕ್ಕೆ ಸೇರಿದೆ. ಆಂಗ್ಲ ಭಾಷೆಯಲ್ಲಿ 'ಮಾರ್ಗೋಸ' ಎನ್ನುತ್ತಾರೆ. ಅಝ್ಯಾದಿರ್ಯಾಕ್ಟ ಇಂಡಿಕ (ಅಝಾದಿರಖ್ತ) ಎಂಬುದು ಇದರ ವೈಜ್ಞಾನಿಕ ಹೆಸರು. ಈ ಹೆಸರಿನ ಮೂಲ ಪರ್ಶಿಯನ್ ಭಾಷೆಯ ಅಝಾದ್‌ರಖ್ತ್ ಹಿಂದ್ ಎಂಬುದಾಗಿದ್ದು, ಇದರರ್ಥ 'ಜ್ವರವನ್ನು ನಿವಾರಿಸುವ ಗುಣವುಳ್ಳ ಸಸ್ಯ' ಎಂದು. ಇದರ ಮೂಲ ಸ್ಥಳ ಭಾರತ.

ಬೇವಿನ ಮರಕ್ಕೆ ನೀರಿನ ಆವಶ್ಯಕತೆ ಇದ್ದರೂ ಕಡಿಮೆ ಮಳೆ ಬೀಳುವ ಪ್ರದೇಶದಲ್ಲೂ ಬೆಳೆಯಬಲ್ಲದು. ಚಳಿಯ ವಾತಾವರಣ ಯೋಗ್ಯವಲ್ಲ. ಸಸಿ ನೆಟ್ಟ ಆರಂಭದಲ್ಲಿ ವೇಗವಾಗಿ ಬೆಳೆವಣಿಗೆ ಇದ್ದು ಅನಂತರದ ಬೆಳೆವಣಿಗೆ ನಿಧಾನಗತಿಯಲ್ಲಿರುತ್ತದೆ. ಸುಮಾರು 50 ಅಡಿ ಎತ್ತರದವರೆಗೆ ಬೆಳೆಯಬಲ್ಲ ಇದು 200 ರಿಂದ 300 ವರ್ಷ ಆಯುಷ್ಯವನ್ನು ಹೊಂದಿದೆ. ನಿತ್ಯ ಹಸುರಿನ ಮರವಾಗಿದ್ದು ಆಕರ್ಷಕವಾಗಿ ಕಾಣುತ್ತದೆ. ರೆಂಬೆ-ಕೊಂಬೆಗಳು ಉದ್ದವಾಗಿ ಸುತ್ತಲೂ ಹರಡಿಕೊಂಡಿರುತ್ತವೆ. ಸಾಮಾನ್ಯವಾಗಿ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಎಲೆಗಳು ಉದುರಿದರೂ ಚಿಗುರೆಲೆಗಳು ಬಂದ ಅನಂತರ ಬಲಿತ ಎಲೆಗಳು ಉದುರುವುದು ವಿಶೇಷ. ಒಣಪ್ರದೇಶಗಳಲ್ಲಿ ಇದರ ಬೆಳೆವಣಿಗೆ ಹೆಚ್ಚು. ರೆಂಬೆಗಳ ಬಣ್ಣ ಬೂದು. ಮರದ ಹೊರಪದರ (ತೊಗಟೆ) ಬಹಳ ದಪ್ಪವಾಗಿರುತ್ತದೆ ಮತ್ತು ಸೀಳುಗಳಿಂದ ಕೂಡಿರುತ್ತದೆ.



ಬೇವು ವಿಶಿಷ್ಟವಾದ ವಾಸನೆಯಿಂದ ಕೂಡಿದೆ. ಅತಿಸಣ್ಣದು ಅಲ್ಲದ, ಅತಿ ದೊಡ್ಡದು ಅಲ್ಲದ ಮಧ್ಯಮ ಗಾತ್ರದ ಮರವಿದು.

ಬೇವಿನ ಮರದ ಹಣ್ಣು, ಹೂ, ಬೀಜಗಳು ಬಹು ಉಪಯುಕ್ತವಾಗಿವೆ. ಹೂ ಸಣ್ಣದು. ಬಿಳಿ ಅಥವಾ ತಿಳಿ ಹಳದಿ ಬಣ್ಣದಿಂದ ಕೂಡಿರುತ್ತದೆ. ಎಲೆಗಳ ಕಂಕುಳಲ್ಲಿ ಹೂಗೊಂಚಲುಗಳಿರುತ್ತವೆ. ಸುವಾಸನೆಯಿಂದ ಕೂಡಿದ ಹೂವುಗಳು ಜೇನುಹುಳುಗಳಿಗೆ ಆಕರ್ಷಕ. ಸಾಮಾನ್ಯವಾಗಿ ಮಾರ್ಚ್‌ನಿಂದ ಜೂನ್‌ವರೆಗೆ ಹೂಬಿಡುವ ಕಾಲ. ಹಣ್ಣುಗಳು ಜೂನ್‌ನಿಂದ ಆಗಸ್ಟ್‌ವರೆಗೆ ಕಂಡುಬರುತ್ತವೆ. ಬೇವಿನ ಹಣ್ಣನ್ನು ನೀರಿನಲ್ಲಿ ನೆನೆಹಾಕಿ ಕೈಯಿಂದ ಹಿಚುಕಿದರೆ ತಿರುಳು, ಸಿಪ್ಪೆ ಮತ್ತು ಬೀಜ ಬೇರ್ಪಡುತ್ತವೆ. ಇದರ ತಿರುಳು, ಸಿಪ್ಪೆ ಔಷಧಿಯ ಗುಣವನ್ನು ಹೊಂದಿರುತ್ತವೆ. ಬೀಜವನ್ನು ಹಾಕಿ ಮತ್ತೆ ಗಿಡವನ್ನು ಬೆಳೆಯಬಹುದು. ಬಿತ್ತಿದ ಬೀಜಗಳೆಲ್ಲವು ಜೀವಂತಿಕೆಯನ್ನು ಹೊಂದಿರುವುದಿಲ್ಲ, ಕೆಲವು ಮಾತ್ರ ಜೀವಂತಿಕೆಯನ್ನು ಹೊಂದಿರುತ್ತವೆ.

ಮರ ಹಿಮವನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಸಮುದ್ರ ಮಟ್ಟದಿಂದ 1,100 ಮೀ. ಎತ್ತರದವರೆಗೆ ಬೆಳೆಯಬಲ್ಲದು. ಬಹಳ ಗಟ್ಟಿಯಾದ ಮರವಾಗಿದ್ದು, ಭಾರವಾಗಿರುತ್ತದೆ. ಈ ಮರ ಪೀಠೋಪಕರಣಗಳಿಗೆ ಉಪಯುಕ್ತ. ತಿರುಳಿನ ಭಾಗವು ವಿಶಿಷ್ಟವಾದ ಸುವಾಸನೆಯಿಂದ ಕೂಡಿರುತ್ತದೆ. ಮರದ ವಿಶಿಷ್ಟತೆಯೆಂದರೆ ರೆಂಬೆ-ಕೊಂಬೆಗಳನ್ನು ಕಡಿದು ಹಾಕಿದರೆ ಅಥವಾ ಮರವನ್ನೇ ಬುಡದಿಂದ ಸ್ವಲ್ಪ ಮೇಲೆ ಕತ್ತರಿಸಿ ಹಾಕಿದರೂ ಮತ್ತೆ ಹೊಸ ರೆಂಬೆ-ಕೊಂಬೆಗಳು ಚಿಗುರಿ ಬೆಳೆಯುತ್ತವೆ. ಈ ಮರದ ಬೇರುಗಳು ವಿಸ್ತೃತವಾಗಿ ಭೂಮಿಯಲ್ಲಿ ಹರಡಿಕೊಂಡಿದ್ದು ಅತಿಹೆಚ್ಚು ಪೋಷಕಾಂಶಗಳನ್ನು ಮರಕ್ಕೆ ಒದಗಿಸುತ್ತಿರುತ್ತವೆ.

ಬೇವು ಉಷ್ಣವಲಯ, ಸಮಶೀತೋಷ್ಣವಲಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪಾಕಿಸ್ತಾನ, ಶ್ರೀಲಂಕಾ, ಥಾಯ್ಲೆಂಡ್ ಮತ್ತು ಇಂಡೋನೇಷಿಯಾಗಳಲ್ಲಿ ಹೆಚ್ಚಾಗಿ ಕಾಣಬಹುದು. ಸೌದಿ ಅರೇಬಿಯಾಕ್ಕೆ ಇತ್ತೀಚಿನ ವರ್ಷಗಳಲ್ಲಿ ಪ್ರವೇಶ ಪಡೆದಿದೆ. ಅರಿಜೋನಾ ಪ್ರದೇಶದಲ್ಲಿ ಬೇವಿನ ಮರಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಭಾರತದಲ್ಲಿ ಉತ್ತರ ಪ್ರದೇಶ, ಬಿಹಾರ, ಒರಿಸ್ಸಾ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಅತಿ ಹೆಚ್ಚಾಗಿ ಕಂಡುಬರುತ್ತವೆ. ಇತ್ತೀಚಿನ ದಿನಗಳಲ್ಲಿ ಕೇವಲ ಕಾಡುಮರವಾಗದೆ ರಸ್ತೆಯ ಅಕ್ಕಪಕ್ಕದಲ್ಲಿ, ಉದ್ಯಾನವನಗಳಲ್ಲಿ, ಮನೆಯ ಸಮೀಪದಲ್ಲಿ ಬೆಳೆಸುವುದು ರೂಢಿಯಲ್ಲಿದೆ.

**ಉಪಯೋಗ :** 'ಸರ್ವರೋಗ ನಿವಾರಕ ಬೇವು ಬಹು ಉಪಯುಕ್ತವಾಗಿದೆ. ಆರೋಗ್ಯದ ದೃಷ್ಟಿಯಿಂದಲ್ಲದೆ, ಮಾನವ ಬಳಕೆಯ ವಸ್ತುಗಳಿಗೂ ಬೇವು ಅತ್ಯವಶ್ಯಕ. ಇದು ಹಗಲಿನ ವೇಳೆಯೇ ಇನ್ನಿತರ ಮರಗಳಿಗಿಂತ ಅತಿಹೆಚ್ಚು ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ. ಈ ಮರದ ಬೇರುಗಳು ಅಗಲವಾಗಿ ಹರಡಿಕೊಂಡಂತೆ ಇದ್ದು, ನೀರನ್ನು ಹಿಡಿದಿಟ್ಟುಕೊಳ್ಳುವುದರ ಜೊತೆಗೆ ಮಣ್ಣಿನ ಸಂರಕ್ಷಣೆ ಮಾಡುತ್ತವೆ. ಇದು ನಿರಂತರವಾಗಿ ಕಚ್ಚಾ ವಸ್ತುವನ್ನು ಒದಗಿಸುವ ಮರ, ಎಲೆ, ಹೂ, ಹಣ್ಣು, ಕಾಯಿ ಪ್ರತಿವರ್ಷವು ಸಿಗುವುದರಿಂದ ಸದಾಕಾಲ ಕಚ್ಚಾವಸ್ತು ದೊರಕಿದಂತಾಗುತ್ತದೆ.

ಬೇವಿನ ಕಡ್ಡಿಯಿಂದ ಹಲ್ಲುಜ್ಜಿದರೆ ಒಳ್ಳೆಯದು. ಉತ್ತರ ಭಾರತದಲ್ಲಿ ಇದರ ಬಳಕೆ ಹೆಚ್ಚು. ಎಲೆಯನ್ನು ದವಸ ಧಾನ್ಯಗಳ ಸಂರಕ್ಷಣೆಯಲ್ಲಿ ಬಳಸುತ್ತಾರೆ. ಬೇವಿನ ಬೀಜದಿಂದ ತೈಲವನ್ನು ಪ್ರತ್ಯೇಕಿಸಿ ಉಳಿದ ಹಿಂಡಿಯಯನ್ನು ರೈತರು ಹಲವಾರು ಬೆಳೆಗಳಿಗೆ ಗೊಬ್ಬರವಾಗಿ ಬಳಸುತ್ತಿದ್ದಾರೆ.

ಬೇವಿನ ಎಣ್ಣೆಯು ಕೀಟನಾಶಕವಾಗಿ ಬಳಕೆಯಾಗುತ್ತದೆ. ಸೊಳ್ಳೆಗಳ ನಿಯಂತ್ರಣಕ್ಕೆ ಯಾವುದೇ ಅಡ್ಡ ಪರಿಣಾಮ ಉಂಟುಮಾಡದ ಔಷಧವೆಂದೇ ಹೇಳಬಹುದು. ಅನೇಕ ಬೆಳೆಗಳಿಗೆ ಕೀಟನಾಶಕವಾಗಿ ಬೇವಿನೆಣ್ಣೆಯನ್ನು ಬಳಸುತ್ತಿದ್ದಾರೆ. ಬೇವಿನ ಎಣ್ಣೆಯನ್ನು ಎಷ್ಟು ಕಡಿಮೆ ಸಾಂದ್ರತೆಯಲ್ಲಿ ಬಳಸುತ್ತೇವೋ ಅಷ್ಟು ಪರಿಣಾಮಕಾರಿಯಾಗಿರುತ್ತದೆ. ಇದರಲ್ಲಿ ಓಲಿಕ್, ಸ್ಟಿಯರಿಕ್, ಲಿನ್ನೋಲೀಕ್, ಪಾಮೆಟಿಕ್ ಆಮ್ಲಗಳು ಇವೆ. ದೀಪವನ್ನು ಉರಿಸಲು ಹಾಗೂ ಸೋಪಿನ ತಯಾರಿಕೆಯಲ್ಲಿ ಬೇವಿನ ಎಣ್ಣೆಯನ್ನು ಬಳಸುತ್ತಾರೆ.

ಬೇವಿನ ಮರದ ಕಟ್ಟಿಗೆಯನ್ನು ಸೌದೆಯಾಗಿ ಮತ್ತು ಇದ್ದಿಲು ಮಾಡಲು ಬಳಸುತ್ತಾರೆ. ಸೊಪ್ಪನ್ನು ಅರೆದು ದೇಹಕ್ಕೆ ಹಚ್ಚಿಕೊಳ್ಳುವುದರಿಂದ ಚರ್ಮ ರೋಗಗಳನ್ನು ತಡೆಯಬಹುದು. ಸಾಮಾನ್ಯವಾಗಿ ದೇಹದ ಮೇಲೆ ಗುಳ್ಳೆ, ಕುರ ಇನ್ನಿತರ ಚರ್ಮಕಾಯಿಲೆಗಳು ಬಂದಾಗ ಬೇವಿನ ಸೊಪ್ಪನ್ನು ಕಾಯಿಸಿದ ನೀರಿನಲ್ಲಿ ಹಾಕಿ ಸ್ನಾನ ಮಾಡಿಸುತ್ತಾರೆ. ಬೇವಿನ ಎಲೆಗಳನ್ನು ಅರೆದು ಜೇನುತುಪ್ಪದೊಡನೆ ಸೇವಿಸಿದರೆ ಕಾಮಾಲೆ ರೋಗವು ವಾಸಿಯಾಗುವುದು. ಮೂತ್ರಪಿಂಡದ ಕಾಯಿಲೆ, ಮೂಲವ್ಯಾಧಿ, ಹೊಟ್ಟೆಯಲ್ಲಿಯ ಹುಳು, ಕುಷ್ಠರೋಗ ಮುಂತಾದವುಗಳ ಚಿಕಿತ್ಸೆಗೆ ಬೇವು ಉಪಯುಕ್ತ. ಮನೆಕಟ್ಟಲು ಬಳಕೆಯಾಗುವುದರ ಜೊತೆಗೆ ಉಳುವ ಉಪಕರಣಗಳಿಗೆ ಬೇವನ್ನು ಬಳಸಲಾಗುತ್ತದೆ. ಇತ್ತೀಚಿನ ಅಧ್ಯಯನದ ಪ್ರಕಾರ ಬೇವಿನ ಎಣ್ಣೆ ಸೇವನೆ ಮಾಡುವುದರಿಂದ ಕೊಲೆಸ್ಟ್ರಾಲ್ ಅಂಶ ಕಡಿಮೆಯಾಗುತ್ತದೆಂದು ತಿಳಿದುಬಂದಿದೆ. ಅಲ್ಲದೇ ಏಡ್ಸ್, ಕ್ಯಾನ್ಸರ್‌ನಂತಹ ಮಾರಕ ರೋಗಗಳ ನಿವಾರಣೆಗೂ ಸಹಾಕಾರಿಯಾಗಿದೆ.

*ಎಂ.ಎಂ.*

**ಬೊಪ್ಪಾಯಿ (ಪರಂಗಿ ಹಣ್ಣು)** ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಪಪ್ಪಾಯಿಕೃಷಿ ಇದೆ. ಅತ್ಯಂತ ಸರಳವಾಗಿ ಬೆಳೆದು ಕಡಿಮೆ ಅವಧಿಯಲ್ಲಿ ಹೆಚ್ಚಿನ ಇಳುವರಿ ಪಡೆಯುವ ಬೆಳೆಯಿದು. ಆಂಧ್ರಪ್ರದೇಶದಲ್ಲಿ ಇದರ ಔಷಧೀಯ ಗುಣಗಳನ್ನು ಅರಿತ ಅನೇಕ ಪ್ರಗತಿಪರ ರೈತರು ಪ್ರತ್ಯೇಕ ತೋಟಗಳಲ್ಲಿ ಇದನ್ನು ವಾಣಿಜ್ಯೋದ್ದೇಶದಿಂದ ಬೆಳೆಯುತ್ತಿದ್ದಾರೆ. ತೆಲುಗಿನಲ್ಲಿ ಬೊಪ್ಪಾಯಿ ಎಂದೇ ಜನಪ್ರಿಯವಾಗಿರುವ ಈ ಹಣ್ಣಿಗೆ 'ಬೊಪ್ಪಾಸುಕಾಯ', 'ಬೊಬ್ಬಾಸುಕಾಯ', 'ಬೊಪ್ಪಾಯಿ' ಎಂದೂ ಕೆಲವು ಪ್ರದೇಶಗಳಲ್ಲಿ 'ಮದನ ಆನಪ' ಅಥವಾ 'ಮದನ ಆನಬ' ಎಂದೂ ಕರೆಯುತ್ತಾರೆ.

ದಕ್ಷಿಣ ಮೆಕ್ಸಿಕೊ (ಮಧ್ಯ ಅಮೆರಿಕಾ)ದಲ್ಲಿಯ ಅತ್ಯುಷ್ಣ ಪ್ರಾಂತ್ಯಗಳು - ವಿಶೇಷವಾಗಿ ಚಿಯಾಪಾಸ್, ವೆರಾಕ್ರುಜ್ ಪ್ರಾಂತ್ಯಗಳು ಪರಂಗಿಯ ಜನ್ಮಸ್ಥಳಗಳೆಂದು ಹೆಚ್ಚುಮಂದಿಯ ಅಭಿಪ್ರಾಯವಾಗಿದೆ. ದಕ್ಷಿಣ ಮೆಕ್ಸಿಕೊ, ಕೊಸ್ಟಾರಿಕಾ ದೇಶಗಳಲ್ಲಿ ವಿಸ್ತಾರವಾಗಿ ದೊರಕುವ ಕಾರಿಕಾ ಪೆಲ್ಟೇಟಾ ಎಂಬ ಪರಂಗಿ ಜಾತಿಯ ಗಿಡದ ಮೇಲೆ ವಿಶೇಷವಾದ ಸಂಶೋಧನೆಗಳು ನಡೆಸಿದ ಬಳಿಕ ಅವರು ಈ ನಿರ್ಧಾರಕ್ಕೆ ಬಂದರು. ಅಲ್ಲಿಂದ ಸ್ಪಾನಿಷ್ ಈಸ್ಟ್ ಇಂಡೀಸ್ ತಲುಪಿ (ಫಿಲಿಫೈನ್ಸ್ ದ್ವೀಪಗಳು, ಮೈಕ್ರೋನೇಷಿಯಾ, ಫಾರ್ಮೋಸಾ, ಮೊಲಕ್ಕಾದ್ವೀಪಗಳು ಇತ್ಯಾದಿಗಳನ್ನು ಒಟ್ಟಾಗಿ ಸ್ಪಾನಿಷ್ ಈಸ್ಟ್ ಇಂಡೀಸ್ ಎನ್ನುತ್ತಾರೆ.) ಅನಂತರ ಕ್ರಿ.ಶ. 16ನೆಯ ಶತಮಾನದಲ್ಲಿ ಭಾರತದಲ್ಲಿ ಪ್ರವೇಶಿಸಿದೆ ಎನ್ನುತ್ತಾರೆ. ಕೆಲವರ ಅಭಿಪ್ರಾಯದಲ್ಲಿ ದಕ್ಷಿಣ ಅಮೆರಿಕಾದಲ್ಲಿಯ ಬ್ರೆಜಿಲ್ ಪರಂಗಿಯ ಜನ್ಮಸ್ಥಳ (ಕ್ರಿ.ಶ. 1550ರಲ್ಲಿ ಪೆರೂ ದೇಶವನ್ನು ಸಂದರ್ಶಿಸಿದ ಒಬ್ಬ ಐರೋಪ್ಯ ಯಾತ್ರಿಕ, ಆಗಲೆ ಪೆರೂ ದೇಶದ ಪ್ರಜೆಗಳು ಪಪಾಯಿ ಎಂಬ ಹೆಸರಿನಲ್ಲಿ ಈ ಹಣ್ಣನ್ನು ಬಳಸುತ್ತಿದ್ದರೆಂದು ತಿಳಿಸಿದ್ದಾರೆ.

**ಉಪಯೋಗಗಳು :** 'ಬೊಪ್ಪಾಯಿ' ಹಣ್ಣಿನಲ್ಲಿ ಸುಕ್ರೋಸ್, ಗ್ಲೂಕೋಸಂ, ಫ್ರಕ್ಟೋಸ್ ಇತ್ಯಾದಿ ಸಕ್ಕರೆಗಳಲ್ಲದೆ ಖನಿಜ ಲವಣಗಳು, ವಿಟಮಿನ್ ಸಿ, ಥಯಾಮೈನ್, ರೈಬೋ ಫ್ಲೇವಿನ್, ನಿಯಾಸಿನ್,

ಕಾರೋಟೇನ್ ಇತ್ಯಾದಿಗಳೆಲ್ಲವೂ ಪುಷ್ಕಳವಾಗಿವೆ. ಆಹಾರ ಪರವಾಗಿಯೇ ಅಲ್ಲದೇ ವೈದ್ಯಪರವಾಗಿಯೂ ಬೊಪ್ಪಾಯಿ ಅಮೂಲ್ಯವಾದದ್ದು. ಹಸಿ ಪರಂಗಿಯಲ್ಲಿ ಪೆಕ್ಟಿನ್ ಹೆಚ್ಚಾಗಿರುತ್ತೆ. ಈ ಪೆಕ್ಟಿನ್‌ನನ್ನು ಜಾಮ್, ಜೆಲ್ಲಿ, ಮಾರ್ಮಲೇಟ್ ಮುಂತಾದವುಗಳನ್ನು ತಯಾರಿಸುವುದರಲ್ಲಿ ಬಳಸುತ್ತಾರೆ. ಅಲ್ಲದೆ ಬಳೆಯ ಉದ್ಯಮದಲ್ಲಿ ಸ್ಫೋಟ ಪದಾರ್ಥಗಳ ತಯಾರಿಯಲ್ಲಿ ಔಷಧ ತಯಾರಿಕೆಯಲ್ಲಿ ಬಳಸುತ್ತಾರೆ.

**ಔಷಧೀಯ ಗುಣ :** ಬೊಪ್ಪಾಯಿ ಗಿಡದಲ್ಲಿಯ ಪ್ರತಿಭಾಗವು ಉಪಯುಕ್ತವಾಗಿವೆ. ಹಸೀ ಪರಂಗಿ ವಿರೇಚನಕಾರಿ, ಮೂತ್ರಕಾರಿ ಪ್ಲೀಹಗ್ರಂಥಿ, ಪಿತ್ತಕೋಶಗಳ ಊತವನ್ನು ಕಡಿಮೆ ಮಾಡುತ್ತದೆ. ಹಾವು ಕಚ್ಚಿದ ವ್ಯಕ್ತಿಗೆ ಪ್ರಥಮ ಚಿಕಿತ್ಸೆಯಾಗಿ ವಿಷಹರಣೆ ಮಾಡಲು ಹಸೀ ಪರಂಗಿಯ ಸಿಪ್ಪೆಯನ್ನು ತೆಗೆದು, ಸ್ವಲ್ಪ ಉಪ್ಪನ್ನು ಸೇರಿಸಿ, ಕಚ್ಚಿದ ಗಾಯದಮೇಲೆ ಕಟ್ಟುತ್ತಾರೆ. ಹಸಿಕಾಯಿ ಮತ್ತು ಹಣ್ಣು ಪರಂಗಿಗಳಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾವನ್ನು ನಾಶಪಡಿಸುವ ಗುಣವಿದೆ. ಸೂರ್ಯಕಿರಣಗಳ ಕಾರಣದಿಂದಾಗಿ ಕೆಲವರಿಗೆ ಚರ್ಮದ ಮೇಲೆ ಚಿಕ್ಕ ಚಿಕ್ಕ ಗೋಧಿ ಬಣ್ಣದ ಮಚ್ಚೆಗಳು ಏರ್ಪಡುತ್ತವೆ. ಇವುಗಳನ್ನು ಫ್ರೆಕಿಲ್ಸ್ ಎನ್ನುತ್ತಾರೆ. ಹಸಿ ಪರಂಗಿ ಇವುಗಳನ್ನು ಹೋಗಲಾಡಿಸುತ್ತದೆ.

**ಇನ್ನು ಕೆಲವು ಉಪಯೋಗಗಳು** ಪರಂಗಿ ಬೀಜಗಳಿಂದ ಎಣ್ಣೆ ತೆಗೆಯುತ್ತಾರೆ. ಅದನ್ನು ಉದ್ಯಮಗಳಲ್ಲಿಯೂ ಅಡುಗೆ ಎಣ್ಣೆಯಾಗಿಯೂ ಬಳಸುತ್ತಾರೆ. ಹಸಿ ಪರಂಗಿ ಕಾಯಿಗಳಿಂದ ಸ್ರವಿಸುವ ಹಾಲಿನಿಂದ 'ಪಪ್ಪೆನ್' ಎಂಬ ಅತಿಮುಖ್ಯವಾದ ಎಂಜೈಮ್‌ನನ್ನು ತಯಾರಿಸುತ್ತಾರೆ. ಇದು ಔಷಧಗಳು 'ಚೂಯಿಂಗ್ ಗಮ್'ಗಳ ತಯಾರಿಕೆಯಲ್ಲಿ ಬಳಸಲ್ಪಡುತ್ತದೆ.

'ಕೊಂಡ ಬೊಪ್ಪಾಯಿ' (ಬೆಟ್ಟದ ಪರಂಗಿ) ತಮಿಳುನಾಡಿನ ನೀಲಗಿರಿ, ಪಳನಿ ಬೆಟ್ಟಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಇದು ಇಬ್ಬನಿಯನ್ನು ಚೆನ್ನಾಗಿ ತಡೆದುಕೊಳ್ಳುತ್ತದೆ. ಏಳೆಂಟು ಅಡಿಗಳಿಗಿಂತ ಹೆಚ್ಚು ಬೆಳೆಯುವುದಿಲ್ಲ. ಈ ಬೆಟ್ಟದಪರಂಗಿ 2 ಡಿಗ್ರಿ ಸೆಂಟಿಗ್ರೇಡ್‌ವರೆಗೂ ಇಬ್ಬನಿಯನ್ನು ತಡೆದುಕೊಳ್ಳುತ್ತದೆ. ಆದುದರಿಂದ ಇದನ್ನು ನಮ್ಮ ಶಾಸ್ತ್ರಜ್ಞರು ಪರಂಗಿಯೊಂದಿಗೆ ಸಂಕರಮಾಡಿ ಹಿಮ ತಡೆದುಕೊಳ್ಳುವ ಪರಂಗಿ ರಕಗಳನ್ನು ಸೃಷ್ಟಿಮಾಡಿದ್ದಾರೆ. ಬೆಟ್ಟಪರಂಗಿ ಚಿಕ್ಕದಾಗಿ, ಸ್ವಲ್ಪ ಉದ್ದವಿದ್ದು ಹಳದಿ ಗೆರೆಗಳಿರುತ್ತವೆ. ಈ ಹಣ್ಣಿನ ತಿರುಳು ಸ್ವಲ್ಪ ಹುಳಿಯಾಗಿರುತ್ತದೆ. ಆದುದರಿಂದ ಇವು ಡೆಸ್ಸರ್ಟ್ಸ್ ಆಗಿ ಉಪಯೋಗಪಡುವುದಿಲ್ಲವಾದರೂ ಜಾಮ್, ಜೆಲ್ಲಿ ಇತ್ಯಾದಿಗಳ ತಯಾರಿಯಲ್ಲಿ ಬಳಸುತ್ತಾರೆ. (ಆಕರ: ಮುತ್ತೇವಿ ರವೀಂದ್ರನಾಥ್, 'ಆಂಧ್ರಜ್ಯೋತಿ' 15.9.2013)

*ಎಂ.ಜಿ.ಎಸ್.*

**ಭೂಹಿಡುವಳಿ** ಕೃಷಿಗೆ ಅಳವಡಿಸುವ ನಿರ್ದಿಷ್ಟ ಭೂಮಿಯೇ ಭೂಹಿಡುವಳಿ. ಇದನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. 1. ಒಬ್ಬ ಅಥವಾ ಹೆಚ್ಚು ಜನರ ಸ್ವಾಮ್ಯದಲ್ಲಿರುವ ಸಾಗುವಳಿ ಭೂಮಿ. ಇದು ಕಡಿಮೆ ವಿಸ್ತಾರವಿರುವ ಕೃಷಿ ವ್ಯವಸ್ಥೆಯಾಗಿದ್ದು ಸಾಗುವಳಿಯೂ ಕಡಿಮೆ, ಲಾಭವೂ ಕಡಿಮೆ. 2. ಹೆಚ್ಚು ಭೂ ಪ್ರದೇಶವನ್ನೊಳಗೊಳ್ಳುವ, ಕೃಷಿಕನೇ ಪೂರ್ಣಾವಧಿಯಲ್ಲಿ ಸಾಗುವಳಿಗೆ ತೊಡಗಿಸಿಕೊಳ್ಳುವ ಭೂಹಿಡುವಳಿ. ಇದೇ ಆರ್ಥಿಕ ಭೂಹಿಡುವಳಿ. ಇದರಲ್ಲಿ ಹೆಚ್ಚಿನ ಅನುಕೂಲಗಳಿದ್ದು ಲಾಭವೂ ಹೆಚ್ಚು. 3. ಇವೆರಡಕ್ಕಿಂತಲೂ ಹೆಚ್ಚು ಭೂ ಪ್ರದೇಶವನ್ನೊಳಗೊಂಡಂಥದು ಮಾದರಿ ಭೂಹಿಡುವಳಿ. 4. ಇವೆಲ್ಲಕ್ಕಿಂತಲೂ ಚಿಕ್ಕದಾದದ್ದು ಕುಟುಂಬ ಭೂ ಹಿಡುವಳಿ.

ಹೀಗೆ ಪ್ರಪಂಚಾದ್ಯಂತ ನಾಲ್ಕು ಬಗೆಯ ಭೂಹಿಡುವಳಿಗಳನ್ನು ಗುರುತಿಸಬಹುದು. ಆದರೆ ಎರಡು ಮತ್ತು ಮೂರನೆಯ ಬಗೆಯ ಭೂ ಹಿಡುವಳಿಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚು ಚಾಲ್ತಿಯಲ್ಲಿವೆ.

ಭಾರತದ ಭೂಹಿಡುವಳಿಗಳಿಗೂ ಇತರ ದೇಶಗಳವರದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಒಂದು ಅಂದಾಜಿನ ಪ್ರಕಾರ ಆಸ್ಟ್ರೇಲಿಯದ ಸರಾಸರಿ ಹಿಡುವಳಿ ಸು. 310 ಹೆಕ್ಟೇರು, ಕೆನಡಾ ಸು. 910 ಹೆಕ್ಟೇರ್, ನ್ಯೂಜಿಲೆಂಡ್ ಸು. 174 ಹೆ., ಅಮೆರಿಕ 680 ಹೆ., ಇಂಗ್ಲೆಂಡ್ 25 ಹೆ., ಡೆನ್ಮಾರ್ಕ್ 16 ಹೆ., ಹಾಲೆಂಡ್ 11 ಹೆ., ಸ್ವೀಡನ್ 9 ಹೆ., ಭಾರತದಲ್ಲಿ ಇದರ ಪ್ರಮಾಣ ಕೇವಲ ಸು. 2 ಹೆಕ್ಟೇರ್ ಮಾತ್ರ. 1976-77ರ ಗಣತಿಯಂತೆ ಪ್ರತಿಶತ 75ರಷ್ಟು ಹಿಡುವಳಿಗಳು ಮಾತ್ರ ಇದ್ದವು. ಸರಾಸರಿ ಹಿಡುವಳಿ ಗಾತ್ರದಲ್ಲಿ ಚಿಕ್ಕದು. ಭೂವಿಭಜನೆಯಿಂದಾಗಿ ಭಾರತದಲ್ಲಿ ಈ ಪರಿಸ್ಥಿತಿ ಒದಗಿದೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಕಾರಣಗಳನ್ನು ಗುರುತಿಸಬಹುದು. ಕೃಷಿಕರ ಸಂಖ್ಯೆ ಹೆಚ್ಚಾಗಿರುವುದು, ವಾರಸುದಾರಿಕೆ ಮತ್ತು ಉತ್ತರಾಧಿಕಾರತ್ವ ಕಾಯಿದೆ ಪ್ರಕಾರ ಪಿತ್ರಾರ್ಜಿತ ಆಸ್ತಿಯಲ್ಲಿ ಹಿಂದು ಮತ್ತು ಮುಸ್ಲಿಮರ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು. ಹಿಂದೆ ಅವಿಭಕ್ತ ಕುಟುಂಬ ವ್ಯವಸ್ಥೆ ಇತ್ತಾದ ಕಾರಣ ಚಿಕ್ಕ ಭೂಹಿಡುವಳಿಗಳು ಕಡಿಮೆ ಇದ್ದುವು. ಕ್ರಮೇಣ ಆಧುನಿಕ ಶಿಕ್ಷಣ, ಕೈಗಾರಿಕೀಕರಣ ಮತ್ತು ವಿಭಕ್ತ ಕುಟುಂಬದ ಆಸಕ್ತಿ ಹೆಚ್ಚಾದುದು ಹಾಗೂ ಗೃಹಕೈಗಾರಿಕೆಗಳ ಅವಸಾನದಿಂದಾಗಿ ನಿರುದ್ಯೋಗಿಗಳು ಅನಿವಾರ್ಯವಾಗಿ ಭೂಮಿಯನ್ನು ಅವಲಂಬಿಸಿದುದೂ ಕೂಡ ಭೂಹಿಡುವಳಿ ಚಿಕ್ಕದಾಗಲು ಕಾರಣವಾಯಿತು. ಇಂತಹ ಚಿಕ್ಕ ಭೂಹಿಡುವಳಿಗಳಿಂದ ಅನುಕೂಲಕ್ಕಿಂತ ಅನಾನುಕೂಲಗಳೇ ಹೆಚ್ಚು.

ಅವಿಭಕ್ತ ಕುಟುಂಬವೊಂದರಲ್ಲಿರುವ ಹತ್ತು ಎಕರೆ ಭೂಮಿಯನ್ನು ಐದು ಜನ ಹಂಚಿಕೊಂಡರೆ ಪ್ರತಿ ಎರಡೆಕೆರೆಗೆ ಒಂದರಂತೆ ಬದುಗಳ ನಿರ್ಮಾಣ, ದಾರಿವ್ಯವಸ್ಥೆ, ಬೇಲಿ ನಿರ್ಮಾಣ ಹೀಗೆ ಭೂಮಿಯನ್ನು ನಿರುಪಯುಕ್ತಗೊಳಿಸುವ ಭಾಗ ಹೆಚ್ಚಾಗುವುದರಿಂದ ಸಾಗುವಳಿ ಭೂಮಿ ಕಡಿಮೆಯಾಗುತ್ತದೆ. ಇಂಥ ತುಂಡು ಭೂಮಿಗಳಲ್ಲಿ ಉಳುಮೆ, ನೀರಾವರಿ ವ್ಯವಸ್ಥೆ, ಯಂತ್ರೋಪಕರಣಗಳ ಬಳಕೆ, ದನಗಳ ಪ್ರವೇಶ ಪ್ರತಿಯೊಂದೂ ಕಷ್ಟ ಸಾಧ್ಯ. ರೈತನೊಬ್ಬನ ಭೂಮಿ ಚದುರಿ ಹೋಗುವುದರಿಂದ ಒಂದು ಕೃಷಿ ಭೂಮಿಯಿಂದ ಇನ್ನೊಂದು ಕೃಷಿ ಭೂಮಿಗೆ ಹೋಗಲು ಸಮಯ ವ್ಯರ್ಥ. ಬಳಸುವ ಉಪಕರಣಗಳನ್ನು ಸಾಗಿಸುವುದೂ ಕಷ್ಟ. ಕೃಷಿ ಹಿಡುವಳಿಗಳು ಬೇರೆ ಬೇರೆಯವರ ಒಡೆತನದಲ್ಲಿದ್ದಾಗ ಚೆಕ್ಕುಬಂದಿ ನಿರ್ಧರಿಸುವಾಗ, ನೀರೊದಗಿಸುವಾಗ, ಗೊಬ್ಬರ ಸಾಗಿಸುವಾಗ, ಫಸಲನ್ನು ಮನೆಗೆ ತರುವಾಗ ವ್ಯಾಜ್ಯಗಳು ಉಂಟಾಗುತ್ತವೆ. ಒಬ್ಬ ರೈತ ಎಲ್ಲ ಕಡೆ ಫಸಲನ್ನು ಪ್ರಾಣಿಪಕ್ಷಿಗಳಿಂದ ರಕ್ಷಿಸಿಕೊಳ್ಳಲು ಹೆಣಗಾಡಬೇಕಾಗುತ್ತದೆ. ವೆಚ್ಚವೂ ಹೆಚ್ಚು. ಹಲವೆಡೆ ಬೆಳೆಗಳ ವ್ಯತ್ಯಾಸದಿಂದ ಅನೇಕ ವೇಳೆ ಲಾಭನಷ್ಟಗಳಲ್ಲಿ ಏರುಪೇರುಂಟಾಗುತ್ತದೆ.

ಚಿಕ್ಕ ಹಿಡುವಳಿಗಳಿಂದ ಕೆಲವು ಪ್ರಯೋಜನಗಳೂ ಉಂಟು. ಅವಿಭಾಜ್ಯ ಕುಟುಂಬದಲ್ಲಿ ಹೆಚ್ಚು ಜನರಿದ್ದು ಒಂದಿಬ್ಬರು ಕೆಲಸ ಮಾಡದಿದ್ದರೂ ನಡೆಯುತ್ತದೆಂಬ ಅಸಡ್ಡೆ ಅಥವಾ ಸೋಮಾರಿತನ ಇರುವುದು ಸಹಜ. ಹಾಗಾಗಿ ವಿಭಕ್ತ ಕುಟುಂಬದಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ತನ್ನ ಪಾಲಿಗೆ ಬಂದ ತುಂಡುಭೂಮಿಯೇ ಪವಿತ್ರವೆಂದು ಭಾವಿಸಿ ಅತ್ಯಂತ ಪ್ರೀತಿಯಿಂದ ಮತ್ತು ಆಸಕ್ತಿಯಿಂದ ಶ್ರಮವಹಿಸಿ ಕುಟುಂಬ ಸಮೇತ ದುಡಿಯುತ್ತಾರೆ. ಆಸ್ತಿ ಪಾಲಿನಲ್ಲಿ ಹೆಚ್ಚು ಫಲವತ್ತಾದ, ಸಾಧಾರಣ, ಕಡಿಮೆ ಫಲವತ್ತಾದ ಜಮೀನು ಬರುವುದರಿಂದ ಒಂದೊಂದು ಭೂಮಿಯಲ್ಲಿ ಒಂದೊಂದು ಬಗೆಯ ಬೆಳೆ ತೆಗೆಯಬಹುದು. ಒಂದರಲ್ಲಿ ನಷ್ಟವಾದರೆ ಇನ್ನೊಂದರಲ್ಲಿ ಹೆಚ್ಚು ಇಳುವರಿ ಸಿಗುತ್ತದೆ. ಮಳೆಗಳಲ್ಲಿ ವ್ಯತ್ಯಾಸವಾಗಲೂ ಪಡೆಯುವ ಫಸಲಿನಲ್ಲಿ ವ್ಯತ್ಯಾಸವಾಗುವುದಿಲ್ಲ. ಕಾರಣ ಹೆಚ್ಚು ಮಳೆಯಾದರೆ ಹಳ್ಳದಲ್ಲಿರುವ ಬೆಳೆ ಕೊಳೆತುಹೋದರೂ ಎತ್ತರದಲ್ಲಿರುವ ಬೆಳೆ ಕೈಗೆ ಸಿಗುತ್ತದೆ. ಭೂಮಿ ಕಡಿಮೆ ಇದ್ದಾಗ ಹೆಚ್ಚು (ತಿಪ್ಪೆ) ಗೊಬ್ಬರ ಬಳಸಿ ಮುತುವರ್ಜಿಯಿಂದ ವ್ಯವಸ್ಥಿತ ರೀತಿಯಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಲು ಅನುಕೂಲವಾಗುತ್ತದೆ.

ದೇಶದ ಹಿತದೃಷ್ಟಿಯಿಂದ ಚಿಕ್ಕ ಭೂಹಿಡುವಳಿಗಿಂತ ಆರ್ಥಿಕ ಭೂಹಿಡುವಳಿಗಳಿಂದಲೇ ಅಧಿಕ ಲಾಭ. ಭಾರತದಂಥ ದೇಶದಲ್ಲಿ ಸಮಗ್ರ ಆರ್ಥಿಕ ದೃಷ್ಟಿಯಿಂದ ಸಣ್ಣ ಅಥವಾ ತುಂಡು ಭೂಹಿಡುವಳಿಗಳನ್ನು ಒಟ್ಟುಗೂಡಿಸಿ ವಿಸ್ತಾರವಾದ ಕ್ಷೇತ್ರದಲ್ಲಿ ವಿಶೇಷವಾದ ಬೆಳೆ ಬೆಳೆಯುವುದರ ಮೂಲಕ ಆರ್ಥಿಕ ಅಭಿವೃದ್ಧಿ ಸಾಧ್ಯ. ಅದಕ್ಕಾಗಿ ಸಣ್ಣ ಹಿಡುವಳಿದಾರರ ಭೂಮಿಯನ್ನು ಸರ್ಕಾರವೇ ವಶಪಡಿಸಿಕೊಂಡು ಸಕಲ ಸೌಲಭ್ಯಗಳನ್ನು ಒದಗಿಸಿ ಆಧುನಿಕ ರೀತಿಯಲ್ಲಿ ಕೃಷಿಗೆ ಸಹಕರಿಸಿದಲ್ಲಿ ಇದು ಸಾಧ್ಯ. ಖಾಸಗಿಯಾಗಿಯೂ ರೈತರು ಒಟ್ಟುಗೂಡಿ ಏಕಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ವ್ಯವಸಾಯ ಮಾಡುವುದು ಉಚಿತವೆನಿಸುತ್ತದೆ. ಮತ್ತೊಂದು ಕ್ರಮವೆಂದರೆ ತುಂಡುತುಂಡು ಭೂಮಿಗಳನ್ನು ಪಕ್ಕದ ಹಿಡುವಳಿದಾರರಿಗೆ ವಹಿಸಿ ಬೇರೆಡೆ ಒಟ್ಟಿಗೆ ಭೂಮಿಯನ್ನುಕೊಂಡು ಕೃಷಿ ಮಾಡುವುದರ ಮೂಲಕವೂ ಸುಧಾರಣೆಯನ್ನು ಕಂಡುಕೊಳ್ಳಬಹುದು.

ಭೂರಹಿತ ಕೃಷಿಕರಿಗಾಗಿ ಸರ್ಕಾರ ತನ್ನ ಸ್ವಾಮ್ಯದಲ್ಲಿರುವ ಬೀಡು ಭೂಮಿಯನ್ನು ಸಾಗುವಳಿ ಮಾಡಲು ಸ್ವಾತಂತ್ರ್ಯಾನಂತರ ಅವಕಾಶ ಮಾಡಿಕೊಟ್ಟಿದ್ದರ ಪರಿಣಾಮವಾಗಿ ಕೃಷಿ ಭೂಮಿ ಸ್ವಲ್ಪಮಟ್ಟಿಗೆ ಹೆಚ್ಚಾಯಿತು. ಸರ್ಕಾರದ ಇತ್ತೀಚಿನ ರೈತಪರ ಯೋಜನೆಗಳಲ್ಲಿ ಒಂದಾದ ಗಂಗಾಕಲ್ಯಾಣ ಯೋಜನೆ ಈ ನಿಟ್ಟಿನಲ್ಲಿ ಬಹಳ ಉಪಯುಕ್ತವಾದುದಾಗಿದೆ. ಒಂದೇ ಕಡೆ ಜಮೀನು ಹೊಂದಿರುವ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದವರ ಜಮೀನುಗಳಿಗೆ ನೀರೊದಗಿಸುವ ಸಲುವಾಗಿ ಸಾಮೂಹಿಕ ಕೃಷಿಪದ್ಧತಿಗೆ ಅನುಕೂಲವಾಗುವಂತೆ ನೀರಿನ ಸೌಲಭ್ಯ ಒದಗಿಸುವುದು ಆಶಾದಾಯಕವಾಗಿದೆ. ತುಂತುರು ಹನಿ ವ್ಯವಸ್ಥೆಯೂ ರೈತರಿಗೆ ವರದಾನವೇ ಆಗಿದೆ.

*ವಿ.ಆರ್.ಬಿ.*

**ಮಂಕರಿ, ಬುಟ್ಟಿ, ತಟ್ಟೆ** ಮಂಕರಿ, ಮಕ್ಕರಿ, ಮಕ್ರಿ, ಮಂಕ್ರಿ ಎಂಬ ಹೆಸರುಗಳಿಂದ ಕರೆಯಲಾಗುವ ಈ ಸಲಕರಣೆ ರೈತರ ಕೃಷಿ ಬದುಕಿಗೆ ಬಹು ಉಪಯುಕ್ತವಾದುದು. ಬಿದಿರಿನ ಬುಟ್ಟಿ, ಹೆಡಗೆ, ಜಲ್ಲೆ ಎಂಬಿತ್ಯಾದಿ ನಾಮಗಳೂ ಇದಕ್ಕುಂಟು. ಮೇದರ ಜಾತಿಯವರು ಇದನ್ನು





ಬಿದಿರು, ಇಲ್ಲವೆ ಈಚಲು, ಖರ್ಜೂರ ಇಲ್ಲವೆ ರೋಜಾ ಗಿಡದ ಕಡ್ಡಿಗಳಿಂದ ಹೆಣೆಯುತ್ತಾರೆ. ಅಪರೂಪಕ್ಕೆ ಲಂಟಾನಕಡ್ಡಿ ಹೂಲಿ ಕಡ್ಡಿಗಳನ್ನು ಬಳಸಿ ಹೆಣೆಯುವುದಿದೆ.

ಮಕ್ಕರಿಯ ಉಪಯೋಗಗಳು ಹಲವು. ಕಸ - ಕಡ್ಡಿ, ಗೊಬ್ಬರ, ಹುಲ್ಲು, ತೆನೆ, ಕಾಯಿ-ಕಸರು, ತರಕಾರಿ ಇತ್ಯಾದಿ ಯಾವುದೇ ಪದಾರ್ಥಗಳನ್ನು ತುಂಬಿ ಸಾಗಿಸಲು ಮಕ್ಕರಿಯ ಬಳಕೆಯಾಗುತ್ತದೆ. ಪದಾರ್ಥ ತೂಕವುಳ್ಳದಾದರೆ ಸಣ್ಣ ಗಾತ್ರದ ಮಂಕ್ರಿಗಳನ್ನು ಬಳಸುತ್ತಾರೆ. ಹಗುರ ಪದಾರ್ಥಗಳನ್ನು ಒಯ್ಯಲು ದೊಡ್ಡ ಗಾತ್ರದ ಮಂಕ್ರಿಗಳನ್ನು ಅಥವಾ ಜಲ್ಲೆಗಳನ್ನು ಬಳಸುತ್ತಾರೆ.

ಬುಟ್ಟಿಗಳು ಇದರ ಒಂದು ಪ್ರಕಾರವಾದರೂ ಆಕಾರ, ಹೆಣಿಗೆ,ಬಳಸುವ ಕಡ್ಡಿಗಳಲ್ಲಿ ಸ್ವಲ್ಪ ಭಿನ್ನತೆಯಿರುತ್ತದೆ. ಕಿಟ್ಟೆಲ್ ಕೋಶದಲ್ಲಿ ಬುಟ್ಟಿ ಎಂದರೆ : 'A basket of bamboo etc of various shaps. especially for flowers, fruits, fishes' ಎಂಬ ವಿವರಣೆಯಿದೆ. ಹಣ್ಣು, ತರಕಾರಿ, ಹೂವುಗಳನ್ನು ತುಂಬಿ ಸಾಗಿಸಲು, ಸಂಗ್ರಹಿಸಲು ಬುಟ್ಟಿಯನ್ನು ಬಳಸಲಾಗುತ್ತದೆ. ಬುಟ್ಟಿಗಳ ತಯಾರಿಕೆಯಲ್ಲಿ ಮುಖ್ಯವಾಗಿ ಬಿದಿರಿನ ಸಣ್ಣ ಸಣ್ಣ ಕಡ್ಡಿಯ ಎಳೆಗಳನ್ನು ಬಳಸಲಾಗುತ್ತದೆ. ಇತರೆ ಜಾತಿಯ ಕಡ್ಡಿಗಳನ್ನು ಇಷ್ಟು ಸಣ್ಣ ಗಾತ್ರಕ್ಕೆ ಕತ್ತರಿಸಿ ನಯಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಹೆಚ್ಚಾಗಿ ಬಿದಿರನ್ನೇ ಬಳಸುವುದು ಕಂಡು ಬರುತ್ತದೆ. ಮದುವೆ, ದೇವರ ಕಾರ್ಯ ಮುಂತಾದ ಶುಭಕಾರ್ಯಗಳಲ್ಲಿ ಬಿದಿರ ಬುಟ್ಟಿಗಳನ್ನು, ಹೂವು, ಹಣ್ಣು, ಬಟ್ಟೆ, ದೇವರ ಸಾಮಾನುಗಳನ್ನು ತುಂಬಿಡಲು, ಸಾಗಿಸಲು 'ಬಿದಿರ ಗೂಡೆ' ಎಂಬ ಸ್ವಲ್ಪ ದೊಡ್ಡ ಗಾತ್ರದ ಬುಟ್ಟಿಗಳನ್ನು ಬಳಸುವುದಿದೆ. ಪೂಜೆಗೆ 'ಹೂ'ತರಲು, ಪೂಜಾ ಸಾಮಗ್ರಿಗಳನ್ನು ಕೊಂಡೊಯ್ಯುವುದು ಮೊದಲಾದ ಕಾರ್ಯಗಳಿಗೆ ಸಣ್ಣ ಗಾತ್ರದ ಹಾಗೂ ಮೇಲೆ ಮುಚ್ಚಳ, ಹಿಡಿಕೆಗಳಿರುವ ಬುಟ್ಟಿಗಳನ್ನು ತಯಾರಿಸಿ ಅವುಗಳಿಗೆ ಚಿತ್ತಾರದ ಅಲಂಕಾರಗಳನ್ನು ಮಾಡಿರುತ್ತಾರೆ.

ಅಲ್ಲದೆ ಮೀನುಗಳನ್ನು ಕಾಳು-ಕಡ್ಡಿಗಳನ್ನು ತುಂಬಿ ಕೊಳ್ಳಲು ಮಧ್ಯಮ ಗಾತ್ರದ ಬುಟ್ಟಿಗಳಿರುತ್ತವೆ. ಕಾಳು - ಕಡ್ಡಿ ತುಂಬುವ ಬುಟ್ಟಿಗಳಿಗೆ ಸಗಣಿ ಮತ್ತು ಗಂಜಳವನ್ನು ತೆಳುವಾಗಿ ಕಲೆಸಿ ಬಳಿಯುವ ಪದ್ಧತಿ ಇದೆ. ಇತ್ತೀಚೆಗೆ ಗಂಜಿ ಇಲ್ಲವೆ ಎನಾಮೆಲ್ ಪೇಯಿಂಟ್‌ಗಳನ್ನು ಬುಟ್ಟಿಗಳಿಗೆ ಹಾಗೂ ಮೊರ, ಜರಡಿಗಳಿಗೆ ಬಳಿಯುವ ಪದ್ಧತಿ ಕಂಡುಬರುತ್ತಿದೆ.

ತಟ್ಟೆ ಎಂಬುದು ಆಕಾರದಲ್ಲಿ ಮಕ್ಕರಿಯಂತೆ ಇರುವುದಾದರೂ ಗಾತ್ರದಲ್ಲಿ ಚಿಕ್ಕದು ಹಾಗೂ ಸ್ವಲ್ಪ ತಟ್ಟೆಯಂತೆ ಸಮತಟ್ಟಾಗಿ ಇರುತ್ತದೆ. ರೇಷ್ಮೆ ಸಾಕಾಣಿಕೆಯಂತಹ ಕೆಲಸಗಳಲ್ಲಿ ಅಗಲವಾದ ತಟ್ಟೆಗಳನ್ನು ಬಳಸುತ್ತಾರೆ. ಅವುಗಳನ್ನು 'ತಟ್ಟೆ' ಎಂದೇ ಕರೆಯುತ್ತಾರೆ. A flat lidlike bamboo of orattan basket for setting out fruits, vegetable etc... ಎಂಬ ವಿವರಣೆಯನ್ನು ತಟ್ಟೆ ಎಂಬುದಕ್ಕೆ ಕಿಟ್ಟೆಲ್ ಕೋಶದಲ್ಲಿ ಕೊಡಲಾಗಿದೆ. ಸಾಮಾನ್ಯವಾಗಿ ತಟ್ಟೆಯನ್ನು ಮಣ್ಣು ಹೊರುವುದಕ್ಕೆ ಗೊಬ್ಬರ - ಗೋಡುಗಳನ್ನು ಹೊರುವುದಕ್ಕೆ ಬಳಸುತ್ತಾರೆ. ಈ ಬಗೆಯ ತಟ್ಟೆಗಳನ್ನು ತಯಾರಿಸಲು ಈಚಲು, ರೋಜಾಗಿಡದ ಕಡ್ಡಿಗಳನ್ನು ಬಳಸುತ್ತಾರೆ. ಮಂಕರಿ, ಬುಟ್ಟಿ, ತಟ್ಟೆಗಳ ತುದಿಯ ಕಡ್ಡಿಗಳು ಕಿತ್ತು ಹೋಗದಿರಲಿ ಎಂದು ದಾರ ಬಿಗಿಯುತ್ತಾರೆ. ಹಾಗೆಯೇ ತಳದಲ್ಲಿ ನುಸಿ ಮಣ್ಣು ಇಲ್ಲವೆ ಪುಡಿ ಗೊಬ್ಬರ ಇತ್ಯಾದಿಗಳು ಸೋರಿಕೆಯಾಗದಿರಲಿ ಎಂದು ತಳದ ಕಡ್ಡಿಗಳು ಕಿತ್ತು ಹೋಗದಿರಲಿ ಎಂದು ದಾರ ಬಿಗಿಯುತ್ತಾರೆ. ಹಾಗೆಯೇ ತಳದಲ್ಲಿ ನುಸಿ ಮಣ್ಣು ಇಲ್ಲವೆ ಪುಡಿ ಗೊಬ್ಬರ ಇತ್ಯಾದಿಗಳು ಸೋರಿಕೆಯಾಗದಿರಲಿ ಎಂದು ತಳಕ್ಕೆ ಗೋಣಿ ತಾಟು ಬಿಗಿಯುತ್ತಾರೆ.

ಇತ್ತೀಚೆಗೆ ಬುಟ್ಟಿ ಹೆಣೆಯುವ ಉದ್ಯಮ ಸೊರಗುತ್ತಿದೆ. ಬಳಕೆಯೂ ಕಡಿಮೆಯಾಗುತ್ತಿದೆ. ಕಾರಣ ಕೃಷಿಯಲ್ಲಿ ಉಂಟಾದ ಪರಿವರ್ತನೆಗಳು, ಸಾಮಗ್ರಿಯ ಕೊರತೆ, ಅರಣ್ಯನಾಶ, ವೃತ್ತಿ ಬದಲಾವಣೆ, ಪ್ಲಾಸ್ಟಿಕ್ ಸಲಕರಣೆಗಳು ಹೇರಳವಾಗಿ ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದು, ಜೊತೆಗೆ ಒಡೆದು ಹೋಗದೇ ಇರುವ ಪ್ಲಾಸ್ಟಿಕ್ ಬುಟ್ಟಿಗಳು.

**ಮಂಕ್ರಿ, ಬುಟ್ಟಿ, ತಟ್ಟೆಗಳ ಕುರಿತ ಗಾದೆಗಳು :** ಜನಪದರ ಗಾದೆಗಳಿಗೆ ವಸ್ತುವಾಗದ್ದು ಜಗತ್ತಿನಲ್ಲಿ ಯಾವುದೂ ಇಲ್ಲವೆನ್ನಬಹುದು. ಹಾಗೆಯೇ ಬುಟ್ಟಿಯನ್ನು ಕುರಿತಂತೆಯೂ ಕೆಲವು ಗಾದೆಗಳಿವೆ.

ಗೋಪಾಳ ಬುಟ್ಟಿಯಲ್ಲಿ ಶನೀಶ್ವರ ಹೊಕ್ಕ ಹಾಗೆ

ಪ್ರಾಣ ಸ್ನೇಹಿತನಾದರೂ ಹಾವಿನ ಬುಟ್ಟಿಗೆ ಕೈ ಹಾಕಬೇಡ

ಮಂಕ್ರಿಗೆ ಮಣ್ಣು ಹೊರೋದ್ ಬಿಟ್ಟು ಮತ್ತೇನು ಗೊತ್ತು ?

ಮಂಕ್ರಿಮುದ್ದೆ ತಿಂದು ಮಂಕು ಬಡಿದಂಗಾಯ್ತು ಅನ್ನಂಗೆ

ಜಲ್ಲೆ ತುಂಬ ಬೆಲ್ಲ ಕೊಟ್ರೂ ಒಲ್ಲೆ ಅಂದನಂತೆ.

ಬುದ್ದಿ ಹೇಳಾಕೋದವನ್ನು ಬುಟ್ಟಿಗಾಕ್ಕಂಡ್ರು ಅಂದಂಗೆ

ಬುಟ್ಟಿ ತುಂಬ ಹೂವು ಹೊಟ್ಟೆ ತುಂಬಾ ನೋವು ನಾನೂ ಮಾಡ್ತಿನಿ
ನಾನಾ ಪೂಜೆ ಅಂದ್ರಂತೆ

ಪೂಜಾರಪ್ಪನ ಬುಟ್ಟೀಲಿ ಹೂವೋ ? ಹಣ್ಣೋ ?

ತಟ್ಟೆ ಬಡಿದ ತಾವು ತಿಟ್ಟವಾಯ್ತು

*ಟಿ.ಕೆ.*

**ಮಂಗಳೂರು ಸೌತೆಗಳು** ತುಳುವ ನಾಡು ಕೃಷಿ ಸಂಸ್ಕೃತಿಯ ನೆಲೆ. ಕೃಷಿಯನ್ನೇ ಹೆಚ್ಚಾಗಿ ನೆಚ್ಚಿಕೊಂಡು ಸಾಂಪ್ರದಾಯಿಕ ಆಹಾರ ಪದ್ಧತಿಯಲ್ಲಿ ಮುಖ್ಯ ಪಾತ್ರ ವಹಿಸುವ ತರಕಾರಿ ಬೆಳೆಗಳನ್ನು 'ಪದಾರ್ಥದ ಪಿತ್ತಿಲು' (ಕಜಿಪುದ ಬಿತ್ತ್‌ಲ್) ಅನ್ನುವ ಹಾಗೆ ಬಹಳ ವಿಶೇಷವಾಗಿ ನಂಬಿಕೆ ಮತ್ತು ಶ್ರದ್ಧೆಯಿಂದ ಬೆಳೆಸಿ ಬಳಸುತ್ತಿರುವರು. ಅದರಲ್ಲೂ ಶುಭಕಾರ್ಯಗಳಿಗೆ



ಅತಿ ವಿಶೇಷವಾಗಿ ಉಪಯೋಗಿಸುವ ತರಕಾರಿ ಎಂದರೆ ಸೌತೆ. ಅದರಲ್ಲಿರುವ ಮಂಗಳೂರು ಸೌತೆ ಮತ್ತು ವಿವಿಧ ವಿಧಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಮಂಗಳೂರು ಸೌತೆ ಎಂದೇ ಇತರೆಡೆ ಕರೆಯಲ್ಪಡುವ, ಸ್ಥಳೀಯವಾಗಿ 'ತೆಕ್ಕರೆ' ಎಂದು ಗುರುತಿಸಲ್ಪಡುವ ತರಕಾರಿಯಲ್ಲೇ ಎರಡು ವಿಧಗಳಿವೆ. ಇವುಗಳಲ್ಲಿ 'ಏಳು ಎಲೆಯ ತೆಕ್ಕರೆ' (ಏಳಿರೆ ತೆಕ್ಕರೆ) ಚಿಕ್ಕ ಕಾಯಿಯಾಗಿದ್ದು, ಬೇಯಿಸದೆ ಹಸಿಯಾಗಿಯೇ ಉಪಯೋಗಿಸಲಾಗುವುದು. ದೊಡ್ಡ ತೆಕ್ಕರೆಯು ಬೆಳೆದು ಹಣ್ಣಾದ ಬಳಿಕ ಪದಾರ್ಥಕ್ಕೆಂದೇ ಉಪಯೋಗಿಸಲಾಗುವುದು. ಇದಲ್ಲದೆ ಇದರಂತೆಯೇ ಪದಾರ್ಥಕ್ಕಾಗಿ ಮಾತ್ರ ಉಪಯೋಗಿಸುವ 'ಗರ್ಬೀಜ' ಮತ್ತು ಕೇವಲ ಹಣ್ಣಿನಂತೆ ತಿನ್ನಲು ಉಪಯೋಗಿಸಲ್ಪಡುವ 'ಇಬ್ಬುಳ/ಮುಲಾಂಬು' ಕೂಡಾ ಇವೆ.

**ಬೀಜ ಸಂಸ್ಕರಣೆ :** ಕೆಂಪಗೆ ಹಣ್ಣಾದ, ಸೌತೆ (ಗರ್ಬೀಜ)ಯನ್ನು ಬಳ್ಳಿಯಲ್ಲೇ ಬಲಿಯಲು ಬಿಟ್ಟು ಅನಂತರ ಬೀಜ ತೆಗೆದು ಅನ್ನ ಬಸಿಯಲು ಬಳಸುವ ಬಳ್ಳಿಯ ತಟ್ಟೆ (ಕುಡುಪು)ಯಲ್ಲಿ ಸೋಸಿ, ಬೇಸಗೆಯಲ್ಲಿ ಬಿಸಿಲಿಗೂ, ಮಳೆಗಾಲದಲ್ಲಿ ಒಲೆಯ ಬದಿಯಲ್ಲಿ ಬೆಚ್ಚಗೆ ಇಟ್ಟು ಒಣಗಿಸುವುದು. ಇದು ಪೂರ್ಣವಾಗಿ ಒಣಗಿದ ಬಳಿಕ ಒಳ್ಳೆಯ ಬೂದಿಯಲ್ಲಿ ಬೆರೆಸಿ, ಬಟ್ಟೆಯಲ್ಲಿ ಕಟ್ಟಿ ಅಥವಾ ಸೋರೆಕಾಯಿ ಬುರುಡೆ ಅಥವಾ ಮಣ್ಣಿನ ಮಡಕೆಯಲ್ಲಿ ಕಟ್ಟಿ ಒಲೆಯ ಮೇಲ್ಗಡೆ ಎತ್ತರದಲ್ಲಿ ಕಟ್ಟಿಡಲಾಗುವುದು.

**ಬಿತ್ತನೆಯ ಭೂಮಿ :** ಬೇರಿನ ಪರಿಚಲನೆಗೆ ಕಷ್ಟವಾಗುವ 'ಕಡು ಮಣ್ಣ'ನಲ್ಲಿ ಈ ಬೆಳೆ ಅಸಾಧ್ಯ. ಮರಳು ಮಿಶ್ರಿತ ಭೂಮಿಯಲ್ಲಿ (ಬೊಟ್ಟು ಕಂಡ, ಸುದೆಸಾಲ್, ಪೊಯ್ಯೆಕಂಡ) ಬೆಳೆ ಹುಲುಸಾಗಿ ಬೆಳೆಯುತ್ತದೆ.

**ಬೆಳೆಯುವ ರೀತಿ :** ಇದನ್ನು ತುಳುನಾಡಿನ ಕೆಡ್ಡಸ ಆಚರಣೆಯ ದಿನಕ್ಕಿಂತ ಹತ್ತು ದಿನ ಮುಂಚಿತವಾಗಿ ಅಂದರೆ ಸುಮಾರು ಫೆಬ್ರವರಿ ತಿಂಗಳಲ್ಲಿ ಬಿತ್ತನೆಮಾಡಲಾಗುವುದು ಮತ್ತು ಸುಗ್ಗಿ ಸಂಕ್ರಮಣ (ವಿಷು

ಸಂಕ್ರಮಣ)ಕ್ಕೆ, ಅಂದರೆ ಏಪ್ರಿಲ್‌ತಿಂಗಳಲ್ಲಿ ಅದರ ಕೊಯ್ಲು ಮಾಡಲಾಗುವುದು. ಬೀಜ ಬಿತ್ತನೆಯಿಂದ, ಗಿಡ ಕಾಯಿ ಬಿಡುವ ತನಕ ಎರಡು ತಿಂಗಳ ಅಂತರದಲ್ಲಿ ಇಪ್ಪತ್ತೆರಡು ದಿನಗಳ ನಿರಂತರ ಕೆಲಸವನ್ನು ಮಾಡಬೇಕಾಗುತ್ತದೆ. ಬಿತ್ತನೆಗೆಂದು ಇಡಲಾದ ಬೀಜವನ್ನು ವರ್ಷದ ಬಳಿಕ ತೆಗೆದು ಸುಗ್ಗಿ ಬೆಳೆ ಕೊಯ್ದ ಬಳಿಕ ಪಾತಿ ಹಾಕಿ ಅರ್ಧ ಅಡಿಗೆ ಒಂದರಂತೆ ಬೀಜ ಹಾಕಲಾಗುವುದು. ಅದಕ್ಕೆ ಬೂದಿ, ಹಟ್ಟಿಗೊಬ್ಬರ, ನೀರನ್ನು ಸಮಯಕ್ಕೆ ಸರಿಯಾಗಿ ನೀಡಲಾಗುವುದು. ಮೊಳಕೆಯೊಡೆದು ಬೆಳೆದಂತೆ ಅದಕ್ಕೆ ಬುಡವನ್ನು ಹಾಕುತ್ತಾ ಬರುವುದು. ವಾರಕ್ಕೊಮ್ಮೆ ಪಾತಿ ತುಂಬುವ ಹಾಗೆ ನೀರನ್ನು ಹರಿಸುವುದು.

ಅದರಲ್ಲೂ ತೆಕ್ಕರೆ ಬಳ್ಳಿಗೆ ಮುಂಡಿ/ಕುಂಟಾಲ/ಕರಂಬಾರು ಗಿಡದ ಗಟ್ಟಿಯಾದ ಕೋಲನ್ನು ಆಧಾರಕ್ಕಿರಿಸುವುದು. ತೆಕ್ಕರೆ ನೇತಾಡಿದಂತೆ ಬೆಳೆದರೆ ಒಳ್ಳೆಯ ಬೆಳೆ ಬರುತ್ತದೆ ಎಂಬ ನಂಬಿಕೆಯಿದೆ. ಈ ಬೆಳೆಯನ್ನು ವರ್ಷವಿಡೀ ಮಾಡಬಹುದು. ಆದರೆ ಈ ಸಮಯದಲ್ಲಿ ಸಿಗುವಂತಹ ಫಲವನ್ನು ಎಲ್ಲಾ ಸಮಯದಲ್ಲಿ ನಿರೀಕ್ಷಿಸುವಂತಿಲ್ಲ.

ತೆಕ್ಕರೆಯನ್ನು ಎರಡು ದಿನಕ್ಕೊಮ್ಮೆ ಕೊಯ್ಯಬೇಕು. ಕೊಯ್ದು ಎರಡು ದಿನಗಳಲ್ಲಿ ಉಪಯೋಗಿಸಬೇಕು. ಇಲ್ಲದಿದ್ದರೆ ಅದು ಕೆಂಪಾಗುತ್ತದೆ. ಬೀಜಕ್ಕಾಗಿ ಬಳಸುವ ತೆಕ್ಕರೆಯನ್ನು ಹಣ್ಣಾಗಲು ಬಳ್ಳಿಯಲ್ಲೇ ಬಿಡಬೇಕು. ಬೆಳೆದ ಸೌತೆಕಾಯಿಯನ್ನು ತೆಂಗಿನ ಎಳೆ ಗರಿಗಳನ್ನು ಉಪಯೋಗಿಸಿ ಮನೆಯ ಚಾವಡಿಯಲ್ಲಿ ಅಲಂಕಾರದಂತೆ ನೇತಾಡಿಸಲಾಗುತ್ತದೆ. ಇದು ಒಂದು ವರ್ಷದವರೆಗೂ ಉಪಯೋಗ ಮಾಡುವಂತಿರುತ್ತದೆ. ಬೆಳೆಯ ಕೊನೆಯ ಹಂತದಲ್ಲಿ ಸಿಗುವ ಎಳೆಯ ಸೌತೆಕಾಯಿಯನ್ನು ಕೊಯ್ದು ಉಪ್ಪು ನೀರಿನಲ್ಲಿ ಹಾಕಿ ಅನಂತರದ ದಿನಗಳಲ್ಲಿ ಬಳಸಲಾಗುತ್ತದೆ.

ದೊಡ್ಡ ತೆಕ್ಕರೆ ಸೌತೆಕಾಯಿಯನ್ನು, ಗರ್ಬೀಜದಂತೆ ಪದಾರ್ಥಕ್ಕೆ ಅಥವಾ ಅಕ್ಕಿ ತಿಂಡಿಯ ಜೊತೆಗೆ ಮಾತ್ರ ಉಪಯೋಗಿಸಲಾಗುತ್ತದೆ. ಎಳೆಲೆಯ ತೆಕ್ಕರೆಯನ್ನು ಹಸಿಯಾಗಿಯೇ ಉಪಯೋಗಿಸಲಾಗುತ್ತದೆ. ಗರ್ಬೀಜವನ್ನು ಪದಾರ್ಥಕ್ಕಾಗಿ ಮತ್ತು ಹಸಿಯಾಗಿ ಹೆರೆದು ಬಾಯಾರಿಕೆಗೆ ದೇಹಕ್ಕೆ ತಂಪು ಕೊಡುವ ಪಾನಕವಾಗಿಯೂ ಉಪಯೋಗಿಸಲಾಗುತ್ತದೆ.

ಇಬ್ಬುಳ ಅಥವಾ ಮುಲಾಂಬುವನ್ನು ಇದೇ ರೀತಿಯಲ್ಲಿ ಬೆಳೆಸಲಾಗುವುದು. ಇದನ್ನು ಕೇವಲ ಹಣ್ಣಿನಂತೆ ಕೆಲವೊಮ್ಮೆ ಬೆಲ್ಲ ಹಾಕಿ ತಿನ್ನಲು ಉಪಯೋಗಿಸುತ್ತಿದ್ದರು.

**ನಂಬಿಕೆಗಳು : ಬೀಜ ಹಾಕುವುದು :** ಇದನ್ನು ಮನೆಯ ಯಜಮಾನನೇ ದೇವರ ಪ್ರಾರ್ಥನೆಯ ಬಳಿಕ ಹಾಕುವುದು. ತಾನು ಬಿತ್ತನೆ ಮಾಡದೆ ಇತರರಿಗೆ ಕೊಡುವ ಹಾಗಿಲ್ಲ. ಕೊಟ್ಟರೆ ಈತನ ಕೃಷಿ ಅಳಿಯುತ್ತದೆ ಎಂಬ ನಂಬಿಕೆ.

ಕೊಯ್ಲಿಗೆ ಬಂದ ಪ್ರಥಮ ಫಲವನ್ನು ಪ್ರದೇಶದ ದೈವ / ದೇವಸ್ಥಾನಗಳಿಗೆ ಅರ್ಪಿಸಲಾಗುತ್ತದೆ.

ಬೀಜ ಯಜಮಾನ ಹಾಕುವುದು, ಒಬ್ಬರು ಸಾಲು ಎಳೆಯುವುದು, ಒಬ್ಬರು ಬೂದಿಗೊಬ್ಬರ ಹಾಕುವುದು, ಒಬ್ಬರು ಬುಡ ಹಾಕುವುದು, ನೀರು ಹಾಕುವುದು, ಕಳೆ ಕೀಳುವುದು - ಒಟ್ಟಾರೆ ಸಂಸಾರ ಒಟ್ಟಿಗೆ ಇದ್ದು ಮಾಡಲಾಗುತ್ತದೆ.

ಮುಖ್ಯವಾಗಿ ತೆಕ್ಕರೆಯನ್ನು 'ತೆನೆ/ಮನೆ ತುಂಬಿಸುವ' ಆಚರಣೆಯಲ್ಲಿ ಹರಿವೆಯೊಂದಿಗೆ ಬಳಸಲಾಗುತ್ತದೆ.

ಆರೋಗ್ಯದ ದೃಷ್ಟಿಯಲ್ಲಿ ಎಳೆಯತೆಕ್ಕರೆಯನ್ನು ಉಪಯೋಗಿಸ ಬೇಕು. ಇದು ಸ್ವಲ್ಪ ಕಫಕಾರಕ. ಕೆಂಪಾದ ಹಣ್ಣಿನ ಬಳಕೆ ವ್ಯಕ್ತಿಯನ್ನು ಮಲಗಿಸುವಷ್ಟು ಪಿತ್ತಕಾರಕ. ಅದರಲ್ಲಿ ಸೌತೆ ಯಾವುದೇ ರೀತಿಯಲ್ಲಿ ಆರೋಗ್ಯಕ್ಕೆ ಹಾನಿಕಾರಕವಲ್ಲ.

ಮದುವೆ, ಗೃಹಪ್ರವೇಶದಂತಹ ಶುಭಕಾರ್ಯಗಳಲ್ಲಿ ಸೌತೆಕಾಯಿಯ ವ್ಯಂಜನ (ಕೊದ್ದೆಲ್) ಮುಖ್ಯವಾಗಿ ಮಾಡಲಾಗುತ್ತದೆ. 'ಹೊಸ ಅಕ್ಕಿ ಊಟ'ದಂದು ತೆಕ್ಕರೆ ಮತ್ತು ಸೌತೆಕಾಯಿಗಳನ್ನು ಹಸಿ ಮತ್ತು ಬೇಯಿಸಿದ ವ್ಯಂಜನಗಳಲ್ಲಿ ಬಳಸಲಾಗುತ್ತದೆ.

ಈ ಬೀಜಗಳನ್ನು ತುಳುನಾಡಿನಿಂದ ಹೊರಗೆಯೂ ಬೆಳೆಯಬಹುದು. ಆದರೆ ಇಲ್ಲಿಯ ಮಣ್ಣಿನಲ್ಲಿ ಬೆಳೆದ ರುಚಿ ಬೇರೆಡೆಯ ಉತ್ಪನ್ನಗಳಲ್ಲಿ ಸಿಗಲು ಸಾಧ್ಯವಿಲ್ಲ.

**ಮಾಹಿತಿ ನೀಡಿದವರು :**

ಪ್ರವೀಣ ಜೋಬ್ ಡಿ'ಸೋಜ (37ವರ್ಷ), ಚೇಳಾಯರು ಪದವು, ಮಂಗಳೂರು.

ಭವಾನಿ ಪಂಬದ (70 ವರ್ಷ), ಪಡು ಪೆರಾರ, ಮಂಗಳೂರು.

ವೆಂಕಪ್ಪ ಸಪಲಿಗೆ (49 ವರ್ಷ), ಪಡುಪೆರಾರ, ಮಂಗಳೂರು.

ಹರಿಣಾಕ್ಷಿ ಶೆಟ್ಟಿ ತೋಕೂರುಗುತ್ತು (67 ವರ್ಷ), ಮಂಗಳೂರು.

*ಡಿ.ಎನ್.ಜಿ.*

**ಮಂಡ್ಯ ಜಿಲ್ಲೆ** ಪ್ರಾಚೀನ ಕಾಲದಿಂದಲೂ ಆಡಳಿತ ಪ್ರದೇಶಗಳನ್ನು ಆಯಾ ಪ್ರದೇಶ ಮುಖ್ಯ ಸ್ಥಳಗಳ ಹಿನ್ನೆಲೆಯಲ್ಲಿ ಹೆಸರಿಸುವುದು ವಾಡಿಕೆ. ಅದರಂತೆ ಮಂಡ್ಯ ನಗರವನ್ನು ಆಡಳಿತ ಕೇಂದ್ರವಾಗಿ ಹೊಂದಿರುವ ಈ ಪ್ರದೇಶಕ್ಕೆ ಮಂಡ್ಯ ಜಿಲ್ಲೆ ಎಂದು ಹೆಸರಿಸಲಾಗಿದೆ. ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ದೊರೆಗಳು ಇವರಿಗೆಲ್ಲಾ ಈ ಪ್ರದೇಶ ಪ್ರಮುಖ ಆಡಳಿತ ಕೇಂದ್ರವಾಗಿತ್ತು. 1939ರಲ್ಲಿ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು ಮಂಡ್ಯ ಜಿಲ್ಲೆ ರಚನೆಯಾಯಿತು. ಕೃಷ್ಣರಾಜಸಾಗರ ನಿರ್ಮಾಣದ ಹಿನ್ನೆಲೆ ಇದಕ್ಕೆ ಕಾರಣ. ಈ ಮೊದಲ ಜಿಲ್ಲೆಯ ಬಹುಭಾಗ ಮೈಸೂರು ಜಿಲ್ಲೆಗೆ ಸೇರಿತ್ತು. ಸ್ವಲ್ಪ ಭಾಗ ಹಾಸನ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿದ್ದವು. ಈ ಎಲ್ಲವನ್ನು ಕೂಡಿಸಿ ಮಂಡ್ಯ ಜಿಲ್ಲೆಯನ್ನು ರೂಪಿಸಲಾಗಿದೆ.

ಮಂಡ್ಯಜಿಲ್ಲೆ ಪೂರ್ವದಲ್ಲಿ ರಾಮನಗರ ಪಶ್ಚಿಮದಲ್ಲಿ ಹಾಸನ, ಉತ್ತರದಲ್ಲಿ ತುಮಕೂರು, ದಕ್ಷಿಣದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಗಡಿಯಾಗಿ ಹೊಂದಿದೆ. ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ, ಮಳವಳ್ಳಿ, ಮದ್ದೂರು,

ಮಂಡ್ಯ ಕಸಬಾ ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಏಳು ತಾಲ್ಲೂಕುಗಳಲ್ಲಿ 31 ಹೋಬಳಿಗಳು, 1483 ಹಳ್ಳಿಗಳು, 10 ಪಟ್ಟಣಗಳು ಇವೆ. ಜಿಲ್ಲೆಯ ವಿಸ್ತೀರ್ಣ 4,946.30 ಚ.ಕಿ.ಮೀ. ಒಟ್ಟು ಜನಸಂಖ್ಯೆ 17,63,705 ಇವರಲ್ಲಿ 16,67,640 ಹಿಂದೂಗಳು, 69,890 ಮುಸ್ಲಿಮರು, 8,094 ಕ್ರಿಶ್ಚಿಯನ್ನರು, 3858 ಜೈನರು, 158 ಸಿಖ್‌ರು 11,093 ಬೌದ್ಧರು ಇತರೆ 2969 ಜನ ವಿವಿಧ ಧರ್ಮಗಳಿಗೆ ಸೇರಿದವರು ಇದ್ದಾರೆ. ಈ ಜಿಲ್ಲೆ ಉತ್ತರ ಅಕ್ಷಾಂಶ $12^{o}$, $15^{o}$, $13^{o}$ ಪೂರ್ವ ರೇಖಾಂಶ $76^{o}$, $15^{o}$, $77^{o}$, $21^{o}$ ನಡುವೆ ಇದೆ. ಮಂಡ್ಯ ಜಿಲ್ಲೆ ಕರ್ನಾಟಕ ರಾಜ್ಯದ ನಾಲ್ಕು ಆಡಳಿತ ವಿಭಾಗಗಳಲ್ಲಿ ಮೈಸೂರು ವಿಭಾಗಕ್ಕೆ ಸೇರಿದೆ.


ಮಂಡ್ಯ ಜಿಲ್ಲೆಯು ಬಹುಭಾಗ ಮಟ್ಟಸವಾದ ಬಯಲು ಪ್ರದೇಶದಿಂದ ಕೂಡಿದೆ. ಸಮುದ್ರಮಟ್ಟದಿಂದ ಸುಮಾರು 762 ರಿಂದ 914 ಮೀ. ಎತ್ತರದಲ್ಲಿದೆ. ಈ ಜಿಲ್ಲೆಯಲ್ಲಿ ಹರಡಿದಂತೆ ಸಣ್ಣ ಮತ್ತು ಮಧ್ಯಮ ಪ್ರಮಾಣದ ಬೆಟ್ಟಗುಡ್ಡಗಳಿವೆ. ಶ್ರೀ ಆದಿಚುಂಚನಗಿರಿ, ಯದುಗಿರಿ, ಕಬ್ಬಾಳುದುರ್ಗ, ಕರಿಘಟ್ಟ, ಬಸವನಬೆಟ್ಟ, ನಾರಾಯಣದುರ್ಗ, ಕೋಟೆ ಬೆಟ್ಟ ಇವು ಮಧ್ಯಮ ಎತ್ತರದ ಬೆಟ್ಟಗಳು. ಈ ಪ್ರದೇಶದ ಭೂಮಿ ಮೃದುಶಿಲಾ ವರ್ಗಕ್ಕೆ ಸೇರಿದುದಾಗಿದೆ. ಮಂಡ್ಯ ಜಿಲ್ಲೆಯ ಪಶ್ಚಿಮ, ಉತ್ತರ ಮತ್ತು ಪೂರ್ವ ಭಾಗಗಳು ಮೈದಾನ ಪ್ರದೇಶವಾಗಿವೆ. ದಕ್ಷಿಣ ಭಾಗದಲ್ಲಿ ಕಾವೇರಿ ನದಿ ಕಣಿವೆಯ ಅಕ್ಕಪಕ್ಕ ಸ್ವಲ್ಪಮಟ್ಟಿಗೆ ಏರುಪೇರಿನ ಭೂಪ್ರದೇಶವನ್ನು ಸಣ್ಣಪುಟ್ಟ ಬೆಟ್ಟಗುಡ್ಡಗಳನ್ನು ಹೊಂದಿದೆ.

ಶ್ರೀಗಂಧ ಮತ್ತು ಹಳಲೆ ಮರಗಳನ್ನು ಕಾಣಬಹುದು. ಶ್ರೀಗಂಧ ಸುವಾಸನೆಗೆ ಹೆಸರಾಗಿದ್ದರೆ ಹಳಲೆ ಔಷಧಿ ಸಸ್ಯವಾಗಿದೆ.

ಬಹಳ ಪ್ರಾಚೀನ ಕಾಲದಿಂದಲೂ ಈ ಪ್ರದೇಶ ವ್ಯವಸಾಯ ಪ್ರಧಾನವಾದದ್ದಾಗಿದೆ. ಶೇ. 80ಕ್ಕೂ ಹೆಚ್ಚು ಜನ ವ್ಯವಸಾಯಗಾರರಾಗಿದ್ದಾರೆ. ಗಂಗರು, ಹೊಯ್ಸಳರು, ಕಟ್ಟಿಸಿದ ಅನೇಕ ದೊಡ್ಡ ದೊಡ್ಡ ಕೆರೆಗಳಿವೆ. ದಡಿಗನ ಕೆರೆ, ಸೂಳೆಕೆರೆ, ಬಿಂಡಿಗನವಿಲೆಕೆರೆ, ಹಿರೀಕೆರೆ, ದೊಡ್ಡರಸಿನ ಕೆರೆ, ಮದ್ದೂರು ಕೆರೆ, ಕಿಕ್ಕೇರಿ ಕೆರೆ, ದೇವಿರಮ್ಮಣ್ಣಿ ಕೆರೆ ಮುಂತಾದ ಕೆರೆಗಳಿವೆ.

ಜಿಲ್ಲೆಯಲ್ಲಿ ಬಹಳ ಪ್ರಾಚೀನ ಕಾಲದಿಂದ ಎರಡು ರೀತಿಯ ವ್ಯವಸಾಯ ಪದ್ಧತಿ ಇದ್ದುದು ಕಂಡುಬರುತ್ತದೆ. ಕೆರೆ ನೀರಾವರಿ ಬೇಸಾಯ ಮತ್ತು ಮಳೆಯಾಧಾರಿತ ಒಣಬೇಸಾಯ. ಮಳೆಯಾಧಾರಿತ ಬೇಸಾಯ ಪ್ರದೇಶವು ಶೇ. 80ಕ್ಕಿಂತ ಹೆಚ್ಚು.

ತೀರಾ ಇತ್ತೀಚಿನವರೆಗೆ ಮಂಡ್ಯಜಿಲ್ಲೆಯ ವ್ಯವಸಾಯ ಬಹುತೇಕ ಮಳೆಯನ್ನೇ ಅವಲಂಬಿಸಿತ್ತು. ಈ ಜಿಲ್ಲೆಯಲ್ಲಿ 33 ಮಳೆಮಾಪನ ಕೇಂದ್ರಗಳಿವೆ. ಇವುಗಳ ಅಂಕಿ-ಅಂಶದ ಪ್ರಕಾರ ವಾರ್ಷಿಕ 880.8 ಮಿ.ಮೀ. ಮಳೆಯಾಗುತ್ತದೆ. ಇದರಲ್ಲಿ ಸಾಕಷ್ಟು ಏರುಪೇರೂ ಕೂಡ ಇರುತ್ತದೆ. ಮಂಡ್ಯ ಜಿಲ್ಲೆಯ ವಾರ್ಷಿಕ ಮಳೆಯ ದಿನಗಳನ್ನು 42 ಎಂದು ಗುರುತಿಸಲಾಗಿದೆ. ಸಾಮಾನ್ಯವಾಗಿ ಯುಗಾದಿಯಿಂದ ವ್ಯವಸಾಯದ ಹೊಸವರ್ಷ ಆರಂಭವಾಗುತ್ತದೆ. ಮಾರ್ಚ್ ತಿಂಗಳಲ್ಲಿ ಬರುವ ರೇವತಿ ಮಳೆಯಿಂದ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಬರುವ ಸ್ವಾತಿ ಮಳೆಯವರೆಗೆ ಈ ವ್ಯವಸಾಯ ಪದ್ಧತಿ ಹರಡಿಕೊಂಡಿದೆ. ಇದರಲ್ಲಿ ಮುಂಗಾರು ಮತ್ತು ಹಿಂಗಾರು ಎಂದು ಎರಡು ಭಾಗಗಳನ್ನು ಮಾಡಿಕೊಳ್ಳಲಾಗುತ್ತದೆ. ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಮಳೆಯಾದಾಗ ಎಳ್ಳು, ಅಲಸಂದೆ, ಬಹಳ ಕಡಿಮೆ ಪ್ರದೇಶದಲ್ಲಿ ಜೋಳ ಬೆಳೆಯುತ್ತಾರೆ. ಈ ಬೆಳೆಗಳು ಜುಲೈ ಅಂತ್ಯದ ಹೊತ್ತಿಗೆ ಕಟಾವಿಗೆ ಬರಬೇಕು. ಆನಂತರ ಹಿಂಗಾರು ಆರಂಭವಾಗುತ್ತದೆ. ಹಿಂಗಾರಿನಲ್ಲಿ ಪ್ರಧಾನವಾಗಿ ಆಹಾರ ಧಾನ್ಯಗಳಾದ ರಾಗಿ ಮತ್ತು ಬತ್ತವನ್ನು ಬೆಳೆಯುತ್ತಾರೆ. ಇದು ಒಂದು ರೀತಿಯಲ್ಲಿ ಎರಡು ಬೆಳೆಯ ವ್ಯವಸಾಯ ಕ್ರಮ ಎಂದು ಹೇಳಬಹುದು.



ಜೂನ್ ತಿಂಗಳಿಂದ ಜುಲೈ ಕೊನೆಯವರೆಗೆ ಅರಬ್ಬಿ ಸಮುದ್ರದ ಕಡೆಯಿಂದ ಬರುವ ಪಶ್ಚಿಮ ಮಾರುತಗಳ ಮಳೆಯನ್ನು ಮುಂಗಾರು ಹಂಗಾಮಿನ ಬೆಳೆಗಳಲ್ಲಿ ನಿರೀಕ್ಷಿಸಲಾಗುತ್ತದೆ. ಬೆಳೆಗಳಿಗೆ ಪಶ್ಚಿಮದ ಮಳೆಗಳು ಸಾಮಾನ್ಯವಾಗಿ ಅಂತಹ ಜೋರು ಮಳೆಗಳಾಗಿರುವುದಿಲ್ಲ. ಆಗಸ್ಟ್‌ನಿಂದ ಅಕ್ಟೋಬರ್ ಕೊನೆಯವರೆಗೆ ಪೂರ್ವ ಮಾರುತಗಳಿಂದ ಬರುವ ಹಿಂಗಾರು ಮಳೆ ಈ ಪ್ರದೇಶಕ್ಕೆ ಬಹಳ ಮುಖ್ಯ. ಈ ಮಳೆಗಳಿಂದಲೇ ಕೆರೆಕಟ್ಟೆಗಳು ತುಂಬುತ್ತವೆ. ಮಂಡ್ಯ ಜಿಲ್ಲೆಯ ಬಹುಭಾಗ ಈ ಮಳೆಯಿಂದಲೇ ತನ್ನ ಕೃಷಿ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.

ಜಿಲ್ಲೆಯಲ್ಲಿ ಒಟ್ಟು 4,98,244 ಹೆಕ್ಟೇರ್‌ಗಳಷ್ಟು ಭೂಮಿ ಇದೆ. ಇದರಲ್ಲಿ 24,765 ಹೆಕ್ಟೇರ್ ಅರಣ್ಯ ಪ್ರದೇಶವಾಗಿದೆ. 60.906 ಹೆಕ್ಟೇರ್ ವ್ಯವಸಾಯೇತರ ಭೂಮಿ, 21,519 ಹೆಕ್ಟೇರ್ ಬಂಜರು ಭೂಮಿಯಾಗಿದೆ. 32,049 ಹೆಕ್ಟೇರ್ ಗೋಮಾಳ ಆಗಿದೆ. 3382 ಗುಂಡು ತೋಪುಗಳಿವೆ. ಒಟ್ಟು ಭೂಮಿಯಲ್ಲಿ ಅರಣ್ಯ ಬಂಜರು, ಗೋಮಾಳ, ತೋಪುಗಳನ್ನು ಕಳೆದು ಮಿಕ್ಕೆಲ್ಲಾ ಭೂಮಿಯಲ್ಲಿ ವ್ಯವಸಾಯ ಚಟುವಟಿಕೆಗಳು ನಡೆಯುತ್ತವೆ. ಮಂಡ್ಯ ಜಿಲ್ಲೆಯ ಸಾಗುವಳಿ ಭೂಮಿ ಕೆಂಪು ಮಿಶ್ರಿತ ಜೇಡಿಮಣ್ಣು ಮತ್ತು ಮರಳು ಮಿಶ್ರಿತ ಜೇಡಿ ಮಣ್ಣಿನಿಂದ ಕೂಡಿದೆ. ಇದು ವ್ಯವಸಾಯಕ್ಕೆ ಯೋಗ್ಯವಾಗಿದೆ.

**ನದಿಗಳು :** ಜಿಲ್ಲೆಯಲ್ಲಿ ನದಿಗಳು, ಕೆರೆಗಳು, ಹಳ್ಳಗಳು ಇವೆ. ಈ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕಾವೇರಿ ಮತ್ತು ಹೇಮಾವತಿ ನದಿಗಳು, ಉತ್ತರ ಭಾಗದಲ್ಲಿ ಲೋಕ ಪಾವನಿ ಮತ್ತು ವೀರವೈಷ್ಣವಿನದಿ, ಶಿಂಷಾ ನದಿಗಳು ಹರಿಯುತ್ತಿವೆ. ಇವುಗಳಲ್ಲಿ ಲೋಕಪಾವನಿ ನಾಗಮಂಗಲ ತಾಲ್ಲೂಕಿನ ಬಸವನಬೆಟ್ಟದ ಪೂರ್ವದಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿದು, ಪಾಂಡವಪುರ ತಾಲ್ಲೂಕಿನ ಕರಿಘಟ್ಟದ ಹತ್ತಿರ ಕಾವೇರಿ ನದಿಯನ್ನು ಸೇರುತ್ತದೆ. ವೀರವೈಷ್ಣವಿ ನದಿ ನಾಗಮಂಗಲ ತಾಲ್ಲೂಕಿನ ಹನುಮನಹಳ್ಳಿ ಮತ್ತು ವಡ್ಡರಹಳ್ಳಿಯ ಮಧ್ಯೆ ಇರುವ ಹಸುವಿನ ಕಾವಲು ಕಾಡಿನಲ್ಲಿ ಹುಟ್ಟಿ ಉತ್ತರಾಭಿಮುಖವಾಗಿ ಹರಿದು ಶಿಂಷಾನದಿಗೆ ಅಡ್ಡಲಾಗಿ ಕಟ್ಟಿರುವ ಮಡಕೇನಹಳ್ಳಿ ಜಲಾಶಯವನ್ನು ಸೇರುತ್ತದೆ. ಅಲ್ಲಿಂದ ಮುಂದೆ ಅದು ಶಿಂಷಾ ನದಿಯಾಗಿ ದಕ್ಷಿಣಾಭಿಮುಖವಾಗಿ ಹರಿದು ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಗಳಿಗೆ ಬಹಳ ಪ್ರಾಚೀನ ಕಾಲದಿಂದಲೂ ಅಣೆಗಳನ್ನು ಕಟ್ಟಿ ವ್ಯವಸಾಯಕ್ಕೆ ನೀರೊದಗಿಸುವ ಪದ್ಧತಿ ಇತ್ತು. ಅಂತಹ ಅನೇಕ ಪ್ರಾಚೀನ ಅಣೆಗಳ ಅವಶೇಷಗಳು ಕಂಡುಬರುತ್ತವೆ. ಅನಂತರ ಮೈಸೂರು ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ರೈತಪರ ನಿಲುವಿನಿಂದಾಗಿ ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣವಾಯಿತು. ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ, ಮದ್ದೂರು, ಮಳವಳ್ಳಿ ತಾಲ್ಲೂಕುಗಳ ಬಹುಭಾಗಗಳಿಗೆ ಕೃಷ್ಣರಾಜಸಾಗರದ ನೀರು ಹರಿಯುತ್ತದೆ. ಸ್ವಾತಂತ್ರ್ಯೋತ್ತರ ಕರ್ನಾಟಕ ಸರ್ಕಾರ ಹಾಸನ ಜಿಲ್ಲೆ ಗೊರೂರು ಹತ್ತಿರ ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಹೇಮಾವತಿ ಜಲಾಶಯವು ಕೆ.ಆರ್.ಪೇಟೆ, ನಾಗಮಂಗಲ, ಮದ್ದೂರಿನ ಕೊಪ್ಪ ಪ್ರದೇಶಗಳ ಅರೆ ನೀರಾವರಿ ಬೆಳೆಗಳಿಗೆ ಮಾತ್ರ ನೀರೊದಗಿಸುತ್ತದೆ. ಇದಲ್ಲದೆ ಇನ್ನು ಕೆಲವು ಪ್ರದೇಶಗಳು ಕೃಷ್ಣರಾಜಪೇಟೆಯ ಸಂತೇಬಾಚಹಳ್ಳಿ ಹೋಬಳಿ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಹೋಬಳಿ, ಕಸಬಾಹೋಬಳಿ, ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಹೋಬಳಿಯ ಬಹುಭಾಗ ಮಳೆಯನ್ನೇ ಆಶ್ರಯಿಸಬೇಕಾಗಿದೆ. ಇತ್ತೀಚಿಗೆ ಕೊಳವೆಬಾವಿಗಳ ಸಹಾಯದಿಂದ ವ್ಯವಸಾಯದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ 779.85 ಕಿ.ಮೀ. ಉದ್ದದ ಕಾಲುವೆಗಳಿಂದ ಹರಿಸುವ ನೀರಾವರಿ ಪದ್ಧತಿ ಇದೆ. ಒಟ್ಟು 24.932 ಕಿ.ಮೀ. ಕೆರೆಗಳಿಂದ ನೀರು ಹರಿಸುವ ಏರ್ಪಾಡುಗಳಿವೆ. ಒಟ್ಟು 10.118 ಕಿ.ಮೀ. ವಿಸ್ತೀರ್ಣ ಬಾವಿಗಳಿಂದ ನೀರು ಹರಿಸುವ ಏರ್ಪಾಟಿದೆ. ಇದಲ್ಲದೆ ಕೊಳವೆ ಬಾವಿ ಮತ್ತು ಏತನೀರಾವರಿ ಮೂಲಕ ವ್ಯವಸಾಯ ಮಾಡುವ ಪದ್ಧತಿಯೂ ಇದೆ. ಮಂಡ್ಯಜಿಲ್ಲೆಯಲ್ಲಿ ಸುಮಾರು 6533 ಕೊಳವೆ ಬಾವಿಗಳಿವೆ ಎಂದು ಅಂದಾಜು ಮಾಡಲಾಗಿದೆ. ಹೀಗೆ ಅನೇಕ ಮೂಲಗಳಿಂದ ನೀರೊದಗಿಸಿಕೊಂಡು ಮಂಡ್ಯ ಜಿಲ್ಲೆಯ ವ್ಯವಸಾಯ ಮುಂದುವರಿದಿದೆ.

**ಬೆಳೆಗಳು :** ಮಂಡ್ಯ ಜಿಲ್ಲೆಯಲ್ಲಿ ಬಹಳ ಪ್ರಾಚೀನಕಾಲದಿಂದ ಪ್ರಮುಖವಾಗಿ ಆಹಾರ ಧಾನ್ಯಗಳನ್ನು ಸಾಮಾನ್ಯವಾಗಿ ಕಾಳುಗಳನ್ನು, ಎಣ್ಣೆಕಾಳುಗಳನ್ನು ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪದ್ಧತಿ ಇತ್ತು. ಈ ಜಿಲ್ಲೆಯ ಪ್ರಧಾನ ಆಹಾರ ಬೆಳೆ ರಾಗಿಯಾಗಿತ್ತು. ಕೆರೆಗಳ ಬಯಲಿನಲ್ಲಿ ಪ್ರಧಾನವಾಗಿ ಬತ್ತವನ್ನು, ವಾಣಿಜ್ಯ ಬೆಳೆಯಾಗಿ ಕಬ್ಬನ್ನು ಬೆಳೆಯುವ ಪದ್ಧತಿ ಇತ್ತು. ಕೃಷ್ಣರಾಜಸಾಗರ ನಿರ್ಮಾಣವಾದ ಮೇಲೆ ಮಂಡ್ಯ ಜಿಲ್ಲೆಯ ವ್ಯವಸಾಯ ಪದ್ಧತಿಯಲ್ಲಿ ಅಪಾರವಾದ ಬದಲಾವಣೆಗಳಾದವು. ಮಳೆಯಾಧಾರಿತ ವ್ಯವಸಾಯವಿದ್ದಾಗ ಸಾಮಾನ್ಯವಾಗಿ ಒಂದು ಪ್ರಮುಖ ಬೆಳೆಯನ್ನು ಕೆಲವು ಉಪ ಬೆಳೆಗಳನ್ನು ಬೆಳೆಯುತ್ತಿದ್ದರು. ಜಲಾಶಯದಿಂದ ನೀರೊದಗಿದ ಮೇಲೆ ಒಂದೇ ವರ್ಷ ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಪದ್ಧತಿ ಜಾರಿಗೆ ಬಂದಿದೆ. ಬಹಳ ಪ್ರಾಚೀನ ಕಾಲದಿಂದಲೂ ಪ್ರಧಾನವಾಗಿ ಆಹಾರ ಬೆಳೆಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರ ಕಾಳು ಬೆಳೆಗಳನ್ನು ಬೆಳೆಯುತ್ತಿದ್ದರು. 17ನೇ ಶತಮಾನದಲ್ಲಿ ಪ್ರವಾಸ ಮಾಡಿದ 'ಅಬ್ಬೆದುಬಾ'ಯ ಎಂಬ ಪ್ರವಾಸಿ ಈ ಪ್ರದೇಶದಲ್ಲಿ ಬೆಳೆಯುತ್ತಿದ್ದ ಹುರಳಿ ಮತ್ತು ಅದರ ರೋಗ ನಿರೋಧಕ ಗುಣಗಳನ್ನು ವರ್ಣಿಸಿದ್ದಾನೆ. ಹಾಗೆಯೇ ಮತ್ತೊಬ್ಬ ಬ್ರಿಟಿಷ್ ಸೈನಿಕ ರಾಗಿ ಮುದ್ದೆ ಮತ್ತು ಹುರುಳಿ ಕಾಳಿನ ಸಾರನ್ನು ಊಟಮಾಡಿ ನನ್ನ ಜೀವನದಲ್ಲಿಯೇ ಇಂತಹ ರುಚಿಯಾದ ಆಹಾರವನ್ನು ತಿಂದಿರಲಿಲ್ಲವೆಂದು ಹೇಳಿದ್ದಾನೆ. ಮಂಡ್ಯ ಜಿಲ್ಲೆಯ ಪ್ರಮುಖವಾದ ಆಹಾರ ಬೆಳೆಯೆಂದರೆ ರಾಗಿ ಬತ್ತ. ಕೆರೆಗಳ ಬಯಲಿನಲ್ಲಿ ಇದನ್ನು ಪ್ರಮುಖವಾಗಿ ಬೆಳೆಯುತ್ತಿತ್ತು. ಮಳೆಯಾಧಾರಿತ ತಗ್ಗು ಭೂಮಿಗಳಲ್ಲಿ ಬರಭತ್ತ ಬೆಳೆಯುವ ಪದ್ಧತಿಯೂ ಇತ್ತು. ಇವುಗಳಜೊತೆಗೆ ಹುರುಳಿ, ಅವರೆ, ಅಲಸಂದೆ ಅಥವಾ ತಡಗಣಿ, ಕರಿ ಎಳ್ಳು, ಹುಚ್ಚೆಳ್ಳು, ಇವುಗಳನ್ನು ಕೂಡ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದರು. ರಾಗಿಯನ್ನು ಬಿತ್ತನೆ, ನಾಟಿ, ಕೂರಿಗೆ ಅಥವಾ ಸಾಲು ಮತ್ತು ಗುಣಿ ಪದ್ಧತಿಗಳಲ್ಲಿ ಬೆಳೆಯುತ್ತಾರೆ. ಸಾಮಾನ್ಯವಾಗಿ ಜುಲೈ, ಆಗಸ್ಟ್ ತಿಂಗಳಲ್ಲಿ ರಾಗಿಯ ಬಿತ್ತನೆ ಕಾರ್ಯ ನಡೆಯುತ್ತಿದೆ. ನಾಟಿ ಮಾಡುವವರು ಒಂದೆಡೆ ರಾಗಿಯನ್ನು ಒಟ್ಲು ಅಥವಾ ಹಗೆ ಹಾಕಿ 25 ರಿಂದ 1 ತಿಂಗಳ ಒಳಗಿನ ಪೈರುಗಳನ್ನು ಕಿತ್ತು ನಾಟಿ ಮಾಡುತ್ತಾರೆ. ಕೂರಿಗೆ ಅಥವಾ ಸಾಲು ರಾಗಿಯ ಪದ್ಧತಿಯಲ್ಲಿ ರಾಗಿಯನ್ನು ಸಾಲಾಗಿ ಹಾಕಿ ಮಧ್ಯೆ ಕಳೆ ತೆಗೆಯಲು ಅನುಕೂಲವಾಗುವಂತೆ ಜಾಗ ಬಿಟ್ಟುಕೊಳ್ಳುತ್ತಾರೆ. ಈಗ ಕೂರಿಗೆ ಪದ್ಧತಿ ಹೆಚ್ಚು ಕಡಿಮೆ ಮಾಯವಾಗಿದೆ. ಆದರೆ ಗೆಣೆ ಹೊಡೆದು ಸಾಲಿನಲ್ಲಿ ರಾಗಿ ಉದುರಿಸುವ ಕ್ರಮ ಪ್ರಧಾನವಾಗಿದೆ. ಗುಣಿರಾಗಿ ಪದ್ಧತಿ ಕೂಡ ಚಾಲ್ತಿಯಲ್ಲಿಲ್ಲ. ಗುಣಿರಾಗಿ ಅಂದರೆ ನಾಟಿ ಪದ್ಧತಿಯ ಇನ್ನೊಂದು ರೂಪ. ನಾಟಿ

## 2010–11ರ ಅಂಕಿಅಂಶಗಳ ಪ್ರಕಾರ ವ್ಯವಸಾಯ/ಏಕದಳ ಧಾನ್ಯಗಳು

| ಪ್ರಮುಖ ಬೆಳಗಳ ವಿಸ್ತೀರ್ಣ / ಉತ್ಪಾದನೆ | | | | | | | | | | |
|---|---|---|---|---|---|---|---|---|---|---|
| ಏಕದಳ ಧಾನ್ಯಗಳ ಉತ್ಪಾದನೆ | | | | | | | | | | |
| ಕ್ರ.ಸಂ. | ತಾಲ್ಲೂಕುಗಳು | | ಬತ್ತ | ಜೋಳ | ಸಜ್ಜೆ | ಮುಸುಕಿನಜೋಳ | ರಾಗಿ | ಗೋದಿ | ಇತರೆ ತೃಣ ಧಾನ್ಯಗಳು | ಒಟ್ಟು ಏಕದಳ ಧಾನ್ಯಗಳು |
| 1 | 2 | | 696 | 700 | 701 | 702 | 703 | 704 | 705 | 706 |
| 1. | ಕೆ.ಆರ್.ಪೇಟೆ | ವಿಸ್ತೀರ್ಣ | 17448 | – | – | 354 | 14001 | – | – | 31803 |
| | | ಉತ್ಪಾದನೆ | 55757 | – | – | 591 | 19071 | – | – | 73404 |
| 2. | ಮದ್ದೂರು | ವಿಸ್ತೀರ್ಣ | 15845 | – | – | 59 | 10995 | – | – | 26898 |
| | | ಉತ್ಪಾದನೆ | 50634 | – | – | 99 | 14970 | – | – | 62065 |
| 3. | ಮಳವಳ್ಳಿ | ವಿಸ್ತೀರ್ಣ | 11544 | – | – | 5438 | 8397 | – | – | 25370 |
| | | ಉತ್ಪಾದನೆ | 36889 | – | – | 9083 | 11438 | – | – | 58550 |
| 4. | ಮಂಡ್ಯ | ವಿಸ್ತೀರ್ಣ | 17044 | – | – | 58 | 10152 | – | – | 27350 |
| | | ಉತ್ಪಾದನೆ | 54466 | – | – | 97 | 13826 | – | – | 63158 |
| 5. | ನಾಗಮಂಗಲ | ವಿಸ್ತೀರ್ಣ | 4406 | – | – | 7 | 23846 | – | – | 28187 |
| | | ಉತ್ಪಾದನೆ | 14079 | – | – | 12 | 32461 | – | – | 65070 |
| 6. | ಪಾಂಡವಪುರ | ವಿಸ್ತೀರ್ಣ | 10310 | – | – | 2 | 9813 | – | – | 20125 |
| | | ಉತ್ಪಾದನೆ | 32946 | – | – | 3 | 13365 | – | – | 46488 |
| 7. | ಶ್ರೀರಂಗಪಟ್ಟಣ | ವಿಸ್ತೀರ್ಣ | 12760 | – | – | 20 | 2466 | – | – | 15240 |
| | | ಉತ್ಪಾದನೆ | 40776 | – | – | 33 | 3354 | – | – | 35215 |
| ಒಟ್ಟು | | ವಿಸ್ತೀರ್ಣ | 89357 | – | – | 5938 | 79670 | – | – | 174965 |
| | | ಉತ್ಪಾದನೆ | 285547 | – | – | 9918 | 108485 | – | – | 403950 |

| ಏಕದಳ ಧಾನ್ಯಗಳ (ಕೆ.ಜಿ./ಹೆಕ್ಟೇರ್) | | | | | | | | | | |
|---|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕುಗಳು | | ಬತ್ತ | ಜೋಳ | ಸಜ್ಜೆ | ಮುಸುಕಿನಜೋಳ | ರಾಗಿ | ಗೋದಿ | ಇತರೆ ತೃಣ ಧಾನ್ಯಗಳು | ಒಟ್ಟು ಏಕದಳ ಧಾನ್ಯಗಳು |
| 1 | 2 | | 762 | 763 | 764 | 765 | 766 | 767 | 768 | 769 |
| 1. | ಕೆ.ಆರ್.ಪೇಟೆ | ವಿಸ್ತೀರ್ಣ | 3370 | – | – | 1658 | 1401 | – | – | 2401 |
| | | ಉತ್ಪಾದನೆ | | | | | | – | – | |
| 2. | ಮದ್ದೂರು | ವಿಸ್ತೀರ್ಣ | 3358 | – | – | 1858 | 1430 | – | – | 2059 |
| | | ಉತ್ಪಾದನೆ | | | | | | – | – | |
| 3. | ಮಳವಳ್ಳಿ | ವಿಸ್ತೀರ್ಣ | 3340 | – | – | 1750 | 1460 | – | – | 2440 |
| | | ಉತ್ಪಾದನೆ | | – | – | | | – | – | |
| 4. | ಮಂಡ್ಯ | ವಿಸ್ತೀರ್ಣ | 3390 | – | – | 1766 | 1480 | – | – | 2420 |
| | | ಉತ್ಪಾದನೆ | | – | – | | | – | – | |
| 5. | ನಾಗಮಂಗಲ | ವಿಸ್ತೀರ್ಣ | 3360 | – | – | 1730 | 1400 | – | – | 2430 |
| | | ಉತ್ಪಾದನೆ | | – | – | | | – | – | |
| 6. | ಪಾಂಡವಪುರ | ವಿಸ್ತೀರ್ಣ | 3368 | – | – | 1788 | 1433 | – | – | 2435 |
| | | ಉತ್ಪಾದನೆ | | – | – | | | – | – | |
| 7. | ಶ್ರೀರಂಗಪಟ್ಟಣ | ವಿಸ್ತೀರ್ಣ | 3364 | – | – | 1758 | 1428 | – | – | 2425 |
| | | ಉತ್ಪಾದನೆ | | – | – | | | – | – | |
| | ಒಟ್ಟು | ವಿಸ್ತೀರ್ಣ | 3364 | – | – | 1758 | 1433 | – | – | 2430 |
| | | ಉತ್ಪಾದನೆ | | | | | | | | |

| | | | | | | | | | | |
|---|---|---|---|---|---|---|---|---|---|---|
| 6. | ಪಾಂಡವಪುರ | ವಿಸ್ತೀರ್ಣ | 3368 | – | – | 1788 | 1433 | – | – | 2435 |
| | | ಉತ್ಪಾದನೆ | | – | – | | | – | – | |
| 7. | ಶ್ರೀರಂಗಪಟ್ಟಣ | ವಿಸ್ತೀರ್ಣ | 3364 | – | – | 1758 | 1428 | – | – | 2425 |
| | | ಉತ್ಪಾದನೆ | | – | – | | | – | – | |
| | ಒಟ್ಟು | ವಿಸ್ತೀರ್ಣ | 3364 | – | – | 1758 | 1433 | – | – | 2430 |
| | | ಉತ್ಪಾದನೆ | | | | | | | | |

| ಪ್ರಮುಖ ಬೆಳೆಗಳ ವಿಸ್ತೀರ್ಣ/ಉತ್ಪಾದನೆ | | | | | | | | | | | | | |
|---|---|---|---|---|---|---|---|---|---|---|---|---|---|
| ದ್ವಿದಳ ಧಾನ್ಯಗಳ ಉತ್ಪಾದನೆ | | | | | | | | | | | | | |
| ಕ್ರ.ಸಂ. | ತಾಲ್ಲೂಕುಗಳು | | ತೊಗರಿ | ಹುರುಳಿ | ಉದ್ದು | ಹೆಸರು | ಅವರೆ | ಅಲಸಂದೆ | ಕಡಲೆ | ಇತರೆ | ಒಟ್ಟು ದ್ವಿದಳ ಧ್ಯಾನಗಳು | ಒಟ್ಟು ಹಣ್ಣು ಬೆಳೆಯ ಉತ್ಪಾದನೆ | ಒಟ್ಟು ತರಕಾರಿ ಬೆಳೆಗಳ ಉತ್ಪಾದನೆ |
| 1 | 2 | | 707 | 708 | 709 | 710 | 711 | 712 | 713 | 714 | 715 | 716 | 717 |
| 1. | ಕೆ.ಆರ್.ಪೇಟೆ | ವಿಸ್ತೀರ್ಣ | 170 | 3815 | – | – | 740 | 1255 | – | – | 5980 | 1095 | 6653 |
| | | ಉತ್ಪಾದನೆ | 90 | 1389 | – | – | 698 | 572 | – | – | 2637 | 7937 | |
| 2. | ಮದ್ದೂರು | ವಿಸ್ತೀರ್ಣ | 80 | 2767 | 122 | 129 | 503 | 628 | – | – | 4229 | 716 | 5111 |
| | | ಉತ್ಪಾದನೆ | 42 | 1006 | 37 | 21 | 474 | 288 | – | – | 1866 | 5189 | |
| 3. | ಮಳವಳ್ಳಿ | ವಿಸ್ತೀರ್ಣ | 147 | 3750 | 89 | 97 | 468 | 491 | – | – | 5042 | 925 | 3366 |
| | | ಉತ್ಪಾದನೆ | 77 | 1364 | 27 | 16 | 439 | 225 | – | – | 2224 | 6704 | |
| 4. | ಮಂಡ್ಯ | ವಿಸ್ತೀರ್ಣ | 188 | 5925 | 72 | 63 | 360 | 822 | – | – | 7430 | 383 | 7327 |
| | | ಉತ್ಪಾದನೆ | 99 | 2154 | 22 | 11 | 337 | 375 | – | – | 3280 | 2472 | |
| 5. | ನಾಗಮಂಗಲ | ವಿಸ್ತೀರ್ಣ | 305 | 4775 | 40 | 40 | 1205 | 977 | 2 | – | 7344 | 700 | 12580 |
| | | ಉತ್ಪಾದನೆ | 160 | 1736 | 12 | 7 | 1134 | 446 | 1 | – | 3243 | 5074 | |
| 6. | ಪಾಂಡವಪುರ | ವಿಸ್ತೀರ್ಣ | 238 | 2582 | 8 | 14 | 659 | 942 | – | – | 4443 | 192 | 2065 |
| | | ಉತ್ಪಾದನೆ | 126 | 939 | 3 | 2 | 619 | 430 | – | – | 1960 | 1390 | |
| 7. | ಶ್ರೀರಂಗಪಟ್ಟಣ | ವಿಸ್ತೀರ್ಣ | 35 | 1400 | 32 | 33 | 127 | 224 | – | – | 1857 | 377 | 2409 |
| | | ಉತ್ಪಾದನೆ | 18 | 509 | 10 | 6 | 4 | 102 | – | – | 817 | 2731 | |
| ಒಟ್ಟು | | ವಿಸ್ತೀರ್ಣ | 1163 | 25014 | 363 | 376 | 4062 | 5339 | 2 | – | 36319 | 4388 | 39511 |
| | | ಉತ್ಪಾದನೆ | 612 | 9097 | 111 | 63 | 3705 | 2438 | 1 | – | 16027 | 31497 | |

| ದ್ವಿದಳ ಧಾನ್ಯಗಳ ಇಳುವರಿ (ಕೆ.ಜಿ./ಹೆಕ್ಟೇರ್) | | | | | | | | | | | |
|---|---|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕುಗಳು | ತೊಗರಿ | ಹುರುಳಿ | ಉದ್ದು | ಹೆಸರು | ಅವರೆ | ಅಲಸಂದೆ | ಕಡಲೆ | ಇತರೆ | ಒಟ್ಟು ದ್ವಿದಳ ಧಾನ್ಯಗಳು | ಒಟ್ಟು ಆಹಾರ ಧಾನ್ಯಗಳು | ಒಟ್ಟು ಹಣ್ಣು ಬೆಳೆಗಳ ಇಳುವರಿ | ಒಟ್ಟು ತರಕಾರಿಗಳ ಬೆಳೆಗಳ ಇಳುವರಿ |
| 1 | 2 | 770 | 771 | 772 | 773 | 774 | 775 | 776 | 777 | 778 | 779 | 780 | 781 |
| 1. | ಕೆ.ಆರ್.ಪೇಟೆ | 529 | 364 | – | – | 943 | 455 | – | – | 440 | 1987 | 7248 | |
| 2. | ಮದ್ದೂರು | 525 | 364 | 303 | 162 | 942 | 458 | – | – | 441 | 1987 | 7247 | |
| 3. | ಮಳವಳ್ಳಿ | 320 | 364 | 303 | 165 | 938 | 458 | – | – | 441 | 1987 | 7247 | |
| 4. | ಮಂಡ್ಯ | 526 | 363 | 305 | 174 | 936 | 456 | 750 | – | 441 | 1987 | 6454 | |
| 5. | ನಾಗಮಂಗಲ | 524 | 363 | 300 | 175 | 941 | 456 | – | – | 441 | 1987 | 7248 | |
| 6. | ಪಾಂಡವಪುರ | 529 | 363 | 375 | 143 | 939 | 456 | – | – | 441 | 1987 | 7239 | |
| 7. | ಶ್ರೀರಂಗಪಟ್ಟಣ | 514 | 363 | 312 | 181 | 32 | 455 | – | – | 441 | 1987 | 7244 | |
| ಒಟ್ಟು | | 554 | 383 | 322 | 176 | 960 | 481 | 750 | – | 465 | 2092 | 7178 | |

| ಮುಖ್ಯ ತರಕಾರಿ ಬೆಳೆಗಳ ಉತ್ಪಾದನೆ (ಮೆ.ಟನ್ನುಗಳಲ್ಲಿ) | | | | | | | | | | |
|---|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕುಗಳು | ಆಲೂಗಡ್ಡೆ ವಿಸ್ತೀರ್ಣ ಉತ್ಪಾದನೆ | ಟೊಮ್ಯಾಟೊ ವಿಸ್ತೀರ್ಣ ಉತ್ಪಾದನೆ | ಬದನೆ ವಿಸ್ತೀರ್ಣ ಉತ್ಪಾದನೆ | ಹುರಳಿಕಾಯಿ ವಿಸ್ತೀರ್ಣ ಉತ್ಪಾದನೆ | ಗೋರಿಕಾಯಿ ವಿಸ್ತೀರ್ಣ ಉತ್ಪಾದನೆ | ಈರುಳ್ಳಿ ವಿಸ್ತೀರ್ಣ ಉತ್ಪಾದನೆ | ಹಸಿರು ಮೆಣಸಿನಕಾಯಿ ವಿಸ್ತೀರ್ಣ ಉತ್ಪಾದನೆ | ಒಟ್ಟು ಸೊಪ್ಪಿನ ತರಕಾರಿಗಳು ವಿಸ್ತೀರ್ಣ ಉತ್ಪಾದನೆ | ಒಟ್ಟು ಕುಂಬಳಜಾತಿ ತರಕಾರಿಗಳು ವಿಸ್ತೀರ್ಣ ಉತ್ಪಾದನೆ |
| 1 | 2 | 753 | 754 | 755 | 756 | 757 | 758 | 759 | 760 | 761 |
| 1. | ಕೆ.ಆರ್.ಪೇಟೆ | 47 | 515 | 237 | 104 | 13 | 87 | 229 | 360 | 1224 |
| | | 860 | 10300 | 5925 | 1040 | 156 | 1305 | 3435 | 3641 | 21040 |
| 2. | ಮದ್ದೂರು | – | 120 | 70 | 30 | – | 35 | 75 | 112 | 238 |
| | | – | 2400 | 1800 | 300 | – | 545 | 1125 | 978 | 4165 |
| 3. | ಮಳವಳ್ಳಿ | 39 | 1195 | 191 | 157 | 9 | 305 | 250 | 625 | 6196 |
| | | 585 | 59750 | 4775 | 1570 | 54 | 5980 | 2000 | 96 | 358 |
| 4. | ಮಂಡ್ಯ | 26 | 756 | 180 | 180 | 30 | 57 | 45 | 70 | 263 |
| | | 470 | 35150 | 4500 | 1800 | 250 | 1010 | 350 | 720 | 3215 |
| 5. | ನಾಗಮಂಗಲ | 36 | 595 | 130 | 95 | 18 | 191 | 90 | 219 | 566 |
| | | 720 | 25500 | 3000 | 950 | 150 | 3260 | 680 | 2250 | 10050 |
| 6. | ಪಾಂಡವಪುರ | – | 314 | 94 | 140 | 29 | 65 | 43 | 51 | 136 |
| | | – | 15700 | 2150 | 1400 | 174 | 1065 | 301 | 434 | 2290 |
| 7. | ಶ್ರೀರಂಗಪಟ್ಟಣ | – | 340 | 225 | 152 | 10 | 83 | 51 | 45 | 57 |
| | | – | 6800 | 5195 | 1520 | 70 | 1485 | 459 | 540 | 925 |
| | ಒಟ್ಟು | 148 | 3835 | 1127 | 858 | 109 | 823 | 783 | 953 | 2842 |
| | | 2635 | 155600 | 27545 | 8580 | 854 | 14650 | 8350 | 9188 | 47881 |

**ವಾಣಿಜ್ಯ ಬೆಳೆಗಳು (ಹೆ)**

| ಕ್ರ.ಸಂ. | ತಾಲ್ಲೂಕುಗಳು | ಹತ್ತಿ | ಕಬ್ಬು | ತಂಬಾಕು | ಒಟ್ಟು ವಾಣಿಜ್ಯ ಬೆಳೆಗಳು | ಹೂವು ವಾಣಿಜ್ಯ ಬೆಳೆ |
|---|---|---|---|---|---|---|
| 1 | 2 | 695 | 696 | 697 | 698 | 698/ |
| 1 | ಕೆ.ಆರ್. ಪೇಟೆ | – | 5180 | – | 12,222 | 19 |
| 2. | ಮದ್ದೂರು | – | 6229 | – | 12,498 | 3 |
| 3. | ಮಳವಳ್ಳಿ | – | 1190 | – | 9,028 | 20 |
| 4. | ಮಂಡ್ಯ | – | 11869 | – | 18,748 | 16 |
| 5. | ನಾಗಮಂಗಲ | – | 27 | – | 12,117 | - |
| 6. | ಪಾಂಡವಪುರ | – | 9676 | – | 11,492 | 174 |
| 7. | ಶ್ರೀರಂಗಪಟ್ಟಣ | – | 2871 | – | 4,634 | 24 |
| ಒಟ್ಟು | | – | 37042 | – | 80,739 | 256 |

| ಎಣ್ಣೆ ಕಾಳುಗಳ ಉತ್ಪಾದನೆ | | | | | | | | | | |
|---|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕುಗಳು | | ಶೇಂಗಾ | ಸೂರ್ಯಕಾಂತಿ | ಕುಸುಮೆ | ಹರಳು | ಎಳ್ಳು | ಹುಚ್ಚೆಳ್ಳು | ಇತರೆ ಎಣ್ಣೆ ಕಾಳುಗಳು | ಒಟ್ಟು ಎಣ್ಣೆ ಕಾಳುಗಳು |
| 1 | 2 | | 719 | 720 | 721 | 722 | 723 | 724 | 725 | 726 |
| 1. | ಕೆ.ಆರ್.ಪೇಟೆ | ವಿಸ್ತೀರ್ಣ | 60 | – | – | 50 | 940 | 410 | – | 1460 |
| | | ಉತ್ಪಾದನೆ | 40 | – | – | 48 | 834 | 140 | – | 1087 |
| 2. | ಮದ್ದೂರು | ವಿಸ್ತೀರ್ಣ | 189 | – | – | 121 | 320 | 358 | – | 988 |
| | | ಉತ್ಪಾದನೆ | 126 | – | – | 115 | 282 | 123 | – | 736 |
| 3. | ಮಳವಳ್ಳಿ | ವಿಸ್ತೀರ್ಣ | 1139 | – | – | 168 | 468 | 267 | – | 2042 |
| | | ಉತ್ಪಾದನೆ | 756 | – | – | 160 | 412 | 92 | – | 1521 |
| 4. | ಮಂಡ್ಯ | ವಿಸ್ತೀರ್ಣ | 46 | – | – | 205 | 312 | 220 | – | 783 |
| | | ಉತ್ಪಾದನೆ | 30 | – | – | 194 | 275 | 74 | – | 583 |
| 5. | ನಾಗಮಂಗಲ | ವಿಸ್ತೀರ್ಣ | 28 | – | – | 215 | 2,150 | 505 | – | 2898 |
| | | ಉತ್ಪಾದನೆ | 19 | – | – | 203 | 1,905 | 174 | – | 2158 |
| 6. | ಪಾಂಡವಪುರ | ವಿಸ್ತೀರ್ಣ | 35 | – | – | 294 | 285 | – | – | 614 |
| | | ಉತ್ಪಾದನೆ | 23 | – | – | 278 | 251 | – | – | 457 |
| 7. | ಶ್ರೀರಂಗಪಟ್ಟಣ | ವಿಸ್ತೀರ್ಣ | 232 | – | – | 28 | 129 | 46 | – | 435 |
| | | ಉತ್ಪಾದನೆ | 154 | – | – | 27 | 113 | 16 | – | 322 |
| ಒಟ್ಟು | | ವಿಸ್ತೀರ್ಣ | 1729 | – | – | 1081 | 4604 | 1806 | – | 9220 |
| | | ಉತ್ಪಾದನೆ | 1148 | – | – | 1025 | 4072 | 619 | – | 6864 |

| ವಾಣಿಜ್ಯ ಬೆಳೆಗಳ ಉತ್ಪಾದನೆ (ಟನ್ನುಗಳಲ್ಲಿ) | | | | | | | | | | | | | |
|---|---|---|---|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕುಗಳು | | ಹತ್ತಿ | ಕಬ್ಬು | ತಂಬಾಕು | ಹರಳು | ಎಳ್ಳು | ಅಗಸೆ | ಸೋಯಅವರೆ | ಸೂರ್ಯಕಾಂತಿ | ಕುಸುಬೆ | ಹುಚ್ಚೆಳ್ಳು | ಒಟ್ಟು ವಾಣಿಜ್ಯ ಬೆಳೆಗಳು |
| 1 | 2 | | 727 | 728 | 729 | 730 | 731 | 732 | 733 | 734 | 735 | 736 | 737 |
| 1. | ಕೆ.ಆರ್.ಪೇಟೆ | ವಿಸ್ತೀರ್ಣ | – | 1570 | – | 50 | 940 | – | – | – | – | 410 | 2970 |
| | | ಉತ್ಪಾದನೆ | – | 186437 | – | 48 | 834 | – | – | – | – | 140 | 187459 |
| 2. | ಮದ್ದೂರು | ವಿಸ್ತೀರ್ಣ | – | 3819 | – | 121 | 320 | – | – | – | – | 358 | 4618 |
| | | ಉತ್ಪಾದನೆ | – | 453507 | – | 115 | 282 | – | – | – | – | 358 | 454027 |
| 3. | ಮಳವಳ್ಳಿ | ವಿಸ್ತೀರ್ಣ | – | 1965 | – | 168 | 468 | – | – | – | – | 267 | 2868 |
| | | ಉತ್ಪಾದನೆ | – | 233343 | – | 160 | 412 | – | – | – | – | 92 | 234007 |
| 4. | ಮಂಡ್ಯ | ವಿಸ್ತೀರ್ಣ | – | 6077 | – | 205 | 312 | – | – | – | – | 220 | 6814 |
| | | ಉತ್ಪಾದನೆ | – | 721645 | – | 194 | 275 | – | – | – | – | 74 | 722188 |
| 5. | ನಾಗಮಂಗಲ | ವಿಸ್ತೀರ್ಣ | – | 21 | – | 215 | 2150 | – | – | – | – | 505 | 2891 |
| | | ಉತ್ಪಾದನೆ | – | 2493 | – | 203 | 1905 | – | – | – | – | 174 | 4775 |
| 6. | ಪಾಂಡವಪುರ | ವಿಸ್ತೀರ್ಣ | – | 6218 | – | 294 | 285 | – | – | – | – | – | 6797 |
| | | ಉತ್ಪಾದನೆ | – | 738388 | – | 278 | 251 | – | – | – | – | – | 738917 |
| 7. | ಶ್ರೀರಂಗಪಟ್ಟಣ | ವಿಸ್ತೀರ್ಣ | – | 2587 | – | 28 | 129 | – | – | – | – | 46 | 2790 |
| | | ಉತ್ಪಾದನೆ | – | 307206 | – | 27 | 113 | – | – | – | – | 16 | 307362 |
| ಒಟ್ಟು | | ವಿಸ್ತೀರ್ಣ | – | 2257 | – | 1081 | 4604 | – | – | – | – | 1806 | 29748 |
| | | ಉತ್ಪಾದನೆ | – | 2643019 | – | 1025 | 4072 | – | – | – | – | 619 | 2648735 |

| ತೋಟದ ಬೆಳೆಗಳ ಉತ್ಪಾದನೆ (ಟನ್ನುಗಳಲ್ಲಿ) | | | | | | | | | |
|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕುಗಳು | | ತೆಂಗು (ಲಕ್ಷ ಕಾಯಿಗಳು) | ಅಡಕೆ | ಏಲಕ್ಕಿ | ಮೆಣಸು | ಗೋಡಂಬಿ | ಕೊಕೋ |
| 1 | 2 | | 738 | 739 | 740 | 741 | 742 | 743 |
| 1. | ಕೆ.ಆರ್.ಪೇಟೆ | ವಿಸ್ತೀರ್ಣ | 11184 | 733 | – | 165 | 12 | 20 |
| | | ಉತ್ಪಾದನೆ | 1118 | 1466 | – | 99 | 36 | 14 |
| 2. | ಮದ್ದೂರು | ವಿಸ್ತೀರ್ಣ | 6240 | 71 | – | 10 | – | 11 |
| | | ಉತ್ಪಾದನೆ | 620 | 100 | – | 5 | – | 9 |
| | ಮಳವಳ್ಳಿ | ವಿಸ್ತೀರ್ಣ | 6600 | 144 | – | 24 | 15 | 15 |
| | | ಉತ್ಪಾದನೆ | 680 | 216 | – | 18 | 2 | 10 |
| 3. | ಮಂಡ್ಯ | ವಿಸ್ತೀರ್ಣ | 3850 | 80 | – | 15 | – | 60 |
| | | ಉತ್ಪಾದನೆ | 450 | 150 | – | 9 | – | 48 |
| 4. | ನಾಗಮಂಗಲ | ವಿಸ್ತೀರ್ಣ | 9600 | 390 | – | 40 | 48 | 46 |
| | | ಉತ್ಪಾದನೆ | 1150 | 660 | – | 20 | 140 | 30 |
| 5. | ಪಾಂಡವಪುರ | ವಿಸ್ತೀರ್ಣ | 2198 | 88 | – | 18 | – | 3 |
| | | ಉತ್ಪಾದನೆ | 242 | 98 | – | 9 | – | 3 |
| 6. | ಶ್ರೀರಂಗಪಟ್ಟಣ | ವಿಸ್ತೀರ್ಣ | 3518 | 65 | – | – | – | 10 |
| | | ಉತ್ಪಾದನೆ | 529 | 68 | – | – | – | 7 |
| ಒಟ್ಟು | | ವಿಸ್ತೀರ್ಣ | 42790 | 1501 | – | 272 | 75 | 165 |
| | | ಉತ್ಪಾದನೆ | 4789 | 2758 | – | 160 | 198 | 120 |

| ಮುಖ್ಯ ತೋಟಗಾರಿಕೆ ಬೆಳೆಗಳ ಉತ್ಪಾದನೆ (ಹಣ್ಣುಗಳು) (ಮೆ.ಟನ್ನುಗಳಲ್ಲಿ) | | | | | | | | | | |
|---|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕುಗಳು | ಬಾಳೆ ವಿಸ್ತೀರ್ಣ/ ಉತ್ಪಾದನೆ | ಮಾವು ವಿಸ್ತೀರ್ಣ/ ಉತ್ಪಾದನೆ | ನಿಂಬೆ ವಿಸ್ತೀರ್ಣ / ಉತ್ಪಾದನೆ | ಪೈನಾಫಲ್ ವಿಸ್ತೀರ್ಣ/ ಉತ್ಪಾದನೆ | ಸೀಬೆ ವಿಸ್ತೀರ್ಣ/ ಉತ್ಪಾದನೆ | ದ್ರಾಕ್ಷಿ ವಿಸ್ತೀರ್ಣ/ ಉತ್ಪಾದನೆ | ಸಪೋಟ ವಿಸ್ತೀರ್ಣ/ ಉತ್ಪಾದನೆ | ದಾಳಿಂಬೆ ವಿಸ್ತೀರ್ಣ/ ಉತ್ಪಾದನೆ | ಪರಂಗಿ ವಿಸ್ತೀರ್ಣ/ ಉತ್ಪಾದನೆ |
| 1 | 2 | 744 | 745 | 746 | 747 | 748 | 749 | 750 | 751 | 752 |
| 1. | ಕೆ.ಆರ್.ಪೇಟೆ | 704 | 794 | 45 | – | 99 | – | 177 | 6 | 166 |
| | | 17160 | 7940 | 1125 | – | 1980 | – | 3540 | 65 | 13320 |
| 2. | ಮದ್ದೂರು | 240 | 925 | 6 | – | 6 | – | 165 | 2 | 25 |
| | | 5200 | 9300 | 120 | – | 120 | – | 3300 | 20 | 2000 |
| 3. | ಮಳವಳ್ಳಿ | 892 | 1214 | 64 | 2 | 55 | – | 555 | 13 | 144 |
| | | 19360 | 18210 | 1600 | 120 | 1100 | – | 11100 | 130 | 10800 |
| 4. | ಮಂಡ್ಯ | 550 | 520 | 60 | – | 30 | – | 130 | 10 | 125 |
| | | 15500 | 7800 | 1500 | – | 600 | – | 2600 | 100 | 9500 |
| 5. | ನಾಗಮಂಗಲ | 560 | 1450 | 120 | – | 72 | – | 365 | 15 | 90 |
| | | 13000 | 14900 | 2900 | – | 1400 | – | 7600 | 150 | 7000 |
| 6. | ಪಾಂಡವಪುರ | 183 | 477 | 19 | – | 5 | – | 60 | – | 37 |
| | | 4550 | 3339 | 475 | – | 100 | – | 600 | – | 2775 |
| 7. | ಶ್ರೀರಂಗಪಟ್ಟಣ | 555 | 859 | 10 | – | 30 | – | 405 | – | 14 |
| | | 13480 | 8590 | 250 | – | 660 | – | 6075 | – | 1120 |
| ಒಟ್ಟು | | 3684 | 6239 | 324 | 2 | 297 | | 1857 | 46 | 601 |
| | | 88250 | 70079 | 7970 | 120 | 5960 | – | 34815 | | 46515 |

ಪದ್ಧತಿಯಲ್ಲಿ ಉದ್ದ, ಅಡ್ಡಗೆಣೆ ಎಳೆದು ಗೆಣೆಗಳು ಕೂಡುವ ಭಾಗಕ್ಕೆ ಸಸಿಗಳನ್ನು ನೆಡುತ್ತಾರೆ. ಗುಣಿ ರಾಗಿಯಲ್ಲಿ ಗೆಣೆಗಳು ಕೂಡುವ ಭಾಗಕ್ಕೆ ರಾಗಿಯನ್ನು ಹಾಕುತ್ತಾರೆ. ನಾಟಿ ಮತ್ತು ಗುಣಿರಾಗಿಗಳಿಗೆ ನಾಟಿ ರಾಗಿ ಮತ್ತು ಗುಣಿ ಪದ್ಧತಿಯಲ್ಲಿ ಎರಡೂ ಕಡೆಯಿಂದ ಕುಂಟೆ ಹೊಡೆದು ಕಳೆ ತೆಗೆಯಬಹುದು. ಸಾಲುರಾಗಿಯಲ್ಲಿ ಏಕಮುಖವಾಗಿ ಕುಂಟೆ ಹೊಡೆಯಲು ಮಾತ್ರ ಸಾಧ್ಯ. ಬಿತ್ತನೆ ರಾಗಿಗೆ ನಾಲ್ಕು ಹಲ್ಲಿನ ಕುಂಟೆ ಹೊಡೆಯುತ್ತಾರೆ. ರಾಗಿಯ ಪ್ರತಿ 7ನೇ ಸಾಲಿನಲ್ಲಿ ಅವರೆ, ಅಲಸಂದೆ ಒಗರು ಜೋಳ, ಇತ್ಯಾದಿ ಸಾಲು ಹಾಕುವ ಪದ್ಧತಿ ಇದೆ. ಇದೊಂದು ರೀತಿಯ ಮಿಶ್ರ ಬೆಳೆ ಪದ್ಧತಿ. ಜುಲೈ, ಆಗಸ್ಟ್‌ನಲ್ಲಿ ಬಿತ್ತಿದ ರಾಗಿ ನವೆಂಬರ್ ಕೊನೆಯ ಹೊತ್ತಿಗೆ ಕೊಯ್ಲಿಗೆ ಬರುತ್ತದೆ. ಅನಂತರ ಡಿಸಂಬರ್‌ನಿಂದ ಜನವರಿ ಕೊನೆಯವರೆಗೆ ಸಾಲಿನಲ್ಲಿ ಹಾಕಿದ ಇತರ ಧಾನ್ಯಗಳು ಕೊಯ್ಲಿಗೆ ಬರುತ್ತವೆ. ರಾಗಿಯಲ್ಲಿ ಕೆಲವು ವಿಶಿಷ್ಟವಾದ ದೇಶೀಯ ತಳಿಗಳಿವೆ. ಇವುಗಳನ್ನು ಮುಂಗಾರು ಮತ್ತು ಹಿಂಗಾರು ರಾಗಿಗಳೆಂದು ವಿಭಾಗ ಮಾಡಿಕೊಳ್ಳುತ್ತಾರೆ. ಮುಂಗಾರಿನಲ್ಲಿ ಬೆಳೆಯುವ ರಾಗಿಯನ್ನು ಗಿಡ್ಡರಾಗಿ ಎಂದು ಕರೆಯುತ್ತಾರೆ. ಇದು ಕಡಿಮೆ ಕಾಲದ ಬೆಳೆಯಾಗಿದ್ದು ಇದರ ತೆನೆಯ ಎಸಳುಗಳು ಮೊಗ್ಗಿನ ಆಕಾರದಲ್ಲಿ ಕೂಡಿಕೊಂಡಿರುತ್ತವೆ. ಹಿಂಗಾರು ರಾಗಿಯಲ್ಲಿ ಚವಲಿಗ, ಬುಂಡಿಗ, ಎಂಬ ಎರಡು ಪ್ರಧಾನವಾದ ರಾಗಿ ತಳಿಗಳಿವೆ. ಚವಲಿಗ ರಾಗಿಯ ಎಸಳುಗಳು ಅರಳಿದ ರೀತಿಯಲ್ಲಿ ಬಿಡಿ ಬಿಡಿಯಾಗಿರುತ್ತವೆ ಮತ್ತು ಉದ್ದವಾಗಿರುತ್ತವೆ. ಬುಂಡಿಗ ರಾಗಿಯ ತೆನೆಗಳು ಗಿಡ್ಡರಾಗಿಯ ತೆನೆಗಳಂತೆ ಮೊಗ್ಗಿನಾಕಾರದಲ್ಲಿ ಕೂಡಿಕೊಂಡಿರುತ್ತವೆ. ಈಗ ರಾಗಿಯ ನಾನಾ ರೀತಿಯ ತಳಿಗಳು ಬಂದಿವೆ. ಮಂಡ್ಯ ಜಿಲ್ಲೆಯಲ್ಲಿ 2010-11ರ ಅಂಕಿ ಅಂಶಗಳ ಪ್ರಕಾರ 79,670 ಹೆಕ್ಟೇರ್ ಪ್ರದೇಶದಲ್ಲಿ ರಾಗಿಯನ್ನು ಬೆಳೆಯುತ್ತಾರೆ.

ಒಂದು ಕಾಲದಲ್ಲಿ ಅಪರೂಪದ ಬೆಳೆಯಾಗಿದ್ದ ಬತ್ತ ಈಗ ರಾಗಿಯಂತೆಯೇ ಪ್ರಮುಖವಾದ ಬೆಳೆಯಾಗಿದೆ. ಮೊದಲಿಗೆ ಕೆರೆಗಳ ಬಯಲಿನಲ್ಲಿ ಬತ್ತ ಬೆಳೆಯಲಾಗುತ್ತಿತ್ತು. ಇದರ ಜೊತೆಗೆ ತನ್ನ ಪ್ರದೇಶಗಳಲ್ಲಿ ಮಳೆಯಾಧಾರಿತ ಬತ್ತವನ್ನು ಬೆಳೆಯುತ್ತಿದ್ದರು. ಕೃಷ್ಣರಾಜಸಾಗರ ಮತ್ತು ಹೇಮಾವತಿ ಜಲಾಶಯಗಳ ನೀರೊದಗುವಿಕೆಯಿಂದ ಬತ್ತ ಬೆಳೆಯುವ ಪ್ರದೇಶ ವ್ಯಾಪಕವಾಗಿ ವಿಸ್ತಾರಗೊಂಡಿದೆ. ಮಂಡ್ಯ ಜಿಲ್ಲೆಯಲ್ಲಿ ಅನೇಕ ಪ್ರಾದೇಶಿಕ ದೇಶೀ ಬತ್ತದ ತಳಿಗಳು ಇದ್ದವು. ದೊಡ್ಡಿ, ಕೆಂಬತ್ತಿ, ಪುಟ್ಟ, ಶಂಬೆ, ರಾಜಮುಡಿ, ತಿರುಗನ ಹಳ್ಳಿ ಸಣ್ಣ, ಹೀಗೆ ಅನೇಕ ಬತ್ತದ ತಳಿಗಳು ಇದ್ದರೂ ದೊಡ್ಡಿ ಮತ್ತು ಕೆಂಬತ್ತಿ ಮಳೆಯಾಶ್ರಿತ ಪ್ರದೇಶಗಳಲ್ಲಿ ಬೆಳೆಯುತ್ತಿತ್ತು. ಇವನ್ನು ಸಾಧಾರಣವಾಗಿ ಜೂನ್ ತಿಂಗಳಲ್ಲಿ ಸಾಲಾಗಿ ಹಾಕುತ್ತಿದ್ದರು. ಸಾಲುರಾಗಿಯಂತೆ ಇದಕ್ಕೂ ಏಕಮುಖವಾಗಿ ಮಾತ್ರ ಕುಂಟೆ ಹೊಡೆದು ಕಳೆ ತೆಗೆಯುವ ಪದ್ಧತಿ ಇತ್ತು. ಇವು ದೀರ್ಘಕಾಲದ ತಳಿಗಳಾಗಿದ್ದು ಸುಮಾರು ಡಿಸಂಬರ್ ಕೊನೆಯ ಹೊತ್ತಿಗೆ ಕಟಾವಿಗೆ ಬರುತ್ತಿದ್ದವು. ಶಂಭೆ, ರಾಜಮುಡಿ, ತಿರುಗನಹಳ್ಳಿ ಸಣ್ಣ ಮುಂತಾದವು ಕೆರೆಗಳ ನೀರಿನ ಆಶ್ರಯದಲ್ಲಿ ಬೆಳೆಯುತ್ತಿದ್ದ ಬೆಳೆಗಳು. ಈಗ ಅಸಂಖ್ಯಾತವಾದ ನಾನಾ ರೀತಿಯ ಬತ್ತದ ತಳಿಗಳು ರೂಪುಗೊಂಡಿವೆ. ಮಂಡ್ಯ ಜಿಲ್ಲೆಯಲ್ಲಿ 2010-11ರ ಅಂಕಿ ಅಂಶಗಳ ಪ್ರಕಾರ 89, 357 ಹೆಕ್ಟೇರ್ ಪ್ರದೇಶದಲ್ಲಿ ಬತ್ತ ಬೆಳೆಯಲಾಗುತ್ತದೆ.

ಸಾಮಾನ್ಯವಾಗಿ ಆಗಸ್ಟ್ ತಿಂಗಳ ಕೊನೆಯ ಭಾಗದಲ್ಲಿ ಮಗ್ಗೆ ಮಳೆ ಕಾಲದಲ್ಲಿ ಹುರುಳಿ ಬಿತ್ತುತ್ತಾರೆ. ಇದನ್ನು ಪ್ರಧಾನವಾಗಿ ಹಾಗೂ ಉಪಬೆಳೆಯಾಗಿ ಬೆಳೆಯುವುದಿದೆ. ಸಾಲುರಾಗಿ ಮಧ್ಯೆ ಹುರುಳಿ ಬಿತ್ತುತ್ತಾರೆ. ಇದಲ್ಲದೆ ಪ್ರತ್ಯೇಕವಾಗಿಯೂ ಹೊಲಗಳಲ್ಲಿ ಬೆಳೆಯುತ್ತಾರೆ. ಡಿಸೆಂಬರ್ ಕೊನೆಯಿಂದ ಜನವರಿ ಎರಡನೇ ವಾರದಲ್ಲಿ ಕಟಾವಿಗೆ ಬರುತ್ತದೆ. ಜಿಲ್ಲೆಯಲ್ಲಿ 25.04 ಹೆ.ನಲ್ಲಿ ಹುರುಳಿ ಬೆಳೆಯಲಾಗಿತ್ತು. (2010-11)

ಮಂಡ್ಯ ಜಿಲ್ಲೆಯಲ್ಲಿ ಅನೇಕ ರೀತಿಯ ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳನ್ನು ಬೆಳೆಯುತ್ತಾರೆ. ದ್ವಿದಳ ಧಾನ್ಯಗಳಲ್ಲಿ ತೊಗರಿ, ಉದ್ದು, ಹೆಸರು, ಅವರೆ ಮುಖ್ಯವಾದವು. 1548 ಹೆಕ್ಟೇರುಗಳಲ್ಲಿ ತೊಗರಿಯನ್ನು, 4647 ಹೆಕ್ಟೇರುಗಳಲ್ಲಿ ಅವರೆಯನ್ನು 9708 ಹೆಕ್ಟೇರುಗಳಲ್ಲಿ ಅಲಸಂದೆ ಅಥವಾ ತಡಗಣಿಯನ್ನು, 453 ಹೆಕ್ಟೇರುಗಳಲ್ಲಿ ಉದ್ದನ್ನು, 707 ಹೆಕ್ಟೇರುಗಳಲ್ಲಿ ಹೆಸರನ್ನು ಬೆಳೆಯುತ್ತಿದ್ದರೆಂದು 2010-11ರ ಅಂಕಿ ಅಂಶದಿಂದ ತಿಳಿದುಬರುತ್ತದೆ. ಎಣ್ಣೆ ಕಾಳುಗಳ ಬೆಳೆಯಲ್ಲಿ ಎಳ್ಳು, ಹುಚ್ಚೆಳ್ಳು, ಕಡಲೆಕಾಯಿ, ಹರಳು, ಮುಖ್ಯವಾದವು. 2010-11ರ ಅಂಕಿ ಅಂಶಗಳ ಪ್ರಕಾರ 5553 ಹೆಕ್ಟೇರುಗಳಲ್ಲಿ ಎಳ್ಳನ್ನು 1960 ಹೆಕ್ಟೇರುಗಳಲ್ಲಿ ಹುಚ್ಚೆಳ್ಳನ್ನು 1575 ಹೆಕ್ಟೇರುಗಳಲ್ಲಿ ಕಡಲೆಕಾಯಿಯನ್ನು, 1355 ಹೆಕ್ಟೇರ್‌ಗಳಲ್ಲಿ ಹರಳನ್ನು ಬೆಳೆಯುತ್ತಿದ್ದರು.

ವ್ಯವಸಾಯದಲ್ಲಿ ಆಹಾರಧಾನ್ಯಗಳಿಗೆ ಪ್ರಮುಖವಾದ ಸ್ಥಾನವನ್ನು ನೀಡಲಾಗಿದೆ. ಮಿಕ್ಕ ಬೆಳೆಗಳಿಗೆ ಹೆಚ್ಚು ಒತ್ತುಕಂಡುಬರುವುದಿಲ್ಲ. ಹಿಂದಿನ ಕಾಲದಲ್ಲಿ ಕೆರೆಬಯಲುಗಳಲ್ಲಿ ಕಬ್ಬು ಬೆಳೆದು ಬೆಲ್ಲ ಮತ್ತು ಸಕ್ಕರೆ ಮಾಡುವ ಪದ್ಧತಿ ಇತ್ತು. ಆಧುನಿಕ ನೀರಾವರಿ ಯೋಜನೆಗಳು ಮತ್ತು ಕೊಳವೆಬಾವಿಗಳ ಕಾರಣದಿಂದಾಗಿ ಕಬ್ಬು ಜಿಲ್ಲೆಯ ಪ್ರಮುಖ ಬೆಳೆಯಾಗಿ ರೂಪುಗೊಂಡಿದೆ. 5 ಸಕ್ಕರೆ ಕಾರ್ಖಾನೆಗಳಿರುವುದು ಇದಕ್ಕೆ ಸಾಕ್ಷಿ. ಸಕ್ಕರೆ ಕಾರ್ಖಾನೆಗಳಲ್ಲದೆ ಅಸಂಖ್ಯಾತ ಗಾಣಗಳು ಕಬ್ಬನ್ನು ಅರೆದು ಬೆಲ್ಲ ಮಾಡುತ್ತಿವೆ. ಹೀಗಾಗಿ ಮಂಡ್ಯ ಜಿಲ್ಲೆಯಲ್ಲಿ 2010-11ರ ಅಂಕಿ ಅಂಶದ ಪ್ರಕಾರ 37,042 ಹೆಕ್ಟೇರುಗಳಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಈಚೆಗೆ ಬೇರೆ ಬೇರೆ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪದ್ಧತಿ ಪ್ರಾರಂಭವಾಗಿದೆ. 2010-11ರ ಅಂಕಿ ಅಂಶಗಳ ಪ್ರಕಾರ ವಾಣಿಜ್ಯ ಬೆಳೆಗಳನ್ನು 80,739 ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ಆಹಾರಧಾನ್ಯ ಬೆಳೆಗಳಿಗೆ ಪ್ರಾಮುಖ್ಯತೆ ಕೊಟ್ಟದ್ದರಿಂದ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ ಅಷ್ಟೊಂದು ಪ್ರಾಮುಖ್ಯತೆ ಇರಲಿಲ್ಲ. ಕೆರೆಬಯಲಿನ ಎತ್ತರವಾದ ಪ್ರದೇಶಗಳಲ್ಲಿ ತಗ್ಗು ಪ್ರದೇಶದ ಭೂಮಿಯಲ್ಲಿ ಏತದ ಬಾವಿ ಮತ್ತು ಬಾವಿಗಳನ್ನು ತೋಡಿ ಸಣ್ಣ ಪ್ರಮಾಣದಲ್ಲಿ ತೋಟದ ಬೆಳೆಗಳನ್ನು ಬೆಳೆಯುವ ಪದ್ಧತಿ ಇತ್ತು. ಇವುಗಳಲ್ಲಿ ತೆಂಗು, ಅಡಕೆ, ನಿಂಬೆ ಕೆಲವು ಹೂವಿನ ಗಿಡಗಳು ಬಾಳೆ, ಬದನೆ, ಹೀರೆ, ಸೊಪ್ಪು ಮುಂತಾದ ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದರು. ಹೀಗೆ ಬೆಳೆದ ತೋಟಗಾರಿಕಾ ಬೆಳೆಗಳಲ್ಲಿ ತಾವು ಉಪಯೋಗಿಸಿಕೊಂಡು ಮಿಕ್ಕಿದ್ದನ್ನು ಮಾರಾಟ ಮಾಡುತ್ತಿದ್ದರು. ಆಧುನಿಕ ಶಿಕ್ಷಣ ಪದ್ಧತಿಯಿಂದಾಗಿ ವ್ಯವಸಾಯದ ಬಗೆಗಿನ ಆಸಕ್ತಿ ಕುಂದುತ್ತಾ ಬಂತು. ಕಾರಣ ಆಹಾರ ಧಾನ್ಯಗಳ ಬೆಲೆಗೂ ಅವುಗಳ ಬೇಸಾಯಕ್ಕೆ ಖರ್ಚಾಗುವ ಹಣಕ್ಕೂ ಅಂತರ ಉಂಟಾಯಿತು. ಆದಾಯವಿಲ್ಲದ ಇವುಗಳನ್ನು ಬೆಳೆಯುವ ಬದಲು ರೈತರು ವಾಣಿಜ್ಯ ಮತ್ತು ತೋಟಗಾರಿಕಾ

ಬೆಳೆಗಳತ್ತ ತಿರುಗಿಸಿದರು. ಮಂಡ್ಯ ಜಿಲ್ಲೆಯಲ್ಲಿ ಈಗ ತೋಟಗಾರಿಕೆ ವಿಪುಲವಾಗಿ ಬೆಳೆದಿದೆ. ತೋಟಗಾರಿಕಾ ಬೆಳೆಗಳಲ್ಲಿ ತೆಂಗು ಪ್ರಧಾನವಾಗಿ ಸ್ಥಾನವನ್ನು ಪಡೆದುಕೊಂಡಿದೆ.

ಮಿಕ್ಕಂತೆ ಅಡಕೆ, ತರಕಾರಿ, ಹೂವು, ಬಾಳೆ, ಮಾವು ಇವೆಲ್ಲ ಹೆಚ್ಚುತ್ತಾ ನಡೆದಿವೆ. ಅಂಕಿ-ಅಂಶಗಳ ಪ್ರಕಾರ 42,790 ಹೆಕ್ಟೇರುಗಳಲ್ಲಿ ತೆಂಗನ್ನು, 1501 ಹೆಕ್ಟೇರುಗಳಲ್ಲಿ ಅಡಕೆಯನ್ನು, ಬಾಳೆ 88.550, ಮಾವು 70.079 ಹೆಕ್ಟೇರುಗಳಲ್ಲಿ, ಇದಲ್ಲದೆ ನಿಂಬೆ, ಸಪೋಟ, ದಾಳಿಂಬೆ, ಪರಂಗಿ ಇತ್ಯಾದಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ಪದ್ಧತಿ ಇದೆ. (2010-11) ತರಕಾರಿ ಬೆಳೆಗಳಲ್ಲಿ 148 ಹೆಕ್ಟೇರುಗಳಲ್ಲಿ ಆಲೂಗಡ್ಡೆ, 3835 ಹೆಕ್ಟೇರುಗಳಲ್ಲಿ ಟೊಮ್ಯಾಟೋ, 1127 ಹೆಕ್ಟೇರುಗಳಲ್ಲಿ ಬದನೆ, 858 ಹೆಕ್ಟೇರುಗಳಲ್ಲಿ ಹುರುಳಿಕಾಯಿಯನ್ನೂ, 823 ಹೆಕ್ಟೇರುಗಳಲ್ಲಿ ಈರುಳ್ಳಿಯನ್ನೂ, 783 ಹೆಕ್ಟೇರುಗಳಲ್ಲಿ ಹಸಿಮೆಣಸಿನಕಾಯಿಯನ್ನು, 2842 ಎಕರೆಗಳಲ್ಲಿ ಕುಂಬಳಕಾಯಿ, ಹಾಗಲ, ಹೀರೆ ಹಬ್ಬದವರೆ ಇತ್ಯಾದಿ ತರಕಾರಿಗಳನ್ನು ಬೆಳೆಯುತ್ತಾರೆ. ಮಂಡ್ಯ ಜಿಲ್ಲೆಯಲ್ಲಿ ಈಗ ಹೂವಿನ ಬೆಳೆ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಸೇವಂತಿಗೆ ಮತ್ತು ಚೆಂಡುಹೂವು ಬೆಳೆ ವ್ಯಾಪಕವಾಗಿ ಕಂಡುಬರುತ್ತದೆ.

ವ್ಯವಸಾಯ ಪ್ರಧಾನವಾದ ಈ ಜಿಲ್ಲೆಯಲ್ಲಿ ಆಹಾರ ಪದಾರ್ಥಗಳ ಶೇಖರಣೆಗೆ ಪ್ರಾಧಾನ್ಯವನ್ನು ನೀಡಲಾಗಿದೆ. ಕಟಾವಾದ ಧಾನ್ಯಗಳನ್ನು ಕಣಗಳಿಗೆ ತಂದು ಒಕ್ಕಣೆ ಮಾಡಿ ಸ್ವಚ್ಛಗೊಳಿಸುತ್ತಾರೆ. ತಮ್ಮ ತಮ್ಮ ಜಮೀನುಗಳಲ್ಲಿ ಅವರವರು ಬೆಳೆಯುವ ಬೆಳೆಗಳ ಗಾತ್ರಕ್ಕನುಗುಣವಾಗಿ 50 x 60, 100x100 ಪ್ರದೇಶವನ್ನು ಕೆತ್ತಿ ಕಸಕಡ್ಡಿ ತೆಗೆದು ನೀರು ಹುಯ್ದು ದನಗಳನ್ನು ಎಣೆಕಟ್ಟಿ ತುಣಿಸುತ್ತಾರೆ. ಚೆನ್ನಾಗಿ ಗಟ್ಟಿಯಾದ ಮೇಲೆ ಅದನ್ನು ಗಾರೆಯೋಪಾದಿಯಲ್ಲಿ ನಯವಾಗಿ ಸಮತಟ್ಟುಮಾಡುತ್ತಾರೆ. ಚೆನ್ನಾಗಿ ಒಣಗಿದ ಮೇಲೆ ಸಗಣಿ ಬಗ್ಗಡದಿಂದ ಸಾರಿಸುತ್ತಾರೆ. ಇಂತಹ ಕಣಗಳಲ್ಲಿ ಒಕ್ಕಣೆ ಮಾಡಿ ತಂದ ಧಾನ್ಯಗಳನ್ನು ಕಣಜ, ಪೆಟ್ಟೆ, ವಾಡೆ, ಮೂಡೆಗಳಲ್ಲಿ ಅವುಗಳು ಹುಳಿತು ಕೆಡದಂತೆ ಸಂಗ್ರಹಿಸುತ್ತಾರೆ. ರಾಗಿಯನ್ನು ಕಣಜಗಳಲ್ಲಿಯೂ ಬತ್ತವನ್ನು ಪೆಟ್ಟೆಗಳಲ್ಲಿಯೂ ಇತರೆ ಧಾನ್ಯಗಳನ್ನು ವಾಡೆಮೂಡೆಗಳಲ್ಲಿಯೂ ಸಂಗ್ರಹಿಸುವ ಪದ್ಧತಿ ಇತ್ತು. ಈಗ ಅದೆಲ್ಲಾ ಹೋಗುತ್ತಿದೆ. ಬತ್ತ ಬಡಿಯುವ, ರಾಗಿ ಬಡಿಯುವ ಯಂತ್ರಗಳು ಬಂದಿವೆ. ಟಾರು ರಸ್ತೆಗಳ ಪಕ್ಕದಲ್ಲಿರುವವರು ರಸ್ತೆಗಳಿಗೆ ಹಾಕಿ ಅಲ್ಲಿ ಓಡಾಡುವ ವಾಹನಗಳಿಂದ ಧಾನ್ಯಗಳನ್ನು ಒಕ್ಕಣೆ ಮಾಡುವ ಕೆಟ್ಟ ಪದ್ಧತಿ ಇದೆ. ಇದರ ಜೊತೆಗೆ ಹಿಂದಿನ ಕಾಲದಂತೆ ಒಂದು ವರ್ಷಕಾಲ ದವಸಧಾನ್ಯಗಳನ್ನು ಕೂಡಿಡುವ ಪದ್ಧತಿ ಮಾಯವಾಗಿದೆ. ಹೀಗಾಗಿ ಕಣಜ, ಪೆಟ್ಟೆ, ವಾಡೆ, ಮೂಡೆಗಳು ಮಾಯವಾಗಿವೆ ಎಂದು ಹೇಳಬಹುದು.

ಮಂಡ್ಯ ಜಿಲ್ಲೆಯಲ್ಲಿ ವ್ಯವಸಾಯ ಇಂದಿಗೂ ದನಗಳ ಉಳುಮೆಯಿಂದ ಪ್ರಧಾನವಾಗಿ ನಡೆಯುತ್ತದೆ. ಜಿಲ್ಲೆಯಲ್ಲಿ ಬಹುತೇಕ ಸಣ್ಣ ಹಿಡುವಳಿದಾರರಿರುವುದರಿಂದ ವ್ಯವಸಾಯದ ಯಂತ್ರೋಪಕರಣಗಳನ್ನು ಇಟ್ಟುಕೊಳ್ಳುವ ಶಕ್ತಿ ಇಲ್ಲ. ಆದರೂ ಈಗ ಟ್ರಾಕ್ಟರ್ ಉಳುಮೆ ಹೆಚ್ಚುತ್ತಿದೆ. ಆಧುನಿಕ ಶಿಕ್ಷಣ ಮತ್ತು ಸರ್ಕಾರಿ ಕೆಲಸಗಳ ಆಮಿಷದಿಂದಾಗಿ ಕೃಷಿಯಲ್ಲಿ ಆಸಕ್ತಿ ಕುಂದುತ್ತಿದೆ. ಬಹುತೇಕ ಜನ ನಗರಜೀವನವನ್ನು ಇಷ್ಟಪಡುತ್ತಾರೆ. ಹೀಗೆ ಹಳ್ಳಿಗಳಲ್ಲಿ ವಯಸ್ಸಾದವರು ಮಾತ್ರ ಇದ್ದಾರೆ, ಯುವಕರೆಲ್ಲಾ ನಗರ ಸೇರಿದ್ದಾರೆ ಎಂಬ ಮಾತು ಇದೆ. ಈ ಎಲ್ಲಾ ಅಡೆತಡೆಗಳ ಮಧ್ಯೆದಲ್ಲಿಯೂ ಮಂಡ್ಯಜಿಲ್ಲೆಯಲ್ಲಿ ಒಟ್ಟು 4,98,244 ಹೆಕ್ಟೇರ್ ವಿಸ್ತೀರ್ಣದಲ್ಲಿ ಸಾಗುವಳಿ ನಡೆಯುತ್ತಿದೆ ಎಂಬುದು ಸ್ವಲ್ಪ ಮಟ್ಟಿಗೆ ಸಮಾಧಾನದ ಸಂಗತಿಯಾಗಿದೆ. ಜಿಲ್ಲೆಯಲ್ಲಿ ಒಟ್ಟು 4,39,051 ಕೃಷಿ ಸಾಗುವಳಿದಾರರಿದ್ದಾರೆ. ಇವರಲ್ಲದೆ 1,97,665 ಕೃಷಿ ಕಾರ್ಮಿಕರಿದ್ದಾರೆ.

**ಕೃಷಿ ಆಚರಣೆಗಳು :** ಈ ಪ್ರದೇಶದಲ್ಲಿ ಸಾಂಪ್ರದಾಯಿಕ ವ್ಯವಸಾಯ ಪದ್ಧತಿ ಇತ್ತು. ಹಿಂದೂ ಹೊಸ ವರ್ಷದ ಆರಂಭದಲ್ಲಿ ಅಂದರೆ ಯುಗಾದಿಯ ದಿನ ಹೊನ್ನಾರುಕಟ್ಟಿ ತಮ್ಮ ಕೃಷಿಕಾರ್ಯಗಳನ್ನು ಆರಂಭಿಸುತ್ತಿದ್ದರು. ಆ ದಿನ ಹಳ್ಳಿಯ ಪ್ರತಿಯೊಂದು ಮನೆಯವರೂ ತಮ್ಮ ಜಮೀನಿನ ಸ್ವಲ್ಪಭಾಗನ್ನಾದರೂ ಉಳುಮೆ ಮಾಡಿ ವ್ಯವಸಾಯವನ್ನು ಆರಂಭಿಸುತ್ತಿದ್ದರು. ಮುಂದೆ ಕಾರುಹಬ್ಬದಿಂದ ಸಂಕ್ರಾಂತಿಯವರೆಗೆ ಕೃಷಿ ಸಂಬಂಧವಾದ ಹಬ್ಬ ಹರಿದಿನಗಳು, ಪೂಜೆ ಪುನಸ್ಕಾರಗಳು ನಡೆಯುತ್ತಿದ್ದವು. ಈಗ ಈ ವಾರ್ಷಿಕ ಸಂಪ್ರದಾಯಗಳೆಲ್ಲಾ ಹೋಗುತ್ತಿವೆ. ನೀರಾವರಿ ಸೌಲಭ್ಯಗಳಿಂದ ವರ್ಷವಿಡಿ ವ್ಯವಸಾಯ ನಡೆಯುವುದರಿಂದ ಇವುಗಳ ಆಚರಣೆ ಕುಂಠಿತವಾಗಿದೆ.

ಪ್ರತಿಯೊಬ್ಬ ರೈತನು ಮೊದಲ ಸಲ ಬೀಜಹಾಕುವಾಗ ಒಂದು ಕುಕ್ಕೆಯಲ್ಲಿ ಬೀಜಗಳನ್ನು ತುಂಬಿ ಹಸುವಿನ ಸಗಣಿ ಉಂಡೆ ಮಾಡಿ ಅದಕ್ಕೆ ಗರಿಕೆಯ ಎಸಳುಗಳನ್ನು ಸಿಕ್ಕಿಸಿ ಪೂಜೆ ಮಾಡಿ ತಮ್ಮ ಹೊಲಗಳಲ್ಲಿ ಬಿತ್ತುತ್ತಿದ್ದರು. ಆನಂತರ ಬೆಳೆಯನ್ನು ಕಟಾವು ಮಾಡುವುದಕ್ಕಿಂತ ಮುಂಚೆ ಹೆಚ್ಚು ಮಾಡುವ ಸಂಪ್ರದಾಯವಿತ್ತು. ಬೆಳೆ ಮಧ್ಯಭಾಗದಲ್ಲಿ ಸ್ವಲ್ಪ ಕುಯ್ದು ಹರಿ ಹಾಕಿ ಮೂರು ಕಲ್ಲುಗಳನ್ನು ತೊಳೆದು ಹರಿಯ ಮೇಲಿಟ್ಟು ಹೂಮುಡಿಸುತ್ತಿದ್ದರು. ಈ ಹೂವುಗಳು ಆ ಹೊಲದಲ್ಲಿಯೇ ಬೆಳೆದ ಅವರೆ ಕುಡಿ ಹುಚ್ಚೆಳ್ಳು ಹೂವುಗಳಾಗಿರುತ್ತಿದ್ದವು. ವ್ಯಾವಸಾಯಿಕ ಬಗೆಗಿನ ಈ ರೀತಿಯ ಆಚರಣೆಗಳು ಮತ್ತು ಸಂಪ್ರದಾಯಗಳು ಕೂಡ ಕಡಿಮೆಯಾಗುತ್ತಿವೆ. ಕಟಾವಿನ ಅನಂತರ ಒಕ್ಕಣೆಯ ಸಮಯದಲ್ಲಿ ಕೂಡ ಅನೇಕ ವಿಧಿವಿಧಾನಗಳನ್ನು ಆಚರಿಸುತ್ತಿದ್ದರು. ಕಣವನ್ನು ಒಂದು ಪವಿತ್ರವಾದ ಸ್ಥಳವೆಂದು ಪರಿಗಣಿಸಲಾಗಿತ್ತು. ಪಾದರಕ್ಷೆಗಳನ್ನು ತೊಟ್ಟು ಹೊಲದೊಳಗೆ ಹೋಗುವಂತಿರಲಿಲ್ಲ. ಅಷ್ಟೆ ಅಲ್ಲ ಧಾನ್ಯಗಳನ್ನು ತುಳಿಯುವಂತಿರಲಿಲ್ಲ. ಮೊದಲ ದಿನ ಮೆದೆ ಪೂಜೆಯೊಂದಿಗೆ ಆರಂಭವಾಗುತ್ತಿದ್ದ ಕೊನೆ ದಿನ ರಾಶಿ ಪೂಜೆಯೊಂದಿಗೆ ಮುಗಿಯುತ್ತಿತ್ತು. ಕೊನೆದಿನ ಕೃಷಿ ಸಂಬಂಧಿತ ಮತ್ತು ರೈತ ಸಂಬಂಧಿತ ಕೆಲಸ ಮಾಡಿದವರಿಗೆ (ಆಯಗಾರರಿಗೆ) ದವಸ ಧಾನ್ಯಗಳನ್ನು ಕೊಡಲಾಗುತ್ತಿತ್ತು. ಒಟ್ಟಿನಲ್ಲಿ ವ್ಯವಸಾಯವನ್ನು ಒಂದು ಪವಿತ್ರವಾದ ಕಾರ್ಯ ಎಂದು ಭಾವಿಸಲಾಗಿತ್ತು.

**ಉಪಕರಣಗಳು :** ವ್ಯವಸಾಯಕ್ಕೆ ಸಂಬಂಧಿಸಿದಂತೆ ಅನೇಕ ಉಪಕರಣಗಳಿವೆ. ಅವುಗಳಲ್ಲಿ ನೇಗಿಲು ಪ್ರಥಮ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಈ ಜಿಲ್ಲೆಯಲ್ಲಿ ಬಹುತೇಕ ಸಣ್ಣ ಮತ್ತು ಮಧ್ಯಮವರ್ಗದ ಹಿಡುವಳಿದಾರರಿರುವುದರಿಂದ ಯಾಂತ್ರಿಕ ಬೇಸಾಯ ಕಷ್ಟಸಾಧ್ಯ ಎಂದು ಹೇಳಬಹುದು. ಟ್ರ್ಯಾಕ್ಟರ್ ಬಳಸುವ ಪದ್ಧತಿ ಇತ್ತೀಚಿಗೆ ಹೆಚ್ಚುತ್ತಿದೆ. ಆದರೆ ನೇಗಿಲು ಭೂಮಿಯನ್ನು ಹದಮಾಡುವಷ್ಟು ಚೆನ್ನಾಗಿ ಟ್ರ್ಯಾಕ್ಟರ್ ಮಾಡುವುದು ಸಾಧ್ಯವಾಗುವುದಿಲ್ಲ. ಹಿಂದೆ ನೇಗಿಲನ್ನು ಆಯಾ ಊರಿನ ಆಚಾರಿಗಳು ಮಾಡುತ್ತಿದ್ದರು. ನೇಗಿಲಿಗೆ ಹೊಂಗೆ ಮತ್ತು ಗಟ್ಟಿ ಮರಗಳನ್ನು ಉಪಯೋಗಿಸುತ್ತಾರೆ. ಈಗ ಸೀಮೆ ನೇಗಿಲುಗಳು ಮತ್ತು ಕಬ್ಬಿಣದ ನೇಗಿಲುಗಳು ಬಂದು ಮರದ ನೇಗಿಲುಗಳು ಕಾಣೆಯಾಗುತ್ತಿವೆ.

ಕಾರಣ ಮರದ ನೇಗಿಲುಗಳನ್ನು ತಯಾರಿಸುವ ಕುಶಲಕರ್ಮಿಗಳು ಈಗ ಅಪರೂಪವಾಗಿದ್ದಾರೆ. ಸರಿಯಾದ ಒಬ್ಬ ರೈತನಿಗೆ ನೇಗಿಲು, ನೊಗ ಒಂದು ಜೊತೆ ಉತ್ತಮವಾದ ಎತ್ತುಗಳು ಕೃಷಿಯ ಸಂಕೇತವಾಗಿದ್ದವು. ಈಗಲೂ ಮಂಡ್ಯ ಜಿಲ್ಲೆಯ ಬಹುತೇಕ ಉಳುಮೆಗೆ ನೇಗಿಲನ್ನೇ ಬಳಸಲಾಗುತ್ತದೆ.

ವ್ಯವಸಾಯ ಉಪಕರಣಗಳಿಗೆ ಸಂಬಂಧಿಸಿದಂತೆ ನೇಗಿಲನ್ನು ಹೊರತುಪಡಿಸಿ ಹಲುಬೆ, ಕುಂಟೆ, ಕೂರಿಗೆ, ಗೆಣೆ ಹಲ್ಬೆ, ನೀರು ಹಲ್ಬೆ, ಗುದ್ಲಿ, ಮಂಕ್ರೆ ಇತ್ಯಾದಿ ಅನೇಕ ಉಪಕರಣಗಳ ಅಗತ್ಯವಿತ್ತು. ಈಗಲೂ ಇವುಗಳ ಉಪಯೋಗ ಸಾಕಷ್ಟು ಪ್ರಮಾಣದಲ್ಲಿ ಬಳಕೆಯಲ್ಲಿದೆ. ಈ ವ್ಯವಸಾಯ ಉಪಕರಣಗಳನ್ನೆಲ್ಲಾ ಕಾರುಹಬ್ಬದ ದಿನ ಪೂಜಿಸುವ ಪದ್ಧತಿಯೂ ಇದೆ.

**ಗೊಬ್ಬರ :** ವ್ಯವಸಾಯದಲ್ಲಿ ಗೊಬ್ಬರ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಹಿಂದಿನ ಕಾಲದಲ್ಲಿ ರೈತರ, ನಾನಾ ರೀತಿಯ ಪ್ರಾಣಿ ಪಕ್ಷಿಗಳನ್ನು ಸಾಕುತ್ತಿದ್ದರು. ಎತ್ತು, ಎಮ್ಮೆ, ಹಸುಗಳು, ಕುರಿ, ಆಡು, ಇವೆಲ್ಲಾ ರೈತನ ಉಪ ಆದಾಯದ ಮಾರ್ಗಗಳಾಗಿದ್ದವು. ಇದರ ಜೊತೆಗೆ ತಮ್ಮ ಜಮೀನುಗಳಿಗೆ ಬೇಕಾದ ಗೊಬ್ಬರವನ್ನು ಕೊಡುತ್ತಿದ್ದವು. ಪ್ರತಿಯೊಬ್ಬ ರೈತನೂ ತನ್ನ ಜಮೀನಿನನಲ್ಲಿ ಗೊಬ್ಬರದ ಗುಂಡಿಗಳನ್ನು ತೆಗೆಯುತ್ತಿದ್ದರು. ಪ್ರತಿದಿನ ಕೊಟ್ಟಿಗೆ ಗುಡಿಸಿ ಕಸವನ್ನು ಗೊಬ್ಬರದ ಗುಂಡಿಗಳಿಗೆ ಹಾಕುತ್ತಿದ್ದರು. ಒಂದು ವರ್ಷ ಕಾಲ ಹೀಗೆ ತುಂಬಿದ ಪ್ರಾಣಿಗಳ ಸಗಣಿ ಹಿಕ್ಕೆ ಮುಂತಾದವುಗಳು ಕೊಳೆತು ಗೊಬ್ಬರವಾಗುತ್ತಿದ್ದವು. ಇದನ್ನು ಹಟ್ಟಿ ಗೊಬ್ಬರ ಎಂದು ಕರೆಯುತ್ತಾರೆ. ಬೀಜ ಬಿತ್ತುವಾಗ ಈ ಗೊಬ್ಬರವನ್ನು ತಮ್ಮ ಜಮೀನುಗಳಿಗೆ ಅಗತ್ಯಪ್ರಮಾಣದಲ್ಲಿ ಚೆಲ್ಲುತ್ತಿದ್ದರು. ಹಟ್ಟಿ ಗೊಬ್ಬರದ ಜೊತೆಗೆ ಬೇರೆ ಬೇರೆ ರೀತಿಯ ಗೊಬ್ಬರಗಳನ್ನು ಉಪಯೋಗಿಸುತ್ತಿದ್ದರು. ಗೊಬ್ಬರದ ಗುಂಡಿಗಳಿಗೆ ಸೊಪ್ಪು ಸೆದೆಗಳನ್ನು ತಂದು ತುಂಬುತ್ತಿದ್ದರು. ಹೀಗೆ ತುಂಬಿದ ಕಸಕಡ್ಡಿ, ಸೊಪ್ಪು ಸೆದೆ, ತರಗುಗಳ ಮೇಲೆ ಮಣ್ಣು ಮುಚ್ಚುತ್ತಿದ್ದರು. ಇದನ್ನು ಹಸುರುಗೊಬ್ಬರ ಅಥವಾ ಎಲೆ ಗೊಬ್ಬರ ಎಂದು ಕರೆಯುತ್ತಾರೆ. ಇದಲ್ಲದೆ ಬೇಸಗೆ ಕಾಲದಲ್ಲಿ ಕೆರೆಗಳಿಂದ ಗೋಡು ಹೊಡೆಯುವ ಪದ್ಧತಿಯೂ ಇದೆ. ಹೀಗೆ ಭೂಮಿಯ ಫಲವತ್ತತೆಯನ್ನು ಉಳಿಸಿಕೊಳ್ಳಲು ಮತ್ತು ಹೆಚ್ಚಿಸಿಕೊಳ್ಳಲು ರೈತರು ನಾನಾ ರೀತಿಯ ನೈಸರ್ಗಿಕ ಗೊಬ್ಬರಗಳನ್ನು ತಯಾರು ಮಾಡಿಕೊಳ್ಳುತ್ತಿದ್ದರು. ಕ್ರಮೇಣವಾಗಿ ಈ ಪದ್ಧತಿ ಮಾಯವಾಗುತ್ತಿದೆ. ಮೊದಲನೆಯದಾಗಿ ಗೊಬ್ಬರಕ್ಕಾಗಿ ಪ್ರಾಣಿಗಳನ್ನು ಸಾಕುವ ಪದ್ಧತಿ ನಿಂತಿದೆ. ಕಾರಣ ಇವುಗಳನ್ನು ಮೇಯಿಸುವ ಜನಗಳೇ ಇಲ್ಲ. ತಮಗೆ ಬೇಕಾದ ಹಾಲು ಕೊಡುವಂಥ ಹಸುಗಳು ಸ್ವಲ್ಪಮಟ್ಟಿನ ಆದಾಯ ಕೊಡವ ಒಂದೆರಡು ಕುರಿ, ಆಡುಗಳನ್ನು ಬಿಟ್ಟರೆ ಪ್ರಾಣಿಗಳನ್ನು ಸಾಕುವ ಪದ್ಧತಿಯೇ ಹೋಗುತ್ತಿದೆ. ಇದರಿಂದಾಗಿ ರೈತರು ರಾಸಾಯನಿಕ ಗೊಬ್ಬರಗಳ ಮೊರೆ ಹೋಗಿದ್ದಾರೆ. ಇದು ಎಷ್ಟರಮಟ್ಟಿಗೆ ರೈತರನ್ನು ಆವರಿಸಿಕೊಂಡಿದೆ ಎಂದರೆ ಅದಿಲ್ಲದೆ ಬೆಳೆಯುವುದು ಸಾಧ್ಯವೇ ಇಲ್ಲ ಎಂಬ ಭಾವನೆ ಮೂಡಿದೆ. ಪ್ರತಿಯೊಂದು ಬೆಳೆಗೂ ರಾಸಾಯನಿಕ ಗೊಬ್ಬರವನ್ನು ಸುರಿಯಲಾಗುತ್ತದೆ. ಇದರಿಂದಾಗಿ ಬೆಳೆಗಳಿಗೆ ರೋಗರುಜಿನಗಳು ಹೆಚ್ಚಿವೆ. ಈ ರೋಗಗಳ ನಿವಾರಣೆಗೆ ಮತ್ತೆ ಅನೇಕ ರೀತಿಯ ಕ್ರಿಮಿನಾಶಕಗಳನ್ನು ಬಳಸಲಾಗುತ್ತಿದೆ. ಇದರಿಂದಾಗಿ ವ್ಯವಸಾಯ ಮಿತ್ರರಾಗಿದ್ದ ಅನೇಕ ಕ್ರಿಮಿಕೀಟಗಳು ಪ್ರಾಣಿ ಪಕ್ಷಿಗಳ ಸಂತತಿ ನಾಶವಾಗಿದೆ. 2010-11 ಅಂಕಿ ಅಂಶಗಳ ಪ್ರಕಾರ 59,729 ಟನ್ ಸಾರಜನಕ, 29,852 ಟನ್ ರಂಜಕ, 21,750 ಟನ್ ಪೊಟ್ಯಾಷ್, ರಾಸಾಯನಿಕ ಗೊಬ್ಬರವನ್ನು ಮಂಡ್ಯ ಜಿಲ್ಲೆಯಲ್ಲಿ ಬಳಸಲಾಗಿದೆ. ಇದರಿಂದ ಆಹಾರ ಧಾನ್ಯಗಳು ಮತ್ತು ತರಕಾರಿಗಳು ತಮ್ಮ ನೈಸರ್ಗಿಕ ಸಾರವನ್ನು ಕಳೆದುಕೊಂಡು, ರುಚಿಹೀನವಾಗುತ್ತಿವೆ. ಹೀಗಾಗಿ ನೈಸರ್ಗಿಕ ಕೃಷಿಯತ್ತ ರೈತರನ್ನು ಪ್ರಚೋದಿಸುವ ಯತ್ನ ನಡೆಯುತ್ತಿದೆ.

*ಸಿ. ಎಚ್. ಆರ್.*

**ಮಕ್ಕಾಚ್ಚೋಳಂ (ಮೆಕ್ಕೆಜೋಳ)** ತಮಿಳುನಾಡಿನಲ್ಲಿ ಬತ್ತ ಮತ್ತು ಗೋಧಿಯ ಅನಂತರದ ಸ್ಥಾನವನ್ನು ಮೆಕ್ಕೆಜೋಳ ಪಡೆದಿದೆ. ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಬರುತ್ತಿದೆ. ತಮಿಳುನಾಡಿನ ದಕ್ಷಿಣದ ಜಿಲ್ಲೆಗಳಲ್ಲಿ ಇದನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ಮೆಕ್ಕೆಜೋಳದ ಆವಶ್ಯಕತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಭಾರತ ದೇಶದಲ್ಲಿ ಬೆಳೆಯುವ ಮೆಕ್ಕೆಜೋಳದ ಬಹುಪಾಲು ಕೋಳಿಯ ಮೇವಿಗಾಗಿ ಬಳಸಲಾಗುತ್ತದೆ. ತಮಿಳುನಾಡಿನಲ್ಲಿ ಬೆಳೆಯುವ ಮೆಕ್ಕೆಜೋಳ ಅಲ್ಲಿಯ ಆವಶ್ಯಕತೆಯನ್ನು ಪೂರೈಸುವಷ್ಟು ಪ್ರಮಾಣದಲ್ಲಿಲ್ಲ. ಆದ್ದರಿಂದ ಮೆಕ್ಕೆಜೋಳವನ್ನು ಕರ್ನಾಟಕ, ಬಿಹಾರ, ಆಂಧ್ರ ಮೊದಲಾದ ರಾಜ್ಯಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಕೊಯಮತ್ತೂರು, ಸೇಲಂ, ಪೆರಂಬಲೂರು, ದಿಂಡುಗಲ್, ಈರೋಡು, ತೇನಿ, ವಿರುದುನಗರ್, ತಿರುನೇಲ್ವೇಲಿ, ವಿಮಿಪ್ಪುರಂ, ತಿರುಚ್ಚಿ, ತಿರುಪ್ಪೂರ್, ತೂತ್ತುಕ್ಕುಡಿ ಮೊದಲಾದ ಜಿಲ್ಲೆಗಳಲ್ಲಿ ಮೆಕ್ಕೆ ಜೋಳವನ್ನು ಬೆಳೆಯುತ್ತಾರೆ. ವರ್ಷದಿಂದ ವರ್ಷಕ್ಕೆ ಬೆಳೆಯುವ ಪ್ರಮಾಣ ಹೆಚ್ಚಾಗುತ್ತಾ ಹೋಗುತ್ತಿದೆ. ಇದಕ್ಕೆ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು:

1. ಖರ್ಚು ಬಹಳ ಕಡಿಮೆ 2. ಕಡಿಮೆ ಪ್ರಮಾಣದ ನೀರು ಸಾಕು 3. ದೊಡ್ಡ ದೊಡ್ಡ ಇಲಾಖೆಗಳೊಂದಿಗೆ ಒಪ್ಪಂದ ಮಾಡಿಕೊಂಡರೆ ಒಳ್ಳೆಯ ಬೆಲೆ ಸಿಗುವುದು 4. ಕೂಲಿ ಆಳುಗಳು ಹೆಚ್ಚಾಗಿ ಬೇಕಾಗಿಲ್ಲ 5. ಒಳ್ಳೆಯ ಬೆಲೆ ಸಿಗುತ್ತದೆ 6. ಸುಲಭವಾಗಿ ಮಾರುವ ಅವಕಾಶ 7. ಹೆಚ್ಚಿನ ಇಳುವರಿಯನ್ನು ಪಡೆಯಬಹುದು 8. ಮೆಕ್ಕೆಜೋಳ ಈಗ ಕೋಳಿಗಳ ಆಹಾರಕ್ಕೆ ಮಾತ್ರ ಬಳಕೆಯಾಗುತ್ತಿಲ್ಲ. 9. ಕೀಟಬಾದೆ ಹೆಚ್ಚಿರುವುದಿಲ್ಲ 10. ಇದರಲ್ಲಿ ದಂಟು ಕೊರೆಯುವ ಹುಳು, ಬೇರು ರೋಗಗಳನ್ನು ಕಡಿಮೆ ಖರ್ಚಿನಲ್ಲಿ ನಿಭಾಯಿಸಬಹುದು 11. ರೋಗ ನಿವಾರಕ ಶಕ್ತಿ ಇರುವ ವಿಧಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ.

**ಉಪಯೋಗಗಳು :** ಇದರಲ್ಲಿ ಕಾರ್ಬೋಹೈಡ್ರೇಟ್ (ಹಿಟ್ಟಿನಂಶ) ಶೇ. 71, ಪುರದಂ ಶೇ. 9, ಕೊಬ್ಬು ಶೇ. 3.5, ನಾರಿನಂಶ ಶೇ. 1 ಇತ್ಯಾದಿ ಪೋಷಕಾಂಶಗಳು ಇವೆ. ಇವುಗಳಲ್ಲದೆ ದೇಹಕ್ಕೆ ಅನುಕೂಲವಾಗುವ ಅನೇಕ ಪೋಷಕಾಂಶಗಳು ಇವೆ. ಮೆಕ್ಕೆಜೋಳದಿಂದ ಚಪಾತಿ, ಉಪ್ಪಿಟ್ಟು, ಚಿಪ್ಸ್ ಮೊದಲಾದ ಆಹಾರ ಪದಾರ್ಥಗಳನ್ನು ತಯಾರಿಸಬಹುದು. ಈ ಜೋಳವನ್ನು ಹುರಿದು (ಪಾಪ್‌ಕಾರ್ನ್) ಪುರಿಯನ್ನು ತಯಾರಿಸಬಹುದು. ಇವನ್ನು ಚಿಕ್ಕವರಿಂದ ದೊಡ್ಡವರವರೆಗೂ ಇಷ್ಟಪಟ್ಟು ತಿನ್ನುತ್ತಾರೆ. ಮಧುಮೇಹ ಇರುವವರು ಸಹ ತಿನ್ನಬಹುದು. ಬೇಬಿಕಾರ್ನ್ ಎನ್ನುವ ಎಳೆ ಜೋಳವನ್ನು ಹಸಿಯಾಗಿಯೂ ತಿನ್ನಬಹುದು. ಅಮೆರಿಕಾ, ಜಪಾನ್, ಜರ್ಮನಿ, ಕೆನಡಾ, ಆಸ್ಟ್ರೇಲಿಯಾ, ಸಿಂಗಪೂರ್ ಮೊದಲಾದ ದೇಶಗಳು ಡಬ್ಬಗಳಲ್ಲಿ ಸಂರಕ್ಷಣೆ ಮಾಡಿರುವ ಎಳೆ ಜೋಳವನ್ನು ಆಮದು ಮಾಡಿಕೊಳ್ಳುತ್ತಾರೆ.

ಹೋಟೆಲುಗಳಲ್ಲಿ ಇದರಿಂದ ಹಲವು ವಿಧವಾದ ಆಹಾರಗಳನ್ನು ತಯಾರಿಸಿ ಗಿರಾಕಿಗಳಿಗೆ ಉಣಬಡಿಸುತ್ತಾರೆ. ಹಸಿ ಜೋಳವನ್ನು ಆವಿಯಲ್ಲಿ ಬೇಯಿಸಿ ಉಪ್ಪು, ಬೆಣ್ಣೆ, ಮೆಣಸಿನಕಾಯಿಯ ಪುಡಿಗಳನ್ನು ಸವರಿ ತಿನ್ನಬಹುದು. ಮೆಕ್ಕೆಜೋಳವನ್ನು ಅಭಿವೃದ್ಧಿ ಹೊಂದಿದ ದೇಶಗಳು ಒಣ ಮತ್ತು ಹಸಿ ಎಂಬುದಾಗಿ ವಿಭಾಗಿಸಿ ಅದರಿಂದ ಹಲವಾರು ವಸ್ತುಗಳನ್ನು ತಯಾರಿಸುತ್ತಾರೆ. ಹಸುಗಳಿಗೆ ಆಹಾರ, ಹಲವು ಬಗೆಯ ತಿಂಡಿಗಳು, ಎಣ್ಣೆ, ಹಿಟ್ಟು ಮೊದಲಾದವುಗಳನ್ನು ತಯಾರಿಸಲು ಮೆಕ್ಕೆಜೋಳ ಉಪಯೋಗವಾಗುತ್ತದೆ. ಹಸಿ ಮೆಕ್ಕೆ ಜೋಳದಿಂದ ಗ್ಲೂಕೋಸ್, ದ್ರವ ಆಹಾರಗಳನ್ನು ತಯಾರಿಸುತ್ತಾರೆ. ಮೆಕ್ಕೆಜೋಳದ ಹಿಟ್ಟನ್ನು ಕಾಗದ, ಪ್ಲಾಸ್ಟಿಕ್ ಮದ್ಯ ಮತ್ತು ರಾಸಾಯನಿಕ ವಸ್ತುಗಳನ್ನು ತಯಾರಿಸಲು ಉಪಯೋಗಿಸಲಾಗುತ್ತದೆ. ಮೆಕ್ಕೆಜೋಳದಿಂದ ಈ ಕೆಳಕಂಡ ವಸ್ತುಗಳನ್ನು ತಯಾರಿಸಬಹುದು.

1. ಆಸ್ಪಿರಿನ್ 2. ಮಕ್ಕಳ ಆಹಾರ 3. ರೋಗ ನಿರೋಧಕ ಔಷಧಿಗಳು 4. ಬಿಸ್ಕೆಟ್ 5. ಐಸ್‌ಕ್ರೀಂ 6. ಹಲವು ಬಗೆಯ ತಿಂಡಿಗಳು 7. ಸೌಂದರ್ಯ ವರ್ಧಕಗಳು 8. ಸೋಪು 9. ಹಣ್ಣಿನ ರಸ 10. ಚಾಕಲೇಟ್ 11. ಉಪ್ಪಿನಕಾಯಿ, ಕೋಸಂಬರಿ - ಹೀಗೆ ಹಲವಾರು ಬಗೆಯ ಸಾಮಗ್ರಿಗಳನ್ನು ತಯಾರಿಸಲು ಮೆಕ್ಕೆಜೋಳದ ಉಪಯೋಗ ಅನನ್ಯವಾದದ್ದು.

ಮೆಕ್ಕೆಜೋಳ ಕೋಳಿ ಮತ್ತು ಹಸುವಿನ ಆಹಾರಕ್ಕೆ ಮಾತ್ರ ಬಳಕೆಯಾಗುತ್ತದೆ ಎಂದು ಕೆಲವರು ಭಾವಿಸಿದ್ದಾರೆ. ಮೆಕ್ಕೆಜೋಳದಲ್ಲೂ ಅನೇಕ ಹೊಸ ಹೊಸ ವಿಧಗಳು ಬಂದಿವೆ. ತಮಿಳುನಾಡಿನ ಕೃಷಿ ವಿಶ್ವವಿದ್ಯಾಲಯ ಹಲವು ವಿಧಗಳನ್ನು ಸಂಶೋಧಿಸಿದೆ. ಇವುಗಳಲ್ಲದೆ ಹಲವು ಖಾಸಗಿ ಇಲಾಖೆಗಳು ಹೆಚ್ಚು ವಿಧಗಳನ್ನು ಹೊರತಂದಿದೆ.

**ತಮಿಳು ಕೃಷಿ ವಿಶ್ವವಿದ್ಯಾಲಯ ಪರಿಚಯಿಸಿರುವ ವಿಧಗಳು:**

ಕೋ-1, ಕೋ ಎಚ್-1, ಕೋ ಎಚ್-2, ಕೋ ಎಚ್ -3, ಕೋ ಪಿ.ಸಿ-1, ಗಂಗಾ 5

ಮೆಕ್ಕೆಜೋಳವನ್ನು ಮೂರು ಅವಧಿಗಳಲ್ಲಿಯೂ ನಾಟಿ ಮಾಡಬಹುದು.

ಜೂನ್-ಆಗಸ್ಟ್ ತಿಂಗಳಲ್ಲಿ ನಾಟಿ ಮಾಡುವ ಜೋಳದ ವಿಧಗಳು : ಕೋ ಎಚ್ 1, ಕೋ 1, ಕೋ ಎಚ್ 2, ಕೋ ಎಚ್ 3, ಕೋ.ಪಿ.ಸಿ. 1

ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಬೆಳೆಸುವ ಜೋಳದ ವಿಧಗಳು : ಕೋ1, ಕೋ ಎಚ್ 1, ಕೋ ಎಚ್ 2, ಕೋ ಎಚ್ 3, ಕೋ.ಪಿ.ಸಿ. 1

ಜನವರಿ-ಫೆಬ್ರವರಿಯಲ್ಲಿ ಬೆಳೆಯುವ ಜೋಳದ ವಿಧಗಳು: ಗಂಗಾ 5, ಕೋ ಎಚ್ 1, ಕೋ 1, ಕೋ ಎಚ್ 2

**ಅಂಗಾಂಶ ಕಸಿ ವಿಧ :** ಕೋ ಎಚ್ (ಎಂ) 4 ಎಂಬುದು ಕಸಿ ವಿಧವಾಗಿದೆ. ಇದು ಒಳ್ಳೆಯ ಬೆಳೆಯನ್ನು ತರುತ್ತದೆ. ಈ ವಿಧದಿಂದ ಎಕರೆಗೆ 2005 ಕಿ.ಗ್ರಾಂ. ಜೋಳವನ್ನು, 7500 ಕಿ.ಗ್ರಾಂ ಜೋಳದ ಹುಲ್ಲನ್ನು ಪಡೆಯಬಹುದು. ಹಿಟ್ಟಿನಂಶ ಶೇ 70.5, ಕೊಬ್ಬಿನಾಂಶ ಶೇ. 5.08 ಇದೆ. ಈ ತಳಿ ಬೇರು ರೋಗವನ್ನು ತಡೆಯುವ ಶಕ್ತಿಯನ್ನು ಹೊಂದಿದೆ. ಅಲ್ಲದೆ ದಂಟಿಗೆ ಹುಳ ಬರುವುದು ಕೂಡ ಕಡಿಮೆ. ಈ ವಿಧದಲ್ಲಿ ಜೋಳವು ಒಳ್ಳೆಯ ಹಳದಿ ಬಣ್ಣದಿಂದ ಕೂಡಿರುವುದು. ಇದಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವುದು. ತೆನೆಯಲ್ಲಿ ಕಾಳು ಒತ್ತೊತ್ತಾಗಿ ಕೊನೆಯವರೆಗೂ ಇರುವುದು. ಇದನ್ನು ಹಲವು ರೈತರು ಇಷ್ಟಪಟ್ಟು ಬೆಳೆಸುತ್ತಾರೆ.

ಜೂನ್, ಜುಲೈಯಲ್ಲಿ ನಾಟಿ ಮಾಡಿದರೆ ಒಳ್ಳೆ ಬೆಲೆ ಸಿಗುವುದು. ಅಂತೆಯೇ ಜನವರಿಯೂ ಉತ್ತಮ ಸಮಯ. 1 ಎಕರೆಗೆ 8 ಕಿಲೋ ಬೀಜ ಬೇಕಾಗುವುದು. 1 ಗುಳಿಗೆ 1 ಬೀಜ ಸಾಕು. ಅಂತರವು 60 x 25 ಸೆಂ.ಮೀ ಇರಬೇಕು.

**ಒಂದು ಎಕರೆಗೆ ಬೇಕಾದ ಗೊಬ್ಬರ :** ಅಡಿಗೊಬ್ಬರವಾಗಿ ಕೊಟ್ಟಿಗೆ ಗೊಬ್ಬರ, ಹಸಿರುಗೊಬ್ಬರ 40 ಕಿಲೋ, ಸೂಪರ್ ಪಾಸ್ಪೆಟ್ 158 ಕಿಲೋ, ಪೊಟಾಷ್ 16 ಕಿಲೋ ಬೇಕು. ಮೇಲ್ಗೊಬ್ಬರವಾಗಿ 25ನೇ ದಿನಕ್ಕೆ ಯೂರಿಯಾ 44 ಕಿಲೋ, 45 ದಿನಕ್ಕೆ ಸೂಪರ್ 35 ಕಿಲೋ, ಪೊಟಾಷ್ 16 ಕಿಲೋ ಬೇಕು. ಇದು ಸರಿಯಾದ ಗೊಬ್ಬರದ ಹಂಚಿಕೆಯಾಗಿದೆ. ಇದನ್ನು ಬಿಟ್ಟು ಪೈರಿಗೆ ತಕ್ಕಂತೆ ಸೂಕ್ಷ್ಮ ರಾಸಾಯನಿಕವನ್ನು ಕೊಡಬೇಕು.

**ಶುಷ್ಕ ಭೂಮಿಯಲ್ಲಿ ಬೆಳೆಯುವ ಬಗೆ :** ಶುಷ್ಕ ಭೂಮಿಯಲ್ಲಿ ಕೋ ಎಚ್4ನ್ನು ಬೆಳೆಸುವುದರಿಂದ ಹೆಚ್ಚಿಗೆ ಗೊಬ್ಬರ ಅಗತ್ಯವಿಲ್ಲ. 5 ಟನ್ ಅಡಿಗೊಬ್ಬರ ಸಾಕು ಅಥವಾ ಎಲೆಗೊಬ್ಬರ ಯೂರಿಯ 30 ಕಿಲೋ ಸೂಪರ್ ಫಾಸ್ಪೆಟ್ 150 ಕಿಲೋ ಪೊಟಾಷ್ 13 ಕಿಲೋ ಅಡಿಗೊಬ್ಬರವಾಗಿ ಕೊಡಬಹುದು. ಮೇಲುಗೊಬ್ಬರವನ್ನು ಕಡಿಮೆ ಮಾಡಬೇಕು. ಶುಷ್ಕ ಭೂಮಿಯಲ್ಲಿ ಬೆಳೆಯಲು ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳು ಯುಕ್ತ. ನಿರಂತರವಾಗಿ ಮಳೆ ಬೀಳುವುದರಿಂದ ಒಳ್ಳೆಯ ಬೆಳೆ ತೆಗೆಯಬಹುದು. ಈ ಭೂಮಿಯಲ್ಲಿ ಎಕರೆಗೆ 1800ರಿಂದ 2000 ಕಿಲೋವರಗೆ ಬೆಳೆ ತೆಗೆಯಬಹುದು. ಆದುದರಿಂದ ಖಾಸಗಿ ಸಂಸ್ಥೆಗಳು ಹಲವು ತಳಿಗಳನ್ನು ಉತ್ಪತ್ತಿ ಮಾಡಿ ಮಾರುಕಟ್ಟೆಗೆ ತರುತ್ತಿವೆ.

**ಬೀಜದ ತಳಿಗಳು : ಹೈಸೆಲ್ :** ಈ ತಳಿ ಒಳ್ಳೆಯ ಫಸಲನ್ನು ತರುವಂಥದ್ದು, ಇದರ ವಿಶೇಷವೆಂದರೆ ಕೀಟಬಾಧೆ ಹೆಚ್ಚು ಇರುವುದಿಲ್ಲ. ಕೆಲವು ತಳಿಗಳಲ್ಲಿ ತೆನೆಯ ಕೊನೆ ಭಾಗಗಳಲ್ಲಿ ಜೋಳ ಇರುವುದಿಲ್ಲ. ಆದರೆ ಈ ತಳಿ ತೆನೆಯ ಕೊನೆಯವರೆಗೂ ಕಾಳುಗಳಿಂದ ಕೂಡಿರುವುದು. ತೆನೆ ಚಿಕ್ಕದಾಗಿದ್ದರೂ ಕಾಳುಗಳು ಒತ್ತೊತ್ತಾಗಿರುವುದು. ಕಾಳುಗಳು ಕಿತ್ತಳೆಯ ಎಸಳಿನಂತಿದ್ದು, ಇದು ಒಳ್ಳೆಯ ತೂಕ ಬರುವುದು. ಮತ್ತೊಂದು ವಿಶೇಷವೇನೆಂದರೆ ಎರಡೆರಡು ತೆನೆ ಬರುವುದು. ಈ ವಿಧವು ಮೆಕ್ಕಲು ಮಣ್ಣಿನಲ್ಲಿ ಉತ್ತಮವಾಗಿ ಬರುತ್ತದೆ. ಚೆನ್ನಾಗಿ ನೋಡಿಕೊಂಡರೆ ಎಕರೆಗೆ 40 ಕ್ವಿಂಟಾಲ್‌ವರೆಗೂ ಇಳುವರಿ ಪಡೆಯಬಹುದು.

**ಪರಪಲ್:** ಇದು ಎಲ್ಲಾ ಬಗೆಯ ಮಣ್ಣಿನಲ್ಲಿಯೂ ಬೆಳೆಯುತ್ತದೆ. ಶುಷ್ಕ ಭೂಮಿ ನೀರಾವರಿ ಭೂಮಿ ಈ ಎರಡೂ ವಿಧದ ಭೂಮಿಯಲ್ಲೂ ಇದನ್ನು ಬೆಳೆಸಬಹುದು. ಕಡಿಮೆ ದಿನಗಳಲ್ಲಿಯೇ ಕುಯ್ಲಿಗೆ ಬರುತ್ತದೆ. 95-100 ದಿನಗಳಲ್ಲಿ ಕುಯ್ಲು ಮಾಡಬಹುದು. ಇದು ತೆನೆಯ ಕೊನೆಯವರೆಗೂ ಕಾಳುಗಳನ್ನು ಹಿಡಿದಿರುವುದು. ಕಿತ್ತಳೆ ಬಣ್ಣ ಬೆರೆತ ಹಳದಿ ಬಣ್ಣದಲ್ಲಿ ಜೋಳದ ಕಾಳುಗಳಿರುವುದು.

**ಆಲ್‌ರೌಂಡರ್ :** ಹೆಸರೇ ಸೂಚಿಸುವಂತೆ ಎಲ್ಲಾ ವಿಧದ ಮಣ್ಣಿನಲ್ಲೂ ಎಲ್ಲಾ ಕಾಲದಲ್ಲೂ ಚೆನ್ನಾಗಿ ಬರುವುದು. ಕಾಳು ಒಳ್ಳೆಯ ಹಳದಿ ಬಣ್ಣದಿಂದ ಕೂಡಿರುವುದು. ಇದನ್ನು ಶುಷ್ಕ ನೆಲದಲ್ಲೂ ನೀರಾವರಿ

ಭೂಮಿಯಲ್ಲೂ ಬೆಳಸಬಹುದು. ಇದರ ಅವಧಿ 110ರಿಂದ 115 ದಿನಗಳು. ದಂಟು ಹೆಚ್ಚು ಎತ್ತರಕ್ಕೆ ಬೆಳೆಯುತ್ತದೆ. ದಂಟು ಬಲು ರುಚಿಯಾಗಿರುವುದರಿಂದ ದನಗಳು ತುಂಬ ಇಷ್ಟಪಟ್ಟು ತಿನ್ನುತ್ತವೆ. ಎಕರೆಗೆ 27ರಿಂದ 30 ಕ್ವಿಂಟಾಲ್‌ವರೆಗೆ ನೀರಾವರಿ ಜಮೀನಿನಲ್ಲಿ ಬೆಳೆಯಲು ಸಾಧ್ಯ. ಸಾಕಷ್ಟು ನೀರಿನ ಪೂರೈಕೆ ಇಲ್ಲದಿದ್ದರೂ ಬರಗಾಲವನ್ನು ಸಹಿಸಿಕೊಂಡು ಬೆಳೆಯುವ ಗುಣ ಇದಕ್ಕೆ ಇದೆ. 6 ತಿಂಗಳವರೆಗೆ ಶೇಖರಿಸಿ ಇಟ್ಟು ಅನಂತರ ಮಾರಾಟ ಮಾಡಿದರೆ ಒಳ್ಳೆಯ ಬೆಲೆ ಸಿಗುತ್ತದೆ. ಎಕರೆಗೆ 8ರಿಂದ 10 ಕಿಲೋವರೆಗೆ ಬಿತ್ತನೆ ಬೀಜ ಬೇಕಾಗುವುದು. ತೆನೆಗೆ ಹಾಲು ಹಿಡಿಯುವ ಸಮಯದಲ್ಲಿ ಭೂಮಿಯಲ್ಲಿ ತೇವಾಂಶ ಇರುವಂತೆ ನೋಡಿಕೊಳ್ಳಬೇಕು. ಈ ಸಮಯದಲ್ಲಿ ಸಾಕಷ್ಟು ನೀರಿನ ಪೂರೈಕೆ ಇಲ್ಲದಿದ್ದರೆ ಕಾಳುಗಳು ಚೆನ್ನಾಗಿ ಬರುವುದಿಲ್ಲ. ಈ ಬೆಳೆಯ ಆರಂಭ ಕಾಲದಲ್ಲೇ ಕಳೆಗಳು ಇಲ್ಲದಂತೆ ನೋಡಿಕೊಳ್ಳಬೇಕು.

**900 M ಗೋಲ್ಡ್ :** ಇದನ್ನು ಹೆಚ್ಚಾಗಿ ತೇನಿ ಜಿಲ್ಲೆಯಲ್ಲಿ ವಿಶಾಲವಾದ ಪ್ರದೇಶದಲ್ಲಿ ಬೆಳೆಸುತ್ತಾರೆ. ಬೇರೆ ಸ್ಥಳಗಳಲ್ಲೂ ಇದನ್ನು ಬೆಳೆಸಬಹುದು. ಇದಕ್ಕೆ ಆಗಸ್ಟ್ ಮತ್ತು ಜನವರಿ ಉತ್ತಮ. ಎಕರೆಗೆ 42 ಮೂಟೆ ಇಳುವರಿ ಸಿಗುವುದು. ಈ ತಳಿಗೆ ಕೀಟ ರೋಗ ಬರುವುದೇ ಇಲ್ಲ. ಕಾರಣ ಅದರ ಎಲೆಗಳು ಚೂಪಾಗಿವೆ. ಕೊನೆಯವರೆಗೂ ತೆನೆಯಲ್ಲಿ ಒತ್ತೊತ್ತಾಗಿ ಕಾಳುಗಳು ತುಂಬಿರುತ್ತವೆ. 90 ದಿನಗಳು ಆದರೂ ಕೂಡ ಇದರ ದಂಟು ಒಣಗುವುದಿಲ್ಲ. ಅಚ್ಚಹಸುರಾಗಿಯೇ ಇರುವುದು. ಆದ್ದರಿಂದ ದನಗಳು ಇಷ್ಟಪಟ್ಟು ತಿನ್ನುವುವು. ತೆನೆಗಳು ಒಂದೇ ಅಳತೆಯಲ್ಲಿ ದಷ್ಟಪುಷ್ಟವಾಗಿ ಬೆಳೆದಿರುತ್ತವೆ. ಆಹಾರಕ್ಕೆ ಇದು ಉತ್ತಮವಾದ ಬೆಳೆ. ಇದರ ಅವಧಿ 115ರಿಂದ 120 ದಿನಗಳು. ಈ ತಳಿಯನ್ನು ಬೆಳೆಯುವುದರಿಂದ ಉತ್ತಮ ಇಳುವರಿ ಸಿಗುವುದು. ಇದು ಹಿಂದಿನ ಕಾಲದಿಂದಲೂ ರೈತರ ಮನಗೆದ್ದ ಬೆಳೆ. ಬಹುಪಾಲು ರೈತರು ಇದನ್ನು ಆಷಾಢ ಮತ್ತು ಶ್ರಾವಣ ಮಾಸದಲ್ಲಿ ಬೆಳೆದು ಧನುರ್ಮಾಸದಲ್ಲಿ ಕೊಯ್ಲುಮಾಡುತ್ತಾರೆ. ಪೆರಂಬಲೂರು ಜಿಲ್ಲೆಯಾದ್ಯಂತ ಇದನ್ನು ಬೆಳೆಯುತ್ತಾರೆ. ದಿಂಡುಗಲ್, ಉಡುಮಲ್ಪೆ ಮೊದಲಾದ ಕಡೆ ರೈತರು ಇದನ್ನು ಇಷ್ಟಪಟ್ಟು ಬೆಳೆಯುವ ಬೆಳೆಯಾಗಿದೆ. ಸಾಧಾರಣವಾಗಿ ಎಕರೆಗೆ 40 ಮೂಟೆಯವರೆಗೂ ಇಳುವರಿಯನ್ನು ತರುವುದು.

**ರಾಜ್‌ಕುಮಾರ್ :** ಈ ತಳಿ ಕೂಡ ರೈತರ ಅಚ್ಚುಮೆಚ್ಚು. ಉಡುಮಲ್ಪೆ, ದಿಂಡುಗಲ್ ಭಾಗಗಳಲ್ಲಿ ರೈತರು ಇಷ್ಟಪಟ್ಟು ಬೆಳೆಯುತ್ತಾರೆ. ಇದಕ್ಕೆ ಮುಖ್ಯ ಕಾರಣ ರೋಗನಿರೋಧಕ ಶಕ್ತಿಯುಳ್ಳ ತಳಿಯಾಗಿದೆ. ಈ ಬೆಳೆ ಬಹು ಎತ್ತರಕ್ಕೆ ಬೆಳೆಯುವುದಿಲ್ಲ. ಈ ತಳಿ ಬೇಬಿ ಕಾರ್ನ್‌ಗೆ ಬರುವ ರೋಗವನ್ನು ತಡೆಗಟ್ಟುತ್ತದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಕಡಿಮೆ ಮಳೆ ಬಿದ್ದರೂ ಈ ಬೆಳೆಯನ್ನು ಬೆಳೆಯಬಹುದು. ಇದರ ಕಾಳುಗಳು ಒಳ್ಳೆಯ ಹಳದಿ ಬಣ್ಣದಿಂದ ಕೂಡಿರುತ್ತವೆ. ಧಾನ್ಯದಲ್ಲಿ ಎಣ್ಣೆಯ ಅಂಶ ಅಧಿಕವಾಗಿರುತ್ತದೆ. ಇದನ್ನು ಕೋಳಿಗಳಿಗೆ ಆಹಾರವಾಗಿ ಬಳಸಿದ ಕೆಲವೇ ದಿನಗಳಲ್ಲಿ ಕೋಳಿಯ ತೂಕ ಹೆಚ್ಚಾಗುವುದು.

**ಲಕ್ಷ್ಮಿ 468 :** ಇದು ಕೂಡ ಉತ್ತಮ ತಳಿ. ದಿಂಡುಗಲ್, ತೇನಿ ಭಾಗಗಳಲ್ಲಿ ಇದನ್ನು ಬೆಳೆಯುತ್ತಾರೆ. ಇದು ಒಳ್ಳೆಯ ಬೆಳೆಯನ್ನು ತರುವಂಥದ್ದು. ಎಕರೆಗೆ 35ರಿಂದ 40 ಮೂಟೆ ಇಳುವರಿ ಸಿಗುವುದು. ಇದು 85ರಿಂದ 90 ದಿನಗಳಲ್ಲಿ ಕುಯ್ಲಿಗೆ ಬರುತ್ತದೆ. ಹೆಚ್ಚು ನೀರು ಇರುವ ಕಡೆ ಇದು ಉತ್ತಮ ಬೆಳೆ. ಒಂದೊಂದು ಜೋಳದ ದಂಟಿಗೆ 4ರಿಂದ 5 ತೆನೆಗಳು ಬಿಡುತ್ತವೆ. ಇದನ್ನು ನೋಡುವುದೇ ಒಂದು ಆನಂದ. ಸಂತೆಗಳಲ್ಲಿ ಇದರ ಬೇಡಿಕೆ ಹೆಚ್ಚು. ಇದು ಎಲ್ಲಾ ಕಾಲದಲ್ಲಿಯೂ ಬೆಳೆಯುವ ಬೆಳೆಯಾಗಿದೆ.

**ಟಾಪ್‌ಸ್ಟಾರ್ :** ಇದು ಸೇಲಂ ಭಾಗದಲ್ಲಿ ಹೆಚ್ಚಾಗಿ ಬೆಳೆಯುವಂಥದ್ದು. ಎಕರೆಗೆ 35ರಿಂದ 40 ಮೂಟೆಯವರೆಗೆ ಇಳುವರಿ ತರುತ್ತದೆ. ಇದನ್ನು ಶುಷ್ಕ ಭೂಮಿಯಲ್ಲಿ ಬೆಳೆಯಬಹುದು. ಯೋಗ್ಯ ಸಮಯದಲ್ಲಿ ಸಾಕಷ್ಟು ನೀರಿನ ಪೂರೈಕೆಯಾದರೆ ಇದು ಒಳ್ಳೆಯ ಲಾಭ ತರುತ್ತದೆ.

**ಡಿ.ಎಂ.ಎಚ್. 555 :** ಇದು ಕೂಡ ಒಳ್ಳೆಯ ಸಾಮರ್ಥ್ಯವುಳ್ಳ ತಳಿ. ಇದು ಎಕರೆಗೆ 40 ಚೀಲದವರೆಗೆ ಇಳುವರಿ ತರುತ್ತದೆ. ಬೇಸಗೆ ಕಾಲದಲ್ಲಿ ಇದನ್ನು ಬೆಳೆಯುತ್ತಾರೆ. ಹೀಗೆ ವಿವಿಧ ಸಾಮರ್ಥ್ಯವುಳ್ಳ ವಿಧಗಳು ಇವೆ. ಹೊಸ ಹೊಸದಾಗಿ ಬರುತ್ತಲೇ ಇವೆ. ಒಬ್ಬ ನಾಲ್ಕು ಎಕರೆಗೆ ಮೆಕ್ಕೆ ಜೋಳ ಬೆಳೆಯಬೇಕಾದರೆ ಒಂದೇ ತಳಿ ನಾಟಿ ಮಾಡದೆ 2,3 ವಿಧದ ತಳಿಗಳನ್ನು ನಾಟಿ ಮಾಡಿ, ಅವುಗಳಲ್ಲಿ ಯಾವುದು ಒಳ್ಳೆಯ ಫಸಲನ್ನು ತರುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು. ಸಾಮರ್ಥ್ಯ ಹೆಚ್ಚಿಸುವ ಅಂಗಾಂಶ ಕಸಿ ವಿಧಗಳನ್ನು ಪೈರು ಮಾಡುವಾಗ ಒಂದೊಂದು ಸಲವು ಇಷ್ಟವಾದ ಅಂಗಾಂಶ ಕಸಿ ವಿಧಗಳನ್ನು ಹೊಸದಾಗಿ ಕೊಂಡು ನಾಟಿ ಮಾಡಬೇಕು. ಬೆಳೆದ ಜೋಳದಿಂದಲೇ ಮತ್ತೆ ಬೀಜ ಮಾಡಿದರೆ ಫಸಲು ಕಡಿಮೆಯಾಗುವುದು. ಇದರಿಂದ ನಿರೀಕ್ಷಿಸಿದ ಬೆಳೆ ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ ತಳಿ ಅಧಿಕ ಫಸಲನ್ನು ನೀಡುತ್ತದೆಯೋ ಆ ತಳಿಯಲ್ಲಿ ನಕಲಿ ಬೀಜ ಬರುವುದು ಸಹಜ.

**ಎಳೆಯ ಮೆಕ್ಕೆಜೋಳ (ಬೇಬಿಕಾರ್ನ್) :** ಇದು ಕೂಡ ಇತರ ತಳಿ ಮೆಕ್ಕೆ ಜೋಳದಂತೆಯೇ. ಆದರೆ ಇತರೆ ಮೆಕ್ಕೆ ಜೋಳವನ್ನು 100ರಿಂದ 110 ದಿನಗಳಲ್ಲಿ ಬಲಿತ ಮೇಲೆ ಕೊಯ್ಲು ಮಾಡಲಾಗುವುದು. ಆದರೆ ಎಳೆಯ ಜೋಳವನ್ನು ಬಲಿಯುವುದಕ್ಕಿಂತ ಮುಂಚೆಯೇ ಕೊಯ್ಲು ಮಾಡಲಾಗುತ್ತದೆ. ಎಳೆಯ ತೆನೆಗಳು 8ರಿಂದ 10 ಸೆಂ.ಮೀ ಉದ್ದ ಇರುವಾಗ ಕೊಯ್ಲು ಮಾಡಲಾಗುತ್ತದೆ. ಇವನ್ನು ಹಸಿಯಾಗಿಯೇ ಇಲ್ಲವೇ ಕತ್ತರಿಸಿ ಸಾಲಡ್ ಮಾಡಿಯೂ, ಸೂಪ್ ತಯಾರಿಸಿಯೂ ಉಪಯೋಗಿಸ ಬಹುದು, ಇತರೆ ಅಂಗಾಂಶ ಕಸಿ ಮೆಕ್ಕೆ ತಳಿಗಳು ತುಂಬ ಇದೆ.

ಇದರಲ್ಲಿ ಭಾರತದಲ್ಲಿ ಪ್ರತ್ಯೇಕವಾದ ತಳಿಗಳು ಹೆಚ್ಚಾಗಿ ಇಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಅನೇಕ ವಿಧಗಳಿವೆ. ಬಟ್ಟರ್‌ಸ್ಕಾಟ್ಚ್, ಡಾನ್, ಸುಗರ್‌ಪಾಯ್, ಸ್ವೀಟಾ, ಡೈನಾಸ್ಟಿ, ಪೈಲಟ್, ಪಿಯಾಸ್ಟಾ, ಸನ್‌ರೈಸ್, ಮಾರ್ನಿಂಗ್ ಸ್ಟಾರ್ - ಹೀಗೆ ಹಲವಾರು ಎಳೆಯ ಮೆಕ್ಕೆ ಜೋಳದ ವಿಧಗಳಿವೆ. ಈ ಎಳೆಯ ಜೋಳವನ್ನು ಹಲವಾರು ದೇಶಗಳು ಹೆಚ್ಚಿನ ಮಟ್ಟದಲ್ಲಿ ರಫ್ತು ಮಾಡುತ್ತವೆ. ಅಂತವುಗಳ ಪೈಕಿ ಥಾಯ್ಲ್ಯಾಂಡ್, ಶ್ರೀಲಂಕಾ, ಥೈವಾನ್, ಚೀನಾ, ಇಂಡೋನೇಷಿಯಾ, ಜಿಂಬಾಂಬೆ, ಜಾಂಬಿಯ, ಪಶ್ಚಿಮ ಆಫ್ರಿಕಾ ಮುಖ್ಯವಾದವು.

ಎಳೆಯ ಜೋಳವನ್ನು ಆಮದು ಮಾಡಿಕೊಳ್ಳುವ ದೇಶಗಳೆಂದರೆ ಅಮೆರಿಕಾ, ಜಪಾನ್, ಜರ್ಮನಿ, ಕೆನಡಾ

**ಬಿತ್ತನೆ :** ಇತರೆ ಮೆಕ್ಕೆ ಜೋಳಕ್ಕೆ ಅಂತರ ಬಿಡುವಂತೆ ಇದಕ್ಕೂ ಅಷ್ಟೇ ಪ್ರಮಾಣದ ಅಂತರವನ್ನು ಬಿಡಬೇಕು. ಇದನ್ನು ಎಲ್ಲಾ ಕಾಲದಲ್ಲೂ ಬೆಳೆಸಬಹುದು. ಶುಷ್ಕ ಭೂಮಿಯಲ್ಲಿ ಬೆಳೆಯಲು ಜೂನ್ ಜುಲೈ ಮತ್ತು ಅಕ್ಟೋಬರ್ ನವೆಂಬರ್ ತಿಂಗಳು ಒಳ್ಳೆಯ ಕಾಲವಾಗಿದೆ.

**ಅಂತರ :** ಪಟದಿಂದ ಪಟಕ್ಕೆ 45 ಸೆಂ.ಮೀ. ಅಂತರ, ಗಿಡದಿಂದ ಗಿಡಕ್ಕೆ 15 ಸೆಂ.ಮೀ. ಅಂತರ ಇರಬೇಕು. ಒಂದು ಎಕರೆಗೆ ಸುಮಾರು 4000 ಪೈರು ಇರಬೇಕು. ಆವಶ್ಯಕತೆಗೆ ತಕ್ಕಂತೆ ನೀರಿನ ಸೌಕರ್ಯ ಮಾಡಬೇಕು. ಕೆಂಪು ಮಣ್ಣಿನ ಭೂಮಿಯಾದರೆ 5ರಿಂದ 6 ದಿನಗಳಿಗೆ ಒಂದು ಸಲ ನೀರು ಹಾಯಿಸಬೇಕು. ಮೆಕ್ಕಲು ಮಣ್ಣು ಆದರೆ 8ರಿಂದ 10 ದಿನಗಳಿಗೆ ಒಮ್ಮೆ ನೀರು ಹಾಯಿಸಿದರೆ ಸಾಕು.

**ಗೊಬ್ಬರ :** ಅಡಿಗೊಬ್ಬರವಾಗಿ ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರ 10ಟನ್, ಎಲೆಸತ್ವ ಯೂರಿಯಾ 40 ಕಿಲೋ, ಸೂಪರ್ ಫಾಸ್ಫೇಟ್ 150 ಕಿಲೋ, ಬೂದಿಸತ್ವ (ಪೊಟಾಷ್) 16 ಕಿಲೋ.

**ಮೇಲ್ಗೊಬ್ಬರ :** ಕಳೆ ತೆಗೆದ ಮೇಲೆ 20 ದಿನಗಳಲ್ಲಿ ಮೇಲ್ಗೊಬ್ಬರ ಹಾಕಬೇಕು. ಯೂರಿಯ 65 ಕಿಲೋ, ಅಸೋಸ್ಪೈರ್ ಇಲ್ಲಂ 4 ಕಿಲೋ, ಫಾಸ್ಫೇರಿಯಾ 4 ಕಿಲೋ, ಪೊಟಾಷ್ ಬ್ಯಾಕ್ಟೀರಿಯಾ 4 ಕಿಲೋ ಮೊದಲಾದವುಗಳನ್ನು ಗೊಬ್ಬರದೊಡನೆ ಸೇರಿಸಿ ಅಡಿಗೊಬ್ಬರವಾಗಿ ಹಾಕಿದರೆ ಸಹಜ ಗೊಬ್ಬರದ ಅಳತೆಯಲ್ಲಿ ಅರ್ಧದಷ್ಟು ಕಡಿಮೆ ಮಾಡಿಕೊಳ್ಳಬಹುದು. 100ರಿಂದ 125 ಸೆಂ.ಮೀ. ಎತ್ತರವಷ್ಟೆ ಬೆಳೆಯುವುದು. ಚೆನ್ನಾಗಿ ನೋಡಿಕೊಂಡರೆ ಬಿತ್ತಿದ 45 ರಿಂದ 55 ದಿನಗಳಲ್ಲಿ ಗಂಡು ಹೂವು ಬಿಡುವುದು. ಗಂಡು ಹೂವುಗಳನ್ನು ಬಿಟ್ಟರೆ ಆಗ ಅವುಗಳನ್ನು ಕತ್ತರಿಸಿ ಬಿಸಾಡಬೇಕು. ಪೈರಿನಲ್ಲಿ 2ರಿಂದ 3 ತೆನೆಗಳು ಸಿಗುವುವು. ತೆನೆಗಳನ್ನು ತಕ್ಕ ಕಾಲದಲ್ಲಿ ಕುಯ್ಲು ಮಾಡುವುದು ಬಹು ಮುಖ್ಯ. 60ರಿಂದ 65 ದಿನಗಳಲ್ಲಿ ಕುಯ್ಲು ಮಾಡಬಹುದು. ಕುಯ್ಲಿನ ಸಮಯದಲ್ಲಿ ಬಹು ಎಚ್ಚರಿಕೆಯಿಂದ ಇರಬೇಕು. ಸರಿಯಾದ ಸಮಯದಲ್ಲಿ ಕುಯ್ಲು ಮಾಡದಿದ್ದರೆ ರುಚಿ ಮತ್ತು ಗುಣಕ್ಕೆ ತೊಂದರೆ. ಕುಯ್ಲಿನ ಕಾಲದಲ್ಲಿ ರೇಷ್ಮೆಯಂತೆ ಎಳೆಗಳು ಹೊರಬರುವುದು. ಅದನ್ನು ಸೂಕ್ಷ್ಮವಾಗಿ ನೋಡಿ ಕೊಯ್ಲು ಮಾಡಬೇಕು.

ಸಾಮಾನ್ಯವಾಗಿ 6ರಿಂದ 7 ದಿನಗಳಲ್ಲಿ ಕೊಯ್ಲು ಮುಗಿಸಿ ಬಿಡಬಹುದು. ಬೆಳಗಿನ ಸಮಯದಲ್ಲೇ ಕೊಯ್ಲು ಮಾಡುವುದೇ ಉತ್ತಮ. ಇದರಿಂದ ಹೆಚ್ಚು ಸಮಯ ಒಣಗಲು ಬಿಡಬೇಕಿಲ್ಲ.

*ಎಂ.ಪಿ.*

**ಮಕ್ಕಿ ಗದ್ದೆ** ಹರಿಯುವ ನೀರನ್ನು, ಕೆರೆಬಾವಿ ಏತದ ನೀರನ್ನು ಬಳಸಿಕೊಳ್ಳದೆ 'ಮಕ್ಕಿ ಗದ್ದೆ' ಎಂದು ಹೆಸರು. ಮಲೆನಾಡಿನ ಪ್ರದೇಶಗಳಾದ ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ಮೊದಲಾದ ತಾಲ್ಲೂಕಿನ ಹಳ್ಳಿ ಪ್ರದೇಶಗಳಲ್ಲಿ ಸತತವಾಗಿ ಮಳೆಸುರಿಯುವುದರಿಂದ ಗುಡ್ಡಗಾಡಿನ ಇಳಿಜಾರಿನ ಕೆಳಪ್ರದೇಶಗಳಲ್ಲಿ ನೀರಿನ ಬುಗ್ಗೆಗಳು ನಿರಂತರವಾಗಿ ಹರಿಯುತ್ತಿದ್ದು ಚಿಕ್ಕ ಅಣೆಕಟ್ಟುಗಳನ್ನು ಕಟ್ಟಿ ಆ ನೀರಿನಿಂದ ಬತ್ತ ಬೆಳೆಯುತ್ತಾರೆ. ಇವು ಸಾಮಾನ್ಯ 'ಗದ್ದೆ'ಗಳು. ಮಕ್ಕಿಗದ್ದೆ ಈ ಗದ್ದೆಗಳಿಗಿಂತ ಎತ್ತರದ ಪ್ರದೇಶದಲ್ಲಿರುತ್ತದೆ. ಹತ್ತಿರದಲ್ಲಿ ಬಾವಿ, ಕೆರೆ, ಕಟ್ಟೆಗಳು ಅಥವಾ ಹಳ್ಳ, ಝರಿಗಳು ಇರುವುದಿಲ್ಲ. ಮಳೆ ಬಂದಾಗ ನೆಲ ಎಷ್ಟು ನೀರನ್ನು ಹೀರಿಕೊಳ್ಳುತ್ತದೆಯೋ ಅಷ್ಟೇ ತೇವಾಂಶದಿಂದ ಅಲ್ಲಿ ಬೆಳೆ ಬೆಳೆಯಬೇಕಾಗುತ್ತದೆ. ಹೀಗಾಗಿ ವರ್ಷಕ್ಕೆ ಒಂದು ಬೆಳೆ ಮಾತ್ರ ಈ ಗದ್ದೆಗಳಲ್ಲಿ ಬೆಳೆಯಲಾಗುತ್ತದೆ. ನೆಲ ಕೂಡ ಪೂರ್ಣ ಫಲವತ್ತಾಗಿರದೆ ಚಿಕ್ಕ ಚಿಕ್ಕ ಕಲ್ಲು ಮರಳುಗಳಿಂದ ಕೂಡಿರುತ್ತದೆ. ಇಲ್ಲಿ ಶ್ರಮಕ್ಕೆ ತಕ್ಕ ಪ್ರತಿಫಲ ಇರುವುದಿಲ್ಲ. ಬದಲಾವಣೆಗಾಗಿ ಮೆಣಸಿನಕಾಯಿ, ತರಕಾರಿ ಬೆಳೆಯಲೂ ಇದರಲ್ಲಿ ಕಷ್ಟವಾಗುತ್ತದೆ. ಇದರಲ್ಲಿ ಬಂದಷ್ಟು ಬೆಳೆ ಬರಲಿ ಎಂದು ಬತ್ತವನ್ನು ಬೆಳೆಸುವ ಪ್ರಯತ್ನ ಮಾಡುತ್ತಾರೆ. ಹಳ್ಳಿಯ ಮನೆಗಳ ಪಕ್ಕದಲ್ಲಿ ಬೋಡು ಗುಡ್ಡಗಳ ಬಯಲುಗಳಿದ್ದರೆ ಅವೇ 'ಮಕ್ಕಿ ಗದ್ದೆ'ಗಳು.

ಊರಿನ ಅಥವಾ ಹಳ್ಳಿಗಳ ಹೆಸರಿನ ಮುಂದೆ 'ಮಕ್ಕಿ' ಎಂದು ಸೇರಿಸುವುದು ಈ ಪ್ರದೇಶದ ವಾಡಿಕೆ. ಉದಾ : ಕುರುಣೇಮಕ್ಕಿ, ಮಳಲ ಮಕ್ಕಿ ಇತ್ಯಾದಿ 'ಮಕ್ಕಿ ಮನೆ' ಎಂಬ ಹೆಸರಿನ ಹಳ್ಳಿಯೂ ಇದೆ. ತುಳುನಾಡಿನಲ್ಲಿ ಇದನ್ನು ಬಾಣಬೊಟ್ಟು ಎಂದು ಕರೆಯುತ್ತಾರೆ.

*ವಿ.ಎಂ.ಎನ್.*

**ಮಚ್ಚು** ಶಿಲಾಯುಗ ಮಾನವನ ಬುದ್ಧಿ ವಿಕಾಸದ ಹಂತಗಳಲ್ಲಿ ಅತಿ ಪ್ರಾಚೀನವಾದುದು. ಆ ಸಂದರ್ಭದಲ್ಲಿ ಆಹಾರಕ್ಕಾಗಿ ಬೇಟೆಯಾಡುವುದನ್ನು ಕಲಿತಾಗ ಅದಕ್ಕೆ ಪೂರಕವಾಗಿ ಶಿಲಾಯುಧಗಳು ತಯಾರಾದವು. ಅವು ಅಷ್ಟು ಪರಿಣಾಮಕಾರಿಯಾಗದೇ ಇರುವುದರಿಂದ ಲೋಹಗಳ ಬಳಕೆ ಆರಂಭವಾಯಿತು. ಆ ಯುಗದ ಮಹತ್ತರ ಕೊಡುಗೆಯೆಂದರೆ ಲೋಹ ಆಯುಧಗಳು. ಪ್ರಾರಂಭದಲ್ಲಿ ಬೇಟೆ ಸಹಾಯಕ್ಕಾಗಿ ತಯಾರಿಸಲ್ಪಟ್ಟ ಲೋಹಾಯುಧಗಳು ಕಾಲ ಕ್ರಮೇಣ ಮಾನವನ ಆವಶ್ಯಕತೆಗಳ ಪೂರೈಕೆಗೆ ನೆರವಾದವು. ಬಳಿಕ ಕಬ್ಬಿಣವನ್ನು ಕಂಡುಹಿಡಿದುಕೊಂಡ ಅಗತ್ಯಕ್ಕನುಸಾರವಾಗಿ ಕಬ್ಬಿಣದ ವಸ್ತುಗಳನ್ನು ಬಳಕೆ ಮಾಡುವ, ತಯಾರಿಸುವ ಕೆಲಸವನ್ನು ಅರಿತುಕೊಂಡ. ಅಂತಹ ವಸ್ತುಗಳಲ್ಲಿ 'ಮಚ್ಚು' ಕೂಡ ಒಂದು. ಈ ಮಚ್ಚು ಕೃಷಿ ಕ್ಷೇತ್ರದಲ್ಲಿ ಅತ್ಯಗತ್ಯವಾದದ್ದು.

ಮರದ ಸಾಮಾನುಗಳನ್ನು ಕಡಿಯಲು, ತುಂಡರಿಸಲು, ಕತ್ತರಿಸಲು ಬಳಸುವ ಕಬ್ಬಿಣದ ಒಂದು ಸಾಧನ ಇದು. ಅಡುಗೆ, ಆಹಾರ ತಯಾರಿಕೆಗೆ ಬೇಕಾದ ಸೌದೆಸೊಪ್ಪುಗಳನ್ನು, ಬೇಲಿ ಬೆಳ್ಳಾರಗಳನ್ನು ಕಡಿಯಲು, ಸವರಲು ದನಕರುಗಳಿಗೆ ಮೇವುಗಳನ್ನು ಒದಗಿಸಲು ಬಳಸುವಂತಹ ಸಾಧನವೂ ಕೂಡ ಆಗಿದೆ. ಈ ಸಾಧನವು ಗ್ರಾಮೀಣ ಪ್ರದೇಶದ ಪ್ರತಿಯೊಬ್ಬ ರೈತನ, ಕೂಲಿಕಾರನ ಮನೆಯಲ್ಲಿ ಇದ್ದೇ ಇರುತ್ತದೆ. ಇಲ್ಲಿ ಕೋಳಿ, ಹಸು, ಕುರಿ, ನಾಯಿ ಇತ್ಯಾದಿ ಸಾಕು ಪ್ರಾಣಿಗಳು ಕೃಷಿ ಕ್ಷೇತ್ರದಲ್ಲಿ ಅಸ್ತಿತ್ವವನ್ನು ಪಡೆದಿವೆ ಹಾಗೂ ಇವೆಲ್ಲವೂ ಸಜೀವ ಸಲಕರಣೆಗಳು, ಇವುಗಳಂತೆಯೇ ನಿರ್ಜೀವಿ ವಸ್ತುಗಳಾದ ಕೊಕ್ಕೆ, ನೇಗಿಲು, ಕುಡುಗೋಲು, ಕೋಲು ಮತ್ತು ಮಚ್ಚು ಕೂಡ ಕೃಷಿಕರ ಒಡನಾಡಿಗಳಾಗಿವೆ. ಕೃಷಿಯೊಂದಿಗೆ ಹಾಸುಹೊಕ್ಕಾಗಿರುವ ಈ ಸಾಧನಗಳು ಕೃಷಿಕನ ಅನಿವಾರ್ಯ ಸಾಧನ.

ಮಚ್ಚನ್ನು, ಕಡಗತ್ತಿ, ಮಚ್ಚುಗತ್ತಿ, ಕೈಗತ್ತಿ, ಕೈಮಚ್ಚು, ಮಡಿ, ಸೃಣೆ ಎಂದೆಲ್ಲಾ ಕರೆಯುತ್ತಿದ್ದಾರೆ. ಹೀಗೆ ಮಚ್ಚನ್ನು ವಿವಿಧ ರೀತಿಯಲ್ಲಿ,

ಪ್ರಾದೇಶಿಕ ಭಿನ್ನತೆಯೊಂದಿಗೆ ಕೂಡ ನೋಡಬಹುದು. ಅದೇ ರೀತಿಯಾಗಿ ಮಚ್ಚನ್ನು ಹುರಿಮಚ್ಚು, ಕೊಳವಿ ಮಚ್ಚು, ತರಿಮಚ್ಚು ಎಂಬ ವಿಧಗಳಿಂದಲೂ ಗುರ್ತಿಸಬಹುದಾಗಿದೆ. ಗ್ರಾಮೀಣ ಪ್ರದೇಶದ ಕೃಷಿಕರು ಸಾಮಾನ್ಯವಾಗಿ ದಿನನಿತ್ಯ ಕೃಷಿ ಉಪಕರಣಗಳನ್ನು ಹೊಲಗದ್ದೆಗಳಲ್ಲಿ ಬಳಸುವವರು.

ರೈತನು ತಾನು ಬೆಳೆದಂತಹ ಫಸಲನ್ನು ಕಾಡುಪ್ರಾಣಿಗಳಿಂದ, ಕಳ್ಳಕಾಕರಿಂದ ಹಾಳಾಗದಂತೆ ಸಂರಕ್ಷಿಸಲು ಬೇಲಿಯನ್ನು ಹಾಕುವಂತಹ ಸಂದರ್ಭದಲ್ಲಿ ಮುಳ್ಳುಗಳನ್ನು ಸವರಿ, ಕಡಿದು ಹಾಕುವಲ್ಲಿ ಮಚ್ಚಿನ ಪಾತ್ರ ಮುಖ್ಯವಾದುದು. ಹಾಗೆಯೇ ಅಡುಗೆಗೆ ಬೇಕಾದ ಕಟ್ಟಿಗೆಯನ್ನು ತುಂಡರಿಸಲು, ತೆಂಗಿನ ಕಾಯಿಯನ್ನು ಸಿಪ್ಪೆಯಿಂದ ಬೇರ್ಪಡಿಸಲು ಮತ್ತು ಕಬ್ಬು ಕೂಲಿಕಾರರು ತಮಗೆ ಅನುಕೂಲವಾದ ರೀತಿಯಲ್ಲಿ ಮಚ್ಚನ್ನು ಕುಲುಮೆಯಲ್ಲಿ ತಟ್ಟಿಸಿ ಕುಟ್ಟಿಸಿ ತುಂಬ ಜೋಪಾನವಾಗಿ ಇಟ್ಟುಕೊಂಡು ಕಬ್ಬು ಕಡಿಯಲು ಬಳಸುತ್ತಾರೆ. ಗ್ರಾಮೀಣ ಪ್ರದೇಶದ ಜನಸಮುದಾಯಗಳು ಇಂದಿಗೂ ಕೂಡ ವೈಜ್ಞಾನಿಕವಾದಂತಹ ಹಿನ್ನೆಲೆಯಲ್ಲಿ ಗುಡುಗು ಮಿಂಚಿನ ಸಂದರ್ಭದಲ್ಲಿ ಕಬ್ಬಿಣದ ಕೃಷಿ ಸಾಮಗ್ರಿಗಳನ್ನು ಮನೆಯ ಬಾಗಿಲಿನ ಮುಂದೆ ಇಡುವಂತಹದ್ದು ರೂಢಿಗತವಾಗಿದೆ. ಇದರಲ್ಲಿ ಮುಖ್ಯವಾಗಿ ಮಚ್ಚನ್ನೇ ಇಡುವಂತಹದ್ದು ಪ್ರಮುಖವಾಗಿದೆ. ಇದು ಅಲ್ಲದೆ ಇನ್ನಿತರ ಚಟುವಟಿಕೆ ಕಾರ್ಯಗಳಲ್ಲಿ ಸಂದರ್ಭಗಳಲ್ಲಿ ಮಚ್ಚಿನ ಬಳಕೆ ಪ್ರಮುಖವಾಗಿದೆ.

*ಎಂ.ಆರ್.ಕೆ.*

**ಮಣ್ಣುಗಳು** ಭೂಮಿಯ ಮೇಲ್ಪದರವೇ ಮಣ್ಣು. ಭೂಮಿಯ ಮೇಲಿರುವ ಸಕಲ ಜೀವರಾಶಿಗಳಿಗೂ ಇದು ಉಪಯುಕ್ತ. ಮಣ್ಣು ಶಿಲೆಗಳ ಶಿಥಿಲೀಕರಣದಿಂದ ಉಂಟಾಗುತ್ತದೆ. ಶಿಥಿಲೀಕರಣಗೊಂಡ ಶಿಲೆಗಳು ಸಣ್ಣ ಸಣ್ಣ ಚೂರುಗಳಾಗಿ, ಅವುಗಳೊಂದಿಗೆ ಸಸ್ಯ ಮತ್ತು ಪ್ರಾಣಿಗಳ ಕೊಳೆತ ಅಂಶವೂ, ಅನೇಕ ಬಗೆಯ ಸೂಕ್ಷ್ಮಜೀವಿಗಳು, ಖನಿಜ ಲವಣಗಳು ಮಣ್ಣಿನಲ್ಲಿ ಸೇರಿಕೊಂಡಿರುತ್ತವೆ.

ಹೀಗೆ ಮೂಲ ಶಿಲೆಗಳು, ಕೊಳೆತ ಜೈವಿಕಾಂಶದ ಪ್ರಮಾಣ, ವಾಯು ಮತ್ತು ಸಾಗಾಣಿಕೆ ಮಾಡುವ ಕರ್ತೃ ಮುಂತಾದವುಗಳ ಪ್ರಭಾವಕ್ಕೆ ಒಳಪಟ್ಟಿದ್ದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದಿರುತ್ತದೆ. ಮಣ್ಣುಗಳ ಉತ್ಪತ್ತಿ, ಕಣರಚನೆ, ರಾಸಾಯನಿಕ ಸಂಯೋಜನೆ ಹಾಗೂ ಅದರ ಬದಲಾವಣೆ ಮುಂತಾದವುಗಳ ಅಧ್ಯಯನವನ್ನು "ಮಣ್ಣಿನ ಶಾಸ್ತ್ರ" (ಪೆಡಾಲಜಿ) ಎಂದು ಕರೆಯುವರು.

**ಮಣ್ಣಿನ ವಿಧಗಳು :** ಭಾರತ ಒಳಗೊಂಡಿರುವ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವನ್ನು ಹೊಂದಿದೆ. ಅಲ್ಲದೆ ನದಿಗಳು, ಗಾಳಿ, ಅಂತರ್ಜಲ, ಸಮುದ್ರದ ಅಲೆಗಳು ಮುಂತಾದ ಧಾತುಗಳಿಂದ ಅನೇಕ ಪ್ರದೇಶಗಳಲ್ಲಿ ಮಣ್ಣು ಸಾಗಿಸಲ್ಪಟ್ಟು ಸಂಚಯನಗೊಂಡಿದೆ. ಇದರಿಂದಾಗಿ ವಿವಿಧ ಬಗೆಯ ಮಣ್ಣುಗಳು ರೂಪುಗೊಂಡಿವೆ. ಮಣ್ಣುಗಳನ್ನು ವರ್ಗೀಕರಿಸಿ ದೇಶಕ್ಕೆ ಅನ್ವಯವಾಗುವ ಒಂದು ನಕಾಶೆಯನ್ನು ತಯಾರಿಸಲು ಪ್ರಯತ್ನ ನಡೆದಿದೆ.

ಫಲವಾಗಿ ಇತ್ತೀಚೆಗೆ 23 ಮಣ್ಣುಗಳನ್ನೊಳಗೊಂಡ ಒಂದು ಭಾರತದ ನಕಾಶೆ ಪ್ರಕಟವಾಗಿದೆ.

ಮಣ್ಣುಗಳನ್ನು ಎರಡು ಮುಖ್ಯ ವಿಧಗಳಾಗಿ ವಿಂಗಡಿಸಬಹುದು.

1. ಅವಶೇಷ ಅಥವಾ ಸ್ಥಾಯಿ ಮಣ್ಣುಗಳು
2. ಸ್ಥಳಾಂತರಿಸಲ್ಪಟ್ಟ ಮಣ್ಣುಗಳು

ನಿರ್ಮಾಣವಾಗಿರುವ ಪ್ರದೇಶದಲ್ಲಿಯೇ ಹಂಚಿಕೆಯಾಗಿರುವ ಮಣ್ಣುಗಳಿಗೆ ಅವಶೇಷ ಅಥವಾ ಸ್ಥಾಯಿ ಮಣ್ಣುಗಳು ಎಂದು ಕರೆಯುತ್ತಾರೆ. ಉದಾ : ಪರ್ಯಾಯ ಪ್ರಸ್ಥಭೂಮಿ ಮಣ್ಣು

ಕೆಲವು ಮಣ್ಣುಗಳು ನಿರ್ಮಾಣವಾಗಿರುವ ಪ್ರದೇಶಗಳಿಂದ ಸಾಗಿಸಲ್ಪಟ್ಟ ಸಂಚಯಿತಗೊಂಡಿರುತ್ತವೆ. ಅವುಗಳನ್ನು ಸ್ಥಳಾಂತರ ಮಣ್ಣುಗಳು ಎಂದು ಕರೆಯುತ್ತಾರೆ. ಉದಾ : ಉತ್ತರಭಾರತದ ಮಣ್ಣು

ಗಿರಿಶಿಖರ 'ಪರ್ವತ'ಗಳಲ್ಲಿ ಉಗಮಿಸುವ ನದಿಗಳಿಂದ ಕೊರೆದು ಸಾಗಿಸಲ್ಪಟ್ಟ ಸಂಚಯಿತಗೊಂಡ ಮಣ್ಣು ಮೆಕ್ಕಲು ಮಣ್ಣು, ಮರುಭೂಮಿ ಮಣ್ಣು, ಲವಣಕ್ಷಾರಯುಕ್ತ ಮಣ್ಣು ಹಾಗೂ ತೆರಾಯಿ ಮಣ್ಣುಗಳು ಉತ್ತರ ಭಾರತದ ಮಣ್ಣುಗಳಾಗಿವೆ. ಇವು ಸ್ಥಳಾಂತರಿಸಲ್ಪಟ್ಟ ಮಣ್ಣುಗಳಿಗೆ

**1) ಮೆಕ್ಕಲು ಮಣ್ಣು :** ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವುದು. ಈ ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ. ಅಥವಾ ದೇಶದ ಒಟ್ಟು ವಿಸ್ತೀರ್ಣದ ಶೇ. 24ರಷ್ಟು ಭಾಗದಲ್ಲಿ ಕಂಡುಬರುವುದು. ಮೆಕ್ಕಲು ಮಣ್ಣು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ್, ಹರಿಯಾಣ, ರಾಜಸ್ಥಾನ ಹಾಗೂ ಅಸ್ಸಾಂ ರಾಜ್ಯದ ಬ್ರಹ್ಮಪುತ್ರ ಕಣಿವೆ, ತಪತಿ ನದಿಗಳ ಕಣಿವೆ ಹಾಗೂ ಪರ್ಯಾಯ ಪ್ರಸ್ಥಭೂಮಿಯ ತೀರಪ್ರದೇಶಗಳಲ್ಲೂ ಸಹ ಕಂಡುಬರುತ್ತದೆ.

ಉತ್ತರದ ಬಯಲು ಪ್ರದೇಶದ ಕೆಲವು ಕಡೆಗಳಲ್ಲಿ ಮಣ್ಣು ಸುಮಾರು 6000 ಮೀ. ಆಳದವರೆಗೂ ಕಂಡುಬರುವುದು. ಮೆಕ್ಕಲು ಮಣ್ಣನ್ನು 'ಭಂಗರ್' ಮತ್ತು 'ಖದರ್' ಎಂದು 2 ವಿಧಗಳಾಗಿ ವಿಂಗಡಿಸಿರುವರು.

**ಭಂಗರ್** : ಇದು ಪುರಾತನ ಕಾಲದಲ್ಲಿ ಸಂಚಯಿತಗೊಂಡದ್ದು. ದಪ್ಪ ಕಣ ಹಾಗೂ ಶಿಲಾಚೂರುಗಳಿಂದ ಕೂಡಿರುತ್ತದೆ.

**ಖದರ್ :** ನದಿಯ ಮೈದಾನದಲ್ಲಿ ಹರಡಿರುವ ಮಣ್ಣನ್ನು ಖದರ್ ಎಂದು ಕರೆಯುವರು. ಇದರಲ್ಲಿ ಮರಳಿನ ಪ್ರಮಾಣ ಅಧಿಕವಾಗಿದ್ದು ಸುಣ್ಣದ ಕಣಗಳು ಅಲ್ಪಪ್ರಮಾಣದಲ್ಲಿರುತ್ತವೆ.

ಮೆಕ್ಕಲು ಮಣ್ಣಿನಲ್ಲಿ ಗೋಧಿ, ಬತ್ತ, ಕಬ್ಬು ಮುಂತಾದ ಹಲವು ಬೆಳೆಗಳನ್ನು ಮಾಡಬಹುದು.

**2. ಮರುಭೂಮಿ ಮಣ್ಣು :** ಮರುಭೂಮಿ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶ. ಸು. 1.42 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಮರಳುಗಾಡು ಕಂಡುಬರುತ್ತದೆ. ಅತಿ ಕಡಿಮೆ ಮಳೆ ಹಾಗೂ ಅತ್ಯಧಿಕ ಉಷ್ಣಾಂಶದಿಂದ ಮರುಭೂಮಿ ರೂಪತಾಳುತ್ತದೆ. ಇದು ರಾಜಸ್ಥಾನದ ಥಾರ್‌ಮರುಭೂಮಿ ಹಾಗೂ ಗುಜರಾತ್, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ಅಂಚುಗಳಲ್ಲಿಯೂ ಕಂಡುಬರುತ್ತದೆ.

**3. ಲವಣ ಮತ್ತು ಕ್ಷಾರಯುಕ್ತ ಮಣ್ಣು :** ಇದು ಹೆಚ್ಚು ಲವಣ ರಂಜಕಗಳಿಂದ ಕೂಡಿದ್ದು ಅನುಪಯುಕ್ತವಾಗಿರುತ್ತದೆ. ಈ ಮಣ್ಣು ಭಾರತದಲ್ಲಿ ಸು. 68,000 ಚ.ಕಿ.ಮೀ. ಪ್ರದೇಶವನ್ನು ಆವರಿಸಿದೆ. ರಾಜಸ್ಥಾನ, ಹರಿಯಾಣ, ಪಂಜಾಬ್, ಉತ್ತರಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಅಲ್ಲಲ್ಲಿ ಚದುರಿದಂತೆ ಕಂಡುಬರುತ್ತದೆ. ಇದಕ್ಕೆ ರ್‍ಹೇ, ಕಲ್ಲರ್, ಉಪರ, ಎಂಬ ಸ್ಥಳೀಯ ಹೆಸರುಗಳು ಇವೆ.

**4. ತೆರಾಯಿ ಅಥವಾ ಪೀಟ ಮಣ್ಣು :** ನೀರು ತುಂಬಿಕೊಂಡಂತಿರುವ ತಗ್ಗು ಹಾಗೂ ಜವುಗು ಪ್ರದೇಶಗಳಲ್ಲಿ ಕಾಣಬಹುದು. ಈ ರೀತಿಯ ಮಣ್ಣು ಸು. 56,000 ಚ.ಕಿ.ಮೀ. ಪ್ರದೇಶದಲ್ಲಿ ವಿಸ್ತರಿಸಿದೆ. ಸಿವಾಲಿಕ್ ಬೆಟ್ಟಗಳ ದಕ್ಷಿಣ ಭಾಗ ಮತ್ತು ಜಮ್ಮು ಕಾಶ್ಮೀರ, ಉತ್ತರ ಪ್ರದೇಶಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಅಲ್ಲದೆ ಪಶ್ಚಿಮ ಬಂಗಾಳದ ತೀರ ಪ್ರದೇಶ, ಕೇರಳ, ತಮಿಳುನಾಡು ಮತ್ತು ಒಡಿಶಾ ರಾಜ್ಯಗಳಲ್ಲಿ ಚದುರಿದಂತೆ ಕಂಡುಬರುತ್ತದೆ.

**ಪರ್ಯಾಯ ಪ್ರಸ್ಥಭೂಮಿಯ ಮಣ್ಣುಗಳು :** ಪರ್ಯಾಯ ಪ್ರಸ್ಥಭೂಮಿಯ ಮಣ್ಣುಗಳು ಅವುಗಳು ಹಂಚಿಕೆಯಾಗಿರುವ ಪ್ರದೇಶದಲ್ಲಿಯೇ ಶಿಲೆಗಳ ಶಿಥಿಲೀಕರಣದಿಂದ ನಿರ್ಮಿತವಾಗಿದ್ದು, ಸ್ಥಳಾಂತರವನ್ನು ಹೊಂದಿಲ್ಲ. ಪರ್ಯಾಯ ಪ್ರಸ್ಥಭೂಮಿಯಲ್ಲಿ ಕಂಡು ಬರುವ ಪ್ರಮುಖ ಮಣ್ಣುಗಳೆಂದರೆ :

1. ಕಪ್ಪು ಮಣ್ಣು
2. ಕೆಂಪು ಮಣ್ಣು
3. ಜಂಬಿಟ್ಟಿಗೆ ಮಣ್ಣು

**1. ಕಪ್ಪು ಮಣ್ಣು :** ಇದು ಭಾರತದ ಮಧ್ಯ ಮತ್ತು ದಕ್ಷಿಣ ಮಧ್ಯ ಭಾಗಗಳಲ್ಲಿ ಇದೆ. ಈ ಮಣ್ಣು ಸು. 5.46 ಲಕ್ಷ ಚ.ಕಿ.ಮೀ. ಪ್ರದೇಶದಲ್ಲಿ ಕಂಡುಬರುತ್ತದೆ. ಇದನ್ನು 'ರೇಗಾರ್ ಮಣ್ಣು' ಎಂದೂ ಕರೆಯುತ್ತಾರೆ. ಕಪ್ಪುಮಣ್ಣಿನ ಪ್ರದೇಶವನ್ನು 'ಡೆಕ್ಕನ್ ಟ್ರಾಪ್' ಎಂದೂ ಸಹ ಕರೆಯುತ್ತಾರೆ.

ಕಪ್ಪು ಮಣ್ಣು ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿ ತಮಿಳುನಾಡು, ರಾಜಸ್ಥಾನ, ಉತ್ತರ ಪ್ರದೇಶಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತದೆ. ಇದು ಭೂಮಿಯ 30 ಸೆಂ.ಮೀ. ಆಳದಿಂದ 100 ಸೆಂ.ಮೀ. ಆಳದವರೆಗೂ ಇರುತ್ತದೆ. ಈ ಮಣ್ಣು ಒದ್ದೆಯಾದಾಗ ಮೃದುವಾಗಿದ್ದು ಜಿಗುಟಾಗಿರುತ್ತದೆ. ಒಣಗಿದಾಗ ತುಂಬಾ ಗಟ್ಟಿಯಾಗಿರುತ್ತದೆ. ಕಬ್ಬಿಣ, ಸುಣ್ಣ, ಮೆಗ್ನೀಷಿಯಂ ಕಾರ್ಬೋನೇಟ್ ಮುಂತಾದ ಖನಿಜಗಳು ಇದರಲ್ಲಿ ಅಧಿಕ ಪ್ರಮಾಣದಲ್ಲಿರುತ್ತವೆ. ಕಪ್ಪು ಮಣ್ಣಿನ ಪ್ರದೇಶದಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಜೋಳ, ಈರುಳ್ಳಿ, ಹೊಗೆಸೊಪ್ಪು, ಎಣ್ಣೆ ಕಾಳುಗಳು ಇತ್ಯಾದಿ.

ಕಪ್ಪು ಮಣ್ಣನ್ನು 1. ಆಳವಿಲ್ಲದ ಕಪ್ಪು ಮಣ್ಣು 2. ಮಧ್ಯಮ ಆಳದ ಕಪ್ಪು ಮಣ್ಣು, 3. ಆಳವಾದ ಕಪ್ಪು ಮಣ್ಣು 4. ಕಪ್ಪು-ಕೆಂಪು ಮಿಶ್ರ ಮಣ್ಣು ಎಂದು ವಿಂಗಡಿಸಲಾಗಿದೆ.

**2. ಕೆಂಪು ಮಣ್ಣು :** ಕೆಂಪು ಮಣ್ಣು ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ. ಇದು. ಸು. 5.18 ಲಕ್ಷ ಚ.ಕಿ.ಮೀ. ಪ್ರದೇಶದಲ್ಲಿ ಕಂಡುಬರುವುದು. ದಕ್ಷಿಣದ ಕನ್ಯಾಕುಮಾರಿಯಿಂದ, ಉತ್ತರದಲ್ಲಿ ಮಧ್ಯಪ್ರದೇಶದ ಝಾನ್ಸಿಯವರೆಗೂ, ಪಶ್ಚಿಮದಲ್ಲಿ ಗುಜರಾತಿನ ಕಛ್ ಪ್ರದೇಶದಿಂದ ಪೂರ್ವದಲ್ಲಿ ಜಾರ್ಖಂಡ್‌ವರೆಗೂ ವ್ಯಾಪಿಸಿದೆ. ಈ ಮಣ್ಣಿನಲ್ಲಿರುವ ಕಬ್ಬಿಣದ ಅಂಶವು ಆಮ್ಲಜನಕದೊಂದಿಗೆ ಸಂಯೋಗ ಹೊಂದಿ ಕಬ್ಬಿಣದ ಆಕ್ಸೈಡ್ ಆಗಿ ಪರಿವರ್ತನೆ ಹೊಂದಿರುವುದರಿಂದ ಇದು ಕೆಂಪು ಬಣ್ಣದಿಂದ ಕೂಡಿದೆ.

**ಅ) ಕೆಂಪುಗೋಡು ಮಣ್ಣು :** ಇದು ನೈಸ್, ಚಾರ್ನೋಕೈಟೀಸ್, ಡೈಯೋರೈಟ್ ಮುಂತಾದ ಶಿಲೆಗಳ ಶಿಥಿಲೀಕರಣದಿಂದ ಉಂಟಾಗುತ್ತದೆ. ಇವುಗಳಲ್ಲಿ ಪ್ರತ್ಯಾಮ್ಲಗಳನ್ನು ಫೆಲ್ಸ್‌ಫಾರ್, ಮೈಕಾ, ಹಾರ್ನ್‌ಬ್ಲೆಂಡ್ ಮುಂತಾದ ಖನಿಜಗಳು ಶಿಥಿಲವಾಗಿ ಅಸಂಯುಕ್ತ ಸಿಲಿಕಾನ್ ಇಲ್ಲದ್ದರಿಂದ ಹೆಚ್ಚು ನವಿರು ಕಣಗಳನ್ನುಳ್ಳ ಗೋಡು ಮಣ್ಣು ರೂಪುಗೊಳ್ಳುವುದು.

**ಆ) ಕೆಂಪು ಮರಳು ಮಣ್ಣು :** ಇದು ಸಾಮಾನ್ಯವಾಗಿ ಅಗ್ನಿಶಿಲೆ, ಗ್ರಾನೈಟ್, ನೈಸ್, ಕ್ವಾರ್ಟ್ಸೈಟೀಸ್, ಮರಳು ಶಿಲೆಗಳಿಂದ ರೂಪುಗೊಂಡ ಮಣ್ಣು. ಇದರಲ್ಲಿ ಮರಳಿನ ಅಂಶ ಹೆಚ್ಚಾಗಿದ್ದು, ಒರಟಾಗಿರುತ್ತದೆ. ಜೇಡಿಖನಿಜಗಳು, ಕೆಂಪು ಲಿಮೋನೈಟ್, ಹಳದಿ ಲಿಮೋನೈಟ್ ಮುಂತಾದ ಕಬ್ಬಿಣದ ಆಕ್ಸೈಡುಗಳಿಂದ ಆವೃತವಾಗಿದ್ದು ಕೆಂಪು ಅಥವಾ ಹಳದಿ ಬಣ್ಣ ಹೊಂದಿರುತ್ತದೆ. ಹಳದಿ ಮಣ್ಣು ಜಲವಿಮುಕ್ತವಾದಾಗ ಬಣ್ಣ ಕೆಂಪಾಗುತ್ತದೆ. ಕಬ್ಬಿಣದ ಗ್ರಾವೆಲ್ ಈ ಮಣ್ಣಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಈ ಮಣ್ಣು ಜೇಡಿ, ಖನಿಜ, ಲಿನೈಟ್ ಮತ್ತು ಇಲೈಟ್‌ಗಳಿಂದ ಕೂಡಿರುತ್ತದೆ. ಅಂತಾರಾಷ್ಟ್ರೀಯ ಮಣ್ಣು ವರ್ಗೀಕರಣ ವ್ಯವಸ್ಥೆಯಂತೆ ಕೆಂಪು ಕಂದು ಜಂಟಿಟ್ಟಿಗೆ ಮಣ್ಣು ಲಾಟೋಸಾಲ್ ಮತ್ತು ಮೆಡಿಟರೇನಿಯನ್ ಮಣ್ಣುಗಳ ಗುಂಪಿಗೆ ಸೇರುತ್ತವೆ.

ರಾಗಿ, ಹೊಗೆಸೊಪ್ಪು ಮತ್ತು ಎಣ್ಣೆಕಾಳುಗಳು ಹಾಗೂ ನೀರಾವರಿ ಸೌಲಭ್ಯವಿರುವ ಕೆಂಪು ಮಣ್ಣಿನಲ್ಲಿ ಬತ್ತ, ಕಬ್ಬು, ಹತ್ತಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

**3) ಜಂಬಿಟ್ಟಿಗೆ ಮಣ್ಣು :** ಜಂಬಿಟ್ಟಿಗೆ ಮಣ್ಣು 300 ಸೆ.ಮೀ.ಗಳಿಗಿಂತ ಹೆಚ್ಚು ಮಳೆ ಬೀಳುವ ಪರ್ವತ ಅಥವಾ ಘಟ್ಟ ಪ್ರದೇಶಗಳಲ್ಲಿ ನಿರ್ಮಿತಗೊಂಡಿದೆ. ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂಗಳು ಮಾತ್ರ ಮೇಲ್ಪದರದಲ್ಲಿ ಉಳಿಯುತ್ತದೆ. ಆದ್ದರಿಂದ ಜಂಬಿಟ್ಟಿಗೆ ಮಣ್ಣಿನಲ್ಲಿ ಫಲವತ್ತತೆ ಕಡಿಮೆ. ಜಂಬಿಟ್ಟಿಗೆ ಮಣ್ಣು ಭಾರತದಲ್ಲಿ ಸು. 2.48 ಲಕ್ಷ ಚದರ ಕಿ.ಮೀ. ಪ್ರದೇಶದಲ್ಲಿ ಕಂಡುಬರುತ್ತದೆ. ಪಶ್ಚಿಮ ಘಟ್ಟಗಳು, ವಿಂಧ್ಯ, ಸಾತ್ಪುರ, ಮತ್ತು ರಾಜಮಹಲ್ ಬೆಟ್ಟಗಳು ಹಾಗೂ ಪೂರ್ವಾಚಲ ಪ್ರದೇಶಗಳಲ್ಲಿ ಈ ಮಣ್ಣು ಕಂಡುಬರುತ್ತದೆ.

ಈ ಮಣ್ಣುಗಳ ಬಣ್ಣ ಸಾಮಾನ್ಯವಾಗಿ ಕೆಂಪು ಇಲ್ಲವೆ ಹಳದಿಗೆಂಪು. ಇದು ರಚನೆಯಲ್ಲಿ ಜೇನುಗೂಡನ್ನು ಹೋಲುತ್ತದೆ. ಇದು ದಟ್ಟವಾಗಿ ಗಟ್ಟಿಯಾಗಿರುತ್ತದೆ. ಇಂತಹ ಮಣ್ಣನ್ನು ಹದವಾದ ತೇವವಿದ್ದಾಗ ಕಿತ್ತು ತೆಗೆದು, ಕತ್ತರಿಸಿ, ಒಣಗಿಸಿ ಇಟ್ಟಿಗೆಯಾಗಿ ಬಳಸುತ್ತಾರೆ. ಇಟ್ಟಿಗೆಗಳು ಒಣಗಿದಾಗ ಕಲ್ಲಿನ ಹಾಗೆ ಗಟ್ಟಿಯಾಗುತ್ತದೆ.

ಕಟ್ಟಡ ನಿರ್ಮಾಣಕ್ಕೆ ಇವನ್ನು ಬಳಸುತ್ತಾರೆ. ಜಂಬಿಟ್ಟಿಗೆ ಮಣ್ಣನ್ನು ಲ್ಯಾಟರೈಟ್ ಮಣ್ಣು (Laterite Soil) ಎಂದೂ ಕರೆಯುತ್ತಾರೆ. ಲ್ಯಾಟರೈಟ್ ಎಂಬ ಹೆಸರು ಇಟ್ಟಿಗೆ ಎಂಬ ಅರ್ಥವುಳ್ಳ ಲ್ಯಾಟಿನ್ ಪದದಿಂದ ಬಂದಿದೆ. ಲ್ಯಾಟರೈಟ್ ಕಲ್ಲುಗಳಿಂದ ವಿಘಟನೆಯಾದ ವಸ್ತುವಿನಿಂದ ಕೂಡಿರುವ ಮಣ್ಣನ್ನು ಲ್ಯಾಟರಿಟಿಕ್ ಅಥವಾ ಜಂಬಿಟ್ಟಿಗೆ ಮಣ್ಣು ಎಂದು ಕರೆಯುತ್ತಾರೆ.

ಈ ಮಣ್ಣಿನಲ್ಲಿ ಮೂಲ ಜೇಡಿ ಖನಿಜಗಳಿಲ್ಲದಿರುವುದರಿಂದ ಜಿಗುಟು, ಕುಗ್ಗುವುದು, ಪ್ರತ್ಯಾಮ್ಲ ವಿನಿಮಯ ಮುಂತಾದ ಜೇಡಿಯ ಗುಣಗಳು ಅಷ್ಟಾಗಿ ಕಂಡುಬರುವುದಿಲ್ಲ. ಜಂಬಿಟ್ಟಿಗೆ ಮಣ್ಣು ಕಾಫಿ, ಟೀ ಮುಂತಾದ ತೋಟಗಾರಿಕೆ ಬೆಳೆಗಳಿಗೆ ಬಹು ಉಪಯುಕ್ತವಾಗಿದೆ.

**ಮಣ್ಣಿನ ಸವೆತ :** ಭೂಮಿಯ ಮೇಲೆ ಕಂಡುಬರುವ ಸಡಿಲವಾದ ಮಣ್ಣಿನ ಪದರವು ವಿವಿಧ ಪ್ರಕೃತಿ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯನ್ನು 'ಮಣ್ಣಿನ ಸವೆತ' ಅಥವಾ 'ಭೂ ಸವೆತ' ಅಥವಾ 'ಮಣ್ಣಿನ ಸವಕಳಿ' ಎಂದು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಹರಿಯುವ ನೀರು, ಗಾಳಿ, ಸಮುದ್ರದ ಅಲೆ ಮುಂತಾದವು ಭೂಸವೆತಕ್ಕೆ ಕಾರಣವಾಗಿವೆ. ಭೂಸವೆತದಲ್ಲಿ 2 ಮುಖ್ಯ ವಿಧಗಳಿವೆ.

1) ಸ್ತರ ಭೂ ಸವೆತ

2) ಕೊರಕಲು ಭೂ ಸವೆತ

**1) ಸ್ತರ ಭೂಸವೆತ :** ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ವಿಸ್ತಾರವಾದ ಭೂಭಾಗದಲ್ಲಿ ಮೇಲ್ಮಣ್ಣು ಸವೆತಕ್ಕೀಡಾಗುವುದಕ್ಕೆ ಸ್ತರ ಭೂಸವೆತ ಎನ್ನುವರು. ಇದರಿಂದ ಗಟ್ಟಿಯಾದ ಮಣ್ಣು ಮಾತ್ರ ಉಳಿದು ಆ ಪ್ರದೇಶವು ವ್ಯವಸಾಯಕ್ಕೆ ಅನುಪಯುಕ್ತವಾಗಿರುತ್ತದೆ.

**2) ಕೊರಕಲು ಭೂ ಸವೆತ :** ಮಳೆಯ ನೀರು ಇಳಿಜಾರನ್ನು ಅನುಸರಿಸಿ ಹರಿಯುವುದು. ಇದರಿಂದ ಇಳಿಜಾರಿನಲ್ಲಿ ಸಡಿಲವಾದ ಮಣ್ಣು ಕೊಚ್ಚಿಕೊಂಡು ಹೋಗಿ ಕೊರಕಲುಗಳು ನಿರ್ಮಿತವಾಗುತ್ತವೆ. ಈ ರೀತಿಯ ಮಣ್ಣಿನ ಸವೆತಕ್ಕೆ 'ಕೊರಕಲು ಭೂಸವೆತ' ಎನ್ನುವರು.

ಇವುಗಳಲ್ಲದೆ ವೇಗವಾಗಿ ಯಾವುದೇ ಅಡೆತಡೆಯಿಲ್ಲದೆ ಬೀಸುವ ಗಾಳಿಯು ಒಣಹವಾಗುಣವಿರುವ ಮರುಭೂಮಿಗಳಲ್ಲಿ ಸಡಿಲವಾಗಿರುವ ಮರಳಿನ ಕಣಗಳನ್ನು ಸಾಗಿಸುವುದು ಅಲ್ಲದೆ ತೀರ ಪ್ರದೇಶಗಳಲ್ಲಿ ಸಮುದ್ರದ ಅಲೆಗಳು ಅಪಾರ ಪ್ರಮಾಣದ ಭೂ ಸವೆತವನ್ನು ಉಂಟುಮಾಡುತ್ತವೆ.

**ಮಣ್ಣಿನ ಸವೆತಕ್ಕೆ ಇತರ ಕಾರಣಗಳು :** ಮಣ್ಣಿನ ಸವೆತವು ದೇಶದ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಅಧಿಕವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ

1) ಅರಣ್ಯ ನಾಶ 2) ಸಾಕು ಪ್ರಾಣಿಗಳಿಗಾಗಿ ಮರಗಳ ಹರಣ 3) ಅವೈಜ್ಞಾನಿಕ ಬೇಸಾಯ 4) ನೀರಾವರಿಯ ಅಧಿಕ ಬಳಕೆ

**1. ಅರಣ್ಯನಾಶ :** ಇತ್ತೀಚಿನ ವರ್ಷಗಳಲ್ಲಿ ದೇಶದ ಅನೇಕ ಕಡೆಗಳಲ್ಲಿ ವ್ಯವಸಾಯ, ಕೈಗಾರಿಕೆ, ವಸತಿ, ಜಲಾಶಯ ನಿರ್ಮಾಣ, ರಸ್ತೆ-ರೈಲು ಮಾರ್ಗಗಳ ನಿರ್ಮಾಣ ಮುಂತಾದ ಉದ್ದೇಶಗಳಿಗಾಗಿ ಅರಣ್ಯಗಳನ್ನು ನಾಶಗೊಳಿಸಲಾಗುತ್ತಿದೆ. ಇದರಿಂದ ಮಣ್ಣಿನ ಸವೆತವು ಹೆಚ್ಚಾಗುತ್ತದೆ.

**2. ಸಾಕು ಪ್ರಾಣಿಗಳನ್ನು ಮೇಯಿಸುವುದು :** ಸಾಕು ಪ್ರಾಣಿಗಳಾದ ಕುರಿ, ಮೇಕೆ, ದನಕರುಗಳನ್ನು ಅತಿಯಾಗಿ ಮೇಯಿಸುವುದರಿಂದ ಸಸ್ಯಗಳು ನಾಶವನ್ನು ಹೊಂದಿ ಮಣ್ಣಿನ ಸವಕಳಿ ಉಂಟಾಗುತ್ತದೆ.

**3. ಅವೈಜ್ಞಾನಿಕ ಬೇಸಾಯ :** ಭಾರತದ ಅರಣ್ಯಗಳಲ್ಲಿ ಅನೇಕ ಕಡೆಗಳಲ್ಲಿ ಇಂದಿಗೂ ಸ್ಥಳಾಂತರ ಬೇಸಾಯವು ಕಂಡುಬರುವುದು. ಈ ಬೇಸಾಯ ಪದ್ಧತಿಯಲ್ಲಿ ಬೇಸಾಯಗಾರನು ವಿವಿಧ ಕಡೆಗಳಲ್ಲಿ ಅರಣ್ಯಗಳನ್ನು ಕಡಿದು ನಾಶಗೊಳಿಸಿ ಭೂಮಿಯಲ್ಲಿ ಉಳುಮೆ ಮಾಡುವುದರಿಂದ ಮಣ್ಣಿನ ಸವೆತವು ಅಧಿಕವಾಗುತ್ತದೆ.

**4. ಅತಿಯಾದ ನೀರಾವರಿಯ ಬಳಕೆ :** ನೀರಾವರಿಯು ಭಾರತದ ಬೇಸಾಯದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ. ನೀರನ್ನು ಅತಿಯಾಗಿ ಬಳಕೆ ಮಾಡುತ್ತಿರುವುದರಿಂದ ಭೂ ಸವೆತ ಉಂಟಾಗುತ್ತದೆ. ಹನಿ ನೀರಾವರಿ ಪದ್ಧತಿ ಮತ್ತು ತುಂತುರು ನೀರಾವರಿ ಪದ್ಧತಿಗಳಿಂದ ಸ್ವಲ್ಪ ಮಟ್ಟಿಗೆ ಮಣ್ಣಿನ ಸವೆತ ತಡೆಗಟ್ಟಬಹುದು.

**5) ಇತರೆ ಕಾರಣಗಳು :** ಇಟ್ಟಿಗೆ, ಹೆಂಚು ಮತ್ತು ಮಡಕೆ ತಯಾರಿಕೆ ಮುಂತಾದ ಕಾರಣಗಳಿಂದ ಭೂಮಿಯ ಮೇಲ್ಭಾಗದಲ್ಲಿರುವ ಮಣ್ಣು ನಾಶವಾಗಿ ಅನುಪಯುಕ್ತವಾದ ಮಣ್ಣು ಉಳಿದುಕೊಳ್ಳುವುದು.

**ಮಣ್ಣಿನ ಸವೆತದಿಂದಾಗುವ ಪರಿಣಾಮಗಳು :**

1. ನದಿಗಳಲ್ಲಿ ಹೂಳು ತುಂಬಿ ಪ್ರವಾಹಗಳುಂಟಾಗುತ್ತವೆ.
2. ನದಿಯ ಪಾತ್ರದಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ. ಇದರಿಂದ ಅಪಾರ ಹಾನಿಯಾಗುತ್ತದೆ.
3. ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ನೀರನ್ನು ಸಂಗ್ರಹಿಸುವ ಸಾಮರ್ಥ್ಯವು ಕಡಿಮೆಯಾಗುವುದು.
4. ಫಲವತ್ತಾದ ಮಣ್ಣು ಸವೆತದಿಂದ ಸಾಗಿಸಲ್ಪಡುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುವುದು. ಇದರಿಂದ ಉತ್ಪಾದನೆ ಕಡಿಮೆಯಾಗುತ್ತದೆ.
5. ಭೂ ಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗಿ ಅಂತರ್ಜಲ ಬತ್ತಿ ಹೋಗುತ್ತದೆ.

**ಮಣ್ಣಿನ ಸಂರಕ್ಷಣೆ ಮತ್ತು ನಿರ್ವಹಣೆ**

ಫಲವತ್ತತೆ ಕಡಿಮೆಯಾಗದಂತೆ ಸುಸ್ಥಿರ ರೀತಿಯಲ್ಲಿ ಮಣ್ಣನ್ನು ಬಳಕೆ ಮಾಡಿ, ನಿರಂತರವಾಗಿ ಬೆಳೆಗಳ ಉತ್ಪಾದನೆಯನ್ನು ಪಡೆಯುವುದೇ ಮಣ್ಣಿನ ನಿರ್ವಹಣೆಯಾಗಿದೆ. ಮಣ್ಣಿನ ಸವೆತವನ್ನು ತಡೆಗಟ್ಟುವ ವಿಧಾನಗಳೆಂದರೆ,

1) ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು ಇದರಿಂದ ನೀರಿನ ವೇಗ ಕಡಿಮೆಯಾಗಿ ಸವೆತದ ಪ್ರಮಾಣ ಕಡಿಮೆಯಾಗುವುದು. ಅಲ್ಲದೆ ನೀರು ಭೂಮಿಯಲ್ಲಿ ಇಂಗಲು ಸಹಾಯಕವಾಗುವುದು.

2) ಅಡ್ಡಬದುಗಳನ್ನು ನಿರ್ಮಿಸುವುದು ಇಳಿಜಾರಿಗೆ ಅಡ್ಡಲಾಗಿ ಬದುಗಳನ್ನು ನಿರ್ಮಿಸುವುದರಿಂದ ಹರಿಯುವ ನೀರಿನ ವೇಗವು ನಿಯಂತ್ರಿಸಲ್ಪಟ್ಟು, ಮಣ್ಣಿನ ಸವೆತವು ಕಡಿಮೆಯಾಗುವುದು.

3) ಅರಣ್ಯ ನಾಶವನ್ನು ತಡೆಗಟ್ಟುವುದು ಮತ್ತು ಅರಣ್ಯಗಳ ಬೆಳೆವಣಿಗೆಯನ್ನು ಪ್ರೋತ್ಸಾಹಿಸುವುದು.

4) ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ ಭೂಪ್ರದೇಶದ ಇಳಿಜಾರು ಅಧಿಕವಾಗಿದ್ದರೆ ಭೂ ಸವೆತದ ಪ್ರಮಾಣವು ಸಹ ಹೆಚ್ಚು. ಇದರಿಂದ ಇಳಿಜಾರನ್ನು ಕಡಿದು ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳನ್ನು ನಿರ್ಮಿಸುವುದರಿಂದ ಮಣ್ಣಿನ ಸವೆತವನ್ನು ತಡೆಗಟ್ಟಬಹುದು.

5) ಪ್ರಾಣಿಗಳನ್ನು ಮೇಯಿಸುವುದನ್ನು ನಿಯಂತ್ರಿಸುವುದು

6) ನೀರಿನ ಯೋಜಿತ ಬಳಕೆ ನೀರಾವರಿ ಪ್ರದೇಶಗಳಲ್ಲಿ ನೀರಿನ ಸರಿಯಾದ ಬಳಕೆ ಪ್ರವಾಹಗಳನ್ನು ನಿಯಂತ್ರಿಸುವುದು. ನೀರು ತುಂಬಿ ಜೌಗು ಪ್ರದೇಶಗಳು ನಿರ್ಮಿತವಾಗದಂತೆ ಎಚ್ಚರಿಕೆ ವಹಿಸುವುದು ಹಾಗೂ ರಾಸಾಯನಿಕಗಳನ್ನು ಬಳಸದೆ ಲವಣ ಮತ್ತು ಕ್ಷಾರಯುಕ್ತ ಮಣ್ಣಿನ ಪ್ರದೇಶಗಳನ್ನು ಬಳಸಿಕೊಳ್ಳುವುದು ಮಣ್ಣಿನ ಸಂರಕ್ಷಣೆಗೆ ಅವಶ್ಯಕವಾದ ಕ್ರಮಗಳಾಗಿವೆ.

7) ಚೆಕ್ ಡ್ಯಾಂಗಳ ನಿರ್ಮಾಣ ಮಣ್ಣಿನ ಸವೆತವನ್ನು ನಿಯಂತ್ರಿಸಲು ಅಡ್ಡಲಾಗಿ ಚೆಕ್ ಡ್ಯಾಂಗಳನ್ನು ನಿರ್ಮಿಸುವುದು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಸಣ್ಣ ಹಳ್ಳ, ತೊರೆಗಳಿಗೆ ನಿರ್ಮಿಸುವ ಸಣ್ಣ ಅಡ್ಡಕಟ್ಟೆಗಳನ್ನು ಚೆಕ್‌ಡ್ಯಾಂ ಎಂದು ಕರೆಯುವರು. ಇವುಗಳಿಂದ ಮಣ್ಣಿನ ಸವೆತವನ್ನು ತಡೆಗಟ್ಟುವುದಲ್ಲದೆ, ಮಳೆಯ ನೀರನ್ನು ಇಂಗಿಸಲೂ ಸಹ ಉಪಯುಕ್ತವಾಗಿವೆ. ಇದರಿಂದ ಸರ್ಕಾರವು ಜಲಾನಯನ ಪ್ರದೇಶಾಭಿವೃದ್ಧಿಯಲ್ಲಿ ಚೆಕ್‌ಡ್ಯಾಂಗಳ ನಿರ್ಮಾಣವನ್ನು ಅಳವಡಿಸಿಕೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಿದೆ.

ಮಣ್ಣು ತನ್ನ ಒಡಲಲ್ಲಿ ಅನೇಕ ಬಗೆಯ ಸೂಕ್ಷ್ಮಜೀವಿಗಳು ಮತ್ತು ಸಸ್ಯಗಳಿಗೆ ಆಶ್ರಯವನ್ನು ಒದಗಿಸಿದೆ. ಅಲ್ಲದೆ ಮಾನವನ ಅಭಿವೃದ್ಧಿಗೆ ಮಣ್ಣು ಸರ್ವರೀತಿಯಲ್ಲಿ ಉಪಯುಕ್ತವಾಗಿದೆ. ಅನ್ನ ಮತ್ತು ಚಿನ್ನವನ್ನು ಕೊಡುವ ಮಣ್ಣನ್ನು ಮಾನವನು ಅತಿಯಾದ ದುರಾಸೆಯಿಂದ ರಾಸಾಯನಿಕ ಗೊಬ್ಬರಗಳ ಬಳಕೆ, ಕೈಗಾರಿಕೆಯ ತ್ಯಾಜ್ಯ ವಸ್ತುಗಳು, ಅರಣ್ಯನಾಶ, ನೀರಾವರಿಯ ಅಧಿಕ ಬಳಕೆ ಮುಂತಾದ ಕ್ರಮಗಳಿಂದ ಮಣ್ಣನ್ನು ಮಲಿನಗೊಳಿಸಿ ಫಲವತ್ತತೆಯನ್ನು ಹಾಳು ಮಾಡುತ್ತಿರುವುದು ದುರದೃಷ್ಟಕರ ಸಂಗತಿ.

ಹೀಗೆ ಮಲಿನವಾಗಿ ಫಲವತ್ತತೆಯನ್ನು ಕಳೆದುಕೊಳ್ಳುತ್ತಿರುವ ಮಣ್ಣನ್ನು ಸಾವಯವ ಕೃಷಿ ಕ್ರಮದ ಮೂಲಕ ಕೃಷಿಯೋಗ್ಯ ಭೂಮಿಯನ್ನಾಗಿ ಮಾಡಬೇಕಿದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಸಾವಯವ ಕೃಷಿ ಮಿಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸಾವಯವ ಕೃಷಿ ಕೈಗೊಳ್ಳುವ ರೈತರಿಗೆ ಹಲವು ರಿಯಾಯಿತಿ ಮತ್ತು ಸೌಲಭ್ಯಗಳನ್ನು ಒದಗಿಸುತ್ತಿವೆ.

*ಎಂ.ಎಚ್.ಆರ್.*

**ಮತ್ತಿ ಮರ** ಔಷಧೀಯ ಗುಣದಿಂದಲೂ ಉತ್ತಮ ಚೌಬೀನೆಯಿಂದಲೂ ಪ್ರಸಿದ್ಧಿಯಾದ ಮರ. ಕಾಂಬ್ರಿಟೇಸೀ ಕುಟುಂಬಕ್ಕೆ ಸೇರಿದೆ. ಟರ್ಮಿನೇಲಿಯ ಎಂಬ ಪ್ರಭೇದದಲ್ಲಿ ಬಿಳಿ ಮತ್ತಿ, ಕರಿಮತ್ತಿ ಎಂದು ಎರಡು ಬಗೆಗಳಿವೆ. ಕಾಡುಬಾದಾಮಿ ಕುಟುಂಬಕ್ಕೆ ಹತ್ತಿರದ ಸಂಬಂಧಿ ಇದು.



ಬಿಳಿಮತ್ತಿ ಅಥವಾ ಹೊಳೆಮತ್ತಿ ನದಿದಡಗಳಲ್ಲಿ, ಹಳ್ಳಕೊಳ್ಳಗಳ ಇಕ್ಕೆಲಗಳಲ್ಲಿ ಸಡಿಲ ಗೋಡು ಮೆಕ್ಕಲು ಮಣ್ಣುಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಸದಾ ಹಸುರಾಗಿರುವ ಬೃಹತ್‌ಗಾತ್ರದ ಮರ. ಸ್ವಾಭಾವಿಕವಾಗಿ ಬೆಳೆಯುವ ಇದನ್ನು ಉತ್ತಮ ನೆರಳಿಗಾಗಿ ಮತ್ತು ಆಲಂಕಾರಿಕ ಸಸ್ಯವಾಗಿ ಬೆಳೆಸುವುದುಂಟು. ಭಾರತದ ಎಲ್ಲ ಭಾಗಗಳಲ್ಲಿಯೂ ಬೆಳೆಯುತ್ತದೆ. ಪಂಜಾಬ್, ಒಡಿಶಾ, ಪಶ್ಚಿಮ ಕರಾವಳಿ, ಹಿಮಾಲಯ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಇದರ ಕೃಷಿ ಹೆಚ್ಚು. ಇದರ ಕಾಂಡ ಬೂದು ಅಥವಾ ನಸುಗೆಂಪು ಮಿಶ್ರಿತ ಹಸುರುಬಣ್ಣದ್ದು. ಬುಡದ ಭಾಗ ಏಣುಗಳ ಹಾಗೆ ಅಗಲವಾಗಿ ಹರಡಿಕೊಂಡಿದ್ದು ತೊಗಟೆ ತುಸು ಮಂದ. ಮರ ಬಲಿತಂತೆ ತೊಗಟೆ ಸಿಪ್ಪೆಯಂತೆ ಒಣಗಿ ಉದುರುತ್ತದೆ. ಎಲೆಗಳು ಅಂಡಾಕಾರವಾಗಿದ್ದು ಅಭಿಮುಖವಾಗಿ ಜೋಡಣೆಗೊಂಡಿರುತ್ತವೆ. ಹೂಗಳು ಸಣ್ಣವಾಗಿದ್ದು ಗೊಂಚಲುಗೊಂಚಲಾಗಿರುತ್ತವೆ. ಹಣ್ಣಿನ ಹೊರಭಾಗ ರೆಕ್ಕೆಗಳಂತೆ ರಚನೆಗೊಂಡಿರುತ್ತದೆ. ಬೀಜದಿಂದ ಸಸ್ಯಾಭಿವೃದ್ಧಿ ಆಗುತ್ತದೆಯಾದರೂ ಕಾಂಡವನ್ನು ತುಂಡರಿಸಿ ನೆಟ್ಟು ಸಸ್ಯಾಭಿವೃದ್ಧಿ ಮಾಡಬಹುದು. ಇದರ ಚೌಬೀನೆ ಸಾಧಾರಣ ಬಾಳಿಕೆ ಬರುವುದರಿಂದ ಹೆಚ್ಚು ಕಾಲ ಸಂಸ್ಕರಿಸಿಡಲು ಆಗುವುದಿಲ್ಲ. ನೀರಿನ ಬಾನಿ, ಗಾಡಿ, ಗಣೆಯ ಆಸರೆ ಕಂಬ ಹಾಗೂ ಆಲಂಕಾರಿಕ ಹಲಗೆಗಳ ತಯಾರಿಕೆಯಲ್ಲಿ ಇದರ ಉಪಯೋಗವಿದೆ.

ಚರ್ಮ ಹದ ಮಾಡಲು ಕೂಡ ಇದರ ತೊಗಟೆ ಉಪಯುಕ್ತ. ಒಂದು ಬಗೆಯ ರೇಷ್ಮೆ ಹುಳುಗಳಿಗೆ ಇದರ ಎಲೆ ಆಹಾರವಾಗಿ ಬಳಕೆಯಾಗುತ್ತದೆ.

**ಕರಿಮತ್ತಿ ಅಥವಾ ಕೊರಮತ್ತಿ :** ರಾಜಸ್ಥಾನ, ಪಂಜಾಬ್‌ಗಳನ್ನು ಹೊರತುಪಡಿಸಿ ಭಾರತದ ಎಲ್ಲಾ ಭಾಗಗಳಲ್ಲೂ ಬೆಳೆಯುತ್ತದೆ. ಚೌಬೀನೆಗೆ ಬಿಳಿಮತ್ತಿ ಮರಕ್ಕಿಂತ ಇದು ಹೆಚ್ಚು ಉಪಯುಕ್ತ. ಅನೇಕ ವರ್ಷಗಳಿಂದ ಇದನ್ನು ಸಾರ್ವತ್ರಿಕವಾಗಿ ಬಳಸಲಾಗುತ್ತಿದೆ. 120-180 ಅಡಿ ಎತ್ತರದವರೆಗೂ ಬೆಳೆಯಬಲ್ಲ ಬೃಹತ್‌ಗಾತ್ರದ ಮರ. ವಾಣಿಜ್ಯದ ದೃಷ್ಟಿಯಿಂದ ಇದನ್ನು ಲಾರೆಲ್ ಎಂದು ಕರೆಯುವುದಿದೆ. ತೇಗ ಮತ್ತು ಸಾಲ್ ಮರಗಳನ್ನು ಬಿಟ್ಟರೆ ಬಾಳಿಕೆಯಲ್ಲಿ ಇದಕ್ಕೆ ಎರಡನೆಯ ಸ್ಥಾನ. ವಿದ್ಯುತ್ ತಂತಿಯ ಹೊದಿಕೆಪಟ್ಟಿ, ಗಾಡಿ, ಬೊಂಬೆ, ಕಟ್ಟಡದ ಮರಮುಟ್ಟುಗಳು, ರೈಲು ಬೋಗಿಗಳು, ಕೃಷಿ ಉಪಕರಣಗಳು, ಎಣ್ಣೆಗಾಣ ತಯಾರಿಸುವಲ್ಲಿ ಇದರ ಬಳಕೆ ಹೆಚ್ಚು. ಸರಿಯಾದ ರೀತಿಯಲ್ಲಿ ಸಂಸ್ಕರಿಸಿ ಬಳಸಿದರೆ ಕರಿಮತ್ತಿ ಚೌಬೀನೆ ಮನೆ ಕಟ್ಟಡಕ್ಕೂ ಬರುತ್ತದೆ. ಕಾಗದ, ರೆಯಾನ್ ತಯಾರಿಕೆ, ಅಗ್ನಿ ನಿರೋಧಕ ಉಪಕರಣ ತಯಾರಿಕೆ, ಹತ್ತಿ, ಉಣ್ಣೆ, ರೇಷ್ಮೆ ಬಟ್ಟೆಗಳಿಗೆ ಬಣ್ಣ ಕಟ್ಟಲು ಇದರ ಉಪಯೋಗವಿದೆ. ಇದರಿಂದ ಉತ್ತಮ ಗೋಂದು ಲಭ್ಯ. ತೊಗಟೆಯನ್ನು ಕಷಾಯ ಮಾಡಿ ಕರುಳಿನ ಹುಣ್ಣು, ಅತಿಸಾರಕ್ಕೆ ಕೊಡುವುದುಂಟು.



ದಕ್ಷಿಣ ಭಾರತದಲ್ಲಿ ಮತ್ತಿಮರವನ್ನು ದೈವಸ್ವರೂಪವೆಂದು ಭಾವಿಸಿ ಪೂಜಿಸಲಾಗುತ್ತದೆ. ನದಿ ದಡದಲ್ಲಿರುವ ಮರವನ್ನು ಕಡಿಯುವುದಾಗಲಿ, ರೆಂಬೆ ಕೊಂಬೆಗಳನ್ನು ಬೇರೆ ಕೆಲಸಗಳಿಗೆ ಬಳಸುವುದಾಗಲಿ ಪಾಪವೆಂದು ಜನ ಭಾವಿಸುವರು. ಸರ್ಪಸುತ್ತು ಹಾಗೂ ಇನ್ನಿತರ ಚರ್ಮಸಂಬಂಧಿ ಕಾಯಿಲೆಗಳಿಗೆ ಮತ್ತಿ ಚಕ್ಕೆಯ ಪುಡಿ ಸಿದ್ಧೌಷಧ.

***ಜೆ.ಎಸ್.***

**ಮದಕಗಳು** ಎರಡು ಗುಡ್ಡಗಳ ಇಳುಕಲುಗಳು ಸೇರಿ ಕಣಿವೆಯಾಗುವಲ್ಲಿ, ಎರಡೂ ಗುಡ್ಡಗಳ ತಪ್ಪಲನ್ನು ಅಡ್ಡಗಟ್ಟಿ ಮದಕಗಳನ್ನು ಕೆರೆಗಳನ್ನು ನಿರ್ಮಿಸುವುದು ಕಾಸರಗೋಡು ಪ್ರದೇಶದಲ್ಲಿ ಸರ್ವೇ ಸಾಮಾನ್ಯ. ಗುಡ್ಡಗಳ ಇಳುಕಲುಗಳು ಸೇರುವಲ್ಲಿ ನೀರಿನ ತಾಣಗಳನ್ನು ಗುರುತಿಸಿ, ಆ ನೀರನ್ನು ಅಲ್ಲೇ ಕೆಳಗೆ ಸಂಗ್ರಹಿಸಿಡಲು ಕೆರೆಗಳನ್ನು ಬಳಸಲಾಗುತ್ತದೆ. ಇಂತಹ ಕೆರೆಗಳು ಸಾಮಾನ್ಯವಾಗಿ ಮನೆಗಳ ಮಟ್ಟಕ್ಕಿಂತ ಕೆಳಗೆ, ಕೃಷಿಭೂಮಿಯಿಂದ ಮೇಲೆ ನಿರ್ಮಾಣಗೊಂಡಿರುತ್ತವೆ. ಕಣಿವೆಗೆ ಅಡ್ಡಲಾಗಿ ಕಟ್ಟಿದ ಕಟ್ಟೆ ಸಾಕಷ್ಟು ನೀರನ್ನು ಸಂಗ್ರಹಿಸಿಡುವ ಸಾಮರ್ಥ್ಯ ಹೊಂದಿರುತ್ತದೆ. ಗುಡ್ಡದ ಇಳುಕಲಿನ ಸ್ವರೂಪವನ್ನು ಅನುಸರಿಸಿ ಒಂದು, ಎರಡು, ಮೂರು ಅಥವಾ ನಾಲ್ಕೂ ಬದಿಗಳಿಂದ ಕಟ್ಟೆಯನ್ನು ಕಟ್ಟಲಾಗುತ್ತದೆ.

ಇಂತಹ ಕೆರೆಗಳಲ್ಲಿ ಸಂಗ್ರಹವಾದ ನೀರನ್ನು ಹೊರಗೆ ಬಿಡಲು ಅಡಕೆ ಮರದಿಂದ ತಯಾರಿಸಿದ ತೂಬುಗಳನ್ನು ಬಳಸುತ್ತಾರೆ. ಕಟ್ಟೆಯ ಅಗಲಕ್ಕಿಂತ ನಾಲ್ಕಡಿ ಹೆಚ್ಚು ಉದ್ದದ, ಗಟ್ಟಿಯಾದ ಅಡಕೆ ಮರದ ತುಂಡನ್ನು ಸಂಗ್ರಹಿಸಿ, ಅದರ ಬುಡದಿಂದ ಒಂದಡಿ ಮೇಲೆ ಕಾಲುಭಾಗ ಕತ್ತರಿಸಿ, ತುದಿಯ ವರೆಗಿನ ಒಂದು ಸಲಿಕೆಯನ್ನು ಎಬ್ಬಿಸಿ, ಒಳಭಾಗವನ್ನು ಸ್ವಚ್ಛಗೊಳಿಸಲಾಗುತ್ತದೆ. ಆಮೇಲೆ, ಎಬ್ಬಿಸಿದ ಸಲಿಕೆಯನ್ನು ಪುನಃ ಜೋಡಿಸಿ ಕಟ್ಟೆಗೆ ಅಳವಡಿಸುತ್ತಾರೆ. ಕಟ್ಟೆಯ ಬುಡದಿಂದ ತುದಿಯವರೆಗೆ, ಪ್ರತಿ ಎರಡೂವರೆ ಅಡಿಗೆ ಒಂದರಂತೆ ಇಂತಹ ತೂಬುಗಳನ್ನಿಟ್ಟು, ಕೊಳೆತ ಬಾಳೆಯ ನಾರು ಹಾಗೂ ಮರದ ಮುಚ್ಚಳದ ಸಹಾಯದಿಂದ ಒಂದಷ್ಟು ನೀರೂ ಹೊರಹೋಗದಂತೆ ತೂಬುಗಳನ್ನು ಮುಚ್ಚಲಾಗುತ್ತದೆ. ಕೆರೆಯ ನೀರನ್ನು ತೂಬುಗಳ ಸಹಾಯದಿಂದ ಮಣ್ಣಿನ ದಂಡೆಗಳ ಮೂಲಕ ತೋಟಕ್ಕೆ ಹಾಯಿಸಲಾಗುತ್ತದೆ.

ಸಾಂಪ್ರದಾಯಿಕವಾಗಿ ಅಡಕೆ ಮರದ ಹಾಳೆಗಳಿಂದ ಮಾಡಿದ 'ಕಿಳ್ಳಿ'ಗಳ ಸಹಾಯದಿಂದ ಹೆಂಗಸರೂ, ಗೇರು ಮರದಿಂದ ತಯಾರಿಸಿದ ದಂಬೆಗಳ ಸಹಾಯದಿಂದ ಗಂಡಸರೂ ಅಡಕೆ ತೋಟಗಳಿಗೆ ನೀರು ಹಾಯಿಸುತ್ತಿದ್ದರು.

ಮದಕಗಳು ಕೆರೆಗಳು ನೀರಿನ ಮೂಲಗಳಾಗಿರುವುದಕ್ಕಿಂತ ಹೆಚ್ಚು ನೀರನ್ನು ಸಂಗ್ರಹಿಸುವ ಕೇಂದ್ರಗಳಾಗಿಯೇ ಬಳಕೆಯಾಗುತ್ತವೆ. ಮೇಲೆ ಯಾವುದೋ ಮೂಲದಿಂದ ಹರಿದುಬರುವ ನೀರನ್ನು ಸಂಗ್ರಹಿಸಿಡುವುದು ಇವುಗಳ ಉದ್ದೇಶ. ಕೆರೆಯ ಕಟ್ಟೆ ಹಲವು ವರ್ಷ ಬಾಳಿಕೆ ಬರುವುದಿದ್ದರೂ ಅದರ ಒಳಭಾಗದ ಮೇಲ್ಪದರವನ್ನು ಪ್ರತೀ ವರ್ಷ ಮಳೆಗಾಲ ಮುಗಿದ ತಕ್ಷಣ ಕೆತ್ತಿ ತೆಗೆದು ಪುನಃ ಮೆತ್ತಲಾಗುತ್ತದೆ. ನೀರಿನ ಸೋರಿಕೆಯನ್ನು ತಡೆಯುವುದು ಇದರ ಉದ್ದೇಶ. ದೊಡ್ಡ ಕೆರೆಗಳಾಗಿದ್ದರೆ ಅವುಗಳ ಕೆಳಗೆ ಇನ್ನೊಂದು ಕೆರೆಯನ್ನು ಕಟ್ಟಿ ಸೋರಿದ ಮತ್ತು ಹೆಚ್ಚುವರಿ ನೀರನ್ನು ಅದರಲ್ಲಿ ಸಂಗ್ರಹಿಸುವುದೂ ಉಂಟು.

***ಆರ್. ಕೆ. ಬಿ.***

**ಮರಗೆಣಸು** ಯುಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಮರಗೆಣಸನ್ನು ಮ್ಯಾನಿಹಾಟ್ ಎಸ್ಕ್ಯುಲೆಂಟಾ ಕೇಮ್ಟ್ ಎಂದು ಕರೆಯುತ್ತಾರೆ.

ಇದು ದಕ್ಷಿಣ ಅಮೆರಿಕದ ಪೆರು ದೇಶದಲ್ಲಿ ಕ್ರಿ.ಪೂ. 1000 ದಿಂದಲೂ ಕೃಷಿಯಲ್ಲಿತ್ತೆಂದು ತಿಳಿದುಬರುತ್ತದೆ. ಇದರಲ್ಲಿ ಎರಡು ವಿಧಗಳಿವೆ. ಅದೆಂದರೆ ಕಹಿ ಮತ್ತು ಸಿಹಿ. ಮೊದಲನೆಯದನ್ನು ತುರಿದು ನೀರಿನಲ್ಲಿ ತೊಳೆದು ಒಣಗಿಸಿ ಅನಂತರ ತಿನ್ನುತ್ತಾರೆ. ಎರಡನೆಯದನ್ನು ನೇರವಾಗಿ ತಿನ್ನುತ್ತಾರೆ. ಭಾರತದಲ್ಲಿ ಸಿಹಿ ಗೆಣಸನ್ನು ಮಾತ್ರ ಬೆಳೆಯುತ್ತಾರೆ.

ಗಿಡದ ನಿಲುವು ಸಣ್ಣ ಮರದಂತೆ ಇದ್ದು ಉಳಿದ ಬೇರುಗಳು ಸಿಹಿ ಗೆಣಸಿನ ರೂಪವನ್ನು ಹೋಲುತ್ತವೆ. ಆದರಿಂದ ಮರಗೆಣಸು ಎಂದು ಕರೆಸಿಕೊಂಡಿದೆ. ಈಸ್ಟ್‌ಇಂಡಿಯಾ ಕಂಪನಿಯವರ ಮೂಲಕ 18 ನೇ ಶತಮಾನದಲ್ಲಿ ಭಾರತಕ್ಕೆ ಇದರ ಆಗಮನವಾಯಿತು. 1794ರಲ್ಲಿ ಕಲ್ಕತ್ತೆಯ ಸರಕಾರಿ ತೋಟದಲ್ಲಿ ಮರಗೆಣಸಿನ ಕಾಂಡಗಳನ್ನು ನೆಡಲಾಯಿತು. ಇಲ್ಲಿ ಉತ್ಪತ್ತಿಯಾದ ಗಿಡಗಳನ್ನು 1814ರಲ್ಲಿ ಅಸ್ಸಾಂ, ಮಲಯ ಪ್ರದೇಶಗಳಲ್ಲಿ ಕೃಷಿ ಮಾಡಲಾಯಿತು. ಅದೇ ಸುಮಾರಿಗೆ ಅದು ಪೂರ್ವ ತೀರ ಮತ್ತು ಕೇರಳವನ್ನು ತಲುಪಿತು. ಎತ್ತರದ ಮರದ ರೀತಿಯ ನಿಲುವಿನಿಂದ ಪಶ್ಚಿಮ ಘಟ್ಟಗಳಲ್ಲೆಲ್ಲಾ ಬೆಳೆದು ಅಧಿಕ ಇಳುವರಿಯನ್ನು ಕೊಟ್ಟಿತು.

**ಹವಾಗುಣ :** ಎಲ್ಲಾ ವಿಧದ ಮಣ್ಣುಗಳಲ್ಲಿ ಬೆಳೆಯುವ ಗುಣವನ್ನು ಗೆಣಸು ಹೊಂದಿದ್ದರೂ ಮರಳು ಮಿಶ್ರಿತ ಗೋಡು ಮಣ್ಣು ಅತ್ಯುತ್ತಮ. ಇದು ಉಷ್ಣ ವಾತಾವರಣವನ್ನು ಬಯಸುವ ಬೆಳೆ. ಸಾಮಾನ್ಯವಾಗಿ ಜೂನ್-ಜುಲೈ ತಿಂಗಳಲ್ಲಿ ಇದನ್ನು ನಾಟಿ ಮಾಡುತ್ತಾರೆ.

**ಬೇಸಾಯ :** ಚೆನ್ನಾಗಿ ಹದಮಾಡಿ ಸಿದ್ಧಪಡಿಸಿದ ಭೂಮಿಗೆ ಒಂದು ಎಕರೆಗೆ ಎಂಟರಿಂದ ಹತ್ತುಗಾಡಿ ಕೊಟ್ಟಿಗೆಗೊಬ್ಬರ ಮತ್ತು ಸ್ವಲ್ಪ ರಾಸಾಯನಿಕ ಗೊಬ್ಬರವನ್ನು ಒದಗಿಸಿ ಚೆನ್ನಾಗಿ ಮಿಶ್ರ ಮಾಡಬೇಕು. ಅನಂತರ ಮೂರು ಅಡಿ ಅಂತರದಲ್ಲಿ ಒಂದೊಂದು ಕಾಂಡವನ್ನು ನಾಟಿ



ಮಾಡಿ ತೆಳುವಾಗಿ ನೀರು ಕೊಡಬೇಕು. ಈ ರೀತಿ ನಾಟಿ ಮಾಡಲು ಎಕರೆಗೆ 5000 ಕಾಂಡದ ತುಂಡುಗಳು ಬೇಕಾಗುತ್ತವೆ. 8-15 ದಿನಗಳಿಗೊಮ್ಮೆ ನೀರು ಕೊಟ್ಟರೆ ಸಾಕು. ನಾಟಿ ಮಾಡಿದ 8 ಮತ್ತು 10 ವಾರಗಳ ಬಳಿಕ ಮೇಲುಗೊಬ್ಬರವನ್ನು ಕೊಡಬೇಕು. ಭೂಮಿ ಅಥವಾ ಹವಾಗುಣದ ಅಂಶಗಳನ್ನವಲಂಬಿಸಿ ನೀರು ಕೊಡಬೇಕು. ಗಿಡ ಬೆಳೆದ ಮೇಲೆ ಭೂಮಿಯನ್ನು ಸಡಿಲಮಾಡಿ ತೆಳುವಾದ ರೆಂಬೆಗಳನ್ನು ಕತ್ತರಿಸಿ ದೃಢವಾದ ನಾಲ್ಕು ರೆಂಬೆಗಳನ್ನು ಮಾತ್ರ ಉಳಿಸಿಕೊಳ್ಳಬೇಕು. ಈ ಬೆಳೆಯನ್ನು ಬಾಳೆ ತರಕಾರಿಗಳು ಮತ್ತು ಜೋಳದ ಜೊತೆ ಪರ್ಯಾಯವಾಗಿ ಬೆಳೆಸಲು ಸಾಧ್ಯ. ಗೆಣಸಿನ ಬೆಳೆಯೊಂದಿಗೆ ಕಡಲೆಕಾಯಿ, ಅಲಸಂದೆ ಅಥವಾ ತಿಂಗಳ ಹುರುಳಿಯನ್ನು ಅಂತರ ಬೆಳೆಗಳಾಗಿಯೂ ಬೆಳೆಯುತ್ತಾರೆ.

**ಸಂರಕ್ಷಣೆ :** ಈ ಬೆಳೆಗೆ ಮರಗೆಣಸಿನ ಮೊಸಾಯಿಕ್ ರೋಗ ಕಾಣಿಸಿಕೊಂಡು ಎಲೆಗಳು ವಿವರ್ಣಗೊಳ್ಳುತ್ತವೆ. ಇದು ನಂಜು ರೋಗವಾಗಿದ್ದು, ನಿಯಂತ್ರಣ ಅಸಾಧ್ಯ.ಆದ ಕಾರಣ ರೋಗಪೀಡಿತ ಸಸಿಗಳನ್ನು ಕಿತ್ತು ಸುಟ್ಟುಹಾಕಬೇಕು.

ಎಲೆಚುಕ್ಕಿ ರೋಗವೂ ಈ ಗಿಡಕ್ಕೆ ತಗುಲಿ ಎಲೆ ಕಂದು ಬಣ್ಣಕ್ಕೆತಿರುಗಿ ಉದುರಿ ಹೋಗುತ್ತದೆ. ಇವಲ್ಲದೆ ಕೆಂಪು ಜೇಡರ, ತಿಗಣೆ ಮತ್ತು ಶಲ್ಕ ಕೀಟದ ಬಾಧೆಯೂ ಇದಕ್ಕಿದೆ. ಅದರಿಂದ ಒಳ್ಳೆಯ ತಳಿಯ ಹಾಗೂ ಉತ್ತಮಕಾಂಡಗಳನ್ನು ಬಿತ್ತನೆಮಾಡುವುದರಿಂದ ರೋಗಗಳನ್ನು ದೂರವಿರಿಸಬಹುದು.

**ಇಳುವರಿ :** ಬೆಳೆ ನಾಟಿಮಾಡಿದ 9-10 ತಿಂಗಳಲ್ಲಿ ಕೊಯ್ಲಿಗೆ ಸಿದ್ಧವಾಗುತ್ತದೆ. ಕೊಯ್ಲಿಗೆ ಬಂದಾಗ ಸಾಮಾನ್ಯವಾಗಿ ಭೂಮಿ ಬಿರುಕುಬಿಡುತ್ತದೆ. ಆ ಸಂದರ್ಭದಲ್ಲಿ ಗೆಣಸನ್ನು ಎಚ್ಚರಿಕೆಯಿಂದ ಅಗೆದು ತೆಗೆಯುತ್ತಾರೆ. ಕೆಲವರು ಗಿಡವನ್ನು ಕತ್ತರಿಸಿ ಗೆಡ್ಡೆತೆಗೆದರೆ, ಇನ್ನು ಕೆಲವರು ಗಿಡವನ್ನು ಹಾಗೆಯೇ ಉಳಿಸಿಕೊಳ್ಳುತ್ತಾರೆ. ಸುಧಾರಿತ ತಳಿಗಳಾದರೆ ಪ್ರತಿ ಎಕರೆಗೆ 16 ಟನ್‌ಗಳವರೆಗೂ ಸ್ಥಳೀಯ ತಳಿಗಳಾದರೆ 5 ರಿಂದ 6 ಟನ್‌ಗಳ ವರೆಗೂ ಇಳುವರಿ ಕೊಡಬಲ್ಲವು.

ಕೇರಳೀಯರ ಜೀವನದಲ್ಲಿ ಮರಗೆಣಸು ಹಾಸುಹೊಕ್ಕಾಗಿದ್ದು, ಅವರ ಆಹಾರ ಪದ್ಧತಿಗಳಲ್ಲಿ ಒಂದಾಗಿ ಹೋಗಿದೆ. ಬೇರುಗಳನ್ನು ತುಂಡುಗಳಾಗಿಯೋ ಹಿಟ್ಟಿನ ರೂಪುವಾಗಿಯೋ ಒಣಗಿಸಿ ತಿಂಗಳು ಗಟ್ಟಲೆ ದಾಸ್ತಾನುಮಾಡಿಕೊಂಡು ಮಳೆಗಾಲದಲ್ಲಿ ರೊಟ್ಟಿ, ಪುಟ್ಟು, ಆಪ್ಪಂ ಮುಂತಾದ ತಿಂಡಿಗಳನ್ನು ತಯಾರಿಸಿಕೊಳ್ಳುತ್ತಾರೆ. ಇದರಿಂದ ಸೇಗೋ ಅಕ್ಕಿ ತಯಾರಿಸಿ ರುಚಿಯಾದ ಪಾಲ್‌ಪಾಯಸಂ ಮುಂತಾದುವನ್ನು ಮಾಡುತ್ತಾರೆ. ಸಿಹಿಗೆಣಸಿನಂತೆ ಇದನ್ನು ಸುಟ್ಟು ಇಲ್ಲವೆ ಬೇಯಿಸಿ ಸೇವನೆ ಮಾಡಬಹುದು. ಇದರಿಂದ ಚಿಪ್ಸ್ ಪಲ್ಯ ಮುಂತಾದ ಅಡುಗೆಗಳನ್ನು ಮಾಡುತ್ತಾರೆ. ಇದು ಬರವನ್ನೆದುರಿಸಿ ಬೆಳೆಯುವ ಗುಣಹೊಂದಿದ್ದು ನಿಂತ ನೀರನ್ನು ಸಹಿಸಲಾರದು.

**ಮರಬಳ್ಳಿ ಗೆಣಸು :** 'ಡಯಸ್ಕೋರಿಯ' ಎಂಬ ವೈಜ್ಞಾನಿಕ ಹೆಸರನ್ನು ಹೊಂದಿರುವ ಮರಬಳ್ಳಿ ಗೆಣಸು ಐದಾರು ಒಳ ಜಾತಿಗಳನ್ನು ಒಳಗೊಂಡಿದೆ. ತಮಿಳಿನಲ್ಲಿ ಇದನ್ನು 'ಚಕ್ಕರೆಕ್ಕಿಳಂಗ್' ಎಂದು ಕರೆಯುತ್ತಾರೆ. ಇವೆಲ್ಲವೂ ನೆಲದೊಳಗಿನ ಗೆಡ್ಡೆಯಿಂದ ಬಿಡುವಂಥವು. ಕೆಲವು ಜಾತಿಯವು ವಿಷಗೆಡ್ಡೆಗಳಾಗಿದ್ದು ಅವು ತಿನ್ನಲು ಯೋಗ್ಯವಲ್ಲ.ಉಳಿದಂತೆಇತರೆ ಜಾತಿಯ ಗೆಣಸುಗಳನ್ನು ಆಹಾರವಾಗಿ



ಉಪಯೋಗಿಸುತ್ತಾರೆ. ಮಲೆನಾಡು ಜನರು ಇದನ್ನು ಹೆಚ್ಚಾಗಿ ಬಳಸುತ್ತಾರೆ. ಇವುಗಳಲ್ಲಿ ಒಂದು ಜಾತಿ ನಾಲ್ಕೈದಡಿ ಉದ್ದ, ಒಂದಡಿ ವ್ಯಾಸದ ಕಂಬದ ರೂಪದಲ್ಲಿರುತ್ತದೆ. ಮಾರುಕಟ್ಟೆಗಳಲ್ಲಿ ಇದನ್ನು ಇಟ್ಟುಕೊಂಡು ಗ್ರಾಹಕರಿಗೆ ಒಂದೊಂದು ಹೆಳಕೆಯಂತೆ ಚಾಕುವಿನಿಂದ ಕತ್ತರಿಸಿ ಕೊಡುತ್ತಾರೆ. ಇದು ಉಷ್ಣಕ್ಕೆ, ಪಿತ್ತಕ್ಕೆ, ವಾಯು ಮತ್ತು ತಲೆಶೂಲೆಗೆ ಒಳ್ಳೆಯದು.

ಪಶ್ಚಿಮ ಘಟ್ಟದ ಕಾಡುಗಳಲ್ಲಿ ಹಾಗೂ ಆಂಧ್ರಪ್ರದೇಶಕ್ಕೆ ಸೇರಿದ ಪೂರ್ವಘಟ್ಟಗಳಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ. ಎಲ್ಲ ಗಿಡಗಳ ಗೆಡ್ಡೆಗಳೂ ಒಂದೇ ರೂಪದಲ್ಲಾಗಲೀ ಗಾತ್ರದಲ್ಲಾಗಲೀ ಸಿಗುವುದಿಲ್ಲ. ರೂಪ, ಗಾತ್ರ ಭೇದಗಳು ಬಹುತರವಾದವು. ಅಪರೂಪವಾಗಿ ಈ ಗೆಡ್ಡೆಯ ಎತ್ತರ ಏಳು ಅಡಿಯವರೆಗೂ ಬೆಳೆಯಬಹುದು. ವ್ಯಾಸ ಒಂದು ಕಾಲು ಅಡಿ, ತೂಕ 130 ರಿಂದ 150 ಪೌಂಡುಗಳಷ್ಟು, ಸುಲಭವಾಗಿ ಒಣಗಿ ಹೋಗುವಂಥ ಗೆಡ್ಡೆ ಇದಲ್ಲ. ಆರೇಳು ತಿಂಗಳು ಹಸಿಯಾಗಿಯೇಇರುತ್ತದೆ. ರುಚಿ ಸ್ವಲ್ಪ ಸಿಹಿಯಾಗಿದ್ದರೂ ಬಹುವಾಗಿ ಸಪ್ಪೆಯ ಛಾಯೆಯನ್ನೇ ಹೊಂದಿರುತ್ತದೆ.

*ಎನ್.ಆರ್.*

**ಮರಸೇಬು** ಆಹಾರವಾಗಿ ಉಪಯೋಗಿಸುವ ಹಣ್ಣುಗಳ ಪೈಕಿ ಒಂದು. ರೋಸೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಪೈರಸ್ ಕಮ್ಯೂನಿಸ್. ಇಂಗ್ಲಿಷ್‌ನಲ್ಲಿ ಇದನ್ನು ಬೇರಿ ಎನ್ನುತ್ತಾರೆ. ವಾಣಿಜ್ಯ ದೃಷ್ಟಿಯಿಂದ ಕಮ್ಯೂನಿಸ್ ಮತ್ತು ಸೇವ ಮುಖ್ಯ ಎನಿಸಿದರೂ ಇದರಲ್ಲಿ ಇನ್ನೂ ಹಲವು ಬಗೆಗಳಿವೆ.

**1. ಸ್ವಾಭಾವಿಕವಾಗಿ ಬೆಳೆಯುವಂಥದು :** ಇದು ಮಧ್ಯ ಮತ್ತು ದಕ್ಷಿಣ ಯುರೋಪ್, ಏಷ್ಯಾಮೈನರ್, ಕಾಕಸಸ್, ಉತ್ತರ ಇರಾನ್ ಮೊದಲಾದೆಡೆಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಕಾಡುಜಾತಿಯೆಂದು ಗುರುತಿಸುವ ಇದರಲ್ಲಿ ಮುಳ್ಳುಗಳಿರುತ್ತವೆ.

**2. ಕೃಷಿ ಮಾಡಿ ಬೆಳೆಯುವಂಥವು :** ಈ ಜಾತಿ ಮರಗಳಲ್ಲಿ ಮುಳ್ಳುಗಳಿರುವುದಿಲ್ಲ. ಇದರ ಎಲೆ ಅಗಲವಾಗಿದ್ದು ಹೂಗಳು ಮತ್ತು ಹಣ್ಣುಗಳು ರಸಭರಿತವಾಗಿರುತ್ತವೆ. ಇದರ ಮೂಲ ಸ್ಥಾನ ಯುರೋಪ್.



ಈ ಬಗೆಯ ಮರಸೇಬಿನಲ್ಲಿ ಐದು ಸಾವಿರಕ್ಕೂ ಹೆಚ್ಚು ಪ್ರಭೇದಗಳಿವೆ. ಪ್ರಮುಖವಾಗಿ ಜರ್ಮನಿ, ಇಟಲಿ, ಫ್ರಾನ್ಸ್, ಸ್ವಿಟ್ಜರ್‌ಲೆಂಡ್, ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಜಪಾನ್ ದೇಶಗಳಲ್ಲಿ ಇದರ ಬೇಸಾಯವಿದೆ. ಭಾರತದಲ್ಲಿ ಪಂಜಾಬ್, ಕಾಶ್ಮೀರ, ಹಿಮಾಚಲಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಅಧಿಕವಾಗಿಯೂ ದೆಹಲಿ, ಉತ್ತರ ಪ್ರದೇಶ, ಅಸ್ಸಾಂ ಮತ್ತು ಬಂಗಾಳಗಳಲ್ಲಿ ಅಲ್ಪ ಪ್ರಮಾಣದಲ್ಲಿಯೂ ಇದರ ಕೃಷಿ ಇದೆ. ಈ ಪ್ರದೇಶಗಳಲ್ಲಿ ಮುಖ್ಯವಾಗಿ ಬಾಗುಗೋಷ, ಬಾರ್ಟ್ಲೆಟ್, ಕಾನ್ಫರೆನ್ಸ್, ಮೇರಿ ಲೂಯಿಸ್, ತಾಮ್ಸನ್ಸ್, ವಿಂಟರ್‌ನೇಲಿಸ್ ತಳಿಗಳು ಕೃಷಿಯಲ್ಲಿವೆ.

ಮರಸೇಬು ಛತ್ರಿಯಾಕಾರದ ಮಧ್ಯಮ ಗಾತ್ರದ ಮರ. ಎಲೆಗಳ ಅಂಚು ಗರಗಸದಂತಿದ್ದು ಅಂಡಾಕಾರದಲ್ಲಿರುತ್ತವೆ. ಹೂಗಳ ಬಣ್ಣ ಬಿಳಿ. ಹಣ್ಣುಗಳು ದುಂಡಗೆ ಇಲ್ಲವೆ ಗೋಳಾಕಾರದಲ್ಲಿರುತ್ತವೆ. ತಿರುಳು ಮೃದುವೂ ಅಲ್ಲ ಒರಟೂ ಅಲ್ಲ. ಕಾಯಿಯ ಬಣ್ಣ ಹಸುರಾಗಿದ್ದು ಹಣ್ಣಾದಂತೆ ಬೂದು ಇಲ್ಲವೆ ಕೆಂಬೂದು ಬಣ್ಣ ಹೊಂದುವುದು.

ಸಸ್ಯಾಭಿವೃದ್ಧಿಯನ್ನು ಬೀಜದಿಂದ ಅಥವಾ ಕಸಿ ಮಾಡುವುದರ ಮೂಲಕ ಮಾಡಲಾಗುತ್ತದೆ. ನೀರನ್ನು ದೀರ್ಘಕಾಲ ಹಿಡಿದಿಟ್ಟುಕೊಳ್ಳಬಲ್ಲ ಸಾಮರ್ಥ್ಯವಿರುವ ಭೂಮಿ ಇದಕ್ಕೆ ಯೋಗ್ಯವಾಗಿದ್ದು ಚಳಿಗಾಲದಲ್ಲಿ ನೆಡುತ್ತಾರೆ. ಗಿಡ ಎತ್ತರವಾಗಿಯೂ ಶೀಘ್ರವಾಗಿಯೂ ಬೆಳೆಯಲು ಅಡ್ಡರೆಂಬೆಗಳನ್ನು ಕತ್ತರಿಸಬೇಕು. ದಪ್ಪಗಾತ್ರದ ಹಣ್ಣುಗಳನ್ನು ಪಡೆಯಲು ಕೆಲವು ಹೀಚುಗಳನ್ನು ಕಿತ್ತು ತೆಗೆಯಬೇಕಾಗುತ್ತದೆ. ಏಳು ವರ್ಷದ ಬಳಿಕ ಫಲಬಿಡಲು ಆರಂಭಿಸಿ 70-80 ವರ್ಷಗಳವರೆಗೂ ಕೊಡುತ್ತದೆ.

**ಉಪಯೋಗ :** ನೇರವಾಗಿ ತಿನ್ನಲು, ಪಾನಕ, ಮಾದಕ ಪಾನೀಯಗಳಲ್ಲಿ ಬಳಸಲಾಗುತ್ತದೆ. ಪ್ರತಿ 100 ಗ್ರಾಂ ಹಣ್ಣಿನಲ್ಲಿ 86.5 ಗ್ರಾಂ ತೇವಾಂಶ, 0.4 ಗ್ರಾಂ ಪ್ರೊಟೀನ್, 0.1 ಗ್ರಾಂ ಕೊಬ್ಬು, 0.3 ಗ್ರಾಂ ಖನಿಜಾಂಶ, 2.1 ಗ್ರಾಂ ನಾರು ಮತ್ತು 10.6 ಗ್ರಾಂ ಶರ್ಕರಪಿಷ್ಟಗಳು ಇವೆ.

ಇದರ ಚೌಬೀನೆ ಕೆತ್ತನೆ ಕೆಲಸಗಳಿಗೂ, ಗಣಿತಕ್ಕೆ ಸಂಬಂಧಿಸಿದ ಉಪಕರಣಗಳ ತಯಾರಿಕೆಯಲ್ಲೂ ಬಳಸುತ್ತಾರೆ. ಚೌಬೀನೆ ಬಣ್ಣ ಕೆಂಪುಮಿಶ್ರಿತ ಹಳದಿ.

*ಎಸ್.ವಿ.*

**ಮರಳು** ಭೂಮಿಯಲ್ಲಿ ದೊರೆಯುವ ಮಣ್ಣುಗಳಲ್ಲಿ ಮರಳು ಒಂದು ಬಗೆ. ಕಣಗಳು ಒಂದಕ್ಕೊಂದು ಅಂಟಿಕೊಳ್ಳದ ಹಾಗೆ ಇದ್ದು, ಗಾತ್ರ ಮತ್ತು ವ್ಯಾಸಕ್ಕನುಗುಣವಾಗಿ ದಪ್ಪ ಮರಳು, ಸಾಧಾರಣ ಮರಳು, ಸಣ್ಣ ಅಥವಾ ನವುರಾದ ಮರಳು ಎಂದು ವಿಂಗಡಿಸಬಹುದು. ಶಿಲೆಗಳ ಮೇಲೆ ಆಗುವ ಪ್ರಾಕೃತಿಕ ವೈಪರೀತ್ಯಗಳೇ ಮರಳು ಉಂಟಾಗಲು ಕಾರಣ. ಇದರಲ್ಲಿ ಜೇಡಿ ಮಣ್ಣು ಮತ್ತು ಮಡ್ಡಿ ಅಲ್ಪ ಪ್ರಮಾಣದಲ್ಲಿ ಬೆರೆತಿರುತ್ತದೆ. ದಪ್ಪ, ಸಣ್ಣ ಕಲ್ಲುಗಳು ಇರಬಹುದು. ಮುಖ್ಯವಾಗಿ ಮರಳಿನಲ್ಲಿ ಬೆಣಚುಕಲ್ಲಿನ ಕಣಗಳು ಹೆಚ್ಚು ಇರುವುದರಿಂದ ಇದನ್ನು ಬೆಣಚು ಕಣಗಳ ಸಮೂಹವೆಂದು ಕರೆಯುತ್ತಾರೆ. ಭೂಗರ್ಭದಲ್ಲಿ ಮರಳು ಪದರುಪದರುಗಳಾಗಿ ಸಂಚಯನಗೊಂಡಿದ್ದರೆ 'ಅಂತರ್ಜಲ' ಹೆಚ್ಚು ಸಾಂದ್ರವಾಗಿರುತ್ತದೆ.

ತೊರೆ, ಸರೋವರ, ನದಿ ಹಾಗೂ ಕಡಲು, ಅನುಕ್ರಮವಾಗಿ ರಭಸ, ಕೊರೆತ, ಪ್ರವಾಹ ಹಾಗೂ ಭರತಗಳಿಂದಾಗಿ ಶಿಲೆಯ ಸವಕಳಿ ಉಂಟಾಗಿ, ಮರಳು ರೂಪುಗೊಳ್ಳುತ್ತದೆ. ಹಿಮಪ್ರದೇಶಗಳಲ್ಲಿ ಹರಿಯುವ ನದಿಗಳು ಕೂಡಾ ಶಿಲೆಗಳನ್ನು ಕೊರೆದು ಮರಳು ಉಂಟಾಗುತ್ತದೆ. ರಭಸದಿಂದ ಬೀಸುವ ಗಾಳಿಯಿಂದಾಗಿಯೂ ಶಿಲೆಗಳ ಸವಕಳಿವುಂಟಾಗಿ ಮರಳು ಕ್ರೋಡಿಕರಣಗೊಳ್ಳುತ್ತದೆ. ಹೀಗೆ ಶೇಖರಣೆಗೊಂಡ ಮರಳನ್ನು ಆಯಾ ಪ್ರದೇಶಗಳಿಗನುಗುಣವಾಗಿ, ಅದು ರೂಪುಗೊಳ್ಳುವ ಬಗೆಯನ್ನು ಅನುಸರಿಸಿ; ನದಿ ಮತ್ತು ತೊರೆಗಳಿಂದ ಉಂಟಾದ ನಿಕ್ಷೇಪಗಳು- ದಂಡೆಗಳಂತೆಯೂ, ನದಿಮುಖಜ ಭೂಮಿಯಲ್ಲಿಯ ನಿಕ್ಷೇಪಗಳು- ಅತೀ ವಿಶಾಲವಾಗಿ ಹರಡಿದಂತೆಯೂ ಸರೋವರ ಮತ್ತು ಸಮುದ್ರ ತೀರಗಳಲ್ಲಿಯ ನಿಕ್ಷೇಪಗಳು - ಬೃಹತ್ ದಂಡೆಗಳಂತೆಯೂ ಗಾಳಿಯ ಹೊಡೆತದಿಂದಾದುದು - ದಿಬ್ಬಗಳಂತೆಯೂ ಕಂಡುಬರುತ್ತವೆ. ಇದನ್ನೆ ನದಿಮರಳು, ಕಡಲು ಮರಳು, ಸರೋವರದ ಮರಳು, ದಿಬ್ಬದ ಮರಳು ಎಂದು ಕರೆಯುವುದು.

**ಉಪಯೋಗ :** ವಿವಿಧ ರೀತಿಯ ಮಣ್ಣುಗಳಾದ ಕೆಮ್ಮಣ್ಣು, ಜೇಡಿಮಣ್ಣು, ಮೆಕ್ಕಲು ಮಣ್ಣು, ಜಂಬಿಟ್ಟಿಗೆ ಮಣ್ಣು, ರಾಗಡಿ ಮಣ್ಣು, ಕಲ್ಲುರ್ಮ ಮಣ್ಣು ಈ ಎಲ್ಲದರಲ್ಲೂ ಕೃಷಿಯನ್ನು ಮಾಡಲು ಆಯಾ ಬೆಳೆಗೆ ಅನುಗುಣವಾಗಿ ಮರಳನ್ನು ಮಿಶ್ರಣ ಮಾಡುತ್ತಾರೆ.

**1) ವಾರ್ಷಿಕ ಬೆಳೆಗಳು :** ಋತುಮಾನ ಅನುಸಾರವಾಗಿ ಬೆಳೆಯುವ ಜೋಳ, ರಾಗಿ, ಬತ್ತ ಮೊದಲಾದ ತೃಣಧಾನ್ಯಗಳು ಹಾಗೂ ಶೇಂಗಾ, ಕಡಲೆ, ತೊಗರಿ, ಅಲಸಂದೆ, ಅವರೆ ಮೊದಲಾದ ದ್ವಿದಳ ಧಾನ್ಯಗಳ ಕೃಷಿಯಲ್ಲಿ ಭೂಮಿಯು ವೈವಿಧ್ಯಮಯವಾಗಿ ಕಂಡುಬರುತ್ತದೆ. ಬೀದರ, ಗುಲ್ಬರ್ಗಾ, ಬಿಜಾಪುರ, ಯಾದಗಿರಿ ಈ ಭಾಗಗಳಲ್ಲಿ ಕಲ್ಲುಮಿಶ್ರಿತ ಕೆಂಪು ಮಣ್ಣು, ಜವುಗು ಮಣ್ಣುಗಳಿದ್ದು ಈ ಭೂಮಿಯಲ್ಲಿ ಉತ್ತಮ ಬೆಳೆಯನ್ನು ತೆಗೆಯಲು ಮರಳನ್ನು ಮಣ್ಣಿನೊಂದಿಗೆ ಮಿಶ್ರಣ ಮಾಡುತ್ತಾರೆ. ಇದರಿಂದ ಹಲವು ಪ್ರಯೋಜನಗಳಿವೆ.

ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದರ ಜೊತೆಗೆ ಅಲ್ಪಪ್ರಮಾಣದಲ್ಲಿ ಮಳೆಬಿದ್ದಾಗಲು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವಿರುತ್ತದೆ. ಮರಳಿನಲ್ಲಿ 'ಜಿಪ್ಸಂ'ನ ಅಂಶವಿರುವುದೇ ಇದಕ್ಕೆ ಕಾರಣ.

ಮಲೆನಾಡಿನ ಕೆಲವು ಪ್ರದೇಶಗಳು, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಸಿದ್ದಾಪುರ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ನವಲಗುಂದ, ಗದಗಜಿಲ್ಲೆಯ ರೋಣ, ಶಿರಹಟ್ಟಿ ತಾಲೂಕಿನ ಕೆಲವು ಭಾಗಗಳಲ್ಲಿ ಎರೇಭೂಮಿ ಹೆಚ್ಚಾಗಿದೆ. ಇಲ್ಲಿಯ ಪ್ರಮುಖ ಬೆಳೆಗಳಾದ ಶೇಂಗಾ, ಹತ್ತಿ, ಎಳ್ಳು, ಕಡಲೆ, ಜೋಳ, ಗೋಧಿ- ಮುಂತಾದವುಗಳ ಕೃಷಿಗೆ ಭೂಮಿಯನ್ನು ಹದಮಾಡುವ ಸಂದರ್ಭದಲ್ಲಿ ಆಯಾ ಬೆಳೆಗೆ, ಫಲವತ್ತತೆಗೆ ಅನುಗುಣವಾಗಿ ಮರಳನ್ನು ಮಿಶ್ರಣ ಮಾಡುತ್ತಾರೆ. ಇದರಿಂದ ಎರಡು ರೀತಿಯ ಪ್ರಯೋಜನಗಳುಂಟು.

ಅ) ಅತೀವೃಷ್ಟಿಯಾದಾಗ ಸಸಿಯ ಬೇರುಗಳು ಕೊಳೆಯದಂತೆ ತಡೆಯುತ್ತದೆ.

ಆ) ಅಲ್ಪಪ್ರಮಾಣದಲ್ಲಿ ಮಳೆಯಾದಾಗಲೂ ತೇವಾಂಶವನ್ನು ಹಿಡಿದಿಟ್ಟುಕೊಳ್ಳುತ್ತದೆ.

ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ ಮುಂತಾದ ಪ್ರದೇಶಗಳಲ್ಲಿ ಜಂಬಿಟ್ಟಿಗೆ ಮಣ್ಣು, ಮೆಕ್ಕಲು ಮಣ್ಣು, ಗೋಡುಮಣ್ಣು, ಎರೆಮಣ್ಣು, ಕೆಂಪುಮಣ್ಣು ಈ ಎಲ್ಲ ಬಗೆಯ ಮಣ್ಣುಗಳನ್ನು ಕಾಣಬಹುದು. ಕೆಂಪು ಮತ್ತು ಕಪ್ಪುಮಣ್ಣಿನಲ್ಲಿ ಹೆಚ್ಚಾಗಿ ಮರಳನ್ನು ಬೆರೆಸಿ, ಭೂಮಿಯನ್ನು ಹದಗೊಳಿಸಿ ಕೃಷಿ ಮಾಡುತ್ತಾರೆ. ಮರಳು ಹೆಚ್ಚಿರುವ ಬಯಲು ಪ್ರದೇಶಗಳಾದ ಬಳ್ಳಾರಿ, ಚಿತ್ರದುರ್ಗ, ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ನದಿಪಾತ್ರಗಳಲ್ಲಿ ದೊರೆಯುವ ಕೆಂಪು ಗೋಡುಮಣ್ಣನ್ನು ಬೆರೆಸಿ ಸಾರಯುಕ್ತವಾಗಿ ಮಾಡುವ ಮೂಲಕ ಕೃಷಿ ಮಾಡುತ್ತಾರೆ.

**2) ಬಹುವಾರ್ಷಿಕ ಬೆಳೆಗಳು :** ಕರ್ನಾಟಕ ರಾಜ್ಯಾದ್ಯಂತ ವೈವಿಧ್ಯಮಯವಾದ ಮಣ್ಣು ದೊರೆಯುತ್ತದೆ. ಆಯಾ ಪ್ರದೇಶದಲ್ಲಿ ಕಂಡುಬರುವ ವಾಯುಗುಣ, ಭೂಗುಣ, ಜಲಸಂಪನ್ಮೂಲಗಳಿಗೆ ಅನುಗುಣವಾಗಿ ವಾರ್ಷಿಕ ಬೆಳೆಗಳ ಕೃಷಿವುಂಟು.

ಬಯಲು ಪ್ರದೇಶ, ಘಟ್ಟಪ್ರದೇಶಗಳಲ್ಲಿ ಹಣ್ಣಿನ ಮರಗಳು, ಸಂಬಾರ ಪದಾರ್ಥಗಳು ಹಾಗೂ ಪಾನೀಯ ಬೆಳೆಗಳ ಕೃಷಿ ಇದೆ. ಸಸಿಗಳನ್ನು ನೆಡುವ ಮೊದಲು ಗುಂಡಿಗಳನ್ನು ತೋಡಿ ಕೊಟ್ಟಿಗೆ ಗೊಬ್ಬರ ಮತ್ತು ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ವಿವಿಧ ರೀತಿಯ ಮಣ್ಣಿನ ಜೊತೆಗೆ ಮರಳನ್ನು ಕಡ್ಡಾಯವಾಗಿ ಬೆರೆಸುತ್ತಾರೆ. ನೆಟ್ಟ ಸಸಿಗಳ ಬೇರನ್ನು ಊರಲು ಬೇಕಾದ ಮೃದುತ್ವವನ್ನು ಕೊಡಲು ಹಾಗೂ ಮಣ್ಣನ್ನು ಸಡಿಲಗೊಳಿಸಲು ಮರಳು ಕಾರಣವಾಗುತ್ತದೆ.

ಸಾಧಾರಣ ಗಾತ್ರದ ಸಾರಯುಕ್ತ ಮರಳನ್ನೇ ಬಳಸುತ್ತಾರೆ. ಸಾಮಾನ್ಯವಾಗಿ ನದಿ, ತೊರೆಯ ಇಕ್ಕೆಲದ ಮರಳು, ಕೆರೆ ಅಂಗಳದ ಮರಳು ಇತ್ಯಾದಿ ಫಲಭರಿತವಾಗಿದ್ದು, ಭೂಮಿಯನ್ನು ಹದಗೊಳಿಸಲು ಬಳಸಿಕೊಳ್ಳುವರು.

**3) ಮರಳು ಪ್ರದೇಶದ ಕೃಷಿ :** ಕೆರೆಯ ದಡ, ನದಿಯ ತೀರ, ಕಡಲಕಿನಾರೆಗಳಲ್ಲಿ ಬೆಳೆಯುವಂಥವು ವಿಶಿಷ್ಟವಾದಂಥವುಗಳಾಗಿವೆ. ಸದಾ ನೀರಿರುವ ಪ್ರದೇಶಗಳಲ್ಲಿ ಬಹುವಾರ್ಷಿಕ ಬೆಳೆಗಳಾದ ತಾಳೆ, ಈಚಲು ತೆಂಗು ಮುಂತಾದ ದಾರು ಮರಗಳನ್ನು ಬೆಳೆಯುತ್ತಾರೆ. ಇವು ಹಲವು ವೇಳೆ ಸ್ವಾಭಾವಿಕವಾಗಿ ಬೆಳೆದರೆ, ಕೆಲವು ವೇಳೆ ಕೃಷಿಮಾಡಿಯೂ ಬೆಳೆಯುತ್ತಾರೆ.

ನದಿ ತೀರಗಳಲ್ಲಿ ಮಳೆಗಾಲದಲ್ಲಿ ಬತ್ತ, ಶುಂಠಿ ಮುಂತಾದ ಹೆಚ್ಚು ನೀರನ್ನು ಬಯಸುವ ಬೆಳೆಗಳನ್ನು, ಕಡಿಮೆ ನೀರನ್ನು ಬಯಸುವ ರಾಗಿ, ಜೋಳಗಳನ್ನು ಬೆಳೆಯುತ್ತಾರೆ. ಕೆಲವು ಭಾಗದ ನದಿ ತೀರಗಳಲ್ಲಿ ಸೌತೆ, ಕಲ್ಲಂಗಡಿ ಮುಂತಾದವುಗಳನ್ನು ಬೆಳೆಯುತ್ತಾರೆ.

**4) ಕೆರೆಯಂಗಳದ ಬೆಳೆಗಳು :** ಕೆರೆಯಂಗಳದ ಮರಳು ಶೇಖರಣೆಗೊಂಡ ಭಾಗಗಳಲ್ಲಿ ಹೆಚ್ಚು ತೇವಾಂಶವಿರುವುದರಿಂದ ಅಲ್ಪಾವಧಿ ಬೆಳೆಗಳಾದ ಕಲ್ಲಂಗಡಿ, ಕೊತ್ತಂಬರಿ, ಸೊಪ್ಪು, ಸೆದೆಗಳನ್ನು ಯಥೇಚ್ಛವಾಗಿ ಬೆಳೆಯಲಾಗುತ್ತದೆ.

ನವೆಂಬರ್-ಡಿಸೆಂಬರ್‌ನಿಂದ ಆರಂಭಿಸಿ ಫೆಬ್ರವರಿಯ ಅಂತ್ಯದವರೆಗೆ ಇಂತಹ ಬೆಳೆಗಳನ್ನು ಕೃಷಿ ಮಾಡಲು ಸಾಧ್ಯವಿದೆ. ಕಲ್ಲಂಗಡಿ, ಸೌತೆಕಾಯಿ,

ಕಡ್ಲೆಕಾಳು ಇತ್ಯಾದಿ ಬೆಳೆಗಳಿಗೆ ಮರಳಿನಲ್ಲಿ ಹುದುಗಿರುವ ತೇವಾಂಶ ಸಾಕಾದರೂ, ಈ ಅವಧಿಯಲ್ಲಿ ಬೀಳುವ ಇಬ್ಬನಿ ಮಂಜೂ ಸಹ ಈ ಬೆಳೆಗಳ ಪೋಷಣೆಗೆ ಸಹಕಾರಿಯಾಗಿದೆ. ಮಂಜಿನ ಹನಿ ಬೀಳುವುದರಿಂದ ಹಾಗೂ ಚಳಿಗಾಲವಾಗಿರುವುದರಿಂದ ಮೇಲಿನ ಬೆಳೆಗಳಿಗೆ ರೋಗಬಾಧೆಯೂ ಇಲ್ಲವೆಂದೇ ಹೇಳಬಹುದು. ಮರಳು ಪ್ರದೇಶಗಳಲ್ಲಿ ಬೆಳೆಗೆ ಬೇಕಾದ ನೀರನ್ನು ಸುಮಾರು 5 ರಿಂದ 10 ಅಡಿ ಗುಂಡಿಯನ್ನು ತೋಡಿ ಕೈ ಏತ ಅಥವಾ ಚೌರಿಗೆ ಬಳಸಿ ತೋಟಗಳಿಗೆ ನೀರನ್ನು ಒದಗಿಸುವರು.ಸಾಮಾನ್ಯವಾಗಿ ಇವು ಸಾರ್ವಜನಿಕರಿಗೂ ಸೇರಿದ ಸೊತ್ತಾಗಿದ್ದು, ಇಡೀ ಹಳ್ಳಿಯವರು ಬಳಸಿ ಕೃಷಿ ಮಾಡಿಕೊಳ್ಳುತ್ತಾರೆ.

*ಡಿ.ಎಚ್.*

**ಮಲೆಕುಡಿಯರ ಬೇಸಾಯ ಪದ್ಧತಿ** ಕರ್ನಾಟಕದ ಬುಡಕಟ್ಟುಗಳಲ್ಲಿ ಮಲೆಕುಡಿಯ ಸಮುದಾಯವೂ ಒಂದು. ಇವರು ಕೊಡಗು, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನೆಲಸಿದ್ದಾರೆ. ಬೆಟ್ಟಗುಡ್ಡಗಳ ತುದಿಯಲ್ಲಿ ವಾಸಿಸುವುದರಿಂದ ಇವರನ್ನು ಮಲೆಕುಡಿಯರು (ಬೆಟ್ಟದ ಮೇಲೆ) ಎಂದು ಕರೆಯುವುದು ವಾಡಿಕೆ. ಮಲೆಯನ್, ಕುಡಿಯನ್, ಗೌಡರ್, ಕುಡಿಯ, ಈಡಿಗ, ಮಲೆಕುಡಿಯ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಡುವ ಇವರು ಮುಖ್ಯವಾಗಿ ಗಿರಿ ನಿವಾಸಿಗಳು. ಪುರಾತನ ಕಾಲದಿಂದಲೂ ಮಲೆಗಳ ತುದಿಗಳಲ್ಲಿ (ಕುಡಿ-ತುದಿ) ವಾಸಿಸುತ್ತಿರುವವರು. ಇವರಲ್ಲಿ ಕೆಲವು ಕುಟುಂಬಗಳು ಮಲೆಗಳನ್ನು ತೊರೆದು, ತಪ್ಪಲು ಪ್ರದೇಶಗಳಿಗೆ ಹೋದರೆ ಮತ್ತೆ ಕೆಲವರು ಕೃಷಿ ಮಾಡುತ್ತಿದ್ದರು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಾತಾವರಣದ ಅನುಕೂಲಕ್ಕೆ ತಕ್ಕಂತೆ ತಮ್ಮ ವಸತಿಗಳನ್ನು ಬದಲಾಯಿಸುತ್ತಾ ಇದ್ದ ಸಮುದಾಯವಿದು. ಕುಮರಿ ಬೆಳೆ ಅಂದರೆ ಬೆಟ್ಟದ ತಪ್ಪಲುಗಳ ಕಾಡನ್ನು ಕಡಿದು, ಚೂಪಾದ ಮರದ ಕೋಲುಗಳಿಂದ ಅಥವಾ ಕೆಲವೊಮ್ಮೆ ಲೋಹದ ಹರಿತವಾದ ಆಯುಧಗಳಿಂದ ನೆಲವನ್ನು ಅಗೆದು ಕಾಳುಗಳನ್ನು ಎರಚಿ ಮಳೆಯ ಆಶ್ರಯದಲ್ಲಿ ಬತ್ತ, ರಾಗಿ, ಜೋಳ, ಸಿಹಿ ಗೆಣಸುಗಳನ್ನು ಬೆಳೆಯುವ ಕ್ರಮ. ಮಲೆಕುಡಿಯ ಬುಡಕಟ್ಟು ಸಮುದಾಯದ ಆರ್ಥಿಕ ಸ್ಥಿತಿಗತಿ ಶೋಚನೀಯ. ಮಲೆಕುಡಿಯರು ತಮ್ಮ ಜೀವನ ನಿರ್ವಹಣೆಗೆ ಪ್ರಧಾನವಾಗಿ ವ್ಯವಸಾಯ, ಕಾಡಿನ ಕಿರು ಉತ್ಪನ್ನಗಳ ಸಂಗ್ರಹಣೆ, ಜೇನು ಕೃಷಿ, ಬೈನೆ ಇಳಿಸುವುದನ್ನೆ ವೃತ್ತಿಯನ್ನಾಗಿಸಿ ಕೊಂಡಿದ್ದಾರೆ. ಇದರ ಜೊತೆಗೆ ಬಹುತೇಕ ಜನರು ಕೂಲಿ (ದಿನಗೂಲಿ)ಯನ್ನೇ ನೆಚ್ಚಿಕೊಂಡಿದ್ದಾರೆ. ಕೆಲವರು ಕಾಫಿ ತೋಟಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಆದಿ ಕಾಲದಿಂದಲೂ ಅರಣ್ಯ ಪ್ರದೇಶಗಳ ಮರಗಿಡಗಳನ್ನು ಕಡಿದು ಅದನ್ನು ಸುಟ್ಟು, ಆ ಜಾಗದಲ್ಲೂ ದವಸ ದಾನ್ಯಗಳನ್ನು ಬೆಳೆಯುತ್ತಿದ್ದರು. ಇದರ ಜೊತೆಗೆ ಏಲಕ್ಕಿ ಬೆಳೆಯುವುದನ್ನು ಮೈಗೂಡಿಸಿಕೊಂಡಿದ್ದಾರೆ.

ಕಾಡುಗಳಲ್ಲಿ ತಾನೆ ತಾನಾಗಿ ಬೆಳೆಯುತ್ತಿದ್ದ ಏಲಕ್ಕಿಯನ್ನು ಸಂಗ್ರಹಿಸಿ ಹತ್ತಿರದ ಮಾರುಕಟ್ಟೆಗಳಲ್ಲಿ ಮಾರಿ ಹಣ ಗಳಿಸುತ್ತಿದ್ದರು. ಅನಂತರದ ದಿನಗಳಲ್ಲಿ, ಭೂಮಾಲೀಕರ ಏಲಕ್ಕಿಯ ತೋಟಗಳಲ್ಲಿ ಕೆಲಸ ಮಾಡಲು ತೊಡಗಿದರು. ಏಲಕ್ಕಿ ತೋಟಗಳು ಪವಿತ್ರವೆಂಬ ಭಾವನೆ ಇರುವುದರಿಂದ ಸಾಧಾರಣವಾಗಿ ಅಸ್ಪೃಶ್ಯ ಜಾತಿಯವರಿಗೆ ಏಲಕ್ಕಿಯ ತೋಟಗಳಿಗೆ ಪ್ರವೇಶವಿರಲಿಲ್ಲ. ಹಾಗಾಗಿ ಏಲಕ್ಕಿ ಕುಯ್ಯುವ ಮೊದಲು ದೇವರಿಗೆ ಹಣ್ಣು ಹಂಪಲು ನೈವೇದ್ಯವಿಟ್ಟು ಅನಂತರ ಏಲಕ್ಕಿ ಬಿಡಿಸುವ ಕೆಲಸವನ್ನು ಪ್ರಾರಂಭಿಸುತ್ತಾರೆ.

ಹಿಂದೆ ಮಲೆಕುಡಿಯರು ಮಲೆಗಳ ತುದಿಗಳಲ್ಲಿ ವಾಸಿಸುತ್ತಿದ್ದಾಗ ಒಂದು ಮರದಲ್ಲಿ ಕೊಂಬೆ ಸೇರುವೆಡೆ ಸ್ವಲ್ಪ ಕೆತ್ತಿ ಆ ಜಾಗದಲ್ಲಿ ಅಗಲವಾದ ಒಂದು ಕಲ್ಲನ್ನು ಇಡುತ್ತಿದ್ದರು, ಆ ಕಲ್ಲಿನ ಮೇಲೆ 'ಮಲೆತಮ್ಮಚ್ಚ' ದೇವರು ಬಂದು ಕುಳಿತುಕೊಂಡು ಸುತ್ತಲ ಭೂಮಿಗೆ ಏಲಕ್ಕಿಯನ್ನು ಎಸೆಯುತ್ತಿತ್ತು. ಇದರಿಂದ ಮಲೆಯ ಕಾಡುಗಳಲ್ಲಿ ಯಥೇಚ್ಛವಾಗಿ ಏಲಕ್ಕಿಯಂತಹ ಶ್ರೇಷ್ಠ ಬೆಳೆಯನ್ನು ಬೆಳೆಯುವಂತೆ ಆಯಿತು. ಮಲೆತಮ್ಮಚ್ಚ ದೇವರು ತನ್ನ ಭಕ್ತರಾದ ಮಲೆ ಕುಡಿಯರಿಗೆ ಏಲಕ್ಕಿಯನ್ನು ಬಿಡಿಸಿ, ಬಳಸಿಕೊಳ್ಳಲು ವರ ನೀಡಿತು ಎಂಬುದು ಅವರ ನಂಬಿಕೆ, ಹೀಗಾಗಿ ಏಲಕ್ಕಿಯನ್ನು ನಾಗರಿಕ ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಮಲೆಕುಡಿಯರದಾಯಿತು.

ಅರಣ್ಯಗಳನ್ನು ತೊರೆದು ಸರಕಾರ ನೀಡಿರುವ ಜಮೀನಿನಲ್ಲಿ ಬದುಕುತ್ತಿರುವ ಮಲೆಕುಡಿಯ ಕುಟುಂಬಗಳು ತಮ್ಮ ಜಮೀನಿನಲ್ಲಿಯೇ ಮನೆಗಳನ್ನು ಕಟ್ಟಿಕೊಂಡು ವ್ಯವಸಾಯವನ್ನು ಮಾಡುತ್ತಿದ್ದರು. ಅಂತಹ ತೋಟಗಳಲ್ಲಿ ಅಥವಾ ಜಮೀನಿನಲ್ಲಿ ವಾಸಿಸುವವರು ಅವರವರ ಸಂಬಂಧಿಕರೇ ಆಗಿರುತ್ತಾರೆ. ಇವರಿಗೆ ಕೊಟ್ಟಿರುವ ಜಮೀನುಗಳಿಗೆ ಕೆಲವರಿಗೆ 2-3 ಎಕರೆ ಇದ್ದರೆ ಇನ್ನು ಕೆಲವರಿಗೆ 5 ಎಕರೆ ಮತ್ತು ಅದಕ್ಕಿಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಕೆಲವರು ಪ್ರಗತಿಪರ ಕೃಷಿಕರಾಗಿದ್ದಾರೆ. ಕೆಲವು ಕುಟುಂಬಗಳು ಸರ್ಕಾರವು ನೀಡಿರುವ ಜಮೀನುಗಳನ್ನು ಪಡೆಯಲು ಅವಕಾಶವಂಚಿತವಾಗಿವೆ.

ಸರ್ಕಾರ ನೀಡಿರುವ ಕೃಷಿ ಭೂಮಿಯಲ್ಲಿ ಕಾಫಿ, ಅಡಕೆ, ತೆಂಗು, ಏಲಕ್ಕಿ, ಅನಾನಸ್, ಗೇರು, ಮೆಣಸು, ಬಾಳೆ, ಬತ್ತ, ರಬ್ಬರ್ ಇತರೆ ಬೆಳೆಗಳನ್ನು ಬೆಳೆಯಲಾಗುತ್ತಿದೆ, ಇಂತಹ ಬೆಳೆಗಳಿಂದ ಬರುವ ಕಿರು ಆದಾಯದಲ್ಲಿ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ.

ಮಲೆಕುಡಿಯರು ಸಹಕಾರಿ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ತಮ್ಮ ತಮ್ಮವರೇ ಸೇರಿಕೊಂಡು ಒಟ್ಟಾಗಿ ಬೇಸಾಯ ಮಾಡಿ ಅದರ ಫಲವನ್ನು ಹಂಚಿಕೊಳ್ಳುವರು. ಇತ್ತೀಚೆಗೆ ಕೃಷಿ ಭೂಮಿಯಲ್ಲಿ ರಾಗಿ, ಮೆಣಸು, ಜೋಳ ಬೆಳೆಯುವುದನ್ನು ರೂಢಿಸಿಕೊಳ್ಳುತ್ತಿದ್ದಾರೆ. ತೋಟಗಾರಿಕ ಬೆಳೆಗಳಾದ ಕಾಫಿ-ಏಲಕ್ಕಿ, ಕರಿಮೆಣಸು, ಅಡಕೆ, ತೆಂಗು ಬೆಳೆಗಳನ್ನು ಅಲ್ಪಪ್ರಮಾಣದಲ್ಲಿ ಬೆಳೆದರೂ ಉತ್ತಮ ಮಾರುಕಟ್ಟೆ ಬೆಲೆ ಇರುವುದರಿಂದ ಆರ್ಥಿಕ ಅಭಿವೃದ್ಧಿಗೆ ಇವು ಪ್ರೇರಕವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಲೆಕುಡಿಯರು ತಮ್ಮ ಸ್ವಂತ ಜಮೀನಿನಲ್ಲಿ ವ್ಯವಸಾಯವನ್ನೇ ಕುಲ ಕಸುಬನ್ನಾಗಿ ಮಾಡಿಕೊಂಡು ಜೀವನವನ್ನು ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಬೆಳ್ತಂಗಡಿ ಮತ್ತು ಸುಳ್ಯ ತಾಲ್ಲೂಕಿನಲ್ಲಿರುವ ಮಲೆಕುಡಿಯರು ಇತರೆ ಕಡೆಗಳಲ್ಲಿರುವ ಮಲೆಕುಡಿಯರಿಗಿಂತ ಕೃಷಿಯಲ್ಲಿ ಮತ್ತು ಶೈಕ್ಷಣಿಕವಾಗಿ ಮುಂದುವರಿದಿದ್ದಾರೆ.

ಪ್ಲಾಂಟೇಷನ್ ಈಗ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಮುಖ್ಯ ಬೆಳೆಯಾಗಿದೆ. ಕಾಫಿ ಮತ್ತು ಏಲಕ್ಕಿ ಕರಿಮೆಣಸು ಇಲ್ಲಿಯ ಮುಖ್ಯ

ವಾಣಿಜ್ಯ ಬೆಳೆಗಳಾಗಿದ್ದು, ಇವಲ್ಲದೆ ಕಿತ್ತಳೆಯನ್ನು ಬೆಳೆಯುವರು. ರಾಜ್ಯದಲ್ಲಿ ಕಾಫಿಯಲ್ಲಿ ಎರಡು ಬಗೆಯ ತಳಿಗಳು ಇವೆ: ಅರ್‍ಯಾಬಿಕ (ಕಾಫಿಯ ಅರ್‍ಯಾಬಿಕ) ಮತ್ತು ರೊಬಸ್ಟ (ಕಾಫಿಯ ಕ್ಯಾನಿಪೋರ). ಅರ್‍ಯಾಬಿಕ ಕಾಫಿಯ ಬೆಳವಣಿಗೆಗೆ ಎತ್ತರದ ಪ್ರದೇಶದಲ್ಲಿ (900-1200ಮೀ) ಉತ್ತಮವಾಗಿದೆಯಾದರೆ ರೊಬಸ್ಟ ಕಡಿಮೆ ಎತ್ತರದ (ಸುಮಾರು 150ಮೀ) ಪ್ರದೇಶಗಳಲ್ಲೂ ಬೆಳೆಯಬಲ್ಲದು, ರೊಬಸ್ಟಕ್ಕಿಂತ ಅರ್‍ಯಾಬಿಕ ಬೆಳೆಗೆ ಹೆಚ್ಚು ನೆರಳು ಅಗತ್ಯ.

ಕಾಫಿ ತೋಟಗಾರಿಕೆಗೆ ಹೆಚ್ಚು ಮಳೆ ಬೀಳುವ ಬೆಟ್ಟ ಪ್ರದೇಶಗಳು ಹಾಗೂ ತಂಪು ಹವೆಯನ್ನು ಹೊಂದಿರುವ ಇಳಿಜಾರು ಪ್ರದೇಶಗಳು ಅತ್ಯಂತ ಅನುಕೂಲ. ಮಳೆ ಹೆಚ್ಚಾಗಿ ಬೇಕಾಗಿದ್ದರೂ ಬಿದ್ದ ನೀರು ಸುಲಭವಾಗಿ ಹರಿದು ಹೋಗುವಂತೆ ಇಳಿಜಾರು ಇರಬೇಕು. ಕಾಫಿ ಗಿಡಕ್ಕೆ ನೆರಳು ಅತ್ಯವಶ್ಯಕ. ಆದ್ದರಿಂದ ಕಾಫಿ ತೋಟಗಳಲ್ಲಿ ನೆರಳಿಗೆ ವಿವಿಧ ಬಗೆಯ ಗಿಡಗಳನ್ನು ಬೆಳೆಸುತ್ತಾರೆ. ಹೀಗೆ ಬೆಳೆಸಲಾಗುವ ನೆರಳಿನ ಮರಗಳಲ್ಲಿ ಮುಖ್ಯವಾದವು ಸಿಲ್ವರ್ ಮರ, ಹಲಸು, ಹೊನ್ನೆ, ನೀಲಿ, ಬೀಟೆ, ನೇರಳೆ, ಕಲ್ಬಾಗಿ, ಹೊಟ್ಟೆಬಾಗಿ, ಬಿಳಿ ಬಸರಿ, ಕರಿ ಬಸರಿ, ಅತ್ತಿ, ಮಿಟ್ಲೆ ಮುಂತಾದವು. ಕಾಫಿ ಗಿಡಕ್ಕೆ ಎಂತಹ ಮಣ್ಣಿನಲ್ಲಿಯಾದರೂ ಬೆಳೆಯುವ ಸಾಮರ್ಥ್ಯ ಇದೆ.

ಮಲೆಕುಡಿಯರು ದಟ್ಟವಾದ ಕಾಡುಗಳಲ್ಲಿ ವಾಸ ಮಾಡುತ್ತಿರುವುದರಿಂದ ಮತ್ತು ಅವರಿಗೆ ಕೊಟ್ಟಿರುವ ಜಮೀನು ಕಾಡು ಭೂಮಿಯಾಗಿರುವುದರಿಂದ ಮೊದಲು ಅವರು ಕಾಡನ್ನು ಕಡಿದು ಭೂಮಿಯನ್ನು ಹದಗೊಳಿಸುತ್ತಾರೆ. ಕಾಫಿ ಗಿಡಕ್ಕೆ ಅನುಕೂಲವಾಗುವ ರೀತಿಯಲ್ಲಿ ನೆರಳು ಕೊಡುವ ಕೆಲವು ದೊಡ್ಡ ದೊಡ್ಡ ಮರಗಳನ್ನು ಉಳಿಸಿಕೊಂಡು ಉಳಿದ ಎಲ್ಲ ಮರ ಗಿಡಗಳನ್ನು ತೆಗೆಯುತ್ತಾರೆ. ಬೀಜಗಳನ್ನು ವಿಶೇಷ ಬಗೆಯ ನರ್ಸರಿಗಳಲ್ಲಿ ನೆಟ್ಟು ಬೆಳೆಸುತ್ತಾರೆ, ಕಾಫಿ ಬೀಜಗಳನ್ನು ಜನವರಿ-ಮಾರ್ಚ್ ತಿಂಗಳುಗಳ ನಡುವಣ ಕಾಲದಲ್ಲಿ ನೆಟ್ಟು ಮೊಳಕೆ ಬರಿಸುತ್ತಾರೆ. ಬೀಜಗಳನ್ನು ಮಣ್ಣಿನಲ್ಲಿ ನೆಟ್ಟು ಅವುಗಳ ಮೇಲೆ ತೆಳುವಾಗಿ ಮಣ್ಣನ್ನು ಹರಡುತ್ತಾರೆ. ಇದರ ಮೇಲೆ ಚಪ್ಪರ ಹಾಕಿ, ಪ್ರತಿ ದಿವಸ ನೀರನ್ನು ಹಾಕುವರು. ಬೀಜಗಳು ಸುಮಾರು 45 ದಿನಗಳಲ್ಲಿ ಮೊಳಕೆಯೊಡೆಯುತ್ತವೆ, ಅನಂತರ ಎರಡನೆ ನರ್ಸರಿಗೆ ವರ್ಗಾಯಿಸಿ ಸಸಿಗಳನ್ನು ಬೆಳೆಸುತ್ತಾರೆ.

ಸಾಮಾನ್ಯವಾಗಿ ಕಾಫಿ ನೆಡುವ ಗುಂಡಿಗಳು ಎರಡು ಅಡಿ ಆಳ, ಒಂದೂವರೆ ಅಡಿ ಅಗಲ, ಒಂದೂವರೆ ಅಡಿ ಉದ್ದ ಇರುತ್ತವೆ. ಸಾಧಾರಣವಾಗಿ ಜುಲೈ ತಿಂಗಳಿನಲ್ಲಿ ನೆಡುವುದನ್ನು ಪ್ರಾರಂಭಿಸಿ ಸೆಪ್ಟೆಂಬರ್ ತಿಂಗಳವರೆಗೂ ಮುಂದುವರಿಸುತ್ತಾರೆ. ಕಾಫಿ ಸಸಿಗಳನ್ನು ಗುಂಡಿಯ ಮಧ್ಯ ಭಾಗದಲ್ಲಿ ನೆಟ್ಟು ಅದರ ಸುತ್ತಲೂ ಮಣ್ಣನ್ನು ಹಾಕಿ, ಅನಂತರ ಸಸಿಗಳು ಗಾಳಿಗೆ ಅಲುಗಾಡಿ ಮುರಿದು ಹೋಗದಂತೆ ಊರುಗೋಲುಗಳನ್ನು ನೆಟ್ಟು ಕಾಪಾಡುತ್ತಾರೆ. ಪ್ರತಿ ದಿನ ಸಮಪ್ರಮಾಣದಲ್ಲಿ ನೀರು ಹಾಕಿ ಬೆಳೆಸುವರು. ಕಾಫಿ ತೋಟದಲ್ಲಿ ಕರಿಮೆಣಸು, ಏಲಕ್ಕಿ, ಕಿತ್ತಳೆ, ಅಡಕೆ ಮುಂತಾದ ಮಿಶ್ರ ಬೇಸಾಯ ಮಾಡುವುದನ್ನು ರೂಢಿಸಿಕೊಂಡಿದ್ದಾರೆ. ಸಸಿಗಳನ್ನು ನೆಟ್ಟ ಮೇಲೆ ಎರಡು ವರ್ಷಗಳ ಅನಂತರ ಕಾಲ ಕಾಲಕ್ಕೆ ಕೊಟ್ಟಿಗೆ ಗೊಬ್ಬರವನ್ನು ಕೊಡುವರು. ಕಾಫಿ ಗಿಡಗಳಿಗೆ ಬರುವ ರೋಗಗಳನ್ನು ತಡೆಗಟ್ಟಲು ಆಗಿಂದಾಗ್ಗೆ ಕಳೆ ಬೆಳೆಯದಂತೆ ನಿಗಾವಹಿಸುವರು. ಕಾಫಿ ಗಿಡ ನೆಟ್ಟ ಮೂರು ವರ್ಷದ ತರುವಾಯ ಫಲ ಕೊಡಲು ಪ್ರಾರಂಭವಾಗುತ್ತದೆ. ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ಹೂ ಬಿಟ್ಟು ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿ ಫಸಲು ಕುಯ್ಲಿಗೆ ಬರುತ್ತದೆ. ಕಾಯಿಗಳು ಹಣ್ಣಾದಂತೆಲ್ಲಾ ಬಿಡಿಸುತ್ತಿರಬೇಕು. ಉದುರಿದ ಹಣ್ಣುಗಳನ್ನು ಆರಿಸಿಕೊಳ್ಳುತ್ತಾರೆ. ಕಾಫಿ ಗಿಡದ ಆಯುಷ್ಯ ಸುಮಾರು ಮೂವತ್ತು ವರ್ಷಗಳಿಂದ ಐವತ್ತು ವರ್ಷಗಳು ಎಂದು ಹೇಳುತ್ತಾರೆ. ಕಾಫಿ ಹಣ್ಣನ್ನು ಗಿಡದಿಂದ ಬಿಡಿಸಿದ ಮೇಲೆ ಕಣ ಅಥವಾ ಸಿಮೆಂಟಿನ ಮೇಲೆ ಬಿಸಿಲಿಗೆ ಹಾಕಿ ಎರಡು ಮೂರು ವಾರಗಳ ಕಾಲ ಒಣಗಿಸಿ, ಮೇಲಿನ ಸಿಪ್ಪೆ ಬಿಸಿಲಿಗೆ ಸಿಕ್ಕಿ ಕಪ್ಪಾಗಿ ತೇವಾಂಶ ಇಂಗಿ ಹೋದ ಮೇಲೆ ಅವುಗಳನ್ನು ಗಾತ್ರದ ಆಧಾರದ ಮೇಲೆ ವಿವಿಧ ಗುಂಪುಗಳನ್ನಾಗಿ ವಿಂಗಡಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ. ಈ ರೀತಿ ಕಾಫಿ ಬೇಸಾಯ ಮಾಡುವುದರ ಮೂಲಕ ಯಾವ ರೈತರಿಗೂ ಕಡಿಮೆ ಇಲ್ಲ ಎಂಬುದನ್ನು ತೋರಿಸಿಕೊಟ್ಟು, ಈ ಬೇಸಾಯದಿಂದಲೇ ಎಷ್ಟೋ ಕುಟುಂಬಗಳು ಜೀವನವನ್ನು ನಡೆಸುತ್ತಿವೆ.

ಪಶ್ಚಿಮ ಘಟ್ಟಗಳ ತೋಟಗಳಲ್ಲಿ ಸಾಮಾನ್ಯವಾಗಿ ಏಲಕ್ಕಿ ಕೃಷಿಯನ್ನು ನೋಡಬಹುದು. ತಂಪಾದ ಹವೆ ಇರುವ ಇಳಿಜಾರು ಪ್ರದೇಶಗಳಲ್ಲಿ ವಾಸಿಸುವ ಮಲೆಕುಡಿಯರು ಏಲಕ್ಕಿ ಬೆಳೆಯುವರು. ಮೊದಲು ಒಟ್ಲು ಪಾತಿಗೆ ನೆರಳು ಮಾಡುತ್ತಾರೆ. ಬೀಜ ಬಿತ್ತಿದ ಒಂದು ತಿಂಗಳ ಬಳಿಕ ಮೊಳಕೆ ಬರಲು ಪ್ರಾರಂಭಿಸಿ ಸುಮಾರು ಎಂಟು ತಿಂಗಳಲ್ಲಿ ಸಸಿ ದೊಡ್ಡದಾಗುತ್ತದೆ. ಆಮೇಲೆ ಅವುಗಳನ್ನು ತೋಟದಲ್ಲಿ ನೆಡುತ್ತಾರೆ, ಏಲಕ್ಕಿಯು ದೀರ್ಘಕಾಲದ ಬೆಳೆಯಾದ್ದರಿಂದ ಕೊಟ್ಟಿಗೆ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರವನ್ನು ಕೊಟ್ಟು ಕೃಷಿ ಮಾಡಿಕೊಳ್ಳುತ್ತಾರೆ. ಹೀಗೆ ಸಸಿಗಳನ್ನು ನೆಟ್ಟ ಮೂರು ವರ್ಷಗಳ ಬಳಿಕ ಫಲ ದೊರೆಯುತ್ತದೆ. ಐದು ವರ್ಷದ ಅನಂತರ ಲಾಭದಾಯಕ ಫಲ ಸಿಗುತ್ತದೆ. ಒಂದು ಗಿಡ ಸರಾಸರಿ ಹದಿನೈದು ವರ್ಷಗಳ ತನಕ ಹೇರಳವಾಗಿ ಫಸಲನ್ನು ನೀಡುತ್ತದೆ, ಏಲಕ್ಕಿ ಗಿಡ ಏಪ್ರಿಲ್-ಮೇ ತಿಂಗಳಿನಿಂದ ಹೂ ಬಿಡಲು ಪ್ರಾರಂಭಿಸುತ್ತದೆ, ಹೂ ಬಿಟ್ಟ ಸುಮಾರು ನಾಲ್ಕು ತಿಂಗಳ ಅನಂತರ ಕಾಯಿ ಬಲಿಯುತ್ತದೆ, ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಕುಯ್ಲು ನಡೆಸುತ್ತಾರೆ, ಕಾಯಿಗಳು ಒಂದೇ ಬಾರಿಗೆ ಕುಯ್ಲಿಗೆ ಬರುವುದಿಲ್ಲವಾದ್ದರಿಂದ ಐದು ಆರು ಬಾರಿ ಕುಯ್ಲು ಮಾಡುತ್ತಾರೆ. ಕುಯ್ಲು ಸುಮಾರು ಒಂದೂವರೆ ತಿಂಗಳು ಸಾಗುತ್ತದೆ. ಅನಂತರ ಕಾಯಿಯನ್ನು ಬಿಸಿಲಿನಲ್ಲಿ ಒಣಗಿಸಿ ಹದಗೊಳಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವರು.

ಮಲೆಕುಡಿಯರು ತಮ್ಮ ಜೀವನ ನಿರ್ವಹಣೆಗಾಗಿ ದೊಡ್ಡ ದೊಡ್ಡ ಜಮೀನುದಾರರ ತೋಟಗಳಲ್ಲಿ ಕೃಷಿ ಕೂಲಿಗಳಾಗಿ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಶ್ರೀಮಂತರ ಜಮೀನಿನಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ತೋಟಗಳಲ್ಲಿ ಕಾಫಿ ಕುಯ್ಯುವ, ಏಲಕ್ಕಿ ಕುಯ್ಯುವ, ತೆಂಗಿನ ಕಾಯಿಗಳನ್ನು ಕೀಳುವ, ಸಿಪ್ಪೆಗಳನ್ನು ಸುಲಿಯುವ, ಅಡಕೆ ಕಿತ್ತು ಸಂಗ್ರಹಿಸುವ ಹಾಗೂ ಬಿಡಿಸುವ, ಅವುಗಳನ್ನು ದಾಸ್ತಾನು ಮಾಡುವ, ಕಾಡು ಕಡಿಯುವ, ತೋಟಕಾಯುವ, ಗೊಬ್ಬರ ಹಾಕುವ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ದಿನವೊಂದರ ಕೂಲಿ ಗಂಡಸರಿಗೆ 150 ರೂ ಆದರೆ ಹೆಂಗಸರಿಗೆ 125 ರೂ ನಿಗದಿಯಾಗಿರುತ್ತದೆ. ಇಂತಹ ಕೆಲಸಗಳಿಂದ ಬರುವ ಆದಾಯದಲ್ಲಿ ಜೀವನ ಮಾರ್ಗವನ್ನು ಕಂಡುಕೊಂಡಿದ್ದಾರೆ. ಮಲೆಕುಡಿಯರು ಕೃಷಿ ಕೂಲಿ ಮಾಡುವುದರ ಜೊತೆಗೆ ಆಗಿಂದಾಗ್ಗೆ ಸರ್ಕಾರವು ಕೈಗೊಳ್ಳುವ ರಸ್ತೆ, ಚರಂಡಿ ಮತ್ತು ಗಣಿಗಾರಿಕೆಯ ಕಾಮಗಾರಿಗಳಲ್ಲಿ ಕೂಲಿ ಆಳುಗಳಾಗಿ ದುಡಿಯುತ್ತಿದ್ದಾರೆ. ಇತ್ತೀಚೆಗೆ ಕೆಲವು

ಮಲೆಕುಡಿಯ ಯುವಕ ಯುವತಿಯರು ಬೆಂಗಳೂರು, ಮೈಸೂರು, ಕೇರಳ, ಮಂಗಳೂರು ಹಾಗೂ ಮಡಿಕೇರಿಯ ಪ್ರವೇಟ್ ಕಂಪನಿಗಳು, ಗಾರ್ಮೆಂಟ್ಸ್‌ಗಳು, ಹೊಟೆಲ್‌ಗಳು, ಕಾರ್ಖಾನೆಗಳು ಹಾಗೂ ಇತರೆ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಕೆಲವು ಯುವಕರು ಯಂತ್ರಗಳ ಚಾಲಕರಾಗಿ ಕೆಲಸ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವು ಮಹಿಳೆಯರು ಮನೆಯಲ್ಲಿಯೇ ಬೀಡಿಸುತ್ತುವ, ಟೈಲರಿಂಗ್ ಮಾಡುವ ವೃತ್ತಿಯನ್ನು ಅವಲಂಬಿಸಿಕೊಂಡು ಜೀವನ ನಿರ್ವಹಿಸುತ್ತಿದ್ದಾರೆ.

**ಬೈನೆ ಹೆಂಡ ಇಳಿಸುವುದು :** ಪೂಮಲೆಕುಡಿಯರ ಕುಲ ಕಸುಬೇ ಹೆಂಡ ಇಳಿಸುವುದು. ಇವರಲ್ಲಿ ಸ್ತ್ರೀ-ಪುರುಷ ಇಬ್ಬರೂ ಬೈನೆ ಮರದಿಂದ ಹೆಂಡ ತೆಗೆಯುವ ಕೆಲಸವನ್ನು ಕರಗತ ಮಾಡಿಕೊಂಡಿದ್ದಾರೆ. ಈ ವೃತ್ತಿಯನ್ನು ದೇವರೇ (ಈಶ್ವರ) ದಯಪಾಲಿಸಿದ್ದಾನೆ ಎಂಬುದಾಗಿ ಇವರು ಹೇಳುವರು. ದೇವರನ್ನು ಮಲೆ ಕುಡಿಯರು 'ಮಲೆತಮ್ಮಚ್ಚ' ಎಂದು ನಂಬಿದ್ದಾರೆ. ಬೈನೆ ಮರಗಳೇ ಇವರ ಜೀವನಕ್ಕೆ ಆಧಾರ ಸ್ತಂಬಗಳಾಗಿದ್ದವು. ಸಾಮಾನ್ಯವಾಗಿ 15-20 ಅಡಿ ಬೆಳೆದ ಮರ ಸುಮಾರು 12 ಹೊಂಬಾಳೆಗಳನ್ನು ಬಿಟ್ಟಿರುತ್ತದೆ. ಇಂಥ ಮರಕ್ಕೆ ಮೊದಲು ಪೂಜೆ ಸಲ್ಲಿಸಿ ಮಲೆತಮ್ಮಚ್ಚ ದೇವರಿಗೆ ನಮಸ್ಕಾರ ಮಾಡಿ ನಮಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕಾಪಾಡು ದೇವರೇ ಎಂದು ಪ್ರಾರ್ಥಿಸಿ ಮರವನ್ನು ಏರಿ ಅದರ ಸುತ್ತಾ ಬೆಳೆದಿರುವ ಗರಿಗಳನ್ನು ಸ್ವಚ್ಛಗೊಳಿಸಿ ಅದರ ಕುತ್ತಿಗೆಯಿಂದ ಸುಮಾರು ಒಂದೂವರೆ ಅಡಿ ಕೆಳ ಭಾಗದ ನಿರ್ದಿಷ್ಟ ಸ್ಥಳದ ಕಾಂಡವನ್ನು ಅದಕ್ಕೆಂದೇ ಬಳಸುವ ಉಪಕರಣದ ಮೂಲಕ ಕೊರೆಯುವರು. ಅದರ ಕೆಳ ಭಾಗಕ್ಕೆ ಮಣ್ಣಿನ ಮಡಕೆ ಕಟ್ಟುವರು. ಮರದಿಂದ ಬರುವ ದ್ರವ ಮಡಕೆಯಲ್ಲಿ ಸಂಗ್ರಹವಾಗಿರುತ್ತದೆ. ಈ ಹೆಂಡವನ್ನು 10 ದಿನಗಳಿಗೊಮ್ಮೆ ಇಳಿಸಿಕೊಳ್ಳುವರು. ಮೊದಲು ಸಂಗ್ರಹಿಸುವ ಹೆಂಡವನ್ನು ದೇವರಿಗೆ ಅರ್ಪಿಸುವರು. ಆ ಮಡಕೆಯಲ್ಲಿ ಸುಮಾರು 15ರಿಂದ 20 ಲೀಟರ್‌ವರೆಗೆ ಬೈನೆ ಹೆಂಡ ಇಳಿದಿರುತ್ತದೆ.

ಇವರು ತಾಳೆ, ಈಚಲು ಮತ್ತು ತೆಂಗಿನ ಮರದ ಹೆಂಡವನ್ನು ಇಳಿಸುತ್ತಾರೆ. ಹೆಂಡವನ್ನು ತೆಗೆದುಕೊಂಡು ಅವರಿಗೆ ಎಷ್ಟು ಬೇಕೋ ಅಷ್ಟನ್ನು ಉಪಯೋಗಿಸಿಕೊಂಡು ಉಳಿದವನ್ನು ಇತರರಿಗೆ ಮಾರಾಟ ಮಾಡುತ್ತಾರೆ. ಒಂದು ಲೀಟರ್ ಬೈನೆ ಹೆಂಡ 15ರಿಂದ 20 ರೂಗೆ ಮಾರುತ್ತಾರೆ. ಈ ಹೆಂಡವನ್ನು ಆರು ತಿಂಗಳ ಮಗುವಿಗೂ ಕೂಡ ಕುಡಿಯಲು ಕೊಡುತ್ತಾರೆ. ಬೆಳಗ್ಗೆ ಹೆಂಡ ಹೊಸದಾಗಿದ್ದಾಗ ಅದು ಸಿಹಿಯಾಗಿದ್ದು ಪುಷ್ಟಿದಾಯಕವಾಗಿರುತ್ತದೆ. ಬಿಸಿಲಿನ ಕಿರಣ ಹೆಚ್ಚಾದಂತೆ ಅದು ಹುಳಿಯಾಗಿ ಅಮಲುಂಟುಮಾಡುತ್ತದೆ.

ಮಲೆಕುಡಿಯ ಬುಡಕಟ್ಟು ಸಮುದಾಯಗಳ ಪ್ರಮುಖ ಆರ್ಥಿಕ ಮೂಲಗಳಲ್ಲಿ ಜೇನು ಕೃಷಿ ಕೂಡ ಪ್ರಮುಖವಾದುದು. ಇವರು ತುಡುವೆ ಜೇನು ಹಾಗೂ ಕಾಡು ಜೇನನ್ನು ಅತ್ಯಂತ ನೈಪುಣ್ಯತೆಯಿಂದ ಸಂಗ್ರಹಿಸುವರು. ಇದರ ಜೊತೆಗೆ ಜೇನು ಪೆಟ್ಟಿಗೆಗಳ ಮೂಲಕ ಉತ್ಪಾದಿಸುವ ಜೇನನ್ನು ಸಹಕಾರಿ ಸಂಘಗಳಿಗೆ ಮಾರಾಟ ಮಾಡುವರು. ತುಡುವೆ ಜೇನಿಗೆ ಹೆಚ್ಚಿನ ಬೇಡಿಕೆ ಇದ್ದು ಅದನ್ನು ಒಂದು ಬಾಟಲಿಗೆ - 250ರಿಂದ 300ರೂವರೆಗೆ ಮಾಡುವರು. ಇದು ಸಹ ಇವರ ಆರ್ಥಿಕ ಪುನಶ್ಚೇತನಕ್ಕೆ ಸಹಕಾರಿಯಾಗಿದೆ.

ಮಲೆಕುಡಿಯರ ಮತ್ತೊಂದು ಗುಂಪಿನವರಾದ ತೇಮಲೆಕುಡಿಯರ ಮೂಲ ವೃತ್ತಿ ಜೇನು ಸಂಗ್ರಹಿಸುವುದಾಗಿದೆ. ದೊಡ್ಡ ದೊಡ್ಡ ಮರಗಳಿರುವ, ಮನುಷ್ಯರು ಏರಲು ಅಸಾಧ್ಯವೆನ್ನಬಹುದಾದ ಕಾಡುಗಳಲ್ಲಿ ಹೆಜ್ಜೇನು ವಾಸಿಸುತ್ತವೆ. ಕೊಡಗು ಭಾಷೆಯಲ್ಲಿ ತೇನು ಅಂದರೆ ಜೇನು ಎಂದು ಅರ್ಥ, ಇಂತಹ ದಟ್ಟವಾದ ಅರಣ್ಯದ ಗುಹೆಗಳಲ್ಲಿ ಮತ್ತು ದೊಡ್ಡ ದೊಡ್ಡ ಮರಗಳಲ್ಲಿ ಹೇರಳವಾಗಿ ಕಟ್ಟುವ ಹೆಜ್ಜೇನನ್ನು ಸಂಗ್ರಹಿಸುವುದನ್ನೆ ಕಸುಬಾಗಿಸಿಕೊಂಡಿರುವ ಜನರನ್ನು ತೇಮಲೆ ಕುಡಿಯರು ಎಂದು ಕರೆಯುತ್ತಾರೆ.

ಬುಟ್ಟಿ ಹೆಣೆಯುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಲೆಕುಡಿಯರು ಮತ್ತು ಕೊಡಗು ಜಿಲ್ಲೆಯಲ್ಲಿರುವ ಅಡಕೆ ಕುಡಿಯರ ಕುಲ ಕಸುಬಾಗಿದೆ. ಇವರು ಕಾಡಿನ ಬಿದಿರು, ಬೆತ್ತ ಮತ್ತು ಇತರೆ ಬಳ್ಳಿಗಳನ್ನು ಬಳಸಿಕೊಂಡು ಮರ, ಕುಕ್ಕೆ, ಮಂಕರಿ, ಬುಟ್ಟಿ, ತಡಿಕೆ, ಪೆಟ್ಟಿಗೆ, ಪಂಜರ ಮುಂತಾದ ಬಗೆಯ ಗೃಹ ಉಪಯೋಗ ವಸ್ತುಗಳಾದ ಮೀನು ಹಾಕುವ ಪುಡಿಕ್ಕೆ, ಕೋಳಿ ಮರಿಗಳನ್ನು ಮುಚ್ಚಿಡುವ ಕೂಟಾಯಿ, ತರಗೆಲೆ ತರುವ ಕುರ್ಕಿಲ್‌ಗಳನ್ನು ತಯಾರಿಸುತ್ತಾರೆ. ಇತ್ತೀಚೆಗೆ ಬೆತ್ತದಿಂದ ಕುರ್ಚಿಗಳನ್ನು ಮಾಡುತ್ತಿದ್ದಾರೆ. ಬೆಳ್ತಂಗಡಿ ತಾಲ್ಲೂಕಿನ ಶಿಲದಲ್ಲಿ ಮಲೆಕುಡಿಯರಿಗಾಗಿಯೇ ಬೆತ್ತದ ಮತ್ತು ಮರದ ಸಾಮಗ್ರಿಗಳನ್ನು ತಯಾರು ಮಾಡುವ ಒಂದು ಸಹಕಾರಿ ಸಂಘವೂ ಇದೆ. ಮಲೆಕುಡಿಯರು ತಯಾರಿಸುವ ಬೆತ್ತದ ಮತ್ತು ಮರದ ಎಲ್ಲಾ ವಸ್ತುಗಳನ್ನು ಸಂಘವೇ ಕೊಂಡು ಮಾರಾಟ ಮಾಡುತ್ತದೆ. ಹೆಂಗಸರು 'ಮುಂಡೇವು' ಎಂಬ ಗಿಡದ ಎಲೆಗಳಿಂದ ಚಾಪೆ ಹೆಣೆಯುತ್ತಾರೆ. ಅಲ್ಲದೆ ಮನೆಯಲ್ಲಿ ವಸ್ತುಗಳನ್ನಿಡಲು ಸಣ್ಣ ಸಣ್ಣ ಪೆಟ್ಟಿಗೆಗಳನ್ನು ಹೆಣೆಯುವರು.

ಇತ್ತೀಚಿನ ಹೊಸಹೊಸ ಅರಣ್ಯ ನೀತಿಗಳಿಂದ ಕಾಡಿನಲ್ಲಿ ದೊರೆಯುವ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಹೆಚ್ಚು ನಿರ್ಬಂಧಗಳನ್ನು ತರುತ್ತಿರುವುದರಿಂದ ಕಾಡಿನಲ್ಲಿ ಬೆಳೆಯುವ ಬೆತ್ತ, ಬಿದಿರು, ಸಾಂಬಾರ ಪದಾರ್ಥಗಳಾದ ಚಕ್ಕೆ, ಮರಾಟಿ ಮೊಗ್ಗು, ಕಲ್ಲು ಹೂ ಮತ್ತು ಗಿಡಮೂಲಿಕೆಗಳನ್ನು ಸಂಗ್ರಹಿಸುವುದಕ್ಕೆ ನಿರ್ಬಂಧವನ್ನು ಹೇರಲಾಗಿದೆ. ಅಲ್ಲದೆ ರಾಷ್ಟ್ರೀಯ ಉದ್ಯಾನವನಗಳಿಗೆ ಪ್ರವೇಶಿಸುವುದನ್ನು ಅಕ್ರಮ ಪ್ರವೇಶವೆಂದು ಪರಿಗಣಿಸಿ ಅಂಥವರ ಮೇಲೆ ಕ್ರಮ ಜರುಗಿಸುವುದು ಸಾಮಾನ್ಯವಾಗಿದೆ. ಇದರಿಂದಾಗಿ ಕಾಡನ್ನೆ ನಂಬಿಕೊಂಡಿರುವ ಎಲ್ಲಾ ಪರಿಶಿಷ್ಟ ಬುಡಕಟ್ಟುಗಳಿಗೆ ಕಾಯಿದೆ ಕಟ್ಟಲೆಗಳು ಮಾರಕವಾಗಿ ಸಾಂಪ್ರದಾಯಿಕ ಕಸುಬುಗಳಿಗೆ ಕೊಡಲಿಪೆಟ್ಟು ಬಿದ್ದಿದೆ.

*ಆರ್. ಕೆ. ಜಿ.*

## ಮಲ್ಲಿಗೆ

ಭಾರತೀಯ ಸಂಸ್ಕೃತಿಯಲ್ಲಿ ಮಲ್ಲಿಗೆಗೆ ಮಹತ್ತ್ವದ ಸ್ಥಾನವಿದೆ. ಹೂವುಗಳಲ್ಲೆಲ್ಲಾ ಮಲ್ಲಿಗೆ ಪ್ರಸಿದ್ಧವಾದುದು. ಮಲ್ಲಿಗೆ ಎಂಬ ಪದವು ಸಂಸ್ಕೃತದ 'ಮಲ್ಲಿಕಾ'ದಿಂದ ಬಂದಿದೆ. ಇದು ಒಲಿಯೇಸಿ ಕುಟುಂಬಕ್ಕೆ ಸೇರಿದ್ದು. ಬೇಲಾ, ಚಂಪಾ, ಚಮೇಲಿ, ಜ್ಯೂಯಿ, ಮೋಟಿಯಾ, ಮೊಗ್ರಾ ಎಂಬ ಹೆಸರುಗಳಿಂದ ಗುರುತಿಸಿಕೊಂಡಿದೆ. ಜಸ್ಮಿನಮ್ ಸಮ್‌ಬಾಕ್ ಎತ್ ಎಂಬುದು ಇದರ ಸಸ್ಯವೈಜ್ಞಾನಿಕ ನಾಮ. ಇದರ ಹುಟ್ಟೂರು ಭಾರತ, ಚೀನಾ, ಬರ್ಮಾ, ಆಸ್ಟ್ರೇಲಿಯಾ ಮತ್ತು ಆಗ್ನೇಯ ಯೂರೋಪ್ ಉತ್ತರ ಅಮೆರಿಕ ಒಳಗೊಂಡಂತೆ ಪ್ರಪಂಚದ ಎಲ್ಲ ಭಾಗಗಳಲ್ಲಿ ಕಂಡುಬರುತ್ತದೆ. ಆಂಗ್ಲಭಾಷೆಯಲ್ಲಿ ಜಾಸ್ಮಿನ್ ಎಂದು ಕರೆಯುತ್ತಾರೆ.

ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಕೆಯಾಗುತ್ತದೆ. ಈ ಸುಗಂಧ ತೈಲವನ್ನು ಸಾಬೂನು, ಊದುಕಡ್ಡಿ, ಸೆಂಟು, ಅತ್ತರು, ಇತರ



ಸುವಾಸನೆಯುಳ್ಳ ಪದಾರ್ಥಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಸುಗಂಧತೈಲ, ಕಾಂಕ್ರಿಟ್ ಮತ್ತು ಅಬ್ಸುಲ್ಯೂಟ್‌ಗಳನ್ನು ಆಮದು ಮಾಡಿಕೊಳ್ಳುತ್ತಿರುವ ರಾಷ್ಟ್ರಗಳೆಂದರೆ ಇಂಗ್ಲೆಂಡ್, ಅಮೆರಿಕ ಸಂಯುಕ್ತ ಸಂಸ್ಥಾನ, ಹಾಲೆಂಡ್, ಸ್ವೀಡನ್ ಜಪಾನ್, ನಾರ್ವೆ ಮತ್ತು ರಷ್ಯಾ.

**ಉಪಯೋಗಗಳು :** ಮಲ್ಲಿಗೆಯಿಂದ ಹಲವು ಉಪಯೋಗಗಳುಂಟು. ಔಷಧೀಯ ಗುಣಗಳನ್ನು ಮೇಳೈಸಿ ಕೊಂಡಿರುವ ಈ ಹೂವನ್ನು ಹಿಂಡಿ ತೆಗೆದ ರಸ ಲೇಪನದಿಂದ ಚರ್ಮ ರೋಗ ನಿವಾರಣೆಯಾಗುವುದು. ತಲೆನೋವಿಗೂ ಇದು ಉಪಶಮನ ನೀಡುವುದು. ಮಲ್ಲಿಗೆಯ ಪರಿಮಳವನ್ನು ಆಘ್ರಾಣಿಸುವುದರಿಂದ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಮಲ್ಲಿಗೆ ವಾತಾವರಣವನ್ನು ತಿಳಿಗೊಳಿಸಿ ದೈಹಿಕ ಮಾನಸಿಕ ಆರೋಗ್ಯವನ್ನು ತಂದು ಕೊಡುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಬೇಸಗೆಯಲ್ಲಿ ಮಲ್ಲಿಗೆಯನ್ನು ಕಣ್ಣುಗಳ ಮೇಲೆ ಇಟ್ಟು ನಿದ್ರಿಸುವುದರಿಂದ ಕಣ್ಣಿನ ಉರಿ ಕಣ್ಣಿನ ಕೆಂಪು ಕಡಿಮೆಯಾಗಿ ಮನಸ್ಸಿಗೆ ಮುದನೀಡುತ್ತದೆ.

ಮಲ್ಲಿಗೆ ಜ್ಯೂಸ್, ಮಲ್ಲಿಗೆ ಟೀ, ತಯಾರಿಸುವುದಿದೆ. ವಾಣಿಜ್ಯ ಬೆಳೆಯಾಗಿ ಮಲ್ಲಿಗೆಯನ್ನು ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಇದು ಬೆಂಗಳೂರು ಮುಂಬೈ, ಮದ್ರಾಸ್, ದೆಹಲಿ, ಕಲ್ಕತ್ತಾಗಳಂತಹ ಮುಖ್ಯ ನಗರಗಳಲ್ಲಿ ಮಾರಾಟವಾಗುತ್ತಿದೆ.

**ಹವಾಗುಣ :** ದಕ್ಷಿಣ ಭಾರತದ ಹವಾಗುಣ ಈ ಹೂವಿನ ಬೇಸಾಯಕ್ಕೆ ಉತ್ತಮವಾಗಿದೆ. ಸಾಧಾರಣವಾದ ಬಿಸಿಲು, ಫಲವತ್ತಾದ ಕೆಂಪು ಗೋಡು ಮಣ್ಣು, ಕಪ್ಪು ಗೋಡು ಮಣ್ಣು ಮಲ್ಲಿಗೆ ಬೆಳೆಗೆ ಯೋಗ್ಯ.

ಮಲ್ಲಿಗೆಯನ್ನು ಬೀಜ ಮತ್ತು ನಿರ್ಲಿಂಗ ಪದ್ಧತಿಯಿಂದಲೂ ಬೆಳೆಸಬಹುದು. ಬೀಜಗಳಿಂದ ಬೆಳೆಸಬಹುದಾದರೆ ಬೀಜಗಳ ಮೇಲಿನ ಸಿಪ್ಪೆ ಸುಲಿದು ಲೋಳೆ ಪದಾರ್ಥವನ್ನು ನೀರಿನಲ್ಲಿ ತೊಳೆದು ಬಿತ್ತಬೇಕು. ಬಿಸಿ ವಾತಾವರಣದಲ್ಲಿ ಬೀಜ ಬೇಗ ಮೊಳೆಯುತ್ತದೆ. ಮರಳಿನಲ್ಲಿ ಬಿತ್ತುವುದರಿಂದ 3 ರಿಂದ 14ವಾರಗಳಲ್ಲಿ ಮೊಳೆಯುವುದು. ಮಳೆಗಾಲದಲ್ಲಿ ಬಿತ್ತುವುದು ಯುಕ್ತ.

ನಿರ್ಲಿಂಗ ಪದ್ಧತಿಯಲ್ಲಿ ಹಂಬಿನ ತುಂಡುಗಳನ್ನು ನೆಡುವುದರಿಂದ, ಗೂಟಿ ವಿಧಾನದಿಂದಲೂ ಗೂಟಿ, ಊರಿ ಬೇರು ಬಿಡುವಂತೆ ಮಾಡುವುದು. ಬೇರು ಚಿಗುರುಗಳನ್ನು ಪ್ರತ್ಯೇಕಿಸಿ ನೆಡುತ್ತಾರೆ. ಮಳೆಗಾಲದಲ್ಲಿ ನೆಡುವುದರಿಂದ ಸ್ಥಿರವಾಗಿ ನಿಂತು ಬೆಳೆಯುತ್ತವೆ.

ಭೂಮಿಯನ್ನು ಆಳವಾಗಿ ಉಳುಮೆ ಮಾಡಿ ಕಸ - ಕಡ್ಡಿ ಕಲ್ಲುಗಳನ್ನು ತೆಗೆದು ಹೆಂಟೆಗಳನ್ನು ಒಡೆದು ಭೂಮಿಯನ್ನು ಸಮ ಮಾಡಿ ಹೆಕ್ಟೇರಿಗೆ 40 ಟನ್‌ಕೊಳೆತ ತಿಪ್ಪೆ ಗೊಬ್ಬರವನ್ನು ಮಿಶ್ರ ಮಾಡಬೇಕು. ಅನಂತರ ಸೂಕ್ಷ್ಮ ಅಂತರದಲ್ಲಿ 45x45x45 ಸೆಂ.ಮೀ. ಉದ್ದಗಲ ಹಾಗೂ ಆಳ ಇರುವಂತೆ ಗುಂಡಿಗಳನ್ನು ತೆಗೆದು ಬಿಸಿಲಿಗೆ ಬಿಡಬೇಕು. ಇದನ್ನು ಏಪ್ರಿಲ್ - ಮೇ ತಿಂಗಳಲ್ಲಿ ಮಾಡುವುದು ಉತ್ತಮ. ಮಳೆ ಬಂದ ಅನಂತರ ಸಮ ಪ್ರಮಾಣದಲ್ಲಿ ತಿಪ್ಪೆ ಗೊಬ್ಬರ ಮತ್ತು ಮೇಲ್ಮಣ್ಣನ್ನು ತುಂಬಿಸಿ ಹಗುರವಾಗಿ ನೀರು ಹಾಕಬೇಕು. ಮಣ್ಣಿನ ಹೆಪ್ಪು ಸಮೇತ ಗಿಡಗಳನ್ನು ನೆಡಬೇಕು. ಗಿಡಗಳನ್ನು ನೆಡುವಾಗ ಮಣ್ಣು ಹಸಿಯಾಗಿರಬೇಕು. ಬೆಳಗ್ಗೆ ಅಥವಾ ಸಾಯಂಕಾಲದ ವೇಳೆ ನೆಡಬೇಕು. ಪ್ರತಿ ಗಿಡಕ್ಕೆ 40 ಕೆ.ಜಿ. ತಿಪ್ಪೆ ಗೊಬ್ಬರವನ್ನು ಅದರ ಜೊತೆಗೆ 120 ಗ್ರಾಂ ಸಾರಜನಕ, 240 ಗ್ರಾಂ ರಂಜಕ ಮತ್ತು 240 ಗ್ರಾಂ ಪೊಟ್ಯಾಷ್‌ಗಳನ್ನು ಕೊಡಬೇಕು. ರಾಸಾಯನಿಕಗಳನ್ನು ಎರಡು ಬಾರಿ ಸಮ ಕಂತುಗಳಲ್ಲಿ ಜನವರಿ ಹಾಗೂ ಜುಲೈನಲ್ಲಿ ಕೊಡಬೇಕು. ವಾರಕ್ಕೊಮ್ಮೆ ನೀರು ಹಾಯಿಸಬೇಕು. ಹೆಚ್ಚಾಗಿ ನೀರುಣಿಸುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು. ಪ್ರತಿ ನಾಲ್ಕು ಬಾರಿ ನೀರು ಹಾಯಿಸಿದಾಗ ಮಣ್ಣನ್ನು ಅಗೆದು ಗಿಡಗಳ ಬುಡಕ್ಕೆ ಕೊಡಬೇಕು. ಮಲ್ಲಿಗೆಯ ಹೂವು ವರುಷದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹೆಚ್ಚಾಗಿ ಬಿಡುತ್ತದೆ. ಗಿಡಗಳನ್ನು ನೆಟ್ಟ ವರುಷವೇ ಹೂವು ಸಿಗುತ್ತವೆ. ಪ್ರತಿ ಎಕರೆಗೆ 1000 ರಿಂದ 1500 ಕಿ.ಗ್ರಾಂ. ಹೂವುಗಳು ದೊರೆಯುತ್ತವೆ. ನೆಟ್ಟ ವರುಷದಿಂದ ನಾಲ್ಕರಿಂದ ಹನ್ನೆರಡು ವರುಷಗಳವರೆಗೆ ಅಧಿಕ ಇಳುವರಿ ಸಿಗುತ್ತದೆ. ಹೂವನ್ನು ಬೆಳಗ್ಗೆ 5 ರಿಂದ 7 ಗಂಟೆಗಳೊಳಗಾಗಿ ಬಿಡಿಸಬೇಕು. ಹೂವಿನ ಮೇಲೆ ಸೂರ್ಯ ರಶ್ಮಿ ಸ್ಪರ್ಶಿಸಿದರೆ ಅದರಲ್ಲಿಯ ಪರಿಮಳ ಬೀರುವ ಸೂಕ್ಷ್ಮ ಸುಗಂಧ ಮೂಲಗಳು ಹೊರಗಿನ ವಾತಾವರಣದಲ್ಲಿ ಬೆರೆತು ಸುವಾಸನೆ ಕಡಿಮೆಯಾಗುತ್ತದೆ.

ಪ್ರತಿದಿನ ಬೆಳಗಿನ ಹೊತ್ತಿನಲ್ಲಿ ಬಲಿತ ಮೊಗ್ಗುಗಳನ್ನು ಬಿಡಿಸಬೇಕು. ಒಂದು ಕೆಜಿ ತೂಕದಲ್ಲಿ 3000 ರಿಂದ 4000 ಮೊಗ್ಗುಗಳು ತೂಗುತ್ತವೆ. ಬಿಡಿಸಿದ ಹೂವುಗಳನ್ನು ಬಿದಿರು ಬುಟ್ಟಿಗಳನ್ನು ಸಡಿಲವಾಗಿ ಹೆಣೆದು ಮಾರುಕಟ್ಟೆಗೆ ಸಾಗಿಸುವರು. ಮಲ್ಲಿಗೆಯಲ್ಲಿ ಸುಮಾರು 300 ತಳಿಗಳಿವೆ. ಇದರಲ್ಲಿ ಸುಮಾರು 40 ತಳಿಗಳನ್ನು ಭಾರತದಲ್ಲಿ ಬೆಳೆಯುತ್ತಾರೆ. ಆದರೆ ವಾಣಿಜ್ಯ ದೃಷ್ಟಿಯಿಂದ ಬೆಳೆಯುವುದು ನಾಲ್ಕು ತಳಿಗಳನ್ನು ಮಾತ್ರ.

| | |
|---|---|
| ಸೂಜಿ ಮಲ್ಲಿಗೆ | ಜಾಸ್ಮಿನಂ ಅರಿಕ್ಯೂಲೇಟಂ |
| ಜಾಜಿಮಲ್ಲಿಗೆ | ಜಾಸ್ಮಿನಂ ಗ್ರ್ಯಾಂಡಿಫ್ಲೋರಂ |
| ಗುಂಡು ಮಲ್ಲಿಗೆ | ಜಾಸ್ಮಿನಂ ಸಾಂಬಾರ್ |
| ನಿತ್ಯಮಲ್ಲಿಗೆ | ಜಾಸ್ಮಿನಂ ಫ್ಲೆಕ್ಸೈಲ್ |

**ರೋಗಗಳು :** ಮಲ್ಲಿಗೆಗೆ ಹಲವು ರೋಗಗಳು ಬಾಧಿಸುತ್ತವೆ.

**ಎಲೆ ಚುಕ್ಕೆ ರೋಗ :** ಇದು ಶಿಲೀಂಧ್ರ ರೋಗವಾಗಿದ್ದು ಸರ್ಕೊಸ್ಪೋರ ಪ್ರಭೇದವು ಈ ರೋಗಕ್ಕೆ ಕಾರಣ. ಎಲೆಗಳ ಮೇಲೆ ಮಾಸಲು ಬಣ್ಣದ ಚುಕ್ಕೆಗಳು ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ರೋಗ ಮಿತಿ ಮೀರಿದಾಗ ಎಲೆಗಳು ಉದುರುತ್ತವೆ. ನಿವಾರಣೆಗೆ 10 ಲೀಟರ್ ನೀರಿಗೆ 30 ಗ್ರಾಂ ಗಂಧಕವನ್ನು ಮಿಶ್ರಣ ಮಾಡಿ ಸಿಂಪಡಿಸಬೇಕು.

**ಬಾಡುವ ರೋಗ :** ಗಿಡಗಳು ಇದ್ದಕ್ಕಿದ್ದಂತೆ ಬಾಡಿ ಸಾಯುತ್ತವೆ. ಇಂತಹ ಗಿಡಗಳನ್ನು ಬೇರು ಸಹಿತ ಕಿತ್ತು ಸುಟ್ಟು ಭೂಮಿಗೆ ಅಗತ್ಯ ಪ್ರಮಾಣದಲ್ಲಿ ತಾಮ್ರಯುಕ್ತ ಶಿಲೀಂಧ್ರ ನಾಶಕವನ್ನು ನೀರಿನಲ್ಲಿ ಮಿಶ್ರಣಮಾಡಿ ಬಳಸಬೇಕು.

**ಬೂದಿರೋಗ :** ರೋಗ ಬಂದಿರುವ ಗಿಡದ ಎಲೆ ಮತ್ತು ಇತರ ಭಾಗಗಳಲ್ಲಿ ಬೂದಿ ತರಹದ ಧೂಳು ಕುಳಿತಿರುತ್ತದೆ. ಸಸ್ಯದ ಯಾವ ಭಾಗದಲ್ಲಿ ಈ ಬೂದಿ ತರಹದ ಧೂಳು ವ್ಯಾಪಿಸಿರುತ್ತದೋ ಆ ಭಾಗವೆಲ್ಲಾ ಕಳಾಹೀನವಾಗಿರುತ್ತದೆ ಹಾಗೂ ಎಲೆಗಳು ಉದುರುತ್ತಿರುತ್ತವೆ. ಇದರ ನಿವಾರಣೆಗೆ 10 ಲೀಟರ್ ನೀರಿಗೆ 20 ಗ್ರಾಂ ಆಕ್ಸಿಥಿಯೊಕ್ವಿನಾಕ್ಸ್ ಮಿಶ್ರಣ ಮಾಡಿ ಸಿಂಪಡಿಸಬೇಕು. ತುಕ್ಕುರೋಗ, ಪಿಲ್ಲೋಡಿ, ವರ್ಣವಿನ್ಯಾಸ ಎಂಬ ರೋಗಗಳು ಬಾಧಿಸುತ್ತವೆ. ಕೀಟಗಳು ಎಲೆ ತಿನ್ನುವ ಕಂಬಳಿಹುಳು, ರಸ ಹೀರುವ ಜಿಗಣೆ, ಬೂಷ್ಟು, ತಿಂಗಣೆ, ಗಂಟುನುಸಿ, ಕೆಂಪುಜೇಡ ಎಂಬ ಕೀಟಗಳು ಬಾಧಿಸುತ್ತವೆ.

**ಮಲ್ಲಿಗೆ ಪ್ರಭೇದಗಳು :** ಪ್ರಪಂಚಾದ್ಯಂತ ಮಲ್ಲಿಗೆಯ ಸುಮಾರು 200 ಪ್ರಭೇದಗಳಿವೆ. ಮಲ್ಲಿಗೆಯ ರೂಪ, ಸುವಾಸನೆ, ಎಲೆಗಳ ಆಕಾರ, ಬೆಳವಣಿಗೆಯ ಕ್ರಮ ಇತ್ಯಾದಿ ವ್ಯತ್ಯಾಸಗಳ ಆಧಾರದ ಮೇಲೆ ಕೆಲವು ಮುಖ್ಯ ಪ್ರಭೇದಗಳನ್ನು ಗುರುತಿಸಬಹುದು.

**ದುಂಡು ಮಲ್ಲಿಗೆ :** 'ಜಾಸ್ಮಿನಮ್ ಸಾಂಬಾಕ್' ಇದರ ಸಸ್ಯವೈಜ್ಞಾನಿಕ ಹೆಸರು. ಅರೇಬಿಯನ್ ಜಾಸ್ಮಿನ್, ಟಸ್ಕನ್ ಜಾಸ್ಮಿನ್ ಎಂಬ ಹೆಸರುಗಳಿವೆ. ಕನ್ನಡದಲ್ಲಿ ಇರುವಂತಿಗೆ, ಸೂಜಿಮಲ್ಲಿಗೆ, ಮೈಸೂರು ಮಲ್ಲಿಗೆ, ಏಳುಸುತ್ತಿನ ಮಲ್ಲಿಗೆ ಎಂದು ಕರೆಯಲಾಗುತ್ತದೆ. ಎಲೆಗಳು ದೀರ್ಘವೃತ್ತಾಕಾರ ಇಲ್ಲವೆ ಅಂಡಾಕಾರವಾಗಿದ್ದು, ಅಭಿಮುಖ



ಮಾದರಿಯಲ್ಲಿ ಜೋಡಣೆಗೊಂಡಿರುತ್ತವೆ. ಗಾಢ ಪರಿಮಳಭರಿತವಾಗಿರುವ ಇದರ ಹೂಗಳು ಬಿಳಿ ಬಣ್ಣದಲ್ಲಿದ್ದು, ದಳಗಳು ಒಂಟಿ ಸುತ್ತಿನಲ್ಲಿ ಅಥವಾ ಅನೇಕ ಸುತ್ತುಗಳಲ್ಲಿರುತ್ತವೆ. ಭಾರತಾದ್ಯಂತ ಕಂಡುಬರುವ ಈ ಪ್ರಭೇದವನ್ನು ಉತ್ತರ ಪ್ರದೇಶದ ಕನೂಜ್, ಜೋದ್‌ಪುರ, ಘಾಜಿಪುರ ಮತ್ತು ಸಿಕಂದರ್ ಪುರಗಳಲ್ಲಿ ಬೃಹತ್ ಪ್ರಮಾಣದಲ್ಲಿ ಕೃಷಿ ಮಾಡಲಾಗುತ್ತದೆ.

**ಜಾಜಿ :** ಇದರ ಸಸ್ಯವೈಜ್ಞಾನಿಕ ಹೆಸರು 'ಜಾಸ್ಮಿನಮ್ ಗ್ರಾಂಡಿಫ್ಲೋರಮ್' ಸ್ಪ್ಯಾನಿಷ್ ಜಾಸ್ಮಿನ್, ಕಾಮನ್ ಜಾಸ್ಮಿನ್ ಎಂಬ ಅನ್ಯ ಹೆಸರುಗಳಿದ್ದು, ಕನ್ನಡದಲ್ಲಿ ಅಜ್ಜಿಗೆ, ಜಟಿಮಲ್ಲಿಗೆ, ಜಾಜಿಮಲ್ಲಿಗೆ ಎಂಬ ಪರ್ಯಾಯ ನಾಮಗಳಿವೆ. ಇದು ಪೊದೆ ಜಾತಿಯದಾಗಿದ್ದು,



ಆಸರೆಗಳನ್ನು ಅವಲಂಬಿಸಿ ಸುತ್ತಿಕೊಂಡು ಬೆಳೆಯುತ್ತದೆ. ಭಾರತ, ಯುರೋಪ್ ಹಾಗೂ ಮೆಡಿಟರೇನಿಯನ್ ಪ್ರದೇಶಗಳಲ್ಲಿ ಇದನ್ನು ವ್ಯಾಪಕವಾಗಿ ಕೃಷಿ ಮಾಡಲಾಗುತ್ತದೆ.

**ಸಣ್ಣ ಜಾಜಿ :** 'ಜಾಸ್ಮಿನಮ್ ಅಫಿಸಿನೇಲ್' ಇದರ ಸಸ್ಯ ವೈಜ್ಞಾನಿಕ ಹೆಸರು. ಇದು ಸಹ ಹಬ್ಬಿ ಬೆಳೆಯುವ ಪೊದೆ ಗಿಡವಾಗಿದೆ. ಹೂಗಳು ಬಿಳಿಬಣ್ಣದಲ್ಲಿದ್ದು, ಪ್ರತಿ ಹೂವಿನಲ್ಲಿ 4-5 ದಳಗಳಿರುತ್ತವೆ. ಈ ಪ್ರಭೇದದ ಮೂಲ ಪರ್ಷಿಯಾ ಅಥವಾ ಕಾಶ್ಮೀರ ಎನ್ನಲಾಗುತ್ತದೆ.

**ಸಣ್ಣ ಮೊಲ್ಲೆ :** 'ಜಾಸ್ಮಿನಮ್ ಅರಿಕ್ಯುಲೇಟಮ್' ಇದರ ಸಸ್ಯವೈಜ್ಞಾನಿಕ ಹೆಸರಾಗಿದ್ದು, ಮಧ್ಯಾಹ್ನ ಮಲ್ಲಿಗೆ, ವಸಂತಮೊಲ್ಲೆ, ಕಾಡರಮಲ್ಲಿಗೆ ಎಂಬ ಹೆಸರುಗಳಿಂದ ಸಹ ಪ್ರಚಲಿತದಲ್ಲಿದೆ. ಅಗಲವಾಗಿ ಹರಡಿಕೊಂಡು ಬೆಳೆಯುವ ಪೊದೆ ಸಸ್ಯವಾಗಿದೆ. ಎಲೆಗಳು ಸರಳ ಬಗೆಯಲ್ಲಿದ್ದು, ಹೂಗಳ ಬಣ್ಣ ಬಿಳುಪು. ದಕ್ಷಿಣ ಭಾರತದಲ್ಲೆಲ್ಲ ಕಾಣಸಿಗುವ ಇದನ್ನು ಉತ್ತರ ಪ್ರದೇಶ, ಬಿಹಾರ ಹಾಗೂ ಬಂಗಾಳಗಳಲ್ಲಿ ಹೆಚ್ಚು ಬೆಳೆಯುವರು.

**ಹಳದಿ ಮಲ್ಲಿಗೆ :** ಯಲ್ಲೊ ಜಾಸ್ಮಿನ್, ಇಟಾಲಿಯನ್ ಜಾಸ್ಮಿನ್, ನೇಪಾಳ ಜಾಸ್ಮಿನ್ ಇತರ ಹೆಸರುಗಳಾಗಿದ್ದು 'ಜಾಸ್ಮಿನಮ್ ಹ್ಯೂಮೈಲ್' ಇದರ ಸಸ್ಯವೈಜ್ಞಾನಿಕ ಹೆಸರಾಗಿದೆ. ಮೇಲ್ಮುಖವಾಗಿ ಹಬ್ಬಿ ಬೆಳೆಯುವ ಪೊದೆ ಜಾತಿಯದಾಗಿದ್ದು ಹೆಚ್ಚು ಹುಲುಸಾಗಿ ಬೆಳೆಯುತ್ತದೆ. ದೀರ್ಘ ಕಾಲ ಹೂ ಬಿಡುವುದರ ಜೊತೆಗೆ ಬೀಜಗಳನ್ನು ಪಡೆಯಬಹುದು. ಹೂಗಳು ಹಳದಿ ಬಣ್ಣದಲ್ಲಿರುವ ಈ ಪ್ರಭೇದ ಕಾಶ್ಮೀರದಿಂದ ನೇಪಾಳದವರೆಗೆ

ಮೂರುಸಾವಿರ ಮೀ. ಎತ್ತರದ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಬೆಳೆಯುತ್ತದೆ.

**ಕಾಡುಮಲ್ಲಿಗೆ :** 'ಜಾಸ್ಮಿನಮ್ ಆಂಗಸ್ಟಿಫೋಲಿಯಮ್' ಎಂಬ ಸಸ್ಯವೈಜ್ಞಾನಿಕ ಹೆಸರಿದ್ದು ವನಮಲ್ಲಿಗೆ ಎಂಬುದು ಪರ್ಯಾಯ ನಾಮವಾಗಿದೆ. ಈ ಮಲ್ಲಿಗೆ ದಕ್ಷಿಣ ಭಾರತದ ಗುಡ್ಡ ಪ್ರದೇಶಗಳಲ್ಲಿ ಬೆಳೆಯುವ ಕಾಡು ಜಾತಿಯದಾಗಿದೆ. ಇದರ ಹೂಗಳು ಬಿಳಿ ಬಣ್ಣದಲ್ಲಿದ್ದು, ನಕ್ಷತ್ರದಾಕಾರದಲ್ಲಿರುತ್ತವೆ.

**ಹಂಬುಮಲ್ಲಿಗೆ :** ಸಸ್ಯಶಾಸ್ತ್ರದಲ್ಲಿ ಇದನ್ನು 'ಜಾಸ್ಮಿನಮ್ ಆರ್ಬಾರೆಸೆನ್ಸ್' ಎಂದು ಗುರುತಿಸಲಾಗಿದೆ. ಸುಮಾರು ಸಾವಿರದ ನಾನ್ನೂರು ಮೀ. ಎತ್ತರದವರೆಗಿನ ಬೆಟ್ಟ ಪ್ರದೇಶಗಳಲ್ಲಿ ಬೆಳೆಯುವ ಸಾಮರ್ಥ್ಯವಿರುವ ಇದು ಹಿಮಾಲಯ ಶ್ರೇಣಿ, ಬಂಗಾಳ, ಒಡಿಶಾ, ಆಂಧ್ರದ ವಿಶಾಖಪಟ್ಟಣದಲ್ಲಿ ಸಾಮಾನ್ಯವಾಗಿದೆ. ಎಲೆಗಳು



ಸರಳವಾಗಿದ್ದು, ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿರುತ್ತವೆ. ಹೂಗಳು ಅಚ್ಚ ಬಿಳುಪು ಮತ್ತು ಸುವಾಸನಾಭರಿತವಾಗಿದ್ದು, ಒಂದೊಂದು ಮಂಜರಿಯಲ್ಲಿ 15-20 ಹೂಗಳಿರುತ್ತವೆ.

**ನಿತ್ಯಮಲ್ಲಿಗೆ :** ಇದರ ಸಸ್ಯವೈಜ್ಞಾನಿಕ ಹೆಸರು 'ಜಾಸ್ಮಿನಮ್ ಫ್ಲೆಕ್ಸೈಲ್'. ಹಂಬಿನ ರೂಪದಲ್ಲಿ ಬೆಳೆಯುವ ಇದು ಅಸ್ಸಾಂ ಹಾಗೂ ದಕ್ಷಿಣ ಭಾರತದ ಎತ್ತರದ ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದು ವರ್ಷವಿಡೀ ಹೂ ಬಿಡುವುದಾದರೂ ಚಳಿಗಾಲದಲ್ಲಿ ಹೂಗಳ ಸಮೃದ್ಧಿ ಹೆಚ್ಚು.

**ಕಾಕಡ :** 'ಜಾಸ್ಮಿನಮ್ ಮಲ್ಟಿಫ್ಲೋರ್‌ಮ್' ಅಥವಾ 'ಜಾಸ್ಮಿನಮ್ ಪ್ಯೂಬೆಸೆನ್ಸ್' ಸಸ್ಯವೈಜ್ಞಾನಿಕ ಹೆಸರಾಗಿದ್ದು, ಭಾರತದಾದ್ಯಂತ ಬೆಳೆಯುತ್ತವೆ. ಕುರುಚಲು ಪೊದೆಯ ರೂಪದಲ್ಲಿ ಹರಡಿಕೊಂಡು ಬೆಳೆಯುವ ಇದು ವರ್ಷವಿಡೀ ಹೂ ಬಿಡುತ್ತದೆ. ಹೂಗಳು ಅಚ್ಚ ಬಿಳಿ ಬಣ್ಣದಲ್ಲಿದ್ದು, ಸುವಾಸನೆ ಇರುವುದಿಲ್ಲ.

**ನಾಗಮಲ್ಲಿಗೆ :** ಮೂಲಿಕೆ ಸಸ್ಯವಾಗಿರುವ ಇದು 'ಅಕ್ಯಾಂತೇಸೀ' ಕುಟುಂಬಕ್ಕೆ ಸೇರಿದೆ. ಇದರ ಸಸ್ಯವೈಜ್ಞಾನಿಕ ಹೆಸರು 'ರೈನಕಾಂತಸ್ ಕಮ್ಯೂನಿಸ್' ಇದರ ಮೂಲಸ್ಥಾನ ಭಾರತ ಮತ್ತು ಮಲಯ.

ನಾಗಮಲ್ಲಿಗೆಯನ್ನು ಕಂದು (ಸಿಕರ್) ಮತ್ತು ಬೀಜಗಳಿಂದ ಕೃಷಿ ಮಾಡಬಹುದು. ಇದು 1-2 ಮೀ ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ಸರಳವಾಗಿದ್ದು, ಸುತ್ತುಮಾದರಿಯಲ್ಲಿ ಜೋಡಣೆಗೊಂಡಿರುತ್ತದೆ. ಇದರ ಹೂಗಳು ಗೊರಟೆ ಹೂಗಳನ್ನು ಹೋಲುತ್ತವೆ.

**ಕೃಷಿ :** ಮಲ್ಲಿಗೆಯನ್ನು ಲಿಂಗ ರೀತಿ (ಬೀಜಗಳಿಂದ) ಮತ್ತು ನಿರ್ಲಿಂಗ ರೀತಿಗಳಿಂದ ಕೃಷಿ ಮಾಡಬಹುದು. ಬೀಜಗಳ ಮೂಲಕ ಕೃಷಿ ಕೈಗೊಳ್ಳುವುದು ಶ್ರಮದಾಯಕವಾಗಿರುವುರಿಂದ ಈ ವಿಧಾನ ವಿರಳ. ಹದವಾಗಿ ಬಲಿತ ಕಾಂಡ ಕಡ್ಡಿಗಳು (ಕಟಿಂಗ್ಸ್), ಕಂದು ಸಸಿಗಳು (ಸಕರ್ಸ್), ಕಸಿಕಡ್ಡಿಗಳ (ಲೇಯರ್)ಮೂಲಕ ಕೃಷಿ ಮಾಡುವುದೇ ಎರಡನೆಯ ವಿಧಾನ. ಜನವರಿ - ಫೆಬ್ರವರಿ ತಿಂಗಳುಗಳಲ್ಲಿ ತಾಯಿಗಿಡಗಳಿಂದ ಆಯ್ದ ತುಂಡುಗಳನ್ನು ಸುಮಾರು 0.3 ಮೀ ಉದ್ದಕ್ಕೆ ಕತ್ತರಿಸಿ, ನೆರಳಿರುವ ಕಡೆಗಳಲ್ಲಿ ಪಾತಿ ಮಾಡಿ, ಸ್ವಲ್ಪ ಓರೆಯಾಗಿ ನೆಡಲಾಗುತ್ತದೆ. ಕಡ್ಡಿಗಳು ನಾಟಿ ಮಾಡಿದ 40-45 ದಿನಗಳ ಅನಂತರ ಬೇರುಬಿಟ್ಟು ಚಿಗುರುತ್ತವೆ. ಅಲ್ಲದೆ ತಾಯಿಗಿಡದ ಬುಡದಲ್ಲಿ ಹುಟ್ಟುವ ಕಂದು ಸಸಿಗಳನ್ನು ಬೇರು ಹರಿಯದಂತೆ ಕಿತ್ತು ನಾಟಿ ಮಾಡುವುದು ಮತ್ತೊಂದು ವಿಧಾನವಾಗಿದೆ. ಆದರೆ ಕಂದು ಸಸಿಗಳನ್ನು ಪಡೆಯಲು ಹೆಚ್ಚು ಸಮಯ ಹಿಡಿಯುವುದರಿಂದ ಈ ವಿಧಾನ ಹೆಚ್ಚು ಬಳಕೆಯಲ್ಲಿಲ್ಲ.

ಶುಷ್ಕತಾ ನಿರೋಧಿ ಗುಣವುಳ್ಳ ಮಲ್ಲಿಗೆ ಗಿಡಗಳು ಉಷ್ಣ ಹಾಗೂ ಸಮಶೀತೋಷ್ಣ ಪ್ರದೇಶಗಳೆರಡರ ಪರಿಸ್ಥಿತಿಗಳಿಗೆ ಒಗ್ಗಿಕೊಂಡು ಬೆಳೆಯಬಲ್ಲವು. ಭಾರತದಲ್ಲಿ ಮೈದಾನ ಪ್ರದೇಶಗಳಲ್ಲದೆ ಬೆಟ್ಟ ಪ್ರದೇಶಗಳಲ್ಲೂ ಇದನ್ನು ಕೃಷಿ ಮಾಡಬಹುದು. ಯಾವ ಬಗೆಯ ಮಣ್ಣಿನಲ್ಲಾದರೂ ಬೆಳೆಸಬಹುದಾದರೂ ಗೋಡುಮಣ್ಣು ಇಲ್ಲವೆ ನೀರಾವರಿ ಸೌಲಭ್ಯವಿರುವ ಒಣ ಮರಳು ಭೂಮಿ ಒಳ್ಳೆಯದು.

ಮಲ್ಲಿಗೆಯನ್ನು ದೊಡ್ಡ ಪ್ರಮಾಣದಲ್ಲಿ ಕೃಷಿ ಮಾಡುವುದಾದರೆ ಪೊದೆ ಜಾತಿಯದಾದರೆ ಎಕರೆಗೆ 722 ಸಸಿಗಳು, ಹಂಬಿನ ಬಗೆಯದಾದರೆ 302 ಸಸಿಗಳು ಬೇಕಾಗುತ್ತವೆ. ಪೊದೆ ಜಾತಿಯ ಗಿಡಗಳ ನಡುವಣ ಅಂತರ ಸುಮಾರು 1.4 ಮೀ. ಇರಬೇಕು, ಹಂಬಿನ ತಳಿಗಳಾದರೆ ಸುಮಾರು 4 ಮೀ ಇರಬೇಕು. ನಾಟಿ ಮಾಡುವ ಮೊದಲು ನೆಲವನ್ನು ಚೆನ್ನಾಗಿ ಉತ್ತು, ಹದಗೊಳಿಸಿ, ಗಿಡಗಳ ಅಂತರವನ್ನು ನೋಡಿಕೊಂಡು ಗುಂಡಿ ತೋಡಿ ಗುಂಡಿಯಲ್ಲಿ ಕೊಳೆತ ಕಾಂಪೋಸ್ಟ್ ಸಗಣಿ ಗೊಬ್ಬರ ಹಾಗೂ ಕೆಮ್ಮಣ್ಣನ್ನು ಮಿಶ್ರಮಾಡಿ ಹಾಕಬೇಕು. ನಾಟಿ ಮಾಡಲು ಮುಂಗಾರು ಯೋಗ್ಯ ಕಾಲ. ಒಂದು ಸಾರಿ ಬಳ್ಳಿಗಳು ಭೂಮಿಯಲ್ಲಿ ಬೇರು ಬಿಟ್ಟ ಮೇಲೆ ಹೆಚ್ಚಿನ ಆರೈಕೆಯ ಅಗತ್ಯವಿಲ್ಲ. ಚಳಿಗಾಲದಲ್ಲಿ (ಜನವರಿ-ಫೆಬ್ರವರಿ) ಗಿಡದ ಪಾತಿಯನ್ನು ಅಗೆದು ಬೇರುಗಳನ್ನು ಬಿಸಿಲಿಗೆ ಒಡ್ಡಿದರೆ ಹೂ ಕಚ್ಚುವುದಕ್ಕೆ ಅನುಕೂಲ.

ಜನವರಿ -ಫೆಬ್ರವರಿ ಹಾಗೂ ಜುಲೈ ತಿಂಗಳುಗಳಲ್ಲಿ ವರ್ಷಕ್ಕೆ ಎರಡು ಬಾರಿಯಂತೆ ಗಿಡಗಳನ್ನು ಕತ್ತರಿಯಿಂದ ಸವರಲಾಗುತ್ತದೆ (ಪ್ರೂನಿಂಗ್). ಹೀಗೆ ಮಾಡುವುದರಿಂದ ಗಿಡವನ್ನು ಅಪೇಕ್ಷಿತ ಎತ್ತರಕ್ಕೆ ಇರಿಸಲು ಹಾಗೂ ಯಥೇಚ್ಛವಾಗಿ ಮೊಗ್ಗು ಕಚ್ಚುವಂತೆ ಮಾಡಲು ಸಹಾಯಕವಾಗುತ್ತದೆ.

ಪೊದೆ ಜಾತಿಯ ಮಲ್ಲಿಗೆಗಳು ವರ್ಷಕ್ಕೆ ಒಂದು ಸಲ ಬೇಸಗೆಯ ಆರಂಭದಿಂದ ಮೊದಲುಗೊಂಡು ಮಳೆಗಾಲ ಮುಗಿಯುವ ತನಕ ಚೆನ್ನಾಗಿ ಹೂ ಕೊಡುತ್ತವೆ. ಸಾಮಾನ್ಯವಾಗಿ ಒಂದು ಗಿಡ ಸುಮಾರು 15-20 ದಿನಗಳ ಕಾಲ ಹೂ ಕೊಡುತ್ತದೆ. ಹೆಕ್ಟೇರಿಗೆ ಸುಮಾರು 2000-2500

ಕೆ.ಜಿ. ಇಳುವರಿ ಸಿಗುತ್ತದೆ. ನಾಟಿ ಮಾಡಿದ ಆರಂಭದ ವರ್ಷಗಳಲ್ಲಿ ಇಳುವರಿ ಕಡಿಮೆಯಿದ್ದು 4-5 ವರ್ಷಗಳ ತರುವಾಯ ಗರಿಷ್ಠ ಇಳುವರಿ ಪಡೆಯಬಹುದು.

ಬಳ್ಳಿ ಜಾತಿಯ ಮಲ್ಲಿಗೆಗಳು ವರ್ಷವಿಡೀ ಇಲ್ಲವೆ ವರ್ಷದ ಹೆಚ್ಚು ಅವಧಿ ಹೂ ಬಿಡುತ್ತವೆ. ಫಲವತ್ತಾದ ಭೂಮಿ, ಒಳ್ಳೆಯ ಆರೈಕೆ ಇದ್ದಲ್ಲಿ 8-10 ವರ್ಷಗಳ ಕಾಲ ಒಳ್ಳೆಯ ಫಸಲು ಪಡೆಯಬಹುದು.

ಮಲ್ಲಿಗೆಯನ್ನು ಸಾಮಾನ್ಯವಾಗಿ ಮಧ್ಯಾಹ್ನದ ಸಮಯ ಗಿಡದಿಂದ ಬಿಡಿಸಲಾಗುವುದು. ಚೆನ್ನಾಗಿ ಬಲಿತ ಮೊಗ್ಗುಗಳನ್ನು ಅರಳುವ ಮುಂಚೆಯೇ ಕೈಯಿಂದ ಬಿಡಿಸಿ ತಂಪು ಸ್ಥಳಗಳಲ್ಲಿ ಸಂಗ್ರಹಿಸಲಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಹೂ, ಮೊಗ್ಗುಗಳನ್ನು ಯಂತ್ರಗಳ ಸಹಾಯದಿಂದ ಬಿಡಿಸುವರು.

**ಉಪಯೋಗ :** ಮಲ್ಲಿಗೆಯನ್ನು ಬಹುಪಾಲು ಹೂವಿನ ಹಾರ, ಹೂಗುಚ್ಛ, ದೇವರ ಪೂಜೆಗೆ ಬಳಸುತ್ತಾರೆ. ನಕ್ಷತ್ರಗಳಂತೆ ಸ್ವಚ್ಛವಾಗಿ ಬೆಳಗುವ ಮತ್ತು ಮಧುರ ಸುವಾಸನೆಯುಳ್ಳ ಮಲ್ಲಿಗೆ ಹೂಗಳೆಂದರೆ ಸ್ತ್ರೀಯರಿಗೆ ಪಂಚಪ್ರಾಣ. ಮಲ್ಲಿಗೆಯ ಹೂ ದಂಡೆಯಿಂದ ಜಡೆಯನ್ನು ಅಲಂಕರಿಸಿಕೊಳ್ಳುವರು. ಮಲ್ಲಿಗೆ ಹೂಗಳಿಂದ ಸುವಾಸನೆಯ ಎಣ್ಣೆ ಮತ್ತು ಅತ್ತರ್‌ಗಳನ್ನು ತಯಾರಿಸುವರು. ಎಣ್ಣೆಯನ್ನು ಸುಗಂಧ ದ್ರವ್ಯಗಳು, ಪ್ರಸಾದನ ಸಾಮಗ್ರಿಗಳು, ಮೈ ಸಾಬೂನು, ಅಗರಬತ್ತಿ, ಬಾಯಿ ದುರ್ಗಂಧ ನಾಶಕಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಮಲ್ಲಿಗೆಗೆ ಕೆಲವು ಔಷಧೀಯ ಗುಣಗಳಿದ್ದು ಎಲೆಯ ರಸವನ್ನು ಹಲ್ಲುನೋವಿಗೆ ಬಳಸುವರು. ವನ ಮಲ್ಲಿಗೆಯ ಎಲೆ, ಕಜ್ಜಿ, ತುರಿಕೆ, ಇಸುಬು ಮುಂತಾದ ಚರ್ಮರೋಗಗಳಿಗೆ ಔಷಧಿಯಾಗಿದೆ. ಜಾಜಿಯ ಬೇರನ್ನು ಗಜಕರ್ಣದ ಚಿಕಿತ್ಸೆಯಲ್ಲಿ ಬಳಸಲಾಗುವುದು. ಮುಖ ಹಾಗೂ ಕಣ್ಣುಗಳನ್ನು ತೊಳೆಯಲು ದುಂಡುಮಲ್ಲಿಗೆ ಹೂವಿನ ರಸ ಯೋಗ್ಯವಾದುದು. ಮಲ್ಲಿಗೆ ಕೃಷಿ ಮಾಡಿ, ಹೂವಿನ ಮಾರಾಟ ಮಾಡುವುದು ಇಂದು ಲಾಭದಾಯಕ ವೃತ್ತಿಯಾಗಿದೆ.

ಭಾರತದ ಕೆಲವು ಕಡೆಗಳಲ್ಲಿ ನಾಗಮಲ್ಲಿಗೆಯ ಬೇರನ್ನು ಹಾವು ಕಡಿತಕ್ಕೆ ಬಳಸುತ್ತಾರೆ. ಆದ್ದರಿಂದಲೇ ಇದಕ್ಕೆ ನಾಗಮುಳ್ಳಿ (ಕೋಬ್ರರೂಟ್), ನಾಗಮಲ್ಲೆ ಎಂಬ ಹೆಸರುಗಳುಂಟು. ಇದರ ಬೇರು ಮತ್ತು ಎಲೆಯ ರಸವನ್ನು ನಿಂಬೆರಸ, ಕರಿಮೆಣಸುಗಳ ಜೊತೆ ಸೇರಿಸಿ ಹಚ್ಚಿದರೆ ಇಸುಬು, ಹುಳುಕಡ್ಡಿಗಳನ್ನು ನಿವಾರಿಸಬಹುದು.

*ವಿ.ಎನ್.ಕೆ.*

**ಮಳೆ** ಪಂಚಭೂತಗಳಲ್ಲಿ ನೀರು ಕೂಡಾ ಒಂದು. ಉದಕದಿಂದ ಉದಯಿಸಿದ ಸಕಲ ಜೀವರಾಶಿಗಳಿಗೂ ಇದುವೇ ಪ್ರಾಣ. ನೀರಿನ ಪ್ರಾಮುಖ್ಯತೆಯಿಂದಾಗಿಯೇ ಮೊದಲು ಮಾನವನು ಜಲಾನಯನ ಪ್ರದೇಶಗಳ ಸನಿಹದಲ್ಲೆ ವಾಸಿಸ ತೊಡಗಿದನು. ಕಾಲ ಕ್ರಮೇಣ ಒಂದು ವರ್ಷದಲ್ಲಿ ಬೀಳುವ ಮಳೆಗಳ ಕ್ರಮ ಬದ್ಧ ತಿಳಿವಳಿಕೆ ಬಂದಿತು. ಒಂದೆಡೆ ನೆಲೆನಿಂತ ಮನುಷ್ಯ ಋತುಗಳಿಗನುಗುಣವಾಗಿ ಮಳೆಗಾಲವನ್ನು ವಿಭಾಗಿಸಿಕೊಂಡನು. ಮಳೆಗನುಸಾರವಾಗಿ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದನು. ಮಾನವನಿಗೂ, ಮಳೆಗೂ ನಿಕಟ ಬಾಂಧವ್ಯ ಏರ್ಪಟ್ಟಿತು. ಮಳೆ ಬಾರದಿದ್ದಾಗ ಅದು ದೈವೀಸ್ವರೂಪವೆಂದು ಭಾವಿಸಿ, ಮಳೆಯನ್ನು ಆಹ್ವಾನಿಸುವ ಆಚರಣೆಯನ್ನು ರೂಢಿಸಿಕೊಂಡನು. ಮಳೆಯ ರಭಸವನ್ನು ಮನಗಂಡು ಗಂಡು ಸ್ವರೂಪವನ್ನು ನೀಡಿ 'ಮಳೆರಾಯ' ಎಂದು ಕರೆದನು. ಪುರುಷತ್ವ ಪ್ರತೀಕದಂತೆ ಸುರಿದ ಮಳೆ ಭೂಮಿಯನ್ನು ತಲಪಿದ ಕೂಡಲೇ ಭೂಮಾತೆಯೊಡಗೂಡಿ ಕರುಣಾಮಯಿ ಮಾತೆಯಾಗಿ ಅವಿನಾಭಾವ ಸಂಬಂಧದಿಂದ ಸಕಲಜೀವರಾಶಿಗಳನ್ನು ಪೋಷಿಸಿ ಸಂರಕ್ಷಿಸುತ್ತದೆ. ಮಳೆ ಬಾರದೆ ಹೋದಾಗ

*ಬಾರೋ ಬಾರೋ ಮಳೆರಾಯ*
*ಬಾಳೆಯ ತೋಟಕೆ ನೀರಿಲ್ಲ*
*ಹುಯ್ಯೋ ಹುಯ್ಯೋ ಮಳೆರಾಯ*
*ಹೂವಿನ ತೋಟಕೆ ನೀರಿಲ್ಲ* -ಅಂತೆಯೇ

*ಕುಟ್ಟೋ, ಕುಟ್ಟೋ ಮಳೆರಾಯ*
*ಕಟ್ಟೆಗೆ ಕುಂಟೆಗೆ ನೀರಿಲ್ಲ*

ಎಂದು ಮಳೆರಾಯನನ್ನು ಪ್ರಾರ್ಥಿಸುವರು. ಇಂತಹ ನೂರಾರು ಜನಪದ ಗೀತೆಗಳು, ಮಳೆಯ ಕುರಿತು ರಚನೆಗೊಂಡವು. ಮೇಲಿನ ಗೀತೆ - ರೈತನ ಆಸೆ ಆಕಾಂಕ್ಷೆಗಳಿಗೆ ಹಿಡಿದ ಕನ್ನಡಿಯಂತೆ, ಬಾಳೆ ಗಿಡ ಹೂವಿನ ಸಸಿ ಒಂದೆರಡು ದಿನ ಮಳೆ ಇಲ್ಲದಿದ್ದರೂ ಬಾಡಿ ಹೋಗುತ್ತವೆ. ತುರ್ತಾಗಿಯು ಮಳೆಬೇಕು. ಆದರೆ ಮಳೆಯ ಪ್ರಾಮುಖ್ಯತೆ ಅಷ್ಟಕ್ಕೆ ನಿಲ್ಲುವುದಿಲ್ಲ. ಮಳೆಗಾಲದ ಅನಂತರವೂ ನೀರು ಬೇಕು, ಕೆರೆ, ಕಟ್ಟೆಗಳು ತುಂಬಬೇಕು. ತನಗಷ್ಟೆ ಅಲ್ಲದೇ ಪ್ರಾಣಿ, ಪಕ್ಷಿ ಸಹಿತವಾಗಿ ಸಕಲ ಜೀವರಾಶಿಗೂ ಬೇಕೆಂಬುದೇ ಅವನ ಬಯಕೆ.

**ಮಳೆಯ ಉತ್ಪತ್ತಿ :** ಸಮುದ್ರ, ಮಹಾಸಾಗರ, ನದಿ, ಕೊಳ, ಹಳ್ಳ ಮುಂತಾದವುಗಳ ನೀರು ಆವಿಯಾಗಿ ಮೋಡಗಳ ರೂಪದಲ್ಲಿ ಸಂಗ್ರಹವಾಗಿ, ಮೋಡಗಳ ಸಾಂದ್ರತೆ ಹೆಚ್ಚಿ ಮತ್ತು ಅಲ್ಲಿಯ ವಾತಾವರಣ ತಂಪಾದಾಗ ಮೋಡಗಳ ತೇವಾಂಶ ಹನಿಯಾಗಿ ಭೂಮಿಯನ್ನು ಸೇರುತ್ತದೆ. ನೆಲದ ಮೇಲೆ ಬಿದ್ದ ನೀರು ಹಳ್ಳ ನದಿಗಳ ಮೂಲಕ ಸಾಗರವನ್ನು ತಲುಪುವುದು. ಈ ಚಕ್ರ ಸತತ ಮುಂದುವರಿಯುವುದು. ಇದನ್ನು ವೈಜ್ಞಾನಿಕ ಪರಿಭಾಷೆಯಲ್ಲಿ 'ಜಲಚಕ್ರ' ಎಂದು ಕರೆಯಲಾಗುತ್ತದೆ. ನೆಲದ ಮೇಲಿನ ಮರಗಿಡಗಳು ಸಹ ಗಣನೀಯ ಪ್ರಮಾಣದಲ್ಲಿ ತೇವಾಂಶವನ್ನು ವಾತಾವರಣಕ್ಕೆ ಸೇರಿಸುತ್ತವೆ.

**ಮಳೆಯ ವರ್ಗೀಕರಣ :** ವಾಯು ಮಂಡಲವು ಧೂಳಿನಕಣಗಳಿಂದ ಹೊಗೆ ಮತ್ತು ಕಡಲಿನಿಂದ ಆವಿಯಾದ ನೀರಿನ ಕಣಗಳಿಂದ ಕೂಡಿದ್ದು ಅದರ ಜೊತೆಯಲ್ಲೆ ಸೂಕ್ಷ್ಮಗಾತ್ರದ ನೀರ ಹನಿಗಳು ವಾಯುವಿನ ಉನ್ನತ ಸ್ತರಗಳಲ್ಲಿ ಮೋಡಗಳಾಗಿ ತೇಲುತ್ತಿರುತ್ತವೆ. ಇವು ಮಳೆಯಾಗಿ ರೂಪುಗೊಳ್ಳಬೇಕಾದರೆ ನಾಲ್ಕು ಕ್ರಿಯಾತಂತ್ರಗಳು ಏಕಕಾಲಿಕವಾಗಿ ಸಂಭವಿಸುತ್ತವೆ. ಅವು ವಾಯುಶೀತಲತೆ, ಸಂಘಟನೆ, ಮೇಘ ಸಮುಚ್ಛಯ ಮತ್ತು ಮಳೆಗೆ ಕಾರಣವಾಗಲು ಸಾಕಾಗುವಷ್ಟು ಪ್ರಮಾಣದಲ್ಲಿ ತೇವದ ಸಂಚಯನ. ಈ ರೀತಿಯಲ್ಲಿ ಬೀಳುವ ಮಳೆಗೆ ಅನುಗುಣವಾಗಿ ಅದನ್ನು ವರ್ಗೀಕರಿಸಲಾಗಿದೆ.

ತುಂತುರು ಮಳೆ - ಗಂಟೆಗೆ ೦.೨೫ ಮಿ.ಮೀ.ಗಿಂತ ಕಡಿಮೆ ಪ್ರಮಾಣ
ಹಗುರ ಮಳೆ - ಗಂಟೆಗೆ ೦.೨೫ ಮಿ.ಮೀ.ಯಿಂದ ೧.೦ ಮಿ.ಮೀ.ವರೆಗೆ
ಸಾಧಾರಣ ಮಳೆ - ಗಂಟೆಗೆ ೧.೦ ಮಿ.ಮೀ. ಯಿಂದ ೪.೦ ಮಿ.ಮೀ.ವರೆಗೆ
ಭಾರೀ ಮಳೆ - ಗಂಟೆಗೆ ೪.೦ ಮಿ.ಮೀ. ಯಿಂದ ೧೬.೦ ಮಿ.ಮೀ.ವರೆಗೆ

ಅತೀಭಾರೀಮಳೆ - ಗಂಟೆಗೆ ೧೬.೦ ಮಿ.ಮೀ. ಯಿಂದ ೫೦ ಮಿ.ಮೀ.ವರೆಗೆ
ಭೀಕರ ಭಾರಿ ಮಳೆ - ಗಂಟೆಗೆ ೫೦ ಮಿ.ಮೀ.ಗಿಂತ ಹೆಚ್ಚು

ಇವುಗಳ ಜೊತೆಯಲ್ಲಿ ವಿಶೇಷವಾಗಿ ಸಿಡಿಲು ಮಳೆ ಮತ್ತು ಆಲಿಕಲ್ಲು ಮಳೆಯನ್ನು ಗಮನಿಸಬಹುದು.

**ಸಿಡಿಲು ಮಳೆ :** ಮಿಂಚು ಮತ್ತು ಗುಡುಗು ಸಹಿತವಾದ ಮಳೆಗೆ ಸಿಡಿಲು ಮಳೆ ಎಂದು ಹೆಸರು. ವಾಯು ಮಂಡಲದಲ್ಲಿ ತೀವ್ರ ಅಸ್ಥಿರತೆಯಿದ್ದು ತೇವಪೂರಿತ ವಾಯುವಿನ ಅಂಶವು ಬಹಳ ಎತ್ತರದಿಂದ ತೂರಲ್ಪಟ್ಟಾಗ ಸಿಡಿಲು ಉಂಟಾಗುತ್ತದೆ.

**ಆಲಿಕಲ್ಲು :** ವಾಯು ಮಂಡಲದಲ್ಲಿರುವ ನೀರ ಹನಿಗಳು ಒಟ್ಟಾಗಿ ಘನೀಕರಿಸಿ ಉಂಟಾಗುವುದು ಆಲಿಕಲ್ಲು. ಆಲಿಕಲ್ಲುಗಳ ಗಾತ್ರ ಒಂದು ಮಿತಿ ದಾಟಿದ ಬಳಿಕ ಅದು ಮೋಡಗಳ ಘರ್ಷಣೆಗೆ ಒಳಪಟ್ಟು, ಮಳೆಯ ಜೊತೆಯಲ್ಲಿ ಭೂಮಿಯನ್ನು ಸೇರುತ್ತದೆ.

**ಮಳೆಯ ಲಕ್ಷಣಗಳು :** ಸಾಮಾನ್ಯವಾಗಿ ಮಳೆಯ ಸಣ್ಣ ಹನಿಗಳು ಪೂರ್ಣ ಗೋಲಾಕಾರದಲ್ಲಿರುತ್ತವೆ. ದೊಡ್ಡ ಹನಿಗಳು ಬುಡದಲ್ಲಿ ಮಟ್ಟವಾಗಿರುತ್ತವೆ. ಅತಿ ದೊಡ್ಡ ಹನಿಗಳು ಪ್ಯಾರಾಚೂಟ್ ಆಕಾರದಲ್ಲಿರುತ್ತವೆ. ಮಳೆಯ ಹನಿಯ ಗಾತ್ರವು ಸಾಮಾನ್ಯವಾಗಿ 1-2 ಮಿ.ಮೀ. 5 ಮಿ.ಮೀ.ಗಿಂತ ದೊಡ್ಡ ಹನಿಗಳು ಅಸ್ಥಿರಗೊಂಡು ಒಡೆದು ಸಣ್ಣ ಸಣ್ಣ ಹನಿಗಳಾಗಿ ಮಾರ್ಪಡುತ್ತವೆ. ಸಮುದ್ರ ಮಟ್ಟದಲ್ಲಿ ಮತ್ತು ಬೀಸುಗಾಳಿಯಿಲ್ಲದಿರುವಾಗ 0.5 ಮಿ.ಮೀ. ಮಳೆಯು ನೆಲಕ್ಕೆ ಸೆಕೆಂಡಿಗೆ 2 ಮೀ. ವೇಗದಲ್ಲಿ ಇಳಿದರೆ 5 ಮಿ.ಮೀ. ಗಾತ್ರದ ಹನಿಯು ಸೆಂಕೆಡಿಗೆ 9 ಮೀ. ವೇಗದಲ್ಲಿ ಅಪ್ಪಳಿಸುತ್ತದೆ.

**ಕೃಷಿಯ ಮೇಲೆ ಮಳೆಯ ಪರಿಣಾಮ :** ಎಲ್ಲಾ ಸಸ್ಯ ರಾಶಿಗಳಿಗೂ ನೀರಿನ ಆವಶ್ಯಕತೆಯಿದ್ದೇ ಇರುವುದರಿಂದ ಮಳೆಯು ಸಸ್ಯಗಳ ಬೆಳವಣಿಗೆಯ ಮೇಲೆ ಅತೀ ಮುಖ್ಯ ಪರಿಣಾಮವನ್ನು ಬೀರುತ್ತದೆ. ಆದರೆ ಸಸ್ಯಗಳು ನಿಗಧಿತ ಪ್ರಮಾಣ ಮತ್ತು ನಿಯಮಿತ ಅವಧಿಯಲ್ಲಿ ನೀರನ್ನು ಬಯಸುವುದರಿಂದ ಅತೀ ಕಡಿಮೆ ಅಥವಾ ಅತಿ ಹೆಚ್ಚು ಮಳೆ ಎರಡೂ ಸಸ್ಯಗಳಿಗೆ ಹಾನಿಕರ. ಬರದ ವಾತಾವರಣವು ಸಸ್ಯ ಸಂಕುಲವನ್ನು ಪೂರ್ಣವಾಗಿ ನಾಶಮಾಡಿದರೆ, ಅತಿಯಾದ ಮಳೆಯು ಸಸ್ಯಗಳಲ್ಲಿ ರೋಗಗಳನ್ನುಂಟು ಮಾಡಬಹುದು ಹಾನಿಕಾರಕ ಶಿಲೀಂಧ್ರಗಳ ಉತ್ಪತ್ತಿಗೆ ಕಾರಣವಾಗುವುದು. ಪ್ರತಿ ಜಾತಿಯ ಗಿಡವು ನಿಗಧಿತ ಪ್ರಮಾಣದ ನೀರಿನ ಆಸರೆಯಲ್ಲಿ ಮಾತ್ರ ಉತ್ತಮ ಬೆಳವಣಿಗೆ ತೋರುವುದು. ಕಳ್ಳಿ ಗಿಡಕ್ಕೆ ಅತ್ಯಲ್ಪ ಪ್ರಮಾಣದ ನೀರು ಸಾಕಾದರೆ ಉಷ್ಣವಲಯದ ಸಸ್ಯಗಳು ಬದುಕುಳಿಯಲು ವರ್ಷಕ್ಕೆ ನೂರಾರು ಅಂಗುಲ ಮಳೆಯನ್ನು ಬಯಸುತ್ತವೆ. ಪ್ರಪಂಚದ ಎಲ್ಲಾ ದೇಶಗಳು ವ್ಯವಸಾಯಕ್ಕಾಗಿ ಮಳೆಯನ್ನು ನಾನಾ ಪ್ರಮಾಣದಲ್ಲಿ ಅವಲಂಬಿಸಿರುತ್ತವೆ. ಭಾರತದ ಕೃಷಿಯು ಮಳೆಯ ಮೇಲೆ ಬಹಳಷ್ಟು ಅವಲಂಬಿತವಾಗಿದೆ. ಹತ್ತಿ, ಬತ್ತ, ಎಣ್ಣೆ ಬೀಜಗಳ ಬೆಳೆಗಳು ಪೂರ್ಣವಾಗಿ ಮಳೆಯನ್ನೇ ನೆಚ್ಚಿವೆ. ಮಳೆಗಾಲದ ಆರಂಭವು ಕೆಲವೇ ದಿನಗಳಷ್ಟು ವ್ಯತ್ಯಾಸವಾದರೂ ದೇಶದ ಆರ್ಥಿಕ ಸ್ಥಿತಿಯ ಮೇಲೆ ಗಂಭೀರ ಪರಿಣಾಮವುಂಟಾಗುವುದು.

*ವಿ.ಎಲ್.ಕೆ.*

**ಮಾವು** ಮಾವು 'ಅನಕಾರ್ಡಿಯೇಸೀ' ಕುಟುಂಬಕ್ಕೆ ಸೇರಿದೆ. ಇದನ್ನು ಆಂಗ್ಲಭಾಷೆಯಲ್ಲಿ ಮ್ಯಾಂಗೋ (Mango), ಸಂಸ್ಕೃತದಲ್ಲಿ ಆಮ್ರ, ತೆಲುಗಿನಲ್ಲಿ ಮಾಮಿಡಿ, ತಮಿಳಿನಲ್ಲಿ ಮಾಂಗಾಯ್, ಹಿಂದಿಯಲ್ಲಿ ಆಮ್ ಎಂದು ಕರೆಯಲಾಗುವುದು. ಇದರ ವೈಜ್ಞಾನಿಕ ಹೆಸರು ಮ್ಯಾಂಗಿಫೆರಾ



ಇಂಡಿಕ ಮಾವು ಬಹು ವಾರ್ಷಿಕ ಬೆಳೆಯಾಗಿದ್ದು, ಪ್ರತ್ಯೇಕವಾದ ತೋಟ ಅಥವಾ ಕೃಷಿ ಭೂಮಿಯ ನಡುವೆ ಬೆಳೆಯಲಾಗುತ್ತಿದೆ. 'ಹಣ್ಣುಗಳ ರಾಜ' ಎಂಬ ಬಿರುದು ಇದಕ್ಕಿದೆ. ಫಲ ಸಸ್ಯಗಳಲ್ಲಿ ಅತ್ಯಂತ ಜನಪ್ರಿಯ ಮತ್ತು ಪ್ರಸಿದ್ಧಿಯನ್ನು ಪಡೆದಿರುವ ಇದರ ಬಣ್ಣ, ಆಕಾರ, ವಾಸನೆ ಮತ್ತು ರುಚಿಗಳು ವೈವಿಧ್ಯಮಯ. 'ಹಸಿದು ಹಲಸಿನ ಹಣ್ಣು ತಿನ್ನು, ಉಂಡು ಮಾವಿನ ಹಣ್ಣು ತಿನ್ನು' ಎಂಬ ಜನಪದರ ಗಾದೆ ಎಲ್ಲರಿಗೂ ಚಿರಪರಿಚಿತ. ಮಾವು ಉಷ್ಣವಲಯದ ಬೆಳೆಯಾದುದರಿಂದ ಭಾರತಾದ್ಯಂತ ಉಷ್ಣ ಹಾಗೂ ಉಪೋಷ್ಣ ವಲಯದ ಪ್ರದೇಶಗಳಲ್ಲಿ ಹಳ್ಳ ತೊರೆಗಳ ಅಕ್ಕಪಕ್ಕದಲ್ಲಿ ತಾನಾಗಿ ಬೆಳೆಯುತ್ತವೆ. ಕಾಡುಗಳಲ್ಲಿಯೂ ಬೆಳೆಯುವುದರಿಂದಾಗಿ ಅದನ್ನು ಕಾಡುಮರವೆಂತಲೂ ಕರೆಯುವರು. ಈ ಮರವನ್ನು ತೋಪುಗಳಲ್ಲೂ ಮನೆಯ ಹಿತ್ತಲಿನಲ್ಲೂ ಕೃಷಿ ಜಮೀನಿನ ಬದುಗಳಲ್ಲೂ (ಅಂಚು), ರಸ್ತೆ ಬದಿಗಳಲ್ಲೂ ಬೆಳೆಯುವುದುಂಟು.

**ಎಲೆ ಮತ್ತು ಹೂವು :** ಮಾವಿನ ಮರದ ಕಾಂಡ ದೃಢವಾಗಿದ್ದು ದೊಡ್ಡದಾಗಿರುತ್ತದೆ. ರೆಂಬೆಗಳು ಹಲವಾರು. ಮರದ ನೆತ್ತಿ ಅಗಲಗೊಂಡು ಗೋಲಾಕಾರ, ಅಂಡಾಕಾರ ಅಥವಾ ಛತ್ರಿಯಾಕಾರದ ಪೊದೆಯಂತಿರುತ್ತವೆ. ಎಳೆಯ ರೆಂಬೆಗಳು ಹಸುರು ಬಣ್ಣವಿದ್ದರೆ ಬಲಿತ ಭಾಗಗಳು ಕಂದುಬಣ್ಣದಲ್ಲಿರುತ್ತವೆ. ತೊಗಟೆಯು ಬಲಿತಂತೆಲ್ಲಾ ಮಂದವಾಗಿರುತ್ತದೆ. ಮಾವು 10-45 ಮೀ ಎತ್ತರಕ್ಕೆ ಬೆಳೆಯುವ ದೊಡ್ಡ ಗಾತ್ರದ ಮರ. ಸಾಮಾನ್ಯವಾಗಿ ನೇರವಾಗಿ, ದೃಢವಾಗಿ ಬೆಳೆಯುವಂಥ ಪ್ರಧಾನಕಾಂಡವೊಂದಿದ್ದು ಗುಮ್ಮಟಾಕಾರದಲ್ಲಿ ಚದರಿಕೊಂಡು ಬೆಳೆಯುವುದು ಇದರ ಮುಖ್ಯ ಲಕ್ಷಣ. ಕಾಂಡ ಒರಟಾದ, ಮಂದವಾದ, ಕಂದುಬಣ್ಣ, ಕಡುಬೂದಿ ಬಣ್ಣದ ತೊಗಟೆಯಿಂದ ಆವೃತವಾಗಿರುತ್ತದೆ. ಎಲೆಗಳು ಮಂದವಾಗಿದ್ದು ಈಟಿಯಂತೆ ಚೂಪಾದ ಆಕಾರವನ್ನು ಹೊಂದಿವೆ. ಪೂರ್ಣಬಲಿತಾಗ ತಿಳಿಹಸುರು ಅಥವಾ ಹೊಳಪು ದಟ್ಟವಾದ ಹಸುರಿನಿಂದ ಕೂಡಿರುತ್ತವೆ. ಎಲೆಗಳನ್ನು ಮುರಿದರೆ ಅಥವಾ ಹೊಸಕಿದರೆ ವಿಶಿಷ್ಟವಾದ ವಾಸನೆ ಹೊರಬರುತ್ತದೆ. ಹೂವುಗಳು ಗೊಂಚಲುಗಳಲ್ಲಿ ಬಿಡುತ್ತವೆ.

ಹೂಗೊಂಚಲಿನ ಪ್ರಧಾನ ತೊಟ್ಟಿನ ಎಸಳುಗಳ ಬಣ್ಣ ನಸುಗೆಂಪು, ಕಡುಗೆಂಪು, ಕೆನ್ನೀಲಿ, ನೀಲಿ, ಹಳದಿ, ಹಳದಿಹಸುರು ಮುತಾದ ರೀತಿಯಲ್ಲಿರುತ್ತವೆ.

ದಕ್ಷಿಣ ಭಾರತದಲ್ಲಿ ವರ್ಷದಲ್ಲಿ ಎರಡು ಸಾರಿ ಅಂದರೆ ಫೆಬ್ರುವರಿ-ಜೂನ್ ಮತ್ತು ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ಚಿಗುರು ಕಾಣಿಸಿಕೊಳ್ಳುತ್ತದೆ. ಪಶ್ಚಿಮ ಭಾರತದಲ್ಲಿ ವರ್ಷದಲ್ಲಿ ಮೂರು ಸಾರಿ ಎಂದರೆ ಫೆಬ್ರುವರಿ-ಮಾರ್ಚ್, ಮಾರ್ಚ್-ಏಪ್ರಿಲ್ ಮತ್ತು ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಚಿಗುರು ಕಾಣಿಸಿಕೊಳ್ಳುವುದು. ಬಿಹಾರ್ ರಾಜ್ಯದಲ್ಲಿ ಮೊದಲ ಹಂತದ ಚಿಗುರು ವಸಂತ ಋತುವಿನ ಪ್ರಾರಂಭದಲ್ಲಿಯೂ ಎರಡನೆಯ ಹಂತದ ಚಿಗುರು ಏಪ್ರಿಲ್-ಮೇ ತಿಂಗಳುಗಳಲ್ಲಿಯೂ ಮೂರನೇ ಹಂತದ ಚಿಗುರು ಜುಲೈ-ಆಗಸ್ಟ್ ತಿಂಗಳುಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ. ಉತ್ತರ ಪ್ರದೇಶದಲ್ಲಿ ಮಾರ್ಚ್-ಏಪ್ರಿಲ್ ಮತ್ತು ಜುಲೈ-ಆಗಸ್ಟ್ ತಿಂಗಳುಗಳಲ್ಲಿ ಮಾತ್ರ ಕಂಡುಬರುತ್ತದೆ. ಪಂಜಾಬಿನಲ್ಲಿ ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಚಿಗುರಿನ ಪ್ರಮಾಣ ಹೆಚ್ಚಾಗಿರುತ್ತದೆ. 8 ರಿಂದ 11 ತಿಂಗಳಷ್ಟು ವಯಸ್ಸಿನ ರೆಂಬೆಗಳಲ್ಲಿ ಮಾತ್ರ ಹೂವು ಕಾಣಿಸಿಕೊಳ್ಳುತ್ತವೆ.

ಉತ್ತರ ಭಾರತದಲ್ಲಿ ಜನವರಿ-ಫೆಬ್ರವರಿ ತಿಂಗಳುಗಳಲ್ಲಿಯೂ ದಕ್ಷಿಣ ಭಾರತದಲ್ಲಿ ಡಿಸೆಂಬರ್-ಜನವರಿ ತಿಂಗಳುಗಳಲ್ಲಿಯೂ ಹೆಚ್ಚು ಹೂವು ಕಾಣಿಸಿಕೊಳ್ಳುತ್ತವೆ. ತಮಿಳುನಾಡಿನ ಕನ್ಯಾಕುಮಾರಿಯಂತಹ ಜಿಲ್ಲೆಗಳಲ್ಲಿ ಸೂಕ್ಷ್ಮ ಹವಾಗುಣ ಇರುವ ಕಾರಣ ನೀಲಂ, ತೋತಾಪುರಿ, ರುಮಾನಿ ಮುಂತಾದ ತಳಿಗಳು ಅಕಾಲದಲ್ಲಿ ಹೂಬಿಟ್ಟು ಜನವರಿ-ಫೆಬ್ರುವರಿ ಹೊತ್ತಿಗೆ ಹಣ್ಣು ಮಾರಾಟಕ್ಕೆ ಬರುತ್ತವೆ.

**ಮಾವನ್ನು ವೈಜ್ಞಾನಿಕವಾಗಿ ಹೀಗೆ ವಿಂಗಡಿಸಬಹುದು:** ಸಸ್ಯ, ವಂಶ: ಹೂ ಬಿಡುವ ಸಸ್ಯ, ವರ್ಗ : ಮ್ಯಾಗ್ನೋಲಿಪ್ಸಿಡ, ಗಣ : ಸಪಿಂಡೆಲೆಸ್, ಕುಟುಂಬ : ಅನಕಾರ್ಡಿಯೇಸೀ, ಜಾಗಿ : ಮ್ಯಾಗ್ನಿಫೆರ. ಒಂದೇ ಮರದಲ್ಲಿ ಗಂಡು ಮತ್ತು ದ್ವಿಲಿಂಗಿ ಹೂಗಳೆರಡೂ ಇರುತ್ತವೆ. ಅಷ್ಠಿಫಲ ಮಾದರಿಯ ಕಾಯಿಯಾಗಿದ್ದು, ಕಾಯಿಯ ಗಾತ್ರವು ವಿಭಿನ್ನ ಬಗೆಗಳಲ್ಲಿ ಮತ್ತು ಬೇರೆ ಬೇರೆ ಆಕಾರಗಳಾಗಿರುವವು. ಕಾಯಿಗೆ ಮಂದ ಅಥವಾ ತೆಳುವಾದ ಸಿಪ್ಪೆಯಿರುತ್ತದೆ. ಸಿಪ್ಪೆಯಲ್ಲಿ ಗ್ರಂಥಿಗಳಿದ್ದು ತಿರುಳು ತಿಳಿಹಳದಿ, ಹಳದಿ, ಕಿತ್ತಳೆ ಮುಂತಾದ ಬಣ್ಣಗಳಾಗಿರುತ್ತದೆ. ಕೆಲವು ಹುಳಿಯಿದ್ದರೆ, ಕೆಲವು ಸಿಹಿ ಮತ್ತು ರುಚಿಯಾದ ಮಾಧುರ್ಯದಿಂದ ಕೂಡಿರುತ್ತವೆ. ಅಂತೆಯೇ ಕೆಲವು ಬಗೆಯ ಮಾವುಗಳು ನಾರು-ನಾರಾಗಿರುವುದುಂಟು. ಒಳಗೆ ಒಂದು ಅಂಡಾಕಾರದ ಬೀಜವಿರುತ್ತದೆ. ಇದರ ಸುತ್ತ ಪೆಡಸಾದ, ನಾರಿನಿಂದ ಕೂಡಿದ ಕವಚ ಆವರಿಸಿಕೊಂಡಿದ್ದು, ಇದನ್ನು ಓಟೆ ಎಂದು ಕರೆಯುತ್ತಾರೆ.

**ಮಾವಿನ ವಿಧಗಳು (ತಳಿಗಳು) :** ಪ್ರಪಂಚದಲ್ಲೆಡೆ ವ್ಯಾಪಕವಾಗಿ ಕಂಡು ಬರುವ ಮಾವು (ಮ್ಯಾಂಗಿಫೆರ ಇಂಡಿಕ) ತೋಟಗಾರಿಕೆ ಬೆಳೆಯಾಗಿದೆ. ಮಾವಿನ ಹಣ್ಣಿನ ಮೂಲ ಭಾರತ ಮ್ಯಾನ್ಮಾರ್, ಥಾಯ್ಲೆಂಡ್, ಇಂಡೋಚೀನಾ, ಮಲೇಷ್ಯಗಳ ನಡುವಣ ಪ್ರದೇಶಗಳು ತವರುನೆಲೆಯಾಗಿವೆ. ಹೆಚ್ಚು ಸಂಖ್ಯೆಯ ಉಪವರ್ಗಗಳು ಮತ್ತು ಪ್ರಭೇದಗಳು ಮಲಯಾ ದ್ವೀಪದಲ್ಲಿಯೇ ಕಂಡುಬರುವವು. ಇಲ್ಲಿಂದ ಪ್ರಪಂಚದ ಇತರೆ ಕಡೆಗಳಿಗೆ ಹರಡಿಕೊಂಡಿದೆ. ಭಾರತದಲ್ಲಿಯೇ ಅಲ್ಲದೆ ಪಾಕಿಸ್ತಾನ, ಬಾಂಗ್ಲದೇಶ, ಫಿಜಿ, ಇಂಡೋನೇಷ್ಯಾ, ಫಿಲಿಫ್ಫೈನ್ಸ್, ಥಾಯ್ಲೆಂಡ್, ಶ್ರೀಲಂಕಾ, ವೆಸ್ಟ್ ಇಂಡೀಸ್ ಮತ್ತು ಮಡಗಾಸ್ಕರ್‌ಗಳಲ್ಲಿಯೂ ಮಾವನ್ನು ಬೆಳೆಯಲಾಗುತ್ತದೆ.

ಇದನ್ನು ವಿವಿಧ ಪ್ರಕಾರಗಳಲ್ಲಿ ಬೆಳೆಯುವುದನ್ನು ಕಾಣಬಹುದು. ಪ್ರಧಾನವಾಗಿ ಬೀಜದಿಂದ ಮತ್ತು ಕಸಿ ವಿಧಾನದಿಂದ. ಭಾರತದಲ್ಲಿ ಬೆಳೆಯಲಾಗುತ್ತಿರುವ ವಿವಿಧ ಬಗೆಯ ಮಾವಿನ ಪೈಕಿ ಹೆಚ್ಚು ಪಾಲು ಮೊದಲನೆಯ ಗುಂಪಿಗೆ ಸೇರಿದ್ದು ವಾಣಿಜ್ಯ ದೃಷ್ಟಿಯಿಂದ ಮುಖ್ಯವೆನಿಸಿಕೊಂಡಿಲ್ಲ. ಏಕೆಂದರೆ ಇವುಗಳಿಂದ ಪುಷ್ಕಳವಾದ ಫಲದೊರೆಯುತ್ತದಾದರೂ, ಏಕ ರೀತಿಯ ಫಲವನ್ನು ನೀರಿಕ್ಷಿಸಲು ಸಾಧ್ಯವಾಗುವುದಿಲ್ಲ. ಇವುಗಳಲ್ಲಿ ಏಕಭ್ರೂಣೀಯ ಮತ್ತು ಬಹುಭ್ರೂಣೀಯ ಎಂಬ ಎರಡು ವಿಧಗಳನ್ನು ಕಾಣಬಹುದು. ಭಾರತದ ಮಾವಿನ ವಿಧಗಳ ಪೈಕಿ ಹೆಚ್ಚಿನವು ಮೊದಲನೆಯ ಗುಂಪಿನಲ್ಲಿ ಕಂಡುಬರುತ್ತವೆ. ಎರಡನೆಯ ವಿಧದ ಮಾವು ಕೇರಳದ ಕೆಲವು ಕಡೆಗಳಲ್ಲಿ ಮಾತ್ರ ಇದೆ.

ವಿವಿಧ ಭಾಗಗಳಲ್ಲಿ ಕಂಡುಬರುವ ಒಂದು ಅಂದಾಜಿನ ಪ್ರಕಾರ ಸುಮಾರು 1000ಕ್ಕಿಂತಲೂ ಹೆಚ್ಚಿನ ಮಾವಿನ ವಿಧಗಳಿವೆ. ಅವುಗಳಲ್ಲಿ ಒಂದೊಂದಕ್ಕೂ ವಿಶಿಷ್ಟವಾದ ಸ್ವಾದ, ರುಚಿ, ತಿರುಳಿನ ರಚನೆಯಿರುವುದು. ಭಾರತದಲ್ಲಿ 77 ವಿಧಗಳನ್ನು, ವಿದೇಶೀಯ 24 ವಿಧಗಳನ್ನು ಗುರುತಿಸಲಾಗಿದೆ.

ವಾಣಿಜ್ಯ ದೃಷ್ಟಿಯಿಂದ ಅತಿಮುಖ್ಯವೆನಿಸಿರುವ ಕೆಲವು ಬಗೆಗಳಿವೆ. ಅವುಗಳ ಕೃಷಿಗೆ ಪ್ರಸಿದ್ಧವಾಗಿರುವ ರಾಜ್ಯಗಳೆಂದರೆ : ಆಲಂಪುರ್ ಬನೆಷನ್ (ಆಂಧ್ರ ಪ್ರದೇಶ, ತಮಿಳುನಾಡು), ಆಲ್‌ಫೊನ್ಸೊ (ಬಾದಾಮಿ, ಆಪೊಸ್ ಇತ್ಯಾದಿ; ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಆಂಧ್ರ), ಬ್ಯಾಂಗಲೂರ (ತೋತಾ ಪುರಿ, ಕಿಳಿಮುಕ್ಕು; ಆಂಧ್ರ, ತಮಿಳುನಾಡು, ಕರ್ನಾಟಕ), ಬಂಗನ ಪಲ್ಲೆ (ಆಂಧ್ರ), ದಸೇರಿ (ಉತ್ತರ ಪ್ರದೇಶ, ಪಂಜಾಬ್, ದೆಹಲಿ), ಗುಲಾಬ್ ಖಾಸ್ (ಬಿಹಾರ), ಲಂಗರಾ (ಉತ್ತರ ಪ್ರದೇಶ, ಬಿಹಾರ) ಮಲ್‌ಗೊವ (ಆಂಧ್ರ, ಮಹಾರಾಷ್ಟ್ರ, ಕರ್ನಾಟಕ), ನೀಲಮ್ (ತಮಿಳುನಾಡು, ಆಂಧ್ರ), ಒಲೂರು (ಕೇರಳ), ಪೈರಿ-ರಸಪುರಿ (ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಕೇರಳ), ರುಮಾನಿ (ತಮಿಳುನಾಡಿನ ಪೂರ್ವ ಜಿಲ್ಲೆಗಳು), ರಾಜಾಪುರಿ (ಗುಜರಾತ್), ಸುವರ್ಣ ರೇಖ (ಆಂಧ್ರ), ವನರಾಜ (ಗುಜರಾತಿನ ವಡೋದರ ಭಾಗ), ಫಜ್ಲಿ (ಪಶ್ಚಿಮ ಬಂಗಾಲ, ಉತ್ತರ ಪ್ರದೇಶ, ಬಿಹಾರ), ಜರ್ದಾಲು (ಬಿಹಾರ, ಉತ್ತರ ಪ್ರದೇಶ), ಸಫೇದ (ಲಕ್ನೊ, ಉತ್ತರ ಪ್ರದೇಶ) ಮುಂತಾದವು.

**ಮುಖ್ಯ ತಳಿಗಳು : ಬಾದಾಮಿ :** ಇದನ್ನು ಆಲ್ಫಾನ್ಸೊ, ಆಪೊಸ್, ಹಾಫಸ್, ಕಾಗಡಿ ಹಾಫಸ್, ಗುಂಡು, ಪಟ್ಟಂ ಜಾತಿ, ಖಾದರ್ ಮುಂತಾದ ಹೆಸರುಗಳಿಂದ ಕರೆಯುವುದುಂಟು. ಭಾರತದ ಅತ್ಯುತ್ತಮ ತಳಿಗಳಲ್ಲಿ ಇದು ಸಹ ಒಂದು. ಪಶ್ಚಿಮ ಕರಾವಳಿಯ ಆರ್ದ್ರ ಹವೆಯಲ್ಲಿ ಬಹಳ ಚೆನ್ನಾಗಿ ಇದು ಫಲಿಸುತ್ತದೆ. ಗೋವೆಯಲ್ಲಿ ಈ ತಳಿ ಉಗಮವಾದುದೆಂದು ತಿಳಿಯಲಾಗಿದೆ. ಆಲ್ಫಾನ್ಸೊ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಲ್ಲಿ ಬೆಳೆಯುತ್ತಿದ್ದು ಬಹಳ ಪ್ರಸಿದ್ಧಿಯನ್ನು ಪಡೆದಿದೆ. ವರ್ಷ ಬಿಟ್ಟು ವರ್ಷ ಫಲ ಕಚ್ಚುವ ಇದರ ಮರಗಳು ಕಸುವಿನಿಂದ ಕೂಡಿರುತ್ತವೆ. ಸಿಹಿ-ಹುಳಿಗಳು ಬಹು ಚೆನ್ನಾಗಿ ಮಿಳಿತಗೊಂಡಿದ್ದು, ಸಿಪ್ಪೆ ಸಾಧಾರಣ ಮಂದ, ತಿರುಳಿನಲ್ಲಿ ಸಾಕಷ್ಟು ರಸವಿದ್ದು ರುಚಿಯಲ್ಲಿ ಮಧುರ. ಮಧ್ಯಕಾಲಿಕ

ತಳಿಯಾದ ಈ ಹಣ್ಣುಗಳ ಸಂಗ್ರಹಣಗುಣ ಉತ್ತಮ. ಹಣ್ಣನ್ನು ಕೊಯ್ಲು ಮಾಡಿದ ಅನಂತರ ಸುಮಾರು ಮೂರು ವಾರಗಳವರೆಗೆ ಇಡಬಹುದು.

**ರಸಪುರಿ :** ಇದನ್ನು ಪೈರಿ, ಪೀಟರ್, ಪೀಟರ್‌ಪಸಂದ್, ಗ್ರೇಪ್, ಗೋಹಾಬಂದರ್, ಎರ್ರಗೋವ, ನಡುಸಲೈ ಮುಂತಾದ ಹೆಸರುಗಳಿಂದ ಕರೆಯುವುದುಂಟು. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು ಸಹ ಅತ್ಯುತ್ತಮ ತಳಿಗಳಲ್ಲಿ ಒಂದು. ಕರಾವಳಿಯ ಆರ್ದ್ರಹವೆಗೆ ಬಹು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಪ್ರತಿ ವರ್ಷ ಮತ್ತು ಕೆಲವೊಮ್ಮೆ ವರ್ಷ ಬಿಟ್ಟು ವರ್ಷ ಫಲಕಚ್ಚುವ ಇದರ ಮರಗಳು ಕಸುವಿನಿಂದ ಕೂಡಿರುತ್ತವೆ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡವು. ರುಚಿಯಲ್ಲಿ ಸಿಹಿಯಿದ್ದು, ಸಿಪ್ಪೆ ಬಾದಾಮಿ ಅಥವಾ ಕಿತ್ತಲೆ ಹಳದಿ ಬಣ್ಣಗಳಿಂದ ಕೂಡಿರುತ್ತವೆ.

**ಬಂಗನಪಲ್ಲಿ :** ಇದನ್ನು ಬಾನೆಷಾನ್, ಚಪ್ಪ, ಚಪ್ಪಾಯ್, ಸೆಪ್ಪ, ಸಫೇದ ಮುಂತಾದ ಹೆಸರುಗಳಿಂದ ಕರೆಯುವುದುಂಟು. ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಒಣ ಪ್ರದೇಶಗಳಲ್ಲಿ ಬೆಳೆಯಬಹುದಾದ ತಳಿ. ಪ್ರತಿ ವರ್ಷ ಫಲಬಿಡುವ ಇದರ ಮರಗಳು ಕಸುವಿನಿಂದ ಕೂಡಿರುತ್ತವೆ. ಗಾತ್ರದಲ್ಲಿ ಹಣ್ಣು ದೊಡ್ಡವು. ರುಚಿ ಸಿಹಿಯಿದ್ದು, ಸಿಪ್ಪೆ ತೆಳ್ಳಗೆ, ನುಣ್ಣಗಿರುತ್ತವೆ.

**ಮಲ್ಗೋವ :** ಇದನ್ನು ಮಲಗೋಬ ಎಂದೂ ಕರೆಯುತ್ತಾರೆ. ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತಡವಾಗಿ ಕೊಯ್ಲಿಗೆ ಬರುವ ಈ ತಳಿಯ ಮರಗಳು ಕಸುವಿನಿಂದ ಕೂಡಿರುತ್ತವೆ. ಗಾತ್ರದಲ್ಲಿ ದೊಡ್ಡದಾಗಿದ್ದು ದುಂಡಾಗಿರುತ್ತವೆ. ರುಚಿ ಮಧುರವಾಗಿದ್ದು, ಸಿಪ್ಪೆ ಮಂದ, ಬಣ್ಣ ಪ್ರಿಮ್ಯೂಲಿನ್ ಹಳದಿಯಾಗಿರುತ್ತದೆ.

**ತೋತಾಪುರಿ :** ಇದನ್ನು ಬೆಂಗಳೂರ (ಬ್ಯಾಂಗಲೂರ), ಕಿಳಿಮುಕ್ಕು, ಗಿಣಿಮೂತಿ, ಕಲೆಕ್ಟರ್, ಸುಂದರೇಶ, ಬರ್ಮೊಡಿಲ್ಲ, ತೇವಡಿಮೂತಿ



ಮುಂತಾದ ಹೆಸರುಗಳಿಂದ ಕರೆಯುವುದುಂಟು. ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದರ ಹಣ್ಣುಗಳಲ್ಲಿ ಕೊಕ್ಕು ಪ್ರಧಾನ, ಪ್ರತಿ ವರ್ಷ ಫಲ ಕಚ್ಚುತ್ತದೆ: ಒಣ ಪ್ರದೇಶಗಳಲ್ಲಿ ತಡವಾಗಿ ಕೊಯ್ಲಿಗೆ ಬರುತ್ತದೆ. ಮರಗಳು ಹೆಚ್ಚು ಕಸುವಿನಿಂದ ಕೂಡಿರುತ್ತವೆ. ಹಣ್ಣು ದೊಡ್ಡದು. ರುಚಿ ಸಾಧಾರಣ, ಸಿಹಿ ಅಥವಾ ಸಪ್ಪೆ. ತಿರುಳು ಗಟ್ಟಿ, ನಾರು ಇರುವುದಿಲ್ಲ. ಸಾಸಿವೆ ಹಳದಿ ಬಣ್ಣ. ರಸದ ಪ್ರಮಾಣ ಸಾಧಾರಣ. ಸಂಗ್ರಹಣಾ ಗುಣ ಅತ್ಯುತ್ತಮವಾಗಿದ್ದು, ದೂರದ ಮಾರುಕಟ್ಟೆಗಳಿಗೆ ಸಾಗಿಸಬಹುದು.

**ನೀಲಂ :** ಇದನ್ನು ಕಾಜಾಲಡ್ಡು ಎಂಬ ಹೆಸರಿನಿಂದಲೂ ಕರೆಯುತ್ತಾರೆ. ದಕ್ಷಿಣ ಭಾರತದ ಅತ್ಯುತ್ತಮ ತಳಿಗಳಲ್ಲಿ ಒಂದು. ಪ್ರತಿ ವರ್ಷ ಅಥವಾ ವರ್ಷದಲ್ಲಿ ಎರಡು ಬಾರಿ ಫಲಕಚ್ಚುವುದುಂಟು. ತಡವಾಗಿ ಕೊಯ್ಲಿಗೆ ಬರುವ ತಳಿ. ಯಥೇಚ್ಛ ಫಸಲು ಬಿಡುತ್ತದೆ. ಮೊದಲ ಫಸಲು ಜೂನ್ ತಿಂಗಳಲ್ಲಿ ಬಂದರೆ ಎರಡನೆ ಫಸಲು ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಬರುತ್ತದೆ. ಹಣ್ಣುಗಳ ಗಾತ್ರ ಸಾಧಾರಣ. ಮೊಟ್ಟೆಯಾಕಾರವಾಗಿದ್ದು ಓರೆಯಾಗಿರುತ್ತವೆ. ಕೇಸರಿ ಹಳದಿ ಅಥವಾ ಕಿತ್ತಲೆ ಹಳದಿ ಬಣ್ಣವನ್ನು ಹೊಂದಿದ್ದು, ತಿರುಳು ಗಟ್ಟಿ, ನಾರುರಹಿತ, ರುಚಿ ಉತ್ತಮ, ಆದರೆ ಸ್ವಲ್ಪ ಹುಳಿಯಾಗಿರುತ್ತದೆ: ರಸದ ಪ್ರಮಾಣ ಸಾಧಾರಣ. ಗುಣಮಟ್ಟದಲ್ಲಿ ತೋತಾಪುರಿ ಹಣ್ಣುಗಳಿಗಿಂತ ಉತ್ತಮ. ಉತ್ತಮ ಸಂಗ್ರಹಣಾ ಗುಣದಿಂದ ಕೂಡಿರುವ ಕಾರಣ ಅವುಗಳನ್ನು ದೂರದ ಮಾರುಕಟ್ಟೆಗಳಿಗೆ ಸಾಗಿಸುವುದುಂಟು. ಈ ತಳಿಯ ಓಟೆಗೆ ಮೂತಿಹುಳುವಿನ ಕಾಟ ಹೆಚ್ಚು.

**ಸುವರ್ಣರೇಖಾ :** ಇದನ್ನು ಸುಂದರಿ, ಸುಂದ್ರಿ, ಸಂಧೂರಿ, ಲಾಟ್ ಸುಂದರಿ, ಸ್ವರ್ಣರೇಖಾ, ಚಿನ್ನ ಸುವರ್ಣಾರೇಖಾ ಮುಂತಾದ ಹೆಸರುಗಳಿಂದ ಕರೆಯುವುದುಂಟು. ಬೇಗ ಕೊಯ್ಲಿಗೆ ಬರುವ ಈ ತಳಿಯ ಮೂಲ ಆಂಧ್ರಪ್ರದೇಶ. ಪ್ರತಿ ವರ್ಷ ಫಲ ಕಚ್ಚುವ ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ರುಚಿ ಮಧುರ, ರಸ ಸಾಕಷ್ಟಿರುತ್ತದೆ. ಹಣ್ಣುಗಳ ಸಂಗ್ರಹಣಾ ಗುಣ ಚೆನ್ನಾಗಿರುವುದರಿಂದ ಇವು ಉತ್ತರ ಭಾರತದ ಮಾರುಕಟ್ಟೆಗಳಿಗೆ ರವಾನೆಯಾಗುತ್ತವೆ.

**ಮುಂಡಪ್ಪ :** ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುತ್ತದೆ: ತಡವಾಗಿ ಕೊಯ್ಲಿಗೆ ಬರುವ ತಳಿ. ಹೆಚ್ಚು ಮಳೆಯಾಗುವ ಕರಾವಳಿ ಪ್ರದೇಶಗಳಲ್ಲಿ ಹಣ್ಣುಗಳ ಗುಣಮಟ್ಟ ಮುಂಗಾರು ಮಳೆಗಳಿಂದಾಗಿ ಕೆಡುವುದಿಲ್ಲ. ಪ್ರತಿ ವರ್ಷ ಫಲಕಚ್ಚುವ ಮರ ಕಸುವಿನಿಂದ ಕೂಡಿದ್ದು ಯಥೇಚ್ಛ ಫಸಲನ್ನು ಬಿಡುತ್ತದೆ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡವು. ಗುಂಡಕೆ ಆಕರ್ಷಕವಾಗಿದ್ದು, ಕೊಕ್ಕು ಮತ್ತು ನಾಭಿ ಇರುವುದಿಲ್ಲ. ತೆಳ್ಳನೆ ಸಿಪ್ಪೆ ದಟ್ಟ ಕ್ರೋಮ್ ಬಣ್ಣ, ತಿರುಳು ಗಟ್ಟಿ, ನಾರು ಇರುವುದಿಲ್ಲ. ವಾಸನೆ ಹಿತಕರ, ಬಲು ರುಚಿ, ರಸ ಸಾಕಷ್ಟಿರುತ್ತದೆ. ಹಣ್ಣಿನ ಗುಣಮಟ್ಟ ಮತ್ತು ಸಂಗ್ರಹಣಾ ಗುಣ ಉತ್ತಮವಾಗಿದೆ.

**ಲಾಂಗ್ರ :** ಇದನ್ನು ಲಾಂಗ್ಡ ಎಂದೂ ಕರೆಯುತ್ತಾರೆ. ಉತ್ತರ ಪ್ರದೇಶ, ಬಿಹಾರ್ ಮತ್ತು ಪಂಜಾಬ್ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸ್ವಲ್ಪ ಪ್ರಮಾಣದಲ್ಲಿ ಗುಜರಾತಿನಲ್ಲಿ ಸಹ ಬೆಳೆಯುತ್ತಾರೆ. ಇದು ವರ್ಷಬಿಟ್ಟು ವರ್ಷ ಫಲ ಕಚ್ಚುತ್ತದೆ. ಮಧ್ಯಕಾಲಿಕ ತಳಿ. ಹಣ್ಣು ಜುಲೈ ಕಡೆಯ ಹೊತ್ತಿಗೆ ಇಲ್ಲವೇ ಆಗಸ್ಟ್ ಮೊದಲ ಭಾಗದಲ್ಲಿ ಕೊಯ್ಲಿಗೆ ಬರುತ್ತದೆ. ಫಸಲು ಯಥೇಚ್ಛ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡದಿದ್ದು, ಉದ್ದವಾಗಿ ಮೊಟ್ಟೆಯಂತಿರುತ್ತದೆ. ಕೊಕ್ಕು ಸ್ವಲ್ಪ ಮಾತ್ರ, ನಾಭಿ ಸ್ವಲ್ಪ ಅಥವಾ ಇರುವುದಿಲ್ಲ. ತುದಿಭಾಗ ಗುಂಡಾಗಿರುತ್ತದೆ. ಸಿಪ್ಪೆ ಸಾಧಾರಣ ಮಂದ, ನಿಂಬೆ ಹಸುರು ಬಣ್ಣ.

ತಿರುಳು ಗಟ್ಟಿ ಇಲ್ಲವೇ ಮೃದು. ಬಣ್ಣ ಬಿಜೋರಿ ಹಳದಿ, ರುಚಿಯಲ್ಲಿ ಮಧುರ, ಸಿಹಿಹುಳಿಗಳು ಬಹು ಹೆಚ್ಚಾಗಿ ಮಿಳಿತಗೊಂಡಿರುತ್ತವೆ. ವಾಸನೆ ಹಿತಕರ, ರಸ ಸಾಧಾರಣದಿಂದ ಯಥೇಚ್ಛ, ಓಟೆ ಮಧ್ಯಮ ಗಾತ್ರ, ಮೇಲೆಲ್ಲಾ ಮೃದುವಾದ ಜೂಲನ್ನು ಹೊಂದಿರುತ್ತದೆ. ಸಂಗ್ರಹಣ ಗುಣ ಕಡಿಮೆ. ಇದರಲ್ಲಿ ಬನಾರಸಿ ಲಾಂಗ್ರ, ಲಾಂಗ್ರ ಹಾರ್ದೋಯಿ, ಲಾಂಗ್ರ ಘಾಜಿಪುರ್ ಮುಂತಾದ ಬಗೆಗಳಿವೆ.

**ದಶೇರಿ :** ಇದನ್ನು ದಶೆಹರಿ ಎಂದೂ ಕರೆಯುವರು. ಉತ್ತರ ಭಾರತದ ಅತ್ಯುತ್ತಮ ಮಧ್ಯಕಾಲಿಕ ತಳಿ. ಮರಗಳು ಸಾಧಾರಣ ಕಸುವಿನಿಂದ ಕೂಡಿದ್ದು ಯಥೇಚ್ಛ ಫಸಲನ್ನು ಬಿಡುತ್ತವೆ. ವರ್ಷ ಬಿಟ್ಟು ವರ್ಷ ಫಲ ಕಚ್ಚುವ ತಳಿ. ಹಣ್ಣು ಗಾತ್ರದಲ್ಲಿ ಸಾಧಾರಣ. ಹಣ್ಣು ಅದುಮಿದಂತೆ. ಉದ್ದ, ಓರೆ, ಸಿಪ್ಪೆಯ ಬಣ್ಣ ಆಕರ್ಷಕ ಹಸುರು ಹಳದಿ ಇಲ್ಲವೇ ಮಾಸಲು ಹಳದಿ. ತಿರುಳು ಆಕರ್ಷಕ ಬಣ್ಣ ಮತ್ತು ವಾಸನೆಗಳಿಂದ ಕೂಡಿರುತ್ತದೆ. ನಾರು ಇರುವುದಿಲ್ಲ. ರುಚಿ ಮಧುರ. ಓಟೆ ತೆಳ್ಳಗೆ, ಅಂಡಾಕಾರ, ಮೇಲೆಲ್ಲಾ ನಯವಾದ ಮೋಟು ಜೂಲು. ಇದನ್ನು ಹೊರ ದೇಶಗಳಿಗೆ ಕಳುಹಿಸಲಾಗುತ್ತಿದೆ. ಸಂಸ್ಕರಿಸಿ ಡಬ್ಬಿಗಳಲ್ಲಿ ಜೋಪಾನ ಮಾಡಿಡಲು ಬಳಸುತ್ತಾರೆ. ಹಣ್ಣುಗಳ ಗುಣಮಟ್ಟ ಉತ್ತಮ.

**ಚೌಸ :** ಅತ್ಯಂತ ಸಿಹಿಯಾದ ಬಗೆ, ಹುಳಿ ಇರುವುದಿಲ್ಲ. ಮರಗಳು ಹೆಚ್ಚು ಕಸುವಿನಿಂದ ಕೂಡಿರುತ್ತವೆ. ಜುಲೈ ಇಲ್ಲವೇ ಆಗಸ್ಟ್ ಮೊದಲ ಭಾಗದಲ್ಲಿ ಕೊಯ್ಲಿಗೆ ಬರುತ್ತದೆ. ಹಣ್ಣು ಓರೆ, ಹೊಳಪು ಹಳದಿ ಬಣ್ಣ. ಮರಗಳು ವರ್ಷ ಬಿಟ್ಟು ವರ್ಷ ಫಲ ಕಚ್ಚುತ್ತದೆ. ಇದಕ್ಕೆ ಗೊಂಚಲು ಸುಳಿಯ ಬಾಧೆ ಹೆಚ್ಚು. ಹಣ್ಣು ಗಾತ್ರದಲ್ಲಿ ದೊಡ್ಡದು.

**ಸಮರ್ ಬೆಹಿಸ್ಟ್ ಚೌಸ :** ಇದಕ್ಕೆ 'ಖಜ್ರಿ' ಎಂಬ ಹೆಸರಿದೆ. ಇದು ಉತ್ತರ ಪ್ರದೇಶದಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಂಡ ತಳಿ. ಮರಗಳು ಸಾಧಾರಣ ಕಸಿವಿನಿಂದ ಕೂಡಿರುತ್ತವೆ. ಫಸಲು ಮತ್ತು ಗಾತ್ರ ಎರಡು ಸಾಧಾರಣ. ಮೊಟ್ಟೆಯಾಕಾರ, ಓರೆಯಾಗಿರುತ್ತವೆ. ತೊಟ್ಟು ಚಚ್ಚೌಕವಾಗಿ ಸೇರುತ್ತದೆ. ಕುಳಿ ಇರುವುದಿಲ್ಲ, ಭುಜಗಳು ಸಮ, ಕೆಳಭುಜ ಎತ್ತರವಿರುತ್ತದೆ. ಕೊಕ್ಕು ಪ್ರಧಾನ. ನಾಭಿಯ ತುದಿ ಗುಂಡಗಿರುತ್ತದೆ. ಸಿಪ್ಪೆ ಸಾಧಾರಣ ಮಂದ, ನಯ. ಮಲ್ಲಿಗೆ ಹೂಬಣ್ಣ. ತಿರುಳು ಗಟ್ಟಿ. ನಾರು ಇರುವುದಿಲ್ಲ. ಬಣ್ಣ ಆಂಬರ್ ಹಳದಿ. ವಾಸನೆ ತೀಕ್ಷ್ಣ ಮತ್ತು ಆಕರ್ಷಕ. ರುಚಿ ಸಿಹಿಯಾಗಿರುತ್ತದೆ. ರಸದ ಪ್ರಮಾಣ ಸಾಧಾರಣ. ಓಟೆ ಉದ್ದವಾಗಿದ್ದು ಮೇಲೆಲ್ಲಾ ಮೃದುವಾದ ಮೋಟು ಜೂಲು ಹರಡಿರುತ್ತದೆ. ಹಣ್ಣುಗಳ ಸಂಗ್ರಹಣಾ ಗುಣ ಸಾಧಾರಣ.

**ಬಾಂಬೆಗ್ರೀನ್ :** ಇದನ್ನು ಮೌಲ್ಡ, ಸೆಹ್ರೋಲಿ ಮುಂತಾದ ಹೆಸರಿನಿಂದ ಕರೆಯಲಾಗುವುದು. ಆಕಸ್ಮಿಕವಾಗಿ ಕಾಣಿಸಿಕೊಂಡ ತಳಿ. ಇದರ ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಪ್ರತಿವರ್ಷ ಫಲ ಕಚ್ಚುತ್ತವೆ. ಫಸಲು ಯಥೇಚ್ಛ. ಬೇಗ ಕೊಯ್ಲಿಗೆ ಬರುವ ತಳಿ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡವು. ಒಂದು ಕಿ.ಗ್ರಾಂ. ತೂಕದಲ್ಲಿ 4-6 ಹಣ್ಣು ಇರುತ್ತವೆ. ಹಣ್ಣು ಸ್ವಲ್ಪ ಉದ್ದ, ಅದುಮಿದಂತೆ ಕಾಣುತ್ತವೆ. ಆಕಾರದಲ್ಲಿ ಮೊಟ್ಟೆಯಂತೆ. ಕುಳಿ ಹೆಚ್ಚು ಆಳ ಇರುವುದಿಲ್ಲ. ಭುಜಗಳು ಅಸಮ, ಕೆಳಭುಜ ಅಗಲವಾಗಿ, ಗುಂಡಿಗೆ, ಎತ್ತರವಾಗಿರುತ್ತದೆ. ಭುಜಭಾಗಗಳಲ್ಲಿ ಹಳದಿ ಛಾಯೆ ಇರುತ್ತದೆ. ಸಿಪ್ಪೆ ನಯ, ಹಳದಿ ಹಸುರು ಇಲ್ಲವೇ ಸ್ಪಿನಾಚ್ ಹಸುರು ಬಣ್ಣ. ತಿರುಳು ಸಾಧಾರಣ ಮೃದು, ನಾರು ಇರುವುದಿಲ್ಲ. ಬಣ್ಣ ಹಳದಿ. ವಾಸನೆ ಹಿತಕರ. ರುಚಿಯಲ್ಲಿ, ಸಿಹಿ. ರಸಸಾಕಷ್ಟಿರುತ್ತದೆ. ಓಟೆ ಮಧ್ಯಮ ಗಾತ್ರ, ಮೇಲೆಲ್ಲಾ ಒತ್ತಾಗಿ ಹರಡಿದ ಮೋಟು ಜೂಲು. ಹಣ್ಣುಗಳ ಗುಣಮಟ್ಟ ಉತ್ತಮ. ಸಂಗ್ರಹಣಾ ಗುಣ ಸಾಧಾರಣ. ಇದರ ಮರಗಳು ಗೊಂಚಲು ಸುಳಿ (ಬಂಚೀಟಾಪ್) ರೋಗಕ್ಕೆ ಸುಲಭವಾಗಿ ತುತ್ತಾಗುತ್ತವೆ.

**ಬೊಂಬಾಯಿ :** ಇದು ಬಿಹಾರದಲ್ಲಿ ಕಂಡುಬರುತ್ತದೆ ; ಬೇಗ ಕೊಯ್ಲಿಗೆ ಬರುವ ತಳಿ. ಮರಗಳು ಸಾಧಾರಣ ಕಸುವಿನಿಂದ ಕೂಡಿದ್ದು ಮಂದಗತಿಯಲ್ಲಿ ಬೆಳೆಯುತ್ತವೆ. ಫಸಲು ಯಥೇಚ್ಛ. ಪ್ರತಿವರ್ಷ ಫಲ ಕಚ್ಚುತ್ತದೆ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡವು. ಓರೆ, ಮೊಟ್ಟೆಯಾಕಾರವಿರುತ್ತದೆ. ಬುಡಭಾಗ ಚಪ್ಪಟೆ, ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ. ಕುಳಿ ಸ್ವಲ್ಪವಷ್ಟೇ. ಭುಜಗಳು ಅಸಮ. ನಾಭಿ ನೆಪಮಾತ್ರಕ್ಕೆ, ತುದಿಭಾಗ ಗುಂಡಾಗಿರುತ್ತದೆ. ಸಿಪ್ಪೆ ಮಂದ, ನಯವಾಗಿರುತ್ತದೆ, ಪ್ರಿಮೂಲಿನ್ ಹಳದಿ ಬಣ್ಣ. ತಿರುಳು ಕ್ಯಾಡ್ಮಿಯಂ ಹಳದಿ ಬಣ್ಣ. ವಾಸನೆ ಹಿತಕರ. ರುಚಿಯಲ್ಲಿ ಸಾಧಾರಣ ಸಿಹಿ. ರಸದ ಪ್ರಮಾಣ ಸಾಧಾರಣ. ಓಟೆ ಸುಮಾರು ದೊಡ್ಡದು, ಮೊಟ್ಟೆಯಾಕಾರ, ಮೇಲೆಲ್ಲಾ ಒತ್ತಾಗಿ ಜೂಲು ಹರಡಿರುತ್ತದೆ. ಹಣ್ಣುಗಳ ಗುಣಮಟ್ಟ ಸಾಧಾರಣದಿಂದ ಉತ್ತಮ. ಸಂಗ್ರಹಣಾ ಗುಣ ಅಷ್ಟೊಂದು ಚೆನ್ನಾಗಿರುವುದಿಲ್ಲ.

**ಗುಲಾಬ್ ಕಾಸ್ :** ಇದು ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಕಂಡುಬರುತ್ತದೆ. ಬೇಗ ಕೊಯ್ಲಿಗೆ ಬರುವ ತಳಿ. ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಫಸಲು ಯಥೇಚ್ಛ. ವರ್ಷ ಬಿಟ್ಟು ವರ್ಷ ಫಲಕಚ್ಚುತ್ತದೆ. ಹಣ್ಣು ಸಾಧಾರಣದೊಡ್ಡವು. ಅವುಗಳಲ್ಲಿ ಗುಲಾಬಿ ಹೂವಿನ ಪರಿಮಳ ಇರುತ್ತದೆ. ಒಂದು ಕಿ.ಗ್ರಾಂ.ಗೆ 5-6 ಹಣ್ಣು ತೂಗುತ್ತವೆ. ಹಣ್ಣು ಉದ್ದ, ಓರೆ. ತೊಡಟ್ಟು ಓರೆಯಾಗಿ ಸೇರಿರುತ್ತದೆ. ಬುಡಭಾಗ ಇಳಿಜಾರಿನಿಂದ ಕೂಡಿರುತ್ತದೆ, ಕುಳಿ ಇರುವುದಿಲ್ಲ, ಭುಜಗಳು ಅಸಮ, ಕೆಳಭುಜ ಎತ್ತರ ಮತ್ತು ಅಗಲ. ಕೊಕ್ಕು ಸ್ಫುಟ. ನಾಭಿ ನೆಪ ಮಾತ್ರಕ್ಕಷ್ಟೆ. ತುದಿ ಗುಂಡಗಿರುತ್ತದೆ. ಸಿಪ್ಪೆ ಮಂದ, ಸ್ವಲ್ಪ ಒರಟು. ಆಂಬರ್ ಹಳದಿ ಇಲ್ಲವೇ ಕ್ಯಾಡ್ಮಿಯಂ ಬಣ್ಣ, ಬುಡಭಾಗ ಮತ್ತು ಪಾರ್ಶ್ವಗಳಲ್ಲಿ ಆಕರ್ಷಕ ಕೆಂಪು ಛಾಯೆ. ತಿರುಳು ಗಟ್ಟಿ. ವಾಸನೆ ಮಧುರ. ತೀಕ್ಷ್ಣ ರುಚಿಯಲ್ಲಿ ಬಲು ಸಿಹಿ. ರಸ ಸಾಕಷ್ಟಿರುತ್ತದೆ. ಓಟೆ ಸಾಧಾರಣ ದೊಡ್ಡದು, ಮೇಲೆಲ್ಲಾ ಮೃದುವಾದ ಮೋಟು ಜೂಲು ಒತ್ತಾಗಿ ಹರಡಿರುತ್ತದೆ. ಹಣ್ಣುಗಳ ಗುಣಮಟ್ಟ ಉತ್ತಮ. ಸಂಗ್ರಹಣೆ ಯೋಗ್ಯವಾದರೂ ಬೇಗ ಸುಕ್ಕುಗಟ್ಟುತ್ತವೆ.

**ಹಿಮಸಾಗರ್ :** ಪಶ್ಚಿಮ ಬಂಗಾಳದ ಜನಪ್ರಿಯ ತಳಿ ; ಮರಗಳು ಸಾಧಾರಣ ಕಸುವಿನಿಂದ ಕೂಡಿದ್ದು ಹೆಚ್ಚು ಫಸಲನ್ನು ಬಿಡುತ್ತದೆ. ಮಧ್ಯಕಾಲಿಕ ತಳಿ. ಪ್ರತಿ ವರ್ಷ ಫಲ ಕಚ್ಚುತ್ತವೆ. ಹಣ್ಣು ಗಾತ್ರದಲ್ಲಿ ದೊಡ್ಡವು. ಮೊಟ್ಟೆಯಾಕಾರ, ಓರೆ, ಹಳದಿ ಬಣ್ಣ. ತೊಟ್ಟು ಚಚೌಕವಾಗಿ ಸೇರಿರುತ್ತದೆ. ಸಿಪ್ಪೆ ಸಾಧಾರಣ ಮಂದ, ತಿರುಳು ಗಟ್ಟಿ, ನಾರು ಇರುವುದಿಲ್ಲ, ಕ್ಯಾಡ್ಮಿಯಂ ಹಳದಿ ಬಣ್ಣ, ವಾಸನೆ ಸ್ವಲ್ಪ ಮಟ್ಟಿಗೆ ಟರ್ಪೆಂಟೈನ್‌ನಂತೆ ಇರುವುದಾದರೂ ಹಿತಕರ. ರುಚಿಯಲ್ಲಿ ಬಲು ಸಿಹಿ. ರಸ ಸಾಕಷ್ಟಿರುತ್ತದೆ. ಹಣ್ಣುಗಳ ಗುಣಮಟ್ಟ ಮತ್ತು ಸಂಗ್ರಹಣಾ ಗುಣ ಉತ್ತಮವಾಗಿದ್ದು ವಾಣಿಜ್ಯ ಯೋಗ್ಯ ತಳಿಯಾಗಿದೆ.

**ಫಜ್ಲಿ :** ತಡವಾಗಿ ಕೊಯ್ಲಿಗೆ ಬರುವ ತಳಿ. ಮರಗಳು ಕಸುವಿನಿಂದ ಕೂಡಿರುತ್ತವೆ. ಫಸಲು ಯಥೇಚ್ಛ. ವರ್ಷ ಬಿಟ್ಟು ವರ್ಷ ಫಲ ಕೊಡುತ್ತವೆ. ಹಣ್ಣು ಗಾತ್ರದಲ್ಲಿ ಬಲು ದೊಡ್ಡವು. ಹಣ್ಣಿನ ಬಣ್ಣ ಹಸುರು. ತಿರುಳಿನಲ್ಲಿ ನಾರು ಇರುವುದಿಲ್ಲ. ಹಣ್ಣುಗಳ ಗುಣಮಟ್ಟ ಮತ್ತು ಸಂಗ್ರಹಣಾ ಗುಣ ಸಾಧಾರಣ.

**ಝುರ್ದಾಲು :** ಬಿಹಾರ್, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಕಂಡುಬರುತ್ತದೆ. ಬಿಹಾರಿನ ಭಾಗಲ್ಪುರ ಜಿಲ್ಲೆಯಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಂಡ ಹೆಚ್ಚು ಬೇಡಿಕೆಯ ತಳಿ. ಪ್ರತಿವರ್ಷ ಫಲ ಕಚ್ಚುತ್ತದೆ. ಬೇಗ ಕೊಯ್ಲಿಗೆ ಬರುವ ಮಧ್ಯಕಾಲಿಕ ತಳಿ. ಮರಗಳು ಸಾಧಾರಣ ಕಸುವಿನಿಂದ ಕೂಡಿದ್ದು ಸಾಧಾರಣದಿಂದ ಹೆಚ್ಚು ಫಸಲನ್ನು ಬಿಡಬಲ್ಲವು. ಹಣ್ಣು ಗಾತ್ರದಲ್ಲಿ ಸುಮಾರು ದೊಡ್ಡವು, ಉದ್ದ, ಮೊಟ್ಟೆಯಾಕಾರ, ಅದುಮಿದಂತೆ ಕಾಣುತ್ತವೆ. ಸಿಪ್ಪೆ ಸಕ್ಕರೆ ಬಾದಾಮಿಯ ಇಲ್ಲವೇ ಬಂಗಾರ ಹಳದಿಯ ಬಣ್ಣ. ತೆಳ್ಳಗೆ, ನಯವಾಗಿರುತ್ತದೆ. ತಿರುಳು ಸ್ವಲ್ಪ ಗಟ್ಟಿ ಇಲ್ಲವೇ ಮೃದು, ಬಣ್ಣ ಕ್ಯಾಪುಸೈನ್ ಹಳದಿ. ವಾಸನೆ ಹಿತಕರವಾಗಿದ್ದು ತಿರುಳಿನಲ್ಲಿ ಹೆಚ್ಚಿನ ನಾರು. ರಸದ ಪ್ರಮಾಣ ಸಾಧಾರಣ. ಹಣ್ಣುಗಳ ಗುಣಮಟ್ಟ ಮತ್ತು ಸಂಗ್ರಹಣಾ ಗುಣಗಳು ಉತ್ತಮ.

**ಕೌವಾಸ್ಜಿ ಪಟೇಲ್ :** ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಕಂಡುಬರುತ್ತದೆ. ಆಕಸ್ಮಿಕವಾಗಿ ಉತ್ಪತ್ತಿಯಾದ ಮಧ್ಯಕಾಲಿಕ ತಳಿ. ಮೊರಬ್ಬಾ, ಕ್ಯಾಂಡಿ, ಉಪ್ಪಿನಕಾಯಿ ಮುಂತಾಗಿ ತಯಾರಿಸಲು ಯೋಗ್ಯ. ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಹಣ್ಣು ಗಾತ್ರದಲ್ಲಿ ಬಲು ದೊಡ್ಡವು. ಸ್ವಲ್ಪಮಟ್ಟಿಗೆ ಅಂಡಾಕಾರ, ತೊಟ್ಟು ಚಚೌಕವಾಗಿರುತ್ತದೆ. ತಿರುಳಿನ ಬಣ್ಣ ಸಕ್ಕರೆ ಬಾದಾಮಿ ಹಳದಿ. ವಾಸನೆ ಮತ್ತು ರುಚಿಗಳಲ್ಲಿ ಸ್ವಲ್ಪ ಹುಳಿ, ರಸದ ಪ್ರಮಾಣ ಕಡಿಮೆ. ಹಣ್ಣಿನ ಗುಣಮಟ್ಟ ಮತ್ತು ಸಂಗ್ರಹಣಾ ಗುಣ ಕಡಿಮೆ.

**ರುಮಾನಿ :** ತಮಿಳುನಾಡಿನ ತಳಿ. ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಫಸಲು ಯಥೇಚ್ಛ. ಪ್ರತಿ ವರ್ಷ ಫಲ ಕಚ್ಚುತ್ತದೆ. ಮಧ್ಯಮಾವಧಿಯಿಂದ ತಡವಾಗಿ ಕೊಯ್ಲಿಗೆ ಬರುವ ತಳಿ. ಕೆಲವೊಮ್ಮೆ ಅಕಾಲದಲ್ಲಿ ಫಲಕಚ್ಚುವುದುಂಟು. ಒಣ ಪ್ರದೇಶಗಳಲ್ಲಿ ಬೆಳೆಯಲು ಬಹುವಾಗಿ ಒಪ್ಪುವ ತಳಿ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡದು. ಗುಂಡಗೆ ಸೇಬು ಹಣ್ಣಿನಂತಿರುತ್ತದೆ. ಸಿಪ್ಪೆ ಮಂದ, ಪ್ರಿಮ್ಯೂಲಿನ್ ಹಳದಿ, ವಾಸನೆ ಹಿತಕರ. ರುಚಿಯಲ್ಲಿ ಮಧುರ, ರಸ ಸಾಕಷ್ಟಿರುವುದು, ಹಣ್ಣುಗಳ ಗುಣಮಟ್ಟ ಸಾಧಾರಣದಿಂದ ಉತ್ತಮ.

**ರಟೌಲ್ :** ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿಕಂಡುಬರುತ್ತದೆ. ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಫಸಲು ಸಾಧಾರಣ, ಹಾಗಾಗಿ ಇದರ ಬೇಸಾಯ ಅಷ್ಟೊಂದು ವ್ಯಾಪಕವಾಗಿ ಕಂಡುಬರುತ್ತಿಲ್ಲ. ಪ್ರತಿ ವರ್ಷ ಫಲ ಕಚ್ಚುತ್ತದೆ. ಮೊಟ್ಟೆಯಾಕಾರವಿದ್ದು ಗಾತ್ರದಲ್ಲಿ ಸಾಧಾರಣ. ಸಿಪ್ಪೆ ತುಸು ಮಂದ, ತಿರುಳು ಗಟ್ಟಿ, ನಾರು ಇರುವುದಿಲ್ಲ. ರುಚಿಯಲ್ಲಿ ಬಲು ಸಿಹಿಯಿದ್ದು ರಸ ಪ್ರಮಾಣ ಅಧಿಕ. ಹಣ್ಣುಗಳ ಗುಣಮಟ್ಟ ಉತ್ತಮ ಹಾಗೂ ಸಂಗ್ರಹಣಾ ಗುಣ ಸ್ವಲ್ಪ ಉತ್ತಮ.

**ಸಿಂಧೂರ :** ತಮಿಳುನಾಡಿನಲ್ಲಿ ಕಂಡುಬರುತ್ತದೆ ; ಮಧ್ಯಕಾಲಿಕ ತಳಿ. ಹಣ್ಣು ಮಧ್ಯಮ ಗಾತ್ರ, ಆಕಾರದಲ್ಲಿ ಮೊಟ್ಟೆಯಂತಿದ್ದು, ಸಿಪ್ಪೆ ಸಾಧಾರಣ ಮಂದ, ಬಣ್ಣ ದಟ್ಟ ಕ್ರೋಮ್ ಇಲ್ಲವೇ ಕಡುಗೆಂಪು. ತಿರುಳು ಗಟ್ಟಿಯಾಗಿದ್ದು, ಸಿಹಿಯಾದ ರುಚಿ ಸಾಕಷ್ಟು ರಸದಿಂದ ಕೂಡಿರುತ್ತವೆ. ಹಣ್ಣಿನ ಗುಣಮಟ್ಟ ಮತ್ತು ಸಂಗ್ರಹಣಾ ಗುಣಗಳು ಉತ್ತಮ.

**ಸೇಂದ್ರೀಯ :** ಮಹಾರಾಷ್ಟ್ರದಲ್ಲಿ ಕಂಡುಬರುತ್ತದೆ. ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಪ್ರತಿವರ್ಷ ಫಲ ಕಚ್ಚುತ್ತದೆ. ಮಧ್ಯಕಾಲಿಕ ತಳಿ ಹಾಗೂ ಫಸಲು ಯಥೇಚ್ಛವಾಗಿರುತ್ತದೆ. ಹಣ್ಣು ಗಾತ್ರದಲ್ಲಿ ಸಣ್ಣದರಿಂದ ಸಾಧಾರಣ ದೊಡ್ಡವು. ಸಿಪ್ಪೆ ಸಾಧಾರಣ ಮಂದ, ನಯ. ಬಣ್ಣ ಲೆಟ್ಯೂಸ್ ಹಸುರು. ಸಾಧಾರಣ ಸಿಹಿ ಮತ್ತು ರಸದ ಪ್ರಮಾಣ ಕಡಿಮೆಯಿಂದ ಸಾಧಾರಣವಾಗಿರುತ್ತದೆ. ಹಣ್ಣಿನ ಗುಣಮಟ್ಟ ಮತ್ತು ಸಂಗ್ರಹಣಾ ಗುಣಗಳು ಸಾಧಾರಣ.

**ಅಲಿಪಸಂದ್ :** ತಮಿಳುನಾಡಿನಲ್ಲಿ ಕಂಡುಬರುವ ಈ ತಳಿ ಅಷ್ಟೊಂದು ವ್ಯಾಪಕವಾಗಿಲ್ಲ. ಕೆಲವೊಮ್ಮೆ ವರ್ಷದಲ್ಲಿ ಎರಡು ಫಸಲು ಸಿಗುವುದುಂಟು. ಹಣ್ಣು ಆಕಾರದಲ್ಲಿ ಹುರುಳಿ ಬೀಜದಂತಿದ್ದು, ಸಿಪ್ಪೆ ಸಾಧಾರಣ ದಪ್ಪ, ಪ್ರಿಮ್ಯೂಲಿನ್ ಹಳದಿ ಬಣ್ಣದಿಂದ ಕೂಡಿರುತ್ತದೆ. ಹಣ್ಣುಗಳ ಗುಣಮಟ್ಟ ಸಾಧಾರಣದಿಂದ ಉತ್ತಮ ಹಾಗೂ ಒಳ್ಳೆಯ ಸಂಗ್ರಹಣಾ ಗುಣವಿರುತ್ತದೆ.

**ಆಲಂಪೂರ್ ಬಾನೆಪಾನ್ :** ಆಂಧ್ರ ಮತ್ತು ತಮಿಳುನಾಡಿನಲ್ಲಿ ಕಂಡುಬರುವ ಆಕಸ್ಮಿಕವಾಗಿ ಕಾಣಿಸಿಕೊಂಡ ಉತ್ತಮ ತಳಿಯಾಗಿದೆ. ಹೆಚ್ಚು ಫಸಲು ಕೊಡುವ ಮಧ್ಯಮಾವಧಿಯ ಈ ತಳಿಯ ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಇಮಾಮ್ ಪಸಂದ್ ಹಣ್ಣನ್ನು ಹೋಲುವ ಇದು ಗಾತ್ರದಲ್ಲಿ ದೊಡ್ಡದಾಗಿದ್ದು, ತೆಳ್ಳನೆಯ ಸಿಪ್ಪೆಯಿಂದ ಕೂಡಿರುತ್ತದೆ. ಹಣ್ಣಿನ ಗುಣಮಟ್ಟ ಮತ್ತು ಸಂಗ್ರಹಣಾ ಗುಣಗಳು ಅತ್ಯುತ್ತಮ.

**ಅನುಪಾನ್ :** ಇದು ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶದಲ್ಲಿ ಕಂಡು ಬರುತ್ತದೆ. ವರ್ಷ ಬಿಟ್ಟು ವರ್ಷ ಫಲಕಚ್ಚುವ ಮಧ್ಯಕಾಲಿಕ ತಳಿಯಾಗಿದ್ದು ಹೆಚ್ಚು ಫಸಲನ್ನು ನೀಡುತ್ತದೆ. ಮೊಟ್ಟೆಯಾಕಾರದ ಈ ಹಣ್ಣಿನಲ್ಲಿ ನಾರಿನ ಅಂಶ ಜಾಸ್ತಿಯಿದ್ದು, ರುಚಿಯಲ್ಲಿ ಸಿಹಿ ಮತ್ತು ರಸದ ಪ್ರಮಾಣ ಉತ್ತಮ. ಸಂಗ್ರಹಣಾ ಗುಣ ಸಾಧಾರಣ.

**ಅತಿಮಧುರಂ :** ಇದು ಆಂಧ್ರ ಮೂಲದ ತಳಿ. ಕೈ ತೋಟಗಳಲ್ಲಿ ಬೆಳೆಸಲು ಬಹುವಾಗಿ ಒಪ್ಪುವಂತಹ ಸಾಧಾರಣ ಫಸಲಿನಿಂದ ಕೂಡಿದ ಜಾತಿ. ಸಾಧಾರಣ ದಪ್ಪದ ಸಿಪ್ಪೆಯಿದ್ದು, ಸಿಹಿ ತಿರುಳು ಮತ್ತು ಸಾಕಷ್ಟು ರಸದಿಂದ ಕೂಡಿರುತ್ತದೆ. ಹಣ್ಣುಗಳ ಗುಣಮಟ್ಟ ಮತ್ತು ಸಂಗ್ರಹಣಾ ಗುಣ ಉತ್ತಮ. ಮಧ್ಯಮ ಗಾತ್ರದ ಹಣ್ಣು ಕೊಡುತ್ತದೆ.

**ಅಜೀಜ್ ಪಸಂದ್ :** ಉತ್ತರ ಪ್ರದೇಶದ ತಳಿ. ಈ ತಳಿಯು ಸಾಧಾರಣ ಕಸುವಿನ ಮರಗಳಿಂದ ಕೂಡಿರುತ್ತದೆ. ಮಧ್ಯಕಾಲಿಕ ತಳಿ. ಇದು ಪ್ರತಿ ವರ್ಷ ಫಲಕಚ್ಚುತ್ತಿದ್ದು, ಯಥೇಚ್ಛ ಫಸಲನ್ನು ನೀಡುತ್ತದೆ. ಹೊಳಪು ಬಣ್ಣವನ್ನೊಂದಿರುವ ಇದರ ಸಿಪ್ಪೆ ದಪ್ಪ, ಸಿಹಿ ರುಚಿಯಿದ್ದು ರಸ ಸಾಕಷ್ಟು ಇರುತ್ತದೆ. ಹಣ್ಣುಗಳ ಗುಣಮಟ್ಟ ಮತ್ತು ಸಂಗ್ರಹಣಾ ಗುಣಗಳು ಅತ್ಯುತ್ತಮ.

**ಆಮ್ಲೆಟ್ :** ಹ್ಯಾಮ್ಲೆಟ್, ಮನೋರಂಜನಿ ಮುಂತಾದ ಹಸರುಗಳಿಂದ ಕರೆಯಲ್ಪಡುವ ಮಧ್ಯಕಾಲಿಕ ತಳಿಯಾಗಿದ್ದು ಇವು

ಸಾಧಾರಣ ಕಸುವಿನಿಂದ ಕೂಡಿದ ಮರಗಳಾಗಿರುತ್ತವೆ. ಆಕಾರದಲ್ಲಿ ಹುರಳಿ ಬೀಜದಂತಿದ್ದು, ಹಣ್ಣು ಗಾತ್ರದಲ್ಲಿ ದೊಡ್ಡದು. ಸಂಗ್ರಹಣೆ ಮತ್ತು ಗುಣಮಟ್ಟ ಅತ್ಯುತ್ತಮವಾಗಿರುತ್ತದೆ.

**ಫಜ್ರಿ ಝುಫ್ರಾನಿ :** ಉತ್ತರ ಪ್ರದೇಶ ತಳಿಯ ಈ ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಗಾತ್ರದಲ್ಲಿ ದೊಡ್ಡದಾಗಿರುವ ಹಣ್ಣನ್ನು ಕೊಡುವ ಮಧ್ಯಕಾಲಿಕ ತಳಿ. ಪ್ರತಿ ವರ್ಷ ಫಲ ಕಚ್ಚುವ ಇದು ಸಾಧಾರಣ ಫಸಲನ್ನು ಕೊಡುತ್ತದೆ. ಆಕಾರದಲ್ಲಿ ಹುರುಳಿ ಬೀಜದಂತಿರುವ ಇವುಗಳ ರುಚಿ, ಸಿಹಿ ನಾರು ರಹಿತ, ಸಾಧಾರಣ ದಪ್ಪ ಸಿಪ್ಪೆಯಿಂದ ಕೂಡಿರುತ್ತವೆ. ಗುಣಮಟ್ಟದ ಸಾಧಾರಣವಾಗಿದ್ದು. ಅತ್ಯುತ್ತಮ ಸಂಗ್ರಹಣಾ ಯೋಗ್ಯವಾಗಿದೆ. ಬಲವಾದ ಗಾಳೀ ಬೀಸಿದರೆ ಹಣ್ಣುಗಳು ತಡೆದುಕೊಳ್ಳಲಾರವು.

**ಬಾರಾಮಸಿ :** ಇದು ಉತ್ತರ ಪ್ರದೇಶದಲ್ಲಿ ಕಂಡುಬರುತ್ತದೆ. ವರ್ಷಾದ್ಯಂತ ಫಲಕೊಡುತ್ತದೆ. ಮರಗಳು ಸಾಧಾರಣ ಕಸುವಿನಿಂದ ಕೂಡಿದ್ದು, ಬೇಗ ಕೊಯ್ಲಿಗೆ ಬರುವ ತಳಿ. ಮಧ್ಯಮ ಗಾತ್ರದ ಹಣ್ಣು ಉದ್ದವಾಗಿದ್ದು, ಹುರುಳಿ ಬೀಜದ ಆಕಾರದಲ್ಲಿರುತ್ತದೆ. ಸಾಧಾರಣ ದಪ್ಪ ಸಿಪ್ಪೆಯನ್ನೊಂದಿದ್ದು ಸಿಹಿ ರುಚಿ. ರಸದ ಪ್ರಮಾಣ ಸಾಧಾರಣವಾಗಿರುತ್ತದೆ. ಉತ್ತಮ ದರ್ಜೆಯ ಹಣ್ಣಾಗಿದ್ದು ಸಂಗ್ರಹಣಾ ಗುಣವನ್ನೊಂದಿರುತ್ತವೆ. ಬಲವಾದ ಗಾಲಿ ಬೀಸಿದಲ್ಲಿ ಹಣ್ಣುಗಳು ತಡೆದುಕೊಳ್ಳಲಾರವು.

**ಭಾರತ್ ಭೋಗ್ :** ಲೋಹ ಪಸಂದ್ ಎಂಬ ಹೆಸರಿನ ಈ ತಳಿ ಪಶ್ಚಿಮ ಬಂಗಾಳ ಮತ್ತು ಬಿಹಾರಗಳಲ್ಲಿ ಕಂಡುಬರುತ್ತದೆ. ಮಧ್ಯಕಾಲಿಕ ತಳಿಯಾಗಿದ್ದು ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಪ್ರತಿವರ್ಷ ಫಲ ಕಚ್ಚುವ ಇದರ ಫಸಲು ಸಾಧಾರಣ. ಓರೆ ಮತ್ತು ಅಂಡಾಕಾರದ ಹಣ್ಣಾಗಿದ್ದು ಸಾಧಾರಣ ದೊಡ್ಡದ್ದಾಗಿರುತ್ತವೆ. ಹಸುರು ಬಣ್ಣದ ದಪ್ಪ ಸಿಪ್ಪೆ, ಗಟ್ಟಿಯಾದ ತಿರುಳು ಮತ್ತು ಕಿತ್ತಳೆ ಹಣ್ಣಿನ ಬಣ್ಣದಂತಿದ್ದು ಸಿಹಿ ರುಚಿಯಿಂದ ಕೂಡಿರುತ್ತವೆ.

**ಗೋಪಾಲ್ ಭೋಗ್ :** ಕೈತೋಟಗಳಿಗೆ ಬಹುವಾಗಿ ಒಪ್ಪುವ ಈ ತಳಿಯ ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಪ್ರತಿ ವರ್ಷ ಫಲ ಕಚ್ಚುವ ಇದು ಯಥೇಚ್ಛ ಫಸಲನ್ನು ಕೊಡುತ್ತದೆ. ಸಾಧಾರಣ ಗಾತ್ರದಿಂದ ಕೂಡಿದ್ದು ತೆಳು ಸಿಪ್ಪೆಯನ್ನೊಂದಿರುತ್ತವೆ. ಹಿತಕರ ವಾಸನೆ ಮತ್ತು ಬಲು ಸಿಹಿ ರುಚಿಯನ್ನು ಹೊಂದಿರುತ್ತವೆ.

**ಕೃಷನ್ ಭೋಗ್ :** ಪಶ್ಚಿಮ ಬಂಗಾಳದಲ್ಲಿ ಕಂಡುಬರುತ್ತದೆ. ಮಧ್ಯಮಾವಧಿ ತಳಿ, ಮಧ್ಯಮಗಾತ್ರ, ಸಾಧಾರಣ ಕಸುವಿನಿಂದ ಕೂಡಿರುತ್ತದೆ. ಕೈತೋಟಗಳಿಗೆ ಬಹುವಾಗಿ ಒಪ್ಪುವ ತಳಿಯಾಗಿದ್ದು ಹಣ್ಣು ಜುಲೈ ಮಧ್ಯಭಾಗದಲ್ಲಿ ಕೊಯ್ಲಿಗೆ ಬರುತ್ತದೆ. ಗಾತ್ರ. ಸಾಧಾರಣ ದಪ್ಪ ಸಿಪ್ಪೆಯಿಂದ ಕೂಡಿರುತ್ತದೆ. ರುಚಿಯಲ್ಲಿ ಸಿಹಿಯಿದ್ದು ರಸ ಸಾಧಾರಣದಿಂದ ಸಾಕಷ್ಟಿರುತ್ತದೆ. ಉತ್ತಮ ದರ್ಜೆಯ ಹಣ್ಣಾಗಿದ್ದು ಸಂಗ್ರಹಣೆಗೆ ಯೋಗ್ಯ.

**ಖಾಸ್ - ಉಲ್ - ಖಾಸ್ :** ಬಿಹಾರಿನ ತಳಿ. ಇದರ ಅರ್ಥ ಅತ್ಯಂತ ಶ್ರೇಷ್ಠ ದರ್ಜೆಯ ಹಣ್ಣು ಎಂದು. ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತವೆ. ಕೈತೋಟಗಳಿಗೆ ಬಹುವಾಗಿ ಒಪ್ಪುವ ಈ ತಳಿ ಪ್ರತಿ ವರ್ಷ ಫಲವನ್ನು ಕಚ್ಚುತ್ತದೆ. ಗಾತ್ರದಲ್ಲಿ ಸಾಧಾರಣ. ಮೊಟ್ಟೆಯಾಕಾರದಲ್ಲಿದ್ದು ದಪ್ಪ ಸಿಪ್ಪೆಯಿಂದ ಕೂಡಿರುತ್ತದೆ. ಹಣ್ಣು ಉತ್ತಮ ದರ್ಜೆಯವು ಮತ್ತು ಸಂಗ್ರಹಣಾ ಗುಣ ಉತ್ತಮ.

**ಜಹಾಂಗೀರ್ :** ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಕಂಡುಬರುವ ಇದು ಮಧ್ಯಕಾಲಿಕ ತಳಿಯಾಗಿರುತ್ತದೆ. ಹಣ್ಣಿನ ಗಾತ್ರ ಬಲು ದೊಡ್ಡದು. ಸ್ವಲ್ಪ ಮಟ್ಟಿಗೆ ಅದುಮಿದಂತೆ ಮೊಟ್ಟೆಯಾಕಾರದಲ್ಲಿರುತ್ತವೆ. ರುಚಿಯಲ್ಲಿ ಬಹು ಸಿಹಿಯಾಗಿದ್ದು ದಪ್ಪನೆಯ ಸಿಪ್ಪೆ, ಮೇಲೆಲ್ಲಾ ಮೃದುವಾದ ಮೋಟು ಜೂಲು ಹೊಂದಿರುತ್ತದೆ. ಸಂಗ್ರಹಣಾ ಗುಣ ಸಾಧಾರಣ ಮತ್ತು ಶ್ರೇಷ್ಠ ಗುಣಮಟ್ಟವನ್ನು ಈ ಹಣ್ಣುಗಳಲ್ಲಿ ಕಾಣಬಹುದು.

**ಜಮಾದಾರ್ :** ಗುಜರಾತಿನಲ್ಲಿ ಕಂಡುಬರುವ ಇದು ಬಾದಾಮಿ ತಳಿಯ ಬೀಜ ಸಸಿಯೆಂದು ಭಾವಿಸಲಾಗಿದೆ. ಮರಗಳು ಸಾಧಾರಣ ಕಸುವಿನಿಂದ ಕೂಡಿರುತ್ತದೆ. ಹಣ್ಣು ಗಾತ್ರದಲ್ಲಿ ಸಣ್ಣದಾಗಿದ್ದು ನೋಡಲು ಬಾದಾಮಿ ತಳಿಯ ಹಣ್ಣುಗಳಂತೆಯೇ ಇರುತ್ತದೆ. ಹಣ್ಣುಗಳ ಮೇಲೆ ಕಠಾರಿಯ ಗುರುತು ಇರುತ್ತದೆ. ಪ್ರತಿ ವರ್ಷ ಫಲ ಕಚ್ಚುವ ತಳಿಯಾಗಿದ್ದು ಯಥೇಚ್ಛವಾಗಿ ಫಸಲನ್ನು ನೀಡುತ್ತದೆ. ಗಾತ್ರದಲ್ಲಿ ಸಾಧಾರಣ ದೊಡ್ಡದಾಗಿದ್ದು ಸಿಪ್ಪೆ ತೆಳು ಮತ್ತು ನಯವಾಗಿರುತ್ತದೆ. ಹಣ್ಣುಗಳ ಗುಣಮಟ್ಟ ಮತ್ತು ಸಂಗ್ರಹಣಾ ಗುಣ ಉತ್ತಮವಾಗಿದ್ದು ಬಲವಾದ ಗಾಳಿ ಬೀಸಿದರೆ ತಡೆದುಕೊಳ್ಳಬಲ್ಲವು.

**ಮಂಕುರಾಡ್ :** ಮಹಾರಾಷ್ಟ್ರ, ಗೋವಾ, ಕರ್ನಾಟಕ ಮುಂತಾಗಿ ಕಂಡುಬರುತ್ತದೆ. ಇದು ಒಣ ಪ್ರದೇಶಗಳಿಗೆ ಬಹುವಾಗಿ ಒಪ್ಪುವಂತಹ ತಳಿ. ವರ್ಷ ಬಿಟ್ಟು ವರ್ಷ ಫಲ ಕಚ್ಚುವ ಮಧ್ಯಕಾಲಿಕ ಬೆಳೆ. ಮರಗಳು ಕಸುವಿನಿಂದ ಕೂಡಿರುತ್ತವೆ. ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ಹಣ್ಣುಗಳ ಮೇಲೆ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಸಾಧಾರಣ ದಪ್ಪನೆಯ ಸಿಪ್ಪೆಯನ್ನು ಹೊಂದಿದ್ದು ಓರೆಯಾಗಿ, ಮೊಟ್ಟೆಯಾಕಾರದಲ್ಲಿರುತ್ತದೆ. ರುಚಿಯಲ್ಲಿ ಬಲು ಸಿಹಿ ರಸದ ಪ್ರಮಾಣ ಕಡಿಮೆಯಿಂದ ಸಾಧಾರಣ. ತಿರುಳು ಗಟ್ಟಿಯಾಗಿದ್ದು ನಾರು ಇರುವುದಿಲ್ಲ. ಹಣ್ಣಿನ ಗುಣಮಟ್ಟ ಉತ್ತಮ ಆದರೆ ಸಂಗ್ರಹಣಾ ಗುಣ ಅಷ್ಟೊಂದು ಉತ್ತಮವಲ್ಲ.

**ತೈಮೂರಿಯಾ :** ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಮರಗಳು ಸಾಧಾರಣ ಕಸುವಿನಿಂದ ಕೂಡಿದ್ದು ಅಧಿಕ ಫಸಲನ್ನು ಬಿಡುತ್ತವೆ. ಪ್ರತಿವರ್ಷ ಫಲ ಬಿಡುತ್ತಿದ್ದು ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡವು ಮತ್ತು ತಡವಾಗಿ ಕೊಯ್ಲಿಗೆ ಬರುವ ತಳಿಯಾಗಿದೆ. ಆಕಾರದಲ್ಲಿ ಹುರುಳಿ ಬೀಜದಂತೆ ಕಾಣುವುದು ಹಾಗೂ ಅತ್ಯುತ್ತಮ ಗುಣಮಟ್ಟದ ಹಣ್ಣಾಗಿರುತ್ತದೆ.

**ಕರ್ನಾಟಕದ ತಳಿಗಳು**

**ಬಿಷಪ್ :** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಈ ಹಣ್ಣು ದುಂಡಗೆ ಇರುತ್ತವೆ. ಉದ್ದ, ಭುಜಗಳು ಸಮ, ಕೊಕ್ಕು ಇರುವುದಿಲ್ಲ. ಸಾಕಷ್ಟು ರಸದಿಂದ ಕೂಡಿದ್ದು ಸಾಧಾರಣ ದಪ್ಪ ಸಿಪ್ಪೆಯಿಂದ ಕೂಡಿರುತ್ತದೆ.

**ಕಲೆಕ್ಟರ್ :** ಮಂಗಳೂರು ಪ್ರದೇಶದಲ್ಲಿ ಕಂಡುಬರುವ ಮಧ್ಯಕಾಲಿಕ ತಳಿಯಾದ ಈ ಹಣ್ಣು ಗಾತ್ರದಲ್ಲಿ ದೊಡ್ಡದಾಗಿರುತ್ತದೆ. ನಾರಿನಿಂದ

ಕೂಡಿರುವ ಇದು ಸಾಧಾರಣ ಸಿಪ್ಪೆಯನ್ನು ಹೊಂದಿದ್ದು ತಿರುಳು ಸುಮಾರು ಗಡಸಾಗಿದ್ದು ರುಚಿಯಲ್ಲಿ ಮಧುರ ಮತ್ತು ರಸದ ಪ್ರಮಾಣ ಸಾಧಾರಣವಾಗಿರುತ್ತದೆ.

**ಕುದುರೆ ಕುಕ್ಕು :** ಮೂಡಬಿದ್ರಿ ಹಾಗೂ ಸುತ್ತ ಮುತ್ತ ಕಂಡುಬರುವ ಮಧ್ಯಕಾಲಿಕ ತಳಿ. ಅಂಡಾಕಾರ, ದುಂಡಗಿರುವ ಇವು ಗಾತ್ರದಲ್ಲಿ ದೊಡ್ಡವು. ದಪ್ಪನೆ ಸಿಪ್ಪೆ ನಾರು ರಹಿತ. ಹಳದಿ ಬಣ್ಣ ಮತ್ತು ರುಚಿಯಲ್ಲಿ ಮಧುರವಾಗಿದ್ದು ಕಡಿಮೆ ಫಸಲನ್ನು ನೀಡುತ್ತವೆ.

**ಕಂಕನಾಡಿ :** ಮಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಕಂಡುಬರುತ್ತದೆ. ಸಾಧಾರಣ ಗಾತ್ರದ ಹಣ್ಣು. ಕೊಕ್ಕು ಇರುವುದಿಲ್ಲ ಸಿಪ್ಪೆ ತೊಗಲಿನಂತೆ. ರಸ ಸಾಕಷ್ಟಿದ್ದು, ತಿರುಳು ಸಿಹಿಯಾಗಿದ್ದು ಹಿತವಾದ ವಾಸನೆಯನ್ನು ಹೊಂದಿರುತ್ತದೆ.

**ಬ್ಲ್ಯಾಕ್ ಅಲ್ಫಾನ್ಸೊ :** ಇದನ್ನು ಕಾಲಾ ಇಷಾಡ್ ಮತ್ತು ಕಾಲಾ ಅಪ್ಫೂಸ್ ಎಂಬ ಹೆಸರಿನಿಂದ ಕರೆಯುವುದುಂಟು. ಮಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಮಂದ ಮತ್ತು ಒರಟಾದ ಸಿಪ್ಪೆಯಿಂದ ಕೂಡಿರುವ ಇದು ದುಂಡಗೆ ಮೊಟ್ಟೆಯಾಕಾರದಲ್ಲಿರುತ್ತದೆ. ಸಾಕಷ್ಟು ರಸ ಮತ್ತು ರುಚಿಯಲ್ಲಿ ಸಿಹಿಯನ್ನು ಹೊಂದಿರುತ್ತದೆ.

**ನೆಕ್ಕರೆ :** ದಕ್ಷಿಣ ಕನ್ನಡ ಜಿಲ್ಲೆಯ ಬಹು ಭ್ರೂಣೀಯ ತಳಿ. ಹಣ್ಣು ಸಾಧಾರಣ ಗಾತ್ರವಿದ್ದು ದುಂಡಗಿರುತ್ತದೆ. ರುಚಿ ಸಾಧಾರಣ, ರಸ ಸಾಕಷ್ಟಿರುತ್ತದೆ.

**ಪಾಯ್ಸ್ ಪಸಂದ್ :** ಇದು ದಕ್ಷಿಣ ಕನ್ನಡ ಜಿಲ್ಲೆಯ ತಳಿ. ಸಾಧಾರಣ ಗಾತ್ರ, ಭುಜಗಳು ಸಮ. ಕೊಕ್ಕು ಇರುವುದಿಲ್ಲ, ಸಿಪ್ಪೆ ಮಂದ, ನುಣುಪಾಗಿರುತ್ತದೆ. ತಿರುಳು ಬಿಗಿ. ಸಿಹಿಯಾಗಿರುತ್ತದೆ. ವಾಸನೆ ಹಿತಕರ, ಸಾಕಷ್ಟು ರಸವನ್ನು ಹೊಂದಿರುತ್ತದೆ.

**ಇತ್ರೂಲಿಯು :** ಮಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕಂಡುಬರುತ್ತದೆ. ಹಣ್ಣು ದೊಡ್ಡದು, ಮೊಟ್ಟೆಯಾಕಾರ, ಭುಜಗಳು ನಯ, ಕೊಕ್ಕು ಇರುವುದಿಲ್ಲ, ಸಿಪ್ಪೆ ಬಲು ತೆಳು, ತಿರುಳು ಬೆಣ್ಣೆಯಂತೆ. ಮೃದುವಾಗಿರುತ್ತದೆ ಬಣ್ಣ ಕಿತ್ತಲೆ ಹಳದಿ, ರುಚಿ ಮತ್ತು ವಾಸನೆಗಳು ಸಾಧಾರಣ. ರಸದ ಪ್ರಮಾಣ ಸಾಕಷ್ಟಿರುತ್ತದೆ.

**ರೆಡ್ಡಿ :** ಮಂಗಳೂರು ಮತ್ತು ಸುತ್ತಮುತ್ತ ಕಂಡುಬರುತ್ತದೆ. ಗಾತ್ರದಲ್ಲಿ ಸಾಧಾರಣವಾಗಿದ್ದು ಗುಂಡಗಿರುತ್ತದೆ. ಸ್ಫುಟವಾದ ಕೊಕ್ಕು ಮತ್ತು ಸಾಧಾರಣ ದಪ್ಪದ ಸಿಪ್ಪೆಯನ್ನು ಹೊಂದಿರುತ್ತದೆ. ತಿರುಳಿನ ವಾಸನೆ ಹಿತಕರ, ರುಚಿ ಸಪ್ಪೆ, ಸಾಕಷ್ಟು ರಸದಿಂದ ಕೂಡಿರುತ್ತದೆ.

**ಫರ್ನಾಂಡಿಸ್ :** ಇದನ್ನು ಫರ್ನಾಂಡಿನೊ ಎಂಬ ಹೆಸರಿನಿಂದ ಕರೆಯುವುದುಂಟು. ತಡವಾಗಿ ಕೊಯ್ಲಿಗೆ ಬರುವ ಈ ತಳಿ ಬಹಳ ಹಳೆಯದು. ಇದು ಮಂಗಳೂರು ಹಾಗೂ ಪಶ್ಚಿಮ ಕರಾವಳಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರತಿವರ್ಷ ಫಲಕಚ್ಚುತ್ತಿದ್ದು ಸಾಧಾರಣ ಗಾತ್ರ ಮತ್ತು ಯಥೇಚ್ಛ ಫಸಲನ್ನು ಕೊಡುತ್ತದೆ. ಆಕಾರದಲ್ಲಿ ಮೊಟ್ಟೆಯಂತೆ ಸಾಧಾರಣ ದಪ್ಪ ಸಿಪ್ಪೆಯನ್ನು ಹೊಂದಿರುತ್ತದೆ. ರುಚಿಯಲ್ಲಿ ಅತಿ ಮಧುರ ಮತ್ತು ಸಾಕಷ್ಟು ರಸದಿಂದ ಕೂಡಿರುತ್ತದೆ.

**ಮಿಶ್ರ ತಳಿಗಳು**

**ಮಲ್ಲಿಕ :** ಇದು ದಶೇರಿ ಮತ್ತು ನೀಲಂ ತಳಿಗಳನ್ನು ಸಂಕರಿಸಿ ಪಡೆದ ಮಿಶ್ರ ತಳಿ. ಪ್ರತಿ ವರ್ಷ ಫಲ ಕೊಡುವ ಇದು ಸಾಧಾರಣದಿಂದ ಸಮೃದ್ಧ ಫಸಲನ್ನು ನೀಡುತ್ತದೆ. ಓಟೆ ತೆಳ್ಳಗಿದ್ದು, ತಿರುಳು ಬಿಗುವಾಗಿದ್ದು, ನಾರು ರಹಿತವಾಗಿರುತ್ತದೆ. ಹಣ್ಣುಗಳ ಸಂಗ್ರಹಣಾ ಗುಣ ಉತ್ತಮ.

**ಆಮ್ರಪಾಲಿ :** ಇದು ನೀಲಂ ಮತ್ತು ದಶೇರಿ ತಳಿಗಳನ್ನು ಸಂಕರಿಸಿ ಪಡೆದ ಮಿಶ್ರ ತಳಿ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡದು, ತಿರುಳಿನ ಅಂಶ ಹೆಚ್ಚು. ಹುಳಿಯ ಅಂಶ ಕಡಿಮೆಯಿದ್ದು ನಾರಿನ ಅಂಶ ಇರುವುದಿಲ್ಲ.

**ಸಿಂಧು :** ರತ್ನ ಮತ್ತು ಆಲ್ಫಾನ್ಸೊ ತಳಿಗಳನ್ನು ಸಂಕರಿಸಿ ಪಡೆದ ಬೀಜ ರಹಿತ ಮಿಶ್ರತಳಿ. ಆಲ್ಫಾನ್ಸೊ ತಳಿಯಲ್ಲಿದ್ದಂತೆ ತಿರುಳು ರುಚಿ ಹಾಗೂ ಇತರ ಗುಣಗಳನ್ನು ಹೊಂದಿರುತ್ತದೆ. ಹಣ್ಣು ಗಾತ್ರದಲ್ಲಿ ಸಾಧಾರಣ ದೊಡ್ಡವು ಮತ್ತು ನಿರ್ಲಿಂಗ ರೀತಿಯಲ್ಲಿ ವೃದ್ಧಿ ಹೊಂದುವುದು. ಇದು ಮಧ್ಯಕಾಲಿಕ ಮಿಶ್ರ ತಳಿ.

**ಅರ್ಕಾಅರುಣ :** ಬಂಗನಪಲ್ಲಿ ಮತ್ತು ಆಲ್ಫಾನ್ಸೊಗಳನ್ನು ಸಂಕರಿಸಿ ಪಡೆದ ತಳಿ. ಇದಕ್ಕೆ ಹೈಬ್ರಿಡ್ - 10 ಎಂಬ ಹೆಸರಿದೆ. ಪ್ರತಿ ವರ್ಷ ಫಲಕಚ್ಚುವ ಇದು ಗಾತ್ರದಲ್ಲಿ ದೊಡ್ಡದು. ಸಸಿಗಳನ್ನು ಕಡಿಮೆ ಅಂತರದಲ್ಲಿ ಬೆಳೆಸಬಹುದು. ಮರಗಳು ಬಲು ಗಿಡ್ಡಗಿದ್ದು, ಹಣ್ಣು ರುಚಿಯಲ್ಲಿ ಬಲು ಸಿಹಿ. ಸಂಸ್ಕರಣೆಗೆ ಯೋಗ್ಯವಾದವು. ಮಿಶ್ರ ತಳಿಯ ಈ ಮರಗಳು ಹೆಕ್ಟೇರಿಗೆ 17 ಟನ್ನುಗಳಷ್ಟು ಹಣ್ಣನ್ನು ಕೊಡಬಲ್ಲವು.

**ಅರ್ಕಾಪುನೀತ್ (ಎಚ್ - 13) :** ಬಂಗನಪಲ್ಲಿ ಮತ್ತು ಆಲ್ಫಾನ್ಸೊ ತಳಿಗಳ ಸಂಕರವಿದು. ಈ ಮರಗಳು ಪ್ರತಿ ವರ್ಷ ಫಲಕೊಡಬಲ್ಲವು. ಇದು ಹೆಕ್ಟೇರಿಗೆ 15 ಟನ್ನುಗಳಿಗೂ ಮೇಲ್ಪಟ್ಟು ಫಸಲನ್ನು ಕೊಡುತ್ತದೆ.

**ಅರ್ಕಾಅನ್‌ಮೋಲ್ (ಎಚ್-17-3) :** ಜನ ಪಸಂದ್ ಮತ್ತು ಆಲ್ಫಾನ್ಸೊ ತಳಿಗಳ ಸಂಕರವಿದು. ಇವು ಪ್ರತಿ ವರ್ಷ ಫಲ ಕಚ್ಚುತ್ತವೆ. ಅಧಿಕ ಫಸಲು ನೀಡಬಲ್ಲವುಗಳಾಗಿದ್ದು ಹಣ್ಣುಗಳನ್ನು ಹೊರ ದೇಶಗಳಿಗೆ ರಫ್ತು ಮಾಡಬಹುದು.

**ಅರ್ಕಾನೀಲ್‌ಕಿರಣ್ (ಎಚ್-20-8) :** ಆಲ್ಫಾನ್ಸೊ ಮತ್ತು ನೀಲಂ ತಳಿಗಳ ಸಂಕರವಿದು. ಈ ಮರಗಳು ಪ್ರತಿ ವರ್ಷ ಫಲ ಕಚ್ಚುತ್ತವೆ. ಹಣ್ಣುಗಳ ಗುಣಮಟ್ಟ ಆಲ್ಫಾನ್ಸೊ ತಳಿಯಲ್ಲಿದ್ದಂತೆ. ಅಧಿಕ ಫಸಲನ್ನು ನೀಡುತ್ತದೆ.

ಸಿಂಧು ಮಹಾರಾಷ್ಟ್ರದ ಕೊಡುಗೆಯಾದರೆ ಅರ್ಕಾಅರುಣ, ಅರ್ಕಾಪುನೀತ್, ಅರ್ಕಾಅನ್‌ಮೋಲ್ ಮತ್ತು ಅರ್ಕಾನೀಲ್‌ಕಿರಣ್ ಮಿಶ್ರ ತಳಿಗಳು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಕೊಡುಗೆಗಳಾಗಿವೆ. ಆಂಧ್ರಪ್ರದೇಶದ ಪ್ರಮುಖ ಮಿಶ್ರ ತಳಿಗಳೆಂದರೆ ಸ್ವರ್ಣ ಜಹಾಂಗೀರ್, ನೀಲೆಷಾನ್, ನೀಲುದ್ದೀನ್, ನೀಲ್ಗೋವ ಮತ್ತು ಎಯುರುಮಾನಿ. ಸಾಬರ್ ಕೇಂದ್ರದ ಮಹಮೂದ್ ಬಹಾರ್ ಮತ್ತು ಪೂವಸಂಕರ್ ಸಹ ಮುಖ್ಯವಾದ ತಳಿಗಳಾಗಿವೆ.

**ಬೇಸಾಯ :** ಪ್ರಧಾನವಾಗಿ ಮಾವು ಉಷ್ಣವಲಯದ ಬೆಳೆ. ಹೂ ಅರಳುವ ಸಮಯದಲ್ಲಿ ಮಂಜು, ಮೋಡ ಮುಸುಕಿದ ವಾತಾವರಣ, ಮಳೆಗಾಳಿ ಇರಬಾರದು. ಹಣ್ಣುಗಳು ಬಲಿತು ಮಾಗುವ ಸಮಯದಲ್ಲೂ

ಮಳೆ ಬೀಳಬಾರದು. ಮಾವು ಫಲಬಿಡುವ ಸಮಯದಲ್ಲಿ ಅತಿಯಾದ ಚಳಿಯನ್ನು ಸಹಿಸದು. ಆಳವಾದ ಮತ್ತು ನೀರು ಚೆನ್ನಾಗಿ ಬಸಿದು ಹೋಗುವ ಮಣ್ಣಿನಲ್ಲಿ ಉತ್ತಮ ಬೆಳವಣಿಗೆಯನ್ನು ಕಾಣಬಹುದು. ಮೆಕ್ಕಲು ಮಣ್ಣು ಸಹ ಅತ್ಯುತ್ತಮವಾದುದು. ಕ್ಷಾರೀಯ ನೆಲ ಶಿಲಾಮಯ ಕ್ಷೇತ್ರಗಳು ಹಾನಿಕರ.



**ಸಸಿ ನೆಡುವುದು :** ಮಾವಿನ ಬೇಸಾಯಕ್ಕೆ ಆಯ್ಕೆ ಮಾಡಿದ ಭೂಮಿಯನ್ನು ಎರಡು - ಮೂರು ಸಾರಿ ಆಳವಾಗಿ ಉಳುಮೆಮಾಡಿ, ಸಮ ಮಾಡಬೇಕು. ಅನಂತರ ಒಂದು ಘನ ಮೀಟರ್ ಗುಂಡಿಗಳನ್ನು ತೆಗೆದು ಬಿಸಿಲಿಗೆ ಬಿಡಬೇಕು. ಸಾಲುಗಳ ನಡುವೆ ಮತ್ತು ಸಾಲಿನಲ್ಲಿ 13 ಮೀ. ಅಂತರ ಕೊಟ್ಟರೆ ಸಾಕು. ಈ ಅಂತರದಲ್ಲಿ ಹೆಕ್ಟೇರಿಗೆ 68 ಗಿಡಗಳನ್ನು ನೆಡಬಹುದು. ಮೇಲಿನ 30 ಸೆಂ.ಮೀ. ಆಳದ ಮಣ್ಣನ್ನು ಗುಂಡಿಯ ಇನ್ನೊಂದು ಮಗ್ಗುಲಲ್ಲಿಯೂ ಮತ್ತು ತಳಪದರಗಳ ಮಣ್ಣನ್ನು ಗುಂಡಿಯ ಮತ್ತೊಂದು ಮಗ್ಗುಲಲ್ಲಿಯೂ ಹಾಕಬೇಕು. ಈ ಕೆಲಸವನ್ನು ಏಪ್ರಿಲ್ - ಮೇ ತಿಂಗಳುಗಳಲ್ಲಿ ಮಾಡಬೇಕು. ಒಂದೆರಡು ಮಳೆಗಳಾದ ಅನಂತರ ಗುಂಡಿಗಳನ್ನು ಸಮ ಪ್ರಮಾಣದ ಮೇಲ್ಮಣ್ಣು ಮತ್ತು ಕೊಳೆತ ತಿಪ್ಪೆ ಗೊಬ್ಬರಗಳನ್ನು ಹರಡಿ ತುಂಬಬೇಕು. ಅನಂತರ ತೆಳ್ಳಗೆ ನೀರು ಹಾಯಿಸಿದಲ್ಲಿ ಗೊಬ್ಬರ ಮಣ್ಣುಗಳ ಮಿಶ್ರಣ ಚೆನ್ನಾಗಿ ಕುಳಿತುಕೊಳ್ಳುತ್ತದೆ.

ಮಾವನ್ನು ಬೀಜಗಳ ಮುಖಾಂತರ ಸುಲಭವಾಗಿ ಬೆಳೆಸಬಹುದಾದರೂ ಹೀಗೆ ಬೆಳೆಸಲಾದ ಮರಗಳಿಂದ ಏಕ ರೀತಿಯ ಗುಣಮಟ್ಟದ ಫಲ ಪಡೆಯುವುದು ಕಷ್ಟ. ಕಸಿಮಾಡಿದ ಮಾವಿನ ಸಸಿಗಳನ್ನು ಜುಲೈ - ಡಿಸೆಂಬರ್ ತಿಂಗಳುಗಳ ಅವಧಿಯಲ್ಲಿ ಕೊಟ್ಟಿಗೆ ಗೊಬ್ಬರ ಬೂದಿ, ಕೆಂಪು ಮಣ್ಣು ಮತ್ತು ಮರಳು ಮಿಶ್ರ ಮಾಡಿ ಹದಗೊಳಿಸಿದ ಗುಂಡಿಗಳಲ್ಲಿ ತುಂಬಿ ನೆಡಲಾಗುತ್ತದೆ. ಸಸಿ ನೆಟ್ಟ ಆರಂಭದಲ್ಲಿ ಗಿಡಗಳಿಗೆ ನೀರು ಹಾಯಿಸಬೇಕು. ಕೊಟ್ಟಿಗೆ ಗೊಬ್ಬರ, ಮೂಳೆ ಗೊಬ್ಬರ, ಹರಳು ಹಿಂಡಿ ಮುಂತಾದವುಗಳ ಮಿಶ್ರಣವನ್ನು ಕೊಡಬೇಕು.

ವಿವಿಧ ಪ್ರಕಾರದ ಮಣ್ಣುಗಳಲ್ಲಿ ಬೆಳೆಸಬಹುದಾದರೂ ಕೆಂಪು ಜೇಡಿಮಣ್ಣು ಉತ್ಕೃಷ್ಟವಾದುದು. ನವೆಂಬರ್ ಮಾಹೆಯ ಅನಂತರ ಒಣಹವೆ ಅವಶ್ಯ. ಹೂವು ಬಿಟ್ಟ ಸಂದರ್ಭದಲ್ಲಿ ಹೆಚ್ಚು ಮಳೆ ಬೀಳಬಾರದು. ಕಸುಕಾಯಿ (ಹೀಚುಕಾಯಿ) ಬಿಟ್ಟ ಮೇಲೆ ಬಿರುಗಾಳಿ ಮತ್ತು ಆಲಿಕಲ್ಲು ಮಳೆ ಬಿದ್ದರೆ ಹಾನಿಕರ. ಸಾಮಾನ್ಯ ಮಾವಿನ ತಳಿಯು ಸಾಕಷ್ಟು ಎತ್ತರಕ್ಕೆ ಬೆಳೆಯ ಬಲ್ಲದು. ಕಸಿ ಮಾಡಿದ ತಳಿ ಎತ್ತರಕ್ಕೆ ಬೆಳೆಯಲಾರದು. ನಾಟಿಮಾಡಿದ ನಾಲ್ಕೈದು ವರ್ಷಗಳಲ್ಲಿ ಮಾವು ಫಲ ನೀಡುತ್ತದೆ. ಕರ್ನಾಟಕದಲ್ಲಿ ಬೆಳೆಯುವ ಮಾವಿನ ಹಣ್ಣಿನ ಆಕಾರ, ಗಾತ್ರ ಮತ್ತು ರುಚಿಗಳು ವಿಭಿನ್ನವಾಗಿರುತ್ತವೆ. ಅವುಗಳ ತಳಿಗಳಲ್ಲೂ ಅನೇಕ ಪ್ರಭೇದಗಳಿವೆ ಉದಾ : ರಸಪುರಿ, ಮಲಗೋವ, ಬಾದಾಮಿ, ನೀಲಂ, ದಶಹರಿ, ತೋತಾಪುರಿ, ಮುಂಡಪ್ಪ (ದಕ್ಷಿಣ ಕನ್ನಡದಲ್ಲಿ) ಮಲ್ಲಿಕ, ಹಾಗೂ ಅನೇಕ ಸಂಕರ ತಳಿಗಳನ್ನು ಕಾಣಬಹುದಾಗಿದೆ.

**ಫಸಲು ಮತ್ತು ಕೊಯ್ಲು :** ಕಸಿಗಿಡಗಳಾದರೆ ನೆಟ್ಟ ಸುಮಾರು ಏಳು ವರ್ಷಗಳಿಂದಾಚೆಗೆ ಮತ್ತು ಬೀಜ ಸಸಿಗಳಾದರೆ ನೆಟ್ಟ ಸುಮಾರು ಹತ್ತು ವರ್ಷಗಳಿಂದಾಚೆಗೆ ಫಸಲನ್ನು ಕೊಡುತ್ತವೆ. ಮಾವಿನ ಕಾಯಿ ಬಲಿತು ಕೊಯ್ಲಿಗೆ ಸಿದ್ಧವಾಗಿವೆಯೇ ಅಥವಾ ಇಲ್ಲವೇ ಎಂಬುದನ್ನು ಕೆಲವೊಂದು ಲಕ್ಷಣಗಳಿಂದ ಸುಲಭವಾಗಿ ತಿಳಿಯಬಹುದು. ಅದನ್ನು ಕೊಯ್ಲುಗಾಲದ ಸೂಚಿ ಎನ್ನುತ್ತಾರೆ. ಹಣ್ಣನ್ನು ಒಮ್ಮೆಲೇ ಕಿತ್ತು ತೆಗೆಯುವ ಬದಲಾಗಿ ಎರಡು ಮೂರು ಹಂತಗಳಲ್ಲಿ ಕೊಯ್ಲು ಮಾಡುವುದು ಒಳ್ಳೆಯ ವಿಧಾನ. ಬಿಡಿಬಿಡಿಯಾಗಿ ಕಿತ್ತು ತೆಗೆಯುವುದು ಒಳ್ಳೆಯ ಕ್ರಮ. ಈ ಉದ್ದೇಶಕ್ಕೆ ಮಡಚುವ ಏಣಿಯನ್ನು ಬಳಸುವುದು ಲಾಭದಾಯಕ. ಉದ್ದನಾದ ಕೊಕ್ಕೆ ಕುಡುಗೋಲಿಗೆ ಬುಟ್ಟಿಗಳನ್ನು ಸಿಕ್ಕಿಸಿ ಕಟ್ಟಿ, ಅವುಗಳ ನೆರವಿನಿಂದ ಕೊಯ್ಲು ಮಾಡುವುದುಂಟು. ಫಸಲಿನ ಪ್ರಮಾಣವು ಮರಗಳ ವಯಸ್ಸು, ತಳಿ, ಹವಾ ಮತ್ತು ಭೂಗುಣ, ಆರೈಕೆ ಮುಂತಾದ ಅಂಶಗಳ ಮೇಲೆ ವ್ಯತ್ಯಾಸಗೊಳ್ಳುತ್ತದೆ. ಪೂರ್ಣವಾಗಿ ಕಾಯಿಗಳು ಬಲಿತಾಗ ಕೊಯ್ಲು ಆರಂಭವಾಗುತ್ತದೆ. ಕೊಯ್ಲು ಮಾಡಿದ ಕಾಯಿಗಳನ್ನು ಬತ್ತದ ಒಣಹುಲ್ಲು ಇಲ್ಲವೆ ಗೋಧಿ, ಬತ್ತದ ತೌಡಿನ ಹಾಸಿನ ಮೇಲಿರಿಸಿ ಹಣ್ಣಾಗಿಸುತ್ತಾರೆ.

**ಕೀಟ ಮತ್ತು ರೋಗಗಳು :** ಬೂಷ್ಟು ರೋಗಗಳ ಪೈಕಿ ಪೌಡರಿ ಮಿಲ್‌ಡ್ಯೂ, ಆಂತ್ರಕ್ನೋಸ್ ಮತ್ತು ಹೂ ಮಂಜರಿಯ ಕುಚ್ಚುಗಟ್ಟುವಿಕೆ ಮುಖ್ಯವೆನಿಸಿವೆ. ಮೊದಲ ರೀತಿಯ ರೋಗ ಹೂ ಮತ್ತು ಕಾಯಿಗಳಿಗೆ ಅಂಟುವಂಥದ್ದು. ಇದನ್ನು ಗಂಧಕವನ್ನು ಸಿಂಪಡಿಸುವುದರ ಮೂಲಕ ತಡೆಗಟ್ಟಬಹುದು. ಜಾಸಿಡ್ ಜಿಗಿಕೀಟ, ಕಾಂಡ ಕೊರಕ, ಸೊಂಡಿಲು ಕೀಟ, ಶಲ್ಕ ಕೀಟ, ಮಕಮಲ್ ತಿಗಣೆ, ಕೆಂಪಿರುವೆ ಮುಂತಾದವು ಮಾವಿನಮರಕ್ಕೆ ಹಾನಿಯನ್ನುಂಟುಮಾಡುತ್ತವೆ. ಅಲ್ಲದೆ ಬೂದಿರೋಗ, ಚಿಬ್ಬುರೋಗ, ಕಪ್ಪು ಬೂಷ್ಟು, ಹಣ್ಣಿನ ಕಪ್ಪು ತುದಿ, ಕೆನ್ನೀಲಿ, ಗೊಂಚಲು ಸುಳಿ, ಸ್ಪಂಜು ಊತಕ, ಹಣ್ಣುಗಳ ತೊಟ್ಟು ಕೊಳೆಯುವುದು, ಅಣುಜೀವಿ ಕಜ್ಜಿ ಇತ್ಯಾದಿ ರೋಗಗಳು ತಗಲುವುದುಂಟು. ಇವುಗಳಿಂದ ಮರಗಳನ್ನು ರಕ್ಷಿಸಲು ದೇಸಿ ಔಷಧಿಗಳಾದ ಬೇವಿನ ಎಲೆ 'ಗಂಜಳ' ಸುಣ್ಣ ಇತ್ಯಾದಿ ಮಿಶ್ರಣ ಮಾಡಿ ಬಳಸಬಹುದು. ಕೀಟನಾಶಕಗಳನ್ನು ಬಳಸಿ ರೋಗಗಳನ್ನು ನಿಯಂತ್ರಿಸಬಹುದು.

ಭಾರತ ಮಾವು ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಪ್ರಥಮ ಸ್ಥಾನದಲ್ಲಿರುವಂತೆ, ಕರ್ನಾಟಕದಲ್ಲಿಯೂ ಅದು ಅತ್ಯಂತ ಪ್ರಮುಖವಾದ ಹಣ್ಣಿನ ಬೆಳೆಯಾಗಿದೆ. ಕರ್ನಾಟಕದಲ್ಲಿ ಹಣ್ಣುಗಳನ್ನು ಬೆಳೆಯುವ ಕ್ಷೇತ್ರ ಮತ್ತು ಉತ್ಪಾದನೆಗಳೆರಡರಲ್ಲೂ ಮಾವು ಪ್ರಥಮ ಸ್ಥಾನದಲ್ಲಿದೆ.

**ಉಪಯೋಗಗಳು :** ಎಳಸಾದ ಮಾವಿನ ಕಾಯಿಗಳಲ್ಲಿ ಹುಳಿ ಹೆಚ್ಚಾಗಿದ್ದು ಅವುಗಳನ್ನು ಉಪ್ಪಿನಕಾಯಿ, ಹಸಿ ಗೊಜ್ಜು, ಚಟ್ನಿ, ಚಿತ್ರಾನ್ನ, ತೊಕ್ಕು ಮುಂತಾದವುಗಳ ತಯಾರಿಕೆಗೆ ಬಳಸಲಾಗುವುದು. ಇದರಲ್ಲಿ 'ಎ' ಮತ್ತು 'ಸಿ' ಜೀವಸತ್ವಗಳು ಇರುತ್ತವೆ. ತೇವಾಂಶ, ಶರ್ಕರ ಪಿಷ್ಟ

ಮತ್ತು ಕಬ್ಬಿಣಾಂಶಗಳು ಹೆಚ್ಚಾಗಿರುತ್ತವೆ. ಮಾವಿನ ಹಣ್ಣನ್ನು ನೇರವಾಗಿ ಅಥವಾ ಊಟದ ಜೊತೆಗೆ ಸೇವಿಸುತ್ತಾರೆ. ಜಾಮ್, ಕ್ಯಾಂಡಿ, ಸಿಹಿ ತೊಕ್ಕು, ಸೀಕರಣೆ, ಮುರಬ್ಬ ಮುಂತಾದವುಗಳಲ್ಲಿ ಬಳಸುವರು. ಚಾಕೋಲೇಟ್, ತಂಪುಪಾನೀಯಗಳ ತಯಾರಿಕೆಗೂ ಮಾವಿನ ಹಣ್ಣು ಬಳಸುತ್ತಾರೆ.

ಅಸಿಡಿಟಿ, ಅಜೀರ್ಣ ಸಮಸ್ಯೆಯಿಂದ ಬಳಲುವವರು ಮಾವಿನ ಹಣ್ಣು ತಿನ್ನುವುದರಿಂದ ಜೀರ್ಣಕ್ರಿಯೆಯನ್ನು ಹೆಚ್ಚಿಸುತ್ತದೆ. ಮಾವಿನ ಹಣ್ಣಿನಲ್ಲಿ ನಾರಿನಾಂಶ ಅಧಿಕವಾಗಿದ್ದು ವಿಟಮಿನ್ 'ಸಿ' ಅಂಶವಿರುವುದರಿಂದ ಕೊಲೆಸ್ಟ್ರಾಲ್ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಸಹಕಾರಿಯಾಗುತ್ತದೆ. ಮಾವಿನಕಾಯಿ ಅಥವಾ ಹಣ್ಣಿನಲ್ಲಿರುವ ಗ್ಲೂಟಾಮೈನ್ ಆಸಿಡ್ ಜ್ಞಾಪಕಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

**ಆಧಾರ ಗ್ರಂಥಗಳು**


ಕರ್ನಾಟಕ ಕೈಪಿಡಿ 2011, ಕರ್ನಾಟಕ ಸರ್ಕಾರ, ಬೆಂಗಳೂರು,

ಕನ್ನಡ ವಿಶ್ವಕೋಶ (ಸಂ.13): ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., 1998

ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಭಾಗ-1,2,3) ಕರ್ನಾಟಕ ಸರ್ಕಾರ, 1986

ಎಂ.ಎ.ನಾರಾಯಣ ರೆಡ್ಡಿ, ಪ್ರಧಾನ ಹಣ್ಣಿನ ಬೆಳೆಗಳು, ಮಾವು, ಕೃಷಿ, ವಿ.ವಿ., ಬೆಂಗಳೂರು, 2001

Hand Book of Agriculture, ICAIR, New Delhi, 2001

Horticultural crop Statistics of Karnataka - 2006-07


*ಪಿ.ಕೆ.ಪಿ.*

**ಮಿಶ್ರ ಬೆಳೆಗಳು (ಬಹುಬೆಳೆ ಬೇಸಾಯ, ಮಲ್ಟಿಪಲ್ ಕ್ರಾಪಿಂಗ್)** ಮಿಶ್ರ ಬೆಳೆಗಳ ಬೇಸಾಯವನ್ನು ಅಂತರ ಬೇಸಾಯ, ಅಪವರ್ತ್ಯ ಬೇಸಾಯ ಎಂದೆಲ್ಲಾ ಕರೆಯುತ್ತಾರೆ. ಒಂದೇ ಭೂಮಿಯಲ್ಲಿ ಎರಡು ಅಥವಾ ಹೆಚ್ಚು ಬೆಳೆಗಳನ್ನು ಏಕಕಾಲಕ್ಕೆ ಬೆಳೆಸುವ ಪದ್ಧತಿಯೇ ಮಿಶ್ರ ಬೇಸಾಯ. ಇದು ಪುರಾತನ ಕಾಲದಿಂದಲೂ ಬಳಕೆಯಲ್ಲಿದೆ. ಇವುಗಳಲ್ಲಿಒಂದು ಪ್ರಥಮ ಅಥವಾ ಮುಖ್ಯ ಬೆಳೆ, ಇನ್ನೊಂದು ಅಕ್ಕಡಿ ಬೆಳೆ, ಅಕ್ಕಡಿ ಬೆಳೆಯನ್ನು ಸಮಾನಾಂತರ ಸಾಲುಗಳಲ್ಲಿ ಮುಖ್ಯ ಬೆಳೆಯ ಮಧ್ಯೆ ಬಿತ್ತಲಾಗುತ್ತದೆ. ಈ ಪದ್ಧತಿಯಿಂದ ರೈತನಿಗೆ ಹೆಚ್ಚು ಅನುಕೂಲ. ಮಿಶ್ರ ಬೇಸಾಯದ ಅನುಸರಣೆಯಲ್ಲಿ ಮೂರುವಿಧಗಳಿವೆ. 1. ಮುಖ್ಯ ಬೆಳೆಯಲ್ಲಿ ಇತರ ಉಪ ಬೆಳೆಗಳನ್ನು ಅಕ್ಕಡಿ ಸಾಲುಗಳಲ್ಲಿ ಬಿತ್ತುವುದು, 2. ದೀರ್ಘಾವಧಿ ಬೆಳೆಗಳಲ್ಲಿ ಅಲ್ಪಾವಧಿಯ ಬೆಳೆಗಳನ್ನು ಪಡೆಯುವುದು, 3. ಒಂದು ಬೆಳೆ ಕಟಾವಿಗೆ ಬರುವ ಮುನ್ನವೇ ಇನ್ನೊಂದು ಬೆಳೆ ಬಿತ್ತುವುದು. ಇದಕ್ಕೆ ಸರದಿ ಬೆಳೆಯೆಂದು ಹೆಸರು. ಇದರಿಂದ ಉತ್ಪಾದನೆ ಮಾತ್ರವಲ್ಲದೇ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು. ಹಾಗೆಯೇ ರೈತ, ಆತನ ಕುಟುಂಬ ಆಳುಗಳು ಮತ್ತು ರಾಸುಗಳಿಗೆ ವರ್ಷವಿಡೀ ಕೆಲಸ ಕೊಟ್ಟಂತಾಗುತ್ತದೆ. ಇದರಿಂದ ರೈತನ ಆರ್ಥಿಕಸ್ಥಿತಿ ಉತ್ತಮ ಗೊಳ್ಳುವುದಲ್ಲದೆ ತನಗೆ ಬೇಕಾದ ಏಕದಳ, ದ್ವಿದಳ ಧಾನ್ಯ ಹಾಗೂ ತರಕಾರಿಗಳನ್ನು ಬೆಳೆದು ಕೊರತೆಯನ್ನು ನೀಗಿಸಿಕೊಳ್ಳಬಹುದು.

ಬಹುಬೆಳೆ ಯೋಜನೆ ಯಶಸ್ವಿಯಾಗಲು ಕೆಲವು ಮುಖ್ಯ ಅಂಶಗಳನ್ನು ಅನುಸರಿಸಬೇಕು. ಬಿಸಲು ರಹಿತ ವಾತಾವರಣದ ಬೆಳೆಗಳನ್ನು ಮತ್ತು ಅಲ್ಪಾವಧಿ ಬೆಳೆಗಳಾದ ಉದ್ದು, ಹೆಸರು, ಅಲಸಂದೆ ಇತ್ಯಾದಿ ಬೆಳೆಗಳನ್ನು ಬೆಳೆಯಬೇಕು. ಋತುಮಾನಕ್ಕನುಗುಣವಾಗಿ ಮಿಶ್ರ ಬೇಸಾಯ ಮಾಡಿದಲ್ಲಿ ಹೆಚ್ಚು ಇಳುವರಿ ಕೊಡಬಲ್ಲದು. ಒಂದು ಬೆಳೆಗೆ ಮಾಡಿದ ಉಳುಮೆ, ಗೊಬ್ಬರ ಪೂರೈಕೆ, ನೀರಾವರಿ ನಿರ್ವಹಣೆಯಿಂದಲೇ ಇತರೆ ಬೆಳೆಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ಉತ್ತಮ ಮಾರ್ಗಾನುಸರಣೆಯಿದ್ದಲ್ಲಿ ಬಹು ಬೆಳೆಗಳಿಂದ ಭೂಮಿಯ ಫಲವತ್ತತೆ ಸ್ವಲ್ಪವೂ ಹಾಳಾಗುವುದಿಲ್ಲ. ಬೆಳೆಯ ಪೂರ್ಣ ಅವಶ್ಯಕತೆಗಳನ್ನು ಒದಗಿಸುತ್ತಿದ್ದಷ್ಟು ಅವು ಉತ್ತಮವಾಗಿ ಬೆಳೆದು ನಿರಂತರವಾಗಿ ಉತ್ಪತ್ತಿ ಕೊಡುತ್ತವೆ.

ಖುಷ್ಕಿ ಬೇಸಾಯದಲ್ಲೂ ಬಹು ಬೆಳೆ ಬೆಳೆಸುವ ಸಾಧ್ಯತೆ ಇದೆ. ಅಲ್ಪಾವಧಿ ಹಾಗೂ ಶುಷ್ಕ ವಾತಾವರಣವನ್ನು ತಡೆಯಬಲ್ಲ ತಳಿಗಳನ್ನು ಉತ್ಪನ್ನ ಮಾಡುವುದರಿಂದ ಅತಿ ಕಡಿಮೆ ಮಳೆಯಿರುವಲ್ಲೂ ಅಲ್ಲಿಯ ಆಗು ಹೋಗುಗಳನ್ನು ಗಮನಿಸಿ ಸಮರ್ಪಕ ಬೆಳೆ ಸರಣಿ ಏರ್ಪಡಿಸಲು ಸಾಧ್ಯವಿದೆ. ಖುಷ್ಕಿ ಪ್ರದೇಶಗಳಿಗೆ ಹರಳು, ತೊಗರಿ, ಜೋಳ, ಹೆಸರು ಮುಂತಾದ ಉತ್ತಮ ತಳಿಗಳಿವೆ. ಇವುಗಳ ಬೆಳೆವಣಿಗೆಯಿಂದ ಭೂಮಿಯೂ ಫಲವತ್ತಾಗುತ್ತದೆ. ಜೋಳ - ಹುರುಳಿ, ಜೋಳ - ನೆಲಗಡಲೆ, ಜೋಳ - ಹೆಸರು, ಜೋಳ - ರಾಗಿ, ಆಲೂಗೆಡ್ಡೆ - ರಾಗಿ, ಸಜ್ಜೆ - ಹೆಸರು, ರಾಗಿ - ಹುರುಳಿ ಮುಂತಾದುವು ಸುಲಭವಾಗಿ ಬೆಳೆಸಬಲ್ಲ ಬೆಳೆ ಸರಣಿಗಳು. ಮಿಶ್ರ ಬೆಳೆಗೆ ಮತ್ತೊಂದು ಕಾರಣವೆಂದರೆ ದೀರ್ಘಾವಧಿ ಬೆಳೆಗಳು ಬೆಳೆದು ಹಬ್ಬಿ ಹರಡಲು ಹೆಚ್ಚು ಕಾಲಾವಧಿ ಬೇಕಾಗುತ್ತದೆ. ಈ ಮಧ್ಯೆ ಒಂದು ಅಲ್ಪಾವಧಿ ಬೆಳೆ ತೆಗೆಯಲು ಸಾಧ್ಯವಿರುತ್ತದೆ. ಆದ್ದರಿಂದ ಮೈಸೂರು ಭಾಗದ ಜಿಲ್ಲೆಗಳಲ್ಲಿ ತೊಗರಿ, ಅವರೆಗಳನ್ನು 'ಕಾರು' ರಾಗಿ ಅಥವಾ ಮುಂಗಾರು ಜೋಳದಲ್ಲಿ ಬಿತ್ತುತ್ತಾರೆ. ರಾಗಿ ಅಥವಾ ಜೋಳ ಆಗಸ್ಟ್ ಹೊತ್ತಿಗೆ ಕಟಾವಿಗೆ ಸಿದ್ಧವಾಗುತ್ತದೆ. ಫಸಲನ್ನು ತೆಗೆದುಕೊಂಡು ಅನಂತರ ಉತ್ತು ಬಿಟ್ಟಲ್ಲಿ ತೊಗರಿ ಮತ್ತು ಅವರೆ ಹಬ್ಬಿ ಬೆಳೆಯಲು ಅನುಕೂಲವಾಗುತ್ತದೆ. ಮತ್ತೊಂದು ಮಿಶ್ರ ಬೆಳೆಯ ಉತ್ತಮ ಸೂತ್ರವೆಂದರೆ ಆಳಬೇರು ಮತ್ತು ಮೇಲ್ಪದರ ಬೇರಿನ ಬೆಳೆಗಳನ್ನು ಸೇರಿಸಿ ಬಿತ್ತಿದ್ದಲ್ಲಿ ಅವು ವಿವಿಧ ಪದರಗಳಲ್ಲಿಯ ಪೋಷಕಾಂಶಗಳನ್ನು ಬಳಸಿ ಮಣ್ಣಿನ ಫಲವತ್ತತೆ ನಾಶವಾಗದಂತೆ ಬೆಳೆಯುತ್ತವೆ. ಜೊತೆಗೆ ಒಂದು ಬೆಳೆ ಕಾರಣಾಂತರದಿಂದ ನಷ್ಟವಾದರೂ ಇನ್ನೊಂದು ಸಮೃದ್ಧಿಯಾಗಿ ಬೆಳೆಯುತ್ತದೆ. ಒಟ್ಟಾರೆ ಮಿಶ್ರ ಬೇಸಾಯದಿಂದ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಬಹುದು. ಮುಖ್ಯ ಬೆಳೆಯ ಇಳುವರಿಯನ್ನು ಹೆಚ್ಚಿಸಬಹುದು. ನೆರಳಿನ ಬೆಳೆಗಳಿಗೆ ರಕ್ಷಣೆಯನ್ನು ಒದಗಿಸಬಹುದು. ಬೆಳೆಗಳಿಗೆ ತಗುಲುವ ರೋಗಗಳನ್ನು ನಿವಾರಣೆ ಮಾಡಬಹುದು. ಸಾಧ್ಯವಾದಷ್ಟು ನೀರು, ಗೊಬ್ಬರ, ಕೀಟನಾಶಕ ಮತ್ತು ಕೆಲಸವನ್ನು ಉಳಿತಾಯ ಮಾಡಿಕೊಳ್ಳಬಹುದು. ಜೈವಿಕ ಸಮಸ್ಯೆಗಳನ್ನು ತಪ್ಪಿಸಬಹುದು. ಈ ಎಲ್ಲಾ ಕಾರಣಗಳಿಂದ ಮಿಶ್ರ ಬೇಸಾಯ ರೈತನಿಗೆ ಅನುಕೂಲಕರ.

ಅಂತರ ಬೆಳೆಗಳಲ್ಲಿ ಅಲ್ಪ ಕಾಲದ ಬೆಳೆಗಳು, ವಾರ್ಷಿಕ ಬೆಳೆಗಳು ಹಾಗೂ ದೀರ್ಘ ಕಾಲದ ಬೆಳೆಗಳೆಂದು ಮೂರು ವಿಧ. ದ್ವಿದಳ ಧಾನ್ಯಗಳು ತರಕಾರಿಗಳು ಅಲ್ಪ ಕಾಲದವು. ಬಾಳೆ, ಗೆಣಸು ಮುಂತಾದವು ವಾರ್ಷಿಕ ಬೆಳೆಗಳು. ಲವಂಗ, ಏಲಕ್ಕಿ, ಜಾಯಿಕಾಯಿ, ಮೆಣಸು ಮುಂತಾದುವು ದೀರ್ಘಕಾಲದ ಬೆಳೆಗಳು. ಮಿಶ್ರ ಬೇಸಾಯ ಮಾಡಬೇಕಾದಾಗ ಯಾವ ಬೆಳೆಯೊಂದಿಗೆ ಯಾವ ಬೆಳೆ ಬೆಳೆಯುವುದು ಯೋಗ್ಯವೆಂದು ತಿಳಿಯಬೇಕು. ಅಡಕೆಯೊಂದಿಗೆ - ಬಾಳೆ, ಕರಿಮೆಣಸು, ವೀಳ್ಯದೆಲೆ, ನಿಂಬೆ ಜಾತಿಯ ಗಿಡಗಳು, ಏಲಕ್ಕಿ, ಲವಂಗ, ಜಾಯಿಕಾಯಿ, ಕಾಫಿ, ನಕ್ಷತ್ರಹಣ್ಣು, ಪಪ್ಪಾಯಿ, ಪೈನಾಪಲ್, ಸುವರ್ಣಗೆಡ್ಡೆ, ಶುಂಠಿ, ಅರಿಸಿನ, ಈರುಳ್ಳಿ, ಬೆಳ್ಳುಳ್ಳಿ, ಹುರುಳಿ, ಉದ್ದು, ಹೆಸರು, ಅಲಸಂದೆ, ಅವರೆ ಜಾತಿಯ ಸಸ್ಯಗಳು ಪಚ್ಚೆತೆನೆ, ಪಚೋಲಿ, ತೊಂಡೆ, ಹಿಪ್ಪಲಿ, ಮುರುಗಲು ಮುಂತಾದವನ್ನು ಬೆಳೆಯಬಹುದು.

ತೆಂಗಿನೊಂದಿಗೆ - ಮಾವು, ಹಲಸು, ಸಪೋಟ (ಚಿಕ್ಕು), ನಿಂಬೆ, ಪೊಪ್ಪಾಯ, ಪೇರಳೆ, ಬಾಳೆ, ಉದ್ದು, ಹೆಸರು, ಅಲಸಂದೆ, ಹುರುಳಿ, ಅವರೆ ಜಾತಿಯ ಸಸ್ಯಗಳು ಸುವರ್ಣಗೆಡ್ಡೆ, ಅರಿಸಿನ, ಶುಂಠಿ, ಮುಂತಾದ ಗೆಡ್ಡೆ ತರಕಾರಿಗಳನ್ನು ಬೆಳೆಯಬಹುದು.

ವೀಳ್ಯದೆಲೆಯೊಂದಿಗೆ - ಅಡಕೆ, ಬಾಳೆ, ಕರಿಮೆಣಸು, ತೆಂಗು, ಅರಿಸಿನ, ಈರುಳ್ಳಿ, ಅಗಸೆ, ನುಗ್ಗೆ, ಹಿಪ್ಪಲಿ, ಬೂರುಗ, ಹಾಲಿವಾಣ, ಚೊಗಚೆ, ಬಂದ್ರೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ತೋಟದ ಸುತ್ತಂಚಿನಲ್ಲಿ ಬಿದಿರು, ಹಲಸು, ಮಾವು, ಬೇವು ಇತ್ಯಾದಿ ಬೆಳೆಯುತ್ತಾರೆ. ಹಲಸಿನೊಂದಿಗೆ - ಬಾಳೆ, ಕರಿಮೆಣಸು, ವೀಳ್ಯದೆಲೆ, ತೆಂಗು, ಶುಂಠಿ, ಅರಿಸಿನ, ಈರುಳ್ಳಿ, ದ್ವಿದಳ ಧಾನ್ಯಗಳು, ಸೊಪ್ಪು ತರಕಾರಿಗಳು, ಮೆಣಸಿನ ತೋಟದಲ್ಲಿ - ಈರುಳ್ಳಿ, ಬೆಳ್ಳುಳ್ಳಿ ಬೆಂಡೆ, ಬದನೆ, ಮೂಲಂಗಿ, ಇತ್ಯಾದಿ ಬೆಳೆಯುತ್ತಾರೆ.

ಮಾವಿನೊಂದಿಗೆ - ಬಾಳೆ, ಗೋಡಂಬಿಯನ್ನು, ಸುತ್ತಂಚಿನಲ್ಲಿ ತೆಂಗು, ಹಲಸು, ಬೇವು, ಬಿದಿರು, ಹುಣಿಸೆ, ಇತ್ಯಾದಿ ಬೆಳೆಯುತ್ತಾರೆ. ಸಪೋಟಾದೊಂದಿಗೆ - ಪೇರಳೆ, ಮಾವು, ಪಪ್ಪಾಯ, ದಾಲ್ಚಿನ್ನಿ, ರಾಗಿ, ಅವರೆ, ಅಲಸಂದೆ, ಹುರುಳಿ, ಉದ್ದು, ಹೆಸರು ಇತ್ಯಾದಿ ಬೆಳೆಗಳನ್ನು ಕೃಷಿ ಮಾಡುತ್ತಾರೆ.

ದ್ರಾಕ್ಷಿಯೊಂದಿಗೆ - ಜೋಳವನ್ನು ಗಾಳಿಯ ನಿಯಂತ್ರಣಕ್ಕಾಗಿ ಬೆಳೆಸುತ್ತಾರೆ. ದಾಳಿಂಬೆ ಜೊತೆ ಸೊಪ್ಪು, ತರಕಾರಿಗಳು, ಅಲಸಂದೆ, ಹುರುಳಿ, ಆಲೂಗೆಡ್ಡೆ, ಗೆಣಸು, ಈರುಳ್ಳಿ, ಕ್ಯಾರೇಟ್, ಮೂಲಂಗಿ ಇತ್ಯಾದಿ ಬೆಳೆಯುವರು.

ಕಿತ್ತಳೆ ಜೊತೆ - ಪ್ರಾರಂಭದಲ್ಲಿ ಗೆಡ್ಡೆ, ಸೊಪ್ಪು, ತರಕಾರಿಗಳು ಬೆಳೆಯುತ್ತಾರೆ. ಸುತ್ತಂಚಿನಲ್ಲಿ ಹಲಸು, ಮಾವು, ಬಿದಿರು, ಏಲಕ್ಕಿ ಕರಿಮೆಣಸು, ಲವಂಗ, ದಾಲ್ಚಿನ್ನಿ, ಮುಂತಾದ ಬೆಳೆ ಬೆಳೆಯುತ್ತಾರೆ. ಆಲೂಗೆಡ್ಡೆ ಬೆಳೆಯಲ್ಲಿ ಮುಸುಕಿನ ಜೋಳ ಅಥವಾ ಅಲಸಂದೆಯನ್ನು, ಟೊಮ್ಯಾಟೋ ಜೊತೆಗೆ ತಿಂಗಳ ಹುರುಳಿ ಬೆಳೆಯುವರು. ಕಾಫಿ ಬೆಳೆಯ ಜೊತೆಗೆ ನಿಂಬೆ ಜಾತಿಯ ಗಿಡಗಳು, ಕಿತ್ತಳೆ, ಹಲಸು, ಬೆಣ್ಣೆ ಹಣ್ಣು ಮಲ್ಲಿಗೆ, ಚೆಂಡು ಹೂ ಮುಂತಾದವು, ಹುಣಿಸೆಯ ಜೊತೆಗೆ ರಾಗಿ, ಗೋಧಿ, ಉದ್ದು ಹೆಸರು ಹುರುಳಿ, ತೊಗರಿ, ತರಕಾರಿಗಳು ಬೆಳೆಯುವರು.

ಬಾಳೆ ಜೊತೆ - ಅಡಕೆ, ನುಗ್ಗೆ, ವೀಳ್ಯದೆಲೆ, ಏಲಕ್ಕಿ, ಲವಂಗ, ದಾಲ್ಚಿನ್ನಿ, ಮೂಲಂಗಿ ಕೆಸವು, ಸುವರ್ಣಗೆಡ್ಡೆ, ಶುಂಠಿ, ಅರಿಸಿನ, ಚೆಂಡುಹೂ ಮುಂತಾದುವನ್ನು ಬೆಳೆಯುತ್ತಾರೆ. ಕ್ಯಾರೇಟ್, ಮೂಲಂಗಿ, ಆಲೂಗೆಡ್ಡೆ ಮುಂತಾದ ಬೆಳೆಗಳಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಕೊತ್ತಂಬರಿ ಮುಂತಾದವನ್ನು ಬೆಳೆಯುತ್ತಾರೆ.

ಹತ್ತಿ ಬೆಳೆಯುವ ಕಡೆಗಳಲ್ಲಿ ಒಂದು ಸಾಲು ಹತ್ತಿ, ಎರಡು ಸಾಲು ನೆಲಗಡಲೆ ಬಿತ್ತಿದರೆ ಉತ್ತಮ ಲಾಭವೀಯುತ್ತದೆ. ಜೋಳ - ಹತ್ತಿಯನ್ನೂ ಬಿತ್ತಬಹುದು. ಹಂಪಿ ಸುತ್ತಮುತ್ತಲ ಪ್ರದೇಶದಲ್ಲಿ ಹತ್ತಿಯೊಂದಿಗೆ ಈರುಳ್ಳಿಯನ್ನು ಬಿತ್ತಿದರೆ ಹಾಸನ ಜಿಲ್ಲೆಯಲ್ಲಿ ಹತ್ತಿಯೊಂದಿಗೆ ರಾಗಿಯನ್ನೋ ಬದನೆ,ಮೆಣಸಿನ ಕಾಯಿಯನ್ನೋ ಅಕ್ಕಡಿ ಬೆಳೆಯಾಗಿ ಬೆಳೆಯುತ್ತಾರೆ. ಕೋಸು ಜಾತಿ, ಬೆಳೆಗಳೊಂದಿಗೆ ಸಾಸಿವೆ, ಜೋಳದೊಂದಿಗೆ ನೆಲಗಡಲೆ, ತೊಗರಿ ಅಥವಾ ಅವರೆಯನ್ನು ಬಿತ್ತುತ್ತಾರೆ. ಸೆಣಬನ್ನು ಬಿತ್ತನೆಗಾಗಿ ಜೋಳದೊಂದಿಗೆ ಅಕ್ಕಡಿಯಾಗಿ ಬೆಳೆಯುವುದುಂಟು.

ರಾಗಿಯಲ್ಲಿ ಮಿಶ್ರ ಬೆಳೆ ಯುಕ್ತವಲ್ಲ. ಆದರೂ ಹುರುಳಿ, ಜೋಳ, ನವಣೆ, ಸೆಣಬು, ಸೂರ್ಯಕಾಂತಿ, ಹರಳು ಮುತಾದವುಗಳನ್ನು ಅಕ್ಕಡಿಯಾಗಿ ಬೆಳೆಯುತ್ತಾರೆ. ಹೊಗೆಸೊಪ್ಪಿನಲ್ಲಿ ಈರುಳ್ಳಿ ಒಂದೇ ಉತ್ತಮ ಫಲವೀಯುವುದು. ಮುಸುಕಿನ ಜೋಳ ಮಿಶ್ರ ಬೆಳೆಗೆ ಉಪಯುಕ್ತವಲ್ಲ. ಇದರಲ್ಲಿ ಇತರೆ ಬೆಳೆಗಳನ್ನು ಬೆಳೆಸಿದಲ್ಲಿ ಎರಡು ಬೆಳೆಯ ಇಳುವರಿಯೂ ಕಡಿಮೆಯಾಗುತ್ತದೆಂದು ಅನುಭವದಿಂದ ರೈತರು ಕಂಡುಕೊಂಡಿದ್ದಾರೆ.

ಪಪ್ಪಾಯದ ಜೊತೆ ಯಾವುದೇ ಅಂತರ ಬೆಳೆ / ಮಿಶ್ರ ಬೆಳೆ ಸಾಧ್ಯವಿಲ್ಲ. ಇದನ್ನೇ ನೆರಳು ಗಿಡವಾಗಿ (ಅಕ್ಕಡಿಯಾಗಿ) ಮಾಡಿಕೊಂಡಾಗ ಅಡಕೆ, ತೆಂಗು, ಸಪೋಟ ಮುಂತಾದ ಸಸಿಗಳನ್ನು ಕಾಪಾಡಿಕೊಳ್ಳಬಹುದು.

**ಮಿಶ್ರ ಬೆಳೆಯಿಂದಾಗುವ ತೊಂದರೆಗಳು :**

ಬೆಳೆ ಸರಣಿ ಸಮರ್ಪಕವಾಗಿರದಿದ್ದಲ್ಲಿ ದೀರ್ಘ ಪರಿಣಾಮವುಳ್ಳ ಬಹುವಿಧ ನಷ್ಟವೇರ್ಪಡುವ ಸಂಭವವುಂಟು. ಒಂದೇ ವಿಧವಾದ ಬೆಳೆಗಳನ್ನು ಸತತವಾಗಿ ಬೆಳೆಸುತ್ತಿದ್ದಲ್ಲಿ ಕೀಟ ಮತ್ತು ರೋಗಗಳ ವೃದ್ಧಿಗೆ ಅನುಕೂಲವಾಗಿ ಬೆಳೆಗಳು ನಾಶವಾಗುತ್ತವೆ. ಒಂದೇ ರೀತಿಯ ಬೇರು ಬೆಳವಣಿಗೆ ಮತ್ತು ಪೋಷಕಾಂಶಗಳ ಅಗತ್ಯವಿರುವ ಬೆಳೆಗಳನ್ನು ಬೆಳೆಸಿದಾಗ ಕನಿಷ್ಠ ಪೋಷಕಾಂಶಗಳ ಅಭಾವ ಅತಿಶೀಘ್ರದಲ್ಲೇ ಉಂಟಾಗಿ ಬೆಳೆನಾಶವಾಗುತ್ತದೆ. ಆದುದರಿಂದ ಮೇಲ್ಪದರ ಬೇರಿನ ಬೆಳೆಗಳ ಮಧ್ಯದಲ್ಲಿ ಆಳ ಬೇರಿನ ಬೆಳೆ ತೆಗೆಯುವುದು ಒಳ್ಳೆಯದು ಅಥವಾ ಮಣ್ಣಿನ ಫಲವತ್ತತೆಯನ್ನು ವೃದ್ಧಿಗೊಳಿಸಬಲ್ಲ ದ್ವಿದಳ ಧಾನ್ಯ ಬೆಳೆಯನ್ನು ಸೇರಿಸುವುದು ಅತ್ಯಾವಶ್ಯಕ. ಋತುಮಾನಕ್ಕೆ ಹೊಂದುವಂಥ ಬೆಳೆಗಳನ್ನೇ ಮಿಶ್ರ ಬೆಳೆಯಲ್ಲಿ ಬೆಳೆಯಬೇಕು. ಇಲ್ಲದಿದ್ದರೆ ಬೆಳೆ ಕೈಗೆ ಸಿಗುವ ಸಂಭವವಿರುವುದಿಲ್ಲ. ಒಂದೇ ತಾಕಿನಲ್ಲಿ ಒಂದೇ ತರಹದ ಬೆಳೆ ಸರಣಿ ಅನುಸರಿಸಬಾರದು ಯುಕ್ತವಾದ 3-4 ಬೆಳೆ ಸರಣಿಯನ್ನು ನಿರ್ಧರಿಸಿ ಮಾರ್ಪಡಿಸುತ್ತಿರಬೇಕು.

*ಎನ್. ಆರ್.*

**ಮಿಡಿಸೌತೆ** ಸೌತೆಕಾಯಿ ಪ್ರಭೇದಕ್ಕೆ ಸೇರಿದ ಒಂದು ತಳಿಯಿದು. ಇದನ್ನು 'ಘರ್ಕಿನ್' ಅಥವಾ 'ಕುಕುಮಿಸ್ ಅಂಗೋರಿಯಾ' ಎಂದು ಕರೆಯಲಾಗುತ್ತದೆ. ಕರ್ನಾಟಕದ ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಧಾರವಾಡ ಜಿಲ್ಲೆಗಳಲ್ಲಿ ಪ್ರಧಾನವಾಗಿ ಬೇಸಗೆಯ ಆರ್ಥಿಕ ಬೆಳೆಯನ್ನಾಗಿ ಬೆಳೆಯಲಾಗುತ್ತದೆ. ಇದರ ಎಳೆಯ ಕಾಯಿಗಳನ್ನು ಬಹುತೇಕವಾಗಿ ಉಪ್ಪಿನಕಾಯಿ ಹಾಗೂ ಔಷಧಿ ತಯಾರಿಕೆಗಾಗಿ ಬಳಕೆ ಮಾಡಲಾಗುತ್ತದೆ. ಹೊರರಾಷ್ಟ್ರಗಳಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆ ಇರುವುದರಿಂದ ಇದನ್ನು ಮುಖ್ಯವಾಗಿ ವಾಣಿಜ್ಯ ಬೆಳೆಯನ್ನಾಗಿ ಬೆಳೆಯಲಾಗುತ್ತದೆ.

**ಲಕ್ಷಣ :** ಮಿಡಿಸೌತೆ ಬಳ್ಳಿ ದಟ್ಟವಾದ ಏಣು ಕವಲುಗಳಿಂದ ಕೂಡಿದ್ದು ವಿಸ್ತಾರವಾಗಿ ಬೆಳೆಯುತ್ತದೆ. ಎಲೆಗಳು ಅಗಲವಾಗಿದ್ದು ದಟ್ಟ ಹಸುರಿನಿಂದ ಕೂಡಿವೆ. ಕಾಯಿಗಳು ಗಾತ್ರದಲ್ಲಿ ಚಿಕ್ಕದಾಗಿದ್ದು, ಗಾಢ ಹಸುರು ಬಣ್ಣವನ್ನು ಹೊಂದಿವೆ. ಉಬ್ಬು ತಗ್ಗಾಗಿರುವ ಏಣುಗಳಿಂದ ಕೂಡಿರುವ ದಪ್ಪ ಸಿಪ್ಪೆಯನ್ನು ಹೊಂದಿರುತ್ತವೆ. ಇವುಗಳನ್ನು ಬಲಿಯಲು ಬಿಟ್ಟರೆ ಉಬ್ಬುತ್ತವೆಯೇ ಹೊರತು, ಉದ್ದವಂತೂ ಆಗುವುದಿಲ್ಲ. ಕಟುವಲ್ಲದ ಕಹಿ ಹಾಗೂ ಕಟುವಲ್ಲದ ಸಿಹಿ ಎರಡೂ ಲಕ್ಷಣಗಳಿಂದ



ಕೂಡಿದ ರುಚಿಯನ್ನು ಹೊಂದಿರುತ್ತವೆ. ಅಷ್ಟಲ್ಲದೆ ಈ ಮಿಡಿಸೌತೆ ಕಾಯಿಗಳು ಇತರೆ ಸೌತೆಕಾಯಿಗಳಿಗಿಂತ ಹೆಚ್ಚು 'ಎ' ಮತ್ತು 'ಸಿ' ಜೀವಸತ್ವ ಹೊಂದಿರುತ್ತದೆ.

**ಮಣ್ಣು ಮತ್ತು ಹವಾಗುಣ :** ಮಿಡಿಸೌತೆಯನ್ನು ಹಲವು ರೀತಿಯ ಮಣ್ಣುಗಳಲ್ಲಿ ಬೆಳೆಯಬಹುದು. ಮರಳು ಮಿಶ್ರಿತ ಜೇಡಿಮಣ್ಣೆ(ಗೋಡು ಮಣ್ಣು)ನಲ್ಲಿ ಇದು ಹುಲುಸಾಗಿ ಬೆಳೆಯುತ್ತದೆ. ನೀರು ಚೆನ್ನಾಗಿ ಇಂಗಿ ಹೋಗುವ ಜೇಡಿಮಣ್ಣಿನಲ್ಲೂ ಇದನ್ನು ಬೆಳೆಯಬಹುದು. ಉತ್ತಮ ಬೆಳೆಗೆ ಮಣ್ಣಿನಲ್ಲಿ ಸಾವಯವ ಪದಾರ್ಥಗಳಿಂದ ಕೂಡಿದ 6.5 ರಿಂದ 7.5 ರಷ್ಟು ರಸಸಾರ ಆವಶ್ಯಕ. ಇತ್ತೀಚಿನ ದಿನಗಳಲ್ಲಿ ರೈತರು ಮರಳುಮಿಶ್ರಿತ ಕೆಂಪು, ಕಪ್ಪು ಮತ್ತು ಇತರೆ ಮಣ್ಣುಗಳಲ್ಲಿ ನೀರಿನ ಸೌಲಭ್ಯಕ್ಕನುಸಾರವಾಗಿ ಇದನ್ನು ಬೆಳೆಯುತ್ತಿದ್ದಾರೆ. ಮುಖ್ಯವಾಗಿ ಉಷ್ಣವಲಯದ ಬೆಳೆಯಾದ ಮಿಡಿಸೌತೆಯನ್ನು ವರ್ಷವಿಡೀ ಬೆಳೆಯಬಹುದಾದರೂ ಬೇಸಗೆ ಕಾಲ ಇದಕ್ಕೆ ಯುಕ್ತ. ಅದರಲ್ಲೂ ಜನವರಿ - ಫೆಬ್ರವರಿ ತಿಂಗಳುಗಳಲ್ಲಿ ಈ ಬೆಳೆಯನ್ನು ಬಿತ್ತಲು ಪ್ರಾರಂಭಿಸಿದರೆ ಹೆಚ್ಚು ಇಳುವರಿ ಪಡೆಯಬಹುದು. 26 ರಿಂದ 28 ಡಿಗ್ರಿ ಸೆಲ್ಸಿಯಸ್ ಉಷ್ಣದಲ್ಲಿ ಚೆನ್ನಾಗಿ ಕಾಯಿ ಕಟ್ಟುತ್ತದೆ. 36 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾದರೆ ಅಥವಾ 10 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಿದ್ದಲ್ಲಿ ಕಾಯಿ ಕಟ್ಟುವುದು ಕುಂಠಿತವಾಗುತ್ತದೆ. ಇದರ ಬಿತ್ತನೆಗೆ ಮುಂಗಾರಿನ ಮೊದಲಿನ ಅವಧಿಯು ಯುಕ್ತ. ಜೊತೆಗೆ ಒಳ್ಳೆಯ ಬೆಳೆ ಹಾಗೂ ಇಳುವರಿಗೆ ಸೆಪ್ಟೆಂಬರ್ - ಅಕ್ಟೋಬರ್ ತಿಂಗಳುಗಳು ಹೇಳಿ ಮಾಡಿಸಿದ ಸಮಯ.

**ತಳಿಗಳು :** ಮಿಡಿಸೌತೆಯಲ್ಲಿ ಹಲವಾರು ತಳಿಗಳಿವೆ. ಅಜಾಕ್ಸ್, ಸ್ಪಾರ್ಟಾ, ಅನ್ಯಾಕ್ಸೊ, ದರ್ಟಿನಾ ಇನ್ನೂ ಮುಂತಾದವು. ಮೊದಲಿನ ಎರಡು ತಳಿಗಳು ವ್ಯಾಪಕವಾಗಿ ಅತಿ ವೇಗವಾಗಿ ಬೆಳೆದು, ಹೆಚ್ಚಿನ ಇಳುವರಿ ಸಾಮರ್ಥ್ಯ ಹೊಂದಿವೆ. ಇವು ಒಳ್ಳೆಯ ಗುಣಮಟ್ಟದ ಹಾಗೂ ಉತ್ತಮ ಗಾತ್ರದ ಕಾಯಿಗಳನ್ನು ಕೊಡುತ್ತವೆ. ಬಹು ಮುಖ್ಯವಾಗಿ ವಿವಿಧ ಪ್ರತಿಕೂಲ ವಾತಾವರಣಕ್ಕೆ ಹೊಂದಿಕೊಳ್ಳುತ್ತವೆ. ಮಿಕ್ಕಂತೆ ಮಿಡಿಸೌತೆಕಾಯಿಗೆ ಪರಾಗಸ್ಪರ್ಶ ಕ್ರಿಯೆ ಬಹು ಮುಖ್ಯ.

**ಭೂಮಿ ಸಿದ್ಧತೆ ಮತ್ತು ಬಿತ್ತನೆ :** ಸ್ವಲ್ಪ ಇಳಿಜಾರು ಪ್ರದೇಶವನ್ನು ಎರಡು ಮೂರು ಸಾರಿ ಉಳುಮೆ ಮಾಡಿ ಹೆಂಟೆ ಒಡೆದು ಚೆನ್ನಾಗಿ ಹದಮಾಡಬೇಕು. ಶಿಫಾರಸ್ಸು ಮಾಡಿದ ಪೂರ್ಣ ಪ್ರಮಾಣದ ಕೊಟ್ಟಿಗೆ ಗೊಬ್ಬರ ರಂಜಕ, ಪೊಟ್ಯಾಷ್ ಜೊತೆಗೆ ಅದರ ಅರ್ಧ ಪ್ರಮಾಣದ ಸಾರಜನಕವನ್ನು ಒಂದು ಸಾಲಿನಲ್ಲಿ ಸೇರಿಸಿ, ಪಕ್ಕದಲ್ಲಿ ಮತ್ತೊಂದು ಸಾಲನ್ನು ಹೊಡೆದು ಬೋದು ಮಾಡಬೇಕು. ಒಂದು ಬೋದುವಿಗೂ ಮತ್ತೊಂದು ಬೋದುವಿಗೂ 90 ರಿಂದ 105 ಸೆಂ.ಮೀ. ಅಂತರವಿರಬೇಕು. ಪ್ರತಿ ಬೋದುಗಳಲ್ಲಿ ಎರಡರಿಂದ ಎರಡುವರೆ ಅಡಿ (22.5 ಸೆಂ.ಮೀ.) ಅಂತರದಲ್ಲಿ ಗುಣಿಗಳನ್ನು ಮಾಡಿ ಎರಡರಿಂದ ಮೂರು ಬೀಜಗಳನ್ನು ನಾಟಿ ಮಾಡಿ ನೀರು ಹಾಯಿಸಬೇಕು. ಬೀಜ ಮೊಳೆತು ಹತ್ತು - ಹನ್ನೆರಡು ದಿನಗಳಲ್ಲಿ ಬೆಳೆದ ಸಸಿಗಳಲ್ಲಿ ಪ್ರತಿ ಗುಣಿಗೆ ಒಂದು ಅಥವಾ ಎರಡು ಸಸಿ ಉಳಿಯುವಂತೆ ನೋಡಿಕೊಳ್ಳಬೇಕು. ಎಕರೆಗೆ 750 ರಿಂದ 800 ಗ್ರಾಂ (40 ರಿಂದ 45 ಸಾವಿರ ಬೀಜಗಳು) ಬೀಜಗಳು ಬೇಕಾಗುತ್ತವೆ. ಮೊದಲ ಉಳುಮೆಯಿಂದ ವಿವಿಧ ಹಂತಗಳಲ್ಲಿ 25 ಟನ್ ಕೊಟ್ಟಿಗೆ ಗೊಬ್ಬರ, 5 ಕ್ವಿಂಟಾಲ್ ಬೇವಿನ ಹಿಂಡಿ, 2.5 ಕ್ವಿಂಟಾಲ್ ಸಾರಜನಕ, 175 ಕೆ.ಜಿ. ರಂಜಕ, 2.5 ಕ್ವಿಂಟಾಲ್ ಪೊಟ್ಯಾಷ್‌ಗಳನ್ನು ಹೊಲಕ್ಕೆ ನೀಡಲಾಗುತ್ತದೆ.

**ಬಳ್ಳಿಗಳಿಗೆ ಆಸರೆ ಕೊಡುವುದು :** ಬೀಜ ಮೊಳೆತ ಹದಿನೈದು ಇಪ್ಪತ್ತು ದಿನಗಳ ಅನಂತರ ಸಸಿಗಳ ಸಾಲಿನುದ್ದಕ್ಕೂ ಐದರಿಂದ ಆರು ಅಡಿ ಎತ್ತರದ ಗೂಟಗಳನ್ನು ನೆಟ್ಟು, ನಾಲ್ಕರಿಂದ ಐದು ಅಡಿ ಎತ್ತರದಲ್ಲಿ ಎರಡು ಹಂತದಲ್ಲಿ ತಂತಿಯನ್ನು ಹೆಣೆಯಬೇಕು. ಇದಕ್ಕೆ ಸೆಣಬಿನ ದಾರದಿಂದ ಬಳ್ಳಿಗಳನ್ನು ಎತ್ತಿ ಕಟ್ಟಿ ಹಬ್ಬಿ ಬೆಳೆಯುವಂತೆ ನೋಡಿಕೊಳ್ಳಬೇಕು. ಬಳ್ಳಿಯ ಎಲ್ಲ ಕುಡಿಗಳಿಗೂ ಇದೇ ರೀತಿ ದಾರವನ್ನು ಕಟ್ಟಿ ಹಬ್ಬಿಸಲಾಗುತ್ತದೆ. ಇದರಿಂದ ಬಳ್ಳಿ ನೆಲಕ್ಕೆ ಬೀಳದೆ ಸರಾಗವಾಗಿ, ಸಮೃದ್ಧಿಯಾಗಿ ಬೆಳೆದು ವಿಸ್ತರಿಸಿಕೊಳ್ಳಲು ಅನುವಾಗುತ್ತದೆ. ಈ

ಕ್ರಮವನ್ನು ಅನುಸರಿಸುವುದರಿಂದ ಉತ್ತಮ ಗುಣಮಟ್ಟದ ಕಾಯಿಯಗಳನ್ನು ಪಡೆಯಬಹುದಲ್ಲದೆ, ಕಾಯಿಗಳನ್ನು ಕೊಯ್ಲು ಮಾಡುವುದು ಸುಲಭವಾಗುತ್ತದೆ. ಕಾಯಿಗಳು ಕಣ್‌ತಪ್ಪಿನಿಂದ ಉಳಿಯುವುದು ಕಡಿಮೆಯಾಗುತ್ತದೆ.

**ನೀರು ನಿರ್ವಹಣೆ ಹಾಗೂ ಅಂತರ ಬೇಸಾಯ :** ಮಿಡಿಸೌತೆ ಬೆಳೆಗೆ ಹವಾಗುಣಕ್ಕನುಗುಣವಾಗಿ ಪ್ರತಿ ಎರಡು ದಿನಕ್ಕೊಮ್ಮೆ ನೀರು ಹಾಯಿಸಲಾಗುತ್ತದೆ. ಬೀಜ ಬಿತ್ತಿದ ಮೂರು ಮತ್ತು ಐದನೇ ವಾರಕ್ಕೆ ಮೇಲು ಗೊಬ್ಬರವಾಗಿ ಉಳಿದ ಅರ್ಧ ಸಾರಜನಕವನ್ನು ಒದಗಿಸಿಕೊಡಬೇಕು. ಬೆಳೆಯಲ್ಲಿ ಕಳೆ ಬೆಳೆಯದಂತೆ ಕ್ರಮ ಕೈಗೊಳ್ಳಬೇಕು.

**ಸಸ್ಯ ಸಂರಕ್ಷಣೆ :** ಮಿಡಿಸೌತೆಗೆ ರೋಗ ತಗಲದಂತೆ ಸೂಕ್ಷ್ಮ ಸಂರಕ್ಷಣಾ ಕ್ರಮಗಳನ್ನು ಅನುಸರಿಸಬೇಕು. ಮಿಡಿಸೌತೆ ಬಿತ್ತಿದ ಹೊಲದ ಸುತ್ತಲೂ 10-15 ದಿನಗಳಿಗಿಂತ ಮುಂಚಿತವಾಗಿ ಮೂರು ಸಾಲುಗಳಲ್ಲಿ ಜೋಳವನ್ನು ಬಿತ್ತಬೇಕು. ಇದರಿಂದ ಗಾಳಿಯಿಂದ ಚಿಟ್ಟೆಗಳಂತಹ ಕೀಟಗಳಿಂದ ಸಂರಕ್ಷಣೆ ದೊರೆಯುತ್ತದೆ. ಕಾಂಡ ಕೊರೆಯುವ ಹುಳು, ಕಾಯಿಕೊರಕ, ಹಣ್ಣು ನೊಣ, ಮತ್ತು ಹಸುರು ಹುಳು, ಎಲೆ ಪದರಗಳ ನಡುವೆ ಸೇರಿ ಹಸುರು ಪದಾರ್ಥ ತಿನ್ನುವ ಎಲೆ ಸುರಂಗ ಕೀಟ, ಎಲೆಗಳ ಮೇಲೆ ಬಿಳಿ, ಹಳದಿ, ಹಾವಿನಾಕೃತಿಯ ಮಚ್ಚೆಗಳು ಕಾಣಿಸಿಕೊಂಡು ಎಲೆ ಒಣಗುವ ರೋಗಗಳು ಮಿಡಿಸೌತೆಗೆ ಸಾಮಾನ್ಯವಾಗಿ ತಗಲುವ ರೋಗಗಳಾಗಿವೆ. ಹಾಗಾಗಿ ಬಿತ್ತನೆಯಾದ ಮೂರು ವಾರಗಳ ಅನಂತರ ಬೆಳೆಗೆ 40 ಗ್ರಾಂ ಕಾರ್ಬರಿಲ್, ಶೇ. 50WP ಒಂದು ಲೀಟರ್ ನೀರಿನಲ್ಲಿ ಕರಗಿಸಿ ಮಿಡಿಸೌತೆಕಾಯಿ ಬಳ್ಳಿಗೆ ಸಿಂಪಡಿಸಬೇಕು. ಅನಂತರ ಬಿತ್ತನೆಯಾದ 5, 8 ಮತ್ತು 11 ವಾರಗಳ ಬಳಿಕ ಎರಡು ಮಿಲಿಲೀಟರ್ ಮೆಲಾಥಿಯಾನ್ 50 ಇ.ಸಿ. ಅಥವಾ ಒಂದು ಮಿಲಿಲೀಟರ್ ಮಿಥೈಲ್ ಪ್ಯಾರಾಥಿಯಾನ್ 50 ಇ.ಸಿ. ಒಂದು ಲೀಟರ್ ನೀರಿನಲ್ಲಿ ಸೇರಿಸಿ ಬೆಳೆಗೆ ಸಿಂಪಡಿಸಬೇಕು. ಬಹುಮುಖ್ಯವಾಗಿ ಜಾಗ್ರತೆ ವಹಿಸಬೇಕಾದ ಸಂಗತಿಯೆಂದರೆ ಗಂಧಕಯುಕ್ತವಾದ ಯಾವುದೇ ಔಷಧಿಗಳನ್ನು ಸಿಂಪಡಿಸದಂತೆ ಎಚ್ಚರಿಕೆ ವಹಿಸಬೇಕು. ಇಂಥ ಕ್ರಮಗಳನ್ನು ಅನುಸರಿಸಿದರೆ ಮಿಡಿಸೌತೆಗೆ ತಗುಲುವ ರೋಗಗಳಿಂದ ಮುಕ್ತಿಗೊಳಿಸಿ ಸಂಮೃದ್ಧ ಬೆಳೆಯನ್ನು ನಿರೀಕ್ಷಿಸಬಹುದು.

**ಕೊಯ್ಲು ಮತ್ತು ಇಳುವರಿ :** ಘರ್ಕಿನ್ ತಳಿಯನ್ನು ಕಿರು ಬೆರಳಿನ ಗಾತ್ರದ 14-14.50 ಮಿ.ಮೀ. ಸುತ್ತಳತೆ ಇರುವಾಗಲೇ ಕೊಯ್ಲು ಮಾಡಬೇಕು. ಈ ಗಾತ್ರದ ಕಾಯಿಗಳಿಗೆ ಹೆಚ್ಚಿನ ಬೆಲೆ ದೊರೆಯುತ್ತದೆ. ಬಿತ್ತಿದ ಒಂದು ತಿಂಗಳ ಅನಂತರ ಮೊದಲನೆಯ ಕೊಯ್ಲು ಪ್ರಾರಂಭವಾಗುತ್ತದೆ. ಸುಮಾರು ಒಂದು ಒಂದೂವರೆ ತಿಂಗಳಿನವರೆಗೆ ಕಾಯಿಗಳು ಬಲಿಯುವ ಮೊದಲೆ ಪ್ರತಿ ದಿನ ಕೊಯ್ಲು ಮಾಡಬೇಕು. ಪ್ರತಿ ಹೆಕ್ಟೇರ್‌ಗೆ ಸುಮಾರು 15 ರಿಂದ 20 ಟನ್ ಇಳುವರಿ ಪಡೆಯಬಹುದು. 6 ಸೆಂ.ಮೀ.ಗೂ ಅಧಿಕ ಉದ್ದದ ಕಾಯಿಗಳಿಗೆ ಬೇಡಿಕೆ ಇರುವುದಿಲ್ಲ. ಸದ್ಯಕ್ಕೆ ಕೆ.ಜಿ. ಒಂದಕ್ಕೆ 20 ರಿಂದ 25 ರೂಪಾಯಿಗಳವರೆಗೂ ಧಾರಣೆ ಇದೆ. ಹೆಚ್ಚಿನ ಇಳುವರಿ ಪಡೆಯುವುದಕ್ಕಾಗಿ ಬೆಳೆ ಪರಿವರ್ತನೆಗೆ ಆದ್ಯತೆ ನೀಡಲಾಗುತ್ತದೆ.

**ಕಾಯಿಗಳು ಶ್ರೇಣೀಕರಣ :** ಕೊಯ್ಲು ಮಾಡಿದ ಕಾಯಿಗಳ ಸುತ್ತಳತೆ ಹಾಗೂ ತೂಕದ ಆಧಾರದ ಮೇಲೆ ಶ್ರೇಣಿಗಳಲ್ಲಿ ಕಾಯಿಗಳನ್ನು ವಿಂಗಡಿಸಲಾಗುತ್ತದೆ.

| ಶ್ರೇಣಿ | ಕಾಯಿಗಳ ಸುತ್ತಳತೆ (ಮಿ.ಮೀ.) | ಒಂದು ಕೀ.ಗ್ರಾಂ.ಗೆ ಕಾಯಿಗಳ ಸಂಖ್ಯೆ |
|---|---|---|
| 1. | 14.00/14.50 | 160 ಅಥವಾ ಅಧಿಕ |
| 2. | 17.00 | 100 ಅಥವಾ ಅಧಿಕ |
| 3. | 19.00 | 60 ಅಥವಾ ಅಧಿಕ |
| 4. | 26.00 | 30 ಅಥವಾ ಅಧಿಕ |

**ಕಾಯಿಗಳ ಸಂಗ್ರಹಣೆ ಹಾಗೂ ಗುಣಮಟ್ಟ ನಿಯಂತ್ರಣ :** ಕೊಯ್ಲು ಮಾಡಿದ ಕಾಯಿಗಳನ್ನು ಸಂಸ್ಕರಣಾ ಘಟಕಕ್ಕೆ ರವಾನಿಸುವ ಮೊದಲು ತಾಜಾತನವನ್ನು ಕಾಪಾಡಿಕೊಳ್ಳಬೇಕು. ಇದಕ್ಕೆ ಅನುಕೂಲವಾಗುವಂತೆ ಹೊಲದ ಪಕ್ಕದಲ್ಲಿ ಒಳ್ಳೆಯ ನೆರಳನ್ನು ನೀಡುವ ಮರಗಳು, ಇಲ್ಲದಿದ್ದರೆ, ತಾತ್ಕಾಲಿಕ ಚಪ್ಪರ ನಿರ್ಮಿಸಿಕೊಳ್ಳಬೇಕು. ಅಲ್ಲಿಗೆ ಕೊಯ್ಲು ಮಾಡಿದ ಕಾಯಿಗಳನ್ನು ರವಾನಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು. ಮರದಡಿ ಅಥವಾ ಚಪ್ಪರದಡಿಯಲ್ಲಿ ಗೋಣಿ ತಾಟು ಅಥವಾ ಪ್ಲಾಸ್ಟಿಕ್ ಹಾಳೆಗಳನ್ನು ಗಾಳಿಯಾಡುವಂತೆ ತೆಳ್ಳಗೆ ಹಾಸಬೇಕು. ಕಾಯಿಗಳಿಗೆ ಸೂರ್ಯನ ಕಿರಣ ನೇರವಾಗಿ ತಾಗದಂತೆ, ಮಳೆ ಬೀಳದಂತೆ ಜಾಗ್ರತೆ ವಹಿಸಬೇಕು.

ಮಿಡಿಸೌತೆಕಾಯಿಗಳನ್ನು ಸಂಪೂರ್ಣವಾಗಿ ಔಷಧಿ ಬಳಕೆಗೆ ಉಪ್ಪಿನಕಾಯಿ ತಯಾರಿಕೆಗೆ ಹಾಗೂ ವಿದೇಶಗಳಿಗೆ ರಫ್ತು ಮಾಡುವುದರಿಂದ ಗುಣ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅಗತ್ಯ.

1. ಕೊಯ್ಲು ಮಾಡಿದ ಕಾಯಿಗಳನ್ನು ನೆಲದ ಮೇಲೆ ಹಾಕದೆ ಟಾರ್ಪಾಲಿನ್ ಅಥವಾ ಪ್ಲಾಸ್ಟಿಕ್ ಹಾಳೆಗಳನ್ನು ಬಳಸಬೇಕು.

2. ಕೊಯ್ಲು ಮಾಡಿದ ಕಾಯಿಯ ತುದಿಯ ಹೂವುಗಳನ್ನು ತೊಟ್ಟುಗಳನ್ನು ತೆಗೆದುಹಾಕಬೇಕು.

3. ಕೊಯ್ಲು ಮಾಡಿದ ಕಾಯಿಗಳನ್ನು ತುಂಬಿಡಲು ಸೆಣಬಿನ ಚೀಲಗಳನ್ನು ಉಪಯೋಗಿಸಬೇಕು.

4. ಕೊಯ್ಲು ಮಾಡಿದ ಕಾಯಿಗಳಿಗೆ ನೀರು ಸಿಂಪರಣೆ ಮಾಡಿದರೆ ಕೊಳೆತು ಹೋಗುವ ಸಾಧ್ಯತೆ ಇರುತ್ತದೆ.

ಕೊಯ್ಲು ಮಾಡಿದ ಕಾಯಿಗಳಲ್ಲಿ ಹುಳುಕೊರಕಕ್ಕೆ ತುತ್ತಾದ, ಡೊಂಕಾದ, ಮುರಿದ, ಅವಳಿ-ಜವಳಿ ಕಾಯಿಗಳನ್ನು ಹಾಗೂ ಶಿಲೀಂಧ್ರ ಅಥವಾ ನಂಜುರೋಗಪೀಡಿತ ಕಾಯಿಗಳನ್ನು ಬೇರ್ಪಡಿಸಿ ನಾಶಗೊಳಿಸಬೇಕು.

**ಕಾಯಿಗಳ ಸಾಗಾಣೆ ಮತ್ತು ಸಂಸ್ಕರಣೆ :** ಕೊಯ್ಲು ಮಾಡಿದ ದಿನವೇ ಶ್ರೇಣೀಕರಿಸಿದ ತಾಜಾ ಕಾಯಿಗಳನ್ನು ಗಾಳಿಯಾಡಲು ರಂಧ್ರಗಳಿರುವ ಪ್ಲಾಸ್ಟಿಕ್ ಕ್ರೇಟುಗಳಲ್ಲಿ ತುಂಬಿಟ್ಟು ಗಾಳಿ ಸಂಚಾರವಿರುವ ತೆರೆದ ವಾಹನದಲ್ಲಿ ಸಂಸ್ಕರಣ ಘಟಕಕ್ಕೆ ರವಾನಿಸಲಾಗುತ್ತದೆ. ಸಂಸ್ಕರಣಾ ಘಟಕಕ್ಕೆ ಸಾಗಿಸಿದ ಕಾಯಿಗಳನ್ನು ಗುಣಮಟ್ಟ ನಿಯಂತ್ರಣಕ್ಕೆ ಒಳಪಡಿಸಲಾಗುತ್ತದೆ. ಉತ್ತಮ ಗುಣಮಟ್ಟವಿರುವ ಕಾಯಿಗಳನ್ನು ನೀರಿನ ಟ್ಯಾಂಕಿಗೆ ಹಾಕಿ 10-15 ನಿಮಿಷ ಬ್ರಷ್‌ನ ಸಹಾಯದಿಂದ ತೊಳೆದು, ಕಳಪೆ ಗುಣಮಟ್ಟದ ಕಾಯಿಗಳನ್ನು ಬೇರ್ಪಡಿಸಿ ವಿವಿಧ ದೇಶಗಳಿಗೆ ರವಾನೆ ಮಾಡಲಾಗುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ ಮಿಡಿಸೌತೆ ಸಂಸ್ಕರಣಾ ಹಾಗೂ ರಫ್ತು ಘಟಕ ಬಳ್ಳಾರಿ ಜಿಲ್ಲೆಯಲ್ಲಿದೆ.

**ಮಾರುಕಟ್ಟೆ :** ಒಪ್ಪಂದ ಮಾಡಿಕೊಂಡ ಕಂಪನಿ ಮತ್ತು ರೈತರ ನಡುವೆ ನೇರ ವ್ಯವಹಾರ ಇರುವುದರಿಂದ, ಶ್ರೇಣಿಗಳಿಗೆ ನಿಗದಿಪಡಿಸಿದ ಪ್ರಮಾಣದಷ್ಟು ಹಣ ನೇರವಾಗಿ ರೈತರಿಗೆ ದೊರೆಯುತ್ತದೆ. ಯಾವುದೇ ದಲ್ಲಾಳಿಗಳ ಹಾವಳಿಯಿರುವುದಿಲ್ಲ. ಕಂಪನಿ ನಿಗಿದಿಪಡಿಸಿದ ಕ್ಷೇತ್ರಾಧಿಕಾರಿಯ ನೇರ ಸಂಪರ್ಕದಲ್ಲಿ ರೈತರಿಗೆ ಬೇಕಾಗುವ ಬೀಜ, ಗೊಬ್ಬರ, ಔಷಧಿಗಳನ್ನು, ಯಾವುದೇ ಬಡ್ಡಿಯಿಲ್ಲದೆ ಕಾಲಕಾಲಕ್ಕೆ ಪೂರೈಸಲಾಗುತ್ತದೆ. ಮಿಕ್ಕ ಸಾಮಗ್ರಿಗಳನ್ನು ಕಂಪನಿ ಹಿಂಪಡೆದು ರೈತರಿಗೆ ಹೊರೆಯಾಗದಂತೆ ನೋಡಿಕೊಳ್ಳಲಾಗುತ್ತದೆ. ತಾವು ಪೂರೈಸಿದ ಬೇಸಾಯ ಸಾಮಗ್ರಿಗಳ ಹಣವನ್ನು ಬೆಳೆ ಮುಗಿದ ಅನಂತರ ಒಟ್ಟು ಲೆಕ್ಕದಲ್ಲಿ ಕಳೆದು ಉಳಿದ ಹಣವನ್ನು ರೈತರಿಗೆ ನೇರವಾಗಿ ನೀಡಲಾಗುತ್ತದೆ. ಇದರಿಂದ ರೈತರು ಹೆಚ್ಚಿನ ಲಾಭ ಪಡೆಯಲು ಅನುಕೂಲವಿದೆ.

*ಬಿ.ವಿ.*

**ಮೀನುಗಾರಿಕೆ** ಆಧುನಿಕ ಸಂದರ್ಭದ ಬದಲಾದ ಪರಿಸ್ಥಿತಿಯಲ್ಲಿ ರೈತ ಕೃಷಿಯಾಧಾರಿತ ಬೆಳೆಗಳನ್ನಷ್ಟೇ ಆಶ್ರಯಿಸಿ ಬದುಕಲು ಸಾಧ್ಯವಿಲ್ಲ. ಇಂಥ ಸಂದರ್ಭದಲ್ಲಿ 'ಅನಿವಾರ್ಯತೆ ಆವಿಷ್ಕಾರದ ತಾಯಿ' ಎಂಬಂತೆ ಇನ್ನಿತರ ವಿಚಾರಗಳತ್ತ ರೈತ ಗಮನ ಹರಿಸಿದ. ಪ್ರಕೃತಿಯಲ್ಲಿ ಲಭ್ಯವಿರುವ ಅನೇಕ ರೀತಿಯ ಪಶು, ಪ್ರಾಣಿ, ಪಕ್ಷಿಗಳನ್ನು ಸಾಕುವ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿಕೊಂಡ. ತನ್ನ ಪರಿಸರದಲ್ಲೇ ದೊರೆಯುವ ಮೀನು, ಮೊಲ, ಪಾರಿವಾಳ, ಹಂದಿ, ನಾಯಿ, ಕೋಳಿ, ಎರೆಹುಳು, ಜೇನುನೊಣ ಇತ್ಯಾದಿಗಳನ್ನು ಸಾಕುವುದರ ಮೂಲಕವೂ ಬದುಕಿನ ಬವಣೆ ನೀಗಿಸುವ ದಿಕ್ಕಿನಲ್ಲಿ ರೈತ ದಾಪುಗಾಲು ಹಾಕುತ್ತಿರುವುದು ಆಶಾದಾಯಕ. ಇಂಥ ಕೃಷಿಯಲ್ಲಿ ಮೀನುಗಾರಿಕೆಯೂ ಒಂದು.



ಆಹಾರದ ಒಂದು ಘಟಕವಾಗಿ ಮೀನುಗಳನ್ನು ಸಾಕುವುದು, ಹಿಡಿಯುವುದು, ಬಳಸುವುದಾಗಿದೆ. ಮೀನಿನಲ್ಲಿ ಅನೇಕ ವಿಟಮಿನ್‌ಗಳು ಅಡಗಿರುತ್ತವೆ. ಗ್ರೀಸ್, ಸಿಸಿಲಿ, ಸ್ಪೇನ್, ಭಾರತ, ಚೀನಗಳನ್ನೊಳಗೊಂಡಂತೆ ಪ್ರಪಂಚದ ಅನೇಕ ದೇಶಗಳಲ್ಲಿ ಮೀನುಗಾರಿಕೆ ಅತ್ಯಂತ ಹಿಂದಿನಿಂದಲೂ ಕಂಡುಬಂದಿದೆ. ಮೀನು ಹಿಡಿಯುವುದು ಪ್ರಪಂಚದಲ್ಲಿ ಬೇಟೆಯ ಆದಿರೂಪಗಳಲ್ಲೊಂದು. ಮೀನುಗಾರಿಕೆಯಲ್ಲಿ 2 ವಿಧ - ಸಮುದ್ರ ಮೀನುಗಾರಿಕೆ ಮತ್ತು ಒಳನಾಡಿನ ಮೀನುಗಾರಿಕೆ.

ಪ್ರಪಂಚಾದ್ಯಂತ ಮೀನು ಕೃಷಿಯು ಇತ್ತೀಚಿಗೆ ಒಂದು ಮುಖ್ಯ ಉದ್ದಿಮೆಯಾಗಿದ್ದು, ಆಹಾರ ಉತ್ಪಾದನೆಯಲ್ಲಿ, ಉದ್ಯೋಗ ಕಲ್ಪಿಸುವಲ್ಲಿ ಹಾಗೂ ವಿದೇಶಿ ವಿನಿಮಯಗಳಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದೆ. ಕೆಲವು ದೇಶಗಳಲ್ಲಿ ಇಂದು ಮೀನು ಕೃಷಿಯೇ ಮುಖ್ಯ ಕಸುಬು. ಅಸಂಖ್ಯ ಜೀವ ವೈವಿಧ್ಯ ಹೊಂದಿರುವ ಭಾರತ ಮೀನು ಉತ್ಪಾದನೆಯಲ್ಲಿ 6ನೇ ದೊಡ್ಡ ದೇಶವಾಗಿದ್ದು, ಒಳನಾಡು ಮೀನು ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿದೆ. (ಚೀನಾ ಮೊದಲನೇ ಸ್ಥಾನದಲ್ಲಿದೆ). ಹಾಗೂ ಪ್ರಪಂಚದ ಶೇ. 10ರಷ್ಟು ಜೀವರಾಶಿಯನ್ನು ಹೊಂದಿದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಮೀನು ಉತ್ಪಾದನೆ ಸತತ ಪ್ರಗತಿಯಲ್ಲಿದ್ದು, 5.2 ಲಕ್ಷ ಟನ್ ಸಾಗರೋತ್ಪನ್ನಗಳನ್ನು ರಫ್ತುಮಾಡಿ 7200 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ಗಳಿಸುತ್ತಿದೆ. ಭವಿಷ್ಯದ ಬೆಳವಣಿಗೆಗೂ ವಿಪುಲ ಅವಕಾಶವಿದೆ.

**ಮೀನು ಕೃಷಿ ಮಾಡುವ ಉದ್ದೇಶಗಳು :** ಹಾರ್‌ಗ್ರೂಪ್ಸ್ ಸ್ಮಿತ್ (2005) ಅವರು ಮೀನು ಕೃಷಿಯ ಅಥ್‌ವಾ ಮೀನುಗಾರಿಕೆ ಅಭಿವೃದ್ಧಿಯನ್ನು ಕುರಿತು. "ಪ್ರಾಕೃತಿಕ ವಿಚಾರಗಳ ಬಗ್ಗೆ ಗೌರವ, ಸರಿಯಾದ ಮೌಲ್ಯಮಾಪನ ಮತ್ತು ಪುನಶ್ಚೇತನ, ಪ್ರಕೃತಿ-ಮಾನವನ ಮಧ್ಯೆ ಉತ್ತಮ ಬೆಸುಗೆ, ಪ್ರತಿಯೊಬ್ಬರ ಸಮಭಾಗಿತ್ವ ಜೀವ ವೈವಿಧ್ಯ ಸಂರಕ್ಷಣೆ, ಲಿಂಗ ಸಮಾನತೆ, ಜಾಗತಿಕ ಆರ್ಥಿಕ ಮಿಲನ, ಉತ್ತಮ ಪದ್ಧತಿಗಳ ಅನುಷ್ಠಾನ, ನಿರಂತರ ಪ್ರಗತಿ, ಪ್ರಕೃತಿ ಮತ್ತು ಮಾನವ ಸಂಪನ್ಮೂಲಗಳಲ್ಲಿ ಕೊರತೆಯುಂಟಾಗಬಾರದು. ಮೇಲಿನವುಗಳನ್ನು ಗೌರವಿಸುವ ಉತ್ತಮ ಸರ್ಕಾರ ಬೇಕು ಎಂದು ಅಭಿಪ್ರಾಯಪಡುತ್ತಾರೆ".

**ಭಾರತದಲ್ಲಿ ಮೀನುಗಾರಿಕೆ :** ಭಾರತದಲ್ಲಿ ಮೀನುಗಾರಿಕೆ ವಿದೇಶಿ ವಿನಿಮಯ ಗಳಿಸುವಲ್ಲಿ, ಉದ್ಯೋಗ ಸೃಷ್ಟಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತಿದೆ. ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಇತ್ತೀಚೆಗೆ ಇಡೀ ದೇಶದಲ್ಲಿ ಒಂದು ಕ್ರಾಂತಿಯನ್ನೇ ತಂದಿದೆ. ಪ್ರಸ್ತುತ ಜಾಗತಿಕ ಮೀನು ಉತ್ಪಾದನೆಯಲ್ಲಿ ಶೇ. 4.4ರಷ್ಟು ಭಾರತದ್ದಾಗಿದೆ. ದೇಶದ ಉತ್ಪಾದನಾ ಸಾಮರ್ಥ್ಯ (ಜಿಡಿಪಿ)ಕ್ಕೆ ಶೇ. 1.07 ರಷ್ಟು ಪಾಲನ್ನು ಮತ್ತು ಕೃಷಿ ಉತ್ಪಾದನಾ ಸಾಮರ್ಥ್ಯಕ್ಕೆ (AGDP)ಕ್ಕೆ ಶೇ. 4.7ರಷ್ಟು ಪಾಲನ್ನು ನೀಡುತ್ತಿದೆ. ದೇಶದಲ್ಲಿ 6.4ಮಿಲಿಯನ್ ಮೆಟ್ರಿಕ್ ಟನ್‌ನಷ್ಟು ಮೀನು ಉತ್ಪಾದನೆಯಾಗುತ್ತಿದ್ದು, ಶೇ. 55ರಷ್ಟು ಒಳನಾಡು ಮೀನು ಕೃಷಿಯಿಂದ ಬರುತ್ತಿದೆ.

ಭಾರತದಲ್ಲಿ ಮೀನುಗಾರಿಕೆಗೆ ಲಭ್ಯವಿರುವ ಜಲಸಂಪನ್ಮೂಲಗಳು

| | | |
|---|---|---|
| ಸಮುದ್ರತೀರ | - | 8129 ಕಿ.ಮೀ. |
| ವಿಶೇಷ ಆರ್ಥಿಕ ವಲಯ | - | 2.02 ಮಿಲಿಯನ್ ಚ.ಕಿ.ಮೀ. |
| ಕಾಂಟಿನೆಂಟಲ್ ಶೆಲ್ಫ್ | - | 0.506 ಮಿಲಿಯನ್ ಚ.ಕಿ.ಮೀ. |
| ನದಿಗಳು ಮತ್ತು ಕಾಲುವೆಗಳು | - | 1,97,024 ಕಿ.ಮೀ. |
| ಜಲಾಶಯಗಳು | - | 3.15 ಮಿ.ಹೆ. |

ಆಕ್ಸ್ಬೋ ಕೆರೆಗಳು ಮತ್ತು ಕಡೆಗಣಿಸಲ್ಪಟ್ಟ ನೀರು - 1.3 ಮಿ.ಹೆ.

ಚೌಳುಪ್ಪು ನೀರು - 1.24 ಮಿ.ಹೆ.

ಎಸ್ಚುರಿ (ನದಿ ಸಾಗರಗಳು ಸೇರುವ ಜಾಗ) - 0.29 ಮಿ.ಹೆ.

ಭಾರತದಲ್ಲಿ 7.085 ಮಿಲಿಯನ್ ಹೆಕ್ಟೇರ್ ವಿವಿಧ ರೀತಿಯ ಜಲ ವಿಸ್ತೀರ್ಣವು ಮೀನು ಕೃಷಿಗೆ ಲಭ್ಯವಿದ್ದು, ಜೊತೆಗೆ 1.71 ಲಕ್ಷ ಕಿ.ಮೀ. ನದಿಗಳ ರೂಪದಲ್ಲಿ ಲಭ್ಯವಿದೆ. 2.5 ಮಿಲಿಯನ್ ಹೆಕ್ಟೇರ್ ಪ್ರದೇಶವನ್ನು ಮೀನು ಕೃಷಿಗೆ ಒಳಪಡಿಸಬಹುದಾಗಿದೆ.

**ಭಾರತದಲ್ಲಿ ಮೀನು ಉತ್ಪಾದನೆ :**

| | | |
|---|---|---|
| ಪ್ರಸ್ತುತ ಒಟ್ಟು ಮೀನು ಉತ್ಪಾದನೆ | - | 6.4 ಎಂಎಂಟಿ |
| ಒಳನಾಡು | - | 3.4 ಎಂಎಂಟಿ |
| ಸಮುದ್ರ | - | 3.0 ಎಂಎಂಟಿ |
| ಉತ್ಪಾದನಾ ಸಾಮರ್ಥ್ಯ | - | 8.4 ಎಂಎಂಟಿ |
| ಮೀನುಮರಿ ಉತ್ಪಾದನೆ | - | 21,000 |
| ಹ್ಯಾಕರಿಗಳು | - | 1,070 |
| ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ | - | 422 |
| ಚೌಳುಪ್ಪು ನೀರು ಮೀನು ಕೃಷಿಕರು-ಅಭಿವೃದ್ಧಿ ಸಂಸ್ಥೆ | - | 39 |



ದೇಶದಲ್ಲಿ 6.4 ಎಂಎಂಟಿ ಯಷ್ಟು ಒಟ್ಟು ಮೀನು ಉತ್ಪಾದನೆಯಿದ್ದು 3.4 ಎಂಎಂಟಿಯಷ್ಟು ಒಳನಾಡು ಮೀನುಕೃಷಿ ಮತ್ತು ಮೀನುಗಾರಿಕೆಯಿಂದ ಉತ್ಪಾದನೆಯಾಗುತ್ತಿದೆ. 2020ನೇ ಇಸವಿಗೆ ಭಾರತದ ಜನಸಂಖ್ಯೆಯು 1.4 ಬಿಲಿಯನ್ ತಲುಪಲಿದ್ದು, ಮೀನಿನ ಉತ್ಪಾದನೆ 9.5 ಎಂಎಂಟಿಗೆ ಏರಿಸಿದರೆ, ಆಹಾರದ ಕೊರತೆ ನೀಗುವುದಲ್ಲದೆ, ದೇಶದ ಆರ್ಥಿಕ ಪ್ರಗತಿಗೂ ಅನುಕೂಲವಾಗುತ್ತದೆ.

**ಕರ್ನಾಟಕದಲ್ಲಿ ಮೀನುಗಾರಿಕೆಯ ಸ್ಥಾನಮಾನ :**

ಕರ್ನಾಟಕದಲ್ಲಿ ಮೀನು ಕೃಷಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಮೀನುಗಾರಿಕೆಯನ್ನೇ ಕಸುಬನ್ನಾಗಿಸಿ ಜೀವನವನ್ನು ನಡೆಸುತ್ತಿರುವ ಕುಟುಂಬಗಳು ಹಲವಾರು. ಇಲ್ಲಿಯೂ ಒಳನಾಡಿನ ಮೀನುಗಾರಿಕೆ ಹೆಚ್ಚಿನ ಪ್ರಾಮುಖ್ಯ ಪಡೆದುಕೊಂಡಿದೆ. ರಾಜ್ಯದ ಜನತೆಗೆ ಆಹಾರ, ಉದ್ಯೋಗ, ಇನ್ನಿತರ ಸಮಸ್ಯೆಗಳನ್ನು ನೀಗಿಸುವುದಲ್ಲದೆ, ಆದಾಯವನ್ನು ಹೆಚ್ಚಿಸುತ್ತಿದೆ.

**ಕರ್ನಾಟಕದಲ್ಲಿ ಮೀನುಗಾರಿಕೆಗೆ ಲಭ್ಯವಿರುವ ಜಲಸಂಪನ್ಮೂಲ**

| | | |
|---|---|---|
| ದೊಡ್ಡ ಕೆರೆಗಳು | : | 6015 |
| ಸಣ್ಣ ಕೆರೆಗಳು | : | 19697 |
| ನದಿಗಳು | : | 5813 ಕಿ.ಮೀ. |
| ಜಲಾಶಯಗಳು | : | 74 |
| ವಿಸ್ತೀರ್ಣ | : | 10 ಲಕ್ಷ ಹೆಕ್ಟೇರ್ |

1.2 ಲಕ್ಷ ಮೆಟ್ರಿಕ್ ಟನ್‌ನಷ್ಟು ಒಳನಾಡು ಮೀನಿನ ಉತ್ಪಾದನೆಯಿದೆ.

ಮೀನುಗಾರಿಕೆ ಇಲಾಖೆಯಿಂದ ಹಲವಾರು ಯೋಜನೆಗಳನ್ನು ಕರ್ನಾಟಕದಲ್ಲಿ ಜಾರಿಗೆ ತರಲಾಗಿದೆ. ಈಗಾಗಲೇ ರಾಯಚೂರು, ಬಳ್ಳಾರಿ, ಗುಲ್ಬರ್ಗಾ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ರೈತರು ತಮ್ಮ ಖಾಸಗಿ ಕೊಳಗಳಲ್ಲಿಯೇ ಮೀನು ಕೃಷಿಯನ್ನು ಕೈಗೊಳ್ಳುತ್ತಿದ್ದಾರೆ. "ವಿಶಾಲ ಕರ್ನಾಟಕ ಮೀನುಗಾರಿಕಾ ಸಹಕಾರ ಸಂಘ"ವನ್ನು 2007ರಲ್ಲಿ ಹಾನಗಲ್, ಹಾವೇರಿ ಜಿಲ್ಲೆಯಲ್ಲಿ ಜಾರಿಗೆ ತರಲಾಯಿತು.

**ಕೊಳಗಳ ನಿರ್ಮಾಣ :** ಮೀನು ಪಾಲನೆಗೆ ಯುಕ್ತವಾದ ಕೊಳ ನಿರ್ಮಿಸಬೇಕು. ಕೊಳ ಆಯುತಾಕಾರವಿದ್ದು, ಕನಿಷ್ಠ ಸು. 0.1 ಹೆಕ್ಟೇರ್ ಅಥವಾ ಕಾಲು ಎಕರೆ ಕಡಿಮೆ ಎಂದರೂ 1000 ಚ.ಮೀ.ಗಿಂತ ಹೆಚ್ಚು ವಿಸ್ತೀರ್ಣ ಹೊಂದಿದ್ದರೆ ಒಳ್ಳೆಯದು. ಕಪ್ಪು ಅಥವಾ ಜೇಡಿ ಮಿಶ್ರಿತ ಮಣ್ಣು ಇದ್ದು, ನೀರು ಸೋರಿ ಹೋಗದಂತೆ ಇರಬೇಕು. ಇದರಿಂದ ಸಾಂದ್ರೀಕೃತ ಮೀನು ಕೃಷಿಯನ್ನು ಮಾಡಬಹುದು.

ಕೆರೆ, ಕಾಲುವೆ, ಕೊಳವೆಬಾವಿ ಇತ್ಯಾದಿ ಮೂಲದ ಸದಾಕಾಲ ನೀರು ದೊರಕುವ ಮಾಲಿನ್ಯರಹಿತ ಉತ್ತಮ ನೀರಿನ ಅವಶ್ಯಕತೆ ಇದೆ.

**ಕೊಳದ ಶುದ್ಧೀಕರಣ :** ಕೊಳವನ್ನು ಖಾಲಿ ಮಾಡಿ ನೀರನ್ನು ಇಂಗಿಸಿ ಕೊಳದ ತಳವನ್ನು ಉಳುಮೆ ಮಾಡಿ 8-10 ದಿನ ಒಣಗಲು ಬಿಡಬೇಕು, ಅನಂತರ ಹೆಂಟೆ ಒಡೆದು ಸಣ್ಣಗೆ ಪುಡಿ ಮಾಡಿ ಸುಮಾರು 1 ರಿಂದ 2 ಅಡಿ ಶುದ್ಧೀಕರಿಸಿದ ನೀರನ್ನು ಕೊಳಕ್ಕೆ ತುಂಬಿಸಬೇಕು. ಪ್ರತಿ ಎಕರೆಗೆ 1600 ಕೆ.ಜಿ. ಹಸಿಸಗಣಿ, 8 ಕೆ.ಜಿ. ಯೂರಿಯಾ ಮತ್ತು 8 ಕೆ.ಜಿ. ಸೂಪರ್ ಫಾಸ್ಫೇಟ್ ದ್ರಾವಣವನ್ನು ಕೊಳದೆಲ್ಲೆಡೆ ಎರಚಬೇಕು. 3-4 ದಿನಗಳ ಅನಂತರ ನೀರಿನ ಮಟ್ಟವನ್ನು 3-4 ಅಡಿಗಳಿಗೆ ಏರಿಸಿ 6-7 ದಿನಗಳಲ್ಲಿ ನೀರಿನ ಬಣ್ಣ ತೆಳು ಹಸುರು ಬಣ್ಣಕ್ಕೆ ತಿರುಗಿದಾಗ ಮೀನು ಮರಿಗಳನ್ನು ಬಿಡಬಹುದು. ಅನಂತರ ಪ್ರತಿ 15 ದಿನಗಳಿಗೊಮ್ಮೆ 500 ಕೆ.ಜಿ. ಹಸಿ ಸಗಣಿಯನ್ನು ಹಾಕಬೇಕು.

**ನೀರು ಪೂರೈಕೆ :** ನೀರಿನ ಬಣ್ಣ ತಿಳಿಹಸುರು ಇದ್ದಲ್ಲಿ ಒಳ್ಳೆಯದು, ಕಡುಹಸುರು ಬಣ್ಣಕ್ಕೆ ತಿರುಗಿದಲ್ಲಿ ನೀರನ್ನು ಬದಲಾಯಿಸಬೇಕು. ನೀರಿನ ಆಳ ಕನಿಷ್ಠ 5 ರಿಂದ 8 ಅಡಿ ಇದ್ದರೆ ಒಳ್ಳೆಯದು. ಕೊಳದ ತಳದ ಮಣ್ಣು ಕಪ್ಪು ಬಣ್ಣಕ್ಕೆ ತಿರುಗದಂತೆ ಕಾಪಾಡಬೇಕು. ನೀರಿನ ರಸಸಾರ 9.5 ಮತ್ತು ಕ್ಷಾರತೆ 160 ಪಿ.ಪಿ.ಎಂ.ಗಿಂತ ಹೆಚ್ಚಾದಲ್ಲಿ ಹಸಿಸಗಣಿಯನ್ನು ಬಗ್ಗಡದ ರೀತಿಯಲ್ಲಿ ಉಪಯೋಗಿಸುವರು.

**ಮೀನು ಮರಿಯ ಗಾತ್ರ :** ಇದು ಬಹುಮುಖ್ಯವಾದ ಅಂಶ. ಮೀನು ಮರಿಯು ಕಡ್ಡಾಯವಾಗಿ 7.5 ರಿಂದ 10 ಸೆಂ.ಮೀ.ಗಳಷ್ಟು ಇರಬೇಕು. ಇಲ್ಲವಾದರೆ ಶೇ. 60-80ರಷ್ಟು ಮರಿಗಳು ಮೀನು ಭಕ್ಷಕ ಮೀನುಗಳು, ಕಪ್ಪೆಗಳು, ಹಾವುಗಳಿಗೆ ಆಹಾರವಾಗುತ್ತವೆ ಹಾಗೂ ಪ್ರಕೃತಿ ವಿಕೋಪಕ್ಕೆ ಬಲಿಯಾಗುತ್ತವೆ. ಇಳುವರಿಯೂ ತಗ್ಗುತ್ತದೆ. ಕೃತಕ ಆಹಾರವನ್ನು ಒದಗಿಸುವುದಿಲ್ಲವಾದ್ದರಿಂದ ಪ್ರತಿ ಎರಡು ಚದರ ಮೀಟರಿಗೆ ಒಂದು

ಮರಿಯಂತೆ (5,000 ಹೆ.) ಬಿಡಬೇಕು. ಹೆಚ್ಚಾದರೆ ಆಹಾರದ ಕೊರತೆಯಿಂದ ಬೆಳವಣಿಗೆ ತಗ್ಗುತ್ತದೆ. ಮೀನುಗಳು ಒಂದು ಕೆ.ಜಿ.ಗೂ ಅಧಿಕ ಬೆಳೆದ ಮೇಲೆ ಅವುಗಳನ್ನು ಹಿಡಿದು ಮಾರಬಹುದು.

ಮೀನು ಮರಿ ಕೇಂದ್ರಗಳಿಂದ ಪ್ಲಾಸ್ಟಿಕ್ ಚೀಲದಲ್ಲಿ ತಂದ ಮೀನು ಮರಿಗಳನ್ನು ಕೆಲಕಾಲ ಚೀಲದ ಸಮೇತ (10-20 ನಿಮಿಷ) ತೇಲಿಬಿಟ್ಟು ಅನಂತರ ಮರಿಗಳನ್ನು ನೀರಿಗೆ ಬಿಡುವುದರಿಂದ ಉಷ್ಣಾಂಶದ ಏರು-ಪೇರಿನ ಒತ್ತಡ ಮರಿಗಳ ಮೇಲೆ ಬೀರುವುದಿಲ್ಲ.



ಅಲ್ಲದೆ ಮೀನು ಮರಿಗಳ ಸುರಕ್ಷಿತ ಬೆಳವಣಿಗೆಯಾಗಿ ತೂಕ ಮತ್ತು ಗಾತ್ರದಲ್ಲಿ ಅಭಿವೃದ್ಧಿಯಾಗುತ್ತವೆ.

**ಪ್ರಮುಖ ತಳಿಗಳು :**

**ಕಾಟ್ಲ :** ಇದು ಭಾರತದ ಪ್ರಮುಖ ಗೆಂಡೆ ಮೀನು. ತಲೆ ದೊಡ್ಡದಾಗಿದ್ದು, ದೇಹ ಅಗಲವಾಗಿರುತ್ತದೆ. ವರ್ಷಕ್ಕೆ 2.0ವರೆಗೂ ಬೆಳೆಯುತ್ತದೆ. ಇವು ಮೊಟ್ಟೆ ಇಡುವ ಸಂಖ್ಯೆ 100000-250000. ಗೊಬ್ಬರ ಮತ್ತು ಪೂರಕ ಆಹಾರದ ಬಳಕೆಯಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ರೋಹು :** ಇದು ಭಾರತದ ಪ್ರಮುಖ ಗೆಂಡೆ ಮೀನು. ತಲೆ ಸಣ್ಣದಾಗಿದ್ದು, ದೇಹ ಉದ್ದವಾಗಿರುತ್ತದೆ ವರ್ಷಕ್ಕೆ 1.5 ಕೆ.ಜಿ. ವರೆಗೂ ಬೆಳೆಯುತ್ತದೆ ಇದು ನೀರಿನ ಮಧ್ಯಭಾಗದಲ್ಲಿ ವಾಸಿಸುತ್ತದೆ. ಮೊಟ್ಟೆ ಸಂಖ್ಯೆ 100000-400000. ಗೊಬ್ಬರ ಮತ್ತು ಪೂರಕ ಆಹಾರದ ಬಳಕೆಯಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ಮೃಗಾಲ್ :** ಭಾರತದ ಪ್ರಮುಖ ಗೆಂಡೆ ಮೀನು. ನೀಳವಾದ ದೇಹ, ಸಣ್ಣ ತಲೆ. ವರ್ಷಕ್ಕೆ 1.5 ಕೆ.ಜಿ.ವರೆಗೆ ಬೆಳೆಯುತ್ತದೆ. ಇದು ನೀರಿನ ಕೆಳಭಾಗದಲ್ಲಿ ವಾಸಿಸುತ್ತದೆ. ಮೊಟ್ಟೆ ಸಂಖ್ಯೆ 90000-420000. ಗೊಬ್ಬರ ಮತ್ತು ಪೂರಕ ಆಹಾರದ ಬಳಕೆಯಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ಸಾಮಾನ್ಯ ಗೆಂಡೆ :** ಇದು ವಿದೇಶಿ ತಳಿಯ ಮೀನು. ಅಗಲ ಬಾಯಿ - ಅಗಲ ದೇಹ ಮತ್ತು ಸಣ್ಣ ತಲೆ ಹೊಂದಿದೆ. ವರ್ಷಕ್ಕೆ 1.5 ಕೆ.ಜಿ. ವರೆಗೆ ಬೆಳೆಯುತ್ತದೆ. ಇದು ನೀರಿನ ಕೆಳಭಾಗದಲ್ಲಿ ವಾಸಿಸುತ್ತದೆ. ಮೊಟ್ಟೆ ಇಡುವ ಸಂಖ್ಯೆ 90000 - 300000. ಗೊಬ್ಬರ ಮತ್ತು ಪೂರಕ ಆಹಾರದ ಬಳಕೆಯಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ಬೆಳ್ಳಿ ಗೆಂಡೆ :** ಇದು ವಿದೇಶಿ ತಳಿಯ ಮೀನು. ಅಗಲ ಹಾಗೂ ನೀಳವಾದ ದೇಹ, ಸಣ್ಣ ತಲೆ ಹೊಂದಿದೆ. ದೇಹವು ಬೆಳ್ಳಿಯಂತೆ ಹೊಳಪಾಗಿರುತ್ತದೆ. ವರ್ಷಕ್ಕೆ 2.5 ಕೆ.ಜಿ. ವರೆಗೆ ಬೆಳೆಯುತ್ತದೆ. ಇದು ನೀರಿನ ಮೇಲ್ಭಾಗದಲ್ಲಿ ವಾಸಿಸುತ್ತದೆ. ಮೊಟ್ಟೆ ಹಿಡುವ ಸಂಖ್ಯೆ 100000-150000. ಗೊಬ್ಬರ ಮತ್ತು ಪೂರಕ ಆಹಾರ ಬಳಕೆಯಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ಹುಲ್ಲುಗೆಂಡೆ :** ಇದು ವಿದೇಶಿ ತಳಿಯ ಮೀನು. ದೇಹ ನೀಳವಾಗಿದ್ದು, ಹಸುರು ಬಣ್ಣದಿಂದ ಕೂಡಿದೆ. ವರ್ಷಕ್ಕೆ 3 ರಿಂದ 4 ಕೆ.ಜಿ.ವರೆಗೆ ತೂಗುತ್ತದೆ. ನೀರಿನಲ್ಲಿ ಬೆಳೆಯುವ ಜಲಸಸ್ಯಗಳನ್ನು ತಿಂದು ಬೆಳೆಯುತ್ತದೆ. ಮೊಟ್ಟೆ ಸಂಖ್ಯೆ 80000 - 120000. ಗೊಬ್ಬರ ಮತ್ತು ಪೂರಕ ಆಹಾರದ ಬಳಕೆಯಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಂದ ಸಿಗುವ ಸೌಲಭ್ಯಗಳು :** ದೇಶದಲ್ಲಿ ಒಳನಾಡು ಮೀನು ಕೃಷಿಯನ್ನು ಅಭಿವೃದ್ಧಿಪಡಿಸಲು ಒಟ್ಟು 422 ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿದ್ದು ಈ ಕೆಳಗಿನ ಸೌಲಭ್ಯವನ್ನು ಒದಗಿಸುತ್ತಿವೆ.

1. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ವತಿಯಿಂದ ನಿರುದ್ಯೋಗಿ ಯುವಕರಿಗೆ ಒಳನಾಡು ಮೀನುಗಾರಿಕೆಯಲ್ಲಿ 10 ದಿನಗಳ ತರಬೇತಿ ನೀಡಲಾಗುವುದು. ತರಬೇತಿಯಲ್ಲಿ ಮೀನು ಕೃಷಿ ಕೈಗೊಳ್ಳುವ ಬಗ್ಗೆ, ಮೀನು ಹಿಡಿಯುವ ಬಗ್ಗೆ, ಬಲೆ ನೇಯುವ ಬಗ್ಗೆ ಮತ್ತು ಹರಿಗೋಲು ಹೊಡೆಯುವುದರ ಬಗ್ಗೆ ಹೇಳಿ ಕೊಡಲಾಗುವುದು.

2. ತರಬೇತಿ ಪಡೆದ ಫಲಾನುಭವಿಗಳು ಸ್ವಂತ ಕೆರೆ, ಕೊಳಗಳಲ್ಲಿ ಮೀನು ಕೃಷಿ ಕೈಗೊಳ್ಳಬಹುದು. ಸ್ವಂತ ಕೆರೆ, ಕೊಳ ಇಲ್ಲದಿರುವ ಫಲಾನುಭವಿಗಳಿಗೆ ಮೀನು ಕೃಷಿ ಕೈಗೊಳ್ಳುವುದಕ್ಕೆ 25 ಎಕರೆ ಒಳಗಿನ ನೀರು ನಿಲ್ಲುವ ವಿಸ್ತೀರ್ಣದ ಸಣ್ಣ ಕೆರೆಯನ್ನು ಗುತ್ತಿಗೆ ಮೇರೆಗೆ 5 ವರ್ಷಗಳ ಅವಧಿಯವರೆಗೆ ನೀಡಲಾಗುವುದು.

3. ಫಲಾನುಭವಿಯು ಸ್ವಂತ ಜಮೀನಿನಲ್ಲಿ ಕೊಳ ನಿರ್ಮಾಣ ಮಾಡಿದಲ್ಲಿ ನಿರ್ಮಾಣ ವೆಚ್ಚ 40,000 ನೀಡುತ್ತದೆ.

4. ಬ್ಯಾಂಕುಗಳಿಂದ ಮೀನು ಕೃಷಿ ಕೈಗೊಳ್ಳಲು ಸಾಲ ಸೌಲಭ್ಯವಿದೆ.

5. ಸಂಸ್ಥೆಯಿಂದ ಮೀನು ಕೃಷಿಕರಿಗೆ ಅಗತ್ಯವಾದ ತಾಂತ್ರಿಕ ಸಲಹೆಯನ್ನು ಸದಾಕಾಲ ನೀಡಲಾಗುವುದು.

**ಮೀನುಗಾರಿಕಾ ಅಭಿವೃದ್ಧಿ ಯೋಜನೆಗಳು :**

1. **ಕೇಂದ್ರ ಪುರಸ್ಕೃತ ಯೋಜನೆ :** ಮೀನು ಕೃಷಿಯನ್ನು ಅಭಿವೃದ್ಧಿ ಪಡಿಸಲು, ಕೇಂದ್ರ ಸರ್ಕಾರವು ಕೆಲವು ಯೋಜನೆಗಳನ್ನು ಹಾಕಿಕೊಂಡಿದೆ. ಆ ಯೋಜನೆಗಳೆಂದರೆ,

   **ಮತ್ಸ್ಯಾಶ್ರಯ ಯೋಜನೆ :** ಮತ್ಸ್ಯಾಶ್ರಯಯೋಜನೆಯಡಿ ಮೀನುಗಾರಿಕೆಯಲ್ಲಿ ತೊಡಗಿರುವಂತಹ ನಿರ್ವಸತಿ ಮೀನುಗಾರರಿಗೆ ವಸತಿಯನ್ನು ಕಲ್ಪಿಸಲು ಸಹಾಯಧನಗಳನ್ನು ನೀಡಲಾಗುವುದು.

**ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ :** ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮೀನುಮರಿ ಉತ್ಪಾದನೆ ಮತ್ತು ಪಾಲನಾ ಕೇಂದ್ರಗಳು ಮತ್ತು ತಾಲ್ಲೂಕು ಮಟ್ಟದ ಮೀನು ಮರಿಪಾಲನಾ ಕೇಂದ್ರಗಳಲ್ಲಿ ಉದ್ಯೋಗ ಅವಕಾಶಗಳನ್ನು ಕಲ್ಪಿಸಲಾಗಿದೆ.

**ಆತ್ಮಾ ಯೋಜನೆ :** ಈ ಯೋಜನೆಯಡಿ 2009-10ನೇ ಸಾಲಿಗೆ ರೂ. 2.34 ಲಕ್ಷಗಳ ಯೋಜನೆ ಅನುಮೋದಿತವಾಗಿದ್ದು, ಇದರಲ್ಲಿ ರೂ. 0.25 ಲಕ್ಷಗಳಷ್ಟು ಅನುದಾನವನ್ನು ಉಪಯೋಗಿಸಿಕೊಂಡು, ರೈತರಿಗೆ ತಾಂತ್ರಿಕ ಮಾಹಿತಿಗಳನ್ನು ನೀಡುವ ಸಲುವಾಗಿ ಕರಪತ್ರ (Folder)ಗಳನ್ನು ತಯಾರಿಸಲಾಗುವುದು.

**2. ರಾಜ್ಯವಲಯ ಯೋಜನೆಗಳು :**

**ಮೀನು ಮರಿ ಉತ್ಪಾದನಾ ಕೇಂದ್ರ ಸ್ಥಾಪಿಸಲು ಸಹಾಯಧನ :** ಖಾಸಗಿ ವ್ಯಕ್ತಿಗಳು ಒಂದು ಹೆಕ್ಟೇರ್ ಪ್ರದೇಶದಲ್ಲಿ ಮೀನು ಮರಿ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಧನ ಸಹಾಯ ನೀಡಲಾಗುವುದು.

**ಮೀನುಗಾರಿಕೆ ಸಲಕರಣೆಗಳ ಕಿಟ್ಟುಗಳ ವಿತರಣೆ :** ನಿರುದ್ಯೋಗಿ ಯುವ ಜನರನ್ನು ಮೀನುಗಾರಿಕೆಗೆ ತೊಡಗಿಸಿಕೊಳ್ಳಲು ಹಾಗೂ ಹಾಲಿ ಮೀನುಗಾರಿಕೆ ವೃತ್ತಿಯನ್ನು ಅವಲಂಬಿಸಿಕೊಂಡು ಜೀವನವನ್ನು ನಡೆಸುತ್ತಿರುವಂತಹ ಬಡ ಮೀನುಗಾರರಿಗೆ ಬಲೆ, ಹರಿಗೋಲು, ಬೈಸಿಕಲ್, ಶಾಖನಿರೋಧಕ ಪೆಟ್ಟಿಗೆಗಳನ್ನು ಒಳಗೊಂಡ ಕಿಟ್ ವಿತರಿಸಲು ತಗಲುವ ವೆಚ್ಚಕ್ಕೆ ಸಹಾಯಧನ ನೀಡುವ ಹೊಸ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

**ಜಲಾಶಯ ಅಭಿವೃದ್ಧಿ ಯೋಜನೆ :** 200 ಹೆ. ಮೇಲ್ಪಟ್ಟ ಜಲಾಶಯ /ಕೆರೆಗಳಲ್ಲಿ ಎನ್.ಎಫ್.ಡಿ.ಬಿ. ವತಿಯಿಂದ 100 ಮಿ.ಮೀ. ಗಾತ್ರದ ಮೀನುಮರಿಗಳನ್ನು ಪ್ರತಿ ಹೆಕ್ಟೇರಿಗೆ 1000 ದಿಂದ 2000 ಮೀನುಮರಿಗಳನ್ನು ಬಿತ್ತನೆ ಮಾಡಲು ಅನುದಾನ ನೀಡಲಾಗಿದೆ.

**ಮೀನು ಮರಿ ಪಾಲನಾ ಕೇಂದ್ರ ಸ್ಥಾಪಿಸಲು ಸಹಾಯಧನ :** ಖಾಸಗಿ ವ್ಯಕ್ತಿಗಳು ಒಂದು ಹೆಕ್ಟೇರ್ ಪ್ರದೇಶದಲ್ಲಿ ಮೀನು ಮರಿಪಾಲನಾ ಕೇಂದ್ರಗಳನ್ನು ಸ್ಥಾಪಿಸಿದರೆ ಸಹಾಯಧನ ನೀಡಲಾಗುವುದು.

**3. ಜಿಲ್ಲಾ ವಲಯ ಯೋಜನೆಗಳು :**

**ಮೀನುಮರಿ ಉತ್ಪಾದನೆ, ಪಾಲನೆ ಮತ್ತು ವಿತರಣೆ :** ಮೀನುಮರಿ ಉತ್ಪಾದನಾ ಹಾಗೂ ಪಾಲನಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ನರ್ಸರಿಗಳಲ್ಲಿ ಮೀನುಮರಿ ಪಾಲನೆ ಮಾಡಿ ಮೀನು ಕೃಷಿಕರಿಗೆ ಇಲಾಖೆ ನಿಗದಿಪಡಿಸಿದ ದರದಲ್ಲಿ ಸರಬರಾಜು ಮಾಡುವುದು.

**ಮೀನು ಸಾಕಾಣಿಕೆ ಕೊಳ ನಿರ್ಮಾಣಕ್ಕೆ ಸಹಾಯ ಧನ :** ಈ ಯೋಜನೆಯಡಿ ಖಾಸಗಿ ವ್ಯಕ್ತಿಗಳು ಸ್ವಂತ ಜಮೀನಿನಲ್ಲಿ ಒಂದು ಎಕರೆ ವಿಸ್ತೀರ್ಣದ ಕೊಳ ನಿರ್ಮಿಸಿದರೆ ಬಂಡವಾಳ ವೆಚ್ಚದ ಶೇ. 25ರಷ್ಟು ಸಹಾಯ ಧನವನ್ನು ನೀಡಲಾಗುವುದು.

**ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಸಹಾಯಧನ :** ಸ್ಥಳೀಯ ಸಂಸ್ಥೆಗಳು ಮೀನು ಮಾರುಕಟ್ಟೆ ನಿರ್ಮಾಣ ಮಾಡಿದರೆ ಬಂಡವಾಳ ವೆಚ್ಚದ ಶೇ. 50ರಷ್ಟು ಸಹಾಯಧನವನ್ನು ನೀಡಲಾಗುವುದು.

**ಮೀನುಗಾರಿಕಾ ಸಹಕಾರ ಸಂಘಗಳಿಗೆ ವ್ಯವಸ್ಥಾಪನಾ ಸಹಾಯಧನ :** ಹೊಸದಾಗಿ ಪ್ರಾರಂಭಿಸಿದ ಮೀನುಗಾರರ ಸಹಕಾರ ಸಂಘಗಳಿಗೆ ಕಾರ್ಯದರ್ಶಿಗಳ ವೇತನ ಭರಿಸಲು ಮೂರು ವರ್ಷ ಸಹಾಯಧನ ನೀಡಲಾಗುವುದು.

**ಪ್ರದರ್ಶನಗಳು ಮತ್ತು ತರಬೇತಿ :** ಸಾರ್ವಜನಿಕರಿಗೆ ಮೀನು ಕೃಷಿ ಬಗ್ಗೆ ತಿಳಿವಳಿಕೆ ನೀಡಲು ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಪ್ರದರ್ಶನ, ತರಬೇತಿ ಏರ್ಪಡಿಸುವುದು.

ಮೀನುಗಾರಿಕೆಯು ಅಥವಾ ಮೀನು ಕೃಷಿ ಯೋಜನಾ ಸಹಿತ ಕೃಷಿಯಾಗಿದೆ. ಆದ್ದರಿಂದ ಸ್ಥಳೀಯ, ಜಿಲ್ಲಾ, ರಾಜ್ಯ, ಹಾಗೂ ರಾಷ್ಟ್ರೀಯ ಮಟ್ಟದಲ್ಲೂ ಉತ್ತಮ ಅಭಿವೃದ್ಧಿಯನ್ನು ಹೊಂದುತ್ತಿದೆ. ಇದರಿಂದ ಆಹಾರ ಸಮಸ್ಯೆ, ನಿರುದ್ಯೋಗ ಸಮಸ್ಯೆ ನೀಗಿಸುವುದರ ಜೊತೆಗೆ ರಾಜ್ಯದ ಹಾಗೂ ರಾಷ್ಟ್ರದ ಆದಾಯವನ್ನು ಹೆಚ್ಚಿಸುತ್ತಿದೆ. ಮೀನುಕೃಷಿ, ಅಂತಾರಾಷ್ಟ್ರೀಯವಾಗಿ ಕೂಡಾ ಲಾಭವನ್ನು ಗಳಿಸುತ್ತದೆ ಎಂತಲೇ ಹೇಳಬಹುದು.

**ಆಧಾರ ಗ್ರಂಥಗಳು**


| | | |
|---|---|---|
| ಡಿ. ನಾಗರಾಜ | - | ಮೀನು ಕೃಷಿ ಮಾರ್ಗಸೂಚಿ |
| ಸಿ. ವಾಸುದೇವಪ್ಪ | - | ಸುಸ್ಥಿರ ಮೀನು ಬೇಸಾಯ ಕ್ರಮಗಳು |
| ಮೀನುಗಾರಿಕೆ ಇಲಾಖೆ | - | ಕರ್ನಾಟಕ ಸರ್ಕಾರ ಮೀನುಗಾರಿಕಾ ಇಲಾಖೆ ಮಾರ್ಗಸೂಚಿ |
| | - | Catalogue - 2006 |
| | - | ಅಂತರ್ಜಾಲ |
| | - | ವಿಶ್ವಕೋಶ |


***ಜೆ.ಕೆ.ಆರ್.***

**ಮುಡಿ** ತುಳುನಾಡಿನಲ್ಲಿ ಅಕ್ಕಿ, ಬತ್ತ ಮತ್ತು ಇತರ ದವಸ ಧಾನ್ಯಗಳನ್ನು ಕೆಡದಂತೆ ರಕ್ಷಿಸಿ ಇಡುವ ಕ್ರಮಗಳಲ್ಲಿ 'ಮುಡಿ' ಕಟ್ಟುವುದು ಒಂದು ವಿಧಾನ. ಸಾಮಾನ್ಯವಾಗಿ ಮುಡಿ ಎಂದರೆ ಮೂರು ಕಳಸೆ ಅಕ್ಕಿ. ಅಂದರೆ ನಲವತ್ತೆರಡು ಸೇರು. ಆದರೆ ವ್ಯಾಪಕ ಅರ್ಥದಲ್ಲಿ ಅದು ಮೂರು ಕಳಸೆಗೆ ಮಾತ್ರ ಸೀಮಿತವಾಗಿರದೆ ಮುಡಿಯ ವಿಧಾನವನ್ನು ಬಳಸಿ ಕಟ್ಟುವ ಎಲ್ಲಾ ಅಳತೆಯ ಮುಡಿಗಳನ್ನು 'ಮುಡಿ' ಎಂದೇ ಕರೆಯುವುದು ರೂಢಿಯಾಗಿದೆ. ಅಕ್ಕಿಯಂತೆ ಉದ್ದು, ಹೆಸರು, ಹುರುಳಿ ಇತ್ಯಾದಿ ಧಾನ್ಯಗಳನ್ನು ನಲವತ್ತೆರಡು ಸೇರಿನ ಮುಡಿಯಾಗಿ ಕಟ್ಟಿದರೆ ಬತ್ತವನ್ನು ನಾಲ್ಕು ಕಳಸೆಯ ಮುಡಿಯಾಗಿ ಕಟ್ಟುವುದು ಪದ್ಧತಿ. ಆದರೆ ಅನುಕೂಲಕ್ಕೆ ತಕ್ಕಂತೆ ಒಂದು ಕಳಸೆಯ 10 ಸೇರಿನ ಮುಡಿಯನ್ನೂ ಕಟ್ಟುವುದು ವಾಡಿಕೆ ಯಲ್ಲಿದೆ. ಆದರೆ ಚಿಕ್ಕದಾಗಿ ಕಟ್ಟಿದ ಮುಡಿಯನ್ನು 'ಕುರುಂಟು' ಎನ್ನುತ್ತಾರೆ. ಒಟ್ಟಿನಲ್ಲಿ ಯಾವುದೇ

ರೀತಿಯಲ್ಲಿ ಧಾನ್ಯ, ಅಕ್ಕಿ, ಬತ್ತ ಹಾಳಾಗದಂತೆ ಬೈ ಹುಲ್ಲಿನ ಮೂಲಕವೇ ರಕ್ಷಿಸಿ ಇಡುವುದು ಮುಡಿಯ ವಿಶೇಷತೆ.

**ಮುಡಿ ಕಟ್ಟುವ ವಿಧಾನ :** ನಾಲ್ಕು ಸೂಡಿ ಬೈಹುಲ್ಲಿನ ಅರೆಹುಲ್ಲನ್ನು ಜಾಡಿಸಿ ತೆಗೆದು ಕಳೆದು ಒಂದು ಉಂಡಿಗೆಯನ್ನಾಗಿ ಮಾಡಿ ಅದರಿಂದ 'ಕಲ್ಲೆ'ಯನ್ನು ತಯಾರಿಸಬೇಕು. ಒಂದು ಉಂಡಿಗೆಯ ಬೈಹುಲ್ಲಿನ ಹಗ್ಗವನ್ನು ಮಾಡಬೇಕು. ಒಂದು ಗೋಣಿಯಲ್ಲಿ ತುಂಬುವಷ್ಟು ಹುಡಿ ಬೈಹುಲ್ಲನ್ನು (ಅರೆಬೈ) ಚೆನ್ನಾಗಿ ತುಳಿದು ಹದಮಾಡಬೇಕು. ಅನಂತರ ಸಮತಟ್ಟು ನೆಲದಲ್ಲಿ ಕಲ್ಲೆಯನ್ನು ಬಿಡಿಸಿ ಏರಿಸಬೇಕು. ಒಂದೊಂದೇ ಕಳಸೆ ಅಕ್ಕಿಯನ್ನು ಹಾಕುತ್ತಾ ಬಂದು ಕರಡು ಗಾತ್ರವನ್ನು ರೂಪಿಸಿ ತಳ ಭಾಗದಿಂದ ಬೈ ಹುಲ್ಲಿನ ಹಗ್ಗವನ್ನು ಸುತ್ತುತ್ತಾ ಬರಬೇಕು. 5 ಸುತ್ತು ಅಡ್ಡಕ್ಕೆ ಸುತ್ತಿ ಬಳಿಕ ನೇರಕ್ಕೆ 24 ಸುತ್ತು ಹಗ್ಗವನ್ನು ಹೆಣೆಯಬೇಕು. ಹಗ್ಗ ಬಿಗಿಯಲು ಮುಡಿ ಆಕಾರಕ್ಕೆ ಬರಲು ಕೊದಂಟಿ ಎಂಬ ತಾಳೆ ಮರದಿಂದ ಅಥವಾ ಹುಣಿಸೆ ಮರದಿಂದ ಮಾಡಿದ ಸಾಧನದಿಂದ ಬಡಿಯಬೇಕು. ಕೇವಲ ನಿಮಿಷದಲ್ಲಿ ಮುಡಿ ತಯಾರಾಗುತ್ತದೆ. ಒಂದು ಸಲ ಕಲ್ಲೆ ಏರಿಸಿ ಹಗ್ಗ ಬಿಗಿಯಲು ಪ್ರಾರಂಭಿಸಿದ ಮೇಲೆ ವಿಶ್ರಾಂತಿ ನೀಡಬಾರದು. ವಿಶ್ರಾಂತಿ ನೀಡಿದರೆ ಮುಡಿ ಆಕಾರ ತಪ್ಪುತ್ತದೆ. ಆಯ ತಪ್ಪುತ್ತದೆ. ಬತ್ತದ ಮುಡಿ ಕಟ್ಟುವುದು ಸುಲಭ. ಅಕ್ಕಿ ಮತ್ತು ಇತರ ಧಾನ್ಯಗಳನ್ನು ಕಟ್ಟುವುದು ಕಷ್ಟ, ಅದಕ್ಕೆ ಪರಿಣಿತರೆ ಬೇಕಾಗುತ್ತದೆ.

ಮುಡಿಗೆ ಹಗ್ಗ ಬಿಗಿಯುವುದರಲ್ಲಿ ಎರಡು ವಿಧ. 24 ಸುತ್ತು ಹಗ್ಗದ ಮುಡಿ ಮತ್ತು 16 ಸುತ್ತು ಹಗ್ಗದ ಮುಡಿ. ಸಾಮಾನ್ಯವಾಗಿ ಅಡ್ಡಕ್ಕೆ 5 ಸುತ್ತು ಹಗ್ಗ ಬಿಗಿದರೆ ನೀಟಕ್ಕೆ 24 ಸುತ್ತು ಹಗ್ಗ ಬಿಗಿಯುತ್ತಾರೆ. ಬತ್ತದ, ಬೀಜದ ಮುಡಿಗಳಾದರೆ 16ಸುತ್ತು ಹಗ್ಗದ ಮುಡಿ ಮಾಡುತ್ತಾರೆ. ಮುಡಿಯಲ್ಲಿಟ್ಟ ಅಕ್ಕಿ, ಬತ್ತ, ಧಾನ್ಯಗಳು ವರ್ಷಾನುಗಟ್ಟಲೆ ಕೆಡದೆ ಆರೋಗ್ಯಕರವಾಗಿ ಉಳಿಯುತ್ತವೆ. ಕೃಷಿಕರ ಮನೆಗಳಲ್ಲಿ ಸಾಮಾನ್ಯವಾಗಿ ಕುತ್ತಟ್ಟದಲ್ಲಿ ಮುಡಿಗಳನ್ನು ಶೇಖರಿಸಿ ಇಡುತ್ತಾರೆ. ಕುತ್ತಟ್ಟವೆಂದರೆ ಅಡುಗೆ ಮನೆಯ ಮೇಲ್ಭಾಗ. ಸದಾ ಕಾಲ ಮುಡಿಗಳಿಗೆ ಹೊಗೆ ತಾಗುವುದರಿಂದ ಯಾವುದೇ ಕ್ರಿಮಿ ಕೀಟಗಳ ಬಾಧೆ ತಾಗುವುದಿಲ್ಲ.

ಮುಡಿ ಕಟ್ಟಲು ದೇಹದಲ್ಲಿ ತ್ರಾಣ ಬೇಕಾಗುತ್ತದೆ. ಉಸಿರಿನ ಬಿಗಿಯಿಂದಲೇ ಉತ್ತಮ ಮುಡಿ ಆಗಲು ಸಾಧ್ಯ. ಹಗ್ಗ ಹೆಣೆಯಲು ಶುರು ಮಾಡಿದ ಮೇಲೆ ಅವಕಾಶ ನೀಡದೆ ಮುಗಿಸಬೇಕು. ಮುಡಿ ಆದ ಮೇಲೆ ಅದರ ಆಕಾರಕ್ಕೆ ತಕ್ಕಂತೆ ನೆಲದಲ್ಲಿ ಹೊರಳಾಡಿಸಬೇಕು. ನಿಜವಾದ ಪರಿಶ್ರಮದಿಂದ ಕಟ್ಟಿದ ಮುಡಿ ನೋಡಲು ಕುಂಬಳ ಕಾಯಿಯಂತೆ ಸುಂದರವಾಗಿ ಕಾಣುತ್ತದೆ. ಇಂತಹ ಮುಡಿಯನ್ನು ಕಂಡು ಹೆಣ್ಣೊಬ್ಬಳು ಉಪ್ಪರಿಗೆಯ ಮೇಲಿಂದಲೇ ಪ್ರಶ್ನಿಸಿದ್ದಾಳೆ. 'ಇದು ಯಾವುದರ ಕಾಯಿ'? ಮನೆಯ ಆಳು 'ಅದು ಅಕ್ಕೀ ಕಾಯಿ' ಎಂಬ ಉತ್ತರಕ್ಕೆ "ಕಾಯಿ ಇಷ್ಟು ದೊಡ್ಡದಿರುವಾಗ ಅದರ ಮರ ಎಷ್ಟು ದೊಡ್ಡದಿರಬೇಕು?" ಎಂದಿರುವುದು. ಮುಡಿ ಕಟ್ಟಲು ಎರಡು ಜನ ಬೇಕಾಗುತ್ತದೆ. ಒಬ್ಬ ಮುಡಿ ಕಟ್ಟಲು, ಇನ್ನೊಬ್ಬ ಹಗ್ಗ ಹಿಡಿಯಲು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿ ಕೊಡುವ ಕಾಲದಲ್ಲಿ ಬೆಳ್ತಿಗೆ ಮತ್ತು ಕುಚ್ಚಲು ಅಕ್ಕಿಯನ್ನು ಭೂಮಾಲಿಕರಿಗೆ ಮುಡಿ ಕಟ್ಟಿಯೇ ಕೊಡಬೇಕಾಗುತ್ತಿತ್ತು. ಈಗ ಮುಡಿ ಕಟ್ಟುವ ಕ್ರಮ ಕಡಿಮೆಯಾಗಿದೆ. ಮುಡಿಯ ಅಕ್ಕಿಯನ್ನು ಊಟ ಮಾಡುವವರೂ ಕಡಿಮೆಯಾಗಿದ್ದಾರೆ.

*ಜಿ.ಎ.ಎಸ್.*

**ಮುರುಗಲು** ಇದು ಅಮೂಲ್ಯವಾದ ಸಸ್ಯ. ಇದರ ಹಣ್ಣನ್ನು ವಿದೇಶಿಯರು ಕೊಂಡೊಯ್ದು ಸಿಪ್ಪೆ, ರಸ, ಬೀಜಗಳನ್ನು ರಾಸಾಯನಿಕಗಳಾಗಿಯೂ ಔಷಧವಾಗಿಯೂ ಬಳಸುತ್ತಿದ್ದಾರೆ. ಪಾನಕ, ಸಾರು, ತಂಬುಳಿ ಮುಂತಾದ ಅಡುಗೆಗಳಿಗೆ ನಿತ್ಯ ಬಳಕೆಯಾಗಿ ಬಳಸುತ್ತಾರೆ. ಇದರ ಬಳಕೆಯಿಂದಾಗಿ ಹುಣಿಸೆ, ಟೊಮ್ಯಾಟೋ, ನಿಂಬೆ ಹಣ್ಣುಗಳಿಗೆ ವಿದಾಯ ಹೇಳಬಹುದು.

ಇದನ್ನು ಕೃಷಿ ಮಾಡಲು ಯಾರೂ ಇಷ್ಟಪಡರು. ಹಿತ್ತಿಲು, ತೋಟ, ಬೆಟ್ಟ, ಗುಡ್ಡ, ಬಯಲು ಎಲ್ಲಾದರೂ ನಾಲ್ಕು ಗಿಡಗಳು ಬೆಳೆಸಿದರೆ ಸಾಕು. ಆಚೀಚೆ ಹರಡದೇ ನೆಟ್ಟಗೆ ಬೆಳೆಯುವ ಈ ಮರ ಹಣ್ಣು ಕೊಡುವುದು ಮಳೆಗಾಲದಲ್ಲಿ, ಕೆಲವು ಕಡೆ ಬೇಸಗೆಯಲ್ಲೂ ಹಣ್ಣು ಸಿಗುತ್ತದೆ. ಹಣ್ಣನ್ನು ಬಹಳ ದಿನ ಇಡಲಾಗದು ಆದರಿಂದಲೇ ಹೆಚ್ಚು ಪ್ರಮಾಣದಲ್ಲಿ ಇದನ್ನು ಬೆಳೆಯುವುದಿಲ್ಲ. ಸಿಪ್ಪೆಯನ್ನು ಒಣಗಿಸಿ ತೇವ ಸೋಕದಂತೆ ಕಟ್ಟಿಟ್ಟರೆ ಹೆಚ್ಚೆಂದರೆ ಎರಡು ವರ್ಷಗಳ ಕಾಲ ಇಡಬಹುದು.

ಇದು ದಕ್ಷಿಣ ಕನ್ನಡ, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಪಶ್ಚಿಮಘಟ್ಟ ಮುಂತಾದ ಕಡೆ ಬೆಳೆಯುತ್ತದೆ. ಈ ಹಣ್ಣುಗಳು ಕೆಂಪು, ಬಿಳಿ ಮತ್ತು ನಿಂಬೆ ಬಣ್ಣಗಳಿಂದಲೂ ಕೂಡಿರುತ್ತವೆ. ಕೆಲವು ಕಡೆ ನೂರಾರು ಗಿಡಗಳು ತೋಟದ ಹಾಗೆ ಬೆಳೆಯುತ್ತವೆ. ಇದು ಕೃಷಿ ಮಾಡದೇ ಬೆಳೆಯಬಲ್ಲ ಗಿಡ. ಬೀಜ ಮತ್ತು ಬೇರುಗಳಿಂದ ಸಸ್ಯಾಭಿವೃದ್ಧಿ ಮಾಡಬಹುದು. ಕಸಿ ಸಸಿಯಾದರೆ ನಾಲ್ಕನೇ ವರ್ಷಕ್ಕೆ ಫಸಲು ನೀಡುತ್ತದೆ. 15-30 ವರ್ಷಗಳ ಅವಧಿಯಲ್ಲಿವರ್ಷಕ್ಕೆ ಒಂದು ಗಿಡ ಒಂದು ಕ್ವಿಂಟಾಲ್ ಫಸಲನ್ನು ನೀಡುತ್ತದೆ. ಕೆಂಪು ಮುರುಗಲು ಸಿಪ್ಪೆ ಅಂಥೋಸಯಾನಿಸ್ ರಾಸಾಯನಿಕವನ್ನು ಹೊಂದಿದ್ದರೆ, ಬಿಳಿ ಮುರುಗಲ ಭೇದಿ ನಿಲ್ಲಿಸುವ ಗುಣವನ್ನು ಹೊಂದಿದೆ. ಇದರ ಬೀಜದಿಂದ ತುಪ್ಪವನ್ನು ತಯಾರಿಸುತ್ತಾರೆ. ಮೂಟೆಗಟ್ಟಲೆ ಸಿಗುವ ಹಣ್ಣು ಒಣಗಿದ ಮೇಲೆ ದಿನನಿತ್ಯದ ಅಡುಗೆಗಳಲ್ಲಿ ಬಳಕೆಯಾಗುತ್ತದೆ. ಇದರಲ್ಲೂ ಗಂಡು ಮರವಿದ್ದು ಗಿಡ ದೊಡ್ಡದಾದ ಮೇಲೆ ಅದು ತಿಳಿಯುತ್ತದೆ. ಅರಣ್ಯ ಇಲಾಖೆಯವರು ಇದರ ಸಸಿಗಳನ್ನು ಮಾರುತ್ತಾರೆ. ಬೆಲೆ ಇಲ್ಲದ ಕಾರಣ ಇದು ಜನಪ್ರಿಯವಲ್ಲ. ಕೃಷಿ ಇಲಾಖೆ, ವಿಶ್ವ ಮಾರುಕಟ್ಟೆ ಮುಂತಾದವರು ಇತ್ತ ಗಮನಹರಿಸಿದರೆ ಹಣ್ಣುಗಳೆಲ್ಲಾ ಡಾಲರ್‌ಗಳಾಗುತ್ತವೆ ಎಂದು ಬಿ.ಜಿ.ಎಲ್. ಸ್ವಾಮಿಯವರು ತಮ್ಮ ಫಲಶ್ರುತಿ ಕೃತಿಯಲ್ಲಿ ಹೇಳಿದ್ದಾರೆ.

*ಎನ್. ಆರ್.*

**ಮುಸುಕಿನ ಜೋಳ** ಇದರ ಮೂಲ ದಕ್ಷಿಣ ಅಮೇರಿಕ. ಇಲ್ಲಿಯ ಪರ್ವತ ಶ್ರೇಣಿಗಳಲ್ಲಿ ಬೆಳೆಯುತ್ತಿದ್ದ ಮುಸುಕಿನ ಜೋಳ ಹುಲ್ಲಿನ ಜಾತಿಗೆ ಸೇರುವ ಬೆಳೆ. ಮೆಕ್ಸಿಕೋ ಮೂಲಕ ಉತ್ತರ ಅಮೇರಿಕಾ ತಲುಪಿ ಅಲ್ಲಿಯ ರೆಡ್ ಇಂಡಿಯನ್ನರ ಪ್ರಮುಖ ಆಹಾರವಾಯಿತು. ಅನಂತರ ಕೊಲಂಬಸ್ ಇದನ್ನು ಯೂರೋಪ್‌ಗೆ ಪರಿಚಯಿಸಿದ. ಈ ಮೊದಲೇ ಆಫ್ರಿಕಾದಲ್ಲಿ ಇದು ಆಹಾರ ಧಾನ್ಯವಾಗಿತ್ತು.

ಮುಸುಕಿನ ಜೋಳವನ್ನು ಹಿಂದಿಯಲ್ಲಿ ಬುಟ್ಟಾ ಎಂದೂ ತಮಿಳುನಲ್ಲಿ 'ಮೆಕ್ಕಾ ಚೋಳಂ' ಎಂದೂ ತೆಲುಗುನಲ್ಲಿ 'ಮೊಕ್ಕ ಜೊನ್ನ'

ಎಂದು ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ 'ಮೇಯ್ಜ್' ಎಂದೂ ಕನ್ನಡದಲ್ಲಿ 'ಮೆಕ್ಕೆ ಜೋಳ'ವೆಂದೂ ಹೆಸರಾಗಿದೆ.



**ವ್ಯವಸಾಯ ಮತ್ತು ಬಿತ್ತನೆ :** ಮುಸುಕಿನ ಜೋಳ ವರ್ಷವೆಲ್ಲ ಬೆಳೆಯಬಹುದಾದ ಬೆಳೆ. ಎಲ್ಲಾ ತರಹದ ವಾತಾವರಣಕ್ಕೂ ಹೊಂದಿಕೊಳ್ಳುತ್ತದೆ. ಮಾರ್ಚ್ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಬಿತ್ತಿದರೆ ಹೆಚ್ಚು ಇಳುವರಿಯನ್ನು ಪಡೆಯಬಹುದು. ಒಂದು ಎಕರೆಗೆ 9 ರಿಂದ 10 ಕೆ.ಜಿ. ಬಿತ್ತನೆ ಕಾಳು ಬೇಕಾಗುತ್ತದೆ.

**ಮಣ್ಣು :** ಬರಡು ನೆಲವನ್ನು ಬಿಟ್ಟು ಉಳಿದ ಎಲ್ಲ ನೆಲಗಳಲ್ಲೂ ಮುಸುಕಿನ ಜೋಳವನ್ನು ಬೆಳೆಯಬಹುದು. ಕಪ್ಪು ಮಣ್ಣಿನಲ್ಲಿ ತೆನೆ ದಪ್ಪವಾಗಿಯೂ ಉದ್ದವಾಗಿಯೂ ಬೆಳೆಯುತ್ತದೆ. ಸುಮಾರು 8 ರಿಂದ 10 ಅಡಿಗಳವರೆಗೂ ಎತ್ತರವಾಗಿ ಬೆಳೆಯುವ ಇದು ಒಂದು ದಂಟಿನಲ್ಲಿ ಎರಡು ಮೂರು ತೆನೆಗಳನ್ನು ಬಿಡಬಲ್ಲದು.

ಅನೇಕ ಬೆಳೆಗಳಿಗೆ ಪರಿವರ್ತನೆಯ ಬೆಳೆಯಾಗಿ ಬೆಳೆಯಬಹುದು. ಅಲ್ಪಾವದಿ ಬೆಳೆ ತೆಗೆದ ನೆಲದಲ್ಲಿ ಗೊಬ್ಬರವನ್ನು ಕಡಿಮೆ ಪ್ರಮಾಣದಲ್ಲಿ ಕೊಟ್ಟು ಭೂಮಿಯನ್ನು ಉತ್ತು ಹದ ಮಾಡಿ ಮೂರು ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಿ ಬೀಜದಿಂದ ಬೀಜಕ್ಕೆ ಅರ್ಧ ಅಡಿ ಅಂತರದಲ್ಲಿ ನೆಡಬೇಕು. ಬೇಸಗೆಯಲ್ಲಿ ಹದವರಿತು ನೀರನ್ನು ಕಟ್ಟಬೇಕು. ಕಾಳನ್ನು ನೆಟ್ಟ ಒಂದು ತಿಂಗಳ ಒಳಗೆ ಗಿಡದ ಸುತ್ತ ಕೆದಕಿ ಬುಡಕ್ಕೆ ಮಣ್ಣು ಏರಿ ಹಾಕಿದರೆ ಬುಡಕ್ಕೆ ಭದ್ರತೆ ಒದಗಿ ದೃಢವಾಗಿ ದಂಟು ಬೆಳೆಯುತ್ತದೆ. ವಾರಕ್ಕೆ ಒಂದೆರಡು ಬಾರಿ ನೀರನ್ನು ಒದಗಿಸಬೇಕು. ಕಳೆ ಬರದಂತೆ ಮೊಳಕೆಯಲ್ಲಿ ಕಿತ್ತು ತೋಟವನ್ನು ಶುದ್ಧವಾಗಿರುವಂತೆ ನೋಡಿಕೊಳ್ಳಬೇಕು. ಮುಸುಕಿನ ಜೋಳ ಮೂರೂವರೆ ತಿಂಗಳ ಬೆಳೆ. ತೆನೆ ಬಲಿತಿರುವುದನ್ನು ತಿಳಿಯಲು ತೆನೆಯ ಮೇಲಿನ ಮುಸುಕನ್ನು ಸರಿಸಿ ನೋಡಬಹುದು. ದಂಟು ಮತ್ತು ಎಲೆ ಬಾಡಿ ಹಣ್ಣಾದಂತೆ ಕಂಡಾಗ ತೆನೆ ಕೊಯ್ಲಿಗೆ ಬಂದಿದೆ ಎಂದು ತಿಳಿಯಬೇಕು.

ಕಾಂಡವು ದಪ್ಪಗೆ ದೃಢವಾಗಿದ್ದರೆ ಒಂದರಲ್ಲಿ 7 ರಿಂದ 8 ಗಿಣ್ಣು ಬರುತ್ತವೆ. ಪ್ರತಿ ಗಿಣ್ಣಿನಲ್ಲಿ ಎಲೆಗಳಿದ್ದು 6 ಅಥವಾ 7ನೇ ಗಿಣ್ಣಿನಲ್ಲಿ ಎಂದರೆ ಕಾಂಡದ ಮೇಲ್ಭಾಗದ ಸುಮಾರಿನಲ್ಲಿ ಕಾಂಡ ಮತ್ತು ಎಲೆಯ ಮಧ್ಯೆ ಗಿಣ್ಣಿನಲ್ಲಿ ತೆನೆಯ ಮೊತೆ ಕಾಣಿಸಿಕೊಂಡು ಬೆಳವಣಿಗೆ ಹೊಂದುತ್ತದೆ. ತೆನೆ ಮೇಲೆ ಮುಸುಕಿದ್ದು ಒಳ ಭಾಗದಲ್ಲಿ ಜೋಳದ ಕಾಳುಗಳು ಸಾಲುಸಾಲುಗಳಾಗಿ ಬೆಳೆಯುತ್ತವೆ. ಗಿಡ ಬಲಿತಂತೆ ತುದಿಯಲ್ಲಿ ಸೂಲಂಗಿ ಮೂಡುತ್ತದೆ. ಇದರ ಮೂಲಕವೇ ಪರಾಗ ಉತ್ಪತ್ತಿಯಾಗುವುದು. ಇದರಿಂದ ಜೋಳ ಬಿತ್ತನೆ ಮಾಡುವಾಗ ಗಾಳಿಗೆ ಅಭಿಮುಖವಾಗಿ ಸಾಲುಗಳನ್ನು ಮಾಡಿದರೆ ಪರಾಗಸ್ಪರ್ಶ ಚೆನ್ನಾಗಿ ನಡೆಯುತ್ತದೆ. ಸೂಲಂಗಿಯನ್ನು ಮೂರು ನಾಲ್ಕು ಸಾಲುಗಳಲ್ಲಿ ಒಂದರಲ್ಲಿ ಬಿಟ್ಟರೆ ಸಾಕು. ಉಳಿದ ಸಾಲುಗಳಲ್ಲಿ ತೆಗೆಯಬಹುದು. ಹೀಗೆ ಮಾಡುವುದರಿಂದ ತೆನೆ ದೃಢವಾಗಿ ಬೆಳೆದು ಉತ್ತಮ ಇಳುವರಿಯನ್ನು ಕೊಡುತ್ತದೆ.

**ಜಾತಿಗಳು :** ಮುಸುಕಿನ ಜೋಳದಲ್ಲಿ ಸ್ಥಳೀಯವಾದ ನಾಡು ಜೋಳ ಮತ್ತು ಹೊರ ದೇಶದ ಸಿಹಿ ಜೋಳ ಎಂದು ಎರಡು ಬಗೆ. ಇವಲ್ಲದೆ ಹಳದಿ, ಕೆಂಪು, ಮಾಸಲು ಬಣ್ಣದ ಸಿಹಿಯ ಮತ್ತು ಸಿಹಿ ಇಲ್ಲದ ಜಾತಿಗಳೂ ಇವೆ. ಮೊದಲು ದೇಶೀಯವಾಗಿ ಸಿಹಿಯಿಲ್ಲದ ಸಾದಾ ಮುಸುಕಿನ ಜೋಳವನ್ನು ಬೆಳೆಯುತ್ತಿದ್ದರು. ಅನಂತರ ವಿದೇಶಿ ತಳಿಗಳ ಪರಿಚಯವಾದ ಮೇಲೆ ದೊಡ್ಡ ಜಾತಿಯ ಸಿಹಿ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇತ್ತೀಚಿನ (2010) ಅಂದಾಜಿನಂತೆ ಕರ್ನಾಟಕದಲ್ಲಿ ಸುಮಾರು 6.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳದ ಬೇಸಾಯ ಮಾಡುತ್ತಿದ್ದು 20.6 ಲಕ್ಷ ಮೆಟ್ರಿಕ್ ಧಾನ್ಯ ಉತ್ಪಾದನೆ ಮಾಡಲಾಗುತ್ತಿದೆ. ಆಂಗ್ಲ ಭಾಷೆಯಲ್ಲಿ ಇದನ್ನು 'ಮೇಜ್' ಎಂದರೆ 'ಜೀವನಾಧಾರ' ಎಂಬ ಅರ್ಥದಲ್ಲಿ ಬಳಸುತ್ತಾರೆ. 'ಜೋಳ ತಿಂದವನು ತೋಳನಂತಾದ' ಎಂಬ ಗಾದೆ ಜೋಳದ ಪೌಷ್ಠಿಕಾಂಶಗಳನ್ನು ಕುರಿತ ಪ್ರಶಂಸೆಯಂತಿದೆ.

**ಕರ್ನಾಟಕದಲ್ಲಿ ಬಳಕೆಯಲ್ಲಿರುವ ತಳಿಗಳು :** ಹಳದಿ, ಕಂದು, ಬಿಳಿ ಮೊದಲಾದ ತಳಿಗಳು. ತಳಿಯಿಂದ ತಳಿಗೆ ಪರಾಗ ಸ್ಪರ್ಶ ಕ್ರಿಯೆ ನಡೆದು ವಿವಿಧ ಬಣ್ಣದ ತಳಿಗಳು ಹುಟ್ಟಿಕೊಂಡಿವೆ. ಬಿಳಿಗಿರಿ ರಂಗನ ಸೋಲಿಗರ ಪೋಡುಗಳಲ್ಲಿ ಇಂತಹ ಮುಸುಕಿನ ಜೋಳ ಬೆಳೆಯುತ್ತಾರೆ.



**ರೋಗಗಳು :** ಇದಕ್ಕೆ ಕಾಂಡ ಕೊರಕ, ಎಲೆ ಕತ್ತರಿಸುವ ಹುಳು, ತೆನೆಕೊರಕ, ಕೀಟಗಳು ಬಾಧಿಸುತ್ತವೆ. ಇವುಗಳ ನಿಯಂತ್ರಣ ಮತ್ತು ನಿರ್ಮೂಲನೆಗೆ ಕೆಲವು ಉಪಾಯಗಳನ್ನು ಮಾಡುತ್ತಾರೆ. ರಾತ್ರಿ ವೇಳೆ ದೀಪವನ್ನು ಬಳಸುವುದು, ಹುಳಿಯಾದ ಕಾಕಂಬಿಯಿಂದ ಆಕರ್ಷಿಸಿ ಪತಂಗಗಳನ್ನು ನಾಶ ಮಾಡುವುದು ಇತ್ಯಾದಿ.

**ಕಷಾಯ ತಯಾರಿಕೆ ಮತ್ತು ಸಿಂಪಡಣೆ :** ಹಸಿಮೆಣಸಿನಕಾಯಿಯನ್ನು ರುಬ್ಬಿಕೊಂಡು ನೀರಿನಲ್ಲಿ ಒಂದು ದಿನ ನೆನೆಸಿಟ್ಟು. ಇದರ ಕಾಲುಭಾಗದಷ್ಟು ಬೆಳ್ಳುಳ್ಳಿಯನ್ನು ಸಹ ರುಬ್ಬಿಕೊಂಡು ಸೀಮೆ ಎಣ್ಣೆಯಲ್ಲಿ ಒಂದು ದಿನ ನೆನೆಸಿಟ್ಟು. ಎರಡನ್ನೂ ಪ್ರತ್ಯೇಕವಾಗಿ ಬಟ್ಟೆಯಿಂದ ಸೋಸಿ ಅನಂತರ ಬಟ್ಟೆ ಸಾಬೂನು ಸ್ವಲ್ಪ ಸೇರಿಸಿ ಮೂರನ್ನು ಬೆರೆಸಿ ಶೋಧಿಸಿಕೊಂಡು ಹದವಾಗಿ ಬೆಳೆಯ ಮೇಲೆ ಸಿಂಪಡಿಸಿದರೆ ಕ್ರಿಮಿ ಕೀಟಗಳು ನಾಶವಾಗುತ್ತವೆ.

ಅಂಗಾರಿ ಮತ್ತು ಶಿಲೀಂಧ್ರ ರೋಗ ಬಂದರೆ ಜೈವಿಕ ವಿಧಾನದಿಂದ ನಿಯಂತ್ರಿಸಬಹುದು. ಕೇದಿಗೆ ರೋಗಕ್ಕೆ ಪರಿಹಾರ ಮಜ್ಜಿಗೆ ಮತ್ತು ಕರಿಮೆಣಸಿನ ಕಷಾಯ. ಬೆಳೆಗೆ ಎಷ್ಟು ಬೇಕೋ ಅಷ್ಟು ಕಷಾಯವನ್ನು ತಯಾರಿಸಿಕೊಂಡು ಬೆಳಗಿನ ಜಾವ ಅಥವಾ ಸಂಜೆ ಸಮಯದಲ್ಲಿ ಗಿಡಗಳ ಮೇಲೆ ಸಿಂಪಡಿಸಿದರೆ ಎಲೆಗಳ ಮೇಲೆ ಮೂಡಿರುವ ಹಳದಿ ಚಿಹ್ನೆಗಳು ಕಾಣದಾಗಿ ಬೆಳೆ ಕೈಗೆಸಿಗುತ್ತದೆ.

*ವಿ.ಆರ್.ಬಿ.*

**ಮುಳ್ಳುರಾಮ ಫಲ** ಆಹಾರವಾಗಿ ಬಳಸುವ ಹಣ್ಣಿನ ಮರಗಳ ಪೈಕಿ ಒಂದು. ಅನೋನೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಅನೋನ ಮ್ಯೂರಿಕೇಟ. ಉಷ್ಣ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುವ




ಇದು ದಕ್ಷಿಣ ಭಾರತಾದ್ಯಂತ ಕಂಡು ಬರುತ್ತದೆ. ಶ್ರೀಲಂಕಾದಲ್ಲೂ ಉತ್ತರ ಭಾರತದ ಕೆಲವು ಭಾಗಗಳಲ್ಲೂ ಬೆಳೆಯುತ್ತದೆ. ಸು. 18-20 ಅಡಿ ಎತ್ತರ ಬೆಳೆಯುವ ಇದು ಸಾಮಾನ್ಯ ಗಾತ್ರದ ಮರ. ಹಣ್ಣಿನ ಮೇಲೆ ಮುಳ್ಳುಗಳಿರುವುದರಿಂದ ಇದಕ್ಕೆ ಮುಳ್ಳುರಾಮಫಲ ಎನ್ನುವರು. ಸ್ವಾಭಾವಿಕವಾಗಿ ಬೆಳೆಯುವ ಗಿಡವಾದರೂ ರುಚಿಕರವಾದ ಹಣ್ಣುಗಳನ್ನು ಕೊಡುವುದರಿಂದ ತೋಟದ ಅಂಚುಗಳಲ್ಲಿ ಕೃಷಿಗೆ ಯೋಗ್ಯವಲ್ಲದ, ಕೃಷಿ ಮಾಡಲು ಸಾಧ್ಯವಿಲ್ಲದ ಇಕ್ಕಟ್ಟಿನ ಜಾಗಗಳಲ್ಲಿ ಬೆಳೆಸುವುದುಂಟು. ಎರಡು ವರ್ಷಗಳಲ್ಲಿ ಫಲಕೊಡಲಾರಂಭಿಸುತ್ತದೆ.

ಹಣ್ಣಿನ ತಿರುಳು ನಾರಿನಿಂದ ಕೂಡಿದ್ದು ಸುವಾಸನಾ ಯುಕ್ತವಾಗಿ, ರಸ ಭರಿತವಾಗಿರುತ್ತದೆ. ಇದರ ತಿರುಳಿನಲ್ಲಿ ಆಮ್ಲೀಯ ಗುಣವಿರುವುದರಿಂದ ರುಚಿ ಹುಳಿಯಾಗಿದ್ದು ಸಕ್ಕರೆ ಅಂಶ ಕಡಿಮೆಯಿರುತ್ತದೆ. ಎಳಸಾದ ಕಾಯಿಯನ್ನು ತರಕಾರಿಯಂತೆ ಉಪಯೋಗಿಸುವುದಿದೆ. ಮೀನನ್ನು ಹಿಡಿಯಲು ಇದರ ಬೀಜಗಳ ಬಳಕೆಯಾಗುತ್ತದೆ. ಎಲೆಗಳಲ್ಲಿ ಸುವಾಸನಾಯುಕ್ತ ತೈಲವಿದ್ದು ಕ್ರಿಮಿನಾಶಕ ಗುಣ ಹೊಂದಿದೆ.

ಹೆಚ್ಚು ಆರೈಕೆಯನ್ನು ಬಯಸದ ಇದು ಎಲ್ಲೆಡೆ ಸಮೃದ್ಧವಾಗಿ ಬೆಳೆಯುತ್ತದೆ. ಆದರೆ ಕೃಷಿ ಮಾಡುವವರು ಸು. 10-15 ಅಡಿ ಅಂತರದಲ್ಲಿ ಗುಂಡಿಗಳನ್ನು ತೋಡಿ ಪಾತಿಗಳಲ್ಲಿ ಬೆಳೆಸಿದ ಸಸಿಗಳನ್ನು ಮೂರು ತಿಂಗಳ ಅನಂತರ ಮೊದಲೇ ಸಿದ್ಧಪಡಿಸಿದ ಗುಂಡಿಗಳಲ್ಲಿ ನೆಟ್ಟು ಆಶ್ರಯ ನೀಡಿ ಸುತ್ತಲೂ ರಕ್ಷಣೆ ಕೊಟ್ಟು ಚಿಗುರೊಡೆದು ಬೆಳೆಯುವ ತನಕ ಪೋಷಿಸಬೇಕು.

*ಎನ್.*

**ಮೂಲಂಗಿ** ಬ್ರ್ಯಾಸ್ಸಿಕೇಸೀ ಕುಟುಂಬಕ್ಕೆ ಸೇರಿದ ಮೂಲಂಗಿಯನ್ನು ಸಸ್ಯವಿಜ್ಞಾನದ ಪರಿಭಾಷೆಯಲ್ಲಿ ರೆಫಾನಸ್ ಸಟೈವಸ್ ಎಂದು ಕರೆಯುತ್ತಾರೆ. ಇದು ಚೀನಾದಲ್ಲಿ ಹುಟ್ಟಿ ಅಲ್ಲಿಯೇ ಕೃಷಿಗೆ ಒಳಪಟ್ಟು ತರಕಾರಿ ಮಾನ್ಯತೆಯನ್ನು ಪಡೆದುಕೊಂಡಿದೆ. ಕೆಲವು ಸಸ್ಯವಿಜ್ಞಾನಿಗಳು ಯೂರೋಪಿನ ಮೂಲದ್ದೆಂದು ಹೇಳಿರುವುದೂ ಉಂಟು.



ಪ್ರಾಚೀನ ಗ್ರೀಕರಿಗೆ ಮೂಲಂಗಿಯನ್ನು ಕುರಿತು ಪ್ರತ್ಯೇಕವಾದ ಅಭಿಮಾನವಿತ್ತು. ಚಿನ್ನದ ಎರಕಗಳಲ್ಲಿ ಹೊಯ್ದಿಟ್ಟಿರುವ ಮೂಲಂಗಿಗಳೇ ಇದಕ್ಕೆ ಸಾಕ್ಷಿಯಾಗಿವೆ. ಭಾರತಕ್ಕೆ ಮೂಲಂಗಿ ಯಾವಾಗ ಪ್ರವೇಶಿಸಿತೆಂಬ ಬಗ್ಗೆ ಯಾವುದೇ ಮಾಹಿತಿಗಳು ದೊರೆತಿಲ್ಲ. ಮೊಗಲರ ಕಾಲದವರೆಗೂ ಈ ತರಕಾರಿಯನ್ನು ಕುರಿತ ದಾಖಲೆಗಳಿಲ್ಲ. 'ಮೂಲ' (ಬೇರು) ಎಂಬ ಪದದಿಂದ ಹುಟ್ಟಿದ ರೂಪಭೇದಗಳೇ ಎಲ್ಲೆಲ್ಲೂ ಬಳಕೆಯಲ್ಲಿವೆ. ಮೂಲಿ, ಮುಲ್ಲಿ, ಮುಲ್ಲಂಗಿ ಇತ್ಯಾದಿ. ಇದು ಮುಗುನಿಗೆಡ್ಡೆ ಎಂದೂ ಪರಿಚಿತವಾಗಿದೆ. ಇದನ್ನು ತೆಲುಗು ಭಾಷೆಯಲ್ಲಿ ಮುಲ್ಲಂಗಿ ಗಡ್ಡ ಎಂದೂ ತಮಿಳು ಭಾಷೆಯಲ್ಲಿ ಮುಲ್ಲಂಗಿಕಿಳಂಗು ಎಂದೂ ಹಿಂದಿ ಭಾಷೆಯಲ್ಲಿ ಮುಲ್ಲಿ ಎಂದು ಕರೆಯುತ್ತಾರೆ.

ಮೂಲಂಗಿಯನ್ನು ಎಲ್ಲಾ ರೀತಿಯ ಮಣ್ಣುಗಳಲ್ಲಿ ಬೆಳೆಸುವ ಸಾಧ್ಯತೆ ಇದ್ದರೂ ಕೊಳೆತ ಎಲೆಮಿಶ್ರಿತ ಮಣ್ಣಿನ ಗೊಬ್ಬರ ಮತ್ತು ಗೋಡು ಮಣ್ಣುಗಳು ಈ ಬೆಳೆಗೆ ಉತ್ತಮ. ಮರಳು ಮತ್ತು ಮರಳುಗೋಡು ಮಣ್ಣುಗಳಲ್ಲಿ ಬೇಗ ಕೊಯ್ಲಿಗೆ ಬರುತ್ತದೆ. ಭಾರವಾದ ಜೇಡಿ ಮಣ್ಣುಗಳಲ್ಲಿ ಒರಟಾದ ಮತ್ತು ಅನೇಕ ಕವಲುಳ್ಳ ಬೇರುಗಳು ಕಂಡುಬರುತ್ತವೆ. ಆದುದರಿಂದ ಈ ಮಣ್ಣು ಯೋಗ್ಯವಲ್ಲ.

ಮೂಲಂಗಿಗೆ ತಂಪಾದ ಹವಾಗುಣ ಉತ್ತಮವೆನಿಸಿದೆ. ಯೂರೋಪಿಯನ್ ತಳಿಗಳಿಗಿಂತ ಏಷ್ಯನ್ ತಳಿಗಳು ಹೆಚ್ಚಿನ ಉಷ್ಣತೆಗೂ ಒಗ್ಗಿ ಕೊಳ್ಳಬಲ್ಲವು. ಮಣ್ಣಿನ ಉಷ್ಣತೆಯು ಹೆಚ್ಚಾಗಿದ್ದರೆ ಎಲೆ ವೃದ್ಧಿಸುತ್ತದೆ ಮತ್ತು ಪೋಷಕಾಂಶಗಳ ಹೀರುವಿಕೆ ಹೆಚ್ಚುತ್ತದೆ. ದೀರ್ಘಾವಧಿ ಮತ್ತು ಅಧಿಕ ಉಷ್ಣತೆಗಳು ಗೆಡ್ಡೆ ಬಿಡದೇ ಹೂ ಬಿಡುವಂತೆ ಮಾಡುತ್ತವೆ. ಉಷ್ಣತೆ ಹೆಚ್ಚಿದಂತೆ ಗೆಡ್ಡೆಯ ಖಾರದ ಅಂಶ ಹೆಚ್ಚುವುದಲ್ಲದೇ ಒರಟೂ ಆಗುತ್ತದೆ. ಅದೇ ತಂಪು ಹೆಚ್ಚಿದಂತೆ ಖಾರದ ಅಂಶ ಕಡಿಮೆಯಾಗುತ್ತದೆ. ಕರ್ನಾಟಕದಲ್ಲಿ ಉತ್ತಮ ಗುಣಮಟ್ಟದ ಗೆಡ್ಡೆಗಳನ್ನು ಪಡೆಯಲು ಏಪ್ರಿಲ್-ಮೇ ತಿಂಗಳುಗಳನ್ನು ಬಿಟ್ಟು ಜೂನ್-ಜುಲೈ, ಅಕ್ಟೋಬರ್-ನವೆಂಬರ್ ಮತ್ತು ಜನವರಿ-ಫೆಬ್ರವರಿ ತಿಂಗಳುಗಳಲ್ಲಿ ಬಿತ್ತನೆ ಪ್ರಾರಂಭಿಸಬಹುದು.

**ಬೀಜ ಮತ್ತು ಬಿತ್ತನೆ :** ಭೂಮಿಯನ್ನು ಚೆನ್ನಾಗಿ ಉತ್ತು ಅನಂತರ ಒಂದು ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಬೇಕು. ಪ್ರತಿ ಎಕರೆಗೆ 8 ಟನ್ ಕೊಟ್ಟಿಗೆ ಗೊಬ್ಬರವನ್ನು ಒದಗಿಸಬೇಕು. ಈ ಸಾಲುಗಳಲ್ಲಿ 4 ಅಂಗುಲಕ್ಕೊಂದರಂತೆ ಬೀಜ ಬಿತ್ತಬೇಕು. ಈ ರೀತಿ ಬಿತ್ತನೆ ಮಾಡಲು ಪ್ರತಿ ಎಕರೆಗೆ 3 ರಿಂದ 5 ಸೇರು ಬಿತ್ತನೆ ಬೀಜ ಬೇಕಾಗುತ್ತದೆ. ಬೀಜಗಳ ಉತ್ತಮ ಮೊಳೆಯುವಿಕೆಗೆ ಹಾಗೂ ಬೆಳೆವಣಿಗೆಗೆ ಮಣ್ಣಿನ ತೇವಾಂಶ ಬಹುಮುಖ್ಯ. ಬಿತ್ತುವಾಗ ಸರಿಯಾದ ತೇವಾಂಶವಿಲ್ಲದೇ ಇದ್ದರೆ ಬಿತ್ತಿದ ಕೂಡಲೇ ನೀರು ಹಾಯಿಸಬೇಕು. ಸಾಧಾರಣ ಮತ್ತು ಹಗುರು ಮಣ್ಣುಗಳಲ್ಲಿ ಚೆನ್ನಾಗಿ ಮೊಳಕೆಯೊಡೆಯುವುದು. ಏಕೆಂದರೆ ಭಾರ ಮಣ್ಣಿನಲ್ಲಿ ಮೇಲ್ಪದರ ಗಟ್ಟಿಯಾಗಿ ಹೆಪ್ಪು ಗಟ್ಟಿರುತ್ತದೆ. ಹವಾಗುಣ ಮತ್ತು ಭೂಗುಣಗಳನ್ನು ಅನುಸರಿಸಿ ವಾರಕ್ಕೆ ಒಂದು ಅಥವಾ ಎರಡು ಬಾರಿ ನೀರು ಹಾಯಿಸುವುದು ಒಳ್ಳೆಯದು. ಕಳೆ ನಿಯಂತ್ರಣವೂ ಒಂದು ಪ್ರಮುಖ ಅಂಶವಾಗಿದೆ. ಕಳೆ ಬೆಳೆಯಲು ಆರಂಭಿಸಿದ ಸಂದರ್ಭದಲ್ಲೇ ಮಣ್ಣನ್ನು ಸಡಿಲಗೊಳಿಸಿದರೆ ಕಳೆಯೂ ನಾಶವಾಗುತ್ತದೆ. ಗೆಡ್ಡೆಯ ಉಸಿರಾಟಕ್ಕೆ ಒಳ್ಳೆಯ ಗಾಳಿ ಸಿಕ್ಕಿ ಬೆಳೆವಣಿಗೆಯೂ ಉತ್ತಮವಾಗುತ್ತದೆ. ಬೇರುಗಳ ಬೆಳೆವಣಿಗೆಯ ಸಂದರ್ಭದಲ್ಲಿ ಸರಿಯಾಗಿ ಮಣ್ಣು ಏರು ಹಾಕದೇ ಇದ್ದರೆ ಬೇರು ವಿಕಾಸವಾಗಿ ಮಣ್ಣಿನಿಂದ ಹೊರಗೆ ಬರುತ್ತದೆ. ಈ ಎಲ್ಲಾ ಎಚ್ಚರಿಕೆಗಳಿಂದ ಗಿಡವನ್ನು ಬೆಳೆಸಿದ ಅನಂತರ ಗಿಡಗಳು ರೋಗಗಳಿಗೆ ತುತ್ತಾಗದಂತೆ ಎಚ್ಚರವಹಿಸಬೇಕು.

**ರೋಗಗಳು :** ಮೂಲಂಗಿ ಬೆಳೆ ಸಾಮಾನ್ಯವಾಗಿ ಎಲೆಚುಕ್ಕೆ ರೋಗ, ಬಿಳಿ ಭಂಡಾರ ರೋಗ, ಹೇನು, ಸಾಸಿವೆಯ ಗರಗಸ ನೊಣ ಮುಂತಾದ ಉಪದ್ರವಗಳಿಗೆ ತುತ್ತಾಗುತ್ತದೆ. ಇದರಲ್ಲಿ ಬಹಳ ಹಾನಿ ಉಂಟು ಮಾಡುವ ಕೀಟ ಹೇನು. ಆರ್ದ್ರ ಮತ್ತು ಮೋಡ ಕವಿದ ವಾತಾವರಣದಲ್ಲಿ ಹೇನು ಹೆಚ್ಚು. ಈ ಕೀಟಗಳ ಹಾವಳಿ ಬಹಳ ಹೆಚ್ಚಾದಾಗ ಸಸ್ಯರಸ ಬಹುತೇಕ ಕಡಿಮೆಯಾಗಿ ಎಲೆ ಕಾಂಡ ಮುಂತಾದವುಗಳು ಸುರುಳಿ ಸುತ್ತಿಕೊಂಡು ಹಳದಿಯಾಗಿ ಕೊನೆಗೆ ಸಾಯುತ್ತವೆ. ಸಾಸಿವೆಯ ಗರಗಸ ನೊಣದ ಮರಿಗಳು ಎಲೆ, ಕಾಯಿಗಳನ್ನು ತಿಂದು ನಾಶಪಡಿಸುತ್ತವೆ. ಎಲೆ ಚುಕ್ಕೆ ರೋಗ ಮೊದಲು ಎಲೆಗಳ ಮೇಲೆ ಗೋಚರಿಸಿ ಅನಂತರ ಹೂಗೊಂಚಲ ಕಾಂಡದ ಮೇಲೆ ಹಳದಿ ಬಣ್ಣದ ಉಬ್ಬಿದ ಮಚ್ಚೆಗಳಾಗಿ ಕಾಣಿಸಿಕೊಳ್ಳುತ್ತವೆ. ಚುಕ್ಕೆಗಳು ವಿಕಾಸವಾಗುತ್ತವೆ. ಮಳೆಗಾಲದಲ್ಲಿ ಶೀಘ್ರವಾಗಿ ಹಬ್ಬುತ್ತವೆ. ಕಾಯಿಗಳ ಮೇಲೆ ರೋಗ ಕಾಣಿಸಿಕೊಂಡಲ್ಲಿ ಬೀಜದ ಮೇಲೆ ಪರಿಣಾಮ ಬೀರುತ್ತದೆ.

ಬಿಳಿ ಭಂಡಾರ ರೋಗವು ಭಾರತದ ಕೆಲವು ಭಾಗಗಳಲ್ಲಿ ಆತಂಕಕಾರಿ. ಎಲೆ ಮತ್ತು ಪುಷ್ಪಮಂಜರಿಯ ತೊಟ್ಟಿನ ಮೇಲೆ ಈ ರೋಗ ಕಂಡು ಬಂದು ಹೂಗಳು ವಿರೂಪಗೊಳ್ಳುತ್ತವೆ. ಎಲೆಗಳ ತಳಭಾಗದಲ್ಲಿ ಬಿಳಿ ಬಣ್ಣದ ಪುಡಿಯಂತಹ ವಸ್ತುವು ಮಚ್ಚೆಗಳಂತೆ ಕಂಡುಬರುತ್ತದೆ. ಅದರಲ್ಲಿಯ ಕೀಟಗಳು ಗಿಡ ಮತ್ತು ಹೂಗಳನ್ನು ನಾಶಪಡಿಸುತ್ತವೆ. ಈ ರೋಗಗಳ ನಿವಾರಣೆಗೆ ಡಿ.ಡಿ.ಟಿ. ಬೇವಿನ ಸೊಪ್ಪಿನ ರಸ ಹಾಗೂ ಮಿಥೈಲ್, ಮ್ಯಾಲಾಥಿಯಾನ್, ಕಾರ್ಬರಿಲ್, ಜೈನೇಬ್ ಮುಂತಾದ ದ್ರಾವಣಗಳನ್ನು ನೀರಿನೊಂದಿಗೆ ಬೆರೆಸಿ ಗಿಡಗಳಿಗೆ ಸಿಂಪಡಿಸಬೇಕು.

**ಇಳುವರಿ :** ತಳಿ ಮತ್ತು ಆಯಾ ಪ್ರದೇಶಕ್ಕೆ ತಕ್ಕಂತೆ ಬಿತ್ತಿದ 25 - 55 ದಿನಗಳಲ್ಲಿ ಮೂಲಂಗಿ ಇಳುವರಿಗೆ ಬರುತ್ತದೆ. 25-30 ದಿನಗಳಲ್ಲಿ ಕೊಯ್ಲಿಗೆ ಬರುವ ಯೂರೋಪಿಯನ್ ತಳಿಗಳನ್ನು ತಡವಾಗಿ ಕೊಯ್ಲು ಮಾಡಿದರೆ ಅವು ಕಹಿಯಾಗುವುದಲ್ಲದೇ ಬೆಂಡಾಗುತ್ತವೆ ಮತ್ತು ಗೆಡ್ಡೆಯ



ಮೇಲ್ಪದರ ಒಡೆಯಲಾರಂಭಿಸುವುದು. ಆದುದರಿಂದ ಗೆಡ್ಡೆಯ ಹದನೋಡಿ ಕೀಳಬೇಕು. ತಂಪಾದ ಹವಾಗುಣ ಪ್ರದೇಶಗಳಲ್ಲಿ ಇದನ್ನು ವರ್ಷವೆಲ್ಲ ಬೆಳೆಯಬಹುದು. ಕೊಯ್ಲಿಗೆ ಮುಂಚೆ ತೆಳುವಾದ ನೀರಾವರಿ ಅಗತ್ಯ. ಪ್ರತಿಯೊಂದು ಎಕರೆಯಿಂದ 4 ರಿಂದ 8 ಟನ್ ಇಳುವರಿ ಪಡೆಯಬಹುದು. ಕೊಠಡಿಯ ಉಷ್ಣತೆಯಲ್ಲಿ 2-3 ದಿನಗಳಿಗಿಂತ ಹೆಚ್ಚಿಗೆ ಶೇಖರಿಸಲಾಗದು.

**ಪ್ರಭೇದಗಳು :** ಮೂಲಂಗಿಯಲ್ಲಿ ಮುಖ್ಯವಾಗಿ ನಾಲ್ಕು ಪ್ರಭೇಧಗಳಿವೆ.

1. ಬಿಳುಪು ಬಣ್ಣದ ಉದ್ದಮೂಲಂಗಿ
2. ಕೆಂಪುಬಣ್ಣದ ಉದ್ದ ಮೂಲಂಗಿ
3. ಬಿಳುಪು ಬಣ್ಣದ ಗುಂಡು ಮೂಲಂಗಿ
4. ಕೆಂಪು ಬಣ್ಣದ ಗುಂಡು ಮೂಲಂಗಿ

ಬಿಳುಪುಬಣ್ಣದ ಉದ್ದ ಮೂಲಂಗಿಯನ್ನು ಸಾಧಾರಣವಾಗಿ ಎಲ್ಲ ಕಡೆಯೂ ಹೆಚ್ಚಾಗಿ ಬೆಳೆಯುತ್ತಾರೆ. ಇದು ಎಲ್ಲ ಮೂಲಂಗಿಗಳಿಗಿಂತಲೂ ಹೆಚ್ಚು ಖಾರವಾಗಿರುತ್ತದೆ. ಕೆಂಪು ಬಣ್ಣದ ಉದ್ದನೆಯ ಮೂಲಂಗಿಯನ್ನು

ತಂಪು ಹವಾಗುಣದಲ್ಲಿ ವರ್ಷವೆಲ್ಲಾ ಬೆಳೆಯುತ್ತಾರೆ. ಗುಂಡು ಮೂಲಂಗಿಯ ಬಿಳುಪು - ಕೆಂಪು ಜಾತಿಗಳನ್ನು ಬೇಸಗೆಯಲ್ಲಿ ಬಿಟ್ಟು ಮಿಕ್ಕೆಲ್ಲ ಕಾಲದಲ್ಲಿಯೂ ಬೆಳೆ ಮಾಡಬಹುದು. ಗುಂಡು ಜಾತಿಯ ಮೂಲಂಗಿಯನ್ನು ಟೇಬಲ್ ರ್‍ಯಾಡಿಷ್ ಎಂದು ಕರೆಯುತ್ತಾರೆ. ಇದರಲ್ಲಿ ಖಾರ ಕಡಿಮೆ ಇದ್ದು ಈ ಜಾತಿಯನ್ನೇ ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚಾಗಿ ಉಪಯೋಗಿಸುವುದರಿಂದ ಈ ಹೆಸರುಬಂದಿದೆ.

ಇದನ್ನು ಹಸಿಯಾಗಿರುವಾಗ, ಖಾರ ಸಾಂಬಾರು ದಿನಸಿಗಳನ್ನು ಬೆರೆಸಿ 'ಜಜ್ಜಿ ಮೂಲಂಗಿ' ಮಾಡುತ್ತಾರೆ. ಹುಳಿ ಮತ್ತು ಪಲ್ಯವನ್ನು ಮಾಡಲು ಉಪಯೋಗಿಸುತ್ತಾರೆ. ಇದರ ಸೊಪ್ಪನ್ನು ಬೇರೆ ಸೊಪ್ಪುಗಳಂತೆ ಬೇಳೆಯೊಂದಿಗೆ ಸೇರಿಸಿ ಪಲ್ಯ ಮಾಡುತ್ತಾರೆ. ಗಡ್ಡೆಯನ್ನು ಹಸುಗಳಿಗೆ ಶೀತವಾಗಬಾರದೆಂದು ತಿನಿಸುತ್ತಾರೆ. ಎಲೆಯನ್ನು ಸಣ್ಣದಾಗಿ ಕತ್ತರಿಸಿ ಕೋಳಿಗಳಿಗೆ ಹಸಿಮೇವಾಗಿ ತಿನಿಸುತ್ತಾರೆ. ಇದರಿಂದ ಕೋಳಿಗಳು ತೊಗಲು ಮೊಟ್ಟೆಗಳನ್ನಿಡುವುದು ತಪ್ಪುತ್ತದೆ.

*ಎನ್. ಆರ್.*

**ಮೆಂತ್ಯ** ಮೆಂತ್ಯವನ್ನು ಉತ್ತರಭಾರತದಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಮೆಸೆಪೊಟೇಮಿಯ, ಪರ್ಷಿಯ, ಏಷಿಯಾ, ಮೈನರ್ ಪ್ರಾಂತ್ಯಗಳ ಬೆಳೆ ಇದು. ತಿಯೋಫ್ರಾಸ್ಟನ ಬರೆಹಗಳಲ್ಲೂ ಪ್ಲಿನಿಯ ಬರೆಹಗಳಲ್ಲೂ ಈ ಗಿಡಗಳ ಉಲ್ಲೇಖವಿದೆ. ಕ್ರಿ.ಶ. 1130 ರಲ್ಲಿ ರಚಿತವಾದ ಮಾನಸೋಲ್ಲಾಸದಲ್ಲಿ ಮೇಥಿಕಚೂರ್ಣದ ಉಪಯೋಗದ ವಿವರಣೆಯಿದೆ. 1450ರಲ್ಲಿ ರಚಿತವಾದ ರಾಜ ನಿಘಂಟು ಮೆಂತ್ಯಕ್ಕೆ ರಕ್ತವೃದ್ಧಿ ಗುಣಗಳನ್ನು ಹೇಳಿದೆ. ಅಕ್ಬರನ ಅಡುಗೆಮನೆಯಲ್ಲಿ ಮೆಂತ್ಯದ ಉಪಯೋಗವಿತ್ತೆಂಬುದು ಅಯ್ನ್ - ಇ - ಅಕ್ಬರಿಯಿಂದ ತಿಳಿದುಬರುತ್ತದೆ. ಮೆಂತ್ಯದ ಸೊಪ್ಪನ್ನು ಒಣಗಿಸಿ 'ಕಸೂರಿ ಮೇಥಿ' ಎಂಬ ಹೆಸರಿನಲ್ಲಿ ಬಳಸುತ್ತಾರೆ.



ಮೆಂತ್ಯದ ಬೆಳೆಗೆ ತಂಪು ಹವೆ ಇರುವ ಪ್ರದೇಶ ಒಳ್ಳೆಯದು. ವರ್ಷದ ಎಲ್ಲ ತಿಂಗಳಲ್ಲಿ ಬಿತ್ತನೆ ಮಾಡಬಹುದು. ಕರ್ನಾಟಕ ರಾಜ್ಯದಲ್ಲಿ ಆಗಸ್ಟ್ ಮಧ್ಯಭಾಗದಿಂದ ನವೆಂಬರ್ ಮಧ್ಯ ಭಾಗದವರೆಗೆ ಬಿತ್ತನೆ ಮಾಡಲಾಗುತ್ತದೆ. ಕೆಲವು ಪ್ರದೇಶಗಳಲ್ಲಿ ಮಾರ್ಚ್ - ಏಪ್ರಿಲ್ ತಿಂಗಳಲ್ಲಿಯೂ ಬಿತ್ತನೆ ಮಾಡುತ್ತಾರೆ. ಮೆಂತ್ಯ ಎಲ್ಲಾ ಬಗೆಯ ಮಣ್ಣುಗಳಲ್ಲಿ ಬೆಳೆಯುತ್ತದೆ. ಮರಳು ಮಿಶ್ರಿತ ಗೋಡುಮಣ್ಣು ಈ ಬೆಳೆಗೆ ಒಳ್ಳೆಯದು. ಆದರೆ ಜೌಗು ಪ್ರದೇಶಗಳಲ್ಲಿ ಮೆಂತ್ಯ ಬೆಳೆಯಲು ಆಗುವುದಿಲ್ಲ. ನೀರು ನಿಲ್ಲದೆ ಬಸಿದು ಹೋಗುವ ಮಣ್ಣು ಉತ್ತಮ.

ಭೂಮಿಯನ್ನು ಎರಡು - ಮೂರು ಬಾರಿ ಉಳುಮೆ ಮಾಡಿ, ಮಣ್ಣಿನ ಹೆಂಟೆಗಳನ್ನು ಒಡೆದು ಪುಡಿಮಾಡಬೇಕು. ಕೊಟ್ಟಿಗೆ ಗೊಬ್ಬರವನ್ನು ಸಾಕಷ್ಟು ಪ್ರಮಾಣದಲ್ಲಿ ಮಿಶ್ರಣ ಮಾಡಿ ಬೆಳೆ ನಿರ್ವಹಣೆಗೆ ಅನುಕೂಲವಾಗುವಂತೆ 3 ಮೀ ಉದ್ದ, 2 ಮೀ. ಅಗಲದ ಮಡಿಗಳನ್ನು ಸಿದ್ಧಪಡಿಸಬೇಕು. ಬೀಜವನ್ನು ಸಮನಾಗಿ ಚೆಲ್ಲಬೇಕು. ನೀರು ಹಾಯಿಸುತ್ತಿರಬೇಕು. ಮೆಂತ್ಯ ಬೀಜ ಐದಾರು ದಿನಗಳಲ್ಲಿ ಮೊಳಕೆ ಒಡೆಯುತ್ತವೆ. ಒಂದು ಹೆಕ್ಟೇರ್ ಪ್ರದೇಶಕ್ಕೆ 40 ಕಿ.ಗ್ರಾಂ. ಮೆಂತ್ಯ ಬೀಜ ಸಾಕು. ಕೆಲವು ಕಡೆ ಮೆಂತ್ಯವನ್ನು ಬಿತ್ತನೆ ಮಾಡದೆ ಭೂಮಿಗೆ ಚೆಲ್ಲಬೇಕು. ಭೂಮಿಯ ಮೇಲೆ ಸಮನಾಗಿ ಬೀಳುವಂತೆ ಅಂದಾಜಿನಲ್ಲಿ ಚೆಲ್ಲಿ ಮಣ್ಣನ್ನು ಹರಡಬೇಕು. 25 ಸೆಂ.ಮೀ. ಅಂತರ ಇರುವಂತೆ ಸಾಲುಗಳನ್ನು ಮಾಡಿ ಬಿತ್ತಿ ಬೆಳೆಸಿದರೆ ಕೃಷಿ ನಿರ್ವಹಣೆ ಸುಲಭವಾಗುತ್ತದೆ. ಕಳೆ ನಿಯಂತ್ರಣವೂ ಸುಲಭವಾಗುತ್ತದೆ. ಒಂದು ಹೆಕ್ಟೇರ್ ಪ್ರದೇಶಕ್ಕೆ ಸುಮಾರು 25 ಕೆ.ಜಿ. ಮೆಂತ್ಯ ಬೇಕಾಗುತ್ತದೆ. ಭಾರತದ ಬೇರೆ ಬೇರೆ ಕಡೆ, ಬೇರೆ ಬೇರೆ ತಳಿಗಳನ್ನು ಬೆಳೆಸಲಾಗುತ್ತಿದೆ. ಉತ್ತರ ಭಾರತದಲ್ಲಿ ಕಸೂರಿ ಮೇಥಿಗಾಗಿ ಕೆಲವು ತಳಿಗಳನ್ನು ಬೆಳೆಸುತ್ತಿದ್ದಾರೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು ಅಭಿವೃದ್ಧಿ ಪಡಿಸಿರುವ 'ಪೂಸ ಅರ್ಲಿಬಂಚಿಂಗ್ ಮತ್ತು ಮೇಥಿ ನಂಬರ್ -47 ಹೆಚ್ಚು ಜನಪ್ರಿಯವಾಗಿದೆ.

ಮೆಂತ್ಯದ ತಳಿಗಳಲ್ಲಿ Co1 ಬೀಜ ಮತ್ತು ಸೊಪ್ಪು ಎರಡೂ ಉದ್ದೇಶದ ತಳಿ. ಒಂದು ಹೆಕ್ಟೇರಿಗೆ. 25 ದಿನಗಳಲ್ಲಿ 4,000 ಕೆ.ಜಿ. ಸೊಪ್ಪನ್ನು ಪಡೆಯಬಹುದು. 90 ದಿನಗಳಲ್ಲಿ 600 ಕೆ.ಜಿ. ಮೆಂತ್ಯ ಬೀಜವನ್ನ ಪಡೆಯಬಹುದು.

ಬಿಹಾರದಲ್ಲಿ ಅಭಿವೃದ್ಧಿಪಡಿಸಿರುವ ರಾಜೇಂದ್ರಕ್ರಾಂತಿ ಬಂಗಾರದ ಬಣ್ಣದಾಗಿರುತ್ತದೆ. ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. 120 ದಿನಗಳಲ್ಲಿ 1250 ಕೆ.ಜಿ. ಮೆಂತ್ಯ ಬೀಜವನ್ನು ಪಡೆಯಬಹುದು.

**'ಪೂಸ ಅರ್ಲಿ ಬಂಚಿಂಗ್'** ಬೇಗನೆ ಕೊಯ್ಲಿಗೆ ಬರುತ್ತದೆ. 156 ದಿನಗಳಲ್ಲಿ 1500 ಕೆ.ಜಿ. ಬೀಜವನ್ನು ಒಂದು ಹೆಕ್ಟೇರಿನಲ್ಲಿ ಪಡೆದುಬಹುದು.

**ನಂಬರ್** - 47 ಮಹಾರಾಷ್ಟ್ರದ ತಳಿ. ಸೊಪ್ಪಿನ ಬಳಕೆಯ ಉದ್ದೇಶದಿಂದ ಅಭಿವೃದ್ಧಿಪಡಿಸಲಾಗಿದೆ. ಎಲೆಗಳು ದೊಡ್ಡದಾಗಿದ್ದು ರಸಭರಿತವಾಗಿರುತ್ತವೆ. 'ಸಿ' ಜೀವಸತ್ವ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

**ಕಸೂರಿ :** ಇದನ್ನು ಹಸಿಯಾಗಿ ಅಥವಾ ಒಣಗಿಸಿ ವಿವಿಧ ಅಡುಗೆಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಈ ತಳಿಯಲ್ಲಿ ಹೂ ಆಗುವುದು ಬಹಳ ನಿಧಾನ. ಬೆಳೆಯ ಅವಧಿಯಲ್ಲಿ 5-6 ಸಲ ಸೊಪ್ಪು ಕೊಯ್ಲು ಮಾಡಬಹುದು.

**ಪ್ರೂಮ್ 20 -** ಇದು ಸೊಪ್ಪಿನ ಬಳಕೆಗೆ ಹೆಚ್ಚು ಉತ್ತಮ. ಎಲೆಗಳು ಚಿಕ್ಕದಾಗಿರುತ್ತವೆ. ಒಂದು ಹೆಕ್ಟೇರಿಗೆ 70-80 ಕ್ವಿಂಟಾಲ್ ಹಸಿ ಸೊಪ್ಪು 7-8 ಕ್ವಿಂಟಾಲ್ ಬೀಜ ದೊರೆಯುತ್ತದೆ.

**ನೀರು ಒದಗಿಸುವುದು :** ಮೆಂತ್ಯ ಬೆಳೆಗೆ ಮಣ್ಣಿನ ತೇವಾಂಶವನ್ನು ಗಮನಿಸಿ ನೀರು ಉಣಿಸಬೇಕು. ಬೀಜ ಬಿತ್ತಿದ ಕೂಡಲೆ ನೀರು ಪೂರೈಕೆ ಮಾಡಬೇಕು. ಸಾಮಾನ್ಯ ಮಣ್ಣಾಗಿದ್ದರೆ ನಾಲ್ಕೈದು ದಿನಗಳಿಗೊಮ್ಮೆ ನೀರು ಕೊಟ್ಟರೆ ಸಾಕು.

**ಗೊಬ್ಬರ :** ಈ ಬೆಳೆಗೆ ಕೊಟ್ಟಿಗೆ ಗೊಬ್ಬರವೇ ಸಾಕು. 12 ರಿಂದ 15 ಟನ್ ತಿಪ್ಪೆ ಗೊಬ್ಬರ ಹಾಕಬೇಕಾಗುತ್ತದೆ. ಕಾಲಕಾಲಕ್ಕೆ ಸರಿಯಾಗಿ ಕಳೆಯನ್ನು ಕಿತ್ತು ಹಾಕಬೇಕು.

**ಕೀಟ ಮತ್ತು ರೋಗಬಾಧೆ :** ಮೆಂತ್ಯದ ಬೆಳೆಗೆ ಗಿಡ ಹೇನು, ಎಲೆ ತಿನ್ನುವ ಕಂಬಳಿ ಹುಳುಗಳ ಕಾಟವಿರುತ್ತದೆ. ಎಲೆ ಚುಕ್ಕೆ ರೋಗದಂತಹ ಶಿಲೀಂಧ್ರ ಬಾಧೆಯು ಇರುತ್ತದೆ. ಜೈವಿಕ ಶಿಲೀಂಧ್ರನಾಶಕ ವಸ್ತುಗಳನ್ನು ಬಳಸಿ ಬೆಳೆಗಳನ್ನು ರಕ್ಷಿಸಬಹುದು. ಬೀಜ ಬಿತ್ತಿದ 20 ರಿಂದ 30 ದಿನಗಳಲ್ಲಿ ಸಸಿ ಸುಮಾರು 20 ರಿಂದ 25 ಸೆಂ.ಮೀ. ಉದ್ದಕ್ಕೆ ಬೆಳೆದು ಮೊದಲ ಕಟಾವಿಗೆ ಸಿದ್ಧವಾಗಿರುತ್ತದೆ. ಮೊದಲ ಸಲ ಕಟಾವಾದ ಮೇಲೆ ಮತ್ತೆ ಹೊಸ ಚಿಗುರು ಬರುತ್ತದೆ. ಕೊಯ್ಲು ಮಾಡಿದ ವೇಳೆ ಸಾರಜನಕದಿಂದ ಕೂಡಿರುವ ಸಾವಯವ ಗೊಬ್ಬರವನ್ನು ಹಾಕಬೇಕಾಗುತ್ತದೆ.

ಮೆಂತ್ಯವನ್ನು ಸೊಪ್ಪಿಗಾಗಿಯೂ ಬೀಜಕ್ಕಾಗಿಯೂ ಬೆಳೆಯುತ್ತಾರೆ. ಇವೆರಡಕ್ಕೂ ಹೆಚ್ಚಿನ ಬೇಡಿಕೆ ಇದೆ. ಸೊಪ್ಪನ್ನು ನಾಲ್ಕೈದು ಬಾರಿ ಕಟಾವು ಮಾಡುವ ಬದಲು ಒಂದು ಸಲ ಕಟಾವು ಮಾಡಿ ಕಾಳಿನ ಉತ್ಪಾದನೆಗೆ ಬಿಡಬೇಕು. ಇದರಿಂದ ಅಧಿಕ ಪ್ರಮಾಣದ ಬೀಜವನ್ನು ಪಡೆಯಲು ಸಾಧ್ಯವಿದೆ.

**ಬೆಳೆನಿರ್ವಹಣೆ :** ಮೆಂತ್ಯದ ಬೆಳೆಗೆ ಮಣ್ಣಿನಲ್ಲಿ ಸದಾಕಾಲ ನೀರಿನಾಂಶ ಇದ್ದರೆ ಒಳ್ಳೆಯ ಇಳುವರಿ ಸಿಗುತ್ತದೆ. ಕಳೆ ಆಗಾಗ ತೆಗೆದು ಹಾಕಬೇಕು. ಇದರಿಂದ ಇಳುವರಿ ಚೆನ್ನಾಗಿ ಆಗುತ್ತದೆ.

ಮೆಂತ್ಯದ ಸೊಪ್ಪನ್ನು ಸರಿಯಾದ ಕಾಲದಲ್ಲಿ ಕೊಯ್ಲು ಮಾಡಬೇಕು. ಇಲ್ಲದಿದ್ದರೆ ಎಲೆಗಳು ಕಹಿ ರುಚಿ ಹೊಂದವುದು. ಸೊಪ್ಪನ್ನು ಕೊಯ್ಲು ಮಾಡಿದ ಅನಂತರ ಬೀಜಕ್ಕೆಂದು ಬಿಟ್ಟ ಗಿಡಗಳಲ್ಲಿ ಕಾಳು ಬಲಿತ ಗಿಡಗಳನ್ನು ಬಳಿಕ ತೆಗೆದು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು. ಬಳಿಕ ಗಿಡವನ್ನು ಬಡಿದು ಕಾಳುಗಳನ್ನು ಬೇರ್ಪಡಿಸಿ, ಧೂಳು ಕಸ ಇಲ್ಲದಂತೆ ಸ್ವಚ್ಛಗೊಳಿಸಬೇಕು.

ಮೆಂತ್ಯದ ಸೊಪ್ಪನ್ನು ಒಣಗಿಸಿ ರಕ್ಷಿಸಿಟ್ಟು ಬಳಸುವುದು ಉತ್ತರ ಭಾರತದಲ್ಲಿ ಹೆಚ್ಚು ರೂಢಿಯಲ್ಲಿದೆ. ಚೆನ್ನಾಗಿ ಒಣಗಿಸಿಟ್ಟ ಸೊಪ್ಪು ಒಂದು ವರ್ಷ ಇಟ್ಟರೂ ಹಾಳಾಗುವುದಿಲ್ಲ. ಮೆಂತ್ಯವನ್ನು ಹಲವಾರು ಉದ್ದಿಮೆಗಳಲ್ಲಿ ಮೂಲವಸ್ತುವಾಗಿ ಬಳಸುತ್ತಾರೆ. ಮಸಾಲೆ ವಸ್ತುಗಳ ತಯಾರಿಕೆಯಲ್ಲಿ ಆಹಾರ ಉದ್ಯಮದಲ್ಲಿ ಇದರ ಬಳಕೆಯುಂಟು. ಮೆಂತ್ಯ ದೋಸೆ ಮೈಸೂರಿನ ಕೆಲವು ಕಡೆ ಮಾಡುತ್ತಾರೆ. ಮೆಂತ್ಯ ತೈಲದಿಂದ ಓಲಿಯೋಸಿನ್ ತೆಗೆದು ವಿದೇಶಿ ಮಾರುಕಟ್ಟೆಗೆ ರಫ್ತು ಮಾಡುತ್ತಾರೆ. ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನಾಲಯವು ಮೆಂತ್ಯದ ಕೊಯ್ಲೋತರ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ವೈದ್ಯಕೀಯ ಗುಣವನ್ನು ಹೊಂದಿರುವ ಮೆಂತ್ಯವು ಆರೋಗ್ಯಕ್ಕೆ ತುಂಬ ಉಪಯುಕ್ತವಾದುದು.

*ಎಸ್.ಬಿ.*

**ಮೆಣಸಿನಕಾಯಿ** ಭಾರತವು ಅನೇಕ ಮಸಾಲೆ ಹಾಗೂ ಸಂಬಾರ ಪದಾರ್ಥಗಳ ಬೆಳೆಗಳಿಗೆ ತವರು ನೆಲೆಯಾಗಿದೆ. ಇಂತಹ ಅನೇಕ ಮಸಾಲೆ ಮತ್ತು ಸಂಬಾರ ಪದಾರ್ಥಗಳಲ್ಲಿ ಮೆಣಸಿನಕಾಯಿಯೂ ಒಂದು. ಅಲ್ಲದೆ ಪ್ರಮುಖ ವಾಣಿಜ್ಯ ಬೆಳೆಯೂ ಹೌದು. ಮಸಾಲೆ ಮತ್ತು ಸಂಬಾರ ಪದಾರ್ಥಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿ ಅನೇಕ ದೇಶಗಳಿಗೆ ರಫ್ತು ಮಾಡುವಲ್ಲಿ ಭಾರತ ಒಂದು ದೊಡ್ಡ ರಾಷ್ಟ್ರವಾಗಿದೆ. ಮೆಣಸಿನಕಾಯಿಯ ಉತ್ಪಾದನೆಯಿಂದ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ವಿದೇಶಿ ವಿನಿಮಯಗಳಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

'ಚಿಲ್ಲಿ' ಅಥವಾ 'ಚಿಲಿ' ಎಂಬ ಪದವು ಮೆಕ್ಸಿಕೊ ದೇಶದ ನೌಹಾಟ್ಲ ಎಂಬ ಭಾಷೆಯಿಂದ ಬಂದಿದೆ. ಕ್ರಿ.ಪೂ. 7000 ವರ್ಷಗಳ ಹಿಂದೆ



ರೆಡ್ ಇಂಡಿಯನ್ನರು ಮೆಣಸಿನಕಾಯಿಯನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. 1492ರಲ್ಲಿ ಕೊಲಂಬಸ್‌ನು ಪ್ರಪಂಚಕ್ಕೆ ಹಲವಾರು ಬಹೂಪಯೋಗಿ ವಸ್ತು ಮತ್ತು ಬೆಳೆಗಳ ಜೊತೆಯಲ್ಲಿ ಮೆಣಸಿನಕಾಯಿ ಬೆಳೆಯನ್ನು ಪರಿಚಯಿಸಿದನು. ಗೋವಿನಜೋಳ, ಆಲೂಗೆಡ್ಡೆ ಮುಂತಾದವುಗಳ ಜೊತೆ ಮೆಣಸಿನಕಾಯಿಯೂ ಒಂದಾಗಿತ್ತು. ದಕ್ಷಿಣ ಮತ್ತು ಮಧ್ಯಅಮೆರಿಕದ ಮೆಕ್ಸಿಕೊ, ಪೆರು, ಬೊಲಿವಿಯಾ ಮತ್ತು ಈಕ್ವೆಡಾರ್ ದೇಶಗಳು ಈ ಬೆಳೆಯ ಮೂಲಸ್ಥಾನ (ತವರು) ಎನ್ನಲಾಗಿದೆ. ಅಲ್ಲಿಂದ ಸ್ಪೇನ್ ದೇಶಕ್ಕೆ ಬಂದ ಮೆಣಸಿನಕಾಯಿ ತೀವ್ರವಾಗಿ ಜಗತ್ತಿನ ಉಳಿದೆಲ್ಲ ಕಡೆ ಹರಡಿಕೊಂಡಿದೆ. ಸ್ಪೇನ್ ದೇಶದಿಂದ ಈ ಬೆಳೆ 16ನೇ ಶತಮಾನದ ಕೊನೆಯ ಭಾಗದಲ್ಲಿ ಪೋರ್ಚುಗೀಸರ ಮುಖಾಂತರ ಭಾರತವನ್ನು ಪ್ರವೇಶಿಸಿತು. ಮೆಣಸಿನಕಾಯಿ ಬೆಳೆಯನ್ನು ಕೊಲಂಬಸ್ ತನ್ನ ಅಮೆರಿಕೆಯ ಪ್ರವಾಸದಿಂದ ಹಿಂದಿರುಗುವಾಗ ಯೂರೋಪಿಗೆ ತಂದನೆಂದು ನಂಬಲಾಗಿದೆ. ಯೂರೋಪ್ ಖಂಡದ ಬಲ್ಗೇರಿಯಾ ಮತ್ತು ದಕ್ಷಿಣ ಅಮೆರಿಕದ ಗ್ವಾಟೆಮಾಲಾ ಮುಂತಾದವು ಮೆಣಸಿನಕಾಯಿ ಬೆಳೆಯ ಎರಡನೆಯ ತವರು ದೇಶಗಳೆಂದು ಪರಿಗಣಿಸಲಾಗಿದೆ.

**ಗುಣಲಕ್ಷಣಗಳು :** ಮೆಣಸಿನಕಾಯಿಯ ಗಿಡವು ಪೊದೆ ರೂಪದಲ್ಲಿ ಬೆಳೆಯುತ್ತದೆ. ಜನಪದರು ಮೆಣಸಿನಗಿಡವನ್ನು ಕುರಿತು 'ತಾಯಿ ತಲೆಕೆದರಿ ಮಗಳು ನಿಜಕೆಂಪಿ' ಎಂಬ ಒಗಟಿನರೂಪದಲ್ಲಿ ವರ್ಣಿಸಿರುವುದನ್ನು ಗಮನಿಸಬಹುದು. ಮೆಣಸಿನಕಾಯಿ ಸಸ್ಯದ ವೈಜ್ಞಾನಿಕ ಹೆಸರು

'ಕ್ಯಾಪ್ಸಿಕಮ್'. ಇದು ಸೋಲನೇಸೀ ಕುಟುಂಬಕ್ಕೆ ಸೇರಿದೆ. ಕ್ಯಾಪ್ಸಿಕಮ್ ಜಾತಿಯಲ್ಲಿ ಒಟ್ಟು 22 ಪ್ರಭೇದಗಳಿದ್ದು ಇವುಗಳಲ್ಲಿ 5 ಪ್ರಭೇದಗಳು ಬೇಸಾಯದಲ್ಲಿವೆ. ಅವುಗಳೆಂದರೆ 1) ಕ್ಯಾಪ್ಸಿಕಮ್ ಆನ್ಯುಯಮ್, 2) ಕ್ಯಾಪ್ಸಿಕಮ್ ಫುಟೆಸೆನ್ಸ್, 3) ಕ್ಯಾಪ್ಸಿಕಮ್ ಪೆಂಡುಲಮ್, 4) ಕ್ಯಾಪ್ಸಿಕಮ್ ಚೈನೆನ್ಸ್, 5) ಕ್ಯಾಪ್ಸಿಕಮ್ ಪ್ಯುಬೆಸ್ಸೆನ್. ಇನ್ನುಳಿದ 17 ಪ್ರಭೇದಗಳು ಅಮೆರಿಕೆಯ ದಕ್ಷಿಣ ಮತ್ತು ಮಧ್ಯವಲಯಗಳಲ್ಲಿ ಕಾಡು ಸ್ಥಿತಿಯಲ್ಲಿ ಕಂಡುಬರುತ್ತವೆ. ಈ ಸಸ್ಯ ಸುಮಾರು 60 ರಿಂದ 90 ಸೆಂ.ಮೀ. ಉದ್ದ ಬೆಳೆಯುತ್ತದೆ. ಇದರ ಮೂಲ ಮಧ್ಯ ಅಮೆರಿಕ ಮತ್ತು ವೆಸ್ಟ್‌ಇಂಡೀಸ್ ಎನ್ನಲಾಗಿದೆ. ಅಮೆರಿಕ ಮತ್ತು ವೆಸ್ಟ್‌ಇಂಡೀಸ್‌ಗಳಲ್ಲಿ ಶೋಧನೆ ನಡೆಸಿ ಗುರುತಿಸಿದ ಮೇಲೆ ಇದು ಬೆಳಕಿಗೆ ಬಂದಿತು. ಅನಂತರ ಜಗತ್ತಿನ ಉಷ್ಣವಲಯ ಪ್ರದೇಶಗಳಲ್ಲೆಲ್ಲ ಬಲುಬೇಗ ಹರಡುವಂತಾಗಿ ವಿವಿಧ ವಾತಾವರಣಗಳಿಗೆ ಹೊಂದಿಕೊಂಡು ಬೆಳೆಯ ತೊಡಗಿ ಇಂದು ಪ್ರಪಂಚಾದ್ಯಂತ ಪಸರಿಸಿಕೊಂಡಿದೆ.

**ಎಲೆ ಮತ್ತು ಹೂವು :** ಮೆಣಸಿನಕಾಯಿ ಗಿಡ ನಾಟಿ ಮಾಡಿದ 40 ದಿನಗಳ ಅನಂತರ, ಅಂದರೆ ಬೀಜ ಬಿತ್ತಿದ 70 ದಿನಗಳ ಮೇಲೆ ಅನಂತರ ಹೂ ಬಿಡಲು ಪ್ರಾರಂಭಿಸುತ್ತದೆ. ಎಲೆಗಳ ಕಂಕುಳಲ್ಲಿ ಹೂವುಗಳು ಕಂಡುಬರುತ್ತವೆ. ನಾಟಿಮಾಡಿದ 60-80 ದಿನಗಳ ಅನಂತರ ಅತಿ ಹೆಚ್ಚು ಹೂವುಗಳು ಕಂಡುಬರುತ್ತವೆ. ಹೂವುಗಳ ಸಂಖ್ಯೆ - ತಳಿ, ಹವಾಗುಣ, ಭೂ ಫಲವತ್ತೆಗೆ ಅನುಗುಣವಾಗಿರುತ್ತವೆ. ಒಂದೇ ಹೂವಿನಲ್ಲಿ ಪುಂಕೇಸರ ಮತ್ತು ಸ್ತ್ರೀಕೇಸರವನ್ನು ಹೊಂದಿರುತ್ತವೆ. ಹೂವಿನಲ್ಲಿ ದೇಟು ಕಂಡುಬರುತ್ತದೆ. ಪುಷ್ಪಪಾತ್ರೆ (ಪುಷ್ಪಪತ್ರ)ಯಿದ್ದು ಐದು ತುಟಿಗಳನ್ನು ಹೊಂದಿರುತ್ತದೆ.

ಕೀಟಗಳಿಂದ ಮತ್ತು ಗಾಳಿಯಿಂದ ಒಂದು ಹೂವಿನಿಂದ ಇನ್ನೊಂದು ಹೂವಿಗೆ ಪರಾಗಸ್ಪರ್ಶವಾಗುತ್ತದೆ. ಹೂವನ್ನು ಸಂಕರಣ ಮಾಡಲು ಪುಂಕೇಸರವನ್ನು ಹೂವು ಅರಳುವ ಒಂದು ದಿನ ಮುಂಚಿತವಾಗಿ ತೆಗೆಯಬೇಕಾಗುವುದು. ಒಟ್ಟು ಹೂವುಗಳ ಸಂಖ್ಯೆ ಕ್ಯಾಲಿಫೋರ್ನಿಯಾ ವಂಡರ್‌ತಳಿಯಲ್ಲಿ 50 ಇದ್ದರೆ, ಬ್ಯಾಡಗಿ ಕಡ್ಡಿ ತಳಿಯಲ್ಲಿ 300 ಕ್ಕಿಂತಲೂ ಮೇಲ್ಪಟ್ಟು ಇರುತ್ತವೆ. ಹೂವುಗಳಿಂದ ಕಾಯಿಗಳು ಬೆಳೆದು ಮಾಗುವ ಪ್ರಮಾಣ ಶೇ. 8-35 ಆಗಿರುತ್ತದೆ.

**ಹಣ್ಣು ಮತ್ತು ಬೀಜಗಳು :** ಮೆಣಸಿನಕಾಯಿಯು ಭೂಮಿಯ ಕಡೆ ಮತ್ತು ಆಕಾಶದ ಕಡೆ ಮುಖ ಮಾಡಿ ಬೆಳೆದಿರುತ್ತವೆ. ಇವು ಅಚ್ಚ ಹಸುರು ಮತ್ತು ತಿಳಿ ಹಸುರುಗಳಿಂದ ಕೂಡಿರುತ್ತವೆ. ಕಾಯಿಗಳ ಸಂಕರಣದಲ್ಲಿ ಮೊದಲನೆಯ ಪೀಳಿಗೆಯಲ್ಲಿ ಎಲ್ಲ ಕಾಯಿಗಳು ಭೂಮಿಯ ಕಡೆ ಓರೆಯಾಗಿರುವುದು ಕಂಡುಬರುತ್ತದೆ. ಮಾಗಿದ ಕಾಯಿಯ ಬಣ್ಣ ಕೆಂಪು ಮತ್ತು ಹಳದಿಯಾಗಿರುತ್ತವೆ. ಸಸ್ಯಗಳ ಸಂಕರಣ ಮಾಡಿದಾಗ ಮೊದಲನೆಯ ಪೀಳಿಗೆಯಲ್ಲಿ ಎಲ್ಲ ಮಾಗಿದ ಕಾಯಿಗಳ ಬಣ್ಣ ಕೆಂಪಾಗಿರುತ್ತದೆ. ಹಣ್ಣಿನ ತೊಗಟೆ ಗಟ್ಟಿಯಾಗಿ ಚರ್ಮದಂತೆ ಇರುತ್ತದೆ. ಬೀಜಗಳನ್ನು ಹಣ್ಣಿನಿಂದ ಬೇರ್ಪಡಿಸಿ ಸಂಗ್ರಹಿಸಿದಾಗ ಮೊಳಕೆ ಒಡೆಯುವ ಪ್ರಮಾಣ ಕಡಿಮೆ ಆಗುವುದುಂಟು. ಆದ್ದರಿಂದ ಬಿತ್ತನೆಗೆ ಸ್ವಲ್ಪ ದಿನಗಳ ಮೊದಲು ಹಣ್ಣಿನಿಂದ ಬೀಜಗಳನ್ನು ಬೇರ್ಪಡಿಸಿ ಬಿತ್ತನೆ ಮಾಡುವುದು ಒಳ್ಳೆಯದು. ಮೆಣಸಿನಕಾಯಿ ತನ್ನ ಆಕರ್ಷಕ ಬಣ್ಣ, ಖಾರ, ಕಂಪು, ವಿಟಮಿನ್ 'ಸಿ', ಹಣ್ಣಿನ ಸಿಪ್ಪೆಯಲ್ಲಿರುವ ಕೆರೊಟಿನಾಯ್ಡ್ (ಕ್ಯಾಪ್ಸಾಂಥಿನ್) ಇತ್ಯಾದಿಗಳಿಂದಾಗಿ ವಿಶೇಷವಾಗಿರುತ್ತದೆ. ಮೆಣಸಿನಕಾಯಿಯಲ್ಲಿ ವಿಟಮಿನ್ 'ಸಿ' ಪ್ರಮಾಣ ಟೊಮ್ಯಾಟೋ ಹಣ್ಣಿಗಿಂತ ಹೆಚ್ಚು. ಇದನ್ನು ಪತ್ತೆ ಹಚ್ಚಿದ 'ಹಂಗೇರಿ' ದೇಶದ ವಿಜ್ಞಾನಿ ಡಾ. ಸ್ಟೆಂಟ್ ಗೊರ್ಗಿ ಇವರಿಗೆ 1973ರಲ್ಲಿನೊಬೆಲ್ ಪಾರಿತೋಷಿಕ ನೀಡಲಾಗಿದೆ.

**ಬೇಸಾಯಕ್ರಮ :** ಮೆಣಸಿನಕಾಯಿ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಬೆಳೆ. ಮರಳು ಮಿಶ್ರಿತ ಜೇಡಿ, ಕೆಂಪು ಜೌಗು ಮತ್ತು ಕಪ್ಪು ಮಣ್ಣು ಬೆಳೆಗೆ ಯೋಗ್ಯವಾಗಿರುತ್ತವೆ. ಸಾಕಷ್ಟು ಗೊಬ್ಬರ ಮತ್ತು ನೀರು ಪೂರೈಕೆಯಿದ್ದರೆ ಮರಳು ಮತ್ತು ಮೆಕ್ಕಲು ಮಣ್ಣುಗಳಲ್ಲಿಯೂ ಇದನ್ನು ಬೆಳೆಯಬಹುದು. ಇದರ ಬೇಸಾಯ ಭಾರತಾದ್ಯಂತ ಸುಮಾರು 78 ಲಕ್ಷ ಹೆಕ್ಟೇರಿಗೂ ಹೆಚ್ಚು ಪ್ರದೇಶದಲ್ಲಿ ಕಂಡುಬರುತ್ತದೆ. ಶೇಕಡಾ 75 ರಷ್ಟು ಇದರ ಕೃಷಿಯಿರುವುದು ಆಂಧ್ರಪ್ರದೇಶ, ಪಂಜಾಬ್ ಮತ್ತು ಬಿಹಾರ ರಾಜ್ಯಗಳಲ್ಲಿ.

ಮಳೆ ಆಶ್ರಯ ಬೆಳೆಯಾಗಿ ಇದನ್ನು ಕೃಷಿ ಮಾಡುವುದೇ ಹೆಚ್ಚು ರೂಢಿಯಲ್ಲಿದೆ. ಕೆಲವೆಡೆ ನೀರಾವರಿ ಬೇಸಾಯ ಮಾಡುವುದು ಉಂಟು. ಮುಂಗಾರಿನಲ್ಲೂ ಈ ಬೆಳೆಯನ್ನು ಶುದ್ಧ ಬೆಳೆಯಾಗಿಯೂ, ಬೇರೆ ಬೆಳೆಗಳ ಜೊತೆಯಲ್ಲಿ ಮಿಶ್ರ ಬೆಳೆಯಾಗಿಯೂ ಬೆಳೆಯುವುದುಂಟು. ಬೀಜಗಳನ್ನು ಒಟ್ಲು ಪಾತಿಯಲ್ಲಿ ಬಿತ್ತಿ ಸಸಿಗಳನ್ನು ಪಡೆದು ಅನಂತರ ಆ ಸಸಿಗಳನ್ನು ಬೇಕಾದ ಕಡೆ ನಾಟಿ ಮಾಡಲಾಗುವುದು. ಸಸಿಗಳು ನಾಟಿ ಮಾಡಿದ 75 ರಿಂದ 105 ದಿನಗಳ ಅನಂತರ ಹೂ ಬಿಡಲು ಆರಂಭಿಸಿ, ಸುಮಾರು 3 ತಿಂಗಳ ಅವಧಿಯವರೆಗೂ ಹೂ ಧರಿಸುತ್ತವೆ. ಕಾಯಿ ಕಚ್ಚಿ ಅವು ಬಲಿಯಲಾರಂಭಿಸಿದ ಮೇಲೆ 3-4 ತಿಂಗಳ ಅವಧಿಯಲ್ಲಿ 5 ರಿಂದ 10 ಸಲ, 8 ರಿಂದ 15 ದಿವಸಗಳ ಅಂತರದಲ್ಲಿ ಬಲಿತ ಹಾಗೂ ಕೆಂಪು ಅಥವಾ ಕಂದು ಬಣ್ಣವನ್ನು ಹೊಂದಿರುವ ಕಾಯಿಗಳನ್ನು ಬಿಡಿಸಿ ಸಂರಕ್ಷಿಸಲಾಗುವುದು.

ಕರ್ನಾಟಕದಲ್ಲಿ ಮೆಣಸಿನಕಾಯಿಯನ್ನು ಸಾಮಾನ್ಯವಾಗಿ ಮುಂಗಾರಿನಲ್ಲಿ ಖುಷ್ಕಿ ಬೆಳೆಯಾಗಿ ಬೆಳೆಯಲಾಗುವುದು. ಉತ್ತರಕರ್ನಾಟಕದಲ್ಲಿ ಅದರಲ್ಲೂ ಮುಖ್ಯವಾಗಿ ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿ ಮೆಣಸಿನಕಾಯಿಯನ್ನು ಖುಷ್ಕಿಯಲ್ಲಿ ಬೆಳೆಯಲಾಗುತ್ತಿದೆ. ನೀರಾವರಿ ಸೌಕರ್ಯವಿದ್ದರೆ ವರ್ಷದ ಯಾವುದೇ ಕಾಲದಲ್ಲೂ ಬೆಳೆಯಬಹುದು. ಪ್ರತ್ಯೇಕವಾಗಿ ಇಲ್ಲವೆ ಇತರೆ ಬೆಳೆಗಳಾದ ಹತ್ತಿ, ಬಾಳೆ, ತೆಂಗು ಮುಂತಾದ ಬೆಳೆಗಳ ಜೊತೆಯಲ್ಲಿ ಬೆಳೆಯಲಾಗುವುದು. ಸಸಿಗಳನ್ನು ಮಡಿಗಳಿಂದ 40 ರಿಂದ 50 ದಿನಗಳ ಮೇಲೆ ಕಿತ್ತು ನಾಟಿಮಾಡಿದರೆ, 3-5 ತಿಂಗಳಲ್ಲಿ ಫಲ ನೀಡುತ್ತವೆ. ಕರ್ನಾಟಕದಲ್ಲಿ ಮುಖ್ಯವಾಗಿ ಧಾರವಾಡ, ಬೆಳಗಾವಿ, ಗುಲ್ಬರ್ಗಾ, ಶಿವಮೊಗ್ಗ, ಕೋಲಾರ, ಮೈಸೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿಅತಿ ಹೆಚ್ಚು ಬೆಳೆದರೆ, ಬೀದರ್, ರಾಯಚೂರು, ಬಳ್ಳಾರಿ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿಯೂ ಕಡಿಮೆ ಬೆಳೆಯಲಾಗುತ್ತದೆ. ಈ ಬೆಳೆಗೆ ನೀರು ಚೆನ್ನಾಗಿ ಬಸಿದು ಹೋಗುವಂತಹ ಫಲವತ್ತಾದ ಗೋಡು ಮಣ್ಣು ಯೋಗ್ಯ. ಮರಳು ಮಿಶ್ರಿತ ಕಪ್ಪು ಮತ್ತು ಕೆಂಪು ಗೋಡು ಮಣ್ಣುಗಳಲ್ಲಿಯೂ ಚೆನ್ನಾಗಿ ಬೆಳೆಯುತ್ತದೆ. ಮಳೆಯಾಶ್ರಿತ ಬೇಸಾಯವು ಮೇ-ಜೂನ್ ತಿಂಗಳಲ್ಲಿ, ನೀರಾವರಿ ಬೆಳೆಯು ಅಕ್ಟೋಬರ್ - ನವೆಂಬರ್ ಮತ್ತು ಜನವರಿ - ಫೆಬ್ರವರಿ ತಿಂಗಳುಗಳಲ್ಲಿ ನಡೆಯುತ್ತದೆ.

**ಮಿಶ್ರ ಬೆಳೆಗಳು :** ಮೆಣಸಿನ ಗಿಡಗಳ ಜೊತೆಗೆ ಅನೇಕ ಮಿಶ್ರ ಬೆಳೆಯನ್ನು ಮಾಡುವುದುಂಟು. ಬೇಗನೆ ಫಲಕೊಡುವ ಬೆಳೆಗಳಾದ ಹೆಸರು, ಅವರೆ, ಬಟಾಣಿ, ಶೇಂಗಾ, ಬೆಳ್ಳುಳ್ಳಿ, ಈರುಳ್ಳಿ ಹಾಗೂ ಇನ್ನಿತರ ಬೆಳೆಗಳನ್ನು ಸಹ ಬೆಳೆಯುವುದುಂಟು. ಮಿಶ್ರಬೆಳೆ ಅನೇಕ ರೀತಿಯಲ್ಲಿ

ಅನುಕೂಲದಾಯಕ. ಮುಖ್ಯಬೆಳೆಗಿಂತ ಉಪಬೆಳೆಗಳಿಂದ ಬೇಗ ಫಲ ದೊರೆಯುವುದರಿಂದ ಹಣಕಾಸಿನ ಅನುಕೂಲವಾಗುವುದು. ಮಿಶ್ರ ಬೆಳೆಗಳನ್ನು ಬೇರೆ ಬೇರೆ ಹಂತಗಳಲ್ಲಿ ಬಿತ್ತನೆ ಮಾಡುವುದರಿಂದ ಮತ್ತು ಕೊಯ್ಲು ಮಾಡುವುದರಿಂದ ರೈತನಿಗೆ ಬಹುಕಾಲ ಉದ್ಯೋಗ ದೊರೆಯುವುದು. ಮಿಶ್ರಬೆಳೆಗಳ ಎಲೆಗಳ ಗುಣಧರ್ಮಗಳು ಹಾಗೂ ಬೇರುಗಳ ವಿಸ್ತರಣೆ ಬೇರೆ ಬೇರೆ ಆಗಿರುವುದರಿಂದ ಪರಸ್ಪರ ಪೋಷಕಾಂಶಗಳಿಗೆ, ತೇವಾಂಶ ಹಾಗೂ ಬಿಸಿಲು ಸಮಾನ ಸದುಪಯೋಗವಾಗುವುದು. ಇದು ಕಳೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ಉತ್ತಮ ವಿಧಾನವಾಗಿದೆ. ದ್ವಿದಳ ಧಾನ್ಯಗಳನ್ನು ಮಿಶ್ರಬೆಳೆಯಾಗಿ ಬೆಳೆಯುವುದರಿಂದ (ಸಾರಜನಕದ ಸ್ಥಿರೀಕರಣದಿಂದ) ಸಾರಜನಕದ ಲಾಭವಾಗಿ ಮಣ್ಣಿನ ಫಲವತ್ತತೆ ಅಧಿಕವಾಗುತ್ತದೆ.



**ಕೊಯ್ಲು ಮತ್ತು ಇಳುವರಿ :** ಇದು ನಾಟಿಮಾಡಿದ 40-50 ದಿನಗಳ ಅನಂತರ ಫಸಲು ಬಿಡಲು ಪ್ರಾರಂಭಿಸುತ್ತದೆ. 80-90 ದಿನಗಳ ಅನಂತರ ಕೊಯ್ಲು ಮಾಡಬಹುದು. ಖುಷ್ಕಿಯಲ್ಲಿ ಹೆಕ್ಟೇರಿಗೆ 75-100 ಕ್ವಿಂಟಾಲ್ ಹಸಿ ಮೆಣಸಿನಕಾಯಿ, 7 ರಿಂದ 10 ಕ್ವಿಂಟಾಲ್ ಒಣ ಮೆಣಸಿನಕಾಯಿ ಇಳುವರಿಯನ್ನು ಕೊಡುತ್ತದೆ. ನೀರಾವರಿಯಲ್ಲಿ ಹೆಕ್ಟೇರಿಗೆ 200 ರಿಂದ 250 ಕ್ವಿಂಟಾಲ್ ಹಸಿ ಮೆಣಸಿನಕಾಯಿ, 20 ರಿಂದ 25 ಕ್ವಿಂಟಾಲ್ ಒಣ ಮೆಣಸಿನಕಾಯಿ ಇಳುವರಿಯನ್ನು ಪಡೆಯಬಹುದು.

**ಕಳೆಗಳು :** ಮೆಣಸಿನಕಾಯಿ ಬೆಳೆಗಳ ಆರೋಗ್ಯಕರ ಬೆಳೆವಣಿಗೆಗೆ ಅಡ್ಡಿಪಡಿಸುವ ಪ್ರಮುಖ ಹಂತವೆ ಕಳೆಗಳು.

ಮೆಣಸಿನಕಾಯಿ ಬೆಳೆಯಲ್ಲಿ ಗಿಡದಿಂದ ಗಿಡಕ್ಕೆ ಇರುವ ಹೆಚ್ಚಿನ ಅಂತರ ಹಾಗೂ ಪ್ರಾರಂಭಿಕ ಹಂತದಲ್ಲಿಯ ಬೆಳೆಯ ನಿಧಾನವಾದ ಬೆಳೆವಣಿಗೆಯಿಂದ ಕಳೆಗಳ ಬೆಳೆವಣಿಗೆಯನ್ನು ವೃದ್ಧಿಸುವಲ್ಲಿ ಸಹಕಾರಿಯಾಗಿದೆ. ಕಳೆಗಳ ಪ್ರಮಾಣವು ಸ್ಥಳ, ಬೆಳೆಯುವ ಕಾಲ ಹಾಗೂ ಮಣ್ಣಿನ ಗುಣಧರ್ಮಗಳನ್ನು ಅವಲಂಬಿಸಿರುತ್ತದೆ. ಕೆಂಪು ಮಣ್ಣಿನ ಭೂಮಿಯಲ್ಲಿ ವಾರ್ಷಿಕ ಕಳೆಗಳು ಮತ್ತು ಕಪ್ಪು ಮಣ್ಣಿನ ಭೂಮಿಯಲ್ಲಿ ಬಹುವಾರ್ಷಿಕ ಕಳೆಗಳು ತೊಂದರೆಯನ್ನುಂಟು ಮಾಡುತ್ತವೆ. ಮೆಣಸಿನಕಾಯಿ ಬೆಳೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಬಹುವಾರ್ಷಿಕ ಕಳೆಗಳೆಂದರೆ - ಸೈನಾಡಾನ್ ಡಕ್ಟಿಲಾನ್ (ಹರಿಯಾಳಿ ಅಥವಾ ಕರ್ಕಿ), ಸೈಪರಸ್ ರೊಟಂಡಸ್ (ಜೇಕು), ಕನ್ವೊಲ್ವುಸ್ ಅರವೆನ್ಸಿಸ್ (ಹಸರಾಣಿ) ಮುಂತಾದವು. ಮುಖ್ಯ ವಾರ್ಷಿಕ ಕಳೆಗಳೆಂದರೆ - ನರಿಬಾಲದ ಹುಲ್ಲು, ಕಪ್ಪು ಮಣ್ಣಿನಲ್ಲಿ ಮತ್ತು (ಕಡುಗೋಲು ಮುಂಡಿ ಕಸ), ಕೆಂಪು ಮಣ್ಣಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ದ್ವಿದಳ ಧಾನ್ಯಗಳ ಗುಂಪಿಗೆ ಸೇರಿದ ಪ್ರಮುಖ ಕಳೆಗಳೆಂದರೆ ಸೈನೊಟಿಸ್ (ಜಿಗಳಿ), (ನೆಲ್ಲಿ), (ಸೀಡಾ), (ಅಣ್ಣಿಕಸ), ಅಕ್ಯಾಂತೊಸ್ಪರ್ಮಮ್ ಹಿಸ್ಪಿಡಮ್ (ಕಡ್ಲಿಮುಳ್ಳು ಕಸ), ಟ್ರೈಯಾಂತಿಮಾ ಪೊರ್ಚುಲೊಕ್ಯಾಸ್ಟ್ರಮ್ (ಕಾರೆಟವೀಡ), (ಮೂಗಿತಿಕಸ) ಇತ್ಯಾದಿ (ಮಂಗನ ಬಾಲ) ಮೆಣಸಿನ ಗಿಡದ ಕಾಂಡದ ಮೇಲೆ ಬೆಳೆಯುವ ಪರಾವಲಂಬಿ ಕಳೆಗಳಾದರೆ, ಓರೊಬ್ಯಾಂಕ್ (ತಂಬಾಕು) ಬೇರಿನ ಮೇಲೆ ಬೆಳೆಯುವ ಪರಾವಲಂಬಿ ಕಳೆಯಾಗಿರುತ್ತದೆ.

ಪ್ರಮುಖವಾಗಿ ಮೆಣಸಿನಗಿಡಕ್ಕೆ ಕಾಣಿಸಿಕೊಳ್ಳುವ ಮುರುಟು ರೋಗಕ್ಕೆ ಕಾರಣವಾಗುವ ಕ್ರಿಮಿಕೀಟಗಳಿಗೆ ಅನೇಕ ಕಳೆಗಳು ಆಶ್ರಯ ನೀಡುತ್ತವೆ. ಅವುಗಳಲ್ಲಿ ಮುಖ್ಯವಾಗಿ ಕಾಕಿ ಗಿಡ, ಕಡ್ಲೆ ಮುಳ್ಳು ಇವುಗಳ ನಿಯಂತ್ರಣ ಮೆಣಸಿನ ಬೇಸಾಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

**ಕಳೆನಿಯಂತ್ರಣ:** ಕಳೆನಿಯಂತ್ರಣಕ್ಕೆ ರೈತರು ಹೆಚ್ಚಾಗಿ ಭೌತಿಕ ವಿಧಾನವನ್ನೇ ಅವಲಂಬಿಸಿರುತ್ತಾರೆ. ಈ ಪದ್ಧತಿಯಲ್ಲಿ ಕೈಯಿಂದ ಕಳೆ ತೆಗೆಯುವುದು ಮತ್ತು ಅಂತರ ಬೇಸಾಯ (ಎಡೆ ಹೊಡೆಯುವುದು) ಬಹುಮುಖ್ಯ. ಈ ವಿಧಾನದ ಕಳೆ ನಿಯಂತ್ರಣಕ್ಕೆ ಆಳುಗಳ ಅವಶ್ಯಕತೆ ಬಹಳವಾಗಿರುತ್ತದೆ. ಪ್ರಸ್ತುತ ದಿನಗಳಲ್ಲಿ ಆಳುಗಳಿಗೆ ತಗಲುವ ಖರ್ಚು ದುಬಾರಿ ಅಲ್ಲದೆ ಲಭ್ಯತೆಯ ಕೊರತೆಯಿಂದಲೂ ಸಕಾಲದಲ್ಲಿ ಈ ವಿಧಾನವನ್ನು ಅನುಸರಿಸುವುದು ಕೆಲವೊಮ್ಮೆ ಅಸಾಧ್ಯವೆನಿಸುತ್ತದೆ. ಇಂತಹ ಕಾರಣಗಳಿಂದಾಗಿ ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಕಳೆನಿಯಂತ್ರಣ ಪದ್ಧತಿ ಜಾರಿಯಲ್ಲಿದೆ. ಪರಿಸರದ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡುತ್ತಿರುವ ಇಂದಿನ ದಿನಗಳಲ್ಲಿ ಭೌತಿಕ ಕಳೆನಿಯಂತ್ರಣ ವಿಧಾನ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ.

ಮಧ್ಯಂತರ ಬೇಸಾಯವನ್ನು ಎಡೆಕುಂಟೆಯಿಂದ ಮಾಡುತ್ತಾರೆ. ಇದರ ಮುಖ್ಯ ಉದ್ದೇಶವೆಂದರೆ ಕಳೆ ನಿಯಂತ್ರಣ, ಭೂಮಿಯಲ್ಲಿ ತೇವಾಂಶ ಸಂಗ್ರಹಣೆ ಮತ್ತು ಭೂಮಿಯನ್ನು ಸಡಿಲಗೊಳಿಸುವುದು. ಮಧ್ಯಂತರ ಬೇಸಾಯವನ್ನು ಆಳವಾಗಿ ಮಾಡಬೇಕು. ಮೆಣಸಿನ ಬೆಳೆಯಲ್ಲಿ ಎರಡೂ ಮಗ್ಗುಲುಗಳಲ್ಲಿ ಮಧ್ಯಂತರ ಬೇಸಾಯವನ್ನು ಮಾಡಲು ಸಾಧ್ಯವಿರುವುದರಿಂದ ಕಳೆ ತೆಗೆಯುವ ಖರ್ಚು ಕಡಿಮೆಯಿರುತ್ತದೆ. ಹತ್ತಿ ಬೆಳೆಯಲ್ಲಿ ಮೆಣಸಿನಕಾಯಿ ಬೆಳೆಯನ್ನು ಮಿಶ್ರ ಬೆಳೆಯಾಗಿ ಬೆಳೆದಾಗ ಮಾತ್ರ ಹತ್ತಿ ಬಿತ್ತನೆಯ ಅನಂತರ ಒಂದೇ ಮಗ್ಗುಲಿನಲ್ಲಿಮಧ್ಯಂತರ ಬೇಸಾಯ ಸಾಧ್ಯ. ನಾಟಿಮಾಡಿದ 4 ರಿಂದ 6 ವಾರಗಳ ಅನಂತರ ಎರಡು ಬಾರಿ ಕೈಯಿಂದ ಕಳೆ ಕೀಳುವುದರಿಂದಲೂ, ಮೆಣಸಿನಕಾಯಿ ಗಿಡದ ಹತ್ತಿರ ಬೆಳದ ಕಳೆಗಳನ್ನು ನಿಯಂತ್ರಿಸಲು ಮಗ್ಗುಲು ಎಡೆಕುಂಟೆಯಿಂದ ಮೆಣಸಿನಗಿಡದ ಸಮೀಪ ಮಧ್ಯಂತರ ಬೇಸಾಯ ಮಾಡುವುದರಿಂದಲೂ ಸಾಧ್ಯವಾಗುತ್ತದೆ.

**ತಳಿಗಳು :** ಮೆಣಸಿನಕಾಯಿ ಬೇಸಾಯ ಭಾರತದಲ್ಲಿ ಬಹಳ ಕಾಲದಿಂದಲೂ ಕೃಷಿಯಲ್ಲಿ ಇರುವುದರಿಂದ ಇದರಲ್ಲಿ ವಿವಿಧ ಪ್ರಭೇದಗಳನ್ನು ಕಾಣಬಹುದು. ಭಾರತದಲ್ಲಿ ನೂರಕ್ಕೂ ಹೆಚ್ಚಿನ ತಳಿಗಳನ್ನು ಬೆಳೆಯುತ್ತಿದ್ದಾರೆ. ಇದರಲ್ಲಿ ಸ್ಥಳೀಯ ತಳಿಗಳು ಮತ್ತು ಸಂಶೋಧನಾ ಕೇಂದ್ರಗಳಿಂದ

ಬಿಡುಗಡೆಯಾದ ಮಿಶ್ರ ತಳಿಗಳೂ ಸೇರಿವೆ. ಕಾಯಿಗಳ ಗಾತ್ರ, ಆಕಾರ, ಬಣ್ಣ ಮತ್ತು ಖಾರದ ತೀಕ್ಷ್ಣತೆಯ ಆಧಾರದ ಮೇಲೆ ತಳಿಗಳಿಗೆ ವಿವಿಧ ಬಗೆಯ ಹೆಸರುಗಳನ್ನು ಕೊಡಲಾಗಿದೆ. ಉದಾಹರಣೆಗೆ : ಅಂಗೀಕಸಿಕಾಯಿ, ಡಬ್ಬಗಾಯಿ, ಗಿಡ್ಡಗಾಯಿ, ಬಳ್ಳಿಗಾಯಿ, ಬಿಳಿಗಾಯಿ ಇತ್ಯಾದಿ. ರೈತರು ಹೆಚ್ಚಾಗಿ ಸ್ಥಳೀಯ ತಳಿಗಳನ್ನು ಬೆಳೆಯುತ್ತಿದ್ದಾರೆ. ಸ್ಥಳೀಯ ತಳಿಗಳಿಂದ ಕಡಿಮೆ ಇಳುವರಿ ದೊರೆಯುವುದಲ್ಲದೆ, ರೋಗ ಹಾಗೂ ಕೀಟಗಳ ಬಾಧೆ ತಡೆದುಕೊಳ್ಳುವ ಶಕ್ತಿಯೂ ಇರುವುದಿಲ್ಲ.

ಮೆಣಸಿನಕಾಯಿ ಬೆಳೆಯುವ ಪ್ರದೇಶಗಳ ಆಧಾರದ ಮೇಲೂ ಮೆಣಸಿನಕಾಯಿಗೆ ಬೇರೆ ಬೇರೆ ಹೆಸರುಗಳುಂಟು. ಅವುಗಳೆಂದರೆ ನೇಪಾಲ, ಸ್ಪ್ಯಾನಿಷ್, ಅಮೆರಿಕನ್, ಬಲ್ಗೇರಿಯನ್, ಹಂಗೇರಿಯನ್, ಮೊರಾಕನ್, ಯುಗೋಸ್ಲಾವಿಯನ್ ಮುಂತಾದ ಹೆಸರುಗಳಿಂದ ಕರೆಯಲಾಗುವುದು. ಕರ್ನಾಟಕದಲ್ಲಿ ಬ್ಯಾಡಗಿ, ಗೌರಿಬಿದನೂರು, ಸಂಕೇಶ್ವರ, ಮೈಸೂರು ಮೆಣಸಿನಕಾಯಿ ಇತ್ಯಾದಿ. ಪ್ರಜಾಜ್ವಾಲ, ಪಂತ್-ಸಿ, ಸೆಲೆಕ್ಷನ್-1, ಎನ್-ಸಿ-46ಎ ಮುಂತಾದವು ಸುಧಾರಿತ ಮಿಶ್ರತಳಿಗಳಾಗಿರುತ್ತವೆ. ಆಂಧ್ರದಲ್ಲಿ ಗುಂಟೂರು ಮೆಣಸಿನಕಾಯಿ. ಆನ್ಯುಯಮ್ ಮೆಣಸಿನಕಾಯಿ ಎಂದು ಪ್ರಧಾನವಾಗಿ ಎರಡು ಬಗೆಗಳುಂಟು. ದಪ್ಪ ಅಥವಾ ದೊಣ್ಣೆಮೆಣಸಿನಕಾಯಿಯು ತರಕಾರಿಯಾಗಿ ಪ್ರಸಿದ್ಧವಾಗಿದೆ. ಇದರಲ್ಲಿ ಖಾರದ ಅಂಶ ಬಹಳ ಕಡಿಮೆ ಅಥವಾ ಇಲ್ಲವೆ ಇಲ್ಲ ಎಂದು ಹೇಳಬಹುದು. ಪಪ್ರಿಕ, ಚಿಲೀಸ್, ರೆಡ್‌ಪೆಪರ್ಸ್, ಕೇಯನ್, ಕ್ಯಾಪ್ಸಿಕಮ್, ಸ್ವೀಟ್ ಪೇಪರ್ಸ್, ಪಮಿಯೆಂಟೊ ಎಂಬ ಹೆಸರುಗಳಿಂದ ವಾಣಿಜ್ಯ ಕ್ಷೇತ್ರದಲ್ಲಿ ಇವು ಪ್ರಸಿದ್ಧಿಯಾಗಿವೆ.

**ಕರ್ನಾಟಕದಲ್ಲಿಯ ತಳಿಗಳು : ಬ್ಯಾಡಗಿ :** ಇದು ಬ್ಯಾಡಗಿಕಡ್ಡಿ, ಡಬ್ಬಿ ಮತ್ತು ದ್ಯಾವನೂರು ಎಂಬ ಮೂರು ತಳಿಗಳನ್ನು ಹೊಂದಿದೆ. ಬ್ಯಾಡಗಿ ಡಬ್ಬಿ ಮತ್ತು ದ್ಯಾವನೂರು ತಳಿಗಳನ್ನು ಕಡಿಮೆ ಮಳೆ ಬೀಳುವ ಒಣ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಇದರ ಬಣ್ಣ ಕಡುಕೆಂಪಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಓಲಿಯೋರೈಸಿನ್ ಹೊಂದಿರುತ್ತದೆ. ಬ್ಯಾಡಗಿ ಕಡ್ಡಿ ತಳಿಯನ್ನು ಹೆಚ್ಚಿನ ಮಳೆ ಬೀಳುವ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದು ನಸುಗೆಂಪು ಬಣ್ಣ ಹೊಂದಿರುತ್ತದೆ. ಈ ಎಲ್ಲ ತಳಿಗಳನ್ನು ಧಾರವಾಡ, ಬೆಳಗಾವಿ, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದ್ದು ಈಗ ಬಳ್ಳಾರಿ, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೂ ಹರಡಿದೆ. ಈ ತಳಿ ಒಂದು ಮೀಟರ್ ಎತ್ತರ ಬೆಳೆಯುತ್ತದೆ. ಹಣ್ಣಾದ ಕಾಯಿ ಕಡುಕೆಂಪು ಬಣ್ಣಕ್ಕೆ ತಿರುಗಿ ಮೇಲ್ಭಾಗದಲ್ಲಿ ಸುಕ್ಕುಗಟ್ಟಿ ಅತಿ ಉದ್ದನೆಯ (12-15ಸೆಂ.ಮೀ.) ಆಕಾರವಿದ್ದು ಕಡಿಮೆ ಖಾರವನ್ನು ಹೊಂದಿರುತ್ತದೆ. ಇದು ಅತಿ ಹೆಚ್ಚಿನ ಓಲಿಯೋರೈಸಿನ್ ಹೊಂದಿರುವುದರಿಂದ ಮುರುಟು ರೋಗಕ್ಕೆ ತುತ್ತಾಗುವ ಸಂಭವ ಹೆಚ್ಚು. ಖುಷ್ಕಿ ಬೆಳೆಯಲ್ಲಿ ಪ್ರತಿ ಹೆಕ್ಟೇರಿಗೆ 7 - 10 ಕ್ವಿಂಟಾಲ್ ಇಳುವರಿಯನ್ನು ಪಡೆಯಬಹುದು.

**ಸಂಕೇಶ್ವರ :** ಬೆಳಗಾವಿ ಜಿಲ್ಲೆಯಲ್ಲಿ ಮಳೆಯಾಶ್ರಯದಲ್ಲಿ ಮುಂಗಾರು ಹಂಗಾಮಿನಲ್ಲಿ ಒಣ ಮೆಣಸಿನಕಾಯಿ ಸಲುವಾಗಿ ಈ ತಳಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಈ ತಳಿಯ ಹಣ್ಣುಗಳು ಕೆಂಪಾಗಿದ್ದು ಕಡ್ಡಿ ಆಕಾರ ಹೊಂದಿರುತ್ತವೆ. ಹಣ್ಣಿನಲ್ಲಿ ಖಾರದ ಅಂಶ ಹೆಚ್ಚಾಗಿದ್ದು ಗಿಡಗಳು 75 ಸೆಂ.ಮೀ. ಎತ್ತರ ಬೆಳೆಯುತ್ತವೆ. ಇದು ಖುಷ್ಕಿ ಬೇಸಾಯಕ್ಕೆ ಯೋಗ್ಯ ತಳಿಯಾಗಿದೆ.

**ಚಿಂಚೋಳಿ :** ಉತ್ತರ ಕರ್ನಾಟಕದಲ್ಲಿ ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಇದರಲ್ಲಿ ಖಾರದ ಅಂಶ ಹೆಚ್ಚು. ನೀರಾವರಿ ತಳಿಯಾಗಿದ್ದು ಪೊದೆಯಾಕಾರದಲ್ಲಿ ಬೆಳೆಯುತ್ತವೆ.

**ಮೈಸೂರು :** ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ನೀರಾವರಿ ಆಶ್ರಯದಲ್ಲಿ ಬೆಳೆಯಲಾಗುತ್ತಿದೆ. ಹಣ್ಣುಗಳು ಕೆಂಪಾಗಿದ್ದು ಖಾರದ ಅಂಶ ಹೆಚ್ಚು. ಗಿಡಗಳು ಗಿಡ್ಡ, ಕಾಯಿಗಳು ನೆಲಕ್ಕೆ ತಗಲುವುವು. ಹಣ್ಣಿನ ಬಣ್ಣ ಕೆಂಪಾಗಿದ್ದು ಕಾಯಿಗಳು ದಪ್ಪವಾಗಿ ಮತ್ತು ಉದ್ದವಾಗಿರುವುವು. ಇದನ್ನು ಹಸಿ ಮೆಣಸಿನಕಾಯಿ ಮತ್ತು ಒಣ ಮೆಣಸಿನಕಾಯಿ ಸಲುವಾಗಿ ಬೆಳೆಯುತ್ತಾದಾದರೂ ಕರ್ನಾಟಕದಲ್ಲಿ ಇದನ್ನು ನೀರಾವರಿಯಲ್ಲಿ ಹಸಿಕಾಯಿಗಳಿಗಾಗಿ ಮತ್ತು ಮುಂಗಾರಿನಲ್ಲಿ ಮಳೆಯಾಶ್ರಯದಲ್ಲಿ ಒಣಕಾಯಿಗಳ ಸಲುವಾಗಿ ಬೆಳೆಯುತ್ತಾರೆ.

**ಜಿ-3 :** ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹಸಿಕಾಯಿಗಳಿಗಾಗಿ ಮಳೆ ಮತ್ತು ನೀರಾವರಿ ಆಶ್ರಯದಲ್ಲಿ ಬೆಳೆಯುತ್ತಾರೆ. ಈ ತಳಿಯನ್ನು ಗುಂಟೂರು ಕೃಷಿ ಸಂಶೋಧನಾ ಕೇಂದ್ರದಲ್ಲಿ ಎನ್.ಪಿ.-46ಎ ತಳಿಯಿಂದ ಅಭಿವೃದ್ಧಿ ಪಡಿಸಿದ್ದಾರೆ. ಗಿಡಗಳ ಎತ್ತರ 75 ಸೆಂ.ಮೀ. ಕಾಯಿಗಳು ಅಚ್ಚಕೆಂಪು ಬಣ್ಣದಿಂದ ಕೂಡಿದ್ದು 6 ರಿಂದ 7 ಸೆಂ.ಮೀ. ಉದ್ದವಿರುತ್ತವೆ. ಬಣ್ಣವು ಬಹಳ ಕಾಲ ಮಾಸದಂತೆ ಇರುತ್ತದೆ, ಅಲ್ಲದೆ ಖಾರದ ಅಂಶ ಕೂಡ ಹೆಚ್ಚಾಗಿರುವುದು. ಇದು ರೋಗ ಮತ್ತು ಕೀಟದ ಬಾಧೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದು ನೀರಾವರಿ ಮತ್ತು ಖುಷ್ಕಿ ಬೇಸಾಯಕ್ಕೆ ಯೋಗ್ಯವಾಗಿದೆ.

**ಜ್ವಾಲಾ :** ಎನ್.ಪಿ.-46ಎ. ಮತ್ತು ಪುರಿ ಕೆಂಪು ಸಂಕರಣದಿಂದ ಅಭಿವೃದ್ಧಿಪಡಿಸಲಾಗಿದೆ. ಇದು ಮುರುಟು ರೋಗ ನಿರೋಧಕ ಶಕ್ತಿಯನ್ನು ಪಡೆದಿದ್ದು ಹೆಚ್ಚು ಇಳುವರಿಯನ್ನು ಕೊಡುವ ಸಾಮರ್ಥ್ಯ ಹೊಂದಿದೆ. ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಬೆಳೆಯಬಹುದಾಗಿದ್ದು, ಬೇಸಗೆಯಲ್ಲಿ ಹಸಿ ಮೆಣಸಿನಕಾಯಿ ಬೆಳೆಯಲು ಹೆಚ್ಚು ಯುಕ್ತ. ಗಿಡಗಳು ಮಧ್ಯಮ ಗಾತ್ರದ ಪೊದೆಯಾಕಾರದಲ್ಲಿರುತ್ತವೆ. ಗಿಡದ ಎತ್ತರ 50 ರಿಂದ 60 ಸೆಂ.ಮೀ. ಕಾಯಿಗಳು ಶೇಕಡಾ 6 ಸೆಂ.ಮೀ. ಉದ್ದವಿದ್ದು ಕೆಂಪು ಬಣ್ಣವಿರುತ್ತವೆ. ಕ್ಯಾಪ್ಸಿಸಿನ್ ಅಂಶ ಶೇ. 04 ರಷ್ಟು ಇರುತ್ತದೆ.

**ಸಿಂಧೂರ (ಸಿ.ಎ. 760) :** ಗಿಡದ ಎತ್ತರ 75-80 ಸೆಂ.ಮೀ. ಕಾಯಿಗಳು 9 ರಿಂದ 10 ಸೆಂ.ಮೀ. ಉದ್ದವಾಗಿದ್ದು, ತುದಿ ಮೊಂಡಾಗಿರುತ್ತದೆ. ಸಿಪ್ಪೆ ದಪ್ಪವಾಗಿದ್ದು ಬಲಿತ ಕಾಯಿಗಳು ಕಡುಗೆಂಪು ಬಣ್ಣವನ್ನು ಹೊಂದಿರುತ್ತವೆ. ಕಾಯಿಗಳಲ್ಲಿ ಮಧ್ಯಮ ಪ್ರಮಾಣದಲ್ಲಿ ಖಾರದ ಅಂಶ ಇರುತ್ತದೆ. ತಳಿಯು ಬ್ಯಾಕ್ಟೀರಿಯಾಗಳಿಂದ ಬರುವ ಎಲೆಚುಕ್ಕಿ ರೋಗನಿರೋಧಕ ಶಕ್ತಿಯನ್ನು ಹೊಂದಿದೆ.

**ಈ-4 (ಭಾಗ್ಯಲಕ್ಷ್ಮಿ) :** ಗಿಡಗಳ ಎತ್ತರ 50-60 ಸೆಂ.ಮೀ. ಹಸಿಕಾಯಿಗಳು ಗಾಢ ಹಸುರಾಗಿದ್ದು ಬಲಿತ ಮೇಲೆ ಕಡುಗೆಂಪು ಬಣ್ಣ ಹೊಂದುತ್ತವೆ. ಕಾಯಿಗಳ ಉದ್ದ 7 ರಿಂದ 8 ಸೆಂ.ಮೀ. ಈ ತಳಿಯು ಅಧಿಕ ಇಳುವರಿ ಕೊಡುವುದಲ್ಲದೆ ರೋಗ ಮತ್ತು ಕೀಟದ ಬಾಧೆ ತಡೆದುಕೊಳ್ಳುವ ಶಕ್ತಿ ಹೊಂದಿದೆ.

**ಕದರೊಳ್ಳಿ :** ಮುಂಗಾರು ಬತ್ತದ ಕಟಾವಿನ ಅನಂತರ ಹಸಿ ಮೆಣಸಿನಕಾಯಿಯ ಸಲುವಾಗಿ ಬೆಳಗಾವಿ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಕಾಯಿಗಳು ಆಕರ್ಷಕ ಹಸುರು ಬಣ್ಣವಿರುತ್ತವೆ. ಗಿಡಗಳ ಎತ್ತರ 50 ರಿಂದ 60 ಸೆಂ.ಮೀ. ಉತ್ತರಪ್ರದೇಶದ ಪಂಥ್-ಸಿ-5 ತಳಿಗಳು

ಮುರುಟುರೋಗ ನಿರೋಧಕ ಶಕ್ತಿಯನ್ನು ಹೊಂದಿವೆ. ಆಂಧ್ರಪ್ರದೇಶದ ಗುಂಟೂರು ಕೃಷಿ ಸಂಶೋಧನಾ ಕೇಂದ್ರದಲ್ಲಿ ಜಿ-1 ಮತ್ತು ಜಿ-4 ತಳಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ತಮಿಳುನಾಡಿನ ಕೊಯಲಪಟ್ಟಿ, ಮಧುರೈ ಮತ್ತು ಕೊಯಮತ್ತೂರು ಸಂಶೋಧನಾ ಕೇಂದ್ರಗಳಲ್ಲಿ ಅಭಿವೃದ್ಧಿ ಪಡಿಸಿದ ತಳಿಗಳೆಂದರೆ ಕೆ-1, ಕೆ-2, ಎಂ-ಡಿ-ಯು-1 ಮತ್ತು ಕೋ-1 ಇತ್ಯಾದಿ.

**ದೊಣ್ಣೆಮೆಣಸಿನಕಾಯಿಯ ತಳಿಗಳು :** ದೊಣ್ಣೆ ಮೆಣಸಿನಕಾಯಿಗೆ ಇಂಗ್ಲಿಷ್‌ನಲ್ಲಿ 'ಬೆಲ್‌ಪೆಪ್ಪರ್', 'ಸ್ವೀಟ್ ಪೆಪ್ಪರ್' ಅಥವಾ 'ಕ್ಯಾಪ್ಸಿಕಮ್' ಎಂದೂ, ಹಿಂದಿಯಲ್ಲಿ 'ಸಿಮ್ಲಾ ಮಿರ್ಚಿ' ಎಂದೂ ಕರೆಯುವರು. ಇದನ್ನು ಹೆಚ್ಚಾಗಿ ತರಕಾರಿ ಸಲುವಾಗಿ ಬೆಳೆಯುತ್ತಾರೆ.

**ಧಾರವಾಡ ದೊಣ್ಣೆ ಮೆಣಸಿನಕಾಯಿ :** ತಾರಿಹಾಳ ದೊಣ್ಣೆ ಮೆಣಸಿನಕಾಯಿಯೆಂದು ಕರೆಯುವುದುಂಟು. ಕಾಯಿಗಳು ದುಂಡಾಗಿ ನಿರಿಗೆಗಳಿದ್ದು ಬಹಳ ಖಾರವಾಗಿರುವುವು. ಈ ಕಾಯಿಗಳು ರುಚಿ ಮತ್ತು ಸ್ವಾದಗಳಿಂದ ಧಾರವಾಡದ ಸುತ್ತಮುತ್ತಲು ಬಹಳ ಜನಪ್ರಿಯವಾಗಿವೆ. ಒಂದು ಗಿಡದಲ್ಲಿ 200-300 ಕಾಯಿಗಳನ್ನು ಪಡೆಯಬಹುದು. 120 ರಿಂದ 180 ದಿನಗಳ ಕಾಲಾವಧಿಯಲ್ಲಿ ಬೆಳೆಯುವ ಈ ತಳಿಯನ್ನು ಕರ್ನಾಟಕದಲ್ಲಿ ನೀರಾವರಿ ಆಶ್ರಯದಲ್ಲಿ ವರ್ಷವಿಡೀ ಬೆಳೆಯಲಾಗುತ್ತದೆ.

**ಕ್ಯಾಲಿಫೋರ್ನಿಯಾ ವಂಡರ್ :** ಅಮೇರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಡೇವಿಸ್‌ನಲ್ಲಿ ಅಭಿವೃದ್ಧಿ ಪಡಿಸಲಾದ ತಳಿ. ಈ ತಳಿಯನ್ನು ಭಾರತದಲ್ಲಿ ಮತ್ತು ಇನ್ನಿತರ ದೇಶಗಳಲ್ಲಿ ಅತಿ ಹೆಚ್ಚಿನ ಕ್ಷೇತ್ರದಲ್ಲಿ ತರಕಾರಿಗಾಗಿ ಬೆಳೆಯಲಾಗುತ್ತಿದೆ. ಇದರ ಕಾಯಿಗಳು ಹೊಳಪಾಗಿ ನೆಟ್ಟಗಿದ್ದು, 3-4 ನಿರಿಗೆಗಳನ್ನು ಹೊಂದಿದ್ದು ಆಕರ್ಷಕವಾಗಿರುವುವು. ಸಾಧಾರಣ ದಪ್ಪವಾಗಿರುವ ತೊಗಟೆಯಿದ್ದು ಬೀಜದ ಅಂಶ ಬಹಳ ಕಡಿಮೆ. ಒಂದು ಹಸಿಕಾಯಿಯ ತೂಕ 150 ರಿಂದ 200 ಗ್ರಾಂಗಳಿರುತ್ತದೆ. ಈ ತಳಿಯನ್ನು ಕರ್ನಾಟಕದಲ್ಲಿ ವರ್ಷವಿಡೀ ಬೆಳೆಯಬಹುದಾಗಿದೆ.

ಇತರೆ ಪ್ರಮುಖ ದೊಣ್ಣೆಮೆಣಸಿನಕಾಯಿ ತಳಿಗಳೆಂದರೆ ಹೈಬ್ರಿಡ್-ಭಾರತ, ಚೈನೀಸ್ ಜೈಂಟ್, ವರ್ಲ್ಡ್ ಬೀಟರ್, ಯೆಲ್ಲೊವಂಡರ್, ರುಬಿಕಿಂಗ್ ಮುಂತಾದವು. ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಇತ್ತೀಚಿಗೆ ಅಭಿವೃದ್ಧಿ ಪಡಿಸಲಾದ ತಳಿಗಳೆಂದರೆ ಅರ್ಕಾ-ಬಸಂತ, ಅರ್ಕಾ-ಮೋಹಿನಿ ಮತ್ತು ಅರ್ಕಾ-ಗೌರವ್ ಇತ್ಯಾದಿ.

**ಹೈಬ್ರಿಡ್ ಭಾರತ :** 1973ರಲ್ಲಿ ಬೆಂಗಳೂರು ಇಂಡೋ-ಅಮೆರಿಕನ್ ಹೈಬ್ರಿಡ್ ಬೀಜ ಸಂಸ್ಥೆ ಈ ತಳಿಯನ್ನು ಬಿಡುಗಡೆ ಮಾಡಿತು. ತಂಬಾಕಿನ ನಂಜುರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ಈ ಗಿಡಗಳು ಉತ್ತಮ ಬೆಳವಣಿಗೆ ಹೊಂದಿರುತ್ತವೆ. ಕಡಿಮೆ ನಿರಿಗೆಗಳನ್ನು ಹೊಂದಿರುವ ಕಾಯಿಗಳು ದುಂಡಾಗಿ ಹೊಳಪಾಗಿರುತ್ತವೆ. ದಪ್ಪ ತೊಗಟೆ ಹೊಂದಿರುವ ಒಂದು ಕಾಯಿಯ ತೂಕ ಸುಮಾರು 100 ಗ್ರಾಂ. ತೂಗುತ್ತದೆ. ಕಾಯಿ ಹೆಚ್ಚು ಖಾರವಾಗಿರುವುದಿಲ್ಲ.

**ಅರ್ಕಾ-ಬಸಂತ್ (ಎಸ್-3) :** ತಿಳಿಹಳದಿ ಬಣ್ಣದ ಅಂಡಾಕಾರದ ಈ ತಳಿಯ ಕಾಯಿಗಳು ಆಕಾಶದ ಕಡೆಗೆ ಓರೆಯಾಗಿ ಕಾಣುತ್ತವೆ. ಸತತವಾಗಿ ಕಾಯಿಗಳನ್ನು ಬಿಡುವ ಈ ತಳಿಯು 120 ರಿಂದ 160 ದಿನಗಳ ಕಾಲಾವಧಿಯ ಬೆಳೆಯಾಗಿರುತ್ತದೆ. ಸುಮಾರು 80 ಗ್ರಾಂ ತೂಕವಿರುವ ಹೆಕ್ಟೇರಿಗೆ 100 ರಿಂದ 150 ಕ್ವಿಂಟಾಲ್ ಹಸಿಕಾಯಿಯ ಇಳುವರಿಯನ್ನು ಕೊಡುವ ಶಕ್ತಿಯನ್ನು ಹೊಂದಿರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳುಗಳನ್ನು ಬಿಟ್ಟು ಈ ತಳಿಯನ್ನು ವರ್ಷದಾದ್ಯಂತ ಬೆಳೆಯಬಹುದು.

**ಅರ್ಕಾ-ಮೋಹಿನಿ (ಎಸ್-13) :** ಇದರ ಹಸಿಕಾಯಿಗಳು ಹೆಚ್ಚು ಹಸುರಾಗಿದ್ದು ಖಾರವಿರುವುದಿಲ್ಲ. 3 ರಿಂದ 4 ನಿರಿಗೆಗಳನ್ನು ಹೊಂದಿರುವ ಈ ಕಾಯಿಗಳು ದೊಡ್ಡಗಾತ್ರವನ್ನು ಹೊಂದಿರುತ್ತವೆ. ತಿರುಳು ದಪ್ಪವಾಗಿದ್ದು ಸಾಗಾಣಿಕೆಗೆ ಮತ್ತು ಅಡುಗೆಗೆ ಯುಕ್ತವಾದ ತಳಿ. 120 ದಿನಗಳ ಕಾಲಾವಧಿಯ ಈ ಬೆಳೆಯು ಹೆಕ್ಟೇರಿಗೆ ಸುಮಾರು 150 ಕ್ವಿಂಟಾಲ್ ಹಸಿ ಮೆಣಸಿನಕಾಯಿಯನ್ನು ಕೊಡಬಲ್ಲದು.

**ಅರ್ಕಾ-ಗೌರವ್ (ಎಸ್-16) :** ಇದು ಕಾಯಿಗಳು ಹಸುರಾಗಿದ್ದು ಗಿಡದಲ್ಲಿ ಆಕಾಶದೆಡೆಗೆ ಓರೆಯಾಗಿರುವುವು. ಸಾಧಾರಣ ದಪ್ಪವಾದ ತೊಗಟೆ ಮತ್ತು ಖಾರವಿಲ್ಲದ ಕಾಯಿ ಇದು. 125 ರಿಂದ 150 ದಿನಗಳ ಕಾಲಾವಧಿಯ ಈ ತಳಿಯು ದೊಡ್ಡದಾದ ಗಿಡಗಳನ್ನು ಹೊಂದಿದ್ದು ಹೆಕ್ಟೇರಿಗೆ 150 ಕ್ವಿಂಟಾಲ್ ಹಸಿಕಾಯಿ ಕೊಡುತ್ತದೆ.

**ಯೆಲ್ಲೋವಂಡರ್ :** ಗಿಡ್ಡವಾಗಿದ್ದು ಕಾಯಿಗಳು ದೊಡ್ಡದಾಗಿರುತ್ತವೆ. ಸಾಧಾರಣ ದಪ್ಪ ತೊಗಟೆಯ ಈ ಕಾಯಿಗಳು 3 ರಿಂದ 4 ನಿರಿಗೆಗಳನ್ನು ಹೊಂದಿರುತ್ತವೆ.

**ರೋಗಗಳು :** ಮೆಣಸಿನಕಾಯಿಬೆಳೆಯನ್ನು ಸುಮಾರು 51 ವಿವಿಧ ಬಗೆಯ ಕೀಟಗಳು ಮತ್ತು ಎರಡು ಬಗೆಯ ಜೇಡರನುಸಿಗಳು ವಿವಿಧ ಹಂತಗಳಲ್ಲಿ ಬಾಧಿಸುತ್ತವೆ. ಇವುಗಳಲ್ಲದೆ ಕೆಲವು ಜಾತಿಯ ಬಸವನಹುಳು ಹಾಗೂ ಸಹಸ್ರಪಾದಿಗಳು ಹಾನಿಯನ್ನುಂಟುಮಾಡುತ್ತವೆ. ಸಸಿಮಡಿಯಲ್ಲಿ ಹಾಗೂ ನಾಟಿ ಮಾಡಿದ ಅನಂತರ ಮುಖ್ಯ ಬೆಳೆಯಲ್ಲಿ ಕಾಣಿಸಿಕೊಂಡು ಮೆಣಸಿನಕಾಯಿ ಇಳುವರಿಯನ್ನು ಗಣನೀಯವಾಗಿ ಕುಂಠಿತಗೊಳಿಸುತ್ತವೆ. ಅವುಗಳಲ್ಲಿ ಮುಖ್ಯವಾದ ಕೀಟಗಳೆಂದರೆ : ಥ್ರಿಪ್ಸ್ ನುಸಿ (ಸ್ಕಿರ್ಟೊಥ್ರಿಪ್ಸ್ ಡಾರ್ಸಾಲಿಸ್), ಜೇಡರನುಸಿ, ಹೇನು ಹಾಗೂ ಕಾಯಿಕೊರೆಯುವ ಕೀಟಗಳು. ಇವಲ್ಲದೆ ಬಿಳಿನೊಣ, ಗೊಣ್ಣೆಹುಳು, ಗೆದ್ದಲು, ಕಾಂಡಕತ್ತರಿಸುವ ಹುಳು, ಸ್ಪೋಡೋಪ್ಟೆರಾ ಮುಂತಾದವು ಕೆಲವು ಸಂದರ್ಭಗಳಲ್ಲಿ ಮಾತ್ರ ತೀವ್ರವಾದ ಹಾನಿಯನ್ನುಂಟು ಮಾಡುತ್ತವೆ. ಕೀಟದಿಂದ ಹರಡುವ ವೈರಸ್ ರೋಗ-ಎಲೆ ಮುರುಟು. ಇವುಗಳಿಂದ ಸಸ್ಯದ ಬೆಳವಣಿಗೆ ಕುಂಠಿತವಾಗಿ ಎಲೆಗಳು ಮುರುಟಿಕೊಂಡು ರೆಂಬೆಗಳ ತುದಿಗಳು ಅಂಟು ದ್ರವದಿಂದ ಆವೃತಗೊಳ್ಳುವುವು. ಕೊಲೆಟೊಟ್ರೈಕಮ್ ಕ್ಯಾಪ್ಸಿಸಿ ಎಂಬ ಬೂಷ್ಟಿನಿಂದ ಕಾಯಿಗಳ ಕೊಳೆರೋಗ, ಕೊಲೆಟೊ ಟ್ರೈಕಮ್ ನೈ ಗ್ರಮ್ ಎಂಬ ಬೂಷ್ಟಿನಿಂದ ಆಂತ್ರಾಕ್ನೋಸ್ ಎಂಬ ರೋಗವನ್ನುಂಟುಮಾಡುತ್ತವೆ. ಅಲ್ಲದೆ ಈ ಬೆಳೆಗೆ ಅತ್ಯಧಿಕ ಗಾಳಿ ಮತ್ತು ಮಳೆಯೂ ಸಹ ಹೆಚ್ಚು ಹಾನಿಕರ.

**ಉಪಯೋಗಗಳು :** ಮೆಣಸಿನಕಾಯಿಯನ್ನು ಬಳಸದೆ ತಯಾರಿಸುವ ಖಾರದ ಅಡುಗೆ ಬಹಳ ವಿರಳ. ಇದನ್ನು ಹಸಿಯಾಗಿ ಮತ್ತು ಒಣಗಿಸಿ ಉಪಯೋಗಿಸಲಾಗುವುದು. ಇದು ಖಾರ ಮತ್ತು ವಾಸನೆಗಳೆರಡನ್ನೂ ಒದಗಿಸುವ ಮಸಾಲೆ ವಸ್ತು. ಹೆಚ್ಚು ಖಾರವಿರುವುದರಿಂದ ರುಚಿಗೆ ತಕ್ಕಷ್ಟು ಬಳಸಬೇಕು. ಇದನ್ನು ವಿವಿಧ ತಿಂಡಿ-ತಿನಿಸುಗಳಲ್ಲಿ ಮಾತ್ರವಲ್ಲ, ಹಿಂದೆ ಯುದ್ಧಾಸ್ತ್ರವಾಗಿಯೂ ಬಳಸಲಾಗುತ್ತಿತ್ತು. ಆದರೆ ಇಂದು ದುಷ್ಕರ್ಮಿಗಳು ಮೆಣಸಿನ ಪುಡಿ (ಖಾರದ ಪುಡಿ)ಯನ್ನು ಕಣ್ಣಿಗೆ ಎರಚಿ ದರೋಡೆಯಂತಹ ದುಷ್ಕೃತ್ಯಗಳಿಗೂ ಬಳಸಿಕೊಳ್ಳುತ್ತಿದ್ದಾರೆ. ಖಾರದ ರುಚಿ ಮತ್ತು ಘಾಟಿಗೆ ಇದರಲ್ಲಿರುವ ಕ್ಯಾಪ್ಸಿಸಿನ್ ಎಂಬ ರಾಸಾಯನಿಕ ಕಾರಣ. ಬಲಿತ ಕಾಯಿಗಳು

ಒಣಗಿದಂತೆ ಬಣ್ಣ ಕೆಂಪಾಗಲು ಅದರಲ್ಲಿರುವ ಕ್ಯಾಪ್ಸೇಂತಿನ್, ಕ್ಯಾಪ್ಸೊರೂಬಿನ್, ಜಿಯಾಕ್ಸಾಂತಿನ್, ಕ್ರಿಪ್ಟೋಕ್ಸಾಂತಿನ್, ಆಲ್ಫ ಮತ್ತು ಬೀಟ ಕ್ಯಾರೊಟಿನ್ ಎಂಬ ಸಂಯುಕ್ತಗಳೇ ಕಾರಣ. ಮೆಣಸಿನ ಕಾಯಿ 'ಸಿ' ಮತ್ತು 'ಎ' ವಿಟಮಿನ್ ಅಂಶಗಳನ್ನು ಒಳಗೊಂಡಿದೆ. ಮೆಣಸಿನಕಾಯಿಗೆ ಔಷಧೀಯಗುಣಗಳೂ ಉಂಟು. ಹಲವು ರೀತಿಯ ಕೀಲುನೋವುಗಳ ಉಪಶಮನಕ್ಕೆ, ಗಂಟಲು ನೋವಿಗೆ ಉಪಯೋಗಿಸುವ ಔಷಧಿಗಳಲ್ಲಿಯೂ ಬಳಸಲಾಗುತ್ತದೆ.

ಭಾರತದಲ್ಲಿ ಮೆಣಸಿನಕಾಯಿ ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕವು ಎರಡನೆಯ ಸ್ಥಾನದಲ್ಲಿದೆ. (ಪ್ರಥಮ ಆಂಧ್ರಪ್ರದೇಶ) ಕರ್ನಾಟಕ ರಾಜ್ಯವು 2006-07ನೇ ಸಾಲಿನಲ್ಲಿ 14 ಲಕ್ಷ ಹೆಕ್ಟೇರ್‌ಗಳಲ್ಲಿ ಇದನ್ನು ಬೆಳೆದು 1.6 ಲಕ್ಷ ಟನ್ನು ಒಣ ಮೆಣಸಿನಕಾಯಿಯನ್ನು ಉತ್ಪಾದಿಸಿತ್ತು.

**ಆಧಾರ ಗ್ರಂಥಗಳು**


ಕರ್ನಾಟಕ ಕೈಪಿಡಿ 2011, ಕರ್ನಾಟಕ ಸರ್ಕಾರ, ಬೆಂಗಳೂರು

ಕನ್ನಡ ವಿಶ್ವಕೋಶ (ಸಂ-13) : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., 1998

ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಭಾಗ-1,2, ಮತ್ತು 3) : ಕರ್ನಾಟಕ ಸರ್ಕಾರ, 1986

ಮೆಣಸಿನಕಾಯಿ ಬೆಳೆ (ಪರಿಷ್ಕರಣೆ) : ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು, 2000

Hand Book of Agriculture : ICAR, NewDelhi, 2001

Horticultural crop Statistics of Karnataka - 2006-07


*ಪಿ.ಕೆ.ಪಿ.*

**ಮೆದಿಕ್ಕಳಂ (ಬತ್ತ ಮಿದಿಯುವ ಅಂಗಳ) ಮತ್ತು ಕಾವಲು ಮನೆ** ಕೇರಳದಲ್ಲಿ ಬತ್ತದ ಬಯಲುಗಳು ಇರುವೆಡೆಗಳಲ್ಲೆಲ್ಲ ಮೆದಿಕ್ಕಳಂಗಳು ಇದ್ದರೂ ಅವುಗಳ ಸ್ವರೂಪದಲ್ಲಿ ಪ್ರಾದೇಶಿಕ ವ್ಯತ್ಯಾಸವಿದೆ. ಕುಟ್ಟ ನಾಡಲ್ಲಿ ಪ್ರತಿ ಕೊಯ್ಲಿನ ಕಾಲದಲ್ಲೂ ದೊಡ್ಡ ಏರಿಗಳಿಗೆ (ಬಂಡ್) ತಾಗಿದಂತೆ ಇರುವ ದೊಡ್ಡ ಕೆರೆ (ಹಿನ್ನೀರು)ಗಳಲ್ಲಿ (ಅವು ಆಗ ಬತ್ತಿರುತ್ತವೆ) ತಾತ್ಕಾಲಿಕವಾಗಿ ಮೆದಿಕ್ಕಳಂಗಳನ್ನು ಮಾಡಿಕೊಳ್ಳುವುದುಂಟು. ಓಣಾಟ್ಟುಕ್ಕರ ಪ್ರದೇಶದಲ್ಲಿ ಸಾಮಾನ್ಯವಾಗಿ ಮನೆಗಳ ಅಂಗಳವನ್ನೇ ಮೆದಿಕ್ಕಳಗಳನ್ನಾಗಿ ಮಾರ್ಪಡಿಸಿಕೊಳ್ಳಲಾಗುತ್ತದೆ. ಅಂಗಳ ಕೆತ್ತುವ (ಕಳಂ ಚೆತ್ತುಗ) ಕೆಲಸವನ್ನು ಮೊದಲೇ ಮಾಡಿಕೊಳ್ಳಲಾಗುತ್ತದೆ. ಕೊಯ್ಲು ಮುಗಿದಾಗ ಪೈರನ್ನು ಹೊರೆಗಳಾಗಿ ಕಟ್ಟಿ ಮೆದಿಕ್ಕಳಂನಲ್ಲಿ ಪ್ರತ್ಯೇಕವಾಗಿ ಪೇರಿಸಿಡುತ್ತಾರೆ. ಹೊರೆಗಳನ್ನು ತಂದು ಹಾಕಿದಾಗ ಉದುರಿದ ಬತ್ತ 'ಉದಿರ್ ಮಣಿ'. ಮೆದಿಕ್ಕಳಂನಲ್ಲಿ ಮರದ ಎರಡು ದಿಂಡುಗಳನ್ನು ಕತ್ತರಿಯ ಆಕಾರದಲ್ಲಿ ಎರಡು ಕಡೆ ಹುಗಿದು ಅವುಗಳ ತುದಿಭಾಗದಲ್ಲಿ ಎರಡು ದಿಂಡುಗಳನ್ನು ಸೇರಿಸಿ ಕಟ್ಟಿ ಅವುಗಳ ಮೇಲೆ ಸಮಾನ ಎತ್ತರಕ್ಕೆ ನಿಲ್ಲುವಂತೆ ಒಂದು ಬಿದಿರನ್ನು ಇಟ್ಟು ಬಿಗಿಯಾಗಿ ಕಟ್ಟುತ್ತಾರೆ. ಹೀಗೆ ದಿಂಡುಗಳನ್ನು ನಾಟಿ ಬಿದಿರನ್ನು ಇಟ್ಟು ಕಟ್ಟುವುದನ್ನು 'ನಾಟ್ಟಿ ಕೆಟ್ಟುಗ' (ನಾಟಿ ಕಟ್ಟುವುದು) ಎನ್ನುತ್ತಾರೆ. ವ್ಯಕ್ತಿಯೊಬ್ಬನ ಸೊಂಟದ ಎತ್ತರಕ್ಕೆ ಕಟ್ಟಿದ ಈ ಅಡ್ಡ ಬಿದಿರನ್ನು ಹಿಡಿದು ಕೊಂಡು ಪರಸ್ಪರ ಮುಖಾಮುಖಿಯಾಗಿ ನಿಂತುಕೊಂಡು ಕಾಲಿನಿಂದ ತೆನೆಯನ್ನು ತುಳಿಯುತ್ತ ಬತ್ತದ ಕಾಳುಗಳನ್ನು ಪೈರಿನಿಂದ ಬೇರ್ಪಡಿಸುವ (ಮಿದಿಯುವ) ಕೆಲಸ ನಡೆಯುತ್ತದೆ. ಹೀಗೆ ಪ್ರತಿಯೊಬ್ಬರೂ ಮಿದಿದ ಬತ್ತವನ್ನು ಅನುಸರಿಸಿ ಕೆಲಸಕ್ಕೆ ಕೂಲಿಯನ್ನು ಬತ್ತದ ರೂಪದಲ್ಲೇ ಕೊಡಲಾಗುತ್ತದೆ.

ಬತ್ತ ಮಿದಿದ ಬಳಿಕ ಪೈರಿನ ಕಟ್ಟುಗಳನ್ನು ಬಿಚ್ಚಿ ಒಳಗೆ ಉಳಿದ ಬತ್ತದ ಕಾಳುಗಳನ್ನು ಕೊಡವಿ ಹಾಕಬೇಕು. ಇದನ್ನು ಕೆಲವೆಡೆ 'ಮೂಡ ಕುಡಯುಗ' (ಕಟ್ಟನ್ನು ಕೊಡಹುವುದು) ಎನ್ನುತ್ತಾರೆ. ಹೀಗೆ ಬೇರ್ಪಡಿಸಿದ ಬತ್ತವನ್ನೆಲ್ಲ ಒಣಗಿಸಿ ಕಸಕಡ್ಡಿ ಬೇರ್ಪಡಿಸುವುದು ಒಂದೇ ದಿನದಲ್ಲಿ ಅಸಾಧ್ಯ. ಆದುದರಿಂದ ಸಂಜೆಹೊತ್ತಿಗೆ ಬತ್ತದ ರಾಶಿ (ಪೊಲಿ) ಹಾಕಿ ಅದರ ಮೇಲೆ ಬೂದಿಯಿಂದ ಮೇಲ್ತುದಿಯಿಂದ ಬುಡದವರೆಗೆ ಐದಾರು ಗೆರೆಗಳನ್ನು ಎಳೆಯಲಾಗುತ್ತದೆ. ಇದನ್ನು 'ಕರಕಂ ಕುಂಚ್ಚಿಡುಗ' (ಗುರುತಿಸಿಡುವುದು) ಎನ್ನುವರು. ಬತ್ತದ ರಾಶಿಯಿಂದ ಯಜಮಾನನಾಗಲಿ ಆಳುಗಳಾಗಲಿ ಬತ್ತವನ್ನು ತೆಗೆದು ವಂಚಿಸುವುದು ಕಷ್ಟ. ಮಾತ್ರವಲ್ಲದೆ ಅಂಥ ವಂಚನೆ ಮಾಡಿದ ಯಾರೇ ಆದರೂ ಆತ ಮುಂದಿನ ವರ್ಷ ಇಷ್ಟು ಹೊತ್ತಿಗೆ ಸತ್ತಿರುತ್ತಾನೆ ಎಂಬ ನಂಬಿಕೆ ಜನಪದರದು.

ಪೈರ ತೆನೆಗಳಿಂದ ಬತ್ತವನ್ನು ಪ್ರತ್ಯೇಕಿಸುವ ಮಿದಿಯುವ ಕೆಲಸಕ್ಕೆ ಕೆಲಸಗಾರರಿಗೆ ಬತ್ತದ ರೂಪದಲ್ಲೇ ಕೊಡುವ ಕೂಲಿಗೆ 'ಪದಂ' ಮತ್ತು 'ತೀರ್ಪ್' ಎಂಬುದಾಗಿ ಹೆಸರು. ಮಿದಿಯುವ ಕೆಲಸದ ಬಳಿಕ ಕೂಡಲೇ ಮಾಡಬೇಕಾದುದೆಂದರೆ ಬತ್ತ ಮತ್ತು ಬೈಹುಲ್ಲುಗಳನ್ನು ರೈತನ ಮನೆಗೆ ಸಾಗಿಸುವುದು. ಇದಕ್ಕೆ ಕೆಲವು ವಾರಗಳ ಕಾಲಾವಕಾಶ ಬೇಕಾಗುತ್ತದೆ. ಈ ಕಾಲಾವಧಿಯಲ್ಲಿ ಮೆದಿಕ್ಕಳಂಗಳ ಹತ್ತಿರವೇ ಪುಟ್ಟ ಕಾವಲು ಮನೆಯನ್ನು ತಾತ್ಕಾಲಿಕವಾಗಿ ನಿರ್ಮಿಸಿಕೊಳ್ಳುತ್ತಾರೆ. ನಾಲ್ಕು ಬದಿಗಳಿಗೂ ಮೇಲ್ಭಾಗಕ್ಕೂ ಹೆಣೆದ ತೆಂಗಿನ ಗರಿಗಳಿಂದ ಮರೆ ಕಟ್ಟಲಾಗುತ್ತದೆ. ಕಾವಲು ಮನೆಗಳಲ್ಲಿ ಒಬ್ಬಿಬ್ಬರು ಮಾತ್ರ ಕಾವಲು ಮಲಗುತ್ತಾರೆ. ರಾತ್ರಿಯಿಡೀ ಲಾಟೀನಿನ ಮಿಣಿ ಮಿಣಿ ಬೆಳಕು ಇರುತ್ತದೆ. ಕೊಯ್ಲು ಮತ್ತು ಮಿದಿಯುವ ಕೆಲಸಗಳು ಮುಗಿದು ಬತ್ತ ಮತ್ತು ಒಣಹುಲ್ಲು ರೈತನ ಮನೆಗೆ ತಲುಪಿದಾಗ ಈ ತಾತ್ಕಾಲಿಕ ಕಾವಲು ಮನೆಗಳನ್ನು ತೆಗೆದು ಬಿಡುತ್ತಾರೆ. ಮೆದಿಕ್ಕಳಂಗಳೂ ಕಾವಲು ಮನೆಗಳೂ ಇಂದು ಅಪರೂಪ ದೃಶ್ಯಗಳಾಗಿವೆ.

*ಎಂ.ಟಿ.*

**ಮೈಸೂರು ಜಿಲ್ಲೆಯ ಕೃಷಿ** ಅರಮನೆಗಳ ನಗರಿ. ಸಾಂಸ್ಕೃತಿಕ ನಗರ ಎಂದೆನಿಸಿಕೊಂಡಿರುವ ಮೈಸೂರು ಜಿಲ್ಲೆಯಾಗಿಯೂ ಸಮೃದ್ಧವಾದ ಪ್ರದೇಶವಾಗಿದೆ. ಕರ್ನಾಟಕದ ದಕ್ಷಿಣ ಭಾಗದಲ್ಲಿ ಡೆಕ್ಕನ್ ಪ್ರಸ್ಥಭೂಮಿಯಲ್ಲಿ ಉತ್ತರ ಅಕ್ಷಾಂಶ 11°60' - 20°17' ವರೆಗೂ ಪೂರ್ವ ರೇಖಾಂಶ 75°19'-77°45' ಗಳ ನಡುವೆ ಇದೆ.ಇದರ ಉತ್ತರಭಾಗದಲ್ಲಿ ಹಾಸನ, ಮಂಡ್ಯ ಜಿಲ್ಲೆಗಳು, ಪಶ್ಚಿಮದಲ್ಲಿ ಕೊಡಗು, ಪೂರ್ವದಲ್ಲಿ ಮಂಡ್ಯ, ಚಾಮರಾಜನಗರ ಜಿಲ್ಲೆಗಳು, ದಕ್ಷಿಣದಲ್ಲಿ ಕೇರಳ ರಾಜ್ಯಗಳು ಸುತ್ತುವರಿದಿದ್ದು, ಒಟ್ಟು ಏಳು ತಾಲ್ಲೂಕುಗಳನ್ನು ಹೊಂದಿದೆ. ಅವು ಹೆಚ್.ಡಿ. ಕೋಟೆ, ಹುಣಸೂರು, ಕೆ.ಆರ್. ನಗರ, ಮೈಸೂರು, ಪಿರಿಯಾಪಟ್ಟಣ, ನಂಜನಗೂಡು ಮತ್ತು ಟಿ. ನರಸೀಪುರಗಳಾಗಿವೆ. ಒಟ್ಟು 33 ಹೋಬಳಿಗಳು, 235 ಗ್ರಾಮ ಪಂಚಾಯಿತಿಗಳು, 1216 ಜನವಸತಿಯನ್ನು ಹಾಗೂ 124 ಜನವಸತಿ ಇಲ್ಲದ ಗ್ರಾಮಗಳನ್ನು ಹೊಂದಿದೆ.

**ಮೇಲ್ಮೈ ಲಕ್ಷಣ :** ಈ ಜಿಲ್ಲೆ ಸಮುದ್ರ ಮಟ್ಟದಿಂದ ಸು. 610 ಮೀ. ಎತ್ತರದಲ್ಲಿದೆ. ಪಿರಿಯಾಪಟ್ಟಣ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ಪಶ್ಚಿಮ ಘಟ್ಟಗಳು ಮತ್ತು ಪೂರ್ವಘಟ್ಟಗಳ ನಡುವೆ ಹಬ್ಬಿದೆ. ಈ ಜಿಲ್ಲೆಯಲ್ಲಿರುವ ಮುಖ್ಯ ಬೆಟ್ಟಗಳೆಂದರೆ - ಚಾಮುಂಡಿ ಬೆಟ್ಟ, (ಸು. 1,063 ಮೀ) ತಿರುಮ ಕೂಡಲು ನರಸೀಪುರದ ಶಂಭುಲಿಂಗೇಶ್ವರ ಬೆಟ್ಟ, ವಾಯವ್ಯ ಕಡೆ ಇರುವ ಬೆಟ್ಟದಪುರದ ಬೆಟ್ಟ. ಇವಲ್ಲದೆ ಅನೇಕ ಸಣ್ಣ ಪುಟ್ಟ ಬೆಟ್ಟಗಳೂ ಇವೆ. ಇದನ್ನು ಮೂರು ವಿಧಗಳಾಗಿ ವಿಂಗಡಿಸಬಹುದು : ಪಶ್ಚಿಮದ ಉಪಮಲೆನಾಡು ಪ್ರದೇಶ, ಮಧ್ಯದ ಕಾಲುವೆ ನೀರಾವರಿ ಪ್ರದೇಶ, ಪೂರ್ವದ ಕೆರೆ ನೀರಾವರಿ ಶುಷ್ಕ ಪ್ರದೇಶ.

ಈ ಜಿಲ್ಲೆಯ ಉಪಮಲೆನಾಡನ್ನು ಬಿಟ್ಟು ಉಳಿದ ಭಾಗ ಮೈದಾನ ಪ್ರದೇಶವಾಗಿದ್ದು, ಅಸಮ ಇಳಿಜಾರಿನಿಂದ ಕೂಡಿದೆ. ಮಧ್ಯಭಾಗ ಕಾಲುವೆ ಮತ್ತು ನೀರಾವರಿಯಿಂದ ಕೂಡಿದ ತರಿಬೆಳೆಗಳ ಸಮೃದ್ಧ ವ್ಯವಸಾಯ ಪ್ರದೇಶವಾದರೆ, ಪೂರ್ವದ ಮೈದಾನವು ಕೆರೆ ನೀರಾವರಿಯುಳ್ಳ ಶುಷ್ಕ ಆಹಾರ ಬೆಳೆಗಳ ನಾಡು. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಈ ಜಿಲ್ಲೆಯ ಒಟ್ಟು ಭೌಗೋಳಿಕ ಕ್ಷೇತ್ರ 6,76,382 ಹೆಕ್ಟೇರ್ ಇದ್ದು, ಮಣ್ಣು, ಮೇಲ್ಮೈ, ಲಕ್ಷಣ, ಇತ್ಯಾದಿ ಗುಣಧರ್ಮಗಳ ಆಧಾರ ಮೇಲೆ ಜಿಲ್ಲೆಯನ್ನು ಎರಡು ಕೃಷಿವಲಯಗಳಿಗೆ ಒಳಪಡಿಸಲಾಗಿದೆ.

**ಹವಾಗುಣ :** ಮೈಸೂರು ಹವಾಗುಣ ಹಿತಕರವಾಗಿದ್ದು, ಆಹ್ಲಾದವುಂಟು ಮಾಡುತ್ತದೆ. ಹೆಚ್ಚು ಬಿಸಿಲು ಇಲ್ಲ, ಅತೀ ತಂಪಾಗಿಯೂ ಇಲ್ಲದೆ ಸುಖೋಷ್ಣವಾಗಿರುತ್ತದೆ. ಇಲ್ಲಿಯ ಸರಾಸರಿ ಉಷ್ಣತೆ 12.9$^{o}$ ಸೆ. ನಿಂದ 36.5$^{o}$ ಸೆ. ಇರುತ್ತದೆ. ಪಶ್ಚಿಮದಿಕ್ಕಿನ ಉಪಮಲೆನಾಡು ಪ್ರದೇಶದಲ್ಲಿರುವ ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಚಳಿಗಾಲ ಮತ್ತು ಮಳೆಗಾಲದಲ್ಲಿ ತಂಪಾದ ತೇವದಿಂದ ಕೂಡಿದ ಹವೆ ಇರುತ್ತದೆ. ನದಿಹರಿಯುವ ಪ್ರದೇಶಗಳನ್ನು ಹೊರತುಪಡಿಸಿದರೆ ಮಿಕ್ಕೆಲ್ಲಾ ಪ್ರದೇಶಗಳು ಶುಷ್ಕ ಹವೆ ಹೊಂದಿರುತ್ತವೆ. ಉಷ್ಣತೆಯ ಚಳಿಗಾಲದಲ್ಲೂ ಬೇಸಗೆಯಲ್ಲೂ ಮತ್ತು ಹಗಲು ರಾತ್ರಿಗಳಲ್ಲಿ ವ್ಯತ್ಯಾಸವಿರುತ್ತದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಬೀಸುವ ನೈರುತ್ಯ ಮಾನ್‌ಸೂನ್ ಮಾರುತಗಳಿಂದ ಮಳೆಯಾಗುತ್ತದೆ. ಜಿಲ್ಲೆಯಲ್ಲಿ ಕಾರ್ಯನಿರತ 41 ವೃಷ್ಟಿಮಾಪನ ಕೇಂದ್ರಗಳಿವೆ.

**ಮಣ್ಣು :** ಮೈಸೂರು ಜಿಲ್ಲೆಯಲ್ಲಿ ಕೆಂಪು ಮಿಶ್ರಿತ ಕಪ್ಪು ಮಣ್ಣು, ಲ್ಯಾಟರೈಟ್ ಮಣ್ಣು, ಕೆಂಪುಚೇಡಿಮಣ್ಣು, ಕೆಂಪು ಮರಳು (ಗೋಡು) ಮಣ್ಣನ್ನು ಕಾಣಬಹುದು ಇವುಗಳನ್ನು.


1. ದಿಣ್ಣೆಗಳ ಮೇಲಿರುವ ಕೆಂಪು ಮರಳು ಮಣ್ಣು.

2. ಮಧ್ಯಂತರ ಪ್ರದೇಶದಲ್ಲಿರುವ ಕೆಂಪು ಮರಳು ಮಣ್ಣು

3. ತಗ್ಗು ಪ್ರದೇಶದಲ್ಲಿರುವ ಕೆಂಪು ಮರಳುಮಣ್ಣು ಎಂದೂ ವಿಭಾಗಿಸುತ್ತಾರೆ

ಮಣ್ಣಿನ ಸಾರಗಳಾದ ಪೊಟ್ಯಾಷ್, ಸಾರಜನಕ, ರಂಜಕಾಂಶಗಳು ಮಳೆಯಾಸರೆ ಜಮೀನು ಟಿ. ನರಸೀಪುರದಲ್ಲಿ ಸಮಪ್ರಮಾಣವಾಗಿ, ನಂಜನಗೂಡು ಮತ್ತು ಪಿರಿಯಾಪಟ್ಟಣದಲ್ಲಿ ಆಮ್ಲೀಯವಾಗಿ, ಇನ್ನಿತರ ತಾಲ್ಲೂಕುಗಳಲ್ಲಿ ಪ್ರತ್ಯಾಮ್ಲೀಯವಾಗಿಯೂ ಇವೆ. ಕರಗುವ ಲವಣಗಳು ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ಸಮ ಪ್ರಮಾಣದಲ್ಲಿವೆ. ಅಲ್ಲಲ್ಲಿ ತೆಳು ಕಪ್ಪು ಮಣ್ಣಿನ ಭಾಗಗಳೂ ಕಂಡುಬರುತ್ತವೆ. ಲ್ಯಾಟರೈಟ್ ಮತ್ತು ಕೆಂಪುಮಣ್ಣು ಜಿಲ್ಲೆಯ ಸುಮಾರು ಅರ್ಧಭಾಗದಷ್ಟು ಪ್ರದೇಶದಲ್ಲಿ ಹರಡಿವೆ.

ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಸಾಗುವಳಿ ಪ್ರದೇಶ 3,60,824 ಹೆ. ಇದ್ದು 2009-10ರ ಜಿಲ್ಲಾ ಅಂಕಿ ಅಂಶದ ಮಾಹಿತಿಯಂತೆ ಭೂ ಬಳಕೆ 3,38,186 ಹೆ. ನಲ್ಲಿ ಬಿತ್ತನೆಯಾಗಿದೆ. ಇದರೊಳಗೆ 1,59,230 ಹೆಕ್ಟೇರ್ ಪ್ರದೇಶ. ವಿವಿಧ ಮೂಲಗಳಿಂದ ನೀರಾವರಿಯಾಗಿದ್ದು, ಇನ್ನುಳಿದ 2,01,594 ಹೆಕ್ಟೇರ್ ಪ್ರದೇಶ ಮಳೆ ಆಶ್ರಿತವಾಗಿದೆ. ಇವುಗಳಲ್ಲಿ 1,85,329 ಹೆ. ಪ್ರದೇಶವು ಬಿತ್ತನೆಗೆ ಒಳಗಾಗಿದೆ.



## ಮೈಸೂರು ಜಿಲ್ಲೆಯಲ್ಲಿ 2011-12ನೇ ಸಾಲಿನ ಬೇಸಗೆ ಹಂಗಾಮಿನ ನೀರಾವರಿ ಪ್ರದೇಶದಲ್ಲಿ (31.03.2012ರ ವರೆಗೆ) ಕ್ರಮಿಸಲಾದ ತಾಲ್ಲೂಕುವಾರು, ಬೆಳೆವಾರು ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

| ಕ್ರ.ಸಂ. | ಬೆಳೆ | ಹೆಚ್.ಡಿ.ಕೋಟೆ | | ಹುಣಸೂರು | | ಕೆ.ಆರ್.ನಗರ | | ಮೈಸೂರು | | ನಂಜನಗೂಡು | | ಪಿರಿಯಾಪಟ್ಟಣ | | ತಿ.ನರಸೀಪುರ | | ಜಿಲ್ಲಾ ಒಟ್ಟು | | % | 2010ರ ಬಿ. ಪ್ರದೇಶ |
|---|---|---|---|---|---|---|---|---|---|---|---|---|---|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | | |
| 1. | ಬತ್ತ | 0 | | 0 | | 0 | | 0 | | 0 | | 0 | | 0 | | 0 | 0 | ##### | 0 |
| 2. | ಜೋಳ–ಹೈಬ್ರೈಡ್ | 0 | | 0 | | 0 | | 70 | | 300 | 280 | 0 | | 0 | | 370 | 280 | 76 | 164 |
| 3. | ರಾಗಿ | 150 | 820 | 1500 | 5130 | 2000 | 1500 | 300 | 10 | 75 | 50 | 9000 | 7850 | 100 | 22 | 13125 | 15382 | 117 | 10495 |
| 4. | ಮುಸುಕಿನಜೋಳ | 0 | | 650 | 2454 | 100 | 130 | 70 | 7 | 25 | 10 | 2500 | 2650 | 50 | | 3395 | 5251 | 155 | 4017 |
| | **ಒಟ್ಟುಏಕದಳಗಳು** | **150** | **820** | **2150** | **7584** | **2100** | **1630** | **440** | **17** | **400** | **340** | **11500** | **10500** | **150** | **22** | **16890** | **20913** | **124** | **14676** |
| 5. | ಕಡಲೆ | 100 | 75 | 50 | 30 | 50 | 30 | 50 | 5 | 1200 | 950 | 350 | 375 | 75 | 12 | 1875 | 1477 | 74 | 883 |
| 6. | ಹುರುಳಿ | 6000 | 5975 | 2000 | 4125 | 2000 | 2500 | 3700 | 4322 | 8500 | 10400 | 7000 | 5300 | 1750 | 1800 | 30950 | 34422 | 111 | 27195 |
| 7. | ಉದ್ದು | 50 | | 50 | 40 | 100 | 85 | 40 | 24 | 0 | | 50 | | 0 | | 290 | 149 | 51 | 133 |
| 8. | ಹೆಸರು | 50 | | 50 | 45 | 100 | 95 | 75 | 42 | 0 | | 50 | | 0 | | 325 | 182 | 56 | 154 |
| 9. | ಅಲಸಂದೆ | 50 | | 300 | 2719 | 500 | 550 | 300 | 10 | 150 | | 6350 | 6650 | 50 | | 7700 | 9929 | 129 | 5720 |
| 10. | ಅವರೆ | 200 | 200 | 900 | 1225 | 500 | 690 | 200 | 75 | 300 | 175 | 2300 | 2450 | 75 | 55 | 4475 | 4870 | 109 | 4493 |
| 11. | ಮಾತ್‌ಬೀನ್ಸ್(ಮಡಕಿ) | 0 | | 0 | | 0 | | 0 | | 0 | | 0 | | 0 | | 0 | 0 | ##### | 0 |
| | **ಒಟ್ಟುದ್ವಿದಳಗಳು** | **6450** | **6250** | **3350** | **8184** | **3250** | **3950** | **4365** | **4478** | **10150** | **11525** | **16100** | **14775** | **1950** | **1867** | **45615** | **51029** | **112** | **38578** |
| | **ಒಟ್ಟುಆಹಾರಧಾನ್ಯಗಳು** | **6600** | **7070** | **5500** | **15768** | **5350** | **5580** | **4805** | **4495** | **1055<br>0** | **11865** | **27600** | **25275** | **2100** | **1889** | **62505** | **71942** | **115** | **53254** |
| 12. | ನೆಲಗಡಲೆ | 0 | | 0 | | 0 | | 0 | | 0 | | 0 | | 0 | | 0 | 0 | ##### | 0 |
| 13. | ಸೂರ್ಯಕಾಂತಿ | 0 | | 0 | | 0 | | 10 | | 0 | | 0 | | 0 | | 10 | 0 | 0 | 2 |
| 14. | ಹರಳು | 0 | | 0 | | 0 | | 0 | | 0 | | 0 | | 0 | | 0 | 0 | ##### | 0 |
| 15. | ಹುಚ್ಚೆಳ್ಳು | 75 | 30 | 250 | | 250 | 70 | 350 | 100 | 300 | 190 | 1500 | 1050 | 0 | | 2725 | 1440 | 53 | 1650 |
| 16. | ಸೋಯಾಅವರೆ | 0 | | 0 | | 0 | | 0 | | 0 | | 0 | | 0 | | 0 | 0 | ##### | 0 |
| 17. | ಕುಸುಬೆ | 0 | | 0 | | 0 | | 0 | | 0 | | 0 | | 0 | | 0 | 0 | ##### | 0 |
| | **ಒಟ್ಟುಎಣ್ಣೆಕಾಳುಗಳು** | **75** | **30** | **250** | **0** | **250** | **70** | **360** | **100** | **300** | **190** | **1500** | **1050** | **0** | **0** | **2735** | **1440** | **53** | **1652** |
| 18. | ಕಬ್ಬು–ಹೊಸನಾಟಿ<br>ಕೂಳೆ | 0<br>0 | 10<br>95 | 50<br>0 | 8 | 100<br>0 | 45 | 75<br>0 | 12<br>19 | 340<br>0 | 280 | 0<br>0 | | 100<br>0 | 61 | 665<br>0 | 347<br>183 | 52<br>##### | 390<br>7415 |
| | **ಒಟ್ಟು ವಾಣಿಜ್ಯಬೆಳೆ** | **0** | **105** | **50** | **8** | **100** | **45** | **75** | **31** | **340** | **280** | **0** | **0** | **100** | **61** | **665** | **530** | **80** | **1105** |
| | **ಮಹಾಮೊತ್ತ** | **6675** | **7205** | **5800** | **15776** | **5700** | **5695** | **5240** | **4626** | **11190** | **12335** | **29100** | **26325** | **2200** | **1950** | **65905** | **73912** | **112** | **56011** |
| | **ಶೇಕಡ ಬಿತ್ತನೆ** | | **108** | | **272** | | **100** | | **88** | | **110** | | **90** | | **89** | | **112** | | **80** |

## ಮೈಸೂರು ಜಿಲ್ಲೆಯಲ್ಲಿ 2011-12ರನೇ ಸಾಲಿನ ಮುಂಗಾರು ಹಂಗಾಮಿನ (30.09.2011ರ ವರೆಗೆ) ಕ್ರಮಿಸಲಾದ ತಾಲ್ಲೂಕುವಾರು, ಬೆಳೆವಾರು ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

### ಮಳೆ ಆಶ್ರಿತ

| ಕ್ರ.ಸಂ. | ಬೆಳೆ | ಹೆಚ್.ಡಿ.ಕೋಟೆ | | ಹುಣಸೂರು | | ಕೆ.ಆರ್.ನಗರ | | ಮೈಸೂರು | | ನಂಜನಗೂಡು | | ಪಿರಿಯಾಪಟ್ಟಣ | | ತಿ.ನರಸೀಪುರ | | ಜಿಲ್ಲಾ ಒಟ್ಟು | | % | 2010ರ ಬಿ.ಪ್ರದೇಶ |
|---|---|---|---|---|---|---|---|---|---|---|---|---|---|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | | |
| 1. | ಜೋಳ–ಹೈಬ್ರೀಡ್ | 500 | 45 | 15 | 0 | 100 | 0 | 1700 | 597 | 9500 | 7225 | 0 | 0 | 0 | 0 | 11815 | 7867 | 67 | 7539 |
| 2. | ಜೋಳ–ಸ್ಥಳೀಯ | 0 | 0 | 0 | 0 | 0 | 135 | 0 | 0 | 0 | 1375 | 0 | 0 | 0 | 0 | 0 | 1510 | 0 | 2820 |
| 3. | ರಾಗಿ | 12000 | 11137 | 10000 | 4062 | 6000 | 3200 | 8000 | 6342 | 2000 | 2180 | 4500 | 4350 | 2200 | 650 | 44700 | 31921 | 71 | 43551 |
| 4. | ಮುಸುಕಿನಜೋಳ | 3000 | 1400 | 11850 | 13824 | 400 | 355 | 800 | 535 | 500 | 570 | 8500 | 8720 | 1100 | 1550 | 26150 | 26954 | 106 | 23984 |
| 5. | ಸಜ್ಜೆ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | | 0 |
| | **ಒಟ್ಟುಏಕದಳಗಳು** | **15500** | **12582** | **21865** | **17886** | **6500** | **3690** | **10500** | **7474** | **12000** | **11350** | **13000** | **13070** | **3300** | **2200** | **82665** | **68252** | **83** | **77894** |
| 1. | ತೊಗರಿ | 1000 | 1224 | 410 | 597 | 200 | 268 | 1000 | 719 | 1000 | 1570 | 75 | 85 | 10 | 70 | 3695 | 4533 | 123 | 3735 |
| 2. | ಹುರುಳಿ | 4500 | 1600 | 7700 | 4420 | 4500 | 2450 | 500 | 1925 | 2700 | 2910 | 50 | 100 | 800 | 375 | 20750 | 13780 | 66 | 19543 |
| 3. | ಉದ್ದು | 350 | 299 | 200 | 165 | 650 | 605 | 550 | 650 | 4000 | 4710 | 50 | 20 | 3200 | 3625 | 90000 | 10074 | 112 | 7863 |
| 4. | ಹೆಸರು | 400 | 420 | 200 | 145 | 500 | 545 | 650 | 587 | 3000 | 3770 | 50 | 15 | 1500 | 2010 | 6300 | 7492 | 119 | 6409 |
| 5. | ಅಲಸಂದೆ | 3000 | 2576 | 6000 | 5671 | 5000 | 4850 | 7000 | 7591 | 5000 | 4955 | 1500 | 775 | 1700 | 850 | 29200 | 27268 | 93 | 30879 |
| 6. | ಅವರೆ | 2300 | 857 | 13500 | 10108 | 500 | 520 | 900 | 420 | 500 | 730 | 700 | 75 | 300 | 75 | 18700 | 12785 | 68 | 16567 |
| 7. | ಮಾತ್‌ಬೀನ್ಸ್(ಮಡಕಿ) | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 00 |
| | **ಒಟ್ಟುದ್ವಿದಳಗಳು** | **11550** | **6976** | **28010** | **21106** | **11350** | **9238** | **10600** | **11892** | **16200** | **18645** | **2425** | **1070** | **7510** | **7005** | **87645** | **75932** | **87** | **84996** |
| | **ಒಟ್ಟುಆಹಾರಧಾನ್ಯಗಳು** | **27050** | **19558** | **49875** | **38992** | **17850** | **12928** | **21100** | **19366** | **2820 0** | **29995** | **15425** | **14140** | **10810** | **9205** | **170310** | **144184** | **85** | **162890** |
| 1. | ನೆಲಗಡಲೆ | 500 | 407 | 600 | 1372 | 300 | 360 | 300 | 178 | 2000 | 1455 | 15 | 5 | 1250 | 2071 | 4965 | 5848 | 118 | 4532 |
| 2. | ಎಳ್ಳು | 600 | 677 | 4500 | 3008 | 2000 | 2500 | 2000 | 1885 | 1500 | 965 | 10 | 13 | 400 | 575 | 11010 | 9623 | 87 | 0 |
| 3. | ಸೂರ್ಯಕಾಂತಿ | 20 | 0 | 50 | 0 | 0 | 0 | 25 | 0 | 2000 | 1135 | 20 | 0 | 150 | 6 | 2265 | 1141 | 50 | 1914 |
| 4. | ಹರಳು | 1000 | 1135 | 200 | 105 | 200 | 103 | 750 | 396 | 1000 | 1145 | 50 | 50 | 50 | 20 | 3250 | 2954 | 91 | 3677 |
| 5. | ಹುಚ್ಚೆಳ್ಳು | 50 | 85 | 250 | 135 | 350 | 47 | 400 | 118 | 0 | 225 | 0 | 0 | 250 | 100 | 1300 | 710 | 55 | 683 |
| 6. | ಸಾಸುವೆ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 7. | ಸೋಯಾಅವರೆ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | **ಒಟ್ಟುಎಣ್ಣೆಕಾಳುಗಳು** | **2170** | **2304** | **5600** | **4620** | **2850** | **3010** | **3475** | **2577** | **6500** | **4925** | **95** | **68** | **2100** | **2772** | **22790** | **20276** | **86** | **21762** |
| 1. | ಹತ್ತಿ | 300000 | 30043 | 800 | 673 | 5 | 0 | 1000 | 1050 | 12000 | 13125 | 10 | 0 | 0 | 0 | 43815 | 44891 | 102 | 40253 |
| 2. | ಹೊಗೆಸೊಪ್ಪು | 4500 | 3697 | 35000 | 29463 | 10000 | 13500 | 10 | 12 | 350 | 350 | 32500 | 31400 | 0 | 0 | 82360 | 78422 | 99 | 84328 |
| | **ಒಟ್ಟು ವಾಣಿಜ್ಯಬೆಳೆ** | **34500** | **33740** | **3580 0** | **30136** | **10005** | **13500** | **1010** | **1062** | **12350** | **13475** | **32510** | **31400** | **0** | **0** | **126175** | **123313** | **92** | **124881** |
| | **ಮಹಾಮೊತ್ತ** | **63720** | **55602** | **91275** | **73748** | **3070 5** | **29438** | **2558 5** | **23005** | **47050** | **48395** | **4803 0** | **45608** | **12910** | **11977** | **31927 5** | **28777 3** | **90** | **309533** |
| | **ಶೇಕಡ ಬಿತ್ತನೆ** | | **87** | | **81** | | **96** | | **90** | | **103** | | **95** | | **93** | | **90** | | **96** |

## ಮೈಸೂರು ಜಿಲ್ಲೆಯಲ್ಲಿ 2011-12ರ ಸಾಲಿನ ಹಿಂಗಾರು ಹಂಗಾಮಿನ (31.12.2011ರ ವರೆಗೆ) ಕ್ರಮಿಸಲಾದ ತಾಲ್ಲೂಕುವಾರು, ಬೆಳೆವಾರು ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

### ಮಳೆ ಆಶ್ರಿತ

| ಕ್ರಸಂ. | ಬೆಳೆ | ಹೆಚ್.ಡಿ.ಕೋಟೆ | | ಹುಣಸೂರು | | ಕೆ.ಆರ್.ನಗರ | | ಮೈಸೂರು | | ನಂಜನಗೂಡು | | ಪಿರಿಯಾಪಟ್ಟಣ | | ತಿ.ನರಸೀಪುರ | | ಜಿಲ್ಲಾ ಒಟ್ಟು | | % | 2010ರ ಬಿ. ಪ್ರದೇಶ |
|---|---|---|---|---|---|---|---|---|---|---|---|---|---|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | | |
| 1. | ಜೋಳ–ಹೈಬ್ರೀಡ್ | 0 | 0 | 0 | 0 | 0 | 0 | 70 | 0 | 300 | 280 | 0 | 0 | 0 | 0 | 370 | 280 | 76 | 164 |
| 2. | ರಾಗಿ | 150 | 820 | 1500 | 5130 | 2000 | 1500 | 300 | 10 | 75 | 50 | 9000 | 7850 | 100 | 22 | 13125 | 15382 | 117 | 10460 |
| 3. | ಮುಸುಕಿನಜೋಳ | 0 | 0 | 575 | 485 | 100 | 130 | 70 | 7 | 0 | 10 | 2500 | 2650 | 50 | 0 | 3295 | 3282 | 100 | 4017 |
| | **ಒಟ್ಟು ಏಕದಳಗಳು** | **150** | **820** | **2075** | **5615** | **2100** | **1630** | **440** | **17** | **375** | **340** | **11500** | **10500** | **150** | **22** | **16790** | **18944** | **113** | **14641** |
| 4. | ಕಡಲೆ | 100 | 75 | 50 | 30 | 50 | 30 | 50 | 5 | 1200 | 950 | 350 | 375 | 75 | 12 | 1875 | 1477 | 79 | 883 |
| 5. | ಹುರುಳಿ | 6000 | 5975 | 2000 | 4125 | 2000 | 2500 | 3700 | 4322 | 8500 | 10400 | 7000 | 5300 | 1750 | 1800 | 30950 | 34422 | 111 | 27195 |
| 6. | ಉದ್ದು | 50 | 0 | 50 | 40 | 100 | 85 | 40 | 24 | 0 | 0 | 50 | 0 | 0 | 0 | 290 | 149 | 51 | 133 |
| 7. | ಹೆಸರು | 50 | 0 | 50 | 45 | 100 | 95 | 75 | 42 | 0 | 0 | 50 | 0 | 0 | 0 | 325 | 182 | 56 | 154 |
| 8. | ಅಲಸಂದೆ | 50 | 0 | 300 | 2719 | 500 | 550 | 300 | 10 | 150 | 0 | 6350 | 6650 | 50 | 0 | 7700 | 9929 | 129 | 5720 |
| 9. | ಅವರೆ | 200 | 200 | 900 | 1225 | 500 | 690 | 200 | 75 | 300 | 175 | 2300 | 2450 | 75 | 55 | 4475 | 4870 | 109 | 4493 |
| 10. | ಮಾತ್‌ಬೀನ್ಸ್(ಮಡಕಿ) | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | ##### | 0 |
| | **ಒಟ್ಟುದ್ವಿದಳಗಳು** | **6450** | **6250** | **3350** | **8184** | **3250** | **3950** | **4365** | **4478** | **10150** | **11525** | **16100** | **14775** | **1950** | **1867** | **45615** | **51029** | **112** | **38578** |
| | **ಒಟ್ಟುಆಹಾರಧ್ಯಾನಗಳು** | **6600** | **7070** | **5425** | **13799** | **5350** | **5580** | **4805** | **4495** | **1052 5** | **11865** | **27600** | **25275** | **2100** | **1889** | **62405** | **69973** | **112** | **53219** |
| 11. | ನೆಲಗಡಲೆ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | ##### | 0 |
| 12. | ಸೂರ್ಯಕಾಂತಿ | 0 | 0 | 0 | 0 | 0 | 0 | 10 | 0 | 0 | 0 | 0 | 0 | 0 | 0 | 10 | 0 | 0 | 0 |
| 13. | ಹರಳು | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | ##### | 2 |
| 14. | ಹುಚ್ಚೆಳ್ಳು | 75 | 30 | 250 | 0 | 250 | 70 | 350 | 100 | 300 | 190 | 1500 | 1050 | 0 | 0 | 2725 | 1440 | 53 | 16450 |
| 15. | ಸೋಯಾಅವರೆ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | ##### | 0 |
| 16. | ಕುಸುಬೆ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | ##### | 0 |
| | **ಒಟ್ಟು ಎಣ್ಣೆಕಾಳುಗಳು** | **75** | **30** | **250** | **0** | **250** | **70** | **360** | **100** | **300** | **190** | **1500** | **1050** | **0** | **0** | **2735** | **1440** | **53** | **1652** |
| | **ಮಹಾಮೊತ್ತ** | **6675** | **7100** | **5675** | **13799** | **5600** | **5650** | **5165** | **4595** | **1082 5** | **12055** | **29100** | **26325** | **2100** | **1889** | **65140** | **71413** | **110** | **54871** |
| | **ಶೇಕಡ ಬಿತ್ತನೆ** | | **106** | | **243** | | **101** | | **89** | | **111** | | **90** | | **90** | | **110** | | **80** |

## ಕೃಷಿ ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ

| ಒಟ್ಟು ಭೂ ಹಿಡುವಳಿದಾರರು (ಒಟ್ಟು) | | | | | | | | | |
|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕು | ಸಂಖ್ಯೆ | | | | ವಿಸ್ತೀರ್ಣ | | | |
| | | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು |
| **1** | **2** | | | | | | | | |
| 1. | ಹೆಚ್.ಡಿ. ಕೋಟೆ | 37322 | 9888 | 21 | 47231 | 47385 | 11427 | 141 | 58953 |
| 2. | ಹುಣಸೂರು | 39839 | 12652 | 35 | 52526 | 44766 | 12446 | 1228 | 58440 |
| 3. | ಕೆ.ಆರ್.ನಗರ | 43340 | 12190 | 5 | 55535 | 34568 | 7013 | 60 | 41641 |
| 4. | ಮೈಸೂರು | 39816 | 11148 | 17 | 50981 | 36589 | 7788 | 198 | 44578 |
| 5. | ನಂಜನಗೂಡು | 56966 | 13333 | 24 | 70323 | 58483 | 10844 | 196 | 69523 |
| 6. | ಪಿರಿಯಾಪಟ್ಟಣ | 36187 | 10039 | 1 | 46227 | 40952 | 10307 | 15 | 51274 |
| 7. | ಟಿ. ನರಸೀಪುರ | 48458 | 14356 | 89 | 62903 | 36766 | 7251 | 107 | 44124 |
| | **ಜಿಲ್ಲಾಮೊತ್ತ** | **301928** | **83606** | **192** | **385726** | **299509** | **67076** | **1945** | **368530** |

| ದೊಡ್ಡ ಭೂ ಹಿಡುವಳಿದಾರರು (ಒಟ್ಟು) | | | | | | | | | |
|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕು | ಸಂಖ್ಯೆ | | | | ವಿಸ್ತೀರ್ಣ | | | |
| | | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು |
| **1** | **2** | | | | | | | | |
| 1. | ಹೆಚ್.ಡಿ. ಕೋಟೆ | 67 | 20 | 6 | 93 | 908 | 259 | 66 | 1233 |
| 2. | ಹುಣಸೂರು | 56 | 13 | 14 | 83 | 835 | 192 | 1107 | 2134 |
| 3. | ಕೆ.ಆರ್.ನಗರ | 10 | – | 1 | 11 | 127 | – | 27 | 154 |
| 4. | ಮೈಸೂರು | 67 | 15 | 8 | 90 | 1017 | 198 | 150 | 1365 |
| 5. | ನಂಜನಗೂಡು | 84 | 9 | 6 | 99 | 1114 | 120 | 91 | 1325 |
| 6. | ಪಿರಿಯಾಪಟ್ಟಣ | 63 | 15 | 1 | 79 | 937 | 244 | 15 | 1196 |
| 7. | ಟಿ. ನರಸೀಪುರ | 15 | 1 | 1 | 17 | 204 | 12 | 11 | 227 |
| | **ಜಿಲ್ಲಾಮೊತ್ತ** | **362** | **73** | **37** | **472** | **5142** | **1025** | **1467** | **7634** |

| ಅರೆ ಮಧ್ಯಮ ಭೂ ಹಿಡುವಳಿದಾರರು (ಒಟ್ಟು) | | | | | | | | | |
|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕು | ಸಂಖ್ಯೆ | | | | ವಿಸ್ತೀರ್ಣ | | | |
| | | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು |
| **1** | **2** | | | | | | | | |
| 1. | ಹೆಚ್.ಡಿ. ಕೋಟೆ | 4752 | 1114 | – | 5866 | 12393 | 2909 | – | 15302 |
| 2. | ಹುಣಸೂರು | 4235 | 1144 | – | 5379 | 10924 | 2974 | – | 13898 |
| 3. | ಕೆ.ಆರ್.ನಗರ | 2502 | 389 | – | 2891 | 6410 | 1006 | – | 7416 |
| 4. | ಮೈಸೂರು | 3182 | 608 | – | 3790 | 8251 | 1501 | – | 9752 |
| 5. | ನಂಜನಗೂಡು | 5356 | 835 | – | 6191 | 13924 | 2153 | – | 16077 |
| 6. | ಪಿರಿಯಾಪಟ್ಟಣ | 4086 | 942 | – | 5028 | 10368 | 2383 | – | 12751 |
| 7. | ಟಿ. ನರಸೀಪುರ | 2669 | 357 | 9 | 3035 | 6851 | 913 | 24 | 7788 |
| | **ಜಿಲ್ಲಾಮೊತ್ತ** | **26782** | **5389** | **9** | **32180** | **69121** | **13839** | **24** | **82984** |

| ಅತಿ ಸಣ್ಣ ಭೂ ಹಿಡುವಳಿದಾರರು (ಒಟ್ಟು) | | | | | | | | | |
|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕು | ಸಂಖ್ಯೆ | | | | ವಿಸ್ತೀರ್ಣ | | | |
| | | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು | ಪುರುಷರು | ಮಹಿಳೆಯರು | ಸಂಘ ಸಂಸ್ಥೆಗಳು | ಒಟ್ಟು |
| 1 | 2 | | | | | | | | |
| 1. | ಹೆಚ್.ಡಿ. ಕೋಟೆ | 18244 | 5166 | – | 23410 | 10076 | 2593 | – | 12669 |
| 2. | ಹುಣಸೂರು | 23348 | 8003 | – | 31351 | 12750 | 3611 | – | 16361 |
| 3. | ಕೆ.ಆರ್.ನಗರ | 32726 | 10147 | – | 42873 | 15812 | 3614 | – | 19426 |
| 4. | ಮೈಸೂರು | 27935 | 8615 | – | 36550 | 13349 | 1336 | – | 14685 |
| 5. | ನಂಜನಗೂಡು | 37308 | 9776 | – | 47084 | 19380 | 4292 | – | 23672 |
| 6. | ಪಿರಿಯಾಪಟ್ಟಣ | 21617 | 6219 | – | 27836 | 11675 | 2999 | – | 14674 |
| 7. | ಟಿ. ನರಸೀಪುರ | 38297 | 12646 | 62 | 51005 | 17791 | 4264 | 21 | 22076 |
| | **ಜಿಲ್ಲಾಮೊತ್ತ** | **199475** | **60572** | **62** | **260109** | **100833** | **22709** | **21** | **123563** |

| | | ಬೀಳು ಭೂಮಿ | | | ಬಿತ್ತನೆಯಾದ ಪ್ರದೇಶ | | |
|---|---|---|---|---|---|---|---|
| ಕ್ರ.ಸಂ. | ತಾಲ್ಲೂಕು | ಚಾಲ್ತಿ | ಇತರೆ | ಒಟ್ಟು | ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು |
| 1 | 2 | | | | | | |
| 1. | ಹೆಚ್.ಡಿ.ಕೋಟೆ | 9,019 | 4,989 | 14,008 | 64,478 | 13,681 | 78,159 |
| 2. | ಹುಣಸೂರು | 16864 | 7235 | 24,099 | 43198 | 71420 | 114,618 |
| 3. | ಕೆ.ಆರ್.ನಗರ | 5368 | 4904 | 10,272 | 36373 | 26808 | 63,181 |
| 4. | ಮೈಸೂರು | 1355 | 10235 | 11,590 | 41452 | 8387 | 49,839 |
| 5. | ನಂಜನಗೂಡು | 9883 | 1307 | 11,190 | 62922 | 27073 | 89,995 |
| 6. | ಪಿರಿಯಾಪಟ್ಟಣ | 3636 | 2288 | 5,924 | 43710 | 46405 | 90,115 |
| 7. | ಟಿ. ನರಸೀಪುರ | 8251 | 3409 | 11,660 | 37805 | 11722 | 49,527 |
| | **ಜಿಲ್ಲಾಮೊತ್ತ** | **54376** | **34367** | **88,743** | **329938** | **205496** | **535434** |

**ಕೃಷಿಕಾರ್ಮಿಕರು :** ಇತ್ತೀಚಿನ ದಿನಗಳಲ್ಲಿ ಕೃಷಿ ಕೆಲಸ ಮಾಡುವವರ ಸಂಖ್ಯೆ ಕ್ಷೀಣವಾಗುತ್ತಿದ್ದು 2001ರಲ್ಲಿ ಇದ್ದುದಕ್ಕಿಂತ ಕಡಿಮೆಯಾಗಿರುವುದು ಕಂಡುಬರುತ್ತದೆ. 2011ರ ಜನಗಣತಿ ಪ್ರಕಾರ ಜಿಲ್ಲೆಯ ಜನಸಂಖ್ಯೆ 29.95 ಲಕ್ಷಗಳಷ್ಟಿದ್ದು, ಈ ಪೈಕಿ 17.56 ಲಕ್ಷ ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಒಟ್ಟು ಜನಸಂಖ್ಯೆಯಲ್ಲಿ 9.26 ಲಕ್ಷ ಮುಖ್ಯ ಕೆಲಸಗಾರರು, 1.84 ಲಕ್ಷ ಅರೆಕಾಲಿಕ ಕೆಲಸಗಾರರು ಇದ್ದರು. ಇದರಲ್ಲಿ 3.95 ಲಕ್ಷ ಕೃಷಿ ಸಾಗುವಳಿದಾರರು ಮತ್ತು 2.50 ಲಕ್ಷ ಕೃಷಿ ಕಾರ್ಮಿಕರು ಇದ್ದಾರೆ. ತಾಲ್ಲೂಕುವಾರು ಪಟ್ಟಿಯನ್ನು ಗಮನಿಸಿದರೆ, ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಒಟ್ಟಾರೆ ಗಂಡಸರು 19801 ಹಾಗೂ ಹೆಂಗಸರು 23908 ಸೇರಿ ಒಟ್ಟು 43709, ಹುಣಸೂರು ತಾಲೂಕಿನಲ್ಲಿ 13616, ಗಂಡಸರು ಹೆಂಗಸರು 19000 ಸೇರಿ 32616, ಕೆ.ಆರ್. ನಗರದಲ್ಲಿ 12846 ಗಂಡಸರು ಹೆಂಗಸರು 16435 ಸೇರಿ 29281 ಕೃಷಿ ಕಾರ್ಮಿಕರು ಇದ್ದಾರೆ. ಮೈಸೂರು ತಾಲೂಕಿನಾದ್ಯಂತ 10025 ಗಂಡಸರನ್ನು ಒಳಗೊಂಡಂತೆ 10449 ಹೆಂಗಸರು ಸೇರಿ 20474 ಒಟ್ಟು ಕಾರ್ಮಿಕರಿದ್ದು, ನಂಜನಗೂಡಿನಲ್ಲಿ 33475 ಗಂಡಸರು, 27393 ಹೆಂಗಸರು ಸೇರಿ 60068 ಮಂದಿ ಪಿರಿಯಾಪಟ್ಟಣದಲ್ಲಿ 8098 ಗಂಡಸರು, 10499 ಹೆಂಗಸರಾದಿಯಾಗಿ ಒಟ್ಟು 18597 ಜನರಿದ್ದಾರೆ. ನರಸೀಪುರದಲ್ಲಿ 29051 ಗಂಡಸರು 15766 ಹೆಂಗಸರು ಸೇರಿ ಒಟ್ಟು 44817 ಮಂದಿ ಕೃಷಿ ಕಾರ್ಮಿಕರಿದ್ದು ಜಿಲ್ಲೆಯಾದ್ಯಂತ ಗಂಡಸರು 12.6.912 ಮತ್ತು ಹೆಂಗಸರು 12.3450 ಎಲ್ಲರೂ ಒಟ್ಟಾರೆ 25.0362 ಕೃಷಿ ಕಾರ್ಮಿಕರಿದ್ದಾರೆ.

| | | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| **1** | **2** | | | | | | | | | |
| 1. | ಹೆಚ್.ಡಿ.ಕೋಟೆ | 19216 | 23319 | 42535 | 585 | 589 | 1174 | 19801 | 23908 | 43709 |
| 2. | ಹುಣಸೂರು | 12688 | 18469 | 31157 | 928 | 531 | 1459 | 13616 | 19000 | 32616 |
| 3. | ಕೆ.ಆರ್.ನಗರ | 12541 | 16026 | 28567 | 305 | 409 | 714 | 12846 | 16435 | 29281 |
| 4. | ಮೈಸೂರು | 9104 | 10205 | 19309 | 921 | 244 | 1165 | 10025 | 10449 | 20474 |
| 5. | ನಂಜನಗೂಡು | 33030 | 27182 | 60212 | 445 | 211 | 656 | 33475 | 27393 | 60868 |
| 6. | ಪಿರಿಯಾಪಟ್ಟಣ | 7548 | 10091 | 17639 | 550 | 408 | 958 | 8098 | 10499 | 18597 |
| 7. | ಟಿ. ನರಸೀಪುರ | 27363 | 14947 | 42310 | 1688 | 819 | 2507 | 29051 | 15766 | 44817 |
| | **ಜಿಲ್ಲಾಮೊತ್ತ** | **121490** | **120239** | **241729** | **5422** | **3211** | **8633** | **126912** | **123450** | **250362** |

**ಮಳೆ :** ನೈಋತ್ಯ ಮಾನ್ಸೂನ್ ಮಳೆ ಈ ಜಿಲ್ಲೆಯಲ್ಲಿ ಮಳೆಗಾಲವನ್ನು ತರುತ್ತದೆ. ಪಶ್ಚಿಮ ದಿಕ್ಕಿನಿಂದ ಪೂರ್ವಕ್ಕೆ ಮಳೆ ಮುಂದುವರೆಯುತ್ತದೆ. ಜೂನ್‌ನಿಂದ ನವೆಂಬರ್ ತಿಂಗಳುಗಳವರೆಗೆ ಹೆಚ್ಚು ಮಳೆಯಾಗುತ್ತದೆ. ಇವುಗಳನ್ನು ಮುಂಗಾರು ಮತ್ತು ಹಿಂಗಾರು ಮಳೆಗಳೆಂದು ವಿಭಾಗಿಸುತ್ತಾರೆ. ಯುಗಾದಿಯ ನಂತರ ಅಂದರೆ ಮಾರ್ಚ್‌ನಿಂದ ಮೇ ತಿಂಗಳಲ್ಲಿ ಬರುವ ಮಳೆಗೆ ಮುಂಗಾರೆಂದು, ಜೂನ್‌ನಿಂದ ನವೆಂಬರ್‌ವರೆಗೆ ಬರುವ ಮಳೆಗೆ ಹಿಂಗಾರೆಂದೂ ಕರೆಯುತ್ತಾರೆ. ಜಲಾಶಯಗಳು ತುಂಬಲು ನಿಜವಾದ ಕೃಷಿ ಚಟುವಟಿಕೆಗಳು ಪ್ರಾರಂಭವಾಗುತ್ತವೆ. 2011ನೇ ಇಸವಿಯಲ್ಲಿ ವಾರ್ಷಿಕ ವಾಡಿಕೆ ಮಳೆ 766.7 ಇದ್ದು ವಾಸ್ತವವಾಗಿ 882.3 ಮೀ ಮಳೆಯಾಗಿದೆ. ಅದೇ ವರ್ಷ ತಿಂಗಳವಾರು ಮಳೆ ಪ್ರಮಾಣ ಮೇ, ಜೂನ್, ಜುಲೈ, ಸೆಪ್ಟೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ವಾಡಿಕೆ ಬರಬೇಕಾಗಿದ್ದ ಮಳೆಗಿಂತ ಕಡಿಮೆಯಾಗಿದ್ದು, ಮಿಕ್ಕ ತಿಂಗಳುಗಳಲ್ಲಿ ಮಳೆ ಪ್ರಮಾಣ ಹೆಚ್ಚಾಗಿದೆ. ತಾಲ್ಲೂಕುವಾರು ಮಳೆ ಪ್ರಮಾಣದಲ್ಲಿ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಒಟ್ಟಾರೆ 2012ರವರೆಗೆ ಶೇ. 67.54 ಹುಣಸೂರು ಶೇ. 63.47 ಕೆ.ಆರ್. ನಗರ ಶೆ. 58 ಮೈಸೂರು ಶೇ. 72 ನಂಜನಗೂಡು ಶೇ. 47.19 ಪಿರಿಯಾಪಟ್ಟಣ ಶೇ. 63 ಟಿ. ನರಸೀಪುರದಲ್ಲಿ ಶೇ. 56 ಮಳೆಯಾಗಿದೆ.

ಈ ಜಿಲ್ಲೆಯಲ್ಲಿ 53.1 ಮಳೆಯ ದಿನಗಳಾಗಿವೆ. ಈ ಮಳೆಯಲ್ಲಿ ಶೇ. 66.3 ರಷ್ಟು ಮಳೆ ಮುಂಗಾರಿನಲ್ಲೂ ಶೇ. 33.7 ಮಳೆ ಹಿಂಗಾರಿನಲ್ಲೂ ಆಗುತ್ತದೆ. ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳು ಹೆಚ್ಚು ಮಳೆ ಬೀಳುವ ತಿಂಗಳುಗಳಾಗಿವೆ. ಮೈಸೂರು ಜಿಲ್ಲೆಯಲ್ಲಿ ಏಪ್ರಿಲ್, ಮೇ ತಿಂಗಳಿನಲ್ಲಿ ಬೀಳುವ ಮಳೆಗಳು ಬಹುಮುಖ್ಯ. ಈ ತಿಂಗಳಲ್ಲಿ ಜಿಲ್ಲೆಯ ಖುಷ್ಕಿ ಜಮೀನುಗಳಲ್ಲಿ ನಡೆಯುವ ಬಿತ್ತನೆಗೆ ಈ ಮಳೆಗಳು ಅನುಕೂಲವಾಗಿವೆ. ಮುಂಗಾರಿನಲ್ಲಿ ಬೀಳುವ ಒಟ್ಟು ಮಳೆಯ ಶೇ. 38.9 ಮಳೆ ಈ ಎರಡು ತಿಂಗಳುಗಳಲ್ಲಿಯೇ ಬೀಳುತ್ತದೆ.

**ನೀರಾವರಿ :** ಬೇಸಾಯಕ್ಕೆ ನೀರು ಅತ್ಯಗತ್ಯ. ಮಳೆಯ ಬೀಳುವಿಕೆ ಎಲ್ಲ ಕಾಲದಲ್ಲೂ ಎಲ್ಲ ಸ್ಥಳಗಳಲ್ಲೂ ಒಂದೇ ರೀತಿ ಇರುವುದಿಲ್ಲ. ಬೇಕಾದಾಗ ಬರುವುದೂ ಇಲ್ಲ. ನೀರನ್ನು ಸಂಗ್ರಹಿಸಿ ಅವಶ್ಯಕವಾದಾಗ ಬಳಸಿಕೊಳ್ಳುವ ಯೋಜನೆಗಳು ನೀರಾವರಿ ವ್ಯವಸ್ಥೆಯಲ್ಲಿ ಕಾರ್ಯರೂಪಗೊಂಡವು. ಕೃತಕ ರೀತಿಯಲ್ಲಿ ನೀರನ್ನು ಬೇಕಾದಾಗ ಬಳಸಿಕೊಳ್ಳಲಾಗುವ ವ್ಯವಸ್ಥೆಯನ್ನು ನೀರಾವರಿ ವ್ಯವಸ್ಥೆಯೆಂದು ಕರೆಯಬಹುದು. ಪ್ರತಿ ಪ್ರದೇಶವು ಇತ್ತೀಚೆಗೆ ಅನುಕೂಲಕರ ನೀರಾವರಿ ವ್ಯವಸ್ಥೆಯನ್ನು ಒಳಗೊಂಡಿದೆ. ನೀರಿನ ಮೂಲಗಳಿಂದ ನೀರನ್ನು ಪಡೆಯುವ ವ್ಯವಸ್ಥೆಗಳು ಹಲವಾರಿವೆ. ನದಿಗಳ ಮೂಲಕ ಹರಿಯುವ ನೀರನ್ನು ಕಾಲುವೆಗಳ ಮೂಲಕ ಪಡೆಯುವುದು ಅದರೊಂದಿಗೆ ಕೆರೆ, ಕೊಳವೆ, ಬಾವಿಗಳು, ಏತ ನೀರಾವರಿ ಜೊತೆಗೆ ತಮ್ಮ ಹೊಲಗಳಲ್ಲಿ ಮಾಡಿಕೊಂಡಿರುವ ಹಳ್ಳಗಳಿಂದ, ಚೆಕ್ ಡ್ಯಾಂಗಳಿಂದಲೂ ನೀರು ಪಡೆಯುವ ವ್ಯವಸ್ಥೆಯಿದೆ.

ಪ್ರಥಮ ನೀರಾವರಿ ವ್ಯವಸ್ಥೆಯೆಂದರೆ : ಕಾಲುವೆಗಳು, ಕೆರೆಗಳು, ಬಾವಿಗಳು, ಕೊಳವೆ ಬಾವಿಗಳು, ಏತ ನೀರಾವರಿ. ಎರಡನೇ ವ್ಯವಸ್ಥೆಯೆಂದರೆ : ಚೆಕ್‌ಡ್ಯಾಂ, ಹೊಂಡಗಳು, ಹನಿ ನೀರಾವರಿ, ನೀರು ಇಂಗು ಗುಂಡಿಗಳು.

ಮೈಸೂರು ಜಿಲ್ಲೆಯಲ್ಲಿ 1975-76ರ ಸಮಯದಲ್ಲಿ ಒಟ್ಟು 2087 ರಷ್ಟು ಪ್ರದೇಶ ನೀರಾವರಿ ಕ್ಷೇತ್ರವಾಗಿತ್ತು. ನೀರಾವರಿ ಯೋಜನೆಗಳಾದ ಕಪಿಲಾ, ಹಾರಂಗಿ, ನುಗು, ತಾರಕಾ ಯೋಜನೆಗಳಿಂದ ಅಲ್ಲದೇ ಗುಂಡಾಲ, ಸುವರ್ಣಾವತಿ ಮುಂತಾದ ಯೋಜನೆಗಳೊಂದಿಗೆ ಅನೇಕ ಸಣ್ಣ ನೀರಾವರಿ ಯೋಜನೆಗಳಿಂದ ಸಾಗುವಳಿಯಾಗುವ ಒಟ್ಟು ಭೂಮಿಯ ಶೇಕಡಾ 18 ಭೂಮಿಗೆ ನೀರಾವರಿ ಸೌಲಭ್ಯವಿದೆ. ನಂಜನಗೂಡು, ಟಿ. ನರಸೀಪುರ, ಕೆ.ಆರ್. ನಗರ ತಾಲ್ಲೂಕುಗಳ ಶೇ. 82.8 ಭೂಮಿ ನೀರಾವರಿಗೆ ಒಳಪಟ್ಟಿದೆ. ನದಿ, ಉಪನದಿಗಳಾದ ಕಪಿಲ, ಕಾವೇರಿ, ಸುವರ್ಣಾವತಿ, ಲಕ್ಷ್ಮಣತೀರ್ಥ, ತಾರಕನದಿ, ನುಗು, ಉಡುತೊರೆ ಹೊಳೆಗಳು ಹರಿಯುತ್ತವೆ.

ಜಿಲ್ಲೆಯಲ್ಲಿ ಮಳೆಯಾಶ್ರಿತ ಪ್ರದೇಶಗಳು ಹೆಚ್ಚಾಗಿದ್ದರೂ ನೀರಾವರಿ ಪ್ರದೇಶಗಳೂ ಹೆಚ್ಚಾಗಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಸರಾಸರಿ ಕಾಲುವೆಯಿಂದ ಪಡೆಯುವ ನೀರಾವರಿ ವಿಸ್ತೀರ್ಣ 105929, ಕಾಲುವೆ ಉದ್ದ 1308.40 ಒಟ್ಟು ನೀರಾವರಿಯಾದ ವಿಸ್ತೀರ್ಣ 119668 ರಷ್ಟಿದೆ.

ಜಿಲ್ಲೆಯಾದ್ಯಂತ 648 ಕೆರೆಗಳಿದ್ದು, ಒಟ್ಟು ನೀರಾವರಿಯಾದ ವಿಸ್ತೀರ್ಣ 17908, ನಿವ್ವಳ ನೀರಾವರಿ ವಿಸ್ತೀರ್ಣ 14622, ಬಾವಿಗಳು 3860 ಇದ್ದು 25379 ಪ್ರದೇಶ ನೀರಾವರಿಗೆ ಒಳಪಟ್ಟಿದ್ದು, ನಿವ್ವಳ ಸರಾಸರಿ ವಿಸ್ತೀರ್ಣ 20237 ಇದೆ. ಕೊಳವೆ ಬಾವಿಗಳು 15,167 ರಷ್ಟಿದ್ದು 34231 ನೀರಾವರಿ ಪ್ರದೇಶವಾದರೆ ನಿವ್ವಳ ನೀರಾವರಿ ವಿಸ್ತೀರ್ಣ 27029 ಇದೆ. ಏತ ನೀರಾವರಿ ಇತ್ತೀಚಿನ ದಿನಗಳಲ್ಲಿ ಕಣ್ಮರೆಯಾಗುತ್ತಿದೆ ಎಂದು ಹೇಳಬಹುದಾದರೂ ಜಿಲ್ಲೆಯಾದ್ಯಂತ 5 ಏತ ನೀರಾವರಿಗಳು ಇವೆ. ಅವುಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ 240 ಹೆಕ್ಟೇರುಗಳು ನಿವ್ವಳ ನೀರಾವರಿ ವಿಸ್ತೀರ್ಣ 140, ಎಲ್ಲ ಮೂಲಗಳು ಸೇರಿ ಮೈಸೂರು ಜಿಲ್ಲೆಯಾದ್ಯಂತ ಒಟ್ಟು ನೀರಾವರಿ ಪ್ರದೇಶ 194,426 ಆದರೆ ನಿವ್ವಳ ನೀರಾವರಿ ವಿಸ್ತೀರ್ಣ 167.957 ಆಗಿದೆ. ತಾಲ್ಲೂಕುವಾರು ಸಂಖ್ಯೆಯನ್ನು ಪರಿಗಣಿಸಿದಲ್ಲಿ.

| ತಾಲ್ಲೂಕು | ಕಾಲುವೆ ಒಟ್ಟು | ಕೆರೆ ಸಂ-ಒಟ್ಟು | ಬಾವಿ ಸಂ-ಒಟ್ಟು ನೀರಾವರಿ | ಕೊಳವೆಬಾವಿ ಸಂ-ಒಟ್ಟು ನೀರಾವರಿ | ಏತ ನೀರಾವರಿ ನೀರಾವರಿ | ಒಟ್ಟು ನೀರಾವರಿ ನೀರಾವರಿ ವಿಸ್ತೀರ್ಣ |
|---|---|---|---|---|---|---|
| ಹೆಗ್ಗಡದೇವನಕೋಟೆ | 7856 | 71-1145 | 232-742 | 258-7.946 | - - | 17,689 |
| ಹುಣಸೂರು | 9303 | 129-4250 | 947-7040 | 2431-4342 | - - | 24935 |
| ಕೆ.ಆರ್. ನಗರ | 27822 | 59-2756 | 731-2034 | 840-1231 | - - | 33843 |
| ಮೈಸೂರು | 8098 | 103-1244 | 62-3863 | 2930-5293 | 3-40 | 18538 |
| ನಂಜನಗೂಡು | 17505 | 7-154 | 651-519 | 2958-727 | - - | 18905 |
| ಪಿರಿಯಾಪಟ್ಟಣ | 6740 | 274-4399 | 230-5233 | 2380-5900 | 2-100 | 22372 |
| ಟೀ. ನರಸೀಪುರ | 28605 | 5-674 | 1013-806 | 3370-1590 | - - | 31675 |
| **ಜಿಲ್ಲಾ ಮೊತ್ತ** | **105929** | **648-14622** | **3866-20237** | **15167-27029** | **5-140** | **167,957** |

ಮೈಸೂರು ಜಿಲ್ಲೆಯಲ್ಲಿ ಹಲವಾರು ಕಾಲುವೆಗಳು ನಾಲೆಗಳಿವೆ. ಹೇಮಾವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಗೊರೂರು ಡ್ಯಾಂ, ಕಾವೇರಿ ನದಿಗೆ ಕಟ್ಟಿರುವ ಕೃಷ್ಣರಾಜ ಸಾಗರ ಅಣೆಕಟ್ಟು ಮತ್ತು ಕಪಿಲಾ ನದಿಗೆ ಕಟ್ಟಿರುವ ಬೀಚನ ಹಳ್ಳಿ ಅಣೆಕಟ್ಟುಗಳಿಂದ ಕಾಲುವೆ ನಾಲೆಗಳನ್ನು ನಿರ್ಮಿಸಿ ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳಿಂದ ಸಾವಿರಾರು ಹೆಕ್ಟೇರು ನೀರಾವರಿಗೆ ಒಳಪಟ್ಟಿದೆ.

**ಕೆರೆ :** ಕೆರೆಗಳನ್ನು ಸಮಾಜದ ಮುಖಂಡರು, ಗಣ್ಯರು, ಶ್ರೀಮಂತರು ನಾಯಕಸಾನಿಗಳು ಸಮಾಜಮುಖಿ ಸೇವಾಕಾರ್ಯಕರ್ತರು ಗ್ರಾಮಗಳಲ್ಲಿ, ಊರುಗಳ ಮುಂದಿನಲ್ಲಿ ಸ್ಥಾಪಿಸುತ್ತಿದ್ದರು. ಅದೊಂದು ಪುಣ್ಯಕಾರ್ಯವೂ ಆಗಿತ್ತು. ಇಂದಿಗೂ ನಗರ ಪ್ರದೇಶಗಳಲ್ಲಿಯೇ ಹಲವು ಕೆರೆಗಳನ್ನು ಕಾಣಬಹುದಾಗಿದೆ.

**ಕೆರೆಯ ನಿರ್ವಹಣೆ :** ಕೆರೆಯ ಮಹತ್ತ್ವ ತಿಳಿದಿದ್ದ ಗ್ರಾಮೀಣರು ಕೆರೆಗಳ ರಕ್ಷಣೆ ಮಾಡುತ್ತಿದ್ದರು. ಏರಿಯ ಸುತ್ತ ಕಲ್ಲಿನ ತಡೆಗೋಡೆ ನಿರ್ಮಿಸಿ, ನೀರು ಹೆಚ್ಚಾದರೆ ಕೋಡಿಹರಿದು ಹೋಗುವಂತೆ ಮಾಡಿಕೊಂಡಿದ್ದರು. ತೂಬಿನ ಮೂಲಕ ನೀರನ್ನು ಹಾಯಿಸಿಕೊಳ್ಳುತ್ತಿದ್ದರು. ಬೇಸಗೆಯ ಸಮಯದಲ್ಲಿ ಕೆರೆಯಲ್ಲಿರುವ ಮಣ್ಣನ್ನು ಸಾಗಿಸಿ ಹೊಲ, ಗದ್ದೆಗಳಿಗೆ ಬಳಸುತ್ತಿದ್ದುದುಂಟು. ಇದರಿಂದ ಕೆರೆಯಲ್ಲಿ ಅತಿಯಾದ ಹೂಳುತುಂಬದೆ ಹೆಚ್ಚಿನ ನೀರು ಸಂಗ್ರಹವಾಗಲು ಅನುಕೂಲವಾಗುತ್ತಿತ್ತು. ಕೆರೆಯು ಜೀವಂತವಾಗಿರಲು ಕೆರೆಗೆ ಬಂದು ಸೇರುವ ಹಲವು ಹಳ್ಳ ಕೊಳ್ಳಗಳಿಂದ ನೀರು ಸರಾಗವಾಗಿ ಸೇರುವಂತೆ ನೋಡಿಕೊಳ್ಳುತ್ತಿದ್ದರು.

**ಬಾವಿ :** ಮಣ್ಣಿನ ಬಾವಿ, ಕಲ್ಲಿನ ಬಾವಿ, ಉಂಗುರದ ಬಾವಿ, ಮೆಟ್ಟಿಲ ಬಾವಿ, ಕೊಳವೆ ಬಾವಿ ಹೀಗೆ ಹಲವು ಬಗೆಯ ಬಾವಿಗಳು ಇದ್ದವು. ಮರದ ನೀರೆತ್ತುವ ಸಲಕರಣೆಗಳಿಂದ ನೀರನ್ನು ಹೊಲ ತೋಟಗಳಿಗೆ ಹಾಯಿಸುತ್ತಿದ್ದರು. ಏತ ನೀರಾವರಿ ಪದ್ಧತಿಯಲ್ಲಿಯೂ ಬಾವಿಯ ಬಳಕೆ ಇದೆ. ಇತ್ತೀಚಿನ ದಿನಗಳವರೆಗೂ ಬಾವಿಗಳಿಗೆ ಪಂಪುಸೆಟ್ಟು ಬಿಟ್ಟು ನೀರನ್ನು ಎತ್ತುವ ವಿಧಾನಗಳು ಇದ್ದವು. ದೊಡ್ಡ ಬಾವಿಗಳನ್ನು ಹೊಲಗದ್ದೆಗಳ ನಡುವೆ ತೆಗೆದರೆ, ಉಂಗುರದ ಬಾವಿಗಳಂತಹ ಚಿಕ್ಕ ಬಾವಿಗಳನ್ನು ಮನೆಯ ಹಿಂಭಾಗದಲ್ಲಿ ತೆಗೆದು ಸಣ್ಣ ತೋಟದ ಕೃಷಿ ಕೆಲಸಕ್ಕೆ ಉಪಯೋಗಿಸುತ್ತಿದ್ದರು.

**ಅಂತರ್ಜಲ :** ಮೈಸೂರು ಜಿಲ್ಲೆಯ ಭೂಮಿಯಲ್ಲಿ ಸ್ಫಟಿಕಾ ಶಿಲೆಗಳು ತುಂಬಿವೆ. ಅವು ನೀರನ್ನು ಪಡೆಯಲು ಅಭೇದ್ಯ ಕೋಟೆಯಂತಿವೆ. ಕ್ರೋಢೀಕರಿಸಿದ ನೀರಿನ ಸೆಲೆ ಸಿಗುವುದಿಲ್ಲ. ಆದರೂ ಅಲ್ಲಲ್ಲಿ ಸಡಿಲವಾದ ಮಣ್ಣು, ಕರಗಿರುವ ಕಲ್ಲುಗಳು ಇರುವ ಭೂಪ್ರದೇಶ ಇರುವುದರಿಂದ ಗಟ್ಟಿತನದಲ್ಲಿ ವ್ಯತ್ಯಾಸವಿದೆ. ಈ ರೀತಿ ಸಡಿಲವಾದ ಮಣ್ಣಿರುವ ಪ್ರದೇಶವು ಸುಮಾರು ಮೂರು ಗ್ಯಾಲನ್ ನೀರನ್ನು ಹಿಡಿದುಕೊಳ್ಳಬಲ್ಲದು.

ಅಲ್ಲದೆ ಜಲಾಶಯದಂತೆ ಇದು ವರ್ತಿಸುತ್ತದೆ. ಅಕ್ಟೋಬರ್ ಸಮಯದಲ್ಲಿ ಮೇಲ್ಮಟ್ಟದ ಭೂಪ್ರದೇಶದವರೆಗೂ ಹೆಚ್ಚಿರುವ ಅಂತರ್ಜಲ ಮಾರ್ಚ್, ಏಪ್ರಿಲ್ ತಿಂಗಳಿನಲ್ಲಿ ಬಹಳ ಆಳಕ್ಕೆ ಇಳಿದಿರುತ್ತದೆ. ಮತ್ತೆ ಮಳೆ ಪ್ರಾರಂಭವಾದಾಗ ಅಂತರ್ಜಲ ಮಟ್ಟ ಹೆಚ್ಚಾಗುತ್ತದೆ. ಇದನ್ನನುಸರಿಸಿ ತೆಗೆಯಲಾದ ತೋಡುಬಾವಿ, ಉಂಗುರದ ಬಾವಿ, ಏತಬಾವಿಗಳ ನೀರಿನ ಮಟ್ಟವೂ ಬದಲಾಗುತ್ತಿರುತ್ತದೆ.

ನೀರಾವರಿ ಸೌಲಭ್ಯವು ಇಲ್ಲದ ಮಳೆಯಾಶ್ರಿತ ಪ್ರದೇಶಗಳಲ್ಲಿ ಜಮೀನು ಸಾಕಷ್ಟಿರುವ ರೈತರು ಇಂಗುಗುಂಡಿಗಳನ್ನು ನಿರ್ಮಿಸಿ ಬೆಳೆಗಳನ್ನು ಬೆಳೆಯುತ್ತಾರೆ. ಬೇಸಗೆಯಲ್ಲಿ ರಾಗಿ, ಕಾಳುಗಳು, ದ್ವಿದಳ ಧಾನ್ಯಗಳನ್ನು ಬೆಳೆಯಲು ಈ ನೀರಾವರಿ ವ್ಯವಸ್ಥೆ ಅನುಕೂಲವಾಗಿದೆ. ಅಂತರ್ಜಲಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಈ ರೀತಿಯ ಪ್ರಯೋಗಗಳು ನಡೆಯುತ್ತಿದೆ. ಅಣೆಕಟ್ಟುಗಳಂತೆ ಚೆಕ್ ಡ್ಯಾಂನ ನಿರ್ಮಾಣದಿಂದ ನೀರನ್ನು ಸಂಗ್ರಹಿಸಿ ಹೊಲ, ಗದ್ದೆಗಳಿಗೆ ಬಳಸಿಕೊಳ್ಳುವ ತಂತ್ರಜ್ಞಾನ ಪ್ರಾರಂಭವಾಗಿದೆ.

**ಸಸ್ಯ ಸಂಪತ್ತು :** ಅರೆಮಲೆನಾಡಿನ ಹತ್ತಿರವಿರುವ ಮೈಸೂರು ಜಿಲ್ಲೆಯ ಹೇರಳ ಸಂಪತ್ತು ಹೆಚ್.ಡಿ. ಕೋಟೆ ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಕಾಣಬಹುದಾಗಿದೆ. ಉಳಿದ ಕಡೆ ಹುಲ್ಲುಗಾವಲುಗಳು ಕಂಡುಬರುತ್ತವೆ. ಕಾಡುಗಳಲ್ಲಿ ಅತ್ತಿ, ತೇಗ, ಗಂಧ, ಬೀಟೆ, ನಂದಿ, ಹಲಸು, ಮತ್ತಿ, ಹಡಗ, ಅರಳಿ, ನೇರಳೆ, ಬಸರಿ, ಬೇವು, ಮಹಾಗನಿ, ಮಾವು, ನೀಲಗಿರಿ, ನೆಡುತೋಪು ಮುಂತಾದವುಗಳನ್ನು ಕಾಣಬಹುದಾಗಿದೆ. ಇದರೊಂದಿಗೆ ಗೋಂದು ಅರಗು ನೀಡುವ ಮರಗಳೂ ಇವೆ. ಬೆಂಕಿ ಕಡ್ಡಿ ತಯಾರಿಸಲು ಬೇಕಾಗುವ ಮೃದು ಮರಗಳು ಲಭ್ಯವಿದೆ. ಹುಣಿಸೆ, ಸೋಗೆ, ಬಾಬೂಲ್ ಮರಗಳ ತೋಪುಗಳೂ ಇವೆ. ರಾಜ್ಯದಲ್ಲಿ ಸಸ್ಯಸಂಪತ್ತು ಹೊಂದಿರುವ ಮೂರನೇ ಜಿಲ್ಲೆ ಇದಾಗಿದೆ. ಮರಗಳ ಪಟ್ಟಿ ಇಲ್ಲಿದೆ.

**ಪ್ರಾಣಿ ಸಂಪತ್ತು :** ಮೈಸೂರು ಹೇರಳವಾದ ಪ್ರಾಣಿಸಂಪತ್ತು ಹೊಂದಿರುವ ಜಿಲ್ಲೆಯಾಗಿದ್ದು, ದನ, ಹಸು, ಎಮ್ಮೆ, ಕುರಿ, ಕೋಳಿ, ಹಂದಿ ಸಾಕಾಣಿಕೆಯಲ್ಲಿ ಪ್ರಸಿದ್ಧಿ ಪಡೆದಿದೆ. ದನ ಸಾಕಾಣಿಕೆಯಲ್ಲಿ ಮೊದಲನೆ ಸ್ಥಾನ.

### ಮೀನುಗಾರಿಕೆ

| ಕ್ರಸಂ. | ತಾಲ್ಲೂಕು | ಹಿಡಿದ ಮೀನುಗಳು (ಟನ್ನುಗಳಲ್ಲಿ) | ಮಂಜುಗಡ್ಡೆ ಕಾರ್ಖಾನೆಗಳು | | ಶೀಥಲೀಕರಣ ಕೇಂದ್ರಗಳು | | ಕೆರೆಗಳ ಸಂಖ್ಯೆ ಮೀನುಗಾರಿಕೆಗೆ ಸಂಬಂಧಿಸಿದಂತೆ | | ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ | | ಮತ್ಸ್ಯಾಆಶ್ರಯ ಯೋಜನೆ ಫಲಾನುಭವಿಗಳ ಸಂಖ್ಯೆ | ಮೀನುಮರಿ ಬಿತ್ತನೆ ಸಂಖ್ಯೆ (ಲಕ್ಷಗಳಲ್ಲಿ) | ಮೀನು ಮಾರುಕಟ್ಟೆಗಳ (ಸಂಖ್ಯೆ) |
|---|---|---|---|---|---|---|---|---|---|---|---|---|---|
| | | | ಸಂಖ್ಯೆ | ಸಾಮರ್ಥ್ಯ | ಸಂಖ್ಯೆ | ಸಾಮರ್ಥ್ಯ | ಪಂ.ರಾಜ್ ಸಂಸ್ಥೆಗೆ ಸೇರಿದೆ | ಸಣ್ಣ ನೀರಾವರಿಗೆ ಸೇರಿದೆ | ಪೂರ್ಣ ಕಾಲಿಕ | ಅರೆಕಾಲಿಕ | | | |
| **1** | **2** | | | | | | | | | | | | |
| 1. | ಹೆಚ್.ಡಿ.ಕೋಟೆ | 2972.74 | – | – | – | – | 85 | 14 | 1500 | 1000 | 20 | 44.95 | 2 |
| 2. | ಹುಣಸೂರು | 1314.09 | – | – | – | – | 186 | 29 | 1767 | 550 | 20 | 19.87 | 2 |
| 3. | ಕೆ.ಆರ್.ನಗರ | 1035.66 | – | – | – | – | 104 | 11 | 200 | 700 | 20 | 15.66 | 8 |
| 4. | ಮೈಸೂರು | 1100.47 | 1 | 6 | 3 | 15 | 95 | 8 | 300 | 500 | 29 | 16.64 | 2 |
| 5. | ನಂಜನಗೂಡು | 728.14 | – | – | – | – | 47 | 14 | 650 | 350 | 63 | 11.01 | 3 |
| 6. | ಪಿರಿಯಾಪಟ್ಟಣ | 1775.71 | – | – | – | – | 403 | 10 | 1500 | 500 | 15 | 26.85 | 10 |
| 7. | ಟಿ.ನರಸೀಪುರ | 2152.67 | – | – | – | – | 59 | 12 | 400 | 800 | 28 | 32.85 | 1 |
| | **ಜಿಲ್ಲಾಮೊತ್ತ** | **11077.5** | **1** | **6** | **3** | **15** | **979** | **98** | **6317** | **4400** | **195** | **167.83** | **28** |

### ಪಶುಪಾಲನೆ

| ಕ್ರಸಂ. | ತಾಲ್ಲೂಕು | ಜಾನುವಾರು ಗಣತಿ | | | | | | | | |
|---|---|---|---|---|---|---|---|---|---|---|
| | | ದನಕರುಗಳು | | | | | ಕುರಿಗಳು | | | |
| | | ಸ್ಥಳೀಯ | ವಿದೇಶಿ ತಳಿ | ಮಿಶ್ರತಳಿ | ಒಟ್ಟು | ಎಮ್ಮೆಗಳು | ಸ್ಥಳೀಯ | ವಿದೇಶಿ ತಳಿ | ಮಿಶ್ರತಳಿ | ಒಟ್ಟು |
| **1** | **2** | | | | | | | | | |
| 1. | ಹೆಚ್.ಡಿ.ಕೋಟೆ | 124402 | – | 11565 | 135967 | 2367 | 16243 | – | – | 16243 |
| 2. | ಹುಣಸೂರು | 71384 | – | 23380 | 94764 | 3636 | 31673 | – | – | 31673 |
| 3. | ಕೆ.ಆರ್.ನಗರ | 66666 | – | 16515 | 83181 | 25131 | 53688 | – | – | 53688 |
| 4. | ಮೈಸೂರು | 37745 | – | 30887 | 68632 | 5053 | 46711 | 112 | 30 | 46853 |
| 5. | ನಂಜನಗೂಡು | 70948 | – | 23882 | 94830 | 6746 | 62438 | – | – | 62438 |
| 6. | ಪಿರಿಯಾಪಟ್ಟಣ | 71301 | – | 15869 | 87170 | 12596 | 11103 | – | – | 11103 |
| 7. | ಟಿ.ನರಸೀಪುರ | 29071 | – | 23141 | 52212 | 10706 | 34970 | 4 | – | 34974 |
| | **ಜಿಲ್ಲಾಮೊತ್ತ** | **471517** | **–** | **145239** | **616756** | **66235** | **256826** | **116** | **30** | **256972** |

**ದನಕರುಗಳು ಕುರಿಗಳು :** ಕುರಿ ಸಾಕಾಣಿಕೆಯಲ್ಲಿ ಎರಡನೆ ಸ್ಥಾನ ಪಡೆದಿದೆ. ಬನ್ನೂರು ಕುರಿ ಎಂಬ ಪ್ರಸಿದ್ಧವಾದ ಕುರಿ ತಳಿ ಇದೆ. ಇದರೊಂದಿಗೆ ಮೀನುಸಾಕಾಣಿಕೆಯೂ ಹೆಚ್ಚಾಗಿದೆ. ಕೆರೆಗಳಲ್ಲಿ ಅಥವಾ ರೈತರ ಜಮೀನಿನಲ್ಲಿ ಹೊಂಡಗಳನ್ನು ನಿರ್ಮಿಸಿ, ವಿವಿಧ ಜಾತಿಯ ಮೀನುಗಳನ್ನು ಸಾಕುವ ಉದ್ಯೋಗ ಆಕರ್ಷಣೀಯವಾಗುತ್ತಿದೆ. ನೀರಿನ ಸೌಕರ್ಯವಿರುವ ರೈತರು ತಮ್ಮ ಜಮೀನುಗಳಲ್ಲಿ ಹೊಂಡಗಳನ್ನು ನಿರ್ಮಿಸಿ ನೀರು ತುಂಬಿ ಜಮೀನಿನಲ್ಲಿ ದೊರೆಯುವ ಕೆಲವು ತ್ಯಾಜ್ಯವಸ್ತುಗಳನ್ನು ಹಾಕಿ ಮೀನನ್ನು ಬೆಳೆಸಿ ಸಂಪಾದನೆ ಮಾಡುತ್ತಾರೆ. ಕೆಲವರು ಮರಿ ಮಾಡಿಸಿದರೆ, ಕೆಲವರು ಮರಿಗಳನ್ನು ತಂದು ದೊಡ್ಡ ಮೀನುಗಳನ್ನು ಮಾರುವ ಕೃಷಿಯಲ್ಲಿ ತೊಡಗಿದ್ದಾರೆ. ಮೀನುಗಾರಿಕೆಯಲ್ಲಿ ಉಪಯೋಗಿಸುತ್ತಿರುವ ಕೆರೆಗಳ ಸಂಖ್ಯೆ ಜಿಲ್ಲೆಯಾದ್ಯಂತ ಒಟ್ಟು 979 ಪಂಚಾಯತ್ ರಾಜ್‌ಗೆ ಸೇರಿದ್ದು 98 ಸಣ್ಣ ನೀರಾವರಿಗೆ ಸೇರಿವೆ. 11 ರಿಂದ 12 ಸಾವಿರ ಕುಟುಂಬಗಳು ಮೀನುಗಾರಿಕೆಯಲ್ಲಿ ತೊಡಗಿವೆ. ಅವುಗಳ ಒಟ್ಟು ವಿವರ ಕೆಳಗಿನ ಪಟ್ಟಿಯಲ್ಲಿದೆ.

**ಪಶುಪಾಲನೆ :** ದನಕರುಗಳು, ಕುರಿಗಳು, ಹಂದಿಗಳನ್ನು ಎಲ್ಲ ತಾಲೂಕುಗಳಲ್ಲಿಯೂ ಸಾಕುತ್ತಾರೆ. ಸ್ಥಳೀಯ, ಮಿಶ್ರ ತಳಿಗಳನ್ನು ಹೊಂದಿರುವ ಅನೇಕ ದನಕರುಗಳು ಇದ್ದು ಹಾಲಿನ ಉತ್ಪಾದನೆಗೆ ಹೆಚ್ಚು ಬಳಕೆಯಾಗುತ್ತವೆ. ಕುರಿಗಳು, ಮೇಕೆಗಳು ಸ್ಥಳೀಯ ತಳಿಗಳು ಇದ್ದು ಮೈಸೂರಿನಲ್ಲಿ ಮಾತ್ರ ವಿದೇಶಿ ತಳಿಗಳು 112 ಮತ್ತು 30 ಮಿಶ್ರತಳಿಗಳು ಇವೆ. ಇವುಗಳನ್ನು ಹೊರತುಪಡಿಸಿ ಮೊಲಗಳು, ನಾಯಿಗಳು ಇತರೆ ಪ್ರಾಣಿಗಳು ಇವೆ.

ಮೈಸೂರು ಕಾಡುಗಳಲ್ಲಿ ಹುಲಿ, ಚಿರತೆ, ಕರಡಿ, ಕಾಡುಕೋಣ, ಆನೆ, ಜಿಂಕೆ, ಸಾರಂಗಗಳೂ ಅನೇಕ ಬಗೆಯ ಹಾವುಗಳೂ ಸುಂದರ ನವಿಲಿನಂತಹ ಕಾಡು ಪಕ್ಷಿಗಳೂ ಇವೆ. ಮೈಸೂರು ಜಿಲ್ಲೆಯಲ್ಲಿ ವನ್ಯ ಮೃಗ ಸಂರಕ್ಷಣ ಕೇಂದ್ರಗಳಿವೆ. ಮೈಸೂರು ನಗರ ಭಾಗದಲ್ಲಿರುವ ಪ್ರಾಣಿ ಸಂಗ್ರಹಾಲಯ ಪ್ರವಾಸಿಗರ ಪ್ರಮುಖ ಆಕರ್ಷಣೀಯ ಕೇಂದ್ರವಾಗಿದೆ. 18 ಪಶು ಆಸ್ಪತ್ರೆಗಳು, 70 ಚಿಕಿತ್ಸಾಲಯಗಳು ಇವೆ.

**ಖನಿಜ ಸಂಪತ್ತು :** ಹೆಚ್ಚಿನ ಖನಿಜ ಸಂಪತ್ತು ಈ ಜಿಲ್ಲೆಯಲ್ಲಿಲ್ಲ. ಜಿಲ್ಲೆಯ ಪಶ್ಚಿಮ, ದಕ್ಷಿಣ, ಆಗ್ನೇಯ ಭಾಗಗಳಲ್ಲಿ ಚಾರ್ನೊಕೈಟ್ ಶಿಲೆಗಳಿದ್ದು, ಉಳಿದ ಭಾಗ ಕಣ ಶಿಲೆಗಳಾಗಿವೆ. ಮೈಸೂರಿನ ನೈಋತ್ಯ ಭಾಗದಲ್ಲಿ ಫ್ರೊಮೈಟ್, ಕಲ್ನಾರು, ವರ್ಮಿಕುಲೈಟ್ ನಿಕ್ಷೇಪವಿದೆ. ಅಲ್ಲಲ್ಲಿ ಹಾರ್ನ್‌ಬ್ಲೆಂಡ್ ಪೈರಾಕ್ಸೆನೈಟ್, ಮಾಗ್ನೆಟ್ ಶಿಲಾರಚನೆಗಳಿವೆ. ತಾಮ್ರ, ಗ್ರಾಫೈಟ್, ಕಬ್ಬಿಣದ ಅದಿರು, ಸುಣ್ಣದ ಕಲ್ಲು, ಡಾಲೊಮೈಟ್, ಬಳಪದ ಕಲ್ಲು, ಅಲಂಕಾರಿಕ ಕಟ್ಟಡದ ಶಿಲೆಗಳು ಕಲ್ನಾರು ಕಂಡುಬರುತ್ತದೆ.

**ಬೆಳೆಗಳು :** ಮೈಸೂರು ಜಿಲ್ಲೆಯಲ್ಲಿ ಮೂರು ರೀತಿಯ ಬೆಳೆ ಹಂಗಾಮುಗಳು ಇರುತ್ತವೆ. ಇವುಗಳಲ್ಲಿ ಮುಂಗಾರು ಹಂಗಾಮು ಪ್ರಮುಖವಾಗಿರುತ್ತದೆ. ಇದನ್ನು ಕೃಷಿ ವಿಜ್ಞಾನಿಗಳು ಮುಂಚಿತ ಮತ್ತು ವಿಳಂಬ ಮುಂಗಾರು ಎಂದು ವಿಂಗಡಿಸುತ್ತಾರೆ. ಬೆಳೆಗಳ ಬಿತ್ತನೆ ಮಾರ್ಚ್ ಕೊನೆ ಅಥವಾ ಏಪ್ರಿಲ್ ಮೊದಲ ವಾರದಿಂದ ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳ ಕೊನೆಯವರೆಗೂ ನಡೆಯುತ್ತದೆ. ಈ ಹಂಗಾಮಿನ ಮುಖ್ಯ ಬೆಳೆಗಳೆಂದರೆ : ಬತ್ತ, ರಾಗಿ, ಜೋಳ, ಮುಸುಕಿನ ಜೋಳ, ತೊಗರಿ, ಹುರುಳಿ, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಹತ್ತಿ ಹಾಗು ತಂಬಾಕು. ಮುಂಗಾರು ಹಂಗಾಮಿಗಿಂತ ಮುಂಚಿತ ಮಳೆಯಾದಲ್ಲಿ ಎಳ್ಳು, ಹೆಸರು, ಉದ್ದು ಹಾಗೂ ಸಂಕರಣ ಜೋಳದ ಬೆಳೆಗಳನ್ನು ಬೆಳೆಯುತ್ತಾರೆ. ಹಿಂಗಾರು ಹಂಗಾಮಿನಲ್ಲಿ ಹಿಂಗಾರು ಜೋಳ, ರಾಗಿ, ಸೂರ್ಯಕಾಂತಿ, ಹುರುಳಿ, ಅಲಸಂದೆ ಇವು ಮುಖ್ಯ ಬೆಳೆಗಳಾಗಿದ್ದು ಬೇಸಗೆಯಲ್ಲಿ ಬತ್ತ, ರಾಗಿ, ನೆಲಗಡಲೆ ಮತ್ತು ದ್ವಿದಳ ಧಾನ್ಯಗಳು ಪ್ರಮುಖವಾಗಿರುತ್ತವೆ. ಮಳೆ ಆಶ್ರಿತ ನೀರಾವರಿ ಎರಡೂ ರೀತಿಯ ಜಮೀನಿನಲ್ಲೂ ಇವುಗಳನ್ನು ಬೆಳೆಯುತ್ತಾರೆ. ಕಬ್ಬು ಒಂದು ಪ್ರಮುಖ ವಾಣಿಜ್ಯ ಬೆಳೆಯಾದ್ದರಿಂದ ಎಲ್ಲ ಮೂರು ಹಂಗಾಮಿನಲ್ಲೂ ನಾಟಿ ಮಾಡಲಾಗುತ್ತದೆ.

ಈ ಜಿಲ್ಲೆಯ ಪ್ರಮುಖ ಏಕದಳ ಬೆಳೆಗಳೆಂದರೆ : ಬತ್ತ, ರಾಗಿ, ಜೋಳ, ಮುಸುಕಿನ ಜೋಳ, ದ್ವಿದಳ ಧಾನ್ಯಗಳು ; ಕಡಲೆ, ಹುರುಳಿ, ಉದ್ದು, ಹೆಸರು ಕಾಳು, ಅಲಸಂದೆ ಅವರೆ, ಮಾತ್ ಬೀನ್ಸ್.

**ಎಣ್ಣೆ ಕಾಳುಗಳು :** ನೆಲಗಡಲೆ, ಸೂರ್ಯಕಾಂತಿ, ಹರಳು, ಹುಚ್ಚೆಳ್ಳು, ಸೋಯಾ ಅವರೆ, ಕುಸುಬೆ.

**ವಾಣಿಜ್ಯ ಬೆಳೆಗಳು :** ಕಬ್ಬು, ಹತ್ತಿ, ಹೊಗೆಸೊಪ್ಪು

ಜಿಲ್ಲೆಯಾದ್ಯಂತ 2011-12ರ ಸಾಲಿನಲ್ಲಿ ಬೆಳೆದ ಬೆಳೆಗಳ ವಿಸ್ತೀರ್ಣ ಹೀಗಿದೆ.

**ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ತಾಲ್ಲೂಕುವಾರು ಬೆಳೆಗಳ ಬೆಳೆವಾರು ವಿಸ್ತೀರ್ಣ, ಉತ್ಪನ್ನ ಮತ್ತು ಇಳುವರಿ ಮತ್ತು ಮೌಲ್ಯದ ವಿವರಗಳು 31-03.2011ರಲ್ಲಿದ್ದಂತೆ**

| | | ಬೆಳೆಗಳು | | | ವಾಣಿಜ್ಯ ಪುಷ್ಪಗಳು | | | | ಔಷಧೀಯ ಸಸ್ಯಗಳು | | | | ಸುಗಂಧಿ | |
|---|---|---|---|---|---|---|---|---|---|---|---|---|---|---|
| ಕ್ರಸಂ. | ತಾಲ್ಲೂಕಿನ ಹೆಸರು | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ |
| 1. | ಹೆಚ್.ಡಿ.ಕೋಟೆ | 1792.00 | 0.77 | 1356.13 | 200.00 | 1235.50 | 6.18 | 137.00 | 0.00 | 0.00 | #DIV/0! | 0.00 | 0.00 | 0.00 |
| 2. | ಹುಣಸೂರು | 1331.00 | 0.22 | 1149.60 | 37.00 | 100.00 | 2.70 | 19.80 | 0.00 | 0.00 | #DIV/0! | 0.00 | 0.00 | 0.00 |
| 3. | ಕೆ.ಆರ್.ನಗರ | 297.00 | 0.15 | 1134.90 | 58.00 | 488.00 | 8.41 | 76.60 | 0.00 | 0.00 | #DIV/0! | 0.00 | 0.00 | 0.00 |
| 4. | ಮೈಸೂರು | 53.00 | 0.01 | 1242.50 | 51.00 | 246.00 | 4.82 | 51.20 | 0.00 | 0.00 | #DIV/0! | 0.00 | 0.00 | 0.00 |
| 5. | ನಂಜನಗೂಡು | 804.40 | 0.25 | 2225.70 | 83.00 | 650.00 | 7.83 | 429.00 | 5.00 | 50.00 | 10.00 | 6.00 | 0.00 | 0.00 |
| 6. | ಪಿರಿಯಾಪಟ್ಟಣ | 1829.50 | 0.30 | 1848.78 | 52.00 | 248.40 | 4.78 | 20.87 | 0.00 | 0.00 | #DIV/0! | 0.00 | 0.00 | 0.00 |
| 7. | ಟಿ.ನರಸೀಪುರ | 1104.00 | 0.42 | 1594.70 | 335.00 | 2320.00 | 6.93 | 305.00 | 0.00 | 0.00 | #DIV/0! | 0.00 | 0.00 | 0.00 |
| 8. | | 0.00 | #DIV/0! | 0.00 | 0.00 | 0.00 | #DIV/0! | 0.00 | 0.00 | 0.00 | #DIV/0! | #DIV/0! | 0.00 | 0.00 |
| 9. | | 0.00 | #DIV/0! | 0.00 | 0.00 | 0.00 | #DIV/0! | 0.00 | 0.00 | 0.00 | #DIV/0! | #DIV/0! | 0.00 | 0.00 |
| 10. | | 0.00 | #DIV/0! | 0.00 | 0.00 | 0.00 | #DIV/0! | 0.00 | 0.00 | 0.00 | #DIV/0! | #DIV/0! | 0.00 | 0.00 |
| 11. | | 0.00 | #DIV/0! | 0.00 | 0.00 | 0.00 | #DIV/0! | 0.00 | 0.00 | 0.00 | #DIV/0! | #DIV/0! | 0.00 | 0.00 |
| | **ಜಿಲ್ಲಾಮೊತ್ತ** | **7210.90** | **0.27** | **10552.31** | **816.00** | **5287.90** | **6.48** | **1039.47** | **5.00** | **50.00** | **10.00** | **6.00** | **0.00** | **0.00** |

## ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ತಾಲ್ಲೂಕುವಾರು ಬೆಳೆಗಳ ಬೆಳೆವಾರು ವಿಸ್ತೀರ್ಣ, ಉತ್ಪನ್ನ ಮತ್ತು ಇಳುವರಿ ಮತ್ತು ಮೌಲ್ಯದ ವಿವರಗಳು 31-03.2011ರಲ್ಲಿದ್ದಂತೆ

| | | ಹಣ್ಣಿನ ಬೆಳೆಗಳು | | | | ತರಕಾರಿ ಬೆಳೆಗಳು | | | | ಸಾಂಬಾರು ಬೆಳೆಗಳು | | | | ತೋಟ |
|---|---|---|---|---|---|---|---|---|---|---|---|---|---|---|
| ಕ್ರ ಸಂ. | ತಾಲ್ಲೂಕಿನ ಹೆಸರು | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ |
| 1. | ಹೆಚ್.ಡಿ.ಕೋಟೆ | 3051.00 | 64585.00 | 21.17 | 6949.70 | 1404.00 | 29536.00 | 21.04 | 1352.89 | 6060.00 | 92629.00 | 15.29 | 5109.00 | 2320.00 |
| 2. | ಹುಣಸೂರು | 2918.00 | 42645.00 | 14.61 | 3510.60 | 743.00 | 12436.00 | 16.74 | 844.08 | 771.00 | 10159.00 | 13.18 | 895.40 | 6078.00 |
| 3. | ಕೆ.ಆರ್.ನಗರ | 227.00 | 4815.00 | 21.21 | 249.25 | 1038.00 | 20315.00 | 19.57 | 595.00 | 29.00 | 108.30 | 3.73 | 6.30 | 2008.00 |
| 4. | ಮೈಸೂರು | 1080.00 | 20165.00 | 18.67 | 1511.70 | 1430.00 | 27799.50 | 19.44 | 1081.00 | 128.00 | 605.00 | 4.73 | 204.00 | 4588.00 |
| 5. | ನಂಜನಗೂಡು | 1263.00 | 27105.75 | 21.46 | 1909.58 | 527.00 | 11601.00 | 22.01 | 649.89 | 127.00 | 1490.00 | 11.73 | 188.00 | 3283.00 |
| 6. | ಪಿರಿಯಾಪಟ್ಟಣ | 871.00 | 11881.00 | 13.64 | 1449.15 | 738.00 | 13185.00 | 17.87 | 727.65 | 1262.00 | 11102.00 | 8.80 | 1932.12 | 6102.00 |
| 7. | ಟಿ.ನರಸೀಪುರ | 741.00 | 10248.00 | 13.83 | 1694.90 | 655.00 | 10312.00 | 15.74 | 447.79 | 231.00 | 2434.00 | 10.54 | 82.90 | 2633.00 |
| 8. | | 0.00 | 0.00 | #DIV/0! | 0.00 | 0.00 | 0.00 | #DIV/0 ! | 0.00 | 0.00 | 0.00 | #DIV/0 ! | 0.00 | 0.00 |
| 9. | | 0.00 | 0.00 | #DIV/0! | 0.00 | 0.00 | 0.00 | #DIV/0 ! | 0.00 | 0.00 | 0.00 | #DIV/0 ! | 0.00 | 0.00 |
| 10. | | 0.00 | 0.00 | #DIV/0! | 0.00 | 0.00 | 0.00 | #DIV/0 ! | 0.00 | 0.00 | 0.00 | #DIV/0 ! | 0.00 | 0.00 |
| 11. | | 0.00 | 0.00 | #DIV/0! | 0.00 | 0.00 | 0.00 | #DIV/0 ! | 0.00 | 0.00 | 0.00 | #DIV/0 ! | 0.00 | 0.00 |
| | ಜಿಲ್ಲಾಮೊತ್ತ | **10151.00** | **181444.75** | **17.87** | **17274.88** | **6535.00** | **125184.50** | **19.16** | **5698.30** | **8608.00** | **118527.30** | **13.77** | **8417.72** | **27012.00** |

## ವಾಣಿಜ್ಯ ಬೆಳೆಗಳ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

| ಕ್ರಸಂ. | ತಾಲ್ಲೂಕು | ಹತ್ತಿ | ಕಬ್ಬು | ತಂಬಾಕು | ಹರಳು | ಎಳ್ಳು | ಅಗಸೆ | ಸೋಯ ಅವರೆ | ಸೂರ್ಯ ಕಾಂತಿ | ಕುಸುಬೆ | ಹುಚ್ಚೆಳ್ಳು | ಒಟ್ಟು ವಾಣಿಜ್ಯ ಬೆಳೆಗಳು |
|---|---|---|---|---|---|---|---|---|---|---|---|---|
| **1** | **2** | | | | | | | | | | | |
| 1. | ಹೆಚ್.ಡಿ.ಕೋಟೆ | 29483 | 5756 | 3906 | 920 | 647 | – | – | – | – | 152 | 40864 |
| 2. | ಹುಣಸೂರು | 673 | 123 | 32256 | 105 | 3008 | – | – | 12 | – | 145 | 36322 |
| 3. | ಕೆ.ಆರ್.ನಗರ | – | 1445 | 10800 | 103 | 1900 | – | – | – | – | 92 | 14340 |
| 4. | ಮೈಸೂರು | 1050 | 2018 | 12 | 396 | 1885 | – | – | – | – | 139 | 5500 |
| 5. | ನಂಜನಗೂಡು | 13125 | 4520 | 350 | 1145 | 965 | – | – | 1135 | – | 366 | 21606 |
| 6. | ಪಿರಿಯಾಪಟ್ಟಣ | 4 | 241 | 31570 | 50 | 13 | – | – | – | – | 1022 | 32900 |
| 7. | ಟಿ.ನರಸೀಪುರ | – | 1606 | – | 20 | 575 | – | – | – | – | 100 | 2301 |
| | **ಜಿಲ್ಲಾಮೊತ್ತ** | **44335** | **15709** | **78894** | **2739** | **8993** | – | – | **1147** | – | **2016** | **153833** |

## ಪ್ರಮುಖ ಎಣ್ಣೆಕಾಳು ಬೆಳೆಗಳ ವಿಸ್ತೀರ್ಣ

| ಎಣ್ಣೆ ಕಾಳುಗಳು (ಹೆ) | | | | | | | | | | |
|---|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕು | ಶೇಂಗಾ | ಸೂರ್ಯ ಕಾಂತಿ | ಕುಸುಮೆ | ಹರಳು | ಎಳ್ಳು | ಅಗಸೆ | ಸೋಯ ಅವರೆ | ಹುಚ್ಚೆಳ್ಳು | ಒಟ್ಟು ಎಣ್ಣೆ ಕಾಳುಗಳು |
| **1** | **2** | | | | | | | | | |
| 1. | ಹೆಚ್.ಡಿ.ಕೋಟೆ | 235 | – | – | 920 | 647 | – | – | 152 | 2044 |
| 2. | ಹುಣಸೂರು | 1372 | 12 | – | 105 | 3008 | – | – | 145 | 4737 |
| 3. | ಕೆ.ಆರ್.ನಗರ | 342 | – | – | 103 | 1900 | – | – | 92 | 2437 |
| 4. | ಮೈಸೂರು | 218 | – | – | 396 | 1885 | – | – | 139 | 2638 |
| 5. | ನಂಜನಗೂಡು | 1480 | 1135 | – | 1145 | 965 | – | – | 366 | 5091 |
| 6. | ಪಿರಿಯಾಪಟ್ಟಣ | 15 | – | – | 50 | 13 | – | – | 1,022 | 1230 |
| 7. | ಟಿ.ನರಸೀಪುರ | 907 | 6 | – | 20 | 575 | – | – | 100 | 1670 |
| | **ಜಿಲ್ಲಾಮೊತ್ತ** | **4,569** | **1153** | – | **2,739** | **8,993** | – | – | **2,016** | **19,847** |

## ಪ್ರಮುಖ ಬೆಳೆಗಳ ವಿಸ್ತೀರ್ಣ

| ಕ್ರ ಸಂ. | ತಾಲ್ಲೂಕು | ದ್ವಿದಳ ಧಾನ್ಯಗಳು (ಹೆ) | | | | | | | | | | |
|---|---|---|---|---|---|---|---|---|---|---|---|---|
| | | ತೊಗರಿ | ಹುರುಳಿ | ಉದ್ದು | ಹೆಸರು | ಅವರೆ | ಅಲಸಂದೆ | ಕಡಲೆ | ಒಟ್ಟು ದ್ವಿದಳ ಧಾನ್ಯಗಳು | ಒಟ್ಟು ಆಹಾರ ಧಾನ್ಯಗಳು | ಒಟ್ಟು ಹಣ್ಣುಗಳ ಬೆಳೆಯ ವಿಸ್ತೀರ್ಣ | ಒಟ್ಟು ತರಕಾರಿ ಬೆಳೆಯ ವಿಸ್ತೀರ್ಣ |
| **1** | **2** | | | | | | | | | | | |
| 1. | ಹೆಚ್.ಡಿ.ಕೋಟೆ | 1068 | 5107 | 163 | 250 | 1323 | 2148 | 28 | 10087 | 28678 | 2250 | 659 |
| 2. | ಹುಣಸೂರು | 597 | 7238 | 165 | 145 | 12560 | 6318 | – | 27023 | 65444 | 3133 | 696 |
| 3. | ಕೆ.ಆರ್.ನಗರ | 268 | 4361 | 643 | 536 | 1101 | 4691 | – | 11600 | 44731 | 245 | 710 |
| 4. | ಮೈಸೂರು | 731 | 3165 | 673 | 612 | 420 | 7621 | – | 13222 | 31535 | 3016 | 1796 |
| 5. | ನಂಜನಗೂಡು | 1570 | 10780 | 4780 | 3780 | 950 | 3949 | 664 | 26473 | 61414 | 1438 | 488 |
| 6. | ಪಿರಿಯಾಪಟ್ಟಣ | 120 | 4698 | 101 | 15 | 2437 | 7435 | 276 | 15082 | 46688 | 999 | 611 |
| 7. | ಟಿ.ನರಸೀಪುರ | 70 | 1258 | 3663 | 1440 | 100 | 914 | 2 | 7447 | 40929 | 1543 | 335 |
| | **ಜಿಲ್ಲಾಮೊತ್ತ** | **4424** | **36607** | **10188** | **6778** | **18891** | **33076** | **970** | **110934** | **319419** | **12624** | **5295** |

## ಪ್ರಮುಖ ಬೆಳೆಗಳ ವಿಸ್ತೀರ್ಣ

| ಏಕದಳ ಧಾನ್ಯಗಳ ವಿಸ್ತೀರ್ಣ (ಹೆ) | | | | | | | | | |
|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕು | ಬತ್ತ | ಜೋಳ | ಸಜ್ಜೆ | ಮುಸುಕಿನ ಜೋಳ | ರಾಗಿ | ಗೋದಿ | ಇತರೆ ತೃಣ ಧಾನ್ಯಗಳು | ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು |
| 1 | 2 | | | | | | | | |
| 1. | ಹೆಚ್.ಡಿ. ಕೋಟೆ | 8517 | 45 | – | 1187 | 8842 | – | – | 18591 |
| 2. | ಹುಣಸೂರು | 13020 | – | – | 16476 | 8925 | – | – | 38421 |
| 3. | ಕೆ.ಆರ್.ನಗರ | 28116 | – | – | 609 | 4406 | – | – | 33131 |
| 4. | ಮೈಸೂರು | 10827 | 597 | – | 544 | 6345 | – | – | 18313 |
| 5. | ನಂಜನಗೂಡು | 22567 | 8600 | – | 1580 | 2194 | – | – | 34941 |
| 6. | ಪಿರಿಯಾಪಟ್ಟಣ | 7101 | 95 | – | 11481 | 12929 | – | – | 31606 |
| 7. | ಟಿ.ನರಸೀಪುರ | 30856 | – | – | 1325 | 1301 | – | – | 33482 |
| | **ಜಿಲ್ಲಾಮೊತ್ತ** | **121,044** | **9,337** | – | **33,202** | **44,942** | – | – | **208,485** |

**ಧಾನ್ಯ ಸಂರಕ್ಷಣೆ :** ಜಿಲ್ಲೆಯಾದ್ಯಂತ ಬೆಳೆಯುವ ಧಾನ್ಯಗಳನ್ನು ಬಿತ್ತನೆಗೆ ಮುಂಚೆ ಗೋಣಿಚೀಲದಲ್ಲಿ ಶೇಕರಿಸಿ ಇಟ್ಟುಕೊಂಡಿರುತ್ತಿದ್ದರು. ಅವು ಹಿಂದೆ ತಾವೇ ಬೆಳೆದ ಸದೃಢ ಬೀಜಗಳಾಗಿರುತ್ತಿದ್ದವು. ಬಿತ್ತನೆ ಬತ್ತ, ತೊಗರಿ, ಅಲಸಂದೆ, ರಾಗಿ, ಹುರುಳಿ ಮುಂತಾದ ಎಲ್ಲ ಏಕದಳ, ದ್ವಿದಳ ಕಾಳುಗಳನ್ನು ಮಣ್ಣು ಮತ್ತು ಬೂದಿ ಅಥವಾ ಮರಳು ಬೂದಿಯೊಂದಿಗೆ ಸೇರಿಸಿ ಗಾಳಿಯಾಡದಂತೆ ಗಟ್ಟಿಯಾಗಿ ಕಟ್ಟುತ್ತಿದ್ದರು. ಸ್ವಾಭಾವಿಕ ವಿಧಾನವನ್ನೇ ಬಳಸಿ ಸಂರಕ್ಷಿಸುತ್ತಿದ್ದರು. ಕೆಲವು ಬಾರಿ ಬಿಸಿಲಿನಲ್ಲಿ ಒಣಗಿಸಿಯೂ ಇಟ್ಟುಕೊಳ್ಳುತ್ತಿದ್ದರು. ಬೀಜಗಳ ಸಂರಕ್ಷಣೆಗೆ ವಾಡೆ, ಬಿದಿರಿನ ಬುಟ್ಟಿ, ಮಡಕೆಗಳ ಉಪಯೋಗವೂ ಇತ್ತು.

**ರಾಗಿ :** ದಕ್ಷಿಣ ಕರ್ನಾಟಕದ ಪ್ರಮುಖ ಬೆಳೆಯಾಗಿ ರಾಗಿಯನ್ನು ಬೆಳೆಯಲಾಗುತ್ತದೆ. ಯಾವುದೇ ರೀತಿಯ ಹವಾಗುಣಕ್ಕೂ ಹೊಂದುಕೊಂಡು ಬೆಳೆಯುವ ಸ್ವಭಾವ ರಾಗಿಯದು. ಮಳೆ ಆಶ್ರಿತ ಜಮೀನಿನಲ್ಲಿ ಮುಂಗಾರು ಸ್ವಲ್ಪ ಮಳೆಯಾದರೂ ರಾಗಿ ಬಿತ್ತನೆ ಮಾಡುತ್ತಾರೆ. ನೀರಾವರಿ ಜಮೀನಿನಲ್ಲಿ ಬೇಸಗೆ ಸಮಯದಲ್ಲಿ ಇದರ ಬಿತ್ತನೆ ನಡೆಯುತ್ತದೆ. ಸರ್ವಋತುಗಳಲ್ಲೂ ಇದನ್ನು ಬೆಳೆಯಬಹುದಾಗಿದೆ. ಆ ವರ್ಷದಲ್ಲಿ ಅಲ್ಪ ಸ್ವಲ್ಪ ಮಳೆ ಬಂದರೂ ರಾಗಿ ಬೆಳೆಯಬಹುದು. ಅಧಿಕ ಪೌಷ್ಠಿಕಾಂಶವುಳ್ಳ ರಾಗಿಯನ್ನು ಕೂರಿಗೆ ವಿಧಾನ, ಚೆಲ್ಲುವ ವಿಧಾನದ ಮೂಲಕ ಬಿತ್ತುತ್ತಾರೆ. ಇದರೊಂದಿಗೆ ಮಧ್ಯದ ಸಾಲುಗಳಲ್ಲಿ ಅವರೆ, ಉದ್ದು, ತೊಗರಿ, ಹುಚ್ಚೆಳ್ಳು ಹಾಕುವುದುಂಟು. ಇದಕ್ಕೆ ರೋಗಗಳ ಬಾಧೆ ಅಷ್ಟಾಗಿ ಇರುವುದಿಲ್ಲ.

ಅಯ್ಯನ ರಾಗಿ, ದುಂಡಗಿನ ರಾಗಿ, ಕೋಣಕೊಂಬಿನ ರಾಗಿ, ಮಿಟ್ಟಾರಾಗಿ, ಕರಿಕಡ್ಡಿ ರಾಗಿ, ಜೇನುಗೂಡು ರಾಗಿ, ಮಧ್ಯಮ ರಾಗಿ, ಕರಿಬುಂಡುಗ, ತೈದಲು, ಮೂರು ತಿಂಗಳ ರಾಗಿ, ಮಾದಯ್ಯನಗಿರಿ ರಾಗಿ, ಬೆಟ್ಟದ ಕೆಳಗಿನ ರಾಗಿ, ಸಣ್ಣಕಡ್ಡಿ ರಾಗಿ, ಪೂರ್ಣರಾಗಿ, ಕಪ್ಪುಗಿಡ್ಡರಾಗಿ, ಹಾಲುಕುಳಿ ರಾಗಿ, ಅಂಗನ ಮಡ್ಡೆ ರಾಗಿ, ಬಿಳಿರಾಗಿ, ಬಿಡ್ಡಪು ರಾಗಿ, ಬಿಳಿತೆನೆ ರಾಗಿ, ಹಸುರು ಬಂಡುಗ ರಾಗಿ, ಕೆಂಪು ರಾಗಿ, ಗಿಡ್ಡರಾಗಿ, ದೊಡ್ಡರಾಗಿ, ಬಿಳಿಬುಂಡುಗ ರಾಗಿ, ಬಿಳಿ ಮುಂಡುಗ ರಾಗಿ ಮುಂತಾದ ತಳಿಗಳನ್ನು ಬಹುತೇಕ ಜಿಲ್ಲೆಯಾದ್ಯಂತ ಕಾಣಬಹುದು.

**ಬತ್ತ :** ಸಾಮಾನ್ಯವಾಗಿ ನೀರಾವರಿ ಪ್ರದೇಶದಲ್ಲಿ ಬೆಳೆಯುತ್ತಾರೆ. ಜಿಲ್ಲೆಯಾದ್ಯಂತ ಕೆರೆ, ಕಾಲುವೆ, ಕೊಳವೆ ಬಾವಿ, ಮಳೆ ಹೆಚ್ಚಾಗಿ ಬೀಳುವ ಪ್ರದೇಶಗಳಲ್ಲೂ ನಾಲೆಗಳ ಮೂಲಕವೂ ಬತ್ತ ಬೆಳೆಯಲು ನೀರು ಪಡೆಯುತ್ತಾರೆ. ಬತ್ತದ ಪೈರನ್ನು ಮೊದಲು ಸಣ್ಣ ಮಡಿಗಳಲ್ಲಿ ಬೆಳೆಸಿ ಅನಂತರ ನಾಟಿ ಮಾಡುತ್ತಾರೆ. ನೀರಾವರಿ ಆಶ್ರಯ ಹೊಂದಿರುವವರು ಸುಧಾರಿತ ತಳಿಗಳನ್ನು ಬೆಳೆದರೆ, ಮಳೆ ಆಶ್ರಿತ ಅಥವಾ ಕೆರೆ ಆಶ್ರಿತ ರೈತರು ಕಡಿಮೆ ನೀರಿದ್ದಾಗ ಬರಬತ್ತ ಎನ್ನುವ ತಳಿಗಳನ್ನು ಬೆಳೆಸುತ್ತಾರೆ. ಇದು ಹಲವಾರು ತಳಿಗಳನ್ನು ಹೊಂದಿದೆ. ಕರಿಮುಂಡುಗನ ಬತ್ತ, ಬಿಳಿ ಮುರುಡುಗನ ಬತ್ತ, ಪಿಚ್ಚನಕಾರು ಬತ್ತ, ಗೂಡು ನೆಲ್ಲು, ಒಂದೂವರೆ ಬತ್ತ, ಕೆಂಪು ಮುಂಡುಗ, ಕರಿನೆಲ್ಲು, ಬಿಳಿನೆಲ್ಲು, ಹಾಲುಬ್ಬಲು, ರತ್ನಚೂಡಿ, ರಾಜಮುಡಿ, ಕಣ್ಣುರತ್ನ ಚೂಡಿ, ಮುಂತಾಗಿ ಇತ್ತೀಚೆಗೆ ಹೊಸತಳಿಗಳ ಉಪಯೋಗ ಹೆಚ್ಚಿದೆ. ಫೆಬ್ರವರಿ ತಿಂಗಳಿನಲ್ಲಿ ನಾಟಿ ಮಾಡಿ ಜುಲೈ ತಿಂಗಳಿನಲ್ಲಿ ಕುಯಿಲು ಮಾಡುವ ಬತ್ತವನ್ನು ಕಾರ್ ಬತ್ತವೆಂದೂ ಜುಲೈ ಕೊನೆಯ ವಾರದಲ್ಲೋ ಆಗಸ್ಟ್ ಮೊದಲ ವಾರದಲ್ಲೋ ನಾಟಿ ಮಾಡಿ ನವೆಂಬರ್ ಡಿಸೆಂಬರ್ ಸಮಯದಲ್ಲಿ ಕೂಯಿಲು ಮಾಡುವ ಬತ್ತವನ್ನು ಹೈನು ಬತ್ತವೆಂದು ಕರೆಯುತ್ತಾರೆ.

**ಜೋಳ :** ಜಿಲ್ಲೆಯ ಗ್ರಾಮೀಣ ಭಾಗದ ಜನರ ಆಹಾರವಾಗಿದೆ. ಮಳೆಯಾಶ್ರಿತ ಜಮೀನಿನಲ್ಲಿ ಜೋಳವನ್ನು ಬೆಳೆಯುತ್ತಾರೆ. ನಂಜನಗೂಡು, ಮೈಸೂರು, ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಇದನ್ನು ಕಾಣಬಹುದು. ಇವು ಖಾರೀಫ್ ಬೆಳೆಗಳಾಗಿವೆ, ಕಾಕಿಜೋಳ, ಕೆಂಪುಜೋಳ, ಬಿಳಿಜೋಳ ಎಂಬ ತಳಿಗಳಿವೆ.

**ಮುಸುಕಿನ ಜೋಳ :** ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ 'ಮುಸುಕಿನ ಜೋಳದ ತಾಲೂಕು' ಎಂದೇ ಹೆಸರು ಪಡೆದಿದೆ. ಹುಣಸೂರು, ಹೆಗ್ಗಡದೇವನಕೋಟೆ, ನಂಜನಗೂಡು, ಕೆ.ಆರ್. ನಗರ, ಟಿ. ನರಸೀಪುರಗಳಲ್ಲಿ ಇದನ್ನು ಬೆಳೆಯುತ್ತಾರೆ. ಮುಸುಕಿನ ಜೋಳದಲ್ಲಿ ಹಳದಿ, ಕಂದು, ಬಿಳಿ ಮೊದಲಾದ ತಳಿಗಳಿವೆ. ಡೆಕ್ಕನ್ ಮತ್ತು ಡೆಕ್ಕನ್ 101 ಪ್ರಮುಖ ತಳಿಯಾಗಿದೆ.

**ದ್ವಿದಳ ಧಾನ್ಯಗಳು :** ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಹಲಸಂದೆ, ಕಡಲೆ ಇವು ಹೊಲಗಳಲ್ಲಿ ಬೆಳೆಯುವ ಬೆಳೆಗಳು. ಮಳೆ ಆಶ್ರಿತ ಪ್ರದೇಶಗಳಲ್ಲಿ, ಮುಂಗಾರಿನ ಸಮಯದಲ್ಲಿ ಮತ್ತು ಹಿಂಗಾರಿನಲ್ಲಿ ರಾಗಿ ಜೋಳದ ಮಧ್ಯೆ ಇವುಗಳನ್ನು ಹಾಕುತ್ತಾರೆ. ರಾಗಿ ಕೊಯ್ಲಾದ ಅನಂತರ ಒಮ್ಮೊಮ್ಮೆ ಹುರುಳಿಕಾಳುಗಳ ಬಿತ್ತನೆ ಮಾಡುವುದೂ ಉಂಟು. ದ್ವಿದಳ ಧಾನ್ಯಗಳು ಭೂಮಿಯ ಸಾರವನ್ನು ಹೆಚ್ಚಿಸಿ ಮುಂದಿನ ಫಸಲು ಉತ್ತಮ ಇಳುವರಿ ಕೊಡಲು ಸಹಾಯಕವಾಗುತ್ತದೆ. ತೊಗರಿಯಲ್ಲಿ ಕೆಂಪು ತೊಗರಿ, ಬಿಳಿ ತೊಗರಿ, ಮರತೊಗರಿ ಮುಂತಾದ ತಳಿಗಳಿವೆ.

**ಹುರುಳಿ :** ಮುಂಗಾರು ಕೈಕೊಟ್ಟು ಹೊಲಗಳು ಬಿತ್ತನೆಯಾಗದೆ ಉಳಿದಾಗ ಹುರುಳಿಯನ್ನು ಬೆಳೆಯುವುದುಂಟು. ಸಾರವಿಲ್ಲದ ನೆಲದಲ್ಲೂ ಬೆಳೆಯುವ ಇದಕ್ಕೆ ಒಂದೆರಡು ಮಳೆ ಬಂದರೆ ಸಾಕು. ಹುರುಳಿಯನ್ನು ಪ್ರತ್ಯೇಕವಾಗಿಯೂ ಸಾಲುಗಳ ಮಧ್ಯೆಯೂ ಬೆಳೆಯುವುದು ರೂಢಿ. ಸಂಕ್ರಾಂತಿಯ ಅನಂತರ ಕುಯ್ಲಿಗೆ ಬರುತ್ತದೆ. ಹುರುಳಿಗಳಲ್ಲಿ ಬಿಳಿ ಹುರುಳಿ, ಕಪ್ಪು ಹುರುಳಿ ಎಂಬ ತಳಿಗಳಿವೆ.

**ಅವರೆ :** ರಾಗಿಯ ಸಾಲುಗಳ ಮಧ್ಯೆ ಬೆಳೆಯುವ ಅವರೆ ಸಂಕ್ರಾಂತಿಯ ಸಮಯದಲ್ಲಿ ಕೊಯ್ಲಿಗೆ ಸಿದ್ಧವಾಗುತ್ತದೆ. ಮೂರು ತಿಂಗಳ ಬೆಳೆಯಾದ ಇದರಲ್ಲಿ ಬಿಳಿ, ಚಿನ್ನದ ಅವರೆ, ಬಂಡೆ ಅವರೆ, ಸಿನುಗಲು, ದಬ್ಬೆ ಅವರೆ, ಬಳ್ಳಿ ಅವರೆ ಮುಂತಾದ ತಳಿಗಳಿವೆ.

**ಹಲಸಂದೆ :** ಇದು ಕೂಡ ರಾಗಿಯ ಸಾಲುಗಳಲ್ಲಿ ಬೆಳೆಯುವಂಥದ್ದು. ನೆಲದ ಫಲವತ್ತತೆ ಹೆಚ್ಚಿಸುವಲ್ಲಿ ಇದರ ಪಾತ್ರ ಹಿರಿದು. ಸಣ್ಣ ಹಲಸಂದೆ, ದೊಡ್ಡ ಹಲಸಂದೆ, ಬೂದು ಬಣ್ಣದ ಹಲಸಂದೆ ಎಂಬ ತಳಿಗಳಿವೆ.

**ಎಣ್ಣೆ ಕಾಳುಗಳು :** ಜಿಲ್ಲೆಯಾದ್ಯಂತ ನೆಲಗಡಲೆ, ಹರಳು, ಎಳ್ಳು, ಹುಚ್ಚೆಳ್ಳು, ಬೆಳೆಗಳು ಹೆಚ್ಚಾಗಿ ಕಂಡುಬರುತ್ತವೆ. ಸೂರ್ಯಕಾಂತಿ ಮಾತ್ರ ಹುಣಸೂರು, ನಂಜನಗೂಡು ಪ್ರದೇಶಗಳಲ್ಲಿ ಬಿತ್ತುವುದು ಕಾಣಬಹುದು.

**ಹರಳು :** ಬಯಲುಸೀಮೆಯ ರೈತರಿಗೆ ಹರಳು ಬಹು ಪರಿಚಿತ. ರಾಗಿಯ ಸಾಲುಗಳಲ್ಲಿ ಹೊಲಗಳ ಬದುಗಳಲ್ಲಿ ಬೆಳೆಯುವ ಇದು ಹೆಚ್ಚು ಶ್ರಮವನ್ನು ಬೇಡುವುದಿಲ್ಲ. ಬಹುವಾರ್ಷಿಕ, ವಾರ್ಷಿಕ ತಳಿಗಳಾಗಿ ಬೆಳೆಯುತ್ತಾರೆ. ಕೆಂಪು ಹರಳು, ಮರ ಹರಳು, ಚಿಟ್ಟ ಹರಳು, ದಪ್ಪ ಹರಳುಗಳೆಂಬ ತಳಿಗಳಿವೆ.

**ಹುಚ್ಚೆಳ್ಳು :** ಇದು ಕೂಡ ರಾಗಿಯ ಹೊಲದ ಸಾಲುಗಳು ಇಲ್ಲವೆ ಅಂಚಿನಲ್ಲಿ ಬೆಳೆಯುವ ಬೆಳೆಯಾಗಿದೆ. ಇದರ ಸುವಾಸನೆಗೆ ಕೀಟಗಳು ಬರುವುದಿಲ್ಲ. ಹೂಬಿಟ್ಟ ಸಂದರ್ಭದಲ್ಲಿ ಇಡೀ ಹೊಲವೇ ಹಳದಿ ಸೀರೆಯುಟ್ಟಂತೆ ನಳನಳಿಸುತ್ತಿರುತ್ತದೆ.

**ಸೂರ್ಯಕಾಂತಿ :** ಸೀಮೆ ಹುಚ್ಚೆಳ್ಳು ಎಂದು ಕೂಡ ಕರೆಯಲಾಗುವ ಇದು ಬಂಗಾರದ ಪಕಳೆಗಳನ್ನು ಹೊಂದಿದೆ. ಕಪ್ಪುಕಾಳಿನ ಸಾಧಾರಣ ತಳಿಗಳು ಎಲ್ಲೆಡೆ ಸಾಮಾನ್ಯವಾಗಿದೆ.

**ನೆಲಗಡಲೆ :** ಇದನ್ನು ಮಳೆಯಾಶ್ರಿತ ಭೂಮಿಯಲ್ಲಿ ಬೆಳೆಯುತ್ತಾರೆ. ಜೂನ್ ಕೊನೆಯಲ್ಲಿ ಅಥವಾ ಮೊದಲವಾರ ಬಿತ್ತನೆ ಮಾಡಿ ಅಕ್ಟೋಬರ್‌ನಲ್ಲಿ ಕೊಯಿಲು ಮಾಡುತ್ತಾರೆ. ನೀರಾವರಿ ಪ್ರದೇಶದಲ್ಲಿ ಬೇಸಗೆ ಬೆಳೆಯಾಗಿ ಬೆಳೆಯುತ್ತಾರೆ. ಅಂಬುಶೇಂಗಾ, ಗುತ್ತಿ ಶೇಂಗಾ ಪ್ರಮುಖ ತಳಿಗಳು.

ಎಳ್ಳು : ಪ್ರತ್ಯೇಕವಾಗಿ ಹೊಲಕ್ಕೆ ಚೆಲ್ಲಿ ಬೆಳೆಯಲಾಗುವ ಎಳ್ಳು ಪ್ರಮುಖವಾದ ಎಣ್ಣೆ ಕಾಳಾಗಿದೆ. ಕಪ್ಪು ಎಳ್ಳು ಸಾಮಾನ್ಯವಾಗಿ ಕಾಣಲಾಗುವ ತಳಿ.

**ವಾಣಿಜ್ಯ ಬೆಳೆಗಳು :** ಹತ್ತಿ, ತಂಬಾಕು, ಕಬ್ಬು ಇವನ್ನು ವಾಣಿಜ್ಯ ಬೆಳೆಗಳೆಂದು ಕರೆಯುತ್ತಾರೆ. ಹತ್ತಿಯನ್ನು ಹೆಚ್.ಡಿ. ಕೋಟೆಯ ಹತ್ತಿರದ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವುದು ಕಂಡುಬರುತ್ತದೆ. ಅದನ್ನು ಹೊರತುಪಡಿಸಿ ನಂಜನಗೂಡು, ಮೈಸೂರು, ಹುಣಸೂರು ತಾಲೂಕುಗಳಲ್ಲಿ ಬೆಳೆಯುತ್ತಾರೆ. ವರಲಕ್ಷ್ಮಿ, ಜಯಲಕ್ಷ್ಮಿ, ಸೇಐಲ್ಯಾಂಡ್ ಹತ್ತಿ ತಳಿಗಳು ಪ್ರಸಿದ್ಧವಾಗಿವೆ.

**ಕಬ್ಬು :** ಸಕ್ಕರೆ ನಾಡು ಮಂಡ್ಯ ಬಿಟ್ಟರೆ ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಜಿಲ್ಲೆ ಹೆಚ್ಚಾಗಿ ಬೆಳೆಯುವ ವಾಣಿಜ್ಯ ಬೆಳೆಯಾಗಿದೆ. ನೀರಾವರಿ ಆಶ್ರಿತ ಬೆಳೆ. ಕೆರೆ, ಕಾಲುವೆ, ನಾಲೆ, ಕೊಳವೆ ಬಾವಿಯ

ಅನುಕೂಲವಿದ್ದವರು ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮೈಸೂರು ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಮೊದಲ ತಾಲೂಕು ಹೆಚ್.ಡಿ. ಕೋಟೆಯಾಗಿದ್ದು, ಅನಂತರ ನಂಜನಗೂಡು, ಮೈಸೂರು, ಕೆ.ಆರ್. ನಗರ, ಟಿ. ನರಸೀಪುರ, ಪಿರಿಯಾಪಟ್ಟಣ, ಹುಣಸೂರು ತಾಲೂಕುಗಳು ಬರುತ್ತವೆ. 419 ವಿವಿಧ ತಳಿಗಳಿವೆ. ಈ ಬೆಳೆಯನ್ನು ಚೆನ್ನಾಗಿ ನಿರ್ವಹಣೆ ಮಾಡಿದಲ್ಲಿ ಉತ್ತಮ ಫಸಲನ್ನು ಪಡೆಯಬಹುದು. ಕಬ್ಬು ಅರೆಯುವ ಆಲೆಮನೆಗಳನ್ನು ವ್ಯಾವಹಾರಿಕ ಉದ್ದಿಮೆಯಾಗಿ ಬಳಸಿಕೊಂಡು 'ಬೆಲ್ಲ'ವನ್ನು ತಯಾರಿಸುತ್ತಾರೆ. ಕಬ್ಬು ಬೆಳೆಯಲು ಮೊದಲು ಕೊಟ್ಟಿಗೆ ಗೊಬ್ಬರವನ್ನೇ ಹೆಚ್ಚಾಗಿ ಬಳಸುತ್ತಿದ್ದರಿಂದ ಉತ್ಪನ್ನ ಕಡಿಮೆಯಾದರೂ ರೋಗಗಳ ಬಾಧೆ ಹೆಚ್ಚಿರಲಿಲ್ಲ.

**ರೇಷ್ಮೆ :** ಮೈಸೂರು ರೇಷ್ಮೆಸೀರೆ ದೇಶ - ವಿದೇಶಗಳಲ್ಲೂ ಪ್ರಖ್ಯಾತ. ಮೈಸೂರು ಜಿಲ್ಲೆಯಲ್ಲಿ ಇದು ಉದ್ದಿಮೆಯಾಗಿ ಬೆಳೆದಿದ್ದು, ಜಿಲ್ಲೆಯಾದ್ಯಂತ ಬೆಳೆಯುತ್ತಾರೆ. ಹಿಪ್ಪುನೇರಳೆ ಬೇಳೆ 1592.03 ವಿ. ಹೆ. ಇದ್ದು ಉತ್ಪಾದನೆ 918.434 ಟನ್ ಇದೆ. ಜಿಲ್ಲೆಯಲ್ಲಿ 548 ಗ್ರಾಮಗಳು ಈ ಕೃಷಿ ಕೈಗೊಂಡಿವೆ. ಎರಡು ರೇಷ್ಮೆ ಮಾರುಕಟ್ಟೆ ಕೇಂದ್ರಗಳು ಇವೆ. ಒಂದು ನಂಜನಗೂಡಿನಲ್ಲಿ ಮತ್ತೊಂದು ಹುಣಸೂರಿನಲ್ಲಿ. ಹಿಪ್ಪುನೇರಳೆ ಬೆಳೆಯಲು ಗಿಣ್ಣು ಇರುವ ಕಡ್ಡಿಗಳನ್ನು (ಮೂರು ಇಂಚು) ಎರಡು ಅಥವಾ ಮೂರಡಿ ಆಳದಲ್ಲಿ ನೆಡುತ್ತಿದ್ದರು. ಇದಕ್ಕೂ ಕೊಟ್ಟಿಗೆ ಗೊಬ್ಬರವೇ ಹೆಚ್ಚಿನ ಉಪಯೋಗ. ಮುಂಗಾರಿನ ಸಮಯದಲ್ಲಿ ನೆಡುತ್ತಿದ್ದು ವರ್ಷದ ಅಂತ್ಯದಲ್ಲಿ ಕಡ್ಡಿ ಕತ್ತರಿಸುತ್ತಿದ್ದರು. ಮಧ್ಯೆ ಸೊಪ್ಪುಗಳನ್ನು ಬಿಡಿಸಿ 365 ದಿನಕ್ಕೆ ಅಂದರೆ ವರ್ಷಕ್ಕೆ ಹತ್ತು ಬೆಳೆಗಳನ್ನು ಬೆಳೆಯುತ್ತಿದ್ದರು. ಸಣ್ಣ ಮಿಶ್ರ, ದಪ್ಪ ಮಿಶ್ರ ತಳಿಗಳನ್ನು ಹಾಕುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ರೇಷ್ಮೆ ಕೃಷಿ ಬಹಳ ಬದಲಾಗಿದೆ.

| ಕ್ರ.ಸಂ. | ತಾಲ್ಲೂಕು | ಹಿಪ್ಪು ನೇರಳೆ ಬೆಳೆ ವಿಸ್ತೀರ್ಣ | ರೇಷ್ಮೆಗೂಡು ಉತ್ಪಾದನೆ (ಟನ್ನುಗಳಲ್ಲಿ) | ರೇಷ್ಮೆ ಕೃಷಿ ಕೈಕೊಂಡಿರುವ ಗ್ರಾಮಗಳ ಸಂಖ್ಯೆ | ಕಸುಬು ಕೈಗೊಂಡ ರೈತರ ಸಂಖ್ಯೆ | | | | ಉತ್ಪಾದಿಸಿದ ರೇಷ್ಮೆಯ ಮೌಲ್ಯ (ಲಕ್ಷ ರೂ.ಗಳಲ್ಲಿ) | ರೇಷ್ಮೆ ಗೂಡಿನ ಮಾರುಕಟ್ಟೆಗಳು |
|---|---|---|---|---|---|---|---|---|---|---|
| | | | | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | ಒಟ್ಟು | | |
| 1 | 2 | | | | | | | | | |
| 1. | ಹೆಚ್.ಡಿ.ಕೋಟೆ | 135.7 | 62.135 | 75 | 33 | 15 | 194 | 242 | 174.253 | – |
| 2. | ಹುಣಸೂರು | 54.72 | 33.654 | 55 | 14 | 13 | 92 | 119 | 90.616 | 1 |
| 3. | ಕೆ.ಆರ್.ನಗರ | 104.37 | 74.596 | 74 | 32 | 8 | 318 | 358 | 170.963 | – |
| 4. | ಮೈಸೂರು | 199.5 | 152.696 | 75 | 19 | 1 | 348 | 368 | 419.492 | – |
| 5. | ನಂಜನಗೂಡು | 624.16 | 207.965 | 97 | 100 | 11 | 971 | 1082 | 494.532 | 1 |
| 6. | ಪಿರಿಯಾಪಟ್ಟಣ | 78.55 | 53.912 | 57 | 18 | 24 | 101 | 143 | 160.536 | – |
| 7. | ಟಿ. ನರಸೀಪುರ | 395.03 | 333.476 | 115 | 71 | 6 | 910 | 987 | 777.914 | – |
| | **ಜಿಲ್ಲಾಮೊತ್ತ** | **1592.03** | **918.434** | **548** | **287** | **78** | **2934** | **3299** | **2288.306** | **2** |

**ತಂಬಾಕು :** ಈ ಬೆಳೆಯನ್ನು ಹುಣಸೂರು ತಾಲೂಕು ವಿಭಾಗದಲ್ಲಿ ಕಾಣಬಹುದು. ಹೆಚ್.ಡಿ. ಕೋಟೆ, ಕೆ.ಆರ್. ನಗರ, ಪಿರಿಯಾಪಟ್ಟಣದಲ್ಲಿ ಮಧ್ಯಮ ಪ್ರಮಾಣದಲ್ಲಿ ಹಾಗೂ ಮೈಸೂರು, ನಂಜನಗೂಡು ತಾಲೂಕುಗಳಲ್ಲಿ ಅತಿ ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಾರೆ. ವಿವಿಧ ತಳಿಗಳನ್ನು ಬೆಳೆಯುತ್ತಾರೆ. ಇವು 150 ರಿಂದ 170 ದಿನಗಳಲ್ಲಿ ಕೊಯಿಲಿಗೆ ಬರುತ್ತವೆ. ಜಿಲ್ಲೆಯಲ್ಲಿ ತಂಬಾಕು ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. 1958-86ರಲ್ಲಿ 10.146 ಹೆಕ್ಟೇರ್ ವಿಸ್ತೀರ್ಣ ಹರಡಿತ್ತು. ಪ್ರಮುಖವಾಗಿ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್. ನಗರ, ಹೆಗ್ಗಡದೇವನ ಕೋಟೆ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಬೆಳೆಯುತ್ತಾರೆ. ಈಗಿನ ವಿಶೇಷ, ಇ1, 12 ಏ51 ತಳಿಗಳು 150 ರಿಂದ 170 ದಿವಸಗಳ ಬೆಳೆಗಳಾಗಿವೆ. 1985ರ ಸಮಯದಲ್ಲಿ ಕುಂಕುಮತಿ ಬೀಡಿ ತಂಬಾಕು ತಳಿ ಬೆಳೆಯುತ್ತಿದ್ದರು. ಹುಣಸೂರಿನಲ್ಲಿ ಸುಧಾರಿತ ತಳಿಗಳನ್ನು ಬೆಳೆಯುತ್ತಾರೆ. 1984 ರಲ್ಲಿ ಕೇಂದ್ರ ಸರ್ಕಾರವು ತಂಬಾಕು ಮಂಡಳಿಯನ್ನು ಸ್ಥಾಪಿಸಿತು. ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ 3906 ಹೆ. ಹುಣಸೂರಿನಲ್ಲಿ 32256 ಹೆ. ಕೆ.ಆರ್. ನಗರದಲ್ಲಿ 10800 ಹೆ. ಮೈಸೂರಿನಲ್ಲಿ 12 ಹೆ. ನಂಜನಗೂಡಿನಲ್ಲಿ 350 ಹೆ. ಪಿರಿಯಾಪಟ್ಟಣದಲ್ಲಿ 31570 ಹೆ. ತಂಬಾಕು ಬೆಳೆಯುತ್ತಾರೆ. ಜಿಲ್ಲೆಯಾದ್ಯಂತ ಒಟ್ಟು 78894 ಹೆ. ವಿಸ್ತೀರ್ಣದಲ್ಲಿ ತಂಬಾಕು ಬೆಳೆಯಲಾಗುತ್ತದೆ.

ವಾಣಿಜ್ಯ ಬೆಳೆಗಳ ವಿಸ್ತೀರ್ಣ ಕೆಳಗಿನಂತಿದೆ.

**ತೋಟಗಾರಿಕಾ ಬೆಳೆಗಳು :** ತೋಟಗಾರಿಕಾ ಬೆಳೆಗಳಲ್ಲಿ ಹಣ್ಣಿನ ಬೆಳೆಗಳು, ತರಕಾರಿ ಬೆಳೆಗಳು, ಸಾಂಬಾರು ಬೆಳೆಗಳು, ಹೂವಿನ ಬೆಳೆಗಳು ಮತ್ತು ಔಷಧೀಯ ಬೆಳೆಗಳು ಎಂದು ವಿಂಗಡಿಸಬಹುದು. ಜಿಲ್ಲೆಯಾದ್ಯಂತ 2011-2012ರ ಸಾಲಿನಲ್ಲಿ ಹಣ್ಣಿನ ಬೆಳೆಗಳ ವಿಸ್ತೀರ್ಣ 10151.00 ಹೆ. ವಿ. ಇದ್ದು, ಉತ್ಪನ್ನ 181444.75 ರಷ್ಟಿದೆ. ಶೇ. 17.87 ರಷ್ಟು ಇಳುವರಿ ಇದೆ. ತರಕಾರಿ ಬೆಳೆಗಳ ವಿ. 6535.00 ಹೆ. ಉತ್ಪನ್ನ 125184 50, ಇಳುವರಿ ಶೇ. 13.77ರಷ್ಟಿದೆ. ಸಾಂಬಾರು ಬೆಳೆಗಳು 8608.00 ವಿ. ಹೊಂದಿದ್ದು 118527.30 ಉತ್ಪನ್ನವಿದೆ. ಶೇ. 13.77 ಇಳುವರಿ ಬಂದಿದೆ. ತೋಟದ ಬೆಳೆಗಳು 27012.00 ಹೆ. ವಿಸ್ತೀರ್ಣವಿದ್ದು ಉತ್ಪನ್ನ 7210.90 ಇದೆ. ವಾಣಿಜ್ಯ ಪುಷ್ಪಗಳು ವಿಸ್ತೀರ್ಣ 816.00 ಹೆಕ್ಟೇರ್ ಉತ್ಪನ್ನ 5287.90 ಇದ್ದು ಇಳುವರಿ ಶೇ. 6.48 ರಷ್ಟಿದೆ. ಹಿಂಗಾರು ಮತ್ತು ಮುಂಗಾರುಗಳಲ್ಲಿ ಇಳುವರಿ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತದೆ. ತರಕಾರಿ ಬೆಳೆಗಳು ಪ್ರಮುಖವಾಗಿ ಆಲೂಗಡ್ಡೆ, ಟೊಮ್ಯಾಟೋ, ಈರುಳ್ಳಿ, ಬದನೆಕಾಯಿ, ಹುರುಳಿಕಾಯಿ, ಹಸಿಮೆಣಸಿನಕಾಯಿ, ಮರಗೆಣಸು, ಎಲೆಕೋಸು, ಹೂಕೋಸು, ಬೆಂಡೆಕಾಯಿ, ಮೂಲಂಗಿ, ಬೀಟ್ರೂಟ್, ಕ್ಯಾರೆಟ್, ದಪ್ಪ ಮೆಣಸಿನಕಾಯಿ, ನುಗ್ಗೆಕಾಯಿ, ಗೋರಿಕಾಯಿ, ಸುವರ್ಣಗೆಡ್ಡೆ,

ಕುಂಬಳಕಾಯಿ, ಬೂದುಗುಂಬಳ, ಪಡುವಲಕಾಯಿ, ಹಾಗಲಕಾಯಿ, ಹೀರೆಕಾಯಿ, ಸೌತೆಕಾಯಿ. ಮುಂತಾದವುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದರೊಂದಿಗೆ ಸೊಪ್ಪಿನ ತರಕಾರಿಗಳೂ ಸೇರಿವೆ. ಇದರ ತಾಲ್ಲೂಕುವಾರು ಪಟ್ಟಿ ಈ ಕೆಳಗಿದೆ.

**ಮುಖ್ಯ ತರಕಾರಿ ಬೆಳೆಗಳ ಉತ್ಪಾದನೆ (ಟನ್ನುಗಳಲ್ಲಿ)**

| ಕ್ರಸಂ. | ತಾಲ್ಲೂಕು | ಆಲೂಗಡ್ಡೆ | ಟಮಟೋ | ಬದನೆ | ಹುರಳಿ ಕಾಯಿ | ಗೋರಿ ಕಾಯಿ | ಈರುಳ್ಳಿ | ಹಸಿರು ಮೆಣಸಿನಕಾಯಿ | ಒಟ್ಟು ಸೊಪ್ಪಿನ ತರಕಾರಿಗಳು | ಒಟ್ಟು ಕುಂಬಳ ಜಾತಿ ತರಕಾರಿಗಳು |
|---|---|---|---|---|---|---|---|---|---|---|
| **1** | **2** | | | | | | | | | |
| 1. | ಹೆಚ್.ಡಿ.ಕೋಟೆ | 25 | 12050 | 3300 | 360 | 60 | 90 | 1225 | 525 | 1990 |
| 2. | ಹುಣಸೂರು | 0 | 5700 | 600 | 420 | – | – | 3225 | 160 | 671 |
| 3. | ಕೆ.ಆರ್.ನಗರ | 0 | 11500 | 1100 | 580 | – | – | 4200 | 160 | 286 |
| 4. | ಮೈಸೂರು | 0 | 15875 | 2125 | 550 | – | – | 1800 | 245 | 1142 |
| 5. | ನಂಜನಗೂಡು | 0 | 2650 | 1378 | 180 | – | 150 | 1888 | 370 | 600 |
| 6. | ಪಿರಿಯಾಪಟ್ಟಣ | 990 | 1740 | – | – | – | – | 9300 | – | 400 |
| 7. | ಟಿ.ನರಸೀಪುರ | 100 | 3950 | 875 | 500 | – | 480 | 600 | 129 | 1233 |
| | **ಜಿಲ್ಲಾಮೊತ್ತ** | **1115** | **53465** | **9378** | **2590** | **60** | **720** | **22238** | **1589** | **6322** |

ತಾಲ್ಲೂಕುವಾರುಗಳಲ್ಲಿ ಕೆಲವು ಪ್ರದೇಶಗಳಿಗನುಗುಣವಾಗಿ ಬೆಳೆಯುವ ತರಕಾರಿಗಳಲ್ಲಿ ವ್ಯತ್ಯಾಸವಿದೆ. ದಪ್ಪಮೆಣಸಿನಕಾಯಿ ಮತ್ತು ಕ್ಯಾರೆಟ್ ಹೊರತುಪಡಿಸಿ ಎಲ್ಲ ತರಕಾರಿಗಳನ್ನು ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಬೆಳೆಯಲಾಗುತ್ತದೆ. ಮೈಸೂರು ಪಿರಿಯಾಪಟ್ಟಣಗಳಲ್ಲಿ ಹೂಕೋಸನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ. ಟೊಮ್ಯಾಟೋ ಎಲ್ಲ ತಾಲ್ಲೂಕುಗಳಲ್ಲಿಯೂ ಹೇರಳವಾಗಿ ಉತ್ಪಾದನೆಯಾಗುತ್ತದೆ. ಜಿಲ್ಲೆಯಾದ್ಯಂತ ಟೊಮ್ಯಾಟೊವನ್ನು 2357 ಹೆ. ಪ್ರದೇಶಗಳಲ್ಲಿ ಬೆಳೆಯುತ್ತಾರೆ. 53465 ಟನ್ ಉತ್ಪಾದನೆ ಇದೆ. ಶೇ. 22.68ರಷ್ಟು ಇಳುವರಿ ಇದೆ. ಈರುಳ್ಳಿಯನ್ನು ಹೆಚ್.ಡಿ. ಕೋಟೆ, ನಂಜನಗೂಡು, ಟಿ. ನರಸೀಪುರಗಳಲ್ಲಿ ಕಾಣಬಹುದು. ತೊಂಡೆಕಾಯಿ ಮತ್ತು ಸಣ್ಣಸೌತೆಕಾಯಿ ಬೆಳೆಯುವುದು ಟಿ. ನರಸೀಪುರದ ವಿಶೇಷತೆಯಾಗಿದೆ. ಮೈಸೂರಿನ ಈರನಗೆರೆ ಬದನೆಕಾಯಿ ಬಹಳ ಪ್ರಸಿದ್ಧ. ಜಿಲ್ಲೆಯಾದ್ಯಂತ 9378 ಟನ್ ಉತ್ಪನ್ನವಿದೆ. ಹುರುಳಿಕಾಯಿ ಜಿಲ್ಲೆಯಾದ್ಯಂತ 311 ಹೆ. ವಿಸ್ತೀರ್ಣದಲ್ಲಿದ್ದು 2590 ಟನ್ ಉತ್ಪನ್ನವಿದೆ. ಪಿರಿಯಾಪಟ್ಟಣದಲ್ಲಿ ಹಸಿರುಮೆಣಸಿನಕಾಯಿಯ ಉತ್ಪಾದನೆ ಇದೆ. ಜಿಲ್ಲೆಯಲ್ಲಿ 1253 ಹೆ. ವಿಸ್ತೀರ್ಣದಲ್ಲಿ 22288 ಲಕ್ಷ ಟನ್ ಉತ್ಪನ್ನವಿದೆ. ಮರಗೆಣಸು ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಕಂಡು ಬರುತ್ತದೆ. 37 ಹೆ. ವಿಸ್ತೀರ್ಣದಲ್ಲಿ ಬೆಳೆಯುವ ಇದರ ಉತ್ಪಾದನೆ 1036 ಟನ್ ರಷ್ಟಿದೆ. ಸಿಹಿ ಗೆಣಸನ್ನು ಹೆಚ್.ಡಿ. ಕೋಟೆ ಮತ್ತು ಟಿ. ನರಸೀಪುರಗಳಲ್ಲಿ ಬೆಳೆಯುತ್ತಾರೆ.

**ಸಂಬಾರು ಪದಾರ್ಥಗಳು :** ಮಸಾಲೆ ಪದಾರ್ಥಗಳಾದ ದಾಲ್ಚಿನ್ನಿ, ಮೆಣಸು, ಏಲಕ್ಕಿ, ಹುಣಿಸೆ, ಅರಿಸಿನ, ಶುಂಠಿ, ಧನಿಯಾ, ಒಣಮೆಣಸಿನಕಾಯಿ ಲವಂಗ, ಜೀರಿಗೆ, ಮೆಂತ್ಯ ಮುಂತಾದ ಪದಾರ್ಥಗಳಲ್ಲಿ ಕೆಲವೇ ಕೆಲವನ್ನು ಮಾತ್ರ ಈ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಮೆಣಸನ್ನು ಹೆಚ್.ಡಿ. ಕೋಟೆ, ಮೈಸೂರು ಮತ್ತು ಟಿ. ನರಸೀಪುರಗಳಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಹುಣಿಸೆ ಕೃಷ್ಣರಾಜ ನಗರ ಮತ್ತು ಪಿರಿಯಾಪಟ್ಟಣ ಹೊರತುಪಡಿಸಿ ಮಿಕ್ಕೆಲ್ಲ ಪ್ರದೇಶದಲ್ಲಿ ಉತ್ಪಾದನೆ ಇದೆ. ಅರಿಸಿನ ಕೃಷಿ ಜಿಲ್ಲೆಯಾದ್ಯಂತ ಇದ್ದು ಹೆಚ್.ಡಿ. ಕೋಟೆ ತಾಲ್ಲೂಕು ಪ್ರದೇಶದಲ್ಲಿ ಹೆಚ್ಚಿನ ಉತ್ಪಾದನೆ ಕಂಡುಬರುತ್ತದೆ. ಒಣಮೆಣಸಿನಕಾಯಿ, ದನಿಯಾ ಇವು ಹುಣಸೂರು ಮತ್ತು ಟಿ. ನರಸೀಪುರ ತಾಲ್ಲೂಕುಗಳಲ್ಲಿ ಅಲ್ಪ ಪ್ರಮಾಣದಲ್ಲಿ ಕಂಡುಬರುತ್ತವೆ.

**ತೋಟದ ಬೆಳೆಗಳು :** ತೆಂಗು, ಅಡಕೆ, ವೀಳ್ಯೆದೆಲೆ, ಕೋಕೋ, ತಾಳೆ ಬೆಳೆ, ಗೋಡಂಬಿಗಳನ್ನು ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ. ತೆಂಗಿನ ಉತ್ಪಾದನೆ ಅತ್ಯಧಿಕವಾಗಿದ್ದು 2011-12ರ ಸಾಲಿನಲ್ಲಿ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ 2050 ಹೆ. ವಿ.ದಲ್ಲಿ 246 ಲಕ್ಷ ಉತ್ಪಾದನೆಯಾಗಿದೆ. ಹುಣಸೂರಿನಲ್ಲಿ 5620 ಹೆ.ನಲ್ಲಿ 674 ಲಕ್ಷ ಕಾಯಿಗಳು ಬಂದಿವೆ. ಕೆ.ಆರ್. ನಗರದಲ್ಲಿ 1794 ಹೆ.ನಲ್ಲಿ 172 ಲಕ್ಷ, ಮೈಸೂರಿನಲ್ಲಿ 4520 ಹೆ. ಪ್ರದೇಶಕ್ಕೆ 542.40 ಲಕ್ಷ ಕಾಯಿಗಳು ನಂಜನಗೂಡಿನಲ್ಲಿ 3199 ಹೆ. ಪ್ರದೇಶದಲ್ಲಿ 431.86 ಲಕ್ಷ, ಪಿರಿಯಾಪಟ್ಟಣದಲ್ಲಿ 5512 ಹೆ.ನಲ್ಲಿ 661.45 ಮತ್ತು ಟಿ. ನರಸೀಪುರದಲ್ಲಿ 2475 ಹೆ. 297 ಲಕ್ಷ ಕಾಯಿಯ ಇಳುವರಿ ಬಂದಿದೆ.

**ಅಡಕೆ :** ತೆಂಗಿನಂತೆಯೇ ಅಡಕೆ ಇಳುವರಿ ಪ್ರಮಾಣ ಅಧಿಕವಾಗಿದೆ. ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ 100 ಹೆ. ವಿಸ್ತೀರ್ಣಕ್ಕೆ 100 ಟನ್ ಉತ್ಪಾದನೆಯಾಗಿದೆ. ಹುಣಸೂರಿನಲ್ಲಿ 360 ಹೆ. ಪ್ರದೇಶಕ್ಕೆ 405 ಟನ್, ಕೆ.ಆರ್. ನಗರದಲ್ಲಿ 171 ಹೆ. ಪ್ರದೇಶದಲ್ಲಿ 205 ಟನ್, ಮೈಸೂರಿನಲ್ಲಿ 25 ಹೆ. ಪ್ರದೇಶದಲ್ಲಿ 30 ಟನ್ ಪಿರಿಯಾಪಟ್ಟಣದಲ್ಲಿ 465 ಹೆ. ಪ್ರದೇಶಧಲ್ಲಿ 697.50 ಟನ್, ನಂಜನಗೂಡಿನಲ್ಲಿ 17 ಹೆ.ಗೆ. 20.40 ಟನ್ ಮತ್ತು ಟಿ. ನರಸೀಪುರದಲ್ಲಿ 465 ಹೆ. ಪ್ರದೇಶಕ್ಕೆ 28 ಟನ್ ಅಡಕೆ ಇಳುವರಿ ಬಂದಿದೆ. ಒಟ್ಟು ಜಿಲ್ಲೆಯಾದ್ಯಂತ 1160 ಹೆ. ವಿಸ್ತೀರ್ಣದಲ್ಲಿ 1486.10 ಯಷ್ಟು ಉತ್ಪಾದನೆಯಾಗಿದೆ.

**ವೀಳ್ಯೆದೆಲೆ :** ಮೈಸೂರು ವೀಳ್ಯೆದೆಲೆ ಎಂದು ಪ್ರಸಿದ್ಧವಾಗಿರುವ ಚಿಗುರು ಎಲೆ ಬಹಳ ಸ್ವಾದಿಷ್ಟಕರವಾಗಿರುತ್ತದೆ. ನೋಡಲು ಬಿಳಿದಾದ

ಎಲೆಯಾಗಿದ್ದು, ಹೆಚ್ಚು ಖಾರವಿಲ್ಲದ, ಸ್ವಲ್ಪ ಒಗರಾಗಿರುವ ಎಲೆಯನ್ನು ಜಿಲ್ಲೆಯಾದ್ಯಂತ ಬೆಳೆಯಲಾಗುತ್ತದೆ. ಹೆಚ್.ಡಿ. ಕೋಟೆಯಲ್ಲಿ 10 ಹೆ. ವಿಸ್ತೀರ್ಣಕ್ಕೆ 2 ರಷ್ಟು ಉತ್ಪನ್ನವಿದ್ದರೆ, ಹುಣಸೂರಿನಲ್ಲಿ 2 ಹೆಕ್ಟೇರ್ ಪ್ರದೇಶದಲ್ಲಿ 34 ಲಕ್ಷ ಎಲೆ ಉತ್ಪಾದನೆ ಇದೆ. ಕೆ.ಆರ್. ನಗರದಲ್ಲಿ 30 ಹೆಕ್ಟೇರ್ ಪ್ರದೇಶದಲ್ಲಿ 600 ರಷ್ಟು ಇಳುವರಿ ಇದೆ. ಮೈಸೂರಿನಲ್ಲಿ 25 ಹೆ. ಪ್ರದೇಶದಲ್ಲಿ 375 ಲಕ್ಷ ಇಳುವರಿ ಇದೆ. ನಂಜನಗೂಡಿನಲ್ಲಿ 18 ಹೆ.ಗೆ. 27 ಲಕ್ಷ ಉತ್ಪಾದನೆ, ಪಿರಿಯಾಪಟ್ಟಣ ಮತ್ತು ಟಿ. ನರಸೀಪುರಗಳಲ್ಲಿ ಕ್ರಮವಾಗಿ 11 ಹೆ. ಪ್ರದೇಶಕ್ಕೆ 220 ಲಕ್ಷ ಮತ್ತು 4 ಹೆ.ಗೆ 60 ಲಕ್ಷ ಇಳುವರಿಯಾಗಿದೆ.

**ಕೋಕೋ :** ವಾಣಿಜ್ಯ ಬೆಳೆಯಾಗಿ ಬೆಳೆಯಲ್ಪಡುವ ಕೋಕೋವನ್ನು ನಂಜನಗೂಡು, ಪಿರಿಯಾಪಟ್ಟಣ, ಹೊರತುಪಡಿಸಿ ಮಿಕ್ಕೆಲ್ಲ ಕಡೆ ಬೆಳೆಯುತ್ತಾರೆ. 20 ಹೆ. ವಿಸ್ತೀರ್ಣದಲ್ಲಿ ಶೇ. 0.60ರಷ್ಟು ಇಳುವರಿ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿದೆ. ಹುಣಸೂರಿನಲ್ಲಿ 4 ಹೆ. ಪ್ರದೇಶಕ್ಕೆ 6 ರಷ್ಟು, ಕೆ.ಆರ್. ನಗರದಲ್ಲಿ 3 ಹೆ, ವಿಸ್ತೀರ್ಣಕ್ಕೆ ಶೇ. 0.60 ಇಳುವರಿ ಇದೆ. ಮೈಸೂರಿನಲ್ಲಿ 10 ಹೆ. ವಿಸ್ತೀರ್ಣಕ್ಕೆ 0.50 ಶೇಕಡವಾರು ಇಳುವರಿಯಾಗಿದೆ. ಜಿಲ್ಲೆಯಲ್ಲಿ 102.70 ಹೆ. ಪ್ರದೇಶದಲ್ಲಿ ಕೋಕೋವಿನ ಇಳುವರಿ ಶೇ. 1.00 ರಷ್ಟಿದೆ.

**ತಾಳೆ ಬೆಳೆ :** ಎಣ್ಣೆಗಾಗಿ ಬೆಳೆಯುವ ಈ ಬೆಳೆಯ ಉತ್ಪಾದನೆ ಜಿಲ್ಲೆಯಾದ್ಯಂತ ಉತ್ತಮವಾಗಿಯೇ ಇದೆ. ಒಟ್ಟು 507 ಹೆ. ವಿಸ್ತೀರ್ಣದಲ್ಲಿ 5642ರಷ್ಟು ಉತ್ಪನ್ನವಿದ್ದು, ಶೇ. 11.31 ರಷ್ಟು ಇಳುವರಿ ಇದೆ. ತಾಲ್ಲೂಕುವಾರುಗಳಲ್ಲಿ ಹೆಚ್.ಡಿ. ಕೋಟೆಯಲ್ಲಿ 140 ಹೆ. ಪ್ರದೇಶದಲ್ಲಿ 1680 ಉತ್ಪನ್ನವಿದೆ. ಹುಣಸೂರಿನಲ್ಲಿ 90 ಹೆ. ವಿಸ್ತೀರ್ಣಕ್ಕೆ 900 ಉತ್ಪಾದನೆ, ಕೆ.ಆರ್. ನಗರದಲ್ಲಿ 10 ಹೆ. ಪ್ರದೇಶದಲ್ಲಿ 90 ರಷ್ಟು ಉತ್ಪಾದನೆ, ಮೈಸೂರಿನಲ್ಲಿ 8.00 ಹೆ. ವಿಸ್ತೀರ್ಣದಲ್ಲಿ 18 ರಷ್ಟು ಉತ್ಪಾದನೆ ಇದೆ. ನಂಜನಗೂಡಿನಲ್ಲಿ 49 ಹೆ.ಗೆ, 784ರಷ್ಟು, ಪಿರಿಯಾಪಟ್ಟಣದಲ್ಲಿ 110 ಹೆ.ಗೆ. 1120 ಮತ್ತು ಟಿ. ನರಸೀಪುರದಲ್ಲಿ 100 ಹೆ.ಗೆ. 1050 ರಷ್ಟು ಉತ್ಪಾದನೆಯಾಗಿದೆ.

**ಬಾಳೆ :** ಮೈಸೂರು ಜಿಲ್ಲೆಯಾದ್ಯಂತ ಅತಿ ಹೆಚ್ಚು ಉತ್ಪಾದನೆಯಾಗುವ ಹಣ್ಣೆಂದರೆ ಬಾಳೆಹಣ್ಣು. ನಂಜನಗೂಡು ತನ್ನ ರಸಬಾಳೆಗೆ ಪ್ರಸಿದ್ಧವಾಗಿದೆ. ಚಿಕ್ಕ ದಪ್ಪನಾದ ರಸಭರಿತವಾದ ಈ ಹಣ್ಣು ಉತ್ತಮ ಪೌಷ್ಠಿಕಾಂಶವುಳ್ಳದ್ದೂ ಹೌದು. ಅಧಿಕ ಬೆಲೆಯುಳ್ಳದ್ದಾಗಿದೆ. ಬಾಳೆ ಹಣ್ಣಿನ ಸ್ಥಾನದಲ್ಲಿ ಮಾವು, ಸಪೋಟ, ಪಪ್ಪಾಯಿ, ಕಲ್ಲಂಗಡಿ, ಸೀಬೆ, ನಿಂಬೆ, ದಾಳಿಂಬೆ, ದ್ರಾಕ್ಷಿ, ಹಲಸು ಮುಂತಾದವನ್ನು ಬೆಳೆಯಲಾಗುತ್ತದೆ. ಆದರೆ ಮೂಸಂಬಿ, ಕಿತ್ತಳೆ, ಅನಾನಸ್, ಬೋರೆ, ಸೀತಾಫಲದಂತಹ ಹಣ್ಣುಗಳು ಕಂಡುಬರುವುದಿಲ್ಲ. ಒಟ್ಟು ಜಿಲ್ಲೆಯಾದ್ಯಂತ ಎಲ್ಲಾ ರೀತಿಯ ಬಾಳೆಹಣ್ಣಿನ ಇಳುವರಿ 125695 ಟನ್ ಉತ್ಪಾದನೆಯಾಗುತ್ತದೆ. ಪಚ್ಚಬಾಳೆಯು ಒಟ್ಟು 1127 ಹೆ. ಪ್ರದೇಶದಲ್ಲಿ 39130 ಉತ್ಪಾದನೆಯಾಗುತ್ತದೆ. ಇತರೆ ಬಾಳೆಗಳು 4077 ಹೆ. ಪ್ರದೇಶದಲ್ಲಿ ಬೆಳೆದಿದ್ದು 86565 ರಷ್ಟು ಉತ್ಪಾದನೆಯಾಗಿದೆ.

ಮಾವು 3517 ಹೆ. ಪ್ರದೇಶದಲ್ಲಿ 33655 ರಷ್ಟು ಉತ್ಪಾದನೆಯಾಗಿದ್ದು, ನಿಂಬೆಯನ್ನು ಹೆಚ್.ಡಿ. ಕೋಟೆ, ನಂಜನಗೂಡು ಮತ್ತು ಟಿ. ನರಸೀಪುರಗಳಲ್ಲಿ ಬೆಳೆಯಲಾಗುತ್ತದೆ. 200 ಟನ್ ಉತ್ಪಾದನೆ ಹೆಚ್.ಡಿ. ಕೋಟೆಯಲ್ಲಿ 40 ಟನ್ ರಷ್ಟು ನಂಜನಗೂಡಿನಲ್ಲಿ, 500 ಟನ್ ನಷ್ಟು ಟಿ. ನರಸೀಪುರಗಳಲ್ಲಿ ಉತ್ಪಾದನೆಯಾಗಿದೆ. ಸೀಬೆ 57 ಹೆ. ನಲ್ಲಿ 499 ರಲ್ಲಿ ಉತ್ಪಾದನೆಯಾಗಿದೆ. ಹುಣಸೂರು, ಮೈಸೂರು, ನಂಜನಗೂಡು, ಪಿರಿಯಾಪಟ್ಟಣ, ಟಿ. ನರಸೀಪುರಗಳಲ್ಲಿ ಈ ಹಣ್ಣನ್ನು ಬೆಳೆಯುತ್ತಾರೆ. ಒಟ್ಟು 1069ರಷ್ಟು ಹೆ. ವಿಸ್ತೀರ್ಣದಲ್ಲಿ 10029 ರಷ್ಟು ಉತ್ಪಾದನೆಯಾಗಿದೆ. ದಾಳಿಂಬೆಯನ್ನು ಟಿ. ನರಸೀಪುರದಲ್ಲಿ ಮಾತ್ರ ಬೆಳೆಯಲಾಗಿದ್ದು 3 ಹೆ. ವಿಸ್ತೀರ್ಣದಲ್ಲಿ 30 ರಷ್ಟು ಉತ್ಪಾದನೆ ಇದೆ. ಹಲಸು ಹೆಚ್.ಡಿ. ಕೋಟೆ, ನಂಜನಗೂಡು, ಟಿ. ನರಸೀಪುರಗಳಲ್ಲಿ ಮಾತ್ರ ಇಳುವರಿ ಕಂಡುಬರುತ್ತದೆ.

**ಕಲ್ಲಂಗಡಿ :** ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ 6750 ರಷ್ಟು ಉತ್ಪನ್ನವಿದೆ. ಹುಣಸೂರಿನಲ್ಲಿ 300 ರಷ್ಟು, ಕೆ.ಆರ್.ನಗರದಲ್ಲಿ 1540, ಮೈಸೂರಿನಲ್ಲಿ 1050, ನಂಜನಗೂಡಲ್ಲಿ 4050, ಪಿರಿಯಾಪಟ್ಟಣದಲ್ಲಿ 200 ಮತ್ತು ಟಿ. ನರಸೀಪುರದಲ್ಲಿ 1200 ರಷ್ಟು ಉತ್ಪನ್ನವಿದೆ.

**ಸೊಪ್ಪು ತರಕಾರಿಗಳು :** ಮೆಂತ್ಯ, ಪಾಲಕ್, ದಂಟು, ಕರಿಬೇವು, ಪ್ರಮುಖವಾಗಿ ಬೆಳೆಯುವ ಸೊಪ್ಪಿನ ತರಕಾರಿಗಳು. ಆದರೂ ಎಲ್ಲ ರೀತಿಯ ಸೊಪ್ಪುಗಳ ಉತ್ಪಾದನೆ ಇದೆ. ಕೊತ್ತಂಬರಿಗಳಂತಹ ಸೊಪ್ಪುಗಳ

**ಮುಖ್ಯ ತೋಟಗಾರಿಕೆ ಬೆಳೆಗಳ ಉತ್ಪಾದನೆ (ಹಣ್ಣುಗಳು) (ಮೆಟ್ರಿಕ್ ಟನ್ನುಗಳಲ್ಲಿ**

| ಕ್ರ. ಸಂ. | ತಾಲ್ಲೂಕು | ಬಾಳೆ | ಮಾವು | ನಿಂಬೆ | ಪೈನಾಪಲ್ | ಸೀಬೆ | ದ್ರಾಕ್ಷಿ | ಸಪೋಟ | ದಾಳಿಂಬೆ | ಪಪ್ಪಾಯ |
|---|---|---|---|---|---|---|---|---|---|---|
| **1** | **2** | **707** | **708** | **709** | **710** | **711** | **712** | **713** | **714** | **715** |
| 1. | ಹೆಚ್.ಡಿ.ಕೋಟೆ | 49245 | 7500 | 200 | – | – | – | 3000 | – | 4500 |
| 2. | ಹುಣಸೂರು | 22825 | 14900 | – | – | 300 | – | 4100 | – | 520 |
| 3. | ಕೆ.ಆರ್.ನಗರ | 3640 | 540 | – | – | – | – | 260 | – | 375 |
| 4. | ಮೈಸೂರು | 11835 | 4750 | – | – | 80 | – | 1000 | – | 2500 |
| 5. | ನಂಜನಗೂಡು | 23250 | 2100 | 40 | – | 90 | – | 224 | – | 1400 |
| 6. | ಪಿರಿಯಾಪಟ್ಟಣ | 10200 | 585 | – | – | 11 | – | 1085 | – | – |
| 7. | ಟಿ.ನರಸೀಪುರ | 4700 | 3280 | 500 | – | 18 | 240 | 360 | 30 | 840 |
| | **ಜಿಲ್ಲಾಮೊತ್ತ** | **125695** | **33655** | **740** | – | **499** | **240** | **10029** | **30** | **10135** |

ಇಳುವರಿ ಕಡಿಮೆ ಇದ್ದು ಪಕ್ಕದ ಜಿಲ್ಲೆಗಳಿಂದ ತರಿಸಿಕೊಳ್ಳಲಾಗುತ್ತದೆ. ಮೆಂತ್ಯಸೊಪ್ಪು, ಕೆ.ಆರ್.ನಗರ, ಮೈಸೂರು ಹಾಗೂ ಟಿ. ನರಸೀಪುರಗಳಲ್ಲಿ ಬೆಳೆಯುತ್ತಾರೆ. ಒಟ್ಟು ಜಿಲ್ಲೆಯಾದ್ಯಂತ ೨೬ ಹೆಕ್ಟೇರ್ ಪ್ರದೇಶದಲ್ಲಿ ೧೭೫ ರಷ್ಟು ಉತ್ಪಾದನೆ ಇದೆ. ಪಾಲಕ್ ಅನ್ನು ಹುಣಸೂರು, ಕೆ.ಆರ್. ನಗರ, ಮೈಸೂರು, ಟಿ. ನರಸೀಪುರಗಳಲ್ಲಿ ಬೆಳೆಯುತ್ತಾರೆ. ಜಿಲ್ಲೆಯಾದ್ಯಂತ ೩೨ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯುವ ಇದರ ಉತ್ಪನ್ನ ೧೫೨ ಟನ್ ರಷ್ಟಿದೆ. ದಂಟು ಹೆಚ್.ಡಿ. ಕೋಟೆ, ಹುಣಸೂರು, ಕೆ.ಆರ್. ನಗರ, ಮೈಸೂರು ಮತ್ತು ಟಿ. ನರಸೀಪುರಗಳಲ್ಲಿ ಬೆಳೆಯುವರು. ಈ ಸೊಪ್ಪು ಜಿಲ್ಲೆಯಲ್ಲಿ ಒಟ್ಟು ೫೯ ಹೆ. ವಿಸ್ತೀರ್ಣದಲ್ಲಿ ೭೭೭ ರಷ್ಟು ಉತ್ಪನ್ನ ಹೊಂದಿದೆ. ಕರಿಬೇವನ್ನು ಹೆಚ್.ಡಿ. ಕೋಟೆ, ಹುಣಸೂರು, ಕೆ.ಆರ್. ನಗರ, ಮೈಸೂರು, ಟಿ. ನರಸೀಪುರಗಳಲ್ಲಿ ಬೆಳೆಯುತ್ತಾರೆ. ಜಿಲ್ಲೆಯಾದ್ಯಂತ ೨೩ ಹೆಕ್ಟೇರ್ ವಿಸ್ತೀರ್ಣದಲ್ಲಿ ೬೫ ರಷ್ಟು ಉತ್ಪನ್ನವಿದೆ. ಕೆಲವು ಕಡೆ ಮನೆ ಅಂದಗಳಲ್ಲಿ ಬೆಳೆದುಕೊಳ್ಳುವ ಪರಿಪಾಠವೂ ಇದೆ. ಒಟ್ಟು ಸೊಪ್ಪಿನ ತರಕಾರಿಗಳು ೧೯೦ ಹೆ. ವಿಸ್ತೀರ್ಣದಲ್ಲಿ ೧೫೮೯ ರಷ್ಟು ಉತ್ಪನ್ನವಿದ್ದು ೮.೩೬ರಷ್ಟು ಇಳುವರಿ ಇದೆ.

**ಹೂವುಗಳು :** ಹೂವಿನ ಕೃಷಿ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚಾಗಿತ್ತು. ಈಗ ನೀರಾವರಿ ಸೌಕರ್ಯವಿರುವುದರಿಂದ ಹೂ ಬೆಳೆಸುವ ಪರಿಪಾಠ ಪ್ರಾರಂಭವಾಗಿದೆ. ಜಿಲ್ಲೆಯಾದ್ಯಂತ ಮಲ್ಲಿಗೆ, ಜಾಜಿ, ಕನಕಾಂಬರ, ಕಮಲ, ಸೇವಂತಿಗೆ, ಪಾರಿಜಾತ, ಸುಗಂಧರಾಜ, ಗುಲಾಬಿ, ಚೆಂಡುಮಲ್ಲಿಗೆ, ತಾವರೆ, ಸಂಪಿಗೆ ಮುಂತಾದ ಹೂವುಗಳು ಕಂಡುಬರುತ್ತವೆ. ಮೈಸೂರು ಮಲ್ಲಿಗೆಯೆಂದು ಪ್ರಸಿದ್ಧವಾಗಿರುವ ಮಲ್ಲಿಗೆಯು ತನ್ನ ಸುವಾಸನೆಯಿಂದಾಕರ್ಷಿತಗೊಳಿಸಿದೆ. ಸಣ್ಣ ಮರ್ಲೆ, ಮಧ್ಯಾಹ್ನದ ಮಲ್ಲಿಗೆ, ಸಂಜೆ ಮಲ್ಲಿಗೆ, ನಿತ್ಯ ಮಲ್ಲಿಗೆ, ಜಾಜಿಮಲ್ಲಿಗೆ, ಸೂಜಿ ಮಲ್ಲಿಗೆ, ಏಳ ಸುತ್ತಿನ ಮಲ್ಲಿಗೆ ಇವೆ. ಇದನ್ನು 'ಅತ್ತರ್'ಗಾಗಿಯೇ ಬೆಳೆಯುತ್ತಾರೆ. ಕೆಂಪು ಮಣ್ಣಿನ ಪ್ರದೇಶಗಳಲ್ಲಿ ಈ ಹೂವಿನ ಇಳುವರಿ ಹೆಚ್ಚಾಗಿರುತ್ತದೆ. ಮೈಸೂರಿನ ಹವಾಗುಣ ಇದಕ್ಕೆ ಹೆಚ್ಚು ಹೊಂದಿಕೆಯಾಗಿದೆ.

**ಬಿತ್ತನೆ ಬೀಜಗಳು ವಿತರಣೆ (ಕ್ವಿಂಟಾಲ್‌ಗಳಲ್ಲಿ)**

| ಕ್ರಸಂ. | ತಾಲ್ಲೂಕು | ಬತ್ತ | ಜೋಳ | ಸಜ್ಜೆ | ಮೆಕ್ಕೆಜೋಳ | ರಾಗಿ | ತೊಗರಿ | ಹುರಳಿ | ಉದ್ದು | ಹೆಸರು | ಕಡಲೆ | ಶೇಂಗಾ | ಸೂರ್ಯ ಕಾಂತಿ | ಹತ್ತಿ | ಇತರೆ (ಅಲಸಂದೆ) |
|---|---|---|---|---|---|---|---|---|---|---|---|---|---|---|---|
| 1 | 2 | 763 | 764 | 765 | 766 | 767 | 768 | 769 | 770 | 771 | 772 | 773 | 774 | 775 | 776 |
| 1. | ಹೆಚ್.ಡಿ.ಕೋಟೆ | 3632.00 | 1.14 | 0.00 | 57.20 | 28.00 | – | – | 1.80 | 9.00 | 24.00 | 60.00 | – | – | 39.60 |
| 2. | ಹುಣಸೂರು | 1535.10 | – | – | 391.95 | 25.20 | 2.65 | – | 5.90 | 1.80 | 5.00 | 30.00 | – | – | 101.15 |
| 3. | ಕೆ.ಆರ್.ನಗರ | 7634.00 | – | – | 4.50 | 3.85 | – | – | 0.65 | – | – | – | – | – | 18.50 |
| 4. | ಮೈಸೂರು | 5716.45 | 17.64 | – | 35.16 | 60.45 | 21.00 | – | 51.30 | 39.40 | 0.80 | 60.00 | – | – | 85.30 |
| 5. | ನಂಜನಗೂಡು | 12171.00 | 55.17 | – | 27.50 | 18.90 | 3020 | – | 210.65 | 134.50 | 238.00 | 150.00 | 12.44 | – | 83.35 |
| 6. | ಪಿರಿಯಾಪಟ್ಟಣ | 616.61 | 0.45 | – | 115.92 | 32.40 | – | – | – | – | 51.00 | – | – | – | 128.20 |
| 7. | ಟಿ.ನರಸೀಪುರ | 14990.30 | – | – | 77.80 | 12.30 | 1.80 | – | 88.20 | 11.60 | – | 200.00 | – | – | 9.90 |
| | **ಜಿಲ್ಲಾಮೊತ್ತ** | **46295.46** | **74.40** | **0.00** | **710.03** | **181.10** | **28.65** | **0.00** | **358.50** | **196.30** | **318.80** | **500.00** | **12.44** | **0.00** | **466.00** |

**ಮೈಸೂರು ಜಿಲ್ಲೆಯಲ್ಲಿ 2012 ನೇ ಸಾಲಿನಲ್ಲಿ ಆಗಿರುವ ತಾಲ್ಲೂಕುವಾರು ಮಳೆ ವಿವರ (ಕೆ.ಎಸ್.ಎನ್.ಡಿ.ಎಂ.ಸಿ. ಇವರಿಂದ ಸಂಗ್ರಹಣೆ)**

**(21.11.2012ರ ವರೆಗೆ)**

| ಕ್ರಸಂ. | ತಾಲ್ಲೂಕು | ಜನವರಿ 2012 ಮಾಹೆಯಲ್ಲಿ | | | | | | ಫೆಬ್ರವರಿ 2012 ಮಾಹೆಯಲ್ಲಿ | | | | | | ಮಾರ್ಚ್ 2012 ಮಾಹೆಯಲ್ಲಿ | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ |
| | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 2011 | 2012 | |
| 1. | ಹೆಚ್.ಡಿ.ಕೊಟೆ | 2.7 | 0.0 | 0.4 | 0 | 0 | 15 | 5.6 | 1.8 | 4.5 | 0 | 0 | 80 | 15.8 | 47.0 | 0.0 | 2 | 0 | 0 |
| 2. | ಹುಣಸೂರು | 2.7 | 0.0 | 1.2 | 0 | 0 | 44 | 3.5 | 13.0 | 0.0 | 2 | 0 | 0 | 15.7 | 76.2 | 0.1 | 2 | 0 | 1 |
| 3. | ಕೆ.ಆರ್.ನಗರ | 3.1 | 0.0 | 0.8 | 0 | 0 | 26 | 3.2 | 3.8 | 0.0 | 0 | 0 | 0 | 12.7 | 8.6 | 0.2 | 0 | 0 | 2 |
| 4. | ಮೈಸೂರು | 3.2 | 0.0 | 1.0 | 0 | 0 | 31 | 4.6 | 17.0 | 0.0 | 1 | 0 | 0 | 13.6 | 20.6 | 0.2 | 1 | 0 | 1 |
| 5. | ನಂಜನಗುಡು | 3.0 | 0.0 | 1.4 | 0 | 0 | 47 | 5.0 | 20.8 | 0.3 | 1 | 0 | 6 | 12.3 | 2.5 | 0.1 | 0 | 0 | 1 |
| 6. | ಪಿರಿಯಾಪಟ್ಟಣ | 2.9 | 0.0 | 0.8 | 0 | 0 | 28 | 3.7 | 1.4 | 0.0 | 0 | 0 | 0 | 12.3 | 0.0 | 0.4 | 0 | 0 | 3 |
| 7. | ಟಿ.ನರಸೀಪುರ | 2.7 | 0.0 | 0.5 | 0 | 0 | 19 | 6.0 | 65.4 | 0.0 | 2 | 0 | 0 | 13.5 | 40.0 | 0.0 | 1 | 0 | 0 |
| | **ಜಿಲ್ಲಾಮೊತ್ತ** | **2.9** | **0.0** | **0.9** | **0** | **0** | **30** | **4.5** | **17.6** | **0.7** | **1** | **0** | **15** | **13.7** | **27.8** | **0.1** | **1** | **0** | **1** |

| ಕ್ರಸಂ. | ತಾಲ್ಲೂಕು | ಜನವರಿ 2012 ಮಾಹೆಯಲ್ಲಿ | | | | | | ಫೆಬ್ರವರಿ 2012 ಮಾಹೆಯಲ್ಲಿ | | | | | | ಮಾರ್ಚ್ 2012 ಮಾಹೆಯಲ್ಲಿ | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ |
| | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 2011 | 2012 | |
| 1. | ಹೆಚ್.ಡಿ.ಕೋಟೆ | 2.7 | 0.0 | 0.4 | 0 | 0 | 15 | 5.6 | 1.8 | 4.5 | 0 | 0 | 80 | 15.8 | 47.0 | 0.0 | 2 | 0 | 0 |
| 2. | ಹುಣಸೂರು | 2.7 | 0.0 | 1.2 | 0 | 0 | 44 | 3.5 | 13.0 | 0.0 | 2 | 0 | 0 | 15.7 | 76.2 | 0.1 | 2 | 0 | 1 |
| 3. | ಕೆ.ಆರ್.ನಗರ | 3.1 | 0.0 | 0.8 | 0 | 0 | 26 | 3.2 | 3.8 | 0.0 | 0 | 0 | 0 | 12.7 | 8.6 | 0.2 | 0 | 0 | 2 |
| 4. | ಮೈಸೂರು | 3.2 | 0.0 | 1.0 | 0 | 0 | 31 | 4.6 | 17.0 | 0.0 | 1 | 0 | 0 | 13.6 | 20.6 | 0.2 | 1 | 0 | 1 |
| 5. | ನಂಜನಗೂಡು | 3.0 | 0.0 | 1.4 | 0 | 0 | 47 | 5.0 | 20.8 | 0.3 | 1 | 0 | 6 | 12.3 | 2.5 | 0.1 | 0 | 0 | 1 |
| 6. | ಪಿರಿಯಾಪಟ್ಟಣ | 2.9 | 0.0 | 0.8 | 0 | 0 | 28 | 3.7 | 1.4 | 0.0 | 0 | 0 | 0 | 12.3 | 0.0 | 0.4 | 0 | 0 | 3 |
| 7. | ಟಿ.ನರಸೀಪುರ | 2.7 | 0.0 | 0.5 | 0 | 0 | 19 | 6.0 | 65.4 | 0.0 | 2 | 0 | 0 | 13.5 | 40.0 | 0.0 | 1 | 0 | 0 |
| | **ಜಿಲ್ಲಾಮೊತ್ತ** | **2.9** | **0.0** | **0.9** | **0** | **0** | **30** | **4.5** | **17.6** | **0.7** | **1** | **0** | **15** | **13.7** | **27.8** | **0.1** | **1** | **0** | **1** |

| ಕ್ರಸಂ | ತಾಲ್ಲೂಕು | ಜುಲೈ 2012 ಮಾಹೆಯಲ್ಲಿ | | | | | | ಆಗಸ್ಟ್ 2012 ಮಾಹೆಯಲ್ಲಿ | | | | | | ಸೆಪ್ಟೆಂಬರ್ 2012 ಮಾಹೆಯಲ್ಲಿ | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ |
| | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 201 1 | 2012 | |
| 1. | ಹೆಚ್.ಡಿ.ಕೋಟೆ | 152.3 | 95.6 | 48.9 | 9 | 5 | 32 | 88.5 | 67.8 | 114.2 | 4 | 9 | 129 | 114.9 | 88.4 | 71.0 | 6 | 5 | 62 |
| 2. | ಹುಣಸೂರು | 101.2 | 98.4 | 23.8 | 5 | 2 | 24 | 61.2 | 76.8 | 59.3 | 4 | 1 | 97 | 109.0 | 71.3 | 59.1 | 6 | 4 | 54 |
| 3. | ಕೆ.ಆರ್.ನಗರ | 78.8 | 35.6 | 30.3 | 1 | 1 | 38 | 55.6 | 86.6 | 50.8 | 3 | 3 | 91 | 106.2 | 81.6 | 30.5 | 6 | 1 | 29 |
| 4. | ಮೈಸೂರು | 73.8 | 98.6 | 30.0 | 4 | 0 | 41 | 64.9 | 100.4 | 72.3 | 7 | 3 | 111 | 111.1 | 52.0 | 76.5 | 3 | 3 | 69 |
| 5. | ನಂಜನಗೂಡು | 74.8 | 52.4 | 39.4 | 4 | 1 | 53 | 67.0 | 179.5 | 62.4 | 6 | 2 | 93 | 107.2 | 47.0 | 32.0 | 3 | 1 | 30 |
| 6. | ಪಿರಿಯಾಪಟ್ಟಣ | 162.1 | 103.8 | 44.3 | 8 | 0 | 27 | 89.9 | 93.6 | 83.3 | 7 | 6 | 93 | 87.5 | 65.8 | 58.8 | 4 | 2 | 67 |
| 7. | ಟಿ.ನರಸೀಪುರ | 57.3 | 54.8 | 27.0 | 3 | 4 | 47 | 68.8 | 101.4 | 71.6 | 7 | 3 | 104 | 127.7 | 31.4 | 39.3 | 2 | 3 | 31 |
| | **ಜಿಲ್ಲಾಮೊತ್ತ** | **100.0** | **77.0** | **34.8** | **5** | **2** | **35** | **70.8** | **100.9** | **73.4** | **5** | **4** | **104** | **109.1** | **62.4** | **52.5** | **4** | **3** | **48** |

| ಕ್ರಸಂ. | ತಾಲ್ಲೂಕು | ಅಕ್ಟೋಬರ್ 2012 ಮಾಹೆಯಲ್ಲಿ | | | | | | ಅಕ್ಟೋಬರ್ 2012 ಮಾಹೆಯ ಅಂತ್ಯಕ್ಕೆ | | | | | | ನವೆಂಬರ್ ಮಾಹೆ (21.11.2012 ರವರೆಗೆ) | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ |
| | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 2011 | 2012 | | ವಾಡಿಕೆ | 2011 | 2012 | 2011 | 2012 | |
| 1. | ಹೆಚ್.ಡಿ.ಕೋಟೆ | 157.5 | 279.6 | 78.9 | 5 | 2 | 50 | 831.7 | 968.0 | 507.4 | 44 | 35 | 61 | 49.7 | 33.1 | 36.7 | 36 | 36 | 31 |
| 2. | ಹುಣಸೂರು | 159.2 | 230.1 | 89.1 | 11 | 2 | 56 | 710.4 | 946.4 | 364.8 | 51 | 22 | 51 | 42.6 | 38.1 | 32.8 | 3 | 2 | 77 |
| 3. | ಕೆ.ಆರ್.ನಗರ | 156.1 | 251.6 | 70.1 | 9 | 2 | 45 | 685.5 | 775.4 | 333.7 | 27 | 16 | 49 | 37.8 | 43.2 | 25.6 | 2 | 1 | 68 |
| 4. | ಮೈಸೂರು | 155.9 | 157.9 | 122.9 | 9 | 3 | 79 | 675.6 | 745.8 | 471.7 | 35 | 22 | 70 | 42.9 | 47.2 | 38.3 | 3 | 1 | 89 |
| 5. | ನಂಜನಗೂಡು | 146.6 | 112.5 | 83.1 | 6 | 2 | 57 | 656.4 | 611.4 | 427.2 | 32 | 11 | 65 | 45.4 | 67.8 | 44.3 | 4 | 1 | 98 |
| 6. | ಪಿರಿಯಾಪಟ್ಟಣ | 143.0 | 293.6 | 74.1 | 11 | 4 | 52 | 792.7 | 917.7 | 483.6 | 54 | 278 | 61 | 40.0 | 27.6 | 32.9 | 2 | 2 | 82 |
| 7. | ಟಿ.ನರಸೀಪುರ | 158.3 | 130.4 | 94.3 | 9 | 2 | 60 | 667.9 | 612.4 | 331.2 | 32 | 22 | 50 | 47.3 | 86.4 | 46.6 | 7 | 1 | 99 |
| | **ಜಿಲ್ಲಾಮೊತ್ತ** | **153.8** | **206.3** | **87.5** | **9** | **2** | **57** | **717.2** | **206.3** | **417.1** | **39** | **22** | **58** | **43.7** | **49.1** | **36.7** | **8** | **6** | **84** |

| ಕ್ರಸಂ | ತಾಲ್ಲೂಕು | ಸಂಚಿತನವೆಂಬರ್ ಮಾಹೆ (21.11.2012 ರವರೆಗೆ) | | | | | |
|---|---|---|---|---|---|---|---|
| | | ಮಳೆ ಮಿ.ಮೀ.ಗಳಲ್ಲಿ | | | ಮಳೆ ದಿನಗಳು | | ಶೇ. ಮಳೆ |
| | | ವಾಡಿಕೆ | 2011 | 2012 | 2011 | 2012 | |
| 1. | ಹೆಚ್.ಡಿ.ಕೋಟೆ | 881.4 | 1001.1 | 544.1 | 80 | 71 | 62 |
| 2. | ಹುಣಸೂರು | 753.0 | 984.5 | 397.6 | 54 | 24 | 53 |
| 3. | ಕೆ.ಆರ್.ನಗರ | 723.3 | 818.6 | 359.3 | 29 | 17 | 50 |
| 4. | ಮೈಸೂರು | 718.5 | 793.0 | 510.0 | 38 | 23 | 71 |
| 5. | ನಂಜನಗುಡು | 701.8 | 679.2 | 471.5 | 36 | 12 | 67 |
| 6. | ಪಿರಿಯಾಪಟ್ಟಣ | 832.7 | 945.3 | 516.3 | 56 | 30 | 62 |
| 7. | ಟಿ.ನರಸೀಪುರ | 715.2 | 698.8 | 377.8 | 39 | 23 | 53 |
| | **ಜಿಲ್ಲಾಮೊತ್ತ** | **760.8** | **845.8** | **453.8** | **47** | **29** | **60** |

**ಮೈಸೂರು ನಗರದ ಕೃಷಿ :** ಸುಂದರ ಉದ್ಯಾನವನಗಳು, ಕಟ್ಟಡಗಳು, ಸಾಂಸ್ಕೃತಿಕ ಕೇಂದ್ರ ಭವ್ಯ ನಗರ ಮೈಸೂರು. ತಾಲ್ಲೂಕಿನ ವಾಯುಗುಣ ಹಿತಕರವಾಗಿದೆ. ಹಲವು ರೀತಿಯ ಮರ, ಗಿಡಗಳು, ಪೊದೆಗಳನ್ನು ಹೊಂದಿರುವ ಈ ನಗರದಲ್ಲಿ ಉತ್ತಮ ತೋಪುಗಳು, ತೋಟಗಳನ್ನು ಕಾಣಬಹುದಾಗಿದೆ. ನೀಲಗಿರಿ, ಹೊಂಗೆ, ಹುಣಸೆ, ಬಾಬುಲ್ ಬನ್ನಿ, ಗುಲ್ಮೊಹರ್‌ನಂತಹ ವಿವಿಧ ಜಾತಿಯ ಮರಗಳು ರಸ್ತೆಯ ಬದಿಗಳಲ್ಲಿ ನೆಡುತೋಪು ಮರಗಳಾಗಿವೆ. ಅರೆ ಮಲೆನಾಡಿಗೆ ಸಮೀಪವಾಗಿರುವ ಮೈಸೂರಿನಲ್ಲಿ ಮಹಾರಾಜರು ದೂರದೃಷ್ಟಿಯಿಂದ ಹಲವು ಗಿಡಗಳನ್ನು ನೆಡಿಸಿ, ಉದ್ಯಾನಗಳನ್ನು ನಿರ್ಮಿಸಿದ್ದರು. "ಒಂದು ಅಶ್ವತ್ಥಮರ, ಬೇವಿನ ಮರ, ಆಲದ ಮರ, ಹತ್ತು ಹುಣಿಸೆಮರ, ಬೇಲ, ಬಿಲ್ವ, ನೆಲ್ಲಿ, ಮಾವುಗಳನ್ನು ಯಾರು ಲೋಕಾರ್ಥವಾಗಿ ನೆಟ್ಟು ಬೆಳೆಸುತ್ತಾರೋ ಅವರು ಸ್ವರ್ಗಪಡೆಯುತ್ತಾರೆ" ಎಂಬ ಸುಭಾಷಿತವಿದೆ.

**ಚಾಮುಂಡಿ ಬೆಟ್ಟದ ಮೇಲಿರುವ ಸಸ್ಯಸಂಪತ್ತು :** ಮೈಸೂರಿಗೆ ಚಾಮುಂಡಿಬೆಟ್ಟ ಕಳಸಪ್ರಾಯದಂತೆ. ಇಲ್ಲಿ ಸುಮಾರು 613 ಹೆಕ್ಟೇರ್ ಪ್ರದೇಶ ರಕ್ಷಿತ ಅರಣ್ಯ ಪ್ರದೇಶವಾಗಿದೆ. ಇಲ್ಲಿ ಕಂಡು ಬರುವ ಸಸ್ಯ ಸಂಪತ್ತು 'ಸ್ಕ್ರಬ್ಬಿ ಜಂಗಲ್' ಗುಂಪಿಗೆ ಸೇರಿವೆ. ಈ ಗುಂಪಿನ ಸಸ್ಯಗಳಲ್ಲಿ ಮರಗಳು, ದೊಡ್ಡಬಳ್ಳಿಗಳು, ಮುಳ್ಳು ಮತ್ತು ಅಗಲವಾದ ಎಲೆಗಳುಳ್ಳ ಪೊದೆಗಳು ಕಂಡುಬರುತ್ತವೆ. ಮುಖ್ಯವಾಗಿ ಶುಷ್ಕ ಸಸ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ಬೆಟ್ಟದಲ್ಲಿಯ ಗಿಡಗಳಲ್ಲಿ ಬಹಳಷ್ಟು ಸಸ್ಯಗಳು ದ್ವಿದಳ ಸಸ್ಯ ಸಮೂಹಕ್ಕೆ ಸೇರಿದವುಗಳಾಗಿವೆ. ಮಿಕ್ಕವು ಏಕದಳ ಸಸ್ಯಗಳ ಸಮೂಹಕ್ಕೆ ಒಳಗೊಂಡಿವೆ. 'ಶುಷ್ಕ ಸಸ್ಯಗಳನ್ನು' ಇಲ್ಲಿ ಕಾಣಬಹುದು. ಇವುಗಳೊಂದಿಗೆ ಔಷಧೀಯ ಸಸ್ಯಗಳೂ ಇವೆ. ಅನೇಕ ರೀತಿಯ ಪುಷ್ಪಗಳ ಗಿಡಗಳನ್ನು ಕಾಣಲು ಸಾಧ್ಯವಿದೆ.

**ವನೌಷಧಗಳು :** ಮೈಸೂರಿನ ಮಹಾರಾಜರು ಔಷಧ ಸಸ್ಯಗಳ ಬಗ್ಗೆ ಆಸಕ್ತಿಯುಳ್ಳವರಾಗಿದ್ದರು. ಆ ಪರಿಣಾಮವಾಗಿ ಔಷಧೀಯ ಸಸ್ಯಗಳ ವನಗಳು ಕಂಡುಬಂದಿವೆ. ಆರುನೂರ ಐವತ್ತಕ್ಕೂ ಹೆಚ್ಚಿನ ಮೂಲಿಕೆಗಳನ್ನು ಗುರುತಿಸಿದ್ದಾರೆ. ಮೈಸೂರಿನ ಸರಸ್ವತಿಪುರಂನಲ್ಲಿರುವ 'ಚಂದ್ರವನ' ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಗಿಡಮೂಲಿಕೆಗಳ ಉದ್ಯಾನವನ, ಜೆ.ಎಸ್.ಎಸ್. ಆಯುರ್ವೇದ ಕಾಲೇಜಿನ ಉದ್ಯಾನವನ, ದತ್ತಪೀಠ ಆಶ್ರಮದಲ್ಲಿ ಅಭಿವೃದ್ಧಿಪಡಿಸುತ್ತಿರುವ ಮತ್ತೊಂದು ಗಿಡಮೂಲಿಕೆಗಳ ಉದ್ಯಾನವನಗಳನ್ನು ನೋಡಬಹುದಾಗಿದೆ. ಬಹಳ ಹಿಂದೆ ಲಿಂಗಾಬುಧಿ ಕೆರೆಯ ಹತ್ತಿರ ಔಷಧೀಯ ಸಸ್ಯಗಳನ್ನು ಬೆಳೆಯಲಾಗುತ್ತಿತ್ತು. ಈಗ ಫಾರಂ ಹೌಸ್ಗಳಲ್ಲಿ ಗಿಡಗಳನ್ನು ಬೆಳೆಸಿ ಮಾರಾಟಮಾಡುವ ವ್ಯವಸ್ಥೆಯಿದೆ. ಇಲ್ಲಿ ಅನೇಕ ಬಗೆಯ ಗಿಡಗಳು, ಶ್ರೀಗಂಧ, ಆಲ, ಮಾವು, ಸಂಪಿಗೆ, ನೇರಳೆ, ಬೇವು, ಹಲಸು, ಹೊನ್ನೆ, ತೇಗ, ಅರಳೀಮರ, ಮಲ್ಲಿಗೆ, ಜಾಜಿ, ದಾಸವಾಳ ಮುಂತಾದ ಗಿಡ ಮರಗಳ ಸಸಿಗಳು ಸಿಗುತ್ತವೆ.

**ಅಲೆ ಅಲೆ ಮಲ್ಲಿಗೆ :** ಮೈಸೂರು ಎಂದಾಕ್ಷಣ ನೆನಪಾಗುವುದು ಸುವಾಸನೆ ಬೀರುವ, ಸಾಗುವೆಡೆಯೆಲ್ಲಾ ಕಂಪನ್ನು ಚೆಲ್ಲುವ ದುಂಡು, ಸಣ್ಣ ಮಲ್ಲಿಗೆಗಳು. ನಿತ್ಯಮಲ್ಲಿಗೆ, ಜಾಜಿ ಮಲ್ಲಿಗೆ, ಸಣ್ಣ ಮರಲೆ, ಇರುವಂತಿಗೆ, ಸೂಜಿಮಲ್ಲಿಗೆ ಮುಂತಾದ ಬಗೆಬಗೆಯ ಮಲ್ಲಿಗೆಗಳು ಬೆಳೆಯುತ್ತವೆ. ಮಲ್ಲಿಗೆ ಹೂವಿನಿಂದ ಸುವಾಸನಾಯುಕ್ತ ಎಣ್ಣೆಯನ್ನು ತೆಗೆಯುತ್ತಾರೆ. ಮೈಸೂರಿನಲ್ಲಿ ಕೆಂಪುಮಣ್ಣು ಇರುವುದರಿಂದ ಇಲ್ಲಿ ಹೆಚ್ಚು ಇಳುವರಿ ಪಡೆಯಬಹುದಾಗಿದೆ. ಕೆಸರೆ ಎಂಬ ಪ್ರದೇಶದಲ್ಲಿ ಇದರ ಉತ್ಪಾದನೆ ಹೆಚ್ಚು.

**ಶ್ರೀಗಂಧ :** ಮಲ್ಲಿಗೆಯೊಡನೆ ಸುವಾಸನೆಯಲ್ಲಿ ಪ್ರಸಿದ್ಧಿಗೆ ಬಂದಿರುವ ಮತ್ತೊಂದು ವಸ್ತು ಶ್ರೀಗಂಧ. ಮೈಸೂರು ಇದರ ತವರು ಎಂದರೆ ತಪ್ಪಾಗಲಾರದು. ಇದರ ವೈಜ್ಞಾನಿಕ ಹೆಸರು 'ಸ್ಯಾಂಟಾಲಮ ಅಲ್ಬಂ'. ನಿತ್ಯ ಹರಿದ್ವರ್ಣದ ಮರವಾಗಿದ್ದು, ಮಧ್ಯಮ ಪ್ರಮಾಣದ ಅಂದವಾಗಿದೆ. ಅತಿ ಬೆಲೆಬಾಳುವ ಇದು ಕುರುಚಲ ಕಾಡುಗಳು, ಹಳ್ಳಿಗಳ ಸಮೀಪ, ಹೊಲಗಳ ಬೇಲಿಯಂಚಿನಲ್ಲಿ ಬೆಳೆಯುತ್ತದೆ. ಶ್ರೀಗಂಧದ ಎಣ್ಣೆಯನ್ನು ಸುವಾಸನಾ ದ್ರವ್ಯಗಳು, ಸಾಬೂನು, ಔಷಧಗಳ ತಯಾರಿಕೆಯಲ್ಲೂ ಬಳಸುತ್ತಾರೆ. ಮರದಿಂದ ಸುಂದರ ವಿಗ್ರಹಗಳನ್ನು ಮಾಡುವುದು ಮೈಸೂರಿನ ಪುರಾತನ ಕಲೆಯಾಗಿದೆ. ಮೈಸೂರಿನಲ್ಲಿ ಶ್ರೀಗಂಧದ ಎಣ್ಣೆ ಕಾರ್ಖಾನೆ ಇದೆ.

**ಮೈಸೂರು ವೀಳ್ಯದೆಲೆ :** ಮೈಸೂರು ವೀಳ್ಯದೆಲೆ ಎಂದರೆ ಬಾಯೂರಿಸುವ ಚಿಗುರು ವೀಳ್ಯದೆಲೆ, ನೋಡಲು ನವಿರಾಗಿದ್ದು, ಹೆಚ್ಚು ಖಾರವಿಲ್ಲದ, ಸ್ವಲ್ಪ ಒಗರಾದ, ತಿನ್ನಲು ಸವಿಯಾದ ಎಲೆ ತನ್ನ ಸವಿಯಿಂದಲೇ ಹೆಸರುವಾಸಿಯಾಗಿದೆ. ಇದರ ವೈಜ್ಞಾನಿಕ ಹೆಸರು 'ಪೈಪರ್ ಬೀಟಲ್'. ಸಸ್ಯ 'ಪೈಪರೇಸಿ' ಕುಟುಂಬಕ್ಕೆ ಸೇರಿದೆ. ಮೈಸೂರಿನ ಸುತ್ತಮುತ್ತ ಈಗಿನ ವಿದ್ಯಾರಣ್ಯಪುರಂನ ಹತ್ತಿರ ವೀಳ್ಯದೆಲೆ ತೋಪುಗಳು ಇದ್ದವು. ನಗರೀಕರಣದಿಂದಾಗಿ ಇಂದು ನಾಶವಾಗಿವೆ. ಇದು ಮರಕ್ಕೆ ಹಬ್ಬುವ ಬಳ್ಳಿಯಾಗಿದ್ದು ಪ್ರತಿ ಹೆಕ್ಟೇರ್ಗೆ 20 ರಿಂದ 30 ಲಕ್ಷ ಟನ್ ಎಲೆಗಳನ್ನು ನಿರೀಕ್ಷಿಸಬಹುದು. ಒಂದು ವರ್ಷದ ನಂತರ ಬಳ್ಳಿ ಇಳಿಸಿ ಮತ್ತೆ ನೆಟ್ಟು ಹೆಚ್ಚಿನ ಇಳುವರಿ ಪಡೆಯಬಹುದಾಗಿದೆ. ಶುಭಕಾರ್ಯಗಳಿಗೆ, ಪೂಜೆಗೆ ಇದು ಬೇಕೇಬೇಕು. ಅಡಕೆ, ಸುಣ್ಣ, ಏಲಕ್ಕಿ, ಕೊಬ್ಬರಿ, ಸಕ್ಕರೆಯೊಂದಿಗೆ ಚಿಗುರೆಲೆ ಸವಿದ ಯಾರೆ ಆದರೂ ಮನಸೋಲದೆ ಇರುವುದಿಲ್ಲ. ಹಾಗಾಗಿ ಕವಿಗಳೂ ಇದರ ರುಚಿಯನ್ನು ತಮ್ಮ ಕಾವ್ಯ, ಕಥೆಗಳಲ್ಲಿ ವರ್ಣಿಸಿದ್ದಾರೆ.

**ಈರನಗೆರೆ ಬದನೆಕಾಯಿ :** 'ಸೋಲೇನಂ ಮೆಲಂಜಿನ' ಎಂಬ ವೈಜ್ಞಾನಿಕ ಹೆಸರು ಪಡೆದ ಬದನೆ 'ಸೋಲನೇಸಿ' ಕುಟುಂಬಕ್ಕೆ ಸೇರಿದೆ. ಮೈಸೂರಿನ ಈರನಗೆರೆ ಅಥವಾ ವೀರನಗೆರೆ ಬಡಾವಣೆಯಲ್ಲಿ ವಾಸಿಸುವ ಜನ ಬೆಂಗಳೂರು ಮೈಸೂರು ರಸ್ತೆ ಬದಿಯ ಹೊಲಗಳಲ್ಲಿ ಬೆಳೆಯುತ್ತಿದ್ದರು. ಎಲ್ಲಾ ರೀತಿಯ ಮಣ್ಣುಗಳಲ್ಲಿ ಬೆಳೆಯಬಹುದಾದ ಗಿಡವಾಗಿದ್ದು ತನ್ನ ಆಕಾರ, ಬಣ್ಣ ಮತ್ತು ಗೊಂಚಲಿನಲ್ಲಿಯ ಕಾಯಿಗಳ ಸಂಖ್ಯೆಯಿಂದಾಗಿ ಹೆಸರುವಾಸಿಯಾಗಿದೆ.

**ಮೈಸೂರಿನ ಪಾಪಾಸುಕಳ್ಳಿ :** ಸಿರಸ್ ಗ್ರಾಂಡಿ ಫ್ಲೋರ' ಕ್ಯಾಕ್ಟಸೀ ಕುಟುಂಬಕ್ಕೆ ಸೇರಿದ ಕಳ್ಳಿ 45 ಅಡಿ 8 ಅಂಗುಲ ಎತ್ತರದ ಪಾಪಾಸು ಕಳ್ಳಿಗಿನ್ನಿಸ್ ದಾಖಲೆಗೆ ಸೇರಿದೆ. ವಿ.ಕೆ. ಕಾಶಿ ಮತ್ತು ಜ್ಯೋತಿ ದಂಪತಿಗಳ ಮನೆಯಲ್ಲಿ ಯಾವುದೇ ಬೇಸಾಯವಿಲ್ಲದೆ ಸುಮ್ಮನೆ ನೆಟ್ಟ ಗಿಡ ತನ್ನ ಬೆಳವಣಿಗೆಯಿಂದ ಆಶ್ಚರ್ಯವುಂಟುಮಾಡಿತ್ತು. ಕಳ್ಳಿ ಹೂ ಕೇವಲ ರಾತ್ರಿಯ ಸಮಯದಲ್ಲಿ ಮಾತ್ರ ಕಂಡುಬರುತ್ತದೆ. ಮರಳುಗಾಡಿನಲ್ಲಿ ಬೆಳೆಯುವ ಈ ಗಿಡ ಮೈಸೂರಿನಲ್ಲಿ ತನ್ನ ಭಾರಿಗಾತ್ರವನ್ನು ಪ್ರದರ್ಶಿಸಿದ್ದು ಸೋಜಿಗವಾಗಿದೆ.

**ದಸರಾದ ಫಲಪುಷ್ಪ ಪ್ರದರ್ಶನ :** ಮಹಾರಾಜರ ಕಾಲದಿಂದಲೂ ನಡೆಯುತ್ತಿರುವ ದಸರಾದಲ್ಲಿ ಫಲಪುಷ್ಪ ಪ್ರದರ್ಶನವೊಂದು

ಆಕರ್ಷಣವಾದ ಒಂದು ಕಾರ್ಯಕ್ರಮ. ತೋಟಗಾರಿಕಾ ಇಲಾಖೆ ಮತ್ತು ಕರ್ಜನ್ ಪಾರ್ಕ್ ಇವರ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಾ ಬಂದಿದೆ. ಆಲಂಕಾರಿಕ ತೋಟಗಳು, ಕುಂಡಗಳ ಜೋಡಣೆ, ಬೋನ್ಸಾಯ್ ಸ್ಪರ್ಧೆ, ಇಕೆಬಾನ ಸ್ಪರ್ಧೆ, ಗುಲಾಬಿಗಿಡಗಳು, ಬೋಗನ್‌ವಿಲ್ಲಾ, ಕ್ರೋಟನ್‌ಗಳು ದಾಸವಾಳ, ಅಂತೋರಿಯಂ, ಪೆಪರೋಮಿಯಾ, ಕಳ್ಳಿಗಳು, ಹಲವು ರೀತಿಯ ಹೂವುಗಳು, ತರಕಾರಿಗಳು ಹಾಗೂ ಬೀಜಗಳನ್ನು ಪ್ರದರ್ಶನಕ್ಕೆ ಇಡುತ್ತಾರೆ. ಹೂವುಗಳಿಂದಲಂಕರಿಸಿದ ವಿಶೇಷ ಕಲೆಯ ಪ್ರದರ್ಶನವೂ ಇರುತ್ತದೆ.

**ಉದ್ಯಾನವನಗಳು :** ಸೊಗಸಾದ ರೀತಿಯಲ್ಲಿ, ಆಲಂಕಾರಿಕವಾಗಿ, ಆಹ್ಲಾದವುಂಟಾಗುವಂತೆ ನಿಯಮಬದ್ಧವಾಗಿ ಬೆಳೆಸಿರುವ ಗಿಡಮರಗಳುಳ್ಳ ಪ್ರದೇಶ ಉದ್ಯಾನವನವೆನಿಸಿಕೊಳ್ಳುತ್ತದೆ. ಸಸ್ಯ ಸಂಪತ್ತು, ಆಹ್ಲಾದಕರ ಗಾಳಿ, ನೆರಳು ಮನಸ್ಸಿಗೆ ಮುದನೀಡುತ್ತವೆ. ಉದ್ಯಾನವನಗಳಲ್ಲಿ ರಸ್ತೆ, ಲಾನುಗಳು, ಸಣ್ಣ ಕೆರೆ, ಕಾರಂಜಿ, ಆಲಂಕಾರಿಕ ಬೇಲಿ, ಸಣ್ಣ ಇಟ್ಟಿಗೆಗಳ ಅಂಚಿನ ಕೋನಗಳು ಮತ್ತು ಸಾಲುಮರಗಳಿಂದ ಕಂಗೊಳಿಸುತ್ತಿರುತ್ತವೆ. ಮೈಸೂರಿನಲ್ಲಿ ಹಲವು ಉದ್ಯಾನವನಗಳಿವೆ. ಕರ್ಜನ್ ಪಾರ್ಕ್ ಕುಪ್ಪಣ್ಣ ಪಾರ್ಕ್, ಸುಬ್ಬರಾಯನಕೆರೆ ಉದ್ಯಾನವನ, ದಕ್ಷಿಣ ವಿಭಾಗದ ಉದ್ಯಾನವನ, ಚೆಲುವಾಂಬ ಉದ್ಯಾನವನ, ಸಂಜೀವಿನಿ ಉದ್ಯಾನವನ, ಚಂದ್ರವನ ಅವಧೂತ ದತ್ತಪೀಠ ಕಿಷ್ಕಿಂಧ ಮೂಲಿಕೆ ವನಗಳು ಇವೆ. ಕುಪ್ಪಣ್ಣ ಪಾರ್ಕ್, ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ ಕಾಲದಲ್ಲಿ ನಿರ್ಮಿತವಾದ ಉದ್ಯಾನವನ, 12 ಎಕರೆ ವಿಸ್ತೀರ್ಣ ಹೊಂದಿದ್ದು ಇಲ್ಲಿ ಬ್ಯಾಂಡ್ ಸ್ಟಾಂಡ್ ಎನ್ನುವ ಪಾರಂಪರಿಕ ಮಂಟಪವೊಂದಿದೆ. ಸಂಗೀತಕಾರಂಜಿ ಇರುವುದು ಇಲ್ಲಿಯ ವಿಶೇಷ. ಮಂಟಪದ ಗಾಜಿನ ಮೇಲ್ಛಾವಣಿಯ ಮೇಲೆ ಮೈಸೂರು ಶೈಲಿಯ ಸುಂದರ ಚಿತ್ರಗಳು ಮನಸೆಳೆಯುತ್ತವೆ. ನೀರು ಪುನರ್ಬಳಕೆ ಪ್ಲಾಂಟ್ ಕೂಡ ಇಲ್ಲಿದೆ. ಕರ್ಜನ್ ಪಾರ್ಕ್ ಐದು ಎಕರೆ ಜಾಗ ಹೊಂದಿದ್ದು ಮೈಸೂರು ನಗರದ ಮಧ್ಯಭಾಗದಲ್ಲಿದೆ. ಆಲಂಕಾರಿಕ ಗಿಡಗಳು, ಗುಲಾಬಿ ಪ್ಲಾಂಟ್, ಹೂ ಬಳ್ಳಿಗಳಿಂದ ಕಂಗೊಳಿಸುತ್ತಿದೆ. ದಸರಾ ಸಂದರ್ಭದಲ್ಲಿ ಫಲಪುಷ್ಪ ಪ್ರದರ್ಶನ ಇದರ ಆಕರ್ಷಣೆ. ಸುಬ್ಬರಾಯನ ಕೆರೆ ಉದ್ಯಾನವನ ಸ್ವಾತಂತ್ರ್ಯ ಹೋರಾಟಗಾರರ ನೆನಪಿನಾರ್ಥ ಕಟ್ಟಿದ್ದಾಗಿದೆ. ಸ್ವಾತಂತ್ರ ಸಂಗ್ರಾಮಿಗಳ ಪ್ರತಿಮೆಗಳನ್ನು ನಿರ್ಮಿಸಿದೆ. ಎರಡು ನೀರಿನ ಕಾರಂಜಿಗಳಿರುವುದು ಇಲ್ಲಿನ ವಿಶೇಷ. ಚೆಲುವಾಂಬ ಉದ್ಯಾನವನ ನಗರದಿಂದ ಶೋಭಿಸುತ್ತಿದೆ. ಅದರ ಸುಂದರವಾದ ರಸ್ತೆಗಳು ಜಾಗಿಂಗ್, ವಾಕಿಂಗ್ ಪಥಗಳಾಗಿವೆ. ಮಕ್ಕಳು ಆಡಲು ವಿವಿಧ ರೀತಿಯ ಅನುಕೂಲವಿದೆ. ಸಂಜೀವಿನಿ ಉದ್ಯಾನವನ ಮತ್ತೊಂದು ಹೆಸರುವಾಸಿಯಾದ ಸ್ಥಳವಾಗಿದೆ. ಬೃಹದಾಕಾರವಾಗಿರುವ 'ಹ್ಯಾಪಿ ಮ್ಯಾನ್' ಇಲ್ಲಿಯ ಆಕರ್ಷಣೆ. ವರ್ತುಲಾಕಾರದಲ್ಲಿರುವ ವಾಕಿಂಗ್ ಪಥ, ಬಗೆಬಗೆಯ ಹೂ ಗಿಡಗಳು, ವಾಟರ್ ಫಾಲ್ಸ್, ಬಾತುಕೋಳಿಗಳು, ಅಪರೂಪದ ಪಕ್ಷಿಗಳ ಮನೆ, ಇಲ್ಲಿಯ ವಿಶೇಷವಾಗಿದೆ. ಚಂದ್ರವನದಲ್ಲಿ ಸುಸಜ್ಜಿತವಾದ 300ಕ್ಕೂ ಹೆಚ್ಚು ಔಷಧಿ ಗಿಡಮೂಲಿಕೆಗಳಿವೆ. ಅವಧೂತ ದತ್ತಪೀಠದ ಕಿಷ್ಕಿಂಧೆ ಮೂಲಿಕೆ ವನ ನಂಜನಗೂಡು ರಸ್ತೆಯಲ್ಲಿ ಇದ್ದು, ಇಡೀ ವಾತಾವರಣ ಹಸುರು ಗಿಡ ಮರಗಳಿಂದ ಕಂಗೊಳಿಸಿ ತಂಪಾಗಿದೆ. ಇಲ್ಲಿ ನಾನೂರಕ್ಕೂ ಹೆಚ್ಚು ಬೋನ್ಸಾಯ್ ಗಿಡಗಳನ್ನು ಬೆಳೆಸಿದ್ದಾರೆ. ಹಲವು ದೇಶಗಳಿಂದ ವಿವಿಧ ಬಗೆಯ ಪಕ್ಷಿಗಳನ್ನು ಸಂಗ್ರಹಿಸಿ ಪಕ್ಷಿಧಾಮವನ್ನಾಗಿ ಮಾಡಿದ್ದಾರೆ. ಇಲ್ಲಿರುವ ಅನೇಕ ಗಿಡಗಳು ಔಷಧೀಯ ಸತ್ವವನ್ನು ಒಳಗೊಂಡಿವೆ. ಗಾಂಧೀವನ ಮಕ್ಕಳಿಗೆ ಸಂಚಾರಿ ಅರಿವು ಮೂಡಿಸುವ ಸಲುವಾಗಿ 1981ರಲ್ಲಿ ಸ್ಥಾಪಿಸಿದರು. 'ಯಜ್ಞಿ ಪಾರ್ಕ್' ಎಂದೇ ಜನಜನಿತವಾಗಿದೆ. ಇಲ್ಲಿ ಕಾರ್ಪೊರೇಷನ್, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಅಂಗಡಿ ಸಾಲು, ಶಾಲೆ ಮುಂತಾದವುಗಳನ್ನು ಮಾಡಿ ಮಕ್ಕಳಲ್ಲಿ ಸಂಚಾರ ವ್ಯವಸ್ಥೆ ಬಗ್ಗೆ ತಿಳಿ ಹೇಳಲು ಪಾರ್ಕ್ ಮಾದರಿಯಾಗಿತ್ತು. ಆದರೆ ಈಗ ಸರಿಯಾದ ನಿರ್ವಹಣೆ ಇಲ್ಲದೆ ಸೊರಗಿದೆ. ಮೈಸೂರಿನ ಹಲವು ದೊಡ್ಡ ಕಟ್ಟಡಗಳ ಸುತ್ತಮುತ್ತ ಸುಂದರ ಉದ್ಯಾನಗಳು ಇವೆ. ನಗರ ಪ್ರದೇಶದಲ್ಲಿರುವ ಕೆರೆಗಳನ್ನು ಅಭಿವೃದ್ಧಿಪಡಿಸಿ ಸುತ್ತಾ ಸುಂದರ ಉದ್ಯಾನವನಗಳೂ ಪಕ್ಷಿಗಳ ನಿರ್ವಹಣೆಯೂ ನಡೆಯುತ್ತಿದೆ. ಕಾರಂಜಿ ಕೆರೆಯಲ್ಲಿ ನವಿಲು, ಚಿಟ್ಟೆಗಳ ಪಾರ್ಕ್ ಇದೆ. ಕುಕ್ಕರಹಳ್ಳಿ ಕೆರೆಯು ಅನೇಕ ಪಕ್ಷಿಗಳಿಗೆ ಮೂಲ ನೆಲೆಯಾಗಿದ್ದು. ಅದರಲ್ಲಿ ಜನರಿಗೆ ಅನುಕೂಲವಾಗುವಂತೆ ಉದ್ಯಾನವನ, ವಾಕಿಂಗ್ ಪಥಗಳನ್ನು ನಿರ್ಮಿಸಲಾಗಿದೆ.

ಹಲವು ಜಾತಿಯ ಮರಗಳಿಂದಲೂ ಗಿಡಬಳ್ಳಿಗಳಿಂದಲೂ ಹೂಗಳಿಂದಲೂ ಕಂಗೊಳಿಸುತ್ತಿರುವ ಮೈಸೂರಿನಲ್ಲಿ ಇನ್ನೂ ಹೆಚ್ಚಿನ ಪರಿಸರದ ಅರಿವು ಮೂಡಬೇಕಿದೆ. ಇತ್ತೀಚೆಗೆ ಅಭಿವೃದ್ಧಿಯ ಹೆಸರಲ್ಲಿ ಮರಗಳನ್ನು ಕಡಿಯುವ ಪರಿ ಹೆಚ್ಚಾಗಿದೆ. ಅರೆ ಮಲೆನಾಡಿನಂತಿದ್ದ ಮೈಸೂರು ಬೆಂಗಾಡಿನಂತಾಗುತ್ತಿರುವುದು ವಿಷಾದದ ಸಂಗತಿ. ಆದರೂ ಬಗೆಬಗೆಯ ಮರಗಳ ಸೊಬಗು ಇಲ್ಲಿ ಇನ್ನೂ ಇರುವುದು ಸಮಾಧಾನಕರ ಅವುಗಳ ಪಟ್ಟಿ ಇಂತಿದೆ.

**ಕೋಷ್ಟಕ - 1**

**ಮೈಸೂರಿನ ಚಂದ್ರವನ, ಚಾಮುಂಡಿಬೆಟ್ಟ, ಜಲಾನಯನ ಪ್ರದೇಶಗಳಲ್ಲಿ, ರಸ್ತೆ ಅಕ್ಕಪಕ್ಕಗಳಲ್ಲಿ ಮತ್ತು ಇತರೆ ಉದ್ಯಾನವನಗಳಲ್ಲಿ ಕಂಡು ಬರುವ ಗಿಡ ಮೂಲಿಕೆಗಳ ಪಟ್ಟಿ**

**(ಆಧಾರ : ಔಷಧೀಯ ಸಸ್ಯಗಳು : ಅಶೋಕ ಸಾತ್ಪುತೆ ಮತ್ತು ಎಲ್. ವಸಂತಾ, ಮೈಸೂರು ಇವರ ಲೇಖನ)**

| ಔಷಧಿ ಸಸ್ಯ (ಕನ್ನಡ ಹೆಸರು) | ವೈಜ್ಞಾನಿಕ ಹೆಸರು | ಕುಟುಂಬ |
|---|---|---|
| ಬಿಲ್ವ | Aegle marmelos | Rutaceae |
| ಗೊಬ್ಬಳಿಮರ | Acacia nilotica | Mimosaceae |
| ಬಾಗೆ ಮರ | Albezzia lebbeck | Mimosaceae |
| ಮದ್ದಾಳೆ | Alstonia scholoaris | Apocyanaceae |
| ಕದಂಬ | Anthocephalus indicus | Rubiaceae |

| | | |
|---|---|---|
| ಬೇವು | Azadirachta indica | Meliaceae |
| ಅಂಕೋಲೆ ಮರ | Alangium salvifolium | Cornaceae |
| ಹೆಮ್ಮರ | Ailanthus excelsa | Simaroubaceae |
| ಕಮರಾಕ್ಷಿ ಗಿಡ | Averrhoa carambola | Oxalidaceae |
| ಮಜ್ಜಿಗೆಗಿಡ (ಹಲವು ಮಕ್ಕಳ ಬೇರು) | Asparagus racemosus | Liliaceae |
| ಬಜೆ | Acorus calamus | Araceae |
| ಕೊಳವಳಿಕೆ | Asterecantha longifolia | Acanthaceae |
| ಲೋಳೆಸರ | Aloe barbadensis | Liliaceae |
| ಬಸವನಪಾದ | Bauhinia purpurea | Caesalpinaceae |
| ನೀರು ಬ್ರಾಹ್ಮಿ | Bacopa monnier | Scrophulariaceae |
| ಬೂರಗ | Ceiba Pentandra | Bombacaceae |
| ಕಕ್ಕಿಮರ | Cassia fistual | Caesalpinaceae |
| ನಿಂಬೆ | Citrus aurantifolia | Rutaceae |
| ಕಳ್ಳಿ | Calotropis gigantia | Asclepiadaceae |
| ತಗ್ಗಿಗಿಡ | Clerodendron phlomidi | Verbenaceae |
| ಕಚೋರ | Curcuma Zeodaria | Zingiberaceae |
| ಬೀಟೆ | Dalbergia latifolia | papilonaceae |
| ಒಂದೆಲೆ ಹೊನ್ನೆ | Desmodium gangeticm | Papilionaceae |
| ಬೆಟ್ಟದ ನೆಲ್ಲಿ | Emblica Officinalis | Euphorbiaceae |
| ಗರುಗದ ಸೊಪ್ಪು | Eclipta alba | Asteraceae |
| ಆಲ | Ficus bengalensis | Moraceae |
| ಅತ್ತಿ | Ficus racemosa | Moraceae |
| ಗೋಣಿ | Ficus mysorensis | Moraceae |
| ಬಸರಿ | Ficus infectoria | Moraceae |
| ಬೇಲ | Feronia limonia | Rutaceae |
| ಅತಿಮಧುರ | Glycyrrhiza glabra | |
| ಶಿವಾನಿ | Gmelina arborata | Verbenaceae |
| ಕೊಡಸೀಗ | Holarrhena antidysenterica | Apocynanceae |
| ತಪಸಿ | Holoptelea intergrifolia | Ulmaceae |
| ವಿದಾರಿ | Ipomoea digitata | Convolvulaceae |
| ನಸುಗುನ್ನಿ | mucuna pruriens | Papilionaceae |
| ಜಾಯಕಾಯಿ ಮರ | Myristica fragrans | Myristicaceae |
| ಹಿಪ್ಪೆ | Madhucha longifolia | Sapotaceae |
| ಸಂಪಿಗೆ | Michelia Champaka | Magnoliaceae |
| ಪಗಡೆ | Mimusops eleng | Sapotaceae |
| ಹೆಬ್ಬೇವು | Melia Composita | Meliaceae |
| ಮಾವು | Mangifera indica | Anacardiaceae |
| ಪಾರಿಜಾತ | Nyctanthus arbor tristis | Oleaceae |
| ತುಳಸಿ | Ocimum sanctum | Lamiaceae |

| | | |
|---|---|---|
| ನೆಲ್ಲಿಕಾಯಿ ಮರ | Phyllanthus emblica | Euphorbiaceae |
| ಪುತ್ರಂಜೀವ | Putranjiva roxburghii | Euphorbiaceae |
| ದಾಳಿಂಬೆ | Punica granatum | Punicaceae |
| ಮೆಣಸು | Piper nigrum | Piperaceae |
| ಹಿಪ್ಪಲಿ | Piper longum | Piperaceae |
| ಶ್ರೀಗಂಧ | Santalum album | Santalaceae |
| ಪಾದರಿಮರ | Stereospermum suoveolens | Bignoniaceae |
| ಅಶೋಕ | Saraca indica | Caesalpinaceae |
| ಅಂಟುವಾಳ | Sapindus laurifolia | Sapindaceae |
| ಕಂಟಕಾರಿ | Solanum Xanthocarpum | Solanaceae |
| ಹೆಗ್ಗುಳ್ಳ | Solanum indicum | Solanaceae |
| ಕಳ್ಳಂಗಡಲೆ | Sida Cardifolia | Malvaceae |
| ಹೂವರಸಿ ಮರ | Thespesia Populnea | Malvaceae |
| ಅಮೃತಬಳ್ಳಿ | Tinospora Cordifolia | Menispermaceae |
| ನೆಗ್ಗಿಲು ಮುಳ್ಳು | Tribulus terrestris | Zygophyllaceae |
| ತೇಗ | Tectona grandis | Verbenaceae |
| ಬಿಳಿ ಮತ್ತಿ ಮರ | Terminalia arjuna | Comberaceae |
| ತಾರೆಕಾಯಿಮರ | Terminalia bellarica | Combretaceae |
| ಅಳಲೆಕಾಯಿ ಮರ | Terminalia Chebula | Combretaceae |
| ಲಾವಂಚ | Vetiveria Zizanioides | Poaceae |
| ಹೀರೆ ಮದ್ದಿನ ಬೇರು | Withania somnifera | Solanaceae |
| ಅಗಸೆ | Sesbania Grandiflora | Papilionaceae |
| ಬನ್ನಿ | Acacia ferruginea | Mimosaceae |
| ನೇರಳೆ | Syzygium Cumini | Myrtaceae |
| ಹುಣಸೆ | Tamarindus indica | Caesalpinaceae |
| ಹಲಸು | Artocarpus hirsuta | Moraceae |
| ಗೇರು ಮರ | Semicarpus anacardium | Connaraceae |
| ಅಮಟೆಕಾಯಿ | Mangifera Pinnata | Anacardiaceae |
| ಕಗ್ಗಲಿ | Acacia catechu | Mimosaceae |
| ಬೋರೆ (ಏಲಚಿ) | Zizyphus Jujuba | Rhammaceae |

**ಕೀಟನಾಶಕಗಳಿಗಾಗಿ ಸಸ್ಯಗಳು**

| | | |
|---|---|---|
| ಬೇವಿನ ಮರ | Azardirachta indica | Mellaceae |
| ಉತ್ತರಾಣಿ | Achyranthus aspera | Amaranthaceae |
| ಬಜೆ | Acorus Calamus | Araceae |
| ಸೀತಾಫಲ | Annona squamosa | Annonaceae |
| ಕಕ್ಕೆಗಿಡ | Cassia fistual | Caesalpinaceae |
| ತಗಚಿ | Cassia tora | Caesalpinaceae |
| ಅರಿಸಿಣ | Curcuma longa | Zingiberaceae |
| ಎಕ್ಕ | Calotropis sps. | Aselepiadaceae |

| | | |
|---|---|---|
| ಬೆಟ್ಟದನೆಲ್ಲಿ | Emblica officinalis | Euphorbiaceae |
| ಹಿಂಗು | Ferula assafoetida | Apiaceae |
| ಆಲ | Ficus bengalensi | Moraceae |
| ಅರಳಿ | Ficus religiosa | Moraceae |
| ಅತ್ತಿ | Ficus racemosa | Moraceae |
| ನುಗ್ಗೆಮರ | Moringa Oleifera | Moringaceae |
| ಹೊಗೆಸೊಪ್ಪು | Nicotiana tabaccum | Solanaceae |
| ಅಂಟುವಾಳ | Sapindus laurifolia | Sapindaceae |
| ಅಳಲೆಕಾಯಿ | Terminalia Chebula | Combretaceae |
| ತಾರೆಕಾಯಿ ಮರ | Terminalia bellarica | Combertaceae |
| ಓಮ | Trachyspermum ammi | Apiaceae |
| **ಸಾವಯವ ಗೊಬ್ಬರಗಳಿಗಾಗಿ ಸಸ್ಯಗಳು** | | |
| ಹುಣಸೆ | Tamarindus indica | Caesalpinaceae |
| ಸೆಣಬು | Crotalaria Juncea | Papilionaceae |
| ತಗಚಿ | Cassia occidentalis | Caesalpinaceae |
| ಗಂಡುತಗಸೆ | Cassia tora | Caesalpinaceae |
| ಹುರಳಿ | Dolichos biflorus | Papilionaceae |
| ಹೆಸರು | Phaseolus radiatus | Papilionaceae |
| ಉದ್ದು | Phaseolus mungo | Papilionaceae |
| ಮುಟ್ಟಿದರೆ ಮುನಿ | Mimosa pudica | Mimosaceae |
| ಬಾಳೆ | Musa Paradisiaca | Musaceae |
| **ಬಣ್ಣಗಳಿಗಾಗಿ ಸಸ್ಯಗಳು** | | |
| ಕೇಸರಿ ರಂಗು | Bixa Orellana | Bixaceae |
| ಪತಂಗ | Caesalpinia sappan | Caesalpiniaceae |
| ಅರಿಸಿಣ | Curcuma Longa | Zingiberaceae |
| ಗೋರಂಟಿ | Lawsonia inermis | Lythraceae |
| ನೀಲಿ | Indigofera sps. | Papilionaceae |
| ಪಾರಿಜಾತ | Nyctanthus arborea | Nyctaginaceae |
| ರಕ್ತಹೊನ್ನೆ | Pterocarpus santalinus | Papilionaceae |
| ಮಂಚಿ ಪೈ | Rubia Cordifolia | Rubiaceae |
| ತೇಗದ ಮರ | Tectona grandis | Verbenaceae |
| ತಾಮ್ರಪುಷ್ಪ | Wood fordia fruiticosa | Lythraceae |

**ಕೋಷ್ಟಕ : 3**

**ಸಾಲುಮರಗಳು ಮತ್ತು ಉದ್ಯಾನವನಗಳ ಮರಗಳು**

ವಿವಿಧ ಮರಜಾತಿಗಳು ಸುಂದರ ಹೊಡೆಗಳನ್ನು ಹೊಂದಿದ್ದು ನಿತ್ಯ ಹರಿದ್ವರ್ಣದವುಗಳಾಗಿ ಬೆಳೆದು ನೆರಳು, ಹಣ್ಣು ಕೊಡುವಂತಿದ್ದು ಮೈಸೂರು ನಗರ ಮತ್ತು ಸುತ್ತಮುತ್ತ ಸಾಲುಮರಗಳಿಗಾಗಿ ಬೆಳೆಸಲ್ಪಟ್ಟಿವೆ. ಇನ್ನೂ ಕೆಲವು ಆಕಾರವುಳ್ಳ ಕಾಂಡ, ಹರಡಿದ ಹಂದರ, ಬಣ್ಣ ಬಣ್ಣದ ಹೂಗಳನ್ನು ಹೊಂದಿದ್ದು ಉದ್ಯಾನವನಗಳಲ್ಲಿ, ಮೃಗಾಲಯದಲ್ಲಿ, ರಸ್ತೆ ಅಕ್ಕ ಪಕ್ಕಗಳಲ್ಲಿ ಬೆಳೆಸಲ್ಪಟ್ಟಲ್ಲಿ ಸರ್ಕಾರಿ ಕಛೇರಿ, ಶಾಲಾ ಕಾಲೇಜು ಆವರಣದಲ್ಲಿ ಶೋಭಾಯಮಾನ ವಾಗಿರುವುವು. ಅಂತಹ ಕೆಲವು ಮರಜಾತಿಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಲಾಗಿದೆ.

| ಕನ್ನಡದ ಹೆಸರು | ವೈಜ್ಞಾನಿಕ ಹೆಸರು | ಕುಟುಂಬ |
|---|---|---|
| ಅತ್ತಿ | Ficus racemosa | Moraceae |
| ಅರಳಿ | Ficus religiosa | Moraceae |
| ಅಶೋಕ | Saraca indica | Caesalpiniaceae |
| ಆಕಾಶಮಲ್ಲಿಗೆ | Mellígntonia hortensis | Bignoniaceae |
| ಆಲ | Ficus bengalensis | Moraceae |
| ಕಂಬದ ಮರ | Polyathia longifolia | Annonaceae |
| ಕಂಚುವಾಳ | Bauhinia Purpurea | Legurminoceae |
| ಗುಲ್‌ಮೊಹರ್ | Delonix regia | Legurminoceae |
| ಗೊಬ್ಬಳಿ | Acacia nilotica | Legurminoceae |
| ಗೋಣಿ | Ficus mysorensis | Moraceae |
| ಜಕರಾಂಡ | Jacaranda Ovalifolia | Bignoniaceae |
| ಟಿಕೋಮ | Tecoma argentia | Bignoniaceae |
| ಟಿಬೂಬಿಯ | Tebubia rosea | Bignoniaceae |
| ತೊರೆಮತ್ತಿ | Terminalia arjuna | Combretaceae |
| ದೊಡ್ಡೆಲೆ ಮಹಾಗನಿ | Swietenia macrophylla | Meliaceae |
| ನಾಡುಬಾದಾಮಿ | Terminalia Catapa | Combretaceae |
| ನೀರುಕಾಯಿ | Spathodea Companulata | Bignoniaceae |
| ನೇರಳೆ | Syzygium Cumini | Myrtaceae |
| ಫೆಲ್ಟೋಫೋರಂ | Peltophorum ferruginea | Caesalpinaceae |
| ಪುತ್ರಂಜೀವಿ | Putranjiva roxburghii | Euphorbiaceae |
| ಬಸರಿ | Ficus infectoria | Moraceae |
| ಬಿಲ್ವಾರ | Albizzia Odoratissima | Leguminoseae |
| ಬೇವು | Azadirachta indica | Meliaceae |
| ಮಹಾಗನಿ | Swietenia mahagani | Meliaceae |
| ಕಿರುಬಿದಿರು | Dendrocalamus strictus | Poaceae |
| ಹೆಬ್ಬಿದಿರು | Bambuassa arundinaceae | Poaceae |
| ಕಾಡುಹುಣಸೆ | Pithecolobium bigemimum | Mimoseae |
| ಬೇಲ | Feronia elephantum | Rutaceae |
| ಅಂಜೂರ | Ficus Carica | Moraceae |
| ಅಗಸೆ | Sesbania grandiflora | Papilionaceae |
| ಮಳೆ ಮರ | Samanea saman | Lequminoseae |
| ಮಾವು | Magnifera indica | Anacardiaceae |
| ಸಿಸ್ಸು | Dalbergia sissoo | Leguminoseae |
| ಸೀಮೆತಂಗಡಿ | Cassia siamea | Lequminosae |
| ಸಂಪಿಗೆ | Michelia champaka | Magnoliaceae |
| ಸ್ಪ್ರರ್ಕುಲಿಯ | Sterculia Colorata | Sterculiaceae |
| ಹಲಸು | Artocarpus integrifolia | Moraceae |
| ಹಿಪ್ಪೆ | Bassia latifolia | Sapotaceae |
| ಹುಚ್ಚುಬೇವು | Azadirachta Melia azederach | Meliaceae |

| | | |
|---|---|---|
| ಹುಣಸೆ | Tamarindus indica | Leguminosae |
| ಹೊಂಗೆ | Pongamia Pinnata | Leguminosae |
| ಹೆಬ್ಬಲಸು | Artocarpus hirsuta | Moraceae |
| ಅರಕೇರಿಯ | Araucaria Cookii | Araucariaceae |
| ಕುಪ್ರೆಸಸ್ ಸೆಮ್‌ಪರ್ವಿರೆನ್ಸ್ | Cupressus sempervirens | Cuppressaceal |
| ನಾಗಲಿಂಗಪುಷ್ಪ | Couroupita guiamensis | Lecythidaceae |
| ನೀಲಗಿರಿ | Eucalyptus globulus | Myrtaceae |
| ಬಗನಿ | Caryota urens | Arecaceae |
| ಸರ್ವೆಮರ | Casuarina equisetifolia | Caurinaceae |
| ರುದ್ರಾಕ್ಷಿಮರ | Elaeocarpus tuberculatus | Elaeocarpaceae |
| ಸಿಲ್ವರ್ ಮರ | Grevillea robusta | Proteaceae |
| ದೇವಕಣಿಗಲೆ | Plumeria rubra | Apocyanaceae |
| ತಾರೆ | Terminalia bellarica | Combretaceae |
| ಅಳಲೆ | Terminalia Chebula | Combretaceae |
| ಹುನಾಲ | Terminalia Paniculata | Combretaceae |
| ಪಗಡೆ | Mimusops elengi | Sapotaceae |
| ನಂದಿ | Lagerstroemia lanceolata | Lythraceae |
| ಬೂರಗ | Bombax Ceiba | Bombacaceae |
| ಬಸವನಪಾದ | Banhina malabarica | Caesalinaceae |
| ಕಾಡುಹಿಪ್ಪೆ | Madhuca malabarica | Sapotaceae |
| ದಾಲ್ಚಿನ್ನಿ | Cinnamomum macrocarpus | Lauraceae |
| ಕುಂಕುಮದ ಮರ | Mallotus Philippinensis | Euphorbiaceae |
| ಇಂಡಿಯಾರಬ್ಬರ್ | Ficus elastica | Moraceae |
| ಮತ್ತಿ | Terminalia tomentosa | Combretaceae |
| ಕೆಂಪುಗೇರು | Anacardium Occidentale | Anacardiaceae |
| ಹಾಲುವಾಣದ ಮರ | Erythrina indica | Papilonaceae |
| ಹೊನ್ನೆ | Pterocarpus bigeminum | Papilonaceae |

*ಪಿ.ಸಿ.ಎಸ್.*

**ಯಾದಗಿರಿ ಜಿಲ್ಲೆಯ ಕೃಷಿ** ಕರ್ನಾಟಕ ರಾಜ್ಯದ 30 ಜಿಲ್ಲೆಗಳ ಪೈಕಿ ಯಾದಗಿರಿ ಒಂದು. ಇದು ಡಿಸೆಂಬರ್ 30, 2009ರಂದು ಗುಲ್ಬರ್ಗ ಜಿಲ್ಲೆಯಿಂದ ಪ್ರತ್ಯೇಕವಾಯಿತು. ಜಿಲ್ಲೆ ಉತ್ತರದಲ್ಲಿ ಸೇಡಂ, ವಾಯವ್ಯದಲ್ಲಿ ಚಿತ್ತಾಪುರ, ಪಶ್ಚಿಮದಲ್ಲಿ ಶಹಾಪುರ ಮತ್ತುಪೂರ್ವದಲ್ಲಿ ಆಂಧ್ರಪ್ರದೇಶದ ಮಹಬೂಬನಗರದ ಮಖ್ತಲ್ ತಾಲ್ಲೂಕುಗಳಿಂದ ಸುತ್ತುವರಿದಿದೆ.

ಈ ಜಿಲ್ಲೆಗೆ ಒಂದು ಐತಿಹಾಸಿಕ ಪರಂಪರೆ ಇದೆ. ಹಿಂದೆ ಯಾದಗಿರಿ ಪ್ರದೇಶವನ್ನು 'ಯಾದವ' ಎಂಬ ರಾಜವಂಶದವರು ಆಳುತ್ತಿದ್ದರಂತೆ. ಇವರನ್ನು ಕೆಲವು ಕಡೆ ಯದುವಂಶ ಎಂದೂ ಸಹ ಕರೆಯುತ್ತಾರೆ. ಯಾದಗಿರಿಯು 1347ರಿಂದ 1425ರತನಕ ಯಾದವರ ರಾಜಧಾನಿಯಾಗಿತ್ತು. ಈ ಕಾಲದಲ್ಲಿ ಹಲವಾರು ರಾಜವಂಶದವರು ಸಂತರು ಈ ಪ್ರದೇಶವನ್ನು ಆಳಿದ್ದಾರೆ. ಜಿಲ್ಲೆಯಾಗಿ ಇದು ಶಹಾಪುರ, ಸುಹಪುರ, ಯಾದಗಿರಿ ಎಂಬ ಮೂರು ತಾಲ್ಲೋಕುಗಳನ್ನು ಹೊಂದಿದೆ.

ಶಹಾಪುರ 1687.1 ಚ.ಕಿ.ಮೀ. ಸುರಪುರ 1838.2 ಚ.ಕಿ.ಮೀ. ಯಾದಗಿರಿ 1709.2 ಚ.ಕಿ.ಮೀ ಇದ್ದು ಒಟ್ಟು 5234.5 ಚ.ಕಿ. ವಿಸ್ತೀರ್ಣವನ್ನು ಹೊಂದಿದೆ.

**ಮೇರೆಗಳು :** ಜಿಲ್ಲೆ ಗಡಿ ಪ್ರದೇಶವಾಗಿದ್ದು ಪೂರ್ವಕ್ಕೆ ಆಂಧ್ರಪ್ರದೇಶ ಹಾಗೂ ಮೆಹಬೂಬು ನಗರಗಳ ಗಡಿಗೆ ಅಂಟಿಕೊಂಡಿದೆ. ಹಾಗೂ ಮಾತ್ರ ಜಿಲ್ಲೆ ಗುಲ್ಬರ್ಗ ಉತ್ತರಕ್ಕೆ ದಕ್ಷಿಣಕ್ಕೆ ರಾಯಚೂರು ಪಶ್ಚಿಮಕ್ಕೆ ಬಿಜಾಪುರದಿಂದ ಕೂಡಿದ್ದು ಒಟ್ಟು 3045.5 ಕಿ.ಮೀ. ಉದ್ದದ ಗಡಿ ಪ್ರದೇಶವನ್ನು ಹೊಂದಿದೆ. ಈ ಜಿಲ್ಲೆ $16^0$ 23' ಉ. ಅ.ದಿಂದ $17^0$ 5' ಉ.ಅ. ಹಾಗೂ ಪೂ.ರೇ. $76^0$ 20' -$77^0$ 30' ರ ನಡು ಹಬ್ಬಿದೆ. ಹಾಗೂ

ನಗರದ ಮಧ್ಯ ಯಾದವರು ಕೋಟೆ ಕಟ್ಟಿಕೊಂಡು ಆಳುತ್ತಿದ್ದರಿಂದ ಅವುಗಳ ಕುರುಹುಗಳು ಸಹ ಇವೆ.

**ಜಿಲ್ಲೆಯ ವಿಸ್ತೀರ್ಣ :** ಜಿಲ್ಲೆಯು ಒಟ್ಟು 52341.51 ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು ಜನಸಾಂದ್ರತೆ ಗುಲ್ಬರ್ಗಕ್ಕಿಂತ ಕಡಿಮೆ ಇದೆ. ಜಿಲ್ಲೆಯಲ್ಲಿ ಒಟ್ಟು 4 ಪೌರಾಡಳಿತ ಸಂಸ್ಥೆಗಳಿದ್ದು ಜಿಲ್ಲಾ ಕೇಂದ್ರವಾದ ಯಾದಗಿರಿ ನಗರ ಸಭೆಯನ್ನು ಹೊಂದಿದೆ. ಇನ್ನುಳಿದಂತೆ ಸುರಪುರ ಹಾಗೂ ಶಹಾಪುರದಲ್ಲಿ ಪುರಸಭೆಗಳಿದ್ದು ಗುರುಮಿಠಕಲ್ ಪಟ್ಟಣ ಪಂಚಾಯಿತಿಯನ್ನು ಹೊಂದಿದೆ. 17 ಗ್ರಾಮ ಪಂಚಾಯಿತಿಗಳು, 16 ಹೋಬಳಿಗಳು 519 ಹಳ್ಳಿಗಳಿವೆ. ಶೇ. 17ರಷ್ಟು ಜನರು ಮಾತ್ರ ನಗರ ಪಟ್ಟಣ ಪ್ರದೇಶಗಳಲ್ಲಿ ವಾಸವಿದ್ದು ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶದಲ್ಲಿ ಜನಸಂಖ್ಯೆ ಪ್ರಮಾಣ ಹೆಚ್ಚಾಗಿದೆ.


**ಮಳೆ :** ಜಿಲ್ಲೆಯ ವಾರ್ಷಿಕವಾಗಿ ವಾಡಿಕೆ ಮಳೆ ಪ್ರಮಾಣ 831.5 ಮಿ.ಮೀ. ಸರಾಸರಿ ಮಳೆಯನ್ನು ಗಮನಿಸಿದಾಗ ವಾಸ್ತವವಾಗಿ 639.9 ಮಿ.ಮೀ ಇದೆ.

ವಾರ್ಷಿಕವಾರು ವಾಸ್ತವಿಕ ಮಳೆ ಮಿ.ಮೀ.ಗಳಲ್ಲಿ 2007-08ರಲ್ಲಿ 7247ಮಿ.ಮೀ. 2008-09 708.4 ಮಿ.ಮೀ. 2009-10ರಲ್ಲಿ 952.9 ಮಿ.ಮೀ. 2010-11ರಲ್ಲಿ 976-1 ಮಿ.ಮೀ. 2011-12ರಲ್ಲಿ 639.9 ಮಿ.ಮೀ.

ಜುಲೈನಿಂದ ಡಿಸೆಂಬರ್ ತಿಂಗಳ ತನಕ ಮಾಸಿಕವಾಗಿ ಮಳೆಯಾಗುತ್ತದೆ. ಜುಲೈನಲ್ಲಿ ಅಧಿಕವಾಗಿದ್ದು ಮುಂದುವರಿದು ಡಿಸೆಂಬರ್ ವೇಳೆಗೆ ಅದರ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ.

**ಕೃಷಿ ಭೂಮಿ ವಿಸ್ತೀರ್ಣ :** ಈ ಜಿಲ್ಲೆಯು ಸಾಧಾರಣ ಮಳೆಯನ್ನು ಪಡೆಯುವುದರಿಂದ ಸಾಧಾರಣ ಮಟ್ಟದಲ್ಲಿ ಕೃಷಿಗೆ ಯೋಗ್ಯವಾದ ಪ್ರದೇಶವನ್ನು ಹೊಂದಿದೆ. ಇಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಜನರು ವಾಸಿಸುತ್ತಿರುವುದರಿಂದ ಸಾಮಾನ್ಯವಾಗಿ ಅವರ ಕಸುಬು ಕೃಷಿಯೇ ಆಗಿದೆ. ಜಿಲ್ಲೆಯಲ್ಲಿ ಒಟ್ಟು 2,26,458 ಕೃಷಿ ಹಿಡುವಳಿದಾರರಾಗಿದ್ದು ಸುಮಾರು 4,42,271.49 ಹೆ. ಭೌಗೋಳಿಕ ಪ್ರದೇಶವಿದೆ.

**ಭೂ ಹಿಡುವಳಿದಾರರು :** ಜಿಲ್ಲೆಯಲ್ಲಿ 22,6375 ಭೂಹಿಡುವಳಿದಾರರಿದ್ದು 442.271 ಹೆ. ಪ್ರದೇಶವನ್ನು ಹೊಂದಿರುವರು.




ಇದರಲ್ಲಿ (2010-11) ಪರಿಶಿಷ್ಟ ಅತಿಸಣ್ಣ ಹಿಡುವಳಿದಾರರು 16,585 ಇದ್ದು 9532.46 ಹೆ. ವಿ.ವನ್ನು ಪರಿಶಿಷ್ಟ ಸಣ್ಣ ಭೂ ಹಿಡುವಳಿದಾರರು 16,833 ಇದ್ದು 23,909.43 ಹೆ. ಪರಿಶಿಷ್ಟ ಅರೆ ಮಧ್ಯಮ ಭೂ ಹಿಡುವಳಿದಾರರು 7849 ಇದ್ದು 20,594.12ಹೆ.ವಿ.ವನ್ನು ಪರಿಶಿಷ್ಟ ಮಧ್ಯಮ ಭೂ ಹಿಡುವಳಿದಾರರು 1.670 ಇದ್ದು 8,958.65 ಹೆ. ವಿ. ವನ್ನು ಪರಿಶಿಷ್ಟ ಮಧ್ಯಮ ಭೂ ಹಿಡುವಳಿದಾರರು 1,670 ಇದ್ದು 8,958.65 ಹೆ.ವಿ.ವನ್ನು ಪರಿಶಿಷ್ಟ ದೊಡ್ಡ ಭೂ ಹಿಡುವಳಿದಾರರು 89 ಇದ್ದು 1,149.49 ಹೆ.ವಿವನ್ನು ಹೊಂದಿದ್ದಾರೆ.

ಪರಿಶಿಷ್ಟ ಪಂಗಡದ ಅತಿ ಸಣ್ಣ ಭೂಹಿಡುವಳಿದಾರರು 7,126 ಇದ್ದು 4,207.64 ಹೆ.ವಿ.ವನ್ನು, ಸಣ್ಣ ಭೂ ಹಿಡುವಳಿದಾರರು 7940 ಇದ್ದು 11,459.31 ಹೆ.ವಿ.ವನ್ನು ಅರೆಮಧ್ಯಮ ಭೂ ಹಿಡುವಳಿದಾರರು 4,633 ಇದ್ದು 12,431.42 ಹೆ.ವಿ.ವನ್ನು ಮಧ್ಯಮ ಭೂ ಹಿಡುವಳಿದಾರರು 1,522 ಇದ್ದು 8,391.75 ಹೆ.ವಿ.ವನ್ನು ದೊಡ್ಡ ಭೂ ಹಿಡುವಳಿದಾರರು 127 ಇದ್ದು 2,047.65 ಹೆ.ವಿ.ವನ್ನು ಹೊಂದಿದ್ದಾರೆ. ಉಳಿದಂತೆ ಇತರೆ ಭೂ ಹಿಡುವಳಿದಾರರಿದ್ದು ಅವರುಗಳಲ್ಲಿ ಅತಿ ಸಣ್ಣ ಭೂ ಹಿಡುವಳಿದಾರರು 47,935 ಇದ್ದು 26,371.81 ಹೆ.ವಿ. ಸಣ್ಣ ಭೂ ಹಿಡುವಳಿದಾರರು 54,561 ಇದ್ದು 79,284.42 ಹೆ.ವಿ.ವನ್ನು ಅರೆಮಧ್ಯಮ ಭೂ ಹಿಡುವಳಿದಾರರು 40,570 ಇದ್ದು, 110,620.30 ಹೆ. ವಿ.ವನ್ನು ಮಧ್ಯಮ ಭೂ ಹಿಡುವಳಿದಾರರು 16,920 ಇದ್ದು 96,487.47ವಿ.ವನ್ನು ಹಾಗೂ ದೊಡ್ಡ ಭೂ ಹಿಡುವಳಿದಾರರು 2,015 ಇದ್ದು 2,6557.59 ಹೆ.ವಿ.ವನ್ನು ಹೊಂದಿದ್ದಾರೆ. ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಸಾಮಾಜಿಕವಾಗಿ ವರ್ಗವಾರು ಹಿಡುವಳಿಯಲ್ಲಿ ಶೇ 5,57ರಷ್ಟು ಏರಿಕೆಯಾಗಿದ್ದು ಇವುಗಳ ಭೂ ಹಿಡುವಳಿಯು ವಿಭಾಗವಾಗಿದೆಯೇ ಹೊರತು ಇದನ್ನು ಕೃಷಿ ಚಟುವಟಿಕೆಗೆ ಬಳಸುವುದರ ಪ್ರಮಾಣ ಕಡಿಮೆಯಾಗಿದೆ.

**ಭೂ ಉಪಯೋಗ :** ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 5234.5 ಹೆ. ವಿಸ್ತೀರ್ಣದಲ್ಲಿ (2011-12) ವಾರ್ಷಿಕ ಬೆಳೆಗಳ ವರದಿ ಪ್ರಕಾರ ಅರಣ್ಯ ಪ್ರದೇಶಕ್ಕೆ 33,773 ಹೆ.ವಿ, ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ 57,575 ಹೆ. ವಿಸ್ತೀರ್ಣ, ಸಾಗುವಳಿ ಮಾಡಿರುವ ಭೂಮಿ 14,877 ಹೆ.ವಿ, ಸಾಗುವಳಿ ಮಾಡದಿರುವ ಇತರ ಭೂ ಪ್ರದೇಶ 11,755 ಹೆ.ವಿ, ವ್ಯವಸಾಯೇತರ ಸಾಗುವಳಿಗೆ ಬಳಸಿರುವ ಪ್ರದೇಶ 29609 ಹೆ.ವಿ, ಬೀಳು ಭೂಮಿ 10,6341 ಹೆ.ವಿ, ಹಾಗೂ ನಿವ್ವಳ ಸಾಗುವಳಿಯಾಗಿರುವ ಪ್ರದೇಶ 30,3522 ಹೆ.ವಿ. ಇದೆ.

ಕೃಷಿಗೆ - 2011-12ನೇ ಸಾಲಿನಲ್ಲಿ ಯಾದಗಿರಿ 99,354 ಹೆ, ಶಹಾಪುರ 144087, ಸುರಪುರ 13,0878 ಹೆ ಇದ್ದು ಒಟ್ಟು 37,4319 ಹೆ. ಪ್ರದೇಶ ಬಿತ್ತನೆಗೆಯೋಗ್ಯವಾಗಿತ್ತು.

2011-12ನೇ ಸಾಲಿನಲ್ಲಿ ಅರಣ್ಯಕ್ಕೆ 3,3773 ಹೆ. ಪ್ರದೇಶ, ನೀರಾವರಿ ಕ್ಷೇತ್ರಕ್ಕೆ 11,6489 ಹೆ. ಪ್ರದೇಶ, ವೃಕ್ಷ ಮತ್ತು ತೋಪುಗಳು 737 ಹೆ. ಪ್ರದೇಶ, ವ್ಯವಸಾಯೇತರ 2,9609 ಹೆ. ಪ್ರದೇಶ, ಸಾಗುವಳಿಗೆ ಯೋಗ್ಯವಾದ ಬಂಜರು 2385 ಹೆ. ಪ್ರದೇಶ, ಖಾಯಂ ಗೋಮಾಳಕ್ಕೆ 11,755 ಹೆ. ಪ್ರದೇಶ, ಬೀಳುಭೂಮಿ 10,6341 ಹೆ. ಪ್ರದೇಶ. ಒಟ್ಟು ಕೃಷಿಗೆ ಉಪಯೋಗಿಸುವ ಭೂಮಿಯನ್ನು ಗಮನಿಸಿದಾಗ ಇನ್ನಿತರ ಚಟುವಟಿಕೆಗೆ ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ಬಂಜರು ಭೂಮಿಯ ಹೆಚ್ಚಳವನ್ನು ಗಮನಿಸಿದರೆ ಜಿಲ್ಲೆಯ ಒಟ್ಟು ಪ್ರದೇಶದಲ್ಲಿ ಇದು ಕೃಷಿಗೆ ಹಾಗೂ ಇನ್ನಿತರ ಚಟುವಟಿಕೆಗೆ ಯೋಗ್ಯವಾಗಿದೆ ಎನಿಸುತ್ತದೆ.

**ನೀರಾವರಿ ಸೌಕರ್ಯ :** ಜಿಲ್ಲೆಯು ಗುಲ್ಬರ್ಗಾದಿಂದ 80 ಕಿ.ಮೀ. ರಾಯಚೂರಿನಿಂದ 80 ಕಿ.ಮೀ. ಬಿಜಾಪುರದಿಂದ 175 ಕಿ.ಮೀ. ಬೆಂಗಳೂರಿನಿಂದ 570 ಕಿ.ಮೀ. ದೂರದಲ್ಲಿದ್ದು ಭೀಮನದಿಯ ಮಡಿಲಲ್ಲಿದೆ. ಇದರಿಂದ ನೀರಿನ ಸಮಸ್ಯೆ ತೀವ್ರವಾಗಿಲ್ಲ. ಜಿಲ್ಲೆಯಲ್ಲಿ 161923 ಹೆ. ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಸುರಪುರ ತಾಲ್ಲೂಕು ನೀರಾವರಿಯ ಅತಿ ಹೆಚ್ಚು ಪಾಲು ಪಡೆಯುತ್ತಿದೆ. ಈ ತಾಲೂಕಿನ 88 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಸೌಲಭ್ಯವಿದೆ. ಶಹಾಪುರ ತಾಲ್ಲೂಕು 63 ಸಾವಿರ ಹೆ. ಪ್ರದೇಶದ ನೀರಾವರಿ ಸೌಲಭ್ಯದೊಂದಿಗೆ ಅನಂತರದ ಸ್ಥಾನ ಪಡೆದಿದೆ. ಇನ್ನುಳಿದಂತೆ ನೀರಾವರಿ ವಿಷಯದಲ್ಲಿ ಯಾದಗಿರಿ ತಾಲ್ಲೂಕು ನತದೃಷ್ಟವಾದುದು ಎಂದೇ ಹೇಳಬಹುದು. ಇದು ಕೇವಲ 10,578 ಹೆ. ಪ್ರದೇಶವನ್ನು ಮಾತ್ರ ಹೊಂದಿದೆ.

ಶಹಾಪುರ ಹಾಗೂ ಸುರಪುರ ತಾಲ್ಲೂಕುಗಳಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಲಾಭ ದೊರೆತರೆ ಯಾದಗಿರಿ ಜಿಲ್ಲೆಯು ಭೀಮಾ ನೀರಾವರಿ ಯೋಜನೆಯನ್ನು ಅಲ್ಪ ಪ್ರಮಾಣದಲ್ಲಿ ಪಡೆಯುತ್ತದೆ ಹಾಗೂ ಈ ತಾಲ್ಲೂಕಿನಲ್ಲಿ ಅತಿ ಹೆಚ್ಚು ಕೆರೆಗಳು ಇವೆ. 100 ಎಕರೆಗೂ ಹೆಚ್ಚು ವಿಸ್ತೀರ್ಣವನ್ನು ಹೊಂದಿರುವ 57ಕ್ಕೂ ಹೆಚ್ಚು ಕೆರೆಗಳಿವೆ. 1600 ಹೆ. ಭೂಮಿಗೆ ಕೆರೆಗಳು ಇಲ್ಲಿ ನೀರುಣಿಸುತ್ತವೆ. ಅಂತರ್ಜಲ ತುಂಬಾ ಮೇಲಿದ್ದು ಇಲ್ಲಿ ಬೆರಳೆಣಿಕೆಯ ಮೀ. ಆಳದಲ್ಲಿ ನೀರು ಸಿಗುತ್ತದೆ.

2011-12ರ ಮಾಹಿತಿಯನ್ನು ಗಮನಿಸಿದಾಗ ಕಾಲುವೆಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ 116489ರಲ್ಲಿ ನಿವ್ವಳ ನೀರಾವರಿ ವಿಸ್ತೀರ್ಣ 103764 ಹೆ. ಕೆರೆಗಳಿಂದ ಒಟ್ಟು ನೀರಾವರಿ ವಿಸ್ತೀರ್ಣ 2841 ಹೆ. ಪ್ರದೇಶದಲ್ಲಿ ನಿವ್ವಳ ನೀರಾವರಿ ಪ್ರದೇಶ 2841ಹೆ. ಬಾವಿಗಳಿಂದ ಒಟ್ಟು ನೀರಾವರಿ ಪ್ರದೇಶ ವಿಸ್ತೀರ್ಣ 9681 ಹೆ.ದಲ್ಲಿ ನಿವ್ವಳ ನೀರಾವರಿ 8921 ಹೆ. ಕೊಳವೆ ಬಾವಿಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ 12853 ಅಥವಾ ನಿವ್ವಳ ನೀರಾವರಿ ವಿಸ್ತೀರ್ಣ 11195 ಹೆ.ಪ್ರ. ಏತ ನೀರಾವರಿಯಿಂದ ಒಟ್ಟು ನೀರಾವರಿ ವಿಸ್ತೀರ್ಣ 2558 ಹೆ. ಪ್ರದೇಶದಲ್ಲಿ ನಿವ್ವಳ ನೀರಾವರಿ ವಿಸ್ತೀರ್ಣ 1962 ಹೆ.ವಿ. ಹಾಗೂ ಇತರೆ ಮೂಲಗಳಿಂದ 4152 ಹೆ. ಪ್ರದೇಶ ಇದ್ದು ಒಟ್ಟಾರೆ 8672 ಹೆ. ವ್ಯವಸಾಯಕ್ಕೆ ನೀರಾವರಿ ಸೌಲಭ್ಯ ದೊರೆಯುತ್ತದೆ.

**ನೀರಾವರಿ :** ರೈತರು ಕೃಷಿ ಮಾಡಲು ನೀರಾವರಿ ಉಪಯುಕ್ತವಾದುದು. ಅಂತರ್‌ಜಲದ ಮೂಲಕವಾಗಿ ಕಾಲುವೆಗಳಿಂದ, ಬಾವಿಯಿಂದ, ಕೆರೆಗಳಿಂದ ನೀರು ಹಾಯಿಸುವ ಮೂಲಕ ಕೃಷಿ ಮಾಡುತ್ತಾರೆ.

**ಬಾವಿ ನೀರಾವರಿ :** ಸಮತಟ್ಟಾದ ಪ್ರದೇಶದಲ್ಲಿ ಚೌಕಾಕಾರದಲ್ಲಿ ನೂರು ಅಥವಾ ಅದಕ್ಕಿಂತ ಹೆಚ್ಚು ಅಡಿಗಳಲ್ಲಿ ಬಾವಿಯನ್ನು ತೋಡಿಸಿ ಬೆಳೆಗಳಿಗೆ ನೀರನ್ನು ಹಾಯಿಸಿ ಬೆಳೆಯುವ ಪದ್ಧತಿಯನ್ನು ಬಾವಿ ನೀರಾವರಿ ಪದ್ಧತಿ ಎನ್ನುವರು. ಜಿಲ್ಲೆಯಲ್ಲಿ ಬೇರೆ ಮೂಲಗಳಿಗೆ ಹೋಲಿಸಿದರೆ ಇದರ ಪ್ರಮಾಣ ಸಾಮಾನ್ಯ ಮಟ್ಟದಲ್ಲಿದೆ.

**ಬೆಳೆಗಳು :** ಜಿಲ್ಲೆಯಲ್ಲಿ ಬತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಲದೆ ಯಾದಗಿರಿಯನ್ನು ಬತ್ತದ ಬಟ್ಟಲು ಎಂದೂ ಕರೆಯುವರು. ಇಲ್ಲಿ 80 ಸಾವಿರ ಹೆ. ಪ್ರದೇಶದಲ್ಲಿ ಬತ್ತ ಬೆಳೆಯಲಾಗುತ್ತದೆ. ಬತ್ತದ ಬೆಳೆಗೆ ಸುರಪುರ ತಾಲ್ಲೂಕಿನ ಕೊಡುಗೆ ಅಪಾರವಾಗಿದ್ದು ಒಟ್ಟು ಉತ್ಪಾದನೆಯಲ್ಲಿ ಅರ್ಧಕ್ಕೂ ಹೆಚ್ಚು ಅಂದರೆ 52,450 ಹೆ. ಪ್ರದೇಶದಲ್ಲಿ ಬೆಳೆಯುತ್ತಾರೆ.

ಬತ್ತದಷ್ಟೇ ಜೋಳ ಪ್ರಮುಖವಾದ ಬೆಳೆಯಾಗಿದ್ದು 87 ಸಾವಿರ ಹೆ. ಭೂಮಿಯಲ್ಲಿ ಕೃಷಿ ಮಾಡುತ್ತಾರೆ. ಹಾಗೂ ನೀರಾವರಿ ಸೌಲಭ್ಯ ಕಡಿಮೆ ಇರುವ ತಾಲ್ಲೂಕಾದ ಯಾದಗಿರಿಯಲ್ಲಿ ಜೋಳ ಹೆಚ್ಚಾಗಿ ಬೆಳೆಯುವರು. ಶೇ 36 ಸಾವಿರ ಹೆ. ಪ್ರದೇಶದಲ್ಲಿ ಜೋಳದ ಕೃಷಿಯುಂಟು.

ದ್ವಿದಳ ಧಾನ್ಯ ಬೆಳೆ ಹೆಚ್ಚು ವಿಸ್ತಾರವನ್ನು ಹೊಂದಿದ್ದು 1.24 ಲಕ್ಷ ಹೆ. ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಉಳಿದಂತೆ ಹತ್ತಿ, ಸಜ್ಜೆ, ಗೋಧಿ, ಮುಸುಕಿನ ಜೋಳ, ಶೇಂಗಾ, ಕಡಲೆ, ಸೂರ್ಯಕಾಂತಿ, ಕಬ್ಬು, ತೊಗರಿ ಮುಂತಾದವು ಬೆಳೆಯುತ್ತಾರೆ.

**ಆಹಾರ ಮತ್ತು ಆಹಾರೇತರ ಬೆಳೆಗಳು :** ಆಹಾರ ಧಾನ್ಯಗಳು ಹಾಗೂ ಬೆಳೆಗಳ ವಿವರಣೆಯನ್ನು ಗಮನಿಸಿದಾಗ ವರ್ಷದಿಂದ ವರ್ಷಕ್ಕೆ ಇಳುವರಿ ಕಡಿಮೆಯಾಗುತ್ತಿರುವುದನ್ನು ಕಾಣಬಹುದು. ಆದರೂ ಕೆಲವೊಂದು ಬೆಳೆಗಳ ಇಳುವರಿ ಉತ್ತಮವಾಗಿದೆ.

2011-12ರ ಅಂಕಿ ಅಂಶವನ್ನು ಗಮನಿಸಿದಾಗ ಏಕದಳ ಧಾನ್ಯಗಳು 140,514 ಹೆ. ಪ್ರದೇಶ ದ್ವಿದಳ ಧಾನ್ಯಗಳು 121763 ಹೆ. ಆಹಾರ ಧಾನ್ಯಗಳು 262277 ಹೆ. ಪ್ರದೇಶ ಹಣ್ಣು ಬೆಳೆಯ ವಿಸ್ತೀರ್ಣ 1567 ಹೆ. ಪ್ರದೇಶ ತರಕಾರಿ ಬೆಳೆಗಳು 1486 ಹೆ. ಪ್ರದೇಶ ಹಾಗೂ ಎಣ್ಣೆಕಾಳುಗಳು 42,991 ಹೆ. ಪ್ರದೇಶವನ್ನು ಹೊಂದಿದೆ.

**ಕೃಷಿ ಉತ್ಪಾದನೆ :** ಜಿಲ್ಲೆಯಲ್ಲಿ 2011-12ರಲ್ಲಿ 69.330 ಹೆ. ಪ್ರದೇಶ 374319 ಹೆ. ಉತ್ಪಾದನೆಯಾಗಿದ್ದು 303522 ಹೆ.

ಪ್ರದೇಶದಲ್ಲಿ ಸರಾಸರಿ ಇಳುವರಿಯಾದ ಪ್ರದೇಶವಾಗಿದೆ. (2011-12 ರಅಂಕಿ ಅಂಶ)

**ಏಕದಳ ಧಾನ್ಯಗಳು :** ಬತ್ತ - 69,0999 ಹೆ., ಜೋಳ - 50,365 ಹೆ., ಸಜ್ಜೆ - 18,850 ಹೆ., ಮುಸುಕಿನ ಜೋಳ - 479 ಹೆ., ಗೋಧಿ - 1675 ಹೆ. ಪ್ರದೇಶ

**ದ್ವಿದಳ ಧಾನ್ಯಗಳು :** ತೊಗರಿ 77524 ಹೆ., ಹುರುಳಿ 165 ಹೆ., ಉದ್ದು 675 ಹೆ., ಹೆಸರು 30706 ಹೆ., ಅವರೆ 10 ಹೆ., ಅಲಸಂದೆ 276 ಹೆ., ಕಡಲೆ 12407 ಹೆ., ಒಟ್ಟು 127163 ಹೆ. ಪ್ರದೇಶವನ್ನು ಒಳಗೊಂಡಿತ್ತು.

**ಎಣ್ಣೆ ಕಾಳುಗಳು :** ಶೇಂಗಾ - 27,684 ಹೆ., ಸೂರ್ಯಕಾಂತಿ - 13,814 ಹೆ., ಕುಸುವೆ - 982 ಹೆ., ಹರಳು - 28 ಹೆ., ಎಳ್ಳು - 427 ಹೆ., ಹುಚ್ಚೆಳ್ಳು - 5 ಹೆ.

ಒಟ್ಟು 42.991 ಹೆ. ವಿಸ್ತೀರ್ಣವನ್ನು ಹೊಂದಿತ್ತು. ಆಹಾರ ಧಾನ್ಯಗಳು ಒಟ್ಟು 262277 ಹೆ. ವಿಸ್ತೀರ್ಣವನ್ನುಹೊಂದಿದ್ದು ತರಕಾರಿ ಬೆಳೆಗಳು 1486 ಹೆ. ವಿಸ್ತೀರ್ಣವನ್ನು ಹೊಂದಿದೆ. 2011-12ರ ಮಾಹಿತಿಯನ್ನು ಗಮನಿಸಿದಾಗ ಎಲ್ಲಾ ಬೆಳೆಗಳು ಭೂಮಿಯ ವಿಸ್ತೀರ್ಣಕ್ಕೆ ತಕ್ಕಂತೆ ಸಾಮಾನ್ಯವಾದ ಸ್ಥಿತಿಯಲ್ಲಿ ಬೆಳವಣಿಗೆಯನ್ನು ಹೊಂದಿವೆ ಎಂದು ಹೇಳಬಹುದು.

**ರೇಷ್ಮೆ ಕೃಷಿ :** ಜಿಲ್ಲೆಯಲ್ಲಿ ರೇಷ್ಮೆ ಕೃಷಿಯು ಸಾಧಾರಣವಾಗಿದ್ದು ಒಟ್ಟು 261 ಹೆ. ಪ್ರದೇಶವು ರೇಷ್ಮೆ ಕೃಷಿಗೆ ಒಳಪಟ್ಟಿದೆ. ಹಿಪ್ಪನೇರಳೆಯನ್ನು ಬೆಳೆಯಲು ಮಳೆಯಾಶ್ರಿತವನ್ನು ಪಡೆಯುತ್ತಾರೆ. ಇದರಿಂದ ಹಿಪ್ಪನೇರಳೆ ಬೆಳೆ ವಿಸ್ತೀರ್ಣ 215.80 ಹೆ. ವಿಸ್ತೀರ್ಣ ಹೊಂದಿದ್ದು, ರೇಷ್ಮೆಗೂಡು ಉತ್ಪಾದನೆಯು 74867 ಹೆ. ವಿಸ್ತೀರ್ಣ ಹೊಂದಿದೆ. ರೇಷ್ಮೆಗೂಡಿನ ಮಾರುಕಟ್ಟೆಯ ಸೌಲಭ್ಯ ಕಡಿಮೆ. ಜಿಲ್ಲೆಯಲ್ಲಿ ರೇಷ್ಮೆ ಕೈಗೊಂಡಿರುವ ಗ್ರಾಮಗಳ ಸಂಖ್ಯೆ ಶೇ 70%ರಷ್ಟಿದ್ದು ಪರಿಶಿಷ್ಟ ಜಾತಿ 120, ಪರಿಶಿಷ್ಟ ಪಂಗಡ 19 ಇತರೆ 122 ಇದ್ದು ಒಟ್ಟು ಶೇ. 261ರಷ್ಟಿದೆ.

2011-12ನೇ ಸಾಲಿನಲ್ಲಿ ಉತ್ಪಾದಿಸಿದ ರೇಷ್ಮೆಯ ಮೌಲ್ಯ (ಲಕ್ಷ ರೂಗಳಲ್ಲಿ) ಶಹಪುರ 130.01 ಲಕ್ಷ, ಸುರಪುರ 17.13 ಲಕ್ಷ, ಯಾದಗಿರಿ 40.03 ಲಕ್ಷ ಇದ್ದು ಒಟ್ಟು 187.17 ಲಕ್ಷದಷ್ಟಿದೆ.

ಎಲ್ಲವನ್ನು ಗಮನಿಸಿದಾಗ ರೇಷ್ಮೆ ಕೃಷಿಯ ಮಟ್ಟ ಸಾಧಾರಣವಾಗಿದೆ ಎಂದೂ ಹೇಳಬಹುದು.

**ಸಾಂಪ್ರದಾಯಿಕ ಕೃಷಿ ವಿಧಾನ :** ಜಿಲ್ಲೆಯಲ್ಲಿ ಕೃಷಿಗೆ ತಕ್ಕಂತೆ ಸಾಂಪ್ರದಾಯಿಕ ಪದ್ಧತಿಯು ರೂಢಿಯಲ್ಲಿದೆ.

ನಾಟಿ ಮಾಡುವುದು, ಅಗೆಯುವುದು, ಸಾಲು ಬಿತ್ತನೆ ಪದ್ಧತಿ, ಕಳೆ ತೆಗೆಯುವುದು, ಕೈ ನಾಟಿ ಮಾಡುವುದು ಇವೆಲ್ಲಾ ಸಾಂಪ್ರದಾಯಿಕ ಕೃಷಿ ವಿಧಾನಗಳಾಗಿವೆ.

ಇವುಗಳನ್ನು ಆಯಾ ಬೆಳೆಗಳಿಗೆ ಸಂಬಂಧಿಸಿದಂತೆ ಮಾಡಲಾಗುತ್ತದೆ. ಕೆಲವು ಕಡೆ ನೀರಾವರಿ ಸೌಲಭ್ಯ ಇರುವಲ್ಲಿ ಈ ಪದ್ಧತಿಗಳು ಅಧಿಕವಾಗಿ ಬಳಕೆಯಾಗುತ್ತದೆ. ಇದರಿಂದ ಸಾಂಪ್ರದಾಯಿಕ ವಿಧಾನ ಬಳಕೆಯು ಕಡಿಮೆ ಪ್ರಮಾಣದಲ್ಲಿ ಆಗುತ್ತದೆ.

**ಗೊಬ್ಬರಗಳು ಮತ್ತು ಕೀಟನಾಶಕಗಳು :** ಉತ್ತಮವಾದ ಬೆಳೆಯನ್ನು ಬೆಳೆಯಲು ಹಾಗೂ ಉತ್ತಮ ಇಳುವರಿಯನ್ನು ಪಡೆಯಲು ಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಉಪಯೋಗಿಸುವರು.

2011-12ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಸಾರಜನಕ 25250 ಟನ್, ರಂಜಕ 33443 ಟನ್, ಪೊಟ್ಯಾಷ್ 11815 ಟನ್‌ಗಳಷ್ಟು ಬಳಸಿದ್ದು ಒಟ್ಟು 70508 ಟನ್ ರಾಸಾಯನಿಕ ಗೊಬ್ಬರವನ್ನು ಬಳಸಿದ್ದಾರೆ. ಅಲ್ಲದೆ ತರಕಾರಿಗಳು, ಸೊಪ್ಪುಗಳು, ಎಣ್ಣೆಕಾಳುಗಳು, ಸಾಂಬಾರ ಪದಾರ್ಥಗಳು ಇನ್ನಿತರ ಧಾನ್ಯಗಳನ್ನು ಬೆಳೆಯಲು ಅವುಗಳ ಫಸಲು ಬರುವ ತನಕ ಅದನ್ನು ಸಂರಕ್ಷಿಸಲು ರೈತರು ಹಲವಾರು ರೀತಿಯಲ್ಲಿ ಕೀಟನಾಶಕಗಳನ್ನು ಬಳಸುತ್ತಿದ್ದಾರೆ. ನೈಸರ್ಗಿಕವಾಗಿ ದೊರೆಯುವ ವಸ್ತುಗಳು ಹಾಗೂ ಕೆಲವು ದೇಶೀ ಔಷಧಿಗಳು ಸಹಾಯದಿಂದ ಕೀಟಗಳನ್ನು ನಾಶ ಮಾಡುತ್ತಿದ್ದರು.

**ಬೀಜ, ಧಾನ್ಯ, ತರಕಾರಿಗಳ ಸಂರಕ್ಷಣೆ :** ಜಿಲ್ಲೆಯಲ್ಲಿ ಬೆಳೆಯುವ ಬೀಜ, ಧಾನ್ಯ, ತರಕಾರಿಗಳನ್ನು ಸಂರಕ್ಷಣೆ ಮಾಡಲು ಹಲವಾರು ಪದ್ಧತಿಯನ್ನು ಅನುಸರಿಸುತ್ತಿದ್ದರು. ಬೀಜವನ್ನು ನೀರಿನಲ್ಲಿ ನೆನೆಸುವುದು, ಸಗಣಿಯನ್ನು ಮಿಶ್ರಣ ಮಾಡುವುದು, ಡಿ.ಡಿ.ಟಿ ಪೌಡರನ್ನು ಸಿಂಪಡಿಸಿ ಮಿಶ್ರಣ ಮಾಡುವುದು ಹಾಗೂ ಬಿಗಿಯಾಗಿ ಚೀಲದಲ್ಲಿ ಕಟ್ಟಿ ಇಡುವುದು.

**ಸಹಾಯಕ ಗ್ರಂಥಗಳು**


ಯಾದಗಿರಿ ಜಿಲ್ಲಾ ವೆಬ್‌ಸೈಟ್

ಕರ್ನಾಟಕ ಕೈಪಿಡಿ - ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು (ಕರ್ನಾಟಕ ಸರ್ಕಾರ ಪ್ರಕಟಣೆ)

ರೈತಮಿತ್ರ ವೆಬ್‌ಸೈಟ್

ಕನ್ನಡ ವಿಶ್ವಕೋಶ ಸಂ. 12, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ. ಮೈಸೂರು


*ಆರ್.ಡಿ.*

**ರಕ್ತಚಂದನ** ಉತ್ತಮ ಚೌಬೀನೆ ಮರಗಳಲ್ಲಿ ಒಂದು. ಫ್ಯಾಬೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಟೀರೊ ಕಾರ್ಪಸ್ ಸ್ಯಾಂಟಲೈನಸ್. ಹೊನ್ನೆಮರದ ಹತ್ತಿರದ ಸಂಬಂಧಿಯಾದ ಇದನ್ನು ರಂಜನ ಎಂದು ಕರೆಯುತ್ತಾರೆ. ಭಾರತದ ಎಲ್ಲ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವಂಥದು. ಆಂಧ್ರ ಪ್ರದೇಶದ ಕಡಪ, ನೆಲ್ಲೂರು, ಕರ್ನೂಲು; ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಗಳಲ್ಲಿಯೂ, ಕರ್ನಾಟಕ-ತಮಿಳುನಾಡಿನ ಗಡಿಭಾಗಗಳಲ್ಲೂ ಈ ಮರಗಳು ಹೆಚ್ಚಾಗಿ ಬೆಳೆಯುತ್ತವೆ. ಉತ್ತಮ ಮಳೆ ಬೀಳುವ ಪ್ರದೇಶಗಳಲ್ಲಿ, ಕಲ್ಲುಬಂಡೆಗಳಿರುವ ಬಂಜರುಭೂಮಿಗಳಲ್ಲಿ, ನೀರು ನಿಲ್ಲದ ನೈಸ್ ವೊದಲಾದ ಶಿಲಾಭೂಮಿಗಳಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ. ಸು. 35-40 ಅಡಿ ಎತ್ತರಕ್ಕೆ ಬೆಳೆಯಬಲ್ಲ ಸಾಧಾರಣ ಗಾತ್ರದ ಮರವಿದು. ಚೆನ್ನಾಗಿ ಬಲಿತ ಮರ 3-4 ಅಡಿ ಸುತ್ತಳತೆ ಬರಬಹುದು. ಇದರ ತೊಗಟೆ ಕಪ್ಪು ಮಿಶ್ರಿತ ಕಂದು ಬಣ್ಣದ್ದಾಗಿದ್ದು ಕಾಂಡವನ್ನು ಕತ್ತರಿಸಿದರೆ ಕೆಂಪು ರಸ ಒಸರುತ್ತದೆ. ಬಿಸಿಲನ್ನು ಹೆಚ್ಚು ಬಯಸುವ ಈ ಮರಕ್ಕೆ ನೆರಳು ಬೇಕಿಲ್ಲ.

ಬೀಜ ಮತ್ತು ಕಾಂಡದ ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡಬಹುದು. ಮರವನ್ನು ಕತ್ತರಿಸಿ ಮತ್ತೊಮ್ಮೆ ಚಿಗುರುವಂತೆಯೂ ಮಾಡಬಹುದು.

ಒಂದೇ ಬುಡದಲ್ಲಿ ನಾಲ್ಕಾರು ಸಸಿಗಳು ಕವಲೊಡೆದು ಬೆಳೆಯುತ್ತವೆ. ಇದರ ಕೊಂಬೆಗಳಲ್ಲಿ ಮೂರರಿಂದ ಆರು ಎಲೆಗಳು ಸಂಯುಕ್ತ ಮಾದರಿಯಲ್ಲಿ ಕೂಡಿರುತ್ತವೆ. ಹೂವಿನಲ್ಲಿ ಐದೈದರಂತೆ ಎರಡು ಗುಂಪುಗಳಿದ್ದು ಒಟ್ಟು ಹತ್ತು ಕೇಸರಗಳಿರುತ್ತವೆ. ಗಿಡ ಎಳಸಾಗಿದ್ದಾಗ ಜಾನುವಾರುಗಳಿಗೆ ಸಿಗದಂತೆ ಬೆಳೆಸಬೇಕು. ಸಾಮಾನ್ಯವಾಗಿ ಮಳೆಗಾಲದಲ್ಲಿ ಸಸಿ ನೆಡುವುದು ವಾಡಿಕೆ. ಹೊಲದ ಬದುಗಳಲ್ಲಿ ಅಥವಾ ದಿಬ್ಬಗಳಲ್ಲಿ ಸಾಲು ಮರಗಳ ಹಾಗೆ ಬೆಳೆಸುವುದುಂಟು. ಮರದ ಕಾಂಡ ಮಾಸಲು ಬಿಳಿ. ಮರ ಬಲಿತಂತೆ ಚೇಗು ಹೆಚ್ಚಾಗಿ ಅತಿ ಭಾರವಾಗಿಯೂ ಗಡುಸಾಗಿಯೂ ಇರುತ್ತದೆ. ಕೆತ್ತನೆ ಕೆಲಸಗಳಿಗೆ ಉಪಯುಕ್ತವಾದ ಇದರ ಚೌಬೀನೆ ಬೊಂಬೆ ತಯಾರಿಕೆಗೆ ಪ್ರಸಿದ್ಧವಾಗಿದೆ. ಬಲಿತ ಮರವನ್ನು ಕೊಯ್ದಾಗ ಚೇಗು ಕೆಂಪು ಬಣ್ಣಕ್ಕಿದ್ದು, ಒಣಗಿದಾಗ ಕಂದು ಬಣ್ಣಕ್ಕೆ ತಿರುಗುತ್ತದೆ. ಈ ಮರದ ದಿಮ್ಮಿಯಲ್ಲಿ ಕೆಂಪು ಹಾಗೂ ಹಳದಿ ವರ್ಣಗಳಿರುವುದರಿಂದ ಹತ್ತಿ, ಉಣ್ಣೆ ಬಟ್ಟೆಗಳಿಗೆ ಮತ್ತು ಚರ್ಮಕ್ಕೆ, ಆಹಾರ ಪದಾರ್ಥಗಳಿಗೆ, ಔಷಧಗಳಿಗೆ, ಕಾಗದದ ತಿರುಳಿಗೆ ಬಣ್ಣ ಕಟ್ಟಲು ಇದನ್ನು ಬಳಸುತ್ತಾರೆ. ಇದರಲ್ಲಿ ನೋವು ನಿಯಂತ್ರಕ ಗುಣವಿದ್ದು, ಊತ, ತಲೆನೋವುಗಳಿಗೂ ಪಿತ್ತಸಂಬಂಧಿ ಕಾಯಿಲೆಗಳಿಗೂ ಚರ್ಮರೋಗಗಳಿಗೂ ಉಪಯುಕ್ತ.

ಜನವರಿ ತಿಂಗಳಿಂದ ಮಾರ್ಚ್ ತಿಂಗಳಿನ ತನಕ ಎಲೆ ಉದುರಿ ಏಪ್ರಿಲ್‌ಗೆ ಚಿಗುರೊಡೆಯುತ್ತದೆ. ಜೂನ್‌ನಲ್ಲಿ ಹೂ ಬಿಡಲಾರಂಭಿಸಿ ಕಾಯಿ ಕಚ್ಚಿ ಫೆಬ್ರವರಿ ವೇಳೆಗೆ ಪಕ್ವವಾಗುತ್ತವೆ.

*ಎಸ್.ವಿ*

**ರಾಗಿ** ರಾಗಿ ಹುಲ್ಲು ಜಾತಿಗೆ ಸೇರಿದ ಏಕದಳ ಸಸ್ಯ. ಇದು ಗ್ರಾಮಿನೆ ಎಂಬ ಗುಂಪಿಗೆ ಸೇರುತ್ತದೆ. ಇದರ ಸಸ್ಯವೈಜ್ಞಾನಿಕ ನಾಮ 'ಎಲುಸೀನ ಕೊರಕೇನ'. ರಾಗಿಯನ್ನು ತಮಿಳುನಲ್ಲಿ 'ರಾಗಿ' (ಕೇವರು) ಎಂದೂ ಮಲಯಾಳದಲ್ಲಿ 'ಮುತ್ತರಿ' ಎಂದೂ ಒಡಿಯಾ ಭಾಷೆಯಲ್ಲಿ ಮಾಂಡಿಯಾ ಎಂದೂ ತೆಲುಗಿನಲ್ಲಿ 'ರಾಗುಲು' ಎಂದೂ ಹಿಂದಿಯಲ್ಲಿ 'ರಾಗಿ' ಎಂದು ಕರೆಯುವರು. ಇದು ಉಷ್ಣವಲಯದಲ್ಲಿ ಬೆಳೆಯಬಹುದಾದ ಖುಷ್ಕಿ ಬೆಳೆಯಾದರೂ ಕಾಲವನ್ನನುಸರಿಸಿ ಸಮಶೀತೋಷ್ಣ ವಲಯದಲ್ಲಿಯೂ ಬೆಳೆಯಬಹುದು. ಕೆಂಪು, ಕಪ್ಪು ಮತ್ತು ಮರಳು ಮಿಶ್ರಿತಗೋಡು ಮತ್ತು ಮೆಕ್ಕಲು ನೆಲಗಳಲ್ಲಿ ರಾಗಿ ಬೆಳೆಯಬಹುದು.



ದಕ್ಷಿಣಭಾರತದಲ್ಲಿ ಕರ್ನಾಟಕ, ತಮಿಳುನಾಡು ಆಂಧ್ರಪ್ರದೇಶ ಮತ್ತು ಕೇರಳದಲ್ಲಿ ರಾಗಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದು ಖುಷ್ಕಿ ಬೆಳೆ ಮಾತ್ರವಾಗಿರದೆ ನೀರಾವರಿ ಬೆಳೆಯೂ ಆಗಿದೆ. ಕರ್ನಾಟಕದಲ್ಲಿ ಚೆಳ್ಳಕೆರೆ, ಪಾವಗಡ ಮಧುಗಿರಿ, ಕೊರಟಗೆರೆ, ದೇವನಹಳ್ಳಿ, ಹೊಸಕೋಟೆ, ಸಿರಾ, ತುಮಕೂರು ಮುಂತಾದ ಭಾಗಗಳಲ್ಲಿ ತರಕಾರಿ ಬೆಳೆಗಳಿಗೆ ಮುಖ್ಯ ಪರ್ಯಾಯ ಬೆಳೆಯಾಗಿ ರಾಗಿಯನ್ನು ಬೆಳೆಯುತ್ತಾರೆ.

**ಭೂಗುಣ :** ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಭೂಗುಣ ರಾಗಿ ಬೆಳೆಗೆ ಅನುಕೂಲವಾಗಿದೆ. ಮೇ ತಿಂಗಳಿಂದ ಆಗಸ್ಟ್ ತಿಂಗಳ ತನಕ ಆಯಾ ಪ್ರದೇಶದ ಸನ್ನಿವೇಶಗಳಿಗೆ ಅನುಗುಣವಾಗಿ ರಾಗಿಯನ್ನು ಬಿತ್ತುವರು. ರಾಗಿಯಲ್ಲಿ ಐನು ರಾಗಿ ಮತ್ತು ಕಾರು ರಾಗಿ ಎಂದು ಎರಡು ವಿಧ. ಇವನ್ನು ಆಯಾ ಕಾಲದಲ್ಲಿ ಬೀಳುವ ಮಳೆಯನ್ನನುಸರಿಸಿ ಬಿತ್ತನೆ ಮಾಡುವರು. ಮೇ / ಜೂನ್ ತಿಂಗಳಲ್ಲಿ ಬಿತ್ತಿದರೆ ನವೆಂಬರ್ / ಡಿಸೆಂಬರ್ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ.


**ಜಾತಿಗಳು :** ಗೂಡುತೆನೆ, ಬಿತ್ತುತೆನೆ, ಜಡೆತೆನೆ, ಬಿಳಿ ತೆನೆ ಎಂದು ಹಲವಾರು ಜಾತಿ. ಈ ತೆನೆಗಳನ್ನು ಅನುಸರಿಸಿ ರುದ್ರ ಜಡೆ ರಾಗಿ, ಮಜ್ಜಿಗೆ ರಾಗಿ, ಮಾದಯ್ಯಗಿರಿ ರಾಗಿ, ಜಡೆ ಸಣ್ಣ ರಾಗಿ, ದೊಡ್ಡರಾಗಿ, ಗಿಡ್ಡರಾಗಿ, ಕಡ್ಡಿರಾಗಿ, ಕರಿಗಿಡ್ಡ ಹುಲ್ಲು ಬೆಳೆ ಎಂದೂ ಬೇರೆ ಬೇರೆ ಭಾಗಗಳಲ್ಲಿ ಕರೆಯುತ್ತಾರೆ. ರಾಗಿ ಬಣ್ಣ ಸಾಮಾನ್ಯವಾಗಿ ಕಂದು ಇಲ್ಲವೆ ಕಂದು ಮಿಶ್ರಿತ ಕಪ್ಪು. ಬಿಳಿ ಮತ್ತು ಕೆಂಪು ರಾಗಿ ತೀರ ಅಪರೂಪ. ರಾಗಿ ತುಂಬ ಗಡಸು ಧಾನ್ಯ. (ಗಟ್ಟಿ) ರಾಗಿಯನ್ನು ಒಣಗಿಸಿ 5-6 ವರ್ಷಗಳವರೆಗೆ ಕೆಡದಂತೆ ಇಡಬಹುದು. ಇದನ್ನು 'ರಾಮಧಾನ್ಯ' (ನರೆದಲೆಗ) ಎಂದೂ ಕರೆಯುತ್ತಾರೆ.

**ಬಿತ್ತನೆ :** ಪಾತಿಗಳಲ್ಲಿ (ಒಟ್ಲುಮಾಡಿ) ಸಸಿ ಬೆಳೆಸಿ ನಾಟಿ ಮಾಡುವುದು. ಕೈಯಿಂದ ಚೆಲ್ಲುವುದು. ಕೂರಿಗೆ ಅಥವಾ ಸಡ್ಡೆಯಿಂದ ಸಾಲಾಗಿ ಬಿತ್ತುವುದು. ರಾಗಿಯನ್ನು ಕೊಟ್ಟಿಗೆ ಗೊಬ್ಬರದೊಂದಿಗೆ ಬೆರೆಸಿ ಬಿತ್ತುವುದಕ್ಕೆ 'ಗುಣಿರಾಗಿ' ಎನ್ನುವರು.

**ಪಾತಿಗಳಲ್ಲಿ ಬೆಳೆಸಿ ನಾಟಿ ಮಾಡುವುದು :** ರಾಗಿಯನ್ನು ಪಾತಿಯಲ್ಲಿ ಬಿತ್ತುವ ಮೊದಲು ನೆಲವನ್ನು ಹುಲ್ಲು ಕಸಕಡ್ಡಿಗಳಿಂದ ಸುಡಬೇಕು. ಅನಂತರ ಆಳವಾಗಿ ಅಗೆದು ಹೆಂಟೆ ಒಡೆದು ಪುಡಿಮಾಡಿ ಗರಿಕೆ ಮೊದಲಾದ ಕಳೆಯನ್ನು ತೆಗೆದು ಮತ್ತೊಮ್ಮೆ ಕೆದಕಿ 2-3 ದಿನ ಒಣಗಲು ಬಿಡಬೇಕು. ಒಣಗಿದ ನೆಲವನ್ನು ಅಗೆದು ಕೊಟ್ಟಿಗೆ ಗೊಬ್ಬರ ಸೇರಿಸ ಹದವಾಗಿ ಹರಡಿ ಸಮತಟ್ಟಾಗಿ ಮಾಡಿ ರಾಗಿಯನ್ನು ಬಿತ್ತಬೇಕು. ನೀರು ಹಾಕುವ ಮೊದಲು ಒಣಹುಲ್ಲನ್ನು ಸಣ್ಣದಾಗಿ ತುಂಡರಿಸಿ ಪಾತಿಯ ಮೇಲೆ ಹರಡಿ ನೀರು ಹಾಕುವುದರಿಂದ ರಾಗಿ ಚದುರಿ ಗುಡ್ಡೆಯಾಗುವುದಿಲ್ಲ. ತೇವಾಂಶವನ್ನು ಹೆಚ್ಚು ಕಾಲ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಬಿತ್ತಿದ 25-30 ದಿನಗಳಲ್ಲಿ 10 ಅಂಗುಲ ಎತ್ತರ ಪೈರು ಬೆಳೆಯುತ್ತದೆ. ಪೈರನ್ನು ಕಿತ್ತು ನಾಟಿ ಮಾಡುವ ಮೊದಲು ಬೇರುಗಳನ್ನು ಹಸಿ ಸಗಣಿ ಮತ್ತು ಕೆಮ್ಮಣ್ಣು ರಾಡಿ ಮಿಶ್ರಣದಲ್ಲಿ ಅದ್ದಿದ್ದರೆ ರೋಗವನ್ನು ತಡೆಯಬಹುದು. ಹೊಲವನ್ನು ಉತ್ತು ಸಾಕಷ್ಟು ಗೊಬ್ಬರವನ್ನು ಹರಡಿ ಹಲುಬೆ ಹೊಡೆದು ಸಮ ಮಾಡಬೇಕು. ಪೈರನ್ನು ನೇಗಿಲು ಸಾಲುಗಳಲ್ಲಿ ಅಥವಾ ಕೈಗುದ್ದಲಿಯಿಂದ ಮಾಡಿದ ಸಾಲುಗಳಲ್ಲಿ ಅರ್ಧ ಅಡಿ ಅಂತರದಲ್ಲಿ ನೆಡಬೇಕು. ಹದವಾಗಿ ನೀರನ್ನು ಕೊಡುತ್ತಿದ್ದರೆ 25-30 ದಿನಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ನೆಲಗಟ್ಟಿಯಾಗಿದ್ದರೆ ಗುದ್ದಲಿಯಿಂದ ಕೆದಕಿ

ಅಲ್ಪ ಪ್ರಮಾಣದಲ್ಲಿ ಗೊಬ್ಬರವನ್ನು ಕೊಡಬಹುದು. ಹೀಗೆ ಮಾಡುವುದರಿಂದ ಪೈರು ನೇರವಾಗಿ ಬೆಳೆದು ತೆಂಡೆಹೊಡೆಯಲು ಸಹಕಾರಿಯಾಗುತ್ತದೆ. ಇದರ ಬೇರುಗಳು ತೆಳುವಾಗಿದ್ದು ತಂತು ಬೇರುಗಳು ಗುತ್ತಿಯಂತಿರುತ್ತವೆ. ಇದರಿಂದ ಆಹಾರ ಮತ್ತು ನೀರಿನ ಅಂಶವನ್ನು ಚೆನ್ನಾಗಿ ಹೀರಿಕೊಳ್ಳಲು ಸಾಧ್ಯವಾಗುತ್ತದೆ. ಗಿಣ್ಣುಗಳಿಂದ ಮತ್ತಷ್ಟು ತಂಡೆ ಹೊಡೆದು ಸಮೃದ್ಧವಾಗಿ ಬೆಳೆಯುತ್ತದೆ.

**ಬಿತ್ತನೆ :** ರಾಗಿಯನ್ನು ಸಾಮಾನ್ಯವಾಗಿ ಭರಣಿ ಮಳೆಯಲ್ಲಿ (ಮೇ ಜೂನ್) ಬಿತ್ತುವರು. ಒಂದು ಎಕರೆ ಹೊಲಕ್ಕೆ ಕೈಯಿಂದ ಎರಚಿ (ಚೆಲ್ಲಿ) ಬಿತ್ತುವುದಾದರೆ 10-12 ಸೇರು ರಾಗಿ ಬೇಕಾಗುತ್ತದೆ. ನಾಟಿ ಮಾಡುವುದಾದರೆ 3-4 ಸೇರು ರಾಗಿ ಸಾಕಾಗುತ್ತದೆ. ಕೂರಿಗೆಯಿಂದ ಬಿತ್ತಿದರೆ 5-6 ಸೇರು ರಾಗಿಬೇಕು. ಕೈಯಿಂದ ಬಿತ್ತುವ ನೆಲವನ್ನು ಮೂರು, ನಾಲ್ಕು ಬಾರಿ ಉಳುಮೆ ಮಾಡಬೇಕು. ಎರಡು ಸಲ ಉತ್ತ ಮೇಲೆ ಕೊಟ್ಟಿಗೆ ಗೊಬ್ಬರವನ್ನು (ಒಂದು ಎಕರೆಗೆ 20ಗಾಡಿ) ಹರಡಬೇಕು. ಅನಂತರ ಎರಡು ಸಾಲು ಉತ್ತು ಹಲುಬೆ ಹೊಡೆದು ಕಸ ಕಡ್ಡಿ ಆಯ್ದು ಶುದ್ಧಮಾಡಬೇಕು.



ರಾಗಿ ಬಿತ್ತಿದ ಮೇಲೆ 4-5 ಅಡಿ ಅಂತರದಲ್ಲಿ ಸಾಲುಗಳು ಮಾಡಿ ಜೋಳ, ಎಳ್ಳು, ಅಲಸಂದೆ, ಅವರೆ, ತೊಗರಿ ಸಜ್ಜೆ, ಹೆಸರು ಮೊದಲಾದ ಕಾಳುಗಳನ್ನು ಕೂರಿಗೆಯಿಂದ ಬಿತ್ತಬೇಕು. ಇದಾದ ಕೂಡಲೆ ಹಲುಬೆ, ಅಥವಾ ಯಟ್ಟ (ಊಟುವೆ)ವನ್ನೂ ಮಣೆಯನ್ನು ಹಾಯಿಸಬೇಕು. ಇದರಿಂದ ರಾಗಿ ಮಣ್ಣಿನಲ್ಲಿ ಬೆರೆತು ಮೇಲೆ ಬರದೆ ಕೂರುತ್ತದೆ. ಹಿಂದೆ ತಿಳಿಸಿದಂತೆ ಸಾಲುಗಳಲ್ಲಿ ಕಾಳುಗಳನ್ನು ಬಿತ್ತುವುದಾದರೂ ಕೆಲವು ಪ್ರದೇಶಗಳಲ್ಲಿ ಒಂದು ಸಾಲಿನಲ್ಲಿ ಜೋಳ ಹುಚ್ಚೆಳ್ಳು ಬಿತ್ತಿದರೆ ಇನ್ನೊಂದು ಸಾಲಿನಲ್ಲಿ ಹುಚ್ಚೆಳ್ಳು, ಕಾಗೆ ಜೋಳ, ಬಿಳಿ ಜೋಳ ಬಿತ್ತುವುದುಂಟು ಕೆಲವರು ಅವರೆ ಅಥವಾ ತೊಗರಿ ಕಾಳುಗಳನ್ನು ಮಾತ್ರ ಸಾಲುಗಳಲ್ಲಿ ಬಿತ್ತುವರು. ಕಾಳು ಒತ್ತಾಗದಿರಲು ಒಂದು ಭಾಗ ರಾಗಿಗೆ ಐದು ಭಾಗ ಗೊಬ್ಬರದೊಂದಿಗೆ ಬೆರೆಸಿ ಕೂರಿಗೆಯಿಂದ ಬಿತ್ತಬೇಕು.

ಕಾರು ರಾಗಿಯನ್ನು ಭರಣಿ ಮಳೆಯಲ್ಲೂ ಹೈನ್ ರಾಗಿಯನ್ನು ಆರಿದ್ರ ಮಳೆಯಲ್ಲೂ (ಜುಲೈ ತಿಂಗಳಲ್ಲಿ) ಬಿತ್ತುವುದು ರೂಢಿ. ಬಿತ್ತಿದ ಮೂರು ದಿನಗಳಲ್ಲಿ ಮೊಳಕೆ ಕಾಣಿಸಿಕೊಳ್ಳುತ್ತದೆ. ಮಧ್ಯೆ ಮಧ್ಯೆ ಸಾಲುಗಳಲ್ಲಿ ಬೆಳೆದಿರುವ ಅವರೆ, ತೊಗರಿ, ಜೋಳದ ಸಸಿಗಳು ಎಳೆಯದಾಗಿದ್ದಾಗ ಬೆಳ್ಳಗೆ ಕಂಡರೆ ರಾಗಿ ಪೈರಿ ಹಸುರಾಗಿ ಕಾಣುತ್ತದೆ.

**ಬೇಸಾಯ ಕ್ರಮ :** ರಾಗಿ ಬಿತ್ತಿದ 20 ದಿನಗಳ ಅನಂತರ ಹಲ್ಲು ಕುಂಟೆ (ಚಿಪ್ಪುಕುಂಟೆ) ಒಡೆಯಬೇಕು. ಕೂರಿಗೆಯಿಂದ ಬಿತ್ತಿದರೆ ಒತ್ತಾಗಿರುವ ಪೈರನ್ನು ಕಿತ್ತು ತೆಳ್ಳಗೆ ಮಾಡಬೇಕು. 4-6 ಹಲ್ಲುಗಳಿರುವ ಕುಂಟೆಯನ್ನು ಮೊದಲು ಉದ್ದವಾಗಿಯೂ ಒಂದು ವಾರದ ಮೇಲೆ ಅಡ್ಡಲಾಗಿಯೂ ಒಡೆಯಬೇಕು. ಕುಂಟೆ ಒಡೆಯುವವನು ನುರಿತ ರೈತನಾಗಿದ್ದು ಹೊಲದಲ್ಲಿ ಯಾವ ಜಾಗದಲ್ಲಿ ಪೈರು ಒತ್ತಾಗಿದೆಯೋ ಅಲ್ಲಿ ಒತ್ತಿ ಹಿಡಿದು ಪೈರು ತೆಳುವಾಗಿರುವ ಕಡೆ ತೇಲಿಸಿಕೊಂಡು ಹೋಗುತ್ತಾನೆ. 'ಬಿತ್ತಿದವನ ಹೊಲ ಹರಗಿದವ ಕೆಡಿಸಿದ' ಎಂಬ ಗಾದೆಯೇ ಇದೆ. ಕುಂಟೆ ಒಡೆಯುವುದರಿಂದ ಸಾಕಷ್ಟು ಉಪಯೋಗವಿದೆ. ಪೈರು ಹದವಾಗಿ ತೆಳುವಾಗಿ, ದಂಟು ದೃಢವಾಗಿ ತೆಂಡೆ ಹೊಡೆದು ಬೆಳೆಯುತ್ತದೆ. ನೆಲದ ಮೇಲ್ಭಾಗದ ಮಣ್ಣು ಕೆದಕಿದಂತಾಗಿ ಬೇರಿಗೆ ಗಾಳಿ ಸಿಗುತ್ತದೆ. ನೆಲದಡಿಯಲ್ಲಿ ತೇವಾಂಶ ಹೆಚ್ಚು ದಿನ ಉಳಿಯಲು ಸಾಧ್ಯವಾಗುತ್ತದೆ. ಕುಂಟೆ ಒಡೆಯುವುದರಿಂದ ಕಳೆ ನಿಯಂತ್ರಣವಾಗುತ್ತದೆ. ಬುಡಗಳಿಗೆ ಮಣ್ಣನ್ನು ಏರಿದಂತಾಗುತ್ತದೆ.

ಕುಂಟೆ ಹೊಡೆಯುವಾಗ ಹಲುಬೆಯ ಹಲ್ಲುಗಳಿಗೆ ಸಿಕ್ಕಿದ ಕಸ ಕಡ್ಡಿಗಳನ್ನು ಆಗಾಗ ತೆಗೆಯುತ್ತಿರಬೇಕು. ಪೈರಿನ ಮೇಲೆ ಮಣ್ಣು ಮುಚ್ಚಿಕೊಂಡಿದ್ದರೆ ಕೈಯಿಂದ ಚದುರಿ ಪೈರನ್ನು ಹೊರ ತೆಗೆಯಬೇಕು.

ಬಿತ್ತಿದ 40-45 ದಿನಗಳಲ್ಲಿ ಪರಾರಿ ಅಥವಾ ಕುಡಗೋಲಿನಿಂದ ಕಳೆಯನ್ನು ತೆಗೆಯಬೇಕು. ಪೈರಿಗೆ ಪೆಟ್ಟಾಗದಂತೆ ನೆಲವನ್ನು ಕೆದಕಿ ಬೇರು ಹದ ತೆಗೆದುಕೊಳ್ಳುವಂತೆ ಮಾಡಬೇಕು. ಎರಡು ತಿಂಗಳಲ್ಲಿ ಪೈರು ಬೆಳೆದು ಗರಿ ಉದ್ದವಾಗಿ ದಟ್ಟವಾಗಿ ಕಂಡರೆ ದನಗಳನ್ನು ಬಿಟ್ಟು ಮೇಯಿಸಬಹುದು. ಅಥವಾ ಗರಿಯನ್ನು ಕೊಯ್ದು ದನಗಳಿಗೆ ಮೇವಾಗಿ ಬಳಸಬಹುದು. ಇದರಿಂದ ತೆನೆ ದಪ್ಪವಾಗಿ ಇಳುವರಿ ಹೆಚ್ಚಾಗುತ್ತದೆ.

**ಕೊಯ್ಲು :** ತೆನೆ ಬಲಿತ ಮೇಲೆ ಪೈರನ್ನು ಕಟಾವು ಮಾಡಿ ಎರಡು ಮೂರು ದಿನ ಹೊಲದಲ್ಲೇ ಬಿಡಬೇಕು. ಒಣಗಿದ ಮೇಲೆ ಬೆಳಗಿನ ಜಾವ ಬಿಸಿಲು ಕಡಿಮೆ ಇರುವಾಗ ಅದೇ ಪೈರಿನಿಂದ ಕಂತೆಗಳನ್ನು ಕಟ್ಟಿ ಎತ್ತರದ ಜಾಗದಲ್ಲಿ ಅಲ್ಲಲ್ಲಿ ಸಣ್ಣ ಗುಡ್ಡೆಗಳಂತೆ ಕುಪ್ಪೆ (ಮೆದೆ) ಹಾಕಬೇಕು. ಸಾಮಾನ್ಯವಾಗಿ ಚೆಲ್ಲಿ ಬೆಳೆಸಿದ ರಾಗಿ ತೆನೆಯನ್ನು ಪೈರಿನ ಸಮೇತ ಕೊಯ್ಲು ಮಾಡುವರು. ಅದೇ ನಾಟಿ ಮಾಡಿದ ಹೊಲದಲ್ಲಿ ತೆನೆಯನ್ನು ಪ್ರತ್ಯೇಕವಾಗಿ ಕಟಾವು ಮಾಡಿ ತಾಳ (ದಂಟನ್ನು) ಹುಲ್ಲಿಗಾಗಿ ಕೊಯ್ದು ಗುಡ್ಡೆ ಮಾಡುತ್ತಾರೆ. ತೆನೆಯನ್ನು ಹೊಲದಲ್ಲಿ ಬಿಡದೆ ಕಣದಲ್ಲಿ ಹರಡಿ ಒಣಗಿಸಿ ರಾಶಿ ಮಾಡಿ ಮೇಲೆ ರಕ್ಷಣೆಗಾಗಿ ಏನಾದರೂ ಹೊದಿಕೆ ಮಾಡುವರು. ಮಳೆಯಿಲ್ಲದ ಸಮಯ ನೋಡಿ ಚೆನ್ನಾಗಿ ಬಿಸಿಲು ಬಂದಾಗ ತುಳಿಸಿ ಒಕ್ಕಣೆ ಮಾಡಿಕೊಳ್ಳುತ್ತಾರೆ. ಚೆನ್ನಾಗಿ ಬೆಳೆದರೆ ಒಂದು ಎಕರೆ ಹೊಲದಲ್ಲಿ 5-8 ಮೂಟೆ (ಕ್ವಿಂಟಾಲ್) ಇಳುವರಿ ಸಿಗುತ್ತದೆ. ನಾಟಿ ಮಾಡಿದ ಹೊಲದಲ್ಲಿ 10-12 ಮೂಟೆ ಇಳುವರಿ ಬರುತ್ತದೆ.

**ತಳಿಗಳು : ಕೊಂಬಿನರಾಗಿ :** ನಾಲ್ಕರಿಂದ - ಐದು ತಿಂಗಳೊಳಗೆ ಕೊಯ್ಲಿಗೆ ಬರುತ್ತದೆ. ಮೇಕೆ - ಕೊಂಬಿನಂತೆ ಉದ್ದವಾದ ಇಣುಕುಗಳನ್ನು ಹೊಂದಿರುವ ತಳಿ. ಉಷ್ಣ ವಲಯಗಳಾದ ತುಮಕೂರು, ಚಿತ್ರದುರ್ಗ ಮತ್ತು ಆಂಧ್ರದ ಅನಂತಪುರ ಜಿಲ್ಲೆಗಳಲ್ಲಿ ನೀರಾವರಿ ಬೆಳೆಯಾಗಿ ಮಾಡುವರು. ಒಣ ಭೂಮಿಯಲ್ಲೂ, ಬೇಸಗೆ ಕಾಲದಲ್ಲೂ ಬೆಳೆಯಬಹುದಾದ ರಾಗಿ ತೆನೆಯಲ್ಲಿ ಇಣುಕುಗಳು ನೀಳವಾಗಿ ಬಿಟ್ಟಿಕೊಂಡಿರುತ್ತವೆ. ಇಳುವರಿ ಕಡಿಮೆ, ಹುಲ್ಲು ಹೆಚ್ಚು, ಗಟ್ಟಿ ಕಾಳು.

**ಕರಿಕಡ್ಡಿರಾಗಿ :** 130-150 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚು ಬೆಳೆಯುತ್ತಾರೆ. ಮಳೆಯ ಏರುಪೇರುಗಳಲ್ಲಿ ಹೊಂದಿಕೊಳ್ಳುವ ಸಾಮರ್ಥ್ಯವಿರುವ ತಳಿ. ಹೆಚ್ಚು ಇಳುವರಿಯನ್ನು ಕೊಡುತ್ತದೆ. ಗಟ್ಟಿ ರಾಗಿಯಾಗಿದ್ದು ಆಹಾರದ ಗುಣಮಟ್ಟ ಅಧಿಕ. ಪೈರು ಹೆಚ್ಚು ತಂಡೆ ಹೊಡೆದು ಜಾನುವಾರುಗಳಿಗೆ ಮೇವನ್ನು ಒದಗಿಸುತ್ತದೆ. ಕ್ರಿಮಿ ಕೀಟಗಳ ಬಾಧೆಯಿಲ್ಲ.

**ಜೇನುಗೂಡು ರಾಗಿ :** ಸಣ್ಣಕಾಳಿನ ತಳಿ. ಮೂರುವರೆ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಈ ತಳಿಗೆ ರೋಗ ಹೆಚ್ಚು. ಇಳುವರಿಯೂ ಹೆಚ್ಚು. ಮಳೆಗಾಲ ಮತ್ತು ಬೇಸಗೆಯಲ್ಲೂ ಬೆಳೆಯಬಹುದಾದದ್ದು.

**ಮಧ್ಯಮರಾಗಿ :** ಗಿಡ್ಡ ಜಾತಿಯ ತಳಿ. ಮೂರು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಹೆಚ್ಚು ಎತ್ತರಕ್ಕೆ ಬೆಳೆಯುವುದಿಲ್ಲ. ಕೈ ಹಿಡಿಯಂಥ ಗುಂಡು ತೆನೆಯ ತಳಿ. ಇಳುವರಿ ಅಧಿಕ, ಕಡಿಮೆ ಮಳೆಯಲ್ಲೂ ಬೆಳೆಯಬಹುದು. ಕಾಳು ಬೇಗನೆ ಉದರದ ಗಟ್ಟಿ ತೆನೆ ಇದರದು.

**ಐಯನ್ ರಾಗಿ :** 150 ದಿನಗಳಲ್ಲಿ ಕೊಯ್ಲಿಗೆ ಬರುವ ತಳಿ. ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಬೆಳೆಯುವ ಮಳೆಯಾಶ್ರಿತ ತಳಿ. ಎತ್ತರಕ್ಕೆ ಬೆಳೆಯುವ ಜಾತಿಯಾದರೂ ರೋಗ ಬಾದೆ ಹೆಚ್ಚು. ದನಕರುಗಳಿಗೆ ಒಳ್ಳೆ ಮೇವು ಸಿಗುತ್ತದೆ. ಸಾಧಾರಣ ಇಳುವರಿಯನ್ನು ಕೊಡುತ್ತದೆ. ಈ ತಳಿಯ ಕಾಳುಗಳು ಒಳ್ಳೆಯ ಪೋಷಕಾಂಶಗಳನ್ನು ಹೊಂದಿದ್ದು ಆಹಾರದಲ್ಲಿ ರೈತರ ಮನಗೆದ್ದ ತಳಿ.

**ಮಂಚಯ್ಯನಗಿರಿ ರಾಗಿ :** ನೂರು ದಿನಗಳ ತಳಿ. ಹಿಂದೆ ಮೈಸೂರು ಪ್ರಾಂತ್ಯದಲ್ಲಿ ಜನಪ್ರಿಯ ತಳಿಯಾಗಿತ್ತು. ಎದೆ ಮಟ್ಟ ಬೆಳೆಯುವ ಜಾತಿ. ಮಳೆಗೆ ತಡೆಯುವುದಿಲ್ಲ. ಜೋರಾಗಿ ಗಾಳಿ ಬೀಸಿದರೂ ಪೈರು ನೆಲ ಮುಟ್ಟುತ್ತದೆ. ಮಳೆಯ ಆಶ್ರಯದಲ್ಲಿ ಬೆಳೆಯಲು ಯೋಗ್ಯವಾದ ತಳಿ. ಹೆಚ್ಚು ಹುಲ್ಲನ್ನು ಕೊಡುವ ಇದರ ಇಳುವರಿ ಸಾಧಾರಣ.

**ಬೆಟ್ಟದ ಕೆಳಗಿನ ರಾಗಿ :** 100-110 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಮಧುಗಿರಿ, ಗೌರಿಬಿದನೂರು ಪ್ರದೇಶಗಳಲ್ಲಿ ಹೆಚ್ಚು ಬೆಳೆಯುತ್ತಾರೆ. ಮಳೆಯಾಶ್ರಿತ ಬೆಳೆಯಾದರೂ ನೀರಾವರಿ ಪ್ರದೇಶದಲ್ಲೂ ಹೊಂದಿಕೊಳ್ಳುವ ತಳಿ. ತೆನೆ ಮುಚ್ಚಿದಂತೆ ಗುಂಡಾಗಿದ್ದು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಊಟಕ್ಕೆ ರುಚಿಯಾದ ರಾಗಿ, ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮವಾಗಿದೆ.

**ಸಣ್ಣ ಕಡ್ಡಿರಾಗಿ :** 4-5 ತಿಂಗಳ ಅವಧಿಯ ಬೆಳೆ. ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯುವ ಮಳೆಯಾಶ್ರಿತ ತಳಿ. ಕಾಂಡ ಸಣ್ಣಕ್ಕಿದ್ದು ಐದು ಅಡಿಯವರೆಗೆ ಬೆಳೆಯಬಲ್ಲದು. ಹೆಚ್ಚು ತೆಂಡೆ ಹೊಡೆದು ಅಧಿಕ ಹುಲ್ಲನ್ನು ಕೊಟ್ಟರೂ ಇಳುವರಿ ಸಾಧಾರಣ. ಆಹಾರಕ್ಕೆ ಉತ್ತಮ ತಳಿ.

**ಪೂರ್ಣರಾಗಿ :** 3-5 ತಿಂಗಳ ಬೆಳೆ. ಕಡಿಮೆ ಮಳೆಯಲ್ಲೂ ಬೆಳೆಯ ಬಹುದಾದ ಇದು ಮಳೆಗಾಲಕ್ಕೆ ಯೋಗ್ಯವಾದ ತಳಿ. ಈ ತಳಿಗೆ ರೋಗಗಳು ಕಡಿಮೆ. ಉತ್ತಮ ನೆಲದಲ್ಲಿ ಬಿತ್ತಿದರೆ ಅಧಿಕ ಇಳುವರಿಯನ್ನು ಕೊಡುತ್ತದೆ. ಕಾಳು ಹೊಳೆಯುವ ಬಣ್ಣವನ್ನು ಹೊಂದಿದ್ದು ಆಕರ್ಷಣೀಯವಾಗಿರುತ್ತವೆ.

**ಕಪ್ಪುತೆನೆ ರಾಗಿ :** ನೀರಾವರಿ ಬೆಳೆ. ತೆನೆಯಲ್ಲಿ ಹೊಟ್ಟು ಹೆಚ್ಚು, ಇಳುವರಿ ಸಾಧಾರಣ. ಮಳೆಯ ಏರುಪೇರುಗಳಿಗೆ ಹೊಂದಿಕೊಳ್ಳ ಬಲ್ಲದು.

**ಹಾಲುಕುರಾಗಿ :** 120 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಮಳೆ ಆಶ್ರಿತ ಬೆಳೆ. ಇಣುಕು ರೋಗಕ್ಕೆ ತುತ್ತಾಗುವ ಇದು ಉದ್ದನೆಯ ಇಣುಕುಗಳನ್ನು ಹೊಂದಿದ್ದು ತೆನೆ ತೆರೆದಂತಿರುತ್ತದೆ. ಹುಲ್ಲು ಅಧಿಕ, ಇಳುವರಿ ಸಾಧಾರಣ.

**ಅಂಗನ ಮಡೆರಾಗಿ :** ಐದು ತಿಂಗಳ ಬೆಳೆ. ಗುಂಡು ತೆನೆ. ಹಿಂದೆ ಬೆಂಗಳೂರು ಸುತ್ತಮುತ್ತ ಬೆಳೆಯುತ್ತಿದ್ದು, ಇಂದು ಕಣ್ಮರೆಯಾಗಿದೆ. ತೆನೆ ಹಣ್ಣಾದರೆ ಕಾಳು ಉದುರುವುದು.

**ಪಿಟಕಡಿ ರಾಗಿ :** ಬೆಂಗಳೂರಿನ ಸುತ್ತಮುತ್ತ ಬೆಳೆಯುವ ತಳಿ. ಗುಡ್ಡ ಗಾಡು ನೆಲದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಹೆಚ್ಚು ತೆಂಡೆ ಹೊಡೆದು ಅಧಿಕ ಹುಲ್ಲನ್ನು ಕೊಡಬಲ್ಲದು. ಕೈ ಮುಷ್ಠಿಯಂತೆ ತೆನೆ ಗುಂಡಿಗೆ ದಪ್ಪಕ್ಕಿದ್ದು ಕಪ್ಪು ಬಣ್ಣವನ್ನು ಹೊಂದಿರುತ್ತದೆ. ಕಡಿಮೆ ಇಳುವರಿ ಹೆಚ್ಚು ರುಚಿ. ರೋಗ ನಿರೋಧಕ ಶಕ್ತಿಹೊಂದಿದ್ದು ಒಂದೆರಡು ಮಳೆ ಕೈಕೊಟ್ಟರೂ ತಡೆಯಬಲ್ಲದು.

**ಹಸುರು ಕಡಿರಾಗಿ :** ಐದು ತಿಂಗಳ ತಳಿ. ಪೈರು ದುಂಡಗೆ ದೃಢವಾಗಿದ್ದು ಮಳೆ ಗಾಳಿಗೆ ಜಗ್ಗುವುದಿಲ್ಲ. ಮಿಶ್ರ ತಳಿಗಳ ಮಧ್ಯೆ ಬೆಳೆಯಬಲ್ಲ ಸಾಮರ್ಥ್ಯವಿದೆ. ಬೆಂಗಳೂರಿನ ಸುತ್ತಮುತ್ತ ಆನೆಕಲ್ ಭಾಗದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಕಡಿಮೆ ಮಳೆಯಲ್ಲೂ ಫಸಲು ಕೊಡುವ ಜಾತಿ. ಉತ್ತಮ ಹುಲ್ಲನ್ನು ಕೊಡುವ ಈ ತಳಿ ಹೆಚ್ಚು ಇಳುವರಿಯನ್ನು ಕೊಡುತ್ತದೆ.

**ಬಿಡುಪುರಾಗಿ :** ನಾಲ್ಕು ತಿಂಗಳ ತಳಿ, ತೆಂಡೆ ಹೊಡೆದು ಬೆಳೆಯುತ್ತದೆ. ಇಣುಕುಗಳು ಉದ್ದವಾಗಿದ್ದು, ಕಾಳು ದಪ್ಪಗೆ ಸಾಸುವೆಯಂತಿರುತ್ತವೆ. ಸಾಧಾರಣ ಎತ್ತರಕ್ಕೆ ಬೆಳೆಯುತ್ತದೆ. ಈ ತಳಿಯನ್ನು ಮುಂಗಾರಿನಲ್ಲಿ ಬಿತ್ತುವರು. ದನಗಳಿಗೆ ರುಚಿಕರವಾದ ಹುಲ್ಲನ್ನು ಕೊಡುವ ತಳಿ. ಮಳೆ ಕಡಿಮೆ ಇರುವ ಭಾಗಗಳಲ್ಲಿ ಹಿಂಗಾರಿನಲ್ಲೂ ಬೆಳೆಯಬಹುದು.

**ಜೇನುಮುತ್ತಿಗೆ ರಾಗಿ :** ಬರಗಾಲದಲ್ಲೂ ಬೆಳೆಯಬಹುದಾದ ತಳಿ. ನಾಲ್ಕು ತಿಂಗಳ ಅವಧಿಯಲ್ಲಿ ಕಟಾವಿಗೆ ಬರುತ್ತದೆ. ಸಾಧಾರಣ ಎತ್ತರಕ್ಕೆ ಬೆಳೆದರೂ ತೆನೆ ಉದ್ದವಾಗಿರುತ್ತದೆ. ಉತ್ತಮ ಇಳುವರಿ ಕೊಡುವ ತಳಿಯಾಗಿದ್ದು ಮಳೆಗಾಲದಲ್ಲೂ ಬೇಸಗೆಯಲ್ಲೂ ನೀರಾವರಿ ಬೆಳೆಯಾಗಿಯೂ ಬೆಳೆಯಬಹುದು.

**ಮಾಂಡರಾಗಿ :** ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಬೆಳೆಯುವ ತಳಿ. ಐದು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಎಲ್ಲ ತಳಿಗಳಿಗಿಂತ ಹೆಚ್ಚು ತೆಂಡೆಯೊಡೆಯುವ ಗುಣವನ್ನು ಹೊಂದಿದೆ. ಮುಂಗಾರು ಬಿತ್ತನೆಗೆ ಯೋಗ್ಯವಾದ ತಳಿಯಾಗಿದ್ದು ಕೆಂಪು ಮಣ್ಣಿನಲ್ಲಿ ಸಾಧಾರಣ ಫಲವತ್ತತೆಯಿದ್ದರೂ ಬೆಳೆಯಬಲ್ಲದು. ಆರೋಗ್ಯವಂಥ ರಾಗಿಯಾಗಿದ್ದು ಉತ್ತಮ ಇಳುವರಿಯನ್ನು ಕೊಡುತ್ತದೆ. ಎತ್ತರಕ್ಕೆ ಬೆಳೆಯುವುದರಿಂದ ಹುಲ್ಲು ಸಿಗುತ್ತದೆ. ಮಳೆ ಕಡಿಮೆಯಾದರು ತಡೆಯಬಲ್ಲ ತಳಿ.

**ಬಿಳಿ ತೆನೆ ರಾಗಿ :** ನಾಲ್ಕು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಈ ತಳಿಯ ಮೂಲ ಆಫ್ರಿಕಾದ ಉಗಾಂಡ. ಒಣ ಭೂಮಿಯಲ್ಲೂ ಬೆಳೆಯ

ಬಲ್ಲದು. ತೆನೆ ಬಲಿತಂತೆಲ್ಲಾ ಕಾಳುಗಳು ಅಕ್ಕಿ ಜೋಡಿಸಿದಂತೆ ಒತ್ತಾಗಿದ್ದು ಮುಷ್ಠಿಯಂತೆ ಬಿಗಿಯಾಗಿರುತ್ತವೆ.

**ಹಸುರು ಬಿಂದುಗ ರಾಗಿ :** ನಾಲ್ಕು ತಿಂಗಳ ತಳಿ. ಮುಂಗಾರಿನಲ್ಲಿ ಬಿತ್ತುವರು. ಮೂರು ನಾಲ್ಕು ತೆಂಡೆಗಳನ್ನೊಡೆದು ಮಟ್ಟಸವಾಗಿ ಬೆಳೆಯುತ್ತದೆ. ಸಾಧಾರಣ ಮಳೆಯಾಗುವಂಥ ಪ್ರದೇಶಗಳಲ್ಲೂ ಬೆಳೆಯವಂಥದ್ದು. ಕೆಂಪು ಮಣ್ಣಿನಲ್ಲಿ ಹಾಗೂ ಮರಳು ಮಿಶ್ರಿತ ಕೆಂಪು ನೆಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ತೆನೆ ಹಳದಿ ಬಣ್ಣ ಹೊಂದಿದಾಗ ಬಲಿತಿದೆ ಎಂದು ಅರ್ಥ. ಯಾವುದೇ ರೋಗಗಳ ಬಾಧೆಯಿಲ್ಲದೆ ಬೆಳೆದು ಉತ್ತಮ ಇಳುವರಿಯನ್ನು, ಹೆಚ್ಚು ಹುಲ್ಲನ್ನು ಕೊಡುತ್ತದೆ.

**ಉಗಾಂಡಾರಾಗಿ :** ಮೂರುವರೆ ತಿಂಗಳ ಅಲ್ಪಾವಧಿಯಲ್ಲಿ ಇಳುವರಿಯನ್ನು ಕೊಡುತ್ತದೆ. ಹೆಚ್ಚು ತೆಂಡೆ ಹೊಡೆದು ಒಳ್ಳೆಯ ಮೇವನ್ನು ಕೊಡುವ ಜಾತಿ. ರೋಗ ನಿರೋಧಕ ಗುಣವನ್ನು ಹೊಂದಿದೆ. ತುಂಡು ಅರಿಸಿನ ರಾಗಿ, ಕರಿ ಮುದುಡು ರಾಗಿ, ಮಜ್ಜಿಗೆ ರಾಗಿ ಇವು ಮೂರರಿಂದ ಮೂರುವರೆ ತಿಂಗಳಲ್ಲಿ ಕೊಯ್ಲಿಗೆ ಬರುವ ತಳಿಗಳು. ಕಾಳುಗಟ್ಟಿಯಿದ್ದು ಸಾಧಾರಣ ಎತ್ತರಕ್ಕೆ ಬೆಳೆಯುತ್ತದೆ. ಕಡಿಮೆ ಮಳೆಯ ಪ್ರದೇಶಗಳಲ್ಲೂ ಬೆಳೆಯಬಹುದಾದ ತಳಿಗಳು.

**ಹುಲ್ಲು ಪೊರೆರಾಗಿ :** ನಾಲ್ಕೂವರೆ ತಿಂಗಳ ಬೆಳೆ. ಕೆಂಪು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ರಾಗಿ ಹಿಟ್ಟು ತುಂಬಾ ಗಡುಸಾಗಿದ್ದು ಮುದ್ದೆ ಬಿಸಿಯಾಗಿರುವಾಗಲೇ ಸೇವಿಸಬೇಕು. ಗಿಡ್ಡರಾಗಿ ತಳಿ - ತೆನೆ ಕಪ್ಪಾಗಿದ್ದು ಕಡಿಮೆ ಮಳೆಯಾಗುವ ಭಾಗಗಳಲ್ಲೂ ಬೆಳೆಯಬಹುದು.

**ದೊಡ್ಡರಾಗಿ :** ಉತ್ತಮ ಇಳುವರಿಯನ್ನು ಕೊಡುವ ತಳಿ. ತೆನೆ ಕಹಿಯಾಗಿದ್ದು ಪ್ರಾಣಿಗಳು ತಿನ್ನಲು ಹಿಂಜರಿಯುತ್ತವೆ. ಕೀಟ ಬಾಧೆ ಇಲ್ಲ. ಮಳೆಯಾಶ್ರಯದಲ್ಲಿ ಅಲ್ಲದೆ ನೀರಾವರಿ ಬೆಳೆಯಾಗಿಯೂ ಇದು ಉತ್ತಮ ತಳಿ ಎನಿಸಿಕೊಂಡಿದೆ. ಬೋಂಡರಾಗಿ ಸಹ ಯಾವುದೇ ರೋಗಗಳಿಗೆ ತುತ್ತಾಗುವುದಿಲ್ಲ.

ಕರಿಬಳಗ, ಹಸುರುಕಂಬಿ, ಜೇನು ಮುದ್ದೆರಾಗಿ, ಬಿಳಿ ಮುಂಡುಗ, 'ಉದುರುಮಲ್ಲಿಗೆ', ಬಾಳೆ ಪಟ್ಟೆ ರಾಗಿ ಇವು ನಾಲ್ಕರಿಂದ ಐದು ತಿಂಗಳಲ್ಲಿ ಕೊಯ್ಲಿಗೆ ಬರುತ್ತವೆ. ಮಳೆಗಾಲಕ್ಕೆ ಯೋಗ್ಯವಾದ ತಳಿಗಳು. ಎಲ್ಲಾ ಹವಾಗುಣಕ್ಕೂ ಮತ್ತು ನೆಲಗಳಿಗೆ ಹೊಂದಿಕೊಂಡು ಬೆಳೆಯುತ್ತವೆ. ಕೋಳಿ ಮೊಟ್ಟೆರಾಗಿ, ತಮಿಳುನಾಡು ಮತ್ತು ಕರ್ನಾಟಕದ ಗಡಿಭಾಗಗಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಕಡಿಮೆ ಹುಲ್ಲು, ಹೆಚ್ಚು ಇಳುವರಿ. ಈ ತಳಿಯಲ್ಲಿ ತೆನೆ ಬಲಿತಾಗ ಕೋಳಿ ಮೊಟ್ಟೆಯಾಕಾರದಲ್ಲಿರುತ್ತದೆ.

**ರೋಗಗಳು ಮತ್ತು ಕೀಟಬಾಧೆ :** ಪೈರನ್ನು ಕಾಂಡ ಕೊರಕ ಕೀಟ ಒಳಗಿನಿಂದ ಕೊರೆದು ಹಾಳು ಮಾಡುತ್ತದೆ. ಕುಂಟೆ ಹೊಡೆಯುವಾಗ ಹೆಚ್ಚು ಮಣ್ಣನ್ನು ಬುಡಕ್ಕೆ ಸಿಗುವಂತೆ ಮಾಡುವುದರಿಂದ ಮತ್ತು ಬೂದಿ, ಡಿ.ಡಿ.ಟಿ. ಪುಡಿಯನ್ನು ಬುಡಕ್ಕೆ ಸುರಿಯುವುದರಿಂದ ನಿಯಂತ್ರಿಸಬಹುದು. ಕಾಂಡಕತ್ತರಿಸುವ ಹುಳ, ಕಪ್ಪು ತಲೆಯ ಕಂಬಳಿ ಹುಳ, ಸಸ್ಯ ಹೇನು ಇವೂ ರಾಗಿ ಬೆಳೆಯನ್ನು ಬಾಧಿಸುತ್ತವೆ. ಹಸಿಮೆಣಸಿನಕಾಯಿ ಮತ್ತು ಬೆಳ್ಳುಳ್ಳಿಯನ್ನು ರುಬ್ಬಿ ನೀರಿನಲ್ಲಿ ಬೆರೆಸಿ ಪೈರಿನಮೇಲೆ ಸಿಂಪಡಿಸುವುದರಿಂದ ನಿಯಂತ್ರಿಸಬಹುದು. ಕಂಬಳಿ ಹುಳ ಮತ್ತು ಮಿಡತೆಗಳನ್ನು ನಿಯಂತ್ರಿಸಲು ಜಮೀನಿನ ಸುತ್ತ 1-5 ಅಡಿ ನಾಟು ಕಾಲುವೆ ಮಾಡಬೇಕು. ಸುತ್ತಲಿನ ತೆವರಿಗಳನ್ನೆಲ್ಲಾ ಚೊಕ್ಕ ಮಾಡಿಡಬೇಕು. ಕಂಬಳಿ ಹುಳಗಳನ್ನು ಆಯ್ದು ಗುಡ್ಡೆ ಮಾಡಿ ಮಣ್ಣು ಮುಚ್ಚಬೇಕು.

ಬೆಂಕಿ ರೋಗ ಬಂದರೆ ರಾಗಿ ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಒಣಗುತ್ತವೆ. ತೆನೆಯ ಹಿಕ್ಕಲುಗಳನ್ನು ಒಣಗಿಸಿ ಬಿಡುತ್ತದೆ. ಇದರ ನಿಯಂತ್ರಣ ಕಷ್ಟ. ಉತ್ತಮ ಜಾತಿಯ ಆರೋಗ್ಯವಾದ ದಪ್ಪನೆಯ ತೆನೆಗಳನ್ನು ಆಯ್ದು ಕೊಯ್ದು ಒಣಗಿಸಿ ಒಕ್ಕಣೆ ಮಾಡಿ ಪ್ರತ್ಯೇಕವಾಗಿ ಶೇಖರಿಸಿಕೊಂಡು ಬಿತ್ತನೆಗೆ ಉಪಯೋಗಿಸಿದರೆ ಇಂಥ ರೋಗಗಳನ್ನು ತಡೆಗಟ್ಟಬಹುದು.

**ಗೊಬ್ಬರ :** ಕೆಂಪು, ಕಪ್ಪು ಮತ್ತು ಮರಳು ಮಿಶ್ರಿತ ಮಣ್ಣುಗಳಲ್ಲಿ ರಾಗಿ ಬೆಳೆಯಬಹುದಾದರೂ ನೆಲವನ್ನು ಫಲವತ್ತಾಗಿ ಮಾಡಲು ಕೊಟ್ಟಿಗೆ ಗೊಬ್ಬರ ಹಾಗೂ ಇತರ ಗೊಬ್ಬರಗಳ ಆವಶ್ಯಕತೆ ಇದೆ. ಮರಳು ಇತರ ಮಿಶ್ರಿತ ಮಣ್ಣಾದರೆ ಕೆರೆಯ ಗೋಡು ಮಣ್ಣನ್ನು ಅಥವಾ ನದೀ ಪಾತ್ರದ ಗೋಡು ಮಣ್ಣನ್ನು ಎರಡು ವರ್ಷಕ್ಕೊಮ್ಮೆಯಾದರೂ ಹೊಲಕ್ಕೆ ಬೆರೆಸಬೇಕು. ಕೊಟ್ಟಿಗೆಗೊಬ್ಬರ, ಹೊಂಗೆ ಹಿಂಡಿ, ಬೇವಿನ ಹಿಂಡಿ, ಹೊಂಗೆ ಮರದ ಎಲೆ ಹೂವು, ಬೇವಿನ ಎಲೆ, ಹಿಪ್ಪೆ, ಲಂಟಾನ ಮತ್ತಿತರ ಗಿಡಗಳ ಸೊಪ್ಪನ್ನು ಗೊಬ್ಬರವಾಗಿ ಬಳಸಿದರೆ ಉತ್ತಮ ಇಳುವರಿಯನ್ನು ಪಡೆಯಬಹುದು. ಜೋರಾಗಿ ಮಳೆ ಬಂದಾಗ ಕೊಚ್ಚಿ ಬರುವ ಎಲೆ ಕಸಕಡ್ಡಿ ಮೊದಲಾದ ತೆಂಡೆಯನ್ನು ಸಂಗ್ರಹಿಸಿ ಹೊಲಕ್ಕೆ ತಂದು ಹರಡುವುದರಿಂದ ಫಲವತ್ತತೆಯನ್ನು ಕಾಪಾಡಬಹುದು.

*ವಿ. ಆರ್. ಬಿ.*

**ರಾಮನಗರ ಜಿಲ್ಲೆಯ ಕೃಷಿ** ಕರ್ನಾಟಕ ರಾಜ್ಯದ ಒಂದು ಜಿಲ್ಲೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಆಗಿದ್ದ ರಾಮನಗರವು 2007 ರಲ್ಲಿ ಪ್ರತ್ಯೇಕ ಜಿಲ್ಲೆಯಾಯಿತು. ಈ ಜಿಲ್ಲೆ ಕರ್ನಾಟಕದ ಆಗ್ನೇಯ ಭಾಗದಲ್ಲಿದ್ದು ಉತ್ತರಕ್ಕೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ದಕ್ಷಿಣಕ್ಕೆ ಚಾಮರಾಜನಗರ, ಪೂರ್ವಕ್ಕೆ ಮಂಡ್ಯ ಜಿಲ್ಲೆಗಳಿವೆ. ಇದು ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ಎಂಬ ನಾಲ್ಕು ತಾಲ್ಲೂಕುಗಳನ್ನು ಒಳಗೊಂಡಿದೆ.

**ಮೇಲ್ಮೈ ಲಕ್ಷಣ :** ರಾಮನಗರ ಜಿಲ್ಲೆ ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ವಿಶಾಲವಾದ ಮೈದಾನ ಪ್ರದೇಶ ಕಡಿಮೆ. ಒರಟಾದ ಕಂದು ಬಣ್ಣದ ಬೆಣಚುಕಲ್ಲಿನಿಂದ ಕೂಡಿದ ಬೆಟ್ಟಗಳ ಸಾಲು ರಾಮನಗರದ ಮೂಲಕ ಹಾದುಹೋಗಿದೆ. ಅಲ್ಲಲ್ಲಿ ಕುರುಚಲು ಗಿಡದ ಕಾಡು ವಿಶೇಷವಾಗಿದೆ.

**ಜಿಲ್ಲೆಯ ವಿಸ್ತೀರ್ಣ :** ಜಿಲ್ಲೆಯ ಒಟ್ಟು ವಿಸ್ತೀರ್ಣ 3576 ಚ.ಕಿ.ಮೀ.ಗಳಾಗಿದ್ದು, ರಾಜ್ಯದ ಒಟ್ಟು ವಿಸ್ತೀರ್ಣದ 1.86ರಷ್ಟಿದೆ. 2011ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 10,82,739 ಆಗಿದ್ದು, ರಾಜ್ಯದ ಒಟ್ಟು ಜನಸಂಖ್ಯೆಯ 1.77 ರಷ್ಟಿದೆ.

**ಹವಾಗುಣ ಮತ್ತು ಮಳೆ :** ಕರ್ನಾಟಕ ವ್ಯವಸಾಯ ಇಲಾಖೆಯು ರಾಜ್ಯವನ್ನು 10 ವ್ಯವಸಾಯ ಪ್ರದೇಶಗಳಾಗಿ ವಿಂಗಡಿಸಿರುವ ಪಟ್ಟಿಯಲ್ಲಿ ರಾಮನಗರವು ಪೂರ್ಣ ಒಣವಲಯಕ್ಕೆ ಸೇರುತ್ತದೆ. ಇಲ್ಲಿಯ ಮಳೆಯ ಪ್ರಮಾಣ 679.1 ರಿಂದ 888.9 ಮೀ.ಗಳಷ್ಟಿದೆ. ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಬೇಸಗೆಯ ಕೊನೆಯ ಭಾಗದಲ್ಲಿ ಮಾನ್ಸೂನ್ ಮಾರುತಗಳ

ಆರಂಭಕ್ಕಿಂತ ಮೊದಲು ಧಾರಕಾರವಾದ ಮಳೆಯಾಗುವುದು. ಅಲ್ಲದೇ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಮತ್ತು ಈಶಾನ್ಯ ನೈಋತ್ಯ ಮಾನ್ಸೂನ್ ಮಾರುತಗಳಿಂದಲೂ ಮಳೆ ಬೀಳುವುದು. ಆದರೆ ನೈಋತ್ಯ ಮಾನ್ಸೂನ್ ಮಾರುತಗಳಿಂದ ಬೀಳುವ ಮಳೆ ಕಡಿಮೆ. ಈ ಪ್ರದೇಶ ಸಮುದ್ರ ಮಟ್ಟಕ್ಕಿಂತ 800-900 ಮೀ. ಎತ್ತರದಲ್ಲಿದೆ. ಇದು ಕೆಂಪು ಮಣ್ಣಿನ ವಲಯ. ಆಳವಾದ ಕೆಂಪುಮಣ್ಣು, ಮರಳುಮಿಶ್ರಿತ ಕೆಂಪುಮಣ್ಣು ಇಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ.

ರಾಜ್ಯವು ಬೇಸಗೆಯಲ್ಲಿ ವಾರ್ಷಿಕ ಮಳೆಯ ಶೇ. 7 ರಷ್ಟನ್ನು ಪಡೆದರೆ, ರಾಮನಗರ ಜಿಲ್ಲೆಯು ತನ್ನ ವಾರ್ಷಿಕ ಮಳೆಯ ಶೇ. 20 ರಷ್ಟನ್ನು ಬೇಸಗೆಯಲ್ಲೇ ಪಡೆಯುತ್ತದೆ. ಬಂಗಾಳಕೊಲ್ಲಿಯ ಚಂಡಮಾರುತಗಳಿಂದ ಈ ಜಿಲ್ಲೆಯ ಪೂರ್ವಭಾಗವು ವ್ಯಾಪಕವಾಗಿ ಮಳೆ ಪಡೆಯುತ್ತದೆ. ಬರಗಾಲದ ವರ್ಷಗಳಲ್ಲಿ ಈ ಚಂಡಮಾರುತಗಳಿಂದ ಬೀಳುವ ಮಳೆ ಈ ಜಿಲ್ಲೆಗೆ ವರಪ್ರಸಾದವಾಗುತ್ತದೆ.

**ಅರಣ್ಯಗಳು :** ಮಳೆಯ ಪ್ರಮಾಣ 90 ಸೆಂ.ಮೀ. ಗಳಿಗಿಂತಲೂ ಕಡಿಮೆಯಿರುವ ಈ ಜಿಲ್ಲೆಯಲ್ಲಿ ಶುಷ್ಕ ಎಲೆಯುದುರುವ ಅರಣ್ಯಗಳು ಕಂಡುಬರುತ್ತವೆ. ಮರಗಳ ದಟ್ಟಣೆ ಹಾಗೂ ಎತ್ತರ ಕಡಿಮೆ. ಮರಗಳ ದಟ್ಟಣೆ ಕಡಿಮೆಯಿರುವುದರಿಂದ ಅವುಗಳ ನಡುವೆ ಪೊದೆಗಳು, ಹುಲ್ಲು, ಮುಳ್ಳು ಗಂಟಿಗಳು ಹೆಚ್ಚು. ರಾಜ್ಯದ ವಿಸ್ತೀರ್ಣದ ಶೇ. 15 ಕ್ಕಿಂತ ಕಡಿಮೆ ಕ್ಷೇತ್ರದಲ್ಲಿ ಅರಣ್ಯ ಪ್ರದೇಶವನ್ನು ಹೊಂದಿದೆ.

**ನೀರಾವರಿ ಸೌಕರ್ಯಗಳು :** ಜಿಲ್ಲೆಯಲ್ಲಿ ಕಾಲುವೆಗಳಿಂದ, ಕೆರೆಗಳಿಂದ, ಕೊಳವೆ ಬಾವಿಗಳ ಜೊತೆಗೆ ಮಳೆಯಾಶ್ರಯದಿಂದ ಕೃಷಿಯನ್ನು ಮಾಡುತ್ತಾರೆ. ಅತಿ ಸಣ್ಣ ಹಿಡುವಳಿದಾರರು ಮಳೆಯನ್ನೇ ಅವಲಂಬಿಸಿದ್ದರೆ, ದೊಡ್ಡ ಭೂಹಿಡುವಳಿದಾರರು ಕೊಳವೆಬಾವಿಗಳಿಂದ ಬೆಳೆಮಾಡುತ್ತಾರೆ.

**ಜಿಲ್ಲೆಯ ನೀರಾವರಿಯಾದ ನಿವ್ವಳ ಪ್ರದೇಶ 2007-08**
**(ಹೆಕ್ಟೇರುಗಳಲ್ಲಿ)**

| ಕಾಲುವೆ ಗಳಿಂದ | ಕೆರೆಗಳಿಂದ | ಬಾವಿಗಳಿಂದ | ಕೊಳವೆ ಬಾವಿಗಳಿಂದ | ಏತ ನೀರಾವರಿ |
|---|---|---|---|---|
| 3352 | 25 | 0 | 37092 | 210 |

ಈ ಜಿಲ್ಲೆ ಪ್ರಮುಖವಾಗಿ ಕೊಳವೆ ಬಾವಿಗಳನ್ನು ಅವಲಂಬಿಸಿದೆ. ಯಾವುದೇ ಮುಖ್ಯ ನದಿಗಳಿಲ್ಲದ ಕಾರಣ ಕಾಲುವೆ ನೀರಾವರಿಯ ಪ್ರಮಾಣವು ಸ್ವಲ್ಪ ಕಡಿಮೆ. ಕೆರೆ ನೀರಾವರಿ ಪದ್ಧತಿಯೂ ತೀರಾ ಕಡಿಮೆಯಿದೆ.

**ಬೆಳೆಗಳು :** ಜಿಲ್ಲೆಯಲ್ಲಿ ರಾಗಿಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ರಾಗಿ ಬೆಳೆಯುವಲ್ಲಿ, ಕರ್ನಾಟಕದಲ್ಲಿ ತುಮಕೂರು ಜಿಲ್ಲೆಗೆ ಮೊದಲ ಸ್ಥಾನವಾದರೆ ರಾಮನಗರ ಜಿಲ್ಲೆಗೆ 2ನೇ ಸ್ಥಾನ.

**ರಾಗಿ ಬೆಳೆಯ ಕ್ಷೇತ್ರ, ಉತ್ಪಾದನೆ ಮತ್ತು ಇಳುವರಿ**

| ಕ್ಷೇತ್ರ ಸಾ.ಹೆ. | ಶೇ. | ಉತ್ಪಾದನೆ 1000 ಟನ್ | ಶೇ. | ಇಳುವರಿ ಕ್ವಿಂ./ಹೆ. |
|---|---|---|---|---|
| 74.4 | 8.9 | 169.5 | 9.7 | 2398 |

ಅಲ್ಲದೇ ಬತ್ತ ಹಾಗೂ ಕಬ್ಬು ಮುಖ್ಯ ಬೆಳೆಗಳು. ಸ್ವಲ್ಪ ಪ್ರಮಾಣದಲ್ಲಿ ಗೋಧಿಯನ್ನು ಬೆಳೆಯುತ್ತಾರೆ. ಹಿಂದೆ ಕಬ್ಬನ್ನು ಅಧಿಕವಾಗಿ ಬೆಳೆಯುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಈ ಭೂಮಿಯನ್ನು ತರಕಾರಿ, ಹಣ್ಣು ಹಾಗೂ ಇತರ ಅಲ್ಪಾವಧಿ ಬೆಳೆಗಳಿಗೆ ಸೀಮಿತಗೊಳಿಸಿಕೊಂಡಿದ್ದಾರೆ. ಹರಳು (ಚೌಡಲ)ನ್ನು ಸಾಧಾರಣ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಇಲ್ಲಿ ಹುಣಿಸೆಮರಗಳು ಹೆಚ್ಚಾಗಿದ್ದು ತಮ್ಮ ಮನೆ ಅಗತ್ಯಕ್ಕೆ ಹುಣಿಸೆ ಹಣ್ಣನ್ನು ಬಳಸಿಕೊಳ್ಳುವುದರ ಜೊತೆಗೆ ಮಾರಾಟವನ್ನು ಮಾಡಲಾಗುತ್ತದೆ.

**ಜಿಲ್ಲೆಯ ಕೃಷಿ ಬೆಳೆಗಳ ವಿಸ್ತೀರ್ಣ ಹೆಕ್ಟೇರುಗಳಲ್ಲಿ**
**(2008-09)**

| | | | | | |
|---|---|---|---|---|---|
| ಬತ್ತ | ರಾಗಿ | ಜೋಳ | ಸಜ್ಜೆ | ಮುಸುಕಿನ ಜೋಳ | ಗೋಧಿ |
| 2040 | 47,888 | 0 | 0 | 1875 | 0 |
| ಉಪತೃಣ ಬೆಳೆಗಳು | | ಕಡಲೆ | ತೊಗರಿ | ನೆಲಗಡಲೆ | ಕಬ್ಬು |
| 98 | | 17 | 3915 | 7830 | 195 |
| ಇತರ ದ್ವಿದಳ ಧಾನ್ಯಗಳು | | | | | |
| 15,883 | | | | | |

ಅಧಿಕ ಪ್ರಮಾಣದಲ್ಲಿ ರಾಗಿಯನ್ನು ಬೆಳೆಯುತ್ತಾರೆ. ಜೊತೆಗೆ ಬತ್ತ ಮುಸುಕಿನ ಜೋಳ ಅಲ್ಲದೇ ಅಲ್ಪಪ್ರಮಾಣದಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಕೃಷಿ ಉತ್ಪಾದನೆಯಲ್ಲಿ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಏರುಪೇರುಗಳಾಗುತ್ತಿದ್ದು ಇದಕ್ಕೆ ನಿರ್ವಹಣಾ ವೆಚ್ಚ ಹಾಗೂ ಕೂಲಿಯಾಳುಗಳ ಅಭಾವವೇ ಕಾರಣವಾಗಿದೆ. ಅಲ್ಲದೇ ಇಲ್ಲಿಯ ರೈತರಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯಿಲ್ಲದೆ ಆದಾಯದ ಪ್ರಮಾಣ ಕಡಿಮೆಯಾಗಿದೆ. ಜಿಲ್ಲೆಯಲ್ಲಿ ಪ್ರಮುಖವಾದ ಯಾವುದೇ ನದಿಗಳಿಲ್ಲದ ಕಾರಣ ಅತ್ಯಧಿಕ ರೈತರು ಕೊಳವೆ ಬಾವಿಗಳನ್ನೇ ಅವಲಂಬಿಸಿದ್ದು ಮಳೆಯ ಪ್ರಮಾಣ ಕಡಿಮೆಯಾದ ಸಂದರ್ಭದಲ್ಲಿ ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾಗುತ್ತಿದೆ. ಹಾಗಾಗಿ ಈ ಜಿಲ್ಲೆಯು ಕೃಷಿ ಬೆಳವಣಿಗೆಗೆ ಅತ್ಯಂತ ಯುಕ್ತ ಪ್ರದೇಶವೂ ಅಲ್ಲದೆ ಅತ್ಯಂತ ಕೆಳಮಟ್ಟದ ಪ್ರದೇಶವೂ ಅಲ್ಲದೆ ಸಾಧಾರಣ ಪ್ರಮಾಣದ ಕೃಷಿ ಬೆಳವಣಿಗೆಯ ಪ್ರದೇಶವಾಗಿದೆ.

### ತೋಟಗಾರಿಕಾ ಬೆಳೆಗಳು

**ಬಹುವಾರ್ಷಿಕ ಬೆಳೆಗಳು :** ಜಿಲ್ಲೆಯಲ್ಲಿ ತೆಂಗನ್ನು ಅಧಿಕವಾಗಿ ಬೆಳೆಯುತ್ತಿದ್ದು, ಚನ್ನಪಟ್ಟಣ ತಾಲ್ಲೂಕಿನಲ್ಲಿ ಹೇರಳವಾಗಿ ಬೆಳೆಯಲಾಗುತ್ತದೆ. 2010-11 ಹಾಗೂ 2011-12ನೇ ಸಾಲಿನ ಅಂಕಿ-ಅಂಶಗಳು ಈ ಕೆಳಗಿನಂತಿವೆ.

ತೆಂಗು - 2010-11-24674 ಹೆ.ವಿ. - 2588 ಉತ್ಪನ್ನ
2011-12-24695 ಹೆ.ವಿ. - 2590.50 ಉತ್ಪನ್ನ

ಅಡಕೆ - 2010-11-2315 ಹೆ.ವಿ. - 2888 ಉತ್ಪನ್ನ
2011-12-2238 ಹೆ.ವಿ. - 2792.50 ಉತ್ಪನ್ನ

ಗೋಡಂಬಿ - 2010-11-25 ಹೆ.ವಿ. - 50 ಉತ್ಪನ್ನ
2011-12-25 ಹೆ.ವಿ. - 50 ಉತ್ಪನ್ನ

**ಹಣ್ಣಿನ ಬೆಳೆಗಳು**

ಮಾವು - 2010-11-22177 ಹೆ.ವಿ.-221770 ಉತ್ಪನ್ನ
2011-12-23995 ಹೆ.ವಿ.-239950 ಉತ್ಪನ್ನ

ಬಾಳೆ - 2010-11-1253 ಹೆ.ವಿ. - 42420 ಉತ್ಪನ್ನ
2011-12-3435 ಹೆ.ವಿ. - 78630 ಉತ್ಪನ್ನ

ದಾಳಿಂಬೆ - 2010-11-4 ಹೆ.ವಿ. - 295 ಉತ್ಪನ್ನ
2011-12-6 ಹೆ.ವಿ. - 95 ಉತ್ಪನ್ನ

**ತರಕಾರಿ ಬೆಳೆಗಳು**

ಟೊಮ್ಯಾಟೋ - 2010-11 ಮುಂಗಾರು - 408 ಹೆ.ವಿ. - 4900 ಉತ್ಪನ್ನ
ಹಿಂಗಾರು-3910 ಹೆ.ವಿ. - 11650 ಉತ್ಪನ್ನ
2011-12 ಮುಂಗಾರು-402 ಹೆ.ವಿ.-8040 ಉತ್ಪನ್ನ
ಹಿಂಗಾರು - 312 ಹೆ.ವಿ. - 10560 ಉತ್ಪನ್ನ

ಈರುಳ್ಳಿ - 2010-11 ಮುಂಗಾರು-56 ಹೆ.ವಿ.-1110 ಉತ್ಪನ್ನ
ಹಿಂಗಾರು - 48 ಹೆ.ವಿ. - 830 ಉತ್ಪನ್ನ
2011-12 ಮುಂಗಾರು-41 ಹೆ.ವಿ.-820 ಉತ್ಪನ್ನ
ಹಿಂಗಾರು - 48 ಹೆ.ವಿ. - 830 ಉತ್ಪನ್ನ

ಆಲೂಗಡ್ಡೆ - 2010-11-18 ಹೆ.ವಿ. - 180 ಉತ್ಪನ್ನ
2011-12-18 ಹೆ.ವಿ. - 180 ಉತ್ಪನ್ನ

ಹಸಿಮೆಣಸಿನ ಕಾಯಿ- 2010-11-471 ಹೆ.ವಿ. - 4098 ಉತ್ಪನ್ನ
2011-12-410 ಹೆ.ವಿ. - 3540 ಉತ್ಪನ್ನ

ಸಿಹಿಗೆಣಸು - 2010-11-89 ಹೆ.ವಿ. - 890 ಉತ್ಪನ್ನ
2011-12-64 ಹೆ.ವಿ. - 640 ಉತ್ಪನ್ನ

ಹುರುಳಿಕಾಯಿ - 2010-11-294 ಹೆ.ವಿ. - 2940 ಉತ್ಪನ್ನ
2011-12-228 ಹೆ.ವಿ. - 2280 ಉತ್ಪನ್ನ

**ಸಂಬಾರಬೆಳೆಗಳು**

ಒಣಮೆಣಸಿನ ಕಾಯಿ - 2010-11-221 ಹೆ.ವಿ. - 221 ಉತ್ಪನ್ನ

ಮೆಣಸು - 2010-11-19 ಹೆ.ವಿ. - 11 ಉತ್ಪನ್ನ
2011-12-19.50 ಹೆ.ವಿ. - 10.60 ಉತ್ಪನ್ನ


ಶುಂಠಿ - 2010-11-66 ಹೆ.ವಿ. - 660 ಉತ್ಪನ್ನ
2011-12-63.50 ಹೆ.ವಿ. - 635 ಉತ್ಪನ್ನ

ಇವುಗಳ ಜೊತೆಗೆ ಹಣ್ಣಿನ ಬೆಳೆಗಳಾದ ಸಪೋಟ, ಪಪ್ಪಾಯ, ಕಿತ್ತಳೆ, ಸೀಬೆ, ದಾಳಿಂಬೆ, ತರಕಾರಿ ಬೆಳೆಗಳಾದ ಮರಗೆಣಸು, ಗೋರಿಕಾಯಿ, ಹೂಕೋಸು, ನಿಂಬೆಹಣ್ಣು, ಬದನೆಕಾಯಿಯನ್ನು ಅಲ್ಪಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ.

**ರೇಷ್ಮೆ ಕೃಷಿ :** ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಹಿಪ್ಪುನೇರಳೆ. ಇಲ್ಲಿ ರೇಷ್ಮೆ ಮಾರುಕಟ್ಟೆಯಿದ್ದು, ಹೆಚ್ಚಾಗಿ ಹಾಗೂ ಉತ್ತಮವಾಗಿ ರೇಷ್ಮೆ ಉತ್ಪಾದನೆಯಾಗುವುದರಿಂದ ಈ ನಗರವು ರೇಷ್ಮೆ ನಗರವೆಂದು ಖ್ಯಾತಿಗಳಿಸಿದೆ.

| ಹಿಪ್ಪುನೇರಳೆ ಕ್ಷೇತ್ರ (ಹೆಕ್ಟೇರ್) | ರೇಷ್ಮೇ ಗೂಡುಗಳ ಉತ್ಪಾದನೆ (ಟನ್ನುಗಳಲ್ಲಿ) |
|---|---|
| 8808 | 6312.00 |

ಭಾರತದಲ್ಲಿ ನಾಲ್ಕು ಮೂಲಗಳಿಂದ ರೇಷ್ಮೆಯನ್ನು ಪಡೆಯಲಾಗುವುದು. ಆದರೆ ಕರ್ನಾಟಕವು ಹಿಪ್ಪುನೇರಳೆ ಮೂಲದಿಂದ ರೇಷ್ಮೆಯನ್ನು ಉತ್ಪಾದಿಸಲಾಗುತ್ತಿದ್ದು, ರಾಮನಗರ ಜಿಲ್ಲೆಯಲ್ಲೂ ಇದೇ ಮೂಲದಿಂದ ರೇಷ್ಮೆ ಉತ್ಪಾದಿಸಲಾಗುತ್ತಿದೆ. ಪ್ರಾರಂಭದ ಹಂತದಲ್ಲಿ



ರೈತನು ಹಿಪ್ಪುನೇರಳೆಯನ್ನು ಬೆಳೆದು, ಇದರಿಂದ ರೇಷ್ಮೆ ಹುಳುಗಳನ್ನು ಸಾಕಿ ರೇಷ್ಮೆ ಗೂಡು ಪಡೆಯುತ್ತಿದ್ದನು. ಅನಂತರ ಇದರ ಸಂಸ್ಕರಣೆ ಕೈಗಾರಿಕೆ ಹಂತದಲ್ಲಿ ನಡೆಯುತ್ತಿದೆ. ರೇಷ್ಮೆ ಕೃಷಿಯು ಹೆಚ್ಚು ಲಾಭದಾಯಕವಾಗಿದ್ದು, ಈ ಜಿಲ್ಲೆಯ ರೈತರು ಮಳೆಯಾಶ್ರಿತ ಹಾಗೂ ನೀರಾವರಿ ಕ್ಷೇತ್ರಗಳೆರಡರಲ್ಲಿಯೂ ಬೆಳೆಯುತ್ತಿದ್ದಾರೆ. ಈ ಕೃಷಿಗೆ ಹೆಚ್ಚು ಕೆಲಸಗಾರರ ಅಗತ್ಯವಿದ್ದು ಅಲ್ಲಿಯ ಜನರಿಗೆ ಉದ್ಯೋಗವನ್ನು ಒದಗಿಸುವ ಕೃಷಿಯಾಗಿದೆ.

**ಕೃಷಿ**

**ರಾಗಿ :** ಜಿಲ್ಲೆಯ ಪ್ರತಿಯೊಂದು ಭಾಗದಲ್ಲೂ ರಾಗಿಯನ್ನು ಬೆಳೆಯಲಾಗುತ್ತದೆ. ಇದು ಮಳೆಯಾಶ್ರಯದ ಬೆಳೆಯಾಗಿದ್ದರೂ ನೀರಾವರಿಯ ವಲಯಗಳಲ್ಲಿ ಬೇಸಗೆಯಲ್ಲಿ ಹಾಗೂ ನಿಯಮಿತವಾಗಿ ನೀರು ಪೂರೈಕೆಯಾಗುವ ಕೆರೆ ನೀರಾವರಿ, ಬಾವಿ ನೀರಾವರಿ, ಹಾಗೂ ಕಾಲುವೆ ನೀರಾವರಿ ವಲಯಗಳಲ್ಲಿಯೂ ಬೆಳೆಯಲಾಗುವುದು. ಮೊದಲು ಸ್ಥಳೀಯ ರಾಗಿ ತಳಿಗಳನ್ನು ಬೆಳೆಯಲಾಗುತ್ತಿತ್ತು. ಇತ್ತೀಚೆಗೆ ಅಧಿಕ ಇಳುವರಿಯ ತಳಿಗಳೂ ಬಳಕೆಯಲ್ಲಿವೆ. ಈ ಜಿಲ್ಲೆಯಲ್ಲಿ ನಾಟಿ ಮಾಡುವ ಮುಖಾಂತರ ರಾಗಿಯನ್ನು ಬೆಳೆಯುವುದು ಹೆಚ್ಚಾಗಿದ್ದು ಇದನ್ನು 'ಅರೆನಾಟಿ' ಎಂದು ಕರೆಯುತ್ತಾರೆ. ಅಲ್ಲದೆ ರಾಗಿಯನ್ನು ಎರಚುವ ಮೂಲಕವೂ ಬೆಳೆಯಲಾಗುವುದು. ಇದನ್ನು 'ಚಲ್ಕೆ' ನಾಟಿ ಎಂದು ಕರೆಯಲಾಗುತ್ತದೆ.

**ಬತ್ತ :** ಜಿಲ್ಲೆಯಲ್ಲಿ ನಾಟಿ ಪದ್ಧತಿಯ ಮೂಲಕ ಬತ್ತವನ್ನು ಬೆಳೆಯಲಾಗುತ್ತದೆ. ಮೊದಲು ಮಡಿ (ಪಟ)ಗಳನ್ನು ಮಾಡಿಕೊಂಡು ಮಣ್ಣಿನ ಜೊತೆಯಲ್ಲಿ ರಾಸಾಯನಿಕ ಗೊಬ್ಬರವನ್ನು ಮಿಶ್ರಮಾಡಿ ಅದರ ಮೇಲೆ ಬತ್ತವನ್ನು ಹಾಕಲಾಗುವುದು. ಅನಂತರ ಬತ್ತವು ಕಾಣಿಸದ ಹಾಗೆ ಹಟ್ಟಿ (ತಿಪ್ಪೆ) ಗೊಬ್ಬರವನ್ನು ಹಾಕಲಾಗುತ್ತದೆ. ಅನಂತರ ಆ ಮಡಿಗಳ ತುಂಬ ನೀರನ್ನು ತುಂಬಲಾಗುವುದು. 5-6 ದಿನಗಳಲ್ಲಿ ಬತ್ತವು ಮೊಳಕೆ ಬಂದು 3 ರಿಂದ 4 ವಾರಗಳಲ್ಲಿ ನಾಟಿ ಮಾಡಲು ಪೈರು ಸಿದ್ಧವಾಗುವುದು. ಹದ ಮಾಡಿದ ಗದ್ದೆಗಳಲ್ಲಿ ಸಿದ್ಧವಾದ ಪೈರುಗಳನ್ನು ನಾಟಿಮಾಡಲಾಗುವುದು. ಇತ್ತೀಚೆಗೆ ಆಧುನಿಕ ಯಂತ್ರಗಳ ಭರಾಟೆ ಈ ಜಿಲ್ಲೆಯಲ್ಲೂ ಆವರಿಸಿದ್ದು ನಾಟಿ ಮಾಡಲು, ಕೊಯ್ಲು ಮಾಡಲು ಯಂತ್ರೋಪಕರಣಗಳನ್ನು ಬಳಸಲಾಗುತ್ತಿದೆ.

**ಬಾಳೆ :** ಬಾಳೆ ಬೆಳೆಯು ಈ ಜಿಲ್ಲೆಯಲ್ಲಿ ಸಾಧಾರಣ ಪ್ರಮಾಣದಲ್ಲಿ ಕಂಡು ಬರುತ್ತದೆ. ಏಲಕ್ಕಿ, ಪಚ್ಚೆಬಾಳೆ, ಬೂದುಬಾಳೆಗಳನ್ನು ಬೆಳೆಯಲಾಗುತ್ತದೆ. ಬಾಳೆಯ ಗಿಡದ ಕಂದುಗಳನ್ನು ತಂದು 2 ಅಡಿ ಅಗಲ 2 ಅಡಿ ಆಳವಾಗಿ ಗುಂಡಿಯನ್ನು ತೆಗೆದು ಕೊಟ್ಟಿಗೆ ಗೊಬ್ಬರ, ಸಾವಯವ ಗೊಬ್ಬರವನ್ನು ಹಾಕಿ ಕಂದು (ಗಿಡ)ವನ್ನು ನೆಡುತ್ತಾರೆ. ಅದರ ಸುತ್ತ ಪಾತಿಯನ್ನು ಮಾಡಿ ನೀರನ್ನು ಹರಿಸಲಾಗುವುದು. ಬೆಳೆದ ಹಾಗೆ ಎರಡು ಬಾರಿ ರಾಸಾಯನಿಕ ಗೊಬ್ಬರವನ್ನು ಹಾಕುತ್ತಾರೆ. ಅನಂತರ ಸುಮಾರು 10 ರಿಂದ 12 ತಿಂಗಳಲ್ಲಿ ಬಾಳೆಯು ಕಟಾವಿಗೆ ಬರುತ್ತದೆ. ಮಿಶ್ರ ಬೆಳೆಯಾಗಿ ಬಾಳೆಯ ತೋಟದಲ್ಲಿ ಮೆಣಸಿನ ಕಾಯಿ, ಹುರುಳಿ, ಟೊಮ್ಯಾಟೋ ಇನ್ನಿತರ ತರಕಾರಿಗಳನ್ನು ಬೆಳೆಯಬಹುದು.

**ಗೊಬ್ಬರಗಳು :**

**ಕೊಟ್ಟಿಗೆ (ತಿಪ್ಪೆ) ಗೊಬ್ಬರ :** ದನಗಳ ಸೆಗಣಿ ಮತ್ತು ದನಗಳು ತಿನ್ನದೇ ಬಿಟ್ಟ ಹುಲ್ಲು ಇನ್ನಿತರ ಆಹಾರ ಪದಾರ್ಥಗಳು ಎಲ್ಲವನ್ನು ಒಂದು ಕಡೆ ಹಾಕುತ್ತಾರೆ. ಅದು ಕ್ರಮೇಣ ಪೌಷ್ಟಿಕಾಂಶವುಳ್ಳ ಗೊಬ್ಬರವಾಗಿ ಪರಿವರ್ತನೆಯಾಗುತ್ತದೆ. ಇದನ್ನು ಎಲ್ಲ ರೀತಿಯ ಬೆಳೆಗಳಿಗೂ ಉಪಯೋಗಿಸಬಹುದು.

**ಸೊಪ್ಪಿನ ಗೊಬ್ಬರ :** ಗದ್ದೆಯ ನಾಟಿಯ ಸಂದರ್ಭದಲ್ಲಿ ಉಳುಮೆ ಮಾಡುವಾಗ ಗೊಬ್ಬರ (ಒಂದು ವಿಧದ ಮರ) ಮರದ ಸೊಪ್ಪನ್ನು ಅಥವಾ ಇನ್ನಿತರ ಮರದ ಸೊಪ್ಪನ್ನು ಹಾಕುತ್ತಾರೆ. ಇದು ಕೊಳೆತು ಗೊಬ್ಬರವಾದಾಗ ಬತ್ತದ ಪೈರು ಸಮೃದ್ಧವಾಗಿ ಬೆಳೆಯಲು ಸಹಾಯಕವಾಗುತ್ತದೆ. ಅಲ್ಲದೇ ಬತ್ತದ ನಾಟಿ ಮಾಡುವ 1 ತಿಂಗಳು ಮುಂಚೆ ಹುರುಳಿ ಕಾಳನ್ನು ಗದ್ದೆಯಲ್ಲಿ ಎರಚುತ್ತಾರೆ. ಇದು ಸ್ವಲ್ಪ ಬೆಳೆದ ಮೇಲೆ ಗದ್ದೆಗೆ ನೀರನ್ನು ಹಾಯಿಸಿ ಹಾಗೇ ಉಳುಮೆ ಮಾಡಿದಾಗ ಹುರುಳಿ ಸೊಪ್ಪು ಮಣ್ಣಿನ ಒಳಗೆ ಸೇರಿಕೊಂಡು ಕೊಳೆತು ಗೊಬ್ಬರವಾಗುತ್ತದೆ.

**ಎರೆಗೊಬ್ಬರ :** ಒಂದು ತೊಟ್ಟಿಯನ್ನು ನಿರ್ಮಿಸಿ ಮಣ್ಣನ್ನು ಹಾಗೂ ಕೊಟ್ಟಿಗೆ ಗೊಬ್ಬರವನ್ನು ಹಾಕುತ್ತಾರೆ. ಅದರೊಳಗೆ ಎರೆಹುಳುಗಳನ್ನು ಬಿಟ್ಟು ತೊಟ್ಟಿಯ ಮೇಲೆ ಪರದೆಯ ಹಾಗೇ ಬಟ್ಟೆಯನ್ನು ಮುಚ್ಚಬೇಕು. ಸ್ವಲ್ಪ ದಿನದ ಅನಂತರ ಗೊಬ್ಬರವನ್ನು ಯಾವುದೇ ಬೆಳೆಗಳಿಗೂ ಉಪಯೋಗಿಸಬಹುದು. ಇದು ಅತ್ಯುತ್ತಮ ಗೊಬ್ಬರವಾಗಿದೆ.

ಇದಲ್ಲದೆ ಯೂರಿಯಾ, ಪೊಟ್ಯಾಷ್, ಡಿ.ಎ.ಪಿ.ಯಂತಹ ರಾಸಾಯನಿಕ ಗೊಬ್ಬರಗಳು ಬಳಕೆಯಲ್ಲಿವೆ. ಇದರಿಂದ ಇಳುವರಿ ಜಾಸ್ತಿಯಾದರೂ ಗುಣಮಟ್ಟ ಕಡಿಮೆಯಾಗುತ್ತಾ ಹೋಗುತ್ತದೆ.

**ಕೀಟನಾಶಕಗಳು :** ತರಕಾರಿಗಳು, ಹಣ್ಣುಗಳು, ಸೊಪ್ಪುಗಳು ಇನ್ನಿತರ ಧಾನ್ಯಗಳನ್ನು ಬೆಳೆಯುವ ಸಂದರ್ಭದಲ್ಲಿ ಅನಾರೋಗ್ಯಕ್ಕೆ ತುತ್ತಾಗದಂತೆ ಕ್ರಿಮಿಕೀಟಗಳಿಂದ ರಕ್ಷಿಸಲು ರೈತರು ಪ್ರಕೃತಿಯಲ್ಲೇ ದೊರೆಯುವ ಕೀಟನಾಶಕಗಳನ್ನು ಬಳಸುತ್ತಿದ್ದರು.

**ಬೇವಿನ ಎಣ್ಣೆ :** ಹಣ್ಣು, ತರಕಾರಿಗಳನ್ನು ಬೆಳೆಯುವ ಸಂದರ್ಭದಲ್ಲಿ ಹುಳುಗಳಿಂದ ರಕ್ಷಣೆ ಮಾಡಲು ಬೇವಿನ ಎಣ್ಣೆಯನ್ನು ಸಿಂಪಡಿಸಲಾಗುತ್ತಿತ್ತು.

**ಬೂದಿ :** ಒಲೆಗಳಿಂದ ತೆಗೆದ ಬೂದಿ ಅಥವಾ ಇನ್ನಿತರ ನಿರುಪಯುಕ್ತ ವಸ್ತುಗಳನ್ನು ಸುಟ್ಟು ಬೂದಿಯನ್ನು ಬೆಳೆಗಳ ಬುಡದಲ್ಲಿ ಹಾಕಿದಾಗ ಸಣ್ಣಪುಟ್ಟ ಕ್ರಿಮಿಗಳು ಸಸ್ಯಗಳಿಂದ ದೂರವಾಗುತ್ತವೆ. ಮುಖ್ಯವಾಗಿ ತೆಂಗಿನ ಮರದ ಬುಡದಲ್ಲಿ ಹಾಕಿದಾಗ ಮರಕ್ಕೆ ಗೆದ್ದಲು ಹಿಡಿಯುವುದು ಕಡಿಮೆಯಾಗುತ್ತದೆ. ಬತ್ತವನ್ನು ಕೊಯ್ಲು ಮಾಡಿ ಒಂದು ಕಡೆ ಸಂಗ್ರಹವಮಾಡಿದಾಗ ನೊಣದಾಕಾರದ ಹುಳುಗಳು ಉತ್ಪತ್ತಿಯಾಗುತ್ತವೆ. ಹೊಂಗೆ ಮರದ ಕೊಂಬೆಗಳನ್ನು ಎಲೆಗಳ ಸಮೇತ ತಂದು ಬತ್ತದ ರಾಶಿಯ ಮೇಲೆ ಹಾಕಿದರೆ ಹುಳುಗಳು ಕಡಿಮೆಯಾಗುತ್ತವೆ.

ಇತ್ತೀಚಿನ ದಿನಗಳಲ್ಲಿ ಇಂತಹ ಪದ್ಧತಿಗಳಾಗಲೀ ಬೇವಿನ ಎಣ್ಣೆಯನ್ನು ಸಿಂಪಡಿಸುವುದಾಗಲೀ ಕಡಿಮೆಯಾಗಿ ರಾಸಾಯನಿಕ ಔಷಧಿಗಳ ಸಿಂಪಡಣೆ ಎತ್ತೇಚ್ಛವಾಗಿದೆ. ರೋಗರ್, ಡಿ.ಡಿ.ಟಿ.ಯಂತಹ ಕ್ರಿಮಿನಾಶಕಗಳು ಚಾಲ್ತಿಯಲ್ಲಿವೆ.

**ಕೃಷಿ ಉಪಕರಣಗಳು :** ಕೃಷಿ ಉಪಕರಣಗಳ ತಯಾರಿಕೆಯಲ್ಲಿ ಮೊದಲು ಮರಗಳನ್ನು ಉಪಯೋಗಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕಬ್ಬಿಣದ ಉಪಕರಣಗಳು ಬಳಕೆಯಲ್ಲಿವೆ.

**1. ನೇಗಿಲು :** ಭೂಮಿಯನ್ನು ಉಳುಮೆ ಮಾಡಲು ಉಪಯೋಗಿಸುವ ಸಾಧನ. ಮೊದಲು ಮರದ ತುಂಡಿನಿಂದ ಮಾಡಿದ ನೇಗಿಲಿನ ತುದಿಯಲ್ಲಿ ಚೂಪಾದ ಕಬ್ಬಿಣ (ಗುಳ)ವನ್ನು ಹಾಕಿಕೊಂಡು ಉಳುಮೆ ಮಾಡಲಾಗುತ್ತಿತ್ತು. ಇತ್ತೀಚೆಗೆ ಪೂರ್ಣ ನೇಗಿಲುಗಳೇ ಕಬ್ಬಿಣದ ನೇಗಿಲುಗಳಾಗಿವೆ. ಈ ಜಿಲ್ಲೆಯಲ್ಲಿ ಕಬ್ಬಿಣದ ನೇಗಿಲು ಮರದ ನೇಗಿಲು ಎರಡು ಚಾಲನೆಯಲ್ಲಿವೆ.

**2. ಕುಂಟೆ (ಗುಂಟೆ)** : ಇದು ನೇಗಿಲಿನಂತೆ ಉಳುಮೆ ಮಾಡುವ ಸಾಧನವಾದರೂ ಭೂಮಿಯ ಮೇಲ್ಮೈಯನ್ನು ಮಾತ್ರ ಉಳುಮೆ ಮಾಡಲು ಬಳಸುತ್ತಾರೆ. ಅಂದರೆ ಮೇಲ್ಮಟ್ಟದ ಮಣ್ಣನ್ನು ಪುಡಿ ಮಾಡಲು ಜೊತೆಗೆ ಕಳೆಯನ್ನು ತೆಗೆಯಲು ಇದು ಉಪಯುಕ್ತ.

**3. ಮಂಕರಿ/ಕುಕ್ಕೆ :** ಗೊಬ್ಬರವನ್ನು ಹೊಲ/ಗದ್ದೆಗಳಿಗ ಎರಚಲು, ಹೈನುಗಾರಿಕೆಯನ್ನು ಮಾಡುವವರು ಸೆಗಣಿ ಹಾಗೂ ಇನ್ನಿತರ ಕಸವನ್ನು ಹೊರಕ್ಕೆ ಹಾಕಲು ಬಳಸುತ್ತಾರೆ.

**4. ಬಾನಿ/ಬಾಣಿ :** ದನಗಳಿಗೆ ನೀರನ್ನು ಕುಡಿಸಲು, ಪಶು ಆಹಾರಗಳಾದ ಹಿಂಡಿ, ಹೊಟ್ಟು, ಕಲಗಚ್ಚುಗಳನ್ನು ಹಾಕಲು ಬಳಸಲಾಗುತ್ತದೆ.

**5. ಮೊರ :** ಇದನ್ನು ಬತ್ತ, ರಾಗಿ ಇನ್ನಿತರ ಆಹಾರ ಪದಾರ್ಥಗಳಿಂದ ದೂಳನ್ನು, ಮಣ್ಣನ್ನು ತೆಗೆಯಲು ಬಳಸುತ್ತಾರೆ. ಇದಕ್ಕೆ ಬತ್ತ ತೂರುವುದು, ರಾಗಿ ತೂರುವುದು ಎನ್ನಲಾಗುತ್ತದೆ. ಅಲ್ಲದೆ ಬತ್ತ, ರಾಗಿಯಂತಹ ಆಹಾರ ಪದಾರ್ಥಗಳನ್ನು ಒಂದು ಕಡೆ ಹಾಕಲು ಅಥವಾ ಚೀಲಕ್ಕೆ ತುಂಬಲು ಬಳಸುತ್ತಾರೆ. ಮೊದಲು ಬಿದಿರಿನಿಂದ ಹೆಣೆದ ಮೊರಗಳೇ ಪೂರ್ಣ ಪ್ರಮಾಣದಲ್ಲಿದ್ದವು. ಇತ್ತೀಚೆಗೆ ಕಬ್ಬಿಣ ಮತ್ತು ಪ್ಲಾಸ್ಟಿಕ್ ಮೊರಗಳನ್ನು ಕಾಣಬಹುದು.

ಇತರ ಜಿಲ್ಲೆಗಳಂತೆ ರಾಮನಗರದಲ್ಲೂ ಕೃಷಿ ಹಬ್ಬಗಳನ್ನು ಆಚರಿಸಲಾಗುತ್ತದೆ. ಸಂಕ್ರಾಂತಿ, ಆಯುಧಪೂಜೆಯಂತಹ ಹಬ್ಬಗಳನ್ನು ಬಹಳ ಸಂಭ್ರಮದಿಂದ ಆಚರಿಸಲಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೃಷಿ ಉಪಕರಣಗಳೆಲ್ಲವೂ ಆಧುನಿಕತೆ ಹೊಂದಿದಂತೆ ಹಬ್ಬಗಳಲ್ಲೂ ಸಹ ಮೂಲ ಸ್ವರೂಪವನ್ನು ಬದಲಾಯಿಸಿಕೊಳ್ಳಲಾಗಿದೆ. ಟ್ರ್ಯಾಕ್ಟರ್, ಟಿಲ್ಲರ್‌ಗಳಂತಹ ಆಧುನಿಕ ಯಂತ್ರಗಳು ಬಳಕೆಯಲ್ಲಿವೆ.

**ಸಹಾಯಕ ಗ್ರಂಥಗಳು :**


ಕರ್ನಾಟಕ ಕೈಪಿಡಿ - 2011, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ - ಡಾ. ರಂಗನಾಥ

ಅಂತರ್ಜಾಲದ ಮಾಹಿತಿ


ಸಹಾಯಕರು : 1. ನಿರ್ದೇಶಕರು, ತೋಟಗಾರಿಕಾ, ಇಲಾಖೆ, ರಾಮನಗರ ಜಿಲ್ಲೆ

*ಎಂ.ಎಂ.*

**ರಾಮಫಲ** ಔಷಧೀಯ ಗುಣವುಳ್ಳ ಹಣ್ಣಿನ ಮರ. ಇದು ಅಮೆರಿಕ ಮೂಲದ್ದೆಂದು ತಿಳಿದುಬರುತ್ತದೆ. ಅನೋನೇಸೀ ಕುಟುಂಬಕ್ಕೆ ಸೇರಿದ ಈ ಮರ ಸೀತಾಫಲ, ಲಕ್ಷ್ಮಣಫಲ, ಹನುಮಾನ್‌ಫಲ ಮುಂತಾದ ಜಾತಿಗೆ ಸೇರಿದ್ದಾಗಿದೆ. ಇದರ ವೈಜ್ಞಾನಿಕ ಹೆಸರು ಅನೋನಾ ರೆಟಿಕ್ಯುಲೇಟ. ಇಂಗ್ಲಿಷಿನಲ್ಲಿ ಇದನ್ನು ಬುಲಕ್ಸ್



ಹಾರ್ಟ್ ಎನ್ನುವರು. ಪರ್ಣಜಾತಿಯ ಅಥವಾ ಅರೆಪರ್ಣಜಾತಿಯ ಈ ಸಸ್ಯ ವೆಸ್ಟ್‌ಇಂಡೀಸ್ ಮತ್ತು ಭಾರತದೆಲ್ಲೆಡೆ ಕಂಡುಬರುತ್ತದೆ. ಸು. ೨೦ ಅಡಿ ಎತ್ತರಕ್ಕೆ ಬೆಳೆಯುವ ಮಧ್ಯಮಗಾತ್ರದ ಈ ಮರದ ಕಾಂಡ ಗಟ್ಟಿಯಾಗಿರುತ್ತದೆ. ಎಲೆಗಳು ಅಭಿಮುಖಿವಾಗಿ ಜೋಡಣೆ ಗೊಂಡಿರುತ್ತವೆ. ಹೂಗಳು ಗೊಂಚಲಿನಂತೆ ಅರಳುತ್ತವೆ. ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಹೂಬಿಟ್ಟು ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಫಲ ನೀಡುತ್ತದೆ. ಮಾಸಲು ಬಣ್ಣದಿಂದ ಕೂಡಿದ ಹಣ್ಣು ಹೃದಯಾಕಾರವಿರುತ್ತದೆ. ಬೀಜ ಕಡಿಮೆ, ತಿರುಳು ಹೆಚ್ಚು. ಈ ತಿರುಳು ತುಂಬ ಸ್ವಾದಿಷ್ಟವಾಗಿರುತ್ತದೆ. ಹೆಚ್ಚು ಸಿಹಿಯಿರುವ ಈ ಹಣ್ಣಿನಲ್ಲಿ ಪಿಷ್ಟ ಅಧಿಕ ಪ್ರಮಾಣದಲ್ಲಿರುತ್ತದೆ. ಹಣ್ಣಿನ ಮೇಲಿನ ಸಿಪ್ಪೆ ಗೆರೆಗಳಿಂದ ಕೂಡಿದ್ದು ನೋಡಲು ಬಲೆಯಂತೆ ಕಾಣುತ್ತದೆ.

ಬೀಜದಿಂದ ಸಸ್ಯಾಭಿವೃದ್ಧಿ ನಡೆಯುತ್ತದೆ. ಎಲ್ಲ ಬಗೆಯ ವಾತಾವರಣ ಮತ್ತು ಎಲ್ಲ ಬಗೆಯ ಮಣ್ಣುಗಳಲ್ಲಿ ಬೆಳೆಯಬಲ್ಲುದು. ಇದರ ತೊಗಟೆಯಲ್ಲಿರುವ ಆಲ್ಕಲಾಯ್ಡ್ ಅಂಶ ಇರುತ್ತದೆ. ಕೆಲವು ರೋಗಗಳನ್ನು ತಡೆಗಟ್ಟುವ ಸಾಮರ್ಥ್ಯ ಇದರಲ್ಲಿದೆ. ಆಮಶಂಕೆ ಹಾಗೂ ಭೇದಿ ನಿವಾರಣೆಗೆ ಇದರ ಹಣ್ಣನ್ನು ಉಪಯೋಗಿಸುತ್ತಾರೆ. ಬೀಜದಲ್ಲಿ ವಿಷಕಾರಕ ಗುಣವಿದೆ.

ಉದ್ಯಾನವನ, ಶಾಲೆ, ಕಛೇರಿ, ಬಂಗಲೆ, ಮನೆಯ ಅಂಗಳ ಮುಂತಾದೆಡೆ ರಾಮಫಲ ಬೆಳೆಸುವುದುಂಟು. ಗದ್ದೆ, ಹೊಲ, ತೋಟಗಳ ಅಂಚಿನ ಬದುಗಳಲ್ಲೂ ಇದನ್ನು ರೈತರು ಬೆಳೆಸುತ್ತಾರೆ. ಇದೇ ಜಾತಿಗೆ ಸೇರಿದ ಮುಳ್ಳುಜಾತಿಗೆ ಸೇರಿದ ಮುಳ್ಳುರಾಮಫಲ ಎಂಬ ಸಸ್ಯ ಪ್ರಭೇದವಿರುತ್ತದೆ. ಇದರಲ್ಲಿ ನಾರಿನಿಂದ ಕೂಡಿದ ರಸಪೂರಿತ, ಸುವಾಸನಾಭರಿತವಾದದ್ದು. ಇದರಲ್ಲಿ ಸಕ್ಕರೆ ಅಂಶ ಕಡಿಮೆ, ಆಮ್ಲೀಯ ಗುಣ ಹೆಚ್ಚಾಗಿದ್ದು ಹುಳಿ ರುಚಿಯಿರುತ್ತದೆ.


*ಸಿ.ಎಚ್.*

**ರಾಯಚೂರು ಜಿಲ್ಲೆಯ ಕೃಷಿ** ಕರ್ನಾಟಕದ ಚರಿತ್ರೆಯಲ್ಲಿ 'ದೋಅಬ್' ಪ್ರದೇಶ ಎಂದು ಪ್ರಸಿದ್ಧಿ ಪಡೆದು ಕೃಷ್ಣಾ ಮತ್ತು ತುಂಗಾಭದ್ರಾ ಎಂಬ ಎರಡು ಪ್ರಮುಖ ನದಿಗಳಿಂದ ಸುತ್ತುವರೆದಿರುವ ಜಿಲ್ಲೆ ರಾಯಚೂರು. ಲಿಂಗಸುಗೂರು ತಾಲ್ಲೂಕಿನ 'ಹಟ್ಟಿ' ಚಿನ್ನದ ಗಣಿ ಈ ಜಿಲ್ಲೆಯಲ್ಲಿದೆ. ಇದು ಜಿಲ್ಲೆಯ ಹಿರಿಮೆಯಾಗಿದೆ. ಕರ್ನಾಟಕದ ಬಹುಭಾಗಕ್ಕೆ ವಿದ್ಯುತ್ ಪೂರೈಸುವ ಉಷ್ಣವಿದ್ಯುತ್ ಸ್ಥಾವರ ಆರ್.ಟಿ.ಪಿ.ಎಸ್. (1985ರಲ್ಲಿ ಸ್ಥಾಪನೆ) ರಾಯಚೂರಿನಲ್ಲಿದೆ. ಜಿಲ್ಲಾ ಕೇಂದ್ರವಾದ ರಾಯಚೂರಿನಲ್ಲಿ 2008ರಿಂದ ಕೃಷಿ ವಿಶ್ವವಿದ್ಯಾನಿಲಯ ಪ್ರಾರಂಭವಾಗಿ ಕಾರ್ಯ ನಿರ್ವಹಿಸುತ್ತಿದೆ. ಆಧುನಿಕ ಮಾತ್ರವಲ್ಲದೆ ಪ್ರಾಚೀನ ಇತಿಹಾಸ, ಗುಡ್ಡ, ಕೋಟೆ, ಕೊತ್ತಲ ಮುಂತಾದ ವಿಶೇಷಗಳಿಂದ ಕೂಡಿದ ಜಿಲ್ಲೆ. ಹೈದರಾಬಾದ್ ನಿಜಾಮರ ಅಧೀನದಿಂದ ಮುಕ್ತಿಗೊಂಡು ಭಾರತದ ಒಕ್ಕೂಟಕ್ಕೆ ಸೇರಿತು. ರಾಜ್ಯ ಪುನರ್ವಿಗಂಡಣೆಯಲ್ಲಿ ಅಂದರೆ 1956ರ ನವೆಂಬರ್ 1ರಂದು ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಂಡು ಕರ್ನಾಟಕದ ಒಂದು ಜಿಲ್ಲೆಯಾಗಿ ರೂಪುಗೊಂಡಿತು. 1997ರ ನವೆಂಬರ್ 1ರಂದು ಜಿಲ್ಲೆಯು ಮರುವಿಂಗಡಣೆಯಾಗಿ ಕೊಪ್ಪಳ ಹೊಸ ಜಿಲ್ಲೆಯಾಗಿ ರೂಪುಗೊಂಡಿತು. ಪ್ರಸ್ತುತ ರಾಯಚೂರು ಜಿಲ್ಲಾಕೇಂದ್ರವನ್ನು ಒಳಗೊಂಡಂತೆ ದೇವದುರ್ಗ, ಲಿಂಗಸುಗೂರು, ಮಾನ್ವಿ ಮತ್ತು ಸಿಂಧನೂರು ಎಂಬ 5 ತಾಲ್ಲೂಕುಗಳನ್ನೊಳಗೊಂಡಿದೆ. ಜಿಲ್ಲಾ ಕೇಂದ್ರವಾಗಿರುವ ರಾಯಚೂರು ಬೆಂಗಳೂರಿನಿಂದ 475 ಕಿ.ಮೀ. ದೂರದಲ್ಲಿದೆ. ಕರ್ನಾಟಕದ ಈಶಾನ್ಯ ಭಾಗದಲ್ಲಿರುವ ಹೈದರಾಬಾದ್-ಕರ್ನಾಟಕದ 6 ಜಿಲ್ಲೆಗಳಲ್ಲಿ ಒಂದಾಗಿದೆ.

ರಾಯಚೂರು ಜಿಲ್ಲೆಯ ಹೆಸರಿನ ಪ್ರಾಚೀನತೆಯನ್ನು ಅವಲೋಕಿಸಿದಾಗ, ರಾಯಚೂರು ಎಂಬ ಹೆಸರು ಹೊಯ್ಸಳರ ಶಾಸನದಲ್ಲಿ ರಾಚವೂರು ಎಂದು ಉಲ್ಲೇಖ ಗೊಂಡಿದೆ. ರಾಚ ಎಂದರೆ ರಾಜ ಎಂದು ಅದು ರಾಜನ ಊರು ಎಂಬ ಹಿನ್ನೆಲೆಯಲ್ಲಿ ಬಂದು ದೆಂದು ಕೆಲವರ ವಾದ. ಮತ್ತೆ ತೆಲುಗಿನ ಮೂಲದಿಂದ ರಾಯೂರು ಎಂದು ಇದ್ದು, 'ರಾಯಿ' ಎಂದರೆ ತೆಲುಗಿನಲ್ಲಿ ಕಲ್ಲುಬಂಡೆ ಎಂದು ಅರ್ಥವಿದೆ. ಇದು ಕಲ್ಲು ಬಂಡೆ ಗಳಿಂದ ಕೂಡಿರುವ ಊರಾಗಿರುವುದರಿಂದ ರಾಯಚೂರು ಎಂಬ ಹೆಸರು ಬಂದಿದೆ ಎಂದು ಕೆಲವರ ಅಭಿಪ್ರಾಯ.

**ಭೌಗೋಳಿಕ ಹಿನ್ನೆಲೆ :** ರಾಯಚೂರು ಜಿಲ್ಲೆಯು ಕರ್ನಾಟಕದ ಈಶಾನ್ಯ ಭಾಗದಲ್ಲಿದ್ದು, $16^0$ 2' ಉತ್ತರ ಅಕ್ಷಾಂಶ, $77^0$ 50' ಪೂರ್ವ ರೇಖಾಂಶದಲ್ಲಿದೆ. ಸಮುದ್ರ ಮಟ್ಟದಿಂದ 1,311 ಅಡಿ ಎತ್ತರವಿರುವ ಈ ಜಿಲ್ಲೆಯ ಉತ್ತರಕ್ಕೆ ಯಾದಗಿರಿ, ಪಶ್ಚಿಮಕ್ಕೆ ಬಿಜಾಪುರ ಮತ್ತು ಬಾಗಲಕೋಟೆ, ಪೂರ್ವಕ್ಕೆ ಆಂಧ್ರಪ್ರದೇಶದ ಮೆಹಬೂಬುನಗರ ಜಿಲ್ಲೆ, ದಕ್ಷಿಣಕ್ಕೆ ಬಳ್ಳಾರಿ ಮತ್ತು ಆಂದ್ರಪ್ರದೇಶದ ಕರ್ನೂಲ್ ಜಿಲ್ಲೆ, ನೈಋತ್ಯಕ್ಕೆ ಕೊಪ್ಪಳ ಜಿಲ್ಲೆಯಿಂದ ಸುತ್ತುವರೆದಿದೆ. ಜಿಲ್ಲೆಯ ಉತ್ತರ ಮತ್ತು ದಕ್ಷಿಣಕ್ಕೆ ಕ್ರಮವಾಗಿ ಕೃಷ್ಣಾ ಮತ್ತು ತುಂಗಾಭದ್ರಾ ನದಿಗಳಿಂದ ಸುತ್ತುವರೆದಿದೆ.

**ಜಿಲ್ಲೆಯ ವಿಸ್ತೀರ್ಣ ಮತ್ತು ಜನಸಂಖ್ಯೆ :** ಜಿಲ್ಲೆಯ ಒಟ್ಟು ವಿಸ್ತೀರ್ಣ 5559 ಚ.ಕಿ.ಮೀ. ಇದ್ದು ರಾಜ್ಯದ ವಿಸ್ತೀರ್ಣದಲ್ಲಿ ಶೇ. 2.90ರಷ್ಟು ಪ್ರದೇಶವನ್ನು ಹೊಂದಿದೆ. ರಾಯಚೂರು ಜಿಲ್ಲಾಡಳಿತ ಕೇಂದ್ರವಾಗಿದ್ದು 2001ರ ಸಮೀಕ್ಷೆಯಂತೆ ರಾಯಚೂರು ತಾಲ್ಲೂಕು 1535 ಚ.ಕಿ.ಮೀ. ದೇವದುರ್ಗ ತಾಲ್ಲೂಕು 1508 ಚ.ಕಿ.ಮೀ. ಲಿಂಗಸುಗೂರು ತಾಲ್ಲೂಕು 1948 ಚ.ಕಿ.ಮೀ. ಮಾನ್ವಿ ತಾಲ್ಲೂಕು 1793 ಚ.ಕಿ.ಮೀ. ಸಿಂಧನೂರು ತಾಲ್ಲೂಕು 1599 ಚ.ಕಿ.ಮೀ. ವಿಸ್ತೀರ್ಣವಿದೆ. ಜಿಲ್ಲೆ ಪ್ರಸ್ತುತ 5 ತಾಲ್ಲೂಕುಗಳು, 37 ಹೋಬಳಿಗಳು, 164 ಗ್ರಾಮ ಪಂಚಾಯಿತಿಗಳು, 883 ಹಳ್ಳಿ (ಗ್ರಾಮ)ಗಳನ್ನು ಹೊಂದಿದೆ. ಕರ್ನಾಟಕದ 4 ಆಡಳಿತ ವಿಭಾಗಗಳಲ್ಲಿ ಒಂದಾದ ಗುಲ್ಬರ್ಗ ರೆವಿನ್ಯೂ ವಿಭಾಗಕ್ಕೆ ರಾಯಚೂರು ಜಿಲ್ಲೆ ಸೇರಿದೆ. 2011ರ ಜನಗಣತಿಯ ಪ್ರಕಾರ ತಾಲ್ಲೂಕುವಾರು ದೇವದುರ್ಗ - 280939, ಲಿಂಗಸುಗೂರು - 385184, ಮಾನ್ವಿ - 370089, ರಾಯಚೂರು- 495712, ಸಿಂಧನೂರು - 392849 ಇದ್ದು, ಒಟ್ಟು ಜಿಲ್ಲೆಯ ಜನಸಂಖ್ಯೆಯು 1924773ರಷ್ಟಿದ್ದು ರಾಜ್ಯದ



ಒಟ್ಟು ಜನಸಂಖ್ಯೆಯ ಶೇ 3.15ರಷ್ಟಿದೆ. ಜಿಲ್ಲೆಯ ಒಟ್ಟು ಜನಸಾಂದ್ರತೆ 228ರಷ್ಟಿದ್ದು, ಪುರುಷರು 09,64,511 ಇದ್ದು ಮಹಿಳೆಯರು 09,64,301 ಜನರಿದ್ದಾರೆ. ಜಿಲ್ಲೆಯ ಒಟ್ಟು ಲಿಂಗಾನುಪಾತವು 992ರಷ್ಟಿದೆ. ಜಿಲ್ಲೆಯ ಸಾಕ್ಷರತೆಯು ಸಾಧಾರಣವಾಗಿದ್ದು ಅದರಲ್ಲಿ ಪುರುಷರು 5,89,746 ಮಹಿಳೆಯರು 4,09,153 ಇದ್ದು ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ 49.56ರಷ್ಟಿದೆ.

**ಭೂಮಿಯ ಮೇಲ್ಮೈ ಲಕ್ಷಣ :** ದಖಿನ್ ಪ್ರಸ್ಥಭೂಮಿಯ ಪಶ್ಚಿಮ ಭಾಗದಲ್ಲಿ ಕರ್ನಾಟಕವಿದ್ದು ರಾಯಚೂರು ಜಿಲ್ಲೆಯ ಡೆಕ್ಕನ್ ಟ್ರಾಪ್‌ನಲ್ಲಿದೆ. ಇಲ್ಲಿ ಹಲವು ಭಾಗಗಳಲ್ಲಿ ಅಗ್ನಿಶಿಲೆಗಳ ಗುಂಪು ಇದ್ದು ಎಲ್ಲವೂ ಕ್ಷಾರಪೂರಿತವಾಗಿವೆ. ಮಣ್ಣು ರೂಪುಗೊಂಡಾಗ ಜಂಬಿಟ್ಟಿಗೆ ಮತ್ತು ಕಪ್ಪು ಜೇಡಿಮಣ್ಣಿ (ರೆಗಾರ್)ನಿಂದ ಕೂಡಿದ ಮೈದಾನ ಪ್ರದೇಶವನ್ನು ಹೊಂದಿದ್ದು, ಇವುಗಳ ಅಡಿಯಲ್ಲಿ ಧಾರವಾಡ ಶಿಲಾಸ್ತೋಮವಿದೆ. ಅಲ್ಲಲ್ಲಿ ಗುಡ್ಡಗಳಿಂದ ಹರಡಿಕೊಂಡಂತೆ ಕೆಂಪು ಮಣ್ಣಿನ ಭೂಮಿ ಹೊಂದಿದೆ. ಧಾರವಾಡ ಷಿಸ್ಟ್‌ನ ಅಗ್ನಿಶಿಲೆ ಮತ್ತು ಜಲಶಿಲೆಗಳೂ ಸೇರಿವೆ. ಕಲ್ಲು ಬಂಡೆಗಳಿಂದ ಕೂಡಿರುವ ಈ ಜಿಲ್ಲೆಯಲ್ಲಿ ಹಲವು ಬೆಟ್ಟಗಳಿವೆ. ಅವುಗಳೆಂದರೆ ಸಿಂಧನೂರು ತಾಲ್ಲೂಕಿನ ದುರ್ಗದಗುಡ್ಡ, ರಾಯಚೂರಿನ ದಕ್ಷಿಣದಲ್ಲಿ ಮಲಬಾದ ಶಿಖರ, ಮಾನ್ವಿ ಶಿಖರ, ಮೊಸರಕಲ್ಲು ಶಿಖರ, ಕರಡಿಗುಡ್ಡ, ಮೇರಿಗುಡ್ಡ, ಚಿನ್ನಾಪುರ ಮುಂತಾದ ಗುಡ್ಡಗಳಿವೆ. ಈ ಬೆಟ್ಟಗಳು ಬೆಣಚು ಕಲ್ಲುಗಳಿಂದ ಕೂಡಿದ್ದು ಬೋಳಾಗಿವೆ. ಇದರ ತಪ್ಪಲಲ್ಲಿ ಪೊದೆಯಂತಹ ಕಾಡುಗಳಿವೆ. ಹೆಚ್ಚು ದಟ್ಟವಾದ ಅರಣ್ಯ ಇರದ ಈ ಜಿಲ್ಲೆಯಲ್ಲಿ ಸಾಧಾರಣ ದಟ್ಟವಾದ ಅರಣ್ಯವಿದೆ. ಜಿಲ್ಲೆಯಲ್ಲಿ ಒಟ್ಟು 325.57 ಚ.ಕಿ.ಮೀ. ಅರಣ್ಯ ಪ್ರದೇಶವಿದೆ. (2007-08ರ ಸಮೀಕ್ಷೆ) ಜಿಲ್ಲೆಯ ಒಟ್ಟು ಭೂ ಪ್ರದೇಶದಲ್ಲಿ 5.86ರಷ್ಟಿದೆ. ರಾಜ್ಯದಲ್ಲಿ ಅತಿ ಕಡಿಮೆ ಅರಣ್ಯ ಕ್ಷೇತ್ರವಿರುವ ಜಿಲ್ಲೆಗಳಲ್ಲಿ ಒಂದಾದ ರಾಯಚೂರು ಶೇ 0.41ರಷ್ಟಿದ್ದು ಈ ಜಿಲ್ಲೆಯ ಅರಣ್ಯವು ಬಳ್ಳಾರಿ ವೃತ್ತಕ್ಕೆ ಸೇರಿದೆ. ಅರಣ್ಯವು ಕುರುಚಲು ಗಿಡಗಳಿಂದ ಕೂಡಿದ್ದು ಇಲ್ಲಿಯ ಕಾಡುಗಳಲ್ಲಿ ಕಕ್ಕೆ, ಜಾಲ, ಹುಣಿಸೆ, ಹೊಂಗೆ, ಹೊನ್ನೆ, ಮುತ್ತುಗ, ಜಾಲ, ಮತ್ತಿ ಮುಂತಾದ ಮರಗಳಿವೆ. ಅತಿ ಹೆಚ್ಚು ಬರಗಾಲ ಪೀಡಿತ ಜಿಲ್ಲೆಗಳ ಸಾಲಿಗೆ ಸೇರಿದ ಈ ಜಿಲ್ಲೆಯ ಬೆಟ್ಟಗಳ ತಪ್ಪಲಿನಲ್ಲಿ ಸೀತಾಫಲ ಮತ್ತು ದಾಳಿಂಬೆಗಳು ಬೆಳೆಯುವವು.

**ಹವಾಗುಣ :** ಕರ್ನಾಟಕ ರಾಜ್ಯವು ಭಾರತದ ದಕ್ಷಿಣ ಭಾಗದಲ್ಲಿದ್ದು ಸಂಪೂರ್ಣವಾಗಿ ಉಷ್ಣವಲಯದಲ್ಲಿದೆ. ಹಾಗಾಗಿ ವಾಯುಗುಣವು ಭೌಗೋಳಿಕ ಸ್ಥಾನ, ಮಾನ್ಸೂನ್ ಮಾರುತಗಳ ಪ್ರಭಾವವನ್ನು ಒಳಗೊಂಡಿದ್ದು ನಾಲ್ಕು ಋತುಗಳನ್ನು ಹೊಂದಿದೆ. ಕರ್ನಾಟಕದ ಈಶಾನ್ಯ ಶುಷ್ಕವಲಯದಲ್ಲಿರುವ ಈ ಜಿಲ್ಲೆಯು ರಾಜ್ಯದಲ್ಲಿ ಅತಿ ಹೆಚ್ಚು ಉಷ್ಣತೆಯನ್ನು ಹೊಂದಿರುವ ಜಿಲ್ಲೆಯಾಗಿದೆ. ಸಮುದ್ರ ಮಟ್ಟದಿಂದ 407 ಮೀ. ಎತ್ತರದಲ್ಲಿರುವ ಈ ಜಿಲ್ಲೆಯಲ್ಲಿ ಮೇ ತಿಂಗಳಿನಲ್ಲಿ ಉಷ್ಣಾಂಶವು ಗರಿಷ್ಠ 39.60 ಸೆ. ಕನಿಷ್ಠ 26.50 ಸೆ. ಇರುತ್ತದೆ. 1928 ಮೇ 23ರಂದು 45.60 ಸೆ. ಉಷ್ಣಾಂಶ ದಾಖಲಾಗಿದ್ದು ಇದುವರೆಗಿನ ದಾಖಲೆಯಾಗಿರುವ ಅತಿ ಹೆಚ್ಚು ತಾಪಮಾನವಾಗಿದೆ. ಚಳಿಗಾಲದಲ್ಲಿ ಚಳಿ ಅಧಿಕವಾಗಿದ್ದು 2011 ಜನವರಿ 11ರಂದು ಅತಿ ಕನಿಷ್ಠ 7.10 ಸೆ. ಉಷ್ಣಾಂಶ ದಾಖಲಾಗಿದೆ. ಜಿಲ್ಲೆಯ ದೇವದುರ್ಗದ ಬಹುಭಾಗ, ಲಿಂಗಸುಗೂರು, ಸಿಂಧನೂರಿನ ಉತ್ತರ ಭಾಗವು ಒಣ ಪ್ರದೇಶವಾಗಿದೆ.

ಜಿಲ್ಲೆಯಲ್ಲಿ ಜೂನ್‌ನಿಂದ - ನವೆಂಬರ್‌ವರೆಗೆ ಮಳೆಗಾಲವಾಗಿದ್ದು 60-100 ಸೆಂ.ಮೀ. ಮಳೆ ಪಡೆಯುವ ಪ್ರದೇಶವಾಗಿದೆ. ಜಿಲ್ಲೆಯಲ್ಲಿ ಮಳೆ ಪ್ರಮಾಣ ಕಡಿಮೆ ಇದ್ದು ಬರಗಾಲ ಪೀಡಿತ ವಲಯವಾಗಿದೆ. ನೈಋತ್ಯ ಮಾನ್ಸೂನ್ 449 ಮಿ.ಮೀ. ಈಶಾನ್ಯ ಮಾನ್ಸೂನ್ ಮಾರುತಗಳು 113 ಮಿ.ಮೀ ಸೆಪ್ಟೆಂಬರ್ ತಿಂಗಳಿನಲ್ಲಿ ಅಧಿಕ ಮಳೆಯಾಗುವುದು. ಚಳಿಗಾಲ (ಜನವರಿ-ಮಾರ್ಚ್)ದಲ್ಲಿ 8 ಮಿ.ಮೀ. ಮಳೆ ಆಗಿದ್ದು ಬೇಸಗೆ (ಏಪ್ರಿಲ್-ಮೇ)ಯಲ್ಲಿ 52 ಮಿ.ಮೀ ಒಟ್ಟಾರೆಯಾಗಿ ವಾರ್ಷಿಕ ಸರಾಸರಿ 621 ಮಿ.ಮೀ ಆಗಿದೆ. ಲಿಂಗಸುಗೂರಿನ ಭಾಗದಲ್ಲಿ ಅತಿ ಕಡಿಮೆ ಮಳೆ ಆಗುವುದು. 2011ರ ಸಮೀಕ್ಷೆಯಂತೆ ತಾಲ್ಲೂಕುವಾರು ಮಳೆ ದೇವದುರ್ಗ - 427.9 ಮಿ.ಮೀ. ಲಿಂಗಸುಗೂರು - 397.8 ಮಿ.ಮೀ. ಮಾನ್ವಿ - 386.4 ಮಿ.ಮೀ. ರಾಯಚೂರು - 437.1 ಮಿ.ಮೀ. ಸಿಂಧನೂರು - 392.8 ಮಿ.ಮೀ. ದಾಖಲಾಗಿದೆ. ಒಟ್ಟಾರೆಯಾಗಿ 144ಕ್ಕೂ ಅಧಿಕ ಮಳೆದಿನಗಳಾಗಿವೆ. ಅಂತರ್ಜಲ ಸಾಮರ್ಥ್ಯ ಪುನರ್‌ಭರ್ತಿಯ ಪ್ರಮಾಣ - 67.1 (ಕೋಟಿ ಘನ ಮೀ.) ಬರಿದಾಗುವ ಪ್ರಮಾಣ - 12.0 (ಕೋಟಿ ಘನ ಮೀ.) ಲಭ್ಯ ಸಾಮರ್ಥ್ಯ - 55.1 (ಕೋಟಿ ಘನ ಮೀ.) ಶೇಕಡವಾರು ಹಂಚಿಕೆ 18 (ಕೋಟಿ ಘನ ಮೀ.) ಆಗಿದೆ.

**ನದಿಗಳು ಮತ್ತು ನೀರಾವರಿ :** ಜಿಲ್ಲೆಯು ದೋಆಬ್ ಪ್ರದೇಶವಾಗಿದ್ದು ಬಹುಭಾಗ ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯ ಉತ್ತರದ ಗಡಿಯಾಗಿ ದಕ್ಷಿಣ ಭಾರತದ ಅತಿದೊಡ್ಡ ನದಿಯಾದ ಕೃಷ್ಣಾ ನದಿ ಹರಿದು ಬಿಜಾಪುರ ಮತ್ತು ಯಾದಗಿರಿ ಜಿಲ್ಲೆಯನ್ನು ಬೇರ್ಪಡಿಸಿದರೆ, ದಕ್ಷಿಣದ ಗಡಿಯಾಗಿ ತುಂಗಭದ್ರಾ ನದಿ ಹರಿದು ಬಳ್ಳಾರಿ ಜಿಲ್ಲೆಯನ್ನು ಬೇರ್ಪಡಿಸುವುದು. ಕೃಷ್ಣಾ ನದಿಯ ಬಲದಂಡೆ, ತುಂಗಭದ್ರಾ ನದಿಯ ಎಡದಂಡೆ ಜಿಲ್ಲೆಯ ಸಮೃದ್ಧ ಪ್ರದೇಶವಾಗಿದೆ. ಪ್ರಾಚೀನ ಕಾಲದಿಂದಲೂ ಈ ನದಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ವಿಜಯನಗರ ಕಾಲದಿಂದಲೂ ನದಿಗಳಿಗೆ ಕಾಲುವೆಗಳನ್ನು ಮಾಡಿ ನೀರಾವರಿ ಪ್ರದೇಶವನ್ನಾಗಿ ಮಾಡಿರುವುದು ಕಂಡುಬರುವುದು. ಜಿಲ್ಲೆಯಲ್ಲಿ ಕೃಷ್ಣಾ ನದಿಯು ಲಿಂಗಸುಗೂರು ತಾಲ್ಲೂಕಿನಲ್ಲಿ ಪೂರ್ವಾಭಿಮುಖವಾಗಿ ಸುಮಾರು 168 ಕಿ.ಮೀ ಹರಿಯುವುದು. ಭೀಮಾನದಿಯು ಸಹ ಇದೇ ತಾಲ್ಲೂಕಿನ ಕಡಲೂರು ಗ್ರಾಮದ ಉತ್ತರದಲ್ಲಿ ಕೃಷ್ಣಾ ನದಿಯನ್ನು ಸೇರುವುದು. ಅನಂತರ ರಾಯಚೂರು ತಾಲ್ಲೂಕಿನ ಬುಡದಿಪಾಡು ಗ್ರಾಮದ ಉತ್ತರದಲ್ಲಿ ಆಂಧ್ರಪ್ರದೇಶವನ್ನು ಪ್ರವೇಶಿಸುವುದು. ಕೃಷ್ಣಾ ನದಿಯ ದೊಡ್ಡ ಉಪನದಿಯಾದ ತುಂಗಭದ್ರಾ ನದಿಯು ಮಾನ್ವಿ, ರಾಯಚೂರು ತಾಲ್ಲೂಕುಗಳನ್ನು ಸುತ್ತುವರಿದು ರಾಯಚೂರು ತಾಲ್ಲೂಕಿನ ತಲಮರಿ ಗ್ರಾಮದ ಆಗ್ನೇಯದಿಂದ ಆಂಧ್ರಪ್ರದೇಶವನ್ನು ಸೇರುವುದು. ಈ ಎರಡು ಪ್ರಮುಖ ನದಿಗಳಲ್ಲದೆ 15 ದೊಡ್ಡ, 21 ಸಣ್ಣ ತೊರೆಗಳು ಹರಿಯುವುದು. ಅವುಗಳಲ್ಲಿ ಹಟ್ಟಿ ನಾಲಾ (30 ಮೈಲುಗಳು), ಚಿಕ್ಕಸುಗೂರು ನಾಲಾ (22 ಮೈಲುಗಳು), ರಾಮದುರ್ಗ ನಾಲಾ (20 ಮೈಲು), ಮಂದರ್ಗಿ ನಾಲಾ (19 ಮೈಲುಗಳು) ಮುಂತಾದವು ಕೃಷ್ಣಾ ನದಿಗೆ ಸೇರಿದ ನಾಲೆಗಳಾಗಿದ್ದರೆ, ಮಸ್ಕಿ ನಾಲಾ (70 ಮೈಲುಗಳು), ಸಿಂಧನೂರು ನಾಲಾ (50 ಮೈಲುಗಳು), ಹಿರೆಹಳ್ಳ (50 ಮೈಲುಗಳು) ಮುಂತಾದವು ತುಂಗಭದ್ರಾ

ನದಿಗೆ ಸೇರುವ ನಾಲೆಗಳಾಗಿವೆ. ಮಸ್ಕಿ ನಾಲಾ ಯೋಜನೆಯು ಲಿಂಗಸುಗೂರು ತಾಲ್ಲೂಕಿನ ಮರಳದಿನ್ನಿ ಗ್ರಾಮದಲ್ಲಿ ಮಸ್ಕಿ ಹಳ್ಳ ಉಪತೊರೆ ಕಟ್ಟುವ ಯೋಜನೆಯಾಗಿದೆ. ಇದರಿಂದ ತಾಲ್ಲೂಕಿನ 3001 ಹೆ. ಭೂಮಿಗೆ ಒಳಪಡುತ್ತದೆ.

**ತಾಲೂಕುವಾರು ನೀರಾವರಿ ಪ್ರದೇಶ (2010-11)**

**ದೇವದುರ್ಗ :** ತಾಲ್ಲೂಕಿನಲ್ಲಿ 6 ಕಿ.ಮೀ. ಉದ್ದದ ಕಾಲುವೆ ಇದ್ದು 38935 ಹೆ. ನಿವ್ವಳ ನೀರಾವರಿ ವಿಸ್ತೀರ್ಣ ಹೊಂದಿದೆ. ಇನ್ನು ತಾಲ್ಲೂಕಿನಲ್ಲಿ 65 ಕೆರೆಗಳಿದ್ದು 328 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಹಾಗೆಯೇ 1985 ಬಾವಿಗಳಿದ್ದು ಒಟ್ಟು 1550 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಇನ್ನು ಕೊಳವೆ ಬಾವಿಗಳು 900, ಏತ ನೀರಾವರಿ 13 ಇದ್ದು ಕೃಷಿಗೆ ಬಳಕೆಯಾಗುತ್ತಿದೆ.

**ಲಿಂಗಸುಗೂರು :** ತಾಲ್ಲೂಕಿನಲ್ಲಿ 25 ಕಿ.ಮೀ. ಉದ್ದದ ಕಾಲುವೆ ಇದ್ದು 25144 ಹೆ. ನಿವ್ವಳ ನೀರಾವರಿ ವಿಸ್ತೀರ್ಣ ಹೊಂದಿದೆ. ತಾಲ್ಲೂಕಿನಲ್ಲಿ 21 ಕೆರೆಗಳಿದ್ದು 40 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಹಾಗೆಯೇ 3056 ಬಾವಿಗಳಿದ್ದು ಒಟ್ಟು 1536 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಕೊಳವೆ ಬಾವಿಗಳು 1980, ಮತ್ತು 424 ಏತ ನೀರಾವರಿ ಇದೆ.

**ಮಾನ್ವಿ :** ತಾಲ್ಲೂಕಿನಲ್ಲಿ 32 ಕಿ.ಮೀ. ಉದ್ದದ ಕಾಲುವೆ ಇದ್ದು 36678 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ತಾಲ್ಲೂಕಿನಲ್ಲಿ 26 ಕೆರೆಗಳಿದ್ದು 122 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಹಾಗೆಯೇ 942 ಬಾವಿಗಳಿದ್ದು ಒಟ್ಟು 438 ನೀರಾವರಿ ವಿಸ್ತೀರ್ಣ ಹೊಂದಿದೆ. ಜೊತೆಗೆ ಕೊಳವೆ ಬಾವಿಗಳು 788 ಮತ್ತು 1089 ಹೆ. ಭೂಮಿಗೆ ಏತ ನೀರಾವರಿಯ ಅನುಕೂಲವಿದೆ.

**ರಾಯಚೂರು :** ತಾಲ್ಲೂಕಿನಲ್ಲಿ 28 ಕಿ.ಮೀ. ಉದ್ದದ ಕಾಲುವೆ ಇದ್ದು 12470 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಇನ್ನು ತಾಲ್ಲೂಕಿನಲ್ಲಿ 191 ಕೆರೆಗಳಿದ್ದು 731 ನೀರಾವರಿ ವಿಸ್ತೀರ್ಣ ಹೊಂದಿದೆ. ಜಿಲ್ಲಾ ಕೇಂದ್ರದಲ್ಲಿ 'ಆಮ್ ತಲಾಬ್' ಎಂಬ ದೊಡ್ಡ ಕೆರೆಯಿದ್ದು ಇದು ಪ್ರವಾಸಿ ತಾಣವೂ ಆಗಿದೆ. ಹಾಗೆಯೇ 3829 ಬಾವಿಗಳಿದ್ದು ಒಟ್ಟು 2941 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಅದಲ್ಲದೆ ಕೊಳವೆ ಬಾವಿಗಳು 1123 ಮತ್ತು 1342 ಏತ ನೀರಾವರಿ ಇದೆ.

**ಸಿಂಧನೂರು :** ತಾಲ್ಲೂಕಿನ್ನಲಿ 59 ಕಿ.ಮೀ. ಉದ್ದದ ಕಾಲುವೆ ಇದ್ದು 55066 ಹೆ. ವ್ಯವಸ್ಥೆ ನೀರಾವರಿ ವಿಸ್ತೀರ್ಣ ಹೊಂದಿದೆ. ಇನ್ನು ತಾಲ್ಲೂಕಿನಲ್ಲಿ 2 ಕೆರೆಗಳು ಮಾತ್ರ ಇದ್ದು ವ್ಯವಸಾಯಕ್ಕೆ ಬಳಸುವುದಿಲ್ಲ. ಹಾಗೆಯೇ 137 ಬಾವಿಗಳಿದ್ದು ಒಟ್ಟು 69 ಹೆ. ನೀರಾವರಿ ವಿಸ್ತೀರ್ಣ ಹೊಂದಿದೆ. ಜೊತೆಗೆ ಕೊಳವೆ ಬಾವಿಗಳು 780 ಮತ್ತು 1602 ಏತ ನೀರಾವರಿಯ ಅನುಕೂಲವಿದೆ. ಜಿಲ್ಲೆಯಲ್ಲಿ ಪ್ರಮುಖವಾದ ನದಿಗಳು ಹರಿಯುವುದರ ಜೊತೆಗೆ ಕಾಲುವೆ, ಕೆರೆ, ಬಾವಿ ಮುಂತಾದವುಗಳ ಮೂಲಕ ವ್ಯವಸಾಯ ಮಾಡುವುದು ಕಂಡುಬರುವುದು.

**ಮಣ್ಣು :** ನಾಗರೀಕತೆಯ ಬೆಳವಣಿಗೆಯಲ್ಲಿ ವ್ಯವಸಾಯದ ಪಾತ್ರ ಬಹುದೊಡ್ಡದಾಗಿದೆ. ವ್ಯವಸಾಯಕ್ಕೆ ಮಣ್ಣು ಮುಖ್ಯವಾದುದು. ಜಿಲ್ಲೆಯಲ್ಲಿ ಕಪ್ಪುಮಣ್ಣಿನ(ಎರೆಮಣ್ಣು) ಬಹುಭಾಗವಿದೆ. ಇದು ಮಾಸಲು ಕಪ್ಪು ಅಥವಾ ಅಚ್ಚ ಕಂದು ಬಣ್ಣವಿರುತ್ತದೆ. ಈ ಮಣ್ಣುಗಳು ಅತಿ ಸೂಕ್ಷ್ಮವಾದ ಜೇಡಿ ಕಣಗಳನ್ನು ಹೊಂದಿರುತ್ತವೆ. ಸುಣ್ಣ ಮತ್ತು ಮೆಗ್ನಿಷಿಯಂಗಳ ಪ್ರಮಾಣ ಹೆಚ್ಚು ಇದ್ದು, ರಂಜಕ ಮತ್ತು ಸಾವಯವ ಅಂಶಗಳು ಕಡಿಮೆ ಇರುವುದು. ತೇವಾಂಶವಿದ್ದಾಗ ಮೃದುವಾಗಿದ್ದು, ಒಣಗಿದರೆ ಸಂಕುಚಿತವಾಗುತ್ತದೆ. ಒಣಹವೆಯ ಬೇಸಗೆಯಲ್ಲಿ ಎರೆಭೂಮಿ ಬಿರುಕು ಬಿಡುವುದು. ಇದರಿಂದಾಗಿ ಮಣ್ಣಿನ ಆಳದವರೆಗೆ ಗಾಳಿಯು ಪ್ರವೇಶಿಸುವ ಅವಕಾಶವಿದೆ. ಹಾಗಾಗಿ ಶುಷ್ಕ ಬೇಸಾಯಕ್ಕೆ ಉತ್ತಮವಾಗಿದೆ. ಜಿಲ್ಲೆಯಲ್ಲಿ ಹೆಚ್ಚು ಆಳದ ಕಪ್ಪು ಮಣ್ಣುಗಳು ಇರುವುದರಿಂದ ಜೋಳ, ಗೋಧಿ, ಹತ್ತಿ, ಎಣ್ಣೆಕಾಳುಗಳು, ಮೆಣಸಿನಕಾಯಿ, ತೊಗರಿ, ಕಡಲೆ, ಈರುಳ್ಳಿ ಇಲ್ಲಿ ಹೆಚ್ಚು ಬೆಳೆಯಲಾಗುತ್ತದೆ.

ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣುಗಳು ಕಣಶಿಲೆಗಳಿಂದ ರೂಪುಗೊಂಡಿದ್ದು ಇದು ಜಿಲ್ಲೆಯಲ್ಲಿ ಅಲ್ಲಲ್ಲಿ ಕಂಡುಬರುವುದು. ಇದರಲ್ಲೂ ಜೋಳ, ಹತ್ತಿ, ಗೋಧಿ, ದ್ವಿದಳ ಧಾನ್ಯಗಳು ಅಲ್ಲದೆ ಮೆಣಸಿನಕಾಯಿ ಮುಖ್ಯ ಬೆಳೆಯಾಗಿದೆ. ಕೃಷ್ಣಾ ಮತ್ತು ತುಂಗಾಭದ್ರಾ ನದಿಯು ಜಿಲ್ಲೆಯಲ್ಲಿ ಹಾದು ಹೋಗುವಲ್ಲಿ ಉತ್ತಮ ಮೆಕ್ಕಲು ಮಣ್ಣಿದೆ. ಕೆಂಪುಜೇಡಿ ಮತ್ತು ಮರಳು ಮಿಶ್ರಿತ ಮಣ್ಣುಗಳು ರಾಯಚೂರು ಮತ್ತು ಲಿಂಗಸುಗೂರು ತಾಲ್ಲೂಕಿನ ಕಂಡುಬರುತ್ತವೆ. ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬೂದು ವರ್ಣದ ತೆಳುಪದರವಿದೆ. ಮಾನ್ವಿ ಮತ್ತು ಸಿಂಧನೂರು ತಾಲ್ಲೂಕಿನಲ್ಲಿ ಅಚ್ಚಕಪ್ಪು ಮಂದ ಪದರವಿದ್ದು ಅದು ಉತ್ತಮ ಫಲದಾಯಕವಾದ್ದದ್ದಾಗಿದೆ. ಇಲ್ಲಿ ಮಣ್ಣು ಬಹುವಾಗಿ ಕರಲು. ಕೆಲವೆಡೆ ಎರಡು ವಿಧವೂ ಸರಿಸಮವಾಗಿರಬಹುದು. ಆಮ್ಲಿತಮಣ್ಣು ಹಲವೆಡೆಯಿದೆ. ಭೂಮಿಯಲ್ಲಿ ಹೆಚ್ಚು ಸಾವಯವ ಪದಾರ್ಥವಿದ್ದು ಸಾಕಷ್ಟು ಪೊಟ್ಯಾಷ್ ಇರುತ್ತದೆ.

ಕೆಂಪು ಜೇಡಿಮಣ್ಣು ಬಣ್ಣದಲ್ಲಿ ಕೆಂಪು ಅಥ'ವಾ ಹಳದಿ ಮಿಶ್ರಿತವಾಗಿದ್ದು ತೆಳು ಅಥವಾ ಮಂದ ಪದರವಾಗಿರುತ್ತದೆ. ಮರಳು ಜೇಡಿ ಮಿಶ್ರವಾಗಿದ್ದು ನೀರು ಚೆನ್ನಾಗಿ ಬಸಿಯುತ್ತದೆ. ಇದು ಮಾನ್ವಿ, ರಾಯಚೂರು, ಲಿಂಗಸುಗೂರು ತಾಲ್ಲೂಕಿನ ಭಾಗಗಳಲ್ಲಿ ಕಂಡುಬರುತ್ತದೆ. ಇಲ್ಲಿ ಬತ್ತ, ಕಬ್ಬು, ತರಕಾರಿ, ಜೋಳ, ನೆಲಗಡಲೆ, ದ್ವಿದಳ ಧಾನ್ಯಗಳು ಬೆಳೆಯಲು ಯೋಗ್ಯವಾಗಿದೆ.

ತೆಳು ಅಥವಾ ಸಾಮಾನ್ಯ ಕಪ್ಪುಮಣ್ಣು, ಕಪ್ಪು ಅಥವಾ ಬೂದು ಬಣ್ಣದಿಂದ ಸುಣ್ಣ ಕೂಡಿದ್ದು ಜೇಡಿ ಹೆಚ್ಚಾಗಿದೆ, ರಾಯಚೂರು ಮತ್ತು ಲಿಂಗಸುಗೂರು ಭಾಗದಲ್ಲಿ ಕಂಡುಬರುತ್ತದೆ. ಇದು ಬತ್ತ, ಕಬ್ಬು, ಗೋಧಿ, ಜೋಳ, ಹತ್ತಿ ಎಣ್ಣೆ ಬೀಜಗಳನ್ನು ಬೆಳೆಯಲು ಉತ್ತಮವಾಗಿದೆ.

ದಪ್ಪ ಪದರದ ಎರೆಭೂಮಿಯು 10-12 ಅಡಿ ಮಂದವಾದ ಪದರವಿದ್ದು, ಮಣ್ಣು ಅಚ್ಚ ಕಪ್ಪು ಅಥವಾ ಮಾಸಲು ಕಪ್ಪು. ಇದು ರಾಯಚೂರು, ದೇವದುರ್ಗ, ಮಾನ್ವಿ, ಸಿಂಧನೂರು ತಾಲ್ಲೂಕುಗಳಲ್ಲಿ ಕಂಡುಬರುತ್ತದೆ. ಈ ಭೂಮಿಯಲ್ಲಿ ತರಕಾರಿ, ಜೋಳ, ಮೆಣಸಿನಕಾಯಿ, ಹತ್ತಿ, ಗೋಧಿ, ನೆಲಗಡಲೆ, ದ್ವಿದಳ ಧಾನ್ಯ, ಕುಸುಮೆ ಮುಂತಾದ ಬೆಳೆಗಳನ್ನು ಬೆಳೆಯಲು ಯೋಗ್ಯ.

ಮೆಕ್ಕಲುಮಣ್ಣು ಜೇಡಿ ಬೆರೆತ ಭೂಮಿಯಾಗಿದ್ದು ನೀರನ್ನು ಹೀರಿ ಹಿಡಿಯುವ ಗುಣವನ್ನು ಹೊಂದಿದೆ. ಇದು ರಾಯಚೂರು, ಸಿಂಧನೂರು,

ಮಾನ್ವಿ, ಲಿಂಗಸುಗೂರು ತಾಲ್ಲೂಕಿನ ನದಿಗಳ ದಡದಲ್ಲಿ ಕಂಡಬರುವುದು. ಇಲ್ಲಿ ಜೋಳ, ಹತ್ತಿ, ದ್ವಿದಳ ಧಾನ್ಯಗಳು, ಮೆಣಸಿನಕಾಯಿ ಹೆಚ್ಚಾಗಿ ಬೆಳೆಯಬಹುದು. ಧಡೆಸುಗೂರಿನಲ್ಲಿ ಮಣ್ಣು ಪರೀಕ್ಷಾ ಕೇಂದ್ರವಿದ್ದು ಪ್ರತಿ ವರ್ಷ 30,000ಕ್ಕೂ ಅಧಿಕ ಮಾದರಿಗಳನ್ನು ಪರೀಕ್ಷಿಸಲಾಗುವುದು. ಇಲ್ಲಿರುವ ಮಣ್ಣಿನ ಗುಣಕ್ಕೆ ತಕ್ಕಂತೆ ಕೆಲವು ಬೆಳೆಗಳಿಗೆ ಬೆರೆಸುವ ಗೊಬ್ಬರಾಂಶದ ಪ್ರಮಾಣ ಇಂತಿದೆ.

| | ಸಾರಜನಕ | ರಂಜಕ | ಪೊಟ್ಯಾಷ್ |
|---|---|---|---|
| ಬತ್ತ | 30 | 30 | 0 |
| ಜೋಳ | 60 | 30 | 0 |
| ನೆಲಗಡಲೆ | 10 | 20 | 0 |

ಆಹಾರ ಬೆಳೆಗಳ ಜೊತೆಗೆ ವಾಣಿಜ್ಯ ಬೆಳೆ ಕೃಷಿವುಂಟು.

**ವ್ಯವಸಾಯ :** ಜಿಲ್ಲೆಯ ವ್ಯಾಪಾರ ಮತ್ತು ವಾಣಿಜ್ಯ ಹೆಚ್ಚಾಗಿ ಕೃಷಿ ಸರಕನ್ನು ಅವಲಂಬಿಸುವಂತೆ ಮಾಡಿದೆ. ಏಕದಳ ಧಾನ್ಯಗಳಾದ ಬತ್ತ, ಜೋಳ, ಸಜ್ಜೆ, ಮುಸುಕಿನ ಜೋಳ, ಗೋಧಿ; ಇನ್ನು ದ್ವಿದಳ ಧಾನ್ಯಗಳಾದ ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಅಲಸಂದೆ, ಕಡಲೆ ಮುಂತಾದವು; ಎಣ್ಣೆಕಾಳುಗಳಾದ ಶೇಂಗಾ, ಸೂರ್ಯಕಾಂತಿ, ಕುಸುಮೆ, ಹರಳು, ಎಳ್ಳು, ಅಗಸೆ; ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು, ತಂಬಾಕು; ತೋಟಗಾರಿಕೆ ಬೆಳೆಗಳಾದ ತೆಂಗು, ಬಾಳೆ, ಮಾವು, ನಿಂಬೆ, ಸೀಬೆ, ಸಪೋಟ, ದಾಳಿಂಬೆ, ಪಪಾಯ; ತರಕಾರಿ ಬೆಳೆಗಳಾದ ಟೊಮ್ಯಾಟೊ, ಹುರುಳಿ ಕಾಯಿ, ಬದನೆ, ಈರುಳ್ಳಿ, ಮೆಣಸಿನಕಾಯಿ, ಸೊಪ್ಪು ತರಕಾರಿಗಳು; ಕುಂಬಳ ಜಾತಿ ತರಕಾರಿಗಳು; ಅಲ್ಪವಾಗಿ ಇರುವ ಪುಷ್ಪೋದ್ಯಮದಲ್ಲಿ ಮಲ್ಲಿಗೆ, ಗುಲಾಬಿ, ಸುಗಂಧರಾಜ, ಸೇವಂತಿಗೆ, ಚೆಂಡು ಮಲ್ಲಿಗೆ ಮುಂತಾದ ಹೂವುಗಳನ್ನು ಜಿಲ್ಲೆಯಲ್ಲಿ ಬೆಳೆಯಲಾಗುವುದು.

**ಬತ್ತ :** ದಕ್ಷಿಣ ಭಾರತದ ಬಹುಮುಖ್ಯ ಆಹಾರ ಬೆಳೆಯಾದ ಬತ್ತವನ್ನು ಕರ್ನಾಟಕದಲ್ಲಿ 11.6 ಲಕ್ಷ ಹೆಕ್ಟೇರಿನಲ್ಲಿ ಬೆಳೆಯಲಾಗುತ್ತದೆ. ಕರ್ನಾಟಕದಲ್ಲಿ ಯಥೇಚ್ಛ ಬತ್ತ ಬೆಳೆಯುವ ಜಿಲ್ಲೆ ಎಂದು ಪ್ರಸಿದ್ಧಿ ಪಡೆದಿದ್ದು ಅದರಲ್ಲಿ ಸಿಂಧನೂರಿನದು ಸಿಂಹಪಾಲು. ಶೇ 60ಕ್ಕೂ ಹೆಚ್ಚಿನ ಪ್ರದೇಶದಲ್ಲಿ ಅಧಿಕ ಇಳುವರಿ ತಳಿಗಳನ್ನು ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ತುಂಗಭದ್ರಾ ನದಿ ಕಣಿವೆಯಲ್ಲಿ ಹೆಚ್ಚಾಗಿ ಬೆಳೆಯುವರು. ಈ ಕ್ಷೇತ್ರದಲ್ಲಿ ನೀರಾವರಿಯ ಬೆಳೆಯಾಗಿದ್ದು, ಮೊದಲ ಸ್ಥಾನ ಪಡೆದಿದೆ. ಪ್ರಾಚೀನ ಕಾಲದಿಂದಲೂ ಇಲ್ಲಿ ಬತ್ತ ಬೆಳೆಯಲಾಗುತ್ತಿದ್ದುದರ ಕುರುಹಾಗಿ ಜಿಲ್ಲೆಯಲ್ಲಿಯ ಮೊಸಳಿಕಲ್ಲು 300, ಬಳ್ಳನಿಟ್ಟಿಗೆ, ಬೇವನಾಹಾಳ (ಬೇವಿನೂರು) ಮುಂತಾದವು ಪ್ರಾಚೀನ ಬತ್ತ (ಸಂ. ಉಂಬಳಿಯಾಗಿ ಕೊಟ್ಟಗ್ರಾಮಗಳು) ಗ್ರಾಮಗಳಾಗಿದ್ದುವೆಂದು ಶಾಸನಗಳಿಂದ ತಿಳಿದುಬರುತ್ತದೆ.

ರಾಯಚೂರು ಜಿಲ್ಲೆಯಲ್ಲಿ ಬೆಳೆಯುತ್ತಿರುವ ಬತ್ತದ ತಳಿಗಳು ಇಂತಿವೆ - 'ಕೊಯಮತ್ತೂರು ಸಣ್ಣ 701 ಇದು ಜಿಲ್ಲೆಯಲ್ಲಿ ಬೆಳೆಯಲು ಯೋಗ್ಯವಾಗಿದೆ. ಅಕ್ಕಿ ಬಿಳಿಯಾಗಿದ್ದು ಎಕರೆಗೆ 1100-1150 ಕೆ.ಜಿ. ಉತ್ಪತ್ತಿ ಇದೆ. ಜೂನ್-ಜುಲೈನಲ್ಲಿ ಬಿತ್ತನೆ ಮಾಡಿ ನವೆಂಬರ್ - ಡಿಸೆಂಬರ್‌ನಲ್ಲಿ ಕಟಾವು ಮಾಡಲಾಗುತ್ತದೆ. 'ಅಮೃತಸಾಲಿ ಅಥವಾ ಗಡ್ಡುನೆಲ್ಲು 19, ಅಕ್ಕಿ ಬಿಳಿಯಾಗಿದ್ದು, ದಪ್ಪವಾಗಿದ್ದು ಎಕರೆಗೆ 1100 ಕೆ.ಜಿ. ಉತ್ಪತ್ತಿ ಇದೆ 'ಕಿಚಡಿ ಸಣ್ಣ' ಫಲವತ್ತಾದ ಭೂಮಿಯಲ್ಲಿ ಬೆಳೆಯಲಾಗುತ್ತದೆ. ಇದು ಬಿಳುಪಿನ ಸಣ್ಣಕ್ಕಿಯಾಗಿದ್ದು ಎಕರೆಗೆ 1300 ಕೆ.ಜಿ. ಉತ್ಪತ್ತಿ ಇದೆ. 'ಕುರ್ಗಿನೆಲ್ಲು 17)' ಜಿಲ್ಲೆಯ ನೀರಾವರಿ ಅನುಕೂಲವಿರುವ ಕಪ್ಪು ಭೂಮಿಗಳಲ್ಲಿ ಬೆಳೆಯಬಹುದು. ಇದು ಬಿಳಿ ಅಕ್ಕಿ ಎಕರೆಗೆ 1000-1050 ಕೆ.ಜಿ. ಉತ್ಪತ್ತಿಯಿದೆ.

**ಜೋಳ :** ಇದು ಬತ್ತದ ಅನಂತರ ಎರಡನೆಯ ಪ್ರಮುಖ ಬೆಳೆಯಾಗಿದೆ. ಕರ್ನಾಟಕದ ಉತ್ತರ ಭಾಗದಲ್ಲಿ ಬಹುಮುಖ್ಯವಾದ ಆಹಾರ ಬೆಳೆಯಾಗಿದ್ದು ಉತ್ತಮ ಪಶು ಆಹಾರವೂ ಆಗಿದೆ. ಮಳೆಯಾಶ್ರಯದ ಉಷ್ಣವಲಯದ ಬೆಳೆಯಾಗಿದ್ದು, ಮುಂಗಾರು ಮತ್ತು ಹಿಂಗಾರು ಎರಡೂ ಅವಧಿಗಳಲ್ಲಿ ಬೆಳೆಯಲಾಗುವುದು. ಇದಕ್ಕೆ ಕಪ್ಪು ಎರೆಮಣ್ಣು ಅನುಕೂಲಕರವಾಗಿದ್ದು, ಜೋಳದ ಬೇಸಾಯಕ್ಕೆ ಕಡಿಮೆ ಮಳೆ ಸಾಕಾಗುವುದು. ಬಿಳಿ ಮತ್ತು ಕೆಂಪು ಜೋಳ ಎಂಬ ಎರಡು ಸ್ಥಳೀಯ ಪ್ರಭೇದಗಳಿವೆ. ಇದರ ಜೊತೆಗೆ ದ್ವಿದಳ ಧಾನ್ಯಗಳನ್ನೂ ಅಕ್ಕಡಿ ಬೆಳೆಯಾಗಿ ಬೆಳೆಯುವರು. ಎರೆಭೂಮಿಗೆ ಅನುಕೂಲವಾದ ಈ ರಬಿ ಬೆಳೆ ಎಕರೆಗೆ 250-350ಕೆ.ಜಿ. ಇಳುವರಿ ಕೊಡುತ್ತದೆ. ಇಲ್ಲಿ ಸುಧಾರಿತ ತಳಿಗಳನ್ನು ಬೆಳೆಯಲಾಗುವುದು.

**ಗೋಧಿ :** ಸಮಶೀತೋಷ್ಣವಲಯದ ಬೆಳೆಯಾದ ಗೋಧಿಯನ್ನು ಚಳಿಗಾಲದ ಉಷ್ಣಾಂಶದಲ್ಲಿ ಬೆಳೆಯಲಾಗುವುದು. ಇದರಿಂದ ಅಧಿಕ ಉತ್ಪಾದನೆ ಸಾಧ್ಯವಿಲ್ಲ. ಮುಂಗಾರಿನಲ್ಲಿ ಜೋಳದ ಕಟಾವಿನ ಅನಂತರ ಪರ್ಯಾಯ ಬೆಳೆಯಾಗಿ ಕಡಿಮೆ ಪ್ರಮಾಣದಲ್ಲಿ ಬೆಳೆಯಲಾಗುವುದು. ರಾಯಚೂರಿನ ಭಾಗದಲ್ಲೂ ಅಲ್ಪಪ್ರಮಾಣದಲ್ಲಿ ಬೆಳೆಯಲಾಗುವುದು. ಇಲ್ಲಿಯ ಪರಿಸರಕ್ಕೆ ಅನುಕೂಲವಾದ ಗೋಧಿಯ ತಳಿಗಳನ್ನು ರಬಿ ಬೆಳೆಯಾಗಿ ಬೆಳೆಯಬಹುದು.

**ಮೆಕ್ಕೆಜೋಳ :** ಇದು ಮೂಲತಃ ದಕ್ಷಿಣ ಅಮೆರಿಕಾದ ಬೆಳೆಯಾಗಿದೆ. ಭಾರತದಲ್ಲಿ ಮೆಕ್ಕೆಜೋಳವನ್ನು ಬೆಳೆಯುವ ಮುಖ್ಯ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇದು ಪಶು ಮತ್ತು ಕೋಳಿಗಳಿಗೆ ಆಹಾರವಾಗಿ ವ್ಯಾಪಕವಾಗಿ ಬಳಕೆಯಾಗುವುದು. ಜಿಲ್ಲೆಯಲ್ಲಿ ಖಾರೀಫ್ ಮತ್ತು ರಬಿ ಬೆಳೆಯಾಗಿಯೂ ಬೆಳೆಯುವರು. ಇಲ್ಲಿಯ ಕಪ್ಪುಮಣ್ಣು ಕೃಷಿಗೆ ಅನುಕೂಲಕರವಾಗಿದೆ.

**ಸಜ್ಜೆ :** ಇದು ರಾಜ್ಯದ ಬಹುಮುಖ್ಯವಾದ ತೃಣಧಾನ್ಯ. ಇದು ಬರಗಾಲದಲ್ಲಿಯೂ ಬೆಳೆಯುವ ಗುಣವನ್ನು ಹೊಂದಿರುವುದರಿಂದ ಉತ್ತರ ಕರ್ನಾಟಕದ ಭಾಗದಲ್ಲಿ ವ್ಯಾಪಕವಾಗಿ ಬೆಳೆಯುವರು. ಹೈದರಾಬಾದ್-ಕರ್ನಾಟಕದ ಆರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುವರು. ಜಿಲ್ಲೆಯಲ್ಲಿ ಏಕ ಬೆಳೆಯಾಗಿ ಅಥವಾ ಅಕ್ಕಡಿಯಾಗಿ ಬೆಳೆಯುವರು. ಅಕ್ಕಡಿಯಾಗಿ ತೊಗರಿ ಅಥವಾ ಜೋಳವನ್ನು ಬೆಳೆಸುವರು.

2009-10ರ ಸಮೀಕ್ಷೆಯಂತೆ ಏಕದಳ ಧಾನ್ಯಗಳ ಉತ್ಪಾದನೆ.

| **ಏಕದಳ ಧಾನ್ಯಗಳು** | **ಒಟ್ಟು (ಮೆಟ್ರಿಕ್ ಟನ್‌ಗಳಲ್ಲಿ)** |
|---|---|
| ಬತ್ತ | 738172 |
| ಜೋಳ | 145758 |
| ಸಜ್ಜೆ | 24202 |
| ಮೆಕ್ಕೆಜೋಳ | 1855 |
| ಗೋಧಿ | 941 |

**ಹತ್ತಿ :** ಭಾರತದ ಹತ್ತಿ ಕೃಷಿಯಲ್ಲಿ ಕರ್ನಾಟಕವು ಎಂಟನೆಯ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಕಪ್ಪು ಎರೆಮಣ್ಣಿನಲ್ಲಿ ಬೆಳೆಯಲಾಗುವುದು. ಇದು ಮುಂಗಾರಿನ ಬೆಳೆ. ಇಲ್ಲಿ ಸಾಂಪ್ರದಾಯಿಕ ಮತ್ತು ಸುಧಾರಿತ ತಳಿಗಳನ್ನು ಬೆಳೆಯಲಾಗುವುದು. ಅವುಗಳಲ್ಲಿ ರಾಯಚೂರು - 51 ಮತ್ತು ಭಾಗ್ಯ ಎಂಬ ತಳಿಗಳನ್ನು ಹೆಚ್ಚು ಬೆಳೆಸುವರು. ಸೋಲಾಪುರ, ಮುಂಬಯಿ ಮತ್ತು ಕೊಯಮತ್ತೂರಿಗೆ ಹೆಚ್ಚು ರಫ್ತಾಗುವುದು.

ಇದಲ್ಲದೆ ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ಹೊಗೆಸೊಪ್ಪುಗಳನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುವುದು.

2009-10ರ ಸಮೀಕ್ಷೆಯಂತೆ ವಾಣಿಜ್ಯ ಬೆಳೆಗಳ ಉತ್ಪಾದನೆ

| ವಾಣಿಜ್ಯ ಬೆಳೆಗಳು | ಒಟ್ಟು (ಟನ್‌ಗಳಲ್ಲಿ) |
|---|---|
| ಹತ್ತಿ | 53381 |
| ಕಬ್ಬು | 2879 |
| ಹೊಗೆಸೊಪ್ಪು | 53 |

**ರೇಷ್ಮೆ ಕೃಷಿ :** ಹಿಪ್ಪನೇರಳೆಯನ್ನು ಮಳೆಯಾಶ್ರಯ ಹಾಗೂ ನೀರಾವರಿ ಬೆಳೆಯಾಗಿ ಕೃಷಿ ಮಾಡುವರು. ಈ ಕೃಷಿಗೆ ಹೆಚ್ಚು ಕೆಲಸಗಾರರು ಬೇಕಾಗಿರುವುದರಿಂದ ಹೆಚ್ಚು ಉದ್ಯೋಗ ಒದಗಿಸುವುದು. ರೇಷ್ಮೆ ಇಲಾಖೆಯ ವರದಿಯಂತೆ ರಾಯಚೂರಿನಲ್ಲಿ ವರ್ಷಕ್ಕೆ ಹಿಪ್ಪನೇರಳೆ 263 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುವುದು. ರೇಷ್ಮೆ ಗೂಡುಗಳ ಉತ್ಪಾದನೆ 74.0 ಟನ್.

**ಎಣ್ಣೆ ಕಾಳುಗಳು :** ಎಣ್ಣೆ ಕಾಳುಗಳ ಉತ್ಪಾದನೆ ಗಮನಾರ್ಹ ಸಾಧನೆಯನ್ನು 'ಹಳದಿ ಕ್ರಾಂತಿ' ಎಂದು ಕರೆಯಲಾಗುವುದು. ಇದು ವಾಣಿಜ್ಯ ಬೆಳೆಯಾಗಿದ್ದು ಇವುಗಳ ಉತ್ಪಾದನೆ ಅಧಿಕ ಲಾಭದಾಯಕ.

**ಶೇಂಗಾ (ನೆಲಗಡಲೆ) :** ರಾಯಚೂರು ಜಿಲ್ಲೆಯಲ್ಲಿ 2, 206 ಎಂಬ ತಳಿಗಳನ್ನು ಬೆಳೆಸುವರು. ಈ ಜಿಲ್ಲೆಯಲ್ಲಿ ಶೇಂಗಾ ಯಥೇಚ್ಛವಾಗಿ ಬೆಳೆಯುವುದರಿಂದ ಎಣ್ಣೆ ತಯಾರಿಸುವ ಮಿಲ್‌ಗಳು ಹೆಚ್ಚಾಗಿವೆ. ಶೇಂಗಾ ಎಣ್ಣೆಯನ್ನು ಪುಣೆ, ಮುಂಬಯಿ ಮುಂತಾದವುಗಳ ಕಡೆ ರಫ್ತಾಗುವುದು.

**ಸೂರ್ಯಕಾಂತಿ :** ಸೂರ್ಯಕಾಂತಿಯಿಂದ ತಯಾರಿಸುವ ಖಾದ್ಯ ತೈಲವು ಕಡಿಮೆ ಪ್ರಮಾಣದ ಕೊಲೆಸ್ಟರಾಲ್ ಹೊಂದಿರುವುದರಿಂದ ಆರೋಗ್ಯಕ್ಕೆ ಉತ್ತಮ. ಇದರಿಂದ ದೊರೆಯುವ ಹಿಂಡಿಯು ಉತ್ತಮ ಪಶು ಆಹಾರವಾಗಿದೆ. ಮುಂಗಾರು ಮತ್ತು ಹಿಂಗಾರು ಅವಧಿಗಳೆರಡರಲ್ಲೂ ಬೆಳೆಯಬಹುದಾದ ಬೆಳೆ. ರಾಯಚೂರು ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿ ಸೂರ್ಯಕಾಂತಿ ಉತ್ಪಾದನೆಯಲ್ಲಿ ಮೊದಲ ಸ್ಥಾನ ಪಡೆದಿದೆ. ಇದಲ್ಲದೆ, ಕುಸುಬೆ, ಹರಳು, ಎಳ್ಳು ಮುಂತಾದ ಎಣ್ಣೆ ಕಾಳುಗಳ ಕೃಷಿಯೂ ಉಂಟು.

2009-10ರ ಸಮೀಕ್ಷೆಯಂತೆ ಎಣ್ಣೆ ಕಾಳುಗಳ ಉತ್ಪಾದನೆ

| ಎಣ್ಣೆ ಕಾಳುಗಳು | ಒಟ್ಟು (ಟನ್‌ಗಳಲ್ಲಿ) |
|---|---|
| ಶೇಂಗಾ | 25748 |
| ಸೂರ್ಯಕಾಂತಿ | 29463 |
| ಕುಸುಬೆ | 1909 |
| ಹರಳು | 249 |
| ಎಳ್ಳು | 335 |
| ಇತರೆ ಎಣ್ಣೆ ಕಾಳುಗಳು | 61 |

**ತೋಟಗಾರಿಕೆ ಬೆಳೆಗಳು :** ತೋಟಗಾರಿಕೆ ಕೃಷಿಯ ಇದರ ಬೆಳವಣಿಗೆಯನ್ನು 'ಸುವರ್ಣ ಕ್ರಾಂತಿ' ಎಂದು ಕರೆಯುವರು. ಇವುಗಳಲ್ಲಿ ಕೆಲವನ್ನು ರಫ್ತು ಮಾಡುವುದರಿಂದ ವಿದೇಶಿ ವಿನಿಮಯ ಗಳಿಕೆಯಲ್ಲು ಪ್ರಮುಖ ಪಾತ್ರವಹಿಸಿದೆ. ರಾಯಚೂರು ಜಿಲ್ಲೆಯಲ್ಲಿ ಹಲವಾರು ಬಗೆಯ ಹಣ್ಣುಗಳನ್ನು ಬೆಳೆಯಲಾಗುತ್ತದೆ. ಅವುಗಳ ಉತ್ಪಾದನೆಯ ವಿವರ 2009-2010ರ ಸಮೀಕ್ಷೆಯಂತೆ ಈ ಕೆಳಗಿನ ಪಟ್ಟಿಯಲ್ಲಿದೆ.

| ಹಣ್ಣುಗಳು | ಒಟ್ಟು (ಮೆಟ್ರಿಕ್ ಟನ್‌ಗಳಲ್ಲಿ) |
|---|---|
| ಬಾಳೆ | 5115 |
| ಮಾವು | 7326 |
| ನಿಂಬೆ | 10686 |
| ಸೀಬೆ | 3916 |
| ಸಪೋಟ | 3641 |
| ದಾಳಿಂಬೆ | 5580 |
| ಪರಂಗಿ | 15680 |

**ತರಕಾರಿಗಳು :** ಜಿಲ್ಲೆಯಲ್ಲಿ ಹಲವಾರು ತರಕಾರಿಗಳನ್ನು ಬೆಳೆಯುವರು. ಸ್ಥಳೀಯ ಬೇಡಿಕೆಯನ್ನು ಪೂರೈಸುವುದು ಮಾತ್ರವಲ್ಲದೆ ನೆರೆ ಜಿಲ್ಲೆಗಳಿಗೂ ರಫ್ತು ಮಾಡಲಾಗುವುದು. 2009-10ರ ಸಮೀಕ್ಷೆಯಂತೆ ರಾಯಚೂರು ಜಿಲ್ಲೆಯಲ್ಲಿ ಬೆಳೆಯುವ ತರಕಾರಿಗಳ ಉತ್ಪಾದನೆಯ ವಿವರ

| ತರಕಾರಿ ಬೆಳೆಗಳು | ಒಟ್ಟು (ಮೆಟ್ರಿಕ್ ಟನ್‌ಗಳಲ್ಲಿ) |
|---|---|
| ಟೊಮ್ಯಾಟೊ | 22692 |
| ಬದನೆ | 8019 |
| ಹುರುಳಿಕಾಯಿ | 2590 |
| ಈರುಳ್ಳಿ | 50525 |
| ಒಣಮೆಣಸಿನಕಾಯಿ | 43368 |
| ಸೊಪ್ಪಿನ ತರಕಾರಿಗಳು | 5924 |
| ಕುಂಬಳ ಜಾತಿ ತರಕಾರಿಗಳು | 11692 |

**ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳು :** ಕೃಷಿಕನ ಬದುಕು ಕೆಲವೊಮ್ಮೆ ಗಾಳಿಗೆ ಇಟ್ಟ ದೀಪದಂತೆ. ಬೆಳೆಗೆ ತಕ್ಕ ಬೆಲೆ ಸಿಗದೆ ನಷ್ಟವನ್ನು ಅನುಭವಿಸುವ, ಕೆಲವೊಮ್ಮೆ ಪ್ರಕೃತಿಯ ವಿಕೋಪಕ್ಕೆ ತತ್ತರಿಸಿ ಹೋಗುವವನು. ರಾಯಚೂರು ಜಿಲ್ಲೆಯು ಅನೇಕ ಬಾರಿ ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ಎದುರಿಸಿದೆ. ಕೃಷಿಯಲ್ಲಿ ನಿರೀಕ್ಷೆಯ ಮಟ್ಟದ ಬೆಳಸು ಬಾರದಿದ್ದಾಗ ರೈತರು ಹತಾಶರಾಗಿ ಬೇರೆ ದಾರಿ ಕಾಣದೆ ಆತ್ಮಹತ್ಯೆಗೆ ಶರಣಾಗುವರು. 2011-12ರ ಸಾಲಿನಲ್ಲಿ ದೇವದುರ್ಗದಲ್ಲಿ 15 ಜನ ರೈತರು, ಮಾನ್ವಿಯಲ್ಲಿ 4 ಜನ ರೈತರು, ಸಿಂಧನೂರಿನಲ್ಲಿ 1 ಪ್ರಕರಣ ಕಂಡುಬಂದು, ಜಿಲ್ಲೆಯಲ್ಲಿ ಒಟ್ಟು 20 ರೈತರ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಈ ಸಂದರ್ಭದಲ್ಲಿ

ಸರ್ಕಾರದಿಂದ ಬಿಡುಗಡೆಗೊಂಡ ಒಟ್ಟು ಪರಿಹಾರದ ಹಣ 4,00,000 ಲಕ್ಷ ರೂಗಳಾಗಿವೆ.

ಹಾಗಾಗಿ ಸರ್ಕಾರವು ಜಿಲ್ಲೆಯಲ್ಲಿ 37 ರೈತ ಸಂಪರ್ಕ ಕೇಂದ್ರಗಳನ್ನು ತೆರೆದಿದೆ. ರೈತರಿಗೆ ಬೇಕಾದ ಮಾಹಿತಿ ಕೊಡುವ ಧ್ಯೇಯವನ್ನು ಹೊಂದಿದೆ. ಇದರ ಜೊತೆಗೆ ಸರ್ಕಾರವು ಬೆಳೆಗಳ ಬೆಲೆ ನಿರ್ಧಾರ, ಬೆಂಬಲ ಬೆಲೆ, ಭೂ-ಚೇತನ, ರಾಷ್ಟ್ರೀಯ ಕೃಷಿ ವಿಮಾ ಯೋಜನೆ, ಕೃಷಿ ತರಬೇತಿ, ಆಹಾರ ಭದ್ರತಾ ಮಿಷನ್, ಆತ್ಮ ಯೋಜನೆ ಮುಂತಾದ ಕಾರ್ಯಕ್ರಮಗಳು ಜಿಲ್ಲೆಯಲ್ಲಿ ಜಾರಿಯಲ್ಲಿವೆ.

**ಸ್ಥಳೀಯವಾಗಿ ಬಳಸುವ ಕೃಷಿ ಸಲಕರಣೆಗಳು ಮತ್ತು ಕೆಲವು ಜನಪದ ಆಚರಣೆಗಳು**

**ಸಡ್ಡೆ :** ಟೊಳ್ಳು ಬಿದಿರಿನ ಕೊಳವೆಗೆ ಮೇಲೆ ಮರದ ಬಟ್ಟಲನ್ನು ಜೋಡಿಸಲಾಗುತ್ತದೆ. ಹತ್ತಿ, ಜೋಳ, ತೊಗರಿ ಮುಂತಾದವುಗಳನ್ನು ಅದರ ಮೂಲಕ ಸಾಲಾಗಿ ಬಿತ್ತನೆ ಮಾಡಲು ನಾಡು ನೇಗಿಲಿಗೆ ಕಟ್ಟಿ ಬಟ್ಟಲು ಖಾಲಿಯಾಗದಂತೆ ಬಿತ್ತನೆ ಬೀಜ ತುಂಬುತ್ತಿರಬೇಕು.

**ಕೂರಿಗೆ :** ಮೇಲಿನ ಬಟ್ಟಲನ್ನು ಮರದಿಂದ ಮಾಡಿಸುತ್ತಾರೆ. ಪಾರ್ಶ್ವದಲ್ಲಿ ನಳಿಗೆಗಳ ಸಂಖ್ಯೆಗೆ ತಕ್ಕಂತೆ ಇಳಿಜಾರಾದ ರಂಧ್ರಗಳನ್ನು ಕೊರೆಯಲಾಗಿದೆ. ಕೆಳಗಡೆ ಕಬ್ಬಿಣದ ಟೊಳ್ಳು ಕೊಳವೆಗಳಿದ್ದು ಅವು ಸಾಲು ಕೆರೆಯಲು ಅದರ ಮೂಲಕ ಬಿತ್ತನೆ ಸಾಲಿನಲ್ಲಿ ಬೀಳಲು ಅನುಕೂಲವಾಗಿರುತ್ತದೆ. ಈ ಕೊಳವೆಗಳ ಸಂಖ್ಯೆ 2,4,6 ಅಥವಾ 12 ಇರಬಹುದು. ಅವುಗಳ ಮಧ್ಯದ ಅಂತರ 9,12 ಅಂಗುಲ ಇದ್ದು ಬೆಳಸಿಗೆ ತಕ್ಕಂತೆ ಜೋಡಿಸುವರು. ಇದರಲ್ಲಿ ನೆಲಗಡಲೆ ಕೂರಿಗೆ, ಹತ್ತಿ, ಜೋಳ ಮತ್ತು ಕಬ್ಬಿಗೆ ಮೇಲು ಗೊಬ್ಬರ ಕೊಡುವ ಕೂರಿಗೆ ಮುಂತಾದ ನಾನಾ ರೀತಿಯ ಕೂರಿಗೆ ಬಳಸುವರು.

**ಮಟ್ಟಮಣೆ :** ನೆಲ ಮಟ್ಟ ಮಾಡಲು, ಮೇಲಿನ ಹೆಂಟೆ ಹೊಡೆಯಲು ಇದು ಅನುಕೂಲ. ಕೇಣೆ ಎಂದು ಕರೆಯುವರು. ಇದನ್ನು ಮರದ ದಿಮ್ಮಿಯಿಂದ ಮಾಡಿರುತ್ತಾರೆ.

**ಅಂಕೊಂಡಿ :** ಕೂರಿಗೆಯ ದಿಂಡಿಗೆ ಕಟ್ಟಲು ಬಳಸುವ ತೊಗಲಿನ ಬಾರಿಗೆ ಜೋಡಿಸುವ ಚಿಕ್ಕ ಮೊಳೆ.

**ಅಳಗ :** ಇದು ಹುಲ್ಲು ಸಪ್ಪ ಮುಂತಾದ ಬೆಳೆಗಳನ್ನು ಕಟ್ಟಲು ಬಳಸುವ ಹಗ್ಗ. ಇದಕ್ಕೆ ಅಳಗದಗ್ಗ, ಹುರಿ ಮುಂತಾದ ಹೆಸರುಗಳಿಂದ ಕರೆಯಲಾಗುವುದು.

**ಅಳ್ತರಿವಿ :** ಬೆಳೆಗಳ ರಾಶಿಯನ್ನು ಅಳೆಯಲು ಉಪಯೋಗಿಸುವ ಮಾಪನ ಇದನ್ನು ಅಳ್ತೆರವಿ, ಅರಿವಿ, ಅಳ್ತಿಕೊಡ ಮುಂತಾದ ಹೆಸರುಗಳಿಂದ ಕರೆಯಲಾಗುವುದು.

**ಇಂಗ್ಲಿ :** ಕುಂಟೆ ದಿಂಡಿಗೆ ಈಸು ಜೋಡಿಸಿದಾಗ ದಿಂಡಿನಿಂದ ಹೊರಗೆ ಬಂದ ಈಸಿಗೆ ಕಡಾಣಿಯಂತೆ ಕಟ್ಟಿಗೆ ಜೋಡಿಸಿ ಬೀಳದಂತೆ ಮಾಡುವುದು

**ಇರ್ಸು :** ಗಾಡಿಯ ಎರಡೂ ಚಕ್ರಗಳೂ ತಿರುಗಲು ಆಧಾರವಾಗಿರುವ ಕಬ್ಬಿಣದಿಂದ ಮಾಡಿರುವ ಸಾಧನ.

**ಈಸು :** ನೇಗಿಲು ಮತ್ತು ನೊಗವನ್ನು ಸೇರಿಸುವ ಮರದ ತುಂಡು ಇದಾಗಿದ್ದು ಇದನ್ನು ಬೇಯಿಸು ಎಂತಲು ಸಹ ಕರೆಯುವರು.

**ಉಣ್ಣೆ :** ಹಲಗೆ ಬಡಿಯಲು ಬಳಸುವ ಕಡ್ಡಿಯಾಗಿದೆ. ಇದನ್ನು ಉಣಚಿ, ಉಣೆಚೆ ಎಂತಲೂ ಕರೆಯುವರು.

**ಉದ್ದಿಗೆ :** ಕುಂಟೆ ಎಳೆಯಲು ಸಹಾಯವಾಗುವಂತೆ ಕುಂಟೆಗೆ ಜೋಡಿಸಿರುವ ಉದ್ದನೆಯ ಬೊಂಬಿನ ಕಟ್ಟಿಗೆ.

**ಎಲೆ ರಾಹುಲ್ಲು :** ಬಂಡಿ ಗಾಲಿಯಲ್ಲಿರುವ ಕಟ್ಟಿಗೆಯ ಹಲ್ಲುಗಳು.

**ಒತ್ತುಗುಣಿ :** ಚಿಕ್ಕಕುಂಟೆಯನ್ನು, ಒತ್ತಿ ಹಿಡಿಯಲು ಉಪಯೋಗಿಸುವ ಕಟ್ಟಿಗೆ.

**ಕೊಳ್ಬಾರು :** ನೊಗಕ್ಕೆ ಸಿಕ್ಕಿಸುವ ಕೋಲಿಗೂ ಮತ್ತು ಎತ್ತಿನ ಕೊರಳಿಗೆ ಬಿಗಿದು ಕಟ್ಟುವ ತೊಗಲಿನ ಪಟ್ಟಿ. ಇದನ್ನು ಗಳೇವುಬಾರು, ಕೊಳಬಾರು, ಕಳೇಬಾರು, ಕಳೇವುದಬಾರು ಎಂದು ಸಹ ಕರೆಯುವರು.

**ಕೋತಿಮಣೆ :** ಏರ್ಗಲ್ ಮುಂದೆ ಮಾಡಿದ ಕಟ್ಟಿಗೆಯ ಮಣೆ.

**ಗಡ್ಡಿ :** ಬಂಡಿ ಚಕ್ರದ ಮಧ್ಯೆ ಇರುವ ದುಂಡಗಿನ ಕಟ್ಟಿಗೆಯ ಕಟ್ಟು.

**ಗುಣ್ಕು :** ಬಂಡಿಗೆ ಎತ್ತನ್ನು ಕಟ್ಟುವಾಗ ಎತ್ತಿನ ಕೊರಳ ಮೇಲಿಂದ ನೊಗ ಜಾರದಂತೆ ನೊಗದ ಹೊರಗಡೆ ಭಾಗಕ್ಕೆ ಸಿಕ್ಕಿಸುವ ಕಟ್ಟಿಗೆಯ ತುಂಡು.

**ಚಳ್ಳು :** ಕಣದಲ್ಲಿ ರಾಶಿಯನ್ನು ಬಳಿಯಲು ಮಾಡಿದ ಪೊರಕೆ. ಇದನ್ನು ಸಳ್ಳು, ಪಿಡಿಕಟಗಿ, ಸಲ್ದು ಎಂತಲೂ ಕರೆಯುವರು.

**ತಟ್ಟಿ ತಟ್ಟೆ :** ಎತ್ತುಗಳಿಗೆ ನುಚ್ಚು ತಿನ್ನಿಸಲು ಇಡುವ ಬಿದಿರಿನಿಂದ ಮಾಡಿದ ಬುಟ್ಟಿ.

**ತೊರಮಣೆ :** ಧಾನ್ಯದ ರಾಶಿಯನ್ನು ಎತ್ತರದಿಂದ ತೂರಲು ಮಾಡಿರುವ ಮೂರು ಕಾಲಿನ ಮಂಚ. ಇದನ್ನು ತೋರಮೆಟ್ಟು ಎಂದು ಸಹ ಕರೆಯುವರು.

**ತೊರಪುಟ್ಟಿ :** ಕಣದಲ್ಲಿ ರಾಶಿ ತೂರಲು ಬಳಸುವ ಪುಟ್ಟಿ

**ರೂಲ್ಗುಂಡು :** ಧಾನ್ಯದ ಕಣದಲ್ಲಿ ತೆನೆಯನ್ನು ಹರಡಿ ತುಳಿಸಿ ತೆನೆಯಿಂದ ಕಾಳನ್ನು ಬೇರ್ಪಡಿಸಲು ಮಾಡಿರುವ ಕಲ್ಲಿನ ಗುಂಡು.

**ಒಳಗಟ್ಟಿ :** ಮಳೆಯ ನೀರಿನಿಂದಾಗಿ ಭೂಮಿಯ ಮಣ್ಣು ಮತ್ತು ಸಾರ ಕೊಚ್ಚಿ ಹೋಗದಂತೆ ತಡೆಯಲು ಮಾಡಿದ ರಕ್ಷಣಿ ಒಡ್ಡು ಅಥವಾ ಕಟ್ಟೆ.

**ಅಳಲು :** ಅಂಬಲಿ ಮತ್ತು ಪುಂಡಿಪಲ್ಲೆ ಮಾಡಿಕೊಂಡು ಬೆಳೆ ಎಡೆಗೆ ಬಂದಾಗ ಹೊಲದಲ್ಲಿ ಸಿಂಪಡಿಸುವ ಆಚರಣೆ. ಇದರಿಂದ ಬೆಳೆಯ ಫಸಲು ಚೆನ್ನಾಗಿ ಬರುತ್ತದೆಂಬ ನಂಬಿಕೆ.

**ಕರಿ ಹರಿಯುವುದು :** ಧಾನ್ಯದ ರಾಶಿಯನ್ನು ಸಂಗ್ರಹಿಸಿದ ಅನಂತರ ಯುಗಾದಿಗೆ ರಕ್ಷಾ ಕವಚವನ್ನು ಕಟ್ಟುತ್ತಾರೆ. ಕಾರಹುಣ್ಣಿಮೆಯ ದಿವಸ ಊರಿನ ಗೌಡನಾದವನು ಈ ರಕ್ಷಾ ಕವಚವನ್ನು ಕಡಿದು ಹಾಕುತ್ತಾನೆ. ಇನ್ನು ಕೆಲವು ಕಡೆಗಳಲ್ಲಿ ಗೌಡನಲ್ಲದೆ ಎತ್ತುಗಳನ್ನು ಓಡಿಸಿ ಕಡಿಸುತ್ತಾರೆ. ಅದರಲ್ಲಿ ಬಿಳಿ ಎತ್ತು ಈ ದಾರವನ್ನು ಕಡಿದರೆ ಬಿಳಿ ಬಣ್ಣದ ಫಸಲುಗಳನ್ನು ಚೆನ್ನಾಗಿ ಬೆಳೆಯುತ್ತವೆ. ಹಾಗೆಯೇ ಕೆಂಪು ಎತ್ತು ಕಡಿದರೆ ಕೆಂಪು ಬಣ್ಣದ ಧಾನ್ಯ ಚೆನ್ನಾಗಿ ಬೆಳೆಯುತ್ತದೆ ಎಂದು ರೈತರ ನಂಬಿಕೆಗಳಿಗಿದೆ.

**ಕುಂಟೆ ಸಾಗಿಸುವುದು :** ಯುಗಾದಿ ಹಬ್ಬದ ದಿನ ಶುಭದಿನ ಎಂದು ಆ ದಿನ ಕೃಷಿ ಕೆಲಸವನ್ನು ಪ್ರಾರಂಭಿಸುವುದು ರೂಢಿ. ಅದನ್ನು ಕುಂಟೆ ಸಾಗಿಸುವುದು ಎಂದು ಕರೆಯುವರು.

**ದೇವಿಗೆ ಉಡಿ :** ಮಳೆ ಸಕಾಲಕ್ಕೆ ಬಾರದೆ ಇದ್ದಾಗ ಗ್ರಾಮೀಣರು ಅನೇಕ ರೀತಿಯಲ್ಲಿ ಪೂಜೆ ಮಾಡುವರು ಅದರಲ್ಲಿ ಇದೂ ಒಂದು. ಇದರಲ್ಲಿ ಊರಿನ ಗ್ರಾಮದೇವತೆಗೆ ಅಕ್ಕಿ, ಬೆಲ್ಲ, ಬಳೆ ಮುಂತಾದವುಗಳಿಂದ ಉಡಿ ತುಂಬುವರು. ಇದೊಂದು ಜನಪದ ಆಚರಣೆ.

**ಧರ್ಮದ ಪದ** : ಗ್ರಾಮೀಣರಲ್ಲಿ ತಮ್ಮದೆ ಆದ ರೀತಿಯಲ್ಲಿ ವಿಶೇಷ ಆಚರಣೆಯನ್ನು ರೂಢಿಸಿಕೊಂಡಿರುತ್ತಾರೆ. ಅದರಲ್ಲಿ ಇದು ಒಂದು. ಮೋಡ ಕಟ್ಟಿ ಮಳೆ ಬಾರದೆ ಹೋದಾಗ ಗ್ರಾಮೀಣ ಸ್ತ್ರೀಯರೆಲ್ಲರು ಸೇರಿ ಮಳೆರಾಯನನ್ನು ಸ್ತುತಿಸಿ ಹಾಡನ್ನು ಹಾಡುವರು ಅದೇ ಧರ್ಮದ ಪದ.

**ಆಕರ ಗ್ರಂಥಗಳು**


ಕನ್ನಡ ವಿಶ್ವಕೋಶ ಸಂ. 13

ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ - 1,

ಅಂತರ್ಜಾಲ ಮಾಹಿತಿ

ಕರ್ನಾಟಕ ಕೈಪಿಡಿ - 2011, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ

ಕನ್ನಡ ಶಾಸನ ಸಂಪುಟ ಭಾಗ-7, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ - ಡಾ. ರಂಗನಾಥ, ವಿದ್ಯಾನಿಧಿ ಪ್ರಕಾಶನ, ಗದಗ

ಕೃಷಿ ಪದಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವ್ಯವಸಾಯ ಕೈಪಿಡಿ - ಜಿ.ವಿ.ಬಿ. ನಾಯ್ಡು, ಬಿ. ರಮೇಶ್, ಬಿ. ಸುರೇಶ್, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

ರಾಯಚೂರು ಜಿಲ್ಲೆಯ ಅಂಕಿ - ಅಂಶಗಳ ನೋಟ 2011-12, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ರಾಯಚೂರು, ಕರ್ನಾಟಕ ಸರ್ಕಾರ


*ಎಸ್.ಬಿ.ವಿ.*

**ಲಕ್ಷ್ಮಣಫಲ** ಅನೋನೇಸೀ ಕುಟುಂಬಕ್ಕೆ ಸೇರಿದ ಫಲವಿದು. ಗಾತ್ರದಲ್ಲಿ ದೊಡ್ಡದಾದ ಇದರ ವೈಜ್ಞಾನಿಕ ಹೆಸರು ಅನೋನ ಮುರಿಕಟ. ಪ್ರಪಂಚದ ಇತರೆಡೆಗಳಲ್ಲಿ ಗ್ರಾವಿಯೋಲ ಮತ್ತು ಸೋರ್ಗಾಸ್ ಎಂದು ಕರೆಯುವರು. ಇದನ್ನು ಬೆಳೆಯಲು ಉಷ್ಣವಲಯ ಪ್ರಶಸ್ತವಾದುದು. ತೇವಾಂಶವಿದ್ದು ಚೆನ್ನಾಗಿ ಬಿಸಿಲು ಬೀಳುವ ಪ್ರದೇಶ ಯುಕ್ತ. ನೀರು ನಿಲ್ಲದೆ ಬಸಿದುಹೋಗುವಂತಿರಬೇಕು.

ಬೀಜದಿಂದ ಸಸ್ಯಾಭಿವೃದ್ಧಿ ಮಾಡುವುದುಂಟು. ಆರೋಗ್ಯಭರಿತವಾದ ಹಣ್ಣುಗಳನ್ನು ಆಯ್ಕೆಮಾಡಿಕೊಳ್ಳಬೇಕು. ಒಂದು ಹಣ್ಣಿನಲ್ಲಿ ಸುಮಾರು ನೂರು ಬೀಜಗಳಿರುತ್ತವೆ. ಮಣ್ಣು, ಮರಳು ಮತ್ತು ಸಾವಯವ ಗೊಬ್ಬರವನ್ನು ಸಮಪ್ರಮಾಣದಲ್ಲಿ ಮಿಶ್ರಮಾಡಿ ಏರು ಮಡಿಗಳನ್ನು ಸಿದ್ಧಪಡಿಸಿಕೊಂಡು ಬಿತ್ತನೆ ಮಾಡಬೇಕು. ಬಿತ್ತಿದ ಮೇಲೆ ತೆಳುವಾಗಿ ಮಣ್ಣನ್ನು ಎರಚಿ ಒಣ ಎಲೆಗಳನ್ನು ಹರಡಿ ದಿನಂಪ್ರತಿ ನೀರು ಚಿಮುಕಿಸಬೇಕು. ಎರಡು ಮೂರು ವಾರಗಳಲ್ಲಿ ಬೀಜ ಮೊಳೆತು ಸಸಿಗಳಾಗುತ್ತವೆ. ಮಣ್ಣು, ಮರಳು ಮತ್ತು ಸಾವಯವ ಗೊಬ್ಬರ ಮಿಶ್ರಮಾಡಿ ತುಂಬಿಸಿದ ಪ್ಲಾಸ್ಟಿಕ್ ಚೀಲಗಳಲ್ಲಿ ಸಸಿ ನೆಡಬೇಕು. ಸುಮಾರು ಒಂದು ಅಡಿ ಎತ್ತರವಾದ ಮೇಲೆ ನಾಟಿ ಮಾಡಬಹುದು.

ನಾಟಿ ಮಾಡುವುದು ಸಾಮಾನ್ಯವಾಗಿ ಮಳೆಗಾಲದ ಆರಂಭದಲ್ಲಿ. ಗಿಡದಿಂದ ಗಿಡಕ್ಕೆ 12 ಅಡಿ, ಸಾಲಿನಿಂದ ಸಾಲಿಗೆ 25 ಅಡಿ ಅಂತರ ಇರಬೇಕು. ಇದು ಬಹಳ ಬೇಗ ಬೆಳೆಯುವುದರಿಂದ ಐದು ವರ್ಷಕ್ಕೆ ಫಲ ನೀಡುತ್ತದೆ. ಇದರ ನಿರ್ವಹಣೆ ಬಹಳ ಸುಲಭ. ಬೇಸಗೆಯಲ್ಲಿ ತೇವಾಂಶವನ್ನು ಕಾಯ್ದುಕೊಳ್ಳಬೇಕು. ಮಳೆಗಾಲದಲ್ಲಿ ಅತಿಯಾಗಿ ನೀರು ನಿಲ್ಲದಂತೆ ಎಚ್ಚರವಹಿಸಬೇಕು. ಕಾಲಕ್ಕೆ ತಕ್ಕಂತೆ ಕಳಿತ ಗೊಬ್ಬರ, ಎರೆಗೊಬ್ಬರ, ಹಸುರೆಲೆ ಗೊಬ್ಬರ ಮೊದಲಾದ ಸಾವಯವ ಗೊಬ್ಬರವನ್ನು ನೀಡಿ ಹೆಚ್ಚು ಇಳುವರಿಯನ್ನು ಪಡೆಯಬಹುದು. ಆದರೂ ಒಂದು ಮರದಲ್ಲಿ ಹೆಚ್ಚೆಂದರೆ 24 ಹಣ್ಣುಗಳು ಬಿಡುತ್ತವೆ. ಏಪ್ರಿಲ್‌ನಿಂದ ಸೆಪ್ಟಂಬರ್‌ವರೆಗೆ ಹಣ್ಣುಗಳು ದೊರೆಯುತ್ತವೆ. ಕಾಯಿ ಹಸುರು ಬಣ್ಣದಿಂದ ಕೂಡಿದ್ದು, ಹಣ್ಣಾದಾಗ ಸ್ವಲ್ಪ ಬಣ್ಣಬದಲಾಗಿ ನಸು ಹಳದಿ ಆಗುತ್ತದೆ. ಹಣ್ಣನ್ನು ಹೆಚ್ಚು ದಿನ ಸಂಗ್ರಹಿಸಿಡಲು ಸಾಧ್ಯವಿಲ್ಲ. ಎರಡು-ಮೂರು ದಿವಸ ಇಡಬಹುದಷ್ಟೆ. ಮರದಿಂದ ಕಾಯಿಯನ್ನು ಕಿತ್ತು ಹಣ್ಣು ಮಾಡುವುದು ಒಳಿತು. ಹಣ್ಣಾದರೆ ಕೆಳಗೆ ಬಿದ್ದು ಒಡೆದುಹೋಗುತ್ತವೆ. ಇವು ಬಹಳ ಸೂಕ್ಷ್ಮವಾಗಿರುತ್ತವೆ.

ಲಕ್ಷ್ಮಣಫಲಕ್ಕೆ ರೋಗದ ಬಾಧೆ ತಟ್ಟುವುದು ಅಪರೂಪ. ಬಂದರೂ ಅಂಥ ಹೆಚ್ಚಿನ ಸಮಸ್ಯೆ ಉದ್ಭವವಾಗುವುದಿಲ್ಲ. ಎಳೆಯ ಕಾಯಿಗಳ ಮೇಲೆ ಪತಂಗವು ಮೊಟ್ಟೆಯಿಟ್ಟು ಆ ಕಾಯಿಯ ಬೆಳವಣಿಗೆ ಕುಂಠಿತವಾಗುತ್ತದೆ. ಅದೇ ರೀತಿ ಕಣಜದ ಲಾರ್ವಾ ಹಣ್ಣಿನ ಬೀಜದೊಳಗೆ ಸೇರಿಕೊಂಡು ಅದನ್ನು ಕೊರೆಯುವುದರಿಂದ ಆ ಹಣ್ಣು ಆರೋಗ್ಯಯುತವಾಗಿರುವುದಿಲ್ಲ.

ಲಕ್ಷ್ಮಣಫಲವನ್ನು ಹಣ್ಣಾಗಿಯೂ ತರಕಾರಿಯಾಗಿಯೂ ಉಪಯೋಗಿಸುತ್ತಾರೆ. ವಿವಿಧ ರೀತಿಯ ಪಾನೀಯಗಳನ್ನು ತಯಾರಿಸುತ್ತಾರೆ. ಹಣ್ಣಿನ ತಿರುಳನ್ನು ಮಾತ್ರ ಬಳಸಬೇಕು. ಲಕ್ಷ್ಮಣಫಲವು ಅನೇಕ ಖಾಯಿಲೆಗಳಿಗೆ ಔಷಧಿಯಾಗಿ ಬಳಕೆಯಾಗುತ್ತದೆ. ಹಿಗ್ಗಿಸುವ ಗುಣವಿದೆ. ಅಪಾಯಕಾರಿಯಾದ ವೈರಸ್‌ಗಳನ್ನು ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ. ಕ್ಯಾನ್ಸರ್ ಕೋಶಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಮಾನಸಿಕ ಖಿನ್ನತೆಯನ್ನು ನಿವಾರಿಸಿ ಪ್ರಶಾಂತತೆಯನ್ನು ಕಾಪಾಡುತ್ತದೆ. ಜ್ವರವನ್ನು ಕಡಿಮೆ ಮಾಡಲು, ಹೊಟ್ಟೆಯ ಹುಳಗಳ ನಿವಾರಣೆಗೆ, ಎದೆಯ ಹಾಲಿನ ಪ್ರಮಾಣವನ್ನು ಹೆಚ್ಚಿಸಲು, ಹೊಟ್ಟೆಯ ಸಮಸ್ಯೆಗಳ ನಿವಾರಣೆ- ಹೀಗೆ ಅನೇಕ ರೀತಿಯ ಖಾಯಿಲೆಗಳಿಗೆ ಹಣ್ಣಿನ ರಸ ಉಪಯುಕ್ತ. ಬೀಜದಲ್ಲಿ ವಿಷದ ಅಂಶ ಇರುವುದರಿಂದ ತಲೆಯ ಹೇನುಗಳ ನಾಶಕವಾಗಿ ಬಳಸಲಾಗುತ್ತದೆ.

*ಪಿ.ಕೆ.ಕೆ.*

**ಲವಂಗ** ಮಿರ್ಟೇಸಿ ಕುಟುಂಬಕ್ಕೆ ಸೇರಿದ ಲವಂಗವನ್ನು ಸಸ್ಯವಿಜ್ಞಾನದಲ್ಲಿ "ಜಿನಿಯಾ ಕ್ಯಾರಿಯೋ ಫಿಲ್ಲೇಟ" ಎಂದು ಕರೆಯುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ 'ಕ್ಲೊವ್ ಟ್ರೀ' ಎನ್ನುತ್ತಾರೆ. ಇದು ಹರಿದ್ವರ್ಣ ಮರವಾಗಿದ್ದು, ಭಾರತದ ದಕ್ಷಿಣದಲ್ಲಿ ಮಾತ್ರ ಬೆಳೆಯುತ್ತಾರೆ. ತಮಿಳುನಾಡು ಮತ್ತು ಕೇರಳದಲ್ಲಿ ಸು. 80 ಹೆಕ್ಟೇರ್‌ಗಳಷ್ಟು ಪ್ರದೇಶದಲ್ಲಿ ಬೆಳೆಸಿದ್ದಾರೆ. ಇದರ ಬೇಸಾಯಕ್ಕೆ ಹೊಂದುವ ಮಣ್ಣೆಂದರೆ ಮೇಲ್ಭಾಗದಲ್ಲಿ

ಕಪ್ಪು ಗೋಡು ಮಣ್ಣು, ಕೆಳಗೆ 'ಕಂಕರ್' ಇರುವ ಅಚ್ಚ ಹಳದಿ ಬಣ್ಣದ ಮಣ್ಣು. ಭಾರತದ ಸಮುದ್ರ ತೀರ ಪ್ರದೇಶಗಳಲ್ಲಿರುವ ಮರಳು ಮಣ್ಣಿನಲ್ಲಿ ಮತ್ತು ಕೇರಳದಲ್ಲಿ ಇರುವ ಜಂಬಿಟ್ಟಿಗೆ ಮಣ್ಣುಗಳಲ್ಲಿ



ಚೆನ್ನಾಗಿ ಬೆಳೆಯುತ್ತದೆ. ನೀರು ನಿಲ್ಲುವ ಸ್ಥಳಗಳು ಇದಕ್ಕೆ ಬಹಳ ಹಾನಿಕರ. ಇದು ಸಾಮಾನ್ಯವಾಗಿ ಸಮುದ್ರ ತೀರಗಳಲ್ಲಿ ಬೆಳೆಯಬಹುದಾದರೂ ಭಾರತ ದೇಶದಲ್ಲಿ ಸುಮಾರು ಸಮುದ್ರ ಮಟ್ಟಕ್ಕಿಂತ 600 ಮೀಟರ್ ಎತ್ತರದ ಪ್ರದೇಶಗಳಲ್ಲಿ, ಹೆಚ್ಚಾಗಿ ಮಳೆಯಾಗುವ ಪ್ರದೇಶಗಳಲ್ಲಿ ಬೆಳೆಯುತ್ತದೆ. ಆದರೂ ಲವಂಗವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುವುದು. ಲವಂಗ ಹೆಚ್ಚು ಔಷಧೀಯ ಗುಣಗಳನ್ನು ಹೊಂದಿದ್ದು ಹೆಚ್ಚು ಬಳಕೆಯಲ್ಲಿರುವ ಪದಾರ್ಥವಾಗಿದೆ. ಆದರೆ ಇದು ಬೆಳೆದು ಫಸಲು ಕೊಡಲು ಹಲವಾರು ವರ್ಷಗಳು ಬೇಕಾಗಿರುವುದರಿಂದ ಇದರ ಬೇಸಾಯಕ್ಕೆ ಅಷ್ಟು ಪ್ರಾಮುಖ್ಯ ಬಂದಿಲ್ಲ.

**ಬಿತ್ತನೆ :** ಬೀಜಗಳಿಂದ ಇದರ ಸಸ್ಯಾಭಿವೃದ್ಧಿ ಆಗುತ್ತದೆ. ಬೀಜಗಳನ್ನು ಮೊದಲು ಒಟ್ಟು ಪಾತಿಗಳಲ್ಲಿ ನೆಟ್ಟು 22 ಸೆಂ.ಮೀ. ಬೆಳೆದಾಗ ಅಂದರೆ ಒಂದು ವರ್ಷದ ಅವಧಿಯ ಅನಂತರ ಪಾತಿಯಿಂದ ತೆಗೆದು ಭೂಮಿಗೆ ಹಾಕಬೇಕು. ಒಂದು ಹೆಕ್ಟೇರಿಗೆ ಸು. 250 ಸಸಿಗಳನ್ನು ನೆಡಬಹುದು. ಇದಕ್ಕೆ ಬೇಕಾಗುವ ಗೊಬ್ಬರ ಕೊಳೆತ ಎಲೆಗೊಬ್ಬರ. ಮರ 6-12 ಮೀಟರ್‌ಗಳಷ್ಟು ಎತ್ತರಕ್ಕೆ ನೇರವಾಗಿ ಬೆಳೆಯುತ್ತದೆ. ಇದು ಕೆಳಭಾಗದಲ್ಲಿ ಹಲವಾರು ಕೊಂಬೆಗಳನ್ನು ಹೊಂದಿದ್ದು, 3-4 ಅಂಗುಲ ಮಾತ್ರ ಎತ್ತರಕ್ಕೆ ಬೆಳೆಯುವ ಕೊಂಬೆಗಳನ್ನು ಹೊಂದಿರುತ್ತದೆ. ತೊಗಟೆಯು ನಯ, ತೆಳು ಮತ್ತು ಬೂದು ಬಣ್ಣವನ್ನು ಹೊಂದಿರುತ್ತದೆ. ಎಲೆಗಳು ಬಲಿತಾಗ ಅಚ್ಚ ಹಸುರು ಬಣ್ಣವನ್ನು ಹೊಂದಿದ್ದು ಹೊಳಪಿನಿಂದ ಕೂಡಿರುತ್ತವೆ. ಇದರ ಎಲೆಗಳಲ್ಲೂ ಎಣ್ಣೆಯ ಗ್ರಂಥಿಗಳಿದ್ದು ಎಲೆ ಸುವಾಸನೆಯಿಂದ ಕೂಡಿರುತ್ತದೆ. ತೇವಾಂಶ ಮತ್ತು ಉಷ್ಣತೆ ಅಧಿಕವಾಗಿರುವ ದಿನಗಳಲ್ಲಿ ಈ ಮರದ ವಾಸನೆ ಬಹಳ ದೂರದವರೆಗೂ ಹಬ್ಬುತ್ತದೆ. ಮರಗಳಲ್ಲಿ ಮೊಗ್ಗು ಬರುವುದು ನಾಲ್ಕು ಅಥವಾ ಐದನೆಯ ವರ್ಷದಲ್ಲಿ. ಭೂಮಿಯು ಫಲವತ್ತಾಗಿಲ್ಲದಿದ್ದರೆ, ಮೊಗ್ಗು ಬರಲು 7-8 ವರ್ಷಗಳಾದರೂ ಆಗಬಹುದು. ಪ್ರತಿ ಮರದಿಂದ 4-5 ಮಂಕರಿಗಳಷ್ಟು ಮೊಗ್ಗು ಸಿಗುತ್ತದೆ. ನದಿಯ ಮಡು ಮಣ್ಣನ್ನು ಹಾಕಿದರೆ ಫಸಲು ಮತ್ತಷ್ಟು ಹೆಚ್ಚುತ್ತದೆ.

ಲವಂಗದ ಮೊಗ್ಗುಗಳನ್ನು ದೋಟಿಗಳ ಸಹಾಯದಿಂದ ಕೀಳುತ್ತಾರೆ. ಮೊಗ್ಗುಗಳು ಮೊದಲು ಹಸುರಾಗಿದ್ದು ಅನಂತರ ಸ್ವಲ್ಪ ಕಂದು ಮಿಶ್ರಿತ ಹಳದಿ ಬಣ್ಣಕ್ಕೆ ತಿರುಗಿ ಕೊನೆಗೆ ಮಂಕುರಕ್ತ ವರ್ಣಕ್ಕೆ ತಿರುಗುತ್ತವೆ. ಆಗ ಇವುಗಳನ್ನು ಕೊಯ್ಯಬೇಕು. ಅನಂತರ ಚಾಪೆಗಳ ಮೇಲೆ ನಾಲ್ಕೈದು ದಿನಗಳು ಒಣಗಿಸಬೇಕು ಅಥವಾ ಸತುವಿನ ತಗಡಿನ ಮೇಲೆ ಹಾಕಿ ಒಲೆಯ ಮೇಲಿಟ್ಟು ಅನಂತರ ಮೂರರಿಂದ ನಾಲ್ಕು ಗಂಟೆಗಳ ಕಾಲ ಒಣಗಿಸಬೇಕು.

ಭಾರತದಲ್ಲಿ ಲವಂಗವನ್ನು ಮುಖ್ಯ ಸಂಬಾರ ಪದಾರ್ಥವಾಗಿಯೂ ತಾಂಬೂಲದೊಂದಿಗೂ ಮತ್ತು ಔಷಧಿಗಳಲ್ಲೂ ಬಳಸುತ್ತಾರೆ. ಲವಂಗವನ್ನು ಪುಡಿ ಮಾಡಿ ಅನಂತರ ಆವಿಯ ಸಹಾಯದಿಂದ ಬಟ್ಟಿ ಇಳಿಸಿ ಲವಂಗದೆಣ್ಣೆಯನ್ನು ಪಡೆಯುತ್ತಾರೆ. ಈ ಎಣ್ಣೆಯನ್ನು ಪರಿಮಳ ದ್ರವ್ಯಗಳಲ್ಲೂ, ಖಾದ್ಯ ಪದಾರ್ಥಗಳಲ್ಲೂ ಸುವಾಸನೆಗಾಗಿ ಉಪಯೋಗಿಸುತ್ತಾರೆ. ಲವಂಗದ ಎಲೆಗಳಿಂದ ಹಾಗೂ ಮರದ ಕೊಂಬೆಗಳಿಂದಲೂ ಎಣ್ಣೆಯನ್ನು ತಯಾರಿಸುತ್ತಾರೆ.

*ಎನ್. ಆರ್.*

**ಲಾಳ (ನಾಲು)** ಎತ್ತು, ಕುದುರೆಗಳಿಗೆ ತಗಲುವ ಗೊರಸು ರೋಗ, ಗುಂಡಿಸೆಲೆ ರೋಗ ನಿವಾರಣೆಗೆ ಹಾಗೂ ಚುರುಕಾಗಿ ಕೆಲಸ ಮಾಡಲಿ ಎಂಬ ಉದ್ದೇಶದಿಂದ ಎತ್ತು ಕುದುರೆಗಳ ಕಾಲಿಗೆ ಹೊಡೆಯುವ ಲೋಹದ



ಪಟ್ಟಿ. ವರ್ಷಕ್ಕೆ ಒಂದೆರಡು ಬಾರಿಯಾದರೂ ಲಾಳ ಕಟ್ಟಿಸುವರು. ಸಾಮಾನ್ಯವಾಗಿ ಬೇಸಗೆಯ ದಿನಗಳಲ್ಲಿ ಗೊರಸು ಒರಟಾಗಿರುವುದರಿಂದ ಈ ಕಾಲದಲ್ಲಿ ಲಾಳ ಕಟ್ಟಿಸುವುದು ರೂಢಿ. ಎತ್ತುಗಳ ಕಾಲಿನ ಮೃದು ಭಾಗಕ್ಕೆ ಸೋಕದ ಹಾಗೆ ಮೊಳೆಯನ್ನು ಹೊಡೆಯುವ ಪರಿಣತರು ಇದ್ದಾರೆ. ಐದು ಅಳತೆಯ ಲಾಳಗಳು ಇರುತ್ತವೆ. ಕುದುರೆ, ಎತ್ತಿನ ಗೊರಸಿಗೆ ಅನುಗುಣವಾಗಿ ಲಾಳವನ್ನು ಅಳವಡಿಸುತ್ತಾರೆ. ಒಂದು ಗೊರಸಿಗೆ ನಾಲ್ಕರಿಂದ ಐದು ಮೊಳೆಗಳು ಬೇಕು. ಲಾಳ ಕಟ್ಟುವುದರಿಂದ ಅನೇಕ ಉಪಯೋಗಗಳಿವೆ. ಲಾಳಕಟ್ಟುವ ಪ್ರಾಣಿಗಳ ಕಾಲುಗಳಿಗೆ ಬರುವ ರೋಗವನ್ನು ತಡೆಗಟ್ಟಬಹುದು. ಪಾದರಕ್ಷೆಯಂತೆ ಕೆಲಸ ಮಾಡುವುದರಿಂದ ನಿರಾಯಾಸವಾಗಿ ಕೆಲಸ ಮಾಡುತ್ತವೆ.

ಗದ್ದೆಗಳಲ್ಲಿ ಕೆಲಸ ಮಾಡುವ ಎತ್ತುಗಳ ಲಾಳ ಬೇಗ ಸವೆಯುತ್ತದೆ. ಬೆಟ್ಟಗುಡ್ಡಗಳಿರುವ ಪ್ರದೇಶದಲ್ಲಿ ಕೆಲಸ ಮಾಡುವಂಥವಕ್ಕೆ ಇನ್ನೂ ಬೇಗ ಸವೆಯುತ್ತದೆ. ಪ್ರತಿದಿನ ಟಾರ್ ರಸ್ತೆಯಲ್ಲಿ ಓಡಾಡುವ ಎತ್ತುಗಳಿಗೆ ಬೇಸಗೆಯಲ್ಲಿ ಟಾರ್ ಕರಗಿ ಕಾಲುಗಳಿಗೆ ಅಂಟಿಕೊಳ್ಳುವುದರಿಂದ ಇವಕ್ಕೆ ಬಳಸುವ ಲಾಳ ಮಾಮೂಲಿ ಲಾಳಕ್ಕಿಂತ ದಪ್ಪವಾಗಿಯೂ ಒರಟಾಗಿಯೂ ಇರುತ್ತದೆ.

*ಎ.ಎಂ.ಡಿ.*

**ಲೋಳೆಸರ** ಲಿಲಿಯೇಸೀ ಕುಟುಂಬದ ಅಲೋಬಾರ್ ಬಡೆನ್ಸ್ ಪ್ರಭೇದಕ್ಕೆ ಸೇರಿದ ಸಸ್ಯ. ಇದಕ್ಕೆ ಇಂಗ್ಲಿಷಿನಲ್ಲಿ ಅಲೋವೇರ ಎಂದೂ ಕನ್ನಡದಲ್ಲಿ ಲೋಳೆಸರ ಎಂದೂ ಸಂಸ್ಕೃತದಲ್ಲಿ ಕುಮಾರಿ, ಘೃತಕುಮಾರಿ ಎಂದೂ ತಮಿಳಿನಲ್ಲಿ ಕುಮಾರಿ ಎಂದೂ ಹಿಂದಿಯಲ್ಲಿ



ಚಿಕನ್‌ವರ್ ಎಂದೂ ತೆಲುಗಿನಲ್ಲಿ ಕಲ್ಬಂದ ಎಂದೂ ಹೆಸರು. ಲೋಳಿಸರ ಚೆನಿನೀಸ್ ಮತ್ತು ಲಿಟ್ಟೊರ್ಯಾಲಿಸ್ ಎಂಬ ಎರಡು ಬಗೆಯಿದ್ದು ಮೊದಲನೆಯದರಲ್ಲಿ ಮುಳ್ಳುಗಳು ಮೊಂಡಾಗಿರುತ್ತವೆ. ಎರಡನೆಯದರಲ್ಲಿ ಎಲೆಗಳು ಸಣ್ಣದಾಗಿರುತ್ತವೆ. ಅಂಚು ಬಾಚಿ ಹಲ್ಲುಗಳಂತಿರುತ್ತದೆ. ಎಲೆ ಸು. 50-60 ಸೆಂ.ಮೀ. ಉದ್ದ ಬೆಳೆಯಬಲ್ಲದು. ಹೂ ಅರಿಸಿನ ಬಣ್ಣದ್ದು.

ಇದರ ಮೂಲಸ್ಥಳ ಆಫ್ರಿಕ, ಕೆನರಿ ದ್ವೀಪಗಳು ಮತ್ತು ಸ್ಪೇನ್. ಭಾರತದಾದ್ಯಂತ ಎಲ್ಲೆಡೆ ಬೆಳೆಯುತ್ತದೆ. ಪ್ರಪಂಚದ ಇತರ ದೇಶಗಳಲ್ಲೂ ಬಹಳ ಹಿಂದಿನಿಂದಲೇ ಇದರ ಪರಿಚಯವಿತ್ತೆಂದು ತಿಳಿದುಬರುತ್ತದೆ. ಪ್ರಾಚೀನ ಈಜಿಪ್ಟಿಯನ್ನರು ಲೋಳೆಸರ ಬಳಸುತ್ತಿದ್ದರೆಂದು ತಿಳಿದುಬರುತ್ತದೆ.

ಲೋಳೆಸರದ ಬಳಕೆ ಇತ್ತೀಚೆಗೆ ಹೆಚ್ಚಾಗುತ್ತಿದೆ. ಅನೇಕ ರೀತಿಯ ಔಷಧಿಗಳ ತಯಾರಿಕೆ, ಸಾಬೂನು, ಸೌಂದರ್ಯವರ್ಧಕಗಳಿಗಾಗಿ ಇದು ಬಹು ಬೇಡಿಕೆಯ ಸಸ್ಯವಾಗಿದೆ. ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಇದನ್ನು ಅನೇಕ ರೈತರು ಕೃಷಿ ಬೆಳೆಯಾಗಿ ಬೆಳೆಯಲು ಆರಂಭಿಸಿದ್ದಾರೆ. ಎಲ್ಲ ಸಸ್ಯಗಳಿಗಿಂತ ಅತ್ಯಂತ ಸುಲಭವಾಗಿ ಬೆಳೆಯಬಹುದು. ಎಲ್ಲ ಹವಾಗುಣಗಳಲ್ಲೂ ಬೆಳೆಯಬಲ್ಲದು.

**ಮಣ್ಣು :** ಯಾವುದೇ ಬಗೆಯ ಮಣ್ಣಿನಲ್ಲಾದರೂ ಲೋಳೆಸರವನ್ನು ಬೆಳೆಸಬಹುದು. ನುರುಜು ಕಲ್ಲು ಭೂಮಿಯಲ್ಲೂ ಪಾಳುಬಿದ್ದ ಜಾಗಗಳಲ್ಲೂ ಸಣ್ಣಕಲ್ಲುಗಳಿಂದ ಕೂಡಿದ ಮರಳು ಮಿಶ್ರಿತ ಒರಟು ಮಣ್ಣಿನಲ್ಲೂ ಬಯಲು ಪ್ರದೇಶದ ಗೋಡುಮಣ್ಣಿನಲ್ಲೂ ಚೆನ್ನಾಗಿ ಬೆಳೆಯುತ್ತದೆ. ಮಣ್ಣಿನಲ್ಲಿ ಸಾವಯವ ವಸ್ತುಗಳಿದ್ದಲ್ಲಿ ಇನ್ನೂ ಚೆನ್ನಾಗಿ ಬೆಳೆಯುವುದು.

**ಹವಾಗುಣ :** ವಾತಾವರಣದಲ್ಲಿ ಉಂಟಾಗುವ ವೈಪರೀತ್ಯವನ್ನು ಸಹಿಸಿಕೊಳ್ಳುವ ಗುಣ ಇದಕ್ಕುಂಟು. ಹೆಚ್ಚು ತೇವಾಂಶ ಮತ್ತು ಉಷ್ಣಾಂಶ ಈ ಸಸ್ಯಕ್ಕೆ ಬಾಧಕವಲ್ಲ. 35 ಸೆಂ.ಮೀ.ನಷ್ಟು ಕಡಿಮೆ ಮಳೆ ಬೀಳುವ ಪ್ರದೇಶದಿಂದ ಹಿಡಿದು 200 ಸೆಂ.ಮೀ.ನಷ್ಟು ಅಧಿಕ ಮಳೆ ಬೀಳುವ ಪ್ರದೇಶಗಳಲ್ಲೂ ಬೆಳೆಯುತ್ತದೆ. ತೀರ ಕಡಿಮೆ ಮಳೆಯಾದಾಗ ಉತ್ತಮ ಇಳುವರಿಗಾಗಿ ಹದವಾಗಿ ನೀರುಣಿಸಬೇಕು.

**ಕೃಷಿ ವಿಧಾನ :** ಬೇರು, ಕಂದುಗಳಿಂದ, ಗುಪ್ತ ಕಾಂಡದ ಚೂರುಗಳಿಂದ ಸಸ್ಯಾಭಿವೃದ್ಧಿ ಮಾಡಬಹುದು. ಕುಂಡಗಳಲ್ಲಿ ಬೆಳೆಯುವಾಗ ಬುಡದಲ್ಲಿ ಮೊಳಕೆಯೊಡೆಯುವ ಚಿಕ್ಕ ಸಸಿಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಬೆಳೆಸಬಹುದು.

ಭೂಮಿಯನ್ನು ಎರಡು ಮೂರು ಸಲ ಉತ್ತು, ಹೆಂಟೆ ಒಡೆದು ಕೊಟ್ಟಿಗೆ ಗೊಬ್ಬರ ಬೆರೆಸಿ ಹದಗೊಳಿಸಬೇಕು. ಹೀಗೆ ಸಿದ್ಧಗೊಂಡ ಭೂಮಿಯಲ್ಲಿ ನಿರ್ದಿಷ್ಟ ಅಂತರದಲ್ಲಿ ನಾಟಿ ಮಾಡಬೇಕು. ಈ ಬೆಳೆಗೆ ಸಾವಯವ ಗೊಬ್ಬರವೇ ಸಾಕು. ಸಗಣಿ, ಹಸುರೆಲೆಗೊಬ್ಬರ, ಕಾಂಪೋಸ್ಟ್‌ಗೊಬ್ಬರ, ಎರೆಗೊಬ್ಬರ, ಸುಡುಮಣ್ಣು ಮುಂತಾದವನ್ನು ಭೂಮಿಗೆ ಅನುಗುಣವಾಗಿ ಸೇರಿಸಬೇಕು. ವಾಣಿಜ್ಯ ದೃಷ್ಟಿಯಿಂದ ಬೆಳೆಸುವಾಗ ಒಂದು ಹೆಕ್ಟೇರಿಗೆ 150 ಕೆ.ಜಿ. ಸಾರಜನಕ ಮತ್ತು ಅಷ್ಟೇ ಪ್ರಮಾಣದ ಪೊಟ್ಯಾಷ್ ಹಾಕಬೇಕು. ಜೈವಿಕ ಗೊಬ್ಬರದ ಬಳಕೆಯಿಂದಲೂ ಉತ್ತಮ ಇಳುವರಿ ಪಡೆಯಬಹುದು. ಮೈಕೊರೈಝಾ ಗಿಡಗಳಿಗೆ ಸಾರಜನಕ ಒದಗಿಸುವಲ್ಲಿ ಸಹಕರಿಸುತ್ತದೆ. ಸಸಿಗಳನ್ನು ನಾಟಿ ಮಾಡಿದ ಕೂಡಲೆ ಮಳೆಯಿಲ್ಲದಿದ್ದರೆ ನೀರೊದಗಿಸಬೇಕು.

**ಕೀಟಬಾಧೆ ಮತ್ತು ರೋಗಗಳು :** ನೈಸರ್ಗಿಕವಾಗಿ ಬೆಳೆದ ಲೋಳೆಸರಕ್ಕೆ ಯಾವುದೇ ಕೀಟಬಾಧೆ ಇರುವುದಿಲ್ಲ. ವಾಣಿಜ್ಯ ಬೆಳೆಯಾಗಿ ಕೃಷಿ ಮಾಡಿದಾಗ ಅಲ್ಪಸ್ವಲ್ಪ ಕೀಟಬಾಧೆ ಉಂಟಾಗುತ್ತದೆ. ಸಸ್ಯಗಳಿರುವ ಜಾಗದಲ್ಲಿ ನೀರು ನಿಲ್ಲುವಂತಿದ್ದರೆ ಅಥವಾ ಸದಾ ಮಳೆ ಬೀಳುವಂತಿದ್ದರೆ ಶಿಲೀಂಧ್ರಬಾಧೆ ತಗಲುತ್ತದೆ. ಸಸಿಗಳ ಮಧ್ಯೆ ಬೆಳೆಯುವ ಕಳೆಗಳನ್ನು ವರ್ಷಕ್ಕೆ ಎರಡು ಮೂರು ಸಲವಾದರೂ ತೆಗೆಯಬೇಕು. ನಾಟಿ ಮಾಡಿದ ಎಂಟು ತಿಂಗಳ ಬಳಿಕ ಕಟಾವಿಕೆಗೆ ಬರುತ್ತದೆ. ಒಂದು ಎಕರೆಗೆ ಸಾಮಾನ್ಯವಾಗಿ 10 ಸಾವಿರ ಕೆಜಿ ಲೋಳೆಸರ ಸಿಗುತ್ತದೆ.

**ಉಪಯೋಗ :** ಲೋಳೆಸರವನ್ನು ತೆಂಗಿನ ಸಸಿಗಳ ಜೊತೆ ಬೆಳೆಸಿದರೆ ಗೆದ್ದಲು ಮತ್ತು ಬೇರು ಹುಳುಗಳಿಂದ ತೆಂಗನ್ನು ರಕ್ಷಿಸಬಹುದು. ಲೋಳೆಸರಕ್ಕೆ ಶಿಲೀಂಧ್ರ ಮತ್ತು ಬ್ಯಾಕ್ಟೀರಿಯಗಳನ್ನು ನಿಯಂತ್ರಿಸುವ ಶಕ್ತಿ ಇರುವುದರಿಂದ ಹರಳು ಹಿಂಡಿಯೊಂದಿಗೆ ಸೇರಿಸಿ ಬಳಸಿದರೆ ಕೃಷಿ ಬೆಳೆಗಳಿಗೆ ಹೆಚ್ಚು ಪ್ರಯೋಜನ ಉಂಟು. ಲೋಳೆಸರದೊಂದಿಗೆ ಲಕ್ಕಿ ಮತ್ತು ನಿರ್ಗಂಧಿ ಗಿಡಗಳನ್ನು ಮಿಶ್ರಮಾಡಿ ತಯಾರಿಸಿದ ಮದ್ದನ್ನು ಬೆಳೆಗಳಿಗೆ ಕೀಟನಾಶಕವಾಗಿ ಬಳಸಬಹುದು. ಹತ್ತಿ ಬೆಳೆಗೆ ಬರುವ ಕೀಟಬಾಧೆ ಹೋಗಲಾಡಿಸಲು ಬಳಸಬಹುದು.

**ಔಷಧೀಯ ಗುಣಗಳು :** ಪ್ರತಿನಿತ್ಯ, ಲೋಳೆಸರದ ರಸವನ್ನು ನಿಯಮಿತ ಪ್ರಮಾಣದಲ್ಲಿ ಸೇವಿಸಿದರೆ ಜೀವಕೋಶಗಳಿಗೆ ಅಗತ್ಯವಾದ ಅಮೈನೊ ಆಮ್ಲಗಳು ದೊರೆತು ಜೀವಕೋಶಗಳ ಮತ್ತು ಅಂಗಾಂಶಗಳ ಸ್ಥಿತಿ ಚೆನ್ನಾಗಿರುತ್ತದೆ. ಜೀರ್ಣಾಂಗವ್ಯೂಹದ ತ್ಯಾಜ್ಯವಸ್ತುವನ್ನು ಹೊರಹಾಕುವ ಗುಣವೂ ಇದಕ್ಕಿದೆ. ದೇಹಾರೋಗ್ಯ ಉತ್ತಮಗೊಳ್ಳುತ್ತದೆ. ಲೋಳೆಸರದಲ್ಲಿ ದೇಹದ ಊತ ಮತ್ತು ಬಾವುಗಳನ್ನು ನಿವಾರಿಸುವ ಗುಣಗಳಿವೆ. ಸ್ನಾಯುಗಳು ಮತ್ತು ಮೂಳೆ ಸಂದುಗಳ ಚಲನವಲನಗಳನ್ನು ಸರಾಗಗೊಳಿಸುತ್ತದೆ. ಅನೇಕ ಬಗೆಯ ಜೀವಸತ್ತ್ವಗಳೂ ಖನಿಜಗಳೂ ಫೋಲಿಕ್ ಆಮ್ಲ, ನಿಯಾಸಿನ್‌ಗಳೂ ಲೋಳೆಸರದಲ್ಲಿವೆ. ಇದು ಚರ್ಮದ ಕಾಂತಿಯನ್ನು ವೃದ್ಧಿಸುತ್ತದೆ. ದೇಹಕ್ಕೆ ಅಪಾಯ ಉಂಟುಮಾಡುವ ಸೂಕ್ಷ್ಮಜೀವಿಗಳನ್ನು ನಿಯಂತ್ರಿಸುತ್ತದೆ. ಲೋಳೆರಸ ಫೈಬ್ರೊಬ್ಲಾಸ್ಟ್‌ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ದೇಹಕ್ಕಾಗುವ ಗಾಯ ಬೇಗ ಗುಣವಾಗುವಂತೆ ಮಾಡುತ್ತದೆ. ನಾಲಗೆ ಹಾಗೂ ಬಾಯಿ ಹುಣ್ಣುಗಳಿಗೂ ಇದು ದಿವ್ಯೌಷಧ.

*ಎ.ಎಂ.ಡಿ.*

**ವನಿಲ** ಏಕದಳ ಸಸ್ಯಜಾತಿಗೆ ಸೇರಿದ ವಾಣಿಜ್ಯಬೆಳೆ. ಇದೊಂದು ಲಾಭದಾಯಕ ಸಾಂಬಾರ ಸಸ್ಯ. ಆರ್ಕಿಡೇಸೀ ಕುಟುಂಬಕ್ಕೆ ಸೇರಿದೆ. ನೂರಕ್ಕೂ ಹೆಚ್ಚು ಪ್ರಭೇದಗಳಿವೆ. ಕೆಲವು ಬಳ್ಳಿಯಂತೆ ಮಣ್ಣಿನಲ್ಲಿ ಬೆಳೆದರೆ ಮತ್ತೆ ಕೆಲವು



ಕೊಳೆತ ವಸ್ತುಗಳ ಮೇಲೆ ಬೆಳೆಯುತ್ತವೆ. ಇದಕ್ಕೆ ಹೆಚ್ಚು ತೇವಾಂಶದಿಂದ ಕೂಡಿದ ಉಷ್ಣಪ್ರದೇಶ ಪ್ರಶಸ್ತವಾದುದು. ಸಮತಟ್ಟಾದ ನೆಲಕ್ಕಿಂತ ಇಳಿಜಾರು ಭೂವಲಯ ಇದಕ್ಕೆ ಉತ್ತಮ. ಜಂಬು ಇಟ್ಟಿಗೆ ಮಣ್ಣು ಹಾಗೂ ಕೊಳೆತ ಸಾವಯವ ಗೊಬ್ಬರವಿದ್ದಲ್ಲಿ ಹುಲುಸಾಗಿ ಬೆಳೆಯುತ್ತದೆ. ಇದರ ಬಳ್ಳಿಗಳು ತೆಳುವಾಗಿದ್ದು 30-40 ಅಡಿ ಎತ್ತರ ಇರುತ್ತವೆ. ಎಲೆ ಮತ್ತು ಕಾಂಡಗಳ ಬಣ್ಣ ಹಸುರು. ಬೀಜ ಚಿಕ್ಕದು.

ಮೊದಲು ಆಫ್ರಿಕ, ಮೆಕ್ಸಿಕೊ ಹಾಗೂ ಶ್ರೀಲಂಕಗಳಲ್ಲಿ ಬೆಳೆಯುತ್ತಿದ್ದು ಕ್ರಮೇಣ ಇದರ ಕೃಷಿ ಭಾರತದಲ್ಲೂ ಆರಂಭವಾಯಿತು. ಬಳ್ಳಿಗಳನ್ನು ಸುಮಾರು 1 ಅಡಿ ಉದ್ದ ಕತ್ತರಿಸಿ ಒಂದೆರಡು ಕಣ್ಣುಗಳಿರುವ ತುಂಡುಗಳನ್ನು ಒಂದು ವಾರ ನೆರಳಿನಲ್ಲಿ ಸಂರಕ್ಷಿಸಿ ಅನಂತರ ಮರಗಳ ಬುಡದಲ್ಲಿ ನೆಡುವರು.

ಸುಮಾರು ಎರಡೂವರೆ ಅಡಿ ಆಳವಿರದಂತೆ ಗುಂಡಿಗಳನ್ನು ತೋಡಿ ಫಲವತ್ತಾದ ಮಣ್ಣು, ಮರಳು, ಕೊಟ್ಟಿಗೆ ಗೊಬ್ಬರಗಳನ್ನು ಸಮಪ್ರಮಾಣದಲ್ಲಿ ತುಂಬಿಸಿ ಅನಂತರ ಬಳ್ಳಿಯ ತುಂಡೊಂದನ್ನು ನೆಟ್ಟು ಸುತ್ತ ಮಣ್ಣು ಹಾಕಿ ಮೇಲ್ತುದಿಯನ್ನು ಮೇಲೆ ಬರುವಂತೆ ಬಿಡಬೇಕು. ನಾಟಿ ಮಾಡಿದ ಮೇಲೆ ದಿನಕ್ಕೊಮ್ಮೆ ನೀರು ಹಾಯಿಸಿದರೆ ಸುಮಾರು ನಾಲ್ಕೈದು ವಾರಗಳಲ್ಲಿ ಚಿಗುರೊಡೆಯುತ್ತವೆ. ಬಳ್ಳಿಗೆ ಆಶ್ರಯ ಮರಗಳ ಅಗತ್ಯವಿದೆ. ಒಂದು ವರ್ಷ ಬೆಳೆದ ಬಳ್ಳಿಯನ್ನು ಐದಾರು ಗಿಣ್ಣುಗಳು ಬಿಟ್ಟು ಕತ್ತರಿಸಿ ನಿರಂತರ ಸಸ್ಯಾಭಿವೃದ್ಧಿಗೆ ಬಳಸಿಕೊಳ್ಳಬಹುದು. ಇದನ್ನು ತೋಟದಂತೆ ಪ್ರತ್ಯೇಕವಾಗಿ ಬೆಳೆಯುವವರು ಚೀಲಗಳಲ್ಲಿ ಬೆಳೆಸಿ, ಅನಂತರ ನಿರ್ದಿಷ್ಟಕಾಲದಲ್ಲಿ ನೆಟ್ಟು ಬೆಳೆಸುತ್ತಾರೆ. ಮೂರು ವರ್ಷಗಳ ಬಳಿಕ ವನಿಲ ಹೂ ಬಿಡುತ್ತದೆ. ಹೆಚ್ಚು ಇಳುವರಿ ಪಡೆಯಲು ತುದಿಗಳನ್ನು ಆಗಾಗ ಚಿವುಟಬೇಕು. ಪರಾಗಸ್ಪರ್ಶಕ್ಕಾಗಿ ಹೂವಿನ ಶಲಾಕಾಗ್ರ ಹಾಗೂ ಪರಾಗಕೋಶದ ನಡುವಿನ ರೊಸ್ಟೆಲಮ್ ಎನ್ನುವ ಪೊರೆ ಸೀಳಿ ಪರಾಗಕೋಶ ಶಲಾಕಾಗ್ರಕ್ಕೆ ಬೆಳಗಿನ ತಂಪು ಸಿಗುವಂತೆ ಮಾಡಲಾಗುವುದು. ಇದನ್ನು ಕೆಲವು ಹೂಗಳಿಗೆ ಮಾಡಿದರೆ ಸಾಕು. ಅದೇ ಎಲ್ಲ ಕಡೆ ಹರಡುತ್ತದೆ.

ಸಸಿ ಬೆಳೆಯುತ್ತಿದ್ದಂತೆ ಬಳ್ಳಿ ಸುಗಂಧ ಬೀರುತ್ತದೆ. ಬೀಜದ ಸುತ್ತ ಮೆತ್ತಗಿನ ತಿರುಳಿರುತ್ತದೆ. ಇದನ್ನು ವನಿಲಿನ್ ಎಂದು ಕರೆಯುವರು. ಕಾಯಿ ಬಲಿತಂತೆ ತಿರುಳು ಚಾಕೊಲೆಟ್ ಬಣ್ಣಕ್ಕೆ ತಿರುಗುತ್ತದೆ. ಬೀಜಗಳ ಮೇಲೆ ವನಿಲಿನ್ ಹರಳುಗಳಂತೆ ಕಾಣಿಸಿಕೊಂಡರೆ ಅದಕ್ಕೆ ಬೆಲೆ ಹೆಚ್ಚು. ಈ ಸಸ್ಯದಲ್ಲಿ ವನಿಲಿನ್ ಜೊತೆಗೆ ಕ್ಯಾಲ್ಸಿಯಮ್, ಜೀವಸತ್ವ ಎ,ಸಿ,ಡಿಗಳು, ಪಿಷ್ಟ, ಸಾರಜನಕ, ಕೊಲೆಸ್ಟಿರಾಲ್‌ಗಳು ಇವೆ.

**ಕೊಯ್ಲು ಮತ್ತು ಸಂಸ್ಕರಣೆ :**

ಪರಾಗಸ್ಪರ್ಶ ಅನಂತರ ಹೂಗಳು ಕಾಯಾಗಿ ಪರಿವರ್ತಿತವಾಗುತ್ತವೆ. ಹೂವು ಕಾಯಾಗಲು 9-10 ತಿಂಗಳು ಬೇಕು. ಕಾಯಿಗಳು ಹಸುರು ಬಣ್ಣದಾಗಿದ್ದು ಮಾಗಿದ ಅನಂತರ ಅದರ ತುದಿ ಹಳದಿ ಬಣ್ಣಕ್ಕೆ ಮಾರ್ಪಾಟಾಗುತ್ತದೆ.

ಕಾಯಿಯ ತುದಿಯು ಒಂದು ಪ್ರಮುಖ ಘಟ್ಟವಾಗಿದ್ದು ಈ ಹಂತದಲ್ಲಿ ಅವುಗಳನ್ನು ಕಟಾವು ಮಾಡಬೇಕು. ನಾಟಿ ಮಾಡಿದ ಬಳ್ಳಿಗಳು ಮೂರು ವರ್ಷಗಳ ಅನಂತರ ಕಾಯಿ ಬಿಡಲು ಆರಂಭಿಸಿದರೆ ಮೊದಲ ಮೂರು ವರ್ಷಗಳು ಇಳುವಳಿ ಕಡಿಮೆ ಇದ್ದು ಮುಂದಿನ ದಿನಗಳಲ್ಲಿ ಪ್ರಮಾಣ ಅತ್ಯಧಿಕವಾಗಿರುತ್ತದೆ. ಹನ್ನೆರಡು ವರ್ಷಗಳ ಅನಂತರ ಹಳೆಯ ಬಳ್ಳಿಗಳನ್ನು ಕತ್ತರಿಸಿ ಹೊಸ ಬಳ್ಳಿಯನ್ನು ನೆಡಬೇಕು.

ವೆನಿಲ್ಲಾ ಕಾಯಿಗಳನ್ನು ಗಿಡದಿಂದ ಕಿತ್ತ ಮೇಲೆ ವೈಜ್ಞಾನಿಕ ವಿಧಾನಗಳ ಮೂಲಕ ಸಂಸ್ಕರಣೆಗೆ ಒಳಪಡಿಸಬೇಕು.

ಕಟಾವಿನ ಅನಂತರ ಅವುಗಳಲ್ಲಿಯ ಜೈವಿಕ ಚಟುವಟಿಕೆಗಳನ್ನು ನಿಲ್ಲಿಸಿ ಕಾಯಿಯಲ್ಲಿ ಕ್ರಿಯಾಶೀಲ ಕಿಣ್ವಗಳು ಉತ್ಪಾದನೆಯಾಗಿ ಗ್ಲೈಕೋಸೈಡ್‌ಗಳು ಜೊತೆಗೆ ಸೇರಿ ಪರಿಮಳಯುಕ್ತವಾದ ವನಿಲಿನ್ ಉತ್ಪತ್ತಿಯಾಗುತ್ತದೆ.

ಇದರಿಂದ ಕಾಯಿಯಲ್ಲಿ ಉಷ್ಣತೆಯ ಪ್ರಮಾಣ ಹೆಚ್ಚಾಗಿ ಹುದುಗು ಕ್ರಿಯೆ ಸ್ಥಗಿತವಾಗುವುದು. ಇದನ್ನು ಕಾಯಿಯನ್ನು ಬೆವರಿಸುವುದು ಎಂದು ಕರೆಯಲಾಗುತ್ತದೆ.

ಈ ವಿಧಾನದಲ್ಲಿ ಕಾಯಿಯು ನಿಧಾನವಾಗಿ ಒಣಗಿ ಕಾಯಿಯಲ್ಲಿನ ದ್ರವ್ಯಗಳು ಸರಿಯಾಗಿ ಅಭಿವೃದ್ಧಿಯಾಗುತ್ತದೆ. ಕಾಯಿಗಳನ್ನು ಮೊದಲು ಬಿದಿರಿನ ಬುಟ್ಟಿಗಳಲ್ಲಿ ತುಂಬಿ 63-65 ಡಿಗ್ರಿ ಸೆಲ್ಸಿಯಸ್‌ನಷ್ಟಿರುವ ಬಿಸಿ ನೀರಿನಲ್ಲಿ ಮೂರು ನಿಮಿಷಗಳ ಕಾಲ ಇಡಬೇಕು. ಇದರಿಂದ ಜೈವಿಕ ಕ್ರಿಯೆ ಸ್ಥಗಿತವಾಗುತ್ತದೆ.

ಬಿಸಿನೀರಿನಿಂದ ತೆಗೆದು ಕಂಬಳಿಗಳಲ್ಲಿ ಸುತ್ತಿ ಮರದ ಡಬ್ಬಿಗಳಲ್ಲಿ ಹಾಕಿ ಮರುದಿನ ಕಂಬಳಿ ಬಿಡಿಸಿದರೆ ಕಾಯಿಗಳು ಕಂದುಬಣ್ಣಕ್ಕೆ ಬಂದಿರುತ್ತದೆ. ಇವುಗಳನ್ನು ಕಪ್ಪು ಹತ್ತಿ ಬಟ್ಟೆಗೆ ಹಾಕಿ ಬಿಸಿಲಿನಲ್ಲಿ ನಾಲ್ಕೈದು ಗಂಟೆಗಳ ಕಾಲ ಸುಮಾರು ಏಳು ದಿನಗಳವರೆಗೆ ಒಣಗಿಸಿದರೆ ಕಾಯಿಗಳ ತೂಕ ಕಡಿಮೆಯಾಗಿರುತ್ತದೆ.

ಇವು ಮೃದುವಾಗಿರುತ್ತವೆ. ಅನಂತರ ಮರದ ತಟ್ಟೆಯಲ್ಲಿ ಹಾಕಿ ಚೆನ್ನಾಗಿ ಗಾಳಿಯಾಡುವ ಕೊಠಡಿಯಲ್ಲಿ ಒಣಗಿಸಬೇಕು. ಈ ರೀತಿ ಹದಿನೈದು ದಿನಗಳು ಕಳೆದ ಮೇಲೆ ಕಾಯಿಯಲ್ಲಿನ ಪರಿಮಳಕಾರಕ ದ್ರವ್ಯಗಳು ಸ್ಪಷ್ಟರೂಪಕ್ಕೆ ಬಂದಿರುತ್ತವೆ. ಇಂತಹ ಕಾಯಿಗಳಲ್ಲಿ ವೆನಿಲಿನ್ ಅಂಶವಿರುತ್ತದೆ.

**ರೋಗಗಳು ಹಾಗೂ ಪರಿಹಾರ**

**1. ಶಿಲೀಂಧ್ರಗಳ ಮೂಲಕ ಹರಡುವ ರೋಗಗಳು**

**ಬೇರು ಕೊಳೆತ ರೋಗ :** ಬೇರುಗಳ ತುದಿಗಳಿಂದ ಆರಂಭವಾಗಿ ತುದಿಗಳು ಕಂದುಬಣ್ಣಕ್ಕೆ ಬದಲಾಗುತ್ತವೆ. ಹೀಗೆ ಆರಂಭವಾದ ರೋಗವು ಇಡೀ ಬೇರು ವ್ಯೂಹಕ್ಕೆ ಹರಡಿ ಎಲೆಗಳು ಹಳದಿ ಬಣ್ಣ ತಾಳುತ್ತವೆ. ಇದರಿಂದ ವನಿಲ್ಲಾ ಬಳ್ಳಿ ಸೊರಗುತ್ತದೆ.

**ಪರಿಹಾರ ಕ್ರಮ :**

ನೀರು ಗಿಡಕ್ಕೆ ಸರಿಯಾಗಿ ಇಂಗುವಂತೆ ನೋಡಿಕೊಂಡು ಅತಿ ನೆರಳು ಅಥವಾ ಅತಿ ಬಿಸಿಲು ಬೀಳದಂತೆ ಮಾಡಿ ಅಪೇಕ್ಷಣೀಯ ಸಂಖ್ಯೆಗಿಂತ ಹೆಚ್ಚಿನ ಕಾಯಿಗಳಿದ್ದರೇ ಅವುಗಳನ್ನು ತೆಗೆದು ಹಾಕಬೇಕು.

**ಕಾಂಡ ಕೊಳೆಯುವ ರೋಗ :** ನಾಟಿ ಮಾಡಿದ ಸಸಿಯ ಕಾಂಡಗಳು ನಿರ್ದಿಷ್ಟ ಎತ್ತರದಲ್ಲಿ ಬೆಳೆಯದೆ ನೆಲವನ್ನು ತಾಗುತ್ತಿದ್ದರೆ ಈ ರೋಗ ಕಾಣಿಸಿಕೊಳ್ಳುತ್ತದೆ. ನೀರಿನಲ್ಲಿ ನೆನೆದಾಗ ಆಗುವಂತಹ ಕುರುಹುಗಳು ಕಾಂಡದ ಮೇಲೆ ಬಂದು ನೀಳ ಬಣ್ಣದ ಗುರುತು ಕಾಣಿಸಿಕೊಳ್ಳುತ್ತದೆ. ಆ ಜಾಗಗಳಲ್ಲಿ ಬಳ್ಳಿ ಕೊಳೆಯಲಾರಂಭಿಸಿ ಸೊರಗುತ್ತದೆ. ಇದು ಹೆಚ್ಚಾದಾಗ ಕಾಯಿಗಳೂ ಸಹ ಕೊಳೆತು ಹೋಗುತ್ತವೆ.

**ಪರಿಹಾರ ಕ್ರಮ :** ಈ ರೋಗ ಕಾಣಿಸಿಕೊಂಡಾಗ ಗಿಡದ ಭಾಗಗಳನ್ನು ಕತ್ತರಿಸಬೇಕು. ಪೊಟಾಶಿಯಂ ಫಾಸ್ಫೋನೇಟ್ ಮೊಂಕೋಝೋಬ್ ಮೊದಲಾದ ರಾಸಾಯನಿಕಗಳನ್ನು ಹದಿನೈದು ದಿನಗಳಿಗೊಮ್ಮೆ ಬಳಸಬೇಕು.

**ಕಾಯಿ ಕೊಳೆಯುವ ಹಾಗೂ ಕಾಯಿ ಉದುರುವ ರೋಗಗಳು :** ಮಳೆಗಾಲದಲ್ಲಿ ಕಾಡುವಂತಹದು. ಕಾಯಿಯ ತುದಿಯಿಂದ ಆರಂಭವಾಗಿ ಇಡಿಯ ಗೊಂಚಲು ರೋಗವಾಗಿ ಅಲ್ಲಲ್ಲಿ ಬೂಸ್ಟ್ ಬೆಳೆಯುತ್ತದೆ. ರೋಗ ತೀವ್ರವಾದ ಹಂತ ತಲುಪಿದರೆ ಎಲೆ, ಕಾಂಡ, ಬೇರುಗಳೆಲ್ಲ ಸಂಪೂರ್ಣವಾಗಿ ನಾಶವಾಗುತ್ತವೆ. ಕಾಯಿ ಉದುರುವ ರೋಗವು ಫಲ ಬಿಟ್ಟ ಕಾಯಿಯಲ್ಲಿ ಕಾಣಿಸಿಕೊಂಡು ಕಾಯಿಗಳ ತುದಿ ಹಳದಿ ಬಣ್ಣಕ್ಕೆ ತಿರುಗಿ ಒಡೆದುಕೊಳ್ಳುತ್ತ ಕಂದು ಬಣ್ಣಕ್ಕೆ ಮಾರ್ಪಾಟಾಗುವುದು.

**ಪರಿಹಾರ ಕ್ರಮ :** ಹೆಚ್ಚು ಬಳ್ಳಿಗಳನ್ನು ಬೆಳಸದೆ, ನೀರನ್ನು ಬುಡಗಳಲ್ಲಿ ನಿಲ್ಲದಂತೆ ಹಾಗೂ ಕಡಿಮೆ ಬಿಸಿಲು ಬೀಳದಂತೆ ನೋಡಿಕೊಳ್ಳುವುದು. ನಿರಂತರ ಮಳೆ ಬೀಳುವುದು ಸಹ ಈ ರೋಗಕ್ಕೆ ಕಾರಣವಾಗುತ್ತದೆ. ಇದನ್ನು ನಿಯಂತ್ರಿಸಲು ಪೊಟ್ಯಾಶಿಯಂ ಫಾಸ್ಫೋನೇಟ್, ಫ್ಯುಸೇರಿಯಮ್ ಆಕ್ಸಿಪೋರಮ್‌ಗಳನ್ನು ಬಳಸುವುದು ಉತ್ತಮ.

**ದಾಸ್ತಾನು ರೋಗಗಳು :** ಕೊಯ್ಲು ಮಾಡಿ ಸಂಸ್ಕರಿಸಿದ ಕಾಯಿಗಳ ಮೇಲೆ ಶಿಲೀಂಧ್ರಗಳು ಆಕ್ರಮಣ ಮಾಡುತ್ತವೆ. ಪೆನ್ಸಿಲಿಯಮ್ ಮತ್ತು ರೈಝೋಪಸ್ ಎಂಬ ಶಿಲೀಂಧ್ರಗಳು ಕಾಯಿಗಳನ್ನು ನಿರುಪಯುಕ್ತ ಮಾಡುತ್ತವೆ.

**ಪರಿಹಾರಕ್ರಮ :** ಸಂಸ್ಕರಿಸಿದ ವನಿಲ್ಲಾ ಕಾಯಿಗಳನ್ನು ಬಿಸಿನೀರಿನಲ್ಲಿಟ್ಟು ಅನಂತರ ಒಣಗಿಸಬೇಕು. ತಾತ್ಸಾರ ಮಾಡಿದರೆ ಕಾಯಿಗಳು ಶೀಲಿಂಧ್ರ ರೋಗಕ್ಕೆ ತುತ್ತಾಗುತ್ತವೆ. ಅಲ್ಲದೇ ಶುಷ್ಕ ಕೊಠಡಿಗಳಲ್ಲಿ ಇವುಗಳನ್ನು ಒಣಗಿಸುವುದು ಯುಕ್ತ.

**ವೈರಸ್‌ಗಳ ಮೂಲಕ ಹರಡುವ ರೋಗಗಳು :** ಇದಕ್ಕೆ ವನಿಲ್ಲಾ ಮೊಸಾಯಿಕ್ ವೈರಸ್ ಮತ್ತು ವನಿಲ್ಲಾ ನೆಕ್ರೋಸಿಸ್ ಪೋಟಿ ವೈರಸ್ ಎಂಬ ಎರಡು ಬಗೆಯ ವೈರಸ್‌ಗಳ ಮೂಲಕ ರೋಗ ಹರಡುತ್ತದೆ.

ವೈರಸ್‌ಗಳು ಗಿಡಗಳನ್ನು ಕತ್ತರಿಸುವ ಸಲಕರಣೆಗಳ ಮೂಲಕ ಹರಡುತ್ತವೆ. ಇವು ರೋಗಿಷ್ಠ ಗಿಡಗಳಿಂದ ಆರೋಗ್ಯವಂಥ ಗಿಡಗಳಿಗೆ ಹರಡಿ ಇಡೀ ಗಿಡವೇ ನಾಶವಾಗುವಂತೆ ಮಾಡುತ್ತವೆ. ಅಲ್ಲದೇ ವನಿಲ್ಲಾ ಗಿಡಗಳಿಗೆ ಎಫಿಡ್ಸ್‌ಗಳು ಸಹ ಹೆಚ್ಚು ಹಾನಿ ಮಾಡುತ್ತವೆ. ಇವು ಗಿಡಗಳ ರಸವನ್ನು ಹೀರುವ ಮೂಲಕ ದುಷ್ಪರಿಣಾಮವನ್ನುಂಟು ಮಾಡುತ್ತವೆ. ಅದೇ ರೀತಿ ಕೋಳಿಗಳು ವನಿಲ್ಲಾ ಗಿಡಕ್ಕೆ ಹೆಚ್ಚಿನ ಹಾನಿ ಮಾಡುತ್ತವೆ. ಬಳ್ಳಿಗಳನ್ನು ಹೆಚ್ಚು ಆಳವಾಗಿ ಹೂಳದೆ ಇರುವುದರಿಂದ ಸೂಕ್ಷ್ಮವಾಗಿರುತ್ತವೆ. ಕೋಳಿಗಳು ವೆನಿಲ್ಲಾ ಗಿಡಗಳ ಬುಡಗಳನ್ನು ಕೆದಕಿ ಹಾಕದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಗಿಡಗಳು ಸಂಪೂರ್ಣ ನಾಶವಾಗುತ್ತವೆ.

*ಎಚ್. ಈ.*

**ವಯನಾಡಿನ ಒಕ್ಕಲು ಬಂಡಿ** ಸಿಲಿಂಡರ್ ಆಕಾರದಲ್ಲಿ ಕಡೆದು ತೆಗೆದ ದೊಡ್ಡದೊಂದು ಕಗ್ಗಲ್ಲನ್ನು ಮರದ ಭದ್ರ ಚೌಕಟ್ಟಿನೊಳಗೆ ಸೇರಿಸಿ ಚಕ್ರದಂತೆ ಎಳೆಯಲಾಗುತ್ತದೆ. ಮರದ ಚೌಕಟ್ಟನ್ನು ಗಟ್ಟಿಮರದ ಉದ್ದನೆಯ ಕೋಲಿಗೆ ಜೋಡಿಸಿ ಕೋಲಿನ ತುದಿಯನ್ನು ನೊಗಕ್ಕೆ ಜೋಡಿಸಲಾಗುತ್ತದೆ. ನೊಗಕ್ಕೆ ಎತ್ತುಗಳನ್ನು ಹೂಡಿ ಕಗ್ಗಲ್ಲಿನ ಚಕ್ರ / ಬಂಡಿಯನ್ನು ಕೊಯ್ಲು ಮಾಡಿ ಕಣದಲ್ಲಿ ತಂದು ಹರಡಿದ ಬತ್ತದ ಪೈರಿನ ಮೇಲೆ ಎಳೆಯಿಸುತ್ತಾರೆ. ಎತ್ತುಗಳು ಮತ್ತು ಮನುಷ್ಯನ ಕಾಲ ತುಳಿತಕ್ಕೂ ಅದಕ್ಕೂ ಮಿಗಿಲಾಗಿ ಬಂಡಿಯ ಉರುಳುವಿಕೆಗೂ ಬತ್ತ ಮತ್ತು ಬೈಹುಲ್ಲು ಬೇರೆ ಬೇರೆಯಾಗಿರುತ್ತವೆ. ಎತ್ತುಗಳನ್ನು ಹೊಡೆಯುವುದಕ್ಕೆ ಒಬ್ಬಾತ, ಪೈರನ್ನು ಮಗುಚಿ, ಕೊಡವಿ ಕೊಡುವುದಕ್ಕೆ ಇನ್ನೊಬ್ಬ - ಹೀಗೆ ಕನಿಷ್ಠ ಎರಡು ಆಳುಗಳು ಈ 'ಒಕ್ಕಲು ಬಂಡಿ'ಯನ್ನು ಸರಿಯಾಗಿ ದುಡಿಸಿಕೊಳ್ಳಲು ಬೇಕಾಗುತ್ತದೆ. ಕೇರಳದ ವಯನಾಡಿನಲ್ಲಿ ಒಕ್ಕಲು ಮಾಡುವುದಕ್ಕೆ ಬಳಕೆಯಾಗುವ ಈ ಬಂಡಿಯು ಒಂದು ಪರಿಷ್ಕೃತ ಆವಿಷ್ಕಾರ. ಈ ಒಕ್ಕಲು ಬಂಡಿಯನ್ನು ಬಳಸಿಕೊಂಡು ದಿನವೊಂದಕ್ಕೆ ಸು. ನಲವತ್ತು ಮುಡಿ (ಒಂದು ಮುಡಿ = 42 ಸೇರು) ಬತ್ತವನ್ನು ಮಿದಿಯಬಹುದು. ಒಕ್ಕಲು ಬಂಡಿಯನ್ನು ಎಳೆಯುವ ಎತ್ತುಗಳು ಪೈರು ತಿನ್ನದಂತೆ ಅವುಗಳ ಬಾಯಿಗೆ ಹುರಿಹಗ್ಗವನ್ನು ಬಳಸಿ ನೇಯ್ದ ಒಂದು ಬಲೆಯಂಥ ರಚನೆಯನ್ನು ಕಟ್ಟಲಾಗುತ್ತದೆ. ಉಳಿದ ಶ್ರಮದಾಯಕ ಕೃಷಿ ಕೆಲಸಗಳಲ್ಲಿಯಂತೆ ಒಕ್ಕಲು ಹಾಕುವಾಗ ಕೂಡ ಹಾಡಿಕೊಳ್ಳಲು ಒಂದು 'ಒಕ್ಕಲ್ ಪಾಟ್ಟ್' ಇದೆ.

***ಕೆ.ಕೆ.***

**ವಯನಾಡಿನ ಪರಂಪರಾಗತ ಕೃಷಿ ಪದ್ಧತಿ** ಕರ್ನಾಟಕ ಮತ್ತು ತಮಿಳುನಾಡಿನ (ವಿಶೇಷವಾಗಿ ಕರ್ನಾಟಕದ) ಜೈನ ಸಂಸ್ಕೃತಿಯ ಪ್ರಭಾವ ವಯನಾಡಿನ ಕೃಷಿಯನ್ನು ಕೇರಳದ ಇತರ ಭಾಗಗಳ ಕೃಷಿ ವಿಧಾನಗಳಿಗಿಂತ ಬಹಳ ವಿಭಿನ್ನವಾಗುವಂತೆ ಮಾಡಿದೆ. ಕೃಷಿಯ ಎಲ್ಲ ವಿಧಾನಗಳಲ್ಲೂ ಮಲಯಾಳದ್ದಲ್ಲದ ಒಂದು ಪದ್ಧತಿ ವಯನಾಡನ್ ಕೃಷಿಯಲ್ಲಿ ಪ್ರತಿಫಲಿಸುತ್ತದೆ.

**ಭೂ ಪ್ರಕೃತಿ :** ವಯಲುಗಳ ನಾಡು - ವಯನಾಡು ಎಂಬ ಮಾತು ಚಾಲ್ತಿಯಲ್ಲಿದೆ. 'ವಯಲ್‌ನಾಡು' ಕಾಲಾಂತರದಲ್ಲಿ ವಯನಾಡಾಯಿತು ಎಂದು ಹೇಳುತ್ತಾರೆ. ಆದರೆ 'ವನನಾಡು' ವಯನಾಡಾಯಿತು ಎಂಬ ಇನ್ನೊಂದು ವಾದವೂ ಇದೆ. (ಸಿ. ಗೋಪಾಲ ನಾಯರ್ - 1911) ಈ ಎರಡೂ ನಿಷ್ಪತ್ತಿಗಳೂ ವಯನಾಡಿಗೆ ಅನ್ವಯವಾಗುತ್ತವೆ. ಕಾರಣ ಅನೇಕ ಗುಡ್ಡ ಬೆಟ್ಟಗಳು ಅವುಗಳ ನಡುವೆ ವ್ಯಾಪಿಸಿರುವ ಬಯಲುಗಳು - ಇದು ಮೊದಲ ನೋಟಕ್ಕೆ ಕಂಡು ಬರುವ ವಯನಾಡಿನ ಭೌಗೋಳಿಕ ಚಿತ್ರಣ.

**ಪರಂಪರಾಗತ ಕೃಷಿಕ ಸಮುದಾಯಗಳು :** ಪಣಿಯರ್, ಅಡಿಯಾನ್‌ಮಾರ್, ಕಾಟ್ಟುನಾಯ್ಕರ್, ಮುಳ್ಳುಕ್ಕುರುಮರ್, ಕುರಿಚ್ಯರ್ - ಎಂಬೀ ಆದಿವಾಸಿ ಸಮೂಹಗಳೂ ಚೆಟ್ಟಿಗಳ್, ಗೌಂಡನ್ಮಾರ್, ನಾಯನ್ಮಾರ್, ಶಮ್ಮನ್ಮಾರ್ - ಹೀಗೆ ಭೂಮಿಯ ಒಡೆತನ ಕೈಯಲ್ಲಿರುವ ಜಮೀನ್ದಾರರೂ ವಯನಾಡಿನಲ್ಲಿ ಕೃಷಿಯಲ್ಲಿ ತೊಡಗಿದ್ದ ಇವರಲ್ಲಿ ಪಣಿಯರು. ಅಡಿಯರು ಮತ್ತು ಕಾಟ್ಟನಾಯ್ಕರು ಜೀತದಾಳುಗಳು ಎಂಬಂತೆ ಕೃಷಿ ಕೆಲಸದಲ್ಲಿ ಭಾಗವಹಿಸುತ್ತಿದ್ದರು.

**'ಮಾಟ್ಟ' ಕೃಷಿಯಿಂದ ವಯಲ್ ಕೃಷಿಯೆಡೆಗೆ :** ಜೈನರ ಆಗಮನದ ಮೊದಲು ಮತ್ತು ಅನಂತರ - ಹೀಗೆ ವಯನಾಡಿನ ಕೃಷಿ ವಿಧಾನವನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ನವೀನ ಶಿಲಾಯುಗದಲ್ಲಿ ಪೂರ್ವಜರು ಕೃಷಿ ಕೆಲಸವನ್ನು ಆರಂಭಿಸಿದಂದಿನಿಂದ ಮಧ್ಯಕಾಲ ಘಟ್ಟದಲ್ಲಿ ಜೈನ ಸಂಸ್ಕೃತಿಯು ಇಲ್ಲಿ ಬಂದು ಬೇರೂರುವವರೆಗೆ ಆದಿವಾಸಿಗಳ ಮಾಟ್ಟ ಕೃಷಿ (ಕುಮರಿ ಕೃಷಿ) ವಯನಾಡಿನಲ್ಲಿ ಪ್ರಚಲಿತದಲ್ಲಿತ್ತು. ಆಗ ಕೃಷಿ ಕೆಲಸವು ಸಂಪೂರ್ಣವಾಗಿ ಆದಿವಾಸಿಗಳ ನಿಯಂತ್ರಣದಲ್ಲಿತ್ತು. ಮಧ್ಯಕಾಲ ಘಟ್ಟದಲ್ಲಿ ಬಂದು ಇಲ್ಲಿ ನೆಲೆ ನಿಂತ ಜೈನರು - ಅದುವರೆಗೆ ಕುಮರಿ ಕೃಷಿಯನ್ನು ಮಾಡುತ್ತಾ ಹಾಗೂ ವನೋತ್ಪತ್ತಿಗಳನ್ನು ಸಂಗ್ರಹಿಸುತ್ತಾ ಜೀವಿಸುತ್ತಿದ್ದ ವಯನಾಡಿನ ಆದಿವಾಸಿಗಳಿಗೆ - ಭೂಮಿಯನ್ನು ಸ್ವಂತ ಮಾಡಿಕೊಂಡು 'ಸ್ಥಿರ ಕೃಷಿ'ಯನ್ನು ಮಾಡುವ ವಿಧಾನವನ್ನು ಪರಿಚಯಿಸಿದರು. ಆದಿವಾಸಿಗಳಲ್ಲೇ ಮೇಲುವರ್ಗದವರಾದ ಕುರುಮರು ಮತ್ತು ಕುರಿಚ್ಯರು ಈ ಜೈನರನ್ನು ಅನುಸರಿಸಿ ಸ್ಥಿರವಾದ ಆರಂಭಿಸಿ ಕೃಷಿ ಮಾಡಲು ಪ್ರೇರಿತರಾದರು. ಜೈನರು ವಿಸ್ತಾರವಾದ ಭೂಪ್ರದೇಶವನ್ನು ಆಕ್ರಮಿಸಿಕೊಂಡಿದ್ದರಿಂದ ಅಲ್ಲಿಯ ಆದಿವಾಸಿಗಳಿಗೆ ಕೃಷಿ ಮಾಡಲು ಬೇಕಾದ ವನಭೂಮಿಯ ಅಲಭ್ಯತೆಯಿಂದಾಗಿ ತಪ್ಪಲು ಪ್ರದೇಶಗಳನ್ನು ಬಯಲುಗಳನ್ನೂ ಕೇಂದ್ರೀಕರಿಸಿಕೊಂಡು ಬೃಹತ್ ಪ್ರಮಾಣದ ಬತ್ತದ ಕೃಷಿ ವಯನಾಡಿನಲ್ಲಿ ಬೇರು ಬಿಟ್ಟಿತು.

**ಬಯಲು ಕೃಷಿ :** ಬಯಲು ಕೃಷಿ ಎಂದರೆ ಇಲ್ಲಿ ಸಂಪೂರ್ಣವಾಗಿ ಬತ್ತದ ಕೃಷಿಯೇ ಆಗಿದೆ. ಬತ್ತದ ಕೃಷಿಯ ಅನನ್ಯವಾದ ಒಂದು ಪರಂಪರೆ ವಯನಾಡಿನಲ್ಲಿತ್ತು. ವಯನಾಡಿನ ಹವಾಗುಣದ ಕೆಲವು ವೈಶಿಷ್ಟ್ಯಗಳಿಂದ ಮಕರ (ಜನವರಿ) ಮಾಸ ಮುಗಿಯುವುದರೊಳಗೆ ಎರಡು ಬಾರಿ ಬೆಳೆ ತೆಗೆಯುವುದು ಅಸಾಧ್ಯವಾಗಿತ್ತು. ಮೊದಲನೆಯದಾಗಿ ವಯನಾಡಿನ ಅಧಿಕ ಚಳಿ ಮತ್ತು ಕಡಿಮೆ ಬಿಸಿಲು ಇರುವ ಹವಾಗುಣದಲ್ಲಿ ಯಾವುದೇ ಬೀಜ ಬಿತ್ತಿದರೂ ಬೆಳವಣಿಗೆಗೆ ಸಾಧಾರಣಕ್ಕಿಂತ ಇಪ್ಪತ್ತು - ಮೂವತ್ತು ದಿನಗಳ ಹೆಚ್ಚಿನ ಬೆಳವಣಿಗೆ ಅಗತ್ಯವಾಗಿತ್ತು. ಶುದ್ಧ ವಯನಾಡಿನದು ಎಂದು ಹೇಳಲ್ಪಡುವ ಬೀಜಗಳಲ್ಲಿ ಹಲವು ವೃಶ್ಚಿಕ - ಧನುರ್ಮಾಸ ಬಾರದೆ ಕೊಯ್ಲು ಸಾಧ್ಯವಾಗುವುದಿಲ್ಲ. ಮೊದಲನೆಯ ಬೆಳೆಯ ನಾಟಿಯೇ ಸಿಂಹ ಮಾಸದವರೆಗೆ ಮುಂದುವರಿಯುವುದಿತ್ತು. ಬಯಲುಗಳ (ಗದ್ದೆ) ಆಧಿಕ್ಯ ಮತ್ತು ಕೆಲಸದಾಳುಗಳ ಅಲಭ್ಯತೆ - ನಾಟಿ ಕೆಲಸ ಇಷ್ಟೊಂದು ದೀರ್ಘವಾಗಲು ಕಾರಣ. ವಿಸ್ತೃತ ಪ್ರದೇಶದ ಕೊಯ್ಲು ಮತ್ತು ಬತ್ತ ಬೇರ್ಪಡಿಸುವ ಕೆಲಸವು ಮುಗಿದಾಗ ಇನ್ನೊಂದು ಬೆಳೆಯನ್ನು ಬೆಳೆಸಲು ಬೇಕಾದ ಸಮಯವೂ ಮಾನವ ಸಂಪನ್ಮೂಲವೂ ಲಭ್ಯವಿರುವುದಿಲ್ಲ. ಮಲಯಾಳಿಗಳು ವಲಸೆ ಹೋದುದರಿಂದ ವಯನಾಡಿನಲ್ಲಿ 'ಪುಂಜ' ಕೃಷಿ ಪ್ರಚಾರಕ್ಕೆ ಬಂತು. ಅದಕ್ಕೂ ಮೊದಲು ಕಬಿನೀ ನದಿಯ ಕಾಲುವೆಗಳು ನೀರನ್ನೊದಗಿಸುತ್ತಿದ್ದ ಪನಮರಂ, ತಿರುನೆಲ್ಲಿ, ಮಾನಂದವಾಡಿ ಎಂಬ ಸ್ಥಳಗಳಲ್ಲಿ ಅಲ್ಪ ಸ್ವಲ್ಪ ಪುಂಜ ಕೃಷಿ ನಡೆಯುತ್ತಿತ್ತು. ಎನ್ನುತ್ತಾರೆ.

ಪುಂಜ ಕೃಷಿಗೆ ಹುಡಿ ಮಣ್ಣಿನಲ್ಲಿ ನೇರವಾಗಿ ಬೀಜ ಬಿತ್ತುತ್ತಾರೆ. ಇಲ್ಲವೇ ನೇಜಿ ಮಾಡಿ ಬಳಿಕ ಕಿತ್ತು ನೆಡುತ್ತಾರೆ. ಹೆಚ್ಚಾಗಿ ನೇಜಿ ನಾಟಿ ಮಾಡುತ್ತಾರೆ. ದೀರ್ಘ ಕಾಲಾವಧಿ ಬೀಜಗಳನ್ನು ಮೇಷ - ವೃಷಭಮಾಸಗಳಲ್ಲೂ ಬೇಗನೆ ಬೆಳೆಯುವ ಬೀಜಗಳನ್ನು ಮಿಥುನ

ಮಾಸದಲ್ಲೂ ಬಿತ್ತುತ್ತಾರೆ. ಅರವತ್ತು ದಿನಗಳ ಬೆಳೆವಣಿಗೆಯಾದರೂ ಇಲ್ಲದೆ ವಯನಾಡಿನ ಯಾವುದೇ ಬತ್ತದ ತಳಿಯ ನೇಜಿಯನ್ನೂ ನಾಟಿ ಮಾಡುತ್ತಿರಲಿಲ್ಲ. ನೇಜಿ ಹಾಕುವುದಕ್ಕಾಗಿ ಎಂಟು - ಒಂಬತ್ತು ಸಲ ಗದ್ದೆಯನ್ನು ಉತ್ತು ಕೆಸರು ಮಾಡುತ್ತಾರೆ. ಆ ಬಳಿಕ ಹಲಗೆಯಿಂದ ಮಟ್ಟಸ ಮಾಡುತ್ತಾರೆ. ನೇಜಿಯನ್ನು ಸುಲಭವಾಗಿ ಕಿತ್ತು ತೆಗೆಯಲು, ಬೀಜಗಳು ಕೆಸರಿನಲ್ಲಿ ಆಳವಾಗಿ ಹೂತು ಹೋಗದಿರಲು ಹಲಗೆಯಿಂದ ಕೆಸರನ್ನು ಮಟ್ಟಸ ಮಾಡಿ, ಮರುದಿನ ಕೆಸರು ಸರಿಯಾಗಿ ಹೊಂದಿ ನಿಂತ ಬಳಿಕ ಬೀಜ ಬಿತ್ತುತ್ತಾರೆ.

'ತೆಳಿವಿದಕ್ಕಲ್' ಮತ್ತು 'ವಾಳಿಚ್ಚ' ಎಂಬ ಎರಡು ಸಂಪ್ರದಾಯಗಳು ವಯನಾಡಿನಲ್ಲಿ ಪ್ರಚಲಿತದಲ್ಲಿದ್ದುವು. ವಿಶೇಷವಾದ ಕಾಲಗಣನೆ ಇಲ್ಲದೆ ಮಾಡುವ ಕೃಷಿ ಪದ್ಧತಿಯಾಗಿತ್ತು - 'ತೆಳಿವಿದಕ್ಕಲ್' (ಕೆಸರಿನಲ್ಲಿ ಬೀಜ ಬಿತ್ತುವುದು). ಇದಕ್ಕಾಗಿ ಗದ್ದೆಯಲ್ಲಿ ನೀರನ್ನು ತುಂಬಿಸಿ ಹಲವು ಬಾರಿ ಉಳುತ್ತಿದ್ದರು. ಬೀಜವನ್ನು ಮೊಳಕೆ ಬರಿಸಿ ಬಿತ್ತುತ್ತಿದ್ದರು. ಎಡವಕೆ, ಕಲ್ಲಡಿಯಾರನ್, ವೆಳ್ಳಪುಂಜ, ಚೋಮಾಲ, ತೊಡಿಯಿನಜಳ್, ಚೆಂತಾಡಿ, ವೆಳಿಯನ್ - ಇತ್ಯಾದಿಗಳು ತೆಳಿವಿದಕ್ಕಲ್‌ಗೆ ಯೋಗ್ಯವಾದ ಬತ್ತದ ತಳಿಗಳು, ಇವುಗಳಲ್ಲಿ ಮೊದಲಿನ ಮೂರನ್ನು ಧಾರಾಳ ನೀರಿನ ಲಭ್ಯತೆ ಇರುವಲ್ಲಿ ಮಾತ್ರವೇ ಬೆಳೆಸುತ್ತಿದ್ದರು.

ವಯನಾಡಿನಲ್ಲಿ ಮಾತ್ರವೇ ಪ್ರಚಲಿತದಲ್ಲಿದ್ದ ಇನ್ನೊಂದು ಕೃಷಿ ಪದ್ಧತಿಯೇ 'ವಾಳಿಚ್ಚ'. ಇದಕ್ಕಾಗಿ ಬೇಸಗೆಯಲ್ಲಿ ಮಣ್ಣಿನಲ್ಲಿ ನೀರು ಆರಿ ಹೋಗುವ ಮೊದಲು ಎಂಟು - ಒಂಬತ್ತು ಬಾರಿ ನೆಲವನ್ನು ಉತ್ತು ಹದಮಾಡುತ್ತಿದ್ದರು. ಮೀನ ಮಾಸ 15ರ ಮೊದಲೇ ಬಿತ್ತುವ ಬತ್ತದ ಬೀಜಗಳು ಮೊದಲ ಮಳೆ ಬಿದ್ದಾಗ ಮೊಳಕೆಯೊಡೆಯುತ್ತವೆ. ಮಳೆ ಚೆನ್ನಾಗಿ ಬಿದ್ದ ಬಳಿಕ ಮಿಥುನ ಮಾಸದಲ್ಲಿ ವಾಳಿಚ್ಚ ಪದ್ಧತಿಯ ಕೃಷಿ ಮಾಡಿದ ಗದ್ದೆಯಲ್ಲಿ ಒಂದು ಬಾರಿ ಉಳುವುದೋ ಇಲ್ಲವೇ ಬೇರೆ ಹೊಲ - ಗದ್ದೆಗಳಲ್ಲಿ ಉತ್ತ ಬಳಿಕ ಎತ್ತುಗಳನ್ನು ಮೇಯಲು ಬಿಡುವುದೋ ಮಾಡುತ್ತಿದ್ದರು. ಸಿಂಹ ಮಾಸದಲ್ಲಿ ಹುಲ್ಲನ್ನು ಕಿತ್ತು ತೆಗೆಯುವುದಕ್ಕಾಗಿ ಕುಂಟೆ ಕಟ್ಟಿ ಎತ್ತುಗಳಿಂದ ಎಳೆಸುತ್ತಿದ್ದರು. ಈ ಸಂದರ್ಭದಲ್ಲಿ ಅನೇಕ ಬತ್ತದ ಸಸಿಗಳನ್ನು ಎತ್ತುಗಳು ತಿನ್ನುವುದು, ಮೆಟ್ಟಿ ನಾಶಮಾಡುವುದು ಮತ್ತು ಹುಲ್ಲಿನೊಂದಿಗೆ ಬತ್ತದ ಸಸಿಗಳೂ ಕಿತ್ತು ಹೋಗುವುದು ಮುಂತಾದ ಕ್ರಿಯೆಗಳು ನಡೆಯುತ್ತಿದ್ದುವು. ಆದರೂ ಅಗತ್ಯವಿರುವಷ್ಟು ಬತ್ತದ ಸಸಿಗಳು ಉಳಿಯುತ್ತಿದ್ದವು. ವಾಳಿಚ್ಚದಲ್ಲಿ ಉಪಯೋಗಿಸುವ ಬತ್ತದ ಬೀಜಗಳೆಲ್ಲಾ ಅತಿಯಾಗಿ ಬೆಳೆಯುವಂಥದೂ ಓರೆಯಾಗಿ, ಮಣ್ಣಿಗೆ ಬೀಳುವಂಥದೂ ಆಗಿರುತ್ತಿದ್ದವು. ಅತಿಯಾದ ಬೆಳೆವಣಿಗೆ ಫಸಲನ್ನು ಬಾಧಿಸುತ್ತದೆ. ದನಕರುಗಳು ತಿಂದು ಹೋಗುವಾಗ ಹಾಗೂ ಮೆಟ್ಟಿ ನಾಶಪಡಿಸುವಾಗ ಸಸಿಗಳ ಅತಿಯಾದ ಬೆಳೆವಣಿಗೆಯು ತಡೆಯಲ್ಪಡುವುದು ಹಾಗೂ ಹೆಚ್ಚಾಗಿರುವ ಸಸಿಗಳು ಕಿತ್ತು ಹೋಗಿ ಸಸಿಗಳ ನಡುವೆ ಅಗತ್ಯವಿದ್ದಷ್ಟು ಅಂತರವೂ ಉಂಟಾಗುವುದು. ಬತ್ತದ ಗದ್ದೆಗಳು ಒಡೆದು ಹೋಗಿ ಬುಡಗಳು ಸರಿಯಾಗಿ ಬೆಳೆದು ಬರಲು 'ಎಡೆ ಉಳುಮೆ' ಸಹಕರಿಸುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ 'ವಾಳಿಚ್ಚ' ಸಂಪ್ರದಾಯವು ಬತ್ತದ ಸಸಿಗಳ ಉತ್ತಮ ರೀತಿಯ ಬೆಳೆವಣಿಗೆಗೆ ಹಾಗೂ ಉತ್ತಮ ಫಸಲಿಗೆ ಕಾರಣವಾಗುತ್ತದೆ.

ಕೇರಳದ ಇತರೆಡೆಯಲ್ಲಿ ಕಂಡುಬರುವ ಬತ್ತ ತುಳಿದು ಬೇರ್ಪಡಿಸುವ ಸಂಪ್ರದಾಯ ವಯನಾಡಿನಲ್ಲಿಲ್ಲ. ಎತ್ತುಗಳ ಸಹಾಯದಿಂದ ಬತ್ತವನ್ನು ಬೇರ್ಪಡಿಸುತ್ತಾರೆ. ಇದನ್ನು 'ಒಕ್ಕಲ್' ಎನ್ನುತ್ತಾರೆ.

**ಒಕ್ಕಲ್ :** ಒಕ್ಕಲ್ ಕಳದ ನಡುವೆ ಒಂದು ಗೂಟವಿರುತ್ತದೆ. ಇದನ್ನು 'ಮೆಟ್ಟಿಕುತ್ತಿ' ಎನ್ನುತ್ತಾರೆ. ಮೆದೆ ಬಿಡಿಸಿ ಬತ್ತದ ಪೈರನ್ನು ಈ ಗೂಟದ ಸುತ್ತಲೂ ಹರಡುತ್ತಾರೆ. ಒಕ್ಕಲ್‌ಗಾಗಿ ಆರು - ಏಳು ಎತ್ತುಗಳಿರುತ್ತವೆ. ತುಂಬಾ ಬತ್ತವಿದ್ದಲ್ಲಿ ಈ ಸಂಖ್ಯೆ ಹೆಚ್ಚಿರುತ್ತದೆ. ನಡುವಿನ ಗೂಟಕ್ಕೆ ಹಗ್ಗದಿಂದ (ಒಕ್ತಲ್ ಕಣ್ಣಿ) ಒಂದು ಎತ್ತನ್ನು ಕಟ್ಟುತ್ತಾರೆ. ಇದರ ಕುತ್ತಿಗೆಯ ಹಗ್ಗಕ್ಕೆ ಇನ್ನೊಂದು ಎತ್ತು. ಅದರ ಕುತ್ತಿಗೆಯ ಹಗ್ಗಕ್ಕೆ ಮತ್ತೊಂದು - ಹೀಗೆ ಎಲ್ಲಾ ಎತ್ತುಗಳನ್ನೂ ಒಕ್ಕಲ್ ಕಣ್ಣಿಗೆ ಜೋಡಿಸುತ್ತಾರೆ. ತಾಯ್‌ವಲ್ ಎಂಬ ಒಂದು ಕಾಡುಮರದ ನಾರಿನಿಂದ ಒಕ್ಕಲ್ ಕಣ್ಣಿಯನ್ನು ತಯಾರಿಸುತ್ತಾರೆ. ಅಥವಾ ಸೆಣಬಿನ ನಾರನ್ನು ಉಪಯೋಗಿಸುತ್ತಾರೆ. ಒಬ್ಬನು ಮೆಟ್ಟಿಕುತ್ತಿಯ ಸುತ್ತಲೂ ಎತ್ತುಗಳನ್ನು ನಡೆಸುತ್ತಾನೆ. ಎತ್ತುಗಳು ಹುಲ್ಲಿನ ಮೇಲೆ ನಡೆಯುವಾಗ ಬತ್ತ ಬೇರ್ಪಡುತ್ತದೆ. ನಡುನಡುವೆ 'ಕೊಕ್ಕೆಯಿಂದ (ಒಕ್ಕುಲು ಕೋಲು - ಮೆರೆಕೋಲು) ಹುಲ್ಲನ್ನು ಮಗುಚುತ್ತಾರೆ. ಆಗ ಹುಲ್ಲಿನಿಂದ ಬೇರ್ಪಟ್ಟ ಬತ್ತದ ಕಾಳುಗಳು ತಳಕ್ಕೆ ಹೋಗಿ ಬೈಹುಲ್ಲು ಮೇಲೆ ನಿಲ್ಲುವುದು. ಮೇಲಿರುವ ಹುಲ್ಲನ್ನು ಆಗಾಗ ತೆಗೆಯುತ್ತಾರೆ. ಕೆಲವು ಎತ್ತುಗಳು ಒಕ್ಕಲ್‌ನ್ನು ನಡುನಡುವೆ ನಿಲ್ಲಿಸುವಾಗ ಹುಲ್ಲಿನ ಎಡೆಯಿಂದ ಬತ್ತವನ್ನು ತಿನ್ನುತ್ತವೆ. ಇದನ್ನು ತಪ್ಪಿಸಲು ಬಿದಿರನ್ನು ಸಪೂರವಾಗಿ ಸೀಳಿ ಕೊಡೆಯ ಆಕಾರದಲ್ಲಿ ನೇಯ್ದು ಅದನ್ನು ಎತ್ತಿನ ಬಾಯಿಗೆ ಕಟ್ಟುತ್ತಾರೆ (ಬಾಯಿ ಕುಕ್ಕೆ) ಒಕ್ಕಲ್ ಮಾಡುವಾಗ ಎತ್ತುಗಲು ಸಗಣಿ ಹಾಕುವ ಸಮಸ್ಯೆ ಇರುತ್ತದೆ. ಸಗಣಿ ಬತ್ತದಲ್ಲಿ ಬೀಳದ ಹಾಗೆ ಹಿಡಿದಿಡಲು ಉದ್ದವಾದ ಬಿದಿರಿನ ಒಂದು ತುದಿಯನ್ನು ಸೀಳಿ 'ಕೊಟ್ಟೆ'ಯ ಹಾಗೆ ಹೆಣೆದು ಒಂದು ಉಪಕರಣವನ್ನು ತಯಾರಿಸಿರುತ್ತಾರೆ. ಇದನ್ನು 'ಚಾಣಕಕೊಟ್ಟ' (ಸಗಣಿ ಬುಟ್ಟಿ) ಎನ್ನುತ್ತಾರೆ. ಒಕ್ಕಲ್‌ನ ಅನಂತರ ಬತ್ತವನ್ನು ಒಟ್ಟು ಸೇರಿಸಲು 'ಪೊಲಿಮಾಂದಿ'ಯನ್ನು (ಗ್ಯಾರೆಮಣೆ) ಉಪಯೋಗಿಸುತ್ತಾರೆ. ಪೊಲಿಮಾಂದಿಯನ್ನು ತಯಾರಿಸಲು ಚೆಂಪಕ ವೇಜ, ಅಯನಿ - ಇವುಗಳಲ್ಲಿ ಯಾವುದಾದರೊಂದು ಮರದ ಕಾಂಡದಿಂದ ಅರ್ಧ ವೃತ್ತಾಕಾರದ ಹಲಗೆಯನ್ನು ಕತ್ತರಿಸಿ ತೆಗೆದು ಅದಕ್ಕೆ ಬಿದಿರಿಸಿ ಉದ್ದನೆಯ ಒಂದು ಹಿಡಿಯನ್ನು ಜೋಡಿಸುತ್ತಾರೆ. ಪೊಲಿಮಾಂದಿ, ಒಕ್ಕಲ್‌ಕಳ ಗುಡಿಸುವುದಕ್ಕಾಗಿ ಉಪಯೋಗಿಸುವ ಹಿಡಿಸೂಡಿಯೂ ವಿಶಿಷ್ಟವಾದುದು. ಕುರುಂದೋಟ್ಟಿಯ ಬೇರುಗಳಿಂದ ಈ ಹಿಡಿಸೂಡಿಯನ್ನು ತಯಾರಿಸುತ್ತಾರೆ. ಒಕ್ಕಲ್‌ಗೆ ಕನಿಷ್ಠ ಮೂರು ಜನರಾದರೂ ಇರಬೇಕು. ಒಬ್ಬರು ಎತ್ತನ್ನು ನಡೆಸಲು ಇನ್ನೊಬ್ಬರು, ಹುಲ್ಲು ಮಗುಚಲು ಮತ್ತೊಬ್ಬರು ಬೈಹುಲ್ಲು ಬಾಚಲು. ಏಳು ಎತ್ತುಗಳಿದ್ದರೆ ಒಂದು ದಿನದಲ್ಲಿ ಹತ್ತು ಮುಡಿ ಬತ್ತ ಬೇರ್ಪಡಿಸಬಹುದು ಎನ್ನುತ್ತಾರೆ.

ಕಾಲ ಕಳೆದಂತೆ ವಯನಾಡಿನಲ್ಲಿ ಒಕ್ಕಲ್ ಪದ್ಧತಿ ಹಲವೆಡೆ ಮರೆಯಾಯಿತು. ಬದಲಾಗಿ 'ಒಕ್ಕಲ್ ಬಂಡಿ'ಯಿಂದ ಬತ್ತ ಬೇರ್ಪಡಿಸಲಾರಂಭಿಸಿದರು. ಸಿಲಿಂಡರ್ ಆಕಾರದಲ್ಲಿ ಕೆತ್ತಿದ ದೊಡ್ಡದಾದ ಒಂದು ಬಂಡೆಕಲ್ಲಿಗೆ ಮಧ್ಯದಲ್ಲಿ ಉದ್ದಕ್ಕೆ ಕಬ್ಬಿಣದ ಸಲಾಕೆಯೊಂದನ್ನು ಹಾಯಿಸಿ ಆಯತಾಕಾರದ ಕಬ್ಬಿಣದ ಚೌಕಟ್ಟಿಗೆ ಜೋಡಿಸುತ್ತಾರೆ. ಇದು 'ಒಕ್ಕಲ್ ಬಂಡಿ' ಇದಕ್ಕೆ ಉದ್ದನೆಯ ಕೋಲೊಂದನ್ನು ಸಿಕ್ಕಿಸಿ ನೊಗಕ್ಕೆ ಕಟ್ಟುತ್ತಾರೆ. ಬಿಚ್ಚಿ ಹರಡಿದ ಬತ್ತದ ಪೈರಿನ ಮೇಲೆ ಈ ಒಕ್ಕಲ್

ಬಂಡಿಯನ್ನು ಎರಡು ಎತ್ತುಗಳಿಂದ ಎಳೆಸಿದಾಗ ಬತ್ತ ಬೇರ್ಪಡುತ್ತದೆ. ಎತ್ತುಗಳನ್ನು ನಡೆಸಲು ಮತ್ತು ಬೈಹುಲ್ಲನ್ನು ತೆಗೆಯಲು ಇಬ್ಬರು ಆಳುಗಳಿರುತ್ತಾರೆ. ಈ ವಿಧಾನದಿಂದ ಒಂದು ದಿನದಲ್ಲಿ ನಲ್ವತ್ತು ಮುಡಿ ಬತ್ತವನ್ನು ಬೇರ್ಪಡಿಸಬಹುದು. ಒಕ್ಕಲ್ ಮಾಡುವಾಗ ಹಾಡುವ 'ಒಕ್ಕಲ್ ಪಾಟ್ಟು'ಗಳು ಇವೆ.

ಒಕ್ಕಲ್ ಮುಗಿದ ಬಳಿಕ ಬತ್ತ ಮತ್ತು ಜೊಳ್ಳನ್ನು ಬೇರ್ಪಡಿಸಲು ವಯನಾಡಿನ ವಿಶೇಷ ವಿಧಾನಗಳಿವೆ. ನಾಡಿನ ಉಳಿದೆಡೆ ಗಾಳಿ ಬೀಸುವ ಸಮಯ ನೋಡಿ 'ಪರಕೊಟ್ಟ' ಅಥವಾ 'ಕೊಂಬುಮುರ' ಅಥವಾ ಎರಡು ಮೂಲೆಗಳುಳ್ಳ ಮೊರದಿಂದ ಬತ್ತ ತುಂಬಿ ಎತ್ತಿಹಿಡಿದು ಗಾಳಿ ಬೀಸುವ ದಿಕ್ಕಿನಲ್ಲಿ ಸ್ವಲ್ಪ ಸ್ವಲ್ಪವಾಗಿ ಸುರಿಯುತ್ತಾರೆ. ಇದು ಜೊಳ್ಳು ಕಸಗಳನ್ನು ಬೇರ್ಪಡಿಸುವ ವಿಧಾನ. ಗಾಳಿ ಇಲ್ಲದ ಕಾಲವಾದರೆ ಬುಟ್ಟಿಯಿಂದ ಸುರಿಯುವಾಗ ಮೊರದಿಂದ ಗಾಳಿ ಬೀಸುತ್ತಾರೆ. ಭಾರ ಕಡಿಮೆ ಇರುವ ಜೊಳ್ಳು, ಕಸ ಬೀಸುವ ಗಾಳಿಗೆ ದೂರ ಹೋಗಿ ಬೀಳುವುದು. ಈ ಜೊಳ್ಳನ್ನು ಇನ್ನೊಮ್ಮೆ ಮೊರದಲ್ಲಿ ಹಾಕಿ ಗೇರಿ (ಕೇರಿ) ಉಳಿದ ಬತ್ತವನ್ನು ತೆಗೆಯುತ್ತಾರೆ.

ವಯನಾಡಿನಲ್ಲೂ ಬತ್ತವನ್ನು ಬುಟ್ಟಿಯಿಂದ ಸುರಿದು ಗಾಳಿ ಬೀಸಿ ಕಾಳು - ಜೊಳ್ಳು ಬೇರ್ಪಡಿಸುವ ಪದ್ಧತಿ ಇತ್ತು. ಗಾಳಿ ಬೀಸುವುದಕ್ಕೆ ಮೊರದ ಬದಲು 'ಪೊಂಲಿಬಾಟ್ಟ' ಉಪಯೋಗಿಸುತ್ತಿದ್ದರು. (ಬಿದಿರಿನಿಂದ ನೇಯುವ, ಎರಡು ಹಿಡಿಗಳಿರುವ ರಚನೆ ಇದು). ಆದರೆ ವಿಶಿಷ್ಟವಾದ ಇನ್ನೊಂದು ವಿಧಾನವಿದೆ. ಬತ್ತವನ್ನು ಎರಡು ಮೂಲೆಯಿರುವ ಮೊರದಲ್ಲಿ ತೆಗೆದು ಗಾಳಿಯ ದಿಕ್ಕನ್ನು ನೋಡಿ ಬಲವಾಗಿ ಬೀಸಿ ಎಸೆಯುತ್ತಾರೆ. ಆಗ ಬತ್ತ ಹತ್ತಿರದಲ್ಲೂ ಬೈಹುಲ್ಲಿನ ಹುಡಿ ಅದರ ಸುತ್ತಲೂ ಮೇಲ್ಭಾಗದಲ್ಲಿ ಹಾಗೂ ಭಾರ ಕಡಿಮೆ ಇರುವ ಜೊಳ್ಳು ಎಲ್ಲಕ್ಕಿಂತಲೂ ದೂರದಲ್ಲೂ ಬೀಳುವುದು. ಬತ್ತದ ಮೇಲಿನಿಂದ ಬೈಹುಲ್ಲಿನ ಹುಡಿಯನ್ನು ಗುಡಿಸಿ ದೂರ ಮಾಡುವರು.

ವಯನಾಡಿನಲ್ಲಿ ಮಳೆ, ಗಾಳಿ, ಚಳಿ, ಬಿಸಿಲು ಎಲ್ಲವೂ ಅಧಿಕವಾಗಿರುತ್ತದೆ. ಕೃಷಿ ಕೆಲಸ ಮಾಡುವಾಗ ಇವುಗಳಿಂದ ರಕ್ಷಣೆ ಪಡೆಯಲು ಅಲ್ಲಿಯ ಆದಿವಾಸಿಗಳು ಕಂಡು ಹಿಡಿದ ರಕ್ಷಾ ಕವಚ 'ಕುರಂಬು ಕುಡ' (ಗೊರಬೆ). ಬಿದಿರಿನಿಂದ ನೇಯುವ ಇದನ್ನು ಧರಿಸಿದರೆ ಸೊಂಟದ ಕೆಳಗಿನವರೆಗೆ ಬೆನ್ನನ್ನು ಮುಚ್ಚುವುದು. ಇದರ ಒಳಭಾಗವನ್ನು ಚಣ್ಣಕ್ಕೂವ ಎಂಬ ಗಿಡದ ಎಲೆಗಳಿಂದ ಮುಚ್ಚುತ್ತಾರೆ.

*ಎಸ್.ಸಿ.ಕೆ. ಅನುವಾದ ಕೆ.ಕೆ.*

**ವಲ್ಲಂ (ಗೂಡೆ)** 'ಮೆದಿಕ್ಕಳಂ' (ಬತ್ತ ಪ್ರತ್ಯೇಕಿಸುವ ಕಣ)ಗಳಲ್ಲಿ ಕೇಳಿಬರುವ ಒಂದು ಮಲಯಾಳಿ ಸಮೃದ್ಧಿ ಹಾಡು ಹೀಗಿದೆ. ಇಲ್ಲಂ ನಿರ ವಲ್ಲಂ ನಿರ ಕೂಟ್ಟ ನಿರ ವಟ್ಟಿನಿರ ಪರನಿರ ಅರನಿರ ಪತ್ತಾಯಂ ನಿರ ನಿರಯೋ ನಿರ ನಿರಯೋ ಪೊಲಿಯೋ ಪೊಲಿ ಪೊಲಿಯೋ. ಇದರ ಆಶಯವೆಂದರೆ ಇಲ್ಲಂ (ರೈತನ ಮುಖ್ಯಮನೆ) ತುಂಬಲಿ, ವಲ್ಲವು ತುಂಬಲಿ ಕುಕ್ಕೆಯು ತುಂಬಲಿ ಹೆಡಗೆ ತುಂಬಲಿ ಪರೆ ತುಂಬಲಿ ಕೋಣೆ ತುಂಬಲಿ ಪತ್ತಾಯವು ತುಂಬಲಿ ತುಂಬಿಯೇ ತುಂಬಲಿ ಸಮೃದ್ಧಿಯು ಹೆಚ್ಚಲಿ ಎಂಬುದು. ಇಲ್ಲಿ ಬರುವ 'ವಲ್ಲ'ವು ಕೃಷಿ ಬದುಕಿನ ಅವಿಭಾಜ್ಯ ಅಂಗವಾಗಿರುವ ಒಂದು ಪುಟ್ಟ ಸಾಧನ. ತೆಂಗಿನ ಗರಿಯನ್ನು ಇಡಿಯಾಗಿ ಕತ್ತರಿಸಿ ಬಿಸಿಲಲ್ಲಿ ಹಾಕಿ ಬಾಡಿಸಿ ಎರಡಾಗಿ ಸೀಳಬೇಕು. ಸೀಳುವಾಗ ಗರಿಯದಿಂಡಿನ ಭಾಗವನ್ನು ಒಂದಿಷ್ಟು ಉಳಿಸಿಕೊಂಡೇ ಸೀಳಬೇಕು. ಬಳಿಕ ಗರಿಯನ್ನು ಚೆನ್ನಾಗಿ ಹೆಣೆದು ವೃತ್ತಾಕಾರವಾಗಿ ದೊಡ್ಡ ಹೆಡಗೆಯ ಆಕಾರದಲ್ಲಿ ಬಾಗಿಸಿಕೊಂಡು ದಿಂಡಿನ ಭಾಗದ ಎರಡು ತುದಿಗಳನ್ನು ಪರಸ್ಪರ ಸೇರಿಸಿ ಬಿಗಿಯಬೇಕು. ಕೆಳಭಾಗದಲ್ಲಿಯ ಓಲೆಗಳನ್ನು ಸೆಣಬು ಅಥವಾ ಬಾಳೆಯ ಹಗ್ಗಗಳಿಂದ ಪರಸ್ಪರ ಜೋಡಿಸಿ ಕಟ್ಟಬೇಕು. ಎಲ್ಲ ಓಲೆಗಳೂ ಹೀಗೆ ಬಂಧಿತವಾದಾಗ ಮೇಲ್ಭಾಗವು ತೆರೆದುಕೊಂಡು ಕೆಳಭಾಗವು ಮುಚ್ಚಿದ ಒಂದು ಸಲಕರಣೆ ಸಿದ್ಧವಾಗುತ್ತದೆ. ಇದೇ ವಲ್ಲಂ. ಒಂದು ಹೆಡಿಗೆಯಲ್ಲಿ ತುಂಬಿಸಬಹುದಾದ ವಸ್ತುಗಳಿಗಿಂತ ಹೆಚ್ಚು ವಸ್ತುಗಳನ್ನು ಇದರಲ್ಲಿ ತುಂಬಿಸಬಹುದು. ಓಲೆಗರಿಗಳ ಗಾತ್ರಾನುಸಾರವಾಗಿ ವಲ್ಲಂ ಕೂಡ ವ್ಯತ್ಯಾಸವಾಗುತ್ತದೆ.

ತರಗೆಲೆ, ಹಸುರು ಹುಲ್ಲು, ಒಣಹುಲ್ಲು, ಹಸುರೆಲೆಗಳು ಮುಂತಾದವುಗಳನ್ನು ತುಂಬಿಸಿಕೊಂಡು ಒಯ್ಯುವುದಕ್ಕೆ ವಲ್ಲಂ ತುಂಬ ಉಪಯುಕ್ತ. ಹೊಲಗದ್ದೆಗಳಲ್ಲಿ ಗೆಡ್ಡೆಗೆಣಸು ಬೆಳೆಗಳನ್ನು ಬೆಳೆಸಲು ಅಗತ್ಯವಾದ ಗೊಬ್ಬರ (ಮುಖ್ಯವಾಗಿ ತರಗೆಲೆ)ವನ್ನು ಇಂಥ ವಲ್ಲಂಗಳಲ್ಲಿ ಶೇಖರಿಸಿ ಬಯಲು ಅಟ್ಟಳಿಗೆಗಳಲ್ಲಿ ಇರಿಸಿಕೊಳ್ಳುತ್ತಾರೆ. ಕೆಸು, ಸುವರ್ಣಗೆಡ್ಡೆ, ಸಿಹಿಗೆಣಸು, ಹುತ್ತರಿಗೆಣಸು ಮುಂತಾದುವನ್ನು ಬೆಳೆಯುವಾಗ ಬೀಜಗಳನ್ನು ನೆಟ್ಟು ಅವುಗಳ ಮೇಲೆ ಹೀಗೆ ಶೇಖರಿಸಿ ಇಟ್ಟಿರುವ ತರಗೆಲೆಯನ್ನು ಸುರಿಯುತ್ತಾರೆ. ಬಳಿಕ ಒಂದಿಷ್ಟು ಮಣ್ಣು ಅದರ ಮೇಲೆ ಹರಡುತ್ತಾರೆ. ಇದು ಮೇಷಮಾಸದ ಬಿರುಬಿಸಿಲಿಗೆ ಬೀಜಗಳು ಒಣಗಿ ಹೋಗದಂತೆ ತಡೆದು ಮಳೆಬಿದ್ದ ಕೂಡಲೆ ಒಳ್ಳೆಯ ಗೊಬ್ಬರವಾಗಿ ಆ ಬೀಜಗಳಿಗೆ ದೊರಕುತ್ತದೆ.

ವಲ್ಲಂಗಳ ತಯಾರಿ ಮತ್ತು ಅವುಗಳ ಉಪಯೋಗ ನಿಧಾನವಾಗಿ ಕಡಿಮೆಯಾಗುತ್ತಿದೆ. ತಮ್ಮ ಅಗತ್ಯಗಳಿಗೆ ಬೇಕಾದ ವಸ್ತುಗಳನ್ನು ಗರಿಷ್ಠ ಮಟ್ಟದಲ್ಲಿ ತಮ್ಮ ಸುತ್ತಮುತ್ತ ದೊರೆಯುವ ಸಾಮಗ್ರಿಗಳಿಂದ ನಿರ್ಮಿಸಿಕೊಳ್ಳುವ ಪರಿಸರ ಸ್ನೇಹಿ ಪ್ರವೃತ್ತಿಕೂಡ ಕಡಿಮೆಯಾಗುತ್ತಿದೆ.

*ಎಂ.ಟಿ.*

**ವೀಳ್ಯದೆಲೆ (ಬೀಟಲ್ ಲೀಫ್)** ಪೈಪರೇಸೀ ಕುಟುಂಬಕ್ಕೆ ಸೇರಿದ ಇದರ ಸಸ್ಯ ವೈಜ್ಞಾನಿಕ ನಾಮ ಮ್ಯಾಗ್ನಿಲಿಪ್ಸಿಡ. ತಮಿಳಿನಲ್ಲಿ ವೆಟ್ರಿಲೈ, ವೆತ್ತಿಲೈಪಾಕು ಎಂದೂ ತೆಲುಗಿನಲ್ಲಿ ತಮಲಪಾಕು ಎಂದೂ ಮಲಯಾಳದಲ್ಲಿ ವೆತ್ತಿಲ ಎಂದೂ ತುಳುವಿನಲ್ಲಿ ಬಚ್ಚಿರೆ ಎಂದೂ ಕರೆಯುವರು. ಇದು ಮಲೇಷ್ಯ ಮೂಲದ್ದೆಂದು ಗುರುತಿಸಲಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ವೀಳ್ಯದೆಲೆಗೆ ವಿಶೇಷ ಮಹತ್ತ್ವವಿದೆ. ಇದರಲ್ಲಿ ರಾಣಿ ಎಲೆ, ಲಕ್ಕವಳ್ಳಿ, ಅಂಬಡೆ, ಕರಿ ಎಲೆ, ತುಂಬಳೆಲೆ, ಮೈಸೂರು ಚಿಗುರೆಲೆ. ಹೀಗೆ ಹಲವು ಬಗೆಯ ತಳಿಗಳಿವೆ. ರಾಣಿಬೆನ್ನೂರು, ಭಟ್ಕಳ, ಮೈಸೂರು, ಬಯಲುಸೀಮೆ, ಮಲೆನಾಡುಗಳಲ್ಲಿ ಅನೇಕ ಜಾತಿಗಳು ಕಂಡುಬರುತ್ತವೆ.

**ರಾಣಿ ಎಲೆ :** ಇದು ಬಿಳಿಯ ಬಣ್ಣ ಹೊಂದಿದ್ದು ಅಂಗೈಯಷ್ಟು ಅಗಲವಿರುತ್ತದೆ. ಖಾರ ಕಡಿಮೆಯಿರುವ ತೆಳುವಾದ ಈ ಎಲೆಯ ರುಚಿ ಹೆಚ್ಚಾಗಿರುತ್ತದೆ. ಇದನ್ನು ಭಟ್ಕಳ, ರಾಣಿಬೆನ್ನೂರುಗಳಲ್ಲಿ

ಹೆಚ್ಚಾಗಿ ಬೆಳೆಯುವರು. ವಿದೇಶಗಳಿಗೆ ಹೆಚ್ಚು ರಫ್ತಾಗುವ ವಾಣಿಜ್ಯ ಬೆಳೆಯಿದು.



**ಲಕ್ಕವಳ್ಳಿ :** ದೀರ್ಘಕಾಲವಿರುವ ಸಾಮರ್ಥ್ಯ ಇದಕ್ಕಿದೆ. ಕಡುಹಸುರು ಬಣ್ಣದ ಖಾರ ಹೆಚ್ಚಾಗಿರುವ ಚಿಕ್ಕ ಎಲೆಯಿದು. ಇದಕ್ಕೆ ರೋಗಬಾಧೆ ಕಡಿಮೆ. ಇದರ ಮೂಲ ಭದ್ರಾವತಿಯ ಲಕ್ಕವಳ್ಳಿ. ಪಶ್ಚಿಮಘಟ್ಟದ ಕಾಡುಗಳಲ್ಲೂ ಇದು ಬೆಳೆಯುತ್ತದೆ.

**ಅಂಬಡೆ :** ಉದ್ದನೆಯ ಬಳ್ಳಿಗಳಲ್ಲಿ ಅಥವಾ ಪೊದೆಯ ರೂಪದಲ್ಲಿ ಬೆಳೆಯುತ್ತದೆ. ರುಚಿ ಸಪ್ಪೆಯಾಗಿದ್ದು ತಾಂಬೂಲಕ್ಕೆ ಹೆಚ್ಚು ಬಳಸುವುದಿಲ್ಲ. ದೇವರ ಕಾರ್ಯಗಳಲ್ಲಿ ಹೆಚ್ಚು ಉಪಯುಕ್ತ. ಸಿಹಿಬೀಡಾಗಳಿಗೆ ಬಳಸುವುದುಂಟು.

**ಕಣಗಿಲೆ :** ಎಲೆ ತುಸು ದಪ್ಪವಾಗಿಯೂ ನೇರವಾಗಿಯೂ ಇದ್ದು ಒಳ್ಳೆಯ ರುಚಿಯುಳ್ಳಂಥದ್ದು.

**ಕರಿಯೆಲೆ :** ಇದು ಒರಟಾದ ಅಂಗೈಯಗಲದ ಕಡುಹುಸುರು ಬಣ್ಣವಿರುವಂಥದು. ಹೆಚ್ಚು ಖಾರ. ಹೆಚ್ಚು ದಿನ ಇಡಲು ಆಗುವುದಿಲ್ಲ. ಸಾಮಾನ್ಯವಾಗಿ ಹೊಗೆ ಸೊಪ್ಪಿನೊಂದಿಗೆ ಬೆರೆಸಿ ತಿನ್ನುವರು.

**ಕುಂಬಳ ಎಲೆ :** ಸಾಧಾರಣ ಖಾರದ ದೊಡ್ಡದಾದ ಎಲೆಯಿದು. ತೆಳುವಾಗಿದ್ದು, ಬಿಳಿ ಹಸುರು ಬಣ್ಣವಿರುತ್ತದೆ. ವೃತ್ತಾಕಾರವಾಗಿ ಊಟದ ಎಲೆಯಂತಿರುತ್ತದೆ. ಸಿಹಿ ಬೀಡಾದಲ್ಲಿ ಇದರ ಬಳಕೆ ಹೆಚ್ಚು.

**ಮೈಸೂರು ಚಿಗುರೆಲೆ :** ಬಿಳಿಬಣ್ಣದ ಅಗಲ ಕಡಿಮೆಯಿರುವ ತೆಳುವಾದ ಎಲೆಯಿದು. ವೀಳ್ಯದೆಲೆಗಳಲ್ಲೆಲ್ಲ ಹೆಚ್ಚು ರುಚಿಯುಳ್ಳದ್ದು, ಸಮಾರಂಭಗಳಲ್ಲಿ ಈ ಎಲೆಯನ್ನು ಹೆಚ್ಚಾಗಿ ಬಳಸುವುದುಂಟು.

**ನಾಗವಲ್ಲಿ :** ದಟ್ಟಹಸುರು ಬಣ್ಣವಿರುವ, ಕಡಿಮೆ ಖಾರ ಇರುವ ಸಾಧಾರಣ ಅಗಲದ ಎಲೆಯಿದು. ನಾಗರದೆಡೆಯಂತೆ ಆಕಾರವಿರುವುದರಿಂದ ಇದನ್ನು ನಾಗವಲ್ಲಿ ಎನ್ನುವರು, ದೀರ್ಘಕಾಲ ಬಾಳಿಕೆ ಬರುತ್ತದೆ.

**ಕರ್ಪೂರವಲ್ಲಿ :** ದಟ್ಟ ಹಸುರು ಬಣ್ಣದಿಂದ ಕೂಡಿದ ಹಸ್ತದಷ್ಟು ಅಗಲದ ಎಲೆಯಿದು. ಕರ್ಪೂರದಂತೆ ಸುವಾಸನೆ ಹೊಂದಿದ್ದು ಸಾಧಾರಣ ಖಾರವಿರುವ ಈ ಎಲೆ ಎಲ್ಲ ರೀತಿಯ ತಾಂಬೂಲಗಳಲ್ಲೂ ಬಳಸಬಹುದಾದಂಥದ್ದು.

**ಪಂಚವಲ್ಲಿ :** ಈ ಎಲೆಗಳ ತುದಿ ಚೂಪಾಗಿದ್ದು ಹಸುರು ಬಣ್ಣ ಹೊಂದಿದ್ದು, ಆಕಾರದಲ್ಲಿ ಬಾದಾಮಿಯನ್ನು ಹೋಲುತ್ತದೆ. ಬೆಳೆದ ಎಲೆಗಳು ತಿನ್ನಲು ಯೋಗ್ಯ. ಇದು ಸುವಾಸನಾಯುಕ್ತವಾದುದು. ಹೆಚ್ಚು ಖಾರವಿದ್ದು ಔಷಧಿಗಳಿಗೆ ಬಳಕೆಯಾಗುತ್ತದೆ.

ವೀಳ್ಯದೆಲೆಯನ್ನು ಕರಾವಳಿ, ಮಲೆನಾಡುಗಳ ಅಡಕೆತೋಟದಲ್ಲಿ ಉಪಬೆಳೆಯಾಗಿ ಬೆಳೆದರೆ ರಾಣೆಬೆನ್ನೂರು, ಮೈಸೂರು, ತುಮಕೂರುಗಳಲ್ಲಿ ಮುಖ್ಯಬೆಳೆಯಾಗಿ ಬೆಳೆಯುವರು.

**ಭೂಮಿ ಹದಮಾಡುವುದು :** ಇದನ್ನು ಬೆಳೆಯಲು ಮರಳು ಮಿಶ್ರಿತ ಕೆಂಪು ಗೋಡುಮಣ್ಣು ಅತ್ಯುತ್ತಮ. ಇದಕ್ಕೆ ಸದಾ ನೀರುಣಿಸಿ, ನಿರಂತರವಾಗಿ ಪೋಷಣೆ ಮಾಡುತ್ತಿರಬೇಕು. ಕಡಿಮೆ ಬಿಸಿಲು, ತೇವಾಂಶ ಹೆಚ್ಚಿರುವ ಪ್ರದೇಶದಲ್ಲಿ ಮಾತ್ರ ಬೆಳೆಯಲು ಸಾಧ್ಯ. ಇದಕ್ಕಾಗಿ ನೆರಳು ನೀಡುವ ಮರಗಳನ್ನು ನೆಟ್ಟರೆ ಬಳ್ಳಿಗಳಿಗೆ ಆಸರೆ ಒದಗಿಸಿ ನೆರಳೂ ದೊರೆಯುತ್ತದೆ.

ವೀಳ್ಯದೆಲೆ ತೋಟಮಾಡಲು ಒಂದು ವರ್ಷ ಮೊದಲೇ ನೆಲವನ್ನು ಹದಗೊಳಿಸಿಕೊಳ್ಳಬೇಕು. ಎಲ್ಲ ರೀತಿಯ ಕಳೆ ಗಿಡಗಳನ್ನು ಬೇರು ಸಹಿತ ತೆಗೆದು ನೆಲವನ್ನು ಶುಚಿಗೊಳಿಸಬೇಕು. ಆಮೇಲೆ ನೇಗಿಲಿನಿಂದ ಉತ್ತು ಹದಮಾಡಿ ಒಂದು ಎಕರೆಗೆ ಸು. 300 ಕುರಿಗಳ ಹಿಕ್ಕೆ ಮತ್ತು ಮೂತ್ರವನ್ನು ಹಾಕಬೇಕು.ಕಳಿತ ಕೊಟ್ಟಿಗೆ ಗೊಬ್ಬರ ಕೊಡಬೇಕು. ಒಂದು ಎಕರೆ ತೋಟಕ್ಕೆ 100 ಎತ್ತಿನ ಗಾಡಿ ಹಸುರೆಲೆ ಗೊಬ್ಬರ ಒದಗಿಸಬೇಕು. ಅನಂತರ ಎರಡು ಮೂರು ಬಾರಿ ಉದ್ದವಾಗಿಯೂ ಅಡ್ಡವಾಗಿಯೂ ಕುಂಟೆ ಹೊಡೆಯಬೇಕು. ಹೀಗೆ ಮಾಡುವುದರಿಂದ ಗೊಬ್ಬರ ಮಣ್ಣಿನೊಂದಿಗೆ ಬೆರೆತು ಮಣ್ಣು ಮೃದುವಾಗುತ್ತದೆ. ಉಳುಮೆ ಅಥವಾ ಭೂಮಿ ಹದಮಾಡುವಿಕೆಯ ಕೆಲಸವನ್ನು ಬಿಸಿಲು ಹೆಚ್ಚಿರುವ ತಿಂಗಳುಗಳಲ್ಲಿ (ಮಾರ್ಚ್-ಮೇ) ನಡೆಸಬೇಕು. ಬಿಸಿಲಿನ ಝಳಕ್ಕೆ ಮಣ್ಣಿನಲ್ಲಿರುವ ರೋಗಾಣುಗಳು ನಾಶವಾಗುತ್ತವೆ.

ಎಲೆ ಬಳ್ಳಿಗಳನ್ನು ನಾಟಿ ಮಾಡುವ ಮೊದಲೇ ಬಳ್ಳಿ ಹಬ್ಬಲು ವಿವಿಧಜಾತಿಯ ಶೀಘ್ರವಾಗಿ ಬೆಳೆಯುವ ಗಿಡಗಳನ್ನು ಬೆಳೆಸಬೇಕು. ನಿರ್ದಿಷ್ಟ ಅಂತರ ಮತ್ತು ಅಳತೆಯಲ್ಲಿ ಚೌಕಾಕಾರದ ಮಡಿಗಳನ್ನು ಮಾಡಿ ಇನ್ನೊಮ್ಮೆ ಗೊಬ್ಬರ ಮತ್ತು ಮರಳು ಮಿಶ್ರಿತ ಮಣ್ಣನ್ನು ಬೆರೆಸಬೇಕು. ಪ್ರತಿಯೊಂದು ಚೌಕದ ಮೂಲೆಯಲ್ಲಿ ಅಗಸೆ, ಚೊಗಚೆ, ಬೂರುಗ, ನುಗ್ಗೆ, ಹಾಲುವಾಣ ಮುಂತಾದ ಶೀಘ್ರವಾಗಿ ಬೆಳೆಯುವ ಮರಗಳ ಬೀಜಗಳನ್ನು ಬಿತ್ತಬೇಕು. ಮೃಗಶಿರಾ ಮಳೆಯಲ್ಲಿ ಬೀಜ ಬಿತ್ತಿದರೆ ಉತ್ತರೆಯಿಂದ ಅನೂರಾಧ ಮಳೆಯ ವೇಳೆಗೆ ಗಿಡಗಳು ಚೆನ್ನಾಗಿ ಬೆಳೆದು ಬಳ್ಳಿಯನ್ನು ನೆಡಲು ಅನುಕೂಲವಾಗುತ್ತದೆ. ಗಿಡ ಬೆಳೆಯುವಾಗ ಚಿಗುರನ್ನು ಚಿವುಟುತ್ತಾ ಹೋದರೆ ಅದು ಶೀಘ್ರವಾಗಿ ಬೆಳೆಯುತ್ತದೆ. ಇದರೊಂದಿಗೆ ತೋಟದ ಸುತ್ತ ಅಂಚಿನಲ್ಲಿ ಸಿಲ್ವರ್ ಓಕ್, ಸರ್ವೆ, ತೇಗ, ಬಿದಿರು, ಬಕುಳ, ದೇವದಾರು ಮೊದಲಾದ ಗಾಳಿಯನ್ನು ತಡೆಯುವ ಮರಗಳನ್ನು ಮೊದಲೇ ಬೆಳೆಸಿರಬೇಕು. ಇವು ಪೂರ್ವ-ಪಶ್ಚಿಮ ದಿಕ್ಕಿನಲ್ಲಿರಬೇಕು.

**ಬೆಳೆಯುವ ವಿಧಾನ :** ಪ್ರಾದೇಶಿಕ ಭೂಗುಣಕ್ಕೆ ಅನುಗುಣವಾಗಿ ಬಳ್ಳಿಯನ್ನು ನೆಟ್ಟು ವೀಳ್ಯದೆಲೆ ಬೆಳೆಸುತ್ತಾರೆ. ಮಲೆನಾಡಿನಲ್ಲಿ 15 ವರ್ಷವಾದ ಅಡಕೆ ಮರಗಳಿಗೆ ಜ್ಯೇಷ್ಠ ಮಾಸದಲ್ಲಿ ಮರದ ಬುಡದಲ್ಲಿ 1½ ಅಡಿ ಆಳದ ಗುಳಿ ತೆಗೆದು ಒಂದು ತಿಂಗಳು ಬಿಡಬೇಕು. ಅಗೆದ ಮಣ್ಣಿಗೆ ಗೊಬ್ಬರ ಸೇರಿಸಿ ಗುಳಿ ತುಂಬಬೇಕು. ಐದು ಕಣ್ಣುಗಳಿಂದ ದಪ್ಪಗಿರುವ ಆರೋಗ್ಯಕರ ಬಳ್ಳಿಯನ್ನು ಕತ್ತರಿಸಿ ಗುಳಿಗೆ ನೆಡುವಾಗ ಅದು ಮರದ ಕಡೆಗೆ ವಾಲಿರುವಂತೆ ನೆಡಬೇಕು. ಪ್ರತಿ ದಿವಸ ನೀರನ್ನು ಹಾಕಬೇಕು. ಒಂದು ತಿಂಗಳ ಬಳಿಕ ಮಣ್ಣು ಸಡಿಲಿಸಿ ಬಳ್ಳಿಯನ್ನು ಮೇಲೆತ್ತಿ ಮರಕ್ಕೆ ಕಟ್ಟಬೇಕು. ಆಗಾಗ ಮೇಲು ಗೊಬ್ಬರ ಸೇರಿಸುತ್ತಲೇ ಇರಬೇಕು. ಹೀಗೆ ಮಾಡುತ್ತಾ ಹೋದರೆ ಮೂರು ವರ್ಷಗಳ ಅನಂತರ ಎಲೆಗಳು ಸಮೃದ್ಧವಾಗಿ ಬೆಳೆದು ಹೆಚ್ಚಿನ ಇಳುವರಿ ಕೊಡುತ್ತವೆ. ಎಲೆಗಳು ಸಣ್ಣದಾದರೆ ಬಳ್ಳಿಯನ್ನು ಸಿಂಬಿ ಸುತ್ತಿ ನೆಲಕ್ಕೆ ಹುಗಿಯಬೇಕು. ಯಥಾಪ್ರಕಾರ ಗೊಬ್ಬರ ನೀರುಗಳನ್ನು ಕೊಡಬೇಕು. ಬಯಲು ಸೀಮೆಯಲ್ಲಿ ಚೈತ್ರ-ವೈಶಾಖ ತಿಂಗಳು ತೋಟ ಮಾಡಲು ಸರಿಯಾದ ಕಾಲ. ನೆಲವನ್ನು ಎರಡು ಮೂರು ಬಾರಿ ತುಂಬ ಆಳವಾಗಿ ಉಳಬೇಕು. ಅನಂತರ ನೀರು ಹಾಯಿಸಿ ಅಗತೆ ಮಾಡಿ ಸುತ್ತಲೂ ಬೇಲಿ ಕಟ್ಟಿ ಮರಗಳನ್ನು ಬೆಳೆಸಬೇಕು. ಹಸುರುಗೊಬ್ಬರ, ಕೊಟ್ಟಿಗೆ ಗೊಬ್ಬರ ಸೇರಿಸಿ ಉಳುಮೆ ಮಾಡಬೇಕು. ಚೌಕಾಕಾರದ ಮಡಿ ಮಾಡಿ ಅವುಗಳ ಮಧ್ಯ ಸಣ್ಣ ಗುಳಿ ತೆಗೆದು ಎರಡು ಮೊಳ ಉದ್ದದ ಆರೋಗ್ಯಕರವಾದ ಕಣ್ಣುಳ್ಳ ಬಳ್ಳಿಯನ್ನು ಸಿಂಬಿ ಮಾಡಿ ನೆಡಬೇಕು. ಚೌಕ ಮಡಿಯ ತುದಿಗಳಲ್ಲಿ ಅಗಸೆ, ಚೊಗಚೆ, ನುಗ್ಗೆ, ಹಾಲುವಾಣ ಗಿಡಗಳ ಬೇಲಿ ಹಾಕಿ ಮಡಿಗಳಿಗೆ ತಾಕುವಂತೆ ಕಾಲುವೆ ಮಾಡಬೇಕು.

18 ತಿಂಗಳ ಅನಂತರ ಪುನಃ ಸುಮಾರು ಎರಡುಮೊಳದುದ್ದದ ಬಳ್ಳಿಯನ್ನು ಸಿಂಬಿ ಸುತ್ತಿ ನೆಲಕ್ಕೆ ಹೂತು ಮಿಕ್ಕ ಬಳ್ಳಿಯನ್ನು ಆಸರೆ ಮರಕ್ಕೆ ಕಟ್ಟಬೇಕು. ಮಧ್ಯದ ಕಾಂಡ ಆಸರೆ ಮರಕ್ಕೆ ಹಬ್ಬುತ್ತಾ ಹೋದಂತೆ ಕವಲುಗಳು ಬರುತ್ತವೆ. ಮಲೆನಾಡಿನಲ್ಲಿ ಮೂರುವರ್ಷಕ್ಕೆ ಕೊಯ್ಲಿಗೆ ಕೊಯ್ಲಿಗೆ ಬಂದರೆ ಬಯಲುಸೀಮೆಯಲ್ಲಿ ಸಾಮಾನ್ಯವಾಗಿ ನಾಲ್ಕು ವರ್ಷಕ್ಕೆ ಬರುತ್ತದೆ. ಎಲೆಯನ್ನು ಕೊಯ್ಯದಿದ್ದರೂ ವರ್ಷಕ್ಕೊಮ್ಮೆ ಬಳ್ಳಿಯಿಳಿಸಿ ಸಿಂಬಿ ಸುತ್ತಿ ನೆಲದಲ್ಲಿ ಹುಗಿದು ಕೆಮ್ಮಣ್ಣು ಮುಚ್ಚಬೇಕು. ಒಂದು ಎಕರೆ ಎಲೆ ತೋಟಕ್ಕೆ ಕನಿಷ್ಠ (ಇನ್ನೂರು) 200 ಬಂಡಿ ಕೆಂಪು ಮಣ್ಣು ಬೇಕು. ಕಳೆ ತೆಗೆದು ಕಸಕಡ್ಡಿಗಳಿಲ್ಲದಂತೆ ಸ್ವಚ್ಛಗೊಳಿಸಿ ತೇವಾಂಶ ಆರದಂತೆ ನೋಡಿಕೊಳ್ಳಬೇಕು. ಗಾಳಿಯ ರಭಸಕ್ಕೆ ಎಲೆಬಳ್ಳಿಗಳು ಮುರಿದು ಬೀಳದಂತೆ ಗೇಣುಕಟ್ಟು ಹಾಗೂ ಮೊಳಕಟ್ಟು ಕಟ್ಟಬೇಕು. ನುರಿತವರಿಂದಲೇ ಈ ಕೆಲಸ ಮಾಡಿಸಬೇಕು. ಆರು ತಿಂಗಳವರೆಗೆ ಎಲೆ ಅಥವಾ ಬಳ್ಳಿಯನ್ನು ಮುಟ್ಟಲೇಬಾರದು. ಉಗುರಿನಿಂದ ಚಿವುಟಬಾರದು. ಕತ್ತರಿಯಿಂದ ಅಥವಾ ಎಲೆ ಉಗುರು ಎಂಬ ಸಾಧನದಿಂದ ಕಟಾವು ಮಾಡಬೇಕು.

**ಬಳ್ಳಿ ಇಳಿಸುವಿಕೆ :** ಆಸರೆ ಮರದಿಂದ ಕಟ್ಟುಗಳನ್ನು ಬಿಚ್ಚಿ ಕವಲು ಬಳ್ಳಿಯನ್ನು ಬುಡದ ಬಳ್ಳಿಯಿಂದ ಬೇರ್ಪಡಿಸಿ ನೆಡಬೇಕು. ಹೀಗೆ ಮಾಡಿದಾಗ ಹೊಸಬಳ್ಳಿ ನೆಟ್ಟಂತಾಗುವುದರಿಂದ ಕೆಂಪು ಮಣ್ಣು, ಕುರಿಗೊಬ್ಬರ ಮಿಶ್ರಣ ಮಾಡಿ ಚೌಕದ ಮಡಿಗೆ ಹಾಕಬೇಕು. ಹೊಸಬಳ್ಳಿ ಚಿಗುರಿದ ಮೇಲೆ ಹಳೆ ಬಳ್ಳಿಯನ್ನು ಮಾರಬಹುದು. ಅಥವಾ ಹೊಸ ತೋಟಕ್ಕೆ ನೆಡಬಹುದು. ಒಂದು ಬಳ್ಳಿ 60 ವರ್ಷಗಳ ತನಕ ಫಸಲು ಕೊಡುವುದುಂಟು. ಪ್ರತಿ ಬಾರಿ ಬಳ್ಳಿ ನೆಡುವಾಗ ಬೇರೆ ಬೇರೆ ದಿಕ್ಕಿಗೆ ಹಬ್ಬುವಂತೆ ಮಾಡಿ ನೆಡುವ ಜಾಗವನ್ನೂ ಬದಲಿಸಬೇಕು. ಹಳೆಯ ಬಳ್ಳಿಯನ್ನು ಎಸೆಯದೆ, ನೀರು ಗೊಬ್ಬರ ಕೊಟ್ಟರೆ ಬೇಗನೆ ಚಿಗುರಿ ಹೊಸ ಬಳ್ಳಿ ಇಳುವಳಿ ಕೊಡುವ ತನಕ ಲಾಭ ತರುತ್ತಿರುತ್ತವೆ. ಬುಡದಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಬಿಸಿಲಿನಲ್ಲಿ ನೀರು ಕೊಡಬಾರದು. ಕೊಟ್ಟಿಗೆ ಗೊಬ್ಬರ ಹಸುರೆಲೆಗೊಬ್ಬರವನ್ನು ಬುಡಕ್ಕೆ ತಾಕದಂತೆ ಹಾಕಿದರೆ ಒಳ್ಳೆಯದು.

**ಉಪಯೋಗ :** ಊಟದ ಜತೆಗೆ ಉಪ್ಪಿನಕಾಯಿ ಇರುವಂತೆ ಊಟವಾದ ಬಳಿಕ ತಾಂಬೂಲ ಮೆಲ್ಲುವುದು ಭಾರತೀಯರ ಸಂಪ್ರದಾಯವಾಗಿದೆ. ನಿಶ್ಚಿತಾರ್ಥ, ಮದುವೆ ಮೊದಲಾದ ಶುಭ ಸಮಾರಂಭಗಳಲ್ಲಿ ಇದು ಕಡ್ಡಾಯವಾಗಿ ಇದ್ದೇ ಇರುತ್ತದೆ. ವೀಳ್ಯದೆಲೆ ಜೀರ್ಣಕಾರಕ ಗುಣವನ್ನು ಹೊಂದಿದೆ. ಔಷಧವಾಗಿಯೂ ಇದರ ಬಳಕೆಯಿದೆ. ಎಲೆಯ ರಸವನ್ನು ಜ್ವರಕ್ಕೂ ಹೊಟ್ಟೆನೋವಿಗೂ ಕೊಡುವುದುಂಟು. ಕಫ, ಕೆಮ್ಮು ಹಾಗೂ ಶ್ವಾಸಕೋಶದ ತೊಂದರೆಗಳಿಗೆ ಎಲೆಯನ್ನು ಕಾಯಿಸಿ ಬಿಸಿಯಿರುವಾಗಲೇ ಎದೆ ಮೇಲೆ ಹಾಕುವರು. ಪಿತ್ತದೋಷ ಪರಿಹಾರಿ.

*ಎ.ಎಂ.ಡಿ.*

**ವೀಳ್ಯದೆಲೆ ಕೃಷಿ (ತಮಿಳುನಾಡಿನಲ್ಲಿ)** ವೀಳ್ಯದೆಲೆಯನ್ನು ತಮಿಳು ಭಾಷೆಯಲ್ಲಿ ವೆಟ್ರಿಲೈ ಎನ್ನುತ್ತಾರೆ. ಇದು ಔಷಧೀಯ ಗುಣವನ್ನು ಹೊಂದಿದ್ದು ಇದು ಮ್ಯಾಗ್ನೋಲಿಪ್ಸಿಡ ವರ್ಗದ ಪೈಪರ್ ಜಾತಿಯ ಪೈಪರೇಸೀ ಕುಟುಂಬಕ್ಕೆ ಸೇರಿದುದಾಗಿದೆ.

ವೀಳ್ಯದೆಲೆಯನ್ನು ಹಸುರು ಬಂಗಾರ ಎಂದೂ ಕರೆಯುತ್ತಾರೆ. ಭಾರತ ದೇಶದಲ್ಲಿ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಅದಕ್ಕೆ ಸಿಕ್ಕಿರುವ ಮಾನ್ಯತೆಯೇ ಆ ಹೆಸರಿಗೆ ಕಾರಣ. ವೀಳ್ಯದೆಲೆ, ಅಡಕೆ, ಅರಿಸಿನ ಕೋಡು, ಸುಣ್ಣ ಎಲ್ಲ ಶುಭಕಾರ್ಯಗಳಿಗೂ ಬೇಕೇಬೇಕು. ನಿತ್ಯ ದೇವರ ಸಮರ್ಪಣೆಗೆ ಹಣ್ಣು ಕಾಯಿಗಳ ಜತೆ ವೀಳ್ಯದೆಲೆ ಇರಲೇಬೇಕು. ವೀಳ್ಯದೆಲೆ, ಅಡಕೆ, ಸುಣ್ಣಗಳ ಸಾಂಗತ್ಯವನ್ನು ತಾಂಬೂಲವೆಂದು ಕರೆಯುತ್ತಾರೆ.

ಆಯುರ್ವೇದದಲ್ಲಿ ಏಳು ಬಗೆಯ ವೀಳ್ಯದೆಲೆಗಳನ್ನು ಹೇಳಲಾಗಿದೆ. ವೀಳ್ಯದೆಲೆಯಿಂದಾದ ಹೆಂಡವನ್ನು ಕೆಲವು ರೋಗಗಳಿಗೆ ಔಷಧವನ್ನಾಗಿ ಬಳಸಬಹುದೆಂದು ಆಯುರ್ವೇದ ಹೇಳುತ್ತದೆ. ವೀಳ್ಯದೆಲೆಯಲ್ಲಿ ಗಂಡು ಹೆಣ್ಣು ಎಂಬ ಎರಡು ಬಗೆಗಳಿವೆ. ಎಲೆಯ ಹಿಂಬದಿಯಲ್ಲಿರುವ ನರಗಳು ನಡು ನರದಲ್ಲಿ ಆರಂಭಿಸಿ ಒಂದೇ ರೀತಿಯಲ್ಲಿ ಹರಡಿದ್ದರೆ ಹೆಣ್ಣೆಲೆಯೆಂದೂ ಓರೆಕೋರೆಯಾಗಿದ್ದು ಗಡಸುತನದಿಂದ ಕೂಡಿರುವ ಎಲೆಯನ್ನು ಗಂಡೆಲೆಯೆಂದೂ ಹೇಳಲಾಗುತ್ತದೆ.

ಮಲೇಷ್ಯಾ ದೇಶದಲ್ಲಿ ಹುಟ್ಟಿದ ವೀಳ್ಯದೆಲೆಯನ್ನು ಭಾರತ, ಇಂಡೋನೇಷಿಯ ಮುಂತಾದ ದೇಶಗಳಲ್ಲಿ ಅಧಿಕವಾಗಿ ಬೆಳೆಸಲಾಗುತ್ತದೆ. ತಮಿಳುನಾಡಿನಲ್ಲಿ ಕಾವೇರಿ ನದಿ ತೀರ ಪ್ರದೇಶಗಳಲ್ಲಿ, ನಾಮಕಲ್ ಜಿಲ್ಲೆಯ ಪರಮತ್ತಿ, ವೇಲೂರು ಹಾಗೂ ಪೊತ್ತನೂರ್ ಭಾಗಗಳಲ್ಲಿ, ಕರೂರು ಜಿಲ್ಲೆಯ ಪುಗಳೂರ್, ತಿರುಚ್ಚಿ ಜಿಲ್ಲೆಯ ತೊಟ್ಟಿಯಂ ಭಾಗಗಳಲ್ಲೂ ಅಧಿಕವಾಗಿ ವೀಳ್ಯದೆಲೆಯನ್ನು ಬೆಳೆಸಲಾಗುತ್ತದೆ. ಈ ಎಲ್ಲ ಭಾಗಗಳಲ್ಲಿ ಬೆಳೆಸುವ ವೀಳ್ಯದೆಲೆಗಳಲ್ಲಿ ಕಾವೇರಿ ನದಿ ತೀರ ಪ್ರದೇಶವಾದ ಕುಂಭಕೋಣಂ ಜಿಲ್ಲೆಯಲ್ಲಿ ಬೆಳೆಸುವ ವೀಳ್ಯದೆಲೆ ಪ್ರಸಿದ್ಧವಾಗಿದೆ. ಕುಂಭಕೋಣಂ ವೀಳ್ಯದೆಲೆ ಎಂದೇ ಜನಪ್ರಿಯವಾಗಿದೆ.

ಒಂದು ನೆಲದ ಮಣ್ಣಿನ ಮತ್ತು ಅಲ್ಲಿಯ ಹವಾಗುಣದ ವಿಶೇಷತೆಗಳನ್ನು ಆಧರಿಸಿ ಅಲ್ಲಿ ಬೆಳೆಯುವ ಬೆಳೆಗಳ ರೂಪ, ಗುಣಮಟ್ಟ ಹಾಗೂ ಅವುಗಳ ರುಚಿ, ಸೊಗಡನ್ನು ಆಧರಿಸಿ ಅವುಗಳನ್ನು ಹೆಚ್ಚು ಬೆಳೆಸಲು ಪ್ರೋತ್ಸಾಹ ನೀಡುವುದಿದೆ. ಅವುಗಳಿಗೆ ಭೌಗೋಳಿಕ ಮಾನ್ಯತೆ ನೀಡಿ ಹೆಚ್ಚು ಮಾರುಕಟ್ಟೆ ಸಿಗುವಂತೆ ಮಾಡಬೇಕಿದೆ.

**ಕೃಷಿ :** ತಮಿಳುನಾಡಿನ ಕುಂಭಕೋಣಂ ಜಿಲ್ಲೆಯ ಅಯ್ಯಂಪೇಟೆ, ರಾಜಗಿರಿ, ಪಂಡರ ವಾಡೈ, ಸ್ವಾಮಿ ಮಲೈ, ಆವೂರು, ತಿರುವೈಯೂರು ಮುಂತಾದ ಪ್ರದೇಶಗಳಲ್ಲಿ ವೀಳ್ಯದೆಲೆಯ ವ್ಯವಸಾಯ ಹೆಚ್ಚು ನಡೆಯುತ್ತದೆ. ವೀಳ್ಯದೆಲೆಯನ್ನು ಬೆಳೆಸಲು ಬಿತ್ತನೆಯೇನೂ ಇಲ್ಲ. ವೀಳ್ಯದೆಲೆಯ ಬಳ್ಳಿ ಕತ್ತರಿಸಿ ನೆಟ್ಟು ಬೆಳೆಸಲಾಗುತ್ತದೆ. ಹೆಚ್ಚು ಬಿಸಿಲಿಲ್ಲದ ಹವಾಗುಣ ಮಣ್ಣಿನ ಫಲವತ್ತತೆ, ನೀರಾವರಿ ಇರುವ ಸ್ಥಳಗಳಲ್ಲಿ ವೀಳ್ಯದೆಲೆಯನ್ನು ಬೆಳೆಸಬಹುದು. ಮಿಶ್ರ ಅಂತರ ಬೆಳೆಯನ್ನಾಗಿ ವೀಳ್ಯದೆಲೆಯನ್ನು ಬೆಳೆಸಲಾಗುತ್ತದೆ. ಅಂದರೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು, ಮುಖ್ಯ ಬೆಳೆಯ ಇಳುವರಿಯನನು ಅಧಿಕಗೊಳಿಸಲು, ಬಿಸಿಲಿನಿಂದ ರಕ್ಷಿಸಲು, ಆದಾಯ ಹೆಚ್ಚಿಸಿಕೊಳ್ಳಲು, ರೋಗ ನಿವಾರಣೆ, ನೀರು ಉಳಿತಾಯ, ಗೊಬ್ಬರ ಉಳಿತಾಯ, ಜೈವಿಕ ಸಮಸ್ಯೆಯ ನಿವಾರಣೆ, ಔಷಧ, ಕೀಟನಾಶಕಗಳಿಗಾಗಿ ವೀಳ್ಯದೆಲೆಯ ಬೆಳೆ ಹೆಚ್ಚಾಗಿ ನಡೆಯುತ್ತದೆ. ಅಂದರೆ ಮುಖ್ಯ ಬೆಳೆಯೊಂದಿಗೆ ವೀಳ್ಯದೆಲೆಯು ಹೊಂದಿಕೆಯಾಗುವುದೇ ಇದಕ್ಕೆ ಕಾರಣ. ಅತಿಯಾಗಿ ನೀರನ್ನು ಗೊಬ್ಬರವನ್ನು ಬಳಸದೆ ಆದಾಯವನ್ನು ಹೆಚ್ಚಿಸುವಂಥದು. ಇದರ ವ್ಯವಸಾಯ, ಸಾಮಾನ್ಯವಾಗಿ ಅಡಕೆ, ಬಾಳೆ, ಕರಿಮೆಣಸು, ನಿಂಬೆ ಜಾತಿಯ ಸಸ್ಯಗಳು, ತೆಂಗು, ಪೇರಳೆ, ಅರಿಸಿನ, ಈರುಳ್ಳಿ, ದ್ವಿದಳ ಧಾನ್ಯ ಮೊದಲಾದವನ್ನು ಬೆಳೆಸುವ ಪ್ರದೇಶಗಳಲ್ಲಿ ಮಿಶ್ರ ಬೆಳೆಯನ್ನಾಗಿ ವೀಳ್ಯದೆಲೆಯನ್ನು ಬೆಳೆಸಲಾಗುತ್ತದೆ. ಯಾವುದೆ ರಾಸಾಯನಿಕ ಬಳಸದೆ ಸಾವಯವ ಪದ್ಧತಿಯಲ್ಲಿ ವ್ಯವಸಾಯ ಮಾಡಿದರೆ ಅತ್ಯುತ್ತಮ ರಸಭರಿತ ವೀಳ್ಯದೆಲೆ ದೊರೆಯುತ್ತದೆ. ಇದರ ಬಳ್ಳಿಗಳನ್ನು ನಾಟಿ ಮಾಡಿ ಚೆನ್ನಾಗಿ ಹಬ್ಬಿದಾಗ ಇಳಿಬಿದ್ದ ಬಳ್ಳಿಗಳನ್ನು ನಾಲ್ಕು ಗಿಣ್ಣುಗಳಿರುವಂತೆ ಕತ್ತರಿಸಿ ನಾಟಿ ಮಾಡಿ ಮತ್ತೆ ಬೆಳೆಯನ್ನು ಹೆಚ್ಚಿಸಿಕೊಳ್ಳಬಹುದು. ಬಳ್ಳಿ ಹಬ್ಬಲು ಉತ್ತಮ ಜಾತಿಯ ಮರವನ್ನು ಉಪಯೋಗಿಸಿದರೆ ವೀಳ್ಯದೆಲೆಯ ಬಳ್ಳಿ ಹಲವಾರು ವರ್ಷ ಬಾಳುತ್ತದೆ. ಬಳ್ಳಿಗೆ ಮಣ್ಣಿನ ಏರಿಕಟ್ಟಿ ನಾಟಿ ಮಾಡುತ್ತಾರೆ. ಅನಂತರ ಉತ್ತಮ ಮಣ್ಣು, ಹಸುರು ಸೊಪ್ಪನ್ನು ಬುಡಕ್ಕೆ ಹಾಕಿದರೆ ಬಳ್ಳಿ ಹಬ್ಬಲು ಪೋಷಣೆ ನೀಡಿದಂತಾಗುತ್ತದೆ. ಬಳ್ಳಿ ಚಿಗುರಿ ಹಬ್ಬಲು ಪ್ರಾರಂಭವಾದ ಕೂಡಲೇ ಸಾವಯವ ಗೊಬ್ಬರ ಹಾಕಿ ಬೆಳೆಸಬೇಕು. ಇದರ ವ್ಯವಸಾಯ ನಡೆಸುವವರು ಹೈನುಗಾರಿಕೆಯನ್ನು ಹೊಂದಿದ್ದರೆ ಇಪ್ಪತ್ತು ದಿನಗಳಿಗೊಮ್ಮೆ ಸಗಣಿ ನೀರು, ಕಟ್ಟಿಗೆ ಬೂದಿ ಇತ್ಯಾದಿಗಳನ್ನು ನೀಡಿದ್ದಾದರೆ ಎಲೆಗಳು ಚೆನ್ನಾಗಿ ಚಿಗುರಿ ರೋಗಮುಕ್ತವಾಗುತ್ತವೆ. ಪಶುಗಳಿಗೆ ಹಾಕುವ ಹಿಂಡಿಯನ್ನು ನೆನೆಸಿ ನೀರು ಮಾಡಿ ಎರಡು ವಾರಕ್ಕೊಮ್ಮೆ ಬಳ್ಳಿಯ ಬುಡಕ್ಕೆ ಹಾಕಿದರೆ ಎಲೆಗಳು ಸಮೃದ್ಧವಾಗಿ ಬೆಳೆಯುತ್ತವೆ.

ವೀಳ್ಯದೆಲೆಯಲ್ಲಿ ಶೇ 84.4 ನೀರಿನ ಅಂಶ, ಶೇ. 3.1 ಪ್ರೋಟೀನ್, ಶೇ. 0.8 ಕೊಬ್ಬು ಇದೆ. ಇದರಲ್ಲಿ ಕ್ಯಾಲ್ಸಿಯಂ, ಪ್ರೋಟೀನ್, ತೈಯಿನ್, ರೈಬೋಪ್ಲೇವಿನ್ ಮತ್ತು ವಿಟಮಿನ್ ಸಿ ಇವೆ. ವೀಳ್ಯದೆಲೆಯನ್ನು ಮಂಗಳಕರವಾದ ಪವಿತ್ರವಾದ ಎಲೆಯೆಂದೂ ಬಣ್ಣಿಸಲಾಗುತ್ತದೆ.

**ಉಪಯೋಗ :** ವೀಳ್ಯದೆಲೆಯನ್ನು ಕುದಿಯುವ ನೀರಿನಲ್ಲಿ ಹಾಕಿ ಬಳಿಕ ಕರಿಮೆಣಸಿನ ಪುಡಿಯನ್ನು ಬೆರೆಸಿ ಕುಡಿದರೆ ಗಂಟಲು ಬೇನೆ ಶಮನವಾಗುತ್ತದೆ. ರಾತ್ರಿ ಮಲಗುವುದಕ್ಕೆ ಮೊದಲು ಎರಡು ಚಮಚ ವೀಳ್ಯದೆಲೆಯ ರಸವನ್ನು ಓಮದ ಜತೆಯಲ್ಲಿ ಕುಡಿದರೆ ಕೀಲುನೋವು ಹಾಗೂ ಮೊಣಕಾಲು ಗಂಟುನೋವು ನಿವಾರಣೆಯಾಗುತ್ತದೆ. ಹೆರಿಗೆಯಾದ ಹೆಣ್ಣು ವೀಳ್ಯದೆಲೆಯನ್ನು ತಿನ್ನುವುದರಿಂದ ಹಾಲು ಹೆಚ್ಚುತ್ತದೆ. ರಕ್ತಗಾಯದ ಮೇಲೆ ವೀಳ್ಯದೆಲೆಯನ್ನು ಸುತ್ತಿ ಕಟ್ಟಿದರೆ ಬೇಗ ಗುಣಮುಖವಾಗುತ್ತದೆ. ಒಂದು ವೀಳ್ಯದೆಲೆ, ಸ್ವಲ್ಪ ಕರಿತುಳಸಿ ಹಾಗೂ ಒಂದು ಲವಂಗವನ್ನು ಅಗಿದು ದಿನಕ್ಕೆ ಎರಡು ಬಾರಿ ಸೇವಿಸಿದರೆ ಕೆಮ್ಮು ಕಡಿಮೆಯಾಗುತ್ತದೆ. ವೀಳ್ಯದೆಲೆಗೆ ಹರಳೆಣ್ಣೆಯನ್ನು ಹಚ್ಚಿ ಬಿಸಿ ಮಾಡಿ ಹೊಟ್ಟೆ ಉಬ್ಬರದಿಂದ ನರಳುತ್ತಿರುವ ಮಗುವಿನ ಹೊಟ್ಟೆಗೆ ಕಾವು ಕೊಟ್ಟರೆ ನೋವು ಮಾಯವಾಗಿ ಮೂತ್ರ ಸುಲಭವಾಗುತ್ತದೆ. ಅರ್ಧ ಗ್ಲಾಸು ತೆಂಗಿನ ಉಣ್ಣೆಗೆ ಒಂದೈದು ವೀಳ್ಯದೆಲೆಗಳನ್ನು ಹಾಕಿ ಕುದಿಸಿ, ಸೋಸಿ ಚರ್ಮ ವ್ಯಾಧಿಗೆ ಅದನ್ನು ಹಚ್ಚಿದರೆ ಬೇಗ ಗುಣವಾಗುತ್ತದೆ. ಜೀರಗೆಯನ್ನು ಪುಡಿಮಾಡಿ ಬೆಣ್ಣೆಯೊಂದಿಗೆ ಬೆರೆಸಿ ಬಳಿಕ ಅದನ್ನು ವೀಳ್ಯದೆಲೆಯ ಹಾಲುದಿಯಲ್ಲಿ ಸವರಿ ಬಿಸಿ ಮಡಕೆಯಲ್ಲಿ ಹದ ಮಾಡಬೇಕು. ಬಳಿಕ ಬೆಂದ ವೀಳ್ಯದೆಲೆಯನ್ನು ನೀರಲ್ಲಿ ಹಾಕಿ ಕುದಿಸಿ ಸೋಸಿ ಕುಡಿದರೆ ಹೊಟ್ಟೆನೋವು ವಾಸಿಯಾಗುತ್ತದೆ. ವೀಳ್ಯದೆಲೆಯನ್ನು ಚೆನ್ನಾಗಿ ಹಿಂಡಿ ಸ್ವಲ್ಪ ಕರ್ಪೂರವನ್ನು ಬೆರೆಸಿ ತಲೆನೋವಿರುವ ಜಾಗಕ್ಕೆ ತಡವಿದರೆ ತಲೆನೋವು ಗುಣವಾಗುತ್ತದೆ. ವೀಳ್ಯದೆಲೆಯೊಂದಿಗೆ ಕರಿಮೆಣಸನ್ನು ಮೆಲ್ಲುತ್ತಿದ್ದರೆ ಚೇಳು ಕಡಿತ ಹಾಗೂ ಇನ್ನಿತರ ವಿಷ ಪದಾರ್ಥದ ಸೇವನೆಯಿಂದಾದ ತೊಂದರೆ ಕಡಿಮೆಯಾಗುತ್ತದೆ. ವೀಳ್ಯದೆಲೆ, ಕರಿಬೇವು ಮತ್ತು ಗರಿಕೆ ಹುಲ್ಲನ್ನು ಮಡಕೆಯಲ್ಲಿರುವ ನೀರಿನೊಂದಿಗೆ ಬೆರೆಸಿ ಕುದಿಸಬೇಕು. ಹಾಕಿದ ನೀರು ಕುದಿದು 1/3ನೇ ಭಾಗಕ್ಕೆ ಬಂದಾಗ ಅದನ್ನು ಆರಿಸಿ ಸೋಸಿ ದಿನಕ್ಕೆ ಮೂರು ಬಾರಿ ಕುಡಿದರೆ ಸಕ್ಕರೆ ರೋಗ ಶಮನವಾಗುತ್ತದೆ. ಕೆಮ್ಮು, ಶೀತ, ಆಸ್ತಮಾ, ಅಲರ್ಜಿ, ವಾತ, ಶ್ವಾಸಕೋಶ, ಹೊಟ್ಟೆನೋವು, ಸಕ್ಕರೆ ರೋಗ, ಕ್ಯಾನ್ಸರ್ ಮುಂತಾದ ಸಮಸ್ತ ರೋಗ ನಿವಾರಕ ವೀಳ್ಯದೆಲೆ.

ವೀಳ್ಯದೆಲೆಯ ರಸ ಹಾಗೂ ಸುಣ್ಣದಲ್ಲಿರುವ ಕ್ಯಾಲ್ಸಿಯಂ ಬೆರೆತು ದೇಹದಲ್ಲಿ ಬಹುಬೇಗ ಹರಡಿಕೊಳ್ಳುವುದೇ ರೋಗ ನಿವಾರಣೆಗೆ ಕಾರಣ. ಒಟ್ಟಿನಲ್ಲಿ ಚಿಗುರು ವೀಳ್ಯದೆಲೆ ವಾತಹರ, ಉದರ ವಾಯುಹರ ಹಾಗೂ ಉತ್ತೇಜನಕಾರಿ. ತಮಿಳುನಾಡಿನಲ್ಲಿ ವೀಳ್ಯದೆಲೆಯ ವ್ಯವಸಾಯ ಸಾವಿರಾರು ಎಕರೆ ಭೂಮಿಯಲ್ಲಿ ಕ್ರಮಬದ್ಧವಾಗಿ ಇಂದಿಗೂ ನಡೆಯುತ್ತಿದೆ.

***ಕೆ.ಎ.ಕೆ.***

## ವೃಕ್ಷಾಯುರ್ವೇದ

ಚಾವುಂಡರಾಯ (ಸು. 1025) 'ಲೋಕೋಪಕಾರ' ಎಂಬ ಶಾಸ್ತ್ರಗ್ರಂಥವನ್ನು ಕನ್ನಡ ಭಾಷೆಯಲ್ಲಿ ಬರೆದಿದ್ದಾನೆ. ಇದು ವಿಶ್ವಕೋಶದಷ್ಟು ವಿಸ್ತಾರವಾದ ಹರವನ್ನು ಹೊಂದಿರುವಂಥದ್ದು. ಇದರಲ್ಲಿ ಪಂಚಾಗಫಲವರ್ಣನೆ, ವಾಸ್ತು, ಗಂಧಯುಕ್ತ ಕ್ರಮ, ಸೂಪಶಾಸ್ತ್ರ, ನರಾದಿ ವೈದ್ಯ, ವಿಷವೈದ್ಯ, ಶಕುನ ಮುಂತಾದ ಜನೋಪಯೋಗಿಯಾದ ಸಾರ್ವಕಾಲಿಕವಾದ ವಿಚಾರಗಳ ಗಣಿಯೇ ಇದೆ. ಈ ಕೃತಿಯಲ್ಲಿ ವೃಕ್ಷಾಯುರ್ವೇದವೆಂಬ ದೇಶೀ ಕೃಷಿ ವಿಚಾರಗಳನ್ನೊಳಗೊಂಡ ಅಧ್ಯಾಯ ಒಂದಿದ್ದು ಅದರ ಸಂಕ್ಷಿಪ್ತ ವಿವರಗಳು ಇಂತಿವೆ.

ಮಾನವ ಮೂಲಭೂತವಾಗಿ ಸಸ್ಯಾವಲಂಬಿತ ಜೀವಿ; ಸಸ್ಯ ಸಂಪತ್ತಿಲ್ಲದೆ ಅವನ ಬದುಕು ಸಾಗುವಂತಿಲ್ಲ. ಅವನೇ ಏಕೆ

ಸಸ್ಯಾವಲಂಬನವಿಲ್ಲದೆ ಇತರ ಪ್ರಾಣಿಕೋಟಿಯೂ ಜೀವಿಸಿರಲಾರದು. ಮನುಷ್ಯ-ಪ್ರಾಣಿವರ್ಗಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಉಡುಪು, ಆಹಾರ, ವಸತಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಸ್ಯಮೂಲಗಳಿಂದಲೇ ದೊರೆಯಬೇಕು ಮಾತ್ರವಲ್ಲ, ಸಕಲ ಪ್ರಾಣಿಗಳ ಪ್ರಾಣಧಾರಣೆಗೆ ಅತ್ಯಗತ್ಯವಾದ ಆಮ್ಲಜನಕ ಕೂಡ ಸಸ್ಯಗಳಿಂದಲೇ ಒದಗಬೇಕು. ಸಸ್ಯಗಳು, ಪ್ರಾಣಿಗಳು ಬಿಡುವ ಇಂಗಾಲಾಮ್ಲವನ್ನು ಹೀರಿಕೊಂಡು ತಮ್ಮಿಂದ ಪರಿಶುದ್ಧ ಆಮ್ಲಜನಕವನ್ನು ವಾತಾವರಣಕ್ಕೆ ಸೇರಿಸಲಿಲ್ಲವೆಂದರೆ ಇಡೀ ಪರಿಸರವೇ ಮಾಲಿನ್ಯದಿಂದ ಹದಗೆಟ್ಟು ಜಗತ್ತು ವಾಸಕ್ಕೆ ಅನರ್ಹವಾಗುತ್ತದೆ. ಕ್ಷಣ ಕ್ಷಣವೂ ಕಾರ್ಖಾನೆಗಳ ಮಾಲಿನ್ಯದಿಂದೊದಗುವ ವಿಪತ್ತಿನಿಂದ ಮಾನವನನ್ನು ಸಸ್ಯ ಸಂಕುಲವೇ ಪಾರುಮಾಡಬೇಕಾಗುತ್ತದೆ. ಅಂದಮೇಲೆ ಮಾನವ ವಾಸಿಸಲು ಬೇಕಾದ ಯೋಗ್ಯ ಪರಿಸರ ಸಸ್ಯಗಳಿಂದಲೇ ನಿರ್ಮಾಣವಾಗುವುದು ಸಾಧ್ಯ. ಇಲ್ಲದೆ ಹೋದರೆ ಸಸ್ಯರಹಿತ ಪ್ರದೇಶ ಮರುಭೂಮಿಯಾಗಿ ಮಾನವ ವಾಸಕ್ಕೆ ಯೋಗ್ಯವೆನಿಸುವುದಿಲ್ಲ. ಮನುಷ್ಯನಿಗೆ ಬೇಕಾದ ನೀರು ಸಹ ಸಸ್ಯಕೋಟಿಯ ಪರೋಕ್ಷ ಸಹಾಯದಿಂದ ಒದಗಬೇಕು. ಮುಗಿಲಿಗೂ ಸಸ್ಯಕ್ಕೂ ದಾಂಪತ್ಯ ಸದೃಶ್ಯವಾದ ಪ್ರೇಮಬಾಂಧವ್ಯವಿದೆಯಾದ್ದರಿಂದ ಮಳೆ ಹೊಯ್ದು ಇಳೆ ತಣಿದು ಬೆಳೆ ಬೆಳೆಯಲು ಸಸ್ಯ ಜಾತಿಯ ಕೊಡುಗೆಯೇ ಸಹಾಯಕ. ಅಷ್ಟೇಕೆ, ಪ್ರಾಣಿಕೋಟಿಯ ಎಲ್ಲ ರೋಗಗಳಿಗೆ ಬೇಕಾದ ಮದ್ದು ಸಸ್ಯಮೂಲದಿಂದಲೇ ಸಿದ್ಧವಾಗಬೇಕು. ಔಷಧೀಯ ಗುಣವಿಲ್ಲದ ಸಸ್ಯವೇ ಇಲ್ಲ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳೂ ಸಸ್ಯಮೂಲದಿಂದಲೇ ಬರಬೇಕು. ಹಾಗೆ ನೋಡಿದರೆ ಭೂಮಿಯ ಮೇಲೆ ಕಾಣಸಿಗುವ ಯಾವೊಂದು ಸಸ್ಯವೂ ನಿಷ್ಪ್ರಯೋಜಕವಲ್ಲ; ಪ್ರತಿಯೊಂದು ಗಿಡ ಮರವೂ ಕಲ್ಪವೃಕ್ಷವೇ. ಅಂತೂ "ಸಂಸ್ಕೃತಿ ನಾಗರಿಕತೆ ವಿಜ್ಞಾನ ಕಾವ್ಯ ಕಲೆ ಮೊದಲಾದ ಮಾನವ ಸಾಧಿಸಿದ ಸಕಲ ಸಿದ್ಧಿಗಳಿಗೂ ಸಸ್ಯದೇವತೆಯ ವರಪ್ರಸಾದವೇ ಮೂಲತಃ ಕಾರಣ" (ಎಂ.ಎಚ್. ಮರಿಗೌಡ, ಸಸ್ಯಾರಾಧಕ ರೈತ, ಮುನ್ನುಡಿ, ಪು. vi). ಆದುದರಿಂದ ಸಸ್ಯ ಸಂಪತ್ತೆ ಸಂಪತ್ತು; ಅವೇ ಮನುಷ್ಯನ ಪಾಲಿಗೆ ಸಾಕ್ಷಾತ್ ದೈವಸ್ವರೂಪ; ಅವನ ಬಾಳಿನ ಭಾಗ್ಯನಿಧಿ. ಹೀಗಾಗಿ ಸಸ್ಯ ಸಂಪತ್ತು ಮಾನವನ ಬದುಕಿಗೆ ಮಾತ್ರವಲ್ಲ, ಸಚ್ಚಿದಾನಂದ ಸಿದ್ಧಿಗೂ ಸಾಧಕವಾಗುತ್ತದೆಂಬುದನ್ನು ಕವಿ ಋಷಿ ಸಂತರು ಬಲ್ಲರು. ಅದು ಸೌಂದರ್ಯದ ನಿಧಿಯಾಗಿಯೂ ಅವರಿಗೆ ಸ್ಫೂರ್ತಿಯ ಸೆಲೆಯೂ ಆಗುತ್ತದೆ.

ಹೀಗಿರುವಾಗ ಮನುಷ್ಯನು ತನ್ನ ಸರ್ವಕ್ಷೇಮಕ್ಕೆ ಕಾರಣವಾದ ಗಿಡ ಮರ ಬಳ್ಳಿಗಳ ರಕ್ಷಣೆಗೆ ಆದ್ಯ ಗಮನಹರಿಸಬೇಕಾಗುತ್ತದೆ. ಯಾವ ಪೈರೆ ಆಗಲಿ, ಮರವೇ ಆಗಲಿ ತಾನು ಬಿಟ್ಟಿದ್ದನ್ನು ತಾನೇ ತಿನ್ನುವುದಿಲ್ಲ. ತೆಂಗು, ಬಾಳೆ, ಕಿತ್ತಳೆ, ಮಾವು, ಹಲಸು, ದ್ರಾಕ್ಷಿ, ದಾಳಿಂಬೆ ಮೊದಲಾದ ಗಿಡಮರಗಳನ್ನು ಕೆಲವು ತಿಂಗಳೋ ವರ್ಷಗಳೋ ಮಾನವ ರಕ್ಷಿಸಿದ್ದಾದರೆ ಅವು ತದನಂತರ ಅವನನ್ನೇ ರಕ್ಷಿಸುತ್ತವೆ. ಈ ಸತ್ಯ ಮನಗಂಡಿರುವುದರಿಂದಲೇ ಭಾರತೀಯ ಸಂಸ್ಕೃತಿಯಲ್ಲಿ ಮರಗಳ ನೆಡುವಿಕೆ ಮತ್ತು ಪಾಲನೆ ಪ್ರಧಾನ ತತ್ತ್ವಗಳಾಗಿ ಕಂಡುಬರುತ್ತವೆ. ಈ ಎಲ್ಲ ದೃಷ್ಟಿಯಿಂದ ಚಾವುಂಡರಾಯ ಆಡಿರುವ ಈ ಮಾತುಗಳು ತುಂಬ ಮನನೀಯವಾಗಿವೆ:

*ಓದುಗಳೊಳ್ ವೃಕ್ಷಾಯು*
*ರ್ವೇದಮೆ ಜನನುತಮಶೇಷಹಿತಮೆಂದಱಿದಂ*
*ತಾದೇಯಮಾಗೆ ಕೀರ್ತಿ*
*ಶ್ರೀದಯಿತಂ ಪೇೞ್ದ ಮೆಸೆಯೆ ಕಾವ್ಯವಿವೇಕಂ*

"ಸಮಸ್ತ ಜ್ಞಾನಂಗಳೊಳಗೆ ವೃಕ್ಷಾಯುರ್ವೇದಮೆ ಸಕಲ ಪ್ರಾಣಿಗಳ್ಗೆ ಹಿತವಮಾಗೆ ಅಱಿಯಲ್ವೇಟ್ಟುದಾಗಿ ವಿದ್ವಾಂಸರ್ಕಳಿಂದು ಪಾದೇಯಮಾಗಿರ್ಪುದಾಗಿ ಆ ವೃಕ್ಷಾಯುರ್ವೇದಮಂ ಪೇೞ್ದಿರ್ಪೆಂ" ಎಂಬುದು ಈ ಪದ್ಯದ ಟೀಕಾರ್ಥ. ವೃಕ್ಷಾಯುರ್ವೇದ (ವೃಕ್ಷ + ಆಯುರ್ವೇದ) ಒಂದು ಸಂಯುಕ್ತ ಪದ. ಸಾಮಾನ್ಯವಾಗಿ 'ವೃಕ್ಷ' ಎಂದರೆ 'ಮರ' ಎಂತಲೂ "ಆಯುರ್ವೇದ ಎಂದರೆ ಆಯಸ್ಸನ್ನು ಕೊಡತಕ್ಕ ಶಾಸ್ತ್ರ, ಆರೋಗ್ಯವನ್ನು ಕಾಪಾಡುವ ಶಾಸ್ತ್ರ" ಎಂತಲೂ ಅರ್ಥ ಸ್ಫುರಿಸುತ್ತದೆ. (ಚಕ್ರವರ್ತಿ ಶ್ರೀನಿವಾಸ ಗೋಪಾಲಚಾರ್ಯ (ಸಂ), ಶಬ್ದಾರ್ಥ ಕೌಸ್ತುಭಃ ಸಂಸ್ಕೃತ ಕನ್ನಡ ಶಬ್ದಕೋಶ, ಸಂ. 1. ಪು. 331). ಆದ್ದರಿಂದ ಇಲ್ಲಿ ವೃಕ್ಷಾಯುರ್ವೇದ ವೆಂದರೆ ಸಸ್ಯಗಳನ್ನು ಮರಗಳನ್ನು ರೋಗಬಾಧೆ ಯಿಲ್ಲದಂತೆ ಸಂರಕ್ಷಿಸಿ ಸೊಂಪಾಗಿ ಬೆಳೆಯುವಂತೆಯೂ ವಿಶೇಷವಾಗಿ ಅವನ್ನು ಚಿಕ್ಕದು ಅಥವಾ ಎತ್ತರವಾಗಿ ಮಾಡಲು ಸಾಧ್ಯವಿರುವಂತೆಯೂ ಔಷಧಗಳನ್ನು ಬಳಸುವುದು ಮುಂತಾದ ವಿಧಿವಿಧಾನಗಳನ್ನು ತಿಳಿಯಹೇಳುವ ಶಾಸ್ತ್ರವೆಂದು ಪರಿಭಾವಿಸಬಹುದಾಗಿದೆ. ಇಂಗ್ಲಿಷಿನಲ್ಲಿ ಕೂಡ ಇದಕ್ಕೆ Treatment of trees ಎಂದು ಅರ್ಥೈಸಿದೆ. (V. Subrahmanya Shastri, M. Ramakrishna Bhat, Varahamihira's Brihat Samhita, Vol. I, p. 483).

ಚಾವುಂಡರಾಯ ಈ ಪ್ರಕರಣದಲ್ಲಿ ಕಾಯಿಪಲ್ಯೆ ಫಲಪುಷ್ಪವೃಕ್ಷಲತೆಗಳನ್ನು ಚೆನ್ನಾಗಿ ಬೆಳೆಸುವ ಹಾಗೂ ಆ ಸಸ್ಯಬಳ್ಳಿಗಳು ಅಧಿಕ ಫಲಪುಷ್ಪಭರಿತವಾಗಿ ತೂಗಿ - ತೊನೆಯಲು ಮಾಡಬೇಕಾದ ವಿಧಾನಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿರುವನು. ಸಾಮಾನ್ಯವಾಗಿ ಇಂದಿನ ತೋಟಗಾರಿಕೆಯ ಉದ್ದೇಶವು ಸಹ ಸಸ್ಯಗಳನ್ನು ಅವುಗಳ ಅಲಂಕಾರಕ್ಕಾಗಿಯೋ ಫಲಕ್ಕಾಗಿಯೋ ಇತರ ಉಪಯೋಗಕ್ಕಾಗಿಯೋ ಬೆಳೆಸುವುದೇ ಆಗಿದೆ. ಹಾಗಾಗಿ ಚಾವುಂಡರಾಯ ಕೊಡುವ ಈ ಬಗೆಯ ವಿವರಗಳು "ಪ್ರಾಯಶಃ ಅಂದು ರೂಢಿಯಲ್ಲಿದ್ದ ತೋಟಗಾರಿಕೆಯ ವಿಧಾನವನ್ನು ಪ್ರತಿಫಲಿಸಿದಂತೆ ತೋರುತ್ತವೆ" (ಕಿಅಸಂ, ಕನ್ನಡ ಸಾಹಿತ್ಯ ಚರಿತ್ರೆ, ಸಂ. 3, ಪು. 681). ಅಲ್ಲದೆ "ತೋಟಗಾರಿಕೆ ಎಂದು ಈಗ ಕರೆಯುವುದಕ್ಕೆ ಚಾವುಂಡರಾಯ ವೃಕ್ಷಾಯುರ್ವೇದ ಎಂದು ಕರೆದಿರುವುದು ಸಮಂಜಸವೂ ಗಮನಾರ್ಹವೂ ಆಗಿದೆ" (ಸಿ. ವೀರಣ್ಣ, ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ, ಪ್ರಾಚೀನ ಸಾಹಿತ್ಯ, ಸಂ. 1, ಪು. 321) ಟೀಕಾಕಾರ ಕೂಡ ಪದ್ಯವೊಂದಕ್ಕೆ ಅರ್ಥ ಬರೆಯುತ್ತ "... ಈ ನಕ್ಷತ್ರಗಳಲ್ಲಿ ಶಾಸ್ತ್ರಯುಕ್ತವಾಗಿ ಬೀಜಂಗಳಂ ಬಿತ್ತುವುದು, ಸಿಂಗರದೋಟಮಂ ಮಾಡಿಸುವುದು" ಎಂದಿದ್ದಾನೆ (6-2). ಇದರಿಂದಾಗಿ ವೃಕ್ಷಾಯುರ್ವೇದ ಪ್ರಕರಣದ ಸಂಗತಿಗಳು ತೋಟಗಾರಿಕೆ ವ್ಯವಸಾಯದ ವ್ಯಾಪ್ತಿಗೆ ಒಳಪಡುತ್ತವೆ.

ವ್ಯವಸಾಯವೆಂದರೆ ಸಸ್ಯಗಳನ್ನು ಬೆಳೆಸುವ ಕಲೆ, ಸಸ್ಯಗಳನ್ನು ಬೆಳೆಸಬೇಕಾದರೆ ಸಸ್ಯಗಳ ಬಗ್ಗೆ ಭೂಮಿಯ ಬಗ್ಗೆ ವ್ಯವಸಾಯಗಾರನಿಗೆ ಯುಕ್ತ ಪರಿಜ್ಞಾನವಿರುವುದು ಅತ್ಯಗತ್ಯ. ಸಸ್ಯ ಜೀವನವನ್ನರಿತು ಅವುಗಳನ್ನು ಲಾಭದಾಯಕವಾಗಿ ಬೆಳೆಸಿಕೊಳ್ಳುವ ಕಲೆಯು ನಮ್ಮ ಪ್ರಾಚೀನರಿಗೆ ಋಗ್ವೇದದ ಕಾಲದಿಂದಲೂ ಗೊತ್ತಿತ್ತು. "ಯಜುರ್ವೇದದಲ್ಲಿ ಬೆಳೆ ಸರದಿಯನ್ನು ಕುರಿತ ಸ್ಪಷ್ಟ ಆಧಾರಗಳು ದೊರೆಯುತ್ತವೆ. ಋಗ್ವೇದದ viii, 91, 5-6ರಲ್ಲಿಯಂತೆ ಒಂದೇ ಜಮೀನಿನಲ್ಲಿ ಬೆಳೆಗಳನ್ನು ಸರದಿಯಲ್ಲಿ ಬೆಳೆಯಲಾಗುತ್ತಿತ್ತಲ್ಲದೆ, ಪಡಬಿಡುವ ಪದ್ಧತಿಯು ತಿಳಿದಿದ್ದಂತೆ ತೋರುತ್ತದೆ. ತೈತ್ತಿರೀಯ ಸಂಹಿತದಲ್ಲಿ ವರ್ಷದಲ್ಲಿ ಒಂದೇ ಜಮೀನಿನಲ್ಲಿ ಎರಡು ಬೆಳೆಗಳನ್ನು ತೆಗೆಯಲಾಗುತ್ತಿತ್ತೆಂದು ಸ್ಪಷ್ಟವಾಗಿ ಹೇಳಲಾಗಿದೆ

(v.1, 7,3). ಅಲ್ಲಿ ವಿವಿಧ ಬೆಳೆಗಳು ಮಾಗುವ ವಿವಿಧ ಕಾಲಗಳನ್ನು ತಿಳಿಸಲಾಗಿದೆ. ಅವುಗಳನ್ನು ಕೊಯ್ಲು ಮಾಡುವ ಸರಿಯಾದ ಕಾಲವನ್ನು ಸಹ ತಿಳಿಸಿದೆ. ಕೌಟಿಲ್ಯನು ಕಾಲೋಚಿತ ಬೇಸಾಯ ಹಾಗೂ ಕೊಯ್ಲು ಮಾಡುವಿಕೆಯ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದಾನೆ" - ಉದ್ಧೃತ : ಸಿ.ಕೆ. ಕುಮುದಿನಿ (ಅನು), ಪ್ರಾಚೀನ ಭಾರತದಲ್ಲಿ ಬೇಸಾಯ, ಪು. 137) ಸಸ್ಯಶಾಸ್ತ್ರ ಹಾಗೂ ವ್ಯವಸಾಯದ ಬಗ್ಗೆ ಅನೇಕ ಪ್ರಾಚೀನ ಗ್ರಂಥಗಳಲ್ಲಿ ವಿಪುಲವಾಗಿ ಮಾಹಿತಿ ದೊರೆತರೂ ಸಹ 'ಅಗ್ನಿ ಪುರಾಣ' ಮತ್ತು ವರಾಹಮಿಹಿರನ 'ಬೃಹತ್ಸಂಹಿತೆ' ಕೃತಿಗಳಲ್ಲಿ ಮರಗಿಡಗಳನ್ನು ಬೆಳೆಸುವ ಕಲೆ ಸಾಕಷ್ಟು ವಿವರವಾಗಿ ಬಂದಿದೆ. ಸಸ್ಯ ಜೀವನದಲ್ಲಿ ಬೀಜಗಳು ಮತ್ತು ಅವುಗಳ ಆಯ್ಕೆ, ಬಿತ್ತುವಿಕೆ, ನೆಡುವಿಕೆ, ಮೊಳೆಯುವಿಕೆ, ಪೋಷಿಸುವಿಕೆ, ಗೊಬ್ಬರ ಹಾಕುವಿಕೆ, ಭೂಮಿಯನ್ನು ಹದಗೊಳಿಸುವಿಕೆ ಮುಂತಾದವು ಅವಿಭಾಜ್ಯ ಅಂಗಗಳು ಎಂದು ವರಾಹಮಿಹಿರ ಗುರುತಿಸಿದ್ದಾನೆ. ಸುರಪಾಲನ 'ವೃಕ್ಷಾಯುರ್ವೇದ'ದಲ್ಲಿ ವಿವಿಧ ಗೊಬ್ಬರಗಳ ತಯಾರಿಕೆ ಹಾಗೂ ವಿವಿಧ ಫಲಪುಷ್ಪಲತೆಗಳಿಗೆ ಗೊಬ್ಬರ ಹಾಕುವ ಕ್ರಮವನ್ನು ಕುರಿತು ಸುದೀರ್ಘ ವಿವರಗಳಿವೆ. 'ಚರಕಸಂಹಿತೆ', 'ಸುಶ್ರುತ ಸಂಹಿತೆ', ಕೌಟಿಲ್ಯನ 'ಅರ್ಥಶಾಸ್ತ್ರ' ಹಾಗೂ ಪರಾಶರನ 'ಕೃಷಿ-ಸಂಗ್ರಹ' ಕೃತಿಗಳಿಂದಲೂ ಕೆಲವು ಸಸ್ಯ, ಕೃಷಿ ಸಂಬಂಧವಾದ ಮಾಹಿತಿಗಳು ಲಭ್ಯವಾಗುತ್ತವೆ. ಆದರೆ ಈ ವಿಷಯದಲ್ಲಿ ಚಾವುಂಡರಾಯ ಬಹುಮಟ್ಟಿಗೆ ವರಾಹಮಿಹಿರನಿಗೆ ಋಣಿಯಾಗಿದ್ದಾನೆ. ಅಂತೂ ಪ್ರಾಚೀನ ಕಾಲದಿಂದಲೂ ಸಸ್ಯಶಾಸ್ತ್ರ, ವ್ಯವಸಾಯ ಮತ್ತು ವೈದ್ಯಶಾಸ್ತ್ರಗಳು ಪರಸ್ಪರ ಪೂರಕವಾದವು ಎಂಬುದು ಸ್ಪಷ್ಟ. ಮೂಲಿಕೆಗಳನ್ನು ಪತ್ತೆ ಹಚ್ಚಲು, ವಿಂಗಡಿಸಲು ಹಾಗೂ ಉಪಯೋಗಿಸಲು ಸಸ್ಯಶಾಸ್ತ್ರೀಯ ತಿಳಿವಳಿಕೆ ಎಷ್ಟು ಅಗತ್ಯವೋ, ಅಂತೆಯೇ ಇವುಗಳನ್ನು ಲಾಭದಾಯಕವಾಗಿ ಬೆಳೆಯಲು ವ್ಯವಸಾಯದ ತಾಂತ್ರಿಕ ಜ್ಞಾನವೂ ಮುಖ್ಯ. ಆದ್ದರಿಂದ ವ್ಯವಸಾಯ ಮತ್ತು ಮೂಲಿಕೆ ಗಿಡಗಳ ಪಾಲನೆ ಪೋಷಣೆಯ ಮೇಲ್ವಿಚಾರಣೆಗಾಗಿ ಒಬ್ಬ ಅಧಿಕಾರಿಯನ್ನು ನೇಮಿಸುತ್ತಿದ್ದುದಕ್ಕೆ ನಿದರ್ಶನಗಳು ನಮಗೆ ಇತಿಹಾಸದಿಂದ ದೊರೆಯುತ್ತವೆ.

ವ್ಯವಸಾಯ ಪ್ರಕೃತಿಯ ಘಟನೆಗಳಿಗೆ ನೇರವಾಗಿ ಒಳಗಾಗಿರುವ ಕಸುಬು. ವಾತಾವರಣದ ವೈಪರೀತ್ಯಗಳನ್ನು ಊಹಿಸುವುದು ತುಂಬ ಕಷ್ಟ. ಆದರೂ ನಮ್ಮ ಪೂರ್ವಿಕರು ಇಂಥ ಏರಿಳಿತಗಳನ್ನು ನಕ್ಷತ್ರಗಳು, ಗಾಳಿಯ ಚಲನೆ, ಸೂರ್ಯಚಂದ್ರರ ಪಥ - ಮುಂತಾದವುಗಳಿಂದ ನಿಖರವಾಗಿ ಊಹಿಸಬಲ್ಲವರಾಗಿದ್ದರೆಂಬುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಚಾವುಂಡರಾಯ ಕವಿಯು ಕೂಡ ಬೀಜಬಿತ್ತನೆಗೆ ಯೋಗ್ಯವೆನಿಸಿದ ಕಾಲವನ್ನು ತಿಳಿಯಲು ಕೆಲವು ನಕ್ಷತ್ರಗಳು ಸೂಚಿಸಿದ್ದಾನೆ (6-2). ಆ ಪ್ರಕಾರ ರೋಹಿಣಿ, ಮೃಗಶಿರ, ಮಖ, ಹಸ್ತ, ಚಿತ್ತ, ವಿಶಾಖ, ಮೂಲ, ಶ್ರವಣ ನಕ್ಷತ್ರಗಳು ತೋಟಗಾರಿಕೆ ಹಾಗೂ ಬೀಜಬಿತ್ತನೆ ಕಾರ್ಯಗಳಿಗೆ ಪ್ರಶಸ್ತವಾಗಿವೆ.

ಬೀಜ ಬಿತ್ತನೆಗೆ ಮುಂಚೆ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿಯೋ ಅಗೆದೋ ಮಣ್ಣನ್ನು ಹರವಿ ಆಬಾದು ಮಾಡಿಕೊಳ್ಳಬೇಕು. ಅಂತರ್ಜಲ ಅಕ್ಷಯವಾಗಿದ್ದು, ಸಸ್ಯಗಳ ಬೆಳೆವಣಿಗೆಗೆ ಅನುಕೂಲಕರವಾದ ಭೂಮಿಯು ತೋಟದ ಕೃಷಿಗೆ ಅತ್ಯಂತ ಯೋಗ್ಯವಾದದ್ದು. "ಉದಕ ಮೃದ್ವಿಯಪ್ಪ ನೆಲನಂ ನೆಜೆಶೋಧಿಸಿ..." (6-3) ಎನ್ನುವ ಮಾತಿನಲ್ಲಿ ಈ ಅಂಶ ಸೊಗಸಾಗಿ ಧ್ವನಿತವಾಗಿದೆ. ಬಳಿಕ ನೀರ್ಗಾಲುವೆ ಅನುಕೂಲವಿರುವಂತೆ 16 x 14 x 10 ಮೊಳಗಳ ಪ್ರಮಾಣದ ಅಂತರದಲ್ಲಿ ಕ್ರಮವಾಗಿ 2 x 4 ಮೊಳದ ಅಗಲ ಮತ್ತು ಉದ್ದವಿರುವ ಗುಣಿಗಳನ್ನು ತೋಡಬೇಕು (6-4). 1 ಮೊಳ = 11/2 ಅಡಿ. ಹಾಗಾಗಿ ಈ ಗುಣಿಗಳ ಅಗಲ ಹಾಗೂ ಆಳ ಅಡಿಗಳಲ್ಲಿ 3x6 ಆದರೆ ಅಂತರ 24x21x15 ಅಡಿಗಳಾಗುತ್ತವೆ. ಸಾಮಾನ್ಯವಾಗಿ ಗುಣಿಗಳ ಆಳ 6 ಅಡಿ ಇರುವುದು ತುಸು ಜಾಸ್ತಿಯೇ. ಏಕೆಂದರೆ ಇಷ್ಟು ಆಳ ಪ್ರಮಾಣಕ್ಕೆ ಬೀಜಗಳನ್ನು ಊರಿದರೆ ಅವು ಮೊಳಕೆಯೊಡೆದು ಭೂಮಿಯ ಮೇಲಕ್ಕೆ ಬರುವುದು ಕಷ್ಟ. ಜೊತೆಗೆ ನೀರಿನ ಪಸೆ ಅಧಿಕವಾದಾಗ ಆಳದ ಗುಣಿಗಳಲ್ಲಿರುವ ಬೀಜಗಳು ಮತ್ತು ಅವುಗಳ ಮೊಳಕೆ ಕೊಳೆಯುವ ಸಂಭವ ಹೆಚ್ಚಿರುತ್ತದೆ. ಕಾಂಡದ ಸಸ್ಯೋತ್ಪಾದನೆಗಾದರೆ ಈ ಸಮಸ್ಯೆ ಅಷ್ಟಾಗಿ ಎದುರಾಗದು. ಹೀಗೆ ಹೇಳುವಾಗ ಒಂದು ಅಂಶವನ್ನು ನೆನಪಿನಲ್ಲಿಡಬೇಕು. ಗುಣಿಗಳು ಆಳವಾಗಿದ್ದಾಗ ಹೆಚ್ಚು ಪ್ರಮಾಣದಲ್ಲಿ ಗೊಬ್ಬರ ಗೋಡುಗಳನ್ನು ತುಂಬಿ ಬೀಜ ಬಿತ್ತನೆ ಅನುಕೂಲವಾಗುವಂತೆ ಮಾಡಿಕೊಳ್ಳಬಹುದು. ಪ್ರಾಯಶಃ ಚಾವುಂಡರಾಯನ ಇಂಗಿತಾರ್ಥವೂ ಇದೇ ಆಗಿರಬೇಕು. ಭೂ ಫಲವತ್ತತೆ ಹೆಚ್ಚಿಸಲೋಸುಗ ಐದು ತೆರನಾದ ಮಣ್ಣು ಮತ್ತು ಗೊಬ್ಬರವನ್ನು ಸಮಗೊಳಿಸಿ ಗುಣಿಗಳಿಗೆ ತುಂಬಬೇಕು. ಇದಕ್ಕೆ ಚಾವುಂಡರಾಯ "ಭೂಮಿ ಸಂಸ್ಕಾರವ್" (6-5) ಎಂದು ಸೂಚಿಸಿರುವುದು ಅತ್ಯಂತ ಔಚಿತ್ಯಪೂರ್ಣ. ವೈಜ್ಞಾನಿಕವಾಗಿಯೂ ಈ ಸಾಂಪ್ರದಾಯಿಕ ಕೃಷಿ ವಿಧಾನಕ್ಕೆ ವಿಶೇಷ ಮಹತ್ತ್ವವಿದೆ.

ಗಿಡಮರಗಳನ್ನು ಬಿತ್ತಿ - ನೆಟ್ಟು ಬೆಳೆಯುವುದು ಎರಡು ರೀತಿಯಲ್ಲಿ - ಬೀಜಗಳಿಂದ; ಬೇರು, ಕಾಂಡ, ಮೊಗ್ಗು - ಮುಂತಾದ ಸಸ್ಯದ ಅಬೀಜ ಭಾಗಗಳಿಂದ. 'ಬೆಳೆಯ ಸಿರಿ ಬೀಜದಲ್ಲಿ' ಎಂಬಂತೆ ಉತ್ತಮ ಬೀಜ ಉತ್ತಮ ಫಲ ನೀಡುತ್ತದೆ. ಇದನ್ನರಿತು ಕೃಷಿಕರು ತಾವು ಬೆಳೆಸುವ ಬೆಳೆಗಳ ಗುಣವೈಶಿಷ್ಟ್ಯವನ್ನು ಪ್ರತ್ಯಕ್ಷ ಅನುಭವದಿಂದ ತಿಳಿದು ತಮಗೆ ಬೇಕಾದ ಒಳ್ಳೆಯ ಬೀಜಗಳನ್ನು ಆಯ್ಕೆ ಮಾಡಿ, ಒಣಗಿಸಿ, ಸಂಸ್ಕರಿಸಿ ಬಿತ್ತುವುದು ಒಳ್ಳೆಯದು. ಅಂತೆಯೇ ಬೇರು, ಕಾಂಡಗಳ ಸಸ್ಯೋತ್ಪಾದನೆಗೆ ಉತ್ತಮ ಜಾತಿಯ ವೃಕ್ಷಗಳ ಬೇರು, ಕಾಂಡಗಳನ್ನೇ ಆರಿಸಿಕೊಂಡು ನೆಡುವುದೂ ಯುಕ್ತ. ಈ ಎರಡು ರೀತಿಯ ಗಿಡ ಬೆಳೆಸುವ ಕ್ರಮವನ್ನು ಪ್ರಸ್ತುತ ಪ್ರಕರಣದಲ್ಲಿ ಚಾವುಂಡರಾಯ ವಿವೇಚಿಸಿರುವುದು ಗಮನಾರ್ಹವಾಗಿದೆ. ಮೊದಲು ತುಂಬ ಚೆನ್ನಾಗಿ ಫಲಿಸಿ ಮಾಗಿ ಉದುರಿದ ಹಣ್ಣುಗಳ ಬೀಜಗಳನ್ನು ಆಯ್ದುಕೊಳ್ಳಬೇಕು. ಹೀಗೆ ಆಯ್ದು ತಂದ ಬೀಜಗಳಿಗೆ ಸಗಣಿ ಕಲಸಿ ಐದು ದಿನ ಒಣಗಿಸಬೇಕು. ಬಳಿಕ ಈ ಬೀಜಗಳನ್ನು ಐದು ದಿನ ಕಾಲ '...ಕ್ಷೀರವಾರಿಯೊಳ್...' (ಮೂಲ ಪದ್ಯದಲ್ಲಿ ಇದು '...ಕ್ಷಾರ ವಾರಿಯೊಳ್' ಎಂದಿದೆ. ಇದು ಸರಿಯಲ್ಲ. ಏಕೆಂದರೆ ಚಾವುಂಡರಾಯ ಬೀಜ ಸಂಸ್ಕಾರಕ್ಕೆ ಹೇಳಿರುವುದು ಹಾಲಿನ ನೀರನ್ನೇ ಹೊರತು, ಉಪ್ಪು ನೀರನ್ನಲ್ಲ. ವರಾಹಮಿಹಿರನಲ್ಲಿ ಕೂಡ "ವಾಸರಾಣಿ ದಶದುಗ್ಧಭಾವಿತಂ..." (55-19) ಎಂಬ ಅಭಿಪ್ರಾಯವಿದೆ. ಆದುದರಿಂದ 'ಕ್ಷೀರವಾರಿಯೊಳ್' ಎಂಬುದು 'ಕ್ಷಾರವಾರಿಯೊಳ್' ಎಂದಾಗಿರುವ ಸಾಧ್ಯತೆ ಹೆಚ್ಚು.) (6-6) ನೆನೆಯಿಸಬೇಕು. ತದನಂತರ ಆ ಬೀಜಗಳಿಗೆ ಗುಳ್ಳದ ಹಣ್ಣಿನ ರಸ, ಎಳನೀರು ಬೆರೆಸಿ ವಾಯುವಿಳಂಗ, ತುಪ್ಪ ಕೂಡಿದ ಧೂಪ ಕೊಡಬೇಕು. ಈ ತೆರನಾಗಿ ಉಪಚಾರ ಮಾಡಿದ ಬೀಜಗಳನ್ನು ಹದವರಿತು ತೋಡಿದ ಗುಣಿಗಳಿಗೆ ಉತ್ತಮ, ಮಧ್ಯಮ, ಅಧಮ ವೃಕ್ಷ ಬೆಳೆಯುವ ಕ್ರಮದಲ್ಲಿ ಬಿತ್ತಬೇಕು. ಬಳಿಕ ಆ ಗುಣಿಗಳಿಗೆ ಮಾಂಸೋದಕವನ್ನು ತಳಿಯಲು "... ಸಸಿಗಳೊದವಿದಾಂಗುಡಿವಿಡುಗುಂ" (6-7) ಎಂದಿದ್ದಾನೆ.

ಆದರೆ ಐದು ದಿನ ಕಾಲ ಹಾಲಿನಲ್ಲಿ ಬೀಜ ನೆನೆ ಹಾಕುವುದರಿಂದ, ಅವಕ್ಕೆ ಗಾಳಿಯ ಸರಬರಾಜು ಇಲ್ಲದೆ ಕೊಳೆತು ಹಾಳಾಗುವುದಿಲ್ಲವೆ ? ಎಂಬ ಪ್ರಶ್ನೆ ಇಲ್ಲಿ ಎದುರಾಗುವುದು ಸಹಜ. ಕಾರಣವಿಷ್ಟೇ. ಸಾಮಾನ್ಯವಾಗಿ ಎಲ್ಲ ಮರದ ಬೀಜಗಳು ಏಕಪ್ರಕಾರವಾಗಿರುವುದಿಲ್ಲ. ಅಂದರೆ ಕೆಲವು ಬೀಜಗಳ ಸಿಪ್ಪೆ ಗಟ್ಟಿಯಾಗಿದ್ದರೆ ಮತ್ತೆ ಕೆಲವು ಬೀಜಗಳ ಸಿಪ್ಪೆ ತೆಳುವಾಗಿರುತ್ತದೆ. ಅದರಲ್ಲಿಯೂ ತಿರುಳು ಬೀಜಗಳಲ್ಲಿ ಕೆಲವನ್ನು ಸ್ವಲ್ಪ ಕಾಲ ಕೂಡಿಟ್ಟಲ್ಲಿ ಆ ಬೀಜಗಳ ಸಿಪ್ಪೆ ತುಂಬ ಗಟ್ಟಿಯಾಗುತ್ತದೆ. ಹೀಗೆ ಗಟ್ಟಿ ಬಿದ್ದ "ಬೀಜಗಳನ್ನು ಬಿತ್ತುವುದಕ್ಕೆ ಮುಂಚೆ ತಣ್ಣೀರಿನಲ್ಲೊ, ಉಗುರುಬೆಚ್ಚನೆ ನೀರಿನಲ್ಲೊ 14 ಗಂಟೆಗಳ ಕಾಲ ನೆನೆಸುವುದು ಒಳ್ಳೆಯದು. ಆಗ ಮೊಳಕೆ ಹೊರಬರಲು ಕಷ್ಟವಾಗುವುದಿಲ್ಲ. ತಡವಾಗುವುದಿಲ್ಲ.... ಕ್ಯಾನ, ಗೊಬ್ಬಳಿ ಮುಂತಾದವುಗಳ ಬೀಜದ ಸಿಪ್ಪೆ ಬಹಳ ಗಟ್ಟಿ. ಇವುಗಳನ್ನು ಮೂರು ದಿವಸಗಳ ಕಾಲ ಬಹಳ ಬಿಸಿಯಿರುವ ನೀರಿನಲ್ಲಿ ನೆನೆಸಬೇಕಾಗುತ್ತದೆ. ಬಿಸಿನೀರಿನಲ್ಲಿ ಬೇಗ ನೆನೆಯುತ್ತವೆ. ಕೆಲವು ಬೀಜಗಳನ್ನು ಐದು ದಿವಸ ನೆನೆಸಬೇಕಾಗಬಹುದು. ಹೀಗೆ ದೀರ್ಘಕಾಲ ನೆನೆಸುವಾಗ ಬೀಜಗಳಿಗೆ ಗಾಳಿಯ ಸರಬರಾಜು ಕಡಿಮೆಯಾಗಿ ಮೊಳಕೆ ಕೆಡಬಹುದು. ಆದುದರಿಂದ ಪ್ರತಿನಿತ್ಯವೂ ಹೊಸ ನೀರಿನಲ್ಲಿ ನೆನೆಸಬೇಕು." (ಬೀಜಗಳನ್ನು ಬಿಸಿನೀರಿನಲ್ಲಿ ನೆನೆಸಲು ನೀರನ್ನು ಮರಳುವಷ್ಟು ($180^0$ರಿಂದ $200^0$ F 80-$90^0$) ಕಾಯಿಸಿ ಈ ನೀರಿಗೆ ಬೀಜವನ್ನು ಸುರಿದು ಆರುವುದಕ್ಕೆ ಬಿಡಬೇಕು ಎಂದು ಹೇಳಲಾಗಿದೆ" - ಮ.ಲ. ನರಸಿಂಹ ಅಯ್ಯಂಗಾರ್, ಎಂ.ಆರ್. ಆನಂದರಾಮಯ್ಯ, ತೋಟಗಾರಿಕೆ ಸಂ. 1, ಪು. 57) ಇದರಿಂದಾಗಿ ಚಾವುಂಡರಾಯ ಮತ್ತು ವರಾಹಮಿಹಿರ - ಇವರೀರ್ವರೂ ಹೇಳಿರುವ ಬೀಜೋಪಚಾರ ಕ್ರಮ ಸೂಕ್ತವೂ ಪ್ರಯೋಗಾರ್ಹವೂ ಆದುದಾಗಿದೆ. "ಬೀಜದ ಗಟ್ಟಿ ಹೊದಿಕೆಯನ್ನು ಮೆತುಗೊಳಿಸಲು ಮತ್ತೊಂದು ಕ್ರಮವನ್ನು ಪಾಶ್ಚಾತ್ಯ ದೇಶಗಳ ತೋಟಗಾರರು ಅನುಸರಿಸುತ್ತಾರೆ. ಬೀಜಗಳನ್ನು ಮಣ್ಣಿನ ಅಥವಾ ಮರಳಿನ ಪದರುಗಳ ಮಧ್ಯೆ ಇಡುವುದೇ ಆ ಕ್ರಮ." (ಮ.ಲ.ನರಸಿಂಹ ಅಯ್ಯಂಗಾರ್, ಎಂ.ಆರ್. ಆನಂದರಾಮಯ್ಯ, ತೋಟಗಾರಿಕೆ, ಪು. 58)

ದಾಳಿಂಬೆ, ಹಲಸು, ಪಾದರಿ, ನೇರಳೆ, ಅಶೋಕ, ಬಾಳೆ, ಮಲ್ಲಿಗೆ, ಅದಿರ್ಗಂತಿ ಮಾದಲ - ಇವೇ ಮೊದಲಾದ ವೃಕ್ಷೌಷಧ ಬಳ್ಳಿಗಳನ್ನು ಬೆಳೆಸುವುದಾದರೆ ಈ ವೃಕ್ಷಲತೆಗಳ ಕಾಂಡವನ್ನು ಕಡಿದು ಇಲ್ಲವೇ ಬೀಜಗಳಿಗೆ ಸಗಣಿ ಲೇಪಿಸಿ ನೆಟ್ಟು ಬಿತ್ತುವುದು ಯುಕ್ತ (6-21). ಹಾಗೆಯೇ ಇಟ್ಟೆಡೆಯಾಗಿ ಬೆಳೆದ ಗಿಡಮರಗಳನ್ನು ಕಿತ್ತು ನೆಡುವಾಗ ಕೆಲವು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಅವುಗಳೆಂದರೆ ಚಿಗುರೊಡೆದು ಬಲಿತ ಸಸಿಗಳಾದರೆ ಹೇಮಂತ ಋತುವಿನಲ್ಲಿಯೂ ಫಲಾನ್ವಿತ ವೃಕ್ಷಗಳಾದರೆ ವರ್ಷ ಋತುವಿನಲ್ಲಿಯೂ ಕಿತ್ತು ನೆಡಬೇಕು. ಎಳೆಯ ಸಸಿಗಳನ್ನು ಬೇರುಸಹಿತ ಕಿತ್ತು ಶಿಶಿರ ಋತುವಿನಲ್ಲಿ ನೆಡುವುದು ಒಳ್ಳೆಯದು (6-17). ಹೀಗೆ ಸಸಿ ನಾಟುವಾಗ ಸಗಣಿ, ಹಾಲು, ವಿಳಂಗ, ತುಪ್ಪ, ಜೇನುತುಪ್ಪ, ಲಾಮಂಚ, ಎಳ್ಳು ಇವನ್ನು ಸಮನಾಗಿ ಕೊಂಡು ಅರೆದು, ಸಸ್ಯಗಳ ಮೂಲಕ್ಕೆ ಬಳಿದು, ಶಾಸ್ತ್ರೋಕ್ತ ವಿಧಿಯಿಂದ ಪೂಜಿಸಿ - ನೆಡುವುದರಿಂದ ಆ ಗಿಡಗಳು ಕುಡಿವೊಡೆದು ಮೊದಲಿಗಿಂತ ಚೆನ್ನಾಗಿ ಬೆಳೆಯುವವು. ಅದಕ್ಕೆ ಈ ಉಲ್ಲೇಖಿತ ಔಷಧವನ್ನು ಪದೇ ಪದೇ ಸಸ್ಯಗಳ ಬೊಡ್ಡೆಗೆ ತೊಡೆದು ಪ್ರತಿನಿತ್ಯ ನೀರೆರೆಯುವ ಕ್ರಮವನ್ನು ಅನುಸರಿಸುವುದು ಯುಕ್ತವೆಂದು ಹೇಳಿದೆ (6-18). ಪ್ರಾಯಶಃ ಸಸ್ಯಗಳಲ್ಲಿ ಸಸ್ಯ ಕ್ರಿಯೆಗಳನ್ನು ಚೋದಕಗೊಳಿಸಲು ಹಾಗೂ ಅವು ಚೆನ್ನಾಗಿ ಭೂಮಿಗೆ ಬೇರುಕೊಟ್ಟು ಬೆಳೆಯಲು ಈ ವಿಧಾನ ಯುಕ್ತವಾಗಿದ್ದಿರಬಹುದು. ಇನ್ನು ಬೀಜ ಬಿತ್ತನೆ ಮೂಲಕ ಮರಗಿಡಗಳನ್ನು ಬೆಳೆಸುವ ಸಂಗತಿ ಕಟ್ಟಿಕೊಡುವ ಪದ್ಯವೊಂದು ಹೀಗೆಯೇ ಸ್ವಾರಸ್ಯಕರವಾಗಿದೆ (6-24):

*ಕ್ರಿಯೆಯಿಂ ಬೀಜಂಗಳನ*
*ಲ್ಲಿಯೆ ಮಣ್ಣೊಳ್ ಬಿತ್ತಿ ತಳಿಗೆ ತುಳ (ಳಿ) ಯಿಸಿ ಪಾಲ್ ಪಂ*
*ದಿಯ ನೆಣಗಳುಮೆಂಬಿವನನು*
*ನಯದೆ ಮೊದಲ್ಗೆಱೆಯೆ ಸದ್ಯಪಲದೊಳ್ ನೆಱೆಗುಂ*

ಈ ಪದ್ಯದ ಟೀಕಾರ್ಥ ಹೀಗಿದೆ : ಆವುದೊಂದು ವೃಕ್ಷಂಗಳಂ ಅಲ್ಲಿಯ ಮಣ್ಣಂ ಚೆನ್ನಾಗಿ ಅಗೆದು ಭೂಮಿಯಂ ಸಸಿನವಾಗಿ ಮಾಡಿಕೊಂಡು ಬಿತ್ತಿ ಹಂದಿಯ ಮಾಂಸದ ರಸಮಂ ಪಾಲಂ ಬೆರಸಿ ಕುದಿಸಿ ಮೊದಲಿಗೆ ಪೊಯ್ಯಲ್ ಆ ಕ್ಷಣದಲ್ಲಿ ವೃಕ್ಷಂಗಳ್ ಪುಟ್ಟಿ ಪುಷ್ಪಫಲಂಗಳಿಂದೆ ಚೆನ್ನಾಗಿ ಪೊಪ್ಪುವುವು. ಇಲ್ಲಿ 'ಹಂದಿಯ ಮಾಂಸದ ರಸಮಂ ಪಾಲಂ ಬೆರಸಿ ಕುದಿಸಿ ಮೊದಲಿಗೆ ಪೊಯ್ಯಲ್' ಎಂಬ ಮಾತು ಗಮನಾರ್ಹ. "...ಕೆಲವು ಗಟ್ಟಿ ಸಿಪ್ಪೆ ಇರುವ ಬೀಜಗಳನ್ನು ಮಡಿಯಲ್ಲಿಯೋ ತಟ್ಟೆಯಲ್ಲಿಯೋ ಹೂಣಿ ಅದರ ಮೇಲೆ ತರಗು ಅಥವಾ ಹುಲ್ಲನ್ನು ಹರಡಿ ಸುಡುತ್ತಾರೆ. ಅನಂತರ ಅದರ ಮೇಲೆ ನೀರನ್ನು ಚಿಮುಕಿಸುತ್ತಾರೆ. ಈ ಶಾಖದಿಂದ ಮೊಳಕೆ ಶೀಘ್ರಗೊಳ್ಳುತ್ತದೆ" (ಅದೇ, ಪು. 58). ಅಲ್ಲದೆ ಮತ್ತೊಂದು ವಿಧಾನದ ಪ್ರಕಾರ "... ಮಡಿಗಳಲ್ಲಿ ಹೆಚ್ಚು ಶಾಖ ಬರಲು ಮಡಿಯ ಮಣ್ಣಿನ ತಳಗೆ ಕುದುರೆ ಅಥವಾ ಕತ್ತೆಯ ಲದ್ದಿಯನ್ನು ಹರಡುತ್ತಾರೆ. ಇದು ಕೊಳೆಯುವಾಗ ಹೆಚ್ಚು ಶಾಖವನ್ನು ಹೊರಗೆಡಹುತ್ತದೆ. ಈ ಕಾವಿನಿಂದ ಮಡಿಯಲ್ಲಿ ನೆಟ್ಟ ಬೀಜಗಳು ಬೇಗ ಮೊಳೆಯುತ್ತವೆ." (ಅದೇ, ಪು. 58) ಆದಕಾರಣ, ಚಾವುಂಡರಾಯ ಸೂಚಿಸಿರುವ ಈ ಉಪಾಯ ಬೀಜಗಳ ಮೊಳಕೆಯನ್ನು ಶೀಘ್ರಗೊಳಿಸುವಲ್ಲಿ ಅತ್ಯಂತ ಫಲಕಾರಿ ಎನಿಸುತ್ತದೆ. ಆದರೆ ಈ ಕ್ರಮದಿಂದ ಟೀಕೋಕ್ತಿಯಲ್ಲಿ ಹೇಳಿರುವಂತೆ 'ಆ ಕ್ಷಣದಲ್ಲಿ ವೃಕ್ಷಂಗಳ್ ಪುಟ್ಟಿ ಪುಷ್ಪ ಫಲಂಗಳಿಂದ ಚೆನ್ನಾಗಿ ಪೊಪ್ಪುವುದು ಸಾಧ್ಯವೆ' ? ಎಂಬ ಸಂದೇಹ ಮೂಡುತ್ತದೆ. ಇದರ ಮೂಲದಲ್ಲಿ "ಪಾಲ್ ಪಂದಿಯ ನೆಣಗಳುಮೆಂಬಿವನನುನಯದೆ ಮೊದಲ್ಗೆಱೆಯೆ ಸದ್ಯಪಲದೊಳ್ ನೆಱೆಗುಂ" ಎಂದಿದೆ. ಇಲ್ಲಿಯ 'ಸದ್ಯಪಲದೊಳ್' ಮಾತಿಗೆ ಟೀಕಾಕಾರ 'ಪುಷ್ಪಫಲ ಗಳಿಂದ' ಎಂಬರ್ಥವನ್ನು ನೀಡಿದ್ದಾನೆ. ಇದು ಸರಿಯಲ್ಲ. ಏಕೆಂದರೆ 'ಪಲ' ಪದಕ್ಕೆ 'ಮಾಂಸ', 'ಬಾಡು' ಎಂಬರ್ಥವಿದೆ (ಕನ್ನಡ ಸಾಹಿತ್ಯ ಪರಿಷತ್ತು, ಸಂಕ್ಷಿಪ್ತ ಕನ್ನಡ ನಿಘಂಟು, ಪು. 512). ಆದುದರಿಂದ ಹಾಲಿನೊಂದಿಗೆ ಕೂಡಿದ ಹಂದಿಯ ನೆಣ - ಮಾಂಸದ ರಸವನ್ನು ಗಿಡಗಳಿಗೆ ತಳಿಯುವುದರಿಂದ ಅವು ಚೆನ್ನಾಗಿ ಕುಡಿಯೊಡೆದು ಬೆಳೆಯುವವು ಎಂದು ಅರ್ಥವುಂಟಾಗುತ್ತದೆ.

ಆಧುನಿಕ ಕೃಷಿಯಲ್ಲಿ ಸುಧಾರಿತ ಸಸ್ಯ - ಬೀಜಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿದೆ. ಕೃಷಿ ವಿಜ್ಞಾನವು ಈ ಕಾಲದಲ್ಲಿ ಹೆಚ್ಚು ಪ್ರಗತಿ ಹೊಂದಿರುವುದರಿಂದ ಕೃಷಿಕರಿಗೆ ಬೇಕಾದ ಶುದ್ಧ ತಳಿಯ ಸಸ್ಯ-ಬೀಜಗಳನ್ನು ಒದಗಿಸಲು ಸಾಧ್ಯವಾಗಿದೆ. ಪರಕೀಯ ಪರಾಗಸ್ಪರ್ಶ ಕ್ರಿಯೆಯಿಂದ ಎರಡು ಸಸ್ಯಗಳಲ್ಲಿರುವ ಒಳ್ಳೆಯ ಗುಣಗಳನ್ನು ಒಂದುಗೂಡಿಸಿ ಅಧಿಕ ಉತ್ಪತ್ತಿ ಕೊಡುವ ಹೊಸ ತಳಿಗಳನ್ನು ತಯಾರಿಸುವ ಕ್ರಮವೂ ಹೆಚ್ಚು ಪ್ರಗತಿಯಲ್ಲಿದೆ. ಅಲ್ಲದೆ ಅತ್ಯಧಿಕ ಇಳುವರಿ ಕೊಡುವ ಹೈಬ್ರಿಡ್ ಬೀಜಗಳನ್ನು ತಯಾರಿಸುವ ಕ್ರಮ ಕೂಡ ಇಂದು ಬಳಕೆಗೆ ಬಂದಿದೆ. ಆದರೆ ಕಸಿ ಕಟ್ಟುವ ಕಲೆ ನಿನ್ನೆ ಮೊನ್ನೆಯದಲ್ಲ; ಅನೇಕ ಶತಮಾನಗಳಿಂದ ಆಚರಣೆಯಲ್ಲಿರುವ ಸಸ್ಯೋತ್ಪಾದನೆ ಕ್ರಮ. ಆದುದರಿಂದ ಇದಕ್ಕಾಗಿ ಇಂದು ಆಶ್ಚರ್ಯಪಡುವ

ಪ್ರಮೇಯವೇನೂ ಇಲ್ಲ. ನಿದರ್ಶನವಾಗಿ ಈ ಕೆಳಗಿನ ಪದ್ಯವೊಂದನ್ನ ಗಮನಿಸಬಹುದಾಗಿದೆ (6-22):

*ಸಮನಾಗಿರೆ ಶಾಖಾಬೀ*
*ಜಮನೆರಡಂ ಕೊಂಡು ಸೀಳ್ದು ಸಂಧಿಸಿ ಮಧುವಾ*
*ಜ್ಯಮನಲ್ಲಿ ತೊಡೆದು ನಡುಗೊಂ*
*ದೆ ಮೊದಲ್ ಪಿರಿದಾಗಿ ತತ್ಫಳಂ ಬೇಱಿಕ್ಕುಂ*

ಸಾಮಾನ್ಯವಾಗಿ ಒಂದು ಸಸ್ಯದ ಭಾಗವನ್ನು ಮತ್ತೊಂದು ಸಸ್ಯ ಭಾಗದೊಡನೆ ಕೂಡಿಸಿ, ಎರಡೂ ಬೆರೆಯುವಂತೆ ಮಾಡುವ ವಿಧಾನವೇ ಕಸಿ ಕಟ್ಟುವಿಕೆ. ಈ ಕಸಿ ಕಟ್ಟುವಿಕೆಯಲ್ಲಿ ಮುಖ್ಯವಾಗಿ ಎರಡು ಸಸ್ಯಗಳು ಪಾತ್ರ ವಹಿಸುತ್ತವೆ. (1) ಕೂರಿಸುವ ಸಸ್ಯಭಾಗ (2) ಧರಿಸುವ ಸಸ್ಯಭಾಗ. ಕೂರಿಸುವ ಸಸ್ಯಭಾಗ ಸಾಮಾನ್ಯವಾಗಿ ಒಳ್ಳೆಯ ಜಾತಿ - ಸಿರಿ ಸಸ್ಯ. ಕೃಷಿತಜ್ಞರು ಈ ಭಾಗವನ್ನು ಸಿರಿಕಾಂಡ, ಸಿರಿಕುಡಿ, ಕುಲೀನ ಕುಡಿ - 'ಸೈಯನ್' (Scion) ಎನ್ನುತ್ತಾರೆ. ಈ ಸೈಯನನ್ನು ಧರಿಸುವ ಸಸ್ಯ ಸಾಮಾನ್ಯವಾಗಿ ದೃಢಕಾಯದ, ಗಟ್ಟಿಮುಟ್ಟಾದ, ಒರಟಾಗಿ ಬೆಳೆಯುವ ಗುಣಮಟ್ಟವುಳ್ಳ ಸಸ್ಯ ಆಗಿರುತ್ತದೆ. ಇದನ್ನು ಬುಡಸಸಿ, ತಾಯಿ ಸಸಿ, ತಾಯಿದಿಂಡು 'ಸಸ್ಯಪೀಠ' ಅಥವಾ 'ಸ್ಟಾಕು' ಎನ್ನುತ್ತಾರೆ. ಕಸಿಯಲ್ಲಿ ಮುಖ್ಯ ಅಂಶ - 'ಸ್ಟಾಕು' ಮತ್ತು 'ಸೈಯನ್‌ಗಳ' ಕೇಂಬಿಯಂ ಪದರಗಳ ಒಗ್ಗೂಡಿಕೆ ಆಗಿದೆ. ಸೈಯನಿಗೂ ಸ್ಟಾಕಿಗೂ ಅನೇಕ ವಿಧಗಳಲ್ಲಿ ಸಂಪರ್ಕವೇರ್ಪಡಿಸಬಹುದು. ಆದ್ದರಿಂದ ಮುಖ್ಯವಾಗಿ ಈ ಕಸಿ ವಿಧಾನಗಳಲ್ಲಿ ನಾಲ್ಕು ಗುಂಪುಗಳನ್ನು ಕಾಣಬಹುದು. ಅವುಗಳೆಂದರೆ (1) ಬೇರು ಕಸಿ (Root grafting) 2) ನೆತ್ತಿಕಸಿ (Crown grafting) 3) ಕಾಂಡ ಅಥವಾ ದಿಂಡು ಕಸಿ (Stem grafting) 4) ಮೇಲ್ಗಸಿ (Top grafting, Top working). ಇವುಗಳಲ್ಲಿ ಚಾವುಂಡರಾಯ ಹೇಳುವ ಕಸಿ ವಿಧಾನ ಮೇಲ್ಗಸಿ ಗುಂಪಿಗೆ ಸೇರುತ್ತದೆ. (ಮ.ಲ.ನರಸಿಂಹ ಅಯ್ಯಂಗಾರ್, ಎಂ.ಆರ್.ಆನಂದರಾಮಯ್ಯ, ತೋಟಗಾರಿಕೆ, ಸಂ.1, ಪು. 103). ಅದರಲ್ಲಿಸೀಳುಕಸಿ, ಬೆಣೆಕಸಿ (Cleft grafting) ವಿಧಾನಕ್ಕೂ ಚಾವುಂಡರಾಯ ಕೊಡುವ ಕಸಿ ವಿಧಾನಕ್ಕೂ ಹೋಲಿಕೆ ಕಂಡುಬರುತ್ತದೆ. ಈ ಆಧುನಿಕ ಕಸಿ ವಿಧಾನ ಪದ್ಧತಿ ಹೀಗಿದೆ: "... ಮೊದಲು ರೆಂಬೆಯನ್ನು ನೀಟಾಗಿ ಅಡ್ಡಕ್ಕೆ ಕತ್ತರಿಸಿ ಅದರ ಮಧ್ಯದಲ್ಲಿ ಗಟ್ಟಿಯಾದ ಚಾಕು ಅಥವಾ ಮಚ್ಚಿನಿಂದ ಎರಡು ಮೂರು ಅಂಗುಲ ಆಳದಷ್ಟು ಸೀಳಿ, ಸೀಳುಬಾಯಿ ತೆರೆದಿರುವಂತೆ... ಅದರಲ್ಲಿ ಚೀಪನ್ನು ಸಿಕ್ಕಿಸಿರಬೇಕು. 2-3 ಮೊಗ್ಗುಗಳಿರುವ ಸಯನನ್ನು, ಈ ಸೀಳಿನಲ್ಲಿ ಒತ್ತಿಕೊಂಡು ಕೂರುವಂತೆ, ಬೆಣೆಯ ಆಕಾರದಲ್ಲಿ ಹೆರೆಯಬೇಕು. ಸ್ಟಾಕಿನ ಸೀಳನ್ನು ಹಿಗ್ಗಿಸಿ ಈ ಬೆಣೆಯನ್ನು ಅದರಲ್ಲಿ ಕೂರಿಸಬೇಕು. ಕೂರಿಸುವಾಗ ಸ್ಟಾಕು ಮತ್ತು ಸಯನಿನ ಕೇಂಬಿಯಂ ಪದರುಗಳು ಒಂದಕ್ಕೊಂದು ಒತ್ತಿಕೊಂಡಿರುವಂತೆ ಮತ್ತುಸಯನಿನ ತಳ ಮೊಗ್ಗು ಸ್ಟಾಕಿನ ಸ್ವಲ್ಪ ಮೇಲೆ ಇರುವಂತೆ ಮತ್ತು ಸೈಯನಿನ ಬೆಣೆಯ ಒಂದು ಭಾಗದ ತೊಗಟೆಯು ಸ್ಟಾಕಿನ ತೊಗಟೆಯೊಂದಿಗೆ ಹೊಂದುಕೊಳ್ಳುವಂತೆ ಜೋಡಿಸಬೇಕು. ತಕ್ಷಣವೇ, ಬೆತ್ತಲೆ ಭಾಗಗಳಿಗೆ ಕಸಿಮೇಣವನ್ನು ಬಳಿಯಬೇಕು. ಸ್ಟಾಕಿನ ರೆಂಬೆ ಎರಡು ಅಂಗುಲಗಳಿಗಿಂತ ದಪ್ಪವಾಗಿದ್ದರೆ ಎರಡು ಸಯನ್ ಬೆಣೆಗಳನ್ನು ಸೀಳಿನ ಎರಡು ಪಕ್ಕಗಳಲ್ಲೂ ಇರಿಸಬಹುದು. ಆಗ್ಗೆ ಇವೆರಡರ ಮಧ್ಯೆ ಸಂದುಬೀಳುತ್ತದೆ. ಇದನ್ನೂ ಕಸಿ ಮೇಣ ಅಥವಾ ಜೇಡಿಯಿಂದ, ನೀರು ಇಳಿಯದಂತೆ ಮುಚ್ಚಬೇಕು" (ಅದೇ, ಪು. 103). ಇದನ್ನು ಗಮನಿಸಿದಾಗ ಚಾವುಂಡರಾಯ ಕಸಿ ಮಾಡಿದ ಭಾಗಕ್ಕೆ ಜೇನುತುಪ್ಪ, ತುಪ್ಪವನ್ನು ಸವರಬೇಕು ಎಂದಿರುವುದು ಸರಿ. ಕಾರಣ, ಕಸಿ ಮಾಡಿದ ಜಾಗದಲ್ಲಿ ತೇವ ಆರದಿರಲು, ಗಾಳಿ ತೂರಿ ಸ್ಟಾಕು ಸೈಯನ್ ಒಣಗದಿರಲು ರೋಗಕಾರಕ ಶಿಲೀಂಧ್ರಗಳು ಒಳ ಹೋಗದಿರಲು ಮೇಣ ಸಂಬಂಧವಾದ ವಸ್ತುವಿನಿಂದ ಆ ಭಾಗವನ್ನು ಮುಚ್ಚಬೇಕಾಗುತ್ತದೆ. ಅದರಲ್ಲಿ ಜೇನುತುಪ್ಪ ರೋಗನಿರೋಧಕ ಅಥವಾ ಪೂತಿನಾಶಕ ಗುಣವನ್ನು ಹೊಂದಿರುವುದರಿಂದ ಕಸಿ ಮಾಡಿದ ಜಾಗಕ್ಕೆ ಅದನ್ನು ತುಪ್ಪದೊಂದಿಗೆ ಸವರುವುದರಿಂದ ಕಸಿ ಗಿಡಕ್ಕೆ ಈ ಔಷಧ ಸಾಕಷ್ಟು ರಕ್ಷಣೆ ಒದಗಿಸಲಿಕ್ಕೂ ಸಾಕು. ಅಂತೂ "ಈ ಬೆಣೆ ಅಥವಾ ಸೀಳು ಕಸಿಕ್ರಮ.... ಹಳೆಯ ಹಣ್ಣಿನ ಮರಗಳನ್ನು ಪುನಃ ಚೇತನಗೊಳಿಸುವುದಕ್ಕೆ" ಹಿಂದಿನಿಂದಲೂ ಬಳಕೆಯಲ್ಲಿರುವ ಯುಕ್ತ ವಿಧಾನ (ಅದೇ, ಪು. 104). ಆದರೂ ಚಾವುಂಡರಾಯನ ಈ ಕಸಿ ವಿಧಾನ ಅನನುಭವಿಗಳಿಗೆ ಹಾಗೂ ಸಾಮಾನ್ಯ ಕೃಷಿ ಜ್ಞಾನಾಭ್ಯಾಸಿಗಳಿಗೆ ದಕ್ಕುವುದಿಲ್ಲವೆಂಬುದು ಅಷ್ಟೇ ಸತ್ಯಸಂಗತಿ ಕೂಡ. ಇನ್ನು ಅವನು ಹೇಳಿರುವ ಬೀಜ ಕಸಿವಿಧಾನ ಹೈಬ್ರಿಡ್ ಬೀಜೋತ್ಪತ್ತಿ ತಳಿ ವಿಧಾನಕ್ಕೆ ಹೆಚ್ಚು ಹತ್ತಿರವಾಗಿದ್ದಿರಬಹುದು.

ಹೀಗೆ ಬೀಜ ಬಿತ್ತಿ ಇಲ್ಲವೇ ಸಸಿ ನಾಟಿಮಾಡಿ ಬೆಳೆಯಿಸಿದ ವೃಕ್ಷಗಳನ್ನು ಸರಿಯಾಗಿ ಪಾಲನೆ ಮಾಡಿ ಪೋಷಿಸುವುದು ಕೃಷಿಕರ ಆದ್ಯ ಕರ್ತವ್ಯ. ಸಸ್ಯಗಳ ಬೆಳವಣಿಗೆಗೆ ಅತ್ಯಾವಶ್ಯಕವಾದಂಥವು ನೀರು ಮತ್ತು ಗೊಬ್ಬರ. ಆದ್ದರಿಂದ ಇವನ್ನು ಕೃಷಿಕರು ಸಕಾಲದಲ್ಲಿ ಒದಗಿಸಿ ಭೂಫಲವತ್ತತೆ ಹೆಚ್ಚಿಸುವ ಮೂಲಕ ಸಸ್ಯಗಳು ಸೊಂಪಾಗಿ ಬೆಳೆಯುವಂತೆ ನೋಡಿಕೊಳ್ಳುವುದೂ ಮುಖ್ಯ. ಅದಕ್ಕೆ ಸಹಕಾರಿಯೆನಿಸಿದ ಅನೇಕ ಮಾಹಿತಿಗಳನ್ನೂ ಚಾವುಂಡರಾಯ ಈ ಪ್ರಕರಣದಲ್ಲಿ ಒದಗಿಸಿದ್ದಾನೆ. ಮಾಂಸೋದಕ ತಳಿಯುವ ಮೂಲಕ ಸೊಗಸಾಗಿ ಕೊನರಿ ಬೆಳೆದ ಸಸಿಗಳಿಗೆ, ಬೆಳಗ್ಗೆ ಸಾಯಂಕಾಲ ತಪ್ಪದೆ ನೀರೆರೆಯಬೇಕು. ಮಾಗಿ ಮತ್ತು ವರ್ಷಕಾಲಗಳಲ್ಲಿ "...ಭೂಮಿಯೊಳಂ ಪದನಱಿತು ನೀರನೆತ್ತುಗೆ ಬಲ್ಲರ್" (6-8) ಎಂದು ಸೂಚಿಸಿದ್ದಾನೆ. ಅಲ್ಲದೆ ಸಸ್ಯಗಳ ಬೊಡ್ಡೆಗೆ ಸಬ್ಬಸಿಗೆಯ ಕಷಾಯ ಅಥವಾ ಆಡಿನ ಮಾಂಸದ ರಸ ಸುರಿಯಲು ಅವು ಅಂಕುರಿಸಿ ನಯವಾಗಿ ಬೆಳೆಯುವವು (6-14). ಜವೆ, ಉದ್ದು, ಹೆಸರು ಇವನ್ನು ಆಡಿನ ಹಾಲಿನಲ್ಲಿ ಅಟ್ಟು ಮಾಡಿದ ಕಷಾಯ; ಹಂದಿ, ಜಿಂಕೆಯಮಾಂಸ, ಜೇನುತುಪ್ಪ, ತುಪ್ಪ, ಅಂಕೋಲೆ ಬೀಜದ ರಸ ಇವನ್ನೊಂದಗೂಡಿ ಮಾಡಿದ ರಸವನ್ನು ತರುಗಳ ಮೂಲಕ್ಕೆ ತಳಿಯುತ್ತ ಬರಲು ಆ ವೃಕ್ಷಗಳು ಪಲ್ಲವಪುಷ್ಪಗಳಿಂದ ಶೋಭಿಸುವವು ಎಂದೂ ಹೇಳಿದೆ (16-15, 19).

ಸಸ್ಯಗಳ ಬೆಳವಣಿಗೆಯಲ್ಲಿ ಗೊಬ್ಬರಗಳ ಪಾತ್ರ ಹಿರಿದು. ಸಸ್ಯಗಳು ತಮಗೆ ಬೇಕಾದ ಪೋಷಕಾಂಶಗಳನ್ನು ಮುಖ್ಯವಾಗಿ ಭೂಮಿಯಿಂದ ಹೀರಿಕೊಳ್ಳುತ್ತವೆ. ಈ ಕ್ರಿಯೆ ನಿರಂತರವಾಗಿ ನಡೆದಲ್ಲಿ ಸಹಜವಾಗಿಯೇ ಮಣ್ಣಿನ ಪೋಷಕಾಂಶ ಗುಣ ಕಡಿಮೆಯಾಗುತ್ತದೆ. ಆಗ ಸಸ್ಯ ಬೆಳವಣಿಗೆ ಕುಂಟಿತಗೊಳ್ಳುತ್ತದೆ. ಆದುದರಿಂದ ಆಗಾಗ ಭೂಮಿಗೆ ಕೊಡುವ ಗೊಬ್ಬರವು ಭೂ ಸತ್ತ್ವ ಹೆಚ್ಚಿಸಿ ಸಸ್ಯಗಳ ಬೆಳವಣಿಗೆಯ ಮೇಲೆ ಒಳ್ಳೆಯ ಪರಿಣಾಮ ಉಂಟುಮಾಡುತ್ತದೆ. ಅದರಲ್ಲಿಯೂ ತೋಟಗಾರರಿಗೆ ನೀರ್ಗೊಬ್ಬರ ಬಹಳ ರೀತಿಯಲ್ಲಿ ಅನುಕೂಲವೆಂದು ತಿಳಿಯಲಾಗಿದೆ. ಏಕೆಂದರೆ "ಸಸ್ಯ ಪೋಷಕಗಳನ್ನು ಬೇರುಗಳು ಕರಗಿದ ರೂಪದಲ್ಲೇ ಹೀರಿಕೊಳ್ಳಬೇಕು. ನಾವೇ ಈ ಪೋಷಕಗಳನ್ನು ಕರಗಿಸಿ ಕೊಡುವುದರಿಂದ, ಇವು ಸಸ್ಯಗಳಿಗೆ ಬೇಗ ಒದಗುತ್ತವೆ. ಘನರೂಪದಲ್ಲಿ ಗೊಬ್ಬರವನ್ನು

ಎಳೆಯ ಗಿಡಗಳಿಗೆ ಹಾಕಿದರೆ ಅದರ ನವುರು ಬೇರುಗಳಿಗೆ ಗೊಬ್ಬರ ತಾಕಿದಾಗ ಅವು ಸುಡಬಹುದು. ನೀರ್ಗೊಬ್ಬರದಲ್ಲಿ ಈ ಭೀತಿ ಇರುವುದಿಲ್ಲ" (ಅದೇ, ಪು. 145). ಹಾಗಾಗಿ ಚಾವುಂಡರಾಯ ಸಸ್ಯಗಳಿಗೆ ಹಾಕಲು ಶಿಫಾರಸ್ಸು ಮಾಡಿರುವ ಮಾಂಸಾದಿ ನೀರ್ಗೊಬ್ಬರ ವಿಧಾನ ಬಹಳ ಯುಕ್ತವಾಗಿಯೇ ಇದೆ ಎನ್ನಲು ಬಾಧಕವಿಲ್ಲ. ಆದರೆ ಸಾಮಾನ್ಯವಾಗಿ ಮಾನವನ ಆಹಾರ ಪದಾರ್ಥಗಳನ್ನೇ ಗೊಬ್ಬರ ರೂಪದಲ್ಲಿ ಬಳಸಲು ಹೇಳಿರುವ ಈ ಕ್ರಮ ಇವೊತ್ತಿಗೆ ಎಷ್ಟು ಪ್ರಸ್ತುತ ಮತ್ತು ಫಲಕಾರಿ ಎಂಬುದು ಚರ್ಚಾಸ್ಪದ.

ಕೃಷಿಯಲ್ಲಿ ಸಸ್ಯ ಸಂರಕ್ಷಣೆ ಒಂದು ಮಹತ್ತ್ವದ ಕ್ರಮ. ಬೆಳೆದ ಬೆಳೆ ಕೈ ಹತ್ತಬೇಕಾದರೆ, ಫಲಪ್ರದವಾಗಬೇಕಾದರೆ ಸಸ್ಯಗಳನ್ನು ಸದಾಕಾಲ ಅವುಗಳ ಶತ್ರುಬಾಧೆಯಿಂದ ಕಾಪಾಡುವುದು ಅನಿವಾರ್ಯ. ಅದಕ್ಕಾಗಿ ಚಾವುಂಡರಾಯ ಕವಿ ಸೂಚಿಸಿರುವ ವಿಧಾನಗಳು ಗಮನಾರ್ಹ. ಮೊದಲಿಗೆ ಮರಗಿಡಗಳ ಸುತ್ತ ಬೆಳೆಯುವ ಕಳೆ ಸಸ್ಯಗಳನ್ನು ಆಗಾಗ ಕಿತ್ತೆಸೆದು, ಸಸ್ಯಗಳ ವೃದ್ಧಿಗೆ ಅನುಕೂಲ ಕಲ್ಪಿಸಬೇಕು. ಬಳಿಕ ಸಸ್ಯಗಳಿಗೆ ನೈಸರ್ಗಿಕ ವೈಪರೀತ್ಯ ಮತ್ತು ಕೀಟ, ಪಕ್ಷಿಗಳ ಉಪದ್ರವ ತಟ್ಟದಂತೆ ಜಾಗ್ರತೆ ವಹಿಸಬೇಕು. "... ಕಿಟ್ಟೂಲಿಕಲ್ ಸಿಡಿಲ್ ಮುಗಿಲುಂ ಕೂರ್ವಿಸಿಲುಟ್ಟುಕವಹ್ನಿಪುಟು ವಾಯಸಮೆಂಬಿವನೆಯ್ದೆ ಕಾಲದಬ್ದುಂಬರೆಗಂ" (6-9) ಇದು ಕವಿಯ ನಿರ್ದೇಶನ.

ಇದರಲ್ಲಿ ಫಸಲು ಸಸ್ಯಗಳನ್ನು ಬೆಂಕಿ, ಕಳೆಸಸ್ಯ, ಕೀಟ, ಪಕ್ಷಿಗಳ ಬಾಧೆಯಿಂದ ಸಂರಕ್ಷಿಸಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಈಗಂತೂ ಕಳೆನಾಶಕ ಮತ್ತು ಕೀಟನಾಶಕಗಳಿಗಾಗಿ ಹಲವು ರಾಸಾಯನಿಕ ಸಿಂಪಡಿಕೆಗಳು ಬಳಕೆಯಲ್ಲಿವೆ. ಆದರೆ ಅದೇ ಆಲಿಕಲ್ಲು, ಸಿಡಿಲು, ಉರಿಬಿಸಿಲು, ಅತಿವೃಷ್ಟಿ - ಈ ಪ್ರಾಕೃತಿಕ ವೈಪರೀತ್ಯಗಳಿಂದ ಸಸ್ಯಗಳನ್ನು ಕಾಪಾಡುವುದು ಕಷ್ಟ. ಎಳೆಯ ಸಸ್ಯಗಳಿಗೆ ಬೇಕಾದರೆ ನೆರಳು ಒದಗಿಸಿಯೋ, ಪ್ಲಾಸ್ಟಿಕ್ ಹಾಳೆಯನ್ನು ಹೊದೆಸಿಯೋ ಬಿಸಿಲು ಮಳೆಗಳಿಂದ ಸ್ವಲ್ಪ ಮಟ್ಟಿಗೆ ರಕ್ಷಣೆಯನ್ನು ಒದಗಿಸಬಹುದು. ಇನ್ನು ಆಲಿಕಲ್ಲು, ಸಿಡಿಲು ಹೊಡೆತಗಳಿಂದ ಅವುಗಳನ್ನು ಪಾರು ಮಾಡುವುದು ದೂರವೇ ಉಳಿದ ಮಾತು. ಹಾಗಾದರೂ ಇವುಗಳ ಬಾಧೆಯಿಂದ ಸಸ್ಯ ಸಂರಕ್ಷಣೆ ಮಾಡಲು ಚಾವುಂಡರಾಯ ತಿಳಿಯಪಡಿಸಿರುವ ಸಲಹೆಯೊಂದು ಸ್ವಾರಸ್ಯಕರವಾಗಿದೆ. ಆ ಪದ್ಯ ಹೀಗಿದೆ (6-10):

*ಮೊಸರ್ಗೂಳಿಂ ವಿಧಿಯಿಂದೆ ಸೂಸೆ ಭರದಿಂ*
*ಬೀಱ್ವಾಲಿಕಲ್ಲಂ ನಿವಾ*
*ರಿಸುಗುಂ ಪೆರ್ಮರನಂ ಸಿಡಿಲ್ಪೊಡೆದೊಡಂತಾ*
*ಬೂದಿಯಂ ಕೊಂಡು ವ*
*ಹ್ನಿ ಸಮೇತಂ ಪೊಗೆಯಿಕ್ಕೆ ಮಂಜಿನೊದವಂ ಕಾಗುಂ*
*ಮರಕ್ಕೆಯ್ದೆ ಧೂ*
*ಪಿಸೆ ಮತ್ಸ್ಯಾಮಿಷ ಸರ್ಷಪಾಜ್ಯಕದಳೀ ಪತ್ರಂಗಳಿಂ*
*ಕೊರ್ವುಗುಂ*

(ಸುರಪಾಲನ ವೃಕ್ಷಾಯುರ್ವೇದದಲ್ಲಿಯೂ "ಬೇಯಿಸಿದ ಸಾಲಿ-ಅನ್ನ ಮತ್ತು ಮೊಸರು ಕಲೆಸಿ ಭೂಮಿಯ ಮೇಲೆಲ್ಲ ಚೆಲ್ಲುವುದರಿಂದ ಆಲಿಕಲ್ಲು ಬೀಳುವುದು ತಪ್ಪುತ್ತದೆ" ಎಂದು ಹೇಳಿದೆ (ಶ್ಲೋಕ 159) - ಉದ್ಧೃತ : ಸಿ.ಕೆ. ಕುಮುದಿನಿ (ಅನು), ಪ್ರಾಚೀನ ಭಾರತದಲ್ಲಿ ಬೇಸಾಯ, ಪು. 85)

ಆದರೆ ಈ ಅಭಿಪ್ರಾಯಕ್ಕೆ ವೈಜ್ಞಾನಿಕವಾಗಿ ಪ್ರತಿಕ್ರಿಯಿಸುವುದು ಕಷ್ಟ. ಮೊಸರನ್ನವನ್ನು ಮರಗಳ ಸುತ್ತ ಎರಚುವುದರಿಂದ ಹಾಗೂ ಸಿಡಿಲು ಬಡಿದ ಮರದ ಬೂದಿಯನ್ನು ತೆಗೆದುಕೊಂಡು ಬಂದು ಹೊಗೆ ಕೊಡುವುದರಿಂದ ಸಸ್ಯಗಳಿಗೆ, ಆಲಿಕಲ್ಲು, ಮಂಜಿನ ಬಾಧೆ ಉಂಟಾಗುವುದಿಲ್ಲ ಎಂಬುದನ್ನು ನಂಬುವುದು ಅಸಾಧ್ಯ. ಒಂದು ವೇಳೆ ನಮ್ಮ ಊಹೆಗೂ ನಿಲುಕದ ಸತ್ಯಾಂಶ ಈ ಮಾತಿನಲ್ಲಿ ಇದ್ದರೂ ಇವೊತ್ತಿನ ಸಂದರ್ಭದಲ್ಲಿ ಇದನ್ನು ಕಾರ್ಯರೂಪಕ್ಕೆ ತರುವುದು ಆಗದ ಮಾತು. ಏಕೆಂದರೆ ಇಡೀ ತೋಟದ ಕೃಷಿ ಪದ್ಧತಿಗೆ ಈ ವಿಧಾನವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದು. ಹೀಗಾಗಿ ಚಾವುಂಡರಾಯನ ಈ ವಿಚಾರಧಾರೆ ವೈಜ್ಞಾನಿಕವೆಂದಾಗಲಿ, ಪ್ರಯೋಗಾರ್ಹವೆಂದಾಗಲಿ ಹೇಳಲು ಸಾಧ್ಯವಿಲ್ಲ. ಆಲಿಕಲ್ಲು ಬೀಳುವುದರಿಂದ ಉಂಟಾಗುತ್ತಿರುವ ಬೆಳೆಯ ನಷ್ಟವನ್ನು ವೈಜ್ಞಾನಿಕ ವಿಧಾನದಿಂದಲೂ ತಡೆಯಲು ಸಾಧ್ಯವಾಗಿಲ್ಲ ಎಂಬುದನ್ನು ಇಲ್ಲಿ ನೆನೆಯಬಹುದು.

ಇಂಗು, ಬಜೆ, ಅತಿಬಜೆ, ಮೆಣಸು, ವಿಳಂಗ, ಗೇರುಬೀಜ, ಗುಬ್ಬಿಬಳ್ಳಿ (ಗುಬ್ಬಳ್ಳಿಯ ಎನ್ನುವುದಕ್ಕೆ ಮೂಲದಲ್ಲಿ 'ಪತಾಕಮಳ' ಎಂದಿದೆ. ಪ್ರಾಯಶಃ ಇದು ಗುಬ್ಬಿಯ ಗೂಡು ಇಲ್ಲವೇ ಕಾಗೆಯ ಬಂಗಾರವಿದ್ದಿರಬಹುದು.) ಸಾಸಿವೆ, ಆಕಳಕೊಂಬು ಇವನ್ನು ಸಮಪ್ರಮಾಣದಲ್ಲಿ ಕೊಂಡು ಗೋಮೂತ್ರದಲ್ಲಿ ಕೊಳೆಯಿಸಿ ವೃಕ್ಷಗಳ ಮೂಲದ ಸುತ್ತಲೂ ಸುರಿಯುವುದರಿಂದ ವೃಕ್ಷಕ್ಕೊದಗುವ ಕೀಟಬಾಧೆ ಇಂಗುವುದು ಎಂದಿದ್ದಾನೆ (6-11). ಆಧುನಿಕ ದೃಷ್ಟಿಯಿಂದ ಈ ಕೀಟ ಹತೋಟಿ ವಿಧಾನ ಒಪ್ಪತಕ್ಕ ಮಾತಲ್ಲವಾದರೂ ಪ್ರಾಚೀನ ಕಾಲದಲ್ಲಿ ವೃಕ್ಷಗಳನ್ನು ಕೀಟಗಳ ಉಪದ್ರವದಿಂದ ಸಂರಕ್ಷಿಸಲು ಅನುಸರಿಸಿಕೊಂಡು ಬರುತ್ತಿದ್ದ ಒಂದು ಅತಿ ಸಾಂಪ್ರದಾಯಿಕ ಪದ್ಧತಿ ಇದಾಗಿದೆಯೆಂಬುದು ಗಮನಾರ್ಹ. ಸಾಮಾನ್ಯವಾಗಿ "ಸಸ್ಯಗಳಿಗೆ ವಿಷಪೂರಿತ ಸಸ್ಯಗಳ ಸಾರವನ್ನು ಸಿಂಪಡಿಸುವಿಕೆಯಿಂದ ಕೀಟಬಾಧೆಯನ್ನು ತಪ್ಪಿಸಬಹುದು. ಉದಾಹರಣೆಗೆ ಸಸ್ಯಜನ್ಯವಾದ, ತಂಬಾಕಿನ ರಸ ಮತ್ತು ಹೊಂಗೆಎಣ್ಣೆ ಇವುಗಳನ್ನು ಈಗಲೂ ಸಹ ಉಪಯೋಗಿಸುತ್ತಾರೆ" (ಡಿ.ಆರ್. ಗೋವಿಂದರಾಜು, ಹೆಚ್.ಕೆ. ನರಸಿಂಹೇಗೌಡ, ಪ್ರಾಚೀನ ಕೃಷಿ ತಂತ್ರಗಳು, ಪು. 71). ಇಂದಿನ ಕೃಷಿಕ ಕೀಟ ಹತೋಟಿಗೆ ಅನೇಕ ಬಗೆಯ ರಾಸಾಯನಿಕ ಔಷಧ ಸಿಂಪರಣೆಯ ಬಳಕೆಯ ಉಪಯೋಗವನ್ನು ಅರಿತೂ ಈ ಬಗೆಯ ಸಸ್ಯಜನ್ಯ ರಸ ಮತ್ತು ಎಣ್ಣೆಗಳನ್ನು ಬಳಸುತ್ತಿದ್ದಾನೆ. ಅಂದಮೇಲೆ ಪ್ರಾಚೀನ ಕಾಲದ ಕೃಷಿ ಪದ್ಧತಿಯಲ್ಲಿ ಈ ಬಗೆಯ ಔಷಧ ಸಿಂಪರಣೆ ತುಂಬ ಸಹಜವೂ ಅಷ್ಟೇ ಮಹತ್ತ್ವಪೂರ್ಣವೂ ಆದ ವಿಧಾನವಾಗುತ್ತೆಂಬುದನ್ನು ನಾವು ಮನಗಂಡುಕೊಳ್ಳಬೇಕು.

ಚಾವುಂಡರಾಯ ಗಿಡಗಳ ಬೆಳೆವಣಿಗೆ ಮತ್ತು ರೋಗ ಹತೋಟಿ ವಿಚಾರ ಪ್ರಸ್ತಾಪಿಸುವಾಗಲೆಲ್ಲ ಆ ಮರಗಿಡಗಳಿಗೆ ಧೂಪ ಕೊಡುವ ವಿಧಾನವನ್ನು ಪದೇ ಪದೇ ತಿಳಿಸುತ್ತಾನೆ. ಆ ಒಂದು ಸಂಗತಿ ಹೀಗಿದೆ : ವಿಳಂಗ, ಮಹಿಷಾಕ್ಷಿ, ಮೀನು, ಅರಿಸಿನ, ಸಾಸಿವೆ, ಮತ್ತಿಯ ಹೂವು - ಇವನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡು ಮರಗಳಿಗೆ ಹೊಗೆ ಹಾಕುವುದರಿಂದ ಅವು ಯಾವ ರೋಗಬಾಧೆಯೂ ಇಲ್ಲದೆ ಚೆನ್ನಾಗಿ ಬೆಳೆದು ಫಲ ನೀಡುವವು (6-12). ಇದರ ವೈಜ್ಞಾನಿಕ ಹಿನ್ನೆಲೆಯೂ ಅಸ್ಪಷ್ಟ. ಆದರೂ ಜಾನಪದದಲ್ಲಿ ಇದಕ್ಕೆ ಪುರಾವೆ ದೊರಕುತ್ತದೆ. ಆ ಸಂಗತಿಯ

ಹಿನ್ನೆಲೆಯಲ್ಲಿ ಇದಕ್ಕೆ ಒಂದೆರಡು ಕಾರಣಗಳನ್ನು ಹೀಗೆ ಊಹಿಸಬಹುದಾಗಿದೆ: (1) ಸಸ್ಯಗಳಿಗೆ ಹೀಗೆ ಹೊಗೆ ಹಾಕುವುದರಿಂದ ಅವುಗಳಿಗೆ ಬೇಕಾದ ಇಂಗಾಲಾಮ್ಲದಂತಹ ಮೂಲವಸ್ತು ಯಥೇಚ್ಛ ಪ್ರಮಾಣದಲ್ಲಿ ಎಲೆಗಳ ಮೂಲಕ ದೊರೆತು ಸಸ್ಯಕ್ರಿಯೆಗೆ ಹೆಚ್ಚು ಅನುವು ಮಾಡಿಕೊಡಬಹುದೆಂದು ತೋರುತ್ತದೆ; (2) ಸಸ್ಯಗಳಿಗೆ ಬೀಳುವ ಕೆಲವು ಕೀಟಗಳ, ಸಣ್ಣ ಪುಟ್ಟ ಪ್ರಾಣಿಪಕ್ಷಿಗಳ ಉಪಟಳವನ್ನು ನಿಯಂತ್ರಿಸಲು ಪ್ರಾಚೀನರು ಅನುಭವದಿಂದ ಕಲಿತುಕೊಂಡಿರಬಹುದಾದ ಒಂದು ತಂತ್ರವಿಧಾನವೂ ಇದಾಗಿರಬಹುದು. "ಹೊಗೆ ಹಾಕುವಿಕೆಯಿಂದ ಅನೇಕ ಕೀಟಗಳು, ಸಣ್ಣ ಸಣ್ಣ ಪ್ರಾಣಿಗಳು ಹಾಗೂ ಇಲಿಗಳನ್ನು ನಾಶ ಮಾಡಬಹುದು" (ಅದೇ, ಪು. 71). ಆದರೆ ಈ ವಿಧಾನವನ್ನು ಇಡೀ ಕೃಷಿ ತೋಟಕ್ಕೆ ಅಳವಡಿಸಿಕೊಳ್ಳಲು ಸಾಧ್ಯವಾಗದು. ಬೇಕಾದರೆ ಒಂದೆರಡು ಸಸ್ಯಗಳ ಮೇಲೆ ಈ ಕ್ರಮವನ್ನು ಪ್ರಯೋಗಿಸಿ, ಇದರ ಉಪಯುಕ್ತತೆಯನ್ನು ಮನಗಾಣಬಹುದಷ್ಟೇ.

ಮರಗಳ ರೋಗಲಕ್ಷಣ ಚಿಹ್ನೆ ಹಾಗೂ ರೋಗತಗುಲಿದ ವೃಕ್ಷಗಳಿಗೆ ಮಾಡಬೇಕಾದ ಚಿಕಿತ್ಸಾಕ್ರಮವನ್ನು ತಿಳಿಸುವ ಪದ್ಯವೊಂದು ಹೀಗಿದೆ (6-13):

**ಕುಡಿ ಮುಱಿದಿರ್ದೊಡಂ ಕೊನೆ ಮುಱುಂಟಿದೊಡಂ ನಱುಕಿರ್ದೊಡಂ ಬೆಳ ತೆರ್ೊಡವೊಣಗಿರ್ದೊಡಂ ಸರುಜಮೀದ್ರುಮಮೆಂದಱಿದಲ್ಲಿ ಕುತ್ತಮು ಳ್ಳೆಡೆಯೆನೆ ನೋಡಿ ತೋಡಿ ಕಳೆದಾಯೆಡೆಯೊಳ್ ಬಿಸಿಯಪ್ಪ ತುಪ್ಪಮಂ ತೊಡೆದು ವಿಳಂಗಮಂ ಕರಿಯಮಣ್ಣುಮನೊಟ್ಟುಗೆ ಬಾಟ್ಟುಮಾ ಮರಂ**

ವರಾಹಮಿಹಿನಲ್ಲಿಯೂ ಈ ವಿಚಾರ ಹೀಗೆ ವ್ಯಕ್ತವಾಗಿದೆ:

*ಶೀತವಾತಾತಪೈ ರೋಗೋ ಜಾಯತೇ ಪಾಂಡುಪತ್ರತಾ*
*ಅವೃದ್ಧಿಶ್ಚ ಪ್ರವಾಲಾನಾಂ ಶಾಖಾಶೋಷೋ ರಸಸ್ರುತಿಃ*
*ಚಿಕಿತ್ಸಿತಮಥೈತೇಷಾಂ ಶಸ್ತ್ರೇಣಾದೌ ವಿಶೋಧನಮ್*
*ವಿಡಙ್ಗ ಘೃತಪಙ್ಕಾಕ್ತಾನ್ ಸೇಚಯೇತ್ ಕ್ಷೀರವಾರಿಣಾ*

(-V. Subramanya Shastri, M. Ramakrishna Bhat, Varahamihria's Brihat Samita, Vol. I, Cha. 55, SL 14, 15)

- ಈ ಎರಡು ಸಂಗತಿಗಳನ್ನು ಹೋಲಿಸಿ ನೋಡಿದಾಗ ಸಾಕಷ್ಟು ಭಿನ್ನತೆ ಇರುವುದು ಕಂಡುಬರುತ್ತದೆ. ಚಾವುಂಡರಾಯನಲ್ಲಿ "ಶೀತವಾತಾತಪೈ ರೋಗೋ ಜಾಯತೇ..." ಈ ಮಾತು ಇಲ್ಲವೆಂಬುದು ಗಮನಾರ್ಹ.)

ಈ ಪದ್ಯಕ್ಕೆ ಟೀಕಾರ್ಥ ಇಂತಿದೆ: "ಆವುದೊಂದು ವೃಕ್ಷಕ್ಕೆ ಕುಡಿಗಳ್ ಮುಱಿದೊಡೆ, ಕೊನೆಗಳ್ ಮುಱುಂಟಿದೊಡೆ ನಱುಕಿದೊಡೆ ಬೆಳತಿಗೆಗೊಂಡೊಡೆ, ಒಣಗಿದೊಡೆ ಇಂತಿವಾದೊಡೆ ಆ ಮರಕ್ಕೆ ರೋಗಮುಂಟೆಂದಱಿವುದು, ಆ ರೋಗಂ ಪುಟ್ಟಿದ ಠಾವಂ ತೋಡಿ ಆ ಠಾವಿಗೆ ಬಿಸಿಯಪ್ಪ ತುಪ್ಪಮಂ ತೊಡೆದು ವಿಳಂಗಂ ಕರಿಯಮಣ್ಣಂ ಕೂಡಿ ತುಂಬಲ್ ಆ ಮರುಗಳ್ ನೀರುಜಮಾಗಿ ಬೆಳೆವುವು."

ಚಾವುಂಡರಾಯ ಹೇಳುವ ಸಸ್ಯರೋಗ ಸ್ವರೂಪದಲ್ಲಿ ವೈಜ್ಞಾನಿಕ ಸತ್ಯವಿದೆ, ಆದರೆ ಅದೇ ದೃಷ್ಟಿಕೋನ ಅವನು ತಿಳಿಯಪಡಿಸಿರುವ ಚಿಕಿತ್ಸಾ ವಿಧಾನದಲ್ಲಿ ಕಂಡು ಬರುವುದಿಲ್ಲವೆಂಬುದು ಸ್ಪಷ್ಟ. ಕಾರಣ, ಆಧುನಿಕ ಕೃಷಿ ತಜ್ಞರ ಪ್ರಕಾರ ಸಾಮಾನ್ಯವಾಗಿ ಸಸ್ಯಗಳ ಸಮರ್ಪಕ ಬೆಳೆವಣಿಗೆಗೆ ಹದಿನಾರು ಪೋಷಕಗಳ ಅಗತ್ಯವಿದೆ. ಈ ಮೂಲವಸ್ತುಗಳಲ್ಲಿ ಇಂಗಾಲ, ಆಮ್ಲಜನಕ ಮತ್ತು ಜಲಜನಕವನ್ನು ಸಸ್ಯಗಳು ವಾಯು ಹಾಗೂ ನೀರಿನಿಂದ ಪಡೆಯುತ್ತವೆ. ಇನ್ನುಳಿದ ಹದಿಮೂರು ಆಹಾರಧಾತುಗಳು ಮುಖ್ಯವಾಗಿ ಸಸ್ಯಗಳಿಗೆ ಭೂಮಿಯಿಂದಲೇ ದೊರಕಬೇಕು. ಅವುಗಳಲ್ಲಿ ಸಸ್ಯಗಳು ತಮ್ಮ ಬೆಳೆವಣಿಗೆಗೆ ಸಾರಜನಕ, ರಂಜಕ ಮತ್ತು ಪೊಟ್ಯಾಷ್‌ನ್ನು ಅಧಿಕ ಪ್ರಮಾಣದಲ್ಲಿಯೂ ಸುಣ್ಣ, ಮೆಗ್ನಿಷಿಯಂ, ಗಂಧಕಗಳನ್ನು ಮಿತ ಪ್ರಮಾಣದಲ್ಲಿಯೂ ಕಬ್ಬಿಣ, ಮ್ಯಾಂಗನೀಸ್, ಬೋರಾನ್, ತಾಮ್ರ, ಸತು, ಮಾಲಿಬ್ಡಿನಂ ಮತ್ತು ಕ್ಲೋರಿನ್‌ಗಳನ್ನು ಅತ್ಯಂತ ಕನಿಷ್ಠ ಪ್ರಮಾಣದಲ್ಲಿಯೂ ಯಾಚಿಸುತ್ತವೆ. ಹಾಗಾಗಿ ಇವುಗಳಲ್ಲಿ ಯಾವುದೇ ಒಂದು ಧಾತುವಿನ ಕೊರತೆಯುಂಟಾದರೂ (ಮಿಕ್ಕೆಲ್ಲ ಧಾತುಗಳು ದೊರೆತರೂ ಕೂಡ) ಸಾಕು; ಸಸ್ಯದ ಬೆಳೆವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಉದಾಹರಣೆಗೆ, ಸಸ್ಯಗಳಿಗೆ ಸಾರಜನಕದ ಕೊರತೆಯುಂಟಾದರೆ ಸಸ್ಯದ ಬೆಳೆವಣಿಗೆ ಕುಂಠಿತವಾಗಿ ಕಾಂಡ ತೆಳುವಾಗಿ ಗಿಡ್ಡವಾಗುತ್ತದೆ. ಕಾಂಡ ಮತ್ತು ಎಲೆಗಳು ತಿಳಿಹಸುರು ಹಳದಿಬಣ್ಣಕ್ಕೆ ತಿರುಗುತ್ತವೆ. ಅಲ್ಲದೆ ಎಲೆಗಳು ಕಂದುಬಣ್ಣವಾಗಿ ಸುಟ್ಟಂತೆ ಕಾಣುತ್ತವೆ. ಹಾಗೆಯೇ ರಂಜಕದ ಕೊರತೆ ಎದುರಿಸುವ ಸಸ್ಯಗಳ ಕಾಂಡ ತೆಳುವಾಗಿ ಎಲೆಗಳು ಬಿಳಿಚಿಕೊಳ್ಳುತ್ತವೆ. ಜೊತೆಗೆ ಎಲೆಗಳ ತುದಿ ಮತ್ತು ಅಂಚಿನಲ್ಲಿ ತುಕ್ಕು ಹಿಡಿದಂತೆ ಕಂದು ಬಣ್ಣದ ಸಣ್ಣ ಚುಕ್ಕೆಗಳಾಗುತ್ತವೆ. ಕ್ರಮೇಣ ಎಲೆಗಳ ತುದಿ ಒಣಗಿ ಅಂಚುಗಳು ಮುದುರಿಕೊಳ್ಳುತ್ತವೆ. ಆದುದರಿಂದ ಆಧುನಿಕ ಕೃಷಿಯಲ್ಲಿ ಈ ರೋಗ ನಿವಾರಣೆಗಾಗಿ ಯುಕ್ತ ಉಪಾಯವಿದೆ. ಅದೆಂದರೆ ಸಸ್ಯ ಯಾವ ಬಗೆಯ ಪೋಷಕಗಳ ಹೀನತೆಯಿಂದ ಬಳಲುತ್ತಿದೆಯೋ ಅದನ್ನು ಗುರುತಿಸಿ, ಗೊಬ್ಬರಗಳ ಮೂಲಕ ಆ ಪೋಷಕಗಳನ್ನು ಪೂರೈಸಿ, ಸಸ್ಯ ಬೆಳೆವಣಿಗೆಯನ್ನು ಕಾಪಾಡುವುದಾಗಿದೆ. (ಕೆ.ಎಸ್. ಕೃಷ್ಣಶಾಸ್ತ್ರೀ, ಜಿ.ಎನ್. ಮೋಹನ್‌ಕುಮಾರ್, ಸಸ್ಯ ಪೋಷಣಗಳು ಮತ್ತು ಅವುಗಳ ಪಾತ್ರ, ಪು. 5-8; ಬಿ.ವಿ. ವೆಂಕಟರಾವ್, ಭೂಫಲವತ್ತು ಮತ್ತು ಗೊಬ್ಬರಗಳು, ಪು. 1-6).

ಈ ದೃಷ್ಟಿಯಿಂದ ನೋಡಿದಾಗ ಚಾವುಂಡರಾಯ ರೋಗೋತ್ಪತ್ತಿ ತಾಣವನ್ನು ನೋಡಿ, ತೋಡಿ ಆ ಭಾಗಕ್ಕೆ ಬಿಸಿತುಪ್ಪ ಲೇಪನ ಮಾಡಿ ವಿಳಂಗದೊಡನೆ ಕರಿಯ ಮಣ್ಣನ್ನು ಬೆರಸಿ ತುಂಬಬೇಕು ಎಂದು ಹೇಳಿರುವುದು ಎಷ್ಟರಮಟ್ಟಿಗೆ ಸಮಂಜಸ ಹಾಗೂ ಇದರಿಂದ ಸಸ್ಯಕ್ಕೆ ಬೇಕಾದ ಪೋಷಕಗಳನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸಲು ಸಾಧ್ಯವೇ ಎಂಬ ಪ್ರಶ್ನೆ ಇದಿರಾಗುತ್ತದೆ. ಜೊತೆಗೆ ಈ ವಿಷಯ ಕೂಡ ಅಸ್ಪಷ್ಟ. ವರಾಹಮಿಹಿರನಲ್ಲಿಯೂ ಇದಕ್ಕೆ ಸ್ಪಷ್ಟ ವಿವರಣೆ ದೊರೆಯದು. ಇದರಿಂದಾಗಿ ಈ ವಿಚಾರವನ್ನು ವೈಜ್ಞಾನಿಕ ಪರಿಧಿಯೊಳಗೆ ತೂಗಿ ನೋಡಲು ಸಾಧ್ಯವಾಗುವುದಿಲ್ಲ.

ತದನಂತರದಲ್ಲಿ ಚಾವುಂಡರಾಯ ಬಾಳೆ, ತೆಂಗು, ಮಾವು, ಹಲಸು, ದ್ರಾಕ್ಷಿ, ದಾಳಿಂಬೆ, ಕಿತ್ತಳೆ, ನೆಲ್ಲಿ, ಮಾದಳ, ಬೆಲ್ಲವತ್ತ, ಹುಣಿಸೆ - ಈ ಮೊದಲಾದ ಫಲವೃಕ್ಷಗಳಲ್ಲಿ ಅಧಿಕ ಇಳುವರಿ ಪಡೆಯಲು ಮಾಡಬೇಕಾದ ಕ್ರಮ ವಿಧಾನಗಳನ್ನು ಕುರಿತು ಪ್ರಸ್ತಾಪಿಸಿದ್ದಾನೆ. ಆ ವಿಚಾರಗಳನ್ನೀಗ ಪರಿಶೀಲಿಸಬಹುದಾಗಿದೆ.

ಆನೆಯ ಮದವನ್ನು ಕಪಿಯ ಕಪಾಲ ಅಥವಾ ಹಂದಿಯ ಹಲ್ಲುಗಳಲ್ಲಿ ತುಂಬಿ ಬಾಳೆ ಗಿಡದ ಬುಡಕ್ಕೆ ಹಾಕಲು ಅದರ ಫಲಗಳು ಗಾತ್ರದಲ್ಲಿ ಆನೆಯ ದಂತವನ್ನು ಹೋಲುವವು (6-29). ಅಂಕೋಲೆ ಬೀಜದ ರಸ, ಹಂದಿಯ ಮಾಂಸ, ರಕ್ತ ಇವನ್ನು ಕುದಿಸಿ ಬಾಳೆಗಿಡಕ್ಕೆ ಹಾಕಿದರೆ "...ದಾಳಿಂಬದ ಫಲದಾಕೃತಿಯ ಫಲಮನದು ತಳೆದಿರ್ಕುಂ" (6-30) ಎಂದು ಹೇಳಿದೆ. ಸಾಮಾನ್ಯವಾಗಿ ಒಳ್ಳೆಯ ಫಸಲು ಕೊಡುವ ಬಾಳೆಮರದ ಕಾಯಿ ಹಣ್ಣುಗಳು ಆನೆಯ ದಾಡೆಯನ್ನು ಹೋಲಬಹುದೇನೋ. ಆದರೆ ಅವು ದಾಳಿಂಬೆ ಫಲದ ಆಕೃತಿಯಂತೆ ಇರುವುದು ಹೇಗೆ ಸಾಧ್ಯ ? ಬಹುಶಃ ಕವಿ ಈ ಮಾತನ್ನು ಆಲಂಕಾರಿಕವಾಗಿ ಬಳಸಿರಬಹುದಷ್ಟೇ. ಹಾಗೆಯೇ ಕಾಡು ಹಂದಿಯ ಮಲ ಮತ್ತು ಕುದುರೆ ಲದ್ದಿಯ ಬೆಂಕಿಯಲ್ಲಿ ಕಾಯಿಸಿದ ಸೂಜಿಯನ್ನು ಬಾಳೆಗೊನೆ ಹುಟ್ಟುವ ತಾವಿಗೆ ಸರಿಯಾಗಿ ಚುಚ್ಚುವುದರಿಂದ, ಅದು ಸಮೃದ್ಧವಾಗಿ ಫಲ ಕೊಡುವುದಂತೆ(ಸುರಪಾಲನ ವೃಕ್ಷಾಯುರ್ವೇದದಲ್ಲಿ "ಬಾಳೆಯ ಬೇರುಗಳಿಗೆ ಹಂದಿ ಇಲ್ಲವೆ ಕುದುರೆ ಲದ್ದಿಯ ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದ ಕೋಲಿನಿಂದ ಚಿಟಿಕೆ ಹಾಕುವುದರಿಂದ ವಿಪುಲ ಇಳುವರಿ ಕೊಡುತ್ತದೆ" ಎಂದು ಹೇಳಿದ (ಶ್ಲೋಕ 137) - ಉದ್ಧೃತ : ಸಿ.ಕೆ. ಕುಮುದಿನಿ (ಅನು). ಪ್ರಾಚೀನ ಭಾರತದಲ್ಲಿ ಬೇಸಾಯ, ಪು. 88) (6-28) ಬಹಳ ಸ್ವಾರಸ್ಯಕರವಾಗಿದೆ ಈ ಸಂಗತಿ. ಆದರೆ ಇದರಿಂದ ಆ ಸಸ್ಯದ ಫಳ ಉತ್ಪತ್ತಿಯ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗುತ್ತದೆ ಎಂದು ನಿರ್ಧರಿಸಿ ಹೇಳುವುದು ಕಷ್ಟ.

ಎಳ್ಳು, ಅಗಸೆಬಿತ್ತ, ವಿಳಂಗ, ಸೈಂಧವ ಲವಣ - ಇವನ್ನು ಒಂದಾಗಿ ಅರೆದು, ಜೇನುತುಪ್ಪ ಮತ್ತು ಮದ್ಯದೊಡನೆ ಕಲಸಿ ತೆಂಗಿನ ಮರದ ಬೊಡ್ಡೆಗೆ ಬಳಿಯುವುದರಿಂದ ಅದು ಅಧಿಕ ಫಲಕೊಡುವುದು ಎಂದಿದ್ದಾನೆ ಚಾವುಂಡರಾಯ (6-32). ಆದರೆ ಈ ಪದಾರ್ಥಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಅರೆದು, ಎಷ್ಟು ದಿನಗಳವರೆಗೆ ಲೇಪಿಸಬೇಕು ಎಂಬುದನ್ನು ಮಾತ್ರ ತಿಳಿಸಿಲ್ಲ. ಇದರಿಂದ ಈ ವಿಧಾನ ಆಗಿನ ಕಾಲದಲ್ಲಿ ಸಾಕಷ್ಟು ಪ್ರಚಲಿತವಾಗಿದ್ದು, ಜಾನಪದೀಯ ತಳಹದಿಯ ಮೇಲೆ ಬೆಳೆದುಕೊಂಡು ಬಂದಿದ್ದ ಅನುಭವಗಮ್ಯ ವಿಚಾರವಾಗಿರಬೇಕು. ಸಾಮಾನ್ಯವಾಗಿ ಎಳ್ಳು ಮತ್ತು ಅಗಸೆ ಹಿಂಡಿಗಳನ್ನು ಗೊಬ್ಬರ ರೂಪದಲ್ಲಿ ಇಂದು ಕೂಡ ಬಳಸಲಾಗುತ್ತಿದೆ. ಅದರಂತೆ ಸಾರಜನಕ, ರಂಜಕ, ಪೊಟ್ಯಾಷ್‌ಗಳ ಶೇಕಡವಾರು ಪ್ರಮಾಣ ಎಳ್ಳು ಹಿಂಡಿಯಲ್ಲಿ ಕ್ರಮವಾಗಿ 6.22, 20.9, 1.26 ಇದ್ದರೆ, ಅಗಸೆ ಹಿಂಡಿಯಲ್ಲಿ 3.56, 1.44, 1.28ರ ಪ್ರಮಾಣದಲ್ಲಿರುತ್ತದೆ. (ಮ.ಲ. ನರಸಿಂಹ ಅಯ್ಯಂಗಾರ್, ಎಂ.ಆರ್. ಆನಂದರಾಮಯ್ಯ, ತೋಟಗಾರಿಕೆ, ಸಂ. 1, ಪು. 150). ಅಂತೆಯೇ ಒಂದು ಕಿಲೋಗ್ರಾಂ ಜೇನುತುಪ್ಪದಲ್ಲಿ ಪೊಟ್ಯಾಷ್ 1.577, ಕ್ಲೋರಿನ್ 67,ಗಂಧಕ 42, ಸುಣ್ಣ 89, ಸೋಡಿಯಂ 133, ರಂಜಕ 19, ಮೆಗ್ನಿಷಿಯಂ 42, ಸಿಲಿಕಾ 24, ಸಿಲಿಕಾನ್ 9, ಕಬ್ಬಿಣ 11, ಮ್ಯಾಂಗನೀಸ್ 3, ತಾಮ್ರ 0.3 ಮಿಲಿಗ್ರಾಂಗಳ ಪ್ರಮಾಣದಲ್ಲಿರುತ್ತದೆ(ಶಾ. ಬಾಲುರಾವ್, ಜೇನಪ್ಪನ ಸಂಸಾರ, ಪು. 106). ಸೈಂಧವ ಲವಣ ಹಾಗೂ ಮದ್ಯದಲ್ಲಿಯೂ ಹೀಗೆ ಸಸ್ಯಾಹಾರ ಧಾತುಗಳು ಇದ್ದಿರಬಹುದು. ಆದುದರಿಂದ ಈ ವಸ್ತುಗಳ ತೇಯ್ದು ಲೇಪಿಸುವ ಕ್ರಮದಿಂದ ತೆಂಗಿನ ಮರಕ್ಕೆ ಬೇಕಾದ ಪೋಷಕಗಳು ದೊರೆತು ಅಧಿಕ ಫಲೋತ್ಪತ್ತಿಗೆ ಸಹಾಯಕವಾಗಬಹುದೆಂದು ತೋರುತ್ತದೆ. "...ಈಗ ಅನೇಕ ಬಗೆಯ ಸಸ್ಯಗಳು ತಮ್ಮ ಎಲೆಗಳಿಂದಲೂ, ಕೆಲವು ಕಾಂಡದಿಂದಲೂ ಈ ಪೋಷಕಗಳನ್ನು ಹೀರಿಕೊಳ್ಳಬಲ್ಲವೆಂದು ಕಂಡುಹಿಡಿದಿದ್ದಾರೆ" (ಮ.ಲ. ನರಸಿಂಹ ಅಯ್ಯಂಗಾರ್, ಎಂ.ಆರ್. ಆನಂದರಾಮಯ್ಯ, ತೋಟಗಾರಿಕೆ, ಸಂ. 1, ಪು. 146). ಹಾಗಾಗಿ "ಸಸ್ಯಗಳ ಮೇಲ್ಮೈ ಮೇಲೆ ವಿವಿಧ ರಸಗಳನ್ನು ಸವರುವುದರಿಂದ ಕೀಟ ಹಾಗೂ ರೋಗಗಳಿಂದ ರಕ್ಷಿಸುತ್ತವೆ. ಅಲ್ಲದೆ ಆ ರಸಗಳಲ್ಲಿಯ ರಾಸಾಯನಿಕಗಳು ಗಿಡದೊಳಕ್ಕೆ ಸಹ ಸೇರಬಹುದು. ಹೀಗೆ ಸವರುವುದರಿಂದ ಗಿಡಗಳು ಸೊಂಪಾಗಿ ಬೆಳೆಯುತ್ತಿದ್ದವು" (ಡಿ.ಆರ್. ಗೋವಿಂದರಾಜು, ಎಚ್.ಕೆ. ನರಸಿಂಹೇಗೌಡ, ಪ್ರಾಚೀನ ಕೃಷಿತಂತ್ರಗಳು, ಪು. 72). ಸಾಮಾನ್ಯವಾಗಿ ಈಗಲೂ ಹಾಸನದ ಕಡೆ ತೆಂಗಿನಮರದ ಬುಡಕ್ಕೆ ಕೆಮ್ಮಣ್ಣು ಮತ್ತು ಸುಣ್ಣವನ್ನು ಪಟ್ಟಿಯ ರೂಪದಲ್ಲಿ ಬಳಿಯುವುದು ಚಾಲ್ತಿಯಲ್ಲಿದೆ. ಆದ್ದರಿಂದ ಇದಕ್ಕೊಂದು ದೇಶೀಯ ಮಹತ್ತ್ವವೂ ಇದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಆದರೆ ಲೇಪಿಸಲು ಹೇಳಿರುವ ವಸ್ತುಗಳಲ್ಲಿರುವ ಸಸ್ಯಾಹಾರ ಮೂಲವಸ್ತುಗಳ ರಾಸಾಯನಿಕ ಸಂಯೋಜನೆ ಬಗ್ಗೆ ಚಾವುಂಡರಾಯನಿಗೆ ನಿಖರ ಪರಿಚಯವಿದ್ದಿತ್ತೆಂದು ಹೇಳಲಾಗುವುದಿಲ್ಲ. ದೇಶೀಯ ಅನುಭವವೇ ಇದಕ್ಕೆ ಮುಖ್ಯ ತಳಹದಿಯಾಗಿರಬೇಕು.

ಆಧುನಿಕ ಕೃಷಿಯ ಪ್ರಕಾರ ತೆಂಗಿನ ಮರ ಚೆನ್ನಾಗಿ ಬೆಳೆದು ಅಧಿಕ ಫಲ ಕೊಡಬೇಕಾದರೆ ಕೊಟ್ಟಿಗೆ ಗೊಬ್ಬರ ಗೋಡು ಹಾಕಿ ಉತ್ತಮ ಬೇಸಾಯ ಪದ್ಧತಿಯನ್ನು ಅನುಸರಿಸಬೇಕು. ಅಲ್ಲದೆ ಗಿಡವೊಂದಕ್ಕೆ ಸಾರಜನಕ, ರಂಜಕ, ಪೊಟ್ಯಾಷ್‌ಗಳನ್ನು ಕ್ರಮವಾಗಿ 0.5 ಕಿ.ಗ್ರಾಂ. 0.32 ಕಿ.ಗ್ರಾಂ. 1.2 ಕಿ.ಗ್ರಾಂ. ಪ್ರಮಾಣದಲ್ಲಿ ದೊರೆಯುವಂತೆ ರಾಸಾಯನಿಕ ಗೊಬ್ಬರಗಳನ್ನು ಭೂಮಿಯೊಳಗೆ ಸೇರಿಸಿ ಕೊಡಬೇಕಾಗುತ್ತದೆ (ಕನ್ನಡ ವಿಶ್ವಕೋಶ, ಸಂ. 9, ಪು. 363). ಅಂತೂ ಈ ಎರಡೂ ವಿಧಾನಗಳಿಗೂ ತಾಳೆಯಾಗುವುದಿಲ್ಲವೆಂಬುದು ಸ್ಪಷ್ಟ.

ಮಾವಿನ ಮರಕ್ಕೂ ಪ್ರಿಯಂಗುವಿನ ಬಳ್ಳಿಗೂ ಕ್ರಿಯೆಯಿಂದ ವಿವಾಹ ಮಾಡಿದರೆ, ಅದು ಸಮೃದ್ಧವಾಗಿ ಫಲ ಬಿಡುವುದು ಎಂದು ಚಾವುಂಡರಾಯ ಸೂಚಿಸಿದ್ದಾನೆ (6-42). "ಸಾಮಾನ್ಯವಾಗಿ ಮಾವು ಅನ್ಯಪರಾಗದಿಂದ ಗರ್ಭಧಾರಣೆಯಾಗುತ್ತದೆ" (ಪಿ. ಮುನಿಸ್ವಾಮಿ, ಎಚ್.ಕೆ. ನರಸಿಂಹೇಗೌಡ, ಸಿ.ಕೆ. ಕುಮುದಿನಿ, ಮಾವು, ಪು. 366). ಆದುದರಿಂದ ಅದು ಫಲ ಬಿಡುವುದಕ್ಕೆ ಪರಾಗಸ್ಪರ್ಶ ಫಲಾಂಕುರವು ಅತಿ ಆವಶ್ಯಕ. ಇದೇ ಕಾರಣದಿಂದ ಇಂದು ಮಾವಿನ ತಳಿ ಗುಣಗಳನ್ನು ಮುಂದುವರಿಸಲು ನಿರ್ಲಿಂಗ ಸಂತಾನಾಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಚಾವುಂಡರಾಯನ ಹೇಳಿಕೆ ಗಮನಾರ್ಹವೆನಿಸುತ್ತದೆ. ಇನ್ನು ಹಂದಿ, ತೋಳ, ಸಾರಗ, ಎತ್ತು, ನರಿ - ಈ ಪ್ರಾಣಿಗಳ ನೆಣದ ಜೊತೆಯಲ್ಲಿ ಅತ್ತಿ, ಆಲ, ಹಲಸು, ಬಸರಿ, ಅರಳಿ ಮರಗಳ ಚಿಗುರನ್ನು ಕೂಡಿಸಿ ಕಷಾಯ ಮಾಡಿದ ನೀರನ್ನು ಹುಳಿ ಮಾವಿನ ಮರದ ಬುಡಕ್ಕೆ ತಳಿಯಲು ಅದು ಇಮ್ಮಾವಿನ ಮರವಾಗುವುದಂತೆ. ಅಂತೆಯೇ ಭದ್ರಮಸ್ತೆ, ಲಾಮಂಚ, ನೇರಳೆಹಣ್ಣು ಇವನ್ನು ಉದಕದಲ್ಲಿ ಅರೆದು ಮಾಡಿದ ಕಷಾಯವನ್ನು ಎಳೆಯ ಮಾವಿನಮರದ ಮೂಲಕ್ಕೆ ಹಾಕಲು, ಅದರ ಹಣ್ಣುಗಳು ಅತಿಸುವಾಸನಾಯುಕ್ತವಾಗಿರುವವು ಎಂದು ಹೇಳಿದೆ. ಗೊಬ್ಬರ ಕೊಡುವ ಮೂಲಕ ಮಾವಿನ ಗಿಡ ಚೆನ್ನಾಗಿ ಫಲ ಕಚ್ಚಬಹುದು. ಆದರೆ ಅದರಿಂದ ರುಚಿ ಮತ್ತು ವಾಸನೆಯ ಮೇಲೂ ಪರಿಣಾಮ ಉಂಟಾಗುತ್ತದೆಂದು ಹೇಳಿದೆ.

ಆಧುನಿಕ ಕೃಷಿತಜ್ಞರ ಪ್ರಕಾರ ಕಸಿ ಮಾಡಿದ ಮಾವಿನ ಮರಗಳಿಂದ ಈ ಬಗೆಯ ಹಣ್ಣುಗಳನ್ನು ಪಡೆಯಲು ಸಾಧ್ಯ. ಅಂದರೆ ಕೆಳದರ್ಜೆಯ

ಮಾವಿನ ಮರಗಳನ್ನು ಮತ್ತು ಬೀಜದಿಂದ ಬೆಳೆಸಿದ ಗಿಡಗಳನ್ನು ಅವುಗಳ ಮೇಲೆ ಅಥವಾ ಪಕ್ಕದಲ್ಲಿ ಅಪೇಕ್ಷಿತ ಮತ್ತೊಂದು ಮಾವಿನ ಕೊಂಬೆಯನ್ನು ಕಸಿ ಮಾಡುವುದರಿಂದ ಸುಧಾರಿಸಬಹುದು. ಆದುದರಿಂದ ಚಾವುಂಡರಾಯನ ಈ ವಿಚಾರಕ್ಕೆ ಹೊಸ ವೈಜ್ಞಾನಿಕ ಸಮರ್ಥನೆ ದೊರೆಯದು.

ನೆಲ್ಲು ಹುಲ್ಲಿನ ಸರವಿಯನ್ನು ಹಲಸಿನ ಮರದ ಬೊಡ್ಡೆಗೆ ಸಂಪೂರ್ಣವಾಗಿ ಸುತ್ತುವುದರಿಂದ ಬುಡದಿಂದಲೇ ಅದು ಕಾಯಿಕೊಡುವುದು (6-31). ಸಹಜವಾಗಿ ಹಲಸಿನ ಮರಗಳಲ್ಲಿ ಬೊಡ್ಡೆಯಿಂದಲೇ ಫಲ ಬಿಡುವ ಜಾತಿಗಳಿವೆಯೆಂಬುದು ಗಮನಾರ್ಹ. ಬಹುಶಃ ಹಲಸಿನ ಮರದ ಬುಡಕ್ಕೆ ಹೀಗೆ ನೆಲ್ಲುಹುಲ್ಲು ಸುತ್ತುವುದರಿಂದ ಮರಕ್ಕೆ ಹೆಚ್ಚಾಗಿ ಶಾಖ ದೊರೆಯಬಹುದು. ಆಗ ಬುಡವೂ ಕಣ್ಣೊಡೆದು ಚಿಗಿತು ಫಲಕೊಡುವುದಕ್ಕೆ ಸಾಧ್ಯವಾಗಬಹುದು ಎನಿಸುತ್ತದೆ.

ದ್ರಾಕ್ಷಿ ಬಳ್ಳಿಗೆ ಕೋಳಿಕಸ ಅಥವಾ ಮಾಂಸದ ಸಾರದಿಂದ ಪೋಷಿಸಿದರೆ ಹೂ ಹಣ್ಣುಗಳ ಭಾರದಿಂದ ಬಾಗಿ ತೂಗುತ್ತದೆ (6-52). "ಕೋಳಿಕಸ ಪ್ರಾಣಿಗಳ ಸಗಣಿ ಲದ್ದಿ ಅಥವಾ ಹಿಕ್ಕೆಗಳ ಪೈಕಿ ಬಹಳ ಸಾರವತ್ತಾದುದು. .... ಇದರಲ್ಲಿ ನೀರಿನ ಅಂಶ ಕಡಿಮೆ; ಸಾವಯವಾಂಶ ಜಾಸ್ತಿ. ಶೇ. 1½ಯಷ್ಟು ಸಾರಜನಕ, 1¼ರಷ್ಟು ರಂಜಕಾಮ್ಲ, ಸ್ವಲ್ಪ ಪೊಟ್ಯಾಷ್ ಇರುತ್ತದೆ." ಆದುದರಿಂದ ಇದೊಂದುಸಾಂದ್ರ ಗೊಬ್ಬರ (ಮ.ಲ. ನರಸಿಂಹ ಅಯ್ಯಂಗಾರ್, ಎಂ.ಆರ್. ಆನಂದರಾಮಯ್ಯ, ತೋಟಗಾರಿಕೆ, ಸಂ. 1, ಪು. 151). ಹೇಳಿ ಕೇಳಿ ಮಾಂಸರಸ ಸಸಾರಜನಕಯುಕ್ತವಾದುದು. ಇವುಗಳನ್ನು ದ್ರಾಕ್ಷಿ ಬಳ್ಳಿಗೆ ಚೆನ್ನಾಗಿ ಹಾಕುವುದರಿಂದ ಅದು ಸಮೃದ್ಧವಾಗಿ ಫಲ ಕೊಡುತ್ತದೆನ್ನುವುದರಲ್ಲಿ ಅನುಮಾನವಿಲ್ಲ. ಈಗಲೂ ಕೂಡ ಸತ್ತನಾಯಿಯನ್ನು ಗಿಡದ ಬಳಿಗೆ ಹೂಳಿ ಅಧಿಕ ಫಲ ಪಡೆಯಲಾಗುತ್ತದೆ ಎಂಬ ಸಂಗತಿಯನ್ನು ಇಲ್ಲಿ ನೆನೆಯಬಹುದು.

ಹಾಗೆಯೇ ದಾಳಿಂಬೆ ಗಿಡಕ್ಕೆ ಆಡಿನ ಹಿಕ್ಕೆ, ನರಿಯ ಮತ್ತು ಟಗರಿನ ಮಾಂಸವನ್ನು ಕೂಡಿಸಿ ಹಾಕುವುದರಿಂದ ಅದು ದೊಡ್ಡ ಗಾತ್ರದ ಹಣ್ಣುಗಳನ್ನು ನೀಡುವುದು ಎಂದಿದ್ದಾನೆ (6-35). ಗೊಬ್ಬರ ಕೊಡುವಿಕೆ ಮುಖ್ಯವಾಗಿ ಫಲ ಅಥವಾ ಫಸಲಿನ ಇಳುವರಿಗೆ ಸಂಬಂಧಿಸಿದ್ದೇ ಆಗಿದೆ. ಆಡಿನ ಗೊಬ್ಬರವಂತೂ ಎಲ್ಲ ಬೆಳೆಗಳಿಗೂ ಉತ್ತಮವಾದದ್ದು. ಈ ರೀತಿಯ ಗೊಬ್ಬರವನ್ನು, ಸಸ್ಯಗಳಿಗೆ ಕೊಡುವುದರಿಂದ ಅವು ಚೆನ್ನಾಗಿ ಫಲ ಕಚ್ಚುತ್ತವೆ ಎನ್ನುವುದರಲ್ಲಿ ಅನುಮಾನವಿಲ್ಲ.

ಬೆಲ್ಲ, ಮಾಂಸ, ಹಾಲು ಇವನ್ನೊಂದಿಗೆ ಕುದಿಯಿಸಿದ ರಸವನ್ನು ಕಿತ್ತಳೆ ಮರಕ್ಕೆ ಎರೆಯಬೇಕು. ಇಲ್ಲವೇ ಅದರ ಬುಡಕ್ಕೆ ಮೊಲದ ಹಿಕ್ಕೆ-ಗೊಬ್ಬರ ಲೇಪಿಸಿ ಧೂಪಿಸುವುದರಿಂದ, ಮುನ್ನ ಫಲ ಕೊಡದಿದ್ದ ಕಿತ್ತಳೆ ಮರ ಹಣ್ಣುಗಳ ಭಾರದಿಂದ ಬೀಗುತ್ತದೆ (6-33). ನೆಲ್ಲಿಯ ಮರದ ರೆಂಬೆಯೊಂದನ್ನು ಕೊಡಲಿಯಿಂದ ಸೀಳಿ ಅದಕ್ಕೆ ಎಳ್ಳು, ಜೇನುತುಪ್ಪ ತುಪ್ಪವನ್ನು ಕಲಸಿ ತುಂಬುವುದರಿಂದ ಮೊದಲು ಫಲ ಕೊಡದಿದ್ದ ನೆಲ್ಲಿಯ ಮರವು ಕೂಡ ಸಮೃದ್ಧವಾಗಿ ಫಲ ಕಚ್ಚುವುದು (6-39). ಈ ವಿಧಾನ ಸ್ವಲ್ಪಮಟ್ಟಿಗೆ ಕಸಿ ಪದ್ಧತಿಗೆ ಹತ್ತಿರವಾಗುತ್ತದೆಯಾದರೂ ಇದು ಕಸಿ ವಿಧಾನವಲ್ಲ. ಹೀಗೆಯೇ ಹುಣಿಸೆ, ಬೆಲ್ಲವತ್ತ, ಮರಗಳು ಅತ್ಯಧಿಕವಾಗಿ ಫಲ ಬಿಡಲು ಅನುಸರಿಸಬೇಕಾದ ಕ್ರಮಗಳು ಪ್ರಸ್ತಾಪಿತವಾಗಿವೆ. ಇಲ್ಲಿಯೇ ಬೇವಿನ ಮರದ ವಿಚಾರ ಬಂದಿರುವುದು ಗಮನಾರ್ಹ. ನಮಗೆ ತಿಳಿದಿರುವಂತೆ ಬೇವಿನ ಕಾಯಿಗಳನ್ನು ಯಾರೂ ಆಹಾರವಾಗಿ ಉಪಯೋಗಿಸುವುದಿಲ್ಲ. ಹಾಗಿದ್ದೂ ಚಾವುಂಡರಾಯ ಏತಕ್ಕೆ ಈ ಮರದಿಂದಲೂ ಅಧಿಕ ಪ್ರಮಾಣದಲ್ಲಿ ಫಲ ಪಡೆಯುವ ವಿಧಾನವನ್ನು ಸೂಚಿಸಿದ್ದಾನೆಂದು ಕುತೂಹಲ ಉಂಟಾಗುತ್ತದೆ. ಆಯುರ್ವೇದದ ಪ್ರಕಾರ ಬೇವು ಒಂದು ಒಳ್ಳೆಯ ಔಷಧೀಯಗುಣಯುಕ್ತವಾದ ಸಸ್ಯ. ಬಹುಶಃ ಈ ಹಿನ್ನೆಲೆಯಲ್ಲಿ ಚಾವುಂಡರಾಯ ಆ ಮರ ಬೆಳೆಸುವ ಕ್ರಮವನ್ನು ಕುರಿತು ಹೇಳಿರಬೇಕು.

ಹಾಗೆಯೇ ಚಾವುಂಡರಾಯ ಇಲ್ಲಿ ಕೊಡುವ ಹಲ ಕೆಲವು ಸಂಗತಿಗಳು ಬಹಳ ಚೋದ್ಯವಾಗಿವೆ. ಆಡಿನ ತೊಗಲು ಇಲ್ಲವೇ ಅಚ್ಚಕರಿ ಎತ್ತಿನ ಗಂಗೆದೊಗಲನ್ನು ಕಾಯಿ ಬಿಟ್ಟಿರುವ ಯಾವುದೇ ವೃಕ್ಷಕ್ಕೆ ಪುಷ್ಯ ನಕ್ಷತ್ರವಿರುವಾಗ ಏಳು ಸಲ ಸುತ್ತುವುದರಿಂದ, ಆ ಮರದ ಕಾಯಿಗಳು ಬಹಳ ದಿನಗಳವರೆಗೆ ಹಣ್ಣಾಗದೆ ಕಾಯಿಗಳಾಗಿಯೇ ಇರುವವು ಎಂದಿದ್ದಾನೆ (6-41). ಕಾಯಿ ಹಣ್ಣಾಗುವುದು ಪ್ರಕೃತಿಯ ಸಹಜಕ್ರಿಯೆ. ಅಷ್ಟೇ, ಏಕೆ ಎಲ್ಲ ದೃಷ್ಟಿಯಿಂದಲೂ ಕಾಯಿ ಮಾಗುವುದು ಅಪೇಕ್ಷಣೀಯ. ಹಾಗಿರುವಾಗ ಇದಕ್ಕೆ ವಿರುದ್ಧವಾದ ನಿಯಮವನ್ನು ಕವಿ ಪ್ರತಿಪಾದಿಸುತ್ತಿರುವುದು ವಿಚಿತ್ರವೆನಿಸುತ್ತದೆ. ಹಾಗೆಯೇ ಜೇನುತುಪ್ಪ, ಸಕ್ಕರೆ, ಯಷ್ಟಿಮಧುಕ, ಕೋಷ್ಠ, ಇಪ್ಪೆಯ ಹೂವು - ಇವನ್ನೊಂದುಗೂಡಿ ಯಾವುದಾದರೊಂದು ವೃಕ್ಷದ ಮೂಲಕ್ಕೆ ಹೂಳುವುದರಿಂದ, ಆ ವೃಕ್ಷದ ಹಣ್ಣುಗಳು ಬೀಜವಿಲ್ಲದೆ ಅತಿ ಸಿಹಿಯಾಗಿರುವಂತೆ (6-40). ಬಹಳ ಕೌತುಕದ ಸಂಗತಿ ಇದು. ಆಧುನಿಕರ ಮತದಂತೆ ಬೀಜರಹಿತ ಹಣ್ಣುಗಳನ್ನು ಪಡೆಯಲು ಸಾಧ್ಯವಿರುವುದು; ಸಂಕರಣ ಬೀಜೋತ್ಪತ್ತಿ ಮತ್ತು ಕಸಿ ಮಾಡಿದ ಸಸ್ಯಗಳ ಬೆಳೆವಣಿಗೆಯಿಂದ ಮಾತ್ರ. ಇದೇ ವಿಚಾರ ಇನ್ನೊಂದು ಪದ್ಯದಲ್ಲಿ ಕೂಡ ಹೀಗೆ ಬಂದಿದೆ (6-56):

> *ಒದವಿ ಪೊದಟ್ಟು ಬಳ್ಳಿಗಳ ಗಂಟುಗಳಂ ನೆಜೆ ಪೊಟ್ಟಿ ಬೇರ್ಗಳೂ*
> *ಟಿದೊಡರಿದಲ್ಲಿ ಕೊಯ್ದು ಪಜಿಗಂ ಬಳಿಕಾ ತೆರದಿಂದಮೇಟಿ ಮಾ*
> *ಟ್ಟುದು ತುದಿಯೊಳ್ ನಯಂಬೆರಸು ಪರ್ವಿದ ಬಳ್ಳಿಯ*
> *ಬೀಜವೊಂದಂಮಿ*
> *ಲ್ಲದೆ ಫಳಸಂಕುಲಂ ಸಮನಿಕುಂ ಕರುಮಚ್ಚರಿ ತಾನಿದೆಂಬಿನಂ*

ಸಾಮಾನ್ಯವಾಗಿ ದ್ರಾಕ್ಷಿಯನ್ನು 'ಕಟಿಂಗ್'ಗಳಿಂದ ವೃದ್ಧಿಸುತ್ತಾರೆ. ಆದುದರಿಂದ ಇದು ಬಹುಶಃ ಬೀಜರಹಿತ ದ್ರಾಕ್ಷಿ ಬೆಳೆಯ ವಿಧಾನವನ್ನು ಹೋಲಬಹುದು.

ಅಂಕೋಲೆಯ ಬೀಜದ ರಸ, ಧಾತಕೀ ಕುಸುಮ, ಮಾಂಸ - ಇವನ್ನು ಕುದಿಸಿದ ಕಷಾಯವನ್ನು ಯಾವುದಾದರೊಂದು ಬಳ್ಳಿಗೆ ತಳಿಯುವುದರಿಂದ, ಆ ವೃಕ್ಷ ಎಲ್ಲ ಕಾಲಗಳಲ್ಲಿಯೂ ಫಲ ಕೊಡುವುದು (6-56). ಜವೆ, ಕರಿಎಳ್ಳು, ನಾಗುಳ, ಆಡಿನಹಿಕ್ಕೆ - ಇವು ಕೂಡಿದ ಕಷಾಯ ಮಾಡಿ ಸಿಂಪಡಿಸುವುದರಿಂದಲೂ ಸಸ್ಯಗಳು ಸರ್ವಕಾಲ ಫಲ ನೀಡುವವು ಎಂದಿದ್ದಾನೆ (6-59).

ಹೆಬ್ಬಾವು ಹಾವುರಾಣೆಗಳ ಮಾಂಸದೊಂದಿಗೆ ಆಡಿನ ಗಂಜಲ ಮತ್ತು ಹಾಲನ್ನು ಬೆರೆಸಿ ಬಳ್ಳಿಯೊಂದರ ಬೇರಿಗೆ ಹಾಕುವುದರಿಂದ, ಅದು ಅತ್ಯಂತ

ಸಮೃದ್ಧವಾಗಿ ಫಲ ಕೊಡುವುದಂತೆ (6-58). ಹಾಗೆಯೇ ಬಳ್ಳಿಗಳಿಗೆ ಇಲ್ಲಣ, ಹಸುವಿನ ತುಪ್ಪ ಅಥವಾ ಹಂದಿ ಮತ್ತು ಇಲಿಯ ಮಾಂಸದಿಂದ ಪೋಷಿಸುವುದು, ಅಥವಾ ಬಳ್ಳಿಯ ಬೇರುಗಳಿಗೆ ಚೇಳಿನ ಮುಳ್ಳನ್ನು ಊರುವುದರಿಂದ, ಅವು ವಿಪುಲವಾಗಿ ಫಲ ಕಚ್ಚುವವು ಎಂದಿದ್ದಾನೆ (6-57). ಆದರೆ ಈ ವಿಚಾರಗಳು ಚರ್ಚಾಸ್ಪದ. ಇನ್ನು ಕಾಡು ಹಂದಿಯ ಮಾಂಸ, ಅಂಕೋಲೆ ಬೀಜದ ಕಷಾಯ ಸುರಿಯುವುದರಿಂದ, ಅವುಡಲ ಗಿಡದ ಕಾಯಿಗಳು 'ಪಾಗಲ ಕಾಯಕ್ಕುಂ...' (6-53) ಎಂದಿದ್ದಾನೆ. ಈ ಬಗ್ಗೆ ವೈಜ್ಞಾನಿಕ ಸಂಶೋಧನೆ ನಡೆಯುದ ಹೊರತು ಏನನ್ನೂ ಹೇಳುವಂತಿಲ್ಲ. ಕುಂಬಳದ ಬಳ್ಳಿಯಲ್ಲಿ ಬದನೆಯ ಕಾಯಿ ಬಿಡಿಸುವ ವಿಧಾನ ಕುರಿತ ಸಲಹೆ ಕೂಡ ಸೋಜಿಗದ ವಿಚಾರವಾಗಿದೆ (5-55) :

**ಬದನೆಯ ಪೊಸಬಿತ್ತಂ ತೋಡಿ ಬಯ್ತಿಟ್ಟು ಕೂಷ್ಮಾಂ**
**ಡದ ಫಲದೊಳದಂ ಮಧ್ವಾಜ್ಯದಿಂ ಮುಚ್ಚಿಸಲ್ ಪ**
**ಣ್ತೊದವಿದಜೊಳೆ ಬಿತ್ತಂಕೊಂಡು ಬಿತ್ತಲ್ ವಿಚಿತ್ರಂ**
**ಬದನೆಯ ಫಲಮಕ್ಕುಂ ಬಳ್ಳಿ ಕೂಷ್ಮಾಂಡಮಕ್ಕುಂ**

ಸಾಮಾನ್ಯವಾಗಿ ಕುಂಬಳದ ಕಾಯಿ ತೋಡಿದರೆ ಅದು ಕೊಳೆಯುವುದು ಸಹಜ. ಕುಂಬಳದ ಕಾಯೊಳಗೆ ಬದನೆಕಾಯಿ ಬೀಜ ಸೇರಿಸಿ, ಬಳಿಕ ಪಕ್ವವಾದ ಕುಂಬಳ ಕಾಯಿಯ ಬೀಜಗಳನ್ನು ತೆಗೆದು ಬೆಳೆಸಿದರೆ ಅದರಲ್ಲಿ ಬದನೆಕಾಯಿ ಬಿಡುವುದು ಸಾಧ್ಯವೇ ಎಂಬ ವಿಚಾರದ ಸತ್ಯಾಸತ್ಯತೆಯನ್ನು ಪ್ರಾಯೋಗಿಕವಾಗಿ ನಿರ್ಧರಿಸಿ ಹೇಳಬೇಕಷ್ಟೆ. ಇಂದಿನ ಕೃಷಿತಂತ್ರಜ್ಞಾನದಲ್ಲಿ ಈ ಬಗೆಯ ಕೆಲವು ವಿಧಾನಗಳು ಬಳಕೆಯಲ್ಲಿವೆ. ಉದಾಹರಣೆಗೆ ಜಪಾನ್, ಮತ್ತಿತರ ದೇಶದಲ್ಲಿ ಬದನೆಕಾಯಿ ಬಳ್ಳಿಯಲ್ಲಿ ಟೊಮ್ಯಾಟೋ ಹಣ್ಣು ಬಿಡಿಸುವ ಒಂದು ತುಂಬ ಯಶಸ್ವಿಯಾದ ವಿಧಾನ ಚಾಲ್ತಿಯಲ್ಲಿದೆ.

ಅಂತೆಯೇ ಮಲ್ಲಿಗೆ, ಸಂಪಿಗೆ, ಕೇದಗೆ, ಬಕುಳ, ಅಶೋಕ, ದಾಸವಾಳ ಈ ಮುಂತಾದ ಪುಷ್ಪಲತೆಗಳಲ್ಲಿ ಅತ್ಯಧಿಕ ರೀತಿಯಲ್ಲಿ ಹೂವುಗಳನ್ನು ಅರಳಿಸುವುದು ಮತ್ತು ಪರಿಮಳಯುಕ್ತವಾಗಿ ಶೋಭಿಸುವಂತೆ ಮಾಡಲು ಅನುಸರಿಸಬೇಕಾದ ವಿಧಾನಗಳು ತುಂಬ ಸ್ವಾರಸ್ಯಕರವಾಗಿದ್ದು, ವಿಚಾರಾರ್ಹವೆನಿಸಿವೆ.

ಹಸನು ಮಾಡಿದ ಭೂಮಿಯ ಮೇಲೆ ಹುಲ್ಲನ್ನು ಹರವಿ ಸುಟ್ಟು, ಮಲ್ಲಿಗೆಯ ಬಳ್ಳಿಗಳನ್ನು ನೆಟ್ಟು ಪೋಷಿಸಿದರೆ ಅವು ಅತಿ ಬೇಗನೆ ಹೂವು ಕೊಡುತ್ತವೆ (6-48). ಸಾಮಾನ್ಯವಾಗಿ ಭೂಮಿಯನ್ನು ಸುಡುವುದರಿಂದ, ಮಣ್ಣಿನಲ್ಲಿರುವ ರೋಗೋತ್ಪತ್ತಿ ಹುಳುಗಳು ನಾಶವಾಗುವುದಲ್ಲದೆ ಭೂ ಫಲವತ್ತತೆ ಹೆಚ್ಚುತ್ತದೆ. ಹಾಗಾಗಿ ಮಲ್ಲಿಗೆ ಬಳ್ಳಿ ಚೆನ್ನಾಗಿ ಬೆಳೆದು ಕ್ಷಿಪ್ರದಲ್ಲಿಯೇ ಹೂವಿನಿಂದ ಕಂಗೊಳಿಸಬಲ್ಲದು.

ದೇವದಾರು ಬೀಜ, ಅರಿಸಿನ, ಮದ್ಯ, ಪಿಪ್ಪಲಿ, ಅಡಕೆ, ಬಿಳಿಸಾಸಿವೆ, ಬೇವಿನ ಕಾಯಿ, ಬಜೆ, ಗುಲುಗಂಜಿ - ಇವುಗಳನ್ನರೆದು ಸಂಪಿಗೆ ಮರದ ಮೂಲಕ್ಕೆ ಲೇಪಿಸಿ, ಪ್ರತಿ ರಾತ್ರಿ ಹಾಲೆರೆದು ಪೋಷಿಸಿದರೆ ತುಂಬ ಚೆನ್ನಾಗಿ ಹೂವು ಬಿಡುವುದು (6-45). ಕೇದಗೆಯ ಬಳ್ಳಿಗೆ ನಾಯಿ ಮಾಂಸ ಹಾಕಿ ಸುವಾಸಿತ ನೀರು ತಳಿದು ಬೆಳೆಸಲು, ಅದರ ಹೂವುಗಳು ಅತ್ಯಂತ ಪರಿಮಳಯುಕ್ತವಾಗಿರುವವು (6-47). ಹಾಲು, ಮಾಂಸ, ರಕ್ತ ಮಿಶ್ರಿತ ಪಂಚಪಲ್ಲವದ ನೀರನ್ನು ಕ್ರಮವರಿತು ಸೂರ್ಯೋದಯ ಕಾಲದಲ್ಲಿ ಎರೆಯುವುದರಿಂದ ಪುನ್ನಾಗ ಬಕುಳ ಲತೆಗಳು ಸರ್ವ ದಿನಗಳಲ್ಲಿಯೂ ಹೂವಿನಿಂದ ಕಂಗೊಳಿಸುವವು. ಮದ್ಯ ಕೂಡಿದ ಜೇನುತುಪ್ಪ ಮತ್ತು ಎಳ್ಳು ಚಿಗುಳಿಯನ್ನು ಅಶೋಕ ಲತೆಯ ಬೇರಿಗೆ ಹಾಕುವುದರಿಂದ ಅದು ಕೂಡ ಎಲ್ಲ ದಿನಗಳಲ್ಲಿಯೂ ಹೂವಿನಿಂದ ರಂಜಿಸುವುದು (6-44).

ಆಧುನಿಕ ವಿಜ್ಞಾನದ ಪ್ರಕಾರ ಸಸ್ಯವು ಹೂ ಧರಿಸುವುದು ಅದರಲ್ಲಿರುವ ಹಾರ್ಮೋನುಗಳ ಪ್ರಮಾಣದ ಮೇಲೆ ಅವಲಂಬಿಸಿದೆ. ಸಸ್ಯದ ಮೇಲೆ ವಿಶಿಷ್ಟ ಹಾರ್ಮೋನುಗಳನ್ನು ಸಿಂಪಡಿಸುವುದರಿಂದ ಹೂವು ಬಿಡುವ ಕಾಲವನ್ನು ಹಿಂಚೆ-ಮುಂಚೆ ಮಾಡಬಹುದಾಗಿದೆ. (ಆರ್.ಎನ್. ಹೆಗಡೆ, ಕೃಷಿಲೋಕ, ಮುಂಗಾರು ಸಂಚಿಕೆ, 1968, ಪು. 21)

ಸಕ್ಕರೆ, ಮದ್ಯ, ಎಮ್ಮೆಯ ಹಾಲು ಮಿಶ್ರಣವನ್ನು ಕೆಂಪುದಾಸವಾಳದ ಬುಡಕ್ಕೆ ಹಾಕುವುದರಿಂದ, ಅದು ಬಿಳಿದಾಸವಾಳದ ಹೂವುಗಳನ್ನು ಧರಿಸುವುದಂತೆ (6-50). ಅಗಿಲು ತಾವರೆಗೆಡ್ಡೆ ಮತ್ತು ಅದರ ಕುಸುಮ ಕೂಡಿ ಮಾಡಿದ ಕಷಾಯ ನೀರನ್ನು ಜಾಜಿ ಮತ್ತು ಮಲ್ಲಿಗೆಯ ಬಳ್ಳಿಗಳ ಮೇಲೆ ಸಿಂಪಡಿಸುವುದರಿಂದ, ಜಾಜಿ ಹೂವಿನ ವಾಸನೆ ಮಲ್ಲಿಗೆಗೂ ಮಲ್ಲಿಗೆ ಹೂವಿನ ವಾಸನೆ ಜಾಜಿ ಹೂವಿಗೂ ಪಲ್ಲಟಿಸುವುದು ಎಂದು ಹೇಳಿದೆ (6-49). ಸುಗಂಧಯುಕ್ತವಾದ ಮಣ್ಣನ್ನು ದುರ್ಗಂಧ ಪುಷ್ಪಲತೆಯ ಬೇರಿಗೆ ಹಾಕಿ ಸಗಣಿ ನೀರಿನಿಂದ ಪೋಷಿಸಿದರೆ ಅದರ ಹೂಗಳು ಅತ್ಯಂತ ಸುವಾಸನೆಯುಳ್ಳವಾಗಿರುತ್ತವೆ ಎಂದೂ ಹೇಳಿದ್ದಾನೆ.

ಇನ್ನೊಂದು ಸ್ವಾರಸ್ಯಕರ ಸಂಗತಿ ಎಂದರೆ ಕೇವಲ ಮುಟ್ಟುವಿಕೆಯಿಂದಲೇ ಲತೆಗಳು ಪುಷ್ಪಭರಿತವಾಗಿ ತೊನೆಯುತ್ತವೆ ಎಂಬುದು. ಉತ್ತಮ ಸುದತಿಯರು ತಮ್ಮ ಎಡಗಾಲಿಂದ ಅಶೋಕ ವೃಕ್ಷವನ್ನು ತಾಡಿಸಿದಾಗ ಅದು ವಿಪುಲವಾಗಿ ಹೂವುಗಳನ್ನು ಬಿಡುವುದು. ಇನ್ನು ಹರೆಯದ ಕನ್ಯೆಯರ ಕಡೆಗಣ್ಣ ನೋಟದಿಂದಲೇ ನಾಗಸಂಪಿಗೆ ಪುಷ್ಪದಿಂದ ಒಪ್ಪುವುದಂತೆ. ಹಾಗೆಯೇ ಶ್ರೇಷ್ಠ ಸ್ತ್ರೀಯರು ಬಾಯಲ್ಲಿ ಮದ್ಯ ತುಂಬಿಕೊಂಡು ಬಕುಳದ ಬಳ್ಳಿಯ ಮೇಲೆ ಉಗುಳಿದಾಗ ಅದು ಹೂ ಬಿಡುತ್ತದೆಯಂತೆ. ಈ ಬಗೆಯ ವೃಕ್ಷ ಪರಿವರ್ತನೆಗೂ ಸ್ತ್ರೀಯರಿಗೂ ಏನು ಸಂಬಂಧವೋ ತಿಳಿಯದು. ಆಧುನಿಕ ವಿಜ್ಞಾನ ಈ ವಿಷಯದಲ್ಲಿ ಮೌನವಾಗಿದೆ. ಪತಿವ್ರತೆಯಾದವರು ಸಸ್ಯಗಳನ್ನು ಮುಟ್ಟಿದರೆ ಅವು ಪುಷ್ಪಫಲಭರಿತವಾಗಿ ತೊನೆಯುತ್ತವೆಂಬ ಹಿಂದಿನವರ ಹೇಳಿಕೆಗಳು ಕೇವಲ ನಂಬಿಕೆಯ ಮೇಲೆ ನಿಂತ ತತ್ತ್ವ ವಿಚಾರಗಳಾಗಿವೆ ಎನಿಸುತ್ತದೆ.

ಒಂದೇ ಬಳ್ಳಿಯಲ್ಲಿ ಎರಡು ಬಗೆಯ ಹೂವುಗಳನ್ನು ಬಿಡಿಸಲು ಕುರಿತು ಹೇಳಿರುವ ಸಂಗತಿಯೊಂದನ್ನು ಇಲ್ಲಿ ಗಮನಿಸಬೇಕು (6-23):

**ಜಲಜಾತ ಕುಮುದ ನೀಲೋ**
**ತ್ಪಲ ಕಂದಮನಾಜ್ಯಮಧುಗಳಿಂ ಸಂಧಿಸಿ ಬಿ**
**ತ್ತಲೊಡಂ ತಳಿ ಹರಿಣಾಮಿಷ**
**ಜಲಮಂ ಮೊದಲೊಂದೆ ಪೂಗಳವು ಬೇಱಕ್ಕುಂ**

ಇದೊಂದು ಕಸಿ ವಿಧಾನಕ್ಕೆ ತುಂಬ ಹತ್ತಿರವಾದ ಸಂಗತಿ. ಪ್ರಾಚೀನರು ಈ ಬಗೆಯ ತಳವೃದ್ಧಿಯಲ್ಲಿಯೂ ಸಾಕಷ್ಟು ಪರಿಣತಿ ಸಾಧಿಸಿದ್ದರೆಂಬುದಕ್ಕೆ ಈ ಪದ್ಯ ಒಂದು ಉತ್ತಮ ನಿದರ್ಶನವೆನ್ನುವಂತಿದೆ. ಸಾಮಾನ್ಯವಾಗಿ ಚಾವುಂಡರಾಯ ಫಲವೃಕ್ಷಗಳಂತೆಯೇ ಹೂವಿನ ಗಿಡಗಳ

ಸಮೃದ್ಧ ಬೆಳವಣಿಗೆಗೆ ಮಾಂಸಸಾರಯುತ ನೀರ್ಗೊಬ್ಬರವನ್ನೇ ಶಿಫಾರಸ್ಸು ಮಾಡುತ್ತಾನೆ. ಏಕೆಂದರೆ "ಈ ನೀರ್ಗೊಬ್ಬರ ಗಿಡಗಳನ್ನು ಸುಡದೆ ಹೂವು ಹೊಮ್ಮಿಸಲು ಸಹಾಯಕ." (ಮ.ಲ. ನರಸಿಂಹ ಅಯ್ಯಂಗಾರ್, ಎಂ.ಆರ್. ಆನಂದರಾಮಯ್ಯ, ತೋಟಗಾರಿಕೆ, ಸಂ. 1, ಪು. 150) "ನೀರ್ಗೊಬ್ಬರದ ಕ್ರಮದಿಂದ, ಗಿಡಗಳ ಬೆಳವಣಿಗೆಗೆ ಅನುಸಾರವಾಗಿ, ಪೋಷಕಗಳ ಮೊತ್ತವನ್ನು, ಒದಗಿಸುವ ಕಾಲದ ಅವಧಿಯನ್ನು ಹೆಚ್ಚುಕಡಿಮೆ ಮಾಡಿಕೊಳ್ಳಬಹುದು. ಪೋಷಕಗಳನ್ನು, ಅದರಲ್ಲೂ ಕಡಿಮೆ ಮೊತ್ತದಲ್ಲಿ ಒದಗಿಸಬೇಕಾಗಿರುವ ಪೋಷಕಗಳನ್ನು ಸಮವಾಗಿ, ಏಕಪ್ರಕಾರವಾಗಿ ಹಂಚಲು ನೀರ್ಗೊಬ್ಬರ ಬಹಳ ಅನುಕೂಲ" (ಅದೇ, ಪು. 145) ಎಂದಿರುವುದರಿಂದ ಚಾವುಂಡರಾಯ ಸಸ್ಯಗಳಿಗೆ ನೀರ್ಗೊಬ್ಬರ ಸಿಂಪಡಿಸಲು ಹೇಳಿರುವುದು ತುಂಬ ಔಚಿತ್ಯಪೂರ್ಣವಾಗಿದೆ ಎನ್ನಬೇಕು. ಆಧುನಿಕ ಕೃಷಿ ಪದ್ಧತಿಯಲ್ಲಿ ಕೂಡ ಸಾರಜನಕ, ರಂಜಕ, ಪೊಟ್ಯಾಷ್‌ಗಳನ್ನು, ಯೂರಿಯಾ, ಮಾನೋ ಮತ್ತು ಡೈಅಮೋನಿಯಂ ಫಾಸ್ಫೇಟ್, ಪೊಟ್ಯಾಸಿಯಂ ಸಲ್ಫೇಟ್, ಫೆರಸ್ ಸಲ್ಫೇಟ್ ಮೊದಲಾದ ಗೊಬ್ಬರಗಳನ್ನು ನೀರಿನಲ್ಲಿ ಬೆರಸಿ ಸಿಂಪಡಿಸಲಾಗುತ್ತದೆ ಎಂಬುದನ್ನು ನೆನೆದಾಗ ಈ ವಿಷಯದ ಔಚಿತ್ಯ ಮತ್ತಷ್ಟು ಮನದಟ್ಟಾಗುತ್ತದೆ.

ಚಾವುಂಡರಾಯ ಈ ಪ್ರಕರಣದಲ್ಲಿ ಹೇಳಿರುವ ಅದೆಷ್ಟೋ ವಿಚಾರಗಳನ್ನು ನಮ್ಮ ವಿವರಣೆಗೆ, ಊಹೆಗೆ ನಿಲುಕುವುದಿಲ್ಲ. ಅವನು ಹೇಳುವಂತೆ ಸಸ್ಯಗಳು ಚೆನ್ನಾಗಿ ಬೆಳೆದು ಉತ್ತಮ ಇಳುವರಿ ಕೊಡಬೇಕಾದರೆ ಬೇಸಾಯ ಕ್ರಮ ಅಷ್ಟೇ ಸೂಕ್ತವಾಗಿರಬೇಕು ಎಂಬುದೇನೋ ನಿಜ. ಆದರೆ ಹಾಗೆ ಬೆಳೆಯಲು ಅವನು ಮುಖ್ಯವಾಗಿ ಶಿಫಾರಸ್ಸು ಮಾಡಿರುವುದು ಪ್ರಾಣಿಜನ್ಯ ಮತ್ತು ಸಸ್ಯಜನ್ಯ ಪದಾರ್ಥಗಳು. ಇವುಗಳಲ್ಲಿ ಬಹುತೇಕವಾಗಿ ಮಾನವ ಆಹಾರಪದಾರ್ಥಗಳೇ ಸೇರಿಕೊಂಡಿವೆ. ಅನ್ನ, ಹಾಲು, ಮೊಸರು, ತುಪ್ಪ, ಜೇನುತುಪ್ಪ, ಜವೆ, ಹೆಸರು, ಉದ್ದು, ಆಡಿನ ಮಾಂಸ ಈ ಮೊದಲಾದ ಪದಾರ್ಥಗಳು ತಿನ್ನಲು ಸಿಕ್ಕದಿರುವ ಈ ಹೊತ್ತಿನಲ್ಲಿ ಇವುಗಳನ್ನು ಗೊಬ್ಬರ ರೂಪವಾಗಿ ಬಳಸುವ ಮಾತು ತೀರ ದೂರವಾಗಿಯೇ ಉಳಿಯುತ್ತದೆ. ಸಸ್ಯಗಳ ಬೆಳವಣಿಗೆಗೆ ನೀರು, ಗೊಬ್ಬರ ಮುಂತಾದವುಗಳು ಅತಿ ಮುಖ್ಯವೆಂದು ತಿಳಿದಿದ್ದ ಚಾವುಂಡರಾಯನಿಗೆ ಸಸಾರಜನಕಯುಕ್ತವಾದ ರಕ್ತ, ಮಾಂಸ, ಮೀನು, ಮೂಳೆ ಮುಂತಾದವುಗಳನ್ನು ಬಳಸುವುದು ಯುಕ್ತವೆಂಬ ಭಾವನೆ ಬೆಳೆದಿರುವುದು ಸಹಜ. ರಾಸಾಯನಿಕ ಗೊಬ್ಬರಗಳ ಬಳಕೆಗೆ ಹೆಚ್ಚು ಮನಸೋತಿರುವ, ಒಗ್ಗಿಹೋಗಿರುವ ಇಂದಿನ ಕೃಷಿಕ ಈ ಬಗೆಯ ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಅದರಲ್ಲಿಯೂ ಮುಖ್ಯವಾಗಿ ಆಹಾರಪದಾರ್ಥಗಳನ್ನು ಗೊಬ್ಬರವಾಗಿ ಬಳಸಲು ಮುಂದಾಗುವ ಸಂದರ್ಭ ತೀರ ಕಡಿಮೆ. ಹಾಗಾಗಿ ಚಾವುಂಡರಾಯನ ಈ ಸಲಹೆ ಇಂದಿನ ಕೃಷಿ ವಿಧಾನಕ್ರಮಕ್ಕೆ ಯುಕ್ತವಾಗಿ ತೋರುವುದಿಲ್ಲ ಎನ್ನಿಸಬಹುದು. ಆದರೆ ಸಸ್ಯಮೂಲ, ಪ್ರಾಣಿಮೂಲ ಗೊಬ್ಬರ ಇಂದಿಗೂ ಕೃಷಿಗೆ ಅತ್ಯಂತ ಉಪಯುಕ್ತವಾಗ ಗೊಬ್ಬರವೆನಿಸಿದೆ. ತೋಟಗಾರಿಕೆ ಕೃಷಿಯು ಫಲಪ್ರದವಾಗಬೇಕಾದರೆ ಸಾವಯವ ಮತ್ತು ಕೃತಕ ಗೊಬ್ಬರಗಳೆರಡನ್ನೂ ಸಮಪ್ರಮಾಣದಲ್ಲಿ ಸಸ್ಯಗಳಿಗೆ ಒದಗಿಸುವುದು ಅತ್ಯಗತ್ಯ. ಕೃತಕ ಗೊಬ್ಬರಗಳಲ್ಲಿ ಸಸ್ಯಗಳಿಗೆ ಬೇಕಾಗುವ ಪೋಷಕಾಂಶ ಅತ್ಯಧಿಕ ಪ್ರಮಾಣದಲ್ಲಿರುತ್ತದೆ ಯಾದರೂ ಅದು ಸಸ್ಯಗಳಿಗೆ ನಿರಂತರವಾಗಿ ಒದಗುವುದಿಲ್ಲ. ಅಲ್ಲದೆ ಈ ಕೃತಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಸ್ವಾಭಾವಿಕ ಕಾಯಕಲ್ಪ ಗುಣವೂ ನಾಶವಾಗುತ್ತದೆ. ಸಾವಯವ ಗೊಬ್ಬರಗಳಲ್ಲಿ ಪೋಷಕಾಂಶಗಳು ಕಡಿಮೆ ಪ್ರಮಾಣದಲ್ಲಿ ಇರುವುದಾದರೂ ಆ ಪೋಷಕಾಂಶಗಳು ಸಸ್ಯಗಳಿಗೆ ದೀರ್ಘಕಾಲ ಒದಗಿಬರುತ್ತವೆ. ಈ ಸಾವಯವ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಸ್ವಾಭಾವಿ ಕಾಯಕಲ್ಪ ಗುಣವೂ ಇಮ್ಮಡಿಯಾಗುತ್ತದೆ. ಆದ್ದರಿಂದಲೇ ಇತ್ತೀಚಿನ ದಿನಗಳಲ್ಲಿ ಸ್ವಾಭಾವಿಕ ಕೃಷಿ ವಿಧಾನವನ್ನೇ ಅಳವಡಿಸಿಕೊಳ್ಳುವುದರತ್ತ ಗಮನಹರಿಸಬೇಕೆಂಬುದು ಪರಿಸರವಾದಿಗಳ ಆಗ್ರಹ. ಈ ಎಲ್ಲ ದೃಷ್ಟಿಯಿಂದ ಗಮನಿಸಿದಾಗ ಚಾವುಂಡರಾಯ ಹೇಳಿರುವ ಸಾವಯವ ಗೊಬ್ಬರಗಳ ಬಳಕೆ ಅತ್ಯಂತ ಯೋಗ್ಯವಾದುದೇ ಎನಿಸುತ್ತದೆ. ಹೀಗೆ ಹೇಳುವಾಗ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೊಂದಿದೆ. ಅದೆಂದರೆ ಪ್ರಾಣಿಗಳ ರಕ್ತ, ಕೊಬ್ಬು, ಮಾಂಸ ಮುಂತಾದವುಗಳನ್ನು ಯಥೇಚ್ಛವಾಗಿ ಉಪಯೋಗಿಸುತ್ತಿದ್ದ ಆ ಕಾಲದಲ್ಲಿ ಅನೇಕ ಪ್ರಾಣಿಗಳನ್ನು ಕೊಲ್ಲುತ್ತಿದ್ದುದು ಬಹುಶಃ ಸಾಮಾನ್ಯ ಸಂಗತಿಯಾಗಿದ್ದಿರಬೇಕು. ಜೊತೆಗೆ ಕಾಡುಪ್ರಾಣಿಗಳ ಉಪಟಳದಿಂದ ಬೆಳೆಗಳನ್ನು ರಕ್ಷಿಸಲು ಅವುಗಳನ್ನು ಕೊಲ್ಲುವುದು ಸಾಮಾನ್ಯ ಪದ್ಧತಿಯಾಗಿರಬಹುದು. ಹಾಗೆ ಕೊಂದ ಪ್ರಾಣಿಗಳ ಮಾಂಸವನ್ನು ನಿರುಪಯುಕ್ತವಾಗಿ ಎಸೆಯುವ ಬದಲು, ಅದನ್ನೇ ಸಸ್ಯಗಳಿಗೆ ಬಹುಮುಖ್ಯ ಗೊಬ್ಬರವನ್ನಾಗಿ ಬಳಸಿಕೊಳ್ಳುವ ವಿಧಾನವನ್ನು ಅರಿತಿರಬೇಕು. ಈ ಕ್ರಮದಿಂದಾಗಿ ಅಂದಿನ ಕಾಲದಲ್ಲಿ ಬದುಕುತ್ತಿದ್ದ, ಆದರೆ ರಕ್ಷಣೆ ಪಡೆಯಲು ಪ್ರಾಕೃತಿಕವಾಗಿ ಅಸಾಧ್ಯವಾಗಿದ್ದ ಪ್ರಾಣಿಗಳಲ್ಲಿ ಅನೇಕ ಬಗೆಯವುಗಳು ನಶಿಸಿರುವ ಸಾಧ್ಯತೆಯೂ ಇದೆ.

ಇನ್ನು ಭೂಫಲವತ್ತತೆ, ಸಸ್ಯ ಸಂರಕ್ಷಣೆ, ಅಧಿಕ ಫಲೋತ್ಪತ್ತಿ ವಿಚಾರದಲ್ಲಿ ಇಂದು ಸಾಕಷ್ಟು ಪ್ರಗತಿ ಉಂಟಾಗಿದೆ. ಈ ದೃಷ್ಟಿಕೋನದಿಂದ ಪ್ರಾಚೀನ ಕಾಲದಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಇಂದಿನವರೆಗೂ ಅದರ ಅವಿಚ್ಛಿನ್ನ ತಂತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಆಧುನಿಕ ವ್ಯವಸಾಯವೇ ಹಿರಿದೆಂಬುದರಲ್ಲಿ ಅನುಮಾನವಿಲ್ಲ. ಹಾಗಿದ್ದ ಮಾತ್ರಕ್ಕೆ ಚಾವುಂಡರಾಯ ಉಲ್ಲೇಖಿತ ಕೃಷಿ ಪದ್ಧತಿಗಳು ಕೇವಲ ದೃಷ್ಟಾಂತ ಹಾಗೂ ಶುಷ್ಕ ಊಹಾಪೋಹಗಳು ಎಂದು ಯೋಚಿಸುವುದಾಗಲೀ ಅವನ್ನು ತಳ್ಳಿಹಾಕುವುದಾಗಲೀ ಸಾಧ್ಯವೇ ಇಲ್ಲ. ಇಂದು ಇದರ ಪರಿಧಿ ದೊಡ್ಡದಾಗಿಯೇ ಹೊರತು, ಬೇರಲ್ಲ. ಮಾನವನ ಸಂಸ್ಕೃತಿಯ ಉಗಮ ಕಾಲದಿಂದಲೂ ದುಡಿಯುತ್ತಿರುವ ವ್ಯವಸಾಯದ ಕೇಂದ್ರ ಶಕ್ತಿಯು ಅವಿರತವಾಗಿ ದುಡಿಯುತ್ತಲೇ ಮುಂದೆಯೂ ಸಾಗುತ್ತದೆ. ಅಂದಿನಿಂದ ಇಂದಿನವರೆಗೂ ಈ ಸಂಬಂಧ ಅನಿರ್ವಚನೀಯವಾಗಿ ಒಂದಕ್ಕೊಂದು ಹೆಣೆದುಕೊಂಡಿದೆ. ಅಂದಮೇಲೆ ವೃಕ್ಷ ಸಂಬಂಧವಾದ ಮಾನವನ ಕಾರ್ಯಗಳಿಗೆ ಎಂದಿಗೂ ಕೊನೆಯಿಲ್ಲ. ಹಾಗಾಗಿ ಚಾವುಂಡರಾಯನ ಕೃಷಿ ವಿಧಾನಗಳು ದೇಶೀ ತಳಹದಿಯ ಮೇಲೆ ಅನೇಕ ಶತಶತಮಾನಗಳಿಂದ ಬೆಳೆದು ಬಂದಿರುವ ವಿಚಾರಗಳೇ ಆಗಿವೆ. ಆಧುನಿಕ ಸಂದರ್ಭದಲ್ಲಿ ಅವುಗಳ ಸತ್ಯಾಸತ್ಯತೆಯನ್ನು ಮನಗಂಡು ಅವುಗಳನ್ನು ಪ್ರಯೋಗಶೀಲತೆಗೆ ಒಳಪಡಿಸಿಕೊಳ್ಳುವುದರ ಮೂಲಕ ಸಾಂಪ್ರದಾಯಿಕ ಕೃಷಿ ವಿಧಾನಗಳಿಗೊಂದು ವೈಜ್ಞಾನಿಕ ದೃಷ್ಟಿಕೋನವನ್ನು ಒದಗಿಸಲು ಸಾಧ್ಯವೆನ್ನಬಹುದು.

**ಆರ್.ಎಸ್.ಎ.**

**ಶತಾವರಿ** ಶತಾವರಿಯು ಲಿಲಿಯೇಸಿ ಕುಟುಂಬಕ್ಕೆ ಸೇರಿದ್ದು, ಸಸ್ಯಶಾಸ್ತ್ರದ ಪರಿಭಾಷೆಯಲ್ಲಿ ಇದನ್ನು 'ಆಸ್ಪರೇಗಸ್ ರೆಸಿಮೋಸಸ್' ಎಂದು ಗುರುತಿಸಲಾಗುತ್ತದೆ. ಸಾಮಾನ್ಯವಾಗಿ ಇದು ಆಷಾಡಿ ಬೇರು, ಶತಮೂಲಿ, ಹಲವು ಮಕ್ಕಳ ಬಳ್ಳಿ, ಮುಕ್ಕಲ, ಮಜ್ಜಿಗೆ ಗೆಡ್ಡೆ, ಮಜ್ಜಿಗೆ ಬಳ್ಳಿ, ತರುವಿನ ಗೆಡ್ಡೆ ಇತ್ಯಾದಿ ಹೆಸರುಗಳಲ್ಲಿ ಬಳಕೆಯಲ್ಲಿದೆ. ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯಗಳಲ್ಲಿ ಬೆಳೆಯುವ ಸಾಮರ್ಥ್ಯವಿರುವ ಶತಾವರಿ ಆಫ್ರಿಕಾ, ಏಷ್ಯಾಖಂಡಗಳಲ್ಲಿ ಕಾಣಸಿಗುತ್ತದೆ. ಭಾರತದ ಬಹುತೇಕ ಭಾಗಗಳಲ್ಲಿ ಹಾಗೂ ಅಂಡಮಾನ್ ದ್ವೀಪ ಸಮೂಹಗಳಲ್ಲಿ ಮತ್ತು ಆಸ್ಟ್ರೇಲಿಯಾದಲ್ಲಿಯೂ ಶತಾವರಿಯನ್ನು ಬೆಳೆಯಲಾಗುತ್ತದೆ.

**ಪ್ರಭೇದಗಳು :** ಶತಾವರಿಯಲ್ಲಿ ಪ್ರಮುಖವಾಗಿ 3 ಪ್ರಭೇದಗಳನ್ನು ಗುರುತಿಸಬಹುದು.

1. ಆಸ್ಪರೇಗಸ್ ರೆಸಿಮೋಸಿಸ್, 2. ಆಸ್ಪರೇಗಸ್ ಅಡೆಸ್ಕಾಡರ್ಸ್, 3. ಆಸ್ಪಿರೇಗಸ್ ಪೆಸಿನೇಟಿಸ್

ಸಂಸ್ಕೃತದಲ್ಲಿ ಶತಾವರಿಯನ್ನು 2 ವಿಧದಲ್ಲಿ ಗುರುತಿಸಲಾಗುತ್ತದೆ.

1. ಶತಾವರಿ 2. ಮಹಾಶತಾವರಿ

**ಸಸ್ಯವರ್ಣನೆ :** ಶತಾವರಿಯು ಸರ್ವಋತುಗಳಲ್ಲೂ ಬೆಳೆಯುವ ಸಸ್ಯವಾಗಿದ್ದು, ಸುಮಾರು 150 ಸೆಂ.ಮೀ.ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ಬೇರುಗಳು ದಪ್ಪಗೆ ಕೊಳವೆ ಆಕಾರದಲ್ಲಿದ್ದು, 15-45 ಸೆಂ.ಮೀ. ಉದ್ದವಿರುತ್ತವೆ ಹಾಗೂ ಇವುಗಳ ಬಣ್ಣ ಬೂದು ಇಲ್ಲವೆ ಹಳದಿ ಮಿಶ್ರಿತ ಬಿಳುಪು. ಎಲೆಗಳು ಬಹಳ ಸಪೂರವಾಗಿರುತ್ತವೆ. ಹೂಗಳು ಹಸಿರು ಮಿಶ್ರಿತ ಬಿಳಿ ಬಣ್ಣದ್ದಾಗಿರುತ್ತವೆ. ಹಣ್ಣು ಕೆಂಪು ಬಣ್ಣದಲ್ಲಿದ್ದು, ಮೂರು ಭಾಗಗಳಾಗಿ ವಿಭಾಗಗೊಂಡಿರುತ್ತದೆ. ಒಂದೊಂದು ಭಾಗದಲ್ಲೂ ಒಂದೊಂದು ಬೀಜವಿದ್ದು, ಬೀಜಗಳು ಕಪ್ಪು ಬಣ್ಣದಲ್ಲಿರುತ್ತವೆ. ಶತಾವರಿಯು ಬಳ್ಳಿಯಾಗಿದ್ದು, ಇದರ ಮೇಲೆ ಸಣ್ಣ ಸಣ್ಣ ಮುಳ್ಳುಗಳಿರುತ್ತವೆ.

**ಕೃಷಿ :** ಶತಾವರಿ ಗುಡ್ಡಗಾಡು ಪ್ರದೇಶಗಳಲ್ಲಿ ಸಹಜವಾಗಿ ಬೆಳೆಯುತ್ತದೆ. ಮಳೆಗಾಲ ಆರಂಭವಾದಂತೆ ಈ ಸಸ್ಯಗಳು ಕಾಣಿಸಿಕೊಂಡು, ವೈಶಾಖದ ಸಮಯದಲ್ಲಿ ಕಾಂಡವು ಕೃಶವಾಗಿ ಗಿಡವು ಒಣಗಿ ಹೋಗುತ್ತದೆ. ಆದರೆ ಬೇರುಗಳು ಹಾಳಾಗದೆ ಭೂಮಿಯಲ್ಲಿ ಜೀವಂತವಾಗಿಯೇ ಉಳಿದಿರುತ್ತವೆ. ಆದರೆ ಶತಾವರಿ ಬೇರನ್ನು ಸಂಗ್ರಹಿಸಲು ಕಾಡಿಗೆ ಹೊರಟವರು ಬೇರನ್ನು ಭೂಮಿಯಲ್ಲಿ ಸ್ವಲ್ಪವೂ ಉಳಿಸದೆ ಕಿತ್ತು ತೆಗೆಯುವುದರಿಂದ, ಅಲ್ಲದೇ ಕಾಡುಗಳ ವಿಸ್ತೀರ್ಣವೂ ಕಡಿಮೆಯಾಗುತ್ತಿರುವುದರಿಂದ ಶತಾವರಿಯನ್ನು ಕೃಷಿಯ ಮೂಲಕ ಕಾಪಾಡಿಕೊಳ್ಳುವ ಅಗತ್ಯವಿದೆ.

**ಮಣ್ಣು :** ಶತಾವರಿಯ ಬೇರುಗಳು ತೀರಾ ಆಳಕ್ಕೆ ಇಳಿಯುವುದಿಲ್ಲವಾದ್ದರಿಂದ ಮಣ್ಣು ಆಳವಿಲ್ಲದಿರುವ ಕಡೆಯೂ, ಕಲ್ಲು ಬಂಡೆಗಳಿರುವ ಪ್ರದೇಶದಲ್ಲೂ ಬೆಳೆಯುತ್ತದೆ. ಎಲ್ಲಾ ಬಗೆಯ ಮಣ್ಣಿನಲ್ಲೂ ಬೆಳೆಯುವ ಸಾಮರ್ಥ್ಯವಿದ್ದರೂ, ಇದಕ್ಕೆ ನೀರು ಬಸಿಯುವಂತಹ ಮರಳುಮಿಶ್ರಿತ ಗೋಡು ಮಣ್ಣು ಮತ್ತು ಕಪ್ಪುಮಣ್ಣು ಒಳ್ಳೆಯದು.

**ಹವಾಗುಣ :** ಶತಾವರಿಗೆ ಹೆಚ್ಚುನೀರಿನ ಅಗತ್ಯವಿಲ್ಲ. ವಾರ್ಷಿಕ 50-100 ಸೆಂ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಇದನ್ನು ಬೆಳೆಸಬಹುದು. ಕಡಿಮೆ ಉಷ್ಣತೆಯಲ್ಲೂ ಬೆಳೆಯುವ ಸಾಮರ್ಥ್ಯವಿರುವ ಇದು 30-35 ಸೆಲ್ಸಿಯಸ್ ಉಷ್ಣತೆ ಇರುವ ಪ್ರದೇಶಗಳಲ್ಲಿ ಬೆಳೆಯುತ್ತದೆ.

**ಬಿತ್ತನೆ :** ಶತಾವರಿಯನ್ನು ಅದರ ಬೀಜಗಳಿಂದ ಬೆಳೆಸಲಾಗುತ್ತದೆ. ಇದರ ಬೀಜ ಬಿತ್ತನೆಗೆ ಮಾರ್ಚ್-ಏಪ್ರಿಲ್ ಒಳ್ಳೆಯ ಕಾಲ. ಶತಾವರಿಯ ಹಳೆಯ ಬೀಜಗಳನ್ನು ಬಿತ್ತಿದರೆ ಮೊಳಕೆಯೊಡೆಯುವ ಸಾಧ್ಯತೆ ಕಡಿಮೆ ಇರುತ್ತದೆ. ಆದ್ದರಿಂದ ತಾಜಾ ಬೀಜಗಳನ್ನು ಬಿತ್ತುವುದು ಒಳ್ಳೆಯದು. ಬೀಜಗಳನ್ನು ಬಿತ್ತುವ ಮೊದಲು ಒಂದು ರಾತ್ರಿ ನೀರಿನಲ್ಲಿ ನೆನೆಸಿ ಬಿತ್ತನೆ ಮಾಡುವುದರಿಂದ ಬೀಜಗಳು ಸುಲಭವಾಗಿ ಮೊಳಕೆಯೊಡೆಯುತ್ತವೆ.

ಬಿತ್ತನೆಗೆ ಪೂರ್ವಸಿದ್ಧತೆಯಾಗಿ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ. ಮಣ್ಣಿಗೆ ಸಾವಯವ ಗೊಬ್ಬರವನ್ನು ಮಿಶ್ರಣ ಮಾಡಿ ಮಡಿಗಳನ್ನು ಮಾಡಬೇಕು. ಸಾಲಿನಿಂದ ಸಾಲಿಗೆ 3 ಸೆಂ.ಮೀ. ಬೀಜದಿಂದ ಬೀಜಕ್ಕೆ 1.5 ಸೆಂ.ಮೀ. ಅಂತರವಿರುವಂತೆ ನೋಡಿಕೊಳ್ಳಬೇಕು. ಬೀಜವನ್ನು ಬಿತ್ತಿದ ನಂತರ ತೆಳುವಾಗಿ ಮಣ್ಣನ್ನು ಹರಡಿ, ದಿನಕ್ಕೆರಡು ಬಾರಿ ಬೆಳಗ್ಗೆ ಸಂಜೆ ನೀರನ್ನು ಸ್ವಲ್ಪ ಪ್ರಮಾಣದಲ್ಲಿ ಪೂರೈಸಬೇಕು.

**ನಾಟಿ :** ನಾಟಿಗೆ ಪೂರ್ವದಲ್ಲಿ ಭೂಮಿಯನ್ನು 10-12 ಅಂಗುಲದಷ್ಟು ಆಳಕ್ಕೆ ಒಂದೆರಡು ಬಾರಿ ಚೆನ್ನಾಗಿ ಉಳುಮೆ ಮಾಡಬೇಕು. ಕಳೆ ನಿಯಂತ್ರಣಮಾಡಿ, ಮಣ್ಣಿಗೆ ಸಾವಯವ ಗೊಬ್ಬರವನ್ನು ಮಿಶ್ರಮಾಡಬೇಕು. ಜುಲೈ - ಆಗಸ್ಟ್ ನಾಟಿಗೆ ಸೂಕ್ತವಾದ ಕಾಲ. ಒಂದು ಹೆಕ್ಟೇರ್‌ಗೆ ನಾಟಿ ಮಾಡಲು ಸುಮಾರು 27,800 ಸಸಿಗಳ ಅಗತ್ಯವಿರುತ್ತದೆ. ಸಾಲಿನಿಂದ ಸಾಲಿಗೆ ಗಿಡದಿಂದ ಗಿಡಕ್ಕೆ 45ಸೆಂ.ಮೀ. ಅಂತರವಿರಬೇಕು. ಮಳೆಗಾಲ ಪ್ರಾರಂಭಗೊಂಡಂತೆ ಸಸಿಗಳನ್ನು ನಾಟಿಮಾಡಬಹುದು. ಬಿಸಿಲಿನ ತೀವ್ರತೆ ಕಡಿಮೆಯಿದ್ದಾಗ ಅಂದರೆ ಬೆಳಗಿನ ಅಥವಾ ಸಂಜೆಯ ಸಮಯ ನಾಟಿ ಮಾಡಿದರೆ ಒಳ್ಳೆಯದು.

**ನಾಟಿಯ ಅನಂತರದಲ್ಲಿ :** ನಾಟಿಮಾಡಿದ ಕೂಡಲೇ ಗಿಡಗಳಿಗೆ ನೀರು ಒದಗಿಸಬೇಕು. ನಾಟಿ ಮಾಡಿದ ಮೊದಲ ಐದಾರು ದಿನಗಳವರೆಗೆ ಪ್ರತಿದಿನ ನೀರು ಕೊಡಬೇಕು. ಅನಂತರ ದಿನ ಬಿಟ್ಟು ದಿನ ನೀರು ಪೂರೈಸಬೇಕು. ಗಿಡಗಳು ಚೆನ್ನಾಗಿ ಬೆಳೆದ ಅನಂತರ ಮಣ್ಣಿನ ತೇವಾಂಶವನ್ನು ಗಮನಿಸಿ ಅಗತ್ಯವಿದ್ದಾಗ ಮಾತ್ರ ನೀರು ಹಾಯಿಸಬೇಕು.

ಹೆಕ್ಟೇರಿಗೆ 20 ಟನ್ ಕೊಟ್ಟಿಗೆ ಗೊಬ್ಬರವನ್ನು ಒದಗಿಸಿದರೆ ಒಳ್ಳೆಯ ಇಳುವರಿಯನ್ನು ಪಡೆಯಬಹುದು.

ಶತಾವರಿಯು ಬಳ್ಳಿಯಾಗಿರುವುದರಿಂದ ಇದಕ್ಕೆ ಆಸರೆಯಾಗಿ 4-6 ಅಡಿ ಉದ್ದದ ಕೋಲುಗಳನ್ನು ನೆಡಬೇಕು.

ಮಣ್ಣಿನಲ್ಲಿರುವ ಪೋಷಕಾಂಶ ಮತ್ತು ತೇವಾಂಶವನ್ನು ಕಳೆಗಿಡಗಳೇ ಹೀರಿಕೊಳ್ಳುವ ಅಪಾಯವಿರುವುದರಿಂದ ಕಳೆಯನ್ನು ನಿಯಂತ್ರಿಸಬೇಕು.

**ಕೊಯ್ಲು :** ಸಸಿಗಳನ್ನು ನೆಟ್ಟ 2-3 ವರ್ಷಗಳ ಅನಂತರ ಕೊಯ್ಲು ಮಾಡಬೇಕು. ಮಣ್ಣಿಗೆ ನೀರನ್ನು ಹಾಯಿಸಿ, ಮಣ್ಣು ಸಡಿಲಗೊಂಡ ಅನಂತರ ಬೇರುಗಳಿಗೆ ಪೆಟ್ಟಾಗದಂತೆ ಕಟಾವು ಮಾಡಬೇಕು.

ಕಟಾವು ಮಾಡಿದ ಬೇರುಗಳನ್ನು ಮೊದಲು ಕುದಿಯುವ ನೀರಿನಲ್ಲಿ 10 ನಿಮಿಷಗಳ ಕಾಲ ಹಾಕಿ ಹೊರ ಕವಚವನ್ನು ತೆಗೆದು ತದನಂತರ ತಣ್ಣೀರಿನಲ್ಲಿ ಹಾಕಬೇಕು. ಆಮೇಲೆ ಬೇರು ಗೆಡ್ಡೆಗಳನ್ನು ಚಿಕ್ಕದಾಗಿ ಕತ್ತರಿಸಿ,

ಚೂರುಗಳನ್ನು ನೀರಿನಲ್ಲಿ ತೊಳೆದು ನೆರಳಿನಲ್ಲಿ ಒಣಗಿಸಬೇಕು. ಒಣಗಿಸಿದ ಮೇಲೆ ತಂಪಾದ, ಆದರೆ ತೇವವಿಲ್ಲದ ಜಾಗದಲ್ಲಿ ಸಂಗ್ರಹಿಸಿಡಬೇಕು.

**ಇಳುವರಿ :** ಪ್ರತಿ ಹೆಕ್ಟೇರ್‌ಗೆ 12-14 ಟನ್‌ಗಳಷ್ಟು ಹಸಿಯ ಗೆಡ್ಡೆಗಳನ್ನು ಪಡೆಯಬಹುದು. ಇದನ್ನು ಯುಕ್ತರೀತಿಯಲ್ಲಿ ಸಂಸ್ಕರಿಸಿ ಒಣಗಿಸಿದಾಗ 10-12 ಕ್ವಿಂಟಾಲ್‌ನಷ್ಟು ಸಿಗುತ್ತದೆ. ಪ್ರತಿಗಿಡಕ್ಕೆ 500-600 ಗ್ರಾಂಗಳಷ್ಟು ಇಳುವರಿ ಬರುತ್ತದೆ. ಒಣಗಿರುವ ಶತಾವರಿ ಬೇರು ತೇವಾಂಶವನ್ನು ಹೀರಿಕೊಳ್ಳುವುದರಿಂದ ಪಾಲಿಥಿನ್ ಚೀಲಗಳಲ್ಲಿ ಸಂಗ್ರಹಿಸಬೇಕು.

**ಕೀಟಗಳು/ರೋಗಗಳು :** ಶತಾವರಿಗೆ ಶಿಲೀಂಧ್ರ ಬಾಧೆಯಿಂದ ತುಕ್ಕುರೋಗ ಬರುತ್ತದೆ. ಇದರ ನಿವಾರಣೆಗೆ ಶೇಕಡಾ 1ಈ ಬೋರ್ಡೋ ದ್ರಾವಣವನ್ನು ಸಿಂಪಡಿಸಬೇಕು.

ಶತಾವರಿಯ ಗೆಡ್ಡೆಗಳನ್ನು ಇಲಿ ಹೆಗ್ಗಣಗಳು ತಿಂದು ಹಾಳು ಮಾಡುತ್ತವೆ. ಇವನ್ನು ಬಿಟ್ಟರೆ ಬೇರೆ ಹೇಳಿಕೊಳ್ಳುವಂತಹ ರೋಗಗಳಾಗಲೀ ಕೀಟಗಳ ತೊಂದರೆಯಾಗಲೀ ಇಲ್ಲ.

**ಉಪಯೋಗ :** 1. ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಕರೆಯುವ ಹಸು ಮತ್ತು ಎಮ್ಮೆಗಳಿಗೆ ಶತಾವರಿ ಗೆಡ್ಡೆಯನ್ನು ತಿನ್ನಿಸುವರು. ಇದರಿಂದ ಅವು ಹೆಚ್ಚಿನ ಪ್ರಮಾಣದಲ್ಲಿ ಹಾಲು ಕೊಡುವುದಲ್ಲದೆ ಅವುಗಳ ಆರೋಗ್ಯವೂ ಚೆನ್ನಾಗಿರುತ್ತದೆ. ಈ ಕಾರಣದಿಂದಲೇ ಶತಾವರಿಯನ್ನು 'ತರುವಿನ ಗೆಡ್ಡೆ' ಎನ್ನುವರು.

2. ಕೆಲವು ಆದಿವಾಸಿ ಜನಾಂಗವದರು ಶತಾವರಿಯ ಗೆಡ್ಡೆಗಳನ್ನು ಮತ್ತು ಎಲೆಗೊಂಚಲುಗಳನ್ನು ತರಕಾರಿಯಂತೆ ಬಳಸುತ್ತಿದ್ದಾರೆ.

3. ಆಯುರ್ವೇದದ ಪ್ರಕಾರ ಶತಾವರಿಯು ಸ್ತನ್ಯವರ್ಧಕ, ಸ್ತನ್ಯಶೋಧಕ ಮೊದಲಾದ ಗುದಿಗಳನ್ನು ಹೊಂದಿದ್ದು, ಸ್ತ್ರೀಯರ ಆರೋಗ್ಯಕ್ಕೆ ಅತ್ಯುಪಯೋಗಿಯಾಗಿರುವುದರಿಂದ ಆಯುರ್ವೇದದಲ್ಲಿ ಇದನ್ನು 'ಸ್ತ್ರೀ ಸಖಿ' ಎಂದೂ ಕರೆಯಲಾಗುತ್ತದೆ.

4. ಯುನಾನಿ ಚಿಕಿತ್ಸಾ ಪದ್ಧತಿಯಲ್ಲಿ ಶತಾವರಿಯನ್ನು ಮೂತ್ರಪಿಂಡ ಮತ್ತು ಪಿತ್ತಕೋಶದ ಕಾಯಿಲೆಗಳ ಹಾಗೂ ಚರ್ಮರೋಗಗಳ ನಿವಾರಕವಾಗಿ ಬಳಸುತ್ತಾರೆ.

5. ಆಯುರ್ವೇದದ ಪ್ರಕಾರ ಶತಾವರಿಯು ಒಂದು ಸಾತ್ವಿಕ ಸಸ್ಯವಾಗಿದ್ದು, ಇದರ ಬಳಕೆಯಿಂದ ದೇಹದಲ್ಲಿ ಓಜಸ್ಸು ಹೆಚ್ಚಾಗುತ್ತದೆ ಮತ್ತು ಆಧ್ಯಾತ್ಮಿಕ ಭಾವವು ಹೆಚ್ಚುತ್ತದೆ.

6. ಶತಾವರಿಯ ಬೇರನ್ನು ತೊಳೆದು, ಜಜ್ಜಿ ನೀರಿನಲ್ಲಿ ನೆನೆಸಿ ಈ ನೀರಿನಿಂದ ಮುಖವನ್ನು ತೊಳೆದರೆ ಮೊಡವೆಗಳು ನಿವಾರಣೆಯಾಗುವುದಲ್ಲದೆ ಮುಖದ ಕಾಂತಿಯು ಹೆಚ್ಚುತ್ತದೆ.

7. ಶತಾವರಿಯ ಬೇರಿನಿಂದ ತೆಗೆದ ರಸಕ್ಕೆ ಸಮಪ್ರಮಾಣದ ಎಳ್ಳೆಣ್ಣೆ ಸೇರಿಸಿ ತಲೆಗೆ ಮಸಾಜು ಮಾಡುವುದರಿಂದ ತಲೆನೋವು, ಅರೆತಲೆನೋವು ಹತೋಟಿಗೆ ಬರುತ್ತದೆ.

8. ಒಂದು ಚಮಚೆಯಷ್ಟು ಶತಾವರಿ ಬೀಜವನ್ನು ಚೆನ್ನಾಗಿ ಕುಟ್ಟಿ ಪುಡಿಮಾಡಿ ಜೇನುತುಪ್ಪ ಸೇರಿಸಿ ದಿನಕ್ಕೆ ಎರಡು ಬಾರಿ ಸೇವಿಸಿದರೆ ಕೆಮ್ಮು, ದಮ್ಮು ನಿವಾರಣೆಯಾಗುತ್ತದೆ.

9. ಶತಾವರಿ ಚೂರ್ಣವನ್ನು ಹಸಿ ಹಾಲಿನಲ್ಲಿ ಕದಡಿ ದಿನದಲ್ಲಿ 3-4 ಸಲ ಸೇವಿಸಿದರೆ ರಕ್ತಾತಿಸಾರವು ವಾಸಿಯಾಗುತ್ತದೆ.

10. ಯಾವುದೇ ಬಗೆಯ ಜ್ವರವಿದ್ದಾಗ ದಿನಕ್ಕೆ ಎರಡು ಸಲ ಒಂದು ಚಮಚೆ ಶತಾವರಿ ಚೂರ್ಣವನ್ನು ಸ್ವಲ್ಪ ನೀರಿನೊಂದಿಗೆ ಸೇವಿಸಿದರೆ ಜ್ವರ ನಿವಾರಣೆ ಸಾಧ್ಯ.

11. ಶತಾವರಿ ಬೇರಿನ ರಸಕ್ಕೆ ಹಾಲು ಮತ್ತು ಸಕ್ಕರೆ ಸೇರಿಸಿ ಸೇವಿಸುತ್ತಿದ್ದರೆ ದೇಹದ ಶಕ್ತಿ ಹೆಚ್ಚುತ್ತದೆ.

12. ಶತಾವರಿ ಎಲೆಯನ್ನು ಹಬೆಯಲ್ಲಿ ಬೇಯಿಸಿ ಸ್ವಲ್ಪ ತುಪ್ಪವನ್ನು ಸೇರಿಸಿ ಸುಟ್ಟಗಾಯ ಮತ್ತು ಹುಣ್ಣಿನ ಮೇಲೆ ಹಚ್ಚುವುದರಿಂದ ಬೇಗ ವಾಸಿಯಾಗುತ್ತದೆ.

**ಪರಾಮರ್ಶನ ಗ್ರಂಥಗಳು**

ಶತಾವರಿ - ಮುನಿಯಾಲ್ ಗಣೇಶ್ ಶೆಣೈ

ಕನ್ನಡ ವಿಶ್ವಕೋಶ ಸಂ. 14

*ವಿ.ಎನ್.ಕೆ.*

**ಶಾಸನಗಳಲ್ಲಿ ಕೃಷಿ ಸಂಬಂಧಿ ವಿಚಾರಗಳು** ಶಾಸನಗಳಲ್ಲಿ ಕೃಷಿಗೆ ಸಂಬಂಧಿಸಿದ ವಿಚಾರಗಳು ಒಂದು ಪ್ರಧಾನ ಅಂಗವಾಗಿ ಬರುವುದಿಲ್ಲ. ಶಾಸನಗಳ ಮೂಲ ಉದ್ದೇಶ ಕೃಷಿಯ ವರ್ಣನೆಯಲ್ಲ. ಶಾಸನಗಳು ವಾಸ್ತವವಾಗಿ ರಾಜಾಜ್ಞೆಗಳು. ಅವುಗಳ ಪ್ರಥಮ ಮತ್ತು ಪರಮ ಗುರಿ ಘಟನೆಗಳನ್ನು ದಾಖಲಿಸುವುದೇ ಆಗಿತ್ತು. ರಾಜರು, ಮಂತ್ರಿಗಳು, ಸಾಮಂತರು, ಕೆಲವೊಮ್ಮೆ ಮೇಲ್ವರ್ಗದ ಸ್ತ್ರೀಯರು ಮೊದಲಾದ ಸಾಮಾಜಿಕ ಗಣ್ಯರು ದಾನ ದತ್ತಿಗಳನ್ನು ನೀಡಿದ್ದನ್ನು ಕೆರೆ, ಕುಂಟೆ, ಬಾವಿ, ತಟಾಕಗಳನ್ನು ಕಾಲುವೆಗಳನ್ನು ನಿರ್ಮಿಸಿದ್ದನ್ನು, ದೇವಾಲಯ, ಮಠ, ಅಗ್ರಹಾರ, ಬಸದಿ ಇತ್ಯಾದಿ ಸ್ಥಾಪಿಸಿದ್ದನ್ನು ಶಾಸನಗಳಲ್ಲಿ ದಾಖಲಿಸಲಾಗಿದೆ. ಇಂತಹ ಹಲವಾರು ಸಂದರ್ಭಗಳಲ್ಲಿ ಕೃಷಿಗೆ ಸಂಬಂಧಿಸಿದ ವಿಚಾರಗಳು ಪ್ರಾಸಂಗಿಕವಾಗಿ ಶಾಸನಗಳಲ್ಲಿ ಕಂಡುಬರುತ್ತವೆ.

ಶಾಸನಗಳ ಹಿನ್ನೆಲೆಯಲ್ಲಿ ಕೃಷಿ ಸಂಬಂಧಿ ವಿಚಾರಗಳನ್ನು ಹಲವು ರೀತಿಯಲ್ಲಿ ವಿಂಗಡಿಸಬಹುದು. ನಿಸರ್ಗದ ವರ್ಣನೆ, ಚಕ್ಕು ಬಂದಿಗಳು, ಅಳತೆಗಳು, ಕೃಷಿ ಉಪಕರಣಗಳು, ನೀರಾವರಿ, ಇಂಥ ಪ್ರಮುಖ ವಿಚಾರಗಳು ಶಾಸನಗಳಲ್ಲಿ ಸ್ಥಾನವನ್ನು ಪಡೆಯುತ್ತವೆ.

**ಶಾಸನಗಳಲ್ಲಿ ನಿಸರ್ಗದ ವರ್ಣನೆ :** ನಿಸರ್ಗ ಜನಜೀವನದ ಹಿನ್ನೆಲೆ. ಅದರೊಂದಿಗೆ ಮಾನವನ ಬಾಳು ಬೆರೆತಿದೆ. ಮಾನವನು ಪ್ರಕೃತಿಯ ಒಂದು ಅಂಗವೇ ಆಗಿರುವುದರಿಂದ ತನ್ನೆಲ್ಲ ಅಭಿಪ್ರಾಯವನ್ನು ಆಲೋಚನೆ, ಅನಿಸಿಕೆ, ಅನುಭವ ಕೀರ್ತಿ ಪ್ರತಿಷ್ಠೆಗಳನ್ನು ಅಭಿವ್ಯಕ್ತಿಸುವುದು ಪ್ರಕೃತಿಯ ಮಡಿಲಲ್ಲಿಯೇ. ನಿಸರ್ಗ ಎಂದ ತಕ್ಷಣ ನೆನಪಿಗೆ ಬರುವುದು, ವಾಸಿಸುತ್ತಿರುವ ನೆಲ ಹರಿಯುವ ಜಲ, ಇವುಗಳೆಡೆಯಲ್ಲಿ ಗಿಡ, ಮರ, ಬಳ್ಳಿ, ಬೆಟ್ಟ ಗುಡ್ಡ, ಕಾಡು-ಮೇಡು ಪ್ರಾಣಿ ಪಕ್ಷಿ ಇತ್ಯಾದಿ.

ನಿಸರ್ಗದತ್ತ ಸುಂದರ ವಾತಾವರಣವಿರುವ ಪ್ರದೇಶದಲ್ಲಿ ದೇವಾಲಯ, ಮಠ, ಅಗ್ರಹಾರ, ಬಸದಿ ವಿಶ್ವವಿದ್ಯಾಲಯ

ಮೊದಲಾದವುಗಳನ್ನು ನಿರ್ಮಿಸುವುದು ಹಿಂದಿನಕ ಕಾಲದಿಂದಲೂ ರೂಢಿಯಲ್ಲಿತ್ತು. ಅವುಗಳ ಸ್ಥಾಪನೆಯ ಸಂದರ್ಭದಲ್ಲಿ ಹಾಕಿಸಿದ ಶಾಸನಗಳಲ್ಲಿ ಅಲ್ಲಿಯ ಪರಿಸರದ ಸೊಬಗನ್ನು ವಿವಿಧ ರೀತಿಯಲ್ಲಿ ಬಣ್ಣಿಸುತ್ತಿದ್ದರು. ಇದಕ್ಕೆ ಕೆಲವು ಉದಾಹರಣೆಗಳ್ನು ಕೊಡಬಹುದು.

ಇದುವರೆಗೆ ನಮಗೆ ತಿಳಿದುಬಂದಿರುವಂತೆ ಚುಟು ಶಾತವಾಹನರ ಒಂದು ಪ್ರಮುಖ ನೆಲೆಯಾಗಿ, ಕದಂಬ ರಾಜಧಾನಿಯಾಗಿ, ಕಲ್ಯಾಣಿ ಚಾಲುಕ್ಯ, ಹಾನುಗಲ್ಲು ಕದಂಬದ ಉಪರಾಜಧಾನಿಯಾಗಿ ಮೆರೆದ ಬನವಾಸಿಗೆ ಸಾವಿರಾರು ವರ್ಷಗಳ ವೈಭವೋಪೇತವಾದ ಇತಿಹಾಸವಿದೆ. ಕಾಲಕ್ರಮದಲ್ಲಿ ಇದರ ಹಿರಿಮೆ ಎಷ್ಟರಮಟ್ಟಿಗೆ ಹೆಚ್ಚಿತ್ತೆಂದರೆ ಕೇವಲ ಊರಾಗಿದ್ದುದು, ರಾಜಧಾನಿ ನಗರವಾಗಿ, ಮಂಡಲವಾಗಿ, ನಾಡಾಗಿ, ದೇಶವಾಗಿ ಬೆಳೆದಿತ್ತು.

ಕೊನೆಗೆ ಪನ್ನಿಚ್ಛಾಸಿರ (12000 )ವಾಯಿತು. 'ಆರಂಕುಸಮಿಟ್ಟೊಡಂ ನೆನೆವುದೆನ್ನಮನಂ ಬನವಾಸಿದೇಶವಂ' ಎಂದು ಪಂಪನಂತಹ ಮಹಾಕವಿ ಉದ್ಘೋಷಿಸುವಂತಾಯಿತು. ಅಷ್ಟೇ ಅಲ್ಲ, 'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನವನದೊಳ್ ಬನವಾಸಿದೇಶದೊಳ್' ಎಂದು ಆತ ಆತ್ಮೀಯವಾಗಿ ಹೇಳುವಷ್ಟು ಆಕರ್ಷಣೀಯವೂ ಪ್ರಶಂಸನೀಯವೂ ಆಗಿತ್ತು.

ಕ್ರಿ.ಶ.ಸು. 1100ರ ದಾವಣಗೆರೆ ಶಾಸನದಲ್ಲಿ ಬನವಾಸಿ ಮಂಡಲದ ಪ್ರಕೃತಿ ಸೌಂದರ್ಯ ಕಣ್ಣಿಗೆ ಕಟ್ಟುವಂತೆ ವರ್ಣಿತವಾಗಿದೆ. 'ಹರಿಹರದೇವರಿಗೆ ದತ್ತಿ ಬಿಟ್ಟ ವಿಚಾರವನ್ನು ತಿಳಿಸುವ ಈ ಶಾಸನದಲ್ಲಿ ಬನವಾಸಿ ಮಂಡಲವನ್ನು ಸುಖದಸಾಗರ, ಸಿರಿಹುಟ್ಟಿದ ಕ್ಷೀರಸಾಗರವೆಂದು ಬಣ್ಣಿಸಲಾಗಿದೆ. ಮಾನವನ ಸಕಲ ರೀತಿಯ ಅಭ್ಯುದಯಕ್ಕೂ ಇಲ್ಲಿ ಅವಕಾಶ ಅನುಕೂಲತೆಗಳು ಹೇರಳವಾಗಿವೆ. ಸತ್ಯದ ತವರ್ಮನೆ, ಚಿತ್ತಜನಿರ್ಕೆದಾಣ, ಯುವತೀ ಜನಂಗಳ ಎಱೆವಟ್ಟು (ಆಶ್ರಯ ಸ್ಥಾನ) ಬುಧಾಳಿಯ ಜನ್ಮಭೂಮಿಗಳಿಂದ ಪ್ರಸಿದ್ಧಿಯನ್ನು ಪಡೆದು ಶೋಭಿಸುತ್ತಿದೆ ಬನವಾಸಿಮಂಡಲ; ಎಲ್ಲಿ ನೋಡಿದರಲ್ಲಿ ಹೊಂಬಣ್ಣದಿಂದ ಕಂಗೊಳಿಸುವ ಕಳಮವನ (ಬತ್ತದ ಗದ್ದೆ) ಆಕಾಶದೆತ್ತರಕ್ಕೂ ತನ್ನ ಸೌರಭವನ್ನು ಸೂಸುವ ಕುಸುಮವನ, ಮುಗಿಲು ಮುಟ್ಟುವ ಚಳಮಯಿವೆನಿಸುವ ನಾರಿಕೇಳವನ, ಹಂಸಾಳಿಗಳಿಂದ ಕೂಡಿದ ಜಲಜವನ ಇವುಗಳಿಂದ ಆ ನಾಡು ರಮ್ಯವಾಗಿ ತೋರುತ್ತಿತ್ತು. ನಿಟಿ ತಳಿ ತೊಂಗಲುಗಳಿಂದ ಕೂಡಿದ ಅಶೋಕೆ, ಎಳನೀರಿನಿಂದಕೂಡಿದ ತೆಂಗು, ಭಾರವಾದ ಕೊನೆಗಳಿಂದಕೂಡಿದ ಕೌಂಗು, ಬೇಗನೆಗಳಿಂದ ಜೋತುಬಿದ್ದ ಕಾತಬಕ್ಕೆ, ಕತ್ತಲೆ ಆವರಿಸಿಕೊಳ್ಳುವಷ್ಟರಮಟ್ಟಿಗೆ ದಟ್ಟವಾಗಿ ಹಬ್ಬಿದ ಉತ್ತಮ ಎಲೆ ಬಳ್ಳಿ ಇವುಗಳಿಂದ ನಂದನವನ ಕಣ್ಸೆಳೆಯುತ್ತಿತ್ತು.

ಧಾರವಾಡ ಜಿಲ್ಲೆಯ ಕ್ರಿ.ಶ. ಸು. 1233ರ ಮತ್ತೊಂದು ಶಾಸನದಲ್ಲಿ 'ಬನವಾಸಿಯಲ್ಲಿದ್ದ ನಾಡು ನಾಡೆಯುಂ ಸೊಗಯಿಸದು' ಎಂಬ ತೀರ್ಮಾನವನ್ನು ಹೊಂದಿದ 'ಸುರ ಭವನ' ಉದಧಿಯನೋಡಿಸುವ ತಟಾಕ, ಅಮರವನ, ಮಹಿಮಯನಳ್ಳಾಡಿಸುವ ಬನ, ಇಷ್ಟೇ ಅಲ್ಲದೆ ಅಲ್ಲಿಯ ಧೇನುಗಳಲ್ಲಿ ಕಾಮಧೇನು, ಕಾನನಗಳೆಲ್ಲ ಕಲ್ಪ ಬೂರುಹಗಳಾಗಿರುವಾಗ ಅದೇನೆಂದು ವರ್ಣಿಸಲಿ, ಎಂಬ ಶಾಸನ ಕವಿ ವರ್ಣಿಸಿಯೂ ತೃಪ್ತಿಕೊಡಲಾಗದ ಕೊರಗೂ ಅದರ ಸೌಂದರ್ಯಕ್ಕೆ ಮೆರಗನ್ನು ಕೊಟ್ಟಿದೆ.

ಬನವಾಸಿಯ ಸೊಬಗನ್ನು, ಸೌರಭವನ್ನು ಹೀಗೆ ಬಣ್ಣಿಸಲಾಗಿದೆ.

**ಆದಟೊಡವನೀಕಾಂತೆಗೊಪ್ಪುವ**
**ವದನವೋ ಶೃಂಗಾರ ಸಾರದ**
**ಸದನವೋ ಸೊಬಗಿನ ಸುಮಾನವ ಸುಖದ**
**ನೆಲೆವೀಡೋ**
**ಸುದತಿರತ್ನಗಳೊಗೆದ ಚೆಲುವಂ**
**ಬಂಧಿಯೋ ಪೇಳೆನೆ ಸಕಲ ಸೌರಂ**
**ಭದಲ್ಲಿ ಸೊಗಸಿಹುದಲ್ಲಿ ಬನವಸೆಯೆಂಬ ಪಟ್ಟಣವು**

ಇಲ್ಲಿಯ ಕೇರಿ ಕೇರಿಗಳನ್ನೂ, ತಳಿರು ತೋರಣಗಳನ್ನು ಸಾರಣೆ-ಕಾರಣೆಗಳ ಅಲಂಕರಣೆಗಳನ್ನೆಲ್ಲ ನೋಡಿ ಕಣ್ಣಿಗೆ ಕಟ್ಟುವಂತೆ ವಿಮರ್ಶಿಸುತ್ತಾನೆ.

**ಕೇರಿ ಕೇರಿಯ ತಳಿರಿಡದ ಗುಡಿ**
**ತೋರಣಂಗಳ ಪರಿದುಳಿಸುತಿಹ**
**ಸಾರಣೆಯ ಕಾರಣೆಯ ಗಂಧೋದಕದ ಚಳೆಯಗಳ**
**ಸೌರಭದ ಪೂವಳಿಗಳಲಿ ಶೃಂ**
**ಗಾರಿಸಿದ ಬೀದಿಗಳ ಸೊಬಗಿನ**
**ಸಾರದಲಿ ಸಮನಿಸಿದುದತಿ ಸೌರಂಭ ಬನವಸೆಯ**

ಇಂಥ ಪ್ರಕೃತಿ ರಮ್ಯವಾದ ಬನವಾಸಿಯನ್ನು ಹಲವಾರು ಶಾಸನಕವಿಗಳು ಅಷ್ಟೇ ಸಮರ್ಥವಾಗಿ ಬಣ್ಣಿಸಿದ್ದಾರೆ. ಐಹೊಳೆಯಲ್ಲಿರುವ ಶಿಲಾಶಾಸನದಲ್ಲಿ ಕವಿ ರವಿಕೀರ್ತಿಯು ಬನವಾಸಿಯನ್ನು ಸ್ಥಳದುರ್ಗವೆಂದೇ ಭಾವಿಸಿದ್ದನೆಂಬುದು ಆತನ ಈ ಪದ್ಯದಿಂದ ತಿಳಿಯುತ್ತದೆ.

**ವರದಾತುಂಗ ತರಂಗರಂಗ ವಿಲಸದ್ಧಂಸಾವಳೀ ಮೇಖಲಾಮ್**
**ವನವಾಸೀಮವ ಮೃದ್ನತಃ ಪ್ರಸ್ಪರ್ದ್ಧಿನೀಂಸಂಪದಾ**
**ಮಹತಾಯಸ್ಯ ಬಲಾರ್ಣನೇವ ಪರಿತಃ**
**ಸಂಛಾದಿತೋವಿನೀತಲಂ**
**ಸ್ಥಲದುರ್ಗಂ ಜಲದುರ್ಗಂತಾಮಿವ ಗತಂ ತತ್ತತ್ ಕ್ಷಣೆ ಪಶ್ಯತಾಃ**

"ವರದಾನದಿಯ ಎತ್ತರಕ್ಕೇರುವ ಅಲೆಗಳೆಂಬ (ಕ್ರೀಡಾ) ರಂಗದ ಮೇಲೆ ಆಡುವ ಹಂಸಗಳೇ ಒಡ್ಯಾಣವಾಗಿರುವಂತಹ, ಸೌಭಾಗ್ಯದಲ್ಲಿ ಇಂದ್ರನ ಸುರಪುರವನ್ನೂ ಮೀರಿಸುಂತಹ, ಸ್ಥಲದುರ್ಗವಾಗಿಯೂ ಸೈನ್ಯ ಸಮುದ್ರದಿಂದ ಆವರಿಸಲ್ಪಟ್ಟ ಭೂಪ್ರದೇಶದಿಂದಾಗಿ ನೋಡುಗರಿಗೆ ಕೂಡ 'ಇದೇನು ಜಲದುರ್ಗವಾಗಿ ಕಾಣುವುದಲ್ಲ' ಎಂದು ಭಾವಿಸುವಂತಹ ಬನವಾಸಿಯಾಗಿದೆ" ಎಂದು ಕವಿ ಯಥೋಚಿತವಾಗಿ ಬಣ್ಣಿಸಿದ್ದಾನೆ.

ಹೀಗೆ ಕ್ರಿ.ಶ.ಸು. 1-2ನೆಯ ಶತಮಾನದಿಂದ ಕ್ರಿ.ಶ. 15ನೆಯ ಶತಮಾನದ ಅವಧಿಯವರೆಗಿನ ಶಾಸನಗಳಲ್ಲಿ ಬಂದಿರುವ ಬನವಾಸೆಯ ವರ್ಣನೆಗಳಿಂದ ಗೋಚರವಾಗುವ ಮುಖ್ಯ ಅಂಶವೆಂದರೆ ಆ ಕಾಲದಲ್ಲಿ ಬನವಾಸೆನಾಡು ಸಂಸ್ಕೃತಿಯ ಆಗರವೂ ಸಮೃದ್ಧಿಸಾಗರವೂ ಆಗಿದ್ದು, ಸಕಲ ಸುಖಗಳ ಬೀಡಾಗಿತ್ತೆಂಬುದೇ ಆಗಿದೆ.

ಧರ್ಮಪ್ರಸಾರ, ಆರಾಧನೆ, ತಪಸ್ಸುಗಳ ಕೇಂದ್ರವಾಗಿದ್ದ ಶ್ರವಣಬೆಳಗೊಳದ ಪ್ರಕೃತಿಯ ಸೌಂದರ್ಯ ಅಲ್ಲಿಯ ಹಲವಾರು ಶಾಸನಗಳಲ್ಲಿ ಅನೇಕ ಬಗೆಯಲ್ಲಿ ವರ್ಣಿತವಾಗಿದೆ. ಭದ್ರಬಾಹುವನ್ನು ಕುರಿತ ಕ್ರಿ.ಶ. 600ರ ಚಂದ್ರಗಿರಿಯ ಶಾಸನ ಪ್ರಭಾಚಂದ್ರಾರ್ಯರು ತಮ್ಮ

ಅವಸಾನ ಸನ್ನಿಹಿತವಾದುದನ್ನು ಗ್ರಹಿಸಿ, ಸಂಘದಿಂದ ಬೇರೆಯಾಗಿ ಕಟವಪ್ರವೆಂಬ ಬೆಟ್ಟದ ಮೇಲೆ ತಂಗಿದ್ದರು. ಪ್ರಕೃತಿ ಸೌಂದರ್ಯದಿಂದ ಈ ಸ್ಥಳವು ರಮ್ಯವಾಗಿದ್ದುದಲ್ಲದೆ ಕಾಡುಮೃಗಗಳಿಂದ ತುಂಬಿ ಭಯಂಕರವಾಗಿದ್ದಿತು. ಕಾಲಕ್ರಮೇಣ ಈ ಬೆಟ್ಟದ ಮೇಲೆ 900 ಜನ ಮಹರ್ಷಿಗಳು ಸಮಾಧಿಯನ್ನು ಪಡೆದರು. ಕ್ರಿ.ಶ.ಸು. 650ರ ಮತ್ತೊಂದು ಶಾಸನದಲ್ಲಿ "ನಂದನವನವನ್ನು ನಾಚಿಸುವಂಥ ರಮ್ಯವಾದ ಅರಣ್ಯ, ಸುತ್ತಲೂ ಮನಮೋಹಕವಾದ ಬತ್ತದ ಗದ್ದೆ ಅಲ್ಲಲ್ಲೆ ರಕ್ತೊತ್ಪಲಕುಂಕಲ, ದುಂಬಿ ಹಿಂಡಿನ ಝೇಂಕಾರ ! ಇಂತಹ ರಮ್ಯ ಪ್ರದೇಶದಲ್ಲಿ ಸದ್ಗುಣ ಸಂಪನ್ನರೂ ಸತ್ಕುಲ ಪ್ರಸೂತರೂ ಕನಕಸೇನಸುತರೂ ಆದ ಬಲದೇವ ಮುನಿಗಳು ಸಮಾಧಿಯನ್ನು ಪಡೆದು ಸಿದ್ಧಲೋಕಕ್ಕೆ ತೆರಳಿದರು." ಮೇಲಿನ ಶಾಸನಗಳನ್ನು ಪರಿಶೀಲಿಸಿದಾಗ ತಿಳಿದುಬರುವ ವಿಷಯವೆಂದರೆ ಸಲ್ಲೇಖನ ವ್ರತವನ್ನು ಮಾಡಲು ಶ್ರವಣಬೆಳಗೊಳದಂತಹ ದಟ್ಟವಾದ ಮತ್ತು ರಮ್ಯವಾದ ನಿಸರ್ಗಸಂಪತ್ತಿನಿಂದ ಆವೃತವಾದ ಸ್ಥಳ ಯುಕ್ತವಾಗಿತ್ತೆಂಬುದು.

ಕುರುಗೋಡು/ಶಾಸನದಲ್ಲಿ ಬಿಲ್ಲಿಕುನ್ದೆಯ ಸುತ್ತಮುತ್ತಲಿನ ಪರಿಸರವನ್ನು ಮನಮುಟ್ಟ ವರ್ಣಿಸಲಾಗಿದೆ. ಸಂಪದ್ಭರಿತವಾದ ಜಂಬೂ ದ್ವೀಪದಲ್ಲಿ ಭರತಭೂಮಿಯೆಂಬ ಸ್ತ್ರೀಯ ತಲೆಗೂದಲಿನಂತೆ ಶೋಭಿಸುತ್ತಿರುವ ಕುಂತಳದೇಶದಲ್ಲಿ ತುಂಗಭದ್ರಾನದಿಯಿಂದ ದಕ್ಷಿಣಕ್ಕೆ ಕಮಲಗಳ ಸಮೂಹದಿಂದ ಬೆಳೆದು ನಿಂತ ಗದ್ದೆ ಹೊಲಗಳಿಂದ ಮಾವು, ಹುಲುಸಾಗಿ ಬೆಳೆದ ಹಲಸು, ಲವಂಗ, ಅಡಕೆ, ಬಳ್ಳಿಗಳಲ್ಲಿಯೇ ಶ್ರೇಷ್ಠವಾದ, ಎಳೆಯ ಚಿಗುರುಗಳಿಂದ ಕೂಡಿದ ಹೊಸ ನಾಗವಳ್ಳಿ ಎಲೆಗಳ ಸಮೂಹಗಳು ಚೆನ್ನಾಗಿ ಬೆಳೆದು ನಳನಳಿಸಿದ ನಂದನವನಗಳು ಬಲ್ಲಿಕುಂದೆಯ ಸುತ್ತಮುತ್ತ ಎಲ್ಲಿ ನೋಡಿದರಲ್ಲಿ ಶೋಭಿಸುತ್ತಿವೆ ಎಂದು ಮುಂತಾಗಿ ಕುರಗೋಡಿನ ನಿಸರ್ಗ ಸಂಪತ್ತನ್ನು ದುರ್ಗಮ ಕೋಟೆಯ ವರ್ಣನೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ. ಈ ಪ್ರದೇಶದಲ್ಲೇ ಕಲಿದೇವಶೆಟ್ಟಿ ಭೂತೇಶದ ಪಶ್ಚಿಮಕ್ಕೆ ಕೆರೆ, ಉತ್ತರಕ್ಕೆ ಶೋಭಿಸುವ ತೀರ್ಥ, ದಕ್ಷಿಣದಲ್ಲಿ ತಂಪುನೀರಿನ ಬಾವಿಗಳನ್ನು ಕಟ್ಟಿಸಿದನು.

ಇಂದಿನಂತೆ ಹಿಂದಿನ ಕಾಲದಲ್ಲೂ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು, ದೇವಾಲಯಗಳನ್ನು ನಿರ್ಮಿಸಲು, ಕೋಟೆಕೊತ್ತಲಗಳನ್ನು ಕಟ್ಟಲು ನಿಸರ್ಗದತ್ತವಾದ ಸಮೃದ್ಧವಾತಾವರಣವಿರುವ ಪ್ರದೇಶವನ್ನು ಆಯ್ಕೆಮಾಡಿ ಕೊಳ್ಳುತ್ತಿದ್ದರು. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬೆಳಗಾವಿಯ ಶಾಸನವನ್ನು ನೋಡಬಹುದು. ಇದು ಪ್ರಾಚೀನ ಕರ್ನಾಟಕದ ಒಂದು ಪ್ರಖ್ಯಾತ ಸಾಂಸ್ಕೃತಿಕ ಕೇಂದ್ರವಾಗಿತ್ತು. ಸುಮಾರು 7 ಕಿ.ಮೀ. ಉದ್ದ 6 ಕಿ.ಮೀ. ಅಗಲದ ವಿಶಾಲನಗರ ಪಂಚ ವಿಶ್ವವಿದ್ಯಾಲಯಗಳೂ, ನೂರಾರು ದೇವಮಂದಿರಗಳೂ, ಹಲವಾರು ಜೈನ ಬಸದಿಗಳೂ, ಬೌದ್ಧವಿಹಾರಗಳೂ, ಭವ್ಯಸೌಧಗಳೂ, ಕೋಟೆಕೊತ್ತಲಗಳೂ, ಉದ್ಯಾನವನ-ಸರೋವರಗಳೂ, ಕಂದಕಗಳೂ, ವಿಶಾಲ ರಸ್ತೆಗಳೂ, ಸುಮಾರು 60 ಸಾವಿರ ಜನಸಂಖ್ಯೆಯೂ ಇದ್ದ ಒಂದು ಮಹಾನಗರವಾಗಿತ್ತು ಆ ಬಳ್ಳಿಗಾವೆ. ಇದನ್ನು ಶಾಸನಗಳಲ್ಲಿ ವಳ್ಳಿಗ್ರಾಮೆ, ವಲ್ಲಿಗ್ರಾಮ, ಬಲಿಪುರ, ಬಳ್ಳಿಗಾವೆ, ಬಳ್ಳಿಗಾವ್ವೆ, ಬಳ್ಳಿಗಾವೆ ಎಂದು ಮುಂತಾಗಿ ಹೆಸರಿಸಲಾಗಿದೆ. ಇದನ್ನು ಅನಾದಿ ಪಟ್ಟಣವೆಂದೂ, ಬನವಾಸಿಯ ಪನ್ನಿರ್ಚ್ಛಾಸಿರಕ್ಕೆ ಅಧಿಷ್ಠಾನವೆಂದೂ (ರಾಜಧಾನಿ) ವಾಣಿಜ್ಯಕೇಂದ್ರವೆಂದೂ, ಕಾಳಾಮುಖದ ಪ್ರಮುಖ ನೆಲೆಯೆಂದೂ, ದಕ್ಷಿಣ ಕೇದಾರವೆಂದೂ ಬಗೆಬಗೆಯಾಗಿ ಬಣ್ಣಿಸಲಾಗಿದೆ. ಹೀಗೆ ಸಕಲ ಸಂಪತ್ತಿನಿಂದ ಕೂಡಿದ ಈ ಬಳ್ಳಿಗಾವೆಯನ್ನು ಬಿಟ್ಟರೆ ಸಮುದ್ರದವರೆಗೆ ವ್ಯಾಪಿಸಿದ ಈ ವಿಸ್ತಾರವಾದ ಭೂಮಂಡಲದಲ್ಲಿ ಇಂಥ ಇನ್ನೊಂದು ಪಟ್ಟಣವು ಬೇರೆ ಯಾವುದಿದೆ - ಎಂದು ಬಳ್ಳಿಗಾವಿಯನ್ನು ಬಣ್ಣಿಸಲಾಗಿದೆ. ಅಂದರೆ ಒಂದು ಪ್ರದೇಶ ಒಂದು ಕಾಲದಲ್ಲಿ ತನ್ನ ವೈಭವ ಪರಾಕಾಷ್ಠೆಯನ್ನು ಮುಟ್ಟಬಹುದು. ಕಾಲಗತಿಯಲ್ಲಿ ಅದರ ಅನೇಕ ಅಂಶಗಳು ನಾಶವಾಗಲೂಬಹುದು. ಇಂತಹ ಕುತೂಹಲಕರ ವಿಷಯಗಳನ್ನು ಮುಂದಿನ ಪೀಳಿಗೆಗೆ ಪ್ರಾಮಾಣಿಕವಾಗಿ ದಾಖಲಿಸಿಕೊಂಡುವಂಥವು ಶಾಸನಗಳೆಂದು ಧಾರಾಳವಾಗಿ ಹೇಳಬಹುದು.

ಒಂದು ನಾಡಿನ ಜನತೆ ತಮ್ಮ ಜೀವನ ನಿರ್ವಹಣೆ ಮತ್ತು ಆರ್ಥಿಕ ಭದ್ರತೆಗೆ ಅಲ್ಲಿಯ ನಿಸರ್ಗ ಸಂಪತ್ತಾದ ಭೂಮಿಯನ್ನು ಆಶ್ರಯಿಸುವುದು ಕಂಡುಬರುತ್ತದೆ. ಪ್ರಕೃತಿದತ್ತವಾದ ಎಲ್ಲ ಕೊಡುಗೆಗಳು ಅಂದರೆ ಮಣ್ಣು, ನೀರು, ಖನಿಜ ಸಂಪತ್ತು, ಅರಣ್ಯ ಸಂಪತ್ತುಗಳು ಭೂಮಿಯಲ್ಲಿ ಸಮಾವೇಶವಾಗುತ್ತವೆ. ಹೀಗಾಗಿ ಭೂಮಿ ಅತ್ಯಂತ ಮಹತ್ವದ ನಿಸರ್ಗ ಸಂಪನ್ಮೂಲವೆಂದು ಹೇಳಬಹುದು. ಬಹುಜನರ ಜೀವನೋಪಾಯವಾದ ಮುಖ್ಯಕಸುಬುಗಳಾದ ಕೃಷಿ, ವ್ಯಾಪಾರ, ಉದ್ಯೋಗ ಕೈಗಾರಿಕೆಗಳನ್ನೊಳಗೊಂಡು ನಾಡಿನ ಸಮಸ್ತ ಆದಾಯಕ್ಕೆಲ್ಲ ಮೂಲಕೇಂದ್ರವಾಗಿದ್ದುದು ಒಕ್ಕಲುತನ. ಅದರಿಂದಾಗಿ ಒಕ್ಕಲುತನದ ಅಭಿವೃದ್ಧಿ ಎಂದರೆ ಒಂದು ನಾಡಿನ ಅಭಿವೃದ್ಧಿ ಎಂಬುದನ್ನು ನಮ್ಮ ಪ್ರಾಚೀನರು ಚೆನ್ನಾಗಿ ಮನಗಂಡಿದ್ದರು. ದಾನವಸ್ತುಗಳಲ್ಲಿ ವ್ಯವಸಾಯ ಯೋಗ್ಯಭೂಮಿಗೆ ಪ್ರಥಮ ಪ್ರಾಶಸ್ತ್ಯ ಸಂದಿದ್ದು ಕರ್ನಾಟಕದ ಮುಕ್ಕಾಲುಪಾಲು ಶಾಸನಗಳು ಭೂದಾನಕ್ಕೆ ಸಂಬಂಧಿಸಿವೆ.

ಸ್ಥಳನಾಮಗಳ ವರ್ಣನೆಗಳು ಮತ್ತು ಸಮುದ್ರದ ಚಿತ್ರಣಗಳು ಶಾಸನಗಳಲ್ಲಿ ವ್ಯಕ್ತವಾಗಿರುವಂತೆ ದಾನ ನೀಡಿದ ಭೂಮಿಯ ಚಕ್ಕುಬಂದಿಯ ವಿವರಣೆ, ಕೆರೆ, ಕುಂಟೆ, ಬಾವಿ, ಏತ, ತೋಟ, ತುಡಿಕೆ, ಅರವಟ್ಟಿಗೆ, ಆರಾಮ (ಉದ್ಯಾನವನ) ಇತ್ಯಾದಿಗಳನ್ನು ನಿರ್ಮಿಸಿದ ಪ್ರಸ್ತಾಪ ಶಾಸನಗಳಲ್ಲಿ ವ್ಯಕ್ತವಾಗಿದೆ. ಅಂದಿನ ಜನರು ಇಂಥವುಗಳ ನಿರ್ಮಾಣ ಪುಣ್ಯದ ಕೆಲಸವೆಂದು ಭಾವಿಸಿದ್ದರು. ಮಕ್ಕಳು ಚಿಕ್ಕಂದಿನಲ್ಲಿರುವಾಗಲೆ ತಂದೆ ತಾಯಿಗಳು ಇಂತಹ ಪುಣ್ಯಕಾರ್ಯಗಳಿಗೆ ಪ್ರೇರಣೆ ನೀಡುತ್ತಿದ್ದರು.

ಕೃಷಿ ಉತ್ಪಾದನೆಗೆ ನೀರಾವರಿ ಅನಿವಾರ್ಯ, ಮಳೆಯನ್ನ ವಲಂಬಿಸದೆ, ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತ್ಯವಶ್ಯಕ ಆದ್ದರಿಂದ ನದಿ, ತೊರೆ, ಕೆರೆ, ಕಟ್ಟೆ, ಹಳ್ಳ ಕೊಳ್ಳ ಬಾವಿಗಳನ್ನು ತೋಡಿಸುತ್ತಿದ್ದರು. ಪ್ರಾಚೀನ ಕಾಲದಿಂದ ಹಿಡಿದು ಇಂದಿಗೂ ಕೆರೆಗಳು ಮನುಷ್ಯನ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ವ್ಯವಸಾಯಕ್ಕೆ, ದನಕರುಗಳಿಗೆ, ಪ್ರಾಣಿಗಳಿಗೆ, ಪಕ್ಷಿಗಳಿಗೆ ಮನುಷ್ಯರಿಗೆ ನೀರು ಅವಶ್ಯಕವಾಗಿ ಬೇಕೇಬೇಕು. ಹೀಗಾಗಿ ಕೆರೆಗಳನ್ನು ಕಟ್ಟಿಸುವುದು ಒಂದು ಧರ್ಮದ ಕಾರ್ಯವಾಗಿ ಪರಿಣಮಿಸಿತ್ತು. ರಾಜನಾದವನು ಅನೇಕ ಕೆರೆ ಕುಂಟೆಗಳನ್ನು ಕಟ್ಟಿಸುತ್ತಿದ್ದನು. ಶ್ರೀಮಂತ ಜನರೂ ಕೆರೆಗಳನ್ನು ಕಟ್ಟಿಸುವಂತಹ ಧಾರ್ಮಿಕ ಕೆಲಸಗಳಿಗೆ ಕೈಹಾಕುತ್ತಿದ್ದರು. ಕ್ರಿ.ಶ. 1497ರ ಕೋಲಾರ ಜಿಲ್ಲೆಯ ಒಂದು ಶಾಸನದಲ್ಲಿ ಕೆರೆಯನ್ನು ಕಟ್ಟಿಸಿ ಅದಕ್ಕೆ 'ಕಟ್ಟು ಕೊಡುಗೆ'ಯನ್ನು ನೀಡಿದುದರ ಪ್ರಸ್ತಾಪ ಬರುತ್ತದೆ.

ಕೆರೆಯ ತೂಬನ್ನು ಕಲ್ಲು, ಇಟ್ಟಿಗೆ ಮತ್ತು ಗಾರೆಯಿಂದ ಭದ್ರವಾಗಿ ಕಟ್ಟಲಾಯಿತು. ಆ ಕೆರೆಯ ಕೆಳಗೆ ತೆಂಗು ಅಡಕೆ ಇತ್ಯಾದಿ ಬೆಳೆಸುವಂತೆಯೂ ಸೂಚಿಸಲಾಯಿತು. ಇದರ ಜೊತೆಗೆ ಕುತೂಹಲ ಸಂಗತಿ ಎಂದರೆ ಆ ಕೆರೆಯ ಕೆಳಗಿನ ಭೂಮಿಯನ್ನು ಉಳುಮೆ ಮಾಡುವವನಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸ್ಥಳವನ್ನು ನೀಡಿರುವುದು - ಬಳ್ಳಾರಿ ಜಿಲ್ಲೆಯ ಒಂದು ಶಾಸನದಲ್ಲಿ ಬಯಕಾರ ರಾಮಪ್ಪ ಎಂಬುವನು ಈ ಭಾಗದಲ್ಲಿ 17 ಕೆರೆಗಳನ್ನು ಕಟ್ಟಿಸಿದನೆಂದು ಹೇಳುತ್ತದೆ. 1ನೇ ಬುಕ್ಕರಾಯ ತನ್ನ ಸಹಸ್ರಾರು ಕೆಲಸಗಾರರಿಂದ ಕೆರೆಗಳನ್ನು ಕಟ್ಟಿಸುತ್ತಿದ್ದನು. ಇವನು ಕಡಪದ ಕಲುಚಪಲ್ಲಿ ಹತ್ತಿರ ತನ್ನಿಬ್ಬರ ಅಧಿಕಾರಿಗಳ ಮೂಲಕ ಕೆರೆಗಳನ್ನು ನಿರ್ಮಿಸುತ್ತಾನೆ. ಕೃಷಿಗೆ ಕುಡಿಯಲು, ಮನುಷ್ಯ ಹಾಗೂ ಪ್ರಾಣಿಗಳಿಗೆ ಅನುಕೂಲವಾಗಲೆಂದು ಈ ಬಗೆಯ ನೀರಾವರಿ ಕಾರ್ಯಗಳನ್ನು ಕೈಗೊಂಡಿದ್ದು ಶ್ಲಾಘನೀಯ. ಎರಡನೇ ಬುಕ್ಕ ಮತ್ತು ಒಂದನೇ ದೇವರಾಯನ ಕಾಲದಲ್ಲಿ ವಿಜಯನಗರ ಪಟ್ಟಣದಲ್ಲಿ ದೊಡ್ಡ ಜಲಾಶಯವನ್ನು ತುಂಗಭದ್ರಾ ನದಿಗೆ ಕಟ್ಟಿದ್ದರು. ಇಂದಿಗೂ ಆ ಕಾಲದ ಕಾಲುವೆಗಳಿವೆ. ನ್ಯೂನಿಜ್‌ನು ತುಂಗಭದ್ರಾ ನದಿಯಿಂದ 5 ಸಣ್ಣ ಕಾಲುವೆಗಳ ಮೂಲಕ ಹರಿದು ಹೋಗುವ ನೀರಿನ ಬಗ್ಗೆ ತಿಳಿಸುತ್ತಾ, ತುರ್ತು ಕಾಲುವೆ 11 ಮೈಲು ನೀರಾವರಿ ಪ್ರದೇಶಕ್ಕೆ ನೀರುಣಿಸುತ್ತಿದ್ದ ಬಗ್ಗೆ ಉಲ್ಲೇಖಿಸಿದ್ದಾನೆ. ಎರಡನೆಯ ಬುಕ್ಕನ ಜಲಸೂತ್ರಧಾರಿ ಸಿಂಗೆಯ ಭಟ್ಟನು ಪ್ರತಾಪ ಬುಕ್ಕರಾಯನ ಆಜ್ಞೆಯಂತೆ ನಿರ್ಮಿಸುತ್ತಾನೆ. ಅವನು ಮಂಮಲ, ಪೆನುಗೊಂಡ, ಸಿರುವಾರ ಕೆರೆಗಳಿಗೆ ಕಾಲುವೆಗಳನ್ನು ನಿರ್ಮಿಸಿರುವುದು ಗಮನಾರ್ಹ. ಈ ಭಾಗದ ಕೃಷಿ ಚಟುವಟಿಕೆಗಳಿಗೆ ಇವರು ಮಾಡಿದ ಕಾರ್ಯಗಳು ಶ್ಲಾಘನೀಯವಾದವು.

ಪ್ರೌಢ ಪ್ರತಾಪರಾಯನ (1406-1422) ಮಂತ್ರಿ ಲಕ್ಷ್ಮೀಧರನು ಮಗುವಾಗಿದ್ದ ಅವಧಿಯಲ್ಲಿ ತಾಯಿ ಹಾಲೆರೆಯುವಾಗ ಹಾಡಿದ ನೀತಿ ಪಾಠ ಹೀಗಿದೆ:

**ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸ**
**ಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ**
**ಗ್ಗೆರೆವೆಟ್ಟಾಗಿರು ಶಿಷ್ಯರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾಂ()**
**ಯೆರದಳ್ಪಾಲೆರೆವಂದು ತೊಟ್ಟು ಕಿವಿಯೊಳು ಲಕ್ಷ್ಮೀಧರಾಮಾತ್ಯನಾ**

ಎಂಬ ಆದರ್ಶ ನೀತಿಪಾಠ ತಿಳಿದುಬರುತ್ತದೆ.

ದಾವಣಗೆರೆ ಜಿಲ್ಲೆ ಹರಿಹರದ ಹತ್ತಿರ ಹರಿದ್ರಾನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಿದ ಪ್ರಜೆಗಳ ಔದಾರ್ಯಕ್ಕೆ 1ನೇ ದೇವರಾಯ ಅವರ ನೀರಾವರಿ ಜಮೀನುಗಳಿಗೆ ಕಂದಾಯದಲ್ಲಿ ರಿಯಾಯಿತಿ ತೋರಿಸಿದನು. ಕ್ರಿ.ಶ. 1424ರಲ್ಲಿ ಈ ಅಣೆಕಟ್ಟು ಕೊಚ್ಚಿ ಹೋದಾಗ ಎರಡನೇ ದೇವರಾಯನು ಅದರ ದುರಸ್ತಿಗೆ ಉದಾರವಾಗಿ ವ್ಯಯ ಮಾಡಿದ. ತನ್ನ ರಾಣಿ ಕಾಮಲಾದೇವಿ ಸ್ಮರಣೆಯ ಹೆಸರಿಂದ ಕಾಮಲಾಪುರದ ಕೆರೆ ಮತ್ತು ಗ್ರಾಮವನ್ನು ನಿರ್ಮಿಸುತ್ತಾನೆ. ಬುಕ್ಕರಾಯ ಕೋಲಾರ ಜಿಲ್ಲೆಯಲ್ಲಿ ಹನ್ನೆ (ಪೆನ್ನಾರ್-ಪಿನಾಕಿನಿ) ನದಿಯ ನೀರನ್ನು ತಿರುಗಿಸಿ ಕಾಲುವೆ ಮೂಲಕ ಪೆನುಗೊಂಡೆಗೆ ನೀರು ಬರುವಂತೆ ಸಾಹಸ ಮಾಡಿದ್ದನು. ಇದಕ್ಕೆ ಮಂಡಲದ ಕಾಲುವೆ ಎಂದು ಹೆಸರು.

ದಾನಕೊಟ್ಟ ಭೂಮಿಯ ಚಕ್ಕುಬಂದಿಯನ್ನು ನೀಡುವಾಗ ಅದರ ಅಚ್ಚುಕಟ್ಟಿನಲ್ಲಿ ಬರುವ ಮರಗಿಡ, ಕೆರೆ, ಕುಂಟೆ, ಗ್ರಾಮ, ಬೆಟ್ಟಗುಡ್ಡ ಇತ್ಯಾದಿಗಳ ವಿವರಗಳು ಶಾಸನಗಳಲ್ಲಿ ದಾಖಲಾಗಿರುವ ಸಂದರ್ಭಗಳುಂಟು. ಉದಾಹರಣೆಗೆ ಶ್ರವಣಬೆಳಗೊಳದ ಒಂದುಶಾಸನ (ಕ್ರಿ.ಶ.ಸು. 1181) ಚಂದ್ರಮೌಳಿಯ ಪ್ರಿಯತಮೆ ಅಚಲದೇವಿಯು ಬೆಳ್ಗೊಳದಲ್ಲಿ ಕಟ್ಟಿಸಿದ ಪಾರ್ಶ್ವನಾಥ ತೇಗುಲಕ್ಕೆ, ವೀರಬಲ್ಲಾಳನು ಬಮ್ಮೆನಹಳ್ಳಿಯನ್ನು ದತ್ತಿಯಾಗಿ ಬಿಟ್ಟನು. ಈ ಗ್ರಾಮಕ್ಕೆ ಪೂರ್ವದಲ್ಲಿ ಕೆಂಬರೆಯ ಹಳ್ಳ ಅಲ್ಲಿಂದ ದಕ್ಷಿಣಕ್ಕೆ ಬಂಡೆ, ಅಲ್ಲಿಂದ ದಕ್ಷಿಣಕ್ಕೆ ಗಿರಿಯ ಹೆದ್ದಾರಿ, ಅಲ್ಲಿಂದ ದಕ್ಷಿಣಕ್ಕೆ ಆಲದಮರ... ಅಲ್ಲಿಂದ ಪಶ್ಚಿಮಕ್ಕೆ ಕಡವದ ಕೊಳ... ಅಲ್ಲಿಂದ ಉತ್ತರಕ್ಕೆ ಓಣೆಯ ಹೆದ್ದಾರಿ, ಅಲ್ಲಿಂದ ಉತ್ತರಕ್ಕೆ ದೇವಣ್ಣ ಕೆರೆಯ ತಾಯ್ವಳ್ಳ, ಅಲ್ಲಿಂದ ಉತ್ತರಕ್ಕೆ ಹುಣಿಸೆಯ ಗುಂಡು... ಇಷ್ಟು ಗ್ರಾಮ ಚಕ್ಕು ಬಂದಿ ಸೀಮೆ ಎಂದು ಹೇಳಿ ಮುಂದಕ್ಕೆ ಮೂಡಸಾಗರ, ತೆಂಕಸಾಗರ, ಪಡುವಹುಳ್ಳಗಟ್ಟ, ಉತ್ತರಕ್ಕೆ ನಟ್ಟಕಲ್ಲು ಹಿರಿಯ ಜಕ್ಕಿಯಬ್ಬೆಯ ಕೆರೆಯ ತೋಟ, ಕೇತಂಗೆರೆ, ಗಂಗಸಮುದ್ರದ ಕೀಳೇರೆಯ ತೋಟ ಬಸದಿ ಮುಂಭಾಗದ ಇಪ್ಪತ್ತು ಅಂಗಡಿಗಳು ಇತ್ಯಾದಿಗಳ ಚಕ್ಕುಬಂದಿಯನ್ನು ನೀಡಿರುವುದು. ಅಂದಿನ ಕಾಲದ ಆ ಪರಿಸರದ ನಿಸರ್ಗವನ್ನು ಪರಿಚಯಿಸುತ್ತವೆ.

ಭಾರತದ ಇತರ ಭಾಗಗಳಲ್ಲಿಯಂತೆ ಕರ್ನಾಟಕದ ಕೆಲವು ಪ್ರದೇಶಗಳಲ್ಲಿಯೂ ಸ್ವಾಭಾವಿಕ ಸಂಪನ್ಮೂಲಗಳ ಕೊರತೆ ಇತ್ತು. ಉದಾಹರಣೆಗೆ ಕೋಲಾರ ಮತ್ತು ಬಳ್ಳಾರಿಯಂತಹ ಬಯಲುಸೀಮೆ ಪ್ರದೇಶಗಳನ್ನು ನೋಡಬಹುದು. ಈ ಪ್ರದೇಶಗಳಲ್ಲಿ ಹೇರಳವಾಗಿ ಕೆರೆ, ಕುಂಟೆ, ಬಾವಿ, ಏತಗಳನ್ನು ನಿರ್ಮಿಸುತ್ತಿದ್ದರಲ್ಲದೆ ಅರವಟ್ಟಿಗೆ, ಆರಾಮ (ಉದ್ಯಾನವನ) ಅನ್ನಸತ್ರ ಮುಂತಾದ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳುವುದರ ಮೂಲಕ ಒಂದಷ್ಟು ನಿಸರ್ಗ ಸಂಪತ್ತನ್ನು ಬೆಳೆಸುತ್ತಿದ್ದರೆಂದು ಹೇಳಬಹುದು.

ಪ್ರಾಚೀನ ಕಾಲದಲ್ಲಿ ಪರಸ್ಥಳದವರಿಗೆ, ದಾರಿಹೋಕರಿಗೆ ಬಾಯಾರಿಕೆಯಾದಾಗ ಕುಡಿಯಲು ಮತ್ತು ವಿಶ್ರಮಿಸಿಕೊಳ್ಳಲು ಅರವಟ್ಟಿಗೆಗಳನ್ನು ನಿರ್ಮಿಸುತ್ತಿದ್ದರು. ಇಂತಹ ಅರವಟ್ಟಿಗೆಗಳ ಪ್ರಸ್ತಾಪವನ್ನು ಅನೇಕ ಶಾಸನಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ಕ್ರಿ.ಶ. 1412ರ ಶಾಸನವನ್ನು ಕೊಡಬಹುದು. "ಶ್ರೀವರ ಪ್ರತಾಪ ಬುಕ್ಕರಾಯನು ಆಳುತ್ತಿರುವಾಗ ಬಿಸಿಲ ಹಳ್ಳಿಯ ಕಣಿವೆಯ ಹಾದಿ ಕೂಡಿದ ಮಹಾಪಥದಲ್ಲಿ ಸೋಮಣ್ಣ ಅಂವಾಗಳು ಅರವಟ್ಟಿಗೆಯನ್ನಿಕ್ಕಿಸಿ ಮಾಳಿಗೆ ಕೂಪಾರಾಮವನ್ನು ಮಾಡಿಸಿಯೇ ಅರವಟ್ಟಿಗೆಯ ಧನ-ಮನ... ಎಂದು ಹೇಳಿ ಮುಂದೆ ಅರವಟ್ಟಿಗೆಗೆ ನೀರನೊಯ್ಯುವುದಕ್ಕೆ ಮರಗಳಿಗೆ ನೀರನೆರುವುದಕ್ಕೆ ಮತ್ತು ಬಾವಿ ಹೂಳಿದರೆ ತೋಡುವುದಕ್ಕೆ ದಾನವನ್ನು ನೀಡಿದರೆಂದು ತಿಳಿಸುತ್ತದೆ. ಮೇಲಿನ ಶಾಸನವನ್ನು ಪರಿಶೀಲಿಸಿದರೆ - ಹಿಂದಿನ ಕಾಲದಲ್ಲಿ ಕೆಲವು ಪ್ರದೇಶಗಳಲ್ಲಿ ನಿಸರ್ಗ ಸಂಪತ್ತು ಹೇರಳವಾಗಿರಲಿಲ್ಲವೆಂದು ತಿಳಿದುಬರುತ್ತದೆ. ಬಳ್ಳಾರಿ ಜಿಲ್ಲೆಯ 'ಬಿಸಿಲಳ್ಳಿ'ಯಂತಹ ಬಿಸಿಲಿನ ತಾಪಕ್ಕೆ ಸಿಕ್ಕ ಹಳ್ಳಿಗಳ ರಸ್ತೆಯ ಇಕ್ಕೆಲಗಳಲ್ಲಿ ಇಂತಹ ಅರವಟ್ಟಿಗೆಗಳನ್ನು ನಿರ್ಮಿಸುತ್ತಿದ್ದರೆಂದು, ಅವುಗಳ ಎಡೆಯಲ್ಲಿ ಆರಾಮಗಳನ್ನು (ಉದ್ಯಾನವನ) ಸ್ಥಾಪಿಸಿ ನೆರಳನ್ನು ನೀಡುವ ವ್ಯವಸ್ಥೆ ಮಾಡುತ್ತಿದ್ದರೆಂದು ತಿಳಿದುಬರುತ್ತದೆ.

**ಬೆಳೆಗಳು ಮತ್ತು ಸರಕುಗಳು :** ಪ್ರಾಚೀನ ಕರ್ನಾಟಕದ ಸುತ್ತ ಪೇಟೆ, ಪಟ್ಟಣಗಳಲ್ಲಿರುತ್ತಿದ್ದ ಸರಕುಗಳ ಹೆಸರುಗಳನ್ನು ನೋಡಿದರೆ ಅಂದಿನ ಕಾಲದಲ್ಲಿ

ನಿಸರ್ಗದಲ್ಲಿ ದೊರೆಯುತ್ತಿದ್ದ ಅನೇಕ ರೀತಿಯ ವಸ್ತುಗಳ ಪರಿಚಯವಾಗುತ್ತದೆ. ಸರಕುಗಳ ವಿವರವನ್ನು ಹೀಗೆ ಕೊಡಬಹುದು. ಬತ್ತ, ಜೋಳ, ಅಕ್ಕಿ, ಎಳ್ಳು, ಹಾಲುವಳ್ಳಿ, ಅವರೆ, ಕಡಲೆ, ತೊಗರಿ, ಗೋಧಿ, ಉದ್ದು, ಜೀರಿಗೆ, ಸಾಸುವೆ, ಮೆಣಸು, ಅಲ್ಲಿ ಶುಂಠಿ, ಅರಿಸಿನ, ಯಾಲಕ್ಕಿ, ಮೆಂತೆ, ಸಬ್ಬಸಗಿ, ಕೊತ್ತಂಬರಿ, ಬೆಳ್ಳುಳ್ಳಿ, ಬಜೆ, ಭದ್ರಮುಸ್ತೆ ಇಂಗು, ಹತ್ತಿ, ಹಂಜಿನೂಲು, ಸೀರೆಪಟ್ಟೆ, ಪಳಿವಟ್ಟ, ಪಟ್ಟಸೂತ್ರ ಬಟ್ಟೆ, ಪಂಚವಳಿಗೆ, ಸೆಣಬು, ಕಂಬಳಿ, ಹುಲಿದೊಗಲು, ವೀಳ್ಯದೆಲೆ ಅಡಕೆ, ಸುಣ್ಣ, ಭದ್ರಹಸ್ತಿ, ಜಾತಶ್ವ ಇಂದ್ರನೀಲ, ಪದ್ಮರಾಗ, ಪವಳ, ಮರಕಕಂ, ಕರ್ತೋತನ, ವಟ್ಟ, ಚಿನ್ನ, ತವರು, ಬೆಲ್ಲ, ಸಕ್ಕರೆ, ಉಪ್ಪು, ಎಣ್ಣೆ, ತುಪ್ಪ, ಲವಂಗ, ಅಗರು, ಚಂದನ, ಕುಂಕುಮ ಮಲೆಗಜ ಕರ್ಪೂರ, ಕಸ್ತೂರಿ, ದವನಾ, ಬಳೆಕಾಡಿಗೆ (ತಾಳೆ) ಓಲೆಕಾಯಿ ಪಲ್ಯ, ಬಾಳೆಹಣ್ಣು, ತೆಂಗಿನಕಾಯಿ, ಎಲಿವಾದ್ರಕಾಯಿ, ನೆಲ್ಲಿಕಾಯಿ, ಹೂವು, ಹೂಮಾಲೆ, ಕಬ್ಬು, ಹಿಪ್ಪಲಿ, ಶಂಖ, ಕಾಷ್ಠ, ಅಂಗು, ನಾರುಬೇರು, ಮೊರ, ಕುದುರೆ, ಎತ್ತು ಮುಂತಾದವು ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸರಕುಗಳಾಗಿವೆ. ಮೇಲಿನ ಪಟ್ಟಿಯನ್ನು ಪರಿಶೀಲಿಸಿದಾಗ ನಮಗೆ ಕೆಲವು ವಿವರಗಳು ದೊರೆಯುತ್ತವೆ. ವಿವಿಧ ರೀತಿಯ ವಸ್ತುಗಳು ಹೆಸರುಗಳು ಉಲ್ಲೇಖಗಳು ಲಭ್ಯವಾಗುತ್ತವೆ. ಬದಲಾಗುತ್ತಿರುವ ಸಮಾಜ ಮತ್ತು ಪರಿಸರದಲ್ಲಿ ಮರೆಯಾಗುತ್ತಲಿರುವ ಅನೇಕ ಸರಕು ಸಾಮಗ್ರಿಗಳನ್ನು ನೆನಪುಮಾಡಿಕೊಳ್ಳಲು ಸಹಾಯಕವಾಗುವುದಲ್ಲದೆ ನಿಸರ್ಗದಲ್ಲಿ ಅನೇಕ ರೀತಿಯ ಇಂತಹ ವಸ್ತುಗಳು ಕ್ರಮೇಣ ಕಡಿಮೆಯಾಗುತ್ತಿರುವುದನ್ನು ಕಾಣುತ್ತೇವೆ.

**ಶಾಸನಗಳಲ್ಲಿ ಕೃಷಿ ಉಪಕರಣಗಳ ಪ್ರಸ್ತಾಪ :** ಅಂದಿನ ಪ್ರಮುಖ ಕೃಷಿ ಉಪಕರಣಗಳೆಂದರೆ ಕುಂಟೆ (ಫಸಲಿನ ಮಧ್ಯೆ ಇರುವ ಕಳೆಯನ್ನು ತೆಗೆಯುವ ಉಪಕರಣ. ಇದರಲ್ಲಿ ಐದ್ಗೇಣಿನ ಗುಂಟಿ, ಕಿರಿಗುಂಟೆ, ಕೈಗುಂಟೆ, ತಲೆಗುಂಟೆ, ಬಾರುಗುಂಟೆ ಎಂದು ಕರೆಸಿಕೊಳ್ಳುತ್ತಿದ್ದ ವಿವಿಧ ರೀತಿಯ ಕುಂಟೆಗಳಿದ್ದವು), ಕುಡ (ಕುಂಟೆಗೆ ಜೋಡಿಸುವ ಕಬ್ಬಿಣದ ಪಟ್ಟಿ), ಕುಡುಗೋಲು (ಬಾಗಿದ, ಒಳ ಅಂಚಿನಲ್ಲಿ ಹರಿತವುಳ್ಳ ಕತ್ತಿ), ಕುದ್ರಕೆಳಿ (ನೇಗಿಲ ಉದ್ದ ಪಟ್ಟಿ ಮತ್ತು ನೇಗಿಲನ್ನು ಜೋಡಿಸುವ ಕೀಲು), ಕುಪ್ಪೆಚಕ್ಕೆ (ಹುಲ್ಲಿನ ಮೆದೆಯನ್ನು ತಟ್ಟುವುದಕ್ಕೆ ಬಳಸುವ ಮರದ ಸಾಧನ), ಕುಮ್ಮು (ಎತ್ತಿನ ಗಾಡಿಯ ಚಕ್ರದ ಮಧ್ಯಭಾಗದಲ್ಲಿರುವ ಗುಂಬ), ಕುರಡಿ (ಕೊಡಲಿ), ಕುರಪಿ (ಕಸ ಕೀಳಲು ಬಳಸುತ್ತಿದ್ದ ಚಿಕ್ಕ ಕತ್ತಿ), ಕುರ್ಗೊಂಬು (ಗೊಬ್ಬರ ತುಂಬಿಡುತ್ತಿದ್ದ ಒಂದು ಸಾಧನ), ಕೈತಲೆ (ತೆಂಗಿನ ಮರ ಹತ್ತುವವನು ಕೈಗಳಿಗೆ ಹಾಕಿಕೊಳ್ಳುತ್ತಿದ್ದ ಹಗ್ಗದ ಸಾಧನ), ಕೊಂಗ್ನಿ (ತೆಂಗಿನಕಾಯಿ ಕೀಳಲು ಬಳಸುವ ಉಪಕರಣಕ್ಕೆ ಜೋಡಿಸುವ ಕಬ್ಬಿಣದ ತುದಿ), ಕೊಂಗ್ನಿಕಟ್ಗೆ (ಕಣದಲ್ಲಿ ತೆನೆ ತಿರುವಿ ಹಾಕಲು ಬಳಸುವ ಸಾಧನ), ಕೊಟ್ಟ (ದನಗಳಿಗೆ ಔಷಧಿ ಕುಡಿಸಲು ಬಳಸುತ್ತಿದ್ದ ಸಾಧ), ಕೊಡ್ಡ (ನೆಲಸಮ ಮಾಡಲು ಬಳಸುವ ಹಲಗೆ), ಕೊಡ್ಲಿ (ಸೌದೆ ಸೀಳುವುದಕ್ಕೆ ಬಳಸುವ ಕಬ್ಬಿಣದ ಸಾಧನ ಇದನ್ನು ಕೊಡ್ಳಿ, ಗೊಡ್ಲಿ, ಕ್ವಡ್ಲಿ, ಚಿಕ್ಕದಾದುದಕ್ಕೆ ಪಿಚ್ಗೊಡ್ಲಿ, ಬಾಯಿಕೊಡ್ಲಿ, ಕೈಕೊಡಲಿ ಎಂದು ಅದರ ಆಕಾರಕ್ಕೆ ಅನುಗುಣವಾಗಿ ಕರೆಯುತ್ತಿದ್ದರು), ಅರ್ಗಿತ್ತಿ (ಬಿದಿರಿನಿಂದ ನಿರ್ಮಿಸಿದ್ದ ತೊಲೆ), ಅಟ್ಣೆ (ಬೆಳೆಯನ್ನು ಕಾಪಾಡಲು ಬೆಳೆಯ ಮಧ್ಯೆ ಹಾಕಿಕೊಳ್ಳುತ್ತಿದ್ದ ಮಂಚ), ಅಡ್ಡೆ (ನೀರು ಹಾಗೂ ಇನ್ನಿತರ ವಸ್ತುಗಳನ್ನು ತರಲು ಬಳಸುತ್ತಿದ್ದ ಉಪಕರಣ), ಅರ (ಕುಡುಗೋಲು ಮತ್ತಿತರ ವಸ್ತುಗಳನ್ನು ಮಸೆಯಲು ಬಳಸುವ ಉಪಕರಣ), ಉತ್ತರಾಣಿ ಕಟ್ಗೆ (ಕಣದಲ್ಲಿ ಧಾನ್ಯವನ್ನು ಸ್ವಚ್ಛ ಮಾಡಲು ಬಳಸುತ್ತಿದ್ದ ಕಡ್ಡಿ), ಉದ್ದಿಗಿ (ಕುಂಟೆ ಎಳೆಯಲು ಸಹಾಯವಾಗುವಂತೆ ಕುಂಟೆಗೆ ಜೋಡಿಸಿರುವ ಉದ್ದನೆಯ ಬೊಂಬಿನ ಕಟ್ಟಿಗೆ), ಉಪ್ಪಮಣೆ (ಬತ್ತದ ರಾಶಿ ಮಾಡಲು ಬಳಸುತ್ತಿದ್ದ ಸಾಧನ), ಉರ್ಗಪತ್ತಿ (ವೀಳೆದೆಲಗಳನ್ನು ಬಳ್ಳಿಯಿಂದ ಬೇರ್ಪಡಿಸಲು ಉಪಯೋಗಿಸುತ್ತಿದ್ದ ಸಾಧನ), ಉಳಿ (ಕಳೆತೆಗೆಯುವ ಸಾಧನ), ಉಳ್ಳ (ಹಂದಿಯನ್ನು ಹಿಡಿಯಲು ಬಳಸುವ ಸಾಧನ), ಎಣೆ (ಬತ್ತದ ಹುಲ್ಲು ತುಳಿಸಿ ಹುಲ್ಲನ್ನು ಮುರಿಯಲು ಹಸುಗಳಿಂದ ಜೋಡಿಸಲ್ಪಟ್ಟ ಒಂದು ಸನ್ನಿವೇಶ), ಏಣಿ (ಎತ್ತರದ ಭಾಗಕ್ಕೆ ಹತ್ತಲು ಬಿದಿರಿನಿಂದ ನಿರ್ಮಿಸಿಕೊಂಡ ಸಾಧನ), ಏತ (ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ), ಒನ್ಕೆ (ತೆನೆ ಬಡಿಯಲು ಹಾಗೂ ಬತ್ತ, ರಾಗಿಗಳನ್ನು ಕುಟ್ಟಿ ಹಸನು ಮಾಡಲು ಬಳಸುತ್ತಿದ್ದ ಪ್ರಮುಖ ಸಾಧನ). ಕವಣೆ (ಕಲ್ಲನ್ನು ಇಟ್ಟು ತಿರುಗಿಸಿ ಬೀಸಿ ಹೊಡೆಯುವುದಕ್ಕಾಗಿ ಮಾಡಿಕೊಂಡಿದ್ದ ಸಾಧನ). ಕೊಪ್ಪರಿಗೆ (ಮಣ್ಣೇರಿಸಲು ಬಳಸುತ್ತಿದ್ದ ಒಂದು ಉಪಕರಣ), ಕೊಂಬ (ಧಾನ್ಯ ಸಂಗ್ರಹಿಸಲು ಬಳಸುವ ಸಾಧನ), ಕೊಳಗ (ಧಾನ್ಯ ಶೇಖರಿಸಿಡಲು ಬಳಸುವ ಕಡಾಯಿ ಪಾತ್ರೆ), ಕೊರೆ (ಹಾರೆ), ಕೊರಂಗ (ತಾಳೆ ಮರದ ನೀರು ಹಾಯಿಸುವ ಒಂದು ಸಾಧನ), ಕೊಳ್ವೆ (ಬೆಂಕಿ ಊದಲು ಉಪಯೋಗಿಸುವ ಉದ್ದನೆಯ ಕಬ್ಬಿಣದ ಕೊಳವೆ), ಗಡೆ (ಬಾವಿಯ ರಾಟೆ, ಗಾಲಿ), ಗಡಾರಿ (ಗಟ್ಟಿ ನೆಲವನ್ನು ಅಗೆಯಲು ಬಳಸುವ ಉಪಕರಣ ಗರಗಸ (ಮರ ಕೊಯ್ಯಲು ಬಳಸಲಾಗುತ್ತಿದ್ದ ಹಲ್ಲುಗಳುಳ್ಳ ಒಂದು ಬಗೆಯ ಉಪಕರಣ), ಗಾಣ (ಎಣ್ಣೆಯನ್ನು ಅಥವಾ ರಸವನ್ನು ತೆಗೆಯುವ ಸಾಧನ), ಗಾದಿಗೆ (ಈರುಳ್ಳಿ ಸಂಗ್ರಹಣೆಗಾಗಿ ಮಾಡುವ ಗೂಡು), ಗಾಡಿ (ಅಂದಿನ ಕೃಷಿಯ ಸಾಧನಗಳಲ್ಲಿ ಪ್ರಮುಖವಾದ ಸಾಧನ, ಇದನ್ನು ಎತ್ತು, ಕೋಣಗಳನ್ನು ಕಟ್ಟಿಕೊಂಡು ಎಳೆಸುತ್ತಿದ್ದರು), ಗುದ್ದಲಿ (ನೆಲ ಅಗೆಯಲು ಬಳಸುವ ಉಪಕರಣ, ಗುದ್ದಲಿ, ಕೋಲ್ಗುದ್ಲಿ, ಕೈಗುದ್ಲಿ, ದೊಡ್ಡಗುದ್ಲಿ, ಬಾಯ್ಗುದ್ಲಿ, ಶಿಗುದ್ಲು ಎಂದು ಆಕಾರಕ್ಕೆ ಹಾಗೂ ಉಪಯೋಗಕ್ಕೆ ತಕ್ಕಂತೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿದ್ದ ಒಂದು ಕೃಷಿ ಸಾಧನ), ಗುಮ್ಮಿ (ಗುಡಾಣ ಅಥವಾ ಧಾನ್ಯ ತುಂಬಿಡಲು ಬಳಸುವ ಉಪಕರಣ), ಚನಾ (ಕಲ್ಲು ಒಡೆಯಲು ಬಳಸುವ ಸಾಧನ), ಜಿಗ್ಳೆ (ಮೊಳೆ), ದೋಟಿ (ಎತ್ತರದ ಮರಗಳಿಂದ ಕಾಯಿ, ಹಣ್ಣು, ಸೊಪ್ಪನ್ನು ಕೊಯ್ಯಲು ಉಪಯೋಗಿಸುತ್ತಿದ್ದ ಸಾಧನ), ನೇಗಿಲು (ನೆಲವನ್ನು ಉಳಲು ಬಳಸುತ್ತಿದ್ದ ಪ್ರಮುಖ ಸಾಧನ, ನೇಗ್ಲ, ನೇಗ್ಳ, ನೇಗಿಲ ಕಟ್ಟಿಗೆ, ನೇಗ್ಲ ತೋಟಿ, ನೇಗ್ಲಾಮಣಿ, ನೇಗ್ಲಾಮೊನೆ ಮುಂತಾದ ಹೆಸರುಗಳಿಂದ ಕರೆದರೂ ಅದರೊಳಗೆ ಅದನ್ನು ಸಿದ್ಧಪಡಿಸಲು ಬೇಕಾಗುವ ಪ್ರತಿಯೊಂದು ವಸ್ತುಗಳಿಗೂ ವಿವಿಧ ಹೆಸರುಗಳಿರುತ್ತವೆ), ಬಲೆ (ಪ್ರಾಣಿಗಳನ್ನು ಹಿಡಿಯಲು ಉಪಯೋಗಿಸುತ್ತಿದ್ದದ್ದು), ಬಾಚಿ (ನೇಗಿಲು, ಗಾಡಿ ಮತ್ತಿತರ ವಸ್ತುಗಳನ್ನು ತಯಾರಿಸಲು ಬಳಸುವ ಸಾಧನ), ಮೆರೆ (ಹುಲ್ಲನ್ನು ಸರಿಸಲು ಬಳಸುವ ಉಪಕರಣ), ಮಟ್ಟಗೋಲು (ಹೆಂಟೆಯನ್ನು ಬಡಿಯಲು ಬಳಸುವ ಉಪಕರಣ), ಮೇಟಿ (ಕಣದ ಮಧ್ಯನೆಡುವ ಕಂಬ), ಮೊರ (ಧಾನ್ಯಗಳನ್ನು ತೂರಲು ಹಾಗೂ ಮನೆಯಲ್ಲಿ ಬಳಸುವ ಬಿದಿರಿನ ಸಾಧನ), ಕೊಂಗ (ಇದು ಧಾನ್ಯವನ್ನು ತೂರಲು ಹೆಚ್ಚಾಗಿ ಬಳಸುತ್ತಿದ್ದ ಒಂದು ಸಾಧನ), ಶಿಂಬೆ (ಬುಟ್ಟಿ, ಪಾತ್ರೆ ಮುಂತಾದವುಗಳ ತಳಕ್ಕೆ ಇಡುವ ಬಿದಿರನ ಅಥವಾ ಬಟ್ಟೆಯ ಸುರುಳಿ), ಹಗ್ಗ (ನೂಲಿನಿಂದ ನಾರಿನಿಂದ ಹೊಸೆದು ತಯಾರಿಸಿದ ಹುರಿ).

**ತೂಕ ಮತ್ತು ಅಳತೆ** : ತೂಕ ಮತ್ತು ಅಳತೆಗಳೆರಡೂ ಸಹ ಒಂದೇ ಅರ್ಥವನ್ನು ಸೂಚಿಸುವಂತಿವೆ. ಬೆಳೆಗಳನ್ನು ರೈತರು ಬೆಳೆದಾದ ಮೇಲೆ ಫಸಲನ್ನು ಅಳತೆ ಮಾಡುವುದು ಒಂದು ಪ್ರಮುಖವಾದ ಕೆಲಸವೆ. ಇಳುವರಿಯ ಆಧಾರದ ಮೇಲೆಯೇ ಭೂಮಿಯ ಫಲವತ್ತತೆಯನ್ನು ಗುರುತಿಸಲಾಗುತ್ತಿತ್ತು ಹಾಗೂ ಗದ್ದೆಗಳ ವಿಸ್ತಾರವನ್ನು ಸೂಚಿಸಲೂ ಸಹ ಸಾಧನಗಳಿದ್ದವು. ಪ್ರಮುಖವಾಗಿ ಬಳಕೆಯಲ್ಲಿದ್ದ ಅಳತೆ ಮತ್ತುತೂಕದ ವ್ಯವಸ್ಥೆ ಸಾಮಾನ್ಯ ಜನತೆಯಿಂದ ಪ್ರಾರಂಭವಾಗಿ ರಾಜಾಸ್ಥಾನದವರೆಗೆ ಏಕರೀತಿಯಲ್ಲಿತ್ತು.

ಅವುಗಳೆಂದರೆ ಅರ್ಪಾವು (ಒಂದು ಪಾವಿನ ಅರ್ಧಭಾಗ), ಅಗ್ರ (ದಾನ ಕೊಡುವಾಗ ನೀಡುವ ಆಹಾರದ ಒಂದು ಅಳತೆ), ಅಗ್ರ (ಒಂದು ಪಲ್ಲದ ತೂಕ), ಅಚ್ಚು (ಎಂಬತ್ತು ಗುಲಗಂಜಿಯ ತೂಕ), ಅಟವಿ (ಅರ್ಧ ಸೇರಿನ ಅಳತೆ), ಅಡ್ಡಿ (ಧಾನ್ಯಗಳಲ್ಲಿ ಅಳೆಯುವ ಮಾಪನ) ಅಡ್ಡಿ ಅಡ್ಡಿಡಿ (ಹದಿನಾರು ಸೇರುಗಳ ಮಾಪನ), ಇಕ್ಕಳ (ಕಾಳು ತುಂಬಿದ ಎರಡು ಚೀಲಗಳ ಮಾಪನ), ಆಳ್ಮೊಟ್ಟೆ (ಒಬ್ಬ ವ್ಯಕ್ತಿಯು ಹೊರಬಹುದಾದಷ್ಟು ಅಳತೆಯ ಚೀಲ), ಐಗಳ (ಕಾಳು ತುಂಬಿದ ಐದು ಕೊಳಗಗಳ ಮಾಪನ), ಕಂಡುಗ (ಇಪ್ಪತ್ತು ಕೊಳಗ ಧಾನ್ಯದ ಮಾಪನ), ಕಂಡಿ (ಹತ್ತು ಮಣದ ಅಳತೆ), ಕಮ್ಮಿ (ಭೂಮಿಯನ್ನು ಅಳತೆ ಮಾಡುವ ಒಂದು ಪ್ರಮಾಣ), ಕವಳಿಗೆ (ವೀಳೆದೆಲೆ ಲೆಕ್ಕ ಹಾಕಲು ಬಳಸುತ್ತಿದ್ದ ಮಾಪನ), ಕಳರುಗುಣಿಗೆ (ಭೂಮಿಯನ್ನು ಅಳೆಯಲು ಬಳಸುತ್ತಿದ್ದ ಒಂದು ಅಳತೆಯ ಕೋಲು), ಕಾಡಿ (ಬತ್ತದ ಅಳತೆಯ ಪ್ರಮಾಣ), ಕುಂಟೆ (ಒಂದು ಎಕರೆ ಜಮೀನಿನ ನಲವತ್ತನೇ ಒಂದು ಭಾಗ), ಕುಳ (ನಾಲ್ಕು ಬಳ್ಳಗಳ ಒಂದು ಅಳತೆ), ತೊಂಬ (ಸುಮಾರು ಇಪ್ಪತ್ತು ಚೀಲ ಕಾಳು ಹಿಡಿಯುವ ಬಿದಿರಿನಿಂದ ತಯಾರಿಸಿದ ಅಳತೆಯ ಪ್ರಮಾಣ), ಕೈ (ನೂರು ವೀಳೆದೆಲೆಗಳ ಕಟ್ಟು), ಕೊಟ್ಟ (ಇಪ್ಪತ್ತೊಂದು ಕೊಳಗ), ಕೊರೆ (ಅರ್ಧತುಂಬಿದ ದವಸದ ಚೀಲ ಅಥವಾ ಬಿದಿರಿನ ವಸ್ತುಗಳು), ಕೊಳಗ (ಧಾನ್ಯವನ್ನು ಅಳೆಯುವ ಸಾಧನ), ಗಜ (ಭೂಮಿಯನ್ನು ಅಳೆಯಲು ಬಳಸುತ್ತಿದ್ದ ಅಳತೆ ಪದ್ಧತಿ), ಗಳಿಗಿ (ಧಾನ್ಯ ಸಂಗ್ರಹಿಸಲು ಈಚಲು ಬರಲಿನಿಂದ ತಯಾರಿಸಿದ್ದ ಒಂದು ಸಾಧನ), ಗಾತ್ರ (ಒಂದು ಸಾವಿರ ವೀಳೆದೆಲೆಯ ಕಟ್ಟು), ಗುಲಿಕಲ್ಲು (ಜಮೀನುಗಳನ್ನು ಅಳತೆ ಮಾಡಿ ಎಲ್ಲೆಯನ್ನು ಸೂಚಿಸಲು ನೆಡುತ್ತಿದ್ದ ಕಲ್ಲು), ಗುಮ್ಮಿ (ಏಳರಿಂದ ಎಂಟು ಚೀಲ ಧಾನ್ಯ ಸಂಗ್ರಹಿಸುತ್ತಿದ್ದ ಮರದ ಪಾತ್ರೆ) ಬಿಟ್ಟಿ (ಒಂದು ನೂರು ವೀಳೆದೆಲೆಯ ಕಟ್ಟು), ಚಾರಿ (ಅಳತೆಯ ಗಡಿಗೆ) ಚಿಂಚಾಲು (ವಸ್ತುಗಳನ್ನು ತೂಕ ಮಾಡಲು ಬಳಸುತ್ತಿದ್ದ ತಕ್ಕಡಿ), ಚೀರಿ (ನೀರಾವರಿ ಭೂಮಿಯನ್ನು ಅಳೆಯಲು ಬಳಸುತ್ತಿದ್ದ ಅಳತೆಯ ಮಾಪನ), ತೂಗೇಕೋಲು (ದವಸ ಧಾನ್ಯಗಳನ್ನು ತೂಕ ಮಾಡಲು ಬಳಸುತ್ತಿದ್ದ ತಕ್ಕಡಿ), ನಗ (ಹತ್ತಿಯ ಗಾತ್ರವನ್ನು ಅಳೆಯುವ ಒಂದು ಮಾನದಂಡ), ಪಡ್ಲ (ರಾಶಿಯ ಗಾತ್ರವನ್ನು ಹೇಳಲು ಬಳಸುವ ಮಾಪನ), ಪತ್ತಾರಿ (ತೆರಿಗೆ ಹಣವನ್ನು ಪಡೆಯುವವನು ಹಾಗೂ ಸಾರ್ವಜನಿಕ ದವಸಗಳನ್ನು ಅಳತೆ ಮಾಡುವವನು), ಪಲ್ಲ (ನೂರು ಸೇರು ಅಳತೆಯ ಪ್ರಮಾಣ), ಪಾವು (ಅಳತೆಯ ಸೇರಿನ ನಾಲ್ಕನೆಯ ಒಂದು ಭಾಗ), ಅರೆ ಪಾವು (ಸೇರಿನ ಎಂಟನೆಯ ಒಂದು ಭಾಗ), ಬಕ್ಕ (ನಲವತ್ತೆಂಟು ಸೇರಿನ ಅಳತೆಯ ಪ್ರಮಾಣ), ಬಳ್ಳ (ಎರಡು ಸೇರು ಅಳತೆ), ಮಣ (ತೂಕದ ಒಂದು ಪ್ರಮಾಣ ಸಾಮಾನ್ಯವಾಗಿ ಕಟ್ಟಿಗೆ ಹುಣಸೆಹಣ್ಣು ತೂಗಲು ಈ ಪದ ಬಳಸುತ್ತಿದ್ದರು), ಮಕ್ಕರಿ (ಹತ್ತು ಹನ್ನೆರಡು ಸೇರು ಹಿಡಿಸುವಷ್ಟು ದೊಡ್ಡದಾದ ಬಿದಿರಿನ ಪುಟ್ಟಿ), ಮಾನ (ಎಣ್ಣೆಯನ್ನು ಅಳೆಯುತ್ತಿದ್ದ ಅಳತೆಯ ಮಾಪನ), ಮಾರು (ಮನುಷ್ಯ ತನ್ನ ಎರಡು ಕೈಗಳನ್ನು ಚಾಚಿದಾಗ ಅವನ ಎರಡು ಕೈಬೆರಳುಗಳುವರೆಗಿನ ಅಂತರ, ಮೊಳ (ಮೊಣಕೈ ಗಂಟಿನಿಂದ ನಡುಬೆರಳಿನ ತುದಿಯವರೆಗಿನ ಅಳತೆ), ಲಿಂಗಮುದ್ರೆ ಕಲ್ಲು (ಹೊಲದ ಸೀಮೆಯನ್ನು ಗುರುತಿಸಲು ನೆಡುತ್ತಿದ್ದ ಕಲ್ಲು), ಸೇರು (ಕೊಳಗದ ನಾಲ್ಕನೇ ಒಂದು ಭಾಗ), ಸೊಲ್ಗೆ (ಅರ್ಧಸೇರಿನ ಅಳತೆ), ಹೆಡಿಗೆ (ಬಿದಿರಿನಿಂದ ಹೆಣೆದ ಅಳತೆಯ ಸಾಧನ).

ರಾಜಮಹಾರಾಜರು ಒಂದು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ಕೃಷಿ ಪ್ರಾಮುಖ್ಯತೆ ಎಷ್ಟಿತ್ತೆಂಬುದನ್ನು ಅರಿತಿದ್ದರು. ದಾನ ದತ್ತಿ ನೀಡುವಾಗ ಭೂಮಿಗೆ ಆದ್ಯತೆ ನೀಡುತ್ತಿದ್ದರು. ಈ ಹಿನ್ನೆಲೆಯಲ್ಲಿಯೇ ಕಾಡು ಕಡಿದು ಬೇಸಾಯ ಮಾಡಲು ಪ್ರೋತ್ಸಾಹಿಸುತ್ತಿದ್ದರು. ನೀರಾವರಿ ಸೌಲಭ್ಯ, ತೆರಿಗೆ ವಿನಾಯಿತಿ - ಹೀಗೆ ಹಲವು ರೀತಿಗಳಲ್ಲಿ ಕೃಷಿಗೆ ಪೂರಕವಾಗಿ ಸ್ಪಂದಿಸುತ್ತಿದ್ದ ವಿಚಾರಗಳು ಶಾಸನಗಳಲ್ಲಿ ಸಮೃದ್ಧವಾಗಿ ಲಭಿಸುತ್ತವೆ.

**ಗ್ರಂಥ ಋಣ**


ಗಂಗೋತ್ರಿ : ಕುವೆಂಪು ಅಭಿನಂದನಾ ಗ್ರಂಥ, ಮುನ್ನುಡಿ, ಪು. 1

ಎಪಿಗ್ರಾಫಿಯ ಕರ್ನಾಟಕ : ಸಂ. ದಾವಣಗೆರೆ 35

ದಕ್ಷಿಣ ಭಾರತದ ಶಾಸನಗಳು : ಶಾಸನ ಸಂಖ್ಯೆ 301

ಎಪಿಗ್ರಾಫಿಯಾ ಇಂಡಿಕಾ ಸಂ. 4, (1947-48) ಪುಟ.1

ಎಪಿಗ್ರಾಫಿಯ ಕರ್ನಾಟಕ: ಸಂ.2. ಶಾಸನ ಸಂಖ್ಯೆ. 1

ದಕ್ಷಿಣ ಭಾರತದ ಶಾಸನಗಳು: ಸಂ. 9

ಎಪಿಗ್ರಾಫಿಯ ಕರ್ನಾಟಕ: ಸಂ. 8. ಶಾ.ಸ. 99, 100, 114, 277

ಎಚ್.ಆರ್.ರಘುನಾಥಭಟ್. ಕರ್ನಾಟಕ ಶಾಸನ ಕಲೆ, ಪು. 82

ದಕ್ಷಿಣ ಭಾರತದ ಶಾಸನಗಳು, ಸಂ. 9

ಎಪಿಗ್ರಾಫಿಯ ಇಂಡಿಕಾ: ಸಂ.5. ಜೆ.ಎಫ್.ಫ್ಲೀಟ್

ಎ.ಎಂ.ಅಣ್ಣಿಗೇರಿ, ಆರ್.ಶೇಷಶಾಸ್ತ್ರಿ: ಶಾಸನ - ಸಂಗ್ರಹ ಪುಟ : 102

ಎಪಿಗ್ರಾಫಿಯ ಕರ್ನಾಟಿಕ: ಸಂ.10 ಮುಳಬಾಗಿಲು 172

ಬಳ್ಳಾರಿ ಜಿಲ್ಲೆಯ ಶಾಸನಗಳು, ಕೆ.ಜೆ. ನಾಗಯ್ಯ, ಪು. 39

ಶ್ರವಣಬೆಳಗೊಳದ ಶಾಸನಗಳು, ಜಿ. ಬ್ರಹ್ಮಪ್ಪ ಪು. 117

ಶಾಸನಗಳಲ್ಲಿ ಕರ್ನಾಟಕದ ವರ್ತಕರು.


*ಎ.ಆರ್.ಬಿ*

**ಶಿವಮೊಗ್ಗ ಜಿಲ್ಲೆಯ ಕೃಷಿ** ಕರ್ನಾಟಕ ರಾಜ್ಯದ ಮೂವತ್ತು ಜಿಲ್ಲೆಗಳ ಪೈಕಿ ಒಂದು. ಶಿವಮೊಗ್ಗ ಜಿಲ್ಲೆಯು ರಾಜ್ಯದ ವಾಯವ್ಯ ಭಾಗದಲ್ಲಿದೆ. ಪೂರ್ವಕ್ಕೆ ಚಿತ್ರದುರ್ಗ, ದಕ್ಷಿಣಕ್ಕೆ ಕಸೂರು, ಉತ್ತರದಲ್ಲಿ ಧಾರವಾಡ, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಜಿಲ್ಲೆಗಳನ್ನು ಗಡಿರೇಖೆಯಾಗಿ ಹೊಂದಿದೆ. ಭದ್ರಾವತಿ, ಹೊಸನಗರ, ಸಾಗರ, ಶಿಕಾರಿಪುರ, ಶಿವಮೊಗ್ಗ, ಸೊರಬ ಹಾಗೂ ತೀರ್ಥಹಳ್ಳಿ ಒಟ್ಟು 7 ತಾಲ್ಲೂಕುಗಳು ಜಿಲ್ಲೆಯಲ್ಲಿವೆ.

**ಮೇಲ್ಮೈಲಕ್ಷಣ :** ಜಿಲ್ಲೆಯು ಸಮುದ್ರ ಮಟ್ಟದಿಂದ ಗರಿಷ್ಠ 2100 ಅಡಿ ಮತ್ತು ಕನಿಷ್ಠ 1900 ಅಡಿ ಎತ್ತರದಲ್ಲಿದೆ. ಜಿಲ್ಲೆಯ ಹೆಚ್ಚಿನ

ಭಾಗವನ್ನು ಮಲೆನಾಡು ಆವರಿಸಿದೆ. ಮೂಡಲ ದಿಕ್ಕು ಬಯಲು ಸೀಮೆಯಾಗಿದೆ. ಮಲೆನಾಡು ಅತ್ಯಂತ ಸುಂದರವಾದ ವನಪ್ರದೇಶವಾಗಿದೆ. ಹಾಗೂ ಚನ್ನಗಿರಿ ತಾಲ್ಲೂಕಿನ ಸೂಳೆಕೆರ ದಕ್ಷಿಣ ಭಾರತದಲ್ಲೇ ಎರಡನೆಯ ಅತಿ ದೊಡ್ಡ ಜಲತಾಣ.

**ಜಿಲ್ಲೆಯ ವಿಸ್ತೀರ್ಣ :** ಜಿಲ್ಲೆಯು ಒಟ್ಟು 8477 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 4.30 ರಷ್ಟಿದೆ. ಜಿಲ್ಲೆಯಲ್ಲಿ 7 ತಾಲ್ಲೂಕುಗಳು 14 ನಾಡ ಕಛೇರಿಗಳು, 826 ಗ್ರಾಮಲೆಕ್ಕಿಗ ವೃತ್ತಗಳು, 40, ಹೋಬಳಿಗಳು 260 ಗ್ರಾಮಪಂಚಾಯಿತಿಗಳು, 9 ನಗರ ಪ್ರದೇಶಗಳು, 1443 ಗ್ರಾಮಗಳು, 3 ನಗರ ಸಭೆ, 4 ಪುರಸಭೆ, 1. ಪಟ್ಟಣ ಪಂಚಾಯಿತಿ ಹಾಗೂ 1 ತಾಲ್ಲೂಕು ಪಂಚಾಯಿತಿ ಕೇಂದ್ರಗಳನ್ನು ಹೊಂದಿದ್ದು, ಸರ್ಕಾರದ, 4. ಆಡಳಿತ ವಿಭಾಗಗಳು ಬೆಂಗಳೂರು ವಿಭಾಗಕ್ಕೆ ಸೇರುತ್ತವೆ.


**ಹವಾಗುಣ :** ಬೆಂಗಳೂರಿಗಿಂತ ಕಡಿಮೆ ಉಷ್ಣತೆ ಹೊಂದಿದ್ದು, ಆಹ್ಲಾದಕರ ವಾತಾವರಣವಿರುವ ಪ್ರದೇಶವಿದು. ಋತುಗಳಿಗನುಗುಣವಾಗಿ ಈ ಭಾಗದಲ್ಲಿ ಜೂನ್-ಸೆಪ್ಟಂಬರ್ ಅವಧಿ ಮುಂಗಾರು ಮಳೆಗಾಲ, ಅಕ್ಟೋಬರ್-ನವೆಂಬರ್ ಹಿಂಗಾರು, ಎಂದು ವಿಂಗಡಿಸಬಹುದು. ವರ್ಷದಲ್ಲಿ ಆರು ತಿಂಗಳು ಕಾಲ ಬಿಸಿಲಿನ ತಾಪತಟ್ಟದೆ ಮೋಡ ಮುಸುಕಿದ ವಾತಾವರಣ ಇರುತ್ತದೆ. ಮುಂಗಾರು ಸಮಯದಲ್ಲಿ ಏಪ್ರಿಲ್-ಜೂನ್ ಅವಧಿಯಲ್ಲಿ ಗುಡುಗು ಮಿಂಚಿನಿಂದ ಕೂಡಿದ ಮಳೆ ಬೀಳುತ್ತದೆ.

**ಮಳೆ :** ಜಿಲ್ಲೆಯಲ್ಲಿ ಪ್ರತಿ ವರ್ಷ ಸರಾಸರಿ 57 ಇಂಚು ಮಳೆ ಬೀಳುತ್ತದೆ. ಜೂನ್, ಜುಲೈ, ಆಗಸ್ಟ್‌ಗಳಲ್ಲೇ ಸುಮಾರು ಎಂಬತ್ತು ದಿನಗಳ ಕಾಲ ಹೆಚ್ಚಿನ ಮಳೆ ಬೀಳುತ್ತದೆ. ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಮಳೆಯ ಪ್ರಮಾಣ ಕಡಿಮೆ ಇರುತ್ತದೆ. (0.79 ಇಂಚು). ।

ಜಿಲ್ಲೆಯ ಪಶ್ಚಿಮದ ಆಗುಂಬೆಯಲ್ಲಿ ವಾರ್ಷಿಕ ಸರಾಸರಿ ಮಳೆ 37 ಇಂಚು ಪೂರ್ವದ ಹೊನ್ನಳ್ಳಿಯಲ್ಲಿ ಅದು 24 ಇಂಚು, ತೀರ್ಥಹಳ್ಳಿ ಸಾಗರ, ನಗರಗಳಲ್ಲಿ ವಾರ್ಷಿಕ ಸು. 100 ಇಂಚುಗಿಂತ ಹೆಚ್ಚು ಮಳೆಯಾಗುತ್ತದೆ. ಆಗುಂಬೆಯಲ್ಲಿ ಒಂದೇ ದಿನ 22 ಇಂಚು ಮಳೆ ಬೀಳುತ್ತದೆ. 2010ರಲ್ಲಿ ವಾರ್ಷಿಕ ಮಳೆ, 12742.0 ಇದ್ದು ಬಿದ್ದ ಮಳೆ 13937.9 ಆಗಿದೆ.

**ಕಾಡುಗಳು :** ಜಿಲ್ಲೆಯಲ್ಲಿ 276855 ಹೆ. ಪ್ರದೇಶ ಅರಣ್ಯವಿದ್ದು, ಶ್ರೀಗಂಧ ಹೊನ್ನೆ, ಬೀಟೆ, ಬೇವು, ಆಲ, ಹತ್ತಿ, ತೇಗ ಮರಗಳು ಇನ್ನಿತರ ಬೆಲೆಬಾಳುವ ಮರಗಳು ಇಲ್ಲಿ ಬೆಳೆಯುತ್ತವೆ. ಅಲ್ಲದೆ ವ್ಯಾಪಕವಾಗಿ ಬಿದಿರಿನ ತೋಪುಗಳು ಬೆಳೆದಿರುತ್ತವೆ. ತೀರ್ಥಹಳ್ಳಿ ತಾಲೂಕಿನಲ್ಲಿ ಅರಣ್ಯಪ್ರದೇಶ ವಿಸ್ತಾರವಾಗಿದೆ. ಅಲ್ಲದೆ ಶಿಕಾರಿಪುರ, ಕುಂಪಿಗಳ ಮಧ್ಯ ದಟ್ಟವಾದ ಅರಣ್ಯವಿದೆ.

**ನೀರಾವರಿ :** ಶಿವಮೊಗ್ಗ ಜಿಲ್ಲೆ ರಾಜ್ಯದಲ್ಲೇ ಹೆಚ್ಚು ವಿಸ್ತಾರವಾದ ನೀರಾವರಿ ಪ್ರದೇಶವುಳ್ಳಂಥದ್ದು. ವರ್ಷದ ಹೆಚ್ಚು ಕಾಲ ಈ ಪ್ರದೇಶದಲ್ಲಿ ಮಳೆಯಾಗುವುದರಿಂದ ನೀರಾವರಿ ವ್ಯವಸ್ಥೆಯಿಂದ ಮಾತ್ರವಲ್ಲದೆ ಮಳೆ ನೀರು ಮತ್ತು ನೂರಾರು ಕೆರೆಗಳು ಮಲೆನಾಡಿನ ಬಹುತೇಕ ಭಾಗದ ಕೃಷಿಗೆ ನೀರೊದಗಿಸುತ್ತದೆ. ಲಕ್ಕವಳ್ಳಿ ಬಳಿ ಭದ್ರಾನದಿಗೆ ಅಡ್ಡಲಾಗಿ ಕಟ್ಟಿರುವ ಭದ್ರಾದಂಡೆ ಇರುವುದು ಚಿಕ್ಕಮಗಳೂರು ಜಿಲ್ಲೆಯಾದರೂ ಅದರ ಕೊಡುಗೆ ಶಿವಮೊಗ್ಗ ಜಿಲ್ಲೆಗೆ ಅಪಾರ. ಸುಮಾರು 50,000 ಹೆ. ಭೂಪ್ರದೇಶಕ್ಕೆ ಇದು ನೀರನ್ನೊದಗಿಸಿದೆ. ಶಿವಮೊಗ್ಗ ತಾಲ್ಲೂಕಿನ ಗಾಜನೂರಿನ ಬಳಿ ಕಟ್ಟಿರುವ ತುಂಗಾನದಿ ಅಣೆಕಟ್ಟು ಸಹ ಮುಖ್ಯ ಜಲಮೂಲವಾಗಿದ್ದು ಸುಮಾರು 9000 ಹೆ. ಪ್ರದೇಶಕ್ಕೆ ನೀರೊದಗಿಸುತ್ತಿದೆ. ಉಳಿದಂತೆ ಕುಮುದ್ವತಿ ನದಿ ಜಲಾಶಯ ಸಹ ಈ ಭಾಗದ ಕೃಷಿಗೆ ನೀರೊದಗಿಸುವಲ್ಲಿ



ಸಹಕಾರಿಯಾಗಿದೆ. ಅಂಬಿಗೊಳ ಜಲಾಶಯ ಮತ್ತು ಗೊಂಡಿ ಅಣೆಕಟ್ಟುಗಳಿಂದಲೂ ಕೃಷಿಗೆ ನೀರು ದೊರೆಯುತ್ತದೆ.

ಜಿಲ್ಲೆಯಲ್ಲಿ ನೀರಾವರಿ ಕ್ಷೇತ್ರಕ್ಕೆ 174739 ಹೆ. ಪ್ರದೇಶ ಯೋಗ್ಯವಾಗಿದ್ದು, ನಿವ್ವಳ ನೀರಾವರಿ ಆದಾಯವು 174739 ಹೆ.ವಿ.ದಲ್ಲಿದೆ. ಇಲ್ಲಿ 7797 ಚ.ಕೆರೆಗಳು, 74 ಮೈಲಿ ಉದ್ದದ ಕಾಲುವೆಗಳಿವೆ. ಇವು 9222 ಎಕರೆ ಜಮೀನಿಗೆ ನೀರುಣಿಸುತ್ತವೆ. ಚನ್ನಗಿರಿ ತಾಲ್ಲೂಕಿನ ಸೂಳೆಗೆರೆ ಕಾಲುವೆ 33 ಮೈಲಿಗಿಂತ ಹೆಚ್ಚು ಉದ್ದ, ಸೋಗಿಲ್ ಕಾಲುವೆ 5 ಮೈಲಿ ಉದ್ದ, ಶಿಕಾರಿಪುರ ತಾಲ್ಲೂಕಿನ ಸಾಲೂರು ಕೆರೆ ಸು. 14 ಮೈಲೂ ಉದ್ದವಿದೆ. 2010-11ರ ಪ್ರಕಾರ ಕಾಲುವೆಗಳಿಂದ ಒಟ್ಟು 57452 ಹೆ. ನೀರಾವರಿಯಾದ ವಿಸ್ತೀರ್ಣದಲ್ಲಿ 44733 ಹೆ. ನಿವ್ವಳ ನೀರಾವರಿ ವಿಸ್ತೀರ್ಣ, ಕೆರೆಗಳಿಂದ ಒಟ್ಟು 62732 ಹೆ. ವಿ.ದಲ್ಲಿ ನಿವ್ವಳ ನೀರಾವರಿ ವಿಸ್ತೀರ್ಣ 56669 ಹೆ. ವಿ. ಬಾವಿಗಳಿಂದ ಒಟ್ಟು 6607 ಹೆ.ವಿ. ದಲ್ಲಿ ನಿವ್ವಳ ನೀರಾವರಿ ವಿಸ್ತೀರ್ಣ 5334 ಹೆ.ವಿ. ಕೊಳವೆ ಬಾವಿಯಿಂದ ಒಟ್ಟು ನೀರಾವರಿಯಾದ ಪ್ರದೇಶ 36753 ಹೆ. 25576 ಹೆ. ನಿವ್ವಳ ನೀರಾವರಿಯಾದ ಪ್ರದೇಶ. ಏತ ನೀರಾವರಿ ಒಟ್ಟು ನೀರಾವರಿಯಾದ ಪ್ರದೇಶ 5629 ಹೆ. ಪ್ರದೇಶದಲ್ಲಿ ಹೆ. ಪ್ರದೇಶದಲ್ಲಿ 4851 ನಿವ್ವಳ ನೀರಾವರಿಯಾದ ಪ್ರದೇಶ.

**ಕೃಷಿ ಭೂಮಿ ವಿಸ್ತೀರ್ಣ**

ಜಿಲ್ಲೆಯು ವಾರ್ಷಿಕವಾಗಿ ಸಾಧಾರಣ ಮಳೆಯನ್ನು ಪಡೆಯುವ ಜಿಲ್ಲೆಯಾದ್ದರಿಂದ ಕೃಷಿಗೆ ಯೋಗ್ಯವಾದ ಪ್ರದೇಶವನ್ನು ಹೊಂದಿದೆ. ಇಲ್ಲಿ ಸುಮಾರು ಶೇ. 75ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವುದರಿಂದ ಕೃಷಿಯನ್ನು ಅವಲಂಬಿಸಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 217740 ಕೃಷಿ ಭೂ ಹಿಡುವಳಿದಾರರಿದ್ದು ಸುಮಾರು 847784.00 ಹೆ. ಭೌಗೋಳಿಕ ಪ್ರದೇಶ ಇದ್ದು ಇದರಲ್ಲಿ 228368 ರಷ್ಟು ಹೆ. ಪ್ರದೇಶ ನಿವ್ವಳ ಸಾಗುವಳಿಯಾದ ಪ್ರದೇಶವಾಗಿದೆ.

**ಅ) ಭೂಹಿಡುವಳಿದಾರರು :** ಜಿಲ್ಲೆಯಲ್ಲಿ 260961 ಹೆ. ಭೂಮಿಯನ್ನು ಹೊಂದಿರುವ 26,405 ಹಿಡುವಳಿದಾರರಿದ್ದಾರೆ. 2010-11ರ ಅಂಕಿ ಅಂಶದ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿದ ಅತಿಸಣ್ಣ ಹಿಡುವಳಿದಾರರು 12829.ರಷ್ಟು ಇದ್ದು, 6980 ಹೆ. ವಿಸ್ತೀರ್ಣ, 5538 ರಷ್ಟು ಸಣ್ಣ ಭೂಹಿಡುವಳಿದಾರರಿದ್ದು 7679 ಹೆ. ವಿಸ್ತೀರ್ಣ, 1572 ಅರೆ ಮಧ್ಯಮ ಭೂಹಿಡುವಳಿದಾರರು 4053 ಹೆ. ವಿಸ್ತೀರ್ಣ 286 ಮಧ್ಯಮ ಭೂಹಿಡುವಳಿದಾರರು 1531 ಹೆ. ವಿಸ್ತೀರ್ಣ 16 ದೊಡ್ಡ ಭೂ ಹಿಡುವಳಿದಾರರು 190 ಹೆ. ವಿಸ್ತೀರ್ಣ ಹೊಂದಿದ್ದಾರೆ.

ಪರಿಶಿಷ್ಟ ಪಂಗಡಕ್ಕೆ ಸೇರಿದ 2681 ರಷ್ಟು ಅತಿಸಣ್ಣ ಹಿಡುವಳಿದಾರರಿದ್ದು 1472 ಹೆ. ವಿಸ್ತೀರ್ಣವನ್ನು, 1358 ರಷ್ಟು ಸಣ್ಣ ಹಿಡುವಳಿದಾರರಿದ್ದು, 1892 ಹೆ. ವಿಸ್ತೀರ್ಣ, 927, ಅರೆ ಮಧ್ಯಮ ಭೂಹಿಡುವಳಿದಾರರಿದ್ದು 1173 ಹೆ.ವಿ. ಹೊಂದಿದ್ದು, 104 ಮಧ್ಯಮ ಭೂ ಹಿಡುವಳಿದಾರರಿದ್ದು 575 ಹೆ. ವಿಸ್ತೀರ್ಣ, 9 ದೊಡ್ಡ ಹಿಡುವಳಿದಾರರಿದ್ದು 117 ಹೆ. ವಿಸ್ತೀರ್ಣವನ್ನು ಹೊಂದಿದ್ದಾರೆ. ಇತರೆ ವರ್ಗಕ್ಕೆ ಸೇರಿದ 98491 ಅತಿಸಣ್ಣ ಭೂಹಿಡವಳಿದಾರರು 51149 ಹೆ. ವಿಸ್ತೀರ್ಣ, 47097 ಸಣ್ಣ ಹಿಡುವಳಿದಾರರು 65944. ಹೆ. ವಿಸ್ತೀರ್ಣ, 22222 ಅರೆ ಮಧ್ಯಮ ಭೂಹಿಡುವಳಿದಾರರು 59778 ಹೆ. ವಿಸ್ತೀರ್ಣ, 7749 ಮಧ್ಯಮ ಭೂಹಿಡುವಳಿದಾರರು 44059 ಹೆ. ವಿಸ್ತೀರ್ಣ, 907 ದೊಡ್ಡ ಭೂಹಿಡುವಳಿದಾರರು 13537 ಹೆ. ವಿಸ್ತೀರ್ಣವನ್ನು ಹೊಂದಿದ್ದಾರೆ.

**ಆ) ಭೂ ಉಪಯೋಗ :** ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 847784 ಹೆ. ವಿಸ್ತೀರ್ಣದಲ್ಲಿ 2010-11ರ ವಾರ್ಷಿಕ ಬೆಳೆಗಳ ವರದಿಗಳ ಪ್ರಕಾರ 276855 ಹೆ. ವಿ. ಅರಣ್ಯ ಪ್ರದೇಶಕ್ಕೆ, 102020 ಹೆ. ಪ್ರದೇಶ ಭೂ ಬಳಕೆಗೆ ಲಭ್ಯವಿಲ್ಲದಿರುವ ಪ್ರದೇಶ, 206642 ಹೆ. ಪ್ರದೇಶ ಸಾಗುವಳಿ ಮಾಡದಿರುವ ಇತರೆ ಭೂಮಿ, 33899 ಹೆ. ಪ್ರದೇಶ ಬೀಳುಭೂಮಿ, ಹಾಗೂ 228368 ಹೆ. ಪ್ರ ನಿವ್ವಳ ಸಾಗುವಳಿಯಾದ ಪ್ರದೇಶವಾಗಿದೆ.

**ಕೃಷಿಗೆ :** 2010-11ರ ಪ್ರಕಾರ ಭದ್ರಾವತಿ 69010 ಹೆ. ಹೊಸನಗರ, 142279 ಹೆ. ಸಾಗರ 194009 ಹೆ. ಶಿಕಾರಿಪುರ 90984 ಹೆ. ಶಿವಮೊಗ್ಗ 111358 ಹೆ. ಸೊರಬ 114767 ಹೆ. ತೀರ್ಥಹಳ್ಳಿ 125377 ಹೆ. ವಿಸ್ತೀರ್ಣ ಹೊಂದಿದ್ದು ಒಟ್ಟು 847784 ಹೆ. ಗಳ ಭೂಮಿಯ ಬಿತ್ತನೆ ಬೆಳೆಗೆ ಯೋಗ್ಯವಾಗಿತ್ತು.

2010-11ರ ಬಿತ್ತನೆಯಾದ ಪ್ರದೇಶ 267221 ಹೆ. ವಿಸ್ತೀರ್ಣ ಅರಣ್ಯಕ್ಕೆ 276855, ಹೆ. ಪ್ರ. ನೀರಾವರಿ ಕ್ಷೇತ್ರಕ್ಕೆ 141731 ಹೆ. ಪ್ರದೇಶ, ವೃಕ್ಷ ತೋಪುಗಳು 26868 ಹೆ. ಪ್ರದೇಶ, ಸಾಗುವಳಿಗೆ ಯೋಗ್ಯವಾದ ಬಂಜರು 16311 ಹೆ. ಪ್ರದೇಶ, ಖಾಯಂ ಗೋಮಾಳಕ್ಕೆ 163463 ಹೆ. ಪ್ರದೇಶ ಬೀಳುಭೂಮಿ 33899 ಹೆ. ಪ್ರದೇಶ ಲಭ್ಯವಾಗಿತ್ತು.

ಒಟ್ಟು ಕೃಷಿಗೆ ಉಪಯೋಗಿಸಿರುವ ಭೂಮಿಯನ್ನು ಗಮನಿಸಿದರೆ ಕೃಷಿಯೇತರ ಚಟುವಟಿಕೆ ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ.

**ಮಣ್ಣು :** ಜಿಲ್ಲೆಯ ಪಶ್ಚಿಮ ಭಾಗದ ತಾಲೂಕುಗಳಲ್ಲಿ ಜಂಬಿಟ್ಟಿಗೆ ಮಣ್ಣು ಸಸ್ಯಗಳ ಬೆಳವಣಿಗೆಗೆ ಪೂರಕವಲ್ಲ. ಬೆಟ್ಟ ಕಣಿವೆಗಳಲ್ಲಿಯ ಮಣ್ಣು ಮೃದುವಾಗಿದ್ದು ಮರಳು ಮಿಶ್ರಿತವಾಗಿದೆ. ವನಪ್ರದೇಶದಲ್ಲಿ ಆವೆ ಮಿಶ್ರಿತವಾಗಿದ್ದು, ಫಲಭರಿತವಾದುದ್ದಾಗಿದೆ. ಶಿವಮೊಗ್ಗ, ಚನ್ನಗಿರಿ ತಾಲ್ಲೂಕುಗಳಲ್ಲಿ ಕಪ್ಪು ಮಣ್ಣಿದ್ದು ಇದು ಹತ್ತಿ, ಕಬ್ಬು ಬೆಳೆಗೆ ಯೋಗ್ಯವಾದುದ್ದಾಗಿದೆ. ಸೊರಬ, ಸಾಗರ ತಾಲ್ಲೂಕುಗಳಲ್ಲಿ ಜಂಬಿಟ್ಟಿಗೆ ಮಣ್ಣಿನಿಂದ ಕೂಡಿದ್ದು, ನೀರನ್ನು ಹೆಚ್ಚಾಗಿ ಹೀರುವಂತದಾಗಿದೆ. ಇದು ಅಡಕೆ, ಮೆಣಸು, ಏಲಕ್ಕಿ ಬೆಳೆಗೆ ಉಪಯುಕ್ತವಾಗಿದೆ. ಇನ್ನಿತರ ತಾಲೂಕುಗಳಲ್ಲಿ ಹಲವಾರು ವಿಧದ ಮಣ್ಣುಗಳು ಕಂಡುಬರುತ್ತವೆ.

ಬತ್ತದ ಬಿತ್ತನೆ ಏಪ್ರಿಲ್ ತಿಂಗಳಲ್ಲಿ ಆರಂಭವಾಗಿ ಜುಲೈ ತನಕವೂ ಮುಂದುವರಿಯುತ್ತದೆ. ಕಟಾವು ನವಂಬರ್‌ದಿಂದ ತೊಡಗಿ ಫೆಬ್ರವರಿ ಕೊನೆಯ ತನಕ ಮುಂದುವರಿಯುತ್ತದೆ. ಮಾರ್ಚ್‌ನ ಕೊನೆ ಅಥವಾ ಒಂದಿಷ್ಟು ತಡವಾಗಿ ತೆನೆ ಬಡಿಯುವ, ಒಕ್ಕುವ ಕೆಲಸಗಳು ಏಪ್ರಿಲ್ ಮೇ ತಿಂಗಳಲ್ಲಿ ಕೊನೆಗೊಂಡು ಆ ಹೊತ್ತಿಗೆ ಮಾರುಕಟ್ಟೆ ಪ್ರವೇಶಿಸುತ್ತವೆ.

**ಬೆಳೆಗಳು :** ಜಿಲ್ಲೆಯಲ್ಲಿ ಹಿಂಗಾರು ಮುಂಗಾರು ಋತುವಿನಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ. ಬತ್ತ ಜಿಲ್ಲೆಯ ಪ್ರಧಾನ ಬೆಳೆ. ಅರವತ್ತು ವಿಧದ ತಳಿಗಳನ್ನು ಇದರಲ್ಲಿ ಗುರುತಿಸಲಾಗಿದೆ. ಶಿವಮೊಗ್ಗ ನಗರ, ಸಾಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಅಡಕೆಯನ್ನು ಹೆಚ್ಚು ಬೆಳೆಯುವರು.

**ಬೆಳೆಯುವ ಬತ್ತದ ಕೆಲವು ತಳಿಗಳು**

| | | | |
|---|---|---|---|
| ಸಕಲಾತಿ ಸಣ್ಣ | ಬಂಗಾರ ಕಡ್ಡಿ ಬತ್ತ | ಹುದ್ರಿ ಬತ್ತ | ಸೋಮಸಾಲಿ ಬತ್ತ |
| ದಸರ ಸಣ್ಣ | ಮೆಂತ್ಯಸಾಲೆ ಬತ್ತ | ಜೊಳಸಿನ ಬತ್ತ | ಜೀರಿಗೆ ಸಾರಿ ಬತ್ತ |
| ನೇರ್ಳಗಿರಿ ಸಣ್ಣ | ಕೇಸರಿ ಬತ್ತ | ಚೆಕ್ಕಳ್ಳಿ ಬತ್ತ | ಮೋಟಲಿಂಗನ ಬತ್ತ |
| ಪುಟ್ಟಿ ಸಣ್ಣ | ಹಸರು ಕೇಸರಿ ಬತ್ತ | ಜನಗಲಿ ಬತ್ತ | ಹಸಿಬಳೆವಿನ ಬತ್ತ |
| ಬಿಳಿ ಸಣ್ಣ | ಕೆಂಪು ಕೇಸರಿ ಬತ್ತ | ಹಸರು ಮೆಲುಗೆ ಬತ್ತ | ಬಿಳಿ ಹಸದಿ ಬತ್ತ |
| ಕೆಂಪು ಸಣ್ಣ | ಕೆರುವಿನ ಬತ್ತ | ಕರೇ ದಾದಿ ಬತ್ತ | ಮರ ಹಸದಿ ಬತ್ತ |
| ಮರುತ್ರ ಸಣ್ಣ | ಹನೆಸಾಲೆ ಬತ್ತ | ಹುಣಸೇ ಹೂವಿನ ಬತ್ತ | ಕುಗಳ್ಳಿ ಬತ್ತ |
| ನೀರ್ಳಗಿರಿ ಸಣ್ಣ | ಅಂಬೆ ಮೂರಿ ಬತ್ತ | ಬಿದನೆ ಬೀಜ ಬತ್ತ | ಕಿರ್ವಣ್ಣರ ಬತ್ತ |
| ಗೌರಿ ಸಣ್ಣ | ಹಸಡಿ ಬತ್ತ | ಕಳವೆ ಬತ್ತ | ಹಸ್ಸಂಗನ ಬತ್ತ |
| ಬಿಳಿಕಣ್ಣು ಹೆಗ್ಗೆ ಬತ್ತ | ಹರಳು ಹೊನಿಸನ ಬತ್ತ | ತೊಗರಿಗಿನ ಬತ್ತ | ಕೊಡ್ಡೆ ಬತ್ತ |
| ಜುಡ್ಡಿ ಸಣ್ಣ | ಗುಗಿಗೊಂಡನ ಬತ್ತ | ಸಿದ್ಧಸಾಲೆ ಬತ್ತ | ಕುರ್ನಿ ಬತ್ತ |
| ಮರ್ದರ ಸಣ್ಣ | ನೆರೋಗೋಳಿ ಬತ್ತ | ವರ್ಣಗಿಲ್ಲಿ ಬತ್ತ | ಬೌಳೆ ಬತ್ತ |
| ಪುಟ್ಟಿ ಸಣ್ಣ | ಕಮರಿಗೌನ ಬತ್ತ | ಹಲುಗಣ್ಣ ಬತ್ತ | ಬಿಳಿ ಬತ್ತ |
| | ನಿರದ ಬತ್ತ | ಕೆಂಪುದಾದಿ ಬತ್ತ | ಸಾಲೆ ಬತ್ತ |

ಸಂಪಿಗೆದಳ, ಬೆಟ್ಟೆಕೆಂಡಲ, ಬಾಳೆ ಸುಳಿ, ಹುಣ್ಕಲ್ ಮರ್ದಿಗ, ಕವಡೆ ದೊಡ್ಡಿಗ ಕಂಬುಟಿಗೆ, ಪುಸ್ಪಮಂಜರಿ, ಬಿಳಿ ಮುಂಡಕರ, ಕೆಂಪು ಮುಂಡಕರ- ಇತ್ಯಾದಿ.

ಬತ್ತವನ್ನು ಬಿಟ್ಟರೆ ಕಬ್ಬು ಹೆಚ್ಚಾಗಿ ಬೆಳೆಯುತ್ತಾರೆ. ಕಬ್ಬಿನ ಮುಖ್ಯ ತಳಿಗಳೆಂದರೆ ಕಿರಿಕಬ್ಬು, ಮರಕಬ್ಬು, ರಸದಾಳಿ, ಪಟ್ಟಪಟ್ಟಿ ಅಥವಾ ರಾಮ ರಸದಾಳಿ, ಜನವರಿಯಿಂದ ಜೂನ್‌ವರೆಗೆ ಕಬ್ಬು ನೆಡಲಾಗುತ್ತದೆ. ಸುಮಾರು ಒಂದು ವರ್ಷ ಅಥವಾ ಸ್ವಲ್ಪ ಹೆಚ್ಚಿನ ಕಾಲಾವಧಿ ಕಬ್ಬು ಬೆಳೆಯಲು ಬೇಕು. ಕಬ್ಬು ಕಡಿದು ಬೆಲ್ಲ ತಯಾರಿಸಲಾಗುತ್ತದೆ. ಮುಂದಿನ ಜುಲೈ ತಿಂಗಳ ಹೊತ್ತಿಗೆ ಬೆಲ್ಲವು ಮಾರುಕಟ್ಟೆಗೆ ತಲುಪುತ್ತದೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಕಬ್ಬು, ಹೊನ್ನಳ್ಳಿಯಲ್ಲಿ ಹತ್ತಿ, ಆಗುಂಬೆಯಲ್ಲಿ ಏಲಕ್ಕಿಯು ಪ್ರಮುಖವಾದ ಬೆಳೆಗಳಾಗಿದೆ. 2010-11ರ ಅಂಕಿ ಅಂಶವನ್ನು ಗಮನಿಸಿದಾಗ ಏಕದಳ ಧಾನ್ಯಗಳು 177943 ಹೆ. ವಿಸ್ತೀರ್ಣ, ದ್ವಿದಳ ಧಾನ್ಯಗಳು 2818 ಹೆ.ವಿ, ಆಹಾರಧಾನ್ಯಗಳು 180761 ಹೆ.ವಿ, ಹಣ್ಣುಗಳ ಬೆಳೆಗಳ ವಿಸ್ತೀರ್ಣ 12611 ಹೆ.ವಿ. ತರಕಾರಿ ಬೆಳೆಗಳು 352 ಹೆ.ವಿ., ಎಣ್ಣೆ ಕಾಳುಗಳು 1857 ಹೆ.ವಿ, ವಾಣಿಜ್ಯಬೆಳೆಗಳು 9815 ಹೆ. ವಿಸ್ತೀರ್ಣ ಬೆಳೆಗಳನ್ನು ಬೆಳೆಯಲಾಗಿದೆ.

**ಕೃಷಿ ಉತ್ಪಾದನೆ :** ಜಿಲ್ಲೆಯಲ್ಲಿ 2010-11ರಲ್ಲಿ 240.961 ಹೆ. ಪ್ರದೇಶದಲ್ಲಿ 38853 ಹೆ. ಉತ್ಪಾದನೆಯಾಗಿದ್ದು ಸರಾಸರಿ ಶೇ. 75ರಷ್ಟು ಇಳುವರಿ ಪಡೆದಿದ್ದಾರೆ.

**ತೋಟದ ಬೆಳೆಗಳು :** ಜಿಲ್ಲೆಯಲ್ಲಿ ಅಡಕೆ, ತೆಂಗು, ಏಲಕ್ಕಿ, ಮೆಣಸು ಮುಂತಾದ ತೋಟದ ಬೆಳೆಗಳನ್ನು ಭದ್ರಾವತಿ, ಶಿವಮೊಗ್ಗ ತಾಲ್ಲೂಕುಗಳಲ್ಲಿ ಬೆಳೆದರೆ, ಗೋಡಂಬಿ, ಕೋಕೋಗಳನ್ನು ಹೆಚ್ಚಾಗಿ ತೀರ್ಥಹಳ್ಳಿ, ಹೊಸನಗರ ತಾಲ್ಲೂಕುಗಳಲ್ಲಿ ಬೆಳೆಯುತ್ತಾರೆ. ಉಳಿದಂತೆ ಅಲ್ಪ ಪ್ರಮಾಣದಲ್ಲಿ ಸೊರಬ, ಸಾಗರ, ಶಿಕಾರಿಪುರ ತಾಲ್ಲೂಕು ಗಳಲ್ಲಿ ಬೆಳೆಯುವರು.

**ಏಕದಳ ಧಾನ್ಯಗಳು :** 2010-11ನೇ ಅಂಕಿ ಅಂಶದ ಪ್ರಕಾರ ಬತ್ತ 1305 ಹೆ. ವಿಸ್ತೀರ್ಣ, ಜೋಳ 178 ಹೆ.ವಿಸ್ತೀರ್ಣ, ಮುಸುಕಿನ ಜೋಳ 47345 ಹೆ.ವಿ., ರಾಗಿ 1316 ಹೆ.ವಿ. ಗೋದಿ 2 ಹಿ.ವಿ., ಹೊಂದಿದ್ದು ಒಟ್ಟು 177943 ಹೆ.ವಿ. ಹೊಂದಿದೆ.

**ದ್ವಿದಳ ಧಾನ್ಯಗಳು :** 2010-11ನೇ ಸಾಲಿನ ಪ್ರಕಾರ ತೊಗರಿ 244 ಹೆ. ವಿಸ್ತೀರ್ಣ, ಹುರುಳಿ 163 ಹೆ. ವಿಸ್ತೀರ್ಣ, ಉದ್ದು 156 ಹೆ. ವಿಸ್ತೀರ್ಣ, ಹೆಸರು 1766 ಹೆ. ವಿಸ್ತೀರ್ಣ, ಅವರೆ 57 ಹೆ. ವಿಸ್ತೀರ್ಣ, ಅಲಸಂದಿ 354 ಸೆ. ವಿಸ್ತೀರ್ಣ, ಕಡಲೆ 78 ಹೆ. ವಿಸ್ತೀರ್ಣ ಹೊಂದಿದ್ದು ಒಟ್ಟು 2818 ಹೆ. ವಿ. ಹೊಂದಿದೆ.

**ಎಣ್ಣೆಕಾಳುಗಳು :** 2010-11ರ ಪ್ರಕಾರ ಶೇಂಗಾ 803 ಹೆ. ವಿಸ್ತೀರ್ಣ, ಸೂರ್ಯಕಾಂತಿ 781 ಹೆ.ವಿಸ್ತೀರ್ಣ, ಹರಳು 2 ಹೆ.ವಿಸ್ತೀರ್ಣ ಎಳ್ಳು 30 ಹೆ.ವಿಸ್ತೀರ್ಣ, ಹುಚ್ಚೆಳ್ಳು 37 ಹೆ. ವಿಸ್ತೀರ್ಣ, ಇತರೆ ಎಣ್ಣೆ 204 ಹೆ. ವಿಸ್ತೀರ್ಣ, ಒಟ್ಟು 1857 ಹೆ. ವಿಸ್ತೀರ್ಣ ಹೊಂದಿದೆ.

**ವಾಣಿಜ್ಯ ಬೆಳೆಗಳು :** 2010-11ರ ಪ್ರಕಾರ ಹತ್ತಿ 1110 ಹೆ. ವಿಸ್ತೀರ್ಣ, ಕಬ್ಬು 7820 ಹೆ.ವಿಸ್ತೀರ್ಣ, ತಂಬಾಕು 19 ಹೆ. ವಿಸ್ತೀರ್ಣ, ಹರಳು 02 ಹೆ.ವಿಸ್ತೀರ್ಣ, ಎಳ್ಳು 30 ಹೆ. ವಿಸ್ತೀರ್ಣ, ಅಗಸೆ 12 ಹೆ. ವಿಸ್ತೀರ್ಣ, ಸೋಯ ಅವರೆ 04 ಹೆ. ವಿಸ್ತೀರ್ಣ, ಒಟ್ಟು 9815 ಹೆ. ವಿಸ್ತೀರ್ಣ ಹೊಂದಿದೆ.

**ಆಹಾರ ಧಾನ್ಯಗಳು :** 2010-11ರ ಪ್ರಕಾರ ಒಟ್ಟು 180761 ಹೆ. ವಿಸ್ತೀರ್ಣ, ಹಣ್ಣುಗಳ ಬೆಳೆಗಳು 12611 ಹೆ.ವಿ., ತರಕಾರಿ ಬೆಳೆಗಳು 352 ಹೆ. ವಿಸ್ತೀರ್ಣ ಹೊಂದಿದೆ.

**ರೇಷ್ಮೆ ಕೃಷಿ :** ಜಿಲ್ಲೆಯಲ್ಲಿ ರೇಷ್ಮೆ ಕೃಷಿಯು ಉತ್ಕೃಷ್ಟವಾದ ಬೆಳೆಯಾಗಿದೆ. ಇದನ್ನು ಹಲವಾರು ರೈತ ಕುಟುಂಬಗಳು ವಾಣಿಜ್ಯ ಬೆಳೆಯಾಗಿ / ಆರ್ಥಿಕ ಕಸುಬಾಗಿ ಮಾಡಿಕೊಂಡು ಬಂದಿದ್ದಾರೆ. ಹಾಗೂ ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ತಂತ್ರಜ್ಞಾನಗಳು ಬಂದಿರುವುದರಿಂದ ಅದನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿರುವುದನ್ನು ಕಾಣಬಹುದು. 2010-11ರ ಪ್ರಕಾರ ಹಿಪ್ಪನೇರಳೆ ಬೆಳೆ ವಿಸ್ತೀರ್ಣ 298.90 ಹೆ.ವಿ. ಇದ್ದು ರೇಷ್ಮೆಗೂಡು ಉತ್ಪಾದನೆ 73.325 ಟನ್‌ಗಳಾಗಿರುತ್ತದೆ.

*ಆರ್.ಎಸ್.ಸಿ.*

**ಶುಂಠಿ** ಸಸ್ಯವಿಜ್ಞಾನದಲ್ಲಿ ಇದರ ಹೆಸರು 'ಜಿಂಬಿಬರ್ ಅಫಿಸಿಸೇಲ್' ಎಂದಿದ್ದು, ಇದು 'ಜಿಂಜಿಬರೇಸಿ' ಕುಟುಂಬಕ್ಕೆ ಸೇರಿದೆ. ಪ್ರಪಂಚದಲ್ಲಿ ಸು. 50,000 ಟನ್, ಒಣ ಶುಂಠಿ ಪ್ರತಿವರ್ಷ ಉತ್ಪತ್ತಿಯಾಗುತ್ತಿದ್ದು, ಇದರ ಅರ್ಧದಷ್ಟು ಭಾಗ ಭಾರತದಲ್ಲಿಯೇ ಬೆಳೆಯುತ್ತಾರೆ. ತೆಲುಗು ಭಾಷೆಯಲ್ಲಿ ಶುಂಠಿಯನ್ನು 'ಅಲ್ಲಮು' ಎಂದೂ ತಮಿಳು ಭಾಷೆಯಲ್ಲಿ 'ಸುಕ್ಕು' ಎಂದೂ ಕರೆಯುತ್ತಾರೆ.

**ಮಣ್ಣು :** ಕ್ಷಾರವಲ್ಲದ, ಸುಲಭವಾಗಿ ನೀರು ಇಂಗಿ ಹೋಗುವಂತಹ ಮರಳು ಮಿಶ್ರಿತ ನೆಲದಲ್ಲಿ ಶುಂಠಿಯನ್ನು ಬೆಳೆಯುತ್ತಾರೆ. ನೆರಳಿನಿಂದ ಕೂಡಿದ ತೇವಾಂಶವಿರುವ ಕಪ್ಪು ಮಣ್ಣು ಈ ಬೆಳೆಗೆ ಹಿತಕರ.



**ನಾಟಿ :** ಭೂಮಿಯನ್ನು ಎರಡು ಮೂರು ಸಾರಿ ಆಳವಾಗಿ ಉತ್ತು ಬಿಸಿಲಿಗೆ ಚೆನ್ನಾಗಿ ಒಣಗಿಸಿ ಹದ ಮಾಡಿಕೊಂಡು ಸು. 50 ಗಾಡಿಗಳಷ್ಟು ಕೊಟ್ಟಿಗೆ ಗೊಬ್ಬರ ಮತ್ತು 8 ಮಣದಷ್ಟು ಸೂಪರ್ ಗೊಬ್ಬರ (ಎಲುಬಿನ ಗೊಬ್ಬರ)ವನ್ನು ಮಿಶ್ರ ಮಾಡಿ ಭೂಮಿಗೆ ಸೇರಿಸಬೇಕು. ಒಂದಡಿಗೊಂದರಂತೆ 4-5 ಅಂಗುಲ ಆಳದ ಸಾಲುಗಳನ್ನು ಮಾಡಿ ಈ ಮೊದಲೇ ಸಿದ್ಧಪಡಿಸಿಕೊಂಡಿರುವ ಶುಂಠಿಯ ಕಣ್ಣುಗಳುಳ್ಳ ಸಸಿಗಳನ್ನು 9 ಅಂಗುಲದಷ್ಟು ದೂರಕ್ಕೆ ಒಂದೂವರೆ ಅಂಗುಲದಷ್ಟು ಆಳಕ್ಕೆ ನೆಡಬೇಕು. ಇಲ್ಲವಾದರೆ ನಾಲ್ಕುವರೆ x ನಾಲ್ಕುವರೆ ಅಡಿಗಳ ಸಣ್ಣ ಸಣ್ಣ ಪಾತಿಗಳಲ್ಲಿ ನೆಡಬೇಕು. ಇದಕ್ಕೆ ಹೆಚ್ಚಿನ ತೇವಾಂಶದ ಆವಶ್ಯಕತೆ ಇದ್ದು ನೀರು ಇಂಗುವಂತೆ ಇಂಗು ಕಾಲುವೆಗಳನ್ನು ಮಾಡಿಡಬೇಕು. ಹೀಗೆ ನೆಟ್ಟ ಶುಂಠಿಯಿಂದ ಹತ್ತು ದಿನಗಳಿಗೆ ಹೊಸ ಎಲೆಗಳು ಬರಲಾರಂಭಿಸುತ್ತವೆ. ಶುಂಠಿಯನ್ನು ಸಾಮಾನ್ಯವಾಗಿ ನವೆಂಬರ್ ತಿಂಗಳಿನಿಂದ ಮೇ ತಿಂಗಳವರೆಗೆ ನಾಟಿ ಮಾಡುತ್ತಾರೆ. ತಂಪು ಹವಾಗುಣ ಮತ್ತು ನೆರಳು ಪ್ರದೇಶದಲ್ಲಿ ಉತ್ತಮ ಇಳುವರಿ ನೀಡುತ್ತದೆ.

ನೆರಳಿಗಾಗಿ ಸಾಲುಗಳ ಮಧ್ಯೆ ಒಂದೂವರೆ ಅಡಿಗಳಿಗೊಂದು ಸಾಲಿನಂತೆ ಹರಳು ಅಥವಾ ತೊಗರಿ ಸಸಿಯನ್ನು ಬೆಳೆಸಬೇಕು. ಪಾತಿಗಳಲ್ಲಾದರೆ ಪಾತಿಗಳ ದಿಂಡುಗಳ ಪಕ್ಕದಲ್ಲಿ ನೆಟ್ಟು ನೆರಳು ಬರುವಂತೆ ಮಾಡಬೇಕು. ಕೆಲವು ಕಡೆ ಬಾಳೆಯ ತೋಟಗಳಲ್ಲಿ ಬಾಳೆಯ ನೆರಳಿನಲ್ಲೇ ಶುಂಠಿಯನ್ನು ಬೆಳೆಯುವುದುಂಟು. ಪಾತಿಗಳನ್ನು ಒಂದೂವರೆ ಎರಡು ತಿಂಗಳಿಗೊಮ್ಮೆ ಕೆದಕಿ ಕಳೆ ತೆಗೆಯುತ್ತಿರಬೇಕು. ಶುಂಠಿಯ ಗಿಡಗಳು ಚೆನ್ನಾಗಿ ಬೆಳೆದಂತೆಲ್ಲ ಭೂಮಿಯಲ್ಲಿ ಶುಂಠಿಯು ಚೆಕ್ಕೆ ಚೆಕ್ಕೆಯಾಗಿ ಅಗಲವಾಗಿ ಗೆಡ್ಡೆ ಕಟ್ಟಿ ಬೆಳೆಯಲಾರಂಭಿಸುತ್ತವೆ. ಹೀಗಾಗಿ ಸು. 10 ತಿಂಗಳುಗಳಲ್ಲಿ ಶುಂಠಿಯು ಅಗೆಯಲು ಸಿದ್ಧವಾಗುತ್ತದೆ. ಆಗ ಶುಂಠಿಯ ಗಿಡದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಲಾರಂಭಿಸುತ್ತವೆ.

ಸಿದ್ಧವಾದ ಶುಂಠಿಯ ಬೆಳೆಯನ್ನು ಸಣ್ಣ ಗುದ್ದಲಿಗಳಿಂದ ಅಗೆದು ಶುದ್ಧಮಾಡಿ ಮಾರುತ್ತಾರೆ. ಕೆಲವು ವೇಳೆ ಎಷ್ಟನ್ನು ಮಾರಬೇಕೋ ಅಷ್ಟನ್ನೇ ಅಗೆದು ಮಿಕ್ಕದ್ದನ್ನು ನೆಲದಲ್ಲೇ ಬಿಟ್ಟು ಆವಶ್ಯಕತೆ ಬಿದ್ದಂತೆಲ್ಲಾ ಅಗೆಯುತ್ತಾರೆ. ಶುಂಠಿಯನ್ನು ನೀರಾವರಿ ಬೆಳೆಯಾಗಿ ಬೆಳೆದಲ್ಲಿ ಎಕರೆ ಒಂದಕ್ಕೆ ಸು. 350 ಮಣಗಳಿಂದ 400 ಮಣಗಳಷ್ಟು ಬೆಳೆಯಬಹುದು.

ಹಸಿಶುಂಠಿಯನ್ನು ಅಗೆದ ಮೇಲೆ ಮೂರ್‍ನಾಲ್ಕು ದಿನ ಚೆನ್ನಾಗಿ ಒಣಗಿಸಿ ಅನಂತರ ನೀರಿನಲ್ಲಿ ನೆನೆಹಾಕಿ ಮಣ್ಣೆಲ್ಲ ಪೂರ್ತಿ ಹೋದ ಮೇಲೆ ಮೇಲಿನ ಸಿಪ್ಪೆಯನ್ನು ಸುಲಿದು ಚೆನ್ನಾಗಿ ಒಣಗಿಸಿ ಒಣಶುಂಠಿಯನ್ನು ಮಾಡುತ್ತಾರೆ. ಪ್ರತಿ ಐದುಮಣಗಳ ಹಸಿ ಶುಂಠಿಗೆ ಒಂದು ಮಣ ಒಣಶುಂಠಿಯಾಗುತ್ತದೆ.

**ಉಪಯೋಗ :** ಶುಂಠಿಯ ಉಪಯೋಗ ಬಹುಮುಖವಾಗಿದ್ದು ಇದು ಜೀರ್ಣಕಾರಿ ಗುಣವನ್ನು ಒಳಗೊಂಡಿದೆ. ಮೈಶಾಖವನ್ನು ಕಾಪಾಡುತ್ತದೆ. ಚಟ್ನಿಗಳಿಗೆ ಮತ್ತು ಪಲ್ಯಗಳಿಗೆ ಉಪಯೋಗಿಸುವುದುಂಟು. ಶುಂಠಿಯ ಕಷಾಯ ಆಯುರ್ವೇದ ಪದ್ಧತಿಯ ಔಷಧಿಗಳಲ್ಲಿ ಬಹುಮುಖ್ಯವಾದದ್ದು.

**ರೋಗಗಳು :** ಶುಂಠಿಯ ಕುಡಿಗಳನ್ನು ಚಿಟ್ಟೆಯ ಮರಿಹುಳುಗಳು ಕೊರೆದು ನಾಶ ಪಡಿಸುವವು. ಈ ಹುಳುಗಳನ್ನು ನಾಶಪಡಿಸಲು ಹುಳು ಹತ್ತಿದ ಕುಡಿಗಳನ್ನು ಕಿತ್ತು ನಾಶಪಡಿಸುವುದು ಮತ್ತು ಡಿ.ಡಿ.ಟಿ. ಸಿಂಪಡಿಸುವುದೂ ಮಾಡಬೇಕು. ಬಿಳಿ ಚುಕ್ಕೆಗಳ, ಕಪ್ಪು ಬಣ್ಣದ ಸ್ಕಿಪ್ಪರ ಪತಂಗದ - ಮರಿ ಹುಳುಗಳು ಎಲೆಗಳನ್ನು ಮಡಿಸಿ ಒಳಗೆ ಮೇಯುವುವು. ಕೋಶಾವಸ್ಥೆಯಲ್ಲಿಯೇ ಈ ಹುಳು ಎಲೆ ಮಡಿಕೆಯನ್ನು ಹಾಳು ಮಾಡುವುದು. ಇದನ್ನು ನಾಶಪಡಿಸಲು ಮರಿಹುಳುಗಳನ್ನು ಹುಡುಕಿ ತೆಗೆಯುವುದು. ಡಿ.ಡಿ.ಟಿ. ಅಥವಾ ಬಿ.ಎಚ್.ಸಿ. ಅಥವಾ ಪ್ಯಾರಾಥಿಯಾನ್ ಪುಡಿಯನ್ನು ಉದುರಿಸುವುದು. ಬೇರು ಕಾಂಡ ಕೊಳೆ ರೋಗ ಶುಂಠಿ ಗಿಡಕ್ಕೆ ತಟ್ಟಿದಾಗ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಗಿಡ ಸಾವಿಗೀಡಾಗುವುದು, ಬೇರುಕಾಂಡ ನೀರು ತುಂಬಿಕೊಂಡು ಮೆತ್ತಗಾಗಿ ಕೊಳೆಯುವುದು. ಈ ರೋಗವನ್ನು ತಡೆಯಲು ಶುಂಠಿಯನ್ನು ದಾಸ್ತಾನು ಮಾಡುವುದಕ್ಕೆ ಮುಂಚೆ ಬೇರು ಕಾಂಡಗಳನ್ನು ಮರ್ಕ್ಯೂರಿಕ್ ಕ್ಲೋರೈಡ್ ಲವಣದಿಂದ ಸಂಸ್ಕರಿಸಬೇಕು.

ಶುಂಠಿಯನ್ನು ಜಮೈಕ, ನೈಜೀರಿಯ ಮತ್ತು ಸೈರ್‌ಲಿಯೋನ್, ಆಸ್ಟ್ರೇಲಿಯ ಮತ್ತು ಜಪಾನ್‌ಗಳಲ್ಲಿ ಬೆಳೆಯುತ್ತಾರೆ. ಜಮೈಕದಲ್ಲಿ ಬೆಳೆಯುವ ಶುಂಠಿ ನಿಂಬೆಯ ವಾಸನೆಯನ್ನು ಹೊಂದಿರುವುದರಿಂದ ಇದಕ್ಕೆ ಬೆಲೆ ಹೆಚ್ಚು. ಪ್ರಪಂಚದ ಮಾರುಕಟ್ಟೆಯಲ್ಲಿ ಭಾರತದ ಶುಂಠಿಯನ್ನು 'ಕೊಚಿನ್ ಜಿಂಜರ್' ಎಂದು ಕರೆಯುತ್ತಾರೆ. ಭಾರತದಲ್ಲಿ ಶುಂಠಿ ಅತ್ಯಧಿಕವಾಗಿ ಉತ್ಪಾದನೆಯಾಗುವುದು ಕೇರಳ, ತಮಿಳುನಾಡು, ಬಿಹಾರ್, ಮಹಾರಾಷ್ಟ್ರ ಮತ್ತು ಗುಜರಾತು ಪ್ರಾಂತ್ಯಗಳಲ್ಲಿ ಕರ್ನಾಟಕದಲ್ಲಿ ಹರಳು, ತೊಗರಿ, ಬಾಳೆ ಬೆಳೆಗಳಲ್ಲಿ ಮಿಶ್ರ ಬೇಸಾಯವಾಗಿ ಬೆಳೆಯುತ್ತಾರೆ. ಭಾರತದಲ್ಲಿ ಹಸಿಶುಂಠಿಯನ್ನು ಹೆಚ್ಚಾಗಿ ಬಳಸುತ್ತಾರೆ. ಸು. 4-5 ಸಾವಿರ ಟನ್‌ಗಳಷ್ಟು ಒಣಶುಂಠಿ ವಿದೇಶಗಳಿಗೆ ರಫ್ತಾಗುತ್ತದೆ. ಶುಂಠಿಯಿಂದ ಎಣ್ಣೆಯನ್ನು ತಯಾರಿಸಿ, ಪರಿಮಳದ್ರವ್ಯಗಳು, ಬಿಸ್ಕೆಟ್ ಬ್ರೆಡ್, ಮಾದಕ ಪಾನೀಯ ಮುಂತಾದ ಖಾದ್ಯಗಳಲ್ಲೂ ಬಳಸುತ್ತಾರೆ.

*ಎಸ್. ಆರ್.*

**ಸಂತೆ** ಕೊಳ್ಳುವವರು, ಮಾರುವವರು ನಿರ್ದಿಷ್ಟ ದಿನ, ನಿರ್ದಿಷ್ಟ ಸ್ಥಳದಲ್ಲಿ ಸೇರುವ ವ್ಯವಸ್ಥೆಯೇ ಸಂತೆ. ಸಂತೆ ಎಂಬ ಪದಕ್ಕೆ ಸಂತಿ, ಸಂತೆ, ಗುಂಪು, ಸಮೂಹ, ಗದ್ದಲ ಎಂಬರ್ಥಗಳಿವೆ. ಮಾನವ ತನ್ನ ಅಗತ್ಯಕ್ಕಿಂತ ಹೆಚ್ಚಾಗಿ ಉತ್ಪಾದಿಸಿದ ವಸ್ತುಗಳನ್ನು ವಿಕ್ರಯ ಮಾಡಲು ಇದು ಪೂರಕವಾದುದು. ಮಾನವ ಸಂಘ ಜೀವಿಯಾದ ಆರಂಭ ಕಾಲದಲ್ಲಿ ತನಗೆ ಬೇಕಾದಷ್ಟನ್ನು ಮಾತ್ರ ಉತ್ಪಾದಿಸುತ್ತಿದ್ದ. ತನಗೆ ಅಗತ್ಯವಾದ ಕೆಲವು ವಸ್ತುಗಳನ್ನು ನೆರೆಹೊರೆಯವರಿಂದ ತನ್ನಲ್ಲಿರುವ ಕೆಲವು ವಸ್ತುಗಳನ್ನು ಕೊಡುಕೊಳ್ಳುವಿಕೆ ಮೂಲಕ ಪೂರೈಸಿಕೊಳ್ಳುತ್ತಿದ್ದನು. ಇದು ಮಾನವನ ಬಯಕೆಗಳು ಪರಿಮಿತಿಯಲ್ಲಿದ್ದಾಗ ಹಾಗೂ ಹೊರ ಪ್ರಪಂಚದ ಅರಿವು ತನ್ನ ಪರಿವೆಗೆ ಬರುವ ಮೊದಲು ಇದ್ದ ಪರಿಸ್ಥಿತಿ. ಕಾಲಕ್ರಮೇಣ ವಸ್ತುಗಳ ಉತ್ಪಾದನೆ ಹೆಚ್ಚಾಯಿತು. ಉತ್ಪಾದನೆಗೆ ಸಹಾಯಕವಾಗುವ ಪೂರಕ ಪರಿಕರಗಳು ಅಗತ್ಯವಾದವು. ಇವೆಲ್ಲವೂ ಒಂದೆಡೆ ಸಿಗುವ ಬಗೆ ಹೇಗೆಂದು ಚಿಂತಿಸಿದಾಗ ಅವನಿಗೆ ಹೊಳೆದದ್ದು ತನ್ನ ಸನಿಹದಲ್ಲೇ ಸುತ್ತಮುತ್ತಲಿನ ಕೆಲವು ಗ್ರಾಮಗಳಿಗಾದರೂ ಅನುಕೂಲವಾಗುವ, ಒಂದು ವಿವಿಧ ವಸ್ತುಗಳು ಸಿಗುವ ಕೇಂದ್ರ ಸ್ಥಾಪನೆ ಮಾಡುವುದಾಗಿತ್ತು. ಹೀಗೆ ಹುಟ್ಟಿಕೊಂಡದ್ದೇ ಸಂತೆ. ಇಲ್ಲಿ ಅನೇಕ ಬಗೆಯ ವಸ್ತುಗಳ ಪ್ರದರ್ಶನ, ಮನರಂಜನೆ ಮುಂತಾದವು ಇರುತ್ತವೆ.



ಇದರ ಪರಿಣಾಮವಾಗಿ ಮಾನವನಿಗೆ ಹಲವು ರೀತಿಯ ಉಪಯೋಗಗಳಾದುವು. ಕೇವಲ ವಸ್ತುವಿನಿಮಯ ಮಾತ್ರವಷ್ಟೇ ಅಲ್ಲ, ವ್ಯಾವಹಾರಿಕ ವಿನಿಮಯ, ಜ್ಞಾನ ವಿನಿಮಯ, ಸಾಂಸ್ಕೃತಿಕ ವಿನಿಮಯ, ವೈವಾಹಿಕ ಸಂಬಂಧ ಇತ್ಯಾದಿಗಳು ಮಾನವನ ಸಾಂಸ್ಕೃತಿಕ ಇತಿಹಾಸದ ಉದಯಕ್ಕೆ ನಾಂದಿಯಾಯಿತು. ಮುಂದೆ ರಾಜ ಮಹಾರಾಜರು ಸಂತೆಗಳ ನಿರ್ಮಾಣಕ್ಕೆ ಸಹಕರಿಸಿದರು. ಹಲವು ಊರಿನ ಮುಖಂಡರನ್ನು ಒಂದೆಡೆ ಸೇರಿಸಿ ಅವರಿಗೆ ಸಂತೆ ನಿರ್ಮಾಣದ ಜವಾಬ್ದಾರಿ ವಹಿಸಿ, ಸಂತೆ ನಡೆಸುವ ಜಾಗವನ್ನು ಕೆಲವು ವರ್ಷಗಳ ಕಾಲ ಕಂದಾಯ ರಹಿತವಾಗಿ ನೀಡಿ ಸಂತೆಗಳ ಬೆಳವಣಿಗೆಗೆ ಕಾರಣರಾದರು. ಸಂತೆಗಳು ಉತ್ತಮವಾಗಿ ಬೆಳವಣಿಗೆ ಹೊಂದಿದ ಬಳಿಕವಷ್ಟೇ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಸಂತೆಯ ಮುಖಂಡರು ಈ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಇಲ್ಲಿ ವಿಶೇಷವಾಗಿ ಗಮನಿಸುವ ಅಂಶವೆಂದರೆ ಎಲ್ಲ ಜಾತಿಯ ಜನರು ಇದರ ಸದಸ್ಯರಾಗುತ್ತಿದ್ದರು. ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಎಲ್ಲರ ಒಪ್ಪಿಗೆಯೂ ಬೇಕಾಗುತ್ತಿತ್ತು. ಇದರಿಂದ ಎಲ್ಲ ಸಮುದಾಯಗಳು ಪರಸ್ಪರ ಸಹಕರಿಸಿ ಮಾನವ ಸಂಘಜೀವಿಯಾಗಿ ಅನ್ಯೋನ್ಯವಾಗಿ ಬದುಕಲು ಸಾಧ್ಯವಾಗುತ್ತಿತ್ತು. ಸಂತೆಗಳು ಹೆಚ್ಚಾದಂತೆಲ್ಲ ಕೃಷಿಕ ಹಾಗೂ ರೈತ ಉತ್ಪಾದಿಸುವ ವಸ್ತುಗಳು ವಿಭಿನ್ನವೂ ವೈವಿಧ್ಯವೂ ಆಗಿ ಬೆಳೆದುವು. ಇದಕ್ಕೆ ಪೂರಕವಾಗಿ ಉಪ ಕಸಬುಗಳೂ ಹುಟ್ಟಿಕೊಂಡವು. ಸಂತೆಗಳಲ್ಲಿ ನಿರ್ದಿಷ್ಟ ವ್ಯಾಪಾರ ಸಂಘಗಳೂ ಉದಯಿಸಿದುವು. ಒಂದು ಕಾಲದಲ್ಲಿ ಸಂತೆಗಳ ಜನಪ್ರಿಯತೆ ಎಷ್ಟಿತ್ತೆಂದರೆ ಅವು ನಡೆಯುತ್ತಿದ್ದ ಆ ಊರಿನ ಹೆಸರಿನೊಂದಿಗೆ ಸಂತೆ ತಳುಕು ಹಾಕಿಕೊಂಡಿದೆ. ಸೋಮವಾರ ಸಂತೆ, ಶನಿವಾರಸಂತೆ, ಸಂತೆ ಬೆನ್ನೂರು ಮುಂತಾದ ಊರುಗಳನ್ನು ಇಲ್ಲಿ ಉದಾಹರಿಸಬಹುದು. ವ್ಯಾಪಾರ ವ್ಯವಹಾರ ಹೆಚ್ಚಾದಂತೆಲ್ಲ ಸಂತೆಯ ಸನಿಹದಲ್ಲೇ ಮನೆಗಳು ಹೆಚ್ಚಾಗಿ ಊರು ವಿಸ್ತಾರವಾಗಿ ಬೆಳೆದು ಅದು ಮುಂದೆ ಕೆಲವೆಡೆ ಪಟ್ಟಣವಾಗಿ ಮಾರ್ಪಾಡಾದುದೂ ಉಂಟು. ವ್ಯಾಪಾರ ವ್ಯವಹಾರ ನಡೆಯುತ್ತಿದ್ದುದರಿಂದ ವಾರದ ಸಂತೆಗೆ ಬದಲಾಗಿ ನಿತ್ಯ ಮಾರುಕಟ್ಟೆ ವ್ಯವಸ್ಥೆ ಆರಂಭಗೊಂಡಿತು. ಮಾರುಕಟ್ಟೆಗಳು ಮುಂದೊಂದು ದಿನ ನಗರ ನಿರ್ಮಾಣಕ್ಕೆ ನಾಂದಿಯಾದುವು. ಇದರಿಂದ ಮಾನವನ ಬದುಕು, ಆಲೋಚನಾ ವಿಧಾನಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಕಂಡುಬಂದವು. ಗುಡಿ ಕೈಗಾರಿಕೆ, ಗೃಹ ಕೈಗಾರಿಕೆಗಳು ಉದಯಿಸಿ ಮಾರುಕಟ್ಟೆಯ ವಿಸ್ತಾರಕ್ಕೆ ಪೂರಕವಾದುವು. ಕಿರುಕುಳ ವ್ಯಾಪಾರಿಗಳು ಸಗಟು ವ್ಯಾಪಾರಿಗಳಾದರು. ಗೃಹಕೈಗಾರಿಕೆ, ಗುಡಿ ಕೈಗಾರಿಕೆಗಳನ್ನು ನಡೆಸುತ್ತಿದ್ದವರು ಬೃಹತ್ ಉದ್ಯಮಿಗಳಾದರು. ರಾಜ್ಯಮಟ್ಟದ ವ್ಯಾಪಾರ ಆರಂಭವಾಗಿ ದೇಶ ವಿದೇಶದವರು ಪರಸ್ಪರ ವ್ಯಾಪಾರ ವಿನಿಮಯದಲ್ಲಿ ತೊಡಗಿದರು. ದೇಶ ವಿದೇಶಗಳ ಸಂಪರ್ಕ ಬೆಳೆದಂತೆಲ್ಲ ಒಂದು ದೇಶದ ವಸ್ತುಗಳು ಮತ್ತೊಂದು ದೇಶದ ಬೇಡಿಕೆಯ ಪದಾರ್ಥಗಳಾದುವು. ಉದಾ : ಭಾರತದ ಸಂಬಾರ ಪದಾರ್ಥಗಳು ವಿದೇಶೀಯರಿಗೆ ಪ್ರಿಯವಾದರೆ ಅಲ್ಲಿಯ ಅಪೂರ್ವ ವಸ್ತುಗಳಾದ ಮುತ್ತು, ಹವಳ ಇಲ್ಲಿಯ ಬೇಡಿಕೆಯ ವಸ್ತುಗಳಾದುವು. ಹೀಗೆ ಸಂತೆ ಎಂಬ ಚಿಕ್ಕ ವ್ಯವಸ್ಥೆ ಮಾನವನ ಸರ್ವಾಂಗೀಣ ಪ್ರಗತಿಯ ದ್ಯೋತಕವಾಗಿ ಬೆಳೆದು ಅನೇಕ ಆವಿಷ್ಕಾರಗಳಿಗೆ ಪ್ರೇರಣೆಯಾಯಿತು.

ಸಂತೆಯನ್ನು ಕುರಿತಂತೆ ಅನೇಕ ಗಾದೆಗಳು, ಒಗಟುಗಳು ನುಡಿಗಟ್ಟುಗಳು ಪ್ರಚಲಿತದಲ್ಲಿವೆ.

**ಗಾದೆ : ಚಿಂತೆ ಇಲ್ಲೋನ್ಗೆ ಸಂತೇಲೂ ನಿದ್ದೆ :** ಸಂತೆಯಲ್ಲಿ ಸದ್ದು ಗದ್ದಲ ಜೋರಾಗಿಯೇ ಇರುತ್ತದೆ. ಅಂಥ ಜಾಗದಲ್ಲೂ ನೆಮ್ಮದಿಯಿಂದ ನಿದ್ದೆ ಮಾಡುವ ವ್ಯಕ್ತಿಯ ಸೋಮಾರಿತನಕ್ಕೆ ಈ ಗಾದೆ ಸಾಕ್ಷಿಯಾಗಿದೆ.

**ಸಂತೆ ನೆರಿಯೋಕೆ ಮುಂಚೆ ಗಂಟುಗಳ್ಳು ನೆರೆದ್ರು :** ಸಂತೆಗಳು ಹಿಂದಿನ ಕಾಲದಲ್ಲಿ ಮಧ್ಯಾಹ್ನದ ಅನಂತರ ಸೇರುತ್ತಿದ್ದುದು ರೂಢಿ. ರೈತರು ಕೆಲಸ ಕಾರ್ಯಗಳನ್ನು ಮುಗಿಸಿ, ತಾವು ಬೆಳೆದ ತಾಜಾ ತರಕಾರಿ, ಸೊಪ್ಪು, ಹೂ ಇತ್ಯಾದಿಗಳನ್ನು ಕೊಯ್ದು ತರಲು ಸಮಯಬೇಕಿತ್ತು. ಇವೆಲ್ಲವನ್ನೂ ಲೆಕ್ಕಚಾರ ಹಾಕಿ ಕೆಲವು ಕಳ್ಳಕಾಕರು ಒಂದೆಡೆ ಸೇರಿ ಹೇಗೂ ರೈತ ತಾನು ತಂದ ವಸ್ತುಗಳನ್ನು ಮಾರಿ ಹಿಂದಿರುಗುವ ವೇಳೆಗೆ ಕತ್ತಲಾಗುತ್ತದೆ ಎಂಬುದೇ ಕಳ್ಳರ ಲೆಕ್ಕಾಚಾರವಾಗಿತ್ತು. ಸಾರಿಗೆ ವ್ಯವಸ್ಥೆಯೂ ಇಲ್ಲದ, ರಸ್ತೆಯೂ ಸರಿಯಾಗಿಲ್ಲದ, ಮನೆಗಳೂ ವಿರಳವಾಗಿದ್ದ ಆ ಕಾಲದಲ್ಲಿ ದಟ್ಟವಾದ ತೋಪು, ಕಾಡುಗಳ ಮಧ್ಯೆ ನಡೆದು ಸಾಗುವ ಸಂದರ್ಭದಲ್ಲಿ ವ್ಯಾಪಾರ ಮಾಡಿ ಹಿಂದಿರುಗುತ್ತಿದ್ದ ರೈತರ ಗಂಟಿಗಾಗಿ ಕಾಯುತ್ತಿದ್ದ ಗಂಟುಕಳ್ಳರನ್ನು ಕುರಿತು ಹುಟ್ಟಿರುವಂಥ ಗಾದೆಯಿದು.

**ಸಂತೆಹೊತ್ಗೆ ಮೂರುಮೊಳ ನೇದ್ನಂಗೆ :** ವಾರಕ್ಕೊಂದೇ ದಿನ ಕೆಲವು ಗಂಟೆಗಳ ಕಾಲ ಮಾತ್ರ ಸಂತೆ ನೆರೆಯುತ್ತಿದ್ದುದರಿಂದ ಆತುರಾತುರವಾಗಿ ಬಟ್ಟೆ ನೇಯ್ದು ಎಷ್ಟು ಸಾಧ್ಯವೋ ಅಷ್ಟನ್ನೇ ತಂದು ಮಾರುತ್ತಿದ್ದ ನೇಯ್ಗೆಗಾರನ ಬದುಕಿನ ಚಿತ್ರಣ ಇಲ್ಲಿ ಅನಾವರಣಗೊಂಡಿದೆ.

**ಸಂತೆ ಸೂಳೆ ನೆಚ್ಚಿ ಮನೆ ಹೆಂಡ್ತಿ ಬಿಟ್ರು :** ಸಂತೆಗಳಂಥ ಜಾಗಗಳಲ್ಲಿ ವಿವಿಧ ಸ್ವಭಾವಗಳ ಬಗೆ ಬಗೆಯ ಅಭಿರುಚಿಯುಳ್ಳ ವ್ಯಕ್ತಿಗಳು ಸೇರುವುದು ಸ್ವಾಭಾವಿಕ. ಅವರ ಬಯಕೆಗಳ ಈಡೇರಿಕೆಗಾಗಿಯೇ ವೇಶ್ಯೆಯರು ಸಂತೆಯ ಆವರಣದಲ್ಲಿ ಒಂದೆಡೆ ಸೇರುತ್ತಿದ್ದರು. ಈ ವ್ಯಾಮೋಹಕ್ಕೆ ದಾಸರಾದ ಕೆಲವರ ಮನೆ ಸಂಸಾರಗಳನ್ನು ಮರೆಯುತ್ತಿದ್ದರು. ಸಂತೆಯಲ್ಲಿಯ ಹೆಣ್ಣನ್ನು ನೋಡಿ ಭ್ರಮೆಗೊಳಗಾಗಿ ಮುಂದಿನ ಸಂತೆಯಲ್ಲೂ ಸಿಗುವಳೆಂಬ ಕಲ್ಪನೆಯಲ್ಲಿ ಕಟ್ಟಿಕೊಂಡ ಹೆಂಡತಿಯನ್ನು ಬಿಡುವ ಪ್ರಸಂಗಗಳೂ ಉಂಟೆಂಬುದನ್ನು ಈ ಗಾದೆ ತಿಳಿಸುತ್ತದೆ.

ಒಂದೊಂದು ವಿಶೇಷವಾದ ವಸ್ತುವಿಗೂ ಒಂದೊಂದು ಬೀದಿ ಇರುವಂತೆ, ಮಾರುಕಟ್ಟೆಯಲ್ಲಿ ಒಂದೊಂದು ವಸ್ತುವಿಗೂ ಪ್ರತ್ಯೇಕ ವಿಭಾಗವಿರುವಂತೆ ಹಿಂದಿನ ಕಾಲದಲ್ಲಿ ಸಂತೆಗಳಿರುತ್ತಿದ್ದುವು. ಪಂಪ ಭಾರತದಲ್ಲಿ (10ನೆಯ ಶತಮಾನ) "ಆಱುಂ ಋತುಗಳ ಪೂಗಳನೊಂದು ಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದೋಜನ ಸಾಲೆಯಿರ್ಪಂತಿರ್ದ ಪೂವಿನ ಸಂತೆಯೊಳ್" 'ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ' ಎಂದು ಮಹಾದೇವಿಯಕ್ಕನ (12ಶ) ವಚನದಲ್ಲಿ ಬರುತ್ತದೆ. 'ಕಲ್ಲು ಸಕ್ಕರೆ ಕೊಳ್ಳಿರೊ...' ಎಂಬ ಕೀರ್ತನೆಯಲ್ಲಿ 'ಸಂತೆ ಸಂತೆಗೆ ಹೋಗಿ ಶ್ರಮಪಡಿಸುವುದಲ್ಲ, ಸಂತೆಯೊಳಗಿಟ್ಟು ಮಾರುವುದಲ್ಲ' ಎಂದು ಹೇಳಿದ್ದಾರೆ. ಪುರಂದರದಾಸರು (15-16 ಶ).

**ಶಾಸನಗಳಲ್ಲಿ ಸಂತೆಯ ಪ್ರಸ್ತಾಪ :** ಶಾಸನವೊಂದರಲ್ಲಿ '...ಆದಿತ್ಯ ವಾರದೊಳ್ ಸಂಥೆಯ, ಸಿಂಗವಟ್ಟಿಗೆಯ ಸುಂಕಮಂ ದೇವರ ನೈವೇದ್ಯಕ್ಕೆ ಬಿಟ್ಟರ್' (ಎ.ಇ. XV, 98-28 1074) ಎಂದು ಬಂದಿದೆ. 'ಸಂಗಿಸೆಟ್ಟಿ ಮುಟ್ಟಿಸೆಟ್ಟಿಗಳ್ಗೆ ಬುಧವಾರದ ಸಂಥೆಯ ಮಾಡಿಯೆನ್ದು ನಿಯಾಮಿಸಲು' (ಎಕ XI, ದಾವಣಗೆರೆ, 105-23, 1218), 'ಸನ್ತೆಯ ಕಟ್ಟುವುದಕ್ಕೆ ಕೊಟ್ಟ ಕೊಡಗಿ ಶಾಸನದ ಕ್ರಮವೆನ್ತೆನ್ದರೆ... ಹಸುಕರು ಸನ್ತಿಯಲು ಅಲ್ಲಾ ಕೂಡಿ (ಎಕIX, ಬೆಂಗಳೂರು 61-22 : 1322) ತೆಂಕಣ ದಿಕ್ಕಿಗೆ ಬ್ರಹ್ಮ ಸಮುದ್ರಕ್ಕೆ ಹೋಹ ಸಂಥೆಯ ದಾರಿಯಿಂ ಮೂಡಣ ಕಡೇಲು ನಡಿಸಿದ ವಾಮನಮುದ್ರೆಯ ಕಲ್ಲುಮೇರೆ (ಎಕ XII, ಶಿರಾ 95-123, 1413) 'ಸಾಲುಮೂಲೆಸಮಸ್ತ ಹಲರು ಇಲ್ಲಿ ಪಞ್ಚಾಳ ಸಹಿತವಾಗಿ ಕೂಡಿ ಸಂತೆಯ ಕಟ್ಟಿಸಿದ ಸಂಬಂಧ' (ಎಕ X, ಬೌರಿಂಗ್ 72-12, 1430), 'ಪಟ್ಟಣವನೂ ಮಾಡಿ ಸನ್ಥೆಯ ಕಟ್ಟಿಸಿ' (ಎಕ IX, ಚೆನ್ನಪಟ್ಟಣ, 12-32, 1319).

ವಿಜಯನಗರ ಅರಸರ ಕಾಲದಲ್ಲಿ (14-16ಶ.) ಒಂದೊಂದು ವಸ್ತುವಿಗೂ ಒಂದೊಂದು ದಿನ ಪ್ರತ್ಯೇಕವಾದ ಸಂತೆಗಳು ನಡೆಯುತ್ತಿದ್ದುವೆಂದು ರಾಬರ್ಟ್ ಸಿವೆಲ್ ಅವರು 'ಫರ್‌ಗಟನ್ ಎಂಪೈರ್' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಮೇಲೆ ನಮೂದಿಸಿರುವ ಶಾಸನಗಳಲ್ಲಿ ಪ್ರತಿದಿನ ಬೇರೆ ಬೇರೆ ಕಡೆ ಸಂತೆ ನಡೆಯುತ್ತಿತ್ತೆಂಬುದನ್ನೂ ಸಂತೆಗಳಿಗೆ ತೆರಿಗೆ ವಿಧಿಸುತ್ತಿದ್ದ ವಿಚಾರವನ್ನೂ ಸಂತೆಗಳೇ ಒಂದು ಊರಿನ ಮಾರ್ಗ ಸೂಚಿಗಳಾಗಿಯೂ ಇದ್ದುವು, ಮೊದಲಾದ ಹಲವಾರು ವಿಚಾರಗಳು ತಿಳಿದು ಬರುತ್ತವೆ.

**ಒಗಟು :** 'ಸಂತೆ ಜನಕ್ಕೆಲ್ಲ ಒಂದೆ ಹಾಸುಗೆ ಒಂದೇ ಹೊದಿಕೆ' ಎಂಬುದಕ್ಕೆ ಆಕಾಶ, ಭೂಮಿ ಎಂಬ ಉತ್ತರವಿದ್ದರೂ ಸಂತೆ ಎಂಬುದು ಮಾನವ ಬದುಕು ಅಶಾಶ್ವತ ಎಂಬುದನ್ನು ಧ್ವನಿಸುತ್ತದೆ. ಇರುವಷ್ಟು ದಿನ ಒಟ್ಟಿಗೆ ಅನ್ಯೋನ್ಯವಾಗಿ ಒಂದೇ ಸೂರಡಿಯಲ್ಲಿ ತುಂಬು ಕುಟುಂಬದಂತೆ ಬಾಳಬೇಕೆಂಬುದನ್ನು ಸೂಚಿಸುತ್ತದೆ.

**ಸಂತೆಗ್ಹೋಗೋನ ತಿಕ ತಲೆಕೆಳಗು :** (ಕೋಳಿ) ಸಂತೆಯಲ್ಲಿ ಕೇವಲ ದವಸಧಾನ್ಯಗಳು ತರಕಾರಿಗಳಷ್ಟೇ ಅಲ್ಲ ಕೋಳಿ ಕುರಿ ಇತ್ಯಾದಿ ಪ್ರಾಣಿಗಳೂ ವಿಕ್ರಯಗೊಳ್ಳುತ್ತಿದ್ದುವೆಂಬುದನ್ನು ಒಗಟು ತಿಳಿಸುತ್ತದೆ. ಸಂತೆಗ್ಹೋಗ್ತಾ ಚಿಂತೆ ಮಾಡ್ತಾ ಬೆನ್‌ತಟ್ತಾ ಬೆಲೆ ಮಾಡ್ತಾ (ಮಡಕೆ) ಸಂತೆ ದಾರೀಲಿ ಕೆಂಪವ್ವ ಕೂತವ್ಳೆ (ತಾಂಬೂಲ) ಸಂತ್ಯಾಗ ತರ್ತಾರೆ ಮನ್ಯಾಗ್ ಅಳ್ತಾರೆ (ಈರುಳ್ಳಿ) ಮೇಲಿನ ಒಗಟುಗಳು ಸಂತೆಯಲ್ಲಿ ನಡೆಯುವ ವ್ಯಾಪಾರ ವ್ಯವಹಾರಗಳ ವೈವಿಧ್ಯವನ್ನು ಪರಿಚಯಿಸುತ್ತಲೇ ಮಾನವನ ಬುದ್ಧಿಗೆ ಸವಾಲೆಸೆದು ಕಸರತ್ತು ನೀಡುತ್ತವೆ.

ವಿಜಯನಗರದ ಅರಸರ ಕಾಲದಲ್ಲಿ ಸಂತೆಗಳ ಸ್ಥಾಪನೆ ವ್ಯಾಪಾರದ ಅಭಿವೃದ್ಧಿಗೆ ಸಹಾಯಕವಾಗಿತ್ತು. ಸಂತೆಗಳ ಸ್ಥಾಪನೆಯನ್ನು ಕುರಿತಂತೆ ಅನೇಕ ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಬಹುದು. ಕ್ರಿ.ಶ. 1362ರಲ್ಲಿ ಕೈವಾರ ನಾಡಿನ ಸಮಸ್ತ ಗೌಡ ಪ್ರಜೆಗಳು ಪ್ರಕ್ಕುಂದದ ಸಮಸ್ತ ನಾನಾ ದೇಶಿಗಳು ಮತ್ತು ಹದಿನೆಂಟು ಜಾತಿಯವರು ಕೈವಾರದಲ್ಲಿ ಒಂದು ಸಂತೆಯನ್ನು ಸ್ಥಾಪಿಸಿ ಪೆರಿಯಾನಾಯನ ಎಂಬುವವನನ್ನು ಪಟ್ಟಣ ಸ್ವಾಮಿಯನ್ನಾಗಿ ನೇಮಿಸಿದರು. ಈ ನಿದರ್ಶನದಲ್ಲಿ ಒಂದು ದೊಡ್ಡ ಸಭೆಯು ಸಂತೆಯನ್ನು ಸ್ಥಾಪಿಸಿತು. ಮತ್ತೊಂದು ನಿದರ್ಶನದಲ್ಲಿ ಕ್ರಿ.ಶ. 1378ರಲ್ಲಿ ಸಾದಲಿನಾಡಿನ ಗೌಡರು ರಾಮೇಶ್ವರದಲ್ಲಿ ಒಂದು ಸಂತೆಯನ್ನು ಸ್ಥಾಪಿಸಿದರು. ಇದರಲ್ಲಿ ಐವರು ಶೆಟ್ಟಿಗಳು ಮತ್ತು ಸಾಲುಮೂಲೆಯ ಸಮಸ್ತ ಹಿರಿಯರು ಹಲವು ನಿಯಮಗಳನ್ನು ಮಾಡಿದರು. ಸಗಟು ಧಾನ್ಯಗಳ ಮೇಲೆ ಒಂದು ವರ್ಷ ಕಾಲ ಯಾವ ತೆರಿಗೆಗಳನ್ನು ವಿಧಿಸುತ್ತಿರಲಿಲ್ಲ ಎಂಬುದು ದಾಖಲಾಗಿದೆ.

ನಾಡಗೌಡ ಅಥವಾ ಮಹಾಮಂಡಲೇಶ್ವರನ ಆಜ್ಞೆಯ ಮೇರೆಗೆ ಸಂತೆಗಳನ್ನು ಪ್ರಾರಂಭಿಸಲಾಗುತ್ತಿತ್ತು. ಇಲ್ಲವೇ ಊರ್ಜಿತಗೊಳಿಸ



ಲಾಗುತ್ತಿತ್ತು. ಪಟ್ಟಣಸ್ವಾಮಿಯನ್ನು ನೇಮಿಸುವಾಗ ನಾಡಿನ ಸಮಸ್ತ ಗೌಡಪ್ರಜೆಗಳು, ನಾನಾದೇಶಿಗಳು ಮತ್ತು ಹದಿನೆಂಟು ಜಾತಿಯವರು ಭಾಗವಹಿಸುತ್ತಿದ್ದರೆಂದು ಕ್ರಿ.ಶ. 1362ರ ಚಿಂತಾಮಣಿ ತಾಲ್ಲೂಕಿನ ಶಾಸನವೊಂದು ತಿಳಿಸುತ್ತದೆ. ತಮಿಳು ಮತ್ತು ತೆಲುಗು ಪ್ರದೇಶಗಳಿಂದ ಕೋಲಾರ ಪ್ರಾಂತ್ಯಕ್ಕೆ ವಲಸೆ ಬಂದ ವ್ಯಾಪಾರಸ್ಥರು ಕ್ರಮೇಣ ಶ್ರೀಮಂತರಾಗಿ ಪಟ್ಟಣಗಳ ಆಡಳಿತದಲ್ಲಿ ಮುಖ್ಯರಾಗುತ್ತಿದ್ದರು ಎಂದು ತೀರ್ಮಾನಿಸಬಹುದು. ಅದೇ ರೀತಿ ಪಟ್ಟಣವೊಂದರಲ್ಲಿ ಸಂತೆಯನ್ನು ಸ್ಥಾಪಿಸಿದಾಗ ಅಲ್ಲಿಯ ಶೆಟ್ಟಿಗಳು, ಗೌಡರು, ಬಣಜಿಗರು ಮತ್ತು ಸಮಸ್ತ ಹಿರಿಯರು ಅದಕ್ಕೆ ಸಂಬಂಧಿಸಿದಂತೆ ಅನೇಕ ನಿಯಮಗಳನ್ನು ಮಾಡುತ್ತಿದ್ದರು. ಹೊಸದಾಗಿ ಸಂತೆ ಸ್ಥಾಪನೆಯಾದಾಗ ಸಂತೆಗೆ ಬಂದ ಸಗಟು ಧಾನ್ಯಗಳ ಮೇಲೆ ಒಂದು ವರ್ಷ ಯಾವ ತೆರಿಗೆಯನ್ನು ವಿಧಿಸುತ್ತಿರಲಿಲ್ಲವೆಂಬ ವಿಷಯವನ್ನು ಶಿಡ್ಲಘಟ್ಟ ತಾಲೂಕಿನ ಶಾಸನವೊಂದು ತಿಳಿಸುತ್ತದೆ. ಅನೇಕ ವೇಳೆ ಗ್ರಾಮವನ್ನು ಪಟ್ಟಣವನ್ನಾಗಿ ಪರಿವರ್ತಿಸುತ್ತಿದ್ದುದುಂಟು. ಕ್ರಿ. 1531ರ ಶಿಡ್ಲಘಟ್ಟ ಶಾಸನ ಇಂಥ ವಿಷಯವನ್ನು ದಾಖಲುಪಡಿಸುತ್ತದೆ. ಗರ್ಭಸರು ಮಹಾಪಾತ್ರ ತಿಮ್ಮಪ್ಪನೆಂಬುವನಿಗೆ ಬಸವಪಟ್ಟಣ ಗ್ರಾಮವನ್ನು ಸಂತೆಗೆ ಉಂಬಳಿ ಮಾನ್ಯವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ. ಸಂತೆಯನ್ನು ಪ್ರಾರಂಭಿಸಿ ಒಂದು ಗ್ರಾಮವನ್ನು ಪಟ್ಟಣವನ್ನಾಗಿ ಪರಿವರ್ತಿಸಿದಕ್ಕೆ ಇದು ನಿದರ್ಶನವಾಗಿದೆ. ಶ್ರೇಣಿಗಳು ಸಂತೆಗಳನ್ನು ಸ್ಥಾಪಿಸುತ್ತಿದ್ದವು. ಬೌರಿಂಗ್‌ಪೇಟೆ ನೊಣಮಂಗಳ ಗ್ರಾಮದ ಕ್ರಿ.ಶ. 1430ರ ಒಂದು ಶಾಸನವು ಐವತ್ತಾರು ರಾಷ್ಟ್ರಗಳ 'ಸಾಲುಮುಲೆ' ಸಮಸ್ತ ರೈತರು ಮತ್ತು ಪಾಂಚಾಲರೊಡನೆ ಒಂದು ಸಂತೆಯನ್ನು ಸ್ಥಾಪಿಸಿ ಆ ಸಂದರ್ಭದಲ್ಲಿ ಸಂತೆಯ ಪಟ್ಟಣಸ್ವಾಮಿಗೆ ಶೆಟ್ಟಿಗೆ ಭೂಮಿಯನ್ನು ಮಾನ್ಯವಾಗಿ ಕೊಟ್ಟರು ಎಂಬುದನ್ನು ತಿಳಿಸುತ್ತದೆ. ಶ್ರೇಣಿಗಳ ಮುಖಂಡರು ಸರ್ಕಾರಕ್ಕೆ ಅರ್ಜಿ ಹಾಕಿದಾಗ ಅದು ಹೊಸ ಪಟ್ಟಣಗಳನ್ನು ಕಟ್ಟುವ ಕೆಲಸವನ್ನು ಕೈಗೊಳ್ಳುತ್ತಿತ್ತು.

**ಪಟ್ಟಣಸ್ವಾಮಿ :** ಇವರಿಗೆ ಬೇರೆ ಬೇರೆ ಹೆಸರುಗಳಿದ್ದವು. ಉದಾಹರಣೆಗೆ ಶೆಟ್ಟಿ, ಪಟ್ಟಣಸ್ವಾಮಿ, ಉಭಯನಾನಾದೇಶಿ, ಮಹಾಪ್ರಭು, ನಾಡಪ್ರಭು, ಮಹಾವಡ್ಡವ್ಯವಹಾರಿ, ಮಹಾನಾಯಕಾಚಾರ್ಯ ಇವರು ಪೌರಾಡಳಿತ ಉಸ್ತುವಾರಿ ಸಂಬಂಧವಾಗಿ ಅಧಿಕಾರ ಹೊಂದಿದ್ದರು. ಶ್ರೇಣಿಯ ರಚನೆ ಮತ್ತು ಕೆಲಸ ಮಾಡುವ ರೀತಿ ಸ್ಥಳದಿಂದ ಸ್ಥಳಕ್ಕೆ ಮತ್ತು ಕಾಲದಿಂದ ಕಾಲಕ್ಕೆ ಬೇರೆಯಾಗಿದ್ದಿರಬೇಕು. ನಾಯಕನು ಸಂಸ್ಥೆಯ ವ್ಯವಹಾರವನ್ನು ಹತೋಟಿಯಲ್ಲಿಟ್ಟುಕೊಂಡಿದ್ದು, ಕೇಂದ್ರ ಸರ್ಕಾರದೊಡನೆ ವ್ಯವಹಾರಗಳಲ್ಲಿ ಅವರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದನು. ಪಟ್ಟಣಸ್ವಾಮಿ ಅಥವಾ 'ಶೆಟ್ಟಿ' ಒಂದು ಸ್ಥಳದ ವಾಣಿಜ್ಯ ಸಂಸ್ಥೆಗಳ ನಾಯಕನಾಗಿದ್ದನು. ಪಟ್ಟಣಸ್ವಾಮಿ ಅನೇಕ ವೇಳೆ ಪಟ್ಟಣದ ಸ್ಥಾಪಕನೂ ಆಗಿರುತ್ತಿದ್ದನು. ಕ್ರಿ.ಶ. 1430ರಲ್ಲಿ ಮಾರಗಲ್‌ಸಂತೆಯ ಪಟ್ಟಣಸ್ವಾಮಿ ಚಿಯ್ಯಿಬಿಸೆಟ್ಟಿಗೆ ಮಾನ್ಯವಾಗಿ ಹೊಲ ಮತ್ತು ಗದ್ದೆಯನ್ನು ಕೊಡಲಾಯಿತು. 1531ರಲ್ಲಿ ತಿಮ್ಮಪ್ಪನೆಂಬುವನಿಗೆ ಸಂತೆಗೆ ಮಾನ್ಯವಾಗಿ ಬಸವಪಟ್ಟಣ ಗ್ರಾಮವನ್ನು ಕೊಡಲಾಯಿತು. ಇದರ ಪಟ್ಟಣಸ್ವಾಮಿ ಹುದ್ದೆಯನ್ನು ಸರ್ಕಾರವು ಒಬ್ಬ ಪ್ರಮುಖ ವರ್ತಕನಿಗೆ ಕೊಡುತ್ತಿತ್ತು ಎಂದು ತಿಳಿಸುತ್ತದೆ. ಬೌರಿಂಗ್ ಪೇಟೆ ತಾಲ್ಲೂಕಿನ ಕಾಮಸಮುದ್ರ ಗ್ರಾಮದ ಕ್ರಿ.ಶ. 1426ರ ಶಾಸನವು ಚಿತಿವಿನಾಯಕ 'ಪಟ್ಟಣಸ್ವಾಮಿತನ'ವನ್ನು ಬಸ್ಸಿಸೆಟ್ಟಿಗೆ ಕೊಟ್ಟನೆಂದು ತಿಳಿಸುತ್ತದೆ. ಪಟ್ಟಣಸ್ವಾಮಿಯ ಮುಖ್ಯರಾಮನ 'ಮಾನ್ಯ' ಭೂಮಿಯಾಗಿತ್ತು. 1362ರಲ್ಲಿ ಕೈವಾರಸಂತೆಯ ಪಟ್ಟಣಸ್ವಾಮಿ ಪೇರಿಯನಾಯನನಿಗೆ ಸಮಸ್ತ ತೆರಿಗೆಗಳನ್ನು ಮನ್ನಾ ಮಾಡಿ (ಮಾನ್ಯ) ಭೂಮಿಯನ್ನು ಕೊಡಲಾಯಿತು. 1426ರಲ್ಲಿ ಬುಡಪಸೆಟ್ಟಿ ಪಟ್ಟಣಸ್ವಾಮಿತನವನ್ನು 'ಮಾನ್ಯ' ಸಹಿತ ಪಡೆದರು. ಪಟ್ಟಣಸ್ವಾಮಿಯ ಮುಖ್ಯ ಕರ್ತವ್ಯಗಳು ಪೌರಾಧ್ಯಕ್ಷತೆ ಮತ್ತು ಸಂತೆಯ ಉಸ್ತುವಾರಿಗಳಾಗಿದ್ದವು. ಸಂತೆಯ ವೆಚ್ಚವನ್ನು ಸುಂಕಗಳ ವಸೂಲಿಯಿಂದ ಪೂರೈಸುತ್ತಿದ್ದನು. ಅದು ಅವನ ಮತ್ತೊಂದು ಆದಾಯವೂ ಆಗಿತ್ತು. ಇತರ ತೆರಿಗೆಗಳೊಡನೆ 'ಸ್ವಾಮಿತನ'ದ ತೆರಿಗೆ ಮತ್ತು ಸೆಟ್ಟಿಗೆಳ ತೆರಿಗೆಗಳನ್ನು ವಿಧಿಸಬೇಕಿತ್ತು.

ಇಂದು ರೈತ ಬೆಳೆದ ಸಕಲ ಸರಕುಗಳಿಗೂ ವಿಲೇವಾರಿ ಮಾಡಲು ಸಾಕಷ್ಟು ಸೌಲಭ್ಯಗಳಿದ್ದು, ಕೃಷಿಗೆ ಪೋಷಣೆಯನ್ನೊದಗಿಸುತ್ತಿದೆ. ಮಾರುಕಟ್ಟೆ ವ್ಯವಸ್ಥೆಯಿಂದಾಗಿ ರೈತರು ಆರ್ಥಿಕವಾಗಿ ಸದೃಢರಾಗಲು ಸಾಧ್ಯವಾಗಿದೆ. ಬೆಲೆ ನಿರ್ಧರಿಸುವಲ್ಲಿ ಬೇಡಿಕೆ ನಿರ್ಧರಿಸುವಲ್ಲಿ ಮಾರುಕಟ್ಟೆಗಳು ಮಾರ್ಗದರ್ಶಕವಾಗಿ ಕೆಲಸ ನಿರ್ವಹಿಸುತ್ತಿವೆ. ಆಹಾರ ಬೆಳೆಗಳಿಗಷ್ಟೇ ಸೀಮಿತವಾಗಿದ್ದ ಕೃಷಿ ಇಂದು ವಿಸ್ತೃತರೂಪ ಪಡೆದುಕೊಂಡಿದೆ. ಆಹಾರೇತರ ಉತ್ಪನ್ನಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ರೈತರು ಇದರಿಂದ ಆರ್ಥಿಕವಾಗಿ ಸದೃಢನಾದರೂ ಆಹಾರ ಬೆಳೆಗಳಲ್ಲಿ ಸಮತೋಲನ ಕಾಪಾಡಲಾಗುತ್ತಿಲ್ಲ. ಹೀಗಿದ್ದಾಗ್ಯೂ ಇದರಿಂದಾಗುವ ಲಾಭವನ್ನು ಅಲ್ಲಗಳೆಯುವಂತಿಲ್ಲ. ಮಾರುಕಟ್ಟೆ ವ್ಯವಸ್ಥೆಯಿಂದ ರೈತನ ಜ್ಞಾನ ವಿಕಾಸವಾಗುತ್ತಿದೆ. ವೈವಿಧ್ಯಮಯವಾದ ಬೆಳೆಗಳನ್ನು ಕೃಷಿ ಮಾಡುತ್ತಿದ್ದಾನೆ. ಮಾರುಕಟ್ಟೆಗೆ ಸರ್ಕಾರದ ಕಾನೂನು ಕಟ್ಟಳೆಗಳು ಅನ್ವಯಿಸುತ್ತವಾದುದರಿಂದ ರೈತ ನಿರ್ಭಯವಾಗಿ ಬೆಳೆಮಾಡುವಲ್ಲಿ ತೊಡಗಿಸಿಕೊಳ್ಳುತ್ತಾನೆ.

*ವಿ. ಆರ್. ಬಿ.*

**ಸಂಪಿಗೆ** ಇದು ಮ್ಯಾಗ್ನೋಲಿಯೇಸೀ ಕುಟುಂಬಕ್ಕೆ ಸೇರಿದ್ದು, ಮೈಕೋಕೇಲಿಯ ಚಂಪಕ ಇದರ ವೈಜ್ಞಾನಿಕ ನಾಮ. ಸಂಪಿಗೆಪೂವ್ವು, ಚಂಪಕಮು, ಚೆಂಬಗಂ, ಚಂಪ, ಚಂಪಕ, ಸುವರ್ಣ ಇವು ಸಂಪಿಗೆಯ ಇತರ ಹೆಸರುಗಳು. ಹೆಸರಾಂತ ಸಸ್ಯಶಾಸ್ತ್ರಜ್ಞ ಪಿ.ಎ. ಮೈಕೇಲಿ ಎಂಬುವವರ ಜ್ಞಾಪಕಾರ್ಥವಾಗಿ ಈ ಹೆಸರಿಡಲಾಗಿದೆ. ಇದರ ತವರೂರು ಭಾರತ, ಮಲೇಷಿಯಾ. ಬಯಲು ಪ್ರದೇಶಗಳು ಇಳಿಜಾರು ಗುಡ್ಡಗಾಡು ಪ್ರದೇಶದಲ್ಲಿ ಬೆಳೆಯುತ್ತದೆ. ಭಾರತದ ಉಷ್ಣವಲಯದ ಪೂರ್ವಭಾಗದಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಯಾವಾಗಲೂ ಹಸುರಿನಿಂದ ಆವೃತ್ತವಾಗಿರುತ್ತದೆ. ಈ ಮರವನ್ನು ಸುವಾಸನೆಯ ಹೂಗಳಿಗಾಗಿ ತೋಟಗಳಲ್ಲಿ, ಉದ್ಯಾನವನಗಳಲ್ಲಿ ಅಲಂಕಾರಕ್ಕೆ ಮತ್ತು ದೇವಾಲಯಗಳ ಬಳಿಯೇ ಪೂಜೆಗಾಗಿ ಬೆಳೆಯುತ್ತಾರೆ.

ಹೂವುಗಳೊಂದಿಗೆ ಮಿಶ್ರ ಮಾಲೆ, ಹಾರ ತುರಾಯಿಗಳನ್ನು ಕಟ್ಟುತ್ತಾರೆ. ಸಂಪಿಗೆ ತೈಲ ಒಂದು ಜನಪ್ರಿಯ ಸುಗಂಧ ಎಣ್ಣೆಯಾಗಿದ್ದು ವಿದೇಶಗಳಲ್ಲಿ ಅಧಿಕ ಬೇಡಿಕೆಯನ್ನು ಹೊಂದಿದೆ. ತೈಲವನ್ನು ಕೇಶತೈಲಗಳು, ಸಾಬೂನು, ಅತ್ತರು, ಊದುಬತ್ತಿ ತಯಾರಿಕೆಯಲ್ಲಿ ಬಳಸುತ್ತಾರೆ. ಮರದ ವಿವಿಧ ಭಾಗಗಳು ಔಷಧೀಯ ಗುಣಗಳನ್ನು ಹೊಂದಿದ್ದು ಬಹು ಉಪಯುಕ್ತವಾಗಿವೆ. ಎಲೆಯಿಂದ ತೆಗೆದ ರಸದೊಂದಿಗೆ ಜೇನುತುಪ್ಪ ಬೆರೆಸಿ ಹೊಟ್ಟೆನೋವಿಗೆ ಕೊಡುತ್ತಾರೆ. ತೊಗಟೆಯನ್ನು ಪುಡಿ ಮಾಡಿ ಜ್ವರದ ನಿವಾರಣೆಗೆ ಬಳಸುತ್ತಾರೆ. ಬೇರನ್ನು ಒಣಗಿಸಿ ತೇದು ಗಂಧವನ್ನು

ತೆಗೆದು ಮೊಸರು ಇಲ್ಲವೇ ಒಡೆದ ಹಾಲಿನೊಂದಿಗೆ ಕುರು ಹಾಗೂ ಊತಗೊಂಡ ದೇಹದ ಭಾಗಗಳಿಗೆ ಹಚ್ಚುತ್ತಾರೆ. ಕೊಬ್ಬರಿ ಎಣ್ಣೆಯೊಂದಿಗೆ ಸಂಪಿಗೆ ಹೂವುಗಳನ್ನೂ ಅರೆದು ತಯಾರಿಸಿದ ಗಂಧವನ್ನು ಸಂಧಿವಾತ ರೋಗಗಳಿಗೆ ಲೇಪನ ಮಾಡುವರು.




**ಬೆಳೆಯುವ ವಿಧಾನ :** ಈ ಬೆಳೆಗೆ ಮರಳು ಮಿಶ್ರಿತ ಗೋಡು ಮಣ್ಣು ಹೆಚ್ಚು ಯೋಗ್ಯವಾದುದು. ಒಣ ಬೇಸಾಯದ ಬೆಳೆಯಾಗಿದ್ದು ಎಲ್ಲಾ ವಾತಾವರಣವನ್ನು ಬೆಳೆಯುತ್ತದೆ. ಬಿಸಿಲು ಹೆಚ್ಚಿದ್ದು ತೇವದಿಂದ ಕೂಡಿದ ವಾತಾವರಣ ಇದ್ದರೆ ಒಳ್ಳೆಯದು.

ಸಂಪಿಗೆಯ ಸಸ್ಯವನ್ನು 'ಲಿಂಗ' ಮತ್ತು 'ನಿರ್ಲಿಂಗ' ವಿಧಾನದಿಂದ ಬೆಳೆಸಬಹುದು. ಲಿಂಗ ಪದ್ಧತಿ ಬಲು ನಿಧಾನ ಮತ್ತು ಹೂವು ಬಿಡಲು 8 ರಿಂದ 10 ವರುಷಗಳು ಬೇಕು. ನಿರ್ಲಿಂಗ ವಿಧಾನದಿಂದ ಅಭಿವೃದ್ಧಿಪಡಿಸಿದ ಗಿಡಗಳು ನೆಟ್ಟ ವರುಷವೇ ಹೂವು ಬಿಡುತ್ತವೆ. ಹಾಗೆಯೇ ಗೂಟಿ ಕಟ್ಟುವ ಪದ್ಧತಿಯೂ ಇದೆ, ಆದರೆ ಇದರಲ್ಲೂ ಹೆಚ್ಚಿನ ಯಶಸ್ಸು ಕಂಡುಬರುವುದಿಲ್ಲ. ಹೆಚ್ಚು ಬಳಕೆಯಲ್ಲಿರುವುದು ಕಸಿ ಪದ್ಧತಿ. ಬೀಜ ಸಸಿಗಳನ್ನು ಕುಂಡ ಇಲ್ಲವೇ ಪಾಲಿಥೀನ್ ಚೀಲಗಳಲ್ಲಿ ಬೆಳೆಸಿ ತಾಯಿಗಿಡದ ಪಕ್ಕದಲ್ಲಿ ಇಟ್ಟು ಬೇರು ಸಸಿಯ ಕಾಂಡ ಮತ್ತು ಕಸಿ ಕೊಂಬೆಯ ತೊಗಟೆ ಬಿಡಿಸಿ ಎರಡನ್ನು ಜೋಡಿಸಿ ಕಟ್ಟುವುದರಿಂದ ಗಾಯ ಭಾಗಗಳು ಕೂಡುತ್ತವೆ. ಈ ರೀತಿ ಮಾಡಲು 7 ರಿಂದ 8 ವಾರಗಳು ಬೇಕು. ಬೇರು ಸಸಿಯ ತಲೆಯನ್ನು ಕಸಿ ಗಂಟಿನ ಮೇಲೆ ಕಚ್ಚು ಕೊಟ್ಟು ಸವರಬೇಕು ಹಾಗೆಯೇ ಕಸಿ ಕೊಂಬೆಯ ಬುಡ ಭಾಗವನ್ನು ಕಸಿ ಗಂಟಿನ ಸ್ವಲ್ಪ ಕೆಳಗೆ ಕಚ್ಚು ಕೊಟ್ಟು ಹಂತ ಹಂತವಾಗಿ ಬೇರ್ಪಡಿಸುವುದರಿಂದ ಕಸಿಗಿಡಗಳನ್ನು ತಯಾರಿಸಬಹುದು. ಈ ಎಲ್ಲಾ ಬಗೆಯ ವಿಧಾನಗಳು ನೆರಳಿನಲ್ಲಿ ನಡೆಯಬೇಕು. ಮಳೆಗಾಲದಲ್ಲಿ ಕಸಿ ಗಿಡಗಳನ್ನು ನೆಡಬೇಕು.

ಭೂಮಿಯನ್ನು ಎರಡು ಭಾರಿ ಉಳುಮೆ ಮಾಡಿ 10 ಮೀಟರ್ ಅಂತರದಲ್ಲಿ 1 ಮೀಟರ್ ಘನಾಕೃತಿಯ ಗುಂಡಿಗಳನ್ನು ತೆಗೆದು ಬಿಸಿಲಿಗೆ ಒಂದು ವಾರ ಬಿಟ್ಟು, ಗುಂಡಿಗಳಿಗೆ ಸಮ ಪ್ರಮಾಣದ ಮೇಲ್ಮಣ್ಣು ಮತ್ತು ತಿಪ್ಪೆ ಗೊಬ್ಬರಗಳಿಂದ ತುಂಬಿ ನೀರು ಹಾಕಿದರೆ ಗಿಡಗಳು ಸ್ಥಿರವಾಗಿ ನಿಂತುಕೊಳ್ಳುವುವು. ಸಂಪಿಗೆ ಗಿಡಕ್ಕೆ ಹೆಚ್ಚಿನ ಗೊಬ್ಬರದ ಅವಶ್ಯಕತೆ ಇಲ್ಲ. ವರುಷಕ್ಕೊಮ್ಮೆ ಮಳೆಗಾಲ ಆರಂಭವಾದಾಗ ಪ್ರತಿ ಗಿಡಕ್ಕೆ 10 ರಿಂದ 12 ಕೆ.ಜಿ. ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರವನ್ನು ಕೊಟ್ಟರೆ ಸಾಕು. ನೆಟ್ಟ ಗಿಡಗಳಿಗೆ ಹದವಾಗಿ ನೀರು ಕೊಡಬೇಕು. ಗಿಡಗಳು ಬೆಳೆದು ದೊಡ್ಡವಾಗಿ ಬೇರು ಆಳವಾಗಿ ಬಿಟ್ಟ ಅನಂತರ ನೀರಿನ ಅವಶ್ಯಕತೆ ಇರುವುದಿಲ್ಲ.

ಗಿಡಗಳ ಬುಡದಲ್ಲಿ ದೊಡ್ಡದಾಗಿ ಪಾತಿಗಳನ್ನು ಮಾಡುವುದರಿಂದ ಬಿದ್ದ ಮಳೆ ನೀರು ಪಾತಿಗಳಲ್ಲಿ ನಿಲ್ಲುತ್ತದೆ. ಒಣಗಿದ ಎಲೆ ಹುಲ್ಲುಗಳನ್ನು ಬುಡದ ಪಾತಿಯಲ್ಲಿ ಹರಡಿ. ಕಳೆಗಳು ಬಾರದಂತೆ ಮಣ್ಣನ್ನು ಕೆದಕಿ ಅಂತರ ಬೇಸಾಯ ಮಾಡಬೇಕು. ಸಂಪಿಗೆ ನೆಟ್ಟಗೆ ಬೆಳೆಯುವ ಮರವಾದ್ದರಿಂದ, ರೆಂಬೆಗಳು ಕಾಂಡದ ಬುಡದಿಂದ ಹರಡಿ ಬೆಳೆಯುವುದರಿಂದ ನೆಲಮಟ್ಟದಿಂದ ಒಂದು ಮೀಟರ್ ಎತ್ತರದವರೆಗೆ ರೆಂಬೆಗಳನ್ನು ತೆಗೆಯಬೇಕು. ಕಸಿಗಿಡಗಳಲ್ಲಿ ಪದೇ ಪದೇ ಪಕ್ಕದಲ್ಲಿ ಬೇರು ಸಸಿಯಿಂದ ಚಿಗುರು ಬರುತ್ತದೆ. ಅದನ್ನು ಆಗಿಂದಾಗ್ಗೆ ತೆಗೆಯಬೇಕು. ಒಣಗಿದ, ರೋಗದಿಂದ ಕೂಡಿದ ಕೊಂಬೆಗಳನ್ನು ತೆಗೆಯಬೇಕು.

ಸಂಪಿಗೆ ಹೂವಿನ ಬಣ್ಣದ ಆಧಾರದ ಮೇಲೆ ಐದು ಬಗೆಗಳಾಗಿ ವಿಂಗಡಿಸಿದ್ದಾರೆ. ಆದರೆ ಸಂಪಿಗೆಯಲ್ಲಿ ನಿರ್ದಿಷ್ಟ ತಳಿಗಳಾವು ಇಲ್ಲ. ಬಿಳಿ ಸಂಪಿಗೆ, ಕೆಂಡ ಸಂಪಿಗೆ, ಕೆನೆ ಬಿಳುಪು ಸಂಪಿಗೆ, ಚೈನಾ ಸಂಪಿಗೆ, ಸಿಂಹಾಚಲ ಸಂಪಿಗೆ ಇತ್ಯಾದಿ.

ನಿರ್ಲಿಂಗ ಪದ್ಧತಿಯಿಂದ ತಯಾರಿಸಿದ ಗಿಡಗಳು ನೆಟ್ಟ ವರುಷವೇ ಹೂ ಬಿಡುತ್ತವೆ. ಗಿಡಗಳ ಬೆಳೆವಣಿಗೆಯ ದೃಷ್ಟಿಯಿಂದ ಮೊದಲ ಒಂದೆರಡು ವರುಷ ಬಿಟ್ಟ ಮೊಗ್ಗುಗಳನ್ನು ತೆಗೆದು ಹಾಕುವುದರಿಂದ ಉತ್ತಮ ಇಳುವರಿ ಸಿಗುತ್ತದೆ. ಬೇಸಗೆ ಮತ್ತು ಚಳಿಗಾಲದಲ್ಲಿ ಸಂಪಿಗೆ ಹೂವು ಹೆಚ್ಚು ಬಿಡುತ್ತವೆ. ಹೂವನ್ನು ನಸುಕಿನ ವೇಳೆ ಬಿಡಿಸುವುದು ಉತ್ತಮ. ಬಿಡಿಸಿದ ಹೂವನ್ನು ತೆಳು ಬಿದಿರು ಬುಟ್ಟಿಗಳಲ್ಲಿ ಸಡಿಲವಾಗಿ ತುಂಬಿ ಸಾಗಿಸಲಾಗುತ್ತದೆ. ಎಲೆಗಳಲ್ಲಿ ಪಿಂಡಿ ಕಟ್ಟಿ ಸಹ ಕಳುಹಿಸುವುದು ರೂಢಿ.

**ರೋಗಗಳು :** ಇದನ್ನು ಬಾಧಿಸುವ ರೋಗಗಳು ಬಹಳ ಕಡಿಮೆ. ದಕ್ಷಿಣ ಭಾರತದಲ್ಲಿ ತೋಕೆ ಚಿಟ್ಟೆ ಸಂಪಿಗೆಯ ಎಲೆಯನ್ನು ತಿನ್ನುತ್ತದೆ. ಇದನ್ನು ತಡೆಗಟ್ಟಲು ಶೇ. 0.2 ಮೆಟಸಿಸ್ಟಾಕ್ಸ್ ಔಷಧವನ್ನು ಸಿಂಪಡಿಸಬೇಕು. ಹಾಗೆಯೇ 'ಟಾರ್‌ಚುಕ್ಕೆ' ಎಂಬ ರೋಗ ಕೂಡ ಕಾಣಿಸಿಕೊಳ್ಳುತ್ತದೆ. ಇದರ ನಿವಾರಣೆಗೆ ಶೇ. 0.2 ಡೈಥೇನ್ - ಎಮ್ - 45 ಇಲ್ಲವೇ ಜಡ್-78 ಎಂಬ ಔಷಧವನ್ನು ಸಿಂಪಡಿಸಬೇಕು.

**ಎಸ್.ಕೆ.ಎನ್.**

**ಸಂಬಾರ ಸಸ್ಯಗಳು** ಸಂಬಾರ ಪದಾರ್ಥಗಳನ್ನು ಬೆಳೆಸುವಲ್ಲಿ ಭಾರತ ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಿದೆ. ವಿದೇಶಿಯರೂ ಸಂಬಾರ ಪದಾರ್ಥಗಳಿಗಾಗಿಯೇ ಭಾರತದೊಡನೆ ಸಂಪರ್ಕ ಹೊಂದಿ ಸಾಕಷ್ಟು ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಈ ಪದಾರ್ಥಗಳು ಆರೋಗ್ಯದ ದೃಷ್ಟಿಯಿಂದ ಹೆಚ್ಚು ಪ್ರಾಮುಖ್ಯ ಪಡೆದಿದ್ದು ತುಂಬಾ ಬೆಲೆ ಬಾಳುವಂಥವಾಗಿವೆ. ಹೆಚ್ಚಾಗಿ ಬಳಕೆಯಲ್ಲಿರುವ ಸಂಬಾರ ಪದಾರ್ಥಗಳೆಂದರೆ ಮೆಣಸು, ಏಲಕ್ಕಿ, ಲವಂಗ, ದಾಲ್ಚಿನ್ನಿ, ಕೊತ್ತಂಬರಿ, ಶುಂಠಿ ಮುಂತಾದವು.

**1. ಮೆಣಸು (ಪೆಪ್ಪರ್):** ದಕ್ಷಿಣ ಭಾರತದ ಕೇರಳ ಪ್ರಾಂತ್ಯದಲ್ಲಿರುವ ಮಲಬಾರ್‌ನಲ್ಲಿ ಬೆಳೆಯುವ ಮೆಣಸು ಪ್ರಪಂಚ ವಿಖ್ಯಾತಿಯನ್ನು ಪಡೆದಿದೆ. ಸಸ್ಯಶಾಸ್ತ್ರದಲ್ಲಿ 'ಪೈಪರ್ ನೈಗ್ರಮ್' ಎಂದು ಕರೆಯಲ್ಪಡುವ ಇದು 'ಪೈಪರೇಸಿ' ಕುಟುಂಬಕ್ಕೆ ಸೇರಿದ ಗಿಡ. ಮೆಣಸಿನ ಉತ್ಪತ್ತಿ ಭಾರತದಲ್ಲಿ ಅತ್ಯಧಿಕ. ಇದನ್ನು ಬೆಳೆಯುವ ಇತರ ಸ್ಥಳಗಳೆಂದರೆ ಇಂಡೋನೇಷಿಯ ದ್ವೀಪಗಳು, ಮಲಯ, ಇಂಡೋಚೈನ, ಮಡಗಾಸ್ಕರ್, ಕೊಮೊರೋಕ್ಕೊ ದ್ವೀಪಗಳು ಮತ್ತು ಥೈಲ್ಯಾಂಡ್, ಪ್ರಪಂಚದ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಇಂಡೋನೇಷಿಯಾದ ಮೆಣಸಿನ ತೋಟಗಳನ್ನು ನಾಶಪಡಿಸಲಾಯಿತು. ಆಗಿನಿಂದಲೂ ಭಾರತದ ಮೆಣಸಿಗೆ ಬಹಳ ಬೇಡಿಕೆಯುಂಟಾಯಿತು. ಮೆಣಸಿನಲ್ಲಿ ಬಿಳಿ ಮೆಣಸು ಮತ್ತು ಕಪ್ಪು ಮೆಣಸು ಎಂದು ಎರಡು ವಿಧ. ಬಿಳಿ ಮೆಣಸಿನ ಉತ್ಪಾದನೆ ಬಹಳ ಕಡಿಮೆ ಇದ್ದು, ಕರಿ ಮೆಣಸು ಹೆಚ್ಚಿನ ಪ್ರಾಮುಖ್ಯವನ್ನು ಪಡೆದುಕೊಂಡಿದೆ. ಅದರಲ್ಲೂ 'ತೆಲ್ಲಿ ಚೆರಿ' ಮತ್ತು 'ಅಲ್ಲೆಪೆ' ಮೆಣಸುಗಳು ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗಿದ್ದು ಉತ್ತಮ ವಾಸನೆ ಮತ್ತು ರುಚಿಯನ್ನು ಹೊಂದಿವೆ. ಇವುಗಳ ಬೆಲೆಯೂ ಹೆಚ್ಚು.

ಮೆಣಸಿನ ಗಿಡ ಸು. 15 ಸೆಂ. ಮೀ.ಗಳಿಗಿಂತಲೂ ಹೆಚ್ಚು ಮಳೆ ಬೀಳುವ ಮತ್ತು ತೇವಾಂಶ ಹೆಚ್ಚಾಗಿರುವ ಉಷ್ಣವಲಯ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದು ಹಲವಾರು ವರ್ಷಗಳ ಕಾಲ ಫಸಲನ್ನು ಕೊಡುವ ಬಳ್ಳಿ. ಸಮುದ್ರ ಮಟ್ಟದಿಂದ ಸು. 1200 ಮೀ. ಎತ್ತರದ ಪ್ರದೇಶಗಳಲ್ಲೂ ಬೇಸಾಯ ಮಾಡುತ್ತಾರೆ. ವಿವಿಧ ಮಣ್ಣುಗಳಲ್ಲಿ ಬೆಳೆಯಬಲ್ಲದು. ಸಾಮಾನ್ಯವಾಗಿ ಕಾಫಿ, ಟೀ ಮತ್ತು ಅಡಕೆಗಳ ಬೇಸಾಯಕ್ಕೆ ಹೊಂದುವ ಮಣ್ಣೇ ಇದಕ್ಕೂ ಹೊಂದುತ್ತದೆ. ಆದರಿಂದ ಕಾಫಿ ಮತ್ತು ಅಡಕೆ ತೋಟಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಕಾಫಿ ತೋಟಗಳಲ್ಲಿ ನೆರಳಿಗಾಗಿ ಹಾಕಿದ ಮರಗಳಿಗೆ ಮೆಣಸಿನ ಬಳ್ಳಿಗಳನ್ನು ಹಬ್ಬಿಸುತ್ತಾರೆ. ಅಡಕೆ ತೋಟಗಳಲ್ಲಿ ಅಡಕೆ ಮರಕ್ಕೆ ಇದನ್ನು ಹಬ್ಬಿಸುತ್ತಾರೆ.

ಹೊಸ ಜಾಗಗಳಲ್ಲಿ ಮೆಣಸನ್ನು ಬೆಳೆಸಬೇಕಾದಾಗ ನೆರಳನ್ನು ಕೊಡುವ ಸಸಿಗಳನ್ನು ಸುಮಾರು ಹನ್ನೆರಡು ಅಡಿ ಅಂತರದಲ್ಲಿ ನೆಡಬೇಕು. ಅವು ಬೆಳೆದ ಅನಂತರ ಮೆಣಸನ್ನು ಬೆಳೆಸಬೇಕು. ಒಂದು ಹೆಕ್ಟೇರಿಗೆ 750 ಮೆಣಸಿನ ಬಳ್ಳಿಗಳು ಬೇಕಾಗುತ್ತವೆ. ಅಡಕೆ ತೋಟಗಳಲ್ಲಿ ಮೆಣಸನ್ನು ಬೆಳೆಸಲು ಸು. 375 ಬಳ್ಳಿಗಳೂ ಕಾಫಿ ಮತ್ತು ಕಿತ್ತಳೆ ತೋಟಗಳಲ್ಲಿ ಸು. 175 ಬಳ್ಳಿಗಳೂ ಬೇಕಾಗುತ್ತವೆ. ಈ ಬಳ್ಳಿಗಳಲ್ಲಿ ಎರಡು ವಿಧ.

**1. ಏಕಲಿಂಗ ಪುಷ್ಪದ ಬಳ್ಳಿಗಳು :** ಇವುಗಳಲ್ಲಿರುವ ಹೂವೆಲ್ಲಾ ಗಂಡು ಅಥವಾ ಹೆಣ್ಣು. ಗಂಡು ಹೂವಿರುವ ಬಳ್ಳಿಗಳು ಫಲಕೊಡುವುದಿಲ್ಲ.

**2. ದ್ವಿಲಿಂಗ ಪುಷ್ಪಗಳು :** ಎಲ್ಲ ಹೂಗಳೂ ಫಲಕೊಡುತ್ತವೆ. ಉತ್ಪಾದನೆಗೆ ದ್ವಿಲಿಂಗ ಪುಷ್ಪಗಳನ್ನೊಳಗೊಂಡ ಬಳ್ಳಿಯನ್ನು ಉಪಯೋಗಿಸುವುದು ಒಳ್ಳೆಯದು. ಒಳ್ಳೆ ಜಾತಿಯ ಸುಮಾರು ಮೂರು ಅಡಿ ಉದ್ದದ ಬಳ್ಳಿಗಳನ್ನು ಕತ್ತರಿಸಿಕೊಂಡು ಪ್ರತಿ ಪಾತಿಯಲ್ಲೂ 6-8 ತುಂಡುಗಳನ್ನು ನೆಡುವುದರಿಂದ ಅವುಗಳಲ್ಲಿ ಒಂದು ಅಥವಾ ಎರಡಾದರೂ ಚಿಗುರಿ ಬೆಳೆಯುತ್ತವೆ. ನೆಡುವಾಗ ಅರ್ಧಭಾಗದಷ್ಟು ಬಳ್ಳಿ ಭೂಮಿಯಲ್ಲಿ ಹುದುಗಿರುತ್ತದೆ. ನೆಡುವ ಮೊದಲು, ನೆರಳು ಮರದ ಹತ್ತಿರ ಹಳ್ಳವನ್ನು ತೋಡಿ ಒಳ್ಳೆಯ ಮಣ್ಣು ಮತ್ತು ಸುಮಾರು 8 ಕಿ.ಗ್ರಾಂ.ಗಳಷ್ಟು ಕೊಟ್ಟಿಗೆ ಗೊಬ್ಬರವನ್ನು ಸೇರಿಸಬೇಕು. ಬಳ್ಳಿ ಚಿಗುರಿ ಬೆಳೆದಂತೆಲ್ಲಾ ಅದನ್ನು ನೆರಳು ಮರಕ್ಕೆ ದಾರದಿಂದ ಕಟ್ಟಬೇಕು. ಬಳ್ಳಿಗಳು ಸ್ವಲ್ಪ ಬೆಳೆದ ಮೇಲೆ ದಾರದ ಅವಶ್ಯಕತೆ ಇಲ್ಲ. ಪ್ರತಿ ವರ್ಷವೂ ಗೊಬ್ಬರ ಹಾಕಿ ಬಳ್ಳಿಗಳನ್ನು ತುಂಬಾ ಮೇಲಕ್ಕೆ ಹೋಗದಂತೆ ಸ್ವಲ್ಪ ಕತ್ತರಿಸಬೇಕು. ನೆರಳು ಮರಗಳು ಅಧಿಕವಾಗಿ ಬೆಳೆಯದಂತೆ ಕತ್ತರಿಸಬೇಕು. ನೆಟ್ಟ ನಾಲ್ಕನೆಯ ವರ್ಷದಿಂದ ಬಳ್ಳಿಗಳು ಫಲಕೊಡುತ್ತವೆ. ಆದರೆ ಲಾಭದಾಯಕ ಫಲ ದೊರೆಯುವುದು ಆರನೆಯ ವರ್ಷದಿಂದ. ಮೆಣಸು ಸರಿಯಾದ ಹದಕ್ಕೆ ಬಲಿತಾಗ ಗುಚ್ಛಗಳನ್ನು ಕಿತ್ತು ಅವುಗಳಿಂದ ಫಲವನ್ನು ಬೇರ್ಪಡಿಸಿ ಒಣಗಲು ಹಾಕಬೇಕು. ಒಣಗಲು ಸು. 6-7 ದಿನಗಳು ಬೇಕು. ಚೆನ್ನಾಗಿ ಒಣಗಿದಾಗ ಫಲವು ಕಪ್ಪು ಬಣ್ಣಕ್ಕೆ ತಿರುಗಿ ಮೇಲ್ಭಾಗ ಸುಕ್ಕುಗಟ್ಟುತ್ತದೆ. ಚೆನ್ನಾಗಿ ಬೆಳೆಸಿದರೆ ಪ್ರತಿ ಬಳ್ಳಿಯಿಂದಲೂ ವರ್ಷಕ್ಕೆ 3-3.5 ಕ್ರಿ.ಗ್ರಾ. ಗಳಷ್ಟು ಒಣಗಿದ ಮೆಣಸು ಸಿಗುತ್ತದೆ. ಇದರಿಂದ ನವೀನ ರೀತಿಯಲ್ಲಿ ಎಣ್ಣೆಯನ್ನು ಬಟ್ಟಿ ಇಳಿಸಿ ಅಮೆರಿಕಾ ಮತ್ತು ಯೂರೋಪ್ ದೇಶಗಳಿಗೆ ರಫ್ತು ಮಾಡುತ್ತಾರೆ. ಪ್ರಪಂಚದಲ್ಲಿ ಈ ಎಣ್ಣೆ ಸು. 15-20 ಟನ್‌ಗಳಷ್ಟು ತಯಾರಾಗುತ್ತದೆಂದು ಅಂದಾಜು ಮಾಡಲಾಗಿದೆ.

**ಬಿಳಿ ಮೆಣಸು :** ಬಿಳಿ ಮೆಣಸನ್ನು ಸಹ ಕಪ್ಪು ಮೆಣಸಿನಂತೆಯೇ ಸಸ್ಯಾಭಿವೃದ್ಧಿ ಮತ್ತು ಬೇಸಾಯ ಮಾಡಬೇಕು. ಫಲ ಬಿಟ್ಟಾಗ ಗಿಡದ ಮೇಲೆ ಹೆಚ್ಚು ಬಲಿಯಲು ಬಿಡಬೇಕು. ಅಚ್ಚಕಿತ್ತಳೆ ಬಣ್ಣಕ್ಕೆ ತಿರುಗಿದಾಗ ಗುಚ್ಛಗಳನ್ನು ಕಿತ್ತು ಒಂದೆಡೆ ಗುಡ್ಡೆ ಹಾಕಿಡಬೇಕು. ಆಗ ಗುಚ್ಛಗಳಲ್ಲಿರುವ ಎಲ್ಲಾ ಮೆಣಸು ಹಣ್ಣಾಗುತ್ತವೆ. ಅನಂತರ ಮೆಣಸನ್ನು ಗುಚ್ಛದಿಂದ ಬೇರ್ಪಡಿಸಿ ನೀರಿನಲ್ಲಿ ಒಂದು ದಿನದ ಮಟ್ಟಿಗೆ ನೆನೆಸಿಟ್ಟರೆ ಹಣ್ಣಿನ ತಿರುಳು ಮೆತ್ತಗಾಗುತ್ತದೆ. ಇದನ್ನು ಕೈಗಳಿಂದ ಉಜ್ಜಿದ ತಿರುಳನ್ನು ಬೇರ್ಪಡಿಸಿದ ಮೇಲೆ ಚೆನ್ನಾಗಿ ತೊಳೆದು ಬಿಸಿಲಿನಲ್ಲಿ ಒಣಗಿಸಬೇಕು. ಒಣಗಿದಾಗ ಬಿಳಿ ಬಣ್ಣವನ್ನು ಪಡೆದುಕೊಳ್ಳುತ್ತದೆ ಇದೇ ಬಿಳಿ ಮೆಣಸು. ಬಿಳಿ ಮೆಣಸಿನಲ್ಲಿ ಖಾರದ ಅಂಶ ಕಡಿಮೆ, ಸುವಾಸನೆಯೂ ಕಡಿಮೆ, ಬೇಡಿಕೆಯೂ ಕಡಿಮೆ. ಆದ್ದರಿಂದ ಇದನ್ನು ಹೆಚ್ಚಾಗಿ ಬೆಳೆಯುವುದಿಲ್ಲ.

**ಮರಾಟಿಮೊಗ್ಗು(ಲಿಸಿಯಮ್ ಅನಿಸಟಮ್ ಲಿನ್):** ಬಹುಕಾಲ ದಿಂದಲೂ ವೈದ್ಯಕೀಯ ಮತ್ತು ಅಡುಗೆ ಮನೆಗಳಲ್ಲಿ ಬಹು ಉಪಯೋಗದ ವಸ್ತು ಇದಾಗಿದೆ. ಈ ಸಣ್ಣ ಮರ ಹೆಚ್ಚಾಗಿ ಬೆಳೆಯುವುದು ಚೀನಾ ದೇಶದಲ್ಲಿ. ಇತರೆ ದೇಶಗಳವರು ಚೀನಾದಿಂದ ಇದನ್ನು ಆಮದು ಮಾಡಿಕೊಳ್ಳುತ್ತಾರೆ. ಈ ಮರದ ಕೃಷಿ ಇನ್ನಾವ ದೇಶದಲ್ಲೂ ಇಲ್ಲ. ಜಾಕಾಯಿ, ಜಾಪತ್ರೆ, ಲವಂಗಗಳ ಜೊತೆಗೇ ಇದನ್ನು ಬಳಸುತ್ತಾರೆ.

ಕನ್ನಡದಲ್ಲಿ ಬಳಕೆಯಲ್ಲಿರುವ ಮರಾಟಿ ಮೊಗ್ಗು ಪದಕ್ಕೂ ಇತರೆ ಭಾರತೀಯ ಭಾಷೆಗಳಲ್ಲಿರುವ ಇದರ ಹೆಸರಿಗೂ ಯಾವ ಸಂಬಂಧವೂ ಇಲ್ಲ. ಹಿಂದಿ, ಗುಜರಾತಿ, ಮರಾಠಿ, ತೆಲುಗು ಭಾಷೆಗಳಲ್ಲಿ ಅನಾಸ್‌ಫೋಲ್, ಅನಾಸ್‌ಫಲ್, ಅನಾಸಪೂವು ಎಂದೂ ಬೊಂಬಾಯಿ ಪ್ರಾಂತ್ಯದಲ್ಲಿ ಬಡಿಯಾನ ಎಂದೂ ಅರಬ್ಬಿ ಭಾಷೆಯಲ್ಲಿ ಬಾಡೀಯಾನ್ ಎಂದು ಕರೆಯುತ್ತಾರೆ. ಭಾರತದಲ್ಲಿ ಈ ಸರಕಿನ ಬಳಕೆ ಆರಂಭವಾದದ್ದೆ ಇತ್ತೀಚಿನ ಶತಮಾನಗಳಲ್ಲಿ, ಮೊಗಲರ ಕಾಲದಲ್ಲಿ ಇದರ ಉಲ್ಲೇಖವಿಲ್ಲ. ಹಕೀಮರು ಮರಾಟಿ ಮೊಗ್ಗಿನಲ್ಲಿ ಜೀರ್ಣಕಾರಿ ಗುಣವಿದೆಯೆಂದು ಮೊಗ್ಗಿನ ಪುಡಿಯನ್ನು ಕೊಡುತ್ತಾರೆ.

**ಓಮ (ಕೊರವಮ್ ಕೊಪ್ಟಿಕಮ್ ಕ್ಲಾರ್ಕ್)** ಎಳೆ ಮಕ್ಕಳಿಗೆ ಜ್ವರ, ಚಳಿ, ಹೊಟ್ಟೆ ನೋವು ಇತ್ಯಾದಿ ಯಾವುದೇ ಕಾಯಿಲೆ ಬರಲಿ ಒಂದು ಚಮಚೆ ಓಮ ನೀರನ್ನು ಕುಡಿಸುವುದು ಹಳೆಯ ವೈದ್ಯ ಪದ್ಧತಿ. 'ಈಗಲೂ ಓಮ ವಾಟರ್' (ವುಡ್ ವರ್ಡ್ಸ್) ಎಂದು ದಿನಕ್ಕೆ ಒಂದೆರಡು ಚಮಚೆ ಮಕ್ಕಳಿಗೆ ಕುಡಿಸುವ ರೂಢಿ ಇದೆ. ಸಂಸ್ಕೃತದಲ್ಲಿ ಅಜ್ಮೋದಾ ಎಂಬ ಹೆಸರಿದೆ. ಚರಕ ಸಂಹಿತೆಯಲ್ಲಿ ಇದರ ಉಲ್ಲೇಖವಿದೆ.

ಪ್ರಾಚೀನ ಗ್ರೀಕರಿಗೆ ಈ ಗಿಡ ಅಮ್ಮಿ ಎಂಬ ಹೆಸರಿನಿಂದ ಪರಿಚಯವಾಗಿತ್ತು. ಗ್ರೀಸ್ ಅದರ ಸುತ್ತಮುತ್ತ ಹಾಗೂ ಮೆಡಿಟರೇನಿಯನ್ ತೀರದ ಆಫ್ರಿಕಾದಲ್ಲೂ ಓಮದ ಗಿಡ ಸ್ವಾಭಾವಿಕವಾಗಿ ಬೆಳೆಯುತ್ತದೆ. ಗ್ರೀಕ್ ಹೆಸರಿನ ಛಾಯೆಯನ್ನೇ ಭಾರತೀಯ ಭಾಷೆಗಳಲ್ಲೂ ಕಾಣುತ್ತೇವೆ. ಅಮನ್, ಬಮನ್ (ಗುಜರಾತಿ, ಹಿಂದಿ) : ಓವ (ಮರಾಠಿ); ಓಮು, ಓಮಂ, ಓಮ ಎಂಬ ನಾಮವನ್ನು ದ್ರಾವಿಡ ಭಾಷಾ ವರ್ಗಗಳಲ್ಲಿ ಕಾಣುತ್ತೇವೆ.

17ನೇ ಶತಮಾನದಲ್ಲಿ ಓಮ ಯುರೋಪ್ ದೇಶದಿಂದ ಇಂಗ್ಲೆಂಡನ್ನು ಸೇರಿತು. ತೈಮಾಲ್ ಎಂಬ ಕ್ರಿಮಿನಾಶಕ ತಯಾರಿಕೆಯಲ್ಲೂ ಆಯುರ್ವೇದದಲ್ಲೂ ಯುನಾನಿಯಲ್ಲೂ ಓಮದ ಬಳಕೆ ಹೆಚ್ಚಾಗಿದೆ. ಬ್ರೆಡ್, ಬಿಸ್ಕತ್, ಕೇಕ್, ಪೇಸ್ಟ್ರಿಗಳಲ್ಲೂ ದಿನ ನಿತ್ಯದ ಅಡುಗೆಗಳಲ್ಲೂ ಓಮಪುಡಿ ಬಳಕೆಯಾಗುತ್ತಿದೆ.

**ಇಂಗು :** ಇಂಗು ಬಹುಕಾಲದಿಂದ ಬಳಕೆಯಲ್ಲಿರುವಂಥದ್ದು. 1687ರಲ್ಲಿ ಪರ್ಷಿಯಾದಲ್ಲಿ ಸಂಚರಿಸುತ್ತಿದ್ದ ಕೀಂಫರ್ ಎಂಬ ಜರ್ಮನ್ ವಿಜ್ಞಾನಿ, 'ಫೆರೂಲ' ಎಂಬ ದಿನಸಿಗೆ ಸೇರಿದ ಸ್ಪೀಷೀಸೊಂದರಿಂದ ಇಂಗನ್ನು ತಯಾರಿಸುತ್ತಿದ್ದ ವಿಧಾನವನ್ನು ನೋಡಿದ್ದ. ಆಮೇಲಿನ ಪರೀಕ್ಷೆಗಳಿಂದ ಅದು ಶುದ್ಧ ಇಂಗು ಅಲ್ಲವೆಂದು ತಿಳಿಯಿತು. ಕೊನೆಗೆ ಬಾಯ್‌ಸಿಯೇ ಎಂಬಾತ ಪರ್ಷಿಯಾ ದೇಶದಲ್ಲಿ ಅಸಲಿ ಇಂಗಿನ ಗಿಡವನ್ನು ಕಂಡುಹಿಡಿದ. ಆಮೇಲೆ ಇದೇ ಗಿಡ ಆಫ್ಘಾನಿಸ್ತಾನದಲ್ಲಿ ಬೆಳೆಯುತ್ತಿದ್ದುದು ಗೋಚರವಾಯಿತು. ಪರ್ಷಿಯ, ಆಫ್ಘಾನಿಸ್ತಾನದಲ್ಲಿ ಈ ಗಿಡದ ಹೆಸರು ಅಂಗೂಸಖೇಮ ಖೋರ ಖೇಮ ; ಇದರಿಂದ ಉತ್ಪನ್ನವಾದ ರಾಳದ ಹೆಸರು ಹಿಂಗ್ (ಸಂಸ್ಕೃತದಲ್ಲಿ ಹಿಂಗು). ಭಾರತೀಯ ಭಾಷೆಗಳಲ್ಲೆಲ್ಲ ಹಿಂಗಿನ ಅಪಭ್ರಂಶ ರೂಪವೇ ಇದೆ. ತಮಿಳಿನಲ್ಲಿ ಮಾತ್ರ ಗಿಡದ ಆಫ್ಘಾನಿ ಹೆಸರು ರೂಪಾಂತರ ಹೊಂದಿರುವಂತೆ ಭಾಸವಾಗುತ್ತದೆ. ಖೇಮ > ಖಾಯಯ್ > ಕಾಯಂ. ಇಂಗಿನ ಒಗ್ಗರಣೆಯನ್ನು ಮಾಡುವ ಪದ್ಧತಿ ನಮ್ಮಲ್ಲಿ ರೂಢಿಯಲ್ಲಿದೆ. ಪ್ರಾಚೀನ ವೈದ್ಯಗ್ರಂಥಗಳಲ್ಲಿ ಇಂಗಿನ ಔಷಧೀಯ ಗುಣಗಳನ್ನು ಕೊಂಡಾಡಿದ್ದಾರೆ. ಇಂಗು-ಮೆಣಸು, ಜೀರಿಗೆ ತ್ರಯದ ಸೂಪ ಸೂತ್ರ ಸೃಷ್ಟಿಯಾಗಿದೆ.

ಇಂಗಿನ ಬಗ್ಗೆ ಕೆಲವು ಗಾದೆ ಮತ್ತು ನುಡಿಗಟ್ಟುಗಳೂ ಬಳಕೆಯಲ್ಲಿವೆ. ಇಂಗು ತಿಂದ ಮಂಗನಂತೆ, ಸಮುದ್ರದಲ್ಲಿ ಇಂಗು ಕದಡುವುದು, ಕುಂಡೆಗೆ ಇಂಗು ಹಚ್ಚಿದ (ಮೋಸಗೊಳಿಸಿದ) ಮುಂತಾದುವು.

**ಬಾಲಮೆಣಸು :** ಈ ಮೆಣಸು, ಜಾವ, ಮೊಲ್ಲುಕ ಪ್ರದೇಶಗಳಲ್ಲಿ ಹುಟ್ಟಿ, ಅನಂತರ ಇತರ ಪ್ರದೇಶಗಳಿಗೆ ಪರಿಚಯವಾಯಿತು. ಇದು ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ಮಹತ್ವವನ್ನು ಪಡೆದಿದೆ. ಮೂಲದೇಶದ ನಿವಾಸಿಗಳಿಗೆ (ಜಾವ, ಮೊಲ್ಲುಕ) ಹೆಚ್ಚು ಲಾಭ ತಂದುಕೊಟ್ಟ ಗಿಡವಿದು. ಈ ಸರಕನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಲು ಇಷ್ಟವಿಲ್ಲದ ಇವರು ಕಾಳನ್ನು ರಫ್ತು ಮಾಡುವುದಕ್ಕೆ ಮೊದಲು ನೀರಿನಲ್ಲಿ ಕುದಿಸಿ ಒಣಗಿಸಿ ಕಳಿಸುತ್ತಿದ್ದರು. ಇದರಿಂದ ರಫ್ತಾದ ಕಾಳು ಕೃಷಿಗೆ ಒಗ್ಗದೇ ಹೋಯಿತು. ಕಳೆದ ಶತಮಾನದವರೆಗೂ ಹೀಗೆ ಆಯಿತು. ಈಚೀಚೆಗೆ ಥಾಯ್, ಸಿಲೋನ್, ಮಲೆಯ, ಭಾರತ ದೇಶಗಳಲ್ಲಿ ಅಲ್ಪಸ್ವಲ್ಪ ಇದರ ಕೃಷಿಯಾಗುತ್ತಿದೆ.

ಹೊರಗಣ್ಣಿಗೆ ಈ ಗಿಡ ಮತ್ತು ಕಾಳು ಮೆಣಸಿನಂತೆಯೇ ಕಂಡುಬಂದರೂ ಕಾಳಿಗೊಂದು ತೊಟ್ಟು ಅಂಟಿಕೊಂಡಿರುತ್ತದೆ. ಈ ತೊಟ್ಟೇ 'ಬಾಲ' - ಬಾಲ ಮೆಣಸು.

ಮೊದ ಮೊದಲು ಮೆಣಸಿಗೆ ಬದಲಾಗಿ ಇದು ಉಪಯೋಗಕ್ಕೆ ಬಂದಿತು. ಆನಂತರ ಕಣ್ಣಿನ ಪೊರೆ ಮಾಂದ್ಯಕ್ಕೂ ಪರಿಹಾರಿಯಾಯಿತು. ಈಗೀಗ ಸಿಗರೇಟಿಗೆ ವಾಸನೆ ಕೊಡುವ ವಸ್ತುವಾಗಿ ಹೆಚ್ಚು ಬಳಕೆಯಲ್ಲಿದೆ. ಇದನ್ನು ವೈದ್ಯದಲ್ಲಿ ಅಧಿಕವಾಗಿ ಬಳಸಿದವರು ಅರಬ್ಬೀಯರು. ಇವರು ಬಾಲ ಮೆಣಸನ್ನು 'ಕಭಾಬಹ್' ಎಂದು ಕರೆದರು. ಭಾರತೀಯ ಭಾಷೆಗಳಲ್ಲೂ ಕಬಾಬ್, ಕಬಾಲ ಇತ್ಯಾದಿ ರೂಪ ಭೇದವನ್ನು ಕಾಣುತ್ತೇವೆ. ದಕ್ಷಿಣಾತ್ಯ ಭಾಷೆಗಳಲ್ಲಿ ಮಾತ್ರ ಮೊದಲೇ ಪರಿಚಿತವಾಗಿದ್ದ ಮೆಣಸಿನಿಂದಾಗಿ ಇದಕ್ಕೆ ಬಾಲ ಮೆಣಸು ಹೆಸರು ಬಂದಿತು.

**ಲವಂಗ :** ಇದರ ಮೂಲ ಸ್ಥಾನ ಮೊಲಕ್ಕಸ್. ಲವಂಗದ ಪ್ರಾಮುಖ್ಯತೆಯನ್ನು ಚೀನಾದವರು ಮೊದಲು ಕಂಡು ಕೊಂಡರು. ಮೊಲಕ್ಕಸ್‌ನಲ್ಲಿ ಬೆಳೆದ ಲವಂಗವನ್ನು ಚೀನಾದವರಿಗೆ ಮಾರಲಾಯಿತು. ಲವಂಗದ ಉಪಯೋಗ ಹೆಚ್ಚಿದಂತೆ ಇದರ ಕೃಷಿಯೂ ಮೊಲಕ್ಕಸ್‌ದೇಶದಿಂದ ಅಬೋಯಾನ ಮತ್ತು ಸೇಲಂ ದ್ವೀಪಗಳಿಗೂ ವ್ಯಾಪಿಸಿತು. ಎರಡನೆಯ ಶತಮಾನದ ಹೊತ್ತಿಗೆ ಇದರ ಪ್ರಾಮುಖ್ಯತೆ ಮುಂದುವರಿದು ಎಲ್ಲಾ ದೇಶಗಳಿಗೂ ಚಿರಪರಿಚಿತವಾಯಿತು. ಪ್ರಪಂಚದಲ್ಲಿಯೇ ಅಧಿಕ ಲವಂಗ ಬೆಳೆಯುವ ಜಾಂಬಿಬಾರ್ ಮತ್ತು ಪೆಂಬ ದ್ವೀಪಗಳಿಂದ ಸಿಗುತ್ತಿದೆ. ಮಡಗಾಸ್ಕರ್ ದ್ವೀಪ ಎರಡನೆಯ ಅಧಿಕೃತ ಪ್ರದೇಶ ; ಮಲೆಯಾದ ಪೆನಾಂಗ್ ಮತ್ತು ಶ್ರೀಲಂಕಾದಲ್ಲೂ ಅತ್ಯುತ್ತಮ ಲವಂಗವನ್ನು ಬೆಳೆಯುತ್ತಾರೆ.

ಭಾರತದಲ್ಲಿ ಲವಂಗ ಬೆಳೆಯ ಪ್ರದೇಶ ಬಹು ಕಡಿಮೆ. ಕೇರಳ ಮತ್ತು ತಮಿಳುನಾಡಿನ ಪ್ರದೇಶಗಳಿಂದ ನೀಲಗಿರಿ ಬೆಟ್ಟಗಳು, ತೆಲಕಾಯಿ ಬೆಟ್ಟಗಳು, ಕನ್ಯಾಕುಮಾರಿ ಪ್ರದೇಶ, ಕೊಟ್ಟಾಯಂ ಮತ್ತು ಕೊಯಿಲಾನ್ ಉದಕಮಂಡಲ ಪ್ರದೇಶಗಳಲ್ಲಿ ಇದನ್ನು ಬೆಳೆಯುತ್ತಾರೆ.

ಚರಕ - ಸುಶ್ರುತರ ಕಾಲದಿಂದಲೂ ಲವಂಗ ಪರಿಚಿತ ವಸ್ತುವಾಗಿದೆ. ಈ ಪದವೇ ಇತರ ಭಾಷೆಗಳಿಗೆ ಹರಿದು ಬಂದಿದೆಯೆನ್ನಬಹುದು. ಪೋರ್ಚುಗೀಸರು ಭಾರತಕ್ಕೆ ಬರುವ ಮುನ್ನ ಲವಂಗ ಎಂಬುದನ್ನೇ 'ಇಲವ ಜ್ಞಾಮ್' ಎಂದು ಉಚ್ಚರಿಸುತ್ತಿದ್ದರು. ಆದರೆ ಪ್ರಾಚೀನ ಗ್ರೀಕರು ಇದೇ ವಸ್ತುವಿಗೆ 'ಕಾರಿಯಾನ್' (Caryon) ಎಂದರು. ಬೆಂಗಾಲಿ, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ 'ಲವಂಗ' ಎಂತಲೂ ಉರ್ದು, ಗುಜರಾತಿ, ಮಲೆಯ ಭಾಷೆಗಳಲ್ಲಿ 'ಲವಂಗ್' ಎಂದೂ ಪಂಜಾಬಿ, ಹಿಂದಿಯಲ್ಲಿ ಲಾಂಗ್, ಲೌಂಗ್ ಎಂದೂ ಕಾಶ್ಮೀರಿ ಭಾಷೆಯಲ್ಲಿ 'ಕಾಂಗ್' ಎಂದೂ ತೆಲುಗು ಭಾಷೆಯಲ್ಲಿ ಲವಂಗಾಲು, ತಮಿಳಿನಲ್ಲಿ ಕ್ರಾಂಬು, ಕಿರಾಂಪು, ಕರಾಂಬು, ಗ್ರಾಂಬು ಎಂದು ಕರೆಯುತ್ತಾರೆ.

**ಜೀರಿಗೆ (ಕ್ಯುಮಿನ್ ಸೈಮಿಯುವ್ ಲಿನ್)** 'ಜೀರಿಗೆಗೆ ವೈದ್ಯಕೀಯ ಗುಣಗಳಿವೆ' ಎಂದು ಜನ ಸಾಮಾನ್ಯರು ಹಾಗೂ ವೈದ್ಯರೂ ಬಹುಕಾಲದಿಂದ ನಂಬಿದ್ದಾರೆ. ಈ ಗಿಡ ಪರ್ಷಿಯಾ ದೇಶದ್ದು. ಮೊದ ಮೊದಲು ಮನುಷ್ಯನ ಬಳಕೆಗೆ ಒದಗಿದ್ದೂ ಅಲ್ಲೇ. ಇದನ್ನು ಸಂಸ್ಕೃತದಲ್ಲಿ ಜೀರಕ, ಪರ್ಷಿಯನ್ ಭಾಷೆಯಲ್ಲಿ ಜೀರ (zeera) ಎಂದು ಕರೆಯುತ್ತಾರೆ. ಭಾರತೀಯ ಭಾಷೆಗಳಲ್ಲಿ ಈ ಹೆಸರು ರೂಪಭೇದಗಳಿಂದ ಕೂಡಿದೆ.

ಹಳೆಯ ವೈದ್ಯಗ್ರಂಥಗಳಲ್ಲಿ ಜೀರಿಗೆ ಹೆಚ್ಚು ಪ್ರಖ್ಯಾತಿಯನ್ನು ಪಡೆದಿತ್ತು. ಇದು ಅಡುಗೆ ಮನೆಯಲ್ಲಿ ಅಗ್ರಸ್ಥಾನವನ್ನು ಹೊಂದಿದೆ. ಹೆಚ್ಚು ಜೀರ್ಣಕಾರಿ ಗುಣವನ್ನು ಹೊಂದಿರುವ ಜೀರಿಗೆ ಕೆಲವೊಮ್ಮೆ ಸಾಸಿವೆಯ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತದೆ. ಇತ್ತೀಚಿನವರೆಗೂ ನಮಗೆ ಪರಿಚಯವಾಗಿರುವುದು ಜೀರಿಗೆಯ ಬೀಜ ಮಾತ್ರ. 17ನೇ ಶತಮಾನದವರೆಗೂ ಭಾರತೀಯರಿಗೆ ಈ ಗಿಡದ ಪರಿಚಯವಿರಲಿಲ್ಲ. ಕಲ್ಕತ್ತ ಸರ್ಕಾರಿ ತೋಟ ಸ್ಥಾಪನೆಯಾದ ಹೊಸದರಲ್ಲಿ ಪರ್ಷಿಯಾದಿಂದ ಬೀಜಗಳನ್ನು ತರಿಸಿಕೊಳ್ಳಲಾಯಿತು. ಅಂದಿನಿಂದ ನಮ್ಮ ದೇಶದಲ್ಲಿ ಈ ಕೃಷಿ ಒಗ್ಗಿದೆ.

**ದಾಲ್ಚಿನಿ (ಲವಂಗ ಪಟ್ಟೆ) :** ಸಿನಮೊ ಮಮ್ ಕ್ಯಾಸಿಯ ಮರದ ತೊಗಟೆಯೇ ದಾಲ್ಚೀನಿ. ದಾಲ್ಚೀನಿ ಮೂಲತಃ ಕನ್ನಡ ಪದವಲ್ಲ, ಉತ್ತರಭಾರತದ ಭಾಷೆಯಿಂದ ಎರವಲು ಪಡೆದದ್ದು. ತಾಳೀಸು ಪಟ್ಟೆ ಎಂಬ ಹೆಸರೂ ತಮಿಳುನಾಡಿನಲ್ಲಿ ರೂಢಿಯಲ್ಲಿದೆ. ದಾಲ್ಚೀನಿಯ ತದ್ಭವ ರೂಪವೇ - ದಾಲ್‌ಚೀನಿ > ತಾಲ್ ಶೀನಿ > ತಾಲೀಸ್ > ತಾಳೀಸ್ (ಪಟ್ಟೈ) (ತಮಿಳು) > ತಾಲೀಸು ಪಟ್ಟೆ ಎಂದು ಕನ್ನಡದಲ್ಲಿ ಕರೆಯುತ್ತಾರೆ.

200 ವರ್ಷಗಳ ಹಿಂದೆ ಸಿನಮೋಮಮ್ ಸೈಲಾನಿಕಮ್ ಎಂಬ ಇನ್ನೊಂದು ಪ್ರಭೇದ ಸಿಲೋನ್ ಮತ್ತು ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳಲ್ಲಿ ಸ್ವಾಭಾವಿಕವಾಗಿ ಬೆಳೆಯಿತು. ಇದರ ತೊಗಟೆಯ ವಾಸನೆಯ ಗುಣವೂ ಚೈನಾದಿಂದ ಆಮದಾಗುತ್ತಿದ್ದ ವಸ್ತುವಿಗಿಂತಲೂ ಶ್ರೇಷ್ಠವಾಗಿತ್ತು. ಅಂದಿನಿಂದ 'ದೇಶಿ ದಾಲ್ಚಿನಿ' ಬಳಕೆಗೆ ಬಂದಿತು. ಕೇರಳ, ತಮಿಳುನಾಡು, ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ತೆಂಗಿನ ತೋಟಗಳಲ್ಲಿ ಅಂತರ ಬೆಳೆಯಾಗಿ ಬೆಳೆಯಲಾಗುತ್ತಿದೆ.

**ಸೋಂಪು :** ಸೋಂಪು ಪ್ರಮುಖವಾಗಿ ಸಾಂಬಾರು ಪದಾರ್ಥ. ಮೊಗಲರ ಕಾಲದಲ್ಲಿ ಪಶ್ಚಿಮ ಏಷಿಯಾ ಪ್ರದೇಶದಿಂದ ಆಮದಾದದ್ದು. ಆದರಿಂದ ಹಿಂದಿನ ಭಾರತೀಯ ಸಂಸ್ಕೃತಿಯಲ್ಲಿ ಇದರ ಹೆಸರು ಎಲ್ಲೂ ಕಂಡುಬಂದಿಲ್ಲ. ಪ್ರಾಚೀನ ಸೂಪ ಶಾಸ್ತ್ರಗಳಲ್ಲಾಗಲಿ, ಶಾಸನಗಳಲ್ಲಾಗಲಿ ಇದರ ಪ್ರಸ್ತಾಪವಿಲ್ಲ. 18 ನೇ.ಶ.ದಲ್ಲಿ ಇದರ ಬೀಜಗಳನ್ನು ಎಲೆಯಡಿಕೆಯೊಂದಿಗೆ ಅಗಿಯುತ್ತಿದ್ದರು (ವಂಗೀಯರು) ಎಂಬುದಕ್ಕೆ ಗ್ರಂಥಾಧಾರವಿದೆ. ಕೆಲವರು ಇದರ ವಾಸನೆಯನ್ನು ಆಸ್ವಾದಿಸುತ್ತಾರಾದರೂ ಮತ್ತೆ ಕೆಲವರು (ಸಸ್ಯಾಹಾರಿಗಳು) ಮೂಗು ಮುರಿಯುತ್ತಾರೆ. ಮೊಗಲಾಯಿ ಪಲಾವ್‌ಗಳಲ್ಲಿ ಸೋಂಪು ವಾಸನೆಯೇ ಹೆಚ್ಚು, ಆಧುನಿಕ ಯುವಕರೂ ಇದರ ಸವಿಯನ್ನು ಬಯಸುತ್ತಾರೆ. ಸಂಪ್ರದಾಯಸ್ಥ ಬ್ರಾಹ್ಮಣ ಮನೆತನದವರು ಇದನ್ನು ಮುಟ್ಟಲು ಹಿಂಜರಿಯುತ್ತಾರೆ.

ರೋಮನ್ನರು ಮತ್ತು ಆಂಗ್ಲರ ಕಾಲದಲ್ಲೇ ಸೋಂಪು ಕೃಷಿಗೆ ಒಳಪಟ್ಟಿತ್ತು. ಅಲ್ಲಿಯ ಹಾಡು, ಕತೆ, ಐತಿಹ್ಯಗಳಲ್ಲೂ ಇದರ ಹೆಸರು ಬಂದಿದೆ. ರೋಮನ್ನರು ಔತಣದೂಟದ ಕೊನೆಯ ಭಕ್ಷ್ಯ ಸೋಂಪಿನ ವಾಸನೆಯದಾಗಿರಬೇಕೆಂಬ ಸಂಪ್ರದಾಯದವರು. ಮಧ್ಯಕಾಲೀನ ಯುರೋಪ್‌ನಲ್ಲಿ ಈ ಗಿಡದ ಎಲ್ಲ ಭಾಗಗಳನ್ನು ಆಹಾರ ಪದಾರ್ಥವಾಗಿ ಬಳಸುತ್ತಿದ್ದರು.

ಇದು ಅನೇಕ ಔಷಧೀಯ ಗುಣಗಳನ್ನು ಹೊಂದಿದ್ದು. ಕಿವಿನೋವಿಗೆ ಗಿಡದ ಕಾಸಿದ ಎಲೆಯ ರಸವನ್ನು ಹಾಕುತ್ತಾರೆ. ಮುಪ್ಪಿಗೆ ಪ್ರಾಯವೀಯುವ ಶಕ್ತಿ ಇದಕ್ಕಿದೆಯೆಂದು ಹೇಳುತ್ತಾರೆ. ಹಾವು ತನ್ನ ದೃಷ್ಟಿಯನ್ನು ತೀಕ್ಷ್ಣವಾಗಿಟ್ಟುಕೊಳ್ಳುವುದಕ್ಕೆ ಸೋಂಪು ತಿನ್ನುತ್ತದೆಯಂತೆ, ನಿದ್ದೆ ಬಂದರೆ, ಮೈಕೈ ನೋವು ಬಂದರೆ, ಕೆಲಸ ಮತ್ತು ಓದಿನ ಕಡೆ ಗಮನಹರಿಸಲು ಸಾಧ್ಯವಿಲ್ಲದೇ ಹೋದಾಗ ಸೋಂಪಿನ ಕಷಾಯ ಕುಡಿಸಿ ಲವಲವಿಕೆಯನ್ನುಂಟು ಮಾಡುತ್ತಾರೆ. 17 ನೆಯ ಶ.ದಲ್ಲಿ ಇಂಗ್ಲೆಂಡ್ ಅಡುಗೆ ಮನೆಗಳಲ್ಲಿ ಸೋಂಪಿನ ಬಳಕೆ ಅನಿವಾರ್ಯವಾಗಿತ್ತು. ಸೂಪ್, ಫ್ರೈ ಮುಂತಾದ ತಿನಿಸುಗಳಲ್ಲಿ ಇದನ್ನು ಬಳಸುತ್ತಿದ್ದರು.

**ಸೀಮೆಸೋಂಪು :** ಬಿಳಿಚಿಕೊಂಡ ಮಹಿಳೆಯರಿಗೆ ಇದನ್ನು ತಿನ್ನಿಸುತ್ತಿದ್ದರೆಂದು (2000 ವರ್ಷಗಳ ಹಿಂದೆ) ಗ್ರೀಕ್ ವೈದ್ಯ 'ಡಯಸ್ಕೋರೈಡಿಸ್' ಬರೆದಿಟ್ಟಿದ್ದಾರೆ. ಅಲೆಕ್ಸಾಂಡರನ ಸೈನಿಕರಿಗೆ ಸೀಮೆ ಸೋಂಪು ಮಿಶ್ರವಾದ ಬ್ರೆಡ್‌ಸರಬರಾಜಾಗುತ್ತಿತ್ತು. ಪ್ರಾಚೀನ ಅರಬ್ಬೀಯರಿಗೂ ಇದು ಪ್ರಿಯವಾದ ಸರಕು.... ಕರಾವ್‌ಯ ಎಂಬ ಹೆಸರಿನಿಂದ ಇದರ ಎಲೆಯನ್ನೂ ಬೀಜವನ್ನು ಸಾಂಬಾರ ಪದಾರ್ಥವಾಗಿ ಉಪಯೋಗಿಸುತ್ತಿದ್ದರು. ಇದರ ಲ್ಯಾಟಿನ್ ಹೆಸರು ಅರಬ್ಬೀ ಮೂಲದಿಂದ ಬಂದುದಾಗಿದೆ.

ಬ್ರೆಡ್, ಕೇಕ್, ಪೇಸ್ಟ್ರಿ ಮೊದಲಾದ ತಿಂಡಿಗಳಲ್ಲಿ ಇದರ ಬೀಜಗಳನ್ನು ಬಳಸುತ್ತಾರೆ. ಮೆಡಿಟರೇನಿಯನ್ ಪ್ರದೇಶದಿಂದ 200-300 ವರ್ಷಗಳ ಹಿಂದೆ ಭಾರತಕ್ಕೆ ಆಮದಾದ ಸಾಂಬಾರ ಪದಾರ್ಥವಿದು. ಭಾರತೀಯರು ಅಷ್ಟಾಗಿ ಇದನ್ನು ಇಷ್ಟಪಡುವುದಿಲ್ಲ. ಮಾಂಸಾಹಾರದ ಸಂದರ್ಭದಲ್ಲಿ ಮಾತ್ರ ಇದನ್ನು ವಿಶೇಷವಾಗಿ ಬಳಸುತ್ತಾರೆ.

ಕನ್ನಡದ ಆಡುನುಡಿಯಲ್ಲಿ ಸೋಪು, ಬಡಿಸೋಂಪು, ಬಡಸೊಂಪು ಎಂದು ಕರೆಯುತ್ತಾರೆ. ಹಿಂದಿಯಲ್ಲಿ ಸೌನ್‌ಫ್, ಬರಿ ಸೌನ್‌ಫ್, ಸೋನ್ಫ್, ಸೋಂಟ್ ಹಾಗೂ ಬಂಗಾಳಿ ಭಾಷೆಯಲ್ಲಿ 'ಮೌರಿ', ಬೊಂಬಾಯಿ ಪ್ರಾಂತ್ಯದಲ್ಲಿ ಪನ್-ಮೊಹುರಿ, ಗುಜರಾತಿಯಲ್ಲಿ ವರಿಯಾಳಿ, ಮರಾಠಿಯಲ್ಲಿ ಬಡಿಷೆಪ್ ಎಂದು ಕರೆಯುತ್ತಾರೆ.

*ಎನ್. ಆರ್.*

**ಸಜ್ಜೆ** ಆಹಾರ ಧಾನ್ಯಗಳಲ್ಲಿ ಒಂದು. ಕಡಿಮೆ ಮಳೆ ಬೀಳುವ ಒಣ ಪ್ರದೇಶದಲ್ಲಿ ಬೆಳೆಯುವ ಬೆಳೆ. ಇದು ಮಳೆ ಆಶ್ರಿತ ಮುಂಗಾರು ಬೆಳೆಯಾಗಿದೆ. ತುಂಬ ಎತ್ತರವಾಗಿ ಬೆಳೆಯುವ ಸಸ್ಯ. ತೆನೆಗಳು ಉದ್ದವಿದ್ದು ನೋಡಲು ಆಕರ್ಷಕವಾಗಿರುತ್ತವೆ. ಕರ್ನಾಟಕದ ಕೊಪ್ಪಳ ಜಿಲ್ಲೆಯಲ್ಲೂ ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿಯೂ ರಾಗಿಯ ಜೊತೆ ಸಾಲು ಬೆಳೆಯಾಗಿ ಸಜ್ಜೆಯನ್ನು ಬೆಳೆಯುವ ಪದ್ಧತಿ ಇದೆ. ಕಾಳನ್ನು ತೆನೆಯಿಂದ ಬೇರ್ಪಡಿಸಿ, ಹಿಟ್ಟು ಮಾಡಿ ವಿವಿಧ ಬಗೆಯ ಅಡುಗೆಗೆ ಬಳಸುತ್ತಾರೆ. 'ಸಜ್ಜೆ ರೊಟ್ಟಿ' ಅತ್ಯಂತ ರುಚಿಕರ ಆಹಾರ. ಹಲವು ದಿನಗಳ ಕಾಲ

ಕೆಡದಂತೆ ಇಡಬಹುದು. ಸಜ್ಜೆಯನ್ನು ನೀರಲ್ಲಿ ನೆನೆಸಿ ಮೊಳಕೆ ಕಟ್ಟಿ, ಹುರಿದು ಪುಡಿ ಮಾಡಿ ತಯಾರಿಸುವ ವಿಶೇಷ ಸಿಹಿ ತಿಂಡಿ 'ಮಾವಳಿ'. ಇದನ್ನು ಹಬ್ಬಗಳಲ್ಲಿ ಹೆಚ್ಚು ತಯಾರಿಸುತ್ತಾರೆ. ಸಜ್ಜೆಯ ತಳಿ ವೈವಿಧ್ಯ ಬಹುದೊಡ್ಡದು. ಇಂದು ಅಧಿಕ ಇಳುವರಿ ತಳಿಗಳ ದಾಳಿಗೆ ಸಿಕ್ಕಿ ಸ್ಥಳೀಯ ತಳಿಗಳು ನಾಶದ ಹಾದಿ ಹಿಡಿಯುತ್ತಿರುವುದನ್ನು ಗಮನಿಸಬಹುದು. ಸಜ್ಜೆಯಲ್ಲಿ ಮರ ಸಜ್ಜೆ, ಹಾಲು ಸಜ್ಜೆ, ಬಿಳಿ ಸಜ್ಜೆ, ಕೆಂಪು ಸಜ್ಜೆ, ಮುಳ್ಳು ಸಜ್ಜೆ, ದೊಡ್ಡ ಸಜ್ಜೆ, ಕೊಂಬಿನ ಅಕ್ಕಿ, ಕಣ್ಣು ಸಜ್ಜೆ ಮುಂತಾದ ವೈವಿಧ್ಯದ ತಳಿಗಳಿವೆ.



**ಮರಸಜ್ಜೆ :** ಇದರ ತೆನೆ ಮೇಲೆ ಮುಳ್ಳುಗಳಿರುತ್ತವೆ. ಎತ್ತರವಾಗಿ ಬೆಳೆಯುವ ಉದ್ದವಾದ ತೆನೆಯ ಗಟ್ಟಿದಂಟಿನ ತಳಿ. ರೋಹಿಣಿ ಮಳೆಯಲ್ಲಿ ರೈತರು ಇದನ್ನು ಬಿತ್ತನೆ ಮಾಡುತ್ತಾರೆ. ದೀಪಾವಳಿ ವೇಳೆಗೆ ಕೊಯ್ಲಿಗೆ ಬರುತ್ತದೆ.

**ಹಾಲುಸಜ್ಜೆ :** ಕುಷ್ಟಗಿ ಭಾಗದಲ್ಲಿ ಇದನ್ನು ಬೆಳೆಯುತ್ತಾರೆ. ಇದು ಅಲ್ಲಿಯ ಜನರ ಮುಖ್ಯ ಆಹಾರ. 'ಮಾದಾಳಿ'ಯನ್ನು ಇದರಿಂದ ತಯಾರಿಸುತ್ತಾರೆ. ಹಸು ಕರುಗಳಿಗೆ ಒಳ್ಳೆಯ ಆಹಾರವಾಗಿಯೂ ಬಳಕೆಯಾಗುತ್ತದೆ. 'ಬಿಳಿ ಸಜ್ಜೆ' ಕಂಪ್ಲಿಕೊಪ್ಪದ ಪ್ರದೇಶದಲ್ಲಿ ಬೆಳೆಯುವ ತಳಿ. ನಾಲ್ಕು ತಿಂಗಳಲ್ಲಿ ಕಟಾವಿಗೆ ಬರುತ್ತದೆ. ಗಿಡ್ಡ ತಳಿ, ರೊಟ್ಟಿಗೆ ಉತ್ತಮ, ಹಸುಗಳಿಗೆ ಒಳ್ಳೆಯ ಮೇವು. 'ಕೆಂಪು ಸಜ್ಜೆ'ಯನ್ನು 'ಕಲಘಟಗಿ' ಪ್ರದೇಶದಲ್ಲಿ ಹೆಚ್ಚು ಬೆಳೆಯುತ್ತಾರೆ. ಇದು ಎತ್ತರವಾಗಿ ಬೆಳೆಯುತ್ತದೆ. ಇದಕ್ಕೂ ನಾಲ್ಕು ತಿಂಗಳ ಸಮಯ ಬೇಕಾಗುತ್ತದೆ. ಕೆಂಪು ಸಜ್ಜೆ ಅಂಬಲಿ ಮತ್ತು ರೊಟ್ಟಿಗೆ ಯುಕ್ತ. 'ಮುಳ್ಳು ಸಜ್ಜೆ' ಸಾಧಾರಣ ಮಳೆಯಾದರೆ ಸಾಕು. ಉತ್ತಮ ಇಳುವರಿ ಕೊಡುತ್ತದೆ. ತೆನೆಗಳ ಮೇಲೆ ಸಣ್ಣಮುಳ್ಳುಗಳ ರಚನೆ ಇರುವುದನ್ನು ಕಾಣಬಹುದು. ಒಳ್ಳೆಯ ಇಳುವರಿಯ ಜೊತೆಗೆ ಹೆಚ್ಚು ತೆಂಡೆ ಒಡೆಯುವ, ಒಂದಾಳುದ್ದ ಎತ್ತರ ಬೆಳೆಯುವ ಆಹಾರಧಾನ್ಯ ಇದಾಗಿದೆ.

**ದೊಡ್ಡಸಜ್ಜೆ :** ಈ ತಳಿಯನ್ನು ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ರಾಗಿಯ ಜೊತೆಯಲ್ಲಿ ಬೆಳೆಯುವ ರೂಢಿಯಿದೆ. ಎತ್ತರವಾಗಿ ಬೆಳೆಯುವುದು. ಇದು ಉದ್ದನೆಯ ತೆನೆಯನ್ನು ಹೊಂದಿರುತ್ತದೆ. ಹಸುಕರುಗಳಿಗೆ ಇದು ಒಳ್ಳೆಯ ಆಹಾರವು ಹೌದು. 'ಹುಲ್ಲು ಸಜ್ಜೆ' ಎತ್ತರವಾಗಿ ಬೆಳೆಯುವ ಧಾನ್ಯ. ಇದರ ಕಾಂಡ ಚಿಕ್ಕದಾಗಿರುತ್ತದೆ. ಕಾಳು ಕಡಿಮೆ, ಹುಲ್ಲು ಜಾಸ್ತಿ. ನೀರಾವರಿ ಪ್ರದೇಶದಲ್ಲಿ ಹಸುಗಳ ಮೇವಿಗೆ ಉತ್ತಮ ಇಳುವರಿಯಾಗಿದೆ. 'ಕೊಂಬಿನ ಅಕ್ಕಿ' ರಾಮನಗರ, ಕನಕಪುರ, ಚನ್ನಪಟ್ಟಣ, ಮಾಗಡಿ ಈ ಭಾಗದ ಜನಪ್ರಿಯ ತಳಿಯಾಗಿದೆ. ರಾಗಿಯ ಜೊತೆ ಸಾಲು ಬೆಳೆಯಾಗಿ ಬೆಳೆಯುವ ಪದ್ಧತಿ ಇಲ್ಲಿದೆ. ತೆನೆ ತೆಳ್ಳಗೆ ಉದ್ದವಿರುತ್ತದೆ. ಬೀಜಗಳು ಕವಚದಿಂದ ಆವೃತವಾಗಿರುತ್ತವೆ. ಹಸುಗಳ ಮೇವಿಗೆ ಉತ್ತಮ ತಳಿ. 'ಕಣ್ಣು ಸಜ್ಜೆ' ಬೀದರ್ ಭಾಗದ ವಿಶೇಷ ತಳಿ. ಈ ಧಾನ್ಯವನ್ನು ಮನೆ ಮದ್ಯ ತಯಾರಿಕೆಗಾಗಿಯೂ ಬಳಸುತ್ತಾರೆ. ಗರ್ಭಿಣಿ ಹೆಂಗಸರಿಗೆ ಉತ್ತಮ ಆಹಾರವಿದು. ಬಿಜಾಪುರದ ಸುತ್ತಮುತ್ತ ಇದರ ಗಂಜಿಯನ್ನು ಮಾಡಿ ಮಕ್ಕಳಿಗೆ ನೀಡುತ್ತಾರೆ. ಹಕ್ಕಿಗಳ ಕಾಟವಿರುವುದಿಲ್ಲ. ಏಕೆಂದರೆ ತೆನೆಯ ಮೇಲೆ ಮುಳ್ಳುಗಳಿರುತ್ತವೆ. ಇದನ್ನು ಕಟಾವು ಮಾಡುವುದು ಮತ್ತು ಒಕ್ಕಣೆ ಮಾಡುವುದು ಸ್ವಲ್ಪ ಶ್ರಮದಾಯಕವಾಗಿರುತ್ತದೆ.

***ಕೆ.ಟಿ.ಕೆ.***

**ಸಪೋಟ** ಇದು ಮೂಲತಃ ಉತ್ತರ ಅಮೆರಿಕದ್ದು. ನೂರುವರ್ಷಗಳಿಗೂ ಹೆಚ್ಚುಕಾಲ ಜೀವಿಸುತ್ತದೆ. ಇದನ್ನು ಕಡಿಮೆ ಮಳೆ ಬೀಳುವ ಹಾಗೂ ಶುಷ್ಕ ಪ್ರದೇಶಗಳಲ್ಲಿ ಬೆಳೆಯಬಹುದು. ಉಷ್ಣವಲಯದ ಪ್ರದೇಶಗಳಿಗೆ ಈ ಬೆಳೆ ಹೆಚ್ಚು ಯುಕ್ತ. ಭಾರತದಲ್ಲಿ ಇದರ ಸಾಗುವಳಿ ಮಹಾರಾಷ್ಟ್ರದಲ್ಲಿ ಪ್ರಾರಂಭವಾಗಿ ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲಿ ಮುಖ್ಯವಾಗಿ ಗುಜರಾತ್, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ಕಂಡುಬರುತ್ತದೆ.



ಎಲ್ಲ ತರದ ಮಣ್ಣುಗಳಲ್ಲಿ ಬೆಳೆಯಬಹುದಾದ ಸಪೋಟ ಬೆಳೆಗೆ ಸಮುದ್ರತೀರ ಪ್ರದೇಶದ ಹವಾಗುಣ ಅತ್ಯುತ್ತಮವಾದದ್ದು ಹಾಗೂ ಕೆಂಪು ಮಣ್ಣು, ಸಾಧಾರಣ ಕಪ್ಪು ಮಣ್ಣುಗಳಲ್ಲಿಯೂ ಬೆಳೆಯುತ್ತದೆ. ಆದಾಗ್ಯೂ ಸಮಶೀತೋಷ್ಣ ವಲಯದಲ್ಲಿ ಚೆನ್ನಾಗಿ ಫಲಬಿಡುತ್ತದೆ. ಒಣ ಹಾಗೂ ಆರ್ದ್ರತೆಯಿಂದ ಕೂಡಿದ ಹವೆ ಇದ್ದಲ್ಲಿ ತೊಂದರೆಯೇನೂ ಆಗುವುದಿಲ್ಲ. ಬೆಚ್ಚಗಿನ ಹವೆ ಇದ್ದಲ್ಲಿ ಉತ್ತಮ. ತೀರ ಪ್ರದೇಶದ ಹವಾಗುಣ ಇದ್ದರೆ ಬೇಸಾಯಕ್ಕೆ ಅತ್ಯುತ್ತಮ.

ಸಪೋಟ ಸ್ವಾದಿಷ್ಟ ಹಣ್ಣು. ಪೂರ್ಣ ಮಾಗಿದಾಗ ಮಧುರವಾದ ವಾಸನೆಯಿಂದ ಕೂಡಿದ್ದು ತಿನ್ನಲು ಸಿಹಿಯಾಗಿರುತ್ತದೆ. ಇದಕ್ಕೆ ಸಪೋಡಿಲ್ಲ, ಚಿಕು, ನೇಸ್ ಬೆರ್ರಿ ಮುಂತಾದ ಹೆಸರುಗಳಿವೆ. ಹಣ್ಣು ಪಕ್ವಗೊಂಡಂತೆಲ್ಲ ಅದರಲ್ಲಿಯ ಪಿಷ್ಟ ಪದಾರ್ಥವು ಸಕ್ಕರೆಯಾಗಿ ಮಾರ್ಪಡುತ್ತದೆ. ಮಾಗಿದ

ಹಣ್ಣಿನಲ್ಲಿ ಶರೀರಕ್ಕೆ ಅಗತ್ಯವಿರುವ ವಿವಿಧ ಪೋಷಕಾಂಶಗಳು ಸಾಕಷ್ಟು ಪ್ರಮಾಣದಲ್ಲಿ ಇರುತ್ತವೆ. ಪಚನ ಕಾರ್ಯದಲ್ಲಿ ನೆರವಾಗಿ ತಿಂದ ಆಹಾರ ಕರುಳಿನಲ್ಲಿ ಚಲಿಸಲು ಅನುಕೂಲವಾಗುತ್ತದೆ. ಇದರಿಂದ ಮಲಬದ್ಧತೆ ನಿವಾರಣೆ ಸಾಧ್ಯ. ಇದರಲ್ಲಿಯ ಕಬ್ಬಿಣದ ಅಂಶ ರಕ್ತ ವೃದ್ಧಿಗೆ ನೆರವಾಗಬಲ್ಲದು. ಸುಣ್ಣ ಮತ್ತು ರಂಜಕಗಳು, ಮೂಳೆ ಮತ್ತು ಹಲ್ಲುಗಳು ದೃಢಗೊಳ್ಳಲು ಸಹಾಯಕವಾಗುತ್ತವೆ. ತೀರ ಪ್ರದೇಶದಲ್ಲಿ ಈ ಹಣ್ಣನ್ನು ಸೇವಿಸುವ ಬಗೆಯೇ ಬೇರೆ. ಚೆನ್ನಾಗಿ ಮಾಗಿದ ಹಣ್ಣನ್ನು ಸಿಪ್ಪೆ ಬಿಡಿಸಿ, ಬೀಜ ತೆಗೆದು, ತಿರುಳನ್ನು ತುಪ್ಪದಲ್ಲಿ ಒಂದೆರಡು ರಾತ್ರಿಗಳ ಕಾಲ ನೆನೆಸಿಟ್ಟು ತಿನ್ನುತ್ತಾರೆ. ಸಪೋಟ ಹಣ್ಣನ್ನು ನೇರವಾಗಿ ತಿನ್ನಬಹುದು. ಹಾಲಿನೊಂದಿಗೆ ಸೇರಿಸಿ ಪಾನಕದಂತೆ ಮಾಡಿ ಕುಡಿಯಬಹುದು. ಜಾಮ್‌ಜೆಲ್ಲಿಗಳಿಗೆ ಚೆನ್ನಾಗಿ ಬಲಿತ ಹಣ್ಣು ಉಪಯೋಗ. ಈ ಮರದ ಹಾಲನ್ನು ದೋಣಿಯ ಹುಟ್ಟಿಗೆ ಬಣ್ಣಹಾಕಲು ಬಳಸುವರು.

ಶ್ವಾಸಕೋಶದ ತೊಂದರೆ, ಉಬ್ಬಸ ಕಫ, ಕಣ್ಣುಬೇನೆಗಳಿಗೆ ಇದು ಒಳ್ಳೆಯ ಔಷಧ. ಚಿಕ್ಕಮಕ್ಕಳು ದಿನನಿತ್ಯ ತಿನ್ನುವುದರಿಂದ ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ. ನಿದ್ರಾಹೀನತೆಯಿಂದ ಬಳಲುವವರು ಈ ಹಣ್ಣು ತಿನ್ನುವುದು ಒಳ್ಳೆಯದು. ಸಪೋಟ ಮರದ ಚಕ್ಕೆಯಲ್ಲಿ ಜ್ವರ ನಿವಾರಕ ಗುಣವಿದೆ, ಇದು ಪಿತ್ತನಿವಾರಕವೂ ಹೌದು.

ಪ್ರತಿ ಗ್ರಾಂ ಸಪೋಟ ಹಣ್ಣಿನಲ್ಲಿ ಪೋಷಕಾಂಶಗಳು ಹೀಗಿವೆ :

| | |
|---|---|
| ಕೊಬ್ಬು | 1.1 ಗ್ರಾಂ |
| ನಾರು | 2.6 ಗ್ರಾಂ |
| ಕಾರ್ಬೋಹೈಡ್ರೇಟ್ | 24.4 ಗ್ರಾಂ |
| ಕ್ಯಾಲ್ಸಿಯಂ | 28 ಮಿ.ಗ್ರಾಂ |
| ಫಾಸ್ಫರಸ್ | 27 ಮಿ.ಗ್ರಾಂ |
| ಕಬ್ಬಿಣ | 2.0 ಮಿ.ಗ್ರಾಂ |
| ಕರೋಟಿನ್ | 97 ಮೈಕ್ರೊ ಗ್ರಾಂ |
| ತಯಾಮಿನ್ | 0.02 ಮಿ.ಗ್ರಾಂ |
| ರೈಬೋಫ್ಲೇವಿನ್ | 0.03 ಮಿ.ಗ್ರಾಂ |
| ವಿಟಮಿನ್ ಸಿ | 6 ಮಿ.ಗ್ರಾಂ |

ಸಪೋಟ ಮರದ ಬೇರು ಮತ್ತು ಕಾಂಡಗಳು ಬಲಿಷ್ಠವಾಗಿರುತ್ತವೆ. ಸರಳವಾದ ಎಲೆಗಳು ಗುಂಪು ಗುಂಪಾಗಿದ್ದು ಸಣ್ಣದಾದ ಹೂವುಗಳು ಬಿಡಿ ಬಿಡಿಯಾಗಿರುತ್ತವೆ. ಹಣ್ಣು ಉದ್ದ, ಅಂಡಾಕಾರ ಅಥವಾ ಗುಂಡಗೆ ಇರುತ್ತದೆ. ನಿತ್ಯ ಹಸುರಿನ ಮರವಾದ ಸಪೋಟ ಬೆಳೆಯುವುದು ಮಂದಗತಿಯಲ್ಲಿ. ಪೂರ್ಣವಾಗಿ ಬೆಳೆದಾಗ ಮರದ ಎತ್ತರ 5 ರಿಂದ 20 ಮೀ ಇರುತ್ತದೆ. ಚಿಗುರೆಲೆಗಳ ಬಣ್ಣ ಮಾಸಲು ಕೆಂಪು, ಬಲಿತ ಎಲೆಗಳ ಬಣ್ಣಹೊಳಪು, ತುದಿ ಚೂಪು. ಹೂವುಗಳು ಎಲೆ ತೊಟ್ಟು ಮತ್ತು ರೆಂಬೆಗಳ ನಡುವೆ ಮೂಡುತ್ತದೆ. ವಾಸನೆ ಇರುವುದಿಲ್ಲ. ಬಣ್ಣ ಹಳದಿಬಿಳುಪು.

ಎಳೆಯ ಕಾಯಿಗಳು ಹಸುರು ಬಣ್ಣದಿಂದ ಕೂಡಿದ್ದರೆ, ಬೆಳೆಯುತ್ತಾ, ಕಂದುಬಣ್ಣಕ್ಕೆ ತಿರುಗುತ್ತವೆ. ಪೂರ್ಣವಾಗಿ ಬಲಿತು ಮಾಗಿದಾಗ ಸಿಪ್ಪೆ ಆಲೂಗಡ್ಡೆಯ ಬಣ್ಣದಂತಿರುತ್ತದೆ. ಹಣ್ಣು ಆಕಾರದಲ್ಲಿ ಉದ್ದವಾಗಿ ಇಲ್ಲವೆ ಗುಂಡಗೆ ಇರುತ್ತದೆ. ಹಣ್ಣಿನ ಒಳಗೆ ತಿರುಳು ಮೃದುವಾಗಿರುತ್ತದೆ. ಹಣ್ಣುಗಳಲ್ಲಿ ಕಪ್ಪು ಬೀಜಗಳಿರುತ್ತವೆ.

ಮರಗಳ ಸ್ವಭಾವ, ಎಲೆಗಳ ಬಣ್ಣ ಮುಂತಾದ ಲಕ್ಷಣಗಳ ಆಧಾರದ ಮೇಲೆ ಸಪೋಟವನ್ನು ವಿವಿಧ ಗುಂಪುಗಳಾಗಿ ವರ್ಗೀಕರಿಸಬಹುದು. ಹಲವಾರು ತಳಿಗಳು ಹಾಗೂ ಮಿಶ್ರತಳಿಗಳಿವೆ. ನೆಟ್ಟಗೆ ಬೆಳೆಯುವ ಸ್ವಭಾವದ ತಳಿಗಳು, ಇಳಿಬಿದ್ದಿರುವ ರೆಂಬೆಗಳಿಂದ ಕೂಡಿದ ತಳಿಗಳು, ಹರಡಿ ಬೆಳೆಯುವ ರೆಂಬೆಗಳಿಂದ ಕೂಡಿದ ತಳಿಗಳು.

**ವಿವಿಧ ತಳಿ ಹಾಗೂ ಮಿಶ್ರ ತಳಿಗಳ ಗುಣಗಳು**

**ಕಾಲಿಪತ್ತಿ :** ಇದು ಮಹಾರಾಷ್ಟ್ರ, ಗುಜರಾತ್ ಮತ್ತು ಉತ್ತರ ಕರ್ನಾಟಕಗಳಲ್ಲಿ ಹೆಸರಾಂತ ತಳಿ. ರೆಂಬೆಗಳು ಮುಂದಕ್ಕೆ ಚಾಚಿ ಹರಡಿರುತ್ತವೆ. ಎಲೆಗಳು ಅಗಲವಿದ್ದು, ಮಂದವಾಗಿರುತ್ತವೆ. ಅವುಗಳ ಬಣ್ಣ ದಟ್ಟ ಹಸುರು ಹಣ್ಣು ಆಕಾರದಲ್ಲಿ ಮೊಟ್ಟೆಯಂತೆ, ಬಿಡಿಬಿಡಿಯಾಗಿರುತ್ತದೆ. ವಾಸನೆ ಹಿತಕರ,



ತಿರುಳು ಸಿಹಿಯಾಗಿ ಮೃದುವಾಗಿರುತ್ತದೆ. ಬಾಯಲ್ಲಿಟ್ಟುಕೊಂಡರೆ ಕರಗುತ್ತದೆ. ಗುಣಮಟ್ಟದಲ್ಲಿ ಶ್ರೇಷ್ಠ. ಬೀಜಗಳ ಸಂಖ್ಯೆ ಕಡಿಮೆ. ಒಂದು ಹಣ್ಣಿಗೆ ನಾಲ್ಕು ಬೀಜಗಳು ಇರುತ್ತವೆ.

**ಛತ್ರಿ :** ಬಹುಮಟ್ಟಿಗೆ ಕಾಲಿಪತ್ತಿ ಮರಗಳಂತೆ ಇರುತ್ತವೆ. ರೆಂಬೆಗಳು ಸುತ್ತ ಹರಡಿ ನೆಲ ಮುಖವಾಗಿ ಇಳಿಬಿದ್ದಿರುತ್ತವೆ. ಸಮತಲವಾಗಿ ಬೆಳೆದು ದೂರಕ್ಕೆ ಬಿಚ್ಚಿ ಹರಡಿದ ಛತ್ರಿಯಂತೆ ಕಾಣುವುವು. ಎಲೆಗಳ ಬಣ್ಣ ತೆಳು ಹಸುರು. ಹಣ್ಣು ನೋಡಲು ಕಾಲಿಪತ್ತಿಯ ಹಣ್ಣುಗಳಂತೆಯೇ ಇರುತ್ತವೆಯಾದರೂ ಗುಣಮಟ್ಟದಲ್ಲಿ ಕಡಿಮೆ. ಇದರ ಬೇಸಾಯ ಮಹಾರಾಷ್ಟ್ರದಲ್ಲಿ ಹೆಚ್ಚು. ಫಸಲು ಸಾಕಷ್ಟಿರುತ್ತದೆಯಾದರೂ ಕಾಲಪತ್ತಿಯಷ್ಟು ಇರುವುದಿಲ್ಲ.

**ಢೋಳಾದಿವಾನಿ :** ಇದು ಮಹಾರಾಷ್ಟ್ರದ ತಳಿ. ಎಲೆಗಳ ಬಣ್ಣ ತೆಳು ಹಸುರು. ಹಣ್ಣು ಆಕಾರದಲ್ಲಿ ಮೊಟ್ಟೆಯಂತೆ, ಹಣ್ಣುಗಳ ಬಣ್ಣ ತೆಳು ಹಳದಿ. ಗುಣಮಟ್ಟದಲ್ಲಿ ಉತ್ತಮ. ಫಸಲು ಅಧಿಕ. ಬೇಸಗೆಯಲ್ಲಿ ಕೊಯ್ಲಿಗೆ ಬರುತ್ತವೆ.

**ಉದ್ದ ಸಪೋಟ :** ಮಹಾರಾಷ್ಟ್ರದಲ್ಲಿ ಕಂಡುಬರುವ ಮತ್ತೊಂದು ತಳಿ. ಎಲೆಗಳು ಸಣ್ಣಗೆ ಉದ್ದನಾಗಿರುತ್ತವೆ. ಬಣ್ಣ ತೆಳು ಹಸುರು. ಹಣ್ಣು ಉದ್ದ, ಸಿಪ್ಪೆ ತೆಳು, ತಿನ್ನಲು ಸಿಹಿಯಾಗಿರುತ್ತದೆ. ಹಣ್ಣು ಕಡಿಮೆ ಸಂಖ್ಯೆಯಲ್ಲಿರುತ್ತವೆ. ಗೂಟ ರೆಂಬೆಗಳಲ್ಲಿ ಸಾಕಷ್ಟು ಬೇರು ಬಿಡುತ್ತವೆ.

**ಭೂರಿ :** ಇದನ್ನು ಭೂರಿಪತ್ತಿ ಎಂದೂ ಸಹ ಕರೆಯುತ್ತಾರೆ. ಎಲೆಗಳು ಒತ್ತಾಗಿದ್ದು ಗಾತ್ರದಲ್ಲಿ ಸಾಧಾರಣ ದೊಡ್ಡವು. ಹಣ್ಣು ಗಾತ್ರದಲ್ಲಿ ದೊಡ್ಡವಿದ್ದು, ಸಿಹಿಯಾಗಿರುತ್ತವೆ. ಗುಣಮಟ್ಟ ಉತ್ತಮ.

**ಜಿಂಗಾರ್ :** ಈ ಮರಗಳು ಮಧ್ಯಮ ಗಾತ್ರದಲ್ಲಿರುತ್ತವೆ. ಎಲೆಗಳು ಬಲು ಸಣ್ಣಗಿದ್ದು, ಹಣ್ಣು ಗೊಂಚಲಲ್ಲಿ ಬಿಡುತ್ತವೆ. ಗೂಟಿ ಕಟ್ಟಿದಾಗ ಬೇರು ಬೇಗ ಕಾಣಿಸಿಕೊಳ್ಳುತ್ತವೆ.

ಜೊನ್ನವಲಸ ರೌಂಡ್, ಪಾಲ, ಕೀರ್ತಿ ಭಾರತಿ, ಕ್ರಿಕೆಟ್ ಬಾಲ್, ಓವಲ್, ತುವಾರಪೂಡಿ ಆಂಧ್ರಪ್ರದೇಶದಲ್ಲಿ ಹೆಸರಾಂತ ತಳಿಗಳಾಗಿವೆ. ಕಲ್ಕತ್ತಾರೌಂಡ್ ಹೆಚ್ಚಾಗಿ ಪಶ್ಚಿಮ ಬಂಗಾಳ, ಕರ್ನಾಟಕ ಹಾಗೂ ಇತರ ಭಾಗಗಳಲ್ಲಿ ಕಂಡುಬರುತ್ತವೆ.

ಸಪೋಟದಲ್ಲಿ ಹಲವಾರು ತಳಿಗಳಿದ್ದರೂ ಎಲ್ಲದರಲ್ಲೂ ಉತ್ಕೃಷ್ಟ ಗುಣಗಳು ಕಂಡುಬರುವುದಿಲ್ಲ. ಗಾತ್ರ, ತಿರುಳಿನ ರಚನೆ, ಸಿಹಿಯ ಅಂಶ, ಬೀಜಗಳ ಸಂಖ್ಯೆ, ರುಚಿ ಮತ್ತು ಪರಿಮಳ, ಇಳುವರಿ ಸಾಗಾಣಿಗೆ ಹಾಗೂ ಸಂಗ್ರಹಣಾ ಗುಣಗಳು ಮುಂತಾದವು ವ್ಯತ್ಯಾಸಗೊಳ್ಳುತ್ತವೆ. ಹಲವಾರು ಉತ್ತಮಗುಣಗಳನ್ನು ಒಂದೇ ತಳಿಯಲ್ಲಿ ಕ್ರೋಢೀಕರಿಸುವ ಉದ್ದೇಶಕ್ಕೆ ಮಿಶ್ರತಳಿ ಉತ್ಪಾದನೆ ಅತ್ಯಗತ್ಯ. ತಮಿಳುನಾಡಿನ ಕೊಯಮತ್ತೂರು ಮತ್ತು ಪೆರಿಯಾಕುಳಂ ಹಾಗೂ ಕರ್ನಾಟಕದ ಧಾರವಾಡಗಳಲ್ಲಿ ಈ ಕಾರ್ಯ ನಡೆದಿದ್ದು ಕೆಲವು ಮಿಶ್ರ ತಳಿಗಳನ್ನು ಉತ್ಪಾದಿಸಿ ಬೇಸಾಯಕ್ಕೆ ಬಿಡುಗಡೆ ಮಾಡಲಾಗಿದೆ.

**ಕೃಷಿ :** ಅಧಿಕ ಇಳುವರಿಯನ್ನು ಪಡೆಯಲು ಉತ್ತಮ ಗುಣಮಟ್ಟದ ಸಸಿಗಳು ಅಗತ್ಯ. ಎರಡು ರೀತಿಯಲ್ಲಿ ಉತ್ತಮ ಸಸಿಗಳನ್ನು ಪಡೆಯಬಹುದು. ಬೀಜ ಪದ್ಧತಿ ಮತ್ತು ನಿರ್ಲಿಂಗ ಪದ್ಧತಿ. ಬೀಜಪದ್ಧತಿಯಲ್ಲಿ ನಿಧಾನವಾಗಿ ಫಲಕೊಟ್ಟರೂ ದೊಡ್ಡ ಮರಗಳನ್ನು ಪಡೆಯಬಹುದು. ನಿರ್ಲಿಂಗ ಪದ್ಧತಿಯಲ್ಲಿ ಗಿಡ್ಡ ಮರಗಳಾದರೂ ಹೆಚ್ಚು ಇಳುವರಿ ಕೊಡಬಲ್ಲ ಮರಗಳನ್ನು ಪಡೆಯಬಹುದು.

ಸಪೋಟ ಬೆಳೆಯುವ ಭೂಮಿಯನ್ನು ಮೊದಲು ಒಂದೆರಡು ಸಾರಿ ಆಳವಾಗಿ ಉಳುಮೆ ಮಾಡಿ ಗಿಡ ಗಂಟೆಗಳನ್ನು ಬೇರು ಸಹಿತ ಕಿತ್ತು ಹಾಕಿ, ಭೂಮಿಯನ್ನು ಸಮ ಮಾಡಬೇಕು. ಮೇಲ್ಮಣ್ಣಿನ ಫಲವತತ್ತೆಯನ್ನು ಕಾಪಾಡಿಕೊಳ್ಳಬೇಕು. ಗಿಡಗಳನ್ನು ನೆಡಲು ಮಳೆಗಾಲದ ಪ್ರಾರಂಭ ಅಥವಾ ಜೂನ್ ತಿಂಗಳು ಉತ್ತಮ. ಮಳೆಗಾಲದ ಪ್ರಾರಂಭದಲ್ಲಿ ನೆಡುವುದರಿಂದ ಗಿಡಗಳು ಮಳೆ ನೀರಿನ ಲಾಭ ಹೊಂದಿ ಚೆನ್ನಾಗಿ ಬೇರು ಬಿಟ್ಟು ಸ್ಥಿರಗೊಳ್ಳಲು ಅನುಕೂಲವಾಗುತ್ತದೆ. ಪೋಷಕಾಂಶಯುಕ್ತ ಹದಮಾಡಿದ ಭೂಮಿಯಲ್ಲಿ ಇಪ್ಪತ್ತು ಅಡಿಗೆ ಒಂದರಂತೆ ಎಕರೆಗೆ 64 ಸಸಿಗಳನ್ನು ನೆಡಬೇಕು. ನಾಟಿ ಮಾಡಿದ ಮೇಲೆ ನೀರು ಹಾಯಿಸಬೇಕು. ಬೇರು ಮಣ್ಣಿನಲ್ಲಿ ಊರುವಂತೆ ತೇವಾಂಶ ಕಾಪಾಡಬೇಕು. ಬೇಸಗೆಯಲ್ಲಿ ಆಗಾಗ ನೀರು ಕೊಡಬೇಕು. ಒಂದು ವರ್ಷವಾದ ಮೇಲೆ 10-15 ದಿನಗಳಿಗೊಮ್ಮೆ ನೀರು ಕೊಡುತ್ತಿರಬೇಕು.

ಸಪೋಟ ಗಿಡಕ್ಕೆ ಕಡಿಮೆ ನೀರಿದ್ದರೂ ಉತ್ತಮ ಫಸಲು ಬರುತ್ತದೆ. ಮಳೆ ಇಲ್ಲದ ಕಾಲದಲ್ಲಿ ಒಣ ಹವೆ ಇರುವಂತಹ ಸಂದರ್ಭದಲ್ಲಿ ಗಿಡಗಳಿಗೆ ಒಂದೆರಡು ವರ್ಷಗಳ ಕಾಲ ಕೈ ನೀರು ಕೊಡಬೇಕು. ಮಣ್ಣಿನಲ್ಲಿ ತೇವಾಂಶವಿದ್ದರೆ ಒಳ್ಳೆಯದು. ಹೂ ಕಾಯಿ ಕಚ್ಚಲು ತಕ್ಕಮಟ್ಟಿನ ತೇವಾಂಶದ ಅಗತ್ಯವಿದೆ.

**ಗೊಬ್ಬರ :** ಸಪೋಟಗಿಡಕ್ಕೆ ಉತ್ತಮವಾದ ಗೊಬ್ಬರ ಹಾಕುವುದು ಒಳಿತು. ಬುಡಕ್ಕೆ ಮೊದಲು ಉಂಗುರಾಕಾರವಾಗಿ ಮಣ್ಣನ್ನು ತೆಗೆದು ಗೊಬ್ಬರವನ್ನು ಹಾಕಿ ನೀರನ್ನು ಹಾಯಿಸುವುದರಿಂದ ಫಸಲು ಉತ್ತಮವಾಗುತ್ತದೆ. ಗಿಡದ ಬೆಳವಣಿಗೆಯೂ ಆಗುತ್ತದೆ.

ಕಳೆಗಳನ್ನು ನಿಯಂತ್ರಿಸದಿದ್ದರೆ ಮುಖ್ಯಬೆಳೆ ನಶಿಸುವ ಸಂಭವವಿರುತ್ತದೆ. ಕೆಲವೊಂದು ಕಳೆಗಳು ಕೀಟ ಮತ್ತು ರೋಗಗಳಿಗೆ ಕಾರಣವಾಗುತ್ತವೆ. ಹಾಗಾಗಿ ಕಳೆಯನ್ನು ಪ್ರಾರಂಭದಲ್ಲೇ ಕಿತ್ತುಹಾಕುವುದು ಒಳ್ಳೆಯ ಕ್ರಮ. ವರ್ಷಕ್ಕೆ ಎರಡು ಬಾರಿ ಕಳೆ ಕೀಳುವುದು ಒಳ್ಳೆಯದು ಅಥವಾ ಹಸುರು ಗೊಬ್ಬರದ ಬೆಳೆಗಳನ್ನು ಬಿತ್ತಿದರೂ ಕಳೆ ಹತೋಟಿ ಸುಲಭವಾಗುತ್ತದೆ. ಸಪೋಟ ಮರಕ್ಕೆ ಕಾಂಡಕೊರೆಯುವ ಹುಳು ಬಾಧಿಸುತ್ತದೆ. ಕೊಂಬೆಗಳನ್ನು ಕೊರೆದು ತಿರುಳನ್ನು ತಿಂದುಹಾಕುತ್ತವೆ. ಒಂದು ತಂತಿಯನ್ನು ಆ ರಂಧ್ರಕ್ಕೆ ಚುಚ್ಚಿದರೆ, ಬೇವಿನ ಎಣ್ಣೆಯನ್ನು ಆ ರಂಧ್ರಕ್ಕೆ ಹಾಕಿದರೆ ಹುಳು ಸಾಯುತ್ತದೆ.

*ಎಸ್.ಎಸ್.*

**ಸರ್ಪಗಂಧ** ಇದು ಸ್ವಾಭಾವಿಕವಾಗಿ ಬೆಳೆಯುವ ಅತ್ಯುತ್ತಮ ಔಷಧೀಯ ಸಸ್ಯ. ಅಪೋಸೈನೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ರಾವುಲ್‌ಫಿಯ ಸರ್ಪೆಂಟೈನಾ. ಇದನ್ನು ಸಿಮರೂಬ, ಆರೋಗ್ಯ ಪಚ್ಚ, ಲಕ್ಷ್ಮೀತರು, ಸರ್ಪಬೇರು ಇತ್ಯಾದಿ ಹೆಸರುಗಳಿಂದಲೂ ಕರೆಯುವುದುಂಟು. ಇದರ ಮೂಲ ಸ್ಥಳ ಅಮೆರಿಕ. ಹಿಮಾಲಯ ಶ್ರೇಣಿಗಳಲ್ಲಿ, ಸಿಕ್ಕಿಂ, ಬಿಹಾರ, ಅಸ್ಸಾಂ, ಪಶ್ಚಿಮಘಟ್ಟ ಶ್ರೇಣಿ, ಶ್ರೀಲಂಕ, ಆಗ್ನೇಯ ಏಷ್ಯ, ಅಮೆರಿಕ- ಮುಂತಾದೆಡೆಗಳಲ್ಲಿ ಕಂಡುಬರುತ್ತದೆ. ದಕ್ಷಿಣ ಭಾರತದ ಆಂಧ್ರಪ್ರದೇಶದಲ್ಲಿ ಮೊದಲ ಬಾರಿಗೆ ಇದರ ಕೃಷಿಯನ್ನು ಮಾಡಲಾಯಿತೆಂದು ತಿಳಿದು ಬರುತ್ತದೆ. ನವದೆಹಲಿಯ 'ನ್ಯಾಷನಲ್ ಬ್ಯೂರೊ ಆಫ್ ಪ್ಲಾಂಟ್ ಜೆನೆಟಿಕ್ ರಿಸೋರ್ಸಸ್' ಸಂಸ್ಥೆ ಈ ಸಸ್ಯದ ಬೆಳೆವಣಿಗೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದರಿಂದ ಒರಿಸ್ಸಾ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ ರಾಜ್ಯಗಳಲ್ಲಿ ಇದರ ಕೃಷಿ ಆರಂಭವಾಯಿತು.



ಈ ಸಸ್ಯದ ಬೆಳೆವಣಿಗೆಗೆ ಉಷ್ಣ ಹವೆ ಯುಕ್ತವಾದುದು. ಬಿರುಸು ಕಾಂಡವುಳ್ಳ ಪೊದರು ಸಸ್ಯವಾದ ಇದು 16-40 ಅಡಿ ಎತ್ತರ ಬೆಳೆಯುತ್ತದೆ. ಚಕ್ರಾಕಾರದ ಅಭಿಮುಖಿ ಮಾದರಿಯ ಗಾಢ ಹಸುರು ಬಣ್ಣದ ಎಲೆಗಳು

ಹೂಗೊಂಚಲು ನೀಲಿ, ತಿಳಿಗೆಂಪು ಅಥವಾ ಬಿಳಿಬಣ್ಣದ್ದು. ಫಾಲಿಕಲ್ ಬಗೆಯ ಕಾಯಿಗಳನ್ನು ಬಿಡುತ್ತದೆ. ಈ ಸಸ್ಯದ ಔಷಧೀಯ ಮಹತ್ತ್ವಕ್ಕೆ ಕಾರಣ ರೆಸಿನ್,ಪಿಷ್ಟ, ಪೊಟ್ಯಾಸಿಯಂ, ಫಾಸ್ಫೇಟ್, ಮ್ಯಾಂಗನೀಸ್ ಹಾಗೂ ಅಜ್ಮಲೀನ್, ಅಜ್ಮಲಿನಿನ್, ಅಜ್ಮಲಿಸಿನ್, ಸರ್ಪೆಂಟಿನ್, ಸರ್ಪೆಂಟಿನಿನ್ ಎಂಬ ಸಸ್ಯಕ್ಷಾರಗಳು. ಇದರಲ್ಲಿ 22 ಜಾತಿ, 170 ಪ್ರಭೇದಗಳಿವೆ. ಮಧ್ಯಮ ಗಾತ್ರದ ನಿತ್ಯಹರಿದ್ವರ್ಣದ ಮರ. ಹಣ್ಣು ನೇರಳೆ ಬಣ್ಣದ್ದು, ಇದರ ಬೀಜದಲ್ಲಿ ಶೇ. 75 ಭಾಗ ತೈಲಾಂಶವಿದೆ. ಗಂಡು ಮತ್ತು ಹೆಣ್ಣು ಮರಗಳು ಪ್ರತ್ಯೇಕವಾಗಿ ಬೆಳೆಯುವುದು ಇದರ ವಿಶೇಷ.

**ಉಪಯೋಗ :** ಇದರ ಬೀಜ, ಸೊಪ್ಪು, ಹಣ್ಣು ಮರವೂ ಸೇರಿದಂತೆ ಎಲ್ಲವೂ ಉಪಯುಕ್ತವೇ. ಎಲ್ಲ ಬಗೆಯ ಮಣ್ಣಿನಲ್ಲೂ ಬೆಳೆಯುವ ಗುಣ ಈ ಸಸ್ಯಕ್ಕಿದೆ.


ಎರಡು ಅಡಿ ಆಳ ಎರಡು ಅಡಿ ಅಗಲ ಗುಂಡಿ ತೋಡಿ ಸು. 15-20 ಅಡಿ ಅಂತರದಲ್ಲಿ ಸಸಿಯನ್ನು ನೆಡಬೇಕು. ಸಸಿಗಳನ್ನು ಬೀಜ, ಕಾಂಡ ಹಾಗೂ ಅಂಗಾಂಶ ಕೃಷಿಯಿಂದಲೂ ವೃದ್ಧಿಮಾಡಬಹುದು. ಇದಕ್ಕೆ ಯಾವುದೇ ಕೀಟಬಾಧೆ ಇರುವುದಿಲ್ಲ. ಹಣ್ಣಿನ ತಿರುಳಿನಿಂದ ಜಾಮ್, ಜೆಲ್ಲಿ ಇತ್ಯಾದಿಗಳನ್ನು ತಯಾರಿಸುವರು. ಇದರೆಣ್ಣೆಯನ್ನು ಡೀಸೆಲ್‌ನೊಂದಿಗೆ ಬೆರೆಸುತ್ತಾರೆ. ಹಣ್ಣಿನ ತಿರುಳು ಇಂಧನವಾಗಿಯೂ ಬಳಕೆಗೊಳ್ಳುತ್ತದೆ. ಎಲೆಗಳಿಂದ ಉತ್ತಮ ಗೊಬ್ಬರ ಪಡೆಯಬಹುದು. ಚೌಬೀನೆಗಾಗಿ, ಸೌದೆಗಾಗಿ ಉಪಯೋಗಿಸಬಹುದು. ಎಣ್ಣೆಯನ್ನು ಸೋಪು, ಶ್ಯಾಂಪು, ಗ್ಲಿಸರಿನ್, ಕೊಬ್ಬಿನ ಆಮ್ಲ, ಈಸ್ಟು, ಮದ್ಯಸಾರ ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ತೈಲದೊಂದಿಗೆ ರಾಸಾಯನಿಕಗಳನ್ನು ಬಳಸಿ ಲೂಬ್ರಿಕೆಂಟ್, ಗ್ರೀಸ್, ಬಣ್ಣ, ವಾರ್ನಿಶ್, ಮೊಂಬತ್ತಿಗಳನ್ನೂ ತಯಾರಿಸುವುದುಂಟು.

ಸರ್ಪಗಂಧದ ತೊಗಟೆಯು ಜ್ವರ, ಮಲೇರಿಯ, ರಕ್ತಸ್ರಾವ ತಡೆಯಲು ಹೊಟ್ಟೆಯಲ್ಲಿರುವ ಅಪಾಯಕಾರಿ ಹುಳುಗಳ ನಿವಾರಣೆಗೆ ಋತುಸ್ರಾವದ ದೋಷ ತಡೆಗಟ್ಟಲು, ರಕ್ತಹೀನತೆ ತಡೆಗಟ್ಟುವಲ್ಲಿ ಇದು ಬಳಕೆಯಾಗುತ್ತಿದೆ. ಬಹಳ ಮುಖ್ಯವಾಗಿ ಇನ್‌ಫ್ಲುಯೆಂಜ ಪೋಲಿಯೊ, ಸರ್ಪಸುತ್ತು ಕಾಯಿಲೆಗಳಿಗೆ ಇದು ದಿವ್ಯೌಷಧ.

*ಎಸ್.ಬಿ.ಕೆ.*

**ಸರ್ವೆಮರ** ಇದರ ಮೂಲ ಆಸ್ಟ್ರೇಲಿಯಾ. ಭಾರತದಲ್ಲಿ ಸರ್ವೆಮರವನ್ನು ಶಾವಕ, ಶ್ರವುಕು, ಶರು, ಸರು, ಸುರು ಮುಂತಾಗಿ ಒಂದೊಂದು ರಾಜ್ಯದಲ್ಲೂ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಶವುಕು ಭಾರತದ ಮೂಲದ್ದಾದರೂ ಇದನ್ನು ಸರ್ವೆ ಮರವೆಂದು ಕರೆಯುತ್ತಾರೆ. ಸರ್ವೆ ಮರ ಯಾವ ನೆಲಕ್ಕೂ ಸೈ. ಬಂಜರು, ಭೂಮಿ, ಬೀಳು ನೆಲ, ಮರಳು, ಕೆಂಪು, ಕಪ್ಪು, ಗುಡ್ಡಗಾಡು, ಬಯಲುಸೀಮೆ ಎನ್ನದೆ ಎಲ್ಲಾ ಮಣ್ಣುಗಳಲ್ಲಿ ಬೆಳೆಯಬಲ್ಲದು. ಇದು ಭಾರತಕ್ಕೆ ಬಂದು ಎರಡು ಮೂರು ಶತಮಾನಗಳಾಗಿರಬಹುದು.

**ಬಿತ್ತನೆ :** ಸರ್ವೆ ಮರದ ಕಾಯಿಗಳನ್ನು ಚೆನ್ನಾಗಿ ಒಣಗಿಸಿ ದೊಣ್ಣೆಯಿಂದ ಒಡೆದು ಬೀಜಗಳನ್ನು ಉದುರಿಸಿಕೊಂಡು ಪಾತಿಗಳಲ್ಲಿ ಬಿತ್ತಬೇಕು. ಪಾತಿಗಳನ್ನು ಮಾಡಲು ನೆಲವನ್ನು ಆಳವಾಗಿ ಅಗೆದು ಹೆಂಟೆ ಒಡೆದು ಪುಡಿ ಮಾಡಿ ಗರಿಕೆ ಮೊದಲಾದ ಕಳೆಯನೆಲ್ಲಾ ಬೇರ್ಪಡಿಸಿ ಶುದ್ಧಮಾಡಿ ಅವಶ್ಯವಾದಷ್ಟು ಕೊಟ್ಟಿಗೆ ಗೊಬ್ಬರ (ಮೇಕೆ ಮತ್ತು ಕುರಿ ಗೊಬ್ಬರ)ವನ್ನು ಹುಡಿ ಮಾಡಿ ಹರಡಿ ಕೈ ಗುದ್ದಲಿಯಿಂದ ಕೆದಕಿ ಗೊಬ್ಬರ ಮಣ್ಣಿನಲ್ಲಿ ಚೆನ್ನಾಗಿ ಬೆರೆಯುವಂತೆ ಮಾಡಬೇಕು. ಬೀಜ ಬಿತ್ತಿದ ಮೇಲೆ ಬೆಳಗ್ಗೆ ಮತ್ತು ಸಂಜೆ ವೇಳೆ ನೀರನ್ನು ಕೊಡಬೇಕು. ಹೆಚ್ಚು ಬಿಸಿಲಿರದ ದಟ್ಟವಾದ ನೆರಳೂ ಇರದ ಜಾಗದಲ್ಲಿ ಸಸಿ ಬೆಳೆಸಿದರೆ



ಎರಡು ತಿಂಗಳಲ್ಲಿ ನಾಟಿ ಮಾಡಲು ಬೇಕಾದ ಎತ್ತರಕ್ಕೆ ಬೆಳೆದಿರುತ್ತವೆ. ಸಸಿಗಳನ್ನು 3 ಅಡಿ ಅಂತರದಲ್ಲಿ ನೇರ ಸಾಲುಗಳನ್ನು ಮಾಡಿ ಎರಡು ಅಡಿ ಆಳ ಒಂದು ಅಡಿ ಅಗಲ ಗುಂಡಿಗಳನ್ನು ತೋಡಿ ಪ್ರತಿ ಗುಂಡಿಗೆ ಎರಡು ಸಸಿಗಳನ್ನು ನೆಡಬೇಕು. ಸಾಮಾನ್ಯವಾಗಿ ಮುಂಗಾರು ಮಳೆಯಲ್ಲಿ ಸಸಿ ನೆಡುತ್ತಾರೆ. ಸಸಿ ನೆಟ್ಟ ಮೇಲೆ ಮಳೆಯಾಗದಿದ್ದರೆ, ಚಿಗುರೊಡೆದು ಬೇರು ಬಿಡುವ ತನಕ ನೀರನ್ನು ಕೊಡಬೇಕು. ಗಿಡ ಆಳೆತ್ತರಕ್ಕೆ ಬೆಳೆದರೆ ಮಳೆಯ ಆಶ್ರಯದಲ್ಲೇ ಮರವಾಗಿ ಬೆಳೆಯುತ್ತದೆ. ಇತ್ತೀಚೆಗೆ ಪಾಲಿತಿನ್ ಚೀಲಗಳಲ್ಲಿ ಕಸಿ ಮಾಡಿ ಬೆಳೆಸುವುದರಿಂದ ನೆಟ್ಟ ಸಸಿಗಳು ಉತ್ತಮವಾಗಿ ಬೆಳೆಯುತ್ತವೆ. ಹೆಚ್ಚು ನೀರನ್ನು ಕೊಡುವ ಅವಶ್ಯಕತೆ ಇಲ್ಲ. ಮೇಕೆಗಳು ಸೊಪ್ಪನ್ನು ತಿನ್ನುವುದರಿಂದ ಜಮೀನಿನ ಸುತ್ತ ಬೇಲಿಯ ಆವಶ್ಯಕತೆ ಇದೆ.

**ಉಪಯೋಗಗಳು :** ಸರ್ವೆ ಮರದ ಪ್ರತಿಯೊಂದು ಭಾಗವು ಉಪಯೋಗಕ್ಕೆ ಬರುತ್ತದೆ. ಮರದ ಸೊಪ್ಪು ಹಸಿಯಾಗಿದ್ದಾಗ ಮೇಕೆಗಳಿಗೆ ಮೇವಿಗಾಗಿ ಬಳಸುತ್ತಾರೆ. ಒಣಗಿದ ಸೊಪ್ಪು ಮತ್ತು ಕಾಯಿಗಳನ್ನು ಸುಣ್ಣದ ಕಲ್ಲನ್ನು ಸುಡಲು ಉಪಯೋಗಿಸುವರು. ಸರ್ವೆಮರದ ಇದ್ದಿಲು ಹೆಚ್ಚು ಶಾಖವನ್ನು ಕೊಡುವುದರಿಂದ ಕಂಬಾರರು ಕಬ್ಬಿಣದ ಉಪಕರಣಗಳನ್ನು ಮಾಡಲು ಇದರ ಇದ್ದಿಲನ್ನು ಇಷ್ಟಪಟ್ಟು ಉಪಯೋಗಿಸುತ್ತಾರೆ.

ಸಸಿನೆಟ್ಟ 15-20 ವರ್ಷಗಳಲ್ಲಿ ಕೊಯ್ಲಿಗೆ ಬರುತ್ತದೆ. ಸಸಿ ಬೆಳೆದು ಒಂದೆರಡು ವರ್ಷದಲ್ಲಿ ಪಕ್ಕದಲ್ಲಿ ಬರುವ ರೆಂಬೆಗಳನ್ನು ಸವರಿದರೆ ಮರ ಎತ್ತರವಾಗಿ ದೃಢವಾಗಿ ಬೆಳೆಯುತ್ತದೆ. ಸರ್ವ ಮರ ಮನೆ ಕಟ್ಟುವಾಗ ತಾರಸಿ ಕೆಲಸ (ಸೆಂಟ್ರಿಂಗ್)ಕ್ಕೆ ತುಂಬಾ ಆವಶ್ಯಕ. ಪಟ್ಟಣ ನಗರಗಳಲ್ಲಿ ಎರಡು ಮೂರು ಅಂತಸ್ತಿನ ಮನೆ ಕಟ್ಟಲು ಈ ಮರವನ್ನು ಆಟ್ಟದಂತೆ ಬಳಸುತ್ತಾರೆ. ಮರ ಬೆಳೆದಂತೆಲ್ಲ ಪಕ್ಕದಲ್ಲಿ ಬರುವ ರೆಂಬೆಗಳನ್ನು ಕತ್ತರಿಸಿ ಬಂಡೆ ಸುಡುವವರಿಗೆ ಮಾರುತ್ತಾರೆ.

*ವಿ.ಆರ್.ಬಿ.*

**ಸಸ್ಯ ಜಾನಪದ** ಮಾನವ ಎಂದೂ ಸ್ವತಂತ್ರನಲ್ಲ, ಸ್ವಾವಲಂಬಿಯೂ ಅಲ್ಲ; ಅವನು ಸದಾ ಪರತಂತ್ರ ಹಾಗೂ ಪರಾವಲಂಬಿ. ಅವನು ನಿಸರ್ಗವನ್ನೊಲಿಸಿಕೊಂಡು, ಅದರ ಪ್ರಯೋಜನವನ್ನು ಪಡೆಯುವುದಾದರೆ ಸುಖವಾಗಿ ಬಾಳುತ್ತಾನೆ; ಅದರ ವಿರುದ್ಧವಾಗಿ ಸೆಣಸಿ, ಹೋರಾಟ ನಡೆಸುವುದಾದರೆ ಅವನು ನಿರ್ನಾಮವಾಗುತ್ತಾನೆ. ನಿಸರ್ಗದ ರಕ್ಷೆಯಿರುವತನಕ ಅವನಿಗೆ ಭಯವಿಲ್ಲ. ಮಾನವ ಜನ್ಮವೆತ್ತುವ ಮುನ್ನ ಅವನು ಪ್ರಾಣಿ ಹಾಗೂ ಸಸ್ಯ ಜನ್ಮಗಳ ಮೂಲಕ ಹಾದು ಬಂದಿದ್ದಾನೆನ್ನುವ ನಂಬಿಕೆ ಅನೇಕ ಜನಾಂಗಗಳಲ್ಲಿ ಪ್ರಬಲವಾಗಿದೆ. ಅವನು ಭೂಮಿಯ ಮೇಲೆ ಕಾಣಿಸಿಕೊಳ್ಳುವ ಹೊತ್ತಿಗೆ ತರುಗುಲ್ಮಲತಾದಿಸಸ್ಯ ಸಂಪತ್ತು, ಸರ್ವತ್ರ ಸಮೃದ್ಧವಾಗಿ ಹರಡಿತ್ತು. ಅವನು ಹುಟ್ಟಿದ್ದೇ ಕಾಡಿನ ನಡುವೆ, ಬೆಳೆದದ್ದೇ ಮರಗಿಡಗಳ ಜತೆಯಲ್ಲಿ. ಅವನ ಹಸಿವನ್ನು ನೀಗಿದ್ದು ಮರದ ಹಣ್ಣು, ನೆಲದ ಗೆಡ್ಡೆ ಗೆಣಸುಗಳು; ಮರದ ತೊಗಟೆಯೇ ಅವನ ಹೊದಿಕೆಯಾಯಿತು; ಮರದ ನೆರಳೇ ಅವನಿಗೆ ಆಸರೆಯಾಯಿತು. ಗುಡುಗು ಸಿಡಿಲು ಮೊದಲಾದ ನೈಸರ್ಗಿಕ ವ್ಯಾಪಾರಗಳು ಹುಲಿ ಚಿರತೆ ಮೊದಲಾದ ದುಷ್ಟಜಂತುಗಳು ಅವನನ್ನು ಪೀಡಿಸುವಾಗ ಮರದ ಬುಡವೊ ಅಥವಾ ಬಾಹುಗಳೋ ಅವನಿಗೆ ಆಶ್ರಯನೀಡಿದುವು. ಐತಿಹಾಸಿಕ ಕಾಲದಲ್ಲಿ ಸಹ ನೆಲದ ಮೇಲೆಲ್ಲ ಹಸುರು ಆವರಿಸಿಕೊಂಡಿದ್ದಿರಬೇಕು. ಆದಿಮಾನವ ದೂರ ದೂರಕ್ಕೆ ವಸತಿಗಳನ್ನು ನಿರ್ಮಿಸಿಕೊಂಡಿದ್ದಂತೆ ತೋರುತ್ತದೆ. ತನ್ನ ಅಳಿವುಳಿವುಗಳಿಗೆ, ತನ್ನ ಪ್ರಾಣಾಧಾರಕ್ಕೆ ಗಿಡಗೆಂಡೆಗಳೇ ಕಾರಣವೆಂದರಿತುಕೊಳ್ಳಲು ಅವನಿಗೆ ಬಹುಕಾಲ ಹಿಡಿಯಲಿಲ್ಲ. ಅರಣ್ಯದಲ್ಲಿ ಎಲ್ಲೆಲ್ಲಿಯೋ ರೂಕ್ಷವಾಗಿ ಬೆಳೆಯುತ್ತಿದ್ದ ಸಸ್ಯಗಳನ್ನು ಪಳಗಿಸಿಕೊಂಡು ತನಗೆ ಬೇಕಾದಷ್ಟನ್ನು ಒಂದೆಡೆ ಬೆಳೆಯಲಾರಂಭಿಸಿದ. ಸಸ್ಯಗಳನ್ನು ಬೆಳೆಯುತ್ತ, ಅರಣ್ಯೋತ್ಪನ್ನಗಳನ್ನು ಬಳಸುತ್ತ ಯಾವ ಪದಾರ್ಥ ಆರೋಗ್ಯಾನುಕೂಲವಾದದ್ದು, ಯಾವುದು ಪ್ರತಿಕೂಲವಾದದ್ದು, ಯಾವ ಗಿಡದ ರಸ ಯಾವ ರೋಗಕ್ಕೆ ಮದ್ದೆಂಬುದನ್ನು ಕಂಡುಕೊಂಡ. ಯಾವುದು ಪ್ರತಿಕೂಲವಾದದ್ದು, ಮಾನವನ ಸಂಸ್ಕೃತಿ ರೂಪುಗೊಂಡದ್ದೇ ಕಾನಾಂತರದಲ್ಲಿ, ಅವನ ಇತಿಹಾಸ ಪ್ರಾರಂಭವಾದದ್ದೇ ಕಾನನಾಂತರದಲ್ಲಿ. ಹಿಂದಿನ ಕಾಲದ ಕವಿ ಋಷಿ ಸಾಧುಸಂತರು ಗಿರವನಪ್ರಿಯರೆಂಬುದನ್ನು, ಪರ್ಣಕುಟಿಗಳೇ ಗುರುಕುಲಗಳಾಗಿದ್ದುವೆನ್ನುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

ವೈಜ್ಞಾನಿಕ ಯುಗದ ಮಾನವನೂ ತನ್ನೆಲ್ಲ ಸೌಕರ್ಯಗಳಿಗೆ ಹಾಗೂ ಕ್ಷೇಮಸಾಧನೆಗೆ ಸಸ್ಯಸಂಪತ್ತನ್ನೇ ಅವಲಂಬಿಸಬೇಕಾಗಿದೆ. ಅವನು ರಾಸಾಯನಿಕ ಮಾತ್ರೆಗಳಿಂದಲೇ ಹೊಟ್ಟೆ ಹೊರೆದುಕೊಳ್ಳಲಾರ; ಕಾರ್ಖಾನೆಯ ಉತ್ಪನ್ನಗಳಿಂದ ಜೀವನ ಸಾಗಿಸಲಾರ. ಆಹಾರ ಪದಾರ್ಥಗಳು, ಬಟ್ಟೆ ಕಾಗದಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳು, ಎಣ್ಣೆ ಔಷಧಿಗಳಿಗೆ ಆಧಾರಭೂತವಾದ ವಸ್ತುಗಳು, ವಸತಿ ಸೌಕರ್ಯಕ್ಕೆ ಬೇಕಾದ ಮರ, ಜೀವನದ ಎಲ್ಲ ಅಗತ್ಯಗಳೂ ಸಸ್ಯಕ್ಷೇತ್ರದಿಂದಲೇ ಪೂರೈಕೆಯಾಗಬೇಕಾಗಿದೆ. ಅರಣ್ಯಗಳು ನಾಶಗೊಂಡು, ಮರ ಗಿಡ ಬಳ್ಳಿ ಪೈರುಗಳೆಲ್ಲ ಒಕ್ಕಲಿಕ್ಕಿ ಹೋಗುವುದಾದರೆ, ಮಾನವ ಮಾತ್ರವಲ್ಲ, ಇಡೀ ಪ್ರಾಣಿಕೋಟಿಯೇ ನಿರ್ನಾಮವಾಗುತ್ತದೆ; ನಾಗರಿಕತೆ ಧ್ವಂಸವಾಗುತ್ತದೆ. ಮನುಷ್ಯನ ಉಪಯೋಗಕ್ಕೆ ಬಾರದ ಸಸ್ಯವಿಲ್ಲವೆಂದೇ ಹೇಳಬಹುದು. ಸೃಷ್ಟಿಯಲ್ಲಿ ನಿಷ್ಪ್ರಯೋಜಕವಾದ ವಸ್ತುವಿರಲಾರದು. ಉಪಯೋಗಕ್ಕೆ ಬಾರದ ಗಿಡವೋ ಬಳ್ಳಿಯೋ ಕಂಟಿಯೋ ಇರುವುದಾದರೆ ಅದಕ್ಕೆ ಮಾನವನ ಅಜ್ಞಾನವೇ ಕಾರಣವೆನ್ನಬಹುದು.

ತನ್ನ ಬದುಕಿಗೆ ಆಧಾರಭೂತವಾಗಿರುವ ಅನಿವಾರ್ಯವಾಗಿರುವ ಸಸ್ಯಗಳ ಬಗ್ಗೆ ಆದಿಮಾನವ ಗೌರವ ವಾತ್ಸಲ್ಯ ಭಯಾಶ್ಚರ್ಯಗಳನ್ನು ಹೊಂದಿದ್ದುದೇನೂ ಆಶ್ಚರ್ಯವಲ್ಲ. ತನಗಿಂತ ಮುಂದೆ ಹುಟ್ಟಿ, ಆಗಸದೆತ್ತರಕ್ಕೆ ಬೆಳೆದು, ತನ್ನ ರಕ್ತಮಾಂಸಗಳ ವೃದ್ಧಿಗೆ ಬೇಕಾದ ದ್ರವ್ಯಗಳನ್ನು ನೀಡಿ, ತಾನು ಮುಪ್ಪಾದರೂ ಪುಷ್ಟವಾಗಿ ಸೊಂಪಾಗಿ ಬೆಳೆಯುವ ಮರ ಗಿಡಗಳನ್ನೂ ತನಗೆ ಹಣ್ಣು ಹಂಪಲು ತರಕಾರಿಗಳನ್ನು ಕಾಳುಕಡ್ಡಿಗಳನ್ನು ಒದಗಿಸಿ ಸತ್ತುಹೋಗುವ ಬಳ್ಳಿಪೈರುಗಳನ್ನೂ ವರ್ಷವರ್ಷವೂ ಎಲೆಯುದುರಿ ಚಿಗುರಿ ಹೂವಾಗಿ ಮೆರೆಯುವ ವೃಕ್ಷಕೋಟಿಯನ್ನೂ ನೋಡಿದಾಗ ಅವನಲ್ಲಿ ನಾನಾಭಾವನೆಗಳು ಮೂಡುವುದು ಸಹಜವೇ. ಅವು ತನ್ನಂತೆ ನಡೆಯುವುದಿಲ್ಲ, ಮಾತಾಡುವುದಿಲ್ಲ; ಆದರೂ ರಾಗಭಾವಗಳ ಉತ್ಪತ್ತಿಗೆ ಕುಣಿತ ಮೆರೆತಗಳ ಪ್ರದರ್ಶನಕ್ಕೆ ಸ್ಫೂರ್ತಿ ಪ್ರೇರಣೆಗಳು ಅವನಿಗೆ ನಿಸರ್ಗದಿಂದಲೇ ಒದಗಿರಬೇಕು. ಅವುಗಳೊಳಗಿರುವ ಯಾವುದೋ ಚೈತನ್ಯಕಾರಣವಾಗಿ ಅಷ್ಟೆಲ್ಲ ಮಹತ್ಕಾರ್ಯಗಳು ಜರುಗುತ್ತಿರಬೇಕೆಂದು ಅವನಿಗನಿಸಿರಬೇಕು. ಮಳೆ ಹುಯ್ದರೆ ಹಸುರು ಚಿಮ್ಮುತ್ತದೆ. ಬೆಂಕಿ ಇದ್ದರೆ ಹೊಗೆ ಏಳುತ್ತದೆ ಎಂಬ ಕಾರ್ಯಕಾರಣ ಸಂಬಂಧ ಪ್ರಜ್ಞೆ ಅವನಲ್ಲಿ ವಿಕಾಸಗೊಂಡು, ಸರ್ವಚೇತನವಾದ ಅಪ್ರಜ್ಞಾಪೂರ್ವಕವಾಗಿ ಅವನ ಮನಸ್ಸಿನಲ್ಲಿ ಮಿಡಿಯುತ್ತಿದ್ದಿರಬೇಕು. ಚೈತನ್ಯವೇ ಮರದ, ಗಿಡದ, ಬಳ್ಳಿಯಹಾಗೂ ಪೈರಿನ ರೂಪದಲ್ಲಿ ಮೂರ್ತ ಸ್ವರೂಪವನ್ನು ಪಡೆದಿದೆ ಎಂಬ ಭಾವನೆ ಮೂಡಿದಾಗ ಅವನ್ನು ಪೂಜಿಸತೊಡಗಿದನು. ಆ ಪೂಜೆಯೂ ಕ್ಲಿಷ್ಟವಾಗಿರಲಾರದು. ಮರವನ್ನು ಕಣ್ಣಿಗೊತ್ತಿಕೊಂಡಿರಬೇಕು; ಕಾಲು ತಗುಲಿದಾಗ ಸಣ್ಣಮಾಡಿಕೊಂಡಿರಬೇಕು.

ಉತ್ತರ ಅಮೆರಿಕೆಯ ಕೆಲವು ಇಂಡಿಯನ್ನರು ಪ್ರತಿಯೊಂದು ನೈಸರ್ಗಿಕ ವಸ್ತುವಿನಲ್ಲಿಯೂ ಚೈತನ್ಯ ಅಥವಾ ಛಾಯೆಯಿದೆ ಎಂದು ನಂಬಿದ್ದಾರೆ. ಅಷ್ಟೇ ಅಲ್ಲ, ಅವುಗಳಲ್ಲಿ ಕೆಲವಕ್ಕೆ ಬುದ್ಧಿಶಕ್ತಿಯಿದೆ ಎಂಬ ಭಾವನೆಯೂ ಅವರಲ್ಲಿದೆ. ಅವರೆಂದೂ ಮರಗಳನ್ನು ಕಡಿದವರಲ್ಲ. ಏತಕ್ಕಾದರೂ ಮರ ಬೇಕಾಗಿದ್ದರೆ ಅದು ಉರುಳುವತನಕ ಮುಟ್ಟುವುದಿಲ್ಲ. ಪೂರ್ವ ಆಫ್ರಿಕೆಯ ವಾಣಿಕರ ಕಲ್ಪನೆಯ ಪ್ರಕಾರ ಪ್ರತಿಯೊಂದು ಮರದಲ್ಲಿಯೂ ಮುಖ್ಯವಾಗಿ ತೆಂಗಿನ ಮರದಲ್ಲಿ ಚೈತನ್ಯವಿದೆ. ಆ ಮರ ಬಾಳಿಗೆ ತುಷ್ಟಿ ಪುಷ್ಟಿಗಳನ್ನು ನೀಡುತ್ತದೆಯಾದ್ದರಿಂದ

ಅದನ್ನು ಕಡಿದವರು ಮಾತೃಹತ್ಯಾದೋಷಿಗಳೆಂದು ಗಣನೆಗೊಳ್ಳುತ್ತಾರೆ. ಮುಗ್ಧ ಜನರ ತೋಳು ಕತ್ತರಿಸುವುದೆಷ್ಟು ಪಾಪಕರವೋ ಮರಗಳ ಕೊಂಬೆ ಕಡಿಯುವುದೂ ಅಷ್ಟೇ ದೂಷ್ಯವೆಂದು ಸಯಾಮಿನ ಸನ್ಯಾಸಿಗಳು ತಿಳಿದಿದ್ದಾರೆ. ಅವಕ್ಕೂ ಚೇತನವಿರುವುದರಿಂದ ಕಡಿದರೆ ನೋವಾಗುತ್ತದೆಂಬ ಭಾವನೆ ಆದಿಮಾನವನಲ್ಲಿ ಮೂಡಿದ್ದು ಅಸಹಜವೇನಲ್ಲ. ಓಕ್ ಆಲ ಬಲಗಿ ಮೊದಲಾದ ದೈತ್ಯಗಾತ್ರದ ವೃಕ್ಷಗಳಲ್ಲಿ ಮಹಾಚೈತನ್ಯವನ್ನು ಕಂಡ ಅವನಲ್ಲಿ ಅವನ್ನು ಕಡಿದವನು ಸಾಯುತ್ತಾನೆ, ಇಲ್ಲವೆ ಅಂಗವಿಕಲನಾಗುತ್ತಾನೆಂಬ ಭಾವನೆ ಮೂಡಿದ್ದು ಸಹಜವೇ. ಮರ ಕಡಿದವನ ಸುಳಿಯೇ ಸತ್ತುಹೋಗುತ್ತದೆಂಬ ನಂಬಿಕೆ ಇಂದಿಗೂ ಹಳ್ಳಿಗಾಡಿನ ಜನರಲ್ಲಿದೆ. ಪಾಪ ಪರಿಹಾರಾರ್ಥವಾಗಿ ಅಂಥದೊಂದು ಮರವನ್ನು ಕಡಿದ ಮರಕಟುಗ ಅದೇ ಕೊಡಲಿಯಿಂದ ಹೇಟೆಯ ಶಿರವನ್ನು ಬಲಿಕೊಡುವ ಪದ್ಧತಿ ಕೆಲವು ಜನಾಂಗಗಳಲ್ಲಿ ಚಾಲ್ತಿಯಲ್ಲಿದೆ. ಪಂಜಾಬಿನ ಕಾಂಗ್ರಾಪರ್ವತ ಪ್ರಾಂತ್ಯದಲ್ಲಿ ಪ್ರಾಚೀನ ದೇವದಾರು ಮರವನ್ನು ಕಡಿದ ತಪ್ಪಿಗಾಗಿ ಸಂಬಂಧಪಟ್ಟ ಊರಿನ ಕುಟುಂಬಗಳು ಪ್ರತಿವರ್ಷವೂ ಪರ್ಯಾಯಕ್ರಮದಲ್ಲಿ ಒಂದೊಂದು ಹುಡುಗಿಯನ್ನು ಬಲಿಕೊಡಬೇಕಾಗಿತ್ತು.

ಮರ ಮುರಿದು ಬೀಳುವಾಗ ಆಗುವ ಶಬ್ದದಿಂದ ಅದು ಅಳುತ್ತದೆಂದೂ, ಆಗ ರಸವೋ ಹಾಲೋ ಸ್ರವಿಸುವುದಾದರೆ ರಕ್ತ ಸವಿಯುತ್ತದೆಂದೂ ಅನೇಕ ದೇಶಗಳ ಜನ ನಂಬಿಕೊಂಡಿದ್ದರು. ಚೀನೀ ಗ್ರಂಥಗಳಲ್ಲಿ ಇಂಥ ಸಂಗತಿಗಳು ಉಲ್ಲೇಖಗೊಂಡಿವೆ. ಮರ ಕಡಿತದಿಂದ ಕಟುಕನಿಗೆ ಅಥವಾ ಅಲ್ಲಿಯ ಕುಲದ ಯಜಮಾನನಿಗೆ ಕೇಡೊದಗುವ ಸಂಭವವಿದ್ದುದರಿಂದ, ಅದನ್ನು ಕಡಿಯುವುದಕ್ಕೆ ಮುಂಚೆ ಮಾಂತ್ರಿಕನ ಅನುಮತಿ ಪಡೆಯುವ ಪದ್ಧತಿ ಮಧ್ಯ ಆಫ್ರಿಕೆಯ ಕೆಲವು ಕುಲಗಳಲ್ಲಿ ಜಾರಿಯಲ್ಲಿತ್ತು. ಆ ಅನುಮತಿ ದೊರೆತ ಅನಂತರ ಕಟುಕ ಕೋಳಿಯನ್ನೋ ಆಡನ್ನೋ ಆಹುತಿನೀಡಿ, ಆನಂತರ ಬುಡಕ್ಕೆ ಕೊಡಲಿ ಬಿಡುತ್ತಿದ್ದನು. ಮೊದಲನೆಯ ಏಟಿನಿಂದ ಸ್ರವಿಸುವ ರಸವನ್ನು ನಾಲಗೆಯಿಂದ ನೆಕ್ಕಿ, ತಾವಿಬ್ಬರೂ ರಕ್ತಸೋದರರೆಂಬ ಬಾಂಧವ್ಯವನ್ನು ಸ್ಥಾಪಿಸಿಕೊಂಡ ಅನಂತರ, ಮುಂದಿನ ಕಾರ್ಯಕ್ಕೆ ಅಣಿಯಾಗುತ್ತಿದ್ದನು. ಮದುವೆ ಮೊದಲಾದ ಶುಭಕಾರ್ಯಗಳಿಗೆ ಸೌದೆಗಾಗಿ ಮರ ಕಡಿಯುವ ಮುನ್ನ ಅದಕ್ಕೆ ಪೂಜೆ ಸಲ್ಲಿಸುವ ಪದ್ಧತಿ ಇಂಡಿಯಾದಲ್ಲಿಯೂ ಕೆಲವು ಕಡೆ ರೂಢಿಯಲ್ಲಿತ್ತು. ಹಣ್ಣು ಬಿಡದ ಮರದ ಬಗ್ಗೆ ಜನ ಕ್ರುದ್ಧರಾಗುತ್ತಿದ್ದುದೂ ಉಂಟು. ಅದು ಹಣ್ಣು ಬಿಡುವಂತೆ ಮಾಡಲು ಕೆಲವು ಆಚರಣೆಗಳನ್ನು ಕೈಗೊಳ್ಳುತ್ತಿದ್ದರು. ಇಬ್ಬರು ಮಚ್ಚು ಕೊಡಲಿಗಳನ್ನು ತೆಗೆದುಕೊಂಡು, ಆ ಮರದ ಬಳಿ ಹೋಗುತ್ತಿದ್ದರು. ಅವರಲ್ಲೊಬ್ಬ ಮರದ ಬುಡದಲ್ಲಿ ನಿಂತರೆ, ಮತ್ತೊಬ್ಬ ಮೇಲೇರುತ್ತಿದ್ದನು. ಹಣ್ಣು ಬಿಡದಿದ್ದರೆ ಕೆಡವಿಬಿಡುತ್ತೇನೆಂದು ಕೆಳಗೆ ನಿಂತವನು ಉಗ್ಗಡಿಸುತ್ತಿದ್ದನು. ಆಗ ಮೇಲಿನವನು ಮರದ ಪರವಾಗಿ ದನಿ ಎತ್ತಿ ಮುಂದೆ ತುಂಬ ಫಲ ಕೊಡುವುದಾಗಿ ಹೇಳುತ್ತಿದ್ದನು. ಇದು ಜಪಾನಿನಲ್ಲಿ ಜಾರಿಯಲ್ಲಿದ್ದ ವಾಡಿಕೆ. ಯೂರೋಪಿನ ಕೆಲವು ರಾಷ್ಟ್ರಗಳಲ್ಲಿ ಇಂಥದೇ ಪದ್ಧತಿ ರೂಢಿಯಲ್ಲಿತ್ತು.

ಮರವೂ ಮನುಷ್ಯನಂತೆ ಚೈತನ್ಯಸಂಪನ್ನವಾದುದರಿಂದ ಮಾನವಸಾದೃಶ್ಯಾರೋಪಣೆ ಸ್ವಾಭಾವಿಕ. ಮದುವೆಯ ಕಲ್ಪನೆ ಮನುಷ್ಯನ ಮನಸ್ಸಿನಲ್ಲಿ ಮೂಡುವ ಹೊತ್ತಿಗೆ ಅವನು ನಾಗರಿಕನಾಗಿದ್ದ. ಅದನ್ನು ಮರಗಳಿಗೆ ಅನ್ವಯಿಸುವ ಹೊತ್ತಿಗೆ ಸರ್ವಚೇತನವಾದದ ಯುಗ ಮುಕ್ತಾಯಗೊಳ್ಳುತ್ತಿತ್ತೆಂದು ಕಾಣುತ್ತದೆ. ಮನುಷ್ಯ ಸಂತಾನದಂತೆ ವೃಕ್ಷಸಂತಾನಾಭಿವೃದ್ಧಿಗೂ ಮದುವೆ ಅತ್ಯವಶ್ಯವೆಂಬ ಭಾವನೆ ಕೇವಲ ಭ್ರಮಾಮೂಲವಾಗಿರದೆ ಶ್ರದ್ಧಾಮೂಲವಾಗಿತ್ತೆಂಬುದಂತು ನಿಜ. ಕೆಲವು ವೃಕ್ಷಜಾತಿಗಳು ದ್ವಿಲಿಂಗಿಗಳು ಮತ್ತೆ ಕೆಲವು ಏಕಲಿಂಗಿಗಳೆಂಬ ವಿಚಾರ ಇಲ್ಲಿ ಅಪ್ರಕೃತ. ಪ್ರಾಚೀನರಲ್ಲಿ ಕೆಲವರಿಗಾದರೂ ಈ ವೈಜ್ಞಾನಿಕ ತತ್ತ್ವ ಗೊತ್ತಿತ್ತೆಂದು ಹೇಳುತ್ತಾರೆ. ಗರ್ಭಧಾರಣ ಸಮಯದಲ್ಲಿ ಗಂಡು ಖರ್ಜೂರ ಮರದ ಪರಾಗವನ್ನು ಹೆಣ್ಣು ಮರದ ಹೂವಿನ ಮೇಲೆ ಕವಿಸುತ್ತಿದ್ದುದುಂಟು. ಮಾವಿನ ಮರ ನೆಟ್ಟವರು ಅದನ್ನು ಬೇರೆ ಮರದೊಡನೆ ಮದುವೆಮಾಡುವತನಕ ಅದರ ಹಣ್ಣು ತಿನ್ನಕೂಡದೆಂಬ ತಿಳಿವಳಿಕೆ ಕೆಲವು ಹಿಂದೂಗಳಲ್ಲಿದೆ. ಹುಣಿಸೆ ಮರ ಮಾವಿನ ತೋಟದ ಹತ್ತಿರವಿದ್ದರೆ, ಅದನ್ನು ಹೆಣ್ಣೆಂದು ಕಲ್ಪಿಸಿಕೊಂಡು ಮಾವಿನ ಮರದೊಡನೆ ಮದುವೆ ಮಾಡುವುದುಂಟು. ಹುಣಿಸೆ ಮರ ಹತ್ತಿರದಲ್ಲಿಲ್ಲವಾದರೆ ಮಲ್ಲಿಗೆ ಬಳ್ಳಿಯನ್ನೇ ಹೆಣ್ಣೆಂದು ಅಂಗೀಕರಿಸುವುದುಂಟು. ಜತೆಗೂಡಿ ಬೆಳೆದ ಆಲ ಮತ್ತು ಅರಳಿ ಮರಗಳಿಗೆ ಯುಕ್ತ ಸಮಯದಲ್ಲಿ ವಿವಾಹ ಮಾಡುವುದು ಒರಿಸ್ಸಾ ಪ್ರಾಂತ್ಯದ ಪದ್ಧತಿ. ಮದುವೆಯಿಲ್ಲದ ಮರಗಳ ಹಣ್ಣುಗಳಲ್ಲಿ ಹುಳು ತುಂಬಿರುತ್ತವೆಂದೂ, ಅವು ತಿನ್ನಲು ಯೋಗ್ಯವಲ್ಲವೆಂದೂ, ಆದ್ದರಿಂದ ಹಣ್ಣು ಬಿಡುವ ಮುನ್ನಮರಗಳಿಗೆ ಮದುವೆ ನಡೆಯಬೇಕೆಂಬುದು ಒರಯಾನ್ (Oraon) ಜನರ ನಂಬಿಕೆ, ಕುಟುಂಬದೊಳಗೆ ನಡೆಯುವ ಮದುವೆಯ ಸಮಯದಲ್ಲಿಯೇ ಆ ಮದುವೆಯೂ ನಡೆಯಬಹುದು. ಅರಳಿ ಮತ್ತು ಬೇವಿನ ಮರಗಳನ್ನು ಒಂದೇ ಕಡೆ ಬೆಳೆಸಿ ಅವುಗಳಿಗೆ ಮದುವೆ ಮಾಡುವ ಪರಿಪಾಠ ಕರ್ನಾಟಕದ್ದು. ಇಂಥ ಮದುವೆಗಳಿಗೆ ಹಿಂದಿನ ಕಾಲದಲ್ಲಿ ತುಂಬ ಹಣ ಖರ್ಚುಮಾಡುತ್ತಿದ್ದುದುಂಟು. ಇಬ್ಬರು ಹೆಂಡಿರನ್ನು ಕಳೆದುಕೊಂಡ ಒರಿಸ್ಸಾದ ವಿಧುರ ಮೂರನೆಯ ಹೆಂಡತಿಗೂ ಅನಿಷ್ಟ ಬಡಿಯಬಾರದೆಂದು ಮದುವೆಗೆ ಮುಂಚೆ ಹಿಪ್ಪಲಿನೇರಳೆ ಮರವನ್ನು ಮದುವೆಯಾಗುತ್ತಿದ್ದನು. ಕರ್ನಾಟಕದಲ್ಲಿ ಅಂಥ ಮದುವೆ ಎಕ್ಕದಗಿಡದೊಡನೆ ಆಗುತ್ತಿತ್ತು. ಮದುವೆಯಾದ ಅನಂತರ ಆ ಗಿಡವನ್ನು ಸುಡುತ್ತಿದ್ದರು. ಅಂತೆಯೇ ವಿಧವೆಯನ್ನು ಮದುವೆಯಾಗಲಿರುವ ಮುಂಬಯಿ ಪ್ರಾಂತ್ಯದ ಆದಿವಾಸಿ ಜನಾಂಗದ ಬ್ರಹ್ಮಚಾರಿ ಮೊದಲು ಶಮಿ ಅಥವಾ ರೂಯಿ ಮರವನ್ನು ಮದುವೆಯಾಗಬೇಕು. ನಿಜವಾದ ಮದುವೆಗೆ ಮುಂಚೆ ಮುಂಡ ಹೆಣ್ಣನ್ನು ಮಹಾವಾಮರಕ್ಕೂ ಗಂಡನ್ನು ಮಾವಿನ ಮರಕ್ಕೂ ಮದುವೆ ಮಾಡಿಸಬೇಕು. ಇದೊಂದು ವಿವಾಹಶಾಸ್ತ್ರ. ದುಷ್ಟಶಕ್ತಿಗಳ ಚೇಷ್ಟೆಯಿಂದ ಪಾರಾಗುವುದೇ ಇಂಥ ಅಣಕು ಮದುವೆಯ ಉದ್ದೇಶವಿದ್ದಂತೆ ತೋರುತ್ತದೆ. ಕ್ರಿಸ್‌ಮಸ್ ಸಮಯದಲ್ಲಿ ಜರ್ಮನಿಯ ರೈತರು ಹುಲ್ಲು ಹುರಿಯಿಂದ ಹಣ್ಣಿನ ಮರಗಳನ್ನು ಕಟ್ಟಿ, ಮದುವೆಯಾಯಿತೆಂದು ಹೇಳಿದ ಅನಂತರ ಹಣ್ಣು ಬಿಡುತ್ತಿದ್ದುವು.

ಹೂತ ಲವಂಗ ವೃಕ್ಷಗಳನ್ನು ಬಸಿರಿಯಂತೆ ಉಪಚರಿಸುವುದೂ ಗದ್ದಲವಾಗದಂತೆ ನೋಡಿಕೊಳ್ಳುವುದೂ ರಾತ್ರಿಯ ವೇಳೆ ಬೆಂಕಿ ಬೆಳಕುಗಳು ಹತ್ತಿರ ಸುಳಿಯದಂತೆ ಎಚ್ಚರಿಕೆ ವಹಿಸುವುದೂ ಕೆಲವು ಕಡೆ ರೂಢಿಯಲ್ಲಿದೆ. ಮರಗಳಿಗೆ ಹೆದರಿಕೆಯಾದರೆ ಹೂ ಕಚ್ಚುವುದಿಲ್ಲವಂತೆ. ಬತ್ತ ಹೊಡೆ ಕಡೆದಾಗ ಗದ್ದೆಯ ಬಳಿ ಬಂದೂಕದ್ದೇ ಆಗಲಿ ಮತ್ತಾವುದೇ ಸದ್ದಾಗಲಿ ಕೇಳಿಸಕೂಡದು. ಸದ್ದು ಕೇಳಿಸಿದರೆ ಗರ್ಭಪಾತವಾಗುತ್ತದೆ; ಬತ್ತ ಬೊಚ್ಚಾಗುತ್ತದೆ.

ಬಿರುಗಾಳಿ ಬೀಸಿ ಮರಕ್ಕೆ ಮರ ಉಜ್ಜಿ ಬೆಂಕಿ ಉತ್ಪತ್ತಿಯಾದಾಗ, ಮರ ಮುರಿದಾಗ ಭೀಕರ ಶಬ್ದವಾಗಿ ತದನಂತರ ಅದು ಒಣಗಿದಾಗ, ಎಲೆ ಉದುರಿದಾಗ ಪ್ರತ್ಯಕ್ಷ ಕಾರಣವಿಲ್ಲದೆ ಮರ ಒಣಗಿ ಪ್ರೇತದಂತೆ ಕಂಡಾಗ, ಆ ತನಕ ಅದರೊಳಗೆ ಸೇರಿಕೊಂಡಿದ್ದ ಪ್ರೇತದಂಥ ಶಕ್ತಿ ತೊಲಗಿ ಹೋಗಿರಬೇಕೆಂದು ಮನುಷ್ಯ ಊಹಿಸಿಕೊಳ್ಳುವುದು ಸಹಜವೇ. ಅವನ ಕಣ್ಣಿಗೆ ಮೊದಮೊದಲು ಚೇತನವೇ ಮರವಾಗಿ ಕಂಡದ್ದು, ಕಾಲ ಕ್ರಮೇಣ ಮರ ಚೇತನದ ಆವಾಸಸ್ಥಾನವೆಂದೂ ಅದು ಅಲ್ಲಿದ್ದು ಹೊರಗೆ ಹೋಗಬಹುದಾದ, ಮತ್ತೆ ಒಳಗೆ ಪ್ರವೇಶಿಸಬಹುದಾದ ಶಕ್ತಿಯೆಂದೂ ಅವನಿಗೆ ವೇದ್ಯವಾಗಿರಬೇಕು. ಮರಗಳಲ್ಲಿ ಅವಿತುಕೊಂಡಿರುವ ದೆವ್ವ ಪೂರ್ಣಿಮಾದಿನದಂದು ಹೊರಗೆ ಬಂದು ಅಡ್ಡಾಡುತ್ತದೆಂದು ಸಿಆವೂ (Siaoo) ತಿಳಿವಳಿಕೆ. ಅದಕ್ಕೆ ದೊಡ್ಡ ಮಂಡೆ, ಉದ್ದನೆಯ ಕೈಕಾಲುಗಳು ಮತ್ತು ಹೆಬ್ಬೊಟ್ಟೆಗಳಿರುತ್ತವಂತೆ. ಅವುಗಳು ಆವಾಸ ಸ್ಥಾನಗಳಲ್ಲಿ ಜನ ಕೋಳಿ ಕುರಿಗಳನ್ನು ತಂದು ಬಲಿಕೊಡುವುದುಂಟು. ನಮ್ಮಲ್ಲಿ ಮಾರಿಮಸಣಿಯರಿಗೆ ತಂಪು ಮಾಡಿಸುವಂತೆ. ಸತ್ತ ಮರದ ಪ್ರೇತ ತೆಂಗಿನ ಮರವನ್ನು ಸುಡುತ್ತದಂತೆ. ಮರ ಒಳ್ಳೆಯದಾದರೂ ಅದರಲ್ಲಿ ಸೇರಿಕೊಳ್ಳುವ ಭೂತದಿಂದ ಜನರಿಗೆ ತುಂಬ ತೊಂದರೆಯಾಗುತ್ತದೆಂಬ ನಂಬಿಕೆ ಮಲೆನಾಡಿನ ಜನರಲ್ಲಿ ರಕ್ತಗತವಾಗಿತ್ತು. ಆದ್ದರಿಂದ ಆ ಶಕ್ತಿಗಳ ತೃಪ್ತಿಗಾಗಿ ಮರಗಳಿಗೆ ಪೂಜೆ ಸಲ್ಲುತ್ತಿತ್ತು. ಭೂತ ಮರದಲ್ಲಿರುವ ತನಕ ಸ್ಲೇವ್‌ಕೋಸ್ಟಿನ ನೀಗ್ರೋ ಮರ ಕಡಿಯುವಂತಿಲ್ಲ. ಅದನ್ನು ಮರುಳುಗೊಳಿಸುವ ಸಲುವಾಗಿ ಮರದ ಬುಡದಲ್ಲಿ ಆಫ್ರೀಚಲಿನ ಎಣ್ಣೆಯನ್ನಿಡುತ್ತಾನೆ. ಆ ಎಣ್ಣೆ ಆ ಶಕ್ತಿಗೆ ಬಹು ಪ್ರಿಯ. ಅದು ಮರ ತ್ಯಜಿಸಿದ ಅನಂತರ ಅದನ್ನು ಕತ್ತರಿಸುತ್ತಾನೆ. ಕಾಡು ಕಡಿದು ಗದ್ದೆ ಮಾಡಬೇಕಾದಾಗ ಸೆಲಿಬೀಸ್ ದ್ವೀಪದ ಜನ, ಸಣ್ಣ ಮನೆಕಟ್ಟಿ, ಬಟ್ಟೆಬರೆ ಭಕ್ಷ್ಯಭೋಜ್ಯಗಳನ್ನಲ್ಲಿರಿಸಿ, ಅರಣ್ಯ ಭೂತಗಳನ್ನಲ್ಲಿಗಾಹ್ವಾನಿಸುತ್ತಾನೆ. ಅವು ಗೂಡು ಸೇರಿದ ಅನಂತರ ಮುಂದಿನ ಕೆಲಸ ಪ್ರಾರಂಭಿಸುತ್ತಾರೆ. ಬೃಹತ್ತರುವನ್ನು ಕಡಿಯುವ ಮುನ್ನ ಮಧ್ಯ ಯುರೋಪಿನ ಕಾಡು ಜನ ಅದರ ಕ್ಷಮೆಯಾಚಿಸುತ್ತಿದ್ದರಂತೆ. ಪ್ರತಿಷ್ಠೆಗೆ ಮಣಿಯುವ ಕುರುಹಾಗಿ ಬೆಳ್ಳಿಯ ಅಥವಾ ಚಿನ್ನದ ಮೊಳೆಯನ್ನು ಹೊಡೆದು ಅದರ ಅನಂತರವೇ ಸೂಡಾನಿನ ಜನ ಅದನ್ನು ಕಡಿಯುತ್ತಿದ್ದುದು. ಕಾಡು ಮರ ತಂದು ಕೊಯ್ದು, ಮನೆಯ ಕಟ್ಟಡಕ್ಕೆ ಬೇಕಾಗುವ ಹಲಗೆ ತೀರು ಕದ ಕಂಬಗಳನ್ನು ತಯಾರಿಸಿಕೊಂಡರೂ ದೆವ್ವ ಹಿಂದುಗಡೆಯೇ ಬಂದು ಮುಟ್ಟುಗಳಲ್ಲಿ ಸೇರಿಕೊಳ್ಳುತ್ತದಂತೆ. ಈ ನಂಬಿಕೆ ಈಗಲೂ ಅನೇಕ ಜನಾಂಗಗಳ ಆಸ್ತಿಯಾಗಿದೆ. ಆದ್ದರಿಂದಲೇ ಮನೆ ಕಟ್ಟಿದ ಅನಂತರ ಬಲಿಕೊಟ್ಟು, ಪ್ರಾಣಿಯ ರಕ್ತವನ್ನು ತೊಲೆ ತೀರುಪಟ್ಟಿಗಳಿಗೆ ಬಳಿಯುವ ತನಕ ಅಲ್ಲಿ ಸೇರಿಕೊಂಡಿರುವ ಭೂತಗಳು ಜಾಗಬಿಟ್ಟು ಕದಲುವುದಿಲ್ಲವಂತೆ. ಈ ಭೂತಗಳಿಗೂ ಸಾಕಷ್ಟು ಪ್ರತಿಷ್ಠೆಯುಂಟು. ಸ್ವಾನುಭವವುಂಟು. ಕಾಡು ಮರ ಬಳಸಿ ಮನೆ ಕಟ್ಟಿದ ಮೇಲೆ ಅವು ಆಗಾಗ್ಗೆ ಊರಿನ ಜನರಿಗೆ ಕಾಟ ಕೊಡುತ್ತವೆ. ಅಂಥ ಸಂದರ್ಭದಲ್ಲಿ ಕರಡಿ ಚಿರತೆ ಹಾವುಗಳನ್ನು ಒಂದು ವರ್ಷ ಕಾಲವಾದರೂ ಕೊಲ್ಲುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕಾಗುತ್ತದೆ. ಬೋರ್ನಿಯೋ ದ್ವೀಪದ ಜನರಲ್ಲಿ ಈ ಪದ್ಧತಿ ಇದೆ. ದೋಣಿಗೆ ಬಳಸಿದ ಮರವನ್ನು ಬಿಟ್ಟು ಭೂತ ತೊಲಗಬಾರದೆಂದೂ ಅದು ಅಲ್ಲಿಯೇ ಇದ್ದುಕೊಂಡು ತಮ್ಮನ್ನು ರಕ್ಷಿಸುತ್ತಿರಬೇಕೆಂದೂ ಥಾಯ್ಲೆಂಡಿನ ಜನ ಬಯಸುತ್ತಾರೆ. ಆದ್ದರಿಂದ ಅವರು ಆಗಾಗ್ಗೆ ದೋಣಿಗೆ ಅನ್ನ ರೊಟ್ಟಿಗಳನ್ನು ನಿವೇದಿಸುತ್ತಾರೆ. ಮರಗಳಲ್ಲಿ ಅಡಗಿರುವ ಭೂತಗಳು ಪ್ರಯಾಣಿಕರನ್ನು ಹಿಡಿದು ಹಿಂಸಿಸುತ್ತವೆಂದೂ ಕೆಲವು ಮರಗಳಿಂದ ಜನರಿಗೆ ಅಂಧತ್ವ ಪ್ರಾಪ್ತವಾಗುತ್ತದೆಂದೂ ಆಸ್ಟ್ರೇಲಿಯಾದ ಮೂಲನಿವಾಸಿಗಳು ನಂಬುತ್ತಾರೆ. ಅವು ಮಾನವ ಶರೀರಗಳನ್ನು ಪ್ರವೇಶಿಸಿ, ರೋಗ ರುಜಿನಗಳನ್ನು ಹುಟ್ಟಿಸುತ್ತವೆಂಬ ತಿಳಿವಳಿಕೆ ಪೂರ್ವ ಆಫ್ರಿಕೆಯ ಮೂಲನಿವಾಸಿಗಳದು.

ಪ್ರತಿಯೊಂದು ಪ್ರಾಣಿ ಅಥವಾ ವಸ್ತುವಿನಲ್ಲಿಯೂ ಬೇಕಾದಾಗ ಅಲ್ಲಿಯ ಇರಬಹುದಾದ, ಬೇಡವಾದಾಗ ಹೊರಗೆ ಬರಬಹುದಾದ ಶಕ್ತಿಯೊಂದಿದೆಯೆಂಬುದನ್ನರಿತಾಗ, ಈ ಶಕ್ತಿಗೆ ಅನೇಕತ್ವವನ್ನಾರೋಪಿಸಿ ಕೊಂಡಾಗ ಆ ಶಕ್ತಿಗಳು ಒಂದು ಕಾಯದಿಂದ ಮತ್ತೊಂದು ಕಾಯಕ್ಕೆ ಪ್ರವೇಶಿಸುವ ಮೂಲಕ ತಂತಮ್ಮ ಸ್ಥಾನಗಳನ್ನು ಅದಲು ಬದಲು ಮಾಡಿಕೊಳ್ಳಬಹುದೆಂದಾಯಿತು. ಮರದ ಆತ್ಮ ಮನುಷ್ಯರ ದೇಹವನ್ನು ಪ್ರವೇಶಿಸುತ್ತದೆಂಬುದಕ್ಕೆ ಆಧಾರಗಳಿಲ್ಲ ಆದರೆ ಸತ್ತ ಹಿರಿಯರ ಆತ್ಮ ಮರವನ್ನು ಪ್ರವೇಶಿಸುತ್ತದೆಂಬ ನಂಬಿಕೆ ಜಗತ್ತಿನ ಅನೇಕ ಜನಾಂಗಗಳಲ್ಲಿದೆ. ಕೆಲವು ಮರ ಮನುಷ್ಯನಿಗಿಂತ ಹೆಚ್ಚು ದಿನ ಬಾಳುವುದು ಮಾತ್ರವಲ್ಲ, ಅವನಿಗಿಂತ ಉದ್ದವಾಗಿ ಗಾತ್ರವಾಗಿ ಬೆಳೆಯುತ್ತವೆನ್ನುವ ಯಥಾರ್ಥತಾಜ್ಞಾನವೂ ಇಂಥ ತಿಳಿವಳಿಕೆಗೆ ಕಾರಣವಾಗಿರಬೇಕು. ಮಧ್ಯ ಆಸ್ಟ್ರೇಲಿಯಾದ ಬುಡಕಟ್ಟಿನ ಜನ ಇಂಥ ನಂಬಿಕೆಯಿಂದಾಗಿ ತಮ್ಮ ಹಿರಿಯರ ಆತ್ಮ ಸೇರಿರಬಹುದಾದ ಮರಗಳಿಗೆ ಅಪಾರ ಗೌರವ ಸಲ್ಲಿಸುತ್ತಾರೆ. ಅವರು ಅವುಗಳನ್ನು ಕಡಿಯುವುದಿಲ್ಲ, ಸುಡುವುದಿಲ್ಲ. ಅವನ್ನು ಕಡಿಯಲು ಪ್ರಯತ್ನಿಸುವ ಹೊರಗಿನವರನ್ನು ಅವರು ಶಕ್ತಿ ಮೀರಿ ತಡೆಯುತ್ತಾರೆ. ತಡೆಯಲು ಸಾಧ್ಯವಿಲ್ಲವಾದರೆ, ತಾವು ಅದೃಷ್ಟಹೀನರೆಂದೂ, ತಮಗೆ ಶಿಕ್ಷೆ ಕಾದಿದೆಯೆಂದೂ ತಿಳಿಯುತ್ತಾರೆ. ಗಗನ ಚುಂಬಿತವಾದ ಮರಗಳಲ್ಲಿ ತಮ್ಮ ಪೂರ್ವಜರು ನೆಲೆಸಿದ್ದುದಾಗಿಯೂ ಗಾಳಿಯಿಂದಾದ ಎಲೆಕೊಂಬೆಗಳ ಸದ್ದುಪೂರ್ವಜರ ಧ್ವನಿ ಎಂದೂ ಭಾವಿಸುತ್ತಾರೆ. ಆ ಮರಗಳ ಬಳಿ ಸುಳಿದಾಗ ಹಿರಿಯರ ಶಾಂತಿಗೆ ಭಂಗವಾಯಿತೆಂದು ತಿಳಿದು ಕ್ಷಮೆ ಕೇಳಿಕೊಂಡು ನಮಸ್ಕರಿಸುತ್ತಾರೆ. ಇಡೀ ಊರಿನ ಹಿರಿಯರ ಪ್ರೇತಗಳೆಲ್ಲ ಅಲ್ಲಿರುವ ಪವಿತ್ರ ವೃಕ್ಷದಲ್ಲಿ ಸೇರಿಕೊಳ್ಳುತ್ತವೆಂಬ ತಿಳಿವಳಿಕೆಯೂ ಕೆಲವು ಕಡೆ ಅಸ್ತಿತ್ವದಲ್ಲಿದೆ. ಅಂಥ ಮರವನ್ನು ಕಡಿದರೆ ಆ ಊರಿನ ವಿನಾಶ ಸಿದ್ಧ. ಬಾಣಂತಿಯರ ಮತ್ತು ಪ್ಲೇಗಿನಿಂದ ಸತ್ತ ಜನರ ಆತ್ಮಗಳು ತಪ್ಪದೆ ಮರಸೇರುತ್ತವೆಂದು ಕೊರಿಯಾ ಜನರ ನಂಬಿಕೆ. ಆ ಮರದ ಬುಡದಲ್ಲಿ ಕಲ್ಲು ಗುಡ್ಡೆಮಾಡಿ, ಆ ಗುಡ್ಡೆಗೆ ಹಂದಿಮಾಂಸ ವೈನ್ ಮೊದಲಾದ ಪದಾರ್ಥಗಳನ್ನು ನೈವೇದ್ಯವಾಗಿ ನೀಡುತ್ತಾರೆ. ಮೃತರ ಆತ್ಮವನ್ನು ಬಲಗೊಳಿಸಿ, ದೇಹ ಕೊಳೆಯದಂತೆ ಸದಾ ಹಸುರಿರುವ ಎತ್ತರದ ಸೈಪ್ರೆಸ್ ಮತ್ತು ಪೈನ್ ಮರಗಳನ್ನು ಚೀನೀಯರು ಅವರ ಸಮಾಧಿಯ ಮೇಲೆ ನೆಡುತ್ತಾರೆ. ಮೃತರ ಆತ್ಮ ಮರದಲ್ಲಿ ನೆಲಸಲಿ, ಅದು ಆ ರೂಪದಲ್ಲಿ ಸದಾ ಕಾಣಿಸುತ್ತಿರಲೆಂಬ ದೃಷ್ಟಿಯಿಂದ ಇಂಡಿಯಾದಲ್ಲಿಯೂ ಸಮಾಧಿಯ ಬಳಿ ಮರ ನೆಡುವುದುಂಟು. ಪ್ರೇತಗಳು ಸ್ಮಶಾನವನ್ನು ಬಿಟ್ಟು ಬರದಿರಲೆಂಬ ಕಾರಣಕ್ಕಾಗಿ ಅಲ್ಲಿಯೇ ತೋಪು ಬೆಳೆಸುವುದೂ ಉಂಟು.

ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಒಂದು ಕತೆಯ ಪ್ರಕಾರ ಅರಳಿಮರ ದುಷ್ಟ ಶಕ್ತಿಯ ಏಳು ಜನ ಸುಂದರ ಪುತ್ರಿಯರನ್ನು ಪ್ರತಿನಿಧಿಸುತ್ತದೆ. ಒಂದು ದಿನ ಅವರು ಹತ್ತಿರದ ನದಿಗೆ ಸ್ನಾನಕ್ಕೆಂದು

ಹೋಗುತ್ತಿದ್ದಾಗ ಕೃಷ್ಣ ಅವರಲ್ಲಿ ಪ್ರೇಮಾಸಕ್ತನಾದನು. ತನ್ನನ್ನು ಮದುವೆಯಾಗುವಂತೆ ಅವನು ಅವರನ್ನು ಕೇಳಿದನು. ಅವರು ನಿರಾಕರಿಸಿದರು. ಕೃಷ್ಣ ಅವರನ್ನು ಹಿಡಿದುಕೊಳ್ಳಲು ತುಡುಕಿದನು. ಆ ಸೋದರಿಯರು ಕೂಡಲೇ ಅರಳಿ ಮರವಾಗಿ ರೂಪಾಂತರ ಹೊಂದಿದರು. ಅವರನ್ನು ಆಲಂಗಿಸಿಕೊಂಡಿದ್ದ ಕೃಷ್ಣ ಒಡನೆಯೇ ಬೇವಿನ ಮರವಾದನು. ಅಂದಿನಿಂದ ಬೇವು ಅರಳಿಗಳಿಗೆ ಮದುವೆಮಾಡಿ ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಒರಿಸ್ಸಾದ ಜಾನಪದ ಕತೆಯೊಂದರ ಪ್ರಕಾರ ಅಲ್ಲಿಯ ಮಂತ್ರಿಯ ಮಗಳು ಚಂಪಕ ವೃಕ್ಷವಾಗಿ ಪರಿವರ್ತನೆಯಾಗುತ್ತಿದ್ದಳಂತೆ. ತೋಡಿದ ಒಂದು ಗುಂಡಿಯಲ್ಲಿ ಅವಳು ಕುಳಿತುಕೊಳ್ಳುತ್ತಿದ್ದಳು. ಅನಂತರ ಗುಂಡಿಯ ಬಾಯನ್ನು ಮಣ್ಣಿಂದ ಮುಚ್ಚುತ್ತಿದ್ದರು. ಗುಂಡಿಯ ಮೇಲೆ ಅರಿಸಿನದ ನೀರು ಚಿಮುಕಿಸುತ್ತಿದ್ದರು. ಅನಂತರ ಚಿನ್ನದ ಬಣ್ಣದ ಮೊಗ್ಗು ಹೂಗಳಿಂದ ತುಂಬಿದ ಚಂಪಕ ವೃಕ್ಷ ಹೊರಬರುತ್ತಿತ್ತು. ಅವಳ ದಾಸಿ ಹೂಗಳನ್ನೆಲ್ಲ ಕಿತ್ತುಕೊಂಡ ಬಳಿಕ "ಓ ಚಿನ್ನದ ಹೂವೇ, ಈಗ ಮೇಲೇಳು" ಎಂದು ಹೇಳುತ್ತಿದ್ದಳು. ಆಗ ಮರ ಮಾನವಾಕೃತಿ ತಾಳುತ್ತಿತ್ತು. ಮತ್ತೊಂದು ಕತೆಯ ಪ್ರಕಾರ, ಒಬ್ಬ ರಾಕ್ಷಸಿ ರಾಣಿಯನ್ನೇ ಬಾವಿಗೆಸೆದು, ಅವಳ ವೇಷಭೂಷಣಗಳನ್ನು ತಾನೇಧರಿಸಿ, ರಾಣಿಯಾದಳು. ನಿಜವಾದ ರಾಣಿ ಸತ್ತು ನೈದಿಲೆಯಾದಳು. ಚತುರೆಯಾದ ರಾಕ್ಷಸಿ ಆ ಗಿಡವನ್ನು ಕಿತ್ತು ಹೊರಗೆ ಬಿಸಾಡಿದಳು. ಆ ನೈದಿಲೆ ಬಾಡಿ, ನೆಲ ಸೇರಿತು. ಆ ಜಾಗದಲ್ಲಿ ಕುಂಬಳದ ಬಳ್ಳಿ ಬೆಳೆದು, ತುಂಬ ಕಾಯಿಬಿಟ್ಟಿತು. ರಾಕ್ಷಸಿ ಅವುಗಳಲ್ಲೊಂದನ್ನು ಕಿತ್ತು ಅಡುಗೆ ಮಾಡಿದಳು. ಅದು ಬೇಯುವಾಗ ತನ್ನ ಕೊಲೆಯ ಕತೆಯನ್ನು ಗಟ್ಟಿಯಾಗಿ ಹೇಳಿದಳು. ದೊರೆ ಅದನ್ನು ಕೇಳಿಸಿಕೊಂಡು ರಾಕ್ಷಸಿಯನ್ನು ಕೂಡಲೇ ಕೊಲೆಮಾಡಿಸಿದನು. ರಾಣಿ ಅಡುಗೆಪಾತ್ರೆಯಿಂದ ಮಾನವರೂಪದಲ್ಲಿ ಹೊರಗೆ ಜಿಗಿದಳು.

ಪದ್ಮಪುರಾಣದ ಉತ್ತರಕಾಂಡದಲ್ಲಿ ದೇವತೆಗಳೇ ವೃಕ್ಷವಾಗಿ ರೂಪಾಂತರಗೊಂಡ ಕತೆಯೊಂದಿದೆ. ಒಂದು ದಿನ ಅರಣ್ಯದ ನಿರ್ಜನ ಪ್ರದೇಶದಲ್ಲಿ ಶಿವಶಿವಾಣಿಯರು ಪ್ರಣಯಲೀಲೆಯಲ್ಲಿ ತಲ್ಲೀನರಾಗಿದ್ದರು. ದೇವತೆಗಳೆಲ್ಲರು ಸಂಚುಹೂಡಿ ಬ್ರಾಹ್ಮಣ ವೇಷದಲ್ಲಿ ಅಗ್ನಿಯನ್ನು ಆ ಸ್ಥಳಕ್ಕೆ ಕಳಿಸಿದರು. ತಮ್ಮ ಏಕಾಂತವನ್ನು ಭಂಗಮಾಡುವ ಸಲುವಾಗಿ ಬಂದವರು ಯಾರೆಂದು ಪಾರ್ವತಿಗೆ ತಿಳಿಯಿತು. ಕುಪಿತಳಾದ ಪಾರ್ವತಿ ಸಂಚುಗಾರರೆಲ್ಲ ಮರಗಳಾಗಲೆಂದು ಶಾಪವಿತ್ತಳು. ಆ ಶಾಪದ ಪರಿಣಾಮವಾಗಿ ಬ್ರಹ್ಮ ಪಲಾಶವೃಕ್ಷನಾದನು; ವಿಷ್ಣು ಅಶ್ವತ್ಥವಾದನು; ರುದ್ರವಟವಾದನು. ಇಂಥ ಸಂಗತಿಗಳು ಅನೇಕ ಜನಾಂಗಗಳ ಜಾನಪದದಲ್ಲಿ ದಂಡಿಯಾಗಿ ಸಿಗುತ್ತವೆ.

ಬರಬರುತ್ತ ಮಾನವನ ಧರ್ಮಕರ್ಮಗಳಿಗೆಲ್ಲ ಮರ ಕೇಂದ್ರಶಕ್ತಿಯಾಯಿತು. ಅವನ ಜೀವನವೃದ್ಧಿಯಲ್ಲಿ, ಮನೋಧರ್ಮ ವಿಕಾಸದಲ್ಲಿ, ಕಲೆಗಳ ಬೆಳವಣಿಗೆಯಲ್ಲಿ, ತತ್ತ್ವದರ್ಶನ ಮತ್ತು ಸೌಂದರ್ಯ ಮೀಮಾಂಸೆಗಳ ಉಗಮದಲ್ಲಿ ಮರದ ಪಾತ್ರ ಮಹತ್ವಪೂರ್ಣವಾಯಿತು. ಮರದ ಸುತ್ತ ಮನೆಗಳೆದ್ದು ಊರಾಯಿತು. ಊರಿನ ನಡುವೆ ಮರ ಅನಿವಾರ್ಯವಾಯಿತು. ಊರಿನ ಕ್ಷೇಮಪಾಲನೆ ಮರದ ಹೊಣೆಗಾರಿಕೆಯಾಯಿತು. ಅದು ಊರಿನ ನ್ಯಾಯದೇವತೆಯೂ ಆಯಿತು. ಪಂಚಾಯಿತಿಗಳೆಲ್ಲ ನಡೆಯುತ್ತಿದ್ದುದೇ ಅದರ ಕೆಳಗೆ. ಸಾಕ್ಷಿಗಳು ಮರದ ಮೇಲೆ ಆಣೆಯಿಟ್ಟು ಸಾಕ್ಷ್ಯನೀಡಬೇಕಾಗಿತ್ತು. ಸುಳ್ಳು ಹೇಳಿದರೆ ಮರದ ಶಾಪ ತಪ್ಪುತ್ತಿರಲಿಲ್ಲ. ಮದುವೆ ಸಹ ಮರದ ಕೆಳಗೆ ಜರುಗುತ್ತಿದ್ದವು. ಲೇವಾದೇವಿಗೂ ಮರವೇ ಸಾಕ್ಷಿಯಾಗುತ್ತಿತ್ತು. ಅದರ ಕೆಳಗೆ ನಡೆದ ಸಕಲ ವ್ಯವಹಾರಗಳು ಸತ್ಯದ ಗಡಿಯನ್ನು ದಾಟುತ್ತಿರಲಿಲ್ಲ. ಮಾನವರ ಪಾಪಪುಣ್ಯಗಳೆಲ್ಲ ಅದಕ್ಕೆ ತಿಳಿಯುತ್ತಿದ್ದುವು. ಒಟ್ಟಿನಲ್ಲಿ ಅದು ಅಗೋಚರ ಶಕ್ತಿಯೊಂದರ ಪ್ರತಿ ನಿಧಿಯಾಯಿತು. ಊರಿನ ಆಗುಹೋಗುಗಳಿಗೆ ಅದರ ಆಶೋತ್ತರಗಳಿಗೆ ಅದೇ ಕಾರಣವಾಗಿ ಧ್ರುವತಾರೆಯಾದುದರಿಂದ ಅದು ಧರ್ಮವೃಕ್ಷ (Life tree)ವಾಯಿತು. ಅದು ಉನ್ನತವಾಗಿ ಬೆಳೆದು ಆಕಾಶಕ್ಕೆ ಊರೆಯಾದುದರಿಂದ, ಆಕಾಶ ಕಳಚಿ ಕೆಳಗೆ ಬೀಳದಂತೆ ರಕ್ಷಿಸುವ ಕಂಬವಾದುದರಿಂದ ಅದು ರಕ್ಷಾಶಕ್ತಿಯಾಯಿತು. ಮೋಡಗಳು ಇಳಿಯುವ ಏಣಿಯಾಗಿ ಮಳೆ ತರುತ್ತಿದ್ದುದರಿಂದ ಕ್ಷೇಮಶಕ್ತಿಯಾಯಿತು. ಮಕ್ಕಳು ಹುಟ್ಟಿದಾಗ ಮರ ನೆಡುವುದೂ ಮರದ ಬೆಳವಣಿಗೆಯ ಆಧಾರದಿಂದ ಮಗುವಿನ ಭವಿಷ್ಯವನ್ನು ನಿರ್ಧರಿಸುವುದೂ ರೋಮನರಲ್ಲಿದ್ದ ಪದ್ಧತಿ. ರೋಮುಲಸ್ ಮತ್ತು ರೀಮಸ್‌ರು ಸಿಕ್ಕಿದ್ದು ಒಂದು ಮರದ ಕೆಳಗೆ. ಅದು ಆ ರಾಜವಂಶದ ಏಳ್ಗೆಗೆ ಪ್ರತೀಕವಾಗಿ ವಂಶ ವೃಕ್ಷವಾಗಿ ಬಹುವರ್ಷಗಳ ಕಾಲ ಅಲ್ಲಿ ನಿಂತಿತ್ತು. ಅದು ಒಣಗುವಂತಾದಾಗ, ರಾಷ್ಟ್ರದ ಅವನತಿಗೆ ಕಾರಣವಾಗಬಹುದೆಂದು ರೋಮನ್ನರು ದುಃಖಾಕ್ರಾಂತರಾದರು.

ಮರದಿಂದ ಮರಕ್ಕೆ ಜಿಗಿದಾಡುವ ನಿರಾಕಾರವೂ ಅಮೂರ್ತವೂ ಆದ ಈ ಸಸ್ಯ ಶಕ್ತಿಯನ್ನು ಕಲ್ಪಿಸಿಕೊಳ್ಳುವುದು ಅವನಿಗೆ ಕಷ್ಟವಾಗಿರಬೇಕು. ಸರ್ವಸಮರ್ಥವಾದ ಆ ಶಕ್ತಿಯನ್ನವನು ಪ್ರಾಣಿರೂಪದಲ್ಲಿ ಕಲ್ಪಿಸಿಕೊಳ್ಳಲಾರ. ಜೀವಕೋಟಿಯಲ್ಲಿ ಮಾನವನೇ ಶ್ರೇಷ್ಠ ಎಂಬ ಭಾವನೆಯೂ ಅವನ ಮನಸ್ಸಿನ ಒಳಪದರದಲ್ಲಿ ಮನೆ ಮಾಡಿಕೊಂಡಿರಬೇಕು. ಆದ್ದರಿಂದ ತನ್ನ ರೂಪವನ್ನೇ ಅದಕ್ಕೂ ಆರೋಪಿಸಿಕೊಂಡನು. ಅವುಗಳಿಗೆ ಮಾನವರೂಪವೊದಗಿದರೂ ಅದರ ಸ್ವರೂಪ ಸ್ವಭಾವಗಳು ಮಾತ್ರ ಬದಲಾಗಲಿಲ್ಲ. ಬಿಸಿಲು, ಮಳೆಗಳಿಗೆ ವನದೇವತೆಗಳೇ ಕಾರಣವೆಂಬ ನಂಬುಗೆ ಮಾನವನ ಮನಸ್ಸಿನಲ್ಲಿ ಬೇರೂರಿತು. ಪವಿತ್ರಾರಣ್ಯದಲ್ಲಿ ಒಂದು ಮರ ಕಡಿದರೂ ವನದೇವತೆಗಳು ಕೋಪಗೊಂಡು ಮಳೆ ತಡೆಯುತ್ತಾರೆಂಬ ಭಾವನೆ ಅಸ್ಸಾಮಿನ ಮುಂಡಾರಿ ಜನಾಂಗದಲ್ಲಿದೆ. ಬರ್ಮದೇಶದ ಕೆಲವೆಡೆಗಳಲ್ಲಿ, ಊರಿನ ಬಳಿಯ ದೊಡ್ಡ ಹುಣಿಸೆಮರಕ್ಕೆ ಹಣ್ಣುಹಂಪಲು ಕೋಳಿಗಳನ್ನು ನೈವೇದ್ಯ ನೀಡಿ, ಮಳೆ ಬರಿಸುವುದುಂಟು. ಅದೃಶ್ಯಚೇತನವೊಂದು ಕಾಡುಗಳನ್ನು ರಕ್ಷಿಸುತ್ತದೆಂದೂ ಮರದ ಬುಡ, ತುದಿ, ಕೊಂಬೆ, ಬೇರುಗಳಲ್ಲಿ ಒಂದೊಂದು ಚೇತನ ವಾಸಿಸುತ್ತದೆಂದೂ ಅವರು ಭಾವಿಸಿಕೊಂಡಿದ್ದಾರೆ. ಎಲೆಯುಳ್ಳ ಕೊಂಬೆಗಳನ್ನು ನೇಗಿಲ ಗೆರೆಗಳಲ್ಲಿ ನೆಟ್ಟರೆ ಒಳ್ಳೆಯ ಫಸಲು ಸಿಗುತ್ತದೆಂದು ಸ್ವೀಡನ್ ರೈತರ ನಂಬಿಕೆ. ಮೇ-ವೃಕ್ಷ ಅಥವಾ ಮೇ-ಸ್ತಂಭದ ಪೂಜೆಯಿಂದ ಸ್ತ್ರೀಯರಿಗೆ ಹಾಗೂ ದನಗಳಿಗೆ ಫಲ ಶಕ್ತಿಯೊದಗುತ್ತದೆಂದು ಯೂರೋಪೀಯರ ತಿಳಿವಳಿಕೆ. ಕೊಟ್ಟಿಗೆಯ ಬಾಗಿಲಲ್ಲಿ ಮೇ ವೃಕ್ಷವನ್ನಿರಿಸಿದರೆ, ದನಗಳಲ್ಲಿ ಹಾಲು ಹೆಚ್ಚಾಗುತ್ತದೆಂದು ಜರ್ಮನಿಯ ಕೆಲವು ಕಡೆ ಜನರ ಭಾವನೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಮರಕ್ಕೆ ಈ ಗುಣವಿರುತ್ತದೆ. ಅರಳಿ ಮರವನ್ನು ಪ್ರದಕ್ಷಿಣೆ ಮಾಡಿ ಪೂಜಿಸಿದರೆ ಬಂಜೆಯರು ಫಲವತಿಯಾಗುತ್ತಾರೆಂಬ ಕಲ್ಪನೆ ದಕ್ಷಿಣ ಭಾರತೀಯರಲ್ಲಿದೆ. ಹೆರಿಗೆ ಸುಖವಾಗಿ ನಡೆಯಲೆಂಬ ದೃಷ್ಟಿಯಿಂದ ಕಾಂಗೋವಿನ ಕೆಲವು ನೀಗ್ರೋ ಕುಲಗಳ ಹೆಂಗಸರು ಪವಿತ್ರ ವೃಕ್ಷಗಳ ತೊಗಟೆಯಿಂದ ಮಾಡಿದ ಉಡುಪುಗಳನ್ನು ಹೊದೆಯುತ್ತಾರಂತೆ. ಕೆಲವು

ಕಡೆ ಮಕ್ಕಳಾಗಲೆಂದು ಹೆಂಗಸರು ಮರಗಳನ್ನು ತಬ್ಬಿಕೊಳ್ಳುವರಂತೆ. ತಮ್ಮ ಕಾಯಿಲೆ ಗುಣವಾಗುವುದಾದರೆ ವಿಶೇಷ ಪೂಜೆ ಮಾಡಿಸುವುದಾಗಿ ಕೆಲವು ಕಡೆಯ ರೋಗಿಗಳು ಮರಕ್ಕೆ ಹರಕೆ ಕಟ್ಟಿಕೊಳ್ಳುವುದುಂಟು.

ಮತದ ಇತಿಹಾಸದಲ್ಲಿ ವೃಕ್ಷಪೂಜೆಯೊಂದು ಮೈಲಿಗಲ್ಲು. ಅದು ಚಾಲ್ತಿಯಲ್ಲಿಲ್ಲದ ದೇಶವಿಲ್ಲ. ಪ್ರಾಚೀನಕಾಲದಿಂದ ರೋಮನ್ನರು ಆಲಿವ್ ಮರವನ್ನೂ ಗ್ರೀಕರು ಸೀಡರ್ ಹೆಸರಿನ ದೇವದಾರು ವೃಕ್ಷವನ್ನೂ ಐಗುಪ್ತರು ತಮರಿಸ್ಕ್ ಎನ್ನುವ ಮರವನ್ನೂ ಪೂಜಿಸುವುದು ರೂಢಿಯಲ್ಲಿದೆ. ಅವರ ದೃಷ್ಟಿಯಲ್ಲಿ ಮರ ದೇವರ ಸಂಕೇತ. ಇಂದಿಗೂ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮೇ ವೃಕ್ಷೋತ್ಸವ ಅದ್ದೂರಿಯಿಂದ ನಡೆಯುತ್ತದೆ. ಅಷ್ಟೇ ವೈಭವದಿಂದ ನಡೆಯುವ ಮತ್ತೊಂದು ಹಬ್ಬವೆಂದರೆ ಪ್ರತಿ ವರ್ಷ ಏಪ್ರಿಲ್ ಇಪ್ಪತ್ತು ಮೂರರಂದು ಬರುವ ಸಂತ ಜಾರ್ಜ್ ದಿನಾಚರಣೆ. ಕಾರಿಂಥಿಯಾದ ಸ್ಲಾವ್ ಜನಾಂಗಕ್ಕೆ ಸೇರಿದ ಹುಡುಗರು ಹಬ್ಬದ ಹಿಂದಿನ ದಿನ ಕೆಡವಿದ ಮರವನ್ನು ಹೂಹಾರಗಳಿಂದ ಅಲಂಕರಿಸುತ್ತಾರೆ. ಸಂಗೀತವಾದ್ಯಗಳ ಸಂಭ್ರಮದೊಡನೆ ಅದನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ. ಭೂರ್ಜ ಜಾತಿಯ ಮರದ ಕೊಂಬೆಗಳಿಂದ ಉದ್ದ ಇಳಿಯ ಮುಚ್ಚಿದ ಹುಡುಗ ಆ ಮೆರವಣಿಗೆಯ ಕಣ್ಮಣಿ. ಅವನನ್ನು ಹರಿತಾಭ ಅಥವಾ ಹಸುರು ಜಾರ್ಜ್ ಎಂದು ಕರೆಯುತ್ತಾರೆ. ಶಾಸ್ತ್ರಗಳೆಲ್ಲ ಮುಗಿದ ಅನಂತರ ಹಸುರು ಜಾರ್ಜನ ಪ್ರತಿಮೆಯನ್ನು ನೀರಿಗೆ ಬಿಸಾಡುತ್ತಾರೆ. ಪರ್ಣಾವರಣದಿಂದ ಬಾಲಕ ಹೊರಗೆ ಬಂದು, ಯಾರೂ ಕಾಣದಂತೆ ಪ್ರತಿಮೆಯನ್ನು ಅದರೊಳಗೆ ನುಗ್ಗಿಸುತ್ತಾರೆ. ಕೆಲವು ಕಡೆ ಹಸುರು ಜಾರ್ಜನನ್ನೇ ನೀರೊಳಗೆ ಮುಳುಗಿಸಿ, ಹೊರಗೆ ತರುತ್ತಾರೆ. ಬೇಸಗೆಯಲ್ಲಿ ಮಳೆ ಬಂದು ಹೊಲಗದ್ದೆ ತೋಟಗಳು ಸದಾ ಹಸುರಾಗಿರಬೇಕೆಂಬುದೇ ಈ ಉತ್ಸವದ ಉದ್ದೇಶ. ನಮ್ಮಲ್ಲಿಯ ಮಳೆರಾಯನ ಮೆರವಣಿಗೆ ಸಾಮಾನ್ಯವಾಗಿ ಇಂಥದೇ. ಆದರೆ ಇದು ಪ್ರತಿವರ್ಷ ನಡೆಯುವ ಹಬ್ಬವಲ್ಲ. ಮತ್ತೆ ಕೆಲವು ಕಡೆ ದನಗಳಿಗೆ ಬಣ್ಣ ಬಳಿದು, ಹಸುರು ಮುಡಿಸಿ, ಸಂಗೀತದೊಡನೆ ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ. ಉದ್ದಕ್ಕೂ ಹಸುರು ಜಾರ್ಜನನ್ನು ಕುರಿತು ಹಾಡುತ್ತಾರೆ. ಈಸ್ಟರ್ ಹಬ್ಬದ ಸಮಯದಲ್ಲಿ ಜೆಪ್ಸಿಯರೂ ಈ ಉತ್ಸವವನ್ನು ಆಚರಿಸುವುದುಂಟು.

ಯುರೋಪಿನ ಕೆಲವು ಕಡೆ ಇಂಥದೇಹಬ್ಬ ವಸಂತ ಋತುವಿನ ಪ್ರಾರಂಭದಲ್ಲಿ ನಡೆಯುತ್ತದೆ. ಊರಿನ ಮಕ್ಕಳು ಜತೆಗೂಡಿ ಒಂದು ಭಾನುವಾರ ಕಾಡಿಗೆ ಹೋಗುತ್ತಾರೆ. ಅಲ್ಲಿ ತಮ್ಮ ಸಹಪಾಠಿಯೊಬ್ಬನನ್ನು ಅವರು ಪರ್ಣಬಾಲಕನನ್ನಾಗಿ ಆರಿಸಿಕೊಳ್ಳುತ್ತಾರೆ. ಎಲೆಗಳುಳ್ಳ ಮರದ ಕೊಂಬೆಗಳನ್ನು ಇಳಿಯ ಮುಳಿಯ ಅವನಿಗೆ ಹೊದಿಸುತ್ತಾರೆ. ಎಲೆಯ ಹೊದಿಕೆಗೆ ಕಣ್ಣಿರುತ್ತದೆ. ಇಬ್ಬರು ಮಕ್ಕಳು ಅವನ ಕೈಹಿಡಿದು ನಡೆಸುತ್ತಾರೆ. ಕುಣಿಯುತ್ತ ಹಾಡುತ್ತ ಅವನನ್ನು ಮನೆಯಿಂದ ಮನೆಗೆ ಒಯ್ಯುತ್ತಾರೆ, ಪ್ರತಿಮನೆಯಲ್ಲಿಯೂ ಮೊಟ್ಟೆಯೋ ರೊಟ್ಟಿಯೋ ಬೇರೆ ಯಾವುದಾದರೂ ತಿಂಡಿಯ ಪದಾರ್ಥವೊ ಸಿಗುತ್ತವೆ. ಕೊನೆಗೆ ಎಲೆ ಹುಡುಗನ ಮೇಲೆ ನೀರು ಚಿಮುಕಿಸಿ ಸಂಗ್ರಹಗೊಂಡ ತಿಂಡಿಯನ್ನು ತಿನ್ನುತ್ತಾರೆ. ಇಂಗ್ಲೆಂಡಿನಲ್ಲಿ ಜಾಕ್-ಇನ್-ದಿ-ಗ್ರೀನ್ ಎಂಬ ಹೆಸರಿನಿಂದ ಇಂಥದೇ ಉತ್ಸವ ನಡೆಯುತ್ತದೆ.

ಮೇಲಿನ ನಿದರ್ಶನಗಳಿಂದ ವೃಕ್ಷಮಾನವ ತತ್ತ್ವ ವಿಕಾಸಗೊಂಡದ್ದನ್ನು ಸ್ಪಷ್ಟವಾಗಿ ಗುರುತಿಸಬಹುದು. ಹಸುರು ಜಾರ್ಜನೇ ಮೇ-ವೃಕ್ಷ; ಅವನು ವೃಕ್ಷಶಕ್ತಿಯ ಪ್ರತೀಕ. ಕೆಲವು ವೇಳೆ ಅವನನ್ನು ದೊರೆ ಅಥವಾ ರಾಣಿ ಎಂದು ಕರೆಯುವುದುಂಟು. ಊರಿನ ಹೊರಗೆ ಮೇ-ವೃಕ್ಷವನ್ನು ಸ್ಥಾಪಿಸಲಾಗುತ್ತದೆ. 'ಮಕ್ಕಳೆಲ್ಲ ಅದರ ಬಳಿ ಓಡುತ್ತಾರೆ. ಈ ಪಂದ್ಯದಲ್ಲಿ ಯಾರು ಮೊದಲು ವೃಕ್ಷವನ್ನು ಮುಟ್ಟುತ್ತಾರೆಯೋ ಅವನೇ ದೊರೆ. ಕೂಡಲೇ ಅವನ ಕೊರಳಿಗೆ ಹೂಹಾರ ಹಾಕಿ, ಅವನ ಕೈಲಿ ಮೇ-ವೃಕ್ಷವನ್ನು ಹಿಡಿಸಿಕೊಂಡು, ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ. ಪ್ರತಿಯೊಂದು ಮನೆಯ ಬಳಿಯೂ ನಿಂತು ಹಾಡುತ್ತ, ಮನೆಯವರಿಗೆಲ್ಲ ಶುಭ ಕೋರುತ್ತಾರೆ. ಕೊಟ್ಟಿಗೆಯ ಕರಿಹಸು ಬಿಳಿ ಹಾಲನ್ನು ಕರೆಯಲೆಂದೂ ಕಪ್ಪು ಕೋಳಿ ಬಿಳಿಮೊಟ್ಟೆಯಿಡಲೆಂದೂ ಹಾರೈಸಿ, ಮೊಟ್ಟೆ ಮತ್ತು ಒಣಬಾಡು ಬೇಕೆಂದು ಕೇಳುತ್ತಾರೆ. ಹಂಗೇರಿಯಲ್ಲಿ ಹಳ್ಳಿಯ ಹುಡುಗಿಯರು ಒಂದೆಡೆ ಸೇರಿ, ಅತ್ಯಂತ ಸುಂದರಿಯಾದ ಹುಡುಗಿಯನ್ನು ರಾಣಿಯನ್ನಾಗಿ ಆರಿಸಿ, ಹಣೆಗೆ ಹೂ ಮುಡಿಸಿ, ಮೆರವಣಿಗೆಯಲ್ಲಿ ನಡಸಿಕೊಂಡು ಹೋಗುತ್ತಾರೆ. ಪ್ರತಿಯೊಂದು ಮನೆಯ ಬಳಿ ನಿಂತು, ಲಾವಣಿಗಳನ್ನು ಹಾಡಿ, ಕಾಣಿಕೆಗಳನ್ನು ಕೊಂಡು, ಮುಂದುವರಿಯುತ್ತಾರೆ.

ದೇವಾಲಯಗಳ ಕಲ್ಪನೆ ಮೂಡುವ ತನಕ ಮರಗಳೇ ದೇವಾಲಯಗಳಾದವು. ಅನಂತರ ಮರಗಳ ಕೆಳಗಿನ ಒಂದು ಮೊರಡುಗಲ್ಲೇ ದೇವರ ಸಂಕೇತವಾಯಿತು. ಒಂದೊಂದು ವನದೇವತೆ ಸ್ವತಂತ್ರ ದೇವತೆಯಾಗಿ ಬಹುದೇವತೋಪಾಸನೆ ಪ್ರಾರಂಭವಾಯಿತು. ತನ್ನ ಸುತ್ತಮುತ್ತಣ ಪಂಚಭೂತಾದಿ ನಿಸರ್ಗಶಕ್ತಿಗಳಿಗೂ ಅತಿಮಾನವತ್ವವನ್ನಾರೋಪಿಸಿ, ಪೂಜಿಸತೊಡಗಿದಾಗ, ಕಾಲಕ್ರಮೇಣ ಜ್ಯುಪಿಟರ್, ಜ್ಯೂಸ್, ಇಂದ್ರ, ವಾಯು ಮೊದಲಾದ ದೇವತೆಗಳು ಹುಟ್ಟಿಕೊಂಡಾಗ, ವೃಕ್ಷದೇವತೆಗಳಿಗೂ ಅವರಿಗೂ ಸಂಬಂಧ ಕಲ್ಪಿಸಲಾಯಿತು. ಇಂದ್ರನಂತೆ ಜುಪಿಟರ್ ಅಥವಾ ಜ್ಯೂಸ್ ಆಕಾಶದ ಮಳೆಯ ಮತ್ತು ಗುಡುಗು ಮಿಂಚುಗಳ ದೇವತೆಗಳು. ಮಳೆಯಾಗುವ ಮತ್ತು ಗುಡುಗು ಮಿಂಚುಗಳಿಂದ ರಕ್ಷಣೆ ಪಡೆಯುವ ಸಲುವಾಗಿ ಜ್ಯುಪಿಟರ್ ಮತ್ತ ಜ್ಯೂಸ್ ದೇವತೆಗಳನ್ನು ಇಟಲಿ ಮತ್ತು ಗ್ರೀಸ್ ದೇಶಗಳಲ್ಲಿ ವಿಶೇಷವಾಗಿ ಪೂಜಿಸುತ್ತಿದ್ದುದುಂಟು. ವೇದಗಳ ಕಾಲದಲ್ಲಿ ದೇವಸಮೂಹದಲ್ಲಿ ಇಂದ್ರನಿಗಿದ್ದ ಅಪೂರ್ವ ಸ್ಥಾನವನ್ನಿಲ್ಲಿ ನೆನೆಯಬಹುದು. ಓಕ್‌ಮರ ಸಿಡಿಲನ್ನಾಕರ್ಷಿಸುತ್ತದೆಂಬ ಪ್ರತೀತಿಯಿದೆ. ಆದ್ದರಿಂದ ಗುಡುಗು ದೇವತೆಗೂ ಓಕ್ ಮರಕ್ಕೂ ಸಂಬಂಧ ಕಲ್ಪಿಸಲಾಯಿತು. ಓಕ್ ಮರಕ್ಕೆ ಮಾಡುವ ಪೂಜೆ ಜ್ಯುಪಿಟರ್ ದೇವತೆಗೆ ಸಲ್ಲುವಂತಾಯಿತು. ಇಂತೆಯೇ ಕೆಂಪು ಹಣ್ಣು ಬಿಡುವ ಸ್ಕಾಂಡಿನೇವಿಯಾದ ರೋವನ್ ಎಂಬ ಮರ ಥಾರ್ ಎಂಬ ಗುಡುಗು ದೇವತೆಗೆ ಸಂಕೇತವಾಯಿತು.

ಭರತಖಂಡದಲ್ಲಿಯೂ ಪವಿತ್ರವೆಂದು ಪರಿಗಣನೆಗೊಂಡಿರುವ ವೃಕ್ಷಗಳು ಹತ್ತಾರಿವೆ. ವೇದಪುರಾಣ ಇತಿಹಾಸ ಕಾವ್ಯಗಳಲ್ಲಿ ಪವಿತ್ರ ವೃಕ್ಷಗಳ ಉಲ್ಲೇಖ ಅನೇಕ ಕಡೆ ಬರುತ್ತದೆ. ಒಂದು ಗಿಡ ನೆಟ್ಟವನೂ ಸ್ವರ್ಗಕ್ಕೆ ಹೋಗುತ್ತಾನೆಂದು ವೇದವೊಳಗುತ್ತದೆ. ಚಿತ್ರಶಿಲ್ಪ ಕಾವ್ಯ ಶಾಸ್ತ್ರಗಳಲ್ಲಿ ಮರಕ್ಕೆ ವಿಶಿಷ್ಟ ಸ್ಥಾನಮಾನಗಳಿವೆ. ಇವುಗಳಲ್ಲಿ ಕೆಲವು ರಾಷ್ಟ್ರೀಯವಾದುವು. ಕೆಲವು ಪ್ರಾದೇಶಿಕವಾದುವು. ಸರ್ವತ್ರ ಸರ್ವಗೌರವಕ್ಕೆ ಪಾತ್ರವಾಗಿರುವ ವೃಕ್ಷವೆಂದರೆ ಅಶ್ವತ್ಥ. ಅದು ದೇವತೆಗಳ ನೆಲೆವೀಡು. ದೇವತೆಗಳಲ್ಲಿ ಅದಕ್ಕೆ ಗೌರವಸ್ಥಾನವುಂಟು. "ಅಶ್ವತ್ಥಃ ಸರ್ವವೃಕ್ಷಾನಾಂ" ಎಂದು ಭಗವದ್ಗೀತೆ ಅದರ ಮಹತ್ವವನ್ನು ಪ್ರಶಂಸಿಸುತ್ತದೆ. ಬೇರು ಮೇಲಾಗಿ ಕೊಂಬೆ ಕೆಳಗಾಗಿರುವ ಅಶ್ವತ್ಥವೃಕ್ಷದ ವರ್ಣನೆ ಅದೇ ಗ್ರಂಥದ ಹದಿನೈದನೆಯ ಸಂಧಿ (1-4)ಯಲ್ಲಿ ಬರುತ್ತದೆ.

ಅದು ವಿಷ್ಣುವಿನ ಸಂಕೇತ. ಬಂಗಾಳದಲ್ಲಿ ಅಶ್ವತ್ಥಪತ್ರವ್ರತವೊಂದು ಆಚರಣೆಯಲ್ಲಿದೆ. ವೈಶಾಖ ಮಾಸದ ಕೊನೆಯ ದಿನದಂದು ಸ್ತ್ರೀಯರು ಅದನ್ನು ಆಚರಿಸುತ್ತಾರೆ. ಆ ವ್ರತಕ್ಕೆ ಬೇರೆ ಬೇರೆ ತರದ ಐದು ಪತ್ರಗಳು ಬೇಕು. ಪ್ರತಿಯೊಂದು ಎಲೆಯೂ ಮಾನವ ಜೀವನದ ವಿವಿಧ ಮೆಟ್ಟಿಲುಗಳನ್ನು ಮತ್ತು ಆಶೋತ್ತರಗಳನ್ನು ಸೂಚಿಸುತ್ತದೆ. ಹಸುರೆಲೆ ಚೆಲುವನ್ನು, ಚಿಗುರು ಮಗುವಿನ ಜನನವ ನ್ನು, ಹಣ್ಣೆಲೆ ಗಂಡನ ದೀರ್ಘಾಯುಸ್ಸನ್ನು, ಒಣಗಿದೆಲೆ ಸುಖಸೌಭಾಗ್ಯಗಳ ಅಭಿವೃದ್ಧಿಯನ್ನು ಮತ್ತು ಹರಿದ ಎಲೆ ಶ್ರೀಮಂತಿಕೆಯನ್ನು ಸೂಚಿಸುತ್ತವಂತೆ. ಅದರಿಂದ ಫಲಶಕ್ತಿ ಲಾಭವುಂಟೆಂಬ ಭಾವನೆ ಭರತಖಂಡದಲ್ಲೆಲ್ಲ ಸಾರ್ವತ್ರಿಕವಾಗಿ ವ್ಯಾಪಿಸಿದೆ. ಬೌದ್ಧರ ಪ್ರಕಾರ ಇದು ಬೋಧಿವೃಕ್ಷವೂ ಅಹುದು.

ಬಹುಪೂಜೆಗೆ ಪಾತ್ರವಾಗಿರುವ ವೃಕ್ಷವೆಂದರೆ ಬುದ್ಧಗಯೆಯಲ್ಲಿರುವ ಬೋಧಿ ವೃಕ್ಷ. ಅದರಡಿಯಲ್ಲಿ ತಪಸ್ಸು ಮಾಡಿದ ಸಿದ್ಧಾರ್ಥನಿಗೆ ಜ್ಞಾನೋದಯವಾಯಿತೆಂಬ ಪ್ರತೀತಿಯಿದೆ. ಬುದ್ಧ ಹುಟ್ಟಿದಾಗಲೇ ಅದು ಹುಟ್ಟಿತೆಂದು ಜಾತಕ ಕಥೆಗಳು ಹೇಳುತ್ತವೆ. ಅದರ ಕೊಂಬೆಗಳು ಜಗತ್ತಿನ ನಾನಾ ಭಾಗಗಳಲ್ಲಿ ನಾಟಿಗೊಂಡು, ಮಹಾವೃಕ್ಷಗಳಾಗಿ ಬೆಳೆದು, ಬುದ್ಧಾನುಯಾಯಿಗಳಿಂದಪೂಜೆ ಪುರಸ್ಕಾರ ಪಡೆಯುತ್ತಿರುವುದು ಚಾರಿತ್ರಿಕ ಸಂಗತಿಯಾಗಿದೆ. ವಿದೇಶೀಯ ಯಾತ್ರಿಕರು ಗಯೆಗೆ ಬಂದಾಗ ಅದರ ಕೆಳಗೆ ತುಸು ಹೊತ್ತು ಕೂರದೆ ಊರು ಬಿಡುವುದಿಲ್ಲ. ಭಾರತೀಯ ಚಿತ್ರಕಲೆಯಲ್ಲಿ ವನದೇವತೆಯರಿಗೆ ವಿಶೇಷ ಸ್ಥಾನವುಂಟಷ್ಟೆ, ಅಮರಾವತಿಯಲ್ಲಿ ಚಿತ್ರಣಗೊಂಡಿರುವ ಬುದ್ಧನ ತಾಯಿ ಮಾಯಾದೇವಿ ವನದೇವತೆಯೇ ಆಗಿದ್ದಾಳೆ.

ಅರಳಿಯಂತೆಯೇ ಪವಿತ್ರವಾದ ಮತ್ತೊಂದುವೃಕ್ಷ ವಟ. ಅದು ಅಮರವಾದ ಮರ. ಶ್ರೀಕೃಷ್ಣ ವಟಪತ್ರಶಾಯಿಯಂತೆ. ಜಲಪ್ರಲಯ ಸಮಯದಲ್ಲಿ ಇಡೀ ಭೂಮಂಡಲವೇ ನೀರಿನಲ್ಲಿ ಮುಳುಗಿಹೋದಾಗ ಅದು ಮಾತ್ರ ಭದ್ರವಾಗಿ ನಿಂತಿತ್ತಂತೆ. ಶಿಶುರೂಪಿಯಾದ ಶ್ರೀಕೃಷ್ಣ ಅದರ ಮೇಲೆ ನಿರಾತಂಕವಾಗಿ ಪವಡಿಸಿದ್ದನು. ಸೋಮರಸ ಪಾನವನ್ನು ಬಿಟ್ಟು, ಆಲದ ಹಾಲನ್ನು ಕುಡಿಯುವಂತೆ ಋಷಿಗಳು ದೊರೆಯೊಬ್ಬನಿಗೆ ಬುದ್ಧಿವಾದ ನೀಡಿದುದಾಗಿ ಐತರೇಯ ಬ್ರಾಹ್ಮಣದಲ್ಲಿ ಉಲ್ಲೇಖವಿದೆ. ಬಂಗಾಳದಲ್ಲಿ ಹಲವು ಕಡೆ ವಟಸಾವಿತ್ರಿ ದಿನದಂದು ಹೆಂಗಸರು ಅದನ್ನು ಪೂಜಿಸಿ, ತಮ್ಮ ಗಂಡಂದಿರಿಗೆ ದೀರ್ಘಾಯುಸ್ಸು ಬೇಡಿಕೊಳ್ಳುವುದುಂಟು. ಪಂಚವಟಿ ಅಥವಾ ಐದು ಮರಗಳ ತೋಪು ಪವಿತ್ರವಾದುದು. ತೋಪಿನಲ್ಲಿ ಐದೇ ಮರವಿರಬೇಕೆಂಬುದಿಲ್ಲ. ಹೆಚ್ಚಾಗಿರಬಹುದು. ಅಲ್ಲಿ ಐದು ಆಲದ ಮರಗಳಿರಬೇಕೇ ಅಥವಾ ಯಾವುದಾದರೂ ಐದು ಮರಗಳಿರಬೇಕೇ ಎಂಬುದು ಸಂದೇಹಾಸ್ಪದವಾದ ಸಂಗತಿ. ಅಶ್ವತ್ಥ, ವಟ, ಬಿಲ್ವ, ಆಮಲಕ ಮತ್ತು ಅಶೋಕ ವೃಕ್ಷಗಳು ಸೇರಿ ಪವಿತ್ರವಾದ ತೋಪಾಗುತ್ತದೆ. ಶಿವಶಕ್ತಿಯರಿಗೆ ಬಿಲ್ವಪತ್ರೆ ಬಹುಪ್ರಿಯವಂತೆ. ಶಿವದೇವಾಲಯವಿದ್ದ ಕಡೆ ಆ ಮರ ಇರಲೇಬೇಕು. ಆ ಮರವನ್ನು ಸೌದೆಗೆ ಬಳಸುವುದಿಲ್ಲ ಕೆಲವು ಕಡೆ ಅದರ ಎಲೆ ಹಣ್ಣು ಔಷಧಿಗೂ ಬರುತ್ತವೆ. ಬಂಗಾಳದಲ್ಲಿ ಅದಕ್ಕೆ ಶ್ರೀಫಲ ಎಂಬ ಮತ್ತೊಂದು ಹೆಸರು ಉಂಟು. ಕದಂಬ ವೃಕ್ಷ ಕೃಷ್ಣನಿಗೆ ಪ್ರಿಯವಾದದ್ದು, ಕರ್ನಾಟಕದ ಸುಪ್ರಸಿದ್ಧ ಪ್ರಾಚೀನ ಮನೆತನದ ಸಂಕೇತ ಕದಂಬ. ಸೀತೆಗೆ ಆಸರೆಕೊಟ್ಟದ್ದು ಅಶೋಕ. ಶಮಿ ವಿಜಯದ ಸಂಕೇತ. ವಿಜಯದಶಮಿಯಲ್ಲಿ ಬನ್ನಿಪೂಜೆಗೆ ವಿಶೇಷವಾದ ಸ್ಥಾನವುಂಟು. ಪಾಂಡವರು ಅಜ್ಞಾತ ವಾಸದ ಕಾಲದಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಮೂಟೆ ಕಟ್ಟಿ ಆ ಮರದ ಮೇಲಿರಿಸಿದ್ದರು. ರಾಜಸ್ಥಾನದ ಜನರಿಗಂತು ಅದು ಪವಿತ್ರ ವಸ್ತು. ಗೋರ ಅಥವಾ ದಡಾರದ ದೇವತೆ ಶೀತಲ. ದಡಾರಕ್ಕೆ ಶೀತಾಳ ಸಿಡುಬೆಂದೇ ಹೆಸರು. ಆ ದೇವತೆ ಸದಾ ಬೇವಿನಮರದಲ್ಲಿ ವಾಸಿಸುತ್ತಾಳಂತೆ. ಸಿಡುಬು ಬಂದನಂತರ ಅದರ ಸೊಪ್ಪನ್ನರೆದು ಮೈಗೆ ಹಚ್ಚುತ್ತಾರೆ. ಬೇವಿನ ಸೌದೆಯಿಂದ ಮಾಡಿದ ಅಡುಗೆಯನ್ನುಂಡವನಿಗೆ ಸರ್ಪದ ವಿಷ ಏರುವುದಿಲ್ಲವಂತೆ. ಅದರ ಎಣ್ಣೇ ಅನೇಕ ಕಾಯಿಲೆಗಳಿಗೆ ಬರುತ್ತದೆ. ದೆವ್ವ ಗಾಳಿ ಕುಡಿಸುವುದಕ್ಕೂ ಈ ಸೊಪ್ಪನ್ನು ಬಳಸುತ್ತಾರೆ. ಯುಗಾದಿಯ ಬೆಲ್ಲಬೇವಂತು ಮರೆಯುವಂಥದಲ್ಲ. ಬಾಣಂತಿ ಕೋಣೆಯನ್ನು ಪ್ರವೇಶಿಸುವ ಮುನ್ನ ಚಿತ್ಪಾವನ ಬ್ರಾಹ್ಮಣರು ಬೇವಿನ ಸೊಪ್ಪದ್ದಿದ ಗಂಜಳದಲ್ಲಿ ಕಾಲು ತೊಳೆದುಕೊಳ್ಳಬೇಕಂತೆ. ಅಹಮ್ಮದ್ ನಗರದಲ್ಲಿ ಹಾವು ಕಚ್ಚಿದ ಮನುಷ್ಯನನ್ನು ಭೈರವ ದೇವಾಲಯಕ್ಕೆ ಕರೆದುಕೊಂಡು ಹೋಗಿ ಬೇವಿನೆಲೆ ಮತ್ತು ಮೆಣಸುಗಳನ್ನರೆದು ತಿನ್ನಿಸುತ್ತಾರೆ.

ನಾರಿಕೇಳ ಅಥವಾ ತೆಂಗು ಕಲ್ಪವೃಕ್ಷವೆಂದು, ಸಕಲ ದೇವತೆಗಳಿಗೂ ಪ್ರಿಯವಾದದ್ದೆಂದು ಭರತಖಂಡದಲ್ಲಿ ಮಾತ್ರವಲ್ಲ, ಅದು ಬೆಳೆಯುವೆಡೆಯಲ್ಲೆಲ್ಲ ಖ್ಯಾತಿಗೊಂಡಿದೆ. ಎಲ್ಲ ಶುಭಕಾರ್ಯಗಳಿಗೂ ಅದು ಮೊದಲು ಬೇಕು. ಅದಿಲ್ಲದೆ ಮದುವೆಯಾಗುವಂತಿಲ್ಲ. ದೇವಾಲಯಗಳಲ್ಲಿ ಪೂಜೆ ನಡೆಯುವಂತಿಲ್ಲ. ಹೆಣ್ಣುಗಂಡಿಗೆ ತೆಂಗಿನಕಾಯಿ ನೀಡುವುದು ಗುಜರಾತಿನ ಮದುವೆಯ ಸಂಪ್ರದಾಯ. ತನ್ನ ಬಾಳಿನುದ್ದಕ್ಕೂ ಗಂಡು ಅದನ್ನು ನೆನಪಾಗಿಟ್ಟುಕೊಳ್ಳುತ್ತಾನಂತೆ. ದುಷ್ಟಶಕ್ತಿಗಳ ಪ್ರಭಾವದಿಂದ ತಪ್ಪಿಸುವ ಸಲುವಾಗಿ ಮತ್ತು ದೃಷ್ಟಿನಿವಾರಣೆಗಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ತೆಂಗಿನ ಕಾಯನ್ನು ನಿವಾಳಿಸಿ ಈಡುಗಾಯಿ ಹೊಡೆಯುವುದುಂಟು. ಕಳಶದ ಪೂಜೆಗಂತು ಇದು ಅನಿವಾರ್ಯ. ಚರ್ಮ ತೆಗೆದ ಕೊಬರಿಯ ಮೇಲೆ ಸರಸ್ವತಿಯ ಚಿತ್ರ ಬರೆದು ಬಸಂತಪಂಚಮಿಯ ದಿನ ಒರಿಸ್ಸಾದ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು, ತಮ್ಮ ಭಕ್ತಿಯನ್ನು ಸಲ್ಲಿಸುತ್ತಾರೆ. ವರ್ಣಗೊಂಡ ಕೊಬರಿಯನ್ನು ಮನೆಯಿಂದ ಮನೆಗೆ ಕೊಂಡೊಯ್ದು, ಸರಸ್ವತೀ ಗೀತವನ್ನು ಹಾಡಿ, ಜನರಿಂದ ಕಾಣಿಕೆ ಪಡೆದು ತಮ್ಮ ಗುರುಗಳಿಗೆ ನೀಡುತ್ತಾರೆ. ಈಗ ಕೊಬರಿ ಪ್ರತಿಮೆಗೆ ಬದಲಾಗಿ ಮಣ್ಣಿನ ಪ್ರತಿಮೆ ಬಳಸುತ್ತಾರೆ. ಕರ್ನಾಟಕದ ಪ್ರತಿಷ್ಠೆಯ ವೃಕ್ಷವೆಂದು ಹೆಸರುಗೊಂಡಿರುವ ಶ್ರೀಗಂಧದ ಚಂದನವಂತು ದಕ್ಷಿಣದಲ್ಲಿ ಸಕಲದೇವತಾ ಕಾರ್ಯಗಳಿಗೆ ಬರುವುದಲ್ಲದೆ, ಅನೇಕರು ಅದನ್ನು ಹಣೆಮೈಗಳಿಗೆ ಹಚ್ಚಿಕೊಳ್ಳುತ್ತಾರೆ. ತೆಂಗಿನಕಾಯಿಯ ಜತೆಜತೆಗೆ ವೀಳೆಯದೆಲೆಯೂ ಪ್ರಸಿದ್ಧಿಯನ್ನು ಪಡೆದಿದೆ. ಕರ್ನಾಟಕದ ಜನಜೀವನದಲ್ಲಿ ಇದು ಹಾಸುಹೊಕ್ಕಾಗಿ ಹರಿದಿದೆ. ಇದು ಶುಭಕಾರ್ಯಗಳಿಗೆ ಮಾತ್ರವಲ್ಲದೆ, ಶಾಂತಿಸಂಧಾನಗಳ ಸಮಯದಲ್ಲಿ, ಯುದ್ಧಕ್ಕೆ ಆಹ್ವಾನ ನೀಡುವಾಗ ಇದರ ಪ್ರಾಶಸ್ತ್ಯ ಅದ್ವಿತೀಯ. ನಿವಾಳಿ ತೆಗೆಯುವಾಗ ಇದು ಬೇಕು. ಇದಿಲ್ಲದೆ ತಾಂಬೂಲವಾಗುವುದಿಲ್ಲ. ಇದರ ಔಷಧೀಯ ಗುಣ ಅಷ್ಟೇ ಪ್ರಸಿದ್ಧ.

ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭರತಖಂಡದಲ್ಲಿಯೇ ತುಲಸಿಗಿರುವ ಮಾನ್ಯತೆ ಬೇರೆ ಗಿಡಕ್ಕಿದ್ದಂತಿಲ್ಲ. ಅದರಂಥ ಪವಿತ್ರವಾದ ವಸ್ತು ಮತ್ತೊಂದಿಲ್ಲ. ಅದು ಸರ್ವಶುಭಕಾರ್ಯಗಳಿಗೂ ಬೇಕಾದದ್ದು. ಅಷ್ಟೇ ಅಲ್ಲ, ತುಲಸಿ ಎಲೆಯಿರುವ ಗಂಗಾಜಲವನ್ನು ಸಾಯುವವನ ಬಾಯಿಗೆ

ಹಾಕಿದರೆ ಅವನಿಗೆ ಮೋಕ್ಷಸಿಗುತ್ತದಂತೆ, ಹರಿಪ್ರಿಯ, ಭೂತಾಘ್ನಿ ಎಂಬ ಹೆಸರುಗಳೂ ಅದಕ್ಕಿವೆ. ಅದಿರುವ ಕಡೆ ಭೂತಪ್ರೇತಾದಿ ದುಷ್ಟಶಕ್ತಿಗಳು ಸುಳಿಯುವುದಿಲ್ಲ. ಆದ್ದರಿಂದಲೇ ಅದು ಎಲ್ಲ ಸಂಪ್ರದಾಯಸ್ಥರ ಮನೆಯ ಅಂಗಣದಲ್ಲಿ ಸುಂದರವಾದ ಕಟ್ಟೆಯೊಳಗೆ ನಲಿದಾಡುತ್ತದೆ. ಕೆಲವು ಕಡೆ ಹೆಂಗಸರು ದಿನಕ್ಕೆರಡು ಸಾರಿ ಅದನ್ನು ಪೂಜಿಸುತ್ತಾರೆ. ಅದರ ಎಲೆಗಳನ್ನೂ ಕುದಿಯುವ ನೀರಿಗೆ ಹಾಕಬಾರದು, ಅದರಿಂದ ಗಿಡದ ಆತ್ಮಕ್ಕೆ ಸಂಕಟವಾಗುತ್ತದಂತೆ. ಸಾಧುಗಳು ತುಲಸಿಯ ಹಾರವನ್ನು ಕೊರಳಲ್ಲಿ ಧರಿಸುತ್ತಾರೆ. ಅದರ ಮೇಲೆ ಬೇರುಗಳಲ್ಲಿ ಗಂಗೆ ಹರಿಯುತ್ತಾಳಂತೆ, ಬ್ರಹ್ಮ ಅದರ ಕೊಂಬೆಗಳಲ್ಲಿ ವಾಸಿಸುತ್ತಾನಂತೆ, ಇತರ ದೇವತೆಗಳು ಅದರ ಎಲೆಗಳ ಮೇಲೆ ಸದಾ ನೆಲಸಿರುತ್ತಾರಂತೆ, ಅದು ಭೂಸ್ವರ್ಗಗಳ ಸಂಧಿಸ್ಥಾನವಂತೆ, ಕೇರಳದ ನಾಯರರು ಪ್ರತಿ ಪ್ರಾತಃಕಾಲ ಸ್ನಾನಾನಂತರ ಏಳು ಸಾರಿ ತುಲಸಿಕಟ್ಟೆಯ ಸುತ್ತ ಪ್ರದಕ್ಷಿಣೆ ಬರುತ್ತಾರೆ. ದೇವಾಲಯಗಳಲ್ಲಿ ನೀಡುವ ತೀರ್ಥಪ್ರಸಾದಗಳಲ್ಲಿ ತುಲಸಿ ಎಲೆ ಇರಲೇಬೇಕು. ಎಲೆಯನ್ನು ಪ್ರಸಾದವೆಂದು ಕಿವಿಯಲ್ಲಿ ಸಿಕ್ಕಿಸಿಕೊಳ್ಳುವುದೂ ಉಂಟು. ಮನೆಯ ಅಂಗಳದಲ್ಲಿ ತುಲಸಿಕಟ್ಟೆ ಇದ್ದರೆ ದೇವಾಲಯಕ್ಕೂ ಹೋಗಬೇಕಾಗಿಲ್ಲ.

ಸಿಡಿಲ ರೂಪವನ್ನು ತಾಳಿದ ಶಿವನ ಕೋಪ ಮತ್ತು ಸಾಗರಗಳ ಸಂಯೋಗದಿಂದಾಗಿ ಜಲಂಧರನೆಂಬ ಮಹಾ ಶೂರ ಹುಟ್ಟಿದ. ಅವನು ಕಾಲನೇಮಿಯ ಮಗಳು ವೃಂದೆಯನ್ನು ಮದುವೆಯಾದ. ಅವಳ ಪತಿವ್ರತಾಮಹಿಮೆಯಿಂದಾಗಿ ಜಲಂಧರನಿಗೀಡಾದ ಶೂರನೇ ಮೂರು ಲೋಕಗಳಲ್ಲಿರಲಿಲ್ಲ. ಭೂಮಂಡಲದ ದೊರೆಗಳೆಲ್ಲ ಅವನಿಗೆ ಶರಣಾಗತರಾದರು. ಲೋಕಕಂಟಕನಾದ ಜಲಂಧರನನ್ನು ವಿನಾಶಗೈಯಬೇಕೆಂದು ದೇವತೆಗಳು ಸಂಚು ಹೂಡಿ ವಿಷ್ಣುವಿನ ಬಳಿ ಹೋದರು. ವಿಷ್ಣು ಜಲಂಧರನ ವೇಷವನ್ನು ತಾಳಿ ವೃಂದೆಯ ಪಾತಿವ್ರತ್ಯವನ್ನು ಕೆಡಿಸಿದನು. ಆಗ ಶಿವ ಜಲಂಧರನನ್ನು ಸುಲಭವಾಗಿ ಕೊಂದನು. ತಾನು ಮೋಸಹೋದುದಕ್ಕಾಗಿ ವೃಂದ ಕಡುನೊಂದು ಚಿತೆಯನ್ನೇರಿದಳು. ಅವಳ ಸಮಾಧಿಯಿಂದ ತುಲಸಿ ಉದ್ಭವವಾಯಿತು. ಇದು ಪದ್ಮಪುರಾಣದ ಕತೆಯಾದರೆ, ಗುಜರಾತಿನಲ್ಲಿ ಇದರ ಜತೆಗೆ ಚಲಾವಣೆಯಲ್ಲಿರುವ ಮತ್ತೊಂದು ಕತೆಯಿದೆ. ರುಕ್ಮಿಣಿ ಕೃಷ್ಣನ ರಾಣಿಯರಲ್ಲೆಲ್ಲ ಅತ್ಯಂತ ಪ್ರಿಯಳಾದವಳು. ನಾರದ ಅವಳನ್ನು ಸ್ವರ್ಗಕ್ಕೊಯ್ಯಬೇಕೆಂದು ಆಲೋಚಿಸಿದ. ಇತರ ರಾಣಿಯರಿಗೆ ಹೊಟ್ಟೆಕಿಚ್ಚು ಬಂದು, ರುಕ್ಮಿಣಿಯನ್ನಲ್ಲಿಯೇ ಉಳಿಸಿದರೆ ಕೃಷ್ಣನ ಭಾರದ ಚಿನ್ನ ನೀಡುವುದಾಗಿ ಆಶ್ವಾಸನೆ ನೀಡಿದರು. ನಾರದಸಮ್ಮತಿಸಿದನು. ತಮ್ಮೆಲ್ಲ ಒಡವೆಗಳನ್ನು ತಕ್ಕಡಿಗೆ ಹಾಕಿದಾಗ ಅದು ಮೇಲೇಳಲೇ ಇಲ್ಲ. ರುಕ್ಮಿಣಿಯ ಬಳಿ ಚಿನ್ನದ ಒಡವೆಗಳೇ ಇರಲಿಲ್ಲ. ಒಂದು ತುಲಸಿ-ಕೃಷ್ಣರಿಗೆ ಮದುವೆಯಾಯಿತು. ಕಾರ್ತಿಕಮಾಸದ ಕೃಷ್ಣಪಕ್ಷದಲ್ಲಿ ಪ್ರತಿವರ್ಷವೂ ತುಲಸಿ ಕೃಷ್ಣರ ಮದುವೆ ನಡೆಯುತ್ತದೆ.

ಕೃಷ್ಣನ ಮೋಸಗಾರಿಕೆಯಿಂದ ಕುಪಿತಗೊಂಡ ವೃಂದಾವತಿ ಸಾಯುವ ಮುನ್ನ "ನಾನು ಪವಿತ್ರ ತುಲಸಿಯಾಗಿ ಹುಟ್ಟುತ್ತೇನೆ. ನನಗೆ ಮಾಡಿದ ಅಪರಾಧಕ್ಕಾಗಿ ನೀನದನ್ನು ಯಾವಾಗಲೂ ಮುಡಿಯಲ್ಲಿ ಧರಿಸಬೇಕು" ಎಂದು ಅವನಿಗೆ ಶಾಪವಿತ್ತಂತೆಯೂ, ಅವಳ ಇಷ್ಟಾರ್ಥ ನೆರವೇರುವಂತೆ ಕೃಷ್ಣ ಹರಸಿದಂತೆಯೂ ಒರಿಸ್ಸಾದ ಜಾನಪದ ತಿಳಿಸುತ್ತದೆ. ತುಲಸಿಯ ಕುಂಡವನ್ನು ಹೊತ್ತ, ಸಾಂಪ್ರದಾಯಿಕ ವೇಷಭೂಷಣಗಳಿಂದ ಕೂಡಿದ ಒರಿಯಾ ಹೆಂಗಸಿನ ರೂಪವನ್ನು ಹೋಲುವ ವೃಂದಾವತಿಯ ಕಲ್ಲಿನ ಮೂರ್ತಿಯನ್ನು ಈಗಲೂ ಅನೇಕ ಮನೆಗಳ ಮುಂದೆ ಕಾಣಬಹುದು.

ಮರ ಮಾನವನ ಮೂಲ ಜನಕ ಎಂಬ ವಿಷಯ ಹಲವು ಜನಾಂಗಗಳ ತಿಳಿವಳಿಕೆ. ಈಜಿಪ್ಟಿನ ಸಸ್ಯಾಧಿದೇವತೆ ಒಸಿರಸ್ (Osiris) ಮತ್ತು ಸೌಂದರ್ಯಕ್ಕೆ ಹೆಸರಾದ ಗ್ರೀಕ್ ದೇವತೆ ಆಡೊನೀಸ್ (Adonis) ವೃಕ್ಷಗಳಿಂದ ಹುಟ್ಟಿದವರೆಂದು ಪ್ರತೀತಿಯಿದೆ. ದಕ್ಷ ಪ್ರಜಾಪತಿಯ ಹೆಂಡತಿ ಮಾರೀಷ ವೃಕ್ಷಸುತೆಯೆಂದು ಹಿಂದೂ ಪುರಾಣಗಳಲ್ಲಿ ಹೇಳಿದೆ. ಬ್ರಹ್ಮ ಕಮಲ ಸಂಭವ, ಅಂತೆಯೇ ಸರಸ್ವತಿ ಕಮಲಾಸನೆ. ವನಮಹೋತ್ಸವದ ವಿವಣೆ ಮತ್ಸ್ಯಪುರಾಣದಲ್ಲಿ ಬರುತ್ತದೆ. ಭವಿಷ್ಯಪುರಾಣ ಹಲಸು, ಎಕ್ಕೆ, ಕುಶ, ಮಾವು, ಬಕುಳ, ಕರವೀರ ಮೊದಲಾದ ಮೂವತ್ತು ಪವಿತ್ರ ತರುಗುಲ್ಮಗಳನ್ನು ಪಟ್ಟಿ ಮಾಡಿದೆ. ಆದರೆ ಅವೆಲ್ಲ ಪವಿತ್ರವಾಗಿದ್ದಂತೆ ತೋರುವುದಿಲ್ಲ. ಸೌರಾಷ್ಟ್ರದಲ್ಲಿ ಇಪ್ಪತ್ತು ನಾಲ್ಕು ವೃಕ್ಷಗಳು ಪವಿತ್ರವಾದುವೆಂದು ಪ್ರಸಿದ್ಧವಾಗಿವೆ. ಹೀಗೆ ಅವುಗಳ ಸಂಖ್ಯೆ ಮತ್ತು ಜಾತಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗೊಳ್ಳುತ್ತವೆ. ಕರ್ಣಾಟಕದ ಕೆಲವು ಕಡೆಗಳಲ್ಲಿ ಕೋಲುಗಳ್ಳಿ ಶ್ರೇಷ್ಠವಾದದ್ದೆಂಬ ತಿಳಿವಳಿಕೆ ಇದೆ. ಹಿಂದಿನ ಕಾಲದಲ್ಲಿ ಮದುವೆ ಮೂರ್ನಾಲ್ಕು ದಿನಗಳ ಕಾಲ ನಡೆಯುತ್ತಿದ್ದಾಗ ಚಪ್ಪರದ ಶಾಸ್ತ್ರವೇ ಒಂದು ದಿನ ನಡೆಯುತ್ತಿತ್ತು. ಮೂರು ಕವೆಗಳನ್ನು ಸಕಲ ಪೂಜಾಗೌರವಗಳೊಡನೆ ದೇವಸ್ಥಾನದಿಂದ ತಂದು, ಶಾಸ್ತ್ರೋಕ್ತವಾಗಿ ಹಸೆ ಜಗಲಿಯ ನಡುವೆ ಮತ್ತು ಅಕ್ಕಪಕ್ಕಗಳಲ್ಲಿ ಸಂಸ್ಥಾಪಿಸಲಾಗುತ್ತಿತ್ತು. ಆ ಮೂರು ಕವೆಗಳಲ್ಲಿ ಒಂದು ಕಳ್ಳಿಯದು; ಉಳಿದುವು ಯಾವುದಾದರೂ ಹಾಲುಳ್ಳ ಮರದವಾಗಬಹುದು. ಅವುಗಳಲ್ಲಿ ಕಳ್ಳಿ ಕವೆಗೆ ಪ್ರಾಧಾನ್ಯ ಮತ್ತು ಪ್ರಾಶಸ್ತ್ಯ. ಮತ್ತೆ ಮದುವೆ ಮುಗಿದ ಅನಂತರ ಅವುಗಳ ವಿಸರ್ಜನೆಯೂ ಶಾಸ್ತ್ರೀಯವಾಗಿ ನಡೆಯುತ್ತಿತ್ತು. ಇದೇ ಸಂದರ್ಭದಲ್ಲಿ ಮಡಿವಾಳ ನೇರಿಳೆ ಕೊಂಬೆ ಹಿಡಿದುಕೊಂಡು ಬರುತ್ತಿದ್ದುದನ್ನೂ ಅದಕ್ಕೂ ಶಾಸ್ತ್ರ ಮರ್ಯಾದೆ ಸಲ್ಲುತ್ತಿತ್ತೆಂಬುದನ್ನೂ ನೆನೆಯಬಹುದು.

ಜಾನಪದದ ದೃಷ್ಟಿಯಿಂದ ಪವಿತ್ರವಾದ ಮತ್ತು ಪವಿತ್ರವಲ್ಲದ, ಅಥವಾ ಧಾರ್ಮಿಕ ಮತ್ತು ಲೌಕಿಕ ವೃಕ್ಷಗಳೆಂದು ಭೂಮಂಡಲದ ಸಸ್ಯಜಾತಿಯನ್ನು ಎರಡು ಭಾಗ ಮಾಡಬಹುದು. ಇವುಗಳಲ್ಲದೆ ಭೂಮಿಯಲ್ಲಿ ಕಾಣದ, ಪುರಾಣಗಳಲ್ಲಿ ಮಾತ್ರವೇ ಉಲ್ಲೇಖಗೊಂಡಿರುವ ವೃಕ್ಷಗಳುಂಟು. ಸೋಮ ಮಂದಾರ ಕಲ್ಪತರು ಸಂಜೀವಿನೀಲತೆ ಸೌಗಂಧಿಕ ಮೊದಲಾದ ಈ ಪೌರಾಣಿಕ ವೃಕ್ಷಲತೆಗಳು ಭೂಮಿಯ ಮೇಲಣ ಯಾವುದಾದರೂ ಸಸ್ಯ ಜಾತಿಗಳಿಗೆ ಸಂವಾದಿಯಾಗಿವೆಯೋ ಏನೋ ಗೊತ್ತಿಲ್ಲ. ಸದ್ಯಕ್ಕೆ ಅವುಗಳ ವಿವರಣೆ ಅನಗತ್ಯ.

ಸಸ್ಯಗಳ ಹಿರಿಮೆಗೆ ಅವುಗಳ ಔಷಧೀಯ ಗುಣವೂ ಕಾರಣವಾಗಿರಬೇಕು. ಚರಕ ಶುಶ್ರುತರು ಮಾತ್ರವಲ್ಲ. ಇಂದಿನ ಮಹಾ ವೈದ್ಯರು ಕಾಣದ ಸಸ್ಯಶಕ್ತಿ ಪ್ರಾಚೀನ ಮಾನವನಿಗೆ ತಿಳಿದಿತ್ತು. ತನ್ನ ಸುತ್ತಮುತ್ತಣ ಯಃಕಶ್ಚಿತ್ ವೃಕ್ಷದಲ್ಲಿ ಮಾತ್ರವಲ್ಲ, ನೆಗ್ಗಲಿನಂಥ ಮುಳ್ಳುಗಿಡದಲ್ಲಿಯೂ ಜೀವರಕ್ಷಕ ಸಾಮರ್ಥ್ಯವನ್ನು ಕಂಡುಕೊಂಡ. ತಿರುಗುಕೋಲಿಗೆ ಅಂಕೋಲೆ ಶ್ರೇಷ್ಠವಾದದ್ದೆಂದು ಹೇಳುತ್ತಾರೆ. ಮಾನವನಿಗೆ ಅಪ್ರಿಯವಾದ ಹಾಗೂ ನಿಷ್ಪ್ರಯೋಜಕವಾದ ಗಿಡವೊಂದು ಈ ನೆಲದ ಮೇಲೆ ಹುಟ್ಟಿರಲಾರದೆಂದುಕೊಂಡ. ಅಳಲೆಕಾಯಿ ಪಂಡಿತರೆಂದು ಅಣಕಕ್ಕೆ ಗುರಿಯಾದ ಕೆಲವು ಆಯುರ್ವೇದ ಪಂಡಿತರು ವೈದ್ಯ ರಹಸ್ಯಗಳನ್ನು ಇತರರಿಗೆ

ತಿಳಿಸಲಿಲ್ಲ. ತುಲಸಿ ಪವಿತ್ರ ವಸ್ತುವೆಂಬ ಗದಣನೆಗೆ ಗುರಿಯಾಗಬೇಕಾದರೆ ಅದರ ಔಷಧೀಯ ಗುಣವೇ ಮುಖ್ಯ ಕಾರಣ. ಜ್ವರಕ್ಕೆ ತಲೆನೋವು ಕೆಮ್ಮು ನೆಗಡಿ ಮೊದಲಾದ ರೋಗಗಳಿಗೆ ಅದು ದೊಡ್ಡ ಮದ್ದು. ಅಷ್ಟು ಸರಳಪದಾರ್ಥದ ಪ್ರಯೋಜನ ಸ್ವಾರ್ಥಪರರಾದ ಪಂಡಿತರಿಂದಾಗಿ ಪಾಮರರಿಗೆ ಸರಿಯಾಗಿ ದೊರೆಯಲಿಲ್ಲ. ಕೆಲವು ಗಿಡಮರಗಳಿಂದ ಉತ್ಪತ್ತಿಯಾಗುವ ವಿಷವನ್ನು ಬಾಣಗಳಿಗೆ ಬಳಸುತ್ತಿದ್ದುದುಂಟು. ಇಲಿಯಡ್ ಮೊದಲಾದ ಗ್ರಂಥಗಳಲ್ಲಿ ಅವುಗಳ ಬಗ್ಗೆ ಸೂಚನೆಯಿದೆ. ಆಫ್ರಿಕಾದಲ್ಲಿ ಇಂದಿಗೂ ವಿಷ ಪರೀಕ್ಷೆಗೆಂದು ಗಿಡದ ರಸಿಕೆ ಅಥವಾ ಪುಡಿಗಳನ್ನು ಬಳಸುವುದುಂಟು. ಮಾನವಾಕೃತಿಯ, ಕೀಳುವಾಗ ಕಿರುಚುವುದೆಂದು ಹೇಳುವ ಬೇರುಳ್ಳ, ಹಿಂದಿನ ಯೂರೋಪಿನಲ್ಲಿ ಪ್ರಸಿದ್ಧವಾದ ಮುದ್ರಕೆ (Mandrake) ಎಂಬ ಗಿಡದ ರಸ ಮತ್ತು ಬರಿಸುತ್ತದಂತೆ. ಅಷ್ಟೇ ಅಲ್ಲ, ಅದರ ಉಪಯೋಗದಿಂದ ಬಂಜೆಯರಲ್ಲಿ ಫಲಶಕ್ತಿ ಉಂಟಾಗುತ್ತದಂತೆ.

ಈ ಔಷಧೀಯ ಗುಣದಿಂದ ವೃಕ್ಷಲಾಂಛನ ತತ್ತ್ವ ರೂಪಗೊಂಡು ದೇವತಾಶಾಸ್ತ್ರದ ಒಂದು ಭಾಗವಾಯಿತು. ಪ್ರತಿಯೊಂದು ರೋಗಕ್ಕೂ ರಾಮಬಾಣದಂತಿರುವ ಮೂಲಿಕೆಯೊಂದು ಇದ್ದೇ ಇದೆ ಎಂಬ ನಂಬಿಕೆಯೇ ಈ ತತ್ತ್ವದ ಉಗಮಕ್ಕೆ ಮೂಲ. ಆಯಾಯ ಗಿಡದ ಬಣ್ಣ ಆಕಾರ ಅಥವಾ ಹೆಸರನ್ನು ಆ ಲಾಂಛನ ಸೂಚಿಸುವಂತಿರುತ್ತದೆ. ಹಳದಿ ಹೂ ಕಾಮಾಲೆಗೆ ಮದ್ದಂತೆ. ನಾಯಿ ನಾಲಗೆ (Cynoglossum) ಎಂಬ ಗಿಡ ನಾಯಿ ಕಚ್ಚಿದ ಗಾಯಕ್ಕೆ ವರವಂತೆ. ಕಾಯಿಲೆ ಬಂದಾಗ ಪ್ರಾಣಿಗಳು ಅಂತಃ ಪ್ರೇರಣೆಯಿಂದಾಗಿ ಈ ಔಷಧೀಯ ಗಿಡಗಳನ್ನು ತಿನ್ನುವುದರಿಂದಲೋ ಮೂಸುವುದರಿಂದಲೋ ಅದು ಗುಣವಾಗುತ್ತದಂತೆ. ಅಜೀರ್ಣವಾದಾಗ ನಾಯಿಗಳು ಹಸುರು ಹುಲ್ಲು ತಿನ್ನುತ್ತವೆಂದು ಕೆಲವು ಕಡೆ ಪ್ರತೀತಿಯುಂಟು.

ಜ್ಯೋತಿಶ್ಶಾಸ್ತ್ರದಲ್ಲಿಯೂ ವೃಕ್ಷಗಳ ಪಾತ್ರವುಂಟೆಂದು ಹೇಳುತ್ತಾರೆ. ಮಂತ್ರ ಮಾಟಗಳಲ್ಲಂತು ಅವುಗಳ ಪ್ರಯೋಜನ ಇದ್ದೇಇದೆ. ಅಷ್ಟೇ ಅಲ್ಲ, ವಶೀಕರಣಕ್ಕೂ ಕೆಲವುಬೀಜಗಳನ್ನೋ ಎಲೆಗಳನ್ನೋ ಇತರ ಭಾಗಗಳನ್ನೋ ಬಳಸುವ ರೂಢಿ ಕೆಲವು ದೇಶಗಳಲ್ಲಿತ್ತು. ಕೆಲವು ಮರಗಳು ಭೂತಗಳಿಗೆ ನೆಲೆದಾಣಗಳೆಂದೂ ಹೇಳುವುದುಂಟು. ಸಸ್ಯಗಳು ಮಾನವ ಕುಲಚಿಹ್ನೆಗಳಾಗಿ ಉಳಿದುಬಂದಿರುವುದು ರಹಸ್ಯಾತ್ಮಕ ಸಂಗತಿಯಾಗಿದೆ. ಅವು ಆ ಪ್ರಾಶಸ್ತ್ಯವನ್ನು ಪಡೆಯಲು ಕಾರಣವೇನೆಂಬುದನ್ನು ಊಹಿಸುವುದು ಕಷ್ಟ. ಈ ಮಾನವ ವೃಕ್ಷ ಸಂಬಂಧಕ್ಕೆ ಆಯಾಯ ವೃಕ್ಷಗಳ ವಿಚಿತ್ರ ಲಕ್ಷಣ ಕಾರಣವಾಗಿರಬಹುದೆ? ಎಂದೋ ಅವುಗಳಿಂದೊಗಿದ ಪ್ರಯೋಜನ ಹೇತುವಾಗಿರಬಹುದೆ? ಕೆಲವರ ಕುಲಲಾಂಛನ ಕೊಗ್ಗೆ, ಮತ್ತೆ ಕೆಲವರದು ಕೊಮ್ಮೆ. ಇದು ಏಕೆ? ಮನೆ ದೇವರಿಗೆ ಈ ಕುಲಲಾಂಛನ ಪ್ರತೀಕವಾಗಿ ಪರಿಣಮಿಸುತ್ತದೆ, ರಾಷ್ಟ್ರಕ್ಕೆ ಬಾವುಟವಿದ್ದಂತೆ. ಸತ್ತ ಮನುಷ್ಯನ ಆತ್ಮ ಕೆಲವು ಗಿಡಗಳನ್ನೋ ಪ್ರಾಣಿಗಳನ್ನೋ ಪ್ರವೇಶಿಸುತ್ತದೆ; ಅವನ ಪೀಳಿಗೆಯ ಜನ ಪಿತೃಪೂಜಾ ನೆವದಿಂದ ಆ ಗಿಡವನ್ನು ಪೂಜಿಸುತ್ತಾರೆ; ಅದೇ ಅವರ ಕುಲಚಿಹ್ನೆಯಾಗುತ್ತದೆ ಎಂದು ಟೈಲರ್ (Tylor) ಮೊದಲಾದ ತಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಚಿನ್ನ ಬೆಳ್ಳಿ ಹಳಗೆ ಬುಟ್ಟಿ ಬುಜ್ಜಣಿಗೆ ಹೆಡಗೆ ಮೊದಲಾದ ಜಡವಸ್ತುಗಳು ಕೂಡ ಕುಲಲಾಂಛನವಾಗಬಲ್ಲುವು. ಇವನ್ನೆಲ್ಲ ಪರಿಶೀಲಿಸುವಾಗ ಕುಲಲಾಂಛನ ಪದ್ಧತಿಯ ರಹಸ್ಯಭೇದನ ಸುಲಭವಾದದ್ದಲ್ಲವೆಂದು ಮನದಟ್ಟಾಗುತ್ತದೆ :

ವೃಕ್ಷನಾಮಗಳ ಅಧ್ಯಯನ ಇನ್ನೂ ಎಲ್ಲಿಯೂ ನಡೆದಂತೆ ತೋರುವುದಿಲ್ಲ. ಅವುಗಳ ಬಣ್ಣ, ಹೂ, ಎಲೆ ಮೊದಲಾದ ಬಿಡಿಭಾಗಗಳ ಗುಣಗಳ ಪ್ರೇರಣೆಯಂತೆ ಹೆಸರು ಹುಟ್ಟಿಕೊಂಡಿರಬೇಕು. ಜನಿವಾರ ಎಂಬುದೊಂದು ಲತೆ, ಯಜ್ಞೋಪವೀತಕ್ಕೂ ಅದಕ್ಕೂ ಸಂಬಂಧವೇನು? ಬಾಚೀ ಗಾಯದ ಸೊಪ್ಪು ಎಂಬುದು ಮತ್ತೊಂದು. ಹೆಸರೇ ಸೂಚಿಸುವಂತೆ ಬಾಚಿ ಗಾಯಕ್ಕೆ ಬಳಸುವ ಸೊಪ್ಪು ಅದು. ವಿಷ್ಣುಕಾಂತಿ ಸೊಪ್ಪು. ಇದರ ಸಾರವನ್ನು ಜ್ವರ ಬಂದವರಿಗೆ ಕೊಡುತ್ತಾರೆ. ಅದರ ಬಣ್ಣ ಅಪ್ಪಟ ನೀಲಿ; ವಿಷ್ಣುವಿನ ದೇಹವರ್ಣವೂ ಅದೇ. ಕೊತ್ತಿಮುಳ್ಳು ಎಂಬುದೊಂದು ಪೊದೆ. ಇಲಿ ಹೆಗ್ಗಣಗಳ ಪ್ರವೇಶಕ್ಕಡ್ಡಿಯಾಗಲೆಂದು ಕಣಜಗಳ ಸುತ್ತ ಇಡುತ್ತಾರೆ. ಅದನ್ನು ಭೇದಿಸಿಕೊಂಡು ಬೆಕ್ಕು ಸಹ ಮುಂದರಿಯಲಾರದು. ಇಂಗ್ಲಿಷಿನಲ್ಲಿಯೂ Address tongue ಎನ್ನುವ ಹೆಸರು ಪ್ರಾಣಿಯಿಂದ ಬಂದದ್ದು. 'ಮುಟ್ಟಿದರೆ ಮುನಿ' ಎಂಬುದು 'Forget me not' ಎನ್ನುವುದ ಭಾಷಾಂತರ. ಸಾಂಕೇತಿಕ ಭಾಷೆಯ ಬೆಳವಣಿಗೆಯಲ್ಲಿ ಗಿಡಗಳ ಪಾತ್ರವನ್ನು ಮರೆಯುವಂತಿಲ್ಲ. ಕೆಲವು ಮಾನವನ ರಾಗಭಾವಗಳಿಗೆ ಸಂಕೇತವಾಗಿರುವುದುಂಟು. ಹಳೆಯ ಒಡಂಬಡಿಕೆಯಲ್ಲಿ ಆಲಿವ್ ಮರ ಶಾಂತಿಗೆ ಸಂಕೇತವಾಗಿರುವಂತೆ, ಭಾರತೀಯರಲ್ಲಿ ಕಮಲ ಪಾವಿತ್ರ್ಯಕ್ಕೆ ಜ್ಞಾನಕ್ಕೆ ಸಂಕೇತವಾಗಿದೆ. ಶಮಿ ಭಾರತೀಯರಲ್ಲಿ, ಲಾರೆಲ್ ಪಾಶ್ಚಾತ್ಯರಲ್ಲಿ, ವಿಜಯದ ಸಂಕೇತ.

ಆದಿಮಾನವನ ಅನೇಕಾನೇಕ ನಂಬಿಕೆಗಳು ಕಾಲ ಹಿಂದು ಹಿಂದಕ್ಕೆ ಸರಿದಂತೆಲ್ಲ ಸಂಪೂರ್ಣವಾಗಿ ಮಣ್ಣುಗೂಡಿವೆ; ಅವನು ಕಲ್ಪಿಸಿಕೊಂಡಿದ್ದ ಮೌಲ್ಯಗಳು ಆಮೂಲಾಗ್ರವಾಗಿ ನಿರ್ಮೂಲನಗೊಂಡಿವೆ. ಆದರೆ ಅವನು ಸಸ್ಯ ವಿಶ್ವದ ಬಗ್ಗೆ ತಳೆದಿದ್ದ ಪವಿತ್ರ ಭಾವನೆಯಂತು ಇಂದಿಗೂ ಹುಸಿಯಾಗಿಲ್ಲ. ಆ ಭಾವನೆ ಕಾಲಾನುಗುಣವಾಗಿ ಸಂಸ್ಕಾರಗೊಂಡು ಹೊಸ ವೇಷ ಭೂಷಣಗಳನ್ನು ಪಡೆದಿರಬಹುದು; ಆದರೆ ಅವನ ಮೂಲ ಪ್ರಜ್ಞೆ ಮಾತ್ರ ಇಂದಿನ ಮಾನವನ ನಾಡಿ ನಾಡಿಗಳಲ್ಲಿ ಸ್ವಸ್ವರೂಪದಲ್ಲಿ ಪ್ರವಹಿಸುತ್ತಿದೆ. ವಾಲ್ಮೀಕಿ ಕಾಳಿದಾಸ ಟಾಗೋರ್ ಕುವೆಂಪು ಕವಿಗಳ ಕಾವ್ಯಗಳ ವ್ಯಾಸಂಗದಿಂದ ಈ ಮಾತಿನ ಯಥಾರ್ಥತೆ ಸ್ಪಷ್ಟವಾಗುತ್ತದೆ; "ಓ ತರುವೆ, ಆದಿಪ್ರಾಣ ನೀನು. ಬದುಕಿನ ಮೂಲದ್ರವ್ಯ ನೀನು" ಎಂಬ ಟಾಗೋರರ ನುಡಿಮಾಲೆಯಲ್ಲಿ, "ಭಗವಂತನ ದಯೆ ಘನಿಸಿಹುದಿಲ್ಲ; ಧನ್ಯತೆ ಕ್ಷಣ ಕ್ಷಣಕ್ಕೂ ಅವತರಿಸಿದೆ. ಇಲ್ಲಿ, ಹೂ ಹೂ ಹೂವಿನ ಸುಂದರ ರೂಪದಲಿ" ಎಂಬ ಕುವೆಂಪು ಅವರ ಸಾಲುಗಳಲ್ಲಿ ಈ ಮಾತಿಗೆ ಸಾಕ್ಷಿ ದೊರೆಯುತ್ತದೆ.

ಸಸ್ಯವಿಜ್ಞಾನಿಯನ್ನು ಕೂಡಿಕೊಂಡು ಭಾಷಾವಿಜ್ಞಾನಿ ವೃಕ್ಷನಾಮಗಳನ್ನೂ ವೈದ್ಯವಿಜ್ಞಾನಿ ಜಾನಪದ ವೈದ್ಯವನ್ನೂ ಸಮಾಜ ವಿಜ್ಞಾನಿ ಸಸ್ಯ ಸಮಾಜವನ್ನು ಕುರಿತ ನಂಬಿಕೆಗಳನ್ನೂ ಕುರಿತು ಅಧ್ಯಯನ ನಡೆಸುವುದಾದರೆ ಅನೇಕ ನೂತನ ಸತ್ಯಾಂಶಗಳು ಹೊರಬೀಳುವ ಸಂಭವವಿದೆ. ಜಾನಪದವೆಲ್ಲ ಅನಾಗರಿಕವಾದದ್ದು ಮೌಢ್ಯಮೂಲ ವಾದುದು ಎನ್ನುವ ತಿಳಿವಳಿಕೆಯೇ ಅನಾಗರಿಕವಾಗುತ್ತದೆ, ಮೌಢ್ಯವಾಗುತ್ತದೆ.

***ಜೆ.ಜೆ.ಡಿ.***

**ಸಹಜ ಕೃಷಿ** ಸಹಜ ಕೃಷಿ ಎಂದರೆ ನಮ್ಮ ನೆಲ, ನೀರು, ಗಿಡ ಮರಗಳು, ನಮ್ಮ ಸುತ್ತಮುತ್ತಲಿನ ಪ್ರಾಣಿ, ಪಕ್ಷಿ, ಕೀಟಗಳು - ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮಾನವನ ಆರೋಗ್ಯಕರವಾದ ಉಳಿವಿಗಾಗಿ ಮಾಡುವ ಕೃಷಿ. ಕುಲಾಂತರಿ ತಳಿಗಳು, ರಸಗೊಬ್ಬರಗಳು ಬಳಸದೆ ಸಹಜ ಬೀಜಗಳು, ಮನೆಗೊಬ್ಬರಗಳು ಬಳಸಿದ ಮಾತ್ರಕ್ಕೆ ಅದು ಸಹಜ ಕೃಷಿ ಆಗುವುದಿಲ್ಲ. ನೆಲ, ನೀರು, ಜೀವರಾಶಿ, ಪ್ರಕೃತಿಯ

ಅನಿವಾರ್ಯ ಭಾಗವಾದ ಮನುಷ್ಯ - ಈ ಎಲ್ಲವೂ ನೆಮ್ಮದಿಯಿಂದ ಉಳಿಯುವುದಕ್ಕಾಗಿ ಅನುಸರಿಸುವ ವಿಧಾನವೇ ಸಹಜ ಕೃಷಿ.

ಪ್ರಕೃತಿಯಲ್ಲೇ ಕೃಷಿಯ ಮೂಲಭೂತ ತತ್ವಗಳು ಅಡಗಿವೆ. ಹೊಲಕ್ಕೆ ಕಾಳನ್ನು ಚೆಲ್ಲಿದರೂ ಹಕ್ಕಿಗಳೇ ತಂದು ನೆಲಕ್ಕೆ ಬೀಳಿಸಿದರೂ ಆ ಕಾಳುಗಳನ್ನು ಇರುವೆಗಳು ಮುಂತಾದವು ತಿಂದು ಉಳಿದವು ಮೊಳಕೆ ಒಡೆಯುತ್ತವೆ. ಮೊಳಕೆ ಒಡೆದ ಮೇಲೆ ಬೆಳೆಯ ಪ್ರಗತಿಯಲ್ಲಿ ದನಕರುಗಳು ಮತ್ತು ಇತರ ಪ್ರಾಣಿಗಳ ಪಾಲು ಇರುತ್ತದೆ. ತೆನೆಯೊಡೆದಾಗ ಹಕ್ಕಿಗಳು ಕೂಡ ತಮ್ಮ ಪಾಲನ್ನು ಪಡೆಯುತ್ತವೆ. ಇದೆಲ್ಲಾ ಹೋಗಿ ಉಳಿದದ್ದು ಒಕ್ಕಣೆಗೊಳ್ಳುತ್ತದೆ. ಅದರಲ್ಲಿ ರೈತನ ಪಾಲು ಮಾತ್ರವಲ್ಲದೆ ಬೇರೆ ಬೇರೆ ಶ್ರಮ ಜೀವಿಗಳ ದುಡಿಮೆಯೂ ಸೇರಿರುತ್ತದೆ. ಇಂಥ ಸಹಜ ಕೃಷಿ ಪದ್ಧತಿಯಿಂದ ಹೊರಬಂದು ಆಧುನಿಕ ಕೃಷಿಯ ಹೆಸರಿನಲ್ಲಿ ಮುನ್ನಡೆದರೆ ಮಾನವ ಜೀವನಕ್ಕೆ ಅದು ಹಾನಿಯನ್ನೆ ಉಂಟುಮಾಡುತ್ತದೆ ಎಂಬುದನ್ನು ಮನಗಾಣಬೇಕು.

ಭೂಮಿ ಬ್ರಹ್ಮಾಂಡದ ಒಂದು ಸಣ್ಣ ತುಣುಕು. ಈ ಭೂಮಿಯಲ್ಲಿಯ ಬೆಟ್ಟ, ಗುಡ್ಡ, ನದಿ, ಸಮುದ್ರ, ಮರ, ಗಿಡ, ಪ್ರಾಣಿ, ಪಕ್ಷಿ, ಮನುಷ್ಯರು ಸೇರಿದಂತೆ ಎಲ್ಲವೂ ಬ್ರಹ್ಮಾಂಡದ ಭಾಗವೇ ಆಗಿವೆ. ಇವೆಲ್ಲ ಜೀವ ಇರಲಿ, ಇಲ್ಲದಿರಲಿ ಪರಸ್ಪರ ಒಂದನ್ನೊಂದು ಅವಲಂಬಿಸಿಕೊಂಡಿರುತ್ತವೆ. ಇದರಿಂದ ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಂಡಂತೆ ಆಗುತ್ತದೆ. ಇದನ್ನೇ ಪ್ರಕೃತಿ ನಿಯಮವೆಂದು ಹೇಳಬಹುದು. ಇವುಗಳಿಗೆಲ್ಲ ಮೂಲ ಆಧಾರ ಭೂಮಿ.

ಭೂಮಿಯ ಅಳಿವು, ಉಳಿವಿನ ಮೇಲೆ ಎಲ್ಲವೂ ಅವಲಂಬಿತವಾಗಿದೆ. ಸ್ವತಃ ಭೂಮಿಯೇ ಒಂದು ಜೀವ ಘಟಕವಾಗಿದೆ. ಅಸಂಖ್ಯಾತ ಸೂಕ್ಷ್ಮಾಣು ಜೀವಿಗಳ ಅಸ್ತಿತ್ವದೊಂದಿಗೆ ಭೂಮಿ ಜೀವಘಟಕವಾಗುತ್ತದೆ. ಸೂಕ್ಷ್ಮಾಣುಗಳು ಬಿಡಿಬಿಡಿಯಾದ ಜೀವಿಗಳಾಗಿವೆ. ಆದರೆ ಸೂಕ್ಷ್ಮಾಣು ಜೀವಿಗಳಿಲ್ಲದೆ ಭೂಮಿ ಬದುಕಿರಲಾರದು. ಇಂಥ ಸೂಕ್ಷ್ಮಾಣು ಜೀವಿಗಳಿಗೂ ಹಸುರೆಲೆ, ಗಿಡ, ಮರ, ಬಳ್ಳಿ, ನಶಿಸಿದ ಸಸ್ಯ, ಗೊಬ್ಬರ, ಸೂರ್ಯನ ಬೆಳಕು, ನೀರಿನ ನೆಲೆಗಳು - ಇವೆಲ್ಲಕ್ಕೂ ಅನ್ಯೋನ್ಯ ಸಂಬಂಧವಿದೆ.

ರೈತರು ಪ್ರಕೃತಿ ಸಹಜವಾದ ಕ್ರಿಯೆಗಳನ್ನು ಅಳವಡಿಸಿಕೊಂಡು ಭೂಮಿಯನ್ನು ಉಳಿಸಿಕೊಳ್ಳುವ ಸರಳ ಸೂತ್ರಗಳನ್ನೇ ಸಹಜ ಕೃಷಿ ಎಂದು ಕರೆಯಬಹುದು. ಇದರಿಂದ ಭೂಮಿಯಲ್ಲಿರುವ ಸೂಕ್ಷ್ಮಾಣು ಜೀವಿಗಳನ್ನು ಉಳಿಸಿ, ಬೆಳೆಸಬಹುದು. ಈ ಪದ್ಧತಿಯಲ್ಲಿ ಅನುಸರಿಸಬೇಕಾದ ಮುಖ್ಯ ಸೂತ್ರಗಳನ್ನು ಹೀಗೆ ಪಟ್ಟಿಮಾಡಬಹುದು.

1. ಆಯಾ ಪ್ರದೇಶದ ಮಣ್ಣಿನ ರಚನೆ, ನೀರಿನ ಲಭ್ಯತೆ ಗಮನಿಸಿ ಅದಕ್ಕೆ ತಕ್ಕಂಥ ಬೆಳೆಗಳನ್ನು ಮಾತ್ರ ಬೆಳೆಯುವುದು.

2. ತಿನ್ನಲು ಅಗತ್ಯವಿರುವ ದವಸ-ಧಾನ್ಯ, ಕಾಳು-ಕಡ್ಡಿ, ಹಣ್ಣು-ಹಂಪಲು, ಸೊಪ್ಪು, ತರಕಾರಿ, ಗೆಡ್ಡೆ ಗೆಣಸುಗಳನ್ನು ಬೆಳೆಯುವುದು.

3. ಹೊಲಗಳಲ್ಲಿ ಇಳಿಜಾರಿಗೆ ಅನುಗುಣವಾಗಿ ಗುಳಿ (ಟ್ರೆಂಚ್) ಬದು, ಕಾಲುವೆ, ಕೆರೆ, ಕುಂಟೆಗಳನ್ನು ನಿರ್ಮಾಣ ಮಾಡಿ ಬಿದ್ದ ಮಳೆ ನೀರಿನ ಹೆಚ್ಚಿನ ಪ್ರಮಾಣವನ್ನು ಶೇಖರಣೆ ಮಾಡುವುದು. ಇದರಿಂದ ಭೂಮಿಯ ಮೇಲಿನ ಮಣ್ಣನ್ನು ಅಲ್ಲೇ ಉಳಿಸಲು ಸಹಾಯವಾಗುತ್ತದೆ. ಇದರ ಜತೆಗೆ ಪ್ರತಿ ಎಕರೆಗೆ 2-3 ದೊಡ್ಡ ಮರಗಳನ್ನು ಬೆಳೆಸಿಕೊಳ್ಳುವುದು (ಹಲಸು, ಬೇವು, ಹುಣಿಸೆ, ಮಾವು ಇತ್ಯಾದಿ).

4. ಅನಗತ್ಯವಾಗಿ ಭೂಮಿಯನ್ನುಉಳುಮೆ ಮಾಡದೆ ಭೂಮಿಯಲ್ಲಿರುವ ಸೂಕ್ಷ್ಮಾಣು ಜೀವಿಗಳನ್ನು ಸೂರ್ಯನ ಕಿರಣಗಳಿಂದ ರಕ್ಷಿಸುವುದು.

5. ರಾಸಾಯನಿಕ ಗೊಬ್ಬರ, ಕೀಟ, ಕಳೆ, ಶಿಲೀಂಧ್ರನಾಶ ಪದಾರ್ಥಗಳನ್ನು ಬಳಸದೆ ಸೂಕ್ಷ್ಮ ಜೀವಿಗಳನ್ನು ರಕ್ಷಿಸುವುದು. ಇದರಿಂದ ಭೂಮಿಯ ಫಲವತ್ತತೆಯನ್ನು ವರ್ಷವರ್ಷಕ್ಕೂ ಹೆಚ್ಚಿಸುವುದು.

6. ಭೂಮಿಯನ್ನು ಸೊಪ್ಪು ಕಡ್ಡಿಗಳಿಂದ ಮುಚ್ಚುವುದು. ಇವು ಕಾಲಕ್ರಮೇಣ ಸಾವಯವ ಗೊಬ್ಬರವಾಗಿ ಬದಲಾವಣೆಗೊಳ್ಳುತ್ತವೆ. ಅತಿ ಕಡಿಮೆ ಮಳೆ ಬೀಳುವ ಪ್ರದೇಶದಲ್ಲೂ ಭೂಮಿಯ ನೀರಿನ ಒರತೆಯನ್ನು ಮುಚ್ಚುವುದರಿಂದ ಕಾಪಾಡಿಕೊಳ್ಳಬಹುದು. ಇದರಿಂದ ಭೂಮಿ ಹೆಚ್ಚು ಜೀವಂತವಾಗಿರುತ್ತದೆ. ಸೂಕ್ಷ್ಮಾಣು ಜೀವಿಗಳು ಬದುಕುತ್ತವೆ. ಜೀವಸರಮಾಲೆ ಬದುಕುತ್ತದೆ.

ಸಹಜ ಕೃಷಿಯ ರೈತರು ಅನುಸರಿಸಬೇಕಾದ ಕ್ರಮಗಳು ಕೆಲವಿವೆ. ಹಂತ ಹಂತವಾಗಿ ಭೂಮಿಯನ್ನು ರಾಸಾಯನಿಕಗಳಿಂದ ಬಿಡಿಸಿಕೊಳ್ಳಬೇಕು. ಪಕ್ಕದ ಜಮೀನುಗಳಿಂದ ರಾಸಾಯನಿಕಗಳು ಬಾರದಂತೆ ತಡೆಗಟ್ಟಬೇಕು. ಇಳಿಜಾರಿಮುಖವಾಗಿ ಕಂದಕಗಳನ್ನು (3x4 ಅಡಿಯಂತೆ) ತೋಡಿಕೊಳ್ಳಬೇಕು.

ಬೆಳೆಗಳನ್ನು ದಕ್ಷಿಣೋತ್ತರವಾಗಿ ಸಾಲುಗಳು ಬರುವಂತೆ ನೋಡಿಕೊಳ್ಳಬೇಕಾಗಿದೆ. ಇದರಿಂದ ಇಡೀ ದಿನದ ಸೂರ್ಯನ ಶಕ್ತಿಯನ್ನು ಸಸ್ಯಗಳು ಸಂಪೂರ್ಣವಾಗಿ ಸದುಪಯೋಗಪಡಿಸಿ ಕೊಂಡು ಅಧಿಕ ಇಳುವರಿ ನೀಡಲು ಸಹಾಯವಾಗುತ್ತದೆ. ರಾಸಾಯನಿಕಗಳಿಂದ ನಾಶವಾದ ಸೂಕ್ಷ್ಮಾಣುಜೀವಿಗಳನ್ನು ಪುನರುತ್ಪತ್ತಿಗೊಳಿಸಲು ನೆಲವನ್ನು ಮುಚ್ಚುವುದರಿಂದ ಸಾಧ್ಯವಾಗುತ್ತದೆ. ಇದರಿಂದ ಸೂಕ್ಷ್ಮಾಣುಜೀವಿಗಳನ್ನು ರಕ್ಷಿಸಿ ವೃದ್ಧಿಯಾಗುವಂತೆ ಮಾಡಬಹುದು.

ಏಕದಳ ವರ್ಗದ ರಾಗಿ, ಹುಲ್ಲು, ಜೋಳದ ದಂಟು, ಕಬ್ಬಿನ ಸೋಗೆ, ತೆಂಗಿನ ಗರಿ, ಬತ್ತದ ಹುಲ್ಲು ಮುಂತಾದವನ್ನು ಉಪಯೋಗಿಸುವುದರಿಂದ ಇದು ಸಾಧ್ಯವಾಗುತ್ತದೆ ಅಥವಾ ಸ್ಥಳದಲ್ಲೇ ಸಿಕ್ಕುವ ಸಸ್ಯಗಳ ಸೊಪ್ಪು, ಕಡ್ಡಿ, ದಂಟುಗಳನ್ನು ಬಳಸಬಹುದು.

ಹಸು, ಎಮ್ಮೆ, ಕುರಿ, ಆಡು, ಕತ್ತೆ, ಮೊಲ ಇತ್ಯಾದಿ ಪ್ರಾಣಿಗಳ ಗಂಜಲ ಸಗಣಿಗಳನ್ನು ಅಲ್ಪ ಪ್ರಮಾಣದಲ್ಲಿ ಬಳಸಿದರೂ ಮಣ್ಣಿನಲ್ಲಿ ಅಪಾರ ಪ್ರಮಾಣದ ಸೂಕ್ಷ್ಮಾಣುಜೀವಿಗಳನ್ನು ಉಳಿಸಬಹುದು.

**ಮುಚ್ಚಿಕೆ (ಮಲ್ಚಿಂಗ್) :** ಕೃಷಿಯ ನೆಲವನ್ನು ಯಾವುದಾದರೂ ವಸ್ತುವಿನಿಂದ ಮುಚ್ಚುವುದು. ಇತ್ತೀಚಿನ ವರ್ಷಗಳಲ್ಲಿ ಮಲ್ಚಿಂಗ್ ಮಾಡುವುದನ್ನು ಕುರಿತು ಕೃಷಿ ವಿಜ್ಞಾನಿಗಳು ಮತ್ತು ಸಾವಯವ ಕೃಷಿಯಲ್ಲಿ ತೊಡಗಿರುವವರು ರೈತರಿಗೆ ಸಲಹೆ ನೀಡುತ್ತಿದ್ದಾರೆ.

ಮುಚ್ಚಿಕೆಯಿಂದ ನೆಲದಲ್ಲಿ ತೇವಾಂಶ ಹೆಚ್ಚು ಕಾಲ ಉಳಿಯುತ್ತದೆ. ಇದರಿಂದ ಕಳೆಯನ್ನು ನಿಯಂತ್ರಿಸಬಹುದು. ಆದರೆ ಇದನ್ನು ಸೀಮಿತ ಉದ್ದೇಶಕ್ಕೆ ತೋಟದ ನೆಲಕ್ಕೆ ಅಥವಾ ಹಿಪ್ಪುನೇರಳೆ, ತರಕಾರಿಯಂತಹ ನೀರಾವರಿ ಬೆಳೆಗೆ ಅಳವಡಿಸಬಹುದೆಂದು ಸಲಹೆ ನೀಡುತ್ತಾರೆ. ಇದನ್ನು ಹೀಗೆ ಸೀಮಿತಗೊಳಿಸಬೇಕಾಗಿಲ್ಲ, ಇದನ್ನು ಎಲ್ಲ ರೀತಿಯ ಕೃಷಿಗೂ ಬಳಸಬಹುದು. ಕೃಷಿಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು

ಅಳವಡಿಸಿಕೊಳ್ಳಬೇಕಾದ ಸಮಯ, ತೋಟಗಾರಿಕಾ ಬೆಳೆಗಳಿಗೆ ಅದರ ನೆಲದ ಮೇಲೆ ಬೆಳೆದಿರುವ ಹುಲ್ಲು, ಕಳೆ ಸಸ್ಯಗಳು, ಗರಿಗಳು ಮುಂತಾದವನ್ನು ಬಳಸಿ ಮುಚ್ಚಿಕೆಯನ್ನು ಮಾಡಬೇಕು.

ಕೃಷಿ ನೆಲವನ್ನು ಉಳುಮೆಮಾಡಿ ಸ್ಥಳೀಯವಾಗಿ ಸಿಗುವ ಹುಲ್ಲು, ಸೊಪ್ಪು, ಕಳೆ ಸಸ್ಯಗಳಿಂದ ಮುಚ್ಚಬೇಕು. ಸೂರ್ಯರಶ್ಮಿ ಬೀಳದಂತೆ ಮಣ್ಣಿನ ಮೇಲೆ ಮಡಕೆಗಳಲ್ಲಿ ತಯಾರಿಸಿರುವ ಕಾಡುಮಣ್ಣಿನ ಜೀವಾಮೃತ ಮತ್ತು ಬೇರೆ ಪ್ರಾಣಿಗಳ ತ್ಯಾಜ್ಯಗಳ ಜೀವಾಮೃತವನ್ನು ಮುಚ್ಚಿಕೆ ಮೇಲೆ ಒಂದೊಂದು ಲೀಟರ್‌ನಷ್ಟು ಸಿಂಪಡಿಸಬೇಕು. ಜೀವಾಮೃತದಲ್ಲಿರುವ ಕಾಡು ಮಣ್ಣಿನ ಸೂಕ್ಷ್ಮಾಣು ಜೀವಿಗಳು ಮತ್ತು ಬೇರೆ ಬೇರೆ ಪ್ರಾಣಿಗಳ ತ್ಯಾಜ್ಯಗಳಲ್ಲಿರುವ ಸೂಕ್ಷ್ಮಾಣು ಜೀವಿಗಳು ನೆಲದಲ್ಲೆಲ್ಲಾ ಹರಡಿ ಸುಲಭವಾಗಿ ಪೋಷಕಾಂಶಗಳು ದೊರಕುವಂತೆ ಮಾಡುತ್ತವೆ.

ಜೀವಾಮೃತವನ್ನು ನೆಲದ ಮಣ್ಣಿಗೆ ಸೇರಿಸಿದ 2-3 ವಾರಗಳ ಬಳಿಕ ಮಲ್ಚಿಂಗ್‌ನಿಂದ ಮಣ್ಣಿನಲ್ಲಿ ಪೂರಕ ಸನ್ನಿವೇಶ ನಿರ್ಮಾಣಗೊಳ್ಳುತ್ತದೆ. ಆಮೇಲೆ ಬಿತ್ತನೆ ಮಾಡಬೇಕು. ಮುಚ್ಚಿಕೆಗೆ ಬಳಸಿದ್ದ ಹುಲ್ಲು, ಸೊಪ್ಪು ಮತ್ತಿತರ ವಸ್ತುಗಳನ್ನೇ ಉಪಯೋಗಿಸಿ ಬೇರೆಡೆ ಮುಚ್ಚಿಕೆ ಮಾಡಬಹುದು. ಮುಚ್ಚಿಕೆಯಿಂದ ಮಣ್ಣಿಗೆ ನಿರಂತರವಾಗಿ ಪೋಷಕಾಂಶಗಳು ಸೇರುತ್ತವೆ. ಕಳೆಯ ನಿಯಂತ್ರಣವಾಗುತ್ತದೆ. ಮಣ್ಣಿನ ಸಾಂದ್ರತೆ ಉಳಿಯುತ್ತದೆ. ಮಣ್ಣಿಗೆ ನೀರನ್ನು ಹಿಡಿದಿರುವ ಸಾಮರ್ಥ್ಯ ಹೆಚ್ಚುತ್ತದೆ. ಕೃಷಿ ನೆಲವನ್ನು ಹೀಗೆ ಹಸನುಗೊಳಿಸಿದರೆ ಉತ್ತಮ ಬೆಳೆ ಸಿಕ್ಕುತ್ತದೆ.

**ಜೀವಾಮೃತ ತಯಾರಿಕೆ :** ಸ್ಥಳೀಯವಾದ ಕಾಡಿನ ಮಣ್ಣನ್ನುತಂದು ಬಿಂದಿಗೆ ನೀರು ಹಿಡಿಯುವ ಮಡಕೆಯಲ್ಲಿ ಹಾಕಿ ಅದಕ್ಕೆ ಒಂದು ಕಿಲೋಗ್ರಾಂ ರಾಗಿಹಿಟ್ಟು (ಏಕದಳ ಹಿಟ್ಟು) ಮತ್ತು ಒಂದು ಕಿಲೋಗ್ರಾಂ ಕಡಲೆಹಿಟ್ಟು (ದ್ವಿದಳ ಹಿಟ್ಟು) ಮತ್ತು 200 ಗ್ರಾಂ ಬೆಲ್ಲ ಸೇರಿಸಿ, ಹತ್ತು ಲೀಟರ್ ನೀರು ಸುರಿದು ಮಡಕೆಯ ಬಾಯಿಗೆ ಮುಚ್ಚಳ ಹಾಕಬೇಕು. ಒಣಭಾಗದ ನೆರಳಿನಲ್ಲಿ ಒಂದು ವಾರ ಇದನ್ನು ಇಡಬೇಕು. ಕಾಡಿನ ಮಣ್ಣಿನ ಸೂಕ್ಷ್ಮಾಣು ಜೀವಿಗಳು. ಇದರಿಂದ ವೃದ್ಧಿಗೊಳ್ಳುತ್ತವೆ. ಒಂದು ವಾರ ಆದ ಮೇಲೆ ಒಂದು ಲೀಟರ್‌ಗೆ 600 ಲೀಟರ್‌ನಂತೆ ನೀರು ಬೆರೆಸಿ ಮರದ ಬೇರಿಗೆ ನೆಲದ ಮಣ್ಣಿಗೆ ಅಥವಾ ಮಲ್ಚಿಂಗ್ ಮೇಲೆ ಸಿಂಪರಣೆ ಮಾಡಬೇಕು. ಇದರೆ ರೀತಿ ಆನೆ, ಮೊಲ, ಪಶುಪಕ್ಷಿಗಳು ಸೇರಿದಂತೆ ಇವುಗಳ ತ್ಯಾಜ್ಯದಿಂದಲೂ ಜೀವಾಮೃತ ತಯಾರಿಸಿ ಬಳಕೆ ಮಾಡಬಹುದು. ಪ್ರಾಣಿ ತ್ಯಾಜ್ಯದಿಂದ ಜೀವಾಮೃತ ತಯಾರಿಸುವುದಾದರೆ ಪ್ರತ್ಯೇಕವಾಗಿ ಹಾಕಬೇಕು. ಹಾಗೆಯೇ ತಾರೆ, ಆಲ, ಅರಳಿ ಮುಂತಾದ ಸ್ಥಳೀಯ ಮರಗಳ ಬುಡದ ಮಣ್ಣಿನ ಜೀವಾಮೃತವೂ ಒಳ್ಳೆಯ ಫಲ ನೀಡುತ್ತದೆ.

**ನೀರಿನ ಸಂಗ್ರಹಣೆ ಮತ್ತು ಸಂರಕ್ಷಣೆ :** ಮಳೆ, ಹಿಮ, ಇಬ್ಬನಿ ಮುಂತಾದ ಎಲ್ಲಾ ಮೂಲಗಳಿಂದ ಬರುವ ಜಲವನ್ನು ಆದಷ್ಟು ಹೆಚ್ಚು ದಿನಗಳ ಕಾಲ ಸಂಗ್ರಹಿಸಿಟ್ಟುಕೊಳ್ಳುವುದು ಇದರ ಆಶಯ. ಇದಕ್ಕಾಗಿ ಮಲ್ಚಿಂಗ್ ಜತೆಗೆ ದೀರ್ಘಕಾಲಿಕ ಜಲಸಂರಕ್ಷಣೆಯನ್ನು ಕೈಗೊಳ್ಳಲು ಕೆಲವು ವಿಧಾನಗಳಿವೆ. ಒಂದು ಪ್ರದೇಶದ ಆರೋಗ್ಯಕರ ಮತ್ತು ಸುಸ್ಥಿರ ನೈಸರ್ಗಿಕ ಪರಿಸರಕ್ಕಾಗಿ ಕೃಷಿ ಕಾಡನ್ನು ಬೆಳೆಸಬೇಕು. ಯಾವುದೇ ಮಾದರಿಯ ಕೃಷಿಯಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಮೂರನೇ ಒಂದು ಭಾಗದಷ್ಟು ಮರಗಳನ್ನು ಬೆಳೆಸಬೇಕು.

**ಟ್ರೆಂಚ್ - ಬಂಡ್ ನಿರ್ಮಾಣ :** ಇಳಿಜಾರಿಗೆ ಅಡ್ಡಲಾಗಿ ಪ್ರತಿ 100 ಅಡಿ ಜಮೀನಿನ ಉದ್ದಕ್ಕೆ 3x4 ಅಡಿ ಟ್ರೆಂಚ್ ತೆಗೆದು ಮಣ್ಣನ್ನುಇಳಿಜಾರಿನ ಕಡೆಗೆ ಹಾಕಿ ಬಂಡ್ (ಬದು) ನಿರ್ಮಿಸಬೇಕು. ಅದರ ಮೇಲೆ ನುಗ್ಗೆಯಂತಹ ಮರಗಳನ್ನು ನೆಟ್ಟುಬೆಳೆಸಿದರೆ ಬದು ಬೇರುಗಳಿಂದ ಬಂಧಿಸಲ್ಪಟ್ಟಿರುತ್ತದೆ. ಟ್ರೆಂಚ್‌ನಲ್ಲಿ ಬಿದ್ದ ಮಳೆ ನೀರು ಇಂಗಿ ಜಲಸಂರಕ್ಷಣೆ ಆಗುತ್ತದೆ.

**ಒಡ್ಡು ನಿರ್ಮಾಣ :** ಕೊಳವೆ ಬಾವಿಗೆ ಹತ್ತಿರವಾಗಿ ಅಥವಾ ಜಮೀನಿನ ಯುಕ್ತವಾದ ಜಾಗದಲ್ಲಿ (ಹಳ್ಳ, ತೊರೆ ಇತ್ಯಾದಿ) ಒಂದು ಅಡ್ಡ ಕಟ್ಟೆಯನ್ನು ನಿರ್ಮಿಸಿ ಹರಿವ ಎಲ್ಲಾ ನೀರು ಸಂಗ್ರಹವಾಗುವಂತೆ ಮಾಡಬೇಕು.

ಮೇಲಿನ ಕ್ರಮಗಳನ್ನು ಅನುಸರಿಸುವುದರಿಂದ ಸಹಜ ಸ್ಥಿತಿ ಮುಂದುವರಿದು ಉತ್ತಮವಾದ ಬೆಳೆ ಸಿಕ್ಕುವುದು ಮಾತ್ರವಲ್ಲದೆ ಉತ್ತಮ ಆಹಾರವೂ ಲಭ್ಯವಾಗಿ ಮನುಷ್ಯನ ಆರೋಗ್ಯ ಜೀವನವನ್ನು ಉಳಿಸುತ್ತದೆ.

*ಕೆ.ಎಚ್.*

**ಸಾವಯವ ಕೃಷಿ** ದೇಶೀಯ ಕೃಷಿಯ ಪ್ರಾಮುಖ್ಯತೆ ಇರುವುದೇ ಸಾವಯವ ಕೃಷಿಯಲ್ಲಿ ಅಥವಾ ಸಹಜ ಕೃಷಿಯಲ್ಲಿ. ಅಧಿಕ ಉತ್ಪನ್ನದ ಆಸೆಯಿಂದ ಆಧುನಿಕ ವಿಧಾನಗಳನ್ನು ಅಳವಡಿಸಿ ಕೃಷಿ ಮಾಡಿದುದರ ಪರಿಣಾಮ ಮಾನವ ಅನೇಕ ರೋಗ ರುಜಿನಗಳಿಗೆ ಗುರಿಯಾದ. ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಾದಂತೆಲ್ಲ ಭೂಮಿಯು ತನ್ನ ಸಾರವನ್ನೆಲ್ಲ ಕಳೆದುಕೊಂಡಿತು.. ಬೆಳೆಗಳ ಇಳುವರಿ ಹೆಚ್ಚಾದರೂ ಪೌಷ್ಠಿಕಾಂಶದ ಕೊರತೆ ಅಷ್ಟೇ ಪ್ರಮಾಣದಲ್ಲಿ ಅಧಿಕವಾಯಿತು. ಇದರಿಂದ ಎಚ್ಚೆತ್ತ ಮಾನವ ಪ್ರಕೃತಿಯಲ್ಲಿ ಲಭಿಸುವ ಜೈವಿಕ ಮತ್ತು ಅಜೈವಿಕ ವಸ್ತುಗಳನ್ನು ಪ್ರಾಕೃತಿಕ ಸಹಜ ಪ್ರಕ್ರಿಯೆಗಳಿಗೆ ಹಾನಿ ಉಂಟಾಗದಂತೆ ಬಳಸುವ ಆ ಮೂಲಕ ಜೀವನಾವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳುವ ಸಹಜ ಕೃಷಿಯತ್ತ ಮನಸ್ಸು ಮಾಡಿದನು.

ಮಧ್ಯಯುಗದ ಸಂದರ್ಭದಲ್ಲಿ ಜರುಗಿದ ಕೈಗಾರಿಕಾ ಕ್ರಾಂತಿ, 20ನೆಯ ಶತಮಾನದ ಪೂರ್ವಾರ್ಧದಲ್ಲಿ ಸಂಭವಿಸಿದ ಎರಡು ಪ್ರಪಂಚ ಯುದ್ಧಗಳು, ವೈಜ್ಞಾನಿಕ ಪ್ರಗತಿ - ಇವೆಲ್ಲವುಗಳ ಫಲವೇ ಮಾನವನು ಸಹಜ ಕೃಷಿಯತ್ತ ಹೊರಳಲು ಮುಖ್ಯಕಾರಣ. ವಿಜ್ಞಾನ ಕ್ಷೇತ್ರದಲ್ಲಾದ ಪ್ರಗತಿಯಿಂದ ಕೃಷಿ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆ ಕಂಡುಬಂದುವು. ಮಾನವ ಶಕ್ತಿಯ ಬದಲು ಯಂತ್ರ ಶಕ್ತಿಯ ಬಳಕೆ, ಗರಿಷ್ಠ ಲಾಭ ಪಡೆಯಲು ಹೆಚ್ಚು ಇಳುವರಿ ಕೊಡುವ ಕೃತಕ ಗೊಬ್ಬರಗಳ ಉಪಯೋಗ, ಹಾಗೂ ರಾಸಾಯನಿಕ ಗೊಬ್ಬರಗಳ ಸಿಂಪರಣೆ ಮುಂತಾದವುಗಳಿಂದಾದ ದುಷ್ಪರಿಣಾಮ ಮನಗಂಡು ಸಹಜ ಕೃಷಿಯತ್ತ ಮನಸ್ಸು ಮಾಡಿದ. ವಾಣಿಜ್ಯದ ದೃಷ್ಟಿಯಿಂದ ಬಹುಮುಖ್ಯವೆನಿಸಿದ ಕಾಫಿ, ಟೀ, ಅಡಕೆ, ಹೊಗೆಸೊಪ್ಪು ಮುಂತಾದ ಮಾನವನಿಗೆ ಅನಿವಾರ್ಯವಲ್ಲದ ಕೃಷಿಯ ಬೆಳವಣಿಗೆ ಹೆಚ್ಚಾಯಿತು. ಬಲು ಉಪಯುಕ್ತವಾದ ಸಸ್ಯ ಪ್ರಭೇದಗಳು ಬೆಳೆಯುವ ಪ್ರಮುಖ ಸ್ಥಾನಗಳನ್ನು ಇವು ಆಕ್ರಮಿಸಿದವು. ಹೀಗೆ ಒಂದೆಡೆ ಕೈಗಾರಿಕೀರಣ, ಇನ್ನೊಂದೆಡೆ ವಾಣಿಜ್ಯೀಕರಣ ಎರಡು ರಾಕ್ಷಸ ಶಕ್ತಿಗಳು ಕೃಷಿ ಕ್ಷೇತ್ರವನ್ನು ಆವರಿಸಿದುವು. ಪರಿಣಾಮ ಪ್ರಕೃತಿಯ ಸಹಜ ಸಸ್ಯ ಸಂಪತ್ತು ನಾಶವಾಯಿತು. ಮಿಶ್ರ ತಳಿ ಬೀಜಗಳ ಬಳಕೆ, ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳು, ಮರದ ನೇಗಿಲಿನ ಬದಲು ಆಧುನಿಕ ಯಂತ್ರಗಳ ಬಳಕೆ, ಯಂತ್ರಗಳ ಮೂಲಕ ನೀರನ್ನು ಉಪಯೋಗಿಸುವುದು - ಹೀಗೆ 20ನೆಯ ಶತಮಾನದ ಉತ್ತರಾರ್ಧದಲ್ಲಿ ಕೃಷಿಯಲ್ಲಿ ಹೊಸ ವೇಳಾಪಟ್ಟಿಯೇ ಸಿದ್ಧವಾಯಿತು.

ಇವೆಲ್ಲದರ ಪರಿಣಾಮವಾಗಿ ಸಹಜ ಕೃಷಿ ಸಮತೋಲನ ಕಳೆದುಕೊಂಡಿತು. ಕೃಷಿಕರು ಆಹಾರದ ಕೊರತೆ ಎದುರಿಸಬೇಕಾಯಿತು. ಅಪೌಷ್ಟಿಕತೆ ತಲೆದೋರಿತು. ಪರಿಸರ ಮಾಲಿನ್ಯದಿಂದ ಮಾನವನಷ್ಟೇ ಅಲ್ಲ ಸಕಲ ಜೀವರಾಶಿಗಳ ಆರೋಗ್ಯ ಹದಗೆಟ್ಟಿತು. ಆಧುನಿಕ ಕೃಷಿ ಉಪಯೋಗ ಕೇವಲ ಉಳ್ಳವರ ಸ್ವತ್ತಾಗಿ ಬಡವರು ಬಡವರಾಗಿಯೇ ಉಳಿದರು. ಶ್ರೀಮಂತರು ಮತ್ತಷ್ಟು ಶ್ರೀಮಂತರಾದರು. ಇಂತಹ ಏರುಪೇರುಗಳಿಂದಾಗಿ ಸಹಜ ಕೃಷಿಯತ್ತ ಮುಖಮಾಡುವುದೇ ಕ್ಷೇಮವೆಂದು ಅರಿತನು.

**ಸಹಜ ಕೃಷಿ :** ಯಾವುದೇ ರಸ ಗೊಬ್ಬರ ಆಧುನಿಕ ಯಂತ್ರಗಳಿಗೆ, ಶರಣಾಗದೆ ಋತುಮಾನಕ್ಕನುಸಾರವಾಗಿ ಘಟಿಸುವ ಸಸ್ಯಗಳ ಹುಟ್ಟು, ಬೆಳವಣಿಗೆ, ಫಲೋತ್ಪತ್ತಿ ಮತ್ತು ಬೀಜ ಚಕ್ರಗಳ ಅಂತ್ಯ ಮೊದಲಾದ ಪ್ರಕೃತಿಯ ಮೂಲಭೂತ ನಿಯಮಗಳಿಗೆ ಅನುಗುಣವಾಗಿ ಕೃಷಿಯನ್ನು ಮಾಡುವ ವಿಧಾನವೇ ಸಹಜ ಕೃಷಿ. ಇದು ಇಂದು ಯಾವ ಪ್ರಮಾಣದಲ್ಲಿ ಪ್ರಾಮುಖ್ಯ ಪಡೆಯುತ್ತಿದೆಯೆಂದರೆ ರಾಸಾಯನಿಕಗಳನ್ನು ಬಳಸಿ ಬೆಳೆಸಿದ ಆಹಾರ ಪದಾರ್ಥಗಳಿಗಿಂತ ಅತ್ಯಂತ ಅಧಿಕ ಬೆಲೆ ತೆತ್ತು ನೈಸರ್ಗಿಕ ಕೃಷಿ ಪದಾರ್ಥಗಳನ್ನು ಕೊಂಡು ತಿಂದು ಜೀವಿಸುವ ಮಂದಿ ಹೆಚ್ಚಾಗುತ್ತಿದ್ದಾರೆ.

ಇದನ್ನು ಪಾರಂಪರಿಕ ಕೃಷಿ, ಪರ್ಯಾಯ ಕೃಷಿ, ನಿಸರ್ಗ ಕೃಷಿ ಸನಾತನ ಕೃಷಿ, ಸಾವಯವ ಕೃಷಿ, ಸಹಜ ಕೃಷಿ ಎಂದು ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಅನೇಕ ವಿದ್ಯಾವಂತ ಯುವಜನ ಕೃಷಿ ವಿಜ್ಞಾನಿಗಳು ಸಹಜ ಕೃಷಿಯಲ್ಲಿ ತೊಡಗಿದ್ದಾರೆ. ದೊಡ್ಡ ನಗರಗಳಲ್ಲಿ ಸಹಜ ಕೃಷಿ ಉತ್ಪನ್ನಗಳ ಮೇಳ, ದೊಡ್ಡ ಮಾರಾಟ ಬಳಕೆಯ ವಿಧಾನ, ಪ್ರಾಮುಖ್ಯತೆ ಮುಂತಾದುವುಗಳ ಪ್ರಾತ್ಯಕ್ಷಿಕೆ ನಡೆಯುತ್ತಿದೆ. ಸಹಜ ಕೃಷಿಯನ್ನು ಸರ್ಕಾರವೂ ಪ್ರೋತ್ಸಾಹಿಸುತ್ತಿದೆ. ರೋಗ ಮುಕ್ತ ಜೀವನಕ್ಕೆ ನಾಂದಿ ಹಾಡುವ ಈ ಪದ್ಧತಿ ಅತ್ಯಂತ ಪರಿಣಾಮಕಾರಿಯಾಗಿ ಇಂದು ಪ್ರಗತಿಯನ್ನು ಹೊಂದುತ್ತಿದೆ. ನೈಸರ್ಗಿಕ ಕೃಷಿ ಉತ್ಪನ್ನಗಳ ಮಾರಾಟ ಮಳಿಗೆಗಳು ಅಸ್ತಿತ್ವಕ್ಕೆ ಬಂದಿವೆ. ಇಂಥ ಮಾರುಕಟ್ಟೆಗಳಿಗೆಂದೇ ಕೆಲವು ರೈತರು ಸಹಜ ಕೃಷಿ ವಿಧಾನದಲ್ಲಿ ಬೆಳೆದ ಪದಾರ್ಥಗಳನ್ನು ನಿರಂತರವಾಗಿ ಸರಬರಾಜು ಮಾಡುತ್ತಿದ್ದಾರೆ. ಇವುಗಳ ಉಪಯುಕ್ತತೆಯನ್ನು ಸಾರುವ ವಿಚಾರಗೋಷ್ಠಿಗಳು, ಲೇಖನಗಳು, ಕರಪತ್ರಗಳು, ಗ್ರಂಥಗಳು ಇಂದು ಪ್ರಕಟಗೊಳ್ಳುತ್ತಿರುವುದು ನೈಸರ್ಗಿಕ ಕೃಷಿಯ ಮಹತ್ತ್ವವನ್ನು ಸಾರಿ ಹೇಳುತ್ತವೆ. ಅಷ್ಟೇ ಅಲ್ಲದೆ ನೈಸರ್ಗಿಕ ಕೃಷಿ ತಜ್ಞರು ಪ್ರಪಂಚಾದ್ಯಂತ ಈ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಂಡು ನೈಸರ್ಗಿಕ ಬೆಳೆಗಳ ವಿಧಿ ವಿಧಾನಗಳನ್ನು ಕುರಿತು ಸಂಶೋಧನೆಗಳನ್ನು ನಡೆಸಿ ಶೂನ್ಯ ಬಂಡವಾಳದಿಂದ ಸರಳವಾಗಿ ಉತ್ತಮ ಇಳುವರಿಯನ್ನು ಪಡೆಯಬಹುದೆಂದು ಸಾಧಿಸಿ ತೋರಿಸಿದ್ದಾರೆ. ಪ್ರಕೃತಿಯಲ್ಲಿ ಸಿಗುವ ವಸ್ತುಗಳನ್ನೇ ಬಳಸಿಕೊಂಡು ಬಂಡವಾಳವಿಲ್ಲದೆ ದುಡಿಮೆಯನ್ನೇ ಬಂಡವಾಳವಾಗಿಸಿಕೊಂಡು ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿ ಸಮೃದ್ಧವಾಗಿ ಇಳುವರಿ ಪಡೆಯಬಹುದು.

ಕ್ರಮೇಣ ನೈಸರ್ಗಿಕ ಕೃಷಿಗೆ ಪೂರಕವೆನಿಸುವ ಬೆಳೆಗಳನ್ನು ತೆಗೆಯಲು ಕೆಲವು ಪ್ರಮುಖ ಸಸಿಗಳನ್ನು ನೆಟ್ಟು ಬೆಳೆಸಲು ಆರಂಭಿಸಲಾಯಿತು. ಉದಾಹರಣೆಗೆ ಕಬ್ಬು ಅಥವಾ ಬಾಳೆ ಬೆಳೆಯಲು ನಾಲ್ಕು ಸಾಲಿನ ಅಂತರದ ಮಧ್ಯೆ ಉಪಬೆಳೆಗಳಾದ ಕಡಲೆ, ಅಲಸಂದೆ, ತೊಗರಿ, ಶೇಂಗಾ, ಉದ್ದು ಮುಂತಾದವನ್ನು ಬೆಳೆಯುವುದರ ಮೂಲಕ ಆದಾಯವೂ ಹೆಚ್ಚಾಗಿ, ಹಸುರು ಗೊಬ್ಬರ ದೊರೆತು, ಭೂಮಿಯ ತೇವಾಂಶ ಆರದೆ, ಮುಖ್ಯ ಬೆಳೆಗೆ ನಷ್ಟವಾಗದೆ ಎರೆಹುಳುಗಳೂ ವೃದ್ಧಿಯಾಗಿ ಸಹಜ ಕೃಷಿಗೆ ಮತ್ತಷ್ಟು ಬಲ ಬರುತ್ತದೆ ಎಂಬುದು ಅನುಭವಿ ರೈತರ ಕೃಷಿಕರ ಅಂಬೋಣ.

ಸಹಜ ಕೃಷಿಯನ್ನು ಉತ್ತಮಪಡಿಸಲು ಪರ್ಯಾಯ ಕೃಷಿ ಪದ್ಧತಿಯ ಜೊತೆಗೆ ಸ್ಥಳಾಂತರ ಬೇಸಾಯ ಪದ್ಧತಿ ಮುಖ್ಯವೆಂದು ತಿಳಿದು ಬಂದಿದೆ. 10 ಎಕರೆ ಜಮೀನುಳ್ಳ ರೈತ ದೀರ್ಘಕಾಲ ರಸಗೊಬ್ಬರ ಮತ್ತು ಕೃತಕ ಔಷಧಿಗಳನ್ನು ಬಳಸಿ ಭೂಮಿಯ ಸಾರವನ್ನೆಲ್ಲ ಹಾಳು ಮಾಡಿರುವ ರೋಗರುಜಿನಗಳ ತವರಾದ ಇಂಥ ಭೂಮಿಯನ್ನು ಪುನರ್ ಉಪಯೋಗ ಮಾಡಲು ಅದರ ಫಲವತ್ತತೆಯನ್ನು ಹೆಚ್ಚಿಸಬೇಕಾಗುತ್ತದೆ. ಆದುದರಿಂದ 5 ಎಕರೆ ಭೂಮಿಯನ್ನು ಅಥವಾ ಜಮೀನಿನಲ್ಲಿ ಅರ್ಧ ಭಾಗವನ್ನು ಎರಡು ಮೂರು ವರ್ಷ ಕಾಲ ಯಾವುದೇ ಬೆಳೆ ಮಾಡದೆ ಬೀಳುಬಿಟ್ಟು ಆ ಜಾಗದಲ್ಲಿ ಬೆಳೆಯುವ ಕಳೆಯನ್ನು ಉತ್ತಿ ಮಣ್ಣಿನೊಂದಿಗೆ ಸೇರಿಸುವುದು. ಮಳೆಗಾಲ ಆರಂಭವಾಗುತ್ತಿದ್ದಂತೆ ಅಲ್ಪಾವಧಿ ಬೆಳೆಗಳಾದ ಅಲಸಂದೆ, ಹುರುಳಿ, ಉದ್ದು, ಹೆಸರು ಮುಂತಾದ ದ್ವಿದಳ ಧಾನ್ಯ ಬಿತ್ತಿ ಒಂದು ಹಂತದವರೆಗೆ ಬೆಳೆಸಿ ಉತ್ತು ಬಿಡುತ್ತಾರೆ. ಬೇಸಗೆ ಕಾಲದಲ್ಲಿ ನದೀಪಾತ್ರ ಅಥವಾ ಕೆರೆ ಅಂಗಳದಲ್ಲಿ ದೊರೆಯುವ ಗೋಡು ಮಣ್ಣನ್ನು ತಂದು ಜಮೀನಿನ ಎಲ್ಲ ಭಾಗಗಳಲ್ಲಿ ಹರಡುವುದು. ಹೀಗೆ ಎರಡು ಮೂರು ವರ್ಷಗಳ ಕಾಲ ಮಾಡಿದಲ್ಲಿ ಈ ತನಕ ಬಳಲಿ ಬೆಂಡಾಗಿದ್ದ ಭೂತಾಯಿ ಫಲ ನೀಡಲು ಸಿದ್ಧಳಾಗುತ್ತಾಳೆ. ಸಹಜ ಕೃಷಿಯ ಅತ್ಯಂತ ಯಶಸ್ವಿ ವಿಧಾನಗಳಲ್ಲಿ ಇದೂ ಒಂದು.

**ರೋಗರುಜಿನಗಳ ತಡೆಗಟ್ಟುವಿಕೆ :** ಸಹಜ ಕೃಷಿ ಬೇಸಾಯದಲ್ಲಿ ರೋಗ ರುಜಿನಗಳು ಕಡಿಮೆಯೇ. ಆದರೂ ಬರಬಹುದಾದ ಅಲ್ಪ ಸ್ವಲ್ಪ ರೋಗಗಳಿಗೆ ಅನುಭವಿ ರೈತ ತನ್ನ ಪರಿಸರದಲ್ಲೇ ಸಿಗುವ ವಸ್ತುಗಳನ್ನು ಬಳಸಿಕೊಂಡು ದೇಶೀಯ ಪದ್ಧತಿಯಲ್ಲೇ ಔಷಧಿಯನ್ನು ಕಂಡುಕೊಂಡಿದ್ದಾನೆ. ಒಂದು ಎಕರೆ ಜಮೀನಿಗೆ 10 ಲೀಟರ್ ಗೋಮೂತ್ರ, 10 ಕೆ.ಜಿ. ಸಗಣಿ, ಎರಡು ಕೆ.ಜಿ. ಬೆಲ್ಲ, ಎಣ್ಣೆ ರಹಿತವಾದ ಕಾಳುಗಳಿಂದ ತೆಗೆದ ಎರಡು ಕೆ.ಜಿ. ಹಿಟ್ಟು ಇವೆಲ್ಲವನ್ನು ಒಟ್ಟಿಗೆ ಬೆರೆಸಿ 200 ಲೀಟರ್ ನೀರು ಹಿಡಿಸಬಲ್ಲ ತೊಟ್ಟಿ ಅಥವಾ ಇತರೆ ಯಾವುದೇ ಪರಿಕರದಲ್ಲಿ ತುಂಬಿ ಕಲಸಬೇಕು. ಇದರೊಂದಿಗೆ ಯಾವ ಜಮೀನಿನಲ್ಲಿ ಔಷಧಿಯನ್ನು ಬಳಸಬೇಕೊ ಆ ಜಮೀನಿನ ಹಿಡಿ ಮಣ್ಣನ್ನು ಸ್ವಲ್ಪ ಮಿಶ್ರ ಮಾಡಿ ಚೆನ್ನಾಗಿ ಕಲಕಿ ಒಂದು ವಾರ ಕಾಲ ಬಿಡಬೇಕು. ಅನಂತರ ಒಂದೆರಡು ತಿಂಗಳ ಪೈರಿಗೆ ಸಾಲುಗಳ ಮಧ್ಯೆ ಸಮ ಪ್ರಮಾಣದಲ್ಲಿ ಬಿಡಬೇಕು. ಇಲ್ಲಿ ಎಚ್ಚರಿಕೆ ಬಹುಮುಖ್ಯ. ಗೊಬ್ಬರದ ಸಾಂದ್ರತೆ ಹೆಚ್ಚಾಗದ ಹಾಗೆ ನೋಡಿಕೊಳ್ಳಬೇಕು. ನುರಿತ ದೇಶೀ ಕೃಷಿಕರಿಗೆ ಇದನ್ನು ನೀಡುವ ಪ್ರಮಾಣ ಚೆನ್ನಾಗಿ ತಿಳಿದಿರುತ್ತದೆ.

*ಎಸ್.ವಿ.*

**ಸಾವೆ** ಇದು ಜನಪ್ರಿಯವಾದ ಒಂದು ಕಿರುಧಾನ್ಯ. ಚಾಮೆ, ಸಾಮೆ ಎಂಬುದಾಗಿಯೂ ಕರೆಯುತ್ತಾರೆ. ಮಳೆ ಕಡಿಮೆಯಾದರೂ ಸಾವೆ ಬೆಳೆಯುತ್ತದೆ. ಬರಗಾಲ ಎದುರಿಸುವ ಸಾಮರ್ಥ್ಯವನ್ನು ಹೊಂದಿದೆ. ಶೀಘ್ರವಾಗಿ ಕುಯಿಲಿಗೆ ಬರುತ್ತದೆ. ಫಲವತ್ತಾದ ಮಣ್ಣು ಇರದೇ ಇದ್ದರೂ ಕೂಡ ಹುಲುಸಾಗಿ ಬೆಳೆಯುವ ಸಾಮೆ ರಾಗಿಯ ಜೊತೆ ಮಿಶ್ರ ಬೆಳೆಯಾಗಿಯೂ ಇಲ್ಲವೇ ಸಾಲು ಬೆಳೆಯಾಗಿಯೂ ಬೆಳೆಯಬಹುದು. ನಾಲ್ಕು ಅಡಿ ಎತ್ತರದವರೆಗೂ ಬೆಳೆಯುವ ಬೆಳೆ ಇದಾಗಿದ್ದು ಕಾಳು ಮಾತ್ರ ಚಿಕ್ಕದಾಗಿರುತ್ತದೆ. ಹರಿ, ಕರಿ, ಬಿಳಿ ಸಾಮೆಗಳೆಂದು ಮೂರು ತಳಿಗಳನ್ನು ಕಾಣಬಹುದು. ರಾಗಿಗೆ ಹದಗೊಳಿಸುವ ಹಾಗೆಯೇ ಭೂಮಿಯನ್ನು ಹದಗೊಳಿಸಿ ಸಾಮೆಯನ್ನು ಚೆಲ್ಲಬೇಕು. ಎರಡು ಮೂರು ಸಾರಿ ಮಳೆ

ಬಂದೊಡನೆ ಬೀಜವನ್ನು ಭೂಮಿಗೆ ಹಾಕಬೇಕು. ಹಲುಬೆಯನ್ನು ಹೊಡೆಯಬೇಕು. ಹೆಚ್ಚು ಗೊಬ್ಬರದ ಆವಶ್ಯಕತೆಯಿಲ್ಲ. ಮೂರು ತಿಂಗಳಲ್ಲಿ ಫಸಲು ಬರುತ್ತದೆ. ಇದರ ಹುಲ್ಲು ಹಸುಗಳಿಗೆ ಒಳ್ಳೆಯ ಮೇವು. ಸಾಮೆ ಅಕ್ಕಿಯ ಅನ್ನ ಬಲುರುಚಿಯಾಗಿರುತ್ತದೆ. ಈ ಧಾನ್ಯ ಕೀಟ ರೋಗಬಾಧೆಯಿಂದ ಮುಕ್ತವಾದುದು.



ಹಲವಾರು ತಳಿಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೆಳೆಯುವ ರೂಢಿಯಿದೆ. ಮಲ್ಲಿಗೆ ಸಾವೆಯನ್ನು ಕಲಘಟಗಿ ಮತ್ತು ಹುಬ್ಬಳ್ಳಿ ತಾಲೂಕಿನಲ್ಲಿ ಬೆಳೆಯುತ್ತಾರೆ. ಕರಿಸಾವೆ ಕೊಟ್ಟೂರು ಹಾಗೂ ಹಡಗಲಿ ತಾಲೂಕಿನಲ್ಲಿ ಬೆಳೆಯುತ್ತಾರೆ. ಈ ಬೆಳೆಗೆ ಮಸಾರಿ ಮಣ್ಣು ಉಪಯುಕ್ತ. ಹೆಜ್ಜಾಮೆ ಎಂಬ ಸಾವೆ ತಳಿಯನ್ನು ಕನಕಪುರ ಭಾಗದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಎತ್ತರವಾಗಿ ಬೆಳೆಯುವ ತಳಿ. ಉದ್ದವಾದ ತೆನೆಗಳು. ಇದು ನಿಧಾನವಾಗಿ ಕುಯಿಲಿಗೆ ಬರುತ್ತದೆ. ರಾಗಿಯ ಮಿಶ್ರ ಬೆಳೆಯಾಗಿಯೂ ಬೆಳೆಯುವುದು ರೂಢಿ. ಕರಿಸಾಮೆಯು ಐದು ತಿಂಗಳ ಅವಧಿಯಲ್ಲಿ ಬರುವ ತಳಿಯಾಗಿದೆ. ಕಾಳು ಕಪ್ಪು ಬಣ್ಣದಿಂದ ಕೂಡಿರುತ್ತದೆ. ಮೂರು ತಿಂಗಳ ಸಾಮೆ ಬೇಗ ಕುಯಿಲಿಗೆ ಬರುವ ಗಿಡ್ಡ ತಳಿ. ಮುಂಗಾರಿನ ಸಾಮೆ ಮೂರು ತಿಂಗಳ ತಳಿ. ಕಾಳುಗಳು ನುಣುಪಾಗಿದ್ದು, ಗಿಡ್ಡ ತಳಿ. ಪನಿವೆರಗು ಇಬ್ಬನಿಗೆ ಬೆಳೆಯುವ ಸಾವೆಗಿಂತ ದೊಡ್ಡದಾದ ಹೊಳೆಯುವ ಕಾಳಿನ ತಳಿ. ಬಂಗಾರ ಪೇಟೆ, ಚಿಂತಾಮಣಿ, ಕೆ.ಜಿ.ಎಫ್. ಭಾಗದ ಮಳೆ ಆಶ್ರಿತ ಪ್ರದೇಶಗಳಲ್ಲಿ ಪ್ರಸ್ತುತ ಈಗಲೂ ಇದನ್ನು ಬೆಳೆಯುತ್ತಿದ್ದಾರೆ. ಇವತ್ತಿಗೂ ಈ ಧಾನ್ಯ ಉಳಿದು ಬಂದಿದೆ.

***ಕೆ.ಟಿ.ಕೆ.***

**ಸಿಹಿ ಗೆಣಸು** ಸಿಹಿ ಗೆಣಸಿನ ತವರು ದಕ್ಷಿಣ ಅಮೆರಿಕ ಎಂದು ಬಹಳ ಕಾಲದಿಂದ ಅಂಗೀಕೃತವಾದ ಅಭಿಪ್ರಾಯ. ಆದರೆ ಇತ್ತೀಚಿನ ಸಂಶೋಧನೆಗಳು ಆಫ್ರಿಕಾಖಂಡ ಅದರ ಉಗಮ ಸ್ಥಾನವೆನ್ನುತ್ತಿದೆ. ಕೊಲಂಬಸ್‌ನು ಅಮೆರಿಕಾವನ್ನು ಅನ್ವೇಷಿಸುವುದಕ್ಕೆ ಮೊದಲೇ ಸಿಹಿ ಗೆಣಸು ಆಫ್ರಿಕಾದಿಂದ ದಕ್ಷಿಣ ಅಮೆರಿಕಾ ಸೇರಿ ಅಲ್ಲಿ ಬೇರು ಬಿಟ್ಟಿತ್ತು. ಅಲ್ಲಿಯ ಜನರ ಮುಖ್ಯ ಆಹಾರ ವಸ್ತುಗಳಲ್ಲೊಂದಾಗಿತ್ತು. ಕೊಲಂಬಸ್‌ನೊಂದಿಗೆ ಯೂರೋಪ್‌ಗೆ ಬಂದಿತು. ಪೋರ್ಚುಗೀಸರು 18ನೇಯ ಶತಮಾನದಲ್ಲಿ ಇದನ್ನು ಭಾರತಕ್ಕೆ ತಂದರೆಂದು ತಿಳಿದುಬರುತ್ತದೆ. ತೆಲುಗು ಭಾಷೆಯಲ್ಲಿ ಗೆಣಸು ಗೆಡ್ಡೆ, ತಮಿಳಿನಲ್ಲಿ ವೆಲ್ಲರಿ ಕಿಳಂಗು, ಹಿಂದಿಯಲ್ಲಿ ಮೀಟಾ ಆಲು ಎನ್ನುತ್ತಾರೆ.

**ಮಣ್ಣು ಮತ್ತು ಹವಾಗುಣ :** ಗೆಣಸನ್ನು ಬೆಳೆಸಲು ಫಲವತ್ತಾದ ಮರಳು ಗೋಡು ಅಥವಾ ಜಂಬುಗೋಡು ಮಣ್ಣುಗಳು ಒಳ್ಳೆಯದು. ಜೇಡಿ ಅಂಶ ಹೆಚ್ಚಿರುವ ಮಣ್ಣುಗಳು ಒಣಗಿ ಗಟ್ಟಿಯಾಗುವುದರಿಂದ ಗೆಡ್ಡೆ ಬೆಳವಣಿಗೆ ಕುಂಠಿತವಾಗುತ್ತದೆ. ಬರೀ ಮರಳು ಮಣ್ಣಾದಲ್ಲಿ ಗೆಡ್ಡೆಗಳು ಉದ್ದವಾಗಿ ಪೆನ್ಸಿಲ್‌ನಂತಾಗುತ್ತವೆ. ಬಿಸಿ ಹವಾಗುಣ ಬಯಸುವ ಈ ಬೆಳೆ ಹಿಮಪಾತಕ್ಕೆ ತುತ್ತಾಗುತ್ತದೆ. ತಂಪಾದ ರಾತ್ರಿ ಮತ್ತು ಮೋಡ ಕವಿದ ವಾತಾವರಣ ಈ ಬೆಳೆಗೆ ಅನುಕೂಲವಲ್ಲ. ಕನಿಷ್ಠ ನಾಲ್ಕು ತಿಂಗಳಾದರೂ ಇದಕ್ಕೆ ಬಿಸಿ ವಾತಾವರಣ ಬೇಕು. ಬೆಳೆಯ ಪ್ರಾಥಮಿಕ ಹಂತದಲ್ಲಿ ನೀರಿಗೆ ಬರ ಇದ್ದರೆ ಗೆಡ್ಡೆ ಬೆಳವಣಿಗೆ ಕುಂಠಿತವಾಗುತ್ತದೆ. ಹಾಗೆಯೇ ಹೆಚ್ಚು ಮಳೆ ಮತ್ತು ಹೆಚ್ಚು ತಾಪಮಾನವಾದಂತೆ ಬಳ್ಳಿ ಬೆಳವಣಿಗೆಯನ್ನು ಹೆಚ್ಚಿಸಿ ಗೆಡ್ಡೆ ಇಳುವರಿ ಕಡಿಮೆ ಮಾಡುತ್ತದೆ. ಮಳೆಯಾಶ್ರಿತ ಬೆಳೆಯ ನಾಟಿಗೆ ಜೂನ್-ಜುಲೈ ತಿಂಗಳು ಸರಿಯಾದುದು. ಎರಡನೆಯ ಬೆಳೆಗೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ನಾಟಿ ಮಾಡುತ್ತಾರೆ. ನೀರಾವರಿ ಬೆಳೆಯನ್ನು ಅಕ್ಟೋಬರ್ - ಡಿಸೆಂಬರ್‌ನಲ್ಲಿ ನಾಟಿ ಮಾಡಬಹುದು.

**ಬಿತ್ತನೆ :** ಸಾಮಾನ್ಯವಾಗಿ ಬಳ್ಳಿಯ ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡುವರು. ನಾಟಿಗೆ ಬಳಸುವ ಕಾಂಡದ ತುಂಡುಗಳು ನಾಲ್ಕು ಕಣ್ಣುಗಳನ್ನು ಹೊಂದಿರಬೇಕು. ತುಂಡಿನ ಉದ್ದ ಅಂತರ ಕಣ್ಣಿನ ಸಂಖ್ಯೆ ಅವಲಂಬಿಸಿರುತ್ತದೆ. ನಾಟಿಗೆ ಎಳೆಯ ಬಳ್ಳಿಯನ್ನು ಉಪಯೋಗಿಸಿದರೆ ಬೇರು ಹೆಚ್ಚಾಗುತ್ತದೆ. ಒಂದು ಎಕರೆಗೆ ನಾಟಿ ಮಾಡಲು ಸು. 21. 750



ಬಳ್ಳಿಯ ತುಂಡುಗಳು ಬೇಕು. ಭೂಮಿಯನ್ನು ಉತ್ತು, ಕುಂಟೆ ಹಾಯಿಸಿ ಎರಡು ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಬೇಕು. ಎಕರೆಗೆ ಹತ್ತು ಟನ್ ಕೊಟ್ಟಿಗೆ ಗೊಬ್ಬರ ಜೊತೆಗೆ ಸಾವಯವ ಗೊಬ್ಬರ ಬೆರೆಸಿ ಅರ್ಧ ಭಾಗವನ್ನು ಮತ್ತು ನಾಟಿಮಾಡುವಾಗ ಇನ್ನುಳಿದ ಗೊಬ್ಬರವನ್ನು ಐದಾರು

ವಾರಗಳಲ್ಲಿ ಮೇಲು ಗೊಬ್ಬರವಾಗಿ ಕೊಡಬೇಕು. ನಿರ್ಮಿಸಿದ ಸಾಲುಗಳಲ್ಲಿ ಒಂದು ಅಡಿ ಅಂತರದಲ್ಲಿ ದೋಣಿ ಸಾಲುಗಳ ಪಕ್ಕದಲ್ಲಿ ಕಾಂಡದ ತುಂಡುಗಳ ಮಧ್ಯದ ಎರಡು ಕಣ್ಣುಗಳನ್ನು ಮಣ್ಣಿನಲ್ಲಿ ಹೂತು ಹೊರಗೆ ಎರಡು ಕಣ್ಣುಗಳನ್ನು ಬಿಡಬೇಕು. ನಾಟಿ ಅನಂತರ ಮಣ್ಣನ್ನು ಬಿಗಿಯಾಗಿ ಒತ್ತಿ ನೀರು ಹಾಯಿಸಬೇಕು. ಬಳ್ಳಿ ಬೆಳೆದು ದೊಡ್ಡದಾದಂತೆಲ್ಲಾ ಹಂಬಿನ ಮೇಲೆ ಅಲ್ಲಲ್ಲಿ ಮಣ್ಣು ಹಾಕಿ ಅಲ್ಲಿಯೇ ಹೊಸ ಬೇರು ಬಿಟ್ಟು ಗೆಡ್ಡೆ ಬಿಡುವಂತೆ ಮಾಡಬಹುದು. ಮಳೆಯಾಶ್ರಯದ ಪ್ರದೇಶದಲ್ಲೂ ಇದನ್ನು ಬೆಳೆಯಬಹುದು. ನಾಟಿ ಮಾಡಿದ 40 ದಿನಗಳ ಅನಂತರ ಹೆಚ್ಚು ನೀರನ್ನು ಬಯಸುತ್ತದೆ. ಮಣ್ಣು ಮತ್ತು ಹವಾಗುಣಕ್ಕೆ ಅನುಗುಣವಾಗಿ 7-8 ದಿನಗಳಿಗೊಮ್ಮೆ ನೀರು ಕೊಡಬೇಕು.

**ರೋಗಗಳು :** ಸಸ್ಯ ಬೆಳವಣಿಗೆಯ ಕಾಲದಲ್ಲಿ ಗೆಣಸು ಅನೇಕ ರೋಗಗಳಿಗೆ ತುತ್ತಾಗುತ್ತದೆ. ಸೊರಗು ರೋಗ (ಕಾಂಡ ಕೊಳೆ ರೋಗ) ಮತ್ತು ಕಪ್ಪು ಕೊಳೆ ರೋಗಗಳು ಈ ಬೆಳೆಯನ್ನು ಹೆಚ್ಚಾಗಿ ಕಾಡುತ್ತವೆ. ಸೊರಗು ರೋಗ ಬಂದಾಗ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ, ವಾಹಿನಿ ಕುಂಚಗಳು ವಿವರ್ಣವಾಗಿ ಗಿಡ ಸಾಯುತ್ತದೆ. ಆಕಸ್ಮಿಕವಾಗಿ ಕ್ರಮೇಣ ರೋಗದಿಂದ ಬದುಕುಳಿದರೂ ಬೆಳವಣಿಗೆ ಕುಂಠಿತವಾಗಿ ವಾಹಿನಿ ಕುಂಚಗಳು ಕಪ್ಪು ಬಣ್ಣ ತಾಳುತ್ತವೆ. ಈ ರೋಗಕಾರಕ ಶಿಲೀಂಧ್ರ ಗೆಡ್ಡೆಗಳ ಮೇಲೆ ವೃತ್ತಾಕಾರದ ಚುಕ್ಕೆಗಳ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಇದನ್ನು ನಿಯಂತ್ರಿಸಲು ಸ್ವಚ್ಛವಾದ ಮತ್ತು ಆರೋಗ್ಯವಂಥ ಕಾಂಡದ ತುಂಡುಗಳನ್ನು ನಾಟಿಗೆ ಬಳಸಬೇಕು. ನೀರಿಗೆ 1 ಕಿಲೋ.ಗ್ರಾಂ.ನಂತೆ ಎಲೆಗಳ ತಳ ಭಾಗಕ್ಕೆ ಸಿಂಪಡಿಸಿರಬೇಕು. ದಾಸ್ತಾನು ಮಾಡಿದ ಗೆಡ್ಡೆಗಳನ್ನು ಮೀಥೈಲ್ ಬ್ರೋಮೈಡ್ ಉಪಯೋಗಿಸಿ ಸ್ವಚ್ಛಗೊಳಿಸಬಹುದು.

ಕಪ್ಪು ಕೊಳೆ ರೋಗವು ಸಾಮಾನ್ಯವಾಗಿ ಉಗ್ರಾಣದಲ್ಲಿ ಕಾಣಿಸಿಕೊಳ್ಳುವ ರೋಗವಾಗಿದೆ. ಈ ರೋಗ ತಗುಲಿದ ಗೆಡ್ಡೆಗಳು ಇತರೆ ಗೆಣಸಿಗಿಂತ ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಬೇಯಿಸಿದಾಗ ಅಸಹ್ಯವಾದ ಕಹಿ ರುಚಿಯನ್ನು ಪಡೆದುಕೊಳ್ಳುತ್ತವೆ. ಇದರ ನಿಯಂತ್ರಣಕ್ಕೂ ಸೊರುಕು ರೋಗ ನಿವಾರಣೆಗೆ ಅನುಸರಿಸಿದ ಕ್ರಮಗಳನ್ನೇ ಅನುಸರಿಸಬೇಕು.

**ಇಳುವರಿ :** ಗೆಣಸಿನಲ್ಲಿ ಕೊಯ್ಲಿನ ಸಮಯ ತಳಿಗಳನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ 120-180 ದಿನಗಳ ಕಾಲಾವಧಿಯನ್ನು ತೆಗೆದು ಕೊಳ್ಳುತ್ತದೆ. ಕೊಯ್ಲಿಗೆ ಮುಂಚೆ ಬಳ್ಳಿಗಳನ್ನು ತೆಗೆದು ಗೆಡ್ಡೆಗೆ ಹಾನಿಯಾಗದಂತೆ ಜಾಗರೂಕತೆಯಿಂದ ಅಗೆದು ತೆಗೆಯಬೇಕು. ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರುವಂತಾದಾಗ ಮತ್ತು ಗೆಡ್ಡೆಯನ್ನು ಕತ್ತರಿಸಿದಾಗ ಅದರಿಂದ ಒಸರುವ ಹಾಲು ಕಂದುಬಣ್ಣಕ್ಕೆ ತಿರುಗುವಂತೆ ಇರಬೇಕು. ಗೆಡ್ಡೆಯ ಇಳುವರಿ ತಳಿ, ಋತುಮಾನ, ಮಣ್ಣಿನ ವಿಧ ಮತ್ತು ಮಣ್ಣಿನ ಫಲವತ್ತತೆಯನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಪ್ರತಿ ಎಕರೆಗೆ 5 ರಿಂದ 6 ಟನ್ ಇಳುವರಿ ಸಿಗುವುದು.

**ತಳಿಗಳು :** ಗೆಣಸಿನಲ್ಲಿ ಅನೇಕ ತಳಿಗಳಿವೆ. ವೈಜ್ಞಾನಿಕವಾಗಿ ಅವನ್ನು

1. ಹೊಸೂರು ರೆಡ್ ಮತ್ತು ಹೊಸೂರು ಗ್ರೀನ್ : ಇವೆರಡೂ ಪ್ರಾದೇಶಿಕ ತಳಿಗಳು.

2. ವಿ. 6 (V-6) ಎಂಬ ತಳಿ ಇತ್ತೀಚೆಗೆ ಕರ್ನಾಟಕವನ್ನು ಪ್ರವೇಶಿಸಿದೆ. ಈ ತಳಿಯ ಬೇರುಗಳು ಕೆಂಪು ಬಣ್ಣವಿದ್ದು, ತಿರುಳು ಕೆನೆ ಬಣ್ಣವನ್ನು ಹೊಂದಿರುತ್ತದೆ. ಇದರ ಕಾಲಾವಧಿ 5 ತಿಂಗಳು.

3. ವಿ. 12 (V-12) ಇದೂ ಕೂಡ ಇತ್ತಿಚೀಗಿನ ತಳಿ. ಇದರ ಬಣ್ಣ ಕಂದು, ನಾಲ್ಕು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ.

4. ಹೆಚ್. 41 ಮತ್ತು ಹೆಚ್ 42 (H-41 & H-42) : ತಿರುವನಂತಪುರದ ಸೆಂಟ್ರಲ್ ಟ್ಯೂಬರ್ ಕ್ರಾಪ್ ರೀಸರ್ಚ್ ಇನ್‌ಸ್ಟಿಟ್ಯೂಟ್ (ಸಿ.ಟಿ.ಆರ್.ಐ.)

5. ಪೂಸಾ ಸಫೇದ್ : ಇದು ತೈವಾನ್ ಪ್ರದೇಶದಿಂದ ಭಾರತಕ್ಕೆ ಪ್ರವೇಶಿಸಿದ ತಳಿ. ಬಿಳಿ ಬಣ್ಣ ಹೊಂದಿದ್ದು ಉತ್ತಮ ಗುಣಮಟ್ಟದ ಮಧ್ಯಮ ಗಾತ್ರದ ಅಧಿಕ ಇಳುವರಿ ಕೊಡುವಂಥದ್ದು.

6. ಪೂಸಾಲಾಲ್ : ಇದು ಜಪಾನಿನ 'ನೋರನ್' ತಳಿಯಿಂದ ಬಂದಿರುವಂಥದು. ಗೆಡ್ಡೆಗಳು ಮಧ್ಯಮಗಾತ್ರ. ಮಧ್ಯದಲ್ಲಿ ದಪ್ಪ ಗೆಡ್ಡೆಯ ಬಣ್ಣ ಕೆಂಪು, ಬೇಯಿಸಿದ ತಿರುಳು ಬಿಳುಪು, ಸಂಗ್ರಹಯೋಗ್ಯ.

7. ಪೂಸಾತುನ್ಹೇರಿ : ಈ ತಳಿ ಅಮೆರಿಕಾದಿಂದ ಬಂದಿರುವಂಥದು. ತಿರುಳಿನ ಬಣ್ಣ ತಿಳಿ ಕಿತ್ತಳೆ. ಇದರಲ್ಲಿ ಹೆಚ್ಚು ಪ್ರಮಾಣದ ಕೆರೋಟಿನ್ ಅಂಶ ಇರುತ್ತದೆ.

ಗೆಣಸಿನಲ್ಲಿ ಬಿಳುಪು ಮತ್ತು ಕೆಂಪು ಜಾತಿಗಳಿವೆ: ಗೆಣಸು ಹೆಚ್ಚಿನ ಪಿಷ್ಟ ಹೊಂದಿರುವುದರಿಂದ ಮಧುಮೇಹಿ ರೋಗಗಳು ವಾತ ರೋಗಿಗಳು ಮತ್ತು ಸ್ಥೂಲ ಕಾಯದವರಿಗೆ ಹಿತಕರವಲ್ಲ, ಇದರಿಂದ ಅನೇಕ ಬಗೆಯ ಖಾದ್ಯ ಪದಾರ್ಥಗಳನ್ನು ತಯಾರಿಸುತ್ತಾರೆ. ರುಚಿ ಸಿಹಿಯಾಗಿರುವುದರಿಂದ ಸುಟ್ಟು ಅಥವಾ ಬೇಯಿಸಿ ತಿನ್ನುತ್ತಾರೆ. ಹುಳಿ ಪಲ್ಯಗಳನ್ನು ಮಾಡಿ ಉಪಯೋಗಿಸುತ್ತಾರೆ.

*ಎನ್. ಆರ್.*

**ಸೀಗೆಕಾಯಿ (ಸೋಪ್ ನಟ್)** ವೈಜ್ಞಾನಿಕವಾಗಿ ಇದನ್ನು ಅಕಾಸಿಯ ರುಗತ ಎಂದು ಕರೆಯುತ್ತಾರೆ. ಕನ್ನಡದಲ್ಲಿ ಸೀಗೆಕಾಯಿ ಗಿಡ, ಸೀಗೆಕಾಯಿ ಬಳ್ಳಿ, ಸೀಗೆಮೆಳೆ ಎಂದೆಲ್ಲಾ ಕರೆಯುತ್ತಾರೆ. ಮುಳ್ಳುಬಳ್ಳಿಯ ಜಾತಿಗೆ ಸೇರುವ ಈ ಗಿಡ ದಕ್ಷಿಣ ಭಾರತದ ಕಾಡುಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತದೆ. ತನ್ನಷ್ಟಕ್ಕೆ ತಾನೆ ಹುಟ್ಟಿ, ಬೆಳೆಯುವ ಈ ಗಿಡ ಆಶ್ರಯಕ್ಕೆ ಯಾವುದಾದರೂ ಒಂದು ಮರ ಸಿಕ್ಕಿದರೆ ಆಕ್ಟೋಪಸ್ ರೀತಿ ಆವರಿಸಿಕೊಳ್ಳುತ್ತದೆ. ಎಲೆ ಕಾಂಡಗಳಲ್ಲೆಲ್ಲಾ ಮುಳ್ಳು ತುಂಬಿಕೊಂಡು ಪೊದೆಯಂತೆ ಬೆಳೆಯುವ ಈ ಗಿಡವನ್ನು ಕುರಿತು 'ಸೀಗೆ ಮೆಳೆಯಲ್ಲಿ ಸಿಕ್ಕಾಕೊಂಡ ಕರಡಿಯಂಗೆ' ಎಂಬ ಗಾದೆ ಮಾತಿದೆ. ಅಂದರೆ ಇದರ ಪೊದೆಯಲ್ಲಿ ಸಿಕ್ಕಿಕೊಂಡರೆ ಮುಳ್ಳುಗಳಿಂದ ಬಿಡಿಸಿಕೊಳ್ಳುವುದು ಬಹಳ ಕಷ್ಟ. ಆದುದರಿಂದ ಅನೇಕ ಸಣ್ಣಪುಟ್ಟ ಪ್ರಾಣಿ ಪಕ್ಷಿಗಳಿಗೆ ಇದು ರಕ್ಷಣೆ ಒದಗಿಸುತ್ತದೆ.

ಸೀಗೆ ಮಾರ್ಚ್ ತಿಂಗಳಲ್ಲಿ ಹೂ ಬಿಡುತ್ತದೆ. ಹೂ ಬಿಳಿಯಬಣ್ಣದ ಗೊಂಚಲು ಗೊಂಚಲು, ಹೂವಿನ ಬುಡ ಕೆಂಪುಬಣ್ಣ ಹೊಂದಿರುತ್ತದೆ. ಹೂ ನೋಡಲು ಸುಂದರವಾಗಿದ್ದು, ಸುವಾಸನಾಭರಿತವಾಗಿದೆ ಹಾಗಾಗಿ

ಜೇನುಹುಳುಗಳನ್ನು ಆಕರ್ಷಿಸುತ್ತದೆ. ಸೀಗೆ ಬಯಲುಸೀಮೆಯ ಬೇಲಿಗಳಲ್ಲೂ ಹುಟ್ಟಿಕೊಂಡು ಮರವನ್ನು ಆಶ್ರಯಿಸಿ ಬೆಳೆಯುತ್ತದೆ. ಒಂದು ಬಾರಿ ತಳ ಊರಿದರೆ ಸಾಕು ತನಗೆ ಬೇಕಾದ ನೀರು ಗೊಬ್ಬರವನ್ನು ತಾನೇ ಪಡೆದುಕೊಂಡು ಬೆಳೆದು, ನಾಲ್ಕೈದು ವರ್ಷಗಳಲ್ಲಿ ಫಲ ಬಿಡಲು ಪ್ರಾರಂಭಿಸುತ್ತದೆ. 50 ರಿಂದ 60 ವರ್ಷದವರೆಗೆ ಜೀವಂತವಾಗಿರುತ್ತದೆ. ನಿರಂತರವಾಗಿ ಫಸಲು ಕೊಡುತ್ತದೆ. ಒಂದು ವರ್ಷ ಹೆಚ್ಚು ಫಲ ನೀಡಿದರೆ ಮತ್ತೊಂದು ವರ್ಷ ಸ್ವಲ್ಪ ಕಡಿಮೆಯಾಗುತ್ತದೆ. ಒಣಗಿ ಉದುರಿದ ಅದರ ದಂಟು, ಎಲೆಗಳು ಮಳೆಬಿದ್ದಾಗ ಕೊಳೆತು ಗೊಬ್ಬರವಾಗುತ್ತವೆ. ಇದಕ್ಕೆ ಯಾವುದೇ ರೋಗಬಾಧೆಯಿಲ್ಲ, ಗೊಬ್ಬರದ ಅವಶ್ಯಕತೆಯಿಲ್ಲ, ನೀರು ಕೂಡ ಯಥೇಚ್ಛವಾಗೇನು ಬೇಕಿಲ್ಲ. ಮಳೆ ಆಶ್ರಯದಲ್ಲಿಯೇ ಸಮೃದ್ಧವಾಗಿ ಬೆಳೆಯುತ್ತದೆ. ಇದೊಂದು ಬಗೆಯ ಶೂನ್ಯ ಬಂಡವಾಳ ಕೃಷಿ ಬೇಸಾಯವಾಗಿದೆ. ತುಂಬಾ ಪ್ರಯೋಜನಕಾರಿಯಾದ ಗಿಡವಾದರೂ ಇದುವರೆಗೆ ಇದನ್ನು ಸಾಂಪ್ರದಾಯಿಕವಾಗಿ ಕೃಷಿ ಮಾಡಿ ಬೆಳೆಸುವ ಪದ್ಧತಿಯಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ



ಮಾರುಕಟ್ಟೆಯಲ್ಲಿ ಸೀಗೆಪುಡಿಯ ಬೆಲೆ ದಿನೇ ದಿನೇ ಗಗನಕ್ಕೇರುತ್ತಿರುವ ಹಿನ್ನೆಲೆಯಲ್ಲಿ, ಇದೂ ಕೂಡ ಲಾಭದಾಯಕ ವಾಣಿಜ್ಯ ಬೆಳೆಯಾಗಿ ಪರಿಣಮಿಸಿದ್ದು, ಅನೇಕ ಪ್ರಗತಿಪರ ಕೃಷಿಕರ ಗಮನ ಸೆಳೆದಿದೆ. ಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳಲ್ಲಿ ಇದರ ಕೃಷಿ ಪ್ರಾರಂಭವಾಗಿದೆ. ಮಳೆ ಆಶ್ರಯದ ಬಯಲುಸೀಮೆ ಪ್ರದೇಶದಲ್ಲಿ ಕೆಲವು ರೈತರು ಜಮೀನಿನ ಸುತ್ತ ಬೇಲಿಯಂತೆ ನೆಟ್ಟು, ಅದರ ಕೆಳಗೆ ಸೀಗೆಬಳ್ಳಿಯನ್ನು ಬೆಳೆಸುವರು. ಕೃಷಿಗೆ ಯೋಗ್ಯವಲ್ಲದ ಹಳ್ಳ ಹಾಗೂ ಕಾಲುವೆ ಬದುಗಳ ಮೇಲೆ ಸಸಿನೆಟ್ಟು, ಸೀಗೆಬಳ್ಳಿ ಬೆಳೆಸುತ್ತಿದ್ದಾರೆ. ಇದರಿಂದ ಬೇಲಿಗಳಲ್ಲಿ ಯಾವ್ಯಾವುದೋ ಬಳ್ಳಿ ಬೆಳೆಯುವ ಬದಲು ಸೀಗೆ ಮೆಳೆ ಇದ್ದರೆ ಸೀಗೆಬಳ್ಳಿಯ ನೆಪದಲ್ಲಿ ಒಂದು ಮರ ಬೆಳೆಸಿದಂತೆ ಆಗುತ್ತದೆ. ಆದಾಯದ ಜೊತೆ 'ಮರಬೆಳೆಸಿ ಪರಿಸರ ಉಳಿಸಿದಂತೆ'ಯೂ ಆಗುತ್ತದೆ. ಸೀಗೆಬಳ್ಳಿ ಕೃಷಿ ಬಹಳ ಸುಲಭವಾಗಿದೆ. ಬಳ್ಳಿಯಲ್ಲೇ ಹಣ್ಣಾಗಿ ಉದುರಿದ ಕಾಯಿಂದ ಬೀಜಗಳನ್ನು ಬೇರ್ಪಡಿಸಿ ಒಣಗಿಸಿ ಮಣ್ಣಿನಲ್ಲಿ ಹಾಕಿದರೆ ಮೊಳಕೆಯೊಡೆದು ಸಸಿಗಳಾಗುತ್ತವೆ. ಅವುಗಳನ್ನು ಮರದ ಬುಡದಲ್ಲಿನೆಟ್ಟು ಸ್ವಲ್ಪ ದಿನ ಹಾರೈಕೆ ಮಾಡಿದರೆ ಮುಗಿಯಿತು, ಕೀಟಬಾಧೆಯೇನಾದರೂ ಬಂದರೆ ಒಲೆ ಬೂದಿಯನ್ನು ಸಿಂಪಡಿಸಿದರೆ ನಿವಾರಣೆಯಾಗುತ್ತದೆ.

**ಉಪಯೋಗ:** ಇದು ಪ್ರಾಚೀನ ಕಾಲದಿಂದಲೂ ಸಾಂಪ್ರದಾಯಿಕವಾಗಿ ತಲೆಕೂದಲನ್ನು ಸ್ವಚ್ಛಗೊಳಿಸಲು ಬಳಸುವ ಉತ್ತಮ ವಸ್ತುವಾಗಿದ್ದು, ರಾಸಾಯನಿಕ ಮುಕ್ತವಾಗಿದೆ. ತಲೆಕೂದಲಿನ ಬುಡಕ್ಕಾಗಲಿ, ತಲೆಬುರುಡೆಯ ಚರ್ಮಕ್ಕಾಗಲಿ ಯಾವುದೇ ಹಾನಿ ಮಾಡುವುದಿಲ್ಲ. ಕಾಯಿ ಬಲಿತಾಗ ಎಣ್ಣೆಕೆಂಪು ಬಣ್ಣಕ್ಕೆ ತಿರುಗುತ್ತದೆ. ಹೆಚ್ಚು ಕಡಿಮೆ ಹುಣಿಸೇ ಹಣ್ಣಿನ ಆಕಾರದಲ್ಲಿದ್ದು, ಸ್ವಲ್ಪ ತೆಳುವಾಗಿರುತ್ತದೆ. 10 ರಿಂದ 15 ಬೀಜಗಳಿಂದ ಕೂಡಿದ್ದು, ಮುರಿದರೆ ಒಂದೊಂದು ಬೀಜದ ಬಳಿ ಒಂದೊಂದು ತುಂಡಾಗುತ್ತದೆ. ಇದರ ಬೀಜವೂ ಹುಣಿಸೇ ಬೀಜದಂತೆ ಕಪ್ಪಾಗಿದ್ದು ಸಣ್ಣದಾಗಿರುತ್ತದೆ. ಕಾಯಿ ಗಿಡದಲ್ಲೇ ಹಣ್ಣಾಗಿ, ಒಣಗಿ ಕೆಳಗೆ ಉದುರುತ್ತವೆ ಅಥವಾ ಒಂದು ಕೊಕ್ಕೆ ಜವಳಿಯನ್ನು ತಂದು ಅಲ್ಲಾಡಿಸಿದರೆ ಉದುರುತ್ತವೆ. ಅವುಗಳನ್ನು ಆಯ್ದುತಂದು ಚೆನ್ನಾಗಿ ಒಣಗಿಸಿ ಪುಡಿಮಾಡಿ ಡಬ್ಬದಲ್ಲಿ ತುಂಬಿಸಿಟ್ಟು, ನೀರು ತಾಕದಂತೆ ಎಚ್ಚರವಹಿಸಿದರೆ ಕೆಡುವುದಿಲ್ಲ. ಹುಳುಬಾಧೆಯಿಲ್ಲ, ವರ್ಷಗಟ್ಟಲೆ ಬಾಳಿಕೆ ಬರುತ್ತದೆ. ಇದು ತುಂಬಾ ಘಾಟು ವಾಸನೆಯಿಂದ ಕೂಡಿದ್ದು, ಬಳಸುವಾಗ ಸ್ವಲ್ಪ ಪ್ರಮಾಣದಲ್ಲಿ ಚಿಗುರಿಪುಡಿ ಅಥವಾ ಸುಜ್ಜಲಿಪುಡಿಯನ್ನು ಬೆರೆಸಿ ಬಳಸಿದರೆ ಘಾಟು ಕಡಿಮೆಯಾಗುತ್ತದೆ. ಪ್ರಾಚೀನ ಕಾಲದಿಂದಲೂ ಇದೊಂದು ಆಯುರ್ವೇದಿಕ್ ಔಷಧೀಯ ಗಿಡವಾಗಿ ಬಳಸಲ್ಪಡುತ್ತಿದ್ದು, ಇಂದಿಗೂ ಇದರ ಎಲೆಗಳನ್ನು ತಲೆಹೊಟ್ಟು ನಿರೋಧಕವಾಗಿ ಬಳಸುತ್ತಾರೆ. ವಾಣಿಜ್ಯ ಬಳಕೆಯಲ್ಲಿ ಸೀಗೆಕಾಯಿ ಜೊತೆ ಒಣಗಿದ ಬಳ್ಳಿಯ ಚಕ್ಕೆಯನ್ನು, ಎಲೆಗಳನ್ನು ಪುಡಿಮಾಡಿ ಸೀಗೆಕಾಯಿ ಪೌಡರ್ ಮತ್ತು ಶಾಂಪೂ ತಯಾರಿಸಲು ಬಳಸುತ್ತಾರೆ. ಇದರ ಚಕ್ಕೆಯಲ್ಲಿ 'ಸಾಪೊನಿನ್ಸ್' ಎಂಬ ರಾಸಾಯನಿಕ ವಸ್ತುವಿದ್ದು ಅದು ನೊರೆಬರಿಸುವ ಮಧ್ಯವರ್ತಿಯಾಗಿ ಕೆಲಸ ಮಾಡುತ್ತದೆ.

ಸಂಬಂಧಗಳ ಬಗ್ಗೆ ಮಾತಾಡುವಾಗ "ಅವರಿಬ್ಬರೂ ಎಣ್ಣೆ - ಸೀಗೆಕಾಯಿ ಇದ್ದ ಹಾಗೆ" ಎಂಬ ಮಾತು ಬಳಸುತ್ತಾರೆ. ಈ ನುಡಿಗಟ್ಟು ಪರೋಕ್ಷವಾಗಿ ಸೀಗೆಪುಡಿಯ ಎಣ್ಣೆ ತೊಳೆಯುವ ಗುಣವನ್ನು ಹೇಳುತ್ತದೆ. ಸೀಗೆಪುಡಿಯಲ್ಲಿ ಎಣ್ಣೆ ಜಿಡ್ಡು, ಕೊಳೆ, ಅಂಟುದ್ರವವನ್ನು ನಿರ್ದಾಕ್ಷಿಣ್ಯವಾಗಿ ಹೋಗಲಾಡಿಸುವ ಗುಣವಿರುವುದರಿಂದ, ಜನಪದರು ಈ ಗಾದೆ ಮಾತನ್ನು ಕಟ್ಟಿದ್ದಾರೆ ಎನ್ನುವುದು ಸೀಗೆಕಾಯಿ ಬಳಸಿದವರಿಗೆ ಮಾತ್ರ ಗೊತ್ತು. ಮಲೆನಾಡಿನ ಸಾಂಪ್ರದಾಯಿಕ ಅಭ್ಯಂಜನಕ್ಕೆ ಬೇರೆಲ್ಲ ಪರಿಕರಗಳಿಗಿಂತ ಇದು ಮುಖ್ಯವಾದುದು. ತಲೆ ಬುರುಡೆಗೆ ಹಾಗೂ ಕೂದಲಿನ ಬುಡಕ್ಕೆ ಯಾವುದೇ ಅಪಾಯ ಮಾಡದೆ ತಲೆಯಲ್ಲಿರುವ ಎಣ್ಣೆಯ ಜಿಡ್ಡು ಮತ್ತು ಕೊಳೆಯನ್ನು ಸುಲಭವಾಗಿ ತೆಗೆಯುತ್ತದೆ. ಸೀಗೆಕಾಯಿ ಮತ್ತು ಅದರ ಉತ್ಪನ್ನ ಬಳಸಿ ತಯಾರಿಸಿದ ಶಾಂಪೂ ಜೊತೆ ಯಾವುದೇ ಕಂಡೀಷನರ್ ಅವಶ್ಯಕತೆಯಿರುವುದಿಲ್ಲ. ಸೀಗೆಪುಡಿಯನ್ನು ತಲೆಗೂದಲನ್ನು ಸ್ವಚ್ಛಗೊಳಿಸಲು ಮಾತ್ರವಲ್ಲದೆ ಪಾತ್ರೆಯ ಜಿಡ್ಡನ್ನು ತೊಳೆಯಲು, ಹಲಸಿನ ಹಣ್ಣನ್ನು ಕುಯ್ಯುವಾಗ ಕೈ ಮತ್ತು ಚಾಕುವಿಗೆ ಹಚ್ಚಿಕೊಳ್ಳುವ ಎಣ್ಣೆ ಮತ್ತು ಹಲಸಿನ ಅಂಟನ್ನು ತೆಗೆಯಲು ಬಳಸುತ್ತಾರೆ. ಬಂಗಾಳದಲ್ಲಿ ಮೀನು ಹಿಡಿಯುವವರು ಸೀಗೆಕಾಯಿ ಎಣ್ಣೆಯನ್ನು ಮೀನನ್ನು ಕೊಲ್ಲುವ ವಿಷವಾಗಿ ಬಳಸುವುದು ಕಂಡುಬಂದಿದೆ. ಇದರ ಎಲೆಗಳಲ್ಲಿ ಆಮ್ಲೀಯ ಗುಣವಿರುವುದರಿಂದ ಚಟ್ನಿ ತಯಾರಿಸಲು ಬಳಸುತ್ತಾರೆ. ಸೀಗೆಕಾಯಿ ಮತ್ತು ಎಲೆಯಲ್ಲಿರುವ ಕೆಲವು ರಾಸಾಯನಿಕ ವಸ್ತುಗಳನ್ನು ಬೇರ್ಪಡಿಸಿ ವಾಣಿಜ್ಯ ದೃಷ್ಟಿಯಿಂದ ರಾಸಾಯನಿಕ ಕೈಗಾರಿಕೆಗಳಲ್ಲಿ ಬಳಸುವ ಪದ್ಧತಿಯೂ ಇದೆ.

ಸೀಗೆಕಾಯಿ ಸನಾತನ ಪರಂಪರೆಯ ಜೊತೆ ಸಾಂಸ್ಕೃತಿಕ ಸಂಬಂಧವನ್ನೂ ಬೆಸೆದುಕೊಂಡು ಬಂದಿದೆ. ಉದಾಹರಣೆಗೆ : ಮದುವೆಯ ಸಂದರ್ಭಗಳಲ್ಲಿ ಮದುವೆಯ ಹಿಂದಿನ ದಿನ ಮಧು ಮಕ್ಕಳಿಗೆ ಮುತ್ತೈದೆಯರಿಂದ ಶುಭಸ್ನಾನ ಮಾಡಿಸುವ ಪದ್ಧತಿಇದೆ.

*ಡಿ.ಆರ್.ಪಿ.*

**ಸೀತಾಫಲ (ಅನ್ನೊ ಸಾವಮೊಸಲ್)** ಸೀತಾಫಲ ಅನೋನೇಸಿ ಕುಟುಂಬಕ್ಕೆ ಸೇರಿದೆ. ಕೆಲವರು ಸೀತಾಫಲವನ್ನು ಸಕ್ಕರೆ ಸೇಬು ಎಂದು ಕರೆಯುತ್ತಾರೆ. ಇದರಲ್ಲಿ ಸುಮಾರು 40 ಜಾತಿಗಳಿವೆ. ಆದರೆ ತಿನ್ನಲು ಉಪಯೋಗವಾಗುವಂತಹವು ಅನೋನೇಸೀ ಬ್ರೆಜಿಲ್‌ನ ಬಿಸೀಬ (Biriba Rolliniadeliciasea) ಅಮೆರಿಕಾದ ಪೆಪ್ಪೋ ಅಥವಾ (ಪೊ) (Paw) ಮುಂತಾದವು.

ಇತರ ಜಾತಿಯವು ಕಸಿ ಕಟ್ಟಲು, ಪರಾಗರೇಣುಗಳನ್ನು ಒದಗಿಸುವುದರಲ್ಲಿ ಸಹಕರಿಸುತ್ತವೆ. ಇದು ಭಾರತ ಮೂಲದೆಂದು ಹಲವರ ಅಭಿಪ್ರಾಯ. ಅಜಂತ ಎಲ್ಲೋರ ಶಿಲೆಗಳಲ್ಲಿ ಈ ಹಣ್ಣುಗಳ ಚಿತ್ರವಿರುವುದು ಇದಕ್ಕೆ ಆಧಾರ. ಸಂಸ್ಕೃತ ಕೃತಿಗಳಲ್ಲೂ ಇದರ ಉಲ್ಲೇಖವಿದೆ. ಭಾರತದ ಅನೇಕ ಭಾಗಗಳಲ್ಲಿ ನೈಸರ್ಗಿಕವಾಗಿ ಬೆಳೆಯುತ್ತದೆ. 'ಐನೆ ಅಕ್ಬರಿ'ಯಲ್ಲೂ ಸೀತಾಫಲದ ಉಲ್ಲೇಖವಿದೆ. ಭಾರತದಿಂದ ಅರೇಬಿಯಾದ ಮೂಲಕ ಈಜಿಪ್ಟ್‌ಗೆ ಪ್ರವೇಶಿಸಿ ಕ್ರಮೇಣ ಉಷ್ಣವಲಯದಲ್ಲೆಲ್ಲಾ ಹಬ್ಬಿರಬೇಕೆಂಬ ಅಭಿಪ್ರಾಯವಿದೆ.



**ಹವಾಗುಣ :** ಸೀತಾಫಲ ಶೀತವಲಯದಲ್ಲಿ ಚೆನ್ನಾಗಿ ಬೆಳೆದರೂ ಇತರ ಹವಾಗುಣದ ಏರುಪೇರುಗಳನ್ನು ತಾಳಿಕೊಂಡು ಬೆಳೆಯುವ ಸಾಮರ್ಥ್ಯವನ್ನು ಹೊಂದಿದೆ. ಒಣ ಹವೆ ಇದ್ದಷ್ಟೂ ಇಳುವರಿ ಹೆಚ್ಚು. ಹೂ ಬಿಡುವ ಕಾಲದಲ್ಲಿ ಒಣ ಹವೆ ಇದ್ದರೆ ಪರಾಗ ಸ್ಪರ್ಶ ಚೆನ್ನಾಗಿ ನಡೆದು ಉತ್ತಮ ಇಳುವರಿಯನ್ನು ಕೊಡುತ್ತದೆ. ತಂಪಾದ ವಾತಾವರಣವಿದ್ದರೆ ಪರಾಗಸ್ಪರ್ಶ ಸರಿಯಾಗಿ ನಡೆಯದೆ ಫಲವು ಇಳಿಮುಖವಾಗುತ್ತದೆ. ಬೆಟ್ಟ ಗುಡ್ಡಗಳಲ್ಲಿ ಕಲ್ಲುಗಳಿಂದ ಕೂಡಿರುವ ಮಣ್ಣಿನಲ್ಲಿ ಎಲ್ಲೆಂದರಲ್ಲಿ ಯಾವುದೇ ಆರೈಕೆಯನ್ನು ಬಯಸದೆ ಬೆಳೆಯಬಲ್ಲದು. ಎಲ್ಲ ತರದ ಮಣ್ಣುಗಳಲ್ಲಿಯೂ ಬೆಳೆಯುತ್ತದೆ. ಸುಣ್ಣದ ಕಲ್ಲುಗಳಿರುವ ಭೂಮಿಯಲ್ಲಿ ಯಾವ ಮರ ಬೆಳೆಯದಿದ್ದರೂ ಸೀತಾಫಲ ಬೆಳೆಯಬಲ್ಲದು. ಆದರೆ ಸಮೃದ್ಧವಾದ ಬೆಳೆಯನ್ನು ಕೊಡುವುದು ಮರಳು ಮಣ್ಣು, ಆಳವಾದ ಮಣ್ಣು ಇರುವ ಪ್ರದೇಶದಲ್ಲಿ ಮಾತ್ರ.

**ಬಿತ್ತನೆ :** ಇತ್ತೀಚೆಗೆ ವಾಣಿಜ್ಯ ದೃಷ್ಟಿಯಿಂದ ಕೆಲವರು ವ್ಯವಸಾಯ ಯೋಗ್ಯವಲ್ಲದ ನೆಲದಲ್ಲಿ ಸೀತಾಫಲ ಬೆಳೆಯುತ್ತಿದ್ದಾರೆ. ಇದರ ಬಿತ್ತನೆಗೆ ಬೀಜವೇ ಮೂಲ. ಕಣ್ಣು ಕಸಿ, ಇನಾರ್ಕಿಂಗ್, ಸೀಳುಕಸಿ, ತೇಪೆ ಕಣ್ಣು ಕಸಿ, ಗೂಟಿ ಹಾಕುವಿಕೆ ಮೊದಲಾದ ವಿಧಾನಗಳಿಂದಲೂ ಗಿಡಗಳನ್ನು ಬೆಳೆಸಬಹುದು. ಅನ್ಯ ಜಾತಿಯ ಗಿಡಗಳನ್ನು ನರ್ಸರಿಯಲ್ಲಿ ಸಸ್ಯ ಪೀಠಗಳಾಗಿ ಬೆಳೆಸಿ ಕ್ರಮೇಣ ಅದಕ್ಕೆ ಕಸಿ ಕಟ್ಟುವುದುಂಟು. ಬೀಜವನ್ನು ಕೆಲವು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ ನೆಟ್ಟರೆ ಮೊಳಕೆ ಬೇಗ ಬರುತ್ತದೆ. ಮರದಿಂದ ಮರಕ್ಕೆ 8 ರಿಂದ 10 ಅಡಿ ಅಂತರವಿರಬೇಕು.

ಉತ್ತಮ ಇಳುವರಿಯನ್ನು ಪಡೆಯಲು ಫಲವತ್ತಾದ ಮಣ್ಣಿನ ಜೊತೆಗೆ ಕೊಟ್ಟಿಗೆ ಗೊಬ್ಬರವನ್ನು ಸೇರಿಸಬಹುದು. ಇದರಿಂದ ಬರಡು ನೆಲದಲ್ಲೂ ಉತ್ತಮ ಫಲವನ್ನು ಪಡೆಯಬಹುದು.

**ನೀರಿನ ಸೌಕರ್ಯ :** ಮಳೆಗಾಲದಲ್ಲಿ ಫಲ ಬಿಟ್ಟು ನೆಲ ಒಣಗುವ ಮೊದಲು ಬೆಳೆ ಬಂದರೆ ನೀರನ್ನು ಕೊಡುವ ಆವಶ್ಯಕತೆ ಇಲ್ಲ. ಬೇಸಗೆಯಲ್ಲಿ ನೀರು ಕೊಡುವುದರಿಂದ ಫಸಲು ಹೆಚ್ಚಾಗುತ್ತದೆ. ಹಣ್ಣಿನ ಗಾತ್ರ ಮತ್ತು ತೂಕವೂ ಹೆಚ್ಚಾಗುತ್ತದೆ. ಸಾಕಷ್ಟು ಕವಲುಗಳು ಬುಡದಿಂದಲೇ ಬರುವುದು ಈ ಮರದ ಗುಣ. ಕೆಲವು ದೃಢವಿಲ್ಲದ ರೆಂಬೆಗಳನ್ನು ಕತ್ತರಿಸಿ ಮರದಿಂದ ಮರಕ್ಕೆ ಬಿಸಿಲುಗಾಳಿ ಸಿಗುವಂತೆ ಮಾಡುವುದು ಒಳ್ಳೆಯದು. ಪರಾಗಸ್ಪರ್ಶದ ಕೊರತೆಯಿದೆ ಎನಿಸಿದಾಗ ಕೃತಕವಾಗಿ ಸ್ವಯಂ ಪರಾಗಸ್ಪರ್ಶ ನಡೆಸಿ ಫಸಲನ್ನು ವೃದ್ಧಿ ಮಾಡಬಹುದು. ಗುಂಪು ಗುಂಪಾಗಿರುವ ಹೂಗಳಲ್ಲಿ ದುರ್ಬಲವಾದ ಕೆಲವನ್ನು ಕಿತ್ತು ಪರಾಗಸ್ಪರ್ಶ ನಡೆಸುವುದರಿಂದ ಒಳ್ಳೆಯ ಫಸಲನ್ನು ಪಡೆಯಬಹುದು. ಕೃತಕ ಪರಾಗಸ್ಪರ್ಶ ಕ್ರಿಯೆಯಲ್ಲಿ ಶಲಾಕಾಗ್ರ ಒಣಗುವ ಮೊದಲು ಪರಾಗಕಣಗಳನ್ನು ಅದರ ಮೇಲೆ ಚೆಲ್ಲುವಂತೆ ಮುಂಜಾಗ್ರತೆ ವಹಿಸುವುದು ಅವಶ್ಯ. ಕಸಿ ಮಾಡಿದ ಸಸಿ ಹಾಗೂ ಬೀಜದಿಂದ ವೃದ್ಧಿ ಮಾಡಿದ ಸಸ್ಯಗಳೊಳಗೆ ಫಸಲು ಬಿಡುವ ಕಾಲದಲ್ಲಿಯೂ ಹೆಚ್ಚಿನ ವ್ಯತ್ಯಾಸಗಳೇನೂ ಇರುವುದಿಲ್ಲ.

**ಬೆಳೆ :** ಸಸಿ ನೆಟ್ಟ ಮೇಲೆ ಐದು ವರ್ಷ ಕಾಪಾಡಿದರೆ ಉತ್ತಮ ಫಸಲು ಕೊಡುತ್ತದೆ. ಒಂದು ಸಸಿ ಆರಂಭದಲ್ಲಿ 100 ರಿಂದ 150 ಹಣ್ಣುಗಳನ್ನು ಕೊಟ್ಟರೆ ಕ್ರಮೇಣ 20 ವರ್ಷಗಳವರೆಗೆ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತವೆ. ಒಂದು ಮರ ಗರಿಷ್ಠ 500 ಹಣ್ಣುಗಳವರೆಗೆ ಬಿಡಬಹುದು. ಸಿಪ್ಪೆ ಹಳದಿ ಬಣ್ಣಕ್ಕೆ ತಿರುಗಿ ಕಣ್ಣು ದಪ್ಪವಾಗಿ ಬಿರುಕು ಬಿಟ್ಟಂತೆ ಕಾಣಿಸಿದಾಗ ಕಿತ್ತು ಒಣ ಹುಲ್ಲಿನ ಮೇಲೆ ಹರಡಿದರೆ ಹಣ್ಣಾಗುತ್ತವೆ. ಇದರಲ್ಲಿ ರಾಮಫಲ, ಹನುಮನ ಫಲ , ಚೆರಿಮೊಯ, ಲಕ್ಷ್ಮಣ ಫಲ ಇತ್ಯಾದಿ ತಳಿಗಳಿವೆ.

**1. ರಾಮಫಲ :** ಇದು 10 ರಿಂದ 12 ಅಡಿಗಳವರೆಗೆ ಎತ್ತರವಾಗಿ ಬೆಳೆಯುತ್ತದೆ. ಒಂದು ಮರದಲ್ಲಿ 20 ರಿಂದ 40 ರವರೆಗೆ ಹಣ್ಣುಗಳನ್ನು ಬಿಡುತ್ತದೆ. ಗಾತ್ರ ಮತ್ತು ಆಕಾರದಲ್ಲಿ ಸೀತಾಫಲವನ್ನು ಹೋಲುವುದಿಲ್ಲ. ಸೀತಾಫಲ ಗುಂಡುಗಿದ್ದರೆ ರಾಮಫಲ ಮಾವಿನಹಣ್ಣಿನಂತೆ ಉದ್ದವಾಗಿರುತ್ತದೆ. ಹಣ್ಣಿನ ಸಿಪ್ಪೆಯ ಮೇಲೆ ಜಾಲದ ಗುರುತುಗಳಿರುವುದರಿಂದ ಇದನ್ನು

ಸೀತಾಫಲವೆಂದೇ ಕರೆಯುತ್ತಾರೆ. ಕೆಂಪು ಕಂದು ಬಣ್ಣದ ಹಣ್ಣಾಗಿದ್ದು ತಿರುಳು ಸಿಹಿಯಾಗಿರುತ್ತದೆ. ತೊಳೆಗಳು ಕಡಿಮೆ, ಹಣ್ಣಿನಲ್ಲಿ ಬೀಜಗಳೂ ಕಡಿಮೆ.

**ಬೇಸಾಯ ಕ್ರಮ :** ರಾಮಫಲಕ್ಕೆ ಸೀತಾಫಲ ಬೆಳೆಗೆ ಬೇಕಾದ ಭೂಗುಣ ಮತ್ತು ಹವಾಗುಣವಿದ್ದರೆ ಸಾಕು. ಸಸ್ಯಾಭಿವೃದ್ಧಿ ಬೀಜದಿಂದ ಅಥವಾ ಕಣ್ಣು ಅಂಟಿಸಿ ನಡೆಸಬಹುದು. ವರ್ಷವೆಲ್ಲ ಫಸಲು ಕೊಡುತ್ತವೆಯಾದರೂ ವರ್ಷದಲ್ಲಿ ಎರಡು ಸಲ ಹೆಚ್ಚು ಇಳುವರಿ ಸಿಗುತ್ತದೆ. ಸೀತಾಫಲದಷ್ಟು ವ್ಯಾಪಕವಾಗಿ ಇದನ್ನು ಬೆಳೆಯುವುದಿಲ್ಲ. ಕಾರಣ ಅದು ಗಿಡದ ತುಂಬ ಕಾಯಿ ಬಿಟ್ಟರೆ ರಾಮಫಲ ಕಡಿಮೆ ಹಣ್ಣುಗಳನ್ನು ಬಿಡುತ್ತದೆ.

**2. ಹನುಮನ ಫಲ :** ದಕ್ಷಿಣ ಭಾರತಕ್ಕಿಂತ ಉತ್ತರ ಭಾರತದಲ್ಲಿ ಉಷ್ಣಹವೆಯಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಒಂದು ಮರದಲ್ಲಿ 15 ರಿಂದ 30 ರವರೆಗೆ ಮಾತ್ರ ಹಣ್ಣನ್ನು ಕೊಡುತ್ತದೆ. ಇದು ರಾಮಫಲದಂತೆ ದುಂಡಗೆ ಅಥವಾ ಹೃದಯದಾಕಾರದಲ್ಲಿರುತ್ತದೆ. ಹಣ್ಣಿನ ಮೇಲೆ ಹಲಸಿನ ಕಾಯಿಯ ಮೇಲಿರುವಂತೆ ಮುಳ್ಳು ಮುಳ್ಳಾಗಿರುತ್ತದೆ. ಹಣ್ಣಿನ ಗಾತ್ರ ದೊಡ್ಡದು. ಪಾನೀಯಗಳ ತಯಾರಿಕೆಯಲ್ಲಿಸುವಾಸನೆಗೆ ಬಳಸುತ್ತಾರೆ. ಮದ್ಯ ಮತ್ತು ಬ್ರಾಂದಿ ತಯಾರಿಸಲು ಬಳಸುವುದುಂಟು.

**ಚೆರಿಮೊಯ :** ಇದನ್ನು ಲಕ್ಷ್ಮಣ ಫಲವೆಂದೂ ಕರೆಯುತ್ತಾರೆ. ಇದರ ಮೂಲ ಅಮೇರಿಕಾದ ಪೆರು. ಒಂದು ಮರದಲ್ಲಿ 40 ರಿಂದ 100ರ ವರೆಗೆ ಹಣ್ಣುಕೊಡುತ್ತದೆ. ತುಂಬ ರುಚಿಯಾದ ಹಣ್ಣು. ಈ ಮರ 10 ರಿಂದ 12 ಅಡಿ ಎತ್ತರ ಬೆಳೆಯಬಲ್ಲದು. ಇದನ್ನು ಸೀತಾಫಲ ರಾಮಫಲಗಳಿಗೆ ಕಸಿ ಗಿಡವಾಗಿ ಬಳಸುತ್ತಾರೆ.

**ರೋಗಗಳು :** ಹಿಟ್ಟಿನ ತಿಗಣೆ, ತೊಗಲು ಕೊಳೆ ಮತ್ತು ಗೊಂದು ಜಿನುಗು ರೋಗಗಳು ಅಪರೂಪಕ್ಕೆ ಬರುತ್ತದೆ. ಆದರೆ ಭಾರತದಲ್ಲಿ ಈ ಮರಗಳಿಗೆ ಯಾವುದೇ ರೋಗ ಬಾಧಿಸುವುದಿಲ್ಲ.

*ಎ.ಬಿ.ಪಿ.*

**ಸೀಬೆಹಣ್ಣು (ಪೇರಲ) (ಗುವ)** ಭಾರತಾದ್ಯಂತ ಪ್ರಚಲಿತವಿರುವ 'ಯೂಫೋರ್ ಬಿಯೇಸಿ' ಕುಟುಂಬಕ್ಕೆ ಸೇರಿದ ಸೀಬೆಹಣ್ಣಿನ ಮತ್ತೊಂದು ಹೆಸರು ಪೇರಲ. ಇದರ ವೈಜ್ಞಾನಿಕ ಹೆಸರು 'ಸಿಡಿಯಂ ಗ್ಯುವ'. ಸಂಸ್ಕೃತದಲ್ಲಿ ಇದನ್ನು 'ಬಹುಬೀಜ ಫಲ' ಎಂದೂ, ತಮಿಳಿನಲ್ಲಿ 'ಕೊಯ್ಯಪಳಂ' ಎಂದು, ತೆಲುಗಿನಲ್ಲಿ 'ಜಾಮ್‌ಪಂಡು' ಎಂದೂ, ಹಿಂದಿಯಲ್ಲಿ 'ಅಮರುದ್' ಎಂದೂ, ಇಂಗ್ಲಿಷನಲ್ಲಿ ಗುವ ಎಂದೂ ಕರೆಯುತ್ತಾರೆ. ಕನ್ನಡದ ಇತರೆ ಹೆಸರುಗಳೆಂದರೆ ಚೇಪೇಕಾಯಿ, ಗೋವಗೇಯ, ಗೋನುಮರ.

ಸೀಬೆಯನ್ನು 'ಬಡವರ ಸೇಬು' ಎಂದು ಕರೆಯುತ್ತಾರೆ. ಪೊದೆಯಂತೆ ಬೆಳೆಯುವ ಮಧ್ಯಮ ಗಾತ್ರದ ಮರ. ಎಲೆಗಳು ವಿರುದ್ಧ ದಿಕ್ಕಿನಲ್ಲಿದ್ದು ಪ್ರತೀ ಎಲೆಯ ಕಂಕುಳಿಂದ ಒಂದು ಅಥವಾ ಹೆಚ್ಚಿಗೆ ಹೂವು ಬಿಡುತ್ತವೆ. ಹಣ್ಣಿನಲ್ಲಿರುವ ಬೀಜದ ಮಹತ್ವ ಹಾಗೂ ರುಚಿಯನ್ನು ಅವಲಂಬಿಸಿ ಹಣ್ಣಿನ ಗುಣಮಟ್ಟ ನಿಶ್ಚಯಿಸುತ್ತಾರೆ. ಈ ಹಣ್ಣನ್ನು ನೇರವಾಗಿ ತಿನ್ನಬಹುದು.

ಈ ಹಣ್ಣಿನ ಮೂಲ ಸ್ಥಾನದ ಬಗ್ಗೆ ನಿರ್ದಿಷ್ಟವಾಗಿ ತಿಳಿಯದಿದ್ದರೂ ಸದ್ಯಕ್ಕೆ ದಕ್ಷಿಣ ಅಮೇರಿಕಾ ಎಂಬುದು ಸಸ್ಯ ವಿಜ್ಞಾನಿಗಳ ಅಭಿಮತ. ಯಾವಾಗ ಭಾರತಕ್ಕೆ ಸೀಬೆಹಣ್ಣಿನ ಆಗಮನವಾಯಿತೆಂದು ಸರಿಯಾಗಿ ತಿಳಿದುಬಂದಿಲ್ಲ. ಆದರೂ ಐನ್-ಇ-ಅಕ್ಬರಿಯಲ್ಲಿ ಈ ಹಣ್ಣನ್ನು ಕುರಾನ್ ದೇಶದ ಹಣ್ಣುಗಳು ಎಂಬ ಶಿರೋನಾಮೆಯಲ್ಲಿ ಸೇರಿಸಲಾಗಿದೆ. ಅಕ್ಬರನ (ಕ್ರಿ.ಶ. 1590) ಕಾಲದ ಮೊಗಲಾಯಿ ತೋಟದಲ್ಲಿ ಈ ಹಣ್ಣನ್ನು ಬೆಳೆಯುತ್ತಿದ್ದರು ಎಂದು ತಿಳಿಸಲಾಗಿದೆ. ಅಂದ ಮೇಲೆ ಈ ಹಣ್ಣು ಉತ್ತರ ಭಾರತಕ್ಕೆ ಪರ್ಷಿಯ ದೇಶದಿಂದ 16ನೇ ಶತಮಾನದ ಅಂತ್ಯದಲ್ಲಿ ಬಂದಿರಬಹುದೆಂದು ಊಹಿಸಬಹುದು. ಇದನ್ನು ಹೆಚ್ಚಾಗಿ ಬರ್ಮಾ, ಸಿಲೋನ್, ಫಿಲಿಪ್ಪೀನ್ಸ್, ಇಂಡೋನೇಷ್ಯಾ ಮುಂತಾದ ಪ್ರಾಚ್ಯ ದೇಶಗಳಲ್ಲಿ ಬೆಳೆಯುತ್ತಾರೆ. ಭಾರತದಲ್ಲಿ ಸಾಧಾರಣವಾಗಿ ಎಲ್ಲ ಕಡೆಯೂ ಬೆಳೆಯುವರು. ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಗೆ ಲಭ್ಯವಾಗುವ ಹಣ್ಣು. ದಕ್ಷಿಣ ಭಾರತದಲ್ಲಿ ತಮಿಳುನಾಡು, ಆಂಧ್ರ, ಕರ್ನಾಟಕದಲ್ಲಿ ಹೆಚ್ಚಾಗಿ ಬೆಳೆಸುವರು. ಸೀಬೆ ಸ್ವಾದಿಷ್ಟಕರವಾದ ಹಣ್ಣು. ಇತ್ತೀಚೆಗೆ ಕರ್ನಾಟಕದಲ್ಲಿ ಬಹಳ ಜನಪ್ರಿಯವಾಗುತ್ತಿದೆ. ಅದರಲ್ಲೂ ಬೆಂಗಳೂರು, ಕೋಲಾರ, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದಾರೆ.



**ತಳಿಗಳು : ಅಲಹಾಬಾದ್ ಸಫೇದ :** ಇದಕ್ಕೆ ಅಲಹಾಬಾದ್ ಸೀಬೆ, ಬಿಳಿ ಸೀಬೆ ಮುಂತಾದ ಹೆಸರುಗಳಿವೆ. ಉತ್ತರ ಪ್ರದೇಶದ ಜನಪ್ರಿಯ ತಳಿ. ಮರ ನುಣುಪಾಗಿದ್ದು ರೆಂಬೆಗಳು ಉದ್ದವಾಗಿ ಅಧಿಕ ಸಂಖ್ಯೆಯಲ್ಲಿರುತ್ತವೆ. ಎಲೆಗಳು ದಟ್ಟವಿದ್ದು, ಅದುಮಿದಂತೆ ಕಾಣುವುವು. ಹಣ್ಣು ಸಾಧಾರಣ ದೊಡ್ಡವಿದ್ದು ಸರಾಸರಿ 180 ಗ್ರಾಂ ತೂಕವಿರುತ್ತದೆ. ಇದು ಗುಂಡಗಿದ್ದು ತುದಿಯತ್ತ ಅದುಮಿದಂತಿರುತ್ತದೆ. ಸಿಪ್ಪೆ ನುಣ್ಣಗಿದ್ದು ಬಿಳಿ ಹಳದಿ ಬಣ್ಣದ್ದಿರುತ್ತದೆ. ತಿರುಳು ಮೃದು ; ಬೆಳ್ಳಗಿರುತ್ತದೆ. ರುಚಿ ಮತ್ತು ವಾಸನೆಗಳು ಹಿತವಾಗಿರುತ್ತವೆ. ತಿರುಳಿನಲ್ಲಿ ಬಹಳಷ್ಟು ಗಡುಸಾದ ಬೀಜ ಇರುತ್ತದೆ ಹಾಗಾಗಿ ತಿನ್ನ ಬಯಸುವವರು ಹಿಂಜರಿಯುವುದು ಸಹಜ. ಕಡಿಮೆ ಮಳೆಯಾಗುವ ಪ್ರದೇಶಗಳಲ್ಲೂ ಇದನ್ನು ಬೆಳೆಯಬಹುದು.

**ಚಿಟ್ಟಿಡಾರ್** : ಇದಕ್ಕೆ ಚುಕ್ಕೆ ಸೀಬೆ ಎನ್ನುತ್ತಾರೆ. ಮರದ ನೆತ್ತಿ ದುಂಡಗಿದ್ದು ರೆಂಬೆಗಳು ಸುತ್ತ ಹರಡಿ ಬೆಳೆದಿರುತ್ತವೆ. ಎಲೆಗಳು ದೊಡ್ಡವಿದ್ದು, ತುದಿ ಚೂಪಾಗಿರುತ್ತದೆ. ಇದರ ಹಣ್ಣು ಎಲ್ಲಾ ವಿಧದಲ್ಲಿ

ಅಲಹಾಬಾದ್ ಸಫೇದ ತಳಿಯಂತೆ ಇರುತ್ತವೆಯಾದರೂ, ಸಿಪ್ಪೆಯ ಮೇಲೆ ಗುಂಡು ಸೂಜಿಯ ತಲೆಯಷ್ಟು ಗಾತ್ರದ ಕೆನ್ನೀಲಿ ಚುಕ್ಕೆಗಳಿರುವುದು ಈ ತಳಿಯಲ್ಲಿನ ವೈಶಿಷ್ಟ್ಯ. ಇದನ್ನು ಹೆಚ್ಚಾಗಿ ದೆಹಲಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಹಣ್ಣು ಗೋಲಾಕಾರ, ಸಿಪ್ಪೆ ಮಾಸಲು ಹಳದಿ ಬಣ್ಣವಿರುತ್ತದೆ. ಹಣ್ಣುಗಳ ಸಂಗ್ರಹಣಾ ಗುಣ ಉತ್ತಮ.

**ಬನಾರಸಿ :** ಸಿಹಿ ಬಗೆಗಳ ಪೈಕಿ ಅತ್ಯುತ್ತಮ ತಳಿ ಇದಾಗಿದೆ. ತಿರುಳಿನಲ್ಲಿ ಹುಳಿಯ ಅಂಶವೇ ಇರುವುದಿಲ್ಲ. ಮರದ ನೆತ್ತಿ ಅಗಲಕ್ಕೆ ಹರಡಿರುತ್ತದೆ. ಹಣ್ಣು ದುಂಡಾಗಿದ್ದು ಹಳದಿ ಬಣ್ಣದ್ದಿರುತ್ತದೆ. ಸಂಗ್ರಹಣಾ ಗುಣ ಸಾಧಾರಣ.

**ಬೂರಾಯಿಪುರ :** ಇದರ ಬೇಸಾಯ ಮತ್ತು ಬಳಕೆಗಳು ಪಶ್ಚಿಮ ಬಂಗಾಳದಲ್ಲಿ ವ್ಯಾಪಕ. ಮರಗಳು ಸಾಧಾರಣ ಎತ್ತರಕ್ಕೆ ಬೆಳೆದು, ಅಗಲವಿರುವ ಹಾಗೂ ಒತ್ತಾಗಿರುವ ನೆತ್ತಿಯಿಂದ ಕೂಡಿರುತ್ತವೆ. ರೆಂಬೆಗಳು ಸುತ್ತಲೂ ಹರಡಿ ಚಾಚಿರುತ್ತವೆ. ಹಣ್ಣು ಸಾಧಾರಣ ದೊಡ್ಡದಿದ್ದು ಗುಂಡಗಿರುತ್ತದೆ. ಅವುಗಳ ತುದಿ ಅದುಮಿದಂತೆ ಕಾಣುವುದು. ಸಿಪ್ಪೆಯ ಬಣ್ಣ ಹಳದಿ ಹಸುರು.

**ಹಬ್ಸಿ :** ಇದು ಗಿಡ್ಡ ತಳಿ. ಹಣ್ಣು ದುಂಡಗಿರುತ್ತದೆ. ಅವುಗಳ ಮೇಲ್ಮೈ ನುಣ್ಣಗಿರುತ್ತದೆ. ಸಿಪ್ಪೆಯ ಬಣ್ಣಮಾಸಲು ಹಳದಿ. ತಿರುಳು ಕೆಂಪು ಇಲ್ಲವೇ ಕೆನೆ ಬಿಳುಪು ಬಣ್ಣವಿದ್ದು ಬಹಳಷ್ಟು ಬೀಜದಿಂದ ಕೂಡಿರುತ್ತದೆ.

**ಹಸುರು ಸೀಬೆ :** ಉತ್ತರ ಪ್ರದೇಶದ ಕಾಶಿ ಹಾಗೂ ಅದರ ಸುತ್ತಮುತ್ತ ಇದರ ಬೇಸಾಯವಿದೆ. ಇದರ ವೈಶಿಷ್ಟ್ಯವೆಂದರೆ ಹಣ್ಣು ಪೂರ್ಣ ಬಲಿತು ಪಕ್ವಗೊಂಡರೂ ಅವುಗಳ ಸಿಪ್ಪೆ ಮಾತ್ರ ಹಸುರಾಗಿರುವುದು. ಆಕಾರ, ರುಚಿ ಮುಂತಾಗಿ ಅಲಹಾಬಾದ್ ಸಫೇದ ತಳಿಯಂತೆ ಇರುತ್ತವೆ.

**ನವಲೂರು ಸೀಬೆ :** ಇದಕ್ಕೆ ಧಾರವಾಡ ಸೀಬೆ ಎಂಬ ಹೆಸರಿದೆ. ಕರ್ನಾಟಕ ರಾಜ್ಯದ ಧಾರವಾಡ-ಹುಬ್ಬಳ್ಳಿಗಳ ಮಧ್ಯೆ ಹೆದ್ದಾರಿಗೆ ಆತುಕೊಂಡಂತೆ ನವಲೂರು ಎಂಬ ಹಳ್ಳಿ ಇದೆ. ಅಲ್ಲಿ ಈ ತಳಿ ಬಲು ಜನಪ್ರಿಯ. ಹಣ್ಣು ನೋಡಲು ಪೇರು ಹಣ್ಣಿನಂತಿದ್ದು ಹಳದಿ ಹಸುರು ಸಿಪ್ಪೆಯಿಂದ ಕೂಡಿರುತ್ತದೆ. ತಿರುಳಿನ ಬಣ್ಣ ಕೆನ್ನೀಲಿ. ಬೀಜ ಅಸಂಖ್ಯಾತವಾಗಿದ್ದು ಗಡುಸಾಗಿರುತ್ತವೆ. ತಿನ್ನಲು ಸಿಹಿಯಾಗಿದ್ದರೂ ಗಟ್ಟಿ ಬೀಜದಿಂದಾಗಿ ಅಷ್ಟೊಂದು ಜನಪ್ರಿಯವಾಗಿಲ್ಲ. ಹಣ್ಣುಗಳ ಸಂಗ್ರಹಣಾ ಗುಣ ಉತ್ತಮ.

**ನಾಸಿಕ್ ಸೀಬೆ :** ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಸುಪ್ರಸಿದ್ಧ ತಳಿ. ಹಣ್ಣು ಆಕಾರದಲ್ಲಿ ಪೇರುಹಣ್ಣಿನಂತೆ, ಗಾತ್ರದಲ್ಲಿ ಸಾಧಾರಣ. ಸಿಪ್ಪೆಯ ಮೇಲೆ ಉದ್ದವಾದ ಗೀರು ಹಳ್ಳಗಳಿರುತ್ತವೆ. ಸಿಪ್ಪೆಯ ಬಣ್ಣ ಮಾಸಲು ಹಳದಿ, ತಿರುಳು ಬೆಳ್ಳಗಿದ್ದು, ಬಹಳಷ್ಟು ಗಟ್ಟಿ ಬೀಜದಿಂದ ಕೂಡಿರುತ್ತದೆ.

**ಬೆಂಗಳೂರು ಸೀಬೆ :** ಹಿಂದೆ ಬೆಂಗಳೂರು ಹಾಗೂ ಅದರ ಸುತ್ತಮುತ್ತ ಬಹಳಷ್ಟು ಹೆಸರು ಗಳಿಸಿದ್ದ ತಳಿ; ಈ ಹಣ್ಣು ಆಕಾರದಲ್ಲಿ ಪೇರು ಹಣ್ಣಿನಂತೆ. ತಿರುಳು ಬೆಳ್ಳಗಿದ್ದು, ಸಿಹಿಯಾಗಿರುತ್ತದೆ. ಬೀಜ ಬಹಳ ಗಡಸು.

**ಕರೇಲ :** ಉತ್ತರ ಪ್ರದೇಶದ ಹಲವಾರು ಕಡೆಗಳಲ್ಲಿ ಇದರ ಬೇಸಾಯವಿದೆ. ಹಣ್ಣು ಆಕಾರದಲ್ಲಿ ಪೇರು ಹಣ್ಣಿನಂತೆ, ಮೇಲ್ಮೈ ಒರಟಾಗಿ ಹಾಗಲಕಾಯಿಯಲ್ಲಿದ್ದಂತೆ ಕಾಣುವುದು. ತಿರುಳು ಬೆಳ್ಳಗಿದ್ದು ತಿನ್ನಲು ಸಿಹಿಯಾಗಿರುತ್ತದೆ. ಬೀಜಗಳ ಸಂಖ್ಯೆ ಅಧಿಕ. ಫಸಲು ಯಥೇಚ್ಛ.

**ಕೆಂಪು ಸೀಬೆ :** ಇದಕ್ಕೆ ಚಂದ್ರ ಸೀಬೆ ಎನ್ನುತ್ತಾರೆ. ಇದನ್ನು ಹೆಚ್ಚಾಗಿ ಅಲಹಾಬಾದ್ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಹಣ್ಣು ಉದ್ದವಾಗಿ, ಮೊಟ್ಟೆಯಂತಿರುತ್ತದೆ. ಹಣ್ಣುಗಳ ಬಣ್ಣ ಹಳದಿ ಹಸುರು. ಮೇಲ್ಮೈ ನುಣ್ಣಗಿರುತ್ತದೆ. ತಿರುಳಿನ ಬಣ್ಣ ಕೆನ್ನೀಲಿ, ಮೃದುವಾಗಿದ್ದು ಸಿಹಿಯಾಗಿರುತ್ತದೆ.

**ಸುಪ್ರೀಮ್ ಮೈಲ್ಡ್ ಫ್ಲೆಶ್ :** ಇದು ಫ್ಲೋರಿಡಾದ ತಳಿ. ಹಣ್ಣು ಅಂಡಾಕಾರವಿದ್ದು ಗಾತ್ರದಲ್ಲಿ ಸಾಧಾರಣ ದೊಡ್ಡವು. ಸಿಪ್ಪೆ ಮತ್ತು ತಿರುಳುಗಳ ಬಣ್ಣ ಬಿಳಿ ಹಸುರು, ರುಚಿಯಲ್ಲಿ ಸಿಹಿ - ಹುಳಿಗಳ ಸಮ್ಮಿಶ್ರಣವಿದ್ದು ತಿನ್ನಲು ಬಲು ಮಧುರ.

**ಹರಿಜ್ಞ :** ಇದರ ಬೇಸಾಯ ಬಿಹಾರ್‌ನಲ್ಲಿ ಹೆಚ್ಚು. ಮರಗಳು 3 ರಿಂದ 5 ಮೀ ಎತ್ತರಕ್ಕೆ ಬೆಳೆಯುತ್ತವೆ ಹಾಗೂ ಸಾಧಾರಣ ಕಸುವಿನಿಂದ ಕೂಡಿರುತ್ತವೆ. ರೆಂಬೆಗಳು ವಿರಳ. ಹಣ್ಣು ಗುಂಡಗಿದ್ದು, ದಟ್ಟ ಹಸುರು ಬಣ್ಣ. ತಿರುಳು ಬೆಳ್ಳಗಿದ್ದು, ರುಚಿಯಲ್ಲಿ ಅತ್ಯುತ್ತಮವಿರುತ್ತದೆ. ಫಸಲು ಯಥೇಚ್ಛ ಸಂಗ್ರಹಣಾಗುಣ ಉತ್ತಮ.

**ಸೇಬು ಬಣ್ಣದ ಸೀಬೆ :** ಇದಕ್ಕೆ ಆಪಲ್ ಕಲರ್ ಎಂಬ ಹೆಸರಿದೆ. ಇದರ ಮರಗಳು ಸಾಧಾರಣ ದೊಡ್ಡವಿದ್ದು 4 ರಿಂದ 5.2 ಮೀ ಎತ್ತರಕ್ಕೆ ಬೆಳೆಯುತ್ತವೆ. ನೆತ್ತಿ ಅಗಲವಿರುತ್ತದೆ. ಹಣ್ಣು ಗುಂಡಾಗಿದ್ದು, ಮೇಲೆಲ್ಲಾ ಕೆಂಪು ಛಾಯೆ ಹೊಂದಿರುತ್ತವೆ. ಸಿಪ್ಪೆಯ ಮೇಲೆ ಸಣ್ಣ ಸಣ್ಣ ಚುಕ್ಕೆಗಳಿರುತ್ತವೆ. ರುಚಿಯಲ್ಲಿ ಸಿಹಿಇದ್ದು, ಉತ್ತಮಸಂಗ್ರಹಣಾ ಗುಣಹೊಂದಿರುತ್ತವೆ.

**ಬೀಜ ರಹಿತ ಸೀಬೆ :** ಇದನ್ನು ಸೀಡ್ಲೆಸ್‌ಗೋವಾ ಎನ್ನುತ್ತಾರೆ. ಇದು ಅಷ್ಟಾಗಿ ಬೇಸಾಯದಲ್ಲಿ ಇಲ್ಲ. ಹಣ್ಣಿನ ತೋಟಗಳಲ್ಲಿಒಂದೆರಡು ಮರಗಳಿದ್ದರೆ ಹೆಚ್ಚು. ಫಸಲು ಕಡಿಮೆ. ಹಣ್ಣುಗಳಿಗೆ ನಿರ್ದಿಷ್ಟ ಆಕಾರ ಇರುವುದಿಲ್ಲ. ಗಾತ್ರದಲ್ಲಿ ಸಾಧಾರಣ ದೊಡ್ಡವಿದ್ದು ಪೂರ್ಣಹಣ್ಣಾದಾಗ ಹಸುರು ಬಿಳುಪು ಬಣ್ಣದ್ದಿರುತ್ತವೆ. ಹಣ್ಣನ್ನು ಎರಡಾಗಿ ಹೋಳು ಮಾಡಿದರೆ ಮಧ್ಯೆ ಪೊಳ್ಳುಭಾಗ ಇದ್ದು ಒಂದೆರಡು ಬೀಜ ಕಂಡುಬರುವುದುಂಟು. ತಿರುಳಿನ ಬಣ್ಣ ಬಿಳುಪು. ರುಚಿಯಲ್ಲಿ ಸಾಧಾರಣ ಸಿಹಿ. ಸಂಗ್ರಹಣಾ ಗುಣ ಕಡಿಮೆ. ಇದರಲ್ಲಿ ನಾಗಪುರ ಸೀಡ್ಲೆಸ್, ಸಹರಾನ್‌ಪುರ ಸೀಡ್ಲೆಸ್ ಮುಂತಾದ ಬಗೆಗಳಿವೆ. (ಸಪೋಟ ಮತ್ತು ಸೀಬೆ ; ಡಾ. ಎಂ. ಎ. ನಾರಾಯಣ ರೆಡ್ಡಿ )

**ಭೂಗುಣ :** ಸೀಬೆಯನ್ನು ಚೆನ್ನಾಗಿ ನೀರು ಬಸಿದು ಹೋಗುವಂತಹ ಯಾವುದೇ ತರಹದ ಮಣ್ಣಿನಲ್ಲಿ ಬೆಳೆಯಬಹುದು. ಆಳವಾದ, ಹದಹೊಂದಿದ, ಮರಳು ಮಿಶ್ರಿತ ಮೇಲ್ಪದರದ ಮಣ್ಣುಳ್ಳ ಕೆಬ್ಬೆನೆಲ, ಗೋಡುನೆಲ ಅಲ್ಲದೆ ಮೆಕ್ಕಲು ಮಣ್ಣಿನಿಂದ ಕೂಡಿದ ಮರಳು ಮಿಶ್ರಿತ ಭೂಮಿ ಈ ಬೆಳೆಗೆ ಉತ್ತಮ. ಗೊಬ್ಬರ ಹೆಚ್ಚಾಗಿ ಕೊಟ್ಟು ಭೂಮಿಯ ರಚನೆ ಹಾಗೂ ಫಲವತ್ತತೆಯನ್ನು ಹೆಚ್ಚಿಸಿಕೊಂಡರೆ ಎಂತಹ ನೆಲದಲ್ಲಿಯಾದರೂ ಸೀಬೆಯನ್ನು ಚೆನ್ನಾಗಿ ಬೆಳೆಯಬಹುದು. ಆದರೂ ಈ ಬೆಳೆಗೆ ಕೆಂಪು ಗೋಡು ಮಣ್ಣು ಹೆಚ್ಚು ಯುಕ್ತ.

**ಹವಾಗುಣ :** ಇದು ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯದ ಹವಾಗುಣದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಉಷ್ಣಾಂಶ ಹೆಚ್ಚಾಗಿರುವ ಒಣ ಪ್ರದೇಶಗಳಲ್ಲಿ ಈ ಬೆಳೆ ಹುಲುಸಾಗಿ ಬರುತ್ತದೆ. ಹವಾಗುಣದ ಏರುಪೇರುಗಳಿಗೆ ಹೊಂದಿಕೊಂಡು ಬೆಳೆಯುವ ಸಾಮರ್ಥ್ಯವಿರುವಂಥದ್ದು. ಹೆಚ್ಚಾಗಿ ಮಳೆ ಬೀಳುವ ಪ್ರದೇಶದಲ್ಲಿ ಗಿಡದ ಬೆಳವಣಿಗೆ ಉತ್ತಮವಾಗಿದ್ದು ಹಣ್ಣುಗಳು ಮಾತ್ರ ಕಳಪೆ ಗುಣಮಟ್ಟದ್ದಾಗಿರುತ್ತವೆ. ಚಳಿಗಾಲವಿದ್ದಲ್ಲಿ ಹಣ್ಣಿನ ಗುಣಮಟ್ಟ ಉತ್ತಮವಾಗಿರುತ್ತದೆ. ಹಾಗಾಗಿ ಒಣಹವೆಯಿಂದ ಕೂಡಿದ ವಾತಾವರಣವೇ ಈ ಬೆಳೆಗೆ ಉತ್ತಮವಾದುದು.

**ಸಸ್ಯಾಭಿವೃದ್ಧಿ :** ಬೀಜದಿಂದ ಸಸ್ಯಾಭಿವೃದ್ಧಿ ಸಾಧ್ಯವಿದೆ. ಬೀಜವನ್ನು ಬಿತ್ತಿ ಸಸಿಗಳನ್ನಾಗಿ ಮಾಡಿ ನೆಡುವುದೇ ಹೆಚ್ಚಾಗಿ ಬಳಕೆಯಲ್ಲಿರುವ ಪದ್ಧತಿಯಾದರೂ, ವೈಜ್ಞಾನಿಕವಾಗಿ 'ಬಡ್ಡಿಂಗ್' 'ಗ್ರಾಫ್ಟಿಂಗ್', 'ಲೇಯರಿಂಗ್' ಪದ್ಧತಿಗಳನ್ನನುಸರಿಸಿ ಸಸಿಗಳನ್ನು ಬೆಳೆಸಿ ನೆಡುವುದು ಒಳ್ಳೆಯ ಪದ್ಧತಿ. ಇದರಿಂದ ಸುಧಾರಿತ ಜಾತಿಯ, ಉತ್ತಮ ದರ್ಜೆಯ ದೊಡ್ಡ ಮತ್ತು ಬೀಜರಹಿತವಾದ ರುಚಿಕರವಾದ ಹಣ್ಣುಗಳನ್ನು ಪಡೆಯಲು ಅನುಕೂಲವಾಗುತ್ತದೆ. ಸಸ್ಯದ ಕವಲು ಬೇರುಗಳನ್ನು ಕಾಂಡದಿಂದ 75-100 ಸೆಂ.ಮೀ. ಕೆಳಗೆ ಕತ್ತರಿಸಿ ಅಥವಾ ಗಾಯಗೊಳಿಸಿ ಅವುಗಳಿಂದ ಬೆಳೆದ ಕಾಂಡದಿಂದಲೂ ಸಸ್ಯಾಭಿವೃದ್ಧಿ ಕ್ರಿಯೆ ನಡೆಸಬಹುದು. ಗೂಟಿ ವಿಧಾನದಿಂದಲೂ ಬೇರು ಬರಿಸಬಹುದು ಅಥವಾ 10-16 ಸೆಂ.ಮೀ. ಉದ್ದದ ಬೇರುಗಳನ್ನು ಕತ್ತರಿಸಿ ನೆಲದಲ್ಲಿ ಹೂಳಿಟ್ಟು ನೀರೆರೆದು ನೆಡಲು ಬೇಕಾದ ಗಿಡಗಳನ್ನು ಪಡೆಯಬಹುದು. ಕರ್ನಾಟಕದಲ್ಲಿ ಕಸಿ ಮಾಡಿ ನೆಡುವುದೇ ವಾಡಿಕೆಯಲ್ಲಿರುವ ಪದ್ಧತಿ. ವಿದೇಶಗಳಲ್ಲಿ ಗುರಾಣಿಕಸಿ, ಫೋರ್‌ಕಟ್ ವಿಧಾನಗಳಿಂದ ಕಸಿ ಮಾಡುತ್ತಿದ್ದರೂ ಅದು ಯಶಸ್ವಿಯಾಗಿಲ್ಲ.

**ಬೇಸಾಯ ಕ್ರಮ : ನಾಟಿ ಮಾಡುವುದು :** ಭೂಮಿಯನ್ನು ಉಳುಮೆ ಮಾಡಿ ಸಿದ್ಧಪಡಿಸಿ ಮಣ್ಣಿನ ಫಲವತ್ತತೆಗನುಗುಣವಾಗಿ 6 ರಿಂದ 7.5 ಮೀ ಅಂತರದಲ್ಲಿ 90 ಘನ ಸೆಂ.ಮೀ. ಗಾತ್ರದ ಗುಂಡಿಗಳನ್ನು ತೋಡಿ ಮೇಲ್ಮಣ್ಣು ಮತ್ತು ಸಾವಯವ ಗೊಬ್ಬರದ ಮಿಶ್ರಣದಿಂದ ತುಂಬಬೇಕು. ನಾಟಿ ಮಾಡುವಾಗ ಗಿಡಗಳ ಕಸಿ ಮಾಡಿದ ಭಾಗ ಭೂಮಿಯ ಮೇಲ್ಭಾಗದಲ್ಲಿರುವಂತೆ ಜಾಗ್ರತೆ ವಹಿಸಿ, ಗಿಡಗಳಿಗೆ ಕೋಲಿನ ಆಸರೆ ಕೊಟ್ಟು ಕಟ್ಟಬೇಕು.

**ಅಂತರಬೇಸಾಯ :** ಉತ್ತಮ ಇಳುವರಿಗಾಗಿ ಮಳೆಗಾಲದ ಪ್ರಾರಂಭದಲ್ಲಿ ಗಿಡಗಳಿಗೆ ಗೊಬ್ಬರಗಳನ್ನು ಒದಗಿಸಿ ಹದಿನೈದು ದಿನಗಳಿಗೊಮ್ಮೆ ನೀರು ಹಾಯಿಸಿ, ಗಿಡಗಳ ಪಾತಿಗಳನ್ನು ಕಳೆಯಿಂದ ಮುಕ್ತವಾಗಿಡಬೇಕು. ಎಳೆ ಸಸಿಗಳಿಗೆ ನೆಟ್ಟ 2-3 ತಿಂಗಳವರೆಗಾದರೂ ಮಣ್ಣಿನ ಹದವರಿತು ನೀರು ಉಣಿಸುವುದು ಒಳ್ಳೆಯದು. ವರ್ಷಕ್ಕೆ ಎರಡಾವರ್ತಿ 150 ಕೆ.ಜಿ. ಕೊಟ್ಟಿಗೆ ಗೊಬ್ಬರ, 3 ಕೆ.ಜಿ. ಕಡ್ಲೆ ಹಿಂಡಿ ಮಿಶ್ರ ಮಾಡಿ ಒಂದು ಸಲಕ್ಕೆ ಅರ್ಧರ್ಧ ಭಾಗವನ್ನು ಕೊಟ್ಟು ನೀರುಣಿಸಿದರೆ ಫಸಲು ವೃದ್ಧಿಸುತ್ತದೆ. ನಾಟಿ ಮಾಡಿದ ಮೊದಲ 3-4 ವರ್ಷಗಳ ತನಕ ತರಕಾರಿ ಮತ್ತು ದ್ವಿದಳ ಧಾನ್ಯದ ಬೆಳೆಗಳನ್ನು ಸೀಬೆ ತೋಟದಲ್ಲಿ ಅಂತರ ಬೆಳೆಗಳನ್ನಾಗಿ ಬೆಳೆಸಬಹುದು. ಗಿಡಗಳು ಒಂದು ಮೀಟರ್ ಬೆಳೆಯುವವರೆಗೆ ಕಾಂಡದ ಮೇಲೆ ಯಾವುದೇ ಕವಲುಗಳು ಬೆಳೆಯದಂತೆ ನೋಡಿಕೊಳ್ಳಬೇಕು.

ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ಎರಡು ವಾರಗಳ ಅಂತರದಲ್ಲಿ ಸಿಂಪರಣೆ ಮಾಡಬೇಕು. ಮುತುವರ್ಜಿ ವಹಿಸಿ ಬೇಸಾಯ ಮಾಡಿದರೆ ಉತ್ತಮ ಫಸಲು ಪಡೆಯಬಹುದು. ನೆಟ್ಟಿರುವ ತಳಿಗಳನ್ನನುಸರಿಸಿ ಎರಡು ವರ್ಷಗಳ ಅನಂತರ ಕಾಯಿ ಬಿಡಲು ಮೊದಲಾಗುತ್ತದೆ. ನಾಲ್ಕು ವರ್ಷಗಳು ಆದ ಮೇಲೆ ಅಧಿಕ ಫಸಲು ಸಿಕ್ಕುತ್ತದೆ. ಸಾಮಾನ್ಯವಾಗಿ ವರ್ಷಕ್ಕೆ ಮೂರು ಬಾರಿ ಫಸಲು ಬಿಡುತ್ತದೆ, ಕೆಲವೊಮ್ಮೆ ವರ್ಷವಿಡೀ ಫಸಲು ನೀಡುವುದೂ ಉಂಟು. ಉತ್ತರಭಾರತದಲ್ಲಿ ಮಳೆಗಾಲದಲ್ಲಿ ಹೂ ಬಿಟ್ಟು ಚಳಿಗಾಲದಲ್ಲಿ ಪಕ್ವವಾಗುತ್ತದೆ. ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಅಕ್ಟೋಬರ್‌ನಲ್ಲಿ ಬೆಳೆಬಿಡುತ್ತದೆ. ಗಿಡದ ರೆಂಬೆಕೊಂಬೆಗಳು ಫಸಲಿನ ಭಾರಕ್ಕೆ ಅಕ್ಕಪಕ್ಕಕ್ಕೆ ಬಾಗುವುದರಿಂದ ಅವುಗಳಿಗೆ ಆಧಾರ ಕೊಡಬೇಕು. ಇಲ್ಲವೆ ಸವರುವಾಗ ಪ್ರಬಲ ರೆಂಬೆ ಕೊಂಬೆಗಳನ್ನು ಮಾತ್ರ ಬಿಟ್ಟು ಉಳಿದವುಗಳನ್ನು ಕತ್ತರಿಸಬೇಕು. ಪ್ರತೀ ವರ್ಷ ಹೀಗೆ ಮಾಡುತ್ತಿದ್ದರೆ ಉತ್ತಮ. ಎಳೆ ಸಸಿಗಳು ಫಸಲು ಬಿಡಲು ಪ್ರಾರಂಭಿಸಿದೊಡನೆ ಅವುಗಳನ್ನು ಒಂದಕ್ಕೊಂದು ಬಗ್ಗಿಸಿ ಕಟ್ಟುವುದರಿಂದ ಕಂಕುಳ ಮೊಗ್ಗುಗಳು ಹೆಚ್ಚಾಗಿ ಬೆಳೆದು ಫಸಲು ಅಧಿಕವಾಗುತ್ತದೆ.

ಸೀಬೆ ಗಿಡಗಳು ಸುಮಾರು 40 ವರ್ಷಗಳ ತನಕ ಫಸಲು ಕೊಡುತ್ತವೆ. ಎಂದು ಅಂದಾಜು ಮಾಡಲಾಗಿದೆಯಾದರೂ ಲಾಭದಾಯಕ ಬೆಳೆ 15-20 ವರ್ಷಗಳ ತನಕ ಸಿಗುತ್ತದೆ. ಗಿಡದ ವಯಸ್ಸಿಗನುಗುಣವಾಗಿ ಪ್ರತಿ ಗಿಡದ ಹಣ್ಣಿನ ಇಳುವರಿ ವ್ಯತ್ಯಾಸವಾಗುತ್ತದೆ. 10 ವರ್ಷದ ಗಿಡದಿಂದ ಪ್ರತಿ ವರ್ಷಕ್ಕೆ ಸುಮಾರು 1000 ದಿಂದ 1500 ಹಣ್ಣುಗಳು ದೊರೆಯುತ್ತವೆ. (100 ರಿಂದ 150 ಕಿ.ಗ್ರಾಂ.) ಬಲಿತ ಕಾಯಿಗಳು ನಸು ಹಳದಿ ಬಣ್ಣಕ್ಕೆ ತಿರುಗಿದಾಗ ಕಟಾವಿಗೆ ಸರಿಯಾದ ಕಾಲವೆಂದು ತಿಳಿಯಬೇಕು. ಹಣ್ಣುಗಳನ್ನು ದೂರದ ಮಾರುಕಟ್ಟೆಗೆ ಒಯ್ಯಬೇಕಾದಲ್ಲಿ ಸ್ವಲ್ಪ ಮುಂಚೆಯೇ ಕೊಯ್ದು ಸಂಗ್ರಹಿಸುವುದು ಒಳ್ಳೆಯದು.

**ಸಸ್ಯ ಸಂರಕ್ಷಣೆ :** ಕಜ್ಜಿ ತಿಗಣೆ, ಹಿಟ್ಟುತಿಗಣೆ, ಎಲೆ ತಿನ್ನುವ ಹುಳು, ತೊಗಟೆ ತಿನ್ನುವ ಹುಳುಗಳಿರುವ ಭಾಗಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಕಡಿದು ಸುಟ್ಟುಹಾಕಬೇಕು. ಹಿಟ್ಟು ತಿಗಣೆ, ಶಲ್ಕ ಕೀಟಗಳ ಹತೋಟಿಗಾಗಿ 40 ಮಿ.ಲೀ. ಬೇವಿನೆಣ್ಣೆ ಅಥವಾ ಹೊಂಗೆ ಎಣ್ಣೆಯನ್ನು 5 ಮಿ.ಲೀ. ಸಾಬೂನಿನ ದ್ರಾವಣದೊಂದಿಗೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. 10ದಿನಗಳ ಅನಂತರ ಅವಶ್ಯವಿದ್ದಲ್ಲಿ ಪುನರಾವರ್ತಿಸಬೇಕು. ಕಪ್ಪು ಶಿಲೀಂಧ್ರ ಹತೋಟಿ ಮಾಡಲು ಶೇ. 2ರಷ್ಟು ಗಂಜಿ (20 ಗ್ರಾಂ. 1 ಲೀ. ನೀರಿನಲ್ಲಿ) ಬೆರೆಸಿ ಸಿಂಪರಣೆ ಮಾಡಬೇಕು. ಹೀಗೆ ಮುತುವರ್ಜಿ ವಹಿಸಿದರೆ ಇಳುವರಿ ಹೆಚ್ಚುತ್ತದೆ.

ತೋಟದಲ್ಲಿ ನೀರು ಮತ್ತು ಗೊಬ್ಬರಗಳಿರುವ ಕಾರಣ ಅನೇಕ ಬಗೆಯ ಕಳೆಗಳು ಹುಟ್ಟಿಕೊಳ್ಳುತ್ತವೆ. ಕಳೆಗಳು ಹಲವಾರು ಕೀಟ ಪೀಡೆಗಳಿಗೆ ಹಾಗೂ ರೋಗಾಣುಗಳಿಗೆ ಆಸರೆಯನ್ನು ಒದಗಿಸುತ್ತದೆ. ಹಾಗಾಗಿ ಅವುಗಳನ್ನು ಸಕಾಲದಲ್ಲಿ ಕಿತ್ತು ನಾಶಮಾಡಬೇಕು. ಸಾಲುಗಳ ನಡುವೆ ವರ್ಷದಲ್ಲಿ ಒಂದೆರಡು ಸಾರಿ ಹಗುರವಾಗಿ ಉಳುಮೆ ಮಾಡಿದ್ದೇ ಆದರೆ ಬಹುತೇಕ ಕಳೆಗಳು ಇಲ್ಲವಾಗುತ್ತವೆ ಹಾಗೂ ಬೆಳೆದ ಕಳೆಗಳನ್ನು ಕಿತ್ತುಹಾಕಬಹುದು. ಮಳೆಗಾಲದ ಪ್ರಾರಂಭದಲ್ಲಿ ಒಮ್ಮೆ ಮತ್ತು ಮಳೆಗಾಲದ ಕಡೆಯಲ್ಲಿ ಮತ್ತೊಮ್ಮೆ ಅಂತರ ಬೇಸಾಯ ಮಾಡಿದರೆ ಸಾಕು. ಕಳೆಗಳನ್ನು ಅವು ಹೂವು

ಬಿಡುವ ಮೊದಲೇ ಕಿತ್ತು ತೆಗೆಯುವುದು ಒಳ್ಳೆಯದು. ಕೊನ್ನಾರಿ, ಗರಿಕೆ ಮುಂತಾದವುಗಳನ್ನು ಆಳವಾಗಿ ಅಗತೆ ಮಾಡಿ, ಕಿತ್ತು ತೆಗೆಯಬೇಕು.

ಅಂತರಬೆಳೆಗಳನ್ನು ಬೆಳೆಯುವುದರಿಂದ ಕಳೆಯನ್ನು ಹತೋಟಿಗೆ ತರಬಹುದು. ತೋಟಕ್ಕೆ ನೀರಾವರಿ ಸೌಲಭ್ಯವಿದ್ದರೆ ಪಪ್ಪಾಯಿ, ಬಾಳೆ, ದಾಳಿಂಬೆ, ಅಂಜೂರ, ನುಗ್ಗೆ, ಕರಿಬೇವು, ತರಕಾರಿ, ಹೂವು ಮುಂತಾದವನ್ನು ಬೆಳೆದು ಒಳ್ಳೆ ಲಾಭವನ್ನು ಮಾಡಬಹುದು. ಹಸುರು ಗೊಬ್ಬರದ ಬೆಳೆಗಳಾದ ಹುರುಳಿ, ಹೆಸರು ಮೊದಲಾದವನ್ನು ಬೆಳೆದರೆ ಭೂಮಿ ಫಲವತ್ತಾಗಿ ಕಳೆಯನ್ನು ಸುಧಾರಿಸುತ್ತದೆ.

**ಉಪಯೋಗಗಳು :** ಇದರಲ್ಲಿ 'ಎ' ಮತ್ತು 'ಸಿ' ಅನ್ನಾಂಗ ಅಧಿಕವಿದೆ. ಔಷಧಿಗೆ ಉಪಯುಕ್ತವಾದ ಸಸ್ಯದ ಭಾಗಗಳೆಂದರೆ ಬೇರು, ಎಲೆ, ಹೂ ಮತ್ತು ಹಣ್ಣು. ಸೀಬೆಯ ಬೇರಿನ ತೊಗಟೆ ಒಗರು. ಇದು ಅತಿಭೇದಿ ನಿಯಂತ್ರಣಕ್ಕೆ ಉಪಯುಕ್ತವಾದ ಭಾಗ. ಬೇರಿನ ಕಷಾಯವನ್ನು ಗರ್ಭಕೋಶ ಹೊರಬಿದ್ದಾಗ ಕೊಡಬಹುದು. ಸೀಬೆಯ ಎಲೆಯನ್ನು ಜಜ್ಜಿ ಗಾಯ  ಮತ್ತು ಹುಣ್ಣುಗಳಿಗೆ ಹಚ್ಚುತ್ತಾರೆ. ಇದು ಕರುಳಿನ ಸ್ನಾಯು ಸ್ತಂಭಕ, ಚಿಗುರೆಲೆಯು ಶಕ್ತಿವರ್ಧಕ. ಎಲೆಯ ಕಷಾಯವನ್ನು ಕಾಲರ ವಾಂತಿಯನ್ನು ನಿಲ್ಲಿಸಲು ಅಜೀರ್ಣಕ್ಕೆ ಸಂಬಂಧಿಸಿದ ರೋಗಗಳ ನಿವಾರಣೆಗೆ ಉಪಯೋಗವಿದೆಯೆಂದು ತಿಳಿಯುತ್ತದೆ. ಎಲೆಯನ್ನು ಜಗಿದರೆ ಹಲ್ಲುನೋವಿಗೆ ಒಳ್ಳೆಯದು. ಹೊಟ್ಟೆ ನೋವು ಮತ್ತು ಜ್ವರ ವಾಸಿಯಾದ ಅನಂತರ ಪೇರಲೆ ಎಲೆ ಕಷಾಯದಿಂದ ಸ್ನಾನ ಮಾಡಿದರೆ ಉತ್ತಮ ಪರಿಣಾಮ ದೊರಕುತ್ತದೆ. ಸಂಧಿವಾತದ ಭಾಗಗಳಿಗೆ ಎಲೆಯನ್ನು ಹಚ್ಚಬೇಕು. ಅಪಸ್ಮಾರದಲ್ಲಿ ರಸವನ್ನು ಉಪಯೋಗಿಸಿದರೆ ಗುಣಮುಖವಾಗುತ್ತದೆ. ಎಲೆಯ ರಸ ಮೆದುಳಿನ ರೋಗಗಳಿಗೆ, ಮೂತ್ರ ಪಿಂಡದ ಊದುವಿಕೆಗೆ ಹಾಗೂ ಪೋಷಕಾಂಶಗಳ ಕೊರತೆಯಿಂದಾದ ರೋಗಕ್ಕೆ ಉಪಯೋಗಿಸಬಹುದು. ಪೇರಳೆಯ ಹೂವು ಶರೀರಕ್ಕೆ ತಂಪು ಕಾರಕ. ಕಫ, ಜ್ವರದಲ್ಲಿ ಮತ್ತು ಕಣ್ಣಿನ ಬೇನೆಗೆ ಉಪಯುಕ್ತವಾದುದು. ಸೀಬೆಹಣ್ಣಿಗೆ ಕಾಮೋತ್ತೇಜಕ ಮತ್ತು ಕಫವನ್ನುಂಟು ಮಾಡುವ ಗುಣವಿದೆ. ಇದು ವಾತ ಮತ್ತು ಪಿತ್ತರಸ ಉತ್ಪಾದನೆಯ ಅಸ್ತವ್ಯಸ್ತವನ್ನು ಗುಣಪಡಿಸುತ್ತದೆ. ಇದು ಪುಷ್ಟಿದಾಯಕ, ಹೃದಯಕ್ಕೆ ಹಿತಕಾರಿ. ಮಧುಮೇಹ, ಸಕ್ಕರೆ ಕಾಯಿಲೆಗಳಿಗೆ ಪ್ರತಿ ದಿನ ಬೆಳಿಗ್ಗೆ ಒಂದು ಚಮಚ ಸೀಬೆ ಎಲೆಗಳ ರಸಕ್ಕೆ ಒಂದು ಚಮಚ ಜೇನುತುಪ್ಪ ಬೆರೆಸಿ ಕುಡಿಯಬೇಕು. ಹೀಗೆ 48 ದಿನಗಳು ಸೇವಿಸಿದರೆ ಸಕ್ಕರೆ ಕಾಯಿಲೆ ಹತೋಟಿಗೆ ಬರುವುದು.

ಮಾಗಿದ ಸೀಬೆಹಣ್ಣಿನ ಬೀಜ ತೆಗೆದು ಸಣ್ಣಗೆ ಕತ್ತರಿಸಿ ಸ್ವಲ್ಪ ಬಿಸಿಮಾಡಿ ಹದವಾಗಿ ಉಪ್ಪಿನ ಪುಡಿಹಚ್ಚಿ ಬಿಸಿಯಾಗಿ ತಿನ್ನುವುದರಿಂದ ನೆಗಡಿ ಮತ್ತು ಕೆಮ್ಮು ವಾಸಿಯಾಗುವುದು. ಅಲ್ಲದೆ ಸೀಬೆಹಣ್ಣಿನಲ್ಲಿ 'ಸಿ' ಜೀವಸತ್ವ ಅಧಿಕವಿರುವುದರಿಂದ ಸಾಮಾನ್ಯ ಆರೋಗ್ಯಕ್ಕೂ ಹಿತಮಿತವಾಗಿ ಹಣ್ಣನ್ನು ಸೇವಿಸುವುದು ಒಳ್ಳೆಯದು. ಸಾಧಾರಣ ರಕ್ತಭೇದಿಗೆ ಸೀಬೆಕಾಯಿಯ ಕಷಾಯ ತಯಾರಿಸಿ ಮಜ್ಜಿಗೆಯೊಡನೆ ಸೇವಿಸಿದರೆ ಫಲಕಾರಿ. ಪೂಜೆ, ವ್ರತಗಳಲ್ಲಿ ಈ ಹಣ್ಣನ್ನು ಬಳಸುತ್ತಾರೆ. ಮಾಗಿದ ಸೀಬೆಹಣ್ಣಿನಿಂದ ವಿಶೇಷವಾಗಿ ಜೆಲ್ಲಿಯನ್ನು ತಯಾರಿಸುತ್ತಾರೆ.

*ವಿ.ಎಂ.*

**ಸುಗಂಧರಾಜ** ಸುಗಂಧರಾಜವು ಅಮರಿಲ್ಲಿಡೇಸಿ ಕುಟುಂಬಕ್ಕೆ ಸೇರಿದೆ. ಇದರ ಸಸ್ಯವೈಜ್ಞಾನಿಕ ಹೆಸರು ಪಾಲಿಯಾಂಥಸ್ ಟ್ಯೂಬರೋಸ್. ಆಂಗ್ಲಭಾಷೆಯಲ್ಲಿ ಟ್ಯೂಬರೋಸ್ ಎಂದು ಕರೆಯುತ್ತಾರೆ. ಇದರ ಮೂಲ ಮೆಕ್ಸಿಕೊ ಹಾಗೂ ಮಧ್ಯೆ ಅಮೆರಿಕ. ಸುಗಂಧ ದ್ರವ್ಯಗಳಲ್ಲಿ ಬಳಸುವಂತಹ ಹೂವುಗಳಲ್ಲಿ ಸುಗಂಧರಾಜವೂ




ಒಂದು. ವಾಣಿಜ್ಯ ಬೆಳೆಗಳಲ್ಲಿ ಅತಿ ಮುಖ್ಯವಾದ ಹೂವಿನ ಬೆಳೆಯಾಗಿದೆ. ಇದನ್ನು ರಜನಿಗಂಧ, ನೀಲ ಸೊಪೇನಿ, ನೀಲಸಂಪಿಗೆ ಎಂದು ಕರೆಯುತ್ತಾರೆ. ಕರ್ನಾಟಕದಲ್ಲದೆ ತಮಿಳುನಾಡು, ಮಹಾರಾಷ್ಟ್ರ ಹಾಗೂ ಪಶ್ಚಿಮ ಬಂಗಾಳದಲ್ಲೂ ಬೆಳೆಯುತ್ತಾರೆ. ಸುಗಂಧ ದ್ರವ್ಯಕ್ಕಾಗಿ ಹಾಗೂ ಹಾರಗಳ ತಯಾರಿಕೆಗಾಗಿ, ಬಿಡಿಹೂವನ್ನು, ಕದಿರನ್ನೂ ಪುಷ್ಪ ಗುಚ್ಛವನ್ನು ತಯಾರಿಸಲು ಬಳಸುತ್ತಾರೆ. ವಿದೇಶಗಳಲ್ಲಿ ಸುಗಂಧ ತೈಲಕ್ಕೆ ಹೆಚ್ಚಿನ ಬೇಡಿಕೆ ಇದ್ದು, ಬೆಲೆ ಬಾಳುವಂತಹ ಸೌಂದರ್ಯ ಸಾಧನಗಳು, ಸುಗಂಧವಸ್ತುಗಳು ಆಗರಬತ್ತಿ, ಕೇಶತೈಲ, ಪನ್ನೀರು ಮತ್ತು ಅತ್ತರ್‌ಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಇದು ಉಷ್ಣಾಂಶ ಹಾಗೂ ಅರೆ ಉಷ್ಣಾಂಶ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದಕ್ಕೆ 20 ಡಿಗ್ರಿಯಿಂದ 30 ಡಿಗ್ರಿ ಉಷ್ಣಾಂಶವಿದ್ದರೆ ಹೆಚ್ಚಿನ ಇಳುವರಿಯನ್ನೂ ಪಡೆಯಬಹುದು. ಎಲ್ಲಾವಿಧದ ಮಣ್ಣಿನಲ್ಲೂ ಬೆಳೆಯುತ್ತಾರೆ. ಫಲವತ್ತಾದ ಭೂಮಿ, ನೀರು ಬಸಿದು ಹೋಗುವಂತಹ ಮಣ್ಣು ಇದರ ಬೇಸಾಯಕ್ಕೆ ಉತ್ತಮ. ಇಂತಹ ಮಣ್ಣಿನಲ್ಲಿ ಹೆಚ್ಚು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವಂತಹ ಸಾಮರ್ಥ್ಯವಿರಬೇಕು.

ಕರ್ನಾಟಕದಲ್ಲಿ ಡಬಲ್ ಮತ್ತು ಸಿಂಗಲ್ ತಳಿಗಳು ಮುಖ್ಯವಾದವು. ವರ್ಷದ ಎಲ್ಲಾ ಕಾಲದಲ್ಲೂ ನೆಡುವರು. ಏಪ್ರಿಲ್ - ಜೂನ್‌ನಲ್ಲಿ ನೆಡುವುದು ಒಳ್ಳೆಯದು. ಸುಮಾರು 2 ರಿಂದ 3 ಸೆಂ.ಮೀ. ವ್ಯಾಸದ ಗಡ್ಡೆಗಳನ್ನು ನಾಟಿಗೆ ಬಳಸುತ್ತಾರೆ. ಪ್ರತಿ ಎಕರೆಗೆ ನಾಟಿ ಮಾಡಲು 360 ಕೆ.ಜಿ. ಗಡ್ಡೆಗಳು ಬೇಕಾಗುತ್ತದೆ.

ಸಸ್ಯಾಭಿವೃದ್ಧಿಯು ಬೀಜದಿಂದ ಇಲ್ಲವೇ ಗಡ್ಡೆಗಳ ಮೂಲಕ ಮಾಡಬಹುದು. ಬೀಜ ಪದ್ಧತಿ ನಿಧಾನ. ಹೊಸ ತಳಿಗಳನ್ನು ಉತ್ಪಾದಿಸುವಾಗ

ಮಾತ್ರ ಬೀಜ ಪದ್ಧತಿಯನ್ನು ಅನುಸರಿಸುತ್ತಾರೆ. ದೊಡ್ಡಗಾತ್ರದ ಗಡ್ಡೆಗಳನ್ನು ಬಿತ್ತಿದರೆ ದೊಡ್ಡಗಾತ್ರ ಹೂವುಗಳನ್ನು ಪಡೆಯಬಹುದು. ಸುಮಾರು 3 ಸೆಂ.ಮೀ. ಗಾತ್ರದ ಗಡ್ಡೆಗಳನ್ನು ಬಿತ್ತನೆಗೆ ಬಳಸಬೇಕು.

ಎರಡು ಇಲ್ಲವೇ ಮೂರು ಭಾರಿ ಆಳವಾಗಿ ಉಳುಮೆ ಮಾಡಿ ಕಳೆಗಳನ್ನು ತೆಗೆದು ಭೂಮಿಯನ್ನೂ ಸಮಮಾಡಿ ಯುಕ್ತಪ್ರಮಾಣದ ಕಳಿತ ಕೊಟ್ಟಿಗೆ ಗೊಬ್ಬರ ಹರಡಿ ಮಿಶ್ರ ಮಾಡಬೇಕು. ಅನಂತರ ಗಿಡಗಳ ಅನುಕೂಲಕ್ಕೆ ಸರಿಯಾಗಿ ಮಡಿಗಳನ್ನು ರಚಿಸಿ ಕಾಲುವೆಗಳನ್ನು ತೆಗೆಯಬೇಕು. ಕಡಿಮೆ ಮಳೆಯಪ್ರದೇಶದಲ್ಲಿ 25 ಸೆಂ.ಮೀ. ಅಂತರದಲ್ಲಿ ಕಾಲುವೆಯನ್ನು ತೆಗೆಯಬೇಕು. ಸಾಲಿನಲ್ಲಿ 22.5 ಸೆಂ.ಮೀ.ಗೆ ಒಂದರಂತೆ ಗಡ್ಡೆಗಳನ್ನು ನೆಡಬೇಕು. ಬಿತ್ತನೆ ಸಮಯದಲ್ಲಿ ಭೂಮಿ ಹಸಿಯಾಗಿರಬೇಕು. ಬಿತ್ತನೆಯ ಅನಂತರ ನೀರು ಹಾಯಿಸಬೇಕು. ಮಣ್ಣು ಫಲವತ್ತಾಗಿದ್ದರೆ ಹೆಚ್ಚಿನ ಇಳುವರಿಯನ್ನು ಪಡೆಯಬಹುದು. ಪ್ರತಿ ಚದರ ಮೀಟರ್‌ಗೆ 20 ಗ್ರಾಂ ಸಾರಜನಕ 30 ರಿಂದ 40 ಗ್ರಾಂ ರಂಜಕ ಮತ್ತು 30 ರಿಂದ 40 ಗ್ರಾಂ ಪೊಟ್ಯಾಸ್ ಅಂಶವುಳ್ಳ ರಾಸಾಯನಿಕ ಗೊಬ್ಬರವನ್ನು ಸಮಪ್ರಮಾಣದಲ್ಲಿಒದಗಿಸಬೇಕು. ಸಸ್ಯದ ಬೆಳವಣಿಗೆಗೆ ಮತ್ತು ಹೂವುಗಳು ಹೆಚ್ಚು ಬಿಡಲು ಸಾರಜನಕ ಸಹಾಯಕ. ರಂಜಕ ಮತ್ತು ಪೊಟ್ಯಾಷ್ ಅಂಶಗಳು ಉತ್ತಮ ಗುಣಮಟ್ಟದ ಹೂವು ಬಿಡುವುದರೊಂದಿಗೆ ರೋಗ ಮತ್ತು ಕೀಟಗಳ ಬಾಧೆಯಿಂದ ರಕ್ಷಿಸುತ್ತವೆ. ಗಡ್ಡೆಗಳನ್ನು ನೆಡುವ ಮುನ್ನ ಅರ್ಧದಷ್ಟು ಸಾರಜನಕ ಮತ್ತು ಪೂರ್ಣ ರಂಜಕ ಹಾಗೂ ಪೊಟ್ಯಾಷ್ ಅಂಶವನ್ನು ಮಣ್ಣಿನಲ್ಲಿ ಮಿಶ್ರ ಮಾಡಬೇಕು. ಉಳಿದರ್ಧ ಸಾರಜನಕವನ್ನು ಬಿತ್ತನೆ ಆದ ಆರು ವಾರಗಳ ಅನಂತರ ಮೇಲು ಗೊಬ್ಬರವಾಗಿ ಕೊಡಬೇಕು. ಹೂವುಗಳ ತೆನೆ ಕಾಣಿಸಿದ ತರುವಾಯ ಎರಡು ವಾರಕ್ಕೊಮ್ಮೆ ದ್ರವರೂಪದ ಗೊಬ್ಬರ ಕೊಡುವುದರಿಂದ ಹೆಚ್ಚು ಲಾಭವನ್ನು ಪಡೆಯಬಹುದು.

**ಗೊಬ್ಬರ ತಯಾರಿಸುವ ವಿಧಾನ :** ನಾಲ್ಕು ಕಿಲೋ.ಗ್ರಾಂ. ಹಸಿ ಸಗಣಿಗೆ ಅಷ್ಟೇ ಅಳತೆಯ ನೀರನ್ನು ಹಾಕಿ ಮಿಶ್ರಗೊಳಿಸಿ 4 ರಿಂದ 10 ದಿನಗಳವರೆಗೆ ಬಿಡಬೇಕು. ಅದು ಚೆನ್ನಾಗಿ ಕೊಳೆತ ಅನಂತರ 50 ಗ್ರಾಂ ಸೂಪರ್ ಪಾಸ್ಪೇಟ್ ಬೆರೆಸಿ ಚೆನ್ನಾಗಿ ಕಲಸಿ ಕೆಲವೇ ದಿನದಲ್ಲಿ ಅದು ಟೀ ಕಷಾಯದ ರೂಪ ತಾಳುತ್ತದೆ. ಆಗ ಅದರ ಮೇಲಿನ ತಿಳಿಯನ್ನು ಮಾತ್ರ ಪ್ರತಿ ಚದರ ಮೀಟರ್ ಒಂದಕ್ಕೆ ಅರ್ಧ ಲೀಟರ್ ಬಳಸಬೇಕು.

ನಾಟಿ ಮಾಡುವ ಮುನ್ನ ಸಮರ್ಪಕವಾಗಿ ನೀರು ಕೊಡುವುದರಿಂದ ಗಡ್ಡೆಗಳು ಮೊಳಕೆ ಒಡೆಯಲು ಸಹಾಯಕವಾಗುತ್ತದೆ. ಒಣಹವೆಯಿದ್ದಾಗ ವಾರಕ್ಕೆ ಒಮ್ಮೆ ಮತ್ತು ಮಳೆ ಇಲ್ಲದಿದ್ದಾಗ ನಾಲ್ಕು ದಿನಗಳಿಗೊಮ್ಮೆ ನೀರು ಹಾಯಿಸಬೇಕು. ಮರಳು ಮಣ್ಣಿನ ಭೂಮಿಯಾದರೆ ಮತ್ತೆ ಮತ್ತೆ ನೀರು ಹಾಯಿಸಬೇಕು.

ಅಂತರ ಬೇಸಾಯವನ್ನು ಮಾಡುವವರು ಸಾಲುಗಳ ಮಧ್ಯೆ ಮಣ್ಣನ್ನು ಆಗ್ಗಿಂದಾಗ್ಗೆ ಹಗುರವಾಗಿ ಕೆದಕಿ ಬುಡಗಳಿಗೆ ಮಣ್ಣು ಹಾಕಬೇಕು. ಇದರಿಂದ ಕಳೆಗಳು ನಾಶವಾಗುತ್ತದೆ ಹಾಗೂ ಗಿಡಗಳಿಗೆ ಶಕ್ತಿ ಸಿಗುತ್ತದೆ. ವರುಷಕ್ಕೆ 4 ರಿಂದ 5 ಭಾರಿ ಈ ರೀತಿಯ ಅಂತರ ಬೇಸಾಯ ಮಾಡಬಹುದು.

ಒಣಗಿದ ಎಲೆಗಳನ್ನು ಬಿಡಿಸಿ ತೆಗೆಯಬೇಕು. ಸಾಲುಗಳ ಮಧ್ಯೆ ಒಣ ಹುಲ್ಲನ್ನು ಮಂದವಾಗಿ ಹರಡುವುದರಿಂದ ಮಣ್ಣಿನಲ್ಲಿ ತೇವಾಂಶ ಸ್ವಲ್ಪ ಕಾಲ ಉಳಿಯುವುದರ ಜೊತೆಗೆ ಕಳೆಗಳು ಬೆಳೆಯುವುದಿಲ್ಲ. ಗಿಡಗಳಿಗೆ ಆಸರೆ ನೀಡುವುದರಿಂದ ಎತ್ತರಕ್ಕೆ ಬೆಳೆದ ಹೂ ತೆನೆಗಳನ್ನು ರಕ್ಷಿಸಬಹುದು.

ಹೂವುಗಳ ಗಾತ್ರವನ್ನು ಹೆಚ್ಚಿಸಲು ಚೋದಕಗಳನ್ನು ಬಳಸುವರು. ಜಿಬ್ಬರೆಲ್ಲಿಕ್ ಆಮ್ಲವನ್ನು ದ್ರಾವಣ ರೂಪದಲ್ಲಿ ಗಿಡಗಳ ಮೇಲೆ ಸಿಂಪಡಿಸುವುದರಿಂದ ದೊಡ್ಡಗಾತ್ರದ ಹೂವುಗಳನ್ನು ಪಡೆಯಬಹುದು. ಬಿತ್ತನೆ ಮಾಡಿದ 10 ರಿಂದ 12 ಮತ್ತು 14 ವಾರಗಳ ಅನಂತರ 150 ಪಿ.ಪಿ.ಎಂ. ಸಿಂಪಡಿಸಬೇಕು.

**ಕೀಟಗಳು ಹಾಗೂ ರೋಗಗಳು : ಕೀಟಗಳು :** ಬೂಷ್ಟು ತಿಗಣೆಯ ಮೈಮೇಲೆಲ್ಲ ಬೂದಿಯಂಥ ಧೂಳು ಇದ್ದು, ದೇಹ ತುಂಬಾ ಮೃದುವಾಗಿದ್ದು, ಗುಂಪು ಗುಂಪಾಗಿರುತ್ತವೆ. ಇವು ಹೂವಿನ ಭಾಗಗಳನ್ನು ಕಚ್ಚಿ ರಸ ಹೀರಿ ಕಳಾಹೀನಗೊಳಿಸುತ್ತವೆ.

ಶಲ್ಕ ಕೀಟ ಇವು ತೆಳು ಹಾಗೂ ಮೃದುವಾಗಿರುವಂತಹ ಕೀಟಗಳು ಇವು ಸಹ ಗುಂಪಾಗಿದ್ದು ರಸವನ್ನು ಹೀರುತ್ತವೆ. ಇದರಿಂದ ಹೂವುಗಳು ಉದುರುತ್ತವೆ. ಇವುಗಳ ನಿಯಂತ್ರಣಕ್ಕೆ 10 ಲೀಟರ್ ನೀರಿಗೆ 10 ಮಿ.ಲೀ. ಮನೋಕ್ರೊಟೊ ಪಾಸ್ ಇಲ್ಲವೆ ಆಕ್ಸಿಡೆಮಟ್ಯಾನ್ ಮಿಶ್ರ ಮಾಡಿ ಸಿಂಪಡಿಸಬೇಕು. ಥ್ರಾಪ್ಸ್ ಈ ಕೀಟಗಳು ಸಹ ಸಾಕಷ್ಟು ಹಾನಿ ಮಾಡುತ್ತವೆ. ಇವು ತುಂಬಾ ಚಿಕ್ಕವು. ಬಣ್ಣ ಕಪ್ಪು, ಪೊರಕೆಯಂತಹ ರೆಕ್ಕೆಗಳಿದ್ದು ಹಾರಾಡುತ್ತವೆ. ಆದರೆ ಮರಿ ಕೀಟಗಳಿಗೆ ರೆಕ್ಕೆ ಇರುವುದಿಲ್ಲ. ಇವು ಹೂವಿನ ಒಳಗೆ ಇದ್ದುಕೊಂಡು ಹೂವನ್ನೆಲ್ಲಾ ತಿನ್ನುತ್ತವೆ. ಆ ಭಾಗವೆಲ್ಲಾ ಕಳಾಹೀನವಾಗಿ ಹೂವು ಒಣಗಿ ಉದುರಿ ಬೀಳುತ್ತವೆ. ಇದರ ನಿಯಂತ್ರಣಕ್ಕೆ 0.025 ಪ್ಯಾರಥಿಯಾನ್ ಇಲ್ಲವೇ 0.05 ಡೈಮಿಥೋಯೇಟ್ ಎನ್ನುವ ದ್ರಾವಣವನ್ನು ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

**ದುಂಡು ಜಂತುಗಳು :** ಇವು ಕಣ್ಣಿಗೆ ಕಾಣದಷ್ಟು ಸಣ್ಣ ಹುಳುಗಳಾಗಿದ್ದು ಬೇರುಗಳನ್ನು ಕಚ್ಚಿ ಗಾಯ ಮಾಡುತ್ತವೆ. ಹೆಚ್ಚು ಹಾನಿಯಾದಾಗ ಗಿಡಗಳ ಬೆಳೆವಣಿಗೆಯೇ ಕುಗ್ಗಿ ಎಲೆ ಮತ್ತು ಹೂವುಗಳು ಸಣ್ಣವಾಗುತ್ತವೆ. ಇದರ ನಿಯಂತ್ರಣಕ್ಕೆ 100 ಚದರ ಮೀಟರ್ ಪ್ರದೇಶಕ್ಕೆ 550 ರಿಂದ 850 ಗ್ರಾಂ ಟೆಮಿಕ್ ಇಲ್ಲವೇ ಫ್ಯೂಂಡಾನ್ ಎಕರೆಗೆ 4 ಕಿ.ಗ್ರಾಂ. ಉದುರಿಸಬೇಕು.

**ರೋಗಗಳು :** ರೋಗಗಳು ಶಿಲೀಂಧ್ರದಿಂದ ಹರಡುತ್ತವೆ. ಎಲೆ, ಹೂವಿನ ದಂಟುಗಳ ಕುತ್ತಿಗೆ ಭಾಗಗಳೆಲ್ಲಾ ಕೊಳೆಯುತ್ತವೆ. ಶಿಲೀಂಧ್ರ ಕಣಗಳು ಗಿಡಗಳ ಇತರ ಭಾಗಗಳಿಗೂ ಹರಡುತ್ತವೆ. ಅಂತಹ ಎಲೆ ಮತ್ತು ಹೂವಿನ ದಂಟು ಮುರಿದು ಬೀಳುತ್ತವೆ. ಹೆಚ್ಚು ಹಾನಿಯಾದಾಗ ಹೂವು ಬಿಡುವುದಿಲ್ಲ. ಇದಕ್ಕೆ ಶೇ. 0.2 ರಿಂದ 0.3 ಬ್ರಾಸ್ಸಿಕಾಲ್ ಅನ್ನು ಮಣ್ಣಿಗೆ ಹಾಕಬೇಕು. ಇಲ್ಲವೇ 1 ಲೀಟರ್ ನೀರಿಗೆ 3 ಗ್ರಾಂ ಮ್ಯಾಂಕೊಜೆಬ್ ಬೆರೆಸಿ ಸಿಂಪಡಿಸಬೇಕು.

**ಗಡ್ಡೆ ಕೊಳೆಯುವ ರೋಗ :** ಮಣ್ಣಿನಲ್ಲಿ ಅಧಿಕ ತೇವವಾದಾಗ ಗಡ್ಡೆಗಳು ಕೊಳೆಯುತ್ತವೆ. ಇಂತಹ ಸಮಯದಲ್ಲಿ ನೀರನ್ನು ಹದವಾಗಿ ಕೊಡಬೇಕು. ಶೇ. 0.2 ರಿಂದ 0.3 ರಷ್ಟು ಔಷಧಿಯನ್ನು ನೀರಿನಲ್ಲಿ ಮಿಶ್ರಣಮಾಡಿ ಮಣ್ಣಿಗೆ ಕೊಡಬೇಕು.

ನಾಟಿ ಮಾಡಿದ ಗಡ್ಡೆಗಳಲ್ಲಿ 3 ರಿಂದ 4 ತಿಂಗಳಿಗೆ ಹೂವಿನ ತೆನೆಗಳು ಕಾಣಬರುತ್ತವೆ. ಮುಂದೆ 20 ರಿಂದ 30 ದಿನಗಳ ಅನಂತರ ಹೂವು ಬಿಟ್ಟು ಅರಳುತ್ತವೆ. ಪ್ರಾರಂಭದಲ್ಲಿ ಹೂವಿನ ಇಳುವರಿ ಹೆಚ್ಚು. ದಿನ ಕಳೆದಂತೆ ಕಡಿಮೆಯಾಗುತ್ತದೆ. ಪೂರ್ಣ ಅರಳಿದ ಹೂವನ್ನು ಮಾತ್ರ ಬಿಡಿಸಬೇಕು. ಹೂವನ್ನು ಮುಂಜಾನೆಯ ತಂಪು ವೇಳೆ ಬಿಡಿಸುವುದು ಉತ್ತಮ. ಮಳೆ ಇಲ್ಲವೇ ಹಿಮ ಸುರಿಯುವಾಗ ಹೂವನ್ನು ಬಿಡಿಸಬಾರದು. ಇದರಿಂದ ಹೂವುಗಳು ಮೆತ್ತಗಾಗಿ ಕೊಳೆಯುತ್ತವೆ. ಚೆನ್ನಾಗಿ ಬೆಳೆದ ಬೆಳೆಯಲ್ಲಿ ಎಕರೆಗೆ 6 ರಿಂದ 8 ಟನ್ ಹೂವು ಸಿಗುತ್ತದೆ. ಬಿಡಿಸಿದ ಹೂವನ್ನು ಸಡಿಲವಾಗಿ ಬಿದಿರಿನ ಬುಟ್ಟಿಯಲ್ಲಿ ತುಂಬಿ ಸಾಗಿಸಬೇಕು. ಹೂವುಗಳನ್ನು ಅದುಮಿ ಇಲ್ಲವೇ ಒತ್ತುವುದಾಗಲಿ ಮಾಡಬಾರದು. ಹೂವುಗಳ ಮೇಲೆ ತಣ್ಣೀರನ್ನೂ ಚಿಮುಕಿಸುವುದರಿಂದ ಶಾಖದಿಂದ ಉಂಟಾದ ಬಿಸಿ ಹೋಗುತ್ತದೆ. ಸಣ್ಣ ಪ್ರಮಾಣದ ಹೂವನ್ನು, ತಾವರೆ ಎಲೆ, ಕೆಸವಿನ ಎಲೆ, ಬಾಳೆ ಎಲೆಯಲ್ಲಿ ಪಿಂಡಿ ಕಟ್ಟುತ್ತಾರೆ. ದೂರದ ಮಾರುಕಟ್ಟೆಗಳಿಗೆ ಸಾಗಿಸಲು ಸುವ್ಯವಸ್ಥಿತವಾದ ಪ್ಲ್ಯಾಸ್ಟಿಕ್ ಚೀಲಗಳಲ್ಲಿ ತುಂಬಿ ಕಳುಹಿಸಬೇಕು. ಒಮ್ಮೆ ಗಡ್ಡೆಗಳನ್ನು ನೆಟ್ಟರೆ ಸುಮಾರು 3 ರಿಂದ 4 ಕೂಳೆ ಬೆಳೆಗಳನ್ನು ಪಡೆಯಬಹುದು. ಆದರೆ ಆರಂಭದ ಫಸಲಿನಲ್ಲಿ ಇಳುವರಿಯನ್ನು ಪಡೆಯಲಾಗುವುದಿಲ್ಲ.

ಬಿತ್ತನೆ ಗಡ್ಡೆಗಳನ್ನು ಶೇಖರಿಸಿಡಲು ಹೂವು ಕಟಾವಾದ ಎರಡು ತಿಂಗಳ ಅನಂತರ ಗಡ್ಡೆಗಳು ಬಲಿತು ಹೊರ ತೆಗೆಯಲು ಸಿದ್ಧವಾಗಿರುತ್ತವೆ. ಭೂಮಿಯಿಂದ ಗಡ್ಡೆಗಳನ್ನು ಹೊರ ತೆಗೆಯುವ ಮುನ್ನ ನೀರು ಹಾಯಿಸುವುದನ್ನು ನಿಲ್ಲಿಸಿ, ಮಣ್ಣು ಒಣಗಿದ ಅನಂತರ ಗಡ್ಡೆಗಳನ್ನು ಹೊರತೆಗೆದು ಶುಚಿ ಮಾಡಬೇಕು. ಗಾತ್ರಕ್ಕೆ ಅನುಗುಣವಾಗಿ ವಿಂಗಡಿಸಿ ಆಯ್ಕೆ ಮಾಡಿದ ಗಡ್ಡೆಗಳನ್ನು ನೆರಳಿನಲ್ಲಿ ಉತ್ತಮ ಗಾಳಿಯಾಡುವ ಸ್ಥಳದಲ್ಲಿ ಇಲ್ಲವೇ ಶೀತಲೀಕರಣ ಕೊಠಡಿಯಲ್ಲಿ 10 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಲ್ಲಿ ಶೇಖರಿಸಿಡಬೇಕು. ಒಂದು ಎಕರೆಗೆ ಸುಮಾರು 8 ರಿಂದ 10 ಟನ್ ಗಡ್ಡೆಗಳನ್ನು ಪಡೆಯಬಹುದು.

*ಎಸ್.ಕೆ.ಎನ್.*

**ಸುಗಂಧ ಸಸ್ಯಗಳು** ಭಾರತೀಯರಿಗೆ ಚಿರಪರಿಚಿತವಾದ ಸುವಾಸನಾ ಸಸ್ಯಗಳೆಂದರೆ ಪನ್ನೀರು, ದವನ, ಮರುಗ, ಕಾಮಕಸ್ತೂರಿ, ಕರ್ಪೂರ ತುಳಸಿ, ತುಳಸಿ, ಮೆಂತ್ಯ ಜಾತಿಯ ಸಸ್ಯಗಳು. ಇವುಗಳ ಎಲೆಗಳನ್ನು ಸುವಾಸನಾ ತೈಲಗಳಿಗೆ, ಮೈಸಾಬೂನು ತಯಾರಿಕೆಗೆ, ಹೂಗಳ ಮಧ್ಯೆ ಸೇರಿಸಿ ಕಟ್ಟಲು ಮತ್ತು ಪೂಜಾ ಸಂದರ್ಭಗಳಲ್ಲಿ ಬಳಸುತ್ತಾರೆ.

1. **ಪನ್ನೀರು ಗಿಡ :** ಇದು 'ಜೆರೇನಿಯೇಸಿ' ಗುಂಪಿಗೆ ಸೇರಿದೆ. ಇದರ ವೈಜ್ಞಾನಿಕ ಹೆಸರು 'ಪೆಲರ್ ಗೋನಿಯಂಗ್ರಾನಿಯೊಲೆನ್ಸ್' ಎಂದು. ಸಾಮಾನ್ಯವಾಗಿ ಇದನ್ನು ಜೆರೇನಿಯಂ ಅಥವಾ ಪನ್ನೀರು ಗಿಡ ಎಂದೂ ಇದರ ತೈಲವನ್ನು ಜೆರೇನಿಯಂ ತೈಲ ಎಂದೂ ಕರೆಯುತ್ತಾರೆ. ಪನ್ನೀರು ಸಸ್ಯ ತೈಲಕ್ಕಾಗಿ ಬೆಳೆಸುವ ಪ್ರಮುಖ ವಾಣಿಜ್ಯ ಬೆಳೆ. ಇದು ದಕ್ಷಿಣ ಆಫ್ರಿಕದ ಕೇಪ್ ಪ್ರಾಂತ್ಯದಲ್ಲಿ ತಾನಾಗಿಯೇ ಬೆಳೆಯುತ್ತದೆ. ಇದನ್ನು ಲಾಭದಾಯಕವಾಗಿ ಮೊದಲು ಬೆಳೆಸಿದವರು ಫ್ರೆಂಚರು. ಪರಿಮಳ ದ್ರವ್ಯಗಳ ತಯಾರಿಕೆಗೆ ಪ್ರಸಿದ್ಧರಾದ ಇವರು 19ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಫ್ರಾನ್ಸ್‌ದ ಫ್ರಾನ್ಸ್‌ನ 'ಗ್ರಾಸ್ಸೇ' ಎಂಬ ಪ್ರದೇಶದಲ್ಲಿ ಮೊದಲಿಗೆ ವಾಣಿಜ್ಯ ಬೆಳೆಯಾಗಿ ಬೆಳೆದರು. ಕ್ರಮೇಣ ಪ್ರಪಂಚದಾದ್ಯಂತ ಸಸ್ಯಾಭಿವೃದ್ಧಿಗೊಂಡು ಭಾರತಕ್ಕೂ ಬಂದಿತ್ತೆಂದು ಇತಿಹಾಸ ತಜ್ಞರಾದ ಅರ್ನೆಸ್ಟ್ ಗುಂಥರ್‌ರವರ ಅಭಿಪ್ರಾಯ ಪಡುತ್ತಾರೆ. ಲಾರೀಯೂನಿಯನ ದ್ವೀಪದಲ್ಲಿ ಇದರ ಉತ್ಪಾದನೆ ಹೆಚ್ಚಾಗಿದ್ದು ಭಾರತದಲ್ಲಿ ಅತ್ಯಂತ ಕಡಿಮೆ ಇದೆ. ಪ್ರತಿ ವರ್ಷವೂ ಬಳಕೆಗೆ ಬೇಕಾದ 18.20 ಟನ್‌ಗಳಷ್ಟು ತೈಲವನ್ನು ಫ್ರಾನ್ಸ್, ಇಂಗ್ಲೆಂಡ್, ನೆದರ್‌ಲ್ಯಾಂಡ್ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

**ಹವಾಗುಣ :** ದಕ್ಷಿಣ ಭಾರತದ ಶಿವರಾಯ್ ಬೆಟ್ಟಗಳ ನಡುವೆ ಯರ್ಕಾಡ್ ಎಂಬಲ್ಲಿ, ನೀಲಗಿರಿ ಬೆಟ್ಟಗಳಲ್ಲಿ ಮತ್ತು ಆನೆ ಮಲೈ ಬೆಟ್ಟಗಳಲ್ಲಿ ಸಮುದ್ರ ಮಟ್ಟದಿಂದ 975-2075 ಮೀಟರ್‌ಗಳಷ್ಟು ಎತ್ತರದಲ್ಲಿ ಇದನ್ನು ಬೆಳೆಯಲಾಗುತ್ತದೆ. ಸಾಮಾನ್ಯವಾಗಿ ಉಷ್ಣವಲಯ ಮತ್ತು ಸಮಶೀತೋಷ್ಣ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

**ಬಿತ್ತನೆ :** ದೊಡ್ಡ ದೊಡ್ಡ ಪಾತಿಗಳನ್ನು ಸಿದ್ಧಪಡಿಸಿಕೊಂಡು ಮಾರ್ಚ್ - ಏಪ್ರಿಲ್ ತಿಂಗಳುಗಳಲ್ಲಿ ಗಿಡದ ರೆಂಬೆಗಳನ್ನು ನೆಡಬೇಕು. ಇವು 7-8 ಗೆಣ್ಣುಗಳನ್ನು ಹೊಂದಿದ್ದು ಸುಮಾರು ಮುಕ್ಕಾಲು ಅಡಿಯಷ್ಟಿರಬೇಕು. ತುದಿಯ ನಾಲ್ಕು ಎಲೆಗಳನ್ನು ಉಳಿಸಿ ಮಿಕ್ಕ ಎಲೆಗಳನ್ನು ತೆಗೆದು ಒಂದು ಗೆಣ್ಣು ಭೂಮಿಯಲ್ಲಿ ಹುದುಗುವಂತೆ ಐದು ಸೆಂ.ಮೀ. ಅಂತರದಲ್ಲಿ ನಾಟಿ ಮಾಡಬೇಕು. ಹೀಗೆ ಮಾಡುವುದರಿಂದ ಎಲೆ ತೆಗೆದ ಜಾಗದಿಂದ ಬೇರುಗಳು ಹುಲುಸಾಗಿ ಬೆಳೆಯುತ್ತವೆ.

ಪಾತಿಗಳಲ್ಲಿ ಕೆಂಪು / ಕಪ್ಪು ಮಣ್ಣು, ಮರಳು ಮತ್ತು ಮಾಗಿದ ಕೊಟ್ಟಿಗೆ ಗೊಬ್ಬರಗಳನ್ನು ಸಮ ಪ್ರಮಾಣದಲ್ಲಿ ಬೆರಸಬೇಕು. ಕಡ್ಡಿಗಳನ್ನು ನೆಟ್ಟ ಅನಂತರ ಬಿಸಿಲು ಬೀಳದಂತೆ ನೆರಳು ಒದಗಿಸಬೇಕು. ಪ್ರತಿದಿನವೂ ನೀರೆರೆದು ತಕ್ಕಷ್ಟು ತೇವ ಇರುವಂತೆ ನೋಡಿಕೊಂಡರೆ ಸುಮಾರು 2 ತಿಂಗಳುಗಳಲ್ಲಿ ಕಡ್ಡಿಗಳು ಬೇರು ಬಿಟ್ಟು ಚಿಗುರೊಡೆದು ನಾಟಿಗೆ ಸಿದ್ಧವಾಗುತ್ತವೆ.

ಮಳೆಗಾಲದ ಪ್ರಾರಂಭದೊಂದಿಗೆ ಭೂಮಿಯನ್ನು ಉಳುಮೆಮಾಡಿ ಹದಗೊಳಿಸಿ ಹೆಕ್ಟೇರಿಗೆ ಸುಮಾರು 10 ಟನ್ ಕೊಟ್ಟಿಗೆ ಗೊಬ್ಬರವನ್ನು, ಸುಡುಮಣ್ಣನ್ನು ಚೆನ್ನಾಗಿ ಬೆರೆಸಿ 60x60 ಸೆಂ.ಮೀ. ಅಂತರದಲ್ಲಿ ಸಣ್ಣಸಣ್ಣ ಗುಳಿಗಳನ್ನು ಮಾಡಿ ನೀರು ಹಾಯಿಸಲು ಅನುಕೂಲವಾಗುವಂತೆ ಕಾಲುವೆಗಳನ್ನು ನಿರ್ಮಿಸಬೇಕು. ಜೂನ್-ಜುಲೈ ತಿಂಗಳಲ್ಲಿ ಮಳೆ ಹದವಾಗಿ ಬಂದ ದಿವಸ ಅಥವಾ ಭೂಮಿಗೆ ನೀರು ಹಾಯಿಸಿದ ಅನಂತರ ನಾಟಿ ಮಾಡಬೇಕು. ಆರಂಭದಲ್ಲಿ ಸಸಿಗಳಿಗೆ ಎರಡು ವಾರಗಳವರೆಗೂ ಎರಡು ದಿನಗಳಿಗೊಮ್ಮೆ ನೀರು ಕಟ್ಟಬೇಕು. ಅನಂತರ 3-4 ದಿನಗಳಿಗೊಂದು ಸಲ ನೀರು ಒದಗಿಸಿದರೆ ಸಾಕು.

**ಇಳುವರಿ :** ನಾಟಿಮಾಡಿ 4-5 ತಿಂಗಳಿಗೆ ಮೊದಲನೆಯ ಕೊಯ್ಲು ಬರುತ್ತದೆ. ಗಿಡ ಕೊಯ್ಲಿಗೆ ಬಂದಾಗ ತಳಭಾಗದ ಎಲೆಗಳು ಹಳದಿಬಣ್ಣಕ್ಕೆ ತಿರುಗುತ್ತವೆ ಅಥವಾ ಅಲ್ಲಲ್ಲಿ ಹೂಗಳು ಕಾಣಿಸಿಕೊಳ್ಳುತ್ತವೆ. ಅಲ್ಲದೆ ಮೊದಲು ಎಲೆಗಳಲ್ಲಿ ಕಂಡು ಬರುವ ನಿಂಬೆ ತರಹದ ವಾಸನೆ ಕ್ರಮೇಣ

ಮಧುರವಾದ ಗುಲಾಬಿಯ ಪರಿಮಳದಂತೆ ಬದಲಾಗುತ್ತದೆ. ಆಗ ಎಲೆ ಕೊಯ್ಲಿಗೆ ಸಿದ್ಧವಾಗಿದೆಯೆಂದರ್ಥ. ಭೂಮಿಯಿಂದ ಸು. 25 ಸೆಂ.ಮೀ.ಗಳಷ್ಟು ಮೇಲಕ್ಕೆ ಬೆಳೆದಿರುವ ಎಲ್ಲಾ ಕೊಂಬೆಗಳನ್ನು ಕೊಯ್ಯಬೇಕು.

ಕೊಯ್ಲಾದ ಗಿಡಗಳು ಮತ್ತೆ ಚಿಗುರುತ್ತವೆ. ಮುಂದಿನ ನಾಲ್ಕು ತಿಂಗಳಿನ ಅವಧಿಯಲ್ಲಿ ಎರಡನೇ ಕೊಯ್ಲಿಗೆ ತಯಾರಾಗುವುವು. ಹೀಗೆ ವರ್ಷಕ್ಕೆ ಮೂರು ಬಾರಿ ಇಳುವರಿಯನ್ನು ಕೊಡುತ್ತದೆ. ಸಾಮಾನ್ಯವಾಗಿ ಒಂದು ಸಲ ಹಾಕಿದ ಬೆಳೆಯು ಎರಡು ಮೂರು ವರ್ಷಗಳವರೆಗೆ ಲಾಭದಾಯಕ ಆದಾಯವನ್ನು ಕೊಡಬಹುದು. ಪ್ರತಿ ಕೊಯ್ಲಿನಿಂದಲೂ ಒಂದು ಹೆಕ್ಟೇರಿಗೆ 5.5 ಟನ್‌ಗಳಷ್ಟು ಸೊಪ್ಪು ಸಿಕ್ಕುತ್ತದೆ.

**ರೋಗಗಳು :** ಪನ್ನೀರು ಸಸ್ಯಕ್ಕೆ ಹಾನಿಯುಂಟು ಮಾಡುವ ಕೀಟಗಳು ಕಡಿಮೆ. ಗೆದ್ದಲು ಭೂಮಿಯಲ್ಲಿ ಮಾತ್ರ ಗಿಡ ನಾಶವಾಗುವುದು. ಸಮುದ್ರ ಮಟ್ಟದಿಂದ ಸುಮಾರು 1400 ಮೀಟರ್‌ಗಳಿಗಿಂತ ಎತ್ತರ ಇರುವ ಪ್ರದೇಶಗಳಲ್ಲಿ ರೋಗ ತಗಲುವುದು ತುಂಬಾ ಕಡಿಮೆ.

ಗಿಡದ ಹಸುರು ಭಾಗಗಳಲ್ಲಿರುವ ಸಣ್ಣ ಸಣ್ಣ ಗ್ರಂಥಿಗಳಲ್ಲಿ ತೈಲವು ಅಡಗಿರುತ್ತದೆ. ಈ ತೈಲವನ್ನು ಬಟ್ಟಿ ಇಳಿಸುವ ವಿಧಾನದಿಂದ ಪಡೆಯುತ್ತಾರೆ. ಬಟ್ಟಿ ಇಳಿಸಲು ಸು. 2 ಗಂಟೆಗಳ ಅವಧಿ ಬೇಕಾಗುತ್ತದೆ. ಎಣ್ಣೆಯ ಶೇಕಡ ಇಳುವರಿ 0.15 ರಿಂದ 0.20 ವರೆಗೆ ಬರುತ್ತದೆ. ಒಂದು ಹೆಕ್ಟೇರಿಗೆ ಸು. 25 ಕಿ.ಗ್ರಾಂ. ಎಣ್ಣೆ ದೊರೆಯುತ್ತದೆ.

**ಪಚ್ಚೆತೆನೆ (ಪಚಾಲಿ)** 'ಲೇಬಿಯೇಟ' ಕುಟುಂಬಕ್ಕೆ ಸೇರಿದ ಈ ಸಸ್ಯದ ವೈಜ್ಞಾನಿಕ ಹೆಸರು 'ಪೋಗೊಸ್ಟೆಮಾನ್‌ಕ್ಯಾಬ್ಲಿನ್'. ಇದನ್ನು ಬ್ರಿಟನ್, ಮಲಯಾ, ಇಂಡೋನೇಷಿಯ ಬ್ರೆಜಿಲ್‌ಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ಭಾರತದಲ್ಲಿ ಬೆಳೆಯುವ ಇದೇ ಜಾತಿಯ ಮತ್ತೊಂದು ಗಿಡ ಪೋಗೋಸ್ಟೆಮಾನ್ ಹೈನಿಯಾನ್ಸ್ ಎಂಬುದು. ಈ ಜಾತಿಗೆ ಸೇರಿದ ಗಿಡಗಳಲ್ಲಿ ಹೂಬಿಡುವುದು ಇದೊಂದೇ. ಇದನ್ನೇ ಭಾರತದಲ್ಲಿ ಪಚ್ಚೆತೆನೆ ಎಂದು ಕರೆಯುವರು. ಸುವಾಸನೆಯ ಎಣ್ಣೆಗಿಂತ ಹೆಚ್ಚಾಗಿ ಇದನ್ನು ಹೂಗಳೊಂದಿಗೆ ಕಟ್ಟಲು ಬೆಳೆಸುತ್ತಾರೆ. ಮೊದಲ ಬಾರಿಗೆ (1950ರಲ್ಲಿ) ಸಿಂಗಪುರ್, ಜೋಹೊರ್ ಮತ್ತು ಇಂಡೋನೇಷಿಯಾದಿಂದ ಈ ಸಸಿಗಳನ್ನು ತರಿಸಿ ಬೆಂಗಳೂರಿನಲ್ಲಿ ಬೆಳೆಸುವ ಪ್ರಯತ್ನಗಳು ನಡೆದವು. ಈ ವಾತಾವರಣದಲ್ಲಿ ಸಮೃದ್ಧಿಯಾಗಿ ಬೆಳೆದು ಉತ್ತಮ ಇಳುವರಿ ಬಂತು.

**ಬಿತ್ತನೆ :** ಪಚಾಲಿ ಸಸಿಗಳನ್ನು ಮರಳು ಮಣ್ಣಿರುವ ಒಟ್ಲು ಪಾತಿಗಳಲ್ಲಿ ಬೆಳೆಸಬೇಕು. ಸು. 25 ಸೆಂ. ಮೀ. ಉದ್ದದ ತುದಿ ರೆಂಬೆಗಳನ್ನು ಕತ್ತರಿಸಿ, ಮೇಲಿನ ನಾಲ್ಕು ಎಲೆಗಳನ್ನು ಬಿಟ್ಟು ಮಿಕ್ಕ ಎಲೆಗಳನ್ನು ತೆಗೆದು ಒಂದು ಗೆಣ್ಣು ಪೂರ್ತಿಯಾಗಿ ಮಣ್ಣಿನೊಳಗೆ ಹುದುಗುವಂತೆ ಪಾತಿಯಲ್ಲಿ ನೆಡಬೇಕು. ಎರಡು ಗಿಡಗಳ ಮಧ್ಯೆ ಅರ್ಧ ಅಡಿ ಅಂತರವಿರಬೇಕು. ನೆಟ್ಟ ಕೂಡಲೇ ನೀರು ಹಾಕಿ ಬಿಸಿಲಿನಿಂದ ಕಾಪಾಡಲು ಚಪ್ಪರ ಕಟ್ಟಬೇಕು. ದಿನನಿತ್ಯ ನೀರು ಒದಗಿಸಬೇಕು. 3-4 ತಿಂಗಳವರೆಗೆ ಬೆಳೆಸಿ ಮೇ-ಜೂನ್ ತಿಂಗಳಿಗೆ ಸಸಿಗಳನ್ನು ಸಿದ್ಧಮಾಡಿಟ್ಟುಕೊಳ್ಳಬೇಕು.

**ನಾಟಿ :** ನಾಟಿಗೆ ಮೊದಲು ಭೂಮಿಯನ್ನು ಚೆನ್ನಾಗಿ ಉತ್ತು ಕೊಟ್ಟಿಗೆ ಗೊಬ್ಬರ, ಎಲೆಗೊಬ್ಬರ ಮುಂತಾದವನ್ನು ಮಿಶ್ರಮಾಡಿ ಭೂಮಿಯನ್ನು ಹದವಾಗಿಟ್ಟುಕೊಳ್ಳಬೇಕು. 60x60 ಸೆಂ.ಮೀ. ಅಂತರದಲ್ಲಿ ನಾಟಿ ಮಾಡಿ ಪ್ರತಿದಿನ ನೀರು ಕೊಡಬೇಕು. ನೆರಳಿನಲ್ಲಿ ಬೆಳೆಸಿದರೆ ಸು. 8 ತಿಂಗಳಿಗೆ ಇಳುವರಿ ಬರುತ್ತದೆ. ಕೊಯ್ಲು ಮಾಡುವಾಗ ಎಳೆಯ ರೆಂಬೆಗಳೆಲ್ಲವನ್ನು ಕತ್ತರಿಸಿ ಕೊಳ್ಳಬೇಕು. ಕತ್ತರಿಸಿದ ಅನಂತರ ಕೊಂಬೆಗಳು ಮತ್ತೆ ಚಿಗುರಿ ಆರು ತಿಂಗಳಿಗೆ ಎರಡನೇ ಕೊಯ್ಲಿಗೆ ಸಿದ್ಧವಾಗುತ್ತವೆ. 3-4 ವರ್ಷಗಳ ಕಾಲ ಆರು ತಿಂಗಳಿಗೊಮ್ಮೆ ಇಳುವರಿ ನೀಡುತ್ತವೆ. ಕೊಯ್ಲಾದ ಅನಂತರ ಸೊಪ್ಪನ್ನು ನೆರಳಿನಲ್ಲಿ ಒಣಗಿಸಬೇಕು. ಅದು ಒಣಗಿದಂತೆಲ್ಲಾ ಸುವಾಸನೆ ಅಧಿಕವಾಗುತ್ತದೆ. ಇದರಿಂದ ಸಿಗುವ ಎಣ್ಣೆಯ ಅಂಶ ಹೆಚ್ಚುತ್ತದೆ. ಬಿಸಿಲಿನಲ್ಲಿ ಒಣಗಿಸಿದರೆ ಎಣ್ಣೆ ಕಡಿಮೆಯಾಗುವ ಸಂಭವವಿರುತ್ತದೆ. ಈ ಎಣ್ಣೆಯನ್ನು ಪರಿಮಳ ದ್ರವ್ಯಗಳ ತಯಾರಿಕೆ, ಸಾಬೂನುಗಳಲ್ಲೂ, ಅಂಗರಾಗಗಳಲ್ಲೂ ಮತ್ತು ಅಗರಬತ್ತಿಗಳ ತಯಾರಿಕೆಯಲ್ಲೂ ಬಳಸುತ್ತಾರೆ. ಪಚ್ಚೆ ತೆನೆಯ ಬೇಸಾಯ ಮತ್ತು ಎಣ್ಣೆ ತೆಗೆಯುವುದರಿಂದ ಮೊದಲನೆಯ ವರ್ಷ ಎಣ್ಣೆಯ ಒಟ್ಟು ಇಳುವರಿ ಸು. 15 ಕಿ.ಗ್ರಾಂ.ಗಳು ಎರಡನೆಯ ವರ್ಷದಿಂದ ಎಣ್ಣೆಯ ಇಳುವರಿ 40 ಕಿ.ಗ್ರಾಂ.ಗಳು.

ಪಚ್ಚೆ ತೆನೆಯ ಗಿಡದ ಬೇಸಾಯದಿಂದ ಸಾಕಷ್ಟು ಲಾಭ ಇದ್ದರೂ ಸಹ, ಇದರ ಅಭಿವೃದ್ಧಿಗೆ ಒಂದು ದೊಡ್ಡ ಅಡಚಣೆ ತಂತುವಿನಾಕಾರದ ಹುಳು, ಇವಕ್ಕೆ ಇಂಗ್ಲಿಷ್ ಭಾಷೆಯಲ್ಲಿ 'ನೆಮಟೋಡ್ಸ್' ಎನ್ನುತ್ತಾರೆ. ಇವು ಬೇರುಗಳಲ್ಲಿ ಗಂಟುಗಳನ್ನು ಉಂಟುಮಾಡುತ್ತವೆ. ಸಾಮಾನ್ಯವಾಗಿ ಒಂದು ವರ್ಷ ಅಥವಾ ಅದಕ್ಕೂ ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ ಇದು ಹೆಚ್ಚಾಗಿ ಬರುತ್ತದೆ. ಈ ರೋಗದಿಂದ ಗಿಡಗಳು ಕ್ರಮೇಣ ಸಾಯುತ್ತವೆ. ಇದನ್ನು ತಡೆಗಟ್ಟಲು ಗಿಡಗಳ ಜೊತೆಗೆ ಚೆಂಡು ಹೂಗಿಡಗಳನ್ನು ಬೆಳೆಸಬೇಕು. ರೋಗಯುಕ್ತ ಗಿಡಗಳನ್ನು ಆದಷ್ಟು ಬೇಗ ತೋಟದಿಂದ ಬೇರ್ಪಡಿಸಬೇಕು. ಬೆಳೆಯುವ ಪ್ರಮಾಣ ಕಡಿಮೆ ಇದ್ದು ಭಾರತಕ್ಕೆ ಪಚ್ಚೆ ತೆನೆಯ ಎಣ್ಣೆಯನ್ನು ಪರ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

**ದವನ :** ಪಾಂಪೊಸಿಟೇ ಕುಟುಂಬಕ್ಕೆ ಸೇರಿದ ಈ ಗಿಡಕ್ಕೆ 'ಆರ್ಟಿಮೀಸಿಯ ಪ್ಯಾಲೇನ್ಸ್' ಎಂಬ ವೈಜ್ಞಾನಿಕ ಹೆಸರಿದೆ. ಹಿಮಗಾಲದಲ್ಲಿ ಸೊಂಪಾಗಿ ಬೆಳೆಯುತ್ತದೆ. ಇದು ಕೇವಲ 4-4½ ತಿಂಗಳುಗಳ ಅವಧಿಯ ಗಿಡ. ಭಾರತದಲ್ಲಿ ಇದು ಅತ್ಯಂತ ಪ್ರಖ್ಯಾತಿಯನ್ನು ಹೊಂದಿದೆ. ಇತರೆ ಹೂಗಳ ಜೊತೆಗೆ ದವನವನ್ನು ಸೇರಿಸಿ ಕಟ್ಟುವರು. ದೇವರುಗಳ ರಥೋತ್ಸವದಲ್ಲಿ ಇದನ್ನು ಬಳಸುವುದು, ದವನ ಇಟ್ಟು ಹೆಣ್ಣು ಮಕ್ಕಳಿಗೆ ಜಡೆ ಹಾಕುವುದು ಮೊದಲಿನಿಂದಲೂ ಮಾಡುತ್ತಾ ಬಂದಿದ್ದಾರೆ. ಇದು ಬಹಳ ಸುವಾಸನೆಯಾದ ಮತ್ತು ಲಾಭದಾಯಕವಾದ ಎಣ್ಣೆಯನ್ನು ಕೊಡುತ್ತದೆ. ಅಮೇರಿಕಾ, ಜಪಾನ್ ದೇಶದವರು ಇಷ್ಟಪಟ್ಟು ಭಾರತದಿಂದ ಇದನ್ನು ತರಿಸಿಕೊಂಡು ಐಸ್‌ಕ್ರೀಂಗಳಲ್ಲಿ, ಸಿಹಿ ತಿಂಡಿಗಳಲ್ಲಿ ಮತ್ತು ಪಾನೀಯಗಳಲ್ಲಿ ಪರಿಮಳಕ್ಕೋಸ್ಕರ ಉಪಯೋಗಿಸುತ್ತಾರೆ. ಇದರ ಬೆಲೆ ಹೆಚ್ಚಾಗಿದ್ದು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಭಾರತ ದೇಶದಲ್ಲೇ ಈ ಎಣ್ಣೆಯ ಬಳಕೆ ಬಹಳ ವಿರಳ. ಕಾರಣ ಈ ಎಣ್ಣೆಯನ್ನು ಉಪಯೋಗಿಸುವ ವಿಧಾನ ತಿಳಿದಿಲ್ಲರುವುದು ಮತ್ತು ಇದರ ಬೆಲೆ ಅಧಿಕವಾಗಿರುವುದೇ ಆಗಿದೆ.

ನೀಲಿ ಮಿಶ್ರಿತ ಹಸುರು ಬಣ್ಣದ ಛಿದ್ರ ಛಿದ್ರ ಎಲೆಗಳನ್ನು ಹೊಂದಿರುತ್ತದೆ. ಹೂವಿಗೆ ಅಂದ ಚಂದವಾಗಲಿ, ಬಣ್ಣವಾಗಲೀ ಇಲ್ಲ.

ಪ್ರಾಚೀನ ಗ್ರೀಕರಿಗೆ ದವನ ಬಹು ಪ್ರಿಯವಾಗಿತ್ತು. ಪಿತೃಗಳ ಗೋರಿಯ ಮೇಲೆ ನೆಡುತ್ತಿದ್ದರು. ಇಂಗ್ಲೆಂಡ್‌ನಲ್ಲಿ ದವನದ ಬೆಳೆ 14ನೇ ಶತಮಾನದಲ್ಲಿ ಆರಂಭವಾಗಿದ್ದಿರಬೇಕು. 18ನೇ ಶತಮಾನದ ಇಂಗ್ಲಿಷ್ ಬರೆಹಗಳಲ್ಲಿ ಈ ಗಿಡವನ್ನು ಹೆಸರಿಸಲಾಗಿದೆ. ಅನಂತರ ಕಾರಣಾಂತರಗಳಿಂದ ಕೃಷಿ ತಪ್ಪಿಹೋಗಿದೆ. ಮೆಡಿಟರೇನಿಯನ್ ಮತ್ತು ಮಧ್ಯ ಪ್ರಾಚ್ಯ ಪ್ರದೇಶಗಳ ಬೆಟ್ಟ ಸಾಲುಗಳು ದವನದ ಹುಟ್ಟೂರು. ಅಲ್ಲಿಂದ ಮೊಗಲರ ಕಾಲದಲ್ಲಿ ಭಾರತಕ್ಕೆ ಬಂದಿತು. ಪರ್ಷಿಯನ್, ಅರಬ್ಬೀ ಭಾಷೆಗಳಲ್ಲಿ 'ಮರ್ದುಕುಷ್' ಎಂದು ಕರೆಯುತ್ತಾರೆ. ಉತ್ತರ ಭಾರತದ ಭಾಷೆಗಳಲ್ಲಿ ಅಂದರೆ ಸಿಂಧಿ, ಪಂಜಾಬಿ, ಆಫ್ಘಾನಿಸ್ತಾನಗಳಲ್ಲಿ 'ಮುರ್ವೋ' ಎಂದೂ, ಬಂಗಾಳಿ ಭಾಷೆಯಲ್ಲಿ ಮುರ್ರ, ಮರಾಠಿ ಮತ್ತು ಗುಜರಾತಿ ಭಾಷೆಗಳಲ್ಲಿ ಮೂರ್ವ ಎಂದು ಕರೆಯುತ್ತಾರೆ. ದ್ರಾವಿಡ ಬುಡಕಟ್ಟಿನ ನುಡಿಗಳಲ್ಲಿ ಮಾತ್ರ ದವನ ಎಂಬ ಹೆಸರು ರೂಢಿಯಲ್ಲಿದೆ.

**ಬಿತ್ತನೆ :** ಬೀಜಗಳಿಂದ ಇದರ ತಳಿ ವೃದ್ಧಿಯಾಗುತ್ತದೆ. ಬೀಜಗಳು ಬಹಳ ಚಿಕ್ಕವು. ಒಂದು ಗ್ರಾಂನಲ್ಲಿ ಸು. 6000 ಬೀಜಗಳಿರುತ್ತವೆ. ಹಿಂದಿನ ವರ್ಷದ ಬೀಜಗಳನ್ನು ಒಟ್ಲು ಪಾತಿಗಳಲ್ಲಿ ಬಿತ್ತಿ ಅನಂತರ ನಾಟಿ ಹಾಕುವುದು ವಾಡಿಕೆ. ನೇರವಾಗಿ ಬೀಜಗಳನ್ನು ಪಾತಿಗಳಲ್ಲಿ ಹಾಕಿದರೆ ಇರುವೆಗಳು ಹೊತ್ತೊಯ್ಯುತ್ತವೆ. ದವನದ ಬೀಜಗಳನ್ನು 1.5 ಶೇ. ಅನುಪಾತದಲ್ಲಿ ಮರಳಿನೊಂದಿಗೆ ಬೆರೆಸಿ ಸಾಕಷ್ಟು ನೀರು ಹಾಕಿ ತೆಳುವಾಗಿರುವ ಬಟ್ಟೆಯ ಚೀಲದಲ್ಲಿ ಕಟ್ಟಿ ಮೇಲೆ ಕಲ್ಲಿಟ್ಟರೆ ಬೀಜಗಳು ಸು. 48 ಗಂಟೆಗಳಲ್ಲಿ ಮೊಳಕೆ ಬರುತ್ತವೆ. ಮೊಳಕೆಯೊಡೆದ ಬೀಜಗಳನ್ನು ಒಟ್ಟು ಪಾತಿಗಳಿಗೆ ಉಪಯೋಗಿಸಿದರೆ ಇರುವೆಗಳಿಂದ ಆಗಬಹುದಾದ ನಷ್ಟವನ್ನು ತಡೆಗಟ್ಟಬಹುದು.

ಒಟ್ಲು ಪಾತಿಗಳು ಸು. 6 ಅಡಿ ಉದ್ದ ಮತ್ತು 3 ಅಡಿ ಅಗಲವಿರುತ್ತದೆ. ಉತ್ತಮಗೊಬ್ಬರವನ್ನು ಸೇರಿಸಿ ಭೂಮಿಯನ್ನು ಹದ ಮಾಡಿ ಈ ಪಾತಿಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಬೀಜಗಳನ್ನು ಬಿತ್ತುವ ಮೊದಲು ಎರಡು ದಿನಕ್ಕೆ ಒಂದು ಸಲದಂತೆ ಎರಡು ಮೂರು ಸಲ ನೀರು ಕಟ್ಟಬೇಕು. ಇದರಿಂದ ಗೊಬ್ಬರದ ಜೊತೆಯಲ್ಲಿ ಪಾತಿಗೆ ಬಂದಿರಬಹುದಾದ ಕಳೆ ಬೀಜಗಳು ಮೊಳೆತು ಚಿಕ್ಕ ಸಸಿಗಳಾಗುತ್ತವೆ. ಇವುಗಳನ್ನು ನಾಶಪಡಿಸಿ ಅನಂತರ ದವನದ ಬೀಜ ಬಿತ್ತಿದರೆ ಒಳ್ಳೆಯದು. ಒಂದು ಹೆಕ್ಟೇರಿಗೆ ನಾಟಿ ಮಾಡಲು ಒಂದು ಸಾವಿರ ಚದರ ಮೀ.ಗಳ ವಿಸ್ತೀರ್ಣದ ಪಾತಿಗಳ ಸಸಿಗಳು ಬೇಕಾಗುತ್ತವೆ. ದವನದ ಸಸಿಗಳು ತುಂಬಾ ಸೂಕ್ಷ್ಮ. ಮಳೆ ಬಂದರೆ ಮೊಳಕೆಗಳು ನಾಶವಾಗುವ ಸಂಭವವಿದೆ. ನವೆಂಬರ್ ತಿಂಗಳಿನ ಎರಡು ಅಥವಾ ಮೂರನೆಯ ವಾರದಲ್ಲಿ ಬೀಜಗಳನ್ನು ಒಟ್ಲು ಪಾತಿಗಳಲ್ಲಿ ಹಾಕಿ ತೆಂಗಿನಗರಿಗಳಿಂದ ಮುಚ್ಚಬೇಕು. ಈ ಪಾತಿಗಳಿಗೆ ಪ್ರತಿನಿತ್ಯವೂ ನೀರೆರೆಯುತ್ತಿರಬೇಕು. ಇದರಿಂದ ಗಿಡಗಳಿಗೆ ನೆರಳು ಸಿಗುತ್ತದೆ. ಮಳೆ ಬಂದಾಗ ಮೊಳಕೆ ಸ್ಥಾನಪಲ್ಲಟಗೊಳ್ಳುವುದಿಲ್ಲ. ಒಂದು ವಾರದ ಅನಂತರ ಗರಿ ತೆಗೆಯಬಹುದು. 20 ದಿನಗಳಿಗೊಮ್ಮೆ ಗೊಬ್ಬರ ಕೊಡುತ್ತಿದ್ದರೆ ಒಳ್ಳೆಯದು. ನೆಟ್ಟ 40 ದಿವಸಗಳಲ್ಲಿ ಇದು ನಾಟಿಗೆ ಯೋಗ್ಯವಾಗುತ್ತದೆ. ಸಸಿಗಳು 10 ಸೆಂ.ಮೀ. ಎತ್ತರ ಇರುತ್ತವೆ.

ನಾಟಿ ಹಾಕಬೇಕಾದ ಭೂಮಿಯನ್ನು ಚೆನ್ನಾಗಿ ಹದ ಮಾಡಿಟ್ಟುಕೊಂಡು 3 ಅಡಿ ಅಗಲ ಮತ್ತು 10 ಅಡಿ ಉದ್ದವಿರುವ ಪಾತಿಗಳನ್ನು ನಿರ್ಮಿಸಿಕೊಂಡು ನಾಟಿ ಹಿಂದಿನ ದಿನ ನೀರು ಹಾಯಿಸಿ ಸಸಿಗಳನ್ನು ಜಾಗರೂಕತೆಯಿಂದ ಒಟ್ಲು ಪಾತಿಗಳಿಂದ ಹೊರ ತೆಗೆದು 15. ಸೆಂ.ಮೀ. ಅಂತರದ ಸಾಲುಗಳಲ್ಲಿ ಗಿಡದಿಂದ ಗಿಡಕ್ಕೆ 8 ಸೆಂ.ಮೀ. ಅಂತರವಿಟ್ಟು ನಾಟಿ ಹಾಕಬೇಕು. ಪ್ರತಿ ಎರಡು ಅಥವಾ ಮೂರು ದಿನಕ್ಕೊಮ್ಮೆ ನೀರು ಕೊಡಬೇಕು. ಕೊಟ್ಟಿಗೆ ಗೊಬ್ಬರ, ಎಲೆಗೊಬ್ಬರ, ರಾಸಾಯನಿಕ ಗೊಬ್ಬರ ಅಥವಾ ಉಪ್ಪನ್ನು (ಯೂರಿಯಾ) ಹಾಕಬೇಕು. ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ಬೀಳುವ ಹಿಮವೂ, ಮಳೆ ಇಲ್ಲದ ಹವಾಗುಣ, ಉಷ್ಣತೆಯ ಬಿಸಿಲು ಈ ಗಿಡಗಳ ಬೆಳವಣಿಗೆಗೆ ತುಂಬಾ ಉತ್ತಮ. ನಾಟಿ ಹಾಕಿದ ಸುಮಾರು ಎರಡು ತಿಂಗಳುಗಳಿಗೆ ಮೊಗ್ಗು, ಹೂಗಳು ಕಾಣುತ್ತವೆ. ಕೊಯ್ಲಿಗೆ ಸರಿಯಾದ ಕಾಲವೆಂದರೆ ಜಮೀನಿನಲ್ಲಿ ಅರ್ಧಕ್ಕೂ ಹೆಚ್ಚು ಭಾಗದಷ್ಟು ಹೂಗಳು ಅರಳಿ ಹಳದಿ ಬಣ್ಣಕ್ಕೆ ತಿರುಗಬೇಕು. ಆಗ ಕೊಯ್ಲು ಮಾಡಿದರೆ ಗಿಡಗಳಲ್ಲಿ ಎಣ್ಣೆಯ ಅಂಶವು ಹೆಚ್ಚುವುದು. ಈ ಹದಕ್ಕೆ ಬರಲು ಮೊಗ್ಗು ಬಂದ ಅನಂತರ ಸು. 20 ದಿವಸಗಳು ಬೇಕಾಗಬಹುದು. ಗಿಡದ ಮೇಲ್ಭಾಗವನ್ನು ಕೊಯ್ದು ಐದಾರು ದಿನ ನೆರಳಿನಲ್ಲಿ ಒಣಗಿಸಿ ಎಣ್ಣೆ ತೆಗೆಯಲು ಸಿದ್ಧ ಮಾಡಿಕೊಳ್ಳಬೇಕು. ತೈಲವನ್ನು ಆವಿಯ ಸಹಾಯದಿಂದ ಬಟ್ಟಿ ಇಳಿಸಿ ತೆಗೆಯುತ್ತಾರೆ. ಪ್ರತಿ ಹೆಕ್ಟೇರಿನಿಂದಲೂ ಸು. 2.5 ಟನ್‌ಗಳಷ್ಟು ಒಣಗಿದ ದವನವು ಸಿಗುತ್ತದೆ. ಇದರಿಂದ ಸು. 7.5 ಕಿ.ಗ್ರಾಂ. ಎಣ್ಣೆ ಬರುತ್ತದೆ. ದವನದ ಎಣ್ಣೆಯ ಸುವಾಸನೆ ಬಹಳ ಮಧುರ. ಆದ್ದರಿಂದ ಹೆಚ್ಚು ಬೆಲೆ ಬಾಳುವ ಸುಗಂಧ ದ್ರವ್ಯಗಳಲ್ಲಿ ಇದನ್ನು ಉಪಯೋಗಿಸುತ್ತಾರೆ.

**ಮರುಗ :** ಭಾರತೀಯರಿಗೆ ಚಿರಪರಿಚಿತವಾದ ಮರುಗವು 'ಲೇಬಿಯೇಟ' ಕುಟುಂಬಕ್ಕೆ ಸೇರಿದ ಅತಿ ಸುವಾಸನಾಯುಕ್ತವಾದ ಸಸ್ಯ. ಇದನ್ನು ಇಂಗ್ಲಿಷ್‌ನಲ್ಲಿ 'ಸ್ವೀಟ್ ಮಾರ್ಜೋರಮ್' ಎಂದೂ ಸಸ್ಯ ವಿಜ್ಞಾನದಲ್ಲಿ ಮೊಜೊರಾನ ಹೊರ್‌ಟೆನ್ಸಿಸ್ ಎಂದೂ ಕರೆಯುತ್ತಾರೆ. ಭಾರತದಲ್ಲಿ ಇದನ್ನು ಸ್ವಲ್ಪ ಮಟ್ಟಿಗೆ ಬೆಳೆಯುತ್ತಾರೆ. ದಕ್ಷಿಣ ಯುರೋಪ್, ಉತ್ತರ ಆಫ್ರಿಕಾ ಮತ್ತು ಏಷ್ಯಾ ಮೈನರ್‌ಗಳಲ್ಲಿ ತಾನೇ ತಾನಾಗಿ ಬೆಳೆಯುತ್ತದೆ.

ಮರುಗ ಸುಮಾರು ಒಂದರಿಂದ ಎರಡು ಅಡಿ ಎತ್ತರಕ್ಕೆ ಬೆಳೆಯುವ ಪುಟ್ಟಗಿಡ. ವರ್ಷಗಟ್ಟಲೆ ಇದು ಇರಬಹುದಾದರೂ ವಾರ್ಷಿಕ ಬೆಳೆಯಾಗಿ ಇದನ್ನು ಬೆಳೆಯುತ್ತಾರೆ.

**ಬಿತ್ತನೆ :** ಬೀಜಗಳಿಂದ ಅಥವಾ ಕಾಂಡಗಳನ್ನು ಕತ್ತರಿಸಿ ನೆಡುವುದರಿಂದ ಸಸ್ಯಾಭಿವೃದ್ಧಿ ನಡೆಯುತ್ತದೆ. ಕುಂಡಗಳಲ್ಲಿ ಅಥವಾ ಒಟ್ಲು ಪಾತಿಗಳಲ್ಲಿ ಬೀಜಗಳನ್ನು ಬಿತ್ತಿ ಸಸಿ ಬೆಳೆಸಿ ಅನಂತರ ನಾಟಿ ಹಾಕಬೇಕು. ಸಾಲಿನಿಂದ ಸಾಲಿಗೆ ಒಂದು ಅಡಿ ಅಂತರ ಮತ್ತು ಗಿಡದಿಂದ ಗಿಡಕ್ಕೆ ಮುಕ್ಕಾಲು ಅಡಿ ಅಂತರ ವಿರಬೇಕು. ನಾಟಿ ಮಾಡಿದ 3-3½ ತಿಂಗಳು ಗಳಿಗೆ ಕೊಯ್ಲಿಗೆ ಸಿದ್ಧವಾಗುತ್ತದೆ. ಗಿಡಗಳಲ್ಲಿ ಹೂಗಳು ಬರುವುದಕ್ಕಿಂತ ಮುಂಚೆ ಕೊಯ್ಲು ಮಾಡುವುದರಿಂದ ಎಣ್ಣೆಯ ಇಳುವರಿ ಹೆಚ್ಚುವುದು. ಗಿಡಗಳನ್ನು ನೆರಳಿನಲ್ಲಿ ಒಣಗಿಸಿ ಅನಂತರ ಬಟ್ಟಿ ಇಳಿಸಿ ಎಣ್ಣೆ ತೆಗೆಯುತ್ತಾರೆ. ಎಣ್ಣೆಯ ಇಳುವರಿ ಒಂದು ಕಿ.ಗ್ರಾಂ.ಗೆ ಶೇ. 0.7 ರಿಂದ 3.5. ಈ ಎಣ್ಣೆ ತೆಳು ಹಳದಿ ಬಣ್ಣದಿಂದ ಕೂಡಿದ್ದು ಬಹಳ ಸುವಾಸನಾಯುಕ್ತವಾಗಿರುತ್ತದೆ. ಇದನ್ನು ಫ್ರಾನ್ಸ್, ಟ್ಯುನಿಷಿಯ, ಮೊರೊಕ್ಕೊ, ಇಟಲಿ, ಹಂಗೇರಿ, ಬಲೇರಿಯ ಮುಂತಾದ ದೇಶಗಳಲ್ಲಿ ತಯಾರಿಸುತ್ತಾರೆ. ಇದರ ಉಪಯೋಗ ಭಾರತದಲ್ಲಿಲ್ಲ. ಮರುಗವನ್ನು

ಹೂಗಳೊಂದಿಗೆ ಕಟ್ಟಿ ಮುಡಿಯಲು ಉಪಯೋಗಿಸುತ್ತಾರೆ. ಮರುಗದ ಎಣ್ಣೆಯನ್ನು ವಿದೇಶಗಳಲ್ಲಿ ಸುಗಂಧದ್ರವ್ಯಗಳ ತಯಾರಿಕೆಯಲ್ಲಿ, ಮಾಂಸ ಮುಂತಾದ ಖಾದ್ಯಗಳಲ್ಲಿ ಪರಿಮಳವನ್ನು ಕೊಡಲು ಉಪಯೋಗಿಸುತ್ತಾರೆ.

**ಕಾಮಕಸ್ತೂರಿ (ಸ್ವೀಟ್ ಬೆಸಿಲ್) :** 'ಲೇಬಿಯೇಟಿ' ಕುಟುಂಬಕ್ಕೆ ಸೇರಿದ ಕಾಮಕಸ್ತೂರಿಯನ್ನು ವೈಜ್ಞಾನಿಕವಾಗಿ 'ಆಸಿಮಮ್ ಬೆಸಿ ಲಿಕಮ್' ಎಂದು ಕರೆಯುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ ಸ್ವೀಟ್ ಬೆಸಿಲ್, ಕಾಮನ್‌ಬೆಸಿಲ್ ಎಂದೂ ಕರೆಯುತ್ತಾರೆ. ಭಾರತದ ವಾಯುವ್ಯ ಪ್ರದೇಶಗಳಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ. ಈ ಗಿಡದಲ್ಲಿ ಕೆಲವು ಪ್ರಭೇದಗಳಿವೆ. ಯೂರೋಪಿನ ಬಗೆಯ ಪ್ರಭೇದದಿಂದ 'ಸ್ವೀಟ್ ಬೆಸಿಲ್ ಆಯಿಲ್' ಹೆಚ್ಚು ಖ್ಯಾತಿಯನ್ನು ಪಡೆದಿದೆ. ಈ ಎಣ್ಣೆಯನ್ನು ಬ್ರೆಡ್ಡು, ಬಿಸ್ಕತ್ತು, ಕೇಕು ಮುಂತಾದವುಗಳಲ್ಲಿ ಬಳಸುತ್ತಾರೆ. ದಂತ ಶುದ್ಧೀಕರಣ ಔಷಧಿಗಳಲ್ಲೂ, ಪರಿಮಳ ದ್ರವ್ಯಗಳ ತಯಾರಿಕೆಯಲ್ಲೂ ಬಳಸುತ್ತಾರೆ. ಇದು ಕ್ರಿಮಿಕೀಟಗಳನ್ನು, ನೊಣ, ಸೊಳ್ಳೆಗಳನ್ನು ನಾಶಪಡಿಸುವ ಮತ್ತು ಹತ್ತಿರ ಬಾರದಂತೆ ತಡೆಯುವ ಗುಣಗಳನ್ನು ಹೊಂದಿದೆ.

**ಕೃಷಿ :** ಬೀಜಗಳಿಂದ ಇದರ ತಳಿ ವೃದ್ಧಿಯಾಗುತ್ತದೆ. ಬೀಜಗಳು ಕಪ್ಪು ಬಣ್ಣದಿಂದ ಕೂಡಿದ್ದು ಜುಲೈ ತಿಂಗಳಲ್ಲಿಬಿತ್ತುತ್ತಾರೆ. (ಈ ಬೀಜಗಳನ್ನು ಮೊದಲು ಫ್ರಾನ್ಸ್ ದೇಶದಿಂದ ತರಿಸಿ ಬೆಂಗಳೂರು, ಉತ್ತರ ಪ್ರದೇಶ ಮತ್ತು ಜಮ್ಮು ಕಾಶ್ಮೀರಗಳಲ್ಲಿಬೆಳೆಸಲಾಯಿತು. ಈ ವಾತಾವರಣಕ್ಕೆ ಹೊಂದಿಕೊಂಡು ಹೆಚ್ಚು ಇಳುವರಿಯನ್ನು ನೀಡುವಂಥ ಸಸ್ಯ ಇದಾಗಿದೆ.) ಆರು ಅಥವಾ ಏಳು ದಿವಸಗಳಲ್ಲಿ ಇವು ಮೊಳಕೆ ಬರುತ್ತವೆ. ಬೀಜಗಳನ್ನು ಬಿತ್ತುವ ಮೊದಲು 24 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ ಅನಂತರ ಒಟ್ಲು ಪಾತಿಗಳಿಗೆ ಬಿತ್ತಿ ಪ್ರತಿದಿನವೂ ನೀರು ಕೊಡಬೇಕು. ಸಸಿಗಳು ಒಂದೂವರೆ ಅಡಿಗಳಷ್ಟು ಎತ್ತರ ಬೆಳೆದಾಗ ಒಟ್ಲು ಪಾತಿಯಿಂದ ತೆಗೆದು ನಾಟಿ ಮಾಡಬೇಕು. ಗಿಡದಿಂದ ಗಿಡಕ್ಕೆ ಒಂದು ಅಡಿ ಅಂತರವಿರಬೇಕು. ವಾರಕ್ಕೆ ಎರಡು ಅಥವಾ ಮೂರು ಸಲ ನೀರು ಹಾಯಿಸುತ್ತಿರಬೇಕು. ನಾಟಿಗೆ ಮೊದಲು ಒಳ್ಳೆಯ ಗೊಬ್ಬರವನ್ನು ಕೊಟ್ಟರೆ ಎರಡು ತಿಂಗಳುಗಳಲ್ಲಿ ಗಿಡಗಳು ಹೂ ಬಿಡುತ್ತವೆ. ಹೆಚ್ಚು ಹೂಗಳು ಅರಳಿದಾಗ ಪೂರ್ತಿಯಾಗಿ ಬೆಳೆದ ಹೂವಿನ ತೆನೆಗಳನ್ನು ಕೊಯ್ಲು ಮಾಡಿ ಬಟ್ಟಿ ಇಳಿಸುವ ಪಾತ್ರೆಗೆ ತುಂಬಿ ಆವಿಯ ಸಹಾಯದಿಂದ ಬಟ್ಟಿ ಇಳಿಸಬೇಕು. ತೆನೆಗಳನ್ನು ಕೊಯ್ದ ಸುಮಾರು ಹತ್ತು ದಿನಗಳಿಗೆ ಮತ್ತೆ ಗಿಡಗಳು ತೆನೆಯಿಂದ ತುಂಬಿರುತ್ತವೆ. ಈ ರೀತಿ ಮೂರು ಸಲ ತೆನೆಗಳನ್ನು ಪಡೆಯಬಹುದು. ಒಂದು ಹೆಕ್ಟೇರಿಗೆ ಮೂರು ಸಲದಿಂದ ಸು. 6.5 ಟನ್‌ಗಳಷ್ಟು ತೆನೆ ಬರುತ್ತದೆ. ಈ ತೆನೆಯಿಂದ 20 ಕಿ.ಗ್ರಾಂ.ಗಳಷ್ಟು ಎಣ್ಣೆಯ ಇಳುವರಿ ಸಿಗುತ್ತದೆ. ಮೂರನೆಯ ಕೊಯ್ಲಿನ ಅನಂತರ ಗಿಡಗಳನ್ನು ಕತ್ತರಿಸಿ ಬಟ್ಟಿ ಇಳಿಸಿದರೆ ಇದರಿಂದಲೂ ಸು. 4-5 ಕಿ.ಗ್ರಾಂ.ಗಳಷ್ಟು ಎಣ್ಣೆ ದೊರೆಯುತ್ತದೆ. ಈ ಎಣ್ಣೆಯನ್ನು ಭಾರತದಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿ ವಿದೇಶಗಳಿಗೆ ರಫ್ತು ಮಾಡುವುದಿದೆ.

**ಕರ್ಪೂರ ತುಳಸಿ(ಕ್ಯಾಂಫರ್ ಬೆಸಿಲ್) :** ಇದು ಪೂರ್ವ ಆಫ್ರಿಕದಲ್ಲಿರುವ ಕೀನ್ಯಾ ದೇಶದ ಗಿಡ. ಇದನ್ನು ಇಂಗ್ಲಿಷ್ ಭಾಷೆಯಲ್ಲಿ 'ಕ್ಯಾಂಫರ್ ಬೆಸಿಲ್' ಎಂದೂ ಹಿಂದಿಯಲ್ಲಿ 'ಕಪೂರ್ ತುಲ್ಸಿ' ಎಂದೂ, ಬೆಂಗಾಲಿಯಲ್ಲಿ 'ಕರ್ಪೂರ್ ತುಲ್ಸಿ' ಎಂದೂ ಕರೆಯುತ್ತಾರೆ. ಸಸ್ಯ ವಿಜ್ಞಾನದಲ್ಲಿ ಇದರ ಹೆಸರು 'ಆಸಿಮಮ್ ಕಿಲಿಮಂಜಾರಿಕಮ್'. ಇದೂ ಸಹ 'ಲೇಬಿಯೇಟಿ' ಕುಟುಂಬಕ್ಕೆ ಸೇರಿದ ಗಿಡ. ಇದರ ಎಲೆಗಳನ್ನು ನೆರಳಿನಲ್ಲಿ ಒಣಗಿಸಿ ಬಟ್ಟಿ ಇಳಿಸಿದಾಗ ಸುವಾಸನೆಯ ತೈಲ ಬರುತ್ತದೆ. ಇದರಲ್ಲಿ ಅಧಿಕ ಭಾಗವು ಗೆಡ್ಡೆ ಕಟ್ಟಿ ನಿಲ್ಲುತ್ತದೆ. ಇದೇ ಕರ್ಪೂರ. ಇದನ್ನು ಬೇರ್ಪಡಿಸಿದಾಗ ಉಳಿಯುವ ಎಣ್ಣೆಗೆ ಇಂಗ್ಲಿಷ್‌ನಲ್ಲಿ 'ಕ್ಯಾಂಫರ್ ಆಯಿಲ್' ಎಂದು ಕರೆಯುತ್ತಾರೆ. ಕಡಿಮೆ ಬೆಲೆಯ ಸಾಬೂನುಗಳ ತಯಾರಿಕೆಯಲ್ಲಿ ಇದನ್ನು ಬಳಸುತ್ತಾರೆ. ಈ ಎಣ್ಣೆಯಲ್ಲಿ ಕೀಟ ನಾಶಕ ಗುಣವಿದೆ. ಸೊಳ್ಳೆಗಳನ್ನು ತಡೆಗಟ್ಟಲೂ ಇದನ್ನು ಬಳಸುತ್ತಾರೆ. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಕೇರಳ ಮುಂತಾದ ಪ್ರದೇಶಗಳಲ್ಲಿ ಹೆಚ್ಚಾಗಿ ಇದರ ಕೃಷಿ ಉಂಟು.

**ಹವಾಗುಣ :** ಇದು ಸಮುದ್ರ ಮಟ್ಟದಿಂದ 900 ಮೀಟರ್‌ಗಳಷ್ಟು ಎತ್ತರದ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಎಲ್ಲಾ ವಿಧದ ಮಣ್ಣುಗಳಲ್ಲಿ ಬೆಳೆಯಬಲ್ಲದಾದರೂ ಗೋಡು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ದನಕರುಗಳು ತಿನ್ನುವುದಿಲ್ಲವಾದ್ದರಿಂದ ಇದನ್ನು ಬೆಳೆಸಲು ಯಾವ ವಿಧವಾದ ರಕ್ಷಣೆಯ ಅವಶ್ಯಕತೆಯೂ ಇಲ್ಲ.

**ಬಿತ್ತನೆ :** ಬೀಜಗಳಿಂದ ಸಸ್ಯಾಭಿವೃದ್ಧಿ ಆಗುತ್ತದೆ. ಒಂದು ಹೆಕ್ಟೇರಿಗೆ ಸಾಕಾಗುವಷ್ಟು ಸಸಿಗಳನ್ನು ಪಡೆಯಲು ಕೇವಲ 70-140 ಗ್ರಾಂ.ಗಳಷ್ಟು. ಬೀಜ ಸಾಕಾಗುತ್ತದೆ. ಬೀಜಗಳನ್ನು ಇರುವೆಗಳಿಂದ ರಕ್ಷಿಸಲು ಮೊದಲು ಒಟ್ಲು ಪಾತಿಗಳಲ್ಲಿ ಬಿತ್ತಬೇಕು. ಬೀಜದೊಂದಿಗೆ 10 ಪಟ್ಟು ಮಣ್ಣು ಬೆರೆಸಿ ಬಿತ್ತಿದರೆ ಎಲ್ಲಾ ಕಡೆಗು ಒಂದೇ ಸಮನಾಗಿ ಗಿಡ ಬರುತ್ತದೆ. ಆದಷ್ಟು ಬೀಜಗಳನ್ನು ಬಿತ್ತಬೇಕು. ಬಿತ್ತನೆ ಆದ ಮೇಲೆ ಬಲಿತ ಮರಳನ್ನು ಹರಡಿ ದಿನವೂ ತೆಳುವಾಗಿ ನೀರು ಹಾಕಬೇಕು. ಬಿತ್ತಿದ ಒಂದು ತಿಂಗಳಿಗೆ ಸಸಿಗಳನ್ನು ನಾಟಿಗೆ ಉಪಯೋಗಿಸಬಹುದು. ಗಿಡಗಳನ್ನು 60 ಸೆಂ.ಮೀ. ಅಂತರದ ಸಾಲುಗಳಲ್ಲಿ ನೆಡಬೇಕು. ಗಿಡದಿಂದ ಗಿಡಕ್ಕೆ 30 ಸೆಂ.ಮೀ. ಅಂತರ ಬಿಡಬೇಕು. ಮಳೆಗಾಲಕ್ಕೆ ಸ್ವಲ್ಪ ಮುಂಚೆ ನಾಟಿ ಮಾಡಿದರೆ ನೀರು ಆವಶ್ಯಕತೆ ಇರುವುದಿಲ್ಲ. ಬಿತ್ತನೆ ಮಾಡಿದ ಸುಮಾರು 4-5 ತಿಂಗಳಿಗೆ ಕೊಯ್ಲಿಗೆ ಸಿದ್ಧವಾಗುತ್ತದೆ. ಗಿಡಗಳಲ್ಲಿ ಹೂ ಬಿಡಲು ಶುರುವಾದಾಗ ನೆಲಮಟ್ಟದಿಂದ ಸು. 30 ಸೆಂ.ಮೀ. ಎತ್ತರಕ್ಕೆ ಕೊಯ್ಯಬೇಕು. ಕೊಯ್ದದ ಮತ್ತೆ ಚಿಗುರಬಲ್ಲದು. ಎರಡನೆಯ ಮತ್ತು ಆ ಬಳಿಕ ಕೊಯ್ಲುಗಳನ್ನು ಮಾಡುವಾಗ ಗಿಡಗಳನ್ನು ಇನ್ನೂ ಸ್ವಲ್ಪ ಎತ್ತರಕ್ಕೆ ಕತ್ತರಿಸಬೇಕು. ಈ ರೀತಿ ವರ್ಷಕ್ಕೆ ಮೂರು ಕೊಯ್ಲುಗಳನ್ನು ಪಡೆಯಬಹುದು. ಸು. 4 ವರ್ಷಗಳ ಅನಂತರ ಇವುಗಳನ್ನು ಕಿತ್ತು ಮತ್ತೆ ಹೊಸ ಗಿಡಗಳನ್ನು ನೆಡಬೇಕಾಗುತ್ತದೆ. ಪ್ರತಿ ಕೊಯ್ಲಿನ ಅನಂತರ ಸೊಪ್ಪನ್ನು ನೆರಳಿನಲ್ಲಿ ಒಣಗಿಸಿ ಕರ್ಪೂರವನ್ನು ಪಡೆಯಲು ಉಪಯೋಗಿಸಬೇಕು. ಪ್ರತಿ ಎಕರೆಗೆ ಒಂದು ವರ್ಷಕ್ಕೆ ಸು. ಮೂರು ಟನ್ ಒಣಗಿದ ಎಲೆಗಳನ್ನು ಪಡೆಯಬಹುದು. ನೀರಾವರಿ ಅನುಕೂಲವಿದ್ದರೆ ಇದರ ಎರಡರಷ್ಟು ಇಳುವರಿಯನ್ನು ಪಡೆಯಬಹುದು.

**ಕರ್ಪೂರ ತಯಾರಿಕೆ :** ಕರ್ಪೂರವನ್ನು ಪಡೆಯಲು ದೊಡ್ಡದಾದ ಕಡಾಯಿಯಲ್ಲಿ ಎಲೆಗಳನ್ನು ತುಂಬಿ ನೀರಿನೊಂದಿಗೆ ಕಾಯಿಸಬೇಕು. ಕಡಾಯಿಯ ಮೇಲ್ಭಾಗವನ್ನು ಇನ್ನೊಂದು ಕಡಾಯಿಯಿಂದ ಬೋರಲಾಗಿ ಮುಚ್ಚಿಡಬೇಕು. ಇವೆರಡೂ ಸರಿಯಾಗಿ ಕೂಡುವಂತೆ ಮಣ್ಣನ್ನು ಮೆತ್ತಬೇಕು. ಮೇಲಿನ ಪಾತ್ರೆಯ ಮೇಲೆ ಒದ್ದೆ ಬಟ್ಟೆಯನ್ನು ಆಗಿಂದಾಗ್ಗೆ ಹಾಕಿ ತಂಪು ಮಾಡಬೇಕು. ನೀರು ಕುದಿಯಲು ಶುರುವಾದಾಗ ಬೆಂಕಿಯನ್ನು

ಆರಿಸಬೇಕು. ನೀರಿನಿಂದ ಹೊರಟ ಆವಿಯೊಡನೆ ಕರ್ಪೂರ ಮತ್ತು ಕರ್ಪೂರ ತೈಲವು ಮೇಲಿನ ಪಾತ್ರೆಯಲ್ಲಿ ಸಂಗ್ರಹವಾಗುತ್ತದೆ. ಇದನ್ನು ಕೆರೆದು ಕರ್ಪೂರವನ್ನು ಸಂಗ್ರಹಿಸುತ್ತಾರೆ. ಇತರೆ ಜಾತಿಯ ತುಳಸಿಗಳಾದ ನಾಯಿ ತುಳಸಿ, ರಾಮತುಳಸಿ, ಶ್ರೀ ತುಳಸಿಗಳಲ್ಲೂ ಸುವಾಸನೆಯ ತೈಲವನ್ನು ಪಡೆಯಬಹುದಾದರೂ ಇವು ಲಾಭದಾಯಕವಲ್ಲ.

**ಮೆಂತ್ಯ ಜಾತಿಯ ಸಸ್ಯಗಳು (ಪುದೀನಾ) :** ಹಲವಾರು ಬಗೆಯ ಮೆಂಥ ಜಾತಿಯ ಸಸ್ಯಗಳಿವೆ. ಅವುಗಳಲ್ಲಿ ಚಟ್ನಿ ತಯಾರಿಸುವ ಪುದಿನಾ ಸೊಪ್ಪು ಒಂದು. ಪುದೀನ ಸೊಪ್ಪಿನಿಂದ ಎಣ್ಣೆ ತಯಾರಿಸುವರು. ಈ ಜಾತಿಯ ಸಸ್ಯಗಳಲ್ಲಿ ಎರಡು ಬಗೆಯ ಸಸ್ಯಗಳು ಮಾತ್ರ ವಾಣಿಜ್ಯ ದೃಷ್ಟಿಯಿಂದ ಹೆಚ್ಚು ಲಾಭಕರ. ಅವುಗಳನ್ನು ಸಸ್ಯಶಾಸ್ತ್ರದಲ್ಲಿ 'ಮೆಂಥ ಆರವೆನ್ಸಿಸ್' 'ಮೆಂಥ ಪೈಪರಿಟ' ಎಂದೂ ಕರೆಯುತ್ತಾರೆ.

ಇವುಗಳಲ್ಲಿ 'ಮೆಂಥ ಪೈಪರಿಟ' ಎಣ್ಣೆಯು ಸುವಾಸನೆಯಲ್ಲಿ ಉತ್ತಮ ಮಟ್ಟದ್ದು. ಈ ಎಣ್ಣೆಯ ಬೆಲೆಯೂ ಜಾಸ್ತಿ. ಇದಕ್ಕೆ "ಪೆಪ್ಪರ ಮೆಂಟ್ ಎಣ್ಣೆ" ಎಂದು ಹೆಸರು. 'ಮೆಂಥ ಆರವೆನ್ಸಿಸ್' ಎಣ್ಣೆಗೆ 'ಜಪಾನಿಸ್ ಮಿಂಟ್' ಎಣ್ಣೆ ಎಂದು ಹೆಸರು. ಈ ಎರಡೂ ಎಣ್ಣೆಗಳನ್ನೂ 'ಟೂಥ್ ಪೇಸ್ಟ್'ಗಳಲ್ಲಿ, ಪೆಪ್ಪರ್ ಮೆಂಟ್‌ಗಳಲ್ಲಿ, ಚ್ಯೂಯಿಂಗ್ ಗಂಗಳಲ್ಲಿ ಬಳಸುತ್ತಾರೆ.

*ಎನ್. ಆರ್.*

**ಸುಡುಮಣ್ಣು** ಕೇರಳದ ಅಡಕೆ, ತೆಂಗು, ಬಾಳೆ, ತರಕಾರಿ ಕೃಷಿಕರು ಅಳವಡಿಸಿಕೊಂಡ ಸ್ವಯಂ ತಯಾರಿಯ ಗೊಬ್ಬರಗಳಲ್ಲಿ ಈ 'ಸುಡುಮಣ್ಣು' ಒಂದು ವಿಧ. ಕೃಷಿ ಪ್ರದೇಶದ ಹುಲ್ಲು, ಕಳೆ ಹಾಗೂ ಇತರ ಅನುಪಯುಕ್ತ ತ್ಯಾಜ್ಯಗಳಿಂದ ವಿಶೇಷ ಸತ್ವಯುತ ಗೊಬ್ಬರ ತಯಾರಿಸುತ್ತಾರೆ. ಈ ಸುಡುಮಣ್ಣಿನ ತಯಾರಿ ಆರಂಭವಾಗುವುದು ಕೃಷಿ ಪ್ರದೇಶದ ಹುಲ್ಲು ಕೀಳುವ ಮೂಲಕ. ಸಾಮಾನ್ಯವಾಗಿ ಮಳೆಗಾಲ ಮುಗಿದ ಬಳಿಕ ಹಾಗೂ ಅಡಕೆ ಬೆಳೆಯ ಕೊಯ್ಲಿನ ಮೊದಲು ಅಂದರೆ ಡಿಸೆಂಬರ್ ತಿಂಗಳಿನ ಆರಂಭದಲ್ಲಿ ಹುಲ್ಲು ಕೀಳುವ ಕೆಲಸವನ್ನು ಆರಂಭಿಸುತ್ತಾರೆ. ಇದು ತೋಟವನ್ನು ಫಸಲು ತೆಗೆಯುವುದಕ್ಕಾಗಿ ಸ್ವಚ್ಛಗೊಳಿಸುವ ಪ್ರಕ್ರಿಯೆ. ತೋಟದ ವಿಸ್ತೀರ್ಣ ಹಾಗೂ ಕೆಲಸದಾಳುಗಳ ಲಭ್ಯತೆಯ ಮೇಲೆ ಇದು ಅವಲಂಬಿತ. ಹೀಗೆ ಕೀಳಲ್ಪಟ್ಟ ಹುಲ್ಲು - ಕಳೆಗಳನ್ನು ಅಲ್ಲಲ್ಲಿ ಪುಟ್ಟ ರಾಶಿಗಳಾಗಿ ಹಾಕುತ್ತಾರೆ. ಅದರೊಂದಿಗೆ ತೆಂಗಿನ ಗರಿಗಳು, ಕಂಗಿನ ಸೋಗೆ, ಹಾಳೆ, ತರಗೆಲೆ, ಕಸಕಡ್ಡಿ, ಬಾಳೆಯ ಒಣಗಿದ 'ಚಾಂಬಾರು' ಇವನ್ನೂ ಒಟ್ಟು ಸೇರಿಸುತ್ತಾರೆ. ಇಡೀ ತೋಟವನ್ನು ಹೀಗೆ ಸ್ವಚ್ಛಗೊಳಿಸಿದ ಬಳಿಕ ರಾಶಿಹಾಕಿದ ತ್ಯಾಜ್ಯಗಳನ್ನು 10-15 ದಿನಗಳ ಕಾಲ ಒಣಗಲು ಅಲ್ಲೇ ಬಿಡುತ್ತಾರೆ. ರಾಶಿ ಚಿಕ್ಕದಾಗಿದ್ದಲ್ಲಿ ಬೇಗನೆ ಒಣಗುವುದು.

ಬಳಿಕ ಒಂದು ವಿಸ್ತಾರವಾದ, ಸಮತಟ್ಟಾದ ನೆಲವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಕೃಷಿಕನು ಗದ್ದೆಯನ್ನು ಹೊಂದಿದವನಾಗಿದ್ದಲ್ಲಿ ಸುಡುಮಣ್ಣಿನ ತಯಾರಿಗೆ ಗದ್ದೆಯನ್ನೇ ಉಪಯೋಗಿಸಿಕೊಳ್ಳುತ್ತಾನೆ. ಈ ವೇಳೆಗಾಗಲೇ ಗದ್ದೆಯ ಎರಡು ಬೇಸಾಯಗಳು ಮುಗಿದಿದ್ದು ಗದ್ದೆ ಒಣಗಿರುತ್ತದೆ. ಸುಡುಮಣ್ಣಿನ ತಯಾರಿಗೆ ಗುಡ್ಡದ ನೆಲಕ್ಕಿಂತ ಗದ್ದೆ ಹೆಚ್ಚು ಯುಕ್ತವಾದುದು. ಕಾರಣ ಇದು ವಿಶಾಲವಾಗಿರುತ್ತದೆ ಮತ್ತು ಕಸದ ರಾಶಿಗೆ ಹಾಕಿದ ಬೆಂಕಿ ಇಲ್ಲಿ ಸುತ್ತಲೂ ವ್ಯಾಪಿಸುವ ಸಾಧ್ಯತೆ ಬಹಳ ಕಡಿಮೆ. ನೆಲವನ್ನು ಆಯ್ಕೆ ಮಾಡಿದ ಬಳಿಕ ತೋಟದಲ್ಲಿ ಒಟ್ಟಲಾದ ರಾಶಿಗೆ ಅನುಗುಣವಾಗಿ ಸುಮಾರು 8-10 ಅಡಿ ವ್ಯಾಸವಿರುವಂತೆ ವೃತ್ತಾಕಾರದಲ್ಲಿ ಒಂದು ಅಡಿ ಎತ್ತರಕ್ಕೆ ಕಲ್ಲು ಮಿಶ್ರಿತ ಹುಡಿ ಮಣ್ಣನ್ನು ತಳಪಾಯವಾಗಿ ಹಾಕುತ್ತಾರೆ. ಬಳಿಕ ಸುಮಾರು ಅಷ್ಟೇ ಎತ್ತರಕ್ಕೆ ಒಣಗಿದ ಕಸದ ರಾಶಿ. ಅನಂತರ ಒಂದು ಪದರ ಮಣ್ಣು - ಒಂದು ಪದರ ಕಸ - ಇಂತಹ ಒಣಗಿದ ವಸ್ತುಗಳೆಲ್ಲಾ ಮುಗಿಯುವವರೆಗೂ ರಾಶಿ ಮಾಡುತ್ತಾರೆ. ಹೀಗೆ ಮಾಡುವಾಗ ಕೊನೆಯ ಪದರ ಮಾತ್ರ ಮಣ್ಣೇ ಇರಬೇಕಾದದ್ದು ಬಹಳ ಮುಖ್ಯ. ಈ ಕೆಲಸ ಪೂರ್ಣಗೊಂಡ ಬಳಿಕ. ಸಂಜೆಯ ಹೊತ್ತಿನಲ್ಲಿ ಹೆಚ್ಚು ಗಾಳಿಯಿಲ್ಲದ ವೇಳೆ ನೋಡಿಕೊಂಡು ಈ ರಾಶಿಗೆ ಬೆಂಕಿ ಇಡುತ್ತಾರೆ. ಮೊದಲಿಗೆ ಒಮ್ಮೆ ಜ್ವಾಲೆಯಿಂದೊಡಗೂಡಿ ಎತ್ತರದವರೆಗೂ ಹೊತ್ತಿ ಉರಿಯುವ ಬೆಂಕಿ ಒಂದೆರಡು ಗಂಟೆಗಳಲ್ಲೇ ಜ್ವಾಲೆಗಳನ್ನು ಕಳೆದುಕೊಂಡು ಮಂದಾಗ್ನಿಯಾಗುತ್ತದೆ. ಮುಂದೆ ಒಂದು ವಾರದವರೆಗೂ ಇದು ಒಳಗೊಳಗೇ ಉರಿಯುತ್ತಾ ಬೂದಿಯಾಗುತ್ತದೆ. ಈ ರಾಶಿಯಲ್ಲಿ ಹೊರ ಆವರಣ ಉರಿದು ಬೂದಿಯಾದಂತೆ ಸುತ್ತಲಿನ ಸುಡುಮಣ್ಣನ್ನು ಹಾರೆಯಿಂದ ಸ್ವಲ್ಪ ಸ್ವಲ್ಪವಾಗಿ ಹೊರಗೆಳೆಯುತ್ತಾರೆ. ಇದು ಒಳಗಿನ ಬೆಂಕಿ ಉರಿಯಲು ಮತ್ತು ಹೊರಗಿನ ಸುಡುಮಣ್ಣು ತಣಿಯಲು ಸಹಕಾರಿ. ಹೀಗೆ ಮಾಡುತ್ತಾ ಸಾಗಿದಂತೆ ಸುಡುವ ಪ್ರಕ್ರಿಯೆ ಪೂರ್ಣವಾಗುತ್ತದೆ. ಬಳಿಕ ಸುಮಾರು 20-30 ದಿನಗಳ ಕಾಲ ಈ ಸುಡುಮಣ್ಣನ್ನು ತಣಿಯಲು ಬಿಡುತ್ತಾರೆ.

ತಣಿದ (ಆರಿದ) ಅನಂತರ ಸುಡುಮಣ್ಣು ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ತೆಂಗು - ಕಂಗುಗಳಿಗೆ ಪೂರೈಸುತ್ತಾರೆ. ಈ ಗೊಬ್ಬರವು ಬಹು ಸತ್ವಯುತವಾಗಿರುವುದರಿಂದ ಬಳಕೆಯ ಪ್ರಮಾಣ ಮಿತಿಯಲ್ಲಿರುತ್ತದೆ. ಕಂಗಿನ ಮರಕ್ಕೆ 3-4 ಸೇರು, ತೆಂಗಿನ ಮರಕ್ಕೆ 5-6 ಸೇರು, ಬಾಳೆಗಿಡಕ್ಕೆ 1-2 ಸೇರು. ಹೆಚ್ಚಿನ ಪ್ರಮಾಣದಲ್ಲಿ ಬಳಸಿದಲ್ಲಿ ಮರದ ಕಾಂಡ ದಪ್ಪವಾಗಿ ಇಳುವರಿ ಕಡಿಮೆಯಾಗುವುದು ಎನ್ನುತ್ತಾರೆ. ತರಕಾರಿ ಮತ್ತು ಬತ್ತದ ಕೃಷಿಯಲ್ಲೂ ಇದನ್ನು ಮಿತ ಪ್ರಮಾಣದಲ್ಲಿ ಬಳಸುತ್ತಾರೆ. ಅಧಿಕವಾದಲ್ಲಿ ಅಲ್ಲೂ ಕಾಳು ಜೊಳ್ಳಾಗುತ್ತದೆ. ಈ ಸುಡುಮಣ್ಣನ್ನು ಸುಟ್ಟ ಗದ್ದೆಯ ಜಾಗದಲ್ಲಿ ಬಹಳ ಪುಷ್ಟಿಯಾಗಿ ಬೆಳೆದುದನ್ನೂ ಆದರೆ ಕಾಳುಗಳು ಹೆಚ್ಚಿನ ಪ್ರಮಾಣದಲ್ಲಿ ಜೊಳ್ಳಾಗಿರುವುದನ್ನೂ ಕಾಣಬಹುದು. ಈ ಗೊಬ್ಬರವನ್ನು ಕೊಟ್ಟ ಒಂದೆರಡು ದಿನಗಳಲ್ಲೇ ನೀರು ಪೂರೈಸುವುದು ಅಗತ್ಯ.

ಆದರೆ ಇತ್ತೀಚಿನ ದಿನಗಳಲ್ಲಿ ಕೆಲಸದಾಳುಗಳ ಅಲಭ್ಯತೆ ಅಥವಾ ಮಿತಿ ಮೀರಿದ ಕೂಲಿಯ ಬೇಡಿಕೆಯಿಂದಾಗಿ ಕೃಷಿಕರು ಕಳೆ ನಿವಾರಣೆಗಾಗಿ ಕಡಿಮೆ ಖರ್ಚಿನ ಯಂತ್ರಗಳನ್ನು ಬಳಸುತ್ತಿದ್ದಾರೆ. ಅಲ್ಲಿ ಹುಲ್ಲು - ಕಳೆಗಿಡಗಳು ಪೂರ್ತಿ ಪುಡಿ ಪುಡಿಯಾಗುವುದರಿಂದ ಒಟ್ಟು ಸೇರಿಸಿ ರಾಶಿ ಹಾಕುವುದು ಅಸಾಧ್ಯ. ಇದಲ್ಲದೆ ಸುಡುಮಣ್ಣಿನ ತಯಾರಿಯ ಒಟ್ಟು ಖರ್ಚು ಅತಿಯಾಗಿರುವುದರಿಂದ ಕೃಷಿಕರು ಈ ಗೊಬ್ಬರದ ತಯಾರಿಕೆಯನ್ನೇ ಕೈಬಿಡುತ್ತಿದ್ದಾರೆ. ಬದಲಾಗಿ ಸಾವಯವ ಗೊಬ್ಬರಗಳಾದ ಕೋಳಿಗೊಬ್ಬರ ಅಥವಾ ಆಡಿನ ಹಿಕ್ಕೆಗಳನ್ನು ಪೂರೈಸುತ್ತಿದ್ದಾರೆ.

ಈ ಸುಡುಮಣ್ಣು ಗೊಬ್ಬರದ ಸರಳ ವಿಧಾನವನ್ನು ಗೆಡ್ಡೆ ತರಕಾರಿಗಳ (ವಿಶೇಷವಾಗಿ ಸುವರ್ಣ ಗೆಡ್ಡೆ) ಬೆಳೆಯಲ್ಲಿ ಉಪಯೋಗಿಸುತ್ತಾರೆ. ಸುವರ್ಣ ಗೆಡ್ಡೆಯನ್ನು ಬೆಳೆಯುವುದಕ್ಕಾಗಿ 2-3 ಅಡಿ ಅಗಲ, 3-4 ಅಡಿ ಆಳದ ಕಾಲುವೆಯಂತೆ ಉದ್ದಕ್ಕೆ ತೋಡುತ್ತಾರೆ. ಇದರಲ್ಲಿ ಸುತ್ತು ಮುತ್ತಲಿನ ತರಗೆಲೆ, ಕಸ-ಕಡ್ಡಿ,

ಸಣ್ಣಪುಟ್ಟ ಕೊಂಬೆ-ರೆಂಬೆಗಳನ್ನು ಸೇರಿಸಿ ಪದರ ಪದರಗಳಾಗಿ ಮಣ್ಣು-ಕಸ-ಮಣ್ಣು-ಕಸ ಬರುವಂತೆ ಕಣಿಯನ್ನು ತುಂಬಿಸುತ್ತಾರೆ. ಬಳಿಕ ಬೆಂಕಿ ಹಚ್ಚಿ ಪೂರ್ತಿ ಸುಟ್ಟು ಬೂದಿಯಾದ ಅನಂತರ ತಣಿಯಲು ಬಿಟ್ಟು, ನೀರು, ಹಾಯಿಸಿ ಸುವರ್ಣಗೆಡ್ಡೆಯ ಬೀಜಗಳನ್ನು ನೆಡುತ್ತಾರೆ. ಮುಂದೆ ಇದಕ್ಕೆ ನೀರಿನ ಪೂರೈಕೆಯಷ್ಟೇ ಸಾಕಾಗುತ್ತದೆ. ಗೆಡ್ಡೆಗಳು ಹುಲುಸಾಗಿ ಬೆಳೆದು ಉತ್ತಮ ಇಳುವರಿ ಲಭ್ಯವಾಗುತ್ತದೆ.

*ಎಸ್.ಪಿ.ಕೆ.*

**ಸುವರ್ಣಗೆಡ್ಡೆ** ಅಲ್ಲಿಯೇಸೀ ಕುಟುಂಬಕ್ಕೆ ಸೇರಿದ ಸುವರ್ಣಗೆಡ್ಡೆ (ಸುರನ್) ಪದದಿಂದ ಬಂದಿರುವಂಥದ್ದು. ಕೊಡಗು, ದಕ್ಷಿಣ ಕನ್ನಡದ ಕಡೆ ಹುತ್ರಿ ಗೆಣಸೆಂದೂ ಇನ್ನು ಕೆಲವು ಕಡೆ ಕಂದಗೆಡ್ಡೆ, ಕಾಡುಚೂರ್ಣಗೆಡ್ಡೆ, ಕಾಡು ಸೂರಣಗೆಡ್ಡೆ ಎಂದೂ ಪರಿಚಿತವಾಗಿದೆ. ಸುವರ್ಣ ಗೆಡ್ಡೆಯನ್ನು ವಾಣಿಜ್ಯ ಬೆಳೆಯಾಗಿ ಭಾರತ, ಚೈನಾ, ಫಿಲಿಫ್ಪೀನ್ಸ್ ಮತ್ತು ಶ್ರೀಲಂಕಾಗಳಲ್ಲಿ ಬೆಳೆಸಲಾಗುತ್ತದೆ. ಭಾರತದಲ್ಲಿ ಆಂಧ್ರ, ಬಿಹಾರ್, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಹೆಚ್ಚಾಗಿ ಬೆಳೆಯುವರು. ಶಾಖಾಹಾರಿಗಳು ದೈನಂದಿನ ಆಹಾರದಲ್ಲಿ ಇದನ್ನು ಹೆಚ್ಚಾಗಿ ಬಳಸುತ್ತಾರೆ.




ಸುವರ್ಣಗೆಡ್ಡೆ ಏಷ್ಯಾ ಅಥವಾ ಆಫ್ರಿಕಾದ ಮೂಲದ್ದೆಂದು ಹೇಳಲಾಗಿದೆ. ಇದರ ಬೇಸಾಯಕ್ಕೆ ಅತ್ಯುತ್ತಮ ಮಣ್ಣು ಅಗತ್ಯ. ಈ ಗೆಡ್ಡೆಯು ಜೌಗು ನೀರಿಗೆ ಕೊಳೆಯುವುದರಿಂದ ನೀರನ್ನು ಹಿಡಿದಿಟ್ಟುಕೊಳ್ಳುವ ಭೂಮಿ ಒಳ್ಳೆಯದಲ್ಲ. ನೀರು ಬಸಿದು ಹೋಗುವ ಗೋಡು ಮಣ್ಣು, ಮರಳು ಮಿಶ್ರಿತ ಗೋಡುಮಣ್ಣು, ಹಾಗೂ ಸಾವಯವ ಗೊಬ್ಬರ ಸೇರಿದ ಸುಡುಮಣ್ಣು ಈ ಬೆಳೆಗೆ ಉತ್ತಮ. ಎರೆ ಮಣ್ಣಿನಲ್ಲಿ ಗೆಡ್ಡೆ ಬೆಳವಣಿಗೆ ಕುಂಠಿತವಾಗುತ್ತದೆ.

ನಾಟಿಗಿಂತ ಮೊದಲು 2-3 ಅಡಿ ಅಗಲ ಹಾಗೂ 3-4 ಅಡಿ ಆಳದ ಕರ್ಣ (ಹಳ್ಳ) ತೋಡಿ ತರಗೆಲೆ, ಕಸ, ಕಡ್ಡಿ, ರೆಂಬೆ, ಕೊಂಬೆಗಳನ್ನು ಸೇರಿಸಿ ಪದರ ಪದರಗಳಾಗಿ ಮಣ್ಣು - ಕಸ ಬರುವಂತೆ ಗುಂಡಿಯನ್ನು ತುಂಬಿಸುತ್ತಾರೆ. ಬಳಿಕ ಬೆಂಕಿಯನ್ನು ಹಚ್ಚಿ ಪೂರ್ತಿ ಸುಟ್ಟು ಬೂದಿಯಾದ ಮೇಲೆ ತಣಿಯಲು ಬಿಟ್ಟು ನೀರು ಹಾಯಿಸಿ ಸುವರ್ಣಗೆಡ್ಡೆಯ ಬೀಜಗಳನ್ನು ಬಿತ್ತುತ್ತಾರೆ. ಹೀಗೆ ಮಾಡುವುದರಿಂದ ಮುಂದೆ ಇದಕ್ಕೆ ಗೊಬ್ಬರದ ಅವಶ್ಯಕತೆ ಇರುವುದಿಲ್ಲ. ಉಷ್ಣ ಮತ್ತು ಅರೆ ಉಷ್ಣ ವಲಯಗಳಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಬೆಳವಣಿಗೆಯ ಹಂತದಲ್ಲಿ ವ್ಯಾಪಕವಾದ ಮಳೆ, ಬಿಸಿ ಮತ್ತು ಆರ್ದ್ರ ವಾತಾವರಣವಿದ್ದರೆ ಒಳ್ಳೆಯದು. ಕರ್ನಾಟಕದಲ್ಲಿ ಮಾರ್ಚ-ಏಪ್ರಿಲ್ ತಿಂಗಳಲ್ಲಿ ಇದನ್ನು ನಾಟಿ ಮಾಡುತ್ತಾರೆ.

**ಬಿತ್ತನೆ :** ಸುವರ್ಣಗೆಡ್ಡೆಯ ಸಸ್ಯಾಭಿವೃದ್ಧಿಗೆ ತಾಯಿ ಕಂದುಗಳ ಪಕ್ಕದಲ್ಲಿ ಹುಟ್ಟಿ ಚಿಗುರುವ ಮರಿಗೆಡ್ಡೆಗಳನ್ನು ಬಳಸುವರು. 20-25 ಗ್ರಾಂ. ಇರುವ ಈ ಸಣ್ಣ ಗೆಡ್ಡೆಗಳು 3-4 ಋತುಮಾನಗಳಲ್ಲಿ 9-10 ಕಿ.ಗ್ರಾಂ. ತೂಗುವವರೆಗೆ ಬೆಳೆಯುತ್ತವೆ. ಸಣ್ಣ ಕಂದುಗಳನ್ನು ಕಡಿಮೆ ಅಂತರ (15-25 ಸೆಂ.ಮೀ.)ದಲ್ಲಿ ನಾಟಿ ಮಾಡಿ ವೃದ್ಧಿ ಪಡಿಸಿಕೊಂಡು ಅನಂತರ ಬೇಕಾದೆಡೆಗೆ ವರ್ಗಾಯಿಸುತ್ತಾರೆ. ದಕ್ಷಿಣ ಭಾರತದ ಕೆಲವು ಸುವರ್ಣ ಗೆಡ್ಡೆ ತಳಿಗಳು ಮರಿ ಕಂದುಗಳನ್ನು ಉತ್ಪತ್ತಿ ಮಾಡದ ಕಾರಣದಿಂದ ದೊಡ್ಡ ಕಂದುಗಳನ್ನು ಕತ್ತರಿಸಿ ಬಳಸುತ್ತಾರೆ. 2-3 ಕಿ.ಗ್ರಾಂ. ತೂಗುವ ಗೆಡ್ಡೆಗಳನ್ನು ಕೇಂದ್ರೀಯ ಮೊಗ್ಗಿನ ಭಾಗ ಒಳಗೊಂಡಿರುವಂತೆ ಕತ್ತರಿಸಿ ನಾಟಿ ಮಾಡಬೇಕು. ಉತ್ತಮ ಬೆಳವಣಿಗೆ ಮತ್ತು ಇಳುವರಿಗೆ ಗೆಡ್ಡೆ ಚೂರಿನ ಗಾತ್ರ ಕನಿಷ್ಠ 500 ಗ್ರಾಂ ಇರಬೇಕು.

ಸುವರ್ಣಗೆಡ್ಡೆ ಬೇಸಾಯ ಮಾಡುವಂತಹ ಭೂಮಿಯನ್ನು 2-3 ಬಾರಿ ಚೆನ್ನಾಗಿ ಉತ್ತು ಹದಕ್ಕೆ ತರಬೇಕು. ಅನಂತರ 3 ಅಡಿ ಅಂತರದಲ್ಲಿ ನಾಟಿ ಮಾಡಿ ದೊಡ್ಡ ದೊಡ್ಡ ಪಾತಿಗಳನ್ನು ತೆಗೆದು ಗೊಬ್ಬರ ಮತ್ತು ಮೇಲ್ಮಣ್ಣಿನಿಂದ ಮುಚ್ಚಬೇಕು. ಒಂದು ಎಕರೆಗೆ ಸುಮಾರು 2 ರಿಂದ 2.5 ಟನ್ "ಕಣ್ಣುಳ್ಳ ಗೆಡ್ಡೆ" ಬಿತ್ತನೆಗೆ ಬೇಕಾಗುತ್ತದೆ. ನಾಟಿ ಮಾಡಿದ ಒಂದು ತಿಂಗಳಲ್ಲಿ ಮೊಳಕೆಯೊಡೆಯುತ್ತದೆ. ಪ್ರತಿ ಎರಡು ವಾರಗಳ ಅನಂತರ ಸಂಪೂರ್ಣ ಸಾರಯುಕ್ತ ಗೊಬ್ಬರವನ್ನು ಒದಗಿಸಬೇಕು. ನಾಟಿ ಮಾಡಿದ ಕೂಡಲೇ ಗೆಡ್ಡೆ ಮೊಳಕೆಯೊಡೆಯುವಾಗ ನೀರು ಹಾಯಿಸುವುದು ಅಗತ್ಯ. ಮಳೆ ಕಡಿಮೆಯಾದಂತೆ ಹೆಚ್ಚು ನೀರು ಹಾಯಿಸಬೇಕು. ಬೆಳೆ ಬಲಿಯುವ ಹಂತಕ್ಕೆ ಬಂದಾಗ ನೀರು ಕಡಿಮೆ ಮಾಡಬೇಕು ಮತ್ತು ಮಳೆಗಾಲದಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಗೆಡ್ಡೆಯ ಗಾತ್ರ ವೃದ್ಧಿಯಾಗಬೇಕಾದರೆ ಮಣ್ಣನ್ನು ಏರು ಹಾಕಿದರೆ ಉತ್ತಮ. ಮಳೆ ಪ್ರಾರಂಭಕ್ಕೆ ಮುನ್ನ 2-3 ಬಾರಿ ಕಳೆ ತೆಗೆಯಬೇಕು. ಗಿಡಗಳ ಬೆಳವಣಿಗೆ ಹೆಚ್ಚಿದಂತೆ ನೆರಳಿನಿಂದಾಗಿ ಕಳೆ ತಂತಾನೆ ಕಡಿಮೆಯಾಗುತ್ತದೆ.

**ಇಳುವರಿ :** ನಾಟಿ ಮಾಡಿದ 9-10 ತಿಂಗಳಲ್ಲಿ ಬೆಳೆ ಕೊಯ್ಲಿಗೆ ಬರುತ್ತದೆ. ಎಲೆಗಳು ಹಳದಿಯಾಗಿ ತೂಗಿ ಬೀಳುವಿಕೆಯು ಕೊಯ್ಲಿನ ಪಕ್ವತೆಯ ಲಕ್ಷಣ. ಅಗೆದ ಅನಂತರ ಗೆಡ್ಡೆಗಳನ್ನು ಕೆಲವು ತಿಂಗಳವರೆಗೆ ಶೇಖರಿಸಲೂ ಸಾಧ್ಯ. ಪ್ರತಿಯೊಂದು ಎಕರೆಯಿಂದ ಸುಮಾರು 15-20 ಟನ್ ಇಳುವರಿ ಪಡೆಯಬಹುದು. ಇದರಲ್ಲಿ ಸು. 14 ಪ್ರಭೇದಗಳನ್ನು ಗುರುತಿಸಲಾಗಿದೆ. ವಾಣಿಜ್ಯ ತಳಿಗಳು ಬಹಳ ಕಡಿಮೆ. ಹೆಚ್ಚಾಗಿ ದೇಶೀ ತಳಿಗಳು ಅಲ್ಲಲ್ಲಿ ಕಂಡುಬರುತ್ತವೆ.

**ಮುಖ್ಯವಾದ ತಳಿಗಳು :**

**1. ಕೊವ್ವೂರು :** ಹೆಚ್ಚು ಇಳುವರಿ ಕೊಡುವ ಮತ್ತು ಹೆಚ್ಚು ವಾರ್ಷಿಕ ಬೆಳವಣಿಗೆ ಹೊಂದುವ ದಕ್ಷಿಣ ಭಾರತದ ತಳಿ. ಕಂದುಗಳು ನಯ, ಒಗರಿಲ್ಲ. ಉತ್ತಮ ಗುಣಮಟ್ಟ ಹೊಂದಿರುತ್ತವೆ.ಇದು ಮರಿಗೆಡ್ಡೆಗಳನ್ನು ಬಿಡುವುದಿಲ್ಲ.

**2. ಸಂತ್ರಾಗಾಚಿ :** ವಾರ್ಷಿಕ ಬೆಳೆವಣಿಗೆ ಹೊಂದಿರುವ ಈ ತಳಿ ಸ್ವಲ್ಪ ಒಗರು ರುಚಿಹೊಂದಿದ ಗೆಡ್ಡೆಗಳನ್ನು ಕೊಡುತ್ತದೆ.ಇದರ ಕಂದುಗಳು ಒರಟಾಗಿದ್ದು ತಿಳಿ ಕೆನೆ ಬಣ್ಣದ ಅನೇಕ ಸಣ್ಣ ಮರಿ ಕಂದುಗಳನ್ನು ಒಳಗೊಂಡಿರುತ್ತದೆ. ಈ ಸಣ್ಣ ಕಂದುಗಳನ್ನು 3-4 ಋತುಮಾನಗಳಿಗೆ ಬೇಸಾಯ ಮಾಡಿದರೆ ಮಾರುಕಟ್ಟೆಗೆ ಯೋಗ್ಯವಾದ ಗೆಡ್ಡೆಗಳಾಗಿ ಬೆಳೆಯುತ್ತವೆ. ಇದು ಪೂರ್ವ ಭಾರತದ ತಳಿ.

**ರೋಗಗಳು :** ಹಾನಿಕಾರಕ ಕೀಟಗಳು ಈ ಬೆಳೆಗೆ ಹೆಚ್ಚಿಲ್ಲ. ಕತ್ತು ಕೊಳೆ ರೋಗ ಮತ್ತು ಅಂಗಮಾರಿ ರೋಗವೆಂದು ಎರಡು ಬಗೆಯ ರೋಗಗಳು ಕಾಣಿಸಿಕೊಳ್ಳುತ್ತವೆ. 2-3 ತಿಂಗಳು ಬೆಳೆದ ಗೆಡ್ಡೆಗೆ ರೋಗಾಣುಗಳು ಗಿಡದ ಬುಡ ಭಾಗದಲ್ಲಿ ಸೇರಿ ನೀರು ನಿಂತರೆ ಕಲೆತ ಮಚ್ಚೆಗಳಾಗಿ ಮಾರ್ಪಟ್ಟು ಕೊಳೆಯಲು ಕಾರಣವಾಗುತ್ತವೆ. ಇಡೀ ಕಾಂಡ ಕುಗ್ಗಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಈ ರೋಗವನ್ನು ನಿಯಂತ್ರಿಸಲು ಹೆಚ್ಚಾದ ನೀರನ್ನು ಭೂಮಿಯಿಂದ ಬಸಿದು ಹೋಗುವಂತೆ ಮಾಡಬೇಕು. ಪ್ರತಿ 10 ಲೀ ನೀರಿಗೆ 20 ಗ್ರಾಂ ಕ್ಯಾಪ್ಟಾನ್ ಬೆರೆಸಿ ಸಿಂಪಡಿಸಬೇಕು. ಅಂಗ ಮಾರಿ ರೋಗವು ಎಲೆಗಳ ಮೇಲೆ ನೀರು ಕಲೆತ ಮಚ್ಚೆಗಳು ಕಾಣಿಸಿಕೊಂಡು ವಿಶಾಲವಾಗುತ್ತಾ ಹೋಗುತ್ತವೆ ಮತ್ತು ಹಾನಿಗೊಳಗಾದ ಭಾಗಕ್ಕೆ ಸರಿಯಾಗಿ ತಳಭಾಗದಲ್ಲಿ ಬಿಳಿ ಬಣ್ಣದ ಶಿಲೀಂಧ್ರ ಕಾಣಿಸಿಕೊಳ್ಳುತ್ತದೆ. ಎಲೆಗಳು ಹಳದಿ ಬಣ್ಣದಿಂದ ಕಂದು ಬಣ್ಣಕ್ಕೆ ತಿರುಗುತ್ತವೆ. ಇದರ ನಿಯಂತ್ರಣಕ್ಕೆ ಶೇ. 1ರಷ್ಟು ಬೋರ್ಡೋ ದ್ರಾವಣವನ್ನು ಸಿಂಪಡಿಸಬೇಕು.

**ಉಪಯೋಗಗಳು :** ಬಹಳ ದಪ್ಪವಾಗಿರುವ ಮತ್ತು ಪಿಷ್ಟ, ಸಾರಜನಕ, ಕೊಬ್ಬು, ಸುಣ್ಣ, ರಂಜಕ, ಕಬ್ಬಿಣ ಮುಂತಾದ ಪೋಷಕಾಂಶಗಳನ್ನು ಹೊಂದಿರುವ ಈ ಗೆಡ್ಡೆಗಳನ್ನು ತರಕಾರಿಯಾಗಿ ಬಳಸುತ್ತಾರೆ. ಬೇಯಿಸಿದ ಸುವರ್ಣಗೆಡ್ಡೆ ಮತ್ತು ಕೆಸು ಗೆಡ್ಡೆಯನ್ನು ಸೇವನೆ ಮಾಡುವುದರಿಂದ ವಾತ ನಿವಾರಣೆಯಾಗುತ್ತದೆ. ಅಸ್ತಮಾ ರೋಗಿಗಳು ಇದನ್ನು ಸೇವಿಸುವುದರಿಂದ ಉಸಿರಾಟ ಸರಾಗವಾಗುವುದು. ಸುವರ್ಣಗೆಡ್ಡೆಗೆ ಮಣ್ಣು ಸವರಿ ಹದವಾಗಿ ಸುಟ್ಟು ಶುಚಿಗೊಳಿಸಿ ಅದರೊಂದಿಗೆ 2 ಚಮಚ ಕಲ್ಲು ಸಕ್ಕರೆ ಮತ್ತು ಮಜ್ಜಿಗೆಯೊಂದಿಗೆ ದಿನಕ್ಕೆ 2 ಬಾರಿ ಸೇವಿಸುವುದರಿಂದ ಮೂಲವ್ಯಾಧಿ ಮತ್ತು ಕೈ ಕಾಲು ಊತ ವಾಸಿಯಾಗುತ್ತದೆ. ತಾಜಾಗೆಡ್ಡೆ, ಹಳೆಬೆಲ್ಲ ಮತ್ತು ಉಪ್ಪು 4 : 1 : 1 ಪ್ರಮಾಣದಲ್ಲಿ ಒಂದು ಮಡಕೆಯಲ್ಲಿಟ್ಟು ಮುಚ್ಚಳ ಹಾಕಿ ಬಾಯಿಯನ್ನು ಬಿಗಿಯಾಗಿ ಕಟ್ಟಿ ಅನಂತರ ಬೆರಣಿಯಲ್ಲಿರಿಸಿ ಸುಟ್ಟು ಆ ಪುಡಿಯನ್ನು ವೀಳೆಯದೆಲೆಯೊಂದಿಗೆ ದಿನಕ್ಕೆ ಒಂದ ಬಾರಿ ಎರಡು ತಿಂಗಳುಗಳ ವರೆಗೆ ಕೊಡುವುದರಿಂದ ಅಸ್ತಮಾ, ದಮ್ಮು, ಆಮವಾತ ಕಡಿಮೆಯಾಗುತ್ತದೆ. ಪಿತ್ತವಿಕಾರವನ್ನು ಕಡಿಮೆಗೊಳಿಸುತ್ತದೆ. ಇದರಿಂದ ಸೂರಣ ಕಲ್ಪ ಎಂಬ ತಿನಿಸನ್ನೂ ಮಾಡುವುದುಂಟು.

*ಎನ್. ಆರ್.*

**ಸೂರ್ಯಕಾಂತಿ** ಇಂಗ್ಲಿಷ್‌ನಲ್ಲಿ ಸನ್‌ಫ್ಲವರ್ ಎನ್ನುವರು. ಇದರ ವೈಜ್ಞಾನಿಕ ಹೆಸರು ಹೇಲಿಯಂಥಸ್ ಅನ್ನಸ್. ಇದೊಂದು ವಾರ್ಷಿಕ ಬೆಳೆ. ಇದರ ಹುಟ್ಟೂರು ಉತ್ತರ ಅಮೆರಿಕದ ಪಶ್ಚಿಮ ತೀರ. ಇದು ಭಾರತಾದ್ಯಂತ ವಿಸ್ತರಿಸಿ ವರ್ಷವಿಡೀ ಬೆಳೆಯುವ ಬೆಳೆಯಾಗಿದೆ. ಸಮಯ / ಹೊತ್ತು ತಿರುಗಿದಂತೆ ಈ ಹೂವಿನ ಮುಖವು ಸೂರ್ಯನತ್ತ ತಿರುಗುವುದರಿಂದ ಇದಕ್ಕೆ ಹೊತ್ತುತಿರುಗ ಹೂ ಎಂಬ ಹೆಸರೂ ಇದೆ.

ಸೂರ್ಯಕಾಂತಿ ಕರ್ನಾಟಕ ರಾಜ್ಯ ಹಾಗೂ ಭಾರತ ದೇಶದ ಅತಿಮುಖ್ಯವಾದ ಎಣ್ಣೆ ಕಾಳು ಬೆಳೆಯಾಗಿದೆ. ಬೀಜದಿಂದಾಗಿ ಇದು ಮನ್ನಣೆ ಪಡೆದಿದ್ದರೂ ಹೂವಿನ ಹೆಸರಿನಿಂದಲೇ ಹೆಚ್ಚು ಗುರುತಿಸಿಕೊಂಡಿದೆ. ಇದರ ಎಣ್ಣೆಯನ್ನು ಹೃದಯ ಸಂಬಂಧಿ ರೋಗದಿಂದ ಬಳಲುವವರು ಆಹಾರದಲ್ಲಿ ಬಳಸುವುದೊಳಿತು.

**ಬೆಳೆಯುವ ವಿಧಾನ :** ಸೂರ್ಯಕಾಂತಿ ಬೆಳೆಯನ್ನು ವರ್ಷದ ಎಲ್ಲ ಕಾಲದಲ್ಲಿಯೂ ಬೆಳೆಯುವರು. ವಿವಿಧ ಮಣ್ಣು ಮತ್ತು ಋತುಮಾನಗಳಿಗೆ ಹೊಂದಿಕೊಳ್ಳುವ ಗುಣ ಈ ಬೆಳೆಗಿದೆ. ಬಹು ಬೇಗ ಕೊಯ್ಲಿಗೆ ಬರುವ ಸಾಮರ್ಥ್ಯವಿದ್ದು ಸುಲಭ ಹಾಗೂ ಕಡಿಮೆ ಖರ್ಚಿನ ಬೆಳೆಯಾಗಿದೆ. ಇದು ಖುಷ್ಕಿ ಮತ್ತು ನೀರಾವರಿ ಆಶ್ರಯದಲ್ಲಿ ಬೆಳೆಯುವ ಲಾಭದಾಯಕ ಬೆಳೆ. ಕರ್ನಾಟಕ ರಾಜ್ಯದ 23 ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಒಟ್ಟು ಕ್ಷೇತ್ರದ ಶೇ. 82 ರಷ್ಟು ಪ್ರದೇಶ ಉತ್ತರ ಕರ್ನಾಟಕಕ್ಕೆ ಸೇರಿದೆ. ರಾಜ್ಯದಲ್ಲಿ ಬಿಜಾಪುರ, ರಾಯಚೂರು, ಬಳ್ಳಾರಿ, ಬಾಗಲಕೋಟೆ, ಕೊಪ್ಪಳ, ಗುಲ್ಬರ್ಗ ಮತ್ತು ಚಿತ್ರದುರ್ಗ ಸೂರ್ಯಕಾಂತಿ ಬೆಳೆಯುವ ಮುಖ್ಯ ಜಿಲ್ಲೆಗಳು. ಪ್ರತಿ ಹೆಕ್ಟೇರಿಗೆ 550 ರಿಂದ 600 ಕೆ.ಜಿ. ಇಳುವರಿ ದೊರೆಯುತ್ತದೆ. ಒಂದೇ ಭೂಮಿಯಲ್ಲಿ ಪ್ರತಿ ವರ್ಷ ಸೂರ್ಯಕಾಂತಿಯನ್ನು ಬೆಳೆಯದೆ ಬೆಳೆ ಪರಿವರ್ತನೆ ಮಾಡುವುದರಿಂದ ರೋಗ ಮತ್ತು ಕೀಟಗಳ ಹಾವಳಿ ಕಡಿಮೆ ಮಾಡಬಹುದು ಹಾಗೂ ಅತ್ಯವಶ್ಯಕ ಪೋಷಕಾಂಶಗಳ ಕೊರತೆಯನ್ನು ನೀಗಿಸಿ ಅಧಿಕ ಇಳುವರಿಯನ್ನು ಪಡೆಯಬಹುದು.

ಬೇಸಗೆ ಹಿಂಗಾರಿನಲ್ಲಿ ಅಧಿಕ ಇಳುವರಿ ಸಿಗುತ್ತಗೆ. ಮುಂಗಾರು ಬೆಳೆಯನ್ನು ಜೂನ್-ಜುಲೈಯಲ್ಲಿ, ಹಿಂಗಾರು ಬೆಳೆಯನ್ನು ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ, ಬೇಸಗೆ ಬೆಳೆಯನ್ನು ಡಿಸೆಂಬರ್ - ಜನವರಿ ತಿಂಗಳಲ್ಲಿ ಬಿತ್ತನೆ ಮಾಡಲು ಯೋಗ್ಯಕಾಲ. ನೀರು ಬಸಿದು ಹೋಗುವಂತಹ ಭೂಮಿಯಲ್ಲಿ ಬೆಳೆಯುವುದು ಉತ್ತಮ. ಬಿತ್ತನೆಗೆ ಮುನ್ನ ಭೂಮಿಯನ್ನು ಉಳುಮೆ ಮಾಡಿ ಎರಡು ಅಡಿ ಅಂತರದ ಸಾಲುಗಳನ್ನು ಮಾಡಿ, ಪ್ರತಿ ಸಾಲಿನಲ್ಲಿಯೂ ಗಿಡದಿಂದ - ಗಿಡಕ್ಕೆ ಒಂದು ಅಡಿ ಅಂತರವನ್ನು ಬಿಟ್ಟು ಎರಡರಿಂದ ಮೂರು ಬೀಜಗಳನ್ನು ಒಂದು ಅಂಗುಲ ಆಳಕ್ಕೆ ಬಿತ್ತನೆ ಮಾಡಬೇಕು. ಬಿತ್ತಿದ 10 ರಿಂದ 15 ದಿನಗಳೊಳಗೆ ಪ್ರತಿ ಸಾಲಿನಲ್ಲಿ 30 ಸೆಂ.ಮೀ. ಅಂತರದಲ್ಲಿ ಪ್ರತಿ ಗುಳಿಗೆ ಒಂದೊಂದೆ ಆರೋಗ್ಯವಾದ ಸಸಿಯನ್ನು ಬಿಟ್ಟು ಉಳಿದುದು ಕೀಳುವುದರಿಂದ ಗಿಡಗಳು ದೃಢವಾಗಿ ಬೆಳೆದು ಗಟ್ಟಿಕಾಳು ಕಟ್ಟಲು ಸಾಧ್ಯವಾಗುತ್ತವೆ. ಅಧಿಕ ಇಳುವರಿಯನ್ನೂ ಪಡೆಯಬಹುದು. ಬಿತ್ತನೆಯಾದ 30 ರಿಂದ 40 ದಿನಗಳೊಳಗೆ ಗಿಡದ ಸುತ್ತ ಮಣ್ಣನ್ನು ಹಾಕುವುದರಿಂದ ತೆನೆ ಬಿಟ್ಟಾಗ ಭಾರದಿಂದ ಅವು ನೆಲಕ್ಕೆ ಬೀಳುವುದನ್ನು ತಡೆಯಬಹುದು. ಸೂರ್ಯಕಾಂತಿ ಬೆಳೆಯೂ ಭೂಮಿಯಿಂದ ಹೆಚ್ಚು ಪೋಷಕಾಂಶಗಳನ್ನು ತೆಗೆದುಕೊಳ್ಳುವುದರಿಂದ ಕೊಟ್ಟಿಗೆ ಗೊಬ್ಬರವನ್ನು ಪ್ರತಿ ಹೆಕ್ಟೇರಿಗೆ 6 ರಿಂದ 7 ಟನ್ ಪ್ರಮಾಣದಲ್ಲಿ, ಬಿತ್ತನೆಗೆ 2 ರಿಂದ 3 ವಾರ ಮೊದಲೇ ಮಣ್ಣಿನಲ್ಲಿ ಸೇರಿಸಬೇಕು. ಇದು 90 ರಿಂದ 100 ದಿನಗಳ ಅವಧಿಯದ್ದಾಗಿದೆ. ಭಾರತ ದೇಶದಲ್ಲಿ ಸುಮಾರು 1.25 ದಶಲಕ್ಷ ಹೆಕ್ಟೇರು ಪ್ರದೇಶದಲ್ಲಿ ಸೂರ್ಯಕಾಂತಿ ಬೆಳೆಯುತ್ತಿದ್ದಾರೆ.

ಈ ಬೆಳೆ ತೀರ ಇತ್ತೀಚಿನದಾದರೂ ಬಹುಬೇಗ ರೈತರನ್ನು ಆಕರ್ಷಿಸಿ ಹೆಚ್ಚು ಲಾಭ ತರುವ ಬೆಳೆಯಾಗಿ ರೂಪುಗೊಂಡಿದೆ.

**ರೋಗಭಾಧೆ :** ಸಾಮಾನ್ಯವಾಗಿ ಕೀಟ ಹಾಗೂ ರೋಗಗಳು ಸೂರ್ಯಕಾಂತಿಗೆ ಬಾಧಿಸುತ್ತವೆ. ಎಲೆ ತಿನ್ನುವ ಕೀಟಗಳು, ರಸ ಹೀರುವ ಕೀಟಗಳು, ತೆನೆ ಕೊರೆಯುವ ಕೀಟ, ತಂಬಾಕಿನ ಹುಳು, ಸ್ಪೋಡಾಪು ಪತಂಗ - ಇವುಗಳ ನಿವಾರಣೆಗೆ ಪ್ರತಿ ಎಕರೆಗೆ ಎರಡರಿಂದ ಮೂರು ಆಕರ್ಷಕ ಬಲೆ ಬಳಸಿ ಕೀಟಗಳ ಚಟುವಟಿಕೆಯನ್ನು ಗುರುತಿಸುವುದರಿಂದ ಮುಂದೆ ಆಗಬಹುದಾದ ತೊಂದರೆಯನ್ನು ತಡೆಗಟ್ಟಬಹುದು.

ಕೀಟದ ಸಂಖ್ಯೆಯ ಪ್ರಮಾಣವನ್ನು ಕಂಡುಹಿಡಿಯಲು ಲೈಂಗಿಕಾರ್ಷಕ ಬಲೆಯನ್ನು ರಚಿಸಿ ಎಕರೆಗೆ 2 ರಿಂದ 3 ರಂತೆ ಬಳಸಿ ಮುಂದೆ ಸಂಭವಿಸಬಹುದಾದ ಕೀಟದ ತೊಂದರೆಯನ್ನು ಅವಶ್ಯವಾಗಿ ತಡೆಗಟ್ಟಬಹುದು.



ಬೇಸಗೆಯಲ್ಲಿ ಉಳುಮೆ ಮಾಡುವುದರಿಂದ ಭೂಮಿಯಲ್ಲಿರುವ ಹೆಲಿಕೋವರ್ಪಾದ ಕೋಶಗಳನ್ನು ಬಿಸಿಲು ಮತ್ತು ಸ್ವಾಭಾವಿಕ ವಿಧಾನದಿಂದಲೂ ನಿವಾರಿಸಬಹುದು.

ತೆನೆಯಲ್ಲಿ ಕಾಣುವ ಬಲಿಷ್ಠ ಮರಿ ಹುಳುಗಳನ್ನು ಆರಿಸಿ ತೆಗೆದು ನಾಶ ಮಾಡಬೇಕು. ಬೇವಿನ ಬೀಜದ ಕಷಾಯವನ್ನು ಹೂವು ಬಿಟ್ಟ ಅನಂತರ ಎರಡು ಸಾರಿ ಸಿಂಪಡಿಸುವುದರಿಂದ ಹಲವು ಕೀಟಗಳ ತೊಂದರೆಯನ್ನು ನಿವಾರಿಸಬಹುದು.

ನಂಜುರೋಗ, ತುಕ್ಕುರೋಗ, ಕೇದಿಕೆರೋಗ, ಎಲೆ ಚುಕ್ಕೆ ರೋಗ ಇವುಗಳ ಹತೋಟಿಗೆ ಬಿತ್ತನೆ ಬೀಜವನ್ನು ರೋಗವಿರುವ ಪ್ರದೇಶದಿಂದ ತರಬಾರದು. ಬೀಜವನ್ನು ಮೆಟಾಲಾಕ್ಸಿಲ್ ಎಂಬ ಶಿಲೀಂಧ್ರನಾಶಕದಿಂದ ಉಪಚರಿಸಿ ಅನಂತರ ಬಿತ್ತನೆ ಮಾಡಬೇಕು. ಇದರಿಂದ ಬೀಜಕ್ಕೆ ಬರುವ ಸೋಂಕನ್ನು ಮತ್ತು (ಭೂಮಿಯ) ಮಣ್ಣಿನಲ್ಲಿ ಇರುವಂತಹ ಸೊಂಕನ್ನು ನಿವಾರಿಸಿ ಸಸ್ಯಗಳನ್ನು ಕಾಪಾಡಬಹುದು. ನೀರು ನಿಲ್ಲುವ ಜಾಗಗಳಲ್ಲಿ ಬಸಿಗಾಲುವೆಗಳನ್ನು ತೆಗೆಯಬೇಕು. ನೀರಾವರಿ ಇರುವ ಭೂಮಿಯಲ್ಲಿ ಸಮರ್ಪಕವಾಗಿ ನೀರು ಕೊಡಬೇಕು. ಬೇಸಗೆಯಲ್ಲಿ ಉಳುಮೆ ಮಾಡುವುದರಿಂದ ಮಣ್ಣಿನಲ್ಲಿರುವ ಸೊಂಕನ್ನು ನಿವಾರಿಸಬಹುದು. ಮಣ್ಣಿನಲ್ಲಿರುವ ಶಿಲೀಂಧ್ರವು ಹೆಚ್ಚಾಗಿ ಸೂರ್ಯಕಾಂತಿ ಬೆಳೆಗೆ ಅನ್ವಯಿಸುವುದರಿಂದ ಮತ್ತೆ ಮತ್ತೆ ಬೆಳೆಯದೆ ಒಂದೆರಡು ವರ್ಷದ ತರುವಾಯ ಬೆಳೆಯುವುದು ಉತ್ತಮ.

ಇದನ್ನು ಕೃಷಿ ಮಾಡುವವರಿಗೆ ಒಂದು ಸಂತಸದ ಸುದ್ದಿ ಎಂದರೆ ಈ ಬೆಳೆಯ ಜೊತೆಗೆ ಜೇನು ಸಾಕಾಣಿಕೆ ಮಾಡುವುದರಿಂದ ನಿರೀಕ್ಷಿಸಿದ ಮಟ್ಟದ ಆದಾಯವನ್ನೂ ಪಡೆಯಬಹುದೆಂದು ಸಂಶೋಧನೆಗಳಿಂದ ಸಾಬೀತಾಗಿದೆ. ಜೇನಿನ ಪರಾಗ ಸ್ಪರ್ಶದಿಂದ ಸೂರ್ಯಕಾಂತಿ ಬೀಜಗಳ ತೂಕ ಹೆಚ್ಚಾಗಿರುವುದನ್ನು ಕಾಣಬಹುದು. ಈ ರೀತಿಯ ಬೇಸಾಯ ಕ್ರಮದಿಂದ ಉತ್ತಮ ದರ್ಜೆಯ ಜೇನುತುಪ್ಪ ಮತ್ತು ಹೆಚ್ಚಿನ ಇಳುವರಿಯ ಎಣ್ಣೆ ಕಾಳುಗಳನ್ನು ಪಡೆಯಬಹುದು. ಸಾವಯವಗೊಬ್ಬರ ಮತ್ತು ಜೈವಿಕ ಕೀಟ ನಾಶಕಗಳ ಬಳಕೆಯಿಂದ ಪತಂಗ, ಜೇನ್ನೊಣ, ಚಿಟ್ಟೆಗಳನ್ನು ಸಂರಕ್ಷಿಸಿ, ಸಂತತಿಯನ್ನು ಹೆಚ್ಚುವಂತೆ ಮಾಡಿ ಆದಾಯ ತರುವ ಬೆಳೆಗಳನ್ನು ಆರೋಗ್ಯಭರಿತ ವಿಧಾನವನ್ನು ಅನುಸರಿಸುವುದು ಒಳಿತು.

*ಎಸ್.ಕೆ.ಎಸ್.*

**ಸೆಣಬು** ನಾರು ಕೊಡುವ ಸಸ್ಯ. ಇದು ಮೆದುವಾದ, ಹೊಳಪುಳ್ಳ ನಾರನ್ನು ಕೊಡುತ್ತದೆ. ಇದನ್ನು ಒರಟು ಹಾಗೂ ಬಲವಾದ ನೂಲನ್ನಾಗಿ ಹೆಣೆಯುತ್ತಾರೆ. ಇದನ್ನು ಕಾಕ್ರೊರುಸ್ ಜಾತಿಯ ಟಿಲಿಯಸೆಯೆ ಸಸ್ಯವರ್ಗದಿಂದ ತಯಾರಿಸಲಾಗುತ್ತದೆ. ಸೆಣಬು ಅತ್ಯಂತ ಸಲಭವಾಗಿ ಸಿಗುವ ನೈಸರ್ಗಿಕ ನಾರುಗಳಲ್ಲಿ ಒಂದು. ಹಾಗೂ ಹತ್ತಿಯ ನಂತರ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆಯಾಗಿ ವಿವಿಧ ರೀತಿಯಲ್ಲಿ ಬಳಕೆಯಾಗುತ್ತದೆ. ಇದರ ನಾರುಗಳು ಪ್ರಾಥಮಿಕವಾಗಿ ಸಸ್ಯಪದಾರ್ಥಗಳಾದ ಸೆಲ್ಯುಲೋಸ್ (ಸಸ್ಯದ ನಾರಿನ ಅಂಶ) ಹಾಗೂ ಲಿಗ್ನಿನ್ (ಮರದ ನಾರಿನ ಅಂಶ)ಗಳಿಂದ ರಚನೆಯಾಗಿವೆ. ಈ ಪ್ರಕಾರವಾಗಿ ಆಂಶಿಕವಾಗಿ ಜವಳಿ ನಾರು ಹಾಗೂ ಆಂಶಿಕವಾಗಿ ಮರದ ನಾರಾದ ಇದು ಲಿಗ್ನೋ ಸೆಲ್ಯುಲೋಸಿಕ್ ನಾರಾಗಿದೆ.

ಸೆಣಬುನಾರನ್ನು ಸಾಮಾನ್ಯವಾಗಿ ಹೆಸಿಯಾನ್ ಎಂದು ಕರೆಯುತ್ತಾರೆ; ಇದರ ಉಡುಪುಗಳನ್ನು ಹೆಸಿಯಾನ್ ಬಟ್ಟೆ ಎನ್ನುವರು. ಸೆಣಬಿನ ದೊಡ್ಡ ಚೀಲಗಳನ್ನು ಯುರೋಪಿಯನ್ ರಾಷ್ಟ್ರಗಳಲ್ಲಿಗೋಣಿಚೀಲ ಎಂದು ಸಹ ಕರೆಯುವರು. ಇದರ ನಾರುಗಳು ಕಂದು ಮಿಶ್ರಿತ ಮಾಸಲು ಬಿಳಿಯ ಬಣ್ಣವನ್ನು ಹೊಂದಿರುತ್ತವೆ. ಹಾಗೂ 1-4 ಮೀ. ಉದ್ದವಿರುತ್ತದೆ (3-12 ಅಡಿಗಳು ).

**ಸಾಗುವಳಿ :** ಸೆಣಬಿಗೆ ಸಾದಾ ಮೆಕ್ಕಲು ಮಣ್ಣು ಹಾಗೂ ನಿಂತ ನೀರಿನ ಅವಶ್ಯಕತೆಯಿದೆ. ಇದನ್ನು ಬೆಳೆಯಲು ಮುಂಗಾರು ಅನುಕೂಲಕರವಾದ ಹವಾಗುಣ.

$20^{0}$ಸಿ ನಿಂದ $40^{0}$ಸಿ ವರೆಗಿನ ತಾಪಮಾನ ಹಾಗೂ ಶೇ. 70-80ರಷ್ಟು ತೇವಾಂಶದ ಪ್ರಮಾಣವು ಉತ್ತಮವಾದ ಸಾಗುವಳಿ ಮಾಡಲು ಅನುಕೂಲಕರವಾಗಿರುತ್ತದೆ. ಈ ಬೆಳೆಗೆ ಒಂದು ವಾರಕ್ಕೆ 5-8 ಸೆಂ.ಮೀಟರ್‌ನಷ್ಟು ಮಳೆಯ ಅಗತ್ಯವಿದೆ. ಹಾಗೂ ಬಿತ್ತನೆಯ ಅವಧಿಯಲ್ಲಿ ಇನ್ನು ಹೆಚ್ಚಿನ ಮಳೆ ಬೇಕು.

**ಬಿಳಿ ಸೆಣಬು : (ಕೋಕ್ರೋರುಸ್ ಕ್ಯಾಪ್ಸುಲರಿಸ್) :** ಭಾರತದ ಬಡ ಹಳ್ಳಿಯ ಜನರು ಸೆಣಬಿನಿಂದ ತಯಾರಾದ ಬಟ್ಟೆಗಳನ್ನು ಧರಿಸುತ್ತಿದ್ದರೆಂದು

ಹಲವಾರು ಐತಿಹಾಸಿಕ ದಾಖಲೆಗಳು ತಿಳಿಸುತ್ತವೆ. ನೇಕಾರರು ಸರಳವಾದ ಕೈ ಮಗ್ಗ ಹಾಗೂ ಚರಕಗಳನ್ನು ಬಳಸಿಕೊಂಡು ಹತ್ತಿಯ ನೂಲುಗಳನ್ನು ನೇಯುವಂತೆ ನೇಯುತ್ತಿದ್ದರು. ಭಾರತದಲ್ಲಿ ವಿಶೇಷವಾಗಿ ಬೆಂಗಾಲಿಗಳು ಹಿಂದಿನಿಂದಲೂ ಬಿಳಿ ಸೆಣಬಿನಿಂದ ಮಾಡಲಾದ ಹಗ್ಗಗಳು ಹಾಗೂ ಹುರಿಗಳನ್ನು ಮನೆ ಬಳಕೆಗೆ, ಇತರ ಉದ್ದೇಶಗಳಿಗೆ ಬಳಸುತ್ತಿದ್ದರು ಎಂದೂ ಇದರ ಇತಿಹಾಸವು ನಿರೂಪಿಸುತ್ತದೆ.

**ಟೋಸ್ಸ ಸೆಣಬು : (ಕಾರ್ಕೋರಸ್‌ಆಲಿಟೋರಿಸ್) -** ಇದು ಒಂದು ಆಫ್ರೋ-ಆರೇಬಿಯನ್ ಸಸ್ಯಜಾತಿ. ಇದು ತನ್ನ ಎಲೆಗಳಿಂದ ಜನಪ್ರಿಯತೆಯನ್ನು ಗಳಿಸಿದೆ. ಇದನ್ನು ಅಂಟಾದ ಸೊಪ್ಪಿನ ಖಾದ್ಯ ಮೊಲೋಖಿಯದಲ್ಲಿ ಪದಾರ್ಥವಾಗಿ ಬಳಸಲಾಗುತ್ತದೆ. ಇದು ಕೆಲವು ಅರಬ್ ರಾಷ್ಟ್ರಗಳಲ್ಲಿ ಜನಪ್ರಿಯವಾಗಿದೆ.



ಟೋಸ್ಸ ಸೆಣಬಿನ ನಾರು ಮೃದುವಾಗಿ, ರೇಷ್ಮೆಯಂತಿದೆ, ಹಾಗೂ ಬಿಳಿ ಸೆಣಬಿಗಿಂತ ಬಲವಾಗಿದೆ. ಈ ಜಾತಿಯು ಗಂಗಾ ಮುಖಜಭೂಮಿಯ ವಾತಾವರಣದಲ್ಲಿ ಒಳ್ಳೆಯ ಸುಸ್ಥಿರತೆಯನ್ನು ತೋರಿಸಿದೆ. ಬಿಳಿ ಸೆಣಬಿನ ಜೊತೆಯಲ್ಲಿ, ಟೋಸ್ಸ ಸೆಣಬನ್ನು ಸಹ ಬಂಗಾಳದ ಮಣ್ಣಿನಲ್ಲಿ ಸಾಗುವಳಿ ಮಾಡಲಾಗುತ್ತದೆ. 10ನೆಯ ಶತಮಾನದ ಪ್ರಾರಂಭದಿಂದಲೂ ಇದನ್ನು 'ಅಲ್ಲಿಪಾಟ್' ಎಂದೂ ಕರೆಯಲಾಗುತ್ತಿದೆ. ಭಾರತ ಹಾಗೂ ಬಾಂಗ್ಲಾದೇಶ ಈ ಜಾತಿಯ ಸೆಣಬನ್ನು ಬೆಳೆಯುವ ರಾಷ್ಟ್ರಗಳಲ್ಲಿ ಅತ್ಯಂತ ದೊಡ್ಡ ಉತ್ಪಾದಕತೆಯನ್ನು ಹೊಂದಿವೆ.

**ಇತಿಹಾಸ :** ಶತಮಾನಗಳಿಂದಲೂ, ಸೆಣಬು ಸಂಪೂರ್ಣವಾಗಿ ನೈಋತ್ಯ ಬಾಂಗ್ಲಾದೇಶದಲ್ಲಿ ಹಾಗೂ ಭಾರತದ ಪಶ್ಚಿಮ ಬಂಗಾಳದಲ್ಲಿ ಬೆಳೆಯುತ್ತಾರೆ. ಬೆಂಗಾಲಿ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿದೆ. 19 ಹಾಗೂ 20ನೇ ಶತಮಾನದ ಪ್ರಾರಂಭದಲ್ಲಿ ಬ್ರಿಟಿಷ್ ಆಡಳಿತಾವಧಿಯಲ್ಲಿ ಬಂಗಾಳದಿಂದ ಹೆಚ್ಚಿನ ಕಚ್ಚಾ ಸೆಣಬಿನ ನಾರನ್ನು ಯುನೈಟೆಡ್‌ಕಿಂಗ್‌ಡಮ್‌ಗೆ (ಯುಕೆ) ರಫ್ತುಮಾಡಲಾಗುತ್ತಿತ್ತು. ಅನಂತರ ಅದನ್ನು ದುಂಡಿಯಲ್ಲಿ ಕೇಂದ್ರೀಕೃತವಾಗಿದ್ದ ಗಿರಣಿಗಳಲ್ಲಿ ಸಂರಕ್ಷಿಸಿಡಲಾಗುತ್ತಿತ್ತು. ಪ್ರಾರಂಭದಲ್ಲಿ ಅವುಗಳ ರಚನೆಯಿಂದಾಗಿ ಬರಿಗೈಯಲ್ಲಿ ಮಾತ್ರ ಸಂಸ್ಕರಣ ಮಾಡಲು ಸಾಧ್ಯವಾಗುತ್ತಿತ್ತು. ಆದರೆ ತಿಮಿಂಗಲದ ಎಣ್ಣೆಯಿಂದ ಇದನ್ನು ಸಂಸ್ಕರಣೆ ಮಾಡಿದರೆ ಯಂತ್ರದಿಂದ ಸಂಸ್ಕರಣೆ ಸಾಧ್ಯ ಎಂದು ಶೋಧಿಸಲಾಯಿತು. ಆಗ ಈ ಉದ್ದಿಮೆ ಅಭಿವೃದ್ಧಿ ಹೊಂದಿತು.

1800ರಲ್ಲಿ ದುಂಡಿಯಲ್ಲಿ ಒಂದು ಸೆಣಬಿನ ಗಿರಣಿಯ ಒಡೆಯನಾಗಿದ್ದ ಮಾರ್ಗರೇಟ್ ಡೋನ್ನೆಲ್ಲಿ ಬಂಗಾಳದಲ್ಲಿ ಮೊದಲ ಸೆಣಬಿನ ಗಿರಣಿಯನ್ನು ಸ್ಥಾಪಿಸಿದರು. ನೈಲಾನ್ ಮತ್ತು ಪಾಲಿಥೀನ್ ಬಳಕೆಯಾಗುತ್ತಿದ್ದ 1950 ಮತ್ತು 1960ರ ದಶಕಗಳಲ್ಲಿ ಏಕಿಕೃತ ಪಾಕಿಸ್ತಾನಕ್ಕೆ ಪೂರ್ವಬಂಗಾಳದಲ್ಲಿ (ಇಂಗಿನ ಬಾಂಗ್ಲಾದೇಶ) ಬೆಳೆಯುತ್ತಿದ್ದ ಸೆಣಬನ್ನು ಆದರಿಸಿದ ಉತ್ಪಾದನೆಗಳ ರಫ್ತು ವಿದೇಶಿಯ ಗಳಿಕೆಗಳಿಗೆ ಪ್ರಮುಖ ಮೂಲಗಳಲ್ಲಿ ಒಂದಾಗಿತ್ತು. ಸೆಣಬನ್ನು "ಬಾಂಗ್ಲಾದೇಶದ ಚಿನ್ನದ ನಾರು" ಎಂದೂ ಕರೆಯಲಾಗುತ್ತಿತ್ತು. ಪಾಲಿಥಿನ್ ಹಾಗೂ ಇತರ ಸಂಶ್ಲೇಷಿತ ವಸ್ತುಗಳು ಸೆಣಬಿಗೆ ಪರ್ಯಾಯವಾಗಿ ಅಧಿಕ ಪ್ರಮಾಣದಲ್ಲಿ ಲಗ್ಗೆ ಇಟ್ಟಾಗ, ಸೆಣಬಿನ ಉದ್ಯಮವು ಹೆಚ್ಚುಕಡಿಮೆ ಕುಸಿತವನ್ನು ಅನುಭವಿಸಿತು.

1980ರ ವರ್ಷಗಳ ಅವಧಿಯಲ್ಲಿ, ಸೆಣಬಿಗೆ ಸಮರ್ಪಕವಾದ ಬೆಲೆಯು ದೊರಕದಿದ್ದಾಗ ಬಾಂಗ್ಲಾದೇಶದ ರೈತರು ಸೆಣಬಿನ ಬೆಳೆಯನ್ನು ಸುಟ್ಟುಹಾಕಿದರು. ಸೆಣಬಿನ ರಫ್ತುಗಾರರು ಇದರ ಬದಲಾಗಿ ಇತರ ಪದಾರ್ಥಗಳತ್ತ ತಿರುಗಿದರು. ಸೆಣಬು ಆಧಾರಿತ ಸಂಸ್ಥೆಗಳು ಹಾಗೂ ಸರಕಾರದ ಸಂಸ್ಥೆಗಳು ಬಾಗಿಲು ಹಾಕುವಂತಾಯಿತು. ವಿಶ್ವದ ಅತ್ಯಂತ ದೊಡ್ಡ ಸೆಣಬಿನ ಗಿರಣಿ ಅದಂಜೀ ಜೂಟ್ ಮಿಲ್ಸ್ ಹಾಗೂ ಲತಿಫ್ ಬವನಿ ಜೂಟ್‌ಮಿಲ್ಸ್ ಕೂಡಾ ತನ್ನ ಉತ್ಪಾದನೆಯನ್ನು ಸ್ಥಗಿತಗೊಳಿಸಿದವು. ಯಾಹ್ಯಬವನ್‌ನ ಒಡೆತನದಲ್ಲಿದ್ದ ಲತಿಫ್‌ಬವನಿ ಜೂಟ್‌ಮಿಲ್ಸ್‌ನ್ನು ಸರ್ಕಾರ ರಾಷ್ಟ್ರೀಕೃತಗೊಳಿಸಿತು. ಅನಂತರ ಬಾಂಗ್ಲಾದೇಶದ ರೈತರು ಆಂತರಿಕ ಮಾರುಕಟ್ಟೆಯಲ್ಲಿ ಸೆಣಬಿಗಿದ್ದ ಬೇಡಿಕೆಯಿಂದಾಗಿ ಬೆಳೆಯನ್ನು ಸಂಪೂರ್ಣವಾಗಿ ನಿಲ್ಲಿಸಲಿಲ್ಲ. 2004-2009ರ ನಡುವೆ ಮತ್ತೆ ಸೆಣಬಿನ ಮಾರುಕಟ್ಟೆ ಚೇತರಿಸಿಕೊಂಡಿತು. ಆನಂತರದ ದಿನಗಳಲ್ಲಿ ಕಚ್ಚಾ ಸೆಣಬಿನ ಬೆಲೆಯು ಶೇ.200ರಷ್ಟು ಅಧಿಕವಾಯಿತು.

ಕ್ರಮೇಣವಾಗಿ ನೈಸರ್ಗಿಕ ನಾರುಗಳ ಪರ್ಯಾಯಗಳಾಗಿ ವಿವಿಧ ಕೈಗಾರಿಕ ಕ್ಷೇತ್ರಗಳಲ್ಲಿ ಸೆಣಬು ಕೈಗಾರಿಕೆ ಪ್ರವೇಶಿಸಿತು. ಇದರಿಂದ ಕಾಗದ, ಸೆಲ್ಯೂಲಾಯ್ಡ್ ಉತ್ಪನ್ನಗಳು ಸಿನೆಮಾ, ನೇಯ್ಗೆ ಮಾಡಿರುವ ವಸ್ತ್ರಗಳು, ಸಂಯೋಜಿತ ವಸ್ತುಗಳು ಹಾಗೂ ಜಿಯೋಟೆಕ್ಸ್‌ಟೈಲ್ಸ್ ಮುಂತಾದವುಗಳು ಉತ್ಪಾದನೆಯಾಗತೊಡಗಿದವು. ಇದರಿಂದಾಗಿ ಸೆಣಬಿನ ಉತ್ಪಾದನೆ ಮತ್ತೂ ಅಧಿಕವಾತೊಡಗಿತು.

ಡಿಸೆಂಬರ್ 2006ರಲ್ಲಿ ಜನರಲ್ ಅಸೆಂಬ್ಲಿ ಆಫ್ ದಿ ಯುನೈಟೆಡ್‌ನೇಶನ್ಸ್, ಸೆಣಬು ಹಾಗೂ ಇತರ ನೈಸರ್ಗಿಕ ನಾರುಗಳ ಬಗೆಗೆ ಗಮನ ಸೆಳೆಯುವ ಸಲುವಾಗಿ 2009ನೇ ವರ್ಷವನ್ನು "ಇಂಟರ್‌ನ್ಯಾಷನಲ್ ಇಯರ್ ಆಫ್ ನ್ಯಾಚುರಲ್ ಫೈಬರ್ಸ್ ಎಂದು ಘೋಷಣೆ ಮಾಡಿತು.

**ಉತ್ಪಾದನೆ :** ಸೆಣಬು ಕಡಿಮೆಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಅವಲಂಬಿಸಿರದ ಮಳೆ-ಆಧಾರಿತ ಬೆಳೆ. ಇದರ ಉತ್ಪಾದನೆಯು ಬಾಂಗ್ಲಾದೇಶ ಹಾಗೂ ಭಾರತದ ಕೆಲವು ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿದೆ. ಸೆಣಬಿನ ನಾರು, ಸೆಣಬಿನ ಗಿಡದ ಕಾಂಡದಿಂದ ಹಾಗೂ

ರಿಬ್ಬನ್ (ಹೊರಪದರ) ನಿಂದ ಬರುತ್ತದೆ. ನಾರುಗಳನ್ನು ಮೊದಲು ನೀರಿನಲ್ಲಿ ಅದ್ದುವ ಮೂಲಕ ಸಾರ ತೆಗೆಯಲಾಗುತ್ತದೆ. ಅನಂತರ ಸೆಣಬಿನ ಕಾಂಡಗಳನ್ನು ನೀರಿನಲ್ಲಿ ನೆನೆಸಿ ಒಟ್ಟಿಗೆ ಕಂತೆ ಕಟ್ಟಿ, ಸಣ್ಣಗೆ ಹರಿಯುವ ನೀರಿನಲ್ಲಿ ಮುಳುಗಿಸಲಾಗುತ್ತದೆ.

ನೆನೆಸಿ ಮೃದುಗೊಳಿಸುವ ಪ್ರಕ್ರಿಯೆಯಲ್ಲಿ ಎರಡು ವಿಧಗಳಿವೆ: ಕಾಂಡ ಹಾಗೂ ರಿಬ್ಬನ್, ನೆನೆಸಿ ಮೃದುಗೊಳಿಸಿದ ಪ್ರಕ್ರಿಯೆಯ ಅನಂತರ ತೊಗಟೆಯನ್ನು ಸುಲಿದು ನಾರಿನಾಂಶವಿಲ್ಲದ ಪದಾರ್ಥವನ್ನು ತೆಗೆದು ಹಾಕಲಾಗುತ್ತದೆ. ಅನಂತರ ಸೆಣಬಿನಲ್ಲಿರುವ ನಾರನ್ನು ಕೀಳುತ್ತಾರೆ. ಸಾಮಾನ್ಯವಾಗಿ ಈ ಕೆಲಸವನ್ನು ಹೆಂಗಸರು ಮತ್ತು ಮಕ್ಕಳು ಮಾಡುತ್ತಾರೆ. ಸ್ಥಳೀಯ ಸೆಣಬನ್ನು ಭಾರತ, ಪಾಕಿಸ್ತಾನ, ಚೀನಾ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಖರೀದಿ ಮಾಡಿದರೆ ಬ್ರಿಟನ್, ಸ್ಪೇನ್, ಐವರಿಕೋಸ್ಟ್, ಜರ್ಮನ್ ಹಾಗೂ ಬ್ರೆಜಿಲ್ ರಾಷ್ಟ್ರಗಳು ಸಹ ಬಾಂಗ್ಲಾದೇಶದಿಂದ ಕಚ್ಚಾ ಸೆಣಬನ್ನು ಆಮದು ಮಾಡಿಕೊಳ್ಳುತ್ತವೆ. ಭಾರತ ಪ್ರಪಂಚದಲ್ಲೇ ಅತ್ಯಂತ ದೊಡ್ಡಪ್ರಮಾಣದಲ್ಲಿ ಸೆಣಬನ್ನು ಬೆಳೆಯುವ ರಾಷ್ಟ್ರವಾಗಿದೆ.

**ಬಳಕೆಗಳು :** ಸೆಣಬು ಹತ್ತಿಯ ಅನಂತರ ಎರಡನೇ ಅತ್ಯಂತ ಪ್ರಮುಖ ಸಸ್ಯದ ನಾರಾಗಿದೆ. ಸಾಗುವಳಿಗೆ ಮಾತ್ರವಲ್ಲದೆ, ವಿವಿಧ ರೀತಿಯಲ್ಲಿ ಬಳಕೆಯಾಗುತ್ತದೆ. ಸೆಣಬು ಮುಖ್ಯವಾಗಿ ಕಚ್ಚಾ ಹತ್ತಿಯನ್ನು ಮೂಟೆ ಕಟ್ಟಲು ಬಳಸಲಾಗುವ ಬಟ್ಟೆ ತಯಾರಿಕೆಗೆ, ಗೋಣಿಚೀಲ ತಯಾರಿಕೆಗೆ ಬಳಕೆಯಾಗುತ್ತದೆ. ನಾರುಗಳನ್ನು ಪರದೆಗಳಾಗಿ, ಕುರ್ಚಿಯ ಹೊದಿಕೆಗಳಾಗಿ, ಜಮಖಾನೆಗಳಾಗಿ, ರತ್ನ ಕಂಬಳಿಗಳಾಗಿ, ಹೆಸಿಅನ್ ಬಟ್ಟೆ ಹಾಗೂ ಲಿನೋಲಿಯಂ (ನೆಲದಹಾಸು ಬಟ್ಟೆ)ಗಳಿಗೆ ಆಧಾರವಾಗಿ ನೇಯಲಾಗುತ್ತದೆ. ಇವುಗಳ ಬಳಕೆಗೆ ಅನೇಕ ಸಂಶ್ಲೇಷಿತ ವಸ್ತುಗಳು ಸೆಣಬಿನ ಬದಲಾಗಿ ಬಂದಿದ್ದರೂ, ಕೆಲವು ಬಳಕೆಗಳು ಮಾತ್ರ ಸೆಣಬಿನ ಜೈವಿಕ ವಿಘಟನೀಯತೆಯ ಸ್ವಭಾವದ ಲಾಭವನ್ನು ಬಳಸಿಕೊಳ್ಳುತ್ತವೆ. ಏಕೆಂದರೆ ಇಂತಹ ಬಳಕೆಗಳಲ್ಲಿ ಸಂಶ್ಲೇಷಿತ ವಸ್ತುಗಳು ಯುಕ್ತವಾಗಿರುವುದಿಲ್ಲ. ಉದಾಹರಣೆ, ಚಿಕ್ಕ ಸಸಿಗಳನ್ನು ಬೆಳೆಸುವ ಧಾರಕಗಳು. ಇಂತಹ ಧಾರಕಗಳಲ್ಲಿ ಬೇರುಗಳಿಗೆ ಹಾನಿಯಾಗದಂತೆ ನೇರವಾಗಿ ನೆಡಬಹುದಾಗಿದೆ ಸೆಣಬಿನ ಗಿಡಗಳು ನೆಲದ ಸವೆತವನ್ನು ತಡೆಗಟ್ಟಿ ಸಸ್ಯವರ್ಗ ಸ್ಥಿರವಾಗುಳಿಯುವಂತೆ ಮಾಡುತ್ತವೆ.

ಇದರ ನಾರನ್ನು ಪ್ರತ್ಯೇಕವಾಗಿ ಇತರ ಮಾದರಿಯ ನಾರುಗಳ ಜೊತೆ ಸೇರಿಸಿ ಹೊಸೆದು ಹುರಿ ಹಾಗೂ ಹಗ್ಗವನ್ನು ತಯಾರಿಸಬಹುದು. ಸಸ್ಯದ ದಪ್ಪವಾದ ಕೊನೆಯ ಭಾಗ, ಸೆಣಬಿನ ಬುಡವನ್ನು, ಅಗ್ಗದ ಬಟ್ಟೆ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಇದಕ್ಕೆ ಪ್ರತಿಯಾಗಿ, ಸೆಣಬಿನ ಉತ್ತಮ ದಾರವನ್ನು ಬೇರ್ಪಡಿಸಿ ಅದನ್ನು ಕೃತಕ ರೇಷ್ಮೆಯಾಗಿ ಪರಿವರ್ತಿಸಬಹುದು. ಸೆಣಬಿನ ನಾರುಗಳನ್ನು ಪ್ರಲ್ಪ್ (ಒಣಗಿದ ನಾರಿನ ವಸ್ತು) ಹಾಗೂ ಕಾಗದವನ್ನು ತಯಾರಿಸಲು ಕೂಡಾ ಬಳಸಲಾಗುತ್ತದೆ. ಬಹುತೇಕ ಕಾಗದ ತಯಾರಿಕೆಗೆ ಮರದತಿರುಳು ಪಡೆಯಲು ಕಾಡನ್ನು ನಾಶಮಾಡುತ್ತಿರುವ ಬಗ್ಗೆ ಕಳವಳ ಹೆಚ್ಚಿರುವ ನಡುವೆ, ಈ ಉದ್ದೇಶಕ್ಕಾಗಿ ಸೆಣಬನ್ನು ಬಳಸಿ ಅದರ ಪ್ರಾಮುಖ್ಯತೆಯು ಹೆಚ್ಚಬಹುದು. ಇದರ ಬಳಕೆಯ ದೀರ್ಘ ಇತಿಹಾಸದಲ್ಲಿ ಗೋಣಿಚೀಲ, ನೆಲಹಾಸುಗಳಾಗಿ, ಬಟ್ಟೆಗಳನ್ನು ಸುತ್ತಲು (ಹತ್ತಿಮೂಟೆ), ವಸ್ತುವಿನ್ಯಾಸ, ಹಾಗೂ ಅದರ ತಯಾರಿಕ ಉದ್ಯಮದಲ್ಲಿ ಬಳಸಲಾಗುತ್ತಿದೆ.

ಸಾಂಪ್ರದಾಯಿಕ ಸೆಣಬನ್ನು, ಸಾಂಪ್ರದಾಯಿಕ ವಸ್ತ್ರೋದ್ಯಮದ ಯಂತ್ರೋಪಕರಣಗಳಲ್ಲಿ ಬಟ್ಟೆಗಳ ನಾರುಗಳಾಗಿ ಬಳಸಲಾಗುತ್ತಿತ್ತು. ಏಕೆಂದರೆ ಅವು ಸೆಲ್ಯುಲೋಸ್ (ಸಸ್ಯದ ನಾರಿನ ಅಂಶ) ಹಾಗೂ ಲಿಗ್ನಿನ್ (ಮರದ ನಾರಿನ ಅಂಶ)ನ್ನು ಒಳಗೊಂಡಿತ್ತು. ಆದರೆ, ಮೋಟಾರು ವಾಹನೋದ್ಯಮದಲ್ಲಿ, ಪಲ್ಪ್ ಹಾಗೂ ಕಾಗದಗಳಲ್ಲಿ ಮತ್ತು ಮರದ ಪೀಠೋಪಕರಣಗಳಲ್ಲಿ, ಹಾಸಿಗೆ ತಯಾರಿಕಾ ಕೈಗಾರಿಕೆಗಳಲ್ಲಿ ಸೆಣಬು ಹಾಗೂ ಅದಕ್ಕೆ ಸಂಬಂಧಿಸಿದ ನಾರುಗಳನ್ನು ಬಳಸಲು ಆರಂಭಿಸಿದಾಗ ಪ್ರಮುಖ ಪ್ರಗತಿಯು ಕಂಡುಬಂತು. ನೇಯ್ಗೆರಹಿತ ತಾಂತ್ರಿಕ ವಸ್ತ್ರಗಳು ಮತ್ತು ಸಂಯೋಜಿತ ತಂತ್ರಜ್ಞಾನದೊಂದಿಗೆ ಸೆಣಬಿನ ಬಳಕೆ ಆರಂಭಿಸಿದವು. ಹೀಗಾಗಿ ಸೆಣಬು ತನ್ನ ಜವಳಿ ನಾರಿನ ದೃಷ್ಟಿಕೋನವನ್ನು ಬದಲಾಯಿಸಿಕೊಂಡು ಒಂದೇ ಸಮನೆ ತನ್ನ ಹೊಸ ರೂಪದತ್ತ ಸಾಗಿತು. ಉದಾಹರಣೆ ಮರದನಾರು. ಪ್ರಗತಿಯೇ ಇಲ್ಲವೆಂದು ಭಾವಿಸಲಾಗಿದ್ದ ಸೆಣಬು, ಜವಳಿ ನಾರಾಗಿ ಉತ್ತುಂಗಕ್ಕೇರಿದೆ. ಆದರೆ ಸೆಣಬು ಮರದ ನಾರಾಗಿ ಹಲವು ಭರವಸೆ ನೀಡುವ ಲಕ್ಷಣಗಳನ್ನು ಹೊಂದಿದೆ.

ಸೆಣಬನ್ನು ಹಲವು ವಿವಿಧ ಬಟ್ಟೆಗಳಾದ ಹೆಸಿಅನ್ ಬಟ್ಟೆ, ಗೋಣಿ ತಟ್ಟು ಅಸ್ತರಿ ಬಟ್ಟೆ, ನೆಲಹಾಸುಗಳಿಗೆ ಆಧಾರ ನೀಡಿ ಹೊಲೆಯುವ ಬಟ್ಟೆ (CBC), ಹಾಗೂ ಕ್ಯಾನ್ವಾಸ್‌ನಲ್ಲಿ ಬಳಕೆಯಾಗುತ್ತದೆ. ಗೋಣಿ ಚೀಲಗಳಿಗಿಂತ ಕಡಿಮೆ ತೂಕವನ್ನು ಹೊಂದಿರುವ ಹೆಸಿಅನ್ ಬಟ್ಟೆಯನ್ನು, ಕೈಚೀಲಗಳು ಹೊದಿಕೆಗಳು, ಗೋಡೆ-ಹಾಸುಗಳು, ಪೀಠೋಪಕರಣಗಳನ್ನು ಹಾಗೂ ಮನೆಯನ್ನು ಸಜ್ಜುಗೊಳಿಸುವಲ್ಲಿ ಬಳಸಲಾಗುತ್ತದೆ.

ಭಾರವಾದ ಸೆಣಬಿನ ನಾರಿನ ಬಟ್ಟೆಯಾದ ಗೋಣಿ ಬಟ್ಟೆಯು ತನ್ನ ಹೆಸರಲ್ಲೇ ಬಳಕೆಯನ್ನು ಸೂಚಿಸುತ್ತದೆ. ಸೆಣಬಿನಿಂದ ಮಾಡಲಾದ ಸಿ.ಬಿ.ಸಿ.ಯು ಎರಡು ವಿಧಾನದಲ್ಲಿ ಬರುತ್ತದೆ. ಪ್ರಾಥಮಿಕ ಸಿ.ಬಿ.ಸಿ.ಯು ಒಂದು ಕುಚ್ಚಾದ ಮೇಲ್ಮೈಯನ್ನು ಒದಗಿಸುತ್ತದೆ. ಈ ನಡುವೆ ದ್ವಿತೀಯ CBCಯನ್ನು ಪ್ರಾಥಮಿಕ ಆಧಾರಕ್ಕೆ ಹೊದಿಕೆಯಾಗಿ ಅಂಟಿಸಲಾಗುತ್ತದೆ. ಸೆಣಬಿನ ಪ್ಯಾಕೆಜಿಂಗ್‌ನ್ನು ಒಂದು ಪರಿಸರ-ಸ್ನೇಹಿ ಪರ್ಯಾಯವಾಗಿ ಬಳಕೆ ಮಾಡಲಾಗುತ್ತದೆ.

ಸೆಣಬಿನ ವಿವಿಧ ಉತ್ಪನ್ನಗಳು ಇಂದಿನ ಗ್ರಾಹಕರಿಗೆ ಹೆಚ್ಚುಹೆಚ್ಚು ಉಪಯುಕ್ತವಾಗುತ್ತಿವೆ. ಇವುಗಳಲ್ಲಿ ಎಸ್ಪಡ್ರಿಲ್‌ಗಳು (ಹೆಣೆದ ನಾರಿನ ಅಟ್ಟೆಯುಳ್ಳ ಹಗುರ ಕ್ಯಾನ್ವಾಸ್ ಷೂಗಳು), ನೆಲಕ್ಕೆ ಹೊದಿಕೆಗಳು, ಮನೆಯ ಜವಳಿಗಳು, ತಾಂತ್ರಿಕ ವಸ್ತ್ರೋದ್ಯಮದಲ್ಲಿ, ಔಷಧಗಳು, ಬಣ್ಣಗಳು ಜಿಯೋಟೆಕ್ಸ್‌ಟೈಲ್ಸ್, ಹಾಗೂ ಹೆಚ್ಚಿನ ಉತ್ಪನ್ನಗಳು ಸೇರಿವೆ.

ಸೆಣಬಿನ ಕೈಚೀಲಗಳನ್ನು ಆಧುನಿಕ ಶೈಲಿಯ ಕೈ ಚೀಲಗಳನ್ನಾಗಿ ಮತ್ತು ಪ್ರಚಾರದ ಕೈಚೀಲಗಳನ್ನು ತಯಾರಿಸಲು ಬಳಸಲಾಗುತ್ತದೆ. ಸೆಣಬಿನ ನೆಲ ಹಾಸುಗಳು, ನೇಯ್ದ ಹಾಗೂ ಕುಚ್ಚಾದ ನೆಲಹಾಸುಗಳ ರಾಶಿಯನ್ನು ಒಳಗೊಂಡಿರುತ್ತದೆ. 5/6 ಮೀಟರ್‌ಗಳಷ್ಟು ಅಗಲ ಹಾಗೂ ಉದ್ದವಾದ ಸೆಣಬಿನ ಚಾಪೆಗಳು, ಹಣಿಗೆಗಳನ್ನು ಭಾರತದ ದಕ್ಷಿಣ ಭಾಗದಲ್ಲಿ, ಗಟ್ಟಿಯಾದ ಹಾಗೂ ಆಲಂಕಾರಿಕ ವಿಧಗಳಲ್ಲಿ ಸುಲಭವಾಗಿ ನೇಯಲಾಗುತ್ತದೆ. ವಿವಿಧ ನೇಯ್ಗೆಯ ವಿಧಾನಗಳಾದ ಚಾಕ್ಲೆ, ಪನಾಮ, ಹೆರ್ರಿಂಗ್ ಬೋನ್ ಚಾಪೆಗಳು, ರಗ್ಗಗಳು ವಿದ್ಯುತ್ ಮಗ್ಗ, ಕೈಮಗ್ಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾರತದ ಕೇರಳದಲ್ಲಿ ತಯಾರಿಸಲಾಗುತ್ತದೆ.

ಗೃಹ ಜವಳಿಯಾಗಿ ಸೆಣಬಿನಿಂದ ಹಲವು ಅನುಕೂಲಗಳಿವೆ.ಹತ್ತಿಯ ಜೊತೆಗೆ ಸೇರಿಸಿ ನೇಯ್ಗೆ ಮಾಡಬಹುದು.ಇದೊಂದು ದೀರ್ಘಕಾಲ ಬಾಳಿಕೆ ಬರುವ, ಒಳ್ಳೆಯ ಬಣ್ಣ ಹಾಗೂ ಪ್ರಕಾಶಮಾನವನ್ನು ಬೀರುತ್ತದೆ. ಹಾಗೂ ಇದರ ನಾರಿನಿಂದ ತಯಾರಾದ ಬಟ್ಟೆಗಳು ಕಾರ್ಬನ್ ಡೈ ಆಕ್ಸೈಡ್‌ಗೆ ತಟಸ್ಥವಾಗಿರುತ್ತವೆ ಮತ್ತು ನೈಸರ್ಗಿಕವಾಗಿ ವಿಭಜನೀಯವಾಗಿರುತ್ತದೆ. 4-6 ತಿಂಗಳಲ್ಲಿ ಸೆಣಬಿನ ಹರ್ಡ್‌ನಿಂದ ಉತ್ಪತ್ತಿಯಾದ (ಸೆಣಬಿನ ಕಾಂಡದ ಒಳಗಿನ ತಿರುಳು ಅಥವಾ ಪ್ಯಾರೆನ್ಕೈಮ) ಒಂದು ದೊಡ್ಡದಾದ ಸೆಲ್ಯುಲೋಸ್‌ನಿಂದ ಸೆಣಬನ್ನು ಬೆಳೆಯಬಹುದಾಗಿದೆ. ಇದು ಪ್ರಪಂಚದಲ್ಲಿರುವ ಬಹುತೇಕ ಮರದ ಬೇಡಿಕೆಯನ್ನು ಪೂರೈಸಲು ಸಾಧ್ಯ. ಸೆಣಬನ್ನು ಗಿಲಿ ಸೊಟಗಳನ್ನು ತಯಾರಿಸಲು ಸಹ ಬಳಸಲಾಗುತ್ತದೆ. ಹಾಗೂ ಹುಲ್ಲು ಅಥವಾ ಪೊಡಿಯನ್ನು ಹೋಲುವ ಇದನ್ನು ವೇಷವನ್ನು ಮರೆಮಾಚಲು ಬಳಸಲಾಗುತ್ತದೆ.

**ಆಹಾರ :** ಸೆಣಬಿನ ಎಲೆಗಳನ್ನು ಪ್ರಪಂಚದ ಹಲವು ಪ್ರದೇಶಗಳಲ್ಲಿ ಆಹಾರವಾಗಿ ಸೇವಿಸುತ್ತಾರೆ. ಪಶ್ಚಿಮ ಆಫ್ರಿಕಾದಲ್ಲಿ ಇದನ್ನೇ ಜನಪ್ರಿಯ ತರಕಾರಿಯಾಗಿ ಬಳಸುತ್ತಾರೆ. ನೈಜೀರಿಯದ ಯಾರುಬಗಳು ಇದನ್ನು 'ಎವೆಡು' ಎಂದು ಕರೆದರೆ, ಮಾಲಿಯದ ಸೊಂಘಯ್‌ಗಳು 'ಫಾಕೊಮ್' ಎನ್ನುವರು. ಈಜಿಪ್ಟ್ ಹಾಗೂ ಪಶ್ಚಿಮ ಆಫ್ರಿಕಾದಲ್ಲಿ ಇದನ್ನು ಸಾಮಾನ್ಯವಾಗಿ 'ಅಂಟಿನ' (ಸ್ವಲ್ಪ ಲೋಳೆಯಾದ) ಸೂಪ್ ಅಥವಾ ಸಾಸ್ ಆಗಿ ಬಳಸುತ್ತಾರೆ. ಹಾಗೂ ಈಜಿಪ್ಟ್‌ನಲ್ಲಿ ಇದನ್ನು ಮುಲುಖಿಯ್ಯ ಎಂದು ಕರೆಯುತ್ತಾರೆ. ಅಲ್ಲದೆ ಸೆಣಬನ್ನು ರಾಷ್ಟ್ರೀಯ ಖಾದ್ಯವೆಂದು ಪರಿಗಣಿಸಲಾಗಿದೆ. ಫಿಲಿಫೈನ್ಸ್‌ನ ಉತ್ತರ ಪ್ರಾಂತ್ಯದಲ್ಲಿ ಇದೊಂದು ಜನಪ್ರಿಯ ಖಾದ್ಯ. ಅಲ್ಲಿ ಅದನ್ನು ಇದನ್ನು ಸಲುಯೋಟ್ ಎನ್ನುವರು. ಪಶ್ಚಿಮ ಕೀನ್ಯಾದ ಲುಯ್ಹಿಯ ಜನರು ಸಹ ಇದರ ಎಲೆಯನ್ನು ಸೇವಿಸುತ್ತಾರೆ. ಇದು ಮೈನ್ರ ಅಥವಾ ಮುರೆರೆ ಎಂಬ ಹೆಸರಿನಿಂದ ಜನಪ್ರಿಯವಾಗಿದೆ. ಈ ಎಲೆಗಳು ಬೀಟಕೆರೋಟಿನ್, ಕಬ್ಬಿಣ, ಕ್ಯಾಲ್ಸಿಯಂ, ಹಾಗೂ ವಿಟಮಿನ್ Cಯಿಂದ ಸಮೃದ್ಧವಾಗಿದೆ. ಈ ಪ್ರಕಾರವಾಗಿ ಸೆಣಬು ಬೀಜದಿಂದ ಹಿಡಿದು ಅವಧಿ ಮುಗಿದ ನಾರಿನ ತನಕವೂ ಉಪಯುಕ್ತವಾಗಿದೆ.

**ವೈಶಿಷ್ಟ್ಯಗಳು :** ಸೆಣಬಿನ ನಾರು ಶೇ. 100 ನಷ್ಟು ಜೈವಿಕ ವಿಘಟನೀಯವಾಗಿದೆ ಹಾಗೂ ಮರುಬಳಕೆ ಮಾಡಬಹುದಾಗಿರುವುದರಿಂದ ಪರಿಸರ ಸ್ನೇಹಿಯಾಗಿದೆ. ಹೊಂಬಣ್ಣ ಹಾಗೂ ರೇಷ್ಮೆ ಹೊಳಪನ್ನು ಹೊಂದಿರುವ ನೈಸರ್ಗಿಕ ನಾರು, ಹೀಗಾಗಿ ಇದನ್ನು ಗೋಲ್ಡನ್ ಫೈಬರ್ ಎಂದೂ ಕರೆಯುವರು. ಸಸ್ಯದ ಕಾಂಡದಿಂದ, ತೊಗಟೆಯ ನಾರಿನಿಂದ ಸಂಗ್ರಹಿಸುವ ಅತೀ ಅಗ್ಗದ ನಾರು. ಹತ್ತಿಯ ಅನಂತರ ಬಳಕೆಯಲ್ಲಿ ವಿಶ್ವವ್ಯಾಪಕವಾಗಿ ಉತ್ಪಾದನೆಯಲ್ಲಿ ಎರಡನೇ ಪ್ರಮುಖ ಸಸ್ಯದ ನಾರಾಗಿದೆ. ಇದು ಹೆಚ್ಚಿನ ಆಕರ್ಷಕ ಬಲವನ್ನು ಹೊಂದಿದೆ. ಕಡಿಮೆ ವಿಸ್ತರಣೀಯತೆ ಹಾಗೂ ನೇಯ್ಗೆಗಳ ಉತ್ತಮ ಜಲನಿರೋಧಕ ಗುಣದ ಬಗ್ಗೆ ಭರವಸೆ ನೀಡುತ್ತದೆ. ಕೃಷಿ ಪದಾರ್ಥಗಳ ದೊಡ್ಡಗಾತ್ರದ ಪ್ಯಾಕೇಜಿಂಗ್‌ಗೆ ಬಹಳ ಸೂಕ್ತವಾಗಿದೆ. ಸೆಣಬು ಒಳ್ಳೆಯ ನಿರೋಧಕವಾಗಿ ಹಾಗೂ ಪ್ರತಿಸ್ಥಾಯಿಗುಣಗಳನ್ನು, ಕಡಿಮೆ ಉಷ್ಣವಾಹಕತೆಯನ್ನು, ಒಂದು ಮಟ್ಟದ ತೇವವನ್ನು ಉಳಿಸಿಕೊಳ್ಳುವ ಅನುಕೂಲಗಳನ್ನು ಹೊಂದಿರುತ್ತದೆ. ಹಾಗೂ ಶಬ್ದ ನಿರೋಧಕ ಗುಣಗಳನ್ನು ಹೊಂದಿದೆ ಜೊತೆಗೆ ಚರ್ಮಕ್ಕೆ ಯಾವುದೇ ಉಪದ್ರವಗಳನ್ನು ನೀಡುವುದಿಲ್ಲ.

ಜಗತ್ತಿನಲ್ಲಿ ಸೆಣಬು ಅತ್ಯುತ್ತಮ ಮೂಲವೆಂದರೆ ಗಂಗಾನದಿಯ ಮುಖಜ ಭೂಮಿಯಲ್ಲಿ ಬಂಗಾಳ ಡೆಲ್ಟಾ ಬಯಲು ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸೆಣಬು ಸಂಶ್ಲೇಷಿತ ಹಾಗೂ ನೈಸರ್ಗಿಕವಾಗಿ ಎರಡೂ ತರದಲ್ಲಿ ಇತರ ನಾರುಗಳ ಜೊತೆಗೆ ಸಂಯೋಜನೆ ಹೊಂದುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಸೆಲ್ಯೂಲೋಸ್ ವಸ್ತುಗಳಿಂದ ತಯಾರಿಸಿದ ವರ್ಣದ್ರವ್ಯಗಳ ವರ್ಗಗಳಾದ ನೈಸಗಿಕ, ಪ್ರತ್ಯಾಮ್ಲೀಯ ರಂಗು, ವ್ಯಾಟ್ (ರಂಗಿನ ನೀರು ತುಂಬಿದ ತೊಟ್ಟಿಯಲ್ಲಿ ಮುಳುಗಿಸಿದ) ಗಂಧಕ, ಪ್ರತಿಕ್ರಿಯಾ ಶೀಲ, ಹಾಗೂ ಬಣ್ಣ ಹಾಕಿದ ವರ್ಣದ್ರವ್ಯಗಳ ಜೊತೆ ಸಂಯೋಜನೆ ಹೊಂದುತ್ತದೆ. ಸೆಣಬನ್ನು ಕಾಸ್ಟಿಕ್‌ಸೋಡಾ (ಸೋಡಿಯಂ ಹೈಡ್ರಾಕ್ಸೈಡ್) ಜೊತೆಗೆ ಸಂಸ್ಕರಿಸಿದಾಗ ಗರಿಗರಿಯಾದ, ಮೃದುವಾದ ನವ್ಯತೆಯ ಹಾಗೂ ಬಟ್ಟೆಯ ನೋಟವು ಸುಧಾರಿಸುತ್ತದೆ. ಹಾಗೂ ಉಣ್ಣೆಯೊಂದಿಗೆ ನೇಯ್ಗೆ ಮಾಡುವಲ್ಲಿ ಸಹಾಯಕವಾಗಿದೆ. ಕೆಲವು ಗಮನಿಸಬೇಕಾದ ಅನುಕೂಲಗಳಲ್ಲಿ ಕಳಪೆಯಾಗಿ ತೂಗುಬಿಡುವುದು ಹಾಗೂ ಸುಕ್ಕಾಗುವುದನ್ನು ತಡೆಯದಿರುವುದು, ಭಂಗುರತೆ (ಸುಲಭವಾಗಿ ಹರಿಯುವ ಲಕ್ಷಣ) ನಾರಿನ ಉದುರುವಿಕೆ, ಸೂರ್ಯನ ಕಿರಣಗಳಿಗೆ ಹಳದಿ ಬಣ್ಣಕ್ಕೆ ತಿರುಗುವುದು. ಸೆಣಬಿನ ಬಟ್ಟೆಗೆ ವರ್ಣದ್ರವ್ಯಗೊಳಿಸುವ ಒಂದು ಪ್ರಯತ್ನದಲ್ಲಿ ಬಿಳುಪಾಗಿಸಿದ ಬಟ್ಟೆಯನ್ನು ಫೆರಸ್ ಸಲ್ಫೇಟ್‌ನ ಜೊತೆಗೆ ಕ್ಷಾರಗೊಳಿಸುವುದರಿಂದ ವರ್ಣದ್ರವ್ಯದ ಮೌಲ್ಯ ಹೆಚ್ಚಾಗುತ್ತದೆ. ಸೆಣಬು ಪ್ರತಿಕ್ರಿಯಾಶೀಲ ವರ್ಣದ್ರವ್ಯಗಳಿಗೂ ಸಹ ಉತ್ತಮವಾಗಿ ಪ್ರತಿಕ್ರಿಯಿಸುತ್ತದೆ. ಈ ಪ್ರತಿಕ್ರಿಯೆಯನ್ನು ಬೆಲೆ ಕೊಡಿಸಿದ ಸೆಣಬಿನ ನಾನಾ ಉತ್ಪನ್ನಗಳಲ್ಲಿ ಉಜ್ವಲವಾಗಿ ಹಾಗೂ ವೇಗವಾಗಿ ಬಣ್ಣ ಬರುವಂತೆ ಮಾಡಲು ಬಳಸಲಾಗುತ್ತದೆ.

*ಆರ್. ಡಿ.*

**ಸೇವಂತಿಗೆ** ಇದೊಂದು ವಾಣಿಜ್ಯ ಬೆಳೆ. ಕನ್ನಡದಲ್ಲಿ ಸೇವಂತಿ, ಶ್ಯಾವಂತಿಗೆ ಎಂತಲೂ, ಆಂಗ್ಲ ಭಾಷೆಯಲ್ಲಿ ಕ್ರಿಸ್ಯಾಂತಿಮಮ್ ಎಂದು ಕರೆಯುವರು. ಇದು ಕಾಂಪೊಸಿಟೆ ಕುಟುಂಬಕ್ಕೆ ಸೇರಿದೆ. ಇದರ ಮೂಲ ಯೂರೋಪ್, ಏಷಿಯಾ, ಅಮೆರಿಕಾ ಮತ್ತು ಆಫ್ರಿಕಾ. ಹಾಸನ, ಮೈಸೂರು ಜಿಲ್ಲೆಗಳಲ್ಲಿ ಈ ಬೆಳೆ ಹೆಚ್ಚಾಗಿ ಕಂಡು ಬರುತ್ತದೆ. ಗುಲಾಬಿಯ ಅನಂತರದ ಸ್ಥಾನವನ್ನು ಸೇವಂತಿಗೆ ತುಂಬುತ್ತಿದೆ.



**ಬಿತ್ತನೆ :** ಫಲವತ್ತಾದ ಭೂಮಿ ನೀರು ನಿಲ್ಲದೆ ಇರುವ ಮರಳು ಮಿಶ್ರಿತ ಗೋಡುಮಣ್ಣು ಈ ಬೆಳೆಗೆ ಉಪಯುಕ್ತ. ತಂಪಾದ ವಾತಾವರಣದಲ್ಲಿ ಮಾರ್ಚ್ - ಏಪ್ರಿಲ್ ತಿಂಗಳುಗಳಲ್ಲಿ ಸಸಿಗಳನ್ನು ನಾಟಿ ಮಾಡುತ್ತಾರೆ. ಹೆಚ್ಚು ತೇವಾಂಶವಿರುವ ಭೂಮಿಯಲ್ಲಿ ಇದನ್ನು ಬೆಳೆಯಲಾಗುವುದಿಲ್ಲ. ಭೂಮಿಯನ್ನು ಚೆನ್ನಾಗಿ ಉತ್ತು, ಕೊಟ್ಟಿಗೆ ಗೊಬ್ಬರ, ಮರಳು, ಎಲೆ ಗೊಬ್ಬರ ಮತ್ತು ಸ್ವಲ್ಪ ಬೂದಿಯನ್ನು ಹಾಕಿ ಭೂಮಿಯನ್ನು ಹದಮಾಡಿ 30 ಸೆಂ.ಮೀ. ಅಂತರದ ಸಾಲುಗಳನ್ನು ಮಾಡಿ ಸಸಿಗಳನ್ನು 20 ರಿಂದ 30 ಸೆಂ.ಮೀ. ಅಂತರದಲ್ಲಿ ನಾಟಿ ಮಾಡಬೇಕು. ನಾಟಿ ಮಾಡಿದ 4 ರಿಂದ 7 ವಾರದ ಅನಂತರ ತುದಿಯನ್ನು ಚಿವುಟುವುದರಿಂದ ಹೆಚ್ಚಿನ ಕವಲುಗಳು ಬೆಳೆಯುತ್ತವೆ. ತುದಿ ಚಿವುಟುವಾಗ ಕೊಟ್ಟಿಗೆ ಗೊಬ್ಬರ, ಎಲೆಗೊಬ್ಬರ ಮತ್ತು ಬೂದಿಯ ಮಿಶ್ರಣವನ್ನು ಮೇಲುಗೊಬ್ಬರವಾಗಿ ಹಾಕಿ ಮಣ್ಣನ್ನು ಏರು ಹಾಕಬೇಕು. ಗಿಡಗಳಿಗೆ ಆಧಾರವಾಗಿ ಕಡ್ಡಿಗಳನ್ನು ಕೊಡಬಹುದು. ಹೆಚ್ಚಾಗಿ ನೀರು ಹಾಯಿಸದಂತೆ ನೋಡಿಕೊಳ್ಳಬೇಕು. ನಾಟಿ ಮಾಡಿದ ಮೂರವರೆ ತಿಂಗಳಿಗೆ ಹೂವು ಬಿಡುತ್ತವೆ. ಅನಂತರ ಒಂದೂವರೆ ತಿಂಗಳುಗಳ ಕಾಲ ಹೂವು ಸಿಗುತ್ತವೆ.

*ಎಸ್.ಕೆ.ಎನ್.*

**ಸೊಪ್ಪಿನ ಮಡಿ** ಹಿಂದೆ ಹಳ್ಳಿಗಳು ಸ್ವಯಂಪೂರ್ಣವಾಗಿದ್ದು, ಪ್ರತಿಯೊಂದು ಹಳ್ಳಿಯಲ್ಲೂ ಸೊಪ್ಪಿನ ಮಡಿಗಳು ಕೈತೋಟಗಳಾಗಿದ್ದವು. ಈ ಸೊಪ್ಪಿನ ಮಡಿಗಳು, ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲೂ ಸಾಮೂಹಿಕವಾಗಿ ಅಂದರೆ ಒಂದೇ ಕಡೆ ಸಿಹಿನೀರಿನ ಬಾವಿಗಳ ಹತ್ತಿರ ಇರುತ್ತಿದ್ದವು. ಊರಿನ ಎಲ್ಲರಿಗೂ ಸಾಮಾನ್ಯವಾಗಿ ಇಲ್ಲಿ ಸ್ಥಳಾವಕಾಶವಿದ್ದು, ಪ್ರತಿಯೊಂದೂ ಕುಟುಂಬಕ್ಕೂ ಒಂದರಿಂದ ಎರಡು ಗುಂಟೆ ಜಮೀನಿರುತ್ತಿತ್ತು.

ಈ ಕೈತೋಟಗಳನ್ನು ಸೊಪ್ಪಿನ ಮಡಿಗಳೆಂದೇ ಕರೆಯುವುದು ವಾಡಿಕೆ. ಇಲ್ಲಿ ಸೊಪ್ಪಲ್ಲದೆ ಬಾಳೆ, ಕರಿಬೇವು, ನಿಂಬೆ, ಹೇರಳೆ ಮತ್ತು ಮನೆಯ ಹೆಣ್ಣು ಮಕ್ಕಳು ಮುಡಿಯಲು ಹಾಗೂ ದೇವರ ಪೂಜೆಗೆ ಬೇಕಾದ ಕಾಶಿಕಣಿಗಲು, ಕಣಿಗಲು, ಚೆಂಡುಹೂ ಪತ್ರೆ ಮುಂತಾದುವುಗಳನ್ನು ಬೆಳೆಯುತ್ತಿದ್ದರು.

**ಬೆಳೆಯ ಕಾಲ :** ಹೊಲದ ಅವರೇ ಕಾಯಿ ಸಾಮಾನ್ಯವಾಗಿ ಫೆಬ್ರವರಿ ಕೊನೆಯವರೆವಿಗೂ ಇರುತ್ತಿದ್ದು, ಅದು ಮುಗಿದ ತಕ್ಷಣ ಬೇರೆ ರುಚಿಕರವಾದ ತರಕಾರಿಗಳು ಸಿಕ್ಕುತ್ತಿರಲಿಲ್ಲ. ಅವರೇಕಾಯಿ ಮುಗಿಯುತ್ತಿದ್ದಂತೆಯೇ ಸೊಪ್ಪಿನ ಮಡಿಗಳ ತಯಾರಿ ಶುರುವಾಗುತ್ತಿತ್ತು; ಅಂದರೆ, ಮಾರ್ಚಿ ಮೊದಲನೆಯ ವಾರದಲ್ಲಿ. ಸೊಪ್ಪಿನ ಬಿತ್ತನೆ ಅದಕ್ಕಾಗಿಯೇ ಮಾಡಿದ ಮಡಿಗಳಲ್ಲಿ ಅಂದರೆ ಪ್ರತಿವರ್ಷವೂ ಒಂದೇ ಜಾಗದಲ್ಲಿ ಮಾಡುವುದು ರೂಢಿ.

**ಕೃಷಿ : ಬೇಲಿ :** ರೈತರ ಮೊದಲ ಕೆಲಸವೆಂದರೆ ಸೊಪ್ಪಿನ ಮಡಿಯ ಹಳೆ ಬೇಲಿಯನ್ನು ಸರಿಪಡಿಸಿ, ಹೊಸ ಲಾಂಟಾನಾ ಅಥವಾ ಬಿದಿರು ಮುಳ್ಳಿನಿಂದ ಬೇಲಿಯನ್ನು ಭದ್ರಪಡಿಸಿ, ತಟ್ಟಿಗೆ ಬಾಗಿಲನ್ನು ಮಾಡಿ ಅದಕ್ಕೆ ಬೀಗ ಹಾಕುವಂತೆ ವ್ಯವಸ್ಥೆ ಮಾಡುತ್ತಿದ್ದರು.

**ಸುಡುವಿಕೆ :** ಅನಂತರ ಹಳೆಯ ಕಸ ಕಡ್ಡಿಗಳನ್ನೆಲ್ಲ ತೆಗೆದು, ಅವನ್ನು ಸೊಪ್ಪಿನ ಮಡಿಯ ಜಾಗದಲ್ಲಿ (ಇಡೀ ಕೈ ತೋಟಕ್ಕೆ ಸೊಪ್ಪಿನ ಮಡಿ ಎನ್ನುವರಾದರೂ ಅದರಲ್ಲಿ ಸೊಪ್ಪು ಬೆಳೆಯುವ ಭಾಗ ಸ್ವಲ್ಪ) ಹರಡಿ, ಆ ಭಾಗವನ್ನು ಸುಡುವುದು.

**ಅಗತೆ :** ಅಗತೆ ಎಂದರೆ ಬಹು ಆಳವಾಗಿ ಹಾರೆಯಿಂದ ದಪ್ಪ ದಪ್ಪ ಹೆಂಟೆಗಳು ಏಳುವಂತೆ 1-2 ಅಡಿ ಆಳದವರೆವಿಗೂ ಅಗೆದು, ಹೆಂಟೆಗಳನ್ನು 10-12 ದಿವಸ ಬಿಸಿಲಿನಲ್ಲಿ ಒಣಗಲು ಬಿಡುವುದು.

**ಹೆಂಟೆಗಳನ್ನು ಪುಡಿಮಾಡುವಿಕೆ :** ಬಿಸಿಲಿನಲ್ಲಿ ಚೆನ್ನಾಗಿ ಒಣಗಿದ ಹೆಂಟೆಗಳನ್ನು ಮರದ ತುಂಡಿನ (ಕೊಡವೆ) ಸಹಾಯದಿಂದ ಪುಡಿ ಮಾಡುವುದು. ಈ ಪುಡಿಮಾಡುವ ಕೆಲಸ ಅನೇಕ ದಿನಗಳವರೆಗೆ ನಡೆಯುತ್ತದೆ. ಮಣ್ಣನ್ನು ಅನೇಕ ಬಾರಿ ತಿರುವಿ, ಹೆಂಟೆಗಳನ್ನು ಪೂರ್ಣವಾಗಿ ಬಡಿದು ಮಣ್ಣನ್ನು ನಯವಾಗಿ ಪುಡಿ ಮಾಡುವುದು.

**ಮಡಿ :** ಮಡಿಯನ್ನು ಸಣ್ಣ ಸಣ್ಣ ಉಪಮಡಿಗಳನ್ನಾಗಿ ವಿಂಗಡಿಸಿ ಸುತ್ತಲೂ ಒಂದು ದೊಡ್ಡ ಬದುವನ್ನು ಕಟ್ಟಿ ಅದರ ಮಧ್ಯೆ ಅಡ್ಡಬದುಗಳನ್ನು ಮಾಡಲು ಸಣ್ಣಸಣ್ಣ ಚಪ್ಪಟೆಯಾದ ಕಲ್ಲುಗಳು ಅಥವಾ ಇಟ್ಟಿಗೆ ಅಥವಾ ಇನ್ನೂ ಕೆಲವರು ಮರದ ತುಂಡುಗಳನ್ನು ಬಳಸುತ್ತಿದ್ದರು. ಈ ಸಣ್ಣ ಮಡಿಗಳ ರಚನೆಯಲ್ಲಿ ಕೆಲವರು ಬಣ್ಣ ಬಣ್ಣದ ವಿವಿಧ ಆಕಾರದ ಕಲ್ಲುಗಳನ್ನೂ ಈ ಅಡ್ಡ ಬದುಗಳಿಗೆ ಜೋಡಿಸುತ್ತಿದ್ದರು; ಹಚ್ಚಹಸಿರು ಸೊಪ್ಪಿನ ಮಧ್ಯೆ ಇವು ಬಹಳ ಅಂದವಾಗಿ ಕಾಣುತ್ತಿದ್ದವು. ಸಾಮಾನ್ಯವಾಗಿ ಸೊಪ್ಪಿನ ಮಡಿಯ ವಿಸ್ತೀರ್ಣ ಮನೆಯ ಜನಸಂಖ್ಯೆಯನ್ನು ಅವಲಂಬಿಸಿರುತ್ತಿತ್ತು; ಕಡಿಮೆ ಜನರಿದ್ದರೆ 4 ಮಡಿಗಳು; ಹೆಚ್ಚು ಜನರಿದ್ದರೆ 12 ರಿಂದ 14 ಮಡಿಗಳು.

**ಬದು :** ಸೊಪ್ಪಿನ ಮಡಿಯ ಸುತ್ತಲೂ ಮಾಡುವ ದೊಡ್ಡ ಬದು ಎತ್ತರವಾಗಿ ಹಾಗೂ ಇದರ ಮೇಲೆ ನಡೆದಾಡುವಷ್ಟು ಅಗಲವೂ ಭದ್ರವೂ ಆಗಿದ್ದು, ಈ ದೊಡ್ಡ ಬದುವಿನ ರಚನೆಗೆ ಒಂದು ವಿಧದ ಕಲಸಿದ ಮಣ್ಣನ್ನು ಉಪಯೋಗಿಸುತ್ತಿದ್ದರು. ಈ ಕಲಸಿದ ಮಣ್ಣನ್ನು ಅನೇಕ ಬಾರಿ ತುಳಿಯುತ್ತಿದ್ದರು; ಈ ರೀತಿ ಮಾಡುವುದರಿಂದ ಅದು ಗಟ್ಟಿಯೂ ಭದ್ರವೂ ಆಗುತ್ತಿತ್ತು.

**ಗೊಬ್ಬರ :** ಸೊಪ್ಪಿನ ಮಡಿಗಳಿಗೆ ಹಾಕುವ ಗೊಬ್ಬರವನ್ನು (ಸಾಮಾನ್ಯವಾಗಿ ಕುರಿಗೊಬ್ಬರ) ತಿಪ್ಪೆಗುಂಡಿಗಳಲ್ಲಿ ಕೊಳೆಯಲು ಬಿಡುತ್ತಿದ್ದರು, ಕೊಳೆತ ಗೊಬ್ಬರದ ಮಧ್ಯೆ ಒಂದು ಗುಂಡಿ ತೋಡಿ ಆ ಗುಂಡಿಯಿಂದ ನಿಧಾನವಾಗಿ ಒಂದು ಚೂಪುಕಡ್ಡಿಯ ಸಹಾಯದಿಂದ ತೋಡಿ ಸೊಪ್ಪಿನ ಮಡಿಗಳಿಗೆ ಉಪಯೋಗಿಸುವುದು ವಾಡಿಕೆ. ಈ ರೀತಿ ಬಹಳ ಚೆನ್ನಾಗಿ ಕಳಿತು ಪುಡಿಯಾದ ಗೊಬ್ಬರಕ್ಕೆ ಸಸಿಗೊಬ್ಬರವೆನ್ನುತ್ತಾರೆ.

**ಮಡಿಗಳ ಮಟ್ಟ :** ಸಿದ್ಧಪಡಿಸಿದ ಮಡಿಗಳಿಗೆ ಗೊಬ್ಬರವನ್ನು ಹರಡಿ ಮಣ್ಣಿನೊಡನೆ ಕೈಬೆರಳಿನಿಂದ ಚೆನ್ನಾಗಿ ಮಿಶ್ರಮಾಡಿ ಮತ್ತೆ ಸಣ್ಣ ಹೆಂಟೆ ಗೊಬ್ಬರದಲ್ಲಿ ಉಳಿದಿರಬಹುದಾದ ಕಸಕಡ್ಡಿಗಳನ್ನು ತೆಗೆದು ಮಡಿಗಳನ್ನು ಒಂದೇ ಮಟ್ಟಕ್ಕೆ ಮಾಡುವುದು.

**ಬಿತ್ತನೆ :** ಮುಂದಿನ ಕೆಲಸವೆಂದರೆ ಬೀಜ ಬಿತ್ತುವುದು. ಸಾಮಾನ್ಯವಾಗಿ ಹರಿವೆ ಮತ್ತು ದಂಟಿನ ಸೊಪ್ಪು ಬೀಜಗಳನ್ನು ಬೆರಸಿ ಬಿತ್ತುವುದು ಪದ್ಧತಿ. ಬಿತ್ತುವುದಕ್ಕೆ ಮುಂಚೆ ಹರಿವೆ ಹಾಗೂ ದಂಟಿನ ಬೀಜಗಳನ್ನು ಮಿಶ್ರಮಾಡಿ (ಹರಿವೆ ಜಾಸ್ತಿ ದಂಡು ಕಡಿಮೆ) ಸ್ವಲ್ಪ ಹೊತ್ತು ಬಿಸಿಲಿನಲ್ಲಿ ಒಣಗಿಸಿ ಅನಂತರ ಎಡಗೈ ಮೇಲೆ ಬಲಗೈಯನ್ನಿಟ್ಟುಕೊಂಡು ನಿಧಾನವಾಗಿ ಕೈಯನ್ನು ಕುಲುಕಿಸಿ

ಒಂದೇ ಸಮವಾಗಿ ಬೀಜಗಳನ್ನು ಬಿತ್ತಿ, ಅನಂತರ ಮತ್ತೊಮ್ಮೆ ಕೈ ಬೆರಳಿನಿಂದ ಬೀಜ ಮಣ್ಣಿನಲ್ಲಿ ಸೇರುವಂತೆ ಕೈಯ್ಯಾಡಿಸುತ್ತಿದ್ದರು.

**ನೀರು :** ಸೊಪ್ಪಿನ ಮಡಿಗಳಿಗೆ ನೀರು ಹಾಕುವುದೂ ಒಂದು ಕಲೆ. ಗಡಿಗೆಯಿಂದ ಸಿಹಿ ನೀರನ್ನು ಬಹಳ ಎತ್ತರದಿಂದ ಚುಮುಕಿಸುವುದು. ಗಡಿಗೆಯನ್ನು ಬಲಗೈನ ಅಂಗೈಮೇಲೆ ಇರಿಸಿ, ಹಸ್ತದ ಮೇಲೆ ನೀರು ಹರಿಯುವಂತೆ ಮಾಡಿ, ಹಾಗೆ ಹರಿದ ನೀರನ್ನು ವೇಗವಾಗಿ ಚಿಮ್ಮುವುದು. ಈ ರೀತಿ ಚಿಮ್ಮಿದ ನೀರು ಹನಿಹನಿಯಾಗಿ ಒಂದೇ ಸಮನೆ ಎಲ್ಲಾ ಕಡೆಯೂ ಬೀಳುತ್ತಿತ್ತು. ಸಾಮಾನ್ಯವಾಗಿ ಸೊಪ್ಪು ಬಲಿತು ಕುಯ್ಲಿಗೆ ಬರುವ ಸಮಯದವರೆಗೆ ಈ ಕೆಲಸ ಗಂಡಸರದಾಗಿರುತ್ತಿತ್ತು. ನೀರನ್ನು ಹಾಕುವುದು ಸಂಜೆ ಅಥವಾ ಮುಂಜಾನೆ ಮಾತ್ರ.

**ಸೊಪ್ಪು ಮೊಳೆಯುವುದು :** ದಂಟು ಮೊದಲು ಹತ್ತು ಹರಿವೆ ನಿಧಾನವಾಗಿ ಹುಟ್ಟುತ್ತವೆ, ದಂಟಿನ ಸೊಪ್ಪಿನ ಎಲೆಗಳು ಅಗಲ, ಹರಿವೆಯ ಎಲೆಗಳು ಸಣ್ಣ. ಮಡಿಗಳಿಂದ ಸೊಪ್ಪನ್ನು ಬಿತ್ತಿದ 10ನೇ ದಿನದಿಂದ ಸಾಮಾನ್ಯವಾಗಿ ಸಸಿ ಕೊಯ್ಯುತ್ತಿದ್ದರು. ಅಂದರೆ ಒತ್ತಾಗಿರುವ ಕಡೆ ಹೆಚ್ಚಿಗೆ ಸೊಪ್ಪನ್ನು ಬೇರು ಸಹಿತ ತೆಗೆಯುವುದು. ಈ ರೀತಿ ಕೊಯ್ದ ಎಳೆ ಸೊಪ್ಪನ್ನು ಅವರೇ ಬೇಳೆಯ ಜೊತೆಯಲ್ಲಿ ಬೇಯಿಸಿ 'ಮಸೊಪ್ಪು' ಮಾಡುತ್ತಿದ್ದರು. ಇದಕ್ಕೆ ಬೆಣ್ಣೆ ಬೆರೆಸಿ ಬಿಸಿಯಾಗಿರುವಾಗ ರಾಗಿಮುದ್ದೆಯ ಜೊತೆಯಲ್ಲಿ ತಿನ್ನಲು ಬಲುರುಚಿ.

ಸೊಪ್ಪನ್ನು ಕೊಯ್ಯುವ ಕಾರ್ಯ ಬಹಳ ದಿನಗಳವರೆಗೆ ನಡೆದು, ಹರಿವೆಯನ್ನು ಎರಡರಿಂದ ಮೂರು ಅಂಗಲಕ್ಕೊಂದರಂತೆ ನಿಲ್ಲಿಸಿ, - ದಂಟನ್ನು ಬದುಗಳ ಪಕ್ಕದಲ್ಲಿ ಒಂದರಿಂದ- ಎರಡು ಅಡಿಗೊಂದರಂತೆ ನಿಲ್ಲಿಸುತ್ತಿದ್ದರು. ಹರಿವೆಯು ಪಕ್ಕಕ್ಕೆ ಹರಿದು ಬೇರುಬಿಟ್ಟು ಮಡಿಯನ್ನೆಲ್ಲಾ ಆಕ್ರಮಿಸುತ್ತದೆ. ಸೊಪ್ಪು ಬಲಿತ ಮೇಲೆ ಒಂದು ಪಕ್ಕದಿಂದ ಕುಯ್ಯಲು ಪ್ರಾರಂಭಿಸಿ ಹರಿವೆಸೊಪ್ಪಿನ ಮೇಲ್ಭಾಗವನ್ನು ಪ್ರತಿದಿನವೂ ಒಂದು ಕಡೆಯಿಂದ ಕುಯ್ಲು ಮಾಡುತ್ತಾ ಹೋಗುತ್ತಾರೆ. ಸಾಮಾನ್ಯವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕುಯ್ಲು ಮಾಡುವ ವೇಳೆಗೆ ಮೊದಲು ಕುಯ್ಲು ಮಾಡಿದ ಜಾಗದಲ್ಲಿ ಸೊಪ್ಪು ಬೆಳೆದಿರುತ್ತದೆ. ಸೊಪ್ಪಿನ ಮಡಿ ಬೇಸಾಯ ಅತ್ಯಂತ ಉನ್ನತ ದರ್ಜೆಯ ತೋಟಗಾರಿಕೆ ನೈಪುಣ್ಯತೆ. ಇದರ ಕೆಲವು ರುಜುವಾತುಗಳು ಈ ಕೆಳಕಂಡಂತಿವೆ.

**ಗೊಬ್ಬರದ ವೈಶಿಷ್ಟ್ಯ :** ಬೆಳೆದ ಸೊಪ್ಪಿನ ಮಡಿಗೆ ಗೊಬ್ಬರವನ್ನು ಯಥೇಚ್ಛವಾಗಿ ಬಳಸುತ್ತಾರೆ. ಸಸಿಗೊಬ್ಬರವನ್ನು ತಂದು ಅದನ್ನು ಮರದ (ಬಿದಿರಿನ) ದೊಡ್ಡ ಕಣ್ಣಿನ ಜರಡಿಯಿಂದ ಜರಡಿ ಹಿಡಿದು, ಕೆಳಗೆ ಬರುವ ಅತಿ ಸಣ್ಣ (ಸೂಕ್ಷ್ಮ)ದಾದ ಪುಡಿಯನ್ನು ವಾರಕ್ಕೊಮ್ಮೆ ಎರಚುತ್ತಾರೆ. ಈ ರೀತಿ ಎರಚಿದ ಪುಡಿಯು ಸೊಪ್ಪಿನ ಮೇಲೆ ನಿಲ್ಲದೆ ನೀರನ್ನು ಎರಚಿದಾಗ ಅದರ ಬುಡ ಸೇರುತ್ತದೆ.

**ಸೊಪ್ಪಿನ ಕುಡುಗೋಲು (ಕುಡ್ಲು) :** ಸೊಪ್ಪನ್ನು ಕುಯ್ಲು ಮಾಡಲು ಸಾಮಾನ್ಯವಾಗಿ ದೊಡ್ಡ ಕುಡುಗೋಲುಗಳನ್ನು ಉಪಯೋಗಿಸುವುದಿಲ್ಲ. ಸೊಪ್ಪಿನ ಕುಡ್ಲು ಸಣ್ಣ; ಹರಿವೆಸೊಪ್ಪನ್ನು ಅದರ ಬುಡಕ್ಕೆ ಒಂದೇ ಸಮನಾಗಿ ಕತ್ತರಿಸಲು ಅನುಕೂಲ. ಮತ್ತೊಂದು ಅನುಕೂಲ; ಇದು ಸಣ್ಣದಾಗಿದ್ದು ಒಂದು ತುದಿಗೆ ದಾರಕಟ್ಟಿರುವುದರಿಂದ ಸೊಪ್ಪು ತರಲು ಹೋಗುವ ಹೆಂಗಸರು ಈ ದಾರದ ಸಹಾಯದಿಂದ ಸೊಪ್ಪಿನ ಮಂಕರಿಗೆ ಇದನ್ನು ಸುಲಭವಾಗಿ ಸಿಕ್ಕಿಸಿಕೊಳ್ಳಬಹುದು.

**ಸೊಪ್ಪಿನ ಮಂಕರಿ (ಬಿದಿರಿನ ಸಣ್ಣ ಮಂಕರಿಗಳು) :** ಹೆಂಗಸರು ಸಾಮಾನ್ಯವಾಗಿ ಸೊಪ್ಪನ್ನು ಇದರಲ್ಲಿ ತುಂಬಿ ಕಂಕುಳಲ್ಲಿಟ್ಟುಕೊಂಡು ತಲೆಯ ಮೇಲೆ ಸಿಹಿ ನೀರಿನ ಕೊಡಗಳನ್ನೂ ಸಹ ಹೊತ್ತು ತರುತ್ತಾರೆ. ಇದರಲ್ಲಿ ದೊಡ್ಡ ಸೊಪ್ಪಿನ ಮಂಕರಿ, ಸಣ್ಣ ಸೊಪ್ಪಿನ ಮಂಕರಿಗಳೆಂದಿರುತ್ತವೆ. ಇವು ಸಂಸಾರದ ಗಾತ್ರಕ್ಕೆ ತಕ್ಕಂತೆ ಇರುತ್ತವೆ.

ಇಂಥ ವೈಶಿಷ್ಟ್ಯವುಳ್ಳ ಸೊಪ್ಪಿನ ಮಡಿ ಕೃಷಿ, ಕೆಲವು ಹಳ್ಳಿಗಳಲ್ಲಿ ಕಂಡುಬಂದರೂ, ಬಹಳಮಟ್ಟಿಗೆ ನಶಿಸಿಹೋಗುತ್ತಿದೆ. ಹಾಗಾಗದಂತೆ, ಅದನ್ನು ಅಭಿವೃದ್ಧಿ ಮಾಡುವುದು ವ್ಯವಸಾಯಗಾರರ ಕರ್ತವ್ಯ.

**ಸಾಮಾನ್ಯವಾಗಿ ಉಪಯೋಗಿಸುವ ಕೆಲವು ಬೆರಕೆ ಸೊಪ್ಪುಗಳು**

| | | |
|---|---|---|
| 1. | ಭೀಮನಸೊಪ್ಪು | Ruella Patula Jacq |
| 2. | ಮೊದ್ದೆ ಸೊಪ್ಪು | Asystacia Coramondalina NCCS |
| 3. | ಬೆಪ್ಪಾಲೇಸೊಪ್ಪು | Wrightia Tinctorea |
| 4. | ಅಣ್ಣೆ ಕೀರೆ ಸೊಪ್ಪು | Celocia argentia L. |
| 5. | ಉತ್ತರಾಣಿ ಸೊಪ್ಪು | Aechyranthns aspera L. |
| 6. | ಕೀರೆಸೊಪ್ಪು | Amaranthus Panniculatus L. |
| 7. | ಕೆಂಪುಗೊಂಡೆ ಸೊಪ್ಪು | Gomphrena globosa L. |
| 8. | ಚಿಲಕೀರೆಸೊಪ್ಪು | Amaranthus Viredes L. |
| 9. | ಚಿಕ್ಕೀರೆ ಸೊಪ್ಪು | A. Polygamus L. |
| 10. | ಬಲಿಕೆ ಸೊಪ್ಪು | A. Candatus L. |
| 11. | ನೀರಾದೋಗದಬಂಟು | Gomphrena decumbense |
| 12. | ಬಿಳಿಹಿಂಡಿ ಬಂಟು | Acura Lanata Juss |
| 13. | ಮಯೂರಶಿಖಿ ಬಂಟು | Celocea Crustata |
| 14. | ಮುಳ್ಳು ಹೊನೆಗೊನೆಸೊಪ್ಪು | Allernanthera echinata |
| 15. | ಮುಳ್ಳುಕೀರೆ ಸೊಪ್ಪು | Amaranthus spinosus |
| 16. | ಹರಿವೆ ಸೊಪ್ಪು | A. Gangificus L. |
| 17. | ಹೊನೆಗೊನೆ ಸೊಪ್ಪು | Alternanthera Sessillis R. Br. |
| 18. | ಅರೆಪ್ಪಕನ್ನೆ ಸೊಪ್ಪು | Veronea Vidica CL |
| 19. | ಒಂದೆಲಗ ಸೊಪ್ಪು | Centella asiatiea urban |
| 20. | ಕನ್ನೆಸೊಪ್ಪು | Commellina communis L. |
| 21. | ನೆಗ್ಗಿಲಕನ್ನೆ ಸೊಪ್ಪು | Cynolis axilaris R & S |
| 22. | ಕಳ್ಳಿಕೀರೆ ಸೊಪ್ಪು | Ipomea speiarea Koen |
| 23. | ನೆಲಹಾಪು ಗೆಣಸು | Ipomea Paniculata |
| 24. | ಚಕ್ಕೋತ ಸೊಪ್ಪು | Atriplex hortensis |
| 25. | ತೊಂಡೆಬಳ್ಳಿ | Coeinia indica W & A |
| 26. | ಎಣ್ಣೆಪುಂಡಿಗಿಡ | Corchorus trilocularis L. |
| 27. | ಕಾಡಸಬಸೀಗೆ | Fumaria Parviflora Lam |
| 28. | ಚುಕ್ಕೆ ಸೊಪ್ಪು | Rumex Versicaricus L. |
| 29. | ಅಗಸೆ ಕುಡಿ | Scsbanea grandiflora (Acra) |

30. ಅಪ್ಸಣಬುಕುಡಿ Crotalaria Juncea L.
31. ಅಲಸಂದೆಕುಡಿ Vigna Catjung Walp
32. ಅವರೆಕುಡಿ Dolichos Lablab L.
33. ಉದ್ದು Phaseodus Mengo L
34. ಕಡಲೆ Cicer Arictlinum L
35. ತೊಗರಿ Cajanus indicus. Spreng
36. ಮೈಸೂರುಬೇಳೆ Lens esculentus Moench
37. ಲೂಸರ್ತ್‌ಸೊಪ್ಪು Medicago Sativa L
38. ಪುಂಡಿಸೊಪ್ಪು Hibiscus Cannabinus L
39. ಸೀಮೆಹುಣಸೆ Pithecolobium dulec Benths
40. ಕಾಡುಮೆಣಸಿನಗಿಡ Toddalea asicatica Lan
41. ತುಂಬೆ Lucas aspera L
42. ಕಣ್ಣುಕಾಡಿಗೆಗಿಡ Colchicum leuteum
43. ವಾತನಾರಾಯಣ Delonin elata L
44. ಕೊಮ್ಮೆಸೊಪ್ಪು Bohereiva diftusa
45. ನೆಗ್ಗಿಲಸೊಪ್ಪು Tribulus terrestris
46. ಕೆಸುವಿನ ದಂಟು Colcacea esculenta
47. ಸಿಹಿಮೆಣಸಿನಕುಡಿ Ipomea batata
48. ಚೊಚೊಬಿಳಿಕುಡಿ (ಸೀಮೆಬದನೆ) Sechnium edulae
49. ಹುಣಸೆಚಿಗುರು Tamarindus indica
50. ಹಾಲೇಸೊಪ್ಪು Mardedemea Volubilis
51. ನುಗ್ಗೆಚಿಗುರು Moringa Plerygospermae
52. ಗೋಣಿಸೊಪ್ಪು Portulaca sp.
53. ಹುಳಿಸೊಪ್ಪು Oxalis corniculata
54. ನೆಲನೆಲ್ಲಿಚಿಗುರು Phyllantus neruri
55. ಸೀಗೇಚಿಗುರು Acacea Caesia willd
56. ಅಮೃತಬಳ್ಳಿ Tinospora cardiflora
57. ದೊಡ್ಡಪತ್ರೆ Anisochylus cornosus
58. ಕುಂಬಳಜಾತಿಗಳ ಕುಡಿ Cucurbita peppo ctee
59. ಕಿರುಕಸಾಲೆ
(ಕೀರಕಸಾಲೆ ಚಿಲ್ಕರೀವೇಸೊಪ್ಪು) Amaranthus Mangostanus
60. ವಿಷ್ಣು ಕಾಂತಿಸೊಪ್ಪು Evolvulus alsinoides
61. ಗೋಣಿಸೊಪ್ಪು Portulaca sp
62. ಭೀಮನಸೊಪ್ಪು Ruellea prostrata poier
63. ನೆಲಗುಳ್ಳಿ (ನೆಲಬದನೆ) Solanum Leave, dunal
64. ಗಣಿಕೆಸೊಪ್ಪು Solanum sp

*ಜಿ.ಎಸ್.*

**ಸೊಪ್ಪುಗಳು** ಮಾನವ ಸೇವಿಸುವ ಆಹಾರಗಳಲ್ಲಿ ಸೊಪ್ಪು ಒಂದು. ಕೆಲವು ಸೊಪ್ಪುಗಳನ್ನು ಬೀಜ ಹಾಕಿ ಬಿತ್ತಿ ಬೆಳೆಯುವರು, ಇನ್ನು ಕೆಲವು ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆ. ಸಸಿಗಳಿಂದ ಬಳ್ಳಿಗಳಿಂದ ಮತ್ತು ಮರಗಳಿಂದ ಸೊಪ್ಪುಗಳನ್ನು ಪಡೆಯಬಹುದು. ಇವುಗಳಲ್ಲಿ ಸುಮಾರು 125 ತಳಿಗಳಿವೆ. ಸುಮಾರು 700-1000 ಪ್ರಭೇದಗಳಿವೆ. ಅವುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು.

1. ಬೇಸಾಯಕ್ಕೆ ಒಳಪಟ್ಟ ಸೊಪ್ಪುಗಳು
2. ದೀರ್ಘಾವಧಿ ಸೊಪ್ಪುಗಳು
3. ವನ್ಯಜಾತಿ ಸೊಪ್ಪುಗಳು

ಕೆಲವು ಸೊಪ್ಪುಗಳು ಎತ್ತರಕ್ಕೆ ಬೆಳೆದರೆ, ಕೆಲವು ಬಳ್ಳಿಯಂತೆ ಹಬ್ಬುತ್ತವೆ, ಇನ್ನು ಕೆಲವು ನೆರಳಿನಲ್ಲಿ ಪೊದೆ - ಮರಗಳಂತೆ ಗದ್ದೆ ತೋಟದ ಅಂಚಿನಲ್ಲಿ ಬೆಳೆಯುವ ಸೊಪ್ಪುಗಳೂ ಇವೆ.

**ಕೀರೆಸೊಪ್ಪು :** ಇದರಲ್ಲಿ ಕಿಲಿಕೀರೆ, ಮುಳ್ಳುಕೀರೆ, ದಗಳಗೀರೆ ದೊಡ್ಡಕೀರೆ, ಚಿಕ್ಕಕೀರೆ ಮೊದಲಾದ ತಳಿಗಳಿವೆ. ಕೀರೆಸೊಪ್ಪು ಬೆಳೆಯುವವರು ತಮ್ಮ ತೋಟದ ಸ್ವಲ್ಪ ಜಾಗದಲ್ಲಿ ಮೊದಲಿಗೆ ಗುದ್ದಲಿಯಿಂದ ಅಗೆದು ಭೂಮಿ ಹದಮಾಡುತ್ತಾರೆ. ಇರುವ ಕಲ್ಲು-ಕಸಕಡ್ಡಿಗಳನ್ನು ತೆಗೆದು ಮಣ್ಣು ಸಮಮಾಡಿ ಅನಂತರ ಅದಕ್ಕೆ ಕೊಟ್ಟಿಗೆ ಗೊಬ್ಬರ ಹಾಕಿ ಮಣ್ಣಿನೊಂದಿಗೆ ಮಿಶ್ರಮಾಡುತ್ತಾರೆ. ಗೊಬ್ಬರ ಹಾಕಿದ ಭೂಮಿಯನ್ನು ಸಾಧಾರಣವಾಗಿ ಪಾತಿಗಳಾಗಿ ಮಾಡುವುದಿಲ್ಲ. ಹಾಗೆಯೇ ಮೇಲೆ ಬೀಜವನ್ನು ತೆಳ್ಳಗೆ ಉದುರಿಸಿ ಬೀಜದ ಮೇಲೆ ಮಣ್ಣನ್ನು ಮುಚ್ಚುತ್ತಾರೆ. ಇದನ್ನು ಬೇಸಗೆಯಲ್ಲಿ ಹೆಚ್ಚು ಬೆಳೆಯುತ್ತಾರೆ.

**ನೀರು ಹಾಕುವುದು :** ನೀರನ್ನು ಹಾಯಿಸುವುದಾಗಲೀ ಮೇಲಿಂದ ಉಯ್ಯುವುದಾಗಲೀ ಮಾಡದೆ ಕೈಯಿಂದ ಚಿಮುಕಿಸುತ್ತಾರೆ. ದಿನಾ ಬೆಳಿಗ್ಗೆ ಮತ್ತು ಸಂಜೆ ಎರಡು ಬಾರಿ ನೀರು ಹಾಕುತ್ತಾರೆ.

**ಸೊಪ್ಪು ಕೊಯ್ಲು :** ಬಿತ್ತಿದ ಮೂರು ದಿನಗಳಲ್ಲಿ ಮೊಳಕೆ ಕಾಣಿಸಿಕೊಳ್ಳುತ್ತದೆ. ತಿಂಗಳ ಹೊತ್ತಿಗೆ ಕೊಯ್ಲಿಗೆ ಸಿದ್ಧವಾಗುತ್ತದೆ. ಕೀರೆಯ ಸೊಪ್ಪು ಬೆಳೆದ ಮೇಲೆ ಕೈಯಿಂದ ಅಥವಾ ಕುಡುಗೋಲಿನಿಂದ ತೆಗೆಯುತ್ತಾರೆ. ಬೇರು ಸಮೇತ ಕೀಳುವುದಿಲ್ಲ. ಅದು ಮತ್ತೆ ಚಿಗುರೊಡೆದು ಬೆಳೆಯುತ್ತದೆ.

**ಮೆಂತ್ಯ ಸೊಪ್ಪು :** ಇದರಲ್ಲಿ ಎರಡು ವಿಧ 1. ಸೀಮೆಸೊಪ್ಪು, 2. ನಾಟಿ ಸೊಪ್ಪು.

**ಮಣ್ಣು ಮತ್ತು ಹವಾಗುಣ :** ಎಲ್ಲಾ ವಿಧದ ಮಣ್ಣುಗಳಲ್ಲಿ ಸುಲಭವಾಗಿ ಬೆಳೆಯಬಹುದಾದರೂ ಚೆನ್ನಾಗಿ ನೀರು ಇಂಗಬಲ್ಲ ಗೋಡುಮಣ್ಣಿನಲ್ಲಿ ಹುಲುಸಾಗಿ ಬೆಳೆಯುತ್ತದೆ. ತಂಪಾದ ಹವಾಗುಣಕ್ಕೆ ಹೊಂದಿಕೊಳ್ಳುತ್ತದೆ.

**ಬಿತ್ತನೆ :** ಭೂಮಿಯನ್ನು ಎರಡರಿಂದ ಮೂರು ಬಾರಿ ಚೆನ್ನಾಗಿ ಉಳಬೇಕು. ಒಂದು ಎಕರೆಗೆ ಸುಮಾರು 5 ಟನ್ ಕೊಟ್ಟಿಗೆ ಗೊಬ್ಬರ ಸೇರಿಸಬೇಕಾಗುತ್ತದೆ. ಅನುಕೂಲಕ್ಕೆ ತಕ್ಕಂತೆ 10 ಅಡಿ 6 ಅಡಿ ಅಳತೆಯನ್ನು

ಸಸಿ ಮಡಿಗಳನ್ನು ತಯಾರಿಸಿಕೊಳ್ಳಬೇಕು. ಎಕರೆಗೆ 16 ಕಿ.ಗ್ರಾಂ. ಬೀಜವನ್ನು ಚೆಲ್ಲಿ ಮಣ್ಣಿನೊಂದಿಗೆ ಮಿಶ್ರಮಾಡಬೇಕು.

**ನೀರು :** ಬೀಜ ಬಿತ್ತಿದ ಒಂದ ದಿನ ತೆಳುವಾಗಿ ಸಿಂಪರಣೆ ಮೂಲಕ ನೀರನ್ನು ಕೊಡಬೇಕು. ಇಲ್ಲದ್ದರೆ ಬೀಜ ಕೊಚ್ಚಿ ಹೋಗುತ್ತದೆ.

**ಕೊಯ್ಲು :** ಸಾಮಾನ್ಯವಾಗಿ ಮೆಂತ್ಯವನ್ನು ಬಿತ್ತಿದ ಮೂರು ವಾರಗಳ ಅನಂತರ ಕೊಯ್ಲು ಮಾಡಬಹುದು. ಮತ್ತೆ 15 - 20 ದಿನಗಳು ಬಿಟ್ಟು ಕೊಯ್ಲು ಮಾಡಬಹುದು. ಮತ್ತೆ 15-20 ದಿನಗಳು ಬಿಟ್ಟು ಕೊಯ್ಲು ಮಾಡಬಹುದು.

**ಚಕ್ಕೋತ ಸೊಪ್ಪು :** ಇದು ಪಾಲಕ್ ರೀತಿಯಂತಿದ್ದು, ಅದಕ್ಕಿಂತಲೂ ತುಸು ಮಂದ. ಚಳಿಗಾಲದ ಸಮಯದಲ್ಲಿ ಇದನ್ನು ಬೇಸಾಯಮಾಡುತ್ತಾರೆ.

**ಭೂಮಿ ಹದ ಮಾಡುವುದು :** ಇತರ ಸೊಪ್ಪುಗಳನ್ನು ಹಾಕಲು ಮಾಡುವ ಹದದಂತೆಯೇ ಇದಕ್ಕೂ ಭೂಮಿ ಉತ್ತು, ಕಲ್ಲು, ಕಸಗಳನ್ನು ಆಯ್ದು ಹದಮಾಡಬೇಕು.

**ಬಿತ್ತನೆ :** ಎಕರೆ 2.5-3 ಕಿ.ಗ್ರಾಂ. ಬಿತ್ತನೆ ಬೀಜ ಬೇಕು. ಅರ್ಧ ಅಂಗುಲಕ್ಕಿಂತ ಆಳವಾಗಿ ಬಿತ್ತಬಾರದು. ಒಂದು ಸಾಲಿನಿಂದ ಮತ್ತೊಂದು ಸಾಲಿಗೆ 2 ರಿಂದ 3 ಅಡಿ ಅಂತರವಿರಬೇಕು.

**ಕೊಯ್ಲು ಮತ್ತು ಇಳುವರಿ :** ಒಂದು ತಿಂಗಳಿನಲ್ಲಿ ಸೊಪ್ಪನ್ನು ಕೊಯ್ಲು ಮಾಡುತ್ತಾರೆ. ಚೆನ್ನಾಗಿ ಬೆಳೆದರೆ ಒಂದು ಸಸಿಯಿಂದ 4-5 ಕಿ.ಗ್ರಾಂ. ಸೊಪ್ಪಿನ ಇಳುವರಿ ಸಿಗುತ್ತದೆ.

**ಪಾಲಕ್** : ಇದರಲ್ಲಿ ಅನೇಕ ತಳಿಗಳಿವೆ. ನಾಟಿ ತಳಿಯ ಬಳಕೆ ಕಡಿಮೆ. ಎಲೆ ಅಂಡಾಕಾರವಾಗಿ, ಅಗಲವಾಗಿದ್ದು ಅಲ್ಲಲ್ಲಿ ಸೀಳಿದಂತೆ ಆಕರ್ಷಕವಾಗಿರುತ್ತದೆ.

**ಮಣ್ಣು :** ಭೂಮಿ ಫಲವತ್ತಾಗಿ ನೀರು ಬಸಿದು ಹೋಗುವಂತಹ ಹುಡಿ ಮಣ್ಣು ಬಹಳ ಯುಕ್ತ. ರೇವೆ ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ.

**ಹವಾಗುಣ :** ಹಿಮ ಬೀಳುವ ಹಾಗೂ ಚಳಿಯಿಂದ ಕೂಡಿದ ನೆರಳಿರದ ವಾತಾವರಣದಲ್ಲಿ ಉತ್ತಮವಾಗಿ ಬೆಳೆಯುತ್ತದೆ.

**ಬಿತ್ತನೆ :**ಭೂಮಿಯನ್ನ 4-3 ಬಾರಿ ಚೆನ್ನಾಗಿ ಉತ್ತು ಹದ ಮಾಡಬೇಕು. ಎಕರೆಗೆ 10 ಟನ್ ಕೊಟ್ಟಿಗೆ ಗೊಬ್ಬರ ಬೇಕು. ನೆಡುವ ಮೊದಲು ಮಡಿಗಳನ್ನು ಮಾಡಿಕೊಂಡಿರಬೇಕು. ಮೈದಾನ ಪ್ರದೇಶಗಳಲ್ಲಾದರೆ ಸೆಪ್ಟೆಂಬರ್-ನವೆಂಬರ್ ತಿಂಗಳು ಬೆಟ್ಟದ ಪ್ರದೇಶಗಳಲ್ಲಾದರೆ ಫೆಬ್ರವರಿ-ಏಪ್ರಿಲ್ ತಿಂಗಳುಗಳಲ್ಲಿ ಬಿತ್ತಬೇಕು. ಬೀಜವನ್ನು ಕೈಯಿಂದ ಚೆಲ್ಲಿ ಅಥವಾ ಕೂರಿಗೆಯಿಂದ ಬಿತ್ತಬಹುದು. ತಿಪ್ಪೆಗೊಬ್ಬರ ಎರಡು ಬಾರಿ ಕೊಡಬೇಕು.

ಇದಕ್ಕೆ ಹೆಚ್ಚು ನೀರು ಬೇಕಾಗುವುದರಿಂದ ಸದಾ ತೇವವಿರುವಂತೆ ನೋಡಿಕೊಳ್ಳಬೇಕು. ಬಿತ್ತಿದ 6 ರಿಂದ 8 ವಾರಗಳಲ್ಲಿ ಕೊಯ್ಲು ಮಾಡಬಹುದು.

**ಹಕ್ಕರಿಕೆಸೊಪ್ಪು :** ನೀರು ಇಂಗಿಹೋಗುವ ಗೋಡು ಭೂಮಿ ಈ ಬೆಳೆಗೆ ಉತ್ತಮ.

ಶುಷ್ಕಹವೆ, ಬಯಸುವ ಇದು ಹೆಚ್ಚು ಉಷ್ಣಾಂಶವಿರುವ ಪ್ರದೇಶಗಳಲ್ಲಿ ಚೆನ್ನಾಗಿ ಹೂ ಬಿಡುತ್ತದೆ. ಆದರೂ ಮಧ್ಯೆ ನೆರಳು ಒದಗಿಸಬೇಕು. ಭೂಮಿಯನ್ನು ಉತ್ತು ಹೆಂಟೆ ಒಡೆದು ಎಕರೆಗೆ 10 ಟನ್ ಗೊಬ್ಬರ ಸೇರಿಸಬೇಕು. 3 ಅಂಗುಲದ ಸಾಲುಗಳಲ್ಲಿ ಬಿತ್ತಿ ನೀರು ಹಾಯಿಸಿ, 5-6 ವಾರಗಳ ತರುವಾಯ ಸಸಿಯನ್ನು ನಾಟಿ ಮಾಡಬಹುದು. ನಾಟಿಮಾಡಲು 1 ಅಡಿ ಅಂತರವಿರಬೇಕು. ಆಗಾಗ್ಗೆ ನೀರು ಒದಗಿಸಬೇಕು.

**ಕೊಯ್ಲು :** ಗೆಡ್ಡೆ ದಪ್ಪವಾದಾಗ ಕೊಯ್ಲು ಮಾಡಬೇಕು. ಧಾರವಾಡದ ಕಡೆ ಇದು ಹತರಿಕೆ, ಇವರೆಡೆ ಸಲಾದಿ, ಸವಾಲ್ ಸೊಪ್ಪೆಂದು ಹೆಸರುವಾಸಿ.

**ಚಿಕ್ಕಿಸೊಪ್ಪು :** ಇದರ ಬೇಸಾಯ ಪಾಲಾಕ ಸೊಪ್ಪಿನಂತೆಯೇ. ಮೊದಲು ಭೂಮಿ ಹದಮಾಡಿ ಬೀಜ ಬಿತ್ತಬೇಕು. ಮೊಳಕೆಯೊಡೆದಾಗ 3-5 ಅಡಿ ಅಂತರ ಸಾಲುಗಳಲ್ಲಿ ಇದನ್ನು ನಾಟಿ ಮಾಡಬೇಕು. ವಾರಕ್ಕೊಂದಾವರ್ತಿ ಬೇಸಗೆಯಲ್ಲಿ ನೀರನ್ನು ಬಿಡಬೇಕು. ಮಧ್ಯೆ ಮಧ್ಯೆ ಕಳೆ ತೆಗೆಯಬೇಕು. 2 ರಿಂದ 4 ವಾರದ ಅನಂತರ ಸೊಪ್ಪು ಪಡೆಯಬಹುದು. ತಂಪು ಹವಾಗುಣ ಇದಕ್ಕೆ ಯುಕ್ತ.

**ಚಕ್ರಮುನಿ ಸೊಪ್ಪು :** ಕರ್ನಾಟಕ, ಕೇರಳದಲ್ಲಿ ಹೇರಳವಾಗಿ ಬೆಳೆಯುತ್ತಾರೆ. ಅಪಾರ ಪೋಷಕಾಂಶ ಹೊಂದಿರುವ ಇದನ್ನು ಬ್ರಿಟಿಷರು "ಮ್ಟುವಲ್‌ಮಿನ್ ಪ್ಲಾಂಟ್' ಎಂದು ಕರೆದಿದ್ದಾರೆ. ಎಲ್ಲಾ ರೀತಿಯ ಮಣ್ಣಿನಲ್ಲಿ ಬೆಳೆಯುತ್ತದೆ. ನೀರು ಬಸಿಯುವ ಕೆಂಪು ಗೋಡು ಮಣ್ಣು ಉತ್ತಮ. ಹೆಚ್ಚು ಮಳೆ ಬರುವ, ಸ್ವಲ್ಪ ನೆರಳು ಇರುವ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಭೂಮಿಯನ್ನು ಹದಮಾಡಿ, ಮಳೆಗಾಲದ ಪ್ರಾರಂಭದಲ್ಲಿ 30 ಘನ ಸೆಂ.ಮೀ. ಗಾತ್ರದ ಗುಂಡಿಗಳನ್ನು 1.5 ಮೀ. ಅಂತರದಲ್ಲಿ ತೆಗೆಯಬೇಕು. ಅದಕ್ಕೆ ತಿಪ್ಪೆ ಗೊಬ್ಬರ ಮತ್ತು ಮೇಲ್ಮಣ್ಣಿನ ಮಿಶ್ರಣ ಹಾಕಿ ನೀರು ಹಾಯಿಸಬೇಕು. ಬೇರು ಬಿಟ್ಟಂತಹ ಸಸಿಗಳನ್ನು ಗುಂಡಿಯೊಳಗೆ ನೆಟ್ಟು, ಊರುಗೋಲನ್ನು ಕಟ್ಟಬೇಕು. ಇತರ ಬೆಳೆಗಳಂತೆ ಗೊಬ್ಬರ ಹಾಕಬೇಕು. ಮಳೆ ಇಲ್ಲದಾಗ ವಾರಕ್ಕೊಮ್ಮೆ ನೀರು ಬಿಡಬೇಕು. ನೆಟ್ಟ 3 ರಿಂದ 4 ತಿಂಗಳಲ್ಲಿ ಸೊಪ್ಪು ಕೊಯ್ಲಿಗೆ ಬರುತ್ತದೆ.

**ಬಸಳೆ :** ಭಾರತ ಮತ್ತು ಚೀನಾ ಬಸಳೆಯ ಮೂಲ ಸ್ಥಳಗಳು. ಇಂಗ್ಲಿಷ್‌ನಲ್ಲಿ ಇಂಡಿಯನ್ ಸ್ಪಿನಾಚ್ ಎಂದು ಕರೆಯುತ್ತಾರೆ.

**ಮಣ್ಣು ಮತ್ತು ಹವಾಗುಣ :** ಹೆಚ್ಚು ಫಲವತ್ತಾಗಿರುವ, ನೀರು ಬಸಿದು ಹೋಗುವಂತಹ ಮಣ್ಣು ಒಳ್ಳೆಯದು, ಮರಳು ಮಿಶ್ರಿತ ಗೋಡು ಅಥವಾ ಕೆಂಪು ಮಣ್ಣುಗಳಲ್ಲಿ ಉತ್ತಮ ಬೆಳವಣಿಗೆಯಾಗುತ್ತದೆ. ಉಷ್ಣವಲಯದಲ್ಲಿ ಚೆನ್ನಾಗಿ ಬೆಳೆಯುತ್ತದೆ. ದಕ್ಷಿಣ ಭಾರತದಲ್ಲಿ ವರ್ಷ ಪೂರ್ತಿ ಫಸಲು ಕೊಡುತ್ತದೆ. ಇದರಲ್ಲಿ ನಿದಿಷ್ಟ ತಳಿಗಳಿಲ್ಲ, ಇದನ್ನು ಕೆಂಪು ಬಸಳೆ, ಬಿಳಿಬಸಳೆ ಎಂದು ಕರೆಯುತ್ತಾರೆ.

**ಬಿತ್ತನೆ :** ಕಾಂಡದ ತುಂಡುಗಳಿಂದ ಹೆಚ್ಚಾಗಿ ಬೆಳೆಯುತ್ತಾರೆ. ಬೀಜಗಳಿಂದ ಬೆಳೆಯಬಹುದು. ಕಾಂಡದ ತುಂಡುಗಳಾದರೆ 15-20ಸೆಂ.ಮೀ. ಉದ್ದದ ಕಾಂಡಗಳನ್ನು ಬಳಸುತ್ತಾರೆ. 1-5 ಮೀ ಸಾಲುಗಳಲ್ಲಿ 60ಸೆಂ.ಮೀ. ಒಂದರಂತೆ 45ಘ.ಸೆಂ.ಮೀ. ಗಾತ್ರದ ತುಂಡಗಳನ್ನು ತೆಗೆದು ತಿಪ್ಪೆಗೊಬ್ಬರ ಮತ್ತು ಮೇಲ್ಮಣ್ಣಿನಿಂದ ತುಂಬಿ ನೀರನ್ನು ಹಾಯಿಸಬೇಕು. 3ರಿಂದ4 ಅಡಿ ಉದ್ದದ ಆಧಾರ ಕೋಲು ಸಿಕ್ಕಿಸಿ, ಕಾಂಡದ ತುಂಡುಗಳನ್ನು

ನೆಡಬೇಕು. ಬಳ್ಳಿಗಳನ್ನು ಬೆಳೆಸುವುದಿದ್ದರೆ ತಂತಿಯ ಜಾಲರಿ ಚಪ್ಪರವನ್ನು ಹಾಕಬೇಕು. ಮೊದಲು ನೆರಳಿನಲ್ಲಿ ಬೆಳೆಸಿದರೆ ಒಳ್ಳೆಯದು. ತಿಪ್ಪೆಗೊಬ್ಬರವನ್ನು ಎರಡು ಕಂತುಗಳಲ್ಲಿ ಹಾಕಬೇಕು.

ಬಸಳೆಗೆ ಹೆಚ್ಚು ನೀರು ಆವಶ್ಯಕ, ಬೇಸಗೆಯಲ್ಲಿ ವಾರಕ್ಕೆ ಎರಡು ಬಾರಿ ನೀರು ಕೊಡಬೇಕು. ಇದರ ಬೇರು ಆಳವಾಗಿ ಇಳಿಯುವುದರಿಂದ ಗುಂಡಿಗಳನ್ನು 3-4 ವಾರಗಳಿಗೊಮ್ಮೆ ಸಡಿಲಿಸಬೇಕು. ಕಾಂಡದ ತುಂಡುಗಳನ್ನು ನಾಟಿ ಮಾಡಿದ ಮೇಲೆ, ದಕ್ಷಿಣ ಭಾರತದಲ್ಲಿ 45 ದಿನಗಳಲ್ಲಿ ಕೊಯ್ಲು ಮಾಡಬಹುದು. ಬೆಂಗಳೂರು ಕಡೆ ಇದನ್ನು ಬಚ್ಚಲು ಸೊಪ್ಪು ಎನ್ನುತ್ತಾರೆ.

**ಕೆಸುವಿನ ದಂಟು :** ಸಾಮಾನ್ಯವಾಗಿ ತೇವಾಂಶವಿರುವ ನದೀದಂಡೆ, ಕೊಳ್ಳ, ಕೆರೆ ಸುತ್ತಮುತ್ತ ಬೆಳೆಯುತ್ತದೆ. ಇದನ್ನು ಬೇಸಾಯ ಮಾಡಲು ಫಲವತ್ತಾದ ಮಣ್ಣು ಇರಬೇಕು. ನೀರು ಬಸಿದು ಹೋಗುವ ಮರಳು ಮಿಶ್ರಿತ ಗೋಡು ಮಣ್ಣು ಅತ್ಯುತ್ತಮ, 21°ಸೆಂ.-27°ಸೆಂ. ಉಷ್ಣತೆ ಬೇಕು. ಸಸ್ಯಾಭಿವೃದ್ಧಿಗೆ ಹೆಚ್ಚಾಗಿ ಗೆಡ್ಡೆ ಅಥವಾ ಮರಿಗೆಡ್ಡೆಗಳನ್ನು ಬೇಸಾಯಕ್ಕೆ ಬಳಸುತ್ತಾರೆ. ಭೂಮಿಯನ್ನು ಚೆನ್ನಾಗಿ ಉತ್ತು ಹದ ಮಾಡಿ ಎಕರೆಗೆ 25 ಟನ್ ಕೊಟ್ಟಿಗೆ ಗೊಬ್ಬರ ಸೇರಿಸಬೇಕು. ಸೆಪ್ಟೆಂಬರ್-ಅಕ್ಟೋಬರ್ ತಿಂಗಳು ಉಪಯುಕ್ತ. ಬೇಸಗೆಯಲ್ಲಿ ನಾಲ್ಕು ದಿನಗಳಿಗೊಮ್ಮೆ ಹಾಯಿಸಬೇಕು. ಇತರೆ ದಿನಗಳಲ್ಲಿ ಹತ್ತು ದಿನಗಳಿಗೊಮ್ಮೆ ನೀರು ಹಾಯಿಸುವುದು ಅಗತ್ಯ. ಆರಂಭದಲ್ಲಿ ಒಂದೆರಡು ಸಲ ಸಾಲುಗಳ ನಡುವೆ ಮಣ್ಣನ್ನು ಸಡಿಲಿಸಬೇಕು. ಎಲ್ಲ ಎಲೆಗಳು ಹಳದಿಯಾಗಿ ಒಣಗಲು ಪ್ರಾರಂಭಿಸಿದಾಗ ಕೊಯ್ಲು ಮಾಡುವ ಸಮಯವಾಗಿರುತ್ತದೆ.

**ಪುಂಡಿ :** ಕರ್ನಾಟಕದಲ್ಲಿ, ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಾಗುವಳಿ ಮಾಡುತ್ತಾರೆ. ಇದಕ್ಕೆ ಗೋಗು, ಪಿಂಡಿಸೊಪ್ಪು, ಪುಂಡಿ, ಪುಂಡ್ರಿಕೆ ಎಂಬ ಹೆಸರುಗಳಿವೆ.

ಇದನ್ನು ಸಾಮಾನ್ಯವಾಗಿ ರಾಗಿ, ಜೋಳ, ಸಜ್ಜೆಗಳೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಯುತ್ತಾರೆ. ಇಲ್ಲವೇ ಹತ್ತಿ ಹಾಗೂ ಇತರ ಹೊಲದ ದಂಡೆಯಲ್ಲಿ ಬೆಳೆಯುವರು. ಇದು ಮುಂಗಾರಿನ ಬೆಳೆ. ಮೇ - ಜೂನ್ ತಿಂಗಳಲ್ಲಿಬಿತ್ತನೆ ಮಾಡುತ್ತಾರೆ.

110 ರಿಂದ 120 ದಿನಗಳಲ್ಲಿ ಸೊಪ್ಪು ಬರುತ್ತದೆ. ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿ ಕಟಾವು ಮಾಡುತ್ತಾರೆ. ಹಗಲು ಹೆಚ್ಚಿರುವ ಕಾಲದಲ್ಲಿ ಚೆನ್ನಾಗಿ ಬೆಳೆಯುತ್ತದೆ.

**ಕೊತ್ತಂಬರಿ :** ಕರ್ನಾಟಕದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇದಕ್ಕೆ ಧನಿಯಾ, ಕೊತ್ತಮೀರಿ ಕೊತಿಂಬ್ರಿ, ಹವೇಜ ಎಂದೂ ಕರೆಯುವರು. ಎಲ್ಲಾ ಕಾಲದಲ್ಲೂ ಇದನ್ನು ಬೆಳೆಯಬಹುದು. ಮಳೆಯ ಅನಂತರ ಭೂಮಿಯನ್ನು 3-4 ಬಾರಿ ಉತ್ತು 10-15 ಟನ್ ಕೊಳೆತ ಕೊಟ್ಟಿಗೆ ಗೊಬ್ಬರ ಹಾಕಬೇಕು.

**ಬಿತ್ತನೆ :** ಎಕರೆಗೆ ಸುಮಾರು 6-7 ಕಿ.ಗ್ರಾಂ. ಬಿತ್ತನೆ ಬೀಜ ಬೇಕಾಗುತ್ತದೆ. ಸೀಳಿದ ಬೀಜ ಬಿತ್ತರೆ ಬೇಗ ಮೊಳಕೆ ಒಡೆಯುತ್ತವೆ. ಬೀಜ ಬಿತ್ತುವುದಕ್ಕೆ ಮುಂಚೆ 12-14 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ಪುನಃ 12-14 ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ ಬಳಸಿದರೆ ಮಳಕೆಯೊಡೆಯುವ ಪ್ರಮಾಣ ಹೆಚ್ಚುತ್ತದೆ.

ಬೀಜವನ್ನು ಮಣ್ಣಿನೊಂದಿಗೆ ಮಿಶ್ರಮಾಡಿ (ಬಿತ್ತುತ್ತಾರೆ) ಚೆಲ್ಲುತ್ತಾರೆ. ಬೀಜ ಬಿತ್ತಿದ 9 ದಿನಗಳ ಅನಂತರ ಮೊಳಕೆಯೊಡೆದು 20-25 ದಿನಗಳಲ್ಲಿಸೊಪ್ಪನ್ನು ಕೊಯ್ಯಬಹುದು. ಕಪ್ಪು ಭೂಮಿಗಳಲ್ಲಿ ಕೊತ್ತಂಬರಿಗೆ ಹೆಚ್ಚು ನೀರು ಬೇಕಾಗಿಲ್ಲ.

**ಪುದೀನ :** ನೀರಿನ ಅಸಿಯಿರುವ ಕಡೆ ಪುದೀನ ಬೆಳೆಯುತ್ತದೆ. ಮಣ್ಣನ್ನು ಉತ್ತು ಹದಮಾಡಬೇಕು. ಎಲ್ಲಾ ವಿಧದ ಮಣ್ಣಿನಲ್ಲಿ ಬೆಳೆಯಬಹುದಾದರೂ ಫಲವತ್ತಾದ ಮರಲು ಗೋಡು ಮಣ್ಣು ಯುಕ್ತ. ನೀರು ಸುಲಭವಾಗಿ ಇಂಗುವಂತಿರಬೇಕು.

**ಬಿತ್ತನೆ :** 1-2 ಗಿಣ್ಣುಗಳಿರುವ ಕಾಂಡದ ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡಲಾಗುತ್ತದೆ. ಸಾಮಾನ್ಯವಾಗಿ ಅಕ್ಟೋಬರ್, ಮಾರ್ಚ ತಿಂಗಳಿನಲ್ಲಿ ನಾಟಿ ಮಾಡುತ್ತಾರೆ. ಪಾತಿಗಳಲ್ಲಿ 22 ಸೆಂ.ಮೀ. ಅಂತರದ ಸಾಲುಗಳಲ್ಲಿ 15 ಸೆಂ.ಮೀ. ಅಂತರದಲ್ಲಿ 3 ಸೆಂ.ಮೀ. ಆಳಕ್ಕೆ ಬಾಗಿದಂತೆ ನಾಟಿ ಮಾಡಬೇಕು. ಸಸಿಗಳಿಗೆ ಬೆಳೆಗಾಲದಲ್ಲಿ ವಾರಕ್ಕೊಮ್ಮೆ ಬೇಸಗೆಯಲ್ಲಿ ವಾರಕ್ಕೆ ಮೂರರಿಂದ ನಾಲ್ಕು ಬಾರಿ ನೀರು ಹಾಯಿಸಬೇಕು. ವರ್ಷ ಪೂರ್ತಿ ಕೃಷಿ ಮಾಡಬಹುದು. ಒಮ್ಮೆ ನಾಟಿ ಮಾಡಿದರೆ 2-3 ವರ್ಷಗಳವರೆಗೆ ಎಲೆಗಳು ಸಿಗುತ್ತವೆ.

**ಕರಿಬೇವು :** ಇದನ್ನು ಕರ್ನಾಟಕವೂ ಸೇರಿದಂತೆ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲಿ ಬೆಳೆಯುತ್ತಾರೆ. ಎಲ್ಲ ಮಣ್ಣುಗಳಲ್ಲಿ ಬೆಳೆಯಬಹುದು. ಆದರೆ ನೀರು ನಿಲ್ಲದೆ ಬಸಿದು ಹೋಗುವ ಕೆಂಪು ಮಣ್ಣು ಒಳ್ಳೆಯದು. ಒಣಹವೆ ಉತ್ತಮವಾಗಿದೆ. ಮುಂಗಾರಿನಲ್ಲಿ ನಾಟಿ ಮಾಡುವುದು ಯುಕ್ತ. ಕಡು ಕಪ್ಪಾದ ಎಲೆಗಳುಳ್ಳ ಹಾಗೂ ಗಾಢ ಹಸುರಿನಿಂದ ಕೂಡಿದ ಎಲೆಗಳ ತಳಿಗಳಿವೆ.

**ಅಭಿವೃದ್ಧಿ :** ಕರಿಬೇವನ್ನು ಬೀಜದಿಂದಲೇ ಅಭಿವೃದ್ಧಿ ಪಡಿಸುತ್ತಾರೆ. ಹಣ್ಣುಗಳನ್ನು ಕಿತ್ತು ಬೀಜ ಪಡೆದು, ನೀರಿನಲ್ಲಿ ತೊಳೆದು ನೆರಳಿನಲ್ಲಿ ಒಣಗಿಸ ಬೇಕು. 12 ರಿಂದ 15 ದಿನಗಳಲ್ಲಿ ಬೀಜ ಮೊಳಕೆಯೊಡೆಯುತ್ತದೆ. ಸಸಿಗಳನ್ನು ನಾಟಿ ಮಾಡಲು 1 ಘನ. ಮೀ. ಗಾತ್ರದ ಗುಂಡಿಗಳನ್ನು ತೋಡಿ ಒಂದು ತಿಂಗಳ ಕಾಲ ಬಿಸಿಲಿಗೆ ಬಿಟ್ಟು ಮೇಲ್ಮಣ್ಣು ಮತ್ತು ತಿಪ್ಪೆ ಗೊಬ್ಬರವನ್ನು ಸಮ ಪ್ರಮಾಣದಲ್ಲಿ ತುಂಬಿ ನೀರನ್ನು ಹಾಯಿಸಬೇಕು. ಸಾಲಿನಿಂದ ಸಾಲಿಗೆ 5-6 ಮೀ.ನಂತೆ ಸಸಿಗಳನ್ನು ನೆಡಬೇಕು. ಮೊದಲಿಗೆ ಸಸಿಗಳು ನೆಟ್ಟಗೆ ನಿಲ್ಲಲ್ಲು ಆಧಾರ ಕಟ್ಟಬೆಕು.

**ಗೊಬ್ಬರ :** ಗೊಬ್ಬರ ಕೊಟ್ಟಷ್ಟು ಇಳುವರಿ ಜಾಸ್ತಿಯಾಗುತ್ತದೆ. ಮಳೆಗಾಲ ಪ್ರಾರಂಭವಾಗುವಾಗ ಮುನ್ನ ಗೊಬ್ಬರ ಕೊಡಬೇಕು.

ಆರಂಭದಲ್ಲಿ ಸ್ವಲ್ಪ ನೀರನ್ನು ಕೊಡುತ್ತಾ ಗಿಡ ಬೆಳೆದಂತೆ ಹೆಚ್ಚು ಹೆಚ್ಚು ನೀರನ್ನು ನೀಡಬೇಕು. ಬೇಸಗೆಯಲ್ಲಿ ವಾರಕ್ಕೊಮ್ಮೆ ಮಳೆಗಾಲದಲ್ಲಿ 15 ದಿನಗಳಿಗೊಮ್ಮೆ ನೀರು ಹಾಯಿಸಬೇಕು.

**ನುಗ್ಗೆಸೊಪ್ಪು :** ಇದು ಮರದಂತೆ ಬೆಳೆಯುವಂಥದ್ದು. ಇದನ್ನು ಎಲ್ಲಾ ವಿಧದ ಮಣ್ಣುಗಳಲ್ಲಿ ಬೆಳೆಸಬಹುದು. ಮರಳುಗೋಡು ಮಣ್ಣು ಅತ್ಯುತ್ತಮ. ನುಗ್ಗೆ ಉಷ್ಣವಲಯದ ಸಸ್ಯ. ಒಣ ಹಾಗೂ ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿಯೂ ಚೆನ್ನಾಗಿ ಬೆಳೆಯುತ್ತದೆ. ನಾಟಿ ಮಾಡಲು ಜೂನ್, ಜುಲೈ ತಿಂಗಳು ಯುಕ್ತ.

ದಕ್ಷಿಣಭಾರತದಲ್ಲಿ ಶ್ರೀಲಂಕಾದ, 'ಜಾಫ್ನಾ' ತಳಿ ಹೆಚ್ಚು ಬೇಸಾಯದಲ್ಲಿದೆ.

ತಮಿಳಿನಲ್ಲಿ ಇದನ್ನು 'ಯಾಳ್‌ಪಾಣಂ ಮುರುಂಗಾಯ' ಎನ್ನುತ್ತಾರೆ.

**ಸಸ್ಯಾಭಿವೃದ್ಧಿ :** ಬೀಜದಿಂದ ಸಸ್ಯಾಭಿವೃಧಿ ಮಾಡುವುದಕ್ಕಿಂತ, ರೆಂಬೆ ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡಿದರೆ ಕಡಿಮೆ ಅವಧಿಯಲ್ಲಿ ಫಲಕೊಡುತ್ತದೆ. 15-17.5 ಸೆಂ.ಮೀ. ವ್ಯಾಸ, 90-180 ಸೆ.ಮೀ. ಉದ್ದದ ತುಂಡುಗಳನ್ನು ಬಳಸಬೇಕು.

ಎರಡು ಅಡಿ ಗುಂಡಿ ಮಾಡಿ ತಿಪ್ಪೆ ಗೊಬ್ಬರ ಮತ್ತು ಮಣ್ಣುಗಳನ್ನು ತುಂಬಿ, ಕಾಂಡವನ್ನು ನೆಡಬೇಕು.

ಮೊದ ಮೊದಲು ಗಿಡಗಳಿಗೆ ನೀರು ದಿನನಿತ್ಯವಿರಬೇಕು. ಅನಂತರ ವಾರಕ್ಕೊಮ್ಮೆ ಕೊಡಬಹುದು.

ಎರಡು ತಿಂಗಳಿನಲ್ಲಿಯೇ ಸೊಪ್ಪನ್ನು ಉಪಯೋಗಿಸಿಕೊಳ್ಳಬಹುದು.

**ಅಗಸೆ ಸೊಪ್ಪು :** ಇದು ಮರದಂತೆ ಬೆಳೆಯುತ್ತದೆ. ಇದನ್ನು 'ಚೊಗಟೆ' ಎಂದೂ ಧಾರವಾಡದ ಕಡೆ 'ಅಗಸೆ' ಎಂದೂ ಕರೆಯುತ್ತಾರೆ. ಮರಳು ಮಿಶ್ರಿತ ಗೋಡುಮಣ್ಣು ಒಳ್ಳೆಯದು. ಬಿಳಿ ಹಾಗೂ ಕೆಂಪು ಹೂ ಬಿಡುವ ಎರಡು ವಿಧಗಳಿವೆ.

**ಬಿತ್ತನೆ :** ಅಗಸೆಯನ್ನು ಬೀಜ ಇಲ್ಲವೆ ಕಾಂಡ ಉಪಯೋಗಿಸಿ ಬೆಳೆಯಬಹುದು. ನಾಟಿ ಮಾಡುವ ಭೂಮಿಯನ್ನು ಚೆನ್ನಾಗಿ 25 ಮೀ. ಅಂತರದಲ್ಲಿ 60 ಘನ ಸೆಂ.ಮೀ. ಆಳದ ಗುಂಡಿಗಳನ್ನು ತೆಗೆದು ಜೂನ್-ಜುಲೈ ತಿಂಗಳಿನಲ್ಲಿ ನಾಟಿ ಮಾಡಬೇಕು. ಇದಕ್ಕೆ ಮಣ್ಣು ಮತ್ತು ತಿಪ್ಪೆ ಗೊಬ್ಬರ ಹೆಚ್ಚಾಗಿ ಕೊಡಬೇಕು.

ಸಸಿಯಾಗಿದ್ದಾಗ ವಾರಕ್ಕೆರಡು ಬಾರಿಯಂತೆ ನೀರು ಹಾಯಿಸಬೇಕು. ಬೆಳೆದಂತೆ ನೀರಿನ ಅಗತ್ಯ ಕಡಿಮೆ. ಯಾವಾಗ ಬೇಕಾದರೂ ಸೊಪ್ಪನ್ನು ಕೊಯ್ಲು ಮಾಡಬಹುದು.

**ಸಬ್ಬಸ್ಸಿಗೆ :** ಕೊತ್ತಂಬರಿ ಜಾತಿಗೆ ಸೇರಿದ ಸಸ್ಯ. ವಿಶಿಷ್ಟ ವಾಸನೆ ಹೊಂದಿದೆ. ಇದನ್ನು ಸಬ್ಬಗೆ, ಸಬ್ಬಕ್ಕಿ, ಸಬ್ಬಾಷಿ ಎಂದು ಕರೆಯುವರು. ಮರಳು ಮಿಶ್ರಿತ ಮಣ್ಣು ಯುಕ್ತ. ಎಲ್ಲ ಕಾಲದಲ್ಲೂ ಬೆಳೆಯಬಹುದು. ಅತಿ ಶೀತವಾದರೆ ಕಷ್ಟ. ಚಳಿಗಾಲದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಭೂಮಿಯನ್ನು ಚೆನ್ನಾಗಿ ಉತ್ತು, ಸಮ ಮಾಡಿ, ಗೊಬ್ಬರ ಮತ್ತು ಮಣ್ಣನ್ನು ಮಿಶ್ರ ಮಾಡುತ್ತಾರೆ. ಕೆಲವರು ಬೀಜವನ್ನು ಕೂರಿಗೆಯಲ್ಲಿ ಬಿತ್ತುತ್ತಾರೆ. ಕೊತ್ತಂಬರಿ ಸೊಪ್ಪನ್ನು ಬೆಳೆದಂತೆಯೇ ಬೆಳೆಯಬಹುದು.

ನಾಟಿಯ ಮೊದಲು, ನಾಟಿಯ ಅನಂತರ ಎರಡು ಅಥವಾ ಮೂರು ತಿಂಗಳಿಗೆ ಕೊಟ್ಟಿಗೆಗೊಬ್ಬರವನ್ನು ಕೊಡಬಹುದು ಮೊದಲು ದಿನ ಬಿಟ್ಟು ದಿನ ನೀರು ಹಾಯಿಸಬೇಕು. ಅನಂತರ ವಾರಕ್ಕೆರಡಾವರ್ತಿ ನೀರು ಒದಗಿಸಿದರೆ ಸಾಕು. ನಾಟಿ ಮಾಡಿದ ಮೇಲೆ 4 ರಿಂದ 5 ವಾರದೊಳಗೆ ಸೊಪ್ಪು ಕೊಯ್ಲಿಗೆ ಬರುತ್ತದೆ. ಹಾಗೆಯೇ ಬಿಟ್ಟರೆ ಹೂವು ಕಾಯಿಯಾಗಿ ಬೀಜ ಪಡೆಯಬಹುದು.

**ದೊಡ್ಡಗೋನಿ ಸೊಪ್ಪು :** ಈ ಸೊಪ್ಪು ಸ್ವಲ್ಪ ಹುಳಿಯಾಗಿರುತ್ತದೆ. ಎಲ್ಲ ರೀತಿಯ ಮಣ್ಣುಗಳಲ್ಲಿ ಬೆಳೆಯುತ್ತದೆ. ಇದನ್ನು ಕುಂಡಗಳಲ್ಲಿಯೂ ಬೆಳೆಸಬಹುದು. ಜನವರಿ ಫೆಬ್ರವರಿ ತಿಂಗಳಿನಲ್ಲಿ ಬೆಳೆಯುವುದು ಉತ್ತಮ.

ಭೂಮಿಯನ್ನು ಉತ್ತಿದ ಅನಂತರ ಹೆಕ್ಟೇರಿಗೆ 200 ಕಿ.ಗ್ರಾಂ.ನಷ್ಟು ಕೊಟ್ಟಿಗೆ ಗೊಬ್ಬರ ಸೇರಿಸಿ, 1-1½ ಕಿ. ಗ್ರಾಂ. ಬಿತ್ತನೆ ಬೀಜವನ್ನು ಹಾಕಿ ತೆಳುವಾಗಿ ಚೆಲ್ಲಬೇಕು. ವಾರಕ್ಕೊಮ್ಮೆ ನೀರನ್ನು ಕೊಡಬೇಕು.

**ಕೊಯ್ಲು :** ಮೊದಲ ಸಲ ಸೊಪ್ಪು ಕೊಯ್ಲು ಮಾಡಲು 35 ದಿನಗಳು ಬೇಕು. ಅನಂತರ 15 ದಿನಗಳಿಗೊಮ್ಮೆ ಚಿಗುರಿದ ಸೊಪ್ಪನ್ನು ಕೊಯ್ಲು ಮಾಡಬಹುದು.

**ಹೊನಗೊನೆ ಸೊಪ್ಪು :** ಭಾರತದಲ್ಲಿ ಕಳೆಯಂತೆ ಬೆಳೆಯುವ ಸೊಪ್ಪು. ನೀರು ನಿಂತ ಹೊಂಡ ಮತ್ತು ಕೆರೆಗಳ ಅಂಚಿನಲ್ಲಿ, ತೇವಾಂಶ ಇರುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇತ್ತೀಚೆಗೆ ಬೇಸಾಯ ಮಾಡಿ ಬೆಳೆಯುತ್ತಿದ್ದಾರೆ.

**ಅಣ್ಣೆಸೊಪ್ಪು :** ಹೊಲ, ಗದ್ದೆ, ನದಿ ದಂಡೆ ಮತ್ತು ಇತರೆ ಜಾಗಗಳಲ್ಲಿ ಬೆಳೆಯುತ್ತದೆ. 1-3 ಅಡಿ ಎತ್ತರಕ್ಕೆ ಬೆಳೆಯುವುದೂ ಉಂಟು. ಇದನ್ನು ಹಣ್ಣೆಸೊಪ್ಪು ಎಂತಲೂ ಕರೆಯುತ್ತಾರೆ. ಇದರ ಉಪಯೋಗದಿಂದ ಕಣ್ಣು ರೋಗ ನಿವಾರಣೆಯಾಗಿ ಬುದ್ಧಿಚುರುಕುಗೊಳ್ಳುತ್ತದೆ.

**ಶತಾವರಿ ಸೊಪ್ಪು :** ಇದಕ್ಕೆ ಶೀತ ಮತ್ತು ಉಷ್ಣಗಳೆರಡನ್ನೂ ತಡೆದುಕೊಳ್ಳುವ ಶಕ್ತಿ ಇದೆ. ಇದರ ಗೆಡ್ಡೆಯನ್ನು ತರಕಾರಿಯಂತೆ ಉಪಯೋಗಿಸುತ್ತಾರೆ. ಆಯುರ್ವೇದದಲ್ಲಿ ಇದರ ಉಪಯೋಗ ಹೆಚ್ಚು.

**ಕಾಚಿ ಸೊಪ್ಪು / ಗಣಿಕೆ :** ಮಳೆಗಾಲದಲ್ಲಿ ಎಲ್ಲೆಂದರಲ್ಲಿ ಬೆಳೆಯುತ್ತದೆ. ಔಷಧೀಯ ಮಹತ್ವ ಇರುವುದರಿಂದ ಇತ್ತೀಚೆಗೆ ಬೇಸಾಯದಲ್ಲಿದೆ. ಇದನ್ನು ಬೆಳೆಗುಣಿ ಸೊಪ್ಪು ಎಂದೂ ಕರೆಯಲಾಗುತ್ತದೆ.

**ಗೋಣಿಸೊಪ್ಪು :** ಉಷ್ಣವಲಯ ಪ್ರದೇಶಗಳಲ್ಲಿ ನೆಲದ ಮೇಲೆ ಬಳ್ಳಿಯಂತೆ ಹರಡಿ ಕೊಂಡು ಬೆಳೆಯುವ ಸಸ್ಯ ಹೊಲಗಳ ಬದಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದರ ಎಲೆಗಳು ಬೇಳೆಕಾಳಿನ ಸ್ವರೂಪ ಹೊಂದಿರುವುದರಿಂದ ಇದನ್ನು ಬೇಳೆಕಾಳಸೊಪ್ಪು ಎಂದೂ ಕರೆಯುತ್ತಾರೆ. ಇದಕ್ಕೆ ನುಚ್ಚುಗೋಣಿ, ಲೋಣಿಕ, ಹಾಲು ಬಚ್ಚಲಿ ಎಂಬ ಹೆಸರುಗಳಿವೆ.

**ಹಾಲೇಸೊಪ್ಪು ಅಥವಾ ದುಷ್ಟಿಕೆ ಸೊಪ್ಪು :** ಇದು ಎತ್ತರವಾದ ಗಡುಸಾದ ಎಲೆಗಳುಳ್ಳದ್ದು. ಸೊಪ್ಪು ಸ್ವಲ್ಪ ಕಹಿ ರುಚಿ ಹೊಂದಿದೆ. ಚೆನ್ನಾಗಿ ಬೇಯಿಸಿ ನೀರನ್ನು ಬಸಿದು ಕಹಿಯನ್ನು ಕಡಿಮೆ ಮಾಡಬಹುದು.

**ಪಾಲಕೀರೆ ಸೊಪ್ಪು :** ಭಾರತದ ಎಲ್ಲ ಕಡೆಯು ಇದರ ಅಸ್ತಿತ್ವ ಉಂಟು. ಇದು ಇತರ ಗಿಡಗಳನ್ನು ತಬ್ಬಿಕೊಂಡು ಬೆಳೆಯುತ್ತದೆ. ಬೇಸಾಯ ಮಾಡಿಯೂ ಬೆಳೆಸಲು ಪ್ರಾರಂಭಿಸಿದ್ದಾರೆ.

**ಹುಳಿ ಚಿಕ್ಕಿ, ಪುಳಂಪುರುಚಿ ಅಥವಾ ಉಪ್ಪಿನ ಸೊಪ್ಪು :** ಇದೊಂದು ದೀರ್ಘ ಋತು ಬೆಳೆ. ಉಷ್ಣವಲಯಗಳಲ್ಲಿ ಹೆಚ್ಚಾಗಿ ಕಂಡು ಬಂದರೂ ಶೀತವಲಯದಲ್ಲೂ ಸಾಮಾನ್ಯವಾಗಿ ಬೆಳೆಯುತ್ತದೆ. ಮಳೆಗಾಲದಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಇದರ ಹುಳಿ ರುಚಿ ಸ್ವಾದಿಷ್ಟ.

**ಬೆಟ್ಟದ ಕನ್ನೆ ಸೊಪ್ಪು :** ಉಷ್ಣವಲಯದ ಸೊಪ್ಪಾದ ಇದು ಉತ್ತಮ ಪೋಷಕಾಂಶ ಹೊಂದಿದೆ.

**ದೊಡ್ಡ ಪತ್ರೆ ಸೊಪ್ಪು :** ಸುವಾಸನೆ ಉಳ್ಳ ದಪ್ಪ ಎಲೆಗಳನ್ನು ಹೊಂದಿದ ಸಸ್ಯ. ಮೃದುವಾಗಿರುತ್ತದೆ. ಹೆಚ್ಚಾಗಿ ಮನೆಯಂಗಳಗಳದಲ್ಲಿ ಬೆಳೆಸುತ್ತಾರೆ. ಅಜೀರ್ಣದಿಂದ ಉಂಟಾಗುವ ಹೊಟ್ಟೆಉಬ್ಬರ, ಪಿತ್ತದ ಗಂಧೆ, ನಿವಾರಿಸಲು ಇದನ್ನು ಉಪ್ಪಿನೊಂದಿಗೆ ಸೇವಿಸುತ್ತಾರೆ. ಹಲವು ತಿಂಡಿಗಳಲ್ಲಿ ಉಪಯೋಗಿಸುವುದೂ ಉಂಟು.

**ಸಣ್ಣ ನೆಗ್ಗಿಲು ಸೊಪ್ಪು :** ಮುಂಗಾರಿನ ಮಳೆ ಬಂದಾಗ ಹುಟ್ಟಿ ಬರುತ್ತದೆ. ಏಕ ಋತು ಸಸ್ಯ. ಇದನ್ನು ಬೇರಕೆ ಸೊಪ್ಪಿನೊಂದಿಗೆ ಉಪಯೋಗಿಸುತ್ತಾರೆ.

**ವಿಷ್ಣುಕಾಂತಿ ಸೊಪ್ಪು :** ದೀರ್ಘಾಯುಷಿ ಸಣ್ಣ ಸಸ್ಯ. ರೋಮಗಳನ್ನು ಹೊಂದಿದೆ. ರೆಂಬೆಗಳು ಕಾಂಡದಿಂದ ಬಂದಿರುತ್ತವೆ. ಎಲೆಗಳು ತೊಟ್ಟಿಲ್ಲದೆ ಅಂಡಾಕಾರ ಅಥ'ವಾ ಈಟಿಯಂತೆ ಚೂಪಾಗಿರುತ್ತವೆ. ಇದನ್ನು ತಿಂದರೆ ಬುದ್ಧಿ ಚುರುಕಾಗುತ್ತದೆ. ನಿದ್ರೆ ಚೆನ್ನಾಗಿ ಬರುತ್ತದೆ.

**ಚಂಚಲಿ ಸೊಪ್ಪು :** ಇದು ಸ್ವಾಭಾವಿಕವಾಗಿ ಬೆಳೆಯುವ ಸೊಪ್ಪು ತರಕಾರಿಗಳಲ್ಲಿ ಒಂದು. ಇದು ಅಮರ್ಯಾಂತೇಸೀ ಕುಟುಂಬಕ್ಕೆ ಸೇರಿದೆ. ಡೈಜೆರ ಮ್ಯೂರಿಕೇಟ ಇದರ ವೈಜ್ಞಾನಿಕ ಹೆಸರು. ಬಹುವಾರ್ಷಿಕ ಅಥವಾ ಏಕವಾರ್ಷಿಕ ಬೆಳೆ. ಇದರ ಮೂಲಸ್ಥಳ ಏಷ್ಯಾ ಹಾಗೂ ಆಫ್ರಿಕಾ. ಭಾರತದ ಬಂಗಾಲ ಹಾಗೂ ಕರ್ನಾಟಕದಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. 2-3 ಅಡಿ ಎತ್ತರ ಬೆಳೆಯುತ್ತದೆ. ಇದರ ಎಲೆಗಳನ್ನಷ್ಟೇ ಬಿಡಿಸಿ ತರಕಾರಿಯಾಗಿ ಬಳಸುತ್ತಾರೆ. ಇದರಲ್ಲಿ ಕೆಲವು ಔಷಧೀಯ ಗುಣಗಳೂ ಇದೆ.

**ಬಿಳಿ ದಿಂಡಿ ಸೊಪ್ಪು :** ಅನೇಕ ಪ್ರಭೇದಗಳನ್ನು ಹೊಂದಿದೆ. ಅದಕ್ಕನುಗುಣವಾಗಿ ಇದರ ಬೆಳವಣಿಗೆ ಇರುತ್ತದೆ. ಭಾರತದಲ್ಲೇ 15 ಪ್ರಭೇದಗಳನ್ನು ಗುರುತಿಸಬಹುದು. ಇದು ಮಳೆಗಾಲದಲ್ಲಿ ಅಧಿಕವಾಗಿ ಕಂಡುಬರುತ್ತದೆ.

**ಸೂರ್ಯಕಾಂತಿ ಸೊಪ್ಪು :** ಇದು ನೆಟ್ಟಗೆ ಬೆಳೆಯುವ ಸಸ್ಯ. ನೀಲಿ ಮತ್ತು ಕೆಂಪು ಹೂಗಳನ್ನು ಹೊಂದಿದೆ. ಮೋಡದ ವಾತಾವರಣದಲ್ಲಿ ಹೂಗಳು ಮುದುಡಿಕೊಳ್ಳುತ್ತವೆ.

**ಕೀಟಗಳು ಮತ್ತು ರೋಗಗಳು :** ಸಾಮಾನ್ಯವಾಗಿ ಸೊಪ್ಪುಗಳಿಗೆ ಕೀಟಗಳು ಮತ್ತು ರೋಗಗಳು ಕಡಿಮೆ. ಕೆಲವು ಕೀಟ ಹಾಗೂ ರೋಗಗಳು ಕಂಡು ಬಂದರೂ ಅವು ಗಿಡವನ್ನು ಎಲ್ಲ ಹಂತಗಳಲ್ಲಿಯೂ ಬಾಧಿಸುವ ಸಂದರ್ಭ ಉಂಟು. ಹೆಚ್ಚು ಹಾನಿಯಾಗುವ ಮೊದಲೇ ಸೊಪ್ಪು ಕೊಯ್ಲು ಮಾಡುವುದರಿಂದ ರೋಗದಿಂದಾಗುವ ನಷ್ಟ ಕಡಿಮೆ ಎಂದೇ ಹೇಳಬೇಕು. ಕೀಟಗಳ ನಿವಾರಣೆಗೆ ಕೊಟ್ಟಿಗೆ ಗೊಬ್ಬರ, ನೀರನ್ನು ಹಾಕಿ ರೋಗ ನಿಯಂತ್ರಿಸಬಹುದು. ರೋಗ ವಿಪರೀತವಾಗುವಂತಹ ಸಂದರ್ಭದಲ್ಲಿಸೊಪ್ಪನ್ನು ಕಿತ್ತು ಸುಡಬೇಕು.

ಸಾಮಾನ್ಯವಾಗಿ ಸಸ್ಯಗಳಿಗೆ ಸಸ್ಯ ಹೇನು, ಎಲೆ ತಿನ್ನುವ ಕೀಟ, ರಂಧ್ರ ಮಾಡುವ ಹುಳ ಎಲೆಗಳ ಮೇಲೆ ಬಿಳಿ ಮಚ್ಚೆ ಉಂಟು ಮಾಡುವ ಬೂಷ್ಟು ಮುಂತಾದವು ಕಾಣಿಸಿಕೊಳ್ಳುತ್ತವೆ. ನುಗ್ಗೆಸೊಪ್ಪಿಗೆ ಕಂಬಳಿ ಹುಳುವಿನ ಬಾಧೆಯಿದೆ.

ಸೊಪ್ಪಿಗೆ ರೋಗ ಬಂದಿದ್ದರೆ, ಬಿಳಿ ಮಚ್ಚೆ ಇರುವ ಎಲೆಗಳ ಮೇಲೆ ಬೂದಿಯನ್ನು ಹರಡುವುದು. ಇಲ್ಲವೆ ಅಂತಹ ಎಲೆಗಳನ್ನು ಕಿತ್ತು ಹಾಕುವುದು ದೇಸಿ ಪದ್ಧತಿಯಾಗಿದೆ.

*ಪಿ.ಸಿ.ಎಸ್.*

**ಸೋಯಾ ಅವರೆ** ಇದು ಗ್ಲೇಸಿ ಮತ್ತು ಫ್ಯಾಬೇಸಿ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಗ್ಲೈಸಿನ್‌ಮ್ಯಾಕ್ಸ್. ಭಾರತದಲ್ಲಿ ಇದರ ಕೃಷಿ ಕ್ರಿ.ಶ. 1977ರಲ್ಲಿ ಪ್ರಾರಂಭವಾಯಿತು. ಮೊದಲು ಮಧ್ಯಪ್ರದೇಶದಲ್ಲಿ ಸಾಗುವಳಿ ಮಾಡಲಾಯಿತು. ಅನಂತರ ಉತ್ತರಪ್ರದೇಶ, ಗುಜರಾತ್, ಹಿಮಾಚಲಪ್ರದೇಶ, ಪಂಜಾಬ್ ಹಾಗೂ ದೆಹಲಿಯಲ್ಲಿ ಬೆಳೆಸಲಾಯಿತು. ಚೀನಾದಲ್ಲಿ ಬೆಳೆ ಆವರ್ತನದ ಅಂಗವಾಗಿ, ಮಣ್ಣಿನಲ್ಲಿ ಸಾರಜನಕವನ್ನು ಸೇರಿಸಲು 5,000 ವರ್ಷಗಳಿಂದ ಬಳಸಲಾಗುತ್ತಿರುವ ಒಂದು ವಾರ್ಷಿಕ ಸಸ್ಯವಾಗಿದೆ. ಇದನ್ನು ಹಿಂದಿಯಲ್ಲಿ ಬಾಟ್ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲೂ (ಮರಾಠಿಯಲ್ಲಿ) ಸೋಯಾಬಿನ್ ಎಂದು ಕರೆಯುತ್ತಾರೆ.



ಪ್ರಪಂಚದಲ್ಲೇ ಅತಿ ಹೆಚ್ಚು ಅಡುಗೆ ಎಣ್ಣೆ ನೀಡುವಂಥ ಬೀಜವಿದು. ನೇರವಾಗಿ ಬೆಳಯುವ ಪೊದೆ ಸಸ್ಯ. ಬೇರೆ ಬೇರೆ ಪರಿಸರದಲ್ಲಿ ಬೇರೆ-ಬೇರೆ ಗಾತ್ರದಲ್ಲಿ ಬೆಳೆಯುತ್ತದೆ. 30 ಸೆಂ.ಮೀ.ಗಿಂತ ಕಡಿಮೆ ಗಾತ್ರದ ಸೋಯಾ ಅವರೆ ಗಿಡಗಳು ಇವೆ. ಹಾಗೆಯೇ 6 ಅಡಿಗಿಂತ ಎತ್ತರಕ್ಕೆ ಬೆಳೆಯುವ ಗಿಡಗಳು ಇವೆ. ಸೋಯಾ ಅವರೆ ಗಿಡದ ಕಾಂಡ, ಎಲೆಗಳು ಮತ್ತು ಕಾಯಿ ಮೃದುವಾದ ರೋಮಗಳಿಂದ ಆವೃತವಾಗಿರುತ್ತದೆ. ಇದು ಕಂದು ಅಥವಾ ಬೂದು ಬಣ್ಣದ್ದಾಗಿರುತ್ತದೆ. ಪ್ರತಿ ಎಲೆಯಲ್ಲಿ 3 ಉಪ ಪತ್ರಗಳಿರುತ್ತವೆ. ಗಿಡದಲ್ಲಿ ಕಾಯಿಗಳು ಬಲಿಯುವ ಮೊದಲೇ ಎಲೆಗಳು ಉದುರಿ ಹೋಗುತ್ತವೆ. ಬೀಜವು ಬೇರೆ ಬೇರೆ ಗಾತ್ರದಲ್ಲಿರುತ್ತದೆ. ಸಿಪ್ಪೆ ಕಪ್ಪು, ಕಂದು, ನೀಲಿ, ಅರಿಸಿನ, ಹಸುರು ಅಥವಾ ಮಿಶ್ರಬಣ್ಣದಿಂದ ಕೂಡಿರುತ್ತದೆ. ಭಾರತದ ಪ್ರಮುಖ ತೈಲ ಬೆಳೆಗಳಲ್ಲಿ ಸೋಯಾ ಅವರೆಗೆ ಸ್ಥಾನವಿದೆ. ಇದು ವಾಸ್ತವವಾಗಿ ದ್ವಿದಳ ಧಾನ್ಯವಾಗಿದ್ದರೂ ತೈಲ ಬೆಳೆಯಿಂದ ಗುರುತಿಸಲಾಗಿದೆ.

ಕರ್ನಾಟಕ,ಧಾರವಾಡ, ಬೆಳಗಾವಿ, ಬೀದರ್, ಬಾಗಲಕೋಟೆ ಮತ್ತು ಹಾವೇರಿ, ಸೋಯಾ ಅವರೆ ಬೆಳೆಯುವ ಪ್ರಮುಖ ಜಿಲ್ಲೆಗಳು. ಈ ಬೆಳೆ ಹೆಚ್ಚಿನ ಉಷ್ಣತೆಯನ್ನಾಗಲೀ ಹೆಚ್ಚಿನ ಶೀತವನ್ನಾಗಲೀ ಸಹಿಸಿಕೊಳ್ಳಲಾರದು. 25 - 30 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಿರುವ ಪ್ರದೇಶಗಳು ಯುಕ್ತ. ಮರಳು ಮಿಶ್ರಿತ ಗೋಡು ಮಣ್ಣಿನಿಂದ ಜೇಡಿಮಣ್ಣಿನವರೆಗೆ ಯಾವುದೇ ಬಗೆಯ ಮಣ್ಣಿನಲ್ಲಿ ಬೆಳೆಯಬಲ್ಲದು. ಇತ್ತೀಚೆಗೆ ಪಿ.ಕೆ. 1029 ಎಂಬ ತಳಿ ರೈತರಲ್ಲಿ ಹೊಸ ಭರವಸೆ ಮೂಡಿಸಿದೆ. ಈ ತಳಿ ತುಕ್ಕು ರೋಗದ ವಿರುದ್ಧ ನಿರೋಧಕ ಶಕ್ತಿ ಹೊಂದಿದೆ.



ಕರ್ನಾಟಕದಲ್ಲಿ ಬೆಳೆಯುವ ಪ್ರಮುಖ ತಳಿಗಳು. ಪಿ.ಕೆ. 1029, ಡಿ.ಎಸ್.ಬಿ. ಕೆ.ಬಿ. 79, ಜೆ.ಎಸ್. 335, ಇತ್ಯಾದಿ. ಸೋಯಾ ಅವರೆಯನ್ನು ಜೂನ್‌ನಿಂದ - ಜುಲೈ ಮಧ್ಯಭಾಗದವರೆಗೆ ಬಿತ್ತನೆ ಮಾಡಬಹುದು. ಬೀಜಗಳನ್ನು2-5 ಸೆಂ.ಮೀ. ಆಳದಲ್ಲಿ ಬಿತ್ತನೆ ಮಾಡಬೇಕು. ಸಾಲಿನಿಂದ ಸಾಲಿಗೆ 45 ಸೆಂ.ಮೀ. ಮತ್ತು ಗಿಡದಿಂದ ಗಿಡಕ್ಕೆ 30 ಸೆಂ.ಮೀ. ಅಂತರವಿರಬೇಕು.

ಸೋಯಾ ಅವರೆಗೆ ಸಾಕಷ್ಟು ಸಾವಯವಗೊಬ್ಬರ ಅಗತ್ಯವಿದೆ. ಎಕರೆಗೆ 5 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರವನ್ನು ಒದಗಿಸಬೇಕು. ಈ ಬೆಳೆಗೆ ಕಾಂಡನೊಣ, ಎಲೆ ಸುತ್ತುವ ಕೀಟಗಳ ಕಾಟ ತುಸು ಮಟ್ಟಿಗೆ ಇರುತ್ತದೆ. ಅಂತ್ರಾಕ್ನೋಸ್, ಎಲೆಚುಕ್ಕಿ ರೋಗ, ಬೆಂಕಿರೋಗ, ಮೊಜಾಯಿಕ್ ಕಾಯಿಲೆ, ಹಳದಿ ಮೊಜಾಯಿಕ್ ಇತ್ಯಾದಿ ಬಾಧಿಸುತ್ತವೆ.

ರೋಗರಹಿತ ಮೂಲದಿಂದ ಪಡೆದ ಬೀಜಗಳನ್ನೇ ಬಿತ್ತನೆಗೆ ಬಳಸಬೇಕು. ಕಾಯಿಲೆ ಬಂದ ಗಿಡಗಳನ್ನು ಹೊಲದಿಂದ ಸಾಕಷ್ಟು ದೂರ ಒಯ್ದು ಸುಡಬೇಕು. ಬೇಸಗೆಯಲ್ಲಿ ನೆಲವನ್ನು ಚೆನ್ನಾಗಿ ಉಳುಮೆ ಮಾಡಿ ಮಣ್ಣನ್ನುತೀವ್ರ ಬಿಸಿಲಿಗೆ ಒಡ್ಡುವುದರಿಂದಲೂ ರೋಗಗಳಿಂದ ಪರಿಹಾರ ಸಾಧ್ಯ. ಸರಿಯಾದ ರೀತಿಯಲ್ಲಿ ನೀರು ಹೊಲದ ಎಲ್ಲ ಜಾಗಗಳಿಗೆ ವಿತರಣೆಗೊಳ್ಳುವಂತೆ ನೋಡಿಕೊಳ್ಳಬೇಕು. ಅಗತ್ಯವಿದ್ದಷ್ಟು ಸಾವಯವ ಗೊಬ್ಬರ ಒದಗಿಸಬೇಕು. ಯಾವ ಕಾಲದಲ್ಲಿ ಬೆಳೆಗೆ ಕಾಯಿಲೆಗಳು ಹೆಚ್ಚಾಗಿ ಬರುವ ಸಾಧ್ಯತೆ ಇರುವುದೊ ಅಂತಹ ಅವಧಿಯಲ್ಲಿ ಬೆಳೆಯನ್ನು ಮಾಡಬಾರದು.

ಬಿತ್ತನೆ ಮಾಡಿದ ನಾಲ್ಕು ತಿಂಗಳಲ್ಲಿ ಬೆಳೆ ಕೊಯ್ಲಿಗೆ ಸಿದ್ಧವಾಗುತ್ತದೆ. ಎಲೆಗಳು ಅರಿಸಿನ ಬಣ್ಣವನ್ನು ತಾಳಿ, ಗಿಡದಿಂದ ಎಲೆಗಳು, ಉದುರಿದಾಗ, ಬೆಳೆ ಕೊಯ್ಲಿಗೆ ಸಿದ್ಧವೆಂದು ಅರ್ಥ. ಇದರ ಕೃಷಿಯಿಂದ ಸಾರಜನಕವು ಭೂಮಿಗೆ ಲಭ್ಯ. ಬರಡು ಭೂಮಿಯಲ್ಲೂ ಸಾಕಷ್ಟು ಪ್ರಮಾಣದಲ್ಲಿ ಸೂಕ್ಷ್ಮ ಪೌಷ್ಟಿಕಾಂಶಗಳು ಮಣ್ಣಿನಲ್ಲಿ ಲಭ್ಯ. ನೆಲಕ್ಕೆ ಫಲವತ್ತತೆ ಮತ್ತು ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ, ಮಣ್ಣಿನ ಸವೆತವನ್ನು ತಡೆಗಟ್ಟಬಹುದು.

**ಸೋಯಾ ಎಣ್ಣೆಯ ಉಪಯೋಗಗಳು :** ಈ ಎಣ್ಣೆಯನ್ನು ಹೆಚ್ಚಾಗಿ ಅಡುಗೆಗೂ ಜೈವಿಕ ಡೀಸೆಲ್ ತಯಾರು ಮಾಡುವಲ್ಲಿಯೂ ವನಸ್ಪತಿ (ಡಾಲ್ಡಾ) ಮಾಡುವಲ್ಲಿಯೂ ಉಪಯೋಗಿಸುತ್ತಾರೆ. ಸೋಯಾ ಹಿಂಡಿಯನ್ನು ಮೇವಿಗಾಗಿ ಉಪಯೋಗಿಸುತ್ತಾರೆ. ಮಣ್ಣಿನ ಸಾರವರ್ಧಕವಾಗಿಯೂ ಕೋಳಿಗೆ ಆಹಾರವಾಗಿಯೂ ಬಳಸುತ್ತಾರೆ, ತೈಲ, ಸಾಬೂನು, ಸೌಂದರ್ಯವರ್ಧಕಗಳು, ರಾಳ, ಪ್ಲಾಸ್ಟಿಕ್, ಇಂಕ್, ಕ್ರೇಯಾನ್, ಸಾಲ್ವೆಂಟ್ ಮತ್ತು ಬಟ್ಟೆ ತಯಾರಿಕೆಯಲ್ಲಿ ಬಳಸುತ್ತಾರೆ. ಅಮೆರಿಕಾದಲ್ಲಿ ಸೋಯಾ ತೈಲವು ಪ್ರಮುಖ ಜೈವಿಕ ಇಂಧನವಾಗಿದೆ. ಅಮೆರಿಕಾದ ಒಟ್ಟು ಜೈವಿಕ ಡೀಸೆಲ್ ಉತ್ಪಾದನೆಯ ಶೇ. 80ರಷ್ಟು ತಯಾರಾಗುವುದು ಸೋಯಾ ತೈಲದಿಂದಲೇ ಇತ್ತೀಚಿನ ವರ್ಷಗಳಲ್ಲಿ ವೋಡ್ಕಾದಂತಹ ಮಾದಕ ಪಾನೀಯಗಳ ತಯಾರಿಕೆಯಲ್ಲೂ ಸೋಯಾ ಅವರೆಯನ್ನು ಬಳಸುತ್ತಿದ್ದಾರೆ. ಇದರ ತೈಲವನ್ನು ಗ್ಲಿಸರಿನ್, ಮುದ್ರಣ ಶಾಯಿ, ಗ್ರೀಸ್, ಲ್ಯುಬ್ರಿಕೆಂಟ್‌ಗಳ ಜಲನಿರೋಧಕ ಸಾಮಗ್ರಿಗಳು ಮತ್ತು ಚರ್ಮದ ವಸ್ತುಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಎಣ್ಣೆ ತೆಗೆದ ಅನಂತರ ಉಳಿಯುವ ಹಿಂಡಿಯನ್ನು ಸಹ ಹಲವಾರು ಉದ್ಯಮಗಳಲ್ಲಿ ಬಳಸುತ್ತಾರೆ. ಅಂಟುಗಳು, ಜಲನಿರೋಧಕ ಸಾಮಾಗ್ರಿ, ಪ್ಲಾಸ್ಟಿಕ್, ಸಂಶ್ಲೇಷಿತ ನೂಲು, ಗೊಬ್ಬರಗಳ ತಯಾರಿಕೆಯಲ್ಲಿ ಬಳಸುತ್ತಾರೆ.

ಕೇವಲ 25 ಗ್ರಾಂನಷ್ಟು ಸೋಯಾ ಅವರೆಯನ್ನು ಪ್ರತಿನಿತ್ಯ ಸೇವಿಸುತ್ತಿದ್ದರೆ ಒಬ್ಬ ವ್ಯಕ್ತಿಗೆ ಅಗತ್ಯವಿರುವ ಎಲ್ಲಾ ಪ್ರೋಟೀನು ದೊರೆಯುತ್ತದೆ. ರಕ್ತದಲ್ಲಿ ಸಕ್ಕರೆ ಅಂಶವನ್ನು ನಿಯಂತ್ರಿಸುತ್ತದೆ. ಕ್ಯಾನ್ಸರ್ ಬರುವ ಸಂಭವ ಕಡಿಮೆ. ರಕ್ತದ ಒತ್ತಡ ನಿಯಂತ್ರಿಸಬಹುದು. ವೃದ್ಧಾಪ್ಯದ ಲಕ್ಷಣಗಳು ಬೇಗನೆ ಕಂಡುಬರುವುದಿಲ್ಲ. ಮೂತ್ರಪಿಂಡದ ಆರೋಗ್ಯವನ್ನು ಕಾಪಾಡುತ್ತದೆ, ಮಕ್ಕಳಿಗೆ ನಿಯಮಿತವಾಗಿ ಸೋಯಾ ಅವರೆ ಕೊಡುತ್ತಿದ್ದರೆ ಅವರ ತೂಕ, ಎತ್ತರ ಹೆಚ್ಚುತ್ತದೆ. ಬುದ್ಧಿಶಕ್ತಿ ಮತ್ತು ರಕ್ತದ ಹಿಮೋಗ್ಲೋಬಿನ್ ಪ್ರಮಾಣ ಹೆಚ್ಚಾಗುತ್ತದೆ. ರಾತ್ರಿ ಕುರುಡು ಸಮಸ್ಯೆಯನ್ನು ಹೋಗಲಾಡಿಸಿ ಕಣ್ಣಿನ ದೃಷ್ಟಿಯನ್ನು ಕಾಪಾಡಬಹುದು. ಹಾಗೆಯೇ ಮನೆ ಔಷಧಿಯಾಗಿ ಸೋಯಾ ಅವರೆ ತಲೆಕೂದಲಿನ ಸಮಸ್ಯೆಗಳು, ಸಂಧಿವಾತ, ಕಣ್ಣಿನ ಸಮಸ್ಯೆ, ಬೊಜ್ಜು ಮತ್ತು ಕ್ಯಾನ್ಸರ್ ತಡೆಯುವಲ್ಲಿ ಸಹಾಯಕ.

ಗೋಧಿ ಹಿಟ್ಟು, ಕಡಲೆಹಿಟ್ಟು, ಸಂಡಿಗೆ, ಹುರಿಗಾಳು, ಹಪ್ಪಳ, ಬಿಸ್ಕತ್, ಆಲೂವೆಡ್ಜಸ್, ಗೋಬಿ, ಕ್ಯಾಪ್ಸಿಕಂ ಬೋಂಡಾದ ರೆಪಿಸಿ, ಹೆಸರುಕಾಳಿನನೊಂದಿಗೆ ದೋಸೆಗಳಲ್ಲಿ ಬಳಸುವುದರಿಂದ ಶೇ. 40ರಷ್ಟು ಪ್ರೋಟಿನ್ ದೊರೆಯುತ್ತದೆ.

ಸಾಮಾನ್ಯ ಅವರೆಗಿಂತ ಸ್ವಲ್ಪ ದಪ್ಪವಾಗಿರುವ ಸೋಯಾ ಕಾಳುಗಳಲ್ಲಿ ಕ್ಯಾಲ್ಸಿಯಂ, ಕಬ್ಬಿಣ, ಮ್ಯಾಗ್ನಿಶಿಯಂ ಪೋಷಕಾಂಶಗಳು ಸ್ವಲ್ಪ ಹೆಚ್ಚಾಗಿವೆ. ಉಷ್ಣವಲಯದ ಬಿಳಿ ಸೋಯಾ ಅವರೆಯನ್ನು ಕಪ್ಪು ತೊಗರಿ ಎಂದು ಕರೆಯುತ್ತಾರೆ. ಬೇರೆ ತಳಿಗಳಿಗಿಂತ ಇಳುವರಿ ಹೆಚ್ಚು. ಕೇವಲ ಭಾರತ ಮಾತ್ರವಲ್ಲದೇ ಪಾಶ್ಚಾತ್ಯ ರಾಷ್ಟ್ರಗಳು ಸೋಯಾ ಅವರೆಯನ್ನು

ಒಂದು ಬೃಹತ್ ಉದ್ಯಮದ ಮೂಲವಸ್ತುವಾಗಿ ಮಾಡಿಕೊಳ್ಳುತ್ತಿವೆ. ಒಟ್ಟಾರೆ ಇದರಿಂದ ಮನುಷ್ಯನಿಗೆ ಬೇಕಾದ ಹತ್ತು ಹಲವು ಪ್ರಯೋಜನಗಳುಂಟು.


**ಗ್ರಂಥಋಣ**

ಅಂತರ್‌ಜಾಲ ಸಹಾಯ

ಸೋಯಾ ಅವರೆ - ಮುನಿಯಾಲ್ ಗಣೇಶ ಶೆಣೈ

ಪ್ರಜಾವಾಣಿ ದಿನಪತ್ರಿಕೆ


*ಎನ್.ಸಿ.*

**ಸೋಲಿಗರಲ್ಲಿ ಕೃಷಿ** ಕರ್ನಾಟಕದ ಬುಡಕಟ್ಟುಗಳಲ್ಲಿ ಸೋಲಿಗ ಸಮುದಾಯವೂ ಒಂದು. ಒಂದೊಂದು ಪ್ರದೇಶದಲ್ಲೂ ಇಂತಹ ಹಲವು ಸಮುದಾಯಗಳಿರುತ್ತವೆ. ಸದಾ ಹಸುರಾಗಿರುವ ಕಾಡುಗಳಲ್ಲಿಯೇ ಇವರ ವಾಸ. ಅಲ್ಲಿ ದೊರೆಯುವ ವಸ್ತುಗಳನ್ನು ಸಂಗ್ರಹಿಸಿ ಜೀವಿಸುವುದು ಇವರಿಗೆ ಪರಂಪರೆಯಿಂದ ಬಂದಂತಹದ್ದು. ದಿನ ನಿತ್ಯ ತನ್ನ ಸನಿಹದಲ್ಲೇ ಯಥೇಚ್ಛವಾಗಿ ಸಿಗುವ ವಸ್ತುವೊಂದರ ಅಭಿರುಚಿಯಲ್ಲಿ ತೊಡಗಿಸಿಕೊಂಡ ಸಮುದಾಯ ಅದನ್ನು ಸಂಗ್ರಹಿಸುವಲ್ಲಿ ನೈಪುಣ್ಯ ಪಡೆದಿರುವುದು ಸಹಜ. ಜೇನು ಹೆಚ್ಚಾಗಿ ಸಿಗುವೆಡೆ ವಾಸಿಸುವಂತಹವರು ಜೇನು ಸಂಗ್ರಹಿಸುವ ಮತ್ತು ಅದನ್ನೇ ಜೀವನಾಧಾರವಾಗಿ ರೂಢಿಸಿಕೊಂಡಿರುವವರನ್ನು ಜೇನು ಕುರುಬರೆಂದು ಗುರುತಿಸಲಾಯಿತು. ಬಿದಿರನ್ನು ಸಂಗ್ರಹಿಸುವಂತಹವರು ಅದನ್ನೇ ವೃತ್ತಿಯಾಗಿ ಮಾಡಿಕೊಂಡವರು ಬೆಟ್ಟಕುರುಬರು. ಹೀಗೆ ಜೀವನೋಪಾಯಕ್ಕಾಗಿ ಮಾಡುವ ಕಸುಬುಗಳೇ ಆ ಸಮುದಾಯದ ನಾಮವಾಚಕಗಳಾಗಿ ಜೇನುಕುರುಬ, ಬೆಟ್ಟಕುರುಬ, ಸೋಲಿಗ ಮೊದಲಾದ ಬುಡಕಟ್ಟು ಸಮುದಾಯಗಳು ಅದೇ ಹೆಸರಿನಿಂದ ಗುರುತಿಸಿಕೊಳ್ಳುತ್ತ ಬಂದುವು. 'ಸೋಲನ ಗೆಣಸ'ನ್ನು ಭೂಮಿಯಿಂದ ಅಗೆದು ತಮ್ಮ ಆಹಾರವಾಗಿ ರೂಢಿಸಿಕೊಂಡು ಬದುಕು ನಿರ್ವಹಣೆ ಮಾಡುತ್ತ ಬಂದವರು ಸೋಲಿಗರು. ಹೀಗೆ ಉದಯಿಸಿ ಕಾಲಕ್ರಮೇಣ ಜಾತಿಗಳಾಗಿ ರೂಪುಗೊಂಡದ್ದೆ ವೃತ್ತಿಯಾಧಾರಿತ ಜಾತಿ ವ್ಯವಸ್ಥೆ. ಮುಂದೆ ಇದು ಶ್ರೇಣೀಕೃತ ವರ್ಗವಾಗಿ ಬದಲಾವಣೆಗೊಂಡಿತು. ಆದರೆ ಇವಾವ ಗೊಂದಲ, ಗೋಜಲುಗಳಿಗೂ ಸಿಗದ ಅಪ್ಪಟ ಬುಡಕಟ್ಟುಗಳಲ್ಲಿ ಸೋಲಿಗ ಸಮುದಾಯವೂ ಒಂದು. ಪ್ರಸ್ತುತ ಸೋಲಿಗರ ಪಾರಂಪರಿಕ ಕೃಷಿ ಪದ್ಧತಿಯನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ಸ್ವಾಭಾವಿಕವಾಗಿ ದೊರೆಯುತ್ತಿದ್ದ ಹಣ್ಣು ಹಂಪಲು, ಗಡ್ಡೆ-ಗೆಣಸುಗಳನ್ನು ಸಂಗ್ರಹಿಸಿ ಆಹಾರಕ್ಕಾಗಿ ಬಳಸಿಕೊಳ್ಳುತ್ತಿದ್ದುದು ಆರಂಭದ ಅವಧಿಯಲ್ಲಿ ತೃಪ್ತಿ ನೀಡುತ್ತಿತ್ತು. ಆಹಾರದ ಕೊರತೆ ಕಾಡತೊಡಗಿದಾಗ, ಕಾಡಿನ ಪರಿಸರದಲ್ಲಿ ಆಹಾರಕ್ಕಾಗಿ ಅಲೆಯುತ್ತಿದ್ದಾಗ ಕೆಲವು ಕಾಳು ಕಡ್ಡಿಗಳನ್ನು ತಿನ್ನಲು ಬಳಸಬಹುದೆಂದು ಅರಿತುಕೊಂಡ. ಹೀಗೆ ಸಂಗ್ರಹಿಸಿ ತಂದ ಕಾಳುಗಳು ಕೈ ಜಾರಿಯೋ ಕಸದ ಮೂಲಕವೋ ವಾಸಸ್ಥಳದ ಅಕ್ಕಪಕ್ಕ ಬಿದ್ದು ಮತ್ತು ಮೊಳೆತು ಚಿಗುರೊಡೆದು ಬೆಳೆಯಾದುದನ್ನು, ಅದು ತನ್ನ ಸನಿಹದಲ್ಲೇ ಸಿಕ್ಕಿದ್ದನ್ನು ಕಂಡು ಸಂತುಷ್ಟನಾಗಿ ಆ ಕಾಳನ್ನೇ ಬಿತ್ತನೆಗಾಗಿ ಬಳಸಿ ವ್ಯವಸಾಯ ಮಾಡುವ ಆಲೋಚನೆ ಬೆಳೆಯಿತು. ಇದು ಬುಡಕಟ್ಟು ಸಮುದಾಯದ ಕೃಷಿಗೆ ನಾಂದಿ ಹಾಡಿದ ಪರಿ. ಕಾಡಿನ ಎಲ್ಲ ಭಾಗಗಳು ಕೃಷಿಗೆ ಯೋಗ್ಯವಲ್ಲ. ನೀರಿನ ಕೊರತೆ ಇದ್ದಾಗಲೂ ಕೃಷಿ ಸಾಧ್ಯವಿಲ್ಲ. ಆದ್ದರಿಂದ ಫಲಭರಿತವಾದ, ನೀರಿನ ಆಸರೆಯಿರುವ ಸಮತಟ್ಟಾದ ಸಿಕ್ಕ ಚಿಕ್ಕ ಜಾಗಗಳಷ್ಟೇ ನೆರವಿಗೆ ಬಂದವು. ಇಂತಹ ಕಡೆ ಕೃಷಿ ಮಾಡುವುದು ಕೂಡ ಕಠಿಣ ಸಾಧ್ಯವಾದುದೇ. ಕಾರೆ ಮರದ, ಬಿದಿರಿನ ಚೂಪಾದ ದಸಿಗಳಿಂದ ನೆಲವನ್ನು ಬಗೆದು, ಕಳೆ ತೆಗೆದು, ಕಲ್ಲು ಆಯ್ದು ಭೂಮಿಯನ್ನು ಹಸನುಗೊಳಿಸಿಕೊಂಡು ಕೃಷಿಗೆ ತೊಡಗಿದ. ಅಲ್ಲಿ 'ಬರಬತ್ತ' ಬೆಳೆಯಲಾರಂಭಿಸಿದ. ಬರ ಬಂದಾಗ ಬದುಕಲಷ್ಟೇ ಇಂತಹ ಕೃಷಿಯ ಆವಶ್ಯಕತೆ ಕಂಡುಬಂದದ್ದನ್ನು 'ಬರಬತ್ತ' ಎಂಬ ಹೆಸರೇ ಸೂಚಿಸುತ್ತದೆ.

**ಕೃಷಿ ವಿಧಾನ :** ಮೇಲೆ ತಿಳಿಸಿದಂತೆ ತೇವಾಂಶವಿರುವ ಜಾಗದಲ್ಲಿ ನೀರಿನ ಆಸರೆ ಸನಿಹದಲ್ಲೆ ಇರುವೆಡೆ, ಹಸನು ಮಾಡಿದ ನಿರ್ದಿಷ್ಟ ಜಾಗಕ್ಕೆ ಸುತ್ತ ಕಟ್ಟೆ ಕಟ್ಟಿ ನೀರು ನಿಲ್ಲುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದ. ಬತ್ತ ಚೆಲ್ಲಿದ ಮೇಲೆ ಆಕಸ್ಮಿಕವಾಗಿ ಯಾವುದೇ ಒಂದು ಹಂತದಲ್ಲಿ ನೀರು ಸಿಗದೇ ತೇವಾಂಶ ಕಡಿಮೆಯಾದಾಗ ಬೊಂಬು ಸೀಳಿ ದೋಣಿ ಮಾಡಿಕೊಂಡು ನೀರಿರುವ ಜಾಗದಿಂದ ಗದ್ದೆಯವರೆಗೆ ಕಾಲುವೆಯಂತೆ ಜೋಡಿಸಿ ಅದರ ಮಧ್ಯೆ ನೀರು ಹರಿದು ಹೋಗದಂತೆ ಜೇಡಿಮಣ್ಣನ್ನು ಮೆತ್ತಲಾಗುತ್ತಿತ್ತು. ಅಗತ್ಯ ಬಿದ್ದಾಗ ಬೇಕಾದಷ್ಟು ನೀರನ್ನು ಇದರ ಮೂಲಕ ಹಾಯಿಸಿಕೊಳ್ಳಲಾಗುತ್ತಿತ್ತು. ಹೀಗೆ ಆಹಾರದ ಮುಖ್ಯ ಬೆಳೆಗಳಾದ ಬತ್ತ ಮತ್ತು ರಾಗಿ ಕೃಷಿ ಮಾಡುವುದನ್ನು ರೂಢಿಸಿಕೊಂಡ ಸೋಲಿಗರು ಸಾಂಬಾರಿಗೆ ಅಗತ್ಯವಾದ ಅವರೆ, ತೊಗರಿ, ಅಲಸಂದೆ ಮುಂತಾದ ಕಾಳುಗಳನ್ನು ಬೆಳೆಯತೊಡಗಿದರು. ತಾವು ವಾಸಿಸುವ ಪರಿಸರದಲ್ಲಿ ಕೃಷಿಗೆ ಬಳಸಿದ ಭೂಮಿ ಬರಡಾದರೆ ಅಥವಾ ಮೂಲ ಸೌಲಭ್ಯಗಳ ಕೊರತೆಯುಂಟಾದರೆ ಅಥವಾ ಅಲ್ಲಿಯ ಪ್ರಾಣಿ ಸಂಕುಲಕ್ಕೆ ತೊಂದರೆಯುಂಟಾಯಿತೆನಿಸಿದರೆ ಅಂತಹ ಜಾಗ ಬಿಟ್ಟು ಮತ್ತೊಂದು ಫಲವತ್ತಾದ ಜಾಗವನ್ನು ಆರಿಸಿಕೊಂಡು ಅಲ್ಲಿ ಕೃಷಿ ಮಾಡುತ್ತಿದ್ದರು. ಇದನ್ನೇ 'ಸ್ಥಳಾಂತರ ಬೇಸಾಯ' ಎನ್ನಬಹುದು. ಈ ಸ್ಥಳಾಂತರ ಬೇಸಾಯ ಬುಡಕಟ್ಟು ಸಮುದಾಯಗಳಲ್ಲೆ ಮೊದಲು ಕಾಣಿಸಿಕೊಂಡದ್ದು. ಭೂಮಿಯ ಫಲವತ್ತತೆಯನ್ನು ಕಾಪಾಡಲು ಇದು ತುಂಬ ಮಹತ್ತ್ವದ ಪದ್ಧತಿಯಾಗಿದೆ.

ಈ ಕೃಷಿ ವ್ಯವಸ್ಥೆಯಲ್ಲಿ ಒಂದು ವಿಶಿಷ್ಟ ಅಂಶ ಅಡಗಿದೆ. ಆ ಪರಿಸರದಲ್ಲಿರುವ ಯಾವುದೆ ಮರಗಳನ್ನು ಕಡಿಯುತ್ತಿರಲಿಲ್ಲ. ಮರಗಳು ವಿರಳವಾಗಿರುವ ಬಿಸಿಲು ಬೀಳುವ ಸಮತಟ್ಟಾಗಿರುವ ಜಾಗಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ಇಂತಹ ವಲಸೆ ಬೇಸಾಯ ಅಥವಾ ಸ್ಥಳಾಂತರ ಬೇಸಾಯವನ್ನೇ ಮಲೆನಾಡು ಪ್ರದೇಶಗಳವರು 'ಕುಮರಿ ಬೇಸಾಯ' ಎನ್ನುವರು.

**ಧಾನ್ಯಗಳ ಒಕ್ಕಣೆ :** ಬುಡಕಟ್ಟು ಸಮುದಾಯಗಳಲ್ಲಿ ಕೆಲವು ಪೋಡುಗಳೇ ಒಂದು ಊರು. ಅಲ್ಲಿಯ ಅಂಗಳವೇ ಕಣ. ಇಲ್ಲಿಯ ಪ್ರಮುಖವೂ ವಿಶಿಷ್ಟವೂ ಆದ ಅಂಶವೆಂದರೆ ಇಷ್ಟೆಲ್ಲ ಕೃಷಿ ಕಾರ್ಯಗಳನ್ನು ಮಾಡುತ್ತಿದ್ದರೂ ಎತ್ತು, ಎಮ್ಮೆಗಳಂತಹ ಪ್ರಾಣಿಗಳ ಸಹಾಯ ಪಡೆಯುತ್ತಿರಲಿಲ್ಲ. ಹಾಗಾಗಿ ಕಣದಲ್ಲಿ ತಮ್ಮ ದೈಹಿಕ ಶ್ರಮದಿಂದಲೇ ಬೆಳೆದ ದವಸಧಾನ್ಯಗಳನ್ನು ಒಕ್ಕಣೆ ಮಾಡಿಕೊಳ್ಳುತ್ತಿದ್ದರು. ಬಿದಿರಿನ ತಟ್ಟೆಗಳ ಮೇಲೆ ಕೊಯ್ದು ತಂದ ತೆನೆಗಳನ್ನು ಹಾಕಿ ಚೆನ್ನಾಗಿ ಒಣಗಿಸಿ ಮಳೆಯಿಲ್ಲದ ವಾತಾವರಣ ನೋಡಿ ನೆಲದ ಮೇಲೆ ಹರಡಿ ಕೋಲುಗಳಿಂದ

ಬಡಿಯುತ್ತಿದ್ದರು. ಕಾಳುಗಳನ್ನು ತೂರಿ ಸಿದ್ಧಗೊಳಿಸಿಕೊಂಡು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಬತ್ತವನ್ನು ದೊಡ್ಡ ದೊಡ್ಡ ಬಂಡೆಗಳ ಮೇಲೆ ಹರಡಿ, ಕಲ್ಲಿನಿಂದ ಬತ್ತದ ಹೊಟ್ಟುಷ್ಟೇ ಬೇರ್ಪಡುವಂತೆ ಕಲ್ಲಿನಿಂದ ಉಜ್ಜಿ ಅಕ್ಕಿ ಮಾಡಿಕೊಳ್ಳುತ್ತಿದ್ದರು.

**ಬೆಳೆ ಸಂರಕ್ಷಣೆ :** ಬುಡಕಟ್ಟು ಸಮುದಾಯದ ಬೆಳೆ ರಕ್ಷಣಾ ಕ್ರಮ ಕುತೂಹಲವನ್ನುಂಟು ಮಾಡುವಂತಹದ್ದು. ಯಾವ ಪ್ರಾಣಿಗೂ ಹಾನಿ ಮಾಡದೆ ಜೀವಕ್ಕೆ ಅಪಾಯ ಉಂಟಾಗದಂತೆ ವಿವಿಧ ಬಗೆಯ ಬೆದರಿಕೆಯನ್ನಷ್ಟೇ ಮಾಡಿ ಬೆಳೆ ರಕ್ಷಿಸುವರು. ಬೆಳೆದು ನಿಂತ ಫಸಲನ್ನು ಸಂರಕ್ಷಿಸಲು ಕಾಡು ಪ್ರಾಣಿಗಳು ಅದನ್ನು ತುಳಿದು, ತಿಂದು ನಾಶಪಡಿಸುವುದನ್ನು ತಪ್ಪಿಸಲು ಸೋಲಿಗರು ತಮ್ಮದೇ ಆದ ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ. 1. ಜಮೀನಿನ ಸುತ್ತ ಬೆಂಕಿ ಹಾಕುವುದು (ಕರಡಿಗಳು ಬೆಂಕಿಗೆ ಹೆದರಿ ಓಡಿ ಹೋಗುತ್ತವೆ) 2. ತಮಟೆ ಬಾರಿಸಿ ದೊಡ್ಡದಾಗಿ ಶಬ್ದ ಮಾಡುವುದು. 3. ಜಮೀನಿನ ಸುತ್ತ ಹಳ್ಳ ತೋಡಿ ಆನೆ ಮುಂತಾದ ಪ್ರಾಣಿಗಳು ಬರದಂತೆ ತಡೆಗಟ್ಟುವುದು. 4. ಮಣ್ಣು ಮತ್ತು ಮರದ ಹಾಲನ್ನು ಸೇರಿಸಿ ಉಂಡೆ ಮಾಡಿ ಒಣಗಿಸಿ ಅದನ್ನು ಕವಣೆಯಲ್ಲಿಟ್ಟು ಗುಂಪಿನಲ್ಲಿರುವ ನಾಯಕ ಆನೆಯ ಕಿವಿ ಪಕ್ಕದ ಹಣೆಯ ಭಾಗಕ್ಕೆ ಹೊಡೆಯುವರು. ನಾಯಕ ಆನೆ ಕಿರುಚಿದರೆ ಇಡೀ ಆನೆಯ ಹಿಂಡೇ ಓಡಿಹೋಗುತ್ತದೆ. ಆನೆಗಳ ಗುಂಪಿಗೆ ಬಲಿಷ್ಠವಾದ ಆನೆಯೊಂದು ನಾಯಕನಾಗಿರುತ್ತದೆ. ಅದನ್ನು ಎಚ್ಚರಿಸುವ ಮೂಲಕ ತಮ್ಮ ಬೆಳೆ ರಕ್ಷಿಸಿಕೊಳ್ಳುವ ಬುಡಕಟ್ಟಿನವರ ಚಾಣಾಕ್ಷತನ ಬೆರಗನ್ನುಂಟು ಮಾಡುತ್ತದೆ. ಕಿವಿ ಪಕ್ಕಕ್ಕೆ ಕವಣೆ ಬೀಸುವ ಜಾಣ್ಮೆ ಬಲವಾದ ಪೆಟ್ಟನ್ನು ಮಾತ್ರ ಕೊಡಬಹುದೇ ಹೊರತು ಪ್ರಾಣಕ್ಕೆ ಯಾವುದೆ ಬಗೆಯ ಅಪಾಯ ಆಗಬಾರ ದೆಂಬುದು ಅದರ ಹಿಂದಿರುವ ಪ್ರಮುಖ ಉದ್ದೇಶ. ನಾಯಕ ಆನೆ ಎಚ್ಚೆತ್ತು ಇತರ ಸಹಜೀವಿಗಳಿಗೂ ಅಪಾಯದ ಸಂದೇಶವನ್ನು ರವಾನೆ ಮಾಡಿ ಅಲ್ಲಿಂದ ಕಾಲ್ತೆಗೆಯುವಂತೆ ಮಾಡುತ್ತದೆ. ಇಲ್ಲಿ ಮಾನವನಿಗೆ ಪ್ರಾಣಿಗಳ ಬಗ್ಗೆ ಇರುವ ಪ್ರೀತಿ, ಅವುಗಳೊಡನೆ ಹೊಂದಿಕೊಂಡು ಹೋಗುವಂತಹ ರೀತಿ ಅರ್ಥಪೂರ್ಣವೂ ಆರೋಗ್ಯಕರವೂ ಆದಂತಹ ವಿಚಾರವಾಗಿದೆ.

**ಧಾನ್ಯ ಸಂಗ್ರಹಾಗಾರ :** ಗರಜುನೆಲ/ಗಟ್ಟಿನೆಲದ ಇಳಿಜಾರಾದ ಪ್ರದೇಶದಲ್ಲಿ ಗುಂಡನೆಯ ಗುಳಿ ತೋಡಿ ಹಗೆವು ನಿರ್ಮಿಸಿಕೊಳ್ಳುವರು. ಸಮತಟ್ಟಾದ ಭಾಗವಾದರೆ ನೀರು ಆಳಕ್ಕಿಳಿದು ಧಾನ್ಯಗಳು ಹಾಳಾಗು ತ್ತವೆಂಬುದು ಈ ಬಗೆಯ ನೆಲದ ಆಯ್ಕೆಯಲ್ಲಿರುವ ಪ್ರಮುಖ ಉದ್ದೇಶ. ಒಣಗಿದ ಬೀಟೆ ಮರದ ಸಣ್ಣ ಸಣ್ಣ ತುಂಡುಗಳನ್ನು ಹಗೆವಿಗೆ ತುಂಬಿ ಬೆಂಕಿ ಹಚ್ಚಿ ಒಣಗಿಸುವರು. ಹೀಗೆ ಮಾಡಿದಾಗ ಬೀಟೆ ಮರದ ಎಣ್ಣೆ ಹಗೆವಿನ ಸುತ್ತ ಸಂಗ್ರಹಗೊಳ್ಳುತ್ತದೆ. ಎಣ್ಣೆಯಿರುವ ಆ ಭಾಗದ ಮೇಲೆ ಧಾನ್ಯದ (ರಾಗಿ) ಹೊಟ್ಟು ಎರಚಿ ಗಚ್ಚು ಹಾಕುವಂತೆ ಮಾಡುತ್ತಿದ್ದರು. ಹೀಗೆ ಮಾಡಿದಾಗ ಯಾವುದೇ ಹುಳು ಉಪ್ಪಟ್ಟೆ ಒಳಗೆ ಪ್ರವೇಶಿಸುವುದಿಲ್ಲ. ಹಗೆವಿಗೆ ಕಾಳು ಅಥವಾ ಧಾನ್ಯ ಸುರಿಯುವುದರಲ್ಲೂ ವೈಜ್ಞಾನಿಕ ವಿಧಾನವಿದೆ. ಒಂದು ಅಥವಾ ಎರಡು ಅಡಿ ಕಾಳು ಸುರಿದ ಮೇಲೆ ಧಾನ್ಯದ ಹೊಟ್ಟನ್ನು ಎರಚುವರು. ಧಾನ್ಯ ತುಂಬುವವರೆಗೆ ಹಂತ ಹಂತವಾಗಿ ಹೊಟ್ಟು ಹರಡುವುದರಿಂದ ಕಾಳಿಗೆ ಹುಳು ಹುಪ್ಪಟೆ ಹತ್ತುವುದಿಲ್ಲ. ಆಕಸ್ಮಿಕವಾಗಿ ನೀರು ಒಳ ಸೇರಿದರೆ ಮೇಲ್ಪದರದ ಧಾನ್ಯವಷ್ಟೇ ಹಾಳಾಗುತ್ತದೆಯೇ ಹೊರತು ತಳಭಾಗದ ಧಾನ್ಯ ಸುರಕ್ಷಿತವಾಗಿರುತ್ತದೆ. ಹಗೆವುಗಳಲ್ಲಿ ರಾಗಿ ಹೊಟ್ಟನ್ನು ವಿಶೇಷವಾಗಿ ಬಳಸುವರು. ಇಂದು ಹಗೆವು ಎಂದು ಕರೆಯುವ ಧಾನ್ಯಸಂಗ್ರಹಾಗಾರದ ಪ್ರಾಚೀನತೆಯನ್ನು ಬುಡಕಟ್ಟುಗಳಲ್ಲೆ ಗುರುತಿಸಬಹುದು. ಅತ್ಯಂತ ವೈಜ್ಞಾನಿಕವೂ ಆಧುನಿಕ ತಂತ್ರಜ್ಞಾನಕ್ಕೆ ಸವಾಲೊಡ್ಡುವಂತಹವೂ ಆದ ಹಗೆವನ್ನು ನಿರ್ಮಾಣ ಮಾಡುತ್ತಿದ್ದ ಸಂಗತಿ ಚೋದ್ಯವನ್ನುಂಟು ಮಾಡುವಂಥದ್ದು. ಹೀಗೆ ಆರಂಭವಾದ ಬುಡಕಟ್ಟು ಸಮುದಾಯಗಳ ಕೃಷಿ (ಆರಂಭ)

ಇಂದು ಹಲವು ವಿಧದ ಪಲ್ಲಟಗಳನ್ನು ಕಂಡುಕೊಂಡಿದೆ. ಕಾಡವರಿಗೆ ನಾಡಿನವರ ಸಂಪರ್ಕ ಬೆಸೆದುಕೊಂಡಂತೆ ಕೃಷಿವಲಯದಲ್ಲೂ ಕ್ರಮೇಣ ಆಧುನಿಕ ರೀತಿಯ ಬೇಸಾಯ ಕ್ರಮ ಕಾಣಿಸಿಕೊಳ್ಳುತ್ತಿದೆ. ವಾಣಿಜ್ಯ ಬೆಳೆಗಳಾದ ಮೆಣಸು, ಏಲಕ್ಕಿ ಮುಂತಾದವನ್ನು ಬೆಳೆದು ಆರ್ಥಿಕವಾಗಿ ಸುಧಾರಣೆ ಗೊಳ್ಳುತ್ತಿದ್ದಾರೆ. ಇದಕ್ಕೆ ಸರ್ಕಾರದ ಧನ ಸಹಾಯವೂ ಲಭಿಸುತ್ತಿದೆ. ಈ ಸಮುದಾಯದ ಹಳೆಯ ತಲೆಮಾರಿನ ಜನ ಪ್ರಸ್ತುತ ಬೇಸಾಯ ಕ್ರಮಗಳಿಂದ ಬೇಸತ್ತು ಬೆರಗುಗಣ್ಣುಗಳಿಂದ 'ನಮ್ಮ ಕೃಷಿ ಪದ್ಧತಿಯೇ ಉತ್ತಮವಾಗಿತ್ತು' ಎಂದು ಉದ್ಗಾರವೆತ್ತಿದ್ದಾರೆ. ಇದು ದೇಶೀಯ ಕೃಷಿ ಪದ್ಧತಿಯನ್ನು ಉಳಿಸಿಕೊಳ್ಳಬೇಕೆಂಬ ಅನಕ್ಷರಸ್ಥ ಆದಿವಾಸಿಗಳ ಅಂಬೋಣ.

*ಎ.ಎಂ.ಡಿ.*

**ಸೌತೇಕಾಯಿ** 'ಸೌತೆಕಾಯಿ' ತರಕಾರಿಗಳ ಪೈಕಿ ಒಂದು. ಬೇಸಗೆಯ ಒಂದು ಮುಖ್ಯ ಬೆಳೆ. ಮೂರು ಸಾವಿರ ವರ್ಷಗಳಷ್ಟು ಹಿಂದಿನಿಂದಲೂ ಭಾರತದಲ್ಲಿ ಸೌತೆಕಾಯಿಯನ್ನು ಬೆಳೆಸಲಾಗುತ್ತಿದೆ ಎಂದು ತಿಳಿದುಬರುತ್ತದೆ.

ಸೌತೆಕಾಯಿಯ ತಿನ್ನಲರ್ಹ ಭಾಗದ ಪ್ರತಿ 100 ಗ್ರಾಂನಲ್ಲಿ ಪೌಷ್ಟಿಕಾಂಶಗಳು ಇಂತಿವೆ.

| | |
|---|---|
| ತೇವಾಂಶ | 96.3 ಗ್ರಾಂ |
| ಕೊಬ್ಬು | 0.1 ಗ್ರಾಂ |
| ನಾರು | 0.4 ಗ್ರಾಂ |
| ಕ್ಯಾಲೋರಿ | 13 ಗ್ರಾಂ |
| ಮ್ಯಾಗ್ನಿಷಿಯಂ | 11 ಮಿ.ಗ್ರಾಂ |
| ರಂಜಕ | 25 ಮಿ.ಗ್ರಾಂ |
| ಸೋಡಿಯಂ | 10.2 ಮಿ.ಗ್ರಾಂ |
| ತಾಮ್ರ | 0.1 ಮಿ.ಗ್ರಾಂ |
| ಕ್ಲೋರಿನ್ | 15 ಮಿ.ಗ್ರಾಂ |
| ಥಯಾಮಿನ್ | 0.03 ಮಿ.ಗ್ರಾಂ |
| ನಿಕೋಟನಿಕ್ ಆಮ್ಲ | 0.2 ಆಮ್ಲ |
| ಸಸಾರಜನಕ | 0.4ಗ್ರಾಂ |
| ಖನಿಜಗಳು | 0.3 ಗ್ರಾಂ |
| ಇತರ ಶರ್ಕರ ಪಿಷ್ಟಾದಿಗಳು | 2.5 ಗ್ರಾಂ |
| ಸುಣ್ಣ | 10 ಮಿ.ಗ್ರಾಂ |
| ಅಕ್ಸಾಲಿಕ್ ಆಮ್ಲ | 15 ಮಿ.ಗ್ರಾಂ |
| ಕಬ್ಬಿಣ | 1.5 ಮಿ.ಗ್ರಾಂ |
| ಪೊಟಾಷಿಯಂ | 50 ಮಿ.ಗ್ರಾಂ |
| ಗಂಧಕ | 17 ಮಿ.ಗ್ರಾಂ |

| | |
|---|---|
| 'ಎ' ಅನ್ನಾಂಗ | 0 ಮಿ.ಗ್ರಾಂ |
| ರಿಬೋಫ್ಲೇವಿನ್ | 0.01 ಗ್ರಾಂ |
| 'ಸಿ' ಅನ್ನಾಂಗ | 7 ಗ್ರಾಂ |

**ಸೌತೇಕಾಯಿಯ ವರ್ಗೀಕರಣ ಮತ್ತು ವಿಧಗಳು :** ಸೌತೇಕಾಯಿ ಕ್ಯುಕುಮಿಸ್ ಜಾತಿಯ ಸಟೈವಸ್ ಪ್ರಭೇದಕ್ಕೆ ಸೇರಿದೆ. ಇದನ್ನು ಸಾಮಾನ್ಯವಾಗಿ 4 ಪಂಗಡಗಳಾಗಿ ವರ್ಗೀಕರಿಸಬಹುದು: ಯೂರೋಪಿಯನ್ - ಅಮೆರಿಕನ್ ತಳಿ, ಪಶ್ಚಿಮ ಏಷ್ಯಾದ ತಳಿ, ಚೀನೀ, ಇಂಡೋ-ಜಪಾನ್ ತಳಿ


**ಹವಾಗುಣ ಮತ್ತು ಮಣ್ಣು :** ಸೌತೇಕಾಯಿ ಉಷ್ಣ ವಾತಾವರಣದ ಬೆಳೆ. $180^0$ರಿಂದ $240^0$ ಸೆಂಟಿಗ್ರೇಡ್ ಉಷ್ಣಾಂಶಗಳ ಅಂತರದಲ್ಲಿ ಸೌತೇಕಾಯಿ ಚೆನ್ನಾಗಿ ಬೆಳೆಯುತ್ತದೆ.

ವಿವಿಧ ಮಣ್ಣುಗಳಲ್ಲಿ ಸೌತೇಕಾಯಿಯನ್ನು ಬೆಳೆಯಬಹುದು. ಜೇಡಿ, ಮೆಕ್ಕಲು ಅಥವಾ ಪೂರ್ಣ ಜೇಡಿಮಣ್ಣು ಅಧಿಕ ಇಳುವರಿಗೆ ಸಹಕಾರಿ. ಇದರ ಬಿತ್ತನೆಗೆ ಸಾಮಾನ್ಯವಾಗಿ ಎರಡು ವಿಧಾನಗಳನ್ನು ಅನುಸರಿಸುತ್ತಾರೆ.

1. ನಿರ್ದಿಷ್ಟ ಅಂತರದ ಗುಂಡಿಗಳಲ್ಲಿ ಚೆನ್ನಾಗಿ ಕಳಿತ ಗೊಬ್ಬರ ಹಾಕಿ ಪ್ರತಿ ಗುಂಡಿಯಲ್ಲೂ ಕೆಲವು ಬೀಜಗಳನ್ನು ಬಿತ್ತಲಾಗುವುದು.

2. ಸಮನಾಂತರದಲ್ಲಿ ಸಾಲುಗೆರೆ ತೆಗೆದು ಆ ಸಾಲುಗಳಲ್ಲಿ ಒಂದು ಅಥವಾ ಎರಡು ಪಾರ್ಶ್ವಗಳಲ್ಲಿ ಬೀಜ ಹೂಳುವರು.

ತಳಿ ಮತ್ತು ಮಣ್ಣಿನ ಫಲವತ್ತತೆಯನ್ನನುಸರಿಸಿ ಸಾಲಿನಿಂದ ಸಾಲಿಗೆ $1^1/_2$ಯಿಂದ $2^1/_2$ ಮೀಟರ್ ಅಂತರದಲ್ಲಿ ನೆಡುತ್ತಾರೆ.



**ಗೊಬ್ಬರಗಳ ಬಳಕೆ :** ಹೆಕ್ಟೇರಿಗೆ 25ರಿಂದ 35 ಟನ್ ಚೆನ್ನಾಗಿ ಕೊಳೆತ ಹಟ್ಟಿ ಗೊಬ್ಬರ ಒದಗಿಸುವುದು. ಜೊತೆಗೆ ರಾಸಾಯನಿಕ ಗೊಬ್ಬರ ಬಳಸಿದರೆ ಅಧಿಕ ಉತ್ಪತ್ತಿ ಹೊಂದಲು ಸಾಧ್ಯ.

ಅಂತರ ಬೇಸಾಯ ಕ್ರಮಗಳು - ಸೌತೇಕಾಯಿ ಗಿಡ ಮೇಲ್ಪದರದಲ್ಲಿ ಬೇರು ಬಿಡುವಂಥದ್ದು. ನೆಟ್ಟ ಪ್ರಾರಂಭದಲ್ಲಿ ಭೂಮಿ ಬಿರುಕು ಬಿಡದಿರಲೂ ಕಳೆ ನಾಶವಾಗಲೂ ಆಗಿಂದಾಗ್ಗೆ ಮೇಲ್ಪದರದ ಅಂತರ ಬೇಸಾಯ ಮಾಡುವುದು ಉಚಿತ.

ಸೌತೇಕಾಯಿಯನ್ನು ಅತಿ ದಪ್ಪ ಗಾತ್ರ ಅಥವಾ ಅಧಿಕ ಬಲಿಕೆಯಿಂದಾಗಿ ನಷ್ಟವಾಗದಂತೆ ಆಗಿಂದಾಗ್ಗೆ ಕೊಯ್ದು ತೆಗೆಯಬೇಕು. ಹವಾಗುಣವನ್ನು ಅನುಸರಿಸಿ 2ರಿಂದ 4 ದಿನಗಳ ಅಂತರದಲ್ಲಿ ಕೊಯ್ಲು ಮಾಡಬೇಕು.

**ಬೀಜೋತ್ಪನ್ನ :** ಸುಲಭವಾಗಿ ಮತ್ತು ಬೇಗ ಬೀಜೋತ್ಪತ್ತಿ ಮಾಡಲು ಕೃಷಿ ವಿಜ್ಞಾನಿಗಳು ಸಂಶೋಧನೆ ನಡೆಸಿ ಕೆಲವು ಸೂಚನೆಗಳನ್ನು ನೀಡಿದ್ದಾರೆ. ಬಲಿತ ತಾಜಾ ಸೌತೇಕಾಯಿಗಳನ್ನು ಒಡೆದು ಬೀಜಗಳನ್ನು ಸಂಗ್ರಹಿಸಿ, ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಶೈತ್ಯಾಗಾರಗಳಲ್ಲಿ ದಾಸ್ತಾನುಮಾಡಿ ಬಿತ್ತನೆಗೆ ಬಳಸಬಹುದು.

**ರೋಗಗಳು : ಸೂಕ್ಷ್ಮಾಣು ಕೊಳೆ ರೋಗ :** ಸೌತೇಕಾಯಿಯ ಪಟ್ಟೇ ದುಂಬಿಗಳಿಂದ ಹರಡುವ ಎರ್ವಿನಿಯಾ ಟ್ರೈಕೆಫೀಲಾ ಎಂಬ ಸೂಕ್ಷ್ಮಾಣುಗಳಿಂದ ರೋಗ. ಇದು ಎಲೆಗಳ ತುದಿಯಿಂದ ತಳಭಾಗಕ್ಕೆ ಎಲೆಕಾಂಡ ಮತ್ತು ಗಿಡದ ಕಾಂಡಕ್ಕೆ ಹರಡಿ ಪೂರ್ಣ ಗಿಡ ಸಾಯುತ್ತವೆ.

**ಆಂತ್ರಾಕ್ನೋಸ್ ಕೊಳೆ ರೋಗ :** ಕೊಲೀಟೋಟ್ರೈಕಂ ವಾಗಿನೇರಿಯಂ ಎಂಬ ಶಿಲೀಂಧ್ರದಿಂದ ಉಂಟಾಗುತ್ತದೆ. ಎಲೆಗಳ ಮೇಲೆ ಸಣ್ಣದಾದ ಹಳದಿ ಅಥವಾ ನೀರು ತೋಯಿಸಿದಂತಹ ಮಚ್ಚೆ ಪ್ರಾರಂಭವಾಗಿ ಬೇಗ ಕಂದು ಬಣ್ಣಕ್ಕೆ ತಿರುಗುತ್ತದೆ.

**ಬೂಷ್ಟು ರೋಗ :** ಇದು ಸೂಡೋಪೆರನಾಸ್ಪೋರಾ ಎನ್ಸ್ಪಿಸಂ ಎಂಬ ಶಿಲೀಂಧ್ರದಿಂದ ಉಂಟಾಗುತ್ತದೆ. ಎಲೆಗಳಿಗೆ ಮಾತ್ರ ತಗಲುವ ರೋಗ. ಹಳದಿ, ಕೆಂಪು, ಕಂದು ಬಣ್ಣದ ಚುಕ್ಕಿಗಳಾಗಿ ಕಂಡುಬರುತ್ತದೆ.

**ಪುಡಿಬೂಷ್ಟು ರೋಗ :** ಮಳೆಯಿಲ್ಲದ ಹೆಚ್ಚು ಉಷ್ಣಾಂಶದ ಸ್ಥಳಗಳಲ್ಲಿ ಅತಿ ತೀವ್ರವಾಗಿ ಹರಡುತ್ತದೆ. ಹಳೆಯ ಎಲೆಗಳ ತಳಭಾಗದಲ್ಲಿ ದುಂಡಗಿರುವ ಬಿಳುಪು ಮಚ್ಚೆ ಮೂಡುವುದು ಈ ರೋಗ ತಗುಲಿದ ಚಿಹ್ನೆ.

**ಕೋನಾಕಾರದ ಎಲೆಮಚ್ಚೆ :** ಫೈಟೋಮೋನಾಸ್ ಲಾಕ್ರಿಮಾನ್ಸ್ ಎಂಬ ಶಿಲೀಂಧ್ರದಿಂದಾಗುತ್ತದೆ. ಎಲೆ ಮತ್ತು ಕಾಯಿಗಳ ಮೇಲೆ ನೀರು ತೋಯಿಸಿದಂತಹ ಮಚ್ಚೆಗಳು ಕಂಡುಬರುವುದು. ಎಲೆ ಬೂದು ಬಣ್ಣಕ್ಕೆ ತಾಳುತ್ತವೆ.

**ಸೌತೇಕಾಯಿಯ ಮೊಸಾಯಿಕ್ ನಂಜುರೋಗ :** ಹಲವು ನಂಜುರೋಗ ತಳಿಗಳ ತಂಡದಿಂದ ಉತ್ಪನ್ನವಾಗುತ್ತದೆ. ಗಿಡಕ್ಕೆ ಮಚ್ಚೆ ತಗುಲಿ, ಕಾಯಿಗಳು ಚುಕ್ಕಿ ಹೊಂದಿ ಡೊಂಕಾಗಿ, ಬಿಳುಪಾಗಿ ಮತ್ತು ವಿಕಾರ ರೂಪ ತಾಳುತ್ತವೆ.

**ಉಪದ್ರವ ಕೀಟಗಳು ಮತ್ತು ಬೇರುಗಂಟಿನ ಜಂತುಹುಳು -** ಇದರಲ್ಲಿ ಕುಂಬಳದ ಕೆಂಪು ದುಂಬಿಗಳು ಅತಿ ತೀಕ್ಷ್ಣ ರೋಗಕಾರಕ ಕೀಟಗಳು. ಮೊಳಕೆಯಿಂದಲೇ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ಎಲೆಗಳ ತಳಭಾಗದಲ್ಲಿ ಕಂಡುಬರುತ್ತವೆ. ಹೇನು ಎಲೆಗಳ ತಳಭಾಗದಲ್ಲಿರುತ್ತವೆ. ಮಾಲಾಥಿಯಾನ್ ಅಥವಾ ಫಾಲಿಡಾಲ್ ಸಿಂಪಡಿಸಿ ಕೀಟಗಳನ್ನು ನಿಯಂತ್ರಿಸಬಹುದು. ಕತ್ತರಿ ಹುಳುಗಳು ಹಗಲಿನಲ್ಲಿ ಮಣ್ಣಿನೊಳಗೆ ಬಚ್ಚಿಟ್ಟುಕೊಂಡು ರಾತ್ರಿಕಾಲದಲ್ಲಿ ಮೇಯುತ್ತವೆ. ಹಣ್ಣಿನ ನೊಣಗಳು - ಕ್ಯುಕರ್ಬಿಟೇಸೀ ಜಾತಿಯ ಹಣ್ಣುಗಳಿಗೆ ಅತಿ ಉಪದ್ರವಕಾರಿ ಕೀಟವಿದು. ಇದು ಅಂಡಕೋಶದ ಚರ್ಮವನ್ನು ಅಥವಾ ಎಳೆಯ ಕಾಯಿಯನ್ನು ಕೊರೆದು ಮೊಟ್ಟೆಯಿಡುತ್ತದೆ.

ಬೇರುಗಂಟು ಜಂತುಹುಳು ಬೇರುಗಳಲ್ಲಿ ಗಂಟುಗಳನ್ನು ಉಂಟುಮಾಡುತ್ತವೆ. ಭೂ ಮೇಲ್ಭಾಗದ ಮೊದಲ ಚಿಹ್ನೆ ಅಸಮರ್ಪಕ ಬೆಳವಣಿಗೆಗೆ ಮತ್ತು ಗಿಡಗಳ ಗುಜ್ಜುವಾಗುವಿಕೆ ಉಂಟಾಗಿ ತೀವ್ರವಾಗಿ ರೋಗಪೀಡಿತ ಗಿಡಗಳು ಶಿಥಿಲವಾಗಿ ಕ್ರಮೇಣ ಸಾಯುತ್ತವೆ.

**ಆಧಾರ ಗ್ರಂಥಗಳು**

ಅಂತರ್‌ಜಾಲ ಸಹಾಯ

ತರಕಾರಿಗಳು

***ಜೆ.ಕೆ.ಆರ್***

## ಹಗೆವು (ಉತ್ತರ ಕರ್ನಾಟಕದ)

ಉತ್ತರ ಕರ್ನಾಟಕವು ಬಹುಪಾಲು ಮಳೆ ಆಶ್ರಿತ ಕೃಷಿಯನ್ನು ಅವಲಂಬಿಸಿದೆ. ಮೇಲು ಜಮೀನಿನಲ್ಲಿ (ಬೆದ್ದಲು ಭೂಮಿ) ಬೆಳೆದ ಬೆಳೆಯನ್ನು (ವಿಶೇಷವಾಗಿ ಜೋಳ, ಗೋಧಿಯನ್ನು) ಸಂರಕ್ಷಿಸಿಡಲು ಪೂರ್ವಜರು ಕಂಡುಕೊಂಡಿರುವ ಮಾರ್ಗವಿದು. ರೈತರ ಭೂ-ಪ್ರಮಾಣವನ್ನು ಅವಲಂಬಿಸಿ, ಹಗೆವಿನ ಆಳತೆಯನ್ನು ನಿರ್ಧರಿಸುವುದು ವಾಡಿಕೆ. 'ಬಲ್ಲಿದವನ ಹಗೆವು ತೆಗೆಯೋ ಹೊತ್ತಿಗೆ ಬಡವನ ಪ್ರಾಣಹೋಯಿತು' ಎಂಬ ಗಾದೆ ಮಾತುಗಳು ಈ ಹಿನ್ನೆಲೆಯಿಂದಲೇ ಹುಟ್ಟಿಕೊಂಡಿರುವಂತಹದು.

**'ಹಗೆವು' ಪದದ ನಿಷ್ಪತ್ತಿ** ಏಕದಳ ಧಾನ್ಯಗಳ ದಾಸ್ತಾನು ಮಾಡುವಲ್ಲಿ ಹಗೇವಿನ ಉಪಯೋಗವು ಬಹುಮುಖ್ಯವಾದುದು. 'ಹಗ್ಗ'ದಿಂದ ಸಹಾಯದಿಂದ ಇಳಿದು, ಜೋಳ/ಗೋಧಿಯನ್ನು ತೊಟ್ಟಿಯಿಂದ ಮೊಗೆದು. ತೊಟ್ಟಿಗೆ ಹಗ್ಗವನ್ನು ಕಟ್ಟಿ ಧಾನ್ಯವನ್ನು ಎಳೆಯುತ್ತಿದ್ದುದರಿಂದ ಇದಕ್ಕೆ 'ಹಗೆವು' ಎಂದು ಕರೆಯುತ್ತಿದ್ದರು. ಇದು ಹಿರಿಯರ ಅಂಬೋಣ. ವಾಸ್ತವವಾಗಿ 'ಹಗೇವು' ಪದದ ನಿಷ್ಪತ್ತಿಯ ವಿಚಾರವೇ ಕುತೂಹಲದಾಯಕವಾಗಿದೆ.

ಮೂಲ ದ್ರಾವಿಡದಲ್ಲಿ 'ಅಗುಟ್' ಎಂಬ ಪದವಿದೆ. ಆ ಪದಕ್ಕೆ ನಿಘಂಟುಕಾರರು 'To dig' ಎಂಬ ಅರ್ಥವನ್ನಿತ್ತಿದ್ದಾರೆ. ಹಾಗೆಯೇ 'ಅಗೆ' ಪದಕ್ಕೆ : to dig; to burrow; to make a hole or a wound (KD, P.14) ಎಂಬ ಅದೇ ಅರ್ಥವು ಇರುವುದು ಗಮನೀಯ.

ಅಗುಟ್ > ಅಗಟ್ > ಅಗುರ್ > ಅಗುಟ್ > ಅಗುಟು > ಅಗೆವು > ಹಗೆವು ಹೀಗೆ 'ಹಗೆವು' ಪದದ ಅರ್ಥವಿಕಾಸವನ್ನು ಕಾಣಬಹುದು. 'ಅಗಿ > ಅಗೆ > ಹಗೆ' ಈ ಕ್ರಿಯಾರೂಪಗಳು ಬಳಕೆಯಲ್ಲಿ ಹಲವು ರೂಪವ್ಯತ್ಯಾಸವನ್ನು ಹೊಂದಿ (ಅರ್ಥವ್ಯತ್ಯಯವಾಗದೆ) ಇಂದು ಬಳಕೆಯಲ್ಲಿರುವ 'ಹಗೆವು' ಪದ ನಿಷ್ಪತ್ತಿಯಾಗಿದೆ.

**ರಚನೆ :** ಉತ್ತರ ಕರ್ನಾಟಕದ ಬಹುಪಾಲು ಹಳ್ಳಿಗಳಲ್ಲಿ ಜೋಳದ ಸಂಗ್ರಹಾಗಾರಗಳಾಗಿ ಹಗೆವುಗಳು ಇದ್ದವು. ಪ್ರಸಕ್ತ ಬಹುಪಾಲು 'ಹಗೆವು'ಗಳು ಮಾಯವಾಗಿರುವುದನ್ನೂ ಕಾಣಬಹುದು. ಆದರೂ ವಿರಳವಾಗಿ ಕಾಣಸಿಗುತ್ತವೆ. 'ಹಗೆವು'ಗಳನ್ನು ತೋಡಲು ಬಹುಪ್ರಶಸ್ತವಾದ ಸ್ಥಳವೆಂದರೆ 'ಕಟಗು' ಹತ್ತುವ ಪ್ರದೇಶ. ತುಂಬಾ ಗಟ್ಟಿಯಾದ, ತಿಳಿ ಹಳದಿ 'ಕಪ್ಪು'ಮಿಶ್ರಿತ ವರ್ಣದ ಮಣ್ಣು, ನೀರು ಬಸಿಯದಂತೆ ತಡೆದು, ಧಾನ್ಯಹಾಳಾಗುವುದನ್ನು ತಪ್ಪಿಸುತ್ತದೆ. ಹಗೆವಿನ ಬಾಯಿಯು ಚೌಕಾಕಾರದ ಪಾಟಿಕಲ್ಲಿನಂತಿರುತ್ತದೆ.

ಆ ಬಾಯಿಯು ಮೊಣಕಾಲಿನ ಗಿಣ್ಣಿನವರೆಗೂ ಇದ್ದು ಅನಂತರ ಆಳವಾಗುತ್ತ ಮಣ್ಣಿನ ಬಿಂದಿಗೆಯ ಆಕಾರವನ್ನು ಪಡೆಯುತ್ತಾ ಹೋಗುತ್ತದೆ. ಪೂರ್ವೋಕ್ತಿಸಿದಂತೆ ಹೊಲದ, ಬೆಳೆಯ ಪ್ರಮಾಣವನ್ನು ಅನುಸರಿಸಿ 16 ರಿಂದ 25 ಹೇರು ಜೋಳಗಳನ್ನು ಹಿಡಿಯುವ 'ಹಗೆವು'ಗಳನ್ನು ತೆಗೆಯುತ್ತಿದ್ದರು. ಕೆಲವು ಕಡೆ ಅನುಕೂಲಸ್ಥರು ತಮ್ಮ ಮನೆಯ ಒಳಗಡೆಯೇ ಹಗೆವು ತೆಗೆದುಕೊಂಡಿರುವ ಉದಾಹರಣೆಗಳಿವೆ.

ಬನದ ಹುಣ್ಣಿಮೆಯನ್ನು ಆಚರಿಸಿ, ಹೊಲದಲ್ಲಿಯ ಗೋಧಿ, ಕಡ್ಲಿಯನ್ನು ಕಿತ್ತು ಒಕ್ಕಲು ಮಾಡುವುದರೊಳಗಾಗಿಯೇ ಬಿಳಿಜೋಳ ಮಾಗಿ ನಿಂತಿರುತ್ತದೆ. ದಂಟಿನ ಸಮೇತ ಕುಡಗೋಲಿನಿಂದ ಕುಯ್ದು ಇಕ್ಕೆಲಗಳನ್ನು ಹಾಕಿ, ತೆನೆಯನ್ನು ಮುರಿದು ಕಣಕ್ಕೆ ಹಾಕಿ ರಾಶಿಯ ಕೆಲಸ ಇನ್ನೇನು ಎರಡು, ಮೂರುದಿನಗಳಲ್ಲಿ ಮುಗಿಯುತ್ತದೆ ಎನ್ನುವಾಗಲೇ ಹಗೆಯ ಬಾಯನ್ನು ತೆಗೆದು, ದನಕರುಗಳು, ಚಿಕ್ಕಮಕ್ಕಳು ಬೀಳದಿರಲೆಂದು ಒಂದು ಬಂಡಿಯ ಗಾಲಿಯನ್ನು ಅದರ ಬಾಯಿಗೆ ಇಟ್ಟು ಎರಡು ದಿನ ಗಾಳಿಯಾಡಲು ಬಿಡುತ್ತಾರೆ. ತತ್ಪೂರ್ವ ಅದರ ಬಾಯಿಯನ್ನು ತೆಗೆದ ಕೂಡಲೆ ಒಂದು ಕಣಕಿಯ ಪೆಂಡಿಗೆ ಉರಿಯನ್ನು ಹಚ್ಚಿ ಅದರೊಳಗೆ ಬಿಟ್ಟು ಮದುವಣಗಿತ್ತಿಯನ್ನಾಡಿಸುವರು. ಅಂದರೆ ರೈತರು ಹಗೆಯನ್ನು 'ಲಕ್ಷ್ಮೀ' ಎಂದು ಪರಿಭಾವಿಸುತ್ತಾರೆ.

ಮರುದಿನ ಅದರ ತಳದಲ್ಲಿರುವ ಬೂದಿಯನ್ನು ಹಗ್ಗ ಕಟ್ಟಿದ ತೊಟ್ಟಿಯಿಂದ ಹೊರಗೆ ಹಾಕಿ, ಸೆಗಣಿಯಿಂದ ಬಾಯ್ಬಂಡಿಯನ್ನು ಸಾರಿಸಿ, ಒಂದು ಚಕ್ಕಡಿ ಕಣಕಿಯನ್ನು ತಂದು ಚಿಕ್ಕ, ಚಿಕ್ಕ ಶಿವುಡುಗಳನ್ನು ಕಟ್ಟಿ ಹಗೆಯ ತಳಪಾಯದಿಂದ ಹಿಡಿದು ಅಡಸುಣಗಿಯನ್ನು (ಆಡಸು = ಅಡಚು; to joint, to be joined to, to unite with; to be near; to associate one self to ಜೋಡಿಸು ಕಟ್ಟುತ್ತ ಅದರ ಬಾಯಿಬಳಿಯ ಹತ್ತಿರ ತಂದು ನಿಲ್ಲಿಸಿ, ಅದರ ತಳಕ್ಕೆ ಸುಂಕವನ್ನು ಹರವಿ, ಅದರ ಮೇಲೆ ಗೋಣಿ ಚೀಲಗಳನ್ನು ಹಾಕಿಸುವರು ಹಗೆವಿನಲ್ಲಿ ಇಳಿದವನು ಮೇಲೆ ಬಂದ ಅನಂತರ ಅವನಿಗೆ ಉಳ್ಳಾಗಡ್ಡಿ ಮತ್ತು ಬೆಲ್ಲವನ್ನು ತಿನ್ನಲು ಕೊಡುತ್ತಾರೆ. (ವೈಜ್ಞಾನಿಕವಾಗಿ ವಿಶ್ಲೇಷಿಸುವುದಾದರೆ, ಹಗೆವಿನೊಳಕ್ಕೆ ಇಳಿದವನಿಗೆ ಉಸಿರಾಟದ ತೊಂದರೆಯಿಂದ ದಮ್ಮು, ಕೆಮ್ಮು ಬಾರದಿರಲೆಂದು) ಮೇಲಿಂದ ಹಗೆಗೆ ಹಾಕಿದ ಕಾಳುಗಳು ಅದರ ಮಧ್ಯದಲ್ಲಿಯೇ ಬೀಳಲೆಂದು ಅದರ ಬಾಯಿಗೆ ಬುಟ್ಟಿಯನ್ನಿಟ್ಟು, ಕಣದಿಂದ ಪೂಜೆ ಮಾಡಿ ಚಕ್ಕಡಿಯಲ್ಲಿ ತುಂಬಿ ತಂದ ರಾಶಿಯನ್ನು ಅದಕ್ಕೆ ಹಾಕುವರು. ಹಗೆಯು ರಾಶಿಯಿಂದ

ತುಂಬಿದ ಮೇಲೆ ಒಂದು ಕುಡಕಿಯಲ್ಲಿ ನೀರನ್ನು ತುಂಬಿ ಅದರ ಮೇಲೆ ಒಂದು ಮುಚ್ಚಳವನ್ನಿಟ್ಟು ಅದನ್ನು ಹಗೆವಿನಲ್ಲಿಟ್ಟು ಬಾಯ್ಗಲ್ಲಿನಿಂದ ಅದನ್ನು ಮುಚ್ಚಿ; ಒಂದು ಪುಟ್ಟಿ ಮಣ್ಣನ್ನು ನೀರಿನಲ್ಲಿ ಕಲಸಿ ಅದರ ರಾಡಿಯನ್ನು ಬಾಯ್ಕಲ್ಲಿನ ಸಂದುಗಳಿಗೆ ಮೆತ್ತಿ, ಮೇಲಿರುವ ಮಣ್ಣನ್ನು ಸಲಕೆಯಿಂದ ಅದರ ಬಾಯಿಗೆ ಎಳೆದು ಹಗೆಯನ್ನು ಮುಚ್ಚುವರು. ಕೆಲವು ದಿನಗಳಾದ ಅನಂತರ ಹಗೆವನ್ನು ತೆರೆದು, ಅದರಲ್ಲಿಯ ಸ್ವಲ್ಪ ಜೋಳವನ್ನು ತೆಗೆದು ಕಿಚಡಿಯನ್ನು ಮಾಡಿ ದೇವರಿಗೆ ಎಡೆ ಹಿಡಿದು ಊಟ ಮಾಡುವುದು ಕೃಷಿಕರ ಸಂಪ್ರದಾಯ.

*ಡಿ.ಎಚ್.*

**ಹಗ್ಗ** ಇಂಗ್ಲಿಷಿನಲ್ಲಿ ರೋಪ್ ಎಂದೂ ಕನ್ನಡದಲ್ಲಿ ಹಗ್ಗ, ಕಣ್ಣೆ ಎಂದೂ ತೆಲುಗಿನಲ್ಲಿ ಪಗ್ಗಮು ಎಂದೂ ಸಂಸ್ಕೃತದಲ್ಲಿ ರಜ್ಜು ಎಂದೂ ತಮಿಳಿನಲ್ಲಿ ಕೈರ್ ಮಲಯಾಳದಲ್ಲಿ ಕಯರ್ ಎಂದೂ ಕರೆಯುವರು. ರೈತನ ಕೃಷಿ ಬದುಕಿನಲ್ಲಿ ಹಗ್ಗದ ಬಳಕೆ ವಿಶೇಷವಾದುದು. ಕೃಷಿಯ ಪ್ರತಿ ಹಂತದಲ್ಲೂ, ಪ್ರತಿಯೊಂದು ಕೆಲಸಕಾರ್ಯಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಹಗ್ಗದ ಉಪಯೋಗ ಇದ್ದೇ ಇದೆ. ಮೂಲತಃ



ಪಶುಗಳನ್ನು ಪಳಗಿಸಲು ಮತ್ತು ನಿಯಂತ್ರಿಸಲು ಹಗ್ಗವನ್ನು ಬಳಸುತ್ತಿದ್ದರು. ಆರಂಭದಲ್ಲಿ ತಮ್ಮ ಸುತ್ತಣ ಪರಿಸರದಲ್ಲಿ ಸಿಗುವ ಕೆಲ ಜಾತಿಯ ಬಳ್ಳಿಗಳೂ ಮರದ ಬೇರುಗಳೂ ಬಳ್ಳಿಯಂತಹ ಗಟ್ಟಿಮುಟ್ಟಾದ ರೆಂಬೆಗಳೂ ಹಗ್ಗಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಕೃಷಿಯ ಬದುಕು ವಿಸ್ತಾರಗೊಂಡಂತೆಲ್ಲ ಹಗ್ಗದ ಬಳಕೆ ಅನಿವಾರ್ಯವೂ ರೈತನ ಮೂಲಭೂತ ಆವಶ್ಯಕತೆಗಳಲ್ಲಿ ಒಂದಾಗಿಯೂ ಪರಿಣಮಿಸಿತು.

ಹಗ್ಗದ ತಯಾರಿಕೆಯಲ್ಲಿ ಬಳಸುವ ವಸ್ತುಗಳು ಆಯಾ ಪ್ರದೇಶದಲ್ಲಿ ದೊರೆಯುವ ಸ್ಥಳೀಯ ಮೂಲವಸ್ತುಗಳೇ.

**ಹಗ್ಗಗಳಲ್ಲಿ ಹಲವು ಬಗೆ :** ಹತ್ತಿ, ಭೂತಾಳೆಪಟ್ಟೆ, ತೆಂಗಿನನಾರು, ಸೆಣಬು, ಗಾಂಜಾಗಿಡದ ನಾರು, ಪುಂಡಿಸೊಪ್ಪಿನ ನಾರು ಕಲ್ನಾರು, ರಕ್ಕಸಬಾಳೆ ನಾರು, ವಿವಿಧ ಬಗೆಯ ಬೇರುಗಳನ್ನು ಕೆಲವು ಬಗೆಯ ಸಸ್ಯಗಳು, ಆಧುನಿಕ ಕಾಲದಲ್ಲಿ ಪ್ಲಾಸ್ಟಿಕ್ ಮತ್ತು ನೈಲಾನ್ ವಸ್ತುಗಳು ಮುಂತಾದವುಗಳಿಂದ ಹಗ್ಗವನ್ನು ತಯಾರಿಸುತ್ತಾರೆ.

**ಬಳಕೆ :** ನಾರಿನ ಹಗ್ಗವನ್ನು ದನ ಕಟ್ಟಲು, ಉಳುಮೆ ಮಾಡುವಾಗ ಎತ್ತುಗಳಿಗೆ, ನೇಗಿಲಿಗೆ, ಹುಲ್ಲಿನ ಹೊರೆ ಕಟ್ಟಲು, ಬಾಯಿಕುಕ್ಕೆಗೆ ನೆಲುವುಗಳಿಗೆ ಎತ್ತಿನಗಾಡಿಗೆ ನೀರು ಸೇದಲು ಕಪಿಲೆಯಲ್ಲಿ ನೀರು ಎತ್ತಲು ಈ ಹಗ್ಗವನ್ನು ಬಳಸುವುದಿದೆ. ಗಾತ್ರ ಮತ್ತು ಗಟ್ಟಿತನಕ್ಕನುಗುಣವಾಗಿ ಇದರ ಬಳಕೆ ಇದೆ. ಹತ್ತಿ ಹಗ್ಗವನ್ನು ಮೂಗು ದಾರಕ್ಕಾಗಿ, ಬಾರುಕೋಲಿಗೆ, ಮೀನಿನ ಬಲೆಗೆ ಬಳಸುವರು. ಮಿಣಿಹಗ್ಗ. ಮಿಣಿ ಎಂದರೆ ಪಶುಗಳ (ದನ, ಎಮ್ಮೆ) ಚರದಿಂದ ಸಿದ್ಧಪಡಿಸಿದ ಹಗ್ಗ. ಸತ್ತ ದನಗಳು ಚರ್ಮ ಸುಲಿದು ಸಣ್ಣ ಎಳೆಗಳಾಗಿ ಹದ ಮಾಡಿಕೊಂಡು ಹಗ್ಗದಂತೆ ಹೊಸೆಯುತ್ತಿದ್ದರು. ಇದನ್ನು ಉಳುಮೆ ಮಾಡುವ ಎತ್ತುಗಳನ್ನು ನಿಯಂತ್ರಿಸಲು ಬಳಸುತ್ತಿದ್ದರು. ಬಯಲು ಸೀಮೆಗಿಂತ ಕರ್ನಾಟಕದ ಉತ್ತರ ಭಾಗದಲ್ಲಿ ಇದರ ಬಳಕೆ ಹೆಚ್ಚು. ಹಿಂದಿನ ಕಾಲದಲ್ಲಿ ನಾಲ್ಕೈದು ಜೊತೆ ಎತ್ತುಗಳನ್ನು ಹೂಡಿ ವ್ಯವಸಾಯ ಮಾಡಲಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಗಟ್ಟಿಮುಟ್ಟಾದ ಈ ಮಿಣಿ ಹಗ್ಗವನ್ನೇ ಬಳಸಬೇಕಾಗಿತ್ತು. ಕೆಲಸಕ್ಕೆ ಅನುಗುಣವಾಗಿ ಇದರ ಗಾತ್ರ, ಉದ್ದಗಳಲ್ಲಿ ವ್ಯತ್ಯಾಸವಿರುತ್ತದೆ. ಒಂದು ಜೊತೆ ಎತ್ತುಗಳನ್ನು ಬಳಸಿ ಕೆಲಸ ಮಾಡುವಾಗ ಹೆಬ್ಬೆಟ್ಟಿನ ಗಾತ್ರದ ಹಗ್ಗ ಸಾಕು. ಬಂದರುಗಳಲ್ಲಿ ಹಡಗುಗಳನ್ನು ಲಂಗರು ಹಾಕಲು ಬಳಸುವ ಹಗ್ಗ ತೋಳು ಗಾತ್ರವಿರುತ್ತದೆ. ಇದನ್ನು ನೈಲಾನ್ ಮತ್ತು ಪ್ಲಾಸ್ಟಿಕ್‌ಗಳಿಂದ ತಯಾರಿಸುವುದಿದೆ. ಇದು ಹೆಚ್ಚು ಬಾಳಿಕೆ ಬರುವಂಥಾಗಿದ್ದು ನೀರಿನಲ್ಲಿ ನೆನೆದರೂ ಹಾಳಾಗುವುದಿಲ್ಲ. ಸಮುದ್ರದಲ್ಲಿ ಮೀನು ಹಿಡಿಯುವ ಬೆಸ್ತರು ಬಳಸುವ ಬೃಹತ್‌ಗಾತ್ರದ ಬಲೆಗಳನ್ನು ನೈಲಾನ್, ಪ್ಲಾಸ್ಟಿಕ್‌ಗಳಿಂದಲೇ ತಯಾರಿಸುತ್ತಾರೆ.

ಹಿಂದಿನ ಕಾಲದಲ್ಲಿ ಹಗ್ಗವನ್ನು ತಯಾರು ಮಾಡಿ ಜೀವನ ಸಾಗಿಸುತ್ತಿದ್ದ ಕೆಲವು ಸಮುದಾಯಗಳೇ ಇದ್ದು ಅವು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನೇ ಅವಲಂಬಿಸಿದ್ದವು. ಬದಲಾದ ಪರಿಸ್ಥಿತಿಯಲ್ಲಿ ಯಂತ್ರಗಳ ಸಹಾಯದಿಂದ ಹಗ್ಗವನ್ನು ವಿವಿಧ ನಮೂನೆಗಳಲ್ಲಿ ಮತ್ತು ಅತಿಶೀಘ್ರವಾಗಿಯೂ ಹಲವು ಬಗೆಯ ಹೊಸ ವಸ್ತುಗಳಿಂದಲೂ ತಯಾರಿಸುತ್ತಿರುವುದರಿಂದ ಅನಿವಾರ್ಯವಾಗಿ ಪಾರಂಪರಿಕ ಸಮುದಾಯಗಳು ಬೇರೆ ವೃತ್ತಿಯನ್ನು ಅವಲಂಬಿಸಿವೆ. ಆದರೂ ಸ್ಥಳೀಯವಾಗಿ ರೈತರು ತಮ್ಮ ಪರಿಸರದಲ್ಲೇ ದೊರೆಯುವ ಅಗ್ಗದ ಪದಾರ್ಥಗಳಿಂದ ಹಗ್ಗ ತಯಾರಿಸಿ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಇವರ ದೃಷ್ಟಿಯಿಂದ ತೃಣವೂ ಘನವಾದ ವಸ್ತುವೇ. ಬತ್ತದ ಹುಲ್ಲನ್ನು ಹೊಸೆದು ಹಗ್ಗ ತಯಾರಿಸಿಕೊಂಡು ಹೊರೆ ಕಟ್ಟಲು ಮತ್ತು ಅರಿಯಿಂದ ಬತ್ತ ಬೇರ್ಪಡಿಸಲು ಇದು ಬಳಕೆಯಾಗುತ್ತದೆ. ಕಣದಿಂದ ಹುಲ್ಲು ಸಾಗಿಸಲು ಬರ್ಕವನ್ನು ಹಗ್ಗದಿಂದ ಸಿದ್ಧಪಡಿಸಿಕೊಳ್ಳುತ್ತಾರೆ. ಇದು ಬಲೆಯಂತೆ ದೊಡ್ಡ ದೊಡ್ಡ ಕಣ್ಣುಗಳಿದ್ದು ನಾಲ್ಕು ಅಡಿ ಅಗಲ ನಾಲ್ಕು ಅಡಿ ಉದ್ದವಿದ್ದು ಚೌಕಾಕಾರವಾಗಿದ್ದು ನಾಲ್ಕು ಮೂಲೆಗಳಲ್ಲಿ ಕಿರು ಬೆರಳಿನ ಗಾತ್ರದ 5-6 ಅಡಿ ಉದ್ದದ ಹಗ್ಗಗಳನ್ನು ಕಟ್ಟಿರುತ್ತಾರೆ. ಇದು ಕತ್ತಾಳೆ ನಾರು, ತೆಂಗಿನನಾರು, ಪ್ಲಾಸ್ಟಿಕ್, ದಾರವನ್ನು ಬಳಸಿ ಸಿದ್ಧಪಡಿಸುವಂಥದ್ದು.

*ಎಚ್.ಎಚ್.*

**ಹತ್ತಿ** ಮಾನವನಿಗೆ ಬೇಕಾದ ಅತಿ ಮುಖ್ಯವಾದ ವಸ್ತುಗಳಲ್ಲಿ ಬಟ್ಟೆಯೂ ಒಂದು. ಇದನ್ನು ತಯಾರಿಸುವ ಮೂಲವಸ್ತುಗಳಲ್ಲಿ ಹತ್ತಿ ಪ್ರಮುಖ ಸ್ಥಾನವನ್ನು ಪಡೆದಿದೆ. ಹತ್ತಿಯಿಂದ ನೂಲುವುದು, ನೇಯುವುದು, ನೂಲಿನಿಂದ ನೇಯ್ದು ವಸ್ತ್ರ ತಯಾರಿಸುವುದು ಒಂದು ಕಲೆ ಹಾಗೂ ಜ್ಞಾನ. ವಸ್ತ್ರ ವಿನ್ಯಾಸ, ಬಣ್ಣ ಹಾಕುವುದು, ಮುದ್ರಿಸುವುದು ಪ್ರಪಂಚಕ್ಕೆ ಅರಿತದ್ದು 'ಮೂರ್' ಜನರಿಂದ. ಬಟ್ಟೆಯಿಂದ ಮೈಯನ್ನು ಮುಚ್ಚುವುದು ಆ ದೇಶದ ಉನ್ನತಿ ಹಾಗೂ

ಸಂಸ್ಕೃತಿಯ ಪ್ರತೀಕಗಳಾಗುತ್ತವೆ. ಭಾರತದಲ್ಲಿ ಋಗ್ವೇದ, ರಾಮಾಯಣ ಹಾಗೂ ಮಹಾಭಾರತದಂತಹ ಮಹಾಕಾವ್ಯಗಳಲ್ಲಿಯೂ ಹತ್ತಿಯ ಉಲ್ಲೇಖವಿದೆ. ಯಾವ ದೇಶವು ಅನಾದಿಕಾಲದಿಂದಲೂ ಹತ್ತಿಯನ್ನು ಬೆಳೆದು ಅದರಿಂದ ವಸ್ತ್ರಗಳನ್ನು ತಯಾರಿಸಿ ಮಾನವನ ಉಪಯೋಗಕ್ಕೆ ಬಳಸಿಕೊಂಡು ತನ್ನ ಹಿರಿಮೆಯನ್ನು ಉಳಿದೆಲ್ಲಾ ಭೂಪ್ರದೇಶಕ್ಕೆ ಹರಡಿತೋ ಅಂದಿನಿಂದಲೇ ಆ ದೇಶವು ಹಿರಿಮೆ, ನಾಗರೀಕತೆ ಹಾಗೂ ಸಂಸ್ಕೃತಿರ್ಯನ್ನು ಹೊಂದಿತೆನ್ನಬಹುದು.



**ಹವಾಗುಣ :** ಪ್ರಪಂಚದಲ್ಲಿ ಬೆಳೆಯಲಾಗುವ ಪ್ರಮುಖ ಬೆಳೆಗಳಲ್ಲಿ ಹತ್ತಿಗೆ ಎರಡನೆಯ ಸ್ಥಾನವಿದೆ. ಬಳಕೆ ಮತ್ತು ಗಳಿಕೆಯಲ್ಲಿಯೂ ಅಷ್ಟೇ ಉತ್ತಮ ಬೆಳೆ. ಹಾಗಾಗಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಹತ್ತಿಯನ್ನು ಬೆಳೆಯುತ್ತಾರೆ. ಆದರೆ ಹೆಚ್ಚಾಗಿ ಉಷ್ಣವಲಯದ ವಾತಾವರಣದಲ್ಲಿ ಉತ್ತಮವಾಗಿ ಬೆಳೆಯುತ್ತದೆ. ವಿಶಾಲವಾದ ಮೈದಾನ ಪ್ರದೇಶ ಈ ಬೆಳೆಗೆ ಅನುಕೂಲಕರವಾಗಿದೆ. ಸಮುದ್ರ ಮಟ್ಟದಿಂದ ಸುಮಾರು 3500 ಅಡಿಗಳಷ್ಟು ಎತ್ತರವಿರುವ ಭೂ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯುವರು. ಬೆಳೆಯ ಕಾಲದಲ್ಲಿ ಹೆಚ್ಚು ಉಷ್ಣಾಂಶವಿರಬೇಕು. ಹತ್ತಿ ಕನಿಷ್ಠವೆಂದರೆ 20 ಅಂಗುಲಗಳಿಂದ 35 ಅಂಗುಲದಷ್ಟು ಮಳೆಯಾದರೆ ಬೆಳೆ ಉತ್ತಮವಾಗಿರುತ್ತದೆ. ಅತಿ ಹೆಚ್ಚಿನ ಮಳೆ ಸುರಿದರೆ ಬೆಳೆ ಹಾಗೂ ಹತ್ತಿ ಕೆಟ್ಟುಹೋಗುತ್ತದೆ. ಪ್ರಪಂಚದಲ್ಲಿ ಉತ್ಪನ್ನವಾಗುವ ಒಟ್ಟು ಹತ್ತಿಯಲ್ಲಿ ಅಮೆರಿಕಾ ದೇಶವು 2/3 ರಷ್ಟನ್ನು ಉತ್ಪಾದಿಸಿದರೆ ಭಾರತ 1/6, ಉಳಿದ 1/6 ಭಾಗವನ್ನು ಚೀನಾ, ರಷ್ಯ, ಟರ್ಕಿ, ಬ್ರಜಿಲ್, ಮೆಕ್ಸಿಕೋ ಶ್ರೀಲಂಕಾ ದೇಶಗಳಲ್ಲಿ ಬೆಳೆಯುತ್ತಾರೆ.

**ಭೂಗುಣ :** ಉತ್ತಮವಾದ ಹತ್ತಿ ಬೆಳೆಗೆ ಅನುಕೂಲಕರವಾದ ಭೂಮಿ ಕಪ್ಪುನೆಲ. ಸ್ವಾಭಾವಿಕವಾಗಿ ಮಣ್ಣಿನ ಹಂಚಿಕೆ ಭೂಮಿಯ ಮೇಲೆ ಒಂದೇ ತೆರನಾಗಿರುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಇಂತಹ ಗುಣವನ್ನು ಹೊಂದಿರುವ ಭೂಮಿಯು ನೂರಾರು ಮೈಲುಗಳಷ್ಟು ವಿಸ್ತರಿಸಿದ್ದರೆ, ಲಕ್ಷಾಂತರ ಹೆಕ್ಟೇರ್‌ನಷ್ಟು ವ್ಯಾಪಿಸಿರುವುದು ಕಂಡುಬರುತ್ತದೆ. ಅಲ್ಲಿಯ ವಾಯುಗುಣ ಹಾಗೂ ಹವಾಗುಣಗಳು ಹತ್ತಿ ಬೆಳೆಗೆ ಉಪಯುಕ್ತವಾಗಿದ್ದರೆ ಒಳ್ಳೆಯ ಹತ್ತಿ ಉತ್ಪಾದನೆಯಾಗುತ್ತದೆ. ಏಕೆಂದರೆ ಇಂತಹ ಮಣ್ಣು ಬೇಸಗೆ ಕಾಲದಲ್ಲಿ ಮೇಲ್ಪದರದಲ್ಲಿ ಒಡೆದು ಛಿದ್ರಗೊಳ್ಳುವುದರಿಂದ ಮಳೆಗಾಲದಲ್ಲಿ ಬಿದ್ದ ಮಳೆಯ ನೀರು ಬೇರೆಯ ಕಡೆ ಹರಿದು ಹೋಗದಂತೆ ಎಷ್ಟು ನೀರನ್ನಾದರೂ ತನ್ನೊಳಕ್ಕೆ ಹೀರಿಕೊಂಡು ಇಂಗಿಸಿಕೊಳ್ಳುವ ಗುಣವನ್ನು ಹೊಂದಿರುತ್ತದೆ. ಅಲ್ಲದೆ ಕಪ್ಪುಮಣ್ಣು ಗಾಳಿಯಲ್ಲಿರುವ ತೇವಾಂಶವನ್ನು ಹೀರಿಕೊಳ್ಳುವ ಗುಣವನ್ನು ಹೊಂದಿರುವುದರ ಜೊತೆಗೆ ನೆಲದ ಅಡಿಯಲ್ಲಿರುವ ತೇವಾಂಶ ಬಹಳ ಕಾಲ ಒಣಗದಂತೆ ಕಾಪಾಡಿಕೊಳ್ಳುವ ಶಕ್ತಿಯನ್ನು ಹೊಂದಿದೆ. ಆ ಕಾರಣದಿಂದ ಅಲ್ಪ ಮಳೆಯಾದರೂ ಸಹ ಸಾಧಾರಣವಾದ ಬೆಳೆಯನ್ನು ಪಡೆಯಬಹುದು. ಇಂತಹ ಕಪ್ಪು ನೆಲದಲ್ಲಿ ಸುಣ್ಣದ ಹರಳಿನ ಮಿಶ್ರಣವಿರುವುದರಿಂದ ಭೂಮಿ ಬಿರಿಯುವ ಗುಣ ಹೊಂದುತ್ತವೆ. ಇಂತಹ ಭೂಮಿಯನ್ನು 'ಕಂಕರ್'ಗಳು ಎಂದು ಕರೆಯುವರು.

ಕಪ್ಪು ಮಣ್ಣಿನ ಭೂಮಿ ಹತ್ತಿ ಬೆಳೆಗೆ ಉಪಯುಕ್ತ, ಆದರೂ ಕೆಂಪುಮಣ್ಣು, ಬೂದು ಮಣ್ಣು ಹಾಗೂ ಬಿಳಿಯ ಮಣ್ಣಿನ ನೆಲಗಳಲ್ಲೂ ಮೆಕ್ಕಲು ಮಣ್ಣಿನಲ್ಲಿಯೂ ಹತ್ತಿಯನ್ನು ಬೆಳೆಯುತ್ತಾರೆ. ಜೌಗು ಭೂಮಿ ಹತ್ತಿ ಬೆಳೆಗೆ ಅನುಕೂಲವಲ್ಲ. ಬೆಳೆಯ ಜಾತಿಯು ಮಣ್ಣಿನ ಗುಣಕ್ಕೆ ಹೊಂದಿಕೆಯಾಗುವಂತಿರಬೇಕು. ಭಾರತದಲ್ಲಿ ಬಹುಪಾಲು ಹತ್ತಿ ಕಪ್ಪುಮಣ್ಣಿನಲ್ಲಿ ಬೆಳೆಯುತ್ತದೆ. ಅಮೆರಿಕ ದೇಶದಲ್ಲಿ ಮಣ್ಣಿಗೆ ತಕ್ಕಂತೆ ಹತ್ತಿಯ ಜಾತಿಗಳ ಬೆಳೆವಣಿಗೆಯಿರುವುದರಿಂದ ಕೆಂಪು ಮಣ್ಣಿನಲ್ಲಿಯೂ ಉತ್ತಮ ಇಳುವರಿಯನ್ನು ಪಡೆಯುತ್ತಾರೆ. ಆದರೆ ಕಪ್ಪು ಮಣ್ಣಿನಲ್ಲಿಯ ಇಳುವರಿ ಕಡಿಮೆಯಿರುತ್ತದೆ. ಕಪ್ಪು ಮಣ್ಣನ್ನು ಹೊರತು ಪಡಿಸಿದರೆ ಉಳಿದ ಮಣ್ಣುಗಳಲ್ಲಿ ಹತ್ತಿಯನ್ನು ನೀರಾವರಿಯ ಸಹಾಯದಿಂದಲೂ ಬೆಳೆಯಬಹುದು. ಸ್ವಾಭಾವಿಕ ವಾತಾವರಣ ಹತ್ತಿ ಬೆಳೆಗೆ ಅನುಕೂಲಕರ. ಜೌಗುನೆಲ ಹತ್ತಿ ಬೆಳೆಗೆ ಯೋಗ್ಯವಾಗಿರುವುದಿಲ್ಲ.

**ಬೇಸಾಯದ ಕಾಲ :** ಹತ್ತಿಯನ್ನು ಎಲ್ಲಾ ಕಾಲಗಳಲ್ಲಿಯೂ ಬೆಳೆಯಲು ಸಾಧ್ಯವಿಲ್ಲ. ಮಳೆ ಬೀಳುವ ಕಾಲ, ಮಳೆ ಬೀಳುವ ಪರಿಮಾಣ, ಭೂಮಿಯ ಗುಣ, ಹತ್ತಿಯ ಜಾತಿ, ಉಷ್ಣಾಂಶ ಇವುಗಳೆಲ್ಲವೂ ಪ್ರಮುಖವಾಗಿ ಪರಿಣಾಮವನ್ನು ಬೀರುತ್ತವೆ. ನೀರಾವರಿ ವ್ಯವಸ್ಥೆಯ ಅನುಕೂಲವನ್ನರಿತು ಬೇಸಾಯ ಮಾಡಬಹುದಾಗಿದೆ. ಭಾರತದಲ್ಲಿ ಮುಂಗಾರಿನ ಸಮಯ ಹತ್ತಿ ಬೆಳೆಗೆ ಯುಕ್ತವಾದುದು. ಏಪ್ರಿಲ್ - ಮೇ ತಿಂಗಳಿನಲ್ಲಿ ಮುಂಗಾರು ಆರಂಭವಾಗುತ್ತದೆ. ಭೂಮಿಯನ್ನು ಉಳುಮೆ ಮಾಡಿ ಹದವಾಗಿಸಿಕೊಂಡು ಹತ್ತಿಯ ಬೇಸಾಯವನ್ನು ಮಾಡಬಹುದು. ಇದೇ ಸಮಯದಲ್ಲಿ ಬಿಳಿಜೋಳ, ನೆಲಗಡಲೆ, ಕೊತ್ತಂಬರಿ, ಕಡಲೆ, ಹೊಗೆಸೊಪ್ಪು, ಹೆಸರು, ಉದ್ದು, ಅಲಸಂದೆ, ಗೋದಿ ಮುಂತಾದ ಬೆಳೆಗಳನ್ನು ಆಯಾಯ ಮಣ್ಣು ಹಾಗೂ ಪ್ರದೇಶಕ್ಕನುಗುಣವಾಗಿ ಬೆಳೆಯಲಾಗುತ್ತದೆ. ಹಾಗೆಯೇ ಹತ್ತಿಗೂ ಮೀಸಲಾದ ಭೂಮಿಯ ಅಗತ್ಯವಿರುತ್ತದೆ. ಹತ್ತಿಯು ಹೂ ಬಿಡುವ ಕಾಲವನ್ನು ಪರಿಗಣಿಸಿ ಮುಂಗಾರಿನಲ್ಲಿ ಬಿತ್ತನೆ ಕಾರ್ಯವನ್ನು ಆರಂಭಿಸುವುದು ಭಾರತದ ಹತ್ತಿ ಬೆಳೆಗಾರರ ಕ್ರಮವಾಗಿದೆ.

**ಬೇಸಾಯದ ಕ್ರಮ :** ಭಾರತದಲ್ಲಿ ಹತ್ತಿಯನ್ನು ಹೆಚ್ಚಾಗಿ ಕಪ್ಪು ನೆಲದಲ್ಲಿ ಬೆಳೆಯುತ್ತಾರೆ. ಹತ್ತಿಯನ್ನು ಬೆಳೆಯುವ ಭೂಮಿಯು ವಿಶಾಲವಾಗಿಯೂ ಸಮತಟ್ಟಾಗಿಯೂ ಇರುತ್ತದೆ. ಅಂತಹ ಭೂಮಿಯನ್ನು ಉತ್ತು ಮಣ್ಣನ್ನು ಪುಡಿಯಾಗುವಂತೆ ಮಾಡಲಾಗುತ್ತದೆ. ಇಲ್ಲವಾದಲ್ಲಿ ಗುದ್ದಲಿ ಹಾಗೂ ಕೋಲುಗುದ್ದಲಿಯಿಂದ ಆಳವಾಗಿ ಅಗೆದು ಗರಿಕೆಯಂತಹ ದೀರ್ಘಾವದಿ ಕಳೆಯು ಹೆಚ್ಚಾಗದಂತೆ ಎಚ್ಚರಿಕೆವಹಿಸಬೇಕು. ಉಳುಮೆಯ ಅನಂತರ ಹೊಲದ ಮಣ್ಣು ಅಥವಾ ಮೇಲ್ಪದರವು ಹುಡಿಯಾಗಿ

ಬಿಸಿಲಿನಲ್ಲಿ ಚೆನ್ನಾಗಿ ಕಾದು ಹದಗೊಳ್ಳುತ್ತದೆ. ಭೂಮಿ ಸಮತಟ್ಟಾಗಿರುವಂತೆ ಮಾಡಬೇಕು. ಅಗತ್ಯವಿದ್ದರೆ ಕುಂಟೆಯನ್ನು ಹೊಡೆಯಬೇಕಾಗುತ್ತದೆ. ಅನಂತರ ಎತ್ತುಗಳಿಂದ ನೇಗಿಲಿನಲ್ಲಿ 3-4 ಅಡಿ ಅಳತೆಯಲ್ಲಿ ಉದ್ದವಾಗಿ ನೇಗಿಲಿನ ಗುರುತು ಉಳಿಯುವಂತೆ ಉಳಬೇಕು. ಅದೇ ರೀತಿ ಅಡ್ಡಲಾಗಿ 3-4 ಅಡಿ ಅಳತೆಯಲ್ಲಿ ಉತ್ತಾಗ ಚಚ್ಚೌಕಾರದ ಗೆರೆಗಳು ಮೂಡುತ್ತವೆ. ಆ ನಡುವಿನ ಗುಳಿಯಿರುವ ಜಾಗಕ್ಕೆ ಹತ್ತಿಯ ಬೀಜಗಳನ್ನು ಹರಡಿ ಅದರ ಮೇಲೆ ಕೊಟ್ಟಿಗೆ ಗೊಬ್ಬರ ಅಥವಾ ರಾಸಾಯನಿಕ ಗೊಬ್ಬರವನ್ನು ಹಾಕಿ ಮುಚ್ಚಬೇಕು.

ಕೆಲವು ಪ್ರದೇಶಗಳಲ್ಲಿ ಉಳುಮೆಗೆ ನೇಗಿಲನ್ನಲ್ಲದೆ ಕೂರಿಗೆಯನ್ನೂ ಬಳಸುತ್ತಾರೆ. ಹತ್ತಿಯಲ್ಲಿ ಹಲವು ಜಾತಿಯ ಪ್ರಭೇದಗಳಿರುವುದರಿಂದ ಕೆಲವು ದೊಡ್ಡ ಗಿಡಗಳಾಗುತ್ತವೆ, ಕೆಲವು ಕುರುಚಲುಗಳಾಗುತ್ತವೆ. ಬೆಳೆಯ ಜಾತಿಯನ್ನಾಧರಿಸಿ ಅವು ಬೆಳೆಯಲು ಬೇಕಾದ ಸ್ಥಳಾವಕಾಶ, ಹರಡುವಿಕೆಗೆ ಅನುಕೂಲವೂ ಹತ್ತಿಯ ಹೂಗಳನ್ನು ಬಿಡಿಸಲು ಸಹಕಾರಿಯೂ ಆಗುವಂತೆ ಗಿಡದಿಂದ ಗಿಡಕ್ಕೆ ಅಂತರವಿರುವಂತೆ ಬಿತ್ತುವಾಗಲೇ ಸರಿದೂಗಿಸಿಕೊಂಡು ಬೀಜ ಹಾಕಬೇಕಾಗುತ್ತದೆ. ಕುರುಚಲು ಜಾತಿಯ ಹತ್ತಿಯಾದರೆ 1 ರಿಂದ 2 ಅಡಿ, ದೊಡ್ಡ ಗಿಡದ ಪ್ರಬೇಧವಾದರೆ 2-3 ಅಡಿ ಅಂತರವಿರುವಂತೆ ಸಾಲು ಹೊಡೆದು ಬಿತ್ತನೆಮಾಡಬೇಕು.

ಬೀಜಗಳು ಮೊಳಕೆಯೊಡೆದು ಬೆಳೆಯಲು ಆರಂಭಿಸಿದಂತೆ ಆಗಾಗ ಮಧ್ಯಬೇಸಾಯ ಮಾಡಿ ಕಳೆಯನ್ನು ತೆಗೆದು ತೇವಾಂಶ ಆರದಂತೆ ಕಾಪಾಡಿಕೊಳ್ಳಲು ಎಚ್ಚರವಹಿಸಬೇಕು. ಹತ್ತಿ ಕುರುಚಲು ಜಾತಿಯಾದರೆ ಹಾಗೇ ಬೆಳೆಸಿದರೆ ಸಾಕು. ದೊಡ್ಡ ಪ್ರಬೇಧವಾದರೆ ಗಿಡದ ಸುತ್ತಲಿನ ಕುಡಿಗಳನ್ನು ಕತ್ತರಿಸಬೇಕಾಗುತ್ತದೆ. ಇದರಿಂದ ಹೆಚ್ಚಿನ ಕವಲುಗಳಾಗಿ, ಚಿಗುರಿ ಹೂಬಿಟ್ಟು ಉತ್ತಮ ಫಸಲು ಹಾಗೂ ಹೆಚ್ಚಿನ ಇಳುವರಿ ಬರುತ್ತದೆ.

**ಬೆಳೆಯ ಅವಧಿ :** ಹತ್ತಿಯ ಜಾತಿ ಮತ್ತು ಪ್ರಬೇಧಗಳಿಂದಾಗಿ ಬೆಳೆ ಹಾಗೂ ಫಸಲಿನಲ್ಲಿ ಮತ್ತು ಬೆಳೆಯುವ ಅವಧಿಯಲ್ಲಿ ವ್ಯತ್ಯಾಸಗಳಿವೆ. ದೊಡ್ಡ ಹತ್ತಿಯು ಬೀಜ ನೆಟ್ಟ ದಿನದಿಂದ ಸುಮಾರು ನೂರು ದಿನಗಳಲ್ಲಿ ಹೂಬಿಟ್ಟು, ಕಾಯಿ ಬಲಿತು, ಹತ್ತಿಯ ಸಿಪ್ಪೆ ಸಿಡಿದು ಅರಳುತ್ತದೆ. ಒಂದು ಗಿಡದಲ್ಲಿಯ ಬೆಳೆ ಪೂರ್ಣಗೊಳ್ಳಲು 140 ರಿಂದ 160 ದಿನಗಳು ಬೇಕಾಗುತ್ತವೆ. ಜೂನ್-ಜುಲೈನಲ್ಲಿ ಬಿತ್ತನೆಯಾಗುವ ದೊಡ್ಡ ಹತ್ತಿಯು ಡಿಸೆಂಬರ್ ತಿಂಗಳವರೆಗೂ ಇರುತ್ತದೆ. ಕೆಲವು ಸಣ್ಣ ಪ್ರಬೇಧದ ಕುರುಚಲು ಹತ್ತಿಯನ್ನು ಆಗಸ್ಟ್ ತಿಂಗಳಿನಲ್ಲಿ ಬಿತ್ತನೆ ಮಾಡುತ್ತಾರೆ. ಅದು ಡಿಸೆಂಬರ್‌ನಿಂದ ಜನವರಿವರೆಗೂ ಬೀಜಸಹಿತವಾದ ಹತ್ತಿಯನ್ನು ಬಿಡುತ್ತದೆ. ಹತ್ತಿಯು ಚೆನ್ನಾಗಿ ಅರಳಿ ಕೊಯ್ಲಿಗೆ ಬಂದಾಗ ಮಳೆಯಾದರೆ ಫಸಲು ಹಾಗೂ ಹತ್ತಿ ಹಾಳಾಗುತ್ತದೆ. ಬೆಳೆವ ರೈತ ನಷ್ಟವನ್ನನುಭವಿಸಬೇಕಾಗುತ್ತದೆ. ಬೆಳೆ ಮುಗಿದ ಮೇಲೆ ಗಿಡವನ್ನು ಉರುವಲಾಗಿ ಬಳಸುತ್ತಾರೆ.

**ವೈಜ್ಞಾನಿಕ ವಿಂಗಡಣೆ :** ಹೂ ಬಿಡುವ ಈ ಸಸ್ಯ ಮ್ಯಾಗ್ನೋಲಿಯೋಪ್ಸಿಡ್ ವರ್ಗಕ್ಕೆ ಸೇರಿದುದಾಗಿದೆ. ಮಾಲ್ವೇಲ್ಸ್ ಗುಂಪಿನ ಮಾಲ್ವೇಸ್ ಕುಟುಂಬದ ಗಾಸಿಪಿಯಮ್ ಜಾತಿಗೆ ಸೇರಿದ ಹತ್ತಿಯು ಗಾಸಿಪಿಯಮ್ ಜಾತಿಯ ಗಿಡಗಳ ಬೀಜದ ಸುತ್ತಲೂ ಬೆಳೆಯುವ ಮೃದು ನಾರು ಆಗಿರುತ್ತದೆ. ಈ ಜಾತಿಯ ಗಿಡಗಳು ಭಾರತ, ಅಮೇರಿಕ, ಆಫ್ರಿಕ ಮೂಲದಿಂದ ಬಂದಂಥವು. ಇಂಥ ಹತ್ತಿಯ ನಾರಿನಿಂದ ಹೆಣೆದ ದಾರದಿಂದ ಮೃದುವಾದ ಹಾಗೂ ಗಾಳಿಗೆ ತೂರಬಲ್ಲಂತಹ ಗುಣಮಟ್ಟದ ಹಾಗೂ ಆಕರ್ಷಕವಾದ ಬಟ್ಟೆಯನ್ನು ತಯಾರಿಸುತ್ತಾರೆ. ಪ್ರಪಂಚಾದ್ಯಂತ ಬಟ್ಟೆ ತಯಾರಿಕೆಗೆ ಬಳಸುವ ಬೃಹತ್ ಪ್ರಮಾಣದ ನೈಸರ್ಗಿಕ ಹತ್ತಿ ಇದು.

**ಪ್ರಮುಖ ಜಾತಿಗಳು :** ಪ್ರಪಂಚದಲ್ಲಿ ಸುಮಾರು 39 ಜಾತಿಯ ಹತ್ತಿ ಪ್ರಬೇಧಗಳಿವೆ. ಆದರೆ ಬಟ್ಟೆಗೆ ಬಳಕೆಯಾಗುವುದು ಕೆಲವು ಜಾತಿಯ ಸಸ್ಯಗಳು ಮಾತ್ರ.

**ಗಾಸಿಪಿಯಮ್ ಅರ್ಬೋರೀ ಯಮ್ ತಳಿ :** ಇದನ್ನು ಮೂಲತಃ ಭಾರತ ಉಪಖಂಡದ ವಾಯುವ್ಯ ಪ್ರದೇಶಗಳಾದ ಪಾಕಿಸ್ತಾನ ಹಾಗೂ ಆಫ್ಘಾನಿಸ್ತಾನಗಳಲ್ಲಿ ಹೆಚ್ಚಾಗಿ ವಾರ್ಷಿಕವಾಗಿ ಬೆಳೆಯುತ್ತಾರೆ. ಸಿಂಧೂ ಹಾಗೂ ಹರಪ್ಪ ನಾಗರಿಕತೆ ಕಾಲದಲ್ಲೂ ಹತ್ತಿ ಇತ್ತೆಂದು ಈಗಿನ ಸಿರಿಯಾ, ಟರ್ಕಿ ಮತ್ತು ಇರಾಕ್ ಪ್ರದೇಶಗಳನ್ನೊಳಗೊಂಡ ಆಗಿನ ಮೆಸೆಪಟೋಮಿಯಾಕ್ಕೆ ಬಟ್ಟೆಯನ್ನು ರಫ್ತು ಮಾಡುತ್ತಿದ್ದರೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಕ್ರಿಸ್ತ.ಪೂರ್ವದಲ್ಲಿಯೇ ಆಫ್ರಿಕ, ನ್ಯೂಬಿಯಾ, ಮೆರೋ ಸಮುದಾಯದ ಜನರು ಬಟ್ಟೆ ತಯಾರಿಸುತ್ತಿದ್ದಾರೆಂದೂ ತಿಳಿದು ಬರುತ್ತದೆ.

**ಗಾ. ಹರ್ಬೇಸಿಯಮ್ :** ಇದನ್ನು ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾದ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಸಹರಾ ಮತ್ತು ಅರ್ಥ್ ಮರುಭೂಮಿಯ ಪ್ರದೇಶಗಳಲ್ಲಿ ಅರೇಬಿಯಾ, ಸವನ್ನ ಪ್ರದೇಶಗಳಲ್ಲಿ ವಾರ್ಷಿಕವಾಗಿ ಬೆಳೆಯುತ್ತಾರೆ. ಚೀನಾದಲ್ಲಿ ಕ್ರಿ.ಶ. 600ರಿಂದಲೂ ಈ ತಳಿ ಬಳಕೆಯಾಗುತ್ತಿತ್ತು. ಭಾರತ, ಚೀನಾ, ಆಫ್ಘಾನಿಸ್ತಾನ, ಟರ್ಕಿ, ಪರ್ಶಿಯಾ, ಮೊದಲಾದ ಕಡೆಗಳಲ್ಲಿ ಹತ್ತಿಯ ಉಪಯೋಗವಿದೆ.

**ಗಾ. ಹರ್ಸುಟಮ್ :** ಮೆಕ್ಸಿಕೋ ದೇಶದಲ್ಲಿ ಪ್ರಮುಖವಾಗಿ ಇದನ್ನು ಬೆಳೆಯುತ್ತಾರೆ. ಇದು ಕಾಡು ಜಾತಿಯ ಹತ್ತಿಗಿಡ. ಪೆಸಿಫಿಕ್ ಹಾಗೂ ಅಟ್ಲಾಂಟಿಕಾದ ತೀರ ಪ್ರದೇಶಗಳಲ್ಲಿ ಬೆಳೆಯುತ್ತಿದ್ದವು. ಅನಂತರ ಉತ್ತರ ಅಮೇರಿಕ, ವೆಸ್ಟ್‌ಇಂಡೀಸ್ ದ್ವೀಪಗಳಲ್ಲಿ ಕಂಡುಬಂದಿತು. ಕ್ರಿ.ಪೂ. 2ನೆಯ ಶತಮಾನದಲ್ಲಿಯೇ ಅರಿಜೋನ ಪ್ರಾಂತ್ಯದಲ್ಲಿ ಈ ತಳಿ ಇತ್ತೆಂದು ತಿಳಿದುಬರುತ್ತದೆ.

**ಗಾ. ಬಾರ್ಬಡನ್ಸ್ :** ಇದು ವೆಸ್ಟ್‌ಇಂಡೀಸ್ ಹಾಗೂ ಬಾರ್ಬೊಡಾಸ್ ದ್ವೀಪಗಳಲ್ಲಿ ಕಂಡುಬರುವ ಅಮೂಲ್ಯವಾದ ಹತ್ತಿ. ಬೂದು ಬಣ್ಣದಿಂದ ಕೂಡಿದ ಮತ್ತು ಅತ್ಯಂತ ಉದ್ದವಾದ ನಾರನ್ನು ಹೊಂದಿರುವ ತಳಿಯಾಗಿದೆ. ರೇಷ್ಮೆಯಂತೆ ಮೃದುವಾಗಿರುವ ಇದರಿಂದ 120-300 ಅತ್ಯಂತ ನವುರಾದ ಹಾಗೂ ನಾಜೂಕಾದ ದಾರಗಳನ್ನು ನೂಲಬಹುದು. ಇದನ್ನು ಮೊತ್ತಮೊದಲು ಬ್ರಿಟಿಷ್ ಮತ್ತು ಅಮೇರಿಕದ ವಿಜ್ಞಾನಿಗಳು ಈಜಿಪ್ಟ್‌ನಲ್ಲಿ ಬಳಕೆಗೆ ತಂದರು. ಇತ್ತೀಚೆಗೆ ಅಮೇರಿಕದಲ್ಲಿ 'ಪಿಮ' ಎಂಬ ಉತ್ಕೃಷ್ಟ ದರ್ಜೆಯ ಹತ್ತಿ ಆವಿಷ್ಕಾರಗೊಂಡಿದ್ದು ಪ್ರಪಂಚದಲ್ಲಿ ಅತಿಹೆಚ್ಚಿನ ಬೇಡಿಕೆಯನ್ನು ಹೊಂದಿದೆ.

**ಬಿ.ಟಿ. ಹತ್ತಿ, :** ಜೈವಿಕ ತಂತ್ರಜ್ಞಾನ ಶಾಖೆಗಳಲ್ಲಿ 'ಸಸ್ಯ ಅಂಗಾಂಶ ಕೃಷಿ'ಯಿಂದ ಬೆಳೆಸಿದ ಟ್ರಾನ್ಸ್‌ಜೆನಿಕ್ ಸಸ್ಯಗಳು ಕೃಷಿ ಕ್ಷೇತ್ರದಲ್ಲಿ ಕ್ರಾಂತಿಯನ್ನು ತಂದಿವೆ. ಇವು 1983ರಲ್ಲಿ ಸಸ್ಯ ಅಂಗಾಂಶ ಕೃಷಿ ಮತ್ತು ಅನುವಂಶಿಕ ಅಭಿಯಂತಿಕೆಗಳನ್ನು ಅಳವಡಿಸಿಕೊಂಡು ತಯಾರಿಸಲಾದ

ಬೀಜಗಳು. ಬ್ಯಾಕ್ಟೀರಿಯ, ವೈರಸ್ ಅಥವಾ ಪ್ರಾಣಿಗಳ ಗುಣ ಹೊಂದಿರುವ ವಂಶವಾಹಿನಿಯನ್ನು ಬೇರ್ಪಡಿಸಿ ಜೀವಕೋಶದ ವರ್ಣ ತಂತುಗಳಿಗೆ ಸಂಯೋಜಿಸಿ ವಿಶಿಷ್ಟ ಗುಣವುಳ್ಳ ಸಸ್ಯಗಳನ್ನು ಪಡೆಯಬಹುದು. ಬಿ.ಟಿ. ಹತ್ತಿ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಜನಜೀವನದ ಕೃಷಿ ಬೀಜ ಉತ್ಪಾದನೆಯಲ್ಲಿ ಬಿರುಗಾಳಿಯನ್ನು ಎಬ್ಬಿಸಿದೆ. ಭಾರತಕ್ಕೆ ಬಿ.ಟಿ. ಹತ್ತಿಯನ್ನು ಕೃಷಿ ಕ್ಷೇತ್ರಕ್ಕೆ ಪರಿಚಯಿಸಿದವರು ಮಹಾರಾಷ್ಟ್ರದವರು ಡಾ. ಬರ್ವಾಲೆಯವರ ನೇತೃತ್ವದಲ್ಲಿ ರೈತರಿಗೆ ಹತ್ತಿ, ತರಕಾರಿ ಹಾಗೂ ಎಣ್ಣೆ ಕಾಳುಗಳ ಶುದ್ಧ ಬೀಜಗಳನ್ನು ಒದಗಿಸುತ್ತಾ ಬಂದಿದೆ. 2004 ರಲ್ಲಿ ದೇಶದ 3 ಲಕ್ಷ ರೈತರು 5 ಲಕ್ಷ ಹೆಕ್ಟೇರ್‌ಗಿಂತಲೂ ಅಧಿಕ ಭೂಮಿಯಲ್ಲಿ ಹತ್ತಿ ಕೃಷಿ ಮಾಡಿದ್ದಾರೆ.



ಹತ್ತಿಯ ಗುಣ ವಿಮರ್ಶೆಗಾಗಿ ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಸಾಕಷ್ಟು ಪ್ರಯೋಗಗಳನ್ನು ನಡೆಸಿದ್ದಾರೆ. ಹೊಸ ಹೊಸ ಜಾತಿಯ ಹೊಸ ತಳಿಗಳ ಆವಿಷ್ಕಾರ ನಡೆಯುತ್ತಲೇ ಇವೆ. ಸಣ್ಣ ಹತ್ತಿಯ ತಳಿಗಳಲ್ಲಿ S69, S69-3, N21-29, N149-52, N.C 86, H 190 ಜಾತಿಗಳಿವೆ. ದೊಡ್ಡ ಹತ್ತಿಯ ತಳಿಗಳಲ್ಲಿ MA2, MA5 ಪ್ರಮುಖವಾದವುಗಳು. ಇತ್ತೀಚೆಗೆ ವರಲಕ್ಷ್ಮಿ, ಜಯವಂತಿ ಮತ್ತು ಜಯದರ್ ತಳಿಗಳು ಬಳಕೆಗೆ ಬಂದಿವೆ. ಭಾರತದಲ್ಲಿ ಸುಮಾರು 87 ಹೈಬ್ರಿಡ್ ತಳಿಗಳು ಉಪಯೋಗದಲ್ಲಿವೆ.

**ರೋಗಗಳು :** ಈ ಬೆಳೆಗೆ ಕಾಲದಿಂದ ಕಾಲಕ್ಕೆ ತಗಲುವ ಕ್ರಿಮಿ ಕೀಟಗಳ ಸಂಖ್ಯೆ ಅಪಾರವಾಗಿದ್ದು ಹತ್ತಿ ಬೆಳೆಗಾರರ ನಿದ್ದೆಗೆಡಿಸಿವೆ. ಪ್ರಪಂಚದಲ್ಲಿ ಸುಮಾರು 162 ಜಾತಿಯ ಕ್ರಿಮಿಕೀಟಗಳಿವೆ. ಅವುಗಳಲ್ಲಿ 15 ಬಹಳ ಅಪಾಯಕಾರಿ, ಬಹಳ ಆಘಾತಕಾರಿ ಕೀಟಗಳೆಂದರೆ. ಜ್ಯಾಸಿಡ್ಸ್, ಅಫೀಡ್ಸ್, ಬಿಳಿನೊಣ, ಸ್ಪಾಟೆಪ್ ಬೋಲ್‌ವರ್ಮ್, ದೊಡ್ಡಬೋಲ್‌ವರ್ಮ್, ಅಮೆರಿಕನ್ ಬೋಲ್‌ವರ್ಮ್, ಇತರ ಕ್ರಿಮಿಕೀಟಗಳೆಂದರೆ, ಬ್ಯಾಕ್ಟೀರಿಯಲ್ ಬ್ಲಾಯ್ಟ್, ಫ್ಯೂಸೋರಿಯಮ್, ಅಲ್ಟೆರ್ ನೇರಿಯಲೀಫ್ ಸ್ಫೋಟ, ಗ್ರೈಮಿಲ್ಡ್ಯು, ಮತ್ತು ಎಲೆ ಮುದುರಿಕೊಳ್ಳುವ ವೈರಸ್‌ಗಳು ಹತ್ತಿ ಬೆಳೆಗೆ ಹಾನಿಯನ್ನುಂಟು ಮಾಡುತ್ತವೆ. ಹತ್ತಿಯನ್ನು ಪ್ರಮುಖವಾಗಿ ಬಟ್ಟೆ ತಯಾರಿಕೆಯಲ್ಲಿ ಬಳಸುತ್ತಾರೆ. ಟೆರಿಕ್ಲಾತ್, ಜೀನ್ಸ್‌ನ್ನು ತಯಾರಿಸಲು ಡೆನಿಮ್, ಕಾರ್ಡುರಾಯ್ ಪ್ರಕಾರಗಳಲ್ಲಿ ಬಳಸುತ್ತಾರೆ. ಕೃತಕ ಪದಾರ್ಥಗಳಿಂದ ರೆಯಾನ್ ಹಾಗೂ ಪಾಲಿಯೆಸ್ಟರ್‌ಗಳ ಜೊತೆ ಮಿಶ್ರಣಮಾಡಿ ಬಟ್ಟೆ ತಯಾರಿಸುವರು. ಆಸ್ಪತ್ರೆಗೆ ಬೇಕಾಗುವ ಬ್ಯಾಂಡೇಜ್, ಸರ್ಜಿಕಲ್ ಹತ್ತಿ, ಮಹಿಳೆಯರು ಬಳಸುವ ಸ್ಯಾನಿಟರಿ ವೇರ್‌ಗಳಲ್ಲಿ ಹತ್ತಿಯನ್ನು ಬಳಸುತ್ತಾರೆ. ಮೀನುಬಲೆ, ಕಾಫಿಫಿಲ್ಟರ್, ಹಾಸಿಗೆ ಹಾಗೂ ಸಿಡಿಮದ್ದು, ಪಟಾಕಿ ತಯಾರಿಕೆಯಲ್ಲಿಯೂ ಹತ್ತಿಯ ಬಳಕೆಯಿದೆ.

ಹತ್ತಿ ಬೀಜದಿಂದ ಅಡುಗೆ ಎಣ್ಣೆಯನ್ನು ತಯಾರಿಸಿದರೆ ಹಿಂಡಿಯನ್ನು ಪ್ರಾಣಿಗಳ ಆಹಾರವಾಗಿ ಉಪಯೋಗಿಸುತ್ತಾರೆ. ಅಣಬೆ ಬೇಸಾಯದಲ್ಲಿಯೂ ಹತ್ತಿಯ ಉಪಯೋಗವಿದೆ. ಪ್ಲಾಕ್ಟಿಕಲ್ ಬೋರ್ಡ್‌ಗಳು, ವಿಧವಿಧದ ಕಾಗದಗಳು, ಪ್ಯಾಕಿಂಗ್ ಕಾಗದಗಳು, ಕಾರುಗೇಟೆಡ್ ಪೆಟ್ಟಿಗೆಗಳು, ಮೊದಲಾದವುಗಳ ತಯಾರಿಕೆಯಲ್ಲಿಯೂ ಹತ್ತಿಯ ಬಳಕೆಯಿದೆ.

**ಹತ್ತಿಯ ಸಾಗುವಳಿ :** ಪ್ರಪಂಚದ ಹತ್ತಿ ಉತ್ಪಾದನೆಯನ್ನು ಗಮನಿಸುವುದಾದರೆ ಚೀನಾದೇಶವು 4.10 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ 4.20 ಮಿಲಿಯನ್ ಟನ್ ಹತ್ತಿ ಉತ್ಪಾದಿಸಿದರೆ ಅಮೆರಿಕ 5.80 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ 3.90 ಮಿಲಿಯನ್ ಟನ್ ಉತ್ಪಾದಿಸಿದೆ. ಭಾರತ 9.10 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ 19.66 ಮಿಲಿಯನ್ ಟನ್ ಹತ್ತಿಯನ್ನು ಉತ್ಪಾದಿಸಿದೆ. 2012ರಲ್ಲಿ ಪ್ರಪಂಚದ ಅತಿದೊಡ್ಡ ಹತ್ತಿ ಉತ್ಪಾದಕಾ ರಾಷ್ಟ್ರಗಳಲ್ಲಿ ಚೀನ, ಭಾರತ, ಅಮೆರಿಕ, ಪಾಕಿಸ್ತಾನ ಮತ್ತು ಬ್ರಜಿಲ್ ದೇಶಗಳು ಪ್ರಮುಖವಾಗಿವೆ.

ಭಾರತದಲ್ಲಿ ಹತ್ತಿ ಬೆಳೆಯುವ ಪ್ರದೇಶವನ್ನು 3 ವಲಯಗಳಾಗಿ ವಿಂಗಡಿಸಿದ್ದಾರೆ.

| ವಲಯ | ರಾಜ್ಯಗಳು | ಸಾಗುವಳಿ | ಮಿಲಿಯನ್ ಹೆಕ್ಟೇರ್ |
|---|---|---|---|
| ಉತ್ತರ | ಪಂಜಾಬ್, ಹರಿಯಾಣ, ರಾಜಸ್ಥಾನ, ಉ.ಪ್ರದೇಶ | ಶೇ.24 | 2.21 |
| ಮಧ್ಯ | ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ | ಶೇ.57 | 5.25 |
| ದಕ್ಷಿಣ | ಆಂಧ್ರ, ಕರ್ನಾಟಕ, ತಮಿಳುನಾಡು | 19 | 1.50 |

ಕರ್ನಾಟಕದಲ್ಲಿ 1,35,000 ಎಕರೆ ಪ್ರದೇಶದಲ್ಲೂ, ಹೈದರಾಬಾದಿನಲ್ಲಿ 35 ಲಕ್ಷ, ಪಂಜಾಬಿನಲ್ಲಿ 33 ಲಕ್ಷ, ಸಿಂಧ್‌ನಲ್ಲಿ 9 ಲಕ್ಷ, ಪೂರ್ವ ಮತ್ತು ಪಶ್ಚಿಮ ಬಂಗಾಳದಲ್ಲಿ 6 ಲಕ್ಷ, ಆಂಧ್ರ ಮತ್ತು ತಮಿಳುನಾಡಿನಲ್ಲಿ 26 ಲಕ್ಷ, ಮುಂಬೈ ಪ್ರಾಂತ್ಯದಲ್ಲಿ 40 ಲಕ್ಷ, ಮಧ್ಯಪ್ರದೇಶದಲ್ಲಿ 42-50 ಲಕ್ಷ ಎಕರೆ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯುತ್ತಾರೆ.

ಪ್ರಸ್ತುತ ಭಾರತದ ಬಯೋಟೆಕ್ ಹತ್ತಿ ಬೆಳೆಯ ಪ್ರಮಾಣ ಶೇ. 15.6 ಇದೆ. ಹೀಗೆ ಹತ್ತಿಯ ಬೆಳೆಗೆ ಉದ್ಯಮ, ಉಪಯೋಗ, ಹಂಚಿಕೆ ಮುಂತಾದವುಗಳಿಂದ ಉತ್ತಮ ಸ್ಥಾನವಿದೆ.

**ಪರಾಮರ್ಶನಗಳು :**

Evolutionary Studies in World Cottons,- Santanam V, Huchinson J.B. 1974 and "Hand-book of Cottons in India", (1999), Sundaram. V. et al.

Seed Industry and COtton Production - B.R. Barwale, Chairman, MAHYCO, Silver Jubilee Lecture series, ISCI Publication. July, 28, 2001

Quality profile of the cottons - 2006, Director, CIRCOT.

"Breeding for Fiber Quality Improvement of Cotton". R. Krishnamurthy, Res Dir ; Rasi seeds (P)Ltd ; Salem, T.N. Dr. V. Sundaram Lecture Series, ISCI Publication, June, 16, 2007.

*ಆರ್.ಎ.*

**ಹಬ್ಬವರೆ** ಪ್ಯಾಬೇಸಿ ಕುಟುಂಬಕ್ಕೆ ಸೇರಿದ್ದಾಗಿದೆ. ಇದರ ಮೂಲ ಮೆಕ್ಸಿಕೋ. ಕೋಸ್ಟರಿಕಾ ಪನಾಮ, ಕೊಲಂಬಿಯಾ ಮತ್ತಿತರ ದೇಶಗಳಲ್ಲಿಯೂ ಬೆಳೆಯಲಾಗುತ್ತಿದೆ.

ಇದರ ಬೇಸಾಯಕ್ಕೆ ಯಾವುದೇ ಭೂಮಿಯಾದರೂ ಸರಿ. ಫಲವತ್ತಿನ ಅಂಶ ಕಡಿಮೆ ಇದ್ದರೂ ಬೆಳೆಯಬಹುದು. ನೀರು ಬಸಿಯುವ ಮರಳು ಮಿಶ್ರಿತ ಗೋಡು ಮಣ್ಣು ಅತ್ಯುತ್ತಮ. ಭೂಮಿಯನ್ನು 2 ರಿಂದ 3 ಬಾರಿ ಆಳವಾಗಿ ಉತ್ತು ಎಕರೆಗೆ 4 ರಿಂದ 5 ಟನ್ ತಿಪ್ಪೆ ಗೊಬ್ಬರವನ್ನು ಸೇರಿಸಿ ಮಿಶ್ರ ಮಾಡಬೇಕು. 6 ಅಡಿ ಅಂತರದ ಸಾಲುಗಳಲ್ಲಿ 2 ಅಡಿ ಗಾತ್ರದ ಗುಂಡಿಗೆ 3 ರಿಂದ 4 ಕಾಳು ಬಿತ್ತಬೇಕು. ಎಕರೆಗೆ 2 ರಿಂದ 3 ಕೆ.ಜಿ. ಬೀಜ ಬೇಕು. ಈ ಕಾಳುಗಳು ಒಂದು ವಾರದಲ್ಲಿ ಮೊಳೆಯುತ್ತವೆ.

ಮಣ್ಣು ಮತ್ತು ಹವಾಗುಣಕ್ಕೆ ಅನುಗುಣವಾಗಿ ನೀರು ಕೊಡಬೇಕು. ನೀರಿನ ಕೊರತೆಯನ್ನು ಇದು ಸ್ವಲ್ಪ ಮಟ್ಟಿಗೆ ಸಹಿಸಿಕೊಳ್ಳಬಲ್ಲದು. 5, 6 ಅಡಿ ಎತ್ತರದಲ್ಲಿ ರಚಿಸಿದ ತಂತಿ ಜಾಲರಿಯ ಮೇಲೆ ಹಬ್ಬಿಸಿದರೆ ಇಳುವರಿ ಉತ್ತಮ. ಚೆನ್ನಾಗಿ ಬೆಳೆದ ಮೇಲೆ ಮಧ್ಯಾಂತರ ಬೇಸಾಯ ಮಾಡಿ ಕಳೆ ತೆಗೆಯಬೇಕು. ಆರ್ದ್ರ ವಾತಾವರಣದಲ್ಲಿ ಹೆಚ್ಚು ಫಲ ಬಿಡುತ್ತದೆ. ಕೆಳ ಮಟ್ಟದ ಪ್ರದೇಶದಲ್ಲಿ ಕಾಯಿ ಇಳುವರಿ ಕಡಿಮೆ. ಅಧಿಕ ಪ್ರಮಾಣದಲ್ಲಿ ಹಿಮ ಬಿದ್ದರೆ ತಡೆದುಕೊಳ್ಳಲಾರದು.

**ಕೀಟಗಳು :** ಹಲವಾರು ಕಪ್ಪು ಬಣ್ಣದ ಕೀಟಗಳು ಗಿಡವನ್ನು ಒಣಗುವಂತೆ ಮಾಡುವುದರಿಂದ ಕ್ರಿಮಿನಾಶಕ ಸಿಂಪಡಿಸಬೇಕಾಗುತ್ತದೆ. ಸೊರಗು ರೋಗ ಬಂದರೂ ಗಿಡ ಒಣಗಿ ಹೋಗುತ್ತದೆ.

ಕಾಯಿ ಎಳಸಾಗಿದ್ದಾಗಲೇ ಕೊಯ್ಲು ಮಾಡಿ ಬಳಸಿದಲ್ಲಿ ರುಚಿ ಹೆಚ್ಚು. ಬಲಿತ ಮೇಲೆ ಕಾಳನ್ನು ಉಪಯೋಗಿಸಬಹುದು. ಬಿತ್ತಿದ ಅನಂತರ ಸುಮಾರು 3 ವರ್ಷಗಳವರೆಗೆ ಸತತವಾಗಿ ಇಳುವರಿ ನೀಡುತ್ತದೆ. ಚೆನ್ನಾಗಿ ಬೆಳೆ ಬಂದರೆ ಒಂದು ಎಕರೆಗೆ 4 ಟನ್ ಇಳುವರಿ ಪಡೆಯಬಹುದು.

**ಉಪಯೋಗಗಳು :** ಎಳೆಯ ಕಾಯಿಗಳನ್ನು ಬೇಯಿಸಿ ಸಾರು, ಪಲ್ಯಗಳನ್ನು ಮಾಡಬಹುದು. ಹಸಿ ಮತ್ತು ಒಣ ಬೀಜಗಳನ್ನೂ ಸಾಂಬಾರಿಗೆ ಬಳಸಬಹುದು.

*ಕೆ.ಎಲ್.*

**ಹರಳು** ಜನಪದರ ಬಾಯಲ್ಲಿ 'ಹಳ್ಳು' ಎಂದೇ ಕರೆಯಲ್ಪಡುವ ಹರಳು ಒಂದು ಉತ್ತಮ ಎಣ್ಣೆ ಬೀಜ. ಇದನ್ನು ಇಂಗ್ಲಿಷ್‌ನಲ್ಲಿ ಕ್ಯಾಸ್ಟರ್ ಸೀಡ್ ಎಂದು ಕರೆಯುತ್ತಾರೆ. ಇದು ಪಾಮಾ ಕ್ರಿಸ್ತಿ ಜಾತಿ / ಪ್ರಭೇದಕ್ಕೆ ಸೇರಿದುದಾಗಿದೆ.

**ಹರಳು ಗಿಡ ಬೆಳೆಸುವ ವಿಧಾನ :** ಇದನ್ನು ಮಳೆಯಾಶ್ರಯದಲ್ಲಿ ಒಣ (ಖುಷ್ಕಿ) ಭೂಮಿಯಲ್ಲಿ ಬೆಳೆಯಲಾಗುತ್ತದೆ. ಇದು ಎಲ್ಲಾ ಮಣ್ಣಿಗೂ ಒಗ್ಗಬಹುದಾದ ಬೆಳೆ. ಮುಂಗಾರಿನಲ್ಲಿ ಮೇ ಕೊನೆಯ ವಾರ ಅಥವಾ ಜೂನ್ ಮೊದಲ ವಾರದಲ್ಲಿ ಸಾಮಾನ್ಯವಾಗಿ ಈ ಮೊದಲೇ ಉಳುಮೆ ಮಾಡಿ ಹದಗೊಳಿಸಿರುವ ಭೂಮಿಗೆ ಬಿತ್ತುತ್ತಾರೆ. 4 x 4 ಅಡಿ ವಿಸ್ತೀರ್ಣದಲ್ಲಿ ಗುಳಿ (ಗುಣಿ)ಗಳನ್ನು ಮಾಡಿ, ಒಂದು ಗುಣಿಗೆ 3 ರಿಂದ 4 ಬೀಜಗಳನ್ನು ಬಿತ್ತಬೇಕು. ಒಂದು ಎಕರೆಗೆ ಸುಮಾರು 3 ಕೆ.ಜಿ.ಯಷ್ಟು ಬಿತ್ತನೆ ಬೀಜ ಬೇಕಾಗುತ್ತದೆ. ಬೀಜಗಳನ್ನು ಗುಣಿಗೆ ಹಾಕಿದ ಅನಂತರ ಗುಣಿಗೆ ಒಂದೊಂದಕ್ಕೆ ಕೊಟ್ಟಿಗೆ ಗೊಬ್ಬರವನ್ನು ಎರಡು ಬೊಗಸೆ / 1/2 ಕೆ.ಜಿ. ಯಷ್ಟು ಹಾಕಿ ಮಣ್ಣು ಮುಚ್ಚಬೇಕು. ಬಿತ್ತಿದ ಬೀಜ ಮೊಳಕೆಯೊಡೆಯಬೇಕಾದರೆ ಒಂದು ವಾರಬೇಕು. ಮೊಳಕೆಯೊಡೆದ ಎರಡು ವಾರದ ಮೇಲೆ ಕಳೆಯನ್ನು ಹೋಗಲಾಡಿಸಲು ಎತ್ತುಗಳ ಸಹಾಯದಿಂದ ಕುಂಟೆ ಹೊಡೆಯಬೇಕು. ಸಾಲಿನಿಂದ ಸಾಲಿಗೆ ಮತ್ತು ಗುಣಿಯಿಂದ ಗುಣಿಗೆ 3 ಅಡಿ ಅಂತರವಿರುವುದರಿಂದ ಎರಡೂ ಕಡೆಯಿಂದಲೂ ಕುಂಟೆ ಹೊಡೆಯಬೇಕು. ಅನಂತರ ಉಳುಮೆ ಮಾಡಿ ಗುಣಿಗೆ ಮಣ್ಣನ್ನು ಕೊಡಬೇಕು. 2 ವಾರ ಕಳೆದ ಅನಂತರ ಉಳುಮೆ ಮಾಡಬೇಕು. ಇಷ್ಟರಲ್ಲಿ ಗಿಡ ಒಂದೂವರೆ ಅಡಿಯಷ್ಟು ಬೆಳೆದಿರುತ್ತದೆ.



ಈಗ ಮತ್ತೊಮ್ಮೆ ಗೊಬ್ಬರವನ್ನು ಎಲ್ಲಾ ಗುಣಿಗಳಿಗೂ ಹಾಕಿ ಅಂತಿಮ ಉಳುಮೆಯನ್ನು ಮಾಡಬೇಕು.

ಎರಡೂವರೆ ತಿಂಗಳಿನ ಅನಂತರ ಗಿಡ ಹೂಬಿಡಲು ಪ್ರಾರಂಭಿಸುತ್ತದೆ. ಈ ಸಂದರ್ಭದಲ್ಲಿ ಹೂ ಮತ್ತು ಎಲೆಗಳನ್ನು ತಿನ್ನಲು ಕಂಬಳಿ (ಸುಂಕು) ಹುಳುಗಳು ಹತ್ತುತ್ತವೆ, ಇದಕ್ಕೆ ಷೇಡ್ ಹತ್ತುವುದು ಎನ್ನುತ್ತಾರೆ. ಈ ಹುಳುಗಳನ್ನು ನಿಯಂತ್ರಿಸಲು



ಸಾಮಾನ್ಯವಾಗಿ ಒಲೆಯ ಬೂದಿಯನ್ನು ಬೆಳಗಿನ ಸಮಯದಲ್ಲಿ ಗಿಡಗಳ ಮೇಲೆ ಎರಚುತ್ತಾರೆ. ಏಕೆಂದರೆ ಇಬ್ಬನಿಯಿಂದಾಗಿ ಎಲ್ಲಾ ಎಲೆಗಳು ತೇವವಾಗಿದ್ದು, ಬೂದಿ ಎಲೆಗೆ ಅಂಟುಕೊಳ್ಳುತ್ತದೆ. ಎಲೆ / ಗಿಡಗಳ ಮೇಲಿರುವ ಹುಳುಗಳ ಕಣ್ಣಿಗೆ ಬೂದಿ ಬಿದ್ದು ಹುಳುಗಲು ಸಾಯುತ್ತವೆ ಹಾಗೂ ಸಾಯದಿದ್ದಾಗ ಕ್ರಿಮಿನಾಶಕವನ್ನು ಸಿಂಪಡಿಸಿ ಹೂ ಮತ್ತು ಎಲೆಗಳನ್ನು ರಕ್ಷಿಸಬೇಕಾಗುತ್ತದೆ. ಮೂರು - ಮೂರೂವರೆ ತಿಂಗಳ ಅನಂತರ ಬಲಿತ ಹರಳು ಕಾಯಿಗಳನ್ನು ಹಂತ ಹಂತವಾಗಿ ಮುರಿದು / ಕೀಳಬೇಕಾಗುತ್ತದೆ.

ಹರಳೆಲೆ ಛತ್ರಿಯಾಕಾರದಲ್ಲಿದ್ದು, ಕಾಯಿ ದ್ರಾಕ್ಷಿ ಗೊಂಚಲಿನಂತಿರುತ್ತದೆ. ಆದರೆ ಕಾಯಿಯ ಮೇಲೆ ಮುಳ್ಳಿನ ರೀತಿಯ ರಚನೆಗಳಿರುತ್ತವೆ. ಸಾಮಾನ್ಯವಾಗಿ ಹಸುರು ಬಣ್ಣದಲ್ಲಿರುವ ಕಾಯಿ ಸ್ವಲ್ಪ ಬೂದು ಬಣ್ಣಕ್ಕೆ ತಿರುಗಿದಾಗ ಬಲಿತಿದೆ ಎಂದು ಅರ್ಥ. ಹೀಗೆ ಹಂತ ಹಂತವಾಗಿ ಕಿತ್ತು (ಮುರಿದು) ಸಂಗ್ರಹಿಸಿದ ಕಾಯಿಗಳನ್ನು ಮೊದಲೇ ಸಗಣಿಯಿಂದ ಸಾರಿಸಿ, ಸಿದ್ಧಪಡಿಸಿದ ಕಣದಲ್ಲಿ ಒಣ ಹಾಕಬೇಕು. ಬಿಸಿಲು ಹೆಚ್ಚಿದ್ದರೆ ಬೇಗ ಒಣಗುತ್ತದೆ. ಒಣಗಿದ ಕಾಯಿಗಳನ್ನು ಕೋಲಿನಿಂದ ಬಡಿದು ಬೇರ್ಪಡಿಸಿ, ಹರಳು ಬೀಜಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಬೇಕು. ಒಂದು ಎಕರೆಗೆ 5 ರಿಂದ 6 ಕ್ವಿಂಟಾಲ್ ಹರಳು ಬೀಜವನ್ನು ನಿರೀಕ್ಷಿಸಬಹುದು.

ಹರಳು ಗಿಡಗಳನ್ನು ಈ ವ್ಯವಸ್ಥಿತ ಕ್ರಮದಲ್ಲೇ ಬೆಳೆಯುವುದು ಒಂದು ವಿಧವಾದರೆ, ಹೊಲದ ತೆವರಿಗಳ ಮೇಲೆ ಸಾಲು - ಸಾಲಾಗಿಯೂ ಬೆಳೆಯುವುದು ಮತ್ತೊಂದು ವಿಧಾನ. ಅಲ್ಲದೆ ಪಾಳು ಜಾಗಗಳಲ್ಲಿ, ತಿಪ್ಪೆ ಗುಂಡಿಗಳಲ್ಲಿ ಅಕಸ್ಮಾತ್ ಹರಳು ಬೀಜ ಬಿದ್ದಿದ್ದರೆ ಅದಾಗಿಯೇ ಗಿಡಗಳು ಹುಟ್ಟುತ್ತವೆ.

**ವಿಧಗಳು :** ಹರಳು ಗಿಡಗಳಲ್ಲಿ ಎರಡು ವಿಧಗಳಿವೆ. ಅವು ಮರಹಳ್ಳು (ಮರಳ್ಳು), ಚಿಟ್ಟಹಳ್ಳು (ಚಿಟ್ಟಳ್ಳು)

ಮರಹಳ್ಳು (ಮರಳ್ಳು) - ಒಮ್ಮೆ ಬಿತ್ತನೆ ಮಾಡಿದರೆ ಒಂದು ವರ್ಷ ಇರುತ್ತವೆ, ಗಾತ್ರದಲ್ಲಿ ದಪ್ಪಗಿರುತ್ತದೆ.

ಚಿಟ್ಟಹರಳು (ಚಿಟ್ಟಳ್ಳು) 5-6 ವರ್ಷ ಅವಧಿಯದಾಗಿರುತ್ತದೆ. ಗಾತ್ರದಲ್ಲಿ ಚಿಕ್ಕದಾಗಿರುತ್ತದೆ.

**ಉಪಯೋಗಗಳು :** ಹರಳು ಬೀಜವನ್ನು ಬಾಣಲಿಯಲ್ಲಿ ಹುರಿದು, ಒನಕೆಯಿಂದ ಕುಟ್ಟಿ, ಚೆನ್ನಾಗಿ ಕಾದಿರುವ ನೀರಿಗೆ ಹಾಕಿ ಬೇಯಿಸುತ್ತಾರೆ. ಚೆನ್ನಾಗಿ ಕುದಿದ ಅನಂತರ ನೀರಿನ ಮೇಲೆ ಎಣ್ಣೆ ತೇಲುತ್ತದೆ. ಅದನ್ನು ಬೇರ್ಪಡಿಸಿ, ಮತ್ತೆ ಬೇಯಿಸುತ್ತಾರೆ. ಹೀಗೆ ತಯಾರಾದ ಹರಳೆಣ್ಣೆಯನ್ನು ತಲೆಗೆ ಹಚ್ಚಿ ಕೊಳ್ಳುತ್ತಾರೆ. ಇದು ದೇಹಕ್ಕೆ ತಂಪನ್ನು ನೀಡುತ್ತದೆ. ಉಷ್ಣಕ್ಕೆ ಸಂಬಂಧಿಸಿದ ಕಣ್ಣುರಿ, ಕಾಲುರಿ ಹಸ್ತದುರಿ ಮೊದಲಾದವುಗಳ ಉಪಶಮನಕ್ಕಾಗಿ ಬಳಸಲಾಗುತ್ತದೆ. ಹಿಂದೆ ಚಿಕ್ಕ ಮಕ್ಕಳಿಗೆ ಎಣ್ಣೆಯನ್ನು ಬಿಸಿ ಮಾಡಿ ನೆತ್ತಿ, ಬೆನ್ನುಗಳಿಗೆ ಹಚ್ಚುತ್ತಿದ್ದರು. ಈಗಲೂ ಹಚ್ಚುತ್ತಿದ್ದಾರೆ. ಆದರೆ ಪ್ರಮಾಣ ಕಡಿಮೆ. ಈಗಲೂ ಚಿಕ್ಕವರು - ದೊಡ್ಡವರೆನ್ನದೆ ಎಣ್ಣೆ ಮಸಾಜ್ ಮಾಡಿಸಿಕೊಂಡು ಬಿಸಿನೀರಿನ ಸ್ನಾನ ಮಾಡುವವರುಂಟು.

ಚಿಟ್ಟೆಳ್ಳೆಣ್ಣೆ ಹೆಚ್ಚು ತಂಪು ನೀಡುತ್ತದೆ. ಗಾಣ ಮತ್ತು ಆಧುನಿಕ ಯಂತ್ರೋಪಕರಣಗಳ ಮೂಲಕವೂ ಹರಳೆಣ್ಣೆಯನ್ನು ತಯಾರಿಸುತ್ತಾರೆ.

ಮದುವೆಯ ಸಂದರ್ಭದಲ್ಲಿ ಅರಿಸಿನದ ನೀರು ಹಾಕುವ ಶಾಸ್ತ್ರ ಮಾಡುವಾಗ ಅರಿಸಿನದ ಜೊತೆ ಹರಳೆಣ್ಣೆಯನ್ನು ಮದುಮಕ್ಕಳಿಗೆ ಈಗಲೂ ಹಚ್ಚುವುದನ್ನು ಗಮನಿಸಬಹುದು. ಗ್ರೀಸ್ ತಯಾರಿಕೆಯಲ್ಲಿಯೂ ಹರಳೆಣ್ಣೆಯನ್ನು ಬಳಸುತ್ತಾರೆ.

ಹರಳಿನ ಸಿಪ್ಪೆ ಮತ್ತು ಗಿಡವನ್ನು ಒಣಗಿದ ಅನಂತರ ಸೌದೆಯಾಗಿ ಉಪಯೋಗಿಸುತ್ತಾರೆ. ಹಿಂದೆ ನೆತ್ತಿಯ ಮೇಲೆ ಹರಳೆಲೆಯನ್ನು ಹಾಕಿಕೊಳ್ಳುತ್ತಿದ್ದರು.

**ಮಾಹಿತಿ ಸಂಗ್ರಹ :**

ಗೌರಮ್ಮ, ಆಲಂಬಾಡಿಕಾವಲು, ಮಂಡ್ಯಜಿಲ್ಲೆ

ಜಯಮ್ಮ, ಮಾಕನಹಳ್ಳಿ, ಮೈಸೂರು ಜಿಲ್ಲೆ

***ಕೆ.ಎಲ್.***

**ಹಲಸು** ಸಂಸ್ಕೃತದ 'ಪನಸಃ' ಕನ್ನಡದಲ್ಲಿ ಹಲಸಾಗಿದೆ. ಇದರ ವೈಜ್ಞಾನಿಕ ಪದನಾಮ 'ಆರ್ಟೋಕಾರ್ಪಸ್ ಹೆಟಿರೋಫಿಲ್ಲಸ್' ಇದು 'ಮೊರೇಸಿ' ಕುಟುಂಬಕ್ಕೆ ಸೇರಿದೆ. ನಿತ್ಯಹಸುರಿನ ಹಣ್ಣು ಬಿಡುವ ಮರಗಳಲ್ಲಿ ಅತ್ಯಂತ ದೊಡ್ಡ ಗಾತ್ರದ ಮರ. ತನ್ನ ಸುತ್ತ ಚೆಲ್ಲುವ ಸುವಾಸನೆಯಲ್ಲಿ ಬಹುಶಃ ಹಲಸನ್ನು ಮೀರಿಸುವ ಫಲ ಪ್ರಪಂಚದಲ್ಲಿ ಇನ್ನೊಂದಿಲ್ಲ. ಈ ಹಣ್ಣನ್ನು ಕುರಿತು ಜನಪದರು ಕಟ್ಟಿರುವ ಪ್ರತಿಮಾತ್ಮಕವಾದ ಒಗಟೊಂದು ಹೀಗಿದೆ : "ತಾಯಿ ತರಕಿ, ಮಗಳು ಬೋಡಿ, ಮೊಮ್ಮಗಳು ಘಮ್‌ಗಡ್ಲೆ".

ಭಾರತದ ಪಶ್ಚಿಮಘಟ್ಟ ಇದರ ಮೂಲಸ್ಥಳ. ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾದಲ್ಲಿ ತುಂಬಾ ಪ್ರಸಿದ್ಧಿ ಪಡೆದಿದೆ. ಭಾರತ, ಬಂಗಾಳ, ನೇಪಾಳ, ಸಿಲೋನ್, ಬರ್ಮಾ, ಚೈನಾ, ಕೀನ್ಯಾ, ಥೈಲ್ಯಾಂಡ್, ಮಲೇಷಿಯಾ, ಇಂಡೋನೇಷ್ಯಾ, ಫಿಲಿಪೈನ್, ಪಶ್ಚಿಮ ಆಫ್ರಿಕ, ಬ್ರೆಜಿಲ್, ಕೆರೆಬಿಯನ್‌ದೇಶಗಳಲ್ಲೂ ಕಂಡುಬರುತ್ತದೆ. ಭಾರತದ ಕೇರಳ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿಯೂ, ಕರ್ನಾಟಕದ ತುಮಕೂರು, ಹಾಸನ, ಬೆಂಗಳೂರು, ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಕೊಡಗು ಈ ಪ್ರದೇಶಗಳಲ್ಲಿ ಹೆಚ್ಚಾಗಿ ಕೃಷಿ ಮಾಡುತ್ತಾರೆ.

**ವಾತಾವರಣ :** ಉಷ್ಣವಲಯದ ಖುಷ್ಕಿ ಬೆಳೆ ಇದು. 28°F ಉಷ್ಣಾಂಶ ಇರುವ ಪ್ರದೇಶ ಇದಕ್ಕೆ ಯೋಗ್ಯವಾದುದು. ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾ ಭೂಭಾಗದ ಮಣ್ಣು ಮತ್ತು ವಾತಾವರಣ ಇದಕ್ಕೆ ಯುಕ್ತವಾದದ್ದಾಗಿದೆ.

**ಬಿತ್ತನೆ :** ಬೀಜಗಳು ಸ್ವಾಭಾವಿಕವಾಗಿ ವಿವಿಧ ಪ್ರಸರಣ ಮಾಧ್ಯಮಗಳ ಮೂಲಕ ಬಿತ್ತನೆಗೊಳ್ಳುತ್ತವೆ. ಉತ್ತಮ ಗೊಬ್ಬರ - ಮಣ್ಣು ಇವುಗಳಿಂದ ಸಿದ್ಧಪಡಿಸಿದ ಏರು ಪಾತಿ ಮತ್ತು ತಗ್ಗು ಪಾತಿಗಳಲ್ಲಿ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ಬೀಜಗಳನ್ನು ನೆಟ್ಟು ನೀರುಣಿಸಿ, ಸೂರ್ಯನ ನೇರ ಶಾಖದಿಂದ ರಕ್ಷಿಸಿ ಕೂಡ ಬೆಳೆಸಲಾಗುತ್ತದೆ. ಸುಮಾರು 2-3 ಅಡಿ ಎತ್ತರ ಬೆಳೆದ ಸಸಿಗಳನ್ನು ಕಿತ್ತು ಮೊದಲೆ ಸಿದ್ಧಪಡಿಸಿದ ಪಾತಿಗಳಲ್ಲಿ 10 ಅಡಿ ಅಂತರದಲ್ಲಿ ನೆಟ್ಟು ಬೆಳೆಸಬೇಕು.

ಎಲೆಗಳ ಅಗಲ ಸುಮಾರು 10 ರಿಂದ 15 ಸೆಂ.ಮೀ. ಉದ್ದ 15 ರಿಂದ 20 ಸೆಂ.ಮೀ. ಇದ್ದು ಹಚ್ಚ ಹಸಿರಿನಿಂದ ಕೂಡಿರುತ್ತವೆ. ಸುಮಾರು 6-7 ವರ್ಷಗಳ ಬಳಿಕ ಕಾಂಡವು ದಪ್ಪ ಮತ್ತು ಎತ್ತರವಾಗಿ ಬೆಳೆದು ಪ್ರಾಯದ ಗಿಡವಾದಾಗ ಹೂ ಕಾಣಿಸಿಕೊಳ್ಳುತ್ತದೆ. ಹಸುರು ಮಿಶ್ರಿತ ಹಳದಿ ಬಣ್ಣದ ಹೂ ಬೆಳೆದು ಕ್ರಮೇಣ ಕಡು ಹಸುರು ಬಣ್ಣಕ್ಕೆ ತಿರುಗುತ್ತದೆ. ಅನಂತರ ಹೂವಿನೊಂದಿಗೆ ಈಚು ಮೂಡಿ ಹಳದಿ ಮಿಶ್ರಿತ ಹಸುರು ಬಣ್ಣದಿಂದ ಕೂಡಿರುತ್ತದೆ. ಕ್ರಮೇಣ ಬೆಳೆದು ಕಾಯಿಯಾಗುತ್ತದೆ.

ಏಪ್ರಿಲ್‌ನಿಂದ ಆಗಸ್ಟ್ ಉತ್ತಮ ಹಣ್ಣಿನ ಕಾಲ. ಆದರೆ ಇತ್ತೀಚೆಗೆ ವಿಭಿನ್ನ ತಳಿಗಳ ಆವಿಷ್ಕಾರದಿಂದಾಗಿ ವರ್ಷವಿಡೀ ಹಣ್ಣು ದೊರಕುವುದೂ ಉಂಟು. ಕಾಯಾಗಿ ಬೆಳೆದು ಕ್ರಮೇಣ ದಪ್ಪನಾದ ಮುಳ್ಳುಗಳಿಂದ ಕೂಡಿದ ಹಸುರು ಮೇಲ್ಭಾಗದ, ಗುಂಡಾದ ಕಾಯಿಯನ್ನು ಮರದ ರೆಂಬೆ - ಕೊಂಬೆ, ಕಾಂಡ ಕೆಲವೊಮ್ಮೆ ಬೇರಿನಿಂದಲೂ ಜೋತು ಬಿದ್ದಿರುವುದನ್ನು ಕಾಣಬಹುದು.

ಎಷ್ಟೋ ಬಾರಿ ಕಾಯಿ ಒಂದೇ ಕಡೆ ಮರದಲ್ಲಿ ಕೇಂದ್ರೀಕೃತವಾಗಿ ಗೊಂಚಲು ಗೊಂಚಲಾಗಿರುವುದೂ ಉಂಟು. ಬಹಳ ಸಾರಿ ಕಾಯಿಯ ಭಾರ ತಡೆಯದೆ ಮರ ಮುರಿಯುವುದೂ ಸಾಮಾನ್ಯ. ಒಟ್ಟಾರೆ ಕಾಯಿ ಪಕ್ವವಾದಾಗ ಹೊರಭಾಗದ ಮುಳ್ಳುಗಳು ಚೂಪಾಗಿರದೆ ಮೊಂಡಾಗಿ, ದಪ್ಪವಾಗಿ ಅರಳಿದಂತೆ ಕಂಡುಬರುತ್ತವೆ. ಈ ಸಂದರ್ಭದಲ್ಲಿ ಕಿತ್ತಿಟ್ಟ ಕಾಯಿ 2-3 ದಿನಗಳಲ್ಲಿ ಹಣ್ಣಾಗಿ ಸುವಾಸನೆಯಿಂದ ಸುತ್ತಲ ಪರಿಸರವನ್ನೇ ಸೆಳೆಯುತ್ತದೆ. ಹದವಾದ ಹಣ್ಣನ್ನು ಬಿಚ್ಚಿ, ಅಂಟು - ಸೋಲೆಗಳಿಂದ ತೊಳೆಗಳನ್ನು ಬೇರ್ಪಡಿಸಿ, ತೊಳೆಗಳನ್ನು ಬೀಜಗಳಿಂದಲೂ ಬೇರ್ಪಡಿಸಿ ತಿನ್ನಲು ಉಪಯೋಗಿಸಬಹುದು.

**ನೀರು :** ಹಲವು ಉಷ್ಣವಲಯದಲ್ಲಿ ವಿಶೇಷವಾಗಿ ಬೆಳೆಯುವ ಬೆಳೆಯಾಗಿರುವುದರಿಂದ ಸ್ವಾಭಾವಿಕವಾಗಿ ಮಳೆ ನೀರಿನಿಂದ ಬೆಳೆಯುವ ಬೆಳೆ. ಬೇಸಗೆಯಲ್ಲಿ 15 ರಿಂದ 30 ದಿನಗಳಿಗೊಮ್ಮೆ ನೀರು ಹಾಯಿಸಿದರೆ ಉತ್ತಮ ಇಳುವರಿ ಕೊಡುತ್ತದೆ. ಸಹಜವಾಗಿ ಇದರ ಬೇರು ಆಳವಾಗಿರುವುದರಿಂದ ಭೂಮಿಯ ತಂಪನ್ನು ಹೀರಿಕೊಂಡು ತೋಟ - ಹೊಲ - ಗದ್ದೆ, ಹಿತ್ತಿಲುಗಳಲ್ಲಿ ಬೆಳೆಯುತ್ತದೆ.

**ಗೊಬ್ಬರ :** ಫಲವತ್ತಾದ ಭೂಮಿಯಲ್ಲಿ ಮರಗಳಿದ್ದರೆ ಗೊಬ್ಬರದ ಅಗತ್ಯ ಬರುವುದಿಲ್ಲ. ಎಲೆ, ಕಸ - ಕಡ್ಡಿ, ಮೆಕ್ಕಲುಮಣ್ಣು ಮತ್ತು ಭೂಮಿಯ ಸಾರವನ್ನು ಹೀರಿಕೊಂಡು ಬೆಳೆಯುತ್ತದೆ. ಸಾಧ್ಯವಾದರೆ ಮೇಲು ಗೊಬ್ಬರ ಕೊಟ್ಟಲ್ಲಿ ಹಣ್ಣುಗಳ ಗಾತ್ರ ಮತ್ತು ಸಂಖ್ಯೆ ಹೆಚ್ಚಾಗುತ್ತದೆ.

**ಹಣ್ಣಿನ ಪೌಷ್ಟಿಕತೆ :**

ಪ್ರತಿ ನೂರು ಗ್ರಾಂ ತಿನ್ನಬಲ್ಲ ಹಣ್ಣು ಮತ್ತು ಬೀಜ ಹಾಗೂ ಎಳೆಯ ತಿರುಳುನಲ್ಲಿರುವ ಪೋಷ್ಟಿಕಾಂಶಗಳ ಪಟ್ಟಿ

| ಪೋಷಕಾಂಶಗಳು | ಎಳೆಯ ತಿರುಳು | ಮಾಗಿದ ತೊಳೆ | ಬೀಜ |
|---|---|---|---|
| ನೀರು (ಶೇ.) | 84.00 | 77.2 | 64.5 |
| ಶರ್ಕರಪಿಷ್ಠ (ಗ್ರಾಂ) | 9.40 | 18.90 | 25.80 |
| ಸಸಾರಜನಕ (ಗ್ರಾಂ) | 2.60 | 1.90 | 6.60 |
| ಕೊಬ್ಬು (ಗ್ರಾಂ) | 0.30 | 0.10 | 0.40 |
| ನಾರು (ಗ್ರಾಂ) | | 1.10 | |
| ಖನಿಜ (ಗ್ರಾಂ) | 0.90 | 0.80 | 1.2 |
| ಸುಣ್ಣ (ಮಿ.ಗ್ರಾಂ) | 50 | 20 | 21 |
| ರಂಜಕ (ಮಿ.ಗ್ರಾಂ) | 97 | 30 | 28 |
| ಕಬ್ಬಿಣ (ಮಿ.ಗ್ರಾಂ) | 1.5 | 500 | |
| ಪೊಟ್ಯಾಷ್ (ಮಿ.ಗ್ರಾಂ) | 246 | | 17 |
| ಎ. ಜೀವಸತ್ವ (ಐ.ಯು.) | | 540 | |
| ಥೈಯಾಮಿನ್ (ಮಿ.ಗ್ರಾಂ) | 0.25 | 30 | |
| ರೈಬೋ ಫ್ಲೇವಿನ್ (ಮಿ.ಗ್ರಾಂ.) | 0.11 | | |
| ಸಿ ಜೀವಸತ್ವ (ಮಿ.ಗ್ರಾಂ) | 11.00 | | |

**ಔಷಧೀಯ ಗುಣ :** ಹಲಸಿನ ಸೇವನೆ ಕೆಲವು ಬ್ಯಾಕ್ಟೀರಿಯಾ ಮತ್ತು ವೈರಾಣುಗಳ ವಿರುದ್ಧ ದೇಹವನ್ನು ಬಲಗೊಳಿಸುತ್ತದೆ. ಬಿಳಿ ರಕ್ತ ಕಣಗಳನ್ನು ಹೆಚ್ಚು ಕೆಲಸ ಮಾಡಲು ಉತ್ತೇಜಿಸುತ್ತದೆ. ಅಲ್ಸರ್‌ಗೆ ಉಪಯೋಗಕಾರಿ. ರೋಗ ನಿರೋಧಕ ಶಕ್ತಿ ಅಧಿಕವಾಗುತ್ತದೆ. ವಿಟಮಿನ್ 'ಎ' ಇರುವುದರಿಂದ ರಾತ್ರಿ ಕುರುಡುತನ ಮತ್ತು ಸಾಮಾನ್ಯ ದೃಷ್ಟಿದೋಷ ನಿವಾರಣೆಗೆ ಸಹಕಾರಿ. ಚರ್ಮಕ್ಕೆ ಬೇಕಾದ ವಿಟಮಿನ್ ಸಿಗುತ್ತದೆ. ಕಡಿಮೆ ರಕ್ತದೊತ್ತಡ ಇರುವವರಿಗೆ ಉಪಯುಕ್ತ. ಅಸ್ತಮನಿಗ್ರಹಕ್ಕೆ ಇದರ ಬೇರು ಸಹಾಯಕ. ರಕ್ತಹೀನತೆಯಿಂದ ಬಳಲುವವರಿಗೆ ಇದು ಒಳ್ಳೆಯದು. ಥೈರಾಯ್ಡ್‌ನ್ನು ನಿಯಂತ್ರಿಸುತ್ತದೆ. ಗರ್ಭಿಣಿಯರಿಗೆ ಉತ್ತಮ ಪೋಷಕಾಂಶ ನೀಡುತ್ತದೆ.

**ಅಡ್ಡ ಪರಿಣಾಮಗಳು :** ಡಯಾಬಿಟಿಕ್ ರೋಗಿಗಳು ಉಪಯೋಗಿಸಬಾರದು. ತುಂಬಾ ತಿಂದರೆ ಅಜೀರ್ಣವಾಗುತ್ತದೆ. ಗಂಡಸರು ಹೆಚ್ಚು ತಿಂದರೆ ಕಾಮಚೇಷ್ಟೆಯನ್ನುಂಟು ಮಾಡುತ್ತದೆ.

**ಹಲಸಿನಿಂದ ತಯಾರಿಸಿದ ತಿನಿಸುಗಳು :** ಎಳೆ ಹಲಸಿನ ಕಾಯನ್ನು ಕೊಯ್ದು ಸಿಪ್ಪೆ ತೆಗೆದು ತೊಳೆ ಸೋಲೆ, ಬೀಜ ಇವುಗಳನ್ನು ಸಿಗಿದು ಖಾರದ ಪುಡಿ, ಉಪ್ಪು, ಸ್ವಲ್ಪ ಬೆಲ್ಲ ಹಾಕಿ ನೀರಿನಲ್ಲಿ ಬೇಯಿಸಿ ಉದ್ದಿನ ಬೇಳೆ ಕರಿಬೇವು ತೆಂಗಿನ ತುರಿ ಒಗ್ಗರಣೆ ಹಾಕಿ ಪಲ್ಯಕ್ಕೆ ಸೇರಿಸಿ ಸೇವಿಸುವುದು. ಬಲಿತ ಹಲಸಿನ ಕಾಯಿ ತೊಳೆ ಬಿಡಿಸಿ ತೊಳೆಯ ಮುಳುಗುವಷ್ಟು ನೀರು ಹಾಕಿ ರುಚಿಗೆ ತಕ್ಕಷ್ಟು ಉಪ್ಪು, ಖಾರ ಹಾಕಿ ಬೆರಸಿ ಹಿಂಗು ಸೇರಿಸಿ, ನುಣ್ಣಗೆ ರುಬ್ಬಿ ಹಿಟ್ಟಿಗೆ ಜೀರಿಗೆ ಎಳ್ಳು ಸೇರಿಸಿ ಬಾಳೆ ಎಲೆ ಅಥವಾ ಪ್ಲಾಸ್ಟಿಕ್ ಹಾಳೆ ಮೇಲೆ ತೆಳ್ಳಗೆ ಸ್ವಲ್ಪ ಹಿಟ್ಟು ಹಾಕಿ ಉಜ್ಜಿ ಬಿಸಿಲಲ್ಲಿ ಇಡಬೇಕು. ಒಣಗಿಸಿ ಸಂಡಿಗೆ ಮಾಡಿಕೊಳ್ಳಬೇಕು. ಜಾಮ್ / ಪಾಯಸ / ರಸಾಯನಗಳನ್ನು ತಯಾರಿಸಬಹುದು.



**ತಳಿಗಳು :** ರುದ್ರಾಕ್ಷಿ : ಈ ತಳಿಯ ಗಾತ್ರ ಚಕ್ಕೋತ ಹಣ್ಣಿನಷ್ಟು, ಸಿಪ್ಪೆ ಮೃದುವಾಗಿದ್ದು ಕಡಿಮೆ ತೊಳೆಗಳನ್ನು ಹೊಂದಿರುತ್ತದೆ. ಅಡುಗೆಗೆ ಯೋಗ್ಯವಾದುದು. ಸಮುದ್ರ ಮಟ್ಟದಿಂದ 1200 ಮೀ. ಎತ್ತರದ ಪ್ರದೇಶದಲ್ಲಿ ಬೆಳೆಯಲು ಸಾಧ್ಯ.

**ಸಿಂಗಾಪುರ್ ಮತ್ತು ಸಿಲೋನ್ :** ಮೈದಾನ ಪ್ರದೇಶಗಳಲ್ಲಿ ಈ ತಳಿಯು ನಾಟಿಯಾದ 2 ವರ್ಷಗಳಲ್ಲಿ ಮತ್ತು ಬೆಟ್ಟ ಪ್ರದೇಶಗಳಲ್ಲಿ ನಾಟಿಯಾದ 2½ ವರ್ಷಗಳಲ್ಲಿ ಫಸಲಿಗೆ ಬರುತ್ತದೆ. ಸಿಲೋನ್‌ನಿಂದ ಭಾರತ ಪ್ರವೇಶಿಸಿದ ಇದು ಭಾರತದ ತಳಿಗಳು ಫಲ ನೀಡದಿದ್ದಾಗ (ಸೆಪ್ಟೆಂಬರ್‌ನಿಂದ ಡಿಸೆಂಬರ್) ಫಲ ನೀಡುತ್ತವೆ.

**ಬಕ್ಕೆ ಹಲಸು :** ಮಧ್ಯಮ ಗಾತ್ರದಿಂದ ಎರಡಾಳು ಹೊರುವಷ್ಟು ಗಾತ್ರದ ಕಾಯಿಗಳು ಮೊಟ್ಟೆಯಾಕಾರವಾಗಿದ್ದು ಅರಿಸಿಣ - ಕೆಂಪು - ಗುಲಾಬಿ ತಿಳಿಗುಲಾಬಿ, ಬಿಳಿ - ಬೆಣ್ಣೆ ಬಿಳಿ - ಕೇಸರಿ - ತಿಳಿ ಕೇಸರಿ ಬಣ್ಣದ ತೊಳೆಗಳನ್ನು ಹೊಂದಿರುತ್ತವೆ. ಇವು ಕೊಬ್ಬರಿಯಂತೆ ಗಟ್ಟಿಯಾಗಿಯೂ ನಾರುನಾರಾಗಿ ಸುವಾಸನೆಯಿಂದ ಕೂಡಿರುತ್ತದೆ.

**ಬೆಳವ / ತುಳುವ / ಅಂಬಲಿ ಹಲಸು :** ಗಾತ್ರದಲ್ಲಿ ಬಕ್ಕೆ ಹಲಸಿನಂತೆ; ಆದರೆ ಕೈಯಲ್ಲಿ ಸಿಗಿದು ತೊಳೆಗಳನ್ನು ತೆಗೆಯಬಹುದು. ತೊಳೆಗಳು ಹೆಚ್ಚಾಗಿದ್ದು ಸುವಾಸನೆಯುಕ್ತವಾಗಿರುತ್ತದೆ. ಅರಿಸಿಣ - ಬಿಳಿ - ಕೇಸರಿ ಬಣ್ಣಗಳಿಂದ ಕೂಡಿರುತ್ತದೆ.

**ನೀರು ಹಲಸು :** ರೋಗ ರಹಿತ ಮರ, ಮರದ ತುದಿಯಲ್ಲಿ ಕಾಯಿ ಬಿಡುತ್ತದೆ. ಬೊಗಸೆ ಗಾತ್ರದಷ್ಟು ಚಿಕ್ಕದ್ದು. ತೊಳೆಗಳು ಚಿಕ್ಕವು. ಅಡಿಗೆಗೆ ಮಾತ್ರ ಬಳಕೆ. ರುಚಿ ಕಡಿಮೆ.

**ಬೇರು ಹಲಸು :** ಬೊಗಸೆ ಗಾತ್ರದ ಹಲಸು. ತೊಳೆಗಳ ಗಾತ್ರ ಚಿಕ್ಕದು. ವರ್ಷಕ್ಕೆ 2 ಬಾರಿ ಫಸಲು. ಹಣ್ಣು ಬಿಡಲು ಸುಮಾರು 25 ರಿಂದ 40 ವರ್ಷಗಳ ಮರವಾಗಿರಬೇಕು. ಬಯಲು ಸೀಮೆಯಲ್ಲಿ ಬೀಜ ಹಾಕಿ ಬೆಳೆಸಿದರೆ ಕರಾವಳಿ ಮತ್ತು ಮಲೆನಾಡುಗಳಲ್ಲಿ ತಾಯಿ ಬೇರಿಗೆ ಕಸಿ ಕಟ್ಟಿ ಬೆಳೆಸುತ್ತಾರೆ.

**ದೇವಿ ಹಲಸು :** ಇದನ್ನು ಕ್ರಿ.ಶ. 1750ರಲ್ಲಿ ಪೋಲಿನೇಷ್ಯಾದ ಮೂಲಕ ಡಚ್ಚರು ಭಾರತಕ್ಕೆ ತಂದರು. ಎಲೆಗಳು ದನಗಳಿಗೆ ಉತ್ತಮ ಮೇವು, ಇದರ ಹಾಲಿನಿಂದ ದೋಣಿಗಳ ಬಿರುಕು ಮುಚ್ಚಬಹುದು, ಮಲಬದ್ಧತೆಗೆ ಉಪಯುಕ್ತ.

**ಬ್ಲಾಕ್ ಗೋಲ್ಡ್:** ಈ ಹಣ್ಣು ಸು. 6.5 ಕೆಜಿ ತೂಕ ಇದ್ದರೂ ಶೇ. 40 ಭಾಗ ತಿನ್ನಲು ಮೃದುವಾದ, ಸಿಹಿಯಾದ ತೊಳೆಗಳಿರುತ್ತವೆ.

**ಚೀನಾ :** ಹಣ್ಣಿನ ತೂಕ ಸು. 2.5 ಕೆ.ಜಿ. ಇದ್ದು ಶೇ. 33 ಭಾಗ ತೊಳೆ ಇದ್ದು ತುಂಬಾ ಸಿಹಿಯಾಗಿರುತ್ತದೆ.

**ಕೊಚ್ಚಿನ್ :** ಹಣ್ಣಿನ ತೂಕ ಸು. 1.5 ಕೆ.ಜಿ ಇದ್ದು ಶೇ. 35 ಭಾಗ ಹಣ್ಣು ಉತ್ತಮವಾಗಿರುತ್ತದೆ.

**ಡಾಂಗ್ ರಶ್ಮಿ :** ತೂಕ ಸು. 8 ಕೆ.ಜಿ. ಶೇ. 32 ಭಾಗ ತೊಳೆಗಳಿದ್ದು ಮಧ್ಯಮ ಸಿಹಿ ಇರುತ್ತದೆ.

**ಗೋಲ್ಡನ್ ನುಗೆಟ್ :** ತೂಕ ಸು. 3.2 ಕೆ.ಜಿ. ಶೇ. 41 ಭಾಗ ಹಣ್ಣು ಗುಂಡಾದ ತೊಳೆಗಳಿದ್ದು ಚಿನ್ನದ ಹಳದಿ ಬಣ್ಣದ್ದಾಗಿದ್ದು ಸಿಹಿಯಾಗಿರುತ್ತವೆ.

**ಗೋಲ್ಡನ್ ಪಿಲ್ಲೋ :** ಇದಕ್ಕೆ ಮಾಂಗ್ - ಟಾಂಗ್ ಎಂದೂ ಕರೆಯುತ್ತಾರೆ. 3½ ಯಿಂದ 5½ ಕೆ.ಜಿ ತೂಕವಿದ್ದು ತೊಳೆಗಳು ಶೇ. 35 ರಿಂದ 40 ಭಾಗ ಇರುತ್ತವೆ.

**ಕೀಟಗಳಿಂದ ಸಂರಕ್ಷಣೆ :** ಕಾಂಡ ಕೊರೆಯುವ ಹುಳುಗಳು ಎಳೆಬೇರು ಮತ್ತು ಕುಡಿಗಳನ್ನು ಕೊರೆದು ತಿನ್ನುತ್ತವೆ. ಇಂತಹ ಟಿಸಿಲುಗಳನ್ನು ಚಿವುಟಿ ತೆಗೆದು 10 ಲೀಟರ್ ನೀರಿಗೆ 40 ಗ್ರಾಂ ಬೆರಸಿದ ಸೆವಿನ್ ಅನ್ನು ಹೂ ಬಿಡುವ ಕಾಲದಲ್ಲಿ ಸಿಂಪಡಿಸಬೇಕು.

ಕಂದು ಮೂತಿ ಹುಳುಗಳು ಎಳೆ ಮೊಗ್ಗು ಮತ್ತು ಕಾಯಿಗಳನ್ನು ಕೊರೆಯುವುದರಿಂದ ಕಾಯಿ ಮತ್ತು ಮೊಗ್ಗುಗಳ ಉದುರುವಿಕೆಗೆ ಕಾರಣವಾಗುತ್ತವೆ. ಇವುಗಳ ನಿಯಂತ್ರಣಕ್ಕೆ ಪರಿಹಾರ ಬಿದ್ದ ಹೂವು ಮತ್ತು ಕಾಯಿಗಳನ್ನು ಸುಟ್ಟು ಬಿಡುವುದು.

ಬೂಷ್ಟ್ ತಿಗಣೆ ಮತ್ತು ಶಲ್ಕ ಕೀಟಗಳು ಎಲೆ ಮತ್ತು ಮೃದು ಟೊಂಗೆಗಳ ರಸ ಹೀರಿ ಒಣಗಿಸುತ್ತವೆ. ಇದನ್ನು

ತಡೆಗಟ್ಟಲು 40 ಗ್ರಾಂ ಕಾರ್ಬರಿಲ್ ಅನ್ನು 10 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಹಣ್ಣು ಕೊಳೆಯುವಿಕೆ ಸಂಬಂಧಿಸಿದಂತೆ - ಹಣ್ಣು ಪಕ್ವವಾಗುವ ಮುನ್ನ ಉದುರಿ ಬೀಳುತ್ತವೆ. ಇದರ ನಿಯಂತ್ರಣಕ್ಕೆ ಶೇ. 1 ಬೋರ್ಡೋ ದ್ರಾವಣವನ್ನು 3 ವಾರಗಳ ಅಂತರದಲ್ಲಿ ಸಿಂಪಡಿಸಬೇಕು. ಕಂದು ಚುಕ್ಕೆ ಎಲೆ ರೋಗವನ್ನು ಶಿಲೀಂಧ್ರರೋಗ ಎನ್ನುವರು. ಎಲೆಗಳ ಮೇಲೆ ಕಂದು ಬಣ್ಣದ ಚುಕ್ಕೆಗಳು ವೃದ್ಧಿಯಾಗಿ ಎಲೆ ಬೀಳುವುದರಿಂದ ಮಿಡಿ ಕಾಯಿಗಳು ಬಿದ್ದು ಹೋಗುತ್ತವೆ. ಈ ರೋಗದ ನಿಯಂತ್ರಣಕ್ಕೆ ಶೇ. 1 ಬೋರ್ಡೋದ್ರಾವಣವನ್ನು 3 ವಾರಗಳ ಅಂತರದಲ್ಲಿ ಸಿಂಪಡಿಸಬೇಕು.

ಕೆನ್ನೀಲಿ ರೋಗ ಕಾಂಡ - ಹೂ ಗೊಂಚಲು ಕೊಳೆಯುವ ರೋಗ : ಟೊಂಗೆಗಳು ಕೆನ್ನೀಲಿ ಬಣ್ಣಕ್ಕೆ ತಿರುಗುತ್ತವೆ. ಕಾಂಡ ಮತ್ತು ಹೂ ಗೊಂಚಲುಗಳ ಬುಡ ಕೊಳೆತು ಒಣಗಲಾರಂಭಿಸುತ್ತವೆ. ಇವುಗಳ ನಿವಾರಣೆಗೆ ಸವರಿಕೆಯಾದ ಅನಂತರ ಕತ್ತರಿಸಿದ ಭಾಗಗಳಿಗೆ ಬೋರ್ಡೋ ಮುಲಾಮು ಹಚ್ಚಬೇಕು.

*ಎಚ್.ಕೆ.ಎಂ.*

**ಹಸುರೆಲೆ ಗೊಬ್ಬರ** ಪ್ರಾಚೀನ ಕಾಲದಿಂದಲೂ ಕೃಷಿಯಲ್ಲಿ ಹಸುರೆಲೆ ಗೊಬ್ಬರದ ಬಳಕೆಯುಂಟು. ಮಣ್ಣಿನ ಫಲವತ್ತತೆಯನ್ನು ಕಾಪಾಡುವಲ್ಲಿ ಇದರ ಪಾತ್ರ ವಿಶಿಷ್ಟವಾದುದು. ನಿರಂತರ ಕೃಷಿಯಲ್ಲಿ ಮಣ್ಣಿನ ಜೀವದ್ರವ್ಯವೆಂದೇ ಪರಿಗಣಿಸಲಾದ ಸಾವಯವ ಪೋಷಕಾಂಶಗಳು ಹಸುರೆಲೆಗೊಬ್ಬರದಿಂದ ಹೆಚ್ಚಾಗಿ ದೊರೆಯುತ್ತವೆ. ರೈತರು ಜಮೀನುಗಳಲ್ಲಿ ಇದಕ್ಕೆಂದು ಹಸುರೆಲೆ ಸಸ್ಯಗಳನ್ನು ಬೆಳೆಸಿ ಅವು ಒಂದು ಹಂತಕ್ಕೆ ಬಂದಾಗ, ಉಳುಮೆ ಮಾಡುವ ಮೂಲಕ ಮಣ್ಣಿನಲ್ಲಿ ಬೆರೆಯುವಂತೆ ಮಾಡಿ ಭೂಮಿಯ ಸತ್ತ್ವವನ್ನು ಹೆಚ್ಚಿಸಿಕೊಳ್ಳುವರು. ಮೇ ಕೊನೆಯವಾರ ಅಥವಾ ಜೂನ್ ತಿಂಗಳ ಮೊದಲೆರಡು ವಾರಗಳು ಈ ಗೊಬ್ಬರವನ್ನು ಒದಗಿಸಲು ಯುಕ್ತವಾದ ಕಾಲ.

ಆರೆಂಟು ವಾರಗಳು ಬೆಳೆದ ಸಸಿಗಳನ್ನು ಭೂಮಿಗೆ ಸೇರಿಸುವ ಈ ಹಸುರು ಹಾಕುವ ಪದ್ಧತಿಯನ್ನು ಹಸುರೆಲೆಗೊಬ್ಬರ ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಹಸುರೆಲೆ ಗೊಬ್ಬರಕ್ಕಾಗಿ ಬಳಸುವ ಸಸ್ಯಗಳು ಬೇಗನೆ ಬೆಳೆದು ಹೆಚ್ಚು ಎಲೆ ಮತ್ತು ಕಾಂಡಗಳನ್ನು ಕೊಡುವಂತಿದ್ದು, ಮಣ್ಣಿನಲ್ಲಿ ಬೆರೆಸಿದರೆ ಶೀಘ್ರವಾಗಿ ಕೊಳೆಯುವಂತಿರಬೇಕು; ಹೆಚ್ಚು ಪೋಷಕಾಂಶಗಳನ್ನು ಕೊಡುವಂತಿರಬೇಕು. ಹುರುಳಿ, ಸಸ್ಬೇನಿಯಾ, ಗೊಳಂಜಿ, ಅಲಸಂದೆ, ಹೆಸರು, ಅವರೆ, ಉದ್ದು ಇತ್ಯಾದಿ ದ್ವಿದಳ ಧಾನ್ಯಗಳ ಸಸಿಗಳನ್ನು ಹಸುರೆಲೆ ಗೊಬ್ಬರಕ್ಕಾಗಿ ಬಳಸುವರು. ಕೆಲವು ನಿರುಪಯುಕ್ತ ಸಸಿಗಳನ್ನು ಸಹ ಹಸುರೆಲೆಗೊಬ್ಬರಕ್ಕೆ ಬಳಸುವುದುಂಟು.

ಬತ್ತ ನಾಟಿ ಮಾಡುವ ಅಥವಾ ಬಿತ್ತುವ ಮೊದಲು ಬಳಸುವ ಹಸುರೆಲೆ ಸೊಪ್ಪುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ. ಆಯಾ ಭಾಗದಲ್ಲಿ ದೊರೆಯುವ ಸಸಿ ಅಥವಾ ಮರಗಳ ಸೊಪ್ಪನ್ನು ಇದಕ್ಕೆ ಬಳಸಲಾಗುವುದು. ಉದಾ : ಚೆಂಬೆಗಿಡ, ಕೆಸರು ಗದ್ದೆಯಲ್ಲಿ ಕೆಲವೆಡೆ ಬಳಸಿದರೆ ಇನ್ನಿತರ ಕಡೆಗಳಲ್ಲಿ ಹೊಂಗೆಸೊಪ್ಪು, ಬೇವಿನ ಸೊಪ್ಪು, ಲಂಟಾನ ಬೇಲಿ ಗಿಡಗಳನ್ನು ಬಳಸುವುದುಂಟು. ಅಪ್ಪಸೆಣಬು ದ್ವಿದಳ ಧಾನ್ಯ ಸಸ್ಯಗಳ ಬೇರುಗಳಲ್ಲಿ ಗಂಟುಗಳಿದ್ದು, ಇವು ಗಾಳಿಯಲ್ಲಿರುವ ಸಾರಜನಕವನ್ನು ಹೀರಿ ಭೂಮಿ ಒದಗಿಸುತ್ತವೆ. ಇತ್ತೀಚಿಗೆ ಆಡುಸೋಗೆ ಸಸ್ಯವನ್ನು ಹಸುರೆಲೆಗೊಬ್ಬರಕ್ಕೆ ಬಳಸುವುದು ಇದೆ. ಹೊಲದಲ್ಲಿ ಬರುವ ಕಳೆಯನ್ನು ಕಿತ್ತು ಅಲ್ಲಿಯೇ ತುಳಿದು ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುವ ರೈತರೂ ಇದ್ದಾರೆ. ಆದರೆ ಇಂಥ ಕಳೆ ಸಸ್ಯಗಳು ಬೀಜವನ್ನು ಬಿಡುವ ಮೊದಲೆ ಭೂಮಿಗೆ ಸೇರಿಸಿದರೆ ಒಳ್ಳೆಯದು.

ಜಮೀನಿನ ಬದುಗಳ ಮೇಲೆ ಅಥವಾ ಬೇರೆ ಭಾಗಗಳಲ್ಲಿ ಬೆಳೆದ ಮರಗಳಿಂದ ಹಸುರೆಲೆ ಸೊಪ್ಪನ್ನು ತಂದು ಭೂಮಿಗೆ ಸೇರಿಸುವುದು ರೂಢಿಯಲ್ಲಿದೆ. ಹೊಂಗೆ, ಯಕ್ಕ, ತುಂಬೆ ಇತ್ಯಾದಿ ಗಿಡಗಳ ಸೊಪ್ಪನ್ನು ತೆಗೆದು ಭೂಮಿಗೆ ಸೇರಿಸಲಾಗುತ್ತದೆ. ಸೇರಿಸಿದ ಸುಮಾರು ಒಂದು ತಿಂಗಳಲ್ಲಿ ಹಸುರೆಲೆ ಸೊಪ್ಪು ಕೊಳೆತು ಗೊಬ್ಬರವಾಗುತ್ತದೆ. ನೀರಾವರಿ ಅನುಕೂಲವಿರುವ ಹಾಗೂ ಹೆಚ್ಚಿಗೆ ಮಳೆ ಬೀಳುವ ಪ್ರದೇಶಗಳಲ್ಲಿ ಈ ಪದ್ಧತಿಗಳನ್ನು ಸುಲಭವಾಗಿ ಅನುಸರಿಸಬಹುದು.

**ಘನಜೀವಾಮೃತ :** ರಾಸಾಯನಿಕ ಕ್ರಿಮಿ ನಾಶಕಗಳಿಂದ ಬರಡಾಗುತ್ತಿರುವ ಭೂಮಿಯನ್ನು ರಕ್ಷಿಸಲು, ರೈತರನ್ನು ಸ್ವಾವಲಂಬಿಯಾಗಿ ಮಾಡಲು, ಕೃಷಿಯನ್ನು ಲಾಭದಾಯಕವಾಗಿ ಮಾಡಲು ಜನರಿಗೆ ರಾಸಾಯನಿಕಯುಕ್ತ ಪೌಷ್ಟಿಕ ಆಹಾರ ನೀಡಲು ರೈತರೇ ಸ್ವತಃ ತಯಾರಿಸುವ ಗೊಬ್ಬರ. 10 ಬುಟ್ಟಿ ಹಸುವಿನ ಸಗಣಿ, 10 ಸೇರಿನಷ್ಟು ಹಸುವಿನ ಗಂಜಲ, ಎರಡು ಕೆ.ಜಿ. ಬೆಲ್ಲ, ಎರಡು ಕೆ.ಜಿ. ಅಲಸಂದೆ ಹಿಟ್ಟು, ಎರಡು ಬೊಗಸೆ ಹೊಲದ ಏರಿಯ ಮಣ್ಣು- ಇವುಗಳನ್ನೆಲ್ಲ ಚೆನ್ನಾಗಿ ಮಿಶ್ರ ಮಾಡಿ ಮೂರು ದಿನಗಳ ಕಾಲ ಮುಚ್ಚಿಡಬೇಕು. ಮೂರು ದಿನಗಳಾದ ಮೇಲೆ ಗೊಬ್ಬರ ಬಳಸಬಹುದು. ಹೀಗೆ ತಯಾರಿಸಿದ ಗೊಬ್ಬರವನ್ನು ಒಂದು ಎಕರೆ ಭೂಮಿಗೆ ಒಂದು ಕ್ವಿಂಟಾಲ್‌ನಷ್ಟು ವರ್ಷಕ್ಕೆ ಒಮ್ಮೆ ಮಾತ್ರ ಹಾಕಬೇಕು. ಇಡೀ ವರ್ಷದ ಬೆಳೆಗೆ ಎಷ್ಟು ಬೇಕೋ ಅಷ್ಟು ಪೋಷಕಾಂಶಗಳನ್ನು ಇದು ಭೂಮಿಗೆ ಪೂರೈಸುತ್ತದೆ, ಭೂಮಿಯು ಫಲವತ್ತತೆ ಕೂಡ ಹಾಗೆಯೇ ಉಳಿದಿರುತ್ತದೆ ಎಂಬುದು ಅನುಭವಿ ರೈತರ ಅಭಿಪ್ರಾಯ.

ಜೀವಾಮೃತ 200 ಲೀ. ನೀರು 10 ಲೀ. ಗೋಮೂತ್ರ, 10 ಕೆ.ಜಿ. ನಾಡ ಹಸುವಿನ ಸಗಣಿ, 1 ಕೆ.ಜಿ. ಬೆಲ್ಲ, 1 ಕೆ.ಜಿ. ಅಲಸಂದೆ ಹಿಟ್ಟು ಎರಡು ಬೊಗಸೆ ಹೊಲದ ಮಣ್ಣು ಬಳಸಿ ನೆಲದಲ್ಲಿ ಕಟ್ಟಿದ ತೊಟ್ಟಿಗೆ ಹಾಕಿ 48 ಗಂಟೆ ಕಾಲ ಬಿಡಬೇಕು. ಎರಡು ದಿನವೂ ಕೋಲಿನಿಂದ ತಿರುಗಿಸುತ್ತಿರಬೇಕು. ಬಳಿಕ ಗೊಬ್ಬರ ಬಳಕೆಗೆ ತಯಾರಾಗುತ್ತದೆ. ಇದನ್ನು ತಿಂಗಳಿಗೊಮ್ಮೆ ಜಮೀನಿಗೆ ಸಿಂಪಡಿಸಬೇಕು.

**ಸೆಣಬು :** ಇದು ಕಡಿಮೆ ಫಲವತ್ತಿನ ಒಳಭೂಮಿ ಅಥವಾ ನೀರು ನಿಲ್ಲುವ ತಗ್ಗು ಭೂಮಿಯಲ್ಲಿ ಉತ್ತಮವಾಗಿ ಬೆಳೆಯುವ ಹಸುರು ಗೊಬ್ಬರದ ಗಿಡ. ಆದರೆ ಚೌಳು ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುವುದಿಲ್ಲ. ಮುಂಗಾರು ಅನಂತರ ಅಥವಾ ಬೇಸಗೆಯಲ್ಲಿ ನೀರಾವರಿ ಬೆಳೆಯಾಗಿ ಬೆಳೆಯಬಹುದು. ಇದು ಎಕರೆಗೆ 6 ರಿಂದ 8 ಟನ್ ಹಸುರೆಲೆಗೊಬ್ಬರ ಕೊಡುತ್ತದೆ. ದನಗಳ ಮೇವಾಗಿಯೂ ಬಳಕೆಯಲ್ಲಿದೆ.

**ಡಯಂಚ :** ಇದೊಂದು ಉದ್ದವಾಗಿ ಬೆಳೆಯುವ ಹಸುರು ಗಿಡ. ವಿವಿಧ ಜಾತಿ ಮಣ್ಣು ಮತ್ತು ಹವಾಗುಣದಲ್ಲಿ ಉತ್ತಮವಾಗಿ

ಬೆಳೆಯುವುದಲ್ಲದೆ ಮಣ್ಣಿನಲ್ಲಿಕಡಿಮೆ ತೇವಾಂಶವಿದ್ದಾಗ್ಯೂ ಬೆಳೆ ತಡೆದುಕೊಳ್ಳುತ್ತದೆ. ಬೆಳೆಯ ಪೂರ್ಣಾವಧಿ ನಾಲ್ಕರಿಂದ ನಾಲ್ಕುವರೆ ತಿಂಗಳಾದರೂ ಬೇಗ ಬೆಳೆಯುವುದರಿಂದ ಭೂಮಿಗೆ ಎರಡು ಎರಡುವರೆ ತಿಂಗಳು ಬೆಳೆದ ಅನಂತರ ಸೇರಿಸುವುದು ಉತ್ತಮ. ಎಕರೆಗೆ 8 ರಿಂದ 10 ಕೆ.ಜಿ. ಬೀಜ ಹಾಕಿದಲ್ಲಿ 55 ರಿಂದ 60 ದಿವಸಗಳಲ್ಲಿ 4 ರಿಂದ 6 ಟನ್ ಹಸುರೆಲೆ ಗೊಬ್ಬರ ಸಿಗುತ್ತದೆ. ನೀರಾವರಿ ಬೆಳೆಯಾದಲ್ಲಿ ಸುಮಾರು 10 ಟನ್ ಗೊಬ್ಬರ ಸಿಗುತ್ತದೆ. ದನಗಳಿಗೆ ಆಹಾರವಾಗಿ ಹುಲ್ಲಿನ ಜೊತೆ ಬಳಕೆಯಲ್ಲಿದೆ.

**ಅಲಸಂದೆ :** ಚಿಕ್ಕ ಪೊದೆಯಂತೆ ಬೆಳೆಯುವ ಹಸುರು ಗಿಡ. ಕಡಿಮೆ ಫಲವತ್ತಿನ ವಿವಿಧ ಮಣ್ಣುಗಳಲ್ಲಿ ಹಾಗೂ ಹವಾಗುಣಕ್ಕೆ ಹೊಂದಿಕೊಂಡು ಬರುವ ಬೆಳೆ. ಮರಳು ಮಿಶ್ರಿತ ಭೂಮಿಗಳಲ್ಲೂ ಬೆಳೆ ಚೆನ್ನಾಗಿ ಬರುತ್ತದೆ.ಎಕರೆಗೆ 12 ರಿಂದ 15 ಕೆ.ಜಿ. ಬೀಜ ಹಾಕಿದಲ್ಲಿ 45 ದಿವಸಗಳಲ್ಲಿ 3 ರಿಂದ 4 ಟನ್ ಹಸುರೆಲೆ ಗೊಬ್ಬರ ದೊರಕುತ್ತದೆ. ಇದನ್ನು ತರಕಾರಿಗಾಗಿಯೂ ಬೆಳೆಯಲಾಗುತ್ತದೆ.

**ಗ್ಲಿರಿಸೀಡಿಯಾ :** ಚಿಕ್ಕಪೊದೆಯಂತೆ ಬೆಳೆಯುವ ಗಿಡ. ಇದನ್ನು ಎಲ್ಲಾ ವಿಧವಾದ ಮಣ್ಣುಗಳಲ್ಲಿ ಇದರ ಕಾಯಿಗಳನ್ನು, ಬೆಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಹಾಗೂ ತಗ್ಗು ಪ್ರದೇಶಗಳಲ್ಲಿ ಹಾಗೂ ಬೆಳೆಯ ಬದುಗಳ ಮೇಲೆ ಕಾಲುವೆ ಅಥವಾ ದಾರಿಯ ಅಕ್ಕಪಕ್ಕ ಬೇಲಿ ಗಿಡವನ್ನಾಗಿ ಬೆಳೆಯಬಹುದು. ಸುಲಭವಾಗಿ ಮತ್ತು ಬೇಗನೆ ಭೂಮಿಯಲ್ಲಿ ಕೊಳೆಯುವುದರಿಂದ ಬತ್ತದ ಗದ್ದೆ ಹಾಗೂ ಇತರೆ ಭೂಮಿಯಲ್ಲಿ ಬಳಸಲಾಗುತ್ತದೆ.

**ಹೊಂಗೆ ಮರ :** ಹಸುರೆಲೆಗಳನ್ನು ಯಥೇಚ್ಛವಾಗಿ ಕೊಡುವ ಮರ. ಹಳ್ಳ ದಡಗಳಲ್ಲಿಯೂ ಜಮೀನಿನ ಸುತ್ತಲೂ ಬೆಳೆಸಬಹುದು. 5-6 ವರ್ಷಗಳ ಅನಂತರ ಸುಮಾರು 2 ರಿಂದ 3 ಟನ್ ಹಸುರೆಲೆಯನ್ನು ಕೊಡುತ್ತದೆ. ಇದರ ಬೀಜದಿಂದ ಔಷಧಿ ಗುಣದ ಹಿಂಡಿಯನ್ನು ತಯಾರಿಸಿ ಹುಳುಗಳ ಕಾಟ ತಪ್ಪಿಸಲು ಸಾವಯವ ಗೊಬ್ಬರವಾಗಿ ಬಳಸಲಾಗುತ್ತದೆ.

**ಯುಪಟೋರಿಯಂ :** ಇದೊಂದು ಕಮ್ಯುನಿಸ್ಟ್ ಬೆಳೆ. ಮಲೆನಾಡಿನ ರಸ್ತೆ ಬದಿಗಳಲ್ಲಿ ಗದ್ದೆಗಳ ಅಕ್ಕಪಕ್ಕದಲ್ಲಿ ಬೀಳು ಬಿಟ್ಟ ಪ್ರದೇಶಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ಗದ್ದೆ ಹೊಲಗಳಿಗೆಲ್ಲ ಗೊಬ್ಬರವಾಗಿ ಬಳಸಲಾಗುತ್ತದೆ.

**ಹಸುರೆಲೆ ಗೊಬ್ಬರ ಹೆಚ್ಚಿಸಲು ಅನುಸರಿಸಬೇಕಾದ ಕ್ರಮಗಳು :** ಮುಂಗಾರು ಬೆಳೆಗಳ ಅನಂತರ ಅನುಕೂಲವಿರುವ ಪ್ರದೇಶಗಳಲ್ಲಿ ಯಾವುದೇ ರೀತಿಯ ಹಸುರು ಗೊಬ್ಬರ ಗಿಡಗಳನ್ನು ಬೆಳೆದು ಅದೇ ಭೂಮಿಯಲ್ಲಿ ಸೇರಿಸುವುದು. ಗ್ರಾಮ ಪಂಚಾಯ್ತಿಗಳು, ಯುವಕ ಸಂಘಗಳು, ಇದರ ಪ್ರಯೋಜನ ಮನಗಂಡು ಬೀಳು ಬಿದ್ದ ಪ್ರದೇಶಗಳಲ್ಲಿ ಬೇಲಿಗಳಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಹಸುರೆಲೆ ಮರಗಳನ್ನು ಬೆಳೆಯಲು ಪ್ರೋತ್ಸಾಹಿಸಬೇಕು. ಕೃಷಿಕರು ತಮ್ಮ ಮನೆಯ ಕೈ ತೋಟದಲ್ಲಿ ಚೀಲಗಳಲ್ಲಿ ಅಥವಾ ತಿಪ್ಪೆ ಗುಂಡಿಯ ಸುತ್ತಲೂ ಪ್ರದೇಶಕ್ಕನುಗುಣವಾಗಿ ಗ್ಲಿರಿಸೀಡಿಯಾ, ಹೊಂಗೆ, ನೆಲ್ಲಿ - ಮುಂತಾದವುಗಳನ್ನು ಬೆಳೆಸಿ ಅದರ ಪ್ರಯೋಜನ ಪಡೆಯಬಹುದು.

**ಹಸುರೆಲೆ ಗೊಬ್ಬರದ ಪ್ರಯೋಜನಗಳು :** ಈ ಗೊಬ್ಬರವನ್ನು ಬಳಸುವುದರ ಮೂಲಕ ಮಣ್ಣಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಗಳನ್ನು ಅಭಿವೃದ್ಧಿಪಡಿಸಬಹುದು. ತೋಟದ ಬೆಳೆಗಳಿಗೆ ಹೆಚ್ಚು ಉಪಯುಕ್ತ. ಪೋಷಕಾಂಶಗಳ ಪ್ರಮಾಣ ಹೆಚ್ಚಿ ಇಳುವರಿ ಅಧಿಕಗೊಳಿಸಬಹುದು. ಇದು ಭೂಮಿಯ ತೇವಾಂಶವನ್ನು ಕಾಪಾಡುವುದರ ಜೊತೆಗೆ ಮಣ್ಣಿನ ಸವೆತವನ್ನು ತಡೆಯುತ್ತದೆ.

ಹುಸುರೆಲೆ ಗೊಬ್ಬರ ಭೂಮಿಗೆ ಸಾವಯವ ಪದಾರ್ಥ ಮತ್ತು ಸಾರಜನಕವನ್ನು ಒದಗಿಸುವ ಬಹಳ ಸುಲಭವಾದ ಮತ್ತು ಮಿತವ್ಯಯವಾದ ಮಾರ್ಗವಾಗಿದೆ. ಹಸುರೆಲೆಗೊಬ್ಬರ ಬೆಳೆಗಳು ದ್ವಿದಳ ಧಾನ್ಯಗಳ ಗುಂಪಿಗೆ ಸೇರಿರುವುದರಿಂದ ಅವುಗಳ ಬೇರುಗಳ ಗಂಟುಗಳಲ್ಲಿ "ರೈಬೋಬಿಯಂ" ಎಂಬ ಸೂಕ್ಷ್ಮ ಜೀವಿಗಳಿದ್ದು ಇವು ವಾಯುಮಂಡಲದ ಸಾರಜನಕವನ್ನು ಹೀರಿ ಬೇರುಗಳಲ್ಲಿ ಶೇಖರಿಸುತ್ತವೆ.

ಇದು ಮಣ್ಣಿನಲ್ಲಿ ಆಳವಾಗಿ ಬೇರು ಬಿಟ್ಟು ಕೆಳಗಿರುವ ಪೋಷಕಾಂಶಗಳನ್ನು ಹೀರಿಕೊಳ್ಳುತ್ತವೆ. ಇಂತಹ ಆಳದಲ್ಲಿ ಲಭ್ಯವಿರುವ ಪೋಷಕಾಂಶಗಳನ್ನು ಭೂಮಿಯ ಮೇಲ್ಪದರದಲ್ಲಿಯೇ ಬೆಳೆಗಳಿಗೆ ಒದಗಿಸುತ್ತವೆ.

ಹಸುರೆಲೆ ಗೊಬ್ಬರ ನಿರಂತರ ಬಳಕೆಯಿಂದ ಮಣ್ಣಿನ ರಚನೆ, ಸಸ್ಯ ಪೋಷಕಾಂಶಗಳ ಸೇರ್ಪಡೆ ಹಾಗೂ ಜೈವಿಕ ಕ್ರಿಯೆಗಳು ಉತ್ತಮಗೊಳ್ಳುತ್ತದೆ.

*ಬಿ.ಆರ್.*

**ಹಾರಕ** ಆಹಾರ ಧಾನ್ಯಗಳಲ್ಲೆಲ್ಲಾ ಹೆಚ್ಚು ಗಟ್ಟಿಯಾದ ಧಾನ್ಯವಿದು. ಈಗ ಇದನ್ನು ಬೆಳೆಯುವುದು ಅಪರೂಪವಾಗಿದೆ. ಮಳೆಯಾಶ್ರಯದಲ್ಲಿ ಬೆಳೆಯಬಹುದಾದ ಕಡಿಮೆ ಆರೈಕೆಯ ಬೆಳೆಯಿದು. ಒಮ್ಮೆ ಉಳುಮೆ ಮಾಡಿ ಬೀಜ ಬಿತ್ತಿದ ಮೇಲೆ, ಒಂದೆರಡು ಮಳೆ ಬಿದ್ದರೆ ಸಾಕು ಬೆಳೆ ಗ್ಯಾರಂಟಿ. ಸಾಮಾನ್ಯವಾಗಿ ಬರಡು ನೆಲದಲ್ಲಿ ದಿನ್ನೆಯಂಥ ಎತ್ತರದ ಪ್ರದೇಶಗಳಲ್ಲಿ ಇದನ್ನು ಬೆಳೆಯುತ್ತಿದ್ದರು.

ಬಡವರ ಧಾನ್ಯವಾದ ಇದನ್ನು ಉಳ್ಳವರು ದನ ಕರುಗಳಿಗೆ ಮೇವಿಗಾಗಿ ಬಳಸುತ್ತಾರೆ. ಹಾಲು ಕರೆಯುವ ರಾಸುಗಳಿಗೆ ಇದು ಉತ್ತಮ ಪೌಷ್ಟಿಕ ಆಹಾರ. ಈ ಬೆಳೆಯ ಅವಧಿ ಆರು ತಿಂಗಳು. ಕರ್ನಾಟಕದಲ್ಲಿ ತುಮಕೂರು, ಕೋಲಾರ, ಚಿತ್ರದುರ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದರು. ಕೆಂಪು ನೆಲದಲ್ಲಿ ಬಿತ್ತಿದರೆ ಉತ್ತಮ ಇಳುವರಿಯನ್ನು ಪಡೆಯಬಹುದು. ಜೂನ್ ತಿಂಗಳಲ್ಲಿ ಬಿತ್ತಿದರೆ ನವೆಂಬರ್-ಜನವರಿ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಒಂದು ಎಕರೆಗೆ ಐದರಿಂದ ಆರು ಸೇರು ಬಿತ್ತನೆ ಬೀಜಬೇಕಾಗುತ್ತದೆ. ಉತ್ತು ಹದ ಮಾಡಿದ ಭೂಮಿಯಲ್ಲಿ ಅನುಭವಸ್ಥ ರೈತನಿಂದ ಕಾಳನ್ನು ಬಿತ್ತಿಸುತ್ತಾರೆ.

ಕೈಯಿಂದ ನಿಗದಿತ ಅಂತರದಲ್ಲಿ ಕಾಳುಬೀಳುವಂತೆ ಬಿತ್ತಬೇಕು. ಹುಲ್ಲಿನಂತೆ ಬೆಳೆಯುವ ಇದು ಒಂದು ಅಡಿಯಿಂದ ಒಂದೂವರೆ ಅಡಿ ಎತ್ತರ ಬೆಳೆಯುತ್ತದೆ. ಈ ಬೆಳೆಯಲ್ಲಿ ಕಳೆಯನ್ನು ತೆಗೆಯುವುದು ಅಪರೂಪ. ತೀರ ಮಳೆ ಬೀಳದಿದ್ದರೂ ಅಲ್ಪ ಸ್ವಲ್ಪ ಬೆಳೆ ಬಂದೇ ಬರುತ್ತದೆ.


**ಉಪಯೋಗ :** ಹಾರಕ ಹೊಟ್ಟು ತುಂಬಾ ದಪ್ಪ ಕಾಳು. ಒನಕೆಯಿಂದ ಕುಟ್ಟಿ ತೆಗೆದ ಅಕ್ಕಿಯನ್ನು ಅನ್ನ ಮಾಡಿ ಉಪಯೋಗಿಸಿದರೆ ಕೆಲವರು ಕಾಳನ್ನು ಬೀಸಿ ರೊಟ್ಟಿಯನ್ನು ಮಾಡಿಕೊಳ್ಳುತ್ತಾರೆ. ಈಗ ಎಲ್ಲ ಬರಡು ನೆಲವನ್ನು ನೀಲಗಿರಿ ಆವರಿಸಿಕೊಂಡಿದ್ದು ಇದನ್ನು ಬೆಳೆಯುವವರು ಕಡಿಮೆ. ಹಾರಕ ಮಣ್ಣಿನ ಸಾರವನ್ನೆಲ್ಲಾ ಹೀರಿಕೊಂಡು ಕಳೆ ಬೆಳೆಯದಂತೆ ದಟ್ಟವಾಗಿ ಬೆಳೆಯುವ ಗುಣವುಳ್ಳದ್ದು.

*ವಿ.ಆರ್.ಬಿ.*

**ಹಾವೇರಿ ಜಿಲ್ಲೆಯ ಕೃಷಿ** ಕರ್ನಾಟಕದ ಮೂವತ್ತು ಜಿಲ್ಲೆಗಳ ಪೈಕಿ ಹಾವೇರಿಯು ಒಂದು. 1997ರಲ್ಲಿ ಇದು ಅಸ್ತಿತ್ವಕ್ಕೆ ಬಂತು. ಇದಕ್ಕಿಂತ ಮುಂಚೆ ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿತ್ತು. ಉತ್ತರ ಕರ್ನಾಟಕದ ಹೆಬ್ಬಾಗಿಲು, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಸಂಗಮ ಸ್ಥಾನ ಎಂಬ ಅಸ್ಮಿತೆಗಳು ಈ ಜಿಲ್ಲೆಯಲ್ಲಿವೆ. ಹಾಗಾಗಿಯೇ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಸಂಕರಶೀಲ ಸಂಸ್ಕೃತಿಯನ್ನು ಇಲ್ಲಿ ಕಾಣಬಹುದು.

ಕರ್ನಾಟಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಸುದ್ದಿಯಲ್ಲಿರುವ ಜಿಲ್ಲೆಯಿದು. ರೈತ ಹೋರಾಟಗಳು ಹಾಗೂ ಬೀಜಕ್ಕಾಗಿ ಪರದಾಟಗಳು ನಡೆಯುತ್ತಿರುತ್ತವೆ. ಹತ್ತಿ ಬೀಜಕ್ಕಾಗಿಯೇ ತಿಂಗಳುಗಟ್ಟಲೆ ಹೋರಾಟ ಮಾಡಿದ ಸಾಕಷ್ಟು ಉದಾಹರಣೆಗಳು ಜಿಲ್ಲೆ ಯಲ್ಲಿವೆ. ಬೀಜೋತ್ಪಾದನೆಯಲ್ಲಿ ಜಿಲ್ಲೆ ದಕ್ಷಿಣ ಏಷ್ಯಾದಲ್ಲಿಯೇ ಹೆಸರುವಾಸಿ. ಮೆಣಸಿನಕಾಯಿ, ಹತ್ತಿ ಉತ್ಪಾದನೆಯಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದೆ. ರಾಸಾನಿಯಕ ಗೊಬ್ಬರ ಬಳಕೆಯನ್ನು ವಿರೋಧಿಸುವ ಹಾಗೂ ಸಾವಯವ ಗೊಬ್ಬರವನ್ನು ಬಳಸುವ ದೊಡ್ಡ ಗುಂಪು ಇಲ್ಲಿದೆ. ಕೃಷಿಪಂಡಿತ ಪ್ರಶಸ್ತಿ ಪಡೆದ ಹಲವು ರೈತರು ಇಲ್ಲಿದ್ದಾರೆ. ಆದಿಮ ಕೃಷಿಪದ್ಧತಿಯೂ ಹೆಚ್ಚು ಬಳಕೆಯಲ್ಲಿದೆ. ಇಲ್ಲಿಯ ಜನರಲ್ಲಿ ಆದಿಮ ಕೃಷಿಪದ್ಧತಿಯಲ್ಲಿ ಇರುವಷ್ಟು ವಿಶ್ವಾಸ ಆಧುನಿಕ ಕೃಷಿ ಪದ್ಧತಿಯಲ್ಲಿ ಇಲ್ಲ. ಪೂರ್ವ ಶಿಲಾಯುಗ, ಶಿಲಾಯುಗ, ನವ ಶಿಲಾಯುಗದ ಅವಶೇಷಗಳು ಇಲ್ಲಿ ದೊರಕಿವೆ. ಈ ಭಾಗದ ಜನರು ಕಬ್ಬಿಣ, ತಾಮ್ರವನ್ನು ಬಳಸುತ್ತಿದ್ದ ಪ್ರಾಚೀನ ಕುರುಹುಗಳು, ತುಂಗಭದ್ರಾ ಮತ್ತು ಅದರ ಉಪನದಿ ವರದಾ ಇವುಗಳ ತೀರಪ್ರದೇಶಗಳಲ್ಲಿ ಇತಿಹಾಸಪೂರ್ವ ಕಾಲದಿಂದಲೂ ಜನವಸತಿ ಇದ್ದ ಅನೇಕ ಕುರುಹುಗಳು ಸಿಗುತ್ತವೆ. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಈ ಭೂಭಾಗಕ್ಕಿದೆ.

ಹಾವೇರಿ ಜಿಲ್ಲೆಯಲ್ಲಿ ಬ್ಯಾಡಗಿ, ರಾಣೆಬೆನ್ನೂರು, ಸವಣೂರು, ಶಿಗ್ಗಾವಿ, ಹಾನಗಲ್ಲು, ಹಾವೇರಿ, ಹಿರೇಕೆರೂರು ಎಂಬ ಏಳು ತಾಲ್ಲೂಕುಗಳಿವೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 4848 ಚ.ಕಿ.ಮೀ. ಇದ್ದು ಬ್ಯಾಡಗಿ ಸಣ್ಣ ತಾಲೂಕು, ರಾಣೆಬೆನ್ನೂರು ದೊಡ್ಡ ತಾಲೂಕು, ಪ್ರಸ್ತುತ ಜಿಲ್ಲೆಯನ್ನು ಆರು ಜಿಲ್ಲೆಗಳು ಸುತ್ತುವರಿದಿವೆ. ಪಶ್ಚಿಮಕ್ಕೆ ಉತ್ತರಕನ್ನಡ, ಉತ್ತರಕ್ಕೆ ಧಾರವಾಡ, ಈಶಾನ್ಯಕ್ಕೆ ಗದಗ, ಪೂರ್ವಕ್ಕೆ ಬಳ್ಳಾರಿ, ದಕ್ಷಿಣಕ್ಕೆ ದಾವಣಗೆರೆ, ನೈರುತ್ಯಕ್ಕೆ ಶಿವಮೊಗ್ಗ ಜಿಲ್ಲೆಗಳು ಇವೆ. 2010-11ರ ಜನಗಣತಿಯ ಪ್ರಕಾರ 14,39,116 ಜನರು ವಾಸವಾಗಿದ್ದಾರೆ. ಈ ಜನಸಂಖ್ಯೆಯಲ್ಲಿ 586935 ಗಂಡಸರು, 553161 ಹೆಂಗಸರು ಇದ್ದಾರೆ. ಇವರಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವವರೇ ಹೆಚ್ಚು. ಜಿಲ್ಲೆಯಲ್ಲಿ 708 ಹಳ್ಳಿಗಳಿವೆ. ಸವಣೂರಿನಲ್ಲಿ 64 ಬ್ಯಾಡಗಿಯಲ್ಲಿ 66 ಹಾವೇರಿಯಲ್ಲಿ 90 ಶಿಗ್ಗಾವಿಯಲ್ಲಿ 98, ರಾಣೆಬೆನ್ನೂರಿನಲ್ಲಿ 108, ಹಿರೇಕೆರೂರಿನಲ್ಲಿ 128, ಹಾನಗಲ್ಲಿನಲ್ಲಿ 156 ಹಳ್ಳಿಗಳಿವೆ. ವ್ಯವಸಾಯವೇ ಈ ಜಿಲ್ಲೆಯ ಗ್ರಾಮೀಣರ ಪ್ರಧಾನವಾದ ವೃತ್ತಿ. 30.5ರಷ್ಟು ಸಾಗುವಳಿದಾರರು, ಶೇ. 43.7 ಕೃಷಿಕಾರ್ಮಿಕರು,



ಶೇ. 4.1ರಷ್ಟು ಗೃಹ ಕೈಗಾರಿಕೆಯವರು, ಶೇ. 21.6ರಷ್ಟು ಇತರೆ ಕೆಲಸಗಾರರು ಜಿಲ್ಲೆಯಲ್ಲಿದ್ದಾರೆ.

**ಹವಾಗುಣ :** ಹಾವೇರಿ ಒಳನಾಡು ಜಿಲ್ಲೆ. ಮಲೆನಾಡು, ಅರೆಮಲೆನಾಡು ಮತ್ತು ಬಯಲು ಸೀಮೆಗಳಿಂದ ಕೂಡಿದೆ. ಭೂಪ್ರದೇಶವು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಇಲ್ಲಿಯ ಭೂರಚನೆ ಸ್ಪಟಿಕಾತ್ಮಕ ಪದರು (ಕ್ರಿಸ್ಟ್ಲೈನ್‌ಶಿಸ್ಟ್)ಯ ಶಿಲೆಯಿಂದ ಕೂಡಿದೆ. ಇಲ್ಲಿಯ ಭೂಮೇಲ್ಮೈ ಕೆಂಪು ಮತ್ತು ಕಪ್ಪು ಮಣ್ಣಿನಿಂದ ಕೂಡಿದೆ. ಹಾನಗಲ್ಲು, ಹಾವೇರಿ, ಹಿರೇಕೆರೂರು ಹಾಗೂ ಶಿಗ್ಗಾವಿ ತಾಲೂಕುಗಳ ಕೆಲವು ಭಾಗಗಳು ಅರೆಮಲೆನಾಡು ಪ್ರದೇಶಗಳಾಗಿದ್ದು, ಇನ್ನುಳಿದ ತಾಲೂಕುಗಳು ಬಯಲುಸೀಮೆಗಳಾಗಿವೆ. ಅರೆಮಲೆನಾಡು ಮತ್ತು ಬಯಲುಸೀಮೆಯನ್ನು ಒಳಗೊಂಡ ಸಂಯುಕ್ತ ಜಿಲ್ಲೆ ಇದು. ಈ ಸಂಯುಕ್ತತೆ ಹಲವು ಕೃಷಿ ವೈವಿಧ್ಯತೆಗೆ ಕಾರಣವಾಗಿದೆ.

ಜಿಲ್ಲೆಯ ವಾರ್ಷಿಕ ಹವಾಗುಣವನ್ನು ನಾಲ್ಕು ಋತುಗಳನ್ನಾಗಿ ವಿಂಗಡಿಸಲಾಗಿದೆ.

1. ಬೇಸಗೆ ಕಾಲ - ಮಾರ್ಚ್‌ನಿಂದ ಮೇ ವರೆಗೆ

2. ಮುಂಗಾರು ಮಾರುತಗಳ ಕಾಲ- ಜೂನ್‌ನಿಂದ ಸೆಪ್ಟೆಂಬರ್ ವರೆಗೆ

3. ಹಿಂಗಾರು ಮಾರುತಗಳ ನಿರ್ಗಮನ ಕಾಲ - ಅಕ್ಟೋಬರ್‌ನಿಂದ ಡಿಸೆಂಬರ್ ಆರಂಭದವರೆಗೆ

4. ಚಳಿಗಾಲ - ಡಿಸೆಂಬರ್‌ನಿಂದ ಫೆಬ್ರವರಿ ವರೆಗೆ

ಮಳೆಗಾಲದಲ್ಲಿ ವಾತಾವರಣ ತಂಪಾಗಿರುತ್ತದೆ. ಅಕ್ಟೋಬರ್, ನವೆಂಬರ್‌ಗಳಲ್ಲಿ ಈಶಾನ್ಯ ಮಾರುತದಿಂದ ಮಳೆಯಾಗುತ್ತದೆ. ಇತ್ತೀಚಿಗೆ ಇದು ಕಡಿಮೆ ಆಗುತ್ತಿದೆ. ಡಿಸೆಂಬರ್‌ನಿಂದ ಫೆಬ್ರವರಿ ಆರಂಭದವರೆಗೆ ಚಳಿಗಾಲ ಇರುತ್ತದೆ. ಈ ವೈವಿಧ್ಯತೆ ಅನೇಕ ಬೆಳೆಗಳಿಗೆ ಕಾರಣವಾಗಿದೆ. ಚಳಿಯನ್ನು ಆಧರಿಸಿ ಕೆಲವು ಬೆಳೆಗಳನ್ನು ಬೆಳೆಯುವ ಪಾರಂಪರಿಕ ಕ್ರಮಗಳು ಬಳಕೆಯಲ್ಲಿವೆ. ಅಂತಹ ಬೆಳೆಗಳಲ್ಲಿ ಹುರುಳಿ, ಉಪ್ಪುಕಡಲೆ ಪ್ರಧಾನ ಬೆಳೆಗಳಾಗಿವೆ. ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಅಂಕಿ-ಅಂಶದ ಪ್ರಕಾರ ಜಿಲ್ಲೆಯ ವಾರ್ಷಿಕ ವಾಡಿಕೆಯ ಮಳೆಯು 777.4 ರಿಂದ 836.8 ಮಿ.ಮೀ. ಆಗಿದ್ದು 2009-10ರ ಅವಧಿಯಲ್ಲಿ 1006 ಮಿ.ಮೀ. ರಿಂದ 986 ಮಿ.ಮೀ. ಮಳೆ ಆಗಿದೆ. ಹಾನಗಲ್ಲು ತಾಲೂಕಿನಲ್ಲಿ ಗರಿಷ್ಠ ಮಳೆಯಾದರೆ ಸವಣೂರು ತಾಲೂಕಿನಲ್ಲಿ ಕನಿಷ್ಠ ಮಳೆ ಆಗುತ್ತದೆ. (ಹಾವೇರಿ ಜಿಲ್ಲೆ ಜಾನಪದ ಸರ್ವೇಕ್ಷಣೆ ಮತ್ತು ಬಹುಮುಖಿ ದಾಖಲೀಕರಣ-ಪು. 08).ಒಟ್ಟಾರೆಯಾಗಿ ಜಿಲ್ಲೆಯಲ್ಲಿ ವರ್ಷಕ್ಕೆ ಸುಮಾರು 61 ರಿಂದ 62 ದಿನಗಳು ಮಳೆಯಾಗುತ್ತದೆ ಎಂದು ಗುರುತಿಸಲಾಗಿದೆ. ಆದರೆ ವಾಸ್ತವವಾಗಿ ನೋಡಿದರೆ 2000ರಲ್ಲಿ 68 ದಿನಗಳು, 2001ರಲ್ಲಿ 23 ದಿನಗಳು, 2004ರಲ್ಲಿ 55 ದಿನಗಳು ಮಳೆ ಆಗಿರುವುದು ತಿಳಿದುಬರುತ್ತದೆ. (ಕೃಷಿ ಜಾನಪದ ಮತ್ತು ಮಹಿಳೆ-ಡಾ. ಸುಮಂಗಲಾ ಅತ್ತಿಗೇರಿ, ಪು. 30). 2005ರಿಂದ 2010ರ ವರೆಗಿನ ಮಳೆ ಪ್ರಮಾಣದ ವರದಿಯಂತೆ 2006ರಲ್ಲಿ ಅತಿಕಡಿಮೆ, 2009ರಲ್ಲಿ ಹೆಚ್ಚು ಮಳೆಯಾಗಿದೆ. ಹಿರೇಕೆರೂರು, ಹಾನಗಲ್ಲು, ಹಾವೇರಿ ತಾಲೂಕುಗಳಲ್ಲಿ ಜಿಲ್ಲೆಯ ಉಳಿದ ತಾಲೂಕುಗಳಿಗಿಂತ ಹೆಚ್ಚು ಮಳೆಯಾಗಿದೆ. ವರ್ಷದಿಂದ ವರ್ಷಕ್ಕೆ ಮಳೆಯಪ್ರಮಾಣ ಇಳಿಮುಖವಾಗುತ್ತಿದೆ. ಮಳೆ ಕಡಿಮೆ ಆಗುತ್ತಿರುವುದಕ್ಕೆ ಜಿಲ್ಲೆಯ ಹಾಗೂ ಪಕ್ಕದ ಜಿಲ್ಲೆಯ ಅರಣ್ಯನಾಶವೇ ಪ್ರಮುಖ ಕಾರಣವೆನ್ನುವುದು ಇಲ್ಲಿಯ ಹಿರಿಯ ತಲೆಮಾರಿನ ರೈತರ ಅಭಿಪ್ರಾಯ. 2003-04ರಲ್ಲಿ ವಾರ್ಷಿಕ ವರದಿಯ ಅಂಕಿ-ಅಂಶಗಳ ಪ್ರಕಾರ ಜಿಲ್ಲೆಯು 47454 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿತ್ತು. ಆದರೆ 2010-11ರ ಜಿಲ್ಲಾ ಅಂಕಿ ಅಂಶಗಳ ವರದಿಯ ಕಾಲಕ್ಕೂ ಅಷ್ಟೇ ಇದೆಯೆಂದು ಉಲ್ಲೇಖವಾಗಿದೆ. ಆದರೆ ಅರಣ್ಯ ಪ್ರದೇಶ ಒತ್ತುವರಿ ಆಗಿರುವ ಹಾಗೂ ಅಂತಹ ಭೂಮಿಯನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಳ್ಳುತ್ತಿರುವ ಸಾಕಷ್ಟು ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮಳೆಯ ಪ್ರಮಾಣದಲ್ಲಿ ಆಗಿರುವ ಬದಲಾವಣೆಯು ಜಿಲ್ಲೆಯ ಕೃಷಿ ವಿಧಾನಗಳಲ್ಲಿ ಅನೇಕ ಬದಲಾವಣೆಗಳನ್ನು ತಂದಿದೆ. ವಿಶೇಷವಾಗಿ ಹೆಚ್ಚು ಬಂಡವಾಳವನ್ನು ಹಾಕಿ ಬೆಳೆಯುತ್ತಿದ್ದ ಬೆಳೆಗಳನ್ನು ಕೈಬಿಡುತ್ತಿದ್ದಾರೆ. ಅದರಲ್ಲೂ ಮುಂಗಾರು ಮಿಶ್ರಬೆಳೆಯ ಪಾರಂಪರಿಕ ವಿಧಾನಗಳನ್ನು ಕೈಬಿಟ್ಟು ಏಕಬೆಳೆ ಬೆಳೆಯುವ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ವಾರ್ಷಿಕ ಮಳೆ ಪ್ರಮಾಣ ಹಾಗೂ ಕಾಲದಲ್ಲಿ ವ್ಯತ್ಯಾಸವಾದರೆ ಹಾಕಿದ ಏಕ ಬೆಳೆಯನ್ನು ತೆಗೆದುಹಾಕಿ ಮತ್ತೆ ಬೇರೆ ಬೆಳೆಯನ್ನು ಬಿತ್ತನೆ ಮಾಡಬಹುದು ಎನ್ನುವ ನಿರ್ಧಾರ ಹಾಗೂ ಏಕಬೆಳೆಗೆ ಆಗುವ ಖರ್ಚನ್ನು ತಡೆದುಕೊಳ್ಳಬಹುದು ಎನ್ನುವುದೇ ಇದಕ್ಕೆ ಕಾರಣವಾಗಿದೆ. ಏಕೆಂದರೆ ಜಿಲ್ಲೆಯಲ್ಲಿ ಮಳೆಯಾಧಾರಿತ ಕೃಷಿ ಪ್ರಧಾನವಾಗಿದೆ. ಅದರಲ್ಲೂ ಮುಂಗಾರು ಮಳೆಯಾಧಾರಿತ ಕೃಷಿಗೆ ಮೊದಲ ಆದ್ಯತೆ ನೀಡುತ್ತಾರೆ. ಮುಂಗಾರು ಬೆಳೆಗಳಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪದ್ಧತಿ ಹೆಚ್ಚು ಬಳಕೆಯಲ್ಲಿದೆ. ಇದು ಪಾರಂಪರಿಕವಾಗಿ ಬಂದಿರುವ ವಿಧಾನ. ಅಂತಹ ಬೆಳೆಗಳಲ್ಲಿ ಹತ್ತಿ, ಈರುಳ್ಳಿ, ಬೆಳ್ಳುಳ್ಳಿ, ಮೆಕ್ಕೆಜೋಳವನ್ನು ಪ್ರಧಾನ ಬೆಳೆಗಳನ್ನಾಗಿ ಬೆಳೆಯುವ ಕ್ರಮವಿದೆ. ಇಂತಹ ಬೆಳೆಗಳಲ್ಲಿ ಮೆಕ್ಕೆಜೋಳ ಪ್ರಥಮ ಸ್ಥಾನದಲ್ಲಿದೆ. ಹತ್ತಿ, ಬೆಳ್ಳುಳ್ಳಿ, ಈರುಳ್ಳಿ ಮತ್ತೂ ಮೆಣಸಿನಕಾಯಿ ಮುಂತಾದುವನ್ನು ಮಿಶ್ರ ಬೆಳೆಯಾಗಿ ಬೆಳೆಯುವ ಪಾರಂಪರಿಕ ವಿಧಾನವಿದೆ. 2010-11ರ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ 135931 ಹೆಕ್ಟೇರ್‌ಗಳಲ್ಲಿ ಮುಸುಕಿನ ಜೋಳವನ್ನು ಬೆಳೆಯಲಾಗಿದೆ. ಸರಕಾರವು 2010-11ನೇ ವರ್ಷದಲ್ಲಿ 21779 ಕ್ವಿಂಟಲ್ ಬಿತ್ತನೆ ಬೀಜಗಳನ್ನು ವಿತರಿಸಿದೆ. ಹಾವೇರಿ ತಾಲೂಕಿನಲ್ಲಿ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇದು ಎರಡು ದಶಕಗಳಿಂದ ಆಗಿರುವ ಬದಲಾವಣೆ. ಈ ದಶಕದಲ್ಲಿ ಇದರ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ ಎನ್ನುತ್ತಿದ್ದಾರೆ ಇಲ್ಲಿಯ ರೈತರು ಮತ್ತು ವ್ಯಾಪಾರಸ್ಥರು. ಇಂತಹ ಬದಲಾವಣೆಗಳಲ್ಲಿ ಮಳೆ ಆಶ್ರಿತ ಕೃಷಿ ಅವಲಂಬನೆಯಿಂದ ಮುಕ್ತಿ ಆಗುವುದಕ್ಕೆ 'ಕೊಳವೆಬಾವಿ'ಗೆ ಶರಣಾಗಿದ್ದಾರೆ. ಒಂದುನೂರು, ನೂರೈವತ್ತು ಅಡಿಗಳಷ್ಟು ಬೋರ್‌ಕೊರೆಸಿದರೆ ಸಾಕು, ನೀರು ಸಿಗುತ್ತಿರುವುದರಿಂದ ಕೊಳವೆಬಾವಿ ಕೃಷಿ ಪದ್ಧತಿಗೆ ಜನರು ಮುಂದಾಗುತ್ತಿದ್ದಾರೆ. ಕೊಳವೆಬಾವಿ ಆಧಾರಿತ ಕೃಷಿಕರಲ್ಲಿ ವಾಣಿಜ್ಯ ಬೆಳೆಗಳಾದ ಹತ್ತಿ, ಮೆಕ್ಕೆಜೋಳ ಬೀಜೋತ್ಪಾದನೆ ಹಾಗೂ ವಿವಿಧ ಬಗೆಯ ಸೊಪ್ಪುಗಳು ಮುಖ್ಯ ಬೆಳೆಗಳಾಗುತ್ತಿವೆ. ಅಂತಹ ಬೆಳೆಗಳಲ್ಲಿ ಬೀಜೋತ್ಪನ್ನತೆ ಮುಂಚೂಣಿಗೆ ಬರುತ್ತಿದೆ. ಹೀಗೆ

ಇಲ್ಲಿಯ ವಾತಾವರಣ ಪಾರಂಪರಿಕ ಮತ್ತು ಆಧುನಿಕ ಶೈಲಿಗಳನ್ನು ರೂಢಿಸಿಕೊಳ್ಳುವುದಕ್ಕೆ ಪ್ರೇರಣೆಯಾಗಿದೆ.

**ಭೂ ವೈಶಿಷ್ಟ್ಯತೆ ಮತ್ತು ಕೃಷಿ ವೈಧನಿಕತೆ :** ಹಾವೇರಿ ಜಿಲ್ಲೆಯ ಮಣ್ಣಿನ ಗುಣ ವಿಶಿಷ್ಟವಾಗಿದೆ. ಇಲ್ಲಿಯ ಭೂಮಿ ಬಹಳ ಫಲವತ್ತಾದದು. ಇಲ್ಲಿ ಕಪ್ಪು ಮತ್ತು ಕೆಂಪು ಮಣ್ಣನ್ನು ಕಾಣಬಹುದು. ಕಪ್ಪು ಮಣ್ಣನ್ನು 'ಯರೆ'ಎಂದೂ ಕೆಂಪು ಮಣ್ಣನ್ನು 'ಮಸರಿ' ಎಂದು ಕರೆಯುತ್ತಾರೆ. ಯಾವ ಭೂಮಿಯಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು, ಯಾವ ಕಾಲದಲ್ಲಿ ಯಾವ ಯಾವ ಬೆಳೆಯನ್ನು ತೆಗೆಯಬೇಕು ಎನ್ನುವ ಪಾರಂಪರಿಕ ವಿಧಾನಗಳಿವೆ. ಅಂತಹ ವಿಧಾನಗಳಲ್ಲಿ 'ಮುಂಗಾರು ಬೆಳೆ' ಮತ್ತು 'ಹಿಂಗಾರು ಬೆಳೆ' ಪ್ರಚಲಿತದಲ್ಲಿವೆ. ಮುಂಗಾರು ಬೆಳೆಯಲ್ಲಿ ಹತ್ತಿ, ಈರುಳ್ಳಿ, ಬೆಳ್ಳುಳ್ಳಿ, ಶೇಂಗ, ಮೆಕ್ಕೆಜೋಳ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಈ ಸಂದರ್ಭದಲ್ಲಿ ಮಿಶ್ರಬೆಳೆ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ಯರೆಭೂಮಿ ಆಧಾರಿತ ಕೃಷಿಕರಲ್ಲಿ ಮಿಶ್ರಬೆಳೆ ಪದ್ಧತಿಯನ್ನು ಹೆಚ್ಚಾಗಿ ಕಾಣಬಹುದು. ಹತ್ತಿ ಬೆಳೆಯಲ್ಲಿ ಈರುಳ್ಳಿ ಅಥವಾ ಬೆಳ್ಳುಳ್ಳಿ, ಕೊತ್ತಂಬರಿ, ಮೆಣಸಿನಕಾಯಿಯನ್ನು ಮಿಶ್ರಬೆಳೆಯಾಗಿ ಬೆಳೆಯುವ ವಿಧಾನವಿದೆ. ಶೇಂಗಾ ಬೆಳೆಯಲ್ಲಿ ಉದ್ದು, ಅಲಸಂದಿ, ಸಾಸಿವೆ, ಹೆಸರು ಮುಂತಾದ ಬೆಳೆಗಳನ್ನು ಮಿಶ್ರವಾಗಿ ಬೆಳೆಯುವ ವಿಧಾನ ಹೆಚ್ಚು ಪ್ರಚಲಿತದಲ್ಲಿದೆ. ಹಿಂಗಾರು ಬೆಳೆಯಾಗಿ ಜೋಳ, ರಾಗಿ, ನವಣೆ, ಸಾಸಿವೆ, ಸೂರ್ಯಕಾಂತಿ, ಹೆಸರು, ಉದ್ದು, ಹುರುಳಿ, ಅಲಸಂದಿ, ಎಳ್ಳು, ಕುಸುಬೆ, ತೊಗರಿ, ಕಡಲೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ಬೀಜೋತ್ಪಾದನೆ, ತರಕಾರಿ, ಅಡಕೆ, ತೆಂಗು, ವೀಳ್ಯದೆಲೆ, ಬಾಳೆ ಹೂವು, ಹಣ್ಣು ಕಾಯಿಗಳನ್ನು ಬೆಳೆಯುತ್ತಾರೆ.

ಇಲ್ಲಿ ಬಿತ್ತನೆ ಮುನ್ನ ಪ್ರಾಥಮಿಕ ಬೇಸಾಯ ಸಾಮಾನ್ಯವಾಗಿದೆ. ವಾರ್ಷಿಕ ಉಳುಮೆಯನ್ನು ಆರಂಭ ಮಾಡುವಾಗ ಅನೇಕ ಆಚರಣೆಗಳುಂಟು. ಉಳುಮೆ ಮಾಡುವುದಕ್ಕೆ 'ಮಾಗಿ' ಮಾಡುವುದು ಎನ್ನುತ್ತಾರೆ. ಇದರಲ್ಲಿ ರಂಟೆ/ನೇಗಿಲು ಹೊಡೆಯುವ ಮತ್ತುಕುಂಟೆ ಮತ್ತು ದಿಂಡು ಹೊಡೆಯುವ ಪದ್ಧತಿಗಳು ಪ್ರಧಾನವಾಗಿವೆ. ಬಿತ್ತನೆಯ ಅನಂತರ ಮಧ್ಯ ಬೇಸಾಯ ಅಥವಾ ಹಿಂಗಾರು ಬೆಳೆ ಬೇಸಾಯ ಭಿನ್ನವಾಗಿದೆ. ಬೆಳೆಯ ಮಧ್ಯೆ ಕಳೆ ನಿರ್ಮೂಲನೆ, ಬೆಳೆ ಆರೈಕೆ ಮುಂತಾದ ವಿಧಾನಗಳಿಗಾಗಿ ಮಾಡುವ ಬೇಸಾಯಕ್ರಮವು ಸಹ ಭಿನ್ನವಾಗಿವೆ. ಮಣ್ಣು ಅಥವಾ ನೆಲಕ್ಕೆ ಆಧರಿಸಿದ ಪಾರಂಪರಿಕ ವಿಧಾನಗಳನ್ನು ಅನುಸರಿಸುವ ಕ್ರಮಗಳಿವೆ. ಬೆಳೆಗಳ ಮಧ್ಯ ಬೆಳೆದ ಕಳೆಯನ್ನು ನಿರ್ಮೂಲನೆ ಮಾಡುವುದಕ್ಕೆ 'ಎಡೆಕುಂಟೆ'ಗಳನ್ನು ಬಳಸಲಾಗುತ್ತಿದೆ. ಇದನ್ನು ಎಡೆಕುಂಟೆ, ಗಡ್ಡೆಗುಂಟೆ ಹೊಡೆಯುವುದು ಎನ್ನುತ್ತಾರೆ. ಬೆಳೆಗಳ ಬುಡಕ್ಕೆ ಮಣ್ಣು ಹಾಕುವುದಕ್ಕೂ ಸಹ ಈ ಕುಂಟೆಯನ್ನು ಬಳಸಲಾಗುತ್ತದೆ. ಇದನ್ನು ಹೊಟ್ಟೆ ಏರಿಸಿರುವುದು, ಸಾಲುಮಾಡುವುದು, ಬೋದು ಏರಿಸುವುದು ಎಂದೆಲ್ಲ ಕರೆಯಲಾಗುತ್ತದೆ. ಹತ್ತಿ, ಮೆಕ್ಕೆಜೋಳ, ಮೆಣಸಿನಗಿಡ, ಸೂರ್ಯಕಾಂತಿ, ಶೇಂಗಾ ಮುಂತಾದ ಬೆಳೆಗಳಿಗೆ ಈ ಬೋದು ಬೇಕೇಬೇಕು. ಬೆಳೆ ಅಥವಾ ಬಿತ್ತನೆ ಮಾಡಿದ ವಿಸ್ತೀರ್ಣಕ್ಕೆ ತಕ್ಕಂತೆ ಅಂದರೆ ಸಾಲುಗಳ ಅಂತರಕ್ಕೆ ತಕ್ಕಂತೆ ಎಡೆಕುಂಟೆ, ಗಡ್ಡೆಕುಂಟೆ ಮುಂತಾದವುಗಳನ್ನು ಬಳಸುತ್ತಾರೆ.

ಜಿಲ್ಲೆಯಲ್ಲಿರುವ ಎಲ್ಲಾ ಭೂಪ್ರದೇಶವು ಕೃಷಿಗೆ ಯೋಗ್ಯವಲ್ಲ ಮತ್ತು ಲಭ್ಯವಿಲ್ಲ. ಕೃಷಿಗೆ ಬಳಕೆಯಾಗುವ ಭೂಮಿಯನ್ನು ಕೃಷಿಭೂಮಿ ಎಂದೂ ಕೃಷಿಗೆ ಬಳಕೆಯಾಗದ ಭೂಮಿಯನ್ನು ಬಂಜರು, ಬೀಳು, ಅರಣ್ಯ, ಗೋಮಾಳ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತಿದೆ.

**ಭೂಮಿಯ ಬಳಕೆ**

| | | | | ಸಾಗುವಳಿ ಲಭ್ಯವಿರುವುದಿಲ್ಲ | | | ಸಾಗುವಳಿ ಮಾಡದಿರುವ ಇತರ ಭೂಮಿ | | | |
|---|---|---|---|---|---|---|---|---|---|---|
| **ಕ್ರ.ಸಂ.** | **ತಾಲೂಕುಗಳು** | **ಭೌಗೋಳಿಕ ವಿಸ್ತೀರ್ಣ** | **ಅರಣ್ಯ** | **ವ್ಯವಸಾಯೇತರ** | **ಬಂಜರು** | **ಒಟ್ಟು** | **ಸಾಗುವಳಿಗೆ ಯೋಗ್ಯವಾದ ಬಂಜರು** | **ಖಾಯಂ ಗೋಮಾಳ** | **ವೃಕ್ಷ ಮತ್ತು ತೋಪುಗಳು** | **ಒಟ್ಟು** |
| 1 | ಬ್ಯಾಡಗಿ | 43656 | 4889 | 2131 | 501 | 2632 | 190 | 1109 | 20 | 1319 |
| 2 | ಹಾನಗಲ್ಲ | 77525 | 8474 | 6479 | 1885 | 8364 | 734 | 2061 | 1535 | 4330 |
| 3 | ಹಾವೇರಿ | 79985 | 3849 | 5405 | 466 | 5843 | 1178 | 1754 | 2 | 2934 |
| 4 | ಹಿರೇಕೆರೂರು | 80694 | 8876 | 6794 | 712 | 7506 | - | 2701 | 298 | 2999 |
| 5 | ರಾಣೆಬೆನ್ನೂರು | 90475 | 10614 | 6229 | 834 | 7063 | 552 | 2417 | 100 | 3069 |
| 6 | ಸವಣೂರ | 53901 | 801 | 2556 | 624 | 3170 | - | 722 | 181 | 903 |
| 7 | ಶಿಗ್ಗಾವಿ | 58920 | 9951 | 3443 | 771 | 4214 | 335 | 1445 | 154 | 1934 |
| | **ಒಟ್ಟು** | **485156** | **47454** | **33037** | **5793** | **38792** | **2989** | **12209** | **2290** | **17488** |

ಮೇಲಿನ ಕೋಷ್ಟಕದ ಪ್ರಕಾರ ಜಿಲ್ಲೆಯ ವಿಸ್ತೀರ್ಣದಲ್ಲಿ ರಾಣೆಬೆನ್ನೂರು ತಾಲೂಕು ಹೆಚ್ಚು ವಿಸ್ತೀರ್ಣವನ್ನು, ಬ್ಯಾಡಗಿ ತಾಲೂಕು ಕಡಿಮೆ ವಿಸ್ತೀರ್ಣವನ್ನು ಹೊಂದಿದೆ. ಹಿರೇಕೆರೂರು ತಾಲೂಕಿನಲ್ಲಿ ವ್ಯವಸಾಯೇತರ ಭೂಮಿ ಹೆಚ್ಚಾಗಿದ್ದರೆ, ಹಾನಗಲ್ಲು ತಾಲೂಕಿನಲ್ಲಿ ಬಂಜರು ಭೂಮಿ ಹೆಚ್ಚಾಗಿದೆ. ಸಾಗುವಳಿ ಲಭ್ಯವಿರದ 38792 ಹೆಕ್ಟೇರ್ ಭೂಮಿಯನ್ನು ಸಹ ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿಕೊಳ್ಳುವುದಕ್ಕೆ ಹಾಗೂ ಸಾಗುವಳಿಗೆ ಯೋಗ್ಯವಾದ ಬಂಜರುಭೂಮಿಯನ್ನು ಕೃಷಿಭೂಮಿಯನ್ನಾಗಿ ಸಿದ್ಧಮಾಡಿಕೊಂಡು ಕೃಷಿ

ಮಾಡುವುದಕ್ಕೆ ಅವಕಾಶವಿದೆ. ಹಾನಗಲ್ಲು, ಹಿರೇಕೆರೂರುನಲ್ಲಿ ಹೆಚ್ಚು ಗೋಮಾಳಗಳು, ಹಾನಗಲ್ಲಿನಲ್ಲಿ ಹೆಚ್ಚು ತೋಪುಗಳು ಇರುವುದನ್ನು ಸೂಚಿಸುತ್ತದೆ. ಆದರೆ ಜಿಲ್ಲೆಯಲ್ಲಿ ದಟ್ಟವಾದ ಕಾಡುಗಳಿಲ್ಲ. ಹಾವೇರಿ, ಹಾನಗಲ್ಲು ಮತ್ತು ಹಿರೇಕೆರೂರು ತಾಲೂಕುಗಳಲ್ಲಿ ಸಣ್ಣ ಗುಡ್ಡ-ಬೆಟ್ಟಗಳಿದ್ದು ಅವುಗಳಲ್ಲಿ ಹೆಚ್ಚು ಗುಡ್ಡಗಳು ಅರಣ್ಯ ಪ್ರದೇಶಗಳಾಗಿವೆ. ಅಂತಹ ಗುಡ್ಡಗಳಲ್ಲಿ ಸಣ್ಣ ಪ್ರಮಾಣದ ಕುರುಚಲು ಕಾಡುಗಳಿದ್ದು, ಈಗ ಬೋಳಾಗಿ ಕುರುಚಲು ಕಾಡುಗಳಾಗುತ್ತಿವೆ. ಈ ಗುಡ್ಡಗಳನ್ನು ಅಕ್ರಮಣ ಮಾಡಿಕೊಳ್ಳಲಾಗುತ್ತಿದೆ. ಜಿಲ್ಲೆಯ ಹಿರೇಕೆರೂರು, ಹಾನಗಲ್ಲು, ಹಾವೇರಿ ತಾಲೂಕುಗಳ ಭಾಗದಲ್ಲಿ ಜಿಲ್ಲೆಯ ಉಳಿದ ಭಾಗಕ್ಕಿಂತ ಹೆಚ್ಚಿನ ಮಳೆ ಬೀಳುತ್ತಿರುವ ಕಾರಣ ಈ ಜಿಲ್ಲೆಯು ಬಯಲು ಸೀಮೆಯೂ ಅಲ್ಲ. ಹಾಗಾಗಿ ಈ ಜಿಲ್ಲೆ ಅರೆಮಲೆನಾಡು ಸೀಮೆಗೆ ಸೇರುತ್ತದೆ.

ತಾಲೂಕಿನಲ್ಲಿ ಕಡಿಮೆ ಇದೆ. ಬೀಳು ಭೂಮಿಯಲ್ಲಿ ರಾಣೆಬೆನ್ನೂರು ಎರಡನೇ ಸ್ಥಾನದಲ್ಲಿದೆ. ಹಾನಗಲ್ಲಿನಲ್ಲಿ ಕುರುಚಲು ಕಾಡುಗಳನ್ನೊಳಗೊಂಡ ಬೀಳುಭೂಮಿ, ರಾಣೆಬೆನ್ನೂರಿನಲ್ಲಿ ಬಯಲುಬೀಳುಗಳು ಅದರಲ್ಲೂ ತುಂಗಭದ್ರ ಹಾಗೂ ಕುಮದ್ವತಿ ನದಿ ದಡಗಳಿಗೆ ಹೊಂದಿಕೊಂಡ ಬೀಳುಗಳು ಹೆಚ್ಚಾಗಿವೆ. ಹಾಗಾಗಿಯೇ ಈ ತಾಲೂಕಿನಲ್ಲಿ ಪಶುಪಾಲನ ಸಮುದಾಯಗಳು, ವಿಶೇಷವಾಗಿ ಕುರಿಗಾರಿಕೆ ವೃತ್ತಿಯವರು ಹೆಚ್ಚಾಗಿ ನೆಲೆಸಿದ್ದಾರೆ. ಹಿರೇಕೆರೂರು ತಾಲೂಕಿನಲ್ಲಿ ದನಗಾರಿಕೆ ವೃತ್ತಿ ಆಧಾರಿತ ಸಮುದಾಯಗಳು ಹೆಚ್ಚಾಗಿವೆ. ಪಶುಪಾಲನ ಸಾಂಸ್ಕೃತಿಕ ನಾಯಕರಾದ ಮೈಲಾರಲಿಂಗನ ಆರಾಧನ ಕೇಂದ್ರಗಳಲ್ಲಿ ಒಂದಾದ ದೇವರಗುಡ್ಡ, ಬೀರಪ್ಪನ ಆರಾಧನ ಕೇಂದ್ರಗಳಲ್ಲಿ ಒಂದಾದ ಮೆಡ್ಲೇರಿ ಈ ಜಿಲ್ಲೆಯಲ್ಲಿರುವುದು ಭೌಗೋಳಿಕ ವೈಶಿಷ್ಟ್ಯತೆಯನ್ನು ಪಶುಪಾಲನೆಯ ಪ್ರಾಚೀನತೆಯನ್ನು ತಿಳಿಸುತ್ತದೆ. ಅಲ್ಲದೆ ಕೊಟ್ಟಿಗೆ ಗೊಬ್ಬರವನ್ನು ಬಳಸಿ ಕೃಷಿ ಮಾಡುವ ಹಾಗೂ ಸಾವಯವ ಕೃಷಿ ಗೊಬ್ಬರವನ್ನು ಬಳಸುವ, ಅದನ್ನು ತಯಾರಿಸಿ ಮಾರಾಟ ಮಾಡುವ ವಿಧಾನಗಳು ಈ ಎರಡು ತಾಲೂಕುಗಳಲ್ಲಿ ಮುಂಚೂಣಿಯಲ್ಲಿವೆ. ಈ ವಿಧಾನಗಳಲ್ಲದೆ ಬೇಸಗೆ ಕಾಲದಲ್ಲಿ ಇಲ್ಲಿಯ ಕುರಿಗಾರರು ಹೊಲಗದ್ದೆಗಳಲ್ಲಿ ಕುರಿಗಳನ್ನು ತಬ್ಬು(ತುರುಬು)ತ್ತಾರೆ. ಅಲ್ಲದೆ ಅಲೆಮಾರಿ ಕುರಿಗಾರರು ಸಹ ಬೇಸಗೆ ಕಾಲದಲ್ಲಿ ವಲಸೆ ಬರುವ, ಹೊಲಗದ್ದೆಗಳಲ್ಲಿ ಕುರಿಗಳನ್ನು ತರುಬುವ ಪಾರಂಪರಿಕ ವಿಧಾನಗಳು ಹೆಚ್ಚು ಬಳಕೆಯಲ್ಲಿವೆ. ಇದರಿಂದ ಹೊಲಗದ್ದೆಗಳಿಗೆ ಗೊಬ್ಬರವಾಗುತ್ತದೆ. ಕುರಿಗಾರರಿಗೆ ಜೀವನವು ಆಗುತ್ತದೆ. ಕೃಷಿಭೂಮಿ ಫಲವತ್ತತೆಗಾಗಿ ಇಂತಹ ಕ್ರಮಗಳನ್ನಲ್ಲದೆ ವರ್ಷಕ್ಕೊಮ್ಮೆ, ಎರಡು ವರ್ಷಗಳಿಗೊಮ್ಮೆ ತಿಪ್ಪೆಗೊಬ್ಬರ, ಕೆರೆಮಣ್ಣು (ಹೂಳು), ಕೊಳೆತ ಮೇವು (ಬಣವಿ)ಗಳನ್ನು ಹಾಕುವ ವಿಧಾನಗಳೂ ಬಳಕೆಯಲ್ಲಿವೆ. ತಿಪ್ಪೆಗೊಬ್ಬರದ ಮತ್ತು ಪಶುಪಾಲನೆಯ ಮಹತ್ವವನ್ನು ಸಾರುವ ಹಟ್ಟಿಹಬ್ಬ, ಕಾರಹುಣ್ಣಿಮೆ ಮುಂತಾದ ಕೃಷಿ ಸಂಬಂಧಿ ಪಾರಂಪರಿಕ ಆಚರಣೆಗಳು ಜೀವಂತವಾಗಿವೆ. ಇವಕ್ಕೆಲ್ಲ ರಾಣೆಬೆನ್ನೂರು ತಾಲೂಕಿನಲ್ಲಿ ನದಿಗಳು ಇರುವುದು ಕಾರಣವಾಗಿದೆ.

**ಭೂಮಿಯ ಬಳಕೆ**

| ಕ್ರ.ಸಂ. | ತಾಲೂಕುಗಳು | ಬೀಳು ಭೂಮಿ | | | ಬಿತ್ತನೆಯಾದ ಪ್ರದೇಶ | | |
|---|---|---|---|---|---|---|---|
| | | ಚಾಲ್ತಿ | ಇತರೆ | ಒಟ್ಟು | ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು |
| 1 | ಬ್ಯಾಡಗಿ | 762 | 885 | 1647 | 33169 | 4402 | 37571 |
| 2 | ಹಾನಗಲ್ಲ | 3863 | 1626 | 5489 | 50868 | 10756 | 61624 |
| 3 | ಹಾವೇರಿ | 456 | 224 | 680 | 66651 | 8323 | 74974 |
| 4 | ಹಿರೇಕೆರೂರು | 1490 | 1173 | 2663 | 58650 | 10214 | 68864 |
| 5 | ರಾಣೆಬೆನ್ನೂರು | 3969 | 1311 | 5280 | 66449 | 11526 | 75975 |
| 6 | ಸವಣೂರ | 125 | 312 | 437 | 48580 | 5830 | 54410 |
| 7 | ಶಿಗ್ಗಾವಿ | 1032 | 217 | 1249 | 41527 | 2118 | 48690 |
| | ಒಟ್ಟು | **11697** | **5748** | **17445** | **363939** | **58169** | **422108** |

ಜಿಲ್ಲೆಯಲ್ಲಿ ಬಿತ್ತನೆಗೆ ಯೋಗ್ಯವಾಗಿರುವ ಭೂಮಿಯಲ್ಲಿ 42,2108 ಹೆಕ್ಟೇರ್ ಬಿತ್ತನೆಯಾಗಿದೆ. ಜಿಲ್ಲೆಯ ಒಟ್ಟಾರೆ ಭೂಮಿಯಲ್ಲಿ ರಾಣೆಬೆನ್ನೂರು ತಾಲೂಕಿನಲ್ಲಿ ಬಿತ್ತನೆಯು ಹೆಚ್ಚಾಗಿದೆ. ಬ್ಯಾಡಗಿಯಲ್ಲಿ ಕಡಿಮೆಯಾಗಿದೆ. ತಾಲೂಕುಗಳ ಭೌಗೋಳಿಕ ವಿಸ್ತೀರ್ಣ ಇದಕ್ಕೆ ಕಾರಣವಾಗಿವೆ. ಏಕಬೆಳೆಪದ್ಧತಿ ಪ್ರಧಾನವಾಗಿ ಮಿಶ್ರಬೆಳೆ ಪದ್ಧತಿ ಇಳಿಮುಖವಾಗುತ್ತಿದೆ ಎನ್ನುವ ವಿವರಗಳು ಸಿಗುತ್ತವೆ. ಹಾನಗಲ್ಲು, ಹಿರೇಕೆರೂರು, ರಾಣೆಬೆನ್ನೂರು ತಾಲೂಕುಗಳು ಮಿಶ್ರಬೆಳೆಯನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿವೆ ಅಥವಾ ಪಾರಂಪರಿಕ ಮಿಶ್ರಬೆಳೆ ಪದ್ಧತಿಯನ್ನು ಅನುಸರಿಸುತ್ತಿವೆ. ಅರೆಮಲೆನಾಡು ಪ್ರದೇಶದಲ್ಲಿ ಈ ಪದ್ಧತಿ ಹೆಚ್ಚು ಬಳಕೆಯಲ್ಲಿದೆ. ಒಟ್ಟಾರೆ ಜಿಲ್ಲೆಯ ರೈತರು ಬಹುಬೆಳೆಯ ಪಾರಂಪರಿಕ ಮಾದರಿಯನ್ನು ಕೈಬಿಟ್ಟು ಏಕಬೆಳೆ ಪದ್ಧತಿಯನ್ನು ಅನುಸರಿಸುವುದಕ್ಕೆ ಮುಂದಾಗುತ್ತಿದ್ದಾರೆ. ಜಿಲ್ಲೆಯ ಕೃಷಿಯಲ್ಲಿ ಆಗಿರುವ ಮತ್ತು ಆಗುತ್ತಿರುವ ಮಹತ್ತರ ಬದಲಾವಣೆ ಇದು. ಹಾನಗಲ್ಲು ತಾಲೂಕಿನಲ್ಲಿ ಬೀಳುಭೂಮಿ ಹೆಚ್ಚು ಇದ್ದರೆ ಸವಣೂರು

ಜಿಲ್ಲೆಯಲ್ಲಿ ಸಾವಯವ ಕೃಷಿಯನ್ನು ಇಷ್ಟಪಡುವ ವರ್ಗ ಹೆಚ್ಚಾಗುತ್ತಿದೆ. ಸಾವಯವ ಕೃಷಿಯಲ್ಲಿ ಪ್ರಗತಿ ಸಾಧಿಸಿದ, 'ಕೃಷಿ ಪಂಡಿತ ಪ್ರಶಸ್ತಿ', 'ಹಾವೇರಿ ಜಿಲ್ಲಾ ಶ್ರೇಷ್ಠ ಕೃಷಿ ಪ್ರಶಸ್ತಿ'ಯನ್ನು ಪಡೆದ ಹಲವು ರೈತರು ಜಿಲ್ಲೆಯಲ್ಲಿದ್ದಾರೆ.

ಜಿಲ್ಲೆಯ ಪ್ರಮುಖ ಉದ್ಯೋಗ ಕೃಷಿ. ಜಿಲ್ಲೆಯಲ್ಲಿ ಕೃಷಿಕರು, ಕೃಷಿಕೂಲಿ ಕಾರ್ಮಿಕರು ಹೆಚ್ಚಾಗಿದ್ದಾರೆ. ಕೃಷಿ ಕಾರ್ಮಿಕರ ತಾಲೂಕುವಾರು ವಿವರ ಇಂತಿದೆ.

**ಕೆಲಸಗಾರರ ವರ್ಗೀಕರಣ**

**ಕೃಷಿಕಾರ್ಮಿಕರು**

| ಕ್ರ.ಸಂ. | ತಾಲೂಕುಗಳು | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|---|
| | | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು |
| 1 | ಬ್ಯಾಡಗಿ | 22883 | 10279 | 14610 | 1130 | 504 | 626 | 26013 | 10777 | 15236 |
| 2 | ಹಾನಗಲ್ಲ | 45492 | 21259 | 24233 | 1736 | 1282 | 454 | 47228 | 22541 | 24687 |
| 3 | ಹಾವೇರಿ | 49767 | 23623 | 26144 | 1576 | 750 | 826 | 51343 | 24373 | 26970 |
| 4. | ಹಿರೇಕೆರೂರು | 41560 | 17648 | 23912 | 1080 | 552 | 528 | 42640 | 18200 | 24440 |
| 5. | ರಾಣೆಬೆನ್ನೂರು | 51758 | 21932 | 29826 | 1905 | 1027 | 878 | 53663 | 22959 | 30705 |
| 6. | ಸವಣೂರ | 29672 | 13816 | 15856 | 3939 | 3096 | 743 | 33611 | 17012 | 16599 |
| 7. | ಶಿಗ್ಗಾವಿ | 30489 | 13733 | 16756 | 6288 | 4382 | 1906 | 36777 | 18115 | 18662 |
| | ಜಿಲ್ಲಾ ಒಟ್ಟು | 273621 | 122284 | 151337 | 17654 | 11693 | 5961 | 291275 | 133977 | 157298 |

ಮೇಲಿನ ಪಟ್ಟಿಯಂತೆ ಜಿಲ್ಲೆಯಲ್ಲಿ 5,91,275 ಜನ ಕೃಷಿ ಕಾರ್ಮಿಕರಿದ್ದಾರೆ. ಅವರಲ್ಲಿ 157298 ಮಹಿಳೆಯರು. 133977 ಪುರುಷರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಮಹಿಳಾ ಕೃಷಿ ಕಾರ್ಮಿಕರು ಹೆಚ್ಚಾಗಿದ್ದಾರೆ. ಜಿಲ್ಲೆಯ ತಾಲೂಕುಗಳಲ್ಲಿ ರಾಣೆಬೆನ್ನೂರು ತಾಲೂಕಿನಲ್ಲಿ ಕೃಷಿಕೂಲಿ ಕಾರ್ಮಿಕರು ಹೆಚ್ಚಾಗಿರುವುದನ್ನು ಕಾಣಬಹುದು. ಒಣಬೇಸಾಯವು ಮತ್ತು ಹೆಚ್ಚಿನ ಜನಸಂಖ್ಯೆ ಈ ಹೆಚ್ಚಳಕ್ಕೆ ಕಾರಣವಾಗಿದೆ. ಇಲ್ಲಿಯ ಹೆಚ್ಚು ಕೃಷಿ ಕೂಲಿಕಾರ್ಮಿಕರು ಒಣಬೇಸಾಯವನ್ನು ಆಧರಿಸಿದ್ದಾರೆ.

**ಕೃಷಿ ಸಾಗುವಳಿದಾರರು**

| ಕ್ರ.ಸಂ. | ತಾಲೂಕುಗಳು | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|---|
| | | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು |
| 1 | ಬ್ಯಾಡಗಿ | 20993 | 15604 | 5389 | 549 | 504 | 45 | 21542 | 16108 | 5343 |
| 2 | ಹಾನಗಲ್ಲ | 36124 | 29973 | 6151 | 1061 | 1004 | 57 | 37185 | 30977 | 6208 |
| 3 | ಹಾವೇರಿ | 30323 | 23570 | 6753 | 535 | 474 | 61 | 30858 | 24044 | 6814 |
| 4 | ಹಿರೇಕೆರೂರು | 38998 | 29718 | 9280 | 302 | 276 | 26 | 39300 | 2994 | 9306 |
| 5 | ರಾಣೆಬೆನ್ನೂರು | 29610 | 23811 | 5799 | 1317 | 1163 | 154 | 30927 | 24974 | 5953 |
| 6 | ಸವಣೂರ | 18099 | 14540 | 3559 | 1201 | 1170 | 31 | 19300 | 15710 | 3590 |
| 7 | ಶಿಗ್ಗಾವಿ | 22563 | 17500 | 5063 | 1953 | 1780 | 1732 | 4516 | 19280 | 5236 |
| | ಜಿಲ್ಲೆ ಒಟ್ಟು | **196710** | **154716** | **41994** | **6918** | **6371** | **547** | **203628** | **161087** | **42450** |

ಮೇಲಿನ ಕೋಷ್ಟಕದ ವಿವರದಂತೆ ಗ್ರಾಮೀಣ ಪ್ರದೇಶದ ಕೃಷಿ ಸಾಗುವಳಿದಾರರು ಅದರಲ್ಲೂ ಪುರುಷ ಕೃಷಿ ಸಾಗುವಳಿದಾರರು ಹೆಚ್ಚಾಗಿದ್ದಾರೆ. ಹಿರೇಕೆರೂರು ತಾಲೂಕಿನಲ್ಲಿ 24516 ಸಾಗುವಳಿದಾರರಲ್ಲಿ 19280 ಪುರುಷರು 5236 ಮಹಿಳೆಯರು ಇದ್ದಾರೆ. ಸಾಗುವಳಿದಾರರಲ್ಲಿ ಪುರುಷರ ನಾಲ್ಕನೆಯ ಒಂದು ಭಾಗದಷ್ಟು ಮಾತ್ರ ಮಹಿಳಾ ಕೃಷಿ ಸಾಗುವಳಿದಾರರಿವುದನ್ನು ಕಾಣಬಹುದು. ಹಾಗಾಗಿ ಕೃಷಿ ಸಾಗುವಳಿ ಪುರುಷರ ಕೈಯಲ್ಲಿದೆ. ಅದರಲ್ಲಿ ಕಾರ್ಮಿಕರಾಗಿ ದುಡಿಯುತ್ತಿರುವವರಲ್ಲಿ ಮಹಿಳೆಯರ ಪಾಲು ಹೆಚ್ಚಾಗಿದೆ. ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಲ್ಲಿ ಒಡೆತನ ಪ್ರಮಾಣ ಇನ್ನು ಕಡಿಮೆ ಇದೆ.

## ಪ್ರಮುಖ ಬೆಳೆಗಳ ವಿಸ್ತೀರ್ಣ

### ಏಕದಳ ಧಾನ್ಯಗಳು ವಿಸ್ತೀರ್ಣ

| ಕ್ರ.ಸಂ. | ತಾಲೂಕುಗಳು | ಬತ್ತ | ಜೋಳ | ಸಜ್ಜೆ | ಮೆಕ್ಕೆ ಜೋಳ | ರಾಗಿ | ಗೋಧಿ | ಇತರೆ ತೃಣ ಧಾನ್ಯಗಳು | ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು |
|---|---|---|---|---|---|---|---|---|---|
| 1 | ಬ್ಯಾಡಗಿ | 775 | 2992 | 0 | 16570 | 37 | 5 | 149 | 20528 |
| 2 | ಹಾನಗಲ್ಲು | 27847 | 366 | 0 | 11886 | 24 | 15 | 1 | 41039 |
| 3 | ಹಾವೇರಿ | 864 | 8311 | 0 | 35465 | 26 | 104 | 260 | 41030 |
| 4 | ಹಿರೇಕೆರೂರು | 2936 | 2237 | 0 | 32430 | 184 | 0 | 41 | 37828 |
| 5 | ರಾಣೆಬೆನ್ನೂರು | 8982 | 9184 | 0 | 24436 | 18 | 47 | 430 | 43097 |
| 6 | ಸವಣೂರ | 61 | 8233 | 0 | 9800 | 38 | 501 | 675 | 19308 |
| 7 | ಶಿಗ್ಗಾವಿ | 9462 | 4659 | 0 | 9344 | 156 | 414 | 1285 | 25320 |
| | **ಜಿಲ್ಲೆ ಒಟ್ಟು** | **50297** | **35982** | **0** | **135931** | **483** | **1086** | **2841** | **277250** |

ಏಕದಳ ಬೆಳೆಯಲ್ಲಿ ಬತ್ತ, ಜೋಳ, ಮೆಕ್ಕೆಜೋಳ, ರಾಗಿ, ಗೋಧಿ ಇತರೆ ಬೆಳೆಗಳನ್ನು ಹಾಗೂ ತೃಣಧಾನ್ಯಗಳನ್ನು ಬೆಳೆಯಲಾಗುತ್ತಿದೆ. ಹಾನಗಲ್ಲು ತಾಲೂಕಿನಲ್ಲಿ ಬತ್ತವನ್ನು, ಹಾವೇರಿ ತಾಲೂಕಿನಲ್ಲಿ ಮೆಕ್ಕೆಜೋಳವನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ.

ಪ್ಯಾಕಬ್ಯಾಡ ಶಿಗ್ಗಾವಿಯಲ್ಲಿ ತೃಣಧಾನ್ಯಗಳನ್ನು ಹೆಚ್ಚು ಬೆಳೆದರೆ ಹಾನಗಲ್ಲಿನಲ್ಲಿ ಕಡಿಮೆ ಬೆಳೆಯುತ್ತಾರೆ. ಸಜ್ಜೆ ಅಪೂರ್ವ ಬೆಳೆಯಾಗಿ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿದೆ. ಬಯಲುಸೀಮೆಯಲ್ಲಿ ವಿಶೇಷವಾಗಿ ಹಾವೇರಿ ತಾಲೂಕು ಗುತ್ತಲ ಹೋಬಳಿ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮತ್ತು ರಾಣೆಬೆನ್ನೂರು ತಾಲೂಕಿನ ದೇವರಗುಡ್ಡ ಹೋಬಳಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸಜ್ಜೆಯನ್ನು ಬೆಳೆಯುತ್ತಿದ್ದಾರೆ. ಸಜ್ಜೆ ಬೆಳೆ ಜಿಲ್ಲೆಯಲ್ಲಿ ಇತ್ತೀಚೆಗೆ ಆರಂಭವಾಗಿದೆ. ಮಳೆ ಕಡಿಮೆ ಆಗುತ್ತಿರುವುದರಿಂದ ಸಜ್ಜೆಯನ್ನು ಬೆಳೆಯುತ್ತಿದ್ದಾರೆ.

## ಪ್ರಮುಖ ಬೆಳೆಗಳ ವಿಸ್ತೀರ್ಣ (ಹೆ)

### ದ್ವಿದಳ ಧಾನ್ಯಗಳು (ಹೆ)

| ಕ್ರ.ಸಂ. | ತಾಲೂಕು | ತೊಗರಿ | ಹುರುಳಿ | ಉದ್ದು | ಹೆಸರು | ಅವರೆ | ಅಲಸಂದಿ | ಕಡಲೆ | | ಒಟ್ಟು ದ್ವಿದಳ ಧಾನ್ಯಗಳು | ಒಟ್ಟು ಆಹಾರ ಧಾನ್ಯಗಳು | ಒಟ್ಟು ಹಣ್ಣುಗಳ ಬೆಳೆಯ ವಿಸ್ತೀರ್ಣ | ತರಕಾರಿ ಬೆಳೆಗಳ ವಿಸ್ತೀರ್ಣ |
|---|---|---|---|---|---|---|---|---|---|---|---|---|---|
| 1 | ಬ್ಯಾಡಗಿ | 143 | 3೦1 | 92 | 2೦3 | 29 | 45 | 3೦ | ೦ | 843 | 21371 | 297 | 1299 |
| 2 | ಹಾನಗಲ್ಲು | 22 | 98 | 36೦ | 2೦೦2 | 27 | 28೦ | 23 | 1 | 2813 | 42592 | 2579 | 98 |
| 3 | ಹಾವೇರಿ | 821 | 55 | 51 | 581 | 13 | 554 | 423 | ೦ | 2498 | 43528 | 677 | 141೦ |
| 4 | ಹಿರೇಕೆರೂರು | 367 | 2125 | 11 | 241 | 34 | 73 | 317 | ೦ | 3168 | 4೦996 | 437 | 173೦ |
| 5 | ರಾಣೆಬೆನ್ನೂರು | 525 | 6೦೦ | 6 | 249 | 67 | 161 | 232 | ೦ | 184೦ | 44937 | 3೦೦ | 54೦7 |
| 6 | ಸವಣೂರ | 84೦ | 611 | 4 | 21೦9 | ೦ | 428 | 27 | ೦ | 4೦19 | 23327 | 169 | 278 |
| 7 | ಶಿಗ್ಗಾವಿ | 313 | 191 | 1೦೦ | 6೦3 | 2೦1 | 551 | 374 | ೦ | 1933 | 27253 | 978 | 123 |
| | **ಜಿಲ್ಲೆ ಒಟ್ಟು** | **3೦31** | **3981** | **624** | **5988** | **371** | **1692** | **1426** | **1** | **17114** | **244364** | **5437** | **1೦345** |

ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಅಲಸಂದಿ, ಕಡಲೆ ಮುಂತಾದ ದ್ವಿದಳ ಧಾನ್ಯಗಳನ್ನು ಜಿಲ್ಲೆಯಲ್ಲಿ ಬೆಳೆಯುತ್ತಾರೆ. 'ಅಕ್ಕಡಿ ಬೆಳೆ'ಯನ್ನಾಗಿ ಬೆಳೆಯುವ ಪಾರಂಪರಿಕ ಕ್ರಮಗಳು ಹೆಚ್ಚಾಗಿ ರೂಢಿಯಲ್ಲಿವೆ. ಉದ್ದು, ಹೆಸರು ಮತ್ತು ಹುರುಳಿಯನ್ನು 'ಹಿಂಗಾರು ಬೆಳೆ'ಯಾಗಿ ಬೆಳೆಯುವ ಪದ್ಧತಿಗಳೂ ಸಹ ಬಳಕೆಯಲ್ಲಿವೆ. ಹಿರೇಕೆರೂರು ತಾಲೂಕಿನಲ್ಲಿ ಹುರುಳಿಯನ್ನು ಹೆಚ್ಚಾಗಿ ಬೆಳೆದರೆ ಹಾವೇರಿಯಲ್ಲಿ ಕಡಿಮೆ ಬೆಳೆಯುತ್ತಾರೆ.

ಹಿರೇಕೆರೂರಲ್ಲಿ ದನಗಳು ಹೆಚ್ಚಾಗಿರುವುದರಿಂದ ದನಗಳ ಆಹಾರಕ್ಕಾಗಿ, ಮೇವಿಗಾಗಿ ಹುರುಳಿಯನ್ನು ಬೆಳೆಯುವರು. ಹಾನಗಲ್ಲಿನಲ್ಲಿ ಉದ್ದು ಮತ್ತು ಹೆಸರನ್ನು ಹೆಚ್ಚಾಗಿ ಹಾಗೂ ಹಿಂಗಾರು ಬೆಳೆಯಾಗಿ ಬೆಳೆಯುವ ಕ್ರಮಗಳು ಬಳಕೆಯಲ್ಲಿವೆ. ಸವಣೂರಿನಲ್ಲಿ ತೊಗರಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇಲ್ಲಿ ತೊಗರಿಯನ್ನು ಅಕ್ಕಡಿ ಬೆಳೆಯಾಗಿ ಬೆಳೆಯುವ ಪಾರಂಪರಿಕ ಕ್ರಮ ರೂಢಿಯಲ್ಲಿದೆ. ಇವರು ಒಣ ಬೇಸಾಯವನ್ನು ಅವಲಂಬಿಸಿರುವುದರಿಂದ ಈ ಬೆಳೆಯನ್ನು ಬೆಳೆಯುತ್ತಿದ್ದಾರೆ.

**ಪ್ರಮುಖ ಬೆಳೆಗಳ ವಿಸ್ತೀರ್ಣ - ಎಣ್ಣೆಕಾಳು (ಹೆಕ್ಟೇರ್ಸ್)**

| ಕ್ರ.ಸಂ. | ತಾಲೂಕು | ಶೇಂಗಾ | ಸೂರ್ಯಕಾಂತಿ | ಕುಸುಮೆ | ಹರಳು | ಎಳ್ಳು | ಹುಚ್ಚೆಳ್ಳು | ಇತರೆ ಎಣ್ಣೆ ಕಾಳುಗಳು | ಒಟ್ಟು ಎಣ್ಣೆ ಕಾಳುಗಳು |
|---|---|---|---|---|---|---|---|---|---|
| 1 | ಬ್ಯಾಡಗಿ | 262 | 397 | 9 | 9 | 12 | 48 | 289 | 1026 |
| 2 | ಹಾನಗಲ್ಲು | 464 | 188 | 23 | 0 | 0 | 2 | 1182 | 1859 |
| 3 | ಹಾವೇರಿ | 3784 | 1852 | 375 | 1 | 41 | 63 | 2067 | 8123 |
| 4 | ಹಿರೇಕೆರೂರು | 694 | 1319 | 1 | 1 | 24 | 43 | 65 | 2147 |
| 5 | ರಾಣೆಬೆನ್ನೂರು | 1070 | 1080 | 127 | 0 | 19 | 35 | 68 | 2399 |
| 6 | ಸವಣೂರ | 8505 | 5891 | 601 | 0 | 126 | 165 | 1841 | 11829 |
| 7 | ಶಿಗ್ಗಾವಿ | 4209 | 35 | 317 | 0 | 23 | 23 | 1839 | 6446 |
| | **ಜಿಲ್ಲೆ ಒಟ್ಟು** | **18988** | **5462** | **1453** | **11** | **245** | **379** | **7351** | **33889** |

ಇಲ್ಲಿಯ ರೈತರು ಶೇಂಗಾ, ಕುಸುಬೆ, ಎಳ್ಳು, ಗುರೆಳ್ಳು (ಹುಚ್ಚೆಳ್ಳು) ಮುಂತಾದ ಎಣ್ಣೆಕಾಳುಗಳನ್ನು ಬೆಳೆಯುತ್ತಾರೆ. ಸವಣೂರು ತಾಲೂಕಿನಲ್ಲಿ ಎಣ್ಣೆಕಾಳುಗಳನ್ನು, ವಿಶೇಷವಾಗಿ ಮಳೆ ಆಶ್ರಯದಲ್ಲಿ ಬೆಳೆಯುವ ಪದ್ಧತಿ ಇದೆ. ಹಿರೇಕೆರೂರು ತಾಲೂಕಿನಲ್ಲಿ ಕಡಿಮೆ ಪ್ರಮಾಣದಲ್ಲಿ ಎಣ್ಣೆ ಕಾಳುಗಳನ್ನು ಬೆಳೆಯುತ್ತಿದ್ದಾರೆ. ಈ ತಾಲೂಕಿನಲ್ಲಿ ಒಣಬೇಸಾಯ ಪದ್ಧತಿ ಕಡಿಮೆ. ವಾಣಿಜ್ಯ ಮತ್ತು ತರಕಾರಿ ಬೆಳೆಗಳನ್ನು ಬೆಳೆಯುವುದಕ್ಕೆ ಇಷ್ಟಪಡುತ್ತಾರೆ. ಉಳಿದಂತೆ ಜಿಲ್ಲೆಯಲ್ಲಿ ಎಣ್ಣೆಕಾಳುಗಳನ್ನು ಮಿಶ್ರಬೆಳೆಯಾಗಿ ಮತ್ತು ಮಳೆ ಆಶ್ರಿತ ಒಣಬೇಸಾಯವಾಗಿ ಕೃಷಿ ಮಾಡುವರು.

ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಪದ್ಧತಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವುದು ಕಂಡುಬರುತ್ತಿದೆ. ಸುಮಾರು 50 ವರ್ಷಗಳ ಹಿಂದಿನವರೆಗೂ ಕಪ್ಪಲಿ (ಕಪ್ಲಿ) ಬಾವಿಗಳನ್ನು ಆಧರಿಸಿ ತೋಟಗಾರಿಕೆ ಮಾಡಲಾಗುತ್ತಿತ್ತು. ಜತೆಗೆ ಕೆರೆ, ಕಟ್ಟೆ, ಹಳ್ಳಗಳನ್ನು ಆಧರಿಸಿದ ನೀರಾವರಿ ಪದ್ಧತಿ ರೂಢಿಯಲ್ಲಿತ್ತು. ಈಗ ಇಂತಹ ವಿಧಾನಗಳು ಕಣ್ಮರೆಯಾಗಿ ಕಾಲುವೆ, ಕೊಳವೆಬಾವಿ ಆಧಾರಿತ ತೋಟಗಾರಿಕೆ ಬೆಳೆಪದ್ಧತಿ ಆರಂಭವಾಗಿದೆ. ಕಟ್ಟೆನೀರಾವರಿ ಪದ್ಧತಿ ಅಂದರೆ ಕಟ್ಟೆನೀರಿನ ಬಸಿ ಆಧಾರಿತ ಪಾರಂಪರಿಕ ಪದ್ಧತಿ ಅಪೂರ್ವವಾಗಿ ಬಳಕೆ ಆಗುತ್ತಿದೆ.

**ತೋಟಗಾರಿಕೆ ಬೆಳೆಗಳು ಕೃಷಿ ಉತ್ಪನ್ನ**

| ಬೆಳೆಗಳು | 1998-99 | | 2005-06 | | |
|---|---|---|---|---|---|
| | ಕ್ಷೇತ್ರ (ಹೆ) | ಉತ್ಪನ್ನ (ಟ) | ಕ್ಷೇತ್ರ (ಹೆ.) | ಉತ್ಪನ್ನ (ಟ) | ಮೌಲ್ಯ (ಕೋಟಿ ರೂ.) |
| ಹಣ್ಣು | 3683 | 48758 | 5888 | 114122 | 76.17 |
| ತರಕಾರಿ | 8934 | 126249 | 23015 | 431208 | 233.01 |
| ಸಾಂಬಾರುಪದಾರ್ಥಗಳು | 29134 | 141211 | 35193 | 59805 | 163.93 |
| ತೋಟದ ಬೆಳೆ | 3680 | 527 | 4554 | 1518 | 30.43 |
| ಪುಷ್ಪಕೃಷಿ | 1348 | 7555 | 1506 | 12697 | 20.04 |
| ಔಷಧೀಯಸಸ್ಯಗಳು | 1 | 8 | 21 | 11 | 0.02 |
| ಸುಗಂಧ ದ್ರವ್ಯ | 25 | 125 | 98 | 180 | 0.47 |
| **ಒಟ್ಟು** | **46805** | **324433** | **70274.0** | **715681** | **524.11** |

ಮುಖ್ಯ ತೋಟಗಾರಿಕೆ ಬೆಳೆಗಳ ಉತ್ಪಾದನೆ (ಹಣ್ಣುಗಳು) (ಮೆ. ಟನ್ನುಗಳಲ್ಲಿ) 31.01.2009ರಂತೆ

| ಕ್ರ.ಸಂ. | ತಾಲೂಕು | ಬಾಳೆ | ಮಾವು | ನಿಂಬೆ | ಪೈನಾಪಲ್ | ಸೀಬೆ | ದ್ರಾಕ್ಷಿ | ಸಪೋಟ | ದಾಳಿಂಬೆ | ಪರಂಗಿ |
|---|---|---|---|---|---|---|---|---|---|---|
| 1 | ಬ್ಯಾಡಗಿ | 7875 | 1351 | 0 | 0 | 130 | 0 | 1176 | 0 | 800 |
| 2 | ಹಾನಗಲ್ಲ | 13594 | 1300 | 0 | 0 | 340 | 0 | 1200 | 0 | 0 |
| 3 | ಹಾವೇರಿ | 23800 | 4430 | 0 | 0 | 7000 | 0 | 4500 | 308 | 4080 |
| 4 | ಹಿರೇಕೆರೂರು | 12488 | 4000 | 0 | 0 | 1300 | 0 | 7000 | 0 | 2880 |
| 5 | ರಾಣೆಬೆನ್ನೂರು | 6680 | 2000 | 0 | 0 | 360 | 0 | 2350 | 40 | 1832 |
| 6 | ಸವಣೂರ | 11285 | 4418 | 0 | 0 | 1500 | 0 | 2900 | 0 | 1600 |
| 7 | ಶಿಗ್ಗಾವಿ | 6777 | 5346 | 0 | 0 | 240 | 0 | 1620 | 0 | 13.28 |
| | **ಜಿಲ್ಲಾ ಒಟ್ಟು** | **82499** | **30115** | **0** | **0** | **10870** | **0** | **20746** | **348** | **12518** |

ಇತ್ತೀಚಿನ ವರ್ಷಗಳಲ್ಲಿ ಕೊಳವೆಬಾವಿಯನ್ನು ಆಧರಿಸಿದ ತೋಟಗಾರಿಕೆ ಬೆಳೆಪದ್ಧತಿ ಜಿಲ್ಲೆಯಲ್ಲಿ ಹೆಚ್ಚಾಗುತ್ತಿದೆ. ಹಣ್ಣುಗಳಲ್ಲಿ ಮಾವು, ಬಾಳೆ, ಸೀಬೆ, ಸಪೋಟ, ದಾಳಿಂಬೆ, ಪರಂಗಿ ಮುಂತಾದ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ. ಅದರಲ್ಲಿ ಮಾವು ಮುಂಚೂಣಿಯಲ್ಲಿದೆ. ಇಲ್ಲಿಯ ತಂಪಾದ ವಾತಾವರಣವೇ ಇದಕ್ಕೆ ಕಾರಣ. ಮಾವನ್ನು ಎಲ್ಲಾ ತಾಲೂಕುಗಳಲ್ಲಿ ಬೆಳೆಯುತ್ತಿದ್ದಾರೆ. ಶಿಗ್ಗಾಂವಿ ತಾಲೂಕಿನಲ್ಲಿ ಹೆಚ್ಚುಉತ್ಪಾದನೆ ಆಗುತ್ತಿದೆ. ಆದರೆ ಬಾಳೆಯನ್ನು ಹಾನಗಲ್ಲು ತಾಲೂಕಿನಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇದಕ್ಕೆ ಇಲ್ಲಿಯ ವಾತಾವರಣ ಮತ್ತು ನೀರಾವರಿಗೆ ಹೆಚ್ಚು ಅವಕಾಶಗಳಿರುವುದು ಕಾರಣವಾಗಿದೆ. ಸವಣೂರು ತಾಲೂಕಿನಲ್ಲಿ ನೀರಾವರಿ ಇಲ್ಲದ ಕಾರಣ ಬಾಳೆಯ ಉತ್ಪಾದನೆ ಕಡಿಮೆ. ಹಾವೇರಿಯಲ್ಲಿ ಸೀಬೆ, ಸಪೋಟವನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ.

**ಮೆಣಸಿನಕಾಯಿ :** ಮೆಣಸಿನ ಕಾಯಿಯನ್ನು ಬ್ಯಾಡಗಿ, ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ ತಾಲೂಕುಗಳಲ್ಲಿ ಬೆಳೆಯುತ್ತಾರೆ. ಬ್ಯಾಡಗಿ ತಾಲೂಕಿನಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಹಿಂದಿನ ದಶಕಕ್ಕೆ ಹೋಲಿಸಿದರೆ ಮಳೆಯ ಪ್ರಮಾಣ ಕಡಿಮೆ ಆಗಿದೆ. ಇಲ್ಲಿಯ ಮೆಣಸಿನ ಕಾಯಿ ಉತ್ಪಾದನೆಯನ್ನು ಆಧರಿಸಿ ಸಂಬಾರು ಪದಾರ್ಥಗಳನ್ನು ತಯಾರಿಸುವ ಖ್ಯಾತಕಂಪನಿಗಳು ಜಿಲ್ಲೆಯಲ್ಲಿ ನೆಲೆಸಿವೆ. ಅಂತಹ ಕಂಪನಿಗಳಲ್ಲಿ ಎವ್.ಡಿ.ಎಚ್. ಎವ್.ಡಿ.ಆರ್. ಆಕಾಯ್ ಕಂಪನಿಗಳು ಪ್ರಮುಖವಾಗಿವೆ. ಮೆಣಸಿನಕಾಯಿಯ ಮಾರಾಟಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆ ಇದೆ. ಇಂತಹ ಸೌಲಭ್ಯಗಳು ಬೆಳೆಗಾರರನ್ನು ಬೆಂಬಲಿಸುತ್ತಿವೆಯಾದರೂ ಮೆಣಸಿನಕಾಯಿ ಬೆಳೆಯುವುದಕ್ಕೆ ರೈತರು ಹಿಂಜರಿಯುತ್ತಿದ್ದಾರೆ.

**ಹತ್ತಿ :** ಇಲ್ಲಿಯ ರೈತರು ವಾಣಿಜ್ಯ ಬೆಳೆಗಳಲ್ಲಿ ಪ್ರಮುಖವಾಗಿ ಹತ್ತಿಯನ್ನು ಬೆಳೆಯುತ್ತಿದ್ದಾರೆ. ಏಷ್ಯಾಖಂಡದಲ್ಲಿ ಹೆಚ್ಚು ಪ್ರಮಾಣದ ಹತ್ತಿಯನ್ನು ಬೆಳೆಯುವ ಜಿಲ್ಲೆ ಇದು ಎನ್ನುವ ಅಸ್ಮಿತೆಯನ್ನು ಪಡೆದುಕೊಂಡಿದೆ. ಹಾಗೂ ಇಲ್ಲಿಯ ಮಣ್ಣಿನ ಗುಣದಿಂದ ಉದ್ದನೆಯ ನೂಲು ಬರುತ್ತದೆ ಎನ್ನುವ ವೈಶಿಷ್ಟ್ಯತೆ ಇದೆ. ರಾಜ್ಯದ ವಿವಿಧ ದಲ್ಲಾಳಿಗಳು ಹತ್ತಿಯ ಖರೀದಿಗಾಗಿ ಈ ಜಿಲ್ಲೆಗೆ ಆಗಮಿಸುತ್ತಿದ್ದಾರೆ. ರಾಣೆಬೆನ್ನೂರಿನಲ್ಲಿ ದೊಡ್ಡದಾದ ಮಾರುಕಟ್ಟೆ ಇದೆ. ಹಿಂದೆ ಸಣ್ಣ ಹತ್ತಿ (ಜೈಧರ) ದೊಡ್ಡ ಹತ್ತಿ (ಲಕ್ಷ್ಮಿ) ಎನ್ನುವ ತಳಿಗಳನ್ನು ಇಲ್ಲಿಯ ರೈತರು ಬೆಳೆಯುತ್ತಿದ್ದಾರೆ. ಈಗ ರಾಸಿಬೀಟಿ, ಬನ್ನಿ ಬೀಟಿ, ಮೈಕೋ ಬೀಟಿ, ಡಿ.ಸಿ.ಎಚ್ ಬ್ರಹ್ಮ, ಬನ್ನಿ, ಚಮತ್ಕಾರ ಇನ್ನು ಮುಂತಾದ ತಳಿಗಳನ್ನು ಬೆಳೆಯುತ್ತಿದ್ದಾರೆ.

**ನೀರಾವರಿ ವ್ಯವಸ್ಥೆ :** ಜಿಲ್ಲೆಯ ಅನೇಕ ಗ್ರಾಮಗಳ ನೆಲೆಗಳು ಮತ್ತು ಗ್ರಾಮನಾಮಗಳು ಜಲಾಶಯದ ಅಸ್ತಿತ್ವವನ್ನು ಸೂಚಿಸುತ್ತವೆ. ಉದಾಹರಣೆಗೆ ಹಾವೇರಿ, ಮೆಡ್ಲೇರಿ ಮುಂತಾದ ಗ್ರಾಮನಾಮಗಳು. ಇದು ಪ್ರಾಚೀನ ಕಾಲದ ಜಲಜ್ಞಾನ ಪಾರಂಪರಿಕ ವೈಧಾನಿಕತೆಯನ್ನು ತಿಳಿಸುತ್ತದೆ. ಸುಮಾರು 10ನೆಯ ಶತಮಾನಕ್ಕಿಂತ ಪೂರ್ವದಲ್ಲಿ ಈ ಜಿಲ್ಲೆಯಲ್ಲಿ ಕೆರೆಗಳು ಬಳಕೆಯಲ್ಲಿದ್ದವು ಎನ್ನುವ ವಿವರಗಳು ಸಿಗುತ್ತವೆ. "ಬಾದಾಮಿ ಚಾಲುಕ್ಯರ ವಿಜಯಾದಿತ್ಯನ ಕಾಲದ ಶಿಗ್ಗಾವಿ ಶಾಸನದಲ್ಲಿ ಗುಡುಗೇರಿ (ಗುಡಗೇರಿ- ಇವತ್ತಿನ ಕುಂದಗೋಳ ತಾಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ) ಪರಿಸರದಲ್ಲಿ 14 ಕೆರೆಗಳಿದ್ದ ಉಲ್ಲೇಖಗಳು ಸಿಗುತ್ತವೆ. ಈ ಶಾಸನವು ಗುಡಗೇರಿಯ ಮೇರೆಗಳನ್ನು ಹೆಸರಿಸುವಾಗ ದಕ್ಷಿಣಕ್ಕೆ ವೆನ್ನಾ (ಎಣ್ಣೆ), ಪಶ್ಚಿಮಕ್ಕೆ ಕುವೇರ, ವಾಯುವ್ಯಕ್ಕೆ ಕೋಡಿ, ಉತ್ತರದಲ್ಲಿ ಪುಲಿವರ, ಈಶಾನ್ಯದಲ್ಲಿ ಮತ್ಕರೆ ಮತ್ತು ಅರಸಾಲ್ ಸರೋವರಗಳು, ಕಾನ್ನೂರ ಗ್ರಾಮದ ಉತ್ತರಕ್ಕೆ ಮಹಿಷಿವಾಟ ಮತ್ತು ಈಶಾನ್ಯಕ್ಕೆ ಪುಲಿ ಎಂಬ ಸರೋವರ ಇದ್ದವು ಎಂದು, ಕಾಪತ್ತಿ ಗ್ರಾಮದ ಬಳಿ ಕುರುತಿಹಳ್ಳಿ ಕೆರೆ ಇತ್ತೆಂದು ಉಲ್ಲೇಖಿಸುತ್ತದೆ. ಕಂದಾಯ ಇಲಾಖೆಯ ಪತ್ರಗಳಲ್ಲೂ ಸಹ ಜಿಲ್ಲೆಯ ಹಲವಾರು ಕೆರೆಗಳ ಉಲ್ಲೇಖ ಸಿಗುತ್ತವೆ. ಅಂತಹ ಕೆರೆಗಳಲ್ಲಿ ಹಾವೇರಿ ಬಳಿಯ ಹೆಗ್ಗೆರೆ -2069 ಹೆ. ಹಿರೇಕೆರೂರು ಬಳಿ ದೊಡ್ಡ ಕೆರೆ-306 ಹೆ. ಮದಗದ ಹೊನ್ನವ್ವಕೆರೆ 344 ಹೆ. ಹಾನಗಲ್ ತಾ. ತಿಳುವಳ್ಳಿ ಬಳಿಯ ಹಿರೇಕೆರೆ 344 ಹೆ. ಹಿರೇಕೆರೂರು ತಾಲೂಕಿನ ಮಾಸೂರು ಬಳಿ ಇರುವ ದೊಡ್ಡ ಕೆರೆಗಳು ಸುಮಾರು 200 ಹೆಕ್ಟೇರಿಗೆ ನೀರಾವರಿ ಒದಗಿಸುತ್ತಿದ್ದವು ಎನ್ನುವ ಚಾರಿತ್ರಿಕ ಸಂಗತಿಗಳು ಸಿಗುತ್ತವೆ. (ಧಾರವಾಡ ಜಿಲ್ಲೆ ಗ್ಯಾಸೆಟಿಯರ್ ಪು. 304) ಅಂತಹ ಕೆರೆಗಳಲ್ಲಿ ಮದಗ, ಮಡ್ಲೇರಿ, ಅಸುಂಡಿ ಮುಂತಾದ ಗ್ರಾಮಗಳ ಕೆರೆಗಳು ಗಮನ ಸೆಳೆಯುತ್ತವೆ. ಆದರೆ ಶಾಸನಗಳಲ್ಲಿ ಉಲ್ಲೇಖಿತವಾದ ಮತ್ತು ಪಾರಂಪರಿಕ ಕೆರೆಗಳು ನೀರಾವರಿಗೆ ಲಭ್ಯವಾಗುತ್ತಿಲ್ಲ.

**ಮದಗ-ಮಾಸೂರು ಕೆರೆ :** ಮಾಸೂರು ಹಿರೇಕೆರೂರು ತಾಲೂಕಿನಲ್ಲಿರುವ ಗ್ರಾಮ. ಈ ಗ್ರಾಮದಲ್ಲಿ 16ನೇ ಶತಮಾನದಲ್ಲಿ ಅಂದರೆ ವಿಜಯನಗರದ ಅರಸರ ಕಾಲದಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಅಣೆಕಟ್ಟಿನ ಕೆಳ ಆಳ 1048 ರಿಂದ 1248 ಅಡಿ. ಮೇಲ್ಭಾಗದಲ್ಲಿ 400 ರಿಂದ 600 ಅಡಿಗಳ ಅಗಲ ಹೊಂದಿದೆ. ನದಿಯ ತಳದಿಂದ ಸುಮಾರು 140 ಅಡಿಗಳಷ್ಟು ಎತ್ತರವಾಗಿದೆ. ಕೆರೆಯಲ್ಲಿ ನೀರು ತುಂಬಿದಾಗ 144 ಹೆಕ್ಟೇರ್‌ಗೆ ವಿಸ್ತಾರವಾಗುತ್ತದೆ. ಪಾರ್ಶ್ವಕೋಡಿಯುಳ್ಳ ಮಣ್ಣಿನ ಆಯಕಟ್ಟಿನ ಒಟ್ಟು ಉದ್ದ 1850 ಅಡಿಗಳಾಗಿವೆ. ಈ ಕೆರೆಯ ಒಟ್ಟು ಪ್ರದೇಶ 1130 ಹೆ. ಮೂಲ ಕೆರೆಯು ಒಡೆದುಹೋಗಿ ಆದಿಲ್‌ಷಾಹಿಗಳ ಕಾಲದಲ್ಲಿ ದುರಸ್ತಿ ಮಾಡಲಾಗಿದೆ. ಅಣೆಕಟ್ಟಿನ ಎಡ ಮತ್ತು ಬಲದಂಡೆ ನಾಲೆಗಳ ಉದ್ದ 15 ಕಿ.ಮೀ. 538 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿತ್ತು. ಈಗ ಇದರ ನೀರಾವರಿ ಬಳಕೆ ಅಪೂರ್ವವಾಗಿದೆ.

**ಮೆಡ್ಲೇರಿ ಕೆರೆ :** ಮೆಡ್ಲೇರಿ ರಾಣೆಬೆನ್ನೂರು ತಾಲೂಕಿನಲ್ಲಿರುವ ಗ್ರಾಮ. ತಾಲೂಕು ಕೇಂದ್ರದಿಂದ ಉತ್ತರಕ್ಕೆ 12 ಕಿ.ಮೀ. ದೂರದಲ್ಲಿದೆ. 1886-87ರಲ್ಲಿ ಕೆರೆಯನ್ನು ನಿರ್ಮಿಸಲಾಗಿದೆ. ಕೆರೆ ಏರಿಯ ಉದ್ದ 2250 ಅಡಿಗಳು. ಮೇಲ್ಭಾಗದ ಏರಿಯ ಎತ್ತರ ಆರು ಅಡಿಗಳು ಹಾಗೂ ಅಣೆಕಟ್ಟೆಯ ಎತ್ತರ 41 ಅಡಿಗಳು. ಕೆರೆಯಲ್ಲಿ ನೀರು ತುಂಬಿದಾಗ 67 ಹೆ. ವಿಸ್ತಾರವಿರುತ್ತದೆ. ನೀರಿನ ಸಂಗ್ರಹ ಸಾಮರ್ಥ್ಯ 576 ದಶಲಕ್ಷ ಘನ ಅಡಿಗಳಾಗಿವೆ. ಎಡದಂಡೆ ಕಾಲುವೆಯ 4 ಕಿ.ಮೀ. ಬಲದಂಡೆ ಕಾಲುವೆ 4.5 ಕಿ.ಮೀ. ದೂರ ಹರಿಯುತ್ತದೆ. ಕೆರೆಯಿಂದ 240 ಹೆ. ಗಳಿಗೆ ನೀರಾವರಿ ಸೌಲಭ್ಯ ದೊರೆಯುವ ಸಾಮರ್ಥ್ಯವಿತ್ತು. ಈಗ ಇದರ ಪ್ರಮಾಣ ಕಡಿಮೆ ಆಗಿದೆ. ಹೂಳು ಮತ್ತು ಜಾಲಿ ಬೆಳೆದುಕೊಂಡಿದೆ. 2012ರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹೂಳೆತ್ತುವ ಕಾರ್ಯವನ್ನು ಮಾಡಲಾಗಿದ್ದರೂ ಮಳೆಯ ಅಭಾವದಿಂದ ಕೆರೆಯು ತುಂಬುತ್ತಿಲ್ಲ. ಹಾಗಾಗಿ ನೀರಾವರಿ ಪದ್ಧತಿಗೆ ಬಳಕೆಯಾಗುತ್ತಿಲ್ಲ. ಹಾಗೂ ಈ ಕೆರೆಯನ್ನು ಆಧರಿಸಿದ ರೈತರು ಬದಲಾದ ಪದ್ಧತಿಗೆ ಅನುಗುಣವಾಗಿ ಕೃಷಿ ಮಾಡುತ್ತಿದ್ದಾರೆ.

**ಅಸುಂಡಿ ಕೆರೆ :** ಅಸುಂಡಿ ರಾಣೆಬೆನ್ನೂರು ತಾಲೂಕಿನಲ್ಲಿರುವ ಗ್ರಾಮ. ಈ ಗ್ರಾಮದ ಪೂರ್ವದಲ್ಲಿ 1889ರಲ್ಲಿ ಕೆರೆಯನ್ನು ನಿರ್ಮಿಸಲಾಗಿದೆ. ಕೆರೆಯ ಉದ್ದ 4767 ಅಡಿ, ಎತ್ತರ 34 ಅಡಿ, ಒಟ್ಟು ವಿಸ್ತೀರ್ಣ 418 ಎಕರೆಗಳು. ನೀರಿನ ಶೇಖರಣಾ ಸಾಮರ್ಥ್ಯ 74 ದಶಲಕ್ಷ ಘನ ಅಡಿಗಳು. ಎರಡು ನೀರು ವಿತರಣಾ ಕಾಲುವೆಗಳಿವೆ. ಬಲದಂಡೆ ಕಾಲುವೆ 7 ಕಿ.ಮೀ. ಎಡದಂಡೆ ಕಾಲುವೆ ಒಂದು ಕಿ.ಮೀ. ದೂರ ಹರಿಯುತ್ತಿದ್ದವು. (ಧಾರವಾಡ ಜಿಲ್ಲೆ ಗ್ಯಾಸಟಿಯರ್ ಪು. 305) ಈ ನೀರನ್ನು ಆಧರಿಸಿ ಅಸುಂಡಿ, ಹೂಲಿಯಾಳ, ಕರ್ಜಗಿ, ಚಿಕ್ಕ ಕುರುವತ್ತಿ, ಹಳೆಕುರುವತ್ತಿ, ದೇವರಗುಡ್ಡ ಮುಂತಾದ ಗ್ರಾಮಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದ್ದು. ಕೆರೆ ನೀರಾವರಿ ಈಗ ಅಷ್ಟಾಗಿ ಬಳಕೆ ಆಗುತ್ತಿಲ್ಲ. ಹೂಳು ತುಂಬಿಕೊಂಡಿದೆ ಮತ್ತು ಜಾಲಿ ಬೆಳೆದುಕೊಂಡಿದೆ. 2012ರಲ್ಲಿ ಸಣ್ಣ ಪ್ರಮಾಣದಲ್ಲಿ ಹೂಳೆತ್ತಲಾಗಿದೆಯಾದರೂ ಕೃಷಿ ನೀರಾವರಿಗೆ ಇದರ ಬಳಕೆ ಅಪೂರ್ವವಾಗಿದೆ. ಸುಮಾರು ಹತ್ತು-ಹನ್ನೆರಡು ವರ್ಷಗಳಿಂದ ಕೆರೆ ತುಂಬಿಲ್ಲ ಎನ್ನುವುದು ಗ್ರಾಮೀಣರ ಅಭಿಪ್ರಾಯ.

**ಕಟ್ಟೆ ನೀರಾವರಿ ಪದ್ಧತಿ :** ಜಿಲ್ಲೆಯಲ್ಲಿ ಕಟ್ಟೆ ನೀರಾವರಿ ಪದ್ಧತಿ ವಿಭಿನ್ನವಾಗಿದೆ. ಗ್ರಾಮದಲ್ಲಿ ಕಟ್ಟೆಯನ್ನು, ಕೃಷಿ ಹೊಂಡಗಳನ್ನು ಮತ್ತು ಊರ ಹೊಂಡಗಳನ್ನು ಕಾಣಬಹುದು. ಹಿರೇಕೆರೂರು ಮತ್ತು ಹಾನಗಲ್ಲು ತಾಲೂಕುಗಳಲ್ಲಿ ಹೆಚ್ಚು ಕಟ್ಟೆಗಳಿವೆ. ಒಂದೊಂದು ಗ್ರಾಮದಲ್ಲಿ ಹದಿನೈದು, ಹದಿನಾರು ಕಟ್ಟೆಗಳಿರುವ ಗ್ರಾಮಗಳಿರುವುದು ವಿಶೇಷ. ಈ ಕಟ್ಟೆಗಳ ಬಸಿ(ತೇವಾ)ಯನ್ನು ಆಧರಿಸಿ ಕೃಷಿ ಮಾಡುವ ಪಾರಂಪರಿಕ ಕ್ರಮಗಳು ಬಳಕೆಯಲ್ಲಿದ್ದವು. ಇಂತಹ ಪದ್ಧತಿಯಲ್ಲಿ ಹೆಚ್ಚಾಗಿ ಬತ್ತ ಬೆಳೆಯುತ್ತಿದ್ದರು. ಈಗಲೂ ಕೆಲವು ಕಡೆ ಈ ವಿಧಾನ ಬಳಕೆಯಲ್ಲಿದೆ. ಆದರೆ ಅಂತಹ ಕ್ರಮಗಳು ಅಪೂರ್ವವಾಗುತ್ತಿವೆ ಹಾಗೂ ಕಟ್ಟೆಗಳನ್ನು ಮುಚ್ಚಲಾಗಿದೆ.

ಜಿಲ್ಲೆಯ ಇಂತಹ ಕೆಲವು ಕೆರೆಗಳು ಕುಡಿಯುವ ನೀರಿಗಾಗಿ ಮಾತ್ರ ಬಳಕೆಯಾಗುತ್ತಿವೆ. ಉದಾಹರಣೆಗೆ ಸವಣೂರು, ಶಿಗ್ಗಾಂವಿ, ಬಂಕಾಪುರ ಮುಂತಾದ ಕೆರೆಗಳನ್ನು ಕಾಣಬಹುದು. ಜಿಲ್ಲೆಯ ನೀರಾವರಿ ವ್ಯವಸ್ಥೆ ಈ ಕೆಳಗಿನಂತಿದೆ.

**ನೀರಾವರಿಯಾದ ನಿವ್ವಳ ಪ್ರದೇಶ**

| ಕ್ರ.ಸಂ. | ತಾಲೂಕುಗಳು | ಕಾಲುವೆಗಳ ಮೂಲಕ | | | ಕೆರೆಗಳ ಮೂಲಕ | | | ಬಾವಿಗಳ ಮೂಲಕ | | |
|---|---|---|---|---|---|---|---|---|---|---|
| | | ಉದ್ದ (ಕಿ.ಮೀ.) | ಒಟ್ಟು ನೀರಾವರಿ ಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ಕೆರೆಗಳ ಸಂಖ್ಯೆ | ಒಟ್ಟು ನೀರಾವರಿ ಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ಬಾವಿಗಳ ಸಂಖ್ಯೆ | ಒಟ್ಟು ನೀರಾವರಿ ಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ |
| 1 | ಬ್ಯಾಡಗಿ | 0 | 0 | 0 | 241 | 0 | 0 | 441 | 0 | 0 |
| 2 | ಹಾನಗಲ್ಲ | 47 | 5975 | 5975 | 728 | 9453 | 9199 | 44 | 0 | 0 |
| 3 | ಹಾವೇರಿ | 0 | 0 | 0 | 40 | 0 | 0 | 171 | 0 | 0 |
| 4 | ಹಿರೇಕೆರೂರು | 0 | 0 | 0 | 605 | 790 | 790 | 1101 | 0 | 0 |
| 5 | ರಾಣೆಬೆನ್ನೂರು | 0 | 0 | 0 | 18 | 0 | 0 | 118 | 0 | 0 |
| 6 | ಸವಣೂರ | 0 | 0 | 0 | 18 | 0 | 0 | 230 | 0 | 0 |
| 7 | ಶಿಗ್ಗಾವಿ | 0 | 0 | 0 | 254 | 547 | 547 | 0 | 0 | 0 |
| | **ಜಿಲ್ಲಾ ಒಟ್ಟು** | **47** | **5975** | **5975** | **1904** | **10790** | **10536** | **2105** | **0** | **0** |

ಒಟ್ಟಿನಲ್ಲಿ ಜಿಲ್ಲೆಯಲ್ಲಿ 1904 ಕೆರೆಗಳಿವೆ. ಹಿರೇಕೆರೂರು ತಾಲೂಕಿನಲ್ಲಿ ಹೆಚ್ಚು ಕೆರೆಗಳಿದ್ದರೆ ರಾಣೆಬೆನ್ನೂರು ಮತ್ತು ಸವಣೂರು ತಾಲೂಕುಗಳಲ್ಲಿ ಕಡಿಮೆ ಕೆರೆಗಳಿವೆ. ಆದರೆ ಇರುವ ಕೆರೆಗಳು ನೀರಾವರಿಗೆ ಬಳಕೆ ಆಗುತ್ತಿರುವುದು ಅಪೂರ್ವವಾಗಿದೆ. ಶಿಗ್ಗಾವಿ, ಹಿರೇಕೆರೂರು ಮತ್ತು ಹಾನಗಲ್ಲು ತಾಲೂಕುಗಳಲ್ಲಿ ಮಾತ್ರ ಕೆರೆ ನೀರಾವರಿ ಪದ್ಧತಿ ಇದೆ. ಇರುವ ಬಾವಿಗಳಲ್ಲಿ ನೀರು ಬತ್ತುತ್ತಿರುವುದರಿಂದ ನೀರಾವರಿಗೆ ಲಭ್ಯವಾಗುತ್ತಿಲ್ಲ. 'ಹಿರಿಯರ ನಾಲೆ'ಯಂತಹ ಕಾಲುವೆಗಳು ಬತ್ತಿಹೋಗಿವೆ. ಕೊಳವೆಬಾವಿಯನ್ನು ಕೊರೆಯಿಸುವುದಕ್ಕೂ ಸಹ ಇಲ್ಲಿಯ ರೈತರು ಹಿಂಜರಿಯುತ್ತಿದ್ದಾರೆ. ವಿಶೇಷವಾಗಿ ಸಣ್ಣ ರೈತರಲ್ಲಿ ಈ ಬಗೆಯ ಹಿಂಜರಿಕೆ ಹೆಚ್ಚಾಗಿದೆ. ಇದಕ್ಕೆ ಆರ್ಥಿಕತೆ ಮತ್ತು ಇತರೆ ಕಾರಣಗಳು ಇವೆಯಾದರೂ ವಿದ್ಯುತ್ ಸೌಲಭ್ಯ ಅಥವಾ ದೂರದಿಂದ ವಿದ್ಯುತ್ ತೆಗೆದುಕೊಳ್ಳಬೇಕಾದ ಸಮಸ್ಯೆಯಿಂದ ಹಿಂಜರಿಯುತ್ತಿರುವುದು ಹೆಚ್ಚಾಗಿ ಕಂಡುಬರುತ್ತಿದೆ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ರೈತರಲ್ಲಿ ಮತ್ತು ಹೆಚ್ಚು ಭೂಮಿಯನ್ನು ಹೊಂದಿರುವ ರೈತರಲ್ಲಿ ಇಂತಹ ಆತಂಕಗಳು ಕಡಿಮೆ ಇದೆ. ಆದರೂ ಈ ದಶಕದಲ್ಲಿ ಈ ಕೊಳವೆಬಾವಿಗಳು ಹೆಚ್ಚುತ್ತಲಿವೆ.

**ನೀರಾವರಿಯಾದ ನಿವ್ವಳ ಪ್ರದೇಶ**

| ಕ್ರ.ಸಂ. | ತಾಲೂಕುಗಳು | ಕೊಳವೆಬಾವಿಗಳು | | | ಏತ ನೀರಾವರಿ | | | | |
|---|---|---|---|---|---|---|---|---|---|
| | | ಸಂಖ್ಯೆಗಳು | ಒಟ್ಟು ನೀರಾವರಿಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ಸಂಖ್ಯೆಗಳು | ಒಟ್ಟು ನೀರಾವರಿಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ಇತರೆ | ಒಟ್ಟು |
| 1 | ಬ್ಯಾಡಗಿ | 3408 | 5508 | 4957 | 0 | 0 | 0 | 0 | 5508 |
| 2 | ಹಾನಗಲ್ಲ | 3582 | 9957 | 8664 | 4 | 102 | 102 | 2087 | 27574 |
| 3 | ಹಾವೇರಿ | 5101 | 11419 | 8731 | 4 | 53 | 53 | 6921 | 18393 |
| 4 | ಹಿರೇಕೆರೂರು | 4337 | 9574 | 5916 | 1 | 0 | 0 | 1394 | 11758 |
| 5 | ರಾಣೆಬೆನ್ನೂರು | 3617 | 12471 | 11258 | 12 | 466 | 466 | 10062 | 22999 |
| 6 | ಸವಣೂರ | 2997 | 2343 | 1260 | 321 | 139 | 139 | 705 | 3187 |
| 7 | ಶಿಗ್ಗಾಂವ | 1533 | 4726 | 3913 | 0 | 0 | 0 | 0 | 5273 |
| | **ಜಿಲ್ಲಾ ಒಟ್ಟು** | **24575** | **55998** | **44699** | **342** | **760** | **760** | **21169** | **94692** |

**ಬೀಜೋತ್ಪಾದನೆ :** ಜಿಲ್ಲೆಯಲ್ಲಿ ಕೊಳವೆಬಾವಿಗಳಿಂದ 55998 ಹೆ. ಏತ ನೀರಾವರಿಯಿಂದ 760 ಹೆ. ಇತರೆ ಮೂಲಗಳಿಂದ 21169 ಹೆ. ನೀರಾವರಿಯಾಗುತ್ತಿದೆ. ಜಿಲ್ಲೆಯ ಕೃಷಿಯಲ್ಲಿ ಬೀಜೋತ್ಪಾದನೆ ಗಮನಸೆಳೆಯುತ್ತದೆ. ಈ ನೆಲದಲ್ಲಿ ಉತ್ಪಾದನೆ ಮಾಡಿದ ಬೀಜಗಳನ್ನು ಏಷ್ಯಾಖಂಡದ ಯಾವುದೇ ಭೂಮಿಯಲ್ಲಾದರೂ ಬಳಸಬಹುದು ಅಥವಾ ಬಿತ್ತಿ ಒಳ್ಳೆಯ ಬೆಳೆಗಳನ್ನು ತೆಗೆಯಬಹುದು ಎನ್ನುವ ವಿಶೇಷತೆಯನ್ನು ಪಡೆದುಕೊಂಡಿದೆ. ಹಾಗಾಗಿಯೇ ದೇಶ-ವಿದೇಶದ ಹಲವಾರು ಖಾಸಗಿ, ಸರಕಾರಿ ಬೀಜೋತ್ಪಾದನೆ ಕಂಪನಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಹಾವೇರಿ ಹಾಗೂ ರಾಣೆಬೆನ್ನೂರು ತಾಲೂಕುಗಳಲ್ಲಿ ಬೀಜೋತ್ಪಾದನೆಯನ್ನು ಹೆಚ್ಚಾಗಿ ಕಾಣಬಹುದು. ಈ ತಾಲೂಕುಗಳನ್ನು 'ಬೀಜೋತ್ಪಾದನೆಯ ಜೇನುಗೂಡು, ಎಂದು ಕರೆಯುತ್ತಾರೆ. ಇಲ್ಲಿ ಬೀಜೋತ್ಪಾದನೆಯ ಚಟುವಟಿಕೆಗಳು ಕೇಂದ್ರೀಕೃತವಾಗಲು ಅನೇಕ ಕಾರಣಗಳಿವೆ. ಮುಖ್ಯವಾಗಿ ಇಲ್ಲಿಯ ವಾತಾವರಣ, ಅತಿಹೆಚ್ಚು ಮಳೆಬೀಳದ ಶುಷ್ಕವಾತಾವರಣ, ಉಷ್ಣತೆಯಲ್ಲಿ ಗಮನಾರ್ಹ ಏರಿಳಿತಗಳು ಇಲ್ಲದೇ ಇರುವುದು ಹಾಗೂ ಬೆಳವಣಿಗೆಗೆ ಬೇಕಾಗಿರುವ ಎಲ್ಲ ರೀತಿಯ ಮಣ್ಣು ಇರುವುದರಿಂದ ವರ್ಷದ ಬಹುಪಾಲು ದಿನಗಳಲ್ಲಿ ಬೀಜೋತ್ಪಾದನೆ ಕೈಗೊಳ್ಳಲು ಅನುಕೂಲವಾಗಿದೆ. ಅಲ್ಲದೆ ಬೀಜೋತ್ಪಾದನೆಯ ಪಾರಂಪರಿಕ ಮತ್ತು ಆಧುನಿಕ ತಾಂತ್ರಿಕತೆಯಲ್ಲಿ ಪರಿಣತಿ ಪಡೆದ ಅನುಭವವುಳ್ಳ ರೈತರು ಇಲ್ಲಿದ್ದಾರೆ. ತಮ್ಮದೇ ಆದ ಲಾಂಛನದ ಅಡಿಯಲ್ಲಿ ಹಾಗೂ ಬ್ರಾಂಡ್‌ನ ಅಡಿಯಲ್ಲಿ ಬೀಜಗಳನ್ನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಕೇವಲ ಪಾರಂಪರಿಕ ಬೀಜಗಳನ್ನು ಮಾತ್ರ ಉತ್ಪಾದನೆ ಮಾಡುತ್ತಿರುವ ಹಲವು ರೈತರು ಜಿಲ್ಲೆಯಲ್ಲಿ ಕಂಡು ಬರುತ್ತಿರುವುದು ವಿಶೇಷ. ಇಂತಹ ಬೀಜೋತ್ಪಾದಕ ರೈತರು ಹಿರೇಕೆರೂರು ಹಾಗೂ ಹಾನಗಲ್ಲು ತಾಲೂಕಿನಲ್ಲಿ ಹೆಚ್ಚಾಗಿದ್ದಾರೆ. ಪಾರಂಪರಿಕ ಮತ್ತು ಅಧಿಕ ಇಳುವರಿ ನೀಡುವ ಬೀಜಗಳ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ.

ಸುಮಾರು 1950ರ ದಶಕದ ಪೂರ್ವದಿಂದಲೂ ಬೀಜೋತ್ಪಾದನೆಯ ಚಟುವಟಿಕೆಗಳು ಈ ಜಿಲ್ಲೆಯಲ್ಲಿ ನಡೆಯುತ್ತಿವೆ. 1960ರ ದಶಕದ ಅನಂತರ ಇದರ ಪ್ರಮಾಣ ಹೆಚ್ಚಾಗುತ್ತ ಬಂದಿದೆ. ಪ್ರಸ್ತುತ ಸಂದರ್ಭದಲ್ಲಿ ಸುಮಾರು 65,000ಕ್ಕಿಂತ ಹೆಚ್ಚು ಎಕರೆಯಲ್ಲಿ ಬೀಜೋತ್ಪಾದನೆಯ ಚಟುವಟಿಕೆಗಳು ನಡೆಯುತ್ತಿವೆ ಎಂದು

ಅಂದಾಜಿಸಲಾಗಿದೆ. ಕೊಳವೆ-ಬಾವಿಗಳನ್ನು ಕೊರೆಯಿಸುವ ಕ್ರಮ ಹೆಚ್ಚಾದಂತೆ ಬೀಜೋತ್ಪಾದನ ಚಟುವಟಿಕೆಗಳು ಹೆಚ್ಚಾಗಿವೆ. ಜಿಲ್ಲೆಯಕೃಷಿ ಚಟುವಟಿಕೆಯಲ್ಲಿ ಈ ದಶಕದಲ್ಲಿ ಆಗಿರುವ ಮುಂಚೂಣಿಯ ಬದಲಾವಣೆ ಇದು. ಗೋವಿನಜೋಳ, ಸೂರ್ಯಕಾಂತಿ, ಹಣ್ಣುಗಳು, ತರಕಾರಿಗಳು ಮತ್ತು ಹೂವುಗಳ ಬೀಜಗಳ ಉತ್ಪಾದನೆ ಇಲ್ಲಿ ನಡೆಯುತ್ತಿದೆ. ತರಕಾರಿಯಲ್ಲಿ ಟೊಮ್ಯಾಟೋ, ಬದನೆ, ಬೆಂಡೆಕಾಯಿ ಮುಂಚೂಣಿಯಲ್ಲಿದ್ದರೆ ಹೂವುಗಳಲ್ಲಿ ಸೇವಂತಿಗೆ, ಚೆಂಡುಹೂ ಮುಂಚೂಣಿಯಲ್ಲಿವೆ. ಚೆಂಡುಹೂ ಬೀಜೋತ್ಪಾದನೆ ಈ ನಾಲ್ಕು ವರ್ಷಗಳಲ್ಲಿ ಮತ್ತಷ್ಟು ಹೆಚ್ಚಾಗಿದೆ. ಮಸಾರಿ ಭೂಮಿಯಲ್ಲಿ ವಿಶೇಷವಾಗಿ ರಾಣೆಬೆನ್ನೂರು ತಾಲೂಕಿನ ಉತ್ತರ ಮತ್ತು ಈಶಾನ್ಯ ಭಾಗದ ಹಳ್ಳಿಗಳಲ್ಲಿ ಈ ಚಟುವಟಿಕೆಯು ಹೆಚ್ಚಾಗುತ್ತಿರುವುದನ್ನು ಕಾಣಬಹುದು.

ಜಿಲ್ಲೆಯಲ್ಲಿ ಮಹಿಕೋ, ಪ್ರೋ ಆಗ್ರೋ, ಸನ್‌ಗ್ರೋ, ಇಂಡೋ ಅಮೇರಿಕನ್ ಹೈಬ್ರಿಡ್ ಸೀಡ್ಸ್, ಜಿ.ಕೆ. ಸೀಡ್ಸ್, ಗಂಗಾ ಕಾವೇರಿ ಸೀಡ್ಸ್, ನಾಮಧಾರಿ ಸೀಡ್ಸ್, ಯುನಿಕಾರ್ನ ಸೀಡ್ಸ್, ಓರಿಯಂಟಲ್ ಸೀಡ್ಸ್ ಮುಂತಾದ ಸುಮಾರು 150ಕ್ಕೂ ಹೆಚ್ಚು ಬೀಜೋತ್ಪಾದನೆಯ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಸರಕಾರಿ ಸಂಸ್ಥೆಗಳಿಂದ ಕೆ.ಎಸ್.ಎಸ್.ಸಿ., ಎನ್.ಎಸ್.ಎಸ್.ಸಿ.ಗಳು ಸಹ ತಮ್ಮ ಕಾರ್ಯವ್ಯಾಪ್ತಿಯನ್ನು ಹರಡಿವೆ. ಬೀಜೋತ್ಪಾದನೆಯಲ್ಲಿ ಸುಮಾರು 55ರಿಂದ 60 ಕೋಟಿ ರೂಪಾಯಿ ವಾರ್ಷಿಕ ವಹಿವಾಟು ನಡೆಯುತ್ತಿದೆ. ಹೀಗೆ ಬೀಜೋತ್ಪಾದನೆ ಮತ್ತು ಕೃಷಿಕರಿಗೆ ತರಬೇತಿ ನೀಡುತ್ತಿರುವ ಸಂಸ್ಥೆಗಳಲ್ಲಿ ಕೃಷಿ ಸಂಶೋಧನಾ ಕೇಂದ್ರ, ಹನುಮನಮಟ್ಟಿ ಗಮನಸೆಳೆಯುತ್ತದೆ.

**ಕೃಷಿ ಸಂಶೋಧನಾ ಕೇಂದ್ರ ಹನುಮನಮಟ್ಟಿ :** ರಾಜ್ಯದ ಮೊದಲ ಕೃಷಿ ವಿಜ್ಞಾನ ಕೇಂದ್ರವಿದು. ಹಾವೇರಿ ಜಿಲ್ಲೆಯ ಏಳು ತಾಲೂಕುಗಳು ಈ ಸಂಶೋಧನ ಕೇಂದ್ರದ ಉಸ್ತುವಾರಿಯಲ್ಲಿವೆ. ಹನುಮನಮಟ್ಟಿ ಗ್ರಾಮವು ರಾಣೆಬೆನ್ನೂರು ತಾಲೂಕು, ಕರ್ಜಿಗಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ರಾ.ಹೆ. 4ಕ್ಕೆ ಹೊಂದಿಕೊಂಡು ಇದೆ. 1974ರಲ್ಲಿ ಆರಂಭವಾದ ಈ ಸಂಶೋಧನಾ ಕೇಂದ್ರದ ಉದ್ದೇಶಗಳು ಇಂತಿವೆ. 1. ಏಕದಳ, ದ್ವಿದಳ ಧಾನ್ಯಗಳ, ಎಣ್ಣೆಕಾಳುಗಳ, ವಾಣಿಜ್ಯ ಬೆಳೆಗಳಾದ ಮೆಣಸಿನಕಾಯಿ ಮತ್ತು ಹತ್ತಿ ಬೆಳೆಗಳ ಹೆಚ್ಚು ಇಳುವರಿ ನೀಡುವ ಆಧುನಿಕ ತಳಿಗಳನ್ನು ಪರಿಚಯಿಸುವುದು, 2. ಮೂಲ ಬಿತ್ತನೆ ಬೀಜದ ಉತ್ಪಾದನೆ ಹಾಗೂ ವಿವಿಧ ಉತ್ಪಾದನೆ ಹಾಗೂ ವಿವಿಧ ಬಿತ್ತನೆ ಬೀಜ ಉತ್ಪಾದನಾ ಸಂಸ್ಥೆಗಳಿಗೆ ಅವನ್ನು ವಿತರಿಸುವುದು, 3. ಈ ವಲಯಕ್ಕೆ ಆರ್ಥಿಕವಾಗಿ ಲಾಭದಾಯಕವಾಗಬಲ್ಲ ಬೆಳೆಪದ್ಧತಿಯ ಸಂಶೋಧನೆ ನಡೆಸುವುದು, 4. ಸುಧಾರಿತ ಬೆಳೆ ತಳಿಗಳ ಬೇಸಾಯ ಮತ್ತು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು, (ಧಾರವಾಡ ಜಿಲ್ಲೆ ಗ್ಯಾಜೆಟಿಯರ್-ಪು. 299). ಈ ಕೇಂದ್ರನಲ್ಲಿ ಹೈನುಗಾರಿಕೆ, ಕೋಳಿಸಾಕಾಣೆ, ಕುರಿ ಮತ್ತು ಮೇಕೆ ಸಾಕಣೆ, ಮೊಲ ಸಾಕಣೆ, ಜೇನು ಕೃಷಿ ಮುಂತಾದ ಕೃಷಿ ಸಂಬಂಧಿತ ಕ್ಷೇತ್ರಗಳ ಬಗ್ಗೆ ವಿಜ್ಞಾನ ಕೇಂದ್ರಕ್ಕೆ ಭೇಟಿನೀಡುವ ರೈತರಿಗೆ ತರಬೇತಿ ನೀಡಲಾಗುತ್ತಿದೆ. ಸಂಶೋಧನಾ ಕೇಂದ್ರವು ಈ ಪರಿಕಲ್ಪನೆಯಲ್ಲಿ ಹಲವಾರು ಮಹತ್ವದ ಯೋಜನೆಗಳನ್ನು ಹಾಕಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಸುತ್ತಿದೆ. ಅಂತಹ ಯೋಜನೆಗಳಲ್ಲಿ ಕೆಲವು ಇಂತಿವೆ.

- ಹಲವಾರು ಬೆಳೆಗಳ ಸುಧಾರಿತ/ಸಂಕರಣ ತಳಿಗಳ ಬೀಜೋತ್ಪಾದನೆ ಹಾಗೂ ತೋಟಗಾರಿಕೆ ಗಿಡಗಳ ಕಸಿ ಸಸಿಗಳನ್ನು ಉತ್ಪಾದಿಸಿ ಈ ಭಾಗದಲ್ಲಿ ಜನಪ್ರಿಯಗೊಳಿಸಿದೆ.
- ಮುಖ್ಯ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸುವಂತೆ ಪ್ರೇರಣೆ ಮಾಡಿದೆ.
- ಸುಧಾರಿತ ಮೇವು ಹಾಗೂ ಹುಲ್ಲಿನ ತಳಿಗಳನ್ನು ಪರಿಚಯಿಸಿದೆ ಮತ್ತು ಇವುಗಳನ್ನು ಬೆಳೆಯಲು ರೈತರಿಗೆ ತರಬೇತಿ ನೀಡಿದೆ.
- ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಪೋಷಕಾಂಶ ಲಭ್ಯತೆ ಮತ್ತು ಪೀಡೆ ನಿರ್ವಹಣೆ ಪದ್ಧತಿ ಅಳವಡಿಸುವಂತೆ ಪ್ರೋತ್ಸಾಹಿಸುತ್ತಿದೆ.
- ಮಣ್ಣು ನೀರು ಮತ್ತು ಸಸ್ಯಪರೀಕ್ಷೆ ಮಾಡುವ ಮತ್ತು ಜೈವಿಕ ಪೀಡೆನಾಶಕಗಳ ಉತ್ಪಾದನೆ ಘಟಕಗಳನ್ನೊಳಗೊಂಡಿದೆ.
- ಕಿರುಧಾನ್ಯಗಳ ಉತ್ಪಾದನಾ ತಾಂತ್ರಿಕತೆಯನ್ನು ತಿಳಿಸಿಕೊಡುತ್ತಿದೆ.

  ಎರೆಹುಳ/ಸಾವಯವಕೃಷಿ/ಸುಸ್ಥಿತಿ ಕೃಷಿ / ಸಮಗ್ರ ಕೃಷಿ ಪದ್ಧತಿ ಅಳವಡಿಕೆಯನ್ನು ಮಾಡಿದೆ.
- ಜಲಾನಯನ ಅಭಿವೃದ್ಧಿ ಕೈಗೊಂಡಿದೆ.
- ಆವೃತ್ತಿ ನಿಧಿಯಡಿಯಲ್ಲಿ ವಿವಿಧ ತಳಿ ಬೀಜಗಳ ಬೀಜೋತ್ಪಾದನೆಯನ್ನು ರೈತರು ಕೈಗೊಳ್ಳಲು ಪ್ರೇರೇಪಿಸುತ್ತಿದೆ.

(ಆಧಾರ : ಹೆಬ್ಬಾಗಿಲು - ಆಮ್ಲಾನ್ ಆದಿತ್ಯ ಬಿಸ್ವಾಸ್ (ಗೌ.ಸಂ.) ಪು. 140)

ಹೀಗೆ ಕೃಷಿ ಮತ್ತು ಬೀಜೋತ್ಪನ್ನತೆಯ ಅಭಿವೃದ್ಧಿ ಕಾರ್ಯಗಳು ಹಾವೇರಿ ಜಿಲ್ಲೆಯಲ್ಲಿ ನಡೆಯುತ್ತಿವೆ. ಬೀಜೋತ್ಪಾದನೆಯಲ್ಲದೆ ಸಿಂಥೈಟ್ ಉದ್ಯಮವೂ ಸಹ ನಡೆಯುತ್ತಿದೆ. ರಾಣಿಬೆನ್ನೂರು ತಾಲೂಕು ಕುಮಾರಪಟ್ಟಣ ಗ್ರಾಮದ ಹತ್ತಿರ ನಿರ್ಮಾಣವಾದ ಸಿಂಥೈಟ್ ಘಟಕ ಮೆಣಸಿನ ಕಾಯಿಯಿಂದ ಹೊರತೆಗೆದ ಓಯೋರೆಸಿನ್‌ಗಳನ್ನು ವಿದೇಶಕ್ಕೆ ಕಳುಹಿಸುತ್ತಿದೆ. ಬ್ಯಾಡಗಿ ತಾಲೂಕಿನ ತಡಸ ಮತ್ತು ಛತ್ರ ಗ್ರಾಮಗಳ ಹತ್ತಿರ ನಿರ್ಮಿತವಾಗಿರುವ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಆ ಮೂಲಕ ಮೆಣಸಿನಕಾಯಿ ಬೆಳೆಗಾರರಲ್ಲಿ ಒಂದು ಬಗೆಯ ಭದ್ರತೆಯನ್ನು ಒದಗಿಸುತ್ತಿದೆ.

ಇಂತಹ ಕಾರ್ಯಗಳಲ್ಲದೆ ಬೀಜಗಳನ್ನು ವಿತರಿಸುವ, ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸುವ ಕಾರ್ಯಗಳೂ ಸಹ ನಡೆಯುತ್ತಿವೆ. ಬೀಜಗಳ ವಿತರಣೆಯನ್ನು ಈ ಕೆಳಗಿನಂತೆ ಕಾಣಬಹುದು.

**2010-11ನೇ ಸಾಲಿನಲ್ಲಿ ವಿತರಿಸಿದ ಬಿತ್ತನೆ ಬೀಜಗಳು (ಕ್ವಿಂಟಲ್‌ಗಳಲ್ಲಿ)**

| ಕ್ರ.ಸಂ. | ತಾಲ್ಲೂಕು | ಬತ್ತ | ಜೋಳ | ಸಜ್ಜೆ | ಮೆಕ್ಕೆ ಜೋಳ | ರಾಗಿ | ತೊಗರಿ | ಹುರುಳಿ | ಉದ್ದು | ಹೆಸರು | ಕಡಲೆ | ಶೇಂಗಾ | ಸೂರ್ಯ ಕಾಂತಿ | ಹತ್ತಿ | ಇತರೆ |
|---|---|---|---|---|---|---|---|---|---|---|---|---|---|---|---|
| 1 | ಬ್ಯಾಡಗಿ | 131 | 64 | 0 | 2857 | 0 | 68 | 0 | 1.5 | 79 | 945 | 225 | 31 | 0 | 154 |
| 2. | ಹಾನಗಲ್ಲ | 6960 | 3 | 0 | 1656 | 0 | 0 | 0 | 3 | 0 95 | 180 | 19 | 0 | 775 | |
| 3. | ಹಾವೇರಿ | 60 | 191 | 0 | 3555 | 0 | 124 | 0 | 3 | 109 | 189 | 1167 | 20 | 0 | 879 |
| 4. | ಹಿರೇಕೆರೂರು | 430 | 85 | 0 | 6634 | 0 | 116 | 0 | 0 | 43 | 1196 | 434 | 19 | 0 | 15 |
| 5. | ರಾಣೇಬೆನ್ನೂರು | 1086 | 166 | 0 | 4585 | 0 | 154 | 0 | 0 | 216 | 391 | 320 | 42 | 0 | 14 |
| 6. | ಸವಣೂರ | 0 | 203 | 0 | 1376 | 0 | 65 | 0 | 0 | 139 | 91 | 488 | 11 | 0 | 732 |
| 7. | ಶಿಗ್ಗಾವಿ | 1746 | 99 | 0 | 1116 | 0 | 37 | 0 | 0 | 88 | 124 | 754 | 7 | 0 | 1933 |
| **ಜಿಲ್ಲಾ ಮಟ್ಟ** | | **10413** | **811** | **0** | **21779** | **0** | **564** | **0** | **75** | **674** | **3031** | **3568** | **149** | **0** | **4502** |

ವಿತರಿಸಿದ ಬೀಜಗಳಲ್ಲಿ 21779 ಕ್ವಿಂಟಲ್ ಮೆಕ್ಕೆಜೋಳವನ್ನು, 10413 ಕ್ವಿಂಟಲ್ ಬತ್ತವನ್ನು ವಿತರಿಸಲಾಗಿದೆ. ಮೆಕ್ಕೆಜೋಳವನ್ನು ರಾಣಿಬೆನ್ನೂರು ತಾಲೂಕಿನ ರೈತರು ಹೆಚ್ಚಾಗಿ ಪಡೆದಿದ್ದಾರೆ. ಆದರೆ ಇಳುವರಿಯಲ್ಲಿ ಹಾವೇರಿಗಿಂತ ಕಡಿಮೆ ಇದೆ. ಈ ಇಳುವರಿ ಕಡಿಮೆಗೆ ಒಣಬೇಸಾಯ ಪದ್ಧತಿಯು ಪ್ರಧಾನ ಕಾರಣವಾಗಿದೆ. ಹತ್ತಿ ಬೀಜಕ್ಕಾಗಿ ತಿಂಗಳುಗಟ್ಟಲೆ ಹೋರಾಟಗಳು ನಡೆಯುತ್ತವೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಹಾಗೂ ಕೃಷಿ ಭೂ ಅಭಿವೃದ್ಧಿಗಾಗಿ ಜಿಲ್ಲಾ ಆಡಳಿತ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ.

**2010-11ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಅಭಿವೃದ್ಧಿ ಪಡಿಸಿದ ಕೃಷಿ ಭೂಮಿ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)**

| ಕ್ರ.ಸಂ. | ತಾಲೂಕು | ಆಹಾರ ಭದ್ರತಾ ಮಿಷನ್ | | | ಐಸೋಫಾಮ್ | ಆತ್ಮ | ಶ್ರೀಪದ್ಧತಿ | ಇತರೆ |
|---|---|---|---|---|---|---|---|---|
| | | ಬತ್ತ | ಜೋಳ | ದ್ವಿದಳ ಧಾನ್ಯ | ಎಣ್ಣೆಕಾಳುಗಳು | ಯೋಜನೆ | ಬತ್ತ | |
| 1 | ಬ್ಯಾಡಗಿ | 0 | 60 | 303 | 2810 | 81 | 20 | 12000 |
| 2 | ಹಾನಗಲ್ಲ | 0 | 23 | 901 | 856 | 56 | 0 | 3000 |
| 3 | ಹಾವೇರಿ | 0 | 515 | 922 | 3728 | 135 | 0 | 23000 |
| 4 | ಹಿರೇಕೆರೂರು | 0 | 49 | 284 | 1948 | 112 | 0 | 22000 |
| 5 | ರಾಣೇಬೆನ್ನೂರು | 0 | 55 | 866 | 2664 | 144 | 0 | 18000 |
| 6 | ಸವಣೂರ | 0 | 44 | 296 | 2270 | 127 | 0 | 8000 |
| 7 | ಶಿಗ್ಗಾವಿ | 0 | 48 | 274 | 2016 | 67 | 0 | 8000 |
| | **ಜಿಲ್ಲಾ ಒಟ್ಟು** | **0** | **294** | **3846** | **16292** | **722** | **20** | **94000** |

(ಆಧಾರ : ಹಾವೇರಿ ಜಿಲ್ಲೆಯ ಅಂಕಿಅಂಶಗಳ ನೋಟ 2010-11)

ಹೀಗೆ ಕೃಷಿಭೂಮಿ ಅಭಿವೃದ್ಧಿ, ಬೀಜೋತ್ಪಾದನಾ ಅಭಿವೃದ್ಧಿ, ನೀರಾವರಿ ಅಭಿವೃದ್ಧಿ ಮುಂತಾದ ಕೃಷಿ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಕೃಷಿಕರಿಗೆ ಸೌಲಭ್ಯ ಒದಗಿಸುತ್ತಿದೆ. ಇಂತಹ ಸೌಲಭ್ಯಗಳನ್ನು ಪಡೆಯುವಲ್ಲಿ ಹಾವೇರಿ ತಾಲೂಕಿನ ರೈತರು ಮುಂಚೂಣಿಯಲ್ಲಿದ್ದಾರೆ. ಹಾನಗಲ್ಲು ತಾಲೂಕಿನ ರೈತರು ಹಿಂದುಳಿದಿದ್ದಾರೆ.

**2010-11ನೇ ಸಾಲಿನಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು**

| ಕ್ರ. ಸಂ. | ತಾಲ್ಲೂಕು | ಒಟ್ಟು ಪ್ರಕರಣಗಳು | ಪರಿಹಾರ ನೀಡಿದ ಪ್ರಕರಣಗಳು | ತಿರಸ್ಕೃತಗೊಂಡ ಪ್ರಕರಣಗಳು | ಪರಿಹಾರ ನೀಡಿದ ಮೊತ್ತ | ರೈತ ಸಂಪರ್ಕ ಕೇಂದ್ರ |
|---|---|---|---|---|---|---|
| 1 | ಬ್ಯಾಡಗಿ | 1 | 0 | 0 | 0 | 2 |
| 2 | ಹಾನಗಲ್ಲ | 3 | 0 | 0 | 0 | 3 |
| 3 | ಹಾವೇರಿ | 1 | 0 | 1 | 0 | 3 |
| 4 | ಹಿರೇಕೆರೂರು | 2 | 0 | 1 | 0 | 3 |
| 5 | ರಾಣೆಬೆನ್ನೂರು | 5 | 0 | 0 | 0 | 3 |
| 6 | ಸವಣೂರ | 0 | 0 | 0 | 0 | 3 |
| 7 | ಶಿಗ್ಗಾವಿ | 2 | 0 | 0 | 0 | 2 |
| | **ಜಿಲ್ಲಾ ಒಟ್ಟು** | **14** | **0** | **2** | **0** | **19** |


ಜಿಲ್ಲೆಯಲ್ಲಿ ಅಪೂರ್ವವಾಗಿ ರೈತರ ಆತ್ಮಹತ್ಯೆಗಳು ನಡೆಯುತ್ತಿವೆ. 2010-11ರ ಅಂಕಿ- ಅಂಶಗಳ ಪ್ರಕಾರ 14 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಣಿಬೆನ್ನೂರು ತಾಲೂಕಿನಲ್ಲಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವಿವರಗಳು ಲಭ್ಯವಾಗಿವೆ. ಒಣ ಬೇಸಾಯವನ್ನು ಆಧರಿಸಿ ಕೃಷಿ ಮಾಡುತ್ತಿರುವುದು ಮತ್ತು ಸೌಲಭ್ಯಗಳು ಇಲ್ಲದಿರುವುದೇ ಇದಕ್ಕೆ ಕಾರಣ. ಆದರೆ ಆತ್ಮಹತ್ಯ ಮಾಡಿಕೊಂಡ ಯಾವುದೇ ರೈತರಿಗೆ ಪರಿಹಾರ ನೀಡಿದ ವಿವರಗಳು ಲಭ್ಯವಿಲ್ಲ.

ಹಾವೇರಿ ಜಿಲ್ಲೆಯ ಕೃಷಿ ಪದ್ಧತಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಸಂಯುಕ್ತ ಅಸ್ಮಿತೆಯನ್ನು ಪಡೆದಂತೆ ಇಲ್ಲಿಯ ಸಮಸ್ಯೆಗಳು ಸಹ ಸಂಯುಕ್ತ ಶೈಲಿಯಲ್ಲೆ ರೂಪುಗೊಳ್ಳುತ್ತಿವೆ. ಮಳೆಯ ಪ್ರಮಾಣ ಕಡಿಮೆ ಆಗುತ್ತಿರುವುದರಿಂದ ರೈತರು ಹೆಚ್ಚು ಹೆಚ್ಚು ಗೊಂದಲಗೊಳ್ಳುತ್ತಿದ್ದಾರೆ. ಹಾಗಾಗಿ ಪಾರಂಪರಿಕ ವಿಧಾನಗಳನ್ನು ಕೈಬಿಡುವ, ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳದ ಸಂಕಷ್ಟದ ಸ್ಥಿತಿಯಲ್ಲಿದ್ದಾರೆ. ಸೂರ್ಯಕಾಂತಿ, ಮೆಕ್ಕೆಜೋಳ, ಹೂವು, ತರಕಾರಿ ಬೀಜೋತ್ಪಾದನೆಯಂತಹ ಕೃಷಿ ಪದ್ಧತಿಗೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಹೆಚ್ಚು ಉತ್ಪಾದನೆ ಮಾಡುವ ಹಂಬಲಗಳಿಂದ ಹೆಚ್ಚಾಗಿ ರಾಸಾಯನಿಕ ಗೊಬ್ಬರಗಳನ್ನು ಕ್ರಿಮಿನಾಶಕಗಳನ್ನು ಬಳಸುತ್ತಿದ್ದಾರೆ. ಇಂತಹ ಪದ್ಧತಿಗಳಿಂದ ಭೂಮಾಲಿನ್ಯ, ಬಂಜರು ಭೂಮಿ ಹೆಚ್ಚಾಗುವಿಕೆ ಇತ್ಯಾದಿ ಆವಶ್ಯಕತೆಗಳು ಸಂಭವಿಸುತ್ತಿವೆ. ಆದರೆ ಇಲ್ಲಿಯ ರೈತರು ಸಾವಯವ ಕೃಷಿಯತ್ತ ಆಕರ್ಷಿತರಾಗುತ್ತಿರುವುದು ಮತ್ತು ಈ ವಿಧಾನವನ್ನು ಹೇಳಿಕೊಡುವ ತರಬೇತಿ ಕೇಂದ್ರಗಳು, ತರಬೇತಿ ಪಡೆದುಕೊಳ್ಳುವ ರೈತರು ಹಾಗೂ ಕೃಷಿಯಲ್ಲಿ ಅನುಸರಿಸುವ ರೈತರು ಹುಟ್ಟಿಕೊಂಡಿರುವುದು ಆಶಾದಾಯಕ ಸಂಗತಿಯಾಗಿದೆ.

*ಸಿ.ಎಸ್.*

**ಹಾಸನ ಜಿಲ್ಲೆಯ ಕೃಷಿ** ಹಾಸನ ಕರ್ನಾಟಕ ರಾಜ್ಯದ ಹಿತಕರ ವಾತಾವರಣವಿರುವ ಜಿಲ್ಲೆಗಳ ಪೈಕಿ ಒಂದು. ಭೌಗೋಳಿಕವಾಗಿ ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ವೈಶಿಷ್ಟ್ಯವಾಗಿದೆ. ಪ್ರಾಕೃತಿಕ ಸಂಪತ್ತು, ನಿಸರ್ಗದ ಚೆಲುವಿನಿಂದ ಕೂಡಿದ ತಾಣವಿದು. ಹೇಮಾವತಿ ನದಿ ಈ ಪ್ರದೇಶದ ಜನರ ಜೀವನಾಡಿಯಾಗಿದೆ. ಹಾಸನ ಸಮುದ್ರಮಟ್ಟದಿಂದ ಸು. 938.17 ಮೀ. ಎತ್ತರದಲ್ಲಿದೆ. ಕರ್ನಾಟಕದ 30 ಜಿಲ್ಲೆಗಳಲ್ಲಿ ಭೌಗೋಳಿಕ ವಿಸ್ತೀರ್ಣದ ದೃಷ್ಟಿಯಿಂದ ಹದಿನೈದನೆಯ ಸ್ಥಾನ. ಶೇ. 3.58ರಷ್ಟು ಭೌಗೋಳಿಕ ಪ್ರದೇಶ ಇದರದು. ಒಟ್ಟು ವಿಸ್ತೀರ್ಣ 6,845ಚ.ಕಿ.ಮೀ. ಆಡಳಿತಾತ್ಮಕವಾಗಿ ಮೈಸೂರು ವಿಭಾಗಕ್ಕೆ ಸೇರಿದೆ.

**ಮೇರೆಗಳು :** ಉತ್ತರದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪೂರ್ವದಲ್ಲಿ ತುಮಕೂರು ಮತ್ತು ಮಂಡ್ಯ ಜಿಲ್ಲೆಗಳು, ದಕ್ಷಿಣದಲ್ಲಿ ಕೊಡಗು ಮತ್ತು ಮೈಸೂರು ಜಿಲ್ಲೆಗಳು, ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸ್ವಲ್ಪ ಭಾಗ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಸುತ್ತುವರಿದಿವೆ. ಉತ್ತರ ಅಕ್ಷಾಂಶ 12º31'-13º33' ಮತ್ತು ಪೂರ್ವರೇಖಾಂಶ 75º33'-76º33' ಇವುಗಳ ನಡುವೆ ವ್ಯಾಪಿಸಿದೆ. ಉತ್ತರ ದಕ್ಷಿಣವಾಗಿ 129 ಕಿ.ಮೀ. ಉದ್ದ, ಪೂರ್ವ ಪಶ್ಚಿಮವಾಗಿ 116 ಅಗಲವಿದೆ. ಆಡಳಿತಾನುಕೂಲಕ್ಕಾಗಿ ಜಿಲ್ಲೆಯನ್ನು ಹಾಸನ ಮತ್ತು ಸಕಲೇಶಪುರ ಎಂದು ಎರಡು ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ. ಹಾಸನ ಉಪ ವಿಭಾಗಕ್ಕೆ ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ ಮತ್ತು ಅರಕಲಗೂಡು ತಾಲ್ಲೂಕುಗಳು, ಸಕಲೇಶಪುರ ಉಪ ವಿಭಾಗಕ್ಕೆ ಬೇಲೂರು, ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳೂ ಸೇರಿವೆ. ಜಿಲ್ಲೆಯಲ್ಲಿ 8 ತಾಲ್ಲೂಕುಗಳೂ 38 ಹೋಬಳಿಗಳು, 11 ಪಟ್ಟಣಗಳು ಮತ್ತು ಜನವಸತಿಯಿಲ್ಲದೆ ಕೆಲವು ಗ್ರಾಮುಗಳು ಸೇರಿದಂತೆ ಒಟ್ಟು 2,576 ಗ್ರಾಮಗಳಿವೆ. ಜಿಲ್ಲೆಯ ವಿಸ್ತೀರ್ಣ 6,8110ಚ.ಕಿ.ಮೀ. ಜನಸಂಖ್ಯೆ 17,21,669 ಇದ್ದು. ಇದರಲ್ಲಿ ಗಂಡಸರು 859086, ಹೆಂಗಸರು 862583 ಇದ್ದಾರೆ. ಒಂದು ಚ.ಕಿ.ಮೀ. ಜನಸಾಂಧ್ರತೆ 251 ಇದೆ.




**ಮೇಲ್ಮೈ ಲಕ್ಷಣ :** ಜಿಲ್ಲೆಯನ್ನು ಹವಾಮಾನ ಮತ್ತು ಮಳೆಯ ಹಿನ್ನೆಲೆಯಲ್ಲಿ ಮೂರು ಪ್ರಾದೇಶಿಕ ಘಟಕಗಳಾಗಿ ವಿಂಗಡಿಸಬಹುದು. 1. ಮಲೆನಾಡು, 2. ಅರೆಮಲೆನಾಡು, 3. ಬಯಲುಸೀಮೆ

**1. ಮಲೆನಾಡು :** ಬೇಲೂರು ತಾಲ್ಲೂಕಿನ ಪಶ್ಚಿಮ ಹಾಗೂ ಈಶಾನ್ಯ ಭಾಗಗಳು ಆಲೂರು ತಾಲ್ಲೂಕಿನ ಪಶ್ಚಿಮ ಮತ್ತು ಕೇಂದ್ರ ಭಾಗಗಳು ಹಾಗೂ ಸಕಲೇಶ ಪುರ ತಾಲ್ಲೂಕುಗಳು ಮಲೆನಾಡು ಪ್ರದೇಶಗಳಾಗಿವೆ.

**2. ಅರೆಮಲೆನಾಡು :** ಅರಕಲಗೂಡಿನ ಮಧ್ಯ ಭಾಗಗಳು, ಹಾಸನ ತಾಲ್ಲೂಕಿನ ಪಶ್ಚಿಮಭಾಗ ಗಳು, ಆಲೂರು ತಾಲ್ಲೂಕಿನ ಪೂರ್ವಭಾಗಗಳು, ಬೇಲೂರು ತಾಲ್ಲೂಕಿನ ಮಧ್ಯ ಮತ್ತು ಪೂರ್ವ ಭಾಗಗಳು ಮತ್ತು ಅರಸೀ ಕೆರೆಯ ಪಶ್ಚಿಮ ಭಾಗಗಳು ಅರೆಮಲೆನಾಡು ಪ್ರದೇಶ ವಾಗಿದೆ.

**3. ಬಯಲುಸೀಮೆ :** ಚೆನ್ನರಾಯಪಟ್ಟಣ, ಹೊಳೆನರಸೀಪುರ ತಾಲ್ಲೂಕುಗಳ ಪೂರ್ಣ ಭಾಗಗಳು, ಅರಸೀಕೆರೆ ಮತ್ತು ಹಾಸನ ತಾಲ್ಲೂಕು ಗಳ ಪೂರ್ವಭಾಗಗಳ ಮತ್ತು ಅರಕಲಗೂಡು ತಾಲ್ಲೂಕಿನಲ್ಲಿ ಆಗ್ನೇಯ ಭಾಗಗಳು ದಕ್ಷಿಣ ಬಯಲು ಸೀಮೆಯ ಪ್ರದೇಶಗಳಾಗಿವೆ.

**ಹವಾಗುಣ :** ಜಿಲ್ಲೆಯ ಹವಾಗುಣವು ಆಹ್ಲಾದಕರವಾಗಿದೆ. ಜಿಲ್ಲೆಯಲ್ಲಿ ನಾಲ್ಕು ಋತುಗಳನ್ನು ಗುರುತಿಸಬಹುದು. ಮಾರ್ಚ್ ನಿಂದ

**ನೀರಾವರಿಯಾದ ನಿವ್ವಳ ಪ್ರದೇಶ (ಕಾಲುವೆ,ಕೆರೆ, ಬಾವಿ, ಕೊಳವೆಬಾವಿ, ಏತನೀರಾವರಿ)**

| ನೀರಾವರಿಯಾದ ನಿವ್ವಳ ಪ್ರದೇಶ | | | | | | | | | | |
|---|---|---|---|---|---|---|---|---|---|---|
| | | ಕಾಲುವೆಗಳಿಂದ | | | ಕೆರೆಗಳಿಂದ | | | ಬಾವಿಗಳಿಂದ | | |
| ಕ್ರಸಂ. | ತಾಲ್ಲೂಕುಗಳು | ಉದ್ದ (ಕಿ. ಮೀ.) | ಒಟ್ಟು ನೀರಾವರಿಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ಸಂಖ್ಯೆಗಳು | ಒಟ್ಟು ನೀರಾವರಿಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ಸಂಖ್ಯೆಗಳು | ಒಟ್ಟು ನೀರಾವರಿಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ |
| **1** | **2** | **649** | **650** | **651** | **652** | **653** | **654** | **655** | **656** | **657** |
| 1. | ಆಲೂರು | 40.00 | 2254 | 2240 | 920 | 5035 | 5010 | 79 | 50 | 46 |
| 2. | ಅರಕಲಗೂಡು | 95.80 | 9868 | 9600 | 804 | 3741 | 2547 | 410 | 43 | 33 |
| 3. | ಅರಸೀಕೆರೆ | – | – | – | 249 | 2746 | 2600 | 510 | – | – |
| 4. | ಬೇಲೂರು | 90.00 | 2405 | 230 | 1624 | 3666 | 3570 | 266 | 270 | 220 |
| 5. | ಚನ್ನರಾಯಪಟ್ಟಣ | 41.60 | 9063 | 9044 | 242 | 2316 | 2300 | 585 | 35 | 30 |
| 6. | ಉಪಮವ | 41.60 | 10257 | 9500 | 1063 | 7717 | 7000 | 312 | 50 | 40 |
| 7. | ಹೊಳೆನರಸೀಪುರ | 205.0 | 11027 | 7999 | 333 | 3627 | 3000 | 523 | 60 | 50 |
| 8. | ಸಕಲೇಶಪುರ | – | – | – | 831 | 5510 | 5444 | 61 | 560 | 506 |
| | **ಒಟ್ಟು** | **514.00** | **44874** | **40683** | **6066** | **34358** | **31471** | **2746** | **1068** | **925** |

ಮೇ ತಿಂಗಳವರೆಗಿನ ಅವಧಿ ಬೇಸಗೆ ಕಾಲ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮುಂಗಾರುಮಳೆ, ಅಕ್ಟೋಬರ್ ನಿಂದ ನವೆಂಬರ್ ವರೆಗೆ ಹಿಂಗಾರು ಮಳೆಯಾಗುತ್ತದೆ. ಡಿಸೆಂಬರ್ ನಿಂದ ಫೆಬ್ರುವರಿ ತಿಂಗಳವರೆಗಿನ ಋತುವನ್ನು ಚಳಿಗಾಲ ಜಿಲ್ಲೆಯ ಹೆಚ್ಚಿನ ಜನರು ಮಳೆಯಾಶ್ರಿತ ಬೇಸಾಯವನ್ನು ಮಾಡುತ್ತಾರೆ. ಉಷ್ಣಾಂಶ ಸಾಮಾನ್ಯವಾಗಿ 19º ಯಿಂದ 26º ವರೆಗೆ ಇರುತ್ತದೆ.

**ಕೃಷಿ ಮತ್ತು ನೀರಾವರಿ : ನದಿಗಳು :** ಹಾಸನ ಜಿಲ್ಲೆಯಲ್ಲಿ ರಾಜ್ಯದ ಜೀವನದಿಯಾದ ಕಾವೇರಿ, ಅದರ ಉಪ ನದಿಯಾದ ಹೇಮಾವತಿ ಮತ್ತು ಯಗಚಿ ನದಿಗಳು ಹರಿಯುತ್ತವೆ. ಜಿಲ್ಲೆಯ ಜಲಾನಯನ ಪ್ರದೇಶವು ಬಹುತೇಕ ಹೇಮಾವತಿ ಜಲಾನಯನ ವನ್ನು ಹೊಂದಿದೆ. ಜಿಲ್ಲೆಯ ಪಶ್ಚಿಮ ಗಡಿಗಳಾದ ಸಕಲೇಶಪುರ ತಾಲ್ಲೂಕು, ಪಶ್ಚಿಮ ಭಾಗದ ನೀರು ನೇತ್ರಾವತಿಗೆ ಹರಿದರೆ, ಅರಸೀಕೆರೆ ತಾಲ್ಲೂಕು ಭಾಗದ ನೀರು ವೇದಾವತಿ ಜಲಾನಯನ ಪ್ರದೇಶಕ್ಕೆ ಹರಿಯುತ್ತದೆ.

ಉಪನದಿಗಳಲ್ಲಿ ಪ್ರಮುಖವಾದುದು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ವೇಖಬಂಗಡಿಯ ಜಾವಳಿ ಬಳಿ ಉಗಮಗೊಂಡು, ದಕ್ಷಿಣಕ್ಕೆ ಹರಿಯುತ್ತಾ ಹೇಮಾವತಿಯನ್ನು ಸೇರಿಕೊಂಡು ಮುಂದೆ ಸಾಗುತ್ತದೆ. ಇದು 182ಕಿ.ಮೀ. ಹರಿವನ್ನು ಪಡೆದಿದೆ.

**ಯಗಚಿ :** ಇದನ್ನು 'ಬದ್ರಿ' ಎಂದು ಕರೆಯುವರು. ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಬೆಟ್ಟಗಳಲ್ಲಿ ಉಗಮಗೊಂಡು ಬೇಲೂರಿನ ಶಿವ ಘಟ್ಟದ ಬಳಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಅನಂತರ ದಕ್ಷಿಣಕ್ಕೆ ಹರಿಯುತ್ತಾ ಪಶ್ಚಿಮದಿಂದ ಹಳ್ಳದ ನೀರನ್ನು ಸೇರಿಸಿಕೊಂಡು ಬೇಲೂರು ಪಟ್ಟಣ ಬಳಿ ಹೇಮಾವತಿ ಸೇರುತ್ತದೆ. ಒಟ್ಟಾರೆ ಜಿಲ್ಲೆಯಲ್ಲಿ 658ಮೀ. ಹರಿವನ್ನು ಹೊಂದಿದೆ.

**ಕೆರೆ - ಕಟ್ಟೆ - ಬಾವಿ :** ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬಿದ್ದರೂ ನದಿ, ಕೆರೆ, ಮತ್ತು ಬಾವಿ ನೀರಾವರಿ ವ್ಯವಸ್ಥೆಯಿದೆ. ಅವುಗಳಲ್ಲಿ ಹೊಳೆನರಸೀಪುರ

**ಹಾಸನ ಜಿಲ್ಲೆಯಲ್ಲಿ 2000 ರಿಂದ 2013ರ ವರೆಗಿನ ತಾಲ್ಲೂಕುವಾರು ವಾರ್ಷಿಕ ಸರಾಸರಿ ಮಳೆಯ ಪ್ರಮಾಣ (ಮಿ.ಮೀ.ಗಳಲ್ಲಿ)**

| ಕ್ರ.ಸಂ. | ತಾಲ್ಲೂಕು | ಜನವರಿ | | | ಫೆಬ್ರವರಿ | | | ಮಾರ್ಚ್ | | | ಏಪ್ರಿಲ್ | | | ಮೇ | | | ಜೂನ್ | | |
|---|---|---|---|---|---|---|---|---|---|---|---|---|---|---|---|---|---|---|---|
| | | ವಾಡಿಕೆ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಡಕೆಮಳೆ | | ವಾಸ್ತವ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಸ್ತವಮಳೆ | |
| | | | 2011 | 2012 | | 2011 | 2012 | | 2011 | 2012 | | 2011 | 2012 | | 2011 | 2012 | | 2011 | 2012 |
| 1. | ಆಲೂರು | 2 | 0 | 0.0 | 4 | 28.8 | 0.0 | 9 | 2.1 | 0.0 | 67 | 79.9 | 251.9 | 97 | 219.8 | 77.5 | 115 | 136.5 | 29.8 |
| 2. | ಅರಕಲಗೂಡು | 2 | 0 | 0.0 | 2 | 0 | 0.0 | 11 | 17.4 | 0.0 | 51 | 63.0 | 98.0 | 103 | 136.2 | 77.6 | 90 | 134.6 | 23.0 |
| 3. | ಅರಸೀಕೆರೆ | 5 | 0 | 0.0 | 5 | 21.7 | 0.0 | 9 | 5.5 | 0.0 | 37 | 59.8 | 130.2 | 98 | 112.7 | 9.0 | 50 | 27.5 | 7.2 |
| 4. | ಬೇಲೂರು | 3 | 0 | 0.0 | 5 | 4.6 | 0.0 | 12 | 13.4 | 0.0 | 74 | 119.4 | 189.7 | 123 | 168.2 | 60.6 | 122 | 137.9 | 27.1 |
| 5. | ಚೆನ್ನರಾಯಪಟ್ಟಣ | 2 | 0 | 0.0 | 3 | 1.6 | 0.0 | 12 | 12.6 | 0.0 | 48 | 103.4 | 122.0 | 103 | 98.8 | 43.0 | 46 | 73.0 | 0.4 |
| 6. | ಹಾಸನ | 1 | 0 | 0.0 | 5 | 0 | 0.0 | 12 | 2.2 | 0.0 | 63 | 139.4 | 179.8 | 94 | 156.2 | 50.0 | 87 | 79.4 | 23.2 |
| 7. | ಹಳೇಬೀಡು | 2 | 0 | 0.0 | 2 | 0 | 0.0 | 11 | 13.2 | 1.2 | 66 | 105.4 | 182.2 | 111 | 104.4 | 14.4 | 58 | 55.0 | 12.6 |
| 8. | ಸಕಲೇಶಪುರ | 4 | 0 | 0.0 | 4 | 1.8 | 0.0 | 11 | 13.2 | 1.2 | 66 | 105.4 | 182.2 | 111 | 104.4 | 14.4 | 376 | 530.0 | 200.6 |
| | **ಒಟ್ಟುಮೊತ್ತ** | **2.6** | **0.0** | **0.0** | **3.8** | **7.3** | **0.0** | **10.6** | **11.6** | **0.2** | **58.1** | **91.0** | **160.5** | **106.1** | **137.0** | **52.8** | **118.0** | **146.7** | **40.5** |

| ಕ್ರ.ಸಂ. | ತಾಲ್ಲೂಕು | ಜುಲೈ | | | ಆಗಸ್ಟ್ | | | ಸೆಪ್ಟೆಂಬರ್ | | | ಅಕ್ಟೋಬರ್ | | | ನವೆಂಬರ್ | | | ಮಳೆಯ ಪ್ರಮಾಣ | | | ಶೇಕಡಾ ವಾರು |
|---|---|---|---|---|---|---|---|---|---|---|---|---|---|---|---|---|---|---|---|---|
| | | ವಾಡಕೆ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಸ್ತವಮಳೆ | | ವಾಡಿಕ ಮಳೆ | ವಾಸ್ತವಮಳೆ | | ವಾಡಿಕೆ ಮಳೆ | ವಾಸ್ತವಮಳೆ | | |
| | | | 2011 | 2012 | | 2011 | 2012 | | 2011 | 2012 | | 2011 | 2012 | | 2011 | 2012 | | 2011 | 2012 | |
| 1. | ಆಲೂರು | 218 | 197.3 | 79.7 | 127 | 113.7 | 174.4 | 88.0 | 80.5 | 61.8 | 147.0 | 303.6 | 2.0 | 38.6 | 77.4 | 16.3 | 912.6 | 1239.1 | 693.1 | **75.9** |
| 2. | ಅರಕಲಗೂಡು | 192 | 96.4 | 117.5 | 115 | 113.3 | 134.3 | 87.0 | 47.4 | 86.3 | 136.0 | 86.4 | 18.6 | 35.0 | 144.0 | 35.6 | 824.0 | 838.7 | 590.9 | **71.7** |
| 3. | ಅರಸೀಕೆರೆ | 62 | 115.2 | 25.0 | 68 | 74.6 | 70.9 | 117.0 | 36.0 | 34.7 | 146.0 | 110.2 | 4.0 | 40.3 | 72.6 | 85.5 | 637.3 | 635.8 | 366.5 | **57.5** |
| 4. | ಬೇಲೂರು | 224 | 157.0 | 40.6 | 121 | 90.8 | 146.8 | 104.0 | 77.6 | 95.5 | 153.0 | 229.0 | 47.8 | 52.4 | 66.3 | 59.1 | 993.4 | 1064.2 | 667.2 | **67.2** |
| 5. | ಚೆನ್ನರಾಯಪಟ್ಟಣ | 67 | 16.0 | 41.6 | 53 | 41.0 | 98.8 | 122.0 | 13.0 | 64.8 | 155.0 | 118.8 | 33.4 | 40.9 | 52.4 | 40.0 | 651.9 | 530.6 | 443.2 | **68.0** |
| 6. | ಹಾಸನ | 154 | 108.0 | 42.2 | 84 | 105.2 | 108.5 | 105.0 | 39.2 | 104.6 | 160.0 | 150.2 | 12.2 | 41.2 | 64.6 | 47.2 | 806.2 | 844.4 | 567.7 | **70.4** |
| 7. | ಹಳೇಬೀಡು | 93 | 42.5 | 38.4 | 59 | 49.6 | 57.7 | 104.0 | 34.7 | 32.1 | 170.0 | 184.4 | 32.0 | 40.5 | 85.9 | 28.0 | 716.5 | 635.9 | 421.5 | **58.8** |
| 8. | ಸಕಲೇಶಪುರ | 751 | 472.2 | 413.9 | 431 | 424.9 | 816.8 | 164.0 | 251.6 | 319.8 | 166.0 | 243.1 | 38.3 | 52.6 | 181.8 | 32.6 | 2136.6 | 2328.4 | 2019.8 | **94.5** |
| | **ಒಟ್ಟುಮೊತ್ತ** | **220.1** | **150.6** | **99.9** | **132.3** | **126.6** | **201.0** | **111.4** | **72.5** | **99.9** | **154.1** | **178.2** | **23.5** | **42.7** | **93.1** | **43.0** | **959.8** | **1014.6** | **721.2** | **75.1** |

**ಕಾವೇರಿ :** ಪಶ್ಚಿಮ ಘಟ್ಟಗಳ ತಲಾಕಾವೇರಿಯಲ್ಲಿ ಉಗಮಗೊಂಡು, ಅರಕಲಗೂಡು ತಾಲ್ಲೂಕಿನ ಕಡವಿ ಹೊಸಹಳ್ಳಿ ಬಳಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಅರಕಲಗೂಡು ತಾಲ್ಲೂಕಿನಲ್ಲಿ ಉತ್ತರ ದಿಕ್ಕಿಗೆ 80ಮೀ.ಗಳು ಹರಿವನ್ನು ಪಡೆದು, ಕೊಣನೂರಿನ ಬಳಿ ಆಗ್ನೇಯ ದಿಕ್ಕಿಗೆ ತಿರುವು ಪಡೆದು ಅನಂತರ ಕೇರಳಾಪುರದ ಬಳಿ ಮೈಸೂರು ಜಿಲ್ಲೆ ಸೇರುತ್ತದೆ.

**ಹೇಮಾವತಿ :** 'ಚಿನ್ನದನದಿ', 'ಎಣ್ಣೆಹೊಳೆ', 'ಹೊಳಪಿನ ಹೊಳೆ' ಎಂದೆಲ್ಲ ಕರೆಯಲ್ಪಟ್ಟಿರುವ ಹೇಮಾವತಿ, ಕಾವೇರಿ ನದಿಯ

ತಾಲ್ಲೂಕಿನಲ್ಲಿರುವ ಹೇಮಾವತಿ ನದಿಯ ಶ್ರೀರಾಮದೇವರ ಕಟ್ಟೆಯ ದಕ್ಷಿಣ ಮತ್ತು ಉತ್ತರ ನಾಲೆಗಳು, ಅರಕಲಗೂಡು ತಾಲ್ಲೂಕಿನಲ್ಲಿ ಕಾವೇರಿನದಿಗೆ ಕಟ್ಟಿರುವ ಕೃಷ್ಣರಾಜೇಂದ್ರ ಅಣೆಕಟ್ಟಿನ ಕಟ್ಟೆಪುರ ಮತ್ತು ರಾಮನಾಥಪುರ ನಾಲೆಗಳೂ ಯಗಚಿನದಿಗೆ ಮತ್ತು ಅದರ ಉಪನದಿಗಳಿಗೆ ಕಟ್ಟೆ ಕಟ್ಟಿ ಅವುಗಳಿಂದ ತೆಗೆದಿರುವ ಹಾಸನ ತಾಲ್ಲೂಕಿನ ಹಾಲವಾಗಲು, ಚಂಗರವಳ್ಳಿ ನಾಲೆಗಳೂ ಬೇಲೂರು ತಾಲ್ಲೂಕಿನಲ್ಲಿರುವ ಕಿತ್ತೂರು, ಹೊಸಕಡಲೂರು ಮತ್ತು ಹಳೆಕಡಲೂರು ನಾಲೆಗಳು ಇವಲ್ಲದೆ ಕೆಲವು ತೊರೆಗಳಿಗೆ ಕಟ್ಟಿರುವ

ಅಡ್ಡಗಟ್ಟೆಯಿಂದ ತೆಗೆದಿರುವ ಮದ ಘಟ್ಟ, ಮಳಲಿಕಾಲುವೆಗಳೂ ಮುಖ್ಯವೆನ್ನಬಹುದು.

ಈ ಎಲ್ಲಾ ಕಾಲುವೆಗಳಿಂದ 7,566 ಹೆಕ್ಟೇರ್ ಪ್ರದೇಶ, ಕೆರೆಗಳಿಂದ 31,461 ಹೆಕ್ಟೇರ್‌ಗಳಿಗೂ ಬಾವಿಗಳಿಂದ 2,801 ಹೆಕ್ಟೇರ್‌ಗಳಿಗೂ ನೀರೊದಗಿತ್ತು. ಜಿಲ್ಲೆಯ ಇತರ ಮೂಲಗಳನ್ನೂ ಸೇರಿಸಿ ಒಟ್ಟು 48.982 ಹೆಕ್ಟೇರಿಗೆ ಪ್ರದೇಶ ನೀರಾವರಿಗೆ ಒಳಪಟ್ಟಿತ್ತು. ಜಿಲ್ಲೆಯಲ್ಲಿ ರಾಮ ಸಮುದ್ರ ಮತ್ತು ರಾವತನಹಳ್ಳಿಗಳಲ್ಲಿ ಏತ ನೀರಾವರಿಯೂ ಇದೆ.

**ಅರಣ್ಯ ಸಂಪತ್ತು :** ಕರ್ನಾಟಕ ರಾಜ್ಯದಲ್ಲಿರುವ ಅರಣ್ಯ ಸಂಪತ್ತಿನಲ್ಲಿ ಹಾಸನ ಜಿಲ್ಲೆ ಮುಖ್ಯವಾದುದಾಗಿದೆ. ಈ ಜಿಲ್ಲೆಯಲ್ಲಿ ಅರಣ್ಯ ಪ್ರದೇಶವು ಸುಮಾರು . 58 ಸಾವಿರ ಹೆಕ್ಟೇರ್ ಇದೆ. ಇದು ಒಟ್ಟು ಭೂಪ್ರದೇಶದ ಶೇ. 9 ರಷ್ಟಿದೆ. ಜಿಲ್ಲೆಯ ಒಟ್ಟು ಅರಣ್ಯದಲ್ಲಿ ಶೇ. 48.44ರಷ್ಟು ಸಕಲೇಶಪುರ, ಶೆ. 27.85 ಅರಸೀಕೆರೆ, 11.15 ಬೇಲೂರು, ಶೇ. 4.54 ಅರಕಲಗೂಡು ತಾಲ್ಲೂಕು, ಶೇ. 2.25 ಹೊಳೆನರಸೀಪುರ, ಶೇ. 3.58 ಹಾಸನ, ಶೇ. 1.29 ಚನ್ನರಾಯಪಟ್ಟಣ ಮತ್ತು 1.29 ಆಲೂರು ತಾಲ್ಲೂಕುಗಳಲ್ಲಿ ಇದೆ. (ಹಾಸನ ಜಿಲ್ಲಾ ಅಂಕಿಅಂಶಗಳ ನೋಟ - 2002-2003) ಈ ಜಿಲ್ಲೆಯಲ್ಲಿರುವ ಪ್ರಮುಖ ಅರಣ್ಯ ಪ್ರದೇಶ ಸಕಲೇಶಪುರ ತಾಲ್ಲೂಕಿನ ಬಿಸಲೆ, ಕೆಂಪುಹೊಳೆ, ಕಬ್ಬಿನಾಲೆ, ಕೆಂಚನಕುವರಿ ಮತ್ತು ಕಾಗಿನೇರಿ ಜೊತೆಗೆ ರಾಮದೇವರಹಳ್ಳಿ ಸುಗಂಧ ಗುಡ್ಡ ಅರಣ್ಯಗಳು ಪ್ರಮುಖವಾದವು. ಹಾಸನ ಜಿಲ್ಲೆಯ ಅರಣ್ಯ ಪ್ರದೇಶವು ದಟ್ಟವಾದ ಗಿಡ ಮರಗಳಿಂದ ಕೂಡಿರುವ ಪ್ರದೇಶವಾಗಿದ್ದು ಅವುಗಳಲ್ಲಿ ಪ್ರಮುಖವಾದ ಅರಣ್ಯಪ್ರದೇಶ ಸಕಲೇಶಪುರ ತಾಲ್ಲೂಕಿನಲ್ಲಿದೆ. ಹೊನ್ನೆ, ತೇಗ, ಬೀಟೆ, ಶ್ರೀಗಂಧ, ಮಾವು, ಹಲಸು, ನಂದಿ, ಆಲ, ನೇರಳ, ಹಿಪ್ಪೆ, ಮಾವು, ಮುಖ್ಯವಾದವು. ಬೆತ್ತ ಬಿದಿರು ಸಹ ಇಲ್ಲಿ ಬೆಳೆಯುತ್ತದೆ.

ಈ ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ಕೇವಲ ಮರಗಳಲ್ಲದೆ ಗಿಡ ಮೂಲಿಕೆಗೆ ಬೇಕಾಗುವ 600 ಜಾತಿಯ ಸಸ್ಯ ಪ್ರಭೇದಗಳು ಇಲ್ಲಿ ದೊರೆಯುವುದು ವಿಶೇಷ. ಇತ್ತೀಚೆಗೆ ಕಾಡನ್ನು ಕಡಿದು ವ್ಯವಸಾಯಕ್ಕೂ ಉಪಯೋಗಿಸುತ್ತಿರುವುದರಿಂದ ಅರಣ್ಯನಾಶದ ಅಂಚಿನಲ್ಲಿದೆ.

ಜಿಲ್ಲೆ ಪ್ರಾಚೀನ ಶಿಲಾಸ್ತರಗಳಿದ್ದು ಹೆಚ್ಚು ಬೆಣಚುಕಲ್ಲು ಮತ್ತು ಅಭ್ರಕದಿಂದ ಕೂಡಿದೆ. ಇಲ್ಲಿ ಪದರು ಪದರಾದ ಶಿಲೆಗಳ ಪ್ರದೇಶ ಕಂಡು ಬರುತ್ತದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ ವಿವಿಧ ಖನಿಜ ಸಂಪತ್ತಿದೆ. ಕಟ್ಟಡಗಳ ನಿರ್ಮಾಣಕ್ಕೆ ಬೇಕಾದ ಗ್ರಾನೈಟ್ ಶಿಲೆ ಸಮೃದ್ಧವಾಗಿದೆ. ಇದಲ್ಲದೆ ಬಾಣಾವರ ಮತ್ತು ಅರಸೀಕೆರೆಗಳಲ್ಲಿ ಒರಟಾದ ಬೆಣಚು ಕಲ್ಲು ಪ್ರದೇಶವಿದೆ.ಚೈರಾ ಪುರದಲ್ಲಿಯ ಕ್ರೋಮೈಟ್, ಬಾಗೇಶಪುರದ ಚೇಣಜೇಡಿ ಮತ್ತು ಹೊಳೆನರಸೀಪುರದ ಕಲ್ನಾರು ಮುಖ್ಯವಾದವು. ಜಿಲ್ಲೆಯಲ್ಲಿ ಸಿಗುವ ಇತರ ಖನಿಜಗಳಲ್ಲಿ ಅಭ್ರಕ, ತಾಮ್ರ, ಮ್ಯಾಗ್ನೆಟೈಟ್, ಗ್ರಾನೈಟ್, ಟಾಲ್ಕ ಮುಂತಾದವು ಮುಖ್ಯವಾದವು.

**ಮಳೆ :** ಮಾರ್ಚ್‌ನಿಂದ ಮೇ ಅಂತ್ಯದವರೆಗೆ ಬೇಸಗೆಯ ಕಾಲವೂ ಮುಂದೆ ಸೆಪ್ಟೆಂಬರ್ ಅಂತ್ಯದವರೆಗೆ ಮುಂಗಾರು ಅಕ್ಟೋಬರ್ ಮತ್ತು ನವೆಂಬರ್‌ಗಳಲ್ಲಿ ಹಿಂಗಾರು ಮಳೆ ಆಗುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿ ತನಕ ಚಳಿಗಾಲವಿರುತ್ತದೆ. ಮಳೆಯ ಪ್ರಮಾಣ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಅಧಿಕವಾಗಿದ್ದು, ಮೇ ತಿಂಗಳಿನಿಂದ ಅಕ್ಟೋಬರ್‌ವರೆಗೆ ಅಧಿಕ ಮಳೆಯಾಗುತ್ತದೆ. ಜಿಲ್ಲೆಯ ಪೂರ್ವಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ. ಜಿಲ್ಲೆಯ ಪಶ್ಚಿಮದಲ್ಲಿರುವ ಸಕಲೇಶಪುರದಲ್ಲಿ 2,288.93 ಮಿ.ಮೀ. ಮಳೆಯಾದರೆ ಜಿಲ್ಲೆಯ ಮಧ್ಯದಲ್ಲಿರುವ ಹಾಸನದಲ್ಲಿ 893.6ಮಿ.ಮೀ. ಮಳೆ ಬೀಳುತ್ತದೆ. ಪೂರ್ವದಲ್ಲಿರುವ ಚನ್ನರಾಯ ಪಟ್ಟಣದಲ್ಲಿ 684.9 ಮಿ.ಮೀ. ಮಳೆಯಾಗಿರುತ್ತದೆ. ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ 1.040.7ಮಿ.ಮೀ. (ಮಳೆಗೆ ಸಂಬಂಧಿಸಿದ ಕೋಷ್ಟಕ ಹಾಕಿ)

**ಮಣ್ಣು :** ಬೆಟ್ಟ ಮತ್ತು ಪಶ್ಚಿಮ ಘಟ್ಟ ಶ್ರೇಣಿಗಳ ಇಳಿಜಾರು ಪ್ರದೇಶಗಳಲ್ಲಿ ಜೇಡಿಮಣ್ಣನ್ನೂ ಅರಣ್ಯ ಪ್ರದೇಶದಲ್ಲಿ ಸಸ್ಯ ಮಿಶ್ರಿತ ಫಲವತ್ತಾದ ಕೆಂಪು ಜಂಬು ಮಣ್ಣನ್ನು, ಆಲೂರು ಸಕಲೇಶಪುರ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಶಿಸ್ಟ್ ಮತ್ತು ಲ್ಯಾಟರೈಟ್‌ನಿಂದಾದ ಮಣ್ಣು ಪ್ರದೇಶವಿದ್ದು ಮೇಲೆಕೆಂಪಾಗಿದ್ದು ಆಳಕ್ಕೆ ಹೋದಂತೆ ಹಳದಿ ಬಣ್ಣದಿಂದ ಕೂಡಿರುವುದು ಕಂಡು ಬರುವುದು.

ಈ ಭಾಗದ ಮಣ್ಣು ಕಾಫಿ, ಟೀ, ಮೆಣಸು, ಏಲಕ್ಕಿ, ಅಡಕೆ, ಬತ್ತ ಮತ್ತು ಕಬ್ಬು ಬೆಳೆಗೆ ಬಹುಪ್ರಶಸ್ತವಾದದ್ದು. ಹಾಸನ, ಚೆನ್ನರಾಯಪಟ್ಟಣ, ಅರಸೀಕೆರೆ ಮತ್ತು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಮರಳು ಮಿಶ್ರಿತ ಕೆಂಪು ಜೇಡಿಮಣ್ಣಿನ ಪ್ರದೇಶ ಹೆಚ್ಚು. ಇದರಲ್ಲಿ ಬತ್ತ, ಕಬ್ಬು, ತೆಂಗು, ತರಕಾರಿಗಳು, ಶೇಂಗಾ, ಹತ್ತಿ, ಜೋಳ ಮುಂತಾದವುಗಳನ್ನು ಬೆಳೆಯುತ್ತಾರೆ. ಎಲ್ಲ ಪ್ರದೇಶಗಳಲ್ಲೂ ನೀರಾವರಿಯನ್ನು ಮತ್ತು ಮಳೆಯನ್ನು ಅನುಸರಿಸಿ ಬೆಳೆಗಳನ್ನು ಬೆಳೆಯಲಾಗುವುದು. ಅರಸೀಕೆರೆ ತಾಲ್ಲೂಕಿನಲ್ಲಿ ಕೆಲವು ಕಡೆ ಕಪ್ಪು ಮಣ್ಣಿನ ಪ್ರದೇಶಗಳಿವೆ. ಈ ಬಗೆಯ ಮಣ್ಣಿನಲ್ಲಿ ಮೆಣಸಿನಕಾಯಿ, ಹತ್ತಿ, ಜೋಳ, ರಾಗಿ ಮತ್ತು ತೈಲ ಬೀಜಗಳನ್ನು ಬೆಳೆಯುತ್ತಾರೆ.

**ಬೆಳೆಗಳು :** ಮಲೆನಾಡು ಮತ್ತು ಮೈದಾನದಲ್ಲಿ ಬೆಳೆಯುವ ಬತ್ತ ಇಲ್ಲಿಯ ಜನರಿಗೆ ಆಹಾರ ಒದಗಿಸುತ್ತದೆ. ಮಲೆನಾಡಿನಲ್ಲಿ ಬತ್ತದ ಬೆಳೆಯಲ್ಲದೆ ಕಾಫಿ, ಟೀ, ಮೆಣಸು, ಏಲಕ್ಕಿ, ಕಿತ್ತಳೆ ಮುಂತಾದವನ್ನು ಪ್ರಮುಖವಾಗಿ ಬೆಳೆಯಲಾಗುತ್ತಿದೆ. ಮೈದಾನ ಪ್ರದೇಶದಲ್ಲಿ ಬತ್ತ ರಾಗಿ, ಆಲೂಗಡ್ಡೆ, ಜೋಳ, ಹತ್ತಿ, ತೆಂಗು, ಬಾಳೆ, ಅಡಕೆ, ಬೆಳೆಗಳು ಪ್ರಚಲಿತದಲ್ಲಿವೆ.

ಮೈದಾನ ಪ್ರದೇಶದಲ್ಲಿ ಬೆಳೆಯುವ ಬೆಳೆಗಳ ಬೇಸಾಯ ಪದ್ಧತಿಗಳು ಒಂದೇ ರೀತಿಯವುಗಳಾಗಿರುವುದಿಲ್ಲ. ಬೇಲೂರು ತಾಲ್ಲೂಕು ಪೂರ್ವಭಾಗ ಅಂದರೆ ಮಾದೀಹಳ್ಳಿ, ಹಳೇಬೀಡು ಮತ್ತು ಅರಸೀಕೆರೆ ತಾಲ್ಲೂಕಿನಲ್ಲಿ ಹೆಚ್ಚಾಗಿ ಹತ್ತಿ, ಜೋಳ, ನವಣೆ, ಪುಟ್ಟೆಳ್ಳು ಮುಂತಾದ ಬೆಳೆಗಳನ್ನು ಬೆಳೆಯುವ ಪದ್ಧತಿಗಳು ಬೇರೆಯಾಗಿರುತ್ತವೆ. ಆಲೂರು ತಾಲ್ಲೂಕಿನ ಪೂರ್ವ ಭಾಗ, ಹಾಸನ, ಹೊಳೆನರಸೀಪುರ, ಅರಕಲಗೂಡು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಹೆಚ್ಚಾಗಿ ರಾಗಿ, ಅವರೆ, ಹುರುಳಿ, ಕಬ್ಬು, ಬತ್ತ ಹಾಗೂ ತೆಂಗು ಬೆಳೆಯುವ ಪದ್ಧತಿಗಳೇ ಬೇರೆಯಾಗಿರುತ್ತವೆ. ಮಲೆನಾಡು ಪ್ರದೇಶಗಳಾದ ಆಲೂರು ತಾಲ್ಲೂಕಿನ ಪಶ್ಚಿಮ ಭಾಗ, ಅರಕಲಗೂಡು ತಾಲ್ಲೂಕಿನ ಪಶ್ಚಿಮಭಾಗ, ಸಕಲೇಶಪುರ ತಾಲ್ಲೂಕು, ಬೇಲೂರು ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಬೆಳೆಯುವ ಬೆಳೆಗಳ ಬೇಸಾಯ ಪದ್ಧತಿಗಳು ಅಲ್ಲಿನ ಪ್ರಕೃತಿಗೆ ಹೊಂದಿಕೊಂಡಿವೆ.

**ಬತ್ತ :** ಹಾಸನ ಜಿಲ್ಲೆಯ ಎರಡನೇ ಹಾಗೂ ಪ್ರಮುಖ ಬೆಳೆ ಎಂದರೆ ಬತ್ತ. ಜಿಲ್ಲೆಯಲ್ಲಿ ಆಲೂಗಡ್ಡೆಗೆ ಪ್ರಥಮ ಸ್ಥಾನವಾದರೂ ನೀರಿರುವ

ಜಾಗಗಳಲ್ಲೆಲ್ಲಾ ಬತ್ತವನ್ನು ಹೆಚ್ಚಾಗಿ ಬೆಳೆಯುವರು. ಅರಕಲಗೂಡು, ಹೊಳೆನರಸೀಪುರ, ಚನ್ನರಾಯ ಪಟ್ಟಣ ಆಲೂರು, ಬೇಲೂರು, ಸಕಲೇಶಪುರ ತಾಲ್ಲೂಕುಗಳಲ್ಲಿ ಬೆಳೆಯುತ್ತಾರೆ. ಸಕಲೇಶಪುರ ಮೂರನೇ ಸ್ಥಾನದಲ್ಲಿ ಅರಕಲಗೂಡು ಎರಡನೇ ಸ್ಥಾನದಲ್ಲಿ, ಹೊಳೆನರಸೀಪುರ ಮೊದಲ ಸ್ಥಾನದಲ್ಲಿ ಇದೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ 47659 ಹೆ.ಗಳಲ್ಲಿ ಬತ್ತವನ್ನು ಬೆಳೆಯಲಾಗುತ್ತಿದೆ.

ನೀರಾವರಿ ಆಶ್ರಿತವಾದ ಕೆರೆ, ನಾಲೆ, ನದಿ, ಕಟ್ಟೆಗಳ ಮೂಲಕ ಬತ್ತವನ್ನು ಬೆಳೆಯುತ್ತಾರೆ. ಬತ್ತವನ್ನು ಜುಲೈ - ಆಗಸ್ಟ್ ತಿಂಗಳಲ್ಲಿ ಬಿತ್ತುವರು. ಬತ್ತ ಬೆಳೆಯುವ ಮೊದಲ ಹಂತ 'ಅಗೆ ಕಟ್ಟುವುದು' ಇದರಲ್ಲಿ ಎರಡು ವಿಧ. ಒಂದು ಬರ ಆಗೆ ಮತ್ತೊಂದು ನೀರು ಅಗೆ. ಬರ ಅಗೆ ಎಂದರೆ ನೀರಿಲ್ಲದ ಪಾತಿ. ನೀರು ಅಗೆ ಎಂದರೆ ಪಾತಿಗೆ ನೀರು ತುಂಬಿಸುತ್ತಾರೆ. ಅಗೆಯಲ್ಲಿ ಚೆಲ್ಲಿದ ಬತ್ತ ಪಾವತಿಗೆ ನೀರು ಅಗೆ ಎನ್ನುವರು. ಮೂರ್‍ನಾಲ್ಕು ದಿನಗಳಲ್ಲಿ ಮೊಳಕೆಯೊಡೆಯುತ್ತದೆ. ಹೀಗೆ ಇಪ್ಪತ್ತೈದು ದಿನ ಬೆಳೆದ ಬತ್ತದ ಪೈರನ್ನು ಕಿತ್ತು ಸಿದ್ದ ಗೊಂಡ ಗದ್ದೆಯಲ್ಲಿ ನಾಟಿ ಮಾಡುತ್ತಾರೆ. ನಾಟಿಯ ಹಿಂದಿನ ದಿನ ನೀರು ನಿಲ್ಲಿಸಿಕೊಂಡು ಪೈರು ಕೀಳುವುದರಿಂದ ಬೇರು ತುಂಡಾಗದು. ಬತ್ತದ ನಾಟಿ ಮಾಡುವ ಗದ್ದೆಯ ತೆವರಿ ಸವರಿ, ಎರಡು ಮೂರು ಬಾರಿ ಉತ್ತು ಅನಂತರ ನೀರು ಕಟ್ಟಿ ಮತ್ತೆ ಉಳುಮೆ ಮಾಡಿ ಕೆನೆ ಮಣ್ಣಿನಿಂದ ತೆವರಿ ಹಾಕಿ, ಪಾತಿಯಿಂದ ಮತ್ತೊಂದು ಪಾತಿಗೆ ನೀರು ಹರಿಯುವಂತೆ ಮಾಡಿಕೊಂಡು ಗದ್ದೆಯನ್ನು ಹಲುಬೆ ಮತ್ತು ಮಣೆಯ ಮೂಲಕ ಸಮತಟ್ಟು ಮಾಡಿ, ನೀರು ನಿಲ್ಲುವಂತ ಸಿದ್ಧ ಪಡಿಸಿಕೊಂಡು ನಾಟಿ ಮಾಡುತ್ತಾರೆ.

ನಾಟಿಯಾದ ಗದ್ದೆಗಳಲ್ಲಿ ಸದಾ ನೀರಿರುವಂತೆ ನೋಡಿಕೊಳ್ಳಬೇಕು. ತಿಂಗಳಿಗೆ ಎರಡು ತಿಂಗಳಿಗೊಮ್ಮೆ ಕಳೆ ಕೀಳಿಸಿ ಯೂರಿಯಾ ಪೊಟಾಷ್ ಮಿಶ್ರಣ ಮಾಡಿ ಎರಚುತ್ತಾರೆ. ಅನಂತರ ಕ್ರಿಮಿನಾಶಕ ಔಷಧಿ ಸಿಂಪಡಿಸುತ್ತಾರೆ. ಬತ್ತ ನಾಟಿ ಮಾಡಿದ 110 ರಿಂದ 125 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಬತ್ತ ಕಟಾವು ಮಾಡುವ ಮೊದಲು 10-12 ದಿನ ಮೊದಲೆ ನೀರು ನಿಲ್ಲಿಸುತ್ತಾರೆ. ಕುಯ್ಲಾದ ಬತ್ತದ ಅರಿಯನ್ನು ಒಂದೆರಡು ದಿನ ಗದ್ದೆಯಲ್ಲೇ ಬಿಟ್ಟು ಒಣಗಿಸುತ್ತಾರೆ. ಅನಂತರ ಕಂತೆ ಕಟ್ಟಿ ಗಾಡಿಗಳ ಮೂಲಕ ಕಣಕ್ಕೆ ಸಾಗಿಸುತ್ತಾರೆ. ಹಿಂದೆ ಅರಿಯನ್ನು ಬಡಿದು ಬತ್ತ ಸಂಗ್ರಹಿಸುತ್ತಿದ್ದರು. ಕ್ರಮೇಣ ಬತ್ತ ಪೈರು ಒಕ್ಕಣೆ ಮಾಡುವ ಆಧುನಿಕ ಯಂತ್ರಗಳು ಬಂದವು. ಅವು ಹುಲ್ಲು ಬೇರೆ ಬತ್ತ ಬೇರೆ ಮಾಡಿಕೊಡುವ ಮಾನವನಿಗಿಂತ ವೇಗವಾಗಿ ಕೆಲಸ ಮಾಡುತ್ತವೆ. ಹೆಚ್ಚಾಗಿ ಬತ್ತ ಬೆಳೆದ ರೈತರು ಗಿರಣಿಗಳಿಗೆ ಮಾರಾಟ ಮಾಡಿದರೆ ಉಳಿದ ರೈತರು ಮನೆಗೆ ಕೊಂಡೊಯ್ದು ಶೇಖರಣೆ ಮಾಡುತ್ತಾರೆ.

**ಆಲೂಗಡ್ಡೆ :** ಹಾಸನ ಜಿಲ್ಲೆಯ ರೈತರ ಆದಾಯದ ಬೆಳೆಯಲ್ಲಿ ಆಲೂಗಡ್ಡೆಗೆ ಪ್ರಮುಖ ಸ್ಥಾನ. ಆಹಾರ ಪದಾರ್ಥವಾಗಿ ಆಲೂಗಡ್ಡೆಗೆ ವಿಶಿಷ್ಟ ಮಹತ್ವವಿದೆ. ಇದು ಅತ್ಯಂತ ಹೆಚ್ಚು ಕ್ಯಾಲೋರಿಯನ್ನು ಹೊಂದಿದ್ದು, ಪಿಷ್ಟ ಪೂರಿತವಾದ ಬೆಳೆಯಾಗಿದೆ. ಹಾಸನದ "ತರಕಾರಿ ರಾಜನೆಂದೇ" ಹೆಸರು ವಾಸಿಯಾಗಿರುವ ಆಲೂಗಡ್ಡೆಯನ್ನು ಜಿಲ್ಲೆಯ ತಾಲ್ಲೂಕಿನಲ್ಲಿ ಪೂರ್ಣವಾಗಿ ಹಾಗೂ ಬೇಲೂರು, ಆಲೂರು, ಅರಕಲಗೂಡು, ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಭಾಗಶಃ ಬೆಳೆಯುತ್ತಾರೆ. ಇದನ್ನು ಬೆಳೆಯಲು ತಂಪಾದ ವಾತಾವರಣ ಅವಶ್ಯಕತೆ ಇದ್ದು ಈ ಪ್ರದೇಶ ಅದಕ್ಕೆ ಹೇಳಿ ಮಾಡಿಸಿದಂತಿದೆ.

**ಮುಖ್ಯ ತರಕಾರಿ ಬೆಳೆಗಳ ಉತ್ಪಾದನೆ (ಮೆ.ಟನ್ನುಗಳಲ್ಲಿ)**

| ಕ್ರ.ಸಂ. | ತಾಲ್ಲೂಕುಗಳು | ಆಲೂಗಡ್ಡೆ | ಟೊಮಾಟೋ | ಬದನೆ | ಹುರಳಿಕಾಯಿ | ಗೋರಿಕಾಯಿ | ಈರುಳ್ಳಿ | ಹಸಿರುಮೆಣಸಿನಕಾಯಿ |
|---|---|---|---|---|---|---|---|---|
| 1. | ಆಲೂರು | 300 | 142 | – | 161 | – | – | 571 |
| 2. | ಅರಕಲಗೂಡು | 2485 | 1514 | – | 1638 | – | – | 6882 |
| 3. | ಅರಸೀಕೆರೆ | 2550 | 3610 | – | 1022 | – | 480 | 588 |
| 4. | ಬೇಲೂರು | 4125 | 2724 | – | 412 | – | – | 808 |
| 5. | ಚನ್ನರಾಯಪಟ್ಟಣ | 5200 | 2100 | – | 920 | – | 300 | 3642 |
| 6. | ಹಾಸನ | 49080 | 5550 | – | 1640 | – | – | 2240 |
| 7. | ಹೊಳೆನರಸೀಪುರ | 4600 | 2460 | – | 1330 | – | – | 1608 |
| 8. | ಸಕಲೇಶಪುರ | – | 160 | – | – | – | – | 1600 |
| ಒಟ್ಟು | | 68340 | 18260 | 0 | 7123 | 0 | 780 | 17939 |

ರೈತನಿಗೆ ಅಲ್ಪಾವಧಿಯಲ್ಲಿ ಹಣ ಮಾಡಿಕೊಡುವ ಆಲೂಗಡ್ಡೆ ಕೇವಲ 80 ರಿಂದ 90 ದಿನಗಳಲ್ಲಿ ಬರುವ ಬೆಳೆ. ಈ ಹಿಂದೆ ಬಿತ್ತನೆ ಬೀಜಕ್ಕಾಗಿ ಚಿಕ್ಕ ಬಳ್ಳಾಪುರ, ಕೋಲಾರದಿಂದ ತರುತ್ತಿದ್ದರು. ಆದರೆ ಈಗ ಪಂಜಾಬು, ಸಿಂಹಳ, ಉತ್ತರ ಪ್ರದೇಶಗಳಿಂದ ಬರುತ್ತಿದೆ. ಇದರ ಸಾರಿಗೆ ವೆಚ್ಚ ಅಧಿಕವಾಗಿದ್ದು ಬಿತ್ತನೆ ಬೀಜದ ಬೆಲೆಯೂ ಜಾಸ್ತಿಯಾಗಿದೆ.

**ಕೃಷಿ :** ಬಿತ್ತನೆ ಬೀಜ ಹಾಕುವ ಮೊದಲೆ ಹೊಲವನ್ನು ಚೆನ್ನಾಗಿ ಉತ್ತು, ಬಿಸಿಲಿನಲ್ಲಿ ಒಣಗಿಸಿ, ನಾಲ್ಕೈದು ಬಾರಿ ಉಳುಮೆ ಮಾಡಿ ಕೊಟ್ಟಿಗೆ ಗೊಬ್ಬರ ಸೇರಿಸಿ ಹದ ಮಾಡಿ ಕೊಂಡಿರುತ್ತೇನೆ. ವಿಶೇಷವಾಗಿ ಈ ಬೆಳೆಯನ್ನು ಮೇ-ಜೂನ್ ತಿಂಗಳಲ್ಲಿ ನಾಟಿ ಮಾಡುತ್ತಾರೆ. ಆಲೂಗಡ್ಡೆ ಬಿತ್ತನೆ ಮಾಡಬೇಕಾದರೆ ಒಂದೂವರೆ ಅಡಿಗೊಂದರಂತೆ ನೇಗಿಲಿನಿಂದ ಸಾಲು ಹೊಡೆದು ಆಲೂಗಡ್ಡೆಯನ್ನು ಹೋಳಾಗಿ ಕತ್ತರಿಸಿ ಮುಕ್ಕಾಲು ಅಡಿಗೊಂದರಂತೆ ನಾಟಿ ಮಾಡುತ್ತಾರೆ. ಮೇಲೆ ಮಣ್ಣು ಮುಚ್ಚಿ ಗೊಬ್ಬರ ಸುರಿದು ಸಮ ಮಾಡುತ್ತಾರೆ. ನಾಟಿಮಾಡಿದ 20 ದಿನಗಳಲ್ಲಿ ಆಲೂಗಡ್ಡೆ ಮೊಳೆತು 5 ರಿಂದ 6 ಇಂಚು ಬೆಳೆಯುತ್ತದೆ. ಆಗ ಕುಂಟೆ ಹೊಡೆದು ಕಳೆ ತೆಗೆದು ರಾಸಾಯನಿಕ ಗೊಬ್ಬರ ಸೇರಿಸಿ ಪೈರಿಗೆ ಮಣ್ಣು ಏರಿಸುತ್ತಾರೆ. ಈ ಕೆಲಸ ಕೇವಲ 45 ದಿವಸದೊಳಗೆ ಮುಗಿಯಬೇಕು. 90ನೇ ದಿನಕ್ಕೆ

ಆಲೂಗಡ್ಡೆ ಕೀಳಲು ಸಿದ್ಧವಾಗಿರುತ್ತದೆ. ಜಿಲ್ಲೆಯಿಂದ ಸರಾಸರಿ ದಿನ ಒಂದಕ್ಕೆ 150 ರಿಂದ 200 ಲೋಡು ಆಲೂಗಡ್ಡೆ ಬೆಂಗಳೂರು ಮಾರುಕಟ್ಟೆಗೆ ರವಾನೆಯಾಗಿರುತ್ತದೆ. ಇದಲ್ಲದೆ ದೆಹಲಿ, ಮುಂಬೈ, ಹೈದರಾಬಾದ್, ತಮಿಳುನಾಡು, ಕೇರಳ ರಾಜ್ಯಗಳಿಗೂ ರವಾನೆಯಾಗುತ್ತದೆ. 2010-11ರ ಅಂಕಿಅಂಶಗಳ ಪ್ರಕಾರ ಹಾಸನ ಜಿಲ್ಲೆಯಿಂದ 68340 ಮೆಟ್ರಿಕ್ ಟನ್ನುಗಳಷ್ಟು ಆಲೂಗಡ್ಡೆ ಕೃಷಿಯಾಗಿತ್ತು.

**ಕಾಫಿ :** ಜಿಲ್ಲೆ ಕಾಫಿ ಬೆಳೆಗೆ ಪ್ರಸಿದ್ಧ. ಸಕಲೇಶಪುರ, ಬೇಲೂರು ತಾಲ್ಲೂಕುಗಳಲ್ಲಿ ಮತ್ತು ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಪ್ರದೇಶಗಳಲ್ಲಿ ಕಾಫಿ ಹೆಚ್ಚು ಬೆಳೆಯುತ್ತಾರೆ. ಐಗೂರು, ಎಸಳೂರು ಮತ್ತು ಹಾನಬಾಳು ಏಲಕ್ಕಿಗೆ ಪ್ರಸಿದ್ಧವಾಗಿವೆ. ಚನ್ನರಾಯ ಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕು ತೆಂಗು ಬೆಳೆಯುವಲ್ಲಿ ಮುಂದಾಗಿದೆ. ಅರಸೀಕೆರೆಯಲ್ಲಿ ಒಂದು ತೆಂಗು ಸಂಶೋಧನಾ ಕೇಂದ್ರವಿದೆ. ಬೇಲೂರು, ಆಲೂರು ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಮೆಣಸನ್ನು ಬೆಳೆಯುತ್ತಾರೆ. ಅಡಕೆಯನ್ನು ಸಕಲೇಶಪುರ ತಾಲ್ಲೂಕಿನ ತಗ್ಗು ಪ್ರದೇಶದ ಕಾಫಿ ಪ್ಲಾಂಟೇಷನ್‌ಗಳಲ್ಲಿ, ಅರಕಲಗೂಡು, ಬೇಲೂರು, ಆಲೂರು, ಚೆನ್ನರಾಯಪಟ್ಟಣ ಮತ್ತು ಹಾಸನ ತಾಲ್ಲೂಕುಗಳಲ್ಲಿ ಬೆಳೆಯುತ್ತಾರೆ. ಹಾಸನ, ಬೇಲೂರು ಮತ್ತು ಅರಕಲಗೋಡು, ಹೊಳೆನರಸೀಪುರ ತಾಲ್ಲೂಕುಗಳು ಆಲೂಗಡ್ಡೆ ಬೆಳೆಗೆ ಹೆಸರಾದವು. ಸಕಲೇಶಪುರ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಕಿತ್ತಳೆ ಮತ್ತು ಬಾಳೆ ಹೆಚ್ಚಾಗಿ ಬೆಳೆಯುತ್ತಾರೆ. ಮಾವು, ಸಪೋಟ, ಪರಂಗಿ ಹಣ್ಣು ಮತ್ತು ಇತರ ಫಲಗಳ ಕೃಷಿಯೂ ಉಂಟು.

ಜಿಲ್ಲೆಯಲ್ಲಿ 51,003 ಹೆಕ್ಟೇರ್‌ಗಳಲ್ಲಿ ಬತ್ತವನ್ನೂ 8,51 ಹೆಕ್ಟೇರ್‌ಗಳಲ್ಲಿ ಜೋಳವನ್ನು, 1,21,428 ಹೆಕ್ಟೇರ್‌ಗಳಲ್ಲಿ ರಾಗಿಯನ್ನು 232 ಹೆಕ್ಟೇರ್‌ಗಳಲ್ಲಿ ಗೋದಿಯನ್ನು, 40,221 ಹೆಕ್ಟೇರ್‌ಗಳಲ್ಲಿ ದ್ವಿದಳ ಧಾನ್ಯಗಳನ್ನು, 3,333 ಹೆಕ್ಟೇರ್‌ಗಳಲ್ಲಿ ಕಬ್ಬನ್ನು 4,857 ಹೆಕ್ಟೇರ್‌ಗಳಲ್ಲಿ ಶೇಂಗಾವನ್ನು 6,192 ಹೆಕ್ಟೇರ್‌ಗಳಲ್ಲಿ ಇತರ ಎಣ್ಣೆ ಬೀಜಗಳನ್ನು, 8,329 ಹೆಕ್ಟೇರ್‌ಗಳಲ್ಲಿ ಹತ್ತಿಯನ್ನು ಬೆಳೆಯಲಾಗಿದೆ. ಜಿಲ್ಲೆಯ ಪ್ರಮುಖ ತೋಟದ ಬೆಳೆಗಳಾಗಿ 15,277 ಹೆಕ್ಟೇರ್‌ಗಳಲ್ಲಿ ಕಾಫಿಯನ್ನು, 443 ಹೆಕ್ಟೇರ್‌ಗಳಲ್ಲಿ ಟೀಯನ್ನು, 1,257 ಹೆಕ್ಟೇರ್‌ಗಳಲ್ಲಿ ಅಡಕೆ ಮತ್ತು 26,625 ಹೆಕ್ಟೇರ್‌ಗಳಲ್ಲಿ ತೆಂಗನ್ನು, 7,921 ಹೆಕ್ಟೇರ್‌ಗಳಲ್ಲಿ ಏಲಕ್ಕಿಯನ್ನು, ಸು. 28 ಹೆಕ್ಟೇರ್‌ಗಳಲ್ಲಿ ಗೋಡಂಬಿಯನ್ನು ಬೆಳೆಯಲಾಗಿದೆ.

**ತೋಟಗಾರಿಕೆ ಬೆಳೆಗಳು :** ಹಾಸನ ಜಿಲ್ಲೆಯಲ್ಲಿ ಋತುಮಾನಕ್ಕನುಸರಿಸಿ ಉಷ್ಣ, ಸಮಶೀತೋಷ್ಣ ಮತ್ತು ಶೀತವಲಯಗಳಿಗೆ ಸೇರಿದ 35ಕ್ಕೂ ಹೆಚ್ಚಿನ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಹಾಸನಜಿಲ್ಲೆಯ ಒಟ್ಟು ಭೂ ವಿಸ್ತೀರ್ಣದ ಶೇ. 25 ಭಾಗ ತೋಟಗಾರಿಕೆಗೆ ಬೆಳೆಸಲಾಗಿದೆ.

ಮಲೆನಾಡು ಪ್ರದೇಶಗಳಲ್ಲಿ ಕಾಫಿ, ಕರಿಮೆಣಸು, ಏಲಕ್ಕಿಯನ್ನು ಜಂಬು ಮಣ್ಣಿನಲ್ಲಿ ಬೆಳೆಯುತ್ತಾರೆ. ಕಿತ್ತಲೆ, ಮಾವು, ಅನಾನಸ್, ಸೀಬೆ, ನಿಂಬೆ, ಬಾಳೆ, ಪರಂಗಿ, ಸಪೋಟ ಮುಂತಾದ ಹಣ್ಣಿನ ಬೆಳೆಗಳನ್ನು ಹಾಗೂ ಗಡ್ಡೆ ತರಕಾರಿಗಳಾದ ಸುವರ್ಣಗೆಡ್ಡೆ, ಗೆಡ್ಡೆ ಕೋಸು, ಮರಗೆಣಸು ಹಾಗೆಯೇ ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರಗಳಲ್ಲಿ ಕಂಡು ಬರುವ ಮರಳು ಮಿಶ್ರಿತ ಕೆಂಪು ಭೂಮಿಯಲ್ಲಿ ಆಲೂಗಡ್ಡೆ, ಟೊಮ್ಯಾಟೊ, ಬದನೆ, ಎಲೆಕೋಸು, ಹುರುಳಿಕಾಯಿ, ಬೆಂಡೆಕಾಯಿ, ಸಿಹಿಗೆಣಸು, ಗೋರಿಕಾಯಿ ಮತ್ತು ವಿವಿಧ

**ತೋಟದ ಬೆಳೆಗಳ ಉತ್ಪಾದನೆ (ಟನ್ನುಗಳಲ್ಲಿ)**

| ಕ್ರಸಂ. | ತಾಲ್ಲೂಕುಗಳು | ತೆಂಗು | ಅಡಿಕೆ | ಏಲಕ್ಕಿ | ಮೆಣಸು | ಗೋಡಂಬಿ |
|---|---|---|---|---|---|---|
| 1. | ಆಲೂರು | 36 | 130 | 14 | 240 | – |
| 2. | ಅರಕಲಗೂಡು | 131 | 1812 | – | 72 | 9 |
| 3. | ಅರಸೀಕೆರೆ | 2093 | 931 | – | – | – |
| 4. | ಬೇಲೂರು | 138 | 505 | 42 | 390 | – |
| 5. | ಚೆನ್ನರಾಯಪಟ್ಟಣ | 1898 | 170 | – | – | – |
| 6. | ಹಾಸನ | 326 | 550 | – | – | – |
| 7. | ಹೊಳೆನರಸೀಪುರ | 315 | 525 | – | – | – |
| 8. | ಸಕಲೇಶಪುರ | 7 | 299 | 1478 | 413 | – |
| | ಒಟ್ಟು | 4944 | 4922 | 1534 | 1116 | 9 |

**ಮುಖ್ಯ ತೋಟಗಾರಿಕೆ ಬೆಳೆಗಳ ಉತ್ಪಾದನೆ (ಹಣ್ಣುಗಳಲ್ಲಿ) (ಮೆ.ಟನ್ನುಗಳಲ್ಲಿ)**

| ಕ್ರಸಂ. | ತಾಲ್ಲೂಕುಗಳು | ಬಾಳೆ | ಮಾವು | ಸೀಬೆ | ದ್ರಾಕ್ಷಿ | ಸಪೋಟ |
|---|---|---|---|---|---|---|
| 1. | ಆಲೂರು | 1818 | 945 | 105 | – | 8 |
| 2. | ಅರಕಲಗೂಡು | 3337 | 2562 | 240 | – | – |
| 3. | ಅರಸೀಕೆರೆ | 12481 | 4795 | 455 | – | 30 |
| 4. | ಬೇಲೂರು | 1206 | 1568 | 6 | – | – |
| 5. | ಚನ್ನರಾಯಪಟ್ಟಣ | 5850 | 1200 | 1200 | – | – |
| 6. | ಹಾಸನ | 3050 | 5100 | 650 | – | – |
| 7. | ಹೊಳೆನರಸೀಪುರ | 3170 | 360 | 150 | – | – |
| 8. | ಸಕಲೇಶಪುರ | 3290 | 280 | – | – | – |
| | ಒಟ್ಟು | 342021 | 6810 | 2806 | – | 38 |

ಬಗೆಯ ಸೊಪ್ಪನ್ನು ಬೆಳೆಯುತ್ತಾರೆ. ಕಪ್ಪು ಮಣ್ಣಿರುವ ಕಡೆ ಮೆಣಸಿನ ಕಾಯಿ ಬೆಳೆಯುತ್ತಾರೆ.

ಅರಕಲಗೂಡು, ಸಕಲೇಶಪುರ, ಆಲೂರು, ಬೇಲೂರು, ಹಾಸನ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರಗಳಲ್ಲಿ ತೋಟಗಾರಿಕೆ ಇಲಾಖೆಗಳಿದ್ದು ವಿವಿಧ ಬಗೆಯ ತರಕಾರಿ ಮತ್ತು ಹಣ್ಣು ಬೆಳೆಗಳಿಗೆ ಸಹಕಾರ ನೀಡುತ್ತಿವೆ.

**ಪಶುಸಂಗೋಪನೆ :** ಪಶುಸಂಪತ್ತನ್ನು ರೈತನ ಬೆನ್ನಲುಬು ಎನ್ನಬಹುದು. ರೈತರಿಗೆ ಆರ್ಥಿಕವಾಗಿ ಹಾಗೂ ವ್ಯವಸಾಯದ ವಿವಿಧ ಕೆಲಸಗಳಿಗೆ ಜಾನುವಾರುಗಳು ಅತ್ಯವಶ್ಯಕ. ಹಾಲಿಗಾಗಿ ಹಸು ಮತ್ತು ಎಮ್ಮೆಗಳನ್ನು ಮೊಟ್ಟೆ ಮತ್ತು ಮಾಂಸಕ್ಕಾಗಿ ಕೋಳಿಗಳನ್ನು ಉಣ್ಣೆ ಮತ್ತು

ಮಾಂಸಕ್ಕಾಗಿ ಕುರಿ, ಹಂದಿ, ಮೇಕೆ ಮೊಲ ಮುಂತಾದ ಪ್ರಾಣಿಗಳನ್ನು ಸಾಕಲಾಗುತ್ತದೆ. ಪಶು ಸಂಗೋಪನೆಯು ವ್ಯವಸಾಯದ ಜೊತೆ ಜೊತೆಯಲ್ಲಿಯೇ ಅವ್ಯಾಹಕವಾಗಿ ಸಾಗುತ್ತಾ ಬಂದಿದೆ.

ಹಾಸನಜಿಲ್ಲೆಯ 2007ರ ಜಾನುವಾರು ಗಣತಿ ಅಂಕಿಅಂಶಗಳ ಪ್ರಕಾರ ದೇಶೀ - 473399, ಮಿಶ್ರ ತಳಿ 160136 ಹಾಗೂ ಎಮ್ಮೆ - 201208 ಹಾಗೂ ಕುರಿ 201205, ಮೇಕೆ - 132181, ಹಂದಿ - 2489 ಇವೆ. ಜಿಲ್ಲೆಯಲ್ಲಿ ಹಳ್ಳಿಕಾರ್ ಮತ್ತು ಅಮೃತ್ ಮಹಲ್ ರಾಸುಗಳು ಪ್ರಸಿದ್ಧಿ. ಹಳ್ಳಿಕಾರ್ ತಳಿ ದನವು ವ್ಯವಸಾಯಕ್ಕೆ ಯೋಗ್ಯವಾಗಿದೆ. ದೃಢವಾದ ಶರೀರ, ಬಲಯುತವಾದ ತೊಡೆ, ಉದ್ದವಾದ ಬಾಲವನ್ನು ಹೊಂದಿರುತ್ತದೆ.

ಹಳ್ಳಿಕಾರ್ ಮತ್ತು ಸ್ಥಳೀಯ ತಳಿಗಳಲ್ಲಿ ಹಾಲಿನ ಉತ್ಪಾದನೆ ಕಡಿಮೆ. ಹೆಚ್ಚು ಹಾಲು ಉತ್ಪಾದನೆ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಮಿಶ್ರ ತಳಿಗಳನ್ನು ಹೆಚ್ಚು ಅಭಿವೃದ್ಧಿಪಡಿಸಬೇಕು. ರೈತರು ತಮ್ಮಲ್ಲಿರುವ ಸ್ಥಳೀಯ ಹಸುಗಳಿಗೆ (ದೇಸಿಯ ವಿದೇಶಿ ಹೋರಿಗಳ ವೀರ್ಯದಿಂದ ಕೃತಕ ಗರ್ಭಧಾರಣೆ ಮಾಡಿಸಿದ್ದಲ್ಲಿ ಮಿಶ್ರ ತಳಿ ಕರುಗಳಾಗುತ್ತವೆ. ಹೆಣ್ಣು ಕರುಗಳನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡಿದ್ದಲ್ಲಿ ಉತ್ತಮ ಹಾಲು ಕೊಡುವ ಹಸುಗಳಾಗುತ್ತವೆ. ಜಿಲ್ಲೆಯ ಪಶು ಸಂಪತ್ತಿನ ಅಭಿವೃದ್ಧಿಗಾಗಿ ನೆರವಾಗಲು ಒಟ್ಟು 95 ಪಶುವೈದ್ಯ ಕೇಂದ್ರಗಳು, 08, ಸಂಚಾರಿಕೇಂದ್ರ, ಕೃತಕ ಗರ್ಭಧಾರಣೆ ಕೇಂದ್ರಗಳು - 10 ಇವೆ. ಹಾಗೆಯೇ ಜಿಲ್ಲೆಯಲ್ಲಿ ಹಂದಿ, ಕುರಿ, ಮೇಕೆ ಸಾಕಾಣಿಕೆ ಪ್ರಗತಿದಾಯಕವಾಗಿದೆ. ಚನ್ನರಾಯಪಟ್ಟಣದಲ್ಲಿ ಕುರಿ ಸಾಕುವವರ ಒಂದು ಸಂಘವಿದೆ. ಕೋಳಿ ಸಾಕಾಣಿಕೆಯೂ ಬೃಹತ್ತಾಗಿ ಬೆಳೆದಿದೆ.

**ಗ್ರಂಥಋಣ :**


ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ (ಪರಿಷ್ಕೃತ) ಸಂಪುಟ -2 ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈ. ವಿ.ವಿ. 2007

ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂಪಾದಕ - ಡಾ. ಆರ್. ಗೋಪಾಲ್. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ - ಮೈಸೂರು 2010.

ಹಾಸನ ಜಿಲ್ಲಾ ಗೆಜೆಟಿಯರ್ ಕೆ. ಅಭಿಶಂಕರ್ (ಸಂ) - 1971.

ಎಪಿಗ್ರಾಫಿಯಾ ಕರ್ನಾಟಕ ಸಂ. 9 ಬೇ - 236 ಮೈ.ವಿ.ವಿ. (ಪರಿಷ್ಕೃತ) ಮೈಸೂರು.

ಹೊಯ್ಸಳ ಸಂಪದ, ಮಳಲಿ ವಸಂತ ಕುಮಾರ್, ಸಂ. ಅಖಿಲ ಭಾರತ 65ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಪುಟ, ಹಾಸನ. 1996

ಹಾಸನ ಜಿಲ್ಲೆಯ ಅಂಕಿಅಂಶಗಳ ನೋಟ 2010-11 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಹಾಸನ.

ಹಿರಿಮೆಯ ಹಾಸನ, ಸಂವೇದನ ಪ್ರಕಾಶನ, ಹಾಸನ ಡಾ. ಹಂಪನಹಳ್ಳಿ ತಿಮ್ಮೇಗೌಡ, 2006.

ಜನತಾ ಮಾಧ್ಯಮ ಪತ್ರಿಕೆ, - ಆರ್.ಪಿ. ವೆಂಕಟೇಶಮೂರ್ತಿ (ಸಂ) ದಿನಾಂಕ : 28-09-2013 ಹಾಸನ.


**ಪಿ.ಎಸ್.**

**ಹಿಪ್ಪಲಿ** ಇದು ಔಷಧೀಯ ಸಸ್ಯ. ಕಾಳು ಮೆಣಸಿನ ಹತ್ತಿರದ ಸಂಬಂಧಿ ಆರೋಗ್ಯವನ್ನು ಸಂರಕ್ಷಿಸುವ ಸದ್ಗುಣ ಹಿಪ್ಪಲಿಯಲ್ಲಿದೆ. ಕೆಮ್ಮಿಗೆ ರಾಮಬಾಣ. (ಲಾಂಗ್ ಪೇಪರ್) ವೈಜ್ಞಾನಿಕ ಹೆಸರು ಪೈಪರ್ ಲಾಂಗಂ ಇಂಗ್ಲಿಷಿನಲ್ಲಿ ಲಾಂಗ್‌ಪೇಪರ್ ಎಂದೂ ಕನ್ನಡದಲ್ಲಿ ಹಿಪ್ಪಲಿ, ತಿಪ್ಪಲಿ



ಎಂದು, ತಮಿಳಿನಲ್ಲಿ ಪಿಪ್ಪಲಿ, ತಿಪ್ಪಲಿ, ತೆಲುಗಿನಲ್ಲಿ ಪಿಪ್ಪಲು, ಮರಾಠಿಯಲ್ಲಿ - ಪಿಂಪ್ಳಿ ಎಂದು ಕರೆಯುವುದುಂಟು. ಮಕ್ಕಳಿರುವ ಮನೆಯಲ್ಲಂತು ಹಿಪ್ಪಲಿ ಇದ್ದೇ ಇರುತ್ತದೆ. ಚಿಕ್ಕಮಕ್ಕಳ ಕೆಮ್ಮಿಗೆ ಇದರಿಂದ ಚಿಕಿತ್ಸೆ ನೀಡುತ್ತಾರೆ. ಹಿಪ್ಪಲಿಯನ್ನು ಸ್ವಲ್ಪ ಬಿಸಿ ಮಾಡಿ ಕುಟ್ಟಿ ಪುಡಿಮಾಡಿ ಜೇನುತುಪ್ಪದೊಂದಿಗೆ ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ನೀಡುವುದುಂಟು.

ಹಿಪ್ಪಲಿಯನ್ನು ಪ್ರಾಚೀನ ಕಾಲದಿಂದಲೂ ಗ್ರಾಮೀಣ ಪ್ರದೇಶದ ಜನರು ಬಳಸುತ್ತಾ ಬಂದಿದ್ದಾರೆ. ಉತ್ತರ ಭಾರತದ ಸಂತಾಲರು ಹಿಪ್ಪಲಿಯನ್ನು ಕೆಮ್ಮು, ದಮ್ಮು, ಹೊಟ್ಟೆನೋವು, ಜ್ವರ ಮುಂತಾದ ಕಾಯಿಲೆಗೆ ಔಷಧವಾಗಿ ಬಳಸುತ್ತಾರೆ. ಇದರ ಮೂಲಸ್ಥಾನ ಭಾರತ. ಮಲಯ, ಭಾರತ, ನೇಪಾಳ, ಶ್ರೀಲಂಕ, ಮಲೇಶಿಯಾ, ಇಂಡೋನೇಶಿಯಾ ಪಿಲಿಫೈನ್ಸ್, ಮುಂತಾದವು ಈ ದೇಶಗಳಲ್ಲಿ ಹಿಪ್ಪಲಿಯು ಸ್ವಾಭಾವಿಕವಾಗಿ ವನ್ಯ ಪ್ರದೇಶಗಳಲ್ಲಿ ಬೆಳೆಯುತ್ತದೆ.

ಭಾರತವು ಹೆಚ್ಚು ಪ್ರಮಾಣದ ಹಿಪ್ಪಲಿಯನ್ನು ಮಲೇಶಿಯಾ ಮತ್ತು ಸಿಂಗಪೂರನಿಂದ ಆಮದು ಮಾಡಿಕೊಳ್ಳುತ್ತದೆ. ಭಾರತದಲ್ಲಿ ಕೇರಳ, ಕರ್ನಾಟಕ, ತಮಿಳುನಾಡು, ಪಶ್ಚಿಮಬಂಗಾಳ, ಉತ್ತರ ಪ್ರದೇಶ, ಮಧ್ಯಪ್ರದೇಶ, ಆಂಧ್ರಪ್ರದೇಶಗಳಲ್ಲಿ ಕೃಷಿ ಮಾಡಲಾಗುತ್ತದೆ. ಇದು ಪೊದೆ, ಬಳ್ಳಿ ರೀತಿಯಲ್ಲಿರುತ್ತದೆ. ಇದಕ್ಕೆ ನೆರಳಿದ್ದರೆ ಯುಕ್ತ.

ವೈದ್ಯರ ಪ್ರಕಾರ ಪ್ರತಿದಿನ ಒಂದು ಗೊಂಚಲು ಹಿಪ್ಪಲಿಯನ್ನು ಹಾಲಿನೊಂದಿಗೆ ಸೇವಿಸುತ್ತಾ ಬಂದರೆ ಹಲವು ಕಾಯಿಲೆಗಳು ದೂರವಾಗುತ್ತವೆ. ಹಿಪ್ಪಲಿ ಬಣ್ಣದಲ್ಲಿ ಕಪ್ಪಾಗಿ, ರುಚಿಯಲ್ಲಿ ಸ್ವಲ್ಪ ಖಾರವಾಗಿ, ಸುವಾಸನೆಯಲ್ಲಿ ಮೆಣಸಿನ ಕಾಳಿನ ವಾಸನೆಯನ್ನೇ ಹೋಲುತ್ತದೆ. ಬಳ್ಳಿಯಲ್ಲಿ ಸಂಬಾರ ಜಿನಸು ಕಾಯಿಗಳು ಗೊಂಚಲಾಗಿ ಉರುಳಿಯಾಕಾರದಲ್ಲಿರುತ್ತವೆ. ಕಾಯಾಗಿರುವಾಗ ಎಲೆ ಹಸುರು ಬಣ್ಣದಿಂದ ಕೂಡಿರುವ ಹಿಪ್ಪಲಿ, ಬೆಳೆದು ಒಣಗಿದ ಮೇಲೆ ಕಪ್ಪು ಬಣ್ಣಕ್ಕೆ

ತಿರುಗುತ್ತದೆ. ಕೆಲವು ಬೂದು ಬಣ್ಣದಿಂದ ಕೂಡಿದ್ದರೆ ಇನ್ನೂ ಕೆಲವು ಕಡುಗಪ್ಪು ಬಣ್ಣದ್ದಾಗಿರುತ್ತವೆ.

ಹಿಪ್ಪಲಿಯನ್ನು ಉಪ್ಪಿನಕಾಯಿಗಳಲ್ಲಿ ಹಾಗೂ ಆಹಾರ ಕೆಡದಂತೆ ಸಂಸ್ಕರಿಸಿಡಲು ಬಳಸುತ್ತಾರೆ. ಇದರ ಹಣ್ಣುಗಳಲ್ಲದೆ, ಬೇರು, ದಂಟಿನ ದಪ್ಪ ಭಾಗಗಳನ್ನು ಕತ್ತರಿಸಿ, ಒಣಗಿಸಿ ಪಿಪ್ಲ್‌ಮೋಲ್ ಎಂಬ ಹೆಸರಿನಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯರು ಔಷಧವಾಗಿ ಬಳಸುತ್ತಾರೆ.

ಮಂಪರಿಗೆ ನಶ್ಯದಂತೆಯೂ, ಶಕ್ತಿದಾಯಕ ಮತ್ತು ರಕ್ತವರ್ಧಕ ಔಷಧದಂತೆಯೂ ಕೊಡುತ್ತಾರೆ. ಪಿತ್ತನಾಳ ಮತ್ತು ಪಿತ್ತಕೋಶಗಳ ತೊಂದರೆ ನಿವಾರಣೆಗಾಗಿ, ಗರ್ಭಸ್ರಾವಕ, ಕುಷ್ಠರೋಗಗಳ ಚಿಕಿತ್ಸೆಯಲ್ಲಿಯೂ ಇದರ ಉಪಯೋಗವುಂಟು.

**ತಳಿಗಳು :** ಇದರಲ್ಲಿ 1940 ಪ್ರಭೇದಗಳಿವೆ ಕರ್ನಾಟಕದಲ್ಲಿ ನಾಲ್ಕು ಜಾತಿಗೆ ಸೇರಿದ ಪ್ರಭೇದಗಳು ಕಂಡುಬರುತ್ತವೆ.

ಈ ಕುಟುಂಬದ ಸಸ್ಯಗಳ ಸ್ವಭಾವ, ಬೇರುಗಳಿಂದ ಏರುವ ಅಡರು ಬಳ್ಳಿಗಳು. ಎಲೆಗಳು ಸರಳ, ಪರ್ಯಾಯ, ಅಭಿಮುಖ, ಅಥವಾ ಸುತ್ತು ಜೋಡಣೆ. ಹೂವು ಚಿಕ್ಕದಾಗಿದ್ದು ಏಕಲಿಂಗಿಯಾಗಿರುತ್ತವೆ. ಒಂದು ಬೀಜವಿರುವ ಮಾಂಸಲ ಬೆರ್ರಿ ಇದರ ಹಣ್ಣಿನ ಲಕ್ಷಣ.

**ಹಿಪ್ಪಲಿಯ ಸ್ವರೂಪ :** ಎಲೆಗಳು ಗಾಢ ಹಸುರು ಬಣ್ಣದಾಗಿದ್ದು. ಮೇಲ್ಮೈ ಹೊಳಪಿನಿಂದ ಕೂಡಿರುತ್ತದೆ. ಹಿಪ್ಪಲಿ ಕಾಳುಗಳು 2-4 ಸೆಂ.ಮೀ. ಉದ್ದದ ಗೊಂಚಲಿನಲ್ಲಿ ಬಿಡುತ್ತವೆ. ಕಪ್ಪು ಮಿಶ್ರ ಹಸುರು ಬಣ್ಣದ ಈ ಗೊಂಚಲು ಹೊಳಪು ಹೊಂದಿರುತ್ತದೆ. ಹಿಪ್ಪಲಿಯ ದಂಟು ಬಳ್ಳಿಯಂತಿದ್ದು, ಮೇಲೆ ಗಿಣ್ಣುಗಳಿರುತ್ತವೆ. ಎಲೆಗಳು 5-9 ಸೆಂ.ಮೀ. ಉದ್ದ 3-5 ಸೆಂ.ಮೀ. ಅಗಲವಿರುತ್ತದೆ. ಹಿಪ್ಪಲಿಯಲ್ಲಿ ಶೇ. 0.7 ತೈಲಾಂಶವಿದೆ. ಇದೊಂದು ಚಂಚಲ ತೈಲವಾಗಿದ್ದು, ಶುಂಠಿ ಮತ್ತು ಕಾಳುಮೆಣಸಿನ ಪರಿಮಳ ಬೀರುತ್ತದೆ. ಹಿಪ್ಪಲಿಯನ್ನು ಬಟ್ಟಿ ಇಳಿಸಿ ತೈಲವನ್ನು ಪಡೆಯುತ್ತಾರೆ.

**ಹಿಪ್ಪಲಿ ಕೃಷಿ :** ಇದನ್ನು ಒಂದು ಕಾಡು ಉತ್ಪನ್ನವಾಗಿ ಈವರೆಗೆ ಭಾವಿಸಲಾಗಿತ್ತು. ಆದರೆ ಆಯುರ್ವೇದ ಔಷಧಗಳ ತಯಾರಿಕೆಯಲ್ಲಿ ಹಿಪ್ಪಲಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಆದ್ದರಿಂದ ರೈತರು ಕೃಷಿಯನ್ನು ಕೈಗೊಂಡು ಉತ್ತಮ ಆದಾಯ ಪಡೆಯುತ್ತಿದ್ದಾರೆ. ಹಿಪ್ಪಲಿಯನ್ನು ಕಡಲ ಮಟ್ಟದಿಂದ ಆರಂಭಿಸಿ, 3000 ಅಡಿ ಎತ್ತರದವರೆಗಿನ ಪ್ರದೇಶಗಳಲ್ಲಿ ಬೆಳೆಯಬಹುದು. 10 ಡಿಗ್ರಿ ಸೆ. 35 ಡಿಗ್ರಿ ಸೆ. ಉಷ್ಣತೆಯ ಪ್ರದೇಶದಲ್ಲಿ ಹಿಪ್ಪಲಿಯನ್ನು ಬೆಳೆಯಬಹುದು. ತೇವಾಂಶವನ್ನು ಹಿಡಿದಿಟ್ಟುಕೊಳ್ಳಬಲ್ಲ ಜಂಬಿಟ್ಟಿಗೆ ಮಣ್ಣು ಉತ್ತಮ. ಕಾಂಡದ ತುಂಡುಗಳನ್ನು ಬಳಸಿ ಬೆಳೆಯಬಹುದು. ತಳಿಗಳ ಅಭಿವೃದ್ಧಿ ಕಾರ್ಯ ಕಡಿಮೆ. ಕೇರಳದ ಕೃಷಿ ವಿಶ್ವವಿದ್ಯಾನಿಲಯವು 'ವಿಶ್ವಂ' ತಳಿಯನ್ನು ಅಭಿವೃದ್ಧಿಪಡಿಸಿತು. ತೆಂಗು ಮತ್ತು ಅಡಕೆ ಮರಗಳ ಮಧ್ಯದಲ್ಲಿ ಇದನ್ನು ಬೆಳೆಸಬಹುದು. ಇದರ ಕೃಷಿಗೆ ಹೆಚ್ಚು ಪ್ರಮಾಣದ ಪೋಷಕಾಂಶಗಳ ಅಗತ್ಯವಿರುತ್ತದೆ. ಪ್ರತಿ ಹೆಕ್ಟೇರಿಗೆ 20 ಟನ್‌ಗಳಷ್ಟು ಸಾವಯವ ಗೊಬ್ಬರ ಒದಗಿಸಬೇಕು. ಹಿಪ್ಪಲಿ ಬೆಳೆಯ ನಡುವೆ ಬದನೆ, ಅಗಸೆ ಇತ್ಯಾದಿಯನ್ನು ಬೆಳೆಯಬಹುದು. ಬೆಳೆಗೆ ತಿಗಣೆಗಳು ಮತ್ತು ಹೆಲೋಪೆಲ್ಟಿಸ್ ಥಿವೋರ್ ಎಂಬ ಕೀಟಗಳು ಕಾಟ ಕೊಡುತ್ತವೆ.

ಕೃಷಿ ಮಾಡುತ್ತಿರುವ ಜಾಗದಲ್ಲಿ ಬೆಳೆದಿರುವ ಕಳೆಗಿಡಗಳನ್ನು ಆಗಾಗ ನಿರ್ಮೂಲನೆ ಮಾಡುತ್ತಿರಬೇಕು. ವಾತಾವರಣದಲ್ಲಿ ಉಷ್ಣತೆಯು ಹೆಚ್ಚಾಗಿರುವಾಗ ಹಿಪ್ಪಲಿ ಗಿಡಗಳು ಬೆಳೆದಿರುವ ಜಾಗದಲ್ಲಿ ಸೊಪ್ಪು ಮತ್ತು ಒಣಹುಲ್ಲಿನ ಹೊದಿಕೆಯನ್ನು ಗಿಡಗಳ ಬುಡದಲ್ಲಿ ಹೊದಿಸುವುದು ಉತ್ತಮ. ನಾಟಿ ಮಾಡಿದ ಒಂದು ವರ್ಷದಿಂದಲೇ ಫಲಕೊಡುತ್ತದೆ. ಆರು ತಿಂಗಳಿಗೆ ಹೂಗಳು ಕಾಣಿಸಿಕೊಳ್ಳುತ್ತದೆ. ಕಾಯಿಗಳು ಮೂಡಿದ ಎರಡು ತಿಂಗಳ ಅನಂತರ ಕಟಾವಿಗೆ ಸಿದ್ಧವಾಗುತ್ತವೆ. ಗಾಢ ಹಸುರು ಬಣ್ಣ ತಾಳಿದಾಗ ಮತ್ತು ಖಾರದ ತೀಕ್ಷ್ಣತೆ ಹೆಚ್ಚಾಗಿದ್ದಾಗ ಕಟಾವು ಮಾಡಬೇಕು. ಮೊದಲ ವರ್ಷದಲ್ಲಿ ಹೆಕ್ಟೇರಿಗೆ 400 ಕೆ.ಜಿ. ಹಿಪ್ಪಲಿ ಸಿಗಬಹುದು. ಆದರೆ ಅನಂತರದಲ್ಲಿ ಹಿಪ್ಪಲಿಯ ಇಳುವರಿ ಹೆಚ್ಚಾಗುತ್ತ ಹೋಗುತ್ತದೆ.

ಆಯುರ್ವೇದದ ಪ್ರಕಾರ ಹಿಪ್ಪಲಿಯನ್ನು ಜೇನುತುಪ್ಪದೊಡನೆ ಸೇವಿಸಿದರೆ ಅಗ್ನಿವರ್ಧಕ, ಜೀರ್ಣಜ್ವರದಲ್ಲಿ, ಅಗ್ನಿಮಾಂದ್ಯದಲ್ಲಿ ಹಿಪ್ಪಲಿಯನ್ನು ಬೆಲ್ಲದೊಡನೆ ಸೇವಿಸಬೇಕು. ಯೋಗರತ್ನಾಕರ ಪ್ರಕಾರ ಹಿಪ್ಪಲಿಯ ಪಾಕವನ್ನು ಬಳಸುತ್ತಿದ್ದರೆ ಧಾತುಗಳ ಪೋಷಣೆಯಾಗುತ್ತದೆ. ದೇಹಕ್ಕೆ ಬಲ ಸಿಗುತ್ತದೆ. ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. ದೇಹಕ್ಕೆ ಕಾಂತಿಯನ್ನು ನೀಡುತ್ತದೆ.

ತಲೆನೋವು, ಮಾನಸಿಕ ಸಮಸ್ಯೆಗಳು, ಕಾಲಿನ ಸಮಸ್ಯೆಗಳು, ಕಿವಿಯ ಸಮಸ್ಯೆ, ಹಲ್ಲಿನ ಸಮಸ್ಯೆ, ಗಂಟಲಿನ ಸಮಸ್ಯೆ, ಹೃದಯದ ಸಮಸ್ಯೆ, ಹೊಟ್ಟೆಯ ಸಮಸ್ಯೆ, ಕೆಮ್ಮು, ನೆಗಡಿ, ಅಸ್ತಮಾ, ಜ್ವರದ ಸಮಸ್ಯೆಗಳು, ಪಿತ್ತಜನಕಾಂಗದ ಸಮಸ್ಯೆ, ಅಲರ್ಜಿ, ನೋವು, ಬಾವು, ಊತ, ಮೂಲವ್ಯಾಧಿ, ಬೊಜ್ಜು ನಿಶ್ಯಕ್ತಿ, ಆಯಾಸ, ಸಂಧಿವಾತ, ಮಹಿಳೆಯರ ಸಮಸ್ಯೆಗಳು, ಪುರುಷರ ಸಮಸ್ಯೆಗಳು, ಮಕ್ಕಳ ಸಮಸ್ಯೆಗಳು, ವೃದ್ಧಾಪ್ಯದ ಸಮಸ್ಯೆಗಳು, ಚಟಗಳು, ಕೀಟಗಳ ಕಡಿತ, ಈ ಮೇಲಿನ ಎಲ್ಲ ಕಾಯಿಲೆಗಳಿಗೆ ಹಿಪ್ಪಲಿ ಉತ್ತಮ ಔಷಧಿಯಾಗಿ ಕಾರ್ಯನಿರ್ವಹಿಸುತ್ತದೆ.

ಇತ್ತೀಚೆಗೆ ಸಂಶೋಧನೆಯಲ್ಲಿಯೂ ಇದನ್ನು ಬಳಸುತ್ತಿದ್ದಾರೆ. ಕ್ಷಯ ರೋಗ, ಮಕ್ಕಳ ಉಬ್ಬಸ, ಹುಳನಾಶಕ , ಪಿತ್ತಕೋಶದ ಆರೋಗ್ಯ, ನೋವು ನಿವಾರಣೆ, ಬ್ಯಾಕ್ಟೀರಿಯಾ, ಮೃತ್ಯುಂಜಯರ ಸವಟಿ, ಮಾನಸಿಕ ಆರೋಗ್ಯ, ಸಂತಾನ ಹೀನತೆ ಮುಂತಾದ ಕಾಯಿಲೆಗಳಿಗೆ ಉತ್ತಮ ಸಂಶೋಧನೆಗಳಿಂದ ಪರಿಹಾರ ಸಿಗುವಂಥ ರೀತಿಯಲ್ಲಿ ಹಿಪ್ಪಲಿ ಸಹಾಯಕವಾಗಿದೆ.

**ಗ್ರಂಥ ಋಣ**


ಅಂತರ್‌ಜಾಲ ಸಹಾಯ

ಹಿಪ್ಪಲಿ (ಸಸ್ಯಸಂಪದ) - ಮುನಿಯಾಲ್ ಗಣೇಶ್ ಶೆಣೈ

ಪ್ರಜಾವಾಣಿ ದಿನಪತ್ರಿಕೆ, ಮಂಗಳವಾರ ಜುಲೈ 2013


*ಎನ್.ಸಿ.*

**ಹಿಪ್ಪುನೇರಳೆ** ರೇಷ್ಮೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬೆಳೆಯುವ ಪ್ರಮುಖ ವಾಣಿಜ್ಯ ಬೆಳೆ. ಹಿಪ್ಪುನೇರಳೆ ರೇಷ್ಮೆ ಹುಳುವಿನ ಏಕೈಕ ಆಹಾರ. ಅದು ಆಳವಾಗಿ ಬೇರು ಬಿಟ್ಟು, ಶೀಘ್ರವಾಗಿ ಬೆಳೆದು ದೀರ್ಘಕಾಲದವರೆಗೆ ಹೆಚ್ಚಿನ ಪ್ರಮಾಣದಲ್ಲಿ ಸೊಪ್ಪಿನ ಇಳುವರಿ ಕೊಡುವ

ಸಸ್ಯ. ಇದರ ವೈಜ್ಞಾನಿಕ ಹೆಸರು ಮೋರಸ್ ಆಲ್ಬ. ಮೋರೆಸಿ ಕುಟುಂಬಕ್ಕೆ ಸೇರಿದೆ.



ಬೇಸಾಯವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದಲ್ಲಿ, ಗುಣಮಟ್ಟದ, ರಸಭರಿತ, ಪೋಷಕಾಂಶಭರಿತ, ರೋಗರಹಿತ ಹಿಪ್ಪುನೇರಳೆ ಬೆಳೆಯಲು ಸಾಧ್ಯ. ಹಿಪ್ಪುನೇರಳೆ ಕಾಂಡದಿಂದ ಅಭಿವೃದ್ಧಿ ಪಡಿಸುವ ಸಸ್ಯ. ಇದನ್ನು ಬೆಳೆಯುವ ಮೊದಲು ಮಣ್ಣಿನ ಆಯ್ಕೆಯ ಬಗೆಗೆ ಎಚ್ಚರಿಕೆ ಅಗತ್ಯ. ಭೂಮಿಯು ಸಮಾನವಾಗಿದ್ದು ಎತ್ತರದ ಪ್ರದೇಶದಲ್ಲಿರಬೇಕು. ಮಣ್ಣು ಕೆಂಪು ಮರಳು ಮಿಶ್ರಿತ ಅಥವಾ ಕಪ್ಪುಮಣ್ಣಾಗಿರಬೇಕು. ಗೆದ್ದಲು, ಜಂತು ಮೊದಲಾದವುಗಳಿಂದ ಮುಕ್ತವಾಗಿದ್ದು ನೀರಿನ ಸೌಕರ್ಯವಿರಬೇಕು. ಭೂಮಿಯ ಆಯ್ಕೆಯಾದ ನಂತರ ಆಳಕ್ಕೆ ಉಳುಮೆ ಮಾಡಿರಬೇಕು. ಇಲ್ಲವೆ ಚೆನ್ನಾಗಿ ಅಗೆಯಬೇಕು, ಬೆಳೆಗೆ ಹಾನಿ ಮಾಡುವಂತಹ ಕಳೆ, ಹಳೆಯ ಬೇರು, ದಪ್ಪ ಕಲ್ಲುಗಳುಮೊದಲಾದವುಗಳಿಂದ ಮುಕ್ತವಾಗಿಸಿ ಸುಮಾರು ಒಂದು ತಿಂಗಳ ಕಾಲ ಭೂಮಿಯನ್ನು ಒಣಗಲು ಬಿಡಬೇಕು. ಮಣ್ಣಿನ ರಸಸಾರ 6.5 ರಿಂದ 7.0 ಇರುವಂತೆ ನೋಡಿಕೊಳ್ಳಬೇಕು.ಒಂದು ವೇಳೆ ಮಣ್ಣಿನ ರಸಸಾರದಲ್ಲಿ ವ್ಯತ್ಯಾಸವಿದ್ದರೆ ಅಗತ್ಯ ಪ್ರಮಾಣದ ಸುಣ್ಣವನ್ನು ಆಮ್ಲಿಯ ಮಣ್ಣಿಗೂ ಜಿಪ್ಸಂ ಮತ್ತು ಹಸಿರೆಲೆಗೊಬ್ಬರವನ್ನು ಪಾಲಿಯ ಮಣ್ಣಿನಲ್ಲಿ ಮಿಶ್ರಣ ಮಾಡಿ, ರಸಸಾರದ ಮಟ್ಟವನ್ನು ಕಾಯ್ದುಕೊಳ್ಳಬೇಕು. ಮಣ್ಣಿನ ಸಾವಯವ, ಇಂಗಾಲದ ಪ್ರಮಾಣ ಶೇ. 1 ಕ್ಕಿಂತ ಹೆಚ್ಚು ಇರಬೇಕು. ಕಡಿಮೆಯಿದ್ದಲ್ಲಿ ಸಾವಯವ ಗೊಬ್ಬರ ನೀಡುವ ಮೂಲಕ ಕೊರತೆ ನೀಗಬೇಕು. ಹಿಪ್ಪುನೇರಳೆ ಬಹು ವಾರ್ಷಿಕ ಬೆಳೆಯಾದ ಕಾರಣ ಹೆಚ್ಚಿನ ಇಳುವರಿ ಪರಿಣಾಮ ಮಣ್ಣಿನ ಫಲವತ್ತತೆ ಸಹಜವಾಗಿ ಕ್ಷೀಣಿಸುವುದು. ಇದನ್ನು ಸುಧಾರಿಸಿಕೊಳ್ಳಲು ಕಾಲಕಾಲಕ್ಕೆ ಮಣ್ಣಿನ ಫಲವತ್ತತೆಯ ಅಗತ್ಯತೆ ಕಾಯ್ದುಕೊಳ್ಳುವುದು ಅತ್ಯವಶ್ಯಕ.

ಹಿಪ್ಪು ನೇರಳೆ ದೀರ್ಘಾವಧಿ ಬೆಳೆಯಷ್ಟೇ ಅಲ್ಲ ವಾರ್ಷಿಕವಾಗಿ ಇದರ ಸೊಪ್ಪನ್ನು 4 ರಿಂದ 5 ಬಾರಿ ಬಳಸುತ್ತೇವೆ. ಆದ ಕಾರಣ ತಳಿಯ ಆಯ್ಕೆಯಲ್ಲಿ ಜಾಗ್ರತೆ ವಹಿಸಬೇಕು. ಕಾಂಡದ ತಯಾರಿಕೆಯಲ್ಲಿ ಬಿತ್ತನೆ ಕಡ್ಡಿಯ ಆಯ್ಕೆ ಬಹಳ ಮುಖ್ಯ. ಗುಣಮಟ್ಟದ, ರೋಗ ರಹಿತ ಕಡ್ಡಿಯಾಗಿರಬೇಕು. ಅಂತಹ ಕಡ್ಡಿಗಳನ್ನು ಮಾತ್ರವೆ ಬಿತ್ತನೆಗೆ ಒಳಪಡಿಸಬೇಕು. ಬಿತ್ತನೆ ಕಡ್ಡಿಗಳು ಭದ್ರವಾಗಿ ಬೇರು ಬಿಡುವ ಮತ್ತು ಚಿಗುರು ಒಡೆಯುವಂತೆ ಬೇಕಾದ ಭೂಮಿಯನ್ನು ಸಿದ್ಧ ಮಾಡಬೇಕು. ಇದರಿಂದ ಹೊಸ ಸಸಿಗಳು ಹುಲುಸಾಗಿ ಮತ್ತು ಸದೃಢವಾಗಿ ಬೆಳೆಯಲು ಸಾಧ್ಯ. ಅದಕ್ಕಾಗಿ ಬಿತ್ತನೆ ಕಡ್ಡಿಗಳನ್ನು 6-8 ತಿಂಗಳು ಚೆನ್ನಾಗಿ ಬೆಳೆದ ಬಿತ್ತನೆ ತೋಟಗಳಿಂದ ಆಯ್ಕೆ ಮಾಡಿ, ಖಟಾವು ಮಾಡಿದ ಕಡ್ಡಿಗಳನ್ನು ತಂಪು ಹೊತ್ತಿನಲ್ಲಿ ಸಾಗಿಸಬೇಕು. ಇದರಿಂದ ಕಡ್ಡಿಗಳು ಒಣಗುವುದು ತಪ್ಪುತ್ತದೆ. ಬಿತ್ತನೆ ಕಡ್ಡಿಗಳನ್ನು ಬಲಿತ ರೆಂಬೆಗಳಿಂದ ಪಡೆಯಬೇಕು. ಕಡ್ಡಿ ತಯಾರಿಸಿ ಕೊಳ್ಳುವಾಗ ರೆಂಬೆಯ ಹೆಚ್ಚು ಬಲಿತ ಭಾಗ ಮತ್ತು ಎಲೆಯ ಮೇಲ್ಭಾಗಗಳನ್ನು ತೆಗೆಯಬೇಕು. ಇದಕ್ಕೆ ಹರಿತ ಸಾಧನಗಳಾದ ಸಿಕೇಚರ್ ಇಲ್ಲವೆ ಮಚ್ಚನ್ನು ಬಳಸಬೇಕು. ಕಡ್ಡಿಗಳು 10-15 ಸೆಂ.ಮೀ. ಇರುವಂತೆಯೂ ನೋಡಿಕೊಳ್ಳಬೇಕು. ಅದರಲ್ಲಿ 3-4 ಗಿಣ್ಣುಗಳು ಹೊಂದಿರುವುದನ್ನು ಮರೆಯಬಾರದು. ಕಡ್ಡಿ ಸೀಳುವುದಾಗಲಿ, ತೊಗಟೆ ಬೇರ್ಪಟ್ಟಿರುವುದಾಗಲಿ ಆಗಬಾರದು. ಬಿತ್ತನೆ ಕಡ್ಡಿ ಹಸಿ ಇರುವಾಗಲೆ ನಾಟಿ ಮಾಡುವುದು. ತಪ್ಪಿದಲ್ಲಿ ಕಡ್ಡಿಯನ್ನು ತೇವಾಂಶದಿಂದ ಕೂಡಿದ ಚೀಲದಿಂದ ಮುಚ್ಚಿ, ನೆರಳಲ್ಲಿಡಬೇಕು. ಇದರಿಂದ ಕಡ್ಡಿ ಒಣಗುವುದು ತಪ್ಪುತ್ತದೆ.

ಬಿತ್ತನೆ ಕಡ್ಡಿಗಳನ್ನು ಆಳವಾಗಿ ಉಳುಮೆ ಮಾಡಿ, ಹದಮಾಡಿದ ಮಣ್ಣಿನಲ್ಲಿ ಸಾಲಿನಿಂದ ಸಾಲಿಗೆ 20 ಸೆಂ.ಮೀ. ಮತ್ತು ಕಡ್ಡಿಯಿಂದ ಕಡ್ಡಿಗೆ 10 ಸೆಂ.ಮೀ. ಅಂತರದಲ್ಲಿ ಒಂದು ಕಣ್ಣು ಮಣ್ಣಿನ ಮೇಲೂ ಉಳಿದವು ಮಣ್ಣಿನ ಒಳಗೂ ಇರುವಂತೆ ನಾಟಿ ಮಾಡಬೇಕು. ಗೊಬ್ಬರವಾಗಿ ಕೊಟ್ಟಿಗೆ ಗೊಬ್ಬರವನ್ನು ಮಾತ್ರ ಬಳಸಬೇಕು. ರಸಗೊಬ್ಬರವನ್ನು ನಾಟಿ ಮಾಡಿದ ತಕ್ಷಣ ಬಳಸಬಾರದು. ನಾಟಿ ಮಾಡಿದ ಅನಂತರ ಎಲ್ಲ ಗುಣಿಗಳಿಗೂ ನೀರು ಹಾಯಿಸಬೇಕು. ನೀರು ಹಾಯಿಸುವಾಗ ಮಣ್ಣಿನ ಗುಣ ಮತ್ತು ವಾತಾವರಣಕ್ಕೆ ಪೂರಕವಾಗಿ 4-6 ದಿನಗಳಿಗೊಮ್ಮೆ ಸಸಿ ಮಡಿಗಳಿಗೆ ನೀರುಣಿಸಬೇಕು. ಹೀಗೆ ಸಸಿ ಮಡಿಗಳಲ್ಲಿ ಬಿತ್ತನೆ ಕಡ್ಡಿಗಳು ನಾಟಿ ಮಾಡಿದ 10-12 ದಿನಗಳ ಬಳಿಕ ಚಿಗುರೊಡೆಯುತ್ತವೆ. ನಾಟಿ ಮಾಡಿದ 30 ದಿನಗಳ ಬಳಿಕ ಬೇರಿನ ಬೆಳವಣಿಗೆ ಆರಂಭವಾದರೂ 70-80 ದಿನಗಳ ಅನಂತರ ಬೇರು ಚೆನ್ನಾಗಿ ಬರುವುದು. ಪ್ರತಿ ಸಸಿಯಿಂದ ಒಂದು ಕಾಂಡವನ್ನು ಬೆಳೆಯಲು ಬಿಟ್ಟು, ಉಳಿದ ರೆಂಬೆಗಳನ್ನು ಸಿಕೇಚರ್ ಇಲ್ಲವೆ ಮಚ್ಚಿನ ಸಹಾಯದಿಂದ ತೆಗೆಯಬೇಕು. ಕಡ್ಡಿಗಳನ್ನು ನಾಟಿ ಮಾಡಿದ ಸು. 35-40 ದಿನಗಳ ಬಳಿಕ ಮೊದಲ ಕಳೆ ತೆಗೆಯುವುದು. 60 ದಿನಗಳ ಬಳಿಕ ಎರಡನೆ ಕಳೆ ತೆಗೆಯುವುದು. ಹಿಪ್ಪು ನೇರಳೆ ಕಡ್ಡಿಗಳನ್ನು ನೇರವಾಗಿ ತೋಟದಲ್ಲಿ ನಾಟಿ ಮಾಡುವುದಾದರೂ ಸಹ ಸಸಿಗಳನ್ನು ಉಪಯೋಗಿಸಿ ತೋಟ ಬೆಳೆಸುವ ವಿಧಾನ ಹೆಚ್ಚು ಉಪಯುಕ್ತ. ತೋಟದಲ್ಲಿ ತಪ್ಪುಗುಳಿಗಳ ಸಾಧ್ಯತೆ ಕಡಿಮೆ ಆಗಿ ಹೆಚ್ಚು ಸಸಿಗಳನ್ನು ಬೆಳೆಯಲು ಸಾಧ್ಯ. ಹಿಪ್ಪು ನೇರಳೆಯ ಉತ್ತಮ ಇಳುವರಿಗೆ ಇದರಿಂದ ಸಹಾಯವಾಗುತ್ತದೆ ಮತ್ತು ಸಸಿ ನೆಡುವಾಗ ನೀರು ನಿಲ್ಲುವ ಜಾಗ ಆಯ್ಕೆ ಮಾಡಬಾರದು. ಸಸಿಗಳನ್ನು 3 ತಿಂಗಳ ಮೊದಲು ಮರುನಾಟಿಮಾಡಲು ಕೀಳಬಾರದು. ಹೀಗೆ ಹಿಪ್ಪುನೇರಳೆ ಕೃಷಿಯಲ್ಲಿ ಕಾಲ ಕಾಲಕ್ಕೆ ಅತ್ಯಗತ್ಯ ಕ್ರಮಗಳನ್ನು ಕೈಗೊಂಡು ಉತ್ತಮ ಗುಣಮಟ್ಟದ ಸೊಪ್ಪು ಬೆಳೆಯಬೇಕು. ಚಾಕಿ ತೋಟ ಮಾಡುವಾಗ ಕಳೆಯನ್ನು ತೆಗೆದು, ಅಂತರ ಬೇಸಾಯ ಮಾಡುವುದು. ಚಾಕಿ ಸೊಪ್ಪು ಕೊಯ್ಲು ಆದ ಪ್ರತಿ ಸಲವು ರಸಗೊಬ್ಬರ ಅಗತ್ಯ ಪೂರೈಸಬೇಕು ಮತ್ತು ಹೆಚ್ಚಿನ ಪ್ರಮಾಣದ ಕೊಟ್ಟಿಗೆ ಗೊಬ್ಬರ ಬಳಸಬೇಕು. ಆದರೆ ಕಟಾವು ಮಾಡುವಾಗ ಬುಡಕ್ಕೆ ಮಾಡಬಾರದು.

ಹಿಪ್ಪು ನೇರಳೆಯ ಉತ್ತಮ ತಳಿಗಳನ್ನು ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಗಳು ಭಾರತ ಸರ್ಕಾರ ಒಳಗೊಂಡಂತೆ ಹಲವಾರು ರಾಜ್ಯ ಸರ್ಕಾರಗಳು ಅಭಿವೃದ್ಧಿ ಪಡಿಸಿವೆ. ಅವುಗಳಲ್ಲಿ ಮಳೆ ಆಶ್ರಿತ ಪ್ರದೇಶ, ನೀರಾವರಿ ಆಶ್ರಿತ ಪ್ರದೇಶಕ್ಕೆ ಅನುಕೂಲವಾಗುವಂತೆ ಸುಧಾರಿತ ತಳಿಗಳನ್ನು ತರಲಾಗಿದೆ. ವಿಕ್ಕರಿ - 1, ಎಸ್ - 36, ಎಸ್ - 13, ಎಸ್ - 1635, ಎಸ್ - 34, ಮೊದಲಾದ ತಳಿಗಳಿವೆ. ಜನಪ್ರಿಯ ತಳಿಗಳಾಗಿ ವಿಕ್ಕರಿ - 1, ಎಸ್ - 36, ಎಸ್ - 13 ನ್ನು ಗುರುತಿಸಲಾಗಿದೆ.

**ವಿಕ್ಕರಿ -1 :** ಇದನ್ನು ನೀರಾವರಿ ಪ್ರದೇಶಕ್ಕೆ ಶಿಫಾರಸ್ಸು ಮಾಡಲಾಗಿದೆ. ವಿ-1 ಹೆಸರಿನಿಂದ ಈ ತಳಿಯನ್ನು ಗುರುತಿಸುವರು. ಇದರ ಗುಣಲಕ್ಷಣಗಳೆಂದರೆ ಎತ್ತರವಾದ ನೇರ ರೆಂಬೆಗಳ ಬೆಳವಣಿಗೆ, ಕಾಂಡ ಬೂದಿ ಬಣ್ಣ ಹೊಂದಿದ್ದು ಎಲೆಗಳು ಅಗಲವಾಗಿ ಮಂದವಾಗಿ ಹೆಚ್ಚು ಎಲೆ ಹಾಗೂ ಹೆಚ್ಚು ತೇವಾಂಶದಿಂದ ನಯವಾಗಿದ್ದು ಹೊಳಪಿನಿಂದ ಕೂಡಿರುತ್ತವೆ. ಈ ತಳಿಯು ಬೇರನ್ನು ಚೆನ್ನಾಗಿ ಬಿಟ್ಟು ಶೀಘ್ರ ಬೆಳವಣಿಗೆಗೆ ಹೆಸರಾಗಿದೆ ಮತ್ತು ಅಧಿಕ ಇಳುವರಿ ಕೊಡುತ್ತದೆ.

**ಎಸ್ - 36 :** ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶದಲ್ಲಿ ಈ ತಳಿ ಬೆಳೆಯುವರು. ಗಿಣ್ಣುಗಳ ಅಂತರ ಕಡಿಮೆಯಿದ್ದು, ಕಾಂಡ ಹರಡಿದಂತೆ ಕಾಣುತ್ತದೆ. ಸಾಧಾರಣವಾಗಿ ಕವಲೊಡೆದಂತಿರುವ ಇದು ಬೂದಿ ಮಿಶ್ರಿತ ಬಣ್ಣದಂತೆ ತೋರುತ್ತದೆ. ಎಲೆಗಳು ದುಂಡಾಗಿ, ಹೊಳಪಿನಿಂದ ಕೂಡಿದ್ದು ಮೃದುತ್ವ ಹಾಗೂ ತಿಳಿ ಹಸುರು ಬಣ್ಣದಿಂದ ಕಂಗೊಳಿಸುತ್ತವೆ. ಚಾಕಿ ಸಾಕಾಣಿಕೆಗೆ ಉತ್ತಮ ತಳಿ. ರಸಭರಿತವಾದ ಇದರ ಸೊಪ್ಪನ್ನು ಆರಂಭಿಕ ಹಂತದ ಹುಳುಗಳಿಗೆ ನೀಡುವರು.

**ಎಸ್ - 34 :** ಕಪ್ಪು ಮಣ್ಣಿನ ಪ್ರದೇಶದಲ್ಲಿ ಈ ತಳಿ ಬೆಳೆಯುವರು. ಬೇರುಗಳು ಬಹು ಆಳಕ್ಕೆ ಹೋಗುವುದರಿಂದ ನೀರಿನಾಂಶದ ಕೊರತೆ ಇರುವಲ್ಲೂ ಚೆನ್ನಾಗಿ ಬೆಳೆಯುತ್ತದೆ. ಈ ತಳಿಯ ಎಲೆಗಳು ಸರಳ, ದಪ್ಪ ಮತ್ತು ದಟ್ಟ ಹಸುರು ಬಣ್ಣವನ್ನು ಹೊಂದಿರುತ್ತವೆ. ಎಲೆಗಳಲ್ಲಿ ನೀರಿನಾಂಶ ತಡೆದು ಕೊಳ್ಳುವ ಸಾಮರ್ಥ್ಯವಿದೆ. ಮಳೆಯಾಶ್ರಿತ ಪ್ರದೇಶದಲ್ಲಿ ಈ ತಳಿ ಉತ್ತಮ ಇಳುವರಿ ನೀಡುವುದು.

**ಎಸ್ - 13 :** ಅತಿ ಶೀಘ್ರವಾಗಿ ಬೆಳೆಯುವ ಇದು ಮಳೆ ಆಶ್ರಿತವಾಗಿದೆ. ಇದರ ರೆಂಬೆಗಳು ಸರಳ ಮತ್ತು ನೇರ. ಗಿಣ್ಣುಗಳ ಅಂತರ ಕಡಿಮೆ. ಎಲೆಗಳು ಸರಳ ಮತ್ತು ದಟ್ಟ ಹಸಿರು ಬಣ್ಣ ಹೊಂದಿರುತ್ತವೆ. ನೀರಿನಂಶ ಹಿಡಿದಿಡುವ ಸಾಮರ್ಥ್ಯವಿರುವ ಈ ತಳಿ ಉತ್ತಮವಾಗಿ ಬೇರು ಬಿಟ್ಟು, ಶೀಘ್ರವಾಗಿ ಬೆಳೆಯುತ್ತದೆ. ಅರೆ ನೀರಾವರಿ ಪದ್ಧತಿಯಲ್ಲೂ ಇದರ ಪಾತ್ರ ಅಪಾರ. ಕರ್ನಾಟಕದಲ್ಲಿ ಕೆಂಪು ಮಣ್ಣಿನಲ್ಲಿ ಇದನ್ನು ಬೆಳೆಯುವರು.

ಹೀಗೆ ಹಿಪ್ಪು ನೇರಳೆಯಲ್ಲಿ ವಿವಿಧ ಬಗೆಗಳಿದ್ದು ಎಲ್ಲವೂ ರೇಷ್ಮೆಯನ್ನು ಅಭಿವೃದ್ಧಿ ಪಡಿಸುವಂತಹವೇ ಆಗಿವೆ.

ಹಿಪ್ಪುನೇರಳೆ ಅತ್ಯಲ್ಪ ಕಾಲದಲ್ಲಿ ಅತಿ ಶೀಘ್ರವಾಗಿ ಬೆಳೆವ ಬೆಳೆ. ಬಿದಿರಿನ ಅನಂತರದ ಸ್ಥಾನ ಹಿಪ್ಪುನೇರಳೆಗೆ ಸಲ್ಲುತ್ತದೆ. ಕಾಲ ಕಾಲಕ್ಕೆ ಬೇಕಾದ ಅಗತ್ಯ ಮುಂಜಾಗರೂಕತಾ ಕ್ರಮಗಳನ್ನು ಪಾಲಿಸದಿದ್ದರೆ ಹಿಪ್ಪು ನೇರಳೆಗೂ ಕೂಡ ಸಮಸ್ಯೆ ತಪ್ಪಿದ್ದಲ್ಲ. ರೋಗಬಾಧೆ ಮತ್ತು ಕೀಟಬಾಧೆಗಳು ಹಿಪ್ಪುನೇರಳೆಯನ್ನು ಕಾಡುತ್ತವೆ. ಹಿಪ್ಪುನೇರಳೆಯೆ ರೇಷ್ಮೆ ಪೂರೈಕೆ ಆಹಾರವಾದ್ದರಿಂದಲೂ, ಉತ್ತಮರೇಷ್ಮೆ ಹೊಂದ ಬೇಕಾದರೆ ಹಿಪ್ಪು ನೇರಳೆಯ ಗುಣಮಟ್ಟ ಕಾಯ್ದುಕೊಳ್ಳುವುದು ಅತ್ಯಗತ್ಯ. ಹಲವು ಕಾರಣಗಳಿಂದಾಗಿ ರೋಗ ಮತ್ತು ಕೀಟ ಬಾಧೆಗಳು ಹಿಪ್ಪುನೇರಳೆಯನ್ನು ಕಾಡುತ್ತವೆ. ಶಿಲೀಂಧ್ರ ಮತ್ತು ಬ್ಯಾಕ್ಟೀರಿಯಾಗಳಂತಹ ಸೂಕ್ಷ್ಮಾಣುಗಳಿಂದ ರೋಗ ಉಂಟಾಗುವುದು. ಈ ರೋಗಗಳು ಸಾಮಾನ್ಯವಾಗಿ ಮಳೆಗಾಲ ಹಾಗೂ ಚಳಿಗಾಲದಲ್ಲಿ ಕಂಡುಬರುತ್ತವೆ. ಆ ಸಮಯದಲ್ಲಿ ಎಲೆ ಮತ್ತು ಬೇರನ್ನು ಇವು ಬಾಧಿಸುತ್ತವೆ. ಹೀಗೆ ಬಾಧಿಸುವ ಮುಖ್ಯ ರೋಗಗಳೆಂದರೆ ಕೆಂಪು ಚುಕ್ಕೆ ರೋಗ (leaf spot), ಬೂದಿ ರೋಗ (powdery mildew), ತುಕ್ಕುರೋಗ (leaf rust), ಕಪ್ಪು ಚುಕ್ಕೆ ರೋಗ (bacterial leaf spot), ಕಾಂಡದ ಕ್ಯಾಂಕರ್ (stem canker), ಬೇರು ಕೊಳೆ ರೋಗ (root-rot), ಬೇರಿನ ಕಪ್ಪು ಕೊಳೆ ರೋಗ (lasiadiplodia root-rot), ಗಂಟು ಬೇರಿನ ರೋಗ (root-knot) ಮೊದಲಾದವು.

ಕೀಟ ಬಾಧೆಯಿಂದಲೂ ಹಿಪ್ಪುನೇರಳೆಗೆ ಸಮಸ್ಯೆ ತಪ್ಪಿದ್ದಲ್ಲ. ಹಿಪ್ಪು ನೇರಳೆಯ ಕುಡಿ ಭಾಗ ಸೇರಿ ಗಿಡದ ರಸ ಹೀರುವ ಕೀಟ ಒಂದಾದರೆ, ಗಿಡದ ಎಲೆಯಲ್ಲಿ ವಾಸ ಮಾಡಿ ಎಲೆಯಲ್ಲಿಯ ಪತ್ರ ಹರಿತ್ತನ್ನು ಹಾಳು ಮಾಡುವ ಕೀಟ ಮತ್ತೊಂದು ಬಗೆಯವು. ಆ ನಿಟ್ಟಿನಲ್ಲಿ ಹೆಸರಿಸಬಹುದಾದ ಕೀಟ ಬಾಧೆಗಳು ಇಂತಿವೆ. ಹಿಪ್ಪುನೇರಳೆ ಎಲೆ ಸುರುಳಿ ಕೀಟ (ಡೈಫೇನಿಯಾ ಪಲ್ವೆರುಲೆಂಟಾ ಲಿಸ್), ತುಕ್ರ (ಮ್ಯಾಕೊನೆಲ್ಲಿ ಹಿರ್‌ಸುಟಸ್), ಬಿಹಾರದ ಕಂಬಳಿ ಹುಳು (ಸ್ಟೈಲೊ ಸೊಮ ಒಬ್ಲಿಕ್ವ), ರೆಕ್ಕೆಯಲ್ಲದ ಮಿಡತೆ (ನಿಯಾರ್ಥಾಕ್ರಿಸ್ ಅಕ್ಯೂಟೆಸೆಪ್ಸ್ ನೀಲ್‌ಗಿರೆನ್ಸಿಸ್), ರೆಂಬೆ ಕತ್ತರಿಸುವ ಹುಳು (ಸ್ಪೊಡಾಪ್ಟೆರ ಲಿಟ್ಯೂರ) ಮೊದಲಾದವು.

ಮಾರುಕಟ್ಟೆಯಲ್ಲಿ ಇವುಗಳ ಪರಿಹಾರಕ್ಕೆಂದು ಸಕ್ರಿಯ ಘಟಕಗಳು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ಆದರೆ ರೋಗ ಮತ್ತು ಕೀಟ ನಿಯಂತ್ರಣಕ್ಕೆ ಶಿಫಾರಸ್ಸು ಮಾಡುವ ಔಷಧಿ, ಕ್ರಿಮಿನಾಶಕಗಳ ಪ್ರಮಾಣ ಬಹಳ ಕಡಿಮೆ ಎಂಬುದನ್ನು ಮರೆಯುವಂತಿಲ್ಲ. ರಾಸಾಯನಿಕ ವಸ್ತುಗಳ ಸಿಂಪಡಣೆಗಾಗಿ ಬೇಕಾದ ದ್ರಾವಣಗಳನ್ನು ಮಿಶ್ರಣ ಮಾಡಿಕೊಳ್ಳುವ, ಸಿದ್ಧಪಡಿಸಿಕೊಳ್ಳುವ ಪರಿಸ್ಥಿತಿ ಇರುವುದರಿಂದ ಸಂಬಂಧ ಪಟ್ಟ ಇಲಾಖಾ ಮಾರ್ಗದರ್ಶಕರ ಮತ್ತು ತಜ್ಞರ ಸಹಕಾರದಿಂದ ಹಿಪ್ಪುನೇರಳೆ ಸಮಸ್ಯೆಯನ್ನು ನಿವಾರಿಸಬಹುದು. ಹಿಪ್ಪುನೇರಳೆಯನ್ನು ಉಷ್ಣವಲಯಕ್ಕಿಂತಲೂ ಸಮಶೀತೋಷ್ಣವಲಯದಲ್ಲಿ ಬೆಳೆಯುವರು. ಪ್ರಗತಿ ಮತ್ತು ಅಭಿವೃದ್ಧಿಯ ನೆಲೆಯಲ್ಲಿ ಗಮನಿಸಿದರೆ ವಿಶ್ವದಲ್ಲಿ ಮೊದಲ ಸ್ಥಾನ ಚೀನಾ ದೇಶದ್ದಾದರೆ ಅನಂತರದ ಸ್ಥಾನ ಭಾರತದ್ದು, ವಾಣಿಜ್ಯ ಬೆಳೆಯಾದ ಇದನ್ನು ಭಾರತದಾದ್ಯಂತ ಬೆಳೆಯುವರು. ಹಿಪ್ಪು ನೇರಳೆಯ ಮುಖ್ಯ ಉದ್ದೇಶ ರೇಷ್ಮೆ ಅಭಿವೃದ್ಧಿ ಪಡಿಸುವುದೇ ಆಗಿದೆ.

ಹಿಪ್ಪುನೇರಳೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆದರೂ ಇದರಿಂದ ಆಹಾರ, ಔಷಧ, ಪಾನೀಯ, ಉರುವಲು (ಸೌದೆ) ಇತ್ಯಾದಿಗಳಿಗೂ ಬಳಸುತ್ತಾರೆ. ಇವುಗಳ ಹಣ್ಣನ್ನು ತಿನ್ನಲು, ಪಾನೀಯ ತಯಾರಿಕೆಯಲ್ಲೂ ಬಳಸುತ್ತಾರೆ. ಇದರ ಕಾಯಿ ಮತ್ತು ಹಣ್ಣನ್ನು ಒಣಗಿಸಿ ಕೋಳಿ, ಹಂದಿಗಳಿಗೆ ಆಹಾರವಾಗಿ ನೀಡುತ್ತಾರೆ. ಇದರ ತೊಗಟೆ ಮೃದುವಾಗಿರುವ ಕಾರಣ ಕಾಗದದ ತಯಾರಿಕೆಯಲ್ಲಿ ಉಪಯುಕ್ತ. ಹಿಪ್ಪು ನೇರಳೆಯ ದಪ್ಪ ಮರಗಳಿಂದ ಉತ್ತಮ ಬೆತ್ತ ಮತ್ತಿತರ ಸಾಮಾಗ್ರಿಗಳನ್ನು ತಯಾರಿಸುವರು. ಜ್ವರ ಮತ್ತು ಗಂಟಲು ಕಡಿತಕ್ಕೆ ಇದರ ಹಣ್ಣು ಸಿದ್ಧೌಷಧ. ಇದರ ಬೇರನ್ನು

ಹೊಟ್ಟೆಯಲ್ಲಿನ ಹುಳದ ನಾಶಕ್ಕೆ ಔಷಧಿಯಾಗಿ ಬಳಸುವರು. ಯೂರೋಪ್ ದೇಶದಲ್ಲಿ ಇದರ ಹಣ್ಣಿನಿಂದ ಮದ್ಯವನ್ನು ಕೂಡ ತಯಾರಿಸುವರು. ಈ ಹಣ್ಣಿನ ಅಭಿವೃದ್ಧಿ ಮಾಡುವಾಗ ತಂತ್ರಜ್ಞಾನದ ಮೂಲಕ ಬೆಳೆ ಬೆಳೆಯುವುದರಿಂದ ದೊಡ್ಡ ಗಾತ್ರದ ಹಣ್ಣುಗಳು ದೊರೆಯುತ್ತವೆ. ಕಪ್ಪು, ನೇರಳೆ, ಬಿಳಿ ಮೊದಲಾದ ಬಣ್ಣದಿಂದ ಕೂಡಿರುತ್ತವೆ. ವರ್ಷದ 6-7 ಕೊಯ್ಲಿನಿಂದ 1000 ಮತ್ತು 2500 ಕಿ.ಗ್ರಾಂ.ನಷ್ಟು ಹಣ್ಣು ದೊರೆಯುತ್ತದೆ. ಕರ್ನಾಟಕದಲ್ಲಿ ಹಣ್ಣಿಗಾಗಿ ಹಿಪ್ಪುನೇರಳೆಯನ್ನು ಬೆಳೆಯದೆ ರೇಷ್ಮೆಗಾಗಿ ಬೆಳೆಯುವರು ಮತ್ತು ಉರುವಲಾಗಿಯೂ ಬಳಸುವರು.

*ಎಸ್.ಬಿ.ಆರ್.*

**ಹುಚ್ಚೆಳ್ಳು** ಮಳೆಯಾಧಾರಿತ ಬೆಳೆ. ಇದು ಉಷ್ಣ ಪ್ರದೇಶಗಳಲ್ಲಿ ಬೆಳೆಯಬಹುದಾದ ತೈಲ ಬೀಜ. ಹುಚ್ಚೆಳ್ಳು ಎಳ್ಳಿನ ಒಂದು ವಿಧವಾಗಿದ್ದು, ಯಾವುದೇ ಮಣ್ಣಿನಲ್ಲಿ ಬೆಳೆಯಬಹುದಾದರೂ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಅತ್ಯುತ್ತಮ ಇಳುವರಿಯನ್ನು ಪಡೆಯಯಬಹುದು.

ಆಗಸ್ಟ್ ಕೊನೆಯ ವಾರ ಅಥವಾ ಸೆಪ್ಟೆಂಬರ್ ಮೊದಲನೆಯವಾರ ಅಂದರೆ ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಕಾರ್ಯ ಪ್ರಾರಂಭಿಸಿದರೆ ಚೆನ್ನಾಗಿ ಬೆಳೆ ಬರುತ್ತದೆ. ಭೂಮಿಯನ್ನು ಆಳವಾಗಿ 3 ಬಾರಿ ಉಳುಮೆ ಮಾಡಬೇಕು. ಹದಗೊಂಡ ಅನಂತರ ಒಂದು ಎಕರೆ ಹೊಲಕ್ಕೆ 9 ರಿಂದ 10 ಟನ್ ಕೊಟ್ಟಿಗೆ ಗೊಬ್ಬರ (ಹಸು, ಎಮ್ಮೆ, ಕುರಿ, ಆಡುಗಳ ತೊಪ್ಪೆ / ಸಗಣಿ)ವನ್ನು ಮಿಶ್ರಣ ಮಾಡಬೇಕು. ಹದವಾದ ಮಳೆ ಬಿದ್ದಾಗ ಎಕರೆಗೆ ಒಂದು ಕೆ.ಜಿ.ಯಷ್ಟು ಬಿತ್ತನೆ ಕಾಳನ್ನು ಮರಳಿನಲ್ಲಿ ಮಿಶ್ರಣ ಮಾಡಿ (ಒಂದೂವರೆ ಅಡಿಯಂತೆ ಸಾಲು ಮಾಡಿ) ಕೈಯಿಂದ ಎರಚಿ ಬಿತ್ತಬಹುದು. ಬಿತ್ತನೆ ಬೀಜ ಮತ್ತು ಗೊಬ್ಬರಗಳು ಮಣ್ಣಿನಲ್ಲಿ ಮಿಶ್ರಣವಾಗುವಂತೆ ಕುಂಟೆ ಹೊಡೆಯಬೇಕು. ಐದು ದಿನಗಳ ಅನಂತರ ಮೊಳಕೆ ಬರುತ್ತದೆ. ಹುಚ್ಚೆಳ್ಳು ಚೆಲ್ಲಿದ 8 ರಿಂದ 10 ದಿನಗಳಲ್ಲಿ ಒಂದು ಬಾರಿ ಹದವಾದ ಮಳೆ ಬೇಕು. ಇಲ್ಲವಾದರೆ ತುಂತುರು ನೀರನ್ನು ಒದಗಿಸಬೇಕಾಗುತ್ತದೆ. 20 ದಿನಗಳ ಅನಂತರ ನೇಗಿಲಿನಿಂದ ಮೇಲ್ಕುಂಟೆಯನ್ನು ಹೊಡೆದು ಕಳೆ ತೆಗೆಯಬೇಕು. ಸಸಿಗಳು ಗಿಡದಿಂದ ಗಿಡಕ್ಕೆ 5 ಇಂಚು



ಅಂತರವಿರುವಂತೆ ಕಾಯ್ದುಕೊಳ್ಳಬೇಕು. ಹತ್ತಿರವಾದರೆ ಹೆಚ್ಚು ಇಳುವರಿ ಬರುವುದಿಲ್ಲ. ಗಿಡವು ಒಂದು ಅಡಿ ಎತ್ತರ ಬೆಳೆದ ಮೇಲೆ ಒಂದೂರವರೆ ತಿಂಗಳಿನ ಅನಂತರ ಮೊಗ್ಗು ಬಿಡಲು ಪ್ರಾರಂಭಿಸುತ್ತದೆ. ಆಗ ಮೇಲ್ಗೊಬ್ಬರವಾಗಿ ಯೂರಿಯಾವನ್ನು ಎಕರೆಗೆ 50 ಕೆ.ಜಿ. ಹಾಕಿ, ನಿಧಾನವಾಗಿ ಕುಂಟೆಯನ್ನು ಹೊಡೆದು ಮತ್ತೆ ಉಳಿದಿರುವ ಕಳೆಯನ್ನು ತೆಗೆಯಬೇಕು.

ಬಿತ್ತಿದ ಎರಡೂವರೆ ತಿಂಗಳಿನಲ್ಲಿ ಗಿಡದ ತುಂಬ ಚಿಕ್ಕ ಚಿಕ್ಕ ನಕ್ಷತ್ರಾಕಾರದ ಹಳದಿ ಹೂ ಬಿಡುತ್ತವೆ. ಹೂ ಕಮರಿ ಬೀಜವಾಗಿ 15 ದಿನಕ್ಕೆ ಸಂಪೂರ್ಣವಾಗಿ ಬಲಿಯುತ್ತದೆ. ಅಂತಿಮವಾಗಿ 90 ರಿಂದ 100 ದಿನಗಳೊಳಗೆ ಕಟಾವು ಮಾಡಿ ಜಾಸ್ತಿ ಒಣಗಿಸದೆ, ತಕ್ಷಣದಲ್ಲಿ ಮೊದಲೇ ಸಿದ್ಧಪಡಿಸಿಕೊಂಡಿರುವ ಕಣಕ್ಕೆ ಸಾಗಿಸಬೇಕು. 2 ರಿಂದ 3 ದಿನಗಳ ಕಾಲ ಕಣದಲ್ಲಿ ಒಣಗಿಸಿ, ಬಡಿದಾಗ ಹುಚ್ಚೆಳ್ಳು ಉದುರುತ್ತದೆ. ಒಂದು ಎಕರೆಗೆ 3 ರಿಂದ 4 ಕ್ವಿಂಟಾಲ್ ಬೆಳೆಯಬಹುದು. ಹುಚ್ಚೆಳ್ಳು ಜೀರಿಗೆಯಾಕಾರದಲ್ಲಿದ್ದು ಕಪ್ಪಗಿರುತ್ತದೆ.

**ಉಪಯೋಗಗಳು :** ಹುಚ್ಚೆಳ್ಳೆಣ್ಣೆ ಅಡುಗೆಗೆ ಉಪಯುಕ್ತ ಅಲ್ಲದೆ ನೇರವಾಗಿಯೂ ಅಂದರೆ ಉದ್ದಿನ ಕಾಳು ಜೊತೆ ಬೆಲ್ಲ ಮತ್ತು ಕಲಿಸಿ ತಿನ್ನಲು ತುಂಬಾ ರುಚಿಯಾಗಿರುತ್ತದೆ. ಹುರಳೀಕಾಳು ಮೊಳಕೆ ಸಾಂಬಾರು ಮತ್ತು ನಾಟಿ ಕೋಳಿ ಸಾಂಬಾರುಗಳಿಗೆ ಕಾಯಿ ರುಬ್ಬುವಾಗ ಸ್ವಲ್ಪ ಹುಚ್ಚೆಳ್ಳನ್ನು ಸೇರಿಸಿ ಸಾಂಬಾರು ಮಾಡಿದರೆ ತುಂಬಾ ರುಚಿ. ಹುಚ್ಚೆಳ್ಳು ಪುಡಿ (ಹುರಿದ ಹುಚ್ಚೆಳ್ಳು, ಒಣಮೆಣಸಿನಕಾಯಿ, ಉಪ್ಪು, ಬೆಳ್ಳುಳ್ಳಿ ಸೇರಿಸಿ ಮಾಡಿದ ಕುಟ್ಟುಡಿ) ಬಾಳೆಕಾಯಿ, ಸೋರೆಕಾಯಿ, ಹಲಸಿನ ಪಲ್ಯೆಗಳಿಗೆ ಚೆನ್ನಾಗಿರುತ್ತದೆ. ರಾಗಿ ರೊಟ್ಟಿ, ಹುಚ್ಚೆಳ್ಳುಚಟ್ನಿ ತಿನ್ನಲು ಹಿತ. ಗಾಣದಲ್ಲಿ ಎಣ್ಣೆ ತಯಾರಿಸಿದ ಅನಂತರ ಉಳಿಯುವ 'ಹುಚ್ಚೆಳ್ಳಿಂಡಿ' ದನಗಳಿಗೆ ಉತ್ತಮ ಮೇವಾಗಿ ಬಳಸುತ್ತಾರೆ. ಹಸು ಮತ್ತು ಎಮ್ಮೆಗಳಿಗೆ ಕೊಟ್ಟರೆ ಚೆನ್ನಾಗಿ ಹಾಲು ಕೊಡುತ್ತವೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕೆಲವೆಡೆ ಕೂರಿಸುವ 'ಕೊಂತಿ'ಗೆ ಈ ಹೂವನ್ನು ಮುಡಿಸುತ್ತಾರೆ. ಕೊಂತಮ್ಮನನ್ನು ಕೊನೆಯ ದಿವಸ ಬಿಡುವುದೂ ಹುಚ್ಚೆಳ್ಳು ಹೊಲಗಳಲ್ಲಿಯೇ, ಈ ಸಂಬಂಧ ಜನಪದ ಗೀತೆ ಸಾಲುಗಳು ಇಂತಿದೆ.

***ಹುಚ್ಚೆಳ್ಹೊಲಕೆ ಹೋದಳೆ ಕೊಂತಿ***
***ಹುಚ್ಚೆಳ್ಹೂವ ಮುಡಿದಳೆ ಕೊಂತಿ***

ಮೈಸೂರು ಮಂಡ್ಯ ಜಿಲ್ಲೆಯ ಪಾಂಡವಪುರ, ಕೆ.ಆರ್. ಪೇಟೆ ತಾಲೂಕಿನ ಸುತ್ತಮುತ್ತ, ಮೈಸೂರು ಜಿಲ್ಲೆಯ ಕೆ.ಆರ್. ನಗರ, ಪಿರಿಯಾಪಟ್ಟಣ ಮೊದಲಾದ ಪ್ರಾಂತ್ಯಗಳಲ್ಲಿ ಈ ಪದ್ಧತಿಯಿತ್ತು.

**ಮಾಹಿತಿ ಸಂಗ್ರಹ**

ಗೌರಮ್ಮ, ಆಲಂಬಾಡಿಕಾವಲು, ಮಂಡ್ಯಜಿಲ್ಲೆ

ಜಯಮ್ಮ, ಮಾಕನಹಳ್ಳಿ, ಮೈಸೂರು ಜಿಲ್ಲೆ

***ಕೆ.ಎಲ್.***

**ಹುಣಿಸೆ** ಇದರ ಹಳಗನ್ನಡ ರೂಪ ಪುಣಿಂಚೆ; ವೈಜ್ಞಾನಿಕ ಹೆಸರು ಟ್ಯಾಮರಿಂಡ್ ಲೆಗ್ಯೂಮಿನೋಸಿ (ಸಿಸ್ಯಾಲಿನಿಯಾಯ್ದ) ಕುಟುಂಬಕ್ಕೆ ಸೇರಿದ ವೃಕ್ಷ. ಇಂಡಿಯನ್ ಡೇಟ್ಸ್ (ಭಾರತದ ಖರ್ಜೂರ) ಎನ್ನುವ ಜನಪ್ರಿಯ ಹೆಸರಿನಿಂದ ಕರೆಯುವ ಇದನ್ನು ಭಾರತದ ವಿವಿಧೆಡೆಗಳಲ್ಲಿ ಇಮ್ಲಿ, ಇಮ್ಲಾ, ಅಂಬ್ಲಿ (ಹಿಂದಿ), ಟೋಮಲ್(ಬೆಂಗಾಲಿ), ಪುಳಿ (ಮಲಿಯಾಳಂ ಮತ್ತು ತಮಿಳು) ಆಮ್ಲಿ (ಮರಾಠಿ) ಮತ್ತು ಚಿಂತ (ತೆಲುಗು) ಇತ್ಯಾದಿ ಹೆಸರುಗಳಿಂದ ಗುರುತಿಸಲಾಗಿದೆ.



ಭಾರತದ ಖರ್ಜೂರ ಎಂಬರ್ಥ ಬರುವ 'ತಾಮರ್-ಇ-ಹಿಂದ್' ಎನ್ನುವ ಪರ್ಷಿಯನ್ ಹೆಸರಿನಿಂದ ತಾಮರಿಂಡಸ್ ಎಂಬ ಹೆಸರು ಪಡೆದಿದೆ.

ದೊಡ್ಡ ಗಾತ್ರದ ದೀರ್ಘಾಯುಷಿ ಮರವಾದ ಇದರ ಮೂಲ ಆಫ್ರಿಕಾ ಖಂಡ. ಪ್ರಸ್ತುತ ಏಷ್ಯಾ, ಅಮೆರಿಕ ಮೊದಲಾದ ದೇಶಗಳಲ್ಲಿ ಇದನ್ನು ಬೆಳೆಸುವರಾದರೂ, ಉಷ್ಣವಲಯದ ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಉಳುಮೆ ಮಾಡಲಾಗದ ಭೂಮಿಯಲ್ಲಿ ಸಾಮಾನ್ಯವಾಗಿ ಹುಣಿಸೆಯನ್ನು ಬೆಳೆಯಲಾಗುತ್ತದೆ. ಹೆಚ್ಚಾಗಿ ಬಂಜರು ಭೂಮಿಯಲ್ಲಿ ಬೆಳೆಸುತ್ತಾರೆ. ಇದರ ತಿರುಳು ಹೆಚ್ಚು ಸ್ವಾದಿಷ್ಟವಾಗಿದ್ದು, 'ಸಿ' ಜೀವಸತ್ವವನ್ನು ಅಧಿಕ ಪ್ರಮಾಣದಲ್ಲಿ ಹೊಂದಿರುತ್ತದೆ. ಭಾರತದ ಉತ್ತರ ಪ್ರದೇಶದ ಪೂರ್ವಭಾಗದ 'ಔಧ್'ನಲ್ಲಿ ಹುಣಿಸೆಯ ಉತ್ತಮ ವೃಕ್ಷಗಳನ್ನು ಕಾಣಬಹುದು. ಕರ್ನಾಟಕದ ಇತರ ಎಲ್ಲ ಜಿಲ್ಲೆಗಳಲ್ಲೂ ಬೆಳೆಯುವರಾದರೂ ಚಿಂತಾಮಣಿ, ಕಡೂರು ಹಾಗೂ ತುಮಕೂರಿನಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ಮರಳುಮಿಶ್ರಿತ ಮಣ್ಣಿನಿಂದ ಹಿಡಿದು, ಬಂಜರು ನೆಲ, ಕಲ್ಲು ಮಣ್ಣು (ಚಿಟುರು) ಫಲವತ್ತಾದ ಭೂಮಿ ಹೀಗೆ ವೈವಿಧ್ಯಮಯ ಮಣ್ಣಿನಲ್ಲಿ ಹುಣಿಸೆಯನ್ನು ಬೆಳೆಯಲಾಗುತ್ತದೆ. ಉಷ್ಣವಲಯದ ಪ್ರದೇಶ ಪ್ರಮುಖವಾದರೂ ಕಡಿಮೆ ತೇವಾಂಶದಲ್ಲಿಯೂ ಈ ಬೆಳೆಯನ್ನು ಬೆಳೆಯುವರು.

ಬೃಹದಾಕಾರದ ಈ ಮರ ದೀರ್ಘಾಕಾಲದವರೆಗೆ ಬೆಳೆಯನ್ನು ನೀಡುತ್ತದೆ. ಸಾಮಾನ್ಯವಾಗಿ ಇದರ ಪ್ರತಿಯೊಂದು ಭಾಗವೂ ಉಪಯುಕ್ತ. ಹುಣಿಸೆ ಮರ ಗಾಢ ಬೂದು ಬಣ್ಣ ಹೊಂದಿದ್ದು ಒರಟಾದ ತೊಗಟೆಯಿಂದ ಕೂಡಿರುತ್ತದೆ. ನಿತ್ಯಹರಿದ್ವರ್ಣದ ಈ ಮರ ಛತ್ರಿಯಂತೆ ಹರಡಿಕೊಳ್ಳುತ್ತದೆ. ಇದರ ಬುಡ ಶಕ್ತಿಯುತವಾಗಿರುತ್ತದೆ. ತೊಗಟೆ ಉದ್ದನೆಯ ಬಿರುಕುಗಳಿಂದ ಮತ್ತು ಅಡ್ಡ ಸೀಳುಗಳಿಂದ ಆವರಿಸಲ್ಪಟ್ಟಿರುತ್ತದೆ.

ಎಲೆಗಳು ಸಂಯುಕ್ತ ಮಾದರಿಯವು. ರೆಂಬೆಗಳ ತುದಿಗಳಲ್ಲಿ ಹೂಗಳ ಗೊಂಚಲುಗಳಿರುತ್ತವೆ. ಅರ್ಧ ಅಂಗುಲ ಉದ್ದವಿರುವ ಬಣ್ಣ ಬಣ್ಣದ ಹಳದಿ ಮತ್ತು ಕೆಂಪು ಚುಕ್ಕೆಗಳಿರುವ ಚಿಕ್ಕ ಹೂಗಳು. ಏಪ್ರಿಲ್-ಜೂನ್ ತಿಂಗಳಲ್ಲಿ ಮೂಡುತ್ತವೆ. ಹೀಚು ಕಾಯಿಗಳು ಮೂರರಿಂದ-ಹನ್ನೆರಡು ನುಣುಪಾದ, ಹೊಳೆಯುವ ಗಾಢ ಕಂದು ಬಣ್ಣದ ಬೀಜಗಳನ್ನು ಹೊಂದಿರುತ್ತವೆ. ಹಣ್ಣು ನಾರಿನಿಂದಲೂ ಆಮ್ಲೀಯ ತಿರುಳಿನಿಂದಲೂ ಕೂಡಿರುತ್ತದೆ. ನವೆಂಬರ್ - ಡಿಸೆಂಬರ್ ತಿಂಗಳಿನಲ್ಲಿ ಅವು ಪಕ್ವವಾಗುತ್ತದೆ. ಇವುಗಳ ಪೈಕಿ ಸಿಹಿ ಮಿಶ್ರಿತ ಹುಳಿ ಇದ್ದು ಕಂದು ತಿರುಳಿರುವುದು ಉತ್ತಮ ತಳಿ.

ಹುಣಿಸೆಯನ್ನು ಆಹಾರ, ಔಷಧ, ಉರುವಲು ಹೀಗೆ ಬಹುರೂಪದಲ್ಲಿ ಬಳಸಲಾಗುತ್ತದೆ. ಮಸಾಲೆ ತಯಾರಿಕೆ, ಅಡುಗೆ ಮತ್ತು ಚಟ್ನಿಗಳಲ್ಲಿ ಹಣ್ಣಿನ ತಿರುಳನ್ನು ನಿತ್ಯ ಉಪಯೋಗಿಸುವರು. ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಹುಣಸೆಗೊಜ್ಜು, ಚೊಟ್ಟುಸಾರು, ಚಟ್ನಿ ಇತ್ಯಾದಿ ಮೇಲೋಗರವಾಗಿ ಬಳಸುತ್ತಾರೆ. ಹುಣಸೆಯನ್ನು ಪಾತ್ರೆ ಶುದ್ದಿಗೊಳಿಸಲು ಬಳಸುವಂತೆ, ಮಡಿ ಮೈಲಿಗೆಯ ಶುಚಿತ್ವದಲ್ಲಿಯೂ ಬಳಸುತ್ತಾರೆ. ಹುಣಸೆಹಣ್ಣನ್ನು ಜೆಲ್ಲೆ ಅಥವಾ ಕೋಲಿನಿಂದ ಬಡಿದು, ಉದುರಿಸಿ ಮತ್ತೊಂದು ಕೋಲಿನಿಂದ ಹಣ್ಣಿನ ಸಿಪ್ಪೆ ಬೇರ್ಪಡಿಸಿ, ಅನಂತರ ಕೊಡ್ತಿ (ಇದು ಹಿಡಿದು ಕೊಳ್ಳಲು ಅನುಕೂಲವಾಗುವ ಹಾಗೆ ಮರದ ಹಾಗೂ ಕಬ್ಬಿಣದ ವಸ್ತುವಾಗಿರುತ್ತದೆ. ಒಂದು ಮೊಳ ಅಳತೆ ಹೊಂದಿರುತ್ತದೆ)ಯಿಂದ ಬಡಿದು ಬೀಜ ತೆಗೆವರು, ಮತ್ತೆ ಕೆಲವರು ಒರಳು ಕಲ್ಲಿನಲ್ಲಿ ಹಣ್ಣನ್ನು ಹಾಕಿ ಒನಕೆಯ ಮೂಲಕ ಮಿದಿದು ಸಹ ಬೀಜ ತೆಗೆವರು. ಅನಂತರ ಹಣ್ಣನ್ನು ಚೆನ್ನಾಗಿ ಮಿದ್ದು ಬಿಲ್ಲೆಯ ರೀತಿಯಲ್ಲಿ ತಯಾರಿಸಿ ಬಿಸಿಲಿನಲ್ಲಿ ಒಣಗಿಸಿ ವರ್ಷಗಟ್ಟಲೇ ಸಂರಕ್ಷಿಸಿ ಹಣ್ಣನ್ನು ಬಳಸುವುದು ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿದೆ. ಸಿಪ್ಪೆ, ಬೀಜ, ನಾರಿನಿಂದ ಮುಕ್ತವಾದ ಹುಣಿಸೆ ಹಣ್ಣಿಗೆ ಹೂ ಹಣ್ಣೆಂದು ಕರೆಯುವುದು ವಾಡಿಕೆ. ಎಲೆಗಳು ಮತ್ತು ಹೂಗಳು ತಿನ್ನಲು ಯೋಗ್ಯ.

ಸರ್ವೋಪಯೋಗಿಯಾದ ಹುಣಿಸೇ ಹಣ್ಣಿನ ಬೀಜವನ್ನು ಹಲವು ಆಟಗಳಲ್ಲಿ ಬಳಸುವರು. ಚೌಕಾಬಾರ, ಅಳಿಗುಳಿಮಣೆ ; ಮೊದಲಾದ ಜನಪದ ಆಟಗಳಲ್ಲಿ ಸಾಮಾನ್ಯವಾಗಿ ಬಳಸುವರು. ಹುಣಸೆಬೀಜವನ್ನು ಎರಡಾಗಿಸುವ ರೀತಿಗೆ 'ಪಚ್ಚಿ' ಎನ್ನುವರು. ಹಾಗೆಯೇ ಬೀಜದ ಒಂದು ಭಾಗವನ್ನಷ್ಟೇ ತೇಯ್ದು (ಬಿಳಿ ಬಣ್ಣ ಬರುವವರೆಗೆ) ಮಾಡುವ ರೀತಿಗೂ ಪಚ್ಚಿ ಎಂದು ಕರೆಯುವರು. ಇದರಲ್ಲಿ ಎರಡೂ ಕಡೆ ತೇಯುವ ಪದ್ಧತಿಯೂ ಉಂಟು. ಏಕೆಂದರೆ ಮೋಸ ಮಾಡಲು ಆಟಕ್ಕೆ ಬಳಸುವ ಒಟ್ಟು ಬೀಜಗಳಲ್ಲಿ ಅಂದರೆ ತಮ್ಮ ಅನುಕೂಲಕ್ಕೆ ಸರಿ ಹೊಂದುವ ಹಾಗೆ ಕೆಲವನ್ನು ಎರಡೂ ಕಡೆ ತೊಯ್ಯುವುದು, ಕೆಲವನ್ನು ಯಾವ ಕಡೆಯೂ ತೇಯದೇ ಹಾಗೆ ಬಳಸುವುದು ಉಂಟು. ಈ ಬೀಜಗಳನ್ನು ಗೋಣಿ, ಹತ್ತಿ ಬಟ್ಟೆಗೆ ಗಂಜಿ ಹಾಕಲು ಬಳಸುತ್ತಾರೆ. ಕಾಫಿಪುಡಿಯ ನಕಲಿ ತಯಾರಿಕೆಗೂ ಇದನ್ನು ಬಳಸುವುದುಂಟು.

ಹುಣಸೆಮರ ಅತಿ ಗಟ್ಟಿಯಾಗಿರುವುದರಿಂದ ಕೆಲವು ಕಡೆ ಗೃಹೋಪಯೋಗಿ ಮತ್ತು ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸುತ್ತಾರೆ. ತೊಲೆ, ಹಲಗೆ, ಕಂಬ, ಪಿಕಾಸಿ, ಒನಕೆ ಇದರಲ್ಲಿ ಮುಖ್ಯವಾದವು. ಕೆಲವು ಕಡೆ ಸೌದೆಗೆ ಹೊರತಾಗಿ ಉಳಿದ ಯಾವ ಉಪಕರಣಗಳಿಗೂ ಬಳಸುವುದಿಲ್ಲ. ಏಕೆಂದರೆ ಇವುಗಳನ್ನು ಬಳಸುವುದರಿಂದ ಮನೆಗೆ ಕೇಡು ಎಂಬ ನಂಬಿಕೆಯೂ ಕೂಡ ಇದೆ. ಅಷ್ಟೇ ಅಲ್ಲದೆ ಇದು ಹೆಚ್ಚು ಕಾವು ನೀಡುವುದರಿಂದ ಕೆಲವೆಡೆ ದೇವರ ಕೊಂಡಗಳಲ್ಲಿ ಇದರ ಕೊರಡುಗಳನ್ನು ಬಳಸುವರು. ಹುಣಿಸೆ ಮರದ ಕಡ್ಡಿಯನ್ನು ಚಬ್ಬೆ ಅಥವಾ ಕೋಲುಗಳಾಗಿ ಎಮ್ಮೆ, ದನ ಮೊದಲಾದ ಪ್ರಾಣಿಗಳನ್ನು ನಿಯಂತ್ರಿಸಲು ಬಳಸುವರು. ಏಕೆಂದರೆ ಇದರಿಂದ ಬೀಳುವ ಹೊಡೆತ ಬಹಳ ತೀಕ್ಷ್ಣವಾದುದು.

ಗ್ರಾಮೀಣರು ಹುಣಿಸೆ ಮರದ ಕೆಳಗೆ ನಿಲ್ಲುವುದು ಅಥವಾ ಮಲಗುವುದಿಲ್ಲ. ಮರದಲ್ಲಿ ದೆವ್ವ ಭೂತಗಳು ಸಾಮಾನ್ಯವಾಗಿ ವಾಸಿಸುತ್ತವೆ ಎಂಬ ನಂಬಿಕೆ. ಆದರೆ ಅದಕ್ಕೆ ಇರುವ ವೈಜ್ಞಾನಿಕ ಕಾರಣವೆಂದರೆ ಹುಣಿಸೆಮರ ಅತಿ ಹೆಚ್ಚು ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್‌ನ್ನು ಬಿಡುಗಡೆ ಮಾಡುವುದರಿಂದ ಆ ಭಾಗದಲ್ಲಿ ಆಮ್ಲಜನಕದ ಕೊರತೆ ಇರುತ್ತದೆ. ಆದ್ದರಿಂದ ಈ ಮರದ ತಳಭಾಗದಲ್ಲಿ ಉಸಿರುಗಟ್ಟುವ ವಾತಾವರಣವಿರುತ್ತದೆ.

ಹುಣಸೆ ಹಣ್ಣನ್ನು ಕುರಿತು ಹಲವು ಗಾದೆಗಳೂ ಉಂಟು. 'ಹೊಳೆಯಲ್ಲಿ ಹುಣಿಸೆ ತೇದ ಹಾಗೆ' 'ಹುಣಸೆ ಮುಪ್ಪಾದರೂ ಹುಳಿ ಮುಪ್ಪಲ್ಲ', 'ಒಂದು ಖಂಡುಗ ಹಾಲ್ಗೆ ಒಂದ್ಕೊಟ್ಟು ಹುಳಿ ಸಾಕು', 'ನನ್ನ ಬಾಳ್ಗೆ ಹುಳಿ ಹಿಂಡ್ಬುಟ್ಟಾ' ಇತ್ಯಾದಿ.

ಹುಣಸೆ ಕೃಷಿಗೆ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ಬೀಜಗಳಿಂದ ಬೆಳೆಸಿದ ಸಸಿಗಳನ್ನು, ಜೂನ್-ಜುಲೈ ತಿಂಗಳುಗಳಲ್ಲಿ ನಾಟಿ ಮಾಡುತ್ತಾರೆ. ಇದರ ತಳಿಗಳಲ್ಲಿ ಹಲವು ಬಗೆಯನ್ನು ಕಾಣಬಹುದಾದರೂ, ಹಣ್ಣಿನ ಬಣ್ಣವನ್ನಾಧರಿಸಿ ಕಂದುಹುಳಿಹಣ್ಣು, ಕೆಂಪುಸಿಹಿಹಣ್ಣೆಂದು ಗುರುತಿಸುವರು. ಕರ್ನಾಟಕದ ಧಾರವಾಡ ಕೃಷಿ ವಿಶ್ವವಿದ್ಯಾನಿಲಯ ಉತ್ಪತ್ತಿ ಮಾಡಿದ NTI-19, ತಮಿಳುನಾಡಿನ ಕೃಷಿ ವಿವಿಯ ಉರುಗಮ್, PKM-1 ಮತ್ತು ಕೆಂಪು ಹುಣಿಸೆ ಹಣ್ಣುಗಳನ್ನು ರಾಜ್ಯದಲ್ಲಿ ಬೆಳೆಯಲಾಗುತ್ತದೆ. ಬೆಂಗಳೂರು ಕೃಷಿ ವಿವಿಯ GKVK-6 ಮತ್ತು GKVK-33 ಹೆಸರಿನ ತಳಿಗಳನ್ನು ಮುಖ್ಯವಾಗಿ ಬೆಳೆಸುವರು. ಸಸ್ಯಾಭಿವೃದ್ಧಿಯಲ್ಲಿ ಗೂಟೆ ಮತ್ತು ಮೃದುಕಾಂಡ ಕಸಿ ವಿಧಾನ ಅತಿಮುಖ್ಯವಾದವುಗಳಾಗಿವೆ.

ಹುಣಸೆ ಸಸಿಗಳನ್ನು ನಾಟಿಮಾಡುವಾಗ ಸಾಲಿನಿಂದ ಸಾಲಿಗೆ ಹಾಗೂ ಗಿಡದಿಂದ ಗಿಡಕ್ಕೆ 30 ರಿಂದ 35 ಅಡಿ ಅಂತರದಲ್ಲಿ ಗುಳಿ ತೆಗೆಯಬೇಕು. ಕಸಿ ಮಾಡಿದ ಸಸಿಗಳನ್ನು ಜೂನ್ ತಿಂಗಳಲ್ಲಿ ನೆಡಬೇಕು ಹಾಗೂ ಮೊದಲ ವರ್ಷದಿಂದ ಮೂರನೇ ವರ್ಷದವರೆಗೂ ಬೇಸಗೆ ಸಮಯದಲ್ಲಿ ವಾರಕ್ಕೊಮ್ಮೆ ನೀರನ್ನು ಹಾಯಿಸಬೇಕು. ಅನಂತರದಲ್ಲಿ ಮಳೆ ಆಶ್ರಯದಲ್ಲಿ ಬೆಳೆಯಬಹುದು. ಕಸಿ ಗಿಡಗಳು ನಾಟಿ ಮಾಡಿದ ಎರಡನೇ ವರ್ಷದಿಂದ ಹೂ ಕಚ್ಚಲು ಆರಂಭಿಸುತ್ತವೆ. ಆದರೆ ನಾಲ್ಕು ವರ್ಷದ ಅನಂತರವೇ ನಿಯಮಿತವಾಗಿ ಹಣ್ಣಾಗುತ್ತದೆ. ಏಳು ವರ್ಷದ ಬಳಿಕ ಹೆಚ್ಚಿನ ಇಳುವರಿ ಬರಲು ಸಾಧ್ಯವಾಗುತ್ತದೆ. ಹತ್ತು ವರ್ಷ ಮೇಲ್ಪಟ್ಟ ಉತ್ತಮ ತಳಿಯ ಪ್ರತಿ ಗಿಡದಿಂದ ಸಾಕಷ್ಟು ಇಳುವರಿ ಪಡೆಯಬಹುದು.

**ರೋಗಬಾಧೆ :** ಹುಣಸೆ ಮರಗಳಿಗೂ ಕೀಟಗಳಿಂದ ರೋಗ ಬಾಧೆಗಳುಂಟಾಗುವುವು. ಇದರಿಂದ ಮುನ್ನೆಚ್ಚರಿಕೆ ಅಗತ್ಯ. ಅದಕ್ಕಾಗಿ ಹುಣಸೆ ತೋಟ ಅಥವಾ ತೋಪನ್ನು ಸ್ವಚ್ಛವಾಗಿಡಬೇಕು. ಕೀಟ ಬಂದಿತ್ತೆಂದು ತಿಳಿದಾಗ ನಾಲ್ಕು ಗ್ರಾಂ ಕಾರ್ಬರಿಲ್ ಇಲ್ಲವೆ 3 ಗ್ರಾಂ ಮೆಲಾಥಿಯಾನಂ ಅಥವಾ 1.5 ಮಿ.ಲೀಟರ್ ಮಾನೋಕ್ರೋಟೋಪಾಸ್ ಪ್ರತಿ ಲೀಟರ್‌ನಲ್ಲಿ ಮಿಶ್ರಣ ಮಾಡಿ ಸಿಂಪಡಿಸುವುದರಿಂದ ಕೀಟ ಬಾಧೆ ತಪ್ಪಿಸಬಹುದು. ಬೂದಿರೋಗ ಕಂಡು ಬಂದರೆ ಅದನ್ನು ನಿಯಂತ್ರಿಸಲು ಹೊಸ ಚಿಗುರು ಮೂಡಿದ ತಕ್ಷಣವೇ 1 ಗ್ರಾಂ ಕಾರ್ಬಂಡಜಿಂ ಅಥವಾ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕವನ್ನು ಪ್ರತಿಲೀಟರ್ ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು. ಹೀಗೆ ಮಾಡುವುದರಿಂದ ಹುಣಿಸೆ ರೋಗ ಮುಕ್ತವಾಗಿ ಉತ್ತಮ ಇಳುವರಿ ನೀಡುವುದು. ಅಲ್ಲದೆ ಹುಣಿಸೆಯನ್ನು ನಾಟಿ ಮಾಡಿದ ಮೇಲೆ 6-8 ವರ್ಷದವರೆಗೆ ಇರುವ ಖಾಲಿ ಪ್ರದೇಶದಲ್ಲಿ ಮಧ್ಯಂತರ ಬೇಸಾಯ ಮಾಡಬಹುದು. ದ್ವಿದಳ ಧಾನ್ಯ, ತರಕಾರಿ, ಸೆಣಬು ಮುಂತಾದ ಬೆಳೆಗಳನ್ನು ಬೆಳೆಸಬಹುದು.

*ಎಸ್.ಎಚ್.ಜಿ.*

**ಹುರುಳಿ (ಬಯಲು ಸೀಮೆಯ)** ಡೆಲಿಕೊಸ್ ಬೈಫ್ಲೋರಸ್ ಪ್ರಭೇದದ ಲೆಗ್ಯುಮಿನೇಸೀ ಕುಟುಂಬಕ್ಕೆ ಸೇರಿದ್ದು ಇಂಗ್ಲಿಷಿನಲ್ಲಿ ಹಾರ್ಸ್‌ಗ್ರಾಮ್ ಎಂದೂ ತೆಲುಗಿನಲ್ಲಿ 'ಉಲವಲು' ತಮಿಳಿನಲ್ಲಿ 'ಕೊಳ್ಳ' ಮಲಯಾಳಂ ಭಾಷೆಯಲ್ಲಿ 'ಮುತಿರ' ಹಿಂದಿಯಲ್ಲಿ 'ಕುಲ್ತಿ' ಎಂತಲೂ ಕರೆಯುತ್ತಾರೆ.



ಹುರುಳಿ ಖುಷ್ಕಿ ಬೆಳೆಯಾಗಿದ್ದು, ಭಾರತದಲ್ಲಿ ಬೆಳೆಯುವ ಬೆಳೆಗಳಲ್ಲಿ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಮತ್ತು ಎಲ್ಲ ತರಹದ ಭೂಮಿಯಲ್ಲೂ ಇದನ್ನು ಬೆಳೆಯುತ್ತಾರೆ. ಹುರುಳಿಯನ್ನು ಪರ್ಯಾಯ ಬೆಳೆಯಾಗಿ ಯಥೇಚ್ಛವಾಗಿ ಬೆಳೆಸುತ್ತಾರೆ. ಇದನ್ನು ಮುಖ್ಯ ಬೆಳೆಯಾಗಿ ಬೆಳೆದರೂ ಕೆಲವೆಡೆಗಳಲ್ಲಿ ಹುರುಳಿಯ ಹೊಲದಲ್ಲಿ ಹುಚ್ಚೆಳ್ಳು, ಸಾಸಿವೆ, ಹರಳು, ಅವರೆ ಮುಂತಾದ ಧಾನ್ಯಗಳನ್ನು ಸಾಲುಗಳಲ್ಲಿ ಬಿತ್ತಿ ಮಿಶ್ರ ಬೆಳೆಯಾಗಿ ಬೆಳೆಯುವುದು ರೂಢಿಯಲ್ಲಿದೆ. ಸರಿಯಾಗಿ ಮಳೆ ಬೀಳದ ಪ್ರದೇಶಗಳಲ್ಲಿ ಹಿಂಗಾರಿನ ಮುಂಬೆಳೆಯಾಗಿ ಹುರುಳಿಯನ್ನು ಬೆಳೆಯುವರು.

**ಬಿತ್ತನೆ :** ಹುರುಳಿಯನ್ನು ಆಯಾ ಪ್ರದೇಶದ ಹವೆ ಮತ್ತು ಭೂಗುಣಗಳಿಗನುಗುಣವಾಗಿ ಬೇರೆ ಬೇರೆ ಕಾಲದಲ್ಲಿ ಬಿತ್ತುತ್ತಾರೆ. ಕರ್ನಾಟಕದ ಪೂರ್ವ ಜಿಲ್ಲೆಗಳಲ್ಲಿ ಜೂನ್-ಜುಲೈ ತಿಂಗಳುಗಳಲ್ಲಿ ಭೂಮಿಯನ್ನು ಹದಮಾಡಿಕೊಂಡು ಆಗಸ್ಟ್ ಮಧ್ಯಭಾಗದಿಂದ ಸೆಪ್ಟೆಂಬರ್ ತಿಂಗಳ ಆದಿ ಭಾಗದವರೆಗೆ ಬಿತ್ತನೆ ಮಾಡುತ್ತಾರೆ. ಎಕರೆಯೊಂದಕ್ಕೆ ಸರಾಸರಿ 12-15 ಸೇರುಗಳಷ್ಟು ಹುರುಳಿಯನ್ನು ಬಿತ್ತುತ್ತಾರೆ. ಕೆಲವೆಡೆ ಕೈಯಿಂದ ಎರಚಿ ಬಿತ್ತನೆ ಮಾಡಿದರೆ ಇನ್ನು ಕೆಲವೆಡೆಗಳಲ್ಲಿ ಎಕರೆ ಒಂದಕ್ಕೆ 7-8 ಸೇರಿನಷ್ಟು ಹುರುಳಿಯನ್ನು ಆರು ಸಾಲಿನ ಕೂರಿಗೆಗಳಲ್ಲಿ ಬಿತ್ತನೆ ಮಾಡುತ್ತಾರೆ.

ಮೈಸೂರು, ಹಾಸನ ಮತ್ತು ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಅಂಗುಲ ಅಗಲದ ಸಾಲುಗಳನ್ನು ಮಾಡುವ 8 ತಾಳಿನ ಕೂರಿಗೆಗಳಲ್ಲಿ ಹುರುಳಿಯನ್ನು ಬಿತ್ತುತ್ತಾರೆ. ಇಂಥ ಹೊಲಗಳಿಗೆ ಮುಳ್ಳು ಹಲುಬೆ (ಗುಂಟ್ವೆ ಹಾಕುವುದು) ಹೊಡೆಯುವ ಅಗತ್ಯವಿರುವುದಿಲ್ಲ. ಕೈಯಿಂದ ಎರಚಿ ಬಿತ್ತನೆ ಮಾಡಿದ ಹೊಲಗಳಿಗೆ ಬಿತ್ತನೆಯಾದೊಡನೆ ಹಗುರವಾದ ಮುಳ್ಳು ಹಲುಬೆಯನ್ನು ಉದ್ದವಾಗಿಯೂ ಮತ್ತು ಅಡ್ಡಲಾಗಿಯೂ ಹೊಡೆದು, ಬಿತ್ತಿರುವ ಬೀಜದ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಮಣ್ಣು ಬೀಳುವಂತೆ ಮಾಡುತ್ತಾರೆ. ಆಗ ಸಸಿ ಬೆಳೆಯಲು ಬೇಕಾದ ಅನುಕೂಲ ಏರ್ಪಡುತ್ತದೆ.

**ಇಳುವರಿ :** ಬಿತ್ತಿದ ಹುರುಳಿ 100-110 ದಿನಗಳಲ್ಲಿ ಫಸಲನ್ನು ಕೊಡುತ್ತದೆ. ಈ ಮಧ್ಯೆ ಸರ್ವೇಸಾಮಾನ್ಯವಾಗಿ ಹೆಚ್ಚಿನ ಕೆಲಸ ಏರ್ಪಡುವುದಿಲ್ಲ. ಕಳೆ ಹೆಚ್ಚಾಗಿರುವ ಹೊಲಗಳಲ್ಲಿ ಮಾತ್ರ ಕಳೆ ತೆಗೆದು ಶುದ್ಧಗೊಳಿಸುತ್ತಾರೆ.

ಹುರುಳಿಯ ಗಿಡವು ಹಳದಿ ಬಣ್ಣಕ್ಕೆ ಬಂದು ಕಾಯಿಯು ಕಂದು ಬಣ್ಣ ಅಥವಾ ಬೂದು ಬಣ್ಣಕ್ಕೆ ತಿರುಗಲಾರಂಭಿಸಿದರೆ ಫಸಲು ಕಟಾವಿಗೆ ಬಂದಿದೆಯೆಂದು ತಿಳಿಯಬೇಕು. ಆ ಸಂದರ್ಭದಲ್ಲಿ ಅದನ್ನು ಕೀಳುವ ಅಥವಾ ಕೊಯ್ಯುವ ಕೆಲಸ ಮಾಡಬೇಕು. ಇಲ್ಲವಾದರೆ ಬಿಸಿಲಿನ ಜಳಕ್ಕೆ ಕಾಯಿಯು ಚೆನ್ನಾಗಿ ಒಣಗಿ, ಸಿಡಿದು ಕಾಳು ಹಾರಿಹೋಗಿ ಇಳುವರಿ ಕಡಿಮೆಯಾಗುತ್ತದೆ. ಕೊಯ್ಲನ್ನು ಮುಂಜಾನೆಯೇ ಆರಂಭಿಸಿ ಬಿಸಿಲೇರುವುದರೊಳಗೆ ಕಿತ್ತು ಗುಡ್ಡೆ ಹಾಕಬೇಕು.

**ಒಕ್ಕಣೆ :** ಹೊಲದಲ್ಲಿನ ಹುರುಳಿಗಿಡದ ಗುಡ್ಡೆಯನ್ನು ಗಾಡಿಗಳಲ್ಲಿ ಹೇರಿ ಕಣಕ್ಕೆ ತಂದು 5-6 ದಿನಗಳು ತೆಳುವಾಗಿ ಹರಡಿ ಒಣಗಿಸಬೇಕು. ಕಲ್ಲುರೋಣು ಸಹಾಯದಿಂದ ಒಕ್ಕಣೆ ಮಾಡಿ ಅನಂತರ ತೂರಿ ಹುರುಳಿಯನ್ನು ಮತ್ತು ಹೊಟ್ಟನ್ನು ಬೇರೆ ಬೇರೆ ಮಾಡಬೇಕು. ಹುರುಳಿಯ ಹೊಟ್ಟು ಎತ್ತುಗಳಿಗೆ ಒಳ್ಳೆಯ ಮೇವಾಗಿದೆ. ಹುರುಳಿಯನ್ನು ಬೇಯಿಸಿ ಅಥವಾ ಹುರಿದು ಎತ್ತು, ಕುದುರೆ, ಆನೆ ಮುಂತಾದ ಪ್ರಾಣಿಗಳಿಗೆ ಕೊಡುತ್ತಾರೆ. ಸಾಕುವ ಟಗರು, ಮೇಕೆಗಳಿಗೂ ಹುರುಳಿಯನ್ನು ಚೆನ್ನಾಗಿ ತಿನಿಸಿ ಕೊಬ್ಬಿಸಿ ಅವುಗಳನ್ನು ಲಾಭದಾಯಕವಾಗಿ ಮಾರಾಟ ಮಾಡಿಕೊಳ್ಳುತ್ತಾರೆ.

ಖುಷ್ಕಿ ಬೆಳೆಯಲ್ಲಿ ಎಕರೆಯೊಂದಕ್ಕೆ ಸರಾಸರಿ ಮೂರರಿಂದ ನಾಲ್ಕು ಪಲ್ಲ ಹುರುಳಿ ಇಳುವರಿಯಾದರೆ, ಮಳೆಯಾಗುವ ಪ್ರದೇಶಗಳಲ್ಲಿ ಐದರಿಂದ ಆರು ಪಲ್ಲ ಹುರುಳಿ ಬೆಳೆಯುತ್ತದೆ.

ಹರಳು ಬಿತ್ತುವ ಹೊಲಗಳಲ್ಲಿ ಹುರುಳಿಯನ್ನು ಜೂನ್ ತಿಂಗಳಿನಲ್ಲಿಯೂ ಮಿಕ್ಕ ಕಡೆ ಸೆಪ್ಟೆಂಬರ್ ತಿಂಗಳಿನಲ್ಲಿಯೂ ಬಿತ್ತನೆ ಮಾಡುತ್ತಾರೆ. ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾರುರಾಗಿಯ ಫಸಲನ್ನು ತೆಗೆದುಕೊಂಡ ಮೇಲೆ ಹುರುಳಿಯನ್ನು ಬೆಳೆಯುತ್ತಾರೆ. ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಅಚ್ಚೆಳ್ಳು ಬೆಳೆಯಾದ ಮೇಲೆ ಹುರುಳಿಯನ್ನು ಬೆಳೆದು ಅನಂತರ ರಾಗಿಯನ್ನು ಬೆಳೆಯುತ್ತಾರೆ. ಹೀಗೆ ಮಾಡುವುದರಿಂದ ಇಳುವರಿ ಹೆಚ್ಚುತ್ತದೆ. ಕೆಲವೊಮ್ಮೆ ಹುರುಳಿಯ ಬೆಳೆಯನ್ನು ಕಾಯಿ ಕಚ್ಚುವ ಮೊದಲೇ ಕಿತ್ತು ನೆಲದಲ್ಲೇ ಬಿಟ್ಟು ನೆಲವನ್ನು ಫಲವತ್ತಾಗಿಸುವುದುಂಟು. ಹುರುಳಿಯ ಬೆಳೆಗೆ ಸಾಧಾರಣವಾಗಿ ಯಾವ ಕ್ರಿಮಿ ಕೀಟಗಳ ಬಾಧೆಯೂ ಇರುವುದಿಲ್ಲ. ಆದರೆ ಮಳೆ ಅತಿಯಾದರೆ ಅಥವಾ ಭೂಮಿಯಲ್ಲಿ ಹೆಚ್ಚು ತೇವವಿದ್ದರೆ ಹುರುಳಿ ಬೆಳೆ ಕೆಟ್ಟು ಹೋಗುವುದು ಮತ್ತು ಜಳ್ಳು ಹೆಚ್ಚಾಗುವುದು.



ದ್ವಿದಳ ಧಾನ್ಯಗಳ ಪೈಕಿ ಒಂದು. ಹೆಚ್ಚು ಪೌಷ್ಠಿಕಾಂಶವುಳ್ಳ ಇದು ಕುದುರೆಗೆ ಮುಖ್ಯ ಆಹಾರ. ಕನ್ನಡದಲ್ಲಿ ಹುರುಳಿ ಎಂದೂ ತೆಲುಗಿನಲ್ಲಿ ಉಲುವಲು ಎಂದೂ ತಮಿಳಿನಲ್ಲಿ ಕೊಳ್ಳು ಇಂಗ್ಲಿಷಿನಲ್ಲಿ ಹಾರ್ಸ್‌ಗ್ರಾಮ್ ಎಂದೂ ಹಿಂದಿಯಲ್ಲಿ ಕುಲ್ತಿ ಎಂದೂ ಕರೆಯುವರು. ಲೆಗ್ಯುಮಿನೇಸೀ ಅಥವಾ ಫ್ಯಾಬೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಡೆಲಿಕೋಸ್ ಬೈಫ್ಲೋರಸ್. ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಬೆಳೆಯುತ್ತಾರೆ. ಕೃಷಿಕನಿಗೆ ಕೈ ಭಾಷೆ ಕೊಟ್ಟ ಬೆಳೆಯಿದು. ಅನಾವೃಷ್ಟಿಯಿಂದಾಗಿ ಮುಂಗಾರು ಕೈ ಕೊಟ್ಟಾಗ, ಸಕಾಲಕ್ಕೆ ಮಳೆ ಬಾರದೆ ಇದ್ದಾಗ ಹುರುಳಿಯನ್ನು ಬಿತ್ತುವರು. ಮಳೆಗಾಲದಲ್ಲೂ ಮತ್ತು ಎಲ್ಲ ಋತುಗಳಲ್ಲೂ ಬೆಳೆಯಬಹುದಾದಂಥದ್ದು. ಮುಖ್ಯ ಬೆಳೆಗೆ ಯೋಗ್ಯವಲ್ಲದ ಜಾಗಗಳಲ್ಲಿ ಫಲವತ್ತಿಲ್ಲದ ಬರಡು ನೆಲದಲ್ಲೂ ಹುರುಳಿಯನ್ನು ಬೆಳೆಯಬಹುದು. ಹುರುಳಿ ಹೊಲಕ್ಕೆ ಗೊಬ್ಬರವೇಕೆ ? ಎನ್ನುವ ಗಾದೆಯೇ ಈ ಬೆಳೆಗೆ ಗೊಬ್ಬರದ ಅಗತ್ಯವಿಲ್ಲವೆಂಬುದನ್ನು ತಿಳಿಸುತ್ತದೆ. ಒಮ್ಮೆ ಬಿತ್ತಿದರೆ ಸಾಕು ಹೆಚ್ಚಿನ ಆರೈಕೆಯನ್ನು ಬಯಸದೆ ಫಲ ಕೊಡುತ್ತದೆ. ಕಳೆ ಕೀಳುವ ಆವಶ್ಯಕತೆಯಿಲ್ಲ. ಮಣ್ಣನ್ನು ಸಡಿಲಿಸಿ ಹದ ಮಾಡಬೇಕಿಲ್ಲ. ಹುರುಳಿ ಗಿಡ ಸಮೃದ್ಧವಾಗಿ ಬೆಳೆದರೆ ಇಳುವರಿ ಕಡಿಮೆಯಾಗುವುದರಿಂದ ಸಾಮಾನ್ಯವಾಗಿ ಬರಡು ನೆಲದಲ್ಲಿ ಮತ್ತು ಕಡಿಮೆ ಮಳೆ ಬೀಳುವ ಕಾಲದಲ್ಲಿ ಇದರ ಬಿತ್ತನೆ ಮಾಡುವರು. ಹುರುಳಿ ಹುಲುಸಾಗಿ ಬೆಳೆದಷ್ಟು ಹರಡುಬಳ್ಳಿಯಂತೆ ವಿಸ್ತಾರವಾಗುತ್ತಾ

ಹೋಗುತ್ತದೆ. ಹೆಚ್ಚು ಹೂ ಬಿಟ್ಟು ಕಾಯಿ ಕಚ್ಚಿದರೂ ಬೀಜ ಬಲಿಯುವುದಿಲ್ಲ. ಜಳ್ಳು ಹೆಚ್ಚಾಗುತ್ತದೆ. ಗಿಡ ತೆಳ್ಳಗೆ, ಗಿಡ್ಡಾಗಿ ಬೆಳೆದಷ್ಟು ಸಸ್ಯದ ತುಂಬ ಕಾಯಿ ಬಿಟ್ಟು ಬೀಜ ತುಂಬಿ ಹೆಚ್ಚು ಇಳುವರಿ ಕೊಡುತ್ತದೆ. ಬರಗಾಲ ನೀಗಿಸುವ ಈ ಧಾನ್ಯ ಕಷ್ಟ ಕಾಲದಲ್ಲಿ ರೈತನನ್ನು ಕಾಪಾಡುತ್ತದೆ. ಇದರ ಬೆಲೆಯೂ ಅಗ್ಗ, ತಿನ್ನಲು ಯೋಗ್ಯ. ಇಂದು ಇದರ ಬೆಲೆ ಗಗನಕ್ಕೇರಿದೆ. ಹುರುಳಿ ಬೆಳೆಯುವ ರೈತರ ಸಂಖ್ಯೆಯೂ ಕಡಿಮೆಯಾಗಿದೆ.

ಸಾಮಾನ್ಯವಾಗಿ ಮುಖ್ಯ ಬೆಳೆ ಮಳೆಯ ಅಭಾವದಿಂದ ಒಣಗಿ ನಷ್ಟವಾದಾಗ ಅಂಥ ಜಾಗದಲ್ಲಿ ಹಲುಬೆ ಅಥವಾ ನೇಗಿಲಿನಿಂದ ಒಂದು ಸಾಲು ಉತ್ತು ಹದಮಾಡಿ ಹುರುಳಿ, ಬಿತ್ತುವರು. ಬಹುವಾರ್ಷಿಕ ಬೆಳೆಗಳಾದ ತೆಂಗು, ಮಾವು, ಸೀಬೆ, ಹುಣಿಸೆ ಸಸಿಗಳನ್ನು ನೆಟ್ಟ ಭೂಮಿಯಲ್ಲಿ ಅವು ಫಸಲು ಕೊಡುವ ತನಕ ನೆರಳು ಹಬ್ಬುವ ಮೊದಲ ವರ್ಷಗಳಲ್ಲಿ ಈ ಬೆಳೆಯನ್ನು ಮಾಡುತ್ತಾರೆ. ಇಂಥ ಜಾಗಗಳಲ್ಲಿ ಕೆಲವರು ಕಾಯಿ ಬಲಿಯುವ ತನಕ ಬಿಟ್ಟು ಇಳುವರಿ ಪಡೆದರೆ ಇನ್ನು ಕೆಲವರು ಹೂ ಬಿಡುವ ಮೊದಲೇ ಉತ್ತು ಅದೇ ಮಣ್ಣಿಗೆ ಗೊಬ್ಬರಕ್ಕಾಗಿ ಸೇರಿಸಿಬಿಡುತ್ತಾರೆ. ಮಳೆಯ ಏರು ಪೇರುಗಳಿಂದ ಬಿತ್ತಿದ ಹೊಲ ಗದ್ದೆಗಳಲ್ಲಿ ಸಮವಾಗಿ ಬೆಳೆಯದೆ ತೇವ ಇರುವ ಕಡೆ ಮಾತ್ರ ಮೊಳಕೆಯೊಡೆದು ಎತ್ತರದ ಭಾಗಗಳಲ್ಲಿ ಬೆಳೆ ಸರಿಯಾಗಿ ಬರದೆ ಇರುತ್ತದೆ. ಅಂಥ ಜಾಗಗಳಲ್ಲಿ ನೇಗಿಲಿನಿಂದ ಉಳಲು ಸಾಧ್ಯವಾಗುವುದಿಲ್ಲ. ಕೈಗೆ ಗುದ್ದಲಿಯಿಂದ ಅಗೆದು ಹುರುಳಿ ಬಿತ್ತುವರು. ಇಲ್ಲಿ ಮುಖ್ಯ ಬೆಳೆಯೂ ಅಲ್ಪ ಪ್ರಮಾಣದಲ್ಲಿ ಕೈಗೆ ಸಿಕ್ಕಿ ಉಳಿದ ಜಾಗವೂ ಉಪಯೋಗಿಸಿಕೊಂಡಂತಾಗುತ್ತದೆ.


**ಬಿತ್ತನೆ ಮತ್ತು ಕೊಯ್ಲು :** ಒಂದು ಎಕರೆಗೆ ಬಿತ್ತಲು ಸುಮಾರು 8-10 ಸೇರು ಹುರುಳಿ ಬೇಕಾಗುತ್ತದೆ. ಒಂದೆರಡು ಬಾರಿ ಉತ್ತು ಮಳೆ ಬಿದ್ದ ಸಮಯದಲ್ಲಿ ಅಥವಾ ಭೂಮಿಯಲ್ಲಿ ತೇವಾಂಶ ಇರುವಾಗ ಕೈಯಿಂದ ಎರಚಿ ಬಿತ್ತುವರು. ಹಿಂದೆ ಹೇಳಿದಂತೆ ಯಾವುದೇ ಆರೈಕೆಯ ಅಗತ್ಯವಿಲ್ಲದೆ ಬೆಳೆಯುವ ಹುರುಳಿ ಸುಮಾರು ನಾಲ್ಕೈದು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಹುರುಳಿ ಗಿಡವನ್ನು ಬೆಳಗಿನ ಜಾವ ಅಥವಾ ಸಂಜೆ ಸಮಯದಲ್ಲಿ ಕೊಯ್ಲು ಮಾಡಬೇಕು. ಬೆಳೆ ಹುಲುಸಾಗಿ ಮತ್ತು ದಟ್ಟವಾಗಿ ಬೆಳೆದಿದ್ದರೆ. ಕುಡುಗೋಲಿನಿಂದ ಕೊಯ್ಯುತ್ತಾರೆ. ಭೂಮಿ ಗಡುಸಾಗಿದ್ದು ಮಳೆ ಬಾರದಿದ್ದ ದಿನಗಳಲ್ಲಿ ಕೈಯಿಂದ ಕೊಯ್ಯಲು ಸಾಧ್ಯವಾಗದಿದ್ದಾಗ ಕುಡುಗೋಲು ಬಳಸುವರು. ತಂಪಾದ ಸಮಯದಲ್ಲಿ ಕೊಯ್ಲು ಮಾಡಲು ಕಾರಣ, ಬಲಿತ ಕಾಯಿಗಳು ಬಿಸಿಲು ಏರಿದಂತೆಲ್ಲ ಮುಟ್ಟಿದರೆ ಸಿಡಿಯುತ್ತವೆ. ಕೊಯ್ಲು ಮಾಡಿದ ಗಿಡಗಳನ್ನು ಮಂಜು ಇರುವಾಗಲೇ ಹುರುಳಿ ಉದುರದ ಹಾಗೆ ಜೋಪಾನವಾಗಿ ಕಣಕ್ಕೆ ಸಾಗಿಸಿ ಹದವಾಗಿ ಹರಡಿ ಮೂರ್‍ನಾಲ್ಕು ದಿವಸ ಒಣಗಲು ಬಿಡುತ್ತಾರೆ. ಅನಂತರ ಮಳೆಯಿಲ್ಲದ ಸಮಯದಲ್ಲಿ ಬಿಸಿಲಿನ ತಾಪ ಹೆಚ್ಚಾಗಿರುವಾಗ ದೊಣ್ಣೆಗಳಿಂದ ಬಡಿದೋ ದನಗಳಿಂದ ತುಳಿಸಿಯೋ ರೋಣುಗಲ್ಲನ್ನು ಬಳಸಿಯೋ ಬೀಜಗಳನ್ನು ಬೇರ್ಪಡಿಸಿ ಶುದ್ಧಗೊಳಿಸಿ ಮನೆಗೆ ಸಾಗಿಸುವ ಮೊದಲು ರಾಶಿಗೆ ಪೂಜೆ ಮಾಡಿ, ಆಯಗಾರರು ಮುಂತಾದವರಿಗೆ ಕೊಡಬೇಕಾದ ಪಾಲು ಕೊಟ್ಟು ಮನೆಗೆ ಸಾಗಿಸುವರು.

**ಉಪಯೋಗಗಳು :** ಗ್ರಾಮೀಣರ ಆಹಾರವಾದ ಇದನ್ನು ಅನೇಕ ರೀತಿಯಲ್ಲಿ ಉಪಯೋಗಿಸುವುದುಂಟು. ಹುರಿದು ಉಪ್ಪುಖಾರ ಬೆರೆಸಿ, ಇತರ ಕಾಳುಗಳೊಂದಿಗೆ ಸೇರಿಸಿ ಚಳಿಗಾಲದಲ್ಲಿ ಹುರಿಗಾಳಿನಂತೆ ಉಪಯೋಗಿಸುತ್ತಾರೆ. ನೇರವಾಗಿಯೋ ಹುರಿದೊ ಸಾರಿಗೆ ಬಳಸುವರು. ಹುರುಳಿ ಮೊಳಕೆ ಬರಿಸಿ ಉಪಯೋಗಿಸಿದರೆ ತುಂಬ ಪೌಷ್ಠಿಕಾಂಶಗಳು ದೊರೆಯುತ್ತವೆ. ವಿವಿಧ ದ್ವಿದಳ ಧಾನ್ಯ ಮತ್ತು ಏಕದಳ ಧಾನ್ಯಗಳನ್ನು ಹುರಿದು ಹಿಟ್ಟು ಮಾಡಿ ಬೆಲ್ಲ ಸೇರಿಸಿ ಗಂಜಿಯಂತೆ ಮಾಡಿ ಮಕ್ಕಳಿಗೆ ನೀಡುವರು. ಹುರುಳಿಯ ಬೇಳೆಯಿಂದ ಹಪ್ಪಳ ಮಾಡುವುದೂ ಉಂಟು. ತೊಗರಿ ಬೇಳೆಯ ಬೆಲೆ ಹೆಚ್ಚಾದುದರಿಂದ ಮತ್ತು ತೊಗರಿ ಬೇಳೆ ಕೈಕೊಟ್ಟಾಗಲೂ ಹುರುಳಿ ಬಳಸಿ ಹೋಳಿಗೆ ತಯಾರಿಸುವರು ಒಡೆಯನ್ನು ಮಾಡುವರು. ಬಡವರಿಗೆ ಸುಲಭ ಬೆಲೆಯಲ್ಲಿ ದೊರಕುವುದರಿಂದ ಇದನ್ನು ಹೋಳಿಗೆಗೆ ಉಪಯೋಗಿಸುತ್ತಾರೆ. ಕುದುರೆಗೆ ಉತ್ತಮ ಆಹಾರವಾಗಿರುವುದರಿಂದ ಇದನ್ನು ಬೇಯಿಸಿ ನೀಡುವರು. ಆದರೆ ಬೇಯಿಸಿದ ಕಟ್ಟು ನೀರು ಹೆಚ್ಚು ಪೋಷಕಾಂಶಗಳನ್ನು ಹೊಂದಿದ್ದು ಇದನ್ನೇ ಸಾರು ಮಾಡಲು ಉಪಯೋಗಿಸುತ್ತಿದ್ದರು. 'ಹಳ್ಳಿ ಮುಕ್ಕನಿಗೆ ಹುಳ್ಳಿ ಕಜ್ಜಾಯ' ಎಂಬ ಗಾದೆ ಮಾತು ಗ್ರಾಮೀಣರ ಆಹಾರ ಎಂಬುದನ್ನು ತಿಳಿಸುವುದರ ಜೊತೆಗೆ ಕಜ್ಜಾಯಕ್ಕೂ ಹುರುಳಿ ಬಳಸುತ್ತಿದ್ದ ವಿಚಾರವನ್ನು ಧ್ವನಿಸುತ್ತದೆ. ಶ್ರೀಮಂತರು ಹುರುಳಿಯ ಬಗೆಗೆ ತೋರುತ್ತಿದ್ದ ಅನಾದರವನ್ನು ಕೂಡ ಇದು ಸಂಕೇತಿಸುತ್ತದೆ.

*ಎನ್. ಆರ್. ಎಸ್. ವಿ.*

**ಹೂಕೋಸು (ಕಾಲಿಫ್ಲವರ್)** ಹೂಕೋಸು ಉತ್ತಮ ತರಕಾರಿಗಳಲ್ಲೊಂದು. ಆಂಗ್ಲಭಾಷೆಯಲ್ಲಿ ಕಾಲಿಫ್ಲವರ್ ಎಂದು ಕರೆಯಲ್ಪಡುವ ಹೂಕೋಸು ಚಳಿಗಾಲದ ಪ್ರಮುಖ ಬೆಳೆ. ಇದನ್ನು ವಿವಿಧ ಅಡುಗೆಗಳಲ್ಲಿ ಬಳಕೆ ಮಾಡುವರು.

**ಬೇಸಾಯ :** ಹೂಕೋಸು ಬೆಳೆಗೆ ಭೂಮಿಯ ಮಣ್ಣು ಹದವಾಗಿರಬೇಕು. ಭೂಮಿಯನ್ನು ನಾಲ್ಕೈದು ಬಾರಿ ಉಳುಮೆ ಮಾಡಿ ನೆಲ ಸಮತಟ್ಟಾಗುವಂತೆ ಉದ್ದಕ್ಕೂ ಅಡ್ಡಕ್ಕೂ ಹಲುಬೆ ಹೊಡೆಯಬೇಕು. ಒಂದು ಎಕರೆಗೆ ಹದಿನೈದರಿಂದ ಇಪ್ಪತ್ತು ಗಾಡಿಯಷ್ಟು ಕೊಟ್ಟಿಗೆ ಗೊಬ್ಬರ ಮತ್ತು ಕೆಮ್ಮಣ್ಣನ್ನು ಭೂಮಿಗೆ ಎರಚಿ ಉಳುಮೆ ಮಾಡಬೇಕು. ಮೊದಲು ಬೀಜವನ್ನು ಒಟ್ಲು ಪಾತಿ ಮಾಡಿ ಬಿತ್ತಬೇಕು. ಒಂದು ಎಕರೆಗೆ ಇನ್ನೂರೈವತ್ತು ಗ್ರಾಂ. ಬೀಜ ಬೇಕಾಗುತ್ತದೆ. ನೀರು ಹದವಾಗಿರುವಂತೆ ನೋಡಿಕೊಳ್ಳಬೇಕು. ಬೀಜ ಮೊಳಕೆಯೊಡೆದು



ಮೂರುವಾರ ಕಳೆದ ಅನಂತರ ಸಸಿಗಳು ನೆಡಲು ಹದವಾಗಿರುತ್ತವೆ. ಹದವಾಗಿರುವ ಭೂಮಿಗೆ ಒಂದೂವರೆ ಅಡಿಗೊಂದರಂತೆ ಸಾಲು ಹೊಡೆಯಬೇಕು. ಒಂದು ಸಸಿಗೂ ಮತ್ತೊಂದು ಸಸಿಗೂ ಹತ್ತರಿಂದ ಹನ್ನೆರಡು ಅಂಗುಲದಷ್ಟು ಅಂತರವಿರುವಂತೆ ನೆಡಬೇಕು. ಅಗತ್ಯವಾದಷ್ಟು ನೀರುಣಿಸುತ್ತಿರಬೇಕು.

**ಕೊಯ್ಲು ಮತ್ತು ಇಳುವರಿ :** ಹೂಕೋಸು ಗೆಡ್ಡೆಗಳು ಚೆನ್ನಾಗಿ ಬಲಿತು ಅಡುಗೆಗೆ ಬಳಸಬಹುದೆನಿಸಿದಾಗ ಕೊಯ್ಲು ಮಾಡಬೇಕು. ಸಾಧಾರಣವಾಗಿ ಮೂರರಿಂದ ನಾಲ್ಕು ತಿಂಗಳಿಗೆ ಕೊಯ್ಲು ಮಾಡುತ್ತಾರೆ. ಭೂಮಿಗೆ ನಾಟಿ ಮಾಡಿದ ಎಲ್ಲಾ ಕೋಸು ಸಸಿಗಳು ಒಂದೇ ಬಾರಿಗೆ ಕೊಯ್ಲಿಗೆ ಬರುವುದಿಲ್ಲ. ಆದುದರಿಂದ ಅವು ಬಲಿತಿರುವುದನ್ನು ಗಮನಿಸಿ ಎರಡು ದಿನಗಳಿಗೊಮ್ಮೆ ಕೊಯ್ಲು ಮಾಡಬೇಕು. ಒಂದು ಎಕರೆಗೆ ಸುಮಾರು ಹತ್ತರಿಂದ ಹನ್ನೆರಡು ಟನ್ ಇಳುವರಿ ಸಿಗುತ್ತದೆ.

**ಮಣ್ಣು ಮತ್ತು ಹವಾಗುಣ :** ಹೂಕೋಸು ಬಿತ್ತುವ ಮಣ್ಣು ಹುಡಿಯಾಗಿರಬೇಕು. ನೀರು ಸುಲಭವಾಗಿ ಇಂಗಿ ಹೋಗುವಂತಿರಬೇಕು. ಕೆಬ್ಬೆ ಮಣ್ಣಿನಲ್ಲಿ ಹೂಕೋಸು ಚೆನ್ನಾಗಿ ಬರುತ್ತದೆ. ಜುಲೈ - ಆಗಸ್ಟ್ ತಿಂಗಳಿನಿಂದ ನವೆಂಬರ್ - ಡಿಸೆಂಬರ್ ತಿಂಗಳವರೆಗೂ ಬಿತ್ತಿ ಬೆಳೆಯುತ್ತಾರೆ.

**ತಳಿಗಳು :** ಹೂಕೋಸಿನಲ್ಲಿ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಎಂಬ ಮೂರು ತಳಿಗಳಿವೆ. ಅರ್ಲೀಸ್ನೋಬಾಲ್, ಮಹಿಕೋರಾಣಿ ತಳಿಗಳು ಅಲ್ಪಾವಧಿಯ ತಳಿಗಳು. ಸ್ನೋಬಾಲ್, ಮಹಾರಾಜ ಮಧ್ಯಮಾವಧಿಯ ತಳಿಗಳು ಹಾಗೂ ಲೇಟ್ ಸ್ನೋಬಾಲ್, ಸ್ನೋಬಾಲ್ ದೀರ್ಘಾವಧಿಯ ತಳಿಗಳಾಗಿವೆ.

**ರೋಗಗಳು :** ಹೂಕೋಸಿಗೆ ಅನೇಕ ರೋಗಗಳು ತಗಲುತ್ತವೆ. ಅಧಿಕವಾದ ಉಷ್ಣತೆಯಿದ್ದು ನೀರಿನ ಅಂಶ ಕಡಿಮೆಯಾದರೆ, ಸಸಿಗಳು ಹೆಚ್ಚಾಗಿ ಬಲಿತಿದ್ದರೆ ಹಾಗೂ ಋತುಮಾನಕ್ಕೆ ಸರಿಯಾದ ತಳಿಯನ್ನು ಬಿತ್ತನೆ ಮಾಡದಿದ್ದರೆ ಸಸಿಗಳು ಒಣಗುತ್ತವೆ. ಕಾಂಡದಲ್ಲಿ ಟೊಳ್ಳು ಕಾಣಿಸಿಕೊಳ್ಳುವುದು, ಕಂದಾಗುವಿಕೆ ಇತ್ಯಾದಿ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಇಂಥ ಸಂದರ್ಭದಲ್ಲಿ ಮಿತ ಪ್ರಮಾಣದಲ್ಲಿ ಬೋರಾಕ್ಸ್ ಮತ್ತಿತರ ರಾಸಾಯನಿಕ ಔಷಧಿಗಳನ್ನು ಸಿಂಪರಣೆ ಮಾಡಿದರೆ ನಿವಾರಣೆಯಾಗುತ್ತದೆ.

**ಔಷಧಿಯ ಗುಣ :** ಸುಲಭವಾಗಿ ಜೀರ್ಣವಾಗುವ ಹೂಕೋಸು ಹಲವು ವ್ಯಾಧಿಗಳನ್ನು ನಿಯಂತ್ರಿಸುತ್ತದೆ. ಗ್ಯಾಸ್ಟಿಕ್ ಇರುವವರು ಹೂಕೋಸಿನೊಂದಿಗೆ ಸ್ವಲ್ಪ ಶುಂಠಿ ಸೇರಿಸಿ ಉಪಯೋಗಿಸಿದರೆ ಉಪಶಮನವಾಗುವುದು. ಅದೇ ರೀತಿ ಮೂಲವ್ಯಾಧಿಯಿಂದ ಬಳಲುತ್ತಿರುವವರು ಹೂಕೋಸನ್ನು ತುಪ್ಪದಲ್ಲಿ ಹುರಿದು ಸ್ವಲ್ಪ ಸೈಂಧವ ಲವಣ ಸೇರಿಸಿ ಉಪಯೋಗಿಸಿದರೆ ಒಳ್ಳೆಯದು. ಕಜ್ಜಿ ಮತ್ತು ಗುಳ್ಳೆಗಳಿಗೆ ಹೂಕೋಸು ಮತ್ತು ಅದರ ಎಲೆಗಳ ರಸವನ್ನು ಹಚ್ಚುವುದರಿಂದ ನವೆ ಕಡಿಮೆಯಾಗುತ್ತದೆ. ಹೂಕೋಸಿನ ಎಲೆಗಳು 'ಎ' ಜೀವಸತ್ವವನ್ನು ಹೊಂದಿವೆ. ಹೂಕೋಸಿನ ರಸವನ್ನು ನಿತ್ಯ ಸೇವನೆ ಮಾಡುವುದರಿಂದ ಶರೀರಕ್ಕೆ 'ಎ' ಜೀವಸತ್ವ ಪೂರೈಕೆಯಾಗುತ್ತದೆ. ಚರ್ಮ ಹಾಗೂ ಕೂದಲಿನ ಆರೋಗ್ಯವನ್ನು ಕಾಂತಿಗೊಳಿಸಿ ರಕ್ಷಣೆ ಮಾಡುತ್ತದೆ. ಗರ್ಭಿಣಿಯರು ತಾಜಾ ಹೂಕೋಸಿನ ರಸವನ್ನು ಶುಂಠಿಯೊಂದಿಗೆ ಉಪಯೋಗಿಸಿದರೆ 'ಸಿ' ಜೀವ ಸತ್ವ ದೊರೆಯುತ್ತದೆ. ತಾಜಾ ಹೂವಿನ ರಸವನ್ನು ಪ್ರಾತಃ ಕಾಲದಲ್ಲಿ ನಿತ್ಯ ಸೇವನೆ ಮಾಡುವುದರಿಂದ ಹೊಟ್ಟೆ ಉರಿ ಶಮನವಾಗುತ್ತದೆ ಮತ್ತು ವಸಡಿನಲ್ಲಿ ರಕ್ತಸ್ರಾವವಿದ್ದರೆ ಕಡಿಮೆಯಾಗುತ್ತದೆ. ಹೂಕೋಸಿನಿಂದ ಉತ್ತಮವಾದ ಹಾಗೂ ರುಚಿಯಾದ ತಿಂಡಿ ತಿನಿಸುಗಳನ್ನು ತಯಾರಿಸಬಹುದಲ್ಲದೆ ಔಷಧಿಯಾಗಿಯೂ ಬಳಸಬಹುದು.

*ಪಿ.ಸಿ.ಡಿ.*

**ಹೆಬ್ಬೇವು** ಕನ್ನಡದಲ್ಲಿ ಹೆಬ್ಬೇವು, ಯಾಬೇವು ಹೆಸರುಗಳಾದರೆ ಇಂಗ್ಲಿಷ್‌ನಲ್ಲಿ 'ಪರ್ಷಿಯನ್ ಲೈಲಾಕ್'. ಇದರ ಸಸ್ಯಶಾಸ್ತ್ರದ ಹೆಸರು ಮೆಲಿಯ ಅಜಾದ್‌ರಕ್. ಸುಮಾರು 25ರಿಂದ 30 ಅಡಿ ಎತ್ತರ ಬೆಳೆಯುವುದು. ವಿಶಾಲವಾದ ರೆಂಬೆ, ಕೊಂಬೆಗಳಿಂದ ಕೂಡಿದ್ದು ಬಿಚ್ಚಿದ ಅಗಲವಾದ ಹಸುರು ಕೊಡೆಯಂತೆ ಕಂಗೊಳಿಸುತ್ತದೆ. ನೆಟ್ಟ ಒಂದು ವರ್ಷದಲ್ಲೆ 8-10 ಅಡಿ ಬೆಳೆದು 5-6 ವರ್ಷದಲ್ಲಿ ಹೆಮ್ಮರವಾಗುತ್ತದೆ. ಡಿಸೆಂಬರ್ ಜನವರಿ ತಿಂಗಳುಗಳಲ್ಲಿ ಮಾಗಿ ಚಳಿಗೆ ಇದರ ಎಲೆಗಳು ಉದುರುತ್ತವೆ. ಹೆಬ್ಬೇವನ್ನು ಮಾಗಡಿ, ರಾಮನಗರ, ಕನಕಪುರ, ಕುಣಿಗಲ್ ತಾಲ್ಲೂಕಿನಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇದರಲ್ಲಿ ಬೆಟ್ಟಬೇವು, ಹೆಬ್ಬೇವು ಎಂಬ ಎರಡು ವಿಧಗಳಿವೆ. ಎಲೆ ಮತ್ತು ಬೀಜದ ಗಾತ್ರದಿಂದ ವ್ಯತ್ಯಾಸವನ್ನು ಗುರುತಿಸಬಹುದು.



**ಸಸಿಗಳನ್ನು ಬೆಳೆಸುವುದು :** 15-20 ವರ್ಷ ಬೆಳೆದ ಮರವನ್ನು ಆಯ್ಕೆ ಮಾಡಿಕೊಂಡು ಫೆಬ್ರವರಿ, ಮಾರ್ಚ್ ತಿಂಗಳುಗಳಲ್ಲಿ ಬೀಜಗಳನ್ನು ಸಂಗ್ರಹಿಸುತ್ತಾರೆ. ಹೆಬ್ಬೇವಿನ ಬೀಜಗಳಲ್ಲಿ ಮೊಳಕೆ ಪ್ರಮಾಣ ತುಂಬಾ ಕಡಿಮೆ. 100 ಬೀಜಗಳನ್ನು ಬಿತ್ತಿದರೆ 15-20 ಬೀಜಗಳು ಮೊಳಕೆ ಬರುತ್ತವೆ. ಬೀಜಗಳನ್ನು ನೇರವಾಗಿ ಪ್ಲಾಸ್ಟಿಕ್ ಚೀಲಗಳಿಗೆ ಬಿತ್ತದೆ, 4 ಅಡಿ ಅಗಲ, 5ರಿಂದ 6 ಅಡಿ ಉದ್ದದ ಏರು ಮಡಿಗಳ ಮೇಲೆ ಮಾರ್ಚ್ ತಿಂಗಳ ಮೂರು ಅಥವಾ ನಾಲ್ಕನೆಯ ವಾರದಲ್ಲಿ ಬಿತ್ತಬೇಕು.

ಮಾವಿನ ತೋಟಗಳಲ್ಲಿ ಗಿಡದಿಂದ ಗಿಡಕ್ಕೆ 30-35 ಅಡಿ ಅಂತರ ಕೊಟ್ಟು ಎರಡು ಮಾವಿನ ಗಿಡಗಳ ಮಧ್ಯೆ ಒಂದು ಹೆಬ್ಬೇವನ್ನು ನೆಡುವರು. ಮಾವಿನ ತೋಪಿನ ಕೊನೆಯಲ್ಲಿ ಹೆಬ್ಬೇವಿನ ಮರಗಳನ್ನು ಬೆಳೆಸುವುದು ಒಳ್ಳೆಯದು. ಇವು ವೇಗವಾಗಿ ಬೆಳೆದು 8ರಿಂದ 10 ವರ್ಷಗಳಲ್ಲಿ ಕಟಾವಿಗೆ ಬರುತ್ತದೆ.

ಸೀಬೆ, ಸಪೋಟ, ಬೆಟ್ಟದನೆಲ್ಲಿ, ಸೀತಾಫಲ, ನುಗ್ಗೆ ತೋಟದ ಮಧ್ಯೆ ಹೂವಿನ ಗಿಡಗಳಾದ ಕಾಕಡ ಕನಕಾಂಬರ ತೋಟಗಳಲ್ಲಿ ಕೂಡ ಹೆಬ್ಬೇವನ್ನು ಬೆಳೆಯುವುದುಂಟು.

ರಾಗಿ ತೊಗರಿ ಹೊಲಗಳ ಬದುಗಳ ಮೇಲೆ ಹೆಬ್ಬೇವಿನ ಗಿಡಗಳನ್ನು ಪೂರ್ವ ಪಶ್ಚಿಮಾಭಿಮುಖವಾಗಿ ಹಾಕುತ್ತಾರೆ. ಗಿಡದಿಂದ ಗಿಡಕ್ಕೆ 25-30 ಅಡಿ ಅಂತರ ಇರುತ್ತದೆ. ಒಟ್ಟು ಒಂದು ಎಕರೆಗೆ 15-20 ಮರ ನೆಡುತ್ತಾರೆ. ಒಂದು ಮರ 10 ಸಾವಿರ ಬೆಲೆ ಬಾಳುವುದು. ಹೊಲದಲ್ಲಷ್ಟೆ ಅಲ್ಲದೆ ಹಿತ್ತಲಲ್ಲೂ ಬೆಳೆಯಬಹುದು. ಇದರಿಂದ ದನ-ಕರುಗಳ ಮೇವಿಗೆ ಉಪಯೋಗವಾಗುತ್ತದೆ.

ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಎರಡು ಚದರಡಿಯ ಗುಂಡಿಗಳನ್ನು ತೆಗೆದು ಸಸಿಗಳನ್ನು ನೆಡಬೇಕು. ನೆಟ್ಟ ಒಂದು ವರ್ಷಕ್ಕೆ ಗಿಡದ ಪಕ್ಕದಲ್ಲಿ ಬರುವ ರೆಂಬೆಗಳನ್ನು ಕೊಂಬೆಗಳನ್ನು ಕತ್ತರಿಸಿ ತೆಗೆಯಬೇಕು. ಸು. 15ರಿಂದ 20 ಅಡಿ ಬೆಳೆಯುವವರೆಗೆ ಪ್ರತಿವರ್ಷ ಕೊಂಬೆಗಳನ್ನು ತೆಗೆಯಬೇಕು.

ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಮಣ್ಣಿನ ತೇವಾಂಶವನ್ನು ನೋಡಿಕೊಂಡು ತಿಂಗಳಿಗೆ ಎರಡು ಸಾರಿ ನೀರು ಕೊಡಬೇಕು. ಸಾಕು ಪ್ರಾಣಿಗಳಿಂದ ರಕ್ಷಿಸಲು ಮುಳ್ಳನ್ನು ಕಟ್ಟುವುದು ಅಗತ್ಯ. ವಿಶೇಷವಾಗಿ ಮೇಕೆಗಳು ಗಿಡಗಳ ಕಾಂಡ ತಿನ್ನುವುದನ್ನು ತಪ್ಪಿಸಲು ರೈತರು ಕಾಂಡಗಳಿಗೆ ಸಗಣಿ ಚಿಗ್ಗಡವನ್ನು ಸವರುವುದು ವಾಡಿಕೆ.

ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕೆಗಳಿಗೆ ಮನೆಯ ಸಾಮಾನುಗಳಿಗೆ ಹೆಬ್ಬೇವಿನ ಬೇಡಿಕೆ ಹೆಚ್ಚಾಗುತ್ತಿದೆ. ಹೆಬ್ಬೇವು ವೇಗವಾಗಿ ಬೆಳವಣಿಗೆಯಾಗಲು ಕಾರಣ ಭೂಮಿಯ ಮೇಲ್ಭಾಗದಲ್ಲಿ ಹರಡಿಕೊಂಡು ಬೆಳೆಯುವ ಅದರ ಬೇರುಗಳ ವ್ಯೂಹ ರಚನೆಯಾಗಿ ಅದರಿಂದ ಪೋಷಕಾಂಶಗಳ ಪೂರೈಕೆಯಾಗುತ್ತದೆ.

ಗಟ್ಟಿಮುಟ್ಟಾದ ಮರವಾಗಿರುವುದರಿಂದ ಇದಕ್ಕೆ ರೋಗಬಾಧೆ ಕಡಿಮೆ.

**ಹೆಬ್ಬೇವಿನ ಕಟಾವು :** ವೇಗವಾಗಿ ಬೆಳೆಯುವ ಹೆಬ್ಬೇವು 20 ವರ್ಷಗಳಲ್ಲಿ ಇಬ್ಬರು ತಬ್ಬುವಷ್ಟು ದಪ್ಪ ಬೆಳೆಯುತ್ತದೆ. ಮರ ಆಧಾರಿತ ಕೈಗಾರಿಕೆಗಳಿಗೆ 6,8,10 ವರ್ಷಗಳ ಮರಗಳ ಕಟಾವು ಮಾಡಬಹುದು. ಕಟಾವು ಮಾಡಿದ ಅನಂತರ ಮತ್ತೆ ಚಿಗುರಿ ಒಂದೇ ವರ್ಷದಲ್ಲಿ 10-15 ಅಡಿ ಎತ್ತರ ಬೆಳೆಯುತ್ತದೆ. ಕಡಿದ ಬುಡದಿಂದ ಮೂರು ಬಾರಿ ಹೆಬ್ಬೇವಿನ ಫಸಲನ್ನು ಪಡೆಯಬಹುದು.

ಚೌಬೀನೆಗೆ ಬಳಸುವಾಗ ಗಾಳಿ, ಮಳೆ ನೀರಿನ ಹೊಡೆತ ಇರುವ ಹೊರ ಭಾಗಗಳಿಗೆ ಬಳಸುವುದು ಸರಿಯಲ್ಲ. ರೀಪರ್, ಬಾಗಿಲು, ಚಾವಣಿಗಳಿಗೆ ಇದರ ಹಲಗೆಗಳನ್ನು ಬಳಸುವರು. ಕೈಗಾರಿಕೆಗಳಲ್ಲಿ ಇದರ ಬೇಡಿಕೆ ಹೆಚ್ಚು. ಆಟದ ಸಾಮಾನುಗಳು, ಮಿಲಿಟರಿ ಶಸ್ತ್ರಾಸ್ತ್ರಗಳು, ಸಂಗೀತ ವಾದ್ಯಗಳು, ಎಲೆಕ್ಟ್ರಾನಿಕ್, ಆಟೋಮೊಬೈಲ್, ಮೋಟರ್ ಉಪಕರಣಗಳು, ಪೆಟ್ಟಿಗೆಗಳು, ಕೃಷಿ ಉಪಕರಣಗಳು, ಪ್ಲೇವುಡ್, ಪೆನ್ಸಿಲ್‌ಗಳ ತಯಾರಿಕೆಯಲ್ಲಿ ಕೂಡ ವ್ಯಾಪಕವಾಗಿ ಬಳಸುತ್ತಾರೆ.

**ಆಧಾರ ಗ್ರಂಥಗಳು**


ಅಂತರ್‌ಜಾಲ ಸಹಾಯ

ಸಹಜಸಾಗುವಳಿ - ಎಲ್.ಸಿ. ಚನ್ನರಾಜ


**ಎನ್.ಸಿ.**

**ಹೆಸರುಕಾಳು** ದೇಹಕ್ಕೆ ತಂಪನ್ನು ನೀಡುವ ಹೆಸರುಕಾಳು ಮುಖ್ಯವಾಗಿ ಕೆಂಪು ಮಣ್ಣು ಪ್ರದೇಶದಲ್ಲಿ, ಕಡಿಮೆ ಅವಧಿಯಲ್ಲಿ ಬೆಳೆಯುವ ಬೆಳೆ. ಮುಂಗಾರಿನಲ್ಲಿ ಖುಷ್ಕಿ ಬೆಳೆಯಾಗಿಯೂ ಬೇಸಿಗೆ ಕಾಲದಲ್ಲಿ ನೀರಾವರಿಯನ್ನು ಆಶ್ರಯಿಸಿ ಇದನ್ನು ಬೆಳೆಯಲಾಗುತ್ತದೆ. ಬತ್ತ ಕಟಾವಾದ ಮೇಲೆ ಗದ್ದೆಯಲ್ಲಿರುವ ತೇವಾಂಶವನ್ನು ಗಮನಿಸಿಯೂ ಈ ಬೆಳೆಯನ್ನು ಬೆಳೆಯಬಹುದು.

**ಇಳುವರಿ :** ಕರ್ನಾಟಕ ರಾಜ್ಯದಲ್ಲಿ ಈ ಬೆಳೆಯನ್ನು 3.76 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಇದರ ಉತ್ಪಾದನೆ 1.30 ಲಕ್ಷ ಟನ್‌ಗಳಷ್ಟಿದೆ. ಬೇಸಗೆಯಲ್ಲಿ ನೀರಾವರಿಯನ್ನು ಆಶ್ರಯಿಸಿ ಹೆಕ್ಟೇರಿಗೆ 10 ರಿಂದ 12.5 ಕ್ವಿಂಟಾಲ್, ಖುಷ್ಕಿ ಬೆಳೆಯಿಂದ ಹೆಕ್ಟೇರಿಗೆ 5 ರಿಂದ 7.5 ಕ್ವಿಂಟಾಲ್ ಇಳುವರಿಯನ್ನು ಪಡೆಯಬಹುದು.



**ತಳಿಗಳು :**

ಪಿ.ಎಸ್. 16- ಸುಮಾರು 65 ರಿಂದ 70 ದಿನಗಳಲ್ಲಿ ಏಪ್ರಿಲ್ - ಮೇ, ಜನವರಿ - ಫೆಬ್ರವರಿ ತಿಂಗಳುಗಳಲ್ಲಿ ಬೆಳೆಯಬಹುದು.

ಪೂಸಾ ಬೈಸಾಕಿ - 65 ರಿಂದ 70 ದಿನಗಳಲ್ಲಿ ಜನವರಿ - ಫೆಬ್ರವರಿ ತಿಂಗಳಿನಲ್ಲಿ ಬೆಳೆಯಬಹುದು.

ಪಿಡಿಎಂ 8400178 - ಇದು ಸಹ 65 ರಿಂದ 70 ದಿನಗಳಲ್ಲಿ ಬೇಸಗೆ ಅಥವಾ ಮುಂಗಾರಿನಲ್ಲಿ ಬೆಳೆಯಲಾಗುತ್ತದೆ.



ಮಣ್ಣು ಮತ್ತು ಹವಾಗುಣವನ್ನು ಅನುಸರಿಸಿ ಎರಡು ಸಾರಿ ಅಂತರ ಬೆಳೆಯಾಗಿ ಈ ಹೆಸರುಕಾಳನ್ನು ಬೆಳೆಯಲಾಗುತ್ತದೆ. ಮೊದಲು ಭೂಮಿಯನ್ನು ಹದಮಾಡಿ ರಾಸಾಯನಿಕ ಗೊಬ್ಬರಗಳಾದ ಸಾರಜನಕ, ರಂಜಕ, ಪೊಟ್ಯಾಶ್‌ಗಳನ್ನು ಮಣ್ಣಿನಲ್ಲಿ ಬೆರೆಸಬೇಕು. ಬಿತ್ತನೆಗೆ ಮೊದಲು ಬೀಜವನ್ನು ರೈಜೋಬಿಯ ಮತ್ತು ರಂಜಕವನ್ನು ಕರಗಿಸುವ ಜೀವಾಣುಗಳಿಂದ ಉಪಚರಿಸಿ, 30 ಸೆಂ.ಮೀ. ಅಂತರದಲ್ಲಿ ಸಾಲುಮಾಡಿ, 7.5 ರಿಂದ 10 ಸಿ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು.

ಬೇಸಗೆ ಮತ್ತು ಮಳೆಗಾಲದ ಬೆಳೆಗಳಿಗೆ ಯುಕ್ತವಾದ ತಳಿಗಳನ್ನು ಬಳಸಿ, ಮಳೆಗಾಲದ ಬೆಳೆಯನ್ನು ಏಪ್ರಿಲ್-ಮೇ ತಿಂಗಳುಗಳಲ್ಲಿಯೂ, ಬೇಸಗೆ ಬೆಳೆಯನ್ನು ಜನವರಿ-ಫೆಬ್ರವರಿ ತಿಂಗಳುಗಳಲ್ಲಿಯೂ ಬಿತ್ತನೆ ಮಾಡುವುದು ಹೆಚ್ಚು ಯುಕ್ತವಾಗುತ್ತದೆ.

**ಕೀಟಗಳು :** ಎಲೆ ಜಿಗಿಹುಳು - ಎಲೆಗಳು ಮುದುರಿ ಹಳದಿ ಬಣ್ಣಕ್ಕೆ ತಿರುಗುತ್ತದೆ

ಸಸ್ಯಹೇನು - ಹೇನುಗಳಿಂದ ತುಂಬಿ ಎಲೆಗಳು ಮುದುರಿಕೊಳ್ಳುತ್ತದೆ.

ಅಗ್ರೋಮೈಜಿಡ್ ನೊಣ- ಕೀಟವು ಕಾಂಡದ ಬುಡವನ್ನು ಕೊರೆಯುವುದರಿಂದ ಗಿಡ ಬಾಡಿ ಹೋಗುತ್ತದೆ.

ಕಾಯಿಕೊರಕ - ಕಾಯಿಗಳಲ್ಲಿ ರಂಧ್ರಗಳುಂಟಾಗುತ್ತವೆ.

**ರೋಗಗಳು :** ನಂಜುರೋಗ - ಎಲೆಗಳು ಕಾಂತಿಹೀನವಾಗಿ ಹೂವು ಸರಿಯಾಗಿ ಬಿಡುವುದಿಲ್ಲ.

ಬೂದಿರೋಗ - ಬೂದಿಯಂತಹ ಬಿಳಿಪುಡಿ, ಎಲೆ ಮತ್ತು ಕಾಂಡಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಎಲೆ ಚುಕ್ಕೆ ರೋಗ - ಎಲೆಗಳ ಮೇಲೆ ಕಂದುಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ.

ಗಿಡಗಳಿಗೆ ಕಾಡುವ ರೋಗ ಮತ್ತು ಕೀಟಗಳನ್ನು ಹತೋಟಿಗೊಳಿಸಲು ಡೈಮಿಥೊಯೇಟ್, ಫಾಸ್ಫಾಮಿಡಾನ್, ಕ್ಲೋರೊಪೈಂಫಾಸ್ ನೀರಿನಲ್ಲಿ ಕರಗುವ ಗಂಧಕ ಮೊದಲಾದ ರೋಗ ಮತ್ತು ಕೀಟನಾಶಕಗಳನ್ನು ಬಳಸಬಹುದು.

**ಎಸ್.ಬಿ.**

**ಹೇರಿಳೆ** ಇದರ ಮೂಲ ಸ್ಥಳ ಭಾರತ. ಆಂಧ್ರದ ಕೃಷ್ಣ ಮತ್ತು ಗುಂಟೂರು ಜಿಲ್ಲೆಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮುಳ್ಳುಗಳಿರುವ ಈ ಮರದ ಎಲೆಗಳಲ್ಲಿ ಗೆರೆಗಳಿರುತ್ತವೆ. ಇದರ ಹೂವು ಬೆಳ್ಳಗಿದ್ದು ಹಣ್ಣು ಕಿತ್ತಲೆಯಾಕಾರದಲ್ಲಿರುತ್ತದೆ. ಕಾಯಿಯಾಗಿದ್ದಾಗ ಹಸುರಾಗಿದ್ದು ಹಣ್ಣಾದಾಗ ಹಳದಿ ಬಣ್ಣಕ್ಕೆ ತಿರುಗುತ್ತದೆ. ಸಿಪ್ಪೆ ಸುವಾಸನೆಯಿಂದ ಕೂಡಿದ್ದು ಒರಟಾಗಿರುವುದರಿಂದ ಬಿಡಿಸುವುದು ಕಷ್ಟ. ಕಹಿ ಕಿತ್ತಳೆ ಮತ್ತು ಗಜನಿಂಬೆಗಳ ನೈಸರ್ಗಿಕ ಅಡ್ಡ ಹಾಯುವಿಕೆಯಿಂದ ಉಂಟಾದ ಮಿಶ್ರತಳಿ ಇದಾಗಿರಬಹುದೆಂದು ಊಹಿಸಲಾಗಿದೆ. ಹಣ್ಣುಗಳು ಕಹಿ ಕಿತ್ತಳೆಯಂತೆ ಹೂಗಳು ಗಜನಿಂಬೆಯಂತೆ ಇರುತ್ತವೆ. ಇದನ್ನು ನೇರವಾಗಿ ಉಪಯೋಗಿಸಲಾಗದು. ಹಣ್ಣಿನ ರಸವನ್ನು ಹಿಂಡಿಕೊಂಡು ಬಳಸುತ್ತಾರೆ.

**ಉಪಯೋಗಗಳು :** ಪಿತ್ತದಿಂದ ಬರುವ ತಲೆ ಸುತ್ತನ್ನು ನಿವಾರಿಸುತ್ತದೆ. ಹಣ್ಣನ್ನು ಎರಡು ಹೋಳು ಮಾಡಿ ಉಪ್ಪನ್ನು ತುಂಬಿ ಇಬ್ಬನಿ ಬೀಳುವ ಜಾಗದಲ್ಲಿ ಒಂದು ರಾತ್ರಿ ಇಟ್ಟು ಸೂರ್ಯೋದಯಕ್ಕೆ ಮೊದಲು ರಸವನ್ನು ಹಿಂಡಿಕೊಂಡು ಜೀರಿಗೆ ಪುಡಿಯೊಂದಿಗೆ ಮೂರು ದಿನ ಬರೀ ಹೊಟ್ಟೆಯಲ್ಲಿ ಕುಡಿದರೆ ಪಿತ್ತ, ತಲೆ ಸುತ್ತು ಗುಣವಾಗುತ್ತದೆ. ಜಠರ ಬಲಹೀನವಾಗಿದ್ದರೆ ಜೀರ್ಣಕ್ರಿಯೆಯನ್ನು ಹೆಚ್ಚಿಸಲು ಇದರ ರಸವನ್ನು ಬಳಸುತ್ತಾರೆ.



**ಹವಾಗುಣ :** ಹೇರಿಳೆ ಬೆಳೆಯಲು ಒಣ ಗಾಳಿಯಿಂದ ಕೂಡಿದ ಉಷ್ಣ ಹವೆ ಬೇಕು. ಬಯಲು ಸೀಮೆಗಳಲ್ಲಿಯೂ ತಪ್ಪಲು ಕಣಿವೆಗಳಲ್ಲಿಯೂ ಹೇರಿಳೆ ಬೆಳೆಯಬಲ್ಲದು. ತಂಪು ಹವೆಯಲ್ಲಿ ಬೆಳೆದ ಹಣ್ಣುಗಳ ಬಣ್ಣ ಆಕರ್ಷಕವಾಗಿರುತ್ತದೆ. ರಸವೂ ಹೆಚ್ಚಾಗಿರುತ್ತದೆ. ಸಿಪ್ಪೆ ತೆಳುವಾಗಿದ್ದು ಒಳ ಪೊರೆ ಸಡಿಲವಾಗಿರುತ್ತದೆ.

**ರೋಗಗಳು :** ನಿಂಬೆ ಪಾದರಗಿತ್ತಿ, (leminbutterfly) ಪ್ಯಾಪಿಯೋಡಿ ಮೋಲಿಯಸ್ ಇದು ಎಲೆಯ ಮೇಲೆ ಬೀಜಗಳಂತಿರುವ ಹಸುರು ಮಿಶ್ರಿತ ಹಳದಿ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯೊಡೆದು ಹೊರ ಬಂದ ಮರಿಗಳು ಎಲೆಗಳನ್ನು ತಿನ್ನುತ್ತವೆ. ಇಂಥ ಚಿಟ್ಟೆಗಳನ್ನು ಸೀಮೆಎಣ್ಣೆ ಹಾಕಿ ನಾಶಪಡಿಸಬೇಕು.

**ತೊಗಟೆ ಕೊರಕ ಹುಳುಗಳು :** ಕಾಂಡ ಕೊರಕ ದುಂಬಿ (Bark Boren) ತೊಗಟೆಯ ಮೇಲೆ ಮೊಟ್ಟೆಯಿಡುತ್ತದೆ. ಮರಿಗಳು ತೊಗಟೆ ಕಾಂಡಗಳ ಮೇಲೆ ಸುರಂಗ ಕೊರೆದು ತಿನ್ನುತ್ತವೆ.

**ಹತೋಟಿ :** ತಂತಿಯ ಬಲೆಯಿಂದ ಕಾಂಡವನ್ನು ರಕ್ಷಿಸುವುದು ಅಥವಾ ಪಿಚಕಾರಿಯಿಂದ ಪೆಟ್ರೋಲ್ ಅಥವಾ ನ್ಯಾಪ್ತಲಿನ್ ದ್ರಾವಣವನ್ನು ಆ ರಂಧ್ರದೊಳಗೆ ತುಂಬಿ ನಾಶ ಮಾಡಬಹುದು. ಅನಂತರ ರಂಧ್ರಗಳನ್ನು ಮುಚ್ಚಿ ಬಿಡಬೇಕು.

ಕಾಂಡ ಕೊರಕ ದುಂಬಿಯನ್ನು ತಂತಿ ಮೂಲಕ ಹೊರಕ್ಕೆಳೆದು ಪೆಟ್ರೋಲ್ ಅಥವಾ ಸೀಮೆ ಎಣ್ಣೆಯನ್ನು ಹಾಕಿ ಕೊಲ್ಲಬಹುದು. ಹಣ್ಣಿನ ರಸ ಹೀರುವ ಚಿಟ್ಟೆಗಳನ್ನು ಬೆಲ್ಲವನ್ನು ನೀರಿನಲ್ಲಿ ಬೆರೆಸಿ ಚಿಟ್ಟೆಗಳನ್ನು ಆಕರ್ಷಿಸಿ ಕೊಲ್ಲಬಹುದು. ಪರ್ಣಸುರುವಾಸಿ ರೋಗ ಬಂದರೆ ಎಲೆಗಳನ್ನು ಕಿತ್ತು ನಾಶ ಮಾಡುವುದು ಒಳ್ಳೆಯದು.

**ಏಫೇಸ್ ಹೇನು :** ಚಳಿ ಮತ್ತು ಮೋಡ ಕವಿದ ವಾತಾವರಣದಲ್ಲಿ ಇವುಗಳ ಬಾಧೆ ಹೆಚ್ಚು. ಪಿಡುಗುಗ್ರಸ್ತ ಎಲೆ ಸುರುಳಿ ಕಟ್ಟುತ್ತದೆ. ಕೊಂಬೆಗಳು ಬೆಳೆಯುವುದಿಲ್ಲ. ಹಣ್ಣುಗಳು ಉದುರುತ್ತದೆ. ನೈಸರ್ಗಿಕವಾಗಿ ಇವುಗಳನ್ನು ತಡೆಗಟ್ಟಲು ಲೇಡಿಬರ್ಡ್ ದುಂಬಿಗಳನ್ನು ಬೆಳೆಸಬಹುದು.

*ವಿ.ಆರ್.ಬಿ.*

**ಹೈನುಗಾರಿಕೆ** ಹಾಲಿನ ಉತ್ಪಾದನೆಗೆ ಸಂಬಂಧಿಸಿದ ಕೃಷಿ ಅಥವಾ ಪಶು ಸಂಗೋಪನೆಯ ಉದ್ಯಮ. ಸಾವಿರಾರು ವರ್ಷಗಳಿಂದಲೂ ವ್ಯವಸಾಯದ ಒಂದು ಭಾಗವಾಗಿಯೇ ಒಂದು ವರ್ಗ ಇದೆ. ಹಾಲಿನ ಉತ್ಪಾದನೆಯನ್ನು ಸಾಮಾನ್ಯವಾಗಿ ಹಸುಗಳಿಂದ ಮಾಡಲಾಗುತ್ತದೆಯಾದರೂ ಎಮ್ಮೆಯ ಪಾತ್ರವೂ ಇದೆ. ಉತ್ಪಾದನೆಯಾದ ಹಾಲು ಹಾಲಿನ ಕೇಂದ್ರಗಳ ಮುಖಾಂತರ ಸಂಸ್ಕರಣ ಕೇಂದ್ರದಲ್ಲಿ ಸಂಸ್ಕರಿಸಲ್ಪಟ್ಟು ಚಿಲ್ಲರೆಮಾರಾಟಕ್ಕೆ ಬಳಕೆಯಾಗುತ್ತದೆ. ಹಾಲಿನ ಮಾರಾಟದ ಜೊತೆಗೆ ಹಾಲಿನಿಂದ ಸಿಹಿ ತಿಂಡಿಗಳನ್ನು ಸಹ ತಯಾರಿಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಹೈನುಗಾರಿಕೆಯು ಉತ್ತಮ ಬೇಡಿಕೆಯ ಜೊತೆಗೆ ಆದಾಯದ ಉದ್ಯಮವಾಗಿದೆ. ಪ್ರಾರಂಭದಲ್ಲಿ ಮನೆಬಳಕೆಯ ಹಾಲಿಗಾಗಿ ಒಂದೊಂದು ಆಕಳನ್ನೋ ಎಮ್ಮೆಗಳನ್ನೋ ಸಾಕುವುದು ರೂಢಿಯಲ್ಲಿತ್ತು. ಆದರೆ ಇಂದು ಆಸಕ್ತಿಯಿಂದ ಹೈನುಗಾರಿಕೆಯನ್ನು ಉದ್ಯೋಗ ಮಾಡಿಕೊಂಡು ವೈಜ್ಞಾನಿಕ ರೀತಿಯಲ್ಲಿಮಾಡಲಾಗುತ್ತಿದೆ. ಪ್ರಪಂಚಾದ್ಯಂತ ಹೈನು ಉತ್ಪಾದನೆಯ ಮಾದರಿಯಲ್ಲಿಒಂದು ದೊಡ್ಡ ಪ್ರಮಾಣದ ಬದಲಾವಣೆ ಕಂಡು ಬಂದಿದೆ. ಬೃಹತ್ ಉತ್ಪಾದಕರೆನಿಸಿಕೊಂಡಿರುವ ಅನೇಕ ದೇಶಗಳು ಇದರ ಬಹುಪಾಲನ್ನು ಆಂತರಿಕವಾಗಿ ಬಳಕೆ ಮಾಡಿದರೆ, ಇತರ ದೇಶಗಳು (ನಿರ್ದಿಷ್ಟವಾಗಿ ಹೇಳುವುದಾದರೆ ನ್ಯೂಜಿಲೆಂಡ್) ತಮ್ಮ ಉತ್ಪಾದನೆಯ ಒಂದು ಬೃಹತ್ ಪ್ರಮಾಣದ ಭಾಗವನ್ನು ರಫ್ತುಮಾಡುತ್ತವೆ. ಆಂತರಿಕ ಬಳಕೆಯು ಅನೇಕ ವೇಳೆ ದ್ರವ ಹಾಲಿನಸ್ವರೂಪದಲ್ಲಿದ್ದರೆ, ಅಂತಾರಾಷ್ಟ್ರೀಯ ವ್ಯಾಪಾರದ ಬಹುಭಾಗವು ಹಾಲಿನಪುಡಿಯಂಥ ಸಂಸ್ಕರಿಸಲ್ಪಟ್ಟ ಹೈನು ಉತ್ಪನ್ನಗಳಲ್ಲಿದೆ. ಒಟ್ಟಾರೆ ಹೇಳುವುದಾದರೆ, ಭಾರತ ಅತ್ಯಂತ ದೊಡ್ಡ ಉತ್ಪಾದಕ ದೇಶವಾಗಿದ್ದರೆ, ನ್ಯೂಜಿಲೆಂಡ್ ಹೆಚ್ಚು ರಫ್ತು ಮಾಡುವ ದೇಶ ಮತ್ತು ಜಪಾನ್ ಹೆಚ್ಚು ಆಮದು ಮಾಡಿಕೊಳ್ಳುವ ದೇಶ.

**ಇತಿಹಾಸ :** ಸಾವಿರಾರು ವರ್ಷಗಳ ಹಿಂದೆಯೇ ಗೋಪಾಲನ ಪದ್ಧತಿ ಒಂದು ಕ್ರಮಬದ್ಧವಾದ ಶಾಸ್ತ್ರವೆನಿಸಿತ್ತು. ಈ ವಿದ್ಯೆಯಲ್ಲಿ ಪಾಂಡವಪುತ್ರ ನಕುಲನನ್ನು 'ಗವಾಶ್ಚ ಚಿಕಿತ್ಸಾಶಾಸ್ತ್ರ ಪ್ರಣೇತಾ' ಎಂದು ಕರೆಯಲಾಗುತ್ತದೆ. ಅವನು ಬರೆದ 'ನಕುಲ ಸಂಹಿತೆ' ಎಂಬ ಪುಸ್ತಕ ಪಶುವೈದ್ಯಕೀಯ ಶಾಸ್ತ್ರದ ಕೈಗನ್ನಡಿ. ಸುಮಾರು 1125ರ ಸಮಯದಲ್ಲಿ ಚಾಲುಕ್ಯವಂಶದ ರಾಜ 6ನೇ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಕೀರ್ತಿವರ್ಮನೆಂಬಾತ ಬರೆದ 'ಗೋವೈದ್ಯ' ಕನ್ನಡದಲ್ಲಿ ದೊರೆತ ಮೊದಲ ಕೃತಿ. ಇದರಲ್ಲಿ ದನಕರುಗಳಿಗೆ ಬರುವ ರೋಗಗಳು ಹಾಗೂ ಅವುಗಳಿಗೆ ಚಿಕಿತ್ಸೆಯ ಬಗ್ಗೆ ವಿವರಿಸಲಾಗಿದೆ.



ಕರ್ನಾಟಕದಲ್ಲಿ ಪಶುಪಾಲನಾ ಚಟುವಟಿಕೆಗಳು ಅಮೃತ್‌ಮಹಲ್ ತಳಿಯ ಉಗಮದೊಂದಿಗೆ ಆರಂಭವಾದವು. ಮೈಸೂರು ಸಂಸ್ಥಾನದ ಅಂದಿನ ಅರಸನಾಗಿದ್ದ ಚಿಕ್ಕ ದೇವರಾಜ ಒಡೆಯರ (ಕ್ರಿ.ಶ. 1672-1704) ಕಾಲದಲ್ಲಿ ಹೈನುಗಾರಿಕೆಯ ಆಡಳಿತವನ್ನು 'ಬೆಣ್ಣೆ ಚಾವಡಿ' ಎಂದು ಕರೆಯಲಾಗುತ್ತಿತ್ತು. ಟಿಪ್ಪು ಸುಲ್ತಾನ ಕಾಲದಲ್ಲಿ ಇದನ್ನೇ 'ಅಮೃತ್ ಮಹಲ್' ಎಂದು ಮರು ನಾಮಕರಣ ಮಾಡಲಾಯಿತು. ಮೈಸೂರು ಅರಮನೆಗೆ ಇಲ್ಲಿಂದಲೇ ಹಾಲು, ಮೊಸರು, ಬೆಣ್ಣೆ, ತುಪ್ಪದ ಸರಬರಾಜು ಆಗುತ್ತಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ(1866) ಅಮೃತ್‌ಮಹಲ್ ಇಲಾಖೆಯ ಪುನಶ್ಚೇತನಗೊಂಡಿತು. 1958ರಲ್ಲಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಪ್ರಥಮವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆಯಾಯಿತು. ಇದಕ್ಕೂ ಮೊದಲು ಪಶುವೈದ್ಯಕೀಯ ಪದವಿಪಡೆಯಲು ಮುಂಬೈಯಲ್ಲಿ ವ್ಯಾಸಂಗ ಮಾಡಬೇಕಾಗಿತ್ತು. 2012-13ನೇ ಸಾಲಿನಲ್ಲಿ ಪುತ್ತೂರಿನಲ್ಲಿ ಮತ್ತೊಂದು ಪಶುವೈದ್ಯಕೀಯ ಕಾಲೇಜಿನ ಸ್ಥಾಪನೆಯ ಬಗ್ಗೆ ತೀರ್ಮಾನವಾಗಿದೆ.

ಗುಜರಾತ್ ರಾಜ್ಯದ ಕೈರಾ ಜಿಲ್ಲೆಯ ಆಣಂದ ಗ್ರಾಮದಲ್ಲಿ ಹೈನುಗಾರಿಕಾ ಆಂದೋಲನ 1964ರಲ್ಲಿ ಆರಂಭವಾಯಿತು. ಹಾಲುಮಾರುಕಟ್ಟೆಯಲ್ಲಿಮಧ್ಯವರ್ತಿಗಳು ಹಾಗೂ ಖಾಸಗಿ ಡೈರಿಗಳ ಏಕಸ್ವಾಮಿತ್ವ ನೀತಿಯಿಂದ ಮುಕ್ತರಾಗಲು ಕೈರಾ ಜಿಲ್ಲೆಯ ಆಣಂದದಲ್ಲಿ

ಮೊತ್ತಮೊದಲ ಬಾರಿಗೆ ಕೈರಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘ ಹುಟ್ಟಿಕೊಂಡಿತು. ಡಾ. ಕುರಿಯನ್ ಈ ಸಂಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಬೆಳೆಸಿದರು. ಅಂತೆಯೇ ಇದು ಕೈರಾ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟವಾಯಿತು. ಕೈರಾ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ತನ್ನ ಹೈನು ಉತ್ಪನ್ನಗಳಿಗೆ 1955ರಲ್ಲಿ 'ಅಮುಲ್' ಎಂದು ನಾಮಕರಣಮಾಡಿತು. ಇದರ ಯಶಸ್ಸಿನಿಂದ ಗುಜರಾತ್ ರಾಜ್ಯದಲ್ಲಿ ಮತ್ತೆ ಇದೇ ರೀತಿ ಐದು ಒಕ್ಕೂಟಗಳು ಸ್ಥಾಪನೆಗೊಂಡವು. 1977ರಲ್ಲಿ ಗುಜರಾತ್ ಸಹಕಾರಿ ಹಾಲು ಮಾರಾಟ ಮಂಡಳಿ ಅಸ್ತಿತ್ವ ಪಡೆಯಿತು. ಆಗ ಕೈರಾ ಜಿಲ್ಲಾಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು 'ಅಮುಲ್'ನ ಒಡೆತನವನ್ನು ಗುಜರಾತ್ ಸಹಕಾರಿ ಹಾಲು ಮಹಾಮಂಡಳಿಗೆ ವಹಿಸಿತು. 1964ರಲ್ಲಿ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಲಾಲ್ ಬಹದ್ದೂರ್‌ಶಾಸ್ತ್ರಿಯವರು ತಮ್ಮ ಗುಜರಾತ್ ಭೇಟಿಯಲ್ಲಿ ಡಾ.ಕುರಿಯನ್‌ರ ಸಹಕಾರಿ ಚಳುವಳಿಯನ್ನು ಕಂಡು ಬೆರಗಾದರು. ಅಲ್ಲದೇ ಆಣಂದ ಮಾದರಿಯ ಡೈರಿ ಸಹಕಾರಿ ಸಂಘಗಳನ್ನು ದೇಶದ ಎಲ್ಲ ರಾಜ್ಯಗಳಿಗೂ ವಿಸ್ತರಿಸುವಂತೆ ಕುರಿಯನ್ ಅವರಿಗೆ ಸೂಚಿಸಿದರು. ಅಂತೆಯೇ ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮ (ಎನ್.ಡಿ.ಡಿ.ಬಿ.) ಸ್ಥಾಪನೆಯಾಯಿತು. ಅದರಂತೆ ಕರ್ನಾಟಕದಲ್ಲಿ ಹಾಲು ಮಹಾಮಂಡಳಿ (ಕೆ.ಎಂ.ಎಫ್) ಜನ್ಮತಾಳಿತು. ಕೆ.ಎಂ.ಎಫ್. ತನ್ನ ಉತ್ಪನ್ನಗಳಿಗೆ 'ನಂದಿನಿ' ಎಂದು ಹೆಸರಿಟ್ಟಿದೆ. ಪ್ರಸ್ತುತ 70 ಕ್ಕೂ ಅಧಿಕ ಹೈನು ಉತ್ಪನ್ನಗಳು ಈ ಹೆಸರಿನಲ್ಲಿ ಮಾರುಕಟ್ಟೆಯಲ್ಲಿ ಜನಪ್ರಿಯವಾಗಿದೆ.

**ಉಪಯೋಗ :** ದೇಶದ ಆರ್ಥಿಕತೆ ವ್ಯವಸ್ಥೆಯ ಮೇಲೆ ಹೈನುಗಾರಿಕೆಯ ಪ್ರಭಾವವಿದೆ. ಜಗತ್ತಿನಲ್ಲಿಯೇ ಭಾರತ ಹಾಲಿನ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತಕ್ಕೆ ಪ್ರಗತಿಯ ಹಾದಿಯಲ್ಲಿ ಸಾಗಲು ಹೈನುಗಾರಿಕೆಯ ಮುಖ್ಯವಾದ ಉದ್ಯಮವಾಗಿದೆ. ಪರಂಪರಾನುಗತವಾಗಿ ಪಶುಪಾಲನೆಯ ಜ್ಞಾನ ಹಳ್ಳಿಗರಿಗೆ ಇರುವುದರಿಂದ ಹೈನುಗಾರಿಕೆಗೆ ಸಹಾಯಕವಾಗುತ್ತದೆ. ಹೈನುಗಾರಿಕೆ ಹಾಗೂ ಕೃಷಿಗೆ ಸಂಬಂಧವಿದ್ದು ಕೃಷಿಯ ಹಲವಾರು ತ್ಯಾಜ್ಯ ವಸ್ತುಗಳು ದನಕರುಗಳಿಗೆ ಆಹಾರವಾಗಿ ಬಳಕೆಯಾಗುತ್ತದೆ. ಅದೇ ರೀತಿ ಹಸುಗಳ ಸಗಣಿ, ಗಂಜಲ ಕೃಷಿಗೆ ಉತ್ತಮವಾದ ಸ್ವಾಭಾವಿಕ ಗೊಬ್ಬರ. ಆರ್ಥಿಕ ಅಭಿವೃದ್ಧಿಯಲ್ಲಿ ಹೈನುಗಾರಿಕೆ ಮುಖ್ಯ ಪಾತ್ರವಹಿಸುತ್ತಿದ್ದು, ಸಾಮಾಜಿಕ ಅಂಶವಾಗಿದೆ. ಶ್ರೀಮಂತ - ಬಡವನೆನ್ನದೆ ಎಲ್ಲರು ಒಂದೇ ಹಾಲಿನ ಕೇಂದ್ರದಲ್ಲಿ ಕೊಂಡು ಕೊಳ್ಳುವಿಕೆಯನ್ನು ನಡೆಸಬೇಕು. ಅಲ್ಲದೇ ಹೆಣ್ಣು ಗಂಡು ಎಂಬ ಭೇದವಿಲ್ಲದೆ ಮಾಡಬಹುದಾದ ಉದ್ಯಮವಿದು. ಪ್ರಸ್ತುತದಲ್ಲಿ ಪಶು ವೈದ್ಯಕೀಯ ಸಲಹೆಗಳು, ಚಿಕಿತ್ಸೆಗಳು, ಕೃತಕ ಗರ್ಭಧಾರಣೆಯ ಸೌಲಭ್ಯಗಳು ಉತ್ತಮವಾಗಿದ್ದು ಹೈನುಗಾರಿಕೆಗೆ ಉಪಯುಕ್ತವಾಗಿವೆ. ಪ್ರಾಚೀನ ಕಾಲದಲ್ಲಿ ಪಶುಕಾಯಿಲೆಯ ಬಗ್ಗೆ ಇದ್ದಂತಹ ಭಯ, ಮೂಢನಂಬಿಕೆಗಳು ಕಡಿಮೆಯಾಗಿದ್ದು ರೈತನಲ್ಲಿ ತಿಳಿವಳಿಕೆಯನ್ನು ಉಂಟುಮಾಡಿದೆ. ಹೈನುಗಾರಿಕೆಯಿಂದ ಉದ್ಯೋಗಾವಕಾಶಗಳು ಹೆಚ್ಚುವುದರಿಂದ ನಿರುದ್ಯೋಗಿಗಳಿಗೆ ಸಹಾಯಕವಾಗಲಿದೆ. ಪಶುಗಳಿಗೆ ಬೇಕಾದ ಹುಲ್ಲಿನ ಬೆಳೆವಣಿಗೆಗೆ ಹಾಗೂ ಪಶುಆಹಾರ, ಪಶು ಔಷಧಿಗಳ ಪೂರೈಕೆಯಂತಹ ಉದ್ಯೋಗಗಳು ದೊರಕುತ್ತವೆ. ಹಾಲಿನ ಉತ್ಪನ್ನಗಳಾದ ಮೊಸರು, ಬೆಣ್ಣೆ, ತುಪ್ಪ, ಖೋವಾ, ಪೇಡಗಳಂತಹ ತಿಂಡಿಗಳನ್ನು ಮಾರಾಟ ಮಾಡಬಹುದು. ಬಹಳಮುಖ್ಯವಾಗಿ ಪಶುಗಳ ವಿಮೆ ಜಾರಿಯಲ್ಲಿರುವುದರಿಂದ ಬಡ ರೈತರು ಪಶುಗಳ ಅನಾರೋಗ್ಯದ ಬಗ್ಗೆ ಇದ್ದಂತಹ ಭಯವನ್ನು ಕಡಿಮೆ ಮಾಡಿಕೊಂಡು ಧೈರ್ಯದಿಂದ ಹಸುಗಳ ಖರೀದಿ ಮಾಡಬಹುದಾಗಿದೆ. ಹಾಗೆಯೇ ಹೆಚ್ಚಿನ ಬಂಡವಾಳದ ಆವಶ್ಯಕತೆಯಿಲ್ಲದೇ ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿ ದೊಡ್ಡ ಪ್ರಮಾಣದಲ್ಲಿ ಮಾಡಬಹುದಾದ ಉದ್ಯಮವಾಗಿದೆ. ಇತ್ತೀಚಿನ ದಿನಗಳಲ್ಲಿ ಪಶುಪಾಲನೆಗೆ ಸುಲಭವಾಗಿ ಬ್ಯಾಂಕ್ ಸಾಲ ಸೌಲಭ್ಯ ಮತ್ತು ವಿವಿಧ ಯೋಜನೆಗಳ ಅಡಿಯಲ್ಲಿ ಸಹಾಯಧನ ಕೂಡ ಲಭ್ಯವಿದೆ.

**ಸಮಸ್ಯೆಗಳು :** ಎಲ್ಲ ಜಾನುವಾರುಗಳು ಎಲ್ಲ ರೀತಿಯ ವಾತಾವರಣದಲ್ಲಿ ಹೊಂದಿಕೊಳ್ಳುವುದಿಲ್ಲ. ಪರಿಸರಕ್ಕೆ ತಕ್ಕಂತಹ ಪಶುಗಳನ್ನು ಸಾಕಬೇಕು. ಇತ್ತೀಚಿನ ದಿನಗಳಲ್ಲಿ ಕಲಬೆರಕೆ ಆಹಾರ ಹಾಗೂ ಗೊಬ್ಬರಗಳಿಂದ ಬೆಳೆದಂತಹ ಆಹಾರದಿಂದ ಪಶುಗಳಲ್ಲಿ ಆಹಾರದ ಸಮಸ್ಯೆ ಹೆಚ್ಚಾಗುತ್ತಿದೆ. ವೈಜ್ಞಾನಿಕ ಔಷಧಿಗಳ ಬಳಕೆಯಿದ್ದರೂ ಸಣ್ಣ ಪ್ರಮಾಣದ ರೈತರು ಸರಿಯಾದ ಪ್ರಮಾಣದಲ್ಲಿ ಚಿಕಿತ್ಸೆ ಕೊಡಿಸುವಲ್ಲಿ ವಿಫಲರಾಗುತ್ತಿದ್ದಾರೆ. ಅರ್ಹ ಪಶು ವೈದ್ಯರ ಸಂಖ್ಯೆ ಕಡಿಮೆಯಿರುವುದರಿಂದ ಸರಿಯಾದ ಸಮಯಕ್ಕೆ ಚಿಕಿತ್ಸೆ ನೀಡಲಾಗುತ್ತಿಲ್ಲ. ಹಾಲು ಬೇಗ ಕೆಡುವಂತಹ ಹಾಗೂ ಸುಲಭವಾಗಿ ಕಲಬೆರಕೆ ಮೊದಲು ಸಾಧ್ಯವಾಗುವಂತಹ ಆಹಾರವಾಗಿದೆ. ಹಾಲಿನ ಸಂಸ್ಕರಣೆ ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಜೊತೆಗೆ ಕಳಪೆ ಗುಣಮಟ್ಟದ ವಿವಿಧ ಹಾನಿಕಾರಕ ರಾಸಾಯನಿಕಗಳಿಂದ ಕೂಡಿದ ಕೃತಕ ಹಾಲಿನ ಮಾರಾಟವಿದ್ದು ಇದರ ನಿಯಂತ್ರಣ ವ್ಯವಸ್ಥೆ ಇಲ್ಲ.

ಜಾನುವಾರು ವಿಮೆಯಂತಹ ಉತ್ತಮ ಸೌಲಭ್ಯವಿದ್ದರೂ ಸೌಲಭ್ಯ ಪಡೆಯಬೇಕಾದ ಪ್ರಮಾಣ ರೈತರಿಗೆ ತಲುಪುವಲ್ಲಿ ವಿಫಲವಾಗುತ್ತಿದೆ. ಅಲ್ಲದೇ ಸಣ್ಣ ಪ್ರಮಾಣದ ರೈತರಿಗೆ ವಿಮೆ ಮಾಡಿಸುವ ರೀತಿ ತಿಳಿಯದೆ ಕಾಯಿಲೆ ಹಾಗೂ ಆಕಸ್ಮಿಕ ಮರಣ ಉಂಟಾದರೆ ರೈತನಿಗೆ ನಷ್ಟ. ಪಶುಗಳ ಆಹಾರದ ದರದಲ್ಲಿ ಏರಿಕೆಯಾಗುತ್ತಿದ್ದರೂ ಹಾಲಿನ ದರದಲ್ಲಿ ಏರಿಕೆಯಾಗದೆ ಇರುವುದು ರೈತರನ್ನು ಸಾಲಗಾರರನ್ನಾಗಿ ಮಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿದ್ದು ಉತ್ತಮ ಗುಣಮಟ್ಟದ ಒಣ ಹಾಗೂ ಹಸುರು ಮೇವು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ. ಹೈನುಗಾರಿಕೆಗೆ ಬ್ಯಾಂಕ್‌ನಿಂದ ಸಾಲ ಸೌಲಭ್ಯದ ವ್ಯವಸ್ಥೆಯಿದ್ದರೂ ಸಾಲದ ಬಡ್ಡಿದರ ಹೆಚ್ಚು. ಸಹಕಾರ ಸಂಘವು ಕಡಿಮೆ ಬಡ್ಡಿಯಲ್ಲಿ ಸಾಲ ನೀಡುತ್ತಿದ್ದರೂ ಅದೆಲ್ಲವೂ ಉಳ್ಳವರ ಪಾಲಾಗುತ್ತಿದೆ.



**ಪರಿಹಾರಗಳು :** ಹೈನುಗಾರಿಕೆ ಒಂದು ಲಾಭದಾಯಕ ಉದ್ಯಮ ಇದನ್ನು ಮಾಡುವ ಎಲ್ಲರೂ ಲಾಭವನ್ನು ಗಳಿಸಲು ಸಾಧ್ಯವಿಲ್ಲ. ಮುಖ್ಯವಾಗಿ ಆಸಕ್ತಿಯೆಂಬುದು ಹೈನುಗಾರಿಕೆಯ ಮೊದಲ ಗುಣಲಕ್ಷಣ. ಆಸಕ್ತಿಯಿಲ್ಲದ ಉದ್ಯಮ ನಷ್ಟದಾಯಕವೇ ಸರಿ. ಅನುಭವವು ಹೈನುಗಾರಿಕೆಯ ಮುಖ್ಯವಾದ ಅಂಶ. ಪಶುಗಳ ಸಾಕುವಿಕೆ, ಅವುಗಳ ಆಹಾರ ಪದ್ಧತಿ, ಅವುಗಳ ಸ್ವಚ್ಛತೆ, ಹಾಲಿನ ನಿರ್ವಹಣೆಯಲ್ಲಿಸಾಕಷ್ಟು ಅನುಭವವಿರಬೇಕು. ಆಸಕ್ತಿ ಹಾಗೂ ಅನುಭವವು ಹೈನುಗಾರಿಕೆಯ ಅರ್ಧದಷ್ಟು ಸಮಸ್ಯೆಗಳನ್ನು ಪರಿಹಾರ ಮಾಡಲ್ಪಡುತ್ತವೆ. ಹೈನುಗಾರಿಕೆಯು ಕಛೇರಿ ಪ್ರಾರಂಭಿಸಿ ನಡೆಸುವ ಉದ್ಯಮವಲ್ಲ. ಕೊಟ್ಟಿಗೆಯ ಪ್ರತಿಯೊಂದು ಆಗು - ಹೋಗುಗಳಲ್ಲಿಯೂ ಮಾಲೀಕನು ಸಂಪೂರ್ಣವಾಗಿ ತೊಡಗಿಕೊಳ್ಳಬೇಕಾಗುತ್ತದೆ. ಪಶುಪಾಲನೆ ಹಾಗೂ ಆಹಾರ ಉತ್ಪಾದನೆಯಲ್ಲಿ ವೈಜ್ಞಾನಿಕ ಅಂಶಗಳನ್ನು ಅಳವಡಿಸಿಕೊಳ್ಳುವುದರಿಂದ ಉತ್ತಮವಾದ ಆಹಾರೋತ್ಪಾದನೆ ಸಾಧ್ಯ.

ದೊಡ್ಡ ಪ್ರಮಾಣದ ಉದ್ಯಮಗಳಿಗೆ ಪೂರ್ವ ಯೋಜನೆಯನ್ನು ರೂಪಿಸುವಂತೆ ಹೈನು ಗಾರಿಕೆಯ ಪೂರ್ವಯೋಜಿತ ನಿರ್ಧಾರವಿದ್ದರೆ ಯಶಸ್ವಿ ಯಾಗಬಹುದು. ಇದನ್ನು ಕನಿಷ್ಠ ಮಟ್ಟದಲ್ಲಿ ನೋಡು ವುದನ್ನು ಬಿಡಬೇಕು, ಫಲವಿಲ್ಲದ ಪಶು ಉದ್ಯಮ ವ್ಯರ್ಥ.

**ಆಹಾರ ಪದ್ಧತಿ :** ಪಶುಗಳ ಸಾಂಪ್ರದಾಯಿಕ ಆಹಾರದಲ್ಲಿ ಬತ್ತದ ಒಣಹುಲ್ಲು, ರಾಗಿಹುಲ್ಲು, ಜೋಳದ ದಂಟು ಇತ್ಯಾದಿಗಳು ಪ್ರಮುಖವಾಗಿವೆ. ಮಳೆಗಾಲದಲ್ಲಿ ಸಿಗುವ ಯಾವುದೇ ನಿರ್ದಿಷ್ಟ ಜಾತಿಗೆ ಸೇರದ ಹಸುರುಹುಲ್ಲು, ಕಾಡುಗಳಲ್ಲಿ ಬೆಳೆಯುವ ವಿವಿಧ ಜಾತಿಯ ಹುಲ್ಲುಗಳು, ಕಬ್ಬಿನ ರವದಿ, ದ್ವಿದಳ ಧಾನ್ಯದ ಹೊಟ್ಟು, ಸೆಣಬುಗಳನ್ನು ಆಹಾರವಾಗಿ ಉಪಯೋಗಿಸಬಹುದು. ಮೇವಿಗೆಂದೇ ಬೆಳೆಯುವ ಹೈಬ್ರೀಡ್ ಹುಲ್ಲುಗಳು, ಗಿನಿಹುಲ್ಲು, ಹೈಬ್ರಿಡ್ ಸೇವಿಯರ್, ಮೇವಿನ ಅಲಸಂದೆ, ಸ್ಟೈಲೋ ಮುಂತಾದವು.

ಹಿಂಡಿರೂಪದ ಆಹಾರಗಳಾದ ಮೆಕ್ಕೆಜೋಳದ ನುಚ್ಚು, ಅಕ್ಕಿ ತೌಡು, ಗೋದಿ, ಬೂಸಾ, ಹತ್ತಿ ಹಿಂಡಿ, ಶೇಂಗಾ ಹಿಂಡಿ ಮಿಶ್ರಣಗಳನ್ನು ಉಪಯೋಗಿಸುವುದು ಸಾಮಾನ್ಯ. ನೀರು, ಕಾರ್ಬೋಹೈಡ್ರೇಟ್, ಪ್ರೋಟೀನ್, ಕೊಬ್ಬು, ಲವಣಾಂಶಗಳು ಹಾಗೂ ಜೀವಸತ್ವಗಳನ್ನು ಹೊಂದಿದ ಸಮತೋಲನ ಆಹಾರ ಪಶುಗಳಿಗೆ ಅಗತ್ಯವಾಗಿದೆ.

**ಆರೋಗ್ಯದ ಸಮಸ್ಯೆಗಳು :** ಪಶುಗಳು ಮೂಕ ಜೀವಿಗಳು. ಮಾನವನಂತೆ ದೈನಂದಿನ ಆವಶ್ಯಕತೆಗಳಲ್ಲದೆ ಜ್ವರ, ಹೊಟ್ಟೆ ಶೂಲೆ ಇತ್ಯಾದಿ ವೇದನೆಗಳನ್ನು ಹೇಳಿಕೊಳ್ಳಲಾಗದೆ ಮೂಕವಾಗಿ ಅನುಭವಿಸುತ್ತವೆ. ಬಾಹ್ಯ ಪ್ರತಿಕ್ರಿಯೆಗಳಿಂದ ಆರೋಗ್ಯ ಮತ್ತು ಅನಾರೋಗ್ಯದ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಆರೋಗ್ಯವಂಥ ಪಶುಗಳ ಚರ್ಮ ಮೃದುವಾಗಿದ್ದು, ಕೂದಲು ನಯವಾಗಿರುತ್ತದೆ. ಕಣ್ಣು ಕಾಂತಿಯುತವಾಗಿದ್ದು, ಮೂಗಿನ ಹೊಳ್ಳೆಗಳು ಒದ್ದೆಯಾಗಿರುತ್ತವೆ. ಆಹಾರ ಸೇವನೆಯಲ್ಲಿ ಆಸಕ್ತಿಯಿದ್ದು ಮೆಲುಕಾಡುವುದು ಕಂಡುಬರುತ್ತದೆ. ಅನಾರೋಗ್ಯಕ್ಕೆ ತುತ್ತಾದ ಆಕಳ ಚರ್ಮ ಮತ್ತು ಕೂದಲು ಒರಟಾಗಿರುತ್ತವೆ. ನಿಸ್ತೇಜ ಕಣ್ಣುಗಳು, ಒಣಗಿದ ಮೂಗಿನ ಹೊಳ್ಳೆಗಳು, ಜೊಲ್ಲು ಸುರಿಸುವಿಕೆ, ಆಹಾರದ ಬಗ್ಗೆ ನಿರ್ಲಕ್ಷ್ಯ, ಮೆಲುಕು ಹಾಕದಿರುವಿಕೆ, ಹೊಟ್ಟೆ ಉಬ್ಬರ ಇತ್ಯಾದಿ ಅನಾರೋಗ್ಯದ ಲಕ್ಷಣಗಳು.

ಸಾಮಾನ್ಯವಾಗಿ ಮೂರು ರೀತಿಯ ರೋಗಗಳನ್ನು ಕಾಣಬಹುದು.

1. ಬ್ಯಾಕ್ಟೀರಿಯಾಗಳಿಂದ ಬರುವ ರೋಗಗಳು : ಬ್ರುಸೆಲ್ಲಾ, ಗಂಟಲು ಬೇನೆ, ಚಪ್ಪೆರೋಗ, ಕ್ಷಯ.

2. ವೈರಾಣುಗಳಿಂದ ಬರುವ ರೋಗಗಳು : ರೇಬೀಸ್, ದೊಡ್ಡರೋಗ, ಕಾಲುಬಾಯಿ ಬೇನೆ.

3. ಪರಾವಲಂಬಿ ಜೀವಿಗಳು : ಒಳಪರಾವಲಂಬಿ ಜೀವಿಗಳು ದುಂಡು, ಚಪ್ಪಟೆ, ದಾರಾದಕೃತಿಯ ಜಂತುಹುಳುಗಳು, ಕರುಳು, ಯಕೃತ್‌ಗಳಲ್ಲಿ ಕಂಡುಬರುವುವು. ರಕ್ತದಲ್ಲಿಯ ಸೂಕ್ಷ್ಮ ಜೀವಿಗಳು : ಜೆಬಿಸಿಯಾ, ಅನಾಪ್ಲಾಸ್ಮಾ, ತಿಲೇರಿಯಾ, ಪುಪನೋಸೋಮ.

**ಹೊರಗಿನ ಪರಾವಲಂಬಿ ಜೀವಿಗಳು : ಹೇನು, ಉಣ್ಣೆಗಳು :** ಇವುಗಳ ಜೊತೆಗೆ ಸಾಮಾನ್ಯವಾದ ಆರೋಗ್ಯದ ಸಮಸ್ಯೆಗಳೆಂದರೆ ಗಾಯ, ತುರಿಕೆ, ಕಜ್ಜಿ, ಕಣ್ಣಿನ ಗಾಯ, ಕಿವಿಸೋರುವುದು, ಕೊಂಬು ಮುರಿತ, ಜ್ವರ, ಮಲಬದ್ಧತೆ, ಸಮಯ ಪಾಲನೆಯು ಬೇಕಾಗುತ್ತದೆ. ಹಸು / ಎಮ್ಮೆಗಳಿಗೆ ಸರಿಯಾದ ಸಮಯದಲ್ಲಿ ಆಹಾರ, ನೀರು ಕೊಡುವುದರ ಜೊತೆಗೆ ಸ್ವಚ್ಛತೆಯನ್ನು ಕಂಡುಕೊಂಡರೆ ಹಾಲಿನ ಉತ್ಪಾದನೆಯಲ್ಲಿ ಗಣನೀಯ ಏರಿಕೆಯನ್ನು ಕಾಣಬಹುದು. ಇರುವಂತಹ ಸಂಪನ್ಮೂಲಗಳನ್ನು ಸರಿಯಾದ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಬೇಕು. ಪಶು ಆಹಾರವನ್ನು ಕಡಿಮೆ ದರವಿರುವ ಸಮಯದಲ್ಲಿ ಸಂಗ್ರಹಿಸಿಕೊಳ್ಳುವುದರಿಂದ ಲಾಭ ಹೆಚ್ಚುತ್ತದೆ. ಪಶುಗಳು ಕೇವಲ ಹಾಲನ್ನು ಕೊಡುವ ಯಂತ್ರವಲ್ಲ. ಅವುಗಳನ್ನು ಪ್ರೀತಿಯಿಂದ ಕಾಣಬೇಕು. ನಿರ್ಮಲವಾದ ಮನಸ್ಸಿನಿಂದ ಪಶುಗಳ ದೇಹದಲ್ಲಿ ಕ್ರಿಯೆಗಳು ಸರಾಗವಾಗಿ ನಡೆದರೆ ಹಾಲಿನ ಪ್ರಮಾಣ ಹೆಚ್ಚುವುದರಲ್ಲಿ ಸಂಶಯವಿಲ್ಲ. ಇತ್ತೀಚಿನ ದಿನಗಳಲ್ಲಿ ಪಶುಜ್ಞಾನದ ಬಗ್ಗೆ ಹಲವಾರು ಪುಸ್ತಕಗಳು ಲಭ್ಯವಿವೆ. ಪುಸ್ತಕಗಳ ಓದಿನ ಜೊತೆಗೆ ಹಲವು ತರಬೇತಿ ಕೇಂದ್ರಗಳಿಗೆ ರೈತರು ಭೇಟಿ ಕೊಟ್ಟು ಹೈನುಗಾರಿಕೆಯ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಪಡೆಯುವುದರಿಂದ ಮೂಢನಂಬಿಕೆಗಳು ಕಡಿಮೆಯಾಗುವುದರ ಜೊತೆಗೆ ಉತ್ತಮ ವೈಜ್ಞಾನಿಕ ಅಂಶಗಳನ್ನು ಅಳವಡಿಸಿಕೊಂಡು ಉತ್ತಮ ಹೈನುಗಾರಿಕೆಯನ್ನು ಮಾಡಬಹುದು.

**ಮೂಲಭೂತ ಸೌಕರ್ಯಗಳು :** ಹೈನುಗಾರಿಕೆಯಲ್ಲಿ ಆಸಕ್ತಿ, ಅನುಭವ ಹಾಗೂ ಅಧ್ಯಯನದ ಜೊತೆಗೆ ಕೆಲವು ಮೂಲಭೂತ ಸೌಕರ್ಯಗಳ ಅಗತ್ಯವಿದೆ. ಮೊತ್ತ ಮೊದಲಿಗೆ ಹೈನುಗಾರಿಕೆಯ ಗಾತ್ರವನ್ನು ನಿರ್ಧರಿಸಿ ತಕ್ಕಂತಹ ಹಣದ ಹೂಡಿಗೆ ಅಗತ್ಯ. ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸುವವರು ಸ್ಥಳದ ಆಯ್ಕೆಯ ಬಗ್ಗೆ ಗಮನ ಹರಿಸುವುದು ಮುಖ್ಯ. ಕೊಟ್ಟಿಗೆ ನಿರ್ಮಾಣದ ಜಾಗ ಸಾಧ್ಯವಾದಷ್ಟು ತೆರೆದ ಪ್ರದೇಶವಾಗಿದ್ದು ಗಾಳಿ, ಬೆಳಕು ಚೆನ್ನಾಗಿ ಬರುವಂತಿರಬೇಕು. ಪಶುಗಳಿಗೆ ಶುದ್ಧವಾದ ತಂಪಾದ ನೀರಿನ ಆವಶ್ಯಕತೆ ಇದ್ದು, ನೀರಿನ ವ್ಯವಸ್ಥೆ ಸರಿಯಾಗಿರಬೇಕು. ಸ್ವಚ್ಛವಾದ ನೀರಿನಿಂದ ಪಶುಗಳನ್ನು ತೊಳೆಯಬೇಕು. ಕೇವಲ ಕುಡಿಯುವ ನೀರಲ್ಲದೆ ಕೊಟ್ಟಿಗೆಯ ಸ್ವಚ್ಛತೆಗೂ, ಮೇವಿನ ಬೆಳೆಗಳಿಗೂ ನೀರಿನ ಅಗತ್ಯವಿದೆ. ಮೂಲಭೂತ

ಆವಶ್ಯಕತೆಗಳಲ್ಲಿಮುಖ್ಯವಾದದ್ದು ಆಹಾರ. ತಳಿಗಳನ್ನು ಆಧರಿಸಿ ಆಹಾರ ಪದ್ಧತಿಯನ್ನು ಬದಲಾಯಿಸಬೇಕು. ಪಶು ವೈದ್ಯಕೀಯ ಸೌಲಭ್ಯವು ಉತ್ತಮವಾಗಿರಬೇಕು. ಉತ್ತಮ ನಿರ್ವಹಣೆ ಮತ್ತು ಆಹಾರ ಕ್ರಮವು ಸರಿಯಾಗಿದ್ದರೆ ಜಾನುವಾರುಗಳಿಗೆ ಆರೋಗ್ಯದ ಸಮಸ್ಯೆಗಳು ಅಷ್ಟಾಗಿ ಬಾಧಿಸಲಾರವು. ಕೆಲಸಗಾರರನ್ನು ನೇಮಿಸಿಕೊಳ್ಳಬೇಕು. ಮುಖ್ಯವಾಗಿ ಹೈನುಗಾರಿಕೆಯನ್ನು ಪ್ರಾರಂಭ ಮಾಡುವ ಮೊದಲು ಹಾಲಿನ ಮಾರುಕಟ್ಟೆಯ ಬಗ್ಗೆ ಚಿಂತನೆ ಮಾಡಿಕೊಂಡಿರಬೇಕು. ಈ ಎಲ್ಲ ಮೂಲಭೂತ ಅಂಶಗಳನ್ನು ಯೋಚಿಸಿ ಸರಿಯಾದ ನಿರ್ಧಾರಗಳನ್ನು ಕೈಗೊಂಡರೆ ಯಶಸ್ವಿ ಹೈನುಗಾರಿಕೆಯಲ್ಲಿ ದೃಢವಾದ ಹೆಜ್ಜೆಯನ್ನಿಡಬಹುದು.

**ರೋಗಗಳು :** ಅಜೀರ್ಣ, ಹೊಟ್ಟೆಯುಬ್ಬರ, ಕೆಮ್ಮು, ಚರ್ಮರೋಗ ಇತ್ಯಾದಿ.

**ಔಷಧೋಪಚಾರ :** ಪಶುಗಳಲ್ಲಿ ತೀಕ್ಷ್ಣರೂಪದ ಕಾಯಿಲೆಗಳು ಕಂಡು ಬಂದ ಸಂದರ್ಭದಲ್ಲಿ ತಕ್ಷಣ ಪಶುವೈದ್ಯರನ್ನು ಕರೆಸಿ ಚಿಕಿತ್ಸೆಯನ್ನು ಕೊಡಿಸಬೇಕಾಗುತ್ತದೆ. ಸಾಮಾನ್ಯ ಆರೋಗ್ಯ ಸಮಸ್ಯೆಗಳಿದ್ದ ಸಂದರ್ಭದಲ್ಲಿ ರೈತನೇ ಪ್ರಥಮ ಚಿಕಿತ್ಸೆ ನೀಡಬಹುದಾಗಿದೆ. ಆಧುನಿಕ ಔಷಧಿಗಳನ್ನು ಬಳಸಿಯೇ ಪ್ರಥಮ ಚಿಕಿತ್ಸೆ ಕೈಗೊಳ್ಳಬೇಕೆಂದಿಲ್ಲ. ಈ ಕೆಳಗಿನ ಪಟ್ಟಿಯನ್ನು ಗಮನಿಸಿ.

| ಔಷಧದ ಹೆಸರು | ಉಪಯೋಗ | ಬಳಸುವ ವಿಧಾನ |
|---|---|---|
| ಪೊಟ್ಯಾಸಿಯಂ ಪರ್ಮ್ಯಾಂಗನೇಟ್‌ಪುಡಿ | ಗಾಯವನ್ನು ತೊಳೆಯಲು | ಒಂದು ಲೀಟರ್ ಶುದ್ಧ ನೀರಿಗೆ ಎರಡು ಚಿಟಿಕೆ |
| ಕರ್ಪೂರ | ಗಾಯಕ್ಕೆ ಹುಳಬೀಳದಂತೆ ತಡೆಯಲು | ಪುಡಿ ಮಾಡಿ ಗಾಯದೊಳಗೆ ತುಂಬಬೇಕು. |
| ಈರುಳ್ಳಿ | ಅಜೀರ್ಣ, ಬಾವು | ಅಜೀರ್ಣದಲ್ಲಿ ಶುಂಠಿ, ಓಮ, ಈರುಳ್ಳಿ ಅಡುಗೆಸೋಡಾ, ಇಂಗು ಸೇರಿಸಿ ತಿನ್ನಿಸಬೇಕು. ಬಾವು ಉಂಟಾದ ಭಾಗಕ್ಕೆ ರಸ ತೆಗೆದು ಲೇಪಿಸಬೇಕು. |
| ಅರಿಸಿನ ಪುಡಿ | ಗಾಯಕ್ಕೆ ಹಚ್ಚಲು | ಅಗತ್ಯ ಪ್ರಮಾಣದಲ್ಲಿ |
| ಬೇವಿನ ಎಣ್ಣೆ | ಚರ್ಮರೋಗ, ಗಾಯದಲ್ಲಿ ಹುಳು ಆಗದಂತೆ ತಡೆಯಲು | ಅಗತ್ಯ ಪ್ರಮಾಣದಲ್ಲಿ ಲೇಪಿಸಬೇಕು. |
| ಫಿನೈಲ್ | ಕ್ರಿಮಿನಾಶಕವಾಗಿ ಕೊಟ್ಟಿಗೆಯ ನೆಲಕ್ಕೆ ಚಿಮುಕಿಸಲು | ಒಂದು ಮಿ.ಲೀ./ಲೀ. ನೀರಿಗೆ |
| ಮೈಲು ತುತ್ತ | ನೆಲಜಾರದಂತೆ ತಡೆಯಲು, ಮೃದು ಪಾದಕ್ಕೆ ಲೇಪಿಸಲು | 10ಗ್ರಾಂ/ಲೀ. ನೀರಿಗೆ |
| ಬೋರಿಕ್ ಆಸಿಡ್ ಪುಡಿ | ಕಣ್ಣಲ್ಲಿನೀರು / ಕೀವು ಬರುತ್ತಿದ್ದರೆ | ಒಂದು ಲೋಟ ನೀರಿಗೆ ಒಂದು ಚಿಟಿಕೆಯಷ್ಟು |
| ಟಿಂಚರ್ ಬೆಂಜೋಯಿನ್ | ರಕ್ತ ಸ್ರಾವವನ್ನು ತಡೆಯಲು | ಹತ್ತಿಯಲ್ಲಿ ಇದನ್ನು ಅದ್ದಿಕೊಂಡು ರಕ್ತ ಬರುತ್ತಿರುವ ಜಾಗಕ್ಕೆ ಬಿಗಿಯಾಗಿ ಹಿಡಿಯಬೇಕು. |
| ಅಂಟಿಬಯೋಟಿಕ್ ಮುಲಾಮು | ಗಾಯಕ್ಕೆ ಹಚ್ಚಲು | ಅಗತ್ಯ ಪ್ರಮಾಣದಲ್ಲಿ |

**ಜಾನುವಾರು ವಿಮೆ :** ಕೃಷಿಗೆ ಪೂರಕವಾದ ಹೈನುಗಾರಿಕೆಯು ರೈತನ ಆರ್ಥಿಕ ಸಬಲತೆಗೆ ಕಾರಣವಾಗಿದ್ದು, ಹೆಚ್ಚು ಬೆಲೆ ನೀಡಿ ಖರೀದಿಸಿದ ಉತ್ತಮ ಮಿಶ್ರತಳಿ ಹಸು, ಎಮ್ಮೆ ಎತ್ತು ಮುಂತಾದವು ಅಕಸ್ಮಾತ್ ಮರಣ ಹೊಂದಿದಲ್ಲಿ ನೊಂದ ರೈತನಿಗೆ ನಷ್ಟವನ್ನು ತುಂಬಿಕೊಡುವ ಏಕೈಕ ವ್ಯವಸ್ಥೆಯೇ 'ಜಾನುವಾರು ಜೀವವಿಮೆ.'

ಸಾಮಾನ್ಯ ವಿಮಾ ಕಂಪನಿಗಳಾದ ಯುನೈಟೆಡ್ ಇಂಡಿಯಾ, ಓರಿಯಂಟಲ್, ನ್ಯಾಷನಲ್ ಇನ್‌ಶ್ಯೂರೆನ್ಸ್ ಮುಂತಾದವುಗಳು ಜಾನುವಾರುಗಳಲ್ಲಿ ಜೀವವಿಮೆ ಕೈಗೊಳ್ಳುತ್ತಿವೆ. ವಿಮೆ ಮಾಡಿಸಿದರೆ ಜಾನುವಾರು ಮೌಲ್ಯದ ಶೇ. 4-5 ರಷ್ಟು ವಿಮಾ ಕಂತು ಪಾವತಿಸಬೇಕಾಗುತ್ತದೆ. 3 ರಿಂದ 12 ವರ್ಷದೊಳಗಿನ ರಾಸುಗಳನ್ನು ವಿಮೆಯ ವ್ಯಾಪ್ತಿಗೊಳಪಡಿಸಬಹುದು. ವಿಮೆಯ ಅವಧಿಯಲ್ಲಿ ರಾಸು ಮರಣ ಹೊಂದಿದರೆ ಮಾತ್ರ ಮಾರುಕಟ್ಟೆ ಬೆಲೆಯನ್ನು ರೈತನಿಗೆ ಮರುಪಾವತಿಸಲಾಗುತ್ತದೆ. ಒಂದು ವೇಳೆ ರಾಸು ಕಾರಣಾಂತರಗಳಿಂದ ನಿಷ್ಪ್ರಯೋಜಕವಾದರೆ ಉದಾಹರಣೆಗೆ ಕಾಲುಮುರಿಯುವುದು, ಕೆಚ್ಚಲು ಬಾವಿನಿಂದ ಹಾಲುಬಾರದೇ ಇರುವುದು ಇತ್ಯಾದಿ ಸಮಯದಲ್ಲಿ ವಿಮೆ ಪಾವತಿಸಲಾಗುವುದಿಲ್ಲ. ಸಾಮಾನ್ಯವಾಗಿ ಹಣಕಾಸು ಸಂಸ್ಥೆಯಿಂದ ಸಾಲಪಡೆದ ರಾಸುಗಳಿಗೆ ವಿಮೆ ಮಾಡಿಸುವುದು ಕಡ್ಡಾಯ ಆದರೆ ಖಾಸಗಿಯಾಗಿಯೂ ವಿಮೆ ಮಾಡಿಸಬಹುದು. ಆಗ ರೈತ ತನ್ನಲ್ಲಿರುವ

ಎಲ್ಲಾ ರಾಸುಗಳನ್ನು ವಿಮೆಯ ವ್ಯಾಪ್ತಿಗೆ ಒಳಪಡಿಸಬೇಕಾಗುತ್ತದೆ. ಅಲ್ಲದೇ ವಿಮಾ ಕಂತುಗಳ ಮೊತ್ತ ಅಧಿಕವಾಗಿರುತ್ತದೆ.

**ಹೈನುಗಾರಿಕೆ ಬಗ್ಗೆ ತರಬೇತಿ ನೀಡುವ ಕೇಂದ್ರಗಳು :**

ಕರ್ನಾಟಕ ಪಶುವೈದ್ಯಕೀಯ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ್, ಬೆಂಗಳೂರು, ಶಿವಮೊಗ್ಗ, ಹಾಸನ.

ರೆಡ್‌ಡೇನ್ ಯೋಜನೆ, ಹೆಸರುಘಟ್ಟ, ಬೆಂಗಳೂರು.

ರೆಡ್‌ಡೇನ್ ಯೋಜನೆ, ಉಪಕೇಂದ್ರ, ಧಾರವಾಡ.

ರೆಡ್‌ಡೇನ್ ಯೋಜನೆ ಉಪಕೇಂದ್ರ, ಮುನಿರಾಬಾದ್ ರಾಯಚೂರು ಜಿಲ್ಲೆ.

ರೆಡ್‌ಡೇನ್ ಯೋಜನೆ ಉಪಕೇಂದ್ರ, ಕೂಡಿಗೆ, ಕೊಡಗು ಜಿಲ್ಲೆ.

ಜಿಲ್ಲಾ ಜಾನುವಾರು ಕ್ಷೇತ್ರ, ಕೊಯ್ಲಾ, ದಕ್ಷಿಣ ಕನ್ನಡ ಜಿಲ್ಲೆ.

ಸಂಯೋಜಿತ ಜಾನುವಾರು ಮತ್ತು ಸಂಶೋಧನಾ ಕ್ಷೇತ್ರ, ಹೆಸರುಘಟ್ಟ, ಬೆಂಗಳೂರು.

ಪಶು ಸಂಶೋಧನಾ ಕ್ಷೇತ್ರ, ಅಜ್ಜಂಪುರ, ಚಿಕ್ಕಮಗಳೂರು ಜಿಲ್ಲೆ.

ಸಂಯೋಜಿತ ಜಾನುವಾರು ಕ್ಷೇತ್ರ, ಉಳವರ್ತಿ, ಚಿತ್ರದುರ್ಗ ಜಿಲ್ಲೆ.

ರುಡ್‌ಸೆಟ್ ತರಬೇತಿ ಕೇಂದ್ರ, ಹೊಳಲೂರು, ಶಿವಮೊಗ್ಗ.

ಆಯಾ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರಗಳು.

ಒಟ್ಟಾರೆ ಹೈನುಗಾರಿಕೆಯ ಸಣ್ಣ ಪ್ರಮಾಣದಿಂದ ಹಿಡಿದು ದೊಡ್ಡ ಪ್ರಮಾಣದವರೆಗೆ ಮಾಡಬಹುದಾದ ಉದ್ಯಮವಾಗಿದೆ. ಬಂಡವಾಳದ ದೃಷ್ಟಿಯಿಂದಲೂ ಅಧಿಕ ಹೊರೆಯೆನ್ನಿಸುವುದಿಲ್ಲ. ಇದರ ಉತ್ಪಾದನೆ, ಆದಾಯ - ನಷ್ಟಗಳು ರೈತನ ಆಸಕ್ತಿಯನ್ನು ಅವಲಂಬಿಸಿದೆ. ಮನೆಯ ಆಹಾರಕ್ಕೂ ಮಾರಾಟಕ್ಕೂ ಅಲ್ಲದೇ ಸ್ವಾಭಾವಿಕ ಗೊಬ್ಬರದ ಉತ್ಪಾದನೆಯ ಜೊತೆಗೆ ಹಲವಾರು ಉಪಯೋಗಗಳಿವೆ. ಹಾಗಾಗಿ ಹೈನುಗಾರಿಕೆಯು ಅತ್ಯಂತ ದೊಡ್ಡ ಪ್ರಮಾಣದ ಸಮಸ್ಯೆಯಲ್ಲದ ಒಂದು ಉಪಯುಕ್ತ ಉದ್ಯಮವಾಗಿದೆ ಎನ್ನಬಹುದು.

*ಎಂ.ಎಂ.*

**ಹೈನುಗಾರಿಕೆಯ ಉಪಕರಣಗಳು** ಹೈನುಗಾರಿಕೆಯ ಬೃಹತ್ ಉದ್ಯಮವಾಗಿ ಪ್ರಪಂಚದಾದ್ಯಂತ ಬೆಳೆಯುತ್ತಿದೆ. ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಂತೆ ಉಪಕರಣಗಳ ಬಳಕೆಯು ಅಧಿಕವಾಗಿದೆ. ಸರಳ ಹೈನುಗಾರಿಕೆಗೂ ಉಪಕರಣಗಳ ಅಗತ್ಯವಿದ್ದು, ದೊಡ್ಡ ಪ್ರಮಾಣದ ಹೈನುಗಾರಿಕೆಗೆ ಇನ್ನು ದೊಡ್ಡ ಪ್ರಮಾಣದ ಉಪಕರಣಗಳ ಅಗತ್ಯವಿದೆ. ಕೆಚ್ಚಲು ಬೇಲಿಯಂತಹ ಚಿಕ್ಕ ಉಪಕರಣದಿಂದಿಡಿದು, ಹಾಲು ಕರೆಯುವ ಯಂತ್ರದಂತಹ ದೊಡ್ಡ ಪ್ರಮಾಣದ ಉಪಕರಣಗಳ ಬಳಕೆಯಿದೆ.

**ಕೆಚ್ಚಲು ಬೇಲಿ :** ಹಸು, ಕರು ಹಾಕಿದಾಗ ಅದಕ್ಕೆ ಕೆಚ್ಚಲು ಹಾಲೇ ಆಹಾರ. ಹಾಗೆಯೇ ಬೆಳೆದಂತೆ ಅದು ಹಾಲ ಕುಡಿಯುವುದನ್ನು ಕಡಿಮೆ ಮಾಡಿ ಹುಲ್ಲನ್ನು ಮೇಯುವಂತೆ ಮಾಡಲು ಕೆಚ್ಚಲು ಬೇಲಿ ಅಗತ್ಯ. ಹಸು ಹಾಗೂ ಕರುವನ್ನು ಒಟ್ಟಿಗೆ ಮೇಯಲು ಬಿಟ್ಟಾಗ ಕರು ಹುಲ್ಲನ್ನು ಮೇಯದೆ ಹಾಲನ್ನೇ ಕುಡಿಯುತ್ತಿರುತ್ತದೆ. ಇದರಿಂದ ಹಾಲಿನ ಪ್ರಮಾಣ ಕಡಿಮೆಯಾಗುವುದಲ್ಲದೇ, ಕರು ಹುಲ್ಲು ಮೇಯುವುದನ್ನೇ ಮರೆತು ಬಿಡುತ್ತದೆ. ಇದನ್ನು ತಪ್ಪಿಸಲು ಬಳಸುವ ಸಾಧನವೇ ಕೆಚ್ಚಲು ಬೇಲಿ. ಇದನ್ನು ಮುಖಮಂಡಲ ಅಥವಾ ಮುಖಚುಂಬರಿ, ಬಾಯಿಕುಕ್ಕೆ ಎಂತಲೂ ಕರೆಯುತ್ತಾರೆ. ಪುಂಡಿ ನಾರಿನಿಂದ ಇಲ್ಲವೇ ರಕ್ಕಸಬಾಳೆ ನಾರಿನಿಂದ ಎಣೆದು, ಮುಂದೆ ಬಿದಿರಿನ ತೆಳ್ಳನೆಯ ಪಟ್ಟಿಯ ಎರಡೂ ತುದಿಗಳನ್ನು ಚೂಪಾಗಿ ಕೆತ್ತುತ್ತಾರೆ. ಇದರ ಚೂಪಾದ ತುದಿಗಳನ್ನು ಕರುವಿನ ಮುಖದ ಎರಡು ಬದಿಗಳಲ್ಲಿ ಬರುವಂತೆ ಕಟ್ಟುತ್ತಾರೆ. ಕರು ಹಾಲು ಕುಡಿಯಲು ಹೋದಾಗ ಚೂಪಾದ ಬಿದಿರಿನ ತುದಿಗಳು ಹಸುವಿನ ಕೆಚ್ಚಲಿಗೆ ಚುಚ್ಚಿದಾಗ ಹಸುವು ಕರುವಿನಿಂದ ದೂರವಾಗುತ್ತದೆ. ಆಗ ಕರು ಹಾಲು ಕುಡಿಯುವುದು ತಪ್ಪುತ್ತದೆ. ಇದು ಕರುವು ಎಲ್ಲ ಸಂದರ್ಭದಲ್ಲೂ ಹಾಲು ಕುಡಿಯುವುದನ್ನು ತಪ್ಪಿಸುವ ಒಂದು ಸರಳ ಸಾಧನ. ಇತ್ತೀಚಿನ ದಿನಗಳಲ್ಲಿ ಈ ಪದ್ಧತಿ ಕಡಿಮೆಯಾಗುತ್ತಿದೆ. ದನಕರುಗಳನ್ನು ಹಿಂದಿನಂತೆ ಕಾಡಿಗೆ ಮೇಯಲು ಬಿಡುವುದೇ ಕಡಿಮೆಯಾಗಿದೆ. ಹಾಗಾಗಿ ಹಸು ಹಾಗೂ ಕರು ಬೇರೆ ಬೇರೆ ಇದ್ದ ಸಂದರ್ಭದಲ್ಲಿ ಈ ಉಪಕರಣದ ಅಗತ್ಯವೇ ಬರುವುದಿಲ್ಲ.

**ಹಗ್ಗ :** ಹಗ್ಗವು ಮಾನವ ಜೀವನದಲ್ಲಿ ಹಲವಾರು ಉಪಯೋಗಗಳಿಗೆ ಬಳಕೆಯಲ್ಲಿದೆ. ಹೈನುಗಾರಿಕೆಯ ಸಂದರ್ಭದಲ್ಲಿ ಹಸು/ಕರುಗಳನ್ನು ಕಟ್ಟಿ ಹಾಕಲು ಹಗ್ಗವನ್ನು ಬಳಸಲಾಗುತ್ತದೆ. ವಿಧ ವಿಧದ ಹಗ್ಗಗಳ ಬಳಕೆಯಿದೆ. ಹಿಂದೆ ಹಗ್ಗದ ತಯಾರಿಕೆಯೇ ಒಂದು ಉದ್ಯಮವಾಗಿತ್ತು. ಆದರೆ ಇಂದಿನ ಸಂದರ್ಭದಲ್ಲಿ ಹಗ್ಗದ ತಯಾರಿಕೆಯ ಯಂತ್ರಗಳು ಬಂದಿದ್ದು ನಿಮಿಷಾರ್ಧದಲ್ಲಿ ಹಗ್ಗದ ತಯಾರಿಕೆಯಾಗುತ್ತಿದ್ದು ಮಾನವನ ಕೆಲಸ ಕಡಿಮೆಯಾಗಿದೆ.

ಬಯಲು ಸೀಮೆಯಲ್ಲಿ ತೆಂಗಿನ ನಾರಿನ ಹಗ್ಗ, ಹತ್ತಿಹಗ್ಗ, ಕತ್ತಾಳೆ ನಾರಿನ ಹಗ್ಗ, ಪುಂಡಿ ಹಗ್ಗ - ಹೀಗೆ ತರಾವರಿ ಹಗ್ಗಗಳು ಬಳಕೆಯಲ್ಲಿವೆ. ಅಲ್ಲದೇ ಕಲ್ನಾರಿನಿಂದ, ರಕ್ಕಸಬಾಳೆ, ವಿವಿಧ ಬೇರುಗಳಿಂದ ಹಗ್ಗವನ್ನು ತಯಾರಿಸಿ ಉಪಜೀವನ ನಡೆಸುತ್ತಿದ್ದ ಕುಟುಂಬಗಳಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಇಂತಹ ಸಸ್ಯಗಳ ಬೆಳವಣಿಗೆ ಕಡಿಮೆಯಾಗಿ ಇಂತಹ ಹಗ್ಗಗಳ ತಯಾರಿಕೆಯೂ ಇಲ್ಲ. ಜೊತೆಗೆ ಇದನ್ನೇ ನಂಬಿದ ಕುಟುಂಬಗಳು ಸಹ ಕಣ್ಮರೆಯಾಗುತ್ತಿವೆ. ಹೈನುಗಾರಿಕೆಯಲ್ಲಿಯೂ ಹಗ್ಗದ ಉಪಯೋಗ ಪ್ರಮುಖವಾದುದು. ಅವುಗಳಲ್ಲಿ ಕೆಲವು ಇಂತಿವೆ.


**ಮೂಗುದಾರ :** ಹಸು/ಕರು/ ಎಮ್ಮೆಗಳನ್ನು ಹತೋಟಿಯಲ್ಲಿ ಇಡಲು ಬಳಸುವ ಒಂದು ಉಪಕರಣ. ಅದೇನ್ ಅಪಾಟಿ ಕುಣಿದಾಡ್ತದೆ ಆಕರ, ನಾಳೆ ಅದಕ್ಕೊಂದು ಮೂಗುದಾರ ಪೋಣಿಸ್ಲಾ... ಎಂಬ ಮಾತನ್ನು ಹಳ್ಳಿಯಲ್ಲಿ ಕೇಳಿರುತ್ತೇವೆ. ಹಸು/ಕರುಗಳು ನಿಯಂತ್ರಣವಿಲ್ಲದೇ ಕುಣಿದಾಡುವುದನ್ನು ತಪ್ಪಿಸಲು ಮೂಗಿಗೆ ದಾರವನ್ನು ಹಾಕಿ ಕೊಂಬಿನ ಹಿಂಭಾಗಕ್ಕೆ ಕಟ್ಟಿರುತ್ತಾರೆ. ಇದರಿಂದ ನಿಯಂತ್ರಣಕ್ಕೆ ಬರುವುದಲ್ಲದೆ ರೈತನು ತನಗೆ ತಕ್ಕಂತೆ ಪಳಗಿಸಿಕೊಳ್ಳಲು ಸಹಾಯಕವಾಗುತ್ತದೆ. ಹಸು/ಕರುಗಳ ಗಾತ್ರಕ್ಕೆ ಸರಿಯಾಗಿ ಮೂಗುದಾರದ ಗಾತ್ರವನ್ನು ನಿರ್ಧರಿಸಬೇಕು. ಕರುವಿಗೆ ಸಣ್ಣ ಗಾತ್ರದ, ಹಸುವಿಗೆ ದಪ್ಪದಾದ ಮೂಗುದಾರದ ಅಗತ್ಯವಿದೆ.

ಮೊದಲು ನಾರಿನಿಂದ ಮೂಗುದಾರ ಮಾಡಲಾಗುತ್ತಿತ್ತು. ಇದು ಮೂಗಿನಲ್ಲಿ ಬರುವ ಜೊಲ್ಲಿನಿಂದ ಕೊಳೆತು ಮೂಗಿನಲ್ಲಿ ಗಾಯದಂತಹ ಸಮಸ್ಯೆಯಾದ್ದರಿಂದ ಅನಂತರದಲ್ಲಿ ಹತ್ತಿಯಲ್ಲಿ ಮೂಗುದಾರ ತಯಾರಿಸುತ್ತಿದ್ದರು. ಇತ್ತೀಚೆಗೆ ಹತ್ತಿಯ ಜೊತೆಗೆ ಪ್ಲಾಸ್ಟಿಕ್ ಮೂಗುದಾರಗಳ ಬಳಕೆಯಿದೆ.

**ಕೊರಳ ಚಿಲಕ :** ಹಸು/ಎಮ್ಮೆಗಳನ್ನು ಹಗ್ಗದಿಂದ ಕಟ್ಟಿ ಹಾಕುವುದು ರೂಢಿ. ಕಟ್ಟಿ ಹಾಕಿದ ಸಂದರ್ಭದಲ್ಲಿ ಹಸುಗಳ ಮೈಯ ನವೆಯಿಂದಲೋ ಅಥವಾ ಸುಮ್ಮನೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಡ್ಡಾದಿಡ್ಡಿ ತಿರುಗಿದಾಗ ಹಗ್ಗ ಸುತ್ತಿಕೊಳ್ಳುತ್ತದೆ. ಅಲ್ಲದೆ ಕೊರಳಿಗೆ ಉರುಳು ಬಿಗಿದು ಜೀವಕ್ಕೆ ಸಂಚಕಾರವಾಗಬಹುದು. ಇಂತಹ ಅನಾಹುತವನ್ನು ತಪ್ಪಿಸಲು ಬಳಸುವ ಒಂದು ಚಿಕ್ಕ ಕಬ್ಬಿಣದ ಸಾಧನವೇ ಕೊರಳಪಟ್ಟಿ ಅಥವಾ ಚಿಲಕವಾಗಿದೆ. ಇದನ್ನು ಹಸು/ಕರು/ಎಮ್ಮೆ/ಕುರಿ ಇಂತಹ ಪ್ರಾಣಿಗಳ ಕತ್ತಿಗೆ ಹಾಕಿದ ಕೊರಳ ಪಟ್ಟಿಗೆ ಚಿಲಕದ ಒಂದು ಭಾಗವನ್ನು ಹಾಗೂ ಹಸುಕಟ್ಟುವ ಹಗ್ಗಕ್ಕೆ ಒಂದು ಭಾಗವನ್ನು ಸೇರಿಸುತ್ತಾರೆ. ಹಸುಗಳು ಸುತ್ತಿದ ಹಾಗೆ ಚಿಲಕವು ತಿರುಗುತ್ತಿರುತ್ತದೆ. ಹಾಗಾಗಿ ಹಗ್ಗ ಸುತ್ತಿಕೊಳ್ಳುವುದಾಗಲಿ, ಉರುಳಿಗೆ ಸಿಲುಕುವುದಾಗಲಿ ಆಗುವುದಿಲ್ಲ. ಇದನ್ನು ಸಿದ್ಧಪಡಿಸಲು 20 ರೂಪಾಯಿ ಖರ್ಚಾಗಬಹುದು. ಈ ಉಪಕರಣವನ್ನು ಎಲ್ಲ ಪ್ರದೇಶಗಳಲ್ಲಿ ಬಳಸುತ್ತಾರೆ.

**ಹೈನುಗಾರಿಕೆಗೆ ಸಂಬಂಧಿಸಿದ ಇತರ ಉಪಕರಣಗಳು :**


**ಗೊಟ್ಟ :** ಬಿದಿರಿನ ಕೊಳವೆಯ ಒಂದು ಬದಿಯನ್ನು ಮುಚ್ಚಿ ಇನ್ನೊಂದು ಬದಿಯನ್ನು ಚೂಪಾಗಿಸಿರುವ ಉಪಕರಣವೇ ಗೊಟ್ಟ. ಇದನ್ನು



ಹಸುಗಳಿಗೆ ಆರೋಗ್ಯ ಸರಿಯಿಲ್ಲದೆ ಆಹಾರ ತಿನ್ನುವುದನ್ನೇ ಬಿಟ್ಟುಬಿಟ್ಟ ಸಂದರ್ಭದಲ್ಲಿ ದ್ರವರೂಪದ ಆಹಾರವನ್ನು ಕುಡಿಸಲು ಬಳಸುತ್ತಾರೆ. ಅಲ್ಲದೇ ಕರುಗಳಿಗೆ ದ್ರವರೂಪದ ಆಹಾರವನ್ನು ಕುಡಿಸಲು ಅಥವಾ ನಾನಾ ಕಾರಣದಿಂದ ಹಸುಗಳು ಕರು ಹಾಕಿದ ಸಂದರ್ಭದಲ್ಲೇ ಸಾವನ್ನಪ್ಪಿದರೆ ಅಂತಹ ಕರುಗಳಿಗೆ ಗೊಟ್ಟದಿಂದಲೇ ಬೇರೆ ಹಸುವಿನ ಹಾಲನ್ನು ಕುಡಿಸುತ್ತಾರೆ. ಚಿಕ್ಕ ಗಾತ್ರದಿಂದ ಹಿಡಿದು ದೊಡ್ಡ ಗಾತ್ರದ ಗೊಟ್ಟಗಳಿವೆ. ಗೊಟ್ಟದಿಂದ ಕುಡಿಸುವಾಗ ಹಸು/ಕರುಗಳ ಗಂಟಲಿನಲ್ಲಿ ಉಂಟಾಗುವ ಗಟ, ಗಟ ಎಂದು ಹೊರಡುವ ಸದ್ದಿನಿಂದಲೇ ಇದಕ್ಕೆ ಗೊಟ್ಟ ಎಂದು ಹೆಸರು ಬಂದಿರಬಹುದೆಂಬ ನಂಬಿಕೆಯಿದೆ.

**ಬಾನಿ :** ದನಕರುಗಳಿಗೆ ಹೊಟ್ಟು, ಹಿಂಡಿ,ತೌಡು, ಮುಸುಕಿನ ಜೋಳದ ಹಿಟ್ಟು ಅಲ್ಲದೇ ಅಳಿದುಳಿದ ಅಡುಗೆಯ ಪದಾರ್ಥಗಳನ್ನೆಲ್ಲ ತಿನ್ನಿಸಲು ಬಳಸುವ ಸಾಧನವೇ ಬಾನಿ. ಇದಕ್ಕೆ ಬಯಲು ಸೀಮೆಯಲ್ಲಿ ಮುಸುರೆ ಅಥವಾ ಕಲಗಚ್ಚು ಎನ್ನುತ್ತಾರೆ. ನೀರನ್ನು ಕುಡಿಸಲು ಸಹ ಇದನ್ನು ಬಳಸುತ್ತಾರೆ. ಕುಂಬಾರರು ಬಾನಿಯ ನಿರ್ಮಾತೃ. ರೈತರು ತಮ್ಮ ಅಗತ್ಯಕ್ಕೆ ತಕ್ಕಂತೆ ಬಾನಿಯನ್ನು ಮಾಡಿಸಿಕೊಂಡಿರುತ್ತಾರೆ. ಇದರಲ್ಲಿ ಮರದ ಬಾನಿಗಳು, ಮಣ್ಣಿನ ಬಾನಿಗಳು, ಬಳಪದ ಕಲ್ಲಿನ ಬಾನಿಗಳು ಎಂಬ ನಾನಾ ವಿಧಗಳಿವೆ. ಮಣ್ಣಿನ ಬಾನಿಗಳನ್ನು ಬಳಸುವ ಮೊದಲು ಮರದ ಬಾನಿಗಳು ಬಳಕೆಯಲ್ಲಿದ್ದವು. ತೆಂಗು, ಈಚಲು, ಆಲ.... ಹೀಗೆ ದೊಡ್ಡ ದೊಡ್ಡ ಮರದ ಬುಡಗಳನ್ನು ತಂದು, ಮಧ್ಯಭಾಗವನ್ನು ಕೊರೆಸಿ, ತಿರುಳನ್ನು ಬಗೆದು ಗುಂಡಿಯಾಕಾರದಲ್ಲಿ ಮಾಡಲಾಗುತ್ತಿತ್ತು. ಇವುಗಳು ಬಹಳ ಕಾಲ ಬಾಳಿಕೆ ಬರುತ್ತಿದ್ದವು. ಇಂದು ಮರದ ಬಾನಿಗಳ ಅವಶೇಷಗಳು ಎಲ್ಲೂ ಉಳಿದಿಲ್ಲ.

**ಮಂತು (ಕಡಗೋಲು) :** ಇದು ಮೊಸರು ಕಡೆಯುವ ಅಥವಾ ಬೆಣ್ಣೆ ತೆಗೆಯುವ ಉಪಕರಣ. ಮಜ್ಜಿಗೆ ಕಡೆಯುವ ಕೋಲು ಎಂತಲೂ ಪ್ರಸಿದ್ಧವಾಗಿದೆ. ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಹತ್ತಾರು ಕರಾವಿನ ಹಸು/ಎಮ್ಮೆಗಳಿರುತ್ತಿದ್ದವು. ಜೊತೆಗೆ ಅವಿಭಕ್ತ ಕುಟುಂಬಗಳಾದ್ದರಿಂದ ಮನೆಯ



ತುಂಬ ಜನರು ತುಂಬಿರುತ್ತಿದ್ದ ಸಂದರ್ಭದಲ್ಲಿ ಎಲ್ಲರಿಗೂ ಸಮೃದ್ಧ ಆಹಾರಕ್ಕಾಗಿ ಮೊಸರನ್ನ ಕಡೆದು ಬೆಣ್ಣೆಯನ್ನುತೆಗೆಯಲಾಗುತ್ತಿತ್ತು. ಆದರೆ ಇಂದು ಇದರ ಬಳಕೆ ಇದ್ದರೂ ಬಹಳ ಕಡಿಮೆಯಾಗಿದೆ.

ಮೆದು ಮರದಿಂದ ತಯಾರಿಸುವ ಈ ಉಪಕರಣಕ್ಕೆ ಒಂದು ಉದ್ದನೆಯ ಕೋಲಿದ್ದು, ಕೆಳಭಾಗಕ್ಕೆ ದುಂಡಾಕಾರದ ಮರದ ಗುಬುಟು ಇರುತ್ತದೆ. ಅದರ ಮೇಲ್ಮೈನಲ್ಲಿ ಹತ್ತಾರು ಏಣುಗಳು. ಸು. 4/5 ಅಡಿ ಎತ್ತರವಿರುವ, ಮೂರು ತೋರು ಬೆರಳು ಗಾತ್ರವಿರುವ ಕೋಲು, ಅದಕ್ಕೆ ಬೊಗಸೆ ಗಾತ್ರದ ಬುಗುಟು ಸಿಕ್ಕಿಸಿರುವ ಕಡಗೋಲನ್ನು ಬಳಸಲಾಗುತ್ತಿತ್ತು. ಕೆಲವು ಮನೆಗಳಲ್ಲಿ ಕಿಟಕಿಯ ಸರಳುಗಳಿಗೆ ಸಿಕ್ಕಿಸಿಕೊಳ್ಳಲಾಗುತ್ತಿತ್ತು. ಇನ್ನು ಕೆಲವರು ಮುಂದಾಲೋಚನೆಯಿಂದ ಅಡುಗೆ ಮನೆಯ ಒಂದು ಮೂಲೆಯಲ್ಲಿ ಇದಕ್ಕಾಗಿಯೇ ಎರಡು ಕೊಂಡಿಗಳನ್ನು

ಮಾಡಿಸಿಕೊಳ್ಳುತ್ತಿದ್ದರು. ಮೊಸರು ಕಡೆಯುವ ಪ್ರಮಾಣದ ಮೇಲೆ ಕಡೆಗೋಲಿನ ಗಾತ್ರ ನಿರ್ಧಾರವಾಗುತ್ತಿತ್ತು. ಕಡಿಮೆ ಮೊಸರಾದರೆ ಸಣ್ಣಗಾತ್ರದ ಕಡಗೋಲು, ಮೊಸರು ಜಾಸ್ತಿಯಿದ್ದರೆ ದಪ್ಪದಾದ ಕಡಗೋಲಿನ ಬಳಕೆ ಮಾಡಲಾಗುತ್ತಿತ್ತು.

ಕಡಗೋಲನ್ನು ತಿಕ್ಕಲು ಹಗ್ಗ(ದಾರ)ವನ್ನು ಬಳಸಲಾಗುತ್ತದೆ. ಹಗ್ಗವನ್ನು ಕಡಗೋಲಿನ ಮುಕ್ಕಾಲು ಭಾಗಕ್ಕೆ ಸುತ್ತಲಾಗುತ್ತದೆ. ಒಂದು ದಾರದ ತುದಿ ಮೇಲೆ, ಇನ್ನೊಂದು ದಾರದ ತುದಿ ಕೆಳಗೆ ಬರುವಂತೆ ಸುರುಳಿ ಸುರುಳಿಯಾಗಿ ಸುತ್ತುತ್ತಿದ್ದರು. ಮೇಲ್ಭಾಗದ ದಾರದ ತುದಿಯನ್ನು ಬಲಗೈಲಿ, ಕೆಳಭಾಗದ ದಾರದ ತುದಿಯನ್ನು ಎಡಗೈಲಿ ಹಿಡಿದು ಹಿಂದೆ ಮುಂದೆ ಮಾಡಿದರೆ 'ಜೀರ್ ಬೋರ್' ಅಂತ ಶಬ್ದವಾಗುತ್ತಿತ್ತು. ಈ ಶಬ್ದದ ಆಧಾರದ ಮೇಲೆ ಕೆಲವು ಹೆಂಗಸರು ಬೆಣ್ಣೆ ಬಂದಿರುವುದನ್ನು ಗೊತ್ತು ಮಾಡುತ್ತಿದ್ದರು ಎಂದು ಹೇಳಲಾಗುತ್ತದೆ.

**ನೆಲುವು :** ಗ್ರಾಮೀಣ ಪ್ರದೇಶಗಳಲ್ಲಿ ಬೆಕ್ಕಿನ ಕಾಟದಿಂದ ಹಾಲನ್ನು ರಕ್ಷಿಸುವುದು ಕಷ್ಟವಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ನೆರವಿಗೆ ಬಂದಿದ್ದು ನೆಲುವು ಉಪಕರಣ. ಹಾಲು, ಬೆಣ್ಣೆ, ತುಪ್ಪ, ಎಣ್ಣೆಯಂತಹ ಖಾದ್ಯಗಳನ್ನು ಬೆಕ್ಕು, ಇರುವೆಗಳಿಂದ ರಕ್ಷಿಸಿಕೊಳ್ಳಲು ಇದನ್ನು ಬಳಸಲಾಗುತ್ತದೆ. ರಕ್ಕಸಬಾಳೆ, ಈಚಲ ನಾರುಗಳಿಂದ ಸು. 2 ಅಡಿಗಳಷ್ಟು ಉದ್ದವಾಗಿ ಹೆಣೆದಿರುವ ಈ ನೆಲುವಿಗೆ ಅದೇ ಸಸ್ಯದ ನಾರಿನಿಂದ ಮಾಡಿದ ದಪ್ಪನೆಯ ಮೂರು ದಾರಗಳು, ಕೆಳಗೆ ಪಾತ್ರೆ ಕೂರುವಷ್ಟು ತಳ ಮಾಡಿರುತ್ತಾರೆ. ಗುಡಿಸಲು/ಮನೆಯ ಜಂತೆಗೆ ಈ ನೆಲುವನ್ನು ತೂಗು ಹಾಕಿ ಅದರಲ್ಲಿ ಹಾಲು/ಮೊಸರಿನ ಪಾತ್ರೆಯನ್ನು ಇಟ್ಟು ಹೋಗುತ್ತಾರೆ. ಈ ಪದಾರ್ಥವನ್ನು ತಿನ್ನಲು ಬೆಕ್ಕು ಹಾರಿದರೆ ನೆಲುವು ಜೀಕುವುದರಿಂದ ಅದರ ಮೇಲೆ ಬೆಕ್ಕು ಏರಲಾಗುವುದಿಲ್ಲ. ಇದಕ್ಕಾಗಿಯೇ 'ನೆಲುವಿಗೆ ಹಾರದ ಬೆಕ್ಕು ಮುಗಿಲಿಗೆ ಹಾರಿತೆ' ಎಂಬ ನಾಣ್ಣುಡಿ ಬಂದಿದೆ.

**ಕಲ್ಲುಸೋರೆ :** ಬಹಳ ತಂಪಾಗಿರುವ ಮೊಸರಿಗೆಂದೇ ವಿಶೇಷವಾಗಿ ಬಳಸಲಾಗುತ್ತಿದ್ದ ಹೈನುಗಾರಿಕೆ ಉಪಕರಣ. ಇದರಲ್ಲಿ ಮೊಸರಿಟ್ಟರೆ ಎಷ್ಟು ದಿನವಾದರೂ ಹುಳಿಯಾಗುತ್ತಿರಲಿಲ್ಲ. ಸಾಮಾನ್ಯವಾಗಿ ತಂಪಿರುವ ಜಾಗದಲ್ಲಿ ಹುಳಿ ಸುಳಿಯುವುದಿಲ್ಲದ ಕಾರಣ ಮೊಸರಿನ ಸಂಗ್ರಹಕ್ಕೆ ಇದನ್ನೇ ಬಳಸಲಾಗುತ್ತಿತ್ತು. ಇದನ್ನು ಬಳಪದ ಕಲ್ಲಿನಿಂದ ತಯಾರಿಸಲಾಗುತ್ತಿದ್ದು, ಪ್ರಾರಂಭದಲ್ಲಿ ಮೊಸರಿಗೆ ಬಳಕೆಯಾಗುತ್ತಿದ್ದ ಕಲ್ಲುಸೋರೆ ಅನಂತರದಲ್ಲಿ ಉಪ್ಪಿನ ಕಾಯಿಯ ಸಂಗ್ರಹಕವಾಗಿ ಬದಲಾಯಿತು. ಇದು ಬಯಲು ಸೀಮೆ ಅದರಲ್ಲೂ ಹಳೆ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿದ್ದ ಉಪಕರಣ.

**ಹಾಲು ಕರೆಯುವ ಯಂತ್ರ :** ಹೈನುಗಾರಿಕೆಯು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದು ವೈಜ್ಞಾನಿಕತೆಯನ್ನು ಅಳವಡಿಸಿಕೊಂಡಿದೆ. ಹಿಂದೆ ಕೈಯಿಂದ ಹತ್ತಾರು ಲೀಟರ್ ಹಾಲನ್ನು ಕರೆಯಲಾಗುತ್ತಿತ್ತು. ಆದರೆ ಇಂದು ಒಬ್ಬ ರೈತನೇ ಹಲವಾರು ಹಸುಗಳನ್ನು ಸಾಕುತ್ತಿದ್ದು ಹಾಲನ್ನು ಕರೆಯಲು ಕಷ್ಟವಾಗುತ್ತದೆ. ಇದರ ಸಮಸ್ಯೆಯನ್ನು ನೀಗಿಸಲು ನೆರವಾದ ಯಂತ್ರವು ಇದಾಗಿದೆ. ಈಗಲೂ ಕೈಯಿಂದಲೇ ಹಾಲನ್ನು ಕರೆಯುವುದು ಹೆಚ್ಚಾಗಿ ಕಂಡು ಬಂದರೂ ದೊಡ್ಡ ಪ್ರಮಾಣದಲ್ಲಿ ಹೈನುಗಾರಿಕೆಯನ್ನು ಮಾಡುವ ಬೆರಳೆಣಿಕೆಯಷ್ಟು ರೈತರು ಇದನ್ನು ಬಳಸುತ್ತಿದ್ದಾರೆ. ಇದರಿಂದ ಹಸುವಿನ ಕೆಚ್ಚಲಿನಲ್ಲಿ ಇರುವ ಪೂರ್ಣಪ್ರಮಾಣದ ಹಾಲನ್ನು ಕರೆಯುವುದರಿಂದ ಹಾಲಿನ ಉತ್ಪಾದನೆಯೂ ಹೆಚ್ಚುತ್ತದೆ.

ಒಟ್ಟಾರೆಯಾಗಿ ಹೈನುಗಾರಿಕೆಯು ವೈಜ್ಞಾನಿಕತೆಯಿಂದ ಬಹಳ ವೇಗವಾಗಿ ತನ್ನ ಫಲವನ್ನು ಕಂಡುಕೊಂಡಿದ್ದು ಭಾರತವು ಪ್ರಪಂಚದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಇದರ ಉಪಕರಣಗಳು ಬಹಳ ದುಬಾರಿಯಲ್ಲದ ಸರಳವಾದ ಉಪಕರಣಗಳಾಗಿವೆ. ಹೈನುಗಾರಿಕೆಯನ್ನು ನಡೆಸುವ ಪ್ರಮಾಣದ ಮೇಲೆ ಉಪಕರಣಗಳನ್ನು ಬಳಸಬೇಕಾಗುತ್ತದೆ. ಕೆಲವು ಉಪಕರಣಗಳು ಇಂದು ತೀರ ಅಗತ್ಯವಲ್ಲದಿದ್ದರೂ ಅವುಗಳ ಬಳಕೆಯಿಂದ ಸಮೃದ್ಧವಾದ ಫಲಿತ ದೊರೆಯುತ್ತದೆ.

*ಎಂ.ಎಂ.*

**ಹೊಗೆಸೊಪ್ಪು** ಇದು ನಿಕೋಷಿಯನ್ ವರ್ಗಕ್ಕೆ ಸೇರಿದ ಸಸ್ಯ. ಇದರಲ್ಲಿ ನಿಕೋಷಿಯನ್ ಟೊಬಾಕಂ ಮತ್ತು ನಿಕೋಷಿಯನ್ ರಸ್ಟಿಕ್ ಎಂದು ಎರಡು ಮೂಲ ತಳಿಗಳಿವೆ. ಇದರ ಮೂಲ ದಕ್ಷಿಣ ಅಮೆರಿಕಾದ ಆಂಡೀಸ್ ಪರ್ವತ ಪ್ರದೇಶ. ಜೀನ್ ನಿಕೋಟ್ ಎಂಬುವವನು ಇದನ್ನು ಫ್ರಾನ್ಸಿಗೆ ಪರಿಚಯಿಸಿದ. ಅಲ್ಲಿಂದ 17ನೇ



ಶತಮಾನದಲ್ಲಿ ಪೋರ್ಚುಗೀಸರು ಭಾರತಕ್ಕೆ ಪರಿಚಯಿಸಿದರು ಎಂದು ತಿಳಿದು ಬರುತ್ತದೆ. ಇದನ್ನು ಮೊದಲಿಗೆ ಭಾರತದಲ್ಲಿ ಗೋವ, ಕರ್ನಾಟಕ, ಗುಜರಾತ್ ಹಾಗೂ ಆಂಧ್ರಪ್ರದೇಶ ರಾಜ್ಯಗಳಲ್ಲಿ ಬೆಳೆಯಲು ಆರಂಭಿಸಿದರು. ಅನಂತರ ಇಡೀ ದೇಶದಲ್ಲಿ ಹರಡಿ ಈಗ ಭಾರತ ಪ್ರಪಂಚದ ಹೊಗೆ ಸೊಪ್ಪು ಬೆಳೆಯುವ ಪ್ರಮುಖ ರಾಷ್ಟ್ರಗಳಲ್ಲೊಂದಾಗಿದೆ. ಚೀನಾ, ಬ್ರೆಜಿಲ್, ಬಿಟ್ಟರೆ ಭಾರತ ಅನಂತರದ ಸ್ಥಾನದಲ್ಲಿದೆ.

ಪ್ರಮುಖ ವಾಣಿಜ್ಯ ಬೆಳೆಯಾದ ಹೊಗೆಸೊಪ್ಪು 1970ರ ದಶಕದಲ್ಲಿ ಕರ್ನಾಟಕವನ್ನು ಪ್ರವೇಶಿಸಿತು. ಹೊಗೆ ಸೊಪ್ಪಿನಲ್ಲಿ ಮೂರು ಬಗೆಗಳಿವೆ. ಅಗಿಯುವ ಹೊಗೆ ಸೊಪ್ಪು, ಬೀಡಿ ಹೊಗೆ ಸೊಪ್ಪು ಮತ್ತು ವರ್ಜೀನಿಯ ಹೊಗೆಸೊಪ್ಪು. ಇದರಲ್ಲಿ ವರ್ಜೀನಿಯ ತಂಬಾಕನ್ನು ಕರ್ನಾಟಕದಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು, ತಾಲ್ಲೂಕುಗಳಲ್ಲಿ ಅತೀ ಹೆಚ್ಚಾಗಿ ಬೆಳೆದರೆ, ಕೆ.ಆರ್. ನಗರ, ಎಚ್.ಡಿ. ಕೋಟೆ, ಗುಂಡ್ಲುಪೇಟೆ ಮತ್ತು ಹಾಸನ ಜಿಲ್ಲೆಯ ಅರಕಲಗೂಡು, ಹೊಳೆನರಸೀಪುರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಡಿಮೆ ಬೆಳೆಯುವರು. ಕರ್ನಾಟಕದಲ್ಲಿ ಇದರ ಸಂಶೋಧನಾ ಕೇಂದ್ರ ಹುಣಸೂರು ತಾಲ್ಲೂಕಿನಲ್ಲಿದೆ. ಇಲ್ಲಿ ಬೆಳೆಯುವ

ವರ್ಜೀನಿಯ ತಂಬಾಕು ಉತ್ಕೃಷ್ಟ ಗುಣ ಮಟ್ಟದ್ದಾಗಿದ್ದು ಪ್ರಪಂಚದ ಮಾರುಕಟ್ಟೆಯಲ್ಲಿ ತುಂಬಾ ಬೇಡಿಕೆ ಇದೆ.

ಹೊಗೆಸೊಪ್ಪನ್ನು ವಿವಿಧ ಬಗೆಯ ಪರಿಸ್ಥಿತಿಗಳಲ್ಲಿ ಬೆಳೆಯ ಬಹುದಾದರೂ ಇದು ಉಷ್ಣವಲಯದ ಬೆಳೆ. ಬೆಳೆಯುವ ಕಾಲದಲ್ಲಿ ಅಧಿಕ ಉಷ್ಣಾಂಶ ಅಂದರೆ 21 ರಿಂದ 27o ಸೆಲ್ಸಿಯಸ್ ಉಷ್ಣಾಂಶವಿರಬೇಕು. ಹದಗೊಳಿಸುವ ಸಂದರ್ಭಗಳಲ್ಲಿ ಮಳೆರಹಿತ ಬಿಸಿಲಿನಿಂದ ಕೂಡಿದ ವಾತಾವರಣ ಆವಶ್ಯಕ. ಸಾಧಾರಣ ಮಳೆ ಹಂಚಿಕೆ ಸಾಕು. ಬೆಳೆಯುವ ಅವಧಿಯಲ್ಲಿ ಸರಾಸರಿ 50 ಸೆಂ.ಮೀ. ವಾರ್ಷಿಕ ಮಳೆಯಾದರೆ ಸಾಕು. ಅತ್ಯಧಿಕ ಮಳೆ ಮತ್ತು ಹಿಮ ಬೆಳೆಗೆ ಹಾನಿಕರ. 50 ಸೆಂ.ಮೀ.ಗಿಂತಲೂ ಕಡಮೆ ಮಳೆಯಾಗುವ ಭಾಗಗಳಲ್ಲಿ ನೀರಾವರಿಯ ಸಹಾಯದಿಂದಲೂ ಕೆಲವು ಬಗೆಯ ಹೊಗೆಸೊಪ್ಪನ್ನು ಬೆಳೆಯಬಹುದು.

ಇದರ ಕೃಷಿ ಬಹುವಾಗಿ ಮಣ್ಣಿನ ಗುಣ ಲಕ್ಷಣಗಳನ್ನು ಅವಲಂಬಿಸಿದೆ. ಮರಳು ಮಿಶ್ರಿತವಾದ ಜೈವಿಕಾಂಶ ಕಡಿಮೆ ಪ್ರಮಾಣದಲ್ಲಿರುವ ಹಾಗೂ ಹೆಚ್ಚಿನ ಖನಿಜಾಂಶವುಳ್ಳ ಮಣ್ಣು ಆವಶ್ಯಕ. ಮರಳು ಮತ್ತು ಮರಳು ಮಿಶ್ರಿತ ಮಣ್ಣು ಈ ಬೆಳೆಗೆ ಉತ್ತಮ. ಇದರಿಂದ ಗುಣಮಟ್ಟ ಉತ್ತಮವಾಗುವುದು. ಇಂಥ ಕಡೆ ವಿಶೇಷವಾಗಿ ವರ್ಜೀನಿಯ ಹೊಗೆಸೊಪ್ಪು ಬೆಳೆಯಲಾಗುವುದು. ಇತರ ಮಣ್ಣಿನಲ್ಲಿಯೂ ಬೇರೆ ಬೇರೆ ವಿಧದ ಹೊಗೆಸೊಪ್ಪನ್ನು ಬೆಳೆಯಬಹುದು. ಬೀಡಿಗೆ ಬಳಸುವ ಹೊಗೆಸೊಪ್ಪನ್ನು ಕಪ್ಪು ಮತ್ತು ಮೆಕ್ಕಲು ಮಣ್ಣಿನಲ್ಲಿಯೂ ಸಿಗಾರ್ ಮತ್ತು ಚಿರೂಟ್‌ಗೆ ಬಳಸುವ ಹೊಗೆಸೊಪ್ಪನ್ನು ಕೆಂಪು ಮಿಶ್ರಿತ ಮಣ್ಣಿನಲ್ಲಿಯೂ ಹುಕ್ಕಾ ಮತ್ತು ತಿನ್ನುವ ಹೊಗೆಸೊಪ್ಪನ್ನು ಮೆಕ್ಕಲು ಮಣ್ಣಿನಲ್ಲಿಯೂ ಬೆಳೆಯುವುದು ಹೆಚ್ಚು ಲಾಭದಾಯಕ.

ಹೊಗೆಸೊಪ್ಪು ಬೆಳೆಯಲು ಅಧಿಕ ಕೆಲಸಗಾರರು ಬೇಕು. ಜಮೀನು ಹದಗೊಳಿಸಲು, ಸಸಿಗಳನ್ನು ಬೆಳೆಸಲು ನಾಟಿ ಮಾಡಲು, ರಸಗೊಬ್ಬರ ಹಾಕಲು ಮತ್ತು ಎಲೆಗಳನ್ನು ಹದಗೊಳಿಸಿ ಮಾರುಕಟ್ಟೆಗೆ ಸಿದ್ಧಗೊಳಿಸಲು ಸಾಕಷ್ಟು ಕಾರ್ಮಿಕರು ಆವಶ್ಯಕ. ಉತ್ಪಾದನೆಯ ಒಟ್ಟು ವೆಚ್ಚದಲ್ಲಿ ಶೇ. 40 ರಷ್ಟು ಕೂಲಿಗಾರರಿಗೆ ಸೇರಿದುದಾಗಿದೆ. ಇದು ವಾಣಿಜ್ಯ ಬೆಳೆಯಾದುದರಿಂದ ಮಾರುಕಟ್ಟೆ ಹತ್ತಿರ ಇರುವುದು ಆವಶ್ಯಕ.

**ಬೆಳೆಯುವ ವಿಧಾನ :** ಮೊದಲಿಗೆ ಭೂಮಿಯಲ್ಲಿ ಒಂದು ಗಾಡಿ ಕೊಟ್ಟಿಗೆ ಗೊಬ್ಬರ ಹಾಕಿ ಮೂರು ನಾಲ್ಕು ಸಲ ಉಳುಮೆ ಮಾಡಿ 3 ಅಡಿ ಅಗಲ 40 ಅಡಿ ಉದ್ದದ 10 ಸಸಿ ಮಡಿಗಳನ್ನು ಮಾಡಿಕೊಳ್ಳಬೇಕು. ಮಡಿಗಳಲ್ಲಿ ಹೆಂಟೆ ಇರದಂತೆ ನೋಡಿಕೊಳ್ಳಬೇಕು. ಪ್ರತಿಯೊಂದು ಮಡಿಗೆ 5 ಗ್ರಾಂ ಹೊಗೆಸೊಪ್ಪಿನ ಬೀಜವನ್ನು ಒಂದು ಬಾಂಡ್ಲಿಯ ಮರಳಿನಲ್ಲಿ ಚೆನ್ನಾಗಿ ಮಿಶ್ರಣ ಮಾಡಿಕೊಂಡು ಮಡಿಗಳಲ್ಲಿ ಹಾಕಬೇಕು ಅಥವಾ ಒಂದು ಕ್ಯಾನ್ ನೀರಿನಲ್ಲಿ 5 ಗ್ರಾಂ ಹೊಗೆಸೊಪ್ಪು ಬೀಜವನ್ನು ಬೆರಸಿ ಪ್ರತಿ ಮಡಿಗಳಿಗೆ ಹಾಕಬೇಕು. ಅನಂತರ ಪ್ರತಿ ಮಡಿಯ ಮೇಲೆ ಬತ್ತದ ಹುಲ್ಲನ್ನು ತೇವಾಂಶ ಆರದಂತೆ ಮುಚ್ಚಬೇಕು. ಒಂದೊಂದು ಕೆ.ಜಿ. 17. 17. 17 ರಸಗೊಬ್ಬರವನ್ನು ಹಾಕಬೇಕು. ಅನಂತರ ದಿನಕ್ಕೆ 3 ಸಲ ಪ್ರತಿಯೊಂದು ಮಡಿಗೂ ಮೂರು ಕ್ಯಾನ್ ನೀರನ್ನು ಹಾಕಬೇಕು. ಈ ಹಂತದಲ್ಲಿ ಕಳೆ ಬಂದರೆ ಕೈಯಿಂದ ಕೀಳಬೇಕು. ಅಲ್ಲದೆ ಸಸಿಗಳಿಗೆ ಕೊಳೆಯುವ ಮತ್ತು ಬ್ಲಾಕ್‌ಸನ್ ರೋಗ ಬರದಂತೆ ಹಾಗೂ ಆರೋಗ್ಯವಾದ ಸಸಿಗಳು ಬರಲು ಬೆಲ್ಟಾಕ್ಸ್, ರೆಡಾಮಿಲ್ ಮುಂತಾದ ಔಷಧಗಳನ್ನು ಸಿಂಪಡಿಸಬೇಕು. ಹೀಗೆ 45 ದಿನ ಜೋಪಾನವಾಗಿ ಆರೈಕೆ ಮಾಡುವುದರಿಂದ 10 ರಿಂದ 12 ಸೆಂ.ಮೀ. ಎತ್ತರಕ್ಕೆ ಸಸಿಗಳು ಬೆಳೆಯುತ್ತವೆ. ಆಗ ಸಸಿಗಳನ್ನು ನಾಟಿ ಮಾಡಬಹುದು.

**ತಳಿಗಳು :** ಈಗ ಮುಖ್ಯವಾಗಿ ವೆರಿಟಿ, ಕಾಂಚನ, ಕಾಂಚನK326 C.H. ಭವ್ಯ, ತಳಿಗಳನ್ನು ಬಳಸಲಾಗುತ್ತದೆ.

**ಆಧುನಿಕ ಪದ್ಧತಿಯಲ್ಲಿ ಸಸಿ ಮಡಿಗಳು :** ತಂಬಾಕು ಬೆಳೆಯುವಲ್ಲಿ ಸಸಿ ಮಡಿಗಳ ನಿರ್ವಹಣೆ ಅತೀ ಮುಖ್ಯವಾದ ಹಂತ. ಬೇಸಗೆ ಕಾಲದ ಮಳೆಯಿಂದಾಗಿ ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗೆ ವಾತಾವರಣದಲ್ಲಿ ಉಂಟಾಗುವ ಬದಲಾವಣೆಗಳಿಂದ ಸಸಿ ಮಡಿಗಳಿಗೆ ಶಿಲೀಂಧ್ರಗಳಿಂದ ಮತ್ತು ನಿಮೋಟೋಡ್ ಜಂತುಗಳಿಂದ ಅನೇಕ ರೋಗಗಳು ತಗುಲಿ ಆರೋಗ್ಯವಂತ ಸಸಿಗಳನ್ನು ಪಡೆಯುವುದು ಕಷ್ಟವಾಗುತ್ತದೆ. ಸಸಿ ಮಡಿ ನಿರ್ವಹಣೆ ಪದ್ಧತಿಯಲ್ಲಿ ಬೆಳೆಸುವುದರಿಂದ ಹವಾಗುಣದ ಮೇಲೆ ಕಡಿಮೆ ಅವಲಂಬಿತವಾಗಿ ಉತ್ತಮ ಗುಣ ಮಟ್ಟದ ರೋಗ ರಹಿತ ಸಸಿಗಳನ್ನು ಪಡೆಯಬಹುದು. ಅಲ್ಲದೆ ರೈತರು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಕಡಿಮೆ ಖರ್ಚಿನಲ್ಲಿ ನಿರ್ವಹಿಸಬಹುದು.

**ಗ್ರೀನ್‌ಟೆಕ್ ಪದ್ಧತಿ :** 15 ಅಡಿ ಉದ್ದ 12 ಅಡಿ ಅಗಲ ಮತ್ತು 9 ಅಡಿ ಎತ್ತರದ ಅಳತೆಯುಳ್ಳ ಹಸುರು ಮನೆಯ, ಎರಡು ಬಾಗಿಲುಳ್ಳ ಮನೆಯಲ್ಲಿ ನಿರ್ಮಿಸಿ ಕೊಳ್ಳಬೇಕು. ಹಸುರು ಮನೆ ನಿರ್ಮಿಸಿ ಕೊಳ್ಳುವಾಗ ಮಳೆ ಮತ್ತು ಬಿಸಿಲಿನ ತಾಪಮಾನ ಪಡೆಯಲು 150 GSM ಪಾಲೀಥಿನ್ ಹಾಳೆಯನ್ನು ಮೇಲ್ಹಾವಣಿಯಾಗಿ ಬಳಸಬೇಕು ಮತ್ತು ಹಸುರು ಮನೆ ಶೇ. 50 ಶೇಡ್‌ಸೆಟ್‌ನಿಂದ ಮುಚ್ಚಬೇಕು. 2 ಬಾಗಿಲುಗಳನ್ನು ಪಾಲಿಥೀನ್ ಹಾಳೆಗಳಿಂದ ಮಾಡಬೇಕು. ಅನಂತರ 2.5 ಅಡಿ ಉದ್ದ, 2 ಅಡಿ ಅಗಲ ಮತ್ತು 4 ಇಂಚು ಎತ್ತರದ 10 ರಿಂದ 20 ಮರದ ತಟ್ಟೆಗಳನ್ನು ತಯಾರು ಮಾಡಬೇಕು. ಪ್ರತಿ ಮರದ ತಟ್ಟೆಗಳಿಗೆ 6 ಕೆ.ಜಿ. ಕೋಕ್‌ಪೀಟ್ ಮತ್ತು 2 ಕೆ.ಜಿ. ಎರೆ ಹುಳು ಗೊಬ್ಬರವನ್ನು ಎರಡು ಸಲ ಚೆನ್ನಾಗಿ ಮಿಶ್ರ ಮಾಡಿ ಮರದ ತಟ್ಟೆಗಳಲ್ಲಿ ಸಮವಾಗಿ ತುಂಬಿ ಪಾಲಿ ಹೌಸ್ (ಹಸುರುಮನೆ)ಯಲ್ಲಿ ನೆಲದಿಂದ ಒಂದು ಅಡಿ ಎತ್ತರದಲ್ಲಿ ಜೋಡಿಸಬೇಕು. ಹೀಗೆ ಜೋಡಿಸಿದ ತಟ್ಟೆಗೆ ತಂಬಾಕು ಬಿತ್ತನೆ ಬೀಜವನ್ನು ಪ್ರತಿ ತಟ್ಟೆಗೆ 0.3 ಗ್ರಾಂ. ಬೀಜವನ್ನು ಮರಳಿನಲ್ಲಿ ಮಿಶ್ರ ಮಾಡಿ ಸಮನಾಗಿ ಬಿತ್ತಬೇಕು. ಬಿತ್ತನೆ ಮಾಡಿದ ಮೇಲೆ ನೀರನ್ನು ಸ್ಪ್ರಿಂಕ್ಲರ್ ಮೂಲಕ ಸಿಂಪಡಿಸಬೇಕು. ರೋಸ್ ಕ್ಯಾನ್ ಮೂಲಕ ನೀರನ್ನು ಹಾಕಬಾರದು. ನೀರನ್ನು ಬಳಸುವಾಗ ಹೆಚ್ಚು ಎಚ್ಚರಿಕೆ ವಹಿಸಬೇಕು. ಬಿತ್ತನೆಯಾದ ಅನಂತರ ದಿನಕ್ಕೆ 10 ಲೀ. ಮತ್ತು ಮೊಳಕೆಯೊಡೆದ ಅನಂತರ 15 ಲೀ. ನೀರನ್ನು ಎಲ್ಲ ತಟ್ಟೆಗಳಿಗೆ ಹಾಕಬೇಕು. ಈ ಹಂತದಲ್ಲಿ ನೀರಿನಲ್ಲಿ ಕರಗುವ 19 : 19 : 19 ರಸ ಗೊಬ್ಬರವನ್ನು ಬಳಸಬೇಕು. 20-25 ದಿನದ ಸಸಿಗಳನ್ನು ಪುನಃ ತಟ್ಟೆಯಲ್ಲಿ ಮರು ನಾಟಿ ಮಾಡಿ ನೀರನ್ನು ಹದವಾಗಿ ಹಾಕಬೇಕು. ಮರು ನಾಟಿ ಮಾಡಿದ ತಟ್ಟೆಗಳನ್ನು 4-5 ದಿನ ನೆರಳಿನಲ್ಲಿ ಇಡಬೇಕು. ಅಲ್ಲದೆ ಶಿಫಾರಸ್ಸು ಮಾಡಿದ ಗೊಬ್ಬರವನ್ನು ಅಷ್ಟೇ ಪ್ರಮಾಣದಲ್ಲಿ ಕೊಡಬೇಕು.

ಮುನ್ನೆಚ್ಚರಿಕೆ ಕ್ರಮವಾಗಿ ತಟ್ಟೆಯಲ್ಲಿ ಹುಲ್ಲು ಅಥವಾ ಹೊಟ್ಟಿನಿಂದ ಮುಚ್ಚಬಾರದು. ನೀರನ್ನು ಆವಶ್ಯಕತೆಗೆ ತಕ್ಕಂತೆ ಹನಿಸುವರು. ಇಲ್ಲದೆ

ಇದ್ದರೆ ಕೊಳೆಯುವ ರೋಗ ಬರುವ ಸಾಧ್ಯತೆ ಇದೆ. ನಾಟಿ ಮಾಡಿದ 20-25 ದಿನದಲ್ಲಿ ಮರು ನಾಟಿ ಕಾರ್ಯ ಮಾಡಿ ಮುಗಿಸಬೇಕು. ಹೀಗೆ ಮಾಡುವುದರಿಂದ ರೋಗ ರಹಿತ ಸಸಿಗಳನ್ನು ಪಡೆಯಬಹುದು. ಮಣ್ಣಿನ ಬಳಕೆ ಇಲ್ಲದೆ ಸಸಿ ಮಡಿಗಳ ಉತ್ಪಾದನೆ ಕಡಿಮೆ ಪ್ರಮಾಣದ ಸ್ಥಳ, ಕಡಿಮೆ ಪ್ರಮಾಣದ ಬೀಜ, ಕಡಿಮೆ ಪ್ರಮಾಣದ ನೀರು, ಕಡಿಮೆ ಪ್ರಮಾಣದ ಔಷಧ ಬಳಸಬಹುದು. ಅಲ್ಲದೆ ಕಾರ್ಮಿಕರ ಆವಶ್ಯಕತೆಯು ಕಡಿಮೆ ಮತ್ತು ಕಳೆ ನಿರ್ವಹಣೆ ಕಡಿಮೆ ಮಾಡುವುದಲ್ಲದೆ ಸಸಿಗಳಿಗೆ ಮಳೆಯಿಂದಾಗುವ ಹಾನಿಯನ್ನು ತಪ್ಪಿಸಬಹುದು.

ಮಡಿಗಳಲ್ಲಿ ಅಥವಾ ತಟ್ಟೆಗಳಲ್ಲಿ ಬೆಳೆದ ಸಸಿಗಳನ್ನು 45 ದಿನಗಳಲ್ಲಿ ನಾಟಿ ಮಾಡಬೇಕು. ನಾಟಿ ಮಾಡುವುದಕ್ಕೆ ಮುಂಚೆ ಭೂಮಿಯನ್ನು ಚನ್ನಾಗಿ ಹದಗೊಳಿಸಿಕೊಂಡಿರಬೇಕು. ಅಂದರೆ ಭೂಮಿಯನ್ನು ಹಿಂಗಾರು ಉಳುಮೆ ಮಾಡಿ ಕೊಂಡಿರಬೇಕು. ಮುಂಗಾರಿನಲ್ಲಿ ಪ್ರತಿ ಎಕರೆಗೆ 5 ಗಾಡಿ ಕೊಟ್ಟಿಗೆ ಗೊಬ್ಬರ ಹಾಕಬೇಕು. ಒಂದು ಬ್ಯಾರನಿಗೆ 3 ಎಕರೆ ಜಮೀನು ಬೇಕಾಗುವುದರಿಂದ 15 ಗಾಡಿ ಕೊಟ್ಟಿಗೆ ಗೊಬ್ಬರ ಹಾಕಬೇಕು. ಹೀಗೆ ಹಾಕಿದ ಅನಂತರ ಮಿಶ್ರಣ ಮಾಡಿ ಎರಡು, ಮೂರು ಸಲ ಭೂಮಿಯನ್ನು ಚನ್ನಾಗಿ ಉಳುಮೆ ಮಾಡಬೇಕು. ಭೂಮಿ ಹದವಾದ ಮೇಲೆ ಇಳಿಜಾರಿಗೆ ಅನುಸಾರವಾಗಿ ಪೂರ್ವ - ಪಶ್ಚಿಮ ದಿಕ್ಕಿಗೆ 3½ ಅಡಿ ಸಾಲನ್ನು ಮಾಡಿಕೊಂಡು ರಿಜ್ಜನ್ನು ಹೊಡೆದು ಸಾಲುಗಳನ್ನು ಎತ್ತರ ಮಾಡಿಕೊಳ್ಳಬೇಕು. ಸಾಲುಗಳಲ್ಲಿ ನೀರನ್ನು ಹಾಯಿಸಿ ಪ್ರತಿ ಸಾಲಿನಲ್ಲಿ 1½ ಅಡಿ ಅಂತರದಲ್ಲಿ ಸಸಿಗಳನ್ನು ನೆಡಬೇಕು. ಮೇ ಮೊದಲ ವಾರದಲ್ಲಿ ಸಸಿಗಳನ್ನು ನೆಡಬೇಕು. ಮಡಿಗಳಿಂದ ಕಿತ್ತು ಸಸಿಗಳನ್ನು ನಾಟಿ ಮಾಡಿದರೆ ಪ್ರತಿಯೊಂದು ಸಸಿಗೆ ಪೇಪರ್ ಅಥವಾ ಎಲೆಗಳಿಂದ ಬಿಸಿಲು ತಾಗದಂತೆ ಮುಚ್ಚಬೇಕಾಗುತ್ತದೆ. ತಟ್ಟೆಗಳಿಂದ ಕಿತ್ತು ನಾಟಿ ಮಾಡಿದರೆ ಮುಚ್ಚುವ ಆವಶ್ಯಕತೆ ಇಲ್ಲ. ನಾಟಿ ಮಾಡಿ 8-10 ದಿನಗಳಲ್ಲಿ ರಸ ಗೊಬ್ಬರವನ್ನು ಹಾಕಬೇಕು. ಕಳೆಯನ್ನು ತೆಗೆದು ಉಳುಮೆ ಮಾಡಬೇಕು. ಮೂರು ಎಕರೆಗೆ 18 ಸಾವಿರದಿಂದ 21 ಸಾವಿರದವರೆಗೆ ಸಸಿಗಳು ಬೇಕಾಗುತ್ತದೆ. ರಸಗೊಬ್ಬರವನ್ನು ಮೊದಲಿಗೆ 3 ಮೂಟೆ DAP, ಮೂರು ಮೂಟೆ ಪೊಟಾಷ್. ಒಂದು ಮೂಟೆ CAN ಹಾಕಬೇಕು. 8 ದಿನದ ಅನಂತರ ಉಳುಮೆ ಮಾಡುವಾಗ 3 ಮೂಟೆ ಪೊಟಾಷ್, ಒಂದು ಮೂಟೆ CAN ಹಾಕಬೇಕು. ಹೀಗೆ ಗೊಬ್ಬರ ಹಾಕುವಾಗ ಸಸಿಯ ಪಕ್ಕದ ಎರಡು ಸೈಡು 4 ಇಂಚು ದೂರದಲ್ಲಿ ನಾಟು ಹೊಡೆದು ಗೊಬ್ಬರವನ್ನು ಹಾಕಬೇಕು. ಅನಂತರ ಕಳೆಯನ್ನು ತೆಗೆದು ಮಣ್ಣು ಎಳೆಯುವ ಗುದ್ದಲಿಯಿಂದ ಮಣ್ಣನ್ನು ಎಳೆದು ಗಿಡಕ್ಕೆ ಹಾಕಬೇಕು. ಇದರಿಂದ ಹೊಲದಲ್ಲಿ ನೀರು ನಿಲ್ಲುವುದಿಲ್ಲ. ಗಿಡವು ದಿಂಡಿನಲ್ಲಿ ಬೆಳೆಯುತ್ತವೆ. ಕೊನೆಯಲ್ಲಿ ಮತ್ತೊಂದು ಸಲ ಉಳುಮೆ ಮಾಡಿ ಮಣ್ಣನ್ನು ಗುದ್ದಲಿ ಸಹಾಯದಿಂದ ಎಳೆದು ಗಿಡಕ್ಕೆ ಹಾಕಿದರೆ ಸಾಕು. ಈ ಹಂತದಲ್ಲಿ 4-5 ಸಲ ಮಳೆ ಬಿದ್ದರೆ ಗಿಡಗಳು ಹುಲುಸಾಗಿ ಬೆಳೆದು 40-50 ದಿನಗಳ ಅವಧಿಯಲ್ಲಿ ಎಲೆ ಮುರಿಯಲು ಸಿದ್ಧವಾಗುತ್ತವೆ.

**ರೋಗ ಮತ್ತು ರೋಗ ನಿರ್ವಹಣೆ : ಹೇನು ಮತ್ತು ಕರಿ :** ಇವು ಎಳಸಾದ ಎಲೆಗಳ ತುದಿಗೆ ಆಕರ್ಷಿತವಾಗಿ ಎಲೆಯ ತಳಭಾಗದಲ್ಲಿ ಕೇಂದ್ರೀಕೃತವಾಗಿ ರಸವನ್ನು ಹೀರಿ ಗಿಡದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಹೀಗೆ ರಸ ಹೀರಿ ಹೇನಿನಿಂದ ಸ್ರವಿಸಲ್ಪಡುವ ಸಕ್ಕರೆಯ ಅಂಶವುಳ್ಳ ದ್ರವ ಕೆಳಗಿನ ಎಲೆಗಳ ಮೇಲೆ ಬಿದ್ದು ಕಪ್ಪು ಬಣ್ಣದ ಶಿಲೀಂಧ್ರ (ಕರಿ) ಬೆಳೆದು ಹದ ಮಾಡುವಾಗ ಗುಣಮಟ್ಟ ಕಡಿಮೆಯಾಗುತ್ತದೆ. ಆದ್ದರಿಂದ ಹೇನಿನ ನಿಯಂತ್ರಣಕ್ಕೆ ಶೇ.0.10 ಪ್ರಮಾಣದಲ್ಲಿ (10 ಗ್ರಾಂ ಪುಡಿಯನ್ನು 10 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ) ಅಸಫೇಟ್ (ಉದಾ ಸ್ಟಾರ್‌ಥೀನ್) ಅಥವಾ ಶೇ.0.13 ಪ್ರಮಾಣದ (3 ಮಿ.ಲೀ. ದ್ರಾವಣವನ್ನು 10 ಲೀಟರ್ ನೀರಿನಲ್ಲಿ ಮಿಶ್ರ ಮಾಡಿ) ಇಮಿಡಾ ಕ್ಲೋಪ್ರಿಡ್ (ಉದಾಕಾನ್ ಫಿಡಾರ್) ಔಷಧೀಯ ಸಿಂಪರಣೆ ಮಾಡಬೇಕು.

ಔಷಧಿ ಸಿಂಪರಣೆ ಮಾಡುವಾಗ ಕೆಲವು ಅಂಶಗಳನ್ನು ಗಮನದಲ್ಲಿರಿಸಿ ಕೊಳ್ಳಬೇಕು. ಹೊಲದಲ್ಲಿ ಹೇನು ಕರಿ ಕೆಲವು ಗಿಡಗಳಿಗೆ ಕಾಣಿಸಿಕೊಂಡಾಗ ಹೊಲಗಳ ಅಂಚಿನಲ್ಲಿರುವ ಗಿಡಗಳಿಗೆ ಸಿಂಪರಣೆ ಮಾಡುವುದರಿಂದ ಹೇನು ಕರಿ ಹರಡುವಿಕೆಯನ್ನು ತಡೆಗಟ್ಟಬಹುದು. ಗಿಡಗಳ ತುದಿಯ ಎಲೆಗಳ ತಳ ಭಾಗಕ್ಕೆ ಸಿಂಪರಣೆ ಮಾಡುವುದರಿಂದ ಹೇನು ಕರಿಗಳನ್ನು ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು.

**ನಂಜು ರೋಗಗಳು :** ಮೊಸೈಕ್, ಎಲೆ ಸುರುಳಿ ಇವು ಸಾಮಾನ್ಯವಾಗಿ ಹೊಲದಲ್ಲಿ ಕಂಡು ಬರುವ ನಂಜು ರೋಗಗಳು. ಈ ರೋಗ ಕಂಡು ಬಂದಲ್ಲಿ ಚಿಕ್ಕ ಗಿಡಗಳನ್ನು ಕಿತ್ತು ನಾಶ ಮಾಡುವುದರಿಂದ ರೋಗ ಪ್ರಸಾರವನ್ನು ತಡೆಗಟ್ಟಬಹುದು. ಕೇವಲ ಸ್ಪರ್ಶದಿಂದಲೇ ಹರಡುವ ಮೊಸೈಕ್ ರೋಗವನ್ನು ಹತೋಟಿಯಲ್ಲಿಡಲು ರೋಗ ತಗುಲಿದ ಸಸಿಗಳಿಗೆ ಸಲಕರಣೆಗಳು ತಾಗದಂತೆ ಜಾಗರೂಕತೆಯಿಂದ ಮಧ್ಯಂತರ ವ್ಯವಸಾಯ ಮತ್ತು ಇತರ ಕೆಲಸಗಳನ್ನು ಮಾಡಬೇಕು. ಅಲ್ಲದೆ ಶಿಫಾರಸ್ಸು ಮಾಡಿದ ನೈರ್ಮಲ್ಯ ಪದ್ಧತಿಗಳನ್ನು ಪಾಲಿಸಬೇಕು.

**ಸೊರಗು ರೋಗ :** ಇದು ಕಪ್ಪು ಕಾಂಡ ರೋಗಕ್ಕೆ ಹೋಲುವ 'ಫ್ಯುಸೇರಿಯಂ' ಹೆಸರಿನ ಶಿಲೀಂಧ್ರದಿಂದ ಬರುವ ಒಂದು ರೋಗ. ಕಾಂಡದ ಒಂದು ಪಕ್ಕದಲ್ಲಿ ತಳದಿಂದ ಪ್ರಾರಂಭವಾಗಿ ಎಲೆಗಳು ಕ್ರಮೇಣ ಬಾಡಿ ಹೋಗಿ ಹಳದಿ ಬಣ್ಣಕ್ಕೆ ಬರುವುದು ಈ ರೋಗದ ಪ್ರಾರಂಭಿಕ ಲಕ್ಷಣ. ಗಿಡವನ್ನು ಕಿತ್ತಾಗ ಒಂದು ಅಥವಾ ಎರಡು ಬೇರುಗಳು ಕಪ್ಪಾಗಿರುವುದು ಕಂಡುಬರುತ್ತದೆ. ರೋಗ ಉಲ್ಬಣಗೊಂಡಂತೆ ಗಿಡ ಪೂರ್ತಿ ಬಾಡಿ ಹೋಗುತ್ತದೆ. ಬೇರು ಗಂಟು ರೋಗ ಮತ್ತು ಕಾಂಡ ಕೊರೆಯುವ ಹುಳದ ಸಸಿಗಳನ್ನು ನಾಟಿ ಮಾಡಿದಾಗ ಈ ರೋಗ ಕಂಡು ಬರುತ್ತದೆ. ವ್ಯವಸಾಯ ಮಾಡುವಾಗ ಇತರ ಗಿಡಗಳಿಗೆ ರೋಗ ಬರದಂತೆ ತಡೆಯಲು ಬ್ಯಾವಿಸ್ಟನ್ ಇತ್ಯಾದಿ ಔಷಧಿಯನ್ನು ಪ್ರತಿ ಒಂದು ಲೀಟರ್ ನೀರಿನಲ್ಲಿ ಎರಡು ಗ್ರಾಂ ಪುಡಿಯಷ್ಟು ಮಿಶ್ರ ಮಾಡಿ ರೋಗ ರಹಿತ ಗಿಡಗಳ ಸುತ್ತ 200 ಮಿ.ಲೀ. ಪ್ರಮಾಣದಲ್ಲಿ ಮಣ್ಣನ್ನು ತೇವಗೊಳಿಸಬೇಕು.

**ಕುಡಿ ಮತ್ತು ಕಂಕುಳ ಕುಡಿಗಳ ನಿರ್ವಹಣೆ :** ಕುಡಿ ಮುರಿಯುವುದರಿಂದ ಪೋಷಕಾಂಶಗಳು ಗಿಡದ ಎಲೆಗಳ ಅಭಿವೃದ್ಧಿಗೆ ಉಪಯೋಗಿಸಲ್ಪಟ್ಟು ಎಲೆಗಳ ಗಾತ್ರ, ತೂಕ ಮತ್ತು ಗುಣಮಟ್ಟ ವೃದ್ಧಿಗೆ ಸಹಾಯವಾಗುತ್ತದೆ. ತಳಿಗಳಿಗೆ ಅನುಸಾರವಾಗಿ ನಿಗದಿತ ಎಲೆಗಳನ್ನು ಮಾತ್ರ ಗಿಡದಲ್ಲಿ ಉಳಿಸಿ ಕುಡಿ ಮುರಿಯಬೇಕು. ಭವ್ಯ ತಳಿಯಲ್ಲಿ ಹದ ಮಾಡಲು ಯೋಗ್ಯವಾದ 22-24 ರತ್ನ ಹಾಗೂ ಕಾಂಚನ ತಳಿಗಳಲ್ಲಿ 20 ರಿಂದ 22 ಎಲೆಗಳನ್ನು ಬಿಟ್ಟು ಕುಡಿ ಮುರಿಯಬೇಕು. ಕುಡಿ ಮುರಿಯುವ ಕಾರ್ಯವನ್ನು ನಿಧಾನ ಮಾಡಿದಲ್ಲಿ ದಿನವೊಂದಕ್ಕೆ ಶೇ. 1 ರಂತೆ ಇಳುವರಿ ಕಡಿಮೆಯಾಗುತ್ತದೆ. ಕುಡಿ ಮುರಿದ ಒಂದೆರಡು ದಿನಗಳೊಳಗೆ ಶೇ. 4 ರ ಪ್ರಮಾಣದಲ್ಲಿ (1 ಲೀ. ನೀರಿನಲ್ಲಿ 40 ಮಿ.ಲೀ. ಔಷಧಿಯನ್ನು ಮಿಶ್ರಮಾಡಿ) ಕಂಕುಳ ಕುಡಿ ನಿಯಂತ್ರಣಗಳಾದ ಡಿಕನಾಲ್, ಸಕ್ಕರೆ, ಜಾಟ್,

ಸೀಟನ್ ಅಥವಾ ರಾಯಲ್ ಟೆನ್‌ಗಳನ್ನು ಉಪಯೋಗಿಸಿ ಕಂಕುಳ ಕುಡಿ ನಿಯಂತ್ರಣವನ್ನು ಮಾಡಬಹುದು. ಕುಡಿ ನಿಯಂತ್ರಣ ಔಷಧಿ ಉಪಯೋಗಿಸದಿದ್ದಲ್ಲಿ ಕೈಯಿಂದ 5 ರಿಂದ 7 ದಿನಗಳ ಅಂತರದಲ್ಲಿ ಒಟ್ಟು ಮೂರು ಬಾರಿ ಮುರಿಯ ಬೇಕು. ಹೀಗೆ ಮಾಡುವುದರಿಂದ ಹೇನಿನ ಹಾವಳಿ ಕಡಿಮೆಯಾಗುತ್ತದೆ ಮತ್ತು ಮೊಸೈಕ್ ರೋಗದ ತೀಕ್ಷ್ಣತೆಯನ್ನು ಕಡಿಮೆಗೊಳಿಸಬಹುದು. ಯಾವುದೇ ಕಾರಣಕ್ಕೆ ಕುಡಿ ಮುರಿಯುವುದಕ್ಕೆ ಮುಂಚಿತವಾಗಿ ಎಲೆ ಮುರಿಯುವ ಕಾರ್ಯವನ್ನು ಮಾಡಬಾರದು. ಸರಿಯಾಗಿ ಬಲಿತ ಹದವಾಗಿ ಹಣ್ಣಾದ ನಸು ಹಳದಿಯಾಗಿ ಮಾರ್ಪಟ್ಟು ಚುಕ್ಕೆಗಳು ಉಂಟಾಗಿ ಸುಕ್ಕುಗೊಂಡು ನೆರಿಗೆಗಳಾಗಿ ಜೋಲುಗೊಂಡ ಎಲೆಗಳನ್ನು ಮುರಿಯಬೇಕು. ಅತಿ ಹಣ್ಣಾದ ಕೆಳಗಿನ ಎಲೆ ಮುರಿಯಬಾರದು. ಇದರಿಂದ ಕೆಳದರ್ಜೆಯ ಹೊಗೆಸೊಪ್ಪು ಉತ್ಪಾದನೆಯಾಗುತ್ತದೆ. ಸರಿಯಾಗಿ ಬಲಿತ ಹದವಾಗಿ ಹಣ್ಣಾದ ಒಂದೇ ಸಮವಾದ ಎಲೆಗಳನ್ನು ಕಟಾವು ಮಾಡುವುದರಿಂದ ಅಧಿಕ ಇಳುವರಿ ಮತ್ತು ಗುಣಮಟ್ಟವನ್ನು ಪಡೆಯಬಹುದು. ಎಲೆಗಳನ್ನು ಬೆಳಗಿನ ವೇಳೆಯಲ್ಲಿಯೇ ಮುರಿದು ಅದೇ ದಿನ ಸಂಜೆ ಬ್ಯಾರನ್‌ನಲ್ಲಿ ಜೋಡಿಸಿ ಹದ ಮಾಡುವ ಕಾರ್ಯ ಪ್ರಾರಂಭಿಸಬೇಕು. ಪ್ರತಿ ಗಿಡದಲ್ಲಿ ಸರಿಯಾಗಿ ಬಲಿತ ಒಂದೆರಡು ಎಲೆಗಳನ್ನು ಮಾತ್ರ ಮುರಿದು ಗುಣಮಟ್ಟವನ್ನು ಕಾಯ್ದು ಕೊಳ್ಳಬೇಕು. ಮುರಿದ ಎಲೆಗಳು ಜಜ್ಜಿ ಹೋಗದಂತೆ ನೋಡಿಕೊಳ್ಳಬೇಕು. ಬಿಸಿಲಿನ ಬೇಗೆಗೆ ಒಡ್ಡದಂತೆ ಗೋಣಿ ತಾಟಿನಿಂದ ಮುಚ್ಚಿ ತಕ್ಷಣವೇ ನೆರಳಿನಲ್ಲಿ ಜೋಡಿಸಬೇಕು. ಮುರಿದ ಎಲೆಗಳನ್ನು ರಾಶಿ ಹಾಕದೆ ಗಾಳಿಯಾಡಲು ಅನುಕೂಲವಾಗುವಂತೆ ಕ್ರಮವಾಗಿ ಜೋಡಿಸಬೇಕು. ಬಲಿಯುವಿಕೆಯಲ್ಲಿ ಏಕರೂಪತೆ ಇಲ್ಲದಿದ್ದಲ್ಲಿ ಬಲಿಯುವಿಕೆಯ ಆಧಾರದ ಮೇಲೆ ಕಡು ಹಸುರು, ತಿಳಿ ಹಸುರು, ಹಳದಿ ಎಲೆಗಳೆಂದು ಮೂರು ಗುಂಪುಗಳಾಗಿ ವಿಂಗಡಿಸಬೇಕು. ಕಡು ಹಸುರು ತಿಳಿ ಹಸುರು ಎಲೆಗಳನ್ನು ಬ್ಯಾರನ್‌ನ ಮೇಲ್ಭಾಗದಲ್ಲಿ ಅತಿ ಬಲಿತ ಹಳದಿ ಎಲೆಗಳನ್ನು ಬ್ಯಾರನ್‌ನ ಕೆಳ ಭಾಗದಲ್ಲಿ ಜೋಡಿಸಬೇಕು. ಈ ರೀತಿ ಜೋಡಿಸುವುದರಿಂದ ಹದ ಮಾಡುವಾಗ ಉಂಟಾಗುವ ನ್ಯೂನತೆಗಳನ್ನು ಹೋಗಲಾಡಿಸಿ ಕೆಳದರ್ಜೆ ಉತ್ಪಾದನೆ ಕಡಿಮೆಗೊಳಿಸಬಹುದು. ಹೆಚ್ಚು ಎಲೆಗಳನ್ನು ಕರೆ ಕಡ್ಡಿಗಳಿಗೆ ಕಟ್ಟುವುದಾಗಲಿ, ಬ್ಯಾರನ್‌ನಲ್ಲಿ ಜಾಸ್ತಿ ಕರೆ ಕಡ್ಡಿಗಳನ್ನು ಜೋಡಿಸುವುದಾಗಲಿ, ಮಾಡಬಾರದು. ಈ ರೀತಿ ಮಾಡಿದಲ್ಲಿ ಬ್ಯಾರನ್‌ನಲ್ಲಿ ಶಾಖದ ಹರಡುವಿಕೆ ಸಮವಾಗಿರದೆ ತೇವಾಂಶ ಆವಿಯಾಗದೆ ಹೆಚ್ಚು ಕಾಲ ಎಲೆಯಲ್ಲಿಯೇ ಉಳಿಯುವುದರಿಂದ 'ಮಚ್ಚೆ' ಇತ್ಯಾದಿ ನ್ಯೂನತೆಗಳು ಕಂಡು ಬರುತ್ತವೆ. ರತ್ನ ಹಾಗೂ ಭವ್ಯ ತಳಿಗಳಲ್ಲಿ 6 ರಿಂದ 7 ದಿನಗಳ ಅಂತರದಲ್ಲಿ ಪ್ರತಿ ಸಲ 2 ರಿಂದ 3 ಎಲೆಗಳನ್ನು ಮುರಿಯಬೇಕು. ಕಾಂಚನ ತಳಿ ಎಲೆಯು ಬಲಿಯುವಿಕೆ ನಿಧಾನವಾದ್ದರಿಂದ 7 ರಿಂದ 9 ದಿನಗಳ ಅಂತರ ಬೇಕಾಗುತ್ತದೆ. ಈ ತಳಿಯಲ್ಲಿ ಪ್ರತಿ ಸಲ 1 ರಿಂದ 3 ಎಲೆಗಳನ್ನು ಮಾತ್ರ ಮುರಿಯಬೇಕು.

**ಎಲೆ ಕಟ್ಟೆ ಬ್ಯಾರನ್‌ನಲ್ಲಿ ಕಡ್ಡಿಗಳ ಜೋಡಣೆ :** ಎಲೆಗಳ ಹಿಂಭಾಗವು ಒಂದಕ್ಕೊಂದು ಹೊಂದಿಕೊಂಡಂತೆ ಎರಡು ಎಲೆಗಳಿಗೆ ಒಂದು ಗೊಂಚಲಿನಂತೆ ಕರೆ ಕಡ್ಡಿಗಳಿಗೆ ಎಲೆಗಳನ್ನು ಕಟ್ಟಬೇಕು. ಪ್ರತಿ ಕಡ್ಡಿಯಲ್ಲಿ 30 ರಿಂದ 36 ಗೊಂಚಲುಗಳು ಮೀರದಂತೆ ಎಚ್ಚರ ವಹಿಸಬೇಕು. ಎಲೆಗಳ ನಡುವೆ ಗಾಳಿಯಾಡಲು ಹಾಗೂ ಶಾಖ ಸಮನಾಗಿ ಹರಡಲು ಸಹಾಯವಾಗುವಂತೆ ಸಾಕಷ್ಟು ಅಂತರವಿರಿಸಿ ಬ್ಯಾರನ್‌ನಲ್ಲಿ ಕರೆ ಕಡ್ಡಿಗಳನ್ನು ಜೋಡಿಸಬೇಕು. 13 x 13 x 13 ಅಳತೆ ಬ್ಯಾರನ್‌ನಲ್ಲಿ 300 ರಿಂದ 350 ಕಡ್ಡಿಗಳನ್ನು, 16 x 16 x 16 ಅಳತೆಯ ಬ್ಯಾರನ್‌ನಲ್ಲಿ 550 ರಿಂದ 600 ಕಡ್ಡಿಗಳನ್ನು, 16 x 24 x 13 ಅಳತೆಯ ಬ್ಯಾರನ್‌ನಲ್ಲಿ 850 ರಿಂದ 900 ಕಡ್ಡಿಗಳನ್ನು ಜೋಡಿಸಬೇಕು. ಶಿಫಾರಸ್ಸಿಗಿಂತ ಹೆಚ್ಚು ಕಡ್ಡಿಗಳನ್ನು ಜೋಡಿಸಿದರೆ ಹದ ಮಾಡಿದ ಹೊಗೆ ಸೊಪ್ಪಿನ ಗುಣ ಮಟ್ಟ ಕೆಡುತ್ತದೆ. ಅಲ್ಲದೆ ಎಲೆ ಮುರಿದ ಕರೆ ಕಡ್ಡಿಗೆ ಜೋಡಿಸುವಾಗ ಮತ್ತು ಬ್ಯಾರನ್‌ಗೆ ಏರಿಸುವಾಗ ಎಲೆಗಳಿಗೆ ಯಾವುದೇ ಹಾನಿ ಆಗದಂತೆ ಎಚ್ಚರವಹಿಸಬೇಕು. ಬ್ಯಾರನ್ನಿನ ಕೆಳಗಿನ ಮತ್ತು ಮೇಲಿನ ಗವಾಕ್ಷಿಗಳನ್ನು, ಬಾಗಿಲನ್ನು ಮುಚ್ಚಿ ವಾಯುವ ಸಂಚಾರವಾಗುವಂತೆ ಮಾಡಿ ಒಲೆಯಲ್ಲಿ ಬೆಂಕಿ ಹಾಕಬೇಕು.

**ಹದ ಮಾಡುವುದು :** ಹದ ಮಾಡುವಾಗ ನಾಲ್ಕು ಹಂತಗಳಾದ ಹಳದೀಕರಣ, ಬಣ್ಣ ಸ್ಥಿರಗೊಳಿಸುವಿಕೆ, ಎಲೆ ಒಣಗಿಸುವಿಕೆ ಮತ್ತು ದಿಂಡು ಒಣಗಿಸುವಿಕೆ ಅವಧಿಯನ್ನು ಋತು, ತಳಿ, ಗಿಡದ ಬೆಳವಣಿಗೆ ಮತ್ತು ಎಲೆಗಳ ಸ್ಥಾನಗಳಿಗೆ ತಕ್ಕಂತೆ ಬದಲಾಯಿಸಿ ಕೊಳ್ಳಬೇಕಾಗುತ್ತದೆ.

**ಹಳದೀಕರಣ :** ಈ ಹಂತದಲ್ಲಿ ಬ್ಯಾರನ್‌ನಲ್ಲಿ ವಾಯು ನಿರ್ಬಂಧಿತವಾಗಿರಿಸಿ ಹೆಚ್ಚು ತೇವಾಂಶವನ್ನು ಕಾಪಾಡಿಕೊಳ್ಳುವುದು ಅತಿ ಮುಖ್ಯ. ಈ ಕಾರ್ಯದಲ್ಲಿ ಸುಮಾರು 30 ರಿಂದ 36 ಗಂಟೆಗಳ ಕಾಲ ಉಷ್ಣಾಂಶ 800F ನಿಂದ ಆರಂಭಿಸಿ 1050F ರವರೆಗೆ ಮಾತ್ರ ಇರುವಂತೆ ಎಚ್ಚರವಹಿಸಬೇಕು. ಒಣ ಹವೆಯ ಸಮಯದಲ್ಲಿ ಹಳದೀಕರಣ ಕಾಲಾವಧಿಯನ್ನು ಹೆಚ್ಚಿಸುವುದರಿಂದ ಉತ್ತಮ ಗುಣಮಟ್ಟವನ್ನು ಪಡೆಯಲು ಸಾಧ್ಯವಾಗುತ್ತದೆ. ಕಾಂಚನ ತಳಿಗೆ ಹಳದೀಕರಣದ ಕಾಲಾವಧಿ ಇತರ ತಳಿಗಳಿಗಿಂತ 8 ರಿಂದ 10 ಗಂಟೆಗಳಷ್ಟು ಜಾಸ್ತಿ ಬೇಕಾಗುತ್ತದೆ. ಅನಂತರ ಬ್ಯಾರನ್‌ನ ಗವಾಕ್ಷಿಗಳನ್ನು ತೆರೆದು ಗಾಳಿ ಸಂಚಾರಕ್ಕೆ ಅನುವು ಮಾಡಿಕೊಟ್ಟು ಉಷ್ಣಾಂಶವನ್ನು 1050Fನಿಂದ ಏರಿಸಿ 1250F ವ್ಯಾಪ್ತಿಯಲ್ಲಿ ಇರಿಸಬೇಕು. ಈ ಕಾರ್ಯಕ್ಕೆ 8 ರಿಂದ 10 ಗಂಟೆಗಳ ಕಾಲಾವಧಿ ಸಾಕಾಗುತ್ತದೆ.

**ಎಲೆ ಒಣಗಿಸುವಿಕೆ :** ಎಲೆಯ ತುದಿ ಒಣಗಲು ಪ್ರಾರಂಭವಾದಾಗ ಗಾಳಿ ಸಂಚಾರವನ್ನು ಹೆಚ್ಚಿಸಿ ಉಷ್ಣಾಂಶವನ್ನು 1400F ವರೆಗೆ ಹೆಚ್ಚಿಸಬೇಕು. ಈ ಹಂತದಲ್ಲಿ ಗಾಳಿ ಸಂಚಾರ ಸಾಕಷ್ಟು ಇಲ್ಲದೆ ಇದ್ದಲ್ಲಿ ಶಾಖ ಸಮನಾಗಿ ಹರಡದೆ ಎಲೆಗಳು 'ಸ್ಪಂಜೀಕರಣ' ಅಥವಾ ಸ್ಪಾಂಜಿಂಗಂ ನ್ಯೂನತೆಗೆ ಒಳಗಾಗುತ್ತದೆ. ಎಲೆ ಒಣಗಿಸಲು 30 ರಿಂದ 40 ಗಂಟೆಗಳು ಬೇಕಾಗುತ್ತದೆ.

**ದಿಂಡು ಒಣಗಿಸುವಿಕೆ :** ಈ ಹಂತದಲ್ಲಿ ಎಲ್ಲಾ ಗವಾಕ್ಷಿಗಳನ್ನು ಮುಚ್ಚಿ ಉಷ್ಣಾಂಶವನ್ನು ನಿಧಾನವಾಗಿ ಹೆಚ್ಚಿಸುತ್ತಾ 1550 F ವರೆಗೆ ಏರಿಸಬೇಕು. ಇದಕ್ಕೆ 25 ರಿಂದ 40 ಗಂಟೆಗಳ ಕಾಲಾವಧಿ ಬೇಕಾಗುತ್ತದೆ. ಒಂದು ವೇಳೆ ಬ್ಯಾರನ್‌ನಲ್ಲಿ ಉಷ್ಣಾಂಶವು 1600F ಗಿಂತ ಹೆಚ್ಚಾದಲ್ಲಿ ಎಲೆಗಳಲ್ಲಿನ ಸಕ್ಕರೆ ಅಂಶವು ಸುಟ್ಟು ಹೋಗಿ ಕೆಂಪು ಬಣ್ಣದ ನ್ಯೂನತೆಗೆ ತುತ್ತಾಗುತ್ತದೆ. ಇದೇ ರೀತಿ ಹಠಾತ್ತನೆ ಉಷ್ಣಾಂಶ ಕಡಿಮೆ ಆದರೆ ದಿಂಡಿನಲ್ಲಿರುವ ನೀರಿನ ಅಂಶ ದಿಂಡಿನ ಉದ್ದಕ್ಕೂ ಎಲೆಗೆ ಹರಿದು 'ರನ್ ಬ್ಯಾಕ್' ಎಂಬ ನ್ಯೂನತೆ ಉಂಟಾಗುತ್ತದೆ. ಒಂದು ಪಕ್ಷ ಕರೆ ಕಡ್ಡಿಗಳನ್ನು ಶಿಫಾರಸ್ಸಿಗಿಂತ ಹೆಚ್ಚು ಜೋಡಿಸಿದರೆ ಎಲೆಗಳ ದಿಂಡು ಹಸಿಯಾಗಿಯೇ ಉಳಿದು ಶೇಖರಣೆ ಮಾಡುವ ಹಂತದಲ್ಲಿ ಹೊಗೆ ಸೊಪ್ಪಿನ ಮೇಲೆ ಬೂಸ್ಟ್ ಬೆಳೆದು ಗುಣ ಮಟ್ಟ ಕೆಡುತ್ತದೆ. ಉಷ್ಣಾಂಶವನ್ನು ಸರಿಯಾಗಿ ನಿರ್ವಹಿಸಲು ಬ್ಯಾರನ್‌ಗಳಲ್ಲಿ 'ಕ್ಯೂರೋ ಮೀಟರ್' ತಪ್ಪದೇ ಬಳಸಬೇಕು. ಇದರಿಂದ ಉತ್ತಮ ದರ್ಜೆ ಹೊಗೆಸೊಪ್ಪು

ಪಡೆಯಲು ಸಹಾಯಕವಾಗುತ್ತದೆ. ಸೌದೆಗೆ ಬದಲು ಕಾಫಿ ಹೊಟ್ಟು, ಕಾಫಿ ಹೊಟ್ಟಿನಿಂದ ತಯಾರು ಮಾಡಿದ ಬ್ರಿಕೆಟ್ಸ್, ತೆಂಗಿನ ಚಿಪ್ಪು ಮತ್ತು ತೆಂಗಿನ ಮಟ್ಟೆ ಇತ್ಯಾದಿಗಳನ್ನು ಉಪಯೋಗಿಸಿ ಬೆಳೆಗಾರರು ಕಾಡು ನಾಶವನ್ನು ತಡೆಗಟ್ಟಬಹುದು. ಹದ ಮಾಡಿದ ಕಾರ್ಯ ಪೂರ್ಣಗೊಂಡ ಬಳಿಕ ರಾತ್ರಿ ವೇಳೆಯಲ್ಲಿ ಬ್ಯಾರಲ್‌ನ ಕಿಟಕಿ ಬಾಗಿಲುಗಳನ್ನು ತೆರೆದಿಟ್ಟು ಹೊಗೆಸೊಪ್ಪು ನಿಗದಿತ ತೇವಾಂಶವನ್ನು ಹೀರಿ ಕೊಳ್ಳುವಂತೆ ಮಾಡಿ ಬೆಳಗಿನ ವೇಳೆಯಲ್ಲಿ ಕಡ್ಡಿಗಳನ್ನು ಇಳಿಸಬೇಕು.

**ಹೊಗೆ ಸೊಪ್ಪಿನ ಶೇಖರಣೆ :** ಹೊಗೆ ಸೊಪ್ಪನ್ನು ಮಾರಾಟ ಮಾಡುವವರೆಗೂ ಬೂಸ್ಟ್, ರೆಕ್ಕೆಹುಳು, ಅತಿಯಾದ ತೇವಾಂಶ, ಮತ್ತು ಶಾಖ ಇತ್ಯಾದಿ ಬರದಂತೆ ಶೇಖರಣೆ ಮಾಡಿದಾಗ ಅದರ ಗುಣ ಮಟ್ಟ ವೃದ್ಧಿಗೊಂಡು ಬಣ್ಣದ ತೀಕ್ಷ್ಣತೆ ಹೆಚ್ಚಾಗಲು ಸಹಾಯವಾಗಿ ಸರಾಸರಿ ಬೆಲೆ ಸಿಗಲು ಸಾಧ್ಯ. ಆದ್ದರಿಂದ ಶೇಖರಣೆ ಮಾಡುವ ಕೋಣೆಯನ್ನು ಶುಚಿಯಾಗಿಟ್ಟು ಆವಶ್ಯಕತೆ ಇದ್ದಲ್ಲಿ ಗೋಡೆಗೆ ಸುಣ್ಣ ಬಳಿದು, ನೆಲದ ಮೇಲೆ ಬತ್ತದ ಹುಲ್ಲಿನ ಪದರವನ್ನು ಎತ್ತರಕ್ಕೆ ನಿರ್ಮಿಸಿ ಪ್ಲಾಸ್ಟಿಕ್ ಹಾಳೆಯನ್ನು ಹರಡಿ, ಹೊಗೆಸೊಪ್ಪನ್ನು ಮೆದೆ ಹಾಕಬೇಕು. ಈ ಹಂತದಲ್ಲಿ ರಸಾಯನಿಕ ಗೊಬ್ಬರ, ಕೀಟನಾಶಕ, ಹಾಗೂ ಗಾಢವಾದ ವಾಸನೆಯುಳ್ಳ ಅನ್ಯ ಪದಾರ್ಥಗಳನ್ನು ಶೇಖರಿಸಿಟ್ಟು ಹೊಗೆಸೊಪ್ಪನ್ನು ಶೇಖರಿಸಬಾರದು. ಎಲೆಗಳನ್ನು ಕರೆ ಕಡ್ಡಿಗಳಿಂದ ಬಿಚ್ಚಿ ಸಣ್ಣ ಸಣ್ಣ ಕಟ್ಟುಗಳನ್ನಾಗಿ ಕಟ್ಟಿ ಮೆದೆ ಹಾಕಬೇಕು. ಮೆದೆಯಲ್ಲಿ ತೇವಾಂಶ ಕಡಿಮೆಯಾದರೆ ಹುಡಿಯಾಗುತ್ತದೆ. ಹಾಗೆಯೇ ಹೆಚ್ಚಾದರೆ ಬಣ್ಣ ಕಳೆದು ಕೊಳ್ಳುತ್ತದೆ. ಆದ್ದರಿಂದ ಹಾಗೆ ಆಗದಂತೆ ನೋಡಿಕೊಳ್ಳಬೇಕು. ಮೆದೆ ಹಾಕುವಾಗ ವಿವಿಧ ತಳಿಗಳ ಎಲೆಗಳನ್ನು ಮಿಶ್ರ ಮಾಡಬಾರದು. ಮೆದೆಗಳನ್ನು ಶುಚಿಯಾದ ಟಾರ್ಪಾಲಿನಿಂದ ಮುಚ್ಚಬೇಕು. ತೇವಾಂಶ ಕಾಯ್ದುಕೊಳ್ಳಲು ಆಗಾಗ್ಗೆ ಮೆದೆಗಳನ್ನು ಪರೀಕ್ಷಿಸಿ ಒಂದು ವೇಳೆ ತೇವಾಂಶ ಜಾಸ್ತಿ ಇದ್ದಲಿ ಮೆದೆಗಳನ್ನು ತಿರವಿ ಹಾಕಬೇಕು. ಹೀಗೆ ಮಾಡುವುದರಿಂದ ಬಣ್ಣದ ತೀವ್ರತೆ ಹೆಚ್ಚಾಗಿ ಹೊಗೆಸೊಪ್ಪಿನ ಸುವಾಸನೆ ಹೆಚ್ಚುತ್ತದೆ.

**ಬೇಲು ಮಾಡುವ ಕ್ರಮಗಳು :** ವಿಂಗಡಿಸಿದ ಎಲೆಗಳನ್ನು ಬೇಲು ಮಾಡುವಾಗ ಬೇರೆ ಬೇರೆ ಗುಂಪಿಗೆ (ಗ್ರೇಡ್) ಹಾಗೂ ತಳಿಗಳಿಗೆ ಸೇರಿದ ಹೊಗೆಸೊಪ್ಪನ್ನು ಮಿಶ್ರ ಮಾಡಬಾರದು. 'ಚ್ಯೆ' ಶೈಲಿಗೆ ಸೇರಿದ ಹೊಗೆಸೊಪ್ಪನ್ನು ಬೇರ್ಪಡಿಸಿ ಸರಿಯಾಗಿ ಬಲಿತು ಹದ ಮಾಡಿದ ಎಲೆಗಳನ್ನು ಪ್ರತ್ಯೇಕ ಬೇಲುಗಳನ್ನಾಗಿ ಮಾಡುವುದರಿಂದ ಉತ್ತಮ ಬೆಲೆ ಪಡೆಯಲು ಸಹಾಯವಗುತ್ತದೆ. ಬೇಲು ತಯಾರಿಸುವಾಗ ಎಲೆಗಳಿಗೆ ನೀರು ಚಿಮುಕಿಸಿ ತೇವಾಂಶ ಹೆಚ್ಚಿಸುವ ಪದ್ಧತಿಯನ್ನು ಮಾಡಬಾರದು. ವರ್ಗೀಕರಿಸಿದ ಹೊಗೆಸೊಪ್ಪನ್ನು ಬೇಲು ಮಾಡಲು ಅಗತ್ಯವಾದ ತೇವಾಂಶ ಇದೆ ಎಂದು ಖಚಿತ ಪಡಿಸಿಕೊಂಡು ತಕ್ಷಣವೇ ಬೇಲು ತಯಾರಿಸುವುದು ಒಳ್ಳೆಯದು. ಒಂದು ಪಕ್ಷ ತೇವಾಂಶ ಹೆಚ್ಚಿರುವ ಎಲೆಗಳನ್ನು ಬೇಲು ಮಾಡಿದ್ದೆ ಆದರೆ ಮಾರುಕಟ್ಟೆಗೆ ಬಿಡುವಾಗ ಒಳಗೆ ತೇವಾಂಶದಿಂದಾಗಿ ಶಾಖ ಹೆಚ್ಚಿ ಗುಣಮಟ್ಟ ಕೆಡುತ್ತದೆ. ಬೇಲುಗಳನ್ನು ಮಾರುಕಟ್ಟೆಗೆ ಸಾಗಿಸುವಾಗ ಸರಿಯಾಗಿ ಟಾರ್ಪಾಲಿನಿಂದ ಮುಚ್ಚುವುದರಿಂದ ತೇವಾಂಶ ಆರಿ ಪುಡಿಯಾಗುವುದನ್ನು ತಪ್ಪಿಸಬಹುದು.

*ಎನ್.ಎಸ್.*

**ಹೊಳೆ ಕೃಷಿ** ಸಮೃದ್ಧ ನೀರು ಮತ್ತು ಫಲವತ್ತಾದ ಮಣ್ಣುಳ್ಳ ನದೀತಟಗಳನ್ನು ಕೇರಳ ಒಳಗೊಂಡಿದೆ. ಪ್ರಾಚೀನ ಭಾರತದಲ್ಲಿ ಹೊಳೆಯ ತೀರಗಳಲ್ಲಿ ಮತ್ತು ದಡಗಳಲ್ಲಲ್ಲದೆ ನದೀ ಪಾತ್ರದಲ್ಲೂ ಕೃಷಿಮಾಡುತ್ತಿದ್ದರು. ಆ ಸಂಪ್ರದಾಯವು ಸ್ವಲ್ಪ ಮಟ್ಟಿಗೆ ಇಂದೂ ಮುಂದುವರಿದಿದೆ.

ಮಳೆಗಾಲದಲ್ಲಿ ತುಂಬಿ ಹರಿಯುವ ಹೊಳೆ ಬೇಸಗೆಯಲ್ಲಿ ವಿಶಾಲವಾದ ಮರಳದಿಣ್ಣೆಗಳನ್ನು ತೆರೆದಿಡುತ್ತದೆ. ಈ ದಿಣ್ಣೆಗಳಲ್ಲಿ ಪರಂಪರಾಗತವಾಗಿ ತರಕಾರಿ, ಬತ್ತಗಳನ್ನು ಬೆಳೆಯುತ್ತಾರೆ.

ಮೇಲುಸ್ತರದಲ್ಲಿ ಮರಳು ಇರುವ ಈ ದಿಣ್ಣೆಗಳ ಸುಮಾರು ಎರಡು-ಎರಡೂವರೆ ಅಡಿ ಕೆಳಗೆ ಕೆಸರು ಮಣ್ಣಿರುತ್ತದೆ. ಮರಳದಿಣ್ಣೆಗಳಲ್ಲಿ ಮಣ್ಣುಕಾಣುವವರೆಗೂ ವೃತ್ತಾಕಾರದಲ್ಲಿ ಹೊಂಡ ಮಾಡಿದ ಬಳಿಕ ಮರಳನ್ನು ಕೆಳಗಿನ ಕೆಸರನ್ನೂ ಚೆನ್ನಾಗಿ ಮಿಶ್ರಮಾಡಿ ಪುಟ್ಟ ಪುಟ್ಟ ಕಿರುದಿನ್ನೆಗಳನ್ನು ಮಾಡಿಕೊಂಡು ಅಲ್ಲಿ ಚೀನೀಕಾಯಿ, ಕುಂಬಳ,ಸೌತೆ, ಸೋರೆ, ಪಡುವಲ, ಹಾಗಲ ಮುಂತಾದವನ್ನು ಬೆಳೆಯುತ್ತಾರೆ. ಸಾಮಾನ್ಯವಾಗಿ ಒಂದು ಕಿರುದಿನ್ನೆಯಲ್ಲಿ ಐದೋ ಆರೋ ಬೀಜ ನೆಡುತ್ತಾರೆ. ಮರಳನ್ನು ತೆಗೆದು ಹಾಕಿದ ರಾಶಿಗೂ ಬೆಳೆಬೆಳೆಯುವ ಕಿರುದಿನ್ನೆಗೂ ಮಧ್ಯೆ ಒಂದಷ್ಟು ಜಾಗವನ್ನು ಖಾಲಿ ಬಿಡುತ್ತಾರೆ. ಗಾಳಿ ಬೀಸಿದಾಗ ರಾಶಿ ಹಾಕಿದ ಮಳಲು ಸರಿದು ಬೆಳೆಯನ್ನು ಮುಚ್ಚಿಬಿಡದಂತೆ ಈ ಉಪಾಯವನ್ನು ಮಾಡುತ್ತಾರೆ. ಗಿಡಗಳು ಬೆಳೆದಂತೆ ಅಗತ್ಯವಾದ ಮಣ್ಣನ್ನು ಅವಕ್ಕೆ ಒದಗಿಸಿ ಕೊಡುತ್ತಾರೆ. ಇದರಿಂದ ಕಳೆಹುಲ್ಲು ಯಾವಾಗಲೂ ಅಡಿ ಭಾಗದಲ್ಲೇ ಇರುತ್ತದೆ.

ಹೊರಗಿನಿಂದ ಗೊಬ್ಬರ ಕೊಡುವ ಸಂಪ್ರದಾಯ ಇಲ್ಲ. ಮಲೆ ಪ್ರದೇಶಗಳಿಂದ ಹರಿದು ಬಂದ ಮೆಕ್ಕಲು ಮಣ್ಣು ಸ್ವತಃ ಒಳ್ಳೆಯ ಗೊಬ್ಬರವಾಗಿರುತ್ತದೆ. ಕೆಸರು ಹೆಚ್ಚಾಗಿರುವ ಜಾಗವಾದರೆ ಏರಿಗಳನ್ನು ನಿರ್ಮಿಸಿಕೊಂಡು ಅದರಲ್ಲಿ ಸಿಹಿಗೆಣಸು ಮುಂತಾದುವನ್ನು ಬೆಳೆಯುತ್ತಾರೆ. ಉದ್ದದ ಏರಿಗಳನ್ನು ನಿರ್ಮಿಸಿಕೊಂಡು ಬೆಂಡೆ ಬದನೆ ಮುಂತಾದುವನ್ನು ಬೆಳೆಯಬಹುದು. ಚೌಕಾಕಾರದಲ್ಲಿ ಸ್ವಲ್ಪ ಎತ್ತರಕ್ಕೆ ಮಣ್ಣು ಹಾಕಿಕೊಂಡು 'ತಡ'ಗಳನ್ನು ನಿರ್ಮಿಸಿ ನಾಲ್ಕು ಸುತ್ತಲೂ ಕಣಿವೆಗಳನ್ನು/ಕಾಲುವೆಗಳನ್ನು ಮಾಡಿ ತಡಗಗಳಲ್ಲಿ ಹೆಸರು, ನೆಲಗಡಲೆ ಮುಂತಾದುವನ್ನು ಬೆಳೆಯುತ್ತಾರೆ.

ಮಕರ ಮಾಸದಲ್ಲಿ ಬತ್ತದ ಬೆಳೆಯನ್ನು ಸುಗ್ಗಿಯಾಗಿ ಬೆಳೆಯುತ್ತಾರೆ. ಸುಗ್ಗಿ ತಳಿಗಳನ್ನೇ ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ. ತೆಕ್ಕನ್‌ಚೀರ, ನವರ ಮುಂತಾದ ತಳಿಗಳು ಬೇಗನೆ ಕಟಾವಿಗೆ ಬರುವಂಥವು ಇಲ್ಲಿ ಬಳಕೆಯಾಗುತ್ತವೆ. ಉಳುಮೆಯ ಅಗತ್ಯ ಬೀಳುವುದಿಲ್ಲ. ಹಾರೆಯಿಂದ ನೆಲವನ್ನು ಒಂದಿಷ್ಟು ಹಸನುಗೊಳಿಸಿದರೆ ಸಾಕಾಗುತ್ತದೆ. ಬಿತ್ತನೆ ಬೇಕಾದರೂ ಮಾಡಬಹುದು; ನೇಜಿ ಹಾಕಿ ಅದನ್ನು ನೆಟ್ಟು ಬೇಕಾದರೂ ಬೆಳೆ ಬೆಳೆಯಬಹುದು. ಬಿತ್ತನೆ ಮಾಡುವುದಾದರೂ ಬತ್ತದ ಬೀಜವನ್ನು ಮೊಳಕೆ ಬರಿಸಿ ಬಿತ್ತನೆ ಮಾಡಲಾಗುತ್ತದೆ. ನೀರು ಹೆಚ್ಚು ಇರುವ ಜಾಗವಾದರೆ ನಾಲ್ಕು ಬದಿಗಳಿಗೂ ಏರಿ ಹಾಕಲಾಗುತ್ತದೆ.

ಚಮ್ರುವಟ್ಟದಂತಹ ಜಾಗಗಳಲ್ಲಿ ಬೇಸಗೆಯಲ್ಲಿ ಸಮುದ್ರದ ಉಪ್ಪುನೀರು ಹೊಳೆಯ ಮೂಲಕ ಮೇಲೇರುತ್ತದೆ. ಉಪ್ಪುನೀರು ಬೆಳೆಯನ್ನು ಹಾಳುಮಾಡದಂತೆ ತೆಂಗಿನ ಗರಿಗಳನ್ನೂ ಮರಳನ್ನೂ ಉಪಯೋಗಿಸಿ ಬಂಡ್‌ಗಳನ್ನು ಮಾಡುತ್ತಾರೆ.

*ಕೆ.ಕೆ.*

# ಅನುಬಂಧಗಳು

೧. ಸಹಾಯಕ ಗ್ರಂಥಗಳು

ಎ. ಕನ್ನಡ

ಬಿ. ಇಂಗ್ಲಿಷ್

ಸಿ. ವಿಶ್ವಕೋಶಗಳು

ಡಿ. ನಿಘಂಟುಗಳು

ಇ. ದಿನಪತ್ರಿಕೆಗಳು - ನಿಯತಕಾಲಿಕೆಗಳು

೨. ಸಸ್ಯಗಳ ಪದಕೋಶ

೩. ರೈತ ಮಹಿಳೆಯರೊಂದಿಗೆ ಮಾತುಕತೆ

೪. ವಿಜ್ಞಾನಿ - ಕೃಷಿಕ ಡಾ. ಖಾದರ್ ಅವರ ಸ್ವಯಂಕೃಷಿ ಪಾಠ

೫. ಲೇಖಕರ ಸೂಚಿ

೬. ಛಾಯಾಚಿತ್ರ - ರೇಖಾಚಿತ್ರ ಭೂಪಟ ನೀಡಿದವರು

# ಅನುಬಂಧ ೧

# ಸಹಾಯಕ ಗ್ರಂಥಗಳು

## ಎ. ಕನ್ನಡ



| ಲೇಖಕರು | ಪ್ರಕಟಿತ ವರ್ಷ | ಶೀರ್ಷಿಕೆ | ಪ್ರಕಾಶನ |
|---|---|---|---|
| ಅಜ್ಜಂಪುರ ಕೃಷ್ಣಸ್ವಾಮಿ | 1988 | ಅರಣ್ಯಶಾಸ್ತ್ರ | ಗೀತಾ ಬುಕ್ ಹೌಸ್, ಮೈಸೂರು |
| ಅಜ್ಜಂಪುರ ಕೃಷ್ಣಸ್ವಾಮಿ | 1992 | ವನ ವೈಖರಿ | ಸ್ವರ್ಣಾಂಬ ಪ್ರಕಾಶನ, ಬೆಂಗಳೂರು |
| ಕೃಷ್ಣಸ್ವಾಮಿ ಅಜ್ಜಂಪುರ | 1996 | ವನಸಿರಿ, ಕರ್ನಾಟಕದ ವೃಕ್ಷ ಸಂಪತ್ತು ಮತ್ತು ವನ್ಯ ಮೃಗಗಳು | ಸ್ವರ್ಣಾಂಭ ಪ್ರಕಾಶನ, ಬೆಂಗಳೂರು |
| ಅನಂತರಾಮು, ಕೆ.(ಡಾ) | 1997 | ದಕ್ಷಿಣ ಕನ್ನಡದ ಸಿರಿನಾಡು | ಅನಂತ ಪ್ರಕಾಶನ, ದೇವಾಂಬಾ ಅಗ್ರಹಾರ, ಮೈಸೂರು |
| ಅಮೃತ ಸೋಮೇಶ್ವರ | 1984 | ತುಳು ಬದುಕು | ಪ್ರಕೃತಿ ಪ್ರಕಾಶನ, ಮಂಗಳೂರು |
| ಅಮೃತ ಸೋಮೇಶ್ವರ | 1997 | ತುಳು ಪಾಡ್ದನ ಸಂಪುಟ | ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ |
| ಆನಂದ ಕಾರಂತ, ಕೆ. | 1973 | ಕರ್ನಾಟಕದ ಫಲಗಳು | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ |
| ಆನಂದತೀರ್ಥ ಪ್ಯಾಟಿ<br>ನರೇಂದ್ರ ರೈ ದೇರ್ಲ | 2008 | ನಿರ್ಮಾಣ ಕಲೆ | ಕರ್ನಾಟಕ ಸರ್ಕಾರ, ಕನ್ನಡ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |
| ಡಾ.ಆಲೂರ್ ಕೆ.ಆರ್. | 1974 | ಪಶು ವೈದ್ಯಕೀಯ ವಿಜ್ಞಾನ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ಆಲೂರ್ ವೆಂಕಟರಾವ್ | 1974 | ಕರ್ನಾಟಕದ ಗತವೈಭವ | ಧಾರವಾಡ |
| ಈಶ್ವರಭಟ್ಟ, ಬಿ. | 1957 | ಅಡುಗೆಮನೆಯ ಸೌಭಾಗ್ಯ | ಕನ್ನಡ ಪ್ರಪಂಚ ಪ್ರಕಾಶನ, ಕದ್ರಿ, ಮಂಗಳೂರು - 2 |
| ಈಶ್ವರಭಟ್, ಪಿ.ಎಸ್. (ಡಾ) | 1978 | ಅಡಿಕೆ | ಪೂಗವನ ಪ್ರಕಾಶನ, ವಿಟ್ಲ, ದ.ಕ. |
| ಉಪಾಧ್ಯಾಯ, ಯು.ಪಿ. (ಸಂ.) | 1988 | ತುಳು ನಿಘಂಟು ಸಂಪುಟಗಳು (1ರಿಂದ 6) | ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ |
| ಉಲ್ಲಾಸ ಕಾರಂತ, ಕೆ. | 1985 | ಅರಣ್ಯ ಮತ್ತು ಸಮಾಜ | ಅಕ್ಷರ ಪ್ರಕಾಶನ, ಸಾಗರ, ಕರ್ನಾಟಕ ರಾಜ್ಯ |
| ಉಪ್ಪಿನ, ಎನ್.ಎಸ್. | 1987 | ವನವೃಕ್ಷಗಳ ಕ್ಷೇತ್ರ ಕೈಪಿಡಿ | ಜನತಾ ಶಿಕ್ಷಣ ಸಮಿತಿ, ವಿದ್ಯಾಗಿರಿ, ಧಾರವಾಡ |
| ಕಟಗಿ ಹಳ್ಳಿಮಠ ಎಸ್.ಎಸ್. | 1956 | ಕೀಟಕ ಪಿಡುಗುಗಳ ಸಮೀಕ್ಷಣೆ | ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ |
| ಕದಿರ ಮಂಡಲಗಿ,ಎಸ್.ಜಿ. | 1991 | ಭೂಬಳಕೆ ಯೋಜನೆ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಕರೋವ್ಕಿನ್, ಎಫ್ | 1987 | ಪುರಾತನ ಜಗತ್ತಿನ ಇತಿಹಾಸ | ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ. |
| ಕಲ್ಲಾಪುರ, ಎಸ್.ಕೆ. | 1977 | ಕಲ್ಲುನಾರು (ಭೂತಾಳೆ ಗಿಡಗಳು) | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು |

| | | | |
|---|---|---|---|
| ಕಲ್ಲಾಪುರ,ಎಸ್.ಕೆ. | 1977 | ಕಲ್ಲುನಾರು (ಭೂತಾಳೆ) ಗಿಡಗಳು | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ಕಿಕ್ಕೇರಿ ನಾರಾಯಣ | 2010 | ಜೇನು ನುಡಿ (ಕನ್ನಡ-ಇಂಗ್ಲಿಷ್ ಡಿಕ್ಷನರಿ) | ಕಾವೇರಿ ಕಾಂಪ್ಲೆಕ್ಸ್, 96, ಮಹಾತ್ಮಗಾಂಧಿ ರಸ್ತೆ, ಚನ್ನೈ |
| ಕಿಕ್ಕೇರಿ ನಾರಾಯಣ (ಸಂ.) | 2011 | ಬುಡಕಟ್ಟು ಸಂಸ್ಕೃತಿ | ಅರುಹು ಕುರುಹು, ವಿಶೇಷ ಸಂಚಿಕೆ, 366-ಎ, ನವಿಲು ರಸ್ತೆ, ಕುವೆಂಪುನಗರ, ಮೈಸೂರು |
| ಕಿಕ್ಕೇರಿ ನಾರಾಯಣ | 2011 | ಜೇನುಕುರುಬ ಬುಡಕಟ್ಟು ಜನಾಂಗದ ಅವ್ಯಕ್ತ ಸಾಂಸ್ಕೃತಿಕ ಪರಂಪರೆ | ಇಂಡ್‌ಕಾಮ್, 393, ವೆಲಚೆರಿ ಮುಖ್ಯರಸ್ತೆ, ವಿಜಯನಗರ, ವೆಲಚೆರಿ, ಚೆನ್ನೈ |
| ಕಿದಿಯೂರು ಗುರುರಾಜ ಭಾಗವತ (ಡಾ.) | 1988 | ಆಯುರ್ವೇದ ದ್ರವ್ಯಗುಣ ಸಾರಸಂಗ್ರಹ | ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು |
| ಕುಮಾರಸ್ವಾಮಿ, ಎ.ಎಸ್. (ಡಾ.) ಶಶಿಧರ, ಕೆ.ಸಿ. | 2004 | ಆಹಾರ ಸುರಕ್ಷತೆ | ಕೃಷಿ ಕಿರಣ, ಚಂದ್ರಕಮಲವಿಠಲ ದೇವಸ್ಥಾನದ ಸಮೀಪ, ಶರಾವತಿ ನಗರ, ಶಿವಮೊಗ್ಗ |
| ಕುಮುದಿನಿ, ಸಿ.ಕೆ. (ಡಾ.) | 1986 | ಪ್ರಾಚೀನ ಭಾರತದಲ್ಲಿ ಬೇಸಾಯ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಕೃಷ್ಣಪ್ರಸಾದ್, ಜಿ. | 2008 | ಬೀಜ | ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |
| ಕೃಷ್ಣಪ್ರಸಾದ್, ಜಿ. ಪೂರ್ಣಪ್ರಜ್ಞ ಬೇಳೂರು ರಘುನಂದನ ಭಟ್ | 2008 | ಆಳ ನೀರಿನ ಬತ್ತ ಬೇಸಾಯ | ಸಹಜ ಸಮೃದ್ಧ, 7ನೇ ಮುಖ್ಯ ರಸ್ತೆ, ಸುಲ್ತಾನ ಪಾಳ್ಯ, ಬೆಂಗಳೂರು |
| ಕೃಷ್ಣರಾವ್,ವೈ.ವಿ. (ಸಂ.) ಏಟುಕೂರು ಬಲರಾಮಮೂರ್ತಿ | 1987 | ಆಂಧ್ರಪ್ರದೇಶ ದರ್ಶಿನಿ (ತೆ.) | ವಿಶಾಲಾಂಧ್ರ ಪಬ್ಲಿಷಿಂಗ್ ಹೌಸ್, ವಿಜ್ಞಾನ ಭವನ, ಹೈದರಾಬಾದ್ |
| ಕೃಷ್ಣಶಾಸ್ತ್ರಿ, ಕೆ.ಎಸ್. (ಡಾ.) | 1984 | ಸಸ್ಯ ಬೆಳವಣಿಗೆ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಕೃಷ್ಣಶಾಸ್ತ್ರಿ, ಕೆ.ಎಸ್. (ಡಾ.) ಶ್ರೀ ದಾಸಪ್ಪ | 1974 | ಕಳೆಗಳು ಮತ್ತು ಕಳೆಗಳ ನಿಯಂತ್ರಣ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಕೆಂಚಯ್ಯ, ಕೆ. (ಡಾ.) ಗಣೇಶಬಾಬು, ಎಂ.ಎಸ್. (ಡಾ.) | 2011 | ಅಡಿಕೆ ಬೆಳೆ ಉತ್ಪಾದನೆ ಹಾಗೂ ಸಂರಕ್ಷಣೆ | ಅಡಿಕೆ ಸಂಶೋಧನಾ ಕೇಂದ್ರ ನವಿಲೆ, ಶಿವಮೊಗ್ಗ |
| ಕೇಶವನ್ ಪ್ರಸಾದ್, ಕೆ. (ಡಾ.) ಗಂಗಾಧರ ದೈವಜ್ಞ (ಡಾ.) | 2008 | ಬುಡಕಟ್ಟು ಅಧ್ಯಯನ | ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ |
| ಕೊರಡ್ಕಲ್ ಶ್ರೀನಿವಾಸ | 1949 | ದಕ್ಷಿಣ ಕನ್ನಡದ ಜನಜೀವನ | ಪಟ್ಬಾಂಗ, ಕನ್ನಡ ಪಾಕ್ಷಿಕ (ಸಂ. 1-8) |
| ಕೊಸಾಂಬಿ, ಡಿ.ಡಿ. | 1998 | ಪ್ರಾಚೀನ ಭಾರತದ ಚರಿತ್ರೆ | ಬೆಳ್ಳಿ ಚುಕ್ಕಿ ಪಬ್ಲಿಷರ್ಸ್, ಬೆಂಗಳೂರು |
| ಕೊಪ್ಪರ, ಬಿ.ಎಚ್. | 1985 | ಏಲಕ್ಕಿ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಕೈಂತಜೆ ವಿಷ್ಣುಭಟ್ಟ | 1998 | ಎತ್ತಿನ ಬಂಡಿ : ಹಳಬರ ಜೋಳಿಗೆ (ಭಾಗ - 03) | ಸಂ. ಜಯಮ್ಮ ಚೆಟ್ಟಿಮೊಡ, ಮೊಗರ್ಪಣೆ, ಸುಳ್ಯ |

| | | | |
|---|---|---|---|
| ಗಂಗೂಲಿ, ಎಸ್.ಆರ್ (ಮೂ) | | | |
| ಮುನಿಸ್ವಾಮಿ, ಡಿ. (ಅನು) | 1985 | ಮಾವು | ಕನ್ನಡ ಅಧ್ಯಯನ ವಿಭಾಗ, ಕೃಷಿವಿಶ್ವವಿದ್ಯಾಲಯ, ಬೆಂಗಳೂರು |
| ಗಾಣದಾಳು ಶ್ರೀಕಂಠ | 2008 | ಕೃಷಿ ಉಪಕರಣಗಳು | ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |
| ಗೋಪಾಲಕೃಷ್ಣ,ಕೆ.ಎಲ್. ಅನು | | | ಬೆಂಗಳೂರು |
| ಗೌಡರ್,ಎಸ್.ಆರ್. | 1983 | ಹಂತಿಯ ಪದಗಳ ಸೊಗಸು | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಘನಮಠದ ಶಿವಯೋಗಿ | 2009 | ಕೃಷಿಜ್ಞಾನ ಪ್ರದೀಪಿಕೆ | ಶ್ರೀಘನಮಠೇಶ್ವರ ಮಠ, ಸಂತೆಕೆಲ್ಲೂರ ಲಿಂಗಸುಗೂರು ತಾ, ರಾಯಚೂರು ಜಿಲ್ಲೆ. |
| ಚಂದ್ರಶೇಖರ, ಎ.ಪಿ. | 2011 | ಬೆಳೆಯೋಣ ಬನ್ನಿ | ನಿರ್ಮಲ ಎ.ಪಿ.ಸಿ., ಇಂದ್ರಪ್ರಸ್ಥ, ಉದ್ಬೂರು |
| ಚಂದ್ರಶೇಖರ, ಎಂ.ಆರ್. | | | |
| ಸುಬ್ಬರಾಯಪ್ಪ, ಬಿ.ವಿ. | 1959 | ಹಾಲು ಮತ್ತು ಅದರ ಉತ್ಪನ್ನಗಳು | ಕಾವ್ಯಾಲಯ ಪ್ರಕಾಶನ, ಮೈಸೂರು |
| ಚಕ್ಕರೆ ಶಿವಶಂಕರ್ (ಸಂ.) | 2003 | ಜನಪದ ತಂತ್ರಜ್ಞಾನ | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು |
| ಚನ್ನಬಸವಣ್ಣ, ಜಿ.ಪಿ. (ಡಾ.) | 1984 | ಜೈವಿಕ ಕೀಟ ಹತೋಟಿ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಚೌಧುರಿ, ಎಸ್.ಎಸ್ | 1968 | ರೇಷ್ಮೆ ಹುಳು ಮತ್ತು ಅದರ ಸಾಕಣೆ | ಗೀತಾ ಬುಕ್ ಹೌಸ್, ಮೈಸೂರು |
| ಜಯಲಕ್ಷ್ಮೀ, ಟಿ. (ಡಾ.) | 2012 | ಸಮಗ್ರ ಕನ್ನಡ ಗಾದೆಗಳು 3-4 | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ |
| ಜ್ಯೋತಿ, ಆರ್.ಎಸ್. | 1985 | ಪ್ರಾಚೀನ ಹಾಗೂ ಅರ್ವಾಚೀನ ದನಗಳ ಇತಿಹಾಸ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು |
| ತಮ್ಮಣ್ಣ ಪದ್ಮಾವತಮ್ಮ, ಕೆ. (ಅನು.) | 1988 | ಮನೆಯ ಕೈತೋಟ | ವರದರಾಜ ಪ್ರಕಾಶನ, ಬನಶಂಕರಿ, ಬೆಂಗಳೂರು |
| ತಿಪ್ಪೇರುದ್ರಸ್ವಾಮಿ, ಎಚ್. (ಡಾ.) | 1968 | ಕರ್ನಾಟಕ ಸಂಸ್ಕೃತಿ ಸಮೀಕ್ಷೆ | ಮೈಸೂರು |
| ತಿಪ್ಪೇರುದ್ರಸ್ವಾಮಿ, ಎಚ್. (ಡಾ.) (ಪ್ರ.ಸಂ.) | 1983 | ಮಲೆನಾಡು ಜಾನಪದ | ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| ತಿಪ್ಪೇರುದ್ರಸ್ವಾಮಿ, ಎಚ್.(ಡಾ.) (ಪ್ರ.ಸಂ.) | 1984 | ವಿಶಿಷ್ಟ ಜಾನಪದ | ಕನ್ನಡ ವಿಭಾಗ, ಮೈ.ವಿ.ವಿ. ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪ್ರಾಜೆಕ್ಟ್ ಮೈಸೂರು ವಿಶ್ವ ವಿದ್ಯಾನಿಲಯ |
| ತುಕಾರಾಂ ಪೂಜಾರಿ (ಸಂ.) | 1997 | ಕಣ್ಮರೆಯಾಗುತ್ತಿರುವ ತುಳು ಬದುಕು | ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಮಂಗಳೂರು |
| ದುರ್ಗೇಕರ, ವೈ.ಎಸ್. | 1975 | ಕಡಲ ಮೀನುಗಾರಿಕೆ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ದೇಜಗೌ (ಪ್ರ.ಸಂ.) (ಡಾ.) | 1994 | ಸಿರಿಯೊಡಲು | ಸ್ವಾಗತ ಸಮಿತಿ, 63ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ |
| ದೇಜಗೌ | 1991 | ಜಾನಪದ ಅಧ್ಯಯನ | ಮೈಸೂರು |

| | | | |
|---|---|---|---|
| ದೇವೇಂದ್ರಕುಮಾರ್ ಹಕಾರಿ (ಡಾ.) | 1996 | ಹಂತಿ ಹಾಡುಗಳು | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು |
| ನಂಜಣ್ಣ ಬೆಸೂರು | 1999 | ಮನೆಯಂಗಳದಲ್ಲಿ ಆಯುರ್ವೇದ | ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು |
| ನಂಜಯ್ಯ,ಆರ್.ಡಿ.(ಡಾ.)<br>ಸತ್ಯನಾರಾಯಣರಾವ್,ಎಂ.(ಡಾ.) | 1977 | ಪಶುರೋಗಗಳು ಮತ್ತು<br>ಸಾರ್ವಜನಿಕ ಆರೋಗ್ಯ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ,<br>ಬೆಂಗಳೂರು |
| ನಂಜಯ್ಯ, ಎಂ. | 2012 | ಸಮಗ್ರ ಕನ್ನಡ ಗಾದೆಗಳು (ಸಂ.1-2) | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,<br>ಮೈಸೂರು ವಿಶ್ವವಿದ್ಯಾನಿಲಯ |
| ನಂಜಾರೆಡ್ಡಿ, ಬಿ.ಎನ್. | 1956 | ಬೆಳೆಗಳು ಮತ್ತು ಬೇಸಾಯ | ಸಾಧನ ಸಾಹಿತ್ಯ ಮಂದಿರ, ಜಗನ್ಮೋಹನ ಪ್ಯಾಲೆಸ್<br>ರೋಡ್, ಮೈಸೂರು |
| ನಂದೀಹಾಳ್, ಬಿ.ಎಸ್.<br>ಗಣೇಶಬಾಬು ಎಮ್.ಎಸ್. | 1988 | ಆಲೂಗಡ್ಡೆ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ನರಸಿಂಹ ಅಯ್ಯಂಗಾರ್,ಮ.ಅ. | 1973 | ನಮ್ಮ ಹಣ್ಣುಗಳು | ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು |
| ನರಸಿಂಹ ಅಯ್ಯಂಗಾರ್,ಮ.ಅ.<br>ಆನಂದರಾಮಯ್ಯ, ಎಂ.ಆರ್. | 1973 | ತೋಟಗಾರಿಕೆ ಸಂ.1 | ಪ್ರಸಾರಾಂಗ, ಮೈ.ವಿ.ವಿ. ಮೈಸೂರು |
| ನರಸಿಂಹ ಅಯ್ಯಂಗಾರ್.ಮ.ಅ. | 1973 | ರೈತರ ನೆಚ್ಚುಮೆಚ್ಚಿನ ಮರಗಳು | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವ ವಿದ್ಯಾಲಯ,<br>ಬೆಂಗಳೂರು |
| ನರಸಿಂಹೇಗೌಡ, ಕೆ.(ಡಾ.)<br>ವೆಂಕಟರಾವ್, ಬಿ.ವಿ.,<br>ಹಿತ್ತಲಮನಿ | 1973 | ಮಣ್ಣು ಮತ್ತು ನೀರು<br>ಸಂರಕ್ಷಣಾ ಕೈಪಿಡಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ನಳಿನಿ,ಎ.ಎಸ್.<br>ವೆಂಕಟಸುಬ್ಬಯ್ಯ.ಕೆ<br>ಪ್ರಭಾಕರ, ಎ.ಎಸ್. | 1924 | ಸುಗಂಧ ದ್ರವ್ಯ ಸಸ್ಯಗಳು | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ,<br>ಬೆಂಗಳೂರು |
| ನಾಗಪ್ಪ, ಟಿ.ಆರ್. | 1990 | ಕೋಳಿ ಸಾಕಿ ಹಣ ಗಳಿಸಿ | ಟಿ.ಆರ್.ನಾಗಪ್ಪ ಚಾಮುಂಡಿಪುರಂ, ಮೈಸೂರು |
| ನಾಗರತ್ನ, ಹೊ. | 1998 | ಆಯುರ್ವೇದ ದರ್ಶನ | ಹಂಸಧ್ವನಿ ಪ್ರಕಾಶನ, ಬೆಂಗಳೂರು |
| ನಾಗಲೋಟಿಮಠ, ಎಸ್.ಜೆ.(ಡಾ) | 1977 | ಸಾಕು ಪ್ರಾಣಿ ಮೂಲದ<br>ಸೋಂಕು ರೋಗಗಳು | ಕನ್ನಡ ಅಧ್ಯಯನ ವಿಭಾಗ<br>ಕೃಷಿವಿಶ್ವವಿದ್ಯಾಲಯ, ಬೆಂಗಳೂರು |
| ನಾಗೇಗೌಡ, ಎಚ್.ಎಲ್.(ಡಾ) | 1969 | ಬೆಟ್ಟದಿಂದ ಬಟ್ಟಲಿಗೆ ಅಥವಾ<br>ಕಾಫಿಯ ಕಥೆ | ಸಾಹಿತ್ಯ ಸದನ, ಲಕ್ಷ್ಮೀಪುರಂ, ಅರಸೀಕೆರೆ |
| ನಾಗೇಶ ಹೆಗಡೆ | 2010 | ಕುಲಕ್ಕೆ ಕಂಟಕ ಕುಲಾಂತರಿ<br>ಆಹಾರ | ನಂ. 569, ಸಜ್ಜನ ರಾವ್ ರಸ್ತೆ, ವಿ.ವಿ.ಪುರಂ,<br>ಬೆಂಗಳೂರು |
| ನಾಯ್ಡು, ಜೆ.ವಿ.ಬಿ.<br>ರಮೇಶ ಬಿ., ಸುರೇಶ ಬಿ. | 1972 | ವ್ಯವಸಾಯ ಕೈಪಿಡಿ | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ |
| ನಾಯ್ಡು, ಜೆ.ವಿ.ಬಿ. | 1974 | ವ್ಯವಸಾಯ ಪ್ರಗತಿ ಸಾಧನೆಯ<br>ಸೂತ್ರಗಳು | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ |
| ನಾಯ್ಡು, ಜೆ.ವಿ.ಬಿ. | 1986 | ರಸದಾಳೆಗಳು | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ |
| ನಾರಾಯಣ್, ಹೆಚ್.ವಿ. | 1967 | ಭೂಮಿ, ಜನಾಂಗ ಮತ್ತು ಚರಿತ್ರೆ | ಸುದರ್ಶನ ಪ್ರಕಾಶನ, ತಿಪಟೂರು |

| | | | |
|---|---|---|---|
| ನಾರಾಯಣ, ಕೆ.ವಿ. (ಡಾ.)<br>ಅಂಗಡಿ,ಎಸ್.ಎಸ್. (ಡಾ.)<br>ಸಾಂಬಮೂರ್ತಿ (ಡಾ.) | 1999 | ಕೃಷಿ ಪದಕೋಶ | ಕನ್ನಡ ವಿಶ್ವವಿದ್ಯಾಲಯ, ಹಂಪಿ |
| ನಾರಾಯಣರೆಡ್ಡಿ, ಎಂ.ಎ. | 1985 | ಕೈತೋಟ | ಐಎಚ್‌ಬಿ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಸತ್ಯನಾರಾಯಣ, ಜಿ.ಎನ್.<br>ನಾರಾಯಣರೆಡ್ಡಿ, ಎಂ.ಎ. | 1985 | ಸೀಬೆ | ಐಬಿಎಚ್ ಪ್ರಕಾಶನ, ಗಾಂಧಿನಗರ. ಬೆಂಗಳೂರು. |
| ನಾರಾಯಣರೆಡ್ಡಿ, ಎಂ.ಎ. | 2001 | ಪ್ರಧಾನ ಹಣ್ಣಿನಬೆಳೆಗಳು - ಮಾವು | ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ನಾರಾಯಣರೆಡ್ಡಿ, ಎಂ.ಎ. | 2002 | ಪ್ರಧಾನ ಹಣ್ಣಿನ ಬೆಳೆಗಳು<br>-ಬಾಳೆ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು |
| ನಾರಾಯಣರೆಡ್ಡಿ ಎಂ.ಎ. | 2004 (ದ್ವಿ.ಮು.) | ಸಪೋಟ ಮತ್ತು ಸೀಬೆ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು |
| ನಾರಾಯಣರೆಡ್ಡಿ, ಎಂ.ಎ.<br>ವರದರಾಜು, ಜಿ.ಎಂ. | 2009 | ಕೃಷಿಯಲ್ಲಿದೇಶೀಯ ತಂತ್ರಜ್ಞಾನ | ಕೃಷಿ ವಿಕಾಸ್ ಪಬ್ಲಿಕೇಷನ್ಸ್, ಬೆಂಗಳೂರು |
| ನಾರಾಯಣರೆಡ್ಡಿ, ಎಂ.ಎ. | 2010 | ಕುಷ್ಕಿ ತೋಟಗಾರಿಕೆ | ಕನ್ನಡ ಅಧ್ಯಯನ ವಿಭಾಗ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿ.ವಿ. ಬೆಂಗಳೂರು |
| ನಾರಾಯಣರೆಡ್ಡಿ, ಎಂ.ಎ. | 2011 | ಸುಗಂಧ ಸಸ್ಯಗಳು | ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು |
| ನಾರಾಯಣಸ್ವಾಮಿ, ಪಿ.<br>ವಸಂತ, ಎಲ್. | 1992 | ಬಹುವಾರ್ಷಿಕ ತರಕಾರಿಗಳು | ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., |
| ನಾರಾಯಣಸ್ವಾಮಿ, ಪಿ.<br>ನಾರಾಯಣರೆಡ್ಡಿ,ಎಂ.ಎ.<br>ಖಾನ್,ಎಂ.ಎಂ. | 1996 | ತೋಟದ ಬೆಳೆಗಳಲ್ಲಿ ಸಸ್ಯಾಭಿವೃದ್ಧಿ | ಕರ್ನಾಟಕ ರಾಜ್ಯವಿಜ್ಞಾನ ಪರಿಷತ್ತು, ಬೆಂಗಳೂರು |
| ನಾರಾಯಣಸ್ವಾಮಿ, ಪಿ.<br>ವಸಂತ, ಎಲ್. | 2010<br>(ಏ.ಮು.) | ಬಳ್ಳಿ ತರಕಾರಿಗಳು | ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು |
| ನಾರಾಯಣಸ್ವಾಮಿ, ಎಂ. | 2008 | ಜಾನುವಾರು | ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು |
| ನಾರಾಯಣ ಸಂಗಮ | 1955 | ಗೋಗ್ರಾಸ | ಮಿಂಚಿನಬಳ್ಳಿ ಚಾವಡಿ, ಧಾರವಾಡ |
| ನಾವಲಗಿ,ಸಿ.ಕೆ. | 2006 | ಉತ್ತರ ಕರ್ನಾಟಕದ ಕೃಷಿ<br>ಜನಪದ ಸಾಹಿತ್ಯ | ಭರತ ಪ್ರಕಾಶನ, ಗೋಕಾಕ |
| ನಾವೂರ ನಾರ್ಣಪ್ಪ ಗೌಡ | 1997 | ಬೇಸಾಯದ ಕೆಲವು ಮಾಹಿತಿಗಳು<br>ಹಳಬರ ಜೋಳಿಗೆ ಭಾಗ 2 | ಜಯಮ್ಮ, ಚೆಟ್ಟಿಮಾಡು, ಸುಳ್ಯ |
| ನಿರಂಜನ (ಪ್ರ.ಸಂ.) | 1972 | ಯಂತ್ರಜಗತ್ತು,<br>ಕಿರಿಯರ ವಿಶ್ವಕೋಶ, ಸಂ. 4 | ಬೆಂಗಳೂರು |
| ನೀಲಾ ಮಂಜುನಾಥ (ಸಂ) | 2012 | ಕರ್ನಾಟಕ ಕೈಪಿಡಿ | ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು |
| ಪರಮೇಶ್ವರ್, ಎನ್.ಎಸ್<br>ಶಂಕರ್, ಎಸ್. | 1984 | ದ್ರಾಕ್ಷಿ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಪರಮೇಶ್ವರ್, ಎನ್.ಎಸ್. | 1984 | ದ್ವಿದಳ ಧಾನ್ಯ ಬೆಳೆಗಳು | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |

| | | | |
|---|---|---|---|
| ಶಂಕರ, ಎಸ್. | | | |
| ಪಾಟೀಲ, ಎಸ್.ಹೆಚ್.<br>ಶೇಷಾದ್ರಿ ಅಯ್ಯರ್, ಅ. | 1978 | ನಮ್ಮ ಮೇವಿನ ಬೆಳೆಗಳು | ವಿಸ್ತರಣ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಪಾಟೀಲ್, ಎಸ್.ವಿ. (ಡಾ.)<br>ದೀಕ್ಷಿತ್, ಎಲ್.ಎ. | 1973 | ಮಣ್ಣು ಮತ್ತು ನೀರು ನಿರ್ವಹಣೆ | ಕನ್ನಡ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಪಾಲ್ಸನ್ ತೋಂ | 2010 | ಕೃಷಿ ಯುಡೆ ಕೇರಳಪ್ಪೆರುಮ | ಮಾತೃಭೂಮಿ ಬುಕ್ಸ್, ಕೇರಳ |
| ಪಾರ್ಪಜೆ ವೆಂಕಟ್ರಮಣ ಭಟ್ | 1974 | ಮಕರಂದ | ಸಂತೋಷ ಪ್ರಿಂಟರ್ಸ್, ಬಂಟ್ವಾಳ, ದಕ್ಷಿಣ ಕನ್ನಡ |
| ಪಾಲ್ತಾಡಿ ರಾಮಕೃಷ್ಣ ಆಚಾರ್(ಡಾ.) | 1997 | ಜಾನಪದ ಮಿನದನ | ಸುಪ್ರಿಯ ಪ್ರಕಾಶನ, ಮಂಗಳೂರು |
| ಪುಟ್ಟಪ್ಪ, ಕೆ.ವಿ. (ಡಾ.) (ಪ್ರ.ಸಂ.) | 1964 | ನೀರಾವರಿ | ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು |
| ಪುಟ್ಟಪ್ಪ, ಕೆ.ವಿ. (ಡಾ.) (ಪ್ರ.ಸಂ.) | 1973 | ನಮ್ಮ ದನಗಳು | ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು |
| ಪುಟ್ಟಪ್ಪ, ಕೆ.ವಿ. (ಡಾ.) (ಪ್ರ.ಸಂ.) | 1975 | ಭಾರತದಲ್ಲಿ ಸುವಾಸನಾ<br>ತೈಲದ ಸಸ್ಯಗಳು | ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು |
| ಪುಟ್ಟಪ್ಪ, ಕೆ.ವಿ. (ಡಾ.) (ಪ್ರ.ಸಂ.) | 1976 | ತೋಟಗಾರಿಕೆ ಸಂ. 2 | ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು |
| ಪುಟ್ಟಪ್ಪ, ಕೆ.ವಿ. (ಡಾ.) (ಪ್ರ.ಸಂ.) | 1977 | ಕೀಟ ಪ್ರಪಂಚಕ್ಕೊಂದು ಕೈಪಿಡಿ | ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು |
| ಪುಟ್ಟಪ್ಪ ಕೆ.ವಿ. (ಡಾ) (ಪ್ರ.ಸಂ.) | 1983 | ತೋಟಗಾರಿಕೆ ಸಂ. 3 | ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1971 | ಕೀಟಗಳ ವಿಂಗಡಣೆ | ಕನ್ನಡ ಅಧ್ಯಯನ ವಿಭಾಗ ಕೃ.ವಿ.ವಿ. ಬೆಂಗಳೂರು |
| ಪುಟ್ಟರುದ್ರಯ್ಯ ಎಂ. (ಡಾ) | 1975 | ಕಬ್ಬಿನ ಬೆಳೆಗೆ ಬೀಳುವ ಕೀಟಗಳು<br>ಹಾಗೂ ಅವುಗಳ ಹತೋಟಿ | ಕನ್ನಡ ಅಧ್ಯಯನ ವಿಭಾಗ ಕೃಷಿ ವಿ.ವಿ. ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1975 | ಧಾನ್ಯದ ಬೆಳೆಗಳಿಗೆ ಬೀಳುವ<br>ಕೀಟಗಳು ಹಾಗೂ ಅವುಗಳ ಹತೋಟಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ,<br>ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1971 | ಸುಭಿಕ್ಷತೆಗೆ ತೆರೆದ ಬಾಗಿಲು | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ,<br>ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1972 | ಕೀಟ ಹತೋಟಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ,<br>ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1975 | ಬೇಳೆ ಕಾಳು ಬೆಳೆಗಳಿಗೆ ಬೀಳುವ<br>ಕೀಟಗಳು ಹಾಗೂ ಅವುಗಳ<br>ಹತೋಟಿ | ಕೃಷಿ ವಿ.ವಿ. ಬೆಂಗಳೂರು |
| ಪುಟ್ಟರುದ್ರಯ್ಯ,ಎಂ. (ಡಾ) | 1975 | ಹಣ್ಣಿನ ಬೆಳೆಗಳಿಗೆ ಬೀಳುವ<br>ಕೀಟಗಳು ಹಾಗೂ ಅವುಗಳ<br>ಹತೋಟಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ,<br>ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1976 | ಅಲಂಕಾರ ಸಸ್ಯಗಳಿಗೆ ಬೀಳುವ<br>ಕೀಟಗಳು ಹಾಗೂ<br>ಅವುಗಳ ಹತೋಟಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1976 | ಎಣ್ಣೆಬೀಜ (ಕಾಳು)ಗಳ<br>ಬೆಳೆಗಳಿಗೆ ಬೀಳುವ ಕೀಟಗಳು<br>ಹಾಗೂ ಅವುಗಳ ಹತೋಟಿ | ಕೃಷಿ ವಿ.ವಿ.ಬೆಂಗಳೂರು |

| | | | |
|---|---|---|---|
| ಪುಟ್ಟರುದ್ರಯ್ಯ, ಎಂ. (ಡಾ) | 1977 | ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ | ಕನ್ನಡ ಅಧ್ಯಯನ ಸಂಸ್ಥೆ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ಪುಟ್ಟರುದ್ರಯ್ಯ, (ಡಾ) ಎಂ. | 1977 | ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಿಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1977 | ಮಾದಕ (ಹೊಗೆಸೊಪ್ಪು, ಗಾಂಜ) ಹಾಗೂ ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ, | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1977 | ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ಪುಟ್ಟರುದ್ರಯ್ಯ, ಎಂ. (ಡಾ) | 1985 | ಬೆಳೆಗಳ ಪ್ರಾಣಿ ಪೀಡೆಗಳು | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ಪುಟ್ಟೇಗೌಡ, ಎಂ. | 1982 | ಭಾರತದ ನೀರಾವರಿ ಮತ್ತು ಕೈಗಾರಿಕೆಗಳು | ನಭಶ್ರೀ ಪ್ರಕಾಶನ, ಮೈಸೂರು - 9 |
| ಪೂರ್ಣಪ್ರಜ್ಞ ಬೇಳೂರು | 2008 | ತೋಟಗಾರಿಕೆ | ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು |
| ಪ್ರಭಾಕರ್,ಎ.ಎಸ್. | 2000 | ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು | ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ |
| ಬಸಪ್ಪನವರ್ ಸಿ.ಎಚ್ | 1990 | ಹಸುರು ಉಸಿರು | ವನಸುಮ ಪ್ರಕಾಶನ, ರಾಜಾಜಿನಗರ, ಬೆಂಗಳೂರು |
| ಬಾಬು ಕೊರಗ ಪಾಂಗಾಳ | 2009 | ಕೊರಗರ ಅಜಲು ಒಂದು ವಿಶ್ಲೇಷಣೆ ಪರಿವರ್ತನೆ | ಪಾದಬೆಟ್ಟು, ಕೊರಗರ ಮನೆ, ಪಡುಬಿದ್ರಿ, ಉಡುಪಿ |
| ಬಾಲುರಾವ್, ಶಾ. | 1973 | ಜೇನವ್ವನ ಸಂತಾನ | ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು |
| ಬೈರಮಂಗಲ ರಾಮೇಗೌಡ | 2011 | ಬೆಂಗಳೂರು ಬೆಡಗು | ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು |
| ಮಂಜೇಶ್ವರ ಗಣಪತಿರಾವ್ | 1923 | ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ | ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ, ಉಡುಪಿ |
| ಮರೀಗೌಡ, ಎಂ.ಎಚ್ | 1981 | ಸಸ್ಯಾರಾಧಕ ರೈತ | ಸಹ್ಯಾದ್ರಿ ಪ್ರಕಾಶನ, ಮೈಸೂರು |
| ಮಲ್ಲಿಕಾರ್ಜುನ ಹೊಸಪಾಳ್ಯ | 2008 | ಕೃಷಿ ಆಚರಣೆ | ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |
| ಮಲ್ಲಿಕಾರ್ಜುನ ಹೊಸಪಾಳ್ಯ, ಶಾಂತಕುಮಾರ, ಸಿ., ಜಯರಾಮ್, ಜಿ. | 2010 | ಚೌಳು ನೆಲದ ಬಂಗಾರ | ಧಾನ್ಯ ಸಂಸ್ಥೆ, 3ನೇ ಮುಖ್ಯರಸ್ತೆ, ಸದಾಶಿವನಗರ, ತುಮಕೂರು |
| ಮಲ್ಲಿಕಾರ್ಜುನ ಹೊಸಪಾಳ್ಯ | 2011 | ನೆಟ್ಟಿರಾಗಿ | ಧಾನ್ಯಸಂಸ್ಥೆ, 3ನೇ ಮುಖ್ಯರಸ್ತೆ, ಸದಾಶಿವನಗರ |
| ಮಹಂತೇಶ್, ಬಿ. | 2002 | ಲಾಭದಾಯಕ ತೆಂಗಿನ ಬೇಸಾಯ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು |

| | | | |
|---|---|---|---|
| ಮಹದೇವಪ್ಪ, ಎಂ.(ಡಾ.) | 1985 | ಬತ್ತ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ.ಬೆಂಗಳೂರು |
| ಮಹದೇವಪ್ಪ, ಎಂ.(ಡಾ.) | 1985 | ಬೀಜೋತ್ಪಾದನೆ ಮತ್ತು ತಾಂತ್ರಿಕತೆ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಮಾಗಂಟಿ ಬಾಪಿನೀಡು (ಸಂ.) | 1942 | ಆಂಧ್ರಸರ್ವಸ್ವಮು (ತೆಲುಗು) | ಹೈದರಾಬಾದ್ |
| ಮುನಿಯಾಲ್ ಗಣೇಶ್ ಶೆಣೈ ಮುನಿಯಾಲ ಗಣೇಶ ಶೆಣೈ ಅವರ ಪುಸ್ತಕ ನಿಧಿ ಹಾಗೂ ನಾಲಂದಾ ಸಾಹಿತ್ಯ ಪ್ರಕಾಶನದಿಂದ ಪ್ರಕಟಗೊಂಡ ಎಲ್ಲ ಕೃತಿಗಳು | 1987 | ಅಣಬೆ ಉತ್ಪಾದನೆ | ನ್ಯೂಸ್ಟಾರ್ ಪಬ್ಲಿಕೇಷನ್ಸ್, ಜೆ.ಬಿ.ನಗರ, ಬೆಂಗಳೂರು |
| ಮುರಳಿ, ಕೆ. | 2010 | ತೋಟಗಾರಿಕೆ ಬೆಳೆಗಳ ಔಷಧೀಯ ಗುಣಗಳು | ಕೃಷಿ ವಿಕಾಸ್ ಪಬ್ಲಿಕೇಷನ್ಸ್, ಕಾಮಾಕ್ಷಿ ಪಾಳ್ಯ, ಬೆಂಗಳೂರು |
| ಮುರಳೀಧರ, ಹೆಚ್.ಜಿ. | 1973 | ತೈಲ ಪ್ರಪಂಚ | ಕನ್ನಡ ಪುಸ್ತಕಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು |
| ಮುರಳೀಧರನ್ ತಟಿಕ್ಕರ | 2010 | ಓರ್ಮಯಿಲೆ ಕೃಷಿ ಕಾಟ್ಚಿಗಳ್ | ಡಿ.ಸಿ. ಬುಕ್ಸ್, ಕೊಟ್ಟಾಯಂ, ಕೇರಳ |
| ಮೃತ್ಯುಂಜಯ, ಎಸ್ | 2000 | ಮೆಣಸಿನಕಾಯಿ ಬೆಳೆ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಮೃತ್ಯುಂಜಯ, ಎಸ್ | 2010 | ಕೃಷಿ ಬೆಳೆಗಳ ಪರಿಚಯ | ಕೃಷಿ ವಿಕಾಸ್ ಪಬ್ಲಿಕೇಷನ್ಸ್, ಬೆಂಗಳೂರು |
| ಮೋಹನ್‌ಕುಮಾರ್, ಜಿ.ಎನ್. ಹುಲಮನಿ, ಎನ್.ಸಿ. | | | |
| ನಾರಾಯಣಸ್ವಾಮಿ. ಪಿ. | 1985 | ತೈಲದ ರಾಜ ತಾಳೆಯ ಮರ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ರಂಗಸ್ವಾಮಯ್ಯ,ಜಿ.ಆರ್. ಷೇಕ್ ಅಲಿ,ಬಿ. | 1984 | ದಕ್ಷಿಣ ಭಾರತದ ಇತಿಹಾಸ | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ |
| ರಂಗಸ್ವಾಮಿ,ಎ. | 1996 | ಚಾವುಂಡರಾಯನ ಲೋಕೋಪಕಾರ ಒಂದು ಅಧ್ಯಯನ | ಮೈಸೂರು |
| ರಂಗಸ್ವಾಮಿ,ಜೆ.ಆರ್. | 1977 | ಮೀನುಗಾರಿಕೆ | ಕ.ಅ.ವಿ. ಕೃ.ವಿ.ವಿ. ಬೆಂಗಳೂರು |
| ರಂಧಾಮ,ಎಂ.ಎಸ್, (ಡಾ.) | 1984 | ಹೂವಿನ ಮರಗಳು | ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೆಹಲಿ |
| ರಣಜಿತ್‌ಸಿಂಗ್ ಲೂಯಿಸ್, ವೈ.ಎಸ್. | 1969 | ಹಣ್ಣುಗಳು | ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ |
| ರಮೇಶ, ಬೆ.ಗೋ. | 1983 | ಬಾಳೆಹಣ್ಣು | ಸಂತೋಷ ಪಬ್ಲಿಕೇಷನ್ಸ್, ವಿಜಯನಗರ, ಬೆಂಗಳೂರು |
| ರವಿವರ್ಮ ಹೆಗ್ಡೆ, ವಿ.(ಡಾ.) | 1973 | ಸಾಕು ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ | ಕೃನ್ನಡ ಅಧ್ಯಯನ ವಿಭಾಗ, ಬೆಂಗಳೂರು |
| ರಾಜಗೋಪಾಲ್,ಪಿ.ಕೆ. | 1974 | ಫಲಗಳು | ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. |
| ರಾಜನ್,ಬಿ.ಕೆ.ಸಿ. ದಾಸಪ್ಪ | 2010 | ರೈತರಿಗೆ ಬೇಕಾದ ಗಿಡಮರಗಳು | ಕನ್ನಡ ಅಧ್ಯಯನ ವಿಭಾಗ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿ.ವಿ. ಬೆಂಗಳೂರು |
| ರಾಮಣ್ಣ ಕ್ಯಾತನಹಳ್ಳಿ | 1985 | ಜಾನಪದ ವಿಹಾರ | ದಿನಕರ ಪ್ರಕಾಶನ, ಬೆಂಗಳೂರು |
| ರಾಮರಾವ್ (ಡಾ.) ಜ್ಯೋತಿ, ಎಸ್.(ಡಾ.) | 1974 | ಗೋಸಂಪತ್ತು | ಕ.ಅ.ವಿ. ಕೃ.ವಿ.ವಿ. ಬೆಂಗಳೂರು |

| | | | |
|---|---|---|---|
| ರಾಮರಾವ್ ಜ್ಯೋತಿ (ಡಾ.) | 1989 | ಆಡು ಮತ್ತು ಕುರಿ ಸಾಕಣೆ | ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ - 1 |
| ರಾಮರಾವ್ ಜ್ಯೋತಿ, ಎಸ್ | 1989 | ದನಗಳ ರೋಗಗಳು ಮತ್ತು ನಿವಾರಣೋಪಾಯಗಳು | ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ - 1 |
| ರಾಮಸ್ವಾಮಿ, ಎಸ್.ಎನ್ (ಡಾ.) | 1986 | ಅನಾವೃತಬೀಜ ಸಸ್ಯಗಳು | ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ |
| ರಾಮಾನುಜನ್,ಎ.ಕೆ. | 1960 | ಗಾದೆಗಳು | ಮೃತ್ಯುಂಜಯ ಮುದ್ರಣಾಲಯ, ಧಾರವಾಡ |
| ರಾವ್, ಸಿ.ವಿ. | 1948 | ತರಕಾರಿಗಳು ಮತ್ತು ಅವುಗಳನ್ನು ಬೆಳೆಯುವ ಬಗೆ | ಸಿ.ಎಲ್.ಎಸ್. ಪ್ರೆಸ್, ಡಿಕಿನರ್ಸ್ ರೋಡ್, ಬೆಂಗಳೂರು |
| ರಾವ್,ಎಸ್.ಆರ್. ಗುರುರಾಜಾಚಾರ್,ಎಸ್. | 1994 (ಅನು) | ಲೋಥಲ್ ಮತ್ತು ಸಿಂಧೂ ನಾಗರಿಕತೆ | ಶ್ರೀಹರಿ ಪ್ರಕಾಶನ, ಧಾರವಾಡ |
| ಲಕ್ಷ್ಮಣರಾವ್,ಕೆ.ಎಸ್. | 1961 | ಸಕ್ಕರೆ | ಮೈಸೂರು ವಿ.ವಿ.ಮೈಸೂರು |
| ಲಕ್ಷ್ಮಣಾಚಾರ್, ಎಂ.ಎಸ್. | 1973 | ಸಂಬಾರ ಪದಾರ್ಥಗಳು | ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು |
| ಲಕ್ಷ್ಮಿ ಜಿ. ಪ್ರಸಾದ | 2010 | ತುಳುವ ಸಂಸ್ಕಾರಗಳು ಮತ್ತು ವೃತ್ತಿಗಳು | ಮಾತೃಶ್ರೀ ಪ್ರಕಾಶನ, ಬೆಂಗಳೂರು |
| ವಸಂತ ಎಲ್., ನಾರಾಯಣಸ್ವಾಮಿ ಪಿ., | 2010 (ಎ.ಮು) | ಬಳ್ಳಿ, ತರಕಾರಿಗಳು | ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು |
| ವಾಮನ ನಂದಾವರ | 2001 | ಕೋಟಿ ಚನ್ನಯ ಜಾನಪದೀಯ ಅಧ್ಯಯನ | ಹೇಮಾಂಶು ಪ್ರಕಾಶನ, ಮಂಗಳೂರು |
| ವಿಜಯ ಅಂಗಡಿ ಪಾಟೀಲ, ವಿ.ಎಸ್. | 1990 | ಹಣ್ಣಿನ ಬೇಸಾಯ | ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ |
| ವಿಜಯ ಅಂಗಡಿ | 2008 | ಜೈವಿಕ ಕೃಷಿಯಲ್ಲಿ ಕೀಟ ರೋಗಗಳ ಹತೋಟಿ | ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |
| ವಿಜಯಕುಮಾರ್ ಗಿಡ್ನವರ | 1986 | ಬೀದರ ಜಿಲ್ಲೆಯಲ್ಲಿ ಕೃಷಿ | ಪ್ರಸಾರಾಂಗ, ಗುಲಬರ್ಗಾ ವಿ.ವಿ. |
| ವೀರಪ್ಪ, ಕೆ.ಎಂ. | 1992 | ಹಸಿರು ನಮ್ಮ ಉಸಿರು | ಶಕುಂತಲ ಪ್ರಕಾಶನ, ಸರಸ್ವತೀಪುರಂ, ಮೈಸೂರು |
| ವೀರೇಶ್, ಜಿ.ಕೆ. (ಡಾ.) | 1984 | ಬೆಳೆ ಕೀಟಗಳ ನಿಯಂತ್ರಣ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ವಿಶ್ವನಾಥ, ಬಿ. | 1997 | ಅಂದಿನ ದಣಿ ಒಕ್ಕಲು | ಜಯಮ್ಮ ಚೆಟ್ಟಿ ಮಾಡ ಮೊಗರ್ಪಣೆ, ಸುಳ್ಯ, ದ.ಕ. |
| ವೆಂಕಟರಾಮಣ್ಣ, ಬಿ.(ಡಾ.) | 2010 | ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ | ಸಿಂಚು ಮಲ್ಟಿಗ್ರಾಫ್, 2ನೇ ಹಂತ, ಕೆ.ಹೆಚ್.ಬಿ.ಕಾಲೋನಿ, ಕುವೆಂಪುನಗರ, ಮೈಸೂರು |
| ವೆಂಕಟರಾಮಣ್ಣ ಬಿ.(ಡಾ.) | 2012 | ಬಂಡಾರಹಳ್ಳಿಯ ಸಂಸ್ಕೃತಿ | ಎಸ್.ಎಲ್.ಎನ್. ಪ್ರಿಂಟರ್ಸ್ 5ನೇ ಬ್ಲಾಕ್, ಬನಶಂಕರಿ, ಬೆಂಗಳೂರು |
| ವೆಂಕಟರಾವ್, ಬಿ.ವಿ. ನರಸಿಂಹೇಗೌಡ, ಎಚ್.ಕೆ. | 1974 | ಮಣ್ಣು | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ವೆಂಕಟರಾವ್, ಬಿ.ವಿ. | 1975 | ಬೇಸಾಯ | ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು |
| ವೆಂಕಟರಾವ್, ಬಿ.ವಿ. | 1984 | ಭೂ ಅಭಿವೃದ್ಧಿಗೆ ಮಿಶ್ರ ಬೇಸಾಯ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |

| | | | |
|---|---|---|---|
| ವೆಂಕಟರಾವ್, ಬಿ.ವಿ. | 1984 | ಮಣ್ಣು ಮತ್ತು ಅದರ ಸಂರಕ್ಷಣೆ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ವೆಂಕಟರಾವ್, ಬಿ.ವಿ. | 1994 | ಇಂಗ್ಲಿಷ್-ಕನ್ನಡ ಕೃಷಿ ವಿಜ್ಞಾನ ಶಬ್ದಕೋಶ | ಐಬಿಎಚ್ ಪ್ರಕಾಶನ, ಬೆಂಗಳೂರು |
| ವೆಂಕಟರಾವ್, ಡಿ. | 1973 | ಕೃಷಿ ಸಹಕಾರ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ವೆಂಕಟರಾವ್, ಡಿ. | 1978 | ಕೃಷಿ ಮಾರುಕಟ್ಟೆಗಳು | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ |
| ವೆಂಕಟರಾವ್, ಡಿ. | 1980 | ಕೃಷಿ ಮತ್ತು ಹಣಕಾಸು | ಪ್ರಸಾರಾಂಗ, ಮೈಸೂರು ವಿ.ವಿ.ಮೈಸೂರು |
| ವೆಂಕಟರಾವ್, ಡಿ. | 1985 | ಕೃಷಿ ಬೆಳವಣಿಗೆ | ವಿದ್ಯಾನಿಧಿ ಪ್ರಕಾಶನ, ಗದಗ |
| ಶಂಕರೇಗೌಡ, ಬಿ.ಟಿ.<br>ವೆಂಕಟರಾವ್ ಬಿ.ವಿ. | 1984 | ಜೋಳ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಶಂಪ ದೈತೋಟ | 1984 | ಗೋಡಂಬಿ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಶಾನಭಾಗ, ಎಂ.ಆರ್. | 1999 | ಮನೆಯಂಗಳದಲ್ಲಿ ಆಯುರ್ವೇದ | ಪ್ರತಿಭಾ ಗ್ರಂಥಮಾಲೆ, ಧಾರವಾಡ |
| ಶಿವಪ್ಪ, ಡಿ.ಎಸ್. (ಡಾ.) | 1969 | ಜೀವಂತ ಭೂಮಿ | ಗೀತಾ ಬುಕ್ ಹೌಸ್, ಮೈಸೂರು |
| ಶಿವರಾಮಯ್ಯ ಬಾಳೆಕಾಯಿ | 2002 | ಫುಕುವೊಕನ ಹಾದಿಯಲ್ಲಿ | ನಮ್ಮ ಪ್ರಕಾಶನ, ತುಮಕೂರು |
| ಶಿವರಾಮ ರೈ, ಪಿ. | 1995 | ಕೃಷಿಕರ ಸಂಗಾತಿ | ನವಕರ್ನಾಟಕ ಪ್ರಕಾಶನ, ಬೆಂಗಳೂರು |
| ಶಿವರಾಮ ರೈ, ಪಿ. (ಡಾ.)<br>ನಾಗೇಶ ಚಂದ್ರ, ಬಿ.ಕೆ. | 1975 | ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು | ಕನ್ನಡ ಅಧ್ಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ಶಿವರಾಮಶೆಟ್ಟಿ, ಬಿ. | 2000 | ಸಸ್ಯಜಾನಪದ | ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ |
| ಶಿವರಾಮು ವ.ನಂ. (ಸಂ.) | 1997 | ಹಗೇವು ತುಂಬ್ಯಾವೆ ಹದಿನಾರು | ಜನಪದ ಕಲಾಮೇಳ, ಹನುಮಂತನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ |
| ಶಿವಾನಂದ ಕಳವೆ | 2008 | ಅರಣ್ಯ | ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |
| ಶಿವಾನಂದ ಕಳವೆ | 2010 | ಕಂಪ್ಯೂಟರ್ ಊಟ ಹಳ್ಳಿ ಮಾರಾಟ | ಧಾತ್ರಿ ಪುಸ್ತಕ, ನಾಗರಬಾವಿ, 2ನೇ ಹಂತ, ಬೆಂಗಳೂರು |
| ಶೇಷಗಿರಿರಾವ್, ಡಿ. | 1974 | ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಬೆಂಗಳೂರು |
| ಶೇಷಗಿರಿರಾವ್, ಡಿ. | 1975 | ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ | ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು |
| ಶೇಷಗಿರಿರಾವ್, ಡಿ. | 1982 | ಶ್ರೀಗಂಧ | ಪ್ರಸಾರಾಂಗ, ಮೈಸೂರು ವಿ.ವಿ. |
| ಶೇಷಗಿರಿರಾವ್, ಡಿ. | 1984 | ಧಾನ್ಯ ಸಂರಕ್ಷಣೆ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಶೇಷಾದ್ರಿ ಅಯ್ಯರ್<br>ಖಾನ್, ಎಮ್.ಎಮ್. | 1978 | ನಮ್ಮ ತರಕಾರಿ ಬೆಳೆಗಳು | ವಿಸ್ತರಣ ವಿಭಾಗ, ಕೃಷಿ ವಿ.ವಿ. ಹೆಬ್ಬಾಳ, ಬೆಂಗಳೂರು |
| ಶ್ಯಾನುಭೋಗ್, ಎಸ್.ಎಲ್. (ಡಾ.)<br>ಶಿವಪ್ರಕಾಶ್ ಎಸ್.ಎಂ. | 1990 | ಮತ್ಸ್ಯ ವಿಜ್ಞಾನ | ಮೀನುಗಾರಿಕಾ ಕಾಲೇಜು, ಕೃ.ವಿ.ವಿ. ಮಂಗಳೂರು |
| ಶ್ರೀಕಂಠಶಾಸ್ತ್ರೀ, ಕೆ. | 1984 | ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ | ಮೈಸೂರು |

| | | | |
|---|---|---|---|
| ಶ್ರೀನಿವಾಸ, ಪಿ. | 2000 | ಪೀಡೆಗಳ ಹತೋಟಿಗಾಗಿ ಸಸ್ಯಗಳು | ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಅಂಡ್ ಆಕ್ಷನ್, ಬೆಂಗಳೂರು |
| ಶ್ರೀನಿವಾಸಯ್ಯ, (ಹೊ.) | 1987 | ಟ್ರ್ಯಾಕ್ಟರ್ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಸಂಗಮೇಶ ಹಂಡಿಗಿ | 1982 | ಜನಪದ ಸಾಹಿತ್ಯ ಮತ್ತು ದೈವೀಶ್ರದ್ಧೆ | ಮೂರುಸಾವಿರ ಮಠ, ಹುಬ್ಬಳ್ಳಿ |
| ಸತ್ಯವತಿ ಆದ್ಯ | 1983 | ಪೂಜಾ ವೃಕ್ಷಗಳು | ಐಬಿಎಚ್ ಪ್ರಕಾಶನ, ಬೆಂಗಳೂರು |
| ಸಿದ್ಧರಾಮಯ್ಯ,ಬಿ.ಎಸ್ | 2006 | ಉಷಾಕಿರಣ | ಸುಸ್ಥಿರ ಕೃಷಿ ಒಂದು ಚಿಂತನೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |
| ಸಿದ್ದವನಹಳ್ಳಿ ಕೃಷ್ಣಶರ್ಮ | 1959 | ಕಾಮಧೇನು | ಗಾಂಧಿ ಸ್ಮಾರಕ ನಿಧಿ, ಬೆಂಗಳೂರು - 03 |
| ಸೀತಾರಾಂ, ಎ. (ಡಾ.) ವೆಂಕಟರಾವ್ ಬಿ.ವಿ. | 1984 | ರಾಗಿ | ರಾಗಿ ಐಬಿಎಚ್ ಪ್ರಕಾಶನ, ಬೆಂಗಳೂರು |
| ಸೀತಾರಾಂ, ಎ. (ಡಾ.) | 1985 | ಸಜ್ಜೆ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಸುಂದರರಾವ್, ಬ.ನ. | 2011 | ಬೆಂಗಳೂರು ಇತಿಹಾಸ (ದ್ವಿ.ಮು.) | ಅಂಕಿತ ಪುಸ್ತಕ, ಬೆಂಗಳೂರು |
| ಸುಭಾಷ್ ಪಾಳೇಕರ್ ಶಂಕರಣ್ಣ ದೊಡ್ಡಣ್ಣವರ | 2011 | ನೈಸರ್ಗಿಕ ಕೃಷಿ | ಕೀರ್ತಿ ಪ್ರಕಾಶನ, 218, ಸ್ಪಂದನ, ಸಿದ್ದಲಿಂಗನಗರ ಗದಗ |
| ಸೀತಾರಾಂ, ಎ. (ಡಾ.) ಗಿರಿರಾಜ್, ಕೆ (ಡಾ.) | 1985 | ಸೂರ್ಯಕಾಂತಿ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಸೂರ್ಯನಾಥ, ಯು.ಕಾಮತ್ (ಸಂ.) | 1986 | ಕರ್ನಾಟಕ ರಾಜ್ಯ ಗೆಜೆಟಿಯರ್ | ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು |
| ಸೂರ್ಯನಾರಾಯಣ ಹೆಗಡೆ | 1984 | ಮಾವು | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಸೂರ್ಯನಾರಾಯಣ ಹೆಗಡೆ | 1985 | ಬಿದಿರು | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಸ್ವಾಮಿ, ಬಿ.ಜಿ.ಎಲ್ | 1991 | ಫಲಶ್ರುತಿ | ಕಾವ್ಯಾಲಯ ಪ್ರಕಾಶನ, ಜಯನಗರ, ಮೈಸೂರು |
| ಸ್ವಾಮಿ, ಬಿ.ಜಿ.ಎಲ್ | 1998 | ಸಸ್ಯಪುರಾಣ | ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು |
| ಹನುಮಂತರಾಜು, ಟಿ.ಹೆಚ್. (ಡಾ.) ರವಿಚಂದ್ರ, ಎನ್.ಜಿ.(ಡಾ.) | | ಸಾವಯವ ಕೃಷಿ ಮತ್ತು ಬೇವು | ಕೃಷಿ ವಿಕಾಸ ಪಬ್ಲಿಕೇಷನ್ಸ್, ಬೆಂಗಳೂರು |
| ಹೊಸಮನಿ, ಎಂ.ಎಂ. (ಡಾ.) | 1985 | ಕಳೆ ನಿಯಂತ್ರಣ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಹೊಸಮನಿ, ಎಂ.ಎಂ. (ಡಾ.) | 1985 | ಮೆಣಸಿನಕಾಯಿ | ಐಬಿಎಚ್ ಪ್ರಕಾಶನ, ಬೆಂಗಳೂರು |
| ಹೊಸಮನಿ, ಎಂ.ಎಂ.(ಡಾ.) | 1987 | ಕೃಷಿ ಶಿಕ್ಷಣ ಮತ್ತು ಕೃಷಿ ಸಂಶೋಧನಾಲಯಗಳು | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಹೊಸಮನಿ, ಎಂ.ಎಂ. (ಡಾ.) ರತ್ನಂ, ಬಿ.ಪಿ. | 1986 | ಮಳೆ ಮತ್ತು ಕೃಷಿ | ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು |
| ಹೊಸಮನಿ, ಎಸ್.ಎ. | 1963 | ನೀರಾವರಿ ಬೇಸಾಯ | ಕರ್ನಾಟಕ ವಿ.ವಿ. ಧಾರವಾಡ |
| ಹಿತ್ತಲಮನಿ, ವೀ.ಚ. | 1972 | ಗೊಬ್ಬರ | ಶರಾವತಿ ಸಾಹಿತ್ಯ, ಧಾರವಾಡ |
| ಹಿತ್ತಲಮನಿ, ವೀ.ಚ. | 1988 | ಅಧಿಕ ಇಳುವರಿ ಎಷ್ಟು, ಎಂತು? | ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ |

| | | | |
|---|---|---|---|
| ಹಿತ್ತಲಮನಿ, ವೀ.ಚ. | 1989 | ಹತ್ತಿ | ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ |
| ಹಿತ್ತಲಮನಿ, ವೀ.ಚ. | 1989 | ಕೊಟ್ಟಿಗೆ (ತಿಪ್ಪೆ)ಗೊಬ್ಬರ | ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ |
| ಹೇಮಾವತಿ ಹೆಗ್ಡೆ (ಸಂ.) | 2010 | ತುಳುಗ್ರಾಮ | ವಿಶ್ವ ತುಳು ಸಮ್ಮೇಳನ, ಉಜಿರೆ, ದ.ಕ. |


## B. English Books


| | | | |
|---|---|---|---|
| Barwale, B.R. | 2001 | Seed industry and cotton production | Mahycho, silver jubilee Lecture series, ISCI publications |
| Bertein stein | 1994 | Peasent state and society in Medieval south India | Oxford University press, New Delhi |
| Bhandarkar, R.G. | 1928 | Early History of the Deccan | Calcutta |
| CIRCOT | 2006 | Director | Quality profile of the cottons |
| Dirstrict Gazetteers of Karnataka | | | Govt of Karnataka |
| Dutta, A.C. | 1965 | A class book of Botany | Oxford university press calcutta |
| Gardner, V.R. | 1961 | Basic Horticulutre The Macmillan company | |
| Glover, P.M. | 1937 | Lac cultivation in India | Indian lac Research Institute, Namkum, Ranchi, Bihar |
| Gopalachari, K. | 1941 | Early History of the Andhra country | Madras |
| Gopalaswamy Iyengar,K.S. | 1970 | Compelte Gardening in India | Bangalore |
| Honnavar, S.Y. | 1982 | Intercropping of chilli cotton mixed cropping with onion and other crops | Bangalore |
| | | 2006-07 | Horticultural crop statistics of Karnataka |
| ICAR | | 2001 | Hand book of Agriculturel, New Delhi |
| Iyengar, P.T.S | 1929 | History of the Tamils | Madras |
| Krishnamurthy, R | 2007 | Breeding for fibre quality improvement of cotton | ISCI publication, selem, T.N |
| Mahalingam, T.V. | 1955 | South Indian Polity | Madras |
| Menon, K.P.V. Pandalai, K.M. | 1958 | The coconut - A mono graph | Ernakulam, Indian central coconut committee |
| Nayaka, H.M. | 1990 | South Indian studies | Geetha Book House, Mysore |

| | | | |
|---|---|---|---|
| Gopal, B.R. | | | |
| Nilakantasastry, K.A. | 1987 | History of South India | Oxford University Press, Madras |
| Santanam, V.<br>Huchinson, J.B | 1974 | Evolutionary studies in world cottons | |
| Sharma, R.S. | 1990 | Indian Feudalism | Mac Millan press, Madras |
| Sundaram, V. | 1999 | Handbook of<br>cottons in India | New Delhi |
| Thampan, P.K. | 1981 | Hand book on coconut, palm | Oxford and I publishing co., New Delhi |
| Venkataram, L. | 1965 | Nursary practices in India | ICAR, New Delhi 23 |


## ಸಿ. ವಿಶ್ವಕೋಶಗಳು


1. ಕನ್ನಡ ವಿಶ್ವಕೋಶ, ಸಂ. 1-14, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. 'ಕರ್ನಾಟಕ' ಕನ್ನಡ ವಿಷಯ ವಿಶ್ವಕೋಶ, ಸಂ. 1-2 ಕುವೆಂಪುಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 2005, 2007
3. ಜಾನಪದ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈವಿವಿ, 2006
4. ಭೂಗೋಳ ವಿಜ್ಞಾನ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 2009
5. ಜಾನಪದ ವಿಶ್ವಕೋಶ, ಸಂ. 1-2, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
6. ದಕ್ಷಿಣ ಭಾರತೀಯ ಜಾನಪದ ಕೋಶ, ಸಂ. 1-2, ಕನ್ನಡ ವಿಶ್ವವಿದ್ಯಾಲಯ, ಹಂಪಿ 2011


## ಡಿ. ನಿಘಂಟುಗಳು


ಕಿಟ್ಟೆಲ್, ರೆ.ಫಾ. ಕನ್ನಡ-ಇಂಗ್ಲಿಷ್ ನಿಘಂಟು

ಕನ್ನಡ-ಕನ್ನಡ ನಿಘಂಟು (1-8) ಸಂಪುಟಗಳು, ಸಾಹಿತ್ಯ ಪರಿಷತ್ತು, ಬೆಂಗಳೂರು

ಇಂಗ್ಲಿಷ್-ಕನ್ನಡ ನಿಘಂಟು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಇಂಗ್ಲಿಷ್-ಕನ್ನಡ ಕೃಷಿ ವಿಜ್ಞಾನಕೋಶ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಸಸ್ಯಗಳ ನಿಘಂಟು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈವಿವಿ

ಪತ್ರಿಕೆಗಳು-ನಿಯತಕಾಲಿಕೆಗಳು

## ಇ. ದಿನಪತ್ರಿಕೆಗಳು - ನಿಯತಕಾಲಿಕೆಗಳು

ಅಡಿಕೆ ಪತ್ರಿಕೆ
ಅಭಿವೃದ್ಧಿ ಅಧ್ಯಯನ
ಅರುಹು - ಕುರುಹು
ಆಂದೋಲನ
ಆಂಧ್ರಜ್ಯೋತಿ (ತೆಲುಗು)
ಆಂಧ್ರಪ್ರಭ (ತೆಲುಗು)
ಇದೆಯಂ ಪೇಸಿಗಿರದು
ಈ ನಾಡು (ತೆಲುಗು)
ಉದಯವಾಣಿ
ಕನ್ನಡ ಪ್ರಭ
ಕಲ್ಕಿ (ತಮಿಳು)
ಕಾರ್ಷಿಕ ವಿಜ್ಞಾನ (ಮಲಯಾಳ)
ಕೃಷಿ ಕಾಮಧೇನು
ಕೃಷಿ ಭಾರತ್
ಕೃಷಿ ಮಲಯಾಳಂ
ಕೃಷಿ ಮಿತ್ರ
ಕೃಷಿ ವಿಜ್ಞಾನ
ಜಾನಪದ ಕರ್ನಾಟಕ
ಜಾನಪದ ಗಂಗೋತ್ರಿ
ದಿನತಂತಿ
ದಿನಮಣಿ (ತಮಿಳು)
ದಿನಮಣಿ ಕದಿರ್
ದಿನಕರನ್
ನೆಟ್ರಿಕಣ್
ಪ್ರಜಾವಾಣಿ
ಬುಡಕಟ್ಟು ಅಧ್ಯಯನ
ಮಂಗೈಯರ್ ಮಲರ್ ತುಗಲಕ್
ಮಯೂರ
ಮಹಿಳಾ ಅಧ್ಯಯನ
ಮಾಲೈಮರಸು
ಯೋಜನಾ
ವಿಜಯ ಕರ್ನಾಟಕ
ವಿಜಯವಾಣಿ
ಶರತ್ ಕೃಷಿ
ಸಂಯುಕ್ತ ಕರ್ನಾಟಕ
ಸಹಜ ಸಾಗುವಳಿ
ಸಿರಿ ಸಮೃದ್ಧಿ
ಸುಧಾ
ಹಿತ್ತಲ ಗಿಡ
ಹೊಸತು

## ಅನುಬಂಧ ೨

## ಸಸ್ಯಗಳ ಪದಕೋಶ

**(ಸೂಚನೆ : ಸಂ. ಸಂಸ್ಕೃತ, ತ. ತಮಿಳು, ತೆ.ತೆಲುಗು, ಮ.ಮಲಯಾಳಂ, ತು.ತುಳು, ಕೊ.ಕೊಡವ)**

**ಅಂಕೋಲೆ ಮರ,** ಕಲ್ಲುಮಾವು Sage - leaved Alanguim, *Alanguim decapetalum* (Cornacese), ತ. ಅಂಕೋಲಮ್ ಅತಿಕೋವವಮ್, ತೆ. ಅಂಕೋಲಮು, ಮ. ಅಂಕೋಲವಮ್, ಚೆಮ್ಮರಮ್, ಅರಿಞಲ್, ತು. ಅಂಕೋಲೆದ ಮರ

**ಅಂಜೂರ,** *Pipicus carris* (Moraceae), ತೆ. ಅಂಜೂರಮು, ಕೊ : ಅಂಜೂರ

**ಅಂಟುವಾಳ,** ಅರಡಾಳ, ಅಂಟರಳೆ, ಕೂಗಟಿ ಮರ, Soapnut Tree, *Sapindus trifoliatus* (Sapindaceae), ಸಂ. ಫೇನಿಲ, ತ. ಪೂವನ್ನಿ, ತೆ. ಕುಂಕುಡು, ಮ. ಚವಕಾಯಿಮರಂ, ತು. ನುರೆಕಾಯಿದ ಮರ, ಕೊ. ಅಂಟುವಾಳತ್ ಕಾಯಿ

**ಅಂತರಗಂಗೆ ಗಿಡ,** Water-Soldier, *Pistia stratiotes* (Aroideae), ತ. ಆಕಾಶ ತಾಮರೈ, ತೆ. ಅಂತರದಾಮರ, ನೀರಾಕು, ತೊಡಿಕೂರ, ಮ. ಅಂಡಾಲ್ಲಂಪೊಂಜ್, ನೀರ್ಚೀರ, ಕುಡಪಾಯಲ್

**ಅಕ್ಕತಂಗಿ ಬಳ್ಳಿ** Flane flower, Malbar Glory, *Gloriosa superba* (Liliaceae), ತ. ಕಲಾಪೈ, ತೆ. ಅಗ್ನಿಸಿಕ, ಮ. ಮಂತೋನ್ನಿ

**ಅಗರು,** ಅಗಿಲುಗಂಧ Agallochum or Aloe-wood *Aquilaria Agallocha* (Trymelaeaceae), ಸಂ. ಅಗರು, ತು.ಹಗಲ್‌ಗಂಧ, ಮ. ಅಕಿಲ್

**ಅಗ್ನಿಬಳ್ಳಿ** Bladder fruit, Baloon vine, *Caridospermum hallicacabum* (sapindaceae), ತ. ಮೂಡಕಾತನ್, ತೆ. ಬುದ್ದಕಾಕ್ಕಿರ, ಮ. ಕಪ್ಪಲ್‌ಪಾಡಿ

**ಅಡಕೆ ಮರ** Areca or Betel-nut palm *Areca catechu*, (Arecaceae), ಸಂ. ಕ್ರಮುಕಮ್, ತ.ಕಮುಕು, ತೆ. ಕ್ರಮುಕಮು, ಮ.ಕಮುಕು, ತು. ಕಂಗ್, ಕೊ. ಅಡಕೆಮರ

**ಅಡಕೆ ಬಾಳೆ** Wild melon, *cucumis trigonus* (Cucurbitacea), ಸಂ. ವಿಂದಾರಕ, ತ. ತುಮ್ಮಟಕಾಯ್, ತೆ. ಪುಡಮಕಾಯಿ, ತು. ಅಪ್ಪದಾರೆ, ಮ. ಚೆಂಕಮ್ಮಟ್ಟಿ, ಕೊಂ. ಪೆಂಡಾರೆ

**ಅಡುಂಬುಬಳ್ಳಿ,** ಕೆಂಪು ಬಂಗಡಬಳ್ಳಿ, Goat's foot creeper *Ipomaea biloba* (convolulaceac), ತ. ಅಡಮ್ಬು, ಮ. ಚುಕನ ಅಚಂಪು, ತು. ಅಡುಂಬುಬೂರು

**ಅಡ್ಕೆಬೀಳು ಬಳ್ಳಿ** *Pothos scandens* (Aroideae), ಮ. ಆನಪ್ಪರುವ, ತು. ಅರ್ಕೆಬೂರು

**ಅತಸಿ ಗಿಡ** Common flax *Linum usitatissimum* (Lineae) ಸಂ. ಅತಸಿ, ತ. ಆಳಿವಿರೈ, ತೆ. ಅತಸಿ, ಮ. ಚೆರುಚಣಂವಕ್ಕ್

**ಅತ್ತೀಮರ** Country fig tree *Ficus glomerata* (urticaceae), ಸಂ. ಔದುಂಬರಮ್, ತ. ಅತ್ತಿಮರಮ್, ತೆ. ಅತ್ತಿಮಾನು, ಮ. ಅತ್ತಿ, ತು. ಅರ್ತಿಮರ, ಕೊ.ಅತ್ತೀಮರ.

**ಅನಾನಸು,** ಹನಾಸು, ಫರೆಂಗಿ ಹಲಸು Pine-apple or Ananas, *Ananassa sativa* (Bromeliaceae), ತೆ. ಪರಂಗಿತಾಳೈ, ಮ. ಅನನಾಸ್, ತು. ಪರೆಂಗಿ ಪೆಲಕಯಿ

**ಅಬ್ಬೊಲಿಗೆ** *Crossandra undulaetolia* (Acanthaceae), ತು. ಅಬ್ಬೊಲಿಗೆ

**ಅಮಟೆ ಮರ,** ಅಂಬಟ (-ಟೆ) Hog-plum or wild mango *spondias mangifera* (Anacardiaceae) ಸಂ.ಆಮ್ರಾತಕ, ತ. ಕಾಟ್ಟುಮಾ, ತೆ. ಅಡವಿಮಾಮಿಡಿ, ಅಂಬಾಳಮು, ಮ. ಅಂಬಾಟಂ, ಅಂಬಟಂ ತು. ಅಂಬಡೆ, ಕೊ. ಅಂಬಟೆ

**ಅಮೃತ,** ಅಮರ, ಉಗನಿಬಳ್ಳಿ Heart-leaued moonseed *Tinospora cordifolia* (Menispermaceae), ಸಂ. ಗುಲೂಚಿ, ತ.ಅಮೃತವಲ್ಲಿ, ತೆ. ತಿಪ್ಪತೀಗೆ, ಮ. ಚಿಟ್ಟಾಮೃತಂ, ತು. ಅಮೃತಬೂರು ಕೊ. ಅಮೃತ

**ಅರಸಿನ ಹೂ** Allamanda *Allamanda anbletii* (Apocynaceae), ಮ. ಓಡಾಪ್ಪೂ, ತು. ಸೈತಾನ ಪೂ. ಕೋ. ಮಂಜ

**ಅರಳೀ,** ಅರಸೇ, ಅಶ್ವತ್ಥ, ಪಿಪ್ಪಲ ಮರ Sacred peepul *Ficus religiosa* (urticaceae), ಸಂ. ಪಿಪ್ಪಲ, ತ. ಅರಶಮರಮ್, ತೆ. ರಾವಿಚೆಟ್ಟು, ಮ. ಅರಯಾಲ್, ತು. ಅತ್ತಸಮರ, ಕೊ. ಅರಳಿ

**ಅರಿಸಿನ,** ಹಳದೀ ಗಿಡ long-rooted turmeric *curcuma longa* (scitamineae), ಸಂ. ಕಾಂಚನ, ತ. ಮಞ್ಚಲ್, ತೆ. ಪಸುಪು, ಮ. ಮಞ್ಞಳ್, ತು. ಮಂಜಲ್‌ದೈ, ಕೊ. ಮಂಜ

**ಅಲಮುರ್ ಮರ** *Memecylon edule* (Melastomaceae), ತ. ಅಲ್ಲಿ, ತೆ. ಅಲ್ಲಿ ಚೆಟ್ಟು, ಮ. ಕಾಯಾವ್, ತು. ಮುಂಡಿ

**ಅಲಿಗಿನ ಗಿಡ,** ಚಣಕಲಿಗಿಡ *Aeschynomene aspera* (Leguminosae), ತ. ನೆಟ್ಟಿ, ತೆ. ದೆಂಡು, ಮ. ನೆಲ್ಲಿತಾಳಿ

**ಅವರೆ,** ಹೊಲದವರೆ ಬಳ್ಳಿ Cow Gram *Dolichos lablab* (Leguminosal), ಸಂ. ಉದ್ದಾಲಕ, ತ. ವೆಳ್ಳವರೈ, ತೆ. ಅನುಮು, ಮ. ವೆಳ್ಳವರ, ಕೊ. ಚೆಟ್‌ಕುರು

**ಅವುಡಲ,** ದೊಡ್ಡಹರಳು, ತುರುಕಹರಳು, ಕಾಡಹರಳು, ಮರಹರಳು, ಫರಂಗಿ ಹರಳು, ದುಂಡಿಗಿನ ಗಿಡ Angular-leaved physic Nut or purging Nut *Jatropha curcas* (Euphorbiaceal), ಸಂ. ಕಾನನ-ಎರಂಡ, ತ.ಕಟ್ಟಾಮಣಕ್ಕು, ತೆ. ಅಡವಿ ಆಮುದವಮು, ಮ. ಕಾಟಾಮಣಕ್ಕ್, ತು. ಕಾಡಳಂಬುಡು

**ಅಶೋಕ,** ಅಸುಗೆ, ಕೆಂಕಲಿ ಮರ Ashoka Tree, *Saraca Indica* (Leguminosae), ಸಂ. ವಿಚಿತ್ರ : ತ. ಅಸೋಗಮ್, ತೆ. ಅಶೋಕಮಾನು, ಮ. ಅಶೋಕಂ, ಕೊ. ಅಶೋಕ

**ಅಳಲೆಕಾಯಿ,** ಅಣಿಲೆಕಾಯಿ, ಕಾರೆಕಾಯಿ, ಹರ್ಡೆಕಾಯಿ ಮರ Ink-nut-tree, *Terminalia chebula,* ಸಂ. ಹರೀತಕಿ, ತ. ಅಜ್ಜನಂ, ತೆ. ಕರಕ್ಕಾಯ, ಮ. ಕಟುಕ್ಕಾ, ತು. ಅಣಿಲೆಮರ, ಕೊ. ಅಳಲೆ

**ಆಕಾಶ ಗರುಡ ಬಳ್ಳಿ** *Corallocarpus epiglia* (Cucurbitaceae), ಸಂ.ಕಡಂಬ, ತ. ಆಕಾಶಕರುಡನ್, ತೆ. ಆಕಾಶಗಡ್ಡ, ಮ. ಕೊಲ್ಲನ್ ಕೋವಕಿರಂಜ

**ಆಕಾಶ ಬಳ್ಳಿ** *Cassytha filifornis* (Laurince), ತ. ಕೊತ್ತಾನ್ ಇಂದಿರವಲ್ಲಿ ನಂದ್ಯೆ, ತೆ. ಪಾಚಿತೀಗ, ಮ. ಆಕಾಶಬಳ್ಳಿ ತು.ಮುದೆಲ್‌ದಂತಿ ಬೂರು

**ಆಡುಮುಟ್ಟದ ಗಿಡ,** ಕುರಿಗಿಡ Worm-killer *Aristolochia bracteata* (Aristolochiaceae), ಸಂ. ಕತ್ರಪುಂಘ, ತ. ಆಡುತಿನ್ನಾಪಾಲೈ, ತೆ. ಗಾಡಿದೆಗಡ್ಡಪರ, ಮ. ಆಡು ತಿನ್ನಾಪಾಲ

**ಆಡುಸೋಗೆ,** ಅಡ್ಡಸರ, ಅಡ್ಡಲಸ, ಬ್ಯಾಲದ ಮರ Malabar Nut, *Adhatoda vasica* (Acanthaceae), ಸಂ. ವಾಶಾ, ತ. ಆಡಾತೊಡೈ, ತೆ. ಅಡ್ಡಸರವು, ಮ. ಆಟಲೋಟಕಂ, ತು. ಯೇಡ್‌ಮುಚ್ಚಂದಿ

**ಆನೆಕತ್ತಾಳಿ,** ಕಲ್ನಾರು, ದೆವ್ವಬಾಳೆ, ರಾಕ್ಷಸಬಾಳೆ American Aloe, *Agaue americana* (Amaryllideae), ಸಂ. ಕಾಂಟಲ, ತ. ಆನೆಕತಾಳೈ, ತೆ. ರಾಕಾಶಿಮಡಲು, ಮ. ಎರೋಪ್ಪಕೈತ, ತು. ದಡ್ಡೊಲಿ

**ಆನೆನೆಗ್ಗಿಲು,** ದೊಡ್ಡನೆಗ್ಗಿಲು *Pedalium murex* (pedalineae), ಸಂ. ಗಜದಂಷ್ಟ್ರಿ, ತ. ಆನನೆರಿಞ್ಜಲ್, ತೆ. ಏನುಗಪಲ್ಲೇರು, ಮ. ಕಾಕಮುಲ್ಲ

**ಆನೆಮುಂಗು,** ದುಂಡುಕರ, ಬಾಗಿ, ಮೊಕ್ಕ, ಅಳಂಗಿ ಮರ *Oroxylum indicum* (Bignoniaceae), ಸಂ. ಖಿಲಬಿಫಲ, ತೆ. ಮಂಡೂಕಪರ್ಣಮು, ಮ. ಪಲಕಪ್ಪೆಯಾನ, ತು. ಆನೆಮುಂಗು

**ಆಲದ ಮರ,** ಗೋಳೀ ಮರ, Banyan Tree *Ficus bengalensis* (urticaceae), ಸಂ. ನ್ಯಗ್ರೋಧ : ತ. ಆಲಮರಮ್, ತೆ. ಮರ್ರಿಚೆಟ್ಟು, ಮ. ಪೇರಾಲ್, ತು. ಗೋಳಿದಮರ, ಕೊ. ಆಲ್‌ತರ್ ಮರ

**ಆಲೂಗಡ್ಡೆ,** ಬಟಾಟೆ, ಉರಲಗಡ್ಡೆ Potato *solanum tuberosum* (solanaceae), ತ. ಉರಳಕಿಳಙ್ಗು, ತೆ. ಉರಲಗಡ್ಡ, ಮ. ಉರುಳಕೆಳಙ್, ತು. ಪಟಾಟೆ, ಕೊ. ಕಂಡೆ

**ಆವರಿಕೆ,** ಚಾಕುಸಿನ ಗಿಡ, ಒಳ್ಳೆ ತಂಗಡಿ, ಹೊನ್ನಾವರಿಕೆ ಗಿಡ Tanners cassia *cassia auriculata* (Leguminosae), ತ. ಆವರೈ, ತೆ. ತಂಗೇಡು, ಮ. ಆವೀರಂ

**ಆವರೆಗಿಡ** *Phaseolus trilobus* (Leguminosae), ತ. ಎಲಿಪ್ಪಯರು, ತೆ. ಕಲಬಂದಚೆಟ್ಟು, ಸಂ.ಅಜರಾ, ಮ. ಚೆರುವಿಡುಕೋಲ್

**ಆಷಾಡಿ,** ಶತಮೂಲಿ, ಹಲುಮಕ್ಕಳತಾಯಿ ಬಳ್ಳಿ *Asparagus racemosus* (Liliaceae), ಸಂ. ಶತಾವರೀ, ತ. ಪಣಿಯನಾಕು, ತೆ. ಶತಾವರಿ, ಮ. ಶತಾವರಿ, ತು. ಉದುರಿಬೂರು

**ಆಸಿನಮರ,** ಆಸು, ಅಶ್ವಕರ್ಣ, ರಾಳದ ಮರ *Sal tree Shorea robusta* (Dipterocarpeae), ಸಂ. ಸರ್ಜ್ಜ:, ತೆ. ಇನುಮದ್ದಿ, ಮ. ಸಾಲವೃಕ್ಷಮ್

**ಇಂಗಿನ ಗಿಡ** Asafoetids *Ferula Asa-foetida* (umbrellifere), ಸಂ. ಹಿಂಗ್, ತ. ಪೆರುಂಗಾಯಮ್, ಉರುಂಬರಮ್, ಇರಾಮಟವಮ್, ತೆ. ಇಂಗುವ ರಾಮುಕಮು, ತು. ಇಂಗಂ, ಮ. ಪೆರುಂಕಾಯಮ್, ಕೊಂ. ಹಿಂಗಾರ್ಘಾಡ

**ಇಂಪಿಗಿಡ** Chinese sugar cane *Andropogon halepensis* (Gramin eae), ಮ. ಅರಿಚ್ಚವಳಂ, ತು. ಅರಿಜೋಳ

**ಇಪ್ಪೆಮರ** Mahwa tree, The Indian Butter tree *Bassia Latifolia* (Sapotaceae), ಸಂ. ಮಧೂಕಃ, ತ. ಮಧೂಕಮ್, ತೆ. ಇಪ್ಪಚೆಟ್ಟು, ಮ. ಇರುಪ್ಪ, ತು. ಇಪ್ಪೆಮರ

**ಇಬ್ಬನೇ ಗಿಡ** Clerodendron *Clerodendron infortunatum* (verbenacaa), ತ. ಪೆರುಗಿಲೆ, ತೆ. ಬಸವನಪಾದು, ತು. ಇವ್ವೆ, ಮ. ಪೆರಗು, ವತ್ತಪೆರಿವಲ್ಲಂ

**ಇಸಬಗೋಲು,** ವಿಸವುಗೋಲು *plantago ouata* (plantagineae), ತ. ಇಶಪ್ಪುಕೋಲ್ವಿರೈ, ತೆ. ಇಸಬಗಾಲವಿತ್ತುಲು, ಮ. ಇಸ್ಪಘಲ್

**ಈಚಲುಮರ** Wild date, Mysore toddy palm *phoenix sylvstris* (palmeae), ಸಂ. ಖರ್ಜೂರಿ: ತ. ಪೇರೀಚ್ಚು, ತೆ. ಈತ, ಈನ್ದು, ಮ. ಕಾಟೇಂತ್, ತು. ಈಚಿಲ್, ಕೊ. ಈಚಿ

**ಈರುಳ್ಳಿ** Onion *Allium cepa* (Liliaceae), ಸಂ. ಉಗ್ರನಾಮ, ಝುಲ್ಲರಿ, ಉಗ್ರಗಂಧಾ, ಫಲಾಂಡು, ತೆ. ಉಲ್ಲಿ, ತ. ವೆಂಗಾಯಮ್, ತು. ನೀರುಳ್ಳಿ, ಮ. ಈರುಳ್ಳಿ, ಕೊಂ. ಪಿಯಾವ್ರು, ಕೊ. ಉಳ್ಳಿಕಂಡೆ

**ಈಶ್ವರಬೇರು,** ಗೋಪಾಲಪುಟ್ಟಿ ತೊಪ್ಪಲು Indian Birthwort *Aristolochia Indica* (Aristolochiaceae), ಸಂ. ಅಹಿಗಂಧಾ, ತ. ಈಶುರವೇರ್, ತೆ. ಈಶ್ವರಪೀರು, ಮ. ಈಶ್ವರಮುಲ್ಲ, ತು. ಇಸರಬೇರ್

**ಉಗುರುಸುತ್ತು ಬಳ್ಳಿ,** ಹಾಲ್ಕೊರಟಿಗ, ಹಾಲಕೊರಟಿಗನ ಬಳ್ಳಿ *Daemia extensa* (ASelepiadaceae), ಸಂ. ಯುಗ್ಮಫಲಿಕಾ, ತ. ವೇಲಿಪರುತ್ತಿ, ತೆ. ಗುರುಟಿಚೆಟ್ಟು, ಮ. ವೇಲಿಪರುತ್ತಿ

**ಉಡಿ ಮರ,** ಸಿಂಟಿ ಮರ *Odina wodier* (Anacardiaceae),

ಸಂ. ಅಜಶೃಂಗೀ, ತ. ಒದಿಯಮರಮ್, ತೆ. ಒಡ್ಡಿಮಾನು, ಮ. ಒತಿ

**ಉತ್ತರಾಣೀ ಗಿಡ** Prickly chaff-flower *Achyranthes aspera* (Amarantaceae) ಸಂ. ಅಪಾಮಾರ್ಗ, ತ. ತಿರುಕಡಲಾಡಿ, ತೆ. ಉತ್ತರೇಣಿ, ಮ. ಕಡಲಾಡಿ

**ಉದ್ದು** Black gram, *Phaseolus raxburghi;* (Leguminosae), ಸಂ. ಮಾಷ, ತ. ಉಳುನ್ನು, ತೆ. ಮಿನುಮುಲು, ಮ. ಉರುನ್ನ್, ತು. ಉರ್ದು, ಕೊ. ಉದ್ದ್

**ಉಪ್ಪಲಿಗೆ,** ಬೆಟ್ಟದಾವರೆ ಮರ *Macaranga indica* (Euphorbiaceae), ತ. ಉತ್ತತಾಮರೈ, ಮ. ಉಪ್ಪಿಲ, ತು. ಉಪ್ಪಲ

**ಎಕ್ಕ,** ಎಕ್ಕೆ, ಎಕ್ಕೆಮಾಲೆ, ಅರ್ಕಗಿಡ, Gigantic swallow wort or Madar *calotropis gigantea* (Asclepiadaceae), ಸಂ. ಅರ್ಕಾಹ್ವ, ತ. ಇರುಕ್ಕು, ತೆ. ಅರ್ಕಮು, ಮ. ಎರಿಕ್ಕು, ತು. ಯೆಕ್ಕ, ಕೊ. ಎಕ್ಕತ್

**ಎಡತರಿ,** ವದವಿನ, ವಡುವಾರದ ಮರ *Dichrostachys cinerea* (Leguminosae), ಸಂ. ವೀರವೃಕ್ಷ:, ತ. ವಿಡತ್ತೇರ್, ತೆ. ವೆಲುತುರು, ಮ. ವೀರವೃಕ್ಷಂ

**ಎಲಚಿ** Jujube or Bhere Fruit Tree, *Zizyphus jujuba* (phannex), ಸಂ. ಕರ್ಕಮಧು ಬದರಿ, ತ. ಇಲಂದೈ, ಕುಲ್ಲರಿ, ವೇತಿರಮ್, ತೆ. ರೇಗುಚೆಟ್ಟು, ಗಂಗರೇಗುಚೆಟ್ಟು, ಬದರಮು, ಮ. ಇಲಂತ, ಕೋಲಂ, ಮಲಂತುಡರ್, ಪರಿಂತುಡರ್, ಕೋ. ಬೋರಿರುಂಕು, ತು. ಬೂಗೂರಿ.

**ಎಲವ,** ಕೆಂಪು ಬೂರಗದ ಮರ Red cotton Tree *Bombax malabaricum* (Maluaceae), ಸಂ. ಶಾಲ್ಮಲಿ, ತ. ಇಲವು, ತೆ. ಬೂರುಗ, ಮ. ಮುಳ್ಳಿಲವ್, ತು. ಮುಳ್ಳಾಲದ ಮರ.

**ಎಲೆಕಳ್ಳಿ,** ದುಂಡುಕಳ್ಳಿ, ಗೂಟಕಳ್ಳಿ *Euphorbia Nivulia* (Euphorhiaceae), ಸಂ. ಪತ್ರಸ್ನುಕ್, ತ. ಇಲೈಕ್ಕಳ್ಳಿ, ತೆ. ಆಕುಜಿಮುಡು, ಮ. ಇಲಕಳ್ಳಿ, ತು. ಇರೆಕಳ್ಳಿ

**ಎಳ್ಳುಗಿಡ** Gingely oil or Teelseed plant *sesamum indicum* (pedaliaceae), ಸಂ. ತಿಲ : ತ. ಎಳ್ಳ್, ತೆ. ನುವ್ವುಲು, ಮ. ಕಾರೆಳ್ಳ್, ತು. ಊರು, ಕೊ. ಎಳ್ಳ್

**ಏರುಂಬಳ್ಳಿ,** ಏರುವಬಳ್ಳಿ, ಅಗ್ನಿಬಳ್ಳಿ, ಬೆಕ್ಕಿನ ತೊಡ್ಡಿನ ಬಳ್ಳಿ, ಬುಡ್ಡಕಾಕರ ತೀಗೆ Heart seed *cardiospermum Halicacabum* (Sapindaceae), ಸಂ. ಶಕ್ರಲತಾ, ತ. ತಿರಗಮೂಲಗಮ್, ತೆ. ಬುಡ್ಡಕಾಕರ, ಮ. ಉಳಿಞ, ತು. ಉರುಂಡೆಬೂರು

**ಏಲಕ್ಕಿ ಗಿಡ** Cardamom plant *Elettaria cardamomum* (Scitamineae), ಸಂ. ಏಲಾ, ತ. ಏಲಮ್, ತೆ. ಏಲ, ಮ. ಏಲಮ್, ತು. ಏಲಕಿ, ಕೊ. ಏಲ

**ಒಂದೆಲಗ,** ಇಲಿಕಿವಿ ಬಳ್ಳಿ Indian penny wort *Hydrocotyle asiatica* (umbellifera ceae), ಸಂ. ಮಂಡೂಕ ವಲ್ಲಿ, ತ. ವಲ್ಲಾರೈ, ತೆ. ಮಂಡೂಕ, ಮ. ಮುತ್ತಳ್, ತು. ತಿಮಿರೆ, ಕೊ. ಎಲಿಕೆವಿ

**ಒಳ್ಳೇ ನೀಲಿ,** ಹೆಣ್ಣು ನೀಲಿ Indigo *Indigofera finctoria* (Lguminosae), ಸಂ. ನೀಲಿನೀ, ತ. ನೀಲಂ, ತೆ. ನೀಲಿ, ಮ. ಅವರಿ, ತು. ನೀಲಿ

**ಓಮ,** ವೋಮ, ಅಜಾಮೂಲ ಗಿಡ Bishops weed or omum plant *carum copticum* (umbelliferae), ಸಂ. ಬ್ರಹ್ಮದರ್ಭ, ತ. ಓಮಮ್, ತೆ. ಓಮಮು, ಮ. ಓಮಮ್, ತು. ವೋಮ, ಕೊ. ಓಮ್

**ಕಂಚಿ,** ಕಾಡುಕುಂಬಳ ಮರ *Trewia nudiflora* (Euphorbiaceae), ತ. ಆಕುಪೂವರಶು, ಮ. ಕಾಂಚಿ

**ಕಂಟಕಾರಿ,** ನೆಲಗುಳ್ಳ, ರಾಮಗುಳ್ಳ ಗಿಡ *Solanum xanthocarpum* (solanaceae), ಸಂ. ಕಂಟಕಾರಿ, ತ. ಕಣ್ಡಙ್ಕತ್ತರಿ, ತ. ನೇಲಮುಲಕ, ಮ. ವೆಳ್ಳೋಟ್ಟುವಳುತಿನ, ತು. ಗುಳ್ಳ

**ಕಂದಗಡ್ಡೆ,** ಕಾಡು ಸೂರ್ಣಗಡ್ಡೆ, Purple-stalked dragon *Amorphophallus dubius* (Aroideae), ಸಂ. ಕಾನನಕಂದ, ತ. ಕಾಟ್ಟುಕ್ಕರಣೈ, ತೆ. ಅಡವಿಕಂದ, ಮ. ಕಾಟ್ಟುಚೇನ, ತು. ಕಾಟ್‌ಕೇನೆ

**ಕಂದರೊಳ,** ಜೋಗಿಯರಳೆ, ಹೂವರಸಿ, ಬಂಗಾಳಿ, ಅಡವಿಬೆಂಡೇ ಮರ Portia Tree, *Thespesia populnea* (Malvaceae), ಸಂ. ಕುನ್ದ, ತ. ಪೂವರಶು, ತೆ. ಗಂಗರಾವಿಚೆಟ್ಟು, ಮ. ಪೂವರಚು, ತು. ಜೋಗಿಮರ

**ಕಕ್ಕೆ,** ಕೊಂದೆ, ಆರಗಿನ ಮರ, ಆರಗ್ವದ, ಆರೇವತ ಮರ Pudding pipe, tree or Indian Laburnum *Cassia Fistula* (Leguminosae), ಸಂ. ರಾಜವೃಕ್ಷ, ತ. ಕೊನ್ರೈ, ತೆ. ರೇಲಚೆಟ್ಟು, ಮ.ಕೊನ್ನೆ, ತು. ಕೊಂದೆ

**ಕಗ್ಗಲಿ,** ಕೆಂಪು ಖೈರದ ಜಾಲಿ, ಶಮೆ, ತರೇದ ಮರ *Acacia sundra* (LEguminosae) ಸಂ. ಖದಿರ, ತ. ಕರುಂಗಾಳಿ, ತೆ. ಚಂದ್ರಚೆಟ್ಟು, ಮ. ಕರಿಜೂಲಿ

**ಕಚೋರ,** ಕಚು, ಸಪ್ಪಂಗ ಗಿಡ Long zedoary *curcuma lalifolia* (Scitamineae), ಸಂ. ಚೋರ, ತ. ಕತ್ತೂರಿಮ್ಞಳ್, ತೆ. ಕಚೋರಮು, ಮ. ಅಡವಿಕಚ್ಚೋಲ

**ಕಚ್ಚೂರ** *Kaempferia galanga* (Scitamineae), ಸಂ. ಸುಗಂಧವಚ, ತ. ಕಚ್ಚೊಲಕ್ಕಿಳಙ್ಗು, ತೆ. ಚಂದ್ರಮೂಲ, ಮ. ಕಚ್ಚೂರಂ

**ಕಟುಕರೋಹಿಣಿ** Hellebore *Helleborus niger* (Ranuculaceae), ಸಂ. ಕಟುಕ ರೋಹಿಣೀ, ತ. ಕಟುರೋಹಿಣಿ, ತೆ. ಕಟುಕ ರೋಹಿಣಿ, ಮ. ಕಟುಕರೋಹಿಣಿ

**ಕಡಗೋಲು,** ಗೊಂದಹಣ್ಣು, ಗೂದೆ, ಗೂದೆಕಟ್ಟು, ಚಪ್ಪರಬದನೆಕಾಯಿ, ತಕ್ಕಾಳಿ ಗಿಡ, Love apple or tomato *lycopersicum esculentum* (solanaceae), ತ. ತೀಮೈಮಣತ್ತಕ್ಕಾಳಿ, ತೆ. ಚಕ್ಕಲಪಂಡು, ಮ. ಪೇತಕ್ಕಾಳಿ

**ಕಡಚಿ** Sirissa Tree, *Albizzia Lebbek* (Leguminos), ಸಂ. ಮುನಿಪ್ರಿಯ, ಶುಕಾಹ್ವಾ, ಸಹಸ್ರ:, ಪೃಥುಶೃಂಗಿ, ತ. ವಾಗೈಮರಮ್, ಚಿರೀಡಂ, ತೆ. ದಿರಸನಚೆಟ್ಟು, ಸಿಂಮವಚೆಟ್ಟು, ಗಿರಿಶಮು, ಕಪೀತನಮು,

ತು. ಬಾಗೆದಮರ, ಮ. ನೆನ್ನೇನಿ

**ಕಡಲೆ** Chicken pea, Bengal Gram *Cicer arietinum* (LEguminosae), ಸಂ. ಚಣಕಃ, ತ. ಕಡಲೈ, ತೆ. ಸೆನಗಲು, ಮ. ಕಚಲ, ತು. ಕಡಲೆ, ಕೊ. ಕಡ್ಲೆ

**ಕಣಗಲ,** ಕಳಿಗಳ ಗಿಡ, ಕಾಡುಗೆಣಸು ಗೆಡ್ಡೆ Tapioca, Bitler Cassava plant, *Manihot uticissima* (Euphorbiaceae), ತ. ಮಲೈಚ್ಚರ್ಕರೈವಳ್ಳಿ, ಮ. ಪೂಳಕ್ಕಿಳಜ್

**ಕಣಗಿಲು** (ಲೆ), ಕಣಿಗಿನ, ಕಣಿಗಳು, ಗಣಿಗಳು, ಕರವೀರ, ಪಡ್ಡಳೆಗಿಡ Oleander *Nerium ororum* (Apocynaceae), ಸಂ. ಕರವೀರ, ತ. ಕರವೀರಮ್, ತೆ. ಗನ್ನೇರು, ಮ. ಕಣಾವೀರಮ್

**ಕಣೆರಿ ಗಿಡ,** ಸುರಿಮುಳ್ಳು *Zizyphus oenoplia* (Rhamneae), ತು. ತೂರಿಮುಳ್ಳು, ಮ. ತುಟಲಿಮುಳ್ಳ್

**ಕತ್ತಾಳೆಗಿಡ** Hedge Aloe *Aloe barbadensis* (Liliaceae) ಸಂ. ಕುಮಾರೀ, ತ. ಕತ್ತಾಳೈ, ತೆ. ಕಲಬಂದ, ಮ. ಕಟ್ಟವಾಳ

**ಕದಂಬ,** ಕಡವ, ಕಾಡಂಬ, ಕಡಹದ ಮರ Cadamba *Anthocephalus cadamba* (Rubiaceae), ಸಂ.ನೀಪ, ತ. ಕಡಂಬಮ್, ತ. ಕದಂಬಮು, ಮ. ಕಟಂಬು

**ಕನಕಮರ** *Cynometra ramiflora* (Leguminosae), ಸಂ. ಮಧೂಕ, ತ. ನಾಯುಡುಕ್ಕನ್, ಮ. ಇರಿಪ್ಪ

**ಕಪ್ಪುಕುರ್ಣಿ,** ಕಪ್ಪುಬೊಬ್ಬುಳಿ *Ecbolium Linneanum* (Acanthaceae), ಮ. ಕೊರಂಡ

**ಕಬ್ಬು** Sugar-cane *Saccharum officinarum* (Gramineae), ಸಂ. ಇಕ್ಷು, ತ. ಕರಮ್ಬು, ತೆ.ಚೆರುಕು, ಮ. ಕರಿಂಪು, ತು. ಕಂಬುರ್, ಕೊ. ಕೈಬು

**ಕಮಲ,** ತಾವರೆ Sacred Lotus *Nelumbium speciosum* (Nymphaeaceae), ಸಂ. ಪದ್ಮಂ, ತ. ತಾಮರೈ, ತೆ. ತಾಮರ, ಮ. ಅರವಿಂದಮ್, ತು. ತಾಮರೆ, ಕೊ. ತಾವರೆ ಪೂ

**ಕರಂಡೆ,** ಮೂಡುಗಟ್ಟಿನಗಿಡ, ಬೋಡುಕಡಲೆ ಸೊಪ್ಪು *Sphaeranthus, indicus* (compositae), ಸಂ. ಮುಂಡಿತಿಕಾ, ತ. ವಿಷ್ಣುಕರನ್ತೈ, ತೆ. ಬೊಡತರಪುಚೆಟ್ಟು, ಮ. ಅಟಕಾಮಣಿಯನ್, ತು. ಕಂರ್ಡೆ

**ಕರಬೂಜ** Musk melon *cucumis melo var.melo* (cucurbitaceae), ತ. ತನ್ನಿಮತ್ತೈ, ತೆ. ಕರಬೂಜ, ಮ. ಕರ್ಬೂಜ, ಕೊ. ಕರಬೂಜ

**ಕರವದೀ,** ಹರೀಕಳಿವಿ, ಕೊರಿಂಡ, ಕವಳಿಕಾಯಿ ಗಿಡ *Carissa carandas* (Apocynaceae), ತ. ಪೆರುಕಳಾಚೆಡಿ, ತೆ. ಒಕಚೆಟ್ಟು, ಮ. ಕರಂಟ, ತು. ಕರ್ಡೇಪುಳಿ

**ಕರಿಚುಳ್ಳಿ** *Barleria obouasta* (Acanthaceae), ಮ. ಕರಚುಳ್ಳಿ, ತು. ಚುಳ್ಳಿ

**ಕರಿಜಾಲಿ,** ಶಮೀ, ಗೊಬ್ಬಿಮರ Babool, Indian Gum arabic tree *Acacia arabica* (Leguminosae), ತ. ಕರುವೇಲ್, ತೆ. ನಲ್ಲತುಮ್ಮ, ಸಂ. ಬರ್ಬೂರ, ಮ. ಕರುವೇಲಮ್

**ಕರಿಜೀನಂಗಿ,** ಅರಿಸಿನ ಜೀನಂಗಿ ಮರ *Sesbania aegyptiaca* (Leguminosae), ಸಂ. ಜಯಂತಿಕ, ತ. ಕುರುಂಶೆಂಬೈ, ತೆ. ಜಲುಗು

**ಕರಿಜೀರಿಗೆ** Fennel flower or black cumin *Nigella sativa* (Ranunculaceae), ಸಂ. ಉಪಕುಂಚಿಕಾ, ತ. ಕುರುಞ್ಜೀರಗಮ್, ಇರುಳಿ ತೆ. ನಲ್ಲಜೀಲಕರ್ರ, ಮ. ಕರಿಂಚೀರಕಮ್, ತು. ಕಪ್ಪಲ್‌ಜೀರ್, ಕೊ. ಕರಿಜೀರಿಗೆ

**ಕರಿತುಂಬೆಗಿಡ,** ಮೊಗಬೀರಚೆಟ್ಟು Malbar catmint *Anisomeles malabarica* (Labiatae), ಸಂ. ಅಲಮೂಲ, ತ. ಪೇಯಿಮರುಚಿ, ತೆ. ಮೊಗಬೀರಾಕು, ಮ. ಕರಿಂತುಂಪ

**ಕರಿತುಳಸಿ ಗಿಡ** Holy basil or Tulasi *ocimum sanctum* (labiatae), ಸಂ. ತುಲಸಿ, ತು. ತುಳಸಿ, ತೆ. ತುಲಸಿ, ಮ.ಕೃಷ್ಣ ತುಳಸಿ, ತು. ಕಪ್ಪು ತೊಳಚಿ, ಕೊ. ಕೃಷ್ಣತೊಳಸಿ

**ಕರಿನೆಕ್ಕಿ ಗಿಡ,** ನಚ್ಚು ಕಡ್ಡಿ *Justicia gendarussa* (Acanthaceae), ಸಂ. ಕೃಷ್ಣನಿರ್ಗುಂಡಿ, ತ. ಕರುನೊಚ್ಚಿ, ತೆ. ನಲ್ಲ ನೊಚ್ಚಿಲಿ, ಮ. ವಾತಂಕೊಲ್ಲಿ, ತು. ಕರಿನೆಕ್ಕಿ

**ಕರಿನೆಲ್ಲಿ,** ಕಿರುನೆಲ್ಲಿ, ಅರನೆಲ್ಲಿ, ರಾಯರನೆಲ್ಲಿ ಮರ Country gooseberry *phyllanthus distichus* (Euphorbiaceae), ತ. ಅರಿನೆಲ್ಲಿ, ತೆ. ರಾಚಯುಸರಿಕೆಚೆಟ್ಟು, ಮ. ನೆಲ್ಲಿಪುಳಿ

**ಕರಿಬೇವು** Curry leaf tree *Murraya koenigi* (Rutaceae), ಸಂ. ಕೃಷ್ಣನಿಂಬ, ತ.ಕರುವೆಪ್ಪಿಲೈ, ತೆ. ಕರಿವೇಪಮು, ಮ. ಕರಿವೇಪು, ತು. ಬೇಸೊಪ್ಪು, ಕೊ. ಕೊಡನಾರ್‌ತೊಪ್ಪು

**ಕರಿಮರ,** ಅಬನಾಸಿ, ಬಿಲಾರದ ಮರ Coromandal ebony tree *Diospyros tupru* (Ebenaceae), ತ. ಕರುಂಗಾಲಿ, ತೆ. ತುಮಿದ, ಮ. ಕರಿಮರಮ್, ಕೊ. ಬೂಟ್ಟಿಮರ

**ಕರಿಮೆಣಸಿನ ಬಳ್ಳಿ** Black pepper vine, also white pepper, according to the preparation *piper nigrum* (piperaceae), ಸಂ. ಮರಿಚಮ್, ತ. ಮಿಳಗು, ತೆ. ಮಿರ್ಯಾಲು, ಮ. ಕುರು, ತು. ಯೆಡ್ಡೆಮುಣ್ಚಿ, ಕೊ. ನಲ್ಲಮಳ್ಳು ಬಳ್ಳಿ

**ಕರಿಯುಹೂಲಿ,** ಕರೆಸೂಲ, ಕರೆಸೂಲ, ಕರೆಹೂಲ, ಗುಡಪಾಲ, ನೆಲಮಾಗಳಿಚೇರ *Flueggia microcarpa* (Euphorbiaceae), ಸಂ. ಅಪ್ರಿಯದ್ರುಮ, ತ. ವರಪ್ಪೂಲ್, ತೆ. ತೆಲ್ಲಪುರುಗುಡು, ಮ. ಪೆರಿಂಕ್ಕಾವ್

**ಕರಿಲಾವಂಚಹುಲ್ಲು** (ಪೂರ್ವಳಿಹುಲ್ಲು) *Andropogon iwarancusa* (gramineae), ತ. ಕಾಮಾಟ್ಟವಿಲ್ಲು, ತೆ. ವಾಸನಗಡ್ಡಿ, ತು. ಕರಿಮುಡ್ಯಲ

**ಕರಿಹತ್ತಿ** ವಿಲಾಯತಿಹತ್ತಿ American cotton *gossypium barbadense* (Malvaceae), ಸಂ. ಮಾಘುನಿ, ತ. ತಾಳಿಪ್ಪರುತ್ತಿ, ತೆ. ನಲ್ಲಪತ್ತಿ

**ಕರೇಕಾಯಿ ಗಿಡ** Emetic Nut *Randia dumetorum* (Rubiacex), ಸಂ. ಮದನ, ತ. ಪೂಂಗಾರೈ, ಮರುಕ್ಕಾರೈ, ತ. ಮಂದಾ, ಮ್ರಂಗ, ಮ. ಮಂಗಕಾಯಿ, ಕಾರಾ

**ಕರ್ಪೂರ** (ಪೂಜೆ) Camphor *cinnamomum camphora* (Lauraceae), ತ. ಕರ್ಪೂರವಮಂ, ತೆ. ಕರ್ಪೂರವಮ್ಮು, ಮ. ಕರ್ಪೂರರಕ್ಷಮಂ

**ಕಲ್ಲಂಗಡಿ** Water melon *citrullers vulgeris* (cucurbitacur) ತ. ಕೊಮ್ಮಟ್ಟಿ, ವತ್ತಾಕ್ಕು, ತೆ. ಕರ್ಬೂಜಿ, ತು. ಬಚ್ಚಂಗಯಿ, ಮ. ವತ್ತಕ್ಕ, ಕೊಂ. ಬಚ್ಚಂಗ, ಕೊ. ಬತ್ತಂಗೆ

**ಕಲ್ಲಟ್ಟೆ** (-ತ್ತಿ), ಸೊಂಡೇ, ಪೌಡಂಗೀ ಗಿಡ *Solanum verbascifolium* (Solanaceae), ಸಂ. ವಿದಾರಿ, ತ. ಚುಂಡೈ, ಮ. ಚುಂಡ

**ಕಸಕಸೆ,** ಗಸಗಸೆ ಗಿಡ poium poppy *papaver somniferum* (papaveraceae), ಸಂ. ಖಾಸ್, ತ.ಗಸಗಸಾ, ತೆ.ಗಸಗಸಲು, ಮ.ಕಶಕಶ, ತು.ಕಸಕಸೆ

**ಕಹಿಪಡವಲ,** ಸಣ್ಣಪಡವಲ, ಕಾಡಾಡುಬಳ್ಳಿ Wild snake gourd *trichosanthes cucumerina* (cucurbitaceae), ಸಂ. ತಿಕ್ತಫಲ, ತ.ಪೇಯ್ಪುಡಲ್, ತೆ. ಅಡವಿಪೊಟ್ಲ, ಮ.ಕಾಟ್ಟುಪಟೋಲಂ, ತು. ಕಾಟ್‌ಪಟ್ಲಕಾಯಿ

**ಕಹಿಸೋರೆ,** ಎಲಚೀ, ಅಲಾಬು, ಈಸಗಾಯಿಬಳ್ಳಿ White pumpkin, bitter, bottle gourd *Lagenaria mulgaris* (cucurbitaceae), ಸಂ. ಅಲಾಬು, ತ.ಶುರೈ, ತೆ.ಅಲಾಬುವು, ಮ.ಕೈಪ್ಪಚುರಮ್, ತು.ಕಾಲ್‌ತುರೆ

**ಕಹಿಹೀರೆ,** ನಾಗದಾಳಿ ಬಳ್ಳಿ *Luffa amara* (Cucurbitacea), ಸಂ. ಕಟುಕಿ, ತ.ಪೇಪ್ಪೀರ್ಕಮ್, ತೆ. ವೆರ್ರಿಬೀರ, ಮ. ಅಟ್ಟಂಜ, ಕೊ. ಕೈಪಪೀರೆ

**ಕಲ್ಲಂಗಡಲೆ** (ಕಲ್ಲಂಗಡ್ಲೆ) ಗಿಡ *Sida retusa* (Malvaceae), ಸಂ. ಬಲಾ. ತ. ಮಯಿರ್ಮಾಣಿಕ್ಕಮ್, ತೆ. ಮಯಿಲುಮಾಣಿಕ್ಯಮ್, ಮ. ಕುರುಂತೋಟ್ಟಿ, ತು. ಕಡೀರ್

**ಕಾಕಮಾರಿ,** ಕಾಗೆಮಾರಿ *Anamirta cocculus* (Menispermaceae), ಸಂ. ಕಾಕಾಹ್ವಾ, ತ.ಕಾಕಕುಲ್ಲಿ, ತೆ.ಕಾಕಮಾರಿ, ಮ.ಮೀನ್ನಙಿ, ತು.ಚಿಪುಲ್ ಕೊಟ್ಟೆ

**ಕಾಕಮುಂಚಿ,** ಅಂಬುಸೊಂಡೆ ಬಳ್ಳಿ, ಮುಳ್ಳುಮುಸ್ತ Three-lobed Nightshade *solanum trilobatum* (Solanaceal), ತ. ತೂದುಳೈ ತೆ. ಮುಂಡ್ಲಮುಸ್ತೆ, ಮ. ತೂದವಳಮ್

**ಕಾಕಿ (ಕಾಕೆ),** ಕಾರೆ ಗಿಡ Carray chaeddie *canthium parviflorum* (Rubiaceae), ತ.ಕರೈ, ತೆ.ಬಲುಸು, ಮ.ಕಣ್ಣಂಗಾರಿ, ತು.ಕಕ್ಕೆಂಡಲ್

**ಕಾಳುಮೆಣಸು,** ಕರಿಮೆಣಸು Pepper *piper nigurm* (piperaceae), ತ.ಮಿಲಗೊ, ತೆ. ಸವ್ವವು, ಮ. ಕುರುಮುಲಗಂ, ಕೊ. ನಲ್ಲಮಳು

**ಕಾಕಿಮಂದಲಿ,** ಅವಗೂದೆ, ಕಾಗೆಮಾರೆ ಬಳ್ಳಿ *Trichosanthes palmata* (cucurbitaceae), ತ. ಕುರಚ್ಚೆ, ತೆ. ಅವ್ವಗೂದ, ಮ. ಕಾಕತೇಂಟೆ

**ಕಾಚು,** ಖದಿರ, ತರೆ, ಕಗ್ಗಲಿಮರ Brown-barked Acacia *Acacia catechu,* ಸಂ. ಖದಿರ, ತ. ವೊದಲೈ, ತೆ. ಪೂಗಮು, ಮ. ಕರಿಜಾಲಿ, ತು.ಕಾಚಿ

**ಕಾಡ-ಅಶ್ವತ್ಥಮರ** *Ficus Arnottiana* (urtipimpalu), ಸಂ. ಪ್ಲಕ್ಷ, ಮ. ಕಲ್ಲರೆಯಾಲ್, ತು. ಕಾಟ್ ಅತ್ತಸ್

**ಕಾಡಕಲ್ಲಟ್ಟೆ,** ಕಾರಶೆ, ಕಾಡಕಡನೆ ಗಿಡ *Solnm torvum* (Solanaceae), ತ. ಕೊತ್ತು ಕತ್ತರಿ, ಮ. ಪುತ್ತರಿಚುಂಟ

**ಕಾಡಕೆಸು ಗಿಡ** *Colocasia nymphacifolia* (Aroideae), ತ. ಶೇಂಬು, ತೆ. ಚಾಮಗಡ್ಡ, ಮ. ವೆಳಿತಾಳ್, ತು. ಕಾಟ್‌ತೇವು, ಕೊ. ಕಾಡ್‌ಕೇಂಬು ಗಿಡ

**ಕಾಡಕೊಂದೆ ಮರ** *Pithecolobium bigeminum* (Leguminosac), ಸಂ. ಅರಗ್ವಧ, ತು. ಕಕ್ಕೆಕಾಯಿ, ಮ. ಕಾಟ್ಟುಕೊನ್ನ

**ಕಾಡಜೀರಿಗೆ,** ಕಾಳಜೀರಿಗೆ Purple fleabane *vernonia anthelmintica* (compositae), ಸಂ. ಅಗ್ನಿಬೀಜ, ತ. ಕಾಟ್ಟುಚೀರಗಂ, ತೆ. ಅಡವಿಜೀಲಕರ, ತು. ಕಾಲಜೀರ್ದರಿ, ಮ. ಕಾಟ್ಟುಜೀರಕಂ

**ಕಾದತ್ತಿ,** ಕಲ್ಲತ್ತಿ, ವನಸಂಪಿಗೆ ಮರ Mountain Ebony *Bauhinia tomentosa* (Leguminosae), ಸಂ. ಫಲ್ಗು, ತ.ಕಾಟ್ಟಾತ್ತಿ, ತೆ. ಅದವಿಮಂದಾರಮು, ಮ. ಕಾಟ್ಟತ್ತಿ, ತು. ಕಾಟರ್ತಿಮರ

**ಕಾಡಪಾವಟೆ ಬಳ್ಳಿ** *Mukia scabrella* (order cucurbitacese), ತೆ. ಪೊಟ್ಟೆಬುಡಮು, ಕೂಟುರುಬುಡಮ್, ಮ. ಮುಕ್ಕಾಲ್ಪೀರಮ್, ಚೆಂಗುಮ್ಮಟಿ, ತು. ನುರ್ತೆಂಗಿ, ಕೊಂ - ಮಯ್ಸಿಕಾರ್ಟ

**ಕಾಡರಿಸಿನ,** ಅಂಬೇಹಳದಿ, ಕಸ್ತೂರಿ ಅರಿಸಿನ ಗಿಡ *Zedoary curcuma zeduoria* (Scitamineae), ತ.ಕಸ್ತೂರಿಮಂಜಲ್, ತೆ. ಕಸ್ತೂರಿಪಸುವು, ಮ. ಕಾಟ್ಟುಮಞ್ಞಾಲ್, ತು. ಆನೆಮಂಜಲ್

**ಕಾಡವರೆ** Cowhage, cowitch *mucma pruriens* (Leguminose), ಸಂ. ಆತ್ಮಗುಪ್ತ, ಕವಿಕಚ್ಚು, ತ. ಪೂನೈಕ್ಕಾಲ, ತೆ. ಪಿಲ್ಲಿಯಡುಗು, ತು. ನಾಯಿಸೊಣಂಗ್, ಮ. ನಾಯಿಕುರುಣ, ಚೊರಿವಳ್ಳಿ, ಕೊಂ. ಖವಲ್ಯಾವಾಲ

**ಕಾಡವೋಮ,** ಗುಡ್ಡವೋಮ ಗಿಡ *Goosefoot chenopodium ambrosioides* (chenopodiaceae), ಮ. ಕಾಟ್ಟು ಅಯಮೋದಕಮ್

**ಕಾಡಹಾಕುಕಾರೆ,** ಕಾಡುಮೆಣಸು ಗಿಡ T*oddalia aculeata* (Rutaceae), ಸಂ. ಕಂಡನಾ, ತ.ಮಿಳಕರಣೈ, ತೆ.ಕೊಂಡಕಸಿಂದ, ಮ.ಕಾರ, ತು.ಕಾಡಕಾರೆ

**ಕಾಡಹೆಸರು ಬಳ್ಳಿ** *Phaseolus adenanthus* (Leguminosae), ಸಂ. ಅರಣ್ಯಮುದ್ಗ, ತ.ಕಾಟ್ಟುಪಯರು, ತೆ. ಅಡವಿಪೆಸಲು, ಮ. ಕಾಟ್ಟುಪಯರು, ತು. ಕಾಟ್‌ಪದೆಂಗಿ

**ಕಾಡಹೊಗೆಸೊಪ್ಪು ಗಿಡ** *Lobelia nicotianaefolia* (campanulaceae), ತ.ಕಾಟ್ಟುಪುಗೈಯಿಲೈ, ತೆ. ಅಡವಿಪೊಗಾಕು, ಮ. ಕಾಟ್ಟ್‌ಪುಗಯಿಲ, ತು. ಕಾಟ್‌ಪುಗೆರೆ, ಕೊ. ಕಾಡ್‌ಪೇತವು

**ಕಾಡುಕಡ್ಲೆ,** ರೊಟ್ಟೀ, ಕಪ್ಪೆರೊಟ್ಟೀ ಗಿಡ Mallow leaf *Malva rotundifolia* (Malvaceae), ತ. ಕಾಟ್ಟುಕಡಲೈ, ತು. ಕಾಟ್‌ಕಡಲೆ, ಮ. ಕಾಟ್ಟ್‌ಕಡಲೆಕ್ಕ

**ಕಾಡುಕಸ್ತೂರಿ,** ಕಲೀಕಸ್ತೂರಿ, ಕಾಡುಕಸ್ತುರಿ, ಕಾಡುಬೆಂಡೆಕಾಯಿ ಗಿಡ Musk mallow *Hibiscus Abelmoschus* (Malvaceae), ಸಂ. ಲತಾಕಸ್ತೂರಿಕಾ, ತ.ವೆತ್ತಿಲೈಕಸ್ತೂರಿ, ತೆ. ಕಸ್ತೂರಿಬೆಂಡ, ಮ.ಕಾಟ್ಟ್‌ಕಸ್ತೂರಿ

**ಕಾಡುಜಾಜಿ** (ಜಾಯಿ) ಮರ Wild nutmeg *Myristica* horsfieldi (myristiceae), ಸಂ. ಕಾಮುಕ, ತ.ಕಾಟ್ಟುಜಾಜಿಕ್ಕಾ, ಮ. ಕಾಟ್ಟುಜಾತಿಕ್ಕ, ತು. ಕಾಟ್‌ಜಾಕಾಯಿ

**ಕಾಡುತೊಗರಿ,** ಕಾಡುಕಡಲೆ ಗಿಡ *Atylosia candollei* (Leguminosae), ತ. ಕಾಟ್ಟುತ್ತೋವರೈ, ಮ. ಕಾಟ್ಟುತುವರ, ತು. ಕಾಟ್‌ತೊಗರಿ

**ಕಾಡುದಾಲ್ಚಿನ್ನಿ** (ದಾಲಚೀನಿ) ಮರ Country cinnamon *Cinnamomum iners* (Laurineae), ಸಂ. ತಿಲಕ, ತ. ಇಲವಂಗಮ್, ತು. ಇಜಿನ್‌ದ ಮರ, ಮ. ಇಲವಂಗಮ್

**ಕಾಡುನುಗ್ಗೆ ಗಿಡ** *Ormocarpum sennoides* (Leguminosae), ತ. ಕಾಟ್ಟುಮುರುಂಗೈ ತೆ. ಅಡವಿಮುನಗ, ಮ.ಕಾಟ್ಟ್‌ಮುರಿಜ

**ಕಾಡುಬಾಳೆ ಗಿಡ** Wild plantain *Musa superba* (Scitamineae), ತ. ಕಾಟ್ಟುವಾಳೈ, ತೆ. ಅಡವಿಯರಟಿಚೆಟ್ಟು, ಮ.ಕಲ್ಲುವಾಳ, ತು. ಕಲ್‌ಬಾರೆ, ಕೊ. ಕಾಡ್‌ಬಾಳೆತೆರಗಿಡ

**ಕಾಡುಬೆಳ್ಳುಳ್ಳಿ,** ಕಾಡಿರುಳ್ಳಿ, ನಾಯಿಉಳ್ಳಿಗಿಡ Indian squill *urginea indica* (Liliaceae) ಸಂ. ವನಪಲಾಂಡು, ತ. ನಾರಿವೆಂಗಾಯಮ್, ತೆ. ನಕ್ಕವುಳ್ಳಿಗಡ್ಡ, ಮ. ಕಾಂತೇಜ, ತು.ಬೊಗ್ಗುಳ್ಳಿ

**ಕಾಡುಮಲ್ಲಿಗೆ ಗಿಡ** Jasmine *Jasminum angustifolium* (oleceae), ಸಂ. ಪ್ರಿಯಾ, ತ.ಕಾಟು, ತೆ.ಅಡವಿಮಲ್ಲೆ, ಮ.ಕಾಟ್ಟುಪಿಚ್ಚಕರಂ, ತು.ಎದ್ರೋಳಿ

**ಕಾಡುಲಿಂಬೆ,** ಕಾಡುನಿಂಬೆ, ದೊಡ್ಡಿಹುಳಿಗಿಡ *Atalantia monophylla* (Rutaceae), ಸಂ. ಅಟವಿಜಂಬೀರಂ, ತ.ಕಾಚೆಲ್ಲುಮಿಚ್ಚೈ, ತೆ.ಅಡವಿನಿಮ್ಮ, ಮ. ಕಾಟ್ಟುಕುರುನ್ನು, ತಂ. ಕೈಪೇರಿಪುಳಿ

**ಕಾಡುಸಂಪಿಗೆ,** ದೇವಗಣಿಗಲು, ಮೊಗಗಣಿಗಲು ಮರ Pagoda Tree *Plumieria acutifolia* (Apocynaceae), ಸಂ. ಚಂಪಕಂ, ತ. ಈಳತ್ತಲರಿ, ತೆ. ಅಡವಿಗನ್ನೇರು, ಮ. ವೆಳುತ್ತರಳಿ, ತು. ಗೋಸಂಪಿಗೆ

**ಕಾಡುಸಾಸಿವೆ,** ನಾಯಿಬೆಳೆ ಗಿಡ, ಗಂಡುನಾಬಳ್ಳಿ Wild mustard *cleome uiscosa* (Capparideae), ಸಂ. ಆದಿತ್ಯ ಭಕ್ತ, ತ. ನಾಯ್ವೇಳೈ, ತೆ. ಕುಕ್ಕವಾಮಿಂಟ್, ಮ. ಆರ್ಯವಾಳ್, ತು. ಸಂತೆಮಿ

**ಕಾಡೆಳ್ಳು,** ಹುಚ್ಚೆಳ್ಳು, ಗುರಿಯೆಳ್ಳು ಗಿಡ Niger seed or Ramtil *Guizotia abyssinica* (compositae), ತ.ಮ.ಕಾಟ್ಟೆಳ್ಳು, ತೆ. ಅದವಿನುವ್ವುಲು

**ಕಾನಗಿನ ಮರ** Cabinet Rosewood *Dalbergia lanceolaria* (Leguminosae), ತ. ಪುಂಗಮರವ್, ತೆ.ಕಾನುಗಚೆಟ್ಟು, ಮ. ಪೂವೀಟ್ಟಿ

**ಕಾಫಿ,** ಬುನ್ನು ಗಿಡ Coffee *coffea arabica* (Rubiaceae), ತ. ಕಾಪಿಕೊಟ್ಟೈ, ತೆ. ಕಾಪಿವಿತ್ತುಲು, ಮ.ಕಪ್ಪಿ, ತು,ಕಾಪಿ. ಕೊ. ಕಾಫಿ

**ಕಾಮಂಚ,** ಕಾವಂಚೆ, ಕಾಚಿ, ಮಜ್ಜಿಗೆ, ವಾಸನೆ, ನೆಸೆ, ಲಾವಂಚಿ ಹುಲ್ಲು Lemon grass, *Andropogon schoenanthus* (Gramineae), ಸಂ. ಮಾಲಾತೃಣಿ, ತ. ಕರ್ಪೂರಪುಲ್, ತೆ. ನಿಮ್ಮಗಡ್ಡಿ, ಮ. ಚಾಯಪುಲ್ಲ್, ತು.ಚಾತಪ್ಪು

**ಕಾಮಕಸ್ತೂರಿ,** ನೀರುತುಳಸಿ, ಕಮ್ಮಗಗ್ಗರೆ, ಕರ್ವಗಗ್ರಿ ಗಿಡ Sweet basil *ocimum basilicum* (labiatae), ತ.ತಿರುನೀರುಪಚ್ಚೈ, ತೆ.ವಿಬೂದಿಪತ್ರಿ, ಮ. ರಾಮತುಳಸಿ, ತು.ಕಾಮಕಸ್ತೂರಿ

**ಕಾಮಲತೆ** Red Jasmine or Indian Forget-me-not *Ipomaea quamoclit* (convolvulaceae), ಮ. ಚುವನ್ನಮುಲ್ಲ

**ಕಾರ್ಚಬಳ್ಳಿ** *Momordica dioica* (cucurbitace) ತ. ಮಲೆಪಾವಕ್ಕಾ, ಏಗಾರವಲ್ಲಿ, ತೆ. ಆಗಾಕರ ಕಾರ್ಕೋಟಕಿ, ತು. ಕಾಡಕಂಚಾಲ, ಮ. ವೆಂಪಾವಲ್, ಕೊಂ. ಪಾಗೀ

**ಕಾಸೀಗಣಗಿಲು ಗಿಡ** (Indian periwink k/c *vincae rosacea* (Apocynacex), ಮ. ಕುಪ್ಪವೇಳ

**ಕಾವಾಕುಳ ಗಿಡ** *Jussieua suffruticosa* (onagraceae), ತ.ನೀರ್ಕಿರಾಂಬು, ಮ.ಕಾಟುಕರಯಾಂಪು

**ಕಾಶ್ಮೀರಿ,** ಕೂಲಿಮರ *Gemelina arborea* (verbenaceae), ಸಂ. ಗಂಧಾರಿ, ತ.ಪೆರುಂಗುಮಿಳ್, ತೆ.ಗುಮುಡುಚೆಟ್ಟು, ಮ.ಕುಮಳ್

**ಕಾಸಮರ್ದ ಗಿಡ** Senna sophera *cassia sophera* (Leguminosae), ತ.ಪೆರಿಯ ತಕರೈ, ತೆ.ಪೈಡಿತಂಗೇಡು, ಮ.ಪೊನ್ನಾಂತಕರ

**ಕಾಸರ್ಕ,** ಕಾಸರಕಾಯಿ, ಹೆಮ್ಮುಷ್ಟಿ, ನಂಜಿನ ಕೊರಡಿನ ಮರ vomit-nut, strychonine tree, Nux-vomica *strychnos nux-vomica* (loganiaceae), ಸಂ.ಕಾರಸ್ಕರ, ತ.ಎಟ್ಟಿಕೊಟ್ಟಾಯಿ, ತೆ.ಮುಸಿಡಿ, ಮ.ಕಾಞ್ಞರಮ್, ತು.ಕಾಯೆರ್

**ಕಾಸರಕನ ಬಂದನಿಗೆ,** ಕಾಸರ್ಕ ಬದನಿಕೆ, ಕಾಸ್ರಕ ಬಾಂದುರಿಕೆ Indian mistletoe *Loranthus loniceroides* (Loranthaceae), ತ. ಉಚ್ಚಿಚೆಡಿ, ಮ.ಕಾಞರತ್ತಿನ್ಮೇಲ್ ಪುಲ್ಲುಣ್ಣಿ

**ಕಿತ್ತಳೆ ಮರ** Sweet orange *Citrus aurantium* (Rutaceae) ಸಂ.ನಾರಂಗ, ತ.ನಾರಂಗಮ್, ತೆ.ನಾರಂಗಮು, ಮ.ಮಧುರ, ತು.ಕಿತ್ತುಲಿ, ಕೊ.ಪುಳಿಮರ

**ಕೀರಕಸಾಲೆ,** ಗೀರಕಸಾಲೆ, ಹಂದಿಕೀರೆ, ಚಿಲ್ಕರಿವೆ ಸೊಪ್ಪು Amarnath *amarantus mangostanus* (Amarantaceal) ಸಂ.ಗಂಡೀರ, ತ.ಶಿರುಕೀರೈ, ತೆ.ಚಿರಿಕೂರ, ಮ.ಚೆರುಚೀರ

**ಕಿರಿಗುಳ್ಳ,** ಕೆಂಪುಗುಳ್ಳ, ಹಬ್ಬುಗುಳ್ಳ ಗಿಡ Indian Nightshade *solanum indicum* (Solanaceae), ಸಂ. ಬೃಹತೀ, ತ.ಕರಿಮುಳ್ಳಿ, ತೆ. ತೆಲ್ಲಮುಲಕ, ಮ.ಚೆರುಚುಂಡ, ತು.ಕಲ್ಲಂಟೆ

**ಕಿರಿಜಾಲಿ,** ಕರಿಕಸ್ತೂರಿ, ಪೀಕ್‌ಜಾಲಿ, ಸಣ್ಣಜಾಲಿ The cassic flower - fragrant *acacia acacia farnesiana* (Leguminosae), ಸಂ. ಅರಿಮೇದ : ತ.ಪೀಕ್ಕರುವೇಲ್, ತೆ. ಕಸ್ತೂರಿ, ಮ.ಪೌವೇಲಂ

**ಕಿರುಗೋಳ ಮರ** *Ficus retusa* (urticaceae) ಸಂ. ಕ್ಷುದ್ರ ತು. ಶಿದಿಗೋಳಿ

**ಕಿರುನೆಲ್ಲಿ ಗಿಡ** *Phyllanthus niruri* (Euphorbiaceae), ಸಂ. ಭೂತಧಾತ್ರಿ, ತ.ಕೀಳ್ಕಾಯ್ನೆಲ್ಲಿ, ತೆ.ನೆಲ ಉಸಿರಿಕ, ಮ.ಕೀಳಾನೆಲ್ಲಿ, ತು. ನೆಲನೆಲ್ಲಿ

**ಕಿರುಮಂಜಿ ಬಳ್ಳಿ,** ನೇಪಾಳದ ಬೇರು, ಆಡುಮುಟ್ಟದ ಗಿಡ, Country Ipecacuanha *tylphora asthmatica* (Asclepiadea), ಸಂ.ಮೂಲಿನೀ ತ.ನಲ್ಪಾನೈ, ತೆ.ಕುರಿಂಜ

**ಕಿರುಹಾಲೆ,** ಕಾಡಬಜ, ಗೋರ್ಕು ಮರ Indian Nettle Tree or charcoal tree *trema orientalis* (urticaceae), ಸಂ.ಜೀವಂತಿ, ತ.ಪೇಯಿಮುಂನೈ, ತೆ.ಮೊರಲಿ, ಮ.ಮಲ್ಲಂತೊದ್ದಲಿ

**ಕಿರಿಹೊನ್ನೆ,** ಬೊಬ್ಬಿಮರ poon tree *calophyllum wightainum* (guttiferae) ತು. ಶಿರಿಪೊನ್ನೆ ಮ. ಚೆರುಪನ್ನ

**ಕಿಸಂಗಿ,** ಹೆತುತ್ತಿ, ತುತ್ತೀ, ತುರುಬೀ ಗಿಡ country mallow *Abutilon indicum* (malvaceae), ತ. ಪಣಿಯಾರತುತ್ತಿ, ತೆ. ತುತ್ತುರುಬೆಂಡ, ಮ. ಕಾಟೂರಂ, ತು. ಉರ್ಕಿ

**ಕುಂಕುಮ** Saffron *crocus satinus* (Irideae), ಸಂ. ಭವರಕ್ತ, ತ. ಕುಂಕುಮಂ, ತೆ. ಕುಂಕುಮಮು, ಮ. ಕುಂಕುಮಂ

**ಕುಂಬಳಕಾಯಿ,** ಸಕ್ಕರೆ ಕುಂಬಳ, ಚೀನಿಕಾಯಿ ಬಳ್ಳಿ Squash gourd or common gourd *cucurbita maxima* (cucurbitaceae), ಸಂ. ಪುಣ್ಯಲತಾ, ತ.ಪೂಶಣಿ, ತೆ. ಕರ್ಬೂಜ ದೋಸ, ಮ. ಚಕ್ಕರಕುಂಪಳಙ, ತು.ಸೀಪೆಕುಂಬುಡ, ಕೊ. ಕುಂಬಳ

**ಕುಪ್ಪಿ ಗಿಡ** Indian Acalypha *Acalypha indica* (Euphorbiaceae) ಸಂ. ಅರಿಟ್ಟಮಂಜರಿ, ತ.ಕುಪ್ಪೈಮೇನಿ, ತೆ.ಕುಪ್ಪಿಚೆಟ್ಟು, ಮ. ಕುಪ್ಪಮೇನಿ, ತು. ಬಂಗಾರಕಾಯಿ

**ಕುರುವೇಲು ಬಳ್ಳಿ** Thick leaved lavender *Anisochilces carnosus* (Labiata), ಸಂ. ಅಜಪಾದ, ಇಂದುಪರ್ಗಿ, ತ. ಕರ್ಪೂರವಳ್ಳಿ ತೆ. ಕರ್ಪೂರವಳ್ಳಿ, ಕರವೇರು ತು. ಸಂಬಾರಬಳ್ಳಿ, ಮ. ಕರ್ಪೂರವಳ್ಳಿ ಕಾಟು ಕೂರ್ಕ, ಕೊಂ. ಸಾವಿರ ಸಂಬಾರ

**ಕುಶದರ್ಭ,** ದರ್ಭ, ದರ್ಬೆ ಹುಲ್ಲು Sacrificial grass *Eragrostis cynosuroides* (Gramineae), ಸಂ. ಕುಶ, ತು.ದರ್ಬೆಪಂತಿ, ಮ. ಅಟ್ಪ್‌ದರ್ಭ, ತೆ. ಕುಶದರ್ಭ

**ಕುಸುಂಬೆ,** ಕುಶಿಬಿಗಿಡ Bastard saffron or safflower *carthamus tinctorius* (compositae), ತ. ಚೆಂದುರುಕ್ಕು, ತೆ.ಕುಸುಂಬಾ, ಮ. ಕುಯುಂಪಪೂ

**ಕೂವೆ ಗಿಡ** East-Indian Arrowroot *curcuma angustifolia* (scitamineae), ಸಂ. ತವಕ್ ಶ್ರೀ ತ. ಅರ್ತಿಮಾವು, ತು. ಕೂವೆ

**ಕೆಂಪು ಕಣಗಿನ,** ಗಣಿಗಿಲತೋರ, ಹೊಳೆಕೌವ ಮರ *Barringtonia acutangula* (Myrtaceae), ತ.ರದಮಿ, ತೆ.ಕನಕಪುಚೆಟ್ಟು, ಮ.ಚೆರಿಯಸಂಸ್ಕರವಡಿ

**ಕೆಂಪು ಕುಂಟಾಲ ಗಿಡ** *Eugenia caryophyllaea* (M.vrtaceae), ತು. ಕುಂಟಾಲಪರಂದ್, ಮ. ಞೇರಲ್

**ಕೆಂಪು ಕೂವೆ,** ದೊಡ್ಡ ಕೂವೊ *curcuma leucorrhiza* (scitamineae) ಮ. ಮಂಞಕೂವ

**ಕೆಂಪು ಜಂಬುನೇರಲು** *Eugenia malaccensis* (Myrtaceae), ಸಂ.ಜಂಬು, ತ.ಜಂಬುನಾವಲ್, ತು. ಜಂಬುನೇರೊಳು, ಮ. ನಾಟ್ಟುಜಾಂಬಲ್

**ಕೆಂಪು ಬಸಳೆ** *Basella rubra* (chenop odiace), ತ.ತಿವಪ್ಪು ಬಚ್ಚಳೈ, ತೆ.ದುಂಪಬಚ್ಚಲಿ, ತು.ಕೆಂಪುಬಸಲೆ, ಮ.ಚುವನ್ನವಸಲ, ಕೊಂ.ತಾಂಬಡಿ ವಾಳಿ. ಕೊಂ.ಚೊಂದ ಬಸಳೆ

**ಕೆಂಪು ಮಂದಾರ,** ಶೆಯಾಡ್ಲ, ಕೆಂಪು ಕಂಚಿವಾಳದ ಮರ Purple bauhinia *Bauhinia uariegata* (Leguminosae), ಸಂ.ಕುದ್ದಾಲ, ತ.ಶೆಮ್ಮಂದಾರೈ, ತೆ.ದೇವಕಾಂಚನಮು, ಮ.ಚುವನ್ನಮಂದಾರಮ್

**ಕೆಂಪು ಮೆಣಸು** Spanish pepper chilli *Capsicm frnteseems* (solanuca), ಸಂ. ಮರಿಚಿಫಲಂ, ತ.ಮಿಳಗಾಯ್, ತೆ.ಮಿರಪಕಾಯಿ, ತು.ಪರಂಗಿಮಣ್ಣೆ, ಮ. ಉಪ್ಪೇರಿಪರಂಕಿ, ಕಪ್ಪಮುಳಕ್, ಪರೆಂಗಿಮುಟಕ್, ಕೊಂ. ಮಿರಸಾಂಗ, ಕೊ. ಬೊಂದಮೊಳ್ಳು

**ಕೆಂಪು ಹೂಲೀ,** ಸೂಲೀಗಿಡ *Breynia rhamnoides* (Euphorbiaceae), ತ. ಪವಳಪ್ಪೂಲಾ, ಮ.ಪಾವಲಪೂಲ

**ಕೇದಗೆ,** ಮುಂಡಿಗೆ, ಕೇತಕಿ, ಕೇದಿಗೆ Screw pine, caldera Bush *Pandanus fascicularis* (pandaneae), ಸಂ.ಕೇತಕೀ, ತ.ತಾಳಂಚೆಡಿ, ತೆ.ಗಾಜಂಗಿ, ಮ.ಕೈತ, ತು.ಕೇದಯಿ

**ಕನ್ನೈದಿಲೆ,** ಚೆನ್ನೈದಿಲು, ಕೋಳೆ, ಕೆಂದಾವರೆ Red-flowered water wly oregyptian lotus *Nymphaea lotus* (Nymphaeaceae), ಸಂ.ರಕ್ತಾನಿಲ, ತ.ಶೆವ್ವಲ್ಲಿ, ತೆ.ಎರ್ರಕಲುವ, ಮ.ರಕ್ತೊತ್ಪಲಮ್, ತು. ಕೆಂಪಲ್ಲಿ

**ಕೆನ್ನೆಗ್ಗಿಲು** (ಚೆನ್ನೆ)ಗಿಡ *Indigofera enneaphylla* (Leguminosae), ಸಂ. ವಸುಕಾ, ತ.ಆದಂಬೇದಿ, ತೆ.ಚೆರಗಡ್ಡಮು, ಮ.ಚೆರುಪುಳ್ಳಟೆ

**ಕೇಪಲ,** ಕೆವಲ, ಕಿಸ್ಗಾರ, ಮಾಲೇಹೂ ಗಿಡ Scarlet *Ixora Ixora cocainea* (Rubiaceae), ಸಂ. ಪಾತಲೀ, ತ.ಚೆತ್ತಿ, ಮ.ಚೆತ್ತಿ ತು.ಕೇಪುಲ

**ಕೇಸವೆ,** ಕೆಸು, ಸಾವೀಗಡ್ಡೆ Taro *colocasia antiquorum* (Aroideae) ಸಂ.ಕಾಚು ತ.ಶೀಮೈಕಿಳಜ್ಗ, ತೆ.ಚೀಮಗಡ್ಡ, ಮ.ಚೇಂಪ್, ತು.ತೇವು, ಕೊ.ಕೆಂಬು

**ಕೇಳ ಹೂ,** ಹೂದಿಂಗಣ Indian shot *canna indica* (scitamineae) ಸಂ.ಸರ್ವಜಯ, ತ.ಪೂವಾಳೈ, ತೆ.ಕೃಷ್ಣತಾಮರ, ಮ.ಕಾಟುವಾರ

**ಕೊಟ್ಟ,** ಕೊಡಚಿ, ಪಾರ್ಪುಲಿಗಿಡ *Zizyphus xylopyrus* (Ruamneae) ತ.ಕೊಟ್ಟೈಯಿಲಂದೈ, ತು.ಕೊಟ್ಟೆಮುಳ್ಳು, ಮ.ಚೋಟ್ಟ್‌ಕೊಟ್ಟ

**ಕೊಡಸಿಗ,** ಬೊದದರಗ, ಕಾಡಗರ್ಗರಿ ಗಿಡ *cleistanthus collinus* (Euhporbiaceae), ಸಂ. ನಂದಿವೃಕ್ಷಮ್, ತೆ.ಕಡಿಸೆಚೆಟ್ಟು, ಮ.ನೀಲಪ್ಪಾಲ

**ಕೊಡಸಿಗೆ ಗಿಡ** oval-leaued Rosebay *wrightia zeylanica* (Apocynaceae), ಸಂ.ವನತಿಕ್ತಾ ತ.ವೇಪ್ಪಾಲೈ, ತೆ.ಕೊಡಿಶಚೆಟ್ಟು, ಮ.ವೆಣ್ಪಾಲ, ತು,ಕೊಡಂಜಿ

**ಕೊತ್ತುಂಬರಿ** (ಕೊತ್ತಂಬರಿ) ಗಿಡ coriander *coriandrum sativum* (umbelliferae), ಸಂ. ಕಸ್ತುಂಬರಿ, ತ.ಕೊತ್ತುಮಲ್ಲಿ, ತೆ.ಕೊತಿಮಿರಿ, ಮ.ಕೊತ್ತಂಪಾಲರಿ, ತು.ಕೊತ್ತಂಬರಿ ಕೊ. ಸಂಬಾರ

**ಕೊರನಾರಿಗಡ್ಡೆ,** ಗೇಕಿನಗಡ್ಡೆ, ಅಬ್ಬಹುಲ್ಲು, ತುಂಗೆಹುಲ್ಲು, *cyperus rotundus* (cyperaceae) ಸಂ.ಮುಸ್ತ ತ.ಕೋರೈಕಿಳಜ್ಗು ತೆ.ತುಂಗಮಸ್ತಿ, ಮ.ಕರಿ ಮುತ್ತಜ, ತು.ತಾರಿಪಂತಿ

**ಕೊರಸಿಗಿನ ಗಿಡ** *Holarrhena antidysenterica* (Apocynaceae), ಸಂ.ಕುಡಜ, ತ.ವೆಪ್ಪಲೈ, ತೆ.ಕಾಕಕೊಡಿಸೆ, ಮ.ಕುದಜಂ

**ಕೊಳವಳಿಕೆ,** ಮಳ್ಳಂಕೋಲೆ, ಗೋರಿಮಿಡಿ, ನೀರುಪ್ಪಿಗಿಡ *Barleria longiflora* (Acanthaceae), ಸಂ.ಕೋಕಿಲಾಕ್ಷ, ತ.ನೀರ್ಮುಳ್ಳಿ, ತೆ.ನೀರುಗೊಟ್ಟಿ, ಮ.ವಯಲ್ಚುಳ್ಳಿ, ತು.ಕೋವೆಮುಳ್ಳುದೈ

**ಕೋಲುತಗಸಿ ಗಿಡ** Negro coffee *Cassia occidentalis* (leguminose), ಸಂ. ಕಾಸಮರ್ದ, ತ.ಪೇಯಾವಿರೈ, ಪೊನ್ನಾವಿರೈ, ತೆ.ಕಸಿಂದ, ಕಸಿವಿಂದ, ತು. ಆನೆತಜಂಕ್, ಮ.ಪೊನ್ನಾವೀರಮ್, ಕೊಂ.ಹೋಡುತ್ಯೆಕಿಳೂ

**ಕೋಳಿಕುಟಮ,** ನಾಂಗುಲಿಕ, ಶಿವಶಕ್ತಿ, ತೊಟಲ್, ಶಿವರತ್ತಿಬಳ್ಳಿ, ಕರಡಿಗಣ್ಣಿನಗಡ್ಡೆ, Gloriosa *Gloriosa superba* (Liliaceae), ಸಂ.ಲಾಂಗುಲಿಕಾ, ತ.ಕಾಂದಳ್, ತೆ. ಅಗ್ನಿಶಿಖ, ಮ.ಮೇತ್ತೋನ್ನಿ, ತು.ಬಲಿಪಪೂ

**ಗಂಟುಭಾರಂಗಿ** (ಬಾರೆಂಗಿ) ಗಿಡ *Clerodendrum serratum* (Verbenaceae), ಸಂ. ಅಂಗಾರ, ತ.ಶಿರುತೇಕ್ಕು, ಮ.ಚೆರುತೇಕ್ಕು, ತೆ.ಭಾರಂಗಿ

**ಗಂಡೀರ** Telinga potato *Amorphophallus campanulatus* (Aroideae), ತ.ಕರಣೈಪ್ಪಲಾ ತೆ.ಕಂದ ಮ.ಚೀನಪಾವ್ ತು.ಪರಿಂಕಿಗಡ್ಡೆ

**ಗಂಡುಕೇಪಳ,** ಬಂದಿಕ್ಸಾ ಗಿಡ *Memecylon amplexicaule* (Melastomaceae), ತು. ಒಳ್ಳೆಕೊಡಿ, ಮ.ನೆಚುಂಚೆತ್ತಿ

**ಗಂಡುಗಂಜಲಗಲಿಕೆ** Cuseus grass, *Andropogon muricatus* (Gramine) ಸಂ-ಉಶೀರ, ವೀರಣಮ್, ಬಹುಮೂಲಾ, ರಣಪ್ರಿಯಾ ತ. ವೆಟ್ಟಿವೇರ್, ಇರುವೇಲಿ, ಇಲಾಮಚೈ ತೆ. ಆಪುರುಗಡ್ಡ, ನೆಲದಮು, ಕುರುವೇರು, ವಟಿವೇರು ತು. ಮುಡ್ಯಲ, ಮ. ರಾಮಚ್ಚಮ್, ಕೊಂ-ಧಾಣಾವಳೋ

**ಗಂಡುಬಿದಿರು** Barspear or Male Bamboo *Dendrocalamus strictus* (Gramineae), ತು. ಪಂಜಿಬೆದರ್, ಮ.ಅರಿಂಕಂಟನ್

**ಗಂಧದ ಮರ** Sandle wood tree *Santalun albun* (Santalacese) ಸಂ. ಪಂಚಸುಗಂಧಾ, ದಾಹಸಿನಿ, ಅನಿಂದಿತಮ್, ತೈಲಪರ್ನಮ್, ತ. ಚಂದನಮರಮ್, ಉಲೋಚಿದಮ್, ಕುಲವುರಿ, ತೆ.ಗಂಧತರುವು, ಚಂದನಮು, ಮಲಯಮು, ಮ.ಚಂದನಮರಮ್, ತು.ಗಂದ, ಚಂದನ, ಕೊಂ. ಶ್ರೀಗಂದ, ಕೊ. ಚಾಂದ್‌ಮರ

**ಗಂಧಮೆಣಸು,** ಬಾಲಮೆಣಸು Cubebs *Piper cubeba* (piperaceae), ಸಂ.ಸುಗಂಧ ಮರಿಚಂ, ತ.ವಾಲ್ಮಿಳಗು, ತೆ.ಚಲವಮಿರಿಯಾಲು, ಮ.ಚೀನಮುಳಗ್, ಕೊ.ಪರಂಗಿಮೊಳು

**ಗಜ್ಜಿಗೆಕಾಯಿ,** ಗಜ್ಜೆಗ ಬಳ್ಳಿ Molucca Bean or nicker plant, Bonduc seed *caesalpinia bonducella* (Leguminosae), ಸಂ.ಕುಬೇರಾಕ್ಷಿ, ತ.ಕಳರ್ಕ್ಕೊಡಿ, ತೆ.ಗಚ್ಚ, ಮ.ಕಳಂಚಿ, ತು.ಗಜಿಗೆಕಾಯಿ

**ಗಣಜಿಲು,** ಕೊಮ್ಮೆ, ಕೆಂಚಿಗೆ *caesalpinia mimosoides* (Leguminosae), ಸಂ.ವೈಶಾಖಿಮಂಥ, ತು.ತೀಮುಳ್ಳು

**ಗರಗಸ,** ಗರ್ಗತ್ತೀ ಮರ Sandpaper tree *Ficus asperrima* (urticaceae), ಸಂ.ಖರಪತ್ರ, ತ.ತರಗತಿಮರಂ, ಮ.ಪಾರೋಮ್, ತು.ಪಾಜೇವು

**ಗರಿಕೇ,** ಕರಿಕೇ, ಅಂಬಟೇಹುಲ್ಲು Hariali or Doub Grass *cynodon dactylon* (Gramineae), ಸಂ.ದೂರ್ವಾ, ತ.ಅರುಗು, ತೆ.ಗರಿಕೆ, ಮ.ಕರುಕಪುಲ್ಲು, ತು.ಕದಿಕೆಪಂತಿ

**ಗರುಗ,** ಗರ್ಗ್ಗ, ಅಜಾಗರ, ಗರುಗಲು ಗಿಡ *Eclipta alba* (compositae), ಸಂ.ಭೃಂಗರಾಜ, ತ.ಕರಿಶಲಾಂಕಣ್ಣಿ, ತೆ.ಗುಂಟಗಲಿಜೇರು, ಮ.ಕಣ್ಣುಣ್ಣಿ

**ಗರುಡಪಾತಾಳ** The mengoose plant *ophiorrhiza mumgos* (Rubiace), ಸಂ. ಸರ್ಪಾರಿಸಿ, ಗರುಡಪುಟಿ, ಪಾತಾಳಬೇದಿ, ಸರ್ಪಕ್ಷಿ, ತ.ಕೀರಿಪ್ಪೂಣ್ಣು, ತೆ.ಸರ್ಪಾರಿಚೆಟ್ಟು, ತು.ಪಾತಾಳಗರಡೆ, ಮ.ಅವಿಲ್‌ಪೂರಿ, ಕೊಂ.ಗರ್ಡಪಾತಾಳಿ

**ಗರುಡಫಲ** *Hydnocarpus venenata* (Bixineae) ತ.ನೇರದಿ, ತೆ.ನಿರದಿ, ಮ.ಮರೋಟಿ, ತು.ಸೂರಂಟೆ

**ಗರ್ಗರಿ ಗಿಡ** *wedelia calendulacea* (compositae), ತ.ಪೊತ್ತಲೈಕೈಯಾಂದಗರೈ ಮ.ಪೈಕಯ್ಯನ್ನಿ

**ಗಾಳಿಮರ** Iron wood tree she oak, beel-wood of Australia, *casuorina equisetifolia* (casurainaceae), ತ.ಸವುಕ್ಕು, ತೆ.ಸರವು, ಮ.ಚೋಲಮಾರುಂ, ಕೊ.ಸಿಲೋರ್ ಮರ

**ಗಿಜಿಗಿಜಿ,** ಗಿಜಟೆ, ಗಿಲಿಗಿಜಿ, ತನ್ನೆಲೆವುಳುಕ ಗಿಡ *crotalaria verrucosa* (Leguminosae) ತ.ವೆಳ್ಳೈಕಿಲುಕಿಲುಪ್ಪೈ, ತು.ಗಿಜಿಗಿಜಿ ದೈ, ಮ.ಪೇತಂದಲ ಕೋಟೆ

**ಗುಗ್ಗುಳ ಮರ** *Boswellia glabra* (Burseraceae), ಸಂ. ಕೊಂಕಣಧೂಪವ್, ತ.ಕುಂದ್ರಿಕವ್, ತೆ.ಪರಂಗಿ ಸಾಂಬ್ರಾಣಿ, ಮ.ಕುಂತಿರಿಕ್ಕಮ್

**ಗುಡ್ಡದ ಗೋಣೀ,** ಕಲ್ಲುಮಾವಿನ ಮರ *Alangium hexapetalum* (cornaceae), ತ.ಕರುಪ್ಪು ಅಳಿಂಜಿಮರಮ್ ತೆ.ನಲ್ಲ ಊಸುಗ, ಮ.ಕರಂಗೋಲಮ್

**ಗುಡ್ಡರೆಂಜೆ,** ಬೀಗದಮರ *Elaeocarpus serratus* (Tiliaceae), ಸಂ.ಚಿರಿಬಿಲ್ವ, ಮ.ಆವಿಲ್, ತು.ರಾಹುಬೀಜ

**ಗುಲಗಂಜಿ,** ಗುರುಗುಂಜಿ, ಗುಲಗಂಜಿ, ಗುಲಿಗಂಜಿಬಳ್ಳಿ wild liquorice *Abrus brecatorius* (Leguminosae), ಸಂ.ತುಲಾಬೀಜಂ, ತ.ಕುನ್ರಿ, ತೆ.ಗುರಿಗಿಂಜ, ಮ.ಕುನ್ನಿ, ತು.ಗುರುಗೊಂಜಿ

**ಗುಲಾಬಿ ಗಿಡ** Rose *Rosa centifolia* (Rosaceae), ಸಂ.ಶತಪತ್ರಿ, ತ.ಗುಲಾಪ್ಪು, ತ.ರೋಜಾಪೂವು, ಮ.ಪನಿನೀರ್‌ಪು, ತು.ಗುಲಾಬು

**ಗುಲಿಡುಗಿಡ** *Gmelina asiatica* (verbenace), ಸಂ. ಗೋಪಭದ್ರಾ, ಲುಕಾರಿಣಿ, ತ.ನಿಲಕ್ಕುಮಿಳ್, ಅರುಚಾಲುರಾ, ಕೂಮಬಲ್, ಕಡಂಬಲ್, ತೆ.ಗುಮುಡು, ಮ.ಕುಮಿಲ್

**ಗುಳ್ಳ,** ಬಿಳೇಗುಳ್ಳಗಿಡ *Solanum ferox* (solanaceae), ತೆ.ಮೊಲಕ್ಕಾಯಿ, ತು.ಗುಳ್ಳಬದನೆ, ಮ.ವೆಳ್ಳೊಟ್‌ವಳುತಿನ

**ಗೆಣಸು** Yam

ಕುಂಟಗೆಣಸು common yam *dioscorea sativa* (Diseoreaceae)

ಮುಡಿಗೆಣಸು, ತೂನಗೆಣಸು, ದಂಡಾಲು Pondicherry potato, yam *Dioscoreaalta* (Dioscoreaceae), ತ.ಪೆರುವಳ್ಳಿ, ತೆ.ಪೆಂಡಲಮು, ಮ.ಕಾಟಿಲ್, ತು.ತೂನಕೆರೆಂಗ್,

ಮುಳ್ಳುಗೆಣಸು Goa potato *Dioscorea aculeata* (Dioscoreaceae), ತು. ಮುಳ್ಳುಕೆರೆಂಗ್, ಮ. ಮುಳ್ಳಂಕಿಳಜ್

ಹೆಬ್ಬು. ದುಪ್ಪಗೆಣಸು *Dioscorea atropurpurea* (Dioscoreaceae), ತು. ತುಪ್ಪೆಕೆರೆಂಗ್, ಕೊ. ಕಳಂಜಿ

**ಗೇರು,** ತುರುಕಗೇರು ಮರ Cashew Nut Tree *Anacardium occidentale* (Anacardiaceae), ಸಂ. ಶೋಫಹರಾ, ತ.ಮುಂದಿರಿಕ್ಕೈ, ತೆ.ಜೀದಿಮಾಮಿಡಿ, ಮ.ಕಪ್ಪಮಾವು, ತು.ಗೋಕುದ ಮರ, ಕೊ.ಗೇರ್

**ಗೇರ್ಕಾಯಿ,** ಕೇರ ಮರ Marking Nut tree *semecarbus Anacardium* (Anacardiaceae), ಸಂ. ಅಗ್ನಿಮುಖಿ, ತ.ಶಿಂಗೋಟ್ಟೈಮರಮ್, ತೆ.ಜೀಡಿಚೆಟ್ಟು, ಮ.ಚೇರ್‌ಮರ, ತು.ತೇರೆದ ಮರ

**ಗೋಡಂಬಿ,** ಗೇರುಬೀಜ Cashewnut *Anacardium occidentall* (Anacardiaceae), ತ. ಮುಂಡಿರಿ, ತೆ.ಜಿದಿಮಮಿದಿ, ಮ.ಕಸುಮದ್ರ, ಕೊಂ.ಗೇರ್‌ಬೀಜ

**ಗೋಣಿಮರ** *Salvadora persica* (salvadoraceae), ಸಂ.ಗೋಲಿ, ತ.ಉಗಾಯಿಪುಟ್ಟೈ, ತೆ.ವರಗೋಗು, ಮ.ಪೀಲುಮರಂ

**ಗೋಧಿ** Common wheat *Triticum vulgare* (gramineae) ಸಂ.ಗೋಧೂಮ, ತ.ಗೋದುಮ್ಮೈ, ತೆ.ಗೋಧುಮಲು, ಮ.ಕೋತಂಪಮ್, ತು.ಗೋದಿ

**ಗೋವ,** ಪೇರಳ, ಚೇಪೆಮರ Red Guaua *psidium guyaua* (myrtaceae), ಸಂ.ಪೇರಾಳ, ತ.ಕೊಯ್ಯಾಪಳಮ್, ತೆ.ಗೊಯ್ಯಾಪಂಡು, ಮ.ಮಲಂಪೇರ, ತು.ಪೇರಂಗಾಯಿ, ಕೊ.ಕಾಯಿ

**ಗೌಜುಮರ** Careya *Careya arborea* (Myrtaceae), ತೆ.ದುದಿಪ್ಪಿ, ತು.ದಡ್ಡಲ್, ಮ.ಪೀಲಮ್, ಪೇರ್, ಉಕಮರಮ್, ಆಲಮ್, ಕೊಂ.ಕುಂಬಿಯೊ

**ಚಂಡೇ,** ಹೊಂಡೇ, ವೊಂಡೇ ಮರ *Cerbera odollam* (Apocynaceae), ತ.ಕಾಟರಳಿ, ತು.ತೆಂಡೆಮರ, ಮ.ಉತಳಂ

**ಚಂದ್ರಕಾಂತಿ** Moon flower creeper *Ipomaea bona* (convolvulaceae), ತೆ.ನಗರಮಕ್ಕಟ್ಟೆ, ಮ.ಮಣ್ಣವಳ್ಳಿ

**ಚಕ್ಲಿ,** ಕೆರಕಪುಳ್ಳೇ, ಸೀಮೇಹುಣಸೆಮರ Manilla tamarind corkapuli *pithecolobium dulce* (Leguminosae), ತ.ಕೊಡುಕ್ಕಪುಳಿ, ತೆ.ಶೀಮಚಿಂತ, ಮ.ಕೊರ್ಕಾಪುಳಿ, ತು.ಚಕ್ಕುಲಿಮರ

**ಚಕೋತ,** ಸಕ್ಕರೆ ಕಂಚಿ, ತೋರಂಜಿ, ಸಕ್ಕರೆನಿಂಬೆ, ಸಕ್ಕೊತ್ತಿ ಮರ pompelmous pummelo or shaddock *citrus decumana* (Ruta ceae), ಸಂ.ಮಧುರಾಮ್ಲಫಲ, ತೆ.ಪಂಪರಪನಸ, ತು.ಚಕ್ಕೋತರ, ಮ.ಮಧುರನಾರಕಮ್, ಕೊ.ಚಕೋತ

**ಚದರಕಳ್ಳಿ,** ಬೊಂತೆಕಳ್ಳಿ, ಜೆಡೆಕಳ್ಳಿ ಗಿಡ Triangular spurge *Euphorbia antiquorum* (Euphorbiaceal), ಸಂ.ಸ್ನುಹಿ, ತ.ಚತುರಕಳ್ಳಿ, ತೆ.ಬೊಮ್ಮಜೆಮುಡು, ಮ.ಚತುರಕಳ್ಳಿ,ತು.ದಾರೇಕಳ್ಳಿ

**ಚಪ್ಪರದವರೆ,** ಗೋರಿಕಾಯಿ ಬಳ್ಳಿ, ಜವಳಿಬಳ್ಳಿ *Cyamposis psoralioides* (Leguminosae), ತ.ಕೂತವರೈ, ಮ.ಪಂತಲವರ, ತು.ದೊಂಪದಬರೆ, ಕೊ.ಚಪ್ಪರ್‌ತರ ಅವರೆ

**ಚಬಕುಮರ,** ಕೇಸರಿಕೆ, ಸರವಿನ, ಗಾಳಿಮರ Casuarina,

tinianpine beefwood tree *casuarina equisetifola* (casuarineae), ತ.ಶಿವಮರಮ್, ತು.ಚಬುಕುಮರ, ಮ.ಚಬೋಕು

**ಚಲಿಬೀಜ,** ಚಿತ್ತುಬೀಜ, ಚಿಲ್ಲಿಯಮರ clearing nut tree *stryehnos potatorum* (loganiaceae), ಸಂ.ಕತಕ, ತ.ತೆತ್ತಾಮರಮ್, ತೆ.ಚಿಲ್ಲಚೆಟ್ಟು, ಮ.ತೇಟ್ಟಾಮರಮ್

**ಚಾಗಿಡ** Tea shrub *camellia, theifera* (Ternstromiaceal), ಮ.ಚಾಯ

**ಜಲಮಲಿ,** ತುಪ್ಪಕೀರೆ Indian *aculypha Acalypha indica* (Euphorbiaceae), ತ.ಕುಪ್ಪಮಣಿ, ಮ. ಕುಪ್ಪಮಣಿ

**ಚಾಯಿ ಬೇರು,** ಚಿರಿವೇರು ಗಿಡ Indian Madder, Chay-root *oldenlandia umbellata* (Rubiaceal), ತ.ಚಾಯವೇರ್, ತೆ.ಚಿರಿವೇರ್, ಮ.ಚಾಯವೇರ್

**ಚಾಹುಲ್ಲು,** ಶುಂಠಿ, ಬೋದೆ, ಸಂಬಾರಹುಲ್ಲು Roussa grass, ginger grass, *Andropogon Martini* (Gramineae), ಸಂ. ಭೂಸ್ತೃಣ, ತ.ಶುಕ್ಕುನಾರಿಪ್ಪುಲ್

**ಚಿಟ್ಟಾವುಟ್ಟಿ,** ಅಂಟುತೊಗರಿಗಿಡ *pavonia zeylanica* (Maluaceal), ತ.ತಿತ್ತಾಮಟ್ಟಿ, ತೆ.ಚಿನ್ನಮುತ್ತವಪುಲಗಮ್

**ಚಿಟಿಪಾಲ ಮರ** Three-nerved zizyphus *zizyphus glabrata* (Rhamneae), ತ.ಕರುಕ್ಕುವಾಳಿ, ತೆ.ಕಾಕುಪಾಲ

**ಚಿತ್ರಮೂಲ**

a. ಕೆಂಪುಚಿತ್ರಮೂಲ Rose-coloured leadwort *plumbago rosea* (plumbagineae), ಸಂ.ಚಿತ್ರವಿಲ್ಲ, ತ.ಚಿತ್ತಿರಮೂಲಮ್, ತೆ.ವಿರ್ರಚಿತ್ರಮೂಲಮು, ಮ.ಚೆಕ್ಕಿಕೊಟುವೇರಿ, ತು.ಕೆಂಪುಚಿತ್ರಮೂಲ,

b. ಬಿಳೀಚಿತ್ರಮೂಲ ceylon leadwort *plumbago zeylanica* (plumbagineae) ತ.ಕೊಡಿವೇಲಿ, ತೆ.ಅಗ್ನಿಮಾತ, ಮ.ತುಂಪಕೊಟುವೇಲಿ, ತು.ಬೊಲ್ದು ಚಿತ್ರಮೂಲ

**ಚಿರ್ರ್ಯಾತ,** ಕಿರಿಯಾತು ಗಿಡ Chiretta, gentian *swertia chirata* (Gentianaceae), ಸಂ.ಕಿರಾತನಾಮಾ, ತ.ಚಿರಾಯತು, ತೆ.ನೆಲವೇವು, ಮ.ಕಿರಿಯಾತ್ತ್, ತು.ಕಿರಿಯಾತ್

**ಚೀಲದ ಮರ** Elephant or wood apple *Feronia elephantum* (Rutacea), ಸಂ.ಕಪಿತ್ಥ, ಗೋಪಕರ್ಣ, ಫಲಸುಗಂಧಿ ಸಂಗ್ರಾಹಿ, ತ.ವಿಳಾಮರಮ್, ವಿಳಾಕಪಿತ್ತಮ್, ವೆಳ್ಳಿಲ್, ತೆ.ವೆಲಗ, ಕಪಿತ್ಥಮ, ಮ. ವಿಳಾವ್ ಕೊಂ. ಚೆಲಪತ್ರಿ ಫಲ

**ಚೆಂಬುಳಕಾಯಿ ಮರ** Red cedar or Bastard sanda *Erylhroxylon monogyuum* (linea), ತೆ. ಅಡವಿಗೋರಂಟ, ತು.ದೇವದಾರಂ, ಮ.ಚುವನ್ನ ಅಗಿಲ್ ದೇವದಾರು

**ಚೆನ್ನಿಮರ** Birch-leaved Acalypha *Acalypha fruticosa* (Euphoriba ceae), ತ.ಚಿನ್ನಿ, ತೆ.ಚಿನ್ನಾಕು

**ಚೇಳುಕೊಂಡಿ,** ಆನೆಕಿವಿ, ಗಜಕರ್ಣ Common maiden hair fern *Adiantum caudatum* (Filices), ಮ. ಮೋದಿರಕ್ಕಣ್ಣಿಪಚ್ಚ

**ಚೇಳುಬಾಲದ ಗಿಡ,** ಚೇಳುಕೊಂಡಿ, ಚೇಳುಮಣಿಗಿಡ Indian Turnsole *Heliotropium indicum* (Boragineae), ಸಂ.ಭೂವೃಶ್ಚಿತಾಳ ತ.ನಕ್ಕಿಪ್ಪೂ, ತೆ.ಗುರುಗು, ತು.ಚೇಲಕಡೆ, ಮ.ವೇನಪಟ

**ಜಂಬುನೇರಳೆ ಮರ** Rose apple *Eugenia jambos* (Myrtaceae), ತು. ಜಂಬುನೇರೊಳು, ಮ.ಪನಿನೀರ್‌ಜಾಂಬು

**ಜವೆಗೋದಿ,** ಯವ Barley *Hordeum sulgare* (Gramineae), ಸಂ.ಯವ, ತೆ.ಯವಲು

**ಜಾಜಿಕಾಯಿಮರ** Nutmeg tree *Myristica fragrans* (Myristiceae), ಸಂ. ಘಟಸ್ಥ, ತ.ಜಾದಿಕಾಯ್, ತೆ.ಜಾಜಿಕಾಯಿ, ಮ.ಜಾತಿಕಾ, ತು.ಜಾಜಿಕಾಯ

**ಜಾಜಿಮಲ್ಲಿಗೆ,** ಆನೆಮಲ್ಲಿಗೆ *Spanish jasmin* (Jasminum granditlorum (oleaceae), ಸಂ.ಜಾತಿ, ಮ.ಪಿಚ್ಚಕಮ್, ತು.ಜಾಜಿಪೂ

**ಜಾಪಾಳದ,** ನೇಪಾಳದ, ನೇರ್ವಾಳದ ಗಿಡ croton oil plant *croton tiglium* (Euphorbiaceae), ಸಂ.ನೇಪಾಳ, ತ.ನೇರ್ವಾಳಮ್, ತೆ.ನೇಪಾಳವೇಮ, ಮ.ನೀರ್ವಾಳಮ್, ತು.ಬ್ಯಾರಿಬಿತ್ತ್

**ಜಾಮಫಲದ ಮರ,** ಪೇರ್ಲಮರ White guava *psidium guyava* (Myrtaceae), ತ.ಕೊಯ್ಯಾಮರಮ್, ತೆ.ಜಾಮಚೆಟ್ಟು, ಮ.ಪೇರ, ತು.ಪೇರಂಗಾಯಿಮರ

**ಜಾರಿಗೆಹುಳಿ,** ಕಣ್ಮುಟಿಗ, ದೇವನಹುಳಿ, ಅರಸಿನಗುರ್ಗಿಮರ Mysore Gamboge tree *Garcinia morella* (Guttiferae), ತ.ಮುಕ್ಕಿ, ಮ.ಚಿಗಿರಿ,ತು.ಜಾರಿಗೆಪುಳಿ

**ಜಿಮ್ಮಿ ಮರ** *Zanthoxylum rhetsa* (Rutaceae), ಮ.ಮುಳ್ಳಿಲು, ತು.ಕಾವಟೆಮರ

**ಜೀರಿಗೆ** Cummin seed *cuminum cyminum* (umbelliferae), ಸಂ.ಜಿರಣಾ, ತ.ಚೀರಕಮ್, ತೆ.ಜೀಲಕರ್ರ, ಮ.ಜೀರಕಮ್, ತು.ಜೀರ್ದರಿ

**ತಗಚೆ,** ತಗರ್ಚಿ, ಗಂಡುತಗಸಿ, ತಗರಿಸ್ಸನ ಗಿಡ Foetid cassia *cassia tora* (Leguminosae), ಸಂ.ತಗಾ, ತ.ತಗರೈ ತೆ.ತಗಿರಸ, ಮ.ತಕರ, ತು.ತಜಂಕ್

**ತಗ್ಗಿಗಿಡ** *clerodendron phlomoides* (verbenaceae), ಸಂ.ಜಯಾರಿಣಿ, ತ.ತಳುದಾಳೈ, ತೆ.ತಲೂಕಿ, ಮ.ತಿರುತಾಳಿ

**ತದಗಣಿ,** ಅಲಸಂದಿಬಳ್ಳಿ Alasandi Bean *Vigna catiang* (Leguminosae), ಸಂ.ಚಪಲ, ತ.ಕಾರಾಮಣಿ, ತೆ.ದಂಟುಪೆಸಲು, ಮ.ಕೋಟ್ಟಪಯರ್, ತು.ಲತ್ತನೆ, ಕೊ.ತಡ್‌ಗಣಿ

**ತಮಟೇಬಳ್ಳಿ** Sword bean, *canavalia Ensiformis* (Leguminos), ತ.ಕೋಳಿಯವರೈ, ಮ.ವಾಳವರತ

**ತರಿ,** ತಾರಿ, ಶಾಂತಿಮರ Beleric myrobalan *Terminalia belerica* (combretaceae), ಸಂ.ಅಕ್ಷವೃಕ್ಷ, ತ.ಅಕ್ಕನ್ದಮ್, ತೆ.ತಾಡಿ,

ಮ.ತಾನ್ನಿ, ತು.ದಾಂದಿಮರ

**ತಾಳಿಮರ,** ಕರತಾಳೆ, ಪನಿ Palmyra palm, Brab tree *Borassus flabelliformis* (palmeae), ಸಂ.ತಾಲ, ತ.ಪನೈಮರಮ್, ತೆ.ತಾಟಿ, ಮ.ತಾಲಮ್, ತು.ತಾರಿ

**ತಾಳಿಸಪತ್ರೆ,** ಗೊರಜಿ, ಚರಿಚಲಿ, ಚಂಚಲಿ ಮರ *Flacourtia cataphracta* (Bixineae), ಸಂ.ತಾಳಿಸಪತ್ರಂ, ತ.ತಾಳಿಶಪತ್ತಿರಿ, ತೆ.ತಾಳೀಸಪತ್ರಿ, ಮ.ತಾಳೀಸಪತ್ರಂ, ತು.ಕೊರಜಿ

**ತಿಗಡೆಬಳ್ಳಿ,** ಆಲ್ತಿಗುಡು, ದೇವದಂತಿ, ಬಿಳಿ ನಾಗದಂತಿ Indian Jalap *Ipomaea Turpethum* (convolvulaceae), ಸಂ.ನಂದಿ, ತ.ಚಿವದೈ, ತೆ.ತೆಗಡ, ಮ.ತಿಗಡೆ, ತು.ತಿಗಡಿ

**ತಿರುವ,** ಜಂಬೆ, ಈರುಳ್, ಹೊನ್ನಾವರಿಕೆ, ಬೆಟ್ಟದಾವರಿಕೆ ಮರ Iron wood *Xylia dolabriformis* (Leguminosae), ತ.ಇರುಳ್ ತೆ.ಕೊಂಡ, ಮ.ಇರುಳ್

**ತುಂಬೆ,** ಕರ್ಜಾಲಿ ಗಿಡ Tumbe *Leucas linifolia* (Labiatae), ಸಂ.ರುದ್ರಪುಷ್ಪ, ತ.ತುಂಬೈ, ತು.ತುಂಬೆ, ಮ.ತುಂಪ

**ತುರಚಿ ಬಳ್ಳಿ** Nettle *Tragia, involucrate* (Euphorbiacca), ಸಂ.ಕಂಚುರಾ, ಸಮುದ್ರಾಂತಾ, ದುರಾಲಭಾ, ಪೀತಪರ್ಣೀ, ತ.ಕಾಯಂಚೊರಿ, ಶಿಂದೊಟ್ಟಿ, ಕಣ್ಣೇಡಿ, ತೆ.ದೂಲಗೊಂಡಿ, ತೇಲುಮಣಿಚೆಟ್ಟು, ತು.ಪಚ್ಚೆರಂಗಿ, ತುನುಸ, ತುನುಸೆ. ಮ.ಕೊಟತ್ತೂವ, ಚೊರಿಜಣಮ್, ಕೊಂ. ಖಾಜ್ರಕುಲ್ಲಿ

**ತುರಿಕೆ,** ತುರಿಸೆಕೆ ಗಿಡ Nilgiri nettle *Urtica parviflora* (urticaceae), ಮ. ಆನಚೊರಿಯಣಮ್, ತು.ಆಕಿರೆ

**ತುರುಕಬೇವು,** ಹುಚ್ಚುಬೇವು, ಅರೆಬೇವು, ಗರುಡಬೇವು common Bead Tree *Melia Azedarach* (Meliaciae), ತ. ಶಿಕರಿನಿಂಬಮ್, ತೆ.ತುರುಕವೇಪ, ಮ.ಮಲೈವೇಂಬು

**ತೆಂಗು,** ತೆಂಗಿನಮರ cocounut palm *Cocos nucifera* (palmeae), ಸಂ.ತೃಣರಾಜ, ತ.ತೆನ್ನಮರಮ್, ತೆ.ಚೆಂಕಾಯಿಚೆಟ್ಟು, ಮ.ತೇಙ, ತು.ತಾರೆ

**ತೇಗ,** ತೇಗಿನ ಮರ, ಸಾಗುವಾನಿ, ಸಾಗೋನಿಮರ Teak tree *Tectona grandis* (verbenaceae), ಸಂ.ತೇಕವೃಕ್ಷ, ತ.ತೇಕ್ಕುಮರಮ್, ತೆ.ಟೇಕು, ಮ.ತೇಕ್ಕ್, ತು.ತೆಕ್ಕಿ

**ತೊಂಡೆ,** ಕೊಂಡೆ ಬಳ್ಳಿ Kayidonda *Cephalandra indica* (cucurbitaceae), ಸಂ.ಕದಳಾ, ತ.ಕೋವೈ, ತೆ.ದೊಂಡತೀಗ, ಮ.ಕೋವ, ತು.ಮಣೋಲಿ

**ತೊಗರಿ,** ಕರಿಉದ್ದು, ತುರುಕುತೊಗರಿ ಗಿಡ Pigeon pea or dholl *Cajanus indicus* (Leguminosae), ಸಂ.ಆಢಕಿ, ತ.ಅಡಗಿ, ತೆ.ಕಂದುಲು, ಮ.ಆಢಕಿ, ತು.ತೊಗರಿ

**ತೊಟ್ಲ ಗಿಡ** *Jatropha glandulifera* (Euphorbiaceae), ತ.ಎಲಿಯಾಮಣಕ್ಕ್, ಮ.ಕಡಲಾಮಣಕ್ಕ್

**ದಂಟುಸೊಪ್ಪು** country green *Amarantus gangelicus* (Amarantacea), ಸಂ. ಅರಿಕಿಸಿರ, ತೆ.ತೋಟಕೂರ, ತೆ.ಪದ್ದೆ,ದೊಗ್ಗೊಲಿಪದ್ದೆ, ಕೊಂ.ಬಾಜ್ಜಿ

**ದತ್ತೂರ,** ದತ್ತೂರಿ, ಉನ್ಮತ್ತ, ಉಮ್ಮತ್ತ, ಉಂಬತ್ತ, ಮದ್ದುಗುಣಿಕೆ ಗಿಡ

a) ಬಿಳೀದತ್ತೂರ white stramony or thorn apple *Datura stramonium* (solanaceae), ಸಂ.ಧತ್ತೂರ, ತ.ಊಮತ್ತೈ, ತೆ.ಉಮ್ಮೆತ್ತಚೆಟ್ಟು, ಮ.ಉಮ್ಮತ್ತಮ್, ತು.ಉಂಬೆ

b) ಕರಿ ಉಮ್ಮತ್ತಗಿಡ purple stramony or thorn apple *Datura fastuosa* (solanaceae) ಸಂ.ಕನಕ, ತ.ಕರುವೂಮತ್ತೈ, ತೆ.ನಲ್ಲಉಮ್ಮೆತ್ತ, ಮ.ಕರಿಉಮ್ಮತ್ತಮ್, ತು.ಕರಿಉಂಟೆ

**ದತ್ತೂರಿಗಿಡ,** ಅರಸಿನ ಉಮ್ಮತ್ತ, ಗೊಳಗೊಳಿಕೆ yellow thistle or mexican poppy *Argemone mexicana* (papaveraceae), ಸಂ. ಬ್ರಹ್ಮದಂಡಿ, ತ.ಕುಡಿಯೋಟ್ಟೆ, ತೆ.ಬ್ರಹ್ಮದಂಡಿ, ಮ.ಪೊನ್ನುಮ್ಮತ್ತಂ

**ದಾರೆಹುಳಿ ಮರ** carambola tree *Averrhoa carambola* (Geraniaceoe) ಸಂ.ಕರ್ಮರಂಗ, ತ.ತಮರತ್ತೈ, ಚಗಡಮ್, ತೆ.ತಮರತಮು, ತು.ದಾರೆಪುಳಿ, ಮ.ತಮರತ್ತ, ಚತುರಪುಳಿ, ಕೊಂ.ಕರ್ಂಬಲ

**ದಾಲ್ಚಿನ್ನಿ** Cinnamon *Cinnamomum zeylanicum* (laurinea), ಸಂ.ತಮಾಲಪತ್ರ, ದಾರುಗಂಧ, ಸುಗಂಧಿತ್ವಚ, ವಸನಮ್, ತ.ಲವಂಗಪಟ್ಟೈ, ಕರುವಾಪಟ್ಟೈ, ತೆ.ಲವಂಗಪಟ್ಟ, ತು.ಇಜಿನ್, ಮ.ಇಲವಂಙಪಟ್ಟ, ವರನ, ಕರುವ, ಕೊಂ.ದಾಲ್ಚಿನ್ನಿ, ಟಿಕ್ಕೆ

**ದಾಸವಾಳ ಗಿಡ** China rose or shoe flower *Hibiscus Rosa sinensis* (malvacea), ಸಂ.ಜಪ, ರುದ್ರಪುಷ್ಪ, ತ.ಶೆಂಬರತ್ತೈ, ಆರತ್ತಮ್, ತೆ.ದಾಸನಚೆಟ್ಟು, ಚೆಮಬರತ್ತಮು, ಜಪಾ, ತು.ದಾಸನ್‌ಪೂ, ಮ.ಚೆಂಪರತ್ತಿ, ಕೊಂ.ದಸಣೆಪೂಲ

**ದಾಳಿಂಬೆಮರ** pomegranate tree *Punica granatum* (Lylhracca), ಸಂ.ಕರಕ, ದಾಡಿಮ, ತ.ಮಾದಳೈ, ತುಚಗಮ್, ತೆ.ದಾಡಿಮಮು, ದಾನಿಮ್ಮ, ದಾಳಿಂಬ, ತು.ದಾಲಿಂಬ, ಮ.ಉರುಯಾಂಪಟಮ್, ತಾಳಿಮಾದಳಮ್, ಕೊಂ.ದಾಳಿಂಬ

**ದೀವಿಹಲಸು ಮರ** Bread fruit tree *Artocarpus incisa* (urticacea), ತು.ದೀವುದ ಗುಜ್ಜೆ, ಮ.ವಿಲಾತಿಪಿಲಾವು, ದ್ವೀಪುಪಿಲಾವು, ಕೊಂ.ದೀವಿಕಡಿಗಿ

**ದೊಡ್ಡನೆಕ್ಕರೆ** Indian Rhododendron *Melastoma malabalhricum* (melaslomacea), ತು.ನೆಕ್ಕರೆ, ಮ.ಕಡಳಿ, ಕೊಂ. ನಾಂಕೇರಿ

**ದೊಡ್ಡಮರದರಿಸಿನ** Tree turmeric *Coscimium Feneetralum* (menispermacea), ತು.ಮರಮಂಜಲ್, ತೆ.ಮಾನುಪಸುವು, ಮ.ಮರಮಂಞಳ್

**ಧೂಪದ ಮರ** White dammor or Indian copal tree *Vateria india* (Diplerocarpeae) ತ.ವೆಳ್ಳೈಕುಂನ್ರಿಕಮ್,

ತೆ.ತೆಲ್ಲದಾಮರಮು, ತು.ತಂದೊಳಿಗೆ, ಮ.ಪಯನ್ನುಮರಮ್, ಕೊಂ.ಧುಂಪಾರೂಕು

**ಧನಿಯ,** ಹವೀಜ, ಕೊತ್ತಂಬರಿ ಬೀಜ Coriander seeds *Coriandrum sativum* (Apiaceae), ತ.ಕೊಟ್ಟಾಮಲ್ಲಿ, ತೆ.ದನಿಯಾಲು, ಮ.ಕೊಟ್ಟಾಮಲ್ಲಿ, ಕೊ.ಸಂಬಾರ

**ನಂದಿಮರ** *Lagerstroemia lanceolata* (Lythracese) ತ.ತೆ.ಮ. ವೆಂತೇಕ್ಕು

**ನವಣೆ ಅಕ್ಕಿ** Italian millet *Setoria italica* (Gramineae) ಸಂ.ಕಂಕುಶ್ಯಾಮಾ, ತ.ತಿನ್ನೆ, ತೆ.ಕೊರ್ರಲು, ಮ.ತಿನ, ಕೊಂ.ವರಯಿ

**ನಾಗವಲ್ಲಿಗೆ** *Rhinacanthces cammunis* (Acanthaceae), ಸಂ.ಯಥಿಕಪೂರ್ಣಿ, ತ.ನಾಗಮಲ್ಲಿ, ಉರಗಮಲ್ಲಿ, ತೆ.ನಾಗಮಲ್ಲಿ, ಮ.ಪುರುಕೊಲ್ಲಿ

**ನಾಗಸಂಪಿಗೆ** *Mesua ferraea* (Guttiferae), ಸಂ.ಕೇಶರಮ್, ನಾಗಪುಷ್ಪ, ನಾಗಮ್, ತ.ನಾಗೇಶುರಮ್, ವೆಳುತ್ತಚಂಪಕಮ್, ನಾಗಪೂ, ತೆ.ನಾಗಕೇಸರಮು, ತು.ನಾಗಸಂಪೈ, ಕೇಶರ, ಮ.ನಾಗಚಂಪಕಮ್, ಕೊಂ.ನಾಗಚಾಂಪೆ

**ನಾಯಿತುಳಸಿ,** ಊರಾಳಗಿಡ Ageratum *Ageratum conyzoides* (compositae), ಮ.ಅಪ್ಪ

**ನಾರಂಬೇಳೆ ಸೊಪ್ಪು** Gynandropsis *Pentaphylla* (capparide), ತ.ವೇಳೈ, ತೆ.ವಾಮಿಂಟ ಅಜಗಂಧಿ, ಮ.ಕಾರ್ವೇಳ, ನಲ್ಲವೇಳ, ಪಾವಕ್ಕ, ಕೊಂ.ಶಿರ್ಕಾಳ

**ನಾರುಂಬೆಳೆ** *Crateena religiosa* (copparideae), ಸಂ.ಪಶುಗಂಧಾ, ಆಜಾಪಾ, ಶ್ವಸಹಾ, ವರುಣ, ತ.ಮಾವಲಿಂಗು, ಆದಿಚಾರಣಮ್, ತು.ತುದೆನೆಕ್ಕಿ, ಮ.ನೀರ್ವಾಲ್

**ನಾಯಿತುಳಸಿ** *Ocimum comum* (Labiatae) ಸಂ.ಆಜಕ, ಗಂಭೀರಮ್, ಗಂಧಪಣಿರ್ಜ್ಜಕ, ತ.ಗಂಜಾಪ್ಪೋರೈ, ತೆ.ಕುಕ್ಕತುಳಸಿ, ತು.ನಾಯಿತೊಳಚಿ, ಮ.ಕಾವ್ಪ್ವರಾಮತುಳಸಿ, ಕೊಂ. ರಾಮತುಳಸಿ

**ನಾಯಿನೇರಳೆ** Iambul, Black plum *Eugenia jambolana* (Myrtacea), ಸಂ.ಬೃಹಸ್ಪತಿ, ಜಾಂಬಮ್,ತ.ನಾವಲ್, ತೆ.ನೇರೇಡು, ತು.ನೇರೊಲ್, ಮ.ನಾವಲ್, ಕಿವಿಕ್ಕನ್‌ತೋರಲ್

**ನಿಂಬೆ** sour lime, Acid lime, Lime *Citrus aurantifolia* (Rutaceae), ತ.ಎಲಿಮಿಚಿಯಂ, ತೆ.ನಿಮ್ಮಪಂದು, ಮ.ಕಗದಿ, ಕೊ.ಚೋರಾಂಗ್ಯ, ಚೋರಂಗೆ

**ನೀರ್ಲಕ್ಕಿ** Three-leaned chaste tree *Vitex irifolia* (verbenancou), ಸಂ.ನೀಲನಿರ್ಗುಂಡಿ, ಕೃಷ್ಣನಿರ್ಗುಂಡಿ, ತ.ನೀರ್ನೊಚ್ಚಿ, ತೆ.ನೀಲವಾದಿಲಿ, ತು.ಕರಿನೆಕ್ಕಿ,ಮ.ಕರುನೊಚ್ಚಿ, ಕೊಂ.ಕಾಳೂನಿಗುಂಡು

**ನುಗ್ಗೆಮರ** Drumstick or horse radish tree *Moringa pterzgo sperm* (moringae), ಸಂ.ಸನಾಮಕ, ಮೋಚಕ, ಹರಿತಪತ್ರ, ದ್ವಿತಿಗ್ರು, ತ.ಮುರುಂಗೈ, ಊಗಡನ್, ಚಳಿಗೈ, ಕರುಂಜನಮ್, ತೆ.ಮುನಗ, ಮೋಚಕಮು, ತು.ನುರ್ಗೆ, ಮ.ಮುರಿಜಾ, ಕೊಂ.ಮತಿಂಗು

**ನೆಗ್ಗಿಲುಮುಳ್ಳು** small caltrops, *Tribulus, tribulus* lerrostris (zygobhylleae), ಸಂ.ಆಕುರಾ, ವನಶೃಂಗಾಟ, ಸೂರ್ಯವರ್ಕ್ಕ, ತ.ನೆರುಂಜಲ್, ಅಚ್ಚುರಮ್, ತಿರಿಕಂಟಕಮ್, ತೆ.ನಲ್ಲೇರು, ತು.ನೇಗಿಲ್‌ಮುಳ್ಳು, ಮ.ನೆರಿಞಿಲ್, ಸೊಂ.ನೆಗಲ್ಮುಳ್ಳು

**ನೆಲಕಡಲೆ** Ground nut, manilla nut *Arachis hypogcace* (Leguminose), ಸಂ.ಬುಚಾನಕ, ತ.ವೇರ್ಕಡಲೈ, ತೆ.ವೇರುಶನಗಲು, ತು.ನೆಲಕಡಲೆ, ಮ.ನೆಲಕಡಲಕ್, ಕೊಂ.ನೆಲಗಡ್ಲೆ

**ನೆಲತಾಳೆ** *Curculigo orchioides* (Amaryllidea), ಸಂ. ಭೂಮಿತಾಳ, ಭೂತ, ಬಹುಲವಲ್ಕಲ, ತನಿಲಪ್ಪನೈ, ತಿರುಕತ್ತಾರು, ತಲತ್ತಾದು, ತೆ.ನೇಲತಾಡಿಚೆಟ್ಟು, ಮುಸಲಿ, ತು.ನೆಲಮುಂದ, ಮ.ನಿಲಪ್ಪನ, ಕೊಂ.ಭುಂಯಿಮಾಡ್ಡಿ

**ನೆಲಕುಂಬಳ** *Ipomaea digitata* (convolvulacae), ಸಂ.ವೃಷ್ಯವಲ್ಲಿ, ಕ್ಷೀರಕಂದಾ, ಶ್ರೇಷ್ಮಕಂದಾ, ವಿರಾರಿ, ತ.ಫಲೋದ್ಮಿ, ತೆ.ನೇಲಗುಮ್ಮುಡು ಭೂಚಕ್ರಗಡ್ಡ, ತು.ನೆಲಕುಂಬುಡ, ಮ.ಮೊತಲ್ಕಂಟ, ಕೊಂ.ಭುಂಯ್ಯಕ್ವಾಳೆ

**ನೆಲತಾವರೆ** Habenaria *Habenoria rotundifolia* (orchidea), ಮ. ಓರಿಲ

**ನೆಲದ ನೆಲ್ಲಿ,** ಕಿರುನೆಲ್ಲಿ *Phyllanthus maderaspatensis* (Euphorbiaceae), ತ.ನಿಲನೆಲ್ಲಿ, ತೆ.ನೀಲ ಉಸಿರಿಕ, ಮ.ಕೀರ್ಟಾನೆಲ್ಲಿ, ತು.ನೆಲನೆಲ್ಲಿ

**ನೆಲಬೇವು** *Andrographis paniculata* (Acanthacea), ಸಂ.ಕುನಿಂಬ, ಮಹಾತೀತ, ನಾರ್ಯತಿಕ್ತ, ತ.ನಿಲವೇಂಬು, ವೇರ್‌ಕಿರಿಯಾತ್ತು, ತು.ಕಿರ್ಯಾತಂ, ಮ.ಕಿರಿಯಾತು, ನಿಲವೇಪು, ಕೊಂ.ಕಿರಾತು

**ನೆಲಸಂಪಿಗೆ** Indian croces *Kamp feria rotunda* (Scitaminea), ಸಂ.ಭೂಯಿಚಂಪಕ, ತ.ನೇಪ್ಪಿರ್ಚಿನ್, ತೆ.ಭೂಚಂಪಕಮು, ಮ.ಚೆಂಚಿನೀರ್‌ಕಿವಿಜ್, ಕೊಂ.ಭುಯಿಂಚಾಂಪೆ

**ನೆಲಹಿಪ್ಪಲಿ** *Lippta nodiflora* (verbenacea), ತ.ಪೊಡುದಳೈ, ತಲೈಬೋಡಂ, ತೆ.ಬೊಕ್ಕೆನ, ಮ.ಕಾಟ್ಟುತಿಪ್ಪಲಿ

**ನೆಲಾವರೆ** Tinnevelly senna *Cassia angustifolia* (leguminose), ಸಂ.ಭೂಪದ್ಮ, ಭೂಮಿಹಾರಿ, ಸ್ಥಲೋತ್ಪಲ, ತ.ನಿಲಾವಿರೈ, ನಿಲಾವಗೈ, ತೆ.ನೇಲಪೊನ್ನ, ಮ.ನಿಲವಾಕ, ಕೊಂ.ಸೋನಾಮಕ್ಕಿ

**ನೆಲ್ಲಿ** Goosebery tree awla tree, Emblic myrobalan *Phyllanthes Emblica* (Euphorbiac), ಸಂ.ಧಾತ್ರಿ, ಆಮ್ರಫಲಂ, ಅದಿಫಲ, ಆಮಾಮಲಕಂ, ತ.ನೆಲ್ಲಿಮರಮ್, ಆಮಲಕಮ್, ತಾತಿರಿ, ತೆ.ಉಸಿರಿಕ, ತ್ರಿಫಲಮು, ನೆಲ್ಲಿ, ಆಮುಲಕಮು, ತು.ನೆಲ್ಲಿ, ಮ.ಆಮಲಕಮ್, ನೆಲ್ಲಿ, ಕೊಂ. ಆವಾಳೊ

**ನೆರೊಳೆ** *Vitex altissiam* (verbenace), ತ.ವೈಲಾದಿ, ತೆ.ನೆವಾಲ್ಯದೊಗ, ತು.ಮೈರೊಳೆ, ಮ.ಮೈಲ್ಲಾಲು, ಮೈಲಾದಿ

**ನೇಮಿಮರ** *Mimusop kauki* (sapotrcea), ಸಂ.ವಸಂತದೂತಿ, ತಾಳಿವೃಂತ, ತ.ಪಾಲೈ, ಮ.ಮಣಿಲಕಾರ

**ನೈದಿಲೆ,** water lily *Nymphaea stellata* (Nympheace), ಸಂ.ಸೀತೋತ್ಪಲ, ತ.ವೆಳ್ಳಾಂಬಲ್, ಇಂದಿರವಾಡಂ, ತೆ.ಅಲ್ಲಿಕಾಡ, ತು.ಅಲ್ಲಿದಪೂ, ಮ.ವೆಳ್ಳನ್ಬಲ್, ನೀರಾಂಪಲ್, ಕೊಂ.ಧವೆಸಾಳಕ

**ಪಗಡೆ ಮರ** Mimusops *Mimesops elengi* (sapo tace), ಸಂ. ಬಕುಳವಮ್, ಸಿಂಹಕೇಶರ, ಅನಂಗಕಾ, ತ. ವಕುಳವಮ್, ಮಗಿಟಮರಮ್, ತೆ. ಪೊಗಡ, ವಕುಳ, ಕೇಸರ ವೃಕ್ಷಮು, ತು. ರೆಂಜೀರ್ದ ಮರ, ಮ. ಮಕುರ, ಎಲಚಿ, ಮಕಿರಮರಮ್ಐ ಇ, ಕೊಂ. ವೊವಳಿರೂಕು

**ಪಚ್ಚೆಹೆಸರು** Green gram *Phaseolees mungo* (Leguminose), ಸಂ.ಮದ, ಮುದ್ಗ, ಕಾಂಭೋಜಿ, ಮಹಾಸಹಾ, ತ.ಪಚ್ಚೈಪಯರು, ಮೊಂಗು, ತೆ. ಪಚ್ಚೈಪೆಸಲು, ತು.ಪದೆಂಗಿ, ಮ. ಚೆರುಪಯರು, ಕೊಂ.ಮೂಗು

**ಪಡವಲ** snake gourd *Trichosanthes anguian* (cucurbifacea), ತ.ಪುಡೋಲ್, ಪುಡಲ್, ತೆ. ಪೊಟ್ಲಕಾಯಿ, ತು.ಪಟ್ಲಕಾಯಿ, ಮ.ಪಟೋಲಮ್, ಕೊಂ.ಪಡ್ವೊಲ

**ಪತಂಗದ ಮರ** sappan wood, Braisletto *Casalpinia sappam* (Legeninose), ಸಂ. ರಕ್ತಮುಕ್ತ, ಪತಂಗ, ತ.ಪರ್ತಂಗಿ, ತೆ.ಬುಕ್ಕಪುಡೆಟ್ಟು, ಬಕಾರುಚಕ್ಕ, ತು.ಚಪ್ಪಂಗ, ಮ.ಚಪ್ಪಜಮ್, ಕೊಂ. ಸಪ್ಪಂಗು

**ಪರ್ಪಾಟಕ** *Mollugo stricta* (Ficoidea), ಸಂ.ಕವಚ, ಕುಂಡಲಿ, ಪರ್ಪಟಕಾ, ಗ್ರೀಷ್ಮಸುಂದರ, ತ.ಪರ್ಪಾಟಕವಮ್, ತೆ.ಪರ್ಪಾಟಕಮು, ತು.ಕೋರಪಂತಿ, ಮ.ಪರ್ಪಾಟಕಮ್, ಕೊಂ. ಪರ್ಪಾಟಕು.

**ಪಾಡಾವಳಿ ಬಳ್ಳಿ** *Cyelea burmanni* (Menispermacea), ಸಂ.ಪಾಠಾ, ತ.ಪಾಡಾ, ತೆ.ತಿಪಲೆ, ಮ.ಪಾಟಕ್ಕಿಟಙ್, ಕೊಂ.ಪಾಡಾವಳಿ

**ಪಾಪಟಿ ಗಿಡ** *Webera corymbosa* (Rubiacae), ತ.ಕುರಾ, ಕೋಡಿಲಮ್ ವೆಳ್ವೆದ್ವಿ, ಮ. ಪುಳಿಯಾಯಿನಿ ಕುಪ್ಪಿಪೂ

**ಪಾಪಾಸುಕಳ್ಳಿ,** ಶಿವರಾಮಕಳ್ಳಿ prickly pear snake hood fig *Opuntia dillenii* (cactaceae), ತ.ಸಪ್ಪತಾತಿಕಳ್ಳಿ, ತೆ.ನಗಪಲ್ಲಿ, ಮ.ಪಡ್ಯ, ಕೊ.ಮುಳ್ಳು ಪೊಟಿಚ್ಚೆ

**ಪಾಪಾಸ್ಕತ್ತಾಳಿ** prickly pear, Indian fig *Opuntia dillenii* (cacacca), ತ.ನಾಗತಾಳಿ ಪಲಕೈಕಳ್ಳಿ, ತೆ.ನಾಗಜಮುಡು, ತು.ಮುಳ್ಳ್‌ಕಳ್ಳಿ, ಮ.ನಾಗತಾಳಿ, ಪಲಕಳ್ಳಿ, ಕೊಂ. ಕಾಂಟ್ಯಾನಿವಲಿ

**ಪಾರಿಜಾತಮರ** Weeping nyctanthes, Night jasmine *Nyctanthes orbor-tristis* (oleacea), ಸಂ. ಪಾರಿಜಾತ, ಸಿಫಾಲಿಕಾ ತ.ಮಂಜಪೂ, ಚೂದಂ, ಪವಳಮಲ್ಲಿಗೈ, ತೆ.ಪಗಡಮಲ್ಲಿ, ಶ್ವೇತಸುರಸ, ಕ್ರಿಷ್ಟಿ, ಮ. ಮಜಪೂಮರಮ್, ಕೊಂ.ಪಾರಿಜಾತಕ

**ತಿಂಡಿಸೊಪ್ಪು** Hibiscus hemp *Hibiscus cannabinces* (malracale), ತ.ಪುಳಿಚ್ಚಕೀರೈ, ಕಾಡ್ಸುರೈ, ತೆ,ಗೋಂಗೂರು ಗುಳುಗುಚೆಟ್ಟು ಕರ್ಣಿಕಾರಮು, ಮ. ಕಾಟ್ಟುವೆಳ್ಳೂರನ್

**ಪುರುಳಿ ಮರ** Trumpet flower *Stereospermn chelonoides* (Bignoniseie), ಸಂ. ಪಾಟಲಿ, ತ.ಪಾದಿರಿಮರಮ್, ಅಪ್ಪು, ಕಾನವಿರಕ್ಕುವಮ್, ತೆ.ಕಲಿಗೊಟ್ಟು, ತು.ಪುರುಳಿ, ಮ. ಪಾತಿರಿಮರಮ್

**ಪುಂಡಿಸೊಪ್ಪು** Roselle Red sorrel *Hibiscus sabdariffa* (Malvaceae), ತ.ಶಿವಪ್ಪುಕಾಯ್ಚುರೈ, ತೆ.ಸೀಮೆಗೋಗು, ಎರ್ರಗೊಂಕಾಯ, ತು.ಪುಂಡಿತಪ್ಪು, ಮ.ಪುಳಿಚೇರ

**ಪುತ್ರಜೀವ** Wild olive *Putrujiva roxburghii* (Euphorbiace), ಸಂ. ಮಾವು, ಪುತ್ರಜೀವಕ, ತ,ಕರುಪಿಲೈ, ತೆ.ಪುತ್ರಜೀವಿ, ಕುದುರುಜೀವಿ, ಸುತಜೀವ:, ಕೊಂ. ಪುತ್ರಜಿಬ್ಬೇಮಣಿ

**ಪುರುಷರತ್ನ** *Ionidium suffeuticosum* (violaceae), ಸಂ. ಪುರುಷರತ್ನಮ್, ಏಕಪತ್ರಿ, ತ. ಓರಿಲೈತ್ತಾಮರೈ, ತೆ.ಪುರುಷರತ್ನಮು, ಮಗಲಿಂಗಮು ಮ. ಓರಿಲತ್ತುಮರ, ಕೊಂ. ಪುರುಷರತ್ನ

**ಪುಷ್ಕರಮೂಲ** Costus *Costus speciosus* (Scitaminese), ಸಂ. ಪುಷ್ಕರಕಾಶ್ಮೀರ ಸುಬಂಧು, ತ.ಕೋಷ್ಟಮ್, ತೆ. ಕಾಶ್ಮೀರಮು, ಬೊಮ್ಮಕಬ್ಬಿಕ, ಭಂಗಲ್‌ಕೋಷ್ಟ, ತು.ಕೋರಿಕೊಟ್ಟು, ಮ.ಚನ್ನಕ್ಕೂವ, ನರುಂಚನ ಪುಷ್ಕರಮೂಲಮ್

**ಪುಷ್ಪಕಾಶೀಸ** Indian sundew *Drosera indica* (Droseracea), ಮ.ಕ್ರಿಮಿನಾಕಿನಿ

**ಪೊಪ್ಪಾಯ** Papaw tree *Carica papaya* (pastitlorea), ತ. ಪಪ್ಪಾಯಿ, ಪಪ್ಪಳಿ, ತೆ.ಬೊಪ್ಪಯಿ, ಮದನ ಆನಪಚೆಟ್ಟು, ತು.ಬಪ್ಪಂಗಾಯಿ ಮ.ಕರ್ಮೋಸ್, ಕಪ್ಪಳಂ, ಪಪ್ಪಾಯವಮ್, ಕೊಂ.ಪೊಪ್ಪಾಯಿಫಳ

**ಬಂದದ ಮರ** Gaub tree *Diospyros embroypteris* (ebenace), ಸಂ. ತೋವರೇ ದಂತಶರ, ತ.ತುಂಬಿ ಪನಿಚ್ಚೈಕಾಯ್, ತೆ.ತುಮಿಕಿಚೆಟ್ಟು, ತಿಂದುಕಿ, ತು.ಬಂದಿದ ಮರ, ಮ.ಪನಿಚ್ಚೆಮರಮ್, ಕೊಂ. ಬಂದಾರೂಕು

**ಬಟಾಣಿ** Garden pea *Pisum sativen* (leguminose), ತ.ಪಟಾಣಿ, ತೆ.ಗುಂಡುಶನಗಲು, ತು. ಬಟಾಣಿ, ಮ.ಪಟ್ಟಾಣಿಪಯರು, ಕೊಂ.ಬಟ್ಟಣೆ

**ಬತ್ತ,** ಅಕ್ಕಿ, ನೆಲ್ಲು common rice *Oryza sativa* (gramineae), ತ.ಅರಿಶಿ, ಸಂ.ತಂದುಲ, ತೆ.ಬಿಯ್ಯಮು, ಮ.ಅರಿ, ತು.ಅರಿ

**ಬದನೆಗಿಡ** Brinjal, egg plart aubergine *Solanum melongena* (solanaceae), ಸಂ.ಪೀತಫಲ, ಕುಲಿರಿತ, ತ.ಕತ್ತರಿ ವಜುದಲೈ, ತೆ.ವಂಕಾಯಿ, ತು.ಬದನೆ, ಮ.ವಮಿತಿನ, ಮುಳುಕುತಕಾಳಿ, ಕೊಂ.ವಾಯಿಂಗಣ

**ಬಜೆಗಿಡ** sweet flag *Acorus calamus* (Aroidea), ಸಂ.

ವಚಾ, ವಿಜಯಾ, ಜಟಿಲಾ, ಬರಸಾರ, ತ.ವಳಂಬು, ಚಟಕ್ಕೋದನ್, ಚಟಿನಮ್, ತೆ.ವಸ, ವಡಜ, ತು.ಬಜೆ, ಮ.ವಯಂಪು, ಕೊಂ. ಏಖಂಡ

**ಬಸವನಪಾದದ ಹೂ,** ಗೌರಿ ಹೂಗಿಡ Garden balsam *Impatiens balasamina* (Balsaminaceae), ತ.ಬಲ್‌ಸಮ್, ಮ.ತೆರಾಡ, ಕೊ.ಕೊಟೆಂಜಿ

**ಬಸಳೆ** ಬಿಳಿ ಬಸಳೆ Malbar night shade *Basella alba* (Basellacae), ಸಂ.ಆಪೋದಿಕಾ, ದಯರ್ಥ್ನೆ, ತ.ವೆಳ್ಳಪಚಳ್ಳೆ, ತೆ.ಅಲ್ಲುಬುಚ್ಚಲಿ, ತು.ಬೊಲ್ದುಬಸಲೆ, ಮ.ವೆಳ್ಳವಸಲ, ವಸಲಬೇರ, ಕೊ.ಬಸಳ್ಯ

**ಬಸುರಿ ಮರ** Wave-leaved fig tree *Ficus tsiela* (uritcacac), ಸಂ.ಕನೀಸಿಕಾ, ತ.ಇಚಿ, ಕಲ್ಲಿಚಿ, ತೆ.ಜಟಿನಿ ಗರ್ದಧಾಂಡೆ, ಕಲಜುವ್ವಿ, ಮ.ಚುವನ್ನ ಆಲ್, ಇತ್ತಿ ಚಕಿಲ

**ಬಾಳೆ** plantain or Banana *Musa paradisiaca, misapientum* (scitamineae), ಸಂ.ಕದಲೀ, ತ.ವಾಳೈ, ತೆ.ಅರಟಿ, ಮ.ವಾಳ, ತು.ಬಾರೆ

**ಬಿಕ್ಕೆ ಗಿಡ** *Gardenia gunnifera* (Rubiacex), ತ.ಕಂಬಿಲಿಪಿಕಿನ್, ತೆ.ಚಿತ್ತಮತ್ತ, ಮಂಚಿಬಿಕ್ಕಿ

**ಬೀಟ್‌ರೂಟ್,** ಬೀಟ್‌ಗೆಡ್ಡೆ Beet root *Beta vulgaris* (chenopodiaceae), ತ.ಬೀಟ್‌ರೂಟ್, ತೆ.ಬೀಟ್‌ರೂಟ್, ಮ.ಬೀಟ್, ಕೊ.ಬೀಟ್‌ರೂಟ್

**ಬೀಟೆಮರ** Blackwood or Rosewood tree *Dalbergiu latifolia* (Leguminosx), ತ.ಎರುವಡಿ, ಇಟ್ಟಿ, ತೆ.ಜಿಟಂಗಿ, ಇಟ್ಟಿಗಿ, ಮ.ವೀಟ್ಟಿ, ಕೊಂ.ಬೀಟೀರೂಕು

**ಬಿದಿರು** common prickly bamboo *Bambusa arundincea* (Gramineax), ಸಂ.ವಂಶ, ತೇಜನ ನವಾಗ್ರಗಂಥಾ, ಬಹುಪಲ್ಲವ, ತ.ಮೂಂಗಿಲ್, ಆಂಬಲ್, ತೆ. ವೆಯರು, ಮ. ಮೂಂಗಿಲ್, ತು.ಬೆದ್ರ್, ಕೊಂ. ವಾಸೊ.

**ಬಿಲಿಂಬಿ ಮರ** Bilimbi tree *Averrhoad bilimbi* (craniacex), ತ.ಪಿಲಿಂಬಿ, ಪಿಲಿಂಬೆ, ಕುಚ್ಚಿತಮರತಕ್ಕಾ, ಮ.ಎಲುಂಬಿ, ತು.ಬಿಂಬುಲಿ, ಕೊಂ.ಬಿಂಬಲ

**ಬಿಲಿಮರ** *Rhododendron arboreun* (Eriaacex), ತ.ಪೂಮರಂ ಬೆಲ್ಲಿಮರಂ

**ಬಿಲ್ವಾರದ ಮರ** *Albizzia ororatissima* (Leguminese), ಸಂ.ಶಿರೀಷ, ಕುರವಕ್, ಮುಸ್ಸಿ, ತ.ವಾಕೈ, ತೆ.ಚುಂದುಗಚೆಟ್ಟು, ತೆಲಸು, ಮ.ವಾಕ

**ಬಿಳಿಗಂಧಗಿರಿ** Toon tree, white ceder *Cedrela toona* (neliacex), ತ.ತೂನ್, ಮ.ಮಡಗಿರಿವೆಂಬು, ದೇವದಾರುಂ

**ಬಿಳಿ ಹಿಂಡಿ ಗಿಡ** *Erua lanata* (Anarantacex), ಸಂ.ಶತಕಾಭೇದಿ, ತ.ಚಿರುಬೂಳೈ, ಉಳಿಞೈ, ತೆ.ಪೆಂಡಿದೊಂಡ, ಮ.ಪಿಂಡಿಕುಂಡ, ಚಿರಪೂಳ

**ಬಿಳೀ ಅಭ್ರಾಂಗ ಗಿಡ** *Grewia microcos* (Tiliaceae), ತ.ಕಡಮ್ಬು, ವಿಚಾಲಮ್, ತು.ಅಬ್ರೋಣಿ, ಮ.ಕೊಟ್ಟಕೈ, ಕೊಂ.ಚಿವಾರಿ

**ಬಿಳೀ ಜೋಳ** Great millet or cholum *Sorgun rulgare* (graninex), ತ.ಚೋಳಮ್, ಚೂನ್ನಲ್, ತೆ.ಜೊನ್ನಲು, ಮ. ಚೋಟಮ್, ತು.ಜೋಳ, ಕೊಂ. ಜೋಳು

**ಬಿಳೀನೆಕ್ಕಿ** Five-leaved chaste tree *Vitex Negundo* (verbenacege) ಸಂ.ನಿರ್ಗುಂಡಿ, ತ.ವೆಣ್ನೊಚ್ಚಿ, ಚಿಂದುವಾರಮ್, ನಿರ್ಕುಂಡಿ, ತೆ.ವೆಲ್ಲವಾಲಲಿ ಸಿಂಧುವಾರಮು, ತು.ನೆಕ್ಕಿ, ಮ.ಇಂದ್ರಾಣಿ, ವೆಣ್ನೊಚ್ಚಿ, ಕೊಂ. ನಿಗುಂಡು

**ಬಿಳೀಬೋವು** Lac tree (dipterocarpex) *shorea talura,* ತ. ತಲೂರ, ತೆ.ಜಾಲಾರಿಚೆಟ್ಟು, ಹಿಂಸ್ರಾ, ಮ.ಕರಿಮರುತು

**ಬಿಳೀ ಮಂದಾರ** *Baubinia acuninate* (leguninosae), ತ.ಕೊಕ್ಕು, ಮಂದಾರೈ, ಮ. ವಮಿತ್ತ ಮಂದಾರಮ್, ಕೊಂ.ಧವೆ ಮಂದಾರು

**ಬಿಳೀ ಜಾಲಿಮರ** panicled acacia *Acacia leucophlna* (Leguninosx), ತ.ಪಟ್ಟೈಚ್ಚಾರಾಯಂ, ವೇಳ್ವೇಲ್, ತೆ.ತೆಲ್ಲತುಮ್ಮ, ಮ.ಚೆಂಗರಿ (ವೆಂಗಾರಿ) ಜಾಲಿ

**ಬಿಳೇಗಣಜಲಿ** *Trianthema pentandra* (Ficoidex), ಸಂ.ವರ್ಷಾಭೂ, ತ.ಚುವೇದ ಮೂಲಮ್, ಚಾರಣೈ ತಲೈ ಎರಿಚ್ಚಾನ್, ತೆ. ಗಲಿಜೇರು, ಮ. ಚಾರಣ, ಸಾರಣ, ತು.ಕೊಂ -ಪಾಷಾಣಭೇದಿ

**ಬೂದಿಕುಂಬಳ ಬಳ್ಳಿ** White gourd melon or pumpkin *Cuecurbita pepo* (Cucurbitacex), ಸಂ.ಕೂಷ್ಮಾಂಡ, ತ.ಕಲ್ಯಾಣ ಪೂಚುಣಿ, ಪರಂಗಿಕಾಯಿ, ತೆ.ಬೂದಿಗುಮ್ಮಡಿ, ತು.ಕರುಕುಂಬುಡ, ಮ.ಕುಂಬಳಮ್, ಕೊಂ.ಕುವಾಳೆ

**ಬೂರಗದ ಮರ,** ಅಪೂರಣಿ Silk-cotton Tree *Bombax malabaricum* (Red-flowered), *Eriodendron anfractuosum* (Maluaceae), ಸಂ.ಶಾಲ್ಮಲೀ, ತ.ಎಲವನ್, ತೆ.ಪೂರ್, ಮ.ಪೂಳ, ತು.ಆಲದಮರ

**ಬೆಂಡೆಕಾಯಿ ಗಿಡ** Esculent okra, Edible Hibiscus *Hibiscus esculentus* (malvacex), ಸಂ.ನೇತ್ರಾಶ್ಶೋತನ, ಪಾಟಲಿ, ತ.ಮ.ವೆಣ್ಣ, ತೆ.ಬೆಂಡಕಾಯ, ತು.ಬೆಂಡೆಕಾಯಿ

**ಬೆಟ್ಟಹೊನ್ನೆಮರ** *Ougeinia dalbergioides* (Leguminose), ತೆ.ನೆಮ್ಮಿಚೆಟ್ಟು, ವಂಜಲಮು, ತಿನಿಶವೃಕ್ಷಮು, ಮ.ಕಾಟ್ಟುಪುನ್ನ

**ಬೆತ್ತ** Rattan cane palm *Cucurbita pepo* (cucurbitacex), ಸಂ. ವೇತಸಮ್, ದೀರ್ಘವಲ್ಲಿ, ಸಮಕ್ಷಿಕಾ, ಲತಾವಂಶಃ, ತ.ಪಿರಂಬು, ವಾನೀರಮ್, ತೆ.ಪೇಮು, ಪೇಪ, ವೇತಸಮು, ತು.ಸೂರುಲ್, ತೂರೂಳು ಬೆತ್ತ, ಮ.ಚೂರಲ್‌ವಳ್ಳಿ, ವೇತ್ರಮ್, ನಿರ್ವಜ, ಕೊಂ.ಬೇತ

**ಬೆಣ್ಣೆಗರುಗ ಗಿಡ** *Sida rhonboidea* (malvacex),

ಸಂ.ಸಮಂಗಾ, ತ.ಮುತ್ತವಪುಲಗ, ಗೂಬತಡ, ಮ.ವಟ್ಟೂರಮ್

**ಬೆಲಪತ್ರೆ** Bael tree *Egle marmelos* (Rutaceae) ಸಂ.ಬಿಲ್ವ, ಮಹಾಕಪಿತ್ಥ, ಆಡೋಲವ್, ಗೋಹರೀತಕೀ, ನೀಲಮಲ್ಲಿಕಾ, ತ.ಎಲ್ವವಮ್, ಅಲುವೀಕವಮ್, ತೆ.ಬಿಲ್ವಮು, ಮಾರೇಡುಚೆಟ್ಟು, ಮಾಲೂರಮು, ಶ್ರೀಫಲಮು, ತಾಂಡಿಲ್ಯಮು, ಮ.ಕೂವಳಂ, ಎಲ್ವಂ, ಮಾವಿಲಾವು, ತು.ಬೆಲ್ಲಪತ್ರೆ, ಕೊಂ.ಬೆಲ್ಲಾಫಲ

**ಬೆಲ್ಲೋಟ್ಟಿ ಗಿಡ** Mussanda (rubiacex), *Mussaenda frondosa*, ಮ.ವೆಳ್ಳಿಲ, ಪ.ಬೊಳ್ಳೆತಪ್ಪು, ಕೊಂ.ಬೆಲ್ಲೊಟಿ

**ಬೆಳ್ಳುಳ್ಳಿ** Garlic *Allium sativum* (Liliacex), ಸಂ. ಲಶುನ, ಅರಿಷ್ಠ, ಗೃಂಜನ, ಶ್ವೇತಕಂದ, ತ.ಮ ವೆಳ್ಳುಳ್ಳಿ, ತೆ.ತೆಲ್ಲಗಡ್ಡ, ವಲ್ಲುಳ್ಳಿ, ತು.ಬೊಳ್ಳುಳ್ಳಿ, ಕೊಂ.ಲಸುಣ

**ಬೇವಿನ ಮರ** Neem or margosa tree *Melia Azadirachta* (meliacex), ಸಂ.ರವಿಪ್ರಿಯ, ವೇಂಬಕ, ವ್ರಣಶೋಧಕರಿ, ತ.ವೇಂಬು, ಅರುಳುರುದಿ, ಚಂಗುಮರು, ತೆ.ವೇಪ, ನಿಂಬಮು, ಮ.ನಿಂಬಮ್ ವೇಪ್ಪು, ರಾಜವೇಪ್ಪು, ತು.ಕೈಬೇವು, ಕೊಂ. ಬೇವಾರೂಕು

**ಬೈರಿ** *Antiaris toxicaria* (uricacex), ಸಂ.ವಲ್ಕಲವೃಕ್ಷ, ತ.ನೆಟ್ಟಾವಿಲ್ಮರಮ್, ಮ.ಅರಂಜಲಿ

**ಬೈನಿ** Bastard sago *Caryota urens* (palmex) ತ.ಕೊಂದರ್ಪನ್ನೈ, ಆದಮ್, ತಾಲಮ್, ತೆ.ಚಿರುಗು, ಜಿರುಗು, ಮ. ಈರಂಪನ, ತು.ಈಂದ್, ಕಣ್ಣಿದ ಮರ, ಕೊಂ. ಇಂದಾರೂಕು, ಬೈನಿರೂಕು, ಮಹಾ ಚರ್ಲಿ

**ಬೊಂಡಳ** cape gooseberry, winter cherry *Physalis peruviana* (solanacex), ಮ. ಇಟ್ಟಾಞಿಡುಜ, ಮೊಟ್ಟಾಂಪುಳಿ, ತು. ಬೂಂಡುಲಿ, ಕೊಂ. ಚಿರಿಪುಟ್ಲ

**ಬ್ರಾಹ್ಮಿ** Thyme-leaved gratiola *Herpesitis monniera* (scrophelarinea), ಸಂ.ತೀವ್ರಾ, ಬ್ರಹ್ಮಿ, ಮಂಡುಕಿ, ತ.ನೀರ್ಪಿರಮಿ, ಪಿರಮಿಯಪ್ಪೂಣ್ಣು, ತೆ.ಸಾಂದ್ರಾಣಿ, ಮ.ನೀರ್‌ಬ್ರಹ್ಮಿ, ಕೊಂ.ಬ್ರಹ್ಮಿ

**ಭಂಗಾರಕಾಯಿ** Annatto tree *Bixa orellana* (Bixineae), ತ.ಕುರಗು ಮಂಜಳ್, ಜಾಫರ, ತೆ.ಜಾಫರಾಚೆಟ್ಟು, ಮ.ಕುಪ್ಪಮಞ್ಞಳ್, ಕೊಂ.ಕುಂಕುಮಿಫಲ

**ಭಂಗಿ ಗಿಡ** Humb Bhany charas *Cannabis sativa* (urticaue), ಸಂ.ವಿಜಯಾ, ಸಿದ್ಧಪತ್ರಿ, ಅಲಾತ, ತ.ಪಂಗಿ, ಕಂಜಾ, ಮದಮತ್ತಗಮ್, ತೆ.ಗಂಜಾಯಿ, ಜಡಗಾಂಜ, ತು.ಬಂಗಿ, ಮ.ಕಂಚಾವು, ಕೊಂ.ಭಾಂಗಿ

**ಭೂತಾಳಮರ** poon tree *Sterculia fotida* (sterculiaceae), ತ.ಕುದಿರೈಪ್ಪಿಡುಕ್ಕನ್, ಪೀನುತ್ತಮರಮ್, ತು.ಪೀನಾರಿಮರ, ಮ. ಪೊಟ್ಟಿಕಾವಳಮ್, ಪೀನಾಮ ಮಾರಲ್

**ಭೂತಕರಳು** Indian screw tree *Helicteres Isora* (sterculiaceae), ಸಂ. ಅವರ್ತಸಿ, ತ.ವಲಂಬುರಿ, ತೆ.ಶ್ಯಾಮಲಿ, ನುಲಿಲೆ, ಮ.ವಲಂಬಿರಿ

**ಮಂಜಿಷ್ಠ** munjeet *Rubia cordifolia* (Rubiaceae), ಸಂ. ಚಿತ್ರವಲ್ಲಿ, ಕಾಲವೇಷಿಕಾ, ಗಂಡಾರಿ, ಮಂಜಿಷ್ಠ, ತ.ಮಂದಿಟ್ಟ, ತೆ.ತಾಮ್ರವಲ್ಲಿ, ಮಂಜಿಷ್ಠ

**ಮಂಜೆಟ್ಟಿ** Redwood tree *Adenanther pavonina* (Leguninosae), ಸಂ.ತಾಮ್ರ, ರಂಜಕ, ಕ್ಷರಕ, ತ.ಮಂಜಾಡಿ, ತಿಲಮ್, ತೆ.ಬಂಡಿಗುರುವೆಂದ, ಮ.ಮಂಚಾಟಿ, ಕೊಂ.ಮಂಜುಟಿರೂಕು

**ಮಗಿಮಾವು** Monkety bread tree, Baobab *Adansonia digitata* (malvaceae), ತ.ಪಪ್ಪರಪ್ಪುಳಿ, ತೂದಿ ಮ.ಪಪ್ಪರಪುಳಿ, ತು.ಚಳ್ಳೆಮರ

**ಮಗ್ಗಾರ್ಲೆಮರ** Weaver's - beam tree *Schrebera swietenioides* (oleaceae), ತ.ಮೊಗ್ಗಲಿಂಗ, ತೆ.ಮೂಕೂಡಿ, ಮಕ್ಕಮ್, ತೊಂಡಮುಕ್ಕಿಡಿ

**ಮಡ್ಡೀಮರ** Indian mulberry *Morinda citrifalia* (Rubiacu), ಸಂ. ಅಚ್ಚುಕ, ತ.ನೊಣಾ, ತುಣವು, ತೆ.ಮಡ್ಡಿಚೆಟ್ಟು, ತು.ತಾಕೊಟೆ, ಮ.ಕಡಪ್ಪಿಲಾವು

**ಮತ್ತಿ** Arjuna myrobalan *Termindlia arjuna* (conbretaceae), ಸಂ. ಇಂದ್ರವೃಕ್ಷ, ನದೀಸರ್ಜ, ಕಿರೀಟಿ, ತ.ಮರುದಯಿ, ತೆ.ತೆಲ್ಲಮದ್ದಿಚೆಟ್ಟು, ಮ.ವಳುಮರುತ, ಕೊಂ.ಮತ್ತೀರೂಕು

**ಮತ್ತಿಮರ** *Terminatia tomentosa* (combralace), ತ.ಆನೆಮಿನ್, ಕರಿಮರ್ದು, ಪುಥಿ, ತೆ.ನಳ್ಳಮದ್ದಿ, ಇನ್ನುಮದ್ದಿ, ತು.ಬನುಪು, ಮ.ಮರ್ದು, ಕರಿಮರ್ದು

**ಮದರಂಗಿ** Henna shrub *Lawsonia alba* (Lythraceae), ಸಂ.ಮೆಂದಿ, .ಮರುದ್ರೋನಿ, ಕುರವಗಮ್, ಕುರಂಡಗಮ್, ತೆ.ಗೋರಂಟ, ಮೈದ, ಕ್ರೊಮ್ಮಿ, ಕುರಿವಕಮು, ಮ.ಮೈಲಾಂಚಿ, ಪೂಯಿತಲಚೆ, ತು.ಮದ್‌ರೆಂಗಿ, ಕೊಂ.ಮತ್ಯೆರ್ಝಾಡ

**ಮದ್ದರಸ** Tabernaemontana *Tabernaemontana coronaria* (A pocynaceae), ಸಂ.ನಂದ್ಯಾವರ್ತ್ತಮ್, ತಕರ, ವಿಷ್ಣುಪ್ರಿಯ, ತಾರಾವಟ, ತ.ನಂದಿಯಾವಟ್ಟಮ್, ನಂದಿಯಾವರ್ತಮ್, ತೆ.ನಂದಿವರ್ಧನಮು, ನಂದ್ಯಾವರ್ರೈಮು, ಮ.ತಗರಂ, ನಂದ್ಯಾರ್ವಟ್ಟಂ, ತು.ಕೊಕ್ಕೇಕಾಯಿದ ಮರ

**ಮರದ ಎಣ್ಣೆಯ ಮರ** Wood oil tree *Dipterocarpus turbinatus* (dipterocarpeae), ತ.ಎಣ್ಣೆ, ತು.ಎಣ್ಣೆದ ಮರ, ಮರ, ವರುಂಗು

**ಮರಬಾಳೆ** Vanda *Saccolabium wightianum* (orehideae) ಮ.ಮರೆಂಬಿ

**ಮರಸಣೆ** A large yan *A locasia macrorhiza* (Aroideae), ಮ.ಈಜಿಚೇಂಬು, ತು.ರಚ್ಚೇವು, ಕೊಂ. ಕಾಸಾಳೆ

**ಮರುಗ** Bow string hemp *Sanseviera zeylanica*

(Haemodoraceae), ಸಂ.ಖರಬುಸ, ಫನಿಜ್ಜಕ, ತ.ಅರಲೈ, ಮರುಳ್, ತೆ.ವಿಷಮಕೊಂಡ, ಚಾಗ

**ಮರುವ** *Terminalia paniculata* (conbretaceae), ತ.ಮ. ಪೂಮರ್ದು, ವಿಲೆಮರ್ದು, ತೆ.ನೀಮೀರಿ

**ಮರುವಾಚಲ** pride of India *Lagerstroemia Reineae* (Lythraceae), ತ.ಕೂಡಲೆಮುಕ್ಕಿ, ತೆ.ವಾರಗೂಗು, ಮ.ನೀರ್‌ವೆಂಡೇಕು, ನೀರ್‌ಮರತು, ಆಟಂಪು

**ಮಲ್ಲಿಗೆ** Double jasmine, *Jasminum sambac* (oleace) ಸಂ. ಮಲ್ಲಿಕಾ, ಅನಂಗಾ, ಭೂಪದಿ, ಕೌಶಿಕಾ, ತೃಣಶಾಖ್ಯ, ತ.ಮಲ್ಲಿಗೈ, ಇರುವಾಡಿ, ತೆ.ಮಲ್ಲೆ, ತು. ದುಂಡುಮಲ್ಲಿಗೆ, ಮ.ಚೆರುಪಿಚ್ಚಮ್, ಮಲ್ಲಿಕ, ನಲ್ಲಮಲ್ಲಿ, ಕೊಂ. ದೊಡ್ಡಮೊಗ್ರೆ

**ಮಾಚಿಪತ್ರೆ** *Grangea maderaspatana* (composit), ತ.ಮಾಚಿಪತ್ತಿರಿ, ತೆ.ಮಾಚಿಪತ್ರಿ, ಮ.ನಿಲಂಪಾಲ

**ಮಾದವಾಳ** Citron, *Citrus medica* (rurace), ಸಂ.ಮಾತುಲಂಗ, ಮಾತುಂಗ, ಬೀಜಪೂರ, ತ.ತೆ. ಮಾದೀಫಲಮು, ತು.ಮಾಪಲ, ಮ. ಮಾದುಲಂಗಮ್, ಮಾದಳನಾರಕಮ್, ಮಾದಳಮ್, ಕೊ.ಮಾವಳಿಂಗ

**ಮಾದಿಮರ** Olibanum, frankinense *Boswetha thurifera* (burseracev), ಸಂ.ಸಾಲತಿ, ತ.ಕುಂದ್ರೀಕಮ್, ತೆ.ಪರಂಗಿಸಾಂದ್ರಾಣಿ, ಮ.ಚಿತೀಂತಿ, ಪಾಲಂಗಮ್, ಕೊ.ವಿಶೇಷ

**ಮಾವಿನ ಮರ** mango tree, *Mangifera Indica* (Anacardiace), ಸಂ. ಆಮ್ರಃ, ಚೂತಃ, ಮಧುಕರಃ, ತ.ಮಾಮರಮ್, ತಿದಳಮ್, ಮಾಂದಿ, ತೆ. ಮಾಟಿ, ಆಮು, ತು.ಕುಕ್ಕು, ಮ.ಮಾಂಜ, ಕೊಂ. ಆಂಬೊ

**ಮುಂಜಿಗಿಡ** *Saccharum arundinaceum* (Gramine), ತೆ.ಮುಂಜಮು, ಪೊನಿಕ, ಮ-ಮುಂಜ, ಮೇಖಲಪುಲ್ಲು

**ಮುರ್ಕಳಿ** *Buchanania latifolia* (Auacardiace), ತ.ಶಾರಪ್ಪರುಪ್ಪು, ತೆ.ಚಾರುಮಾಮಿಡಿ, ಚಾರಪಪ್ಪು, ತು, ಮೊರೆಂಟಿ, ಮ.ಮುರುಳ್, ಮಹಾ, ಚೌರ

**ಮುರ್ಗಿನಹುಳಿ** Mate mangorteen, *Garcinia Indica* (Guttifer), ತ.ಮುರ್ಗಾಲ್‌ಮರ, ತು. ಪುಣರ್‌ಪುಳಿ, ಮ.ಪುನಂಪುಳಿ, ಕೊಂ. ಬೀರುಂಡ

**ಮುಚ್ಚಿಲು,** Toothed Dillenia *Dillenia pentagyna* (dilleniace), ತ.ನಾಯಿತೇಕು, ಪಿಣ್ಣ, ತೆ.ಚಿನ್ನಕಲಿಂಗ, ತು.ಮುಚ್ಚಿಲ್, ಮ.ನಾಯಿತಾಕು, ಕೊಡೆಪುಣ್ಣೆ

**ಮುಟ್ಟಿದರೆ ಮುನಿ** Humble plant, sensitive plant, *Mimosa pudica* (Leguminocee), ಸಂ.ಅಜಾಲಿಕಾಲಿಕಾ, ಶಬರ, ನಮಸ್ಕಾರೀ, ತ.ತೊಟ್ಟಾಲ್ಯುರುಂಗಿ, ತೆ.ಮುನುಗುದಾಮರಮು, ಮುತ್ತವಪುಲ ಗಮುಚೆಟ್ಟು, ತುನಾಚಿಕೆದ್ಯೆ, ಮ.ತೋಟ್ಟಾಲ್‌ವಾಡಿ, ತೀಂಡಾರ್ಮಣಿ

**ಮುತ್ತುಗ** Bastard teak, *Butea Frondosa* (Leguminas), ಸಂ. ಪಲಾಶ, ಕಮಲಾಸನ, ತ್ರಿಪತ್ರಿಕ, ತ.ಪಲಾಶು, ವಾತಪೋತಮ್, ತೆ.ಮೋದುಗ, ತು.ಪಲಾಶ, ಮ.ಪಿಲಾಚಮ್, ಕಿಂಶುಕಮ್, ಕೊಂ. ಫಲಸಾರೂಕ

**ಮುಸುಕಿನ ಜೋಳ,** ಮೆಕ್ಕೆ ಜೋಳ Maize or corn *Zea mays* (poaceae), .ತಮುಕ್ಕಚೋಳಮ್, ತೆ.ಮುಕ್ಕಜೊನ್ನ, ತು.ಮಕ್ಕಜೋಳಮ್

**ಮುಳ್ಳುಸೌತೆ ಬಳ್ಳಿ** common cucumber *Cucumis sativus* (cucurbitaceae), ಸಂ. ಉರ್ವಾರುಕಾ, ಹಸ್ತಿಪರ್ಣಿನೀ, ತ್ರಪುಶಾ, ತ.ಮುಳ್ಳುವೆಳ್ಳರಿ, ತೆ.ದೋಸೆಕಾಯಿ, ತು.ತೆಕ್ಕರೆ, ಮ.ಮುಳ್ಳನ್‌ವೆಳ್ಳರಿ, ಕಕ್ಕರಿ, ಕೊಂ.ತೌನೆ

**ಮುಳ್ಳುಮದರಂಗಿ** *Barlenia prionitis* (Acanthaceae), ಸಂ.ಕೋರಂಟ, ಸೈರಿಯಕ, ಅನಂತಾ, ತ.ಚೆಮ್ಮುಳ್ಳಿ, ತೆಮುಳ್ಳುಗೋರಂಟ, ತು.ಗೋರಂಟೆ, ಗೊರವೆ ದೈ, ಮ.ಚೆಮ್ಮುಳ್ಳಿ, ವೆತ್ತಿಲ, ಕೊಂ. ಗೊರಟೆ

**ಮೂಲಂಗಿ** Radish *Raphanus sativus* (cruciferea), ಸಂ.ಮೂಲಕಮ್, ವೆಲ್ಲಫಲ, ವೃತ್ತತೃಣ, ತ.ಮುಳ್ಳಂಗಿ, ತು.ಮುಲ್ಲೆಂಗಿ, ಮ.ಮೂಲಂಕಿ, ಮೂಲಂಗಿ

**ಮೆಂತೆಗಿಡ** Fenugreek *Trigonella foenum-graeum* (leguninose), ತ.ವೆಂದಯಮ್, ತೆ.ಮೆಂತ್ರಿ, ಮೆಂತಲು, ತು.ಮೆತ್ತೆ, ಮ.ಉಲುವ, ವೆಂತಯಮ್, ಕೊಂ.ಮೆತ್ತಿ

**ಮೆಕ್ಕೆಜೋಳ** Maize or Indian corn *Zea mayu* (Graminea), ತ.ಮೊಕ್ಕಾಜೋಳಮ್, ತೆ.ಮೊಕ್ಕಜೊನ್ನ, ತು.ಜೋಳಿ, ಮ.ಪೊಂತಿಜಜೋಳಮ್, ಕೊಂ.ಜೋಳಂ

**ಮೊಂಡುಗಳ್ಳಿ** Milk Hedge, Indian spurge *Euphorbia tirucalli* (Enphorbiace), ಸಂ.ಗಂಡೇರಿ, ತ್ರಿಕಂಟಕ, ವಜ್ರದ್ರುಮ ದಂಡಸುಹಾ, ತ.ಕಳ್ಳಿ, ತೆ.ಕಳ್ಳಿ, ಜೆಮುಡು, ತು.ಕೋಡುಕಳ್ಳಿ, ಮ.ತಿರುಕಳ್ಳಿ, ಕಾಟಿರುಮ, ಕೊಂ.ಬಡ್ಡಿನಿವಲಿ

**ಮೊದಿರಕಣ್ಣಿ** *Hugonia mystax* (lineae), ತ.ಮೋದಿರಕಣ್ಣಿ, ತೆ.ಗಟ್ರಿಂತ, ಉಡಪಚೆಟ್ಟು, ತು.ಮುಳ್ಳಂಕೊಲೆ, ಮ.ಮೋದಿರಕಣ್ಣಿ, ಕೊಂ. ಧವಿಪೊಂಸರಿ

**ರಕ್ತಚಂದನ** Red sandal wood *Pterocarpus santalinus* (Leguminose), ತ.ತೆಲಚಂದನಮ್, ತೆ.ಎರ್ರಗಂಧಪುಚಿಕ್ಕ, ಕುಚಂದನಮು, ಮ.ಚೆಂಚಂದನಮ್, ಕೊಂ.ಚಂದಿರ, ಸಂ.ಕುಚಂದನ, ಮಲಯಜ, ಹರಿಚಂದನ, ಕುತಿಕಮ್

**ರಕ್ತಹೊನ್ನೆ** Kinotree *Pterocarpus marsupium* (leguminose), ಸಂ.ಮಹಾಕುಟಜ, ತ.ವೆಂಗೆ, ತೆ.ಏಗಿ, ತು.ಬೇಂಗ, ಮ.ವೆಂಗ

**ರತ್ನಗಂಧಿ** Barbadoes Flowerfence or peacock's pride *Casalpinia pulcherrima* (Leguninose), ತ.ಮಯಿರ್ಕೊನ್ನೈ, ಮ.ತೆಚ್ಚಿಮಂದಾರಮ್, ಚೆತ್ತಿಮಂದಾರಮ್, ಕೊಂ.ರತ್ನಗಂಧಿ

**ರಬ್ಬರಿನ ಮರ** India Rubber tree *Herea brasiliensis*

*manihot glaziovii* (Euphorbiacea), ಮ. ರಬ್ಬರ್‌ಮರಂ

**ರಾಗಿ** Ragi *Eleusine caracana* (Graminea), ಸಂ.ಕೃಷ್ಣಾ, ಚಿಕ್ಕಣಂ, ರಾಜಿಕಾ, ಕ್ಷುತಾಭಿಜನನ, ತ.ಇರಾಗಿ ಕೇಳ್ವರಗು, ತೆ.ರಾಗಿ, ತಮಿದೆಲು ಚೋಳು, ತು.ರಾಗಿ, ಮ.ರಾಗಿ, ಕೊಂ.ನಾಂಚಣೊ

**ರಾಮಫಲ** Bullock's heart *Anona reliculatha* (Anonacere), ತ.ರಾಮಚಿತ್ತಾ, ಆಣಿನುಣಾ, ಮನಿಲಾಆತ್ತಾ, ತೆ.ರಾಮಫಲಮು, ಮ.ವರಂಗಿಡಕ್ಕೆ ಆತ್ತ, ರಾಮಚಿತ್ತಾಮರವಮ್, ಕೊ.ರಾಂಫಲ

**ಲಕ್ಕಿಮರ** *Gvettarda speciosa* (Rubiacea), ತ.ಪನ್ನೀರ್ಮರವಮ್, ತೆ.ಪನ್ನೀರುಪುಷ್ಪಚೆಟ್ಟು, ಮ.ರಾವುಪ್ಪೂ, ಕೊಂ.ಪನ್ನೀರಜಾಂಬ

**ವಹ್ವಳಗಿಡ** Ringworm shrub, *Cassia alata* (Leguminos) ತ.ವೆಂಡುಕೊಲ್ಲಿ, ಶೀಮ್ಮೈ ಅಗತ್ತಿ, ತೆ. ಶೀಮ ಅಟಿಶಿ, ಮೆಟ್ಟತಾಮರ, ತು.ಪುರಿತಪ್ಪು, ದದ್ರುಮರ್ದಾ, ಮ. ಸೀಮ ಅಗತಿ, ಕೊ. ದಾದ್ರುಪಾನ

**ವಿಭೂತಿ ಗಿಡ** Four - o'clock flower, marvel of peru *Mirabilis jalapa* (Nyctaginaceae), ಸಂ.ಸಂಧ್ಯಾರಾಗ, ತೆ.ಚಂದ್ರಕಾಂತ, ಮ.ಅಂತಿಮಲರಿ, ತು.ಬಯ್ಯಮಲ್ಲಿಗೆ, ಕೊಂ.ಆಕಾಶ, ಮಾಗ್ರಿ, ನ.ನಪ್ತರಾತು

**ವಿಷಖದ್ದಿ** *Sida carpinifolia* (malvace), ತ.ವಟ್ಟತ್ತಿರುವಿ, ಅರಿವಾಳ್ಮಮಯ್ಯಿಪೂಣ್ಡು, ಮಲೈದಾಂಗಿ, ತೆ.ವಿಷಬೊದ್ದಿ, ಮ.ಚೆರುಪರುವ, ಮಲತಾಜ

**ವಿಷಮಧಾರಿ,** ಕುಂಡಲಿ *Clerodendron inerme* (verbenace), ತ.ಪೀನಾರಿಚ್ಚಂಗು, ಚಂಗಂಕುಪ್ಪಿ, ತೆ. ಪೀಸಂಗಿಚೆಟ್ಟು, ಮ.ನೀರ್ನೊಚ್ಚಿ, ಕೊಂ. ನಿರ್ವಿಷ

**ವಿಷಮುಂಗುಲಿ,** ಮಂಜೀವಾರು *Crinum defixum,* (Amaryllide), ತ.ತುಷೈವಾಚಿ, ವಿಷಮೂಂಗಿಲ್, ತೆ.ಕೆಸರಿಚೆಟ್ಟು, ತು.ಇಸಮುಂಗಿಲಿ, ಮ.ವೆಳುತ್ತಪೊಳತಾಳಿ, ಕೊಂ. ಕಿರಟಿಮಾರಿ

**ವಿಷ್ಣುಕ್ರಾಂತಿ** *Evolvulus Alsinoides* (convolvulace), ಸಂ. ಅಂಜನಪುಷ್ಪ, ವಿಷ್ಣುಕ್ರಾಂತಾ, ಸತಿನಲಿಕಾ, ತ.ವಿಷ್ಣುಕಾಂತಿ, ತೆ.ವಿಷ್ಣುಕ್ರಾಂತಮು, ಮ.ವಿಷ್ಣುಕ್ರಾಂತಿ, ಕೊಂ. ವಿಷ್ಣುಕ್ರಾಂತಿ

**ವೀಳ್ಯದೆಲೆ** Betel leaf pepper, *Piper betle* (piperace), ಸಂ.ಭುಜಂಗವಲ್ಲಿ, ಕಾಲಸ್ಯಂದ, ತಾಂಬೂಲಿ, ನಾಗವಲ್ಲಿ, ತ.ವೆತ್ತಿಲೈ, ಇಲೈಕ್ಕೊಡಿ, ತಾಂಬೂಲ, ತೆ.ತಮಲಪಾಕು, ನಾಗವಲ್ಲಿ, ತು.ಬಚ್ಚಿರೆ, ಮ.ವೆತ್ತಿಲ, ತಾಂಬೂಲಂ, ಕೊಂ.ಪಾನ, ಪೊಡಿಪಾನ

ಶಂಖಪುಷ್ಪ Clitoria *Clitoria ternatea* (Leguminor), ಸಂ.ಗವಾಕ್ಷ, ರೋಮವಲ್ಲಿ, ಖದಿರಕಾ, ಅಪರಾಜಿತಾ, ಮಹಾ, ಗೋಕರ್ಣಿಮಾಲಾ, ತ. ಕಾಕ್ಕಾಣಮ್, ಕವಾಚ್ಚಿ, ಕರುವಿಳೈ, ಕಂಚಿನ್ನಿ, ತೆ.ದಿಂಟೆನ, ಮ.ಆರಲ್, ಶಂಖಪುಷ್ಪಂ, ಕೊಂ. ಶಂಕಪುಷ್ಪಿ

**ಶೀವನ್ನಿ** *Gmelina asiatica* (verbenaceae), ಸಂ. ಗೋಪಭದ್ರಾ, ವಿಕಾರಿಣಿ, ತ.ನಿಲಕ್ಕುಮಿಳ್, ಅರುಚಾವಿರಾ, ಕೂಮಬಲ್, ಕಡಂಬಲ್, ತೆ.ಗುಮುಡು, ಮ.ಕುಮಿಲ್

**ಶಿವಮಲ್ಲಿಗಿಡ** *Indigofera aspalalhoides* (leguminosea), ತ.ತಿವನಾರ್ವೆಂಬು ಮ.ಮಣಲಿ

**ಶೀ(ಸೀ)ಗೆಬಳ್ಳಿ** Soap acacia *Acacia concinna* (Leguminosae), ಸಂ. ಸಪ್ತಲ, ತ.ತೀಯಕ್ಕಾಯ್, ತೆ.ಚೀಕಾಯ, ಶೀಕಾಯ, ಮ.ಚೀಕಕಾಯಿ, ಚೀಯಕಾಯಿ, ತು.ಸೀಗೆ, ಕೊಂ.ಸಿಕಾಯಿ, ಮಹಾಶಿಕಾಕಾಯಿ

**ಶೀಬಾರಿಬೇರು** Asparagus *Asparagus sarmentoses* (Liliaceae), ತಣ್ಣೀರ್ವಿಟ್ಟಾನ್ನಿಬಿಂಗು, ಚಹಾಮೂಲಮ್, ಚಂತ್ತಿರವೇರಿ, ತೆ.ಚಲ್ಲಗಡ್ಡಲು, ಮ.ಚದಾವೇಲ್ಕಿಕಿದಿಜು, ತು.ಉದುರಿ, ಬೂರು ತೌಡಂಗೆ

**ಶೀಮೆ ಅಗಸೆ** Ringworm shorut cassia alata (Leguminoseae) ತ.ವೆಂಡುಕೊಲ್ಲಿ, ಶೀಮ್ಮೈ.ಅಗತ್ತಿ, ತೆ.ಶೀಮ ಅವಿತಿ, ಮಟ್ಟತಾಮರ, ಮ ಸೀಮ ಅಗತಿ, ತು. ಪುರಿತಪ್ಪು ರದ್ರುಮರ್ದ್, ಕೊಂ. ದಾರ್ರ್ವಪಾನ

**ಶುಂಠಿ** Common ginger *Zingiber officinale* (Zingiberaceae), ಸಂ.ಶೃಂಗಿವೇರ, ಆರ್ದ್ರಕಮ್, ನಗಂಜ, ವಿಶ್ವಭೇಷಕಮ್, ತ.ಇಂಜಿ, ಶುಕ್ಕು, ವೇರ್ಕೊಂಬು, ತೆ.ಶುಂಠಿ, ಮ.ಇಂಚಿ, ಚಿಂಚಿವೇರ್, ಕು. ಶುಂಠಿ, ಕೊ. ಇಂಜಿ

**ಶ್ರೀತಾಳೀ ಮರ** Talipot or Fan paln *Corypha umbraculifera* (order palmeae), ಸಂ. ಅಲ್ಪಾಯುಷಿ ಕತಕಾಳಿ, ಕಾಳಿ, ಕರಳಿಕಾ, ಪಕ್ತಿ, ತ.ಶೀದಾಳಮ್, ತಳಪ್ಪಮರಮ್, ತಾಳಿಪ್ಪನೈ, ತೆ.ಶ್ರೀತಾಳಮು, ದೃಢದಳವೃಕ್ಷಮು, ಮ.ತಳತಮಂಡ್ಪೊ, ತು.ಪನೊಲಿದ ಮರ

**ಶ್ರೀಮುದ್ರೆಗಿಡ,** ಕಳ್ಳಂಗಡಲೆ Demon's comb, Indian Abutilon *Abutilon indicum* (Malvaceae), ತ.ಪೆರಿನ್‌ತೊಟ್ಟಿ, ತೆ.ತುಟ್ಟಿ ರಿಚಿಂದ ಮ.ಮುದ್ರ

**ಶ್ರೀ ಹೊನ್ನೆ** Poor spar *calophyllun tomerntosum* (Guttiferae), ತ.ಪೂಂಗು, ತೆ.ಪೂನ್ನ, ಮ.ಪುನ್ನ

**ಸಂಕೇಶ್ವರ ಮರ** Goolmohur, Royal goolmahur *Poinciana regia* (leguminose), ತ.ವಾದನಾರಾಯಣ ಪಂಜಾದಿ, ತೆ.ಶೀಮತಂಗೇಡು, ತು.ಕೋಡುಮರ, ಮ.ಅಲಸಿಪ್ಪೂ, ಕೊಂ.ಹೊಡಿರತ್ನಗಂಧಿ

**ಸಂದುಬಳ್ಳಿ** *Vitis quadrangularis* (Ampelideeae), ಸಂ.ಕಾಂಡಲತಾ, ವಜ್ರಕಂಡಾ, ವಜ್ರವಲ್ಲಿ, ತ.ಅರುಗಣಿ, ಪಿರಂಡೈ, ಕಿರುಟ್ಟೆ, ಪುಳಿಂದ್ಯೆ, ತೆ.ನಲ್ಲೇರು, ವಜ್ರವಲ್ಲಿ, ಮ ಚಜಲಂಪರಂಡ, ತು.ಸಂದಂಬೂರು, ಕೊಂ. ಸಂದ್‌ಬಳ್ಳಿ

**ಸಂಪಿಗೆ ಮರ** (Champaca) *Michelia champace* (magnoliaceae), ಸಂ.ಕುಸುಮಾ, ಚಾಂಬೂನದ, ವನಮಾಲಿಕಾ, ಸುಕುಮಾರ, ತ.ಚಣ್ಣಗಮ್, ವಂಡುಣಾಮಲರ್, ತೆ.ಚಂಪಕಮು,

ಸಂಪೆಂಗ, ಮ.ಚಂಪಕವಮ್, ತು.ಸಂಪಯಿ, ಚೆಂಪಕಮರ, ಕೊಂ.ಚಾಂಪ್ಯಾರೂಕು

**ಸಂಬಾರಬಳ್ಳಿ** *Vitis indica* (Ampelideae), ಮ.ಚೆಂಪರವಳ್ಳಿ, ತು.ಸಂಬಾರಬಳ್ಳಿ, ಕೊ.ಸಾವಿರಸಂಹಾರ ಸಂಬರಬಳ್ಳಿ

**ಸಜ್ಜೆ** pearl millet, *Pennisetum typhoides* (poaceae), ತ.ಪಚ್ಚಪೈರು, ತೆ.ಪುಸಲು, ಮ.ಚೆರು ಪೈಯರು, ಕೊ.ಸಜ್ಜೆ

**ಸಣ್ಣ ಈಚಲ ಮರ** Dwarf wild date *Phoenix farinifera* (palmex), ತ.ಈಚಮರವಮ್, ತೆ.ಈತಮಾನು, ಮ.ಚಿತ್ತೀಂತ್, ಕೊಂ.ಸಾನು ಇಚಲಾರೂಕು

**ಸಣ್ಣಕಾಗೆ ಸೊಪ್ಪು** *Phyllanthus reticulatus* (Euphorbiaceae), ತ.ನೀರ್ಪೂವ್ಲಾ, ತೆ.ನಲ್ಲಪುರುಗುಡು, ಮ.ಕಾಟುನೀರೂರಿ, ತು.ಕಾಕೆಸೊಪ್ಪು, ಕೊಂ.ಕಾಕ್ಕೆಸಪ್ಪ

**ಸಣ್ಣ ತುರುಚಿ** *Tragia cannabina* (Euphorbiaceae), ಸಂತ.ಗ್ರಾಹಿಣೀ, ವಿರೂಪಾ, ತ.ಚಿರುಕ್ಕಾಯಂಚೂರಿ, ಪೂನೈಕ್ಕಾಯಂಡೂರಿ, ತೆ.ದೋಗೊಂಡಿ, ಕೊಂ. ಖಾಜ್ರುಕುಲ್ಲಿ

**ಸಣಬುಗಿಡ** Sunn Hemp plant *Crotalaria juncea* (Leguninosae), ಸಂ.ವರ್ಣ, ಕರ್ಣಶೂಲ, ಧನಹಾರಿ, ಸತಿನಕ, ತ.ಚಣಲ್, ಕುತ್ತಿರಮ್, ತೆ.ಗಿಲಿಗಿಚ್ಚ, ಜನಪನಾರ, ಮ.ಚಣಕ ಶಣಮ್, ಕಾಟುತಂದಲ್‌ಕೊಡಿ, ಕೊಂ ಸೊಣಬು

**ಸನಾಡಿಕಾ** spreading hogweed *Boerhaavia repens* (Nyetagineeae) ತ.ಮೂಕ್ಕಿ ರಟ್ಟೈ, ಕಡಿಯಿರತ್ತವಮ್, ತೆಟ ಅಟತಮಾಮಿಡಿ, ಮ.ತಮಟ್‌ಮ, ತಟುತಾಟು, ತು.ನೆಲಬಸಲೆ

**ಸಪ್ಪಂಗ** *Morinda unbellata* (Rubiaceae), ಸಂ. ದಾರುಹರಿದ್ರಾ, ದಾರ್ವೀ, ಪೀತದಾರು, ಅಲಕ್ಷುಕಾ, ತ.ಮಣಾಮೆರಮ್, ತೆ.ಮೂಲುಗು, ಮ.ಮೇಣಾಮರಮ್, ತು.ಕಕ್ಕೆಕಾಯಿ, ಕೊಂ.ಸಪ್ಪಂಗು

**ಸಮುದ್ರಫಲ** *Barringtonia recenosa* (myrtaceae), ತ.ಸಮುದ್ರಪುಲ್ಲಾನಿ, ಮ.ಸಮುದ್ರವೂ, ಸಂಸ್ಕರವಡಿ, ಕೊಂ,ಸಮುದ್ರಫಳ

**ಸಮುದ್ರಬಳ್ಳಿ** Elephant creeper *Argyreia speciosa* (convolrulaceae), ತ.ಪೀಯ್ಮುಚುಟ್ಟೈ, ಸಮುದ್ರಪ್ಪಾಲೈ, ಕಡರ್ಪಾಲೈ, ಚಮುತ್ತಿರಚೋಗಿ, ತ.ಸಮುದ್ರಪಾಲ, ಸ.ಸಮುದ್ರಜೋಗಮ್

**ಸಲುಫ ಗಿಡ** The dill *Peucedanum graveolens* (unbellifieae), ಸಂ. ಶತಪುಷ್ಪಿ, ಮಧುರಾ, ಚಾಮರಪುಷ್ಪಿಕಾ, ಮಿಶ್ರೇಯ, ತ.ಶಿವಕುಪ್ಪೆ, ತೆ.ಶತಕುವೆ, ಮ.ಚತುಕುಪ್ಪ,ತು.ತಾತಯಿ

**ಸಹದೇವಿ** Ash-coloured fleadbane *Vornonia cinerea* (compositeae), ಸಂ.ಅರ್ಥಪ್ರಸಾದನ, ತ.ನೈಚಿಟ್ಟೆ, ಮ.ಪಿರಿಞೀ, ಪೂವಾಂಕುರುಂತಲ, ಕೊಂ.ಸಾಯಿದೇವಿ

**ಸಾರಾಮಿಸ್ತ್ರಿ** salep *Orchislatifolia* (orchideeae) ಕ.ತೆ - ಸಾಲಾಮಿಸ್ರಿ, ಮ.ಸಲಾಮಿಸ್ರಿ, ಕುಂ.ಸಾಲಂಮಿತ್ರಿ

**ಸಾಸಿವೆ** Indian mustard *Brassica juncea* (cruciferueae) ಸಂ.ಸರ್ಷಪಃ, ರಕ್ತಜಾಜಿ, ದುಂದುಭ. ತ.ಕುಡುಗು, ತ.ಆವಾಲು, ಮ.ಕಡುಕ, ತು.ದಾಸಲು, ಕೊ.ದಾಸಮ

**ಸಿಹಿಗೆಣಸು** sweet potato *Ipomeae batatas* (convolvulaceae), ತ.ಚರ್ಕರೈವಳ್ಳಿ, ವಳ್ಳಿಕಿಟಙ್ಗು, ತೆ.ಗನುಸು, ಚಿಲಗಡಮು, ಮೋಹನಮು, ಮ.ಕಿಟಿಂಙ, ಚೀನಿಕ್ಕಿಟಂಙ, ಮಧುರಕ್ಕಿಟಿಂಙ, ವಳ್ಳಿಕ್ಕಿಬಿಂಙ, ತು.ಕರೆಂಗ್, ಕೊಂ. ಚೀನಿಕಣಂಗ

**ಸೀಮೊಂಡೆ ಬಳ್ಳಿ** *Zehneria umbellata* (cucurbitace) ತ- ಕರ್ಕೋವೈ, ತು-ಸೀಪೆಮನೋ, ಮ.ಕರಿವಿವಳ್ಳಿ, ಕೊಂ. ಘೊಯಂಟ

**ಸೀತಾಫಲ** custard apple tree or sweet sop *Anona squamosa* (Anonaceae), ಸಂ. ಶುಭಾ, ಸುದಾ, ತ.ಆತ್ತಾ ಮರಮ್, ತೆ.ಸೀತಾಫಲವು, ಗಂಡಗಂತ್ರವು, ಮ.ಚೀತಾರ್‌ಮರವಮ್, ತು.ಅವ್ರತಕಾಯಿಮರ, ಕೊ.ಸೀತಾಫಲ

**ಸೀತಾಶ್ರು** Sita's tears bladderwort *Utricularice* (order lentibularieae), ಮ.ಸೀತಾಶ್ರು, ಕೊಂ.ಮಹಾ, ಸೀತಾಶ್ರು

**ಸುಗಂಧಮುಸ್ತೆ** (Indian spikenard) *Nardostachys jatamansi* (valerianeae), ಸಂ.ಜಟಾ, ನಳಿಕಾ, ಅಲೇಮಜಾ, ತಾಪಸಿ, ತ.ನಮತ್ತಮ್, ತೆ.ತು ಜಟಾಮಾಂಸಿ, ಮ.ಮಾಂಟೆ, ಜಟಾಮಾಂಸಿ

**ಸುಗಂಧವಾಚಿ ಗಿಡ** Greater galangal *Alpinia galanaga* (seitaminea), ಸಂ.ಕವಿದ್ರುಮಾ

**ಸುಗಂಧರಾಜ** Tuberose *Polianthes tuberosa* (Agavaceae), ತ.ನೀಲಸಂಪಂಗಿ, ತೆ.ಸುಕಂದರಾಜಿ, ಮ.ಗುಲಚ್ಚದಿ, ಕೊ.ಸುಗಂಧರಾಜ

**ಸುಗಂಧಿಬಳ್ಳಿ** Country sarsaparilla *Hemidesmes indicees* (Asclepiadel), ಸಂ.ರಕ್ತಕಾರಿವ ಅನಂತಮೂಲ, ಭದ್ರವಲ್ಲಿ, ತ.ನನ್ನಾರಿ ಕೃಷ್ಣವಲ್ಲಿ, ತೆ.ಪಾಲಸುಗಂಧಿ, ಸುಗಂಧಿಪಾಲ, ತು.ಕನ್ಯಾಬೂರು, ಮ.ನನ್ನಾರಿ ಪಾರವಳ್ಳಿ, ನರುನೀಣ್ಣಿಕಿವಿಜ್, ಕೊಂ.ದುದವಾಲಿ

**ಸುರಹೊನ್ನೆ** Alexandrian laurel or primary oil tree *Calophyllum inophyllum* (Guttifere), ಸಂ.ಪೂನ್ನಾಗಮ್, ನಮೇರುಕಾ, ಪಂಚಕೇಶರ, ತುಂಗಕೇಶರ, ತ.ಪುನ್ನೈ, ನಮೇರುಮರಮ್, ಪುನ್ನಾಗವಮ್, ತೆ.ನಮೇರು, ಪೊನ್ನವಿತ್ತುಲು, ತು.ಪೊನ್ನಿದಮರ, ಮ.ಚಿರುಪುನ್ನ, ಪೊನ್ನಕಮ್, ಕೊಂ.ಉಂಡೀರೂಕು

**ಸೂರಣಗಡ್ಡೆ** Tacca, *Tacca pinnatifida* (Taccace), ಸಂ.ಸೂರ್ಣ, ಸ್ಪುರಣ, ತ.ಕೇನ, ಮ.ಚೇನ, ತು.ಕೇನೆ, ಕೊಂ.ಸೂರ್ಣ

**ಸೂರ್ಯಕಾಂತಿ** Changeable rose, *Hibiscus mutabilis* (malvace), ಸಂ.ಪದ್ಮಚಾರಿಣಿ, ಮ.ಹಿನಪರುತ್ತಿ, ಚೀನಪರುತ್ತಿ, ಕೊಂ.ಸೂರ್ಯಕಾಂತಿ

**ಸೂಳೆಬೊಟ್ಟುಗಿಡ** pavetta *Pavetta indica* (Rubiacea) ಸಂ.ಕಾಕಚ್ಛೇದಿ, ತ.ಪಾದಟ್ಟೈ, ತೆ.ಪಾಪಟ, ಪಾಪಿರಿ, ಪಾಪಿಡಿ, ತು.ಸೂಳೆಬೊಟ್ಟು, ಮ.ಪಾಟ್ಟ, ಪಾವಟಕೋಡಿ

**ಸೇವಂತಿಗೆ** chrysanthemum, *Chrysanthe mum Indicum*

(Composit), ಸಂ.ಸುಗಂಧಿಕಾ, ಶತಪತ್ರತರಣಿ, ಅತಿಮುಕ್ತಾ, ತ.ಶಾಮಂತಿ, ತು.ಚಮತ್ತಿಗೆ, ಮ.ಚೆವಂತಿ, ಚೇಮಂತಿ, ಕೊಂ.ಶೇವಂತೆ

**ಸೊಗದೇಬೇರು** Winter cherry, *Withania somnifera* (solanace), ಸಂ. ಅಶ್ವಗಂಧಿ, ದ್ವಿಶಾರಿದಾ, ಆಬಾಲವ್, ವಸಂತಕುಸುಮ, ತ.ಅಚುವಗಂದಿ, ಅಮುಕ್ಕಿರಾ, ತೆ.ಪೆನ್ನೇರು, ಅಶ್ವಗಂಧಿ, ಮ.ಅಮುಕಿರಮ್, ಪೀರ್ವತೆ, ಕೊಂ. ಅಶ್ವಗಂಧಿ

**ಸೊಳ್ಳೆಮರ** Sepistan plun *Cordia nyxa* (Boraginex), ಸಂ.ಶ್ಲೇಷ್ಮಾತಕಮ್, ತ.ಪೆರಿಯನರುವಿಲಿ, ತೆ.ಪೆದ್ದನಕ್ಕೇರು ಎರಿಗಿಕಾಯ, ಬೆಂಕಾಚಟ್ಟು, ಮ.ನರುವರಿ. ವಿಡಿಮರಂ, ತು.ಚಳ್ಳಂಗಾಯಿ, ಕೊಂಶರ್ಪಳ, ಮಹಾ ಭೋಕುರ

**ಸೋಂಪು** Anise *Pimpinella Anisum* (umbellifer), ತ.ಸೊಂಬೂ, ತೆ.ಕುಪ್ಪಿ, ಸೊಂಪು, ಮ.ಪೆರುಂಜೀರಗಮ್, ಕೊಂ. ಸೇವಿ, ತು.ಬಡೇಸೋಪು

**ಸೋಮಲತೆ** Moonplant, *Sarcostemma brevistigma* (Asclepiade), ತೆ.ಸೋಮಮು, ಸೋಮಲತಾ, ಪುಲ್ಲತೀಗೆ

**ಸೋರೆಕಾಯಿ,** ಮಂಗಳೂರು ಸೌತೆ cucumber *Cucumis sativus* (cucurbitaceae), ತ, ಮುಳ್ಳುವೆಲ್ಲರಿ, ಮ. ಮುಳ್ಳುವೆಲ್ಲರಿ, ಕೊ.ತೊರೆ

**ಸೌತೆಬಳ್ಳಿ** cucumber, cucumis utilissimus (cucurbitace), ಸಂ.ಉರ್ವಾರುಕ,, ತು.ತೌತೆ, ಮ.ವೆಳ್ಳರಿಕ, ಕೊಂ.ಮಗ್ಗೆ

**ಸ್ವಾಮಿ ಮರ** Redwood tree, soymida febrifuga (meliace), ತ.ಶೆಮ್ಮರಮ್, ತೆ.ಸೂಮಿ, ಸೋಮಿದಡೆಟ್ಟು

**ಹಂಸಪಾದಿ** *Coldnia procumbens* (Boragine), ಸಂ. ತ್ರಿಪಾದಿ, ಗಮ್ಮತಿಕಾ, ಗೋದಾಪದಿ, ಘುಟ ಮಂಡಲಕ, ವಿಶ್ವಗ್ರಂಥಿ, ತ.ಶೆರುಪ್ಪಡಿ, ತೆ.ಹಂಸಪಾದಿ, ಮ.ತ್ರಿಪಾದಿ

**ಹನಮರ** Kino tree *Pterocorpus marsupium* (leguminose), ಸಂ.ಮಹಾಕುಟಜ, ತ.ವೆಂಗೆ, ತೆ.ವಗಿ, ತು.ವೇಂಗ, ಮ.ವೆಂಗ

**ಹತ್ತಿ** Indian cotton plant *Gossypium herbaceeon* (malracear), ಸಂ. ಅನಗ್ನಿಕಾ, ತುಂಡಿಕೇರಿ, ಕಾರ್ಪಾಸಃ ಕಾಳಕಾಂತ, ತ.ಪರುತ್ತಿ, ಕಾರ್ಪಾಚಮ್, ಉತ್ತಿರಿ, ತೆ.ಪತ್ತಿ, ತು. ಪರ್ತಿ, ಮ. ಕರುಪರುತ್ತಿ, ಕೊಂ. ಕಾಪ್ಪುಸಲ

**ಹರಳು** *Ricincess cammunis* (Euphorbinece) ಸಂ. ಅವುಂಡ, ಏರಂಡಮ್, ಗಂಧರ್ವಹಸ್ತಕ, ತ.ಆಮಣಕ್ಕು, ಆಂದಗಮ್, ತೆ.ಆಮುದಾಲಚೆಟ್ಟು, ತು.ಆಲಂಬುಡ, ಮ.ಚಿವ್ವಾಮಣಕ್ಕು, ಕೊಂ.ಎರಡಿ

**ಹಲಸಿನ ಮರ** Indian jack tree *Artocarpus inlergrifolio* (urticaceae), ಸಂ. ಪನಸ, ಸ್ಕಂದಫಲ, ಪಶುಮುಸ್ತಾ, ಕಂಟಿಕಫಲಾ, ತ.ಪಲಾಚು, ಚೀರಾ, ತೆ.ಪನಸ, ತು.ಪೆಲ, ಮ.ಪಿಲಾವು, ಕಣ್ಣಕಿಫಲ, ಜಕ್ಕ, ಕೊಂ. ಪಣಸು

**ಹಲವುಮಕ್ಕಳ ಬಳ್ಳಿ** Asparagus, *Asparagus sarmentosuc* (Liliace), ತ. ತಣ್ಣೀರ್ವಿಟ್ವಾಣ್ಕಿಂಗು, ಚಹಾಮೂಲಮ್, ಚಾತ್ತಿರವೇರಿ, ತೆ.ಚಲ್ಲಗಡ್ಡಲು, ತು.ಉದುರಿಬೂರು, ತೌಡಂಗೆ, ಮ.ಚದಾವೇಲಿಕಿ

**ಹಸ್ತಿಪಾದ** Elephant's foot Elephantopus scaber (composita), ಸಂ. ಹಸ್ತಿಪಾದ, ಎದುಲ, ತು.ನೆಲಮುಚ್ಚಳ, ಮ.ಆನಯಡಿ, ಆನೇಚೊವಡಿ, ಕೊಂ.ಮುಸಳಕೋಂಬು

**ಹಾಗಲಬಳ್ಳಿ** Momordica *Momordica charantia* (cucurbitacan), ಸಂ.ಕಾರವಲ್ಲಿ, ವಿಷಕಟಂಕಿ, ತ.ಪಾಗಲ್, ತೆ.ಕಾರಕ, ಪೊಟ್ಟೆಕಾರಕ, ತು.ಕಂಚಾಲ, ಮ.ಪಾವಲ್ ಮಿತಿಪಾಗಲ್, ಪುಲ್ಲಾಯಿನಿ, ರಾಜವಳ್ಳಿ, ಕೊಂ. ಕಾರಾತೆ

**ಹಲ್ಲುನೋವು** Ivory wood *Wrightia linctoria* (Apocynacar), ತ.ವೆಪ್ಪಾಲೆ, ನೀಲಪಾಲೆ, ಪಾಲೆ, ತೆ.ಪಾಲವರಿ, ತು.ನೈಕೂಲಿ, ಮ.ಪಾಲ, ತೊಂದಪಾತಿ

**ಹಾಲೆಮರ** Dita bark *Alstania scholaris* (Apocynacar), ಸಂ.ಜೀವನಿ, ಪಯಸ್ವಾ, ಕ್ಷತ್ರಿಯಾ, ಶೃಂಗಿರೀಟಿಕಾ, ಸಪ್ತಪರ್ಣ, ತ.ವಳಿಲೈಪ್ಪಾಲೈ, ತೆ.ಏಡಾಕುಲಂಟಿಕಟ್ಟು, ತು.ಪಾಲೆ, ಪಾಲೆಂಬು, ಮ. ಏರಿಲಂಡಾಲ, ದೈವಪಾಲ, ಮಂಗಲಪಾಲ, ಕೊಂ.ಸಾಂತ್ನಿರೂಕು

**ಹಾವುನಂಜಿನಗಿಡ** cammon Rue *Rutes grarelenes* (Rulaacee), ತೆ.ಸುದ್ದಪುಆಕು, ತು.ಸದಾಪು, ಮ.ಅರೂತ, ಸೋಮರಾಯನ್

**ಹಾವುಮೆಕ್ಕೆ** Colocynth or bitter apple *Citrullus colocyullis* (cucurbitace), ಸಂ. ಇಂದ್ರಾವರುಣಿ, ಚಿತ್ರಫಲ, ಗೋಬಂದಿನಿ, ತ.ಪೇದಿಕಾರಿ, ಅತ್ತುತ್ತುಯಮಟ್ಟಿ, ಪೇಯ್ಕೊಮ್ಮಟ್ಟಿ, ತೆ.ಪಾಪರಬುಡಮು, ಕಾರ್ಕಾರುಕಮು, ವೆರ್ರಿಪಚ್ಚ, ತು.ಕಕ್ಕೆಂಡೆಲ್, ಮ.ಪೈಕುಮ್ಮಟಿ ಕಾಟುವೆಳ್ಳರಿ, ಕೊಂ.ಕಾವಂಡಳಿ

**ಹಿಪ್ಪಲಿ ಬಳ್ಳಿ** Long pepper *Piper longum* (piperace), ಸಂ.ಪಿಪ್ಪಲೀ, ಕಣೋಫಲಾ, ಸೋನಾಮಿಕ ತ್ರಿಕಣಾ ತ.ತಿಪ್ಪಿಲಿ, ಕಲಿನಿ, ಚಮಿಲಾಗಿ, ತೆ.ಪಿಪ್ಪಲಿ. ತು.ಶಿಪ್ಪಲಿ, ಮ.ತಿಪ್ಪಲಿ, ಕೊಂ.ಹಿಪ್ಲಿ

**ಹಿರಿಬೋಗಿ** Hoper wigihtiama (Diplorocampa), ತ.ಕೂಗೊ, ತು.ಕರ್ಮರ್. ಮ.ಇಲಪೋಗು

**ಹಿರೇಕಣಿಗು** *Garcinia xanlhochymus* (Guttilera), ತ.ಕುಳವಿ, ತಮಾಲಮ್ ತಾಪಿಂಚಮ್, ತ.ತಮಾಲಮ್ ಸಮುದ್ರಪಚ್ಚ

**ಹಿರೇಮರ** *Ailamthees exceelsa* (simarubea), ತ.ಪೆರುಮರುತ್ತು, ತೆ.ಪೆದ್ದಮಾನು, ಮ.ಪೆರುಮರಂ. ಮಹಾಮಹಾರುಖ

**ಹೀರೇಬಳ್ಳಿ** Luffa *Luffa acertangulle* (cucurbitacea), ತ.ಪೀರ್ಕು, ಚಾಲಿನಿ, ಪೀರಮ್, ತೆ.ಬೀರಕಾಯ, ತು.ಪೀರೆ, ದಾರೆಪೀರೆ, ಮ.ಪೀಚ್ಚಕಂ, ಚೀರುವೀರಂ, ಕೊಂ.ಪೋಸಾಳೆ

**ಹುಣಿಸೆ ಮರ** Tamarind tree *Tamarindus Indica* (Leguminose), ಸಂ. ತಿಂತ್ರಣೀ, ಆಮ್ಲವೃಕ್ಷ, ಚಿಂಚ, ಶುಕ್ತಂ, ತ.ಪುಳಿಯಮರವಮ್, ಇಂದವಮ್, ಮುಗಿನಿ, ತೆ.ಚಿಂತಚೆಟ್ಟು,

ತು.ಪುಸ್ಕೆದಮರದ ಪುಳಿ, ಮ. ಆಮ್ಲಮ್, ಚಿಂಚ, ಚಿಂಡಿದಂ, ಮಧುರಪುಳಿ, ಕೊಂ.ಜೀಂಪ, ಚೆಂಚುರುಗ

**ಹುರುಳಿ** Horse gram, *Dolichos biflorus* (leguminos), ಸಂ. ಖಲಕುಲ, ಕುಲಸ್ಥ, ತ.ಕೊಳ್ಳು, ತೆ. ಉಲವಲು, ತು.ಕುಡು, ಮ.ಕೊಳ್ಳು, ಮುತಿರ, ಕೊಂ. ಕುಳಿತು

**ಹುಳಿಹುಣಿಚೆಯ ಗಿಡ** Yellow wood sorrel *Oxalis corniculator* (geraniaceae), ಸಂ.ಚಾಂಗೇರಿ, ಚುಕ್ರಿಕಾ, ಆಮ್ಲಲೋಣಿಕಾ, ತ.ಪುಳಿಯಾರೈ, ಅಡಾಚನಿ, ಡುಟಿಗಂ, ತೆ.ಪುಲಿಚಿಂತ, ಪುಲ್ಲಚೆಂಚಲಿ, ಮ.ಪುಳಿಯಾರಲ್, ಕೊಂ.ತೆಲ್‌ತುಪ್ಪಿ

**ಹೆಗ್ಗೆಣಸು** potato yam, wild yam *Discorca bulbifero* (Dioscoreaceae), ತ.ಕತ್ತುಕ್ಕಿಲಂಗು, ತೆ.ಚಡುಪಡ್ಡಡುಪ್ಪ, ಮ.ಕಡು, ಕೊ.ಕಾಡ್ ಕಳಂಜಿ

**ಹೆಬ್ಬಲಸಿನ ಮರ** Jungle jack freuit *Artocorpus hirsuta* (urticaceae), ತ.ಅಂದಲ್ಲಿ, ಆಯಿಲಾ, ಕಾಟ್‌ಪಿಲಾ, ತೆ.ನಾಟಪನಸಚೆಟ್ಟಾ, ತು.ಪೆಜ, ಮ.ಆಯಿಸಿ, ಕಾಟ್‌ಪಿಲಾವ, ಕೊಂ. ಪಾಚ್ಚಣಸಾರೂಕಾ

**ಹೆಮ್ಮರ** *Ailantus molaborica* (sinorulrae), ಸಂ.ಅರಲು, ಮಹಾನಿಂಬ, ಅತಿಸಾರಹಿತಾ, ಪಿಶಾಚವೃಕ್ಷ, ತ.ಮ. ಪೆರುಮರಮ್

**ಹೇಸಿಗೆ ಹೂ** Lontana *Lantana camara* (verbenaceae), ತು.ನಾತಪೂ, ಮ.ಅರಿಪ್ಪ,ಕೊಂ.ಗಣಿರೆ

**ಹೊಂಗರ** Indian coral tree *Erythrina Indica* (Leguniosoe) ತ.ಕಲಿಯಾಣಮುರುಕ್ಕು, ಚವುಡಯವ್, ಮುರುಕ್ಕಮರಮ್, ಮುಣ್ಣುರುಕ್ಕು, ತೆ.ಬಾಡಿಸೆ, ಚೆಟ್ಟಿ, ಮುಚ್ಚಿಕ್ರ, ತು.ಪೊಂಗಃ, ಮ. ಮುಳ್ಳುಮುರಿ, ವಾಂದಾರಮ್, ಕೊಂ.ಪಾಗಿರೊ

**ಹೊಂಗೆ** Indian beech *Ponganior glorbra* (leguminosore) ಸಂ.ಕರಂದ, ಧನವೃಕ್ಷ, ಪೂತಿಕರಂಜ, ಹಸ್ತಿಜ, ಮಾತೃವೃಕ್ಷ, ತ.ಪೂಂಗೆ, ಪುಂಗಮುವ್, ತೆ.ಕಾನಗು, ಕ್ರಾನುಗು, ಕ್ರೋವಿಡೆಟ್ಟ,ತು.ಕೊಂರ್ಗು, ಕೊರೆಲಗಿ, ಪುಂಗಾ, ಮ.ಪೂಂಜಾ, ಕೊಂ.ಕರಿಂಜೆರೂಕು

**ಹೊಗೆಸೊಪ್ಪು** Tobacco, *Nicotiana tabocum* (solanaceae), ಸಂ. ತಾಮ್ರಕೂಟ, ತ.ಪುಗೈಯಿಲ್ಲೈ, ತೆ.ಪೂಗಾಕು, ತು.ಪುಗೆರೆ, ಮ.ಪುಕಯಿಲ, ಕಳಂಜಮ್, ಕೊಂ.ಧುರಾ, ಪಾನ

**ಹೊನಗನ ಸೊಪ್ಪು** *Alternanthero sersilis* (Anoranacea) ಸಂ.ಪರಾಗ, ಪತ್ತೂರ, ತ.ಪೊನ್ನಾಂಕಣ್ಣಿ, ಚಿದಪ್ಪುರಮ್, ಜಾನಕಿ, ಮ.ಪೊನ್ನಾಂಕಣ್ಣಿ, ಕೊಂ. ಹೊನಗನಿ

**ಹೊನ್ನೆ** Kamalaehyor tree *Mollotus philippinesis* (Euphorbiaceae), ಸಂ. ಮಧುಕ, ಪುನ್ನಾಮ, ವಿವೃದ್ಧ, ತ.ಕಾಮುಲ, ಕಾಮಸೋಚಮ್, ತೆ.ಪುನ್ನಾಗಮು, ವಸಂತಗಂಧಮು, ತುಂಗವೃಕ್ಷಮು, ತು.ಪೊನ್ನೆದಮರ, ಮ.ಪುನ್ನ, ಕೊಂ. ಉಂಡಿರೂಕು

**ಹೊಳೆಚುಳ್ಳಿ** Holly leoued Aconthus or bears breech *Acanthus ilicifolius* (Acounthaceae) ತ.ಕಯಿತ್ತೈಮುಳ್ಳಿ, ತು.ತುದೆತುಳ್ಳಿ, ಮ.ಪಯಿಚೌಚುಳ್ಳಿ

## ಅನುಬಂಧ ೩

# ರೈತ ಮಹಿಳೆಯರೊಂದಿಗೆ ಮಾತುಕತೆ

ಭೂಮಿಯನ್ನು ಭೂತಾಯಿ ಎಂದು ಕರೆಯುತ್ತೇವೆ. ಮನುಷ್ಯನಿಗಷ್ಟೇ ಅಲ್ಲ ಸಕಲ ಜೀವಜಂತುಗಳಿಗೂ ಭೂಮಿಯೇ ಆಶ್ರಯತಾಣ; ಅದುವೇ ಪೊರೆವ ತಾಯಿ. ಭೂಮಿ ನಂಜಾದರೆ ತಾಯಿಯ ಎದೆಹಾಲು ವಿಷವಾದಂತೆ ಎಂದು ನಂಬಿದವರು ರೈತಾಪಿ ಜನ. ಇವರು ಪಾರಂಪರಿಕ ಕೃಷಿ ಪದ್ಧತಿಯನ್ನೇ ಇಷ್ಟಪಡುತ್ತಾರೆ. ಕೃಷಿಯ ಹಲವು ಪ್ರಯೋಜನಗಳನ್ನು ಅದರ ವಿಭಿನ್ನ ಮುಖಗಳನ್ನು ಅವರದ್ದೇ ಮಾತುಗಳಲ್ಲಿ ಸರಳವಾಗಿ ವಿವರಿಸುತ್ತಾರೆ. ಅವರ ಮಾತು ದೇಶೀ ಕೃಷಿಯ ಮಹತ್ತ್ವವನ್ನು ಅದನ್ನು ಉಳಿಸಿಕೊಳ್ಳುವ ಅಗತ್ಯವನ್ನು ಮನದಟ್ಟು ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಪುಟ್ಟತಾಯಮ್ಮ ಮತ್ತು ಕೃಷ್ಣಮ್ಮ ಎಂಬ ಇಬ್ಬರು ಹಿರಿಯ ರೈತ ಮಹಿಳೆಯರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ.

ಪ್ರ. ಹೊಲದಲ್ಲಿ ಏನೇನು ಬೆಳೆಯುತ್ತೀರಿ ?

ಉ. ರಾಗಿ, ಜೋಳ, ಅವರೆಕಾಯಿ, ಹುಚ್ಚೆಳ್ಳು, ಎಳ್ಳು, ತಣ್ಣೆಕಾಳು ಎಲ್ಲಾ ಬೆಳೆಯುತ್ತೇವೆ. ಹಿಂದೆಲ್ಲಾ ರಾಗಿ ಜೊತೆ ಆರ್ಕ, ಸಾಮೆ, ನವಣೆ, ಹೆಜ್ಜಾಮೆ ಎಲ್ಲ ಹಾಕುತ್ತಿದ್ದೆವು.

ಪ್ರ. ಈ ನವಣೆ ಹೆಜ್ಜಾಮೆ ಎಲ್ಲ ಏನು?

ಉ. ನವಣೆ, ಆರ್ಕ, ಸಾಮೆ, ಹೆಜ್ಜಾಮೆ ಎಲ್ಲ ದೇಹಕ್ಕೆ ಪುಷ್ಟಿ ನೀಡೋಂತ ಆಹಾರ. ನವಣೆ ಸಣ್ಣದಾಗಿರುತ್ತೆ. ಹೆಜ್ಜಾಮೆ ದಪ್ಪವಾಗಿ ಬೆಳ್ಳಗಿರುತ್ತೆ. ನವಣೆನಾ ಅನ್ನ ಮಾಡಬಹುದು. ಕರುವಿಗೆ ಹಸುವಿನ ಹಾಲಿಲ್ಲದಾಗ ನವಣೆ ಆಡಿಸಿ, (ರುಬ್ಬಿ) ಬೇಯಿಸಿ ಆರಿಸಿ ಗೊಟ್ಟಕ್ಕೆ ತುಂಬಿ ಕರುವಿಗೆ ಕುಡಿಸುತ್ತಿದ್ದರು. ಹೆಜ್ಜಾಮೆಯನ್ನು ಬೇಯಿಸಿ ಕುಟ್ಟಿ ಅನ್ನ ಮಾಡಿಕೊಂಡು ತಿನ್ನುತ್ತಿದ್ದೆವು.

ಪ್ರ. ಏಕೆ ಬತ್ತ ಇರಲಿಲ್ಲವಾ?

ಉ. ಇತ್ತು. ಆದರೆ ಬಯಲು ಸೀಮೆ ಕಡೆ ಮಳೆ ಬಂದರೆ ಮಾತ್ರ ಬೆಳೆ ಅಲ್ವಾ, ರಾಗಿ ಬರುವುದಕ್ಕೆ ಮುಂಚೆ ಇವನ್ನು ಬೆಳೆಯುತ್ತಿದ್ದೆವು

ಪ್ರ. ಅವುಗಳನ್ನು ಬೇರೆಯಾಗಿ ಬೆಳೆಯುತ್ತಿದ್ರಾ ಹೇಗೆ?

ಇಲ್ಲಾ ರಾಗಿ ಜೊತೆ ಸಾಲಲ್ಲಿ ಬೆಳೆಯುತ್ತಿದ್ದೆವು. ರಾಗಿ ಹತ್ತು ಭಾಗವಾದರೆ, ಇವು ಒಂದು ಭಾಗ. ರಾಗಿ ಜೊತೆ ನವಣೆ, ಹೆಜ್ಜಾಮೆ, ಸಾಮೆ ಎಲ್ಲವನ್ನೂ ಚೆಲ್ಲುತ್ತಿದ್ದರು. ರಾಗಿನಾ ಚೆಲ್ಲಿ, ಬಿತ್ತಿ ಅಥವಾ ನಾಟಿಮಾಡುತ್ತಿದ್ದರು. ಇವುಗಳನ್ನು ಸುಮ್ಮನೆ ಚೆಲ್ಲುತ್ತಿದ್ದರು. ಇವು ಸ್ವಲ್ಪ ಮುಂದೆನೇ ಕಟಾವಿಗೆ ಬರುತ್ತಿದ್ದವು. ಮೇಲಿನ ತೆಂಡೆಗಳನ್ನು ಕೂದು, ದಂಟನ್ನು ಹಸು, ಕುರಿ, ದನಗಳಿಗೆ ಹಾಕುತ್ತಿದ್ದರು.

ಪ್ರ. ಕಾಳಿನ ಬಗ್ಗೆ ಹೇಳಿದ್ರಲ್ಲಾ?

ಉ. ಅವರೆ ಕಾಳು, ತಣ್ಣೆಕಾಳು (ಹಲಸಂದೆ)ಹುಚ್ಚೆಳ್ಳು ರಾಗಿ ಜೊತೆ ಚೆಲ್ಲುತ್ತಿದ್ದೆವು. ಡಿಸೆಂಬರ್‌ನಲ್ಲಿ ಅವರೆಕಾಳು ಬರುತ್ತಿತ್ತು. ಕೆಲವು ಸಾಲನ್ನು ಮಾತ್ರ ಬೀಜಕ್ಕೆ ಬಿಟ್ಟು ಎಲ್ಲವನ್ನೂ ಕುಯ್ಯುತ್ತಿದ್ದೆವು. ಹೊಲದ ಬದಿಯ ಅವರೆಯನ್ನು ದನಗಳು ಮೇಯುತ್ತಿದ್ದವು. ತಣ್ಣೆಕಾಳು, ಹುಚ್ಚೆಳ್ಳುಗಳನ್ನು ಕುಯ್ದು ಕಣದಲ್ಲಿ ಬಡಿದು, ಪೆಟ್ಟೆ ಕಟ್ಟಿ ತುಂಬಿಡುತ್ತಿದ್ದೆವು. ಕಾಳುಗಳು ನಮಗಾದರೆ, ಗಿಡದ ಸೊಪ್ಪುಗಳು ದನಕರುಗಳಿಗೆ ಮೇವಾಗುತ್ತಿತ್ತು.

ಪ್ರ. ಯಾವ ಗೊಬ್ಬರ ಹಾಕುತ್ತಿದ್ರಿ?

ಉ. ಕೊಟ್ಟಿಗೆ ಗೊಬ್ಬರ ಹೆಚ್ಚು. ಬೇಸಗೆ ಸಮಯದಲ್ಲಿ ಅಂದರೆ ಏಪ್ರಿಲ್-ಮೇನಲ್ಲಿ ಕೆರೆಯಿಂದ ಗೋಡು ಮಣ್ಣು ತಂದು ಹಾಕುತ್ತಿದ್ದೆವು. ಅದಾದ ಮೇಲೆ ತಿಪ್ಪೆ ಗೊಬ್ಬರ, ಅದನ್ನು ಕೊಟ್ಟಿಗೆ ಗೊಬ್ಬರ ಅಂತಲೂ ಹೇಳುತ್ತಾರೆ. ಅದನ್ನು ಚೆಲ್ಲುತ್ತಿದ್ದರು. ತಿಪ್ಪೆ ಗೊಬ್ಬರದಲ್ಲಿ ಸೊಪ್ಪು, ಆಡು, ಕುರಿ, ದನಗಳ ಸಗಣಿ, ಪಿಕ್ಕೆಗಳನ್ನು, ಕಸ-ಕಡ್ಡಿಗಳನ್ನು ಸುರಿಯುತ್ತಿದ್ದೆವು. ಒಳ್ಳೆ ಗೊಬ್ಬರ ಆಗುತ್ತಿತ್ತು. ಈಗಿನಂತೆ ರಾಸಾಯನಿಕ ಗೊಬ್ಬರ ಹಾಕುತ್ತಿರಲಿಲ್ಲ.

ಪ್ರ. ಹಿಂದಿನ ಉಳುಮೆ ಬಗ್ಗೆ ಹೇಳಿ

ಉ. ಯುಗಾದಿ ಹಬ್ಬ ಬಂದ ಮೇಲೆ, ಮುಂಗಾರಲ್ಲಿ 'ಹೊನ್ನೇರು' ಕಟ್ಟುತ್ತಿದ್ದರು. ನಾಲ್ಕೈದು ಬಾರಿ ಊರಿನ ಸುತ್ತ ಒಬ್ಬ ನೇಗಿಲು ಹಿಡಿದು ಉತ್ತುಕೊಂಡು ಬರುತ್ತಿದ್ದ ಆಮೇಲೆ ಎಲ್ಲರೂ ಉಳುತ್ತಿದ್ದರು. ನೀರೆಕ್ಕೆಯಲ್ಲಿ ನೀರು ನಿಂತಾದ ಮೇಲೆ ಹೊಲ ಉಳುತ್ತಿದ್ದುದು. ಮಳೆ ಬಂದರೆ ಮಾತ್ರ ರಾಗಿ ಹಾಕುತ್ತಿದ್ದರು ಇಲ್ಲದಿದ್ದರೆ ಬರೀ ಹುರುಳಿ ಚೆಲ್ಲುತ್ತಿದ್ದರು.

ಪ್ರ. ಆಗ ಮಿಶ್ರ ಬೆಳೆ ಏನೇನು ಹಾಕುತ್ತಿದ್ರಿ ?

ಉ. ಅದೇ ರಾಗಿ ಜೊತೆ ಅವರೆ, ಹುಚ್ಚೆಳ್ಳು, ತಣ್ಣೆ, ಸಾಮೆ, ಅರ್ಕ, ಒಂದೊಂದು ಸಾಲು ಮಧ್ಯ ಹಾಕುತ್ತಿದ್ದೆವು. ಮನೆಗೆ ಕಾಳಾಗಿ ವರ್ಷಗಟ್ಟಲೆ ಉಪಯೋಗಿಸಲು ಕಾಳು ಸಿಗುತ್ತಿತ್ತು. ರಾಗಿಯೂ ಇರುತ್ತಿತ್ತು. ಬೇಸಗೆಯಲ್ಲಿ ತಿನ್ನಲು ಸಾಮೆ, ಹೆಜ್ಜಾಮೆ ಉಪಯೋಗಿಸುತ್ತಿದ್ದೆವು. ಇವುಗಳಿಗೆ ಹೆಚ್ಚು ನೀರೇನು ಬೇಕಿರಲಿಲ್ಲ. ಸ್ವಲ್ಪ ಮಳೆಯಾದರೆ ಸಾಕಿತ್ತು. ಹೊಲಕ್ಕೆಯೇನಾದರೂ ಕಡ್ಡಿ (ರೇಷ್ಮೆ ಬೆಳೆ) ನೆಟ್ಟಿದ್ದರೆ ಹರಳು ಗಿಡ ನೆಡುತ್ತಿದ್ದೆವು. ಚಿಟ್ಟರಳು, ದಪ್ಪ ಹರಳು ಎಂದು ಎರಡು ತರ. ಚಿಟ್ಟರಳು ಸಿಡಿಯುವ ಮುಂಚೆ ಸಂಗ್ರಹಿಸಿ, ಎಣ್ಣೆ ಮಾಡಲು ಉಪಯೋಗಿಸುತ್ತಿದ್ದೆವು. ಹುಚ್ಚೆಳ್ಳನ್ನು ಗಾಣಕ್ಕೆ ತೆಗೆದುಕೊಂಡು ಹೋಗಿ ಎಣ್ಣೆ ಮಾಡಿಸುತ್ತಿದ್ದೆವು. ಕೊಬ್ಬರಿಯಿಂದ ಎಣ್ಣೆ ಮಾಡಿಸುತ್ತಿದ್ದೆವು. ಹಾಗಾಗಿ ಮನೆಯಲ್ಲೆ ಹತ್ತಿರದಲ್ಲೆ ಎಲ್ಲವೂ ದೊರೆಯುತ್ತಿದ್ದವು. ಈಗ ಎಲ್ಲಾ ಹೊರಗಿನಿಂದಲೇ ತರುತ್ತಾರೆ. ಫೆಬ್ರವರಿ ಸಂದರ್ಭದಲ್ಲಿ ಕೀರೆ, ದಂಟು ಸೊಪ್ಪನ್ನು ಬೆಳೆಯುತ್ತಿದ್ದೆವು. ಮನೆಗೆ ಸೊಪ್ಪಾಗುತ್ತಿತ್ತು. ಮೆಣಸಿನಕಾಯಿ ನೆಟ್ಟರೆ ಮಧ್ಯೆ ಸಣ್ಣತೊಗರಿ ಇಲ್ಲವೇ ದಪ್ಪತೊಗರಿಯನ್ನೂ ಬೆಳೆಯುತ್ತಿದ್ದುದುಂಟು. ನೀರಿದ್ದಾಗ ಬಾವಿಯ ಪಕ್ಕದಲ್ಲಿ ಈರುಳ್ಳಿ, ಬೆಳ್ಳುಳ್ಳಿಗಳನ್ನು ಬೆಳೆಯುತ್ತಿದ್ದೆವು. ಅವುಗಳನ್ನು ಕಂತೆ ಕಟ್ಟಿ ತೊಂಬೆಗೆ ನೇತು ಹಾಕಲಾಗುತ್ತಿತ್ತು. ಎಲ್ಲಾ ನಾಟಿ ಮಾತ್ರ. ಆಗೆಲ್ಲಾ ತುಂಬಾ ಕೆಲಸ ಮಾಡುತ್ತಿದ್ದರು. ದೀಪಾವಳಿಯಿಂದ ಉಗಾದಿಯವರೆಗೆ ಆದ್ರೂ ಕಣದ ಕೆಲಸ ಮುಗಿಯುತ್ತಿರಲಿಲ್ಲ.

ಪ್ರ. ಆಗ ಬೆಳೆಗಳಿಗೆ ಯಾವ ತರಹದ ರೋಗಗಳು ಬರುತ್ತಿದ್ದವು ?

ಉ. ಆಗ ಯಾವ ರೋಗವೂ ಇರಲಿಲ್ಲ. ಹಂಗೇನಾದ್ರೂ ಇದ್ರೆ ಈ ಬೇವಿನ ಎಲೆ ತಂದು ಪುಡಿಮಾಡಿ ಸುಟ್ಟು ನೀರಿನೊಂದಿಗೆ ಕಲಸಿ ಹಾಕುತ್ತಿದ್ದೆವು. ಅದಕ್ಕೆ ಹಸುವಿನ ಗಂಜಲ ಸೇರಿಸುತ್ತಿದ್ದೆವು. ಅವರೆ ಕಾಳಿಗೆ ಮಾತ್ರ ಹಿಮ ಬಿದ್ದಾಗ ಹುಳ ಬರುತ್ತಿತ್ತು. ಬದನೆ, ಟಮೊಟೊ, ಮೆಣಸಿನಕಾಯಿ, ಇಂಥ ಗಿಡಗಳ ಜೊತೆ ಚೆಂಡು ಹೂವಿನ ಗಿಡವನ್ನೂ ನೆಡುತ್ತಿದ್ದರಿಂದ ಅಷ್ಟೇನೂ ಹುಳದ ಬಾಧೆ ಇರಲಿಲ್ಲ. ಕಾಳುಗಳನ್ನು ಮಾತ್ರ ವಡಕೆ ಹುಲ್ಲಿನಿಂದ ಬಿದಿರಿನ ಸಹಾಯದೊಂದಿಗೆ ಕಟ್ಟಿ ಬಿದಿರು ತೆಗೆದು ಹುಲ್ಲನ್ನು ಕೊಳವೆಯಂತೆ ಮಾಡಿ ಯಾವ ಹುಳವೂ ಹೋಗದಂತೆ ಬಿಗಿಯಾಗಿ ಬಂಧಿಸಿ ಕಾಳುಗಳನ್ನು ಇಡುತ್ತಿದ್ದರು.

ಪ್ರ. ಮಣ್ಣಿನ ಪರೀಕ್ಷೆ ಏನಾದ್ರೂ ಮಾಡಿಸ್ತಿದ್ರಾ?

ಉ. ಏನೂ ಇಲ್ಲ. ಆಗ ಮಣ್ಣು ಚೆನ್ನಾಗಿರುತ್ತಿತ್ತು. ಬರೀ ತಿಪ್ಪೆ ಗೊಬ್ಬರ ಅಥವಾ ಕುರಿಗಳ ಹಿಂಡನ್ನು ಹೊಲ ಗದ್ದೆಗೆ ಬಿಟ್ಟು ಮೇಯಿಸಿ ಅವುಗಳ ಗೊಬ್ಬರವು ಮಣ್ಣಿಗೆ ಸೇರುವಂತೆ ಮಾಡುತ್ತಿದ್ದರು. ಹುಳ್ಳಿಯನ್ನು ಹೊಲದಲ್ಲಿ ಮಣ್ಣಿನಲ್ಲಿ ಉಳುಮೆ ಮಾಡುತ್ತಿದ್ದರು. ಬೇಸಗೆಯಲ್ಲಿ ಕೆರೆಯ ಮಣ್ಣನ್ನು ಹಾಕುತ್ತಿದ್ದರಿಂದ ಮಣ್ಣಿನ ಫಲವತ್ತತೆ ಚೆನ್ನಾಗಿತ್ತು. ಮಣ್ಣಿನಲ್ಲಿ ಎರೆಹುಳಗಳು ಆಗ ಜಾಸ್ತಿ ಇದ್ದವು. ಕೀಟನಾಶಕ ಬಳಸದೇ ಇದ್ದುದರಿಂದ ಅವು ತುಂಬಾ ಸಿಗುತ್ತಿದ್ದವು. ಆದರೆ ಈಗ ನಾವೆ ತಂದು ಬೆಳೆಸಬೇಕಾಗಿದೆ.

ಪ್ರ. ಈಗ ರಾಗಿ ಜೋಳನೆಲ್ಲಾ ರಸ್ತೆ ಬದಿ ಹಾಕಿ ಕಾಳು ಬಿಡಿಸುತ್ತಾರೆ ಅದರ ಬಗ್ಗೆ ಏನಂತೀರಾ ?

ಉ. ತಪ್ಪು ಅದು. ರಾಗಿ ಲಕ್ಷ್ಮಿ ಇದ್ದಂಗೆ. ಗಲೀಜು ಮಾಡಬಾರದು. ನಾವು ಕಣ ಮಾಡಿ ಕಾಳು ರಾಗಿಗಳನ್ನೆಲ್ಲಾ ಬಡಿತಿದ್ದೆವು. ಎಲ್ಲಾ ಕೊಯ್ದಾದ ಮೇಲೆ ಸ್ವಲ್ಪ ಜಾಗವನ್ನು ಮಟ್ಟ ಮಾಡಿ ನೀರು ಹೊಯ್ದು ಕುರಿ ಹಸುವಿನ ಕಾಲಿನಲ್ಲಿ ತುಳಿಸಿ ಗರಿಯಿಂದ ನುಣ್ಣಗೆ ಸಮಮಾಡಿ, ಸಗಣಿ ಸಾರಿಸಿ ಅದು ಒಣಗಿದ ಮೇಲೆ ಮಧ್ಯೆ ಮೇಟಿ ನೆಟ್ಟು ತೆನೆ ಮೇಲೆ ಕೂಳೆ ಕೆಳಗೆ ಬರುವಂತೆ ಇಟ್ಟು, ರೋಣು ಕಲ್ಲಿನಿಂದ ಬಿಡಿಸುತ್ತಿದ್ದರು. ಈಗಲೂ ಸರ್ಕಾರದ ಕಣ ಇದೆ ಯಾರೂ ಉಪಯೋಗಿಸುವುದಿಲ್ಲ.

ಪ್ರ. ಕೃಷಿ ಕೆಲಸ ತುಂಬಾ ಕಷ್ಟದ ಕೆಲಸ ಅಲ್ವಾ?

ಉ. ಯಾವುದೇ ಕೆಲಸಾನ ಪ್ರೀತಿಸಬೇಕು. ಇಲ್ಲಾಂದರೆ ಎಲ್ಲವೂ ಕಷ್ಟವೇ. ಆಗ ಬೆಳಗೆದ್ದು ಗಂಡಸರು ದನ ಕಟ್ಟಿಕೊಂಡು ಹೊಲಕ್ಕೆ, ಗದ್ದೆಗೆ ಹೋಗ್ತೋರು. ಹೆಂಗಸರು ಕಸ ಬಳಿದು ಅಡಿಗೆ ಮಾಡಿಕೊಂಡು ಹೊಲಕ್ಕೆ ಹೋಗ್ತೋರು. ಅಲ್ಲಿ ಕಳೆ ಕೀಳೋದು, ಕಾಳು, ಕಾಯಿ ಕೀಳೋದು, ನೀರು ಹಾಕೋದು ಹೀಗೆ ಏನೇನೋ ಕೆಲಸ ಮಾಡುತ್ತಿದ್ದೆವು. ಬೆಳಗ್ಗಿನಿಂದ ದುಡಿದು ಬೆವರು ಬರ್ತಾಯಿತ್ತು. ಕೆಟ್ಟ ನೀರೆಲ್ಲಾ ಹೋಗಿ ಆರೋಗ್ಯ ಚೆನ್ನಾಗಿರ್ತಿತ್ತು. ಬಿ.ಪಿ ಶುಗರು ಗೊತ್ತೇ ಇರಲಿಲ್ಲ. ಕಾಳು-ಕಡ್ಡಿಯಿಂದ ಮನೆಗೆ ಬೇಕಾಗೊ ಕಾಳು ಸಿಗೋದು. ಸೊಪ್ಪುಚೆನ್ನಾಗಿ ಸಿಗುತ್ತಿತ್ತು. ನಮಗೆ ಬೇಕಾದ ಎಣ್ಣೆ ಕಾಳುಗಳನ್ನು ಬೆಳೆದುಕೊಳ್ತಾಯಿದ್ದದ್ದರಿಂದ ಗಾಣಕ್ಕೆ ಕೊಟ್ಟು, ಎಣ್ಣೆ ಮಾಡಿಸಿಕೊಳ್ಳುತ್ತಿದ್ದೆವು. ಕಾಳು ಗಿಡದಿಂದ ದನಕ್ಕೆ ಕುರಿಗಳಿಗೆ ಸೊಪ್ಪು ಸಿಗೋದು ಅರ್ಕ, ನವಣೆ, ರಾಗಿ, ಸಾಮೆ ಇವುಗಳಿಂದಾಗಿ ಹುಲ್ಲಿನ ಸಮಸ್ಯೆ ಇರಲಿಲ್ಲ. ಕುರಿ ಆಡು ಇದ್ದದ್ದರಿಂದ ತುಪ್ಪಟ ಮಾರಿ ಕಂಬಳಿ ತೆಗೆದುಕೊಳ್ಳುತ್ತಿದ್ದೆವು. ಹಸುವಿನಿಂದ ಸಮೃದ್ಧ ಹಾಲು, ಮೊಸರಾಗುತ್ತಿತ್ತು. ತಿಪ್ಪೆ ಗೊಬ್ಬರಕ್ಕೇನೂ ಕಾಸುಕೊಡುವ ಆಗಿರಲಿಲ್ಲ. ಈಗಿನಂತೆ ರೋಗಗಳೂ ಇರಲಿಲ್ಲ. ಬಿತ್ತನೆ ಬೀಜಗಳನ್ನು ನಾವೆ ಮಾಡಿಕೊಳ್ಳುತ್ತಿದ್ದೆವು. ಯಾವುದಕ್ಕೂ ಕಾಸು ಹೆಚ್ಚೇನೂ ಖರ್ಚಾಗುತ್ತಿರಲಿಲ್ಲ. ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದರು. ಆದರೆ ಈಗ ಅವೆಲ್ಲಾ ಕಮ್ಮಿಯಾಗಿದೆ. ಎಲ್ಲದಕ್ಕೂ ಸರ್ಕಾರದ ಕಡೆ ಮುಖ ಮಾಡುತ್ತಾರೆ. ಸ್ವಲ್ಪ ತಾಳ್ಮೆಯಿಂದ ವ್ಯವಹರಿಸಿದರೆ ವ್ಯವಸಾಯಕ್ಕಿಂತ ಸುಖವಾದ ಕೆಲಸ ಬೇರಿಲ್ಲ. ಬೆಳಗ್ಗಿನ ಒಳ್ಳೆ ಗಾಳಿ, ದೇಹ ಶ್ರಮ, ಕಲಬೆರಕೆ ಇಲ್ಲದ ಊಟ,ಮಾಡುತ್ತಿದ್ದರಿಂದಲೇ ನಾವು ಚೆನ್ನಾಗಿದ್ದೇವೆ.

ಪ್ರ. ಆಗಿನ ಕಾಲದ ವ್ಯವಸಾಯಕ್ಕೂ ಈಗಿನ ಕಾಲಕ್ಕೂ ಏನು ವ್ಯತ್ಯಾಸ ?

ಉ. ಆಗ ಜನ ನಮ್ಮ ಕೆಲಸ ಅಂಥ ಮಾಡುತ್ತಿದ್ದರು. ಈಗ ಎಲ್ಲದಕ್ಕೂ ಅಂಗಡಿಯಿಂದ ತರೋಣ ಅಂತಾರೆ. ಎಲ್ಲರೂ ಕೂತು ತಿಂದರೆ ಬೆಳೆಯುವರ್‍ಯಾರು? ನಮ್ಮ ಆಹಾರ ನಾವೇ ಸಂಪಾದಿಸಬೇಕಲ್ಲವೆ.

ಸಹಜ ಕೃಷಿಯೇ ಸರ್ವವ್ಯಾಧಿಗಳಿಗೂ ಮದ್ದು. ಕೃತಕ ಗರ್ಭಧಾರಣೆ, ಪ್ರಣಾಳ ಶಿಶು ಇವೆಲ್ಲ ಪ್ರಕೃತಿಗೆ ವಿರುದ್ಧವಾದ ಪ್ರಕ್ರಿಯೆಗಳು. ಋತುಮಾನಕ್ಕನುಗುಣವಾಗಿ ಮನುಷ್ಯನಿಗೆ ಬೇಕಾದ ಆಹಾರವನ್ನು ಪ್ರಕೃತಿಯೇ ಹಲವು ರೀತಿಯಲ್ಲಿ ನೀಡುತ್ತಿದೆ. ಬೇಸಗೆ ಕಾಲದಲ್ಲಿ ಹೆಚ್ಚು ನೀರಿನಾಂಶವಿರುವ ಹಣ್ಣುಗಳನ್ನು ಮಳೆಗಾಲ ಚಳಿಗಾಲಗಳಲ್ಲಿ ಸಿಪ್ಪೆ ಮಂದವಿರುವ ಉಷ್ಣಾಂಶವಿರುವ ಹಣ್ಣುಗಳನ್ನು ಕೊಡುತ್ತದೆ. ಇದು ಪ್ರಕೃತಿಯ ರಹಸ್ಯ. ಇದನ್ನು ವಿಕೃತಿಗೊಳಿಸುವುದು ಸುಕೃತವಲ್ಲ ಎಂಬುದೇ ಇವರ ಮಾತುಕತೆಯ ತಿರುಳು.

**ಮಾಹಿತಿ :**

ಕೃಷ್ಣಮ್ಮ ಬಂಡಾರಹಳ್ಳಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ

ಪುಟ್ಟತಾಯಮ್ಮ, ತೊಪ್ಪನಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ

**ಅಕ್ಷರ ರೂಪ : ಪೂರ್ಣಿಮ, ಸಿ.ಎಸ್.**

# ಅನುಬಂಧ ೪

## ವಿಜ್ಞಾನಿ - ಕೃಷಿಕ ಡಾ. ಖಾದರ್ ಅವರ ಸ್ವಯಂಕೃಷಿ ಪಾಠ

'ಆರೋಗ್ಯಕ್ಕಾಗಿ ಆಹಾರ, ಆಹಾರಕ್ಕಾಗಿ ಕೃಷಿ' ಎಂಬ ತಾತ್ವಿಕ ತಳಹದಿಯಲ್ಲಿ ಡಾ. ಖಾದರ್ ಅವರು ಶಾಲಾ ಕಾಲೇಜುಗಳಲ್ಲಿ, ನಗರ, ಪಟ್ಟಣಗಳಲ್ಲಿ, ಗ್ರಾಮ, ತೋಟಗಳಲ್ಲಿ ಪಾಠಗಳನ್ನು ಮಾಡುತ್ತಾರೆ. ದೇಹಕ್ಕೆ ಬೇಕಾದ ಪೌಷ್ಟಿಕ ಆಹಾರವನ್ನು ಬಳಸಿ ಆಸ್ಪತ್ರೆಯಿಂದ ದೂರವಿರಬೇಕೆಂದು ತಿಳಿಸುತ್ತಲೇ ರಾಸಾಯನಿಕ ಬಳಸದೆ ಸಹಜ ಕೃಷಿಯನ್ನು ಅಳವಡಿಸಿಕೊಂಡು ರೈತರು ತಮ್ಮ ಆರೋಗ್ಯವನ್ನು, ಆರ್ಥಿಕ ಪರಿಸ್ಥಿತಿಯನ್ನು ಹೇಗೆ ಸುಧಾರಿಸಿಕೊಳ್ಳಬೇಕೆಂದು ತಿಳಿವಳಿಕೆ ನೀಡುತ್ತಾರೆ.

ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ರಾಸಾಯನಿಕ ಪ್ರಚೋದಕ (ಸ್ಟೆರಾಯಿಡ್) ಪದಾರ್ಥಗಳ ಮೇಲೆ ಪಿಎಚ್.ಡಿ. ಪದವಿ ಪಡೆದಿರುವ ಡಾ. ಖಾದರ್ ಅವರು ಅಮೆರಿಕಾದ ಡುಪಾಂಟ್ ಎನ್ನುವ ಒಂದು ದೊಡ್ಡ ಬಹುರಾಷ್ಟ್ರೀಯ ಕಂಪನಿಯಲ್ಲಿ ಹತ್ತು ವರ್ಷ ವಿಜ್ಞಾನಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಭೂಮಿಯ ವಿನಾಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಷಡ್ಯಂತ್ರವನ್ನು ಸಹಿಸಲಾರದೆ, ಕಂಪನಿಯಿಂದ ಹೊರಬಂದು ಭಾರತದ ಭೂಮಿಯ ಫಲವತ್ತತೆಯನ್ನು ಕಾಪಾಡಲು ಸಹಜ ಕೃಷಿಯನ್ನು ರೈತರು ಅಳವಡಿಸಿಕೊಳ್ಳುವ ಮುಖಾಂತರ ರಾಸಾಯನರಹಿತ ಕೃಷಿಯಿಂದ ಭೂಮಿಯನ್ನು ಉಳಿಸಿಕೊಳ್ಳಲು, ದುಡಿದು ಬಂದ ಲಾಭವನ್ನೆಲ್ಲಾ ರೈತರು ತಮ್ಮ ಕುಟುಂಬಕ್ಕೆ ಬಳಸಿಕೊಂಡು ಸುಖಮಯ ಜೀವನ ನಿರ್ವಹಣೆ ಮಾಡಲು ಮುಂದಾಗಬೇಕೆಂದು ಮಾರ್ಗದರ್ಶನ ಮಾಡುತ್ತಿದ್ದಾರೆ. ರೈತರಲ್ಲಿ ವಿಶ್ವಾಸ ಮೂಡಿಸಲು ತಾವೇ ಸ್ವತಃ ಹೆಗ್ಗಡದೇವನ ಕೋಟೆಯಲ್ಲಿ ಎಂಟು ಎಕರೆ ಬಂಜರು ಭೂಮಿಯಲ್ಲಿ ಕಾಡು ಕೃಷಿ, ಸಹಜ ಕೃಷಿಯನ್ನು ಮಾಡಿ, ತಮ್ಮ ಕುಟುಂಬಕ್ಕೆ ಬೇಕಾದ ದವಸ, ಧಾನ್ಯ, ಹಣ್ಣು ಮತ್ತು ತರಕಾರಿ ಸೇರಿದಂತೆ ಎಲ್ಲವನ್ನು ಬೆಳೆಯುತ್ತಾರೆ. ಆ ಮುಖಾಂತರ ನಮ್ಮ ಕುಟುಂಬದ ಆರೋಗ್ಯಕ್ಕಾಗಿ ನಾವು ಉತ್ಪಾದನೆ ಮಾಡಬೇಕು. ಹೆಚ್ಚಿನದನ್ನು ಮಾರಾಟ ಮಾಡಬೇಕು. ಆಗಲೇ ನಮ್ಮ ಆರೋಗ್ಯ ವೃದ್ಧಿಯಾಗುತ್ತದೆ. ಇದನ್ನು ಎಲ್ಲರೂ ಅನುಸರಿಸಿದರೆ ಒಳ್ಳೆಯದೆಂದು ಅವರು ಅಭಿಪ್ರಾಯಪಡುತ್ತಾರೆ.

**ಆರೋಗ್ಯದ ಸಿರಿ ಸಿರಿಧಾನ್ಯಗಳು :** ಡಾ|| ಖಾದರ್ ಆರೋಗ್ಯ, ಆಹಾರ, ಕೃಷಿಯ ಅರ್ಥವನ್ನು ಜನಸಾಮಾನ್ಯರಿಗೆ ಸರಿಯಾದ ರೀತಿಯಲ್ಲಿ ತಿಳಿಸುತ್ತಾ, ಜನರ ಮನಸ್ಸನ್ನು ತಟ್ಟುತ್ತಿರುವ ಒಬ್ಬ ಆರೋಗ್ಯ ಪ್ರವಾದಿ, ವೈದ್ಯ, ವಿಜ್ಞಾನಿ. ತೃಣಧಾನ್ಯಗಳ ಮಹತ್ವವನ್ನು ಕುರಿತು ಖಾದರ್ ಅವರು ಹೀಗೆ ವಿವರಿಸುತ್ತಾರೆ.

ನಾವು ಇಂದು ಹೆಚ್ಚಾಗಿ ತಿನ್ನುತ್ತಿರುವುದು ಪಾಲಿಷ್ ಮಾಡಿದ ಅಕ್ಕಿ ಮತ್ತು ಗೋಧಿಯನ್ನು. ಇದೇ ನಮ್ಮ ದೇಶದಲ್ಲಿ ಮಧುಮೇಹಿಗಳ ಸಂಖ್ಯೆ ಹೆಚ್ಚಾಗಲು ಕಾರಣ. 2020ನೇ ಇಸವಿಯ ಹೊತ್ತಿಗೆ ಭಾರತದ ಶೇ 50ರಷ್ಟು ಜನರು ಮಧುಮೇಹಿಗಳಾಗುತ್ತಾರೆ. ಅಕ್ಕಿ ಮತ್ತು ಗೋಧಿ ಜೀರ್ಣಕ್ರಿಯೆಯಲ್ಲಿ ಸಕ್ಕರೆಯನ್ನು ಅತಿ ಬೇಗನೆ ರಕ್ತಕ್ಕೆ ಸೇರಿಸಿಬಿಡುತ್ತದೆ. ಅವುಗಳಲ್ಲಿರುವ ನಾರಿನಾಂಶವು ಕಡಿಮೆ. ರಾಗಿಯೂ ನಮ್ಮ ಆಹಾರದ ಮುಖ್ಯ ಭಾಗವಾಗಿದೆ. ಆದರೆ ರಾಗಿಯಿಂದ ಉಪಾಹಾರದ ಪದಾರ್ಥಗಳನ್ನು ಮಾಡಲಾಗದು. ರೊಟ್ಟಿ, ಮುದ್ದೆ, ಉಪ್ಪಿಟ್ಟು ಮಾಡಬಹುದು. ಆದರೆ ರಾಗಿಯಲ್ಲದೆ ಇನ್ನೂ ಹಲವು ಅಚ್ಚರಿಯ ಧಾನ್ಯಗಳಿವೆ ಎಂದು ಹೇಳುತ್ತಾ ಅವರ ಅನುಭವ ಆಧರಿಸಿದ ವೈಜ್ಞಾನಿಕ ವಿವರಣೆ ನೀಡಲು ಪ್ರಾರಂಭಿಸಿದರು.

ಅಕ್ಕಿ, ಗೋಧಿಗೆ ಬದಲಾಗಿ ಪುರಾತನ ಕಾಲದಿಂದಲೂ ನಮ್ಮ ಜನರ ಆರೋಗ್ಯ ಕಾಪಾಡಿಕೊಂಡು ಬಂದ ಧಾನ್ಯಗಳಿವೆ. ಅವನ್ನು ಸಾಮಾನ್ಯವಾಗಿ ಕಿರುಧಾನ್ಯಗಳು, ತೃಣ ಧಾನ್ಯಗಳು ಎಂಬ ಹೆಸರಿನಿಂದ ಕರೆಯುತ್ತಾರೆ. ಬಹುಶಃ ಗೋಧಿ, ಅಕ್ಕಿಗಿಂತ ಗಾತ್ರದಲ್ಲಿ ಚಿಕ್ಕದಾಗಿರುವುದರಿಂದ ಅವುಗಳಿಗೆ ಆ ಹೆಸರು ಬಂದಿರಬಹುದು. ಆದರೆ ಅವುಗಳಿಗಿರುವ ಉತ್ಕೃಷ್ಟ ಅಸಾಧಾರಣ ಗುಣಗಳಿಂದ ಅವು ಎಂದಿಗೂ ಕಿರುಧಾನ್ಯಗಳಲ್ಲ, ಅವು ಸಿರಿಧಾನ್ಯಗಳೇ ಸರಿ ಎಂಬುದು ಖಾದರ್‌ವರ ಉವಾಚ. ಸಿರಿಧಾನ್ಯಗಳು ಇಂದು ಅಪರೂಪದ ಪ್ರಭೇದಗಳಾಗಿವೆ. ಕಣ್ಮರೆಯಾಗುತ್ತಿರುವ ಇವುಗಳನ್ನು ಉಳಿಸಿ ಬೆಳೆಸದಿದ್ದರೆ ಮುಂದಿನ ದಿನಗಳಲ್ಲಿ ಮನುಷ್ಯನ ಆರೋಗ್ಯ ಅಧೋಗತಿ ತಲುಪುವುದರಲ್ಲಿ ಸಂದೇಹವಿಲ್ಲ ಎಂದು ಖಾದರ್ ಸ್ಪಷ್ಟಪಡಿಸಿದರು.

ಈ ಧಾನ್ಯಗಳು ಮಾನವನ ಆಹಾರ ಅಭ್ಯಾಸದಲ್ಲಿ ಬಹಳ ಹಿಂದಿನಿಂದಲೂ ಸೇರಿಹೋಗಿವೆ. ಮೊದಲ ಮನೆ ಬಳಕೆ ಧಾನ್ಯಗಳಾಗಿ ಮಾನವನಿಗೆ ಪರಿಚಯವಾಗಿರಲೂ ಸಾಕು. ಇವುಗಳಲ್ಲಿ ಕಾಳು ಸಣ್ಣದಾಗಿರುತ್ತದೆ. ಹುಲ್ಲಿನ ಜಾತಿಗೆ ಸೇರಿದ ಇವು ಪೋಯೇಸಿ ಕುಟುಂಬದ ಸದಸ್ಯರು. ಬೀಜಹಾಕಿದ 65 ದಿನಗಳೊಳಗೆ ಕುಯ್ಲಿಗೆ ಬರುವ ಕುಳ್ಳಗಿನ ಸಸ್ಯ ಪ್ರಭೇದಗಳು. ಸಣ್ಣ ಪ್ರಮಾಣದ ರೈತರೇ ಹೆಚ್ಚಾಗಿ ಬೆಳೆಯುತ್ತಿದ್ದ ಈ ಬೆಳೆಗಳು ರೈತರ ಆಶಾಕಿರಣಗಳಾಗಬೇಕಾಗಿತ್ತು. ರಾಗಿಯ ಜೊತೆ ಇನ್ನೂ ಅನೇಕ ರೀತಿಯ ತೃಣಧಾನ್ಯಗಳು ತಮ್ಮ ಉತ್ಕೃಷ್ಟತೆ ಮೆರೆಯುತ್ತಿವೆ. ಅವುಗಳೆಂದರೆ ಸಜ್ಜೆ, ಹಾರಕ, ನವಣೆ, ಸಾವೆ (ಸಾಮೆ), ಊದಲು, ಬರಗು, ಕೊರ್ಲೆ, ಇತ್ಯಾದಿ.

**ಒಣಭೂಮಿಯ ಬಂಗಾರ :** ಸಿರಿಧಾನ್ಯಗಳು ಸಾಮಾನ್ಯವಾಗಿ ಕಡಿಮೆ ಫಲವತ್ತತೆ ಇರುವ ಮಣ್ಣಿನಲ್ಲಿಯೇ ಬೆಳೆದು ಫಲ ನೀಡುತ್ತವೆ. ಮಣ್ಣಿನಲ್ಲಿ ಕೇವಲ 15 ಸೆಂ.ಮೀ.ವರೆಗೆ ಫಲವತ್ತತೆ ಇದ್ದರೂ ಸಾಕು ಹುಲುಸಾಗಿ ಬೆಳೆಯುತ್ತವೆ. ಕೆಲವು ಪ್ರಭೇದಗಳು ಕ್ಷಾರೀಯ ಮಣ್ಣು ಕೇಳುತ್ತವೆ. ಇನ್ನು ಕೆಲವು ಆಮ್ಲೀಯ ಮಣ್ಣಿನಲ್ಲಿ ಬೆಳೆಯುತ್ತವೆ. ಸಜ್ಜೆಯಂತೂ ಮರಳುಮಣ್ಣಿನಲ್ಲಿಯೇ ಚೆನ್ನಾಗಿ ಬೆಳೆಯುತ್ತದೆ. ರಾಜಸ್ಥಾನದಂತಹ ಮರುಭೂಮಿಯಲ್ಲಿಯೂ ಸಜ್ಜೆ ಬೆಳೆದಿರುವುದೂ ಉಂಟು. ರಾಗಿಗೆ ಹುಲುಸಾಗಿ ಬೆಳೆಯಲು ಕ್ಷಾರೀಯ ಮಣ್ಣುಬೇಕು. ಊದಲು ಸಮಸ್ಯೆಗಳಿರುವ ಮಣ್ಣಿನಲ್ಲಿಯೇ ಸವಾಲಿನಂತೆ ಬೆಳೆಯುತ್ತದೆ. ಪುನರ್ರೂಪಿತ ಮಣ್ಣು ಈ ಬೆಳೆಗೆ ಇನ್ನೂ ಉತ್ಕೃಷ್ಟ. ಒಣಭೂಮಿ ರೈತರು ಇವನ್ನು ಕಡಿಮೆ ಖರ್ಚಿನಲ್ಲಿ ಬೆಳೆದು ತೋರಿಸಬಹುದು.

**ಅಲ್ಪನೀರಿನಲ್ಲಿ ಕಲ್ಪವೃಕ್ಷ :** ಸಿರಿಧಾನ್ಯಗಳಿಗೆ ಬೆಳೆಯಲು ಹೆಚ್ಚು ನೀರಿನ ಆವಶ್ಯಕತೆ ಇಲ್ಲ. ರಾಗಿ ಮತ್ತು ಸಜ್ಜೆಗೆ ಬಾಳೆ ಕಬ್ಬು ಬೆಳೆಯಲು ಬೇಕಾಗುವ ನೀರಿನ ಪ್ರಮಾಣದಲ್ಲಿ ಶೇ 25 ಸಾಕು. ಬತ್ತಕ್ಕಿಂತ ಶೇ 30 ಕಡಿಮೆ ಇದ್ದರೂ ಸಾಕು. ಇವುಗಳಿಗೆ ನೀರಾವರಿ ವ್ಯವಸ್ಥೆಯೇ ಬೇಡ. ಮಳೆ ನೀರೊಂದೇ ಸಾಕು. ಒಂದು ಕೆ.ಜಿ. ಬತ್ತ ಬೆಳೆಯಲು 4000 ಲೀ. ನೀರು ಬಳಸುತ್ತೇವೆ. ಆದರೆ ಸಿರಿಧಾನ್ಯಗಳು ಬಿರು ಬೇಸಗೆಯಲ್ಲೂ ಬೆಳೆ ಅರಳಿಸುವಾಗ ಅವು ಬಳಸುವ ನೀರಿನ ಪ್ರಮಾಣ ಅತ್ಯಂತ ಕಡಿಮೆ. ವಾರ್ಷಿಕ ಮಳೆ ಪ್ರಮಾಣ 500 ಮಿ.ಮೀ. ಇರುವ ಆಫ್ರಿಕಾದಲ್ಲೇ ಪ್ರಪಂಚದ 74 ಸಿರಿಧಾನ್ಯಗಳು ಬೆಳೆಯುತ್ತವೆ.

ಅಲ್ಲಿರುವ ಮರಳು ಮಿಶ್ರಿತ ಆಮ್ಲೀಯ ಮಣ್ಣಿನಲ್ಲಿ ಬೆಳೆಯುವುದು ಅವುಗಳ ಗಟ್ಟಿತನಕ್ಕೆ ಸಾಕ್ಷಿಯಾಗಿದೆ. ಜಾಗತಿಕ ಹವಾಗುಣದ ಏರುಪೇರುಗಳಲ್ಲಿ ಅಧಿಕ ಉಷ್ಣತೆ ದಾಖಲಾಗುತ್ತಿದ್ದರೂ ಮಳೆ ಕಡಿಮೆಯಾಗುತ್ತಿದ್ದರೂ ದಕ್ಷಿಣ ಪ್ರಸ್ಥಭೂಮಿ ಮತ್ತು ರಾಜಸ್ಥಾನದಂತಹ ಮರುಭೂಮಿ ಪ್ರದೇಶದಲ್ಲಿಯೂ ಉಳಿದು ಬೆಳೆದು ಜನ ಜಾನುವಾರುಗಳ ಆಹಾರ ಮತ್ತು ಮೇವಿನ ಕೊರತೆಯನ್ನು ನೀಗಿಸುವ ಸಾಮರ್ಥ್ಯ ಇರುವುದು ಸಿರಿಧಾನ್ಯಗಳಿಗೆ ಮಾತ್ರ. ವಿದ್ಯುತ್‌ಗಾಗಿ, ನೀರಿಗಾಗಿ, ಸಬ್ಸಿಡಿಗಾಗಿ ತೃಣಧಾನ್ಯ ಬೆಳೆಗಾರರು ಸರ್ಕಾರವನ್ನು ಅವಲಂಬಿಸಿಲ್ಲ.

**ರಾಸಾಯನಿಕ ಗೊಬ್ಬರಗಳ ಗೊಡವೆಯೇ ಇಲ್ಲ :** ಹಸುರು ಕ್ರಾಂತಿಯ ಹೆಸರಿನಲ್ಲಿ ರೈತರ ಕೃಷಿ ಬದುಕನ್ನು ಪ್ರವೇಶಿಸಿದ ರಸಗೊಬ್ಬರಗಳು ಅವರ ಬದುಕನ್ನೇ ನುಂಗಿವೆ. ಆದರೆ ಸಿರಿಧಾನ್ಯಗಳಿಗೆ ರಸಗೊಬ್ಬರಗಳ ಆವಶ್ಯಕತೆ ಇಲ್ಲ. ಕೊಟ್ಟಿಗೆ ಗೊಬ್ಬರ, ಪಂಚಗವ್ಯ, ಜೀವಾಮೃತ, ಎರೆಹುಳು ಗೊಬ್ಬರ ಹೀಗೆ ಏನನ್ನಾದರೂ ಪಾರಂಪರಿಕ ಪದ್ಧತಿಯಲ್ಲಿ ಬಳಸಿ ಬೆಳೆಯಬಹುದಾದ ಬೆಳೆ ಎಂದರೆ ಸಿರಿಧಾನ್ಯ ಮಾತ್ರ. ಈ ಬೆಳೆ ವ್ಯವಸ್ಥೆ ರೈತರ ಹತೋಟಿಯಲ್ಲಿರುತ್ತದೆ.

**ಒಂದು ಬೆಳೆಯಲ್ಲ - ಒಂದು ಇಡೀ ವ್ಯವಸ್ಥೆ :** ಪಾರಂಪರಿಕ ವ್ಯವಸ್ಥೆಯಲ್ಲಿ ಬೆಳೆಯುವ ಸಿರಿಧಾನ್ಯಗಳು ಕೇವಲ ಬೆಳೆಗಳಲ್ಲ. ಅವು ಒಂದು ಇಡೀ ಕೃಷಿ ವ್ಯವಸ್ಥೆಯನ್ನೇ ರೂಪಿಸುತ್ತವೆ. ಅವು ಬೆಳೆಯುವ ನೆಲಕ್ಕೇ ಪಾರಂಪರಿಕವಾಗಿ ವೈವಿಧ್ಯ ಉಕ್ಕಿಸುವ ಗುಣ ಬಂದಿರುತ್ತದೆ. ಒಂದೇ ನೆಲದಲ್ಲಿ ಈ ಸಿರಿ ಧಾನ್ಯಗಳೊಂದಿಗೆ 6-20 ಬೆಳೆಗಳನ್ನು ಬೆಳೆಯಲಾಗುತ್ತದೆ. ಉದಾ: ಹಿಮಾಲಯದ ಜಾರ್‌ವಾನ್ ಕೃಷಿ ವ್ಯವಸ್ಥೆ. ಇಲ್ಲಿ ಸಿರಿ ಧಾನ್ಯಗಳೊಂದಿಗೆ ಹನ್ನೆರಡು ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತದೆ.

ರಾಜಸ್ಥಾನದ ಸಾಟಧಾನ್, ದಕ್ಷಿಣ ಭಾಗದ ಪನ್ನೆಂಡು ಪಂಟಲು ಈ ವ್ಯವಸ್ಥೆಯಲ್ಲಿ ಸಿರಿಧಾನ್ಯಗಳೊಂದಿಗೆ ಬೇಳೆಕಾಳು, ಎಣ್ಣೆಕಾಳು ಬೆಳೆದು ಅದನ್ನೊಂದು ಪರಿಪೂರ್ಣ ವ್ಯವಸ್ಥೆಯನ್ನಾಗಿಸಿದೆ.

**ಪೌಷ್ಟಿಕಾಂಶಗಳ ಆಗರ :** ಹಾರಕ, ನವಣೆ, ಸಜ್ಜೆ, ಸಾವೆ ಇವುಗಳಿಂದ ಮಾಡಿದ ಇಡ್ಲಿ, ರೊಟ್ಟಿ, ಬಿಸಿಬೇಳೆ ಬಾತ್ ಮೊಸರನ್ನ ತಿಂದೇ ಅನುಭವಿಸಬೇಕು. ಯಾವುದೇ ಆಯಾಮದಲ್ಲಿ ನೋಡಿದರೂ ಸಿರಿಧಾನ್ಯಗಳು ಪೌಷ್ಟಿಕಾಂಶದಲ್ಲಿ ಗೋಧಿ, ಅಕ್ಕಿಗಿಂತ ಸಾವಿರಾರು ಮೈಲು ಮುಂದಿವೆ. ಹೋಲಿಕೆ ಮಾಡಲೂ ಸಾಧ್ಯವಿಲ್ಲ. ನಾರಿನಾಂಶ ತೆಗೆದುಕೊಂಡರೆ ಅಕ್ಕಿಗಿಂತ 50 ಪಟ್ಟು ಹೆಚ್ಚು.

ರಾಗಿಯಲ್ಲಿ ಅಕ್ಕಿಗಿಂತ 30 ಪಟ್ಟು ಹೆಚ್ಚು ಕ್ಯಾಲ್ಸಿಯಂ ಇದೆ. ಕಬ್ಬಿಣದ ಅಂಶ ತೆಗೆದುಕೊಂಡರೆ ಸಾಮೆ(ಸಾವೆ)ಯ ಜೊತೆ ಅಕ್ಕಿ ಸ್ಪರ್ಧೆ ನಡೆಸಲೂ ಯೋಗ್ಯವಲ್ಲ. ನಮಗೆ ಅತ್ಯಂತ ಅವಶ್ಯಕವಾಗಿ ಬೇಕಾಗಿರುವ ಬೀಟಾ-ಕ್ಯಾರೋಟಿನ್ ಸಿರಿಧಾನ್ಯಗಳಿಂದ ಹೇರಳವಾಗಿ ದೊರೆಯುತ್ತದೆ. ನಮ್ಮ ಪ್ರತಿಷ್ಠಿತ ಆಹಾರಧಾನ್ಯ ಅಕ್ಕಿಯಲ್ಲಿರುವ ಬೀಟಾ-ಕ್ಯಾರೋಟಿನ್ ಸೊನ್ನೆ ಎಂಬುದೇ ಈ ಪ್ರಕೃತಿಯ ದೊಡ್ಡ ವ್ಯಂಗ್ಯ.

ರೋಗದ ಭಯ ಇಲ್ಲ : ಈ ಬೆಳೆಗಳಿಗೆ ರೋಗ ಬರುವುದು ಕಡಿಮೆ. ಕೀಟದ ಹಾವಳಿ ಇಲ್ಲ.

**ಸಿರಿಧಾನ್ಯಗಳ ಮಾನ್ಯತೆ ಮತ್ತು ಪುನರುಜ್ಜೀವನ ಇಂದಿನ ತುರ್ತು ಅಗತ್ಯ : ನೀತಿ ನಿರೂಪಣೆ ಅಂಶಗಳು**

1. ಸಿರಿಧಾನ್ಯಗಳು, ಬರ ತಡೆದುಕೊಳ್ಳುವ ನೀರುಳಿಸುವ ಬೆಳೆಗಳು. ಅದಕ್ಕೇ ಇವನ್ನು ಬರಗಾಲ ಎದುರಿಸುವ ಬೆಳೆಗಳ ಸಾಲಿನಲ್ಲಿ ನಿಲ್ಲಿಸುತ್ತಾರೆ. ಇದೇ ಗುಣದಿಂದ ಅವು ಭಾರತದ ಆಹಾರ ಮತ್ತು ಕೃಷಿಯ ಭವಿಷ್ಯ ಎನಿಸಿಕೊಳ್ಳುತ್ತವೆ. ಪ್ರತಿಯೊಬ್ಬ ಸಿರಿಧಾನ್ಯ ಬೆಳೆಯುವ ರೈತರಿಗೂ ಹವಾಗುಣ ಬದಲಾವಣೆ ಬೋನಸ್, ಜೀವವೈವಿಧ್ಯ ಬೋನಸ್, ನೀರುಳಿತಾಯದ ಬೋನಸ್ ದೊರಕಬೇಕು.
2. ದೇಶದ ವಿವಿಧ ಭಾಗಗಳಲ್ಲಿ ಅನೇಕ ವಿಧದ ಸಿರಿಧಾನ್ಯಗಳನ್ನು ಬೆಳೆಯುತ್ತಾರೆ. ರಾಜಸ್ಥಾನ ಸಜ್ಜೆಯ ತವರು. ದಕ್ಷಿಣ ಪ್ರಸ್ಥಭೂಮಿ (ಮರಾಠವಾಡ), ಆಂಧ್ರದ ತೆಲಂಗಾಣ ಮತ್ತು ಕರ್ನಾಟಕ ಜೋಳಕ್ಕೆ ಪ್ರಸಿದ್ಧಿ. ದಕ್ಷಿಣ ಆಂಧ್ರ, ತಮಿಳುನಾಡು, ಒರಿಸ್ಸಾ ದಕ್ಷಿಣ ಕರ್ನಾಟಕ ರಾಗಿಗೆ ಮೂಲ ಸ್ಥಾನವಿದ್ದಂತೆ. ಉತ್ತರಾಖಂಡ ಮತ್ತು ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ನವಣೆ, ಹಾರಕ, ಊದಲು ಮತ್ತು ಬರಗುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇವನ್ನೇನಾದರೂ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸೇರಿಸಿದರೆ ಇಡೀ ವ್ಯವಸ್ಥೆಯೇ ಪೌಷ್ಟಿಕಾಂಶವುಳ್ಳ ಕಾಳುಗಳಿಂದ ತುಂಬಿ ಹೋಗುತ್ತದೆ.
3. ಸಿರಿಧಾನ್ಯಗಳು ಕ್ಯಾಲ್ಸಿಯಂ, ಲವಣಾಂಶ, ಕಬ್ಬಿಣ, ನಾರು, ಬೀಟಾ ಕ್ಯಾರೋಟಿನ್, ಮ್ಯಾಗ್ನೀಷಿಯಂ, ರಂಜಕ, ಪೊಟ್ಯಾಷ್ ಮತ್ತು ಅನೇಕ ಸೂಕ್ಷ್ಮ ಪೋಷಕಾಂಶಗಳನ್ನು ಹೊಂದಿರುವುದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಿಸಿದರೆ ಸುಭದ್ರ ಆಹಾರ ವಿತರಣಾ ವ್ಯವಸ್ಥೆ ರೂಪಿಸಿದಂತಾಗುತ್ತದೆ.
4. ಸಿರಿಧಾನ್ಯಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಿಸಬೇಕಾದರೆ ಅದು ಮೊದಲು ಸಂಪೂರ್ಣ ವಿಕೇಂದ್ರೀಕರಣದ ವ್ಯವಸ್ಥೆಯಾಗಬೇಕು. ಸ್ಥಳೀಯ ಉತ್ಪಾದನೆ, ಶೇಖರಣೆ ಮತ್ತು ವಿತರಣೆ ಇದರ ಜೀವಾಳ. ಧಾನ್ಯ ಕಟಾವು, ಒಕ್ಕಣೆ, ಸಂಗ್ರಹಣೆ, ಗುಣಮಟ್ಟ ಕಾಪಾಡುವುದು ಇದಕ್ಕೆ ಸರ್ಕಾರದ ಬೆಂಬಲ ಇರಲೇಬೇಕು.

5. ಶಾಲೆಗಳ ಮಧ್ಯಾಹ್ನದ ಬಿಸಿಯೂಟದಲ್ಲಿ, ಅಂಗನವಾಡಿಗಳಲ್ಲಿ, ಹಾಸ್ಟೆಲ್‌ನ ಆಹಾರದಲ್ಲಿ ಸಿರಿಧಾನ್ಯಗಳಿರುವಂತೆ ಅವಕಾಶ ಮಾಡಿಕೊಂಡರೆ ಇದು ನ್ಯೂನ ಪೋಷಣೆ ತಡೆಯಲು ತುಂಬಾ ಸಹಾಯಕವಾಗುತ್ತದೆ.
6. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಿಸುವುದರಿಂದ ರೈತರಿಗೆ ಮಾರುಕಟ್ಟೆ ತೆರೆಯಲ್ಪಡುತ್ತದೆಯಲ್ಲದೆ, ಸಿರಿಧಾನ್ಯ ಕೃಷಿಯಲ್ಲಿ ರೈತರಿಗೆ ಹೊಸ ಭರವಸೆ ಮೂಡುತ್ತದೆ.
7. ಸಿರಿಧಾನ್ಯ ಬೆಳೆಯುವಲ್ಲಿ ಬಿತ್ತನೆ, ಉತ್ಪಾದನೆ, ಮಾರುಕಟ್ಟೆ ಎಲ್ಲವೂ ಸಾಮೂಹಿಕ ಪ್ರಯತ್ನದಲ್ಲಿ ಆಗಬೇಕು. ಇದರಿಂದಲೂ ರೈತರು ಧೈರ್ಯ ಕಳೆದುಕೊಳ್ಳದಿರಲು ಸಹಕಾರಿಯಾಗುತ್ತದೆ. ಸಾಂಸ್ಥಿಕ ರೂಪ ಕೊಟ್ಟರಂತೂ ಸಂಘಟನಾ ಶಕ್ತಿಯೂ ಬಂದಂತಾಗುತ್ತದೆ.
8. ಈ ಕೃಷಿಯಲ್ಲಿ ಸುಸ್ಥಿರ ಬೇಸಾಯ ಪದ್ಧತಿ ಅಳವಡಿಸುವುದರಿಂದ ಜೀವಿವೈವಿಧ್ಯ ವೃದ್ಧಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಇದೊಂದು ಜೀವಿವೈವಿಧ್ಯಕ್ಕೆ ನಾವು ಸಲ್ಲಿಸುವ ಗೌರವವೂ ಆಗುತ್ತದೆ.
9. ಸಿರಿಧಾನ್ಯ ಕೃಷಿಯೊಂದಿಗೆ ಹಸು, ದನ ಸಾಕಣೆಯನ್ನು ಸಮೀಕರಿಸಿದರೆ ಒಂದು ಸಾವಯವ ಸಂಬಂಧ ಈ ವ್ಯವಸ್ಥೆಯಲ್ಲಿ ಸ್ಥಾಪಿತವಾಗುತ್ತದೆ. ಹಾಲಿನ ಉತ್ಪಾದನೆಯೂ ಹೆಚ್ಚುತ್ತದೆ.
10. ಮಳೆಯಾಶ್ರಿತ ಕೃಷಿಯ ಅಭಿವೃದ್ಧಿಗೆ ತುರ್ತಾಗಿ ಗಮನ ಕೊಡಬೇಕು. ಇದಕ್ಕೆ ಉದ್ಯೋಗ ಖಾತ್ರಿ ಯೋಜನೆಯ ನೆರವು ಪಡೆಯಬಹುದು. ನೆಲ ಸಿದ್ಧಪಡಿಸುವುದು ಬೀಜ ಹಾಕುವುದು, ಕಟಾವು ಮಾಡುವುದು ಎಲ್ಲದಕ್ಕೂ ಈ ಯೋಜನೆ ಸಹಕಾರಿಯಾಗುತ್ತದೆ.
11. ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸಂಶೋಧನೆ ಆಗಬೇಕಾಗಿದೆ. ಇದನ್ನು ರೈತರ ಅನುಭವ ಆಧರಿಸಿಯೇ ಮಾಡಬೇಕಾಗಿದೆ. ಅವನ ಮುನ್ನೋಟ, ದೂರದೃಷ್ಟಿ ಇದರಲ್ಲಿ ಹೆಚ್ಚು ಸಹಕಾರಿಯಾಗುತ್ತದೆ.

**ಸಿರಿಧಾನ್ಯಗಳಲ್ಲಿರುವ ಪೋಷಕಾಂಶಗಳು**

| ಧಾನ್ಯ | ಪ್ರೊಟೀನ್ (ಗ್ರಾಂ) | ಫೈಬರ್ (ಗ್ರಾಂ) | ಲವಣಾಂಶ (ಗ್ರಾಂ) | ಕಬ್ಬಿಣ (ಮಿ.ಗ್ರಾಂ) | ಕ್ಯಾಲ್ಸಿಯಂ (ಮಿ.ಗ್ರಾಂ) |
|---|---|---|---|---|---|
| ಸಜ್ಜೆ | 10.6 | 1.3 | 2.3 | 16.9 | 38 |
| ರಾಗಿ | 7.3 | 3.6 | 2.7 | 3.9 | 344 |
| ನವಣೆ | 12.3 | 8.0 | 3.3 | 2.8 | 31 |
| ಬರಗು | 12.5 | 2.2 | 1.9 | 0.8 | 14 |
| ಹಾರಕ | 8.3 | 9.0 | 2.6 | 0.5 | 27 |
| ಸವೆ | 7.7 | 7.6 | 1.5 | 9.3 | 17 |
| ಊದಲು | 11.2 | 10.1 | 4.4 | 15.2 | 11 |
| ಅಕ್ಕಿ | 6.8 | 0.2 | 0.6 | 0.7 | 10 |
| ಗೋಧಿ | 11.8 | 1.2 | 1.5 | 5.3 | 41 |

**ಡಾ. ಖಾದರ್‌ರವರಿಗೆ ರೈತರ ಪ್ರಶ್ನೆಗಳು**

ನೀರಾವರಿ ಪ್ರದೇಶದಲ್ಲಿ ವ್ಯಾಪಕವಾಗಿ ಕವಳೆ (ಬತ್ತ-ನೆಲ್ಲು) ಬೆಳೆಯುತ್ತಾರೆ. ಇಂತಹ ಏಕಬೆಳೆ ಪದ್ಧತಿ ಅಪಾಯಕಾರಿಯೇ?

**(ಮಾಣಿಕಪ್ಪ, ಕೃಷಿಕರು, ರಾಯಚೂರು)**

ಹೌದು, ಏಕ ಬೆಳೆ ಪದ್ಧತಿಯನ್ನು ರೈತರು ಅಳವಡಿಸಿಕೊಳ್ಳುವುದು ಅಪಾಯಕಾರಿ. ವಿಶೇಷವಾಗಿ ಏಕದಳ ಬೆಳೆಯನ್ನು ದ್ವಿದಳ ಧಾನ್ಯಗಳೊಂದಿಗೆ ಮಿಶ್ರ ಬೆಳೆಯನ್ನಾಗಿ ಮಾಡಿಕೊಳ್ಳದೆ ಹೋದಲ್ಲಿ ಇನ್ನಷ್ಟು ಅಪಾಯಕಾರಿ. ಯಾಕೆಂದರೆ ಏಕದಳ ಸಸ್ಯಗಳು ಹಾಗೂ ಗಿಡಗಳು ಭೂಮಿಯಿಂದ ಸಾರವನ್ನು ಹೀರಿಕೊಳ್ಳುತ್ತವೆ. ದ್ವಿದಳ ಧಾನ್ಯಗಳು ಭೂಮಿಗೆ ಸಾರವನ್ನು ಒದಗಿಸುತ್ತವೆ. ಒಂದು ದ್ವಿದಳ ಧಾನ್ಯದ ಸಸ್ಯದ ಬೇರುಗಳು ವಾತಾವರಣದಿಂದ ಸಾರಜನಕವನ್ನು ಒದಗಿಸುತ್ತವೆ. ದ್ವಿದಳ ಧಾನ್ಯದ ಬೆಳೆಗಳನ್ನು ಏಕದಳ ಬೆಳೆಗಳೊಂದಿಗೆ ಮಿಶ್ರಣ ಮಾಡಿಕೊಳ್ಳದೇ ಹೋದಾಗ ಮಣ್ಣಿಗೆ ಬೇಕಾದ ಸಾರಜನಕವನ್ನು ಕೃತಕವಾಗಿ ಒದಗಿಸಬೇಕಾಗುತ್ತದೆ.

ದ್ವಿದಳ ಧಾನ್ಯಗಳ ಮಿಶ್ರ ಪದ್ಧತಿ ಇಲ್ಲದೆ ಇರುವಾಗ ಭೂಮಿಯಲ್ಲಿರುವ ಸಾರವನ್ನು ಹೆಚ್ಚೆಚ್ಚು ಏಕದಳ ಬೆಳೆಗಳು ಹೀರಿಕೊಳ್ಳುವುದರಿಂದಾಗಿ ಭೂಮಿಯಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಇದರಿಂದಾಗಿ ರೋಗ ಬಾಧೆ ಹಾಗೂ ಕೀಟಭಾದೆ ಹೆಚ್ಚುತ್ತಾ ಹೋಗುತ್ತದೆ.

ಇದನ್ನು ನಿಗ್ರಹಿಸಲು ಹೆಚ್ಚೆಚ್ಚು ರಾಸಾಯನಗಳನ್ನು ಸಿಂಪರಣೆ ಮಾಡಬೇಕಾಗುತ್ತದೆ. ಜತೆಗೆ ಈ ರಾಸಾಯನಿಕಗಳಿಂದಾಗಿ ಮಣ್ಣಿನಲ್ಲಿರುವ ಸೂಕ್ಷ್ಮಾಣುಗಳು ಹೆಚ್ಚೆಚ್ಚು ನಾಶವಾಗುತ್ತಾ ಹೋಗುತ್ತವೆ ಭೂಮಿ ಬರಡಾಗುತ್ತಾಹೋಗುತ್ತದೆ.

ನೆಲ್ಲು (ಬತ್ತ) ಬೆಳೆಯುವ ಪ್ರದೇಶ, ಹತ್ತಿ ಬೆಳೆಯುವ ಪ್ರದೇಶದಲ್ಲಿ ಏಕ ಬೆಳೆ ಪದ್ಧತಿ ವ್ಯಾಪಕವಾಗಿ ರಾಜ್ಯದಲ್ಲಿ ಜಾರಿಗೆ ಬಂದಿದೆ. ರೈತರು ಕೂಡಲೇ ಇದರಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಲು ಮುಂದಾಗಬೇಕು.

ನೆಲ್ಲಿನ ಗದ್ದೆಗಳಲ್ಲಿ ಎರಡು ಮಡಿಗಳ ಮಧ್ಯೆ ಒಂದು ಮಡಿ ದ್ವಿದಳ ಬಳಸುವಂತಾಗಬೇಕು. ಸಹಜವಾಗಿ ಆಯಾ ಭಾಗದಲ್ಲಿ ಬೆಳೆಯುತ್ತಿರುವ ದ್ವಿದಳ ಧಾನ್ಯಗಳನ್ನು ಹಾಕಿಕೊಳ್ಳುವಂತಾಗಬೇಕು. ಇದರಿಂದಾಗಿ ಗದ್ದೆಗೆ ಆವಶ್ಯಕತೆ ಇರುವ ಸಾರಜನಕವನ್ನು ಭೂಮಿ ಪಡೆಯಲು ಸಾಧ್ಯವಾಗುತ್ತದೆ. ಜೊತೆಗೆ ಭೂಮಿಯಲ್ಲಿ ಸೂಕ್ಷ್ಮಜೀವಿಗಳ ಸಂಖ್ಯೆ ಹೆಚ್ಚಾಗಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ. ರೋಗ ಹಾಗೂ ಕೀಟಬಾಧೆ ಕಡಿಮೆಯಾಗುತ್ತದೆ. ಹಂತಹಂತವಾಗಿ ಕೃಷಿ ವೆಚ್ಚ ಕಡಿತಗೊಳ್ಳುತ್ತಾ ಉತ್ಪಾದನೆಯನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆ.

ಈಶಾನ್ಯ ಭಾಗದಲ್ಲಿ ತೊಗರಿ ಹಣಕಾಸು ಬೆಳೆಯಾಗಿ ರೈತರಿಗೆ ಹೆಚ್ಚು ಲಾಭ ನೀಡುತ್ತಿದೆ. ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ರೋಗ ಹಾಗೂ ಕೀಟಬಾಧೆ ಹೆಚ್ಚಾಗಿದ್ದು ರೈತರು ನಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಇದಕ್ಕೆ ಡಾ|| ಖಾದರ್ ಅವರ ಸಲಹೆ ಇಂತಿದೆ. **(ಬಾಬು ಹಿರಮಶೆಟ್ಟಿ, ಗುಲ್ಬರ್ಗಾ ಜಿಲ್ಲೆ)**

ತೊಗರಿ ಬೆಳೆಯನ್ನು ಮುಖ್ಯ ಬೆಳೆಯನ್ನಾಗಿ ಮಾಡಿಕೊಳ್ಳುವಾಗ ರೈತರು ಕೆಲವು ವಿಶೇಷ ಕ್ರಮಗಳನ್ನು ಅನುಸರಿಸಬೇಕು. ತೊಗರಿ ದ್ವಿದಳ ಧಾನ್ಯವಾಗಿದ್ದು ಇದರೊಂದಿಗೆ ಹೆಚ್ಚಿನ ಔಷಧೀಯ ಗಿಡಗಳನ್ನು ಹಾಕಿಕೊಳ್ಳುವುದು ಅತ್ಯಗತ್ಯ. ಮೆಣಸಿನಕಾಯಿ, ಶುಂಠಿ, ಅರಿಸಿನ, ಬೆಳ್ಳುಳ್ಳಿ, ಮಧ್ಯದ ಸಾಲುಗಳಲ್ಲಿ ಹಾಕಿಕೊಳ್ಳಬೇಕು. ಇದರಿಂದ ತೊಗರಿ ಬೇರಿಗೆ ಬರುವ ರೋಗವನ್ನು ತಡೆಗಟ್ಟಲು ಸಾಧ್ಯ. ನಾಲ್ಕೈದು ಸಾಲಿಗೆ ಒಂದು ಸಾಲಿನಂತೆ ಔಷಧೀಯ ಸಸ್ಯಗಳನ್ನು ಹಾಕಿಕೊಳ್ಳುತ್ತಲೇ ಏಕದಳಗಳಾದ ನವಣೆ, ಸಾಮೆ, ಆರ್ಕ, ಸಜ್ಜೆಯನ್ನು ಕೂಡ ಹಾಕಿಕೊಳ್ಳಬಹುದು. ಸ್ಥಳೀಯವಾಗಿ ಯಾವುದನ್ನು ಹಾಕಿಕೊಳ್ಳಬೇಕೆಂದು ನಿರ್ಧರಿಸುವಂತಾಗಬೇಕು. ಒಣ ಬೇಸಾಯವಿದ್ದಲ್ಲಿ ಬೆಳ್ಳುಳ್ಳಿ ಹಾಕಿಕೊಳ್ಳಲಾಗದು. ಹೀಗೆ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಬೆಳೆಗಳನ್ನು ಹಾಕಿಕೊಳ್ಳಬೇಕು.

ತೊಗರಿ ಬೆಳೆಯನ್ನು ಉತ್ತರ-ದಕ್ಷಿಣಾಭಿಮುಖವಾಗಿ ಹಾಕಿಕೊಳ್ಳಬೇಕು. (ಇದು ಎಲ್ಲಾ ಬೆಳೆಗಳಿಗೂ ಅನ್ವಯಿಸುತ್ತದೆ). ಪೂರ್ವ-ಪಶ್ಚಿಮಾಭಿಮುಖವಾಗಿ ತೊಗರಿ ಸಾಲಿನ ಅಂತರವನ್ನು ತೊಗರಿ ಗಿಡಗಳಿಗೆ ಸೂರ್ಯನ ಕಿರಣಗಳು ಸಂಪೂರ್ಣವಾಗಿ ಬೀಳುವಂತೆ ನೋಡಿಕೊಳ್ಳಬೇಕು.

ಕುರಿಗಳನ್ನು ಹೊಲಗಳಲ್ಲಿ ತರುಬುವ ಪದ್ಧತಿ ವ್ಯಾಪಕವಾಗಿದ್ದು, ಇದು ಭೂಮಿಗೆ ಹೆಚ್ಚು ಲಾಭದಾಯಕವೆಂದು ಕುರಿ ಮಾಲಿಕರಿಗೆ ಹಣ ಕೊಟ್ಟು ಕುರಿಗಳನ್ನು ತರುಬಲಾಗುತ್ತದೆ. ಈ ಕುರಿತು ಡಾ. ಖಾದರ್‌ರವರ ಅನಿಸಿಕೆಗಳೇನು? **(ಕೋಟೆಪ್ಪ ಅಳವಂಡಿ)**

ಹಲವು ದಿನ ಕುರಿಗಳನ್ನು ಒಂದೇ ಭೂಮಿಯಲ್ಲಿ ನಿಲ್ಲಿಸುವ ಮುಖಾಂತರ ಕುರಿಗಳು ಭೂಮಿಯ ಮೇಲೆ ಮಲಮೂತ್ರ ವಿಸರ್ಜನೆ ಮಾಡುತ್ತವೆ. ಪ್ರತಿಯೊಂದು ಪಶು-ಪಕ್ಷಿಗಳ ಮಲಮೂತ್ರಗಳಲ್ಲಿ ವಿಭಿನ್ನವಾದ ಸೂಕ್ಷ್ಮ ಜೀವಿಗಳಿರುತ್ತವೆ. ಅವುಗಳನ್ನು ಉಳಿಸಿ ಅಭಿವೃದ್ಧಿಪಡಿಸುವ ಮುಖಾಂತರ (ಭೂಮಿಯ) ಮಣ್ಣಲ್ಲಿ ಸೂಕ್ಷ್ಮಜೀವಿಗಳ ಸಂಖ್ಯೆಯನ್ನು ಹೆಚ್ಚಿಗೆ ಮಾಡಿ ಮಣ್ಣನ್ನು ಫಲವತ್ತನ್ನಾಗಿಸಲು ಮತ್ತು ಸಹಜ ಕೃಷಿಯನ್ನು ಅಳವಡಿಸಿಕೊಳ್ಳಲು ಇದೊಂದು ಅತ್ಯುತ್ತಮವಾದ ಮಾರ್ಗವಾಗಿದೆ.

ಆದರೆ ಕುರಿಗಳು ಮಲಮೂತ್ರ ವಿಸರ್ಜನೆ ಮಾಡಿದ ಜಾಗವನ್ನು ಹಾಗೇ ಬಿಟ್ಟಲ್ಲಿ ಸೂಕ್ಷ್ಮಜೀವಿಗಳು ಬದುಕಿ ಉಳಿಯುವುದಿಲ್ಲ. ಹಿಕ್ಕೆಗಳು ಒಣಗಿ ಹೋಗುತ್ತವೆ. ಇದಕ್ಕೆ ಬದಲಾಗಿ ಕುರಿ ತರುಬಿದ ಅನಂತರ ಕೃಷಿ ತ್ಯಾಜ್ಯವನ್ನು ಮಲಮೂತ್ರದ ಮೇಲೆ ಮುಚ್ಚಿಗೆ ಹಾಕುವಂತೆ ಮಾಡಿದಲ್ಲಿ ಅಪಾರ ಪ್ರಮಾಣದ ಸೂಕ್ಷ್ಮಜೀವಿಗಳು ಬದುಕಿ ಉಳಿದು ವೃದ್ಧಿಯಾಗಿ ಮಣ್ಣಲ್ಲಿ ಸೇರಿಕೊಳ್ಳುತ್ತವೆ. ಮುಚ್ಚಿಗೆಯ ಮೇಲೆ ಮಳೆ ಬಂದಲ್ಲಿ ಇಲ್ಲವೇ ನೀರನ್ನು ಬಳಸಿ ತಂಪು ಉಳಿಸಿಕೊಳ್ಳುವಂತಾದಲ್ಲಿ ಇನ್ನೂ ಹೆಚ್ಚಿನ ಲಾಭ ಪಡೆಯಬಹುದಾಗಿದೆ.

ರೈತರು ಬಹಳ ಮುಖ್ಯವಾಗಿ ಅರ್ಥೈಸಿಕೊಳ್ಳಬೇಕಾಗಿರುವ ವಿಷಯವೇನೆಂದರೆ, ಕೃಷಿ ಭೂಮಿಯಲ್ಲಿ ವಿಭಿನ್ನವಾದ ಮತ್ತು ಹೆಚ್ಚಿನ ಪ್ರಮಾಣದ ಸೂಕ್ಷ್ಮ ಜೀವಿಗಳನ್ನು ಅಭಿವೃದ್ಧಿಪಡಿಸುವುದೇ ಕಾಡು ಕೃಷಿಯ ಮೂಲ ತತ್ತ್ವವಾಗಿದೆ. ಇದನ್ನೇ ಸಹಜ ಕೃಷಿಯೆನ್ನುತ್ತಾರೆ. ಅಂದರೆ ಕಾಡು ಸಹಜವಾಗಿ ಬೆಳೆಯುತ್ತದೆ. ಮನುಷ್ಯರು ರಸಗೊಬ್ಬರಗಳನ್ನು ಹಾಕಿ ಕಾಡನ್ನು ಅಭಿವೃದ್ಧಿಪಡಿಸುತ್ತಿಲ್ಲ. ಸಹಜವಾಗಿ ಗಿಡ ಮರಗಳ ಎಲೆಗಳು ನೆಲದ ಮೇಲೆ ಬಿದ್ದು ಅದರ ಮೇಲೆ ಪಶು, ಪಕ್ಷಿ, ಪ್ರಾಣಿಗಳ ಮಲಮೂತ್ರ ವಿಸರ್ಜನೆಯಿಂದಾಗಿ ಮಳೆ ಬಂದಾಗ ಕೊಳೆತು ಮುಚ್ಚಿಗೆಯ ರೂಪದಲ್ಲಿ ಉದುರಿರುವ ಎಲೆಗಳ ಮುಖಾಂತರ ಕೋಟಿ ಕೋಟಿ ಸೂಕ್ಷ್ಮಾಣು ಜೀವಿಗಳು ಹುಟ್ಟಿಕೊಳ್ಳುತ್ತವೆ. ಇಂತಹ ವಿಭಿನ್ನವಾದ ಸೂಕ್ಷ್ಮಾಣು ಜೀವಿಗಳೇ ಗಿಡ ಮರಗಳಿಗೆ ಬೇಕಾದ ಪೌಷ್ಟಿಕಾಂಶಗಳನ್ನು ಒದಗಿಸುತ್ತವೆ. ಅಂದರೆ ಮಣ್ಣಲ್ಲಿ ಹಾಗೂ ವಾತಾವರಣದಲ್ಲಿ ನೈಟ್ರೋಜನ್, ಪಾಸ್ಫರ್, ಪೊಟ್ಯಾಷ್ ಸೇರಿಕೊಂಡಂತೆ ಹಲವಾರು ವಿಧದ ಎಲ್ಲಾ ತರಹದ ಪೌಷ್ಟಿಕಾಂಶಗಳು ಅಡಗಿರುತ್ತವೆ. ಅವುಗಳನ್ನು ಗಿಡ ಮರ ಸಸ್ಯಗಳಿಗೆ ಬೇಕಾದ ರೀತಿಯಲ್ಲಿ ಪರಿವರ್ತನೆ ಮಾಡಿ (ಸಾಲ್ಯುಲೈಸಿಂಗ್ ದಿ ಕೆಮಿಕಲ್ಸ್) ಒದಗಿಸುವ ಕ್ರಿಯೆಯನ್ನು ಸೂಕ್ಷ್ಮಾಣು ಜೀವಿಗಳು ಮಾಡುತ್ತವೆ. ಒಂದೊಂದು ತೆರನಾದ ಸೂಕ್ಷ್ಮಾಣು ಜೀವಿಗಳು ವಿಭಿನ್ನವಾದ ಪಾತ್ರವನ್ನು ನಿರ್ವಹಿಸುತ್ತವೆ. ಇದನ್ನು ಪ್ರಕೃತಿ ಸಹಜಕ್ರಿಯೆ ಎನ್ನುತ್ತಾರೆ. ಆದ್ದರಿಂದ ಕಾಡು ಸಹಜವಾಗಿ ಬೆಳೆಯುತ್ತದೆ. ಪಶು-ಪಕ್ಷಿ-ಪ್ರಾಣಿ-ಸೂಕ್ಷ್ಮ ಜೀವಿಗಳು ಲಕ್ಷಾಂತರ ಹುಳುಗಳು ಕೀಟಗಳು ಸಹ ಜೀವನ ನಡೆಸುತ್ತವೆ. ಇದನ್ನೇ ಜೈವಿಕ ಸಮತೋಲನ ಪ್ರಕೃತಿ ಸಹಜ ಜೀವವೆನ್ನಲಾಗುತ್ತದೆ.

ಇಂಥ ಪ್ರಕೃತಿ ಸಹಜ ಕ್ರಿಯೆಯನ್ನು ರೈತರು ತಮ್ಮ ಭೂಮಿಯಲ್ಲಿ ಅಳವಡಿಸಿಕೊಳ್ಳುವುದೇ 'ಕಾಡು ಕೃಷಿ' ಸಹಜ ಕೃಷಿಯಾಗಿದೆ. ಇದನ್ನು ಅಳವಡಿಸಿಕೊಳ್ಳಲು ಕುರಿಯನ್ನು ತರುಬಿ ಅದರ ಮಲಮೂತ್ರಗಳಿಂದ ಹುಟ್ಟಿಕೊಳ್ಳುವ ಸೂಕ್ಷ್ಮಜೀವಿಗಳನ್ನು ಅಭಿವೃದ್ಧಿಪಡಿಸುವುದು ಜೊತೆ ಜೊತೆಯಲ್ಲಿ ಆಯಾ ಪ್ರದೇಶದಲ್ಲಿ ಲಭ್ಯವಿರುವ ಹಸು, ಎಮ್ಮೆ, ಕತ್ತೆ, ಕುರಿ, ಆಡು, ಕೋಳಿ ಇನ್ನಿತರೆ ಪಶುಪಕ್ಷಿಗಳ ಮಲಮೂತ್ರಗಳನ್ನು ಸಂಗ್ರಹಿಸಿ, ಒಂದು ಲೀಟರಿನಷ್ಟು ಮಲಮೂತ್ರಗಳೊಂದಿಗೆ ಅರ್ಧ ಕೆ.ಜಿ. ಏಕದಳ ಧಾನ್ಯದ ಹಿಟ್ಟು, ಅರ್ಧ ಕೆ.ಜಿ. ದ್ವಿದಳ ಧಾನ್ಯದ ಹಿಟ್ಟು 100 ಗ್ರಾಂ ಕಪ್ಪು ಬೆಲ್ಲದೊಂದಿಗೆ

ಹತ್ತು ಲೀಟರ್ ನರಲ್ಲಿ ಮಿಶ್ರಣ ಮಾಡಿ ಒಂದು ವಾರ ನೀರಲ್ಲಿ ಎತ್ತಿಟ್ಟುಕೊಂಡರೆ ಸಾಕು, ಕೋಟಿ ಕೋಟಿ ಸೂಕ್ಷ್ಮಜೀವಿಗಳು ಅಭಿವೃದ್ಧಿಯಾಗಿರುತ್ತವೆ. ಅಗತ್ಯಕ್ಕೆ ತಕ್ಕಂತೆ ನೀರಲ್ಲಿ ಬೆರೆಸಿ ನೂರು, ಇನ್ನೂರು, ಸಾವಿರ ಎಕರೆಗಳಿಗೂ ಇದೇ ಸೂಕ್ಷ್ಮ ಜೀವಿಗಳನ್ನು ಬಳಸಬಹುದಾಗಿದೆ. ಈ ತೆರನಾಗಿ ಬಂಡವಾಳ ಇಲ್ಲದೆ ಸ್ವಾವಲಂಬಿಯಾದ ಸಹಜ ಕೃಷಿಯನ್ನು ರೈತರು ಅಳವಡಿಸಿಕೊಳ್ಳಬೇಕಾಗಿದೆ.

**ಮಿಶ್ರ ಬೆಳೆ ಬಗ್ಗೆ ಖಾದರ್ ಅವರ ಸಲಹೆಗಳು**

'ಏಕಬೆಳೆ ಪದ್ಧತಿ' ಸುಸ್ಥಿರವಾದುದಲ್ಲ ಎಂಬುದನ್ನು ನಾವು ಮೊದಲು ಅರ್ಥಮಾಡಿಕೊಳ್ಳಬೇಕು. ಎರಡನೆಯದು ಬಹು ಬೆಳೆ ಪದ್ಧತಿ ಆರೋಗ್ಯಕರವಾದದ್ದು ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಆದರೆ ಒಂದು ಎಚ್ಚರಿಕೆ ಇರಬೇಕು-ನಾವು 'ಏಕದಳ ಬೆಳೆ'ಗಳನ್ನು ಮಾತ್ರ ಸಂಯೋಜನೆ ಮಾಡಿದರೆ ಅದು ಕೂಡ ಅಸ್ಥಿರ ಕೃಷಿಯಾಗಿಬಿಡುತ್ತದೆ. "ಏಕದಳ ಬೆಳೆಗಳ ಜೊತೆ ದ್ವಿದಳ ಬೆಳೆಗಳನ್ನು ಸಂಯೋಜಿಸಿದ 'ಮಿಶ್ರ ಬೆಳೆ ಪದ್ಧತಿ'ಯು ಸುಸ್ಥಿರ ಕೃಷಿ ಮಾದರಿಗಳನ್ನು ರೂಪಿಸಬಹುದು. ಈ ಸಂಯೋಜನೆಯನ್ನು ಕೂಡ ಕ್ರಮಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ಅಳವಡಿಸಿಕೊಳ್ಳಬೇಕು" ಎಂದು ಡಾ. ಖಾದರ್ ಕೆಲವು ಸಲಹೆಗಳನ್ನು ಕೊಡುತ್ತಾರೆ.

ಮೊದಲನೇ ಸಲಹೆ - ಒಂದು ಮಳೆಗಾಲದಲ್ಲಿ ಕಟಾವು ಮಾಡಿದ ಬೆಳೆಗಳ ಕೂಳೆ (ಬೇರು)ಗಳನ್ನು ಕೂಡಲೆ ತೆಗೆಯದೆ ನೆಲದಲ್ಲೇ ಉಳಿಸಿರಬೇಕು. ಹೀಗೆ ಮಾಡುವುದರಿಂದ ಮಣ್ಣಿಗೆ ಜೈವಿಕ ರಾಶಿ ಹೇರಳವಾಗಿ ಸೇರಿ ಅದರ ಸಾಂದ್ರತೆ ಮತ್ತು ನೀರು ಹಿಡಿದಿಡುವ ಸಾಮರ್ಥ್ಯ ಹೆಚ್ಚುತ್ತದೆ. ಲೆಗ್ಯೆಮ್ ಸಸ್ಯಗಳ ಬೇರು ಗಂಟುಗಳಲ್ಲಿಯ ಸೂಕ್ಷ್ಮಾಣು ಜೀವಿಗಳು ತಮ್ಮ ಕ್ರಿಯೆಯನ್ನು ಪೂರ್ಣಗೊಳಿಸಿ ಮಣ್ಣಿನ ಸಾರವರ್ಧನೆಯನ್ನು ಮಾಡಲು ಸಾಧ್ಯವಾಗುತ್ತದೆ.

ಎರಡನೇ ಸಲಹೆ ಎಂದರೆ ಒಂದು ಕೃಷಿಯ ನೆಲದ ಮೈ ತುಂಬಾ ಒಂದೇ ಬೆಳೆಯ ಬೀಜಗಳನ್ನು ಬಿತ್ತನೆ ಮಾಡದೆ, ದ್ವಿದಳ ಬೆಳೆ ಮತ್ತು ಏಕದಳ ಬೆಳೆಗಳನ್ನು ಪರ್ಯಾಯವಾಗಿ ಸಂಯೋಜಿಸುವುದು. ಏಕದಳ ಬೆಳೆ ಹೀರಿಕೊಂಡ 'ನೈಟ್ರೋಜನ್ (ಸಾರ)'ವನ್ನು ಹತ್ತಿರದಲ್ಲೇ ಇರುವ ದ್ವಿದಳ ಬೆಳೆಯ ಬೇರಿನ ಗಂಟುಗಳಲ್ಲಿಯ ಸೂಕ್ಷ್ಮಾಣು ಜೀವಿಗಳು 'ಮರುಪೂರಣ'ಗೊಳಿಸುತ್ತವೆ.

ಮಿಶ್ರ ಬೆಳೆಪದ್ಧತಿಯನ್ನು ಅನುಸರಿಸುವಾಗ ಕೆಲವು ನಿಬಂಧನೆಗಳನ್ನು ಪಾಲಿಸಬೇಕು ಎಂಬುದು ಖಾದರ್ ಅವರ ಸಲಹೆ.

ಕೃಷಿ ನೆಲ ಇಳಿಜಾರಿದ್ದರೆ ಏಕದಳ ಮತ್ತು ದ್ವಿದಳ ಬೆಳೆಗಳ ಪಟ್ಟಿಗಳು ಹೆಚ್ಚು ವಿಶಾಲವಾಗಿರಬೇಕು. ಕೃಷಿ ನೆಲ ಸಮತಟ್ಟಾಗಿದ್ದರೆ ಪಟ್ಟಿಗಳು ಕಡಿಮೆ ವಿಶಾಲವಾಗಿದ್ದರೂ ಪರವಾಗಿಲ್ಲ. ಉದಾಹರಣೆ : 1. ಇಳಿಜಾರು ನೆಲದಲ್ಲಿ ಮೊದಲ ದ್ವಿದಳ ಬೆಳೆಯ ಪಟ್ಟಿ 30ಅಡಿ ಇದ್ದರೆ ಅನಂತರ ಬರುವ ಏಕದಳ ಬೆಳೆ ಪಟ್ಟಿ 30 ಅಡಿ ಇರಬೇಕು. ಅನಂತರ 30 ಅಡಿ ದ್ವಿದಳ ಆನಂತರ 30 ಅಡಿ ಏಕದಳ...

ಉದಾಹರಣೆ : 2. ಸಮತಟ್ಟಾದ ನೆಲದಲ್ಲಿ ಮೊದಲ ದ್ವಿದಳ ಬೆಳೆ ಪಟ್ಟಿ 10 ಅಡಿ ಇದ್ದರೂ ಸಾಕು. ಅನಂತರ 10 ಅಡಿ ಏಕದಳ ಬೆಳೆ. ಅನಂತರ 10 ಅಡಿ ದ್ವಿದಳ 10 ಅಡಿ ಏಕದಳ ಬೆಳೆ.... ಇಳಿಜಾರು ಹೆಚ್ಚು ಇದ್ದಷ್ಟು ಬೆಳೆಗಳ ಪಟ್ಟಿ ವಿಶಾಲಗೊಳ್ಳಬೇಕು.

ಸೂಚನೆ : ಮೇಲೆ ತಿಳಿಸಿರುವ ಅಳತೆಗಳು ಕೇವಲ ಉದಾಹರಣೆ ಮಾತ್ರ. ಮಿಶ್ರ ಬೆಳೆ ಸಂಯೋಜಕನು ತನ್ನ ಅಗತ್ಯಕ್ಕೆ ತಕ್ಕಂತಹ ಅಳತೆಯನ್ನು ಇಟ್ಟುಕೊಳ್ಳಬಹುದು.

ಮೂರನೇ ಸಲಹೆ - ಬಿತ್ತನೆಯನ್ನು ಎತ್ತರದಿಂದ ಮೊದಲು ಶುರು ಮಾಡಿ, ಇಳಿಜಾರಿಗೆ ಅಡ್ಡವಾಗಿರುವಂತೆ ಇರಲಿ. ಮೊದಲ ಪಟ್ಟಿ ದ್ವಿದಳ ಬೆಳೆಯದು. (ಉದಾಹರಣೆ - 30 ಅಡಿ ಅಥವಾ 15 ಸಾಲು) ಎರಡನೆಯ ಪಟ್ಟಿ ಏಕದಳ ಬೆಳೆಯದು (ಉದಾಹರಣೆ-30 ಅಡಿ ಅಥವಾ 15 ಸಾಲು) ಹೀಗೆ ತಗ್ಗಿದ ತುದಿಯವರೆಗೆ ಬಿತ್ತನೆ ಮುಂದುವರಿಯಲಿ.

ನೆಲ ಸಮತಟ್ಟಾಗಿದ್ದರೂ ಸಹ ನೀರು ಹರಿಯುವುದನ್ನೂ ಆಧರಿಸಿ, ಎತ್ತರದಿಂದ ಬಿತ್ತನೆ ಶುರುಮಾಡಿ ತಗ್ಗಿನಲ್ಲಿ ಮುಕ್ತಾಯಗೊಳಿಸಬೇಕು.

ಈ ವಿಧಾನ ಹೆಚ್ಚು ವೈಜ್ಞಾನಿಕ. ಏಕೆಂದರೆ ಏಕಬೆಳೆ ಕಡೆಗೆ ಹರಿಯುವಂತಿರಬೇಕು. ಕಾರಣ ದ್ವಿದಳ ಬೆಳೆ ಭೂಮಿಗೆ ತುಂಬಿದ ಸಾರ ಏಕದಳ ಬೆಳೆಗೆ ನೀರು ಹರಿದಾಗ ಸಿಗುವಂತಿರಬೇಕು.

ನಾಲ್ಕನೇ ಸಲಹೆ : ದ್ವಿದಳ ಬೆಳೆ ಮತ್ತು ಏಕದಳ ಬೆಳೆಗಳ ಪರ್ಯಾಯ ಪಟ್ಟಿಗಳು ಸಂಯೋಜನೆಗೊಳಿಸಿದಂತೆ ಕೃಷಿ ಭೂಮಿಯ ಸುತ್ತ ರಕ್ಷಣಾ ಬೆಳೆಗಳನ್ನು ಕೂಡ ಅಳವಡಿಸಿಕೊಳ್ಳಬೇಕು.

ಉದಾಹರಣೆ : 1. ವನ್ಯ ಜೀವಿಗಳು (ಹಂದಿ/ಕರಡಿ) ದಾಳಿ ಇಡುವಂತಿದ್ದರೆ ರಕ್ಷಣೆಗಾಗಿ ಕೃಷಿ ಭೂಮಿಯ ಸುತ್ತ ಆರ್ಕ ಅಥವಾ ಕೆಂಪು ಪುಂಡಿಯಂತಹ ಬೆಳೆಗಳನ್ನು ಅಳವಡಿಸಿಕೊಳ್ಳಬೇಕು.

ಉದಾಹರಣೆ : 2. ಕೀಟನಾಶಕ ಬಾಧೆಯನ್ನು ತಪ್ಪಿಸಿಕೊಳ್ಳಲು 'ಚೆಂಡುಹೂವು'ನಂತಹ ಬೆಳೆಗಳನ್ನು ಅಳವಡಿಸಬೇಕು.

ಏಕದಳ ಬೆಳೆ, ದ್ವಿದಳ ಬೆಳೆ ಜೊತೆ ಮೆಣಸಿನಕಾಯಿ, ಬೆಂಡೆ, ಬದನೆ, ಟೊಮಾಟೋ, ಸೊಪ್ಪುಗಳಂತಹ ತರಕಾರಿಗಳು, ಹುಚ್ಚೆಳ್ಳು, ಎಳ್ಳಿನಂತಹ ಎಣ್ಣೆ ಪ್ರಭೇದಗಳನ್ನು ಚೆಂಡು ಹೂವು, ಸೇವಂತಿಗೆಯಂತಹ ಹೂವು ಪ್ರಭೇದಗಳನ್ನು ಅಳವಡಿಸಿದರೆ, ವೈವಿಧ್ಯಮಯ ಆಹಾರ ಸಿಗುತ್ತದೆ. ಶ್ರಮಕ್ಕೆ ತಕ್ಕ ಆದಾಯವು ದಕ್ಕುತ್ತದೆ. ನಮ್ಮ ಶ್ರಮ ವ್ಯರ್ಥವಾಗದು. ಈ ವಿಧಾನದಿಂದ ಅನಿಶ್ಚಿತ ಮಳೆಯಿದ್ದರೂ ಆದಾಯ ಪಡೆಯಬಹುದು ಎಂಬುದು ಹಲವು ಕೃಷಿಕರ ಅನುಭವ.

**ಆಧಾರ :**

ಕೃಷಿ ಭಾರತ್, ಸಂ. 1, ಸಂ. 2, ದಿನಾಂಕ 01 ಜೂನ್ 2013

ಸಂ. 2 ಸಂ. 4, ದಿನಾಂಕ 01 ನವೆಂಬರ್ 2013

# ಅನುಬಂಧ ೫

## ಲೇಖಕರ ಸೂಚಿ

| | | |
|---|---|---|
| **ಎ.ಎ.ಕೆ** | ಅಶೋಕ ಆಳ್ವ, ಕೆ.(ಡಾ.) | ಸಂಶೋಧಕ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ |
| **ಎ.ಬಿ.ಬಿ.** | ಅಚ್ಯುತ ಭಟ್, ಬಿ. | ನಂ. 9, ಡಾ.ವಾಸುದೇವನಗರ್, ತಿರುವಾನ್ಮಿಯೂರ್, ಚೆನ್ನೈ |
| **ಎ.ಬಿ.ಪಿ.** | ಆಶಾಕುಮಾರಿ, ಬಿ.ಪಿ. (ಡಾ.) | ಸಹಾಯಕ ಪ್ರಾಧ್ಯಾಪಕಿ, ಮಹಾರಾಜ ಕಾಲೇಜು, ಮೈಸೂರು |
| **ಎ.ಜಿ.** | ಆನಂದ, ಜಿ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎ.ಕೆ.ಎಚ್** | ಆನಂದಕುಮಾರ್, ಎಚ್. | ಸಹಾಯಕ ಪ್ರಾಧ್ಯಾಪಕರು, ಸಂಜೆ ಕಾಲೇಜು, ಮೈ.ವಿ.ವಿ., ಮೈಸೂರು |
| **ಎ.ಎಂ.ಡಿ.** | ಅಕ್ಕಮಹಾದೇವಿ, (ಡಾ.) | ಸಹಾಯಕ ಪ್ರಾಧ್ಯಾಪಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎ.ಎನ್.ಎಸ್.** | ಅನ್ನಪೂರ್ಣ, ಎನ್.ಎಸ್. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಬಿ.** | ಭಾರತಿ | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಬಿ.ಸಿ.ಎಸ್.** | ಬೋಲ ಚಿತ್ತರಂಜನ್‌ದಾಸ್ ಶೆಟ್ಟಿ | ಪ್ಲಾಟ್ ನಂ. 902, ಕ್ಲಾಸಿಕ್ ಪ್ಯಾರಡೈಸ್, ಕೆ.ಎಸ್.ರಾವ್ ರೋಡ್, ಮಂಗಳೂರು |
| **ಬಿ.ಕೆ.ಎಂ.** | ಭೈರಪ್ಪ, ಕೆ.ಎಂ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಬಿ.ಎಂ.** | ಭಾರತಿ ಮರವಂತೆ (ಡಾ.) | ತಂದೆ / ಶೇಷಗಿರಿ ಶ್ಯಾನುಭೋಗ್, ಹೊಸಮನೆ ಅಂಚೆ, ಮರವಂತೆ, ಕುಂದಾಪುರ |
| **ಬಿ.ಆರ್.** | ಬಸವರಾಜು | ಸಂಶೋಧನಾ ಸಹಾಯಕ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಂಡಿ, ರಾಷ್ಟ್ರೀಯ ಹೆದ್ದಾರಿ 4, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ |
| **ಬಿ.ವಿ.** | ಬಸವರಾಜಪ್ಪ, ವಿ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಸಿ.ಎಚ್.** | ಚಂದ್ರಶೇಖರ ಹಿರೇಮಠ | ಇ.ಡಬ್ಲ್ಯು.ಎಸ್. 9, ಮೂರನೇ ಕ್ರಾಸ್, ಗಂಗೋತ್ರಿ ಹುಡ್ಕೊ ಬಡಾವಣೆ, ಮೈಸೂರು |
| **ಸಿ.ಎಚ್.ಆರ್.** | ಚೇತನ, ಎಚ್.ಆರ್. (ಡಾ.) | ಸಹಾಯಕ ಪ್ರಾಧ್ಯಾಪಕಿ, ಮಹಾರಾಜ ಕಾಲೇಜು, ಮೈಸೂರು |
| **ಸಿ.ಎಸ್.** | ಚಂದ್ರಪ್ಪ ಸೊಬಟಿ (ಡಾ.) | ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ 4, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ |
| **ಡಿ.ಕೆ.** | ದಿವಾಕರ, ಕೆ. | ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ, ದಕ್ಷಿಣ ಕನ್ನಡ |
| **ಡಿ.ಎಚ್.** | ದೇವರಡ್ಡಿ ಹದ್ಲಿ | ಯೋಜನಾ ಸಹಾಯಕ, ಲಲಿತ ಕಲೆಗಳ ಕಾಲೇಜು, ಮಾನಸಗಂಗೋತ್ರಿ, ಮೈಸೂರು |
| **ಡಿ.ಎನ್.ಜಿ.** | ದಯಾನಂದ, ಜಿ. (ಕತ್ತಲ್‌ಸಾರ್) | C/o ಗಣೇಶ ಅಮೀನ್ ಸಂಕಮಾರ್, ಸಿರಿ ಪಾವಂಜೆ, ಹಳೆಯಂಗಡಿ, ಮಂಗಳೂರು. |
| **ಡಿ.ಆರ್.ಸಿ.** | ದೇವರಾಜು, ಆರ್.ಸಿ. | ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಭಾರತಿ ಕಾಲೇಜು, ಭಾರತಿ ನಗರ, ಕೆ.ಎಂ.ದೊಡ್ಡಿ, ಮಂಡ್ಯ ಜಿಲ್ಲೆ. |
| **ಡಿ.ಎಸ್.** | ದಿವ್ಯ,ಎಸ್. | ನಂ.F8/A, ವೀವರ್ಸ್ ಕಾಲೋನಿ, 5ನೇ ಕ್ರಾಸ್, ವಿಶ್ವೇಶ್ವರನಗರ, ಮೈಸೂರು |
| **ಡಿ.ವಿ.ಡಿ.** | ದುಗ್ಗಮ್ಮ.ವಿ.ಡಿ. | ನಂ.L 18, ಕರ್ನಾಟಕ ಗೃಹ ಮಂಡಳಿ (ಕೆ.ಎಚ್.ಬಿ.) 3ನೇ ಹಂತ, ಕುವೆಂಪುನಗರ, ಮೈಸೂರು |
| **ಜಿ.ಎ.ಎಸ್.** | ಗಣೇಶ್ ಅಮೀನ್ ಸಂಕಮಾರ,(ಡಾ.) | ಸಿರಿ ಪಾವಂಜೆ, ಹಳೆಯಂಗಡಿ, ಮಂಗಳೂರು |

| | | |
|---|---|---|
| **ಜಿ.ಜೆ.ಟಿ.** | ಗುಲಾಬಿ ಜನಾರ್ದನ ತೆಕ್ಕಡೆ | ಸಹಾಯ ಪ್ರಾಧ್ಯಾಪಕ, ಮಲೆಮಹದೇಶ್ವರ ಜೂನಿಯರ್ ಕಾಲೇಜು, ಮದೆನಾಡು ಅಂಚೆ, ಕೊಡಗು ಜಿಲ್ಲೆ |
| **ಜಿ.ಎಂ.ಬಿ.** | ಗಿರೀಶ್, ಎಂ.ಬಿ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಜಿ.ಎನ್.ಎಸ್** | ಗೀತಾ ನಾವಲ್ ಶ್ರೀನಿವಾಸ್ | ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ, ಮಂಡ್ಯಜಿಲ್ಲೆ |
| **ಜಿ.ಎಸ್.** | ಗಂಗಾಸ್ವಾಮಿ | ಸಹಾಯಕ ತೋಟಗಾರಿಕಾ ಅಧಿಕಾರಿ, ಹಾರಂಗಿ ಅಂಚೆ, ಕೊಡಗು ಜಿಲ್ಲೆ |
| **ಎಚ್.ಈ.** | ಹಂಸವೇಣಿ, ಈ. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಚ್.ಎಚ್.** | ಹೊಂಬಯ್ಯ ಹೊನ್ನಲಗೆರೆ | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಚ್.ಜಿ.ಜಿ.** | ಹಂಸಲೇಖಾ, ಜಿ.ಜಿ. | ನಂ. 160, 4ನೇ ತಿರುವು, ಎಸ್.ಬಿ.ಐ.ರಸ್ತೆ, ರೆವಿನ್ಯೂ ಬಡಾವಣೆ, ಹೆಬ್ಬಾಳ್, ಮೈಸೂರು - 16 |
| **ಎಚ್.ಕೆ.ಎಂ.** | ಹರ್ಷಿಣಿ, ಕೆ.ಎಂ. | ಸಹಾಯಕ ಪ್ರಾಧ್ಯಾಪಕಿ, ಲಲಿತಕಲಾ ಕಾಲೇಜು, ಮಾನಸಗಂಗೋತ್ರಿ, ಮೈಸೂರು |
| **ಎಚ್.ಪಿ.ಎನ್.** | ಹರೀಶ್, ಪಿ.ಎನ್.(ಡಾ.) | ಸಹಾಯಕ ಪ್ರಾಧ್ಯಾಪಕ, ಮಹಾರಾಜ ಕಾಲೇಜು, ಮೈಸೂರು |
| **ಎಚ್.ಟಿ.ಕೆ.** | ಹೇಮಲತಾ, ಟಿ.ಕೆ. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಜೆ.ಬಿ.ಆರ್.** | ಜೋಯಪ್ಪ, ಬಿ.ಆರ್. | ಅಧ್ಯಾಪಕರು, ಮಲೆಮಹದೇಶ್ವರ ಜೂನಿಯರ್ ಕಾಲೇಜು, ಮದೆನಾಡು ಅಂಚೆ, ಕೊಡಗು |
| **ಜೆ.ಸಿ.** | ಜ್ಯೋತಿ ಚೇಳ್ಯಾರು | ಉಪನ್ಯಾಸಕಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಹಳೆಯಂಗಡಿ, ಮಂಗಳೂರು ತಾ., ದಕ್ಷಿಣ ಕನ್ನಡ ಜಿಲ್ಲೆ |
| **ಜೆ.ಜಿ.ಡಿ.** | ಜವರೇಗೌಡ, ದೇ.(ಡಾ.) | ವಿಶ್ರಾಂತ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| **ಜೆ.ಕೆ.ಆರ್.** | ಜಮುನ, ಕೆ.ಆರ್. | W/o ನಾಗರಾಜು, ಸಿ. ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಜೆ.ಪಿ.ಎಚ್** | ಜಯಪ್ರಕಾಶ್ ಶೆಟ್ಟಿ, ಎಚ್. | ಸಹಪ್ರಾಧ್ಯಾಪಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು, ಉಡುಪಿ |
| **ಜೆ.ಎಸ್.** | ಜ್ಯೋತಿಶಂಕರ್ (ಡಾ.) | ಸಹಾಯಕ ಪ್ರಾಧ್ಯಾಪಕಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು |
| **ಕೆ.ಎ.ಕೆ.** | ಕುಮಾರ್ ಆಚಾರ್, ಕೆ. | ಗ್ರಾಜುಯೇಟ್ ಅಸಿಸ್ಟೆಂಟ್ ಇನ್ ಕನ್ನಡ, ಕರ್ನಾಟಕ ಸಂಘ ಹೈಯರ್ ಸೆಕೆಂಡರಿ ಸ್ಕೂಲ್, ಟಿ. ನಗರ, ಚೆನ್ನೈ |
| **ಕೆ.ಎಂ.** | ಕವಿತ, ಎಂ. | ನಂ. 56, CH - 7, 2ನೇ ತಿರುವು, ಕುಕ್ಕರಹಳ್ಳಿ, ಸರಸ್ವತಿಪುರಂ, ಮೈಸೂರು |
| **ಕೆ.ಇ.ಪಿ.ಕೆ.** | ಕೀರ್ತಿ.ಪಿ.ಕೆ. | ನಂ. 69, ಸೂರ್ಯಬೇಕರಿ ಹಿಂಭಾಗ 2ನೇ ತಿರುವು, ಹೆಬ್ಬಾಳ್, ಮೈಸೂರು - 16 |
| **ಕೆ.ಜಿ.ಸಿ.** | ಕೃಷ್ಣಕುಮಾರ್, ಜಿ.ಸಿ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಕೆಎಚ್.** | ಖಾದರ್, (ಡಾ.) | 965, ಸುಖಸದನ 14ನೇ ಮುಖ್ಯರಸ್ತೆ, 4ನೇ ಹಂತ, ಟಿ.ಕೆ.ಲೇಔಟ್, ಮೈಸೂರು |
| **ಕೆ.ಕೆ.** | ಕಮಲಾಕ್ಷ,ಕೆ. (ಡಾ.) | ಅಕ್ಷತಾ, ಧನ್ವಂತರಿ ನಗರ, ಹಿದಾಯತ್‌ನಗರ ಅಂಚೆ, ಕಾಸರಗೋಡು, ಕೇರಳ |
| **ಕೆ.ಕೆ.ಜಿ.** | ಕವಿತಾ, ಕೆ.ಜಿ. (ಡಾ.) | ಸಹ ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹಾಸನ |
| **ಕೆ.ಎಲ್.** | ಕೋಕಿಲ (ಡಾ.) | ಸಹಾಯಕ ಪ್ರಾಧ್ಯಾಪಕಿ, ಮಹಾರಾಜ ಕಾಲೇಜು, ಮೈಸೂರು |
| **ಕೆ.ಎಂ.** | ಕನ್ನಿಕ, ಎಂ. (ಡಾ.) | ಸಂಶೋಧಕಿ, (ಪೋಸ್ಟ್ ಡಾಕ್ಟೊರೊಲ್ ಫೆಲೋ) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಕೆ.ಎಂ.ಎನ್.** | ಕೇಶವಮೂರ್ತಿ, ಎನ್. | ಪ್ರಸಾರ ನಿರ್ವಾಹಕರು (ಕೃಷಿ), ಆಕಾಶವಾಣಿ, ಮೈಸೂರು |

| | | |
|---|---|---|
| **ಕೆ.ಎನ್.** | ಕುಮುದ, ಎನ್ (ಡಾ.) | ಸಹಾಯಕ ಸಂಪಾದಕಿ, ಕನ್ನಡ ವಿಶ್ವಕೋಶ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಕೆ.ಪಿ.ಕೆ.** | ಕಿರಣ್, ಪಿ.ಕೆ. | ನಂ. 69, ಸೂರ್ಯಬೇಕರಿ ಹಿಂಭಾಗ, 2ನೇ ತಿರುವು, ಹೆಬ್ಬಾಳ್, ಮೈಸೂರು |
| **ಕೆ.ಪಿ.ಎಂ.** | ಕುಮಾರ್, ಪಿ.ಎಂ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಕೆ.ಎಸ್.** | ಕೃಷ್ಣಪ್ಪ, ಎಸ್. (ಡಾ.) | ಸಹಾಯಕ ಪ್ರಾಧ್ಯಾಪಕ, ಮಹಾರಾಜ ಕಾಲೇಜು, ಮೈಸೂರು |
| **ಕೆ.ಟಿ.ಕೆ.** | ಕೆಂಪೇಗೌಡ, ಟಿ.ಕೆ. (ಡಾ.) | ಸಹಾಯಕ ಪ್ರಧ್ಯಾಪಕ, ಮಹಾರಾಜ ಕಾಲೇಜು, ಮೈಸೂರು |
| **ಎಲ್.ಆರ್.** | ಲೋಕೇಶ್, ಆರ್. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಂ.ಜಿ.** | ಮಾದಪ್ಪ, ಜಿ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಂ.ಜಿ.ಎಸ್.** | ಮೋಹನ, ಜಿ.ಎಸ್.(ಡಾ.) | ನಂ.1256, 7ನೇ ಕ್ರಾಸ್, 4ನೇ ಮುಖ್ಯರಸ್ತೆ, ಚಂದ್ರ ಲೇಔಟ್, ಬೆಂಗಳೂರು |
| **ಎಂ.ಎಚ್.ಆರ್.** | ಮಹಾದೇವಯ್ಯ, ಎಚ್.ಆರ್. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು |
| **ಎಂ.ಎಲ್.** | ಮಂಜುಳಾಕ್ಷಿ, ಎಲ್. (ಡಾ.) | ಹಿರಿಯ ಸಂಯೋಜನಾಧಿಕಾರಿ, ಸಿ.ಐ.ಐ.ಎಲ್. ಮಾನಸ ಗಂಗೋತ್ರಿ, ಮೈಸೂರು |
| **ಎಂ.ಆರ್.** | ಮಂಜುರಾಜ್, ಎಚ್.ಎನ್. (ಡಾ.) | ಸಹ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ.ಆರ್.ನಗರ |
| **ಎಂ.ಕೆ.ಎಸ್.** | ಮೋಹನಕುಮಾರ್, ಕೆ.ಎಸ್. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಂ.ಎಂ.** | ಮಲ್ಲೇಶ್, ಎಂ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಂ.ಪಿ.** | ಮಣಿ, ಪಿ. (ಡಾ.) | ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು |
| **ಎಂ.ಆರ್.ಕೆ.** | ಮಹೇಶ್, ಆರ್.ಕೋಡಿಬಗನೆ | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಂ.ಎಸ್.ಎಂ.** | ಮುತ್ತಯ್ಯ, ಎಸ್.ಎಂ. | ಸಹಾಯಕ ಪ್ರಾಧ್ಯಾಪಕ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ |
| **ಎಂ.ಟಿ.** | ಮುರಳೀಧರನ್ ತಟಕ್ಕರ್ | C/o ಕಮಲಾಕ್ಷ, ಕೆ. 'ಅಕ್ಷತಾ' ಧನ್ವಂತರಿ ನಗರ, ಹಿದಾಯತ್‌ನಗರ ಅಂಚೆ, ಕಾಸರಗೋಡು ಕೇರಳ |
| **ಎನ್.** | ನೇತ್ರಾವತಿ (ಡಾ.) | ಸಹ ಪ್ರಾಧ್ಯಾಪಕಿ, ಮಹಾರಾಣಿ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು |
| **ಎನ್ಎ.ಆರ್.** | ನಾಗರಾಜು | ಪ್ರಾಧ್ಯಾಪಕ, ಶಾಂತಿ ಪ್ರಥಮ ದರ್ಜೆ ಕಾಲೇಜು, ಮಳವಳ್ಳಿ, ಮಂಡ್ಯ ಜಿಲ್ಲೆ |
| **ಎನ್.ಸಿ.** | ನಾಗರಾಜು, ಸಿ. | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎನ್.ಸಿ.ಪಿ.** | ನಿಂಗನಗೌಡ, ಚ. ಪಾಟೀಲ | ನಂ. 29, ಆರ್.ಎಸ್. ರೋಖಡೆ ಬಿಲ್ಡಿಂಗ್, ಸಿದ್ಧಕಲ್ಯಾಣ ನಗರ, ಉಣಕಲ್, ಹುಬ್ಬಳ್ಳಿ, |
| **ಎನ್.ಎಚ್.** | ನಾಗರತ್ನ ಹೆಮ್ಮಿಗೆ | ನಂ. 2248, ಸುಕೃತಿ, ಬೋಗಾದಿ 2ನೇ ಹಂತ, ಮೈಸೂರು |
| **ಎನ್.ಆರ್.** | ನಾಗರತ್ನಮ್ಮ (ಡಾ.) | ಸಹಾಯಕ ಪ್ರಾಧ್ಯಾಪಕಿ, ಮಹಾರಾಜ ಕಾಲೇಜು, ಮೈಸೂರು |
| **ಎನ್.ಆರ್.ಡಿ.** | ನರೇಂದ್ರ ರೈ ದೇರ್ಲ | 'ಕನಸು', ಅಂಚೆ ಮೂಡಾವು, ಪುತ್ತೂರು, ದ.ಕ. |
| **ಎನ್.ಎಸ್.** | ನಾಗಣ್ಣ, ಎಸ್. | ಸಹಾಯಕ ಪ್ರಾಧ್ಯಾಪಕ, ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು |
| **ಎನ್.ಟಿ.** | ನಾರಾಯಣ, ಟಿ. (ಡಾ.) | ನಂ. 324/18, ಶ್ರೀಲಲಿತ, 24ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಬೆಂಗಳೂರು |
| **ಪಿ.** | ಪ್ರಮೀಳ | ಮುನೇಶ್ವರ ನಗರ, ತಾಯಿಯ ಆಸರೆ, 1ನೇ ಮುಖ್ಯರಸ್ತೆ, ಎರಡನೇ ತಿರುವು, ಸ್ಟೇಡಿಯಂ ಹತ್ತಿರ, ಕೋಲಾರ |
| **ಪಿ.ಕೆ.** | ಪರಮೇಶ, ಕೆ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಪಿ.ಸಿ.ಡಿ.** | ಪರಶುರಾಮ, ಸಿ.ಡಿ.(ಡಾ.) | ಸಹಾಯಕ ಪ್ರಾಧ್ಯಾಪಕ, ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |

| | | |
|---|---|---|
| **ಪಿ.ಸಿ.ಎಸ್.** | ಪೂರ್ಣಿಮಾ, ಸಿ.ಎಸ್. | ನಂ. 292, 'ಇ' ಬ್ಲಾಕ್, ವಿಜಯನಗರ 3ನೇ ಹಂತ, ಮೈಸೂರು |
| **ಪಿ.ಆರ್.ಕೆ.** | ಪ್ರದೀಪಕುಮಾರ್, | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಪಿ.ಕೆ.ಪಿ.** | ಪುಟ್ಟಯ್ಯ ಕೀರ್ತಿಪುರ | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಪಿ.ಎಸ್.** | ಪುಟ್ಟಸ್ವಾಮಿ (ಡಾ.) | ಸಹ ಪ್ರಾಧ್ಯಾಪಕ, ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ಹೇಮ ಗಂಗೋತ್ರಿ, ಹಾಸನ |
| **ಆರ್.ಎ.** | ರಾಜೇಶ್ ಅಮೃತಿ | ಸಹಾಯಕ ಪ್ರಾಧ್ಯಾಪಕರು, ವಿ.ವಿ.ಪುರಂ ಸಂಜೆ ಕಾಲೇಜು, ಕೆ.ಆರ್.ರಸ್ತೆ, ಬೆಂಗಳೂರು |
| **ಆರ್.ಎ.ಪಿ.** | ರಾಮಕೃಷ್ಣ ಆಚಾರ್ಯ ಪಾಲ್ತಾಡಿ | ಮಾಜಿ ಅಧ್ಯಕ್ಷರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ನೆಲೆ ಬೆದ್ರಾಳ, ನರಿ ಮೊಗ್ರು, ಪುತ್ತೂರು, ದಕ್ಷಿಣ ಕನ್ನಡ |
| **ಆರ್.ಡಿ.** | ರಮೇಶ, ಡಿ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಆರ್.ಎಚ್.ಎನ್.** | ರೇಖಾ ಹಿಮಾನಂದ್ | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಆರ್.ಕೆ.ಬಿ.** | ರಾಧಾಕೃಷ್ಣ ಬೆಳ್ಳೂರು | ಸಹಾಯಕ ಪ್ರಾಧ್ಯಾಪಕ, ಸರಕಾರಿ ಕಾಲೇಜು, ಕಾಸರಗೋಡು, ವಿದ್ಯಾನಗರ ಅಂಚೆ, ಕಾಸರಗೋಡು, ಕೇರಳ |
| **ಆರ್.ಕೆ.ಜಿ.** | ರಮೇಶ, ಕೆ.ಜಿ. | ಸಹಾಯಕ ಪ್ರಾಧ್ಯಾಪಕ, ಮಹಾರಾಜ ಕಾಲೇಜು, ಮೈಸೂರು |
| **ಆರ್.ಎಂ.** | ರಮಣಿ | ಸಹಾಯಕ ಪ್ರಾಧ್ಯಾಪಕಿ, ತ್ರಿವೇಣಿ ಕಲಾ ಮತ್ತು ವಾಣಿಜ್ಯ ಕಾಲೇಜು, ವಿದ್ಯಾನಗರ ಅಂಚೆ, ಕಾಸರಗೋಡು, ಕೇರಳ |
| **ಆರ್.ಎಂ.ಎ.** | ರಾಧಾಮಣಿ, ಎಂ.ಎ. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು |
| **ಆರ್.ಎಂಯು** | ರಾಮು ಮೂಲಗಿ (ಡಾ.) | ಶಾಂತಿನಿಕೇತನ ಭೈರಿದೇವರಕೊಪ್ಪ, ಹುಬ್ಬಳ್ಳಿ |
| **ಆರ್.ಎನ್.** | ರಾಮನಾಥಂನಾಯ್ಡು | ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು |
| **ಆರ್.ಪಿ.ಕೆ.** | ರಾಘವೇಂದ್ರ, ಪಿ.ಕೆ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಆರ್.ಎಸ್.ಎ.** | ರಂಗಸ್ವಾಮಿ, ಎ. (ಡಾ.) | ಪ್ರಾಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು |
| **ಆರ್.ಎಸ್.ಸಿ.** | ರಮೇಶ, ಸ.ಚಿ.(ಡಾ.) | ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ ಜಿಲ್ಲೆ |
| **ಆರ್.ಎಸ್.ಜೆ.** | ರಾಜಶೇಖರ ಜಮದಂಡಿ (ಡಾ.) | ಬಸವಸದನ, ಸಿದ್ಧಾರ್ಥನಗರ, ಸಂತ ಜೋಸೆಫ್ ಆಸ್ಪತ್ರೆ ಮುಂಭಾಗ, ಚಾಮರಾಜನಗರ |
| **ಎಸ್.** | ಶ್ರೀನಿವಾಸ (ಡಾ.) | 8ನೇ ಅಡ್ಡರಸ್ತೆ, ಇಡಬ್ಲ್ಯುಎಸ್ 246, ಗಂಗೋತ್ರಿ ಲೇ ಔಟ್, ಮೈಸೂರು |
| **ಎಸ್.ಎ.** | ಸುಮಂಗಲ ಅತ್ತಿಗೇರಿ (ಡಾ.) | ಜಾನಪದ ವಿ.ವಿ. ಗೊಟಗೋಡಿ, ಶಿಗ್ಗಾಂವಿ, ಹಾವೇರಿ ಜಿಲ್ಲೆ |
| **ಎಸ್.ಎ.ಬಿ.** | ಶಿವದೇವಿ, ಎ.ಬಿ. | ಸಹಾಯಕ ಪ್ರಾಧ್ಯಾಪಕಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಸೋಮವಾರಪೇಟೆ, ಕೊಡಗು ಜಿಲ್ಲೆ |
| **ಎಸ್.ಬಿ.** | ಷಹಸೀನಾ ಬೇಗಂ (ಡಾ.) | ಸಹಾಯಕ ಪ್ರಾಧ್ಯಾಪಕಿ, ಮಹಾರಾಜ ಕಾಲೇಜು, ಮೈಸೂರು |
| **ಎಸ್.ಬಿ.ಕೆ.** | ಶ್ರೀನಿವಾಸ, ಬಿ.ಕೆ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಸ್.ಬಿ.ಆರ್.** | ಸತ್ಯನಾರಾಯಣ, ಬಿ.ಆರ್. (ಡಾ.) | ಸಹಾಯಕ ಪ್ರಾಧ್ಯಾಪಕ, ಮಹಾರಾಜ ಕಾಲೇಜು, ಮೈಸೂರು |
| **ಎಸ್.ಬಿ.ವಿ.** | ಸತೀಶ್‌ಕುಮಾರ್, ಬಿ.ವಿ. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ಎಸ್.ಸಿ.ಕೆ.** | ಸುಜಿತ್‌ಕುಮಾರ್,ಸಿ.ಕೆ. | ಚಕ್ಕಲಕ್ಕಲ ಹೌಸ್, ಪೆರಿಂಜಿರಿ ಅಂಚೆ, ತ್ರಿಶೂರ್, ಕೇರಳ |
| **ಎಸ್.ಜಿ.** | ಸಾಯಿಗೀತಾ | ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿ, ದೇರಳಕಟ್ಟೆ, ಮಂಗಳೂರು |

| | | |
|---|---|---|
| ಎಸ್.ಜಿ.ಎ. | ಸುಬ್ಬಲಕ್ಷ್ಮಿ, ಜಿ.ಎ. | ಅತಿಶಯ ಉಜ್ವಲ ಧವಳ, ನಂ. 62/E, ಆನಂದ ನಗರ, ಮೈಸೂರು |
| ಎಸ್.ಎಚ್.ಎನ್. | ಸೀತಾ, ಎಚ್.ಎನ್. (ಡಾ.) | ಸಹಾಯಕ ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು |
| ಎಸ್‌ಯು.ಎಚ್. | ಸುಧಾಕರ, ಎಚ್. | ಸಂಶೋಧಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| ಎಸ್.ಎಚ್. | ಶ್ರೀಧರ ಹೆಗಡೆ (ಡಾ.) | ಪ್ರಾಧ್ಯಾಪಕ, ಎಫ್.ಎಂ.ಸಿ. ಕಾಲೇಜು, ಮಡಿಕೇರಿ, ಕೊಡಗು |
| ಎಸ್.ಎಚ್.ಜೆ. | ಸತೀಶ, ಎಚ್.ಜೆ. | ಸಹಾಯಕ ಪ್ರಾಧ್ಯಾಪಕ, ಮಹಾರಾಜ ಕಾಲೇಜು, ಮೈಸೂರು |
| ಎಸ್.ಜೆ. | ಸೋಮಣ್ಣ, ಜೆ. (ಡಾ.) | ಸಹ ಪ್ರಾಧ್ಯಾಪಕರು, ಎಫ್.ಎಂ.ಸಿ. ಕಾಲೇಜು, ಮಡಿಕೇರಿ, ಕೊಡಗು |
| ಎಸ್.ಕೆ. | ಸೌಭಾಗ್ಯವತಿ, ಕೆ. (ಡಾ.) | ಸಹಾಯಕ ಪ್ರಾಧ್ಯಾಪಕಿ, ಯುವರಾಜ ಕಾಲೇಜು, ಮೈಸೂರು |
| ಎಸ್.ಕೆ.ಎನ್. | ಸುನೀತಾ, ಕೆ.ಎನ್. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| ಎಸ್.ಕೆ.ಆರ್. | ಶಶಿಕಲಾ, ಆರ್. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| ಎಸ್.ಎಂ. | ಸವಿತ, ಎಂ. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| ಎಸ್.ಬಿ.ಎಂ. | ಸುರೇಶ, ಎಂ.ಬಿ. (ಡಾ) | ಸಹಾಯಕ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು |
| ಎಸ್.ಎನ್. | ಶ್ರೀಧರ, ಎನ್. ಏತಡ್ಕ | ಸಹಾಯಕ ಪ್ರಾಧ್ಯಾಪಕ, ಸರಕಾರಿ ಕಾಲೇಜು, ವಿದ್ಯಾನಗರ ಅಂಚೆ, ಕಾಸರಗೋಡು, ಕೇರಳ |
| ಎಸ್.ಪಿ. | ಶ್ರೀಪಡ್ರೆ | ವಾಣಿನಗರ ಅಂಚೆ, ಪೇರಲ (ವಯ), ಕಾಸರಗೋಡು, ಕೇರಳ |
| ಎಸ್.ಪಿ.ಕೆ. | ಸತ್ಯಪ್ರೇಮ, ಕೆ.(ಡಾ.) | ಕನ್ನಡ ಅಧ್ಯಾಪಕರು, ಸರ್ಕಾರಿ ಪದಪೂರ್ವ ಕಾಲೇಜು, ಕಾರ್‌ಸ್ಟ್ರೀಟ್, ಮಂಗಳೂರು |
| ಎಸ್.ಪಿ.ಆರ್. | ಶ್ರೀನಿವಾಸ, ಪೂ.ರಾ. | ಕಗ್ಗೋಡು ಅಂಚೆ ಮತ್ತು ಗ್ರಾಮ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ |
| ಎಸ್.ಎಸ್. | ಶಿಲ್ಪ, ಎಸ್. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| ಎಸ್.ಎಸ್.ಬಿ. | ಸದಾಶಿವ, ಬಿ. | ನಿವೃತ್ತ ಪ್ರಾಚಾರ್ಯ, ಮಂಜೇಶ್ವರ ಗೋವಿಂದ ಪೈ ಸ್ಮಾರಕ, ಸರಕಾರಿ ಕಾಲೇಜು ಬಳಿ, ಮಂಜೇಶ್ವರ ಮಂಜೇಶ್ವರ ಅಂಚೆ, ಕಾಸರಗೋಡು, ಕೇರಳ |
| ಎಸ್.ವಿ. | ಸ್ನೇಹ, ವಿ. | ನಂ. 632, 8ನೇ ಕ್ರಾಸ್, ಜನತಾನಗರ, ಮೈಸೂರು |
| ಎಸ್.ವೈ. | ಸುರೇಶ ಎಡನಾಡು | ಸುರಗಿ ನಿಲಯ, ಕುಲ್ಲಂಚೆಟ್ಟು, ಎಡನಾಡು ಅಂಚೆ, ಕಾಸರಗೋಡು, ಕೇರಳ 671321 |
| ಟಿ.ಎ.ಕೆ. | ತಿಮ್ಮಪ್ಪ, ಎ.ಕೆ. (ಡಾ.) | ಸಹಾಯಕ ಪ್ರಾಧ್ಯಾಪಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಕ್ಕಿ ಆಲೂರು, ಹಾನಗಲ್ಲು, ಹಾವೇರಿ ಜಿಲ್ಲೆ |
| ಟಿ.ಕೆ. | ತಿಮ್ಮಯ್ಯ, ಕೆ. (ಡಾ.) | ಸಹ ಪ್ರಾಧ್ಯಾಪಕ, ಮಹಾರಾಜ ಕಾಲೇಜು, ಮೈಸೂರು |
| ಟಿ.ಪಿ. | ತುಕಾರಾಂ ಪೂಜಾರಿ | ಅಧ್ಯಕ್ಷರು, ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಸಂಚಯ ಗಿರಿ, ಪೋಸ್ಟಾಫೀಸು ರಸ್ತೆ, ಬಿ.ಸಿ.ರೋಡ್, ಮಂಗಳೂರು |
| ಯು.ಸಿ.ಎಸ್. | ಊರ್ವಿಳಾ, ಸಿ.ಎಸ್. (ಡಾ.) | C/0 ಅಚ್ಯುತ ಸತ್ಯಗಿರಿ, ನಂ. 176, 17ನೆಯ ಕ್ರಾಸ್, 22ನೇ ಮುಖ್ಯರಸ್ತೆ, ಜೆ.ಪಿ.ನಗರ, 5ನೇ ಹಂತ, ಬೆಂಗಳೂರು |
| ಯು.ಇ. | ಉನ್ನಿಕೃಷ್ಣನ್, ಇ.(ಡಾ.) | ಗೌರ್ವನಮೆಂಟ್ ಹೈಯರ್ ಸೆಕೆಂಡರಿ ಸ್ಕೂಲ್, ಪೆರಿಯೆ ಅಂಚೆ, ಕಾಸರಗೋಡು, ಕೇರಳ |
| ಯು.ಜೆ.ಎಸ್. | ಉಷಾದೇವಿ, ಜೆ.ಎಸ್. (ಡಾ.) | ಸಹ ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಟೇಶ್ವರ, ಕುಂದಾಪುರ, ಉಡುಪಿ ಜಿಲ್ಲೆ |
| ವಿ.ಕೆ. | ವನಿತಾ, ಕೆ. | C/o ರಂಗಸ್ವಾಮಿ ಎಂ. ಸಹಾಯಕ ಪ್ರಾಧ್ಯಾಪಕ, ಆರ್.ಐ.ಇ., ಮಾನಸ ಗಂಗೋತ್ರಿ, ಮೈಸೂರು |
| ವಿ.ಕೆ. | ವೃಷಭಕುಮಾರ್ (ಡಾ.) | ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, ಶಿಗ್ಗಾವಿ |
| ವಿ.ಎಲ್.ಕೆ. | ವರಲಕ್ಷ್ಮಿ, ಕೆ. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |

| | | |
|---|---|---|
| **ವಿ.ಎಲ್.ಎಂ** | ವಿಮಲಾಕ್ಷಿ, ಎಂ. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ವಿ.ಎಂ.** | ವಿಜಯಲಕ್ಷ್ಮಿ ಮನಾಪುರ (ಡಾ.) | ಸಹಾಯಕ ಪ್ರಾಧ್ಯಾಪಕಿ, ಮಹಾರಾಜ ಕಾಲೇಜು, ಮೈಸೂರು |
| **ವಿ.ಎಂ.ಎನ್** | ವೆಂಕಟೇಶ, ಎಂ.ಎನ್ (ಡಾ.) | ಪ್ರಾಧ್ಯಾಪಕ, ಕನ್ನಡ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಆಂಧ್ರಪ್ರದೇಶ |
| **ವಿ.ಎನ್.** | ವಾಮನ ನಂದಾವರ | ಮಾಜಿ ಅಧ್ಯಕ್ಷರು, ಕರ್ನಾಟಕ ತುಳು ಅಕಾಡೆಮಿ, ದೃಶ್ಯ ಗೊಲ್ಲಚ್ಚಿಲ್, ಲೋಹಿತ್‌ನಗರ, 5ನೇ ಕ್ರಾಸ್, ದೇರೆಬೈಲ್, ಮಂಗಳೂರು |
| **ವಿ.ಎನ್.ಕೆ.** | ವೃಂದ, ಎನ್.ಕೆ. | ಸಂಶೋಧಕಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ವಿ.ಆರ್.ಬಿ.** | ವೆಂಕಟರಾಮಣ್ಣ, ಬಿ. (ಡಾ.) | ಸಹಾಯಕ ಪ್ರಾಧ್ಯಾಪಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು |
| **ವಿ.ಎಸ್.** | ವಿನೋದ, ಎಸ್. (ಡಾ.) | ಸಹಾಯಕ ಪ್ರಾಧ್ಯಾಪಕಿ, ಎಂ.ಎಂ.ಕೆ. ಎಸ್.ಡಿ.ಎಂ. ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು |

## ಅನುಬಂಧ ೬

# ಛಾಯಾಚಿತ್ರ - ರೇಖಾಚಿತ್ರ ನೀಡಿದವರು

ಶ್ರೀ ಗಣೇಶ ಅಭಿರುಚಿ

ಡಾ. ಚಂದ್ರಪ್ಪ ಸೊಬಟಿ

ಶ್ರೀ ದೇವರಡ್ಡಿ ಹದ್ಲಿ

ಡಾ.ಬಿ. ಧನಂಜಯ

ಡಾ. ಭಾರತಿ ಮರವಂತೆ

ಡಾ.ಎಂ.ಎಸ್. ಮುತ್ತಯ್ಯ

ನಟರಾಜ

ಶಾಲಿನಿ

ಡಾ.ಎಸ್.ಸಿ. ರಮೇಶ್

ಡಾ.ಎಂ. ರಾಮನಾಥಂ ನಾಯ್ಡು

ಡಾ. ರಾಮು ಮೂಲಗಿ

ಕುಮಾರಿ ಸ್ನೇಹಾ, ವಿ.

ಕುಮಾರಿ ಸಂಯಮ, ಎನ್.ವಿ.

ಕುಮಾರಿ ಯಶಸ್ವಿನಿ, ವಿ.

ಇವರೆಲ್ಲರ ನೆರವಿಗೆ ಕೃತಜ್ಞತೆಗಳು



ಮಾನವ ಸಂಸ್ಕೃತಿಯ ವಿಕಾಸದ ಹಾದಿಯಲ್ಲಿ ಕೃಷಿ ಅತ್ಯಂತ ಪ್ರಮುಖವಾದ ಅನ್ವೇಷಣೆ. ಕೃಷಿಯನ್ನು ಹೊರತುಪಡಿಸಿ ಸಮಾಜದ ಅಸ್ತಿತ್ವವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಜಾಗತೀಕರಣ, ವಸಾಹತೀಕರಣಗಳ ಪ್ರಭಾವದಿಂದ ಇಡೀ ಭಾರತೀಯ ಸಮಾಜದ ಸ್ವರೂಪವೇ ಬದಲಾಗಿದೆ. ಇಲ್ಲಿ ಮೇಲ್ನೋಟಕ್ಕೆ ಕೃಷಿ ದೇಶದ ಬೆನ್ನೆಲುಬು ಎಂದು ಹೇಳಲಾಗುತ್ತಿದೆ. ಆದರೆ ಇಂದಿನ ದಿನಮಾನಗಳಲ್ಲಿ ಕೃಷಿಸಮುದಾಯ ವ್ಯವಸಾಯಕ್ಕೆ ಬೆನ್ನು ತಿರುಗಿಸುತ್ತಿದೆ. ಕೈಗಾರಿಕೆಗಳು ಹೆಚ್ಚು ಹೆಚ್ಚು ಸ್ಥಾಪನೆಗೊಳ್ಳುವ ಮೂಲಕ ದೇಶ್ಯಮೂಲ ಪಾರಂಪರಿಕ ಕೃಷಿಪದ್ಧತಿಗಳು ಕಣ್ಮರೆಯಾಗುತ್ತಿವೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ. ಈ ನಡುವೆಯೇ ಬಹುರಾಷ್ಟ್ರೀಯ ಕಂಪೆನಿಗಳು ಸರಬರಾಜು ಮಾಡುತ್ತಿರುವ ವಿವಿಧ ಹೈಬ್ರಿಡ್ ಬೀಜಗಳು, ಬಳಸುವ ವಿವಿಧ ರಾಸಾಯನಿಕಗಳು, ಆಧುನಿಕ ಉಪಕರಣಗಳು ನೆಲವನ್ನು ವಿಷಯುಕ್ತಗೊಳಿಸಿವೆ. ಅಗತ್ಯವಿರುವ ಆಹಾರೋತ್ಪಾದನೆಯ ಮೇಲೆ ತೀವ್ರ ವ್ಯತಿರಿಕ್ತ ಪರಿಣಾಮ ಉಂಟುಮಾಡಿದೆ. ಈ ನಡುವೆ ದೇಶ್ಯಮೂಲ ಕೃಷಿ ಪರಂಪರಾಜ್ಞಾನ ಹಿನ್ನೆಲೆಗೆ ಸರಿಯುತ್ತಿರುವುದು ತೀವ್ರ ಕಳವಳಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಕಣ್ಮರೆಯಾಗುತ್ತಿರುವ ನೆಲಮೂಲಜ್ಞಾನ ಪರಂಪರೆಗಳನ್ನು ಶೋಧಿಸಿ, ಮರುಶೋಧಿಸಿ, ಸಂರಕ್ಷಿಸಿ, ಸಂವರ್ಧಿಸುವ ಪ್ರಯತ್ನಗಳೂ ನಡೆಯುತ್ತಿರುವುದು ಅತ್ಯಂತ ಆಶಾದಾಯಕ ಬೆಳವಣಿಗೆ. ಇದರ ಭಾಗವಾಗಿ 'ದಕ್ಷಿಣ ಭಾರತೀಯ ದೇಶಿ ಕೃಷಿವಿಜ್ಞಾನ ಕೋಶ' ಮಹತ್ವದ್ದು ಎಂದೆನಿಸುತ್ತದೆ. ಕರ್ನಾಟಕದ ಪಾರಂಪರಿಕ ಕೃಷಿ ವಿಧಾನಗಳು ಮತ್ತು ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ಪ್ರಚಲಿತವಿರುವ ಕೃಷಿ ವಿಧಾನಗಳು ಪರಸ್ಪರ ಸಾಮ್ಯತೆಯನ್ನು ಹೊಂದಿವೆ. ಆದ್ದರಿಂದ ನಾಡಿನ ಕೃಷಿಸಂಬಂಧೀ ಸಂಸ್ಕೃತಿ ವಿವರಗಳ ಜೊತೆಗೆ ಒಟ್ಟು ದಕ್ಷಿಣ ಭಾರತದ ಕೃಷಿ ಸಂಬಂಧೀ ಮಾಹಿತಿಗಳು ಇಲ್ಲಿ ಹೇರಳವಾಗಿವೆ. ಈ ಹಿನ್ನೆಲೆಯಲ್ಲಿ ಇಂಥ ಬೃಹತ್‌ಪ್ರಮಾಣದ ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ'ವನ್ನು ತಮಗೆ ಲಭ್ಯವಿದ್ದ ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಅತ್ಯಂತ ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ, ಅರ್ಥಪೂರ್ಣವಾಗಿ ಸಂಯೋಜಿಸಿ ರೂಪಿಸುವಲ್ಲಿ ಕಾರ್ಯನಿರ್ವಾಹಕ ಸಂಪಾದಕ ಪ್ರೊ. ಆರ್ವಿಯಸ್ ಸುಂದರಂ, ಸಂಪಾದಕ ಪ್ರೊ. ಸ.ಚಿ. ರಮೇಶ ಮತ್ತು ಸಂಪಾದಕ ಮಂಡಳಿಯವರು ಅಹರ್ನಿಶಿ ಶ್ರಮಿಸಿದ್ದಾರೆ. ಅವರ ಶ್ರದ್ಧೆ, ಶ್ರಮಕ್ಕೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

**ಪ್ರೊ. ಅಂಬಳಿಕೆ ಹಿರಿಯಣ್ಣ**

ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

**ಕರ್ನಾಟಕ ಜಾನಪದ ವಿಶ್ವವಿದ್ಯಾಲಯ**